START

MICROFILMED
BY
NATIONAL ARCHIVES
OF INDIA
at the Karnataka
State Archives
BANGALORE
1974

VRITTANTAPATRIKE

(IN KANNADA)

VOL-12

4-6-1914

27-5-1915

CONTINUED

REEL NO 10

ಅನಾಹುತಗಳು ಸಂಭವಿಸುವವು!

ಕೆಲಸಮಾಡುವ ಯಾವ ಮನುಷ್ಯನಾದರೂ, ಕೆಲಸಮಾಡದ ಅನೇಕ ಮನುಷ್ಯರಲ್ಲಾದರೂ ಅನಾಹುತಗಳು ಆಗುತ್ತವೆ. ಪ್ರತಿದಿನವೂ ಯಾರಿಗಾದರೂ ಸಂಭವಿಸುತ್ತೆ. ಎಂದಾದರೂ ಒಂದು ದಿನ ಅದು ನಿಮಗೂ ಆದೀತು.

ಇಲಿನಾಯ್ಸಿನ ಕಿವ್ಯಾನಿಯಲ್ಲಿರುವ ಮಿ॥ ಓ. ಎಸ್. ಸ್ಕಾಮುನ್ ಹೇಳುವದು:— "ಮಹಡಿಯಿಂದ ಇಳಿಯುತ್ತಿದ್ದಾಗ ನನ್ನ ಹೆಂಡತಿಯು ನಿಂತುಕೊಳ್ಳಲಾರದಷ್ಟು ಕಠಿಣವಾದ ರೀತಿಯಲ್ಲಿ ಆಕೆಯ ಮೊಣಕಾಲು ಉಳುಕಿತು. ಕೀಲು ಪೆಡಸಾಗಿ ಬಹಳ ಊದಿಕೊಂಡು, ಮುಟ್ಟಿದರೆ ನೋವು ಸಹಿಸಕೂಡದಷ್ಟು ಮಟ್ಟಿಗೆ ಇತ್ತು. ಆಕೆ ಅನೇಕವಾದ ಔಷಧಿಗಳನ್ನೆಲ್ಲಾ ಉಪಯೋಗಿಸಿ, ಆ ತತ್ಕಾಲಕ್ಕೆ ಸ್ವಲ್ಪ ಮೇಲನ್ನು ಹೊಂದಿದಂತೆ ಕಂಡಳು.

ಲಿಟಲ್ಸ್ ಓರಿಯೆಂಟಲ್ ಬಾಂ ಎಂಬದನ್ನು ಕುರಿತು ಕೇಳಿ, ಅದನ್ನು ಉಪಯೋಗಿಸಬೇಕೆಂದು ನಿಶ್ಚಯಿಸಿಕೊಂಡಳು. ಅದನ್ನು 3 ದಿನಗಳು ಉಪಯೋಗಿಸಿದನಂತರ ಮನೆಯಲ್ಲಿ ತಿರುಗಾಡುವಷ್ಟು ಶಕ್ತಳಾದಳು."

ಸೀಸೆ 1ಕ್ಕೆ 1 ರೂ. ಮೇರಿಗೆ ಎಲ್ಲಾ ಔಷಧಗಾರರಲ್ಲಿಯೂ ಸಿಗುತ್ತೆ. 101-8

ಸುಖಕರ, ಆನಂದ, ಬಹಳ್ ಅವಶ್ಯ.

ಈಗ ತಾನೇ ಕಂಡುಹಿಡಿದಿದೆ.

ಜರ್ಮನ್ ರಾಜ್ಯದಲ್ಲಿ ನೂರಾರು ವರುಷಗಳಿಂದ ಉಪಯೋಗದಲ್ಲಿದೆ.

ಸೆಲಿಂತಾನ ಬೆಳ್ಳಿಯ ವರಕು ಸುತ್ತಿದ ಮುತ್ತುಗಳು.

(1) ಮನಸ್ಸಿಗೆ ಹರ್ಷವನ್ನೂ ಉಲ್ಲಾಸವನ್ನೂ ಕೊಟ್ಟು ಜೀರ್ಣಶಕ್ತಿಯನ್ನುಂಟುಮಾಡುವುದು.

(2) ಹಾಡುವವರಿಗೆ ವರಪ್ರಸಾದವಾದದ್ದು.

(3) ಬಾಯಿ ದುರ್ಗಂಧ, ಗಂಟ್ಲು ಗಾರೆಸ್ಸುವುದು, ಉಬ್ಬಸ, ಸಮುದ್ರಯಾನದ ಜುಗುಪ್ಸೆ, ಈ ಮೊದಲಾದವನ್ನು ಹುಟ್ಟದಂತೆ ಅಡ್ಡಿಮಾಡುತ್ತದೆ.

(4) ತಾಂಬೂಲದೊಡನೆ ಸೇವಿಸುವುದಕ್ಕೆ ಅತ್ಯಂತ ಹಿತಕರವಾಗಿದೆ. [73-15]

ಒಂದು ಸಲ ಪರೀಕ್ಷೆಮಾಡಿದಲ್ಲಿ ಯಾವಾಗಲೂ ಒಂದು ಪೊಟ್ಟಣ ಇದ್ದೇ ತೀರಬೇಕೆಂದು ನೀವೇ ನಿಶ್ಚಯಿಸುವಿರಿ.

ಮುತ್ತಿನಂತಿರುವ 45 ಮಾತ್ರೆ ಉಳ್ಳ ಪೊಟ್ಟಣಕ್ಕೆ ಕ್ರಯ 2 ಆಣೆ.

,,	95	,,	,,	,,	4	,,
,,	200	,,	,,	,,	7	,,
,,	300	,, ಸುಂದರವಾದ ಟೀನ್ ಡಬ್ಬಾ			9	,,
,,	80	,,	,,	,,	4	,,
,,	100	,, ಬಾಟ್ಲಿಯಲ್ಲಿ			4½	,,

ಈ ಕ್ರಯದಷ್ಟು ಸ್ಟಾಂಪನ್ನೂ, ಅಂಚೆ ವೆಚ್ಚಕ್ಕೆ ಜಾಸ್ತಿ ಒಂದಾಣೆಯನ್ನೂ ಸೇರಿಸಿ ಕಳುಹಿಸಬೇಕು. ಕಾಗದಪತ್ರವನ್ನೂ ವಿಳಾಸಗಳನ್ನೂ ನಮಗೆ ಇಂಗ್ಲೀಷಿನಲ್ಲೇ ಬರೆಯತಕ್ಕದ್ದು.

ನಮ್ಮ ವಿಳಾಸ—ಸೆಲಿಂತಾನ ಡಿಪೋ,
ಬೊಂಬಾಯಿ 3;

ಅಥವಾ, ಬಿ. ಸಿ. ಷಾ ಕಂಪೆನಿ,
509 ಮಿಂಟ್ ಬೀದಿ, ಮದರಾಸ್.

S. U. N. & Co.,

BENARES CITY, U. P.

ಸೊಗಸಾದ ಸರಕುಗಳು !!

ದೊಡ್ಡ ಕಂಪೆನಿ!

ಈ ನಮ್ಮ ಕಂಪನಿಯಲ್ಲಿ ನೆಯಿದು ತಯಾರಿಸುವ ಉತ್ತಮವಾದ ಬನಾರಸ್ ರೇಷ್ಮೆ ಜರಿ ಸೀರೆಗಳು, ಕಣ, ಪೀಟಾ, ಕಾಶ್ಮೀರ್ ಶಾಲು, ದುಪ್ಪಟ್ಟಿ, ಮಗುಟ, ಜಗನ್ನಾಥ ಜಾಗಟೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಕ್ಯಾಟಲಾಗ್ 1 ನ್ನು ಮತ್ತು 3 ವಿಶ್ವೇಶ್ವರ ಪಟಗಳನ್ನು ಇನಾಮಾಗಿ ಕಳುಹಿಸಲಾದೀತು. [69-15]

ಎಸ್. ಯು. ಎನ್. ಮತ್ತು ಕಂಪೆನಿ, ಕಾಶಿ.

BRAHMAPPA TAVANAPPANAVAR,

Merchant & Commission Agent.

Agent to Messrs. Currimbhoy Ebrahim & Co's Mills,
BOMBAY.

ನಾವು ಮುಂಬೈ ಮೆಸ್ಸರ್ಸ್ ಕರೀಂಬಾಯ್ ಇಬ್ರಾಹಿಂ ಅಂಡ್ ಕಂಪೆನಿಯವರ ಬಾಬತು, ಮೆಸ್ಸರ್ಸ್ ಫಜುಲ್ಭಾಯ್ ಮಿಲ್ಸ್ ಲಿಮಿಟೆಡ್ ಮುಂಬೈ, ದಿ ಕ್ರೆಸೆಂಟ್ ಮಿಲ್ಸ್ ಲಿಮಿಟೆಡ್ ಮುಂಬೈ, ಕರೀಂಭಾಯ್ ಮಿಲ್ಸ್ ಲಿಮಿಟೆಡ್ ಮುಂಬೈ, ದಿ ಇಂಡಿಯನ್ ಬ್ಲೀಚಿಂಗ್, ಡೈಯಿಂಗ್ ಅಂಡ್ ಪ್ರಿಂಟಿಂಗ್ ವರ್ಕ್ಸ್ ಲಿಮಿಟೆಡ್ ಮುಂಬೈ, ದಿ ಇಂಡೋರ್ ಅಂಡ್ ಮಾಳ್ವಾ ಯುನೈಟೆಡ್ ಮಿಲ್ಸ್ ಲಿಮಿಟೆಡ್ ಇಂಡೋರ್, ಇವುಗಳಲ್ಲದೆ ಇನ್ನೂ ಅನೇಕ ಮಿಲ್ಲುಗಳ ಬಟ್ಟೆಗಳನ್ನು ಮೈಸೂರು ಸೀಮೆಯಲ್ಲೆಲ್ಲಾ ವಿಕ್ರಯಮಾಡಲು ಕಮಿಷನ್ ಏಜಂಟರಾಗಿರುತ್ತೇವೆ. ನಮ್ಮ ಮುಖಾಂತರ ಮಾಲು ತರಿಸಿಕೊಳ್ಳತಕ್ಕವರಿಗೆ ಮುಂಬೈಯಲ್ಲಿ ಬಟ್ಟೆಗಳ ಮೇಲೆ ವಿಧಿಸತಕ್ಕ ದಳ್ಳಾಳಿ, ಜೋಟಾದಳ್ಳಾಳಿ, ವೆಚ್ಚ ಮುಮ್ಮ, ಗಂಟುಕಟ್ಟುವದು, ಸ್ಟೇಷನ್ನಿಗೆ ಸೇರಿಸುವದು, ಮುಂತಾದ ವಗೈರೆ ಯಾವ ವಿಧವಾದ ಖರ್ಚು ತಗಲದೆ ಇರುವದರಿಂದ ಮುಂಬೈಯಿಂದ ತರಿಸುವ ದಕ್ಕಿಂತಲೂ ಸುಲಭ ದರದಲ್ಲಿ ಸಿಕ್ಕುತ್ತೆ. ಮತ್ತು ಮುಂಬೈಗೆ ಹೋಗಿಬರುವ ದೇಹಶ್ರಮವೂ, ಖರ್ಚೂ ಉಳಿಯುತ್ತೆ. ಹೆಚ್ಚು ಬಟ್ಟೆಗಳನ್ನು ಏಕಕಾಲದಲ್ಲಿ ಕೊಳ್ಳತಕ್ಕವರಿಗೆ ಮಾಲಿನ ಮೇಲೆ ಶೇಕಡ 3 ರೂಪಾಯಿ ಲಾಗಾಯ್ತು 4½ ರೂಪಾಯಿ ವರೆಗೆ ಡಿಸ್ಕೌಂಟು ದೊರೆಯುತ್ತೆ. [97-10]

ನಮ್ಮ ಟ್ರಾವಲಿಂಗ್ ಏಜಂಟರ ವಶ ಬಟ್ಟೆಗಳ ನಮೂನೆಗಳನ್ನು ಕೊಟ್ಟು, ದರ ಒಬ್ಬ ವ್ಯಾಪಾರಗಾರನಿಗೆ ತೋರಿಸಿ ಆರ್ಡರು ತೆಗೆದುಕೊಳ್ಳುವ ಏರ್ಪಾಡು ಮಾಡಿರುತ್ತೆ. ನಮ್ಮ ದಾವಣಗೆರೆ ಮತ್ತು ಬೆಂಗಳೂರು ಆಫೀಸುಗಳಲ್ಲಿ ಮಾಲು ಹಾಜರು ಸಹ ದೊರೆಯುತ್ತೆ.

ಬಟ್ಟೆಗಳನ್ನು ವ್ಯಾಪಾರಮಾಡಲು ಅನುಭವಸ್ಥರಾದ ಏಜಂಟರುಗಳೂ ಮತ್ತು ಗುಮಾಸ್ತರುಗಳೂ ಬೇಕಾಗಿದೆ.

ಎಲ್ಲಾ ಕಾಗದಪತ್ರಗಳೂ ದಾವಣಗೆರೆ ಆಫೀಸಿಗೆ ಬರೆಯಲ್ಪಡಬೇಕು.

ಹೆಡ್ ಆಫೀಸು:—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್, ದಾವಣಗೆರೆ. ಬ್ರಾಂಚ್ ಆಫೀಸು:—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

2-22

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ:—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು. (೨) ಟೋಪಿಗಳನ್ನು ಬುದ್ಧಿಗಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ.

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ. ೮ ಆ., ೧ ರೂ. ೬ ಆ.;

ಚುಕ್ಕಿಯುಳ್ಳ ಟೋಪಿಗಳು ರೂ. ೧-೮; ರೂ. ೧-೧೨.

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ. ೨.

ದಾರದ ಟೋಪಿಗಳು ೧ ರೂ. ೧೨ ಆ.; ೧ ರೂ. ೮ ಆ.; ೧ ರೂ. ೬ ಆ.

ಮುಸುಕಿನ ಟೋಪಿಗಳು ೧ ರೂ. ೮ ಆ.; ೧ ರೂ. ೬ ಆ.

"In addition to cap making we are giving special attention to knitting stockings. All our stockings, for adults and children, are hand-made. Prices will be sent on enquiry."

ಮ್ಯಾನೇಜರ್, ಟೋಪಿ ಕಾರ್ಖಾನೆ,
ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ.

Apply:—
MANAGER, CAP WORKS,
GIRLS' INDUSTRIAL SCHOOL, HASSAN.

ಶ್ರೇಷ್ಠವಾದ ವಾಚ್! ನೂತನವಾದ ವಾಚ್! ಸಾಖ್ಯವಾದ ವಾಚ್!

ಸ್ಪ್ರಿಂಗ್ ಪಾಕೆಟ್ ಲೀವರ್ ವಾಚ್.

ಇದರ ಕ್ರಯ 7 ಬಹುಮಾನಗಳ ಸಮೇತ ರೂ. 3-8-0 ಮಾತ್ರ.

ಏಳು ವರ್ಷಗಳ ಖಾತ್ರಿಯಾದ ಗ್ಯಾರಂಟಿ.



ಘನವಂತರೇ,

ಈ ನೂತನ ನಮೂನೆ ವಾಚ್ ಈಗ ತಾನೇ ಬಂದಿರುತ್ತೆ. ಪ್ರಪಂಚದಲ್ಲೆಲ್ಲಾ ಹೆಸರುವಾಸಿಯಾದ ಮತ್ತು ಶ್ರೇಷ್ಠವಾದ ಲೀವರ್ ಕೆಲಸದಿಂದಲೂ, ಬಲಿಷ್ಠವಾದ ಮತ್ತು ನಾಜೂಕಾದ ಯಂತ್ರ ಸಾಮಾನುಗಳಿಂದಲೂ ತಯಾರಾಗಿ ಬಂದಿರುತ್ತೆ. ಈಗ ತಾನೆ ಹೊಸದಾಗಿ ನಾವು ಪ್ರತ್ಯೇಕವಾಗಿ ತರಿಸಿರುತ್ತೇವೆ. ಗೌರ್ನಮೆಂಟು ಟೈಂಗೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದದ್ದು. ನಂಬಿಕೆಯಾಗಿ ದೀರ್ಘಕಾಲ ಅನೇಕ ವರ್ಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು. ಬಹು ರಮಣೀಯವಾದ ವಾಚ್. ಬರೀ ಮಾತುಗಳಿಂದಲೇನು? ಪರಂಪರೆ ಬಾಳಿಕೆ ಬರುವ ವಾಚ್ ಇದೇ. ಇದರ 7 ಬಹುಮಾನಗಳ ತಪಸೀಲ್:—(1) ಸುಂದರವಾದ ವಾಚ್ ಸರಪಣಿ, (2) ದಿಕ್ಕುಗಳನ್ನು ತೋರಿಸುವ ಉತ್ತರಮುಖಿ, (3) ವಾಚ್‌ಗೆ ಧೂಳು ಸೇರದಂತೆ ಭದ್ರಪಡಿಸುವ ತೊಗಲಿನ ಚೀಲ, (4) ಕುತ್ತಿಗೆಗೆ ವಾಚ್ ಸಂಗಡ ಧರಿಸಿಕೊಳ್ಳುವ ರೇಷ್ಮೆ ದಾರ, (5) ವಾಚ್ ಪೆಟ್ಟಿಗೆ (ಬಹು ಸುಂದರವಾದದ್ದು), (6) ಪರಿಮಳವುಳ್ಳ ಸುವಾಸನೆ ಸೀಸೆ, (7) ಕರವಸ್ತ್ರ.

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.— [117-4]

ಟಿ. ಸೀತಾರಾಮ ಮೊದಲಿಯಾರ್, ನಂ. 3, ಕಂದಪ್ಪ ಮೊದಲಿ ಬೀದಿ, ತಿರುವಲ್ಲಿಕೇಣಿ, ಮದರಾಸು.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

5—6—1914 ರಿಂದ 12—6—1914 ರ ವರೆಗೆ

ಸ್ಥಳ		ಪ್ಲೇಗ್		ಕಾಲರಾ	
		ತಗಲಿದ್ದು.	ಸತ್ತದ್ದು.	ತಗಲಿದ್ದು.	ಸತ್ತದ್ದು.
ಬೆಂಗಳೂರು	ಪಟ್ಟಣ	0	0	0	0
ಮೈಸೂರು	,,	0	0	0	0
ಬೆಂಗಳೂರು	ಡಿಸ್ಟ್ರಿಕ್ಟ್	0	0	0	0
ಮೈಸೂರು	,,	0	0	0	0
ಕೋಲಾರ್	,,	0	0	11	3
ಕೋಲಾರ್ ಚಿನ್ನದ ಗಣಿಗಳು		1	1	0	0
ತುಮಕೂರು	ಡಿಸ್ಟ್ರಿಕ್ಟ್	0	0	0	0
ಹಾಸನ	,,	0	0	0	0
ಚಿತ್ರದುರ್ಗ	,,	0	0	0	0
ಕಡೂರ್	,,	2	0	0	0
ಶಿವಮೊಗ್ಗ	,,	4	4	0	0
	ಜುಮ್ಲಾ...	7	5	11	3

ಶಾಲಿವಾಹನ ಶಕ ವರುಷಂಗಳು 1837 ನೇ ಆನಂದ ಸಂವತ್ಸರೇ ಉತ್ತರಾಯಣೆ ಗ್ರೀಷ್ಮ ಋತೌ ಆಷಾಢ ಶುದ್ಧ ತದಿಗೆ ಶುಕ್ರವಾರದಿಂದ ಆಷಾಢ ಶುದ್ಧ ನವಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ.

1914 ನೇ ಜೂನ್ ಮತ್ತು ಜೂಲೈ.

ತಾ.	ವಾರ.	ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ	ಮಿಥುನ ಮಾಸ ತೇದಿ
26	ಶುಕ್ರ ::	ತದಿಗೆ	34-1	ಪುಷ್ಯ	31-2	13
27	ಶನಿ ;;	ಚೌತಿ	30-53	ಆಶ್ಲೇಷ	30-47	14
28	ಭಾನು §	ಪಂಚಮಿ	26-39	ಮಖಾ	27-37	15
29	ಸೋಮ ‡	ಷಷ್ಠಿ	21-45	ಪುಬ್ಬಾ	24-39	16
30	ಮಂಗಳ †	ಸಪ್ತಮಿ	16-15	ಉತ್ತರ	21-7	17
1	ಬುಧ	ಅಷ್ಟಮಿ	10-17	ಹಸ್ತ	17-10	18
2	ಗುರು *	ನವಮಿ	4-10	ಚಿತ್ತ	53-45	19

:: ನಂಜನಗೂಡಿನಲ್ಲಿ ಮಾರ್ಕಂಡೇಯೋತ್ಸವ. ;; ದೇವರಾಜೇ ಅರಸಿನ ಕುಮಾರರ ವರ್ಧಂತಿ § ಪಂಚಮೀತಿಥಿ, ಮಳೆ ನಕ್ಷತ್ರ—ಆರಿದ್ರಾ 3 ನೇ ಪಾದ ‡ ತಿಥಿದ್ವಯಂ. † ಅಷ್ಟಮೀ ತಿಥಿ. * ಅನಮು, ವೈವಸ್ವತಮನ್ವಾದಿ, ಮಳೆ ನಕ್ಷತ್ರ—ಆರಿದ್ರಾ 4 ನೇ ಪಾದ.

Printed and Published by the Rev. H. Gulliford, Proprietor and Manager, Wesleyan Mission Press, Mysore. 25/6/1914.

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೮ ಮೈಸೂರು—೧೯೧೫ ನೇ ಇಸವಿ ಜೂಲೈ ತಾರೀಖು ೧ ನೇ ಗುರುವಾರ. ಸಂಚಿಕೆ ೨೬

ಸ್ತ್ರೀಯರ ಸಂತೋಷವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ಶೀಲಿಮೆಯಿಂದ ನಬಿಡವಾದ ಕೇಶದಾಮವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಇಂತಹ ಕೇಶ ರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲುಪ ಉಪಕರಣವಾದರೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡು ವದೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾ



ರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ. ಈ ತೈಲವನ್ನು ತೊಡೆದುಕೊಳ್ಳುತ್ತಲೇ, ಮಸ್ತಿಷ್ಕದ ಬೇಗೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ, ಕೂದಲುಗಳು ಇದನ್ನು ತೊಡೆಯ ತೊಡಗಿದ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು; ಅವರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು.

ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡುವದಕ್ಕಿಂತ ಒಂದೇಯೊಂದು ಬಾರಿ ಈ « ಕಾಮಿನಿಯಾ ತೈಲ » ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ « ಸರ್ಟಿಫಿಕೇಟ್ ಒಫ್ ಮೆರಿಟ್ » ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಅವುಗಳಲ್ಲಿ ಒಂದನ್ನೇ ನೋಡಿರಿ: ನೇಗಿನಹಾಳಕರ ಬಂಧುಗಳು. ಬಸವನ ಗಲ್ಲಿ, ಬೆಳಗಾಂವ—ತಾವು ಕೆಲ ತಿಂಗಳ ಹಿಂದೆ ಕಳುಹಿಸಿದ « ಕಾಮಿನಿಯಾ » ತೈಲವು ಕೂದಲುಗಳನ್ನು ಬೆಳೆಯಿಸುವುದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ. ಆದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ. ಪಿ ದ್ವಾರಾ ರವಾನಿಸುವುದು. ಸೀಸೆಯೊಂದರ ಕ್ರಯ ರೂ. 1-0-0, ಅ. ವೆ. 0-4-0 ಬೇರೆ; 3 ಸೀಸೆಗಳ ಕ್ರಯ ರೂ. 2-10-0, ಅ. ವೆ. 0-7-0 ಬೇರೆ.

ಸೂಚನೆ.—ಅನೇಕ ದುರ್ವಿನೀತರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ವಿಕರಿಯಿಂದ ತಮಗೆ ಅತ್ಯಲ್ಪ ನಫೆಯೇ ದೊರಕುತ್ತದೆಂದು, ನೀವು « ಕಾಮಿನಿಯಾ ತೈಲ » ವನ್ನು ಕೇಳಿದರೆ, « ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ » ಎಂದು ಅವರಿಗೆ ಬಹಳ ಲಾಭ ದೊರಕತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸ ಹೋಗದಂತೆ « ಕಾಮಿನಿಯಾ ಓಯಿಲ್ » ತಾನೇ ಬೇಕೆಂಬು ಕೇಳಿರಿ; ಅವರಲ್ಲಿ ಇದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳುವಷ್ಟು ಮೆಹನತುಬಾಸ್ ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಿಬೀಳದೆ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಖುಷ್ಬೂ-ದಿಲ್ ಬಹಾರ್!!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಆಲ್ಕೋಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ತೊಟ್ಟುಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ಸ್ವರ್ಗೀಯವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ. ಈ ಖುಷ್ಬೂ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವುದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ. [19-25]

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಡ್ರಾಮಿನ (ಮಾಧಿಯಂ) ಸೀಸೆ 1ಕ್ಕೆ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0. ಅಂಚೆಯ ವೆಚ್ಚ ಬೇರೆ ರೂ. 0-4-0. ಖುಷ್ಬೂ-ದಿಲ್ ಬಹಾರ್ ಪರಿಮಳದ ಕಾರ್ಡುಗಳು ಡಜನ್ ಒಂದಕ್ಕೆ 0-13-0.

ಮೇಲೆ ಕಂಡ ಎಲ್ಲಾ ಸುಗಂಧಗಳು ಸಿಕ್ಕುವ ಪತ್ತೆ :—

ಆಂಗ್ಲೋ-ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್ಜಿದ್, ಬೊಂಬಾಯಿ.

ಏಜೆಂಟ್, ಬಿ. ಅರ್ ವಾರ್, ಬೆಂಗಳೂರು.

Full Notes and **Examiner** on L. S. E. Texts (1915)—**Both Tanglewood and Fairy Tales,** with Author's life, meanings, explanations, summaries, constructions and questions. Price **Annas 5. English Papers.**—Subscription **Re. 1¼ only.** Special copy **As. 6. Spelling Book As. 5.** (Postage extra).

Apply to, **M. N. Sitarama Rao,**
[100-9] **Krishnaraja Mohalla, Mysore.**

NOW READY

Full Notes with Summary and Numerous useful questions on Circe's Palace; The Golden Fleece and Fairy Tales (L. S. Text for 1915) by Mr. A. S Rangaswamiengar, B.A., Asst. Master, Maharani's College, Mysore. Price four annas only. Yate's Primer 0-4-0; Yate's Second Reader 0-9-0; King Second Reader 0-6-0; King Third Reader 0-8-0; Macmillan's New No. IV Reader 0-12-0; Hydes Practical English Grammar—**First** 0-15-0, **Second** 0-15-0; Longman's School Geography 1-4-0; Marrison's Junior Geography of India 0-12-0.

We supply you any books in English or Canarese.

[23-25] **The General Agency, Mysore.**

ಸಿದ್ಧವಾಗಿದೆ.

1915 ನೆಯ ವರ್ಷದ ಲೋವರ್ ಸೆಕಂಡರಿ

ಕನ್ನಡ ಟೆಕ್ಸ್ಟಿನ ನೋಟ್ಸು.—ಕ್ರಯ 6 ಆಣೆ.

ಡಿಸ್ಕೌಂಟು—10 ಕ್ಕೆ 1; 25 ಕ್ಕೆ 3; 60 ಕ್ಕೆ 8; 100 ಕ್ಕೆ 20.

ಮಕ್ಕಳ ಭೂವಿವರಣೆ.

ಈಗಿನ ಪಾಠಕ್ರಮಕ್ಕೆ ತಕ್ಕಂತೆ ಹೊಸದಾಗಿ ಆಗಿದೆ. ಇದರಲ್ಲಿ ಮೈಸೂರು ದೇಶದ ಜಿಲೆ, ಎತ್ತರ, ನದೀ ಪರ್ವತಾದಿಗಳು ಇವುಗಳನ್ನು ತೋರಿಸುವ ಮೂರು ಭೂಪಟಗಳೂ, ಚಿತ್ರಗಳೂ ಇವೆ. ಕ್ರಯ 2 ಆಣೆ. [49-20]

ಇಂಡಿಯಾ 2 ನೆಯ ಪುಸ್ತಕದ ನೋಟ್ಸು 2½ ಆಣೆ, ಮೆಕ್ಮಿಲನ್ ರವರ 3 ನೇ ಪುಸ್ತಕದ ನೋಟ್ಸು 1½ ಆಣೆ, ಡಿಟೊ 4 ನೇ ಪುಸ್ತಕದ ನೋಟ್ಸು 1¾ ಆಣೆ, ಡಿಟೋ 6 ನೇ ಪುಸ್ತಕದ ನೋಟ್ಸು 4 ಆಣೆ. ನವಬಾಲವ್ಯಾಕರಣ (2 ನೇ ತರಗತಿಗೆ) 1 ಆಣೆ, Notes on "Tanglewood Tales," English Lower Secondary Text for 1915—As. 3. Notes on Fairy Tales—As. 2.

ನಮ್ಮ ವಿಳಾಸ:—ಯನ್. ಆರ್. ವೆಂಕಟಸುಬ್ಬಾಚಾರ್ಯ,
ಸುಬೋಧಗ್ರಂಥಾಲಯ, ಮೈಸೂರು.

ಮಹಿಳಾಸಖೀ

ಸ್ತ್ರೀಯರಿಗೆ ಉಪಯುಕ್ತವಾದ ಕರ್ಣಾಟಕ ಮಾಸಪತ್ರಿಕೆಯು

ಜೂನ್ ತಿಂಗಳಿನ ಮಾಸಪತ್ರಿಕೆಯ ವಿಷಯಸೂಚನೆ

ವಾಚಕಿಯರಿಗೆ :	ಒಂದು ಕಾಳು ದವಸದ ಧರ್ಮಕ್ಕೆ ಚಿನ್ನದ ಪ್ರತಿಫಲವು ......
(1) ಹಾಲಿನಿಂದ ಕ್ಷಯರೋಗದ ಅಪಾಯ, (2) ಅದಕ್ಕೆ ಪರಿಹಾರ, (3) ಹಾಲು ಮಾರುವವರೂ ಅವರ ವಿಧಾನಗಳೂ, (4) ಚಿಕ್ಕ ಮಕ್ಕಳಿಗೋಸ್ಕರ, (5) ಕೂಲಗಿತ್ತಿಯರು, (6) ಸ್ವೈರ್ಯಾಲ್ಯದ ಪ್ರಾಮುಖ್ಯತೆ.	ಚೀನಾ ಜನರ ಕೆಲವು ಸುಗುಣಗಳು......
	ಮಕ್ಕಳಿಗೆ: ಪ್ರೀತಿಯಿಂದ ಸಾಕಿದ ಬಿಣಸು, ಹೊಲಿಗೆ ಕೆಲಸದ ವಿಷಯವು
	ಮೊಂಟಿಸೆಲ್ಲೀರಿಯವರ ಬೋಧನೆಯ ವಿಧಾನ ....
	ಕೆಲವು ಬುದ್ಧಿವಾಕ್ಯಗಳು ......
ಧರ್ಮಿಷ್ಠನಾದ ಸಂಗೀತಗಾರನು	ವರ್ತಮಾನ ಸಂಗ್ರಹ ....
ಸ್ತ್ರೀ ಗೌರವ (1)	ಬಾಯಿಗೆ ಕಡಿವಾಣ ಹಾಕುವುದು......
ಸ್ವೈರ್ಯಾಲ್ಯ	ಪಾಕಶಾಸ್ತ್ರ ....

ಒಂದು ವರುಷದ ಚಂದಾ ... ... 0—6—0

ಒಂದು ವರುಷದ ಚಂದಾ, ಹಾಸಲು ಸಹಿತ ... 0—9—0

ಮಹಿಳಾಸಖಿಯನ್ನು ತರಿಸಿಕೊಳ್ಳುವುದಕ್ಕೆ ಬರೆಯಬೇಕಾದ ಪತ್ರಕ್ರಮ :—

[129-4] ತಾರೀಖು..................

ಮೈಸೂರಲ್ಲಿರುವ ಸಿ. ಎಲ್. ಎಸ್. ಡಿಪೋ ಮ್ಯಾನೇಜರವರಿಗೆ.

ಅಯ್ಯಾ,

ಮಹಿಳಾಸಖಿಯ ಒಂದು ವರುಷದ ಚಂದಾ ಮೊಬಲಗು, ಹಾಸಲು ಸಹಿತ 0—9—0 ಆಣೆಗಳಿಗೆ ಸರಿಯಾದ ಪೋಸ್ಟೇಜು ಸ್ಟಾಂಪುಗಳನ್ನು ಇದರಲ್ಲಿ ಇಟ್ಟಿರುತ್ತೇನೆ. ದಯವಿಟ್ಟು ಪತ್ರಿಕೆಯನ್ನು ಕಳುಹಿಸುತ್ತಾ ಬರಬೇಕೆಂದು ಕೋರುತ್ತೇನೆ.

ವಿಳಾಸ :— ರುಜು..................

WANTED

Agents for the sale of Steel Cash and Treasure Safes, in Mysore District, for terms and other particulars, apply to

Basel Mission Mechanical Establishment,
[142-1] **Mangalore.**

ಹೊಸ ಬಂಗಾಳಿ ನಾವಿಲ್ಸ್.—ವಿಷವಿಜಯ 4 ಆ. ಸನ್ಯಾಸಿನಿ 1½ ಆ. ಅನಾಥಪ್ರೇತ 1 ಆ. ಬಿ. ವೆಂಕಟಾಚಾರ್ಯರಿಂದ ವಂಗವಿಜೇತ 1-4-0. ಚಂದ್ರಶೇಖರ 1-1-0. ರಜನಿ 13 ಆ. ಅಹಲ್ಯಾಬಾಯಿ 9 ಆ. ಇತ್ಯಾದಿ. ಚಿತ್ರವಿಚಿತ್ರಾವಳಿ II 8 ಆಣೆ. ಮಾಯಾವಿ ಪ್ರಿಂಟಾಗುತ್ತಿದೆ. ನ್ಯಾಯದರ್ಪಣ 1½ ರೂಪಾಯಿ.
[53-19] ಎಂ. ಸುಬ್ಬರಾವ್, ಬುಕ್ ಸೆಲರ್, ಶಂಕರಪುರ, ಬೆಂಗಳೂರು ಸಿಟಿ.

ಕಳವು, ದರೋಡೆ.

ಡಕಾಯಿತಿ, ಆಕ್ರಮ ಪ್ರಸಂಗವು, ಆಸಾಮಿ ಚೋರಿ, ಮಾನನಷ್ಟ ಮುಂತಾದವುಗಳಿಗೆ ಶಿಕ್ಷೆವಿಧಿಸಿರುವ ದಂಡನೀತಿ ಶಾಸ್ತ್ರವು ಪೂರ್ವದಲ್ಲಿ ಶುಕ್ರಾಚಾರ್ಯರಿಂದ ರಚಿತವಾಗಿ ಈಗಿನ ಬ್ರಿಟಿಷ್ ಚಕ್ರಾಧಿಪತ್ಯದಲ್ಲಿ ಅನುಮೋದಿಸಿ ಇಂಡಿಯಾ ಗವರ್ನರ್ ಜನರಲ್‌ರವರಿಂದ ಮುಂಜೂರಾಗಿ ಕಲ್ಕತ್ತಾ, ಮುಂಬೈ, ಮದ್ರಾಸ್, ಮೈಸೂರು ಜಿಲ್ಲಾಗಳಲ್ಲಿ « ಕನ್ನಡ ಇಂಡಿಯನ್ ಪೆನಲ್ ಕೋಡ್ » ಎಂಬ ಅಭಿಧಾನದಿಂದ ಜಾರೀಲಿ ಬಂದಿರುವರು. ಈ ಆಕ್ಟಿಗೆ ಅನೇಕ ಜಡ್ಜಿಗಳು ಟಿಪ್ಪಣಿಗಳನ್ನು ಬರೆದಿರುವರು. ಅವುಗಳೂ ಈ ಪುಸ್ತಕದಲ್ಲಿ ಅಡಗಿರುವವು. ಕ್ರಯ ಧಪ್ಪ ಕಾಗದದ್ದು 3 ರೂಪಾಯಿ; ಹಸನುಕಾಗದದ್ದು ರೂ. 2-8-0.

[143-1] ವಿಳಾಸ—ಬಿ. ನರಸಿಂಗರಾವ್,
ಎಡಿಟರ್, ಲಾ ಗೆಜೆಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

ರಸಿಕರಾದ ಕನ್ನಡಿಗರೇ!

ಇತ್ತ ನೋಡಿ.

« ನಿರುಪಮಾ » ಹೊಸ ನಾಟಕಗಳಲ್ಲಿ ಮೇಲೆನಿಸಿ ಬಹು ಜನರ ಸ್ತೋತ್ರಕ್ಕೆ ಪಾತ್ರವಾದ ನಾಟಕ. ಕಥಾ ವಿಧಾನವೂ ಮಾತುಗಳೂ ಪದ್ಯಗಳೂ ಬಹು ಚಮತ್ಕಾರವಾಗಿಯೂ ಸರಸವಾಗಿಯೂ ಇವೆ. ಕ್ರಯ 12 ಆಣೆ. « ಕುಮುದಿನಿ » ಬಂಗಾಳಿಯ ನಾವೆಲಿನ ಭಾಷಾಂತರ, ಪತಿವ್ರತೆಯ ಕಥೆ. ಕ್ರಯ 6 ಆಣೆ. « ಸಂತಾಪಕ » ಮನೋಹರವಾದ ನವೀನ ಕಾದಂಬರಿ. ಎಲ್ಲರೂ ಅಗತ್ಯವಾಗಿ ಓದಬೇಕಾದುದು. ಕ್ರಯ 4 ಆ, « ಮಹಾರಾಜ್ಯಪುರಾಧಿಪತ್ಯ » 4 ಆ. « ಪಟು ಬೋಳ ರಹಸ್ಯ » 2 ಆ. « ಕಲಹಪ್ರಿಯಾಪ್ರಹಸನ » 2 ಆ. « ಯೋಗಿನಿದ್ರಾ ಪ್ರಹಸನ » 2 ಆಣೆ.—ಈ ನಾಲ್ಕು ನಕಲಿಗಳೂ ಒಟ್ಟು 8 ಆಣೆ.
[266-29] ವಿಳಾಸ— ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

WANTED

An active and influential Sole District Agent for the Districts of Bangalore, Tumkur, Shimoga, Kolar, and Coorg on liberal terms of Commission and monthly Office allowance. None but those who can guarantee good business need apply to

Messers. VENKATACHALAM & SONS.
Chief Agents,
Hindustan Co-operative Insuraunce Society, Ltd.,
166, Dodpet, near Old Taluk Cutcherry,
[224-30] *MYSORE.*

ನ್ಯಾಷನಲ್ ಅಷೂರೆನ್ಸ್ ಕಂಪನಿ, ಲಿಮಿಟೆಡ್,

ವಿಜಯನಗರಂ ಸಿಟಿ.

1905 ರಲ್ಲಿ ಸ್ಥಾಪಿಸಲ್ಪಟ್ಟದ್ದು.

1912 ನೇ ಆಕ್ಟು ಪ್ರಕಾರ ಬದಲಾಯಿಸಿದೆ.

ಗವರ್ನಮೆಂಟ್ ಸೆಕ್ಯೂರಿಟಿಗಳನ್ನು ಪಡೆದಿದೆ.

ಕಂಪನಿ ಆಸ್ತಿಯನ್ನು ಹಂಚಿಕೊಳ್ಳುವ ಷೇರುದಾರರಿಲ್ಲ.

ವೈದ್ಯರ ಪರಿಕ್ಷಾ ಸರ್ಟಿಫಿಕೇಟು ಅವಶ್ಯವಿಲ್ಲ.

ಬೋನಸ್ ಹಣ ಅಪಾರವಾಗಿ ಪಾವತಿ ಮಾಡಿದೆ.

ಜೀವವಿಮೆ—ತಿಂಗಳ ಚಂದಾ 1 ನೇ ಕ್ಲಾಸ್ ರೂ. 1; 2 ನೇ ಕ್ಲಾಸ್ ರೂ. 3-8-0.
ಮದುವೆ ಫಂಡು—ತಿಂಗಳ ಚಂದಾ ರೂ. 1-0-0.

ಇದು ಬಹು ಲಾಭಕರವಾದ ಮತ್ತು ಸುರಕ್ಷಿತವಾದ ಕಂಪನಿ. ವಿಮೆ ಮಾಡತಕ್ಕವರಿಗೂ ಫಂಡು ಪಡೆಯತಕ್ಕವರಿಗೂ ತುಂಬಾ ಅನುಕೂಲವಾಗಿರುತ್ತದೆ. [138-3]

ಏಜಂಟರು ಬೇಕು. ಧಾರಾಳವಾದ ಕಮಿಷನ್ ಸಿಗುತ್ತೆ. ಕಂಪನಿಯ ಪ್ರಾಸ್ಪೆಕ್ಟಸ್ಸು ಬಿಟ್ಟಿ ಕೇಳಿದವರಿಗೆ ಕೊಡುತ್ತೆ. ಈ ವಿಳಾಸಕ್ಕೆ ಬರೆದುಕೊಳ್ಳಿ :—

ವಿ. ಬಿ. ಶ್ರೀಕಂಠಯ್ಯನವರು,
ಮೈಸೂರು ಮತ್ತು ಕೊಡಗಿನ ಚೀಫ್ ಏಜೆಂಟ್,
ಕೋಟೆ, ಬೆಂಗಳೂರು ಸಿಟಿ.

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು."

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು. ವಾಯು, ಕೀಲು, ಅರಶಲೆ, ಚಳಿನೋವುಗಳು; ಯಾವ ಕಾರಣದಿಂದ ಹುಟ್ಟುವ ಬಾಧೆಗಳಾಗಲಿ, ಉಳುಕು, ಹಲ್ಲುನೋವು, ಗಂಟ್ಲು ಗಾರೆನ್ನುವುದು, ಕೆಮ್ಮುಗಳು, ಶೀತನೆಗಡಿ, ಶ್ವಾಸರೋಗ, ಬಚ್ಚು, ಉಳುಕು, ಛಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ. ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು. ಕ್ಲಿಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲಿ ಕೊಡಿ ಎಂದು ಕೇಳು. ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡಬೆಂದು ಕೇಳಿ ತೆಗೆದುಕೋ. ಈ ಯಶಸ್ವಿಯಾಗಿ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ. ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ. ಲಕ್ಷಾಂತರ ಜನರು ಗುಣಹೊಂದಿದಾರೆ; ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ. [122-6]

"ಕ್ಲಿಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡಿ. ಅದರ ಕ್ರಯ ಬಾಟ್ಲಿಗೆ 12 ಆಣೆ; ಅಂಚೆ ವೆಚ್ಚ 4 ಆಣೆ. 3 ಅಥವಾ ಹೆಚ್ಚು ಬಾಟ್ಲಿ ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ. ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ. ವಿಳಾಸಗಳು:—(1) ಎಸ್. ಪೀಟರ್ಸ್, 37 ಪಾಮರೆಸಿಲ್ಕ್ ಬೀದಿ, ಪುರಸವಾಕಂ, ವೇಪೇರಿ, ಮದರಾಸ್; (2) ಟಿ. ಎಸ್. ಚೆನ್ನಯ್ಯಶೆಟ್ಟರು, ಜನರಲ್ ಮರ್ಚಂಟ್, ತುಮಕೂರು.

ಶ್ರೀಕರಕಸ್ತೂರಿಮಾತ್ರೆ

ಬಿ. ವಿ. ಪಂಡಿತರ

250 ಮಾತ್ರೆಯುಳ್ಳ ಸೀಸೆಗೆ 4 ಅ.; 5 ಸೀಸೆಗಳಿಗೆ 1 ಇನಾಂ.

ಈ ಮಾತ್ರೆಗಳ ಬೆಲೆಯನ್ನು ನೋಡಿ ಇವರ ಗುಣವನ್ನು ಊಹಿಸಲಾಗದು. ಟಿಬೆಟ್ ದೇಶದ ಕಸ್ತೂರಿಯಿಂದಲೇ ವಿಶೇಷವಾಗಿ ತಯಾರಾಗಲ್ಪಡುತ್ತಿರುವ ಈ ಶ್ರೀಕರ ಕಸ್ತೂರಿ ಮಾತ್ರೆಗಳು ಸುವಾಸನೆಯಾಗಿರುವುದು ಮಾತ್ರವಲ್ಲದೆ ತಾಂಬೂಲದೊಡನೆ ಅಥವಾ ಹಾಗೆಯೇ ಸೇವಿಸಿದರೆ ಎಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸುವುದು. ಮಕ್ಕಳಿಗೆ ಉಂಟಾಗುವ ಅಜೀರ್ಣಭೇದಿ-ಜ್ವರ-ಕೆಮ್ಮು-ನೆಗಡಿ-ಎಳವು-ಹೊಟ್ಟೆಯುಬ್ಬರ-ಈ ರೋಗಗಳನ್ನು ಸಮೀಪದಲ್ಲಿಯೇ ವೈದ್ಯನಿದ್ದಂತೆ ಶೀಘ್ರ ಗುಣಪಡಿಸುವುದು. ಪ್ರಯಾಣಿಕರಿಗೂ ಸೋಂಕು ರೋಗಸ್ಥಳದಲ್ಲಿರುವವರಿಗೂ ಮಲೆನಾಡಿನಲ್ಲಿರುವವರಿಗೂ ಇದರಂತೆ ಮತ್ಯಾವುದೂ ಆರೋಗ್ಯವನ್ನು ಕೊಟ್ಟು ಕಾಪಾಡಲಾರದು. [220-36]

ವಿಷಮಜ್ವರಗಳು-ನೆಗಡಿ-ಕೆಮ್ಮು-ತಲೆನೋವು-ಅಗ್ನಿಮಾಂದ್ಯ-ಶೀತವಾಯು-ಹಲ್ಲುನೋವು-ಮಲಬಂಧ-ಅರೋಚಕ-ನರಗಳ ದೌರ್ಬಲ್ಯ—ಈ ರೋಗಗಳನ್ನು ಪ್ರತಿಯೊಬ್ಬರಿಗೂ ಗುಣಪಡಿಸಿ ರಕ್ತವೃದ್ಧಿಯನ್ನುಂಟುಮಾಡುವುದು. ಸಾವಿರಾರು ಜನರು ಪರೀಕ್ಷಿಸಿದ್ದಾರೆ. ಟಪಾಲ್ ಖರ್ಚು 12 ಸೀಸೆ ವರೆಗೆ 4 ಆಣೆ.

ವಿಳಾಸ—ಮ್ಯಾನೇಜರ್, ಸದ್ವೈದ್ಯಶಾಲಾ, ನಂಜನಗೂಡು.

ಚರಿವಾತದಿಂದ ಬಿಡುಗಡೆ ಪಡೆದೆ.

ನೀವು ಹಿಂಸೆಪಡಬೇಕಾದದ್ದು ಇಲ್ಲವೇ ಇಲ್ಲ. ಹಿಂದುಮುಖ್ಯ ಅನೇಕ ಔಷಧಗಳನ್ನು ಉಪಯೋಗಿಸಿದ್ದೀರಿ. ಆದರೂ ಕಠಿಣನೋವ ನ್ಯಾದರೂ ಹೋಗಿಸುವ ಔಷಧವುಂಟು.

ನೆಲ್ಲಿ ಸಂಸ್ಥಾನದ ಸೌತ್ ಹಿಲ್ ಲಾಡ್ಜ್ [illegible] ಹೇಳುವುದೇನೆಂದರೆ:—ನಾನು ಚರಿವಾತದಿಂದ ಅಧಿಕ ಕಷ್ಟಪಟ್ಟೆನು. ನನ್ನ ಗೋಳನ್ನು ಯಾರೂ ನೋಡಲಾಗುತ್ತಿರಲಿಲ್ಲ. ಕಾಲ್ಗಳು ನೋವಿನಿಂದ ನೊಂದಿದ್ದವು ಕಷ್ಟವಾಗಿತ್ತು. ನನ್ನ ಕಣ್ಣು ತಲೆ ಎಲುಬುಗಳೂ ಅಲೆಯುವ ವರ್ಷಗಳಲ್ಲಿಯೂ ಬಿಡುವಿಲ್ಲದೆ ಸ್ಥಿತಿಯನ್ನು ತಿಳಿದ್ದರದೇಲೆ 7 ನಿಮಿಷಗಳಲ್ಲಿ ನೋವಿನಿಂದ ಬಿಡುಗಡೆ ಹೊಂದಿದೆನು. ಮೂರು ವಾರಗಳ ತರುವಾಯ ಆ ನೋವು ತಿರುಗಿ ಕಾಣಿಸಲೇ ಇಲ್ಲ. ಟಿಟೋಸ್ ಓರಿಯೆಂಟಲ್ ಬಾಂ ಎಂಬುದನ್ನು ಆರ್ಧ ಸೀಸೆ ಉಪಯೋಗಿಸಿ, ಪೂರ್ಣ ಕ್ಷೇಮ ಹೊಂದಿದೆನು.

ಸೀಸೆ 1ಕ್ಕೆ 1 ರೂ. ವೇರಿಗೆ ಎಲ್ಲಾ ಔಷಧಿಗಾರರಲ್ಲಿಯೂ ಸಿಗುತ್ತೆ.

101-9

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೇನ್ ಯವರು ಹೊಟ್ಟೆಶೂಲೆ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.



3-27

ಕೆಳ ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಕೀಲುಗಳ ನೋವು, ಹೊಟ್ಟೆಯ ನಾನಾ ತರವ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತವೆ. ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿಲ್ಲ.

ಜ್ಞಾಪಕವಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ. ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ.

ಇದು ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಶೀಸೆಗೆ ೧ ರೂಪಾಯಿ. ದೊಡ್ಡ ಶೀಸೆಗೆ ೨ ರೂಪಾಯಿ.

500 ರೂಪಾಯಿಗಳು ಬಹುಮಾನ.
ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

ಈ ಮುರಬ್ಬಾವು "ಪಂಜಾಬ್ ಸಾಲಾಮಿಸ್ರಿ" ಅಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡಲ್ಪಡುವುದು.

ಕ್ರಯ 2 ರೂಪಾಯಿ.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡವರಿಗೆ ಹೃದಯ ಕೋಶವು ಬಲಹೀನವಾಗಿ ನಾನಾ ವ್ಯಾಧಿಗಳಿಂದ ಮರಣ ಪರಿಯಂತರವೂ ಬಾಧೆಪಡುವರು. ಈ "ಪಂಜಾಬ್ ಸಾಲಾಮಿಸ್ರೀ ಮುರಬ್ಬಾ" ದ ಸೇವನೆಯಿಂದ ಕೈ, ಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ತಲೆಯ ನೋವೂ, ಇವುಗಳೆಲ್ಲವೂ ಪಂಜಾಬ್ ಸಾಲಾಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುತ್ತದು, ಮೆದುಳಿಗೆ ಬಲವನ್ನುಂಟುಮಾಡುವುದು, ಧಾತುವನ್ನು ಕೇಟಿಗೊಳಿಸುವುದು, ಸೊಂಟದ ನೋವು ಸ್ವಲ್ಪ ಮಾತ್ರವೂ ಇರಲಾರದು. ಈ ಪಂಜಾಬ್ ಸಾಲಾಮಿಸ್ರಿಯ ಮುರಬ್ಬಾಕ್ಕೆ ಕಾಂಸ್ಯದ ಮತ್ತು ಭಂಗಾರದ ಭಸ್ಮವು ಎಷ್ಟು ಮಾತ್ರವೂ ಸಮಾನವಾಗಲಾರದು. ಹೊಟ್ಟೆಯಲ್ಲಿರುವ ಜ್ವರದ ಗಡ್ಡೆಯನ್ನು ನಾಶಪಡಿಸುವುದು. ಶ್ವಾಸ ಕಾಸರೋಗಗಳನ್ನು ನಿರ್ಮೂಲಪಡಿಸುವುದು. ಕಾಬೂಲ್, ಕಾಂದಹಾರ್ ದೇಶಗಳ ಜನರು ಸಾಲಾಮಿಸ್ರಿಯ ಹಣ್ಣನ್ನು ಬಹಳವಾಗಿ ತಿನ್ನುವರು. ಆದ್ದರಿಂದ ಶಕ್ತಿಯಲ್ಲಿ ಬಹಳ ಗಟ್ಟಿಗರು. ಡಬ್ಬಾ 1 ಕ್ಕೆ ರೂ 2-0-0. ಟಪಾಲ್ ಖರ್ಚು ಅಲಾಯಿದ. [133-3]

ಅನುಪಾನಪತ್ರಿಕೆ ಔಷಧದ ಸಂಗಡ. ಕ್ಯಾಟ್ಲಾಗ್ ಅಪೇಕ್ಷಿಸುವವರು 6 ಕಾಸಿನ ಸ್ಟ್ಯಾಂಪು ಕಳಿಸಿ.

ಏಜಂಟರು—ಡಿ. ಸೈಯದ್ ಉಸ್ಮಾನ್ ಅಂಡ್ ಕೊ, ದೊಡ್ಡಪೇಟೆ, ಬೆಂಗಳೂರು ಸಿಟಿ.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು, 5 ಹಾಜಿ ಸಾಹೇಬ್ ಮಹಡಿ, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

Mellin's Food

ಮೆಲ್ಲಿನ್ಸ್ ಆಹಾರವು

ಕೈಸೋಕದೆ ಮಾಡಿದ

ಶಿಶುಗಳಿಗೂ ರೋಗಿಷ್ಠರಿಗೂ

ಮೆಲ್ಲಿನ್ಸ್ ಆಹಾರವು ಕ್ರಮಪ್ರಕಾರ ತಯಾರ್ಮಾಡಿ ಸೇವಿಸಿದರೆ ಹುಟ್ಟಿದ ಶಿಶುಗಳು ಮೊದಲುಗೊಂಡು ಮುದಿಪ್ರಾಯದವರ ತನಕ ಎಲ್ಲರಿಗೂ ಸಂಪೂರ್ಣವಾದ ದೇಹಪುಷ್ಟಿಯನ್ನೂ ವಿಶೇಷವಾದ ಬಲವನ್ನೂ ಕೊಡುತ್ತದೆ. [4-27]

ಮೆಲ್ಲಿನ್ಸ್ ಆಹಾರವೆಂಬ ಬೇರೆ ಬೇರೆ ತಿಂಡಿ ಪದಾರ್ಥಗಳನ್ನು ಹಿಂದುಸ್ಥಾನ, ಬರ್ಮಾ ಮತ್ತು ಸಿಲೋನ್ ದ್ವೀಪಗಳಲ್ಲಿ ಎಲ್ಲಾ ವ್ಯಾಪಾರಗಾರರೂ ಬಿಕರಿಮಾಡುತ್ತಾರೆ. **Messrs. OAKES & Company, Mount Road, Madras.**

ವಿಳಾಸ—ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ. ಮೌಂಟ್ ರೋಡ್. ಮದರಾಸ್.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಹೊಡೆತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಸಪ್ತ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ಬಾರಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಸುತಕಷೂಲಿ, ಮಕ್ಕಳ ಎಳವು, ಜ್ವರ, ನಷ್ಟಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—320 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ; 6 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪೀ ವರೆಗೆ ಪೋಸ್ಟೇಜು 4 ಆಣೆ. [179-43]



೨. ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ವೈದ್ಯರಿಂದು ಕೋರಿಯೆಗಳೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರಿಸಿ ಮೂತ್ರವು ಕಟ್ಟಿದ್ದ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ. ಸಮಯದಲ್ಲಿ 'ಪೇಚಾಡಬೇಡಿ! ಒಂದೇ ಒಂದು ಬುದ್ಧಿಯನ್ನಿಟ್ಟಿರಿ! ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುವುದು. ಬೆಲೆ ರೂ. 1; ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ತಂಜಾವೂರು. ಗೆಜ್ಜೆ ಅಡ್ಡಿಗೆ ಕ್ರಯ 7 ಆಣೆ.



ಅಡ್ಡಿಗೆ ಮಾದರಿ ನೋಡಬೇಕಾದರೆ ಬರೆದರೆ ಉಚಿತವಾಗಿ ಕಳುಹಿಸುತ್ತೇವೆ. ಇದು ಎಲೆಕ್ಟ್ರಿಕ್ ಚಿನ್ನದಿಂದ ಗಟ್ಟಿ ಗೆಜ್ಜೆಗಳನ್ನು ತಯಾರಿಸಿ ಸುಂದರವಾಗಿ ಕುಕ್ಕುವುಗಳಿಟ್ಟು ರೇಷ್ಮೆ ಮಿಶ್ರವಾದ ಕರಿ ದಾರದಿಂದ ಕಟ್ಟಿರುತ್ತೆ. ಸ್ತ್ರೀಯರು ಕೊರಳಲ್ಲಿ ಧರಿಸುವದಕ್ಕೆ ಲಾಯಖಾದದ್ದು. ನಮ್ಮಲ್ಲಿ ಜನಗಳಿಗೆ ನಂಬಿಕೆ ಹುಟ್ಟುವದಕ್ಕಾಗಿ ಮಾಟಂ ನೋಡಬೇಕೆಂದು ಬರೆಯುವವರಿಗೆ ಮಾದರಿ ಕಳುಹಿಸುತ್ತೇವೆ. [139-2]

ವಿಳಾಸ—ಎಸ್. ಎಚ್. ಮೂರ್ತಿ ಅಂಡ್ ಕಂಪೆನಿ,
ತಿರುವಲಕ್ಕೇಣಿ, ಮದರಾಸು.

ಮಧುರೆ ಜುನ್ನಡಿ ಅಂಚಿನ ಸೀರೆ ಅಪ್ಪಲ್ ರಖಂ ರೂ. 1-15-0.

ಇದು 18 ಮೊಳ ಧಾರಾಳವಾಗಿದೆ. ಉಡಲು ಲಾಯಖಾದದ್ದು. ಬಣ್ಣ ಹೋಗದು, ಸುಂದರವಾದ ಸೆರಗು. ಫೋಟೋ ಪ್ರಕಟನೆಗಳ ದೆಸೆಯಿಂದ ಈ ಖಾರೀ ಕ್ರಯದ ಸೀರೆಯನ್ನು ಅಸಲು ಬೆಲೆಗೆ ತಗ್ಗಿಸಿ ಮಾರುತ್ತೇವೆ. ಜಾಗ್ರತೆ ತರಿಸುವವರಿಗೆ ಮಾತ್ರ ಈ ಕ್ರಯಕ್ಕೆ ದೊರೆಯುತ್ತೆ.

ವಿಳಾಸ—ರಾಮರಾವ್, ಎಸ್. ಎಂ. ಕೋಯಿಲ್ ಬೀದಿ,
[139-3] ತಿರುವಲಕ್ಕೇಣಿ, ಮದರಾಸು.

ಇಗೋ ನೋಡಿ.

ನಾವು ಸ್ವತಃ ಕಂಡುಹಿಡಿದಿರುವ ಬೆನ್ನುಕಡೆ ಕಾಣುವಂಥಾ ಕನ್ನಡಕ (ಸುಲೋಚನ) ಕ್ಕಾಗಿ 5 ರೂಪಾಯಿ ಮನಿಆರ್ಡರು ಮಾಡುವವರಿಗೆ ಬಹಳ ಸೊಗಸಾದ 18 ಕ್ಯಾರಟ್ ನಕಲ್ ಭಂಗಾರದ ಉಂಗುರವು ಬಿಟ್ಟಿ ಕೊಡುತ್ತೇವೆ. ಈ ಕನ್ನಡಕವು 20 ನೇ ಶತಮಾನದ ಆಶ್ಚರ್ಯವು; ಈ ಸಂವತ್ಸರದ ನವೀನವಸ್ತುವು ತಲೆಗೆ ಮೂರನೆಯ ಕಣ್ಣು ಪ್ರಪಂಚದಲ್ಲಿ ಈ ಕನ್ನಡಕದ ಮೂಲಕ ಹುಟ್ಟಿದ್ದರಿಂದ ನಮ್ಮ ಎದುರಿಗೂ, ಹಿಂದುಗಡೆಯೂ ನಡೆಯುವ ಸಂಗತಿಗಳನ್ನೆಲ್ಲಾ ಒಂದೇ ಸಮಯದಲ್ಲಿ ತಿಳಿಯುವಂತಾಗಿದೆ. ನಿಮ್ಮ ತಲೆಯಲ್ಲಿ ಹಿಂದುಗಡೆ ಇನ್ನೊಂದು ಕಣ್ಣು ಬೇಕೆಂಬ ಅಪೇಕ್ಷೆಯೇ ಬೇಡ. ಇದು ಬಹು ಸುಲಭವಾದದ್ದು, ಪರಮಾಶ್ಚರ್ಯಕರವಾದದ್ದು. ಈ ಕನ್ನಡಕವು ಪೋಲೀಸಿನವರಿಗೂ, ಪತ್ತೇದಾರಿಯವರಿಗೂ, ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ಅನ್ಯೇಕೆ ಪ್ರತಿ ಒಬ್ಬರಿಗೂ ಅತ್ಯಗತ್ಯವಾಗಿ ಬೇಕಾದದ್ದಾಗಿರುತ್ತದೆ. ಆದ್ದರಿಂದ ಈ ಸುಲಭ ಸಮಯವನ್ನು ಕಳೆಕೊಳ್ಳಬೇಡಿ. ಕ್ರಯ ಐದು ರೂಪಾಯಿ (5 ರೂ.) ಮಾತ್ರ. ಈ ದಿನವೇ ನೀವು 5 ರೂ. ಕಳಿಸಿ ಕನ್ನಡಕವನ್ನೂ ಮೇಲ್ಕಂಡ ಬಹುಮಾನವನ್ನೂ ತರಿಸಿಕೊಳ್ಳಿ. [140-1]

ವಿಳಾಸ.—ಫಟಾಲಾ ಕಂಪನಿ, ಚಿತ್ತೂರು, ಉ. ಆರ್ಕಾಟು.

ತಾ.ಕ:—ನಮಗೆ ಇಂಗ್ಲೀಷಿನಲ್ಲೇ ಕಾಗದ ಬರೆಯಬೇಕು.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

3-23

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಕಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ:—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ.

ಸಾದಾ ಕೆಂಪು, ಕಪ್ಪು, ಬಿಳಿಕೆ, ಕಾಫಿ ಬಣ್ಣಗಳ ಟೋಪಿಗಳು ೧ ರೂ. ೮ ಆ; ೧ ರೂ. ೬ ಆ.;

ಚುಕ್ಕೆಯುಳ್ಳ ಟೋಪಿಗಳು ರೂ. ೧—೮; ರೂ. ೧—೧೨.

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ರೂ. ೨.

ಜಾರದ ಟೋಪಿಗಳು ೧ ರೂ. ೧೨ ಆ.; ೧ ರೂ. ೮ ಆ.; ೧ ರೂ. ೬ ಆ

ಮುಸುಕಿನ ಟೋಪಿಗಳು ೧ ರೂ. ೮ ಆ.; ೧ ರೂ. ೬ ಆ.

"In addition to cap making we are giving special attention to knitting stockings. All our stockings, for adults and children, are hand-made. Prices will be sent on enquiry."

ಮ್ಯಾನೇಜರ್, ಟೋಪಿ ಕಾರ್ಖಾನೆ,
ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ.

Apply:—
MANAGER, CAP WORKS,
GIRLS' INDUSTRIAL SCHOOL, HASSAN.

"ವೃತ್ತಾಂತ ಪತ್ರಿಕೆ" ಏಜಂಟರಿಗೆ.

ಕಳೆದ ತಿಂಗಳ ಆಖೈರಿಗೆ ವೃತ್ತಾಂತ ಪತ್ರಿಕೆಯ ವರುಷವು ಪೂರೈಸಿರುತ್ತದೆ. ನಮ್ಮ ಏಜಂಟರು ಬಿ. ಫಾರಮುಗಳನ್ನು ತಯಾರುಮಾಡಿ ಬೇಗನೆ ಕಳುಹಿಸಿಕೊಡಬೇಕಾಗಿದೆ. ಕೆಲವು ಏಜೆಂಟರು ಹಿಂದಿನ ಕ್ವಾರ್ಟರುಗಳ ಲೆಕ್ಕಗಳನ್ನೇ ಇನ್ನೂ ಕಳುಹಿಸಿಲ್ಲ. ಎಲ್ಲಾ ಲೆಕ್ಕಗಳನ್ನೂ ಈ ವಾರದೊಳಗೆ ಕಳುಹಿಸಿಕೊಡುತ್ತಾರೆಂದು ನಿರೀಕ್ಷಿಸಲಾಗಿದೆ.

ಮ್ಯಾನೇಜರ್, "ವೃತ್ತಾಂತ ಪತ್ರಿಕೆ," ಮೈಸೂರು.

ಗೃಹಕೃತ್ಯದ ನೋಟೀಸು.

ಬೆಂಗಳೂರು ಡಿಸ್ಟ್ರಿಕ್ಟಿಗೆ ಸೇರಿದ ಕ್ಲೋಸ್‌ಪೇಟೆ ಟವುನಲ್ಲಿದ್ದ ನಮ್ಮ ದೊಡ್ಡಪ್ಪನಾದ ಆಯಿತಾ ರಾಮಯ್ಯಶೆಟ್ಟಿಯವರು ಕಾಲವಾಗಿರುವದರಿಂದ ಡಿಟೋ ಕ್ಲೋಸ್‌ಪೇಟೆಯಲ್ಲಿರುವ ನನಗೆ ಸೇರಿದ ಅರ್ಧಭಾಗದ ಮನೆಯನ್ನು ಬಿಟ್ಟು ಮಿಕ್ಕ ಅರ್ಧಭಾಗವನ್ನು ಸದರಿಯವರ ಹೆಂಡತಿ ಆಯಿತಾ ಭಕ್ತಾಲಮ್ಮನು ಪರಭಾರೆ ಮಾಡುವದಾಗಿ ಕೇಳುತ್ತೇನೆ. ನನ್ನ ಅನುಮತಿಯಿಲ್ಲದೆ ಅವರಿಂದ ಪರಭಾರೆ ಮಾಡಿಕೊಳ್ಳುವವರು ನನಗಾಗುವ ನಷ್ಟಕ್ಕೆಲ್ಲಾ ಗುರಿಯಾಗಬೇಕಾಗುತ್ತೆ. ಮೇಲ್ಕಂಡ ಮನೆಯ ವಿಷಯವಾಗಿ ನನಗೂ ಅವರಿಗೂ ತಕರಾರಿದೆ.

ಕ್ಲೋಸ್‌ಪೇಟೆ. [141-2]

23-6-1914. ಆಯಿತಾ ಸಂಜೀವರಾಯಶೆಟ್ಟಿ,

ಗೃಹಕೃತ್ಯದ ನೋಟೀಸು.

ಗೋರಿಬಿದನೂರು ತಾ॥ ಹೊಸೂರು ಹೋಬಳಿ ಕುರೂಡಿ ಗ್ರಾಮದಲ್ಲಿರುವ ನಮ್ಮ ಜ್ಞಾತಿ ಕಂಬಾಲೂರು ಹನುಮಂತಾಚಾರ್ ಬಾಬತು ವಾಳಿಗೆ ಮನೆಯನ್ನು ಮೇಲ್ಕಂಡ ಹನುಮಂತಾಚಾರ್ ಸೋದರಳಿಯ ಗುಂಡಾಚಾರ್, ಹನುಮಂತಾಚಾರ್ ಹೆಂಡತಿ ಸಾವಿತ್ರಮ್ಮ ಮತ್ತು ಹನುಮಂತಾಚಾರ್ ಅಣ್ಣ ಗೋವಿಂದಾಚಾರರ ಹೆಂಡತಿ ಸುಬ್ಬಮ್ಮ ಇವರು ಪರೀತಾಗಿ ನನ್ನ ಹಕ್ಕಿಗೆ ಲೋಪಮಾಡಬೇಕೆಂದು ಆಧಾರ ಕ್ರಯ ಭೋಗ್ಯ ವಗೈರೆ ಮೂಲಕ ಪರಭಾರೆ ಮಾಡಲು ಇವರಿಗೆ ಯಾವ ಹಕ್ಕೂ ಇರುವದಿಲ್ಲ. ಹಾಗೆ ಪಡೆದುಕೊಂಡವರು ನನ್ನ ಲುಕ್ಸಾನಿಗೆಲ್ಲಾ ಜವಾಬ್ದಾರರಾಗಬೇಕಾಗುತ್ತೆಂದು ಈ ಮೂಲಕ ಎಚ್ಚರಿಸಿರುತ್ತೇನೆ.

ಎಸ್. ಎಸ್. ಕಂಬಾಲೂರು ರಾಮಾಚಾರ್, ಕುರೂಡಿ, ಹೊಸೂರು
[147-1] ಹೋಬಳಿ, ಗೋರಿಬಿದನೂರು ತಾಲ್ಲೂಕು.

ಐದು ಘಂಟೆಗಳ ಅಲಾರಂ ಟೈಂಪೀಸು.

ಇದು ಒಂದು ಅದ್ಭುತವಾದ ಆಶ್ಚರ್ಯವು. ಯಾವಾಗ್ಗೂ ನೋಡಿರಲಾರಿರಿ. ಇದು ನಮ್ಮ ಹತ್ತಿರ ಹೊರ್ತು ಮತ್ತಾರಲ್ಲಿಯೂ ದೊರೆಯದು. ಈ ಐದು ಗಂಟೆಗಳು ಒಂದೊಂದು ಒಂದೊಂದು ತರಹಾ ಶಬ್ದದಿಂದ ಅಲಾರಂ ಹೊಡೆಯುವಾಗ ಶ್ರವಣಾನಂದವಾದ ಸಂಗೀತದಂತೆ ಇರುತ್ತೆ. ಇದರ ಶಬ್ದವು ಸಾಧಾರಣ ಒಂದು ಫರ್ಲಾಂಗಿನ ವರಿಗೂ ಕೇಳಿಸುತ್ತೆ. ಎಂಥಾ ಗಾಢನಿದ್ರೆ ಮಾಡುವವರೂ ತಾವು ಎಷ್ಟು ಹೊತ್ತಿಗೆ ಏಳಬೇಕೋ ಅದಕ್ಕೆ ಸರಿಯಾಗಿ ಅಲಾರಂ ಪಿನ್ನನ್ನು ಕೊಟ್ಟು ತಲೆ ಕೆಳಗೆ ಇಟ್ಟು ಮಲಗಿಕೊಂಡರೆ ಆ ಹೊತ್ತಿಗೆ ಸರಿಯಾಗಿ ಥಟ್ಟನೆ ಎಬ್ಬಿಸುತ್ತೆ. ಇದರ ಬೆಲೆ 1 ಕ್ಕೆ ರೂ. 4-8-0. [132-3]



ನಮ್ಮ ಅಡ್ರಸು—ಎಂಪರರ್ ವಾಚ್ ಕಂಪೆನಿ,
ಪೋಸ್ಟು ಬಾಕ್ಸು ನಂ. 170, ಮದರಾಸು.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ:—ಬೆನ್ನಿನಲ್ಲಿ ಛಳುಕು; ನಿದ್ರೆಯಿಲ್ಲದೆ ಇರುವುದು; ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಿಳುಪಾಗಿಯೋ ಇಳಿಯುವುದು; ಬಿಡದೆ ಬಾಯಾರಿಕೆ; ಬಳಲಿಕೆ; ಎದೆ ತಲ್ಲಣಿಸುವುದು; ತಲೆನೋವು; ಗಾಬರಿ; ಕಣ್ಣುಮೊಬ್ಬು; ತಲೆ ತಿರುಗುವಿಕೆ; ಮೈನೋವು; ಕೀಲುನೋವು; ಮರವು; ನಿತ್ರಾಣ; ಇವೇ ಮೊದಲಾದುವು ಅಲಕ್ಷ್ಯಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [181-43]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ಸ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು.



ರೂ. ೨—೦—೦; ಅಥವಾ ೬ ಬುಡ್ಡಿಗಳಿಗೆ ರೂ. ೧೦—೮—೦. ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು. ಅಥವಾ ಡೋಸ್, ಪಿ. ಒ. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು

ಔಷಧಿ ತಕ್ಕೊಂಡು ಗುಣವಾಗುವದಕ್ಕಿಂತಲೂ ತಕ್ಕ ಕ್ರಮದಲ್ಲಿರುವದು ಉತ್ತಮ.

SCOTT'S EMULSION. 5-37

(ಸ್ಕಾಟ್ಸ್ ಇಮಲ್ಷನ್)

ಥಟ್ಟ, ಶರೀರವ್ಯವಸ್ಥೆ ಪ್ಲೇಗ್, ಮಹಾಮಾರಿರೋಗ, ವಾಂತಿಭೇದಿ ಅಥವಾ ಶ್ವಾಸಕೋಶದ ರೋಗಗಳ ಭಯಕ್ಕೆ ಒಳಪಡುವ ಅಗತ್ಯವಿಲ್ಲ.

ರೋಗವು ಬಲಹೀನರನ್ನೂ ದುರ್ಬಲರನ್ನೂ ಬೇಗನೆ ತಗಲಿ ಹಿಡಿಯುತ್ತದೆ.

ಅಸ್ವಸ್ಥವನ್ನು ದೂರ ಹೋಗಲಾಡಿಸಿ, ಶರೀರದಲ್ಲಿರುವ ಬಲಹೀನ ಭಾಗಗಳನ್ನು ಬಲಪ್ರಾಣಗೊಳಿಸಿ, ಸಂಪೂರ್ಣ ಸೌಖ್ಯವನ್ನು ಉಂಟುಮಾಡುತ್ತದೆ.

ಕೈಸೋಕದೆ ತಯಾರಾದದ್ದು.

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ.

ಎಲ್ಲಾ ಔಷಧಿ ವ್ಯಾಪಾರಗಾರರಲ್ಲೂ ಮಾರಾಟವಾಗುತ್ತದೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್.

ತಾಲ್ಲೂಕು ವರ್ತಮಾನಗಳು.

ಹೊಳೆನರಸೀಪುರ.—ಈ ಊರಿನಲ್ಲಿ ಮಳೆ ಸುತರಾಂ ಇಲ್ಲವೇ ಇಲ್ಲ. ಈಗ ನಾಲ್ಕೈದು ದಿವಸದಿಂದ ಮೋಡವಾಗುತ್ತಾ ಇವೆ. ಧಾರಣೆವಾಸಿಗಳೆಲ್ಲಾ ಬಹಳ ತಗ್ಗಾಗಿ, ಬಡಬಗ್ಗರು ಜೀವನ ಮಾಡುವದೇ ಕಷ್ಟವಾಗಿದೆ.—ಈ ಊರಿನಲ್ಲಿ ದನಗಳನ್ನು ಕೊಯ್ಯುವ ಪದ್ಧತಿಯು ಬಹಳ ಜಾಸ್ತಿಯಾಗಿತ್ತು. ನಮ್ಮ ಅಮಲ್ದಾರರು ಬಹಳ ಮುತುವರ್ಜಿಯಿಂದ ಇದಕ್ಕೆ ತುಂಬಾ ನಿಗಾಕೊಟ್ಟು ಬಹಳ ಮಟ್ಟಿಗೆ ಇದನ್ನು ತಪ್ಪಿಸಿರುತ್ತಾರೆ.

ದೇವನಹಳ್ಳಿ ತಾ॥ ವಿಜಯಪುರ(?).—ಕಾಲಸ್ಥಿತಿಯು ಮಳೆಯಿಲ್ಲದೆ ಭೀಕರವಾಗಿದೆ. ಜೂನ್ ತಾ. 12 ರಲ್ಲಿ ಶ್ರೀ ಶಿವಗಂಗಾ ಸ್ವಾಮಿಗಳವರು ದಯಮಾಡಿ 3 ದಿನವಿದ್ದು ಕರ್ಮವಿಷಯವಾಗಿ ಹೃದಯಂಗಮವಾದ ಉಪನ್ಯಾಸವನ್ನು ಮಾಡಿದರು. ಇಲ್ಲಿನ ಬ್ರಾಹ್ಮಣರೂ, ವರ್ತಕರೂ, ಅವರನ್ನು ಸತ್ಕರಿಸಿ 200 ರೂಪಾಯಿಗಳವರೆಗೂ ಕಾಣಿಕೆಯನ್ನು ಸಮರ್ಪಿಸಿದರು.—ತಾ. 19 ರಲ್ಲಿ ಬೆಂಗಳೂರು ಸರ್ಕಲ್ ಇನ್ಸ್‌ಪೆಕ್ಟರ್ ಸಾಹೇಬರವರು ದಯಮಾಡಿ ಇಲ್ಲಿನ ಸ್ಕೂಲುಗಳ ಕಿಂಡರ್‌ಗಾರ್ಟನ್ ಶಿಕ್ಷಣ, ಚಿತ್ರ, ಹೆಣಿಗೆ, ಮರಗೆಲಸ, ಮಣ್ಣಿನಕೆಲಸ, ಬಟ್ಟೆನಕೆಲಸ, ಇವೇ ಮೊದಲಾದುವುಗಳನ್ನು ಪರಾಮರಿಸಿ ತೃಪ್ತಿಗೊಂಡರು.—ಈ ಊರಿಗೆ ಒಬ್ಬ ಸೂಲಗಿತ್ತಿಯೂ, ಆಸ್ಪತ್ರೆಯೂ ಅತ್ಯಾವಶ್ಯಕವಾಗಿದೆ. 5-6 ಸಾವಿರ ಪ್ರಜೆಗಳುಳ್ಳ ದೊಡ್ಡ ಮ್ಯುನಿಸಿಪಾಲಿಟಿ ಇದ್ದರೂ ಈ ವಿಷಯದಲ್ಲಿ ಪ್ರಜೆಗಳೂ, ಸರ್ಕಾರದವರೂ ಏಕೆ ಉದಾಸೀನರಾಗಿರುವರೋ ಗೊತ್ತಿಲ್ಲ.

ಕುಣಿಗಲು.—ಇಲ್ಲಿ 2-3 ಹದ ಮಳೆಗಳಾದವು. ರೈತರು ಭೂಮಿಯನ್ನು ಉತ್ತು, ಬೀಜವನ್ನು ಬಿತ್ತುವದಕ್ಕೆ ಇನ್ನೂ ಮಳೆ ಸಾಲದ್ದರಿಂದ ಎದುರುನೋಡುತ್ತಿದ್ದಾರೆ. ಗಾಳಿ ಮಾತ್ರ ಜೋರಾಗಿ ಬೀಸುತ್ತಿದೆ. ಊರಿನಲ್ಲಿ ವ್ಯಾಪಿಸಿದ್ದ ಟಿಂಕೀಫೀವರ್ ಎಂಬ ಜ್ವರವೂ, ಸಿಡುಬಿನ ಉಪದ್ರವೂ ಕೊಂಚಮಟ್ಟಿಗೂ ಶಮನವಾಗಿವೆ. ಬಿಸಲಿನ ತಾಪ ಕಠಿನ.—ತಾ. 21 ನೇ ಭಾನುವಾರ ರಾತ್ರಿ ಸುಮಾರು 1 ಗಂಟೆಯ ಸಮಯದಲ್ಲಿ ಈ ಊರಿನಲ್ಲಿ ವಾಸಮಾಡುತ್ತಿರುವ ಜಾಗೇನಹಳ್ಳಿ ರ್‍ಯಾಸು॥ ಲಿಂಗಣ್ಣಯ್ಯನವರು ತಮ್ಮ ಮನೆಯ ವಟಾರದಲ್ಲಿ ದನಕರುಗಳನ್ನು ಕಟ್ಟಿಕೊಳ್ಳುವದಕ್ಕಾಗಿ ಹಾಕಿದ್ದ ಹುಲ್ಲಿನ ಪಡ್ಡಿಗೆ ಹ್ಯಾಗೋ ಬೆಂಕಿಬಿದ್ದು ಬೆಂದುಹೋದದ್ದಲ್ಲದೆ ಪಕ್ಕದಲ್ಲಿದ್ದ ದೊಡ್ಡ ಹೆಂಚಿನ ಮನೆಗೂ ಬೆಂಕಿ ಜ್ವಾಲೆಯು ವ್ಯಾಪಿಸಿ ಹತ್ತಿಕೊಳ್ಳುವದಕ್ಕೆ ಪ್ರಾರಂಭಿಸುವಷ್ಟರಲ್ಲಿಯೇ ಜನಗಳು ಸೇರಿ ತುಂಬಾ ಸಾಹಸಪಟ್ಟು ಬೆಂಕಿಯನ್ನು ಆರಿಸಿಬಿಟ್ಟರು. ಇದರಿಂದ ಇನ್ಯಾವ ಅಪಾಯವೂ ಸಂಭವಿಸಲಿಲ್ಲ.—ಬೀಡಿ, ಸಿಗರೆಟ್ಟುಗಳನ್ನು ಸೇದುವ ಹುಡುಗರ ದೆಸೆಯಿಂದಲೇ ಈ ಕೆಡಕು ಆಗಿರಬಹುದೆಂದು ಹೇಳುತ್ತಾರೆ. ಸರ್ಕಾರದವರು ಚಿಕ್ಕವಯಸ್ಸಿನ ಬಾಲಕರು ಬೀಡಿ, ಸಿಗರೆಟ್ಟುಗಳನ್ನು ಸೇದಬಾರದೆಂಬ ಕಾನೂನನ್ನು ಈ ಸ್ಥಳದಲ್ಲಿಯೂ ಜಾರಿಗೆ ತಂದರೆ ಅತ್ಯುತ್ತಮವಾಗಿರುವದು.

ಕುಣಿಗಲ್ ತಾ॥ ಅಮೃತೂರು.—ಸುಮಾರು 8-10 ವರ್ಷಗಳ ಕೆಳಗೆ ಅಮೃತೂರು ಗವರ್ನಮೆಂಟ್ ಬಾಯ್ಸ್ ಸ್ಕೂಲಿನ ಹೆಡ್ ಮಾಸ್ಟರ್ ಮ॥ ಕೃಷ್ಣರಾಯರು ಹೀನಸ್ಥಿತಿಯಲ್ಲಿದ್ದ ಸ್ಕೂಲನ್ನು ಬಹಳ ಮೆಹನತ್ತಿನಿಂದ ಅಭಿವೃದ್ಧಿಗೆ ತಂದು 40-50 ಹುಡುಗರಿಗೆ ಕನ್ನಡ ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆಹೊಂದಿಸಿದರು. ಆಕಸ್ಮಾತ್ ಅವರಿಗೆ ವರ್ಗವಾಯಿತು. ಆ ಕಾಲದಲ್ಲಿ ಗ್ರಾಮ ನಿವಾಸಿಗಳು ಮತ್ತು ವಿದ್ಯಾರ್ಥಿಗಳು ವಿಶ್ವಾಸ ಭಕ್ತಿಯಿಂದ ಮರ್ಯಾದೆ ತೋರಿಸಲು ಅವಕಾಶವಿಲ್ಲದೆ ಕುತೂಹಲಪಡುತ್ತಿದ್ದರು. ಅಷ್ಟರಲ್ಲಿಯೇ ಅವರು 23 ನೇ ತಾ. ಸೋಮವಾರ ಇಲ್ಲಿಗೆ ಬಂದರು. ವಿದ್ಯಾರ್ಥಿಗಳು ಮತ್ತು ಗ್ರಾಮಸ್ಥರು ಗವರ್ನಮೆಂಟ್ ಬಾಯ್ಸ್ ಸ್ಕೂಲಿನಲ್ಲಿ ಸಭೆ ಸೇರಿ ಸಭಾಧ್ಯಕ್ಷರಾಗಿ ಸಮ್ಮತು ಶೇಕದಾರ್ ಮ॥ ಜಿ. ವಿ. ರಾಮಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಮ॥ ಹೆಡ್ ಮಾಸ್ಟರ್ ಕೃಷ್ಣರಾಯರ ಮೆಹನತ್ತಿನ ವಿಚಾರದಲ್ಲಿ ಕೆಲವು ಉಪನ್ಯಾಸಗಳು ನಡೆದು, ಸಭಾ ತಾಂಬೂಲಾದಿಗಳೂ ಗಂಧ ಪುಷ್ಪಾದಿಗಳೂ ಸಂಗೀತ ಸಾಹಿತ್ಯಗಳೂ ಜರುಗಿ ಸಭೆಯು ಬರಖಾಸ್ತಾಯಿತು. ಮಂಗಳವಾದ್ಯಗಳೊಡನೆ ರಸ್ತೆಯ ಸ್ವಲ್ಪ ದೂರದ ಮಟ್ಟಿಗೆ ಹೋಗಿ ಅವರನ್ನು ಪ್ರಯಾಣ ಬೆಳಸಿ ಕಳುಹಿಸಿಕೊಟ್ಟರು.

ಮಾಗಡಿ ತಾ॥ ಹಾರೋಹಳ್ಳಿ.—ಕಳೆದ ತಿಂಗಳು 4 ನೇ ತಾ. ಮಾಗಡಿ ಕಸಬಾ ಶೇಕ್ದಾರ್ ಮ॥ ಕೆ. ರಾಮರಾಯರು ಇಲ್ಲಿಗೆ ಬಂದು ಆಂಜನೇಯ ದೇವಸ್ಥಾನದಲ್ಲಿ ಗ್ರಾಮದ ಕೆಲವು ಜನಗಳನ್ನು ಸಭೆಗೆ ಸೇರಿಸಿ ಪತ್ರಿಕೆಗಳ ಉಪಯೋಗವನ್ನೂ ಗ್ರಾಮಾಭಿವೃದ್ಧಿ ವಿಚಾರಗಳನ್ನೂ ವಿವರಿಸಿ ತಿಳುವಳಿಕೆ ಕೊಟ್ಟು ಗ್ರಾಮಾಭಿವೃದ್ಧಿ ಸಂಘವನ್ನು ಸ್ಥಾಪಿಸಿ, ಕೆಲವು ಮಂದಿಯನ್ನು ಮೆಂಬರುಗಳಾಗಿಯೂ ಮ॥ ಪಟೇಲ್ ಹಿರಿಯಣ್ಣಗೌಡರನ್ನು ಸಂಘದ ಮ್ಯಾನೇಜರನ್ನಾಗಿಯೂ ನಿಯಮಿಸಿ ದೇಶೀಯ ಪತ್ರಿಕೆಗಳನ್ನು ತರಿಸುವಂತೆ ತಿಳಿಸಿಹೋದರು.—ಇಲ್ಲಿ ಮಳೆ ತಕ್ಕಮಟ್ಟಿಗೆ ಹದವಾಗಿದೆ. ಬೇಸಾಯಕೆಲಸಗಳನ್ನು ಮಾಡಲು ತಕ್ಕಮಟ್ಟಿಗೆ ಅನುಕೂಲವಾಗಿರುತ್ತೆ. ಕೆಲವರು ಬತ್ತ, ರಾಗಿಯನ್ನು ಬಿತ್ತುತ್ತಿದ್ದಾರೆ.—ತಾ. 2 ನೇ ಮಂಗಳವಾರ ಸಾಯಂಕಾಲ ಈ ಊರಿನ ದೇವಣ್ಣನೆಂಬುವನು ತನ್ನ ದನಗಳಿಗೆ ಹುಲ್ಲು ತರುವುದಕ್ಕಾಗಿ ಅವನ ಹುಲ್ಲು ಹಿತ್ತಲಿಗೆ ಹೋಗಿ ಹುಲ್ಲು ಕಟ್ಟುತ್ತಾ ಕುಳಿತಿದ್ದ ಹತ್ತಿರವೇ ಸಿಡಿಲು ಬಡಿದಂತಾಗಲು ಅವನು ಭಯದಿಂದ ನೆಲದಮೇಲೆ ಬಿದ್ದುಬಿಟ್ಟನು. ಆ ಮೇಲೆ ಚೇತರಿಸಿಕೊಂಡು ತನ್ನ ಮನೆಗೆ ಬಂದು ಸೇರಿದನು. ಮರುದಿನಬೆಳಿಗ್ಗೆ ಹೋಗಿನೋಡುವಲ್ಲಿ ಅವನು ಕುಳಿತಿದ್ದ ಬಳಿಯಲ್ಲಿ ಇದ್ದ ಬೇಲಿಯೆಲ್ಲಾ ಸುಟ್ಟು ಆರಿಹೋಗಿತ್ತು. ಈ ಸಿಡಿಲಿನ ಉರಿಯು ಸಮೀಪದಲ್ಲಿದ್ದ ಹುಲ್ಲುಮೆದೆಗಳಿಗೆ ತಗಲದೆ ಇದ್ದದ್ದು ಆಶ್ಚರ್ಯವಾಗಿದೆ.

ಗೃಹಕೃತ್ಯದ ನೋಟೀಸು.

ಹುಣಸೂರಿನಲ್ಲಿರುವ ಲೇಟ್ ಸ್ಕೂಲ್ ಮಾಸ್ಟರ್ ಲಕ್ಷ್ಮೀನಾರಣಪ್ಪನವರಿಗೆ ಮೈನರ್ ನಾರಾಯಣ ಎಂಬ ಒಬ್ಬ ಮಗನಿದ್ದಾನೆ. ಮೈನರ್ ತಾಯಿ ಕಾವೇರಮ್ಮನೆಂಬವರು ಇದ್ದಾರೆ. ಲಕ್ಷ್ಮೀನಾರಣಪ್ಪನೆಂಬುವರು ಕಾಲವಾಗುವಾಗ್ಗೆ ಪಿತ್ರಾರ್ಜಿತವಾದ ಆಸ್ತಿ 10-15 ಸಾವಿರ ರೂಪಾಯಿನ ವರಿವಿಗೂ ಇತ್ತು. ಇದಲ್ಲದೇ ಮೈನರ್ ತಾಯಿ ಕಾವೇರಮ್ಮನೆಂಬುವರು ಗಂಡಕಾಲವಾದ ನಂತರ ಹಲಕೆಲವು ತಪ್ಪಿಸಿಕೊಂಡಿದ್ದು ಈಚೆಗೆ ಜನಗಳ ದುರ್ಬೋಧನೆಯಿಂದ ಕೂಸಹ ಕೆಲವು ಬೆಳಸಿಕೊಂಡು ಇರುವುದಲ್ಲದೆ 6-7 ಸಾವಿರ ರೂಪಾಯಿನ ಆಸ್ತಿ ವ್ಯಯಮಾಡಿರುತ್ತಾರೆ. ಇನ್ನೂ ಆಸ್ತಿಗಳೆಲ್ಲಾ ಕಲಾವು ಆಗುತ್ತಾ ಬರುತ್ತೆ. ಲಕ್ಷ್ಮೀನಾರಣಪ್ಪನವರಿಗೆ ಕೊಡಬೇಕಾದ ದೇಣೆದಾರರ ಪೈಕಿ ಲೇಟ್ ದರೋಗ ಗುಲಾಂಮೊಹದೀನ್ ಸಾಹೇಬರು ವಗೈರೇರಿಂದ 1,200 ರೂಪಾಯಿ ವರಿವಿಗೂ ಡಿಕ್ರಿ ಪ್ರಕಾರ ಬರಬೇಕಾದ್ದಕ್ಕೆ ಈ ಕಾವೇರಮ್ಮನು ತನ್ನ ಖರ್ಚುಗೋಸ್ಕರ 300-400 ರೂಪಾಯಿನ ವರಿವಿಗೂ ಸೋಡಿಬಿಟ್ಟು ಹಣತೆಗೆದುಕೊಂಡಿದ್ದಾರೆ. ಇನ್ನು ಕೆಲವರಿಗೂ ಸೋಡಿಬಿಟ್ಟು ತೆಗೆದುಕೊಂಡಿದ್ದಾರೆ. ಇದರಿಂದ ಮೈನರಿಗೆ ಖುಂಟಾ ನಷ್ಟವಾಗಿದೆ. ಹಾಲಿ ಇರತಕ್ಕ ಲೇಟ್ ದರೋಗ ರಹಿಮಾನ್ ಷರೀಫ್ ಸಾಬರ ಮಕ್ಕಳಿಂದ ಭಾರಿ ಬಾಲ ಆಗು ಬರತಕ್ಕದ್ದಾಗಿದೆ. ಈ ಮೊಬಲಗಿಗೆ ಅಸಲಿನಲ್ಲೇ ಬಿಟ್ಟು ಹಣ ತೆಗೆದುಕೊಳ್ಳುವ ಯೋಚನೆಮಾಡಿದ್ದಾರೆ. ಈ ಕಾವೇರಮ್ಮನು ಮಾಡುವ ಸಾಲಗಳಿಗೂ, ದೇಣೆದಾರರಿಗೆ ಸೋಡಿಬಿಟ್ಟರತಕ್ಕದ್ದಕ್ಕೂ, ಮುಂತೆ ಸ್ಥಿರಸೊತ್ತು ಕ್ರಯ ಭೋಗ್ಯ ವಗೈರೆ ಮಾಡುವುದಕ್ಕೂ ಈಕೆಗೆ ಯಾವ ಹಕ್ಕೂ ಇರುವುದಿಲ್ಲ. ಈ ಸಂದರ್ಭಕ್ಕಾಗಿ ಜಿಲ್ಲೆ ಕೋರ್ಟಿನಿಂದಲೂ ಸರಿಯಾದ ತಿಳುವಳಿಕೆ ಈಗ ಆಗಬಹುದು. [149-1]

ತಾ. 28-6-1914. ಪುಟ್ಟಲಿಂಗಯ್ಯ, ಹುಣಸೂರು.

ವೃತ್ತಾಂತ ಪತ್ರಿಕೆ.

—:o:—

ಸನ್ ೧೯೧೪ ನೇ ಇಸವಿ ಜೂಲೈ ತಾ. ೨ ನೇ ಗುರುವಾರ.

ಮೈಸೂರು ಸರ್ಕಾರದ ರೆವಿನ್ಯೂ ಇಲಾಖೆ.

ಮೈಸೂರು ಗವರ್ನಮೆಂಟಿನ ರೆವಿನ್ಯೂ ಕಮಿಷನರವರಾದ ಮ|| ಕೆ. ದೊರಸಾಮಿ ಅಯ್ಯರವರು ಬರೆದ 1912–13ನೇ ಸಾಲಿನ ರಿಪೋರ್ಟನ್ನು ಸರ್ಕಾರದವರು ಈಗ ಪ್ರಕಟಮಾಡಿದಾರೆ. ಇದರಲ್ಲಿ ಸಂಸ್ಥಾನಾಮಳೆ ವ್ಯವಹರಿಸುವಂಥಾ ಅನೇಕ ಸ್ವಾರಸ್ಯವುಳ್ಳ ವಿಚಾರಗಳು ಅಡಕವಾಗಿರುತ್ತವೆ. ಆ ವರುಷದಲ್ಲಿ ಮಳೆಗಳು ವಿಶೇಷವಾಗಿ ಸುರಿದವು; ಧಾರಣೆವಾಸಿಗಳು ಹೆಚ್ಚಾಗಿದ್ದವು. ಆ ಸಾಲು ಸುಭಿಕ್ಷವಾಗಿ ನಡೆಯಿತೆಂದು ಹೇಳಬೇಕಾಗಿದೆ. ನಮ್ಮ ಸೀಮೆಯಿಂದ ಧಾನ್ಯಗಳೂ ಇತರ ಬೆಳೆಗಳೂ ಹೊರಕ್ಕೆ ಸಾಗಿಹೋದವು; ಹೊರದೇಶದಲ್ಲಿ ಧಾರಣೆ ಹೆಚ್ಚಾಗಿದ್ದದ್ದರಿಂದ ನಮ್ಮ ಬೆಳೆಗಳಿಗೆ ಒಳ್ಳೇ ಕ್ರಯ ಸಿಕ್ಕಿದವು. ನಮ್ಮ ಸಂಸ್ಥಾನದ ಆಮದುರಫ್ತು ಇಷ್ಟಿಷ್ಟೆಂದು ಹೇಳ ಕೆಲವು ಸಂಖ್ಯೆಗಳನ್ನು ಈ ರಿಪೋರ್ಟಿನಲ್ಲಿ ಕಾಣಿಸಿರುತ್ತಾರಾದರೂ ಅವು ನಿರಖಾದವುಗಳಲ್ಲವಾದದ್ದರಿಂದ ಆಮದಾಗಲಿ ರಫ್ತಾಗಲಿ ಎಷ್ಟೆಂಬುವುದು ಸರಿಯಾಗಿ ತಿಳಿಯುವುದೇ ಕಷ್ಟವಾಗಿದೆ. ಹೀಗೆಯೇ ಈ ರಿಪೋರ್ಟಿನಲ್ಲಿ ಬರೆದಿರುವ ಲೆಕ್ಕಗಳ ಸಂಖ್ಯೆಗಳು ಎಷ್ಟು ಮಟ್ಟಿಗೆ ಸರಿಯಾದವುಗಳೆಂದು ನಂಬಬಹುದೋ ನಮಗೆ ಸಂಶಯವಾಗಿದೆ. ನಮ್ಮ ಸಂಸ್ಥಾನದಲ್ಲಿ ಸುಭಿಕ್ಷವು ನೆಲೆಗೊಂಡಿದ್ದ ಕಾರಣ ಆ ಸಾಲಿನಲ್ಲಿ ಸಿಲೋನ್ ಮುಂತಾದ ಅನ್ಯ ಸ್ಥಳಗಳಿಗೆ ನಮ್ಮ ಜನರನ್ನು ಜಿತಾವಣೆಮಾಡಿ ಕೂಲಿಪಾಟಿಗಾಗಿ ಕರೆದುಕೊಂಡು ಹೋಗುವುದಕ್ಕೆ ಏಜಂಟರುಗಳಿಗೆ ಸಾಧ್ಯವಾಗದೆಹೋಯಿತು; ಅಂದರೆ, ನಮ್ಮ ಜನರು ಕೂಲಿಪಾಡು ಹುಡುಕಿಕೊಂಡು ಪರಸ್ಥಳಗಳಿಗೆ ವಿಶೇಷವಾಗಿ ಹೋಗಲಿಲ್ಲವೆನ್ನಬಹುದು.

ನಮ್ಮ ಸಂಸ್ಥಾನದ ಕಸಬು ಕೈಗಾರಿಕೆಗಳಲ್ಲಿ ಯಾವುದೊಂದು ಬದಲಾವಣೆಯೂ ಅದಂತೆ ಕಾಣುವುದಿಲ್ಲವಾದರೂ ಇನ್ನು ಮುಂದೆ ಅವು ಅಭಿವೃದ್ಧಿಗೆ ಬರಬಹುದೆಂದು ನಿರೀಕ್ಷಿಸಲಾಗಿದೆ. ಕಸಬುಗಳಿಗೆ ಬೆಂಗಳೂರೇ ಮುಖ್ಯವಾದ ಸ್ಥಾನ; ಅಲ್ಲಿ ಸಾಲ್ ಒಂದಕ್ಕೆ ಸುಮಾರು ನಾಲ್ವತ್ತರಿಂದ ಐವತ್ತು ಲಕ್ಷ ರೂಪಾಯಿನ ವರೆಗೆ ಪದಾರ್ಥಗಳು ತಯಾರಾಗುತ್ತವೆಂದು ಕಾಣುವುದು.

ಸಂಸ್ಥಾನದಲ್ಲೆಲ್ಲಾ ಅಂಟುರೋಗಗಳು ವಿಶೇಷವಾಗಿ ವ್ಯಾಪಿಸಿರಲಿಲ್ಲವೆಂದು ಹೇಳಬಹುದು. ಆದರೆ ಮೈಸೂರು ಡಿಸ್ಟ್ರಿಕ್ಟಿನಲ್ಲಿ ವಾಂತಿಭೇದಿ ಉಪದ್ರವೇನೋ ಸ್ವಲ್ಪ ಕಠಿಣವಾಗಿಯೇ ಇತ್ತು. ರಿಪೋರ್ಟಿನಲ್ಲಿ ಬರೆದಿರುವ ಸಂಖ್ಯೆಗಳನ್ನು ನಂಬುವುದು ಕಷ್ಟ.

ವಿಸ್ತಾರವಾದ ಹೊಸ ಜಮೀನು ಆ ಸಾಲಿನಲ್ಲಿ ಉಳುಮೆಗೆ ಬಂದಿರುತ್ತದೆ; ಆದರೂ ದರಖಾಸ್ತುಗಳನ್ನು ನೋಡಿ ವ್ಯವಸ್ಥೆ ಮಾಡಿದ್ದು ಬಹಳ ಸಾವಕಾಶವಾಯಿತು. ಡಿಸ್ಟ್ರಿಕ್ಟ್ ಅಧಿಕಾರಿಗಳು ಇದಕ್ಕೆ ನಾನಾರೀತಿಯಾದ ಕಾರಣಗಳನ್ನು ಹೇಳಿದಾರೆ. ಈ ಪೈಕಿ ದರಖಾಸ್ತು ಕೊಟ್ಟವರಲ್ಲಿ ಮುತುವರ್ಜಿ ಹೆಚ್ಚಾಗಿರಲಿಲ್ಲವೆಂಬುವುದು ಒಂದು ಕಾರಣವಂತೆ. ಜಮೀನಿಗೆ ದರಖಾಸ್ತು ಕೊಟ್ಟಮೇಲೆ ಅರ್ಜಿದಾರನು ಎಷ್ಟುಸಲ ಪಟೇಲ, ಶ್ಯಾನುಭೋಗ, ಶೇಕ್ದಾರ, ಅಮಲ್ದಾರ, ಅ|| ಕಮಿಷನರು, ಇತರ ಅಧಿಕಾರಿಗಳನ್ನು ಹೋಗಿ ಕಂಡು ಜ್ಞಾಪಕಕೊಡುತ್ತಿರಬೇಕೋ ತಿಳಿಯಲಪೇಕ್ಷಿಸುತ್ತೇವೆ. ಅಧಿಕಾರಿಯು ಅರ್ಜಿದಾರನನ್ನು ಇನ್ನೊಂದಾವರ್ತಿ ಬರಹೇಳಿದರೆ ಬಹುಶಃ ಅವನು ತನ್ನ ಅರ್ಜಿ ವ್ಯವಸ್ಥೆಯಾಗುವುದು ಸಾವಕಾಶವೆಂದು ತಿಳಿದುಕೊಂಡು ಅಷ್ಟರಲ್ಲಿ ತನ್ನ ಇತರ ಕೆಲಸಕಾರ್ಯಗಳಲ್ಲಿ ಆಸಕ್ತನಾಗಿದ್ದಿರಬಹುದು. ಅನೇಕವೇಳೆ ಕೀಳು ನೌಕರರು ಅಲಕ್ಷ್ಯಮಾಡುತ್ತಾರೆಂಬುವುದು ಸ್ಪಷ್ಟವಾಗಿ ಕಾಣುತ್ತದೆ. ಹ್ಯಾಗಂದರೆ ಆ ಸಾಲಿನಲ್ಲಿ 3,138 ಜನ ಪಟೇಲ್ ಶ್ಯಾನುಭೋಗರುಗಳಿಗೆ ಜುಲ್ಮಾನೆ ಮಾಡಿದೆ ಎಂದೂ, 235 ಜನರನ್ನು ಸಸ್ಪೆಂಡ್ ಮಾಡಿದೆ ಎಂದೂ, 37 ಮಂದಿಯನ್ನು ಕೆಲಸದಿಂದಲೇ ವಜಾಮಾಡಿದೆ ಎಂದೂ ಈ ರಿಪೋರ್ಟು ಹೇಳುತ್ತದೆ. ಸರ್ಕಾರದವರು ತಮ್ಮ ದರ್ಪವನ್ನು ಪ್ರಕಾಶಕ್ಕೆ ಬರುವಂತೆ ಮಾಡಿದರೆಂದು ಸಂತೋಷಪಡುತ್ತೇವಾದರೂ ಇದರಿಂದ ಎಷ್ಟು ಮಟ್ಟಿಗೆ ಚೆನ್ನಾಗಿ ಕೆಲಸಗಳು ನಡೆಯುವಂತಾಯಿತೆಂಬುವುದನ್ನು ತಿಳಿಯಬೇಕೆಂದು ಕುತೂಹಲಪಡುತ್ತೇವೆ. ಈ ಭಾಗದಲ್ಲಿ ಈ ರಿಪೋರ್ಟು ಏನೂ ಹೇಳುವುದಿಲ್ಲ.

ಗವರ್ನಮೆಂಟಿನವರು ಸಾಲವಾಗಿ ಕೊಟ್ಟ ಹಣಗಳನ್ನು ವಾಪಸು ವಸೂಲುಮಾಡಿಕೊಳ್ಳುವ ಭಾಗದಲ್ಲಿ ಅವರಿಗೆ ಬಹಳ ಕಷ್ಟವಾಗಿರಬೇಕೆಂದು ಕಾಣುತ್ತದೆ. ಈ ರೀತಿಯಲ್ಲಿ ಬಹಳ ಹಣಗಳು ಸರ್ಕಾರಕ್ಕೆ ವಸೂಲಾಗದೆ ನಷ್ಟವಾಗಿರಬೇಕೆನ್ನುವುದಕ್ಕೆ ಸಂಶಯವಿಲ್ಲ. ಸಾಮಾನ್ಯವಾಗಿ ರಿಪೋರ್ಟುಗಳಲ್ಲಿ ಅಂಥಾ ಸಾಂಗಾರರ ಹೆಸರುಗಳನ್ನು ಬರೆಯುವುದಿಲ್ಲ. ಆದರೆ ಚಿಕ್ಕಮಗಳೂರು ಕಾಫಿ ಬ್ಯಾಂಕಿನವ ಗವರ್ನಮೆಂಟಿಗೆ ರೂ. 28,981–15–10 ಪೈ ಬಾಕಿ ಬರಬೇಕಾಗಿದೆ ಎಂದು ಹೇಳುವಲ್ಲಿ ಈ ರಿಪೋರ್ಟು ಮ|| ಸಿ. ಶ್ರೀನಿವಾಸರಾಯರೆಂಬವರು ಆ ಪೈಕಿ ರೂ. 14,864–3–4 ಪೈ ಸಾಲ ವಾಪಸು ಕೊಡಬೇಕೆಂದು ಕಾಣಿಸಿರುತ್ತದೆ. ಇವಲ್ಲದೆ ಇದೇ ರಿಪೋರ್ಟು ಮಂಡ್ಯದ ತಾಲ್ಲೂಕಿನಲ್ಲಿ ಐದು ಜನರಿಗೆ ಭಾವಿಗಳಿಗಾಗಿ 710 ರೂಪಾಯಿ ಸಾಲ ಕೊಟ್ಟು ಕೆಲವು ವರುಷಗಳಾದವೆಂದೂ, ಆ ಸಾಲ ಇನ್ನೂ ಪಾವತಿ ಆಗಿಲ್ಲವೆಂದೂ, ಭಾವಿಗಳು ಕೂಡ ಇನ್ನೂ ಮುಗಿಯಲಿಲ್ಲವೆಂದೂ ಹೇಳುವುದು.

ಕೆಲವು ಕಡೆ ಅಲ್ಪಸ್ವಲ್ಪ ಅಭಿವೃದ್ಧಿ ಕಾರ್ಯಗಳು ನಡೆದಿವೆ ಎಂದು ಈ ರಿಪೋರ್ಟಿನಲ್ಲಿ ಓದಿ ಸಂತೋಷಪಡುತ್ತೇವೆ. ಯಡತೊರೆ ಮತ್ತು ಟಿ. ನರಸಿಪುರ ತಾಲ್ಲೂಕುಗಳಲ್ಲಿ ಭತ್ತದ ಪೈರನ್ನು ಒಂದೊಂದಾಗಿ ನಾಟಿಹಾಕಿ ಬೆಳೆ ಮಾಡಿದ್ದು ಬಹಳ ಹುಲಸಾಯಿತೆಂದು ತಿಳಿಯುವುದು. ಯಡೆಹಳ್ಳಿ ಸಬ್ ತಾಲ್ಲೂಕಿನಲ್ಲಿ ಇಬ್ಬರು ರೈತರು 15 ಗುಂಟೆ ಜಮೀನಿನಲ್ಲಿ ಇದೇ ರೀತಿ ಭತ್ತದ ಬೆಳೆಮಾಡಿದರು. ಹೊಸ ತರಹಾ ಕಬ್ಬಿಣದ ನೇಗಲಿನಿಂದ ಜಮೀನನ್ನು ಉತ್ತು ಹಸಿ ಎಲೆಯ ಗೊಬ್ಬರವನ್ನು ಹಾಕಿದರು. ಇದರಿಂದ ಕಡೆಯಲ್ಲಿ 7½ ಪಲ್ಲ ಭತ್ತ ಬೆಳೆಯಿತು. ಆದರೆ ಸಾಮಾನ್ಯವಾಗಿ ಎಂದಿನಂತೆ ಉತ್ತು ಬೆಳೆಮಾಡಿದ್ದರೆ 3½ ಪಲ್ಲ ಮಾತ್ರ ಉತ್ಪತ್ತಿಯಾಗುತ್ತಿತ್ತು. ಕಬ್ಬಿಣದ ಮಿಷನ್ ನೇಗಲುಗಳನ್ನು ರೈತರು ಬಹಳವಾಗಿ ಅಪೇಕ್ಷಿಸುವರು; ಯಾಕಂದರೆ ಅವು ನಮ್ಮ ಸೀಮೆಗೆ ಅನುಕೂಲವಾಗಿಯೂ, ಬೆಲೆಯಲ್ಲಿ ಬಹಳ ಸುಲಭವಾಗಿಯೂ ಇರುವವು. ಅತ್ತಲಾಗಿ ತಾತಾರವರ ರೇಷ್ಮೆ ಫಾರಮಿನಲ್ಲಿ ಬಹಳ ಚೆನ್ನಾಗಿ ಕೆಲಸಗಳು ನಡೆಯುತ್ತಲಿವೆ.

ಮಾರಿಕಣಿವೆ ತಲಾವಿನ ಕೆಳಗೆ ಈಗ 24,787 ಎಕರೆ ಜಮೀನು ವ್ಯವಸಾಯಕ್ಕೆ ಬಂದಿದೆ ಎಂದೂ, ಇನ್ನೂ 1,690 ಎಕರೆ ಜಮೀನು ವ್ಯವಸಾಯಕ್ಕೆ ದೊರಕುತ್ತದೆಂದೂ ಗೊತ್ತಾಗುವುದು. ಇದಲ್ಲದೆ ಸರಿಯಾಗಿ ನೋಡಿಕೊಳ್ಳದೆ ಹೋದದ್ದರಿಂದಲೋ ಅಥವಾ ಜೊಂಡು ಬೆಳೆದುಕೊಂಡೋ ಸುಮಾರು 6,552 ಎಕರೆಯಷ್ಟು ಜಮೀನು ಬಂಜರುಬಿದ್ದು ಹೋಗಿದೆ ಎಂದು ಈ ರಿಪೋರ್ಟು ಹೇಳುತ್ತದೆ. ನೀರು ಯಥೇಚ್ಛವಾಗಿ ದೊರಗುವ ಕಡೆ ಅದನ್ನು ಸರಿಯಾಗಿ ಉಪಯೋಗಪಡಿಸಿಕೊಳ್ಳದೆ ಇರುತ್ತಾರಲ್ಲಾ ಎಂದು ಚಿಂತೆಪಡುವೆವು.

ಗ್ರಾಮಾಂತರಗಳಲ್ಲಿ ಒಳ್ಳೆಯ ಕುಡಿಯುವ ನೀರು ದೊರಗಿಸುವುದಕ್ಕೂ ಅನುಕೂಲವಾದ ರಸ್ತೆಗಳನ್ನು ಮಾಡಿಸುವುದಕ್ಕೂ ಇನ್ನೂ ಬಹಳ ಸಾಹಸಪಡಬೇಕಾಗಿದೆ. ಈ ಭಾಗದಲ್ಲಿ ಅಲ್ಪಸ್ವಲ್ಪ ಕೆಲಸಗಳು ನಡೆದಿದ್ದರೂ ಸಾಕಾದಷ್ಟು ಅನುಕೂಲಗಳನ್ನು ಇನ್ನೂ ಕಲ್ಪಿಸಿರುವುದಿಲ್ಲ. ಸಂಪದಭ್ಯುದಯ ಸಮಾಜಕ್ಕಾಗಿ ಖರ್ಚುಮಾಡುವ ಹಣದಲ್ಲಿ ಕೆಲವು ಭಾಗವನ್ನು ತೆಗೆದು ಗ್ರಾಮಗಳಿಗೆ ವಿನಿಯೋಗಿಸಿದ ಪಕ್ಷದಲ್ಲಿ ಪ್ರಜೆಗಳಿಗೆ ಇನ್ನೂ ಬಹಳ ಉಪಕಾರವಾದೀತು.

ಆಸ್ಟ್ರಿಯಾ ಹಂಗರಿ ಯುವರಾಜರ ಕೊಲೆಯು.

ಯೂರೋಪಿಗೆ ಸೇರಿದ ಆಸ್ಟ್ರಿಯಾ ಹಂಗರಿ ಎಂಬ ಚಕ್ರಾಧಿಪತ್ಯದ ಯುವರಾಜರವರಾದ ಆರ್ಚ್‌ಡ್ಯೂಕ್ ಫ್ರಾನ್ಸಿಸ್ ಫರ್ಡಿನೆಂಡ್‌ರವರು ಯುವರಾಣಿಯವರ ಸಮೇತ ಬೊಸ್ನಿಯಾ ಎಂಬ ಸಂಸ್ಥಾನದ ರಾಜಧಾನಿಯಾದ ಸಾರ್ಜೆವೊ ಎಂಬ ನಗರದೊಳಗೆ ಒಂದು ಮೋಟರಿನಲ್ಲಿ ಕುಳಿತು ಹೋಗುತ್ತಿದ್ದಾಗ ಕೆಳೆಭಾನುವಾರ ಪ್ರಿನ್‌ಜಿಪ್ ಎಂಬೊಬ್ಬ ವಿದ್ಯಾರ್ಥಿಯು ಆ ದಂಪತಿಗಳಿಗೆ ಪಿಸ್ತೂಲನ್ನು ಗುರಿಕಟ್ಟಿ ಎರಡಾವರ್ತಿ ಹೊಡೆದನು. ಗುಂಡುಗಳು ಸರಿಯಾಗಿ ತಗಲಿ ಯುವರಾಜರೂ, ಅವರ ಪತ್ನಿಯವರೂ ಮೃತಪಟ್ಟರೆಂದು ತಂತೀ ವರ್ತಮಾನ ಬಂದಿರುತ್ತದೆ. ಬೊಸ್ನಿಯವು ಹಂಗೆರಿಯ ದಕ್ಷಿಣಭಾಗದಲ್ಲಿರುವ ಒಂದು ಸಣ್ಣ ಸಂಸ್ಥಾನ; ಅಲ್ಲಿನ ಜನರಿಗೆ ಸರ್ಬರೆಂಬ ಹೆಸರು. ಈ ಜನರು ತಮ್ಮ ಕುಲಕ್ಕೆ ಸೇರಿರುವವರನ್ನೆಲ್ಲಾ ಒಂದಾಗುವಂತೆ ಮಾಡಬೇಕೆಂದು ಸಾಹಸಪಡುತ್ತಿದಾರೆ. ಅವರ ಈ ಏರ್ಪಾಸು ಆರ್ಚ್‌ಡ್ಯೂಕ್ ಫ್ರಾನ್ಸಿಸ್ ಎಂಬ ಮೇಲ್ಕಂಡ ಯುವರಾಜರಿಗೆ ಸಮ್ಮತವಿಲ್ಲದೆ ಅವರು ಅದಕ್ಕೆ ವಿರೋಧಿಸುತ್ತಿದ್ದರೆಂದು ಹೇಳುವರು. ಆದಕಾರಣ ಯುವರಾಜರು ಬೊಸ್ನಿಯಾ ರಾಜಧಾನಿಗೆ ಬಂದಾಗ ಅವರನ್ನು ಆ ಜನರು ಮೇಲ್ಕಂಡಂತೆ ಕೊಂದು ಹಾಕಿದ್ದಾಗಿ ಊಹಿಸಲ್ಪಟ್ಟಿದೆ.

ಯುವರಾಜರವರು ಯುವರಾಣಿಯವರ ಕೂಡ ಕುಳಿತು ಟೌನ್ ಹಾಲ್ ಬಂಗಲೆಗೆ ಹೋಗುತ್ತಿದ್ದರು; ಅಲ್ಲಿ ಅವರಿಗಾಗಿ ಒಂದು ಸಂತೋಷ ಕೂಟವು ನಡೆಯುವಂತೆ ಏರ್ಪಾಡಾಗಿತ್ತು. ಮೊದಲು ದಾರಿಯಲ್ಲಿ ಒಂದಾನೊಂದು ಆಚ್ಛಾಫೀಸಿನ ಮೊಳೆ ಜೋಡಿಸುವವನು ಒಂದು ಸಿಡಿಮದ್ದಿನ ಗುಂಡನ್ನು ಯುವರಾಜರ ಗಾಡಿಯ ಮೇಲೆ ಎಸೆದನು. ಅದು ಅವರಿಗೆ ತಗಲದೆಹೋಯಿತು. ಆದರೆ ಆ ಸಿಡಿಮದ್ದಿನ ಗುಂಡು ಹಾರಿದ್ದರ ದೆಸೆಯಿಂದ ಅವರ ಸಂಗಡ ಇದ್ದ ಇಬ್ಬರು ಅಧಿಕಾರಿಗಳಿಗೂ, ನೋಟನೋಡುತ್ತಾ ನಿಂತಿದ್ದ ಪ್ರಜೆಗಳಲ್ಲಿ ಆರೇಳು ಜನರಿಗೂ ಗಾಯಗಳಾದವು. ಯುವರಾಜ ದಂಪತಿಗಳು ಅಲ್ಲಿಂದ ಮುಂದೆ ಟೌನ್ ಹಾಲಿಗೆ ಹೋಗಿ, ಬಳಿಕ ಪಟ್ಟಣವನ್ನು ನೋಡುವ ಉದ್ದೇಶ್ಯ ಸವಾರಿ ಹೊರಟರು. ಅಲ್ಲಿ ಮೇಲ್ಕಂಡ ವಿದ್ಯಾರ್ಥಿಯು ಪಿಸ್ತೂಲನ್ನು ಗುರಿಕಟ್ಟಿ ಎರಡಾವರ್ತಿ ಗುಂಡು ಹೊಡೆದನು. ಮೊದಲನೆಯ ಗುಂಡು ಯುವರಾಣಿಯವರ ಕೆಳ ಹೊಟ್ಟೆಗೂ ಎರಡನೆಯದು ಯುವರಾಜರ ಕುತ್ತಿಗೆಗೂ ಬಡಿದು ಪಾರಾದವು. ಅವರಿಬ್ಬರನ್ನೂ ಕೂಡಲೇ ಗವರ್ನರವರ ಬಂಗಲೆಗೆ ಸಾಗಿಸಿ ಚಿಕಿತ್ಸೆ ಮಾಡಿದರೂ ಪ್ರಯೋಜನವಾಗದೆ ಸ್ವಲ್ಪ ಹೊತ್ತಿನೊಳಗಾಗಿ ದಂಪತಿಗಳು ಕಾಲವಾದರು. ಈ ಕೊಲೆ ನಡೆದ ಸ್ಥಳದಲ್ಲೇ ಇನ್ನೊಂದು ಸಿಡಿಮದ್ದಿನ ಗುಂಡು ಸಿಕ್ಕಿತು. 84 ವರುಷ ವಯಸ್ಸಾಗಿರುವ ಜೋಸೆಫ್ ಚಕ್ರವರ್ತಿಯವರಿಗೆ ಆಕಸ್ಮಿಕವಾಗಿ ಸಂಭವಿಸಿದ ಈ ವಿಯೋಗವು ಅಪಾರವಾದ ವ್ಯಥೆಯನ್ನುಂಟುಮಾಡಿರುತ್ತದೆ.

ಆ ವಿದ್ಯಾರ್ಥಿಯನ್ನೂ ಮೊಳೆಜೋಡಿಸುವವನನ್ನೂ ಹಿಡಿದಿಟ್ಟುಕೊಂಡಿದಾರೆ. ಅವರನ್ನು ಕೇಳಿದರೆ ಈ ಕ್ರೂರಕೃತ್ಯಕ್ಕೆ ತಮಗೆ ಯಾರೂ ಬೆಂಬಲಕೊಡಲಿಲ್ಲವೆಂದು ಹೇಳುವರು; ಆದರೆ ಅವರ ಮಾತು ನಂಬತಕ್ಕದ್ದಾಗಿ ಕಾಣುವುದಿಲ್ಲ. ಈ ಭಯಂಕರವಾದ ಕೊಲೆಯ ದೆಸೆಯಿಂದ ಸರ್ಬರಿಗೂ ಆಸ್ಟ್ರಿಯದವರಿಗೂ ಇರುವ ವೀರವೈಷಮ್ಯಗಳು ಇನ್ನೂ ಹೆಚ್ಚುವವು. ಕೊಲೆಯಾದ ಆರ್ಚ್‌ಡ್ಯೂಕರಿಗೆ ಪುತ್ರಸಂತಾನವಿಲ್ಲದ ಕಾರಣ ಇವರ ದಾಯಾದಿಯೇ ಯುವರಾಜನಾಗುವನು.

ಮದ್ಯಪಾನದಿಂದುಂಟಾಗುವ ಕೇಡುಗಳು.

ಸರ್ ಫ್ರೆಡರಿಕ್ ಟ್ರೀವ್ಸ್ ಎಂಬವರು ಈಗಿನ ಕಾಲದಲ್ಲಿ ಅತ್ಯಂತ ಪ್ರಸಿದ್ಧರಾದ ವೈದ್ಯರುಗಳ ಪೈಕಿ ಒಬ್ಬರಾಗಿಯೂ ನಮ್ಮ ಚಕ್ರವರ್ತಿಗಳಾದ ಏದನೇ ಜಾರ್ಜ್ ದೊರೆಗಳಿಗೂ ಪ್ರಿನ್ಸ್ ಆಫ್ ವೇಲ್ಸ್ ರವರಿಗೂ ಅವಶ್ಯವಿದ್ದಾಗ ಚಿಕಿತ್ಸೆಯನ್ನು ಮಾಡುವ ಘನ ವೈದ್ಯರುಗಳಲ್ಲಿ ಒಬ್ಬರಾಗಿಯೂ ಇರುತ್ತಾರೆ. ಸಾರಾಯಿ, ಹೆಂಡ, ಬೀರ್, ಬ್ರಾಂದಿ, ವಿಸ್ಕಿ, ವೈನ್ ಮುಂತಾದ ನಿಶಾಪದಾರ್ಥಗಳಲ್ಲಿರುವ ಆಲ್‌ಕೊಹಾಲ್ ಎಂಬುವದನ್ನು ಸೇವನೆಮಾಡೋಣದರಿಂದ ದೇಹಕ್ಕೆ ಉಂಟಾಗುವ ಅನರ್ಥಗಳನ್ನು ಕುರಿತು ಇವರು ನಮ್ಮೆಲ್ಲರಿಗೂ ತಿಳಿಯಪಡಿಸಿರುವದೇನಂದರೆ:—

ಮೊದಲನೇದಾಗಿ ಆಲ್‌ಕೊಹಾಲ್ ಎಂಬುದು ಒಂದು ಬಗೆ ಪಾಷಾಣವಾಗಿದೆ. ಇದರಿಂದ ಕೆಲವು ಪ್ರಯೋಜನಗಳು ಇರುತ್ತವೆ. ಆದರೆ ಇದರಲ್ಲಿರುವ ಒಂದು ವಿಶೇಷವಾದ ಗುಣವೇನಂದರೆ—ಈ ಪಾಷಾಣವನ್ನು ಸೇವನೆಮಾಡಿದ್ದರಿಂದುಂಟಾಗಿರುವ ಕೇಡನ್ನು ಪರಿಹರಿಸಿಕೊಳ್ಳಬೇಕಾದರೆ, ಅದನ್ನೇ ಮತ್ತೊಂದಾವರ್ತಿ ಸೇವನೆಮಾಡಬೇಕು. ಹೀಗೆ ಈ ದುರಭ್ಯಾಸವು ಮನುಷ್ಯನಲ್ಲಿ ಬೆಳೆಯುತ್ತಾ ಬಂದು, ಕಡೆಗೆ ಅವನನ್ನು ತನ್ನ ಅಡಿಯಾಳಾಗ ಮಾಡಿಕೊಳ್ಳುತ್ತದೆ. ಡಾಕ್ಟರುಗಳು ಇದನ್ನು ಔಷಧಕ್ಕಾಗಿ ಪ್ರಯೋಗಿಸುವದುಂಟು. ಆದರೆ ಇದರ ಉಪಯೋಗವು ಪ್ರತಿವರುಷದಲ್ಲಿಯೂ ಕಡಿಮೆಯಾಗುತ್ತಲೇ ಬರುತ್ತದೆ.

ಎರಡನೇದಾಗಿ ಆಲ್‌ಕೊಹಾಲ್ ಮನುಷ್ಯನಿಗೆ ಹಸಿವೆಯನ್ನು ಹುಟ್ಟಿಸುವಂಥ ಪದಾರ್ಥವಲ್ಲ. ಸ್ವಲ್ಪ ಆಲ್‌ಕೊಹಾಲನ್ನು ಕುಡಿಯದಿದ್ದರೆ, ಊಟಮಾಡುವದಕ್ಕೆ ಆಗುವದಿಲ್ಲವೆಂದು ಅನೇಕರು ಹೇಳುವರು. ಆದಕಾರಣ ಇದು ತಮಗೆ ಯಾವ ವಿಧವಾದ ಕೇಡನ್ನಾದರೂ ಮಾಡಲಾರದೆಂದು ಅವರು ಭಾವಿಸುವರು. ಆರೋಗ್ಯದಲ್ಲಿರುವಂಥ ಮನುಷ್ಯನಿಗೆ ಹಸಿವೆಯನ್ನು ಹೆಚ್ಚಿಸಿಕೊಳ್ಳಬೇಕಾದ ಅಗತ್ಯವೇ ಇರುವದಿಲ್ಲ. ಆಲ್‌ಕೊಹಾಲ್ ಸೇವನೆಯಿಂದ ಹಸಿವೆಯನ್ನು ಹೆಚ್ಚಿಸಿಕೊಳ್ಳದೆ ಇರುವದು ಉತ್ತಮ.

ಮೂರನೇದಾಗಿ ಸಾರಾಯಿ, ಹೆಂಡ ಮುಂತಾದ ನಿಶಾಪದಾರ್ಥಗಳನ್ನು ಕುಡಿಯುವದರಿಂದ ತಮಗೆ ಬಲ ಬರುತ್ತದೆಂದು ಅನೇಕರು ನೆನಸುತ್ತಾರೆ. ಆದರೆ ಆಲ್‌ಕೊಹಾಲ್ ಎಂಬ ಪದಾರ್ಥವು ರಕ್ತವನ್ನು ಬದಲಾಯಿಸಿ, ಅದು ದೇಹಕ್ಕೆ ತಕ್ಕ ಪೋಷಣೆಯನ್ನು ಕೊಡದಂತೆ ಮಾಡಿಬಿಡುತ್ತದೆ. ಅಂಗಸಾಧನೆಯಲ್ಲಿ ಗೆಲ್ಲಬೇಕೆಂಬ ಅಪೇಕ್ಷೆಯುಳ್ಳ ಯಾವನಾದರೂ ತನ್ನನ್ನು ಹೆಚ್ಚಾಗಿ ಬಲಪಡಿಸಿಕೊಳ್ಳುವ ಹಾಗೆ ಆಲ್‌ಕೊಹಾಲನ್ನು ಎಂದಾದರೂ ತೆಗೆದುಕೊಳ್ಳು

ದಿಲ್ಲ. ಇದಕ್ಕೆ ಬದಲಾಗಿ ಅದು ಕಡುಪಾಷಾಣವೆಂದು ವಿಸರ್ಜಿಸಿದನು. ಆಲ್‌ಕೊಹಾಲ್ ಸ್ವಲ್ಪ ಕಾಲದ ವರೆಗೂ ಮನುಷ್ಯನಿಗೆ ಬಲಕೊಡುವಂತೆ ತೋರುವದು. ಅವನು ತನ್ನ ಶಕ್ತಿಯನ್ನೆಲ್ಲಾ ಒಟ್ಟಾಗಿ ಕೂಡಿಸಿ, ಅದನ್ನು ಒಂದೇ ಸಾರಿ ಉಪಯೋಗಿಸುವಂತೆ ಮಾಡುತ್ತದೆ. ಅದು ವಾಸ್ತವವಾಗಿ ಮಾಡು ವಂಥ ಕೆಲಸವು ಇದೇ. ಆದರೆ ಅದು ಯಾವಾಗಲೂ ಅವನನ್ನು ಮುಂಚೆಗಿಂತ ಬಲಹೀನನನ್ನಾಗ ಮಾಡಿಬಿಡುತ್ತದೆ.

ಸರ್ ಫ್ರೆಡೆರಿಕ್ ಟ್ರೆವ್ಸ್ ರವರು ದಕ್ಷಿಣ ಆಫ್ರಿಕದಲ್ಲಿರುವ ಲೇಡಿಸ್ಮಿತ್ ಎಂಬ ಪಟ್ಟಣವನ್ನು ಬಿಡಿಸಿಕೊಳ್ಳುವದಕ್ಕಾಗಿ ಹೋಗುತ್ತಿದ್ದ ಸೈನ್ಯದ ಡಾಕ್ಟರಾಗಿ ಅದರ ಜೊತೆಯಲ್ಲಿ ಹೋದರು. ಆ ಸೈನ್ಯದಲ್ಲಿ 30,000 ಶಿಪಾಯಿಗಳಿದ್ದರು. ಅವರು ಬೇಸಿಗೆ ಕಾಲದಲ್ಲಿ ದೀರ್ಘಪ್ರಯಾಣಗಳನ್ನು ಮಾಡಬೇಕಾಗಿತ್ತು. ಇವರಲ್ಲಿ ಮೊದಲು ಬಳಲಿದವರಾಗಿ ಮುಂದಕ್ಕೆ ನಡೆಯಲಾರದೆ ಹಿಂದುಳಿದವರು ಯಾರು? ಉದ್ದವಾದವರೂ ಅಲ್ಲ; ಗಿಡ್ಡರಾದವರೂ ಅಲ್ಲ; ದೊಡ್ಡವರೂ ಅಲ್ಲ; ಚಿಕ್ಕವರೂ ಅಲ್ಲ. ಅವರು ಯಾರೆಂದರೆ ಕುಡುಕರೇ. ಕುಡುಕರೆಂದು ದೊಡ್ಡ ದೊಡ್ಡ ಅಕ್ಷರಗಳಲ್ಲಿ ಒಂದೊಂದು ಚೀಟಿಯನ್ನು ಬರೆದು ಅವರುಗಳ ಬೆನ್ನಿಗೆ ಅಂಟಿಸಬಹುದಾಗಿತ್ತು. ಆಲ್‌ಕೊಹಾಲ್ ಅದನ್ನು ಸೇವಿಸುತ್ತಿರುವವನಿಗೆ ವಾಸ್ತವವಾಗಿ ಬಲವನ್ನು ಕೊಡುವದಿಲ್ಲ.

ಆಲ್‌ಕೊಹಾಲ್ ಹೃದಯದ ನಾಡಿಯನ್ನು ಚುರುಕಾಗಿ ಮಾಡಿ, ಚರ್ಮವನ್ನು ಕೆಂಪಾಗ ಮಾಡುತ್ತದೆ. ಆದರೆ ಅದರ ಶಕ್ತಿಯು ತಗ್ಗಿದ ಕೂಡಲೆ ಹೃದಯದ ನಾಡಿಯು ಬಹಳ ನಿಧಾನವಾಗುವದರಿಂದ ಮನುಷ್ಯನು ಬಲಹೀನನಾಗುತ್ತಾನೆ. ಆಲ್‌ಕೊಹಾಲ್ ನರಗಳಿಗೆ ವಿಷಪ್ರಯೋಗಮಾಡಿ ಕೆಡಿಸಿಬಿಡುತ್ತದೆ. ನರಗಳ ಚೈತನ್ಯವು ಕಡಮೆಯಾಗುವದರಿಂದ ಮನುಷ್ಯನು ಹೆಡ್ಡನಾಗುತ್ತಾನೆ. ಇಂಥವನು ತನ್ನ ಕೆಲಸವನ್ನು ತೃಪ್ತಿಕರವಾಗಿ ಮಾಡಲಾರನು.

ಒಬ್ಬನು ದೀರ್ಘಾಲೋಚನೆಯಿಂದಲೂ ತುಂಬಾ ಜಾಗರೂಕತೆಯಿಂದಲೂ ಕೆಲಸ ಮಾಡಬೇಕಾಗಿದ್ದರೆ, ಅವನು ಎಂದಿಗೂ ಆಲ್‌ಕೊಹಾಲನ್ನು ಪಾನಮಾಡಬಾರದು. ಯಾರಿಗೆ ತಮ್ಮ ಕೆಲಸದಲ್ಲಿ ಜಾಗರೂಕತೆಯೂ ಸೂಕ್ಷ್ಮಬುದ್ಧಿಯೂ ಕಾರ್ಯಾಕಾರ್ಯಗಳನ್ನು ತೂಗಿನೋಡುವ ವಿಮರ್ಶಾಜ್ಞಾನವೂ ಹಸ್ತಲಾಘವವೂ ಆವಶ್ಯವಾಗಿರುತ್ತದೆಯೋ ಅಂಥವರು ಆಲ್‌ಕೊಹಾಲನ್ನು ಎಂದಿಗೂ ಮುಟ್ಟಬೇಕಾರದು. ವೈದ್ಯರೇ ಮುಂತಾದ ಅನೇಕ ಉದ್ಯೋಗಸ್ಥರು ಹಗಲಲ್ಲಿ ಮದ್ಯಪಾನಕಗಳನ್ನು ತೆಗೆದುಕೊಳ್ಳುವದಿಲ್ಲ. ಯಾಕೆಂದರೆ ಅಂಥ ಪಾನವಿದಾರ್ಥಗಳು ಅವರು ತಮ್ಮ ಕೆಲಸವನ್ನು ತೃಪ್ತಿಕರವಾಗಿ ಮಾಡದಂತೆ ಅಭ್ಯಂತರ ಪಡಿಸುತ್ತವೆ.

ಆಲ್‌ಕೊಹಾಲ್ ತೆಗೆದುಕೊಳ್ಳುವದರಿಂದ ದೇಹದಲ್ಲಿ ಕಾವು ಹುಟ್ಟುವದೆಂದು ಕೆಲವರು ಯೋಚಿಸುತ್ತಾರೆ. ಇದೂ ಸಹ ದೊಡ್ಡ ತಪ್ಪು. ಆಲ್‌ಕೊಹಾಲ್ ವಾಸ್ತವವಾಗಿ ಜೀವಶಕ್ತಿಯನ್ನು ಕಡಮೆಮಾಡುತ್ತದೆ. ಆದ್ದರಿಂದ ಅದನ್ನು ಸೇವನೆಮಾಡುವವರು ಉಷ್ಣವನ್ನಾಗಲಿ ಶೀತವನ್ನಾಗಲಿ ಸಹಿಸುವದು ಹೆಚ್ಚು ಕಷ್ಟವಾಗುತ್ತದೆ.

ಎಂದಾದರೂ ಕುಡಿಯದೆ ಇರುವವರಿಗಿಂತ ಕುಡುಕರಿಗೆ ರೋಗಬಂದರೆ ಗುಣವಾಗುವದು ಬಹಳ ಹೆಚ್ಚು ಕಷ್ಟ. ಅವರ ದೇಹವು ಬಲಹೀನವಾಗಿರುವದರಿಂದ ರೋಗವನ್ನು ಎದುರಿಸಲಾರದು. ಒಂದು ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಬೇಕಾದರೆ ಅವನಿಗೆ ಅದು ಮತ್ತಷ್ಟು ಹೆಚ್ಚು ಪ್ರಾಣಾಪಾಯಕರವಾಗಿರುವದು.

ಕೆಲಸಮಾಡುವದಕ್ಕೆ ಯೋಗ್ಯರಾಗಿಯೂ ದೃಢಕಾಯರಾಗಿಯೂ ಇರಬೇಕೆಂದು ಅಪೇಕ್ಷಿಸುವ ಯುವಕರೂ ಯುವತಿಯರೂ ಆಲ್‌ಕೊಹಾಲನ್ನು ಎಂದಿಗೂ ಸೇವನೆಮಾಡಲೇಬಾರದು. ಅವರು ಯಾವ ಸಂದರ್ಭದಲ್ಲಾದರೂ ಅದನ್ನು ತೆಗೆದುಕೊಳ್ಳಬೇಕಾದ ಕಾರಣವು ಇರುವದೇ ಇಲ್ಲ. ಇದು ಒಂದು ಬಗೆ ಪಾಷಾಣ. ಆಲ್‌ಕೊಹಾಲನ್ನು ಪ್ರತಿದಿನವೂ ತೆಗೆದುಕೊಳ್ಳಬೇಕಾಗಿರುವಂತೆ ಆರ್ಸೆನಿಕ್ ಅಥವಾ ಸ್ಟ್ರಿಕ್ನೈನ್ ಎಂಬ ಪಾಷಾಣವನ್ನೂ ಸಹ ತೆಗೆದುಕೊಳ್ಳಬೇಕೆಂದು ಅವರು ಹೇಳಬಹುದು.

ಆಲ್‌ಕೊಹಾಲ್ ಸೇವನೆಮಾಡುವದರಿಂದ ದೇಹಕ್ಕೆ ಈ ಮೇಲೆ ಹೇಳಿರುವ ನಷ್ಟಗಳು ಉಂಟಾಗುತ್ತವೆಂದು ಸರ್ ಫ್ರೆಡೆರಿಕ್ ಟ್ರೆವ್ಸ್ ರವರು ಹೇಳುತ್ತಾರೆ. ಇದುಮಾತ್ರವಲ್ಲದೆ ಅದು ಬುದ್ಧಿಯನ್ನು ಮಂದಮಾಡಿ ಓದುವದಕ್ಕೆ ಕಷ್ಟವಾಗುವಂತೆ ಮಾಡುತ್ತದೆ ಇವೆಲ್ಲವುಗಳಿಗಿಂತಲೂ ಹೆಚ್ಚಾಗಿ ಅದು ಮನುಷ್ಯನ ಮನಸ್ಸನ್ನು ಬಲಹೀನಪಡಿಸುತ್ತದೆ. ಅವನು ಕೆಟ್ಟದ್ದನ್ನು ಮಾಡಿ ದೇವರ ಕಟ್ಟಳೆಯನ್ನು ಮೀರುವಂತೆ ಪ್ರೇರಿಸಲ್ಪಡುವಾಗ ಅದನ್ನು ಎದುರಿಸುವಷ್ಟು ಶಕ್ತಿಯು ಅವನಿಗೆ ಇರುವದಿಲ್ಲ. ಆದಕಾರಣ ಸುಲಭವಾಗಿ ಪಾಪದಲ್ಲಿ ಬಿದ್ದು ದೇಹಾತ್ಮಗಳಲ್ಲಿ ಬಲಹೀನನಾಗುತ್ತಾನೆ.

ನಮ್ಮ ಮೈಸೂರು ಸೀಮೆಯಲ್ಲಿ ಕುಡುಕುತನವು ಹೆಚ್ಚುತ್ತಾ ಬರುತ್ತದೆ. ದೇಶಾಭಿಮಾನಿಗಳೆಲ್ಲರೂ ಜನಗಳಿಗೆ ಈ ವಿಷಯವನ್ನು ಪ್ರಚುರಪಡಿಸಿ, ತಮ್ಮ ಬೋಧನೆಯಿಂದಲೂ ಮಾದರಿಯಿಂದಲೂ ಅವರನ್ನು ಪ್ರೇರಿಸಿ ಈ ದುರಭ್ಯಾಸವನ್ನು ನಿಲ್ಲಿಸಿಬಿಡುವಂತೆ ತಮ್ಮ ಸರ್ವಪ್ರಯತ್ನವನ್ನೂ ಮಾಡಬೇಕಾಗಿದೆ.

ಒಳದೇಶದ ವೃತ್ತಾಂತಗಳು.

ಈ ವಾರ ನಮ್ಮ ಪತ್ರಿಕೆಯು ಹತ್ತು ಪುಟಗಳುಳ್ಳದ್ದಾಗಿದೆ.

ನಮ್ಮ ಮಹಾರಾಜರವರೂ ಮಹಾಮಾತೃಶ್ರೀಯವರೂ ಇಷ್ಟರಲ್ಲೇ ರಾಜಧಾನಿಯಿಂದ ನೀಲಗಿರಿಗೆ ದಯಮಾಡುವರೆಂದು ಕೇಳುತ್ತೇವೆ.

ಕಳೆದ ವಾರ ಎರಡು ದಿನ ಒಳ್ಳೇ ಮಳೆ ಸುರಿಯಿತು. ಮೋಡಮಾಡುತ್ತಲೂ ಶೀತಗಾಳಿ ಬೀಸುತ್ತಲೂ ಇದೆ. ಧಾರಣೆವಾಸಿಗಳು ದಿನದಿನಕ್ಕೆ ಹೆಚ್ಚುತ್ತಾ ಬಂದಿವೆ.

ಈಚೆಗೆ ಕೆಲವು ವಾರಗಳಿಂದ ಮೆಯಿಲ್ ಗಾಡಿಗಳು ಕಾಲಕ್ಕೆ ಸರಿಯಾಗಿ ಬರುವುದೇ ಅಪರೂಪವಾಗಿ, ರಾಜಧಾನಿಯ ವರ್ತಕರೇ ಮುಂತಾದ ಪ್ರಜೆಗಳಿಗೆ ತುಂಬಾ ಅನನುಕೂಲವಾಗಿರುವುದು. ರೈಲ್ವೆ ಕಂಪನಿಯವರೂ ನಮ್ಮ ಸರ್ಕಾರದವರೂ ಈ ಭಾಗವನ್ನು ಕ್ರಮಪಡಿಸಬೇಕಾಗಿದೆ.

ಕಳೆದ ಸೋಮವಾರ ಶ್ರೀಮದ್ಯುವರಾಜರವರು ಬರೋಡಾ ಸಂಸ್ಥಾನದ ರಾಜಕುಮಾರರ ಸಮೇತ ಮೋಟಾರಿನಲ್ಲಿ ಬೆಂಗಳೂರಿಗೂ ಅಲ್ಲಿಂದ ಕುಣಿಗಲಿಗೂ ದಯಮಾಡಿದರು. ಆ ರಾಜಕುಮಾರರನ್ನು ಹಾಗೇ ಸಾಗಕಳುಹಿಸಿ ಯುವರಾಜರವರು ಒಂದೆರಡು ದಿನಗಳಲ್ಲೇ ವಾಪಸು ದಯಮಾಡುವವರಾಗಿದ್ದಾರೆ.

ಬೆಂಗಳೂರು ಸಿಟಿ ಗಲುವಿನಂಗಡಿ ಬೀದಿಯಲ್ಲಿ ಲಿಂಗಪ್ಪ, ಕೆಂಚಣ್ಣ ಎಂಬಿಬ್ಬರು ಸುಂದರೀಬಾಯಿ ಎಂಬಾಕೆಯನ್ನು ಹಿಡಿದೆಳದು ಮಾನಭಂಗಮಾಡಿದರೆಂದು ಸಿಟಿ ಮ್ಯಾಜಿಸ್ಟ್ರೇಟರು ಲಿಂಗಪ್ಪನಿಗೆ 25 ರೂಪಾಯಿ, ಕೆಂಚಣ್ಣನಿಗೆ 15 ರೂಪಾಯಿ ಜುಲ್ಮಾನೆ ವಿಧಿಸಿರುತ್ತಾರೆ.

ಯೂರೋಪ್ಪಿಯನ್ ಅತಿಥಿಗಳ ಸಂತೋಷಾರ್ಥವಾಗಿ ಕಳೆದ ಶನಿವಾರ ರಾತ್ರಿ, ರಾಜಧಾನಿಯ ಟೌನ್ ಹಾಲಿನಲ್ಲಿ ಅರಮನೆ ಕಂಪನಿಯವರು ಬೇರೆ ಬೇರೆ ನಾಟಕಗಳ ಮೂರು ಸೀನುಗಳನ್ನು ಆಡಿದರು. ಶ್ರೀಮದ್ಯುವರಾಜರು, ಬ್ರಿಟಿಷ್ ರೆಸಿಡೆಂಟರು, ಅವರ ಪತ್ನಿ ಪುತ್ರಿಯರು, ಬರೋಡಾ ರಾಜಕುಮಾರರು, ಸುಮಾರು 80 ಮಂದಿ ಯೂರೋಪ್ಪಿಯನ್ ಸರದಾರರು, ನೆರೆಸಾನಿಗಳು ದಯಮಾಡಿದ್ದು ನಾಟಕಗಳ ಸೀನರಿಗಳನ್ನೂ, ನಾಟಕಧಾರಿಗಳ ಚತುರತೆ ನೃತ್ಯಗೀತಾದಿಗಳನ್ನೂ ನೋಡಿ ಸಂತೋಷಪಟ್ಟು ಮೆಚ್ಚಿಕೊಂಡರು.

ಮುನ್ಸಿಫರಾಗಿದ್ದು ರಿಟೈರಾಗಿ ಅನೇಕ ಬಂಗಾಳಿ ನಾವೆಲ್ (ಕಥೆ) ಗಳನ್ನು ಭಾಷಾಂತರಮಾಡಿ ಪ್ರಕಟಿಸಿ ಕನ್ನಡದೇಶದಲ್ಲೆಲ್ಲಾ ತುಂಬಾ ಹೆಸರುವಾಸಿಯನ್ನು ಪಡೆದಿದ್ದ ಮ॥ ಬಿ. ವೆಂಕಟಾಚಾರ್ಯರು ಕಳೆದ ವಾರ ಬೆಂಗಳೂರಿನಲ್ಲಿ ಅಕಸ್ಮಾತ್ತಾಗಿ ಕಾಲವಾದರೆಂದು ತಿಳಿಯಲು ವಿಷಾದಿಸುತ್ತೇವೆ.

ನಂಜನಗೂಡಿನ ಮಿಡಲ್ ಎ. ವಿ. ಸ್ಕೂಲಿನ ಉಪಾಧ್ಯಾಯರ ಸಂಘದವರು ಬಡವಿದ್ಯಾರ್ಥಿಗಳಿಗೆ ಎ. ವಿ. 1 ನೇ ತರಗತಿಯಲ್ಲಿ ಇಬ್ಬರಿಗೆ ಅರ್ಧ ಫೀಯನ್ನೂ, ಇಬ್ಬರಿಗೆ ಪೂರ್ತಾ ಫೀಯನ್ನೂ ಉಚಿತವಾಗಿ ಕೊಡುತ್ತಾರೆಂದೂ, ವಿದ್ಯಾರ್ಥಿಗಳು ಕನ್ನಡ 1 ನೇ ತರಗತಿಯಲ್ಲಿ ಪ್ಯಾಸಾಗಿರಬೇಕೆಂದೂ ತಿಳಿಸುತ್ತಾರೆ.

ಅರಮನೆಯ ಜಿಲ್ಲೇಕಚೇರಿಯ ಛಾರ್ಜನ್ನು ವಹಿಸಿರುವ ಮ॥ ಎ. ವಿ. ಸುಬ್ರಹ್ಮಣ್ಯರಾಜೇ ಅರಸಿನವರಿಗೆ ನಮ್ಮ ಮಹಾರಾಜರವರು ಅರಮನೆಯ ಬಾರ್ ಕಚೇರಿ ಭಕ್ಷಿಗಿರಿಯನ್ನು ಈ ತಿಂಗಳ ಪ್ರಾರಂಭದಿಂದ ದಯಪಾಲಿಸಿರುತ್ತಾರೆ. ಇದುವರೆಗೆ ಬಾರ್ ಇಲಾಖಾ ಕಾಮಂಡಾಂಟರಾಗಿದ್ದ ಮ॥ ಮಹಮದ್ ಮರ್ಚಾ ಸಾಹೇಬರಿಗೆ ಪೆನ್ಷನ್ ಕೊಡಲಾಯಿತು.

ಒಬ್ಬ ಬಾತ್ಮಿದಾರರಿಂದ.—ರಾಜಧಾನಿಯಲ್ಲಿ ಈಗ ಹೊಸದಾಗಿ ಮಾಡಿರುವ ಶ್ರೀ ಶಾರದಾ ವಿಲಾಸ ಒಥೆಲೋ ಯೂನಿಯನ್ ಸಂಘದವರು ಕಳೆದ ಬುಧವಾರ ಟೌನ್ ಹಾಲಿನಲ್ಲಿ ಷ್ಯಾಡ್‌ಲಾಕ್ ಎಂಬ ಇಂಗ್ಲಿಷ್ ನಾಟಕವನ್ನು ಕನ್ನಡದಲ್ಲಿ ಮಕರಂದಿಕಾ ಪರಿಣಯವೆಂಬ ಹೆಸರಿನಿಂದ ಆಡಿದರು. ವೃದ್ಧಾಪ್ಯದಲ್ಲಿ ವಿವಾಹವನ್ನು ಬಯಸುವವರಿಗೆ ಈ ಚರಿತ್ರೆಯು ಒಳ್ಳೇ ಪಾಠವಾಗಿರುತ್ತದೆ.

ಮಿ॥ ಎಚ್. ಜೆ. ಭಾಭಾ ಸಾಹೇಬರವರ ಹೆಸರನ್ನು ಶಾಶ್ವತಪಡಿಸುವುದಕ್ಕಾಗಿ ಚಂದಾ ಹಣವನ್ನು ಕೂಡಿಸಿ ಬಹುಕಾಲವಾದರೂ ಅದು ಇನ್ನೂ ವ್ಯವಸ್ಥೆ ಆಗದಿರುವುದು ತುಂಬಾ ಶೋಚನೀಯವಾಗಿದೆ ಎಂದು ಚಂದಾ ಕೊಟ್ಟವರು ಆಕ್ಷೇಪಣೆಮಾಡುತ್ತಿದ್ದಾರೆ. ಈ ಫಂಡಿನ ಸೆಕ್ರೆಟರಿಗಳಾದ ಡಾಕ್ಟರ್ ಅಚ್ಯುತರಾಯರೂ, ಮ॥ ಸಿ. ಕೃಷ್ಣರಾಯರೂ ಈ ಕಾರ್ಯವನ್ನು ಬೇಗನೆ ಸಾರ್ಥಕಪಡಿಸುವರೆಂದು ನಿರೀಕ್ಷಿಸುತ್ತೇವೆ.

ಮೈಸೂರು ಸಂಪದಭ್ಯುದಯ ಸಮಾಜದವರು ಸಂಸ್ಥಾನಾಮಳೆ ಉಂಡು ಬರುವ ಕಸಬುಗಳು, ವ್ಯಾಪಾರ ಮುಂತಾದ ವಿಷಯಗಳನ್ನು ಕುರಿತ ಒಂದು ದೊಡ್ಡ ಪುಸ್ತಕವನ್ನು ಬರೆಸಿ ಒಂದು ಪ್ರತಿಯನ್ನು ನಮಗೆ ಕಳುಹಿಸಿದ್ದಾರೆ. ಇದನ್ನು ಮ॥ ವಿ. ಎಸ್. ಸಾಂಬಶಿವ ಅಯ್ಯರವರು ಸಂಸ್ಥಾನದಲ್ಲೆಲ್ಲಾ ಸಂಚಾರಮಾಡಿ ವಿಷಯಗಳನ್ನು ಶೋಧನೆಮಾಡಿ ಬರೆದಿರುವರು. ಇದರ ವಿಷಯವಾಗಿ ಇನ್ನೊಂದು ವೇಳೆ ಪ್ರಸ್ತಾಪಮಾಡುವೆವು.

ಬೆಂಗಳೂರು ಸಿಟಿ ಕವಾಡಿಗರ ರೇವಣ್ಣಸೆಟ್ಟಿ ಪೇಟೆಯಲ್ಲಿ ಸ್ಕೂಲಿನಿಂದ ಬರುತ್ತಿದ್ದ ನಂಜುಂಡಯ್ಯನೆಂಬ 9 ವರುಷದ ಹುಡುಗನನ್ನು ರಂಗಪ್ಪನೆಂಬುವನು ಚಿತಾವಣೆಮಾಡಿ ಕರೆದುಕೊಂಡು ಹೋಗಿ ಕೋರಟರ ಪಾರ್ಕಿನ ಹೈದರ್ ಸಾಬಿ ಬಾವಿಗೆ ದಬ್ಬಿ ಕೊಂದುಹಾಕಿ ಅವನ ಮೈಮೇಲಿದ್ದ ಒಡವೆಗಳನ್ನು ಅಪಹರಿಸಿದನೆಂದು ಸಿಕ್ಕಿಬಿದ್ದಿದ್ದಾನೆ. ಅವನ ಬಳಿ ಆ ಒಡವೆಗಳು ಸಿಕ್ಕಿದವು. ಹೆಣವು ಆ ಬಾವಿಯಲ್ಲಿ ತೇಲುತ್ತಿತ್ತು. ವಿಚಾರಣೆ ನಡೆಯುತ್ತಿದೆ.

ಸಂಸ್ಥಾನದ ಸಂಡೇ ಸ್ಕೂಲ್ ಪರೀಕ್ಷೆಗಳು ಈ ತಿಂಗಳು 18 ನೇ ತಾರೀಖಿಗೆ ಪ್ರಾರಂಭವಾಗುತ್ತವೆ. ಕನ್ನಡಭಾಗದ ಪರೀಕ್ಷೆಗಳಿಗೆ ಹೋಗತಕ್ಕವರು ಕೂಡಲೇ ತಮ್ಮ ಸಂಡೇ ಸ್ಕೂಲ್ ಟೀಚರುಗಳಿಗೋ, ತಮ್ಮ ಸ್ಥಳದ ಮಿಷನರಿಗಳಿಗೋ ತಿಳಿಸಬೇಕು. ಇದಕ್ಕೆ ಫೀಜು ಏನೂ ಕಟ್ಟಬೇಕಾಗಿಲ್ಲ. ಎಲ್ಲರಿಗಿಂತಲೂ ಮೇಲಾಗಿ 1 ನೇ ತರಗತಿಯಲ್ಲಿ ತೇರ್ಗಡೆಹೊಂದತಕ್ಕವನಿಗೆ ಒಂದು ಬೆಳ್ಳಿಯ ಮೆಡಲೂ, ತೇರ್ಗಡೆ ಹೊಂದುವವರಿಗೆಲ್ಲಾ ಸರ್ಟಿಫಿಕೇಟುಗಳೂ ದೊರಕುವವು.

ಹೋದ ವರುಷ ಆಗಸ್ಟ್ ತಿಂಗಳಲ್ಲಿ ನಮ್ಮ ಮಹಾರಾಜರವರ ಮಿಲಿಟರಿ ಅಸಿಸ್ಟೆಂಟರಾಗಿರುವ ಕರ್ನಲ್ ಎ. ಜೋನ್ಸ್‌ರವರು ಬೆಂಗಳೂರಿನಲ್ಲಿ ಮೋಟರ್ ಗಾಡಿಯಲ್ಲಿ ಹೋಗುತ್ತಿದ್ದಾಗ ಸಿಟಿ ಮ್ಯುನಿಸಿಪಾಲಿಟಿಯವರ ಅಜಾಗರೂಕತೆಯಿಂದ ಅವರ ಗಾಡಿಗೆ ಶೇಷಾದ್ರಿರೋಡಿನಲ್ಲಿ ಅಪಾಯಸಂಭವಿಸಿತೆಂದೂ, ಅದಕ್ಕಾಗಿ 200 ರೂಪಾಯಿ ಡಾಮಾಜು ಕೊಡಬೇಕೆಂದೂ ಕೇಳಿದರು. ಅವರಿಗೂ ಮ್ಯುನಿಸಿಪಾಲಿಟಿಗೂ ಕಾಗದಪತ್ರಗಳು ನಡೆಯುತ್ತಾ ಬಂದು, ಕಡೆಗೆ ಸಿಟಿ ಮ್ಯುನಿಸಿಪಾಲಿಟಿಯವರು ಅವರಿಗೆ 130 ರೂಪಾಯಿ ಕೊಡುವುದಾಗಿ ಒಪ್ಪಿಕೊಂಡು, ಕಳೆದ ವಾರ ಈ ಹೋರಾಟವನ್ನು ಮುಕ್ತಾಯಮಾಡಿದರು.

ಕಳೆದ 20 ನೇ ತಾ. ಶನಿವಾರ ಸಾಯಂಕಾಲ ಬೆಂಗಳೂರು ಲಂಡನ್ ಮಿಷನ್ ಹೈ ಸ್ಕೂಲಿನ ಬಾಲಿಕೆಯರಿಗೆ ಬಹುಮಾನಗಳನ್ನು ಹಂಚಿದರು. ವಿದ್ಯಾ ಇಲಾಖೆಯ ಮುಖ್ಯಾಧಿಕಾರಿಯಾದ ರಾವ್ ಬಹದೂರ್ ಮ॥ ಎಂ. ಶಾಮರಾಯರು ಅಗ್ರಾಸನವನ್ನು ವಹಿಸಿ, ಆ ಪಾಠಶಾಲೆಯಲ್ಲಿ ನಡೆಯುವಂಥಾ ವಿದ್ಯಾಬೋಧನಾ ಕ್ರಮಗಳು ಬಹಳ ತೃಪ್ತಿಕರವಾಗಿವೆ ಎಂದೂ, ಪರಸ್ಥಳದಿಂದ ಬರತಕ್ಕ ವಿದ್ಯಾರ್ಥಿನಿಯರಿಗಾಗಿ ಒಂದು ಭೋಜನಶಾಲೆಯನ್ನೂ ಮಂದಿರವನ್ನೂ ಕಲ್ಪಿಸುವುದಕ್ಕೆ ಸ್ಕೂಲಿನ ಅಧಿಕಾರಿಗಳು ಮಾಡಿರುವ ಏರ್ಪಾಡು ಸ್ತೋತ್ರಾರ್ಹವಾಗಿವೆ ಎಂದೂ ಹೇಳಿ, ಬಹುಮಾನಗಳಿಗಾಗಿ 25 ರೂಪಾಯಿ ಕೊಟ್ಟು ಪ್ರೋತ್ಸಾಹಪಡಿಸಿದರು.

ಒಬ್ಬ ಬಾತ್ಮಿದಾರರಿಂದ.—ಇದೇ ತಿಂಗಳು 22 ನೇ ತಾರೀಖಿನಲ್ಲಿ ಒಬ್ಬ *ಇಂಗ್ಲಿಷ್ ಸರದಾರರು ಮೋಟರಿನಲ್ಲಿ ಹೋಗುತ್ತಿರುವಾಗ*, ಮೈಸೂರು ದಾರಿಯಲ್ಲಿ, ಚನ್ನಪಟ್ಟಣಕ್ಕೆ 5 ಮೈಲಿಗಳ ಫಾಸಲೆಯಲ್ಲಿ ಒಂದು ಅನಾಹುತ ನಡೆಯಿತು. 60 ವರ್ಷದ ಕುಂಬಾರ ಮುದುಕನೊಬ್ಬನು ಅಕಸ್ಮಾತ್ ಮೋಟರಿಗೆ ಸಿಕ್ಕಿ, ಗಾಡಿಯು ಅವನ ಮೇಲೆ ಹರಿದು ತುಂಬಾ ಜಖಂ ಆಯ್ತು. ತರುವಾಯ ಆ ಸರದಾರರು ಹಿಂತಿರುಗಿ ಚನ್ನಪಟ್ಟಣಕ್ಕೆ ಬಂದು, ಇಲ್ಲಿನ ಡಾಕ್ಟರನ್ನು ಕರೆದುಕೊಂಡು ಹೋಗಿ, ಅವನನ್ನು ಆಸ್ಪತ್ರೆಗೆ ಸಾಗಿಸಿದರು. ಆದರೆ ಮಾರನೆ ದಿನ ಅವನು ಕಾಲವಾದನು. ಪುನಃ ಆ ಸರದಾರರು ಚನ್ನಪಟ್ಟಣಕ್ಕೆ ಬಂದು ಆ ಮನುಷ್ಯನ ಕುಟುಂಬ ಸಂರಕ್ಷಣೆಗಾಗಿ 850 ರೂಪಾಯಿ ಪ್ರತಿಫಲ ಕೊಡುವುದಾಗಿ ಇಲ್ಲಿನ ಅಧಿಕಾರಿಗಳ ಮೂಲಕ ಹೇಳಿಸಿದರು. ಆ ಕುಂಬಾರನಿಗೆ ಐದಾರು ಮಂದಿ ಮಕ್ಕಳಿದ್ದಾರೆ.

ಮೈಸೂರು ಗೆಜೆಟ್ ಸಂಗ್ರಹ.

ಸಿಕಾರಿಪುರದ ಈಗಿನ ಮ್ಯುನಿಸಿಪಲ್ ಕೌನ್ಸಿಲ್ಲು 1914 ನೇ ಡಿಸೆಂಬರ್ ಆಖೈರು ವರೆಗೆ ಇರತಕ್ಕದ್ದು.

ಮೋಳ್ಕಾಲ್ಮೂರಿನಲ್ಲಿ ಒಂದು ಸರ್ಕಾರಿ ಆಸ್ಪತ್ರೆಯನ್ನು ಇಡಲಾಗುವುದು. ಇದರಿಂದ ಅಲ್ಲಿನ ಮ್ಯುನಿಸಿಪಲ್ ಕೌನ್ಸಿಲರುಗಳ ಸಂಖ್ಯೆಯನ್ನು 9 ರಿಂದ 10ಕ್ಕೆ ಜಾಸ್ತಿಮಾಡಿ ಮುಂದೆ ಹೇಳುವವರನ್ನು ಮ್ಯುನಿಸಿಪಲ್ ಮೆಂಬರಾಗಿ ನೇಮಕ ಮಾಡಿದೆ—ಮ॥ ಪಂಡಿತರತ್ನಂ ಸ್ಥಾನಿಕಂ ಕುಪ್ಪಸ್ವಾಮಿಯ್ಯಂಗಾರ್ರ್ಯು, ಕೋಆಪರೇಟಿವ್ ಸೊಸೈಟಿ ಸೆಕ್ರೆಟರಿ ಮ॥ ಗಂಗಣ್ಣಶೆಟ್ಟರು, ಆಸ್ಪತ್ರೆಯ ಸಬ್ ಅ॥ ಸರ್ಜನ್‌ರು.

ಸಿಕಾರಿಪುರದ ತಾಲ್ಲೂಕು ಅಮಲ್ದಾರ್ ಮ॥ ಜಿ. ಶಾಂತವೀರಪ್ಪನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರುತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.—ಶಿವಮೊಗ್ಗಾ ಡೆಪ್ಯುಟಿ ಕಮಿಷನರ ಆಫೀಸ್ ಹೆಡ್ ಅಸಿಸ್ಟೆಂಟ್ ಮ॥ ಎಸ್. ನಾರಾಯಣರಾಯರು ಅಮಲ್ದಾರ್ ಮತ್ತು 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಲ್ಪಟ್ಟಿದ್ದಾರೆ.

ಚಿತ್ರದುರ್ಗಕ್ಕೆ ಎಕ್ಸೈಸ್ ಆಫೀಸರಾಗಿ ವರ್ಗಪಟ್ಟಿರುವ ಅ॥ ಕಮಿಷನರ್ ಮ॥ ಎಸ್. ವೆಂಕಟರಂಗಂರವರಿಗೆ ಜೂಲೈ ತಾ. 1 ರಿಂದ ಆರು ವಾರಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಫಾರೆಸ್ಟ್ ಅ॥ ಕನ್ಸರ್ವೇಟರ್ ಮ॥ ಎಚ್. ರಾಮಯ್ಯನವರಿಗೆ ಕೊಟ್ಟಿರುವ ಮೂರು ತಿಂಗಳು ಹದಿನೆಂಟು ದಿನಗಳ ಕಾಯಿಲೆ ರಜವನ್ನು ಇನ್ನೂ ಆರು ತಿಂಗಳು ನಾಲ್ಕು ದಿನಗಳಿಗೆ ಜಾಸ್ತಿಮಾಡಿದೆ.

ಮೈಸೂರು ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರ್ ಮ॥ ಬಿ. ಕೃಷ್ಣರಾಯರಿಗೆ ಕೊಟ್ಟಿರುವ ಎರಡು ತಿಂಗಳ ಪ್ರಿವಿಲೇಜ್ ರಜವನ್ನು ಇನ್ನೂ ಒಂದು ತಿಂಗಳು ಜಾಸ್ತಿ ಮಾಡಿದೆ. ಈಗಿನ ಬದಲಿ ಏರ್ಪಾಡೇ ಜಾರಿಯಲ್ಲಿರತಕ್ಕದ್ದು.

ಹಾಸನದ ಡೆಪ್ಯುಟಿ ಕಮಿಷನರ ಆಫೀಸ್ ಶಿರಸ್ತೇದಾರ್ ಮ॥ ಬಿ. ಎಂ. ವೆಂಕಟೇಶಯ್ಯನವರು ಹಾಸನದ ತಾಲ್ಲೂಕು ಅಮಲ್ದಾರ್ ಮತ್ತು 2 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಲ್ಪಟ್ಟಿದ್ದಾರೆ.

ಬೆಂಗಳೂರು ಪೊಲೀಸ್ ಇನ್ಸ್‌ಪೆಕ್ಟರ್ ಮ॥ ಸಿ. ಕೃಷ್ಣರಾಯರನ್ನು ಹಿರಿಯೂರು ತಾಲ್ಲೂಕಿನ ಅಮಲ್ದಾರ್ ಮತ್ತು 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಿದೆ. ಅಮಲ್ದಾರ್ ಮ॥ ಕೆ. ನರಸಿಂಹಯ್ಯಂಗಾರ್ರ್ಯು ಜೂನ್ ಆಖೈರಿನಿಂದ ನಿವೃತ್ತರಾಗತಕ್ಕದ್ದು.

ರಾಜಕಾರ್ಯ ಪ್ರಸಕ್ತ ರಾಯಬಹದೂರ್ ಎಂ. ಮುತ್ತಣ್ಣನವರು ಜೂಲೈ ತಾ. 1 ರಿಂದ ಪೆನ್ಷನ್ ಹೊಂದಿದರಿಂದ ಮ॥ ಎಂ. ಜಿ. ರಾಮರಾಯರು ಫಾರೆಸ್ಟ್ ಇಲಾಖೆಯ ಕನ್ಸರ್ವೇಟರಾಗಿ ಬದಲಿ ನೇಮಿಸಲ್ಪಟ್ಟಿದ್ದಾರೆ.

ಮಿ॥ ಜಸ್ಟಿಸ್ ಇ. ಎಚ್. ವಾಲೆಸ್‌ರವರು ಜೂಲೈ ತಾ. 1 ರಿಂದ ಬ್ರಿಟಿಷ್ ಸರ್ವೀಸಿಗೆ ವಾಪಸು ಹೋಗಿರುವದರಿಂದ ಮ॥ ಟಿ. ಪರಮಶಿವ ಅಯ್ಯರವರು ಚೀಫ್ ಕೋರ್ಟಿನ ಜಡ್ಜರಾಗಿ ನೇಮಿಸಲ್ಪಟ್ಟಿದ್ದಾರೆ.

ಅ॥ ಕಮಿಷನರ್ ಮ॥ ಜಿ. ಹನುಮಂತರಾಯರು ಚಿತ್ರದುರ್ಗದ ಡಿಸ್ಟ್ರಿಕ್ಟ್ ಎಕ್ಸೈಜ್ ಆಫೀಸರಾಗಿ ವರ್ಗಮಾಡಲ್ಪಟ್ಟಿದ್ದಾರೆ.

ಮ॥ ಕೆ. ಸಹಸ್ರನಾಮ ಅಯ್ಯರವರನ್ನು 80 ರೂಪಾಯಿ ಸಂಬಳದ ಮೇಲೆ ಹಂಗಾಮಿ ಓವರ್‌ಸಿಯರಾಗಿ ನೇಮಿಸಿ, ಯಡತೊರೆ ಡಿವಿಜನ್‌ಗೆ ವರ್ಗಮಾಡಿದೆ.—ಮ॥ ಕೆ. ವಿ. ರಾಘವಚಾರ್ಯರನ್ನು 60 ರೂಪಾಯಿ ಸಂಬಳದ ಮೇಲೆ ಹಂಗಾಮಿ ಓವರ್‌ಸಿಯರಾಗಿ ನೇಮಿಸಿ, ನೀರಾವರಿ ಡಿವಿಜನ್‌ಗೆ ವರ್ಗಮಾಡಿದೆ.

ಶಿವಮೊಗ್ಗಾ ಡಿವಿಜನ್ ಅ॥ ಇಂಜನಿಯರ್ ಮ॥ ಸಿ. ವಿಜಯರಂಗಂ ನಾಯುಡುರವರಿಗೆ ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಮ॥ ಎಂ. ರಾಮಯ್ಯನವರನ್ನು 2 ನೇ ಕ್ಲಾಸ್ ಸಬ್ ಅ॥ ಇಂಜನಿಯರಾಗಿ ಹಂಗಾಮಿ ನೇಮಕಮಾಡಿ, ಕಾವೇರಿ ರಿಜರ್ವಾಯರ್ ಕಾಮಗಾರಿ ಡಿವಿಜನ್‌ಗೆ ವರ್ಗಮಾಡಿದೆ.

ಗುಬ್ಬಿ ತಾಲ್ಲೂಕು ಅಮಲ್ದಾರ್ ಮ॥ ಟಿ. ಸ್ವಾಮಿನಾಥಶಾಸ್ತ್ರಿಯವರಿಗೆ ಕೊಟ್ಟಿರುವ ಹತ್ತು ದಿನಗಳ ಪ್ರಿವಿಲೇಜ್ ರಜವನ್ನು ಇನ್ನೂ ಐದು ದಿನಗಳಿಗೆ ಜಾಸ್ತಿ ಮಾಡಿದೆ.

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು.

ಕಳೆದ ಶನಿವಾರ ಬೆಳಗ್ಗೆ ಮೈಸೂರು ಮ್ಯುನಿಸಿಪಲ್ ಕೌನ್ಸಿಲರುಗಳು ಟೌನ್ ಹಾಲ್ ಮಂದಿರದಲ್ಲಿ ಸಭೆಸೇರಿ ತಿಂಗಳುಗಟ್ಟಳೆಯ ಮ್ಯುನಿಸಿಪಲ್ ಮೀಟಿಂಗನ್ನು ನಡಿಸಿದರು. ಆಗ ಚರ್ಚೆಯಿಂದ ತೀರ್ಮಾನವಾಗಿರುವ ಮುಖ್ಯವಿಷಯಗಳೇನೆಂದರೆ—

ಮನೆಯ ಯಜಮಾನನು ತನ್ನ ಸಂಸಾರದಲ್ಲಿ ಸಂಭವಿಸುವ ಜನನ ಮರಣಗಳನ್ನು ಮ್ಯುನಿಸಿಪಾಲಿಟಿಗೆ ತಿಳಿಸಲು ಅನುಕೂಲಿಸುವಂತೆ ಪ್ರತಿ ಮೊಹಲ್ಲಾಯಲ್ಲೂ ಒಂದು ಬಹಿರಂಗವಾದ ಸ್ಥಳವನ್ನು ಗೊತ್ತುಮಾಡಿ ಅಲ್ಲಿ ಒಂದು ಬೋರ್ಡನ್ನು ಕಟ್ಟಿಸಬೇಕಾದದ್ದು ಅವಶ್ಯವೆಂದು ಮ॥ ಅಂಬಳೆಪಂಡಿತರವರು ಸೂಚಿಸಿದ್ದನ್ನು ಹೆಲ್ತ್ ಕಮಿಟಿಯವರ ಅಭಿಪ್ರಾಯಕ್ಕಾಗಿ ತೆಗೆದಿಟ್ಟರು.—ಮ್ಯುನಿಸಿಪಲ್ ಇಂಜನಿಯರವರು ತಮಗೆ ಸಂಬಳವಲ್ಲದೆ ತಿಂಗಳಿಗೆ 50 ರೂಪಾಯಿ ಅಲೋಯನ್ಸು ಕೊಡಿಸಬೇಕೆಂದು ಕೇಳಿಕೊಂಡರು. ಕೆಲವು ಮೆಂಬರುಗಳು 30 ರೂಪಾಯಿ ಕೊಡಬಹುದೆಂದು ಅಭಿಪ್ರಾಯಪಟ್ಟರು. ಕಡೆಯಲ್ಲಿ ಮೆಂಬರುಗಳ ಒಟ್ಟುಸಮ್ಮತಿಯನ್ನು ಕೇಳಿದಾಗ ಅಲೋಯನ್ಸೇ ಕೊಡಬೇಕಾದದ್ದಿಲ್ಲವೆಂದು ತೀರ್ಮಾನವಾಯಿತು.—ಒಂದು ಬಚ್ಚಲನ್ನು ತಿರುಗಿಸುವುದಕ್ಕೆ ವೆಂಕಟಪ್ಪನೆಂಬಾತನಿಗೆ ಸೇರಿದ ಖಾಲಿ ನಿವೇಶನವನ್ನು ಮ್ಯುನಿಸಿಪಾಲಿಟಿಗೆ ಕೊಂಡುಕೊಳ್ಳಬೇಕೆಂದು ಮೆಂಬರುಗಳು ಒಪ್ಪಿದರು.—ಪ್ರೆಸಿಡೆಂಟರ ಬಳಿ ತಿರುಗುವುದಕ್ಕೆ ಒಂದು ಬೈಸಿಕಲ್ ಕೊಂಡು ಒಬ್ಬ ಜವಾನನಿಗೆ ವಹಿಸಿ ಅವನಿಗೆ ತಿಂಗಳಿಗೆ 2 ರೂಪಾಯಿ ಅಲೋಯನ್ಸು ಕೊಡಬಹುದೆಂದೂ, ಹಕೀಂ ಅಲ್ಲೀ ಪೀರ್ ಸಾಹೇಬರಿಗೆ ಇನ್ನೂ 5 ರೂಪಾಯಿ ಗ್ರಾಂಟು ಕೊಡಬಹುದೆಂದೂ ಹಿಂದೆ ಮೆಂಬರುಗಳು ಒಪ್ಪಿಕೊಂಡಿದ್ದರು. ಸರ್ಕಾರದವರು ಇವೆರಡು ಬಾಬುಗಳನ್ನೂ ಸ್ಯಾಂಕ್ಷನ್ ಮಾಡದೆಹೋದದ್ದನ್ನು ನೋಡಿ ಮೆಂಬರುಗಳು ಸ್ವಲ್ಪ ಚಿಂತೆಪಟ್ಟು ಈ ಭಾಗದಲ್ಲಿ ತಮ್ಮ ಅಸಮಾಧಾನವನ್ನು ಗವರ್ನ್‌ಮೆಂಟಿಗೆ ಅರಿಕೆಮಾಡಿ ಗವರ್ನ್‌ಮೆಂಟಿನವರು ತಮ್ಮ ಹುಕುಮನ್ನು ಪುನರಾಲೋಚನೆಗೆ ತಂದುಕೊಂಡು, ಅವೆರಡು ಬಾಬುಗಳನ್ನು ಸ್ಯಾಂಕ್ಷನ್ ಮಾಡುವಂತೆ ಕೇಳಿಕೊಳ್ಳುವಂತೆ ಅಭಿಪ್ರಾಯಪಟ್ಟರು.—ಮ್ಯುನಿಸಿಪಲ್ ಸ್ಟೋರಿನಲ್ಲಿದ್ದ ಕಾರ್ಪೆಂಟರ್ ಎಂಬ ನೌಕರಿಯನ್ನು ವಜಾಮಾಡಬಹುದೆಂದೂ, ಸ್ಟೋರ್ ಜವಾನನಿಗೆ 8 ರೂಪಾಯಿ ಸಂಬಳಕೊಟ್ಟು ಟೌನ್ ಹಾಲ್ ವಿದ್ಯುಚ್ಛಕ್ತಿಯ ದೀಪಗಳನ್ನು ನೋಡಿಕೊಳ್ಳುವಂತೆ ನೇಮಿಸಬೇಕೆಂದೂ ಒಪ್ಪಲಾಯಿತು.—ರಾಜಧಾನಿಯಲ್ಲಿ ಪುಷ್ಪಗಳ ಪ್ರದರ್ಶನವನ್ನು ನಡಿಸಬೇಕೆಂದೂ, ಅದರ ಖರ್ಚಿಗೆ ಮ್ಯುನಿಸಿಪಾಲಿಟಿಯಿಂದ ಕೆಲವು ಹಣ ಕೊಡಬಹುದೇ ಎಂದೂ ಸರ್ಕಾರದವರು ಬರೆದು ಕೇಳಿದ್ದರು. ಇದಕ್ಕೆ ಹಣ ಕೊಡಲು ಮ್ಯುನಿಸಿಪಾಲಿಟಿಗೆ ಚೈತನ್ಯವಿಲ್ಲವೆಂದು ಮೆಂಬರುಗಳು ತೀರ್ಮಾನಮಾಡಿದರು.—ಮಹಾರಾಣಿ ಆಸ್ಪತ್ರೆಗೆ ಮ್ಯುನಿಸಿಪಾಲಿಟಿಯಿಂದ ಸಲ್ಲುವ ಹಣವನ್ನು ಬಿಡುಗಡೆಮಾಡಿ, ಆ ಆಸ್ಪತ್ರೆಯ ಖರ್ಚನ್ನೆಲ್ಲಾ ಸರ್ಕಾರದವರೇ ವಹಿಸಿಕೊಳ್ಳಬೇಕೆಂದು ಹಿಂದೆ ಮೆಂಬರುಗಳು ಒಪ್ಪಿ ತೀರ್ಮಾನಮಾಡಿದ್ದರು. ಇದನ್ನು ಸರ್ಕಾರದವರು ಸ್ಯಾಂಕ್ಷನ್ ಮಾಡುವುದಿಲ್ಲವೆಂದು ಹುಕುಂ ಕೊಟ್ಟಿದ್ದಾರೆ.—ಖಸಾಬ್ ಖಾನೆಯಲ್ಲಿ ಏರ್ಬಾಗುವ ನೀರಿಗೆ ಅರ್ಧ ಛಾರ್ಜನ್ನು ಮ್ಯುನಿಸಿಪಾಲಿಟಿಯವರು ಪಾವತಿಮಾಡುವಂತೆ ಒಪ್ಪಲಾಗಿದೆ.

ಮುಂದಿನ ಸಾಲಿಗೆ ಟೋಲ್‌ಗೇಟುಗಳ ಹರಾಜು 2,150 ರೂಪಾಯಿಗೂ, ತೆಂಗು ಹುಲ್ಲು ಮುಂತಾದ ಉತ್ಪತ್ತಿಯ ಹರಾಜು 870 ರೂಪಾಯಿಗೂ ನಿಷ್ಕರ್ಷೆಮಾಡಲಾಯಿತು.—ಸ್ಯಾನಿಟರಿ ಇನ್ಸ್‌ಪೆಕ್ಟರುಗಳ ದಿರಸಿಗಾಗಿ ಖರ್ಚಾದ ಒಟ್ಟು ಹಣದಲ್ಲಿ ಈ ಸಲಕ್ಕೆ ಮ್ಯುನಿಸಿಪಾಲಿಟಿಯಿಂದ ಅರ್ಧ ಭಾಗವನ್ನು ಕೊಡಬಹುದೆಂದು ಮೆಂಬರುಗಳು ಒಪ್ಪಿದರು.—ಮನೆಯಲ್ಲಿ ಪ್ಲೇಗ್ ಕಾಯಿಲೆ ಪ್ರಾಪ್ತವಾದರೆ ಹ್ಯಾಗೋ ಅದೇ ರೀತಿ ಕಾಲರಾ ಅಥವಾ ಸಿಡುಬು ಕಾಣಿಸಿಕೊಂಡರೆ ಮನೆಯ ಯಜಮಾನನು ಕೂಡಲೇ ಹೆಲ್ತ್ ಆಫೀಸರಿಗೋ, ಸ್ಯಾನಿಟರಿ ಇನ್ಸ್‌ಪೆಕ್ಟರಿಗೋ, ಮೊಹಲ್ಲಾ ರಿಜಿಸ್ಟ್ರಾರುಗಳಿಗೋ ಅಗತ್ಯವಾಗಿ ತಿಳಿಸಲೇ ಬೇಕೆಂದು ವಿಧಿಸುವಂತೆ ಮೆಂಬರುಗಳು ಒಪ್ಪಿ ತೀರ್ಮಾನಮಾಡಿದರು.

ನಮ್ಮ ಪುಸ್ತಕಭಂಡಾರವು.

“ಜಾನಕೀ ಪರಿಣಯ ನಾಟಕಂ”.—ಇದು ತುಮಕೂರು ತಾಲ್ಲೂಕು ಬೆಳ್ಳಾವೆ ಸ್ಕೂಲ್ ಮಾಸ್ಟರು ಮ|| ಹನುಮಾನ್ ವೆಂಕಟರಾಯರೆಂಬವರಿಂದ ಬರೆಯಲ್ಪಟ್ಟುದಾಗಿದೆ. ಇದು ಮೊದಲು ರಾಮಭದ್ರದೀಕ್ಷಿತನೆಂಬ ಕವಿಯಿಂದ ಸಂಸ್ಕೃತದಲ್ಲಿ ಬರೆಯಲ್ಪಟ್ಟು, ಮೇಲೆ ಕಂಡವರಿಂದ ಕನ್ನಡಕ್ಕೆ ಪರಿವರ್ತಿಸಲ್ಪಟ್ಟಿದೆ. ಈ ವೆಂಕಟರಾಯ ಕವಿಗಳ ಕವಿತಾಬಂಧವು ಸರಳವಾಗಿ ಗಾಂಭೀರ್ಯಗುಣಪೂರ್ಣವಾಗಿದೆ. ವಿಶೇಷವಾಗಿ ಹಳೆಗನ್ನಡದ ಪದಗಳ ಪ್ರಯೋಗವುಳ್ಳ ಈ ಗ್ರಂಥವು ಹಳೆಗನ್ನಡ ಭಾಷೆಯ ಅಭ್ಯಾಸಿಗಳಿಗೆ ಸಾಕಾದಷ್ಟು ಉಪಯುಕ್ತವಾಗಿರುವುದರಿಂದ ಹಳೆಗನ್ನಡ ಭಾಷಾಭಿವೃದ್ಧಿಗೆ ಪ್ರೋತ್ಸಾಹವಾಗಿರುವ ಗ್ರಂಥಗಳಲ್ಲಿ ಇದೊಂದಾಗಿದೆಯೆಂದು ನಾವು ಅಭಿಪ್ರಾಯಪಡುವುದಲ್ಲದೆ ಆಳುವವರು ಇಂಥಾ ವಿದ್ವಾಂಸರಿಗೆ ಪ್ರೋತ್ಸಾಹ ಕೊಡುವುದು ಸಹಜವಾಗಿದೆಯೆಂದು ಹೇಳುತ್ತೇವೆ.

“ರಾಜಶೇಖರಚರಿತ್ರೆ”.—ಇದಕ್ಕೆ ವಿವೇಕಚಂದ್ರಿಕೆಯೆಂಬ ಹೆಸರೂ ಇದೆ. ರಾಯಬಹದೂರ್ ವೀರೇಶಲಿಂಗಂ ಪಂತುಲುಗಾರು ತೆಲುಗಿನಲ್ಲಿ ರಚಿಸಿದ ರಾಜಶೇಖರಚರಿತ್ರೆಯ ಕನ್ನಡ ಪರಿವರ್ತನೆಯೇ ಇದು. ಇದು ಹಿಂದೂಗಳ ಆಚಾರ ವ್ಯವಹಾರಗಳಲ್ಲಿನ ಗುಣದೋಷಗಳನ್ನು ಯಥಾವತ್ತಾಗಿ ವಿವರಿಸಿ, ಜನರನ್ನು ನೀತಿಮಾರ್ಗದಲ್ಲಿ ನಡೆಯಿಸುವುದು. ಮೈಸೂರಿನ ವಿದ್ಯಾಶಾಖೆಯವರೂ, ಬೊಂಬಾಯಿನ ವಿದ್ಯಾಶಾಖೆಯವರೂ ಈ ಪುಸ್ತಕಕ್ಕೆ ಪ್ರೋತ್ಸಾಹವನ್ನು ದಯಪಾಲಿಸಿರುವುದೂ, ಪ್ರಥಮಮುದ್ರಣದ ಪ್ರತಿಗಳು ಮುಗಿದು ಈಗ ಸಿದ್ಧವಾಗಿರುವ ದ್ವಿತೀಯಮುದ್ರಣವೂ ಈ ಪುಸ್ತಕದ ಶ್ರೇಷ್ಠತೆಯನ್ನು ವ್ಯಕ್ತಪಡಿಸುವುವು. ಬಾಲಕಬಾಲಕಿಯರು ಓದಲು ಅನುಕೂಲವಾದ ವಚನಗ್ರಂಥ. ಬೆಂಗಳೂರಲ್ಲಿರುವ ಮ|| ಬೆಳ್ಳಾವೆ ಸೋಮನಾಥಯ್ಯನವರಿಂದ ಕನ್ನಡಿಸಲ್ಪಟ್ಟು ಬೆಂಗಳೂರು ಏರಿಷ್ ಪ್ರೆಸ್ಸಿನಲ್ಲಿ ಮುದ್ರಿತವಾಗಿರುವ ಇದರ ಬೆಲೆ ಒಂದು ರೂಪಾಯಿ.

“ಶಕ್ತಿ”.—ಈ ಪುಸ್ತಕವು ಸವಿನುಡಿಯ ಗ್ರಂಥಮಾಲಾ ಸಂಪಾದಕರಾದ ಮ|| ಭಾರತಿಸಂಪಂಗಿರಾಮ ಎಂಬ ವಿದ್ವಾಂಸರ ಮೂಲಕ ಬಂಗಾಳಿ ಭಾಷೆಯಿಂದ ಕನ್ನಡಕ್ಕೆ ಪರಿವರ್ತಿಸಲ್ಪಟ್ಟುದಾಗಿದೆ. ಇದು ಸರಳವಾದ ಕನ್ನಡ ಮಾತುಗಳ ಪ್ರಯೋಗವುಳ್ಳುದಾಗಿ ಪಂಡಿತಪಾಮರರೀರ್ವರ ಉಪಯೋಗಕ್ಕೆ ಯೋಗ್ಯವಾಗಿದೆ. ಅಲ್ಲಲ್ಲಿ ಕೆಲವು ಶಬ್ದದೋಷಗಳಿವೆ ಎಂದರೆ ಒ ಬರೆಯುವ ಕಡೆ ಪೊ, ಎ ಬರೆಯುವ ಕಡೆ ಯೆ, ಅನಂತರ ಬರೆಯುವ ಕಡೆ ನಂತರ, ಇವು ಅಷ್ಟು ವಿಶೇಷ ದೋಷಗಳಲ್ಲದಿದ್ದರೂ ಗ್ರಂಥಕರ್ತೃಗಳು ಮುಂದಣ ಮುದ್ರಣದಲ್ಲಿ ಸರಿಪಡಿಸುವರೆಂದು ನಂಬಿದೇವೆ. ಈ ಕಥಾ ಪುಸ್ತಕವು ಸಮರ್ಥರಾದ ಶಕ್ತಿಗೆ ನೇತದೇವರಿಂದ ನಾಯಕನಾಯಿಕರ ಉಪಯುಕ್ತವಿಷಯವನ್ನು ಬೋಧಿಸುವುದೂ, ಯುದ್ಧಾದಿಯಾದ ಅನೇಕ ಮಹಮದೀಯ ರಾಜರ ಚರಿತ್ರೆಗಳನ್ನು ತಿಳಿಸುವುದೂ ಆಗಿ ಜನರಿಗೆ ವಿಶೇಷ ಉಪಯೋಗಕರವಾದ ವಿಷಯಗಳನ್ನು ಸಂಪಾದಿಸಿ ಅಭಿವೃದ್ಧಿಗೆ ತರುವ ಉತ್ತಮಕಥಾ ಗ್ರಂಥಗಳೊಳಗೆ ಒಂದಾಗಿರುವುದೆಂದು ನಾವು ಧಾರಾಳವಾಗಿ ಹೇಳುತ್ತೇವೆ.

“ರಾಮಕೃಷ್ಣಪರಮಹಂಸರ ಸದ್ಬೋಧಸಂಗ್ರಹ”.—ಪ್ರಪಂಚದಲ್ಲಿ ರಾಮಕೃಷ್ಣಪರಮಹಂಸರ ಹೆಸರನ್ನು ಅನೇಕರು ಕೇಳಿರಬಹುದು. ಈ ಮಹನೀಯರ ಸಂಕ್ಷಿಪ್ತಚರಿತೆಯು ಮೊದಲ 32 ಪುಟಗಳ ಪರ್ಯಂತವೂ, ಆ ಮೇಲೆ ಅವರು ಹೇಳಿದ 646 ತತ್ವೋಕ್ತಿರತ್ನಗಳ ಸಂಗ್ರಹವೂ ಈ ಪುಸ್ತಕದಲ್ಲಿ ಸಂಕಲಿತವಾಗಿವೆ. ಇವರ ತತ್ವರತ್ನಗಳು ಅಮೂಲ್ಯವಾದುವು ಮತ್ತು ಸರ್ವಗ್ರಾಹ್ಯವಾದುವು. 641 ನೆಯ “ಎಲೌ: ತಾಯಿ! ನಾನೇ ದೊಡ್ಡವನು, ನಾನೇ ಬ್ರಾಹ್ಮಣನು; ಅವರೆಲ್ಲರೂ ನೀಚರಾದ ಹೊಲೆಯರು ಎಂಬೀ ಮೊದಲಾದ ನೀಚಭಾವನೆಗಳನ್ನು ತೆಗೆದುಹಾಕು; ಏಕೆಂದರೆ ಅವರು ನಿನ್ನ ಬೇರೆ ಬೇರೆ ರೂಪಗಳನ್ನು ಧಾರಣಮಾಡಿದವರೇ ಇರುವರು” ಎಂಬ ಇದರೊಳಗಿರುವ ಸ್ವಾಮಿಗಳ ಸದ್ಬೋಧೆಯೇ ಅವರ ಮಹತ್ವನ್ನು ಸೂಚಿಸುವುದು. ಬೆಳಗಾಂನಲ್ಲಿರುವ ಡಾ|| ವ|| ಶ್ರೀ. ನಾಗೇಶ ವಾಸುದೇವಗುಣಾಜಿ, ಬಿ.ಎ., ಎಲ್.ಎಲ್.ಬಿ. ಯವರ ಅಪ್ಪಣೆಯನ್ನು ಪಡೆದು ಇಂಗ್ಲೀಷಿನಿಂದ ಕನ್ನಡಕ್ಕೆ ಬಾಗೇವಾಡಿ (ಬೆಳಗಾಂ) ಹೆಡ್ ಮಾಸ್ಟರ್ ಮ|| ಕೆ. ಗ. ವಿಜಾಪೂರಕರರು ಪರಿವರ್ತಿಸಿರುವಂತೆ ಪೀಠಿಕೆಯಿಂದ ತಿಳಿಯಬರುವುದು. ಪುಸ್ತಕದ ಮೊದಲಲ್ಲಿ ಭಗವಾನ್ ಶ್ರೀರಾಮಕೃಷ್ಣರ ಭಾವಚಿತ್ರವು ಮೆರೆಯುತ್ತಿದೆ. ಬೆಳಗಾಂ ಮಹಾವೀರ ಮುದ್ರಣಾಲಯದಲ್ಲಿ ಸೊಗಸಾದ ಕಾಗದದ ಮೇಲೆ ಮುದ್ದಾಗಿ ಮುದ್ರಿತವಾಗಿರುವ ಇದರ ಬೆಲೆ ಒಂದು ರೂಪಾಯಿ.

“ವಿದ್ಯಾರ್ಥಿ ಕರಭೂಷಣ (ಪ್ರಥಮಭಾಗ)”.—ಇದು ಮರಿಮಲ್ಲಪ್ಪನವರ ಹೈಸ್ಕೂಲ್ ಹೆಡ್ ಮಾಸ್ಟರು ಮ|| ಎಂ. ವೆಂಕಟಕೃಷ್ಣಯ್ಯನವರಿಂದ ಕನ್ನಡಕ್ಕೆ ಜಾನ್ ಟಾಡ್ ಸಾಹೇಬರವರ ಸ್ಟೂಡೆಂಟ್ಸ್ ಮ್ಯಾನ್ಯುಯಲ್ ಎಂಬ ಪುಸ್ತಕದ ಆಧಾರದಿಂದ ಬರೆಯಲ್ಪಟ್ಟುದು. ಇದರಲ್ಲಿ ನಾಲ್ಕು ಪರಿಚ್ಛೇದಗಳಿವೆ. ವ್ಯಾಸಂಗ ಕ್ರಮ, ಇಂದ್ರಿಯನಿಗ್ರಹದಿಂದ ವ್ಯಾಸಂಗಕ್ಕಿರುವ ಅನುಕೂಲ, ಅಭ್ಯಾಸ, ಪರದೇಶದ ವಿದ್ಯಾರ್ಥಿಗಳ ವ್ಯಾಸಂಗ ಲಕ್ಷಣ, ಗ್ರಂಥಲಕ್ಷಣ ಮೊದಲಾದ ಉಪಯುಕ್ತ ವಿಷಯಗಳಿಂದ ಆಡಕವಾಗಿರುವ ಈ ಪುಸ್ತಕವು ವಿದ್ಯಾರ್ಥಿಗಳಿಂದ ಮಾತ್ರವೇ ಅಲ್ಲದೆ ಇತರರಿಂದಲೂ ಸಂಗ್ರಹಿಸಲು ಯೋಗ್ಯವಾದುದು. ಮ|| ಎಂ. ವೆಂಕಟಕೃಷ್ಣಯ್ಯನವರು ಇಂತಹ ಪುಸ್ತಕವನ್ನು ಕನ್ನಡಿಗರಿಗೆ ಸಿದ್ಧಪಡಿಸಿಕೊಟ್ಟುದಕ್ಕಾಗಿಯೂ, ಮೈಸೂರು ವಿದ್ಯಾ ಇಲಾಖೆಯ ಅಧ್ಯಕ್ಷರಾದ ರಾಯ ಬಹದ್ದೂರ್ ಎಂ. ಶಾಮರಾವ್, ಎಂ.ಎ. ರವರು ಈ ಪುಸ್ತಕವನ್ನು ಕನ್ನಡಿಸಲು ಸೂಚಿಸಿದುದಕ್ಕಾಗಿಯೂ ಬಲು ಸಂತೋಷಪಡುತ್ತೇವೆ. ಈ ಪುಸ್ತಕದಲ್ಲಿ ಡೆಮಾಸ್ತನೀಸ್, ನ್ಯೂಟನ್, ಎಡಿಸನ್, ವರರುಚಿ ಮುಂತಾದವರನ್ನು ಆ ಆ ನಿಯಮಗಳಿಗೆ ಉದಾಹರಣೆಯನ್ನಾಗಿ ಕೊಟ್ಟಿರುವುದು ವಾಚಕರ ಮನಸ್ಸನ್ನಂಟದಿರದು. ಈ ಪುಸ್ತಕವು ಪಾಠಶಾಲೆಗಳ ಲೈಬ್ರರಿಗಳಿಗೂ ಪಾಠಶಾಲೆಗಳಿಗೂ ಸರ್ಕಾರದವರಿಂದ ಒದಗಿಸಲ್ಪಟ್ಟರೆ ಒಳ್ಳೆಯದು. ಕನ್ನಡಿಗರೂ, ಮಕ್ಕಳ ತಂದೆ ತಾಯಿಗಳೂ ಓದಬೇಕಾದ ಪುಸ್ತಕ. ಮೈಸೂರು ಜಿ. ಟಿ. ಎ. ಪ್ರೆಸ್ಸಿನಲ್ಲಿ ಸೊಗಸಾಗಿ ಅಚ್ಚಾಗಿರುವ ಇದರ ಬೆಲೆ ಪ್ರತಿ ಒಂದಕ್ಕೆ 8 ಆಣೆ.

ಚಕ್ರವರ್ತಿಯವರ ವರ್ಧಂತಿ ಉತ್ಸವವು.

ಹೊಳೆನರಸೀಪುರ.

ಇಲ್ಲಿ ಹೋದಸೋಮವಾರ ಚಕ್ರವರ್ತಿ ಸಾರ್ವಭೌಮರವರ ವರ್ಧಂತಿಯು ಬಹಳ ವಿಜೃಂಭಣೆಯಿಂದ ನಡೆಯಿತು. ಹೆಡ್ ಮಾಸ್ಟರ್ ಮ|| ಸಂಪತ್ತಯ್ಯಂಗಾರ್ರವರು ವಿದ್ಯಾರ್ಥಿಗಳಿಗೆಲ್ಲಾ ವಿನೋದಕರವಾಗಿ ಆಟಪಾಟಗಳನ್ನು ಆಡಿಸಿ ರಾಜಭಕ್ತಿ ವಿಶ್ವಾಸವನ್ನು ತೋರಿಸಿ ಹುಡುಗರಿಗೆಲ್ಲಾ ಸಕ್ಕರೆ ಮುಂತಾದ್ದನ್ನು ಹಂಚಿದರು. ಇಲ್ಲಿನ ಟೆನಿಸ್ ಸೆಕ್ರಿಟರಿಗಳಾದ ಮ|| ಕೆ. ನರಸಿಂಹಯ್ಯನವರು ಟೆನಿಸ್ ಮತ್ತು ಫುಟ್‌ಬಾಲ್ ಮ್ಯಾಚುಗಳನ್ನು ಆಡಿಸಿ ಬಳಿಕ ಇಲ್ಲಿನ ಎಲ್ಲಾ ದೊಡ್ಡಮನುಷ್ಯರುಗಳನ್ನೂ ಸಭೆ ಸೇರಿಸಿ ಚಕ್ರವರ್ತಿ ಸಾರ್ವಭೌಮರಲ್ಲಿ ತಮಗಿರುವ ರಾಜಭಕ್ತಿವಿಶ್ವಾಸವನ್ನು ತೋರಿಸಿದ್ದಲ್ಲದೆ, ಅಲ್ಲಿ ನೆರದಿದ್ದವರಿಗೆಲ್ಲಾ ಫಲಾಹಾರಾದಿಗಳನ್ನು ಮಾಡಿಸಿದ ನಂತರ ಎಲ್ಲರೂ ಚಕ್ರವರ್ತಿ ಸಾರ್ವಭೌಮರವರ ಶ್ರೇಯಃಪ್ರಾರ್ಥನೆಯನ್ನು ಮಾಡಿ ಸಭೆಯನ್ನು ಭರಖಾಸ್ತು ಮಾಡಿದರು.

ಹಾಸನ.

ಕಳೆದ ಸೋಮವಾರ ನಮ್ಮ ಇಂಡಿಯಾ ಚಕ್ರಾಧಿಪತಿಗಳಾದ ಐದನೇ ಜಾರ್ಜ್ ಪ್ರಭುಗಳವರ ವರ್ಷ ವರ್ಧಂತಿ ಮಹೋತ್ಸವವನ್ನು ಇಲ್ಲಿ ಎಂದಿನಂತೆಯೇ ಬಹು ಅತ್ಯುತ್ಸಾಹದಿಂದ ನಡಿಸಿದರು. ಇಲ್ಲಿನ ಜೂಬಿಲೀ ಹಾಲ್ ಮೈದಾನದಲ್ಲಿ ನಾಲ್ಕು ಡೇರೆಗಳನ್ನು ಹಾಕಿ, ಎಲ್ಲಾ ಪಾಠಶಾಲೆಗಳ ಬಾಲಕಾಬಾಲಕರನ್ನು ಸೇರಿಸಿ, ವಿಧವಿಧವಾದ ಪಂದ್ಯಗಳನ್ನಿಟ್ಟು ಗೆದ್ದವರಿಗೆ ಬಹುಮಾನಗಳನ್ನು ಕೊಟ್ಟರು. ಆ ದಿನ ಇಲ್ಲಿನ ಎಲ್ಲಾ ಅಧಿಕಾರಿಗಳೂ ಸೇರಿ ರಾಜಭಕ್ತಿಯನ್ನು ಅತ್ಯುತ್ಸಾಹದಿಂದ ಪ್ರಕಟಪಡಿಸಿದರು. ಈ ಮೈದಾನಕ್ಕೆ ಚಾರ್ ಸಿಪಾಯಿಗಳು ತಂಡತಂಡವಾಗಿ ಬಂದು ಅವರ ವಾದ್ಯದೊಡನೆ ಡ್ರಿಲ್ ಮುಂತಾದುದನ್ನು ಮಾಡಿ ತೋರಿಸಿ ಕೂಡಿದ್ದ ಜನರಿಗೆಲ್ಲಾ ಮಹದಾನಂದಪಡಿಸಿದರು. ಕಡೆಯಲ್ಲಿ ಮಹಾರಾಜಾ ಚಕ್ರವರ್ತಿಯವರ ಶ್ರೇಯಃಪ್ರಾರ್ಥನೆಯೊಡನೆ ಸೆಲ್ಯೂಟ್ ಮಾಡಿದರು. ನೆರೆದಿದ್ದ ಮಹಾಜನವೂ, ವಿದ್ಯಾರ್ಥಿಗಳೂ ಎಲ್ಲರೂ ಸೇರಿ ಚಕ್ರವರ್ತಿ, ಚಕ್ರವರ್ತಿನಿಯವರ ಹೆಸರಿನಲ್ಲಿ ಜಯಧ್ವನಿಮಾಡಿದರು.

ಕುಣಿಗಲು.

ತಾ. 22 ನೇ ಸೋಮವಾರ ಬೆಳಿಗ್ಗೆ ಗೌರ್ನಮೆಂಟ್ ಕನ್ನಡ ಸ್ಕೂಲಿನಲ್ಲಿ ಚಕ್ರವರ್ತಿ ಸಾರ್ವಭೌಮರ ವರ್ಧಂತಿ ಉತ್ಸವದ ಜ್ಞಾಪಕಕ್ಕಾಗಿ ಮಹಾಜನಗಳು ಒಂದು ಸಭೆಮಾಡಿ, ಈ ಸಭೆಯಲ್ಲಿ ಇಲ್ಲಿನ ಸೈಡ್‌ಫಾರಂ ಅಸಿಸ್ಟೆಂಟರಾದ ಮಿ|| ಮಹಮದ್ ಜಾಫರ್‌ಸಾಹೇಬರವರು ಅಗ್ರಾಸನರಾಗಿಯೂ, ಸರ್ಕಲ್ ಇನ್ಸ್‌ಪೆಕ್ಟರವರು ಸಭೆಯ ಮುಖಂಡರಾಗಿಯೂ ಇದ್ದರು. ಅಗ್ಗೆ ನೆರದಿದ್ದ ಮಹನೀಯರುಗಳಲ್ಲಿ ವೇ|| ಈಶ್ವರಶಾಸ್ತ್ರಿಗಳು ಬ್ರಿಟಿಷರ ಪ್ರಭುತ್ವದಿಂದ ಇಂಡಿಯಾದೇಶಕ್ಕೆ ಉಂಟಾಗಿರತಕ್ಕ ಪ್ರಯೋಜನನನ್ನೂ, ಇಂಗ್ಲೀಷರಲ್ಲಿರತಕ್ಕ ಸತ್ಯತೆ, ನೀತಿ, ಪ್ರಜಾನುರಾಗ, ಭೂತದಯೆ, ಕಾರ್ಯಸಾಧನೆ, ರಾಜ್ಯಪರಿಪಾಲನಾಕ್ರಮ, ಈ ಮುಂತಾದ ವಿಷಯಗಳನ್ನೂ ಕುರಿತು ಸಂಕ್ಷೇಪವಾಗಿಯೂ, ಸ್ವಾರಸ್ಯವಾಗಿಯೂ ಉಪನ್ಯಾಸಮಾಡಿದರು. ಅಗ್ರಾಸನರಾದ ಮಿ|| ಮಹಮದ್‌ಜಾಫರ್ ಸಾಹೇಬರವರೂ, ಸರ್ಕಲ್ ಇನ್ಸ್‌ಪೆಕ್ಟರವರೂ ನಮ್ಮ ದೇಶೀಯರಲ್ಲಿ ಉಂಟಾಗಬೇಕಾಗಿರುವ ಐಕಮತ್ಯ, ವಿದ್ಯೆಯ ಪ್ರಯೋಜನ, ಇವುಗಳನ್ನು ಕುರಿತು ಸ್ವಲ್ಪ ಮಾತಾಡಿದರು. ಅನಂತರ ಆರ್ಯಬಾಲಿಕಾ ಪಾಠಶಾಲೆಯ ಬಾಲಕಿಯರು ನಮ್ಮ ಚಕ್ರವರ್ತಿಗಳ, ಚಕ್ರವರ್ತಿನಿಯವರ ಮತ್ತು ನಮ್ಮ ಸೀಮೆಯನ್ನಾಳುವ ಶ್ರೀಮನ್ಮಹಾರಾಜಾ ಬಹದ್ದೂರರವರ, ಶ್ರೀಮದ್ಯುವರಾಜರವರ ಶ್ರೇಯಸ್ಸನ್ನು ಬಯಸಿ ಗೀತಗಳನ್ನು ಹಾಡಿದರು. ಅನಂತರ ಅಗ್ರಾಸನರಿಗೂ, ಸಭೆಯ ಮುಖಂಡರಿಗೂ ಪುಷ್ಪ ಹಾರ ತುರಾಯಿಗಳೂ, ಸಭಿಕರಿಗೆ ಪುಷ್ಪಮಾಲಿಕೆಗಳೂ ಹಂಚಲ್ಪಟ್ಟು ಸಭೆ ಬರಖಾಸ್ತಾಯಿತು.

ದೇವನಹಳ್ಳಿ ತಾಲ್ಲೂಕು ವಡಿಗೇನಹಳ್ಳಿ.

ತಾ. 22 ರಲ್ಲಿ ಶ್ರೀಮತ್ ಸಾರ್ವಭೌಮರವರ ವರ್ಧಂತಿಯ ಮಹೋತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ನೆರವೇರಿಸಲು ಸರ್ಕಲ್ ಇನ್ಸ್‌ಪೆಕ್ಟರ್ ಸಾಹೇಬರವರು ಬೇಕಾದಷ್ಟು ದ್ರವ್ಯಸಹಾಯವನ್ನು ಮಾಡಿದರು. ಊರಿನ ನೂರಾರುಮಂದಿ ದೊಡ್ಡಮನುಷ್ಯರೂ, ಉಪಾಧ್ಯಾಯರೂ, ಬಾಲಕಬಾಲಿಕೆಯರೂ, ಇವರೊಡನೆ ಸರ್ಕಲ್ ಇನ್ಸ್‌ಪೆಕ್ಟರ್ ಸಾಹೇಬರವರು ಶ್ರೀಸಾರ್ವಭೌಮರವರ ಚಿತ್ರಪಟವನ್ನು ಬ್ಯಾಂಡ್‌ವಾದ್ಯದೊಂದಿಗೆ ಊರಲ್ಲೆಲ್ಲಾ ಮೆರವಣಿಗೆ ಮಾಡಿಸಿ ಹೊಸ ಸ್ಕೂಲಿನ ಬಳಿಗೆ ಎಲ್ಲರೂ ಬಂದ ಮೇಲೆ ಬಾಲಕರಿಂದ ನಾನಾವಿಧವಾದ ಆಟಗಳನ್ನು ಆಡಿಸಿ ಗೆದ್ದವರಿಗೆಲ್ಲಾ ತಾವೇ ರೂಪಾಯಿಗಳನ್ನು ಬಹುಮಾನ ಮಾಡಿದರು. ಇವರ ವಿಶೇಷವಾದ ಔದಾರ್ಯಕ್ಕೂ, ಬಾಲಕರ ಮೇಲಣ ವಿಶ್ವಾಸಕ್ಕೂ, ಗ್ರಾಮಸ್ಥರು ಕೃತಜ್ಞತೆಯನ್ನು ಅರ್ಪಿಸಿ ಅತ್ಯಂತ ಸಂತೋಷಗೊಂಡರು. ಸ್ಕೂಲಿನಲ್ಲಿ 175 ಬಾಲಕರಿರುವಂತೆಯೂ, ದಿನೇದಿನೇ ಅಭಿವೃದ್ಧಿಸ್ಥಿತಿಗೆ ಬರುತ್ತಿರುವದೆಂತಲೂ, ಎಲ್ಲರ ಜ್ಞಾನಾಭಿವೃದ್ಧಿಗಾಗಿ ಸ್ಕೂಲಿನಲ್ಲಿ ಒಂದು ವಾಚಕಮಂದಿರವೂ ಪುಸ್ತಕಭಂಡಾರವೂ ಸ್ಥಾಪಿಸಿರುವಂತೆಯೂ, ಇದರ ಪ್ರಯೋಜನವನ್ನು ಸರ್ವರೂ ಪಡೆಯಬೇಕೆಂದೂ ಹೆಡ್ ಮಾಸ್ಟರವರು ಹೇಳಿದ ಮೇಲೆ ಶ್ರೀಚಕ್ರವರ್ತಿಯವರ, ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಗಳು ಮಾಡಲ್ಪಟ್ಟವು. ಅ|| ಪಟೇಲ್ ಕೃಷ್ಣಪ್ಪನವರೇ ಮೊದಲಾದವರು ದೊಡ್ಡಮನುಷ್ಯರೆಲ್ಲರನ್ನೂ ಗಂಧ ಪುಷ್ಪ ತಾಂಬೂಲಾದಿಗಳಿಂದ ಸತ್ಕರಿಸಿದರು. ಎಲ್ಲಾ ಸ್ಕೂಲುಗಳಸುಮಾರು 350 ಮಂದಿ ಬಾಲಕಬಾಲಿಕೆಯರಿಗೆ ಲಾಡು, ಬಾಳೇಹಣ್ಣು ಹಂಚಲ್ಪಟ್ಟವು. ಈ ಕಾಲದಲ್ಲಿ ಇಲ್ಲಿನ ಹೊಸ ದಫೇದಾರ್ ದೊಡ್ಡರಾಮಯ್ಯನವರು ತಮ್ಮ ಸಿಬ್ಬಂದಿಯೊಡನೆ ಉತ್ಸವಭಾಗಿಗಳಾಗಿ ರಾಜಭಕ್ತಿಯನ್ನು ವ್ಯಕ್ತಗೊಳಿಸಿದರು.

ತುರುವೆಕೆರೆ.

ಶ್ರೀಮದಿಂಡಿಯಾ ಚಕ್ರವರ್ತಿಯವರ ಜನ್ಮೋತ್ಸವವು ತುರುವೆಕೆರೆಯಲ್ಲಿ ಅಲ್ಲಿನ ಅಮಲ್ದಾರ್ ಮ|| ಎಸ್. ಸೀತಾರಾಮಯ್ಯನವರ ಪ್ರೋತ್ಸಾಹದಿಂದ ಬಹಳ ವಿಜೃಂಭಣೆಯಾಗಿ ನಡೆಯಿತು. ಎಲ್ಲಾ ಸ್ಕೂಲ್ ಬಾಲಕ ಬಾಲಿಕೆಯರಿಗೂ ಆಟಪಾಟಾದಿ ವಿನೋದಗಳು ಕಲ್ಪಿಸಲ್ಪಟ್ಟಿತ್ತು. ಅದು ಮುಗಿದ ಕೂಡಲೆ ಎಲ್ಲರೂ ಗೌ|| ಎ. ವಿ. ಸ್ಕೂಲಿನಲ್ಲಿ ಸಭೆ ಸೇರಿದರು. ಪ್ರಜಾನುರಾಗಿಗಳೂ, ಪ್ರಜಾಹಿತಚಿಂತಕರೂ ಆದ ಇಲ್ಲಿನ ಅಮಲ್ದಾರ್ರವರು ಅಗ್ರಾಸನವನ್ನು ವಹಿಸಿದ್ದರು. ಭಗವತ್ಪ್ರಾರ್ಥನೆಯಾದ ನಂತರ ಎ. ವಿ. ಸ್ಕೂಲ್ ಇಂಗ್ಲೀಷ್ ಮಾಸ್ಟರ್ ಮ|| ವಿ. ರಾಮಚಂದ್ರರಾಯರು ಚಕ್ರವರ್ತಿಗಳ ಗುಣಕಥನವನ್ನು ಮಾಡಿದರು. ಆಟಗಳಲ್ಲಿ ಗೆದ್ದ ಬಾಲಕ ಬಾಲಕಿಯರಿಗೆ ಸಭಾಧ್ಯಕ್ಷರು ಸ್ವಹಸ್ತ ಬಹುಮಾನಗಳನ್ನು ದಯಪಾಲಿಸಿದರು. ಇಲ್ಲಿನ ವರ್ತಕರಾದ ಮ|| ಭದ್ರಶೆಟ್ಟರು ತಮ್ಮ ರಾಜಭಕ್ತಿಯನ್ನೂ ಔದಾರ್ಯವನ್ನೂ ಇಲ್ಲಿನ ಎಲ್ಲಾ ಬಾಲಕ ಬಾಲಕಿಯರಿಗೂ ಮಿಠಾಯಿ ಹಂಚುವದರ ಮೂಲಕ ವ್ಯಕ್ತಪಡಿಸಿದರು. ಇವರಿಗೆ ವಿದ್ಯಾರ್ಥಿಗಳ ವಿಷಯದಲ್ಲಿರತಕ್ಕ ಅಭಿಮಾನವು ಸ್ತೋತ್ರಾರ್ಹವಾದದ್ದು. ಗರ್ಲ್ಸ್ ಸ್ಕೂಲ್ ಮ|| ರಂಗಣ್ಣನವರು ಸಭಿಕರನ್ನು ತಮ್ಮ ಸಂಗೀತದಿಂದ ವಿನೋದಪಡಿಸಿದರು. ಕೆಲವು ವಿದ್ಯಾರ್ಥಿನಿಯರು ಶ್ರೀಮನ್ಮಹಾರಾಜರವರ ಮತ್ತು ಚಕ್ರವರ್ತಿಯವರ ಶ್ರೇಯಃಪ್ರಾರ್ಥನೆಯನ್ನು ಇಂಪಾಗಿ ಹಾಡಿದರು. ಗೌ|| ಎ. ವಿ. ಸ್ಕೂಲ್ ಹೆ|| ಮಾ|| ಮ|| ಎಚ್. ವಾಸುದೇವರಾಯರೂ, ಸಭಾಧ್ಯಕ್ಷರೂ ರಾಜಭಕ್ತಿ ಮತ್ತು ಇಂಗ್ಲೀಷರ ಆಳ್ವಿಕೆಯಿಂದ ನಮಗೆ ಉಂಟಾಗಿರತಕ್ಕ ಪ್ರಯೋಜನಗಳನ್ನು ಕುರಿತು ಹೃದಯಂಗಮವಾದ ಉಪನ್ಯಾಸಗಳನ್ನು ಕೊಟ್ಟರು. ಸ್ಥಳಿಕರಲ್ಲಿ ಗೌರವಸ್ಥರಾದ ಮ|| ವಿ. ನಾರಣಪ್ಪನವರು ರಾಜ ಪ್ರಜಾ ಸಂಬಂಧವನ್ನೂ, ರಾಜಭಕ್ತಿಯನ್ನೂ ಕುರಿತು ಒಂದು ಭಾಷಣವನ್ನು ಮಾಡಿದರು. ಸಭಿಕರೆಲ್ಲರಿಗೂ ಗಂಧ ಪುಷ್ಪ ತಾಂಬೂಲಗಳು ಹಂಚಲ್ಪಟ್ಟವು. ಶ್ರೀಮನ್ಮಹಾರಾಜರವರಿಗೂ, ಚಕ್ರವರ್ತಿಯವರಿಗೂ ಶ್ರೇಯಸ್ಸನ್ನು ಬಯಸಿ ಸಭೆಯು ಜಯಧ್ವನಿಯಿಂದ ಪೂರೈಸಲ್ಪಟ್ಟಿತು.

ನೆಲಮಂಗಲದ ತಾಲ್ಲೂಕು ಭೈರನಹಳ್ಳಿ.

ಈ ಗ್ರಾಮದ ಸ್ಕೂಲಿನಲ್ಲಿ ಈ ತಿಂಗಳು 22 ನೆಯ ತಾ. ಸೋಮವಾರ ಶ್ರೀಮದಿಂಡಿಯಾ ಚಕ್ರವರ್ತಿ ಸಾರ್ವಭೌಮರವರ ವರ್ಧಂತಿ ಮಹೋತ್ಸವವು ಬಹಳ ವಿಜೃಂಭಣೆಯಿಂದ ನೆರವೇರಿತು. ಸಭಾ ಮಂಟಪವು ಕದಳೀಸ್ತಂಭಗಳಿಂದಲೂ, ಮಾವಿನ ಚಿಗುರುಗಳಿಂದಲೂ, ಧ್ವಜ ಪತಾಕೆಗಳಿಂದಲೂ ಶೋಭಾಯಮಾನವಾಗಿ ಅಲಂಕರಿಸಲ್ಪಟ್ಟು, ಮಧ್ಯಾಹ್ನ 2 ಘಂಟೆಗೆ ಸ್ಕೂಲ್ ಕಮಿಟಿ ಮತ್ತು ಗ್ರಾಮಾಭಿವೃದ್ಧಿ ಸಮಾಜದ ಕಮಿಟಿ ಮೆಂಬರುಗಳೂ, ಗ್ರಾಮದ ಮುಖಂಡರೂ, ಬಾಲಕ ಬಾಲಕಿಯರೂ, ಸುತ್ತುಮುತ್ತಲಿನ ಅನೇಕ ಗ್ರಾಮಗಳ ಮಹನೀಯರುಗಳೂ ದಯಮಾಡಿಸಿ ಸಭೆಯನ್ನಲಂಕರಿಸಿದರು. ಮ|| ಡಿ. ವಿ. ಹನುಮಂತರಾಯರಿಂದ ಅಗ್ರಾಸನಾಧಿಪತ್ಯವು ವಹಿಸಲ್ಪಟ್ಟಿತ್ತು. ಇವರು ಇಂಗ್ಲೀಷರ ಆಳ್ವಿಕೆಯಿಂದ ಉಂಟಾಗಿರುವ ಪ್ರಯೋಜನಗಳನ್ನೂ, ರಾಜರಿಗೂ ಪ್ರಜೆಗಳಿಗೂ ಇರುವ ಸಂಬಂಧವನ್ನೂ, ಈ ವರ್ಧಂತಿ ಉತ್ಸವದಲ್ಲಿ ಪ್ರಜೆಗಳು ತೋರಿಸಬೇಕಾದ ರಾಜಭಕ್ತಿಯನ್ನೂ ಕುರಿತು ಉಪನ್ಯಾಸಮಾಡಿದರು. ಅನಂತರ ವಾ. ಕೃಷ್ಣಪ್ಪನವರು ವಿದ್ಯಾಭ್ಯಾಸದ ವಿಷಯವಾಗಿ ಸರ್ಕಾರದವರು ವಿದ್ಯೆಯನ್ನು ಹರಡಲು ಮಾಡುತ್ತಿರುವ ಪ್ರಯತ್ನಗಳನ್ನೂ, ಇದರಿಂದುಂಟಾಗುವ ನಾಗರಿಕತೆಯನ್ನೂ ಕುರಿತು ಬಹು ಸ್ವಾರಸ್ಯವಾಗಿ ಉಪನ್ಯಾಸಮಾಡಿದ್ದನ್ನು ಸಭಿಕರೆಲ್ಲಾ ಕೇಳಿ ಬಹಳ ಸಂತುಷ್ಟರಾದರು. ಅಗ್ರಾಸನಾಧಿಪತಿಗಳು ಶ್ರೀಮದಿಂಡಿಯಾ ಚಕ್ರವರ್ತಿ ಸಾರ್ವಭೌಮದಂಪತಿಗಳವರ, ನಮ್ಮ ಶ್ರೀಮನ್ಮಹಾರಾಜರವರ, ಯುವರಾಜರವರ ಭಾವ ಚಿತ್ರಗಳಿಗೆ ಹಾರ ತುರಾಯಿಗಳನ್ನರ್ಪಿಸುತ್ತಿರುವಲ್ಲಿ ಬಾಲಕಬಾಲಕಿಯರು ಶ್ರೇಯಃಪ್ರಾರ್ಥನೆ, ಸೆಲ್ಯೂಟ್‌ಗಳನ್ನು ಮಾಡಿದರು. ವಾದ್ಯಗಳ ಘೋಷಗರ್ಜನೆಯುತ್ತಿರಲು, ಸಭಿಕರೆಲ್ಲಾ ಮುಜರೆಮಾಡಿದರು. ಈ ಸಭೆಯು ನಡೆಯುವಂತೆ ಪ್ರೋತ್ಸಾಹಿಸಿದ ಮೆಂಬರುಗಳು ಮ|| ಗಳಾದ ಶಾ. ಕೃಷ್ಣಪ್ಪನವರೂ, ಪಟೇಲ್ ಬೈರೇಗೌಡರೂ, ಮುನಿಬೈರಪ್ಪನವರೂ, ಬೈರೇಗೌಡರೂ, ಚಿಕ್ಕಣ್ಣನವರೂ ತುಂಬಾ ಸಹಾಯಮಾಡಿದರು. ಸಭಿಕರಿಗೂ, ಬಾಲಕಬಾಲಕಿಯರಿಗೂ ಗಂಧ, ಪುಷ್ಪ, ತಾಂಬೂಲ, ಕೊಬರಿ ಸಕ್ಕರೆಗಳನ್ನು ಹಂಚಿದ ಮೇಲೆ ಸಭೆಯು ಬರಖಾಸ್ತಾಯಿತು.

ಬೆಂಗಳೂರು ಸಿಟಿ ಶ್ರೀನಿವಾಸಮಂದಿರ.

ಬೆಂಗಳೂರು ಸಿಟಿ ಶ್ರೀನಿವಾಸಮಂದಿರದಲ್ಲಿ ಚಕ್ರವರ್ತಿಯವರ ಜನ್ಮೋತ್ಸವವನ್ನು ಕಳೆದ ತಾ. 22 ನೇ ಸೋಮವಾರ ಬಹು ಮನೋಜ್ಞವಾಗಿ ನಡಿಸಲಾಯಿತು. ಬೆಳಿಗ್ಗೆ ಮಂದಿರದೊಳಗೆ ವಿಶೇಷವಾದ ಪೂಜೆ ಅಭಿಷೇಕ ಉತ್ಸವಗಳೂ ಶ್ರೇಯಃ ಪ್ರಾರ್ಥನೆಗಳೂ ನಡಿಸಲ್ಪಟ್ಟವು. ಅನಾಥ ಮಕ್ಕಳು ಸಾಯಂಕಾಲ ಮಂದಿರದ ಸಭಾಮಂದಿರದಲ್ಲಿ ಕೂಡಿದಾಗ ಅಡ್ವೊಕೇಟ್ ಮ|| ಟಿ. ಕೆ. ವೀರಬಸವಯ್ಯನವರು ಆ ಮಕ್ಕಳನ್ನು ಕುರಿತು ರಾಜನ ವಿಷಯದಲ್ಲಿ ಹಿಂದುಗಳಿಗೆ ಪ್ರಾಚೀನ ಕಾಲದಿಂದಲೂ ಇರುವ ಭಕ್ತಿ ಪ್ರೀತಿ ಅನುರಾಗಗಳನ್ನು ವಿವರಿಸಿ, ಪೂರ್ವಕಾಲದ ದೊರೆಗಳು ತಮ್ಮ ಹಕ್ಕುಬಾಧ್ಯತೆಗಳ ವಿಷಯದಲ್ಲಿ ಚಿಂತೆಪಡುತ್ತಿರಲಿಲ್ಲವೆಂದೂ, ತಮ್ಮ ಕರ್ತವ್ಯಗಳನ್ನು ಸಾರ್ಥವಾಗಿ ನೆರವೇರಿಸಿ ಪ್ರಜೆಗಳನ್ನು ನೆಮ್ಮದಿಯಾಗಿಯೂ ಸುಖದಿಂದಲೂ ಪರಿಪಾಲನೆ ಮಾಡುವುದರಲ್ಲೇ ತಮ್ಮ ಸರ್ವ ಶಕ್ತಿಯನ್ನೂ ವಿನಿಯೋಗಿಸುತ್ತಿದ್ದರೆಂದೂ, ನಮ್ಮ ಚಕ್ರವರ್ತಿ ಸಾರ್ವಭೌಮರವರ ಗುಣ ಲಕ್ಷಣಗಳೂ ಅದೇ ಪ್ರಕಾರವಾಗಿರುತ್ತವೆಂದೂ, ಅವರು ಹಿಂದುಸ್ಥಾನದ ಪ್ರಜೆಗಳ ಮೇಲಿಟ್ಟಿರುವ ಪ್ರೀತಿಯನ್ನು ಪ್ರಕಾಶಪಡಿಸುವುದಕ್ಕೋಸ್ಕರ ವಿಶೇಷ ಶ್ರಮವನ್ನು ವಹಿಸಿ ಹಿಂದುಸ್ಥಾನಕ್ಕೆ ದಯಮಾಡಿ ದೆಹಲಿಯಲ್ಲಿ ಅಮೋಘವಾದ ದರ್ಬಾರನ್ನು ನಡಿಸಿದರೆಂದೂ, ನಮ್ಮನ್ನಾಳುವ ಶ್ರೀಕೃಷ್ಣರಾಜೇಂದ್ರ ಒಡೆಯರವರೂ ಅದೇ ರೀತಿ ಸಾರ್ವಭೌಮರವರ ಭಕ್ತಿ ಪ್ರೀತಿಗಳನ್ನು ವಿಶೇಷವಾಗಿ ಸಂಪಾದಿಸಿಕೊಂಡು ಪ್ರಜೆಗಳಾದ ನಮ್ಮನ್ನು ಸಂರಕ್ಷಣೆ ಮಾಡುತ್ತಿದ್ದಾರೆಂದೂ ಹೇಳಿದರು. ಅವರು ಕಡೆಯಲ್ಲಿ ವಿದ್ಯಾರ್ಥಿಗಳಿಗೆ ಹೇಳಿದ ಐದು ಮುಖ್ಯವಾದ ಹಿತೋಕ್ತಿಗಳ್ಯಾವವೆಂದರೆ—ಶರೀರದ ಎಲ್ಲಾ ಅಂಗಗಳನ್ನು ಗಟ್ಟಿಮುಟ್ಟಾಗುವಂತೆ ಮಾಡಿಕೊಳ್ಳಬೇಕು; ನಡೆನುಡಿಗಳಲ್ಲಿ ಸತ್ಯವಂತರಾಗಿರುವಂತೆ ಶ್ರಮಪಡಬೇಕು; ವಿದ್ಯಾದಿಗಳನ್ನು ಕಷ್ಟಪಟ್ಟು ಕಲಿತು ಬುದ್ಧಿಕೌಶಲ್ಯವನ್ನು ಸಂಪಾದಿಸಿಕೊಳ್ಳಬೇಕು; ರಾಜನ ವಿಷಯದಲ್ಲಿ ಸರ್ವ ಕಾಲಗಳಲ್ಲೂ ಭಕ್ತಿಯನ್ನೂ ಪ್ರೀತಿಯನ್ನೂ ಇಟ್ಟುಕೊಂಡಿರಬೇಕು; ಸರ್ವದಾ ಪರಮಾತ್ಮನಲ್ಲಿ ಭಯಭಕ್ತಿಗಳನ್ನು ಪಡೆದಿರಬೇಕು.

ತಿರುಪತಿಯ ಮ|| ಗೋಪಾಲಾಚಾರ್ಯರವರು ಅವರನ್ನು ವಂದಿಸಿದರು. ಸರ್ ಮತ್ತು ಲೇಡಿ ಜಗನ್ಮೋಹನ ದಾಸರವರು ಬೊಂಬಾಯಿನಿಂದ ಬಂದು ಆ ದಿನದ ಸಭೆಯಲ್ಲಿ ಹಾಜರಾಗಿದ್ದರು. ಬಳ್ಳಾರಿಯ ಸರಸವಿನೋದಿನಿ ಸಭಾ ಪ್ರಸಿಡೆಂಟರು ರಾವ್ ಬಹದ್ದೂರ್ ಸಿ. ಎಸ್. ಗೌಡರವರು ಆ ದಿನದ ಖರ್ಚುಗಳಿಗೆ ದ್ರವ್ಯ ಸಹಾಯಮಾಡಿದರು. ಬ್ರಿಟಿಷ್ ರಾಷ್ಟ್ರಗೀತವನ್ನು ಹಾಡಿದ ಬಳಿಕ ಮಕ್ಕಳಿಗೆಲ್ಲಾ ತಿಂಡಿಯ ಪೊಟ್ಟಣಗಳು ಹಂಚಿದರು. ಎಲ್ಲರೂ ಚಕ್ರವರ್ತಿಯವರಿಗೂ, ಮಹಾರಾಜರವರಿಗೂ, ಯುವರಾಜರವರಿಗೂ ಶ್ರೇಯಃಪ್ರಾರ್ಥನೆಯನ್ನು ಮಾಡಿ ಸಂತೋಷಕೂಟವನ್ನು ಮುಕ್ತಾಯಮಾಡಿದರು.

ಚನ್ನರಾಯಪಟ್ಟಣ.

ಇದೇ ಮಾಹೆ 22 ನೆಯ ತಾ. ಸೋಮವಾರವೂ, 23 ನೆಯ ತಾ. ಮಂಗಳವಾರವೂ ಈ ಊರಿನ ಎ. ವಿ. ಸ್ಕೂಲಿನಲ್ಲಿ ಈ ಮಹೋತ್ಸವವು ಬಹಳ ಸಂಭ್ರಮದಿಂದ ನೆರವೇರಿತು. ಸೋಮವಾರ ಬೆಳಿಗ್ಗೆ ಎ. ವಿ. ಸ್ಕೂಲಿನ ಬಾಲಕರೂ ಹಿಂದಿ ಸ್ಕೂಲಿನ ಬಾಲಕರೂ, ಉಪಾಧ್ಯಾಯರುಗಳೆಲ್ಲರೂ ಸಭೆ ಸೇರಿದರು. ದೇವರ ಸ್ತೋತ್ರವನ್ನು ಹಾಡಿದ ನಂತರ ಹೆಡ್ ಮಾಸ್ಟರ್ ಮ|| ಕೃಷ್ಣಸ್ವಾಮಯ್ಯಂಗಾರ್ರು ಬಾಲಕರಿಗೆ ಸಭೆಯು ಸೇರಿದ ಉದ್ದೇಶವನ್ನು ತಿಳಿಸಿ ಜಾರ್ಜ್ ಪ್ರಭುಗಳ ಚರಿತ್ರೆಯನ್ನು ಸಂಕ್ಷೇಪವಾಗಿ ವಿವರಿಸಿದರು. ಮೈಸೂರು ಮಹಾರಾಜರವರ ಶ್ರೇಯಃಪ್ರಾರ್ಥನಾ ಹಾಡುಗಳೂ, ಬ್ರಿಟಿಷ್ ನ್ಯಾಷನಲ್ ಆಂಥೆಂ ಸಹಾ ಹಾಡಲ್ಪಟ್ಟವು. ಬಾಲಕರೆಲ್ಲರಿಗೂ ತಿಂಡಿ ಹಂಚಲ್ಪಟ್ಟು ಸಭೆಯು ಬರಖಾಸ್ತಾಯಿತು. ಮಧ್ಯಾಹ್ನ 3 ಘಂಟೆಗೆ ಕ್ರಿಕೆಟ್ ಮೊದಲಾದ ಪಂದ್ಯಗಳು ನಡೆದವು. ಸಾಯಂಕಾಲ ಸ್ಥಳೀಯ ದೊಡ್ಡ ಮನುಷ್ಯರಲ್ಲನೇಕರು ಸ್ಕೂಲ್ ಮೈದಾನದಲ್ಲಿ ಸಭೆ ಸೇರಿ ವಿದ್ಯಾರ್ಥಿಗಳಿಗೆ ಮರುದಿನ ಬಹುಮಾನವನ್ನು ಹಂಚಬೇಕೆಂದು ನಿಶ್ಚಯಿಸಿದರು. ಮಾರನೇ ದಿನ ಮಧ್ಯಾಹ್ನ 3 ಘಂಟೆಯಿಂದ 6 ಘಂಟೆ ವರೆಗೆ ಕ್ರಿಕೆಟ್, ಫ್ಲಾಟ್ ರೇಸ್, ಬೈಸಿಕಲ್ ಜೂಟು, ಹೈ ಜಂಫ್, ಲಾಂಗ್ ಜಂಫ್ ಮೊದಲಾದ ವಿನೋದಕರವಾದ ಪಂದ್ಯಗಳು ನಡೆದವು. ಅನಂತರ ಅಮಲ್ದಾರ್ ಮ|| ಸುಂದರರಾಜಯ್ಯಂಗಾರ್ರವರು, ಪೋಲೀಸ್ ಇನ್ಸ್‌ಪೆಕ್ಟರು, ಶಿರಸ್ತೇದಾರ್ರು, ಡಾಕ್ಟರವರು, ಡಿಸ್ಟ್ರಿಕ್ಟ್ ಸ್ಯಾನಿಟರಿ ಅಸಿಸ್ಟೆಂಟರು, ಸಬ್ ರೆಜಿಸ್ಟ್ರಾರ್ರು ಮೊದಲಾದ ಆಫೀಸರುಗಳೂ, ಮ|| ಮೂಡಗೆರೆ ವೆಂಕಟರಾಮಯ್ಯನವರು, ಮ|| ಬಸೆಟ್ರು, ಮ|| ಚಿಕ್ಕ ಸಂಬಯ್ಯನವರೇ ಮೊದಲಾದ ಸ್ಥಳೀಯ ದೊಡ್ಡ ಮನುಷ್ಯರೂ ಸಭೆ ಸೇರಿದರು. ಅಮಲ್ದಾರ್ರವರು ಅಗ್ರಾಸನವನ್ನು ವಹಿಸಿದ ಮೇಲೆ ಹೆಡ್ ಮಾಸ್ಟರು ವರ್ಷದ ವರ್ಧಂತಿಯ ಮಹೋತ್ಸವವನ್ನು ಆಚರಿಸುವುದರ ಆವಶ್ಯಕತೆಯನ್ನು ವಿವರಿಸುವದರ ಮೂಲಕ ರಾಜಲಕ್ಷಣಗಳನ್ನೂ, ಪ್ರಜೆಗಳಿಗೂ ರಾಜನಿಗೂ ಇರುವ ಸಂಬಂಧವನ್ನೂ ತಿಳಿಸಿ, ಶ್ರೀಜಾರ್ಜ್ ಪ್ರಭುಗಳ ಕಲ್ಯಾಣ ಗುಣಗಳನ್ನು ಕೊಂಡಾಡಿ, ಪ್ರಜೆಗಳು ಪದೇ ಪದೇ ಹೀಗೆ ಒಂದು ಕಡೆ ಸೇರುವುದು ಬಹಳ ಫಲಕಾರಿಯೆಂದು ತಿಳಿಸಿದರು. ಬಾಲಕ ಬಾಲಕಿಯರು ಇಂಗ್ಲೀಷ್, ಸಂಸ್ಕೃತ, ಕನ್ನಡ ಮತ್ತು ಹಿಂದಿ ಭಾಷೆಗಳಲ್ಲಿ ಪದ್ಯಗಳನ್ನು ಹಾಡಿದರು. ಆಟದಲ್ಲಿ ಗೆದ್ದವರಿಗೆ ಬಹುಮಾನ ಹಂಚಲ್ಪಟ್ಟಿತು. ಹೆಡ್ ಮಾಸ್ಟರು ಈ ರೀತಿ ಚನ್ನರಾಯಪಟ್ಟಣದ ಪ್ರಜೆಗಳೂ ಆಫೀಸರುಗಳೂ ಔದಾರ್ಯವನ್ನು ತೋರಿಸಿ, ಬಾಲಕರಿಗೆ ಉತ್ತೇಜನವನ್ನು ಕೊಟ್ಟು, ತಮ್ಮ ರಾಜಭಕ್ತಿಯನ್ನು ಪ್ರಕಾಶಗೊಳಿಸಿದುದಕ್ಕಾಗಿ ವಂದನೆಗಳನ್ನು ಅರ್ಪಿಸಿದರು. ಅಮಲ್ದಾರ್ರವರು ಇಂಗ್ಲೀಷಿನಲ್ಲಿ ಇಂತಹ ಕೂಟದ ಪ್ರಯೋಜನವನ್ನು ವಿವರಿಸಿದರು. ಬಾಲಕ ಬಾಲಕಿಯರಿಗೆ ಮಿಠಾಯಿ ಹಂಚಲ್ಪಟ್ಟಿತು. ಬ್ರಿಟಿಷ್ ಮತ್ತು ಮೈಸೂರು ನ್ಯಾಷನಲ್ ಆಂಥೆಂ ಹಾಡಿದ ನಂತರ ಎಲ್ಲರಿಗೂ ತಾಂಬೂಲ ಹಂಚಿದರು. ಇಂತಹ ಸಭೆಯು ಪದೇ ಪದೇ ಸೇರುತ್ತಿರಬೇಕೆಂದೂ, ನಮ್ಮ ಜಾರ್ಜ್ ಚಕ್ರವರ್ತಿಗಳು ನಮ್ಮನ್ನು ಚಿರಕಾಲ ಪಾಲಿಸುತ್ತಿರಬೇಕೆಂದೂ ಹೆಡ್ ಮಾಸ್ಟರು ಪ್ರಾರ್ಥಿಸಿದ ನಂತರ ಸಭೆಯು ಬರಖಾಸ್ತಾಯಿತು.

ಬಾತ್ಮಿದಾರರಿಗೆ ನೋಟೀಸ್.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜಾಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸವನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂತಹವುಗಳಿಗೆ ನಾವು ಜಾಗಾ ಕೊಡಲಾರೆವು.

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲುಪುವಂತೆ ಕಳುಹಬೇಕು. ಮಂಗಳವಾರ, ಬುಧ

ಣಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ನಿರವಸೆ ಕಡಮೆ. ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ.

ಕರೆಸ್‌ಪಾಂಡೆನ್ಸ್.

ಪ್ರಜಾಪ್ರತಿನಿಧಿಗಳ ಮೂಲಕ ಸರ್ಕಾರಕ್ಕೆ ಅರಿಕೆ.

ಅಯ್ಯಾ,—ಮೈಸೂರು ವಿದ್ಯಾಭ್ಯಾಸದ ಇಲಾಖೆಯವರು ಕರ್ನಾಟಕ ಪಂಡಿತ ಪರೀಕ್ಷೆಯೆಂಬುದನ್ನು ನಡೆಯಿಸುತ್ತಿರಾರಷ್ಟೆ. ಈ ಪರೀಕ್ಷೆಯು ಕನ್ನಡದ ಮೂರು ಭಾಗಗಳನ್ನೂ, ಸಂಸ್ಕೃತದ ಮೂರು ಭಾಗಗಳನ್ನೂ ಅಂತು ಒಟ್ಟು ಆರು ಭಾಗಗಳನ್ನುಳ್ಳದ್ದಾಗಿದೆ. ಕಳೆದ ವರ್ಷ ಪ್ರಜಾಪ್ರತಿನಿಧಿ ಸಭೆಯಲ್ಲಿ ಈ ಪರೀಕ್ಷೆಯನ್ನು ಸಂಸ್ಕೃತದ ಭಾಗಗಳಲ್ಲಾಗಲಿ, ಕನ್ನಡದ ಭಾಗಗಳಲ್ಲಾಗಲೀ ಬೇರೆ ಬೇರೆ ದಾಖಲಾಗಲು ದರಖಾಸ್ತುದಾರರಿಗೆ ಸೌಲಭ್ಯವನ್ನುಂಟುಮಾಡಿ ಕೊಡಬೇಕೆಂದು ನಂ. 384 ನೇ ಸಬ್ಜೆಕ್ಟಿನಲ್ಲಿ ಕೇಳಿದ್ದರು. ಅದಕ್ಕೆ ಕೂಡಲೇ ಬೇರೆ ಬೇರೆ ಸಂಸ್ಕೃತ ಕನ್ನಡಗಳಿಗೆ ಅಪ್ಲಿಕೇಷನ್ ಮಾಡಲು ಅನುಕೂಲಪಡಿಸುವುದಾಗಿ ಅಪ್ಪಣೆಯಾಗಿತ್ತೆಂದು ಕೇಳುತ್ತೇನೆ. ಈ ವಿಷಯದಲ್ಲಿ ಈ ವರೆಗೂ ಯಾವ ಏರ್ಪಾಡೂ ಆದಂತೆ ಕಾಣುವುದಿಲ್ಲ. ಈ ವರ್ಷದ ಪ್ರತಿನಿಧಿಗಳೂ, ಸರ್ಕಾರದವರೂ ಈ ಸಂಗತಿಯನ್ನು ಚರ್ಚಿಸಿ ದರಖಾಸ್ತುದಾರರಿಗೆ ಸುಖವನ್ನುಂಟುಮಾಡಲು ಪ್ರಾರ್ಥನೆ.

ಉಪಾಧ್ಯಾಯರು.

ಪಾಠ ಪುಸ್ತಕಗಳನ್ನು ಬದಲಾಯಿಸುವದರ ಕಷ್ಟನಷ್ಟಗಳು.

ಅಯ್ಯಾ,—ಹೈ ಸ್ಕೂಲ್‌ಗಳಲ್ಲಿನ 4 ನೇ ಫಾರಂ ಮತ್ತು ಅದಕ್ಕಿಂತ ಮೇಲ್ಪಟ್ಟ ತರಗತಿಗಳ ಪಾಠಕ್ಕಾಗಿ "ವಿದ್ಯಾರ್ಥಿ ಕರಭೂಷಣ" ಮತ್ತು "ಶ್ರೀರಾಮಚರಿತೆ" ಎಂಬ ಪುಸ್ತಕಗಳನ್ನು ನೇಮಿಸಿ ವಿದ್ಯಾ ಇಲಾಖೆಯವರು ಗೆಜೆಟ್ಟಿನಲ್ಲಿ ಛಾಪಿಸಿದ್ದರು. ಈ ಪುಸ್ತಕಗಳನ್ನು ಅನೇಕಾನೇಕ ವಿದ್ಯಾರ್ಥಿಗಳು ಕೊಂಡುಕೊಂಡು ಉಪಯೋಗಿಸುತ್ತಲಿರುವರು. ನೆನ್ನೆಯ ಗೆಜೆಟ್ಟಿನಲ್ಲಿ ಆ ಪುಸ್ತಕಗಳನ್ನು ತಿರಸ್ಕರಿಸಿಬಿಟ್ಟು, ಅವುಗಳಿಗೆ ಬದಲಾಗಿ ಬೇರೆ ಪುಸ್ತಕಗಳನ್ನು ನೇಮಿಸಿ ಛಾಪಿಸಿರುತ್ತಾರೆ. ಇಂತಹ ಆತುರದ ಮತ್ತು ಅನಿರೀಕ್ಷ್ಯವಾದ ಬದಲಾವಣೆಗಳನ್ನು ಮಾಡುವುದರಿಂದ ಎಷ್ಟು ಮಂದಿ ಬಡವಿದ್ಯಾರ್ಥಿಗಳಿಗೆ ದುಗುಣಿ ಖರ್ಚಾಗಬೇಕಾಗುವುದೆಂಬುದನ್ನು ಇಲಾಖಾ ಅಧ್ಯಕ್ಷರು ಗಮನಿಸಬೇಕಲ್ಲವೇ? ಒಂದಾವರ್ತಿ ನೇಮಿಸಿದ ಪುಸ್ತಕಗಳು ಎರಡು ವರ್ಷ ಕಾಲವಾದರೂ ಇರಬೇಕಲ್ಲವೇ? ಮತ್ತು ಅವನ್ನು ಬದಲಾವಣೆಮಾಡುವ ಸಂದರ್ಭಗಳಲ್ಲಿ ಸಹ ಕನಿಷ್ಠಪಕ್ಷ ಆರು ತಿಂಗಳು ಕಾಲವಾದರೂ ಮುಂಚಿತವಾಗಿಯೇ ಗೆಜೆಟ್ಟಿನಲ್ಲಿ ಛಾಪಿಸಿ ಎಲ್ಲರಿಗೂ ತಿಳಿಸುವುದು ಉತ್ತಮ. ಹಾಗೆ ಮಾಡದಿದ್ದರೆ ಆಯಾ ಸ್ಥಳಕ ಡಿಪೋಗಳವರು ಮಾರಾಟಕ್ಕಾಗಿ ತರಿಸಿರುವ ಅಂತಹ ಹಳೇ ಪುಸ್ತಕಗಳು ಅವರ ಬಳಿಯಲ್ಲಿ ನಿಂತುಹೋಗಿ, ಬಹು ನಷ್ಟಕ್ಕೆ ಗುರಿಯಾಗುವರು. ಈ ವಿಷಯವನ್ನು ನಮ್ಮ ವಿದ್ಯಾ ಇಲಾಖಾ ಅಧ್ಯಕ್ಷರವರು ತಮ್ಮ ಚಿತ್ತಕ್ಕೆ ತಂದುಕೊಂಡು ಬಡವಿದ್ಯಾರ್ಥಿಗಳ ಮತ್ತು ಡಿಪೋಗಳವರ ಅನುಕೂಲತೆಗೆ ತಕ್ಕಂತೆ ಏರ್ಪಾಡು ಮಾಡುತ್ತಾ ಬರುವರೆಂದು ನಂಬುತ್ತೇನೆ.

ವಿದ್ಯಾರ್ಥಿ ಹಿತಕಾಂಕ್ಷಿ.

ಗ್ರಾಮಾಭಿವೃದ್ಧಿ ಸಂಘಕ್ಕೆ ಸೂಚನೆ.

ಅಯ್ಯಾ,—ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಗ್ರಾಮಾಭಿವೃದ್ಧಿ ಸಂಘಗಳು ಏರ್ಪಾಡಾಗಿ ಆಯಾ ಗ್ರಾಮಗಳ ಅಭಿವೃದ್ಧಿಗೆ ಅವಶ್ಯಕವಾದ ಸಲಹೆಗಳನ್ನು ಸೂಚಿಸುತ್ತಲೂ, ಅವುಗಳಲ್ಲಿ ಬಹುಜನಾನುಮತಿಯನ್ನು ಪಡೆದ ಸಲಹೆಗಳನ್ನು ಆಚರಣೆಗೆ ತರುತ್ತಲೂ ಬರಬೇಕೆಂದಿರುವ ಈ ನೂತನವಾದ ಏರ್ಪಾಡು ಎಷ್ಟೋ ಶ್ಲಾಘನೀಯವಾದುದೇ ಸರಿ. ಇಂತಹ ಸಲಹೆಗಳ ಗುಂಪಿನಲ್ಲಿಯೇ ಸೇರಿ ತ್ವರೆಯಾಗಿ ಆಚರಣೆಗೆ ಬರಬೇಕಾದ ಕೆಲ ವಿಷಯಗಳನ್ನು ಇದರಡಿಯಲ್ಲಿ ಸೂಚಿಸುತ್ತೇನೆ. ವಾಚಕರು ಇವುಗಳನ್ನು ಗಮನಿಸಿ ತಮತಮಗೆ ಯುಕ್ತವಾಗಿ ತೋರುವವುಗಳನ್ನು ಆಯಾ ಗ್ರಾಮಾಭಿವೃದ್ಧಿ ಸಂಘಗಳಲ್ಲಿ ಪ್ರಸ್ತಾಪಕ್ಕೆ ತಂದು ಆಚರಣೆಗೆ ತರುವುದಕ್ಕೆ ಪ್ರಯತ್ನಿಸುವವರಾಗಲಿ ಎಂದು ಕೇಳಿಕೊಳ್ಳುತ್ತೇನೆ.

(1) ಪ್ರತಿಯೊಂದು ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರ್ ಸ್ಥಳಗಳಲ್ಲಿಯೂ ಒಂದೊಂದು ಇಂಡಸ್ಟ್ರಿಯಲ್ ಸ್ಕೂಲನ್ನೂ, ಅದಕ್ಕೆ ಸಂಬಂಧಿಸಿಕೊಂಡಿರುವಂತೆ ಅನಾಥಬಾಲಕರಿಗೂ ದರಿದ್ರರಾದ ಜನರಿಗೂ ಕೈಗಾರಿಕೆ ಕೆಲಸವನ್ನು ಕಲಿತುಕೊಳ್ಳುವುದಕ್ಕಾಗಿ ಒಂದು ಅನಾಥಾಲಯವನ್ನೂ ಸ್ಥಾಪಿಸಬೇಕು. ಇಂತಹ ಶಾಲೆಗಳಲ್ಲಿ ಕನಿಷ್ಠಪಕ್ಷ ಮೇಲಿನ ಪ್ರೈಮರಿ ಮೂರನೇ ತರಗತಿ ವರೆಗಾದರೂ ಕನ್ನಡ ವಿದ್ಯಾಭ್ಯಾಸಕ್ಕೆ ಅವಕಾಶವನ್ನು ಕಲ್ಪಿಸಬೇಕು. ಪ್ರತಿ ಡಿಸ್ಟ್ರಿಕ್ಟಿನಲ್ಲಿಯೂ ಇರುವ ತಾಲ್ಲೂಕುಗಳ ಅಮಲ್ದಾರರುಗಳೂ, ಪ್ರತಿ ಹೋಬಳಿ ಶೇಕದಾರರುಗಳೂ, ಉಪಾಧ್ಯಾಯರೂ, ಆಯಾ ಪ್ರಾಂತಗಳಲ್ಲಿ ಅನಾಥರಾಗಿಯೂ, ಕೇವಲ ದರಿದ್ರರಾಗಿಯೂ, ಇರುವ ಬಾಲಕರನ್ನು ತಮ್ಮ ತಮ್ಮ ಸರ್ಕೀಟ್ ಸಮಯಗಳಲ್ಲಿ ಹುಡುಕುತ್ತಾ, ವಿಚಾರಿಸುತ್ತಾ ಇದ್ದು, ಹಾಗೆ ಸಿಕ್ಕುವವರನ್ನು ಪ್ರೋತ್ಸಾಹಿಸಿ, ಆಯಾ ಅನಾಥಾಲಯಗಳಿಗೆ ಕಳುಹಿಸುತ್ತಾ ಬರಬೇಕು.

(2) ಪ್ರತಿ ಡಿಸ್ಟ್ರಿಕ್ಟಿನಲ್ಲಿಯೂ ಇರುವ ಯಾವುದಾದರೊಂದು ಮುಖ್ಯ ತಾಲ್ಲೂಕು ಹೆಡ್‌ಕ್ವಾರ್ಟರ್ ಸ್ಥಳದಲ್ಲಿ ಅನಾಥಬಾಲಕಿಯರು, ದರಿದ್ರರಾದ ವಿಧವೆಯರು, ಶೈಶವದಲ್ಲಿಯೇ ತಾಯಿಯನ್ನು ಕಳೆದುಕೊಂಡ ಬಡ ಶಿಶುಗಳು ಇಂಥವರಿಗೋಸ್ಕರ ಒಂದು ಅನಾಥಾಲಯವನ್ನೂ, ಅದಕ್ಕೆ ಸೇರಿದಂತೆ ಹೊಲಿಗೆ, ಹೆಣಿಗೆ, ಬುಕ್ ಬೈಂಡಿಂಗ್, ಚಾಪೆ ಹೆಣಿಗೆ, ಮುಂತಾದ ಸ್ತ್ರೀಪ್ರಜಾ ಸಾಧ್ಯವಾದ ಕಸಬು ಕಲಿಸುವ ಪ್ರೈಮರಿ ಪಾಠಶಾಲೆಯನ್ನೂ, ಏರ್ಪಡಿಸಬೇಕು. ಮೇಲೆ ಹೇಳಿದ ಸೂಚನೆಯಂತೆಯೇ ಅಧಿಕಾರಿಗಳು ಇಂತಹ ಆಲಯಗಳಿಗೂ ತಕ್ಕವರಾದ ಬಾಲಕಿಯರು, ವಿಧವೆಯರು, ಶಿಶುಗಳು, ಇಂಥವರನ್ನು ಹುಡುಕುತ್ತಾ ಇದ್ದು ದೊರೆತಾಗ ಕರೆತಂದು ಸೇರಿಸುತ್ತಾ ಬರಬೇಕು.

ಹೀಗೆ ಮಾಡುತ್ತಾ ಬರುವುದರಿಂದ ಅಂತಹ ಬಡಜನರಿಗೆ ಸದ್ಯಕ್ಕೆ ಆದರಣೆಯೂ, ಮುಂದಕ್ಕೆ ಮರ್ಯಾದೆಯುಳ್ಳ ಜೀವನೋಪಾಯವೂ ದೊರೆತಂತಾಗಿ ಗ್ರಾಮಾಭಿವೃದ್ಧಿಗೆ ಅವಕಾಶವಾಗುವುದಲ್ಲದೆ, ಈ ದೇಶದಲ್ಲಿ ದರಿದ್ರರು ದುರ್ಮಾರ್ಗಿಗಳಾಗಿ ಬೆಳೆದು, ಮುಂದೆ ತಮ್ಮ ಜೀವನೋಪಾಯಕ್ಕಾಗಿ ಜಾರತ್ವ, ಚೋರತ್ವಗಳಲ್ಲಿ ಪ್ರವರ್ತಿಸಿ, ಸತ್ಪ್ರಜಾ ಸಮುದಾಯಕ್ಕೂ, ರಾಜ್ಯಾಧಿಕಾರಿಗೂ ಕಂಟಕರಾಗುವುದು ತಪ್ಪಿಹೋಗುವುದು. ಹೀಗೆ ಮಾಡುವುದರಲ್ಲಿ ಬಾಲಕರ ಅನಾಥಾಲಯವು ಇರುವ ಸ್ಥಳದಲ್ಲಿ ಬಾಲಕಿಯರದು ಇಲ್ಲದಂತೆಯೂ, ಬಾಲಕಿಯರ ಶಾಲೆ ಇರುವ ಸ್ಥಳದಲ್ಲಿ ಬಾಲಕರದು ಇಲ್ಲದಂತೆಯೂ ನೋಡಿಕೊಳ್ಳುತ್ತಿರಬೇಕು. ದೃಷ್ಟಾಂತವಾಗಿ, ಈಗ ಹಾಸನದಲ್ಲಿ ಬಾಲಕಿಯರ ಅನಾಥಾಲಯವಿರುವುದರಿಂದ ಅಲ್ಲಿ ಬಾಲಕರ ಆಲಯವನ್ನು ಸ್ಥಾಪಿಸದೆ, ಈ ಡಿಸ್ಟ್ರಿಕ್ಟಿನ ತಾಲ್ಲೂಕುಗಳಲ್ಲಿ ಪ್ರಮುಖಸ್ಥಳವಾಗಿರುವ ಹೊಳೆನರಸಿಪುರದಲ್ಲಿ ಬಾಲಕರ ಅನಾಥಾಲಯವನ್ನು ಸ್ಥಾಪಿಸುವುದು ಅನುಕೂಲವಾಗಿರುವುದೆಂದು ತಿಳಿಯಬೇಕು.

ಪ್ರಜಾ ಕ್ಷೇಮಾಭಿಲಾಷಿ

ತಾಲ್ಲೂಕು ವರ್ತಮಾನಗಳು.

ಅರಕಲಗೂಡು.—ಇಲ್ಲಿ 8-10 ದಿವಗಳಿಂದ ಸೋನೆ ಮಳೆ ಪ್ರಾರಂಭವಾಗಿದೆ. ರೈತರು ಬೀಜ ಹಾಕುವುದು, ಸೊಸಿ ನೆಡುವುದು ಮುಂತಾದ ಕೃಷಿಯ ಕೆಲಸಗಳನ್ನು ಸಂತೋಷದಿಂದ ಮಾಡುತ್ತಿದಾರೆ.—ನಮ್ಮ ದೇಶದ ಎಲ್ಲಾ ಭಾಗಗಳಲ್ಲಿ ಈಗ ಹೊಸದಾಗಿ ಮಾಡಿರುವ ಅಳತೆ ಸೇರು ಮುಂತಾದವುಗಳನ್ನು ವ್ಯಾಪಾರಸ್ಥರು ಉಪಯೋಗಿಸುವಂತೆಯೂ, ಹಳೆಯವುಗಳನ್ನು ತೆಗೆದುಬಿಡುವಂತೆಯೂ ಸರ್ಕಾರದಿಂದ ಅಪ್ಪಣೆಯಾಗಿ ಇತರ ಕಡೆ ಉಪಯೋಗದಲ್ಲಿದ್ದರೂ ಈ ಊರಿನಲ್ಲಿ ಇನ್ನೂ ಉಪಯೋಗದಲ್ಲಿಲ್ಲ. ನಮ್ಮ ಅಮಲ್ದಾರ್ರವರು ಇವುಗಳನ್ನು ತರಿಸಿ ಎಲ್ಲಾ ವರ್ತಕರೂ ಕೊಂಡುಕೊಂಡು ಉಪಯೋಗಿಸುವಂತೆ ಮಾಡಿದರೆ ಈ ದುರ್ಭಿಕ್ಷ ಕಾಲದಲ್ಲಿ ಪ್ರಜೆಗಳಿಗೆ ಹಿತವಾಗಬಹುದು.—ಈಗ ಹೊಸದಾಗಿ ಬಂದಿರುವ ಡಾಕ್ಟರ್ ವಾಸುದೇವರಾಯರು ರೋಗಿಗಳಿಗೆ ಬಹು ಪ್ರೀತಿಯಿಂದ ಔಷಧವನ್ನು ಕೊಟ್ಟು ಚಿಕಿತ್ಸೆಮಾಡುತ್ತಾ, ಜನಗಳ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿರುತ್ತಾರೆ.

ಹುಣಸೂರು ತಾ|| ಚಿಕ್ಕಾಡಿಗನಹಳ್ಳಿ.—ಅಮಲ್ದಾರಿ ಛಾರ್ಜಿನಲ್ಲಿದ್ದ ಸ್ಪೆಷಲ್ ಶಿರಸ್ತೇದಾರರು ಉಂಡವಾಡಿಗೆ ತಮ್ಮ ಕೆಲಸದ ನಿಮಿತ್ತ ವಾಪಸು ದಯಮಾಡಿದರು. ಮೈಸೂರು ಮತ್ತು ಬ್ರಿಟಿಷ್ ಸರ್ವಿಸ್ ಇಂಜನಿಯರುಗಳು ಇಂಜನ್ ಮತ್ತು ಕೆಲವು ಗಾಡಿ ಸಾಮಾನು ಸಮೇತ ಉಂಡವಾಡಿ ಬಳಿ ಬಂದಿರುತ್ತಾರೆ. ಇವರು ಲಕ್ಷ್ಮಣತೀರ್ಥ ನದಿಯ ನೀರಿನ ವೇಗ ಕಂಡುಹಿಡಿಯಲು ಕೆಲವು ತಿಂಗಳು ಇರುತ್ತಾರಾಗಿ ವರ್ತ[illegible].—[illegible]ಕಾರು ಸೀಮೆಯಾದ ಈ ಪ್ರಾಂತ್ಯ ಮಳೆಯಿಲ್ಲದೆ ಚೆಲ್ಲಿದ್ದ ರಾಗಿ ಪೈರು ಒಣಗಿಹೋಯಿತು. ಗೋಕಾಯಿಗಳಿಗೆ ಹುಲ್ಲೂ ನೀರಿನ ಅಭಾವ ಅಷ್ಟಿಷ್ಟೆಂದು ಹೇಳತೀರದು. ರೂಪಾಯಿಗೆ 5-6 ಕಂತೆ ನೆಲ್ಲುಹುಲ್ಲು ಸಿಕ್ಕುವದೂ ದುರ್ಲಭವಾಗಿದೆ. ಧಾರಣೆ ರಾಗಿ 14 ಸೇರೂ, ಅಕ್ಕಿ 5-6 ಸೇರೂ ಇದೆ. ಮಳೆ ತುಂತುರು ಹನಿಯಾಗುತ್ತಾ ಗಾಳಿ ಮಾತ್ರ ಬಿರುಸಾಗಿ ಬೀಸುತ್ತಾ ಇದೆ.—ಗ್ರಾಮಸ್ಥರು ಗ್ರಾಂಟ್ ಇನ್ ಏಡ್ ಸ್ಕೂಲ್ ಮಾಸ್ಟರ ಅರ್ಧ ತಲ[illegible] 3-4 ತಿಂಗಳಾಗುತ್ತಾ ಬಂದಾಗ್ಯೂ ಸ್ಕೂಲಿನ [illegible]—ಸುತ್ತುಮುತ್ತ ಸಿಡುಬು ಪ್ರಾರಂಭವಾಗಿದೆ. ವ್ಯಾಕ್ಸಿನೇಟರು ವರ್ಷಕ್ಕೆ ಒಂದಾವರ್ತಿಯಾದರೂ ಬರುವದಿಲ್ಲ. ಸರ್ಕಾರದವರು ತಿಳುವಳಿಕೆ ಇಲ್ಲದವರಿಗೆ ಬುದ್ಧಿವಾದ ಹೇಳಿ ಸಿಡುಬನ್ನು ಹಾಕಿದರೆ ಎಷ್ಟೋ ಮೇಲಾದೀತು.

ಚಿಂತಾಮಣಿ.—ಮಳೆ ಇಲ್ಲ. ಗಾಳಿ ಬಲವಾಗಿ ಬೀಸುವದರಿಂದ ಅಲ್ಪಸ್ವಲ್ಪ ಮೋಡ ಎದ್ದರೂ ಗಾಳಿಗೆ ಚದರಿ ಹೋಗುತ್ತಿದೆ. ದವಸಗಳ ಧಾರಣೆ ಏರುತ್ತಾ ಇದೆ. ಅಲ್ಪ ಸಂಬಳದವರು ಬದುಕುವದು ಬಹು ಕಷ್ಟವಾಗಿದೆ.—ಈ ಊರಿಗೆ ಕೆರೆಯಿಂದ ನಲ್ಲಿಗಳ ಮುಖಾಂತರ ನೀರು ಬರಬೇಕಾಗಿದೆ. ಈಗ 2-3 ತಿಂಗಳಿಂದಲೂ ನೀರಿಗೆ ಬಹು ತೊಂದರೆಯಾಗಿರುತ್ತದೆ. ನೀರು ಬರುವ ತೂಬಿಗೆ ಏನೋ ಅಡ್ಡಬಿದ್ದು ಬರತಕ್ಕ ಸ್ವಲ್ಪ ನೀರನ್ನು ಊರಿಗೆಲ್ಲಾ ಹಂಚಿ ಬಿಡುತ್ತಾರೆ. ಅಧಿಕಾರಿಗಳು ಈ ವಿಷಯದಲ್ಲಿ ನಿಗಾ ಕೊಡಬೇಕಾಗಿದೆ.—ಪೋಲೀಸ್ ಬಂದೋಬಸ್ತು ಬಹು ಚೆನ್ನಾಗಿದೆ. ಹೊಸ ಇನ್ಸ್‌ಪೆಕ್ಟರವರೂ ಜಮಾದಾರರೂ ಬಂದಲಾಗಾಯಿತು ಕಳ್ಳರ ಕಾಟ ತಪ್ಪಿಹೋಯಿತು. ಪ್ರಜೆಗಳು ನೆಮ್ಮದಿಯಾಗಿದಾರೆ.—ಸಂದುಗೊಂದುಗಳಲ್ಲಿ ಜಲ ಮಲ ವಿಸರ್ಜನೆ ಹೆಚ್ಚಾಗಿದೆ. ಆರೋಗ್ಯ ಇಲಾಖೆಯವರು ಈ ವಿಚಾರದಲ್ಲಿ ನಿಗಾ ಕೊಡಬೇಕಾಗಿದೆ. ಅಧಿಕಾರಿಗಳು ಆಗಾಗ್ಗೆ ಈ ಊರಿಗೆ ದಯಮಾಡಿಸಿದಾಗ್ಯೂ ದೊಡ್ಡರಸ್ತೆಗಳಲ್ಲಿ ತಿರುಗಾಡಿ ಊರಿನ ಅಂದಚಂದವನ್ನು ನೋಡಿಕೊಂಡು ಹೋಗುವಹಾಗೆ ಕಾಣುತ್ತದೆಯೇ ಹೊರತು ಸಂದುಗೊಂದುಗಳ ಮೇಲೆ ಅವರ ದೃಷ್ಟಿ ಬಿದ್ದಹಾಗೆ ಕಾಣುವದಿಲ್ಲ.—ಕಳೆದ ಲಗ್ನಕಾಲದಲ್ಲಿ ಈ ಊರಿನ ವರ್ತಕರಲ್ಲಿ ಬಹು ಆಡಂಬರವಾಗಿ 7-8 ಮದುವೆಗಳು ನಡೆದವು. ಆದರೆ ದೇವನಹಳ್ಳಿ ಮುನಿಸ್ವಾಮಿಶೆಟ್ಟರ ಕುಮಾರರಾದ ಸುಬ್ಬಶೆಟ್ಟರು ತಮ್ಮ ತಮ್ಮಂದಿರಿಗೆ ಮದುವೆ ಮಾಡಿದ್ದರಲ್ಲಿ ನೂರಾರು ಬಡಜನರಿಗೆ ಸುಖಭೋಜನಮಾಡಿಸಿ ಸಂತೋಷಪಡಿಸಿದ್ದು ಅವರ ಉದಾರಗುಣವನ್ನು ತೋರ್ಪಡಿಸುತ್ತದೆ.

ಮಾಗಡಿ ತಾ|| ಸಂಕೀಘಟ್ಟ.—ಈ ಪ್ರಾಂತ್ಯ ಮುಂಗಾರು ಮಳೆ ಬೀಳಲೇ ಇಲ್ಲ. ರೈತರೆಲ್ಲರೂ ಮೇಘವನ್ನು ನೋಡಿನೋಡಿ ನಿರುತ್ಸಾಹಿಗಳಾಗುತ್ತಲಿದಾರೆ. ಧಾರಣೆವಾಸಿಯಂತೂ ದಿನೇದಿನೇ ಹೆಚ್ಚುತ್ತಾ ಇದೆ. ಬಡವರ ಸಂಕಟ ಹೇಳತೀರದು. ಈ ಗ್ರಾಮವು 600 ಪ್ರಜಾಸಂಖ್ಯೆಯುಳ್ಳದ್ದಾಗಿದೆ. ಊರಿನಲ್ಲಿ ರಸ್ತೆಸರಿಯಾಗಿಲ್ಲದೆ ಕತ್ತಲೆಕಾಲದಲ್ಲಿ ಸಂಚರಿಸುವುದು ಬಹಳ ಕಷ್ಟ. ಸ್ಯಾನಿಟರಿ ರೂಲ್ಸು ಜಾರಿಯಲ್ಲಿದ್ದಾಗ್ಯೂ ಗ್ರಾಮದ ಮಧ್ಯೆ ಸ್ಕೂಲ್ ಕಟ್ಟಡದ ಎದುರಿಗಿರುವ ಬೈಲಿನಲ್ಲಿ ಜನಗಳು ಗಲೀಜುಮಾಡುವುದರಿಂದ ಅಸಹ್ಯವಾಗುತ್ತೆ. ಈ ತಾಲ್ಲೋಕಿಗೆ ಸ್ಯಾನಿಟರಿ ಇನ್ಸ್‌ಪೆಕ್ಟರು ಇರುವದಾಗಿ ವರ್ತಮಾನವೇ ಹೊರತು ಅವರ ದರ್ಶನ ದುರ್ಲಭವಾಗಿದೆ. ಇವರು ಆಗಾಗ್ಗೆ ಗ್ರಾಮ ಗಸ್ತುಮಾಡಿ ಜನಗಳಿಗೆ ಎಚ್ಚರಿಕೆ ಹೇಳುತ್ತಿದ್ದರೆ ಗ್ರಾಮವು ಕೊಂಚಮಟ್ಟಿಗಾದರೂ ಶುಚಿಯಾಗಿದ್ದೀತು. ಈ ವಿಷಯದಲ್ಲಿ ಅಮಲ್ದಾರ್ರವರು ಸರಿಪಡಿಸಿಕೊಡಬೇಕಾಗಿ ಕೋರುತ್ತೇನೆ.—ಈ ಊರಿನಲ್ಲಿ ಗ್ರಾಮಾಭಿವೃದ್ಧಿ ಕಮಿಟಿಯು ಸ್ಥಾಪಿತವಾಗಿ ಮೂರು ತಿಂಗಳಾಯಿತು. ತಾ. 21 ನೇ ಭಾನುವಾರರಾತ್ರಿ ಸದರೀ ಕಮಿಟಿಗೆ ಗ್ರಾಮದವರನ್ನೆಲ್ಲಾ ಜಮಾಯಿಸಿ ಛೇರ್‌ಮ್ಯಾನ್ ಮ|| ರಾಘವಾಚಾರ್ರು ಗೌರ್ನಮೆಂಟಿಗೂ ಪ್ರಜೆಗಳಿಗೂ ಇರುವ ಸಂಬಂಧ, ಪರಸ್ಪರಸಹಾಯಕ ಸಂಘಗಳ ಪ್ರಯೋಜನ, ವ್ಯವಸಾಯ, ಈ ವಿಷಯಗಳಲ್ಲಿಯೂ, ಸ್ಕೂಲ್ ಮಾಸ್ಟರು ವಿದ್ಯಾವಿಷಯವಾಗಿಯೂ ಉಪನ್ಯಾಸಗಳನ್ನು ಮಾಡಿದರು. ಈ ಕಮಿಟಿಯ ಮೆಂಬರುಗಳು ಹಾಜರಿದ್ದು ಕಮಿಟಿಯ ಕೆಲಸಗಳನ್ನು ಸಮರ್ಪಕವಾಗಿ ನಡಿಸಿದರು. ಇನ್ನುಮುಂದಾದರೂ ಈ ಕಮಿಟಿಗಳಲ್ಲಿ ನಡೆಯುವ ಉಪನ್ಯಾಸಗಳನ್ನೇ ಕೇಳುವುದರ ಮೂಲಕ ಅನಾದಿಯಾಗಿ ನಮ್ಮ ಜನಗಳಿಗುಂಟಾಗಿರುವ ಮೌಢ್ಯವು ತೊಲಗಿ ತನ್ಮೂಲಕ ತಾವೂ ಸೌಖ್ಯವನ್ನು ಹೊಂದಿ ದೇಶದ ಏಳಿಗೆಗೂ ಸಹಾಯಕರಾಗಲೆಂದು ಹಾರೈಸುತ್ತೇನೆ.

ದಾವಣಗೆರೆ ತಾ|| ಭಾವಿಹಾಳ್.—ಈ ವರಿವಿಗೂ ಮಳೆ ಬರಲಿಲ್ಲ. ಮೋಡ ಗಾಳಿ ಆಡಂಬರವೇ ಅಗಿ ಇರುತ್ತೆ. ರಾತ್ರಿ ತಂಗಾಳಿ ಬೀಸುವುದು. ದಿನಸಿ ಧಾರಣೆಯಂತೂ ಹೆಚ್ಚುತ್ತಲೇ ಇವೆ.—ಈ ತಾಲ್ಲೋಕಿಗೆ 200 ಗ್ರಾಮಗಳು ಸೇರಿರಬಹುದು. ವ್ಯಾಪಾರ ಕಸಬಿನ ಜನಗಳು ವಿಶೇಷವಾಗಿ ಇರುವುದರಿಂದ ಪೋಸ್ಟು ಇಲಾಖೆಯವರಿಗೆ ಹೆಚ್ಚಾಗಿ ಉತ್ಪತ್ತಿಯಾಗುತ್ತಿದ್ದಾಗ್ಯೂ ಗ್ರಾಮಾಂತರಗಳ ಮೇಲೆ ಕಾಗದ ಕೊಡಲು ವಿಲೇಜ್ ಪೋಸ್ಟ್‌ಮ್ಯಾನನನ್ನು ಇಬ್ಬರನ್ನೇ ಇಟ್ಟಿದಾರೆ. ಪಾರ್ಸೆಲ್, ರಿಜಿಸ್ಟರ್ ವಗೈರೆಗಳು ಹದಿನೈದು ದಿವಸಕ್ಕೊಮ್ಮೆಯಾದರೂ ಪಾವತಿ ಆಗುವುದೇ ಕಷ್ಟವಿರುತ್ತೆ. ವಿಲೇಜ್ ಪೋಸ್ಟ್‌ಮ್ಯಾನ್‌ರನ್ನು ಕೇಳಿದರೆ ಹಳ್ಳಿಗಳು ಜಾಸ್ತಿ ಇರುವುದರಿಂದಲೂ, ಕಾಗದಪತ್ರಗಳು ಹೆಚ್ಚಾಗಿ ಬರುವುದರಿಂದಲೂ ಪಾವತಿ ಮಾಡುವುದೇ ಕಷ್ಟವಾಗುತ್ತೆಂತ ಹೇಳುತ್ತಾರೆ. ಆದ್ದರಿಂದ ಈ ಕೊರತೆಯನ್ನು ತಪ್ಪಿಸುವುದಕ್ಕೆ ಪೋಸ್ಟ್‌ಮಾಸ್ಟರ್ ಜನರಲ್‌ರವರು ತಮ್ಮ ಘನತರವಾದ ಚಿತ್ತಕ್ಕೆ ತರಿಸಿಕೊಂಡು ವಿಲೇಜ್ ಪೋಸ್ಟ್‌ಮ್ಯಾನ್‌ರಿಗೆ ತಲಬನ್ನು ಹೆಚ್ಚಿಸಿ, ಮಾಯಕೊಂಡ ಬ್ರಾಂಚ್ ಪೋಸ್ಟಿಗೆ ಒಬ್ಬ ವಿಲೇಜ್ ಪೋಸ್ಟ್‌ಮ್ಯಾನನ್ನು ನೇಮಿಸಿ ವಾರಕ್ಕೊಂದಾವರ್ತಿ ಕಾಗದಪತ್ರಗಳು ಪಾವತಿ ಮಾಡಿಸುವಂತೆ ಮಾಡುವರೆಂದು ನಂಬಿದ್ದೇವೆ.—ಇಲ್ಲಿಗೆ ಒಂದು ಮೈಲಿ ಫಾಸಲೆಯಲ್ಲಿರುವ ಸೀರಹಡು ಅಡವಿಯಲ್ಲಿ ಇದೇ ಗ್ರಾಮದ ಬಂಜಪ್ಪಳ ಬೋರನಾಯ್ಕನ ತಮ್ಮ ಓಬನಾಯ್ಕನು ಸೀತಾರಿಗೆ ಹೋಗಿದ್ದನು. ಒಂದು ಚಿರತೆಯು ಕಾಡುಹಂದಿಯನ್ನು ಹಿಡಿದು ಎತ್ತಿಕೊಂಡು ಅವನ ಎದುರಿಗೆ ಬರುವುದನ್ನು ನೋಡಿ ಧೈರ್ಯಗುಂದದೆ ನಿಂತು ತುಪಾಕಿಯಿಂದ ಅದರ ಹಣೆಗೆ ಹೊಡೆಯಲು ಅದು ಆರ್ಭಟಿಸಿ ಮೇಲಕ್ಕೆ ಹಾರಿ ಬಿದ್ದು ಮೃತಿಯನ್ನೈದಿತು. ಮತ್ತು ಇದೇ ಕಾಡಿನಲ್ಲಿ ಈ ದುಷ್ಟಮೃಗಗಳಿಂದ ದನಕರುಗಳು ತಿರುಗಾಡುವದೇ ಕಷ್ಟವಿರುತ್ತೆ. ಇವನು ತುಪಾಕಿ ವಿದ್ಯೆಯಲ್ಲಿ ಬಹು ಗಟ್ಟಿಗನಾದ್ದರಿಂದ ಈಗ ಏಳು ಎಂಟು ಚಿರತೆಯನ್ನು ಹೊಡೆದಿರುತ್ತಾನೆ. ಇವನು ಈ ದುಷ್ಟಜಂತುವನ್ನು ಸಂಹರಿಸಿದ್ದಕ್ಕಾಗಿ ಎಲ್ಲರೂ ಕೊಂಡಾಡುತ್ತಾರೆ.

ಶಿವಮೊಗ್ಗ.—ಕಳೆದ ಜೂನ್ ತಾ. 23 ರಲ್ಲಿ ಹೈ ಸ್ಕೂಲ್ ಕಾಂಪೌಂಡಿನಲ್ಲಿ ಚಕ್ರವರ್ತಿಯವರ ವರ್ಷ ವರ್ಧಂತಿ ಉತ್ಸವದ ಸಂತೋಷಕ್ಕಾಗಿ ಸ್ಕೂಲ್ ಬಾಲಕರು, ಹಾರುವದು, ಓಡುವದು ಮುಂತಾದ ಆಟಗಳನ್ನು ಬಹಳ ಚೆನ್ನಾಗಿ ಆಡಿದರು. ಮ|| ಸಿ. ಸುಬ್ಬರಾಯರ ಮಗ ಬಹಳ ಮೆಹನತ್ತು ಮಾಡಿ ಇನಾಂ ಪಡೆದನು. ಸೆಕ್ಷನ್ಸ್ ಜಡ್ಜರವರೂ, ಹೆಡ್ ಮಾಸ್ಟರವರೂ ಬಹಳ ಮುತವರ್ಜಿಯಿಂದ ಕೆಲಸಮಾಡಿದರು. ಆ ದಿನ ಸಾಯಂಕಾಲ ಟವನ್ ಹಾಲಿನಲ್ಲಿ ಹೈಸ್ಕೂಲ್ ಹುಡುಗರು ಷೇಕ್ಸ್‌ಪಿಯರ್ ನಾಟಕ ಆಡಿ ಬಹಳ ತಮಾಷೆ ಮಾಡಿದರು.—ಈ ಊರಿಗೆ ಬಂದಿರುವ ಹರಿಕಥೆ ತಿಮ್ಮಣ್ಣದಾಸರವರು ಪೇಟೆಯಲ್ಲಿ ಬೂದಿಹಾಳ ರಾಮಯ್ಯನವರ ಮನೆಯಲ್ಲಿ ಹರಿಕಥೆ ಮಾಡಿದ್ದು ಬಹಳ ಚೆನ್ನಾಗಿ ಆಯಿತು. ಜನರೆಲ್ಲಾ ಬಹಳ ಸಂತೋಷಪಟ್ಟರು.—ಶಿವಮೊಗ್ಗಾ ಮುನ್ಸೀಫ್ ಕೋರ್ಟ್ ದಫೇದಾರ್ ಸೀಗೆಹಟ್ಟಿ ತಿಮ್ಮಣ್ಣನೆಂಬವನಿಗೆ ಸಾಗರದಲ್ಲಿ ಅಮೀನ್ ಕೆಲಸವಾಗಿದೆ. ಇವನು ಸರಕಾರಿ ಕೆಲಸವನ್ನು ಬಹಳ ಜಾಗರೂಕತೆಯಿಂದ ಮಾಡುತ್ತಾ ಇದಾನೆ. ಈ ಹಿಂದೆ ಕೆಲಸದಲ್ಲಿದ್ದ ಜನರು ಬೈಸಿಕಲ್ ಉಪಯೋಗಿಸಿ ಕೆಲಸಮಾಡಲಿಲ್ಲ. ಇವನು ಬೈಸಿಕಲ್ ಉಪಯೋಗಿಸಿ ಕೆಲಸನಡಿಸುವದರಿಂದ ಮೇಲ್ಪಟ್ಟ ಆಫೀಸರೆಲ್ಲಾ ಬಹಳ ಸಂತೋಷಪಡುತ್ತಾರೆ.—ಮಲೆನಾಡಿನಲ್ಲಿ ಸ್ವಲ್ಪ ಮಳೆಯಾದ್ದರಿಂದ ನದಿಗೆ ಸ್ವಲ್ಪ ನೀರು ಬಂದಿರುತ್ತೆ. ಇನ್ನೂ ಮೋಡವಾಗಿ ತುಂತುರು ಹನಿ ಬೀಳುತ್ತದೆ. ಜನರೆಲ್ಲಾ ಬಿತ್ತುವ ಹಂಗಾಮಿನಲ್ಲಿದಾರೆ. ಮತ್ತು ಬೆಳೆ ಹಿಂದಾಯಿತೆಂದು ಪೇಚಾಡುತ್ತಾರೆ.—ಇಲ್ಲಿನ ಕೋಆಪರೆಟಿವ್ ಬ್ಯಾಂಕಿನವರು 30-40 ರೂಪಾಯಿ ಖರ್ಚುಮಾಡಿ ರಿಜಿಸ್ಟರ್ ಪುಸ್ತಕಗಳನ್ನು ಅಚ್ಚುಹಾಕಿಸಿ ಬೈಂಡ್ ಮಾಡಿಸಿ ತರಿಸಿದಾರೆ. ಅಹಳ ಚೆನ್ನಾಗಿದ್ದರೂ ಸರಿಯಾಗಿ ಬರೆಯುವ ಗುಮಾಸ್ತೆ ಆದಲ್ಲಿ ಕೆಲಸವೂ ಬಹಳ ಚೆನ್ನಾಗಿ ಆಗುತ್ತೆ. ಸಂದಲ್ ಕೋಠಿಯನ್ನು ಊರ ಒಳಗಿನಿಂದ ತೆಗೆದು ಸೇತುವೆ ಹತ್ತಿರ ಕಟ್ಟಿರುವ ಕಟ್ಟಡಕ್ಕೆ ತಂದಿದಾರೆ.—ಬಡಜನರಿಗೆ ಕೂಲಿ ಸಿಕ್ಕಿ ಸಂತೋಷಪಡುವರು.—ಶಿವಮೊಗ್ಗಾ ಟವನ್ ಜೈಲಿನ ಬಳಿ ಇರುವ ಬೊಮ್ಮನ ಕಟ್ಟೆಯಲ್ಲಿ ಲಕ್ಷ್ಮಿ, ಭೈರ, ನಗಣಿ ಎಂಬೀ ಮೂವರು ಸೇರಿ ರಸ್ತೆಯಲ್ಲಿ ಕುರಿಗಳನ್ನು ಮೇಯಿಸುತ್ತಿದ್ದ ಅರಜಗಟ್ಟಿ ಚಿಕ್ಕಣ್ಣನೆಂಬುವವ ಕುರಿಗಳೆರಡನ್ನು ಜುಲುಂ ಮಾಡಿ ಕಿತ್ತುಕೊಂಡು ಹೋದರೆಂದು ವರ್ತಮಾನಬಂದಿದೆ.

ನಂಜನಗೂಡು.—ಮಳೆಯಿಲ್ಲದೆ ಪೈರುಗಳೆಲ್ಲಾ ಒಣಗುತ್ತಿವೆ. ಮ್ಯುನಿಸಿಪಾಲಿಟಿಯ ಕೆಲಸಗಳು ಮೊದಲಿಗಿಂತಲೂ ಹೆಚ್ಚು ಶ್ರದ್ಧೆಯಿಂದ ನಿರ್ವಹಿಸಲ್ಪಡುತ್ತಿರುವಂತೆ ತೋರುವುದಿಲ್ಲ. ಮೆಂಬರುಗಳೂ ವೈಸ್ ಪ್ರೆಸಿಡೆಂಟರೂ ಹೆಸರಿಗೆ ಮಾತ್ರ ಆಸೆಪಡುತ್ತಿಲ್ಲವೆಂದು ಹೇಳುವುದಾದರೆ ಇಲ್ಲಿನ ಕೊರತೆಗಳೇನು? ಅವುಗಳನ್ನು ಹೇಗೆ ಪರಿಹರಿಸಬಹುದು? ಎಂಬ ವಿಚಾರಗಳನ್ನು ಕುರಿತು ಏನು ಯೋಚಿಸಿರುವರೆಂದು ಕೇಳಬಹುದು. ದಿವಾನ್ ಸಾಹೇಬರವರ ಅಪ್ಪಣೆಯಂತೆ ಮುದ್ರಿಸಲ್ಪಡುತ್ತಿರುವ "ಮ್ಯುನಿಸಿಪಲ್ ಗೈಡ್" ನಲ್ಲಿ ಈ ವಿಷಯವಾಗಿ ಬರೆದಿರುವುದೆಂಬುದು ನಿರೀಕ್ಷಣೀಯವಾಗಿದೆ.—ಈ ವರುಷ ನಡೆದ ವಿವಾಹಗಳೆಲ್ಲಾ ಆಗಮಿಕ ಕುಮಾರಸ್ವಾಮಿ ದೀಕ್ಷಿತರ ಮಗಳನ್ನು ಮೈಸೂರು ಭುವನೇಶ್ವರಿ ಪ್ರೆಸ್ ಪ್ರೊಪ್ರೈಟರವರಿಗೆ ಕೊಟ್ಟು ನೆರವೇರಿಸಿದ ವಿವಾಹವೇ ವಿಶೇಷ ವೈಭವದಿಂದಲೂ ವಿತರಣೆಯಿಂದಲೂ ನಡೆದಿತೆಂದು ಹೇಳಬಹುದು. ಇತ್ತ ದುಂದುವೆಚ್ಚದಲ್ಲಿ ಹಿಂದುಗಳು ಹೆಸರಾದವರು. ಹೆಸರಾದ ಧನಿಕರೇ ಇಲ್ಲಿ ಮಿತವ್ಯಯವನ್ನು ಮರೆಯದಿರುವಲ್ಲಿ ಸಾವಿರಾರು ಅಪವ್ಯಯವು ದುರ್ವ್ಯಯವೇ ಆಗಬಹುದು. ಇಲ್ಲಿನ ಆರ್ಯಬಾಲ ಪಾಠಶಾಲೆಗೆ ಡಾ|| ರಾಜಗೋಪಾಲರವರೂ ತಿಂಗಳಿಗೊಂದು ರೂಪಾಯಿನಂತೆ ಧರ್ಮಮಾಡುವುದಾಗಿ ವಾಗ್ದಾನಮಾಡಿರುವರು. ಈ ಊರಿನ ಪ್ರಜಾಮುಖಂಡರ ಈ ಧರ್ಮಕಾರ್ಯವು ಸ್ತುತ್ಯವಾಗಿದೆ. ಸ್ಕೂಲಿನ ಫಲಿತಾಂಶವು ತೃಪ್ತಿಕರವಾಗಿದೆ.—ಶ್ರೀ ಶ್ರೀಕಂಠಮಂಟಪಶಾಲೆಯು ವೈಸ್ ಪ್ರೆಸಿಡೆಂಟರವರ ಪ್ರೋತ್ಸಾಹದಿಂದಲೂ, ಕಾರ್ಯದರ್ಶಿ ಮ|| ವೆಂಕಟನಾರಾಯಣನವರ ಉತ್ಸಾಹ ಔದಾರ್ಯಗಳಿಂದಲೂ, ಈಚೆಗೆ ಹೊಸದಾಗಿ ಸೇರಿದ ಕೆಲವು ಮಂದಿ ದೊಡ್ಡ ಮನುಷ್ಯರ ಸಹಾಯದಿಂದಲೂ ಬೆಳಗ್ಗೆ 7 ರಿಂದ 10 ಘಂಟೆ ವರೆಗೂ ಉಚಿತವಾಗಿ ಓದುವ ಬಗ್ಗೆ ತೆರೆಯಲ್ಪಡುತ್ತಿರುವುದು. ಸುಮಾರು ಮುನ್ನೂರು ಪುಸ್ತಕಗಳ ವರಿವಿಗೂ ಇರುವ ಇದಕ್ಕೆ ಸೇರಿದ ಪುಸ್ತಕಭಂಡಾರವನ್ನು ಸರ್ವರ ಉಪಯೋಗಕ್ಕೆ ಸಲುವಾಗಿಯೂ ತೆರೆಯುವ ಏರ್ಪಾಡನ್ನು ಇದರ ಸ್ಥಾಪಕರು ಮಾಡುವರೆಂದು ನಂಬಿರುವೆವು.—ಇಲ್ಲಿನ ಮಿಡ್ಲ್ ಸ್ಕೂಲಿನಿಂದ ಲೋವರ್ ಸೆಕೆಂಡರಿ ಪರೀಕ್ಷೆಗೆ ಕಳುಹಲ್ಪಟ್ಟಿದ್ದ 16 ಮಂದಿ ವಿದ್ಯಾರ್ಥಿಗಳ ಪೈಕಿ 13 ಮಂದಿ ತೇರ್ಗಡೆಯಾದರು.—ಬ್ರಹ್ಮಶ್ರೀ ಆಗಮಿಕ ಕುಮಾರಸ್ವಾಮಿ ದೀಕ್ಷಿತರವರ ಮುತುವರ್ಜಿಯಿಂದ ಪ್ರತಿ ವರ್ಷವೂ ನಡೆಯುತ್ತಿರುವ ಅದ್ವೈತ ಸಭೆಯು ಸೇರುವ ಸಮಯವು ಸಮೀಪವಾಯ್ತು. ದ್ವೈತ, ವಿಶಿಷ್ಟಾದ್ವೈತಗಳ ಸಭೆಗಳನ್ನು ಸ್ಮರಣೆಗೆ ತಂದುಕೊಂಡು ಇಲ್ಲಿನ ಧನಿಕರು ಔದಾರ್ಯವನ್ನು ಪ್ರಕಟಿಸುವರೆಂದು ನಂಬಿರುವೆನು. ಈ ಸಭೆಯ ಸ್ಥಾಪಕರು ಅರ್ಧರಾತ್ರಿಯಲ್ಲಿ ಸಭೆ ಸೇರುವುದನ್ನು ತಪ್ಪಿಸಬೇಕೆಂದೂ, ಒಂದೆರಡು ಉಪನ್ಯಾಸಗಳನ್ನಾದರೂ ತಪ್ಪದೆ ನಡೆಯಿಸಬೇಕೆಂದೂ ಸೂಚಿಸುವೆನು. ದೇವಸ್ಥಾನದ ಫಂಡಿನಿಂದ ಯಥೋಚಿತವಾಗಿ ಪಡೆದು ಪರಸ್ಥಳದ ವಿದ್ವಾಂಸರನ್ನು ಬರಮಾಡಿಕೊಂಡು ಆವಶ್ಯಕವಾಗಿ ಗೌರವಿಸಬೇಕು. ಪ್ರತಿಯೊಂದು ದೇವಸ್ಥಾನವೂ ಆರ್ಯಮತಸಿದ್ಧಾಂತಗಳ ಜನ್ಮಸ್ಥಳವಾಗಿದ್ದಿತೆಂಬುದನ್ನು ಧರ್ಮದರ್ಶಿಗಳು ಮರೆಯಬಾರದು. ಹಾಗೆ ಧರ್ಮಕ್ಕೆ ಪ್ರೋತ್ಸಾಹವು ಸರ್ಕಾರದಿಂದ ಸಿಕ್ಕುವುದಿಲ್ಲವಾದರೆ ಧನಿಕರೂ, ದೊಡ್ಡವರಾಗಿರುವ ಧರ್ಮದರ್ಶಿಗಳೂ ತಮ್ಮ ಗೌರವವನ್ನು ವೆಚ್ಚಮಾಡಿ, ಇಂತಹ ಸಮಯದಲ್ಲಿ ವಿದ್ವಾಂಸರನ್ನು ಸಂತೋಷದಿಂದ ಪುರಸ್ಕರಿಸಬೇಕಾಗಿದೆ.

ತೀರ್ಥಹಳ್ಳಿ.—ಈಗ ಕೆಲವು ದಿವಸದಿಂದ ಮಳೆಯು ತಕ್ಕಮಟ್ಟಿಗೆ ಬರುತ್ತಿದೆ. ಆದರೆ ಪ್ರತಿ ವರುಷದಂತೆ ಈ ಸಾರಿ ಜೂನ್ 10 ನೇ ತಾ. ಗೆ ಮಳೆಯು ಸರಿಯಾದ ಕಾಲಕ್ಕೆ ತಕ್ಕಂತೆ ಪ್ರಾರಂಭಿಸದೆ ಇರುವ ಕಾರಣ ನೋಡಿದರೆ ಮುಂದಕ್ಕೆ ಇಂಥಾ ಸ್ಥಿತಿ ಎಂದು ವೃಷ್ಟಿ ಬರುವಿಕೆಯನ್ನು ಹೇಳಲು ಸಾಧ್ಯವಿಲ್ಲ. ಈಗ ಬೇಸಾಯಕ್ಕೆ ನೀರು ಸಾಲದು. ದಿವಸಕ್ಕೆ ಒಂದೆರಡು ಸಾಧಾರಣವಾದ ಮಳೆಯು ಮಾತ್ರ ಬರುತ್ತಿದೆ. ಇಂಥಾ ಜಡಿಮಳೆಯ ಕಾಲದಲ್ಲಿ ಬೇಸಿಗೆಯಂತೆ ಬಿಸಿಲು ಪ್ರಕಾಶವಾಗುತ್ತಿದೆ. ಈಗಾಗಲೇ ಹುಲಿಕ ಪ್ರಾಂತ್ಯದಲ್ಲೂ ಅಡಕೆಯ ಫಸಲಿಗೆ ಕೊಳೆಯ ರೋಗವು ಪ್ರಾರಂಭವಾಗಿರುತ್ತೆಂದು ಕೇಳುತ್ತೇವೆ. [ಈ ಕೊಳೆ ರೋಗದ ಲಕ್ಷಣ ಕಂಡು ಬಂದ ಕೂಡಲೇ ತೋಟದ ರೈತರು ವ್ಯವಸಾಯ ಇಲಾಖೆಯವರು ಸೂಚಿರುವ ಪರಿಹಾರದ ಕಾರ್ಯಗಳನ್ನು ಮಾಡಿದರೆ ಆ ರೋಗದ ಸೆಲೆಯೇ ಇರುವುದಿಲ್ಲ. ಸುಲಭವಾದ ಉಪಾಯವನ್ನು ಕಂಡು *ಹಿಡಿದು ತೋರಿಸಿಕೊಟ್ಟಿದ್ದರೂ ರೈತರು ಮಾಡದೆ ಸುಮ್ಮನಿದ್ದರೆ ತಮಗೂ ತಮ್ಮ* ನೆರೆಯ ತೋಟಗಾರರಿಗೂ ನಷ್ಟವಾಗುವದರಲ್ಲಿ ಸಂಶಯವಿಲ್ಲ.—ಎಡಿ.] ಈಚೆಗೆ ಈ ಪ್ರಾಂತ್ಯದ ನಾಮಧಾರಿ ಗೌಡರುಗಳ ಲಗ್ನಗಳೆಲ್ಲಾ ಪೂರೈಸುತ್ತಾ ಬಂದಿರುತ್ತದೆ. ಈ ಸಾರಿ ಇವರಲ್ಲಿ ಒಂದೆರಡು ಲಗ್ನಗಳು ಮಾಮೂಲು ಪದ್ಧತಿಗಿಂತ ಹೆಚ್ಚಾದ ವಿಜೃಂಭಣೆಯಿಂದ ನಡೆದಿರುತ್ತದೆ.—ಕಸಬಾ ವಾಸಿ ಅಮ್ಮಬ್ಬಾಬ್ಬೇರಿ ಎಂಬವರು ಬಟ್ಟೆ ಮಗ್ಗವನ್ನು ತಮ್ಮ ಸ್ವಂತ ಖರ್ಚಿನಿಂದ ಇಟ್ಟು ಕೆಲಸನಡಿಸುತ್ತಾ ಸುಮಾರು 4 ತಿಂಗಳ ಮೇಲಾಯಿತು. ಇಲ್ಲಿ ಕೈಗಾರಿಕೆ ಕೆಲಸವೇ ಇದುವರೆಗೂ ಇರಲಿಲ್ಲ. ಬಹು ಮೆಹನತ್ತು ಮಾಡಿ ಬೇರೆ ಕಡೆಯಿಂದ ನೆಯ್ಗೆಯವರನ್ನು ಕರಸಿ ಮುತುವರ್ಜಿಯಿಂದ ನೆಯ್ಗೆ ಕೆಲಸವನ್ನು ಸಾಧ್ಯವಾದಷ್ಟು ಧಾರಾಳವಾಗಿಯೂ, ನಾಜೂಕಾಗಿಯೂ ನಿರ್ವಹಿಸಿದವರಲ್ಲಿ ಇವರೇ ಮೊದಲನೆಯವರು. ಸ್ಥಳಿಕ ಮಹನೀಯರು ಮತ್ತು ಸರಕಾರದವರು ಇವರಿಗೆ ಬೇಕಾದ ಸಲಹೆಗಳನ್ನು ಕೊಟ್ಟು ಪ್ರೋತ್ಸಾಹಪಡಿಸಿ ನೆಯ್ಗೆ ಕೆಲಸವನ್ನು ಅಭಿವೃದ್ಧಿಪಡಿಸುತ್ತಾರೆಂದು ನಂಬಿದೆ.—ಈ ತೀರ್ಥಹಳ್ಳಿಯಲ್ಲಿ ಮಾಮೂಲಾಗಿ ಇದು ನಾಟಿ ಕಾಲ. ಆದರೆ ಮಳೆ ಸರಿಯಾಗಿ ನಡಿಸದೆ ಕೆರೆ ಕಟ್ಟೆ ತುಂಬದೆ ನೀರಿನ ಅಭಾವದಿಂದ ನಾಟಿ ಕೆಲಸ ಪ್ರಾರಂಭವೇ ಇಲ್ಲ. ಈ ಮಲೆನಾಡಿಗೆ ಮಳೆ ಹೆಚ್ಚಾಗಿ ಹೊಯ್ದರೇನೇ ಭತ್ತದ ಫಸಲಿಗೆ ಅನುಕೂಲ.—ಈ ತಾಲ್ಲೋಕಿನಲ್ಲಿ ಬೆಳೆದ ಭತ್ತವು ಬೇರೆ ಕಡೆಗೆ ರಫ್ತಾಗುವದರಿಂದ ಇಲ್ಲಿ ಬಡಜನಗಳಿಗೂ, ಸಣ್ಣ ನೌಕರ

ಹೊಸ ಅಕ್ಕಿ ಅಮದಾಗಿ ಬರಬೇಕು. ಇಲ್ಲಿ ಅಕ್ಕಿ ಅರು ಸೇರಾಗಿದೆ. ಹಾಗೂ ಹೊಸ ರೂಲ್ಸ್ ಪ್ರಕಾರ ಹೊಸ ಅಳತೆ ಸಾಧನಗಳು ಇನ್ನೂ ಈಗಿಂಗೆ ಬಂದಿಲ್ಲ. ಎಲ್ಲಾ ಜಿನಸಿ ಧಾರಣೆಯೂ ಬಹಳ ಪ್ರಿಯವಾಗಿದೆ. ಈ ಸ್ಥಳದಲ್ಲಿ ಹಾಲು ಹೈನರು ಬೆಣ್ಣೆ ಮುಂತಾದ್ದಕ್ಕೆ ಬಹಳ ಅಭಾವ. ಸರಕಾರದವರ ಸಹಾಯ ಪಡೆದು ಯಾರಾದರೂ ಕರೋಹಳ್ಳಿಯನ್ನು ಏರ್ಪಡಿಸಿದರೆ ಜನಗಳಿಗೆ ಬಹಳ ಪ್ರಯೋಜನವಾದೀತು. ಈ ವರ್ಷನಲ್ಲಿ ಬಹು ಜನ ಸೆಮ್ಮದಿಗೆ ಆಹಾರಕ ವಾಗಿ ಸುಲಭದಲ್ಲಿ ಪೂರೈಸಬಹುದಾದ ಕೆಲವು ಏರ್ಪಾಡುಗಳನ್ನು ಮಾಡಿಸುವ ಹದಲ್ಲಿ ಮ್ಯುನಿಸಿಪಲ್ ಕೌನ್ಸಿಲವರು ಪ್ರಯತ್ನಪಟ್ಟಾರೆಂದು ನಿರೀಕ್ಷೆಯು ಳ್ಳದೆ.—ತೀರ್ಥಹಳ್ಳಿಯಿಂದ ಶಿವಮೊಗ್ಗಾಕ್ಕೆ ಇರುವ 30 ಮೈಲಿ ರೋಡು ಕೇವಲ ದುಃಸ್ಥಿತಿಯಲ್ಲಿದ್ದು, ಅನುದು ರಿಪ್ಪೇರಿಗೆ ಆತಂಕವಾಗಿದೆ. ಇದು ಮಳೆ ಜಾಡು ಪ್ರದೇಶ; ಮಳೆ ಹೆಚ್ಚಾದ್ದರಿಂದ ಗಾಡಿಗಳಿಗೆ ಈ ರೋಡಿನಿಂದ ತೊಂದರೆ ಜಾಸ್ತಿಯಾಗಿದೆ. ಅನುದು ರಿಪ್ಪೇರಿ ಜಾಸ್ತಿ ಇರುವದರಿಂದಲೂ, ತೀರಿನ ಹೊಡೆತ ದಿಂದಲೂ ರಸ್ತೆ ಕೆಡತಕ್ಕದ್ದು ಏನಾದ ಕಾರಣವಲ್ಲ. ಕಂಟ್ರಾಕ್ಟರು ಮತ್ತು ಸಂಬಂಧಪಟ್ಟ ಅಧಿಕಾರಸ್ಥರುಗಳ ಲೋಪದಿಂದ ಕೆಡತಕ್ಕದ್ದೆಂತ ದೃಢವಾಗಿ ಹೇಳಬಹುದು. ಅವೇಳ ಅಧಿಕಾರ ದೃಷ್ಟಿಗೆ ಬಿದ್ದರೂ ಈ ರೋಡು ಹೀನಸ್ಥಿತಿ ಯಲ್ಲಿರುವದು ಶೋಚನೀಯವಾಗಿದೆ.

ಮುಳವಳ್ಳಿ.—ಈಗ್ಗೆ 3 ವಾರದಿಂದ ಮೋಡವಾಗುತ್ತಾ ಏನಂತ ಗಾಳಿಗೆ ಪ್ರಾರಂಭವಾಗಿದೆ. ಜೋಳದ ಪೈರು ಕೆಲವು ಕಡೆ ಚೆನ್ನಾಗಿಯೂ, ಕೆಲವು ಸುಮಾರಾಗಿಯೂ ಇದೆ. ಗೋಣಾಯಿಗಳಿಗೆ ಹುಲ್ಲಿಗೆ ವಿಶೇಷ ಕಷ್ಟ.—ಜೂನ್ ಮಾಹೆ 3 ನೇ ತಾ. “ ಲಿಟರರಿ ಯೂನಿಯನ್ ” ಎಂಬ ವಾಚನಶಾಲೆಯ ಪ್ರಾರಂಭೋತ್ಸವವು ಬಹಳ ವಿಜೃಂಭಣೆಯಿಂದ ಟೌನ್ ಹಾಲ್ ಕಟ್ಟಡದಲ್ಲಿ ನಡೆಯಿತು. ಅಮಲ್ದಾರ್ ಮ॥ ವೆಂಕಟನಾರಣಯ್ಯನವರು ಅಗ್ರಾಸನವನ್ನು ವಹಿಸಿ, ಬಹಳ ಸ್ವಾರಸ್ಯವಾದ ಉಪನ್ಯಾಸವಮಾಡಿ, ಈ ಕಾರ್ಯಕ್ಕೆ ಮುಂದಾಳಾಗಿ ನಿಂತಿದ್ದ ವಿದ್ಯಾರ್ಥಿ ಮಂಡಲಿಯನ್ನೂ ಪಾಠಕರನ್ನೂ ಬಹಳವಾಗಿ ಕೊಂಡಾಡಿದರು. ಅಮಲ್ದಾರರು ಅಧ್ಯಕ್ಷರಾಗಿಯೂ, ಮ॥ ಸುಬ್ಬರಾವ್ ಮಲ್ಲಪ್ಪಯ್ಯನವರು ಸೆಕ್ರಿಟರಿಯಾಗಿಯೂ ನೇಮಿಸಲ್ಪಟ್ಟರು.—ಕಳೆದ ಆಗಸ್ಟ್ ತಾ. 8 ರಲ್ಲಿ ಸಂತೆ ಯಲ್ಲಿ ನಡೆದ ಪಾರಾಮಾರಿ ಪೊಳದ್ವಮೆಯು ವಿಚಾರಣೆಯಾಗಿ ಕಳೆದ ತಾ. 9 ರಲ್ಲಿ ತೀರ್ಮಾನವಾಯಿತು. ಅಪರಾಧಿಗಳ ಪೈಕಿ 16 ಜನಕ್ಕೆ 1 ತಿಂಗಳ ಕಠಿಣ ಸಜಾ, 15 ರೂ. ಜುಲ್ಮಾನೆಯೂ; ಉಳಿದ 26 ಜನಕ್ಕೆ ತಲಾ 100 ರೂ. ಜುಲ್ಮಾನೆಯೂ ವಿಧಿಸಲ್ಪಟ್ಟಿತು. ಈ ಮೊಕದ್ದಮೆಯಲ್ಲಿ ಅನೇಕ ಗೌರವಸ್ಥರಾದ ವರ್ತಕರೂ ಸೇರಿರುತ್ತಾರೆ. ಈಚೆಗೆ ಅಪರಾಧಿಗಳೆಲ್ಲರೂ ಅಪೀಲ್ ಮಾಡಿಕೊಂಡು ಜಾಮೀನ್ ಮೇಲೆ ಬಿಡಲ್ಪಟ್ಟಿದಾರೆ. ನಮ್ಮ ಊರಿನಲ್ಲಿರುವ ಕೋಮುಗಳ ವೈಮನಸ್ಯವೇ ಆಗಾಗ್ಗೆ ಈ ರೀತಿ ಕಲಹಗಳಿಗೆ ಕಾರಣವಾಗಿರುತ್ತೆ.—ಜೂನ್ ತಾ. 30 ರಲ್ಲಿ ಬೆಳಕವಾಡಿಯಲ್ಲಿ ಒಬ್ಬ ಕುರುಬಗೌಡನು ತನ್ನ ಹೆಂಡತಿ ವ್ಯಭಿಚಾರ ಮಾಡಿದಳೆಂದು ಅವಳನ್ನು ಕತ್ತುಮುರುಕಿ ಕೊಂದುಹಾಕಿ ಅರ್ಜಿ ಜಾನಹಳ್ಳಿ ಪಾಲ್ಕಿ ಎಡವಾನುಹಳ್ಳಿಗೆ ಹೊರಟುಹೋದನು. ಈ ಖೂನಾದ ಸಂಗತಿ ನಮ್ಮ ಅಮಲ್ದಾರ್ರಿಗೆ ತಿಳಿದಾಗ ಅವರು ತಲಾಷ್‌ಮಾಡಿ ಅಪರಾಧಿಯನ್ನು ಪತ್ತೆ ಮಾಡಿ ತಂದಿರುತ್ತಾರೆ. ಪೊಲೀಸ್ ಸೂಪರೇಂಟರು ದಯಮಾಡಿ ತನಿಖೆಮಾಡಿಕೊಂಡು ನೆನ್ನೆ ಪ್ರಯಾಣಮಾಡಿದರು.—ತಾ. 4 ರಲ್ಲಿ ಪೇಟೆಯಿಂದ ಕೋಟೆ ಗರ್ಲ್ಸ್ ಸ್ಕೂಲಿಗೆ ಬರುತ್ತಿದ್ದ ಮಂಕಿಟ್ಟನ ಮಗಳು ಚೋರಮ್ಮನೆಂಬ 7 ವರ್ಷದ ಬಾಲಕಿಯನ್ನು ಚಿಕ್ಕ ಉರುಫ್ ಸಣ್ಣಿ ಎಂಬುವಳು ಕರೆದುಕೊಂಡುಹೋಗಿ ಆ ಬಾಲಕಿಯ ಕೊರಳಲ್ಲಿದ್ದ ಹನುಮಂತನ ತಾಳಿಯನ್ನು ತೆಗೆದುಕೊಂಡದ್ದು ಪತ್ತೆ ಆಗಲು ಅಮಲ್ದಾರ್ರು ಅವಳಿಗೆ ಮೂರು ತಿಂಗಳ ಕಠಿಣ ಸಜಾ ವಿಧಿಸಿದರು.

ಸುಖಕರ, ಆನಂದ, ಬಹಳ ಅವಶ್ಯ.

ಈಗ ತಾನೇ ಕಂಡುಹಿಡಿದಿದೆ.

ಜಪಾನ್ ರಾಜ್ಯದಲ್ಲಿ ನೂರಾರು ವರುಷಗಳಿಂದ ಉಪಯೋಗದಲ್ಲಿದೆ.

ಸೆಂತಾನ

ಬೆಳ್ಳಿಯ ಹಾಳೆ ಸುತ್ತಿದ ಮುತ್ತುಗಳು.

(1) ಮನಸ್ಸಿಗೆ ಹರ್ಷವನ್ನೂ ಉಲ್ಲಾಸವನ್ನೂ ಕೊಟ್ಟು ಜೀರ್ಣಶಕ್ತಿಯನ್ನುಂಟುಮಾಡುವುದು.

(2) ಪಾಡುವವರಿಗೆ ವರಪ್ರಸಾದವಾದದ್ದು.

(3) ಬಾಯಿ ದುರ್ಗಂಧ, ಗಂಟಲು ಗಾರೆನ್ನುವುದು, ಉಬ್ಬಸ, ಸಮುದ್ರಯಾನದ ಬುಗುಪ್ಸೆ, ಈ ಮೊದಲಾದವನ್ನು ಹುಟ್ಟದಂತೆ ಅಡ್ಡಿಮಾಡುತ್ತದೆ.

(4) ತಾಂಬೂಲದೊಡನೆ ಸೇವಿಸುವುದಕ್ಕೆ ಅತ್ಯಂತ ಹಿತಕರವಾಗಿದೆ. [73–16]

ಒಂದು ಸಲ ಪರೀಕ್ಷೆಮಾಡಿದಲ್ಲಿ ಯಾವಾಗಲೂ ಒಂದು ಪೊಟ್ಟಣ ಇದ್ದೇ ತೀರಬೇಕೆಂದು ನೀವೇ ನಿಶ್ಚಯಿಸುವಿರಿ.

ಮುತ್ತಿನಂತಿರುವ	45	ಮಾತ್ರೆ ಉಳ್ಳ ಪೊಟ್ಟಣಕ್ಕೆ	ಕ್ರಯ	2	ಆಣೆ.
,,	95	,, ,,	,,	4	,,
,,	200	,, ,,	,,	7	,,
,,	300	,, ಸುಂದರವಾದ ಟಿನ್ ಡಬ್ಬಾ		9	,,
,,	80	,, ,,	,,	4	,,
,,	100	,, ಬಾಟ್ಲಿಯಲ್ಲಿ		4½	,,

ಈ ಕ್ರಯದಷ್ಟು ಸ್ಟಾಂಪನ್ನೂ, ಅಂಚೆ ವೆಚ್ಚಕ್ಕೆ ಜಾಸ್ತಿ ಒಂದಾಣೆಯನ್ನೂ ಸೇರಿಸಿ ಕಳುಹಿಸಬೇಕು. ಕಾಗದಪತ್ರವನ್ನೂ ವಿಳಾಸಗಳನ್ನೂ ನಮಗೆ ಇಂಗ್ಲೀಷಿನಲ್ಲೇ ಬರೆಯತಕ್ಕದ್ದು.

ನಮ್ಮ ವಿಳಾಸ—ಸೆಂತಾನ ಡಿಪೋ,
ಮಾರ್ಸೂನ್ ಬಿಲ್ಡಿಂಗ್, ಪ್ರಿನ್ಸೆಸ್ ಸ್ಟ್ರೀಟ್,
ಬೊಂಬಾಯಿ 2;
ಅಥವಾ, ಬಿ. ಸಿ. ಷಾ ಕಂಪೆನಿ,
509 ಮಿಂಟ್ ಬೀದಿ, ಮದರಾಸ್.

ಬೆಲೆಯುಳ್ಳ ಬಾಳಿಕೆ ಬರುವ ವಾಚ್! ಸಾಧ್ಯವಾದ ವಾಚ್!!

ಸಿಸ್ಟಂ ಲೀವರ್ ವಾಚ್.

ಇದರ ಕ್ರಯ ಎಂದಿಗೂ ಕಡಿಮೆಯಾಗದೆ ಸುಂದರವಾದ ವಾಚ್ ಸರಪಣಿ ಸಮೇತ 8 ರೂಪಾಯಿ ಮಾತ್ರ. 5 ವರುಷಗಳ ಖಾತ್ರಿ ಗ್ಯಾರೆಂಟಿ.

ಸ್ವಾಮಿ, ಈ ವಾಚ್ ನೂತನವಾದದ್ದು. ಅಂದರೆ ಶ್ರೇಷ್ಠವಾದ ಲೀವರ್ ಕೆಲಸದಿಂದ ತಯಾರಾದದ್ದು. ಬಲವುಳ್ಳ ಚಕ್ರಗಳಿಂದ ತಯಾರಾದದ್ದು. ಗಂಭೀರವಾದ ಘಂಟೆ ಮತ್ತು ಮಿನಿಟ್‌ಗಳು. ರಮಣೀಯವಾದ ನಮೂನೆ. ತಲೆಯಲ್ಲಿಯೇ ಬೀಗ, ಮಣ್ಣು ಧೂಳು ಸೇರದಂತೆ ಒಳಗೂ ಸಹ ಗ್ಯಾಸ್ ಕೋವರ್ (ಕನ್ನಡಿ ಮುಚ್ಚಳ) ಉಳ್ಳದ್ದು. ಪರಂಪರೆ ಅಂದರೆ ಅನೇಕ ವರುಷಗಳ ವರಿಯಂತರ ಬಾಳಿಕೆ ಬರುವಂಥಾದ್ದು. ಇದಕ್ಕೆ ಯಾವ ವಿಧವಾದ ಬಹುಮಾನವೂ ಇಲ್ಲ. ಯಾಕೆಂದರೆ ವಾಚ್ ಬಹು ಶ್ರೇಷ್ಠವಾದದ್ದು. ಮನಾಸ್ಸು ಒಪ್ಪದಲ್ಲಿ ಹಣ ವಾಪಸ್ ಮಾಡಲ್ಪಡುತ್ತೆ. ನಂಬಿಕೆಯುಳ್ಳ ವಾಚ್. [145-1] ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.

ವಿಳಾಸ—ಟಿ. ಆರ್. ವೆಂಕಟರಮಣ ಅಂಡ್ ಕಂಪೆನಿ,
ನಂ. 7 ಕೋಪ್ ವೆಂಕಟಾಚಲಯ್ಯರ್ ಬೀದಿ, ಮದರಾಸು.

ನೋಟೀಸು.

ಮೈಸೂರು ಬ್ಯಾಂಕ್, ಲಿಮಿಟೆಡ್.

ಸನ್ 1914 ನೇ ಜೂಲೈ ತಾ. 1 ರಿಂದ ಆಚೆಗೆ ಸೇವಿಂಗ್ಸ್ ಬ್ಯಾಂಕ್ ಲೇವಾದೇವಿಯನ್ನು ಹೊಸದಾಗಿ ಯಾರ ಹೆಸರಿನಲ್ಲೂ ಅಂಗೀಕರಿಸಿ ಪ್ರಾರಂಭಮಾಡುವುದಿಲ್ಲ; ಆದರೆ ಅದಕ್ಕೆ ಪ್ರತಿಯಾಗಿ ಡೈರೆಕ್ಟರುಗಳು ಶೇಕಡಾ ವರುಷಕ್ಕೆ 4 ರೂಪಾಯಿ ಬಡ್ಡಿಯುಳ್ಳ “ ಪ್ರಿಫರೆನ್ಷಲ್ ಡಿಪಾಜಿಟ್ ” ಎಂಬ ಹೊಸ ತರಹಾ ಲೇವಾದೇವಿಯನ್ನು ಪ್ರಾರಂಭಮಾಡಬೇಕೆಂದು ಗೊತ್ತುಮಾಡಿದಾರೆ.

ಈ “ ಪ್ರಿಫರೆನ್ಷಲ್ ಡಿಪಾಜಿಟ್ ” ಎಂಬ ಖಾತೆಯ ನಿಬಂಧನೆಗಳೇನೆಂದರೆ:—.

1. ಡಿಪಾಜಿಟ್‌ದಾರರು ತಿಂಗಳಿಗೆ 5 ರೂಪಾಯಿಗೆ ಕಮ್ಮಿ ಇಲ್ಲದೆ ಪಾವತಿ ಮಾಡಬೇಕು. ಇವಕ್ಕೆ ವರುಷಕ್ಕೆ ಶೇಕಡಾ 4 ರೂಪಾಯಿನಂತೆ ಚಕ್ರಬಡ್ಡಿಯನ್ನು ಆರು ತಿಂಗಳಿಗೊಂದಾವರ್ತಿ ಅಂದರೆ ಜೂನ್ ತಾರೀಖು 30 ಮತ್ತು ಡಿಸೆಂಬರ್ ತಾರೀಖು 31 ಕ್ಕೆ ಲೆಕ್ಕಾಚಾರಮಾಡಿ ಸೇರಿಸಲಾಗುತ್ತದೆ.

2. ಪ್ರತಿ ಅರ್ಧವರುಷಕ್ಕೂ ಬರುವ ಬಡ್ಡಿಯನ್ನು ಅಂದರೆ ಜೂನ್ ತಾ. 30 ಮತ್ತು ಡಿಸೆಂಬರ್ ತಾ. 31 ಕ್ಕೆ ಆಗುವಷ್ಟು ಬಡ್ಡಿಯನ್ನು ಅಸಲ್ ಹಣಕ್ಕೆ ಸೇರಿಸಿ ಅದರ ಕೂಡ ಪಾವತಿ ಆಗುವಂತೆ ತೋರಿಸಲಾಗುತ್ತೆ. ಮತ್ತು ಫಿಕ್ಸೆಡ್ ಡಿಪಾಜಿಟ್ಟುಗಳ ಬಡ್ಡಿ ಪಾವತಿ ಆಗುವಂತೆ ಈ ಬಡ್ಡಿಯನ್ನು ಪಾವತಿ ಮಾಡುವುದಿಲ್ಲ.

3. ಡಿಪಾಜಿಟ್‌ದಾರರು ಆರು ತಿಂಗಳ ತನಕ ಡಿಪಾಜಿಟ್‌ದಾರರಾಗಿದ್ದುಕೊಂಡೇ ಬಂದಿದ್ದಾಗ್ಯೂ ಅವರ ಡಿಪಾಜಿಟ್ ಹಣವು 30 ರೂಪಾಯಿ ಆಗದೆ ಹೋದರೆ ಆ ಘಸ್ಲಾಖೆಯಲ್ಲಿ ಅಂಥಾ ಅಸಲ್‌ಹಣಕ್ಕೆ ಬಡ್ಡಿ ಕೊಡಲ್ಪಡುವುದಿಲ್ಲ; ಆದರೆ ಅಸಲ್‌ಹಣವು 30 ರೂಪಾಯಿ ಅಥವಾ ಇದಕ್ಕಿಂತ ಹೆಚ್ಚಾಗಿರುವ ಸಂದರ್ಭಗಳಲ್ಲೆಲ್ಲಾ ಅಂಥ ಅಸಲ್‌ಹಣಕ್ಕೆ ಬಡ್ಡಿ ದಾಖಲ್ಮಾಡಲಾಗುತ್ತೆ.

4. ಡಿಪಾಜಿಟ್ಟುಗಳನ್ನು ವಾಪಸುಪಡೆಯಬೇಕಾದರೆ ಮೊದಲು 3 ತಿಂಗಳ ನೋಟೀಸ್ ಕೊಡಬೇಕು; ಆದರೆ ಆ ರೀತಿ ಬಂದ ನೋಟೀಸಿನ ತಾರೀಖಿನಿಂದ ಶೇಕಡಾ 3 ರಂತೆ ಬಡ್ಡಿ ಕೊಡಲಾಗುತ್ತೆ.

5. ಡಿಪಾಜಿಟ್‌ದಾರನು (ದಾರಳು) ಕಾಲವಾದ ಪಕ್ಷದಲ್ಲಿ ಡಿಪಾಜಿಟ್ಟನ್ನೂ ಬಡ್ಡಿಯನ್ನೂ ಪೂರ್ತಾ ಆತನ ಅಥವಾ ಆಕೆಯ ವಾರಸ್‌ದಾರರಿಗೆ ಪಾವತಿ ತಕ್ಷಣವೇ ಮಾಡಲಾಗುತ್ತೆ; ಇದಕ್ಕೆ ಸಾಮಾನ್ಯವಾಗಿ ಕೊಡಬೇಕಾದ ನೋಟೀಸ್ ಅಗತ್ಯವಿಲ್ಲ. ಹಾಗಿಲ್ಲದ ಪಕ್ಷದಲ್ಲಿ ಆ ಹಣವನ್ನೆಲ್ಲಾ ಬ್ಯಾಂಕಿನಲ್ಲೇ ಇಟ್ಟುಕೊಂಡು ಮೃತನ ಅಥವಾ ಮೃತಳ ವಾರಸ್‌ದಾರರಿಗೆ ಬಡ್ಡಿಯನ್ನು ಮೂರು ತಿಂಗಳಿಗೊಂದಾವರ್ತಿ ಅಪೇಕ್ಷಿಸಿದಾಗ್ಯೂ ಪಾವತಿ ಮಾಡುತ್ತಾರೆ. ಆದರೆ ಅಂಥಾ ವಾರಸ್‌ದಾರರ ಹೆಸರನ್ನು ಡಿಪಾಜಿಟ್‌ದಾರರು ಮೊದಲೇ ಬ್ಯಾಂಕಿನಿಂದ ಕೊಡೋಣಾಗುವ ಫಾರಮಿನಲ್ಲಿ ಬರೆದುಕೊಟ್ಟು, ಆ ಹೆಸರು ಬ್ಯಾಂಕಿನ ಪುಸ್ತಕಗಳಲ್ಲಿ ಕ್ರಮವಾಗಿ ದಾಖಲಾಗಿರಬೇಕು.

6. ಡಿಪಾಜಿಟ್‌ದಾರರು ತಮ್ಮ ಹಣವನ್ನು ಅಥವಾ ಅದರ ಒಂದು ಅಂಶವನ್ನು ಅದು ಸಂಪೂರ್ಣವಾಗುವುದಕ್ಕೆ ಮೊದಲೇ ವಾಪಸ್ ಪಡೆಯಬೇಕಾಗಿದ್ದಲ್ಲಿ ಅಂಥಾ ಹಣಕ್ಕೆ ಬ್ಯಾಂಕಿನ ಬ್ರಾಂಚು, ಅಥವಾ ಏಜನ್ಸಿಯಲ್ಲಿ ಆ ಸಮಯದಲ್ಲಿ ಜಾರಿಯಲ್ಲಿರುವ ಡಿಸ್ಕೌಂಟ್ ದರದಂತೆ ವಜಾ ಮಾಡಿಕೊಳ್ಳಲಾದೀತು. ಅಥವಾ ಅಂಥಾ ಡಿಪಾಜಿಟ್ಟಿನ ಮೇಲೆ ಸಾಧ್ಯವಾಗುವಷ್ಟು ಹಣವನ್ನು ಬ್ಯಾಂಕಿನ ಚಾಲ್ತಿ ಬಡ್ಡಿ ದರದ ಮೇಲೆ ಅಡ್ವಾನ್ಸು ಕೊಡಬಹುದು.

7. ಡಿಪಾಜಿಟ್‌ದಾರರಿಗೆ ಒಂದು ಪ್ಯಾಸ್ ಬುಕ್ಕು ಕೊಡಲ್ಪಡುವುದು. ಪ್ರತ್ಯೇಕವಾದ ರಸೀತಿ ಕೊಡಲ್ಪಡುವುದಿಲ್ಲವಾದಕಾರಣ ಹಣಕಳುಹಿಸುವಾಗಲೆಲ್ಲಾ ಡಿಪಾಜಿಟ್‌ದಾರರು ತಮ್ಮ ಪ್ಯಾಸ್ ಬುಕ್ಕನ್ನು ಬ್ಯಾಂಕಿಗೆ ಹಾಜರು ಪಡಿಸಬೇಕು. ಅದರಲ್ಲೇ ಡಿಪಾಜಿಟ್ ಹಣಗಳನ್ನೆಲ್ಲಾ ಕ್ರಮವಾಗಿ ದಾಖಲ್ ಮಾಡಲಾಗುತ್ತೆ. ಇದಲ್ಲದೆ ಬಡ್ಡಿ ಲೆಕ್ಕಾಚಾರಮಾಡಿ ಸೇರಿಸುವುದಕ್ಕಾಗಿ ಪ್ರತಿ ಘಸ್ಲಾಖೆಯಲ್ಲೂ ಅಂದರೆ ಜೂನ್ ತಾ. 30 ಕ್ಕೂ, ಡಿಸೆಂಬರ್ ತಾ. 31 ಕ್ಕೂ ಪ್ಯಾಸ್ ಬುಕ್ಕನ್ನು ಬ್ಯಾಂಕಿಗೆ ಕಳುಹಿಸಬೇಕಾಗುತ್ತದೆ.

8. ಹಣ ವಾಪಸ್ ಪಡೆಯ ಬೇಕಾದಾಗ ಪ್ಯಾಸ್ ಬುಕ್ಕನ್ನು ಬ್ಯಾಂಕಿಗೆ ಹಾಜರುಮಾಡುವುದೇ ಡಿಪಾಜಿಟ್‌ದಾರನ ಸರಿಯಾದ ಸಮ್ಮತಿ ಅಧಿಕಾರವೆಂದು ಎಣಿಸಲ್ಪಡುತ್ತದೆ.

9. ಈ ಡಿಪಾಜಿಟ್ಟುಗಳ ಕ್ರಮಗಳನ್ನು ಬದಲಾವಣೆಮಾಡುವ ಹಕ್ಕು ಬ್ಯಾಂಕು ವಹಿಸಿರುತ್ತದೆ. ಮತ್ತು ಕಾಗದದ ಮೂಲಕವೋ ಅಥವಾ ಬಹಿರಂಗವಾದ ಪ್ರಕಟನೆಯ ಮೂಲಕವೋ ಎರಡು ತಿಂಗಳ ನೋಟೀಸನ್ನು ಡಿಪಾಜಿಟ್‌ದಾರರಿಗೆ ಕೊಟ್ಟು ಡಿಪಾಜಿಟ್ಟುಗಳನ್ನು ವಾಪಸ್ ಪಾವತಿಮಾಡುವ ಅಧಿಕಾರವೂ ಬ್ಯಾಂಕಿಗೆ ಉಂಟು.

10. ಡಿಪಾಜಿಟ್‌ದಾರರು ತಮ್ಮ ಮಿಸ್ತಿ ಹಣಗಳನ್ನು ಬ್ಯಾಂಕಿನ ಯಾವ ಏಜನ್ಸಿಗಾಗಲಿ ತಲುಪಿಸುವಂತೆ ಯಾವ ಖರ್ಚೂ ಇಲ್ಲದೆ ಯಾವ ಬ್ರಾಂಚಿಗಾಗಲಿ, ಏಜನ್ಸಿಗಾಗಲಿ ಪಾವತಿಮಾಡಬೇಕೆಂದು ಕಟ್ಟಬಹುದು.

ಡಬ್ಲಿಯು ಸಿ. ರೋಸ್,
ಮ್ಯಾನೇಜರ್.

[150–1]

1915 ನೇ ಲೋ.ಸೆ. ಟೆಕಸ್ಟ್, ವ್ಯಾಕರಣ ಪ್ರಶ್ನೋತ್ತರ

ಪದ್ಯ ಮತ್ತು ಪಠನಗ್ರಂಥಗಳಲ್ಲೂ ಶಬ್ದಾದರ್ಶದಲ್ಲೂ ಮುಖ್ಯ ಪ್ರಶ್ನೆಗಳು, ಉತ್ತರಗಳೂ ಬರೆಯಲ್ಪಟ್ಟು, ಜೂಲೈ 15 ಕ್ಕೆ ಬಕರಿಗೆ ಸಿದ್ಧವಾಗುತ್ತದೆ. ಕ್ರಯ 4 ಆಣೆ. ವಿಳಾಸ—ಕೆ. ಆರ್. ನರಸಿಂಹಯ್ಯ,
[148-1] ಕನ್ನಡ ಪಂಡಿತ, ಹೈಸ್ಕೂಲ್, ಚಿಕ್ಕಬಳ್ಳಾಪುರ.

ಹೊಸ ಏರ್ಪಾಡನ್ನು ಓದಿ ನೋಡಿ ಲಾಭಪಡೆಯಿರಿ.

ಕಣ್ಣು ಇಲ್ಲದಿದ್ದರೆ ಕಲಿಯುಗವೇ ಇಲ್ಲ!



ಭಾರೀಕ್ರಯದ ಕನ್ನಡಕಗಳು ಕ್ರಯ ರೂ. 3-8-0. ಸ್ಫಟಿಕದ ಕನ್ನಡಕವನ್ನು ಉಪಯೋಗಿಸಿ ನಿಮ್ಮ ದೃಷ್ಟಿಯನ್ನು ಕಾಪಾಡಿಕೊಳ್ಳಿರಿ. ಅಲ್ಪಕ್ರಯದ ಕನ್ನಡಕಗಳು ದೃಷ್ಟಿಯನ್ನು ಹೋಗಲಾಡಿಸಿ ಕಾಲಕ್ರಮೇಣ ವ್ಯಾಧಿಯನ್ನುಂಟು ಮಾಡುತ್ತೆ. ಆದಕಾರಣ ಅವುಗಳನ್ನು ಉಪಯೋಗಿಸಬೇಡಿರಿ. ನಮ್ಮಲ್ಲಿ ಸ್ಫಟಿಕದ ಕನ್ನಡಕಗಳು ಕ್ರಯಕ್ಕೆ ದೊರೆಯುತ್ತೆ. ಬೇಕಾದವರು ಬರೆದರೆ ಎಲ್ಲಾ ತರಹದ ಮತ್ತು ಎಲ್ಲಾ ನಂಬರಿನ ಕನ್ನಡಕಗಳಿರುವ ಭಾರೀಕ್ರಯದ ಪಟ್ಟಿಗೆ ಒಂದನ್ನು ಉಚಿತವಾಗಿ ಕಳುಹಿಸುತ್ತೇವೆ. ಬಾಕೀ ವಿಷಯವೆಲ್ಲಾ ನಿಮ್ಮ ದರಖಾಸ್ತು ಬಂದಮೇಲೆ ಬರೆದು ತಿಳಿಸುತ್ತೇವೆ [139-2]

ವಿಳಾಸ.—ಸೀಲಹರ್ ಅಂಡ್ ಬ್ರದರ್ಸ್,
ಎಸ್. ಎಂ. ಕೋಯಿಲ್ ಬೀದಿ, ತಿರುವಲ್ಲಿಕ್ಕೇಣಿ, ಮದರಾಸು.

ವಾಚಕ ಮಹಾಶಯರೇ! ಈ ಕೆಳಗೆ ಕಂಡ ಆಭರಣಗಳನ್ನು ಆಸ್ಟ್ರೇಲಿಯಾ ದೇಶದ ಬೆಳ್ಳಿ ಕಂಚಿನಿಂದ ತಯಾರಿಸಿರುತ್ತೆ. ಇವರ ರಂಗು ಎಷ್ಟು ವರುಷಗಳಾದರೂ ಕೆಡುವದಿಲ್ಲ. ಇದು ಸರ್ವರಿಗೂ ಧರಿಸಿಕೊಳ್ಳುವದಕ್ಕೆ ಲಾಯಖಾಗಿದ್ದು. ಇವಕ್ಕೆ ಏಜಂಟರುಗಳು ಬೇಕು. ಸಂಬಳ ತಿಂಗಳಿಗೆ ರೂ. 15. ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆಯಿರಿ.

ಸುಂದರವಾದ ಕಾಲುಕಡಗ.

ದೊಡ್ಡವರಿಗೆ	ಚಿಕ್ಕವರಿಗೆ	ಹುಡುಗರಿಗೆ	ಮಕ್ಕಳಿಗೆ
1-8-0	1-3-0	0-14-0	0-10-0

ಸುಂದರವಾದ ಡಾಬು (ವಡ್ಯಾಣ).

ದೊಡ್ಡವರಿಗೆ	ಚಿಕ್ಕವರಿಗೆ	ಹುಡುಗಿಯರಿಗೆ
1-6-0	1-3-0	0-15-0

ಸುಂದರವಾದ ಪುದುಚೇರಿ ರುಳಿ (ಕಾಲುಗೊಲಸು).

ದೊಡ್ಡವರಿಗೆ	ಚಿಕ್ಕವರಿಗೆ	ಹುಡುಗರಿಗೆ	ಮಕ್ಕಳಿಗೆ
1-14-0	1-10-0	1-6-0	1-4-0

ತಾಜಾಕಲಂ.—ಒಂದು ರೂಪಾಯಿಗೆ ಕಮ್ಮಿ ಇಲ್ಲದೆ ತರಿಸಿಕೊಳ್ಳುವವರಿಗೆ ಸುಂದರವಾದ ಎಲೆಕ್ಟ್ರಿಕ್ ಚಿನ್ನದ ಮೈಸೂರು ಕಪ್ಪವನ್ನು ಪ್ರತಿ ಒಂದು ರೂಪಾಯಿಗೂ 1 ಕಪ್ಪವನ್ನು ಉಚಿತವಾಗಿ ಕೊಡುತ್ತೇವೆ. ಮತ್ತು ರೂಪಾಯಿಗೆ ಎರಡು ಆಣೆ ಕಮಿಷನ್ ಕೊಡುತ್ತೇವೆ.

ವಿಳಾಸ—ಎಸ್. ಎನ್. ಮೂರ್ತಿ ಕಂಪೆನಿ,
[139-2] ತಿರುವಲಕ್ಕೇಣಿ, ಮದರಾಸು

ಅಲ್ಪವೆಚ್ಚ. ಅನುಭವಸಿದ್ಧವಾದ ಫಲವಧಿಕ.

ವನಸ್ಪತಿ ಕಾಫೀಪುಡಿ.

ಸರ್ವರಿಗೂ ಬೇಕಾದುದು.

ಚಿತ್ರದುರ್ಗದ ಪ್ರಸಿದ್ಧ ವೈದ್ಯರಾದ ಗತಿಸಿದ ನಮ್ಮ ತಂದೆ ಪಂಡಿತ ವೆಂಕಟರಮಣಪ್ಪನವರ ಮತ್ತು ನನ್ನ ಅನುಭವದಿಂದ ಶಾಸ್ತ್ರೋಕ್ತರೀತ್ಯಾ ಈ ಕಾಫೀಪುಡಿಯು ತಯಾರಿಸಿರುತ್ತೆ. ಇದರಲ್ಲಿ ನೆಲವಾಗಳಿ, ಅಶ್ವಗಂಧಿ ಮುಂತಾದ ಅನೇಕ ಮೂಲಿಕೆಗಳನ್ನೇ ಸೇರಿಸಿರುತ್ತೆ. ಕಾಫೀ ಬೀಜದಿಂದ ತಯಾರ್ ಮಾಡಲ್ಪಟ್ಟ ಪುಡಿಗಿಂತಲೂ, ಈ ನಮ್ಮ ಪೌಡರ್ ಅತ್ಯುತ್ತಮವಾದುದೆಂತ ಅನೇಕ ಜನ ದೊಡ್ಡ ಮನುಷ್ಯರೂ, ಪಂಡಿತರೂ ಅಭಿಪ್ರಾಯಪಟ್ಟಿರುವುದರ ಮೇಲೆ ಇದನ್ನು ಈಗ ಬಕರಿಗೆ ಸಿದ್ಧಗೊಳಿಸಲಾಗಿದೆ. ಈ ಕಾಫೀಪುಡಿಯ ಸೇವನೆಯಿಂದ ವಾತ ಪಿತ್ತ ಶ್ಲೇಷ್ಮಗಳಿಂದುಂಟಾಗುವ ಶಿರೋ ರೋಗಗಳು, ಉದರ ಸಂಬಂಧವಾದ ರೋಗಗಳು, ಅನೇಕ ಬಗೆಯ ಹೊಟ್ಟೆಶೂಲೆಗಳು, ಎಲ್ಲಾ ಬಗೆಯ ಜ್ವರಗಳು, ಅಜೀರ್ಣ ದೋಷವೂ ಪರಿಹರವಾಗುವದಲ್ಲದೆ, ದೇಹಾರೋಗ್ಯವನ್ನು ಸಮಾಧಾನಸ್ಥಿತಿಯಲ್ಲಿಟ್ಟುಕೊಂಡಿರುತ್ತದೆ. ವಿದ್ಯಾರ್ಥಿಗಳಿಗೂ, ಲಾಯರುಗಳಿಗೂ, ರುಳಿತು ಕೆಲಸಮಾಡತಕ್ಕವರಿಗೂ, ಸಕೀರ್ಟು ತಿರುಗುವವರಿಗೂ ಇದರ ಸೇವನೆಯಿಂದ ರಕ್ತಶುದ್ಧಿಯುಂಟಾಗಿ ಬುದ್ಧಿಕುಶಲತೆಯನ್ನೂ, ಚಟುವಟಿಕೆಯನ್ನೂ ಉಂಟುಮಾಡುತ್ತದೆ. ಮತ್ತು ಮೆದುಳನ್ನು ವೃದ್ಧಿಮಾಡಿ ಜ್ಞಾಪಕಶಕ್ತಿಯನ್ನು ಹೆಚ್ಚಿಸುತ್ತದೆ. ಈ ಕಾಫೀ ಪಾನಮಾಡುವಾಗ ಬಾಯಿಗೆ ಮಧುರವಾಗಿಯೂ, ಸುವಾಸನೆಯುಳ್ಳದ್ದಾಗಿಯೂ, ರುಚಿಯಾಗಿಯೂ ಇದ್ದು, ಮನಸ್ಸಿಗೆ ಉಲ್ಲಾಸವನ್ನುಂಟುಮಾಡುತ್ತದೆ. ಗರ್ಭಿಣಿಯರೂ ಸಹ ಇದನ್ನು ಸೇವಿಸುವದರಿಂದ ಅವರಿಗೂ, ಗರ್ಭದ ಶಿಶುವಿಗೂ ಆರೋಗ್ಯಭಾಗ್ಯವನ್ನು ಕಲ್ಪಿಸುತ್ತದೆ. ನಾವು ಹೆಚ್ಚಿಗೆ ವಿವರಿಸಿ ಹೊಗಳುವದಕ್ಕಿಂತಲೂ ವಾಚಕರು ಒಂದಾವರ್ತಿ ತರಿಸಿ ನೋಡಿ ಅನುಭವದಿಂದ ಈ ಪುಡಿಯ ಬಿಕರಿಗೆ ಪ್ರೋತ್ಸಾಹವನ್ನುಂಟುಮಾಡಬೇಕಾಗಿ ಸರ್ವರಿಗೂ ವಿನಯಪೂರ್ವಕ ಅರಿಕೆ ಮಾಡಿರುವೆನು. ಈಗ ಲೋಕದಲ್ಲಿ ಬಳಕೆಯಾಗಿರುವ ಕಾಫಿಯಂತೆಯೇ ಇದನ್ನೂ ಉಪಯೋಗಿಸಬೇಕು (ಅಂದರೆ, ಈ ಪುಡಿಯನ್ನು ಹಾಕಿದ ನಂತರ ಒಂದು ಕುದಿ ಕುದಿಯಬೇಕು). 1 ಸೇರಿನ ಡಬ್ಬಿಗೆ ಕ್ರಯ 1 ರೂಪಾಯಿ. ಅಂಚೇ ವೆಚ್ಚ ಬೇರೆ. ಹೆಚ್ಚಿಗೆ ತರಿಸಿಕೊಳ್ಳುವವರಿಗೆ ಒಂದು ಡಜನ್‌ಗೆ 1 ಡಬ್ಬಿ ಉಚಿತವಾಗಿ ಕೊಡಲ್ಪಡುತ್ತೆ.

ನಮ್ಮ ವಿಳಾಸ.—ವಿ. ತಿಮ್ಮಣ್ಣಪಂಡಿತ್, ನೇಟಿವ್ ಡಾಕ್ಟರ್,
[144–1] ಆರ್ಯಧರ್ಮವೈದ್ಯಶಾಲಾ, ಚಿತ್ರದುರ್ಗ.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1914 ನೇ ಇಸವಿ ಜೂನ್ 18 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ.

ಬೇಕು:—(1) ಷೇರು ಮೊಬಲಗು	ರೂ. 0,85,065
,, (2) ಡಿಪಾಜಿಟ್ಟುಗಳು	,, 15,12,361
,, (3) ಇತರೆ	,, 32,685
(ಅಣೆ, ಕಾಸು ಬಿಟ್ಟಿರುತ್ತೆ.)	ಜುಮ್ಲಾ ರೂ. 25,30,111

ಬೇಕು:—(1) ಕೈಯಲ್ಲಿರುವ, ಬ್ಯಾಂಕುಗಳಲ್ಲಿರುವ ಹಣ	ರೂ 6,39,145
,, (2) ಖಾತೆ ಮತ್ತು ಇತರ ಸಾಲಗಳು	,, 13,44,987
,, (3) ಡಿಸ್ಕೌಂಟು ಮಾಡಿದ ವಾಯಿದೆ ಹುಂಡಿಗಳು	,, 1,64,626
,, (4) ಇನ್‌ವೆಸ್ಟ್‌ಮೆಂಟುಗಳು	,, 2,01,000
,, (5) ಏಜನ್ಸಿಗಳಲ್ಲಿರುವ ಮೊಬಲಗು	,, 1,48,914
,, (6) ಬ್ಯಾಂಕಿನಲ್ಲಿರುವ ಸಾಮಾನುಗಳು	,, 8,345
,, (7) ಇತರೆ	,, 23,095
(ಅಣೆ, ಕಾಸು ಬಿಟ್ಟಿರುತ್ತೆ.)	ಜುಮ್ಲಾ ರೂ. 25,30,111

ಡಬ್ಲ್ಯು. ಸಿ. ರೋಜ್, ಮ್ಯಾನೇಜರ್.

ತುಮಕೂರು ವೆಸ್ಲಿಯನ್ ಮಿಷನ್ ಬಾಲಿಕಾ ಪಾಠಶಾಲೆಗಳು.

ಬಹುಮಾನ ವಿನಿಯೋಗವು.

ಈ ಪಾಠಶಾಲೆಗಳ ವಿದ್ಯಾರ್ಥಿನಿಯರಿಗೆ ಕಳೆದ ಮಾಹೆ 23 ನೇ ತಾ. ಮಂಗಳವಾರ ಬಹುಮಾನಗಳು ಹಂಚಲ್ಪಟ್ಟವು. ಡೆಪ್ಟಿ ಕಮಿಷನರ್ ಮ|| ಬಿ. ಟಿ. ಕುಮಾರಸ್ವಾಮಿ ನಾಯಕರವರು ಸಭೆಯ ಅಗ್ರಾಸನವನ್ನು ವಹಿಸಿದ್ದರು. ಪೊಲೀಸ್ ಸೂಪರಿಂಟ್‌ರವರು, ಮುನ್‌ಸಿಫರವರು, ಹೈ ಸ್ಕೂಲ್ ಹೆಡ್ ಮಾಸ್ಟರವರು, ಲಾಯರುಗಳು, ವೈಸ್ ಪ್ರೆಸಿಡೆಂಟರವರು, ಮ್ಯುನಿಸಿಪಲ್ ಕೌನ್ಸಿಲರುಗಳು ಮುಂತಾದ ದೊಡ್ಡಮನುಷ್ಯರು ಸಭೆಯನ್ನು ಅಲಂಕರಿಸಿದ್ದರು. ಸಭೆಯು ಪ್ರಾರಂಭವಾದ ಕೂಡಲೆ ಇಂಗ್ಲಿಷ್, ತೆಲುಗು, ತಮಿಳು, ಹಿಂದುಸ್ಥಾನಿ ಹಾಡುಗಳೂ, ಸಂಗೀತ ಸಾಹಿತ್ಯಗಳೂ, ಸಂಭಾಷಣೆಗಳೂ, ಉಪನ್ಯಾಸಗಳೂ, ಸಂಸ್ಕೃತ ರಿಸಿಟೇಷನ್ ಮೊದಲಾದವುಗಳೆಲ್ಲಾ ಬಹಳ ಸಮರ್ಪಕವಾಗಿಯೂ, ಸಭಿಕರ ಮನಸ್ಸನ್ನು ಆಕರ್ಷಿಸುವಂತೆಯೂ ಬಾಲಕಿಯರಿಂದ ನಡಿಸಲ್ಪಟ್ಟವು. ಪೇಟೆ ಮತ್ತು ಕೋಟೆ ಬಾಲಕಿಯರ ಪಾಠಶಾಲೆಗಳ ಹೆಡ್ ಮಾಸ್ಟರುಗಳಾದ ಮ|| ಟಿ. ಗುರುಚನ್ನಬಸವಯ್ಯನವರು ಮತ್ತು ಮ|| ಆರ್. ವೆಂಕಟರಾಯರು ಸ್ಕೂಲುಗಳ ರಿಪೋರ್ಟುಗಳನ್ನು ಓದಿದರು. ನಂತರ ಸಭಾಧ್ಯಕ್ಷರು ಈ ಪಾಠಶಾಲೆಗಳು ಬಹು ಕಾಲಕ್ಕೆ ಮುಂಚಿತವಾಗಿ ಸ್ಥಾಪಿಸಲ್ಪಟ್ಟವುಗಳೆಂದೂ, ಕಿಂಡರ್‌ಗಾರ್ಟನ್, ಡ್ರಿಲ್, ಸಂಗೀತ, ಹೊಲಿಗೆ ವಗೈರೆ ನವೀನ ವಿದ್ಯೆಗಳು ಈ ಪಾಠಶಾಲೆಯಲ್ಲಿ ಚೆನ್ನಾಗಿ ಬೋಧಿಸಲ್ಪಡುತ್ತಿವೆ ಎಂದೂ, ಮೈಸೂರು ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ವಿದ್ಯಾರ್ಥಿನಿಯರು ಈ ಪಾಠಶಾಲೆಗಳ ಮೂಲಕ ತೇರ್ಗಡೆ ಹೊಂದುತ್ತಾ ಬರುತ್ತಿರುವರೆಂದೂ, ಮಿಷನರಿ ದೊಡ್ಡಮನುಷ್ಯರು ಸ್ತ್ರೀ ವಿದ್ಯಾಭಿವೃದ್ಧಿಯಲ್ಲಿ ಧೀರರೆಂಬ ಕೀರ್ತಿ ಪಡೆದಿರುವರೆಂದೂ, ಅವರು ಜನರಲ್ಲಿ ತಿಳುವಳಿಕೆಯನ್ನುಂಟುಮಾಡಲು ತುಂಬಾ ಶ್ರಮಪಡುತ್ತಿದ್ದಾರೆಂದೂ, ಈ ಪಾಠಶಾಲೆಗಳ ಪೂರ್ಣ ಪ್ರಯೋಜನಗಳನ್ನು ತುಮಕೂರು ಪ್ರಜೆಗಳು ಹೊಂದಬೇಕೆಂದೂ, ಈ ಸ್ಕೂಲುಗಳ ಲೇಡಿ ಸೂಪರಿಂಟ್ ಮಿಸ್ ಪ್ಯಾಚೆಟ್ ರವರೂ ಹೆಡ್ ಮಾಸ್ಟರುಗಳೂ ತುಂಬಾ ಕಷ್ಟಪಟ್ಟು ಕೆಲಸಮಾಡುತ್ತಾ ಬಂದಿರುವರೆಂದೂ, ಇನ್ನು ಅನೇಕ ಸಂಗತಿಗಳನ್ನು ಕುರಿತು ಗಂಭೀರವಾದ ಭಾಷಣವನ್ನು ಮಾಡಿದರು. ಅನಂತರ ಎರಡು ಸ್ಕೂಲುಗಳ ಬಾಲಕಿಯರಿಗೆ ಮೈಸೂರು ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆಹೊಂದಿದ ಸರ್ಟಿಫಿಕೇಟುಗಳೂ, ಬಿಂದಿಗೆಗಳೂ ಬಹುಮಾನವಾಗಿ ಕೊಡಲ್ಪಟ್ಟದ್ದಲ್ಲದೆ ಇತರ ಬಾಲಕಿಯರಿಗೂ ಯೋಗ್ಯತಾನುಸಾರವಾಗಿ ಬಹುಮಾನಗಳು ಕೊಡಲ್ಪಟ್ಟವು. ಬಳಿಕ ರೆವ್. ಎಚ್. ಎಚ್. ನ್ಯೂಹಾಮ್ ದೊರೆಯವರು ಬಾಲಕಿಯರು ಶ್ರಮಪಟ್ಟು ವಿದ್ಯಾಭ್ಯಾಸಮಾಡುತ್ತಾ ಬರುತ್ತಿರುವದೂ, ಇಲ್ಲಿನ ಉಪಾಧ್ಯಾಯರುಗಳೂ ಮಿಸ್ ಪ್ಯಾಚೆಟ್ ರವರೂ ತುಂಬಾ ಕಷ್ಟಪಟ್ಟು ಕೆಲಸಮಾಡುತ್ತಾ ಬರುತ್ತಿರುವದೂ ಈ ಕೀರ್ತಿಗೆ ಮುಖ್ಯ ಕಾರಣಗಳೆಂದು ಮುಂತಾಗಿ ಉಪನ್ಯಾಸಮಾಡಿದರು. ತರುವಾಯ ಚಕ್ರವರ್ತಿಯವರ ಮತ್ತು ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನೆಗಳು ನಡೆದವು. ಪುಷ್ಪಮಾಲಿಕೆಗಳನ್ನು ಎಲ್ಲರಿಗೂ ಹಾಕಿದ ಮೇಲೆ ಸಂತೋಷದಿಂದ ತೆರಳಿದರು.

ಓರಿಯಂಟಲ್ ಗ|| ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು..............ರೂ. 4,45,00,000

ಕಂಪನಿಯಿಂದ ಪಾವತಿ ಆಗಿರುವದು ,, 4,00,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ.—ಮಿ|| ಎಂ. ಎಸ್. ರೆಟಿಲೊ, ಚೀಫ್ ಏಜೆಂಟ್, ಬೆಂಗಳೂರು; ಮ|| ಎಂ. ಎಸ್. ಸಂಜಪ್ಪನವರು ಅಥವಾ ಮ|| ವೆಂಕಟಪತಯ್ಯನವರು, ಕಂಪನಿ ಏಜಂಟರು, ಮೈಸೂರು; ಅಥವಾ

[194-40] ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ, ಮದರಾಸ್.

ಹಿಂದುಸ್ಥಾನ್ ಕೋಆಪರೇಟಿವ್ ಜೀವವಿಮೆ ಸಂಘ ಲಿ. ಹಿಂದುಸ್ಥಾನ್ ಕಟ್ಟಡಗಳು—ಕಲ್ಕತ್ತಾ.

ಕಂಪನಿಯ ಮೂಲಧನ (ಒಂದು ಕೋಟಿ ರೂಪಾಯಿ)	1,00,00,000
ಪಾವತಿಯಾದ ಮೊಬಲಗು	10,50,000
ವಸೂಲಾದ ಮೊಬಲಗು	87,00,000

ಈ ಕಂಪೆನಿಯಲ್ಲಿ ಪಾಲಿಸಿದಾರ್‌ರಿಗೆ ಬಹಳ ಕಮ್ಮಿಯಾದ ದರಗಳ ಪಟ್ಟಿಯನ್ನು ಮಾಡಿರುವುದು. 1912 ನೇ ಇಸ್ವಿಯ ಇಂಡಿಯಾ ಗವರ್ನಮೆಂಟಿನ ಜೀವವಿಮೆ ಕಂಪನಿಯ ಆಕ್ಟಿನ ಪ್ರಕಾರ ಸರ್ಕಾರದಲ್ಲಿ 2 ಲಕ್ಷ ರೂಪಾಯಿಗಳನ್ನು ಡಿಪಾಜಿಟ್ಟು ಮಾಡಲ್ಪಟ್ಟಿರುತ್ತೆ. ಮತ್ತು ಅನೇಕ ಮಹಾರಾಜರುಗಳು ಮುಂತಾದ ದೊಡ್ಡವರು ಪ್ರೆಸಿಡೆಂಟರಾಗಿರುವದರಿಂದ ಈ ಕಂಪನಿಯ ಅಭಿವೃದ್ಧಿ ಸ್ಥಿತಿಯನ್ನು ಪ್ರಕಟನೆ ಮಾಡುವುದಕ್ಕೆ ಸಂತೋಷವಾಗಿರುತ್ತದೆ.

ಸುಲಭವಾಗಿ ಹಣವನ್ನು ಪಾರ್ಟಿಯವರ ಮನೆಯಲ್ಲೇ ಜಾಗ್ರತೆ ಪಾವತಿಗೆ ಏರ್ಪಾಡು ಮಾಡಲ್ಪಡುತ್ತೆ. ಆದ್ದರಿಂದ ಪಾಲಿಸಿದಾರ್‌ರು ಮತ್ತು ಇದಕ್ಕೆ ಸೇರಿದ ಏಜಂಟ್ರುಗಳು ತುಂಬಾ ಅದೃಷ್ಟವಂತರೆಂಬುವದರಲ್ಲಿ ಸಂದೇಹವಿಲ್ಲ.

ಹೆಚ್ಚಿನ ವಿಷಯಗಳಿಗೂ, ಫಾರಂ ಮತ್ತು ಪ್ರಾಸ್‌ಪೆಕ್ಟಸುಗಳಿಗೂ ಕೆಳಗಿನ ವಿಳಾಸಕ್ಕೆ ಜಾಗ್ರತೆಯಾಗಿ ಬರೆಯಿರಿ. [243-30]

ವೆಂಕಟಾಚಲಂ ಅಂಡ್ ಸನ್ಸ್, ಚೀಫ್ ಏಜಂಟ್ರು,

166, ದೊಡ್ಡಪೇಟೆ, ಮೈಸೂರು.

S U. N. & Co., BENARES CITY, U. P.

ಸೊಗಸಾದ ಸರಕುಗಳು !! ದೊಡ್ಡ ಕಂಪೆನಿ !

ಈ ನಮ್ಮ ಕಂಪನಿಯಲ್ಲಿ ನೆಯ್ದು ತಯಾರಿಸುವ ಉತ್ತಮವಾದ ಬನಾರಸ್ ರೇಷ್ಮೆ ಜರೀ ಸೀರೆಗಳು, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ್ಟಿ, ಮುಗುಟ, ಜಗನ್ನಾಥ ಜಾಗಟೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಫುಟಗಳುಳ್ಳ ಕ್ಯಾಟಲಾಗ್ 1 ನ್ನು ಮತ್ತು 2 ವಿಶ್ವೇಶ್ವರ ಫಟಗಳನ್ನು ಇನಾಮಾಗಿ ಕಳುಹಿಸಲಾಗುವುದು. [69-16]

ಎಸ್. ಯು. ಎನ್. ಮತ್ತು ಕಂಪೆನಿ, ಕಾಶಿ.

ಶ್ರೇಷ್ಠವಾದ ವಾಚ್ ! ನೂತನವಾದ ವಾಚ್ ! ನಾಜೂಕಾದ ವಾಚ್ !

ಸ್ಟ್ರಿಂಗ್ ಪಾಕೆಟ್ ಲೀವರ್ ವಾಚ್.

ಇದರ ಕ್ರಯ 7 ಬಹುಮಾನಗಳ ಸಮೇತ ರೂ. 3–8–0 ಮಾತ್ರ.

ಏಳು ವರ್ಷಗಳ ಖಾತ್ರಿಯಾದ ಗ್ಯಾರಂಟಿ.



ಘನವಂತರೇ,

ಈ ನೂತನ ನಮೂನೆ ವಾಚ್ ಈಗ ತಾನೇ ಬಂದಿರುತ್ತೆ. ಪ್ರಪಂಚದಲ್ಲೆಲ್ಲಾ ಹೆಸರುವಾಸಿಯಾದ ಮತ್ತು ಶ್ರೇಷ್ಠವಾದ ಲೀವರ್ ಕೆಲಸದಿಂದಲೂ, ಬಲಿಷ್ಠವಾದ ಮತ್ತು ನಾಜೂಕಾದ ಯಂತ್ರ ಸಾಮಾನುಗಳಿಂದಲೂ ತಯಾರಾಗಿ ಬಂದಿರುತ್ತೆ. ಈಗ ತಾನೆ ಹೊಸದಾಗಿ ನಾವು ಪ್ರತ್ಯೇಕವಾಗಿ ತರಿಸಿರುತ್ತೇವೆ. ಗೌರ್ನಮೆಂಟು ಟೈಂಗೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದದ್ದು. ನಂಬಿಕೆಯಾಗಿ ದೀರ್ಘಕಾಲ ಅನೇಕ ವರ್ಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು. ಬಹು ರಮಣೀಯವಾದ ವಾಚ್. ಬರೀ ಮಾತುಗಳಿಂದಲೇನು ? ಪರಂತರ ಬಾಳಿಕೆ ಬರುವ ವಾಚ್ ಇದೇ. ಇದರ 7 ಬಹುಮಾನಗಳ ತಪಸೀಲ್:—(1) ಸುಂದರವಾದ ವಾಚ್ ಸರಪಣಿ, (2) ದಿಕ್ಕುಗಳನ್ನು ತೋರಿಸುವ ಉತ್ತರಮುಖಿ, (3) ವಾಚ್‌ಗೆ ಧೂಳು ಸೇರದಂತೆ ಭದ್ರಪಡಿಸುವ ತೊಗಲಿನ ಚೀಲ, (4) ಕುತ್ತಿಗೆಗೆ ವಾಚ್ ಸಂಗಡ ಧರಿಸಿಕೊಳ್ಳುವ ರೇಷ್ಮೆ ಧಾರ, (5) ವಾಚ್ ಪೆಟ್ಟಿಗೆ (ಬಹು ಸುಂದರವಾದದ್ದು), (6) ಪರಿಮಳವುಳ್ಳ ಸುವಾಸನೆ ಶೀಷೆ, (7) ಕರವಸ್ತ್ರ.

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.— [117-5]

ಟಿ. ಸೀತಾರಾಮ ಮೊದಲಿಯಾರ್, ನಂ. 3, ಕಂದಪ್ಪ ಮೊದಲಿ ಬೀದಿ, ತಿರುವಲ್ಲಿಕೇಣಿ, ಮದರಾಸು.

ನೂತನವಾಗಿ ತಯಾರಾಗಿ ಬಂದ ಮನೋಹ್ಲಾದವನ್ನುಂಟುಮಾಡುವ

ವಿಚಿತ್ರ ಎಲೆಕ್ಟ್ರಿಕ್ ಪಾಕೆಟ್ ದೀಪವು.

ಇದರ ಕ್ರಯ ದೀಪ 1 ಕ್ಕೆ ರೂ. 3–0–0 ಮಾತ್ರ.

ಎತ್ತಿದ ಕ್ಷಣವೇ ಆರಿಹೋಗುವ ದೀಪಗಳ ಡಾಂಭಿಕ ಪ್ರಕಟನೆಗಳನ್ನು ನೋಡಿ ಮೋಸಹೋಗದೀರಿ.

ಘನವಂತರೇ, ಈ ಯಂತ್ರದಿಂದ ನಾವು ಬೆಳಕು ಬೇಕಾದಾಗ ಇದರ ಗುಂಡಿ (ಬಟನ್) ಅಮುಕಿದಲ್ಲಿ ಕಾಂತಿಯುಳ್ಳ ಮತ್ತು ಅಧಿಕ ತೇಜಸ್ಸುಳ್ಳ ಬೆಳಕು

ಉಂಟುಮಾಡುತ್ತೆ. ರಾತ್ರಿ ಅಕಸ್ಮಾತ್ತು ಜರುಗುವ ಅಪಾಯಗಳಿಗೂ, ಪ್ರಯಾಣಿಕರಿಗೂ ವಿಶೇಷ ಸಹಕಾರಿಯಾದ ಆಶ್ಚರ್ಯ ದೀಪವು. ಬೆಂಕಿಕಡ್ಡಿ, ಎಣ್ಣೆ, ಲಾಂದ್ರ ಮುಂತಾದ್ದನ್ನು ಹುಡುಕಬೇಕಾದ ಕೆಲಸವಿಲ್ಲ. ಬೇಕಾದಾಗ ಅಮುಕಿದಲ್ಲಿ ತನ್ನಷ್ಟಕ್ಕೆ ತಾನೇ ಪ್ರಕಾಶ ಉಂಟಾಗುವದು. ಇದನ್ನು ಉಪಯೋಗಿಸುವ ಕ್ರಮ ಅಚ್ಚು ಪತ್ರಿಕೆಯನ್ನು ದೀಪದ ಜೊತೆಯಲ್ಲಿ ರವಾನಿಸುತ್ತೇವೆ. ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.

ನಮ್ಮ ವಿಳಾಸ—ಎನ್. ಎಂ. ಸ್ವಾಮಿ ಅಂಡು ಕಂಪೆನಿ,

[109-8] ನಂ. 44, ನಂಬಿಉಳಯ್ಯರ್ ಬೀದಿ, ಮದರಾಸು.

BRAHMAPPA TAVANAPPANAVAR,

Merchant & Commission Agent.

Agent to Messrs. Currimbhoy Ebrahim & Co's Mills, BOMBAY.

ನಾವು ಮುಂಬೈ ಮೆಸ್ಸರ್ಸ್ ಕರೀಂಬಾಯ್ ಇಬ್ರಾಹಿಂ ಅಂಡ್ ಕಂಪೆನಿಯವರ ಬಾಬತು, ಮೆಸ್ಸರ್ಸ್ ಫಜುಲ್ಬಾಯ ಮಿಲ್ಸ್ ಲಿಮಿಟೆಡ್ ಮುಂಬೈ, ದಿ ಕ್ರೆಸೆಂಟ್ ಮಿಲ್ಸ್ ಲಿಮಿಟೆಡ್ ಮುಂಬೈ, ಕರೀಂಬಾಯ್ ಮಿಲ್ಸ್ ಲಿಮಿಟೆಡ್ ಮುಂಬೈ, ದಿ ಇಂಡಿಯನ್ ಬ್ಲೀಚಿಂಗ್, ಡೈಯಿಂಗ್ ಅಂಡ್ ಪ್ರಿಂಟಿಂಗ್ ವರ್ಕ್ಸ್ ಲಿಮಿಟೆಡ್ ಮುಂಬೈ, ದಿ ಇಂಡೋರ್ ಅಂಡ್ ಮಾಲ್ವಾ ಯುನೈಟೆಡ್ ಮಿಲ್ಸ್ ಲಿಮಿಟೆಡ್ ಇಂಡೋರ್, ಇವುಗಳಲ್ಲದೆ ಇನ್ನೂ ಅನೇಕ ಮಿಲ್ಲುಗಳ ಬಟ್ಟೆಗಳನ್ನು ಮೈಸೂರು ಸೀಮೆಯಲ್ಲೆಲ್ಲಾ ವಿಕ್ರಯಮಾಡಲು ಕಮಿಷನ್ ಏಜಂಟರಾಗಿರುತ್ತೇವೆ. ನಮ್ಮ ಮುಖಾಂತರ ಮಾಲು ತರಿಸಿಕೊಳ್ಳತಕ್ಕವರಿಗೆ ಮುಂಬೈಯಲ್ಲಿ ಬಟ್ಟೆಗಳ ಮೇಲೆ ವಿಧಿಸತಕ್ಕ ದಲ್ಲಾಳಿ, ಜೋಟಾದಲ್ಲಾಳಿ, ಮೊಕ್ತಾದುಮ್ಮ, ಗಂಟುಕಟ್ಟುವದು, ಸ್ಟೇಷನ್ನಿಗೆ ಹೇರಿಸುವದು, ಹುಂಡೇಕರಿ ವಗೈರೆಯಾವ ವಿಧವಾದ ಖರ್ಚೂ ತಗಲದೆ ಇರುವದರಿಂದ ಮುಂಬೈಯಿಂದ ತರಿಸುವ ದಕ್ಕಿಂತಲೂ ಸುಲಭ ದರದಲ್ಲಿ ಸಿಕ್ಕುತ್ತೆ. ಮತ್ತು ಮುಂಬೈಗೆ ಹೋಗಿಬರುವ ದೇಹಶ್ರಮವೂ, ಖರ್ಚೂ ಉಳಿಯುತ್ತೆ. ಹೆಚ್ಚು ಬಟ್ಟೆಗಳನ್ನು ಏಕಕಾಲದಲ್ಲಿ ಕೊಳ್ಳತಕ್ಕವರಿಗೆ ಮಾಲಿನ ಮೇಲೆ ಶೇಕಡ 2 ರೂಪಾಯಿ ಲಾಗಾಯ್ತು 4½ ರೂಪಾಯಿ ವರಿಗೆ ಡಿಸ್ಕೌಂಟು ದೊರೆಯುತ್ತೆ. [97-11]

ನಮ್ಮ ಟ್ರಾವೆಲಿಂಗ್ ಏಜಂಟರ ವಶ ಬಟ್ಟೆಗಳ ನಮೂನೆಗಳನ್ನು ಕೊಟ್ಟು ದರ ಒಟ್ಟು ವ್ಯಾಪಾರಗಾರರಿಗೆ ತೋರಿಸಿ ಆರ್ಡರು ತೆಗೆದುಕೊಳ್ಳುವ ಏರ್ಪಾಡು ಮಾಡಿರುತ್ತೆ, ನಮ್ಮ ದಾವಣಗೆರೆ ಮತ್ತು ಬೆಂಗಳೂರು ಆಫೀಸುಗಳಲ್ಲಿ ಮಾಲು ಹಾಜರು ಸಹ ದೊರೆಯುತ್ತೆ.

ಬಟ್ಟೆಗಳನ್ನು ವ್ಯಾಪಾರಮಾಡಲು ಅನುಭವಸ್ಥರಾದ ಏಜಂಟರುಗಳು ಮತ್ತು ಸುಮಾಸ್ತರುಗಳೂ ಬೇಕಾಗಿದೆ.

ಎಲ್ಲಾ ಕಾಗದಪತ್ರಗಳೂ ದಾವಣಗೆರೆ ಆಫೀಸಿಗೆ ಬರೆಯಲ್ಪಡಬೇಕು.

ಹೆಡ್ ಆಫೀಸು :—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್, ದಾವಣಗೆರೆ. ಬ್ರಾಂಚ್ ಆಫೀಸು :—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಮೈಸೂರು ಗವರ್ನಮೆಂಟ್ ಸೆಕ್ಯೂರಿಟಿ

ಲೈಫ್ ಮತ್ತು ಮ್ಯಾರಿಯೇಜ್ ಕಂಪೆನಿ, ಲಿಮಿಟೆಡ್.

ಹೆಡ್ ಆಫೀಸ್—ಮೈಸೂರು.

ಮೂಲಧನ ರೂ. 1,00,000.

(1895ನೇ ಇಸವಿ 3ನೇ ಮೈಸೂರು ಕಂಪನಿಗಳ ಕಾನೂನ್ ಪ್ರಕಾರ ರೆಜಿಸ್ಟರ್ ಮಾಡಲ್ಪಟ್ಟಿರುತ್ತೆ.)

ಎಚ್ಚರಿಕೆ :—(ನೀವು ಪ್ರಾವಿಡೆಂಟ್ ಜೀವವಿಮೆ ಪಾಲಿಸಿಯಾಗಲಿ, ಮದುವೆ ವಿಮೆ ಪಾಲಿಸಿಯಾಗಲಿ ತೆಗೆದುಕೊಂಡು ಹಣ ಕಟ್ಟುವುದಕ್ಕೆ ಮುಂಚೆ ನಮ್ಮ ಕಂಪನಿಯ ಪ್ರಾಸ್ಪೆಕ್ಟಸ್ಸನ್ನು ಕೇಳಿ ತರಿಸಿಕೊಂಡು ಚೆನ್ನಾಗಿ ಓದಿ ನೋಡಿ. ಇದರಿಂದ ಹಿಂದುಸ್ಥಾನದಲ್ಲಿ ಈಗಿನ ಕಾಲದ ಪ್ರಾವಿಡೆಂಟ್ ಫಂಡುಗಳ ನಡವಳಿಕೆಗಳೆಲ್ಲಾ ನಿಮಗೆ ವಿವರವಾಗಿ ಗೊತ್ತಾಗುತ್ತದೆ; ಮತ್ತು ಇದರಿಂದ ನೀವು ಯಾವ ಒಳ್ಳೇ ಕಂಪನಿಯನ್ನು ಚುನಾಯಿಸಿಕೊಳ್ಳಬೇಕೋ, ನಿಮ್ಮ ಕಷ್ಟಾರ್ಜಿತದ ಹಣವು ಯಾವ ಕಂಪನಿಯಲ್ಲಿ ಸುರಕ್ಷಿತವಾಗಿರುವುದೋ ಅದೆಲ್ಲಾ ನಿಮಗೇ ಚೆನ್ನಾಗಿ ಗೊತ್ತಾಗುತ್ತದೆ.)

ಈ ಕಂಪನಿ ಸಂಪೂರ್ಣ ನಂಬಿಕೆಯುಳ್ಳದ್ದು. ಇದರಲ್ಲಿ ದೃಷ್ಟಿಪಾತ್ರವಾದ ಭಾಗಗಳೂ, ಉಚಿತವಾದ ಕ್ರಮಗಳೂ, ಹಿಂದುಸ್ಥಾನದ ಎಲ್ಲಾ ಭಾಗಗಳಲ್ಲೂ ಚೀಫ್ ಏಜಂಟರೂ, ಏಜಂಟರೂ ಬೇಕಾಗಿದೆ. ಅವರಿಗೆ ಸಂಬಳವೂ, ಕಮೀಷನ್ನೂ ಕೊಡಲಾಗುವುದು. ಪ್ರಾಸ್ಪೆಕ್ಟಸ್ ಮುಂತಾದವುಗಳನ್ನು ಇವರಿಗೆ ಬರೆದು ತರಿಸಿಕೊಳ್ಳಿ :—

ಎಂ. ಎಲ್. ನಾಗಣ್ಣ, ಮ್ಯಾನೇಜಿಂಗ್ ಡೈರೆಕ್ಟರ್, ಮೈಸೂರು.

ಇಪ್ಪತ್ತನೇ ಶತಮಾನದ ಆಶ್ಚರ್ಯ.

ಮೈಸೂರು ಗವರ್ನಮೆಂಟ್ ಸೆಕ್ಯೂರಿಟಿ ಮ್ಯೂಚುಯೆಲ್ ಪ್ರಾಪರ್ಟಿ ಇನ್‌ವೆಸ್ಟ್‌ಮೆಂಟ್ ಕಂಪನಿ, ಲಿಮಿಟೆಡ್. ಹೆಡ್ ಆಫೀಸ್—ಮೈಸೂರು.

ಮೂಲಧನ ರೂ. 1,00,000.

(1895ನೇ ಇಸವಿ 3ನೇ ಮೈಸೂರು ಕಂಪನಿಗಳ ಕಾನೂನ್ ಪ್ರಕಾರ ರೆಜಿಸ್ಟರ್ ಮಾಡಲ್ಪಟ್ಟಿರುತ್ತೆ.)

ಲೇವಾದೇವಿ :—ಎಲ್ಲಾ ಜಾತಿಯ ಲೇವಾದೇವಿಯನ್ನೂ ನಡಿಸಲಾಗುತ್ತೆ. ಕಂಪನಿಯ ಷೇರುಗಳು ಬಹು ಅಮೂಲ್ಯವಾದವು; ಮತ್ತು ಎಲ್ಲರೂ ಪಡೆಕೊಳ್ಳುವಷ್ಟು ಸುಲಭವಾಗಿ ಮಾಡಲಾಗಿದೆ. [161–48]

ಜಮೀನು, ಮನೆ, ಮೊದಲಾದ ಆಸ್ತಿಗಳನ್ನು ಕೊಂಡು ಸ್ವಾಧೀನಪಡಕೊಳ್ಳುವುದಕ್ಕೆ ಬಹು ಶ್ರೇಷ್ಠವೂ ಅತ್ಯಂತ ಸುಲಭವೂ ಆದ ಮಾರ್ಗಗಳನ್ನು ಕಲ್ಪಿಸಲಾಗಿದೆ. ಕೊಂಡುಕೊಳ್ಳಬೇಕೆಂಬ ಜಮೀನು ಅಥವಾ ಮನೆಯ ಮೇಲೆ ಕಂಪನಿಯವರು ಅಡ್ವಾನ್ಸು ಹಣ ಕೊಡುತ್ತಾರೆ. ಸಾಲ ತೀರಿಸುವುದಕ್ಕೂ ಕಂಪನಿಯಿಂದ ಹಣ ಕೊಡುತ್ತಾರೆ. ಈ ಹಣಗಳನ್ನು ಕಂಪನಿಯವರು ತಿಂಗಳು ತಿಂಗಳಿಗೆ ಸುಲಭವಾದ ಕಂತುಗಳ ಪ್ರಕಾರ ವಸೂಲ್ಮಾಡಿಕೊಳ್ಳುವರು.

ಬೇಕಾಗಿದೆ :—ಮೈಸೂರು ಸಂಸ್ಥಾನಕ್ಕೆ ಸೇರಿದ ಪ್ರತಿ ಒಂದು ತಾಲ್ಲೂಕಿನಲ್ಲೂ ಕಂಪನಿಯ ಪರವಾಗಿ ನಾಲ್ಕು ಮಂದಿ ಸ್ಥಳೀಯ ಡೈರೆಕ್ಟರುಗಳು ಬೇಕು. ಅವರಿಗೆ ಕಂಪನಿಯಿಂದ ಧಾರಾಳವಾದ ರಿಯಾಯತಿಗಳು ದೊರಕುವವು. ಘನವಂತರಾಗಿಯೂ, ಮುಖಂಡರಾಗಿಯೂ ಇರತಕ್ಕವರು ಮಾತ್ರ ಬರೆದುಕೊಳ್ಳತಕ್ಕದ್ದು. ಪ್ರಾಸ್ಪೆಕ್ಟಸ್ ಮುಂತಾದವುಗಳನ್ನು ಇವರಿಗೆ ಬರೆದು ತರಿಸಿಕೊಳ್ಳಿ :—

ಎಂ. ಎಲ್. ನಾಗಣ್ಣ, ಮ್ಯಾನೇಜಿಂಗ್ ಡೈರೆಕ್ಟರ್, ಮೈಸೂರು.

ಯಾಕೆ ಪರೀಕ್ಷಿಸಬಾರದು ? ಭಂಗಾರದ ಪದಕ ಬಂದಿದೆ.

ಸೆಂಟ್, ಅತ್ತರ್‌ಗಳಲ್ಲೆಲ್ಲಾ ಶ್ರೇಷ್ಠವಾದದ್ದು

ಆಟೋ ಮೋಹಿನಿ

ಇದು ರಿಜಿಸ್ಟರ್ ಆಗಿದೆ. ಈಗಿನ ಕಾಲದಲ್ಲಿ ಇದೇ ನಿಲ್ಲುವ, ಸುವಾಸನೆಯುಳ್ಳ, ಮನೋಹರವಾದ ಮತ್ತು ಸರಿಯಾದ ಪರಿಮಳದ ದ್ರಾವಕ. ಲಿರ ವಸ್ತ್ರಕ್ಕೆ ನಾಲ್ಕು ತೊಟ್ಟು ಹಾಕಿಕೊಂಡರೆ ನಾಲ್ಕು ದಿನಗಳ ತನಕ ಘಮಘಮಿಸುವ ಸುವಾಸನೆ ಇರುತ್ತೆ, ಹಾಗೆ ದೀರ್ಘಕಾಲ ನಿಲ್ಲತಕ್ಕದ್ದಲ್ಲವೆಂದು ರುಜುವಾತು ಮಾಡಿಕೊಡುವವರಿಗೆ ನಾವು ಒಂದು ನೂರು ರೂಪಾಯಿ ಬಹುಮತಿ ಕೊಡುತ್ತೇವೆ. ಪರೀಕ್ಷೆಮಾಡಿ ನೋಡಿ, ಬಹುಮತಿಯನ್ನು ಸಂಪಾದಿಸಿಕೊಳ್ಳಿ !

ಕ್ರಯ ½ ಔನ್ಸ್ ಗಾಜಿನ ಬಿರಡೆಯ ಬಾಟ್ಲಿಗೆ ರೂ. 2-0-0.

,, 1 ಡ್ರಾಂ ಕೊಳವೆ ,, ,, ,, 0-12-0.

ಆಟೊ ಮೋಹಿನಿ ಪರಿಮಳದ ಕಾರ್ಡುಗಳು ಡಜನ್ 1 ಕ್ಕೆ ರೂ. 0-12-0

ಎಲ್ಲರಲ್ಲೂ ವಿಕರಿಗೆ ಇಟ್ಟಿವೆ.

ಮದರಾಸ್ ಅಧಿಕಕ್ಕೆಲ್ಲಾ ಏಜಂಟರು—

ಷಾ ಭಗವಾನದಾಸ್ ಚುನಿಲಾಲ್ ಕಂಪನಿ,

[251-20] ೧೨೭, ಬೈನಾಬಜಾರ್ ರೋಡ್, ಮದರಾಸ್.

ಜೈನರವರ ಸ್ವದೇಶೀ ಬಾಮ್.

ರಿಜಿಸ್ಟರಾದ ಟ್ರೇಡ್ ಮಾರ್ಕು.

ಈ ಬಾಮ್ ವಾತ, ಸಂಧಿವಾತ, ಕುತ್ತಿಗೆ ನೋವು, ಅರೆತಲೆನೋವು, ನಡುನೋವು, ಶೀತ, ಸೆಳತ, ಬೆನ್ನುನೋವು, ಊದು, ಕೆಮ್ಮು, ಎದೆನೋವು, ಹೊಟ್ಟೆನೋವು, ಚಳುಕು, ಚೇಳುಕಡಿತ, ಕೈಕಾಲು ದೇಹ ಕೀಲುಗಳ ನೋವು, ಉರಿ, ಸುಟ್ಟಗಾಯ ಮೊದಲಾದವುಗಳನ್ನು ನಿರ್ಮೂಲನಾಗಿ ಹೋಗಲಾಡಿಸುತ್ತದೆ. ಜಟ್ಟಿಗಳಿಗೂ, ಮೆದುಳಿನ ಕೆಲಸಗಾರರಿಗೂ ಸಾಮಾನ್ಯವಾಗಿ ಎಲ್ಲಾ ಕೆಲಸದವರಿಗೂ ಈ ಸ್ವದೇಶೀ ಬಾಮ್ ಬಹಳ ಪ್ರಯೋಜನಕರವಾದದ್ದು. ಕೊಬ್ಬಾಗಲಿ, ಬೇರೆ ಯಾವ ಕೆಟ್ಟ ಪದಾರ್ಥವಾಗಲಿ ಮಿಶ್ರಮಾಡಿಲ್ಲ. ಯುರೋಪ್, ಇಂಡಿಯಾ, ಅಮೆರಿಕಾ ವೈದ್ಯಗ್ರಂಥಗಳನ್ನು ನೋಡಿ ತಯಾರುಮಾಡಿದೇವೆ. ಹಿಂದುಗಳೆಲ್ಲಾ ಇದನ್ನು ಉಪಯೋಗಿಸಬಹುದು. ಇದು ಯಕ್ಷಿಣಿಯಂಥಾ ಮದ್ದು. ಲಕ್ಷಾಂತರ ಜನರನ್ನೆಲ್ಲಾ ವಾಸಿಮಾಡಿದೆ. ಪ್ರತಿ ಒಬ್ಬರೂ, ಪ್ರತಿ ಮನೆಯವರೂ ಇದನ್ನು ಇಟ್ಟೇ ಇರಬೇಕು. ಇದು ಚಿನ್ನದಂಥಾ ಔಷಧ. ಎಲ್ಲಾ ವೈದ್ಯಶಾಲೆಗಳಲ್ಲೂ ಬಳಕೆಯಾಗುತ್ತಿದೆ. ಸೂರ್ಯಕಿರಣಗಳ ರಿಜಿಸ್ಟರ್ ಮಾರ್ಕು ಇರುವುದನ್ನು ನೋಡಿ ಕೊಂಡುಕೊಳ್ಳಿ. ನಕ್ಕಲ್ ಔಷಧವನ್ನು ಕೊಂಡು ಮೋಸಹೋಗಬೇಡಿ. ಉಪಯೋಗದ ಕ್ರಮ ಬಾಟ್ಲಿ ಸಂಗಡಲೇ ಇಟ್ಟಿದೆ. 1 ಬಾಟ್ಲಿಗೆ 12 ಆಣೆ; 3 ಕ್ಕೆ ರೂ. 1-14-0. ವಿ. ಪಿ ಬೇರೆ. ನಮ್ಮ ಎಲ್ಲಾ ಔಷಧಿಗಳ ಕ್ಯಾಟಲಾಗನ್ನೂ ಬರೆದು ತರಿಸಿಕೊಳ್ಳಿ. [25-23]

ವಿಳಾಸ—ಜಿ. ಗುಲಾಬ್ ಚಂದ್ ಪೌವಾರ್,

60 ನೈನಪ್ಪನಾಯಕ್ ಬೀದಿ, ಪಾರ್ಕ್ ಟೌನ್, ಮದರಾಸ್.

ವ್ಯಾಪಾರಿಗಳಿಗೆ ವಿಶೇಷ ಸೂಚನೆ.

ಸೋಲಾಪುರದ ಚೆಕ್ಕುಗಳು—ಸೀರೆಗಳು, ಖಣಗಳು.

ಹೊಸ ನಮೂನೆಯ ತರಹವಾರಿ ಚೆಕ್ಕುಗಳು, ಸೀರೆಗಳು, ಖಣ ಕಿರಿಗೆಗಳು, ಚಿಲ್ಲರೆಯಾಗಿಯೂ ಬೇಲುಗಳಲ್ಲಿಯೂ ಸುಲಭ ಕ್ರಯಕ್ಕೆ ನಮ ದೊಯುವವು. ಈಗ ಮುಂದಾಗಿ ಕಳುಹಿಸಿ ನಾಲ್ಕಾರು ತಿಂಗಳು ಕಾದು ಕೋರಿದ ನಮೂನೆಗಳು ಬಾರದೆ ನಷ್ಟಪಡಬೇಕಾದ ಅವಶ್ಯಕವಿಲ್ಲ. ಸರಕ ಮೇಲಿನ ನಂಬರುಗಳನ್ನು ತಿಳಿಸಿ ಬೇಕಾದಷ್ಟು ತರಿಸಿಕೊಳ್ಳಬಹುದು. ಸೋ ಪುರಕ್ಕಿಂತ ನಮ್ಮಲ್ಲಿಯೇ ಅನುಕೂಲ ಹೆಚ್ಚಾಗಿರುವುದರಿಂದ ಸ್ಥಳದ ಮ ಪರಸ್ಥಳದ ವರ್ತಕರನೇಕರು ನಮ್ಮ ಮೂಲಕವೇ ತರಿಸಿ ಫಾಯಿದೆ ಹೊಂ ತ್ತಿರುವರು. [28-23]

ಹೆಚ್ಚು ವಿಷಯಕ್ಕೆ ಕಾಗದ ಬರೆದು ತಿಳಿದುಕೊಳ್ಳಬಹುದು

ಇಂಡಿಯನ್ ಕೋಆಪರೆಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್,

159, ಕಿಲಾರಿ ರೋಡ್ (ಕುಂಚಿಗರ ಪೇಟೆ), ಬೆಂಗಳೂರು ಸಿ

ಕುಂತಲಾನಂದ ತೈಲವು.

192-4

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಿರುದಿನ ಬಿ ಕನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ. ಮುಖ್ಯವಾದ ಎಲ್ಲಾ ವ

ಮಾನ ಪತ್ರಿಕೆಗಳೂ ಅನೇಕಾನೇಕ ದೊ ಮನುಷ್ಯರೂ ಇದರ ಉತ್ತಮೋತ್ತಮ ಗು ಳಿಗಾಗಿ ಶ್ಲಾಘಿಸಿರುವರು. ಈ ತೈಲವು ಕೂ ಲನ್ನು ಚೆನ್ನಾಗಿಯೂ ತ್ವರೆಯಾಗಿಯೂ ಯುಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋ ಗೋಳಿಸುತ್ತದೆ. ನಿದ್ರಾಭಂಗವನ್ನು ಪರಿಹರಿ ಸಲ್ಲಿ ಇದಕ್ಕೆ ಸಮಾನವಾದದ್ದು ಬೇರೊ ಲ್ಲ. ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋ ಗಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂ ಮನೆಯಲ್ಲಿಯೂ ಇರತಕ್ಕದಾಗಿದೆ. ಬೆಲೆ ಬಾಟ್ಲಿಗೆ 1 ರೂಪಾಯಿ 3 ಬಾಟ ೩ ರೂಪಾಯಿ 10 ಆಣೆ. ಅಂಚೆ ಹಾಸಲು ಬೇರೆ. ನಮ್ಮ ದೊಡ್ಡ ಕನ್ನಡ ಕ್ಯಾ ಲಾಗು ತರಿಸಿ ನೋಡಿರಿ.

ನಮ್ಮ ವಿಳಾಸ:—ಬಿ. ಎಮ್. ನಾಥ ಮತ್ತು ಕಂಪೆನಿ,

ವೇಪೇರಿ, ಮದರಾಸ್.

ಅಮೃತಾಂಜನ ರಿಜಿಸ್ಟರ್ಡ್

ಇದು ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು. ಇದರ ಉಪಯೋಗದಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗವಾಯು, ಉಳುಕು, ಕೆಮ್ಮು, ಸೊಂಟದನೋವು, ಶೀತ, ಚರ್ಮ ವ್ಯಾಧಿ, ಹಲ್ಲುನೋವು, ಚೇಳು ಕಡಿತ ಮೊದಲಾದ ಎಲ್ಲಾ ತರದ ನೋವುಗಳು ಮಾತ್ರಿಯಾಗಿ ನಿಲ್ಲುವವು. ಕಹಾರಿ ಔಷಧಗಳನ್ನು ಪಡಕೊಳ್ಳಬೇಡಿರಿ. ಈ ನಮ್ಮ ಗೋಚರಪ್ರಖ್ಯಾತವಾದ ಅಮೃತಾಂಜನವನ್ನು ನಮ್ಮ ರಿಜಿಸ್ಟ್ರಿಯಾದ ಮತ್ತು ಹಲವು ಭಾಷೆಗಳುಳ್ಳ ಸುಂದರವಾದ ಕರಡಿಗೆಯಲ್ಲಿ ಪ್ಯಾಕ್‌ಮಾಡಿರುತ್ತೇವೆ. ಕರಡಿಗೆ ಇಲ್ಲದ ಬಾಟ್ಲಿಗಳನ್ನು ಪಡಕೊಳ್ಳಬೇಡಿರಿ. ಬಾಟ್ಲಿ ಒಂದರ ಕಿಮ್ಮತು 0-8-0. ಡಜನ್ 1 ಕ್ಕೆ 5-4-0. ವಿ. ಪಿ. ಪ್ರತ್ಯೇಕ. ಗಜಕರ್ಣದ ಮುಲಾಮು 0-6-0. ದಂತಮಂಜನ 0-2-0. ಮೋಹಿನಿ ತೈಲ 0-12-0. ಬಿಚ್ಚು ಮುಲಾಮು 0-3-0. ಜುಲಾಬು ಮಾತ್ರೆ 0-9-0. ಸುಂದರಿ ಮುಲಾಮು 0-8-0. ಕ್ಯಾಟಲಾಗಿಗೆ ಬರೆಯಿರಿ. [62-17]

ನಮ್ಮಲ್ಲಿ ತಯಾರಾಗುವ ಎಲ್ಲಾ ತರದ ಔಷಧಗಳು ಮಂಗಳೂರಿನಲ್ಲಿ ದಿ ಉಲ್ಲನ್ ಮಾರ್ಟ್ ಇವರಲ್ಲಿ ಸಿಕ್ಕುತ್ತವೆ.

ಅಮೃತಾಂಜನ ಡಿಪೋ,

ಪೋರ್ಟು. ಮುಂಬಯಿ, ಮತ್ತು ೯ ಜಹಂಗೀರ್ ಸ್ಟ್ರೀಟ್, ಮದ್ರಾಸು.

ಡೋಂಗರೆ

ಇವರ ಬಾಲಾಮೃತ

[150-50]

ಸೇವನದಿಂದ ಹುಡುಗರು ಸಶಕ್ತರೂ ನಿರೋಗಿಗಳೂ ಆಗಿ ಅವರ ಭಾರವು ಬೆಳೆಯುತ್ತದೆ. ಒಂದು ಬಾಟ್ಲಿಗೆ ೧೨ ಆಣೆ. ಟಪಾಲ್ ಖರ್ಚು ೪ ಆಣೆ.

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಾಯಿ ಇವರಲ್ಲೂ ಮತ್ತು ಎಸ್. ವೈದ್ಯ ಅಂಡ್ ಕೊ, ಪಾರ್ಕ್ ಟವ್ನ, ಮದರಾಸು ಇವರಲ್ಲೂ ದೊರೆಯುವುದು.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

12—6—1914 ರಿಂದ 19—6—1914 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಕಾಲರಾ ತಗಲಿದ್ದು.	ಕಾಲರಾ ಸತ್ತದ್ದು.
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	6	4	0	0
ಮೈಸೂರು ,,	0	0	0	0
ಕೋಲಾರ್ ,,	4	4	7	5
ಕೋಲಾರ್ ಚಿನ್ನದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟು	0	0	0	0
ಹಾಸನ ,,	0	0	0	0
ಚಿತ್ರದುರ್ಗ ,,	0	0	4	2
ಕಡೂರ್ ,,	0	0	0	0
ಶಿವಮೊಗ್ಗಾ ,,	9	7	0	0
ಜುಮ್ಲಾ....	19	15	11	7

ಶಾಲಿವಾಹನ ಶಕ ವರುಷಂಗಳು 1837 ನೇ ಆನಂದ ಸಂವತ್ಸರೇ ಉತ್ತರಾಯಣೆ ಗ್ರೀಷ್ಮಋತೌ ಆಷಾಢ ಶುದ್ಧ ಏಕಾದಶಿ ಶುಕ್ರವಾರದಿಂದ ಆಷಾಢ ಬಹುಳ ಬಿದಿಗೆ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1914 ನೇ ಜುಲೈ.

ತಾ.	ವಾರ.	ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ	ಮಿಥುನ ಮಾಸ ತೇದಿ
3	ಶುಕ್ರ ::	ಏಕಾದಶಿ	51-45	ಸ್ವಾತಿ	8-50	20
4	ಶನಿ ;;	ದ್ವಾದಶಿ	46-6	ವಿಶಾಖ	4-52	21
5	ಭಾನು §	ತ್ರಯೋದಶಿ	40-57	ಅನುರಾಧ	1-22	22
6	ಸೋಮ ‡	ಚತುರ್ದಶಿ	36-27	ಮೂಲ	55-59	23
7	ಮಂಗಳ †	ಪೌರ್ಣಮಿ	33-14	ಪೂರ್ವಾಷಾಢ	54-42	24
8	ಬುಧ	ಪಾಡ್ಯಮಿ	30-48	ಉತ್ತರಾಷಾಢ	54-31	25
9	ಗುರು •	ಬಿದಿಗೆ	29-34	ಶ್ರವಣ	55-32	26

:: ಸ್ಮಾರ್ತ ಪ್ರಥಮ ಏಕಾದಶಿ, ಗೋಪದ್ಮವ್ರತ. ;; ವೈಷ್ಣವ ಪ್ರಥಮ ಏಕಾದಶಿ, ಹರಿವಾಸರ, ಶಯನದ್ವಾದಶಿ. § ಪ್ರದೋಷ, ಶ್ರೀರಂಗದಲ್ಲಿ ಜ್ಯೇಷ್ಠಾಭಿಷೇಕ, ಮೃತ್ಯುಯೋಗ, ಮಳೆ ನಕ್ಷತ್ರ—ಪುನರ್ವಸು 1 ನೇ ಪಾದ. ‡ ವ್ಯಾಹ ಭಾವ, ಶ್ರೀರಂಗದಲ್ಲಿ ತಿರುಪ್ಪಾವಾಡೆ. † ವ್ಯಾಸಪೂರ್ಣಿಮಾ. • ಮೇಲುಕೋಟೆಯಲ್ಲಿ ಮಹಾಭಿಷೇಕ ಮತ್ತು ಕಲ್ಯಾಣೋತ್ಸವ, ಮಳೆ ನಕ್ಷತ್ರ—ಪುನರ್ವಸು 2 ನೇ ಪಾದ.

ಪ್ರೊಫೆಸರ್ ಬ್ರೇಸ್ಲರ್

ಇಲೆಕ್ಟ್ರೊ ಪೆಯಿನಾಡೈನ್

ಮನುಷ್ಯನ ಶರೀರದಲ್ಲಿ ವಿದ್ಯುಚ್ಛಕ್ತಿ ವ್ಯಾಪಿತವಿರುವದೆಂತಲೂ, ವಿದ್ಯುಚ್ಛಕ್ತಿ ಕಡಮೆಯಾದ ಕೂಡಲೇ ನಾನಾ ತರದ ವ್ಯಾಧಿಗಳು ಲಭಿಸುವದೆಂತಲೂ, ಅಂತಹ ವ್ಯಾಧಿಗಳನ್ನು ಶೀಘ್ರ ಗುಣಪಡಿಸಲು ವಿದ್ಯುಚ್ಛಕ್ತಿ ಮಿಶ್ರವಾದ ಔಷಧದ ಉಪಯೋಗದಿಂದಲ್ಲದೆ

ಬೇರೆ ಔಷಧಗಳಿಂದ ವ್ಯಾಧಿಗಳನ್ನು ಶೀಘ್ರ ಗುಣಪಡಿಸುವದು ಕಷ್ಟವೆಂತಲೂ ಅಮೇರಿಕಾ ದೇಶದ ವೈದ್ಯಶಾಸ್ತ್ರ ಪಂಡಿತರು ವೈದ್ಯಶಾಸ್ತ್ರ ಪರಿಶೋಧನೆಯಿಂದ ಸಿದ್ಧಿಸಿರುವರು. ಈ ಔಷಧವು ಉಪಯೋಗಿಸಿದ ಕೂಡಲೇ ದೇಹಕ್ಕೆ ಸಾಕಾಗುವಷ್ಟು ವಿದ್ಯುಚ್ಛಕ್ತಿಯನ್ನುಂಟುಮಾಡಿ ವ್ಯಾಧಿಯನ್ನು ಅತಿ ಶೀಘ್ರ ಗುಣಪಡಿಸುತ್ತೆ. ಪ್ರಾಚೀನಕಾಲದ ಔಷಧಗಳಿಗೆಲ್ಲವು ಇದು ಅತ್ಯುತ್ತಮವಾದದ್ದು. ಒಂದಾವರ್ತಿ ಪರೀಕ್ಷಿಸಿ ನೋಡಿದರೆ ಇದರ ಗುಣವು ವ್ಯಕ್ತವಾಗುತ್ತೆ.

ಎಲೆಕ್ಟ್ರೊಪೆಯಿನಾಡೈನ್ ತೈಲದಿಂದ ಗುಣಪಡುವ ವ್ಯಾಧಿಗಳು:—

ತಿಮರುವಾಯುವು, ಕೀಲ್ವಾಯುವು, ಪಾರ್ಶ್ವವಾಯುವು, ಕ್ಷಯ, ಕೆಮ್ಮು, ನೆಗಡಿ, ವಾಯುನೋವು (ಕೈಕಾಲು ಹಿಡಿತ), ಉಳುಕುಹಿಡಿದಿದ್ದರು, ಕಠಿನಶ್ವಾಸ, ನಡುನೋವು (ಸೊಂಟನೋವು), ಪಕ್ಕಶೂಲೆ, ಹಲ್ಲುನೋವು, ತಲೆನೋವು, ಅರೆತಲೆನೋವು, ಉಬ್ಬಸ, ವಿಷಜ್ವರದ ಗಡ್ಡೆಗಳಿಗೂ ಮತ್ತು ಮಕ್ಕಳ ಪಕ್ಕಶೂಲೆ, (ಅಳ್ಳಿ) ಶೈತ್ಯದೋಷಗಳೂ, ವಿಷಹುಳಗಳ ಕಡಿತಗಳಿಗೂ (ಚೇಳು ಮುಂತಾದದ್ದು), ಇದಕ್ಕೆಲ್ಲಾ ಬಹಳ ಶ್ಲಾಘನೀಯವಾದದ್ದು. [12-26]

ಉಪಯೋಗಿಸುವ ಕ್ರಮವು ಹಿಂದುದೇಶದ ಎಲ್ಲಾ ಭಾಷೆಗಳಲ್ಲಿಯೂ ಬುಡ್ಡಿಯ ಸಂಗಡ ಕಳುಹಿಸಲಾದೀತು.

ಬುಡ್ಡಿಯ ಕ್ರಯ ರೂ. 0-8-0. ವಿ. ಪಿ. ಖರ್ಚು 0-4-0. ಏಜಂಟರು ಬೇಕು.

ಮುಖ್ಯ ಏಜಂಟರು:—ಗುರುಬಸವ ಅಂಡ್ ಕಂಪನಿ, ಮದರಾಸ್.

Printed and Published by the Rev. H. Gulliford, Proprietor and Manager, Wesleyan Mission Press, Mysore. 2/7/1914.

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು

ಸಂಪುಟ ೨೮ ಮೈಸೂರು—ಸರ್ ೧೯೧೪ ನೇ ಇಸವಿ ಜೂಲೈ ತಾರೀಖು ೯ ನೇ ಗುರುವಾರ. ಸಂಚಿಕೆ ೬

WANTED

Agents for the sale of Steel Cash and Treasure Safes, in Mysore District, for terms and other particulars, apply to

Basel Mission Mechanical Establishment, Mangalore.

[142-2]

ಹೊಸ ಬಂಗಾಳಿ ನಾವೆಲ್ಸ್.—ವಿಷವೃಕ್ಷ 4 ಆ. ಸನ್ಯಾಸಿ 1½ ಆ. ಆನಂದ ಮಠ 1 ಆ. ಬಿ ವೆಂಕಟಾಚಾರ್ಯರಿಂದ ವಂಗವಿಜೇತ 1-4-0. ಚಂದ್ರಶೇಖರ 1-1-0. ರಜನಿ 13 ಆ. ಆನಲ್ಯಾಬಾಯಿ 9 ಆ. ಇತ್ಯಾದಿ. ಚಿತ್ರವಿಚಿತ್ರಾವಳಿ II 8 ಆಣೆ. ಮಾಯಾವಿ ಪ್ರಿಂಟಾಗುತ್ತಿದೆ. ನ್ಯಾಯದರ್ಪಣ 1½ ರೂಪಾಯಿ.

[53-20] ಎಂ. ಸುಬ್ಬರಾವ್, ಬುಕ್ ಸೆಲರ್, ಸಂಕರಪುರ, ಬೆಂಗಳೂರು ಸಿಟಿ.

ಕಳವು, ದರೋಡೆ.

ದಗಾಯುತಿ, ಅಶ್ರಮ ಸ್ತ್ರೀಸಂಗಮ, ಆಸಾಮಿ ಚೋರಿ, ಮಾನನಷ್ಟ ಮುಂತಾದ ಸ್ಥಗಳಿಗೆ ಶಿಕ್ಷೆವಿಧಿಸಿರುವ ದಂಡನೀತಿ ಶಾಸ್ತ್ರವು ಪೂರ್ವದಲ್ಲಿ ಋಷಿ ಚಾರ್ಯರಿಂದ ರಚಿತವಾಗಿ ಈಗಿನ ಬ್ರಿಟಿಷ್ ಚಕ್ರಾಧಿಪತ್ಯದಲ್ಲಿ ಅನುಮೋದಿಸಿ ಇಂಡಿಯಾ ಗವರ್ನರ್ ಜನರಲ್‌ರವರಿಂದ ಮುಂಜೂರಾಗಿ ಕಲ್ಕತ್ತಾ, ಮುಂಬೈ, ಮದ್ರಾಸ್, ಮೈಸೂರು ಜಿಲ್ಲಾಗಳಲ್ಲಿ "ಕನ್ನಡ ಇಂಡಿಯನ್ ಪೆನಲ್ ಕೋಡ್" ಎಂಬ ಅಭಿದಾನದಿಂದ ಜಾರೀಲಿ ತಂದಿರುವರು. ಈ ಆಕ್ಟಿಗೆ ಅನೇಕ ಜಡ್ಜಿಗಳು ಅಪ್ಪಣೆಗಳನ್ನು ಬರೆದಿರುವರು. ಅವುಗಳೂ ಈ ಪುಸ್ತಕದಲ್ಲಿ ಅಡಗಿರುವವು. ಕ್ರಯ ಥಪ್ಪ ಕಾಗದದ್ದು 2 ರೂಪಾಯಿ; ಹನಸುಕಾಗದದ್ದು ರೂ. 2-8-0.

[143-2] ವಿಳಾಸ—ಬಿ. ನರಸಿಂಗರಾವ್, ಎಡಿಟರ್, ಕಾ ಗೆಜೆಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

ರಸಿಕರಾದ ಕನ್ನಡಿಗರೇ!

ಇತ್ತ ನೋಡಿ.

"ನಿರುಪಮಾ" ಹೊಸ ನಾಟಕಗಳಲ್ಲಿ ಮೇಲೆನಿಸಿ ಬಹು ಜನರ ಸ್ತೋತ್ರಕ್ಕೆ ಪಾತ್ರವಾದ ನಾಟಕ. ಕಥಾ ವಿಧಾನವೂ ಮಾತುಗಳೂ ಪದ್ಯಗಳೂ ಬಹು ಚಮತ್ಕಾರವಾಗಿಯೂ ಸರಸವಾಗಿಯೂ ಇವೆ. ಕ್ರಯ 12 ಆಣೆ. "ಕುಮುದಿನಿ" ಬಂಗಾಳಿಯ ನಾವೆಲಿನ ಭಾಷಾಂತರ. ಪತ್ತೇದಾರಿಯ ಕಥೆ. ಕ್ರಯ 6 ಆಣೆ. "ಸಂತಾಪಕ" ಮನೋಹರವಾದ ನವೀನ ಕಾದಂಬರಿ. ಎಲ್ಲರೂ ಅಗತ್ಯವಾಗಿ ಓದಬೇಕಾದುದು. ಕ್ರಯ 4 ಆ. "ಮಹಾರಣ್ಯವುರಾಧಿಪತ್ಯ" 4 ಆ. "ಪರಲೋಕ ರಹಸ್ಯ" 2 ಆ. "ಕಲಹಪ್ರಿಯಾಪ್ರಹಸನ" 2 ಆ. "ಯೋಗನಿದ್ರಾ ಪ್ರಹಸನ" 2 ಆಣೆ.—ಈ ನಾಲ್ಕು ಸರಲಿಗಳೂ ಒಟ್ಟು 8 ಆಣೆ.

[266-30] ವಿಳಾಸ— ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

NOW READY

Full Notes with Summary and Numerous useful questions on Circe's Palace; The Golden Fleece and Fairy Tales (L. S. Text for 1915) by Mr. A. S Rangaswamiengar, B.A., Asst. Master, Maharani's College, Mysore. Price four annas only. Yate's Primer 0-4-0; Yate's Second Reader 0-9-0; King Second Reader 0-6-0; King Third Reader 0-8-0; Macmillan's New No. IV Reader 0-12-0; Hydes Practical English Grammar—First 0-15-0, Second 0-15-0; Longman's School Geography 1-4-0; Marrison's Junior Geography of India 0-12-0.

We supply you any books in English or Canarese.

[23-26] **The General Agency, Mysore.**

ಸಿದ್ಧವಾಗಿದೆ.

1915 ನೆಯ ವರ್ಷದ ಲೋವರ್ ಸೆಕೆಂಡರಿ

ಕನ್ನಡ ಟೆಕ್ಸ್ಟಿನ ನೋಟ್ಸು.—ಕ್ರಯ 6 ಆಣೆ.

ಡಿಸ್ಕೌಂಟು—10 ಕ್ಕೆ 1; 25 ಕ್ಕೆ 3; 50 ಕ್ಕೆ 8; 100 ಕ್ಕೆ 20.

ಮಕ್ಕಳ ಭೂವಿವರಣೆ.

ಈಗಿನ ಪಾಠಕ್ರಮಕ್ಕೆ ತಕ್ಕಂತೆ ಹೊಸದಾಗಿ ಆಗಿದೆ. ಇದರಲ್ಲಿ ಮೈಸೂರು ದೇಶದ ಬೆಳೆ, ಎತ್ತರ, ನದೀ ಪರ್ವತಾದಿಗಳು ಇವುಗಳನ್ನು ತೋರಿಸುವ ಮೂರು ಭೂಪಟಗಳೂ, ಚಿತ್ರಗಳೂ ಸೇರಿವೆ. ಕ್ರಯ 2 ಆಣೆ. [49-21]

ಇಂಗ್ಲೀಷಿನ 2 ನೆಯ ಪುಸ್ತಕದ ನೋಟ್ಸು 2½ ಆಣೆ. ಮೆಕ್ಮಿಲನ್ ರವರ 3 ನೇ ಪುಸ್ತಕದ ನೋಟ್ಸು 1½ ಆಣೆ, ಡಿಟೊ 4 ನೇ ಪುಸ್ತಕದ ನೋಟ್ಸು 1½ ಆಣೆ, ಡಿಟೋ 5 ನೇ ಪುಸ್ತಕದ ನೋಟ್ಸು 4 ಆಣೆ. ನವಬಾಲವ್ಯಾಕರಣ (2 ನೇ ತರಗತಿಗೆ) 1 ಆಣೆ. Notes on "Tanglewood Tales," English Lower Secondary Text for 1915—As. 3. Notes on Fairy Tales—As. 2.

ನಮ್ಮ ವಿಳಾಸ:—ಯಸ್. ಆರ್. ವೆಂಕಟಸುಬ್ಬಾಚಾರ್ಯ, ಸುಬೋಧಗ್ರಂಥಾಲಯ, ಮೈಸೂರು.

ನೋಟೀಸು.

ಮೈಸೂರು ಬ್ಯಾಂಕ್, ಲಿಮಿಟೆಡ್.

ಸರ್ 1914 ನೇ ಜೂಲೈ ತಾ. 1 ರಿಂದ ಈಚೆಗೆ ಸೇವಿಂಗ್ಸ್ ಬ್ಯಾಂಕ್ ಲೇವಾದೇವಿಯನ್ನು ಹೊಸದಾಗಿ ಯಾರ ಹೆಸರಿನಲ್ಲೂ ಅಂಗೀಕರಿಸಿ ಪ್ರಾರಂಭಮಾಡುವುದಿಲ್ಲ; ಆದರೆ ಅದಕ್ಕೆ ಪ್ರತಿಯಾಗಿ ಡೈರೆಕ್ಟರುಗಳು ಶೇಕಡಾ ವರುಷಕ್ಕೆ 4 ರೂಪಾಯಿ ಬಡ್ಡಿಯುಳ್ಳ "ಪ್ರೊವಿಡೆಂಷಲ್ ಡಿಪಾಜಟ್" ಎಂಬ ಹೊಸ ತರಹಾ ಲೇವಾದೇವಿಯನ್ನು ಪ್ರಾರಂಭಮಾಡಬೇಕೆಂದು ಗೊತ್ತುಮಾಡಿದಾರೆ.

ಈ "ಪ್ರೊವಿಡೆಂಷಲ್ ಡಿಪಾಜಟ್" ಎಂಬ ಖಾತೆಯ ನಿಬಂಧನೆಗಳೇನೆಂದರೆ:—

1. ಡಿಪಾಜಟ್‌ದಾರರು ತಿಂಗಳಿಗೆ 5 ರೂಪಾಯಿಗೆ ಕಮ್ಮಿ ಇಲ್ಲದೆ ಪಾವತಿ ಮಾಡಬೇಕು. ಇದಕ್ಕೆ ವರುಷಕ್ಕೆ ಶೇಕಡಾ 4 ರೂಪಾಯಿನಂತೆ ಚಕ್ರಬಡ್ಡಿಯನ್ನು ಆರು ತಿಂಗಳಿಗೊಂದಾವರ್ತಿ ಅಂದರೆ ಜೂನ್ ತಾರೀಖು 30 ಮತ್ತು ಡಿಸೆಂಬರ್ ತಾರೀಖು 31 ಕ್ಕೆ ಲೆಕ್ಕಾಚಾರಮಾಡಿ ಸೇರಿಸಲಾಗುತ್ತದೆ.

2. ಪ್ರತಿ ಅರ್ಧವರುಷಕ್ಕೂ ಬರುವ ಬಡ್ಡಿಯನ್ನು ಅಂದರೆ ಜೂನ್ ತಾ. 30 ಮತ್ತು ಡಿಸೆಂಬರ್ ತಾ. 31 ಕ್ಕೆ ಆಗುವಷ್ಟು ಬಡ್ಡಿಯನ್ನು ಅಸಲ್ ಹಣಕ್ಕೆ ಸೇರಿಸಿ ಅದರ ಕೂಡ ಪಾವತಿ ಆಗುವಂತೆ ತೋರಿಸಲಾಗುತ್ತೆ. ಮತ್ತು ಫಿಕ್ಸೆಡ್ ಡಿಪಾಜಟ್ಟುಗಳ ಬಡ್ಡಿ ಪಾವತಿ ಆಗುವಂತೆ ಈ ಬಡ್ಡಿಯನ್ನು ಪಾವತಿ ಮಾಡುವುದಿಲ್ಲ.

3. ಡಿಪಾಜಟ್‌ದಾರರು ಆರು ತಿಂಗಳ ತನಕ ಡಿಪಾಜಟ್‌ದಾರರಾಗಿದ್ದುಕೊಂಡೇ ಬಂದಿದ್ದಾಗ್ಯೂ ಅವರ ಡಿಪಾಜಟ್ ಹಣವು 30 ರೂಪಾಯಿ ಆಗದೆ ಹೋದರೆ ಆ ಘಟ್ಟಾಹೆಯಲ್ಲಿ ಅಂಥಾ ಅಸಲ್‌ಹಣಕ್ಕೆ ಬಡ್ಡಿ ಕೊಡಲ್ಪಡುವುದಿಲ್ಲ; ಆದರೆ ಅಸಲ್‌ಹಣವು 30 ರೂಪಾಯಿ ಅಥವಾ ಅದಕ್ಕಿಂತ ಹೆಚ್ಚಾಗಿರುವ ಸಂದರ್ಭಗಳಲ್ಲೆಲ್ಲಾ ಅಂಥ ಅಸಲ್‌ಹಣಕ್ಕೆ ಬಡ್ಡಿ ದಾಖಲ್ಮಾಡಲಾಗುತ್ತೆ.

4. ಡಿಪಾಜಟ್ಟುಗಳನ್ನು ವಾಪಸುಪಡೆಯಬೇಕಾದರೆ ಮೊದಲು 3 ತಿಂಗಳ ನೋಟೀಸ್ ಕೊಡಬೇಕು; ಆದರೆ ಆ ರೀತಿ ಬಂದ ನೋಟೀಸಿನ ತಾರೀಖಿನಿಂದ ಶೇಕಡಾ 3 ರಂತೆ ಬಡ್ಡಿ ಕೊಡಲಾಗುತ್ತೆ.

5. ಡಿಪಾಜಟ್‌ದಾರನು (ದಾರರು) ಕಾಲವಾದ ಪಕ್ಷದಲ್ಲಿ ಡಿಪಾಜಟ್ಟನ್ನೂ ಬಡ್ಡಿಯನ್ನೂ ಖುಲಾಸ್ ಆತನ ಅಥವಾ ಆಕೆಯ ವಾರಸ್‌ದಾರರಿಗೆ ಪಾವತಿ ತಕ್ಷಣವೇ ಮಾಡಲಾಗುತ್ತೆ; ಇದಕ್ಕೆ ಸಾಮಾನ್ಯವಾಗಿ ಕೊಡಬೇಕಾದ ನೋಟೀಸ್ ಅಗತ್ಯವಿಲ್ಲ. ಹಾಗಿಲ್ಲದ ಪಕ್ಷದಲ್ಲಿ ಆ ಹಣವನ್ನೆಲ್ಲಾ ಬ್ಯಾಂಕಿನಲ್ಲೇ ಇಟ್ಟುಕೊಂಡು ಮೃತನ ಅಥವಾ ಮೃತಳ ವಾರಸ್‌ದಾರರಿಗೆ ಬಡ್ಡಿಯನ್ನು ಮೂರು ತಿಂಗಳಿಗೊಂದಾವರ್ತಿ ಅಪೇಕ್ಷಿಸಿದಾಗ್ಯೂ ಪಾವತಿ ಮಾಡುತ್ತಾರೆ. ಆದರೆ ಅಂಥಾ ವಾರಸ್‌ದಾರರ ಹೆಸರನ್ನು ಡಿಪಾಜಟ್‌ದಾರರು ಮೊದಲೇ ಬ್ಯಾಂಕಿನಿಂದ ಕೊಡೋಣಾಗುವ ಫಾರಮಿನಲ್ಲಿ ಬರೆದುಕೊಟ್ಟು, ಆ ಹೆಸರು ಬ್ಯಾಂಕಿನ ಪುಸ್ತಕಗಳಲ್ಲಿ ಕ್ರಮವಾಗಿ ದಾಖಲಾಗಿರಬೇಕು.

6. ಡಿಪಾಜಟ್‌ದಾರರು ತಮ್ಮ ಹಣವನ್ನು ಅಥವಾ ಅದರ ಒಂದು ಅಂಶವನ್ನು ಅದು ಸಂಪೂರ್ಣವಾಗುವುದಕ್ಕೆ ಮೊದಲೇ ವಾಪಸ್ ಪಡೆಯಬೇಕಾಗಿದ್ದಲ್ಲಿ ಅಂಥಾ ಹಣಕ್ಕೆ ಬ್ಯಾಂಕಿನ ಬ್ರಾಂಚು, ಅಥವಾ ಏಜನ್ಸಿಯಲ್ಲಿ ಆ ಸಮಯದಲ್ಲಿ ಜಾರಿಯಲ್ಲಿರುವ ಡಿಸ್ಕೌಂಟ್ ದರದಂತೆ ವಜಾ ಮಾಡಿಕೊಳ್ಳಲಾದೀತು. ಅಥವಾ ಅಂಥಾ ಡಿಪಾಜಟ್ಟಿನ ಮೇಲೆ ಸಾಧ್ಯವಾಗುವಷ್ಟು ಹಣವನ್ನು ಬ್ಯಾಂಕಿನ ಚಾಲ್ತಿ ಬಡ್ಡಿ ದರದ ಮೇಲೆ ಅಡ್ವಾನ್ಸು ಕೊಡಬಹುದು.

7. ಡಿಪಾಜಟ್‌ದಾರರಿಗೆ ಒಂದು ಪ್ಯಾಸ್ ಬುಕ್ಕು ಕೂಡಲೇ ಕೊಡಲಾಗುವುದು. ಪ್ರತ್ಯೇಕವಾದ ರಸೀತಿ ಕೊಡಲ್ಪಡುವುದಿಲ್ಲವಾದಕಾರಣ ಹಣಕಳುಹಿಸುವಾಗಲೆಲ್ಲಾ ಡಿಪಾಜಟ್‌ದಾರರು ತಮ್ಮ ಪ್ಯಾಸ್ ಬುಕ್ಕನ್ನು ಬ್ಯಾಂಕಿಗೆ ಹಾಜರುಪಡಿಸಬೇಕು. ಅವರಲ್ಲೇ ಡಿಪಾಜಟ್ ಹಣಗಳನ್ನೆಲ್ಲಾ ಕ್ರಮವಾಗಿ ದಾಖಲ್ ಮಾಡಲಾಗುತ್ತೆ. ಇದಲ್ಲದೆ ಬಡ್ಡಿ ಲೆಕ್ಕಾಚಾರಮಾಡಿ ಸೇರಿಸುವುದಕ್ಕಾಗಿ ಪ್ರತಿ ಛಿಮ್ಮಾಹೆಯಲ್ಲೂ ಅಂದರೆ ಜೂನ್ ತಾ. 30 ಕ್ಕೂ, ಡಿಸೆಂಬರ್ ತಾ. 31 ಕ್ಕೂ ಪ್ಯಾಸ್ ಬುಕ್ಕನ್ನು ಬ್ಯಾಂಕಿಗೆ ಕಳುಹಿಸಬೇಕಾಗುತ್ತದೆ.

8. ಹಣ ವಾಪಸ್ ಪಡೆಯ ಬಹುದಾದಾಗ ಪ್ಯಾಸ್ ಬುಕ್ಕನ್ನು ಬ್ಯಾಂಕಿಗೆ ಹಾಜರುಮಾಡುವುದೇ ಡಿಪಾಜಟ್‌ದಾರನ ಸರಿಯಾದ ಸಮ್ಮತಿ ಅಧಿಕಾರವೆಂದು ಎಣಿಸಲ್ಪಡುತ್ತದೆ.

9. ಈ ಡಿಪಾಜಟ್ಟುಗಳ ಕ್ರಮಗಳನ್ನು ಬದಲಾವಣೆಮಾಡುವ ಹಕ್ಕು ಬ್ಯಾಂಕು ವಹಿಸಿರುತ್ತದೆ. ಮತ್ತು ಕಾಗದದ ಮೂಲಕವೋ ಅಥವಾ ಬಹಿರಂಗವಾದ ಪ್ರಕಟನೆಯ ಮೂಲಕವೋ ಎರಡು ತಿಂಗಳ ನೋಟೀಸನ್ನು ಡಿಪಾಜಟ್‌ದಾರರಿಗೆ ಕೊಟ್ಟು ಡಿಪಾಜಟ್ಟುಗಳನ್ನು ವಾಪಸ್ ಪಾವತಿಮಾಡುವ ಅಧಿಕಾರವೂ ಬ್ಯಾಂಕಿಗೆ ಉಂಟು.

10. ಡಿಪಾಜಟ್‌ದಾರರು ತಮ್ಮ ಜಿಸ್ತು ಹಣಗಳನ್ನು ಬ್ಯಾಂಕಿನ ಯಾವ ಏಜನ್ಸಿಗಾಗಲಿ ತಲುಪಿಸುವಂತೆ ಯಾವ ಖರ್ಚೂ ಇಲ್ಲದೆ ಯಾವ ಬ್ರಾಂಚಿಗಾಗಲಿ, ಏಜನ್ಸಿಗಾಗಲಿ ಪಾವತಿಮಾಡಬೇಕೆಂದು ಕಟ್ಟಬಹುದು.

ಡಬ್ಲಿಯು ಸಿ. ರೋಸ್,
ಮ್ಯಾನೇಜರ್.

[150-2]

WANTED

An active and influential Sole District Age[nt] for the Districts of Bangalore, Tumkur, Shimog[a,] Kolar, and Coorg on liberal terms of Commissi[on] and monthly Office allowance. None but th[ose] who can guarantee good business need apply to

Messrs. VENKATACHALAM & SONS,
Chief Agents,
Hindustan Co-operative Insurance Society, Lt[d.]
166, Dodpet, near Old Taluk Cutcherry,
[224-31] *MYSORE.*

ಓರಿಯಂಟಲ್ ಗ॥ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ

ಕಂಪನಿಯ ಫಂಡು.............ರೂ. 4,45,00,000

ಕಂಪನಿಯಿಂದ ಪಾವತಿ ಆಗಿರುವದು ,, 4,00,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ [...]ಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಬೇಕೆಂದಿರುವವರು ಈ ವಿಳಾಸದಾರರಿಗೆ ಬರೆದುಕೊ[ಂಡರೆ] ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ.—ಮ॥ ಎಂ. ಎಸ್. [...] ಚೀಫ್ ಏಜೆಂಟ್, ಬೆಂಗಳೂರು; ಮ॥ ಎಂ. ಎಸ್. ಸಂಜಪ್ಪನ[ವರು] ಅಥವಾ ಮ॥ ವೆಂಕಟಸುಬ್ಬಯ್ಯನವರು, ಕಂಪನಿ ಏಜಂಟರು, ಮೈಸೂರು; ಅ[...]

[194-41] ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ, ಮದರಾ[ಸು]

ಹಿಂದುಸ್ಥಾನ್ ಕೋಆಪರೆಟಿವ್ ಜೀವವಿಮೆ ಸಂಘ [...]

ಹಿಂದುಸ್ಥಾನ್ ಕಟ್ಟಡಗಳು—ಕಲ್ಕತ್ತಾ.

ಕಂಪೆನಿಯ ಮೂಲಧನ (ಒಂದು ಕೋಟಿ ರೂಪಾಯಿ) 1,00,00,00[0]

ಪಾವತಿಯಾದ ಮೊಬಲಗು...... 10,50,00[0]

ವಸೂಲಾದ ಮೊಬಲಗು ...... 87,00,00[0]

ಈ ಕಂಪೆನಿಯಲ್ಲಿ ಪಾಲಿಸಿದಾರ್ರಿಗೆ ಬಹಳ ಕಮ್ಮಿಯಾದ ದರಗಳ ಪ[ಟ್ಟಿಯ]ನ್ನು ಮಾಡಿರುವುದು. 1912 ನೇ ಇಸ್ವಿಯ ಇಂಡಿಯಾ ಗವರ್ನ್‌ಮೆಂಟಿನ ವಿಮೆ ಕಂಪನಿಯ ಆಕ್ಟುಗಳ ಪ್ರಕಾರ ಸರ್ಕಾರದಲ್ಲಿ 2 ಲಕ್ಷ ರೂಪಾ[ಯಿ]ಗಳನ್ನು ಡಿಪಾಜಟ್ಟು ಮಾಡಲ್ಪಟ್ಟಿರುತ್ತೆ. ಮತ್ತು ಅನೇಕ ಮಹಾರಾ[ಜ]ರು ಮುಂತಾದ ದೊಡ್ಡವರು ಪ್ರೆಸಿಡೆಂಟರಾಗಿರುವದರಿಂದ ಈ ಕಂಪೆ[ನಿಯ] ಅಭಿವೃದ್ಧಿಸ್ಥಿತಿಯನ್ನು ಪ್ರಕಟಿಸಿ ಮಾಡುವುದಕ್ಕೆ ಸಂತೋಷವಾಗುತ್ತದೆ.

ಸುಲಭವಾಗಿ ಹಣವನ್ನು ಪಾರ್ಟಿಯವರ ಮನೆಯಲ್ಲೇ ಜಾಗ್ರತೆ ಪಾ[ವತಿ] ಏರ್ಪಾಡು ಮಾಡಲ್ಪಡುತ್ತೆ. ಆದ್ದರಿಂದ ಪಾಲಿಸಿದಾರ್ರು ಮತ್ತು ಇದಕ್ಕೆ [...] ಏಜಂಟ್ರುಗಳು ತುಂಬಾ ಅದೃಷ್ಟವಂತರೆಂಬುವದರಲ್ಲಿ ಸಂದೇಹವಿಲ್ಲ.

ಹೆಚ್ಚಿನ ವಿಷಯಗಳಿಗೂ, ಫಾರಂ ಮತ್ತು ಪ್ರಾಸ್‌ಪೆಕ್ಟಸುಗಳಿಗೂ ಕೆ[ಳಗಿನ] ವಿಳಾಸಕ್ಕೆ ಜಾಗ್ರತೆಯಾಗಿ ಬರೆಯಿರಿ. [243-31]

ವೆಂಕಟಾಚಲಂ ಅಂಡ್ ಸನ್ಸ್, ಚೀಫ್ ಏಜಂಟ್ರು,
166, ದೊಡ್ಡಪೇಟೆ, ಮೈಸ[ೂರು]

ನ್ಯಾಷನಲ್ ಅಷೂರೆನ್ಸ್ ಕಂಪನಿ, ಲಿಮಿಟೆ[ಡ್]

ವಿಜಯನಗರಂ ಸಿಟಿ.

1905 ರಲ್ಲಿ ಸ್ಥಾಪಿಸಲ್ಪಟ್ಟದ್ದು.

1912 ನೇ ಆಕ್ಟು ಪ್ರಕಾರ ಬದಲಾಯಿಸಿದೆ.

ಗವರ್ನ್‌ಮೆಂಟ್ ಸೆಕ್ಯೂರಿಟಿಗಳನ್ನು ಪಡೆದಿದೆ.

ಕಂಪನಿ ಆಸ್ತಿಯನ್ನು ಹಂಚಿಕೊಳ್ಳುವ ಷೇರುದಾರರಿಲ್ಲ

ವೈದ್ಯರ ಪರೀಕ್ಷಾ ಸರ್ಟಿಫಿಕೇಟು ಅವಶ್ಯವಿಲ್ಲ.

ಬೋನಸ್ ಹಣ ಅಪಾರವಾಗಿ ಪಾವತಿ ಮಾಡಿದೆ.

ಜೀವವಿಮೆ—ತಿಂಗಳ ಚಂದಾ 1 ನೇ ಕ್ಲಾಸ್ ರೂ. 1; 2 ನೇ ಕ್ಲಾಸ್ ರೂ. 0[...]

ಮದುವೆ ಫಂಡು—ತಿಂಗಳ ಚಂದಾ ರೂ. 1-0-0.

ಇದು ಬಹು ಲಾಭಕರವಾದ ಮತ್ತು ಸುರಕ್ಷಿತವಾದ ಕಂ[ಪನಿ]. ವಿಮೆ ಮಾಡತಕ್ಕವರಿಗೂ ಫಂಡು ಪಡೆಯತಕ್ಕವರಿಗೂ ತು[ಂಬಾ] ಅನುಕೂಲವಾಗಿರುತ್ತದೆ. [133-4]

ಏಜಂಟರು ಬೇಕು. ಧಾರಾಳವಾದ ಕಮೀಷನ್ ಸಿಗ[ುವುದು]. ಕಂಪನಿಯ ಪ್ರಾಸ್ಪೆಕ್ಟಸ್ಸು ಬಿಟ್ಟಿ ಕೇಳಿದವರಿಗೆ ಕೊಡುತ್ತೆ. ವಿಳಾಸಕ್ಕೆ ಬರೆದುಕೊಳ್ಳಿ:—

ವಿ. ಬಿ. ಶ್ರೀಕಂಠಯ್ಯನವರು, ಮೈಸೂರು ಮತ್ತು ಕೊಡಗಿನ ಚೀಫ್ ಏಜೆಂಟ್, ಕೋಟೆ, ಬೆಂಗಳೂರು ಸಿಟಿ.

V. B. Srikantiah,
Chief Agent, Mysore [&] Coorg, Fort, Bangalore [City].

ಕುಂತಲಾನಂದ ತೈಲವು.

192-42

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಹುಮಾನ ಬಿಲ್ಲೆಗಳನ್ನು ಎಂಟು ಸರ್ಟಿಫಿಕೇಟುಗಳನ್ನು ಪಡೆದಿದೆ. ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು. ಈ ತೈಲವು ಕೂದಲನ್ನು ಅನ್ಯಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನು ಹೋಗಗೊಳಿಸುತ್ತದೆ. ಸುಗಂಧವನ್ನು ಹರಡಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದ್ದಾಗಿದೆ. ಬೆಲೆ ಬಾಟ್ಲಿಗೆ 1 ರೂಪಾಯಿ 3 ಬಾಟಲಿಗೆ 3 ರೂಪಾಯಿ 10 ಆಣೆ. ಅಂಚೆ ಹಾಸಲು ಬೇರೆ. ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ.

ನಮ್ಮ ವಿಳಾಸ:—ಬಿ. ಎಮ್. ನಾಥ ಮತ್ತು ಕಂಪನಿ,
ವೇಪೇರಿ, ಮದರಾಸ್.

ಯಾಕೆ ಪರೀಕ್ಷಿಸಬಾರದು ? ಭಂಗಾರದ ಪದಕ ಬಂದಿದೆ.

ಸೆಂಟ್, ಅತ್ತರ್‌ಗಳಲ್ಲೆಲ್ಲಾ ಶ್ರೇಷ್ಠವಾದದ್ದು
ಅಟೋ ಮೋಹಿನಿ

ಇದು ರಜಿಸ್ಟರ್ ಆಗಿದೆ. ಈಗಿನ ಕಾಲದಲ್ಲಿ ಇದೇ ಹೆಚ್ಚಿನ, ಸುವಾಸನೆಯುಳ್ಳ, ಮನೋಹರವಾದ ಮತ್ತು ಸರಿಯಾದ ಪರಿಮಳದ ದ್ರವ್ಯವು. ಈ ವಸ್ತ್ರಕ್ಕೆ ನಾಲ್ಕು ತೊಟ್ಟು ಹಾಕಿಕೊಂಡರೆ ನಾಲ್ಕು ದಿನಗಳ ತನಕ ಘಮಘಮಿಸುವ ಸುವಾಸನೆ ಇರುತ್ತೆ, ಹಾಗೆ ದೀರ್ಘಕಾಲ ನಿಲ್ಲತಕ್ಕದ್ದಲ್ಲವೆಂದು ರುಜುವಾತು ಮಾಡಿಕೊಡುವವರಿಗೆ ನಾವು ಒಂದು ನೂರು ರೂಪಾಯಿ ಬಹುಮಾನ ಕೊಡುತ್ತೇವೆ. ಪರೀಕ್ಷೆಮಾಡಿ ನೋಡಿ, ಬಹುಮಾನವನ್ನು ಸಂಪಾದಿಸಿಕೊಳ್ಳಿ!

ಕ್ರಯ ½ ಔನ್ಸ್ ಗಾಜಿನ ಬಿರಡೆಯ ಬಾಟ್ಲಿಗೆ ರೂ. 2–0–0.
,, 1 ಡ್ರಾಂ ಕೊಳವೆ ,, ,, ,, 0–12–0.

ಅಟೊ ಮೋಹಿನಿ ಪರಿಮಳದ ಕಾರ್ಡುಗಳು ಹಜಾರ್ 1 ಕ್ಕೆ ರೂ. 0-12-0

ಎಲ್ಲರಲ್ಲೂ ವಿಕರಿಗೆ ಇಟ್ಟಿದೆ.

ಮದರಾಸ್ ಅಧಿಪತ್ಯಕ್ಕೆಲ್ಲಾ ಏಜಂಟರು—
ಷಾ ಭಗವಾನ್‌ದಾಸ್ ಚೂನಿಲಾಲ್ ಕಂಪನಿ,
[251–30] ೧೬೩, ಚೈನಾಬಜಾರ್ ರೋಡ್, ಮದರಾಸ್.

ಸುಖಕರ, ಆನಂದ,
ಬಹಳ್ ಅವಶ್ಯ.
ಈಗ ತಾನೇ ಕಂಡುಹಿಡಿದಿದೆ.

ಜರ್ಮನ್ ರಾಜ್ಯದಲ್ಲಿ ನೂರಾರು ವರುಷಗಳಿಂದ ಉಪಯೋಗದಲ್ಲಿದೆ.

ಸೆಶಿಂತ್ರಾನ

ಬೆಳ್ಳಿಯ ವರಕು ಸುತ್ತಿದ ಮುತ್ತುಗಳು.

(1) ಮನಸ್ಸಿಗೆ ಹರ್ಷವನ್ನೂ ಉಲ್ಲಾಸವನ್ನೂ ಕೊಟ್ಟು ಜೀರ್ಣಶಕ್ತಿಯನ್ನುಂಟುಮಾಡುವುದು.

(2) ಹಾಡುವವರಿಗೆ ವರಪ್ರಸಾದವಾದದ್ದು.

(3) ಬಾಯಿ ದುರ್ಗಂಧ, ಗಂಟ್ಲು ಗಾರೆನ್ನುವುದು, ಉಬ್ಬಸ, ಸಮುದ್ರಯಾನದ ಜುಗುಪ್ಸೆ, ಈ ಮೊದಲಾದವನ್ನು ಹುಟ್ಟದಂತೆ ಅಡ್ಡಿಮಾಡುತ್ತದೆ.

(4) ತಾಂಬೂಲದೊಡನೆ ಸೇವಿಸುವುದಕ್ಕೆ ಅತ್ಯಂತ ಹಿತಕರವಾಗಿದೆ. [73–17]

ಒಂದು ಸಲ ಪರೀಕ್ಷೆಮಾಡಿದಲ್ಲಿ ಯಾವಾಗಲೂ ಒಂದು ಪೊಟ್ಲ ಇದ್ದೇ ತೀರಬೇಕೆಂದು ನೀವೇ ನಿಶ್ಚಯಿಸುವಿರಿ.

ಮುತ್ತಿನಂತಿರುವ 45 ಮಾತ್ರೆ ಉಳ್ಳ ಪೊಟ್ಲಕ್ಕೆ ಕ್ರಯ 2 ಆಣೆ.
,, 95 ,, ,, ,, ,, 4 ,,
,, 200 ,, ,, ,, ,, 7 ,,
,, 200 ,, ಸುಂದರವಾದ ಟೀನ್ ಡಬ್ಬಾ 9 ,,
,, 80 ,, ,, ,, ,, 4 ,,
,, 100 ,, ಬಾಟ್ಲಿಯಲ್ಲಿ 4½ ,,

ಈ ಕ್ರಯದಷ್ಟು ಸ್ಟಾಂಪನ್ನೂ, ಅಂಚೆ ವೆಚ್ಚಕ್ಕೆ ಜಾಸ್ತಿ ಒಂದಾಣೆಯನ್ನೂ ಸೇರಿಸಿ ಕಳುಹಿಸಬೇಕು. ಕಾಗದಪತ್ರವನ್ನೂ ವಿಳಾಸಗಳನ್ನೂ ನಮಗೆ ಇಂಗ್ಲೀಷಿನಲ್ಲೇ ಬರೆಯತಕ್ಕದ್ದು.

ನಮ್ಮ ವಿಳಾಸ—ಸೆಶಿಂತ್ರಾನ ಡಿಪೋ,
ಮೋರ್ಸೂರ್ ಬಿಲ್ಡಿಂಗ್, ಪ್ರಿನ್ಸೆಸ್ ಸ್ಟ್ರೀಟ್,
ಬೊಂಬಾಯಿ 2;
ಅಥವಾ, ಬಿ. ಸಿ. ಷಾ ಕಂಪೆನಿ,
509 ಮಿಂಟ್ ಬೀದಿ, ಮದರಾಸ್.

CHAMBERLAIN'S PAIN BALM.

ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು.

3-2



ಚಿನ್ನೆಲುಬಿನ ನೋವು, ಪಕ್ಕಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ತಲೆನೋವು, ಜಜ್ಜಾದ ಕಡೆ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ.

ವಾಯುನೋವೆಂದರೇನು ?

ಕೀಲುಗಳಲ್ಲೂ ಮಣಿಕಟ್ಟುಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಕಳೆಯುವ ಬಾಧೆ, ಖಂಡಗಳು ಇರಿಯುವುದು, ವಿಶ್ರಾಂತಿ ಕೊಡದೆ ಇರುವುದು, ನಿದ್ದೆಹತ್ತದೆ ಇರುವುದು—ಇವೇ, ಇದೆಲ್ಲಾ ನಿಮಗೆ ಯಾವಾಗ ಉಂಟಾಗುತ್ತದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು.

ಆಗ ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ.

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಕಾವು ಮೂಳೆಯೊಳಕ್ಕೆ ವ್ಯಾಪಿಸುತ್ತದೆ. ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ. ಮನಸ್ಸಿಗೆ ಉಲ್ಲಾಸವಾಗುತ್ತದೆ. ಆದನ್ನೇ ಆಗಿಂದಾಗ್ಗೆ ಉಪಯೋಗಿಸುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಮುಟ್ಟಿದ್ದೇನೂ ಅಲ್ಲ.

ಇದು ಎಲ್ಲೆಲ್ಲೂ ವಿಕರಿಯಾಗುವುದು. ಸಣ್ಣ ಶೀಸೆಗೆ ೧ ರೂಪಾಯಿ. ದೊಡ್ಡ ಶೀಸೆಗೆ ೨ ರೂಪಾಯಿ.

ಪ್ರೊಫೆಸರ್ ಬ್ರೇಸ್ಲರ್
ಇಲೆಕ್ಟ್ರೊ ಪೆಯಿನಾಡ್ಯನ್

ಮನುಷ್ಯನ ಶರೀರದಲ್ಲಿ ವಿದ್ಯುಚ್ಛಕ್ತಿ ವ್ಯಾಪಿಸಿರುವದೆಂತಲೂ, ವಿದ್ಯುಚ್ಛಕ್ತಿ ಕಡಮೆಯಾದ ಕೂಡಲೇ ನಾನಾ ತರದ ವ್ಯಾಧಿಗಳು ಲಭಿಸುವದೆಂತಲೂ, ಅಂತಹ ವ್ಯಾಧಿಗಳನ್ನು ಶೀಘ್ರ ಗುಣಪಡಿಸಲು ವಿದ್ಯುಚ್ಛಕ್ತಿ ಮಿಶ್ರವಾದ ಔಷಧದ ಉಪಯೋಗದಿಂದಲ್ಲದೆ ಬೇರೆ ಔಷಧಗಳಿಂದ ವ್ಯಾಧಿಗಳನ್ನು ಶೀಘ್ರ ಗುಣಪಡಿಸುವದು ಕಷ್ಟವೆಂತಲೂ ಅಮೇರಿಕಾ ದೇಶದ ವೈದ್ಯಶಾಸ್ತ್ರ ಪಂಡಿತರು ವೈದ್ಯಶಾಸ್ತ್ರ ಪರಿಶೋಧನೆಯಿಂದ ಸಿದ್ಧಿಸಿರುವರು. ಈ ಔಷಧವು ಉಪಯೋಗಿಸಿದ ಕೂಡಲೇ ದೇಹಕ್ಕೆ ಸಾಕಾಗುವಷ್ಟು ವಿದ್ಯುಚ್ಛಕ್ತಿಯನ್ನುಂಟುಮಾಡಿ ವ್ಯಾಧಿಯನ್ನು ಅತಿ ಶೀಘ್ರ ಗುಣಪಡಿಸುತ್ತೆ. ಪ್ರಾಚೀನಕಾಲದ ಔಷಧಗಳಿಗೆಲ್ಲವು ಇದು ಅತ್ಯುತ್ತಮವಾದದ್ದು. ಒಂದಾವರ್ತಿ ಪರೀಕ್ಷಿಸಿ ನೋಡಿದರೆ ಇದರ ಗುಣವು ವ್ಯಕ್ತವಾಗುತ್ತೆ.



ಎಲೆಕ್ಟ್ರೊಪೆಯಿನಾಡ್ಯನ್ ತೈಲದಿಂದ ಗುಣಪಡುವ ವ್ಯಾಧಿಗಳು:—

ತಿಮುರುವಾಯುವು, ಕೀಲ್ವಾಯುವು, ಪಾರ್ಶ್ವವಾಯುವು, ಕ್ಷಯ, ಕೆಮ್ಮು, ನೆಗಡಿ, ವಾಯುನೋವು (ಕೈಕಾಲು ಹಿಡಿತ), ಉಳುಕುಹಿಡಿದಿದ್ದರು, ಕಠಿನಕ್ಕಾಗಿ ನಡುನೋವು (ಸೊಂಟನೋವು), ಪಕ್ಕಶೂಲೆ, ಹಲ್ಲುನೋವು, ತಲೆನೋವು, ಆರೆ ನೋವು, ಉಬ್ಬಸ, ವಿಷಜ್ವರದ ಗಡ್ಡೆಗಳಿಗೂ ಮತ್ತು ಮಕ್ಕಳ ಪಕ್ಕಶೂಲೆ, (ಅಳ್ಳೆ) ಕೃತ್ಯದೋಷಗಳೂ, ವಿಷಹುಳಗಳ ಕಡಿತಗಳಿಗೂ (ಚೇಳು ಮುಂತಾದದ್ದು), ಇದಕ್ಕೆಲ್ಲಾ ಬಹಳ ಶ್ಲಾಘನೀಯವಾದದ್ದು. [12–27]

ಉಪಯೋಗಿಸುವ ಕ್ರಮವು ಹಿಂದುದೇಶದ ಎಲ್ಲಾ ಭಾಷೆಗಳಲ್ಲಿಯೂ ಬುಡ್ಡಿಯ ಸಂಗಡ ಕಳುಹಿಸಲಾದೀತು.

ಬುಡ್ಡಿಯ ಕ್ರಯ ರೂ. ೧–8–0. ವಿ. ಪಿ. ಖರ್ಚು 0–4–0. ಏಜಂಟರು ಬೇಕು.

ಮುಖ್ಯ ಏಜಂಟರು:—ಗುರುಬಸವ ಅಂಡ್ ಕಂಪನಿ, ಮದರಾಸ್.

THE MYSORE GOVERNMENT SECURITY

Life and Marriage Assurance Co., Ltd.

Head Office: Mysore.

CAPITAL Rs. 1,00,000

(INCORPORATED UNDER THE MYSORE COMPANIES' REGULATION No. III OF 1895.)

CAUTION:—Before you go in for a Provident, Life or Marriage Policy, please ask for a copy of our Company's prospectus, which will explain to you the mode of the working of the present-day provident companies in India, and enables you to select a good institution, where your hard-earned money will be safe.

Absolute Security, **Attractive Schemes,** **Soundest Principles.**

Wanted Chief Agents and agents throughout India on Commission and Salary. For prospectuses, etc., please apply to

Mr. M. L. NAGANNAH,
Managing Agent, MYSORE

A NOVELTY OF THE TWENTIETH CENTURY!

THE MYSORE GOVERNMENT SECURITY

MUTUAL PROPERTY INVESTMENT COMPANY, LTD.

HEAD OFFICE: MYSORE.

CAPITAL Rs. 1,00,000.

(INCORPORATED UNDER THE MYSOR COMPANIES' REGULATION No. III OF 1895.)

BANKING:—Every sort of banking business transacted. The company's shares are most valuable and are within the reach of all.

Land and house purchase and investment policies are a speciality of the company, by which the company advances loans on the security of immovable properties to purchase houses and lands or to liquidate prior debts, and recovers the same by easy monthly instalments.

WANTED

Four local directors for each and every taluk of the Mysore Province on liberal terms to represent the company. Only men of position and influence need apply. For prospectuses, etc., please apply to

It is to be kindly noted by the public that Mr. B. C. Gopalasawmy has been appointed as our District Agent for Hassan District. Our policy-holders in Hassan taluk can pay their premia to our above district agent as Mr. G. S. Ramakrishniah's services were already dispensed with.

[161-40]

Mr. M. L. NAGANNAH,
Managing Agent, MYSORE

ಮಧುರೆ ಜುನ್ನಡಿ ಅಂಚಿನ ಸೀರೆ ಅಪ್ಪಲ್ ರಬಿಂ ರೂ. 2-6-0.
ಜುಲೈ ತಿಂಗಳ ಒಳಗಾಗಿ ತರಿಸಿಕೊಳ್ಳುವರಿಗೆ ಒಂದು ಸಿಂಗಪೂರು ರವಿಕೆಯನ್ನು ಪ್ರತಿ ಸೀರೆಯ ಇನಾಮಾಗಿ ಕೊಡುತ್ತೇವೆ. [99-5]



ಇದು ಉಡುವುದಕ್ಕೆ ರಢೂಢಿಯಾಗಿಯೂ, ನೋಟಕ್ಕೆ ನಯವಾಗಿಯೂ, ಬೆಲೆ ಸುಲಭವಾಗಿಯೂ ಇದೆ. ಬಣ್ಣ ಹೋಗದು. ಸೀರೆಯ ಉದ್ದ 18 ಮೊಳ. ಸುಂದರವಾದ ಸೆರಗು. ಒಂದನ್ನು ತರಿಸಿ ಪರೀಕ್ಷಿಸಿ. ವಿಳಾಸ—ವಿ. ಕೃಷ್ಣಸ್ವಾಮಿ ಮೊದಲಿಯಾರ್, ನಂ. 27, ಬಂದರ್ ಬೀದಿ, ಜ. ಟ., ಮದರಾಸು.

ನೂತನವಾಗಿ ತಯಾರಾಗಿ ಬಂದ ಮನೋಹರವೆಯನ್ನುಂಟುಮಾಡುವ

ವಿಚಿತ್ರ ಎಲೆಕ್ಟ್ರಿಕ್ ಪಾಕೆಟ್ ದೀಪವು.

ಇದರ ಕ್ರಯ ದೀಪ 1 ಕ್ಕೆ ರೂ. 3-0-0 ಮಾತ್ರ.

ಎತ್ತಿದ ಕ್ಷಣವೇ ಆರಿಹೋಗುವ ದೀಪಗಳ ಡಾಂಭೀಕ ಪ್ರಕಟನೆಗಳನ್ನು ನೋಡಿ ಮೋಸಹೋಗಬೇಡಿ.

ಘನವಂತರೇ, ಈ ಯಂತ್ರದಿಂದ ನಾವು ಬೆಳಕು ಬೇಕಾದಾಗ ಇದರ ಗುಂಡಿ (ಬಟನ್) ಅಮುಕಿದಲ್ಲಿ ಕಾಂತಿಯುಳ್ಳ ಮತ್ತು ಅಧಿಕ ತೇಜಸ್ಸುಳ್ಳ ಬೆಳಕು ಉಂಟುಮಾಡುತ್ತ. ರಾತ್ರಿ ಆಕಸ್ಮಾತ್ತು ಜರುಗುವ ಅಪಾಯಗಳಿಗೂ, ಪ್ರಯಾಣಿಕರಿಗೂ ವಿಶೇಷ ಸಹಕಾರಿಯಾದ ಆಶ್ಚರ್ಯ ದೀಪವು. ಬೆಂಕಿಕಡ್ಡಿ, ಎಣ್ಣೆ, ಲಾಂದ್ರ ಮುಂತಾದ್ದನ್ನು ಹುಡುಕಬೇಕಾದ ಕೆಲಸವಿಲ್ಲ. ಬೇಕಾದಾಗ ಅಮುಕಿದಲ್ಲಿ ತನ್ನಷ್ಟಕ್ಕೆ ತಾನೇ ಪ್ರಕಾಶ ಉಂಟಾಗುವದು. ಇದನ್ನು ಉಪಯೋಗಿಸುವ ಕ್ರಮ ಅಚ್ಚು ಪತ್ರಿಕೆಯನ್ನು ದೀಪದ ಜೊತೆಯಲ್ಲಿ ರವಾನಿಸುತ್ತೇವೆ. ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.

ನಮ್ಮ ವಿಳಾಸ—ಎನ್. ಎಂ. ಸ್ವಾಮಿ ಅಂಡು ಕಂಪೆನಿ,
[109-9] ನಂ. 44, ನಂಬುಳಯ್ಯರ್ ಬೀದಿ, ಮದರಾಸು.

ಹಾರಮೋನಿಯಂ ಕಲಿಯುವ ಪುಸ್ತಕ. ಕ್ರಯ 6 ಆಣೆ.

ಇದು ಪಂಡಿತ ಮಿತ್ರದಾಸರವರಿಂದ ಪ್ರಚುರಿಸಲ್ಪಟ್ಟಿರುತ್ತೆ. ಇದರಲ್ಲಿ 40 ಪಾರಸಿ ಹಾಡುಗಳು ಹಾರಮೋನಿಯಂ ನುಡಿಸುವ ವಿಧಾನ, ಆರೋಹಣ ಅವರೋಹಣಗಳು, ಮತ್ತು ಸೌಖ್ಯಗುರ್ತುಗಳು ತಿಳುಹಿಸಲ್ಪಟ್ಟಿರುತ್ತೆ. ಸ್ವಲ್ಪ ಆಂಗ್ಲೇಯ ಭಾಷಾ ಪರಿಶ್ರಮವಿರುವವರೆಲ್ಲರೂ ಈ ಗ್ರಂಥದ ಸಹಾಯದಿಂದ ಹಾರಮೋನಿಯಂ ನುಡಿಸುವದನ್ನೂ ಹಾಡುವದನ್ನೂ ಕಲಿಯಬಹುದು.

ತಂಜಾವೂರು ಗೆಜ್ಜೆ ಅಡ್ಡಿಗೆ ಕ್ರಯ 6 ಅಣೆ.



ಇದು ಕೆನಡಿಯನ್ ಗೋಲ್ಡ ನೂತನ ಲೋಹದಿಂದ ಗಟ್ಟಿಗೆಜ್ಜೆಗಳನ್ನು ತಯಾರಿಸಿ ಸುಂದರವಾಗಿ ಕೊಕ್ಕೆಗಳು ಮತ್ತು ಕುರ್ತುಗಳು ಇಟ್ಟು ಎಲೆಕ್ಟ್ರಿಕ್ ಶಕ್ತಿಯಿಂದ ಗಟ್ಟಿಯಾದ ಚಿನ್ನವನ್ನು ಹಾಕಿ ನೋಡುವವರಿಗೆ ಬಹು ಆಶ್ಚರ್ಯವಾಗುವ ಹಾಗೆ ಸ್ವಲ್ಪ ಕ್ರಯವನ್ನಿಟ್ಟು ಅಡ್ಡಿಗೆಯನ್ನು ತಯಾರಿಸಿರುತ್ತೇವೆ. ಇದು ಗಾಜಿನ ಮಣಿಗಳಲ್ಲ. ನಿಜವಾದ ಗಟ್ಟಿ ಗೆಜ್ಜೆಗಳು. ಸ್ತ್ರೀಯರೂ ಹುಡುಗಿಯರೂ ಕೊರಳಿಗೆ ಧರಿಸಿಕೊಳ್ಳುವದಕ್ಕೆ ಲಾಯಖಾದದ್ದು. [151-1]
ವಿಳಾಸ—ಎಸ್. ನರಸಿಂಹನಾಯುಡು, ಟಿಪ್ಲಿಕೇನ್, ಮದರಾಸ್.

BRAHMAPPA TAVANAPPANAVAR,

Merchant & Commission Agent
Agent to Messrs. Currimbhoy Ebrahim & Co's Mills.
BOMBAY.

ನಾವು ಮುಂಬೈ ಮೆಸ್ಸರ್ಸ್ ಕರೀಂಬಾಯ್ ಇಬ್ರಾಹಿಂ ಅಂಡ್ ಕಂಪೆನಿಯವರ ಬಾಬತು, ಮೆಸ್ಸರ್ಸ್ ಫಜುಲ್ಭಾಯಿ ಮಿಲ್ಸ್ ಲಿಮಿಟೆಡ್ ಮುಂಬೈ. ದಿ ಕ್ರೆಸೆಂಟ್ ಮಿಲ್ಸ್ ಲಿಮಿಟೆಡ್ ಮುಂಬೈ, ಕರೀಂಬಾಯ್ ಮಿಲ್ಸ್ ಲಿಮಿಟೆಡ್ ಮುಂಬೈ, ದಿ ಇಂಡಿಯನ್ ಬ್ಲೀಚಿಂಗ್, ಡೈಯಿಂಗ್ ಅಂಡ್ ಪ್ರಿಟಿಂಗ್ ವರ್ಕ್ಸ್ ಲಿಮಿಟೆಡ್ ಮುಂಬೈ, ದಿ ಇಂಡೋರ್ ಅಂಡ್ ಮಾಳ್ವಾ ಯುನೈಟೆಡ್ ಮಿಲ್ಸ್ ಲಿಮಿಟೆಡ್ ಇಂಡೋರ್, ಇವುಗಳಲ್ಲದೆ ಇನ್ನೂ ಅನೇಕ ಮಿಲ್ಲುಗಳ ಬಟ್ಟೆಗಳನ್ನು ಮೈಸೂರು ಸೀಮೆಯಲ್ಲೆಲ್ಲಾ ವಿಕ್ರಯಮಾಡಲು ಕಮಿಷನ್ ಏಜಂಟರಾಗಿರುತ್ತೇವೆ. ನಮ್ಮ ಮುಖಾಂತರ ಮಾಲು ತರಿಸಿಕೊಳ್ಳತಕ್ಕವರಿಗೆ ಮುಂಬೈಯಲ್ಲಿ ಬಟ್ಟೆಗಳ ಮೇಲೆ ವಿಧಿಸತಕ್ಕ ದಳ್ಳಾಳಿ, ಟೋಟಾದಳ್ಳಾಳಿ, ಮೊಕ್ಕಾದುಮ್ಮ, ಗಂಟುಕಟ್ಟುವದು, ಸ್ಟೇಷನ್ನಿಗೆ ಹೇರಿಸುವದು, ಹುಂಡೇಕರಿ ವಗೈರೆ ಯಾವ ವಿಧವಾದ ಖರ್ಚೂ ತಗಲದೆ ಇರುವದರಿಂದ ಮುಂಬೈಯಿಂದ ತರಿಸುವದಕ್ಕಿಂತಲೂ ಸುಲಭ ದರದಲ್ಲಿ ಸಿಕ್ಕುತ್ತೆ. ಮತ್ತು ಮುಂಬೈಗೆ ಹೋಗಿಬರುವ ದೇಹಶ್ರಮವೂ, ಖರ್ಚೂ ಉಳಿಯುತ್ತೆ. ಹೆಚ್ಚು ಬಟ್ಟೆಗಳನ್ನು ಏಕಕಾಲದಲ್ಲಿ ಕೊಳ್ಳತಕ್ಕವರಿಗೆ ಮಾಲಿನ ಮೇಲೆ ಸೇಕಡ 3 ರೂಪಾಯಿ ಲಾಗಾಯ್ತು 4½ ರೂಪಾಯಿ ವರಿಗೆ ಡಿಸ್ಕೌಂಟು ದೊರೆಯುತ್ತೆ. [97-12]

ನಮ್ಮ ಟ್ರಾವಲಿಂಗ್ ಏಜಂಟರ ವಶ ಬಟ್ಟೆಗಳ ನಮೂನೆಗಳನ್ನು ಕೊಟ್ಟು, ದರ ಒಬ್ಬ ವ್ಯಾಪಾರಗಾರನಿಗೆ ತೋರಿಸಿ ಆರ್ಡರು ತೆಗೆದುಕೊಳ್ಳುವ ಏರ್ಪಾಡು ಮಾಡಿರುತ್ತೆ. ನಮ್ಮ ದಾವಣಗೆರೆ ಮತ್ತು ಬೆಂಗಳೂರು ಆಫೀಸುಗಳಲ್ಲಿ ಮಾಲು ಹಾಜರು ಸಹ ದೊರೆಯುತ್ತೆ.

ಬಟ್ಟೆಗಳನ್ನು ವ್ಯಾಪಾರಮಾಡಲು ಅನುಭವಸ್ಥರಾದ ಏಜಂಟರುಗಳೂ ಮತ್ತು ಗುಮಾಸ್ತರುಗಳೂ ಬೇಕಾಗಿದೆ.

ಎಲ್ಲಾ ಕಾಗದಪತ್ರಗಳೂ ದಾವಣಗೆರೆ ಆಫೀಸಿಗೆ ಬರೆಯಲ್ಪಡಬೇಕು.

ಹೆಡ್ ಆಫೀಸು:—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್, ದಾವಣಗೆರೆ. ಬ್ರಾಂಚ್ ಆಫೀಸು:—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಮಧುರೆ ಜುನ್ನಡಿ ಅಂಚಿನ ಸೀರೆ ಅಪ್ಪಲ್ ರಬಿಂ ರೂ. 1-15-0.

ಇದು 18 ಮೊಳ ಧಾರಾಳವಾಗಿದೆ, ಉಡಲು ಲಾಯಖಾದದ್ದು. ಬಣ್ಣ ಹೋಗದು. ಸುಂದರವಾದ ಸೆರಗು. ಫೋಟೋ ಪ್ರಕಟಣೆಗಳ ದೆಸೆಯಿಂದ ಈ ಭಾರೀ ಕ್ರಯದ ಸೀರೆಯನ್ನು ಅಸಲು ಬೆಲೆಗೆ ತಗ್ಗಿಸಿ ಮಾರುತ್ತೇವೆ. ಜಾಗ್ರತೆ ತರಿಸುವವರಿಗೆ ಮಾತ್ರ ಈ ಕ್ರಯಕ್ಕೆ ದೊರೆಯುತ್ತೆ.
ವಿಳಾಸ—ರಾಮರಾವ್, ಎಸ್. ಎಂ. ಕೋಯಿಲ್ ಬೀದಿ,
[139-3] ತಿರುವಲಿಕ್ಕೇಣಿ, ಮದರಾಸು.

ಬೆಲೆಯುಳ್ಳ ಬಾಳಿಕೆ ಬರುವ ವಾಚ್! ನ್ಯಾಯವಾದ ವಾಚ್!!

ಸಿಸ್ಟಂ ಲೀವರ್ ವಾಚ್.

ಇದರ ಕ್ರಯ ಎಂದಿಗೂ ಕಡಿಮೆಯಾಗದ ಸುಂದರವಾದ ವಾಚ್ ಸರಪಣಿ ಸಮೇತ
3 ರೂಪಾಯಿ ಮಾತ್ರ. 5 ವರುಷಗಳ ಖಾತ್ರಿ ಗ್ಯಾರೆಂಟಿ.

ಸ್ವಾಮಿ, ಈ ವಾಚ್ ನೂತನವಾದದ್ದು. ಅಂದರೆ ಶ್ರೇಷ್ಠವಾದ ಲೀವರ್ ಕೆಲಸದಿಂದ ತಯಾರಾದದ್ದು. ಬಲವುಳ್ಳ ಚಕ್ರಗಳಿಂದ ತಯಾರಾದದ್ದು. ಗಂಭೀರವಾದ ಘಂಟೆ ಮತ್ತು ಮಿನಿಟ್‌ಗಳು. ರಮಣೀಯವಾದ ನಮೂನೆ. ಕಡೆಯಲ್ಲಿಯೇ ಬೀಗ. ಮಣ್ಣು ಧೂಳು ಸೇರದಂತೆ ಒಳಗೂ ಸಹ ಗ್ಲಾಸ್ ಡೋಮ್ (ಕನ್ನಡಿ ಮುಚ್ಚಳ) ಉಳ್ಳದ್ದು. ಹರಂಪರೆ ಅಂದರೆ ಅನೇಕ ವರುಷಗಳ ಪರಿಯಂತರ ಬಾಳಿಕೆ ಬರುವಂಥಾದ್ದು. ಇದಕ್ಕೆ ಯಾವ ವಿಧವಾದ ಬಹುಮಾನವೂ ಇಲ್ಲ. ಯಾಕೆಂದರೆ ವಾಚ್ ಬಹು ಶ್ರೇಷ್ಠವಾದದ್ದು. ಮನಸ್ಸು ಒಪ್ಪದಲ್ಲಿ ಹಣ ವಾಪಸ್ ಮಾಡಲ್ಪಡುತ್ತೆ. ನಂಬಿಕೆಯುಳ್ಳ ವಾಚ್. [145-2] ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.
ವಿಳಾಸ—ಬಿ. ಆರ್. ವೆಂಕಟರಮಣ ಅಂಡ್ ಕಂಪೆನಿ,
ನಂ. 7 ಕೋಪ್ ವೆಂಕಟಾಚಲಯ್ಯರ್ ವೀದಿ, ಮದರಾಸು.

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು."

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು. ವಾಯು, ಕೀಲು, ಅರಶಲೆ, ತಲೆನೋವುಗಳು; ಯಾವ ಕಾರಣದಿಂದ ಹುಟ್ಟುವ ಬಾಧೆಯಾಗಲಿ, ಉಬ್ಬಸ, ಹಲ್ಲುನೋವು, ಗಂಟ್ಲು ಗಾರೆನ್ನುವುದು, ಕೆಮ್ಮುಗಳು, ಶೀತನೆಗಡಿ, ಶ್ವಾಸರೋಗ, ಜಜ್ಜು, ಉಳುಕು, ಛಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ. ಸಮೀಪದಲ್ಲಿ ಘನ ವೈದ್ಯನ ಅಂಗಡಿಗೆ ಹೋಗು. ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲು ಕೊಡಿ ಎಂದು ಕೇಳು. ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೋ. ಈ ಯುಕ್ತಿಯೋನಾದಿ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ. ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ. ಲಕ್ಷಾಂತರ ಜನರು ಗುಣಹೊಂದಿದಾರೆ: ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ. [122-6]

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡಿ. ಅದರ ಕ್ರಯ ಬಾಟ್ಲಿಗೆ 12 ಆಣೆ; ಅಂಚೆ ವೆಚ್ಚ 4 ಆಣೆ. 3 ಅಥವಾ ಹೆಚ್ಚು ಬಾಟ್ಲು ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ. ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ. ವಿಳಾಸಗಳು:—(1) ಎಸ್. ಪೀಟರ್ಸ್, 37 ಪದಮುಟಿಪಿಳ್ಳೆ ಬೀದಿ, ಪುಸಿವಾಕಂ, ವೇಪೇರಿ, ಮದರಾಸ್; (2) ಕೆ. ಎಸ್ ಕನ್ನಯ್ಯಶೆಟ್ಟರು, ಜನರಲ್ ಮರ್ಚಂಟ್, ತುಮಕೂರು.

ವಾಚಕ ಮಹಾಶಯರೇ! ಈ ಕೆಳಗೆ ಕಂಡ ಆಭರಣಗಳನ್ನು ಆಸ್ಟ್ರೇಲಿಯಾ ದೇಶದ ಬೆಳ್ಳಿ ಗಿಲೀಟಿನಿಂದ ತಯಾರಿಸಿರುತ್ತೆ. ಇದರ ರಂಗು ಎಷ್ಟು ವರುಷದೊಳಾದರೂ ಕೆಡುವುದಿಲ್ಲ. ಇದು ಸರ್ವರಿಗೂ ಧರಿಸಿಕೊಳ್ಳುವದಕ್ಕೆ ಲಾಯಖಾದದ್ದು. ಇದಕ್ಕೆ ಏಜಂಟರುಗಳು ಬೇಕು. ಸಂಬಳ ತಿಂಗಳಿಗೆ ರೂ. 15. ಬೇಕಾದವರು ಕೆಳಗಣ ವಿಳಾಸಕ್ಕೆ ಬರೆಯಿರಿ.



ಸುಂದರವಾದ ಕಾಲುಕಡಗ.

ದೊಡ್ಡವರಿಗೆ	ಚಿಕ್ಕವರಿಗೆ	ಹುಡುಗರಿಗೆ	ಮಕ್ಕಳಿಗೆ
1-8-0	1-3-0	0-14-0	0-10-0

ಸುಂದರವಾದ ಡಾಬು (ವಡ್ಯಾಣ).

ದೊಡ್ಡವರಿಗೆ	ಚಿಕ್ಕವರಿಗೆ	ಹುಡುಗಿಯರಿಗೆ
1-6-0	1-3-0	0-15-0

ಸುಂದರವಾದ ಪುದುಚೇರಿ ದುಳಿ (ಕಾಲುಗೊಲಸು).



ದೊಡ್ಡವರಿಗೆ	ಚಿಕ್ಕವರಿಗೆ	ಹುಡುಗರಿಗೆ	ಮಕ್ಕಳಿಗೆ
1-14-0	1-10-0	1-6-0	1-4-0

ತಾಕಾಕಲಂ.—ಒಂದು ರೂಪಾಯಿಗೆ ಕಮ್ಮಿ ಇಲ್ಲದೆ ತರಿಸಿಕೊಳ್ಳುವವರಿಗೆ ಸುಂದರವಾದ ಎಲೆಕ್ಟ್ರಿಕ್ ಚಿನ್ನದ ಮೈಸೂರು ಕಪ್ಪವನ್ನು ಪ್ರತಿ ಒಂದು ರೂಪಾಯಿಗೂ 1 ಕಪ್ಪವನ್ನು ಉಚಿತವಾಗಿ ಕೊಡುತ್ತೇವೆ. ಮತ್ತು ರೂಪಾಯಿಗೆ ಎರಡು ಆಣೆ ಕಮಿಷನ್ ಕೊಡುತ್ತೇವೆ.
ವಿಳಾಸ—ಎಸ್. ಎನ್. ಮೂರ್ತಿ ಕಂಪೆನಿ,
[139-3] ತಿರುವಲಿಕ್ಕೇಣಿ, ಮದರಾಸು.

ಗೃಹಕೃತ್ಯದ ನೋಟೀಸು.

ನಂಜನಗೂಡು ಕಸಬಾ ಚಾಮಲಾಪುರದಲ್ಲಿರುವ ಗಾಣಿಗರ ಸಿದ್ದೀನಾಲಂಜಪ್ಪನ ಸೊಸೆ ಮಾದಮ್ಮನು ಇದರಿಂದ ಸಮಸ್ತಜನಗಳಿಗೂ ತಿಳಿಯಪಡಿಸುವದೇನಂದರೆ—ನನ್ನ ಮಾವ ಲಂಜಪ್ಪನವರಿಗೆ ದ್ಯಾವಾಜಮ್ಮನೆಂಬ ಒಬ್ಬ ಹೆಣ್ಣುಮಗಳೂ, ದ್ಯಾವಶೆಟ್ಟಿ ಎಂಬ ಒಬ್ಬ ಗಂಡುಮಗನೂ ಇದ್ದರು. ಸದರಿ ದ್ಯಾವಶೆಟ್ಟಿಗೆ ನಾನು ಶಾಸ್ತ್ರೋಕ್ತವಾಗಿ ಮದುವೆಯಾದ ಹೆಂಡತಿ. ನನ್ನ ಮಾವನೂ, ನನ್ನ ಗಂಡನೂ ಮತ್ತು ದ್ಯಾವಾಜಮ್ಮನೂ ಸಹ ಕಾಲವಾದರು. ಆ ಲಾಗಾಯತು ನನ್ನ ಮಾವನ ಬಾಬ್ತು ವಿಶಿಷ್ಟ ಚರ ಸ್ಥಿರ ಸೊತ್ತುಗಳಿಗೂ, ಲೇಣೆ ದೇಣೆ ಮುಂತಾದ ಎಲ್ಲಾ ಆದಾಯನಷ್ಟಗಳಿಗೂ ಬಾಧ್ಯಳಾಗಿ ನಾನೇ ಅನುಭವಿಸುತ್ತಾ ಬಂದಿರುತ್ತೇನೆ. ಮುಖ್ಯಬಾಧ್ಯವಾದ ವಾರಸುದಾರರಾಗಲಿ ಹಕ್ಕುದಾರರಾಗಲಿ ಇರುವದಿಲ್ಲ. ಹೀಗಿರುವಲ್ಲಿ ನನಗೆ ಆಗದ ಕೆಲವು ಪುಂಡುಜನಗಳು ನನ್ನ ಮಾವನವರಿಗಾಗಲಿ, ನನಗಾಗಲಿ ಯಾವ ವಿಧವಾಗಿಯೂ ಸಂಬಂಧವಿಲ್ಲದ ಲಕ್ಷ್ಮಮ್ಮ, ಮಾದ ಎಂಬ ಇಬ್ಬರು ಹುಡುಗರಿಗೆ ಏನೇನೋ ದುರ್ಬೋಧನೆಗಳು ಮಾಡಿ ಸದರಿ ಹುಡುಗರಿಂದ ನನಗೆ ತುಂಬಾ ತೊಂದರೆ ಕೊಡಿಸುವದರ ಮೂಲಕ ಸದರಿ ಹುಡುಗರಿಗೆ ನನ್ನಿಂದ ಹಿಸ್ಸೆ ಕೊಡಿಸಬೇಕೆಂತಲೂ, ನಂತರ ಅವರಿಂದ ಸೊತ್ತನ್ನು ತಾವು ಬರಸಿಕೊಳ್ಳಬೇಕೆಂತಲೂ ದುರುದ್ದೇಶಗೊಂಡು ತಕ್ಕ ತರದೂದು ನಡಿಸುತ್ತಾ ಬಂದಿರುತ್ತಾರೆ. ಈ ವಿಷಯ ನನ್ನಿಂದ ಇಲ್ಲಿ ಪೊಲೀಸಿಗೆ ಫಿರ್ಯಾದಾಗಿ ವಿಚಾರಣೆ ನಡೆಯುತ್ತಾ ಇದೆ. ಮೇಲ್ಕಂಡ ಲಕ್ಷ್ಮಮ್ಮ, ಮಾದ ಎಂಬ ಹುಡುಗರ್ಯಾರೋ ನನಗೆ ಗೊತ್ತಿಲ್ಲ; ನನಗೂ ಅವರಿಗೂ ಯಾವ ಸಂಬಂಧವೂ ಇರುವದಿಲ್ಲ. ನಮ್ಮ ಕುಟುಂಬದ ಆಸ್ತಿಗಳ್ಯಾವತ್ತೂ ನನ್ನ ಸ್ವಾಧೀನಾನುಭವದಲ್ಲಿರೋಣದರಿಂದ ನನ್ನ ತಿಳುವಳಿಕೆಗೆ ಬರದೆ ಸದರಿ ಹುಡುಗರಿಂದ ಆಧಾರ, ಭೋಗ್ಯ, ಕ್ರಯ ವಗೈರೆ ಯಾರೂ ಮಾಡಿಕೊಳ್ಳಕೂಡದು. ಹಾಗೇನಾದರು ಮಾಡಿಕೊಂಡದ್ದೇ ಆದರೆ ಅದು ಸಲ್ಲಲಾರದು. ನನಗೆ ಬರತಕ್ಕ ಅಂಗಡಿ ಮನೆ ವಗೈರೆ ಬಾಡಿಗೆಗಳು ಸಹ ಅವರಿಗೆ ಪಾವತಿಮಾಡಕೂಡದು ಎಂಬೀ ಅಂಶಗಳನ್ನು ಸರ್ವರ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸಿದೇನೆ.

1-7-1914. [152-1] ಮಾದಮ್ಮನ ಗುರ್ತಿನ ರುಜು.

ಹಿಂದುಸ್ಥಾನದಲ್ಲಿ ಮಕ್ಕಳು

ಬಹಳ ಉಷ್ಣರಾಜ್ಯವಾದದ್ದರಿಂದ ನಾನಾ ಬೇನೆಬಾಧೆಗಳನ್ನು ಸಹಿಸಿಕೊಂಡು ಬೆಳೆಯಬೇಕಾಗಿದೆ. ಅವರ ಸಣ್ಣಸಣ್ಣ ಮೂಳೆಗಳೂ ಮಾಂಸಖಂಡಗಳೂ ಸರಿಯಾಗಿ ಬಲಹೊಂದಿ ಬೆಳೆಯುವದಕ್ಕೆ ಅವರಿಗೆ ಚಿಕ್ಕಂದಿನಿಂದಲೇ ಬಲಕಾರಿಯಾದ ಸೇವನಾ ಔಷಧವನ್ನು ಕೊಡುವುದು ಅವಶ್ಯಕ.

SCOTT'S EMULSION

5-28

(ಸ್ಕಾಟ್ಸ್ ಇಮಲ್‌ಷನ್)

ಎಂಬೀ ಸೇವನಾ ಔಷಧದಲ್ಲಿ ಮಕ್ಕಳ ಸಮಸ್ತ ಅಂಗಗಳನ್ನೂ ಬಲಪಡಿಸಿ ಬೆಳಸುವಂಥಾ ಬಹು ಉತ್ಕೃಷ್ಟವಾದ ಗುಣಗಳಿರುತ್ತವೆ.

ಇದಕ್ಕೆ ಸಮಾನವಾದದ್ದು ಮತ್ತ್ಯಾವದೂ ಇಲ್ಲ.

ಈ ಔಷಧವನ್ನು ಸೇವನೆ ಮಾಡುತ್ತಾ ಬಂದ ಒಡನೆಯೇ ಅದರ ಗುಣಗಳು ಕಂಡುಬರುವವು.

ಕೈಯಿಂದ ಮುಟ್ಟದೇನೇ ತಯಾರಾದದ್ದು.

ಮೀನುಮನುಷ್ಯ ಇರುವ ಈ ಔಷಧದ ಗುರುತು. ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ವಿಕರಿಯಾಗುತ್ತಿದೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್.

ತಾಲ್ಲೂಕು ವರ್ತಮಾನಗಳು.

ಸಕಲೇಶಪುರ.—ಹಲುಸುಲಿಗೆಹ್ಯಾಟಿ ಎಂಬ ಊರಿಗೆ ಆರಿದ್ರೆ ಮಳೆ ಬಂದರೂ ಜನಗಳಿಗೆ ನೀರಿನ ತೊಂದರೆ ನಿವಾರಿಸಲು ಸಂಕಟಪಡುತ್ತೇನೆ. ಈ ಊರಿನ 3-4 ಭಾವಿಗಳು ಒಣಗಿಹೋಗಿವೆ. ನೀರನ್ನು ಹೆಂಗಸರೂ ಮಕ್ಕಳು ಸಹ 1½ ಮೈಲಿ ದೂರದ ಕಾಲುವೆಯಿಂದ ತರುತ್ತಾ ಇದಾರೆ. ತರಿಜಮೀನು ನಾಟಿ ಬಗ್ಗೆ ಬೀಜ ಚೆಲ್ಲುತ್ತಾ ಇದಾರೆ. ಬತ್ತದ ಧಾರಣೆ 14-15 ರೂ. ಹೇಳುತ್ತಾರೆ. ಈ ಊರಿನ ಯೋಗ್ಯರಾದ ಚಿಕ್ಕಶಿವಣ್ಣಚಾರ್ರಮಕ್ಕಳು ವೀರಾಚಾರಿಯವರು ಕಳೆದ ವರುಷ ಲಗ್ನವಾಗಿದ್ದ ಅವರ ಪತ್ನಿಯು ಸಿಡುಬಿನ ಹಾವಳಿಯಲ್ಲಿ ಕಾಲವಾದಳು. ಇವರು ಇಷ್ಟಮಿತ್ರರನ್ನೂ ಬಂಧುಗಳನ್ನೂ ಕರಸಿಕೊಂಡು ಪುನಃ ವಿವಾಹ ಹೊಸಮನೆ ಕಿಟ್ಟನೆಂಬ ಗ್ರಾಮದಲ್ಲಿ ಅತಿವಿಜೃಂಭಣೆಯಿಂದ ಮಾಡಿಕೊಂಡರು.—ಈ ಪ್ರಾಂತ್ಯ 4-5 ಜನ ಬಾಣಂತಿಯರು ಅಕಾಲಮರಣವಾದರು. ಇದಕ್ಕಾಗಿ ವಿಷಾದಪಡುತ್ತೇವೆ. ಮನೆ ಯಜಮಾನರೇ ಆಗಲಿ ಇನ್ನಾರೇ ಆಗಲಿ ಆಸ್ಪತ್ರೆಗೆ ಹೋಗಿ ತಿಳಿಸದೆ ಇದ್ದದ್ದೇ ಮರಣಕ್ಕೆ ಕಾರಣವೆಂತ ತಿಳಿಯುತ್ತೇವೆ.—ಮ॥ ವೀರಾಚಾರಿಯವರು ಗ್ರಾಮಸ್ಥರನ್ನು ಸೇರಿಸಿಕೊಂಡು ಮುಂದಾಳಾಗಿ ನಿಂತು ಅನುಕೂಲವಾದ ಭಾವಿ ತೋಡಿಸಿ ಕೀರ್ತಿಪಡಿಯುತ್ತಾರೆಂದು ನಂಬಿದೇನೆ. ನೆನ್ನೆಯಿಂದ ಶೀತಗಾಳಿ ಬೀಸುತ್ತಾ ತುಂತುರುಮಳೆ ಬೀಳುತ್ತೆ.

ಯಡತೊರೆ ತಾ॥ ಮಿರ್ಲೆ.—ಮೋಡಗಳು ಆಕಾಶದಲ್ಲಿ ಕಾಣುವುದೇ ವಿನಹ ಮಳೆ ಇಲ್ಲ. ಮುಸ್ಕಿ ಜಮೀನುಗಳಲ್ಲಿರುವ ಗೊಬ್ಬರವನ್ನು ಉಪಯೋಗಿಸಲು ಮಾರ್ಗವಿಲ್ಲದೆ ಇವೆ. ಜೋಳ, ಗಿಡ್ಡರಾಗಿ, ಇವರ ಹೆಸರೇ ನಿರ್ನಾಮವಾಯಿತು. ಕಾಲ್ನಡೆಗಳಿಗೆ ಮೇವು ಇಲ್ಲ. ಇವುಗಳಿಗೆ ಕಾಲುಜ್ವರ ಬಾಯಿಜ್ವರ. ಈ ಕಾರಣದಿಂದ ಇವು ಸಾಯುತ್ತಲಿರುವವು. ಜನರು ಹಂಬಲಿಸಿ ಕೊಳಗುತ್ತಿದಾರೆ. ಜಾನ್ವಾರುಗಳ ಕಷ್ಟ ವಿವರಿಸಲು ಅಸಾಧ್ಯ. ಮುಸ್ಕಿ ಫಸಲು ಈ ರೀತಿ ಪರಿಣಮಿಸಿತು. ತರೀ ಫಸಲಾದರೋ ಜೂನ್ 15 ಅಥವಾ 20 ನೇ ತಾ. ಒಳಗಾಗಿ ಆದರೂ ಕಾವೇರಿ ಪ್ರವಾಹ ಬರುತ್ತಲಿತ್ತು. ಈ ಸಾರಿ ಜೂನ್ 30 ನೇ ತಾ. ಆದರೂ ಪ್ರವಾಹವು ಈಗ ಕೆಂಪ ಮಟ್ಟಿಗೆ ಬಂದು, ಈಗ ನಾಲೆಗೆ ನೀರು ಬಿಟ್ಟು ಇದಾರೆ. ಆಗೇ ಗದ್ದೆಗಳೇ ಉಳುತ್ತ ಇಲ್ಲ. ಮುಂದೆ ಭತ್ತದ ಮಗ್ಗಿ ಹಾಕಿ ಪೈರು ಬಂದು ನಾಟಿ ಹಾಕುವುದು ಯಾವ ಕಾಲದಲ್ಲೋ. ಮುಂದಿನ ಫಸಲು ಇನ್ನೆಷ್ಟರ ಮಟ್ಟಿಗಾದೀತೋ. ಧಾರಣೆ ವಾಸಿಗಳು ಹೇಳತೀರದು.—ಈ ಗ್ರಾಮದಲ್ಲಿ ಇಂಗ್ಲಿಷ್ ಸ್ಕೂಲು ಸ್ಥಾಪಿಸಬೇಕೆಂದು ಗ್ರಾಮಸ್ಥರು 400 ರೂ. ಚಂದಾ ಕೂಡಿಸಿ, ತಾ. 1 ರಲ್ಲಿ ಖಜಾನೆಗೆ 180 ರೂ. ಕಟ್ಟಿದರು. ನಮ್ಮ ಅಮಲ್ದಾರ್ ಮ॥ ಜಿ. ನಾರಾಯಣರಾಯರು ಈ ಸ್ಕೂಲು ಸ್ಥಾಪಿಸುವ ವಿಚಾರದಲ್ಲಿ ತುಂಬಾ ಮುತುವರ್ಜಿವಹಿಸಿ ಅದಕ್ಕಾಗಿ ಗ್ರಾಮಸ್ಥರಿಗೆ ತಿಳುವಳಿಕೆ ಕೊಟ್ಟು ಇದಾರೆ. ಗ್ರಾಮಸ್ಥರ ಇಷ್ಟವನ್ನು ದಯಾಳು ಸರ್ಕಾರದವರು ಸ್ಕೂಲ್ ಸ್ಥಾಪಿಸುವುದರ ಮೂಲಕ ಈಡೇರಿಸುವರೆಂದು ನಂಬಿದೇನೆ.

ಈಗಲೇ ಸಿದ್ಧವಾಗಿದೆ ! ಕ್ರಯ 9 ಆಣೆಗಳು !! 6 ಕ್ಕೆ 1 ಹೆಚ್ಚು !!!

1915 ನೇ ಮೈ|| ಲೋ|| ಸ್ಕೂ|| ಕನ್ನಡ ಟೆಕ್ಸ್ಟ ಪ್ರಶ್ನೋತ್ತರ.

ಟೆಕ್ಸ್ಟ ನೋಟ್ಸ್ 6 ಆಣೆ. ವ್ಯಾಕರಣ ಪ್ರಶ್ನೋತ್ತರ (1891-1914) 5 ಆಣೆ. ವಿದ್ಯಾರ್ಥಿಗಳಿಗೆ ಅತ್ಯಂತೋಪಯುಕ್ತವಾದ ಎಗ್ಸಾಮಿನರ್ ಮಾಸಪುಸ್ತಕಕ್ಕೆ ಜುಲೈ ಆಖೈರಿನೊಳಗೆ ಚಂದಾದಾರರಾಗುವವರಿಗೆ ಮೇಲ್ಕಂಡ ಪ್ರಶ್ನೋತ್ತರ ವಾಗಲಿ, ಟೆ|| ನೋಟ್ಸಾಗಲಿ ಬಹುಮಾನ. ಚಂದಾ ರೂ. 1-4-0. ಕನ್ನಡ 2 ನೇ ರೀಡರಿನ ನೋಟ್ಸ್ 2 ಆಣೆ; 3 ನೆಯದು 1½ ಆಣೆ; 4 ನೆಯದು 1½ ಆಣೆ. ಕ್ಯಾಟ್ಲಾಗ್ ತರಿಸಿ ನೋಡಿ. ವಿಳಾಸ—ಸಿ. ಪುಟ್ಟಯ್ಯ, ಮ್ಯಾನೇಜರ್,

[164-1] ಎಗ್ಸಾಮಿನರ್ ಆಫೀಸ್, ಚಿಕ್ಕಬಳ್ಳಾಪುರ.

ಹೊಳೆನರಸೀಪುರ ಮುನ್ಸಿಫ್ ಕೋರ್ಟಿನಲ್ಲಿ.

ಸನ್ 1913-14 ನೇ ಇಸವಿ ಓ. ಎಸ್. ನಂಬರ್ 497.

Present: N. H. Sreenivasa Rao, Esq., B.A., B.L., Munsiff, Hole-Narsipur.

ವಾದಿ:—ಹೊಳೆನರಸೀಪುರದ ಕಸಬಾ ಬ್ಯಾಡಿಯಲ್ಲಿ ಇರುವ ಚವುದ್ರಿ ಕೊಟ್ಟೂರಯ್ಯನವರ ಮಗ ದೇಶದ ಯಜಮಾನ್ ಚವುದ್ರಿ ಅಣ್ಣಯ್ಯ.

ಪ್ರತಿವಾದಿ:—ಹೊಳೆನರಸೀಪುರದ ತಾಲ್ಲೂಕು ಹಳೆಕೋಟೆ ಹೋಬಳಿ ಆಡವಿನಕೋಟೆ ವಾಸಸ್ಥ ಕಾಳೆಗೌಡನ ಮಗ ಪುಟ್ಟೆಗೌಡ ವಗೈರೇರು.

ಸಿವಿಲ್ ಪ್ರೊಸೀಜರ್ ಕೋಡು ಆರ್ಡರ್ 1 ರೂಲ್ 86 ರೀತ್ಯಾ.

ಹೊಳೆನರಸೀಪುರದಲ್ಲಿ ಇರುವ ದೇಶದ ಯಜಮಾನ್ ಚವುದ್ರಿ ಕೊಟ್ಟೂರಯ್ಯನವರ ಮಕ್ಕಳು ಅಣ್ಣಯ್ಯನವರು ಈಗ ಪ್ರತಿವಾದಿಗಳ ಮೇಲೆ ತಂದಿರತಕ್ಕ ಮೇಲ್ಕಂಡ ಸಿವಿಲ್ ಮೊಕದ್ದಮಾದಲ್ಲಿ ಹೊಳೆನರಸೀಪುರದಲ್ಲಿ ಕಂಟಿ ಸಂಗನ ಬಸವ ದೇಶಿಕೇಂದ್ರ ಸ್ವಾಮಿ ಪಡಿವಾಳ ಶಿವಯೋಗೀಶ್ವರ ಮಠ ಪೂಜಾಸ್ಥಾನಕ್ಕೆ ಸೇರಿದ ಶಿವಾಚಾರದ ಮತಸ್ಥರಾಗಿ ಹಕ್ಕು ಇರುವ ಎಲ್ಲಾ ಜನಗಳೂ ಈ ಮೊಕದ್ದಮಾಕ್ಕೆ ಕಕ್ಷಿಗಾರರಾಗಿ ಸೇರಲು ಅಪೇಕ್ಷೆ ಉಳ್ಳವರು ಈ ಕೋರ್ಟಿನ ರೂಬರೂಬು ಸನ್ 1914 ನೇ ಇಸವಿ ಅಕ್ಟೋಬರ್ 13 ನೇ ತಾರೀಖು ದಿವಿ 11 ಗಂಟೆಗೆ ಹಾಜರಾಗತಕ್ಕದ್ದೆಂತ ಈ ಮೂಲಕ ಪ್ರಸಿದ್ಧಪಡಿಸಿರುತ್ತೆ.

[146-1] ತಾರೀಖು 23 ನೇ ಜೂನ್ 1914 ನೇ ಇಸವಿ.

N. SREENIVASA RAO,
Munsiff.

ವೃತ್ತಾಂತ ಪತ್ರಿಕೆ.

—:o:—

ಸನ್ ೧೯೧೪ ನೇ ಇಸವಿ ಜೂಲೈ ತಾ. ೯ ನೇ ಗುರುವಾರ.

ಮೈಸೂರು ಸಂಸ್ಥಾನದ ಮ್ಯುನಿಸಿಪಾಲಿಟಿಗಳು.

ನಮ್ಮ ಗವರ್ನಮೆಂಟಿನವರು ಈ ಸೀಮೆಯ ಮ್ಯುನಿಸಿಪಾಲಿಟಿಗಳಲ್ಲಿ ನಡೆದಿರುವ ಕಾರ್ಯಗಳ ವಾರ್ಷಿಕ ರಿಪೋರ್ಟನ್ನು ಪರಾಂಬರಿಸಿ ಹುಕುಮನ್ನು ಪ್ರಕಟಮಾಡಿರುತ್ತಾರೆ. ಈ ಸಂಸ್ಥಾನದಲ್ಲಿ 89 ಮ್ಯುನಿಸಿಪಾಲಿಟಿಗಳಿರುತ್ತವೆ. ಈ ಪೈಕಿ 84 ಮ್ಯುನಿಸಿಪಾಲಿಟಿಗಳು 1906 ನೇ ಇಸವಿಯ ಮ್ಯುನಿಸಿಪಲ್ ಕಾನೂನಿಗೆ ಅನುಸಾರವಾಗಿರುವವು. 23 ಮ್ಯುನಿಸಿಪಾಲಿಟಿಗಳಲ್ಲಿ ಮೆಂಬರುಗಳ ಚುನಾವಣೆ ನಡೆಯಬೇಕಾಗಿತ್ತು. ಗುಬ್ಬಿಯಲ್ಲೂ ಹುಣಸೂರಿನಲ್ಲೂ ಚುನಾವಣೆಗಳು ಕೆಟ್ಟುಹೋದವಂತೆ; ಇದಕ್ಕೆ ಕಾರಣವೇನೋ ಗವರ್ನಮೆಂಟಿನವರು ಈ ರಿಪೋರ್ಟಿನಲ್ಲಿ ಕಾಣಿಸಿಲ್ಲ. ಎಂಟು ಮ್ಯುನಿಸಿಪಾಲಿಟಿಗಳಲ್ಲಿ ಚುನಾವಣೆಯ ಏರ್ಪಾಡೇ ನಡೆಯಲಿಲ್ಲ. 13 ಮ್ಯುನಿಸಿಪಾಲಿಟಿಗಳೊಳಗೆ ಓಟ್ ಮಾಡುವ ಹಕ್ಕುಳ್ಳವರು 10,183 ಮಂದಿ ಇದ್ದರಾದರೂ 5,106 ಜನರು ಮಾತ್ರ ಚುನಾವಣೆ ನಡೆದ ಸ್ಥಳಕ್ಕೆ ಹೋಗಿ ತಮ್ಮ ಓಟನ್ನು ಹಾಕಿಬಂದರು. ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಗೆ ಮೆಂಬರಾಗಬೇಕೆಂದು ನಿಂತು ಸೋತುಹೋದವರಲ್ಲಿ ಕೆಲವರು ಚುನಾವಣೆ ಸರಿಯಾಗಿ ನಡೆಯಲಿಲ್ಲವೆಂದು ಕೋರ್ಟಿನಲ್ಲಿ ವ್ಯಾಜ್ಯವಾಡಿದರು; ಆದರೆ ಅದು ಹುರುಳಿಲ್ಲದ ಹೋರಾಟವೆಂದು ಮೊಕದ್ದಮೆಗಳು ವಜಾಮಾಡಲ್ಪಟ್ಟವು.

ಮ್ಯುನಿಸಿಪಲ್ ಮೀಟಿಂಗುಗಳಿಗೆ ಹಾಜರಾಗತಕ್ಕ ಮೆಂಬರುಗಳ ಸಂಖ್ಯೆ ಅನೇಕ ಸಂದರ್ಭಗಳಲ್ಲಿ ತೃಪ್ತಿಕರವಾಗಿಲ್ಲ. ವಿಧಾಯಕವಾದಷ್ಟು ಮೆಂಬರುಗಳು ಹಾಜರಾಗದೆ ಹೋದಕಾರಣ ಕೆಲವು ಮೀಟಿಂಗುಗಳೇ ನಡೆಯಲಿಲ್ಲ. ಸರ್ಜಾಪುರ, ಚಿಕ್ಕಬಳ್ಳಾಪುರ, ಕೊರಟಗೆರೆ, ಮಳವಳ್ಳಿ, ಬೀರೂರು ಟವುನ್‌ಗಳ ಮ್ಯುನಿಸಿಪಲ್ ಮೀಟಿಂಗುಗಳಿಗೆ ಸರ್ಕಾರಿ ಮೆಂಬರುಗಳ ಹಾಜರಾತಿಯು ಬಹಳ ಅತೃಪ್ತಿಕರವಾಗಿತ್ತು. ಕೆಲವು ಮ್ಯುನಿಸಿಪಾಲಿಟಿಗಳು ಸರ್ಕಾರದಿಂದ ತಮಗೆ ಎಷ್ಟುಮಟ್ಟಿನ ಅಧಿಕಾರ ವಹಿಸಿರುತ್ತಾರೆಂಬುವುದೇ ತಿಳಿದುಕೊಂಡಿಲ್ಲ. ಮ್ಯುನಿಸಿಪಾಲಿಟಿಗೆ ಮ್ಯಾನೇಜಿಂಗ್ ಕಮಿಟಿಯು ಅವಶ್ಯವಾಗಿ ಇದ್ದೇ ತೀರಬೇಕು; ಆದರೆ ಅನೇಕ ಕಡೆ ಮ್ಯುನಿಸಿಪಲ್ ಕೌನ್ಸೆಲರುಗಳು ಅಂಥಾ ಕಮಿಟಿಗಳನ್ನು ನೇಮಕಮಾಡಿಕೊಳ್ಳದೆ ಇರುತ್ತಾರೆ.

ಕೆಲವು ಮ್ಯುನಿಸಿಪಾಲಿಟಿಗಳಲ್ಲಿ ಕೆಲಸಕಾರ್ಯಗಳು ಬಹಳ ನಿಧಾನಕ್ಕೆ ಬಿದ್ದಿವೆ. ಚಿಕ್ಕಮಗಳೂರಿನಲ್ಲಿ ಅನೇಕ ನಿವೇಶನಗಳಿಗೆ ಮಾಲೀಕರ್ಯಾರೋ ತಿಳಿಯದು; ಕೆಲವು ಖಾತೆದಾರರು ತಮ್ಮ ನಿವೇಶನಗಳು ಎಲ್ಲಿವೆಯೋ ನೋಡಿಕಾಣರು. ಬೀರೂರು, ಹುಣಸೂರು, ಚಾಮರಾಜನಗರ, ಯಡತೊರೆ, ಗುಂಡ್ಲುಪೇಟೆ, ಶ್ರೀರಂಗಪಟ್ಟಣ, ಮದ್ದೂರು, ನಾಗಮಂಗಲ, ಈ ಮ್ಯುನಿಸಿಪಾಲಿಟಿಗಳಲ್ಲಿ ತೆರಿಗೆಗಳ ವಸೂಲಾಯಿತು ಸ್ವಲ್ಪವೂ ತೃಪ್ತಿಕರವಾಗಿಲ್ಲ; ಸಾಲದ್ದಕ್ಕೆ ನೆಲಮಂಗಲ, ಶ್ರೀರಂಗಪಟ್ಟಣ, ಹುಣಸೂರು, ಮಾಲೂರು, ಚಿಂತಾಮಣಿ, ಮುಳಬಾಗಲು ಟವುನ್‌ಗಳಲ್ಲಿ ನೌಕರರು ಮ್ಯುನಿಸಿಪಲ್ ಹಣಗಳನ್ನು ತಿಂದುಹಾಕಿದಾರೆಂದು ಹೊರಪಟ್ಟಿದೆ. ಆದರೆ ಹೀಗೆ ಹಣಗಳನ್ನು ದುರುಪಯೋಗಪಡಿಸಿಕೊಂಡಿರುವವರನ್ನು ದರ್ಯಾಫ್ತು ಮಾಡಿದರೋ ಇಲ್ಲವೋ ಈ ರಿಪೋರ್ಟಿನಿಂದ ಗೊತ್ತಾಗುವುದಿಲ್ಲ.

ಕಾನಕಾನಹಳ್ಳಿ, ಶ್ರೀನಿವಾಸಪುರ, ಬಾಗೇಪಲ್ಲಿ, ಹೆಗ್ಗಡದೇವನಕೋಟೆ ಮ್ಯುನಿಸಿಪಾಲಿಟಿಗಳಲ್ಲಿ ಸಾಲಾಖೈರಿನಲ್ಲಿ ಸಾಲವೇ ಹೊತ್ತುಕೊಂಡಿದೆ. ಕೋಲಾರ, ಮದ್ದೂರು, ಹರಿಹರ ಮ್ಯುನಿಸಿಪಾಲಿಟಿಗಳು ಹಣಕಾಸಿನ ವಿಷಯದಲ್ಲಿ ಸ್ವಲ್ಪ ಚೇತರಿಸಿಕೊಂಡಿರುವವು. ಕೆಲವು ಮ್ಯುನಿಸಿಪಾಲಿಟಿಗಳು ಹಣವನ್ನು ಮಿಗಿಸಿ ಬಡ್ಡಿಗೆ ಹಾಕಿಕೊಂಡಿರುತ್ತವೆ. ಶಿಕಾರಿಪುರ ಮತ್ತು ನ್ಯಾಮತಿ ಮ್ಯುನಿಸಿಪಾಲಿಟಿಗಳು ಈ ಸಂತೋಷಕರವಾದ ಸ್ಥಿತಿಯಲ್ಲಿರುವವು.

ನಂಜನಗೂಡಿನಲ್ಲಿ ಒಳ್ಳೇ ಕುಡಿಯುವ ನೀರನ್ನು ಒದಗಿಸುವ ಏರ್ಪಾಡು ನಡೆಯುತ್ತಿದೆ. ಇದಕ್ಕೆ 38,000 ರೂಪಾಯಿ ಖರ್ಚಾಗುವುದೆಂದೂ, ಈ ಪೈಕಿ 10,000 ರೂಪಾಯಿ ಶ್ರೀನಂಜುಂಡೇಶ್ವರಸ್ವಾಮಿ ದೇವಸ್ಥಾನದ ಹಣದಿಂದ ಕೊಡುವಂತೆ ಗೊತ್ತಾಗಿದೆಯೆಂದೂ ತಿಳಿದುಬರುವುದು.

ಮ್ಯುನಿಸಿಪಲ್ ಕಾನೂನುಗಳನ್ನು ಮೀರಿದ್ದಕ್ಕೆ ಅಷ್ಟೇನೂ ವಿಶೇಷವಾಗಿ ಫಿರ್ಯಾದುಗಳೂ ಶಿಕ್ಷೆಗಳೂ ನಡೆಯಲಿಲ್ಲ. ಮಾಡಿಟ್ಟಿರುವ ಕಾನೂನನ್ನು ಸರಿಯಾಗಿ ಜಾರಿಗೆತರದಿರುವ ಪಕ್ಷಕ್ಕೆ ಕಾನೂನುಗಳಿಲ್ಲದಿರುವುದೇ ಮೇಲು. ಕಾನೂನು ಜಾರಿಮಾಡದೆ ಬಿಟ್ಟುಬಿಟ್ಟರೆ ಅದರ ವಿಷಯದಲ್ಲಿ ಭಕ್ತಿ ಇರಬೇಕಾದದ್ದು ತಪ್ಪಿ ಜನಗಳು ಅದನ್ನು ಅಸಡ್ಡೆಮಾಡುವರು.

ಜನಗಳು ಇನ್ನೂ ಉತ್ಸಾಹಪಟ್ಟು ಕೆಲಸಮಾಡುವುದಾದರೆ ಮ್ಯುನಿಸಿಪಲ್ ಕಾರುಬಾರುಗಳು ಎಷ್ಟೋ ಚೆನ್ನಾಗಿ ನಡೆಯಬಹುದು. ಕೆಲವು ಸಂದರ್ಭಗಳಲ್ಲಿ ಸರ್ಕಾರದವರು ಮಿತಿಮೀರಿ ತಲೆ ಹಾಕುವರು; ಮೆಂಬರುಗಳಿಗೆ ಸಹಜವಾಗಿ ಇರುವ ಸ್ವಾತಂತ್ರ್ಯಗಳನ್ನು ಕಾರ್ಯದಲ್ಲಿ ತೋರಿಸಲು ಅವಕಾಶವಿಲ್ಲ. ಕೆಲವು ವೇಳೆ ಗವರ್ನಮೆಂಟಿನವರ ವರ್ತನವು ಖರ್ಚುಬಾಬುಗಳನ್ನು ಸ್ಯಾಂಕ್ಷನ್‌ಮಾಡುವುದರಲ್ಲೂ ಸ್ಯಾಂಕ್ಷನ್‌ಮಾಡದೆ ತಿರಸ್ಕರಿಸುವುದರಲ್ಲೂ ಬಹಳ ಆಶ್ಚರ್ಯವಾಗಿ ಕಾಣುತ್ತದೆ. ಮ್ಯುನಿಸಿಪಾಲಿಟಿಯವರ ತೀರ್ಮಾನಗಳು ಗವರ್ನಮೆಂಟಿಗೆ ಸ್ಯಾಂಕ್ಷನ್‌ಬಗ್ಗೆ ಹೋದರೆ ಅವುಗಳ ವಿಷಯದಲ್ಲಿ ಯಾವನೋ ಒಬ್ಬ ಗುಮಾಸ್ತೆಯು ತನಗೆ ತೋರಿದಂತೆ ಬರೆಯುತ್ತಾನೆಂದು ಹೇಳಬೇಕಾಗುವುದು. ಇತ್ತಲಾಗಿ ಅನೇಕ ಮ್ಯುನಿಸಿಪಾಲಿಟಿಗಳಿಗೆ ತಮ್ಮ ಸ್ವಾತಂತ್ರ್ಯವೆಷ್ಟೋ ತಮ್ಮ ಹದ್ದುಯಾವುದೋ ಅದೇ ತಿಳಿಯದೆ ಇದೆ. ಇದರಿಂದ ಅನೇಕ ಮ್ಯುನಿಸಿಪಾಲಿಟಿಗಳು ಸರ್ಕಾರದ ಕಾನೂನುಗಳಿಗೆ ವಿರೋಧವಾದ ಕಾರ್ಯಗಳನ್ನು ಮಾಡತಕ್ಕವುಗಳಾಗಿರುವವು. ಆದಕಾರಣ ಇವುಗಳನ್ನೆಲ್ಲಾ ಮೇಲ್ದೃಷ್ಟಿ ಇಟ್ಟು ಸರಿಯಾಗಿ ನಡಿಸಿಕೊಂಡು ಬರಬೇಕಾಗಿರುತ್ತದೆ.

ಅನೇಕ ಮ್ಯುನಿಸಿಪಾಲಿಟಿಗಳಲ್ಲಿ ಕೆಲಸಕಾರ್ಯಗಳು ತೃಪ್ತಿಕರವಾಗಿಯೂ, ಚಟುವಟಿಕೆಯಿಂದಲೂ ನಡೆಯದೆ ಕೆಡುವುದಕ್ಕೆ ಕಾರಣವೇನೆಂದರೆ ಅಧಿಕಾರಿಯಾದವನು ಬಹಳ ಕಾಲ ಒಂದೇ ಕಡೆ ಇರುವುದಿಲ್ಲ. ಸರ್ಕಾರದಿಂದ ನೇಮಕವಾಗುವವರು ಬೇಗ ಬೇಗನೆ ವರ್ಗಪಡುತ್ತಾರೆ. ಹೊಸಬರು ಕೆಲಸಗಳನ್ನೆಲ್ಲಾ ಸರಿಯಾಗಿ ತಿಳಿಯುವುದು ಸಾಧ್ಯವಲ್ಲ. ರೆಕಾರ್ಡುಗಳನ್ನು ತಿಳಿದು ಆಗಿಂದಾಗ್ಗೆ ಬರವಣಿಗೆಯನ್ನು ನೋಡಿಕೊಳ್ಳುತ್ತಾ ಬರುವಂಥಾ ಸ್ಥಳೀಯ ಮನುಷ್ಯನು ಶಾಶ್ವತವಾಗಿದ್ದರೆ ಆತನಿಗೆ ಮ್ಯುನಿಸಿಪಾಲಿಟಿಯ ಸ್ಥಳವಿದ್ಯಮಾನಗಳೂ, ಹಣಕಾಸುಗಳ ವಿಚಾರವೂ ಚೆನ್ನಾಗಿ ಪರಿಶ್ರಮವಿದ್ದೀತು. ಯೋಗ್ಯನೂ ಸಮರ್ಥನೂ ಸಂಬಿಗಸ್ಥನೂ ಆದ ಅಂಥಾ ಮನುಷ್ಯನನ್ನು ಹುಡುಕಿ ಆಯಾ ಮ್ಯುನಿಸಿಪಾಲಿಟಿಯಲ್ಲಿ ಖಾಯಮಾಗಿ ನೇಮಿಸುವುದಾದರೆ ಈಗ ನಡೆಯುತ್ತಿರುವ ಅಕ್ರಮಗಳೂ, ವಸೂಲಿ ಹಣವನ್ನು ತಿಂದುಹಾಕುವುದೂ ಬಹಳ ಮಟ್ಟಿಗೆ ನಿಲ್ಲಬಹುದು. ನೌಕರಮಾನೇರುಗಳೂ ಮೆಂಬರುಗಳೂ ಆಗಿಂದಾಗ್ಗೆ ಬದಲಾವಣೆಯಾಗಬಹುದಾದರೂ ಸ್ಥಳೀಯ ಅಧಿಕಾರಿಯು ಶಾಶ್ವತವಾಗಿದ್ದರೆ ಎಷ್ಟೋ ಅನುಕೂಲ.

ಲೋಕಲ್ ಬೋರ್ಡುಗಳು.

ನಮ್ಮ ಸೀಮೆಯಲ್ಲಿ ಪ್ರತಿ ಒಂದು ಡಿಸ್ಟ್ರಿಕ್ಟಿಗೂ, ಪ್ರತಿ ತಾಲ್ಲೂಕಿಗೂ ಒಂದೊಂದು ಲೋಕಲ್ ಬೋರ್ಡು ಇರುವುದಲ್ಲದೆ ಯೂನಿಯನ್ ಪಂಚಾಯತಿಗಳು 243 ಇರುತ್ತವೆ. ತಾಲ್ಲೂಕು ಬೋರ್ಡುಗಳಲ್ಲಿ ಇನ್ನೂ ವಿಶೇಷ ಚಟುವಟಿಕೆಯಿಂದಲೂ ಮುತುವರ್ಜಿಯಾಗಿಯೂ ಕೆಲಸಗಳು ಜರುಗಬೇಕು. ಬೆಂಗಳೂರು, ದೇವನಹಳ್ಳಿ, ದೊಡ್ಡಬಳ್ಳಾಪುರ, ತುಮಕೂರು, ತುರುವೆಕೆರೆ, ನಂಜನಗೂಡು, ಮಂಡ್ಯ, ಫ್ರೆಂಚ್‌ರಾಕ್ಸ್, ಪಿರಿಯಾಪಟ್ಟಣ, ಈ ತಾಲ್ಲೂಕ್ ಬೋರ್ಡುಗಳ ಮೀಟಿಂಗುಗಳಿಗೆ ಸರ್ಕಾರಿ ಮೆಂಬರುಗಳ ಹಾಜರಾತಿಯು ಸಾಲದು. ಸರ್ಕಾರಿ ಮೆಂಬರುಗಳು ಸರಿಯಾಗಿ ಮೀಟಿಂಗುಗಳಿಗೆ ಹಾಜರಾಗಿ ಖಾಸಗಿ ಮೆಂಬರುಗಳಿಗೆ ಮೇಲ್ಪಂಕ್ತಿ ಹಾಕಿಕೊಡಬೇಕೆಂದು ಸರ್ಕಾರದವರು ದಂಡಿಸಿರುವುದನ್ನು ಸಹಜವೆಂದು ಒಪ್ಪುತ್ತೇವೆ. ಹಾಜರಾತಿ, ಉತ್ಸಾಹ, ಚರ್ಚೆಗಳಲ್ಲಿ ವಿಶೇಷ ಚಟುವಟಿಕೆ, ಬೋರ್ಡಿನ ಕೆಲಸಕಾರ್ಯಗಳಲ್ಲಿ ಆಸಕ್ತಿ, ಈ ಮುಂತಾದ ಲಕ್ಷಣಗಳನ್ನು ವಿಶೇಷವಾಗಿ ಪ್ರಕಾಶಪಡಿಸುವಂಥಾ ಸರ್ಕಾರಿ ಮತ್ತು ಖಾಸಗಿ ಮೆಂಬರುಗಳ ಹೆಸರುಗಳನ್ನು ಪ್ರತಿ ಒಂದು ಬೋರ್ಡಿನವರೂ ಗುರುತುಮಾಡಿಕೊಂಡಿದ್ದು ಸಾಲಾಖೈರಿನಲ್ಲಿ ಗವರ್ನಮೆಂಟಿಗೆ ತಿಳಿಸುತ್ತಾ ಬರಬೇಕೆಂದು ಸರ್ಕಾರದವರು ಸೂಚಿಸಿದಾರೆ.

ಖಾಸಗಿ ಮೆಂಬರನ್ನೇ ವೈಸ್ ಪ್ರೆಸಿಡೆಂಟರಾಗಿ ಚುನಾಯಿಸಿ ನೇಮಿಸಿಕೊಳ್ಳಬಹುದಾಗಿದ್ದರೂ ಬೆಂಗಳೂರು, ಕೋಲಾರ, ತೀರ್ಥಹಳ್ಳಿ, ಮೂಡಿಗೆರೆ, ಈ ನಾಲ್ಕು ತಾಲ್ಲೂಕು ಬೋರ್ಡುಗಳಿಗೆ ಮಾತ್ರ ಖಾಸಗಿ ಮೆಂಬರುಗಳನ್ನು ಚುನಾಯಿಸಿಕೊಂಡಿದಾರೆ. ಬೋರ್ಡುಗಳ ಹಣಕಾಸುಗಳ ಜಮಾಖರ್ಚನ್ನು ನೋಡಿಕೊಳ್ಳುವುದಕ್ಕೆ ನೇಮಕವಾದ ಕಮಿಟಿಗಳ್ಯಾವೂ ಯಾವ ಸ್ಥಳದಲ್ಲೂ ಸರಿಯಾಗಿ ಕೆಲಸಮಾಡಲಿಲ್ಲ. ಸರ್ಕಾರದವರು ತಾಲ್ಲೂಕ್ ಬೋರ್ಡುಗಳಿಗೆ ಹೊಸದಾಗಿ ಕೆಲವು ಅಧಿಕಾರಗಳನ್ನು ವಹಿಸಬೇಕೆಂದಿದ್ದರೂ ಇನ್ನೂ ಈ ಭಾಗದಲ್ಲಿ ಡಿಸ್ಟ್ರಿಕ್ಟುಗಳಿಂದ ಅಧಿಕಾರಿಗಳ ರಿಪೋರ್ಟುಗಳು ಗವರ್ನಮೆಂಟಿಗೆ ತಲಪದೆ ಇದೆ. ಈಗ ಕೊಟ್ಟಿರುವ ಸ್ವಾತಂತ್ರ್ಯಗಳನ್ನೇ ಈ ಬೋರ್ಡುಗಳು ತೃಪ್ತಿಕರವಾಗಿ ನಡಿಸಲಾರದೆ ಇರುವಲ್ಲಿ ಇನ್ನೂ ಹೆಚ್ಚಾದ ಅಧಿಕಾರಗಳನ್ನು ವಹಿಸುವುದರಿಂದ ಸಾರ್ಥಕವೇನೋ ನಮಗೆ ತಿಳಿಯದು.

ಯೂನಿಯನ್ ಪಂಚಾಯತಿಗಳು ಅಷ್ಟೇನೂ ತೃಪ್ತಿಕರವಾಗಿ ನಡೆಯುತ್ತಿರುವಂತೆ ತೋರುವುದಿಲ್ಲ. 37 ಯೂನಿಯನ್‌ಗಳಲ್ಲಿ ಮೆಂಬರುಗಳು ಕೂಡಿ ಮೀಟಿಂಗನ್ನೇ ಮಾಡಲಿಲ್ಲ; ಈ ಪೈಕಿ 28 ಯೂನಿಯನ್‌ಗಳು ಮೈಸೂರು ಡಿಸ್ಟ್ರಿಕ್ಟಿಗೆ ಸೇರಿರುತ್ತವೆ. 21 ಯೂನಿಯನ್‌ಗಳಲ್ಲಿ ತೆರಿಗೆಗಳೇ ವಸೂಲಾಗಲಿಲ್ಲ; ಬಹುಶಃ ಆ ಗ್ರಾಮಗಳವರು ತಮಗೆ ಯೂನಿಯನ್ ಬೇಡವೆಂದು ಹಟಹಿಡಿದು ತೆರಿಗೆಕೊಡದೆ ಇರಬೇಕೆಂದು ಕಾಣುತ್ತದೆ. ಕ್ಲೋಸ್‌ಪೇಟೆ ಸಬ್ ತಾಲ್ಲೂಕು ಚಾಲಮಂಗಲವೆಂಬ ಯೂನಿಯನ್‌ನಲ್ಲೂ, ಶ್ರೀರಂಗಪಟ್ಟಣದ ತಾಲ್ಲೂಕು ಅರಕೆರೆ ಯೂನಿಯನ್‌ನಲ್ಲೂ ತಲಾ 1,000 ರೂಪಾಯಿ ತೆರಿಗೆಗಳು ವಸೂಲಾಗಿದ್ದರೂ ಪ್ರಜಾಸೌಕರ್ಯಗಳಿಗಾಗಿ ವರುಷಕ್ಕೆಲ್ಲಾ ಚಾಲಮಂಗಲದಲ್ಲಿ 5 ರೂಪಾಯನ್ನು ಖರ್ಚುಮಾಡಿದಾರೆ; ಅರಕೆರೆಯಲ್ಲಾದರೋ ಒಂದು ಕಾಸೂ ಖರ್ಚಾಗಲಿಲ್ಲ!

ಸರ್ಕಾರದವರು ಡಿಸ್ಟ್ರಿಕ್ಟ್ ಬೋರ್ಡುಗಳಿಗೂ, ತಾಲ್ಲೂಕ್ ಬೋರ್ಡುಗಳಿಗೂ, ಯೂನಿಯನ್ ಪಂಚಾಯತಿಗಳಿಗೂ ವಿಶೇಷ ಜವಾಬ್ದಾರಿಯನ್ನು ವಹಿಸಿರುತ್ತಾರೆ. ಈ ಸಂಘಗಳು ಪ್ರಾಮುಖ್ಯವಾಗಿ ಮೂರು ವಿಷಯಗಳನ್ನು ತುಂಬಾ ಮುತುವರ್ಜಿವಹಿಸಿ ಸಾಹಸಪಟ್ಟು ನೋಡಿಕೊಳ್ಳಬೇಕಾಗಿದೆ:—(1) ಪ್ರತಿ ಒಂದು ಗ್ರಾಮದಲ್ಲೂ ಮನುಷ್ಯರಿಗೂ ದನಕರುಗಳಿಗೂ ಒಳ್ಳೆಯ ಕುಡಿಯುವ ನೀರು ಸಿಕ್ಕುವಂತೆ ಮಾಡಬೇಕು; (2) ಪ್ರತಿ ಒಂದು ಗ್ರಾಮದಲ್ಲೂ ಪ್ರಜೆಗಳು ಆರೋಗ್ಯವಾಗಿರುವುದಕ್ಕೆ ಸಹಾಯವಾಗುವಂತೆ ಕಕ್ಕಸ ಮುಂತಾದದ್ದನ್ನು ಸಾಗಿಸಿಬಿಟ್ಟು ಚೊಕ್ಕಟವಾಗಿಡಬೇಕು; (3) ಪ್ರತಿ ಒಂದು ಗ್ರಾಮಕ್ಕೂ ಒಂದಾದರೂ ಗಟ್ಟಿಯಾದ ಗಾಡೀ ರಸ್ತೆ ಇರಬೇಕು. ಇಷ್ಟು ಕೆಲಸವನ್ನು ಮಾಡಬೇಕಾದರೆ ಪ್ರತಿ ಬೋರ್ಡಿನವರೂ ಯೂನಿಯನ್‌ನವರೂ ಅನೇಕ ವರುಷಗಳ ಕಾಲ ಮುತುವರ್ಜಿ ವಹಿಸಿ ಕಷ್ಟಪಡುತ್ತಾ ಬರಬೇಕು. ಈ ಮೂರು ಕೆಲಸಗಳೂ ತೃಪ್ತಿಕರವಾಗಿ ಆಗುವ ತನಕ ಈ ಬೋರ್ಡುಗಳಿಗೂ ಯೂನಿಯನ್‌ಗಳಿಗೂ ಇನ್ನ್ಯಾವ ಕೆಲಸಗಳನ್ನೂ ವಹಿಸಲೇ ಬಾರದು. ಇಷ್ಟು ಅವಶ್ಯವಾದ ಈ ಮೂರು ಕಾರ್ಯಗಳನ್ನೂ ಯಾವ ಬೋರ್ಡಿನವರೇ ಆಗಲಿ ಕಷ್ಟಪಟ್ಟು ಮಾಡಿಕೊಳ್ಳುತ್ತಿದ್ದರೆ ಅಂಥವರಿಗೆ ಸರ್ಕಾರದವರು ಉದಾರವಾದ ಸಹಾಯವನ್ನು ಮಾಡಬೇಕಾಗಿದೆ.

ಗ್ರಾಮಗಳಲ್ಲೆಲ್ಲಾ ವಿದ್ಯಾಭ್ಯಾಸವು ಚಟುವಟಿಕೆಯಿಂದಲೂ ತೃಪ್ತಿಕರವಾಗಿಯೂ ನಡೆಯುವಂತೆ ವಿದ್ಯಾ ಇಲಾಖೆಯವರು ಏರ್ಪಾಡುಮಾಡಿಟ್ಟು ಮೇಲ್ವಿಚಾರಣೆ ನೋಡಿಕೊಳ್ಳಬೇಕು.

ಒಬ್ಬ ದೇಶಾಭಿಮಾನಿಯು ಸ್ವಜನಗಳಲ್ಲಿ ನಡಿಸಿದ ತಿದ್ದುಪಾಟುಗಳು.

ಆಫ್ರಿಕಾ ಖಂಡದಲ್ಲಿರುವ ಕಾಫರಿ ಜನಗಳು ಕೇವಲ ಅನಾಗರಿಕರೂ ಪಾಮರರೂ ಮೃಷ್ಟರೂ ಆಗಿದ್ದರು. ವಿದ್ಯೆಯ ಗಂಧವೇ ಅವರಲ್ಲಿರಲಿಲ್ಲ. ಭೂತಪ್ರೇತ ಪಿಶಾಚಿಗಳಿಗೂ ಮಂತ್ರಗಾರರಿಗೂ ಮಾಟಗಾರರಿಗೂ ಅವರು ಬಹಳ ಹೆದರುವರು. ಚರ್ಮದ ತುಂಡುಗಳನ್ನು ಸೊಂಟಕ್ಕೆ ಕಟ್ಟಿಕೊಳ್ಳುವದೇ ಅವರ ಉಡುಪಾಗಿದ್ದಿತು. ಗುಂಪುಗುಂಪಾಗಿ ಮೃಗಗಳೋಪಾದಿಯಲ್ಲಿ ಕಾಡಿನಲ್ಲಿ ಅಲೆಯುತ್ತಾ ಬೇಟೆಯಾಡಿ ಜೀವನಮಾಡುತ್ತಿದ್ದರು. ಆದರೆ ಕ್ರೈಸ್ತ ಮತದ ಪಾದ್ರಿಗಳು ಅಲ್ಲಿಗೆ ಹೋಗಿ ಅವರಿಗೆ ನಾಗರಿಕತೆ, ವಿದ್ಯೆ, ಸನ್ಮಾರ್ಗಗಳನ್ನು ಬೋಧಿಸಿ ಅವರಲ್ಲಿ ಅನೇಕರು ತಮ್ಮ ಕೆಟ್ಟ ಪದ್ಧತಿಗಳನ್ನು ತ್ಯಜಿಸುವಂತೆ ಮಾಡಿದರು. ಹೀಗೆ ಸನ್ಮಾರ್ಗಪ್ರವರ್ತಕರಾದವರ ಪೈಕಿ ಖಾಮನೆಂಬ ಒಬ್ಬ ಯುವ್ವನಸ್ಥನಿದ್ದನು. ಇವನ ತಂದೆಯು ಬೆಚುವಾನದೇಶದ ಒಂದು ಜನಾಂಗದವರಿಗೆ ಅರಸನಾಗಿದ್ದನು. ತಂದೆಯೂ ಸ್ವದೇಶಿಗಳ ಹಾಗೆ ಅಜ್ಞಾನಿಗಳ ಆಚಾರಪದ್ಧತಿಗಳಲ್ಲಿ ಆಸಕ್ತನಾಗಿದ್ದನು. ಆದರೆ ಖಾಮನು ಪಾದ್ರಿಗಳ ಪಾಠಶಾಲೆಯಲ್ಲಿ ಬಾಲ್ಯದಿಂದ ವಿದ್ಯಾಭ್ಯಾಸಮಾಡಿದನು.

ಮತ್ತು ಸಕಾಲದಲ್ಲಿ ಖಾಮನೂ ಈತನ ತಮ್ಮನಾದ ಖಾಮನಯೆಂಬುವನೂ ವಿವಾಹವಾದರು. ಖಾಮನ ದಾಂಪತ್ಯಸ್ಥಿತಿಯು ಬಹಳ ಸುಖಕರವಾಗಿತ್ತು. ಆದರೆ ದೇಶದ ಪದ್ಧತಿಗನುಸಾರವಾಗಿ ಖಾಮನು ಬೇರೆ ಕೆಲವು ಸ್ತ್ರೀಯರನ್ನು ವಿವಾಹವಾಗಬೇಕೆಂದು ತಂದೆಯು ಅವನನ್ನು ಪ್ರೇರಿಸಿದನು. ಇವರ ಪದ್ಧತಿ ಏನೆಂದರೆ ಯಾವ ಅರಸನು ಹೆಚ್ಚಾದ ಹೆಂಡರನ್ನು ಆಳುತ್ತಾನೋ ಅವನೇ ಬೇರೆ ಅರಸುಗಳಿಗಿಂತ ಶ್ರೇಷ್ಠನು. ಆದ್ದರಿಂದ ಖಾಮನ ತಂದೆಯು ತನ್ನ ಜೇಷ್ಠಪುತ್ರನಾದ ಖಾಮನು ತನ್ನ ರಾಜ್ಯದ ಯುವರಾಜನಾಗಿದ್ದಾನೆ. ಅವನು ಈ ಪದ್ಧತಿಯನ್ನನುಸರಿಸಿ ಎಲ್ಲರಿಗಿಂತ ಶ್ರೇಷ್ಠನೆನಿಸಿಕೊಳ್ಳಬೇಕೆಂದು ನಿಶ್ಚಯಿಸಿದನು. ಮತ್ತು ಅವನು ತನಗೆ ಸ್ನೇಹಿತನಾಗಿದ್ದ ಇನ್ನೊಬ್ಬ ಅರಸನಿಗೆ ತೆರಕೊಟ್ಟು ಅವನ ಮಗಳನ್ನು ಸಹ ಖಾಮನಿಗೆ ತಂದುಕೊಳ್ಳಬೇಕೆಂದು ನಿಶ್ಚಯಿಸಿದ್ದನು. ಪ್ರಜೆಗಳು ಸಹ ಅದೇ ಅಭಿಪ್ರಾಯವುಳ್ಳವರಾಗಿ ಖಾಮನನ್ನು ಪೀಡಿಸುತ್ತಿದರು. ಆದರೆ ಖಾಮನು ಪಾದ್ರಿಗಳ ಬೋಧನೆಯನ್ನು ಕೈಕೊಂಡು ಏಕಪತ್ನೀವ್ರತನಾಗಿರುವೆನೆಂದು ನಿಶ್ಚಯಿಸಲಾಗಿ ಆ ದೇಶದ ಜನಗಳು ಗಾಬರಿಯಾದರು. ಹಿಂದುಜನಗಳಲ್ಲಿರುವ ಹಾಗೆ ಆಫ್ರಿಕಾದಲ್ಲಿಯೂ ತಂದೆತಾಯಿಗಳೇ ಮಗನಿಗೆ ಕನ್ಯೆಯನ್ನು ಗೊತ್ತುಮಾಡುವ ಪದ್ಧತಿ ಇತ್ತು. ಮತ್ತು ಈ ಕ್ರಮವನ್ನನುಸರಿಸಿ ತಂದೆಯು ಖಾಮನಿಗೆ—ನೀನು ಆ ಶೂನ್ಯಗಾರನ ಕುಮಾರಿಯನ್ನು ಮದುವೆಯಾಗಬೇಕೆಂದು ಆಜ್ಞಾಪಿಸಿದನು. ಆದರೆ ಖಾಮನು—ನಾನು ದೇವರ ಆಜ್ಞೆಯನ್ನು ಅನುಸರಿಸಿ ಮಾಬೆಸ್ಸಿಯೆಂಬ ಗುಣಸಂಪನ್ನಳಾದ ನಾರೀಮಣಿಯನ್ನು ಪಾಣಿಗ್ರಹಣ ಮಾಡಿಕೊಂಡಿದ್ದೇನೆ. ಅವಳ ವಿನಾ ತನಗೆ ಬೇರೆ ಪತ್ನಿ ಇಲ್ಲ. ನಾನು ದೇವರ ಕಟ್ಟಳೆಗೆ ವಿಧೇಯನಾಗಿರಬೇಕು. ನಾನು ಎರಡನೇ ಮದುವೆಯಾಗುವದಿಲ್ಲವೆಂದು ತನ್ನ ತಂದೆಗೆ ಹೇಳಿದನು.

ಕಡೆಗೆ ತಂದೆಯೂ ಅವನ ಪ್ರಜೆಗಳೂ ಸೇರಿ ಖಾಮನನ್ನೂ ಅವನ ತಮ್ಮನನ್ನೂ ಯುದ್ಧದಲ್ಲಿ ಸೋಲಿಸಿ ಬಲಾತ್ಕಾರವಾಗಿ ಮದುವೆಮಾಡಬೇಕೆಂದು ತೀ

ಯಿಸಿದರು. ಮತ್ತು ತಂದೆಯು ಇದಕ್ಕಾಗಿ ದಂಡು ಕಳುಹಿಸಿದರೂ ಅವನ ಪ್ರಯತ್ನವು ಕಡೆಗೆ ನಿಷ್ಫಲವಾಯಿತು. ಯಾಕೆಂದರೆ ಪ್ರಜೆಗಳು ಖಾಮನ ಸದ್ಗುಣವನ್ನೂ ಒಳ್ಳೇ ನಡತೆಯನ್ನೂ ನೋಡಿ ಅವನ ಮೇಲೆ ಕೈ ಮಾಡುವದಕ್ಕೆ ಒಪ್ಪದೆ ಅವನ ಪಕ್ಷವನ್ನೇ ಕಟ್ಟಕಡೆಗೆ ವಹಿಸಿದರು. ಮತ್ತು ತಂದೆಯು ಓಡಿಹೋಗಿ ಪ್ರಾಣಭೀತಿಯಿಂದ ಅಡಗಿಕೊಂಡಿದ್ದನು. ಖಾಮನು ಆಗ ತಂದೆಯನ್ನು ಸಂಹರಿಸಿ ರಾಜ್ಯಭಾರವನ್ನು ತಾವೇ ವಹಿಸಬೇಕೆಂದು ಪ್ರಜೆಗಳು ಸಮ್ಮತಿಪಟ್ಟರು. ಆದರೆ ಖಾಮನು ತಂದೆಯನ್ನು ಕರಿಸಿ, ಮನ್ನಿಸಿ, ರಾಜ್ಯಭಾರವನ್ನು ಪುನಃ ಅವನಿಗೆ ಕೊಟ್ಟು—ಬಹು ಪಶ್ಚಾತ್ತಾಪಕ್ಕೆ ಮಾತ್ರ ನನ್ನನ್ನು ಬಲಾತ್ಕರಿಸಬೇಡವೆಂದು ಬೇಡಿಕೊಂಡನು.

ಆದರೆ ತಂದೆಯು ಪುನಃ ಅರಸಾಡ ಕೊಡಲಿ ತನ್ನ ದೇಶದಲ್ಲಿರುವ ಶೂನ್ಯಗಾರರನ್ನೂ ಮಂತ್ರಜ್ಞರನ್ನೂ ಕರಿಸಿ ಖಾಮನನ್ನು ಕಪಿಸಿ ಶೂನ್ಯಮಾಡಿ ಕೊಲ್ಲಬೇಕೆಂದು ಆಜ್ಞಾಪಿಸಿದನು. ಖಾಮನು ಮಂತ್ರಜ್ಞರನ್ನೂ ಶೂನ್ಯಗಾರರನ್ನೂ ನೋಡು—ಮಂತ್ರ ಮಾಟ ಶೂನ್ಯಗಳು ಬರೀ ಸುಳ್ಳು, ನಿಷ್ಪ್ರಯೋಜನವೆಂದು ನನ್ನ ಜನಗಳಿಗೆ ಸಿದ್ಧಾಂತಪಡಿಸುವದಕ್ಕೆ ಇದರಿಂದ ತಕ್ಕ ಅವಕಾಶ ಲಭ್ಯವಾಗುವದೆಂದು ನಿರೀಕ್ಷಿಸುತ್ತಿದ್ದನು. ಶೂನ್ಯಗಾರರು ಖಾಮನ ಮನೆಯ ಮುಂದೆ ಅಗ್ನಿಕುಂಡವನ್ನು ಮಾಡಿ ಅದರೊಳಗೆ ಮೂಲಿಕೆಗಳನ್ನು ಹಾಕುತ್ತಾ ಖಾಮನನ್ನು ಕಪಿಸಿ ಮಾಟಮಾಡಿದರು. ಇದನ್ನು ನೋಡಿ ಪ್ರಜೆಗಳು ಅಯ್ಯೋ! ನಮ್ಮ ಯುವರಾಜನು ಈ ಶೂನ್ಯಗಾರರ ಕಟ್ಟಿಗೆ ಸಿಕ್ಕಿ ನಾಶವಾಗುತ್ತಾನಲ್ಲಾ? ಅವನನ್ನು ಬಿಡಿಸಿಕೊಳ್ಳುವವರು ಯಾರೂ ಇಲ್ಲವೇ ಎಂದು ಚಿಂತಿಸುತ್ತಿದ್ದರು. ಆದರೆ ಖಾಮನು ಮಾತ್ರ ನಿಶ್ಚಿಂತನಾಗಿಯೂ ಶಾಂತಚಿತ್ತನಾಗಿಯೂ ಇದ್ದು ಅಕಸ್ಮಾತ್ತಾಗಿ ಮನೆಯಿಂದ ಹೊರಗೆ ಬಂದು ಆ ಶೂನ್ಯಗಾರರನ್ನೆಲ್ಲಾ ಓಡಿಸಿ ಬೆಂಕಿಯನ್ನು ಆರಿಸಿ ಮಾಟ ಮಂತ್ರಗಳೆಲ್ಲಾ ಸುಳ್ಳೆಂದು ಸುತ್ತಲು ನಿಂತಿದ್ದವರಿಗೆ ಹೇಳಿ ಮನೆಗೆ ಹೋಗಿ ಮಲಗಿಕೊಂಡನು. ಜನಗಳು ಈ ರಾತ್ರಿ ಖಾಮನಿಗೆ ಏನಾಗುವದೋ? ಎಂದು ಭೀತರಾಗಿದ್ದರು. ಆದರೆ ಅವನು ಯಾವ ಹಾನಿಯೂ ಇಲ್ಲದೆ ಬೆಳಿಗ್ಗೆ ಸುಖವಾಗಿ ಎದ್ದು ಬಂದದ್ದನ್ನು ನೋಡಿ ಎಲ್ಲರೂ ಆಶ್ಚರ್ಯಪಟ್ಟು ಸಂತೋಷಚಿತ್ತರಾದರು. ಶೂನ್ಯಗಾರರು ಮತ್ತೊಂದು ಸಾರಿ ಮಾಟಮಾಡಬೇಕೆಂದು ಅರಸನಿಂದ ಪ್ರೇರಿತರಾಗಿ ಮಾಡಿದರು. ಆದರೆ ಅದರಿಂದ ಅವನಿಗೆ ಯಾವ ಹಾನಿಯೂ ಸಂಭವಿಸದಿರುವದನ್ನು ನೋಡಿ—ನಮ್ಮ ಮಾಟ ಮಂತ್ರಗಳು ಖಾಮನಿಗೆ ನಾಟುವದಿಲ್ಲವೆಂದು ಹೇಳಿ ಹೊರಟುಹೋದರು.

ಆದರೆ ಖಾಮನೂ ಅವನ ತಮ್ಮನೂ—ಮಾಟ ಮಂತ್ರಗಳು ನಮಗೆ ಮಾತ್ರವಲ್ಲ, ಯಾರಿಗೂ ಏನೂ ಅಪಾಯಮಾಡಲಾರದ ಸುಳ್ಳು ಕಲ್ಪನೆ. ಕೊಲ್ಲುವ, ರಕ್ಷಿಸುವ ಅಧಿಕಾರವು ದೇವರೊಬ್ಬನಲ್ಲಿ ಮಾತ್ರ ಉಂಟು. ಆತನನ್ನು ಭಕ್ತಿಯಿಂದ ಸೇವಿಸಿದರೆ ಯಾವದಕ್ಕೂ ಹೆದರಬೇಕಾಗಿಲ್ಲವೆಂದರು.

ಒಳದೇಶದ ವೃತ್ತಾಂತಗಳು.

ಈ ವಾರ ನಮ್ಮ ಪತ್ರಿಕೆಯು ಹತ್ತು ಪುಟಗಳುಳ್ಳದ್ದಾಗಿದೆ.

ರಾಜಧಾನಿಯಲ್ಲಿ 8-10 ದಿನಗಳಿಂದ ಸದಾ ಮೋಡವಾಗುತ್ತಾ ತುಂತುರು ಹನಿ ಬೀಳುತ್ತಲೂ, ಬಲವಾದ ಶೀತಗಾಳಿ ಬೀಸುತ್ತಲೂ ಇದೆ.

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯವರು ರಸ್ತೆಗಳನ್ನು ದುರಸ್ತು ಮಾಡುವದಕ್ಕೆ ಸ್ಟೀಂ ರೋಡ್ ರೋಲರ್ ಎಂಬ ಯಂತ್ರವನ್ನು 7,000 ರೂಪಾಯಿಗೆ ಕೊಂಡು ತರಿಸಬೇಕೆಂದು ನಿಶ್ಚಯಿಸಿರುತ್ತಾರೆ.

ನಮ್ಮ ಬ್ರಿಟಿಷ್ ರೆಸಿಡೆಂಟರಾದ ಸರ್ ಹ್ಯೂ ಡೇಲಿ ಯವರು ತಮ್ಮ ಕುಮಾರಿಯನ್ನು ಬೆಂಗಳೂರಿನಲ್ಲಿ ಕ್ಯಾಪ್ಟನ್ ಡಬ್ಲ್ಯು. ಪ್ಯಾಜಿಟ್ ಟಾಮ್ಲಿನ್ಸನ್ ರವರಿಗೆ ಕೊಟ್ಟು ಈ ತಿಂಗಳು ತಾ. 18 ನೇ ಶನಿವಾರ ವಿವಾಹಮಾಡುವವರಾಗಿದ್ದಾರೆ.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲ್ ನಿಂದ ಈ ವರುಷದ ಪ್ರಜಾಪ್ರತಿನಿಧಿಸಭೆಗೆ ಮ|| ಗಳಾದ ಜಿ. ರಾಜಪ್ಪನವರು, ಎಚ್. ಕೆ. ವೀರಬಸವಯ್ಯನವರು, ಜಿ. ಸಿದ್ದವೀರಪ್ಪನವರು, ಬಿ. ಹನುಮಪ್ಪನವರು ಮೆಂಬರಾಗಿ ಹೋಗುವಂತೆ ಚುನಾವಣೆ ಆಗಿದೆ.

ಈ ಸಲ ರಾಜಧಾನಿಯಲ್ಲಿ ನಡೆಯುವ ದಸರಾ ಪ್ರದರ್ಶನವು ಸೆಪ್ಟಂಬರ್ ತಾ. 21 ನೇ ಸೋಮವಾರ ಪ್ರಾರಂಭವಾಗುತ್ತೆಂದೂ, ಪ್ರದರ್ಶನಕ್ಕೆ ವಸ್ತುಗಳನ್ನು ಸೆಪ್ಟಂಬರ್ ತಾ. 5 ರೊಳಗಾಗಿ ತಲಪುವಂತೆ ಕಳುಹಿಸಿಕೊಡಬೇಕೆಂದೂ ಸೆಕ್ರೆಟರಿಯವರು ತಿಳಿಸುತ್ತಾರೆ.

ಬೆಂಗಳೂರು ಸಿಟಿಯಲ್ಲಿ ಗಂಗಾಧರ ಮೊದಲಿಯಾರ್ ಎಂಬಾತನು ನೋಸ್ತ್ ಕರವಾದ ಬ್ರಾಂದಿ ಸೀಸೆಯನ್ನು ಬಿಕರಿ ಮಾಡಿದ್ದಕ್ಕಾಗಿ ಸಿಟಿ ಮ್ಯಾಜಿಸ್ಟ್ರೇಟರು ಆತನಿಗೆ 200 ರೂಪಾಯಿ ಜುಲ್ಮಾನೆ, ಇಲ್ಲವೇ ಒಂದು ತಿಂಗಳ ಕಠಿಣ ಸಜಾ ಎಂಬ ಶಿಕ್ಷೆಯನ್ನು ವಿಧಿಸಿದರು.

ಲೇಟ್ ದಳವಾಯಿ ದೇವರಾಜೇಅರಸಿನವರ ಕುಮಾರ್ತೆಗೂ, ಸೊಸೆಗೂ ತುಂಬಾ ಕಾಯಿಲೆಯಾಗಿ, ಡಾಕ್ಟರುಗಳಾದ ಮೇಜರ್ ಫ್ಲೆಕ್ಸ್‌ರವರೂ, ಎಸ್. ಸುಬ್ಬರಾಯರೂ, ರಂಗಾಚಾರ್ಯರೂ ಚಿಕಿತ್ಸೆ ಮಾಡುತ್ತಿದ್ದಾರೆಂದು ತಿಳಿಯುವುದು. ಈ ಹೆಣ್ಣುಮಕ್ಕಳಿಗೆ ಬೇಗನೆ ಆರೋಗ್ಯವುಂಟಾಗಲೆಂದು ಪ್ರಾರ್ಥಿಸುತ್ತೇವೆ.

ನಮ್ಮ ಸಂಸ್ಥಾನದ ಚೀಫ್ ಕೋರ್ಟಿನ ಜಡ್ಜರಾದ ಸರ್ ಮಿಲ್ಲರ್‌ಯವರಿಗೆ ನಮ್ಮ ಸರ್ಕಾರದವರು ತಿಂಗಳಿಗೆ 3,500 ರೂಪಾಯಿ ಸಂಬಳ ಸಲ್ಲತಕ್ಕದ್ದೆಂದು ಹುಕುಂ ಕೊಟ್ಟಿದ್ದಾರೆ. ಖಜಾನಾ ಭಕ್ಷಿಯವರಾದ ಮ|| ಜೆ. ಎಸ್. ಚಕ್ರವರ್ತಿಯವರ ಸಂಬಳವನ್ನು 2,000 ರೂಪಾಯಿಗೆ ಬಡ್ತಿ ಮಾಡಿದ್ದಾರೆ.

ಮೈಸೂರು ಸರ್ಕಾರದಿಂದ ಗ್ವಾಲಿಯರ್ ಮಹಾರಾಜರವರು ಕೊಂಡು ಕೊಂಡ ಇಪ್ಪತ್ತು ಆನೆಗಳನ್ನು ಹಿಂದಿನ ಮಂಗಳವಾರ ಬೆಂಗಳೂರಿನಲ್ಲಿ ರೈಲ್ ಗಾಡಿಗಳ ಮೇಲೆ ಹತ್ತಿಸಿ ಸಾಗಹಾಕಿದರು. ಆ ಪೈಕಿ ಒಂದು ಹೊಸ ಆನೆಯು ಗಾಡಿಯೊಳಕ್ಕೆ ಹೋಗದೆ ಬಹಳ ಕಷ್ಟಪಡಿಸಿ, ಕಡೆಗೆ ಹಳೇ ಆನೆಗಳಿಂದ ಏಟು ತಿಂದು ಬಿದ್ದು ವ್ಯತಪಟ್ಟಿತು.

ಕಳೆದ ಸೋಮವಾರ ಎರಡನೇ ಮಹಾರಾಜಕುಮಾರ್ತೆಯವರ 3 ನೇ ಕುಮಾರ್ತೆಯ ವರುಷಾಬ್ದಿಕದ ನಿಮಿತ್ತ ಮಹಾಮಾತೃಶ್ರೀಯವರು ರಾಜಧಾನಿಯಲ್ಲಿರುವ ಧರ್ಮನಿಲಯಗಳಿಗೂ ಕಂಗಳರಿಗೂ 2,000 ರೂಪಾಯನ್ನು ಧರ್ಮ ಕೊಟಿಸಿದ್ದಲ್ಲದೆ, ನೂರಾರು ಮಂದಿ ಸ್ತ್ರೀಯರಿಗೂ ಹೆಣ್ಣು ಮಕ್ಕಳಿಗೂ ಸಮಾರಾಧನೆಮಾಡಿಸಿ ಅಂಗವಸ್ತ್ರ ದಕ್ಷಿಣೆಗಳನ್ನು ದಯಪಾಲಿಸಿದರು.

ಕಳೆದ ಶನಿವಾರ ಬೆಂಗಳೂರು ಶ್ರೀನಿವಾಸ ಮಂದಿರದ ಸ್ತ್ರೀ ಶಾಖೆಯಲ್ಲಿ ಒಂದು ಮನೋಹರವಾದ ಕೂಟವು ಜರುಗಿತು. ಶಾಕಿನಾಡದ ಮ|| ಕೋಟೀಶ್ವರ ಗುಪ್ತರವರ ಪತ್ನಿ ಶ್ರೀ ಕಮಲಮ್ಮನವರು ಸಮಾಜವೆಂಬುದನ್ನೂ, ಕಾವೇರಮ್ಮನವರು ಆರ್ಯರನ್ನೂ ಕುರಿತ ಉಪನ್ಯಾಸಗಳನ್ನು ಓದಿದರು. ಮಹಿಳೆಯರು ಬಹು ಮಂದಿ ಸೇರಿದ್ದು ಉಪನ್ಯಾಸಗಳನ್ನು ಕೇಳಿ ಸಂತೋಷಪಟ್ಟರು.

ಅರಸೀಕೆರೆಯ ಮ|| ಎಂ. ಆರ್. ರಂಗಣ್ಣನವರು ಬರೆಯುವುದು—ಚೇಳು ಕಡಿದ ಕೂಡಲೆ ನವಾಸಾಗರಕ್ಕೆ ಸ್ವಲ್ಪ ಸುಣ್ಣ ಬೆರಸಿ ತಿಕ್ಕಿದರೆ ದ್ರವಬರುವುದು. ಅದನ್ನು ಚೆನ್ನಾಗಿ ಮೂಸಿನೋಡಿದರೆ ಚೇಳಿನ ಉರಿಯೂ ಬಾಧೆಯೂ ತಕ್ಷಣ ನಿಲ್ಲುತ್ತದೆ. ಒಂದು ಸೀಸೆಯಲ್ಲಿ ನವಾಸಾಗರವನ್ನೂ ಸುಣ್ಣವನ್ನೂ ಬೆರಸಿ ಇಟ್ಟುಕೊಂಡಿದ್ದು ಚೇಳು ಕಡಿದಾಗ ಉಪಯೋಗಿಸಬಹುದು. ಇದು ಬಹು ಖಾತ್ರಿಯಾದದ್ದು. ಕಡಿದ ಸ್ಥಳಕ್ಕೆ ಸ್ವಲ್ಪ ತಿಕ್ಕಬೇಕು.

ಹಿಂದುಸ್ಥಾನದ ಸರ್ವೆ ಇಲಾಖೆಯ ಅಧಿಕಾರಿಯಾಗಿರುವ ರಾವ್ ಸಾಹೇಬ್ ಅನಂತರಾವ್ ಎಂಬುವರು ಬೆಂಗಳೂರು ಅಲಸೂರು ಪೇಟೆಯಲ್ಲಿ ಇಳುಕೊಂಡಿದ್ದಾಗ ಷೇಕ್ ಚಂದ್ ಮತ್ತು ಸಯ್ಯದ್ ಖಾದರ್ ಎಂಬ ಇಬ್ಬರು ಪೋಲೀಸಿನವರು ಅವರ ಬಂಗಲೆಗೆ ನುಗ್ಗಿ ಸುಮಾರು 500 ರೂಪಾಯಿನ ಸಾಮಾನುಗಳನ್ನು ಕಳುವು ಮಾಡಿದರೆಂದೂ, ಇವರ ಬಳಿ ಆ ಪೈಕಿ ಸುಮಾರು 100 ರೂಪಾಯಿನ ಪದಾರ್ಥಗಳು ಸಿಕ್ಕಿದವೆಂದೂ ಮೊಕದ್ದಮೆ ಆಗಿ ವಿಚಾರಣೆ ನಡೆಯುತ್ತಿದೆ.

ತಿಪಟೂರು ಟವನ್ ಗೆ ನಾಲ್ಕು ಗಲ್ಲಿಗಳಿಂದ ಹೋಗುವ ಖಾಲಿ ಮತ್ತು ಭರ್ತಿ ಗಾಡಿಗಳ ಮೇಲೆ ಸುಂಕ ಹಾಕುತ್ತೇವೆಂದು ಆ ಮ್ಯುನಿಸಿಪಲ್ ಬೋರ್ಡಿನವರು ತಿಳಿಸಿದ್ದಕ್ಕೆ ಸರ್ಕಾರದವರು ಅದನ್ನು ಒಪ್ಪಿ ಸ್ಯಾಂಕ್ಷನ್ ಮಾಡಿ, ಬಾರಾಮಾರ್ಗದ ಭರ್ತಿ ಅಥವಾ ಖಾಲಿ ಗಾಡಿಗಳಿಗೆ ಸುಂಕ ಹಾಕಕೂಡದೆಂದು ವಿಧಿಸಿರುತ್ತಾರೆ. ನಡೆಸ್ತಾಡುವ ಸುಂಕದ ದರಗಳೆಷ್ಟೆಂದರೆ—ಜೋಡೆತ್ತಿನ ಭರ್ತಿ ಗಾಡಿಗೆ 2 ಆಣೆ, ಖಾಲಿ ಗಾಡಿಗೆ 1 ಆಣೆ; ಒಂಟೆತ್ತಿನ ಭರ್ತಿ ಅಥವಾ ಖಾಲಿ ಗಾಡಿಗೆ 1 ಆಣೆ.

ತೀರ್ಥಹಳ್ಳಿ ತಾಲ್ಲೂಕಿನ ಅಮಲ್ದಾರ್ ಮ|| ಎಸ್. ಧರ್ಮರಾಯರು ಕಳೆದ ಗುರುವಾರ ಮಧ್ಯಾಹ್ನ ಹುಮಚದಕಟ್ಟೆಯಲ್ಲಿ ಸಿದ್ಧವಾಗಿದ್ದ ಸರ್ಕಾರಿ ಹೊಸ ಆಸ್ಪತ್ರೆಯನ್ನು ಉತ್ಸವಪೂರ್ವಕವಾಗಿ ಪ್ರಾರಂಭಮಾಡಿದರು. ಸುತ್ತಮುತ್ತಿನ ಪ್ರಮುಖಪ್ರಜೆಗಳೆಲ್ಲಾ ಆ ದಿನ ಕೂಡಿದ್ದು, ಬಹು ಸಂಭ್ರಮದಿಂದಲೂ ಕೃತಜ್ಞತೆಯಿಂದಲೂ ಶ್ರೀಮನ್ ಮಹಾರಾಜರವರ ಶ್ರೇಯಸ್ಸನ್ನು ಬಯಸಿದರು. ಈ ಆಸ್ಪತ್ರೆಗೆ ಮ|| ಪಿ. ಗುರುಸ್ವಾಮಯ್ಯನವರು ಮೊದಲನೇ ವೈದ್ಯರಾಗಿ ನೇಮಕವಾಗಿರುತ್ತಾರೆ.

ಸಂಸ್ಥಾನದೊಳಗೆ ಇಂಗ್ಲಿಷ್ ಮತ್ತು ಕರ್ನಾಟಕ ಅಂಗಸಾಧನೆಗಳಲ್ಲಿ ಚತುರರೂ ಸಮರ್ಥರೂ ಆಗಿರುವ ವಿದ್ಯಾರ್ಥಿಗಳಿಗೆ ಈ ಸಲ ನವರಾತ್ರಿ ಉತ್ಸವ ಕಾಲದಲ್ಲಿ ರಾಜಧಾನಿಯೊಳಗೆ ಕೆಲವು ಪಂದ್ಯಗಳನ್ನು ಏರ್ಪಾಡುಮಾಡಿದಾರೆ. ಈ ಏರ್ಪಾಡಿಗೆ ಸರ್ದಾರ್ ಎಂ. ಗೋಪಾಲರಾಜೆ ಅರಸಿನವರು ಪ್ರೆಸಿಡೆಂಟರು, ಅಡ್ವೊಕೇಟ್ ಮ|| ಬಿ. ಆರ್. ಕೃಷ್ಣಮಾಚಾರ್ಯರು ಸೆಕ್ರೆಟರಿಯವರು. ಈ ಪಂದ್ಯಗಳಿಗೆ ಸೇರತಕ್ಕವರು ಸೆಪ್ಟಂಬರ್ ತಾ. 7 ರೊಳಗಾಗಿ ಸೆಕ್ರೆಟರಿಯವರಿಗೆ ಬರಹಮೂಲಕ ತಿಳಿಸಬಹುದು.

ಶ್ರೀಮನ್ ಮಹಾರಾಜರವರು ಅರಮನೆಯ ರಾಣಿವಾಸದವರ ಸಮೇತ ಮೊನ್ನೆ ಮಂಗಳವಾರ ನಂಜನಗೂಡಿಗೆ ಚಿತ್ತೈಸಿದ್ದು ಪೌರ್ಣಮಿ ಉತ್ಸವಾದಿಗಳನ್ನು ಬೆಳಸಿಕೊಂಡು ರಾತ್ರಿ ಸುಮಾರು 7½ ಗಂಟೆಗೆ ವಾಪಸು ದಯಮಾಡಿದರು. ಮಹಾರಾಜರವರು ಈ ದಿನ ಪರಿವಾರ ಸಮೇತ ರಾಜಧಾನಿಯಿಂದ ಮೋಟಿರಿನಲ್ಲಿ ನೀಲಗಿರಿಗೆ ಚಿತ್ತೈಸುತ್ತಾರೆಂದೂ, ಮಹಾಮಾತೃಶ್ರೀಯವರೇ ಮೊದಲಾದ ರಾಣಿವಾಸದವರು ಮೋಟರುಗಳಲ್ಲಿ ರಾಜಧಾನಿಯಿಂದ ಈ ದಿನ ಬೆಂಗಳೂರಿಗೆ ದಯಮಾಡುವರೆಂದೂ ತಿಳಿದುಬಂದಿದೆ.

ರಾಜಧಾನಿಯ ಜಗನ್ಮೋಹನ ಬಂಗಲೆಯಲ್ಲಿ ಆಗಸ್ಟು ತಾ. 15 ನೇ ಶನಿವಾರ ಮಧ್ಯಾಹ್ನ ಫಲಪುಷ್ಪಾದಿಗಳ ಮೊದಲನೇ ಪ್ರದರ್ಶನವು ಪ್ರಾರಂಭವಾಗುತ್ತದೆ. ಶ್ರೀಮನ್ ಮಹಾರಾಜರವರು ಚಿತ್ತೈಸಿ ಈ ಪ್ರದರ್ಶನವನ್ನು ಪ್ರಾರಂಭಿಸಬಹುದೆಂದು ಕಾಣುವುದು. ರಾಜಧಾನಿಯಲ್ಲಿ ಬಂಗಲೆಗಳಲ್ಲೂ ಮನೆಗಳಲ್ಲೂ ಪ್ರಜೆಗಳು ಗಿಡಗಳನ್ನೂ, ಹೂವು ಹಣ್ಣುಗಳನ್ನೂ ತೋಟಗಾರರು ಹೂವು ತರಕಾರಿಗಳನ್ನೂ ಉತ್ಸಾಹದಿಂದಲೂ ಮುತುವರ್ಜಿಯಿಂದಲೂ ಬೆಳೆಯುವುದಕ್ಕೆ ಈ ಪ್ರದರ್ಶನದ ಏರ್ಪಾಡು ತುಂಬಾ ಪ್ರೋತ್ಸಾಹವಾಯಿತೆಂದು ಸಂತೋಷಪಡುತ್ತೇವೆ.

ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ತೇರ್ಗಡೆಹೊಂದಿದ ವಿದ್ಯಾರ್ಥಿಗಳಿಗೆ ಮೈಸೂರು ಮತ್ತು ಬೆಂಗಳೂರು ಕಾಲೇಜುಗಳಲ್ಲಿ ಇರುವ ತರಗತಿಗಳು ಸಾಲವೆಂದೂ, ಇನ್ನು ಕೆಲವನ್ನು ಹೆಚ್ಚಿಸಿ ಪ್ರೌಢವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡಬೇಕೆಂದೂ ಬೆಂಗಳೂರಿನಲ್ಲಿ ಪ್ರಜೆಗಳ ಮುಖಂಡರು ಕಳೆದ ವಾರ ಒಂದು ಸಭೆಯನ್ನು ನಡಿಸಿ ತೀರ್ಮಾನಮಾಡಿಕೊಂಡು, ಗವರ್ನಮೆಂಟಿಗೆ ಅರಿಕೆಮಾಡಿರುತ್ತಾರೆ. ಇದಲ್ಲದೆ ಕಳೆದವಾರ ಬಹುಮಂದಿ ವಿದ್ಯಾರ್ಥಿಗಳು ಅರ್ಜಿಬರೆದುಕೊಂಡುಹೋಗಿ ದಿವಾನರವರನ್ನು ಕಂಡು ಒಪ್ಪಿಸಿ, ಈ ವಿಷಯವನ್ನೇ ಕುರಿತು ಅರಿಕೆಮಾಡಿಕೊಂಡಿದಾರೆ.

ಒಬ್ಬ ಬಾತ್ಮೀದಾರರಿಂದ.—ರಾಜಧಾನಿಯ ಹಳೇ ಅಗ್ರಹಾರದ ವರ್ತಕ ಮಂಡಲಿಯವರ ಪ್ರೋತ್ಸಾಹದಿಂದ ತಾ. 3 ನೇ ಶುಕ್ರವಾರ ರಾತ್ರಿ ತಳೂರುಮಠದಲ್ಲಿ ದೊಡ್ಡಬಳ್ಳಾಪುರದಿಂದ ಬಂದಿರುವ ವೇ|| ಶಿವದೇವಶಾಸ್ತ್ರಿಗಳವರು ಗಿರಿಜಾಕಲ್ಯಾಣವೆಂಬ ಶಿವಕಥೆಯನ್ನು ಭಕ್ತಿರಸದಿಂದ ಮಾಡಿದ್ದನ್ನು ಬಹು ಜನರು ಕೇಳಿ ಆನಂದಪಟ್ಟರು. ರಾಜಧಾನಿಯ ಇನ್ನೊಂದು ಭಾಗದಲ್ಲಿರುವ ಗಂಗಡಿಕಾರರ ಒಕ್ಕಲಿಗ ಪ್ರಜೆಗಳು ಧಾರವಾಡದ ಕುರುತ್ಕೋಟಿ ವೇ|| ನಾರಾಯಣ ಶಾಸ್ತ್ರಿಗಳಿಂದ ಅದೇ ದಿನ ರಾತ್ರಿ ಹರಿಕಥೆಯನ್ನು ನಡಿಸಿ ಅವರಿಗೆ ಮ|| ಎಂ. ವೆಂಕಟಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಬಂಗಾರದ ಪದಕವನ್ನು ಬಹುಮಾನ ಮಾಡಿದರು.

ಕಳೆದ ಬುಧವಾರ ಸಾಯಂಕಾಲ ಮೈಸೂರು ಫಾರೆಸ್ಟ್ ಇಲಾಖೆಯವರು ಬೆಂಗಳೂರು ಲಾಲ್ ಬಾಗ್ ಉದ್ಯಾನವನದಲ್ಲಿ ಮ|| ಎಂ. ಮುತ್ತಣ್ಣನವರಿಗೆ ದಿವ್ಯವಾದ ಔತಣವನ್ನು ಮಾಡಿದರು. ಈಗಿನ ಮತ್ತು ಮಾಜಿ ದಿವಾನರುಗಳೂ ಕೌನ್ಸಿಲ್ ಮೆಂಬರುಗಳೂ, ಸರ್ಕಾರದ ದೊಡ್ಡ ಅಧಿಕಾರಿಗಳೂ, ಪ್ರಜೆಗಳ ಮುಖಂಡರೂ ದಯಮಾಡಿದ್ದರು. ಮ|| ಬಿ. ವಿ. ರಾಮಯ್ಯಂಗಾರ್ರು ಮ|| ಮುತ್ತಣ್ಣನವರ ಗುಣಕಥನ ಮಾಡಿ ಅವರಿಗೆ ವಿಶ್ರಾಂತಿಯಲ್ಲಿ ಆಯುರಾರೋಗ್ಯಾದಿಗಳುಂಟಾಗಲೆಂದು ಬಯಸಿದರು. ಇದಲ್ಲದೆ ಬೆಂಗಳೂರಲ್ಲಿರುವ ಕೊಡಗರೆಲ್ಲಾ ಸೇರಿ ಮ|| ಮುತ್ತಣ್ಣನವರಿಗೆ ಔತಣವನ್ನು ಮಾಡಿದರು. ಮ|| ಮುತ್ತಣ್ಣನವರು ಕಳೆದ ಬುಧವಾರ ರಾತ್ರಿ ರೈಲು ಹತ್ತಿ ಕೊಡಗಿಗೆ ಪ್ರಯಾಣಮಾಡಿದರು.

ಪರಹಿತ ಕಾರ್ಯವು.

ಸೆಂಟ್ ಜಾನ್ ಅಂಬ್ಯುಲೆನ್ಸ್ ಸಂಘದ ಮೈಸೂರು ಶಾಖೆಯ ವಾರ್ಷಿಕ ಕೂಟವು ಕಳೆದ ಶನಿವಾರ ಸಾಯಂಕಾಲ ರಾಜಧಾನಿಯ ಟೌನ್ ಹಾಲ್ ಮಂದಿರದಲ್ಲಿ ಶ್ರೀಮನ್ ಮಹಾರಾಜರವರ ಅಧ್ಯಕ್ಷತೆಯಲ್ಲಿ ಜರುಗಿತು. ಹೆಸರು ಮಾತ್ರ ಹೊಸದಾಗಿದೆಯಲ್ಲದೆ ಈ ಸಂಘದ ಕಾರ್ಯಗಳು ಪರಹಿತವಾದದ್ದಾಗಿದೆ. ಅಕಸ್ಮಾತ್ತಾಗಿ ಸಂಭವಿಸುವ ಅಪಾಯಗಳಿಗೆಲ್ಲಾ ಸಾಮಾನ್ಯ ಜನರೂ ಪ್ರಥಮ ಚಿಕಿತ್ಸೆಯನ್ನು ಕಲಿತುಕೊಳ್ಳಬೇಕೆಂಬುವುದೇ ಈ ಸಂಘದ ಉದ್ದೇಶ. ಇದಕ್ಕಾಗಿ ಈ ಸಂಘದವರು ವೈದ್ಯರನ್ನು ನೇಮಿಸಿ ಎಲ್ಲರಿಗೂ ಚಿಕಿತ್ಸೆಮಾಡುವ ವಿಧಾನಗಳನ್ನು ಕಲಿಸಿಕೊಡುತ್ತಾರೆ. ಸಕಲ ಪ್ರಜೆಗಳೂ ಗಂಡಸರಾಗಲಿ ಹೆಂಗಸರಾಗಲಿ ಅಂಥಾ ತರಗತಿಗಳಿಗೆ ಹೋಗಿ ಸೇರಿ ಆ ವಿಧಾನಗಳನ್ನು ಪೂರ್ಣವಾಗಿ ಕಲಿತುಕೊಳ್ಳಬಹುದು. ಮೈಸೂರು ಶಾಖೆಗೆ ಸರ್ದಾರ್ ಎಂ. ಲಕ್ಷ್ಮೀಕಾಂತರಾಜೆ ಅರಸಿನವರು ಸೆಕ್ರೆಟರಿಯವರಾಗಿರುತ್ತಾರೆ. ಇವರು ಆ ದಿನ ಕಳೆದ ವರುಷದ ರಿಪೋರ್ಟನ್ನು ಓದಿ ಹೇಳಿ, ಮೈಸೂರಿನ ಪ್ರಜೆಗಳೆಲ್ಲಾ ಈ ಚಿಕಿತ್ಸೆಯನ್ನು ಕಲಿತುಕೊಳ್ಳಬೇಕೆಂದು ಪ್ರೋತ್ಸಾಹ ಮಾಡಿದರು. ಅಂಥಾ ತರಗತಿಗಳಲ್ಲಿ ಸೇರಿ ಕಲಿತುಕೊಂಡಿರುವವರು ಆ ದಿನ ಕೆಲವು ಚಿಕಿತ್ಸೆಗಳನ್ನು ಸಭೆಯಲ್ಲಿ ಮಾಡಿ ತೋರಿಸಿದರು. ಈ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿರುವಂಥಾ ವಿದ್ಯಾರ್ಥಿಗಳಿಗೂ ವಿದ್ಯಾರ್ಥಿನಿಯರಿಗೂ ಶ್ರೀಮನ್ ಮಹಾರಾಜರವರು ಸಭೆಯಲ್ಲಿ ಸರ್ಟಿಫಿಕೇಟುಗಳನ್ನು ದಯಪಾಲಿಸಿ ಸಭಿಕರನ್ನು ಕುರಿತು ಅಪ್ಪಣೆ ಕೊಡಿಸಿದ ಮುಖ್ಯಾಭಿಪ್ರಾಯಗಳೇನೆಂದರೆ—

ರೋಗವನ್ನೂ ಕಾಯಿಲೆಯನ್ನೂ ಕಡಿಮೆಮಾಡುವ ವಿಷಯದಲ್ಲಿ ಪ್ರತಿ ಒಬ್ಬರೂ ಉತ್ಸಾಹಪಡಬೇಕು. ಇದು ಪರೋಪಕಾರಕ್ಕೆ ಸಾಧನವಾದ ವಿಷಯ. ನಮ್ಮ ಊರಿನ ಕಮಿಟಿಯವರು ನಡಿಸಿರುವ ಕಾರ್ಯಗಳು ತೃಪ್ತಿಕರವಾಗಿವೆ ಎಂದು ಹೇಳಲಾಗದು. ಕಮಿಟಿಯವರು ಇನ್ನೂ ಅನೇಕ ಪ್ರಜೆಗಳನ್ನು ಪ್ರೋತ್ಸಾಹಪಡಿಸಿ ಪ್ರಥಮ ಚಿಕಿತ್ಸೆಯ ವಿಧಾನಗಳನ್ನು ಕಲಿಸಬೇಕಾಗಿದೆ. ಪ್ರಜೆಗಳೂ ವಿಶೇಷವಾಗಿ ತರಗತಿಗಳಿಗೆ ಸೇರಿ ಈ ವಿಧಾನಗಳನ್ನು ಕಲಿತಿದ್ದರೆ ಪರೋಪಕಾರವಮಾಡಲು ಸಮರ್ಥರಾಗುತ್ತಾರೆ. ನಮ್ಮ ಪ್ರಜೆಗಳು ಕಾಯಿಲೆಯವರನ್ನು ಉಪಚರಿಸುವುದರಲ್ಲೂ ಚಾಲೂ ಆದವರಿಗೆ ಚಿಕಿತ್ಸೆಮಾಡುವುದರಲ್ಲೂ ಇರುವಂಥಾ ಪರಹಿತವನ್ನೂ ಪ್ರೀತಿಯನ್ನೂ ಗ್ರಹಿಸಿಕೊಂಡ ಪಕ್ಷದಲ್ಲಿ ಇಂಥಾ ತರಗತಿಗಳು ಇನ್ನೂ ಹೆಚ್ಚುವವೆನ್ನುವುದಕ್ಕೆ ಸಂಶಯವಿಲ್ಲ. ಇಂಥಾ ಕಾರ್ಯಕ್ಕೆ ಬೇಕಾಗುವ ಸಹಾಯವನ್ನು ಮಾಡಲು ನಾವು ಸಿದ್ಧರಾಗಿದ್ದೇವೆ. ಕಳೆದ ವರುಷ ಈ ತರಗತಿಗಳಿಗೆ ಸೇರಿ ತೇರ್ಗಡೆ ಹೊಂದಿದವರು ಬಹಳ ಸ್ವಲ್ಪಮಂದಿ. ಹೀಗೆ ಸರ್ಟಿಫಿಕೇಟುಗಳನ್ನು ಪಡೆಯುವವರ ಸಂಖ್ಯೆ 40-50 ಕ್ಕೆ ಪ್ರತಿಯಾಗಿ ನೂರುಗಟ್ಟಲೆ ಹೆಚ್ಚಬೇಕೆಂದು ಕುತೂಹಲಪಡುತ್ತೇವೆ.

ಕಡೆಯಲ್ಲಿ ಸೆಕ್ರೆಟರಿಯವರು ಮಹಾರಾಜರವರಿಗೆ ಪುಷ್ಪಗಳನ್ನು ಒಪ್ಪಿಸಿದರು. ಕರ್ನಲ್ ಫ್ಲೆಕ್ಸ್‌ರವರು ಮಹಾರಾಜರವರಿಗೆ ಸಭಿಕರ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಿ, ಕೂಟವನ್ನು ಮುಕ್ತಾಯಮಾಡಿದರು.

ಮೈಸೂರು ಗೆಜೆಟ್ ಸಂಗ್ರಹ.

ಫಾರೆಸ್ಟ್ ಸೆಟ್ಲ್‌ಮೆಂಟ್ ಆಫೀಸರಾಗಿರುವ ಅ|| ಕಮಿಷನರ್ ಮ|| ಸಿ. ವೆಂಕಟರಾಯರನ್ನು ಜುಲೈ ತಾ. 1 ರಿಂದ ಬೆಂಗಳೂರು ಸಿಟಿ ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟಾಗಿ ನೇಮಕಮಾಡಿದೆ.

ಕೃಷ್ಣರಾಜಪೇಟೆ ಮ್ಯುನಿಸಿಪಲ್ ಕೌನ್ಸಿಲಿನ ಅವಧಿಯನ್ನು ಜುಲೈ ತಾ. 9 ರ ವರೆಗೆ ಹೆಚ್ಚಿಸಿದೆ.

ಕಡೂರ್ ಡೆಪ್ಯುಟಿ ಕಮಿಷನರ ಆಫೀಸ್ ಹೆಡ್ ಅಕೌಂಟೆಂಟ್ ಮಿ|| ಎಲ್. ಎಸ್. ರೀಗೋಯವರನ್ನೂ, ನಾಗಮಂಗಲದ ತಾಲ್ಲೂಕ್ ಶಿರಸ್ತೇದಾರ್ ಮ|| ಎಂ. ರಾಮಚಂದ್ರರಾಯರನ್ನೂ ಹಂಗಾಮಿಯಾಗಿ ಡೆಪ್ಯುಟಿ ಅಮಲ್ದಾರರಾಗಿ ನೇಮಕಮಾಡಿ, ಮೈಸೂರ್-ಹಾಸನ್-ಅರಸೀಕೆರೆ ರೈಲ್ ರಸ್ತೆಗೆ ಜಮೀನುಗಳನ್ನು ಕೊಂಡುಕೊಳ್ಳುವ ಸ್ಪೆಷಲ್ ಆಫೀಸರ ಕೈಕೆಳಗೆ ಕೆಲಸಕ್ಕಾಗಿ ವರ್ಗಮಾಡಿದೆ.

ಮಿ|| ಪಿ. ಎಫ್. ಬೌರಿಂಗ್ ಯವರು ಕೆಲಸದ ಮೇಲೆ ಹಾಜರಾದ ಬಳಿಕ ಮ|| ಬಿ. ರಾಮಸ್ವಾಮಯ್ಯನವರು ಕೋಲಾರ್ ಚಿನ್ನದ ಗಣಿಗಳ ಸ್ಪೆಷಲ್ ಮ್ಯಾಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿದಾರೆ.

ಮಿ|| ಪಿ. ಜಿ. ಡಿಸೌಜಾರವರು ಗವರ್ನಮೆಂಟಿನ ಡೆಪ್ಯುಟಿ ಸೆಕ್ರೆಟರಿಯಾಗಿ ನೇಮಿಸಲ್ಪಟ್ಟಿದಾರೆ.

ಮೂಡಿಗೆರೆ ರೇಂಜಿನ ಫಾರೆಸ್ಟ್ ಸಬ್ ಅ|| ಕನ್ಸರ್ವೇಟರ್ ಮ|| ಎಂ. ಎ. ವರದಾಚಾರ್ರನ್ನು ಕುಂಸಿಯಲ್ಲಿರುವ ಫಾರೆಸ್ಟ್ ಗರಗಸದ ಕಾರ್ಖಾನೆಯ ಛಾರ್ಜಿಗೆ ಹಂಗಾಮಿಯಾಗಿ ವರ್ಗಮಾಡಿದೆ.

ಮುಂದೆ ಹೇಳುವ ಅ|| ಕಮಿಷನರುಗಳ ವರ್ಗಾವರ್ಗಿ ಹುಕುಂ ಮಾಡಿದೆ:—ಮ|| ಗಳಾದ ಟಿ. ಚೆಲ್ಕಣ್ಣನವರು ಕೋಲಾರ್ ಚಿನ್ನದ ಗಣಿಗಳಿಂದ ದಾವಣಗೆರೆ ಸಬ್ ಡಿವಿಜನ್ ಛಾರ್ಜಿಗೆ; ಆರ್. ನಾರಾಯಣರಾಯರು ದಾವಣಗೆರೆಯಿಂದ ಹಾಸನದ ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜಿಗೆ; ಪಿ. ಗೋಪಾಲರಾಜೆ ಅರಸಿನವರು ಹಾಸನದ ಡಿಸ್ಟ್ರಿಕ್ಟ್ ಖಜಾನೆ ಛಾರ್ಜಿನಿಂದ ಹಾಸನದ ಡೆಪ್ಯುಟಿ ಕಮಿಷನರ ಆಫೀಸಿಗೆ; ಎನ್. ಮಾಧವರಾಯರು ರೆವಿನ್ಯೂ ಕಮಿಷನರ ಆಫೀಸಿನಿಂದ ದಿವಾನರವರ ಆಫೀಸಿಗೆ (ಅ|| ಸೆಕ್ರೆಟರಿ); ಜಿ. ತಂಬುಚೆಟ್ಟಿಯವರು ಬೆಂಗಳೂರು ಡಿಸ್ಟ್ರಿಕ್ಟ್ ಪೋಲೀಸ್ ಇಲಾಖೆಯಿಂದ ರೆವಿನ್ಯೂ ಕಮಿಷನರ ಆಫೀಸಿಗೆ; ಬಿ. ರಾಮಸ್ವಾಮಯ್ಯನವರು ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ (ವೈಸ್ ಪ್ರೆಸಿಡೆಂಟ್) ಯಿಂದ ಬೆಂಗಳೂರು ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟ್ ಕೆಲಸಕ್ಕೆ.

ಮ|| ಸಿ. ಕೆ. ರಾಮಚಂದ್ರಯ್ಯರವರನ್ನೂ, ಮ|| ಪಿ. ವಿ. ಗಣಪತಯ್ಯನವರನ್ನೂ ಹಂಗಾಮಿಯಾಗಿ 80 ರೂಪಾಯಿ ತಲಬಿನ ಮೇಲೆ ಎರಡು ವರುಷಗಳ ತನಕ ಓವರ್ಸೀಯರನ್ನಾಗಿ ನೇಮಿಸಿ ಕಾವೇರಿ ರಿಜರ್ವಾಯರ್ ಕಾಮಗಾರಿಯ ಯಡತೊರೆ ಡಿವಿಜನ್ ಗೆ ವರ್ಗಮಾಡಿದೆ.

ಕಾವೇರಿ ರಿಜರ್ವಾಯರ್ ಕಾಮಗಾರಿಯ ಸಬ್ ಅ|| ಇಂಜನಿಯರ್ ಮ|| ಎನ್. ಗೋಪಾಲ ಅಯ್ಯಂಗಾರ್ರನ್ನು ಜುಲೈ ತಾ. 1 ರಿಂದ ಒಂದು ವರುಷದ ವರೆಗೆ ಅರಮನೆ ಡಿವಿಜನ್ ಗೆ ವರ್ಗಮಾಡಿದೆ.

ಮ|| ಬಿ. ವೆಂಕೋಬರಾಯರನ್ನು ರೈಲ್ವೆ ಇಲಾಖಾ ಸ್ಟೋರ್ ಕೀಪರಾಗಿಯೂ, ಬೆಂಗಳೂರು-ಚಿಕ್ಕಬಳ್ಳಾಪುರ ರೈಲ್ವೆ ಸೂಪರಿಂಟೆಂಡೆಂಟರಾಗಿಯೂ ಹಂಗಾಮಿಯಾಗಿ ನೇಮಕಮಾಡಿದೆ.

ಮುಂದೆ ಹೇಳುವ ಇಂಜನಿಯರುಗಳ ವರ್ಗಾವರ್ಗಿಗಳನ್ನು ಹುಕುಂ ಮಾಡಿದೆ:—ಮ|| ಎಚ್. ಎಸ್. ಲಕ್ಷ್ಮೀನರಸಪ್ಪನವರು ಬೆಂಗಳೂರಿಂದ ಮೈಸೂರು ಹೆಡ್‌ಕ್ವಾರ್ಟರ್ ರೇಂಜಿಗೆ, ಮ|| ವೈ. ಎಸ್. ಕೇಶವರಾಯರು ಮೈಸೂರಿನಿಂದ ಬೆಂಗಳೂರು ಡಿವಿಜನ್ ಗೆ, ಮ|| ಕೆ. ವೆಂಕಟರಾಮಯ್ಯನವರು ಬೆಂಗಳೂರಿಂದ ಕಾವೇರಿ ರಿಜರ್ವಾಯರ್ ಕಾಮಗಾರಿ ಡಿವಿಜನ್ ಗೆ, ಮ|| ಬಿ. ಸಿ. ಶ್ರೀನಿವಾಸಯ್ಯಂಗಾರ್ರು ಮೈಸೂರಿನಿಂದ ಯಡತೊರೆ ಡಿವಿಜನ್ ಗೆ, ಮ|| ಕೆ. ಆರ್. ಶೇಷಾಚಾರ್ರು ಕಾವೇರಿ ರಿಜರ್ವಾಯರಿನಿಂದ ಹಾಸನದ ಡಿವಿಜನ್ ಗೆ, ಮ|| ಎಸ್. ಎ. ರಾಮಸ್ವಾಮಿಅಯ್ಯರವರು ಹಾಸನದಿಂದ ನೀರಾವರಿ ಡಿವಿಜನ್ ಗೆ.

ಮಧುಗಿರಿ ತಾಲ್ಲೂಕು ಅಮಲ್ದಾರ್ ಮ|| ಎಚ್. ಪಿ. ಗಂಗಾಧರಪ್ಪನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಶಿರಸ್ತೇದಾರ್ ಮ|| ಜಿ. ವಾಸುದೇವರಾಯರು ತಾಲ್ಲೂಕ್ ಛಾರ್ಜನ್ನು ವಹಿಸತಕ್ಕದ್ದು.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1914 ನೇ ಇಸವಿ ಜೂನ್ 26 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ.

ಲೇಣೆ:—	(1) ಷೇರು ಮೊಬಲಗು	ರೂ. 9,68,065
,,	(2) ಠೇವಾಣಿಗಳು	,, 15,38,704
,,	(3) ಇತರೆ	,, 32,332
	(ಆಣೆ, ಕಾಸು ಬಿಟ್ಟಿರುತ್ತೆ.) ಜುಮ್ಲಾ	ರೂ. 25,59,791

ದೇಣೆ:—	(1) ಕೈಯಲ್ಲಿರುವ, ಬ್ಯಾಂಕುಗಳಲ್ಲಿರುವ ಹಣ	ರೂ. 7,04,850
,,	(2) ಖಾತೆ ಮತ್ತು ಇತರ ಸಾಲಗಳು	,, 13,52,031
,,	(3) ಡಿಸ್ಕೌಂಟು ಮಾಡಿದ ವಾಯಿದೆ ಹುಂಡಿಗಳು	,, 1,57,800
,,	(4) ಇನ್‌ವೆಸ್ಟ್‌ಮೆಂಟುಗಳು	,, 2,01,000
,,	(5) ಏಜೆನ್ಸಿಗಳಲ್ಲಿರುವ ಮೊಬಲಗು	,, 1,11,100
,,	(6) ಬ್ಯಾಂಕಿನಲ್ಲಿರುವ ಸಾಮಾನುಗಳು	,, 8,376
,,	(7) ಇತರೆ	,, 23,004
	(ಆಣೆ, ಕಾಸು ಬಿಟ್ಟಿರುತ್ತೆ.) ಜುಮ್ಲಾ	ರೂ. 25,59,791

ಡಬ್ಲಿಯು. ಸಿ. ರೋಸ್, ಮ್ಯಾನೇಜರ್.

ಮಂಚೇನಹಳ್ಳಿ ಬಡವಿದ್ಯಾರ್ಥಿಗಳ ಕಷ್ಟ.

ಗೌರಿಬಿದನೂರು ತಾಲ್ಲೂಕು ಮಂಚೇನಹಳ್ಳಿ ಗ್ರಾಮದಲ್ಲಿ ಇಂಗ್ಲಿಷ್, ಸಂಸ್ಕೃತ, ಕನ್ನಡ ಸ್ಕೂಲುಗಳಿವೆ. ಇಂಗ್ಲಿಷ್ ಸ್ಕೂಲಿಗೆ 50 ರೂಪಾಯಿ ಗ್ರಾಂಟೂ, ಸಂಸ್ಕೃತ ಪಾಠಶಾಲೆಗೆ 15 ರೂಪಾಯಿ ಗ್ರಾಂಟೂ ಸಲ್ಲುತ್ತಿದೆ. ಸರಾಸರಿ ತಿಂಗಳಿಗೆ 45 ರೂಪಾಯಿ ಖರ್ಚು ಇದ್ದು ಹೆಚ್ಚು ಕಮ್ಮಿ ಅರ್ಧ ಖರ್ಚನ್ನು ಗ್ರಾಂಟು ಮೂಲಕ ಸರ್ಕಾರದಿಂದ ಹೊಂದುತ್ತಿರುವ ಲೋಯರ್ ಮಿಡಲ್ ಗರ್ಲ್ಸ್ ಸ್ಕೂಲ್ ಸಹಾಯ ಉಂಟು. ಕನ್ನಡ ಸ್ಕೂಲು ಪೂರಾ ಸರ್ಕಾರಿ. ಇದಕ್ಕೆ 67 ರೂಪಾಯಿ ಖರ್ಚು ಉಂಟು. ಈ ರೀತಿ ಉದಾರಿಗಳಾದ ಸರ್ಕಾರದವರು ಈ ಗ್ರಾಮದ ಹೆಣ್ಣು ಗಂಡು ಮಕ್ಕಳ ವಿದ್ಯಾಭಿವೃದ್ಧಿ ವಿಷಯದಲ್ಲಿ ವಿಶೇಷ ದಯೆಯಿಂದ ಎಲ್ಲಾ ಅನುಕೂಲಗಳನ್ನೂ ಕಲ್ಪಿಸಿಕೊಟ್ಟು ಈ ಗ್ರಾಮದ ಪ್ರಜೆಗಳನ್ನು ಉದ್ಧಾರ ಮಾಡುತ್ತಿದ್ದಾರೆ. ಇದಕ್ಕಾಗಿ ನಮ್ಮ ಶ್ರೀಮನ್ಮಹಾರಾಜರವರಿಗೆ ಈ ಗ್ರಾಮದಲ್ಲಿ ಅಶೇಷ ವೈದಿಕ ಲೌಕಿಕರೆಲ್ಲರೂ ಪ್ರತಿನಿತ್ಯವೂ ಕಾಲತ್ರಯದಲ್ಲಿಯೂ ವಂದನಾಪೂರ್ವಕವಾಗಿ ಶ್ರೇಯಃಪ್ರಾರ್ಥನೆ ಮಾಡುತ್ತಿರುವರು.

ಆದರೆ ಏನು ಹೇಳಲಿ ! ಘನ ಸರ್ಕಾರದವರ ಸದುದ್ದೇಶವನ್ನು ಕೃತಜ್ಞತೆಯಿಂದ ಗ್ರಹಿಸಿ ಅದಕ್ಕೆ ಸಾಧ್ಯವಾದಷ್ಟು ಸಹಾಯಮಾಡುವದಕ್ಕೆ ಬದಲಾಗಿ ತಮ್ಮ ಅಲ್ಪ ಮತಿಯಿಂದ ಅದನ್ನು ಕೆಡಿಸುವವರಿಗಾಗಿ ವ್ಯಸನಪಡಬೇಕಾಗಿದೆ. ಸರ್ಕಾರಿ ಸಹಾಯ ಪಡೆಯುತ್ತಿರುವ ಇಂಗ್ಲಿಷ್, ಸಂಸ್ಕೃತ, ಗರ್ಲ್ಸ್ ಸ್ಕೂಲುಗಳನ್ನು ವಜಾಮಾಡಿಸಿ, ಎಲ್ಲಾ ಏಕ್ ಸರ್ಕಾರಿ ಸ್ಕೂಲುಗಳೇ ಬೇಕೆಂದು ಹೋರಾಡುವ ಮೂರ್ಖರು ಕೆಲವರು ಕೈಯಲ್ಲಿ "ಘನವಂತರು ಮಾನ್ಯ ಮಾಡಲು ಅಸಹ್ಯ ಪಡುವ ಕೆಲವು ಮಾತುಗಳನ್ನು ಬರೆದ" ಒಂದು ಕಾಗದವನ್ನು ಹಿಡಿದು ಮನೆಮನೆಗೆ ಓಡ್ಯಾಡುತ್ತಾ ರುಜುಹಾಕಿರಿ ಎಂದು ಬಲಾತ್ಕರಿಸುತ್ತಾ ಬುದ್ಧಿವಂತರಿಂದ ಗದರಿಸಿಕೊಳ್ಳುತ್ತಾ, ತಿಳುವಳಿಕೆ ಇಲ್ಲದವರ ರುಜುಗಳನ್ನು ಹಾಕಿಸುತ್ತಾ ಓಡ್ಯಾಡುವದನ್ನು ನೋಡುವಾಗ ನಾಚಿಕೆಯಾಗುತ್ತದೆ. ಇವರು ಇದೇ ಇಂಗ್ಲಿಷ್ ಸ್ಕೂಲಿನಲ್ಲಿ ಫ್ರೀ ಆಗಿ ವಿದ್ಯೆ ಕಲಿತು ಇಂಗ್ಲಿಷ್, ಸಂಸ್ಕೃತ ಭಾಷೆಗಳಲ್ಲಿ ಲೋವರ್ ಸೆಕೆಂಡರಿ ಪರೀಕ್ಷೆ ಕೊಟ್ಟಿರುವುದನ್ನೂ, ಇವರಲ್ಲಿ ಕೆಲವರ ಬಾಲಕಿಯರು ಇಲ್ಲಿನ ಲೋಯರ್ ಮಿಡಲ್ ಗರ್ಲ್ಸ್ ಸ್ಕೂಲಿನಲ್ಲಿ ಹೊಲಿಗೆ ಓದು ಬರಹಗಳಲ್ಲಿ ತಕ್ಕ ಮಟ್ಟಿಗೆ ಬುದ್ಧಿವಂತೆಯರಾಗಿರುವುದನ್ನೂ ನೋಡುವಾಗ ಅವರ ಈಗಿನ ನಡವಳಿಕೆಯು ವಿಷಾದವನ್ನುಂಟುಮಾಡುತ್ತದೆ.

ಹಿಂದೆ ಕನ್ನಡ ಸ್ಕೂಲಿನಲ್ಲಿದ್ದ ಹೆ॥ ಮಾಸ್ತರುಗಳು ಕ್ಲಿಪ್ತಕಾಲಗಳನ್ನು ಹೇಳಿಸಿ, ವಿದ್ಯಾರ್ಥಿಗಳು ಕನ್ನಡ ಪಾಠಗಳನ್ನು ಕನ್ನಡ ಸ್ಕೂಲಿನಲ್ಲೂ ಇಂಗ್ಲಿಷ್ ಪಾಠಗಳನ್ನು ಇಂಗ್ಲಿಷ್ ಸ್ಕೂಲಿನಲ್ಲಿಯೂ ಕ್ರಮವಾಗಿ ಕಲಿಯುವಂತೆ ಅನುಕೂಲವಾದ ಏರ್ಪಾಡುಗಳನ್ನು ಮಾಡುತ್ತಾ ಉಭಯ ಸ್ಕೂಲಿನವರೂ ಅನ್ಯೋನ್ಯವಾಗಿ ಏಕೀಭವಿಸಿ ಕೆಲಸಮಾಡುತ್ತಾ ಬಂದದ್ದರಿಂದ ಅನೇಕಾನೇಕ ವಿದ್ಯಾರ್ಥಿಗಳು 15-16 ವಯಸ್ಸಿನೊಳಗಾಗಿ ಕನ್ನಡ, ಇಂಗ್ಲಿಷ್, ಸಂಸ್ಕೃತ ಭಾಷೆಗಳಲ್ಲಿ ಲೋವರ್ ಸೆಕೆಂಡರಿ ಪರೀಕ್ಷೆ ಕೊಟ್ಟು ಮುಂದಿನ ವಿದ್ಯಾಭ್ಯಾಸಕ್ಕಾಗಿ ಹೈ ಸ್ಕೂಲುಗಳಿರುವ ಸ್ಥಳಕ್ಕೆ ಹೋಗಿರುತ್ತಾರೆಂಬದಕ್ಕೆ ಸಾಕಾದಷ್ಟು ದೃಷ್ಟಾಂತ್ರಗಳಿವೆ. ಈಗಿನ ಕ. ಸ್ಕೂಲಿನ ಹೆ॥ ಮಾ॥ ಕಾಲದಲ್ಲಿ ಇದಕ್ಕೆ ಅವಕಾಶವಿಲ್ಲವಲ್ಲಾ ಎಂದು ಹೇಳಲು ಬಹು ಸಂಕಟವಾಗುತ್ತದೆ. "ನಾವು ಇಲ್ಲೇ ಇಂಗ್ಲಿಷ್ ಹೇಳುತ್ತೇವೆ. ಇಲ್ಲೇ ಸಂಸ್ಕೃತ ಹೇಳುತ್ತೇವೆ" ಎಂದು ವಿದ್ಯಾರ್ಥಿಗಳನ್ನು ಇನ್ನೆಲ್ಲಿಗೂ ಹೋಗದಂತೆ ತಡೆಯುವದಲ್ಲದೆ ಬೇಗ ಹೋಗುವ ವಿದ್ಯಾರ್ಥಿಗಳಿಗೆ ನಾನಾ ವಿಧವಾದ ತೊಂದರೆಗಳನ್ನುಂಟುಮಾಡುತ್ತಾರಂತೆ. ಕನ್ನಡ ಸ್ಕೂಲಿನಲ್ಲಿ ಇಂಗ್ಲಿಷ್ ಮತ್ತು ಸಂಸ್ಕೃತ ಪಾಠಗಳನ್ನು ಹೇಗೆ ಬೋಧಿಸಬಹುದೋ ತಿಳಿಯದು. ಅಂತು ಬಡ ವಿದ್ಯಾರ್ಥಿಗಳ ವಯಸ್ಸೆಲ್ಲಾ ಕನ್ನಡ ಸ್ಕೂಲಿನಲ್ಲೇ ಕಳೆದುಹೋಗುತ್ತದೆ. ಕನ್ನಡ ಪರೀಕ್ಷೆ ಆಗುವದಕ್ಕೇ 15-16 ವರ್ಷ ಕಳೆದುಹೋದರೆ ಪುನಃ ಇಂಗ್ಲಿಷ್ ಪ್ರಥಮಾಕ್ಷರದಿಂದ ಪ್ರಾರಂಭಿಸಿ ಪರೀಕ್ಷೆ ಆಗುವಾಗ ವಯಸ್ಸು ಎಷ್ಟಾಗುತ್ತದೋ, ವಿದ್ಯಾಭ್ಯಾಸದಲ್ಲಿ ಮುಂದೆ ಹೋಗತಕ್ಕ ಬಾಲಕರ ಗತಿ ಏನೋ ಯೋಚನೆಮಾಡದೆ ಒಂದು ಸ್ಕೂಲಿನಲ್ಲೇ ಹುಡುಗರು ಭರ್ತಿಯಾಗಿರಬೇಕೆಂದು ಬಾಲಕರನ್ನು ಕೆಡಿಸುವದು ಯಾವ ನ್ಯಾಯವೋ ತಿಳಿಯುವುದಿಲ್ಲ. ಇವರಿಂದಲೇ ಸರ್ಕಾರದವರು ಕನ್ನಡ 2 ನೇ ತರಗತಿಯಲ್ಲಿಯೇ ಇಂಗ್ಲಿಷ್ ಪ್ರಾರಂಭಿಸತಕ್ಕದೆಂಬ ಹೊಸ ರೂಲು ಮಾಡಿದ್ದಾರೆ. ಇದಕ್ಕೆ ಮಂಚೇನಹಳ್ಳಿಯಲ್ಲಿ ಅವಕಾಶವಿಲ್ಲದೆಹೋಗಿದೆ ಎಂದು ಪೇಚಾಡುತ್ತಾ ಅನೇಕ ವಿದ್ಯಾರ್ಥಿಗಳೂ, ಅವರ ಪೋಷಕರೂ 2 ನೇ ತರಗತಿ ಆದ ಕೂಡಲೆ ಇಂಗ್ಲಿಷ್ ಸ್ಕೂಲಿಗೆ ಸೇರಬೇಕೆಂದು ಅಪ್ಪಣೆ ಚೀಟಿ ಬೇಡಿದರೆ, "ಹೋಗು, ನಿಮ್ಮಪ್ಪನನ್ನು ಕರೆದುಕೊಂಡು ಬಾ" ಎಂತಲೂ, ಅಪ್ಪ ಬಂದರೆ "ಇನ್ಸ್‌ಪೆಕ್ಟರ್ ಹುಕುಂ ಆದರೆ ಕೊಡುತ್ತೇವೆ" ಎಂತಲೂ ಹೇಳಿ ಕಾಲಹರಣ ಮಾಡುತ್ತಾರಂತೆ. ಹೀಗಾದರೆ ಆ ಸ್ಕೂಲುಗಳ ಬಾಗಿಲು ಮುಚ್ಚಬೇಕಾಗುತ್ತದೆಂದು ಇವರು ಯೋಚಿಸಿದ್ದರೂ ಆ ಸ್ಕೂಲುಗಳು ಸ್ಥಳದ ಮತ್ತು ಪರಸ್ಥಳದ ವಿದ್ಯಾರ್ಥಿಗಳಿಂದ ತುಂಬಿಹೋಗಿರುವದರಿಂದ ಆ ಉದ್ದೇಶವು ಸಫಲವಾಗುವಹಾಗಿಲ್ಲ. ಇದನ್ನೆಲ್ಲಾ ನೋಡಿ ಇಂಗ್ಲಿಷ್ ಸ್ಕೂಲ್ ಮ್ಯಾನೇಜರೂ, ಹೆ॥ ಮಾಸ್ತರೂ ಬೇಸತ್ತು ಆ ಸ್ಕೂಲಿನ ವಿದ್ಯಾರ್ಥಿಗಳೇ ನಮ್ಮ ಸ್ಕೂಲಿಗೆ ಬೇಡವೆಂದು ಹೇಳಿದರೆ ಆ ವಿದ್ಯಾರ್ಥಿಗಳ ಗತಿಯೇನು ? ವಿದ್ಯಾರ್ಥಿಗಳ ಪರಿಣಾಮವನ್ನು ಚಿಂತಿಸಿ, ಇಂಥಾ ವಿದ್ಯಾರ್ಥಿಗಳನ್ನೇ ಸ್ಕೂಲಿಗೆ ಸೇರಿಸಿಕೊಂಡ ಪಕ್ಷದಲ್ಲಿ ಹೆ॥ ಮಾಸ್ತರು ಎಷ್ಟು ಶ್ರಮ ಪಡಬೇಕು ? ಬಹುಶಾ ಇಂಗ್ಲಿಷ್ ಸ್ಕೂಲ್ ಹೆ॥ ಮಾಸ್ತರು ದುರಭಿಪ್ರಾಯ ಉಳ್ಳವರಲ್ಲವೆಂಬದು ಅವರ ನಡವಳಿಕೆಯಿಂದಲೇ ಸ್ಪಷ್ಟವಾಗುತ್ತದೆ. ಇವರು ಅವರಿಗಳಿಗೂ ಉಪಕಾರಿಗಳಾಗಿರುತ್ತಾರೆ.

ಇಂಗ್ಲಿಷ್ ಸ್ಕೂಲಿನಲ್ಲಿ ಪ್ರತಿ ವರ್ಷವೂ ತರಗತಿಗಳ ಬದಲಾವಣೆಗಳು ನಡೆದು ಜೂನ್ 15 ಕ್ಕೆ ಹೊಸ ಕೆಲಸವು ಪ್ರಾರಂಭವಾಗುತ್ತದೆ. ಈ ಸಲ ಜೂನ್ 13 ನೇ ತಾ. ಆದ ನಂತರ 1 ನೇ ತರಗತಿಗೆ ಸೇರಬೇಕಾದ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವದಿಲ್ಲ ಎಂಬ ವದಂತಿ ಹುಟ್ಟಿತು. ಕನ್ನಡ ಸ್ಕೂಲಿನಲ್ಲಿ ಅಪ್ಪಣೆ ಚೀಟಿ ದೊರೆಯಲಿಲ್ಲ. ಕಾಲ ಮೀರಿದ ನಂತರ ವಿದ್ಯಾರ್ಥಿಗಳನ್ನು ಕ್ಲಾಸಿಗೆ ಸೇರಿಸುವದರಿಂದ ವಿದ್ಯಾರ್ಥಿಗಳಿಗೂ ಉಪಾಧ್ಯಾಯರಿಗೂ ಉಂಟಾಗುವ ತೊಂದರೆ ಎಷ್ಟೆಂಬದು ಗೊತ್ತೇ ಇದೆ. ಆದ್ದರಿಂದ ಕೆಲವು ವಿದ್ಯಾರ್ಥಿಗಳೂ, ಅವರ ಪೋಷಕರೂ ಅಪ್ಪಣೆಚೀಟಿಗಾಗಿ ಎಷ್ಟು ಶ್ರಮಪಟ್ಟು ಹೋರಾಡಿದರೂ ಅಪ್ಪಣೆ ಚೀಟಿ ದೊರೆಯಲಿಲ್ಲ. ಆ ತೋಲಿ ಇಂಗ್ಲಿಷ್ ಸ್ಕೂಲ್ ಹೆ॥ ಮಾಸ್ತರೇ ಆ ವಿದ್ಯಾರ್ಥಿಗಳ ಅಪ್ಪಣೆಚೀಟಿಗಳನ್ನು ಕಳುಹಿಸಬೇಕೆಂದು ಕನ್ನಡ ಸ್ಕೂಲ್ ಹೆ॥ ಮಾಸ್ತರನ್ನು ಬರಹ ಮೂಲಕ ಕೇಳಿಕೊಂಡಾಗ್ಯೂ ಕಳುಹಿಸಲಿಲ್ಲವಂತೆ. ಎದ್ಯುಕೇಷನ್ ರೂಲ್ಸ್ ಮೇರೆ ಆ ವಿದ್ಯಾರ್ಥಿಗಳ ಪೋಷಕರಿಂದ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರಿಗೆ ಈ ವಿಷಯದಲ್ಲಿ ಅರ್ಜಿ ಬರಸಬೇಕೆಂದು ಯೋಚಿಸಿದ ಹಾಗೂ, ಅವರ ಮೇಲೆ ಕ. ಸ್ಕೂಲಿನ ಅ॥ ಮಾಸ್ತರುಗಳಲ್ಲಿ ಕೆಲವರೆಲ್ಲೆ ಈ ಇಂಗ್ಲಿಷ್ ಸ್ಕೂಲಿನಲ್ಲೇ ತಮ್ಮಲ್ಲಿಯೇ ಓದಿದವರಾಗಿರುವದರಿಂದ ಅವರಿಗೆ ತೊಂದರೆಯಾದೀತೆಂದು ಸಂಕಟಪಡುತ್ತಿದ್ದಾರೆಂತಲೂ, ಅಲ್ಲಿ ಕ. ಸ್ಕೂಲ್ ಹೆ॥ ಮಾಸ್ತರು ತಮ್ಮ ಅಪ್ಪಣೆಚೀಟಿ ಇಲ್ಲದೆ ವಿದ್ಯಾರ್ಥಿಗಳನ್ನು ಸೇರಿಸಿಕೊಂಡಿರುವಂತೆ ಅರ್ಜಿಹಾಕಬೇಕೆಂದು ಯೋಚಿಸಿರುವ ಹಾಗೂ, ಅದಕ್ಕಾಗಿ ಮೊದಲೇ ಈ ವಿಷಯವನ್ನೆಲ್ಲಾ ಇನ್ಸ್‌ಪೆಕ್ಟರ್ ಜನರಲ್‌ರವರ ನೋಟೀಸಿಗೆ ಆ ವಿದ್ಯಾರ್ಥಿಗಳ ಪೋಷಕರ ಮೂಲಕ ತಿಳಿಸಬೇಕೆಂದು ನಿಶ್ಚಯಿಸಿರುವ ಹಾಗೂ ತಿಳಿಯಬರುತ್ತೆ. ಮುಖ್ಯ ವಿದ್ಯಾಭ್ಯಾಸಕ್ಕೆ ಅಡಚಣೆಯಾಗಿದೆ. ಇಂಗ್ಲಿಷ್ ಸ್ಕೂಲು ಈ ಗ್ರಾಮದಲ್ಲಿ 20 ವರ್ಷಗಳಿಂದ ಇದ್ದು, ಜನಗಳಿಗೆ ವಿಶೇಷ ಪ್ರಯೋಜನವನ್ನು ಮಾಡಿಯೂ ಮಾಡುತ್ತಲೂ ಇದೆ. ಆದಾಗ್ಯೂ 3-4 ವರ್ಷಗಳಿಂದ ಇಂಥಾ ತೊಂದರೆಗಳು ಪ್ರಾಪ್ತವಾಗಿವೆ. ಇದು ಜಾಗ್ರತೆ ಸರಿಪಡದೆಹೋದರೆ ವಿದ್ಯಾರ್ಥಿಗಳಿಗೆ ಇನ್ನೂ ಕಷ್ಟ ಹೆಚ್ಚುವುದು. ಸಂಸ್ಕೃತ ಪಾಠಶಾಲೆಗೆ ಸೇರಬೇಕೆಂದಿರುವವರಿಗೂ ಇದೇ ತೊಂದರೆಯುಂಟು. ಮುಖ್ಯ ಕ. ಸ್ಕೂಲಿನ ಹೆಡ್ ಮಾಸ್ಟರ ಉದ್ದೇಶದಂತೆ ಇಂಗ್ಲಿಷ್ ಮತ್ತು ಸಂಸ್ಕೃತ ಪಾಠಶಾಲೆಗಳು ನಿರ್ನಾಮವಾಗದೆ ಅಭಿವೃದ್ಧಿ ಸ್ಥಿತಿಯಲ್ಲಿಯೇ ಇರುವದು ಸಂತೋಷಕರವಾಗಿದ್ದಾಗ್ಯೂ ಇಲ್ಲಿನ ವರ್ಧಿಷ್ಣುಗಳಾದ ವಿದ್ಯಾರ್ಥಿಗಳಿಗೆ ಕಷ್ಟವೂ ನಷ್ಟವೂ ತಪ್ಪಲಿಲ್ಲವೆಂದು ನಾವು ಬಹಳವಾಗಿ ಸಂತಾಪಪಡುತ್ತೇವೆ.

ವಿದ್ಯಾರ್ಥಿಗಳ ಹಿತಚಿಂತಕ.

ಮೈಸೂರು ನ್ಯಾಯವಿಧಾಯಕ ಸಭೆ.

ಕಳೆದ 29 ನೇ ತಾ. ಸೋಮವಾರ ಮಧ್ಯಾಹ್ನ ಮೈಸೂರು ನ್ಯಾಯವಿಧಾಯಕ ಸಭೆಯು ಬೆಂಗಳೂರು ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ನಡೆಯಿತು. ದಿವಾನ್‌ರೂ, ಕೌನ್ಸಿಲರುಗಳೂ, ಮೆಂಬರುಗಳೂ ಹಾಜರಾಗಿದ್ದರು. ಸಭೆಯ ಕಾರ್ಯಗಳು ಪ್ರಾರಂಭವಾಗುವುದಕ್ಕಿಂತ ಮುಂಚೆ ದಿವಾನ್ ಮ॥ ಎಂ. ವಿಶ್ವೇಶ್ವರಯ್ಯನವರು ಮೆಂಬರುಗಳನ್ನು ಕುರಿತು ಕೆಲವು ಸಂಗತಿಗಳನ್ನು ಹೇಳಿದರು. ಏನೆಂದರೆ—

ಈ ದಿನ ನಿಮಗೆಲ್ಲಾ 1914-15 ನೇ ಸಾಲಿನ ಜಮಾಖರ್ಚುಗಳ ಅಂದಾಜಾಪಟ್ಟಿಯನ್ನು ಕೊಡಲಾಗುತ್ತೆ. ಅದನ್ನು ನೀವುಗಳು ಸಾಂಗವಾಗಿ ಓದಿ ಪ್ರತಿ ಒಂದು ಡಿಸ್ಟ್ರಿಕ್ಟಿಗೂ ಅವಶ್ಯವಾಗಿರುವ ವಿಷಯಗಳನ್ನೂ, ಗವರ್ನ್‌ಮೆಂಟಿನವರು ಮಾಡಬೇಕಾದದ್ದನ್ನೂ, ಪ್ರಜೆಗಳು ಎಷ್ಟು ಮಟ್ಟಿಗೆ ಸಹಾಯಮಾಡತಕ್ಕವರಾಗಿದ್ದಾರೆಂಬದನ್ನೂ ಯೋಚಿಸಿ ಇನ್ನೊಂದು ಮೀಟಿಂಗಿನಲ್ಲಿ ತಿಳಿಸಬೇಕಾಗಿದೆ. ಮಳೆಗಳು ಬಾರದೆ ತಡೆದಿರೋಣದರಿಂದ ಅನಾವೃಷ್ಟಿ ಸಂಭವಿಸಿದ ಪಕ್ಷದಲ್ಲಿ ಗವರ್ನ್‌ಮೆಂಟಿನವರಿಂದ ಆಗಬೇಕಾಗುವ ಕಾರ್ಯಗಳನ್ನೂ ಸೂಚಿಸಬೇಕಾಗಿದೆ ಎಂದು ಹೇಳಿ, ಬಜೆಟ್ ಮೀಟಿಂಗು ತಾ 7 ನೇ ಮಂಗಳವಾರ ನಡೆಯತಕ್ಕದ್ದೆಂದು ಗೊತ್ತುಮಾಡಿ ತಿಳಿಸಿದರು.

ಪ್ರಶ್ನೋತ್ತರಗಳು.

ಮ॥ ಬಿ. ನರಸಿಂಗರಾಯರ ಪ್ರಶ್ನೆ:—ಬೇರೆ ಬೇರೆ ಇಲಾಖೆಗಳಲ್ಲಿ ಸಿಬ್ಬಂದಿಯನ್ನು ಕಡಮೆಮಾಡಲಾಗಿದೆ ಎಂದು ಗವರ್ನ್‌ಮೆಂಟಿನವರು ಕಳೆದ ಮೀಟಿಂಗಿನಲ್ಲಿ ಪ್ರತ್ಯುತ್ತರ ಕೊಡೋಣಾಯಿತಷ್ಟೆ. ಈಚೆಗೆ ಅದೇ ಇಲಾಖೆಗಳಲ್ಲಿ ಖಾಯಮಾದ ಎಷ್ಟು ಜಾಸ್ತಿ ಲವಾಜಮೆಯನ್ನು ಸ್ಯಾಂಕ್ಷನ್ ಮಾಡೋಣಾಗಿದೆ ? ಎಷ್ಟೆಷ್ಟು ದೊಡ್ಡ ಅಧಿಕಾರಿಗಳನ್ನೂ, ಗುಮಾಸ್ತೆಯರನ್ನೂ, ಜವಾನರನ್ನೂ ನೇಮಿಸಲಾಗಿದೆ ?

ಮ॥ ಕೆ. ಎಸ್. ಚಕ್ರವರ್ತಿಯವರ ಜವಾಬು :—ನೀವು ಕೇಳುವ ಪ್ರಕಾರ ಉತ್ತರವನ್ನು ತಃಖ್ತೆಯಾಗಿ ತಯಾರುಮಾಡಿ ಕೊಡಲು ಕಾಲವಿಳಂಬವಾಗುತ್ತೆ. ಅದನ್ನು ತಯಾರುಮಾಡಿಸಿ ಕೊಡುತ್ತೇವೆ.

ಮ॥ ಬಿ. ನರಸಿಂಗರಾಯರ ಪ್ರಶ್ನೆ:—ಚಿಕ್ಕಬಳ್ಳಾಪುರದ ಅಮಲ್ದಾರರು ಒಂಭತ್ತು ಜನರನ್ನು ಹಿಡಿದು ವಿಚಾರಣೆಯಿಲ್ಲದೆ ಒಂಭತ್ತು ತಿಂಗಳು ಲಾಕಪ್ಪಿನಲ್ಲಿಟ್ಟುಕೊಂಡಿದ್ದು, ಆ ಬಳಿಕ ಅವರನ್ನು ದರ್ಯಾಫ್ತಿಮಾಡಿ ಬಿಟ್ಟುಬಿಟ್ಟರೆಂದು ಎರಡು ಪತ್ರಿಕೆಗಳಲ್ಲಿ ಪ್ರಕಟವಾಗಿದ್ದದ್ದನ್ನು ಸರ್ಕಾರದವರು ಓದಿದ್ದಾರೆಯೋ ? ಆ ಸಂಗತಿ ನಿಜವಾದದ್ದೇ ? ಆ ಅಧಿಕಾರಿಯ ವರ್ತನದ ವಿಷಯದಲ್ಲಿ ಗವರ್ನ್‌ಮೆಂಟಿನವರು ಏನು ಮಾಡಿದ್ದಾರೆ ?

ಮ॥ ಎಚ್. ವಿ. ನಂಜುಂಡಯ್ಯನವರ ಉತ್ತರ:—ಆ ಸಂಗತಿಯನ್ನು ಗವರ್ನ್‌ಮೆಂಟಿನವರು ಈಗ ಓದಿರುತ್ತಾರೆ. ಪೋಲೀಸಿನವರು 1913 ನೇ ಜೂನ್ ತಾ. 9 ರಲ್ಲಿ 9 ಮಂದಿಯನ್ನಲ್ಲ, 7 ಜನರನ್ನು ದಸ್ತಗಿರಿಮಾಡಿ ಆ ಅಮಲ್ದಾರ್ರ ಮುಂದೆ ಹಾಜರುಮಾಡಿದರು. 1914 ನೇ ಜನವರಿ ತಾ. 29 ರಲ್ಲಿ ಅಮಲ್ದಾರ್ರು ದರ್ಯಾಫ್ತಿಯಿಂದ 5 ಮಂದಿಗೆ ಶಿಕ್ಷೆವಿಧಿಸಿ, ಇಬ್ಬರನ್ನು ಖುಲಾಸ್ ಮಾಡಿದರು. ಆ 5 ಮಂದಿ ಅಪೀಲ್ ಮಾಡಿಕೊಂಡಾಗ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಕೆಳಕೋರ್ಟಿನ ದರ್ಯಾಫ್ತಿ ಅಕ್ರಮವಾದದ್ದೆಂದು ಗೊತ್ತುಮಾಡಿ, ಶಿಕ್ಷೆಯನ್ನು ಮಾರ್ಚಿ ತಾ. 9 ರಲ್ಲಿ ವಜಾಮಾಡಿದರು. ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಹುಕುಮು ನ್ಯಾಯವಾದದ್ದೇ ಎಂದು ಚೀಫ್ ಕೋರ್ಟಿನಲ್ಲಿ ಕಟ್ಟನ್ನು ಅಜಮಾಯಿಷಿ ಮಾಡಲಾಯಿತು. ವಿಶೇಷವಾದ ಗಮನ ಕೊಡುವಂಥಾ ಕಾರಣವೇನೂ ಕಂಡುಬರಲಿಲ್ಲ.

ಮ॥ ಬಿ. ನರಸಿಂಗರಾಯರ ಪ್ರಶ್ನೆ :—ಬೆಂಗಳೂರಿನಲ್ಲಿ ಯಾವ ಯಾವ ಸರ್ಕಾರಿ ಕಛೇರಿಗಳನ್ನು ಬಾಡಿಗೆಯ ಕಟ್ಟಡಗಳಲ್ಲಿ ಮಾಡುತ್ತಿದ್ದಾರೆ ? ಎಷ್ಟು ದಿನಗಳಿಂದ ತಿಂಗಳಿಗೆ ಎಷ್ಟು ಬಾಡಿಗೆ ಪಾವತಿ ಆಗುತ್ತಿದೆ ? ಬೆಂಗಳೂರಿನಲ್ಲಿ ಸರ್ಕಾರಕ್ಕೆ ಸೇರಿದ ಎಷ್ಟು ಕಟ್ಟಡಗಳು ಖಾಲಿ ಇವೆ ?

ಮ॥ ಚಕ್ರವರ್ತಿಯವರ ಉತ್ತರ :—ನೀವು ಅಪೇಕ್ಷಿಸು ವಿಷಯಗಳನ್ನು ತಿಳಿಸುವುದಕ್ಕೆ ಎರಡು ತಃಖ್ತೆಗಳನ್ನು ತಯಾರುಮಾಡಿಕೊಟ್ಟಿದೇವೆ. ಸರ್ಕಾರಿ ಕಟ್ಟಡಗಳ್ಯಾವೂ ಖಾಲಿ ಇಲ್ಲ.

ಮ॥ ಆರ್. ವೆಂಕಟರಾಮಣ್ಣನವರ ಪ್ರಶ್ನೆ :—ದೊಡ್ಡ ಕೆರೆಗೂ, ಸಣ್ಣ ಕೆರೆಗೂ ವ್ಯತ್ಯಾಸವೇನು ? ಕಳೆದ ಐದು ವರುಷಗಳಲ್ಲಿ ಯಾವ ಯಾವ ತರಹಾ ಕೆರೆಗಳು ಎಷ್ಟೆಷ್ಟು ದುರಸ್ತು ಮಾಡಲಾಗಿವೆ ? ದೊಡ್ಡ ಕೆರೆಗಳ ಕೆಳಗೆ ಎಷ್ಟು ಜಮೀನುಗಳು ಇವೆ ? ಈ ಪೈಕಿ ಎಷ್ಟು ಜಮೀನು ಸಾಗುವಳಿಯಲ್ಲಿದೆ ? ಹಣವಿಲ್ಲವೆಂಬ ಕಾರಣದಿಂದ ಎಷ್ಟು ಸಣ್ಣ ಕೆರೆಗಳ ದುರಸ್ತನ್ನು ನಿಲ್ಲಿಸಿದೆ ?

ಮ॥ ಎಂ. ಕಾಂತರಾಜೆ ಅರಸಿನವರ ಉತ್ತರ :—300 ರೂಪಾಯಿಗಿಂತ ಹೆಚ್ಚು ಕಂದಾಯ ಕೊಡುವ ಕೆರೆಗಳು ದೊಡ್ಡ ಕೆರೆಗಳೆಂದೂ, ಅದಕ್ಕಿಂತ ಕಡಮೆಯಾದವು ಸಣ್ಣ ಕೆರೆಗಳೆಂದೂ ವಿಂಗಡಿಸಿದೆ. ನೀವು ಕೇಳುವ ಸಂಗತಿಗಳನ್ನು ತಃಖ್ತೆ ಮಾಡಿ ಒದಗಿಸಿರುತ್ತೇವೆ. ನಿಮ್ಮ ಮೂರನೇ ಪ್ರಶ್ನೆಗೆ ಸಮಾಧಾನವನ್ನು ಹೇಳುವುದು ಕಷ್ಟ. ಆ ಲೆಕ್ಕಗಳನ್ನು ತಯಾರುಮಾಡಿಸುವುದು ಸಾವಕಾಶವಾದೀತು. ಯಾವ ಒಂದು ಕೆರೆ ವಿಷಯದಲ್ಲಾದರೂ ಸಂಗತಿ ತಿಳಿಯಬೇಕಾದರೆ ಲೆಕ್ಕಗಳನ್ನು ಕೂಡಿಸಿ ಹೇಳಬಹುದು. ನಿಮ್ಮ 4 ನೇ ಪ್ರಶ್ನೆಗೆ ಲೆಕ್ಕಗಳನ್ನು ಕೂಡಿಸಿ ಉತ್ತರ ಹೇಳುವುದು ಕಷ್ಟ.

ಮ॥ ಬಿ. ವೆಂಕಟರಾಮಣ್ಣನವರ ಪ್ರಶ್ನೆ:—ರಾಜಾದಾಯದಿಂದ ಕಳೆದ 10 ವರುಷಗಳಲ್ಲಿ ಬೆಂಗಳೂರು, ಮೈಸೂರು ಪಟ್ಟಣಗಳ ಅಭಿವೃದ್ಧಿಗೆ ಎಷ್ಟು ಹಣ ಕೊಡೋಣಾಗಿದೆ ? ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರುಗಳ ಅಭಿವೃದ್ಧಿಗೆ ಅದೇ 10 ವರುಷದಲ್ಲಿ ಎಷ್ಟು ಕೊಟ್ಟಿದೆ ?

ಮ॥ ಎಂ. ಕಾಂತರಾಜೆ ಅರಸಿನವರ ಉತ್ತರ :—ಆ ಪ್ರಶ್ನೆಗೆ ತಕ್ಕ ಸಮಾಧಾನವನ್ನು ಬರೆದು ಮೆಂಬರುಗಳ ತಿಳುವಳಿಕೆಗಾಗಿ ಈ ಸಭೆಯಲ್ಲಿಟ್ಟಿದೇವೆ. ಅದನ್ನು ನೋಡಿಕೊಳ್ಳಬಹುದು.

ಮ॥ ಬಿ. ಕೆ. ಗರುಡಾಚಾರ್ರ ಪ್ರಶ್ನೆ :—ಬೆಂಗಳೂರು ಹುಚ್ಚರ ಆಸ್ಪತ್ರೆಯ ವೈದ್ಯರಾದ ಮ॥ ವಿ. ಅಬ್ಬಯ್ಯ ನಾಯುಡುಯವರು ಆಸ್ಪತ್ರೆಯಿಂದ ಹೊರಗೆ ಯಾರಿಗೂ ಚಿಕಿತ್ಸೆಮಾಡಕೂಡದಂತೆ ಸರ್ಕಾರದವರು ನಿರ್ಬಂಧಮಾಡಿದ್ದಾರೆಯೋ ? ಅದಕ್ಕೆ ಸಂಬಂಧಪಟ್ಟ ಕಾಗದಪತ್ರಗಳನ್ನು ಮೆಂಬರುಗಳಿಗೆ ತೋರಿಸಬಹುದೇ ? ಮೈಮರೆಸ ರೋಗಚಿಕಿತ್ಸೆಯನ್ನು ಅವರೊಬ್ಬರೇ ಚೆನ್ನಾಗಿ ಬಲ್ಲವರಾದ್ದರಿಂದ ಪ್ರಜೆಗಳು ಅವರಿಂದ ಚಿಕಿತ್ಸೆಮಾಡಿಸಿಕೊಳ್ಳುವುದಕ್ಕೆ ಅಡ್ಡಿಯಾಗಿದೆ. ಸರ್ಕಾರದವರು ಆ ನಿರ್ಬಂಧವನ್ನು ತಪ್ಪಿಸಿಕೊಡಬೇಕು.

ಮ॥ ಎಂ. ಕಾಂತರಾಜೆ ಅರಸಿನವರ ಉತ್ತರ :—ಅವರಿಗೆ ಹಾಗೆ ಹುಕುಂ ಕೊಟ್ಟು ನಿರ್ಬಂಧಮಾಡಿರುವುದು ನಿಜ. ಆ ಕಾಗದಪತ್ರಗಳನ್ನು ಪ್ರಕಟಿಸಬೇಕಾದ ಅಗತ್ಯ ಕಂಡುಬರುವುದಿಲ್ಲ. ಅಂಥಾ ರೋಗಚಿಕಿತ್ಸೆಯನ್ನು ತಿಳಿದಿರುವ ಇತರ ವೈದ್ಯರೂ ಇರುತ್ತಾರೆ. ಆ ನಿರ್ಬಂಧದ ಹುಕುಮನ್ನು ವಜಾ ಮಾಡಲಾಗುವುದಿಲ್ಲ.

ಮ॥ ಬಿ. ಕೆ. ಗರುಡಾಚಾರ್ರ ಪ್ರಶ್ನೆ:—ಕೋಲಾರ್ ಚಿನ್ನದ ಗಣಿಗಳ ಪ್ರಾಂತ್ಯದಲ್ಲಿ ದೇಶೀಯ ಮದ್ಯಗಳ ಕಂಟ್ರಾಕ್ಟುದಾರರಿಗೆ ಲಾಭವೇನೂ ಉತ್ಪತ್ತಿ ಆಗದಂತೆ ಹರಾಜು ಹಾಕುತ್ತಿರುವುದು ಯಾವ ಸಾಲಿನಿಂದ ? ಈ ರೀತಿ ಬಹು ಕಾಲದಿಂದ ನಡೆಯುತ್ತಾ ಬಂದಿದ್ದರೆ ಸರ್ಕಾರಕ್ಕೆ ನಷ್ಟವಾಗ ಬೇಕು; ಇಲ್ಲವೇ ಕುಡಿಯುವವರಿಗೆ ಮೋಸವಾಗುತ್ತಿರ ಬೇಕು. ಇಂಥಾ ವಿಚಾರವನ್ನು ಸರ್ಕಾರದವರು ಸರಿಪಡಿಸಬಾರದೇ ?

ಮ॥ ಎಂ. ಕಾಂತರಾಜೆ ಅರಸಿನವರ ಉತ್ತರ :—ಈ ಸಂಗತಿ ಮೊದಲು 1905-06 ನೇ ಸಾಲಿನಲ್ಲಿ ಗೊತ್ತಾಯಿತು. ಅದಕ್ಕಾಗಿ ಸರ್ಕಾರದವರು ಸ್ಪೆಷಲ್ ಏರ್ಪಾಡು ಇಟ್ಟಿದ್ದಾರೆ. ಇಜಾರೆದಾರರು ಈ ವ್ಯಾಪಾರದಲ್ಲಿ ನಷ್ಟ ಸಂಭವಿಸಿದರೂ ಲೇವಾದೇವಿಯಲ್ಲಿ ಅವರಿಗೆ ಲಾಭವಿರೋಣದರಿಂದ ಅವರು ಲಕ್ಷ್ಯಮಾಡುವುದಿಲ್ಲವೆಂದು ತಿಳಿದು ಬಂದಿದೆ. ಇದಕ್ಕೆ ಕಂಟ್ರಾಕ್ಟರುಗಳೇ ಪರಿಹಾರವನ್ನು ಮಾಡಿಕೊಳ್ಳಬೇಕು; ಆದರೂ ಸರ್ಕಾರದವರು ಈ ಭಾಗವನ್ನು ಕುರಿತು ಆಲೋಚಿಸುತ್ತಿದ್ದಾರೆ.

ಮ॥ ವೆಂಕಟೇಶಯ್ಯನವರ ಪ್ರಶ್ನೆ:—ಹಾಸನದಿಂದ ಮಂಗಳೂರಿಗೆ ರೈಲು ಹಾಕುವ ಪ್ರಯತ್ನ ಎಲ್ಲಿನ ವರೆಗೆ ಬಂದಿದೆ ?

ಮ॥ ಎಚ್. ವಿ. ನಂಜುಂಡಯ್ಯನವರ ಉತ್ತರ :—ಇಂಡಿಯಾ ಗವರ್ನ್‌ಮೆಂಟಿನವರ ಕೂಡ ಕಾಗದ ಪತ್ರಗಳನ್ನು ನಡಿಸುತ್ತಾ ಇದೇವೆ.

ಮ॥ ವೆಂಕಟೇಶಯ್ಯನವರ ಪ್ರಶ್ನೆ :—ಈಚೆಗೆ ಕೋಲಾರ್ ಚಿನ್ನದ ಗಣಿಯಲ್ಲಿ ನಡೆದ ಅನಾಹುತದ ಪೂರ್ವೋತ್ತರವೇನು ? ಅದರಿಂದಾದ ನಷ್ಟವೆಷ್ಟು ? ಅಂಥಾ ಅನಾಹುತಗಳು ನಡೆಯದಂತೆ ಯಾವ ತರಹಾ ಎಚ್ಚರಿಕೆ ಏರ್ಪಾಡುಗಳುಂಟು ? ಪ್ರಾಣ ಕಳೆದುಕೊಂಡ ಕೂಲಿಕಾರರ ಸಂಸಾರಸ್ಥರಿಗೆ ಕಂಪನಿಯವರು ಏನಾದರೂ ಪರಿಹಾರದ್ರವ್ಯವನ್ನು ಕೊಡುವುದುಂಟೇ ?

ಮ॥ ಎಚ್. ವಿ. ನಂಜುಂಡಯ್ಯನವರ ಉತ್ತರ :—ಮೈಸೂರ್ ಗಣಿಯ ಚಿನ್ನಿಂಟ್ ಷಾಫ್ಟ್ ಎಂಬ ಗಣಿಯಲ್ಲಿ ಜೂನ್ ತಾ. 6 ರಲ್ಲಿ ಅನಾಹುತವಾಯಿತು. ಅದರಿಂದ 3 ಮಂದಿ ಸತ್ತರು ; 3 ಮಂದಿಗೆ ತುಂಬಾ ಜಖಂ ಆಗಿದೆ. ಅನಾಹುತ ನಡೆಯದಂತೆ ಕಂಪನಿಯವರು ಎಚ್ಚರಿಕೆಯ ಏರ್ಪಾಡು ಮಾಡಿರುತ್ತಾರೆ. ಸತ್ತವರ ಸಂಸಾರಕ್ಕೆ ಪರಿಹಾರ ಕೊಡಬೇಕೆಂಬ ಕಾನೂನನ್ನು ಮಾಡಿಲ್ಲ. ಆದರೆ ಕಂಪನಿಯವರೇನೋ ಪರಿಹಾರದ್ರವ್ಯವನ್ನು ಕೊಡುವುದುಂಟು. ಇದನ್ನು ಖಂಡಿತಮಾಡುವ ವಿಷಯದಲ್ಲಿ ಸರ್ಕಾರದವರೂ ಕಂಪನಿಯವರೂ ಆಲೋಚಿಸುತ್ತಿದ್ದಾರೆ. ಫಲಿತಾಂಶ ಇಷ್ಟರಲ್ಲೇ ಗೊತ್ತಾದೀತು.

ಮ॥ ಎಸ್. ಆರ್. ಬಾಲಕೃಷ್ಣರಾಯರ ಪ್ರಶ್ನೆ:—ಶಿವಮೊಗ್ಗದಲ್ಲಿ ಮತ್ತೆ ಕಾಲೇಜನ್ನು ಇಡಿಸುವ ಯೋಚನೆ ಉಂಟೇ ? ನಮ್ಮ ಸೀಮೆಯ ಹುಡುಗರು ವಿಶೇಷವಾಗಿ ಬೊಂಬಾಯಿ ಯೂನಿವರ್ಸಿಟಿ ಪರೀಕ್ಷೆಗಳಿಗೆ ಹೋಗುತ್ತಿರುವುದರಿಂದ ಶಿವಮೊಗ್ಗೆ ಮತ್ತು ಚಿತ್ರದುರ್ಗದ ಸ್ಕೂಲುಗಳನ್ನು ಬೊಂಬಾಯಿ ಯೂನಿವರ್ಸಿಟಿಗೆ ಸೇರಿಸಬಹುದೇ ?

ಮ॥ ಎಚ್. ವಿ. ನಂಜುಂಡಯ್ಯನವರ ಉತ್ತರ —ಮೈಸೂರು ಸಂಸ್ಥಾನಕ್ಕೆ ಪ್ರತ್ಯೇಕವಾದ ಯೂನಿವರ್ಸಿಟಿಯನ್ನು ಸ್ಥಾಪಿಸಬೇಕೆಂಬ ಆಲೋಚನೆ ಇದೆ. ಇದು ತೀರ್ಮಾನವಾದರೆ ಈ ವಿಷಯ ವ್ಯವಸ್ಥೆಯಾಗುವುದು.

ಮ॥ ಬಾಲಕೃಷ್ಣರಾಯರ ಪ್ರಶ್ನೆ:—ರೆವಿನ್ಯೂ ಕೋರ್ಟುಗಳಲ್ಲೂ ಕಚೇರಿಗಳಲ್ಲೂ ವ್ಯಾಜ್ಯಗಳೂ ಅಪೀಲುಗಳೂ ಚಿಲ್ಲರೆ ಅರ್ಜಿಗಳೂ ದರಖಾಸ್ತುಗಳೂ ವ್ಯವಸ್ಥೆಯಾಗುವುದಕ್ಕೆ ವಿಪರೀತಕಾಲವಾಗುತ್ತದೆ. ಇದನ್ನು ತಪ್ಪಿಸುವುದಕ್ಕಾಗಿ ಇಂಥಾ ಮೊಕದ್ದಮೆ ಇಷ್ಟೇ ದಿನಗಳಲ್ಲಿ ವ್ಯವಸ್ಥೆ ಆಗಬೇಕೆಂದೂ, ಸಾವಕಾಶವಾದರೆ ಅದಕ್ಕೆ ಕಾರಣವನ್ನು ತಿಳಿಸಬೇಕೆಂದೂ, ಆಗಾಗ್ಗೆ ಎಷ್ಟು ಮೊಕದ್ದಮೆಗಳು ಫೈಸಲಾದವೋ, ಎಷ್ಟು ಬಾಕಿ ಉಳಿದಿವೆಯೋ ರಿಪೋರ್ಟು ಕಳುಹಿಸುತ್ತಾ ಬರಬೇಕೆಂದೂ ವಿಧಿಸಿದರೆ ತುಂಬಾ ಕ್ಷೇಮವಾಗುವುದು.

ಮ॥ ಎಂ. ಕಾಂತರಾಜೆ ಅರಸಿನವರ ಉತ್ತರ :—ಯಾವ ಮೊಕದ್ದಮೆ ವಿಷಯವಾಗಿ ನೀವು ಪ್ರಶ್ನೆಮಾಡುತ್ತೀರೋ ಹೇಳಿದರೆ ವಿಚಾರಿಸಿ ಸಮಾಧಾನ ಹೇಳಬಹುದು. ರೆವಿನ್ಯೂ ಬಾಬಿನಲ್ಲಿ ಕೆಲಸಕಾರ್ಯಗಳು ಬೇಗನೆ ವ್ಯವಸ್ಥೆಯಾಗುವ ಭಾಗದಲ್ಲಿ ಸಾವಕಾಶವಾಗದಂತೆ ಈಗ ಕೆಲವು ನಿರ್ಬಂಧಗಳಿರುತ್ತವೆ. ಈ ವಿಚಾರವನ್ನು ಸರ್ಕಾರದವರು ಇನ್ನೂ ಕ್ರಮಪಡಿಸಬೇಕೆಂದು ಯೋಚಿಸುತ್ತಿದ್ದಾರೆ.

ಬಳಿಕ ಕೆಲವು ಕಾನೂನುಗಳ ಬದಲಾವಣೆಯನ್ನು ಕುರಿತು ಮೆಂಬರುಗಳು ಚರ್ಚೆಮಾಡಿದರು. ಕಡೆಯಲ್ಲಿ ಸಂಸ್ಥಾನದ ಖಜಾನಾ ಛಕ್ಷಿಯಾದ ಮ॥ ಜಿ. ಎಸ್. ಚಕ್ರವರ್ತಿಯವರು 1914-15 ನೇ ಸಾಲಿನ ಜಮಾಖರ್ಚುಗಳ ಅಂದಾಜಾಪಟ್ಟಿಗಳನ್ನು ಓದಿಹೇಳಿ, ಮೀಟಿಂಗನ್ನು ಮುಕ್ತಾಯಮಾಡಿದರು.

ಖಾತ್ರಿದಾರರಿಗೆ ನೋಟೀಸ್.

ಖಾತ್ರಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಹೆಸರು ವಿಳಾಸವಿಲ್ಲದೆ ಬರತಕ್ಕ ಖಾತ್ರಿಗಳಿಗೆ ನಾವು ಜಾಗಾ ಕೊಡಲಾರೆವು. ಆದಕಾರಣ ಖಾತ್ರಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸವನ್ನು ಬರೆದು ತಿಳಿಸತಕ್ಕದ್ದು. ಮತ್ತು ಖಾತ್ರಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು ; ಇಂಥವುಗಳಿಗೆ ನಾವು ಜಾಗಾ ಕೊಡಲಾರೆವು.

ಪ್ರಚುರಪಡಿಸುವುದಕ್ಕೆ ಬರತಕ್ಕ ಖಾತ್ರಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು. ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಖಾತ್ರಿಗಳು ಆಯಾ ವಾರದಲ್ಲೇ ಪ್ರಕಟವಾಗುವದೆಂಬ ಭರವಸೆ ಕಡಮೆ. ಖಾತ್ರಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ.

ಎ. ಗಂಗಪ್ಪ, ಕುಂಸಿ :—ಅಂಥಾ ದುರ್ನಡತೆಯುಳ್ಳ ನೌಕರನು ಹೊರಟು ಹೋದ ಮೇಲೆ ಅವನ ವಿಚಾರವನ್ನು ಪ್ರಕಟಿಸಿ ಫಲವಿಲ್ಲ. ಮುಖಂಡರೂ

ಗಣ್ಯರೂ ಆದ ಪ್ರಜೆಗಳು ಮೊದಲು ಮೇಲ್ಪಟ್ಟ ಅಧಿಕಾರಿಗೆ ಬರೆದುಕೊಂಡರೆ ಅನುಕೂಲವಾದೀತು.

ಇಡಗೂರು, ಕಲಿದೇವರಪುರ:—ಈ ಬಾತ್ಮಿಗಳಲ್ಲಿ ವಿಶೇಷ ವರ್ತಮಾನಗಳೇನೂ ಕಂಡುಬರಲಿಲ್ಲ.

ಜಿ. ಪಿ. ಪುಟ್ಟಯ್ಯ, ಶ್ರವಣಬೆಳಗೊಳ:—ಈ ಬಾತ್ಮಿಯನ್ನು ಪ್ರಕಟಿಸೋಣದರಿಂದ ಪ್ರಯೋಜನವೇನೂ ಕಾಣುವುದಿಲ್ಲ.

—ಎಡಿ.]

ಕರೆಸ್‌ಪಾಂಡೆನ್ಸ್.

ಟಿನ್ ಹಾಲಿನಲ್ಲಿ ಕಂಡ ಗುಣ.

ಅಯ್ಯಾ,—ನನ್ನ ಮಾವಂದಿರು ಈಗ್ಗೆ ಒಂದುವರೆ ವರುಷದ ಹಿಂದೆ ಮೃತಪಟ್ಟರು. ಇವರು ಸಾಯುವಾಗ್ಗೆ ಇವರಿಗೆ 20 ದಿವಸದ ಹೆಣ್ಣುಕೂಸು ಇತ್ತು. ಈ ಮಗುವಿನ ತಾಯಿಗೆ ಎದೆ ಹಾಲು ಸ್ವಲ್ಪವೂ ಇರಲಿಲ್ಲ. ಸದರಿ ಮಗುವಿಗೆ ಹಾಲು ಇಲ್ಲದಿರುವ ಪ್ರಯುಕ್ತ ನಾನು ತೆಗೆದುಕೊಂಡು ಸದರಿ ಮಗುವನ್ನು ಸಾಕುತ್ತಾ ಟಿನ್ ಹಾಲು ಯಾವಾಗ್ಯೂ ಉಪಯೋಗಿಸುತ್ತಾ ಬಂದೆನು. ಸದರಿ ಹಾಲಿನ ಗುಣದಿಂದ ಒಂದು ತಿಂಗಳ ನಂತರ ತಿಳಿಯಬಂತು. ಕಡ್ಡಿಗಾತ್ರ ಇದ್ದ ಮಗು ಒಳ್ಳೇ ತೇಜಸ್ಸು ಪುಷ್ಟಿ ಕಂಡುಬಂದ ಮೇರೆಗೆ ಇದುವರೆಗೂ ಸದರಿ ಹಾಲನ್ನೇ ಸೇವಿಸುತ್ತಾ ಬಂದ ಪ್ರಯುಕ್ತ ಸದರಿ ಮಗುವು ತೇಜಸ್ಸು ಕಾಂತಿಯಾಗಿ ಬೆಳೆಯುತ್ತಾ ಬಂದಿರುವ ದೆಸೆಯಿಂದ ಈ ವಿಷಯ ತಮ್ಮ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಲು ಬೇಡುತ್ತೇನೆ.

ಕೋಲಾರ. ಎ. ಎಂ. ಅಬ್ದುಲ್ ಜಲೀಲ್.

ಮೊಬ್ದಾರರುಗಳು.

ಅಯ್ಯಾ,—ಮೊಬ್ದಾರರ ವಿಷಯವಾಗಿ ಮ|| ಟಿ. ಎಸ್. ರಾಮಚಂದ್ರರಾಯರು ತಮ್ಮ ಅಮೋಘವಾದ ಪತ್ರಿಕೆಗೆ ಕಳೆದ ವಾರ ಬರೆದ ಬರವಣಿಗೆಯನ್ನು ಓದಿ ನೋಡಿದಲ್ಲಿ ಯಾರು ತಾನೇ ಆಶ್ಚರ್ಯಪಡದೆ ಇರಲಾರರು? ಈ ಬರವಣಿಗೆಯು ಯಾರನ್ನೋ ಉದ್ದೇಶಿಸಿ ಬರೆದದ್ದಾಗಿರುತ್ತದೆಯೇ ಹೊರತು ಮತ್ತೆ ಬೇರೆ ಅಲ್ಲ. ಒಂದು ಪಕ್ಷವಾದ ಇಂಥಾ ಬರವಣಿಗೆಯಿಂದ ವಾಚಕರಿಗೇ ಆಗಲಿ, ಮೊಬ್ದಾರರಿಗೇ ಆಗಲಿ ಯಾವ ಪ್ರಯೋಜನವೂ ತೋರುವುದಿಲ್ಲ.

ಮೊಬ್ದಾರರ ವಿಚಾರದಲ್ಲಿ ಚೀಫ್ ಕೋರ್ಟಿನವರು ಫುಲ್ ಬೆಂಚಿನಲ್ಲಿ 1910 ನೇ ಇಸವಿಯಲ್ಲಿ ಮಾಡಿರುವ ತೀರ್ಮಾನದಲ್ಲೂ ಮತ್ತು 1900 ನೇ ಇಸವಿ ಜನವರಿ 27 ರಲ್ಲಿ ಕೊಟ್ಟಿರುವ ನಂ. 177 ನೇ ಸರ್ಕ್ಯುಲರಿನಿಂದಲೂ ಇವರ ಬರವಣಿಗೆಯಂತೆ ಧ್ವನಿ ಕೊಡುವುದಿಲ್ಲ. ಈಗ ಇರತಕ್ಕ ಮ್ಯಾಜಿಸ್ಟ್ರೇಟರುಗಳೆಲ್ಲರೂ ಒಳ್ಳೇ ವಿದ್ಯಾವಂತರಾದ್ದರಿಂದ ಅವರು ಪಕ್ಷಪಾತವಿಲ್ಲದೆ ಮೊಬ್ದಾರರುಗಳಿಗೆ ಅವಕಾಶ ಕೊಡುವವರಾಗಿದ್ದಾರೆ. ಆದ್ದರಿಂದ ಈ ರೀತಿಯಾಗಿ ಮ್ಯಾಜಿಸ್ಟ್ರೇಟರನ್ನು ಆಕ್ಷೇಪಿಸುವುದು ತುಂಬಾ ಅನುಚಿತ. ಮತ್ತು ಹಾಲಿ ಇರುವ ಮೊಬ್ದಾರರುಗಳ ಪೈಕಿ ಕೆಲವರು ತಮ್ಮ ಅಂದರೆ ರಾಯರುಗಳ ಸಂಘಕ್ಕೇ ಅಪಮಾನಕರವಾದ ನಡವಳಿಕೆಯನ್ನು ನಡಿಸುತ್ತಾ ಇರುವುದು ಮ್ಯಾಜಿಸ್ಟ್ರೇಟರ ನಿಗಾಕ್ಕೆ ಆಗಿಂದಾಗ್ಗೆ ಬರುತ್ತಾ ಇದ್ದಾಗ್ಯೂ ಅವರು ಈ ಜನರ (ಮೊಬ್ದಾರರ) ಜೀವನೋಪಾಯಕ್ಕೆ ಭಂಗ ತರಬಾರದೆಂದು ತೋರಿಸುತ್ತಾ ಇರುವ ರಿಯಾಯ್ತಿಯನ್ನು ಕಳೆದುಕೊಳ್ಳುವಂತೆ ತೋರುತ್ತೆ. ಇನ್ನು ಮುಂದಾದರೂ ರಾಯರು ಈ ರೀತಿಯಾದ ಒಂದು ಪಕ್ಷದ ಬರವಣಿಗೆಯನ್ನು ಬರೆಯದೆ ಮಾನಸಿಕ ಮಾಡುವುದು ಯುಕ್ತ.

ಹಿತೈಷಿ.

ಸೂಳೆಕೆರೆ ಏರ್ಪಾಡು.

ಅಯ್ಯಾ,—ಚೆನ್ನಗಿರಿ ತಾಲ್ಲೂಕಿನಲ್ಲಿ ಸೂಳೆ ಕೆರೆಯು 40 ಮೈಲಿ ಸುತ್ತಳತೆಯುಳ್ಳ ದೊಡ್ಡ ಕೆರೆಯಾಗಿ 2 ವರುಷ ಮಳೆ ಬರದೆ ಇದ್ದರೂ ಸಾಕಾಗುವಷ್ಟು ನೀರು ಇದೆ. ಕಾಲ್ವೆ ನಾದುರಸ್ತಾಗಿರುವುದರಿಂದ ತ್ಯಾವಣಿಗೆ, ಬೆಳ್ಳಿಗೆರೆ, ಕತೆಟ್ಟಿಹಳ್ಳಿ, ಮುಜರೆಹೊಸೂರು, ಕತ್ತಲಗೆರೆ, ಕಾಂಗನೂರು, ಕಲ್ಲೇನಹಳ್ಳಿ, ಅರೆಹಳ್ಳಿ, ಈ 9 ಗ್ರಾಮಗಳ ತರೀ ಜಮೀನುಗಳಿಗೆ ನೀರಿಲ್ಲದೆ ರೈತಪ್ರಜೆಗಳು ಮಳೆಗೋಸ್ಕರ ಆಕಾಶವನ್ನು ನೋಡುತ್ತಾ ಇದ್ದಾರೆ. ಈ ವರುಷ ಮಳೆಯು ಸಾವಕಾಶವಾಗಿರುವುದರಿಂದ ಗೋಕಾಯಿಗಳಿಗೆ ಹುಲ್ಲು ಇಲ್ಲದೆ ತೊಂದರೆಯಾಗಿದೆ. ರೈತರು ಖುಷ್ಕಿ ಫಸಲನ್ನು ಬೆಳೆದು ಎಕರೆ 1 ಕ್ಕೆ 7-8 ರೂಪಾಯಿ ಕಂದಾಯವನ್ನು ಎಷ್ಟೋ ವರುಷಗಳಿಂದಲೂ ತೆರುತ್ತಾ ಜೀವರವಗಳಾಗಿರುತ್ತಾರೆ.

ಇಂಜನೀರ್ ಇಲಾಖೆಗೆ ಕಾಲ್ವೆಯನ್ನು ಸೇರಿಸಿ ಕಾಲ್ವೆ ವಿಷಯ ಸರಿಯಾಗಿ ಕ್ರಮಪಡಿಸಲು ಈ ವರುಷ ಎಕರೆ 1 ಕ್ಕೆ 8 ಆಣೆ ಪ್ರಕಾರ ಕಂಟ್ರಿಬ್ಯೂಷನ್ ಮೊಬಲಗು ಸಹ ವಸೂಲ್ಮಾಡಿದೆ. ಇದು ಸರ್ಕಾರದಲ್ಲಿ ಇತ್ಯರ್ಥವಾಗಲಿಕ್ಕೆ ಎಷ್ಟು ವರ್ಷಗಳಾಗುತ್ತಯೋ ನೋಡಬೇಕು.

ಮೇಲ್ಕಂಡ 8 ಹಳ್ಳಿಗಳ ಪೈಕಿ ಅರೆಹಳ್ಳಿ ಎಂಬುವುದು ಇದೇ ಕಾರಣದಿಂದ ಹಾಳಾಗಿ ನೆಲಸಮವಾಗಿತ್ತು. ಇಲ್ಲಿ 200 ಚಿಲ್ಲರೆ ಎಕರೆ 700-800 ರೂಪಾಯಿ ಆಕಾರ ಕಂಡ ಜಮೀನುಗಳು ಸಾಗುವಳಿಗೆ ಯೋಗ್ಯವಾಗಿ ಹಾಜರು ಇರುತ್ತೆ. ಈ ಜಮೀನುಗಳೆಲ್ಲಾ ಸಾಗುವಳಿ ಮಾಡಿ ಇಲ್ಲಿ ಪುನಹ ಗ್ರಾಮ ಆಬಾದುಮಾಡಬೇಕೆಂದು ಮುಸಲ್ಮಾನರು, ಲಂಬಾಣಿಗರು, ವಡ್ಡರು ವಗೈರೆ 20 ಮನೆಯವರು ಮನೆ ಕಟ್ಟಿ ವ್ಯವಸಾಯದ ಸಾಮಗ್ರಿಗಳನ್ನೆಲ್ಲಾ ಸಿದ್ಧಪಡಿಸಿಕೊಂಡು ಇಲ್ಲಿಗೆ 2-3 ವರುಷಗಳಾಗಿವೆ. ಈ ಭೂಮಿಗೆ ಅಮಲ್ದಾರರಿಂದ ದಿವಾನ್ ಸಾಹೇಬರ ವರೆಗೂ ದರಖಾಸ್ತು ಮಾಡಿದ್ದಾಯ್ತು.

ತಾ. 9-4-1914 ನೇ ಮೈಸೂರು ಸರ್ಕಾರಿ ಗೆಜೆಟ್ಟಿನ ಕನ್ನಡ ಕಾಪಿಯಲ್ಲಿ ಛಾಯಿಸಾಗಿರುವದನ್ನು ಕಂಡು ತಾ. 7-5-1914 ರಲ್ಲಿ ತಾಲ್ಲೂಕ್ ಅಮಲ್ದಾರರವರಲ್ಲಿ ಪುನಹ ದರಖಾಸ್ತು ಮಾಡಲಾಯ್ತು. ಇನ್ನೂ ಇತ್ಯರ್ಥವಾಗಿಲ್ಲ. ಹಂಗಾಮ ಕಾಲ ಮೀರುತ್ತಾ ಇದೆ. ಇದು ಯಾರ ಮುಂದೆ ಹೇಳಿಕೊಂಡರೂ ನಮ್ಮ ಕಷ್ಟ ತೀರದ್ದಾಗಿದೆ.

ನಮ್ಮ ಮೈಸೂರು ಸರ್ಕಾರದವರು ಶಿವಮೊಗ್ಗಾ ಡಿಸ್ಟ್ರಿಕ್ಟ್ ವಿನಹಾ ಸಂಪದಭಿವೃದ್ಧಿ ಆಲೋಚನೆಯಲ್ಲಿರಬಹುದೆಂದು ನಾವುಗಳೆಲ್ಲಾ ತಿಳಿದುಕೊಂಡು ಇರುತ್ತೇವೆ.

ಅರೆಹಳ್ಳಿ. ಮಹಮದ್ ಯಾಕೂಬ್, ಜಮೀನ್‌ದಾರ್.

[ಈ ಬಾತ್ಮಿದಾರರು ಹೇಳುವುದು ನಿಜವೆಂದು ನಮಗೆ ತೋರುತ್ತದೆ. ರೈತರಿಗೆ ಬೇಗಬೇಗನೆ ಅವರು ಕೇಳುವ ಸಹಜವಾದ ಅನುಕೂಲಗಳನ್ನು ಸರ್ಕಾರದವರು ನಡಿಸಿಕೊಡುತ್ತಾ ಬಂದರೆ ಸಂಪದಭಿವೃದ್ಧಿಯು ಬೇರೆ ಹಣ ಖರ್ಚಿಲ್ಲದೆ ತನಗೆ ತಾನೇ ಆಗಲು ಬಹುಮಟ್ಟಿಗೆ ಸಹಾಯವಾದೀತು. ರೈತರು ನಿರೀಕ್ಷಿಸುವ ಮಳೆಯಾದರೂ ಬೇಗನೆ ಬಂದೀತು; ಆದರೆ ಅವರು ಸರ್ಕಾರದವರನ್ನು ಪ್ರಾರ್ಥಿಸಿ ಬರೆದುಕೊಳ್ಳುವ ಅರ್ಜಿಗಳು ವ್ಯವಸ್ಥೆಯಾಗುವುದಿಲ್ಲವಲ್ಲಾ ಎಂದು ವಿಷಾದವಾಗುತ್ತದೆ.—ಎಡಿ.]

ತಾಲ್ಲೂಕು ವರ್ತಮಾನಗಳು.

ಮಾಗಡಿ.—ಈ ಪ್ರಾಂತ್ಯ ಕಳೆದ ವಾರ ಅರ್ಧಕದ ಮಳೆಯಾದರೂ ಉಪಯೋಗ ಕಾಣಲಿಲ್ಲ. ಭಾವಿಗಳಲ್ಲಿ ನೀರೆಲ್ಲಾ ಬತ್ತುತ್ತಿದೆ. ಬಿತ್ತನೆಯ ಕೆಲಸಗಳಿಗೆ ಅನುಕೂಲವೇ ಇಲ್ಲ. ಹವ ತಂಪಾಗಿದ್ದರೂ ಮಳೆ ಬೀಳಲೊಲ್ಲದೆ ಇದೆ. ಮುಂದಿನ ಸ್ಥಿತಿ ದುರಾಲಕ್ಷ್ಯವಾಗಿದೆ.—ಮೊನ್ನೆದಿನ ಮೋರಿನ ಪೇಟೆಯಲ್ಲಿ ಒಂದು ಮನೆಯ ದೊಡ್ಡಗೋಡೆ ಕಳಚಿಕೊಂಡು ಬೀದಿಯಲ್ಲಿ ಹೋಗುತ್ತಿದ್ದ ಇಬ್ಬರು ಹುಡುಗರ ಮೇಲೆ ಬಿದ್ದ ಪೆಟ್ಟಿಗೆ ಇಬ್ಬರೂ ಸತ್ತುಹೋದರು. ಮ್ಯುನಿಸಿಪಾಲಿಟಿಯವರು ಇಂತಹ ಅಪಾಯಕರವಾದ ಗೋಡೆಗಳನ್ನು ಮೊದಲೇ ಕೆಡವಿಸಿದ್ದರೆ ಈ ಪ್ರಾಣನಷ್ಟವಾಗುತ್ತಿರಲಿಲ್ಲ. ಮುಂದೆಯಾದರೂ ಮ್ಯುನಿಸಿಪಾಲಿಟಿಯವರು ಎಚ್ಚರಿಕೆ ತೆಗೆದುಕೊಳ್ಳುವರೆಂದು ನಂಬುತ್ತೇನೆ.—ಈ ತಾಲ್ಲೂಕಿನ ಗ್ರಾಮಾಭಿವೃದ್ಧಿ ಸಂಘಗಳು 50ರ ವರೆಗೆ ಏರ್ಪಾಡಾಗಿ, ಕೆಲಸ ನಡಿಸುತ್ತಿರುವುದು ಅಮಲ್ದಾರರವರ ಜಾಗರೂಕತೆ, ಪ್ರಯತ್ನಗಳನ್ನು ತೋರುವುದು.—ಉಪಾಧ್ಯಾಯರ ಸಂಘವು ಕ್ರಮವಾಗಿ ನಡೆಯುತ್ತಿದೆ.—ಡೆ|| ಇನ್‌ಸ್ಪೆಕ್ಟರವರು ಬಂದು ಎಲ್ಲಾ ಸ್ಕೂಲುಗಳನ್ನೂ ಪರೀಕ್ಷಿಸಿಕೊಂಡು ಹೋದರು.—ಇಲ್ಲಿನ ಪಂಚಮರ ಸ್ಕೂಲಿನಲ್ಲಿ ಇಲ್ಲಿನ ಹಿಂದೂ ಬಾಲಕರೂ ಸೇರಿ ಓದುತ್ತಿರುವುದನ್ನು ನೋಡಿದರೆ ಸಂಘಸಂಸ್ಕರಣವು ಸುಲಭವೆಂದೇ ತೋರುವುದು.

ಅರಕಲಗೂಡು.—ಈ ಊರಿನಲ್ಲಿ ಈಗ 8-10 ದಿವಸಗಳಿಂದಲೂ ಮೋಡವಾಗಿ ಸೋನೆ ಮಳೆ ಬರುತ್ತಾ ಇದೆ. ಆದರೆ ಎಷ್ಟು ಮಳೆ ಬಂದರೂ ಕುಡಿಯುವುದಕ್ಕೆ ನೀರು ಸಾಲದು. ರೈತರು ಹಜಾರಣೆಯಿಂದ ಕೆಲಸಗಳನ್ನು ಮಾಡಲಾರಂಭಿಸಿರುತ್ತಾರೆ. ಎಷ್ಟಾದರೂ ಧಾರಣೆವಾಸಿಗಳು ಬಹಳ ದುಬಾರಿಯಾಗಿವೆ. ರಾಗಿ 14 ಸೇರೂ, ಅಕ್ಕಿ 7 ಸೇರೂ ಮಾರಾಟದಲ್ಲಿದೆ. ದನಗಳು ಹುಲ್ಲು ಇಲ್ಲದೆ ಸಂಕಟಪಡುತ್ತಿವೆ. ಮುಂದೆ ಪೈರು ಸರಿಯಾಗಿ ಆಗುವದಿಲ್ಲವೆಂದು ಜನಗಳು ಈಗಿನಿಂದಲೂ ಬಹಳ ಹೆದರುತ್ತಲಿದ್ದಾರೆ.—ಸರ್ಕಾರಿ ಉದ್ಯೋಗಸ್ಥರ ಪೈಕಿ ಕೆಲವರು ಬಹಳ ಕಾಲದಿಂದಲೂ ವರ್ಗಪಡದೆ ಸ್ಥಳಮನೆತನದಂತೆ ಇದ್ದು ಪ್ರಜೆಗಳನ್ನು ಬಹಳ ಹಿಂಸಿಸುತ್ತಲಿದ್ದಾರೆ. ಈಗ ಸಾಲ್ ಆಖೈರಾದ್ದರಿಂದ ಪೋಟಿಗೆಯನ್ನು ತೆಗೆದುಕೊಳ್ಳುವ ಬಡ ವಿಕ್ರಾನುಭೋಗ ಪಟೇಲರಿಗೆ ಬಹಳ ತೊಂದರೆಯುಂಟು. ಈ ಕಷ್ಟವನ್ನು ಮೇಲಿನ ಅಧಿಕಾರಸ್ಥರು ವಿಚಾರಿಸಿ ಪ್ರಜೆಗಳಿಗೆ ಸುಖವನ್ನುಂಟುಮಾಡಬೇಕು.—ಇಲ್ಲಿ ಲಾಂದ್ರಗಳು ಸರಿಯಾಗಿ ಉರಿಯುತ್ತಲಿವೆ.—ಅಮಲ್ದಾರರು ಆಗಾಗ್ಗೆ ಬೀದಿಗಳ ಮೇಲೆ ಬಂದು ಪ್ರಜೆಗಳ ಯೋಗಕ್ಷೇಮವನ್ನು ವಿಚಾರಿಸುತ್ತಿದ್ದಾರೆ.—ಈ ಊರಿನಲ್ಲಿ ಹುಂಟಿಕಾಯಿರುಗಳು ಜಾಸ್ತಿಯಾಗಿ ಇಲ್ಲಿ ವಾಸಮಾಡತಕ್ಕದ್ದೇ ಬಹಳ ಕಷ್ಟವಾಗಿದೆ. ಇಂಥಾವರಿಗೆ ಸರ್ಕಾರಿ ಉದ್ಯೋಗಸ್ಥರು ಸಹಾಯಕರಾಗಿ ಕೆಲಸಮಾಡುತ್ತಾರೆ. ಮುಖ್ಯ ರೈತರಿಗೆ ತುಂಬಾ ಕಷ್ಟವಾಗಿದೆ. ಇಂಥಾ ವಿಚಾರಗಳನ್ನು ನಮ್ಮ ಡೆಪ್ಯುಟಿ ಕಮಿಷನರು ವಿಚಾರಿಸಿ, ತಕ್ಕ ಬಂದೋಬಸ್ತು ಮಾಡಿಸಿದರೆ ಬಹಳ ಉತ್ತಮ.—ಈ ಊರಿನ ಜನಗಳಿಗೆ ಮೆಡಿಕಲ್ ಹಿಂದೂ ವೈದ್ಯಶಾಲೆಯು ಬಹಳ ಉಪಕಾರಿಯಾಗಿದೆ. ವೈದ್ಯರು ಬಹಳ ಶ್ರಮೆಯಿಂದ ಕೆಲಸಗಳನ್ನು ನಡಿಸುತ್ತಾನೆ. ಇಂತಹವರಿಗೆ ಸರ್ಕಾರದ ಸಹಾಯ ಅತ್ಯವಶ್ಯಕವಾಗಿದೆ.—ಸಂತೆಯಲ್ಲಿ ವ್ಯಾಪಾರಸ್ಥರು ಅಳತೆಗಳನ್ನು ಬದಲಾಯಿಸಿ ಮೋಸಮಾಡುತ್ತಾ ಇದ್ದಾರೆ. ಈ ತಾಲ್ಲೋಕು ಮರೂರು ಸಂತೆಯಲ್ಲಿ ಕೆಲವು ಜನಗಳು ವ್ಯಾಪಾರಸ್ಥರನ್ನು ಹಿಂಸಿಸಿ ಹಸಿಗೆ ಎತ್ತುತ್ತಿದ್ದಾರೆ. ಇವರ ಹಾವಳಿ ಬಹಳ ಜಾಸ್ತಿಯಾಗಿರುವದರಿಂದ ಸರ್ಕಾರದವರು ನಿಗಾ ಇಟ್ಟರೆ ಬಹಳ ಅನುಕೂಲ.

ಫ್ರೆಂಚ್‌ರಾಕ್ಸ್.—ಮಳೆ ಸುತರಾಂ ಇಲ್ಲ. ನೀರಿನ ತೊಂದರೆಯನ್ನು ಎಷ್ಟು ಹೇಳಿದರೂ ಸಾಲದು. ಇಲ್ಲಿನ ಜನರಲ್ ಭಾವಿಯಲ್ಲೂ ನೀರು ಬಹಳ ಮಟ್ಟಿಗೆ ಕಡಮೆಯಾಗಿದೆ.—ನಮ್ಮ ಅಮಲ್ದಾರರು ಹೊಸ ಸೇರುಗಳನ್ನೂ ಹೊಸ ತೂಕದಬಟ್ಟುಗಳನ್ನೂ ಉಪಯೋಗಿಸಬೇಕೆಂದು ಹುಕುಂ ಕೊಟ್ಟಿದ್ದರ ಮೇಲೆ ಈಗ ಇಲ್ಲಿರತಕ್ಕ ಎಲ್ಲಾ ವ್ಯಾಪಾರಸ್ಥರೂ ಅಂಗಡಿಗಳಲ್ಲೂ ಸಂತೆಯಲ್ಲೂ ಹೊಸ ಸೇರು ಬಟ್ಟುಗಳನ್ನೇ ಉಪಯೋಗಿಸುತ್ತಿದ್ದಾರೆ.—ಮ್ಯುನಿಸಿಪಲ್ ಲಾಂದ್ರಗಳನ್ನು ಇಡಿಸುವ ಏರ್ಪಾಡು ಜಾಗ್ರತೆಯಾಗಿ ಆದೀತೆಂದು ನಿರೀಕ್ಷಿಸುತ್ತೇನೆ.—ಚಿನಕುರುಳಿ ಪೋಸ್ಟ್‌ಮಾಸ್ಟರ್ ಗೋವಿಂದಯ್ಯನೆಂಬುವನು ಮನಿಯಾರ್ಡರ್ ಹಣವನ್ನು ದುರುಪಯೋಗ ಪಡಿಸಿಕೊಂಡಂತೆಯೂ, ಅದಕ್ಕಾಗಿ ಅವನಿಗೆ 6 ತಿಂಗಳ ಕಠಿಣ ಸಜಾವೂ 50 ರೂಪಾಯಿ ಜುಲ್ಮಾನೆಯೂ ಕಳೆದ ವಾರ ವಿಧಿಸಲ್ಪಟ್ಟಿತ್ತೆಂದೂ ಕೇಳುತ್ತೇನೆ.—ಕಳೆದ 1 ನೇ ತಾ. ಬುಧವಾರ ರಾತ್ರಿ ಫ್ರೆಂಚ್‌ರಾಕ್ಸಿನಲ್ಲಿ ವಾಸವಾಡುತ್ತಿದ್ದ ಗಾಣಿಗರ ದಾಸಿ ಎಂಬ ಕರ್ರಿರಾಕ್ಷನು ಇಲ್ಲಿಗೆ 4 ಮೈಲಿ ದೂರದಲ್ಲಿ ತನ್ನ ಹೆಂಡತಿಯಾದ ಬೋರಿ ಎಂಬವಳನ್ನು ನಾನಾ ರೀತಿ ಹಿಂಸಿಸಿ ಕೊರಳು ಕೊಯಿದು ಕೊಂದುಹಾಕಿದ್ದುದೂ ಅಲ್ಲದೆ ತಾನೂ ಅದೇ ಸ್ಥಳದಲ್ಲಿ ಒಂದು ಮರಕ್ಕೆ ನೇಣುಹಾಕಿಕೊಂಡು ಸತ್ತುಹೋಗಿದ್ದನು. ಮಾರಣೇ ದಿನ ಶ್ರೀರಂಗಪಟ್ಟಣದ ಅಮಲ್ದಾರರೂ ಪೊಲೀಸ್ ಇನ್‌ಸ್ಪೆಕ್ಟರವರೂ ತನಿಖೆಗಾಗಿ ಅಲ್ಲಿಂದ ಬಂದಿದ್ದರು. ಫ್ರೆಂಚ್‌ರಾಕ್ಸಿನಿಂದ ಪ್ರೊ|| ಸೂಪರಿನ್‌ಟೆಂಡೆಂಟರವರೂ ಸಬ್ ಇನ್‌ಸ್ಪೆಕ್ಟರೂ ಹೋಗಿ, ಎರಡು ಹೆಣಗಳನ್ನೂ ನೋಡಿ ಮಹಜರು ಮಾಡಿ ಡಾಕ್ಟರ ಅಭಿಪ್ರಾಯಕ್ಕಾಗಿ ಶ್ರೀರಂಗಪಟ್ಟಣಕ್ಕೆ ಕಳಿಸಿಕೊಂಡು ಹೋದರು.—ಇಲ್ಲಿಗೆ 3 ಮೈಲಿ ದೂರದಲ್ಲಿರುವ ತಿರುಮಲಸಾಗರದ ಛತ್ರದ ಬಳಿ ರಸ್ತೆಯಲ್ಲಿ ಯಾರೋ ಒಂದು ಕೈಚೀಲವನ್ನು ಬಿಟ್ಟು ಹೋಗಿದ್ದರು. ಅದರಲ್ಲಿ ಒಂದು ರೇಷ್ಮೆ ಮಡಿಯೂ, ಸೋಪು, ಬ್ರಷ್ ಮೊದಲಾದದ್ದೂ ಇವೆ. ಅದನ್ನು ಇಲ್ಲಿನ ಪೊಲೀಸ್ ಸ್ಟೇಷನ್‌ನಲ್ಲಿ ಇಟ್ಟಿದ್ದಾರೆ.—ಇಲ್ಲಿನ ಪೊಲೀಸ್ ದಫೇದಾರ್ ಚಂದ್ರಶೇಖರಯ್ಯನವರಿಗೆ ಮೇಲುಕೋಟೆಗೆ ವರ್ಗವಾಗಿ ಅಕ್ಕಿಹೆಬ್ಬಾಳು ಹೆಡ್. ಸುಬ್ರಾಯರು ದಫೇದಾರ್ ಛಾರ್ಜಿಗೆ ಬಂದಿದ್ದಾರೆ.

ದೊಡ್ಡಬಳ್ಳಾಪುರ.—ಈ ಊರಲ್ಲಿ ಪ್ರಸಿದ್ಧವರ್ತಕರಾದ ಮ|| ಅವಾಖಾನ್ಯ ನಂಜುಂಡಪ್ಪನವರ 2 ನೇ ಕುಮಾರರಾದ ಗುರುನಂಜುಂಡಪ್ಪನವರಿಗೆ ಮೂರುವಾರಗಳ ಹಿಂದೆ ವಿಷಜ್ವರ ತಗಲಿ ಕಳೆದ ಶನಿವಾರ ಕಾಲವಾದರು. ಇವರು ತುಂಬಾ ಗುಣಾಢ್ಯರಾಗಿದ್ದದ್ದರಿಂದ ಇವರ ಮನೆಯವರು ಮಾತ್ರವಲ್ಲದೆ ಇವರ ಕೈಕೆಳಗೆ ಕೆಲಸಮಾಡುತ್ತಿರುವ ಅನೇಕ ದೇವಾಂಗದವರೂ ತುಂಬಾ ವ್ಯಸನಾಕ್ರಾಂತರಾಗಿದ್ದಾರೆ.—ಕೆಲವು ದಿನಗಳ ಹಿಂದೆ ಲಾಕಪ್ಪಿನಲ್ಲಿ ಖೈದಿಯಾಗಿದ್ದ ಗುಡುಖಾನ್ ಎಂಬವನು ಮೇಲ್ಛಾವಣಿ ತೆಗೆದು ಓಡಿಹೋಗಿದ್ದನು. ಇವನನ್ನು ಕಾಯುತ್ತಿದ್ದ ಪೋಲೀಸಿನವರು 2 ನೇ ತಾ. ಖೈದಿಯನ್ನು ಚಿಕ್ಕಬಳ್ಳಾಪುರ ಸರಹದ್ದಿನಲ್ಲಿ ಪುನಹಾ ಹಿಡಿದರು. ಈ ಗುಡುಖಾನನು ಕಳೆದ ತಿಂಗಳು 17 ನೇ ತಾ. ರಾತ್ರಿ ತಪ್ಪಿಸಿಕೊಂಡು ತನ್ನನ್ನು ಕಾಯುತ್ತಿದ್ದ ಕಾನ್‌ಸ್ಟೇಬಲಿನ ಡ್ರೆಸ್ಸನ್ನು ಹಾಕಿಕೊಂಡು ಓಡಿಹೋಗಿದ್ದನು. ಲಾಕಪ್ ಕೊಠಡಿಯು ಭದ್ರವಾಗಿಲ್ಲದ್ದರಿಂದ ಖೈದಿಯು ತಪ್ಪಿಸಿಕೊಂಡು ಹೋಗಲಿಕ್ಕೆ ಅನುಕೂಲವಾಯಿತೆಂದು ಹೇಳುತ್ತಾರೆ.—ನಮ್ಮ ಸಬ್ ರೆಜಿಸ್ಟ್ರಾರ್ ಲಕ್ಷ್ಮೀಕಾಂತಯ್ಯಂಗಾರ್ರು ತಮ್ಮ ಜ್ಯೇಷ್ಠಕುಮಾರಿಯನ್ನು ಕಳಲೆಯ ಹುಡುಗನಿಗೆ ಕೊಟ್ಟು ವಿಜೃಂಭಣೆಯಾಗಿ ಲಗ್ನಮಾಡಿದರು. ವಧುವರರನ್ನು ಆಶೀರ್ವದಿಸುವಂತೆ ಈ ಊರಿನ ಸಮಸ್ತ ಮತದ ಮುಖಂಡರೂ ಮಾತ್ರವಲ್ಲದೆ ತಿಪ್ಟೂರು, ದಾವಣಗೆರೆ ಮುಂತಾದ ದೂರಸ್ಥಳಗಳಿಂದಲೂ ಇವರ ಮಿತ್ರರು ದಯಮಾಡಿ ದಂಪತಿಗಳಿಗೆ ಬಹುಮಾನಗಳನ್ನು ಕೊಟ್ಟರು.—ಮಳೆ ಸುತರಾಂ ಕಮ್ಮಿಯಾಗಿದೆ. ಆಗಾಗ್ಗೆ ತುಂತುರು ಹನಿ ಬೀಳುತ್ತೆ. ಗಾಳಿಯಿಂದ ಮೋಡಗಳು ಚದರಿಹೋಗುವವು. ರಾಗಿ ಧಾರಣೆ ಬಹಳ ಏರಿ ರೂಪಾಯಿಗೆ 11 ಸೇರು ಸಿಕ್ಕುವದು ಕಷ್ಟ.—ನಮ್ಮ ಡಾಕ್ಟರು ಮ|| ವರದಯ್ಯಂಗಾರ್ರು ಸ್ಯಾನಿಟೇಷನ್ ಕಲಿಯಲಿಕ್ಕೆ ಈ ವಾರ ಬೊಂಬಾಯಿಗೆ ಹೋಗುವರೆಂದು ಕೇಳಲಾಗಿದೆ.—ಈ ಊರಿನಲ್ಲಿರುವ ಮೋರಿಬಾಯಿ ಯವರ ವಿಡೋಸ್ ಹೋಮಿಗೆ ಅಮೇರಿಕದಿಂದ ಬಂದಿರುವ ಮಿಸ್ ಫಾಕ್ಸ್‌ಯವರು ಸುಮಾರು 2,000 ರೂಪಾಯಿ ಮುಟ್ಟಿಸಿ ಹೊಸ ಕಟ್ಟಡಗಳನ್ನು ಕಟ್ಟಿಸಿರುತ್ತಾರೆ. ಈ ಕಟ್ಟಡಗಳ ಪ್ರತಿಷ್ಠೆಯು ಪ್ರಾಯಶಃ ಈ ತಿಂಗಳಲ್ಲಿ ನಡೆಯಬಹುದು.

ಶ್ರೀರಂಗಪಟ್ಟಣದ ತ|| ಕ್ಯಾತನಹಳ್ಳಿ.—ಈ ಗ್ರಾಮವು ಈ ತಾಲ್ಲೋಕಿಗೆ ಮುಖ್ಯ ಹೋಬಳಿಯಾಗಿ 2,200 ಪ್ರಜೆ ಉಳ್ಳ 800 ಮನೆಗಳಿಂದ ಕೂಡಿ, ಯೂನಿಯನ್ ಉಳ್ಳ ಭಾರಿ ಗ್ರಾಮವಾಗಿದೆ. ಊರು ಚಿಕ್ಕದೇವರಾಜ ನಾಲೆಯಿಂದ ಸುತ್ತಲ್ಪಟ್ಟದ್ದಾಗಿ ಕಬ್ಬು ಭತ್ತ ವ್ಯವಸಾಯಮಾಡುವ ರೈತರಿಂದ ತುಂಬಿರುತ್ತದೆ. ಈ ಗ್ರಾಮಕ್ಕೆ ಯೂನಿಯನ್ ಆಗಿ 8 ವರ್ಷಗಳಾದರೂ ಗ್ರಾಮ ಪಾಕೀಜಾ ಅತೃಪ್ತಿಕರವಾಗಿದೆ. ಮೆಂಬರುಗಳು ಗ್ರಾಮಾಭಿವೃದ್ಧಿ ವಿಷಯದಲ್ಲಿ ಮುತವರ್ಜಿ ವಹಿಸದೆ ಇರುತ್ತಾರೆ. ಜಾಡಮಾಲಿಗಳು ಸರಿಯಾಗಿ ಕೆಲಸಮಾಡದೆ ಕೆಲವು ಬೀದಿಗಳಲ್ಲಿ ಕಸ ತುಂಬಿರುತ್ತದೆ. ಇದರ ತನಿಖೆಯೇ ಇಲ್ಲ. ರಸ್ತೆ ಮಗ್ಗುಲಲ್ಲಿ ಕಲ್ಲಿನ ಚರಂಡಿ ಹಾಕಿಸುವುದಕ್ಕೆ ಈ ಊರಿನವರಿಗೆ ಕಂಟ್ರಾಕ್ಟು ಕೊಟ್ಟಿದ್ದಾರೆ. ಇದು ಸ್ಯಾಂಕ್ಷನ್ ಆಗಿ 5-6 ತಿಂಗಳಾದರೂ ಈಗತಾನೇ ಚರಂಡಿ ಸ್ವಲ್ಪ ದೂರ ತೆಗಿಸುತ್ತಾರೆ. ಈ ವಿಷಯದಲ್ಲಿ ಮುತುವರ್ಜಿಯಾಗಿ ಕೆಲಸ ನಡಿಸದೆಹೋದರೆ ಬೀದಿಗಳು ಮಳೆಯಿಂದ ಕೊರಕಲುಬಿದ್ದು ತೊಂದರೆಯಾದೀತಾದ್ದರಿಂದ ಅಧಿಕಾರಿಗಳು ಗಮನಕೊಡುವರೆಂದು ನಂಬಿರುತ್ತೇನೆ.—ಈ ವರ್ಷ ಲೋ. ಸೆ. ಪರೀಕ್ಷೆಯಲ್ಲಿ ಇಲ್ಲಿ 4 ಕ್ಕೆ 3 ಮಂದಿ ತೇರ್ಗಡೆಯಾದರು. ಹೊಸ ಸ್ಕೂಲು ತಯಾರಾಗಿ ತಿಂಗಳಾದರೂ ಇನ್ನೂ ಪ್ರವೇಶೋತ್ಸವ ನಡೆದಿಲ್ಲ. ನಮ್ಮ ಸರ್ಕಾರದವರು ಒಂದು ಗರ್ಲ್ಸ್ ಸ್ಕೂಲನ್ನು ದಯಪಾಲಿಸಿರುತ್ತಾರೆ. 20 ಬಾಲಿಕೆಯರು ಓದುತ್ತಿರುವರು. ಇದು ಪ್ರತಿಯೊಬ್ಬರಿಗೂ ಸಂತೋಷವನ್ನುಂಟುಮಾಡಿದೆ. ವೆಸ್ಲಿಯನ್ ಮಿಷನ್ ಸಂಘದವರು ಇಟ್ಟಿರುವ ಪಂಚಮರ ಸ್ಕೂಲು ತಕ್ಕಮಟ್ಟಿಗೆ ಅಭಿವೃದ್ಧಿ ಸ್ಥಿತಿಯಲ್ಲಿದೆ. ಆದರೆ ಒಂದು ಇಂಗ್ಲಿಷ್ ಸ್ಕೂಲು ಇಲ್ಲದ್ದು ಬಹಳ ಚಿಂತೆಯಾಗಿದೆ.—ಈ ಊರಲ್ಲಿ ಒಂದು ಕೋಆಪರೆಟಿವ್ ಸೊಸೈಟಿ ಇಲ್ಲ. ಅದರ ಪ್ರಯೋಜನ ಇಲ್ಲಿ ಒಬ್ಬರಿಗೂ ಗೊತ್ತಿರುವುದಿಲ್ಲ. ರೆಜಿಸ್ಟ್ರಾರ್ರು ಇನ್‌ಸ್ಪೆಕ್ಟರನ್ನು ಕಳುಹಿಸಿ ಈ ಗ್ರಾಮದ ಪ್ರಜೆಗಳಿಗೆ ಅದರ ಪ್ರಯೋಜನವನ್ನು ತಿಳಿಸಿ ಒಂದು ಸೊಸೈಟಿಯನ್ನು ಸ್ಥಾಪಿಸುವರೆಂದು ನಂಬುತ್ತೇನೆ.—ಇಲ್ಲಿನ ಶ್ರೀ ವೀರಶೈವ ಗ್ರಂಥಾಲಯದಲ್ಲಿ ತಕ್ಕಮಟ್ಟಿಗೆ ವರ್ತಮಾನ ಪತ್ರಿಕೆಗಳೂ ಪುಸ್ತಕಗಳೂ ತರಿಸುತ್ತಾ ಇದ್ದಾರೆ. ಈ ಗ್ರಂಥಾಲಯವು ಅಭಿವೃದ್ಧಿ ಸ್ಥಿತಿಯನ್ನು ಹೊಂದುವುದರಲ್ಲಿ ಅಭ್ಯಂತರವಿಲ್ಲ.—ಸೋನೆ ಮಳೆ ಬೀಳುತ್ತಿದೆ. ಧಾರಣೆವಾಸಿ ಜಬರಾಗಿರುತ್ತೆ.—ಈ ಊರಿಗೆ ಒಂದು ಸಂತೆಯಾಗುವುದಕ್ಕಾಗಿ ಅನೇಕರು ಮೇಲ್ಪಟ್ಟ ಅಧಿಕಾರಿಗಳ ಸಂಗಡ ಪ್ರಾರ್ಥಿಸಿಕೊಂಡರೂ ಇನ್ನೂ ಆಗದೆ ಇರುವುದು ಬಹು ತೊಂದರೆಯಾಗಿದೆ. ನಮ್ಮ ಅಮಲ್ದಾರ್ರು ಗಮನಕೊಡುವರೆಂದು ನಂಬಿರುತ್ತೇನೆ.

ಕುಣಿಗಲು.—ಇಲ್ಲಿ ಮಳೆ ಬಾರದೆ ರೈತರು ಬೀಜ ಬಿತ್ತುವದಕ್ಕಾಗಿ ಆಕಾಶವನ್ನೇ ನೋಡುತ್ತಿದ್ದಾರೆ. ಸುತ್ತುಮುತ್ತಲಿನ ಅನೇಕ ಗ್ರಾಮಗಳಲ್ಲಿ ದನಕರುಗಳಿಗೆ ಹುಲ್ಲೂ ನೀರೂ ದೊರೆಯದೆ ತುಂಬಾ ಕಷ್ಟಕ್ಕೆ ಗುರಿಯಾಗಿವೆ. ಇಲ್ಲಿರುವ ದೊಡ್ಡ ಕೆರೆಯು ಹಿಂದಿನ ಬೈಲಿನಲ್ಲಿ ಈ ವರುಷ ಸಮೃದ್ಧಿಯಾದ ಭತ್ತದ ಬೆಳೆ ಆಗಿರೋಣದರಿಂದಲೂ, ಕೆರೆಯಲ್ಲಿ ಇನ್ನೂ ಕಾಲುಭಾಗಕ್ಕಿಂತಲೂ ಸ್ವಲ್ಪ ಹೆಚ್ಚಿಗೆ ನೀರಿರೋಣದರಿಂದಲೂ ಇಲ್ಲಿನ ದನಕರುಗಳಿಗೂ ಜನಗಳಿಗೂ ಸ್ವಲ್ಪ ಅನುಕೂಲವಾಗಿದೆ. ಬಹಳ ದೂರಸ್ಥಳಗಳಿಂದ ಪ್ರತಿದಿನದಲ್ಲೂ ಈ ಸ್ಥಳಕ್ಕೆ ಅನೇಕ ಗಾಡಿಗಳು ಬಂದು ಹುಲ್ಲು ಭರ್ತಿಮಾಡಿಕೊಂಡು ಹೋಗುತ್ತಿವೆ. ಧಾರಣೆವಾಸಿಗಳಂತೂ ದಿವದಿನಕ್ಕೆ ಏರುತ್ತಲೇ ಇವೆ. ಬಡಬಗ್ಗರ ಪಾಡನ್ನು ವಿವರಿಸಲಾಗದು. ಇಲ್ಲಿನ ಅಂಗಡಿಗಳಲ್ಲಿ ಸರಕಾರದಿಂದ ಸರಿಪಾದ ಅಳತೇ ಸೇರುಗಳೂ ತೂಕದ ಬಟ್ಟುಗಳೂ ಇರುವದಾದರೆ ಜನರಿಗೆ ಅನುಕೂಲ. ಇನ್ನೂ ಅನೇಕರು ಕಮ್ಮಿ ಸೇರು, ಬೊಟ್ಟುಗಳನ್ನು ಇಟ್ಟು ವ್ಯಾಪಾರಮಾಡುತ್ತಿದ್ದಾರೆ.—ನಮ್ಮ ಅಮಲ್ದಾರರು ಊರು ಬಡಾವಣೆ ಮಾಡುವದಕ್ಕಾಗಿ ಈ ಊರಿನ ಪಶ್ಚಿಮ ಭಾಗದಲ್ಲಿ ಸ್ಥಳವನ್ನು ಗೊತ್ತುಮಾಡಿ, ಮನೆಯ ನಿವೇಶನಗಳನ್ನು ವಿಂಗಡಿಸುವದರಲ್ಲಿದ್ದಾರೆ. ಗ್ರಾಮ ಪಾಕೀಜಾ ವಿಷಯದಲ್ಲೂ ಕ್ಷೇಮಾಭಿವೃದ್ಧಿ ವಿಷಯದಲ್ಲೂ ನಮ್ಮ ಅಮಲ್ದಾರ್ರು, ಡಾಕ್ಟರವರು, ಸ್ಯಾನಿಟರಿ ಇನ್‌ಸ್ಪೆಕ್ಟರೇ ಮುಂತಾದವರು ಬಹಳ ಮುತುವರ್ಜಿ ವಹಿಸಿರುತ್ತಾರೆ.—ಇಲ್ಲಿ ಈಗ ಸಂತೆ ಊರೊಳಗೇ ನಡೆಯುವದು ಅನುಕೂಲವಲ್ಲ. ಆ ದಿವಸ ರಸ್ತೆಯಲ್ಲಿ ಜನ ಮತ್ತು ಗಾಡಿಗಳ ಸಂಚಾರಕ್ಕೆ ತುಂಬಾ ಅಡಚಣೆಯುಂಟೆಂತ ಸರಕಾರದವರು ತಿಳಿದಿದ್ದಾಗ್ಯೂ ಸಂತೆಗೆ ಬೇರೆ ಸ್ಥಳವನ್ನು ಯಾತಕ್ಕೆ ಇದುವರೆಗೂ ಏರ್ಪಡಿಸಲಿಲ್ಲವೋ ತಿಳಿಯದು. ಇದು ಕ್ರಮವಿಲ್ಲದ ಸಂತೆಯೆಂದು ಹೇಳುವದರಲ್ಲಿ ಯಾವ ಸಂದೇಹವೂ ಇಲ್ಲ. ದೊಡ್ಡ ಕೆರೆಗೆ ಹೋಗುವ ದಾರಿಯಲ್ಲಿ ದೊಡ್ಡ ದೇವಸ್ಥಾನದ ಬಳಿ ಬೇಕಾದಷ್ಟು ಮೈದಾನವಿದೆ. ಅಲ್ಲಿನ ಕಾಡು ಕತ್ತರಿಸಿ ಸಂತೆ ನಡೆಯುವಂತೆ ಏರ್ಪಾಡು ಮಾಡಿದರೆ ಜನಗಳಿಗೂ ದನಗಳಿಗೂ ತುಂಬಾ ಅನುಕೂಲವಾದೀತು.—ಈ ಊರಿನ ಉಪ್ಪಾರ್ರ ಕೇರಿಯಲ್ಲಿ ಒಬ್ಬ ಬಡವಿಧವೆಯ ಹುಲ್ಲಿನ ಮನೆಗೆ ಯಾರೋ ದುಷ್ಟರು ಬೆಂಕಿ ಹಾಕಿದ್ದರಿಂದ ಆ ಮನೆಯು ನಿರ್ನಾಮವಾಯಿತು. ಅವಳ ಗೋಳಾಟವನ್ನು ಹೇಳತೀರದ್ದಾಗಿತ್ತು. ಪೊಲೀಸಿನವರು ಇಂಥಾ ದುರ್ಮಾರ್ಗರನ್ನು ಪತ್ತೆಮಾಡಬೇಕಾಗಿದೆ.—ಕೆಲವು ದಿನಗಳ ಮುಂಚೆ ಇದೇ ಊರಿನ ರೇವಣ್ಣನೆಂಬುವನು ತನ್ನ ಮಾವಿನ ತೋಟದಲ್ಲಿ ಒಟ್ಟಿದ್ದ ಎರಡು ಹುಲ್ಲಿನ ಬಣವೆಗಳಿಗೂ ಯಾರೋ ಬೆಂಕಿ ಹಚ್ಚಿ ಸಂಪೂರ್ಣವಾಗಿ ಸುಟ್ಟಿದ್ದಲ್ಲದೆ ಅಲ್ಲಿದ್ದ ಒಂದು ಹೆಂಚಿನ ಮನೆಗೂ ಹತ್ತಿಸಿದ್ದ ಬೆಂಕಿಯು ಪ್ರಜ್ವಲಿಸದೆ ಆರಿಹೋಗಿತ್ತು. ಅಪರಾಧಿಗಳು ಯಾರೆಂಬುವದು ಇನ್ನೂ ಪ್ರಕಟಕ್ಕೆ ಬಂದಿಲ್ಲ.

ವಿದೇಶ ವೃತ್ತಾಂತಗಳು.

ಲಂಡನ್ ಪಟ್ಟಣದ ಓಲ್ಡ್ ಕೆಂಟ್ ರೋಡ್ ಎಂಬ ಬೀದಿಯಲ್ಲಿ ಕಳೆದ ವಾರ ಬೆಂಕಿಬಿದ್ದು ಕಾರ್ಖಾನೆಯೂ, ಒಂದು ಬೈನ್ ಮನೆಗಳೂ ಸುಟ್ಟುಹೋಗಿ ಒಂದೂವರೆ ಲಕ್ಷ ರೂಪಾಯಿನ ಆಸ್ತಿ ನಷ್ಟವಾಯಿತು.

* * *

ಇಂಗ್ಲಿಷ್ ರಾಜ್ಯದಲ್ಲಿ ರಾಜಕೀಯ ವಿಚಾರಗಳನ್ನು ಹಿಡಿದು ಹೋರಾಡುತ್ತಿದ್ದ ತುಂಬಾ ಪ್ರಖ್ಯಾತರಾದ ಮಿ|| ಜೋಸಫ್ ಚೇಂಬರ್‌ಲಿನ್‌ರವರು ಕಳೆದ ಶುಕ್ರವಾರ ಲಂಡನ್ ಪಟ್ಟಣದಲ್ಲಿ ಕಾಲವಾದರು. ಈ ವಾರ್ತೆಯನ್ನು ಕೇಳಿ ಚಕ್ರವರ್ತಿಯವರು ಮೊದಲುಗೊಂಡು ಸಮಸ್ತ ಇಂಗ್ಲಿಷ್ ಪ್ರಜೆಗಳಿಗೂ ವಿಷಾದ ಉಂಟಾಗಿದೆ.

* * *

ಪ್ಯಾರಿಸ್ ಪಟ್ಟಣದ ಒಬ್ಬ ದಂತವೈದ್ಯನ ದೊಡ್ಡ ಅಂಗಡಿಗೆ ಕಳ್ಳರು ಬಿದ್ದು, ಚಿನ್ನ ಬೆಳ್ಳಿಗಳಲ್ಲಿ ತಯಾರುಮಾಡಿ ಬಿಕರಿಗೆ ಇಟ್ಟಿದ್ದ ಸುಮಾರು ಎರಡು ಲಕ್ಷ ನಕಲ್ ಹಲ್ಲುಗಳನ್ನೂ, ಇನ್ನೂ ಬೆಲೆಯಾಗುವ ಇತರ ಸಾಮಾನುಗಳನ್ನೂ ಕದ್ದುಕೊಂಡು ಹೋದರು. ಮಾಲೀಕನಿಗೆ 60 ಲಕ್ಷ ರೂಪಾಯಿ ತನಕ ನಷ್ಟವಾಗಿರುತ್ತದೆ.

* * *

ವಿಲಾಯತಿಯಲ್ಲಿ ಸ್ತ್ರೀಯರಿಗೆ ಸ್ವಾತಂತ್ರ್ಯಗಳನ್ನು ವಹಿಸಬೇಕೆಂದು ಅಧಿಕಾರಿಗಳ ಕೂಡ ಹೋರಾಡುವುದಕ್ಕೆ ಸ್ತ್ರೀಯರು ಒಂದು ಸಭೆಯನ್ನು ಮಾಡಿಕೊಂಡಿದ್ದಾರೆ. ಈ ಸಂಘದವರು ಕೆಲವು ಸ್ತ್ರೀಯರ ಹೆಸರುಗಳನ್ನು ಬರೆದು ಪಟ್ಟಿಮಾಡಿ, ಅವರಿಗೆಲ್ಲಾ ಬಿರುದುಗಳನ್ನು ಕೊಡಬೇಕೆಂದು ಅರ್ಜಿ ಬರೆದು ಚಕ್ರವರ್ತಿ ಸಾರ್ವಭೌಮರವರಿಗೂ, ಮಂತ್ರಿಶ್ರೇಷ್ಠರಾದ ಮಿ|| ಆಸ್ಕ್ವಿತ್‌ರವರಿಗೂ ಒಪ್ಪಿಸಿರುತ್ತಾರೆ.

* * *

ಡಚ್ಚರಿಗೆ ಸೇರಿದ ಜಾವಾ ದ್ವೀಪದಲ್ಲಿ ಮುಖ್ಯಪಟ್ಟಣವಾದ ಬಟೇವಿಯಾದೊಳಗೆ ಅಕಸ್ಮಾತ್ತಾಗಿ ಬಹಳ ಮಳೆ ಸುರಿಯಿತು. ಬೆಂಕೋಲನ್ ಎಂಬಲ್ಲಿ ಅನೇಕ ವರ್ತಕರ ಅಂಗಡಿಗಳೂ, ಮನೆಗಳೂ, ಸ್ಕೂಲುಗಳೂ ನಾಶವಾದವು. ನಷ್ಟವಾಗಿರುವ ಆಸ್ತಿಯನ್ನು ಇಷ್ಟೆಂದು ಹೇಳಲಾಗುವುದಿಲ್ಲ. ಮನೆಗಳು ಕಳಚಿ

ಬಿದ್ದುಕೊಂಡದ್ದರಿಂದ ಸುಮಾರು ಇಪ್ಪತ್ತು ಮಂದಿ ಯೂರೋಪಿಯನರಿಗೆ ಜಖಂ ಆಗಿರುತ್ತದೆ.

ಸುಮಾತ್ರಾ ದ್ವೀಪದಲ್ಲಿ ಭೂಕಂಪವು ಪ್ರಾಪ್ತವಾಗಿ ಟೆಲಿಗ್ರಾಫ್ ಕಂಬಗಳೂ, ಕಂಭಗಳೂ, ಮನೆಗಳೂ, ಸರ್ಕಾರಿ ಬಂಗಲೆಗಳೂ ಬಿದ್ದುಹೋದವು. ಅನೇಕ ಜನರು ಪ್ರಾಣ ಕಳೆದುಕೊಂಡರು.

ಟಾಂಗ್ಯಾರ್ ರೈಲ್ ರಸ್ತೆಯು ಪೈಕಿ ಹೆರಾಕ್ಲುಸ್ ಎಂಬ ಊರಿನಿಂದ ಟೆಲ್ ಅಬಿಯಾದ್ ಎಂಬ ಸ್ಥಳದ ವರೆಗೆ 60 ಮೈಲಿ ಕಾಮಗಾರಿ ಆಗಿರುವುದರಿಂದ ಈ ಭಾಗವನ್ನು ಈ ತಿಂಗಳ ಪ್ರಾರಂಭದಲ್ಲಿ ಪ್ರತಿಷ್ಠೆ ಮಾಡಿ, ಗಾಡಿಗಳನ್ನು ಬಿಡಲಾರಂಭಿಸಿದಾರೆ.

ಉತ್ತರ ಅಮೇರಿಕದಲ್ಲಿ ಮಸಚುಸೆಟ್ಸ್ ಎಂಬ ಡಿಸ್ಟ್ರಿಕ್ಟಿಗೆ ಸೇರಿದ ಸಾಲೆಂ ಪಟ್ಟಣಕ್ಕೆ ಬೆಂಕಿಬಿದ್ದು ಸುಮಾರು ಅರ್ಧ ಪಟ್ಟಣವೆಲ್ಲಾ ನಾಶವಾಯಿತು. ಎಪ್ಪತ್ತು ಲಕ್ಷ ಪೌನುಗಳ ಬೆಲೆಬಾಳುವ ಆಸ್ತಿಪಾಸ್ತಿಗಳು ಹಾಳಾದವು. ಹತ್ತು ಸಹಸ್ರ ಜನರು ಮನೆಗಳನ್ನು ಕಳೆದುಕೊಂಡು ಕಷ್ಟಪಡುತ್ತಿದಾರೆ. 50 ಮಂದಿ ಗಾಯವಾಗಿ ಆಸ್ಪತ್ರೆಗೆ ಹೋದರು.

ಡಚ್ಚರಿಗೆ ಸೇರಿದ ಈಸ್ಟ್ ಇಂಡೀಸ್ ದ್ವೀಪಗಳ ಪೈಕಿ ಬೆಂಕೂಲೆನ್ನಲ್ಲಿ ಭೂಕಂಪವಾಗಿ ಅನೇಕ ಮನೆಗಳು ಕಳಚಿಬಿದ್ದುಹೋದವು. ಹನ್ನೊಂದು ಜನರು ಮೃತಪಟ್ಟರು. ಅತ್ತಲಾಗಿ ಚೀನಾರಾಜ್ಯಕ್ಕೆ ಸೇರಿದ ಸೈಕಿಯಾಂಗ್ ಮತ್ತು ಸೀಕಿಯಾಂಗ್ ನದಿಗಳಲ್ಲಿ ಐವತ್ತು ವರುಷಗಳಿಂದ ಕಾಣದಂಥಾ ಅಪಾರವಾದ ಪ್ರವಾಹಗಳು ಬಂದು, ನೂರಾರು ಗ್ರಾಮಗಳು ನಾಶಹೊಂದಿದವು; ಸಾವಿರಾರು ಪ್ರಜೆಗಳು ಮನೆಮಠಗಳನ್ನು ಕಳೆದುಕೊಂಡು ಕಷ್ಟಪಡುತ್ತಿದಾರೆ.

ಕಳೆದ ವಾರ ಇಂಗ್ಲಾಂಡಿನ ಕೆಲವು ಭಾಗಗಳಲ್ಲಿ ಅಪೂರ್ವವಾದ ಬಿಸಿಲು ಕಾಯಿತು. ಮೂರು ವರುಷಗಳಿಂದ ಅಷ್ಟು ಸೆಕೆ ಪ್ರಾಪ್ತವಾಗಿರಲಿಲ್ಲವೆಂದು ಹೇಳುತ್ತಾರೆ. ಹಲವರು ಬಿಸಿಲಿನ ತಾಪವನ್ನು ಸಹಿಸಲಾರದೆ ಅಕಾಲಮರಣವನ್ನು ಹೊಂದಿದರು. ಅನೇಕ ಕಡೆ ಬೆಂಕಿಬಿದ್ದು ಬಹಳ ಆಸ್ತಿ ನಷ್ಟವಾಯಿತು. ಸಿಡಿಲು ಗುಡುಗು ಮಿಂಚು ಸಹಿತವಾಗಿ ಅಪಾರವಾದ ಮಳೆ ಸುರಿದದ್ದರಿಂದ ಅನೇಕ ಕಡೆಗಳಲ್ಲಿ ಪ್ರವಾಹಗಳು ಬಂದು ಕಷ್ಟನಷ್ಟಗಳುಂಟಾದವು. ಬ್ರಾಡ್‌ಫರ್ಡ್ ಎಂಬ ಊರಿನಲ್ಲಿ ಮಳೆನೀರಿನ ದೆಸೆಯಿಂದ ರಸ್ತೆಗಳು ಕಿತ್ತುಹೋಗಿ ಜನರು ಕಾರ್ಖಾನೆಗಳಿಂದ ಗಾಬರಿಬಿದ್ದು ಓಡಿಹೋದರು.

ದಕ್ಷಿಣ ಆಫ್ರಿಕದ ವ್ಯವಸಾಯಗಾರರ ಪೈಕಿ ಮುಖಂಡರಾದ ಐವತ್ತು ಜನ ಜನರು ಇಂಗ್ಲಾಂಡಿಗೆ ಹೋಗಿರುತ್ತಾರೆ. ವ್ಯವಸಾಯ ಶಾಸ್ತ್ರವನ್ನು ಇಂಗ್ಲಾಂಡಿನಲ್ಲಿ ಎಷ್ಟುಮಟ್ಟಿಗೆ ಅಭಿವೃದ್ಧಿಗೆ ತಂದಿದಾರೆಂದು ನೋಡಿಕೊಂಡು ಹೋಗುವುದೇ ಅವರ ಉದ್ದೇಶ. ಅವರು ಸಂಚಾರಮಾಡುವ ಕಡೆಗಳಲ್ಲೆಲ್ಲಾ ಇಂಗ್ಲಿಷರು ಅವರನ್ನು ಆದರಿಸಿ ಸತ್ಕರಿಸುತ್ತಿದಾರೆ. ಅವರ ರಾಜಭಕ್ತಿಯೂ, ಸುಹೃದಯವೂ ಇಂಗ್ಲಿಷರಲ್ಲಿ ತುಂಬಾ ಗೌರವವನ್ನೂ ಪ್ರೀತಿಯನ್ನೂ ಹುಟ್ಟಿಸಿರುವವು. ಚಕ್ರವರ್ತಿ ಸಾರ್ವಭೌಮರವರು ಬಕಿಂಗ್‌ಹಂ ರಾಜಭವನದಲ್ಲಿ ಅವರೆಲ್ಲಾ ಭೇಟಿಯನ್ನು ದಯಪಾಲಿಸಿ, ಪ್ರತಿ ಒಬ್ಬರ ಸಂಗಡಲೂ ಸ್ವಲ್ಪ ಸ್ವಲ್ಪ ಹೊತ್ತು ಸಂಭಾಷಣೆಮಾಡಿದರು. ಆ ರೈತರ ಸಂತೋಷವೂ ಉತ್ಸಾಹವೂ ಅಪಾರವಾಗಿರುತ್ತದೆ.

ಫ್ರಾನ್ಸ್ ದೇಶದಲ್ಲಿರುವ ಸೇಂಟ್ ಪಟ್ಟಣದ ನ್ಯಾಯಸ್ಥಾನದಲ್ಲಿ ಒಂದು ಆಶ್ಚರ್ಯಕರವಾದ ವ್ಯಾಜ್ಯವು ಫೈಸಲಾಯಿತು. ಫಾರ್ಮನ್ ಎಂಬಾತನೂ ಇತರ ಕಾರೀಗಾರರೂ ತಮ್ಮ ವಿಮಾನಯಂತ್ರಗಳಲ್ಲಿ ಕುಳಿತು ಕೆಲವು ಪ್ರದೇಶಗಳಲ್ಲಿ ಸಂಚಾರಮಾಡಿದಾಗ ಆ ಪ್ರದೇಶಗಳ ಗೋಶಾಲೆಗಳು ಗಾಬರಿಪಟ್ಟು, ಕ್ರಮವಾಗಿ ಕೊಡುತ್ತಿದ್ದಷ್ಟು ಹಾಲು ಕೊಡದೆ ಮಾಲೀಕರಿಗೆ ನಷ್ಟವಾಯಿತು. ಈ ಗೋಪಾಲಕರು ಆ ಕಾರೀಗಾರರಿಂದ ನಷ್ಟದ್ರವ್ಯವನ್ನು ಕೊಡಿಸಬೇಕೆಂದು ಅವರ ಮೇಲೆ ದಾವಾ ಮಾಡಿದರು. ಜಡ್ಜಿಗಳು ಈ ಮೊಕದ್ದಮೆಯನ್ನು ಪರ್ಯಾಲೋಚಿಸಿ ತೀರ್ಮಾನ ಹೇಳಿದ್ದೇನೆಂದರೆ—ನೆಲದಿಂದ ಮರಗಳ ನೆತ್ತಿಯ ತನಕ ಇರುವ ವಾಯುಮಂಡಲವು ಜಮೀನಿನ ಮಾಲೀಕರಿಗೆ ಸೇರಿದ್ದು; ಮರಗಳ ಮೇಲೆ ಇರುವ ವಾಯುಮಂಡಲವು ಎಲ್ಲರಿಗೂ ಸೇರಿದ್ದಾಗಿರುತ್ತದೆ. ಆದಾಗ್ಯೂ ಈ ಕಾರೀಗಾರರ ದೆಸೆಯಿಂದ ಗೋಶಾಲೆಗಳು ಗಾಬರಿಬಿದ್ದು ಮಾಲೀಕರಿಗೆ ನಷ್ಟ ಉಂಟಾಗಿರುವುದರಿಂದ ಕಾರೀಗಾರರು ಆ ಗೋಪಾಲಕರಿಗೆ ನಷ್ಟದ್ರವ್ಯವನ್ನು ಕೊಡಬೇಕಾಗಿದೆ ಎಂದು ಹೇಳಿ ನಷ್ಟದ್ರವ್ಯವನ್ನು ಕೊಡಿಸಿರುತ್ತಾರೆ.

Full Notes and Examiner on L. S. E. Texts (1915)—Both Tanglewood and Fairy Tales, with Author's life, meanings, explanations, summaries, constructions and questions. Price Annas 5. English Papers.—Subscription Re. 1¼ only. Special copy As. 6. Spelling Book As. 4. (Postage extra).

Apply to, M. N. Sitarama Rao,

[100-10] Krishnaraja Mohalla, Mysore.

ಹೊಸ ಏರ್ಪಾಡನ್ನು ಓದಿ ನೋಡಿ ಲಾಭಪಡೆಯಿರಿ.

ಕಣ್ಣು ಇಲ್ಲದಿದ್ದರೆ ಕಲಿಯುಗವೇ ಇಲ್ಲ!



ಭಾರೀಕ್ರಯದ ಕನ್ನಡಕಗಳು ಕ್ರಯ ರೂ. 2-8-0. ಸ್ಫಟಿಕದ ಕನ್ನಡಕವನ್ನು ಉಪಯೋಗಿಸಿ ನಿಮ್ಮ ದೃಷ್ಟಿಯನ್ನು ಕಾಪಾಡಿಕೊಳ್ಳಿರಿ. ಅಲ್ಪಕ್ರಯದ ಕನ್ನಡಕಗಳು ದೃಷ್ಟಿಯನ್ನು ಹೋಗಲಾಡಿಸಿ ಕಾಲಕ್ರಮೇಣ ವ್ಯಾಧಿಯನ್ನುಂಟುಮಾಡುತ್ತೆ. ಆದಕಾರಣ ಅವುಗಳನ್ನು ಉಪಯೋಗಿಸಬೇಡಿರಿ. ನಮ್ಮಲ್ಲಿ ಸ್ಫಟಿಕದ ಕನ್ನಡಕಗಳು ಕ್ರಯಕ್ಕೆ ದೊರೆಯುತ್ತೆ. ಬೇಕಾದವರು ಬರೆದರೆ ಎಲ್ಲಾ ತರಹದ ಮತ್ತು ಎಲ್ಲಾ ನಂಬರಿನ ಕನ್ನಡಕಗಳಿರುವ ಭಾರೀಕ್ರಯದ ಪೆಟ್ಟಿಗೆ ಒಂದನ್ನು ಉಚಿತವಾಗಿ ಕಳುಹಿಸುತ್ತೇವೆ. ಬಾಕೀ ವಿಷಯವೆಲ್ಲಾ ನಿಮ್ಮ ದರಖಾಸ್ತು ಬಂದಮೇಲೆ ಬರೆದು ತಿಳಿಸುತ್ತೇವೆ. [139-3]

ವಿಳಾಸ.—ನೀಲಕರ್ ಅಂಡ್ ಬ್ರದರ್ಸ್,

ಎಸ್. ಎಂ. ಕೋಯಿಲ್ ಬೀದಿ, ತಿರುವಲ್ಲಿಕ್ಕೇಣಿ, ಮದರಾಸು.



ಜೂಲೈ ಮಹೋತ್ಸವದ ಕೈ ಗಡಿಯಾರ.

ಅರ್ಧ ಕ್ರಯ ರೂ. 1-4-0

ಇದೇ ಜೂಲೈ ಹಬ್ಬದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದ ಕೈ ಗಡಿಯಾರವನ್ನು ಜುಲೈ ಒಳಗೆ ತರಿಸಿಕೊಳ್ಳುವವರಿಗೆ ರೂಪಾಯಿ 1-14-0 ಆಣೆಗೆ ಕೊಡಲ್ಪಡುತ್ತೆ. [93-5]

ವಿಳಾಸ—ವಿ. ಕೃಷ್ಣಸ್ವಾಮಿ ಮೊದಲಿಯಾರ್, ನಂ.27 ಬಂಡರ್ ಬೀದಿ, ಜಿ.ಟಿ., ಮದರಾಸು.

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶದಾಮವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾವುದೆಂದರೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ. ಈ ತೈಲವನ್ನು ತೊಡೆದುಕೊಳ್ಳುತ್ತಲೇ, ಮಸ್ತಿಷ್ಕದ ಬೇಗೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ತೊಡೆಯ ತೊಡಗಿದ ಬಳಿಕ ಎಂದಿಗೂ ಉದುರಿ ಬಿದ್ದುಹೋಗಲಾರವು; ಅದರ ಬದಲು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು.



ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡುವುದಕ್ಕಿಂತ ಒಂದೇಒಂದು ಬಾರಿ ಈ "ಕಾಮಿನಿಯಾ ತೈಲ" ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಆಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಅವುಗಳಲ್ಲಿ ಒಂದನ್ನೇ ನೋಡಿರಿ! ನೇಗಿನಹಾಳಕರ ಬಂಧುಗಳು, ಬಸವನಗಲ್ಲಿ, ಬೆಳಗಾಂವ—ತಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವುದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ. ಆದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ. ಪಿ. ದ್ವಾರಾ ರವಾನಿಸುವುದು. ಸೀಸೆಯೊಂದರ ಕ್ರಯ ರೂ. 1-0-0, ಅ. ವೆ. 0-4-0 ಬೇರೆ; 3 ಸೀಸೆಗಳ ಕ್ರಯ ರೂ. 2-10-0, ಅ. ವೆ. 0-7-0 ಬೇರೆ.

ಸೂಚನೆ.—ಅನೇಕ ದುರ್ವಿನೀತರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ವಿಕರಿಯಿಂದ ತಮಗೆ ಅತ್ಯಲ್ಪ ನಫೆಯೇ ದೊರಕುತ್ತದೆಂದು, ನೀವು "ಕಾಮಿನಿಯಾ ತೈಲ" ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭ ದೊರಕತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಇದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳುವಷ್ಟು ಮೆಹರುಬಾನ್ ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಿಬೀಳದೆ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಒಟ್ಟೋ ದಿಲ್ ಬಹಾರ್!!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಆಲ್ಕೋಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ತಟುಕುಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ. ಈ ಒಟ್ಟೋ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವುದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ. [19-26]

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಡ್ರಾಮಿನ (ಮಿಡಿಯಂ) ಸೀಸೆ 1ಕ್ಕೆ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0. ಅಂಚೆಯ ವೆಚ್ಚ ಬೇರೆ ರೂ. 0-4-0. ಒಟ್ಟೋ-ದಿಲ್ ಬಹಾರ್ ಪರಿಮಳದ ಕಾರ್ಡುಗಳು ಡಜನ್ ಒಂದಕ್ಕೆ 0-12-0.

ಮೇಲೆ ಕಂಡ ಎಲ್ಲಾ ಸುಗಂಧಗಳು ಸಿಕ್ಕುವ ಪತ್ತೆ :—

ಅಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್‌ಜಿದ್, ಬೊಂಬಾಯಿ.

ಏಜೆಂಟ್, ಡಿ. ಉಲ್ಫ ಪಾರ್ಕ್, ಮಂಗಳೂರು.

ಮನೆಗೂ ಜೇಬಿಗೂ ಅಲಂಕಾರವು.

ಚಿತ್ತೂರಿನಲ್ಲಿರುವ ಘಟಾಲಾ ಎಂಬ ಕಂಪನಿಗೆ ಈ ದಿನವೇ ಐದು (5) ರೂಪಾಯಿ ಮಣಿ ಆರ್ಡರು ಮಾಡಿದರೆ ಅವರು ನಿಮಗೆ ಒಂದು ಬಲವಾದ ಲೀವರ್ ಜೇಬಿನ ಗಡಿಯಾರವನ್ನೂ, ಮನೆಯಲ್ಲಿ ಗೋಡೆಗೆ ನೇತುಹಾಕುವ ಗಂಟೆಹೊಡೆಯುವ 3 ಮೂಳೆಯ 8 ದಿನಕ್ಕೊಂದುಸಲ ಬೀಗಕೊಡುವ ಒಂದು ದೊಡ್ಡ ಗಡಿಯಾರವನ್ನೂ ಕಳುಹಿಸುತ್ತಾರೆ. 10 ರೂ. ಕ್ರಯವನ್ನು ಜೂಲೈ ತಾ. 19ರ ವರೆಗೆ ಮಾತ್ರ 5 ರೂಪಾಯಿಗೆ ಇಳಿಸಿದೆ. ಬಳಿಕ ಇದು ರೂ. 10 ಕೊಟ್ಟಲ್ಲದೆ ಸಿಕ್ಕುವುದಿಲ್ಲ. ವಿ. ಪಿ. ಮಾಡುವುದಿಲ್ಲ, ಈ ದಿನವೇ 5 ರೂ. ಕಳಿಸಿರಿ. ಪತ್ರವನ್ನು ಇಂಗ್ಲಿಷಿನಲ್ಲೇ ಬರೆಯಬೇಕು. [153-1]

ತಂಜಾವೂರು ಗೆಜ್ಜೆ ಅಡ್ಡಿಗೆ ಕ್ರಯ 7 ಆಣೆ.



ಅಡ್ಡಿಗೆ ಮಾದರಿ ನೋಡಬೇಕಾದರೆ ಬರೆದರೆ ಉಚಿತವಾಗಿ ಕಳುಹಿಸುತ್ತೇವೆ. ಇದು ಎಲೆಕ್ಟ್ರಿಕ್ ಚಿನ್ನದಿಂದ ಗಟ್ಟಿ ಗೆಜ್ಜೆಗಳನ್ನು ತಯಾರಿಸಿ ಸುಂದರವಾಗಿ ಕುಚ್ಚುಗಳಿಟ್ಟು ರೇಷ್ಮೆ ಮಿಶ್ರವಾದ ಕರಿ ದಾರದಿಂದ ಕಟ್ಟಿರುತ್ತೆ. ಸ್ತ್ರೀಯರು ಕೊರಳಲ್ಲಿ ಧರಿಸುವದಕ್ಕೆ ಲಾಯಖಾದದ್ದು. ನಮ್ಮಲ್ಲಿ ಜನಗಳಿಗೆ ನಂಬಿಕೆ ಹುಟ್ಟುವದಕ್ಕಾಗಿ ಮಾದರಿ ನೋಡಬೇಕೆಂದು ಬರೆಯುವವರಿಗೆ ಮಾದರಿ ಕಳುಹಿಸುತ್ತೇವೆ. [139-3]

ವಿಳಾಸ—ಎಸ್. ಎನ್. ಮೂರ್ತಿ ಅಂಡ್ ಕಂಪೆನಿ,

ತಿರುವಲಿಕ್ಕೇಣಿ, ಮದರಾಸು.

ಐದು ಘಂಟೆಗಳ ಅಲಾರಂ ಟೈಂಪೀಸು.

ಇದು ಒಂದು ಅದ್ಭುತವಾದ ಆಶ್ಚರ್ಯವು. ಯಾವಾಗ್ಯೂ ನೋಡಿರಲಾರಿರಿ. ಇದು ನಮ್ಮ ಹತ್ತಿರ ಮೊದಲು ಮಾತ್ರವೇ ದೊರೆಯುದು. ಈ ಐದು ಗಂಟೆಗಳು ಒಂದೊಂದು ಒಂದೊಂದು ತರಹಾ ಶಬ್ದದಿಂದ ಅಲಾರಂ ಹೊಡೆಯುವಾಗ ಶ್ರವಣಾನಂದವಾದ ಸಂಗೀತದಂತೆ ಇರುತ್ತೆ. ಇದರ ಶಬ್ದವು ಸಾಧಾರಣ ಒಂದು ಫರ್ಲಾಂಗಿನ ವರಿಗೂ ಕೇಳುತ್ತೆ. ಎಂಥಾ ಗಾಢನಿದ್ರೆ ಮಾಡುವವರೂ ತಾವು ಎಷ್ಟು ಹೊತ್ತಿಗೆ ಏಳಬೇಕೋ ಅದಕ್ಕೆ ಸರಿಯಾಗಿ ಅಲಾರಂ ಬೀಗವನ್ನು ಕೊಟ್ಟು ತಲೆ ಕೆಳಗೆ ಇಟ್ಟು ಮಲಗಿಕೊಂಡರೆ ಆ ಹೊತ್ತಿಗೆ ಸರಿಯಾಗಿ



ಥಟ್ಟನೆ ಎಬ್ಬಿಸುತ್ತೆ. ಇದರ ಬೆಲೆ 1 ಕ್ಕೆ ರೂ. 4-8-0. [132-4]

ನಮ್ಮ ಅಡ್ರಸು—ಎಂಪರರ್ ವಾಚ್ ಕಂಪೆನಿ,

ಪೋಸ್ಟು ಬಾಕ್ಸು ನಂ. 170, ಮದರಾಸು

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

3-24

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ವಿಕರಿಯಾಗುತ್ತಿರುವ ಟೋಪಿಗಳ ದಾರಕ್ಕಾ ದೇಶಾದದ್ದು. ಅವು ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ:—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹು ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ.

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ. ೮ ಆ ೧ ರೂ. ೬ ಆ.;

ಚುಕ್ಕಿಯುಳ್ಳ ಟೋಪಿಗಳು ರೂ. ೧—೮; ರೂ. ೧—೧೨.

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ. ೨.

ದಾರದ ಟೋಪಿಗಳು ೧ ರೂ. ೧೨ ಆ.; ೧ ರೂ. ೮ ಆ.; ೧ ರೂ. ೬ ಆ.

ಮುಸುಕಿನ ಟೋಪಿಗಳು ೧ ರೂ. ೮ ಆ.; ೧ ರೂ. ೬ ಆ.

"In addition to cap making we are giving special attention to knitting stockings. All our stockings, for adults and children, are hand-made. Prices will be sent on enquiry."

ಮ್ಯಾನೇಜರ್, ಟೋಪಿ ಕಾರ್ಖಾನೆ,

ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ

Apply:—

MANAGER, CAP WORKS,

GIRLS' INDUSTRIAL SCHOOL, HASSAN

ತಾಲ್ಲೂಕು ವರ್ತಮಾನಗಳು.

ದೊಡ್ಡಬಳ್ಳಾಪುರ.—ಈ ಊರಿನಲ್ಲಿ ಮಳೆ ಇಲ್ಲ. ಜನರು ಮೋಡವನ್ನೇ ನೋಡುತ್ತಿದ್ದಾರೆ.—ನಾನು ಏನೋ ಕೆಲಸಕ್ಕಾಗಿ ಈ ಊರಿಗೆ ಬಂದೆ. ತಾ. 28 ನೇ ಭಾನುವಾರ ಸಾಯಂಕಾಲ ಸಾಹುಕಾರ್ ದುಮಾಲೆ ರುದ್ರಪ್ಪನವರ ಧರ್ಮ ಸತ್ರದಲ್ಲಿ ಸಂಗೀತಕಚೇರಿ ನಡೆಯುವಂತೆ ತಿಳಿದುಬಂದು ನೋಡಲು ಆಸಕ್ತಿಯಿಂದ ಹೋದೆ. ಅತ್ಯುತ್ಕೃಷ್ಟವಾದ ಜನಾವಣೆಯಿಂದ ಸಂಗೀತವು ನಡೆಯುತ್ತಾ ಇತ್ತು. ಮುನ್ಸೀಫರವರು, ಸರ್ಕಾರಿ ನೌಕರರು, ವರ್ತಕರು, ಇತರ ದೊಡ್ಡ ಮನುಷ್ಯರು ಸಹ ನೆರೆದಿದ್ದರು. ಈ ಸಂಗೀತದಿಂದ ಜನರಿಗೆಲ್ಲಾ ಬಹಳ ಆನಂದವಾಯಿತು. ಸಂಗೀತಾನಂತರ ಮಿಮಿಕ್ ಪ್ರೊಫೆಸರ್ (ಏಕಪಾತ್ರ) ರಾಮಲಿಂಗಯ್ಯನವರು ಬಾಯಿಯಲ್ಲೇ ತಬಲಾ, ಮೂಚಿಂಗ್ ಕೆಲಸ, ಧವಳ, ಶಂಖ, ವಗೈರೆ ನುಡಿಸಿದ್ದಲ್ಲದೆ ಎಲ್ಲಾ ಪಕ್ಷಿಜಾತಿಗಳು ಕೂಗುವಂತೆ ಕೂಗಿ ಸಭೆಯನ್ನು ಆಶ್ಚರ್ಯಾನಂದ ಪಡಿಸಿದರು. ಈ ಊರಿನಲ್ಲಿ ಇವರಿಗೆ ಒಂದು ಮೆಡಲ್ ಕೊಡುತ್ತಾರೆಂದು ವದಂತಿ ಇರುತ್ತೆ. ಈ ಸಂಗೀತ ಮತ್ತು ಮಿಮಿಕ್ ಸಭೆಯಲ್ಲಿ ಬಂತಹ ಜನರಿಗೆ ಆದರಣೆಯೂ, ಗಂಧ ಪುಷ್ಪ ತಾಂಬೂಲಗಳೂ ಕೊಡತಕ್ಕ ಏರ್ಪಾಡುಗಳು ಸಹಾ ನಡೆಸುತ್ತಿದ್ದ ಮ|| ಪದ್ಮನಾಭಯ್ಯನವರ ಏರ್ಪಾಡು ತುಂಬಾ ಸಂತೋಷವಾಗಿತ್ತು. ಪರಸ್ಥಳದ ಸಂಗೀತ ವಿದ್ವಾಂಸರಿಗೆ ಈ ಊರಿನಲ್ಲಿ ಈ ರೀತಿ ಗೌರವ ಕೊಟ್ಟು ಪ್ರೋತ್ಸಾಹ ಮಾಡತಕ್ಕ ಇಲ್ಲಿನ ಪ್ರಜೆಗಳಿಗೆ ಈ ಮೂಲಕ ವಂದನೆಗಳನ್ನು ಅರ್ಪಿಸುತ್ತೇನೆ.

ಕೃಷ್ಣರಾಜಪೇಟೆ ತಾ|| ಅಕ್ಕಿಹೆಬ್ಬಾಳು.—ಸೋನೆ ಮಳೆ ಕೊಂಚ ಮಾರು ವಾಗಿದೆ. ಯಾವ ಬತ್ತಸೀ ಪೈರಿಗೂ ತೊಂದರೆಯಿಲ್ಲ. 27 ನೇ ತಾ. ನಾಲೆಯಲ್ಲಿ ಸ್ವಲ್ಪ ನೀರು ಬಿಟ್ಟರು. ಈ ಸ್ವಲ್ಪ ನೀರಿನಿಂದ ಪೈರಿನಲ್ಲಿ ಒಬ್ಬರಿಗೊಬ್ಬರಿಗೆ ವಿರೋಧ ಉಂಟಾಗಲು ಅವಕಾಶವಾಗಿದೆ. ಕೊಡ್ಲೆ ಪ್ರವಾಹ ಬರಬಹುದೆಂದು ನಿರೀಕ್ಷಿಸಲ್ಪಟ್ಟಿದೆ.—ಮೈಸೂರು ಸಂಸ್ಥಾನಕ್ಕೂ ಮದರಾಸಿಗೂ ಕಾವೇರಿ ಜಲಾಶಯದ ವಿಚಾರದಲ್ಲಿ ಹೇಮಾವತಿ ನದಿಯಲ್ಲಿ ನೀರು ಎಷ್ಟು ಪ್ರವಹಿಸುತ್ತೆಂಬುವದನ್ನು ನೋಡಲು ಮದರಾಸು ಗೌರ್ನಮೆಂಟಿನಿಂದ ಒಬ್ಬ ಓವರ್ಸೀಯರು ಬಂದು ಈ ಊರಿನಲ್ಲಿ ಆಫೀಸು ಮಾಡಿ ನಿಂತು ಸಾಯಂಸ್ತ್ರಾತಗಳಲ್ಲಿ ನೀರಿನ ಗೇಜು ತೆಗೆಯುತ್ತಾ ಇದ್ದಾರೆ.—ಇಲ್ಲಿಗೆ ಬಂದಿರುವ ಎಗ್ಸಿಕ್ಯುಟಿವ್ ಇಂಜಿನಿಯರವರು ಬಹಳ ಶ್ರದ್ಧೆಯಿಂದಲೂ, ಮುತುವರ್ಜಿಯಾಗಿಯೂ ಆಗಲೇ ಹೇಮಗಿರಿ ನಾಲೆ ಬಡಾವಣೆ ಭಾಗವನ್ನು ಮುಕ್ಕಾಲು ವಾಸಿ ಪೂರೈಸಿರುತ್ತಾರೆ. ಇವರ ಮೊಹನತ್ತು ನೋಡಿದರೆ ಈ ವರ್ಷ ನಾಲೆಯೂ ಕೂಡ ಜಾತ್ರಕೆ ಪೂರೈಸುತ್ತೆಂದು ತೋರುತ್ತೆ.—ಈ ಊರಿನಲ್ಲಿ ಈ ದಫಾ ಗೌ|| ಕನ್ನಡ ಸ್ಕೂಲಿನಲ್ಲಿ 7 ಮಂದಿ ಕನ್ನಡ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ಈ ಸ್ಕೂಲಿಗೆ ಇನ್ನೊಬ್ಬ ಟೀಚರನ್ನು ಸ್ಯಾಂಕ್ಷನ್ ಮಾಡಿದೆ ಎಂಬ ಹುಕುಂ ಬಂದು ಮೂರು ತಿಂಗಳಾದಾಗ್ಯೂ ಅಸಿಸ್ಟೆಂಟ್ ಟೀಚರನ್ನೇ ಕಳುಹಿಸಿಕೊಟ್ಟಿಲ್ಲ. ಸ್ಕೂಲಿನಲ್ಲಿ ಒಂದು ನೂರು ಹುಡುಗರನ್ನು ಇಬ್ಬರು ಮಾಸ್ಟರೇ ನಿರ್ವಹಿಸುವದು ಕಷ್ಟ.—ಈ ಪ್ರಾಂತ್ಯನ್ನು ಸೂರು ಅವರೆಕಾಳು, ಬೈರ್ಕ್ತ ಕೇಸರಿ ಬತ್ತ ಮತ್ತು ಕಬ್ಬುಗಳು ಅರ್ಧ ಮಟ್ಟಿಗೆ ಆಗಿರುತ್ತೆ. ಈಗ ಮೈಸೂರಿಂದ 40 ಮೈಲಿ ವರೆಗೆ ಟೆಲಿಗ್ರಾಫನ್ನು ಹಾಕಿರುತ್ತಾರೆ. ಈ ಗ್ರಾಮದಲ್ಲಿ 1,000 ಪ್ರಜೆಗಳ ವರೆಗೂ ಇರುತ್ತಾರಲ್ಲದೆ ವ್ಯಾಪಾರ ಮತ್ತು ನಾಲೆ ಕೆಲಸಕ್ಕಾಗಿ ಅನೇಕ ಜನಗಳು ಬಂದು ವಾಸಮಾಡುವುದರಿಂದ ಈ ಊರಿನಲ್ಲಿ ಒಂದು ಆಸ್ಪತ್ರೆಯನ್ನು ಸರ್ಕಾರದವರು ಇಡಿಸಿಕೊಟ್ಟರೆ ಅನೇಕ ಬಡಜನಗಳಿಗೆ ಬಹಳ ಅನುಕೂಲವಾಗುತ್ತೆ.

ಬೆಂಗಳೂರು ಸಿಟಿ.—ಬೆಂಗಳೂರಿನಲ್ಲಿ ಮಳೆ ಹನಿಗಳು ಮಾತ್ರ ಆಗಾಗ್ಗೆ ಬೀಳುತ್ತವೆ. ಬೆಳೆಗೆ ಅನುಕೂಲವಿಲ್ಲ.—ಈಗ್ಗೆ ಹತ್ತು ದಿವಸಗಳಿಗೆ ಮುಂಚೆ ಇದೇ ಊರು ಕಬ್ಬನ್‌ಸಾಬರ ಪೇಟೆಯಲ್ಲಿ ಒಬ್ಬ ನೇಯುವವರ ಹುಡುಗನು ಮಠಕ್ಕೆ ಓದುವದಕ್ಕೆ ಹೋಗಿದ್ದನು. ಅವರ ಮನೆಯಲ್ಲೇ ಕೂಲಿಗೆ ನೇಯುವವನು ಮಠಕ್ಕೆ ಹೋಗಿ—ಹುಡುಗನನ್ನು ಕಳುಹಿಸಿರಿ, ಬೇಗ ಹೋಲಿಸಬೇಕೆಂದು ಕರೆದುಕೊಂಡು ಹೋಗಿ ಕತ್ತು ಮುರಿದು ಹಾಕಿ ಕೈಕಾಲು ಕೊರಳು ಕಿವಿಯಲ್ಲಿನ ಒಡವೆಗಳನ್ನು ಸುಲಿದುಕೊಂಡು ಲಾಲ್ ಬಾಗ್ ಬಳಿ ಒಂದು ಭಾವಿಯಲ್ಲಿ ಹಾಕಿಬಿಟ್ಟನು. ಪೋಲೀಸಿನವರು ಅವನನ್ನು ತಲಾಷ್ ಮಾಡಿ ಹಿಡಿದರು. ಎರಡು ದಿನಗಳವರೆಗೂ ಅವನು ಬಾಯಿಬಿಟ್ಟು ಹೇಳಲಿಲ್ಲ. ಮೂರನೇ ದಿನ ತೋರಿಸುತ್ತೇನೆಂದು ಭಾವಿಯ ಬಳಿಗೆ ಕರೆದುಕೊಂಡು ಬಂದು ತೋರಿಸಿದನು. ಹೆಣವು ತೇಲುತ್ತಿತ್ತು. ತರುವಾಯ ಅದನ್ನು ಮನೆಗೆ ತೆಗೆದುಕೊಂಡು ಬಂದರು. ಸಾವಿರಾರು ಮಂದಿ ನೋಡಿ ಗೋಳಾಡಿ ದಫನ್ ಮಾಡಿದರು. ಈ ಪ್ರಾಣಘಾತುಕನ ವಿಚಾರಣೆ ನಡೆಯುತ್ತಿದೆ. ಈ ಕೆಲಸದ ಭೀತಿಗೆ ಸಾವಿರಾರು ಜನರು ತಮ್ಮ ಮಕ್ಕಳಿಗೆ ಇಟ್ಟಿದ್ದ ಒಡವೆಗಳನ್ನು ತೆಗೆದುಬಿಟ್ಟರು.—ಈ ಊರು ಹಲಸೂರು ಪೇಟೆ ಬಳಿ ಸುಬೇದಾರನ ಭಾವಿಗೆ ನೀರಿಗೆ ಹೋಗುವ ರಸ್ತೆಗೆ ಅಡ್ಡವಾಗಿ ಮುಸಲ್ಮಾನರ ಗೋರಿಗೆ ಜಾಗ ಕಟ್ಟಿದ್ದಾರೆ. ಮ್ಯುನಿಸಿಪಲ್ ಪ್ರಸಿಡೆಂಟರ ವಿಚಾರಣೆಯು ಆಯ್ತು. ಕಿತ್ತುಹಾಕಲಿಲ್ಲ. ಅವರು ನಿರ್ಭಯದಿಂದ ಅದಕ್ಕೆ ಸ್ವಲ್ಪ ಎದುರು ಪಾರ್ಶ್ವದಲ್ಲಿ ಮತ್ತೊಂದು ಗೋರಿಗೆ ಅಸ್ತಿಭಾರ ಕಟ್ಟಿದ್ದಾರೆ. ಹೆಂಗಸರು ನೀರಿಗೆ ಹೋಗುವದಕ್ಕೆ ತುಂಬಾ ಮುಷ್ಕಿಲ್ ಆಗಿದೆ. ಬಂಡಿಗಳು ಹೋಗುವದು ತಪ್ಪೇ ಹೋಯಿತು. ಇಲ್ಲಿ ಹಿಂದೂ ಮುಸಲ್ಮಾನರ ಮೆರವಣಿಗೆಗಳಲ್ಲಿ ಮಸೀದಿ ಗೋರಿಗಳ ಮುಂದೆ ಹಿಂದುಗಳು ಬಾಜಾಬಜಂತ್ರಿ ನಿಲ್ಲಿಸುತ್ತಾರೆ. ದೇವಸ್ಥಾನಗಳ ಮುಂದೆ ಮುಸಲ್ಮಾನ್ ಬಾಜಾಬಜಂತ್ರಿ ನಿಲ್ಲಿಸುವದಿಲ್ಲ. ಇದಕ್ಕೆ ಕಾರಣವೇನೋ ತಿಳಿಯದು.—ಈಗ ಮೂರು ದಿವಸಕ್ಕೆ ಮುಂಚೆ 18 ವರುಷ ಕಠಿಣ ಶಿಕ್ಷೆಯಲ್ಲಿ ಸಜಾ ಅನುಭವಿಸಿ ಜೈಲಿನಿಂದ ತಪ್ಪಿಸಿಕೊಂಡು ಬಂದಿರುವವನು ಡಿಟೆಕ್ಟಿವ್ ಪೋಲೀಸಿನವರಿಗೆ ಸಿಕ್ಕಿದನು. ಪೋಲೀಸಿನವರು ಅವನನ್ನು ಹಿಡಿಯುವದಕ್ಕೆ ಹೋರಾಡುತ್ತಿರುವಾಗ ಕಳ್ಳನು ತನ್ನ ಸೊಂಟದಲ್ಲಿದ್ದ ಚಾಕನ್ನು ತೆಗೆದು ಒಬ್ಬ ಪೋಲೀಸಿನವನನ್ನು ತುಂಬಾ ಘಾಯಪಡಿಸಿ ಅವರಿಂದ ತಪ್ಪಿಸಿಕೊಂಡು ಪರಾರಿಯಾದನು. ಇನ್ನೂ ಪತ್ತೆ ಇಲ್ಲ. ಪೆಟ್ಟುತಿಂದ ಪೋಲೀಸಿನವನನ್ನು ಆಸ್ಪತ್ರೆಗೆ ಸಾಗಿಸಿದರು; ಉಳಿಯುವ ಹಾಗಿಲ್ಲವೆಂದು ಹೇಳುತ್ತಾರೆ.—ಇಲ್ಲಿ ಟ್ರಾಂವೆ ಹಾಕುವದಕ್ಕೆ ರೋಡು ವಿಸ್ತಾರಮಾಡುವದಕ್ಕೆ ಅಂಗಡಿ ಮನೆಗಳಿಗೆ ಗುರುತು ಹಾಕಿದ್ದಾರೆ. ಕೆಲವರದು ಪೂರಾ, ಮತ್ತೆ ಕೆಲವರದು ಅರ್ಧ, ಈ ಪ್ರಕಾರವಾಗಿ ಹೋಗುವಂತಿವೆ. ಅಂಗಡಿಗಳವರು ವ್ಯಥೆಪಡುತ್ತಾರೆ. ಇವಲ್ಲದೆ ಆದಾಯದ ಮೇಲೆ ತೆರಿಗೆಹಾಕುತ್ತಾರೆಂದು ಹೇಳುತ್ತಾರೆ.—ಇಲ್ಲಿ ಮಾರ್ಕೆಟ್ಟಿನಲ್ಲಿ ಕೊಳೆತ ಮಾವಿನ ಹಣ್ಣುಗಳನ್ನೂ, ವಾಟೆಗಳನ್ನೂ ಆಗಾಗ್ಗೆ ಸಾಗಿಸಿಬಿಡುವದಿಲ್ಲ. ಜನರು ಅದನ್ನು ತುಳಿದುಕೊಂಡೇ ಓಡ್ಯಾಡುತ್ತಾರೆ. ಅಲ್ಲಿ ಶೆಟ್ಟರು ಪದಾರ್ಥವನ್ನು ಮಹಾ ಚಮತ್ಕಾರದಿಂದ ಕೊಡುತ್ತಾರೆ. ಸೇರಿಗೆ ಅರಪಾವೇ ಕಮ್ಮಿಯಾಗಿರುತ್ತದೆ.—ಇಲ್ಲಿ ಗಂಧಿಗೆ ಅಂಗಡಿಗಳಲ್ಲಿ ತೊಲೆ, ಅರ್ಧತೊಲೆಗೆ ತೂಕದ ಬಟ್ಟುಗಳಿಲ್ಲ; ಗಾಜಿನ ಬಿಲ್ಲೆಗಳು ಹಾಕಿ ತೂಕಮಾಡುತ್ತಾರೆ. ಅವು ತೊಲೆಗೆ 1-2 ಆಣೆ ಕಮ್ಮಿಯಾಗಿರುತ್ತವೆ. ಈ ವಿಷಯಗಳನ್ನು ಸರ್ಕಾರದವರು ಮುದ್ದು ಪರಾಂಬರಿಸಿ ಪ್ರಜೆಗಳಿಗೆ ಅನುಕೂಲ ಮಾಡಿಕೊಡುವರೆಂದು ನಂಬಿ ಇದೇನೆ.—ಇಲ್ಲಿ ಕೋರ್ಟುಗಳು, ಮತ್ತು ನಾನಾ ವಿಧವಾದ ಆಫೀಸುಗಳಲ್ಲಿ ಅಧಿಕಾರ ನಡಿಸುವವರು ಲಂಚ ತೆಗೆದುಕೊಳ್ಳದೆ ನಿಸ್ಪೃಹರಾಗಿ ಯಾವಾಗ್ಗೆ ನಡೆಯುವರೋ ತಿಳಿಯಲಿಲ್ಲ. ಆ ಪೈಕಿ ಪೋಲೀಸು ಇಲಾಖೆಯಲ್ಲಿ ಲಂಚ ಕೈಸೇರುವದು ಅಷ್ಟೇನೂ ಅಪರೂಪವಾಗಿಲ್ಲ.—ಪರಸ್ಥಳದವರು ಕೋರ್ಟು ಕೆಲಸಕ್ಕಾಗಿ 11 ಘಂಟೆಗೆ ಸರಿಯಾಗಿ ಬೆಂಗಳೂರು ತಲಪುವಂತೆ ಗುಂತಕಲ್, ತುಮಕೂರು, ಮೈಸೂರು ಇಲ್ಲಿನ ರೈಲ್ ಗಾಡಿಗಳು ಬಂದರೆ ಕೋರ್ಟು ಕೆಲಸಕ್ಕಾಗಿ ಬರುವವರಿಗೆ ತುಂಬಾ ಅನುಕೂಲವಾದೀತು.

ವ್ಯಾಪಾರಿಗಳಿಗೆ ವಿಶೇಷ ಸೂಚನೆ.

ಸೋಲಾಪುರದ ಚೆಕ್ಕುಗಳು—ಶೀರೆಗಳು, ಖಣಗಳು.

ಹೊಸ ನಮೂನೆಯ ತರತರವಾದ ಚೆಕ್ಕುಗಳು, ಶೀರೆಗಳು, ಖಣಗಳು, ಕಿರಿಗೆಗಳು, ಚಿಲ್ಲರೆಯಾಗಿಯೂ ಬೇಲುಗಳಲ್ಲಿಯೂ ಸುಲಭ ಕ್ರಯಕ್ಕೆ ನಮ್ಮಲ್ಲಿ ದೊರೆಯುವವು. ಹಣ ಮುಂದಾಗಿ ಕಳುಹಿಸಿ ನಾಲ್ಕಾರು ತಿಂಗಳು ಕಾದು ಕಾದು ಕೋರಿದ ನಮೂನೆಗಳು ಬಾರದೆ ನಷ್ಟಪಡಬೇಕಾದ ಅವಶ್ಯಕವಿಲ್ಲ. ಸರಕುಗಳ ಮೇಲಿನ ನಂಬರುಗಳನ್ನು ತಿಳಿಸಿ ಬೇಕಾದಷ್ಟು ತರಿಸಿಕೊಳ್ಳಬಹುದು. ಸೋಲಾಪುರಕ್ಕಿಂತ ನಮ್ಮಲ್ಲಿಯೇ ಅನುಕೂಲ ಹೆಚ್ಚಾಗಿರುವುದರಿಂದ ಸ್ಥಳದ ಮತ್ತು ಪರಸ್ಥಳದ ವರ್ತಕರನೇಕರು ನಮ್ಮ ಮೂಲಕವೇ ತರಿಸಿ ಲಾಭವನ್ನು ಹೊಂದುತ್ತಿರುವರು. [28-24]

ಹೆಚ್ಚು ವಿಷಯಕ್ಕೆ ಕಾಗದ ಬರೆದು ತಿಳಿದುಕೊಳ್ಳಬಹುದು.

ಇಂಪಿರಿಯಲ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್,

159, ಕಿಲಾರಿ ರೋಡ್ (ಕುಂಚಿಗರ ಪೇಟೆ), ಬೆಂಗಳೂರು ಸಿಟಿ.

ನಿನಗೆ ಮೈ ಸ್ವಸ್ಥವಿಲ್ಲವೋ?

ನಿನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ, ನಿನಗೆ ಯಾವ ನೋವೇ ಉಂಟಾಗಿರಲಿ—"ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತಿದೆಯೇ?" ಎಂದು ನಿನ್ನನ್ನು ನೀನೇ ಕೇಳಿಕೋ; ಹಾಗೆ ಆಗದಿದ್ದರೆ ಡೋಯನ್‌ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ. ಮಾರನೇ ದಿನ ಬೆಳಿಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನಿನಗೆ ಮೈ ಸ್ವಸ್ಥವಾಗುವುದು.



(೧೨ ಆಣೆ ಬುಡ್ಡಿ ಪರಿಮಾಣ)

ಮಲಬಂಧನೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ ಪರಿಣಮಿಸುವುದು. ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲಕಾರಣವಾಗಿರುವುದು. ಮಲಬಂಧದಿಂದ ರೋಗಗಳೇಕೆ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು. ಆ ರೋಗಗಳಾವುವೆಂದರೆ:—ಪಿತ್ತಕೋಶ ರೋಗ; ಪಿತ್ತ; ಪಿತ್ತಜ್ವರ; ಅಜೀರ್ಣ; ಅಗ್ನಿಮಾಂದ್ಯ; ಗಾಬರಿ; ಅಶಕ್ತಿ; ಎದೆಯು ತಲ್ಲಣಿಸುವುದು; ತಲೆತಿರುಗುವುದು; ತಲೆನೋವು; ಹೊಟ್ಟೆಯುಬ್ಬರ; ಹುಳಿತೇಗಿನ ಹೊಟ್ಟೆನೋವು; ಹೆಂಗಸರ ವ್ಯಾಧಿಗಳು; ಇವೇ ಮೊದಲಾದವು. ಹೀಗಿಂಪೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು.

ಡೋಯನ್‌ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು. ಗಂಡಸರಿಗಾಗಲಿ ಹೆಂಗಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ ಕೆಟ್ಟಲವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ಶುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇಗ ನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು. [181-44]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ. ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು. ಔಷಧಗಳನ್ನು ಮಾರುವವರ ಬಳಿಯೆಲ್ಲಾ ದೊರೆಯುವುವು; ಅಥವಾ ಡೋಯನ್, ಪಿ. ಓ. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು.

S U. N. & Co.,

BENARES CITY, U. P.

ಸೊಗಸಾದ ಸರಕುಗಳು !!

ದೊಡ್ಡ ಕಂಪೆನಿ !

ಈ ನಮ್ಮ ಕಂಪೆನಿಯಲ್ಲಿ ನೆಯದು ತಯಾರಿಸುವ ಉತ್ತಮವಾದ ಬನಾರಸ್ ರೇಷ್ಮೆ ಜರಿ ಶೀರೆಗಳು, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ್ಟ, ಮಗುಟ, ಜಗನ್ನಾಥ ಜಾಗಟೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಕ್ಯಾಟಲಾಗ್ 1 ನ್ನು ಮತ್ತು 2 ವಿಶ್ವೇಶ್ವರ ಪಠಗಳನ್ನು ಇನಾಮಾಗಿ ಕಳುಹಿಸಲಾದೀತು. [69-17]

ಎಸ್. ಯು. ಎನ್. ಮತ್ತು ಕಂಪೆನಿ, ಕಾಶಿ.

ಶ್ರೇಷ್ಠವಾದ ವಾಚ್ ! ನೂತನವಾದ ವಾಚ್ ! ನಾಜೂಕಾದ ವಾಚ್ !

ಸ್ಟ್ರಾಂಗ್ ಪಾಕೆಟ್ ಲೀವರ್ ವಾಚ್.

ಇದರ ಕ್ರಯ 7 ಬಹುಮಾನಗಳ ಸಮೇತ ರೂ. 3–8–0 ಮಾತ್ರ.

ಏಳು ವರ್ಷಗಳ ಖಾತ್ರಿಯಾದ ಗ್ಯಾರಂಟಿ.



ಘನವಂತರೇ,

ಈ ನೂತನ ನಮೂನೆ ವಾಚ್ ಈಗ ತಾನೇ ಬಂದಿರುತ್ತೆ. ಪ್ರಪಂಚದಲ್ಲೆಲ್ಲಾ ಹೆಸರುವಾಸಿಯಾದ ಮತ್ತು ಶ್ರೇಷ್ಠವಾದ ಲೀವರ್ ಕೆಲಸದಿಂದಲೂ, ಬಲಿಷ್ಠವಾದ ಮತ್ತು ನಾಜೂಕಾದ ಯಂತ್ರ ಸಾಮಾನುಗಳಿಂದಲೂ ತಯಾರಾಗಿ ಬಂದಿರುತ್ತೆ. ಈಗ ತಾನೆ ಹೊಸದಾಗಿ ನಾವು ಪ್ರತ್ಯೇಕವಾಗಿ ತರಿಸಿರುತ್ತೇವೆ. ಗೌರ್ನಮೆಂಟು ಟೈಂಗೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದದ್ದು. ನಂಬಿಕೆಯಾಗಿ ದೀರ್ಘಕಾಲ ಅನೇಕ ವರ್ಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು. ಬಹು ರಮಣೀಯವಾದ ವಾಚ್. ಬರೀ ವಸ್ತುಗಳಿಂದಲೇನು ? ಪರಂಪರೆ ಬಾಳಿಕೆ ಬರುವ ವಾಚ್ ಇದೇ. ಇದರ 7 ಬಹುಮಾನಗಳ ತಪಸೀಲ್:—(1) ಸುಂದರವಾದ ವಾಚ್ ಸರಪಣಿ, (2) ದಿಕ್ಕುಗಳನ್ನು ತೋರಿಸುವ ಉತ್ತರಮುಖಿ, (3) ವಾಚ್‌ಗೆ ಧೂಳು ಸೇರದಂತೆ ಭದ್ರಪಡಿಸುವ ತೊಗಲಿನ ಚೀಲ, (4) ಕುತ್ತಿಗೆಗೆ ವಾಚ್ ಸಂಗಡ ಧರಿಸಿಕೊಳ್ಳುವ ರೇಷ್ಮೆ ಧಾರ, (5) ವಾಚ್ ಪೆಟ್ಟಿಗೆ (ಬಹು ಸುಂದರವಾದದ್ದು), (6) ಪರಿಮಳವುಳ್ಳ ಸುವಾಸನೆ ಶೀಸೆ, (7) ಕರವಸ್ತ್ರ.

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.— [117-6]

ಟಿ. ಸೀತಾರಾಮ ಮೊದಲಿಯಾರ್, ನಂ. 3, ಕಂದಪ್ಪ ಮೊದಲಿ ಬೀದಿ, ತಿರುವಲ್ಲಿಕೇಣಿ, ಮದರಾಸು.

ಡೋಂಗರೆ

ಇವರ ಬಾಲಾಮೃತ

[150-51]

ಸೇವನದಿಂದ ಹುಡುಗರು ಸಶಕ್ತರೂ ನಿರೋಗಿಗಳೂ ಆಗಿ ಅವರ ಭಾರವು ಬೆಳೆಯುತ್ತದೆ. ಒಂದು ಬಾಟ್ಲಿಗೆ ೧೦ ಆಣೆ. ಟಪಾಲ್ ಖರ್ಚು ೪ ಆಣೆ.

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಾಯಿ ಇವರಲ್ಲೂ ಮತ್ತು ಎಸ್. ವೈದ್ಯ ಅಂಡ್ ಕೊ, ಪಾರ್ಕ್ ಟವರ್, ಮದರಾಸು ಇವರಲ್ಲೂ ದೊರೆಯುವುದು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂಧುಗಳ ನೋವು, ಮೈ ಕಾಲು ಹೊಡೆತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ವಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಟ್ಟುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—220 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ; 6 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪೀ ವರೆಗೆ ಪೋಸ್ಟೇಜು 4 ಆಣೆ. [179-44]

೨. ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈಮಾರಿಕೆಂದು ತೋರಿದಾಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರಿಸಿಕೆ, ಮೂತ್ರವು ಕಟ್ಟಿದರೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿ ! ಒಂದೇ ಒಂದು ಬುಡ್ಡಿಯು ನಿಮ್ಮಲ್ಲಿರಲಿ ! ವೈದ್ಯೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುವುದು. ಬೆಲೆ ರೂ. 1; ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

Jain's Best Ointment.

ಜೈನ್‌ರವರ ಉತ್ತಮೋತ್ತಮ ಆಯಿಂಟ್‌ಮೆಂಟು.

ಇದು ವೈದ್ಯಶಾಸ್ತ್ರ ಪ್ರಕಾರ ತಯಾರಾದ ಉತ್ತಮವಾದ ತೈಲವು. ಇದನ್ನು ಹಚ್ಚಿದರೆ ಬಹಳ ದಿನಗಳಿಂದಲೂ ಇರತಕ್ಕ ಪಡೆ, ಕೆಂಪು, ಕಪ್ಪು, ತುರಿ, ಹುಳುಕಡ್ಡಿ, ನಡುವಿನ ಕೆರತ, ಎಲ್ಲಾ ತರದ ರಣಗಳು, ಹುಣ್ಣುಗಳು ಬಹು ವೇಗವಾಗಿ ಬೆಂಕಿಯಲ್ಲಿ ಬಿದ್ದ ಹತ್ತಿಯಂತೆ ಧ್ವಂಸವಾಗಿ ಮಾಯವಾಗುತ್ತವೆ. ಕತ್ತಿ, ಚಾಕು ಮೊದಲಾದ ಆಯುಧಗಳಿಂದ ಉಂಟಾಗುವ ಗಾಯಗಳಿಗೆ ಪ್ಲಾಸ್ಟರಿಗೆ ಬದಲಾಗಿ ಈ ತೈಲವನ್ನೇ ಉಪಯೋಗಿಸಬಹುದು. ಇದನ್ನು ಗೋಕಾಯಿಗಳ ಹುಣ್ಣುಗಳಿಗೂ, ಕುದುರೆ, ನಾಯಿ ಮೊದಲಾದ ಪ್ರಾಣಿಗಳ ಗಾಯಗಳಿಗೂ ಲಕ್ಷಣೆಯಂಥಾ ಔಷಧ. ಈ ಔಷಧವನ್ನು ಕಂಡುಹಿಡಿದು ತಯಾರ್ಮಾಡುವುದಕ್ಕೆ ಬಹಳ ಶ್ರಮವನ್ನೂ, ಕಾಲವನ್ನೂ, ಹಣವನ್ನೂ ಖರ್ಚುಮಾಡಿರುತ್ತೇವೆ. ಈ ಆಯಿಂಟ್‌ಮೆಂಟಿನಿಂದ ಸಾವಿರಾರು ಜನರಿಗೆ ಗುಣವಾಗಿರುತ್ತದೆ. ನಕ್ಕಲ್ ತೈಲಗಳನ್ನು ನೋಡಿ ಮೋಸಹೋಗಬೇಡಿ. ನಮ್ಮ ಗುರುತಿರುವದನ್ನು ನೋಡಿ ಕೊಂಡುಕೊಳ್ಳಿ. ಔಷಧದ ಕೂಡ ಅನುಪಾನ ಪತ್ರಿಕೆ ಉಂಟು. ಕ್ರಯ 1 ಬಾಟ್ಲಿಗೆ ರೂ. 1; ಸಣ್ಣ ಬಾಟ್ಲಿಗೆ 10 ಆಣೆ. ವಿ. ಪಿ. ಛಾರ್ಜು ಬೇರೆ. ಗುಲಾಬ್‌ಸುಂದರ ಪ್ರಕಾಶ ಕೂದಲೆಣ್ಣೆ—ಮೆದುಳಿನ ಕೆಲಸದವರಿಗೂ ಇತರರಿಗೂ ಬಹಳ ಗುಣಕಾರಿ. ಕ್ರಯ ಬಾಟ್ಲಿಗೆ ರೂ. 1-6-0. ಇದನ್ನು ಒಂದು ಸಲ ತರಿಸಿ ಪರೀಕ್ಷಿಸಿ. [25-24]

ವಿಳಾಸ—ಜಿ. ಗುಲಾಬ್ ಚಂದ್ ಪೌವಾಳ್,

60 ನೈನಪ್ಪನಾಯಕ್ ಬೀದಿ, ಪಾರ್ಕ್ ಟೌನ್, ಮದರಾಸ್.

ಎಲ್ಲರಿಗೂ ಬೇಕು.

ಬಾಲಸಂಜೀವಿನಿ—ಮಕ್ಕಳಿಗೆ ಒಂದು ಮಾತ್ರೆಯನ್ನು ಎದೆಹಾಲಿನಲ್ಲಿ ಹಾಕಿದರೆ 1-2 ವೇಳೆ ಮಾತ್ರ ಸುಖವಾಗಿ ಭೇದಿ ಮಾಡಿಸಿ ಪಕ್ಕೆಗಳ ಸೆಳತ (ಯಕೃತ್), ಜ್ವರ, ಹೊಟ್ಟೆಯುಬ್ಬರ, ಶೀತವಾಯು, ಕೆಮ್ಮು, ನೆಗಡಿ, ಮುಕ್ಕುವಿಕೆ ಮುಂತಾದ್ದನ್ನು ಆಶ್ಚರ್ಯವಾಗುವಂತೆ ತಕ್ಷಣ ಗುಣಮಾಡುತ್ತದೆ. ಬೆಲೆ 50 ಮಾತ್ರೆ 4 ಆಣೆ.

ಅಮೋಘಿನಿ—ಅಮೋಘವಾದ ಸುವಾಸನೆಯಿಂದ ಕೂಡಿದ ಈ ಮಾತ್ರೆಗಳು ಸಂಗೀತಗಾರರಿಗೆ ಅಮೃತಪ್ರಾಯವಾದುವು. ಶರೀರದ ಆಯಾಸ, ಬಾಯಾರಿಕೆ, ವಿಧವಿಧವಾದ ಕೆಮ್ಮು, ಉಬ್ಬಸಗಳನ್ನು ತಕ್ಷಣ ಪರಿಹರಿಸಿ ರಕ್ತವೃದ್ಧಿಯನ್ನೂ ಮನಸ್ಸಿಗೆ ಅಪೂರ್ವವಾದ ಆನಂದವನ್ನೂ ಉಂಟುಮಾಡುತ್ತದೆ. ಬೆಲೆ 150 ಮಾತ್ರೆ 4 ಆಣೆ.

ನಾರಿಕೇಳಾಂಜನ—ಕಣ್ಣಿನೊಳಗೆ ಹಾಕಲು ಅತ್ಯುತ್ತಮವಾದ, ಅತಿ ಸೌಮ್ಯವಾದ, ಇತರ ಎಲ್ಲಾ ನಾರಿಕೇಳಾಂಜನಗಳನ್ನು ಮೀರಿಸಿರುವ ಪೂರ್ವಿಕರಿಂದ ರಹಸ್ಯವಾಗಿ ಉಪದೇಶಿಸಲ್ಪಟ್ಟ ಸಿದ್ಧಾಮೃತ. ಬೆಲೆ 4 ಆಣೆ.

ಶ್ರೀಕರಕಸ್ತೂರಿ ಮಾತ್ರೆ—250 ಮಾತ್ರೆ 4 ಆಣೆ.

ಪ್ರತಿ ಔಷಧವೂ ವಿಶದವಾದ ಅನುಪಾನಪತ್ರದೊಡನೆ ಕೂಡಿರುವುದು. ಮೇಲ್ಕಂಡ ಔಷಧಗಳನ್ನು ಪ್ರತ್ಯೇಕ ಅಥವಾ ಒಟ್ಟಿಗೆ ಐದು ಸೀಸೆ ತರಿಸಿದರೆ ಒಂದು ಇನಾಮು. ವಿ. ಪಿ. ಛಾರ್ಜು ಪ್ರತ್ಯೇಕ. [220-37]

ವಿಳಾಸ—ಬಿ. ವಿ. ಪಂಡಿತ್, ಸದ್ವೈದ್ಯಶಾಲಾ, ನಂಜನಗೂಡು.

ಅಮೃತಾಂಜನ ರಿಜಿಸ್ಟರ್ಡ್

ಇದು ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು. ಇದರ ಉಪಯೋಗದಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗವಾಯು, ಉಳುಕು, ಕೆಮ್ಮು, ಸೊಂಟದನೋವು, ಶೀತ, ಚರ್ಮ ವ್ಯಾಧಿ, ಹಲ್ಲುನೋವು, ಚೇಳು ಕಡಿತ ಮೊದಲಾದ ಎಲ್ಲಾ ತರದ ನೋವುಗಳು ಜಾತ್ರಿಯಾಗಿ ನಿಲ್ಲುವವು. ಕಕಾರಿ ಔಷಧಗಳನ್ನು ಪಡೆಕೊಳ್ಳಬೇಡಿರಿ. ಈ ನಮ್ಮ ಲೋಕಪ್ರಖ್ಯಾತವಾದ ಅಮೃತಾಂಜನವನ್ನು ನಮ್ಮ ರಿಜಿಸ್ಟ್ರಿಯಾದ ಮತ್ತು ಹಲವು ಭಾಷೆಗಳುಳ್ಳ ಸುಂದರವಾದ ಕರಡಿಗೆಯಲ್ಲಿ ಪ್ಯಾಕ್‌ಮಾಡಿರುತ್ತೇವೆ. ಕರಡಿಗೆ ಇಲ್ಲದ ಬಾಟ್ಲಿಗಳನ್ನು ಪಡೆಕೊಳ್ಳಬೇಡಿರಿ. ಬಾಟ್ಲಿ ಒಂದರ ಕಿಮ್ಮತ್ತು 0-8-0. ಡಜನ್ 1 ಕ್ಕೆ 5-4-0. ವಿ. ಪಿ. ಪ್ರತ್ಯೇಕ. ಗಜಕರ್ಣದ ಮುಲಾಮು 0-6-0. ದಂತಮಂಜನ 0-2-0. ಮೋಹಿನಿ ತೈಲ 0-12-0. ಬಜ್ಜಿ ಮುಲಾಮು 0-3-0. ಜುಲಾಬು ಮಾತ್ರೆ 0-8-0. ಸುಂದರಿ ಮುಲಾಮು 0-8-0. ಕ್ಯಾಟಲಾಗಿಗೆ ಬರೆಯಿರಿ. [52-18]

ನಮ್ಮಲ್ಲಿ ತಯಾರಾಗುವ ಎಲ್ಲಾ ತರದ ಔಷಧಗಳು ಮಂಗಳೂರಿನಲ್ಲಿ ದಿ ಉಲ್ಲನ್ ಮಾರ್ಟ್ ಇವರಲ್ಲಿ ಸಿಕ್ಕುತ್ತವೆ.

ಅಮೃತಾಂಜನ್ ಡಿಪೋ,

ಫೋರ್ಟು. ಮುಂಬಯಿ, ಮತ್ತು ೯ ಜಹಂಗೀರ್ ಸ್ಟ್ರೀಟ್, ಮದ್ರಾಸು.

ಈಗ ಸಾಲಾಮಿಸ್ರಿಯ ಧಾರಣೆಯು ಜಾಸ್ತಿಯಾಗಿರುವದರಿಂದ 1-8-0 ಕ್ರಯ ಇದ್ದದ್ದನ್ನು ರೂ. 2 ಮಾಡಿರುತ್ತೇವೆ.

500 ರೂಪಾಯಿಗಳು ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

ಈ ಮುರಬ್ಬಾವು "ಪಂಜಾಬ್ ಸಾಲಾಮಿಸ್ರಿ" ಅಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡಲ್ಪಡುವುದು.

ಕ್ರಯ 2 ರೂಪಾಯಿ.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡವರಿಗೆ ಹೃದಯ ಕೋಶವು ಬಲಹೀನವಾಗಿ ನಾನಾ ವ್ಯಾಧಿಗಳಿಂದ ಮರಣ ಪರಿಯಂತರವೂ ದುಃಖಪಡುವರು. ಈ "ಪಂಜಾಬ್ ಸಾಲಾಮಿಸ್ರೀ ಮುರಬ್ಬಾ" ದಿನ ಸೇವನೆಯಿಂದ ಕೈ, ಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ತಲೆಯ ನೋವೂ, ಇವುಗಳೆಲ್ಲವೂ ಪಂಜಾಬ್ ಸಾಲಾಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು, ಮೆದುಳಿಗೆ ಬಲವನ್ನುಂಟುಮಾಡುವುದು, ಧಾತುವನ್ನು ಕೇಶರಿಸುವುದು, ಸೊಂಟದ ನೋವು ಸ್ವಲ್ಪ ಮಾತ್ರವೂ ಇರಲಾರದು. ಈ ಪಂಜಾಬ್ ಸಾಲಾಮಿಸ್ರಿಯ ಮುರಬ್ಬಾಕ್ಕೆ ತಾಂಬ್ರದ ಮತ್ತು ಭಂಗಾರದ ಭಸ್ಮವು ಎಷ್ಟು ಮಾತ್ರವೂ ಸಮಾನವಾಗಲಾರದು. ಹೊಟ್ಟೆಯಲ್ಲಿರುವ ಜ್ವರದ ಗಡ್ಡೆಯನ್ನು ನಾಶಪಡಿಸುವುದು. ಶ್ವಾಸ ಕಾಸರೋಗಗಳನ್ನು ನಿರ್ಮೂಲಪಡಿಸುವುದು. ಕಾಬೂಲ್, ಕಾಂದಹಾರ್ ದೇಶಗಳ ಜನರು ಸಾಲಾಮಿಸ್ರಿಯ ಹಣ್ಣನ್ನು ಬಹಳವಾಗಿ ತಿನ್ನುವರು. ಆದ್ದರಿಂದ ಶಕ್ತಿಯಲ್ಲಿ ಬಹಳ ಗಟ್ಟಿಗರು. ಡಬ್ಬಾ 1 ಕ್ಕೆ ರೂ. 2-0-0. ಟಪಾಲ್ ಖರ್ಚು ಅಲಾಯದ. [133-4]

ಅನುಪಾನಪತ್ರಿಕೆ ಔಷಧದ ಸಂಗಡ. ಕ್ಯಾಟ್ಲಾಗ್ ಅಪೇಕ್ಷಿಸುವವರು ½ ಕಾಸಿನ ಸ್ಟ್ಯಾಂಪು ಕಳಿಸಿ.

ಏಜಂಟರು—ಡಿ. ಸೈಯದ್ ಉಸ್ಮಾನ್ ಅಂಡ್ ಕೊ, ದೊಡ್ಡಪೇಟೆ, ಬೆಂಗಳೂರು ಸಿಟಿ.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು, 5 ಹಾಜಿ ಸಾಹೇಬ್ ಮಹಡಿ, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

Mellin's Food

ಮೆಲಿನ್ಸ್ ಆಹಾರವು

ಕೈ ಸೋಕದೆ ಮಾಡಿದ

ಶಿಶುಗಳಿಗೂ ರೋಗಿಷ್ಠರಿಗೂ

ಮೆಲಿನ್ಸ್ ಆಹಾರದ ಬಿಸ್ಕತ್ತುಗಳು [4-28]

ಬೆಳೆಯುವ ಮಕ್ಕಳಿಗೆ ಎದೆಹಾಲು ತಪ್ಪುವ ಕಾಲದಲ್ಲಿ ಇದು ಶ್ರೇಷ್ಠವಾದ ಆಹಾರ; ಮತ್ತು ದೊಡ್ಡವರಿಗೆ ದೇಹ ಪುಷ್ಟಿಯನ್ನೂ ಬಲವನ್ನೂ ಕೊಡತಕ್ಕದ್ದು.

Messrs. OAKES & Company, Mount Road, Madras.

ವಿಳಾಸ-ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.



ಲಿಪ್ಟನ್ಸ್ ಓರಿಯೆಂಟಲ್ ಬಾಮ್ ಎಂಬುದು.

ಸಳೇ ನೋವಿದ್ದರೂ, ಊತ ಇದ್ದರೂ, ಯಾವತರದ ಕಷ್ಟವಿದ್ದರೂ ಸ್ವಸ್ಥಮಾಡಿ, ಬಹುಗಡೆಯ ಆಶೀರ್ವಾದಕೊಡುತ್ತದೆ.

ಸಟ್ಟ್ಯರ್‌ಕೋಲ್ಡ್ ಫೀಲ್ಡಿನ ಜೆ. ಮ್ಯಾಜೆಸ್ ಬರೆಯುವದು:—"ನನ್ನ ಹತ್ರವಿದ್ದ ಲಿಪ್ಟನ್ಸ್ ಓರಿಯಂಟಲ್ ಬಾಂ ಎಂಬುದರ 1 ಸೀಸೆಯನ್ನು ನನ್ನ ಕಾಲಿಗೂ, ಮೊಣಕಾಲಿಗೂ ಹಚ್ಚಿದ 10 ನಿಮಿಷಗಳಲ್ಲಿ ನೋವು ಬಿಟ್ಟಿತು. ಮತ್ತೆರಡಾವರ್ತಿ ಉಪಯೋಗಿಸಿದೆನು—ನನಗಿದ್ದ ನೋವು ತಿರುಗಿ ಬರಲೇ ಇಲ್ಲ. ಆ ತೈಲದಲ್ಲಿ ಸ್ವಲ್ಪ ಅಂಗೈಗೆ ಹಾಕಿಕೊಂಡು ನನ್ನ ಮಗನಗಂಟ್ಲು ನೋವಿಗೆ ಹಚ್ಚಿದೆನು. ಅವನಿಗೆ ಸ್ವಸ್ಥವಾಯಿತು. ಒಬ್ಬ ಹೆಂಗಸಿರಳು! ಅವಳಿಗೆ 1 ವರುಷದವರಿಗೆ ಜ್ವರವಾಗಿತ್ತು. ಅದರಿಂದ ಅವಳು ಅಧಿಕ ನೋವನ್ನು ಅನುಭವಿಸಿದಳು. ಲಿಪ್ಟನ್ಸ್ ಓರಿಯಂಟಲ್ ಬಾಂ ಎಂಬುದನ್ನು ಉಪಯೋಗಿಸಲು ಹೇಳಿದೆನು. ನನ್ನಲ್ಲಿದ್ದ 1 ಸೀಸೆಯ ತೈಲವನ್ನು ಮತ್ತು ಆಕೆಗೆ ಕೊಟ್ಟೆನು. ಅದರಿಂದಲೇ ಆಕೆಗೆ ಕ್ಷೇಮವಾಯಿತು."

ಸೀಸೆ 1ಕ್ಕೆ 1 ರೂ. ಮೇಲಿಗೆ ಔಷಧಗಾರರ್ಲ್ಲರಲ್ಲಿ ಯೂ ಸಿಗುತ್ತೆ. 101-10

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

19—6—1914 ರಿಂದ 26—6—1914 ರ ವರೆಗೆ

ಸ್ಥಳ		ಪ್ಲೇಗ್		ಕಾಲರಾ	
		ತಗಲಿದ್ದು.	ಸತ್ತದ್ದು.	ತಗಲಿದ್ದು.	ಸತ್ತದ್ದು.
ಬೆಂಗಳೂರು	ಪಟ್ಟಣ	0	0	0	0
ಮೈಸೂರು	,,	0	0	0	0
ಬೆಂಗಳೂರು ಡಿಸ್ಟ್ರಿಕ್ಟ್		0	0	0	0
ಮೈಸೂರು	,,	0	0	0	0
ಕೋಲಾರ್	,,	1	1	22	18
ಕೋಲಾರ್ ಚಿನ್ನದ ಗಣಿಗಳು		0	0	0	0
ತುಂಕೂರು ಡಿಸ್ಟ್ರಿಕ್ಟ್		0	0	28	14
ಹಾಸನ	,,	0	0	0	0
ಚಿತ್ರದುರ್ಗ	,,	0	0	0	0
ಕಡೂರ್	,,	13	7	0	0
ಶಿವಮೊಗ್ಗಾ	,,	1	1	0	0
	ಜುಮ್ಲಾ	15	9	50	32

ಶಾಲಿವಾಹನ ಶಕ ವರುಷಂಗಳು 1837 ನೇ ಆನಂದ ಸಂವತ್ಸರೇ ಉತ್ತರಾಯಣೇ ಗ್ರೀಷ್ಮಋತೌ ಆಷಾಢ ಬಹುಳ ತದಿಗೆ ಶುಕ್ರವಾರದಿಂದ ಆಷಾಢ ಬಹುಳ ನವಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ.

1914 ನೇ ಜುಲೈ.

ತಾ.	ವಾರ.	ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ	ಮಿಥುನ ಕಟಕ ಕೇದಿ
10	ಶುಕ್ರ ::	ತದಿಗೆ	29-35	ಧನಿಷ್ಠ	57-56	27
11	ಶನಿ	ಚೌತಿ	30-52	ಶತಭಿಷ	60-0	28
12	ಭಾನು §	ಪಂಚಮಿ	33-24	ಶತಭಿಷ	2-4	29
13	ಸೋಮ	ಷಷ್ಠಿ	36-57	ಪೂರ್ವಾ	6-46	30
14	ಮಂಗಳ †	ಸಪ್ತಮಿ	41-22	ಉ. ಭಾ	12-25	31
15	ಬುಧ ‡	ಅಷ್ಟಮಿ	46-25	ರೇವತಿ	18-42	32
16	ಗುರು *	ನವಮಿ	51-32	ಅಶ್ವಿನಿ	25-16	1

:: ಸಂಕಟಹರ ಚತುರ್ಥಿ. § ಮಳೆ ನಕ್ಷತ್ರ—ಪುನರ್ವಸು 3 ನೇ ಪಾದ. † ಮೇಲುಕೋಟೆಯಲ್ಲಿ ಕೃಷ್ಣರಾಜಮುಡಿ ಉತ್ಸವ. ‡ ಶ್ರೀಚಾಮುಂಡೇಶ್ವರೀ ವರ್ಧಂತ್ಯುತ್ಸವ. * ದಕ್ಷಿಣಾಯನಪುಣ್ಯಕಾಲ, ಮಳೆ ನಕ್ಷತ್ರ—ಪುನರ್ವಸು 4 ನೇ ಪಾದ.

Printed and Published by the Rev. H. Gulliford, Proprietor and Manager, Wesleyan Mission Press, Mysore. 9/7/1914.

REGISTERED
M. 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೮ ಮೈಸೂರು—ಸನ್ ೧೯೧೪ ನೇ ಇಸವಿ ಜೂಲೈ ತಾರೀಖು ೧೬ ನೇ ಗುರುವಾರ. ಸಂಚಿಕೆ ೨

ನೋಟೀಸು.

ಮೈಸೂರು ಬ್ಯಾಂಕ್, ಲಿಮಿಟೆಡ್.

ಸನ್ 1914 ನೇ ಜೂಲೈ ತಾ. 1 ರಿಂದ ಆಚೆಗೆ ಸೇವಿಂಗ್ಸ್ ಬ್ಯಾಂಕ್ ಲೇವಾದೇವಿಯನ್ನು ಹೊಸದಾಗಿ ಯಾರ ಹೆಸರಿನಲ್ಲೂ ಅಂಗೀಕರಿಸಿ ಪ್ರಾರಂಭಮಾಡುವುದಿಲ್ಲ; ಆದರೆ ಅದಕ್ಕೆ ಪ್ರತಿಯಾಗಿ ಡೈರೆಕ್ಟರುಗಳು ಶೇಕಡಾ ವರುಷಕ್ಕೆ 4 ರೂಪಾಯಿ ಬಡ್ಡಿಯುಳ್ಳ "ಪ್ರಾವಿಡೆನ್ಷಲ್ ಡಿಪಾಜಟ್" ಎಂಬ ಹೊಸ ತರಹಾ ಲೇವಾದೇವಿಯನ್ನು ಪ್ರಾರಂಭಮಾಡಬೇಕೆಂದು ಗೊತ್ತು ಮಾಡಿದಾರೆ.

ಈ "ಪ್ರಾವಿಡೆನ್ಷಲ್ ಡಿಪಾಜಟ್" ಎಂಬ ಖಾತೆಯ ನಿಬಂಧನೆಗಳೇನೆಂದರೆ:—

1. ಡಿಪಾಜಟ್‌ದಾರರು ತಿಂಗಳಿಗೆ 5 ರೂಪಾಯಿಗೆ ಕಮ್ಮಿ ಇಲ್ಲದೆ ಪಾವತಿ ಮಾಡಬೇಕು. ಇದಕ್ಕೆ ವರುಷಕ್ಕೆ ಶೇಕಡಾ 4 ರೂಪಾಯಿನಂತೆ ಚಕ್ರಬಡ್ಡಿಯನ್ನು ಆರು ತಿಂಗಳಿಗೊಂದಾವರ್ತಿ ಅಂದರೆ ಜೂನ್ ತಾರೀಖು 30 ಮತ್ತು ಡಿಸೆಂಬರ್ ತಾರೀಖು 31 ಕ್ಕೆ ಲೆಖ್ಖಾಚಾರಮಾಡಿ ಸೇರಿಸಲಾಗುತ್ತದೆ.

2. ಪ್ರತಿ ಅರ್ಧವರುಷಕ್ಕೂ ಬರುವ ಬಡ್ಡಿಯನ್ನು ಅಂದರೆ ಜೂನ್ ತಾ 30 ಮತ್ತು ಡಿಸೆಂಬರ್ ತಾ. 31 ಕ್ಕೆ ಆಗುವಷ್ಟು ಬಡ್ಡಿಯನ್ನು ಅಸಲ್ ಹಣಕ್ಕೆ ಸೇರಿಸಿ ಆದರ ಕೂಡ ಪಾವತಿ ಆಗುವಂತೆ ತೋರಿಸಲಾಗುತ್ತೆ. ಮತ್ತು ಫಿಕ್ಸೆಡ್ ಡಿಪಾಜಟ್ಟುಗಳ ಬಡ್ಡಿ ಪಾವತಿ ಆಗುವಂತೆ ಈ ಬಡ್ಡಿಯನ್ನು ಪಾವತಿ ಮಾಡುವುದಿಲ್ಲ.

3. ಡಿಪಾಜಟ್‌ದಾರರು ಆರು ತಿಂಗಳ ತನಕ ಡಿಪಾಜಟ್‌ದಾರರಾಗಿದ್ದು ಕೊಂಡೇ ಬಂದಿದ್ದಾಗ್ಯೂ ಅವರ ಡಿಪಾಜಟ್ ಹಣವು 30 ರೂಪಾಯಿ ಆಗದೆ ಹೋದರೆ ಆ ಷಣ್ಮಾಸದಲ್ಲಿ ಅಂಥಾ ಅಸಲ್‌ಹಣಕ್ಕೆ ಬಡ್ಡಿ ಕೊಡಲ್ಪಡುವುದಿಲ್ಲ; ಆದರೆ, ಅಸಲ್‌ಹಣವು 30 ರೂಪಾಯಿ ಅಥವಾ ಇದಕ್ಕಿಂತ ಹೆಚ್ಚಾಗಿರುವ ಸಂದರ್ಭಗಳಲ್ಲೆಲ್ಲಾ ಅಂಥ ಅಸಲ್‌ಹಣಕ್ಕೆ ಬಡ್ಡಿ ದಾಖಿಲ್ಮಾಡಲಾಗುತ್ತೆ.

4. ಡಿಪಾಜಟ್ಟುಗಳನ್ನು ವಾಪಸುಪಡೆಯಬೇಕಾದರೆ ಮೊದಲು 3 ತಿಂಗಳ ನೋಟೀಸ್ ಕೊಡಬೇಕು; ಆದರೆ ಆ ರೀತಿ ಬಂದ ನೋಟೀಸಿನ ತಾರೀಖಿನಿಂದ ಶೇಕಡಾ 3 ರಂತೆ ಬಡ್ಡಿ ಕೊಡಲಾಗುತ್ತೆ.

5. ಡಿಪಾಜಟ್‌ದಾರನು (ದಾರಳು) ಕಾಲವಾದ ಪಕ್ಷದಲ್ಲಿ ಡಿಪಾಜಟ್ಟನ್ನೂ ಬಡ್ಡಿಯನ್ನೂ ಫೂರ್ತಾ ಆತನ ಅಥವಾ ಆಕೆಯ ವಾರಸ್‌ದಾರರಿಗೆ ಪಾವತಿ ತಕ್ಷಣವೇ ಮಾಡಲಾಗುತ್ತೆ; ಇದಕ್ಕೆ ಸಾಮಾನ್ಯವಾಗಿ ಕೊಡಬೇಕಾದ ನೋಟೀಸ್ ಅಗತ್ಯವಿಲ್ಲ. ಹಾಗಿಲ್ಲದ ಪಕ್ಷದಲ್ಲಿ ಆ ಹಣವನ್ನೆಲ್ಲಾ ಬ್ಯಾಂಕಿನಲ್ಲೇ ಇಟ್ಟುಕೊಂಡು ಮೃತನ ಅಥವಾ ಮೃತಳ ವಾರಸ್‌ದಾರರಿಗೆ ಬಡ್ಡಿಯನ್ನು ಮೂರು ತಿಂಗಳಿಗೊಂದಾವರ್ತಿ ಅಪೇಕ್ಷಿಸಿದಾಗ್ಯೂ ಪಾವತಿ ಮಾಡುತ್ತಾರೆ. ಆದರೆ ಅಂಥಾ ವಾರಸ್‌ದಾರರ ಹೆಸರನ್ನು ಡಿಪಾಜಟ್‌ದಾರರು ಮೊದಲೇ ಬ್ಯಾಂಕಿನಿಂದ ಕೊಡೋಣಾಗುವ ಫಾರಮಿನಲ್ಲಿ ಬರೆದುಕೊಟ್ಟು, ಆ ಹೆಸರು ಬ್ಯಾಂಕಿನ ಪುಸ್ತಕಗಳಲ್ಲಿ ಕ್ರಮವಾಗಿ ದಾಖಿಲಾಗಿರಬೇಕು.

6. ಡಿಪಾಜಟ್‌ದಾರರು ತಮ್ಮ ಹಣವನ್ನು ಅಥವಾ ಅದರ ಒಂದು ಅಂಶವನ್ನು ಅದು ಸಂಪೂರ್ಣವಾಗುವುದಕ್ಕೆ ಮೊದಲೇ ವಾಪಸ್ ಪಡೆಯಬೇಕಾಗಿದ್ದಲ್ಲಿ ಅಂಥಾ ಹಣಕ್ಕೆ ಬ್ಯಾಂಕಿನ ಬ್ರಾಂಚು, ಅಥವಾ ಏಜನ್ಸಿಯಲ್ಲಿ ಆ ಸಮಯದಲ್ಲಿ ಜಾರಿಯಲ್ಲಿರುವ ಡಿಸ್ಕೌಂಟ್ ದರದಂತೆ ವಜಾ ಮಾಡಿಕೊಳ್ಳಲಾದೀತು. ಅಥವಾ ಅಂಥಾ ಡಿಪಾಜಟ್ಟಿನ ಮೇಲೆ ಸಾಧ್ಯವಾಗುವಷ್ಟು ಹಣವನ್ನು ಬ್ಯಾಂಕಿನ ಚಾಲ್ತಿ ಬಡ್ಡಿ ದರದ ಮೇಲೆ ಅಡ್ವಾನ್ಸು ಕೊಡಬಹುದು.

7. ಡಿಪಾಜಟ್‌ದಾರರಿಗೆ ಒಂದು ಪ್ಯಾಸ್ ಬುಕ್ಕು ಕೊಡಲೇ ಕೊಡಲಾಗುವುದು. ಪ್ರತ್ಯೇಕವಾದ ರಶೀತಿ ಕೊಡಲ್ಪಡುವುದಿಲ್ಲವಾದಕಾರಣ ಹಣಕಳುಹಿಸುವಾಗಲೆಲ್ಲಾ ಡಿಪಾಜಟ್‌ದಾರರು ತಮ್ಮ ಪ್ಯಾಸ್ ಬುಕ್ಕನ್ನು ಬ್ಯಾಂಕಿಗೆ ಹಾಜರು ಪಡಿಸಬೇಕು. ಅದರಲ್ಲೇ ಡಿಪಾಜಟ್ ಹಣಗಳನ್ನೆಲ್ಲಾ ಕ್ರಮವಾಗಿ ದಾಖಿಲ್ ಮಾಡಲಾಗುತ್ತೆ. ಇದಲ್ಲದೆ ಬಡ್ಡಿ ಲೆಖ್ಖಾಚಾರಮಾಡಿ ಸೇರಿಸುವುದಕ್ಕಾಗಿ ಪ್ರತಿ ಷಣ್ಮಾಸದಲ್ಲೂ ಅಂದರೆ ಜೂನ್ ತಾ. 30 ಕ್ಕೂ, ಡಿಸೆಂಬರ್ ತಾ. 31 ಕ್ಕೂ ಪ್ಯಾಸ್ ಬುಕ್ಕನ್ನು ಬ್ಯಾಂಕಿಗೆ ಕಳುಹಿಸಬೇಕಾಗುತ್ತದೆ.

8. ಹಣ ವಾಪಸ್ ಪಡೆಯ ಬಹುದಾದಾಗ ಪ್ಯಾಸ್ ಬುಕ್ಕನ್ನು ಬ್ಯಾಂಕಿಗೆ ಹಾಜರುಮಾಡುವುದೇ ಡಿಪಾಜಟ್‌ದಾರನ ಸರಿಯಾದ ಸಮ್ಮತಿ ಅಧಿಕಾರವೆಂದು ಎಣಿಸಲ್ಪಡುತ್ತದೆ.

9. ಈ ಡಿಪಾಜಟ್ಟುಗಳ ಕ್ರಮಗಳನ್ನು ಬದಲಾವಣೆಮಾಡುವ ಹಕ್ಕು ಬ್ಯಾಂಕು ವಹಿಸಿರುತ್ತದೆ. ಮತ್ತು ಕಾಗದದ ಮೂಲಕವೋ ಅಥವಾ ಬಹಿರಂಗವಾದ ಪ್ರಕಟನೆಯ ಮೂಲಕವೋ ಎರಡು ತಿಂಗಳ ನೋಟೀಸನ್ನು ಡಿಪಾಜಟ್‌ದಾರರಿಗೆ ಕೊಟ್ಟು ಡಿಪಾಜಟ್ಟುಗಳನ್ನು ವಾಪಸ್ ಪಾವತಿಮಾಡುವ ಅಧಿಕಾರವೂ ಬ್ಯಾಂಕಿಗೆ ಉಂಟು.

10. ಡಿಪಾಜಟ್‌ದಾರರು ತಮ್ಮ ಖುದ್ದು ಹಣಗಳನ್ನು ಬ್ಯಾಂಕಿನ ಯಾವ ಏಜನ್ಸಿಗಾಗಲಿ ಕಳುಹಿಸುವಂತೆ ಯಾವ ಖರ್ಚೂ ಇಲ್ಲದೆ ಯಾವ ಬ್ರಾಂಚಿಗಾಗಲಿ, ಏಜನ್ಸಿಗಾಗಲಿ ಪಾವತಿಮಾಡಬೇಕೆಂದು ಕಟ್ಟಬಹುದು.

ಡಬ್ಲ್ಯು ಸಿ. ರೋಸ್,

[150—3] ಮ್ಯಾನೇಜರ್.

ಟೆರೆಗೆ ಸಿದ್ಧವಾಗಿದೆ! ಕ್ರಯ 3 ಆಣೆಗಳು!!, 5 ಕ್ಕೆ 1 ಹೆಚ್ಚು!!!

1915 ನೇ ಮೈ|| ಲೋ|| ಸೆ|| ಕನ್ನಡ ಟೆಕ್ಸ್ಟ ಪ್ರಶ್ನೋತ್ತರ.

ಟೆಕ್ಸ್ಟ ನೋಟ್ಸ್ 6 ಆಣೆ. ವ್ಯಾಕರಣ ಪ್ರಶ್ನೋತ್ತರ (1891-1914) 5 ಆಣೆ. ವಿದ್ಯಾರ್ಥಿಗಳಿಗೆ ಅತ್ಯಂತೋಪಯುಕ್ತವಾದ ಎಗ್ಝಮಿನರ್ ಮಾಸಪುಸ್ತಕಕ್ಕೆ ಜುಲೈ ಆಖೈರಿನೊಳಗೆ ಚಂದಾದಾರರಾಗುವವರಿಗೆ ಮೇಲ್ಕಂಡ ಪ್ರಶ್ನೋತ್ತರವಾಗಲಿ, ಟೆ|| ನೋಟ್ಸಾಗಲಿ ಬಹುಮಾನ. ಚಂದಾ ರೂ. 1-4-0. ಕನ್ನಡ 2 ನೇ ರೀಡರಿನ ನೋಟ್ಸ್ 2 ಆಣೆ; 3 ನೆಯದು 1½ ಆಣೆ; 4 ನೆಯದು 1½ ಆಣೆ. ಕ್ಯಾಟ್ಲಾಗ್ ತರಿಸಿ ನೋಡಿ. ವಿಳಾಸ—ಸಿ. ಪುಟ್ಟಯ್ಯ, ಮ್ಯಾನೇಜರ್,

[154-2] ಎಗ್ಝಮಿನರ್ ಆಫೀಸ್, ಚಿಕ್ಕಬಳ್ಳಾಪುರ.

ಓರಿಯಂಟಲ್ ಗ|| ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು..............ರೂ. 4,45,00,000

ಕಂಪನಿಯಿಂದ ಪಾವತಿ ಆಗಿರುವದು ,, 4,00,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ.—ಮಿ|| ಎಂ. ಎಸ್. ರಬಿಟೊ, ಚೀಫ್ ಏಜೆಂಟ್, ಬೆಂಗಳೂರು; ಮ|| ಎಂ. ಎಸ್. ನಂಜಪ್ಪನವರು ಅಥವಾ ಮ|| ವೆಂಕಟಪತಯ್ಯನವರು, ಕಂಪನಿ ಏಜಂಟರು, ಮೈಸೂರು; ಅಥವಾ

[194-42] ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ, ಮದರಾಸ್.

ಹಿಂದುಸ್ಥಾನ್ ಕೋಆಪರೆಟಿವ್ ಜೀವವಿಮೆ ಸಂಘ ಲಿ.

ಹಿಂದುಸ್ಥಾನ್ ಕಟ್ಟಡಗಳು—ಕಲ್ಕತ್ತಾ.

ಕಂಪನಿಯ ಮೂಲಧನ (ಒಂದು ಕೋಟಿ ರೂಪಾಯಿ)	1,00,00,000
ಪಾವತಿಯಾದ ಮೊಬಲಗು	10,50,000
ವಸೂಲಾದ ಮೊಬಲಗು	87,00,000

ಈ ಕಂಪನಿಯಲ್ಲಿ ಪಾಲಿಸಿದಾರ್‍ರಿಗೆ ಬಹಳ ಕಮ್ಮಿಯಾದ ದರಗಳ ಪಟ್ಟಿಯನ್ನು ಮಾಡಿರುವದು. 1912 ನೇ ಇಸ್ವಿಯ ಇಂಡಿಯಾ ಗವರ್ನ್‌ಮೆಂಟಿನ ಜೀವವಿಮೆ ಕಂಪನಿಯ ಆಕ್ಟುಗಳ ಪ್ರಕಾರ ಸರ್ಕಾರದಲ್ಲಿ 2 ಲಕ್ಷ ರೂಪಾಯಿಗಳನ್ನು ಡಿಪಾಜಟ್ಟು ಮಾಡಲ್ಪಟ್ಟಿರುತ್ತೆ. ಮತ್ತು ಅನೇಕ ಮಹಾರಾಜರುಗಳು ಮುಂತಾದ ದೊಡ್ಡವರು ಪ್ರೆಸಿಡೆಂಟರಾಗಿರುವದರಿಂದ ಈ ಕಂಪನಿಯ ಅಭಿವೃದ್ಧಿಸ್ಥಿತಿಯನ್ನು ಪ್ರಕಟನೆ ಮಾಡುವುದಕ್ಕೆ ಸಂತೋಷವಾಗಿರುತ್ತದೆ.

ಸುಲಭವಾಗಿ ಹಣವನ್ನು ಪಾರ್ಟಿಯವರ ಮನೆಯಲ್ಲೇ ಜಾಗ್ರತೆ ಪಾವತಿಗೆ ಏರ್ಪಾಡು ಮಾಡಲ್ಪಡುತ್ತೆ. ಆದ್ದರಿಂದ ಪಾಲಿಸಿದಾರ್‍ರು ಮತ್ತು ಇದಕ್ಕೆ ಸೇರಿದ ಏಜಂಟ್ರುಗಳು ತುಂಬಾ ಅದೃಷ್ಟವಂತರೆಂಬುವದರಲ್ಲಿ ಸಂದೇಹವಿಲ್ಲ.

ಹೆಚ್ಚಿನ ವಿಷಯಗಳಿಗೂ, ಫಾರಂ ಮತ್ತು ಪ್ರಾಸ್‌ಪೆಕ್ಟಸುಗಳಿಗೂ ಕೆಳಗಿನ ವಿಳಾಸಕ್ಕೆ ಜಾಗ್ರತೆಯಾಗಿ ಬರೆಯಿರಿ. [243-32]

ವೆಂಕಟಾಚಲಂ ಅಂಡ್ ಸನ್ಸ್, ಚೀಫ್ ಏಜಂಟ್ರು,

166, ದೊಡ್ಡಪೇಟೆ, ಮೈಸೂರು.

ನ್ಯಾಷನಲ್ ಅಷೂರೆನ್ಸ್ ಕಂಪನಿ, ಲಿಮಿಟೆಡ್,

ವಿಜಯನಗರಂ ಸಿಟಿ.

1906 ರಲ್ಲಿ ಸ್ಥಾಪಿಸಲ್ಪಟ್ಟದ್ದು.

1912 ನೇ ಆಕ್ಟು ಪ್ರಕಾರ ಬದಲಾಯಿಸಿದೆ.

ಗವರ್ನ್‌ಮೆಂಟ್ ಸೆಕ್ಯೂರಿಟಿಗಳನ್ನು ಪಡೆದಿದೆ.

ಕಂಪನಿ ಆಸ್ತಿಯನ್ನು ಹಂಚಿಕೊಳ್ಳುವ ಷೇರುದಾರರಿಲ್ಲ.

ವೈದ್ಯರ ಪರೀಕ್ಷಾ ಸರ್ಟಿಫಿಕೇಟು ಅವಶ್ಯವಿಲ್ಲ.

ಬೋನಸ್ ಹಣ ಅಪಾರವಾಗಿ ಪಾವತಿ ಮಾಡಿದೆ.

ಜೀವವಿಮೆ—ತಿಂಗಳ ಚಂದಾ 1 ನೇ ಕ್ಲಾಸ್ ರೂ. 1; 2 ನೇ ಕ್ಲಾಸ್ ರೂ. 0-8-0.

ಮದುವೆ ಫಂಡು—ತಿಂಗಳ ಚಂದಾ ರೂ. 1-0-0.

ಇದು ಬಹು ಲಾಭಕರವಾದ ಮತ್ತು ಸುರಕ್ಷಿತವಾದ ಕಂಪನಿ. ವಿಮೆ ಮಾಡತಕ್ಕವರಿಗೂ ಫಂಡು ಪಡೆಯತಕ್ಕವರಿಗೂ ತುಂಬಾ ಅನುಕೂಲವಾಗಿರುತ್ತದೆ. [138—5]

ಏಜಂಟರು ಬೇಕು. ಧಾರಾಳವಾದ ಕಮಿಷನ್ ಸಿಗುತ್ತೆ. ಕಂಪನಿಯ ಪ್ರಾಸ್ಪೆಕ್ಟಸ್ಸು ಪಟ್ಟಿ ಕೇಳಿದವರಿಗೆ ಕೊಡುತ್ತೆ. ಈ ವಿಳಾಸಕ್ಕೆ ಬರೆದುಕೊಳ್ಳಿ:—

ವಿ. ಬಿ. ಶ್ರೀಕಂಠಯ್ಯನವರು, ಮೈಸೂರು ಮತ್ತು ಕೊಡಗಿನ ಚೀಫ್ ಏಜೆಂಟ್, ಕೋಟೆ, ಬೆಂಗಳೂರು ಸಿಟಿ.	**V. B. Srikantiah,** *Chief Agent, Mysore & Coorg, Fort, Bangalore City.*

ಹೊಸ ಬಂಗಾಳಿ ನಾವಿಲ್ಸ್—ವಿಷವಿವಾಹ 4 ಆ. ಸನ್ಯಾಸಿನಿ 1½ ಆ. ಅನ್ನಪೂರ್ಣೇಶ 1 ಆ. ಬಿ. ವೆಂಕಟಾಚಾರ್ಯರಿಂದ ವಂಗವಿಜೇತ 1-4-0. ಚಂದ್ರಶೇಖರ 1-1-0. ರಜನಿ 13 ಆ. ಅಹಲ್ಯಾಬಾಯಿ 9 ಆ. ಇತ್ಯಾದಿ. ಚಿತ್ರವಿಚಿತ್ರಾವಳಿ II 8 ಆಣೆ. ಮಾಯಾವಿ ಪ್ರಿಂಟಾಗುತ್ತಿದೆ. ನ್ಯಾಯದರ್ಪಣ 1½ ರೂಪಾಯಿ.

[63-21] ಎಂ. ಸುಬ್ಬರಾವ್, ಬುಕ್ ಸೆಲರ್, ಶಂಕರಪುರ, ಬೆಂಗಳೂರು AM.

Full Notes and Examiner on L. S. E. Texts (1915)—**Both Tanglewood and Fairy Tales, with** Author's life, meanings, explanations, summaries, constructions and questions. Price **Annas 5. English Papers.**—Subscription **Re. 1½ only.** Special **copy As. 6. Spelling Book As. 4.** (Postage extra).

Apply to, **M. N. Sitarama Rao,**

[100-11] **Krishnaraja Mohalla, Mysore.**

ಕಳವು, ದರೋಡೆ.

ದರೋಡೆ, ಅಕ್ರಮ ಸ್ತ್ರೀಸಂಗಮ, ಅಸಾಮಿ ಚೋರಿ, ಮಾನನಷ್ಟ ಮುಂತಾದವುಗಳಿಗೆ ಶಿಕ್ಷೆವಿಧಿಸಿರುವ ದಂಡನೀತಿ ಶಾಸ್ತ್ರವು ಪೂರ್ವದಲ್ಲಿ ಶುಕ್ರಾಚಾರ್ಯರಿಂದ ರಚಿತವಾಗಿ ಈಗಿನ ಬ್ರಿಟಿಷ್ ಚಕ್ರಾಧಿಪತ್ಯದಲ್ಲಿ ಅನುಮೋದಿಸಿ ಇಂಡಿಯಾ ಗವರ್ನರ್ ಜನರಲ್‌ರವರಿಂದ ಮುಂಚಾಗಿ ಕಲ್ಕತ್ತಾ, ಮುಂಬೈ, ಮದ್ರಾಸ್, ಮೈಸೂರು ಜಿಲ್ಲಾಗಳಲ್ಲಿ "ಕನ್ನಡ ಇಂಡಿಯನ್ ಪೀನಲ್ ಕೋಡ್" ಎಂಬ ಅಭಿದಾನದಿಂದ ಜಾರೀಲಿ ತಂದಿರುವರು. ಈ ಆಕ್ಟಿಗೆ ಅನೇಕ ಜಡ್ಜಿಗಳು ಟಿಪ್ಪಣಿಗಳನ್ನು ಬರೆದಿರುವರು. ಅವುಗಳೂ ಈ ಪುಸ್ತಕದಲ್ಲಿ ಅಡಗಿರುವವು. ಕ್ರಯ ದಪ್ಪ ಕಾಗದದ್ದು 2 ರೂಪಾಯಿ; ಹಸನುಕಾಗದದ್ದು ರೂ. 2-8-0.

[143—3] ವಿಳಾಸ—ಬಿ. ನರಸಿಂಗರಾವ್,

ಎಡಿಟರ್, ಲಾ ಗೆಜೆಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

ರಸಿಕರಾದ ಕನ್ನಡಿಗರೇ!

ಇತ್ತ ನೋಡಿ.

"ನಿರುಪಮಾ" ಹೊಸ ನಾಟಕಗಳಲ್ಲಿ ಮೇಲೆನಿಸಿ ಬಹು ಜನರ ಸ್ತೋತ್ರಕ್ಕೆ ಪಾತ್ರವಾದ ನಾಟಕ. ಕಥಾ ವಿಧಾನವೂ ಮಾತುಗಳೂ ಪದ್ಯಗಳೂ ಬಹು ಚಮತ್ಕಾರವಾಗಿಯೂ ಸರಸವಾಗಿಯೂ ಇವೆ. ಕ್ರಯ 12 ಆಣೆ. "ಕುಮುದಿನಿ" ಬಂಗಾಳಿಯ ನಾವೆಲಿನ ಭಾಷಾಂತರ, ಪತ್ತೇದಾರಿಯ ಕಥೆ. ಕ್ರಯ 6 ಆಣೆ. "ಸಂತಾಪಕ" ಮನೋಹರವಾದ ನವೀನ ಕಾದಂಬರಿ. ಎಲ್ಲರೂ ಅಗತ್ಯವಾಗಿ ಓದಬೇಕಾದುದು. ಕ್ರಯ 4 ಆ. "ಮಹಾರಣ್ಯಪುರಾಧಿಪತ್ಯ" 4 ಆ. "ಪಾದುಕೋಳ ರಹಸ್ಯ" 2 ಆ. "ಕಲಹಪ್ರಿಯಾಪ್ರಹಸನ" 2 ಆ. "ಯೋಗನಿದ್ರಾಪ್ರಹಸನ" 2 ಆಣೆ.—ಈ ನಾಲ್ಕು ನಕಲಿಗಳೂ ಒಟ್ಟು 8 ಆಣೆ.

[266—31] ವಿಳಾಸ— ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

NOW READY

Full Notes with Summary and Numerous useful questions on Circe's Palace; The Golden Fleece and Fairy Tales (L. S. Text for 1915) by Mr. A. S Rangaswamiengar, B.A., Asst. Master, Maharani's College, Mysore. Price four annas only. Yate's Primer 0-4-0; Yate's Second Reader 0-9-0; King Second Reader 0-6-0; King Third Reader 0-8-0; Macmillan's New No. IV Reader 0-12-0; Hydes Practical English Grammar—First 0-15-0, Second 0-15-0; Longman's School Geography 1-4-0; Marrison's Junior Geography of India 0-12-0.

We supply you any books in English or Canarese.

[23-27] **The General Agency, Mysore.**

ಸಿದ್ಧವಾಗಿದೆ.

1915 ನೆಯ ವರ್ಷದ ಲೋವರ್ ಸೆಕಂಡರಿ

ಕನ್ನಡ ಟೆಕ್ಸ್ಟಿನ ನೋಟ್ಸು.—ಕ್ರಯ 6 ಆಣೆ.

ಡಿಸ್ಕೌಂಟು.—10 ಕ್ಕೆ 1; 25 ಕ್ಕೆ 3; 50 ಕ್ಕೆ 8; 100 ಕ್ಕೆ 20.

ಮಕ್ಕಳ ಭೂವಿವರಣೆ.

ಈಗಿನ ಪಾಠಕ್ರಮಕ್ಕೆ ತಕ್ಕಂತೆ ಹೊಸದಾಗಿ ಅಗಿದೆ. ಇದರಲ್ಲಿ ಮೈಸೂರು ದೇಶದ ಬೆಳೆ, ಎತ್ತರ, ನದೀ ಪರ್ವತಾದಿಗಳು ಇವುಗಳನ್ನು ತೋರಿಸುವ ಮೂರು ಭೂಪಟಗಳೂ, ಚಿತ್ರಗಳೂ ಸೇರಿವೆ. ಕ್ರಯ 2 ಆಣೆ. [49-22]

ಇಲಾಖೆಯ 2 ನೆಯ ಪುಸ್ತಕದ ನೋಟ್ಸು 2½ ಆಣೆ. ಮೆಕ್ಮಿಲನ್ ರವರ 3 ನೇ ಪುಸ್ತಕದ ನೋಟ್ಸು 1½ ಆಣೆ. ಡಿಟೊ 4 ನೇ ಪುಸ್ತಕದ ನೋಟ್ಸು 1½ ಆಣೆ. ಡಿಟೋ 5 ನೇ ಪುಸ್ತಕದ ನೋಟ್ಸು 4 ಆಣೆ. ನವಬಾಲವ್ಯಾಕರಣ (2 ನೇ ತರಗತಿಗೆ) 1 ಆಣೆ. Notes on "Tanglewood Tales," English Lower Secondary Text for 1915—As. 3. Notes on Fairy Tales—As. 2.

ನಮ್ಮ ವಿಳಾಸ:—ಯನ್. ಆರ್. ವೆಂಕಟಸುಬ್ಬಾಚಾರ್ಯ,

ಸುಬೋಧಗ್ರಂಥಾಲಯ, ಮೈಸೂರು.

S U. N. & Co.,

BENARES CITY, U. P.

ಸೊಗಸಾದ ಸರಕುಗಳು !!
ದೊಡ್ಡ ಕಂಪೆನಿ !

ಈ ನಮ್ಮ ಕಂಪನಿಯಲ್ಲಿ ನೆಯಿದು ತಯಾರಿಸುವ ಉತ್ತಮವಾದ ಬನಾರಸ್ ರೇಷ್ಮೆ ಜರೀ ಸೀರೆಗಳು, ಶಲ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ್ಟ, ಮಗುಟ, ಜಗನ್ನಾಥ ಜಾಗಟೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವ ವರಿಗೆ 100 ಪುಟಗಳುಳ್ಳ ಕ್ಯಾಟಲಾಗ್ 1 ನ್ನು ಮತ್ತು 2 ವಿಶ್ವೇಶ್ವರ ಪಠಗಳನ್ನು ಉಚಿತವಾಗಿ ಕಳುಹಿಸಲಾದೀತು. [69-18]

ಎಸ್. ಯು. ಎನ್. ಮತ್ತು ಕಂಪೆನಿ, ಕಾಶಿ.

ಸೋಲಾಪುರದ ಜವುಳಿ.

ಚಕ್ಕುಗಳು, ಶೀರೆಗಳು, ಕಿರಿಗೆಗಳು, ಖಣಗಳು.

ಇವುಗಳಲ್ಲಿ ಒಂದು ಬೇಲ್‌ಗಿಂತ ಕಡಮೆ ತರಿಸಲು ಕೋರುವವರು ಆಯಾ ಡಿಸ್ಟ್ರಿಕ್ಟುಗಳಲ್ಲಿರುವ ನಮ್ಮ ಏಜಂಟರುಗಳಲ್ಲಿ ಹಮೇಷ ಇರುವ ದಾಸ್ತಾನಿನಲ್ಲಿ ತರಿಸಿಕೊಳ್ಳಬಹುದು. ನಮೂನೆ ಬಟ್ಟೆಗಳೂ ಇವರಲ್ಲಿ ದೊರೆಯುವವು.

ಮೈಸೂರು, ನಂಜನಗೂಡು, ಚಾಮರಾಜನಗರ, ಈ ಪ್ರಾಂತ್ಯದವರು ಮ॥ ಜ. ಎಸ್. ಶ್ರೀಕಂಠಯ್ಯನವರು ಕಂಪೆನಿ, ದೊಡ್ಡಪೇಟೆ, ಮೈಸೂರು, ಇವರಲ್ಲಿ ;

ತುಮಕೂರು, ಹಾಸನ, ಕಡೂರು, ಚಿತ್ರದುರ್ಗ, ಈ ಪ್ರಾಂತ್ಯದವರು ಮ॥ ಎಸ್. ನಾರಾಯಣರಾಯರು, ಅರಸೀಕೆರೆ, ಇವರಲ್ಲಿ ;

ಕ್ಲೋಸ್‌ಪೇಟೆ, ಚನ್ನಪಟ್ಟಣ, ಮದ್ದೂರು, ಶ್ರೀರಂಗಪಟ್ಟಣ, ಕೋಲಾರ, ಈ ಪ್ರಾಂತದವರು ಬಿ. ಜಿ. ಕೌಶಿಕರು, 6 ಆರ್ಕಾಟ್ ಶ್ರೀನಿವಾಸಾಚಾರ್ರ ಬೀದಿ, ಚಿಕ್ಕಪೇಟೆ, ಬೆಂಗಳೂರು ಸಿಟಿ, ಇವರಲ್ಲಿಯೂ ಬೇಕಾದ ಮಾದರಿಯ ಸರಕುಗಳನ್ನು ತರಿಸಿಕೊಳ್ಳಬಹುದು.

ಹೆಚ್ಚು ವಿಷಯಕ್ಕೆ ಕಾಗದವನ್ನೂ, ಮುಂಗಡ ಕಳುಹಿಸುವ ಹಣವನ್ನೂ ಕೆಳಗಿನ ವಿಳಾಸಕ್ಕೆ ರವಾನಿಸಬೇಕು. [28-25]

ಇಂಡಿಯನ್ ಕೊಆಪರೆಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್,
169, ಕಿಲಾರಿ ರೋಡ್ (ಕುಂಚಿಗರ ಪೇಟೆ), ಬೆಂಗಳೂರು ಸಿಟಿ.

ಬೆಲೆಯುಳ್ಳ ಬಾಳಿಕೆ ಬರುವ ವಾಚ್ ! ನಾಜೂಕಾದ ವಾಚ್ !!

ಸಿಸ್ಟಂ ಲೀವರ್ ವಾಚ್.

ಇದರ ಕ್ರಯ ಎಂದಿಗೂ ಕಡಿಮ್ಮೆಗದ ಸುಂದರವಾದ ವಾಚ್ ಸರಪಣಿ ಸಮೇತ
3 ರೂಪಾಯಿ ಮಾತ್ರ. 5 ವರುಷಗಳ ಖಾತ್ರಿ ಗ್ಯಾರೆಂಟಿ.



ಸ್ವಾಮಿ, ಈ ವಾಚ್ ನೂತನವಾದದ್ದು. ಅಂದರೆ ಶ್ರೇಷ್ಠವಾದ ಲೀವರ್ ಕೆಲಸದಿಂದ ತಯಾರಾದದ್ದು. ಬಲವುಳ್ಳ ಚಕ್ರಗಳಿಂದ ತಯಾರಾದದ್ದು. ಗಂಭೀರವಾದ ಘಂಟೆ ಮತ್ತು ಮಿನಿಟ್‌ಗಳು. ರಮಣೀಯವಾದ ನಮೂನೆ. ತಲೆಯಲ್ಲಿಯೇ ಬೀಗ, ಮಣ್ಣು ಧೂಳು ಸೇರದಂತೆ ಒಳಗೂ ಸಹ ಗ್ಲಾಸ್ ದೋಮ್ (ಕನ್ನಡಿ ಮುಚ್ಚಳ) ಉಳ್ಳದ್ದು. ಪರಂಪರೆ ಅಂದರೆ ಅನೇಕ ವರುಷಗಳ ಪರಿಯಂತರ ಬಾಳಿಕೆ ಬರುವಂಥಾದ್ದು. ಇದಕ್ಕೆ ಯಾವ ವಿಧವಾದ ಬಹುಮಾನವೂ ಇಲ್ಲ. ಯಾಕಂದರೆ ವಾಚ್ ಬಹು ಶ್ರೇಷ್ಠವಾದದ್ದು. ಮನಸ್ಸು ಒಪ್ಪದಲ್ಲಿ ಹಣ ವಾಪಸ್ ಮಾಡಲ್ಪಡುತ್ತೆ. ನಂಬಿಕೆಯುಳ್ಳ ವಾಚ್. [145-3] ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.

ವಿಳಾಸ—ಟಿ. ಆರ್. ವೆಂಕಟರಮಣ ಅಂಡ್ ಕಂಪೆನಿ,
ನಂ. 7 ಕೋಪ್ ವೆಂಕಟಾಚಲಯ್ಯರ್ ಬೀದಿ, ಮದರಾಸು.

BRAHMAPPA TAVANAPPANAVAR,

Merchant & Commission Agent.

Agent to Messrs. Currimbhoy Ebrahim & Co's Mills, BOMBAY.

ನಾವು ಮುಂಬೈ ಮೆಸ್ಸರ್ಸ್ ಕರೀಂಬಾಯ್ ಇಬ್ರಾಹಿಂ ಅಂಡ್ ಕಂಪೆನಿಯವರ ಬಾಬತು, ಮೆಸ್ಸರ್ಸ್ ಫಜುಲ್ಭಾಯ ಮಿಲ್ಸ್ ಲಿಮಿಟೆಡ್ ಮುಂಬೈ. ದಿ ಕ್ರೆಸೆಂಟ್ ಮಿಲ್ಸ್ ಲಿಮಿಟೆಡ್ ಮುಂಬೈ, ಕರೀಂಬಾಯ್ ಮಿಲ್ಸ್ ಲಿಮಿಟೆಡ್ ಮುಂಬೈ, ದಿ ಇಂಡಿಯನ್ ಬ್ಲೀಚಿಂಗ್, ಡೈಯಿಂಗ್ ಅಂಡ್ ಪ್ರಿಂಟಿಂಗ್ ವರ್ಕ್ಸ್ ಲಿಮಿಟೆಡ್ ಮುಂಬೈ, ದಿ ಇಂಡೋರ್ ಅಂಡ್ ಮಾಳ್ವಾ ಯುನೈಟೆಡ್ ಮಿಲ್ಸ್ ಲಿಮಿಟೆಡ್ ಇಂಡೋರ್, ಇವುಗಳಲ್ಲದೆ ಇನ್ನೂ ಅನೇಕ ಮಿಲ್ಲುಗಳ ಬಟ್ಟೆಗಳನ್ನು ಮೈಸೂರು ಸೀಮೆಯಲ್ಲೆಲ್ಲಾ ವಿಕ್ರಯಮಾಡಲು ಕಮಿಷನ್ ಏಜಂಟರಾಗಿರುತ್ತೇವೆ. ನಮ್ಮ ಮುಖಾಂತರ ಮಾಲು ತರಿಸಿಕೊಳ್ಳತಕ್ಕವರಿಗೆ ಮುಂಬೈಯಲ್ಲಿ ಬಟ್ಟೆಗಳ ಮೇಲೆ ವಿಧಿಸತಕ್ಕ ದಳ್ಳಾಳಿ, ಚೋಟಾದಳ್ಳಾಳಿ, ಮೊಕ್ಕಾಮು, ಗಂಟುಕಟ್ಟುವದು, ಸ್ಟೇಷನ್ನಿಗೆ ಹೇರಿಸುವದು, ಹುಂಡೇಕರಿ ವಗೈರೆ ಯಾವ ವಿಧವಾದ ಖರ್ಚು ತಗಲದೆ ಇರುವದರಿಂದ ಮುಂಬೈಯಿಂದ ತರಿಸುವ ದಕ್ಕಿಂತಲೂ ಸುಲಭ ದರದಲ್ಲಿ ಸಿಕ್ಕುತ್ತೆ. ಮತ್ತು ಮುಂಬೈಗೆ ಹೋಗಿಬರುವ ದೇಹಶ್ರಮವೂ, ಖರ್ಚೂ ಉಳಿಯುತ್ತೆ. ಹೆಚ್ಚು ಬಟ್ಟೆಗಳನ್ನು ಏಕಕಾಲದಲ್ಲಿ ಕೊಳ್ಳತಕ್ಕವರಿಗೆ ಮಾಲಿನ ಮೇಲೆ ಶೇಕಡ 3 ರೂಪಾಯಿ ಲಾಗಾಯ್ತು 4½ ರೂಪಾಯಿ ವರಿಗೆ ಡಿಸ್ಕೌಂಟು ದೊರೆಯುತ್ತೆ. [97-13]

ನಮ್ಮ ಟ್ರಾವಲಿಂಗ್ ಏಜಂಟರ ವಶ ಬಟ್ಟೆಗಳ ನಮೂನೆಗಳನ್ನು ಕೊಟ್ಟು, ದರ ಒಬ್ಬ ವ್ಯಾಪಾರಗಾರನಿಗೆ ತೋರಿಸಿ ಆರ್ಡರು ತೆಗೆದುಕೊಳ್ಳುವ ಏರ್ಪಾಡು ಮಾಡಿರುತ್ತೆ. ನಮ್ಮ ದಾವಣಗೆರೆ ಮತ್ತು ಬೆಂಗಳೂರು ಆಫೀಸುಗಳಲ್ಲಿ ಮಾಲು ಕಾಣದರು ಸಹ ದೊರೆಯುತ್ತೆ.

ಬಟ್ಟೆಗಳನ್ನು ವ್ಯಾಪಾರಮಾಡಲು ಅನುಭವಸ್ಥರಾದ ಏಜಂಟರುಗಳೂ ಮತ್ತು ಗುಮಾಸ್ತರುಗಳೂ ಬೇಕಾಗಿದೆ.

ಎಲ್ಲಾ ಕಾಗದಪತ್ರಗಳೂ ದಾವಣಗೆರೆ ಆಫೀಸಿಗೆ ಬರೆಯಲ್ಪಡಬೇಕು.

ಹೆಡ್ ಆಫೀಸು :—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್, ದಾವಣಗೆರೆ. ಬ್ರಾಂಚ್ ಆಫೀಸು :—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

CHAMBERLAIN'S COUGH REMEDY.

ಚೇಂಬರ್ಲೇನಯವರು ಕಂಡುಹಿಡಿದ ಕೆಮ್ಮಿನ ಔಷಧವು.

3-29



ಶೀತದ ಕೆಮ್ಮು, ಗಂಟ್ಲು ಗಾರೆನ್ನುವುದು, ಹುಡಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟ್ಲಿನಲ್ಲೂ ಎದೆಯಲ್ಲೂ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಾಣಪ್ರಾಯವಾದೆ.

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ. ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ. ಅದರ ಮೇಲೆ ನ್ಯೂಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು. ತರುವಾಯ ಉಗುಳಿನಲ್ಲಿ ರಕ್ತಬೀಳುವುದು. ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು.

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟ್ಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಖಂಡಿತವಾಗಿ ನಿವಾರಣೆಮಾಡುತ್ತದೆ. ಉಸುರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ. ಅಪಾಯಕರವಾದ ಕೆಮ್ಮಿನ ಶಬ್ದವನ್ನು ನಿಲ್ಲಿಸಿಬಿಡುತ್ತದೆ. ಎದೆ ಒಣಗುವಂಥಾ ಕೆಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ವಾಸಿಮಾಡತಕ್ಕದ್ದು. ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ರೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ.

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ.

ಈ ಔಷಧವು ವನಸ್ಪತಿಗಳ ತಯಾರಿ.

ಕೈಯಿಂದ ಮುಟ್ಟದೆ ತಯಾರಾಗಿದೆ.

ಎಲ್ಲೆಲ್ಲೂ ವಿಕರಿಯಾಗುವುದು. ಸಣ್ಣ ಶೀಸೆಗೆ ೧ ರೂಪಾಯಿ. ದೊಡ್ಡ ಶೀಸೆಗೆ ೨ ರೂಪಾಯಿ.

Mellin's Food

ಮೆಲಿನ್ಸ್ ಆಹಾರವು

ಕೈಸೋಕದೆ ತಯಾರ್ಮಾಡಿರುವದು. [4-29]

ಮೆಲಿನ್‌ರವರ ಲಾಕ್ಟೋ ಎಂಬಾಹಾರ.

ಇದರಲ್ಲಿ ಮೆಲಿನ್ಸ್ ಆಹಾರವೂ ಹಾಲೂ ಮಿಶ್ರವಾಗಿದೆ. ಕೆಲವು ನಿಮಿಷಗಳಲ್ಲಿ ತಯಾರ್ಮಾಡಿಕೊಳ್ಳಬಹುದು. ಶಿಶುಗಳಿಗೂ ದೊಡ್ಡವರಿಗೂ ಸಂಪೂರ್ಣ ಆಹಾರ.

ಬೆಳಗಿನ ಊಟಕ್ಕೆ ಮೆಲಿನ್ಸ್ ಲಾಕ್ಟೋ ಉಪಯೋಗಿಸಿದರೆ ಶರೀರಪುಷ್ಟಿಯನ್ನೂ ಲವಲವಿಕೆಯನ್ನೂ ಕೊಡುತ್ತದೆ.

Messrs. OAKES & Company, Mount Road, Madras.

ವಿಳಾಸ—ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

ವೈದ್ಯ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಜೋಡತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂಥಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಮುಟ್ಟುಶೂಲೆ, ಮಕ್ಕಳ ಎಳವು, ಜ್ವರ, ನಟ್ಟುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—220 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ; 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪೀ ವರೆಗೆ ಪೋಸ್ಟೇಜು 4 ಆಣೆ. [179-45]



೨. ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈವಿಸಾರಿಕೆಂದು ತೋರಿದಾಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿ ! ಒಂದೇ ಒಂದು ಬುಡ್ಡಿಯು ಇಮ್ಮಲ್ಲಿರಲಿ ! ವಿಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುವುದು. ಬೆಲೆ ರೂ. 1; ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ :—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಈಗ ಸಾಲಾಮಿಸ್ರಿಯ ಧಾರಣೆಯು ಜಾಸ್ತಿಯಾಗಿರುವದರಿಂದ 1-8-0 ಕ್ರಯ ಇದ್ದದ್ದನ್ನು ರೂ. 2 ಮಾಡಿರುತ್ತೇವೆ.

500 ರೂಪಾಯಿಗಳು ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

ಈ ಮುರಬ್ಬಾವು "ಪಂಜಾಬ್ ಸಾಲಾಮಿಸ್ರಿ" ಅಲ್ಲವೆಂದು ವ್ಯಕ್ತಪಡಿಸುವವರಿಗೆ
500 ರೂಪಾಯಿಗಳು ಬಹುಮಾನ ಕೊಡಲ್ಪಡುವುದು.

ಕ್ರಯ ೨ ರೂಪಾಯಿ.



ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡವರಿಗೆ ಹೃದಯ ಕೋಶವು ಬಲಹೀನವಾಗಿ ನಾನಾ ವ್ಯಾಧಿಗಳಿಂದ ಮರಣ ಪರಿಯಂತರವೂ ದುಃಖಪಡುವರು. ಈ "ಪಂಜಾಬ್ ಸಾಲಾಮಿಸ್ರೀ ಮುರಬ್ಬಾ" ವಿನ ಸೇವನೆಯಿಂದ ಕೈ, ಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ತಲೆಯ ನೋವೂ, ಅವುಗಳೆಲ್ಲವೂ ಪಂಜಾಬ್ ಸಾಲಾಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು, ಮೆದುಳಿಗೆ ಬಲವನ್ನುಂಟುಮಾಡುವುದು, ಧಾತುವನ್ನು ಶೇಖರಿಸುವುದು, ಸೊಂಟದ ನೋವು ಸ್ವಲ್ಪ ಮಾತ್ರವೂ ಇರಲಾರದು. ಈ ಪಂಜಾಬ್ ಸಾಲಾಮಿಸ್ರಿಯ ಮುರಬ್ಬಾಕ್ಕೆ ಶಾಂಬ್ರದ ಮತ್ತು ಭಂಗಾರದ ಭಸ್ಮವು ಎಷ್ಟು ಮಾತ್ರವೂ ಸಮಾನವಾಗಲಾರದು. ಹೊಟ್ಟೆಯಲ್ಲಿರುವ ಜ್ವರದ ಗಡ್ಡೆಯನ್ನು ನಾಶಪಡಿಸುವುದು. ಶ್ವಾಸ ಕಾಸರೋಗಗಳನ್ನು ನಿರ್ಮೂಲಪಡಿಸುವುದು. ಕಾಬೂಲ್, ಕಾಂದಹಾರ್ ದೇಶಗಳ ಜನರು ಸಾಲಾಮಿಸ್ರಿಯ ಹಣ್ಣನ್ನು ಬಹಳವಾಗಿ ತಿನ್ನುವರು. ಆದ್ದರಿಂದ ಶಕ್ತಿಯಲ್ಲಿ ಬಹಳ ಗಟ್ಟಿಗರು. ಡಬ್ಬಾ 1 ಕ್ಕೆ ರೂ. 2-0-0. ಟಪಾಲ್ ಖರ್ಚು ಅಲಾಯಿದ. [133-6]

ಅನುಪಾನಪತ್ರಿಕೆ ಔಷಧದ ಸಂಗಡ. ಕ್ಯಾಟ್ಲಾಗ್ ಅಪೇಕ್ಷಿಸುವವರು 6 ಕಾಸಿನ ಸ್ಟಾಂಪು ಕಳಿಸಿ.

ಏಜಂಟರು—ಡಿ. ಸೈಯದ್ ಉಸ್ಮಾನ್ ಅಂಡ್ ಕೊ,
ದೊಡ್ಡಪೇಟೆ, ಬೆಂಗಳೂರು ಸಿಟಿ.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
5 ಹಾಜಿ ಸಾಹೇಬ್ ಮಹಡಿ, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

WANTED

An active and influential Sole District Agent for the Districts of Bangalore, Tumkur, Shimoga, Kolar, and Coorg on liberal terms of Commission and monthly Office allowance. None but those who can guarantee good business need apply to

Messers. VENKATACHALAM & SONS,
Chief Agents,
Hindustan Co-operative Insurannce Society, Ltd.,
166, Dodpet, near Old Taluk Cutcherry,
[224-32] *MYSORE.*

ಎಲ್ಲರಿಗೂ ಬೇಕು.

ಬಾಲಸಂಜೀವಿನಿ.—ಮಕ್ಕಳಿಗೆ ಒಂದು ಮಾತ್ರೆಯನ್ನು ಎದೆಹಾಲಿನಲ್ಲಿ ಹಾಕಿದರೆ 1-2 ವೇಳೆ ಮಾತ್ರ ಸುಖವಾಗಿ ಭೇದಿ ಮಾಡಿಸಿ ಹಕ್ಕೆಗಳ ಸೆಳತ (ಯಳವು), ಜ್ವರ, ಹೊಟ್ಟೆಯುಬ್ಬರ, ಶೀತವಾಯು, ಕೆಮ್ಮು, ನೆಗಡಿ, ಮುಕ್ಕುವಿಕೆ ಮುಂತಾದ್ದನ್ನು ಆಶ್ಚರ್ಯವಾಗುವಂತೆ ತಕ್ಷಣ ಗುಣಮಾಡುತ್ತದೆ. ಬೆಲೆ 50 ಮಾತ್ರೆ 4 ಆಣೆ.

ಆಮೋದಿನಿ.—ಅಮೋಘವಾದ ಸುವಾಸನೆಯಿಂದ ಕೂಡಿದ ಈ ಮಾತ್ರೆಗಳು ಸಂಗೀತಗಾರರಿಗೆ ಅತ್ಯಂತಪ್ರಿಯವಾದುವು. ಶರೀರದ ಆಯಾಸ, ಬಾಯಾರಿಕೆ, ವಿಧವಿಧವಾದ ಕೆಮ್ಮು, ಉಬ್ಬಸಗಳನ್ನು ತಕ್ಷಣ ಪರಿಹರಿಸಿ ಶಕ್ತಿವೃದ್ಧಿಯನ್ನೂ ಮನಸ್ಸಿಗೆ ಅಪೂರ್ವವಾದ ಆನಂದವನ್ನೂ ಉಂಟುಮಾಡುತ್ತದೆ. ಬೆಲೆ 150 ಮಾತ್ರೆ 4 ಆಣೆ.

ನಾರಿಕೇಳಾಂಜನ.—ಕಣ್ಣಿನೊಳಗೆ ಹಾಕಲು ಅತ್ಯುತ್ತಮವಾದ, ಅತಿ ಸೌಮ್ಯವಾದ, ಇತರ ಎಲ್ಲಾ ನಾರಿಕೇಳಾಂಜನಗಳನ್ನು ನಿರ್ಮಿಸಿರುವ ಪೂರ್ವಿಕರಿಂದ ರಹಸ್ಯವಾಗಿ ಉಪದೇಶಿಸಲ್ಪಟ್ಟ ಸಿದ್ಧಾಮೃತ. ಬೆಲೆ 4 ಆಣೆ.

ಶ್ರೀಕರಕಸ್ತೂರಿ ಮಾತ್ರೆ.—250 ಮಾತ್ರೆ 4 ಆಣೆ.

ಪ್ರತಿ ಔಷಧವೂ ವಿವರವಾದ ಅನುಪಾನಪತ್ರದೊಡನೆ ಕೊಡಿರುವುದು. ಮೇಲ್ಕಂಡ ಔಷಧಗಳನ್ನು ಪ್ರತ್ಯೇಕ ಅಥವಾ ಒಟ್ಟಿಗೆ ಐದು ಸೀಸೆ ತರಿಸಿದರೆ ಒಂದು ಇನಾಮು. ವಿ. ಪಿ. ಛಾರ್ಜು ಪ್ರತ್ಯೇಕ. [220-38]

ವಿಳಾಸ—ಬಿ. ವಿ. ಪಂಡಿತ್, ಸದ್ವೈದ್ಯಶಾಲಾ, ಸಂಜನಗೂಡು.

WANTED

Agents for the sale of Steel Cash and Treasure Safes, in Mysore District, for terms and other particulars, apply to

Basel Mission Mechanical Establishment,
[142-3] **Mangalore.**

ಮಕ್ಕಳ ಆರೋಗ್ಯವನ್ನು

ಯಾವಾಗಲೂ ಕಾಪಾಡುವದು ಹೆತ್ತವರ ಮೇಲೆ ಬಿದ್ದ ಭಾರವಾಗಿದೆ.

ಸಣ್ಣ ಮಕ್ಕಳು ಹೇಳದಂತೆ ಕೇಳದೆ ಸಿಟ್ಟಿಗೆ ಒಳಪಡುವಂಥವರಾಗಿದ್ದು ಆಹಾರರುಚಿ ಕಡಮೆಯುಳ್ಳವರಾಗಿದ್ದಾರೆಂದು ಕಂಡ ಕೂಡಲೇ

SCOTTS' EMULSION 5-29

(ಸ್ಕಾಟ್ಸ್ ಇಮಲ್‌ಷನ್)

ಎಂಬೀ ಸೇವನಾ ಔಷಧವನ್ನು ಕೊಡಬೇಕು. ಹಾಲಿನಲ್ಲಿ ಕೆಲವು ತೊಟ್ಟು

Always get the Emulsion with this mark—the Fishman the mark of the "Scott" process!

ಬೆರಸಿಕೊಟ್ಟು ಕೂಡಲೇ ದೊಡ್ಡ ವ್ಯತ್ಯಾಸ ತೋರುವುದು. ಅದು ಸಂತೋಷವೂ ಆನಂದವೂ ಪಡುವದಾಗಿ ಆಹಾರದ ರುಚಿ ಹೊಂದಿ ಸುಖ ಚಿಹ್ನೆ ತೋರಿಸುವದು.

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ.

ಎಲ್ಲಾ ಔಷಧ ಮಾರುವವರಲ್ಲೂ ಸಿಕ್ಕುತ್ತದೆ.

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್.

ತಾಲ್ಲೂಕು ವರ್ತಮಾನಗಳು.

ಗುಬ್ಬಿ ತಾ|| ಮತ್ತೀಕೆರೆ.—ಈ ಪ್ರಾಂತ್ಯ ಈ ವರಿವಿಗೂ ಮಳೆಯಿಲ್ಲದೆ ವ್ಯವಸಾಯಕ್ಕೆ ಬಹಳ ಕುಂದಕವಾಗಿದೆ. ಧಾರಣೆವಾಸಿಗಳಂತು ಕ್ಷಾಮಗಾಲವನ್ನೇ ಆವರಿಸಿಕೊಂಡಿವೆ. ಅಲ್ಲದೆ ಇಲ್ಲಿಗೆ ಸಮೀಪವಾಗಿರುವ ಚಿಕ್ಕನಾಯಕನಹಳ್ಳಿ ಪ್ರಾಂತ್ಯ ಕಾಲರಾ ಗಲಾಟೆ ಇರುವದರಿಂದ ಈ ಪ್ರಾಂತ್ಯದ ಪ್ರಜೆಗಳೆಲ್ಲ ತುಂಬಾ ಭಯಪಡುತ್ತಿದ್ದಾರೆ.—ಈ ಗ್ರಾಮದಲ್ಲಿ ಮೊನ್ನೆ ಆಷಾಢ ಶುದ್ಧ ಏಕಾದಶಿ ದಿವಸ ಶ್ರೀರಂಗನಾಥಸ್ವಾಮಿಯ ಪಂಚಾಭಿಷೇಕವೂ, ಉತ್ಸವವೂ ಬಹಳ ವಿಜೃಂಭಣೆಯಿಂದ ಈ ಗ್ರಾಮಸ್ಥರು ಮತ್ತು ಮಂದಲಾಪುರದ ಗ್ರಾಮಸ್ಥರು ಸಹಾ ಏಕಮತ್ಯದೊಡನೆ ನಡಿಸಿದರು.

ಅರಸೀಕೆರೆ.—ಕಳೆದ 5 ಮತ್ತು 6 ನೇ ತಾ. ಸ್ವಲ್ಪ ಮಳೆ ಬಂದದ್ದರಿಂದ ರೈತರು ಬಿತ್ತನೆ ಕೆಲಸವನ್ನು ಶುರುಮಾಡಿದರು. ಆದರೆ ಈಚೆಗೆ ಸರಿಯಾದ ಮಳೆ ಬಾರದೆ ಮೋಡ ಮುಸುಕಿ ತಂಗಾಳಿ ಬೀಸುತ್ತ ಆಗಾಗ್ಗೆ ಸಣ್ಣಸಣ್ಣ ಹನಿಗಳು ಬೀಳುತ್ತವೆ. ದನಕರುಗಳಿಗೆ ಮೇವೂ ನೀರೂ ಸಿಕ್ಕುವದು ಪ್ರಯಾಸ. ಭಾವಿ ಕೆರೆ ಕುಂಟೆಗಳೆಲ್ಲಾ ಬತ್ತಿಹೋಗಿ ಕುಡಿಯುವದಕ್ಕೆ ನೀರು ದೊರೆಯುವದು ಬಹಳ ಕಷ್ಟವಾಗಿದೆ. ಧಾರಣೆವಾಸಿಗಳು ದಿನೇ ದಿನೇ ಛಡಾವಾಗುತ್ತಲಿವೆ. ಬಡಬನರ ಕಷ್ಟ ಹೇಳತೀರದು. ಹವಾ ಚೆನ್ನಾಗಿಲ್ಲ.—ಕಳೆದ ಲೋವರ್ ಸೆಕಂಡರಿ ಪರೀಕ್ಷೆಯಲ್ಲಿ ಇಲ್ಲಿನ ಎ. ವಿ. ಸ್ಕೂಲಿನಲ್ಲಿ ಇಂಗ್ಲೀಷನಲ್ಲಿ 6 ಕ್ಕೆ 4 ಮಂದಿ, ಕನ್ನಡದಲ್ಲಿ 9 ಕ್ಕೆ 5 ಮಂದಿ, ಸಂಸ್ಕೃತದಲ್ಲಿ ಇಬ್ಬರೂ ತೇರ್ಗಡೆ ಹೊಂದಿದಾರೆ. ಈಚೆಗೆ ಒಂದೆರಡು ತಿಂಗಳಿಂದ ಸರ್ಕಾರದವರು ಇಲ್ಲಿನ ಕಸಬಾ ಹೊಲಗೇರಿ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಒಬ್ಬ ಮಾಸ್ಟರನ್ನು ನೇಮಿಸಿ ಸದ್ಯಕ್ಕೆ ರೈಲ್ವೆ ಸ್ಟೇಷನ್ ಬಳಿ ಇರುವ ಛತ್ರದಲ್ಲಿ ವಿದ್ಯಾಭ್ಯಾಸ ಮಾಡಿಸುತ್ತಿದಾರೆ. ಹೊಸ ಕಟ್ಟಡದ ಕೆಲಸವನ್ನು ಸಾ|| ಚೌಡಪ್ಪನವರು ಮುಚ್ಚುವರ್ಜಿ ವಹಿಸಿ ಪೂರೈಸುವದರಲ್ಲಿ ಆಸಕ್ತರಾಗಿದಾರೆ. ಈ ಕಾರ್ಯವು ವಿಶೇಷ ಶ್ರೇಯಸ್ಕರವಾದದ್ದು. ಮಕ್ಕಳ ಸಂಖ್ಯೆ 15-20 ಆಗಿದೆ.—ಕಳೆದ ತಾ. 7 ನೇ ಮಂಗಳವಾರ ಅ|| ಕಮೀಷನರ್ ಮ|| ಅಪ್ಪಣ್ಣಯ್ಯಂಗಾರ್ಯ ಹಾಸನದಿಂದ ದಯಮಾಡಿ ಜಮಾಬಂದಿ ಮಾಡಿ ಜನರ ಅಹವಾಲುಗಳನ್ನು ತಿಳಿದುಕೊಂಡು ಕಂದಾಯಗಳು ಹೆಚ್ಚಾಗಿರುವಂಥವರಿಗೆ ಕಮ್ಮಿ ಮಾಡಿಸಿ, ರಾತ್ರಿಯೇ ಹಾಸನಕ್ಕೆ ಪ್ರಯಾಣ ಬೆಳಸಿದರು.

ಬೇಲೂರು.—ಇದು ವರಿವಿಗೂ ಮಳೆ ಬಾರದೆ ಈಗ ಒಂದು ವಾರದಿಂದ ಸೋನೆಮಳೆ ಪ್ರಾರಂಭವಾಗಿದೆ ಈ ಮಲ್ನಾಡಿನ ಬಹು ಕಡೆ ಬಿತ್ತಿಯೇ ಇಲ್ಲ. ಬಿತ್ತಿರುವುದಕ್ಕೂ ನೀರಿಲ್ಲ. ಕೆರೆ ಕುಂಟೆಗಳೆಲ್ಲಾ ಒಣಗಿ ಹೋಗಿದೆ. ಈ ಮಲ್ನಾಡಿನವರಿಗೆ ಈ ಕೆರೆಗಳ ಆಶ್ರಯವೇ ಪರಂತು ಅನ್ಯಥಾ ಪಾನಕ್ಕೆ ಬೇರೆ ಜಲವಸತಿ ಇಲ್ಲ. ಸಿಡುಬು, ದಡಾರ, ಆಮಶಂಕೆ, ವಿಷಮಶೀತಜ್ವರಗಳಿಂದ ಮಕ್ಕಳು ಮಾತ್ರವಲ್ಲದೆ ಬಹು ಮಂದಿ ದೊಡ್ಡವರೂ ಸಾಯುತ್ತಲೂ, ಸತ್ತುಹೋಗಿಯೂ ಇರುವರು. ದನಗಳ ಸ್ಥಿತಿಯಂತೂ ಹೇಳಬೇಕಾದುದೇ ಇಲ್ಲ. ದನಕರುಗಳಿಗೆ ಮೇವು ನೀರು ಇಲ್ಲದೆ ದೊಡ್ಡ ಜಡ, ಕಾಲುಜರ, ಬಾಯಿಜರ ಹುಟ್ಟಿ ನೂರಾರು ರಾಸುಗಳು ಸತ್ತುಹೋದವು. ಬಹು ಮಂದಿ ಬೇಸಾಯ ಮಾಡಲು ಶ್ರಾಣವಿಲ್ಲದೆ ಹೊಟ್ಟೆಗಿಲ್ಲದೆ ಸಾಯುವ ಗತಿ ಬಂದಿದೆ.—ನಮ್ಮ ಅಮಲ್ದಾರ್ ಮ|| ಕೆ. ಲಿಂಗೋಪಂತ್ ಬಾದಾಮಿಯವರು ಈ ಮಲ್ನಾಡಿನವರ ಸ್ಥಿತಿಗತಿಯನ್ನು ಪರಾಂಬರಿಸಿ, ಈ ಊರಲ್ಲಿ ಒಂದು ಅಗ್ರಿಕಲ್ಚರ್ ಕೋಆಪರೆಟಿವ್ ಸೊಸೈಟಿಯನ್ನು ಏರ್ಪಡಿಸಿ, ಅದಕ್ಕೆ ತಾವು ಪ್ರೆಸಿಡೆಂಟರಾಗಿ ನಿಂತು, ಮಳೆ ಬಂದಾಗ ಪೇರಾವು ಮಾಡಿ ಬೆಳೆಯತಕ್ಕ, ಅತ್ಯಲ್ಪಕಾಲದಲ್ಲಿ ಪ್ರಜೆಗಳಿಗೆ ನೆಮ್ಮದಿಯನ್ನುಂಟುಮಾಡತಕ್ಕ, ಮಳೆ ಹೆಚ್ಚಾಗಿ ಬಾರದಿದ್ದರೂ ಅನುಕೂಲವಾಗಿ ಬೆಳೆಯತಕ್ಕ ಕೆಲವು ವಿಧದ ಭತ್ತ, ರಾಗಿ ವಗೈರೆ ಧಾನ್ಯಗಳನ್ನು ಅಗ್ರಿಕಲ್ಚರಲ್ ಇನ್‌ಸ್ಪೆಕ್ಟರ ಮೂಲಕ ತರಿಸಿ ಪ್ರಮುಖರಿಂದರನ್ನೆಲ್ಲಾ ಇಲ್ಲಿನ ಟೌನ್ ಹಾಲಿಗೆ ಬರಮಾಡಿಕೊಂಡು ಪ್ರಜೆಗಳೆಲ್ಲರೂ ಉಜ್ಜೀವಿಸುವ ಮಾರ್ಗವನ್ನು ತೋರಿಸಿ, ಉಕಸ್ಮಾಸಿದ್ದಲ್ಲದೆ ಜೂರ್ನ್ಯಾರಿಗೆ ಏನೇನು ಬೇಕೋ, ಯಾವ ಪೈರನ್ನು ಹೇಗೆ ಬೆಳೆಯಬೇಕೋ ತಾವು ಒದಗಿಸಿ ಕೊಡುವುದಾಗಿ ಕಳೆದ ಗುರುವಾರ ವಾಗ್ದಾನಮಾಡಿದ್ದಲ್ಲದೆ ಪ್ರಜಾ ಮುಖಂಡರನ್ನು ಪ್ರೋತ್ಸಾಹಿಸಿ ಒಂದು ವ್ಯವಸಾಯಸಂಘವನ್ನೇರ್ಪಡಿಸಿದರು. ಈ ಸಂಘಕ್ಕೆ ಈ ಊರಿನವರು ಮಾತ್ರವಲ್ಲದೆ ಈ ತಾಲೂಕಿನವರೆಲ್ಲಾ ಸೇರಿ ತಮಗೆ ಬೇಕಾದ ವ್ಯವಸಾಯೋಪಕರಣಗಳನ್ನೂ, ಹಸನಾದ ಬೀಜಗಳನ್ನೂ, ಅದನ್ನು ಬೆಳೆಯುವ ವಿಧಾನವನ್ನೂ ನಮ್ಮ ಅಮಲ್ದಾರ್ರ ಮೂಲಕ ತಿಳಿದುಕೊಂಡಾರೆಂದು ಹಾರೈಸಲ್ಪಟ್ಟಿದೆ.—ಈ ಊರು ಆಸ್ಪತ್ರೆಗೆ ವಿರಾಮವಿಲ್ಲದೆ ರೋಗಿಗಳು ಬರುತ್ತಿರುವರು. ಕೊಂಚವೂ ಬೇಜಾರಿಲ್ಲದೆ ಉಪಚರಿಸುತ್ತಿರುವ ನಮ್ಮ ಡಾಕ್ಟರ್ ಟಿ. ಕೆ ವೆಂಕಟಾಚಾರ್ಯರ ಗುಣವು ಶ್ಲಾಘ್ಯವೇ ಸರಿ. ಇದು ವರಿವಿಗೆ ಇಂತಹ ಸುಲಭರೂ, ಪರೋಪಕಾರಿಗಳೂ, ಪ್ರಜಾಹಿತಚಿಂತೆಯೇ ಮುಖ್ಯವಾಗಿ ಉಳ್ಳ ಅಮಲ್ದಾರರೂ, ಡಾಕ್ಟರೂ ದೊರೆತಿರಲಿಲ್ಲ.—ಈ ತಲ್ಲೂಕಿನಲ್ಲಿ ದುಷ್ಕಾಲದ ದೆಸೆಯಿಂದ ಕಳ್ಳತನವೂ ಪಟೇಲ ಎಂಬ ಮೂರೆಲೆ ಆಟವೂ ಹೆಚ್ಚಿ ಬಹು ಮಂದಿ ಬಡಪ್ರಜೆಗಳು ದುರಾಶೆಯಿಂದ ತಮ್ಮ ಸರ್ವವನ್ನೂ ಕಳೆದುಕೊಂಡು ಗೋಳಾಡುತ್ತಿರುವರು. ಪೊಲೀಸ್ ಇನ್‌ಸ್ಪೆಕ್ಟರವರು ಇಂಥಾ ದುಷ್ಟರನ್ನು ಹಿಡಿದು ದಂಡಿಸಿ ಪ್ರಜಾನೆಮ್ಮದಿಯನ್ನು ಕಾಪಾಡುವರೆಂದು ಕೋರಲ್ಪಟ್ಟಿದೆ.

ಅದ್ಭುತವಾದ ಬಲಕಾರಿ ಮತ್ತು ಬಾಯಿನಾತ್ರಹರ.

ಜಿನತಾನ

ಜೀರ್ಣಶಕ್ತಿ ಹುಟ್ಟಿಸುವುದರಲ್ಲಿ ಇದಕ್ಕೆ ಸಮಾನವಾದದ್ದು ಇನ್ನೊಂದಿಲ್ಲ; ಅನ್ನಕೋಶವು ಎಷ್ಟೇ ದುರ್ಬಲವಾಗಿದ್ದರೂ ಅದರ ಕಾರ್ಯಗಳನ್ನು ಸೇರುಸೇರು ಮಾಡುವದಿಲ್ಲ. ಇದರ ಸೇವನೆಯಿಂದ ಎಲ್ಲಾ ರೋಗಗಳನ್ನೂ ಅಂಟದಂತೆ ತಡೆಯಬಲ್ಲದು. ಈ ಭಾಗದಲ್ಲಿ ಇದರ ಗುಣವು ಬಹು ಫಲಕಾರಿಯಾಗಿದೆ. ಇದಲ್ಲದೆ ಇದನ್ನು ಸೇವಿಸುವವರ ಬಾಯಿಯಲ್ಲಿ ಎಲ್ಲಾ ತರದ ದುರ್ನಾತವೂ ಹೋಗಿ ಸುಗಂಧವು ಹುಟ್ಟಿ ಹರ್ಷಕರವಾಗಿದ್ದೀತು.

ಗಂಟಲಿನ ನರಗಳು ಇದರ ಸೇವನೆಯಿಂದ ಬಹಳ ಬಲಗೊಳ್ಳುವವು. ಇದರ ಗುಣವನ್ನು ನೋಡಿ ಉಪನ್ಯಾಸಕರೂ, ನಾಟಕಧಾರಿಗಳೂ, ಸಂಗೀತಗಾರರೂ, ಬೋಧಕರೂ, ವಾಚಾಳಕ ಪ್ರಿಯರೂ ಈ ಮಾತ್ರೆಗಳನ್ನು ಬಹಳವಾಗಿ ಮೋಹಿಸಿ ಪ್ರೀತಿಯಿಂದ ಉಪಯೋಗಿಸುತ್ತಿದ್ದಾರೆ.

ಈ ಮಾತ್ರೆಗಳನ್ನು ಜಪಾನಿನಲ್ಲಿರುವ ಒಸಾಕಾ ಪಟ್ಟಣದ ಮೋರಿಷಿತಾ ಕಂಪನಿಯವರು ತಯಾರುಮಾಡುತ್ತಾರೆ.

ಈ ಮಾತ್ರೆಗಳ	30 ಮಾತ್ರೆಗಳುಳ್ಳ ಪೊಟ್ಟಣಕ್ಕೆ 1½ ಆಣೆ.	65 ಮಾತ್ರೆ ಪೊಟ್ಟಣಕ್ಕೆ 3 ಆಣೆ.
ಕ್ರಯ	195 ,, ಡಬ್ಬಾ ಸಮೇತ 8 ಆಣೆ.	455 ,, ಕನ್ನಡಿ ಡಬ್ಬಾಕ್ಕೆ 1 ರೂಪಾಯಿ.

ಎಲ್ಲಾ ಅಂಗಡಿಗಳಲ್ಲಿಯೂ ವಿಕರಿಯಾಗುವುದು.

ಸೋಲ್ ಏಜಂಟರು:—

ಎಸ್. ವೈದ್ಯ ಮತ್ತು ಕಂಪನಿ,
ಪಾರ್ಕ್‌ಟೌನ್, ಮದ್ರಾಸ್

[156-1]

ಬೆಲೆ ಬಹು ಸುಲಭ. ಪದಾರ್ಥ ಅತ್ಯುತ್ತಮ. ಸಾಮಾನುಗಳಂತೂ ಬಹಳ ಮಜಬೂತಾದವು.

ತತ್ಕಾಲದಲ್ಲಿ ಪ್ರತಿ ಅಂಗಡಿಗಳಲ್ಲಿಯೂ ಅನೇಕ ತರಹ ಹೆಸರಿಲ್ಲದ ಹಾರ್ಮೋನಿಯಂಗಳನ್ನು ತರಿಸಿ ಕೆಲಸಕ್ಕೆ ಪ್ರಯೋಜನವಾಗದೇ ನಿಮ್ಮ ಹಣವನ್ನು ವ್ಯರ್ಥವಾಗಿ ಕಳೆದುಕೊಳ್ಳಬೇಡಿರಿ.

ಹಾಗಾದರೆ ಒಳ್ಳೇ ಬಾಳಿಕೆಬರುವ ಹಾರ್ಮೋನಿಯಂಗಳು ಯಾವವು? ಯಾಕೆ, ಸಂದೇಹವೇನು ? ಈ ಕೆಳಭಾಗದಲ್ಲಿ ವಿವರಿಸಿರುವ "ಮೋಹೆನ್‌ಫ್ಲೂಟ್ ಹಾರ್ಮೋನಿಯಂ" ಗಳನ್ನೂ, "ಮೋಸ್ಲೆಂಫ್ಲೂಟ್ ಹಾರ್ಮೋನಿಯಂ" ಗಳನ್ನೂ ತರಿಸಿ ಪರೀಕ್ಷಿಸಿರಿ.

ನಮ್ಮಲ್ಲಿ ವಿಕ್ರಿಯಾಗುವ ಹಾರ್ಮೋನಿಯಂಗಳು ಮಜಬೂತಾದ ಸಾಮಾನುಗಳಿಂದಲೂ, ಅನೇಕ ದಿವಸಗಳು ಬಾಳಿಕೆಬರುವಂತೆ ಬುದ್ಧಿವಂತರಾದ ಕಾರೀಗಾರರಿಂದ ತಯಾರಾಗಿವೆಯಾದ್ದರಿಂದ ಸರ್ವರೂ ಇದನ್ನೇ ಮೋಹಿಸಿಕೊಂಡು ಕೊಳ್ಳುತ್ತಲಿದಾರೆ. ಮತ್ತು ಪರಸ್ಥಳಕ್ಕೆ ರವಾನಿಸುವಾಗ್ಗೆ ನಾವು ಖುದ್ದು ಅಜಮಾಯಿಷಿಮಾಡಿ ಒಳ್ಳೇದಾದ್ದನ್ನೇ ರವಾನಿಸುತ್ತಲಿದೇವೆಯಾದ್ದರಿಂದ ಪ್ರತಿ ನಿತ್ಯವೂ ಆರ್ಡರ್‌ಗಳು ಬರುತ್ತಲಿವೆ.



ನಂ. 1.	(Moslem flute) ಮೋಸ್ಲಿಂ ಫ್ಲೂಟ್ ಸಿಂಗಲ್ ರೀಡ್ ಹಾರ್ಮೋನಿಯಂ 1 ಕ್ಕೆ	ರೂ. 35-0-0
ನಂ. 2.	(Mohen flute) ಮೋಹೆನ್ ಫ್ಲೂಟ್ ಸಿಂಗಲ್ ರೀಡ್ ಹಾರ್ಮೋನಿಯಂ 1 ಕ್ಕೆ	37-8-0
ನಂ. 3.	(Mohen flute) ಮೋಹೆನ್ ಫ್ಲೂಟ್ ಸಿಂಗಲ್ ರೀಡ್ ಅತ್ಯುತ್ತಮವಾದ ಹಾರ್ಮೋನಿಯಂ 1 ಕ್ಕೆ	42-8-0
ನಂ. 4.	(Moslem flute) ಡಬ್ಬಲ್ ರೀಡ್ಸ್ ಮೋಸ್ಲಿಂ ಫ್ಲೂಟ್ ಹಾರ್ಮೋನಿಯಂ 1ಕ್ಕೆ	47-8-0
ನಂ. 5.	(Mohen flute) ಡಬ್ಬಲ್ ರೀಡ್ಸ್ ಮೋಹೆನ್ ಫ್ಲೂಟ್ ಅತ್ಯುತ್ತಮವಾದ ಹಾರ್ಮೋನಿಯಂ 1 ಕ್ಕೆ	52-8-0

ಸೂಚನೆ.—ಹಾರ್ಮೋನಿಯಂಗಳಿಗೆ ಆರ್ಡರ್ ಕೊಡತಕ್ಕ ಪ್ರತಿಯೊಬ್ಬರೂ 5 ರೂಪಾಯಿ ಅಡ್ವಾನ್ಸು ಕಳಿಸಬೇಕು. ಬಾಕೀ ಮೊಬಲಗಿಗೆ ರೈಲ್ವೆ ರಶೀತಿಯನ್ನು ವಿ. ಪಿ. ಮೂಲಕ ರವಾನಿಸಲಾಗುತ್ತೆ.

ನೆಪ್ಚೂನ್ ಫೌಂಟೆನ್ ಪೆನ್‌ಗಳು.

ಪ್ರತಿಯೊಂದು ಪೆನ್‌ಗಳಿಗೂ 14 ಕ್ಯಾರೆಟ್ ಚಿನ್ನದ ಮುಳ್ಳುಗಳನ್ನು ಹಾಕಿದೆ. ಮತ್ತು ಕ್ರಯಕ್ಕೆ ತಕ್ಕ ಹಾಗೆ 4 ವರುಷದ ಲಾಗಾಯ್ತು 8 ವರುಷದ ವರೆಗೂ ಏಟ್ಟು ಕೆಡುವುದಿಲ್ಲ. ಪ್ರತಿಯೊಂದು ಪೆನ್ನಿಗೂ ಕೋಟಿನ ಜೇಬಗ ಸಿಗಲುಹಾಕಿಕೊಳ್ಳುವ ಕ್ಲಿಪ್ ಒಂದು, ಪೆನ್‌ಗಳಿಡುವ ಅಂದವಾದ ಪೆಟ್ಟಿ ಒಂದು, ಶಾಯಿ ಹಾಕುವ ಗಾಜಿನ ಟ್ಯೂಬ್ ಒಂದು, ಪೆನ್‌ಗಳಿಗೆ ಶಾಯಿ ಹಾಕುವ ವಿವರದ ಪ್ರಿಂಟಾದ ಚೀಟಿ ಒಂದು, ಇಷ್ಟನ್ನೂ ಉಚಿತವಾಗಿ ರವಾನಿಸುತ್ತೇವೆ.

ನಂ. 200 ನೆಪ್ಚೂನ್ 14 ಕ್ಯಾರೆಟ್ ಮುಳ್ಳು ಹಾಕಿದ್ದು ಕ್ರಯ	ರೂ. 1-14-0
ನಂ. 205 ನೆಪ್ಚೂನ್ 14 ಕ್ಯಾರೆಟ್ ಮುಳ್ಳು ಹಾಕಿದ್ದು ಕ್ರಯ	,, 2-10-0
ನಂ. 210 ನೆಪ್ಚೂನ್ 14 ಕ್ಯಾರೆಟ್ ಮುಳ್ಳು ಹಾಕಿದ್ದು ಕ್ರಯ	,, 4-2-0
ಫೌಂಟೆನ್ ಪೆನ್‌ಗಳಿಗೆ ಹಾಕುವ ಸ್ಟಾರ್ ಇಂಕು ಶೀಸೆ 1ಕ್ಕೆ	,, 0-8-0

[158-1] ನಮ್ಮ ವಿಳಾಸ:—ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕೃಷ್ಣರಾಜಮೊಹಲ್ಲಾ, ಮೈಸೂರು.

ತಪ್ಪಿದರೆ ನಿಮ್ಮ ಹಣ ವಾಪಸು ಮಾಡಲಾಗುವುದು.

ಜೂಲೈ ತಾ. 26 ರ ತನಕ ಕ್ರಯವನ್ನು 4 ನೇ 1 ಭಾಗಕ್ಕೆ ಇಳಿಸಿದೇವೆ. ಪ್ರಪಂಚದಲ್ಲೆಲ್ಲಾ ಪ್ರಖ್ಯಾತಿ ಹೊಂದಿರುವ ನಮ್ಮ ಯೂರ್ದ್ಯೆಕ್ (ಬಲಕಾರಿಯಾದ) ಔಷಧಿಯನ್ನು ಸೇವಿಸಬೇಕು. ಬಲಕಾರಿಗಳೆಂಬ ಔಷಧಗಳಲ್ಲಿ ಇದು ರತ್ನ ದಂಥಾದ್ದು. ಇದು ನೆತ್ತಿಯ ಮತ್ತು ದೇಹದ ಶಕ್ತಿ ಸಾಮರ್ಥ್ಯಗಳನ್ನು ಬಹಳ ವಾಗಿ ಹೆಚ್ಚಿಸಿ, ತುಂಬಾ ಚುರುಕುತನವನ್ನೂ ಹುಮ್ಮಸ್ಸನ್ನೂ ಶಕ್ತಿಯನ್ನೂ ಕೊಡುತ್ತೆ. 4 ರೂಪಾಯಿಗೆ ಬಿಕರಿ ಮಾಡುತ್ತಿದ್ದದ್ದನ್ನು ಈಗ ಜೂಲೈ ತಾ. 30 ರ ತನಕ ರೂ. 1-3-0 ಗೆ ಇಳಿಸಿರುವೆವು. ಪೋಸ್ಟೇಜ್ ಮಾಫಿ. ಪತ್ರವನ್ನು ಇಂಗ್ಲೀಷಿನಲ್ಲೇ ಬರೆಯಿರಿ. ವಿಳಾಸ:—ಯೂರ್ದ್ಯೆಕ್ ಮ್ಯಾನ್ಯುಫ್ಯಾಕ್ಟರಿ, ಚಿತ್ತೂರು, ಉತ್ತರ ಆರ್ಕಾಟು.

[157-1]

ಗೃಹಕೃತ್ಯದ ನೋಟೀಸು.

ಹೊಳೆನರಸೀಪುರದ ಕಸಬಾ ಕೋಟೆಯಲ್ಲಿ ಇರುವ ಯಾದವ ಮಠದ ಬಳಿ ದೊಡ್ಡ ರಂಗಣ್ಣನವರ ಕುಟುಂಬ ತಿಮ್ಮಮ್ಮನು ಇದರಿಂದ ಸಮಸ್ತ ಜನರಿಗೂ ತಿಳಿ ಯಪಡಿಸುವದೇನೆಂದರೆ—ನನ್ನ 2 ನೇ ಮಗ ಗುಂಡಪ್ಪ ಎಂಬ ಸುಮಾರು 16 ವರುಷ ವಯಸ್ಸುಳ್ಳವನು ಕೆಟ್ಟ ಜನಗಳ ಸಹವಾಸದಿಂದ ಸುಮಾರು 5-6 ತಿಂಗ ಳಿಂದ ಬುದ್ಧಿಸ್ಥಿಮಿತವಿಲ್ಲದೆ ಮನೆಯನ್ನು ಬಿಟ್ಟು ಹೋಗಿರುತ್ತಾನೆ. ಆದ್ದರಿಂದ ತನ್ನ ದುರ್ವ್ಯಾಪಾರಗಳಿಗಾಗಿ ಮೇಲ್ಕಂಡ ನನ್ನ 2 ನೇ ಮಗ ಗುಂಡಪ್ಪನು ಮಾಡ ಬಹುದಾದ ಸಾಲಗಳಿಗೆ ನಮ್ಮ ಸ್ವಯಾರ್ಜಿತವಾದ ಕುಟುಂಬದ ಸ್ಥಿರಸ್ವತ್ತು ಚರಸ್ವತ್ತುಗಳ ಮೇಲೆ ಸಾಲಗಳನ್ನು ಯಾರೂ ಕೊಡಕೂಡದು. ಇದರ ಮೇಲೆ ಕೊಡುವದಾದರೆ ಆ ಸಾಲಗಳಿಗೆ ಈ ಕುಟುಂಬದ ಯಾವ ಆಸ್ತಿಯೂ ಎಂದಿಗೂ ಈಡಾಗಲಾರದು ಎಂತ ಈ ಮೂಲಕ ಸಮಸ್ತರಿಗೂ ಎಚ್ಚರಿಕೆ ಕೊಟ್ಟಿರುತ್ತೇನೆ.

[156-1] ತಿಮ್ಮಮ್ಮನ ಗುರ್ತಿನ ರುಜು.

ಪ್ರೊಫೆಸರ್ ಗಜ್ಜಾರರವರ

ಗುಣಕಂಡ ಪ್ರಖ್ಯಾತವಾದ ಔಷಧಗಳು.

ವ್ಯರ್ಥವಾದ ಔಷಧಗಳನ್ನು ಉಪಯೋಗಿಸಿ ಪ್ರಾಣಾಪಾಯಕ್ಕೆ ಗುರಿಯಾ ಗುವುದೇಕೆ? ವಿವೇಕದಿಂದ ತಯಾರುಮಾಡಿರುವ ನಮ್ಮ ಔಷಧಗಳನ್ನು ಸೇವನೆ ಮಾಡಬಾರದೇ?

ಟಾನಿಕ್ ಸೊಲ್ಯೂಷನ್.—ಇದರಲ್ಲಿ ಗ್ಲಿಸರಿನೋಫೇಟ್ಸ್ ಎಂಬ ಅಮೂ ಲ್ಯ ಪದಾರ್ಥಗಳನ್ನು ಹಾಕಿ ತಯಾರುಮಾಡಿದೆ. ಇದು ಬೇಗನೆ ಶರೀರಕ್ಕೆ ಸೇರಿ ಹೋಗುತ್ತೆ. ಆರೋಗ್ಯವನ್ನೂ ಚುರುಕುತನವನ್ನೂ ಶಕ್ತಿಯನ್ನೂ ವೃದ್ಧಿಮಾಡು ವುದು. ನರಗಳ ದುರ್ಬಲವನ್ನೂ ಹೋಗಲಾಡಿಸುವುದರಲ್ಲಿ ಇದು ಬಹಳ ಶ್ರೇಷ್ಠವಾದ ಔಷಧ. ಕ್ರಯ ಸೀಸೆಗೆ 2 ರೂಪಾಯಿ, ಮತ್ತು ರೂ. 1-3-0.

ರಕ್ತಶುದ್ಧಿಗೆ ಮಹೌಷಧ.—ಇದು ರಕ್ತವನ್ನೂ ದೇಹದ ಎಲ್ಲಾ ಭಾಗಗ ಳನ್ನೂ ಶುದ್ಧಿಮಾಡುತ್ತೆ. ಬಹಳ ಚೆನ್ನಾಗಿ ಗುಣಕಂಡ ಔಷಧ. ಕ್ರಯ ಸೀಸೆಗೆ 1 ರೂಪಾಯಿ.

ಲಿವರ್ ಸೊಲ್ಯೂಷನ್.—ಪಿತ್ತಕೋಶದ ಮೇಲೆ ಇದು ಬಹಳ ಚೆನ್ನಾಗಿ ಕೆಲಸಮಾಡೋಣದರಿಂದ ಮಲಬದ್ಧತೆಯುಳ್ಳವರಿಗೆ ಮಹೋಪಕಾರಿಯಾಗಿದೆ. ಜ್ವರಕ್ಕೂ ಇದನ್ನು ಕೊಡುತ್ತಾರೆ. ಇದು ಮನೆಯಲ್ಲಿ ಇಟ್ಟಿರಬೇಕು. ಕ್ರಯ ಸೀಸೆಗೆ ರೂ. 1; ಮತ್ತು ರೂ. 0-10-0.

ಜ್ವರದ ಔಷಧ.—ವಿಷಮಶೀತಜ್ವರ, ಸಿಂಕುಬರುವಜ್ವರ, ಅವಧಿಯಜ್ವರ, ಎಲ್ಲಾ ತರದ ಜ್ವರಗಳಿಗೂ ಇದು ಸಂಜೀವನವಾಗಿದೆ. ಇದು ಕ್ವಿನೈನ್‌ಗಿಂತ ಬಹಳ ಅಗ್ಗ. ಕ್ರಯ ಸೀಸೆಗೆ 10 ಆಣೆ; 4 ಆಣೆ.

ಹುಳುಕಡ್ಡಿ ಔಷಧ.—ಹುಳುಕಡ್ಡಿಯನ್ನು ಖಂಡಿತವಾಗಿ ಗುಣಮಾಡುತ್ತೆ. ಕ್ರಯ ಸೀಸೆಗೆ 4 ಆಣೆ.

ಹಲ್ಲುಪುಡಿ.—ಈ ಪುಡಿಯಿಂದ ಹಲ್ಲು ಉಜ್ಜಿಕೊಂಡರೆ ಬಾಯಿಗೆ ಸುವಾಸನೆ ಕೊಡುತ್ತೆ. ಹಲ್ಲು ಸವೆದು ಕೆಡದಂತೆ ಬಹಳ ಚೆನ್ನಾಗಿಟ್ಟು ಕಾಪಾ ಡುತ್ತೆ. ಕ್ರಯ ಸೀಸೆಗೆ 4 ಆಣೆ; 6 ಆಣೆ; 1 ರೂಪಾಯಿ.

ಇಂಗ್ಲೀಷಿನಲ್ಲೇ ನಮಗೆ ಕಾಗದವನ್ನು ಬರೆಯಬೇಕು.

ಸೋಲ್ ಏಜಂಟರು:—ಎಸ್ ವೈದ್ಯ ಮತ್ತು ಕಂಪನಿ, ಪಾರ್ಕ್ ಟೌನ್, ಮದರಾಸ್

[156-1]

ವೃತ್ತಾಂತ ಪತ್ರಿಕೆ.

—:o:—

ಸನ್ ೧೯೧೪ ನೇ ಇಸವಿ ಜೂಲೈ ತಾ ೧೬ ನೇ ಗುರುವಾರ.

ಲೇಡಿ ಹಾರ್ಡಿಂಗ್‌ರವರ ಮರಣವು.

ಹಿಂದುಸ್ಥಾನದ ಘನವನ್ನೈದಿದ ವೈಸ್‌ರಾಯರವರ ಧರ್ಮ ಪತ್ನಿಯವರಾದ ಲೇಡಿ ಹಾರ್ಡಿಂಗ್‌ರವರು ಕಾಲವಾದರೆಂಬ ದುಃಖಕರವಾದ ಸುದ್ದಿಯನ್ನು ಈ ವಾರ ಪ್ರಕಟಿಸಬೇಕಾಯಿ ತೆಂದು ಬಹಳವಾಗಿ ವಿಷಾದಪಡುತ್ತೇವೆ. ಆಕೆಯವರು ಕೆಲವು ವಾರಗಳ ಹಿಂದೆ ಹಿಂದುಸ್ಥಾನದಿಂದ ಇಂಗ್ಲೆಂಡಿಗೆ ದಯಮಾಡಿ ದರು. ಅಲ್ಲಿ ವೈದ್ಯರು ಅವರಿಗೆ ಏನೋ ಶಸ್ತ್ರಚಿಕಿತ್ಸೆ ಮಾಡಿದ ರೆಂದು ಕಳೆದ ವಾರ ಪ್ರಕಟವಾದ ತಂತೀವರ್ತಮಾನವು ಅನೇಕ ರಲ್ಲಿ ಗಾಬರಿಯನ್ನೂ ಆಶ್ಚರ್ಯವನ್ನೂ ಉಂಟುಮಾಡಿತು. ಮೊದ ಲು ಬಂದ ವರ್ತಮಾನಗಳಲ್ಲಿ ಅವರಿಗೆ ಆರೋಗ್ಯವಾಗುತ್ತಿದೆ ಎಂದು ತಿಳಿಯಿತು; ಆದರೆ ಮೇಲೆ ಕಳೆದ ಶನಿವಾರ ಆಕೆಯವರು 4½ ಗಂಟೆಗೆ ತೀರಿಹೋದರೆಂದು ಪ್ರಕಟವಾಯಿತು. ಮೊನ್ನೆ ಮಂಗಳ ವಾರ ಉತ್ತರಕ್ರಿಯೆಗಳು ನಡೆಯುವಂತೆ ಗೊತ್ತಾಗಿತ್ತು.

ಲೇಡಿ ಹಾರ್ಡಿಂಗ್‌ರವರ ಧೈರ್ಯವೂ ಸದ್ಗುಣವೂ ಸ್ತೋತ್ರಾ ರ್ಹವಾಗಿದ್ದುವು. ನಾನಾ ಅವಗಢಗಳೂ ಗಂಡಾಂತ್ರಗಳೂ ಪ್ರಾ ಪ್ತವಾದಾಗಲೂ ಆಕೆಯವರ ಧೈರ್ಯಸ್ಥೈರ್ಯಾದಿಗಳು ಸ್ವಲ್ಪ ವೂ ಕಂಪಿಸುತ್ತಿರಲಿಲ್ಲ. ನಮ್ಮ ದೇಶದ ಹೆಂಗಸರುಮಕ್ಕಳುಗಳ ಮೇಲೆ ಆಕೆಗೆ ಅಪಾರವಾದ ಪ್ರೇಮವಿದ್ದಿತು. ತಮಗಿದ್ದ ಅಧಿಕಾ ರಸ್ಥಾನದ ಬಲದಿಂದ ಆಕೆಯವರು ಈ ರಾಷ್ಟ್ರದ ಆಸ್ಪತ್ರೆಗ ಳೊಳಗೆ ಸ್ತ್ರೀರೋಗಿಗಳಿಗೆ ನಡೆಯುವ ಚಿಕಿತ್ಸೆ ಶೈತ್ಯೋಪಚಾರಗ ಳನ್ನು ಬಹಳ ಮಟ್ಟಿಗೆ ಚೆನ್ನಾಗಿ ನಡೆಯುವಂತೆ ಮಾಡಿಸಿದರು.

ಇಂಥಾ ಪತ್ನಿಯವರ ವಿಯೋಗದಿಂದ ನಮ್ಮ ವೈಸ್‌ರಾಯಿ ಪ್ರಭುಗಳಿಗೆ ಅಪಾರವಾದ ದುಃಖವು ಪ್ರಾಪ್ತವಾಗಿರುವ ವಿಷಯ ದಲ್ಲಿ ನಮ್ಮಂತೆಯೇ ನಮ್ಮ ವಾಚಕರೆಲ್ಲಾ ಬಹಳವಾಗಿ ಸಂತಾಪ ಪಡುವರೆಂದೂ, ಅವರಿಗೆ ಈ ದುಃಖವನ್ನು ಪರಿಹರಿಸಿ ಸಮಾಧಾನ ವನ್ನುಂಟುಮಾಡಲೆಂದು ಸರ್ವಶಕ್ತನಾದ ದೇವರನ್ನು ಪ್ರಾರ್ಥಿಸು ತ್ತಾರೆಂದೂ ನಂಬುತ್ತೇವೆ.

ಈ ದುಃಖಕರವಾದ ಸುದ್ದಿಯು ತಲುಪಿದ ಕೂಡಲೆ ನಮ್ಮ ಸಂಸ್ಥಾನದ ಸಕಲ ಪಾಠಶಾಲೆಗಳೂ ಆಕೆಯವರ ಜ್ಞಾಪಕಾರ್ಥ ವಾಗಿ ಮೊನ್ನೆ ಮಂಗಳವಾರ ಮುಚ್ಚಲ್ಪಟ್ಟುವು. ಇದಲ್ಲದೆ ನೆನ್ನೆ ಬೆಳಿಗ್ಗೆ ರಾಜಧಾನಿಯ ಮ್ಯುನಿಸಿಪಲ್ ಕೌನ್ಸೆಲರುಗಳು ಟೌನ್ ಹಾಲಿನಲ್ಲಿ ಸ್ಪೆಷಲ್ ಮೀಟಿಂಗನ್ನು ನಡಿಸಿ, ಘನವನ್ನೈದಿದ ವೈಸ್ ರಾಯರವರಿಗೆ ಅವರ ಪ್ರೈವೇಟ್ ಸೆಕ್ರಿಟರಿಯವರ ಮೂಲಕ ಸಂತಾಪಸೂಚಕವಾದ ತಂತೀವರ್ತಮಾನವನ್ನು ಕಳುಹಿಸಿದರು. ಅದರ ಸಾರಾಂಶವೇನೆಂದರೆ—

"ಮೈಸೂರು ಮ್ಯುನಿಸಿಪಲ್ ಕೌನ್ಸೆಲರುಗಳಾದ ನಾವು ಸ್ಪೆಷಲ್ ಮೀಟಿಂಗಿ ನಲ್ಲಿ ಲೇಡಿ ಹಾರ್ಡಿಂಗ್ ರವರ ಮರಣವಾರ್ತೆಯನ್ನು ಕೇಳಿ ಬಹಳವಾಗಿ ದುಃಖ ಪಟ್ಟು, ಆಕೆಯವರು ಮೊನ್ನೆತಾನೇ ನಮ್ಮ ರಾಜಧಾನಿಯಲ್ಲಿ ಕೃಪೆಯಿಟ್ಟು ದಯ ಮಾಡಿದ್ದರಲ್ಲಾ ಎಂದು ವಿಷಾದಪಡುತ್ತಿದೇವೆ. ಘನವನ್ನೈದಿದ ವೈಸ್‌ರಾಯರವ ರಿಗೆ ಈ ವಿಯೋಗದಿಂದ ಉಂಟಾಗಿರುವ ಅಪಾರವಾದ ದುಃಖದಲ್ಲಿ ನಾವೂ ಭಾಗಿಗಳಾಗಿ ಸಂತಾಪಪಡುತ್ತಿರುವೆವು."

ಮೇಲ್ಕಂಡ ತಂತೀವರ್ತಮಾನವು ರಾಜಧಾನಿಯ ಸಮಸ್ತ ಪ್ರಜೆಗಳಲ್ಲೂ ವ್ಯಾಪನೆಯಾಗಿರುವಂಥಾ ದುಃಖವನ್ನೂ ಸಂತಾಪ ವನ್ನೂ ಪ್ರಕಾಶಪಡಿಸುವುದೆಂದು ನಾವು ಚೆನ್ನಾಗಿ ಹೇಳಬಲ್ಲೆವು.

ನ್ಯಾಯವಿಧಾಯಕ ಸಭೆಯಲ್ಲಿ ಬಡ್ಜೆಟ್ಟಿನ ಚರ್ಚೆ.

ಮೈಸೂರು ಗವರ್ನಮೆಂಟಿನವರು ತಯಾರುಮಾಡಿರುವ 1914-15 ನೇ ಸಾಲಿನ ಜಮಾಖರ್ಚಿನ ಅಂದಾಜುಪಟ್ಟಿ(ಬಡ್ಜೆಟ್) ಯನ್ನು ನಾವು ನೋಡಿರುತ್ತೇವೆ. ನ್ಯಾಯವಿಧಾಯಕ ಸಭೆಯಲ್ಲಿ ನಡೆದ ಚರ್ಚೆಗಳು ವರ್ತಮಾನ ಪತ್ರಿಕೆಗಳಿಂದ ಅಲ್ಪಸ್ವಲ್ಪ ಗೊತ್ತಾ ಗಿರುತ್ತದೆ. ಬಡ್ಜೆಟ್ಟಿನಲ್ಲಿ ಸರ್ಕಾರದವರು ಬಹಳ ಹಣಗಳನ್ನು ಹೊಸ ಬಾಬುಗಳ ಖರ್ಚಿಗೆ ಕೊಟ್ಟಿರುವರು. ಇಷ್ಟು ಹಣಗಳೂ ಆವಶ್ಯವೇ ಸರಿ ಎಂದು ಒಪ್ಪಿಕೊಳ್ಳುವೆವು; ಆದರೂ ರೈಲ್ವೆ ಬೆಳವಣಿಗೆಗೂ, ವಿದ್ಯಾಭ್ಯಾಸವನ್ನು ಹರಡುವುದಕ್ಕೂ ಹೆಚ್ಚು ಹಣ ಖರ್ಚುಮಾಡಬೇಕಾಗಿರುವುದೇನೋ ನ್ಯಾಯವೂ ಆವಶ್ಯವೂ ಸಹ ಜವೂ ಆಗಿದೆ. ಸರ್ಕಾರದಲ್ಲಿ ಹಣವಿದೆ; ಇಂಥಾ ಹಣವನ್ನು ನಿರ ರ್ಥಕವಾಗಿ ಬ್ಯಾಂಕಿನಲ್ಲಿ ಕೂಡಿಸಿಟ್ಟುಕೊಂಡು ನೋಡುವುದ ಕ್ಕಿಂತ ಸಂಸ್ಥಾನವನ್ನು ಅಭಿವೃದ್ಧಿಗೆ ತರುವಂಥಾ ಬಾಬುಗಳಿಗೆ ವಿನಿಯೋಗಿಸುವುದು ಎಷ್ಟೋ ಉತ್ತಮ.

ನ್ಯಾಯವಿಧಾಯಕ ಸಭೆಯಲ್ಲಿ ಪ್ರಜಾಪಕ್ಷದ ಮೆಂಬರು ಗಳು ಮಾಡಿದ ಆಕ್ಷೇಪಣೆಗಳು ಮಾರ್ಗದರ್ಶಕಗಳಾಗಿರುವುದಕ್ಕೆ ಪ್ರತಿಯಾಗಿ ಗವರ್ನಮೆಂಟಿನವರ ಏರ್ಪಾಡುಗಳನ್ನು ಖಂಡಿಸುವ ವುಗಳಾಗಿದ್ದುವು. ಎಕ್ಸೈಸ್, ವಿದ್ಯಾಭ್ಯಾಸ, ಸಂಪದಭ್ಯುದಯ ಸಮಾಜ, ಫಾರೆಸ್ಟು, ಕೆರೆಗಳು, ಈ ಬಾಬುಗಳಲ್ಲಿ ಸರ್ಕಾರದವರ ವರ್ತನವನ್ನು ಮೆಂಬರುಗಳು ಬಹಳವಾಗಿ ಖಂಡನೆಮಾಡಿದರೇ ಹೊರತು ಯಾರೂ ಅದಕ್ಕಿಂತ ಉತ್ತಮವಾದ ವರ್ತನವನ್ನು ಸ್ಪಷ್ಟವಾಗಿ ವಿವರಿಸಿ ತೋರಿಸಿಕೊಡಲಿಲ್ಲ. ಕಳೆದ ಸಾಲಿನಲ್ಲಿ ಅಭಿವೃದ್ಧಿಯ ಕಾರ್ಯಗಳಿಗೆ ಸರ್ಕಾರದಿಂದ ಸ್ಯಾಂಕ್ಷನ್ ಆಗಿದ್ದ ಬಹಳ ಹಣಗಳು ಆಯಾ ಕಾರ್ಯಗಳು ನಡೆಯದೆ ಉಳಿದು ಹೋದ ವಿಷಯದಲ್ಲಿ ಮೆಂಬರುಗಳು ವಿಶೇಷ ಆಕ್ಷೇಪಣೆಮಾಡಿ ದರು. ಮೆಂಬರುಗಳು ಮಾಡಿದ ಆಕ್ಷೇಪಣೆಗಳಿಗೆ ಸರ್ಕಾರದ ವರು ಹೇಳಿದ ಸಮಾಧಾನಗಳು ಅಷ್ಟೇನೂ ತೃಪ್ತಿಕರವಾಗಿರಲಿಲ್ಲ. ಮುಖ್ಯವಾಗಿ ಬಡ್ಜೆಟ್ಟು ಅನೇಕ ವೇಳೆ ಸ್ಯಾಂಕ್ಷನ್ ಆಗುವುದೇ ಬಹಳ ತಾಮಸವಾಗಿರೋಣದರಿಂದ ವರುಷ ಹುಟ್ಟುತ್ತಲೇ ಕೆಲಸಗಳನ್ನು ಪ್ರಾರಂಭಿಸಿ ನಡಿಸುವುದಕ್ಕೂ, ಸ್ಯಾಂಕ್ಷನ್ ಆದ ಹಣವನ್ನೆಲ್ಲಾ ವಿನಿಯೋಗಿಸುವುದಕ್ಕೂ ಕಾಲ ಸಾಕಾಗುವುದಿಲ್ಲ.

ಈಗ ಸ್ಯಾಂಕ್ಷನ್ ಆಗಿರುವ ಅಷ್ಟೊಂದು ಹಣಗಳನ್ನೆಲ್ಲಾ ಚಾಲ್ತಿ ಸಾಲಿನಲ್ಲೇ ಖರ್ಚುಮಾಡುವುದು ಸಾಧ್ಯವೆಂಬ ಭಾಗದಲ್ಲಿ ಗವರ್ನಮೆಂಟಿನವರು ಮೆಂಬರುಗಳಿಗೆ ಯಾವ ಭರವಸೆಯನ್ನೂ ಕೊಟ್ಟಿರುವಂತೆ ಕಾಣಲಿಲ್ಲ. ಚಾಲ್ತಿ ಸಾಲು ಪ್ರಾರಂಭವಾಗಿ ಎರ ಡು ವಾರ ಕಳೆಯಿತು; ಸ್ಯಾಂಕ್ಷನ್ ಆಗಿರುವ ಹಣಗಳು ಖರ್ಚು ಮಾಡುವ ಆಯಾ ಬಾಬುಗಳ ಅಧಿಕಾರಿಗಳಿಗೆ ದೊರಕಿರುವುದಿಲ್ಲ. ನಮ್ಮ ಸೀಮೆಯಲ್ಲಿ ಕೂಲಿಕಾರರು ಸಿಕ್ಕುವುದು ಪ್ರಯಾಸವಾಗಿ ರೋಣದರಿಂದ ನಮ್ಮ ಸರ್ಕಾರದವರು ಪ್ರಾರಂಭಿಸಿರುವಂಥಾ ಭಾರೀ ಕೆಲಸಕಾರ್ಯಗಳಿಗೆಲ್ಲಾ ಕೂಲಿಯವರನ್ನು ಹೊರಗಿನಿಂದ ತಂದು ಒದಗಿಸುವುದು ಎಷ್ಟು ಮಟ್ಟಿಗೆ ಸಾಧ್ಯವೋ ನಮಗೆ ತಿಳಿಯದು. ವಿದ್ಯಾಭ್ಯಾಸದ ಇಲಾಖೆಯ ವಿಷಯದಲ್ಲೇನೋ ಕಳೆದ ಸಾಲಿನಲ್ಲಿ ಖರ್ಚಾಗಿರುವುದಕ್ಕಿಂತ ಈ ಸಾಲಿನಲ್ಲಿ ಹೆಚ್ಚು ಹಣವನ್ನು ವಿನಿಯೋಗಿಸಿಕೊಳ್ಳುವುದು ಸಾಧ್ಯವಲ್ಲವೆಂದು ಹೇಳ ಬಲ್ಲೆವು.

ಪ್ರಜಾಪಕ್ಷದ ಮೆಂಬರುಗಳು ನಮ್ಮ ಸೀಮೆಯನ್ನು ಉ ಚ್ಚ್ರಾಯಸ್ಥಿತಿಗೆ ತರಬೇಕೆಂಬ ಉದ್ದೇಶವನ್ನಿಟ್ಟುಕೊಂಡು, ತಮ್ಮ ತಮ್ಮ ಸರಹದ್ದಿನಲ್ಲಿ ಆಗಿಂದಾಗ್ಗೆ ಸಂಚಾರಮಾಡುತ್ತಾ ಸಕ್ಕವಿ ದ್ಯಮಾನಗಳನ್ನೂ ಪ್ರಜೆಗಳ ಸ್ಥಿತಿಗತಿಯನ್ನೂ ಮುಂದಿಟ್ಟುಮಾಡಿ ಕೊಳ್ಳುತ್ತಾ ಬರುವುದನ್ನು ನೋಡಬೇಕೆಂದು ಕುತೂಹಲಪಡು ತ್ತೇವೆ. ವಿದ್ಯೆಯನ್ನು ಹರಡುವುದು ಬಹಳ ಶ್ರೇಯಸ್ಕರವಾದ ದ್ದೆಂದು ಬಹು ಖಂಡಿತವಾಗಿ ಹೇಳಬಲ್ಲೆವು. ಆದರೆ ವಿದ್ಯಾ ಇಲಾಖೆಯಿಂದ ಸಾಧ್ಯವಾಗುವಷ್ಟಕ್ಕಿಂತ ಹೆಚ್ಚಾಗಿ ಆತುರಪಟ್ಟು ಕಾರ್ಯನಡಿಸುವುದು ಎಂದಿಗೂ ಸಾರ್ಥಕವಾಗಲಾರದು. ಮೊದಲು ತರಪೇತಾದ ಉಪಾಧ್ಯಾಯರು ಒದಗಬೇಕು, ಸ್ಕೂಲ್ ಕಟ್ಟಡಗಳಾಗಬೇಕು, ದರ್ಪವುಳ್ಳ ಮೇಲ್ವಿಚಾರಣೆ ಆಗಬೇಕು; ಈ ಮೂರು ಭಾಗಗಳಲ್ಲೂ ಈಗಲೇ ಬಹಳ ಕೊರತೆಗಳುಂಟು. ತರುವಾಯ ಪ್ರಜೆಗಳು ಆರೋಗ್ಯದಲ್ಲಿರುವುದಕ್ಕೆ ತಕ್ಕ ಏರ್ಪಾ ಡುಗಳಾಗಬೇಕು. ಪ್ರತಿ ಒಂದು ಸ್ಥಳದಲ್ಲೂ ಪ್ರಜೆಗಳಿಗೂ ಗೋಕಾಯಿಗಳಿಗೂ ಒಳ್ಳೆಯ ಕುಡಿಯುವ ನೀರನ್ನು ಒದಗಿಸಿಕೊ ಡಬೇಕು. ಆರೋಗ್ಯದ ಇಲಾಖೆಯ ಅಧಿಕಾರಿಗಳು ಪ್ರಜೆಗಳಲ್ಲಿ ಪ್ರೀತಿ, ಭಕ್ತಿ, ಭರವಸೆಗಳನ್ನು ಸಂಪಾದಿಸಿಕೊಂಡವರಾಗಿದ್ದು ಅವರ ಪ್ರೋತ್ಸಾಹದಿಂದ ಗ್ರಾಮಸ್ಥರು ಆರೋಗ್ಯಕರವಾದ ಮನೆ ಗಳನ್ನು ಕಟ್ಟಿಕೊಳ್ಳುವಂತೆಯೂ, ಮನೆಮಠಗಳನ್ನು ಕೊಳಕಿ ಲ್ಲದೆ ಚೊಕ್ಕಟವಾಗಿಟ್ಟುಕೊಳ್ಳುವಂತೆಯೂ ಮಾಡಬಲ್ಲವರಾಗ ಬೇಕು. ಇದಲ್ಲದೆ ಪ್ರತಿ ಒಂದು ಗ್ರಾಮದಿಂದಲೂ ದೊಡ್ಡ ರಸ್ತೆಗೆ ಹೋಗಿ ಸೇರುವಂಥಾ ಹಾದಿ ಆಗಿ, ಇದು ಬಹಳ ಒಳ್ಳೆ ಯ ಸ್ಥಿತಿಯಲ್ಲಿರುವಂತೆ ನೋಡಿಕೊಳ್ಳಬೇಕು. ವಿದ್ಯಾಭ್ಯಾಸ, ಆರೋಗ್ಯದ ಏರ್ಪಾಡು, ಒಳ್ಳೆಯ ನೀರು, ಗಟ್ಟಿಯಾದ ರಸ್ತೆ, ಇಷ್ಟು ಮಾತ್ರ ಲಭ್ಯವಾಗುವ ಪಕ್ಷಕ್ಕೆ ನಮ್ಮ ಸೀಮೆಯು ಚೆನ್ನಾಗಿ ಅಭಿವೃದ್ಧಿ ಹೊಂದುವುದರಲ್ಲಿ ಅಭ್ಯಂತರವಿಲ್ಲ.

ಜಮಾಖರ್ಚಿನ ಅಂದಾಜುಪಟ್ಟಿಗಳ ವಿಷಯದಲ್ಲಿ ಪಕ್ಷಪಕ ಪಕ್ಷಗಳನ್ನು ಹಿಡಿದು ಚರ್ಚೆಮಾಡುವುದರಿಂದ ಎಷ್ಟೋ ಪ್ರಯೋ ಜನವಾಗುತ್ತದೆ. ನಮ್ಮ ಸೀಮೆಯಲ್ಲಿ ಇನ್ನೂ ಅನೇಕ ಪ್ರಜೆಗಳು ಬಡ್ಜೆಟ್ಟನ್ನು ಚೆನ್ನಾಗಿ ಗ್ರಹಿಸಿಕೊಳ್ಳುವುದಕ್ಕೆ ಪ್ರಯತ್ನ ಪಡಬೇ ಕೆಂದು ಹಾರೈಸುತ್ತೇವೆ.

ಮೈಸೂರು ಸೀಮೆಯ ವ್ಯವಸಾಯವು.

ಮೈಸೂರು ಸಂಸ್ಥಾನದ ಚೈತನ್ಯ, ಕಸುಬುಗಳು, ವ್ಯಾಪಾರ, ಲೇವಾದೇವಿ, ಈ ಮುಂತಾದ ವಿಚಾರಗಳನ್ನು ಮ॥ ವಿ. ಎಸ್. ಸಾಂಬಶಿವ ಅಯ್ಯರ್, ಬಿ.ಎಸ್‌ಸಿ. ರವರು ತನಿಖೆಮಾಡಿ ವಿಷ ಯಗಳನ್ನು ಸಂಗ್ರಹಮಾಡಿ ಒಂದು ದೊಡ್ಡ ಪುಸ್ತಕವನ್ನು ರಚಿಸಿ ದ್ದಾರೆ. ಇವರ ಈ ಕಾರ್ಯವು ತುಂಬಾ ಸ್ತೋತ್ರಾರ್ಹವಾದದ್ದು. ಅದರಲ್ಲಿ ಪ್ರಯೋಜನಕರವಾದ ಅನೇಕ ವಿಚಾರಗಳು ಅಡಗಿರು ತ್ತವೆ. ತನಿಖೆಮಾಡುವಲ್ಲಿ ಅವರಿಗೆ ದೊರೆತ ಸಂಗತಿಗಳು ಖಚಿತ ವಾದವುಗಳಲ್ಲವಾದಕಾರಣ ಈ ಪುಸ್ತಕದಲ್ಲಿ ಬರೆಯಲ್ಪಟ್ಟಿರುವ ವಿಷಯಗಳು ಅದರ ಯೋಗ್ಯತೆಯನ್ನು ಸ್ವಲ್ಪಮಟ್ಟಿಗೆ ಕಡಮೆ ಮಾಡಿರುತ್ತವೆ. ಓದುತ್ತಾ ಬಂದಾಗ ಅಷ್ಟಷ್ಟು ದೂರಕ್ಕೂ "ಬಹುಶಃ," "ಸುಮಾರಾಗಿ" ಎಂಬೀ ರೀತಿಯಾದ ಮಾತು ಗಳೇ ವಿಶೇಷವಾಗಿ ಕಂಡುಬರುವುವು. ಅವರು ಬರೆಯುವ ತೀರ್ಮಾನಗಳನ್ನು ನಂಬುವಾಗ್ಗೆ ವಾಚಕರು ಈ ಭಾಗವನ್ನು ನೆನ ಪಿನಲ್ಲಿಟ್ಟುಕೊಂಡಿರಬೇಕು.

ಈ ಪುಸ್ತಕದಲ್ಲಿ ಲೆಕ್ಕಗಳೂ ತಃಖ್ತೆಗಳೂ ಹೆಚ್ಚಾಗಿರುತ್ತವೆ. ಈ ಲೆಕ್ಕಗಳು ಖರಾವಾರ್ಕಾ ಆಗಿವೆ ಎಂದು ಯಾರು ಹೇಳಬ ಲ್ಲರೋ ನಮಗೆ ತಿಳಿಯದು. ಅವುಗಳನ್ನು ಬಿಟ್ಟರೆ ಬೇರೇ ಲೆಕ್ಕ ಗಳು ದೊರಕುವಹಾಗಿಲ್ಲವಾದದ್ದರಿಂದ ವ್ಯವಸಾಯದ ಉತ್ಪ ನ್ನಗಳ ವಿಷಯದಲ್ಲಿ ಈ ಪುಸ್ತಕದಲ್ಲಿ ಕೊಟ್ಟಿರುವ ಲೆಕ್ಕವು ಬಹು ತರ ಅಷ್ಟೇ ಇರಬಹುದೆಂಬ ಊಹೆಯನ್ನುಂಟುಮಾಡುತ್ತದೆ. ಕೆಲ ವು ಲೆಕ್ಕಗಳಾದರೋ ಸಾಮಾನ್ಯವಾಗಿ ಜನರು ತಿಳಿದುಕೊಂಡಿ ರುವ ಅಭಿಪ್ರಾಯಕ್ಕೆ ವ್ಯತಿರಿಕ್ತವಾಗಿರುವವು.

ಬಹಳ ಪ್ರಾಮುಖ್ಯವಾಗಿ ಸೂಚಿಸಲ್ಪಟ್ಟಿರುವ ಭಾಗವೇನೆಂ ದರೆ, ನಮ್ಮ ಸೀಮೆಯು ವಿಶೇಷವಾಗಿ ವ್ಯವಸಾಯದ ಸೀಮೆ ಯಾಗಿದ್ದರೂ ನಮ್ಮ ಪ್ರಜೆಗಳಿಗೆ ಬೇಕಾಗುವಷ್ಟು ದವಸಧಾನ್ಯ ಗಳನ್ನು ಬೆಳೆಯುವುದಿಲ್ಲ. ಈ ಮಾತನ್ನು ಎಲ್ಲರೂ ನಂಬುತ್ತಾ ರೆಯೋ ಎಂದು ಸಂಶಯಪಡುತ್ತೇವೆ. ಧಾನ್ಯವು ಹೊರಕ್ಕೆ ಸಾಗಿ ಹೋಗುತ್ತಿರುವುದರಿಂದ ಧಾರಣೆ ಹೆಚ್ಚಿದೆ ಎಂದು ಜನರು ಸಾಮಾ ನ್ಯವಾಗಿ ಹೇಳುತ್ತಾರೆ. ಮ॥ ಸಾಂಬಶಿವ ಅಯ್ಯರವರಾದರೋ ಮೈಸೂರಿನಲ್ಲಿ ತಲೆಗೆ ವರುಷಕ್ಕೆ 90 ಸೇರು ಭತ್ತ ಬೇಕೆಂದೂ, ತಲೆಗೆ 80 ಸೇರಿಗಿಂತ ಹೆಚ್ಚು ಬೆಳೆಯಾಗುವುದಿಲ್ಲವೆಂದೂ ಬರೆ ಯುತ್ತಾರೆ. ಆದರೆ ರಾಗಿಯ ವಿಷಯ ಹೀಗಿಲ್ಲ; ಇದು ನಮ್ಮ ಸೀಮೆಯಲ್ಲಿ ಪ್ರಜೆಗಳಿಗೆ ಬೇಕಾಗಿರುವುದಕ್ಕಿಂತ ಸ್ವಲ್ಪ ಹೆಚ್ಚಾ ಗಿಯೇ ಬೆಳೆಯಾಗುತ್ತಿದೆ. ವರುಷಕ್ಕೆ ತಲಾ 100 ಸೇರು ರಾಗಿ ಬೇಕಾಗಿದೆ ಎಂದೂ, 102 ಸೇರು ಬೆಳೆಯಾಗುವುದೆಂದೂ ಕಾಣಿಸಿ ರುವರು. ಜೋಳದ ಬೆಳೆ ಸಾಲದು; ತಲಾ 24 ಸೇರು ಬೇಕಾಗಿರು ವಲ್ಲಿ 21 ಸೇರು ಮಾತ್ರ ಬೆಳೆಯುತ್ತಾರೆ. ಮಿಕ್ಕ ಧಾನ್ಯಾದಿ ಗಳೆಲ್ಲಾ ಬೆಳೆಯುವುದಕ್ಕೂ ಜನಗಳು ಉಪಯೋಗಿಸುವುದಕ್ಕೂ ಸರಿಹೋಗುವುದು.

ನಮ್ಮ ಸೀಮೆಯಲ್ಲಿ ಪ್ರಜೆಗಳಿಗೆ ಬೇಕಾಗಿರುವಷ್ಟು ಬೆಳೆ ಆ ಗುವುದಿಲ್ಲವೆಂಬುವುದನ್ನು ಮ॥ ಅಯ್ಯರವರು ಇನ್ನೊಂದು ರೀತಿ ಯಾಗಿ ತೋರಿಸಿಕೊಟ್ಟಿದ್ದಾರೆ. ಕಳೆದ 1890 ರಿಂದ 1900 ರ ವರೆ ಗೆ ಪ್ರತಿ ವರುಷವೂ ಸರಾಸರಿ ಹಾಕಿ ನೋಡಿದರೆ ಹೊರಗಿನಿಂದ 26 ಲಕ್ಷ ರೂಪಾಯಿನ ಧಾನ್ಯಾದಿ ಆಹಾರ ಪದಾರ್ಥಗಳು ನಮ್ಮ ಸೀಮೆಗೆ ಬಂದಿವೆ ಎಂದೂ, 53 ಲಕ್ಷ ರೂಪಾಯಿನಷ್ಟು ಈ ಸೀ ಮೆಯಿಂದ ಹೊರಕ್ಕೆ ಸಾಗಿಹೋಗಿದೆ ಎಂದೂ ಗೊತ್ತಾಗುವುದು; ಅಂದರೆ 27 ಲಕ್ಷ ರೂಪಾಯಿನ ದವಸ ಆಮದಿಗಿಂತ ಹೆಚ್ಚಾಗಿ ರಫ್ತಾಯಿತು. ಇತ್ತಲಾಗಿ 1901 ನೇ ಇಸವಿಯಿಂದ 1911 ರ ವರೆಗೆ ಹತ್ತು ವರುಷಗಳಲ್ಲಿ ಪ್ರತಿ ವರುಷವೂ ರಫ್ತಿಗಿಂತ ನಮ್ಮ ಸೀಮೆಗೆ ಆಮದಾದ ದವಸಗಳೇ 20 ಲಕ್ಷ ರೂಪಾಯಿನಂತೆ ಹೆಚ್ಚಾಗಿರುತ್ತವೆ. ಇದು ಬಹಳ ಆಶ್ಚರ್ಯಕರವಾದ ವಿಷಯ. ಇದು ನಿಜವಾಗಿರುವ ಪಕ್ಷದಲ್ಲಿ ದವಸ ಹೆಚ್ಚಾಗಿ ನಮ್ಮ ಸೀಮೆ ಯಿಂದ ಸಾಗಿಹೋಗುತ್ತಿರುವುದರಿಂದ ಧಾರಣೆಗಳು ಏರಿವೆ ಎಂಬ ಜನರಾಡಿಕೆಯ ಮಾತಿನಲ್ಲಿ ಸ್ವಲ್ಪವೂ ನಿಜವಿಲ್ಲದೆಹೋಗುತ್ತದೆ.

ಮ॥ ಸಾಂಬಶಿವ ಅಯ್ಯರವರು ನಮ್ಮ ಸೀಮೆಯಲ್ಲಿ ಭತ್ತದ ಬೆಳೆಯನ್ನು ಇನ್ನೂ ಬಹಳವಾಗಿ ಹೆಚ್ಚಿಸಬೇಕೆಂದೂ, ಮಲೆನಾ ಡು ಪ್ರಾಂತ್ಯಗಳನ್ನು ಅಭಿವೃದ್ಧಿಗೆ ತರುವುದಕ್ಕೆ ಸಾಹಸ ಪಡಬೇ

ಎಂದೂ ಸೂಚಿಸುತ್ತಾರೆ. ಆವರು ಕೆಲಸಗಾರರು ಸಿಕ್ಕುವುದು ಪ್ರಯಾಸವೆಂದು ಒಪ್ಪಿಕೊಂಡು, ಯಂತ್ರಗಳನ್ನು ಹೆಚ್ಚಾಗಿ ಉಪಯೋಗಿಸುವುದು ಒಳ್ಳೆಯದೆಂದು ಹೇಳುವರು. ವ್ಯವಸಾಯದಲ್ಲಿ ಲಾಭವಿದೆ ಎಂದು ತೋರಿಸಿಕೊಟ್ಟರೆ ನಮ್ಮ ಸೀಮೆಯಲ್ಲಿ ಹಣ ಒದಗುವುದಕ್ಕೇನೂ ಕಷ್ಟವಿಲ್ಲವೆಂದು ಭರವಸೆ ಕೊಡುತ್ತಾರೆ. ನಮ್ಮನ್ನು ಕೇಳಿದರೆ ಹೊಸ ಏರ್ಪಾಡುಗಳನ್ನು ಚರ್ಚಿಸಿ ಪ್ರಾರಂಭಿಸುವುದಕ್ಕಿಂತ ಮುಂಚೆ ನಮ್ಮ ಗವರ್ನ್‌ಮೆಂಟಿನವರು ಮಾರೀಕಣಿವೆ ತಲಾವಿನ ಕೆಳಗಿರುವ ಜಮೀನುಗಳನ್ನು ಫಲಭರಿತವಾಗಿ ಮಾಡಬೇಕಾಗಿದೆ ಎಂದು ಹೇಳುವೆವು. ಯಾಕೆಂದರೆ ಅಲ್ಲಿ ನೀರಿಗಾಗಲಿ, ಜಮೀನಿಗಾಗಲಿ ಸ್ವಲ್ಪವೂ ಕೊರತೆಯಿಲ್ಲ. ಇವೆರಡನ್ನೂ ಸಾರ್ಥಕಪಡಿಸಿಕೊಳ್ಳಬೇಕಾದ ಪ್ರಯತ್ನಗಳೇ ಆವಶ್ಯಕ.

ಜಂಟಿ ಪಟ್ಟಿಗಳೂ, ಒಟ್ಟು ಸಂಸಾರಗಳೂ ಜಮೀನುಗಳನ್ನು ಸಣ್ಣಸಣ್ಣವಾಗಿ ವಿಭಾಗಮಾಡಿರುತ್ತವೆ. ಸಂಸಾರಗಳಾಗಲಿ ದೇಶವಾಗಲಿ ಅಭಿವೃದ್ಧಿ ಹೊಂದುವುದಕ್ಕೆ ಇದು ಮೊದಲನೇ ತಡೆ. ವಿಸ್ತಾರವಾದ ಜಮೀನುಗಳನ್ನು ಮಾಡಿ ಯಂತ್ರಗಳನ್ನಿಟ್ಟು ವ್ಯವಸಾಯ ಮಾಡುವುದನ್ನು ಪರೀಕ್ಷಿಸಿನೋಡಬೇಕು. ಇಂಥಾ ಪರೀಕ್ಷೆಗೆ ಮಲೆನಾಡು ಬಹಳ ಅನುಕೂಲವಾದ ಪ್ರದೇಶ. ಶಿವಮೊಗ್ಗೆಯಿಂದ ಗೇರುಸೊಪ್ಪೆಕಡೆ, ಆಗುಂಬೆಗೂ ಮೋಟರ್ ಗಾಡಿಗಳ ಟಪ್ಪಾಲನ್ನು ಇಡಿಸಿ, ಪ್ರಜೆಗಳ ಆರೋಗ್ಯಭಾಗ್ಯವನ್ನು ಕಾಪಾಡುವುದಕ್ಕೆ ವೈದ್ಯರನ್ನೂ ಔಷಧಗಳನ್ನೂ ಧಾರಾಳವಾಗಿ ಒದಗಿಸಬೇಕು ಎಂಬದಾಗಿ ಸೂಚಿಸಲ್ಪಟ್ಟಿದೆ.

ಈ ವಿಚಾರಗಳನ್ನು ಸರ್ಕಾರದವರೂ ಪ್ರಜಾಪ್ರಮುಖರೂ ಜಾಗರೂಕತೆಯಿಂದ ಸಾವಧಾನವಾಗಿ ಯೋಚಿಸಿ ಪರೀಕ್ಷೆಗಳನ್ನು ಮಾಡಬೇಕಾಗಿದೆ. ಈ ಅಮೂಲ್ಯವಾದ ಪುಸ್ತಕವನ್ನು ಪ್ರಕಟಮಾಡಿದ್ದಕ್ಕಾಗಿ ನಾವು ಮ|| ಸಾಂಬಶಿವ ಅಯ್ಯರವರನ್ನು ವಂದಿಸುವೆವು. ಈ ಪುಸ್ತಕದಲ್ಲಿ ಸೂಚಿಸಲ್ಪಟ್ಟಿರುವ ವಿಚಾರಗಳನ್ನು ಕುರಿತು ಪುನಹ ಪ್ರಸ್ತಾಪ ಮಾಡಬೇಕೆಂದು ಕುತೂಹಲಪಡುತ್ತೇವೆ.

ಖಾಮನು ಮದ್ಯಪಾನವನ್ನು ನಿಲ್ಲಿಸಿದ್ದು.

ಈತನು ಬೆಚುವಾನದೇಶದಲ್ಲಿ ದೊರೆಯಾಗಿ ಸ್ವಲ್ಪ ಹೆಚ್ಚು ಕಡಮೆ ಇಪ್ಪತ್ತೈದು ವರುಷಗಳು ವಿವೇಕದಿಂದಲೂ ನಾಗರಿಕತೆಯಿಂದಲೂ ರಾಜ್ಯವನ್ನು ಪಾಲಿಸುತ್ತಿದ್ದನು. ಇವನು ಕ್ರೈಸ್ತಭಕ್ತನಾದ್ದರಿಂದ ರಾಜ್ಯವನ್ನೇ ಹೋಗಲಾಡಿಸಿಕೊಳ್ಳುವಷ್ಟು ಕಷ್ಟನಷ್ಟಗಳಿಗೆ ಗುರಿಯಾದನು. ಆದರೂ ಅವನಿಗೆ ಸರ್ವಾಧಿಕಾರ ಬಂದಾಗ ಪ್ರಜೆಗಳು ತನ್ನ ಮತವನ್ನೇ ಅನುಸರಿಸಬೇಕೆಂದು ಅವರನ್ನು ಬಲಾತ್ಕಾರಪಡಿಸಲಿಲ್ಲ. ಆದರೆ ಅವನು ಪ್ರಭುತ್ವಕ್ಕೆ ಬಂದಕೂಡಲೆ ತನ್ನ ಪ್ರಜೆಗಳನ್ನೆಲ್ಲಾ ಸಭೆ ಸೇರಿಸಿ ಅವರ ಎದುರಿಗೆ ತನ್ನ ನಿಜಾಭಿಪ್ರಾಯವನ್ನು ಪರಿಷ್ಕಾರವಾಗಿ ತಿಳಿಸಿದನು. ಆಗ ಅವನು ಅವರಿಗೆ ಹೇಳಿದುದೇನೆಂದರೆ—

ನಾನು ಕ್ರಿಸ್ತನ ಶಿಷ್ಯನಾಗಿದ್ದೇನೆ. ದೇವರು ತನ್ನ ವಾಕ್ಯವಾದ ಬೈಬಿಲೆಂಬ ಪುಸ್ತಕದಲ್ಲಿ ವಿಧಿಸಿರುವ ಆಜ್ಞೆಗಳನ್ನು ತಪ್ಪದೆ ಕೈಕೊಳ್ಳುವದಕ್ಕೆ ಪ್ರಯತ್ನಪಡುತ್ತೇನೆ. ನೀವು ನಿಮ್ಮ ಮೂಢಭಕ್ತಿಯನ್ನು ಅಜ್ಞಾನದ ಆಚಾರಗಳನ್ನೂ ತ್ಯಜಿಸಿ ನಿಜದೇವನ ಭಕ್ತರಾಗಬೇಕೆಂದು ಅಪೇಕ್ಷಿಸುತ್ತೇನೆ. ಆದರೆ ಈ ವಿಷಯದಲ್ಲಿ ನನ್ನ ಅಧಿಕಾರವನ್ನು ಪ್ರಯೋಗಿಸಿ ನಿಮ್ಮನ್ನು ಬಲಾತ್ಕಾರಪಡಿಸುವದೇ ಇಲ್ಲ. ಅಂಥಾ ಕಾರ್ಯಗಳಿಗೆ ಸಹಾಯಮಾಡುವದೂ ಇಲ್ಲ. ನಾನು ಸರ್ವಶಕ್ತನಾದ ದೇವರಿಗೆ ಪ್ರಾರ್ಥನೆಮಾಡಿ ಆತನ ಆಶೀರ್ವಾದವನ್ನು ಪಡೆದು ಬೀಜವನ್ನು ಬಿತ್ತುವೆನು. ನಿಮಗಿಷ್ಟವಿದ್ದರೆ ನೀವೇ ಸ್ವಂತವೆಟ್ಟದಿಂದ ಬೀಜಗಳನ್ನು ಮಂತ್ರಿಸಿ ಬಿತ್ತಿರಿ. ನಾನು ಈ ಪದ್ಧತಿಯನ್ನೂ ಇದೇ ತರದ ಸಕಲ ಮೂಢಪದ್ಧತಿಗಳನ್ನೂ ನಿರಾಕರಿಸುವವನಾಗಿದ್ದೇನೆಂದು ವ್ಯಕ್ತವಾಗಿ ಹೇಳಿದನು.

ಇನ್ನೊಂದು ಮುಖ್ಯಪದ್ಧತಿಯನ್ನು ನಿರ್ದಾಕ್ಷಿಣ್ಯದಿಂದ ದಂಡಿಸಿ ಕಡೆಗೆ ರದ್ದುಮಾಡಿದನು. ಅದು ಯಾವದೆಂದರೆ, ಮದ್ಯಪಾನ. ಇವನು ಚಿಕ್ಕವನಾಗಿರುವಾಗಲೆ ಮದ್ಯಪಾನದಿಂದ ತನ್ನ ದೇಶದ ಜನಗಳು ಕೆಟ್ಟುಹೋಗುತ್ತಿರುವುದನ್ನು ನೋಡಿ ಸಂಕಟಪಟ್ಟು—ನಾನು ಅರಸನಾಗುವಾಗ ನನ್ನ ಪಟ್ಟಣವು ಒಳ್ಳೆಯದಾಗಿರಬೇಕು, ಆದರೆ ಮದ್ಯಪಾನಮಾಡುವ ಜನಗಳುಳ್ಳ ಪಟ್ಟಣವು ಒಳ್ಳೆಯದಾಗಿರಲಾರದು ಎಂದು ಆಗಾಗ್ಗೆ ಹೇಳುತ್ತಿದ್ದನು. ಇವನು ಪೋಷಾಂಗಿನಲ್ಲಿ ಆಳಲಾರಂಭಿಸಿದಾಗ ಮದ್ಯದ ವ್ಯಾಪಾರವನ್ನು ಹುಟ್ಟಡಗಿಸಬೇಕೆಂದು ನಿಶ್ಚಯಿಸಿಕೊಂಡನು. ಅದಲ್ಲದೆ ಪೋಷಾಂಗಿನಲ್ಲಿದ್ದ ಬಿಳೀ ಜನಗಳು ಆಗಿನವರೆಗೂ ನಿರಾತಂಕವಾಗಿ ಈ ದುರ್ವ್ಯಾಪಾರವನ್ನು ನಡಿಸುತ್ತಿದ್ದರು. ಅವರು ಬ್ರಾಂದಿ ಮುಂತಾದ ವಿನಾಶಕರ ಪದಾರ್ಥಗಳನ್ನು ಬಹಳವಾಗಿ ತರಿಸಿ ಯಥೇಚ್ಛವಾಗಿ ಮಾರಿ ತಾವೂ ಕುಡಿಯುತ್ತಿದ್ದರು. ಇದರಿಂದ ವ್ಯಭಿಚಾರ ನರಹತ್ಯ ಮುಂತಾದ ಕ್ರೂರಕೃತ್ಯಗಳೂ ಅಪಸ್ಮಾರ ಮುಂತಾದ ರೋಗಗಳೂ ಪ್ರಜೆಗಳಲ್ಲಿ ಹೆಚ್ಚಿದವು. ಕಪ್ಪುಜನಗಳು ಬಿಳೀಜನಗಳ ದುಷ್ಟನೀತಿಯನ್ನು ಹಿಡಿದು ತಮ್ಮ ಸಂಪಾದನೆಯನ್ನೆಲ್ಲಾ ತಮ್ಮನ್ನು ಕೆಡಿಸಿಕೊಳ್ಳುವುದಕ್ಕೆ ವ್ಯಯಮಾಡುತ್ತಿರುವುದನ್ನು ಖಾಮನು ನೋಡಿ—ಇದರಿಂದ ವಿನಾಶವೇ ಆಗಲಿ ಇದನ್ನು ನಿಲ್ಲಿಸೇ ನಿಲ್ಲಿಸುವೆನೆಂದು ದೃಢಸಂಕಲ್ಪಮಾಡಿಕೊಂಡನು.

ಮತ್ತು ಇದಕ್ಕಾಗಿ ಅವನು ಬಿಳೀ ಜನರಾದ ವರ್ತಕರನ್ನು ಕರಿಸಿ, ನೀವು ಸಾರಾಯಿ ಮಾರಬೇಕೂಡದೆಂದು ಆಜ್ಞಾಪಿಸಿದನು. ಅವರು—ನಾವು ಇನ್ನು ಮೇಲೆ ಅದನ್ನು ಮಾರುವುದಿಲ್ಲ. ಆದರೆ ನಮ್ಮ ಸ್ವಂತ ಉಪಯೋಗಕ್ಕಾಗಿ ಮಾತ್ರ ಬ್ರಾಂದಿ ತರಿಸಿಕೊಳ್ಳುವುದನ್ನು ಅಡ್ಡಿಮಾಡಕೂಡದೆಂದು ಬೇಡಿಕೊಂಡರು. ಅದಕ್ಕೆ ಅರಸನು—ಒಳ್ಳೇದು. ನೀವು ಸ್ವಲ್ಪವಾಗಿ ತರಿಸಿಕೊಂಡು ಬಳಸಿದರೆ ಚಿಂತೆಯಿಲ್ಲ. ಅಮಲೇರುವ ಹಾಗೆ ಕುಡಿಯಕೂಡದೆಂದು ಆಜ್ಞಾಪಿಸಿ ಕಳುಹಿಸಿದನು. ಆದರೆ ಒಂದು ವಾರ ಪೂರೈಸುವದರೊಳಗಾಗಿ ಬಿಳೀ ಜನಗಳಲ್ಲಿ ಅನೇಕ ವ್ಯಾಪಾರಿಗಳು ವಿಪಾಕೋರರಾಗಿದ್ದದ್ದು ಸ್ಪಷ್ಟವಾಗಿ ಕಂಡುಬಂದದ್ದರಿಂದ ಆ ಬಿಳೀ ಜನಗಳನ್ನು ಕರಿಸಿ—ನೀವು ನಿಮ್ಮ ಆಸ್ತಿಪಾಸ್ತಿಗಳನ್ನೆಲ್ಲಾ ತೆಗೆದುಕೊಂಡು ಇಲ್ಲಿಂದ ಹೊರಟುಹೋಗಿರಿ. ನಿಮಗೆ ನಾಚಿಕೆಯಾಗುವದಿಲ್ಲವೇ? ನಿಮ್ಮಿಂದ ನಮಗೆ ದೇವರ ವಾಕ್ಯವು ಲಭ್ಯವಾಯಿತು. ನನ್ನ ಪ್ರಜೆಗಳು ದೇವರ ವಾಕ್ಯದ ಪ್ರಕಾರ ನಡೆಯಬೇಕೆಂದು ನಾನು ಪ್ರಯತ್ನಿಸುತ್ತಾ ಇದ್ದೇನೆ. ಆದರೆ ನನ್ನ ಪ್ರಜೆಗಳು ಎಂದಿಗೂ ಅರಿಯದ ದುಷ್ಟನೀತಿಗಳನ್ನು ನೀವು ಅವರಿಗೆ ಕಲಿಸುತ್ತಿದ್ದೀರಿ. ಇದು ನಿಮಗೆ ಸರಿಯೇ? ಎಂದು ಗದರಿಸಿ ಓಡಿಸಿದನು. ಹೀಗೆ ಬ್ರಾಂದಿಯನ್ನೂ ಸ್ಥಳದಲ್ಲಿಯೇ ಸಿದ್ಧಪಡಿಸುತ್ತಿದ್ದ ಬೀರ್ ಎಂಬ ಸಾರಾಯಿಯನ್ನೂ ಮಾರಕೂಡದೆಂದು ಖಾಮನು ನಿಲ್ಲಿಸಿದನು. ಇದರಿಂದ ಖಾಮನ ಪ್ರಭುತ್ವದಲ್ಲಿ ಪ್ರಜೆಗಳು ಸುಖವಾಗಿ ಬಾಳುವುದು ಸಾಧ್ಯವಾಯಿತು.

ಖಾಮನು ಪ್ರಯಾಸಿಯೂ ಮತ್ತು ನೀತಿವಂತನೂ ಆಗಿದ್ದನು. ಅವನು ಬೆಳಗಿನ ಜಾಮಕ್ಕೆ ಎದ್ದು ತನ್ನ ಜನಗಳನ್ನು ಸೇರಿಸಿಕೊಂಡು ಅವರೊಂದಿಗೆ ದೇವರಿಗೆ ಪ್ರಾರ್ಥನೆಯನ್ನು ಸಮರ್ಪಿಸಿ ಅನಂತರ ಪ್ರಜೆಗಳ ಅಹವಾಲನ್ನು ಕೇಳಿ ಅವರ ವ್ಯಾಜ್ಯಗಳನ್ನು ಹರಿಸುವನು. ಅಪರಾಧಿಗಳನ್ನು ದಂಡಿಸುವನು. ಇವೇ ಮುಂತಾದ ರಾಜಕೀಯ ಕೆಲಸಗಳನ್ನು ಮುಗಿಸಿದ ನಂತರ ಉಳಿದ ಕಾಲವನ್ನು ವಿಸ್ತಾರವಾಗಿರುವ ತನ್ನ ತೋಟಗಳನ್ನು ವ್ಯವಸಾಯಮಾಡುವದರಲ್ಲಿಯೂ ದನಕರುಗಳ ನಿಗಾವಣೆಯಲ್ಲಿಯೂ ವ್ಯಯಮಾಡುವನು.

ಈ ಸೀಮೆಯಲ್ಲಿ ಅನೇಕ ಮಂದಿ ಇನಾಮ್‌ದಾರರೂ ಜಹಗೀರ್‌ದಾರರೂ ಇದ್ದಾರೆ. ಮಲೆನಾಡು ಪ್ರಾಂತ್ಯದಲ್ಲಿ ಒಬ್ಬೊಬ್ಬ ಗೌಡರು ಅನೇಕ ಎಕರೆಗಳ ಖಾವಂದರಾಗಿ ನೂರಾರು ರೂಪಾಯಿ ಕಂದಾಯವನ್ನು ಕೊಡುವವರಾಗಿದ್ದಾರೆ; ಇವರ ಕೈಕೆಳಗೆ ಅನೇಕ ಮಂದಿ ಕೂಲಿಕಾರರು ಇದ್ದಾರೆಂತಲೂ ಅವರಲ್ಲಿ ಅನೇಕರು ಮದ್ಯಪಾನ ಮುಂತಾದ ದುರಭ್ಯಾಸಗಳಿಗೆ ಸಿಕ್ಕಿ ಕೆಟ್ಟುಹೋಗುತ್ತಿದ್ದಾರೆಂತಲೂ ಆಗಾಗ್ಯೆ ಕೇಳುತ್ತೇವೆ. ಇಂಥಾ ಕಡೆಗಳಲ್ಲಿ ಇನಾಮ್‌ದಾರರೂ ಜಹಗೀರ್‌ದಾರರೂ ಸಾಹುಕಾರರೂ ಖಾಮನ ಮೇಲ್ಪಂಕ್ತಿಯನ್ನು ಕೈಕೊಂಡು ಮದ್ಯಪಾನವನ್ನು ತಾವೇ ಮೊಟ್ಟಮೊದಲು ಸಂಪೂರ್ಣವಾಗಿ ವಿಸರ್ಜಿಸಿ ಅನಂತರ ತಮ್ಮ ಕೈಕೆಳಗಿನ ಪ್ರಜೆಗಳಿಗೆ ತಕ್ಕ ಬುದ್ಧಿಯನ್ನು ಹೇಳಿ ಮದ್ಯಪಾನದ ಹಾನಿಯನ್ನು ನಿಲ್ಲಿಸಬೇಕೆಂದು ಪ್ರಾರ್ಥಿಸುತ್ತೇವೆ.

ನಂಜನಗೂಡಿನಲ್ಲಿ ನಡೆದ ಅನಾಹುತವು.

ಉತ್ಸವಕಾಲದಲ್ಲಿ ತೆಪ್ಪವು ಮುಳುಗಿ ಐದು ಮಂದಿ ಸತ್ತರು.

ಇದೇ ಜೂಲೈ ತಾ. 12 ನೇ ಭಾನುವಾರ ಸಾಯಂಕಾಲ 7 ಘಂಟೆಯಲ್ಲಿ ತೆಪ್ಪವು ದೇವರ ಸಮೇತ ಮುಳುಗಿಹೋಯಿತು. ಆ ಕಾಲದಲ್ಲಿ ತೆಪ್ಪದ ಮೇಲೆ ಹೆಚ್ಚು ಜನರಿರಲಿಲ್ಲ. ಇದ್ದವರಲ್ಲಿ ಇಬ್ಬರು ಬೆಸ್ತರೂ, ಮೂರು ಮಂದಿ ಬಾಲಕರೂ ಒಟ್ಟು ಐದು ಮಂದಿ ಕಾಲವಾದರು. ಅಲ್ಲಿಯೇ ಕತ್ತಿನ ಉದ್ದದವರೆಗೂ ನೀರಿನಲ್ಲಿ ನಿಂತಿದ್ದ ಅರ್ಚಕರನ್ನೂ, ಕೆಪ್ಪಯ್ಯನೆಂಬ ಮಠಪತಿಯವರನ್ನೂ ಸಹ ಅಶ್ವತ್ಥಶೆಟ್ಟಿ ಎಂಬ ವೈಶ್ಯರವನು ಎಳೆದು ತಂದು ದಡವನ್ನು ಸೇರಿಸಿದನು.

ಈ ದುಃಖಕರವಾದ ಅನಾಹುತವು ನಡೆದಾಗ ಅಮಲ್ದಾರರು ಜ್ವರಪೀಡಿತರಾಗಿ ಊರಿಗೆ ಒಂದು ಮೈಲಿ ಇರುವ ಅವರ ಮನೆಯಲ್ಲಿದ್ದರು. ಆಗಮಿಕರೂ ಸಹ ಕಾಯಿಲೆಯಿಂದ ಹಾಸಿಗೆಯನ್ನು ಹಿಡಿದಿದ್ದರು. ಪೇಷ್ಕಾರರು ರಜಾದ ಮೇಲೆ ಮೈಸೂರಿಗೆ ಹೋಗಿದ್ದರು. ಸಬ್ ಡಿವಿಜನ್ ಆಫೀಸರು ಬೆಂಗಳೂರಿಗೆ ಹೋಗಿದ್ದರು. ಇದು ನಡೆದ ಅರ್ಧ ಘಂಟೆಗೆ ಮೊದಲು ಪೋಲೀಸ್ ಇನ್ಸ್‌ಪೆಕ್ಟರು ಬಂದು ಸೇರಿದರು. ಆ ಮೇಲೆ ಅಮಲ್ದಾರರು ಬಂದರು.

ಹಿಂದಿನ ದಿನವೇ ದೋಣಿಯು ಅಪಾಯಕರವಾದ ಸ್ಥಿತಿಯಲ್ಲಿದ್ದಿತೆಂದು ಗೊತ್ತಿದ್ದಿತಂತೆ! ಇಂತಹ ಉತ್ಸವ ಕಾಲದಲ್ಲಿ ಜವಾಬ್ದಾರರಾದ ನೌಕರರ್ಯಾರೂ ಅಲ್ಲಿ ಇಲ್ಲದಿದ್ದುದೊಂದೇ ವಿಷಾದಕರವು.

ತಂತೀ ವರ್ತಮಾನದಂತೆ ಡೆಪ್ಯುಟಿ ಕಮಿಷನರ್‌ರವರೂ, ಪೋಲೀಸ್ ಸೂಪರಿಂಟೆಂಡೆಂಟರೂ ಮೋಟರಿನಲ್ಲಿ ರಾತ್ರಿ 10½ ಘಂಟೆಗೆ ಬಂದರು. ಈ ಮಧ್ಯೆ ಸರಾಫ್ ಯೋಗಾನರಸಿಂಹಯ್ಯನವರೂ, ವೆಂಕಟಪ್ಪನೆಂಬುವರೂ ಈಜುಬಿದ್ದು ಹೋಗಿ ದೇವರ ವಿಗ್ರಹವು ಮುಳುಗಿದ್ದ ಸ್ಥಳವನ್ನು ನೋಡಿಕೊಂಡು ಬಂದಿದ್ದರು. ಒಂದು ಕಂಬವನ್ನು ಗುರ್ತಾಗಿ ನಂದುಕಟ್ಟಿದರು. ಆ ರಾತ್ರಿಯೆಲ್ಲಾ ಊಟವೂ ಇಲ್ಲದೆ ಬಹು ಜನರು ಹೊಳೆಯ ದಡಿಯಲ್ಲೇ ಇದ್ದರು.

ಮರುದಿನ ಬೆಳಿಗ್ಗೆ (ಸೋಮವಾರ) 8 ಘಂಟೆಗೆ ದೇವರ ವಿಗ್ರಹವು ಸಿಕ್ಕಿ ಮೇಲಕ್ಕೆ ತರಲ್ಪಟ್ಟಿತು. ವಿಚಾರಮಾಡಿದ್ದರಲ್ಲಿ ಸುಮಾರು ಏಳುನೂರು ರೂಪಾಯಿ ಬೆಲೆ ಬಾಳುವ ಆಭರಣಗಳೇ ಮುಂತಾದ ವಸ್ತುಗಳು ನಷ್ಟವಾದವೆಂದು ಕೇಳುತ್ತೇನೆ. ಮುಂದಿನ ವಿಚಾರಣೆಯು ನಿರೀಕ್ಷಣೀಯವಾಗಿದೆ.

ವಾತ್ತಾದಾರ್.

[ಈ ತೆಪ್ಪೋತ್ಸವ ಕಾಲದಲ್ಲಿ ತೆಪ್ಪಕ್ಕೆ ಹಗ್ಗವನ್ನು ಕಟ್ಟಿ ತೆಪ್ಪವನ್ನು ಸ್ವಲ್ಪ ದೂರ ನದಿಯ ಮೇಲೆ ಎಳೆಯುವುದು ಪದ್ಧತಿ. ಅದರಂತೆ ಈ ತೆಪ್ಪಕ್ಕೆ ಕಟ್ಟಿದ್ದ ಹಗ್ಗವು ಎಳೆಯುವಾಗ್ಗೆ ಅಕಸ್ಮಾತ್ತಾಗಿ ಕಿತ್ತುಹೋಯಿತೆಂದೂ, ಕೂಡಲೇ ಪ್ರವಾಹದ ಮೇಲ್ಗಡೆ ಅಡ್ಡಸ್ತಿದ್ದ ಆ ಭಾರವುಳ್ಳ ತೆಪ್ಪವು ಒಂದು ಕಡೆಗೆ ಹೊರಳಿದ ದೆಸೆಯಿಂದ ನದಿಯಲ್ಲಿ ಅನಾಮತ್ತಾಗಿ ಮಗುಚಿ ಮುಳುಗಿಕೊಂಡಿತೆಂದೂ ತಿಳಿಯಬಂದಿದೆ.—ಎಡಿ.]

ಒಳದೇಶದ ವೃತ್ತಾಂತಗಳು.

ಈ ವಾರ ನಮ್ಮ ಪತ್ರಿಕೆಯು ಹತ್ತು ಪುಟಗಳುಳ್ಳದ್ದಾಗಿದೆ.

* * *

ರಾಜಧಾನಿಯ ಕೋಟೆ ವರಾಹಸ್ವಾಮಿ ದೇವಸ್ಥಾನದೊಳಗೆ ಸುಮಾರು 10-12 ದಿನಗಳಲ್ಲಿ ಕಂಚಿನ ಗರುಡಗಂಬವು ಮುರಿದು ಬಿದ್ದುಹೋಯಿತು.

* * *

ಮದರಾಸ್ ಆಧಿಪತ್ಯದ ಗವರ್ನರವರಾದ ಲಾರ್ಡ್ ಪೆಂಟ್ಲೆಂಡ್‌ರವರು ಕಳೆದ ಸೋಮವಾರ ಬೆಳಿಗ್ಗೆ ಬೆಂಗಳೂರಿಗೆ ದಯಮಾಡಿ ಒಂದು ದಿನ ರೆಸಿಡೆಂಟರವರ ಆತಿಥ್ಯವನ್ನು ಸ್ವೀಕರಿಸಿ ತೆರಳಿದರು.

* * *

ರಾಜಕಾರ್ಯ ಪ್ರಸಕ್ತ ರಾಯಬಹದ್ದೂರ್ ಮ|| ಎಂ. ಮುತ್ತಣ್ಣನವರಿಂದ ಮ|| ಎಂ. ಜಿ. ರಾಮರಾಯರು ಮೈಸೂರು ಫಾರೆಸ್ಟುಗಳ ಕನ್ಸರ್ವೇಟರ್ ಕೆಲಸದ ಛಾರ್ಜನ್ನು ಜೂಲೈ ತಾ. 1 ರಲ್ಲಿ ವಹಿಸಿಕೊಂಡಿದಾರೆ.

* * *

ಬೆಂಗಳೂರು ದಂಡಿನಲ್ಲಿರುವ ಮಿ|| ಅಬ್ದುಲ್ ಸತಾರ್ ಸಾಹೇಬರು ಭಾರೀ ಬೆಲೆಕೊಟ್ಟು ಕೊಂಡು ತಂದಿದ್ದ ಜೋಡಿನ ಕುದುರೆಯು ಎಡವಿ ಗಾಯಪಟ್ಟದ್ದರಿಂದ ಅವರು ಕಳೆದ ವಾರ ಅದನ್ನು ಗುಂಡಿನಿಂದ ಹೊಡೆದು ಕೊಂದುಹಾಕಿದರು.

* * *

ಬೆಂಗಳೂರು ಹೆಬ್ಬಾಳದ ವ್ಯವಸಾಯ ಸ್ಕೂಲಿನ ವಿದ್ಯಾರ್ಥಿಗಳು ಹಿಂದಿನ ಬುಧವಾರ ಮೊದಲನೇ ವರುಷದ ಸಂತೋಷ ಕೂಟವನ್ನು ನಡಿಸಿದರು. ವಿದ್ಯಾರ್ಥಿಗಳೂ ಫಾರಂ ಆಳುಗಳೂ ನಾನಾ ಪಂದ್ಯಗಳಲ್ಲಿ ಸೇರಿ ಸಂತೋಷಪಟ್ಟ ಮೇಲೆ ಗೆದ್ದವರಿಗೆ ಡಾಕ್ಟರ್ ಕೋಲ್‌ಮನ್‌ರವರು ಬಹುಮಾನಗಳನ್ನು ಹಂಚಿದರು.

* * *

ಕಾಕ್ಸ್‌ಟಾನಹಳ್ಳಿ ತಾಲ್ಲೂಕು ಪಾರೇಹಳ್ಳಿಯಲ್ಲಿ ಚಿಕ್ಕ, ಬೋರಿ ಎಂಬಿಬ್ಬರು ಸೇರಿ ಟಕವಿ ಎಂಬವಳನ್ನು ಕೊಂದುಹಾಕಿದರೆಂದು ಮೊಕದ್ದಮೆ ಆಗಿ ಬೆಂಗಳೂರು ಸೆಷನ್ಸ್ ಜಡ್ಜ್ ಮಿ|| ಆರ್. ಬಿ. ಪ್ಲಮರವರು ದಯಾರ್‌ಸ್ಸಿ ಮಾಡಿದರು. ಚಿಕ್ಕನಿಗೆ ಮರಣದಂಡನೆ ವಿಧಿಸಲ್ಪಟ್ಟಿತು; ಬೋರಿಯನ್ನು ಖುಲಾಸ್‌ಮಾಡಿದರು.

* * *

ಒಂದು ವಾರದಿಂದ ರಾಜಧಾನಿಯಲ್ಲಿ ಪ್ಲೇಗ್ ಉಪದ್ರವು ಪ್ರಾರಂಭವಾಗಿದೆ ಎಂದು ತಿಳಿಸಲು ವಿಷಾದಿಸುತ್ತೇವೆ. ಕೃಷ್ಣರಾಜಮೊಹಲ್ಲಾ ಧೀವಟಿಗೆ ಬೀದಿಯಲ್ಲೂ ಕನ್ನೆಗೌಡನ ಕೊಪ್ಪಲಿನಲ್ಲೂ ಕೆಲವರು ಕಾಯಿಲೆಯಾಗಿ 3-4 ಮಂದಿ ತೀರಿಹೋದರು. ಇನ್ನೂ ಕಾಯಿಲೆಗಳಿವೆ. ಇಲಿಗಳು ಸಾಯುತ್ತಿರುವವು; ಜನರು ಕೂಡಲೇ ಮನೆಗಳನ್ನು ಬಿಡುತ್ತಿದಾರೆ. ಅಲಕ್ಷ್ಯಮಾಡಿದರೆ ಪ್ಲೇಗ್ ಹೆಚ್ಚಿ ಹರಡುವುದಕ್ಕೂ ಮರಣಗಳಾಗುವುದಕ್ಕೂ ಆಸ್ಪದವಾಗೋಣವರಿಂದ ಪ್ರಜೆಗಳು ಎಚ್ಚರಿಕೆಯಾಗಿರಬೇಕೆಂದು ಸೂಚಿಸುತ್ತೇವೆ.

ಮ|| ಜಯಕೃಷ್ಣರಾಯರೆಂಬ ದೇಶೀಯ ಕ್ರೈಸ್ತರು ತಮ್ಮ ಸಣ್ಣ ಮಗನ ಕಾಲು ಊನವಾಗಿರುವುದರಿಂದ ಅದನ್ನು ಸರಿಮಾಡಿಸಿಕೊಂಡು ಬರುವುದಕ್ಕೋಸ್ಕರ ಆ ಮಗನ ಕೂಡ ಕಳೆದ ವಾರ ಆಸ್ಪತ್ರೆಯಾಳ್ಕೆ ಸೇರಿದ ಮಯುನಾ ಪಟ್ಟಣವನ್ನು ಕುರಿತು ಪ್ರಯಾಣಮಾಡಿದರು.

* * *

ಮೈಸೂರು ನಿವಾಸಿಯಾದ ರಂಗರಾಜು ಎಂಬವನ 12 ವರುಷದ ನರಸಿಂಹರಾಜು ಎಂಬ ಹುಡುಗನು ಹೇಳದೆ ಬೆಂಗಳೂರಿಗೆ ಹೋದನು. ಮುದ್ದಯ್ಯ ಆಲಿಯಸ್ ನರಸಿಂಹಯ್ಯನೆಂಬ ಮೈಸೂರಿನವನು ಆ ಹುಡುಗನನ್ನು ಅಟಕಿ ಅವನ ಕಿವಿಯಲ್ಲಿದ್ದ ಹತ್ತಕಡಕನ್ನು ತೆಗೆದುಕೊಂಡು ಈಗ ಪೋಲೀಸಿನವರ ಕೈಗೆ ಸಿಕ್ಕಿದಾನೆ.

* * *

ನಮ್ಮ ಸರ್ಕಾರದವರು ಕೆರೆ ಮತ್ತು ನಾಲೆಗಳ ನೀರಾವರಿಯನ್ನು ನೋಡಿಕೊಳ್ಳುವುದಕ್ಕೂ ಅದನ್ನು ಕ್ರಮಪಡಿಸುವುದಕ್ಕೂ ಸಾಲಿಯಾನಾ 32,000 ರೂಪಾಯಿ ಸಿಬ್ಬಂದಿ ಖರ್ಚಿಟ್ಟು ಒಂದು ಪ್ರತ್ಯೇಕವಾದ ಡಿವಿಜನನ್ನು ಏರ್ಪಾಡುಮಾಡಿ, ಈ ಡಿವಿಜನ್‌ಗೆ ಮ|| ಎಸ್. ಎ. ರಾಮಸ್ವಾಮಯ್ಯಂಗಾರ್ರನ್ನು ಮುಖ್ಯಾಧಿಕಾರಿಯಾಗಿ ನೇಮಕ ಮಾಡಿರುತ್ತಾರೆ.

* * *

ಕಳೆದ ಶನಿವಾರ ಬೆಂಗಳೂರು ಶ್ರೀನಿವಾಸ ಮಂದಿರದ ಸ್ತ್ರೀಶಾಖೆಯವರು ಸಭೆ ಸೇರಿ ಸಭಾಕಾರ್ಯಗಳನ್ನು ಜರುಗಿಸಿದರು. ಶ್ರೀ ಮಹಾಲಕ್ಷ್ಮಮ್ಮನವರು ಗುರು ಎಂಬ ವಿಚಾರವನ್ನು ಕುರಿತು ಉಪನ್ಯಾಸಮಾಡಿ, ಗುರುವಿನಲ್ಲಿ ಸ್ವಾರ್ಥತ್ಯಾಗವೂ ಪರಹಿತವೂ ಪ್ರಧಾನವಾಗಿರಬೇಕೆಂಬ ಅರ್ಥವನ್ನು ವಿವರಿಸಿದರು.

* * *

ರಾಜಧಾನಿಯಲ್ಲಿ ಯಾವಳೋ ಒಬ್ಬ ಪುಣ್ಯಾತಗಿತ್ತಿಯು ಮಗುವನ್ನು ಕೊಂದು ಗಂಡನಿಗೆ ಅಡಿಗೆಮಾಡಿಟ್ಟಳೆಂದು ಮುಂತಾಗಿ ವರ್ತಮಾನ ಹುಟ್ಟಿ ಹಬ್ಬುತ್ತಿದೆ. ಅನೇಕರು ಪೋಲೀಸಿನವರನ್ನೂ ಕೇಳುತ್ತಿದಾರೆ. ಈ ಸುದ್ದಿಯಲ್ಲಿ ಸ್ವಲ್ಪವೂ ನಿಜವಿಲ್ಲ. ಇದನ್ನು ಯಾರು ಹುಟ್ಟಿಸಿದರೆಂದು ಪತ್ತೆಮಾಡುವುದು ಒಳ್ಳೇದು.

* * *

ಬೆಂಗಳೂರು ದಂಡಿನ ಷೇಕ್ ಚಂದ್, ಸಯ್ಯದ್ ಖಾದರ್ ಎಂಬ ಇಬ್ಬರು ಪೋಲೀಸಿನವರು ಒಬ್ಬ ರೆವಿನ್ಯೂ ಅಧಿಕಾರಿಯ ಮನೆಗೂ, ಅಲಸೂರಿನಲ್ಲಿ ಒಂದು ಅಂಗಡಿಗೂ ನುಗ್ಗಿ ಕಳುವುಮಾಡಿದ್ದು ರುಜುವಾತಾದದ್ದರಿಂದ ಡಿ|| ಮ್ಯಾಜಿಸ್ಟ್ರೇಟರು ಕಳೆದ ಶುಕ್ರವಾರ ಅವರಿಬ್ಬರಿಗೂ ತಲಾ ಎರಡು ವರುಷ ಕಠಿಣ ಸಜಾ ವಿಧಿಸಿದರು.

* * *

ಕೌನ್ಸಿಲರಾದ ಸರ್ದಾರ್ ಕಾಂತರಾಜೇ ಅರಸಿನವರಿಗೆ ಸಿ.ಎಸ್.ಐ. ಎಂಬ ಬಿರುದು ಬಂದ ಸಂತೋಷಕ್ಕಾಗಿ ರಾಜಧಾನಿಯ ಪ್ರಜೆಗಳೂ, ಕಾಸ್ಮಾಪಾಲಿಟನ್ ಕ್ಲಬ್ಬಿನ ಮೆಂಬರುಗಳೂ ಅವರನ್ನು ಕರಸಿಕೊಂಡು ಸಂತೋಷಕೂಟಗಳನ್ನು ನಡಿಸಿ ಅವರಲ್ಲಿ ತಮಗಿರುವ ಭಕ್ತಿ ಪ್ರೀತಿಗಳನ್ನು ಪ್ರಕಾಶಪಡಿಸಬೇಕೆಂದು ನಿಶ್ಚಯಿಸಿಕೊಂಡಿದಾರೆ.

* * *

ಕನ್ನಂಬಾಡಿ ತಲಾವಿನ ಅಣೆಕಟ್ಟಿನ ಕಾಮಗಾರಿಯಲ್ಲಿ ತೂಬುಗಳನ್ನು ನಿಲ್ಲಿಸುವ ಕಡೆ ಗೋಡೆಗಳು ಪ್ರವಾಹದ ದೆಸೆಯಿಂದ ತೂತುಬಿದ್ದು ನೀರು ನುಗ್ಗುತ್ತಿದೆ ಎಂದೂ, ನಾರ್ತ್ ಬ್ಯಾಂಕಿನ ಗೋಡೆಯಲ್ಲೂ ಹೀಗೆ ತೂತುಬಿದ್ದು ನೀರು ಹರಿಯುತ್ತಿದೆ ಎಂದೂ, ಇವೆರಡನ್ನೂ ತಡೆಯುವುದಕ್ಕಾಗಿ ಇಂಜನಿಯರುಗಳು ಇತರ ಕೆಲಸಗಳನ್ನು ನಿಲ್ಲಿಸಿ ಕೂಲಿಯವರನ್ನೆಲ್ಲಾ ಬಿಟ್ಟು ಕೆಲಸಮಾಡಿಸುತ್ತಿದಾರೆಂದೂ ಪ್ರಕಟವಾಗಿದೆ.

* * *

ರಾಜಧಾನಿಯ ಕೋಟೆಯಲ್ಲಿ ಲೇಟ್ ದಳವಾಯಿ ದೇವರಾಜೆ ಅರಸಿನವರ ಕಿರಿಯ ಕುಮಾರರು ಕಾಯಿಲೆಯಾಗಿದ್ದು ಮೊನ್ನೆ ಸೋಮವಾರ ಸಂಜೆಹೊತ್ತಿನಲ್ಲಿ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ. ಈ ಹೆಣ್ಣುಮಗುವಿಗೆ ಇನ್ನೂ 14 ವರುಷವಾಗಿತ್ತು. ವಾಯುದೋಷರ ಪ್ರಾಪ್ತವಾಗಿ ಮಾಡಿದ ಚಿಕಿತ್ಸೆಯೆಲ್ಲಾ ವ್ಯರ್ಥವಾಯಿತು. ರಾತ್ರಿ 10 ಗಂಟೆಗೆ ಅರಮನೆಯ ಮರ್ಯಾದೆಗಳ ಸಮೇತ ಶವವನ್ನು ಮೆರವಣಿಗೆಯಲ್ಲಿ ಸಾಗಿಸಿ ದಹನಮಾಡಿದರು. ರಾಜಬಿಂಡಿಯವರೂ, ಕೆಲವು ಅಧಿಕಾರಿಗಳೂ ಶವದ ಕೂಡ ಹೋಗಿಬಂದರು. ಉತ್ತರಕ್ರಿಯಾದಿಗಳು ಬಹು ಉದಾರವಾಗಿ ನಡೆಯುತ್ತಿವೆ.

* * *

ಕೋಲಾರ್ ಚಿನ್ನದ ಗಣಿಗಳಲ್ಲಿ ಈ ವರುಷ ಮೊದಲನೇ ನಾಲ್ಕು ತಿಂಗಳಲ್ಲೂ ಹೋದ ವರುಷ ಅದೇ ನಾಲ್ಕು ತಿಂಗಳಲ್ಲೂ ಉತ್ಪತ್ತಿ ಮಾಡಿಯುವ ಚಿನ್ನದ ಕ್ರಯವನ್ನು ಕೆಳಗಿನ ತಃಖ್ತೆಯಿಂದ ತಿಳಿಯಬಹುದು. ಇದರಿಂದ ಹೋದ ವರುಷಕ್ಕಿಂತ ಈ ವರುಷದ ಉತ್ಪತ್ತಿಯು 2,500 ಪೌಂಡು ಕಡಮೆಯಾಗಿದೆ ಎಂದು ಗೊತ್ತಾಗುವುದು. ಏಪ್ರಿಲ್ ಕಡೇ ಭಾಗದಿಂದ ಶಿವಸಮುದ್ರದಲ್ಲಿ ವಿದ್ಯುಚ್ಛಕ್ತಿಯ ಉತ್ಪತ್ತಿಯು ನೀರು ಸಾಲದೆ ಕಡಮೆಯಾಗಿ, ಗಣಿಗಳಲ್ಲಿ ಯಂತ್ರಗಳನ್ನಿಟ್ಟು ಕೆಲಸಗಳನ್ನು ಮಾಡಿಸುತ್ತಿದಾರೆ. ಪೌಂಡು 1 ಕ್ಕೆ 15 ರೂಪಾಯಿನಂತೆ ಲೆಕ್ಕ ಹಾಕಿಕೊಳ್ಳತಕ್ಕದ್ದು.

	1914	1913
ಜನವರಿ	76,353 ಪೌಂಡು	75,902 ಪೌಂಡು
ಫೆಬ್ರವರಿ	71,469 ,,	71,332 ,,
ಮಾರ್ಚಿ	75,762 ,,	76,466 ,,
ಏಪ್ರಿಲ್	72,709 ,,	75,108 ,,
	2,96,293	2,98,808

* * *

ತಿರುಮಕೂಡ್ಲು ನರಸೀಪುರದ ತಾಲ್ಲೂಕು ಕೃಷ್ಣರಾಜಪುರ ಅಗ್ರಹಾರದೊಳಗೆ ಮ|| ಶ್ರೀನಿವಾಸರಂಗಾಚಾರ್ಯರ ಮನೆಯಲ್ಲಿ ಒಡವೆ, ಹಣ, ಕರೆನ್ಸಿ ನೋಟುಗಳು, ಬಟ್ಟೆಗಳು ಕಳುವಾದ ಸಂದರ್ಭದಲ್ಲಿ ಪೋಲೀಸಿನವರು ಮೂರು ಮಂದಿಯನ್ನು ಹಿಡಿದು ಪತ್ತೆ ತರದೂದು ನಡಿಸುತ್ತಿದ್ದರು. ಈ ಪೈಕಿ ಮರಕೇಸದ ಸಿದ್ದಾಚಾರಿ ಎಂಬುವನು ದಸ್ತಗಿರಿಯಾದ ಏಳು ದಿನಗಳ ಮೇಲೆ ಕಳೆದ ಯುಗಾದಿ ಹಬ್ಬದ ದಿನ ಪೋಲೀಸಿನವರ ಸ್ವಾಧೀನದಲ್ಲಿದ್ದಾಗ ಸತ್ತುಹೋದನು. ಇವನ ರಕ್ತಸಂಬಂಧಿಗಳು ಪೋಲೀಸಿನವರ ಮೇಲೆ ಅವರು ಮೃತನನ್ನು ಹಿಂಸೆಮಾಡಿದ್ದರಿಂದ ಅವನು ಸತ್ತನೆಂದು ಮುಂತಾಗಿ ಅರ್ಜಿ ಹಾಕಿದರು. ಪೋಲೀಸ್ ಅಧಿಕಾರಿಗಳು ತನಿಖೆಮಾಡಿ ಆ ಸಮಯದಲ್ಲಿ ಪೈದಿಗಳ ಮೇಲುಸ್ತುವಾರಿ ಇದ್ದ ನಂಜ, ರಾಚ, ನಂಜುಂಡ, ಪಾಪಾಮಿಯ ಮತ್ತು ದಫೇದಾರ್ ಕೆಪಸಿಪತಯ್ಯ ಎಂಬೀ ಐದು ಮಂದಿಯ ಮೇಲೂ ಇವರು ಮೃತನನ್ನು ಹಿಂಸೆಮಾಡಿದರೆಂದು ಮೊಕದ್ದಮೆ ತಂದಿದ್ದರು. ಇದನ್ನು ಮೈಸೂರು ಸೆಷನ್ಸ್ ಜಡ್ಜ್ ಮಿ|| ಎ ಹಾಜಾ ಹುಸೇನ್ ರವರು ದಯಾರ್ಪ್ತಿಮಾಡಿ ಮೊನ್ನೆ ಮಂಗಳವಾರ ತೀರ್ಮಾನವನ್ನು ಹೇಳಿದರು. ಮೊದಲನೇ ನಾಲ್ಕು ಅಪರಾಧಿಗಳಾದ ನಂಜ, ರಾಚ, ನಂಜುಂಡ, ಮಹಮದ್ ಇಮಾಂ ಅಲಿಯಸ್ ಪಾಪಾಮಿಯ ಎಂಬವರಿಗೆ ತಲಾ ಒಂದು ವರುಷವೂ, ದಫೇದಾರ್ ಕೆಪಸಿಪತಯ್ಯನಿಗೆ ಮೂರು ವರುಷವೂ ಕಠಿಣ ಸಜಾ ವಿಧಿಸಲ್ಪಟ್ಟಿದೆ. ಇದರ ಮೇಲೆ ಇವರೆಲ್ಲಾ ಚೀಫ್ ಕೋರ್ಟಿನಲ್ಲಿ ಅಪೀಲು ಮಾಡುವರೆಂದು ಕೇಳುತ್ತೇವೆ.

ದೊಡ್ಡ ಬಳ್ಳಾಪುರದಲ್ಲಿ ಸಂತೋಷಸಭೆ.

ಕಳೆದ 6 ನೇ ತಾ. ಸೋಮವಾರ ಸಾಯಂಕಾಲ ಹಳೇ ಕಛೇರಿ ಕಟ್ಟಡದಲ್ಲಿ ಈ ಊರಿನ ಪ್ರಮುಖರು ಸುಮಾರು 600 ಮಂದಿವರೆಗೂ ಸಭೆ ಸೇರಿ 40 ವರ್ಷ ವಿದ್ಯಾಭ್ಯಾಸದ ಇಲಾಖೆಯಲ್ಲಿ ಈ ಪೈಕಿ 25 ವರ್ಷ ಈ ಊರಲ್ಲಿ ಹಿಂದುಸ್ಥಾನಿ ಸ್ಕೂಲ್ ಹೆಡ್ ಮಾಸ್ಟರಾಗಿ ಉತ್ತಮವಾದ ಸರ್ವಿಸ್ ಮಾಡಿ ಸೆರ್ಟಿಫಿಕೇಟ್ ಮೇಲೆ ಈಗತಾನೇ ನಿವೃತ್ತರಾಗಿರುವ ಮಿ|| ಬುರಾನುದೀನ್ ಸಾಹೇಬರಿಗೆ ತಮ್ಮ ಮರ್ಯಾದೆ ತೋರಿಸಿದರು. ಸಭೆಯನ್ನು ಮುನ್ಸಿಫ್ ಮ|| ಮಹದೇವಯ್ಯನವರೂ, ಅವರ ಪಕ್ಕದಲ್ಲಿ ಹೆಡ್ ಮಾಸ್ಟರ್ ಬುರಾನುದೀನ್ ಸಾಹೇಬರೂ, ಮತ್ತು ಮುಂದಣ ವಿದ್ಯಾಭ್ಯಾಸಕ್ಕಾಗಿ ಮದರಾಸಿಗೆ ಹೋಗಿರುವ ಡಾಕ್ಟರ್ ವರದಾಚಾರ್ಯರು ಅಲಂಕರಿಸಿದರು. ಸಾಹುಕಾರ್ ಆ. ವೆಂಕಟನಾರಣಶೆಟ್ಟರು ಡಾಕ್ಟರವರ ಉತ್ಕೃಷ್ಟವಾದ ಸೌಮ್ಯತೆ, ಸಾಧಾರಣತ್ವ, ಕನಿಕರ, ದಯೆ, ನಿಸ್ಪೃಹತ್ವಗಳನ್ನು ವರ್ಣಿಸಿ ಅವರಿಗೆ ಸಭಿಕರ ಪರವಾಗಿ ವಂದನೆಗಳನ್ನು ಅರ್ಪಿಸಿದರು. ಸರ್ವರೂ ಅನುಮೋದಿಸಿದರು. ಅನಂತರ ಹೆಡ್ ಮಾಸ್ಟರ್ ಬಿ. ಕೊಂಗಾಡಿಯಪ್ಪನವರು ಮಿ|| ಬುರಾನುದೀನ್ ಸಾಹೇಬರವರ ಶ್ರೇಷ್ಠವಾದ ಸರ್ವಿಸ್ಸನ್ನೂ, ಅವರಿಂದ ತರಪೇತಾಗಿರುವ ಮಕ್ಕಳ ವಿದ್ಯಾಭ್ಯಾಸವನ್ನೂ, ಅವರ ಗುಣ ನಡತೆಗಳಿಂದ ಈ ಊರಿನ ಸಮಸ್ತ ಮಹಮದಿಯರಿಗೆ ಉಂಟಾಗಿರುವ ಉತ್ಸಾಹ ಸಹಾಯಗಳನ್ನೂ ಕುರಿತು ಬಹು ಸ್ವಾರಸ್ಯವಾಗಿ ಉಪನ್ಯಾಸಮಾಡಿದರು. ಕಡೆಯಲ್ಲಿ ಮ|| ಮಹದೇವಯ್ಯನವರು ಉಭಯತ್ರರ ನಡತೆಯಿಂದಲೂ, ಕೆಲಸದಿಂದಲೂ ಈ ಊರಿಗೂ ತಮಗೂ ಉಂಟಾಗಿರುವ ಸಂತೋಷವನ್ನು ಗಂಭೀರವಾಕ್ಯಗಳಿಂದ ವ್ಯಕ್ತಪಡಿಸಿದ ಮೇಲೆ ಪ್ರತಿಯಾಗಿ ಡಾಕ್ಟರವರೂ, ಹೆಡ್ ಮಾಸ್ಟರರೂ ಬಹು ವಿನಯವಾಕ್ಯಗಳಿಂದ ತಾವು ಮಾಡಿರುವ ಕರ್ತವ್ಯಕ್ಕಾಗಿ ಅಷ್ಟು ಶ್ಲಾಘನೆ ಮರ್ಯಾದೆಗಳನ್ನು ತೋರಿಸಿದ ಸಭೆಯವರಿಗೆ ಅತ್ಯಂತ ಕೃತಜ್ಞತೆಯನ್ನು ವ್ಯಕ್ತಪಡಿಸಿದರು. ಈ ಸಭೆಯಲ್ಲಿ ವೀಣಾಗಾನವೂ ಫೋನೋಗ್ರಾಫೂ ಮಂಗಳ ವಾದ್ಯಗಳೂ ಮಕರತೋರಣಗಳೂ ಗಂಧಪುಷ್ಪ ತಾಂಬೂಲಗಳೂ ಕೋಲಾಹಲ ಮಯವಾಗಿತ್ತು. ಮಹಮದಿಯರಲ್ಲಿ ಅನೇಕರೂ ಹೆಡ್ ಮಾಸ್ಟರಿಗೆ ಬಹಳ ಮರ್ಯಾದೆ ತೋರಿಸಿದರು.

ಒಂದು ಪರಸ್ಪರಸಹಾಯ ಸಂಘದ ಸ್ಥಾಪನೆ.

ಇದೇ ಜುಲೈ 9 ನೇ ತಾ. ಗುರುವಾರ ರಾತ್ರಿ 7½ ಘಂಟೆಗೆ ಕಿಬ್ಬನಹಳ್ಳಿ ತಾಲ್ಲೂಕು ಗಂಜಿಗುಂಟೆ ಗ್ರಾಮದಲ್ಲಿ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ಕೋಆಪರೇಟಿವ್ ಸೊಸೈಟಿ ಅನ್‌ಲಿಮಿಟೆಡ್ ಸ್ಥಾಪನೆಯಾಯಿತು. ಆ ಸಾಯಂಕಾಲ ಬಜಾರಿನಲ್ಲಿರುವ ಸಕ್ಕರೆ ನಾರಪ್ಪನವರ ಮನೆಯ ಮುಂಭಾಗದಲ್ಲಿ ಕದಳಿ ಸ್ತಂಭಗಳಿಂದಲೂ, ವಿಚಿತ್ರಾಲಂಕಾರಗಳಿಂದಲೂ ಶೃಂಗರಿಸಲ್ಪಟ್ಟ ದಿವ್ಯ ಮಂದಿರದೊಳಗೆ ಸಭೆ ಸೇರಿತು. ಸೆಕ್ರೆಟರಿಯವರಾದ ಚಿ. ಪುಟ್ಟೂರಾಮರೂ, ಅ|| ಸೆ|| ವೆಂಕೋಬರಾಯರೂ ಅಗ್ರಾಸನವನ್ನು ವಹಿಸಿ ರೆಜಿಸ್ಟ್ರಾರವರಿಂದ ಮಂಜೂರಾಗಿ ಬಂದಿರುವ ಇಂದಾರಸು ಹುಕುಮನ್ನೂ ಬೈಲಾಗಳನ್ನೂ ಓದಿ, ವಿಚಾರಗಳನ್ನು ಚರ್ಚಿಸಿದರು ನಂತರ ಸಭ್ಯರಾದವರಿಗೆ ಸೊಸೈಟಿಯಲ್ಲಿ ತಕ್ಕ ಅಧಿಕಾರಗಳನ್ನು ಕೊಟ್ಟು ಸೊಸೈಟಿಯನ್ನು ಸ್ಥಾಪಿಸಲಾಯಿತು. ಕವೀಶ್ವರ ವೇ|| ವೆಂಕಟನಾರಾಯಣ ಶಾಸ್ತ್ರಿಗಳವರು ಸ್ವಾಗತಪೂರ್ವಕವಾದ ಉಪನ್ಯಾಸವನ್ನು ಓದಿದರು. ಅದರ ಅಭಿಪ್ರಾಯವೇನಂದರೆ—ಈ ದಿನ ನೇತ್ರಾನಂದವಾಗಿ ಶೃಂಗರಿಸಲ್ಪಟ್ಟ ಈ ದಿವ್ಯ ಮಂದಿರದೊಳಗೆ ಪರಸ್ಪರ ಪ್ರೀತಿಯಿಂದ ಅಭಿವೃದ್ಧಿ ವಾತ್ಸಲ್ಯವಂ ತಾಳಿ ನೆರದಿರ್ದ ಸಂತೋಷಕೂಟವಂ ನೋಡಿ ಅತ್ಯಾನಂದವಾಯಿತು. ತಮ್ಮಗಳ ಪ್ರಯತ್ನಕಾರ್ಯಗಳನ್ನು ಶೀಘ್ರವಾಗಿ ಅಭಿವೃದ್ಧಿ ಪಡಿಸುವಂತೆ ಪ್ರಾರ್ಥಿಸುತ್ತೇನೆ. ನಮ್ಮ ದೇಶದಲ್ಲಿ ಪರಸ್ಪರಸಹಾಯವೆಂಬ ಪುರಾತನ ಶಾಸ್ತ್ರಜನ್ಯ ಸೂಕ್ಷ್ಮಪದವನ್ನು ಕೆಲವರು ತಿಳಿಯದೇಲೂ, ಕೆಲವರು ತಿಳಿದು ಪ್ರಯತ್ನಪಡದೇಲೂ ದಿನೇದಿನೇ ಅಗೋಚರವಾಗಿ, ಕೆಲವು ಕಾಲದ ನಂತರ ತದ್ವ್ಯತಿರಿಕ್ತಾರ್ಥವಾದ ಪರಸ್ಪರ ಅಸಹಾಯವೆಂಬ ಅರ್ಥ ಆಚರಣೆಗೆ ಬಂದು ನಮ್ಮ ದೇಶದೊಳಗೆ ಅಂಧಕಾರಮಯವಾಯ್ತು. "ನಪ್ರಯತ್ನಂ ನಸಾಧಯೇತ್" ಎಂಬ ಶಾಸ್ತ್ರಾನುಸಾರವಾಗಿ ಇದುವರೆಗೂ ನಿಜಾರ್ಥವನ್ನು ಕಂಡುಹಿಡಿಯಲು ಸಾಧ್ಯವಾಗದೆ, ಈಗ ನಮ್ಮ ದೇಶದಲ್ಲಿ ಈ ಅಂಧಕಾರವನ್ನು ಹೋಗಲಾಡಿಸಲು ಸೂರ್ಯಸೋಮಾದಿಯಲ್ಲಿ ಚೈತನ್ಯವಂ ತಾಳ್ದು ಘನವನ್ನು ಹೊಂದಿದ ಶ್ರೀಕೃಷ್ಣರಾಜ ಬಹದೂರ್ ಮಹಾಪ್ರಭುಗಳವರ ದಿವ್ಯ ಚಿತ್ತವೆಂಬ ಸ್ಥಳದೋಳ್ ಪರಸ್ಪರಸಹಾಯವೆಂಬ ಪದದ ನಿಜಾಂಶವು ನೆಲೆಗೊಂಡಿತು. ತತ್ಪದವನ್ನು ಶ್ರೀಮನ್ಮಹಾರಾಜರವರು ಸಂಗ್ರಹಿಸಿ ತಮ್ಮ ಬಹಿಃಪ್ರಾಣರಾದ ದಿವಾನ್ ಸಾಹೇಬ್ರುಹಜೂರವರಿಗೂ, ಸೊಸೈಟಿ ರೆಜಿಸ್ಟ್ರಾರವರಿಗೂ ನಿಜಾಂಶವನ್ನು ವ್ಯಕ್ತಪಡಿಸಲು ಆ ಕಾಂತಿಯು ಪರಸ್ಪರ ಅಸಹಾಯಾಂಧಕಾರಗಳನ್ನು ನುಂಗುತ್ತಾ ಬಂದಿದೆ ಕಿಬ್ಬನಹಳ್ಳಿದ ಅಮಲ್ದಾರ್ ಮಿ|| ಥಾಂಸನ್ ಸಾಹೇಬರವರು ಪ್ರತಿಯೊಂದು ಗ್ರಾಮಕ್ಕೂ ಚಿತ್ತೈಸಿ ಗ್ರಾಮಸ್ಥರ ಅಜ್ಞಾನಾಂಧಕಾರಗಳನ್ನು ತಮ್ಮ ವಿನಯವಾದ ವಾಗ್ಬೋಧನೆಯಿಂದ ತೊಲಗಿಸಿ ಕೀರ್ತಿವಂತರಾದ್ದರಿಂದಲು, ಈ ಸಾಮಾನ್ಯಗ್ರಾಮವಾದ ಗಂಜಿಗುಂಟೆಯಲ್ಲಿ ದೇಶಸೌಕರ್ಯಪದದ ನಿಜಾಂಶವನ್ನು ತಿಳಿದು ಸಾಹಸಪಟ್ಟು ಅನ್ಯ ಸೌಕರ್ಯವಂ ಉಂಟುಮಾಡಿದರು. ಈ ಉಪನ್ಯಾಸ ನಡೆದ ನಂತರ ಗಂಧಪುಷ್ಪತಾಂಬೂಲಾದಿಗಳಿಂದ ಸಂತೋಷಪಟ್ಟು ರಾತ್ರಿ 10 ಘಂಟೆಗೆ ಸಭೆಯು ಬರಖಾಸ್ತು ಮಾಡಲ್ಪಟ್ಟಿತು.

ಚಿತ್ರದುರ್ಗದ ಡಿಸ್ಟ್ರಿಕ್ಟು ವಿದ್ಯಾಭಿವೃದ್ಧಿ ಸಂಘ.

ಈ ತಿಂಗಳು ತಾ. 6 ನೇ ಭಾನುವಾರ ಮಧ್ಯಾಹ್ನ 3 ಘಂಟೆಗೆ ಸಂಘದ ಮೆಂಬರುಗಳು ಎ. ವಿ. ಸ್ಕೂಲ್ ಹಾಲಿನಲ್ಲಿ ಸೇರಿ ತಿಂಗಳಗಟ್ಲೆ ಮೀಟಿಂಗು ನಡಿಸಿದರು. ಸಂಘದ ಪ್ರೆಸಿಡೆಂಟರು, ವೈಸ್ ಪ್ರೆಸಿಡೆಂಟರು, ಹೈ ಸ್ಕೂಲ್ ಹೆಡ್ ಮಾಸ್ಟರ್ ಮ|| ನಾರಾಯಣಯ್ಯಂಗಾರ‍್ರು, ಅ. ಮಾ. ಮ|| ಲಕ್ಷ್ಮೀಪತಯ್ಯನವರು, ಹೊರಗಿನಿಂದ 30 ಜನ ಮೆಂಬರುಗಳು ಸೇರಿದ್ದರು. ಮೆಂಬರುಗಳ ಕೋರಿಕೆ ಮೇರೆಗೆ ಈ ಮೀಟಿಂಗಿಗಾಗಿ ಹೈ ಸ್ಕೂಲ್ ಹೆಡ್ ಮಾಸ್ಟರ್ ಮ|| ನಾರಾಯಣಯ್ಯಂಗಾರ‍್ರು ಅಗ್ರಾಸನಾಧಿಪತ್ಯದ ಒಂದು ಭಾಗವನ್ನು ಅಲಂಕರಿಸಿದರು. ಸೆಕ್ರೆಟರಿಯವರು ಹಿಂದಿನ ತಿಂಗಳಲ್ಲಿ ನಡೆದ ಮುಖ್ಯಾಂಶಗಳನ್ನೆಲ್ಲಾ ತಿಳಿಸಿ ಆ ದಿನದ ಪ್ರೋಗ್ರಾಮನ್ನು ಓದಿ ಹೇಳಿದರು.

ಹಳ್ಳಿಯ ಜನಗಳಿಗೆ ವಿದ್ಯೆಯ ವಿಷಯದಲ್ಲಿ ಅಭಿರುಚಿ ಹುಟ್ಟುವ ಹಾಗೆ ಮಾಡುವ ಕ್ರಮಗಳನ್ನು ಕುರಿತು ಮ|| ವೆಂಕಟಾಚಲಯ್ಯನವರು ಚಿಕ್ಕದಾದ ಒಂದು ಉಪನ್ಯಾಸ ಮಾಡಿದರು. ಅದರ ಮುಖ್ಯಾಂಶಗಳು.—ಸಾಯಂಕಾಲದ ಹೊತ್ತು ಜನಗಳನ್ನು ಸೇರಿಸಿ ಪತ್ರಿಕೆಗಳನ್ನು ಓದೋಣ, ಸಮುದಾಯದಲ್ಲಿ ತಮ್ಮ ಸ್ಕೂಲ್ ವಿದ್ಯಾರ್ಥಿಗಳಿಂದ ಸಣ್ಣ ಉಪನ್ಯಾಸವನ್ನು ಓದಿಸೋಣ, ಆಗಾಗ್ಗೆ ವಿದ್ಯಾರ್ಥಿಗಳ ಯೋಗಕ್ಷೇಮವನ್ನು ತಂದೆತಾಯಿಗಳಿಂದ ತಿಳಿಯುವುದು, ಸಾಯಂಕಾಲದ ಹೊತ್ತು ಬಾಲಕರು ಓದುವದನ್ನು ವಿಚಾರಿಸುವಂತೆ ವಾರಕ್ಕೊಂದುಸಾರಿ ನೋಡುವುದು, ಇವೇ ಮೊದಲಾದವು. ಈ ವಿಷಯದಲ್ಲಿ ಮೆಂಬರುಗಳು ತಮ್ಮ ತಮ್ಮ ಅಭಿಪ್ರಾಯಗಳನ್ನು ಹೇಳಿ ಚರ್ಚೆ ಮಾಡಿದರು.

ಜನಗಳ ಏಳಿಗೆ ವಿಚಾರವಾಗಿ ಮ|| ಡಿ. ಎಂ. ರಾಮಯ್ಯನವರು ಒಂದು ಉಪನ್ಯಾಸವನ್ನು ಓದಿ ಹೇಳಿದರು. ಇದರಂತೆ ಆಚರಣೆಗೆ ತರುವ ಭಾಗದಲ್ಲಿ ಪುರೋಭಿವೃದ್ಧಿಗೆ ಸಹಾಯವಾಗುವದು. ಬಹು ಸ್ವಾರಸ್ಯವಾಗಿತ್ತು. ಈ ಉಪನ್ಯಾಸವನ್ನು ಪ್ರಿಂಟು ಮಾಡಿಸಿರುವರು. ಇದರ ಕ್ರಯ 6 ಕಾಸು. ಇಷ್ಟವುಳ್ಳವರು ತರಿಸಿಕೊಂಡು ಪ್ರೋತ್ಸಾಹಪಡಿಸಬೇಕಾಗಿ ನಿರೀಕ್ಷಿಸಿದೆ.

ಎಕನಾಮಿಕ್ ಕಾನ್‌ಫರೆನ್ಸಿನ ಸಬ್ ಕಮಿಟಿಯವರು ನಮ್ಮ ವಿದ್ಯಾಭಿವೃದ್ಧಿ ಸಂಘದ ಮೀಟಿಂಗಿಗೆ ಟವರ್ ಹಾಲಿನಲ್ಲಿ ಸ್ಥಳವನ್ನೂ, ಉಪಾಧ್ಯಾಯರುಗಳು ಓದುವದಕ್ಕಾಗಿ ಒಂದು ಲೈಬ್ರರಿಯನ್ನೂ ಒದಗಿಸಿಕೊಟ್ಟಿದ್ದಕ್ಕಾಗಿ ನಾವು ಕೃತಜ್ಞರಾಗಿದೇವೆ. ಮುಂದಿನ ತಿಂಗಳ ಮೀಟಿಂಗು ಟವರ್ ಹಾಲ್ ಬಂಗ್ಲೆಯಲ್ಲಿ ನಡೆಯುವದಾಗಿ ನಿಶ್ಚಯಿಸಿದೆ.

ಪ್ರತಿ ತಿಂಗಳಲ್ಲಿಯೂ ಮೊದಲನೇ ಭಾನುವಾರ ನಡೆಯುತ್ತಿದ್ದ ಮೀಟಿಂಗನ್ನು ಎರಡನೇ ಭಾನುವಾರ ನಡಿಸತಕ್ಕದ್ದೆಂದು ಅನೇಕ ಮೆಂಬರು ಕೇಳಿಕೊಂಡದ್ದರ ಮೇರೆ ಎಲ್ಲರೂ ಒಪ್ಪಿ ರಿಕಾರ್ಡು ಮಾಡಿದರು. ಮುಂದಿನ ಮೀಟಿಂಗು ಆಗಸ್ಟ್ 9 ನೇ ತಾ. ಭಾನುವಾರ ನಡೆಯತಕ್ಕದ್ದೆಂದು ನಿಶ್ಚಯಿಸಿದೆ. ಈ ಮೀಟಿಂಗಿಗಾಗಿ ಹಳ್ಳಿಗಳಿಂದ ಬರತಕ್ಕ ಉಪಾಧ್ಯಾಯರುಗಳಿಗೆ ಇಳಿಯುವದಕ್ಕೂ ಊಟಕ್ಕೂ ಬಹಳ ಅನನುಕೂಲವಿರುತ್ತಿತ್ತು. ಈ ಲಾಗಾಯಿತು ಸ್ಟೂಡೆಂಟ್ಸ್ ಹೋಮಿನಲ್ಲಿ ಎಲ್ಲದಕ್ಕೂ ಅನುಕೂಲವಾಗುವಂತೆ ಏರ್ಪಡಿಸಿದ್ದಕ್ಕಾಗಿ ಮ|| ಡಿ. ಇ. ತಿರುಮಲಾಚಾರ್ಯರವರಿಗೂ, ಹೈ ಸ್ಕೂಲ್ ಹೆ. ಮಾ. ಮ|| ನಾರಾಯಣಯ್ಯಂಗಾರ್ಯರಿಗೂ ಸರ್ವರೂ ಬಹಳವಾಗಿ ಕೃತಜ್ಞತೆಯನ್ನು ತೋರಿಸುತ್ತಾರೆ.

ವೀಣಾ ಬಿಸ್ವಪ್ಪ, ಜಾ. ಸೆಕ್ರೆಟರಿ

ಬಾತ್ಮಿದಾರರಿಗೆ ನೋಟೀಸ್.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜಾಗ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸವನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು ; ಇಂಥವುಗಳಿಗೆ ನಾವು ಜಾಗ ಕೊಡಲಾರೆವು.

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು. ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ. ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ.

ಕರೆಸ್ಪಾಂಡೆನ್ಸ್.

ದಿಕ್ಕಿಲ್ಲದೆ ಕಷ್ಟಕ್ಕೆ ಗುರಿಯಾಗಿರುವುದು.

ಅಯ್ಯಾ,—ಕ್ಲೋಸ್‌ಪೇಟೆ ಸಬ್ ಡಿವಿಜನ್ ಆಫೀಸರ್ ಮ|| ಸಿರಸಿ ಆನಂದರಾಯರ ಮನೆಯಲ್ಲಿ ಮರಿಕೆ ಎಂಬ ವಿದ್ಯಾರ್ಥಿಯು ಊಟಮಾಡಿಕೊಂಡು ಸ್ಕೂಲಿನಲ್ಲಿ ಓದಿಕೊಳ್ಳುತ್ತಾ ಇದ್ದನು. ಈಚೆಗೆ ಹೋಟಲಿನಲ್ಲಿ ಊಟಮಾಡಿಕೊಂಡು ರೈಲ್ವೆ ಸ್ಟೇಷನ್‌ನಲ್ಲಿ ನೀರು ಹಾಕುತ್ತಾ ಇದ್ದು ನಂತರ ಖಾಯಿಲೆಯಾದಮೇಲೆ ಹೋಟಲಿನವರು ಓಡಿಸಿಬಿಟ್ಟರು. ಈ ಹುಡುಗನು ಮೊನ್ನೆ 4 ನೇ ತಾ. ಚನ್ನಪಟ್ಟಣದ ಪೂರ್ಣಯ್ಯನವರ ಛತ್ರಕ್ಕೆ ಬಂದು, ಜ್ಞಾನವಿಲ್ಲದೆ ಬಿದ್ದಿದ್ದನು. ಇವನನ್ನು ಟವರ್ ಪೋಲೀಸ್ ಸ್ಟೇಷನ್ ರೈಟರ್ ನಾರಣಪ್ಪನವರು ಕಂಡು ಈತನ ಸ್ಥಳವಗೈರೆ ವಿಚಾರಿಸಿದರು. ತನ್ನ ಹೆಸರು ಮರಿಕೆ, ಸ್ಥಳ ಹಾಸನ, ತಂದೆಹೆಸರು ಹರಿಯಪ್ಪ, ತಾಯಿ ನರಸಮ್ಮ ; ತಂದೆತಾಯಿಗಳು ಸತ್ತುಹೋದರು. ತುಮಕೂರಿನಲ್ಲಿ ಲಾಯರ್ ಬೇಲೂರಿನ ಕೃಷ್ಣಪ್ಪನವರು ತನ್ನ ಭಾವನಾಗಬೇಕೆಂದೂ, ಕುಣಿಗಲ್ ತಾಲ್ಲೂಕು ಪಕ್ಕದ ನಾಗಸಂದ್ರದಲ್ಲಿ ನಾಗಮ್ಮ, ವೆಂಕಮ್ಮನೆಂಬವರು ತನಗೆ ದೊಡ್ಡಮ್ಮ, ಚಿಕ್ಕಮ್ಮನಾಗಬೇಕೆಂದೂ ಹೇಳುತ್ತಾನೆ. ಆತನು ಖಾಯಿಲೆಯಿಂದ ತುಂಬಾ ನಿಶ್ಶಕ್ತನಾಗಿರೋದರಿಂದ ಮೇಲ್ಕಂಡವರು ಇಲ್ಲಿನ ಡಾಕ್ಟರಿಂದ ಔಷಧಿ ಕೊಡಿಸಿ, ಆಹಾರ ಪಥ್ಯಗಳನ್ನು ನೋಡಿಕೊಳ್ಳುತ್ತಿದಾರೆ. ವಾರಸುದಾರರು ಯಾರಾದರೂ ಇದ್ದ ಪಕ್ಷದಲ್ಲಿ ಬಂದು ಕರೆದುಕೊಂಡು ಹೋಗಬಹುದು.

ಪ್ರತ್ಯಕ್ಷದರ್ಶಿ.

ಚಿತ್ರದುರ್ಗದ ವಿಚಾರಗಳು.

ಅಯ್ಯಾ,—ಚಿತ್ರದುರ್ಗವು ಮೈಸೂರು ಸಂಸ್ಥಾನಕ್ಕೆ ಕೇವಲ ಕೊನೆಯ ಸರಹದ್ದಿನಲ್ಲಿದ್ದು, ಸಂಸ್ಥಾನದ ಮುಖ್ಯಪಟ್ಟಣಗಳೊಂದಿಗೆ ರೈಲ್ವೆಯಿಂದ ಸಂಬಂಧಿಸದೆ ಇರುವದರಿಂದ ಸಂಸ್ಥಾನದ ದೊಡ್ಡ ದೊಡ್ಡ ಆಫೀಸರುಗಳು ಇಲ್ಲಿಗೆ ಆಗಾಗ್ಗೆ ಬಾರದೆ ಇಲ್ಲಿನ ಕಾರುಬಾರುಗಳನ್ನೂ ಮತ್ತು ಪ್ರಜೆಗಳ ಸುಖದುಃಖಗಳನ್ನೂ ತಿಳಿಯದೆ ಡಿಪಾರ್ಟುಮೆಂಟಿನ ಅಧಿಕಾರಿಗಳಿಂದ ಬಂದ ರಿಪೋರ್ಟುಗಳ ಮೇಲೆ ತೃಪ್ತಿಹೊಂದಿ ಇರುವದರಿಂದ ಈ ಡಿಸ್ಟ್ರಿಕ್ಟಿನ ಆಡಳಿತಕ್ರಮಗಳು ಬಹಳಮಟ್ಟಿಗೆ ಕೆಟ್ಟು, ಚಿಕ್ಕನೌಕರರಲ್ಲಿ ದೊಡ್ಡ ಆಫೀಸರುಗಳು ಸ್ವತಂತ್ರ ವಹಿಸಿರುವದರಿಂದ ಪ್ರಜೆಗಳು ನಾನಾತರದ ಕಷ್ಟನಷ್ಟಗಳಿಗೆ ಗುರಿಯಾಗುತ್ತಿರುವರು.—ಈ ವಿಷಯವನ್ನು ದೊಡ್ಡ ಆಫೀಸರುಗಳಲ್ಲಿ ಹೇಳಿದರೂ ಕಷ್ಟ; ಹೇಳದೆ ಇದ್ದರೂ ಕಷ್ಟ ಎಂದು ಪ್ರಜೆಗಳು ಗುಣಗುಟ್ಟುತ್ತಿರುವರು. ಚಿಕ್ಕ ನೌಕರಿಯಿಂದ ದೊಡ್ಡ ನೌಕರಿಗೆ ಬಂದ ಅಧಿಕಾರಿಗಳು ಪ್ರಜೆಗಳ ಕಷ್ಟಸುಖಗಳನ್ನೂ ಮತ್ತು ನೌಕರ ನಾಸೇರ ಕಚ್ಚಾ ಅಮಲನ್ನೂ ಬಲ್ಲವರಾಗಿರುತ್ತಾರೆ. ಎತ್ತಿಕೊಳ್ಳುತ್ತಲೇ ದೊಡ್ಡ ಅಧಿಕಾರಕ್ಕೆ ಬರತಕ್ಕವರಿಗೆ ಕಚ್ಚಾ ಅಮಲ್ ತಿಳಿಯದೆ ಪ್ರಜೆಗಳಿಗೆ ಅತಿಶಯವಾದ ಕಷ್ಟ ಪರಂಪರೆಯನ್ನು ಚಿಕ್ಕನೌಕರರಿಂದ ಅನುಭವಿಸಬೇಕಾಗುತ್ತೆ.— ಈ ನಡವಳಿಕೆಯು ನಮ್ಮ ಡಿಸ್ಟ್ರಿಕ್ಟಿನಲ್ಲಿ ಹೆಚ್ಚಾಗಿ ನೆಲೆಗೊಂಡಿರುತ್ತೆ. ಮಹಾರಾಜಾ ಸರ್ಕಾರದವರು ಈ ವಿಷಯಗಳನ್ನು ದಿವ್ಯಚಿತ್ತಕ್ಕೆ ತಂದು ಪ್ರಜಾನುರಾಗಿಗಳಾಗಿಯೂ, ಪಕ್ಷಪಾತವಿಲ್ಲದವರಾಗಿಯೂ ಇರುವ ಆಫೀಸರುಗಳನ್ನು ಪ್ರತಿ ಒಂದು ಡಿಪಾರ್ಟುಮೆಂಟಿಗೆ ಕಳುಹಿಸಿಕೊಟ್ಟಲ್ಲದೆ ಈ ಡಿಸ್ಟ್ರಿಕ್ಟಿನ ಕ್ರಮಗಳು ಸರಿಪಡಲಾರವು. ಜಾಗ್ರತೆಯಾಗಿ ಸರ್ಕಾರದವರು ಈ ಕಂಟಕವನ್ನು ಹೋಗಲಾಡಿಸುತ್ತಾರೆಂದು ನಂಬಲ್ಪಟ್ಟಿರುತ್ತೆ.

ಈ ಡಿಸ್ಟ್ರಿಕ್ಟು ಬೋರ್ಡಿನಲ್ಲಿ ಲಾಯರುಗಳು ಮತ್ತು ಹಳ್ಳಿಗೌಡರು ಇರುತ್ತಾರೆ. ಲಾಯರುಗಳಿಗಂತು ಕೋರ್ಟು ಕಚೇರಿಗಳಲ್ಲಿನ ಕೇಸಿನ ಮೇಲೆ ಗಮನವಿರುತ್ತೇ ವಿನಹ ಪ್ರಜೆಗಳ ಸುಖದುಃಖಗಳಲ್ಲಿ ಸಾಮಾನ್ಯವಾಗಿರಲಾರದು. ಮತ್ತು ಗೌಡರಿಗೆ ಟವರ್ ಪ್ರಜೆಗಳ ಸುಖದುಃಖಗಳ ಇಂಗಿತ ಹ್ಯಾಗೆತಾನೇ ಗೊತ್ತಾದೀತು? ಕಾಲ್ದೋಷಾಮಲೆ ಬರತಕ್ಕ ಮೆಂಬರುಗಳಿಗೆ ನೂರಾರು ರೂಪಾಯಿ ಮೈಲೇಜು, ಭತ್ಯ ಖರ್ಚಾಗುತ್ತೆಯೇ ವಿನಹ ಪ್ರಜೆಗಳಿಗೆ ಯಾವ ಸುಖವೂ ಇಲ್ಲ. ಇಲ್ಲಿ ಪ್ರಜಾಪಕ್ಷದವರು (ಈ ಬೋರ್ಡಿನಲ್ಲಿ) 8-10 ಮಂದಿ ಸಿಕ್ಕುವದೇ ಕಷ್ಟ. ನಿಜವಾಗಿಯೂ ದೇಶಕ್ಕೂ, ಪ್ರಜೆಗಳಿಗೂ ಹಿತವನ್ನುಂಟುಮಾಡುವವರನ್ನು ಚುನಾಯಿಸಿದಲ್ಲಿ ಸರ್ಕಾರಕ್ಕೂ ಮತ್ತು ಪ್ರಜೆಗಳಿಗೂ ಫಾಯಿದೆಯೂ ಸುಖವೂ ಆದೀತೆಂದು ನಂಬಲ್ಪಟ್ಟಿರುತ್ತೆ.

ಈ ಟವರ್‌ನಲ್ಲಿ ಕುರುಬರಲ್ಲಿಯೂ ಮತ್ತು ಇತರ ಮತದಲ್ಲಿಯೂ ಗುಡಿ ಚೆಟ್ಟಿ ಸೂಳೆಯರು ಹೆಚ್ಚಿ ಯೌವನಸ್ಥರನ್ನು ಮತ್ತು ಚಿಕ್ಕಪ್ರಾಯದವರನ್ನು ವಶಮಾಡಿಕೊಂಡು ಅನೇಕ ಬಗೆ ರೋಗಾದ್ಯುಪದ್ರವಗಳಿಂದ ನರಳಿಸಿ ಕೊಲ್ಲುತ್ತಾರೆ. ಕೆಲವರ ಆಸ್ತಿಪಾಸ್ತಿಗಳನ್ನು ಸೆಳೆಯುತ್ತಾ ಇದಾರೆ. ಇವರ ಮನೆಗೆ ಕೆಲವು ಸರ್ಕಾರಿ ನೌಕರರು ಹೋಗುತ್ತಿರುವದರಿಂದ ಇವರ ಸಹಾಯದಿಂದ ತಮಗೆ ಆಗದೆ ಇದ್ದವರ ಮೇಲೆ ಬನಾವಟ್ಟು ಕೇಸು ಮಾಡುತ್ತೇವೆಂದು ಹೇಳಿ ದ್ರವ್ಯಾರ್ಜನೆಮಾಡುತ್ತಿರುವರು. ಸರ್ಕಾರಿ ನೌಕರರು ಇವರ ವಶವರ್ತಿಗಳಾಗಿರುವದು ಆಶ್ಚರ್ಯ ! ಇಂಥವರುಗಳ ಮನೆಗೆ ಹೋಗತಕ್ಕ ಸರ್ಕಾರಿ ನೌಕರರನ್ನು ಮಹಾರಾಜಾ ಸರ್ಕಾರದವರು ಬಂದೋಬಸ್ತು ಯಾಕೆ ಮಾಡಬಾರದು? ಮತ್ತು ಸೂಳೆಯರಿಗಾಗಿ ಒಂದು ತಕ್ಕ ಖಾನೂನು ಮಾಡಿದರೆ ಪ್ರಜೆಗಳು ಮತ್ತು ಯೌವನಸ್ಥರು ಸುಖದಿಂದಿರುತ್ತಾರೆಂದು ನಂಬಲಾಗಿದೆ.

ಸತ್ಯವಾದಿ.

ಮೂಗೂರಿನಲ್ಲಿ ನುತ್ತೆ ಪಾರ್ಟಿಗಳು ಹುಟ್ಟಿವೆಯಂತೆ.

ಅಯ್ಯಾ,—ಟಿ. ನರಸೀಪುರದ ತಾಲ್ಲೂಕು ಮೂಗೂರಿನ ಗ್ರಾಮದಲ್ಲಿ ಅನೇಕ ಜನಗಳು ಗುಂಪುಸೇರಿ ಕಳ್ಳಿಗಾಲದ ರೈಟ್ ಕೇಸು ಮಾಡಿರತಕ್ಕ ವಿಷಯದಲ್ಲಿ ಮೂಗೂರು ಗ್ರಾಮಸ್ಥರನ್ನು ಸರ್ಕಾರದವರು ದಸ್ತಗಿರಿಯಿಂದ ಅಪರಾಧಿಗಳಿಗೆ ಶಿಕ್ಷೆವಿಧಿಸಿ ಇರುವದು ಸರಿಯಷ್ಟೆ. ಇದರಲ್ಲಿ ಕೆಲವರು ಸಜಾದಿಂದ ಬಿಡುಗಡೆಹೊಂದಿ ಬಂದಿರುತ್ತಾರೆ ; ಕೆಲವು ಜನಗಳು ಸಜಾ ಅನುಭವಿಸುತ್ತಾ ಇರುತ್ತಾರೆ. ಎರಡನೇ ದಫ ನಡೆದ ಮೇಲ್ಕಂಡ ಕೇಸಿನಲ್ಲಿ ಪುಟ್ಟಸುಬ್ಬೇಗೌಡರ ಮಗ ಚಿಕ್ಕಪುಟ್ಟಸ್ವಾಮಿ ಎಂಬುವನನ್ನು ಕೇಸಿನಿಂದ ಬಿಡುಗಡೆಮಾಡಿ ಇರುತ್ತಾರೆ. ಇವನು ಊರಿಗೆ ಬಂದ ಮೇಲೆ ಕೆಲವು ಪಟಿಂಗ ಜನಗಳನ್ನು ಗುಂಪುಕಟ್ಟಿಕೊಂಡು ಮೇಲ್ಕಂಡ ಮೊಕದ್ದಮೆಯಲ್ಲಿ ಸರ್ಕಾರದ ತರಫು ಸಾಕ್ಷಿ ಹೇಳಿ ಇರುವವರಿಗೆ ಮಾನನಷ್ಟ, ದ್ರವ್ಯನಷ್ಟ, ಪ್ರಾಣಹಾನಿ ಮುಂತಾದ್ದು ಮಾಡುವದಾಗಿಯೂ, ಪೂರ್ವದಲ್ಲಿ ತನ್ನ ತಂದೆ ಅಪ್ಪಣೆ ಪ್ರಕಾರ ನಡೆಯುತ್ತಾ ಇದ್ದಂತೆ ಈಗಲೂ ತನ್ನ ಅಪ್ಪಣೆ ಪ್ರಕಾರ ಎಲ್ಲಾ ಕೋಮಿನವರೂ ನಡೆಯಬೇಕೆಂತಲೂ ಜನಗಳಿಗೆ ನಿರ್ಬಂಧಪಡಿಸುತ್ತಾ ಇರುತ್ತಾನೆ. ಇವನ ತಂದೆಗೆ ಮೂಗೂರು ರೆವಿನ್ಯೂ ಪಟೇಲಿ ಕೆಲಸವೂ, ನಂಜಶೆಟ್ಟಿ ಎಂಬುವನಿಗೆ ಪೋಲೀಸು ಪಟೇಲಿ ಕೆಲಸವೂ, ಕಾಶೀಪತ್ಯನ ವಂಶಕ್ಕೆ ಶ್ಯಾನುಭೋಗಿ ಕೆಲಸವೂ ಇತ್ತು. ಈ ಕೇಸು ಇವರ ಮೇಲೆ ಆದನಂತರ ಇವರುಗಳ ವಂಶಕ್ಕೆ ಸರ್ಕಾರದ ಕೆಲಸಗಳನ್ನು ತಪ್ಪಿಸಿ ಬೇರೆ ಇಸಂ ನೇಮಿಸಿ ಇದ್ದರು. ಅಗ್ಗೆ ಈ ವಂಶಸ್ಥರ ಮಾತನ್ನು ಈ ಗ್ರಾಮಸ್ಥರು ಯಾರೂ ಕೇಳುತ್ತಾ ಇರಲಿಲ್ಲ. ಈಚೆಗೆ ಶ್ಯಾನುಭೋಗಿ ಕೆಲಸವನ್ನು ಕಾಶೀಪತ್ಯನ ವಂಶಸ್ಥರಿಗೆ ಕೊಟ್ಟು ಇರುತ್ತಾರೆ. ರೆವಿನ್ಯೂ ಪಟೇಲ ಕೆಲಸವನ್ನು ಪುಟ್ಟಸುಬ್ಬೇಗೌಡನ ತಮ್ಮ ಬಸಪ್ಪ ಎಂಬುವನಿಗೆ ಕೊಡುವದಾಗಿ ವರ್ತಮಾನ ಹೇಳಿಕೊಳ್ಳುತ್ತಾನೆ. ಪೋಲೀಸು ಪಟೇಲಿ ಕೆಲಸ ಮಾತ್ರ ಮೇಲ್ಕಂಡ ನಂಜಶೆಟ್ಟಿ ವಂಶಕ್ಕೆ ಕೊಡುವದಿಲ್ಲವೆಂತ ಆರ್ಡರಾಗಿ ಇರುತ್ತೆ. ಈ ಮೂರು ಜನಗಳು ಈ ಕೇಸಿಗೆ ಮುಖ್ಯ ಅಪರಾಧಿಗಳು ; ಮತ್ತು ಗ್ರಾಮಕ್ಕೆ ಮುಖ್ಯಸ್ಥರು. ಈ ಮೂರು ವಂಶಸ್ಥರು ಒಬ್ಬರ ಮಾತನ್ನು ಒಬ್ಬರು ಮೀರಿ ನಡೆಯುವದಿಲ್ಲ. ಈ ಮೂರು ಜನಗಳ ವಂಶಸ್ಥರು ಹಾಲಿ ತಮಗೆ ಇರುವ ಸರ್ಕಾರದ ಕೆಲಸದಿಂದ ಜನಗಳಿಗೆಲ್ಲಾ ಭಯವನ್ನುಂಟುಮಾಡುತ್ತಾ ಇರುತ್ತಾರೆ ಈ ರೀತಿಯಾಗಿ ಇವರುಗಳ ವಂಶಕ್ಕೆ ಸರ್ಕಾರದ ಕೆಲಸವಿರುವದರಿಂದ ಮೇಲ್ಕಂಡಂತೆ ಜನಗಳು ಇವರ ಮಾತುಗಳನ್ನು ಕೇಳಿ ಸರ್ಕಾರದ ತರಫ್ ಸಾಕ್ಷಿ ಹೇಳುವವರಿಗೆ ಮೇಲ್ಕಂಡಂತೆ ನಾನಾ ತರದ ಕೆಡಕು ಮಾಡಿಸುವದರಲ್ಲಿ ಸಂದೇಹವೇ ಇಲ್ಲ. ಈ ಗ್ರಾಮದಲ್ಲಿ ಬಂದೋಬಸ್ತಿನ ಬಗ್ಗೆ ರಿಜರ್ವ್ ಪೋಲೀಸಿನವರು ಮತ್ತು ಪೋಲೀಸು ಆಫೀಸರು ಇದ್ದರು. ಈಚೆಗೆ ಇದನ್ನು ತಪ್ಪಿಸಿ ಒಬ್ಬ ದಫೇದಾರರನ್ನೂ, 4-5 ಜನ ಕಾನಿಸ್ಟೇಬಲರನ್ನೂ ಇಟ್ಟು ಇರುತ್ತಾರೆ ಈ ರೀತಿ ಪೋಲೀಸು ಪಹರೆ ಇತ್ತು. ಮೇಲ್ಕಂಡ ಮೂರು ಜನಗಳ ವಂಶಸ್ಥರ ಜೊತೆಯಲ್ಲಿ ಯಾವ ಜನಗಳೂ ಗುಂಪು ಸೇರಕೂಡದೆಂತ ಪೋಲೀಸಿನವರು ನಿರ್ಬಂಧಮಾಡುತ್ತಾ ಇದ್ದರು. ಈಚೆಗೆ ಇವರಿಗೆ ಸರ್ಕಾರದ ಶ್ಯಾನುಭೋಗಿ ಕೆಲಸ ಆದದ್ದರಿಂದ ಮೇಲ್ಕಂಡಂತೆ ನಡಿಸಲು ಪೋಲೀಸಿನವರಿಗೆ ಅವಕಾಶ ತಪ್ಪಿ ಇರುತ್ತೆ. ಈ ಗ್ರಾಮಕ್ಕೆ ಅಮಲ್ದಾರರವರು, ಪೋಲೀಸ್ ಇನ್‌ಸ್ಪೆಕ್ಟರು, ಜಮೇದಾರರು ಸಹ ಆಗಾಗ್ಗೆ ದಯಮಾಡಿಸಿ ಬಹಳ ನಿಗೇವಾನಿ ನೋಡಿಕೊಳ್ಳುತ್ತಾ ಇರುತ್ತಾರೆ. ಈ ಗ್ರಾಮದಲ್ಲಿ ಸೂಳೇರ ಜಾತಿಯಲ್ಲಿ ಅಮೃತಾಸಾನಿ ಎಂಬವಳ ಮನೆಯಲ್ಲಿ ಒಂದು ಮನೆಗೆಯೂ, ಪುಟ್ಟಿಪ್ಪ ಎಂಬವನ ಮನೆಯಲ್ಲಿ ಒಂದು ಮದುವೆಯೂ ಆಯ್ತು. ಈ ಪ್ರಸ್ತಕ್ಕೆ ಈ ಜಾತಿ ಜನಗಳು ಯಾರೂ ಹೋಗಕೂಡದೆಂತಲೂ, ಇವರಿಬ್ಬರೂ ಫೀ ಇರಂ ಒಂದು ರೂಪಾಯಿ ಜುಲ್ಮಾನೆ ಕೊಡಬೇಕೆಂತಲೂ ಮೇಲ್ಕಂಡ ಚಿಕ್ಕಪುಟ್ಟಸ್ವಾಮಿ, ಈರಪ್ಪನ ಮಗ ದೇವಪ್ಪ, ಪೈತಿಗಂಟಿ ಮಲ್ಲಪ್ಪನೂ ಕಟ್ಟುಮಾಡಿ ಇವರಿಂದ ಹಣ ವಸೂಲ್ಮಾಡಿಕೊಂಡು ಇವರ ಮನೆ ಪ್ರಸ್ತಕ್ಕೆ ಆ ಜಾತಿ ಜನಗಳನ್ನು ಕಳುಹಿಸಿರುತ್ತಾರೆ. ಸರ್ಕಾರದ ತರಫ್ ಸಾಕ್ಷಿ ನುಡಿದ ಸುಬ್ಬಯ್ಯನಿಗೆ ಮದುವೆ ಆಯ್ತು. ಆ ಮದುವೆಗೆ ಶಿವಾಚಾರದವರು ಯಾರೂ ಹೋಗಕೂಡದೆಂತ ಕಟ್ಟುಮಾಡಿದ ಮೇರೆಗೆ ಯಾರೂ ಹೋಗಲಿಲ್ಲ. ಅಲ್ಲದೆ ನಾನಾ ತರದ ತೊಂದರೆಗಳನ್ನು ಉಂಟು ಮಾಡುತ್ತಾ ಇರುತ್ತಾರೆ. ಮಳೆ ಬೆಳೆ ಇಲ್ಲದ ಗ್ರಾಮದಲ್ಲಿ ಬಹಳ ತೊಂದರೆ ಆಗಿ ಇರುತ್ತೆ. ಇವರ ಅಪ್ಪಣೆ ಪ್ರಕಾರ ವಾಲಗದವರು, ಅಗಸರು, ಕೆಲಸಿಗಳು, ನಾಯಕಸಾನಿಯರು ಸಹ ಯಾರ ಮನೆ ಕೆಲಸಕ್ಕೆ ಹೋಗಬೇಕಾದರೂ ಇವರುಗಳ ಅಪ್ಪಣೆ ಪ್ರಕಾರ ಹೋಗಬೇಕೆಂತಲೂ, ಇತರ ಜನಗಳ ಮನೆಗಳಿಗೆ ಹೋಗಕೂಡದೆಂತಲೂ ಕಟ್ಟು ಮಾಡಿಕೊಂಡಿರುತ್ತಾರೆ. ಆದ್ದರಿಂದ ದಯಾಳುಗಳಾದ ಸರ್ಕಾರದವರು ಈ ಗ್ರಾಮದಲ್ಲಿ ಜಾಸ್ತಿ ಪೋಲೀಸು ಬಂದೋಬಸ್ತಿಯನ್ನು ಇಟ್ಟು, ಹಾಲಿ ಮೇಲ್ಕಂಡ ವಂಶಸ್ಥರಿಗೆ ಗ್ರಾಮನೌಕರಿ ಸರ್ಕಾರಿ ಕೆಲಸವನ್ನು ತಪ್ಪಿಸಿ, ಮೇಲ್ಕಂಡವರು ದುರ್ನಡತೆ ನಡೆಯದೆ ಇರತಕ್ಕ ಭಾಗದಲ್ಲಿ ತಕ್ಕ ಬಂದೋಬಸ್ತು ಮಾಡಿಸಿಕೊಡಬೇಕಾಗಿ ಬೇಡಿಕೊಳ್ಳುತ್ತೇನೆ.

ಮೂಗೂರು. ಸಿ. ಆರ್. ಲಕ್ಷ್ಮೀನಾರಣಪ್ಪ.

[ಸ್ಥಳದ ಅಮಲ್ದಾರರೂ ಪೋಲೀಸ್ ಇನ್‌ಸ್ಪೆಕ್ಟರವರೂ ಈ ಬಾತ್ಮಿಯಲ್ಲಿ ಕಂಡ ವಿಷಯಗಳ ನಿಜಾಂಶವನ್ನು ಪರಿಶೋಧನೆ ಮಾಡಿ ಜನರ ದೀನ ನೆಮ್ಮದಿಯನ್ನು ಕಾಪಾಡುವ ಏರ್ಪಾಡು ಮಾಡುವವರಾಗಲೆಂದು ಹಾರೈಸುತ್ತೇವೆ.—ಎಡಿ.]

ತಾಲ್ಲೂಕು ವರ್ತಮಾನಗಳು.

ತುಮಕೂರು ತಾ|| ತರೂರು.—ನಮ್ಮ ಅಮಲ್ದಾರ್ ಮ|| ಎಂ. ಎಸ್. ರಾಮಚಂದ್ರರಾಯರು ಇಲ್ಲಿಗೆ ದಯಮಾಡಿ ಸ್ಕೂಲಿನಲ್ಲಿ ಗ್ರಾಮಸ್ಥರನ್ನು ಬರಮಾಡಿಕೊಂಡು ಸಭೆ ನಡಿಸಿ ಗ್ರಾಮಾಭಿವೃದ್ಧಿ ಸಂಘವನ್ನು ಸ್ಥಾಪನೆ ಮಾಡಿದರು. ಈ ಸಂಘಕ್ಕೆ ಏಳು ಮಂದಿ ಮೆಂಬರಾಗಿ ನೇಮಿಸಲ್ಪಟ್ಟಿದಾರೆ. ಇವರ ಪ್ರೋತ್ಸಾಹದಿಂದ ಜನಗಳು ಸೇರಿ ವಾರಕ್ಕೆ ಒಪ್ಪತ್ತು ಗ್ರಾಮಾಭಿವೃದ್ಧಿ ಕಾರ್ಯಗಳನ್ನು ಮಾಡುತ್ತಿರುವದು.—ಈ ಗ್ರಾಮದಲ್ಲಿ ಅಮಲ್ದಾರ್ರ ಮತ್ತು ಮ|| ಭವಾನಿಸಿಂಗರ ಪ್ರೋತ್ಸಾಹದಿಂದ ಒಂದು ರೀಡಿಂಗ್ ರೂಮ್ ಪ್ರಾರಂಭವಾಗಿದೆ. ಮಾಸ್ಟರು ಗ್ರಾಮಸ್ಥರಿಗೆ ಪ್ರತಿ ಭಾನುವಾರವೂ ಸೋಮವಾರವೂ ಮೀಟಿಂಗು ನಡಿಸಿ ಅನೇಕ ವಿಚಾರಗಳನ್ನು ಪತ್ರಿಕೆಗಳಿಂದ ಓದಿ, ಉಪನ್ಯಾಸಗಳ ಮೂಲಕ ತಿಳಿಸುತ್ತಿದಾರೆ.—ಈಗಿನ ಮಾಸ್ಟರ ಸಾಹಸದಿಂದ 50 ಮಂದಿ ವಿದ್ಯಾರ್ಥಿಗಳು ಸ್ಕೂಲಿನಲ್ಲಿ ಓದುತ್ತಿದಾರೆ. ಒಬ್ಬ ಮಾಸ್ಟರಿಂದ ಹೇಳುವದು ಕಷ್ಟವಾದ್ದರಿಂದ ಇನ್ನೊಬ್ಬರನ್ನು ಕೊಡಬೇಕೆಂದು ಪ್ರಾರ್ಥಿಸಿಕೊಂಡಿದೇವೆ.—ಡೆಪ್ಟಿ ಇನ್‌ಸ್ಪೆಕ್ಟರ ಮತ್ತು ಅಮಲ್ದಾರ್ರ ಸಾಹಸಪ್ರಯತ್ನದಿಂದ ಹೊಸ ಸ್ಕೂಲ್ ಕಟ್ಟಡಕ್ಕೆ ಚಂದಾ ವಸೂಲಾಗಿ ಪಟೇಲ್ ನರಸೇಗೌಡರು ಈ ಕಟ್ಟಡದ ಕಾಮಗಾರಿ ಮಾಡಿಸುತ್ತಿದಾರೆ. ಈ ತಿಂಗಳಲ್ಲೇ ಇದು ಮುಗಿದು ಸಿದ್ಧವಾಗಬಹುದು.—ಇಲ್ಲಿನ ಕೋಆಪರೆಟಿವ್ ಸೊಸೈಟಿಯಲ್ಲಿ ಲೇವಾದೇವಿ ಚೆನ್ನಾಗಿ ನಡೆಯುತ್ತಿದೆ. ಇಲ್ಲಿಗೆ ಒಂದು ಗರಲ್ಸ್ ಸ್ಕೂಲ್, ನೈಟ್ ಸ್ಕೂಲ್, ಪೋಸ್ಟ್ ಆಫೀಸು ತುಂಬಾ ಅವಶ್ಯವಾಗಿವೆ. ಸರ್ಕಾರದವರು ಇವುಗಳನ್ನು ಸ್ಥಾಪಿಸಿಕೊಟ್ಟರೆ ತುಂಬಾ ಅನುಕೂಲವಾಗುತ್ತೆ.

ನಂಜನಗೂಡು.—ವೇ|| ಯಜ್ಞೇಶ್ವರ ಶಾಸ್ತ್ರಿಗಳು ಈ ಬಾರಿ ಪರಸ್ಥಳದ ಯಾತ್ರಿಕರಿಗೆ ಕಾಲಕಾಲಕ್ಕೆ ಅನ್ನೋದಕಗಳನ್ನೊದಗಿಸಲು ಹೆಚ್ಚು ಶ್ರಮವನ್ನು ವಹಿಸಿದ್ದರಿಂದ ಗಿರಿಜಾ ಕಲ್ಯಾಣವೂ, ಆಗಮಿಕ ಕುಮಾರಸ್ವಾಮಿಗಳ ಮಹನೀಯತೆಯಿಂದ ಅಷ್ಟೈಶ್ವರ್ಯ ಸಭೆಯೂ ಯಾವ ನ್ಯೂನತೆಯೂ ಇಲ್ಲದೆ ಸಮರ್ಪಕವಾಗಿ ನೆರವೇರಿದವೆಂದು ತಿಳಿಸಲು ಸಂತೋಷಿಸುತ್ತೇನೆ.—ಪ್ರವಾಹವು ವಿಶೇಷವಾಗಿ ಬಂದಿಲ್ಲದಿದ್ದರೂ ಈಗಾಗಲೇ ಇಬ್ಬರು ಹೆಂಗಸರು ನದಿಯಪಾಲಾದರೆಂದು ಕೇಳುತ್ತೇನೆ. ಪ್ರತಿವರ್ಷವೂ ಸಾಮಾನ್ಯವಾಗಿ ಸಂಭವಿಸುವ ಈ ವಿಪತ್ತನ್ನು ತಪ್ಪಿಸಲು ಏನು ಮಾಡಲು ಸಾಧ್ಯವಿಲ್ಲ.—ತಿರುಮಕೂಡಲಿನ ಸಂಗೀತ ಸುಬ್ಬಣ್ಣನವರು ಇಲ್ಲಿಗೆ ಬಂದು ದೇವಸ್ಥಾನದಲ್ಲಿ ಕೊಳಲನ್ನು ಬಾರಿಸಿದರು. ಇವರ ಪಾಂಡಿತ್ಯವು ಸ್ತೋತ್ರಾರ್ಹವಾದುದೆಂದು ಪ್ರತೀತಿ ಇದೆ. ಇಲ್ಲಿಗೆ ವಿದ್ವಾನ್ ವಾಸುದೇವಾಚಾರ್ಯರು ಬಂದು ಒಂದು ಕಛೇರಿಯನ್ನು ನಡಿಸಿ ತಮ್ಮ ಪಾಂಡಿತ್ಯದಿಂದ ಎಲ್ಲರನ್ನೂ ಸಂತೋಷಪಡಿಸಿದರು; ಈ ಪುರವಾಸಿಗಳು ಮೇಲ್ಕಂಡವರಿಗೆ ಒಂದು ಪದಕವನ್ನು ಕೊಡುವರೆಂದು ಕೇಳುತ್ತೇನೆ.—ತಾಲ್ಲೂಕು ಪ್ರೋಗ್ರೆಸ್ ಕಮಿಟಿಯು ಚಟುವಟಿಕೆಯಾಗಿ ಕೆಲಸಮಾಡಬೇಕೆಂದು ಬಯಸುವೆನು. ವಾಚಕಶಾಲೆಯ ಪುಸ್ತಕಭಂಡಾರವು ಇನ್ನೂ ಸರ್ವರ ಉಪಯೋಗಕ್ಕೆ ಸಲುವಾಗಿಯೂ ತೆರೆಯಲ್ಪಟ್ಟಿಲ್ಲ. ಆರ್ಯ ಬಾಲಪಾಠಶಾಲೆಯ ವರ್ಷದ ವಿಪಾಟಂಗು ಇನ್ನೂ ನೆರವೇರಲಿಲ್ಲ. ಮೇಲ್ಕಂಡ ಸಾರ್ವಜನಿಕ ಸಂಸ್ಥೆಗಳೆಲ್ಲವೂ ಚಟುವಟಿಕೆಯಿಂದ ಕಾರ್ಯಕ್ರಮದಲ್ಲಿ ನಡೆದು ಕೀರ್ತಿಯನ್ನು ತರಲೆಂದು ಹಾರೈಸುವೆನು. ಇಲ್ಲಿನ ಮಿಡ್ಲ್ ಎ. ವಿ. ಸ್ಕೂಲು ಅಭಿವೃದ್ಧಿಗೆ ಬಂದು ತೊಂಭತ್ತು ಮಂದಿ ಬಾಲಕರು ಓದುತ್ತಿರುವರು, ಉಪಾಧ್ಯಾಯರು ಸಾಲದು.

ಚನ್ನಪಟ್ಟಣ.—ಈ ತಿಂಗಳ ಪ್ರಾರಂಭದಲ್ಲಿ ಸ್ವಲ್ಪ ಮಳೆಯಾಯ್ತು; ತರುವಾಯ ಆಗಿಂದಾಗ್ಗೆ ಸ್ವಲ್ಪ ತುಂತುರು ಹನಿ ಮಳೆ ಬೀಳುತ್ತಾ ಇತ್ತು. ಒಂದು ವಾರದಿಂದ ಸುತರಾಂ ಮಳೆಯೇ ಇಲ್ಲ. ರೈತಾಬಿಗಳೆಲ್ಲಾ ಆಕಾಶವನ್ನೇ ನೋಡುತ್ತಿದ್ದಾರೆ. ಸುಮಾರು 3 ವಾರಗಳಿಂದ ವಿಪರೀತ ಗಾಳಿ ಶುರುವಾಗಿ, ತುಂಬಾ ತೊಂದರೆಯಾಗಿರುತ್ತದೆ. ಧಾರಣೆವಾಸಿಗಳಂತು ಮಳೆ ಇಲ್ಲದ್ದರಿಂದ ದಿನೇ ದಿನೇ ಏರುತ್ತಾ ಬಡಜನಗಳ ಜೀವನಕ್ಕೆ ತುಂಬಾ ತೊಂದರೆಯಾಗಿದೆ. ಅದರಲ್ಲಿಯೂ ಈಗ ಹೊಸದಾಗಿ ಸರ್ಕಾರದಿಂದ ಮಾರಲ್ಪಡುವ ಅಳತೆ ಸೇರುಗಳನ್ನು 5-6 ಜನ ವರ್ತಕರೂ, ತೂಕದ ಬಟ್ಟುಗಳನ್ನು 3-4 ಜನರೂ ತರಿಸಿಕೊಂಡಿದ್ದಾರೆ. ಮಿಕ್ಕವರು ಹಳೇ ಸೇರುಗಳನ್ನೂ, ಬಟ್ಟುಗಳನ್ನೂ ಉಪಯೋಗಿಸುವುದರಿಂದ ಮೋಸವೇ ಹೆಚ್ಚಾಗಿದೆ. ಸರ್ಕಾರದವರು ಎಲ್ಲಾ ಅಂಗಡಿಗಳವರಿಗೂ ಖಂಡಿತವಾದ ಅಪ್ಪಣೆ ಕೊಡಿಸಿದರೆ ಮೇಲಾಗುತ್ತೆ. ದನಗಳ ಪಾಡಂತೂ ಹೇಳತೀರದು. ಈಗ ಸುಮಾರು 1 ತಿಂಗಳಿಂದ ಕೆಲವು ಕಡೆ ದನಗಳಿಗೆ ಸೊಪ್ಪು ತವರಿಸಾಕುತ್ತಿದ್ದಾರೆ.—10ನೇ ತಾ. ಶುಕ್ರವಾರ ಹಗಲು 4 ಘಂಟೆಯಲ್ಲಿ ಇಲ್ಲಿನ ದಾಯರೀ ಕೇರಿಯಲ್ಲಿ ಎರಡು ಪಾರ್ಟಿಗಳಾಗಿದ್ದ ಮಹಮದಿಯರಲ್ಲಿ ಅಕಸ್ಮಾತ್ ಜಗಳ ಹುಟ್ಟಿ, ಬಹು ಭಯಂಕರವಾಗಿ ದೊಣ್ಣೆಗಳಿಂದಲೂ ಗರಗಸದಂತಿದ್ದ ಮೀನಿನ ಬಾಲದ ಎಲುಬುಗಳಿಂದಲೂ ಹೊಡೆದಾಡಿ, ನಾಲ್ಕಾರು ಜನರಿಗೆ ತಲೆಯ ಮೇಲೆ ಪೂರಾ ಏಟುಬಿದ್ದು ಮೈಯೆಲ್ಲಾ ರಕ್ತಮಯವಾಗಿ ಆಸ್ಪತ್ರೆಗೆ ಬಂದು ಇಲ್ಲಿನ ಡಾಕ್ಟರಿಂದ ಇಲಾಜುಮಾಡಿಸಿಕೊಂಡು ಹೋದರು. ಇವರನ್ನು ನೋಡಿದವರು ಇಷ್ಟಕ್ಕೇ ಜಗಳ ತೀರಲಿಲ್ಲ, ಇಂದು ನಾಳೆಯೊಳಗಾಗಿ ಒಬ್ಬಿಬ್ಬರು ಖೂನಿಯಾಗುವ ಮಟ್ಟಿಗೂ ಜಗಳ ನಡೆಯಬಹುದೆಂದು ಮಾತನಾಡಿಕೊಳ್ಳುತ್ತಿದ್ದರು. ಹೀಗೆಯೇ ಆಗಬಹುದೆಂದು ಇವರಲ್ಲಿ ಮುಖಂಡರಾದವರು ತಿಳಿದು ಇವರೆಲ್ಲರನ್ನೂ 11 ನೇ ತಾ. ಮಸೀದಿಗೆ ಬರಮಾಡಿಕೊಂಡು ಮುಂದೆ ಆಗಬಹುದಾದ ಕಷ್ಟನಷ್ಟಗಳನ್ನು ವಿವರಿಸಿಹೇಳಿ, ಅಂಥಾ ಕಷ್ಟನಷ್ಟಗಳಿಗೆ ಗುರಿಯಾಗದೆ ಎಲ್ಲರೂ ಸಹೋದರ ಭಾವದಿಂದಿರಲು ವಿವೇಕ ಹೇಳಿದ ಮೇಲೆ ಎಲ್ಲಾ ಯೌವನಸ್ಥರೂ ಬುದ್ಧಿ ತಂದುಕೊಂಡು ವೈಷಮ್ಯವನ್ನು ಬಿಟ್ಟು, ಆ ಮಸೀದಿಯಿಂದಲೇ ಬಾಜಾ ಬಜಂತ್ರಿಯೊಡನೆ ಎಲ್ಲರೂ ಏಕವಾಗಿ ಮೆರವಣಿಗೆ ಹೊರಟು ಎಲ್ಲರಿಗೂ ಸಂತೋಷವನ್ನುಂಟುಮಾಡಿದರು.

ಶಿಕಾರಿಪುರ.—ಸುಮಾರು 15 ದಿವಸಗಳಿಂದಲೂ ವಿರಾಮವಿಲ್ಲದೆ ಮಳೆ ಬರುತ್ತಾ ಸೂರ್ಯನನ್ನು ಕಾಣುವುದೇ ಅಪರೂಪವಾಗಿದೆ. ಹಲವು ಜನ ರೈತರು ಮಳೆಗಾಗಿ ಬಿತ್ತಲವಕಾಶವಿಲ್ಲದೆ ವಿರಾಮವನ್ನೇ ಎದುರು ನೋಡುತ್ತಿದ್ದಾರೆ. ಯಾವಾಗಲೂ ಶೀತಗಾಳಿ ಬೀಸುತ್ತಿರುವದರಿಂದ ಜನರಿಗೆ ಸ್ವಲ್ಪಮಟ್ಟಿಗೆ ಅನಾರೋಗ್ಯವುಂಟಾಗಿದೆ.—ಅಮಲ್ದಾರ್ ಮ|| ಜಿ. ಶಾಂತವೀರಪ್ಪನವರು ಇಲ್ಲಿಗೆ ದಯಮಾಡಿ ಹತ್ತು ತಿಂಗಳು ಮಾತ್ರ ಆಯ್ತು. ಇಷ್ಟರೊಳಗೆ ಇವರು ಎಲ್ಲಾ ಜನರಲ್ಲೂ ಅನುರಾಗವನ್ನು ಸಂಪಾದಿಸಿಕೊಂಡು ತಮ್ಮ ಕಾರ್ಯಗಳನ್ನು ನೀತಿಯಿಂದ ನಡಿಸುತ್ತಾ ಬಂದರು. ಇವರ ಕಾಲದಲ್ಲಿ ಹಿಂದಿನಂತೆ ಕೊಲೆ, ದೊಂಬಿ ವಗೈರೆ ದುಷ್ಕೃತ್ಯಗಳ ಮೊಕದ್ದಮೆಗಳು ಬಂದುವೇ ಇಲ್ಲ. ಇವರು ಬಡಪ್ರಜೆಗಳಲ್ಲಿ ತುಂಬಾ ಅನುರಾಗವಿಟ್ಟು ಉಚಿತವಾದ ಅನುಕೂಲಗಳನ್ನು ಕಾಲವಿಳಂಬವಿಲ್ಲದೆ ಮಾಡಿಕೊಡುತ್ತಿದ್ದರು. ಮತ್ತು ತಮ್ಮ ಕೈಕೆಳಗಿನ ನೌಕರರಿಗೆ ಸಹಾಯಕರಾಗಿದ್ದು ಅವರ ಕೆಲಸಗಳ ಕೊರತೆಯನ್ನು ತಿದ್ದುತ್ತಾ ಬಂದರು. ನಿರ್ನಾಮವಾಗಿದ್ದ ರೀಡಿಂಗ್ ರೂಮ್ ಇವರ ಕಾಲದಲ್ಲಿ ಜೀರ್ಣೋದ್ಧಾರವಾಯಿತು. ಪರಸ್ಪರಸಹಾಯಕ ಸಂಘ, ಟವುನ್ ಪ್ರೋಗ್ರೆಸ್, ಶಿಕ್ಷಣ ರೋಡ್ ವಗೈರೆ ಅನೇಕ ನೂತನ ಕಾರ್ಯಗಳು ಏರ್ಪಟ್ಟವು. ವಿಶೇಷವಾಗಿ ವಿದ್ಯಾಭಿಮಾನಿಗಳಾಗಿದ್ದು ಆಗಾಗ್ಗೆ ಇಲ್ಲಿನ ಸ್ಕೂಲುಗಳನ್ನು ಪರೀಕ್ಷಿಸುತ್ತಾ, ತಾಲೂಕಿನ ಅನೇಕ ಸ್ಕೂಲುಗಳನ್ನು ಏರ್ಪಡಿಸುವುದರಲ್ಲಿಯೂ, ಗ್ರಾಮಾಂತರದ ಪ್ರಜೆಗಳಿಗೆ ಆರೋಗ್ಯಭಾಗ್ಯ ವೃತ್ತಪತ್ರಿಕೆಗಳ ಪ್ರೋತ್ಸಾಹವನ್ನು ಕೊಡುತ್ತಾ ಸರ್ವಪ್ರಜೆಗಳಿಂದಲೂ ಗೌರವಿಸಲ್ಪಟ್ಟಿದ್ದರು. ಈಗ ಇವರು 3 ತಿಂಗಳ ರಜಾ ಪಡೆದು ತಾ. 10 ನೇ ಜೂಲೈಗೆ ಬೆಂಗಳೂರಿಗೆ ಪ್ರಯಾಣಮಾಡಿದರು. ಇಲ್ಲಿನ ಪ್ರಜೆಗಳೂ, ಸರ್ಕಾರಿ ನೌಕರರೂ, ಮುನ್ಸಿಪಲ್ ಮೆಂಬರುಗಳೂ ಅವರಲ್ಲಿ ತಮಗಿದ್ದ ಭಕ್ತಿ ವಿಶ್ವಾಸಗಳನ್ನು ತೋರ್ಪಡಿಸಿ ಕಳೆದ ಬುಧವಾರ ಇಲ್ಲಿನ ಎ. ವಿ. ಸ್ಕೂಲಿನಲ್ಲೂ, ಗುರುವಾರ ಪೇಟೆ ಮಿಡ್ಲ್ ಗರಲ್ಸ್ ಸ್ಕೂಲಿನಲ್ಲೂ ಸಭೆಗಳನ್ನು ನಡಿಸಿ ಸಂತೋಷಗೊಳಿಸಿದರು. ಅಲ್ಲದೆ ಸರ್ಕಾರಿ ನೌಕರರಿಂದಲೂ, ಇತರ ಮಿತ್ರಮಂಡಲಿಯವರಿಂದಲೂ ಪ್ರತ್ಯೇಕ ಪ್ರತ್ಯೇಕವಾಗಿ ಸನ್ಮಾನಿಸಲ್ಪಟ್ಟರು. ಸದ್ಯ ಇವರ ಸ್ಥಾನಕ್ಕೆ ಬಂದಿರುವ ಮ|| ಎಸ್. ನಾರಾಯಣರಾಯರು ಅವರ ವರ್ತನವನ್ನೇ ಅನುಕರಿಸಿ ಕೀರ್ತಿಭಾಜನರಾಗಬೇಕಾಗಿದೆ.

ತರೀಕೆರೆ.—ಕೆಲವು ದಿನಗಳಿಂದ ಮಳೆ ಬರುತ್ತಿದ್ದು ಸ್ವಲ್ಪ ನಿಂತಿದ್ದ ಜನರು ಹೊಲ, ಗದ್ದೆಗಳನ್ನು ಬಿತ್ತಿದರು; ಇನ್ನೂ ಅನೇಕರು ಬಿತ್ತಿಲ್ಲ. ಮಳೆಯು ದಿನವೂ ಬರುತ್ತಿದೆ. ದನಕರುಗಳಿಗೆ ಹುಲ್ಲು ತಕ್ಕ ಮಟ್ಟಿಗೆ ಸಿಕ್ಕುತ್ತೆ. ಸೋನೆ ಮಳೆಯಾಗಿರುವದರಿಂದ ಕೆರೆಕಟ್ಟೆಗಳಿಗೆ ನೀರು ಬಂದಿಲ್ಲ. ಕುಡಿಯುವ ಕೆರೆಯಲ್ಲಿ ಈ ಸೋನೆಮಳೆಯಿಂದ ಸ್ವಲ್ಪ ನೀರು ನಿಂತಿದೆ. ಈ ನೀರಿಗೆ ಅನೇಕರು ಕಾದುಕೊಂಡಿದ್ದರು. ಸ್ವಲ್ಪ ನೀರು ಇರುವದರಿಂದ ದನಕರುಗಳನ್ನು ತೊಳೆಯುವದೂ, ಕೊಳೆ ಬಟ್ಟೆ ಒಗೆಯುವದೂ, ಮಕ್ಕಳ ಬಟ್ಟೆ ತೊಳೆಯುವದೂ ಪ್ರಾರಂಭವಾಯಿತು. ಇದನ್ನು ಕರುಣವಿಟ್ಟು ನಿಲ್ಲಿಸಲು ಅರಿಕೆ ಮಾಡುತ್ತೇನೆ.—ಊರಲ್ಲಿ ಅಲ್ಲಲ್ಲಿ ಪ್ಲೇಗ್ ಇದೆ. ಕೆಲವು ಕೇಸಾಗಿದೆ. ಇಲಿಗಳು ಅಲ್ಲಲ್ಲಿ ಬೀಳುತ್ತವೆ. ನಮ್ಮ ಅಮಲ್ದಾರರು ಜನರಿಗೆ ಪ್ಲೇಗ್ ಸಿಡುಬನ್ನು ಹಾಕಿಸಲು ಏರ್ಪಡಿಸುವರೆಂದು ನಂಬುತ್ತೇವೆ. ಅಲ್ಲದೆ ಒಂದು ವೇಳೆ ಪ್ಲೇಗಿನಿಂದ ಮನೆ ಬಿಡಬೇಕಾದರೆ ಜನರಿಗೆ ಈ ಮಳೆಗಾಲದಲ್ಲಿ ಬಹಳ ತೊಂದರೆಯಾಗುತ್ತೆ. ಗಳ, ಕೊಂಬುಗಳನ್ನು ತರಿಸಿ ಇಟ್ಟಿದ್ದರೆ ಹ್ಯಾಗೂ ಅನುಕೂಲ. ಈ ಕಾಲದಲ್ಲಿ ಹುಲ್ಲು ಕಟ್ಟುವದಕ್ಕೆ ಹೆದರಿ, ಮರೆಮಾಡಿಕೊಂಡದ್ದರಿಂದಲೇ ಹೀಗೆ ಹೆಚ್ಚಿರುತ್ತೆಂದು ಹೇಳಬಹುದು. ಜನರಿಗೆ ಸರ್ಕಾರದಿಂದ ಸಹಾಯಮಾಡಿ ಇಲಿ ಬಿದ್ದ ಕೂಡಲೇ ಮನೆ ಬಿಡಿಸುವದಾದರೆ ಹೆಚ್ಚಿನ ಕಷ್ಟವೂ ಕೇಡೂ ಆಗಲಾರದು.—ಸುತ್ತಲಿರುವ ಕೆಲವು ಹಳ್ಳಿಗಳಲ್ಲಿ ಪ್ಲೇಗ್ ಹೆಚ್ಚಾಗಿದೆ. ಅಲ್ಲಿನ ಜನರ ಅಪೇಕ್ಷೆಯಂತೆ ಡಾಕ್ಟರವರು ಹೋಗಿ ಇನಾಕ್ಯುಲೇಷನ್ ಮಾಡುತ್ತಾರೆ.—ಇಲ್ಲಿನ ಮಾರ್ಕೆಟ್ ಬಳಿ ಇರುವ ರೈಲ್ವೆ ಸೇತುವೆಯ ಮೇಲಿನಿಂದ ಒಬ್ಬ ಮಹಮ್ಮದೀಯ ಹುಡುಗನು ಕೆಳಗೆ ಬಿದ್ದು ಗಾಯವಾಗಿದೆ. ಹೆಚ್ಚಿನ ಅಪಾಯವಿಲ್ಲವೆಂದು ಕೇಳುತ್ತೇವೆ.—ಕೆಲವು ದಿನಗಳ ಹಿಂದೆ ಈ ಊರಿನ ಘೂಡಮಾಲಿಗಳು ಹೆಚ್ಚಾಗಿ ಕುಡಿದು ತಾವುತಾವೇ ಜಗಳಮಾಡಿ, ಎ. ವಿ. ಸ್ಕೂಲಿಗೆ ನುಗ್ಗಿ ಜವಾನನನ್ನು ಗಾಯಗೊಳಿಸಿದರು. ಅಲ್ಲದೆ ಒಡ್ಡರವನೊಬ್ಬನೂ, ಮಾದಿಗರವನೊಬ್ಬನೂ ಹೀಗೆ ಕುಡಿದು, ಮಾದಿಗರವನು ಒಡ್ಡರವನಲ್ಲಿದ್ದ ರೂಪಾಯನ್ನು ತೆಗೆದುಕೊಳ್ಳಲು ಪ್ರಯತ್ನಪಟ್ಟು ಬಹಳವಾಗಿ ಹೊಡೆದಾಡಿ ಡಾಕ್ಟರ್ ಸರ್ಟಿಫಿಕೇಟ್ ಮಾಡಿಸಿ ಮೊಕದ್ದಮೆ ಮಾಡಲು ಯತ್ನಿಸಿದ್ದರು. ಇದಕ್ಕೆ ಕಾರಣ ಮಿತಿಮೀರಿ ಅವರಿಗೆ ಕುಡಿಯಲು ಸಿಕ್ಕಿತು.—ಇಲ್ಲಿನ ಸಂತೆಯಲ್ಲಿ ಪದಾರ್ಥಕ್ಕೆ ಸುಂಕ, ಗಾಡಿಗೆ ಸುಂಕ, ಸ್ಥಳಕ್ಕೆ ಸುಂಕ, ಇದರ ಮೇಲೆ ಮೊಂಡು ಫಕೀರರ ಕಾಟ. ಇದನ್ನೆಲ್ಲಾ ಹ್ಯಾಗೆ ಸಹಿಸಬೇಕೆಂದು ವರ್ತಕರು ಪೇಚಾಡುತ್ತಾರೆ. ನಮ್ಮ ಅಮಲ್ದಾರರು ಇದನ್ನು ವಿಚಾರಿಸುವರೆಂದು ನಂಬುತ್ತೇವೆ.—ಕೆಲವು ಕಡೆಗಳಲ್ಲಿ ರಸ್ತೆಗಳು ಬಹಳ ಕೆಸರಾಗಿರುತ್ತವೆ. ಕೆಲವು ಕಡೆ ಚರಂಡಿಗಳಲ್ಲಿ ನೀರು ಸರಾಗವಾಗಿ ಹೋಗುವದಿಲ್ಲ.—ಕೆಲವು ದಿನಗಳ ಕೆಳಗೆ ಇಲ್ಲಿನ ರೈಲ್ವೆ ಸ್ಟೇಷನ್ ಹತ್ತಿರ ಒಂದು ಎಮ್ಮೆಯು ರೈಲಿಗೆ ಸಿಕ್ಕಿ ಕೊಡಲೆ ಪ್ರಾಣಹೋಯಿತು. ಇದರ ವಾರಸುದಾರರು ಪತ್ತೆ ಇಲ್ಲ.—ಊರಲ್ಲಿ ಅನೇಕ ಕಡೆ ಮರ ಕೊಯ್ಯುವ ಸ್ಥಳಗಳಿವೆ. ಇದರಿಂದ ಹೆಂಗಸರ ವಾಸಕ್ಕೂ, ನಾಟಾಗಳನ್ನು ಕೆಡುವುವಾಗ ಗೋಡೆ ಆದುರುವದೂ, ನಾನಾ ತೊಂದರೆಗಳೂ ಉಂಟು. ಇದನ್ನು ತಪ್ಪಿಸಿದರೆ ಬಹಳ ಕ್ಷೇಮ. ಇದನ್ನು ಅಮಲ್ದಾರರು ಚಿತ್ತಕ್ಕೆ ತಂದುಕೊಳ್ಳುವರೆಂದು ನಂಬುತ್ತೇವೆ.—ಈ ಊರಿನ ಸಂತೆಯಲ್ಲಿ ಕೆಲವರು ಸೇರಿ ಪೊಲೀಸ್ ಅಧಿಕಾರಿಗಳ ಗಮನಕ್ಕೆ ಸಿಕ್ಕದೆಯೂ, ಪೊಲೀಸ್‌ನವರ ಕುಮ್ಮಕಿನಿಂದ ಜೂಜಾಡುತ್ತಲಿದ್ದಾರಂತೆ. ಪೊಲೀಸ್ ಅಧಿಕಾರಿಗಳು ಹೆಚ್ಚು ನಿಗಾ ಕೊಡಬೇಕಾಗಿದೆ.—ಈ ಊರಿಗೆ ಮ|| ಪಲ್ನಿಮೂರ್ತಿಯವರು ಬಂದು ತಮ್ಮ ದೇಹಶಕ್ತಿಯನ್ನು ಜನರಿಗೆ ತೋರ್ಪಡಿಸಿ, ಜನರಿಗೆ ಸಂತೋಷವನ್ನೂ ಆಶ್ಚರ್ಯವನ್ನೂ ಉಂಟುಮಾಡುತ್ತಲಿದ್ದಾರೆ. ಕಬ್ಬಿಣದ ಪಟ್ಟಿಯನ್ನು ಕೈಗೆ ಸುತ್ತುವದೂ, ಘರ್ತಿಗಾಡಿಗಳೆರಡನ್ನು ಎದೆಯ ಮೇಲೂ ಸೊಂಟದ ಮೇಲೂ ಎಳೆಯಿಸಿಕೊಳ್ಳುವದೂ, ಸರಪಣಿ ಕೀಳುವದೂ, ಸುಮಾರು 200 ಪೌಂಡು ಭಾರವನ್ನು ಹಲ್ಲಿನಿಂದ ಎತ್ತುವದೂ, ಮಾಂಸಖಂಡಗಳನ್ನು ಉಬ್ಬಿಸುವದೂ, 4 ಜನರಿಂದ ಗುದ್ದಿಸಿಕೊಂಡು ನಿರಾಯಾಸವಾಗಿರುವದೂ ಮೊದಲಾದವುಗಳು ಜನರಲ್ಲಿ ಬಹಳ ಭ್ರಮೆಯನ್ನುಂಟುಮಾಡಿವೆ.—ಬೆಟ್ಟತಾವರೆ ಹಳ್ಳಿಯಲ್ಲಿ ಮಾದಿಗನವರವನ ಮನೆಯವರೆಲ್ಲರೂ ಕೆಟ್ಟರಾಗಿ ತಿಂದು ಬಹಳ ಕಷ್ಟಪಟ್ಟರು. ಯಜಮಾನನು ಸತ್ತೇ ಹೋದನು. ಇಲ್ಲಿನ ಡಾಕ್ಟರವರು ಅಜಮಾಯಿಷಿಮಾಡಿ ತಮ್ಮ ಅಭಿಪ್ರಾಯವನ್ನು ಸೂಚಿಸಿದರು. ಉಳಿದವರಿಗೆ ವಾಸಿಯಾಗಿದೆ.—ಪ್ಲಾಂಟರ್ ಕುಳ್ಳೇಗೌಡರಮನ ರಂಗೇಗೌಡರಿಗೆ 2½ ವರುಷ ಸಜವೆಂಬ ತೀರ್ಮಾನವು ಅಪೀಲ್ ಕೋರ್ಟಿನಲ್ಲೂ ಖಾಯಂ ಆಯಿತು.

ಹುಣಸೂರು.—ಈ ತಾಲ್ಲೋಕಿನ ಸ್ವಲ್ಪ ಹೆಚ್ಚು ಕಡಮೆ ಅಜೂಬಾಜೂ ಗ್ರಾಮಾಂತರಗಳಲ್ಲೆಲ್ಲಾ ಕಳೆದ 1-2 ವಾರಗಳಿಂದ ಪುರಸತ್ತು ಇಲ್ಲದೆ ಹಗಲು ರಾತ್ರಿಗಳಲ್ಲೂ ಜಡಿ ಮಳೆ ಹಿಡಿದಿದೆ. ಜಡದ ಮೇಲೆ ಹದ ಮಳೆಯಾಗುತ್ತಿರುವುದು. ಮಳೆಯು ಸ್ವಲ್ಪ ಹಿಂದಾದರೂ ಸದ್ಯ ಪಚ್ಚೆಪೈರುಗಳೆಲ್ಲಾ ಕಳಕಳಿಸುತ್ತಿರುವವು. ರೈತಾಬಿಗಳು ವ್ಯವಸಾಯ ಕೆಲಸದಲ್ಲಿ ಆಸಕ್ತರಾಗಿ ಇವರ ದೆಸೆಯಿಂದ ಕಮ್ಮಿ ಕೂಲಿಗೆ ಆಳುಗಳು ದೊರಕದೆ ಮುನಿಸಿಪಲ್ ಕೆಲಸಗಳೆಲ್ಲಾ ಮುಳ್ಳಿ ಬಿದ್ದಿರುವವು. ಕೆಲವು ಗ್ರಾಮಾಂತರಗಳ ಜನರು ಈಗ್ಗೆ ಸ್ವಲ್ಪ ಧಾರಣೆ ಜಾಸ್ತಿಯಾಗಿರುತ್ತದೆಂದು ನೋಡಿ ದುರಾಶೆಯಿಂದ ಬಂಡಿಗಳಲ್ಲಿ ಹುಲ್ಲನ್ನೂ, ಕಾಳು ಕಡ್ಡಿಗಳನ್ನೂ ಹೊರಕ್ಕೆ ಮಾರುತ್ತಿರುವರು. ಇದರಿಂದ ಉಭಯತ್ರರೂ ಕಡೆಯಲ್ಲಿ ಕಷ್ಟಪಡುವರು. ನಮ್ಮ ಅಮಲ್ದಾರರು ಹಲವು ಬಾರಿ ತಾಲ್ಲೋಕಿನ ಬೇರೆ ಬೇರೆ ಕಡೆಗಳಲ್ಲಿ ಸರ್ಕೀಟ್ ಮಾಡಿಕೊಂಡು ಅಲ್ಲಲ್ಲಿನ ವಿದ್ಯಮಾನಗಳನ್ನು ವಿಚಾರಿಸಿ ತಿಳಿದುಕೊಂಡು ಬಂದಿರುವರು. ಅವರ ಅಭಿಪ್ರಾಯದಂತೆಯೂ ಈ ತಾಲ್ಲೋಕು ಇತರ ತಾಲ್ಲೋಕುಗಳಿಗಿಂತ ಉತ್ತಮಸ್ಥಿತಿಯಲ್ಲಿರುತ್ತೆ. ಸಾಂಕ್ರಾಮಿಕ ಜಾಡ್ಯಗಳೇನೂ ಇಲ್ಲ. ಧಾರಣೆವಾಸಿಗಳೇನೋ ಜಾಸ್ತಿಯಾಗಿಯೇ ಇರುತ್ತವೆ. ಕತ್ತೆಗಳ, ಕೇರೀ ನಾಯಿಗಳ ಹಾವಳಿ ಜಾಸ್ತಿಯಾಗಿರುವುದು. ಇದನ್ನು ತಪ್ಪಿಸಿದರೆ ಉತ್ತಮ.—ಸೇತುವೆಯ ಮೇಲೆ ಮುಸಾಫರ್ ಛತ್ರವಿದೆ. ಅದರ ಸ್ಥಿತಿಯನ್ನು ನೋಡಿದರೆ ನಾಗರಿಕರಾದ ಉತ್ತಮ ಜನರು ತಂಗುವದಕ್ಕೆ ತಕ್ಕದ್ದಾಗಿ ಕಾಣುವುದಿಲ್ಲ. ಕಿಟಕಿಗಳ ಚೌಕಟ್ಟುಗಳನ್ನು ಅಲ್ಲಿಗೆ ಬಂದು ಇಳಿಯುವ ಜನರು ಒಲೆಗೆ ಸೌದೆಗಾಗಿ ಉಪಯೋಗಿಸುವಂತೆ ಕಾಣುತ್ತದೆ. ಕಬ್ಬಿಣದ ಸಲಾಕಿಗಳನ್ನು ಬೇಕಾದರು ಅಪಹರಿಸುತ್ತಾರೆ. ಅನೇಕ ಹೆಂಚುಗಳು ಹಾಳಾಗಿವೆ. ಬಳಿಗೆ ವನ, ಕಸು, ಕತ್ತೆ, ಕುಮುದಿಗಳು ನಿಲ್ಲುತ್ತವೆ. ಇತರ ಅನೇಕ ಕಡೆಗಳಲ್ಲಿ ಛತ್ರಗಳಿದ್ದರೂ ಇದರ ಹಾಗೆ ನಾಮುಸ್ತಾಗಿ ಕಾಣುವುದಿಲ್ಲ. ಆದುದರಿಂದ ತಕ್ಕ ಸಾಮಾನುಗಳನ್ನಿಡಿಸಿ, ಗೇಟ್ ವಗೈರೆ ಬಂದೋಬಸ್ತುಮಾಡಿಸಿ ಮುಖ್ಯ ಪ್ರಯಾಣಿಕರಿಗೆ ಅನುಕೂಲವಾಗುವಂತೆ ಮಾಡಿಸಿದರೆ ಶಾನೆ ಉಪಕಾರವಾಗುವುದು. ಗೌರ್ನಮೆಂಟ್ ಛತ್ರವನ್ನು ಈ ಸ್ಥಿತಿಯಲ್ಲಿಟ್ಟರೆ ಇತರ ರೈತಾಬಿಗಳು ತಮ್ಮ ಛತ್ರಗಳನ್ನು ಉತ್ತಮಸ್ಥಿತಿಯಲ್ಲಿಡುವುದು ಹ್ಯಾಗೆ? ಇದನ್ನು ಕ್ರಮಪಡಿಸಬೇಕಾಗಿ ಕೋರುತ್ತೇವೆ.—ಹೊಳೆಗೆ ಹೋಗುವ ದಾರಿಯ ಪಕ್ಕದಲ್ಲೇ ಕವಲುಗಳುಳ್ಳ ಒಂದು ಭಾರಿ ಅಶ್ವತ್ಥದ ಮರವು ಬಹಳ ಓರೆಗೆ ಅಪಾಯಕರವಾದ ಸ್ಥಿತಿಯಲ್ಲಿ ನಿಂತಿದೆ. ಆ ದಾರಿಯಲ್ಲಿ ಬಹಳ ಜನರು ತಿರುಗುತ್ತಾರಾದುದರಿಂದ ಗಾಳಿಯಿಂದ ಬಿದ್ದು ಯಾವಾಗಾದರೂ ಪ್ರಾಣಾಪಾಯವಾಗುವುದಕ್ಕೆ ಮುಂಚಿತವಾಗಿಯೇ ಅದನ್ನು ಆದಷ್ಟು ಬೇಗ ಕಡಿಸಿ ಹಾಕಿದರೆ ಉಪಕಾರವಾದೀತು. ಅಲ್ಲಿ ಜಗುಲಿಗೆ ಹಾಕಿದ್ದ ಹಾಸುಕಲ್ಲುಗಳನ್ನು ಯಾರೋ ಬಂಡಿಯ ಮೇಲೆ ಏರಿಸಿಕೊಂಡು ಹೋದರು. ಪೊಲೀಸ್ ಇನ್ಸ್‌ಪೆಕ್ಟರವರ ಮನೆಯು ಅಲ್ಲಿಗೆ ಕೇವಲ ಹತ್ತಿರದಲ್ಲಿರುತ್ತದೆ. ಪೊಲೀಸ್ ಇಲಾಖೆಯ ವಿಷಯ ಮೇಲ್ಪಟ್ಟ ಅಧಿಕಾರಿಗಳು ತಕ್ಕ ಏರ್ಪಾಡು ಮಾಡಬೇಕು. ಟವುನ್ನಿನಲ್ಲಿ ಸರಿಯಾದ ರಾತ್ರಿ ಬೀಟ್ ಇರುವುದಿಲ್ಲ. ಇರುವ 3 ಜನ ಪೊಲೀಸಿನವರು ಏನುತಾನೆ ಮಾಡ್ಯಾರು? ಇದು ಸ್ವಲ್ಪ ವುಂಡುಸ್ಥಳ. ಏನಾದರೂ ಮಾಹಾಮಾರಿಯಾಗಿ ಪೊಲೀಸಿನವರನ್ನು ಕರೆದರೆ ಅವರು ಎಲ್ಲಿರುತ್ತಾರೋ ಗೊತ್ತಾಗುವದಿಲ್ಲ. ರಾತ್ರಿಹೊತ್ತು ದೊಡ್ಡ ರಸ್ತೆಗಳಲ್ಲೇ ಸರಿಯಾದ ಗಸ್ತು ಇಲ್ಲದಿರುವಾಗ ಸಂದುಗೊಂದುಗಳ ಪಾಡೇನೆಂದು ಜನಗಳು ಬಹು ಅಸಮಾಧಾನದಿಂದ ಮಾತನಾಡಿಕೊಳ್ಳುತ್ತಿರುವರು. ಹೆಸರುಮಾತ್ರಕ್ಕೆ ಪೊಲೀಸ್ ಠಾಣ ಇದ್ದರೂ ಅಲ್ಲಿ ಯಾರೂ ಇರುವದಿಲ್ಲ. ಊರಿನ ತೊಂಡುದನ, ಕತ್ತೆ, ಕುದುರೆಗಳು ಒಳಗೆ ನಿಂತುಕೊಳ್ಳುತ್ತವೆ.—ಕಳೆದ ತಿಂಗಳ 1ನೇ ವಾರದ ಸುಮಾರಿನಲ್ಲಿ ಹಗಲು ಸುಮಾರು ಗಂಟೆಯ ಸಮಯದಲ್ಲಿ ಮೈಸೂರಿಂದ ಪೆರಿಯಾಪಟ್ಟಕ್ಕೆ ಲಗ್ನಕ್ಕಾಗಿ ಹೋಗುತ್ತಿದ್ದ ಇಬ್ಬರು ಹೆಂಗಸರ ಮೇಲೆ ಯಾರೋ ಒಬ್ಬ ದುರಾತ್ಮನು ಬಿದ್ದು ಅವರಲ್ಲಿದ್ದ ಒಡವೆ ವಸ್ತುಗಳನ್ನೆಲ್ಲಾ ದರೋಡೆಮಾಡಿಕೊಂಡು, ಅಷ್ಟರಲ್ಲಿ ಆ ಮಾರ್ಗವಾಗಿ ಒಬ್ಬ ರೋಮನ್ ಕೆಥೋಲಿಕ್ ಪ್ರೀಸ್ಟ್‌ರವರು ಮೋಟರ್ ಬೈಸಿಕಲ್ ಮೇಲೆ ಪ್ರಯಾಣಮಾಡಿಕೊಂಡು ಬರುವುದನ್ನು ನೋಡಿ ಅವರನ್ನು ಬಿಟ್ಟು ಹೊರಟುಹೋಗಿದ್ದುದನ್ನು ಕಣ್ಣಾರನೋಡಿದ ಪ್ರಯಾಣಿಕರಲ್ಲಿ ಒಬ್ಬರು ತಿಳಿಸಿದರು. ಇದು ಕಳ್ಳಬೆಟ್ಟದ ಹತ್ತಿರ ನಡೆದದ್ದು. ಕೃತ್ಯನಡೆದ ಸ್ಥಳಕ್ಕೂ ಪೊಲೀಸ್ ಸ್ಟೇಷನ್ನಿಗೂ 2½ ಇಲ್ಲವೇ 3 ಫರ್ಲಾಂಗ್ ದೂರ. ಆ ದೊಡ್ಡಮನುಷ್ಯರು ಬಾರದಿದ್ದರೆ ಅವರನ್ನು ಆ ದುರುಳನು ಕೊಂದುಹಾಕುತ್ತಿದ್ದನೆಂದು ಕಾಣುತ್ತದೆ. ನಿರ್ಭಯವಾಗಿ ಹಗಲಿನಲ್ಲೇ ಹೀಗೆ ದರೋಡೆ ನಡೆದರೆ ಪ್ರಜೆಗಳು ನೆಮ್ಮದಿಯಾಗಿ ಪ್ರಯಾಣಮಾಡುವುದೂ ಬಾಳುವುದೂ ಹ್ಯಾಗೆ? ಪೊಲೀಸ್ ಖಾತೆಯನ್ನು ಮೇಲ್ಪಟ್ಟ ಅಧಿಕಾರಿಗಳು ಕೊಂಚ ಪರ್ಯಾಲೋಚಿಸಿ ಕ್ರಮಪಡಿಸಬೇಕಾದದ್ದು ಆವಶ್ಯಕ.

ಇಂಡಿಯಾ ದೇಶದ ವೃತ್ತಾಂತಗಳು.

ಕೊಚ್ಚಿ ಸಂಸ್ಥಾನದ ರಾಜರವರು ವಯಸ್ಸು ಕಳೆದವರಾಗಿರೋಣದರಿಂದ ಬರುವ ಆಗಸ್ಟ್ ತಿಂಗಳು ಮೂರನೇ ವಾರದಲ್ಲಿ ಆಳ್ವಿಕೆಯ ಭಾರವನ್ನು ತ್ಯಜಿಸಿ, ವೈದಿಕ ಧರ್ಮಗಳನ್ನು ಆಚರಿಸುವವರಾಗಿದ್ದಾರೆಂದು ತಿಳಿದುಬರುತ್ತದೆ.

ಪೂರ್ವ ಬಂಗಾಳಾಕ್ಕೆ ಸೇರಿದ ಸಿಲ್‌ಹಟ್ ನಗರದಲ್ಲಿ ಮುಲ್ಲಾ ಖಾಜಿ ಮುದ್ದೀನನೆಂಬ ಮಹಮದಿಯನು ರಾಜದ್ರೋಹಕರವಾದ ಉಪನ್ಯಾಸಗಳನ್ನು ಮಾಡುತ್ತಿದ್ದನೆಂದು ಹಿಡಿದು ಮ್ಯಾಜಿಸ್ಟ್ರೇಟರು ಅವನಿಂದ ನೇಕ್‌ಚಾಲಿನ ಜಾಮೀನನ್ನು ತೆಗೆದುಕೊಂಡಿದಾರೆ.

ಇಂಗ್ಲಿಷ್ ರಾಜ್ಯಭಾರದ ಮಂತ್ರಿ ಶ್ರೇಷ್ಠರಾದ ಮಿ|| ಆಸ್ಕಿತ್‌ರವರು ಹಿಂದುಸ್ಥಾನದ ವೈಸ್‌ರಾಯರ ಅಧಿಕಾರದ ಅವಧಿಯನ್ನು (ಐದು ವರುಷ) ವ್ಯತ್ಯಾಸಮಾಡಲಾಗುವುದಿಲ್ಲವೆಂದು ಕಳೆದ ವಾರ ಪಾರ್ಲಿಮೆಂಟಿನಲ್ಲಿ ಹೇಳಿದರು. ಇದರಿಂದ ನಮ್ಮ ವೈಸ್‌ರಾಯರವರ ಅವಧಿಯನ್ನು ಹೆಚ್ಚುಮಾಡುವರೋ ಇಲ್ಲವೋ ಸಂಶಯವಾಗಿದೆ.

ಬೀಹಾರಿನಲ್ಲಿ ವಿಷ್ಣುದತ್ತ, ಮೋತಿಚಂದ್, ಬನ್ಸಿಧರ ಎಂದೀ ಮೂರು ಮಂದಿ ಸೇರಿ ಭಗವಾನ್‌ದಾಸ್ ಎಂಬೊಬ್ಬ ಮಹಂತನನ್ನು ಕೊಂದುಹಾಕಿ ಆತನ ಬಳಿ ಇದ್ದ ಸುಮಾರು 70,000 ರೂಪಾಯಿನ ನಗನಾಣ್ಯಗಳನ್ನು ಅಪಹರಿಸಿ, ಬಹುಕಾಲದ ಮೇಲೆ ಸಿಕ್ಕಿಬಿದ್ದರು. ಈಗ ಆ ಮೂರು ಜನರನ್ನೂ ಆರಾ ಪಟ್ಟಣದ ಸೆಷನ್ಸ್ ಜಡ್ಜರು ದರ್ಯಾಫ್ತುಮಾಡುತ್ತಿದ್ದಾರೆ.

ಕಳೆದ ವಾರ ಅರಬ್ಬಿ ಸಮುದ್ರದ ಮೇಲೆ ವಿಶೇಷವಾದ ಸುಂಟರಗಾಳಿ ಮುಂತಾದದ್ದು ಪ್ರಾಪ್ತವಾಗಿ ಅಂಚೆ ಬಸ್ತಾಗಳನ್ನು ಭೂಚ್ ಪಟ್ಟಣದಿಂದ ಒಂದು ದೋಣಿಯಲ್ಲಿ ರವಾನೆ ಮಾಡಿದಾಗ ಅದು ಸಮುದ್ರದಲ್ಲಿ ಮುಳುಗಿಹೋಯಿತು. ಅದರಲ್ಲಿದ್ದ ಒಂಭತ್ತು ಜನ ಪ್ರಯಾಣಿಕರೂ, ಒಬ್ಬ ಅಂಚೆ ಇಲಾಖಾ ಅಧಿಕಾರಿಯೂ, ಹದಿಮೂರು ಅಂಚೆ ಬಸ್ತಾಗಳೂ ಸಮುದ್ರದಪಾಲಾದವು.

ಹಿಂದುಸ್ಥಾನದಲ್ಲಿ ಧಾನ್ಯಾದಿಗಳನ್ನು ಮಾರುವ ವರ್ತಕರು ಅನೇಕ ಕೆಟ್ಟ ವಸ್ತುಗಳನ್ನು ಬೆರಕೆಹಾಕಿ ಬಿಕರಿಮಾಡುತ್ತಿದ್ದಾರೆಂದೂ, ಇದನ್ನು ಅಡಗಿಸುವುದಕ್ಕೆ ಈಗ ಇರತಕ್ಕ ಕಾನೂನು ಸಾಲದಾದ್ದರಿಂದ ಇದಕ್ಕಾಗಿಯೇ ಪ್ರತ್ಯೇಕವಾದ ಒಂದು ಕಾನೂನ್‌ಮಾಡಿ ಜಾರಿಗೆ ತರಬೇಕಾಗಿದೆ ಎಂದೂ ಹಿಂದುಸ್ಥಾನದ ಬೇರೆ ಬೇರೆ ನಗರಗಳ ವರ್ತಕಮಂಡಲಿಯವರು ಗವರ್ನ್‌ಮೆಂಟಿಗೆ ಅರಿಕೆಮಾಡಿದಾರೆ.

ತಿರುವಾಂಕೂರು ರಾಜಧಾನಿಯಲ್ಲಿ ಸುಮಾರು 25 ವರುಷದ ಷಾನಾರ್ ಜಾತಿಯ ಒಬ್ಬ ಹೆಂಗಸು ಕಳೆದ ಜೂನ್ ತಾ. 23 ನೇ ರಾತ್ರಿ ಐದು ಹೆಣ್ಣುಮಕ್ಕಳನ್ನು ಏಕಕಾಲದಲ್ಲಿ ಹೆತ್ತಳು. ಮೊದಲನೇ ಮಗು 24 ಗಂಟೆಹೊತ್ತು ಬದುಕಿತು. ಮೂರನೇ ಮಗು ಸತ್ತುಹುಟ್ಟಿತು. ಉಳಿದ ಮೂರು ಮಕ್ಕಳು ಬೆಳಕು ಹರಿಯುವುದರಲ್ಲಿ ತೀರಿಹೋದವು. ಹುಟ್ಟಿದ್ದ ಐದು ಮಕ್ಕಳೂ ಚೆನ್ನಾಗಿ ಬೆಳೆದಿದ್ದವೆಂದು ಹೇಳುತ್ತಾರೆ.

ಫರೀದ್‌ಪುರದ ರಾಜದ್ರೋಹ ಮೊಕದ್ದಮೆಯಲ್ಲಿ ವಾಮನ ಚಂದ್ರಚಕ್ರವರ್ತಿಯೆಂಬ ಅಪರಾಧಿಯು ತನ್ನ ಮೇಲೆ ಸಾಕ್ಷಿಹೇಳುವ ಸಾಕ್ಷಿಗಾರರನ್ನು ಗಾಬರಿಪಡಿಸಿದನೆಂದು ಮೊಕದ್ದಮೆ ಬಂದು ಅವನಿಗೆ 15 ತಿಂಗಳ ಕಠಿಣಸಜಾ ಆಗಿತ್ತು. ಅದರ ಮೇಲೆ ಅವನು ಕಲ್ಕತ್ತಾ ಹೈಕೋರ್ಟಿನಲ್ಲಿ ಅಪೀಲ್ ಮಾಡಿಕೊಂಡನು. ಜಡ್ಜಿಯವರು ಈ ಮೊಕದ್ದಮೆಯ ಕಟ್ಟನ್ನು ಪರಾಂಬರಿಸಿ, ಅಪರಾಧವು ಚೆನ್ನಾಗಿ ರುಜುವಾತಾಗಿದೆ ಎಂದೂ, ರಾಜದ್ರೋಹ, ಕೊಲೆ, ಸಿಡಿಮದ್ದಿನ ಗುಂಡು ಎಸೆಯುವುದು, ಈ ಮುಂತಾದ ಕ್ರೂರಕೃತ್ಯಗಳನ್ನು ನಡಿಸುತ್ತಿರುವ ಕಾಲದಲ್ಲಿ ಇಂಥಾ ಅಪರಾಧಿಗಳಿಗೆ ಕರುಣವನ್ನು ತೋರಿಸಬಾರದೆಂದೂ ಅಭಿಪ್ರಾಯಪಟ್ಟು, ಕೆಳಕೋರ್ಟಿನ ಶಿಕ್ಷೆಯನ್ನು ಖಾಯಂ ಮಾಡಿದರು.

ಬರ್ಮಾ ಆಧಿಪತ್ಯಕ್ಕೆ ಸೇರಿದ ಅಪ್ಪರ್ ಚಿಂದ್ವಾ ಡಿಸ್ಟ್ರಿಕ್ಟಿನಲ್ಲಿ ಒಂದು ಹೊಸ ಕಂಪನಿಯವರು ಒಂದು ಭಾವಿಯನ್ನು ತೋಡಿಸಿದ್ದರಲ್ಲಿ ಅದರೊಳಗಿಂದ ದಿನಕ್ಕೆ ಎರಡು ಸಾವಿರ ಪೀಪಾಯಿಗಳು ಭರ್ತಿಯಾಗುವಷ್ಟು ಸೀಮೆಯೆಣ್ಣೆ ಹೊರಡುತ್ತದೆ. ಈಗ ಆ ಕಂಪನಿಯವರು ಆ ಎಣ್ಣೆಯನ್ನು ಅಲ್ಲಿಂದ 170 ಮೈಲಿ ದೂರ ನಳ್ಳಿಗಳಲ್ಲಿ ಸಾಗಿಸಿ ತಂದು ರೈಲ್ವೆಸ್ಟೇಷನ್‌ಗೆ ಸೇರಿಸಿ ಅಲ್ಲಿಂದ ಮುಂದಕ್ಕೆ ರೈಲಿನ ಮೇಲೆ ರವಾನೆಮಾಡಬೇಕೆಂದು ಕಾಮಗಾರಿ ನಡಿಸುತ್ತಿದಾರೆ. ಬರ್ಮಾದಲ್ಲಿ ಈ ಎಣ್ಣೆ ಉತ್ಪತ್ತಿಯಾಗುವುದು ಈಚೆಗೆ ತುಂಬಾ ಹೆಚ್ಚಿರುತ್ತದೆ. ಕಳೆದ 1904 ನೇ ಇಸವಿಯಲ್ಲಿ 11 ಕೋಟಿ 60 ಲಕ್ಷ ಗ್ಯಾಲನ್ ಎಣ್ಣೆ ಉತ್ಪತ್ತಿಯಾಗಿತ್ತು; ಕಳೆದ 1912 ನೇ ಇಸವಿಯಲ್ಲಿ ಈ ಎಣ್ಣೆಯ ಉತ್ಪತ್ತಿಯು 24 ಕೋಟಿ 5 ಲಕ್ಷ ಗ್ಯಾಲನ್‌ಗಳಿಗೆ ಹೆಚ್ಚಿರುತ್ತದೆ.

ಪಂಜಾಬು ಆಧಿಪತ್ಯಗಳಿಗೆ ಸೇರಿದ ಲಾಹೋರ್ ಪಟ್ಟಣದಲ್ಲಿ ಒಂದು ಪರಸ್ಪರ ಸಹಾಯಕ ಕಂಪನಿಯು ಪ್ರಾರಂಭವಾಗಿದೆ. ಮಿಸೆಸ್ ಬೀಸೆಂಟರು, ಕಲ್ಕತ್ತಾ ಹೈಕೋರ್ಟಿನ ಮಾಜಿ ಜಡ್ಜರಾದ ಮ|| ಶಾರದಾ ಚರಣಮಿತ್ರರು, ಈ ಮೊದಲಾದ ದೇಶೀಯ ದೊಡ್ಡಮನುಷ್ಯರು ಈ ಕಂಪನಿಯನ್ನು ಪ್ರಾರಂಭಿಸಿರುವರು. ಐದು ರೂಪಾಯಿನ ಹತ್ತು ಕೋಟಿ ಷೇರುಗಳನ್ನು ಮಾಡಿ, ಬಿಕರಿಮಾಡುತ್ತಿದಾರೆ. ಮೇಲ್ಕಂಡ ಕಮಿಟಿಯವರು 50 ಷೇರುಗಳನ್ನು ಮಾತ್ರ ಕೊಂಡುಕೊಂಡು, ಉಳಿದ ಷೇರುಗಳನ್ನು ಹಿಂದುಸ್ಥಾನದ ಪ್ರಜೆಗಳಿಗಾಗಿ ಬಿಟ್ಟಿದಾರೆ. ಹಿಂದುಸ್ಥಾನವೆಲ್ಲಾ ಈ ಕಂಪನಿಯ ಶಾಖೆಗಳನ್ನಿಟ್ಟು ಗೋಶಾಲೆಗಳನ್ನು ಸಾಕಿ ಒಳ್ಳೆಯ ಆರೋಗ್ಯಕರವಾದ ಹಾಲನ್ನು ಪ್ರಜೆಗಳಿಗೆ ಒದಗಿಸಿಕೊಡಬೇಕೆಂಬುವುದೇ ಈ ಕಂಪನಿಯ ಉದ್ದೇಶ. ಇದು ಎಷ್ಟು ಮಟ್ಟಿಗೆ ನೆರವೇರುವುದೋ ನೋಡಬೇಕಾಗಿದೆ.

ವಿದೇಶ ವೃತ್ತಾಂತಗಳು.

ವಿಮಾನಯಂತ್ರಗಳನ್ನು ತಯಾರ್ಮಾಡಿ ಅಂತರಿಕ್ಷದಲ್ಲಿ ಸಂಚಾರಮಾಡುವುದರಲ್ಲಿ ತುಂಬಾ ಪ್ರಖ್ಯಾತಿಪಡೆದಿದ್ದ ಲೆಗಾಗ್ನೋ ಎಂಬೊಬ್ಬ ಫ್ರೆಂಚ್ ಸಾರೇಗಾರನು ಕಳೆದ ವಾರ ವಿಮಾನಯಂತ್ರದಿಂದ ಬಿದ್ದು ಮೃತಪಟ್ಟನು.

ಉತ್ತರ ಧ್ರುವವನ್ನು ನೋಡಿ ಬರಬೇಕೆಂದು ಸ್ಟೆಫೆನ್‌ಸನ್ ಎಂಬಾತನು ಕೆಲವು ಸಹಪಾಠಿಗಳೊಡನೆ ಸಮುದ್ರಯಾನ ಮಾಡುತ್ತಿದ್ದರು. ಈ ಗುಂಪಿಗೆ ಸೇರಿದವರಲ್ಲಿ ಎಂಟು ಮಂದಿ ರಾಸಿಗಲ್ ಎಂಬ ದ್ವೀಪದ ಬಳಿ ಅಕಾಲಮರಣ ಹೊಂದಿದರೆಂದು ವರ್ತಮಾನ ಬಂದಿದೆ.

ರಷ್ಯಾ ಚಕ್ರಾಧಿಪತ್ಯಕ್ಕೆ ಸೇರಿದ ಈಶಾನ್ಯ ಪ್ರಾಂತ್ಯಗಳ ಕಾಡುಗಳಲ್ಲಿ ಬೆಂಕಿ ಹುಟ್ಟಿ ಕಾಡನ್ನೆಲ್ಲಾ ಉರಿಸುತ್ತಿದೆ. ವಿಸ್ತಾರವಾದ ಪ್ರದೇಶಗಳು ಹತ್ತಿಕೊಂಡು ಹಾಳಾಗುತ್ತಿವೆ. ಕೆಲವು ಗ್ರಾಮಗಳೂ, ರೈತರು ಬೆಳೆಮಾಡಿದ್ದ ಪೈರುಗಳೂ ಸುಟ್ಟು ಹೋದವು. ಪ್ರಜೆಗಳಿಗೆ ನಾನಾ ಕಷ್ಟನಷ್ಟಗಳುಂಟಾಗಿವೆ.

ಇಂಗ್ಲಾಂಡಿಗೆ ಸೇರಿದ ಉಲಿಚ್ ಎಂಬ ಸ್ಥಳದಲ್ಲಿ ಯುದ್ಧದ ಸಾಮಗ್ರಿಗಳನ್ನು ತಯಾರ್ಮಾಡುವ ಘಾರಿ ಸರ್ಕಾರಿ ಕಾರ್ಖಾನೆಗಳಲ್ಲಿ ಹನ್ನೆರಡು ಸಾವಿರ ಜನರು ಕೆಲಸಕ್ಕೆ ಜೋಡು ಹಟಹಿಡಿದು ನಿಂತು ಬಿಟ್ಟಿರು. ಇವರನ್ನು ಸಮಾಧಾನಪಡಿಸಿ ಕೆಲಸಕ್ಕೆ ಬರಮಾಡಿಕೊಳ್ಳಬೇಕೆಂದು ಅಧಿಕಾರಿಗಳು ಏರ್ಪಾಡುಮಾಡಿರುವರು.

ಆಫ್ರಿಕಕ್ಕೆ ಸೇರಿದ ಸೋಮಲಿಲಾಂಡಿನಲ್ಲಿ ಮುಲ್ಲಾ ಎಂಬ ಮಹಮದೀಯರ ಮುಖಂಡನು ಪುನಹ ಹಿಂಬಾಲಕರನ್ನು ಸೇರಿಸಿಕೊಂಡು ದಾಂಧಳೆಮಾಡಲಾರಂಭಿಸಿ ಬರ್ಬರಾಸ್ ಎಂಬ ಸ್ಥಳವನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕೆ ನುಗ್ಗಿಹೋಗುತ್ತಿರುವುದಾಗಿಯೂ, ಏಡೆನ್‌ನಲ್ಲಿ ಇಟ್ಟಿರುವ ಹಿಂದುಸ್ಥಾನದ ಸೈನಿಕರನ್ನು ಅಲ್ಲಿಗೆ ಕಳುಹಿಸುವ ಏರ್ಪಾಡು ನಡೆದಿದೆ ಎಂದೂ ವರ್ತಮಾನ ಬಂದಿದೆ.

ಪರ್ಷಿಯಾ ರಾಜ್ಯದಲ್ಲಿ ಷಾರವರಿಗೆ ಮುಂದಿನ ಮಂಗಳವಾರ ರಾಜ್ಯಾಭಿಷೇಕವಾಗುತ್ತದೆ. ಷಾರವರಿಗೆ 18 ವಯಸ್ಸು ವಯಸ್ಸಾಗಿ ವಿದ್ಯಾದಿ ಸಾಮರ್ಥ್ಯಗಳನ್ನು ಪಡೆದಿದಾರೆಂದು ತಿಳಿಯುವುದು. ಈಗ ಪರ್ಷಿಯಾ ರಾಜ್ಯವು ಇನ್ನೂ ಸರಿಯಾಗಿ ತಹಬಂದಿಗೆ ಬಂದಿಲ್ಲವಾದದ್ದರಿಂದ ಷಾರವರು ಚತುರರಾಗಿದ್ದರೂ ರಾಜ್ಯದ ಕಾರುಬಾರುಗಳನ್ನು ಹ್ಯಾಗೆ ತಹಬಂದಿಗೆ ತಂದುಕೊಳ್ಳುವರೋ ನೋಡತಕ್ಕದ್ದಾಗಿದೆ.

ಉತ್ತರ ಅಮೇರಿಕದ ರಾಜಧಾನಿಯಾದ ನ್ಯೂಯಾರ್ಕ್ ಪಟ್ಟಣದಲ್ಲಿ ನಾಲ್ಕು ಮಂದಿ ಕ್ರೂರಾತ್ಮಗಳು ಒಂದು ಮನೆಯಲ್ಲಿ ಸಿಡಿಮದ್ದಿನ ಗುಂಡುಗಳನ್ನು ತಯಾರುಮಾಡುತ್ತಿದ್ದಾಗ ಅವು ಅಕಸ್ಮಾತ್ತಾಗಿ ಹತ್ತಿಕೊಂಡು ಹಾರಿದ್ದರಿಂದ ಆ ನಾಲ್ಕು ಮಂದಿಯೂ ತತ್ಕ್ಷಣವೇ ಮೃತಪಟ್ಟರು. ಏಳುಮಂದಿ ನಿರಪರಾಧಿಗಳಾದ ಪ್ರಜೆಗಳಿಗೆ ಏಟುಗಳು ಗಾಯಗಳಾಗಿವೆ. ಆ ಕ್ರೂರಾತ್ಮಗಳು ಮಿ|| ರಾಕ್‌ಫೆಲರ್ ಎಂಬ ಕೋಟ್ಯಾಧೀಶ್ವರನನ್ನು ಕೊಂದುಹಾಕಬೇಕೆಂದು ಏರ್ಪಾಡು ಮಾಡುತ್ತಿದ್ದರೆಂದು ಪೋಲೀಸಿನವರು ಹೇಳುವರು.

ಚೀನಾ ಗವರ್ನ್‌ಮೆಂಟಿನವರು ಇಂಗ್ಲಿಷ್ ರಾಯಭಾರಿಗಳಿಗೆ ಕಳೆದ ತಿಂಗಳು 18 ನೇ ತಾ. ನಲ್ಲಿ ತಿಳಿಸಿದ್ದೇನಂದರೆ—ಸ್ಟ್ರೇಟ್ ಸೆಟ್ಲ್‌ಮೆಂಟಿನಿಂದ 30,000 ಚೀನಾ ದಂಗೇಕೋರರು ಮೂರು ಹಡಗುಗಳಲ್ಲಿ ಆಯುಧಪಾಣಿಗಳಾಗಿ ಮಕಾವೋವಿಗೂ, ಸ್ವಾಟೋವಿಗೂ ಬರುತ್ತಾರೆ. ಅವರನ್ನು 3,000 ದಂಗೇಕೋರರು ಎದುರುಗೊಳ್ಳುವರು. ಈ ವಿಷಯದಲ್ಲಿ ಆಯಾ ಸ್ಥಳದ ಅಧಿಕಾರಿಗಳು ಎಚ್ಚರಿಕೆಯಿಂದಿರಬೇಕು. ಚೀನಾ ಸರ್ಕಾರದವರಿಗೆ ಈ ಸುದ್ದಿಯು ಕಳವಳವನ್ನುಂಟುಮಾಡಿರಬೇಕೆಂದು ತೋರುವುದು. ಇತ್ತಲಾಗಿ ಚೀನಾ ರಾಜ್ಯಭಾರವನ್ನು ಕ್ರಮಪಡಿಸುವುದರಲ್ಲಿ ಗವರ್ನ್‌ಮೆಂಟಿಗೆ ಸಹಾಯಮಾಡುತ್ತಿರುವ ಡಾಕ್ಟರ್ ಮಾರಿಸನ್ ಎಂಬ ಇಂಗ್ಲಿಷ್ ದೊಡ್ಡ ಮನುಷ್ಯನು ರಾಜ್ಯಭಾರಕಾರ್ಯಗಳು ಈಗ ತುಂಬಾ ಕ್ರಮಕ್ಕೆ ಬರುತ್ತಿವೆ ಎಂದೂ, ಚೀನೆಯ ಅಭಿವೃದ್ಧಿ ವಿಷಯದಲ್ಲಿ ಸಂಶಯಪಡಬೇಕಾದ್ದಿಲ್ಲವೆಂದೂ ಭರವಸೆ ಕೊಟ್ಟಿದಾನೆ.

ಚಕ್ರವರ್ತಿಸಾರ್ವಭೌಮರವರು ಮಹಾರಾಜ್ಞೀರವರ ಸಮೇತ ಸ್ಕಾಟ್‌ಲೆಂಡಿಗೆ ಸೇರಿದ ಎಡಿಂಬರೋ ಪಟ್ಟಣಕ್ಕೆ ಚಿತ್ತೈಸಿ, ಹೋಲಿರೂಡ್ ಎಂಬ ರಾಜಭವನದಲ್ಲಿ ಇಳುಕೊಂಡಿದಾರೆ. ಅವರು ಸ್ಟೇಷನ್ನಿಂದ ಸಾರೋಟಿನಲ್ಲಿ ಕುಳಿತು ರಾಜಬೀದಿಯಲ್ಲಿ ಸವಾರಿ ದಯಮಾಡುತ್ತಿದ್ದಾಗ ಸ್ತ್ರೀಯರಿಗೆ ಸ್ವಾತಂತ್ರ್ಯಗಳನ್ನು ಕೊಡಬೇಕೆಂದು ಹೋರಾಡುವ ಗುಂಪಿಗೆ ಸೇರಿದ ಹೆಂಗಸರ್ಯಾರೋ ಒಂದು ಕಾಗದದ ಚಂಡನ್ನು ಕಟ್ಟಿ ತಮ್ಮ ಅಂಕಿತವನ್ನು ಬರೆದು ಆ ಸಾರೋಟಿಗೆ ಎಸೆದರು. ಇನ್ನೊಂದು ಕಡೆ ಅಂದರೆ ಬೆಲ್‌ಫಾಸ್ಟ್ ಪಟ್ಟಣದಲ್ಲಿ ಈ ಸ್ತ್ರೀಯರ ಗುಂಪಿನವರು ಇದುವರೆಗೆ ಎರಡು ದೊಡ್ಡ ಮತ್ತು ಚರಿತ್ರಾರ್ಹವಾದ ಬಂಗಲೆಗಳಿಗೆ ಬೆಂಕಿ ಹಾಕಿ ಹಾಳುಮಾಡಿದ್ದರು. ಕಳೆದ ವಾರದ ಈ ಗುಂಪಿನವರು ಇನ್ನೊಂದು ದೊಡ್ಡ ಬಂಗಲೆಯನ್ನು ನಾಶಮಾಡಿದರು. ಅದರಲ್ಲಿ ಪೂರ್ವಕಾಲದ ಅನೇಕ ಅಮೂಲ್ಯವಸ್ತುಗಳೂ, ತಸ್ವೀರುಗಳೂ ಇದ್ದವು. ಅದೆಲ್ಲಾ ಸುಟ್ಟು ಹಾಳಾಯಿತು. ಇನ್ನೊಂದು ಕಡೆ ಅದೇ ಸ್ತ್ರೀಯರ ಗುಂಪಿಗೆ ಸೇರಿದ ಹೆಂಗಸರಿಬ್ಬರು ಬರ್ನ್ಸ್ ಎಂಬ ದೊಡ್ಡ ಕವಿಯ ಬಂಗಲೆಯನ್ನು ನಾಶಪಡಿಸಬೇಕೆಂದು ದೊಡ್ಡ ಸಿಡಿಮದ್ದಿನ ಗುಂಡುಗಳನ್ನು ಇಟ್ಟಿದ್ದರು. ಕಾವಲುಗಾರರಿಗೆ ಅವು ಸಿಕ್ಕಿದವು. ಅವರು ಒಬ್ಬ ಹೆಂಗಸನ್ನು ಹಿಡಿದು ಇರುತ್ತಾರೆ.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲ್ಕಡೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ:—ಬೆನ್ನಿನಲ್ಲಿ ಛಳುಕು; ನಿದ್ರೆಯಿಲ್ಲದೆ ಇರುವುದು; ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಿಳುಪಾಗಿಯೋ ಇಳಿಯುವುದು; ಬಿಡದ ಬಾಯಾರಿಕೆ; ಬಳಲಿಕೆ; ಎದೆ ತಲ್ಲಣಿಸುವುದು; ತಲೆನೋವು; ಗಾಬರಿ; ಕಣ್ಣುಮಬ್ಬು; ತಲೆ ತಿರುಗುವಿಕೆ; ಮೈನೋವು; ಕೀಲುನೋವು; ಮರವು; ನಿತ್ರಾಣ; ಇವೇ ಮೊದಲಾದುವು. ಅಲಕ್ಷ್ಯಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [181-46]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ಸ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು



ರೂ. ೨—೦—೦; ಅಥವಾ ೬ ಬುಡ್ಡಿಗಳಿಗೆ ರೂ. ೧೦—೮—೦. ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು. ಅಥವಾ ಡೋನ್ಸ್. ಪಿ. ಒ. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುವು.

ಜೂಲೈ ಮಹೋತ್ಸವದ ಕೈಗಡಿಯಾರ.



ಅರ್ಧ ಕ್ರಯ ರೂ. 1-4-0

ಇದೇ ಜೂಲೈ ಹಬ್ಬದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದ ಕೈಗಡಿಯಾರವನ್ನು ಜುಲೈ ಒಳಗೆ ತರಿಸಿಕೊಳ್ಳುವವರಿಗೆ ರೂಪಾಯಿ 1-14-0 ಆಣೆಗೆ ಕೊಡಲ್ಪಡುತ್ತೆ. [99-6]

ವಿಳಾಸ—ವಿ. ಕೃಷ್ಣಸ್ವಾಮಿ ಮೊದಲಿಯಾರ್, ನಂ.27 ಬಂದರ್ ಬೀದಿ, ಜಿ.ಟಿ., ಮದರಾಸು.

ಮಧುರೆ ಜುನ್ನಡಿ ಅಂಚಿನ ಸೀರೆ ಅವ್ವಲ್ ರಖಂ ರೂ. 1-15-0.

ಇದು 18 ಮೊಳ ಧಾರಾಳವಾಗಿದೆ. ಉಡಲು ಲಾಯಖಾದದ್ದು. ಬಣ್ಣ ಹೋಗದು. ಸುಂದರವಾದ ಸೆರಗು. ಪೋಟೀ ಪ್ರಕಟನೆಗಳ ದೆಸೆಯಿಂದ ಈ ಭಾರೀ ಕ್ರಯದ ಸೀರೆಯನ್ನು ಅಸಲು ಬೆಲೆಗೆ ತಗ್ಗಿಸಿ ಮಾರುತ್ತೇವೆ. ಜಾಗ್ರತೆ ತರಿಸುವವರಿಗೆ ಮಾತ್ರ ಈ ಕ್ರಯಕ್ಕೆ ದೊರೆಯುತ್ತೆ.

ವಿಳಾಸ—ರಾಮರಾವ್, ಎಸ್. ಎಂ. ಕೋಯಿಲ್ ಬೀದಿ, ತಿರುವಲಕ್ಕೇಣಿ, ಮದರಾಸು.

[139-4]

ಮೇಲಾದ ಜರಾಕ ರೇಷ್ಮೆ ಪಂಚೆಗಳು.

ಒಳ್ಳೇ ಸಮಯ ! ಸಾವಿರಗಟ್ಲೆ ಖರ್ಚಾಗುತ್ತಿದೆ !! ಸಂಶಯ ದೊರೆಯಲಾರದು !!!

ಅನೇಕ ಪಂಚೆಗಳು ದಿನವೂ ಖರ್ಚಾಗುತ್ತಾ ಇರುವುದರಿಂದ ಪ್ರತ್ಯೇಕ ಬೆಲೆಯು ತಗ್ಗಿಸಿರುತ್ತೇವೆ. ವಾಚಕರೇ ! ಶೃಂಗಾರವನ್ನೂ, ನಾಗರಿಕತೆಯನ್ನೂ ಹೊಂದಿರುವ ಮೇಲಾದ ಅಸಲ್ ರೇಷ್ಮೆ ಪಂಚೆಗಳು ಹಬ್ಬಗಳ ಕಾಲದಲ್ಲಿ ಹೊದಿಯಲು ಅನೇಕ ಪಂಚೆಗಳನ್ನು ತರಿಸಿಕೊಂಡಿರುವದ್ದರಿಂದ ಮುಕ್ಕಾಲು ಪಾಲು ಸರಕು ಖರ್ಚಾಗಿಹೋಗಿರುತ್ತೆ. ಈಗ ಸ್ವಲ್ಪವೇ ಉಳಿದಿರುತ್ತೆ. ಈ ಪಂಚೆಗಳು ಸ್ತ್ರೀ ಪುರುಷರು ಬಾಲಿಕೆಗಳು ಧರಿಸಿಕೊಳ್ಳಬಹುದು. ಅಪೂರ್ವವಾದ ಪಂಚೆಗಳು. ಇದರಲ್ಲಿ ಕೆಂಪು, ಹಸರು, ಎಲೆಹಸರು, ರೋಜಾ, ಮೇಘವರ್ಣ, ಇತ್ಯಾದಿ ರಂಗುಗಳುಂಟು. ಬಹಳ ಉತ್ಕೃಷ್ಟವಾದ ಪಂಚೆಗಳು. ಈ ಖರೀದಿಗೆ ನಮ್ಮಲ್ಲಿ ಅಲ್ಲದೆ ಮತ್ತೆ ಯಾರಲ್ಲಿಯೂ ದೊರೆಯಲಾರದು.

5½ ಮೊಳ ಉದ್ದ, 2½ ಮೊಳ ಅಗಲ ಇರುವ ಪಂಚೆ ಒಂದಕ್ಕೆ ರೂ. 8. ಪಂಚೆ 1 ಕ್ಕೆ ಟಪಾಲು ಖರ್ಚು 4 ಆಣೆ. ಎರಡು ಪಂಚೆಗಳನ್ನು ಒಂದೇ ಸಲ ತರಿಸಿಕೊಂಡರೆ ಟಪಾಲು ಖರ್ಚು ಇನಾಂ.

ನಮ್ಮ ವಿಳಾಸ—ಎನ್. ಎಂ. ಸ್ವಾಮಿ ಅಂಡು ಕಂಪೆನಿ, ನಂ. 44, ನಂಬುಲಯ್ಯರ್ ಬೀದಿ, ಮದರಾಸು.

[109-10]

ತಂಜಾವೂರು ಗೆಜ್ಜೆ ಅಡ್ಡಿಗೆ ಕ್ರಯ 7 ಆಣೆ.



ಅಡ್ಡಿಗೆ ಮಾದರಿ ನೋಡಬೇಕಾದರೆ ಬರೆದರೆ ಉಚಿತವಾಗಿ ಕಳುಹಿಸುತ್ತೇವೆ. ಇದು ಎಲೆಕ್ಟ್ರಿಕ್ ಚಿನ್ನದ ಗಟ್ಟಿ ಗೆಜ್ಜೆಗಳನ್ನು ತಯಾರಿಸಿ ಸುಂದರವಾಗಿ ತುಕ್ಕುಗಳಿಟ್ಟು ರೇಷ್ಮೆ ಮಿಶ್ರವಾದ ಕರಿ ದಾರದಿಂದ ಕಟ್ಟಿರುತ್ತೆ. ಸ್ತ್ರೀಯರು ಕೊರಳಲ್ಲಿ ಧರಿಸುವದಕ್ಕೆ ಲಾಯಖಾದದ್ದು. ನಮ್ಮಲ್ಲಿ ಜನಗಳಿಗೆ ನಂಬಿಕೆ ಹುಟ್ಟುವದಕ್ಕಾಗಿ ಮಾದರಿ ನೋಡಬೇಕೆಂದು ಬರೆಯುವವರಿಗೆ ಮಾದರಿ ಕಳುಹಿಸುತ್ತೇವೆ. [139-4]

ವಿಳಾಸ—ಎಸ್. ಎನ್. ಮೂರ್ತಿ ಅಂಡ್ ಕಂಪೆನಿ, ತಿರುವಲಕ್ಕೇಣಿ, ಮದರಾಸು.

ಕಣ್ಣು ಇಲ್ಲದಿದ್ದರೆ ಕಲಿಯುಗವೇ ಇಲ್ಲ !

ಭಾರೀಕ್ರಯದ ಕನ್ನಡಕಗಳು ಕ್ರಯ ರೂ. 2-8-0. ಸ್ಫಟಿಕದ ಕನ್ನಡಕವನ್ನು ಉಪಯೋಗಿಸಿ ನಿಮ್ಮ ದೃಷ್ಟಿಯನ್ನು ಕಾಪಾಡಿಕೊಳ್ಳಿರಿ. ಅಲ್ಪಕ್ರಯದ ಕನ್ನಡಕಗಳು ದೃಷ್ಟಿಯನ್ನು ಹೋಗಲಾಡಿಸಿ ಕಾಲಕ್ರಮೇಣ ವ್ಯಾಧಿಯನ್ನುಂಟುಮಾಡುತ್ತೆ. ಆದಕಾರಣ ಅವುಗಳನ್ನು ಉಪಯೋಗಿಸಬೇಡಿರಿ. ನಮ್ಮಲ್ಲಿ ಸ್ಫಟಿಕದ ಕನ್ನಡಕಗಳು ಕ್ರಯಕ್ಕೆ ದೊರೆಯುತ್ತೆ. ಬೇಕಾದವರು ಬರೆದರೆ ಎಲ್ಲಾ ತರಹದ ಮತ್ತು ಎಲ್ಲಾ ನಂಬರಿನ ಕನ್ನಡಕಗಳಿರುವ ಭಾರೀಕ್ರಯದ ಪಟ್ಟಿ ಒಂದನ್ನು ಉಚಿತವಾಗಿ ಕಳುಹಿಸುತ್ತೇವೆ. ಬಾಕೀ ವಿಷಯವೆಲ್ಲಾ ನಮ್ಮ ಪಟ್ಟಿ ಬಾಸ್ತು ಬಂಪಮೇಲೆ ಬರೆದು ತಿಳಿಸುತ್ತೇವೆ. [139-4]

ವಿಳಾಸ.—ಸೀಲಕರ್ ಅಂಡ್ ಬ್ರದರ್ಸ್, ಎಸ್. ಎಂ. ಕೋಯಿಲ್ ಬೀದಿ, ತಿರುವಲ್ಲಿಕ್ಕೇಣಿ, ಮದರಾಸು.

ಮನೆಗೂ ಜೇಬಿಗೂ ಅಲಂಕಾರವು.

ವಾಯಿದೆಯನ್ನು ಜೂಲೈ ತಾ. 24 ರ ತನಕ ಬೆಳೆಸಬೇಕೆಂದು ಅನೇಕರು ಕಾಗದ ಬರೆದಿರೋಣದರಿಂದ ಈ ಒಂದು ಸಲಕ್ಕೆ ಆ ರೀತಿ ಪಟ್ಟು ಮಾಡಿದೆ. ಮರೆಯದೆ, ಆಲಸ್ಯಮಾಡದೆ ಬೇಗ ಬರೆಯಿರಿ. 24 ನೇ ತಾ. ಆದ ಮೇಲೆ ನಾವು 10 ರೂಪಾಯಿಗೆ ಒಂದು ಪೈ ಕಮ್ಮಿಯಾದರೂ ಕೊಡಲಾರೆವು. ಇಷ್ಟು ಅಗ್ಗವಾಗಿ ಪ್ರಪಂಚದಲ್ಲಿ ಇನ್ಯಾರೂ ಕೊಡುವುದಿಲ್ಲ. ಇದು ಚಿನ್ನದಂಥಾ ಸಮಯ. ಮತ್ತೆ ದೊರಕಲಾರದು.

ಚಿತ್ತೂರಿನಲ್ಲಿರುವ ಘಟಾಲಾ ಎಂಬ ಕಂಪನಿಗೆ ಈ ದಿನವೇ ಐದು (೫) ರೂಪಾಯಿ ಮಣಿ ಆರ್ಡರ್ ಮಾಡಿದರೆ ಅವರು ನಿಮಗೆ ಒಂದು ಬಲವಾದ ಲೀವರ್ ಜೇಬಿನ ಗಡಿಯಾರವನ್ನೂ, ಮನೆಯಲ್ಲಿ ಗೋಡೆಗೆ ನೇತುಹಾಕುವ ಗಂಟೆ ಹೊಡೆಯುವ 8 ಮೂಲೆಯ 8 ದಿನಕ್ಕೊಂದುಸಲ ಬೀಗಕೊಡುವ ಒಂದು ದೊಡ್ಡ ಗಡಿಯಾರವನ್ನೂ ಕಳುಹಿಸುತ್ತಾರೆ. 10 ರೂ. ಕ್ರಯವನ್ನು ಜೂಲೈ ತಾ. 26 ವರೆಗೆ ಮಾತ್ರ 5 ರೂಪಾಯಿಗೆ ಇಳಿಸಿದೆ. ಬಳಿಕ ಇದು ರೂ. 10 ಕೊಟ್ಟರೂ ಸಿಕ್ಕುವುದಿಲ್ಲ. ವಿ. ಪಿ. ಮಾಡುವುದಿಲ್ಲ. ಈ ದಿನವೇ 5 ರೂ. ಕಳಿಸಿರಿ. ವಿಳಾಸವನ್ನು ಇಂಗ್ಲಿಷಿನಲ್ಲೇ ಬರೆಯಬೇಕು.

[157-1] ವಿಳಾಸ—ಘಟಾಲಾ ಕಂಪನಿ, ಚಿತ್ತೂರು, ಉತ್ತರ ಆರ್ಕಾಟು.

ಮೈಸೂರು ಗವರ್ನ್‌ಮೆಂಟ್ ಸೆಕ್ಯೂರಿಟಿ

ಲೈಫ್ ಮತ್ತು ಮ್ಯಾರಿಯೇಜ್ ಕಂಪೆನಿ, ಲಿಮಿಟೆಡ್.

ಹೆಡ್ ಆಫೀಸ್—ಮೈಸೂರು.

ಮೂಲಧನ ರೂ. 1,00,000.

(1895ನೇ ಇಸವಿ 3ನೇ ಮೈಸೂರು ಕಂಪನಿಗಳ ಕಾನೂನ್ ಪ್ರಕಾರ ರೆಜಿಸ್ಟರ್ ಮಾಡಲ್ಪಟ್ಟಿರುತ್ತೆ.)

ಎಚ್ಚರಿಕೆ:—(ನೀವು ಪ್ರಾವಿಡೆಂಟ್ ಜೀವವಿಮೆ ಪಾಲಿಸಿಯಾಗಲಿ, ಮದುವೆ ವಿಮೆ ಪಾಲಿಸಿಯಾಗಲಿ ತೆಗೆದುಕೊಂಡು ಹಣ ಕಟ್ಟುವುದಕ್ಕೆ ಮುಂಚೆ ನಮ್ಮ ಕಂಪನಿಯ ಪ್ರಾಸ್ಪೆಕ್ಟಸ್ಸನ್ನು ಕೇಳಿ ತರಿಸಿಕೊಂಡು ಚೆನ್ನಾಗಿ ಓದಿ ನೋಡಿ. ಇದರಿಂದ ಹಿಂದುಸ್ಥಾನದಲ್ಲಿ ಈಗಿನ ಕಾಲದ ಪ್ರಾವಿಡೆಂಟ್ ಫಂಡುಗಳ ನಡವಳಿಕೆಗಳೆಲ್ಲಾ ನಿಮಗೆ ವಿವರವಾಗಿ ಗೊತ್ತಾಗುತ್ತದೆ; ಮತ್ತು ಇದರಿಂದ ನೀವು ಯಾವ ಒಳ್ಳೇ ಕಂಪನಿಯನ್ನು ಚುನಾಯಿಸಿಕೊಳ್ಳಬೇಕೋ, ನಿಮ್ಮ ಕಷ್ಟಾರ್ಜಿತದ ಹಣವು ಯಾವ ಕಂಪನಿಯಲ್ಲಿ ಸುರಕ್ಷಿತವಾಗಿರುವುದೋ ಅದೆಲ್ಲಾ ನಿಮಗೇ ಚೆನ್ನಾಗಿ ಗೊತ್ತಾಗುತ್ತದೆ.)

ಈ ಕಂಪನಿ ಸಂಪೂರ್ಣ ನಂಬಿಕೆಯುಳ್ಳದ್ದು. ಇದರಲ್ಲಿ ದೃಷ್ಟಿಪಾತ್ರವಾದ ಭಾಗಗಳೂ, ಉಚಿತವಾದ ಕ್ರಮಗಳೂ. ಹಿಂದುಸ್ಥಾನದ ಎಲ್ಲಾ ಭಾಗಗಳಲ್ಲೂ ಚೀಫ್ ಏಜಂಟರೂ, ಏಜಂಟರೂ ಬೇಕಾಗಿದೆ. ಅವರಿಗೆ ಸಂಬಳವೂ, ಕಮೀಷನ್ನೂ ಕೊಡಲಾಗುವುದು. ಪ್ರಾಸ್ಪೆಕ್ಟಸ್ ಮುಂತಾದವುಗಳನ್ನು ಇವರಿಗೆ ಬರೆದು ತರಿಸಿಕೊಳ್ಳಿ:—

ಎಂ. ಎಲ್. ನಾಗಣ್ಣ, ಮ್ಯಾನೇಜಿಂಗ್ ಡೈರೆಕ್ಟರ್, ಮೈಸೂರು.

ಇಪ್ಪತ್ತನೇ ಶತಮಾನದ ಆಶ್ಚರ್ಯ.

ಮೈಸೂರು ಗವರ್ನಮೆಂಟ್ ಸೆಕ್ಯೂರಿಟಿ ಮ್ಯೂಚುಯೆಲ್ ಪ್ರಾಪರ್ಟಿ ಇನ್‌ವೆಸ್ಟ್‌ಮೆಂಟ್ ಕಂಪನಿ, ಲಿಮಿಟೆಡ್. ಹೆಡ್ ಆಫೀಸ್—ಮೈಸೂರು.

ಮೂಲಧನ ರೂ. 1,00,000.

(1896ನೇ ಇಸವಿ 3ನೇ ಮೈಸೂರು ಕಂಪನಿಗಳ ಕಾನೂನ್ ಪ್ರಕಾರ ರೆಜಿಸ್ಟರ್ ಮಾಡಲ್ಪಟ್ಟಿರುತ್ತೆ.)

ಲೇವಾದೇವಿ:—ಎಲ್ಲಾ ಜಾತಿಯ ಲೇವಾದೇವಿಯನ್ನೂ ನಡಿಸಲಾಗುತ್ತೆ. ಕಂಪನಿಯ ಷೇರುಗಳು ಬಹು ಅಮೂಲ್ಯವಾದವು; ಮತ್ತು ಎಲ್ಲರೂ ಪಡಕೊಳ್ಳುವಷ್ಟು ಸುಲಭವಾಗಿ ಮಾಡಲಾಗಿದೆ. [161-

ಜಮೀನು, ಮನೆ, ಮೊದಲಾದ ಆಸ್ತಿಗಳನ್ನು ಕೊಂಡು ಸ್ವಾಧೀನಪಡಕೊಳ್ಳುವುದಕ್ಕೆ ಬಹು ಶ್ರೇಷ್ಠವೂ ಅತ್ಯಂತ ಸುಲಭವೂ ಆದ ಮಾರ್ಗಗಳನ್ನು ಕಲ್ಪಿಸಲಾಗಿದೆ. ಕೊಂಡುಕೊಳ್ಳಬೇಕೆಂಬ ಜಮೀನು ಅಥವಾ ಮನೆಯ ಮೇಲೆ ಕಂಪನಿಯವರು ಅಡ್ವಾನ್ಸು ಹಣ ಕೊಡುತ್ತಾರೆ. ಸಾಲ ತೀರಿಸುವುದಕ್ಕೂ ಕಂಪನಿಯಿಂದ ಹಣ ಕೊಡುತ್ತಾರೆ. ಈ ಹಣಗಳನ್ನು ಕಂಪನಿಯವರು ತಿಂಗಳು ತಿಂಗಳಿಗೆ ಸುಲಭವಾದ ಕಂತುಗಳ ಪ್ರಕಾರ ವಸೂಲ್ಮಾಡಿಕೊಳ್ಳುವರು.

ಬೇಕಾಗಿದೆ:—ಮೈಸೂರು ಸಂಸ್ಥಾನಕ್ಕೆ ಸೇರಿದ ಪ್ರತಿ ಒಂದು ತಾಲ್ಲೂಕಿನಲ್ಲೂ ಕಂಪನಿಯ ಪರವಾಗಿ ನಾಲ್ಕುಮಂದಿ ಸ್ಥಳೀಯ ಡೈರೆಕ್ಟರುಗಳು ಬೇಕು. ಅವರಿಗೆ ಕಂಪನಿಯಿಂದ ಧಾರಾಳವಾದ ರಿಯಾಯತಿಗಳು ದೊರಕುವವು. ಘನವಂತರಾಗಿಯೂ, ಮುಖಂಡರಾಗಿಯೂ ಇರತಕ್ಕವರು ಮಾತ್ರ ಬರೆದುಕೊಳ್ಳತಕ್ಕದ್ದು. ಪ್ರಾಸ್ಪೆಕ್ಟಸ್ ಮಂತಾದವುಗಳನ್ನು ಇವರಿಗೆ ಬರೆದು ತರಿಸಿಕೊಳ್ಳಿ:—

ಎಂ. ಎಲ್. ನಾಗಣ್ಣ, ಮ್ಯಾನೇಜಿಂಗ್ ಡೈರೆಕ್ಟರ್, ಮೈಸೂರು.

ಯಾಕೆ ಪರೀಕ್ಷಿಸಬಾರದು ? ಭಂಗಾರದ ಪದಕ ಬಂದಿದೆ.

ಸೆಂಟ್, ಅತ್ತರ್‌ಗಳಲ್ಲೆಲ್ಲಾ ಶ್ರೇಷ್ಠವಾದದ್ದು

ಅಟೋ ಮೋಹಿನಿ

ಇದು ರಿಜಿಸ್ಟರ್ ಆಗಿದೆ. ಹಗಿನ ಕಾಲದಲ್ಲಿ ಇದೇ ನಿಲ್ಲುವ, ಸುವಾಸನೆಯುಳ್ಳ, ಮನೋಹರವಾದ ಮತ್ತು ಸಂಬಂಧದ ಪರಿಮಳದ ದ್ರವ್ಯಕ. ಈ ವಸ್ತ್ರಕ್ಕೆ ನಾಲ್ಕು ತೊಟ್ಟು ಹಾಕಿಕೊಂಡರೆ ನಾಲ್ಕು ದಿನಗಳ ತನಕ ಘಮಘಮಿಸುವ ಸುವಾಸನೆ ಇರುತ್ತೆ, ಹಾಗೆ ದೀರ್ಘಕಾಲ ನಿಲ್ಲತಕ್ಕದ್ದಲ್ಲವೆಂದು ರುಜುವಾತು ಮಾಡಿಕೊಡುವವನಿಗೆ ನಾವು ಒಂದು ನೂರು ರೂಪಾಯಿ ಬಹುಮತಿ ಕೊಡುತ್ತೇವೆ. ಪರೀಕ್ಷೆಮಾಡಿ ನೋಡಿ, ಬಹುಮತಿಯನ್ನು ಸಂಪಾದಿಸಿಕೊಳ್ಳಿ !

ಕ್ರಯ ½ ಔನ್ಸು ಗಾಜಿನ ಬಿರಡೆಯ ಬಾಟ್ಲಿಗೆ ರೂ. 2-0-0.

,, 1 ಡ್ರಾಂ ಕೊಳವೆ ,, ,, ,, 0-12-0.

ಅಟೋ ಮೋಹಿನಿ ಹುವಿನ ಸಾಬೂನು ಡಜನ್ 1 ಕ್ಕೆ ರೂ. 0-12-0

ಎಲ್ಲರಲ್ಲೂ ವಿಕರಿಗೆ ಇಟ್ಟಿದೆ.

ಮದರಾಸ್ ಆಧಿಪತ್ಯಕ್ಕೆಲ್ಲಾ ಏಜಂಟರು—

ಷಾ ಭಗವಾನ್‌ದಾಸ್ ಚೂನಿಲಾಲ್ ಕಂಪನಿ,

[251-41] ೧೨೩, ಚೈನಾಬಜಾರ್ ರೋಡ್, ಮದರಾಸ್.

ಶ್ರೀ ಕಸ್ತೂರಿ ಮಾತ್ರೆ

ಬಿ. ವಿ. ಪಂಡಿತರ

250 ಮಾತ್ರೆಯುಳ್ಳ ಸೀಸೆಗೆ 4 ಆ.; 5 ಸೀಸೆಗಳಿಗೆ 1 ಇನಾಂ.

ಈ ಮಾತ್ರೆಗಳ ಬೆಲೆಯನ್ನು ನೋಡಿ ಇವರ ಗುಣವನ್ನು ಊಹಿಸಲಾಗದು. ಟಿಬೆಟ್ ದೇಶದ ಕಸ್ತೂರಿಯಿಂದಲೇ ಶಾಸ್ತ್ರೋಕ್ತವಾಗಿ ತಯಾರಾಗಲ್ಪಡುತ್ತಿರುವ ಈ ಶ್ರೀಕರ ಕಸ್ತೂರಿ ಮಾತ್ರೆಗಳು ಸುವಾಸನೆಯಾಗಿರುವುದು ಮಾತ್ರವಲ್ಲದೆ ತಾಂಬೂಲದೊಡನೆ ಅಥವಾ ಹಾಗೆಯೇ ಸೇವಿಸಿದರೆ ಎಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸುವುದು. ಮಕ್ಕಳಿಗೆ ಉಂಟಾಗುವ ಅಜೀರ್ಣ-ಭೇದಿ-ಜ್ವರ-ಕೆಮ್ಮು-ನೆಗಡಿ-ಉಬ್ಬಸ-ಹೊಟ್ಟೆಯುಬ್ಬರ-ಈ ರೋಗಗಳನ್ನು ಸವಿಾಪದಲ್ಲಿಯೇ ವೈದ್ಯನಿದ್ದಂತೆ ತಕ್ಷಣ ಗುಣಪಡಿಸುವುದು. ಪ್ರಯಾಣಿಕರಿಗೂ ಸೊಂಕು ರೋಗಗಳುಳ್ಳ ಸ್ಥಳದಲ್ಲಿರುವವರಿಗೂ ಮಲೆನಾಡಿನಲ್ಲಿರುವವರಿಗೂ ಇದರಂತೆ ಮತ್ಯಾವುದೂ ಆರೋಗ್ಯವನ್ನು ಕೊಟ್ಟು ಕಾಪಾಡಲಾರದು. [220-38]

ವಿಷಮಜ್ವರಗಳು-ನೆಗಡಿ-ಕೆಮ್ಮು-ತಲೆನೋವು-ಅಗ್ನಿಮಾಂದ್ಯ-ಶೀತವಾಯು-ಹಲ್ಲುನೋವು-ಮಲಬಂಧ-ಅತೋಟಕ-ನರಗಳ ದೌರ್ಬಲ್ಯ—ಈ ರೋಗಗಳನ್ನು ಪ್ರತಿಯೊಬ್ಬರಿಗೂ ಗುಣಪಡಿಸಿ ರಕ್ತವೃದ್ಧಿಯನ್ನುಂಟುಮಾಡುವುದು. ಸಾವಿರಾರು ಜನರು ಪರೀಕ್ಷಿಸಿದ್ದಾರೆ. ಟಪಾಲ್ ಖರ್ಚು 12 ಸೀಸೆ ವರೆಗೆ 4 ಆಣೆ.

ವಿಳಾಸ—ಮ್ಯಾನೇಜರ್, ಸದ್ವೈದ್ಯಶಾಲಾ, ನಂಜನಗೂಡು.

ಡೋಂಗರೆ

ಇವರ ಬಾಲಾಮೃತ

[150-52]

ಸೇವನದಿಂದ ಹುಡುಗರು ಸಶಕ್ತರೂ ನಿರೋಗಿಗಳೂ ಆಗಿ ಅವರ ಭಾರವು ಬೆಳೆಯುತ್ತದೆ. ಒಂದು ಬಾಟ್ಲಿಗೆ ೧೦ ಆಣೆ. ಟಪಾಲ್ ಖರ್ಚು ೪ ಆಣೆ.

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಾಯಿ ಇವರಲ್ಲೂ ಮತ್ತು ಎಸ್. ವೈದ್ಯ ಅಂಡ್ ಕೊ, ಪಾರ್ಕ್ ಟವರ್, ಮದರಾಸು ಇವರಲ್ಲೂ ದೊರೆಯುವುದು.



ಅಮೃತಾಂಜನ ರಿಜಿಸ್ಟರ್ಡ್

ಇದು ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು. ಇದರ ಉಪಯೋಗದಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗವಾಯು, ಉಳುಕು, ಕೆಮ್ಮು, ಸೊಂಟನೋವು, ಶೀತ, ಚರ್ಮವ್ಯಾಧಿ, ಹಲ್ಲುನೋವು, ಚೇಳು ಕಡಿತ ಮೊದಲಾದ ಎಲ್ಲಾ ತರದ ನೋವುಗಳು ಖಾತ್ರಿಯಾಗಿ ನಿಲ್ಲುವವು. ನಕಲಿ ಔಷಧಗಳನ್ನು ಪಡಕೊಳ್ಳಬೇಡಿರಿ. ಈ ನಮ್ಮ ಜಗತ್ಪ್ರಖ್ಯಾತನಾದ ಅಮೃತಾಂಜನವನ್ನು ನಮ್ಮ ರಿಜಿಸ್ಟ್ರಿಯಾದ ಮತ್ತು ಹಲವು ಭಾಷೆಗಳುಳ್ಳ ಸುಂದರವಾದ ಕರಡಿಗೆಯಲ್ಲಿ ಪ್ಯಾಕ್‌ಮಾಡಿರುತ್ತೇವೆ. ಕರಡಿಗೆ ಇಲ್ಲದ ಬಾಟ್ಲಿಗಳನ್ನು ಪಡಕೊಳ್ಳಬೇಡಿರಿ. ಬಾಟ್ಲಿ ಒಂದರ ಕಿಮ್ಮತ್ತು 0-8-0. ಡಜನ್ 1 ಕ್ಕೆ 5-1-0. ವಿ. ಪಿ. ಪ್ರತ್ಯೇಕ. ಗಜಕರ್ಣದ ಮುಲಾಮು 0-6-0. ದಂತಮಂಜನ 0-2-0. ಬೋಳಿನ ತೈಲ 0-12-0. ಖಜ್ಜಿ ಮುಲಾಮು 0-3-0. ಜುಲಾಬು ವಟಿ 0-8-0. ಸುಂದರಿ ಮುಲಾಮು 0-8-0. ಕ್ಯಾಟಲಾಗಿಗೆ ಬರೆಯಿರಿ. [52-19]

ನಮ್ಮಲ್ಲಿ ತಯಾರಾಗುವ ಎಲ್ಲಾ ತರದ ಔಷಧಗಳು ಮಂಗಳೂರಿನಲ್ಲಿ ದಿ ಉಲ್ಲನ್ ಮಾರ್ಟ್ ಇವರಲ್ಲಿ ಸಿಕ್ಕುತ್ತವೆ.

ಅಮೃತಾಂಜನ ಡಿಪೋ,

ಫೋರ್ಟ್. ಮುಂಬಯಿ, ಮತ್ತು ೯ ಜಹಂಗೀರ್ ಸ್ಟ್ರೀಟ್, ಮದ್ರಾಸು.

ಪ್ರೊಫೆಸರ್ ಬ್ರೇಸ್ಲರ್

ಇಲೆಕ್ಟ್ರೋ ಪೆಯಿನಾಡೈನ್

ಮನುಷ್ಯನ ಶರೀರದಲ್ಲಿ ವಿದ್ಯುಚ್ಛಕ್ತಿ ವ್ಯಾಪಿತವಿರುವದೆಂತಲೂ, ವಿದ್ಯುಚ್ಛಕ್ತಿ ಕಡಮೆಯಾದ ಕೂಡಲೇ ನಾನಾ ತರದ ವ್ಯಾಧಿಗಳು ಸಂಭವಿಸುವದೆಂತಲೂ, ಅಂತಹ ವ್ಯಾಧಿಗಳನ್ನು ಶೀಘ್ರ ಗುಣಪಡಿಸಲು ವಿದ್ಯುಚ್ಛಕ್ತಿ ಮಿತ್ರವಾದ ಔಷಧದ ಉಪಯೋಗದಿಂದಲ್ಲದೆ



ಬೇರೆ ಔಷಧಗಳಿಂದ ವ್ಯಾಧಿಗಳನ್ನು ಶೀಘ್ರ ಗುಣಪಡಿಸುವದು ಕಷ್ಟವೆಂತಲೂ ಅಮೇರಿಕಾ ದೇಶದ ವೈದ್ಯಶಾಸ್ತ್ರ ಪಂಡಿತರು ವೈದ್ಯಶಾಸ್ತ್ರ ಪರಿಶೋಧನೆಯಿಂದ ಸಿದ್ಧಿಸಿರುವರು. ಈ ಔಷಧವು ಉಪಯೋಗಿಸಿದ ಕೂಡಲೇ ದೇಹಕ್ಕೆ ಸಾಕಾಗುವಷ್ಟು ವಿದ್ಯುಚ್ಛಕ್ತಿಯನ್ನುಂಟುಮಾಡಿ ವ್ಯಾಧಿಯನ್ನು ಅತಿ ಶೀಘ್ರ ಗುಣಪಡಿಸುತ್ತೆ. ಪ್ರಾಚೀನಕಾಲದ ಔಷಧಗಳಿಗೆಲ್ಲವು ಇದು ಅತ್ಯುತ್ತಮವಾದದ್ದು. ಒಂದಾವರ್ತಿ ಪರೀಕ್ಷಿಸಿ ನೋಡಿದರೆ ಇದರ ಗುಣವು ವ್ಯಕ್ತವಾಗುತ್ತೆ.

ಎಲೆಕ್ಟ್ರೋ ಪೆಯಿನಾಡೈನ್ ತೈಲದಿಂದ ಗುಣಪಡುವ ವ್ಯಾಧಿಗಳು:—

ತಿಮರುವಾಯುವು, ಕೀಲ್ವಾಯುವು, ಪಾರ್ಶ್ವವಾಯುವು, ಕ್ಷಯ, ಕೆಮ್ಮು, ನೆಗಡಿ, ವಾಯುನೋವು (ಕೈಕಾಲು ಹಿಡಿತ), ಉಳುಕು ಹಿಡಿದಿದ್ದರು, ಕಠಿನಶ್ವಾಸ, ನಡುನೋವು (ಸೊಂಟನೋವು), ಪಕ್ಕಶೂಲೆ, ಹಲ್ಲುನೋವು, ತಲೆನೋವು, ಅರೆತಲೆನೋವು, ಉಬ್ಬಸ, ವಿಷಜ್ವರದ ಗಡ್ಡೆಗಳಿಗೂ ಮತ್ತು ಮಕ್ಕಳ ಪಕ್ಕಶೂಲೆ, (ಅಳ್ಳೆ) ಶೈತ್ಯದೋಷಗಳೂ, ವಿಷಜಂತುಗಳ ಕಡಿತಗಳಿಗೂ (ಚೇಳು ಮುಂತಾದದ್ದು), ಇದಕ್ಕೆಲ್ಲಾ ಬಹಳ ಶ್ಲಾಘನೀಯವಾದದ್ದು. [12-28]

ಉಪಯೋಗಿಸುವ ಕ್ರಮವು ಹಿಂದುದೇಶದ ಎಲ್ಲಾ ಭಾಷೆಗಳಲ್ಲಿಯೂ ಬುಡ್ಡಿಯ ಸಂಗಡ ಕಳುಹಿಸಲಾದೀತು.

ಬುಡ್ಡಿಯ ಕ್ರಯ ರೂ. 0-8-0. ವಿ. ಪಿ. ಖರ್ಚು 0-4-0. ಏಜಂಟರು ಬೇಕು.

ಮುಖ್ಯ ಏಜಂಟರು:—ಗುರುಬಸವ ಅಂಡ್ ಕಂಪನಿ, ಮದರಾಸ್.

ತಾಲೂಕು ವರ್ತಮಾನಗಳು.

ಚಳ್ಳಕೆರೆ.—ಇಲ್ಲಿ ಪ್ರತಿ ದಿನವೂ ಮೋಡವಾಡುತ್ತದೆ. ಗಾಳಿ ವಿಶೇಷವಾಗಿ ಬೀಸುವದರಿಂದ ಮಳೆ ಸುತರಾಂ ಇಲ್ಲದೆ ರೈತರು ಇದುವರೆಗೂ ಬೀಜ ವಗ್ಗೆರೆ ಪೇರಾವು ಮಾಡದೆ ಮಳೆಗೆ ಆಕಾಶವನ್ನೇ ನೋಡುತ್ತಾ ಇದಾರೆ. ಈ ತಾಲ್ಲೂಕಿನಲ್ಲಿ ಮಳೆ ಯಾವಾಗ್ಯೂ ಕಮ್ಮಿ; ಅಂಥಾದ್ದರಲ್ಲಿ ಸುತರಾಂ ಮಳೆ ಬಾರದ್ದರಿಂದ ಬಡಬಗ್ಗರೆಲ್ಲಾ ಕೆಲಸವಿಲ್ಲದೆ ಅಲೆದಾಡುತ್ತಾ ಇದಾರೆ.—ಇಲ್ಲಿನ ಎ. ವಿ. ಸ್ಕೂಲ್ ಹೆಡ್ ಮಾಸ್ಟರ ಮನೆಯಲ್ಲಿ ಈಗ್ಗೆ ಸುಮಾರು 20 ದಿವಸಗಳ ಕೆಳಗೆ 400 ರೂಪಾಯಿ ಬಾಳುವ ಮಾಲುಗಳು ಕಳುವಾಗಿರುತ್ತವೆ. ಇನ್ನೂ ಪತ್ತೆ ಆಗಲಿಲ್ಲ. ಪತ್ತೆತರದೂಡು ಪೋಲೀಸಿನವರು ನಡಿಸುತ್ತಾ ಇದಾರೆ.—ಈ ಊರಿನಲ್ಲಿ ಬಹಳ ದೊಡ್ಡ ಸಂತೆ ಆಗುತ್ತೆ. ಅನೇಕ ಕಡೆಗಳಿಂದ ಗಾಡಿಗಳು ಬರುತ್ತವೆ. ದಿನಸಿ ಧಾರಣೆ ದಿನದಿನಕ್ಕೂ ಹೆಚ್ಚಾಗುತ್ತಾ ಇದೆ.—ಇಲ್ಲಿನ ಟೋಲ್ ಗೇಟು ಉತ್ಪತ್ತಿ ಕಳೆದ ವರುಷ 1,775 ರೂಪಾಯಿ ಇದ್ದದ್ದು ಈ ವರುಷ ಡೆಪ್ಯುಟಿ ಕಮಿಷನರ್ ಸಾಹೇಬರವರೇ ದಯಮಾಡಿಸಿ ಹರಾಜು ಮಾಡಿಸಿದ್ದರ ಮೇಲೆ ಸ್ಪರ್ಧೆಯಲ್ಲಿ 2,475 ರೂಪಾಯಿಗೆ ಮ|| ಉಪ್ಪಿನ ಮುರಿಗೆಪ್ಪನವರ ಹೆಸರಿಗೆ ಬೀಟು ನಿಂತಿರುತ್ತೆ.—ಈ ತಾಲ್ಲೂಕು ಸರಾಫ್ ಮ|| ಸಿ. ಎಸ್. ತೀರ್ಥಶೆಟ್ಟಿರಿಗೆ ಟ್ರೆಜರಿ ಮೂಲಕ ಬಂದಿದ್ದ 200 ರೂಪಾಯಿ ನೋಟಿನ ಲಕೋಟೆಯು ಈಗ್ಗೆ 15 ದಿವಸಗಳ ಕೆಳಗೆ ಗೈರ್‌ಹಾಜರಿಯಾಗಿರುತ್ತೆ.

ಶಿವಪುರು.—ಇಲ್ಲಿ ಈ ವರುಷ ಸರಿಯಾದ ಮಳೆಯಿಲ್ಲದೆ ಸುತ್ತುಮುತ್ತಲಿನ ಕೆರೆಗಳು ಒಣಗಿಹೋಗಿವೆ. ಕಳೆದ ವರ್ಷವೂ ಸರಿಯಾದ ಬೆಳೆ ಇಲ್ಲದೆ ಬಡ ಜನಗಳು ಆಹಾರವಿಲ್ಲದೆ ಸಂಕಟಪಡುವ ಹೊತ್ತು ಬಂದಿದೆ. ಈಗ ಮೋಡವಾಡುತ್ತಲೇ ಇದೆ. ಮಳೆಯಂತು ಸರಿಯಾಗಿಲ್ಲ. ರೈತರು ಸರಿಯಾದ ಉಳ್ಮೆ ಮಾಡಿಕೊಳ್ಳಲು ಅವಕಾಶವಿಲ್ಲದೆ ಆಕಾಶವನ್ನೇ ನೋಡುತ್ತಿದಾರೆ. ಧಾರಣೆವಾಸಿಗಳು ದಿನೇ ದಿನೇ ಏರುತ್ತಾ ಇದೆ.—ಇಲ್ಲಿ ಪ್ರತಿ ರವಿವಾರ ಭಾನುವಾರ ಸಂತೆಯಾಗುತ್ತದೆ. ಈ ಸಂತೆಯಲ್ಲಿ ವರ್ತಕರಿಗೆ ಫಕೀರರುಗಳಿಂದಲೂ ಮೊಂಡ ಕೃಷ್ಣನಿಂದಲೂ ವಿಶೇಷ ತೊಂದರೆಯುಂಟು. ಇವರು ಮುಲುಂಮಾಡಿ ಧಾನ್ಯದ ರಾಶಿಗೆ ತಾವೇ ಕೈಹಾಕಿ ಲೋಟಾದಲ್ಲಿ ಕಾಳನ್ನು ಬಾಚಿಕೊಳ್ಳುತ್ತಾರೆ. ಆಗ ವರ್ತಕರು ಅಡ್ಡಿಮಾಡಿದರೆ ಅವರು ಮೊಂಡತನವನ್ನು ತೋರಿಸಿ ತಮ್ಮ ಕಾರ್ಯವನ್ನು ಗೆಲಿಸಿಕೊಳ್ಳುತ್ತಾರೆ. ತಕ್ಷಣವೇ ಸರ್ಕಾರಕ್ಕೆ ತಿಳಿಸಲು ವ್ಯಾಪಾರದ ದೆಸೆಯಿಂದ ವರ್ತಕರಿಗೆ ಅವಕಾಶವಾಗುವದಿಲ್ಲ. ಸರ್ಕಾರದವರು ಈ ಪದ್ಧತಿಯನ್ನು ನಿಲ್ಲಿಸುವದು ವರ್ತಕರಿಗೆ ಕ್ಷೇಮ. ಇಲ್ಲಿ 8-10 ದಿನಗಳಿಂದ ಪ್ಲೇಗ್ ಶುರುವಾಗಿ 3-4 ಜನರು ತೀರಿಹೋದರು.—ಕಳೆದ ತಿಂಗಳಲ್ಲಿ ಇಲ್ಲಿಗೆ ಸುಮಾರು 4 ಮೈಲಿ ದೂರದಲ್ಲಿರುವ ಆಲೂರು ಗ್ರಾಮದಲ್ಲಿ ಮಡಿವಾಳರ ಹುಚ್ಚ ಎಂಬುವನನ್ನು ಯಾವದೋ ಕಾರಣದಿಂದ ಕೊಂದುಹಾಕಿದರು. ಈ ಸಂಗತಿಯು ಸರ್ಕಾರಕ್ಕೆ ತಿಳಿದು ತಕ್ಷಣವೇ ಅಲ್ಲಿಗೆ ಹೋಗಿ ಪತ್ತೆಮಾಡಿದಾಗ ಖೂನಿ ಮಾಡಿದವರು ಇಬ್ಬರು ಸಿಕ್ಕಿದರು. ಅಪರಾಧಿಗಳು ಚಿಕ್ಕಲಿಂಗ, ಮರುಳಸಿದ್ದ ಎಂದು ಗೊತ್ತಾಗಿ ಈಗ ಇವರಿಬ್ಬರನ್ನು ವಿಚಾರಣೆ ಬಗ್ಗೆ ತುಮಕೂರು 1 ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿಟ್ಟಿದಾರೆ. ಖೂನಿ ಪತ್ತೆಮಾಡಿದವರು ಅಮಲ್ದಾರರೂ, ಪೋ|| ಇನ್‌ಸ್ಪೆಕ್ಟರವರೂ, ಕಸಬಾ ದಫೇದಾರರೂ, ಕಾ|| ರಂಗಸ್ವಾಮಯ್ಯ, ಕಾ|| ಫರೋಕ್ತೀರಿನ್ ಸಾಬ್ ಇವರು.—ಇದಲ್ಲದೆ ಇದೇ ಸ್ಥಳದ ವೈಶ್ಯರ ಸಾ. ಶ್ರೀಕಂಠಪ್ಪನವರು ಸಂತೆಗೆ ಚಿನ್ನ ಬೆಳ್ಳಿ ನಗಗಳು ಅಂದರೆ ಸುಮಾರು 2,000 ರೂಪಾಯಿ ನಗಗಳು ತುಂಬಿದ ಪೆಟ್ಟಿಗೆಯನ್ನು ಇಟ್ಟುಕೊಂಡು ಹೋಗುತ್ತಿರುವಾಗ್ಗೆ ರಾತ್ರಿ ವೇಳೆ ಸುಮಾರು ಬೆಳಗಿನ 3 ಘಂಟೆ ಹೊತ್ತಿನಲ್ಲಿ ಇಲ್ಲಿಗೆ ಸುಮಾರು 1½ ಮೈಲಿ ದೂರದಲ್ಲಿ (ನೊಣವಿನಕೆರೆ ರೋಡು 3-4 ನೇ ಮೈಲಿ ಕಲ್ಲಿನ ಬಳಿ) ಕಳ್ಳರು ಆ ಸಾಹುಕಾರರನ್ನು ಸ್ವಲ್ಪ ಹೊಡೆದು ಪೆಟ್ಟಿಗೆ ಕಿತ್ತುಕೊಂಡು ಹೋದರು. ತಕ್ಷಣವೇ ಸರ್ಕಾರದವರಿಗೆ ತಿಳಿದು ಪೋ|| ಅಧಿಕಾರಿಗಳು ಅಲ್ಲಿಗೆ ಹೋಗಿ ವಿಚಾರಿಸಿ ಪತ್ತೆಮಾಡಿದ್ದರಲ್ಲಿ ಅಪರಾಧಿಗಳು ಚಿಕ್ಕಯ್ಯ, ದಾಸ, ತಿಮ್ಮಯ್ಯ, ರಣಪ್ಪ ಎಂಬೀ 4 ಮಂದಿ ಎಂದು ಗೊತ್ತಾಯಿತು. 1 ನೇ, 2 ನೇ ಅಪರಾಧಿಗಳು ಸಿಕ್ಕಿದಾರೆ. 3 ನೇ, 4 ನೇ ಅಪರಾಧಿಗಳು ಪರಾರಿಯಾಗಿದಾರೆ. ಇವರನ್ನು ಸರ್ಕಾರದವರು ಪತ್ತೆಮಾಡುತ್ತಿದಾರೆ. ಕಳುವು ಮಾಲು (ಪೆಟ್ಟಿಗೆ) ಯನ್ನು ತೆಂಗಿನ ತೋಟದಲ್ಲಿ ಹೂತಿಟ್ಟಿದ್ದರು. ಮಾಲು ಏನೂ ಲೋಪವಾಗದೆ ಹಾಗೆಯೇ ಸಿಕ್ಕಿದೆ. ಕೇಸ್ ಪತ್ತೆಮಾಡಿದವರು ಪೋ|| ಇನ್‌ಸ್ಪೆಕ್ಟರವರೂ, ಕ|| ದಫೇದಾರರೂ, ಕಾ|| ಫರೋಕ್ತೀರಿನ್ ಸಾಬ್, ಕಾ|| ವೆಂಕಟಶೆಟ್ಟಿ ಎಂದು ಗೊತ್ತಾಗಿದೆ.—ಅಮಲ್ದಾರರವರು ಇಲ್ಲಿಗೆ ಬಂದ ಲಾಗಾಯಿತು ಕೆಲಸಗಳನ್ನು ಕ್ರಮವಾಗಿ ಯಾವ ಮುಖದಾಕ್ಷಿಣ್ಯವೂ ನೋಡದೆ ಮಾಡುತ್ತಾ ಪ್ರಜೆಗಳ ಪ್ರೀತಿಪಾತ್ರರಾಗಿದಾರೆಂಬುವದಕ್ಕೆ ಸಂದೇಹವಿಲ್ಲ.

ಶ್ಯಾಮಗೊಂಡ್ಲು.—ಕೆಲವು ದಿನಗಳಿಂದ ತಂಗಾಳಿ ಬೀಸಿ ಒಂದೆರಡು ಹದ ಮಳೆಗಳಾದವು. ಆದರೂ ಉಳುಮೆಗೂ, ಬಿತ್ತನೆಗೂ ಅನುಕೂಲವಾಗದೆ ರೈತರು ಮಳೆಯನ್ನೇ ಎದುರುನೋಡುತ್ತಿದಾರೆ. ಧಾರಣೆವಾಸಿಗಳು ದಿನೇ ದಿನೇ ಏರುತ್ತಿವೆ. ಹೆಸರಿಗೆ ಆನಂದಸಂವತ್ಸರವೇ ಹೊರತು ಆನಂದವೇನೂ ಕಾಣದೆ ಜನಗಳಿಗೆ ಜೀವನಕ್ಕೆ ತೊಂದರೆಯಾಗಿದೆ. ಈ ಪ್ರಾಂತ್ಯ ಕೆಲವು ಕಡೆ ಕಣ್ಣಿನ ನೋವೂ, ಸಿಡುಬೂ ತುಂಬಿವೆ.—ಕಳೆದ ತಿಂಗಳು ಶ್ರೀಮನ್ ಮಹಾರಾಜರವರ ಮೂರನೇ ದರೋತ್ಸವವೂ, ಶ್ರೀಮನ್ ಚಕ್ರವರ್ತಿಯವರ ಜನ್ಮೋತ್ಸವವೂ ಗ|| ಎ. ವಿ. ಸ್ಕೂಲಿನಲ್ಲಿ ಬಹು ವಿಜೃಂಭಣೆಯಿಂದ ನೆರವೇರಿದವು. ಇದರಲ್ಲಿ ಮ|| ಕೃಷ್ಣಮೂರ್ತಾಚಾರ್ಯರು ಮಾಡಿದ ಸಂಸ್ಕೃತ ಉಪನ್ಯಾಸವು ಮನೋಹರವಾಗಿತ್ತು.—ಈ ವರ್ಷ ನಡೆದ ಮೈ. ಲೋವರ್ ಸೆಕೆಂಡರಿಯಲ್ಲಿ ರಾಮುಲಕ್ಷ್ಮಣಸೆಟ್ಟಿ ಎಂಬ ವಿದ್ಯಾರ್ಥಿಯು 1 ನೇ ತರಗತಿಯಲ್ಲಿಯೂ, ಇನ್ನೊಬ್ಬನು ಸಂಸ್ಕೃತದಲ್ಲಿ 2 ನೇ ವರ್ಗದಲ್ಲಿಯೂ ತೇರ್ಗಡೆಯಾದರು. ಈ ವರ್ಷ ಮೇ ತಿಂಗಳಲ್ಲಿ ನಾರ್ಮಲ್ ಸ್ಕೂಲಿಗೆ ಉಪಾಧ್ಯಾಯರನ್ನು ಚುನಾಯಿಸದೆ ಜುಲೈ ತಿಂಗಳಾದರೂ ಸುಮ್ಮನಿರಲು ಕಾರಣವೇನೋ ತಿಳಿಯದು.—ಟವರ್ ಅಧಿಕಾರಿಗಳು ತಮ್ಮ ಕೆಲಸವನ್ನು ಚಟುವಟಿಕೆಯಿಂದ ಮಾಡುತ್ತಾರೆ. ನಿಡುವಂದ ಸ್ಟೇಷನ್‌ನಲ್ಲಿ ಸಾವಿರಾರು ಜನ ರೈಲು ಹತ್ತುವವರೂ, ಇಳಿಯುವವರೂ ಪ್ರತಿ ದಿನವೂ ಸೇರುತ್ತಾರೆ. ಆದರೆ ಅಲ್ಲಿರುವ ಛಾವಣಿಯಲ್ಲಿ ಕೊಂಚವಾದರೂ ನೀರಿಲ್ಲ. ಇದು ಜನಗಳಿಗೆ ತುಂಬಾ ತೊಂದರೆಯಾಗಿದೆ. ಈ ಲೋಪವನ್ನು ದಯವಿಟ್ಟು ಗೌರ್ನಮೆಂಟಿನವರು ಸರಿಪಡಿಸಬೇಕಾಗಿದೆ. ನಿಡುವಂದದ ಸ್ಟೇಷನ್‌ನಲ್ಲಿ ಅ|| ಸ್ಟೇಷನ್ ಮಾಸ್ಟರು ತುಂಬಾ ಚಟುವಟಿಕೆಯಿಂದ ಕೆಲಸಮಾಡುತ್ತಾ ಅಧಿಕಾರಿಗಳಿಗೆ ನಂಬಿಕೆಯಾಗಿರುತ್ತಾರೆ.—ಕಳೆದ ಭಾನುವಾರ ವಾಸನಕುಪ್ಪೆ ಗ್ರಾಮದಲ್ಲಿ ಒಂದು ಕೋತಿ ಸತ್ತುಹೋಯ್ತು. ಈ ಊರಿನ ದಾಸರು ಅದನ್ನು ಒಂದು ಚಿಕ್ಕ ಗಾಡಿಯ ಮೇಲೆ ಬಟ್ಟೆಯಲ್ಲಿ ಸುತ್ತಿ ಅದರ ಉತ್ತರ ಕ್ರಿಯಾದಿಗಳಿಗೆ ಊರಿನಲ್ಲಿ ಮೆರವಣಿಗೆ ಮಾಡಿ ಅಂಗಡಿಗಳಲ್ಲಿ ದುಡ್ಡು ವಸೂಲ್ಮಾಡಿದರು. ಈ ನವನಾಗರಿಕ ಕಾಲದಲ್ಲಿ ಜನಗಳ ವಿವೇಕವನ್ನು ಎಷ್ಟು ಹೇಳಿದಾಗ್ಯೂ ತೀರದು.

ನಿಮ್ಮ ಜೀವಮಾನದ ಅರ್ಧ ಭಾಗವೆಲ್ಲಾ ನೀವು ವಾಯುವಿನಿಂದ ಕಷ್ಟಪಟ್ಟು, ಮುಖ್ಯ ವೈದ್ಯರಿಂದಲೂ ಆಸ್ಪತ್ರಿಯಿಂದಲೂ ಪ್ರಯೋಜನ ಹೊಂದದೆ ನಿರೀಕ್ಷೆ ಹೀನರಾಗಿದ್ದರೂ, ನಿಮ್ಮ ವಾಯುನೋವು ವಾಸಿಯಾಗಬಹುದು.

ಟಿಟಿಲ್‍ಸ್ ಓರಿಯಂಟಲ್ ಬಾಂ ಎಂಬದು ತಕ್ಷಣ ಬಿಡುಗಡೆಯನ್ನು ಕೊಟ್ಟು, ನೋವನ್ನು ಹೊರಡಿಸಿ, ಜಡತುಕೊಂಡಿರುವ ಕೀಲುಗಳನ್ನೂ ನರಗಳನ್ನೂ ನಿಮ್ಮ ಪ್ರಾಯಕಾಲದಲ್ಲಿದ್ದಂತೆ ಮಾಡುವುದು.

ಸದರ್ಲಾಂಡ್‍ಷೈರಿನ ಜೋನಾರ್ ಬ್ರಿಡ್ಜನಲ್ಲಿರುವ ಮೆ|| ಇ. ಗ್ರೇ ಬರೆಯುವದು:— "ವಾಯುವಿನ ಬಾಧೆಯಿಂದ ನಾನು ಬಹು ಸಂಕಟಪಡುತ್ತಿದ್ದೆನು. ಲೋಕದಲ್ಲಿ ನನ್ನಂಥಾವನು ಇನ್ನೊಬ್ಬ ನಿಲ್ಲವೆಂದು ನೆನಸಿದೆನು. ಪ್ರಸಿದ್ಧ ವೈದ್ಯರಿಗೂ ಔಷಧಿಗಳಿಗೂ ಬಹಳ ಹಣ ಖರ್ಚು ಮಾಡಿದೆನು. ಆದರೂ ಪ್ರಯೋಜನವಾಗಲಿಲ್ಲ. ಹೇಳ ಕೂಡದಷ್ಟು ನೋವನ್ನು ಅನುಭವಿಸಿದೆನು. ನನ್ನ ಕಾಲುಗಳ ವಾಯುವಿನಿಂದ ನಡಿಯಲಾರದಿದ್ದೆನು. ನಾನು ಸತ್ತಿದ್ದರೆ ಚೆನ್ನಾಗಿತ್ತೆಂದು ನೆನಸಿದೆನು. 1 ಸೀಸೆಯ ಟಿಟಲ್‍ಸ್ ಓರಿಯಂಟಲ್ ಬಾಮನ್ನು ಉಪಯೋಗಿಸಿದ 3 ಗಂಟೆಗಳಲ್ಲಿ ಗುಣ ಕಂಡುಬಂತು. ಮರುದಿನ ನಡಿಯಲಾಯಿತು. ಆಗ್ಯೆ ನಾನು ನಡೆದು ಅನೇಕ ವಾರಗಳಾಗಿದ್ದವು. ಈಗ ಪೂರ್ಣ ಕ್ಷೇಮವೆಂದು ತಿಳಿದು ಸಂತೋಷಿಸುತ್ತೇನೆ."

ಸೀಸೆ 1ಕ್ಕೆ 1 ರೂ. ಮೇರಿಗೆ ಔಷಧಗಾರರೆಲ್ಲರಲ್ಲಿಯೂ ಸಿಗುತ್ತೆ.

101-11

THE PLACE FOR HASSAN CAPS IS

HASSAN.

ನಿಮ್ಮ ತಲೆಯ ಮೇಲಿರುವುದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

2-26

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ಮಾರಟೆಲ್ಲಾ ಬೇರಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ:—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ಸಾರವೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚೆನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚೆನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚೆನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದು ಚೆನ್ನಾಗಿಲ್ಲದ್ದು ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ.

ಸಾದಾ ಕೆಂಪು, ಕಪ್ಪು, ಬಿಳಿ, ಇತರ ಬಣ್ಣಗಳ ಟೋಪಿಗಳು ೧ ರೂ. ೮ ಆ ೧ ರೂ. ೬ ಆ.;

ಚುಕ್ಕಿಯುಳ್ಳ ಟೋಪಿಗಳು ರೂ. ೧–೮; ರೂ. ೧–೧೨.

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ. ೨.

ಜಾರದ ಟೋಪಿಗಳು ೧ ರೂ. ೧೨ ಆ.; ೧ ರೂ. ೮ ಆ.; ೧ ರೂ. ೬ ಆ

ಮುಸುಕಿನ ಟೋಪಿಗಳು ೧ ರೂ. ೮ ಆ.; ೧ ರೂ. ೬ ಆ.

"In addition to cap making we are giving special attention to knitting stockings. All our stockings, for adults and children, are hand-made. Prices will be sent on enquiry."

ಮ್ಯಾನೇಜರ್, ಟೋಪಿ ಕಾರ್ಖಾನೆ,

ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್ ಹಾಸನ.

Apply:—

MANAGER, CAP WORKS,
GIRLS' INDUSTRIAL SCHOOL, HASSAN.

ಕುಂತಳಾನಂದ ತೈಲವು.

192-43

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಿರುದಿನ ಬಿಲ್ಲೆಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ. ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು. ಈ ತೈಲವು ಕೂದಲನ್ನು ಚೆನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುತ್ತದೆ. ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದ್ದಾಗಿದೆ. ಬೆಲೆ ಬಾಟ್ಲಿಗೆ 1 ರೂಪಾಯಿ 3 ಬಾಟಲಿಗೆ 2 ರೂಪಾಯಿ 10 ಆಣೆ. ಅಂಚೆ ಹಾಸಲು ಬೇರೆ. ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ.

ನಮ್ಮ ವಿಳಾಸ:—ಬಿ. ಎಮ್. ನಾಥ ಮತ್ತು ಕಂಪೆನಿ,
ವೇಪೇರಿ, ಮದರಾಸ್.

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು."

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು. ವಾಯು, ಕೀಲು, ಅರಶಲೆ, ತಲೆನೋವುಗಳು; ಯಾವ ಕಾರಣದಿಂದ ಹುಟ್ಟುವ ಬಾಧೆಯಾಗಲಿ, ಉಬ್ಬಸ, ಹಲ್ಲುನೋವು, ಗಂಟ್ಲು ಗಾರೆನ್ನುವುದು, ಕೆಮ್ಮುಗಳು, ಶೀತನೆಗಡಿ, ಶ್ವಾಸರೋಗ, ಜಜ್ಜು, ಉಳುಕು, ಥಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ. ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು. ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲಿ ಕೊಡಿ ಎಂದು ಕೇಳು. ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೋ. ಈ ಯುಕ್ತಿಯೋಪಾದಿ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ. ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ. ಲಕ್ಷಾಂತರ ಜನರು ಗುಣಹೊಂದಿದಾರೆ; ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ. [122-7]

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡಿ. ಅದರ ಕ್ರಯ ಬಾಟ್ಲಿಗೆ 12 ಆಣೆ; ಅಂಚೆ ವೆಚ್ಚ 4 ಆಣೆ. 3 ಅಥವಾ ಹೆಚ್ಚು ಬಾಟ್ಲಿ ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ. ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ. ವಿಳಾಸಗಳು:—(1) ಎಸ್. ಪೀಟರ್ಸ್, 37 ವಡಮಲೆಪಿಳ್ಳೆ ಬೀದಿ, ಪುರಸವಾಕಂ, ವೇಪೇರಿ, ಮದರಾಸ್; (2) ಪಿ. ಎಸ್. ಕೆನ್ನಯ್ಯಶೆಟ್ಟರು, ಜನರಲ್ ಮರ್ಚೆಂಟ್, ತುಮಕೂರು.

ಸುಖಕರ, ಆನಂದ, ಬಹಳ ಅವಶ್ಯ.

ಈಗ ತಾನೇ ಕಂಡುಹಿಡಿದಿದೆ.

ಜರ್ಮ ರಾಜ್ಯದಲ್ಲಿ ನೂರಾರು ವರುಷಗಳಿಂದ ಉಪಯೋಗದಲ್ಲಿದೆ.

ಸೆಶಿಂತಾನ

ಬೆಳ್ಳಿಯ ವರಕು ಸುತ್ತಿದ ಮುತ್ತುಗಳು.

(1) ಮನಸ್ಸಿಗೆ ಹರ್ಷವನ್ನೂ ಉಲ್ಲಾಸವನ್ನೂ ಕೊಟ್ಟು ಜೀರ್ಣಶಕ್ತಿಯನ್ನುಂಟುಮಾಡುವುದು.

(2) ಹಾಡುವವರಿಗೆ ವರಪ್ರಸಾದವಾದದ್ದು.

(3) ಬಾಯಿ ದುರ್ಗಂಧ, ಗಂಟ್ಲು ಗಾರೆನ್ನುವುದು, ಉಬ್ಬಸ, ಸಮುದ್ರಯಾನದ ಜುಗುಪ್ಸೆ, ಈ ಮೊದಲಾದವನ್ನು ಹುಟ್ಟದಂತೆ ಅಡ್ಡಿಮಾಡುತ್ತದೆ.

(4) ತಾಂಬೂಲದೊಡನೆ ಸೇವಿಸುವುದಕ್ಕೆ ಅತ್ಯಂತ ಹಿತಕರವಾಗಿದೆ. [73–18]

ಒಂದು ಸಲ ಪರೀಕ್ಷೆಮಾಡಿದಲ್ಲಿ ಯಾವಾಗಲೂ ಒಂದು ಪೊಟ್ಟಣ ಇದ್ದೇ ತೀರಬೇಕೆಂದು ನೀವೇ ನಿಶ್ಚಯಿಸುವಿರಿ.

ಮುತ್ತಿನಂತಿರುವ 45 ಮಾತ್ರೆ ಉಳ್ಳ ಪೊಟ್ಟಣಕ್ಕೆ ಕ್ರಯ 2 ಆಣೆ.

,,	95	,, ,, ,, ,,	4 ,,
,,	200	,, ,, ,, ,,	7 ,,
,,	200	,, ಸುಂದರವಾದ ಟಿನ್ ಡಬ್ಬಾ	9 ,,
,,	80	,, ,, ,, ,,	4 ,,
,,	100	,, ಬಾಟ್ಲಿಯಲ್ಲಿ	4½ ,,

ಈ ಕ್ರಯದಷ್ಟು ಸ್ಟಾಂಪನ್ನೂ, ಅಂಚೆ ವೆಚ್ಚಕ್ಕೆ ಜಾಸ್ತಿ ಒಂದಾಣೆಯನ್ನೂ ಸೇರಿಸಿ ಕಳುಹಿಸಬೇಕು. ಕಾಗದಪತ್ರವನ್ನೂ ವಿಳಾಸಗಳನ್ನೂ ನಮಗೆ ಇಂಗ್ಲೀಷಿನಲ್ಲೇ ಬರೆಯತಕ್ಕದ್ದು.

ನಮ್ಮ ವಿಳಾಸ—ಸೆಶಿಂತ್ರಾನ ಡಿಪೋ,
ಮಾರ್ಸೂರ್ ಬಿಲ್ಡಿಂಗ್, ಪ್ರಿನ್ಸೆಸ್ ಸ್ಟ್ರೀಟ್,
ಬೊಂಬಾಯಿ 2;
ಅಥವಾ, ಬಿ. ಸಿ. ಷಾ ಕಂಪೆನಿ,
509 ಮಿಂಟ್ ಬೀದಿ, ಮದರಾಸ್.

ಮಧುರೆ ಜುನ್ನಡಿ ಅಂಚಿನ ಸೀರೆ ಅವ್ವಲ್ ರಖಂ ರೂ. 2–6–0. ಜುಲೈ ತಿಂಗಳ ಒಳಗಾಗಿ ತರಿಸಿಕೊಳ್ಳುವರಿಗೆ ಒಂದು ಸಿಂಗಪೂರು ರವಿಕೆಯನ್ನು ಪ್ರತಿ ಸೀರೆಗೂ ಇನಾಮಾಗಿ ಕೊಡುತ್ತೇವೆ. [99-6]

ಇದು ಉಡುವುದಕ್ಕೆ ದಪ್ಪವಾಗಿಯೂ, ನೋಟಕ್ಕೆ ನಯವಾಗಿಯೂ, ಬೆಲೆ ಸುಲಭವಾಗಿಯೂ ಇದೆ. ಬಣ್ಣ ಹೋಗದು ಸೀರೆಯ ಉದ್ದ 18 ಮೊಳ. ಸುಂದರವಾದ ಸರಗು. ಒಂದನ್ನು ತರಿಸಿ ಪರೀಕ್ಷಿಸಿ. ವಿಳಾಸ—ವಿ. ಕೃಷ್ಣಸ್ವಾಮಿ ಮೊದಲಿಯಾರ್, ನಂ. 27, ಬಂದರ್ ಬೀದಿ, ಜಿ. ಟಿ., ಮದರಾಸು.

Jain's Swadeshi Balm.

ಜೈನ್‍ರವರ ಸ್ವದೇಶೀ ಬಾಮ್ ರೆಜಿಸ್ಟರಾದ ಟ್ರೇಡ್ ಮಾರ್ಕ.

ಈ ಬಾಮ್ ವಾತ, ಸಂಧಿವಾತ, ಕುತ್ತಿಗೆ ನೋವು, ಅರೆತಲೆನೋವು, ಹಲ್ಲು ನೋವು, ಶೀತ, ನೆಗಡಿ, ಬೆನ್ನುನೋವು, ಊದು, ಕೆಮ್ಮು, ಎದೆನೋವು, ಹೊಟ್ಟೆನೋವು, ಚಳುಕು, ಚೇಳುಕಡಿತ, ಕೈಕಾಲು ದೇಹ ಕೀಲುಗಳ ನೋವು, ಉಂ, ಸುಟ್ಟಗಾಯ ಮೊದಲಾದವುಗಳನ್ನು ನಿರ್ಮೂಲವಾಗಿ ಹೋಗಲಾಡಿಸುತ್ತದೆ. ಜಡ್ಜಿಗಳಿಗೂ, ಮೆದುಳಿನ ಕೆಲಸಗಾರರಿಗೂ ಸಾಮಾನ್ಯವಾಗಿ ಎಲ್ಲಾ ಕೆಲಸದವರಿಗೂ ಈ ಸ್ವದೇಶೀ ಬಾಮ್ ಬಹಳ ಪ್ರಯೋಜನಕರವಾದದ್ದು. ಕೊಬ್ಬಾಗಲಿ, ಬೇರೆ ಯಾವ ಕೆಟ್ಟ ಪದಾರ್ಥವಾಗಲಿ ಮಿಶ್ರಮಾಡಿಲ್ಲ. ಯುರೋಪ್, ಇಂಡಿಯಾ, ಅಮೆರಿಕಾ ವೈದ್ಯಗ್ರಂಥಗಳನ್ನು ನೋಡಿ ತಯಾರ್ಮಾಡಿದೇವೆ. ಹಿಂದುಗಳೆಲ್ಲಾ ಇದನ್ನು ಉಪಯೋಗಿಸಬಹುದು. ಇದು ಯುಕ್ತಿಣಿಯಂಥಾ ಮದ್ದು. ಲಕ್ಷಾಂತರ ಜನರನ್ನೆಲ್ಲಾ ವಾಸಿಮಾಡಿದೆ. ಪ್ರತಿ ಒಬ್ಬರೂ, ಪ್ರತಿ ಮನೆಯವರೂ ಇದನ್ನು ಇಟ್ಟೇ ಇರಬೇಕು. ಇದು ಚಿನ್ನದಂಥಾ ಔಷಧ. ಎಲ್ಲಾ ವೈದ್ಯಶಾಲೆಗಳಲ್ಲೂ ಬಿಕರಿಯಾಗುತ್ತಿದೆ. ಸೂರ್ಯಕಿರಣಗಳ ರೆಜಿಸ್ಟರ್ ಮಾರ್ಕ್ ಇರುವುದನ್ನು ನೋಡಿ ಕೊಂಡುಕೊಳ್ಳಿ. ನಕ್ಕಲ್ ಔಷಧವನ್ನು ಕೊಂಡು ಮೋಸಹೋಗಬೇಡಿ. ಉಪಯೋಗದ ಕ್ರಮ ಬಾಟ್ಲಿ ಸಂಗಡಲೇ ಇಟ್ಟಿದೆ. 1 ಬಾಟ್ಲಿಗೆ 12 ಆಣೆ, 3 ಕ್ಕೆ ರೂ. 1-14-0. ವಿ ಪಿ ಬೇರೆ ನಮ್ಮ ಎಲ್ಲಾ ಔಷಧಿಗಳ ಕ್ಯಾಟ್ಲಾಗನ್ನೂ ಬರೆದು ತರಿಸಿಕೊಳ್ಳಿ. [25-26]

ವಿಳಾಸ—ಟಿ. ಗುಲಾಬ್ ಚಂದ್ ಪೌರ್ವಾಳ್,
60 ಸೈನಪ್ಪನಾಯಕ್ ಬೀದಿ, ಪಾರ್ಕ್ ಟೌನ್, ಮದರಾಸ್

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

26—6—1914 ರಿಂದ 3—7—1914 ರ ವರೆಗೆ

ಸ್ಥಳ		ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಕಾಲರಾ ತಗಲಿದ್ದು.	ಕಾಲರಾ ಸತ್ತದ್ದು
ಬೆಂಗಳೂರು	ಪಟ್ಟಣ	1	0	0	0
ಮೈಸೂರು	,,	0	0	0	0
ಬೆಂಗಳೂರು	ಡಿಸ್ಟ್ರಿಕ್ಟು	0	0	0	0
ಮೈಸೂರು	,,	2	2	0	0
ಕೋಲಾರ್	,,	1	1	2	1
ಕೋಲಾರ್ ಚಿನ್ನದ ಗಣಿಗಳು		1	1	0	0
ತುಂಕೂರು	ಡಿಸ್ಟ್ರಿಕ್ಟು	3	3	12	7
ಹಾಸನ	,,	0	0	0	0
ಚಿತ್ರದುರ್ಗ	,,	0	0	0	0
ಕಡೂರ್	,,	4	4	0	0
ಶಿವಮೊಗ್ಗ	,,	1	1	0	0
	ಜುಮಲಾ......	12	11	14	8

ಶಾಲಿವಾಹನ ಶಕ ವರುಷಂಗಳು 1837 ನೇ ಆನಂದ ಸಂವತ್ಸರೇ ಉತ್ತರಾಯಣೆ ಗ್ರೀಷ್ಮಋತೌ ಆಷಾಢ ಬಹುಳ ದಶಮಿ ಶುಕ್ರವಾರದಿಂದ ಆಷಾಢ ಬಹುಳ ಅಮಾವಾಸ್ಯೆ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1914 ನೇ ಜೂಲೈ.

ತಾ.	ವಾರ.	ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ	ಕಟಕ ಮಾಸ ತೇದಿ
17	ಶುಕ್ರ ::	ದಶಮಿ	56-15	ಭರಣಿ	31-45	2
18	ಶನಿ	ಏಕಾದಶಿ	60.0	ಕೃತ್ತಿಕೆ	37-37	3
19	ಭಾನು §	ಏಕಾದಶಿ	0-5	ರೋಹಿಣಿ	43-40	4
20	ಸೋಮ *	ದ್ವಾದಶಿ	3-3	ಮೃಗಶಿರ	46-44	5
21	ಮಂಗಳ †	ತ್ರಯೋದಶಿ	4-50	ಆರಿದ್ರಾ	49-20	6
22	ಬುಧ ‡	ಚತುರ್ದಶಿ	5-22	ಪುನರ್ವಸು	50-43	7
23	ಗುರು ;;	ಅಮಾವಾಸ್ಯೆ	4-40	ಪುಷ್ಯ	50-54	8

:: ಆಡಿಶುಕ್ರವಾರ, ಮೇಲುಕೋಟೆಯಲ್ಲಿ ಕೃಷ್ಣರಾಜಮುಡಿ ಉ. § ಸರ್ವತ್ರ ಏಕಾದಶಿ, ಮಳೆ ನಕ್ಷತ್ರ—ಪುಷ್ಯ 1 ನೇ ಪಾದ. * ಪ್ರದೋಷ. † ಮಾಸಶಿವರಾತ್ರಿ. ‡ ಸರ್ವತ್ರಭೀಮಾಮಾಸ್ಯೆ, ಜ್ಯೋತಿಸ್ತಂಭವ್ರತ. ;; ಮಳೆ ನಕ್ಷತ್ರ—ಪುಷ್ಯ 2 ನೇ ಪಾದ.

Printed and Published by the Rev. H. Gulliford, Proprietor and Manager, Wesleyan Mission Press, Mysore. 16/7/1914.

REGISTERED
M. 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೮ ಮೈಸೂರು—ಸನ್ ೧೯೧೫ ನೇ ಇಸವಿ ಜೂಲೈ ತಾರೀಖು ೨೨ ನೇ ಗುರುವಾರ. ಸಂಚಿಕೆ ೮

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶದಾಮವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು ? ಇಂತಹ ಕೇಶ ರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಾಪ ಉಪಕರಣವಾದರೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಆಗತ್ಯದ ಸಹಕಾರಿಯಾಗಿರುತ್ತದೆ. ಈ ತೈಲವನ್ನು ತೊಡೆದುಕೊಳ್ಳುತ್ತಲೇ, ಮಸ್ತಿಷ್ಕದ ಬೇಗೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ತೊಡೆಯ ತೊಡಗಿದ ಬಳಿಕ ಎಂದಿಗೂ ಜಗುಳಿ ಬಿದ್ದು ಹೋಗಲಾರವು; ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು

ಕೀಳುತರದ ಎಣ್ಣೆಗಳನ್ನು ಕೊಂಡು ಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡುವುದಕ್ಕಿಂತ ಒಂದೇಯೊಂದು ಬಾರಿ ಈ « ಕಾಮಿನಿಯಾ ತೈಲ » ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ « ಸರ್ಟಿಫಿಕೇಟ್ ಒಫ್ ಮೆರಿಟ್ » ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಅವುಗಳಲ್ಲಿ ಒಂದನ್ನೇ ನೋಡಿರಿ! ನೇಗಿನಹಾಳಕರ ಬಂಧುಗಳು. ಬಸವನಗಲ್ಲಿ, ಬೆಳಗಾಂವ—ತಾವು ಕೆಲ ತಿಂಗಳ ಹಿಂದೆ ಕಳುಹಿಸಿದ « ಕಾಮಿನಿಯಾ » ತೈಲವು ಕೂದಲುಗಳನ್ನು ಬೆಳೆಯಿಸುವುದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ. ಆದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ. ಪಿ. ದ್ವಾರಾ ರವಾನಿಸುವುದು. ಸೀಸೆಯೊಂದರ ಕ್ರಯ ರೂ. 1-0-0, ಅ. ವೆ. 0-4-0 ಬೇರೆ; 3 ಸೀಸೆಗಳ ಕ್ರಯ ರೂ. 2-10-0, ಅ. ವೆ. 0-7-0 ಬೇರೆ

ಸೂಚನೆ.—ಅನೇಕ ಮರ್ಯಾದೆಗೇಡಿತರದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಬೆಳಕಿನಿಂದ ತಮಗೆ ಅಕ್ಕಲ್ಪ ನಫೆಯೇ ದೊರಕುವದೆಂದು, ನೀವು « ಕಾಮಿನಿಯಾ ತೈಲ » ವನ್ನು ಕೇಳಿದರೆ, « ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ » ಎಂದು ಅವರಿಗೆ ಬಹಳ ಲಾಭ ದೊರಕತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸ ಹೋಗದಂತೆ « ಕಾಮಿನಿಯಾ ಓಯಿಲ್ » ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಇದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳುವಷ್ಟು ಮೆಹರುಬಾನ್ ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಬೇಕಾದ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಒಟ್ಟೊ ದಿಲ್ ಬಹಾರ್ !!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಆಲ್ಕೋಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಫುಲ್ಲವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ. ಈ ಒಟ್ಟೊ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ. [19-27]

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಡ್ರಾಮಿನ (ನಮೂನೆಯ) ಸೀಸೆ 1ಕ್ಕೆ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0. ಅಂಚೆಯ ವೆಚ್ಚ ಬೇರೆ ರೂ. 0-4-0. ಒಟ್ಟೊ-ದಿಲ್ ಬಹಾರ್ ಪರಿಮಳದ ಕಾರ್ಡುಗಳು ಡಜನ್ ಒಂದಕ್ಕೆ 0-12-0.

ಮೇಲೆ ಕಂಡ ಎಲ್ಲಾ ಸುಗಂಧಗಳು ಸಿಕ್ಕುವ ಸ್ಥಳ :—

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪೆನಿ,

ಜುಮ್ಮಾಮಸ್‌ಜೀದ್, ಬೊಂಬಾಯಿ.

ಏಜೆಂಟ್, ಡಿ. ಆಲ್ಟ್ ನಾರ್ತ್, ಮಂಗಳೂರು.

ಹೊಸ ಬಂಗಾಳಿ ನಾವಿಲ್ಸ್.—ವಿಷವಿವಾಹ 4 ಆ. ಸನ್ಯಾಸಿನಿ 1½ ಆ. ಅನಾಥಪ್ರೇತ 1 ಆ. ಬಿ. ವೆಂಕಟಾಚಾರ್ಯರಿಂದ ವಂಗವಿಜೇತ 1-4-0. ಚಂದ್ರಶೇಖರ 1-1-0. ರಜನಿ 13 ಆ. ಅಹಲ್ಯಾಬಾಯಿ 9 ಆ. ಇತ್ಯಾದಿ. ಚಿತ್ರವಿಚಿತ್ರಾವಳಿ II 8 ಆಣೆ. ಮಾಯಾವಿ ಪ್ರಿಂಟಾಗುತ್ತಿದೆ. ನ್ಯಾಯದರ್ಪಣ 1½ ರೂಪಾಯಿ.

[53-22] ಎಂ. ಸುಬ್ಬರಾವ್, ಬುಕ್ ಸೆಲರ್, ಸಂಕರಪುರ, ಬೆಂಗಳೂರು ಸಿಟಿ.

Full Notes and **Examiner** on L. S. E. Texts (1915)—**Both Tanglewood and Fairy Tales**, with Author's life, meanings, explanations, summaries, constructions and questions. Price **Annas 5. English Papers.**—Subscription **Re. 1½ only.** Special copy **As. 6. Spelling Book As. 4.** (Postage extra).

Apply to, **M. N. Sitarama Rao,**

[100-12] **Krishnaraja Mohalla, Mysore.**

ಕಳವು, ದರೋಡೆ.

ದರೋಡೆ, ಅಕ್ರಮ ಸ್ತ್ರೀಸಂಗಮ, ಅಸಾಮಿ ಚೋರಿ, ಮಾನನಷ್ಟ ಮುಂತಾದವುಗಳಿಗೆ ಶಿಕ್ಷೆ ವಿಧಿಸಿರುವ ದಂಡನೀತಿ ಶಾಸ್ತ್ರವು ಪೂರ್ವದಲ್ಲಿ ಶುಕ್ರಾಚಾರ್ಯರಿಂದ ರಚಿತವಾಗಿ ಈಗಿನ ಬ್ರಿಟಿಷ್ ಚಕ್ರಾಧಿಪತ್ಯದಲ್ಲಿ ಅನುಮೋದಿಸಿ ಇಂಡಿಯಾ ಗವರ್ನರ್ ಜನರಲ್‌ರವರಿಂದ ಮುಂಚುರಾಗಿ ಕಲ್ಕತ್ತಾ, ಮುಂಬೈ, ಮದ್ರಾಸ್, ಮೈಸೂರು ಜಿಲ್ಲೆಗಳಲ್ಲಿ « ಕನ್ನಡ ಇಂಡಿಯನ್ ಪೆನಲ್ ಕೋಡ್ » ಎಂಬ ಅಭಿದಾನದಿಂದ ಜಾರೀಲಿ ತಂದಿರುವರು. ಈ ಆಕ್ಟಿಗೆ ಅನೇಕ ಜಡ್ಜಿಗಳು ಟಿಪ್ಪಣಿಗಳನ್ನು ಬರೆದಿರುವರು. ಅವುಗಳೂ ಈ ಪುಸ್ತಕದಲ್ಲಿ ಅಡಗಿರುವವು. ಕ್ರಯ ಧಪ್ಪ ಕಾಗದದ್ದು 2 ರೂಪಾಯಿ; ಹಸನುಕಾಗದದ್ದು ರೂ. 2-8-0.

[143-4] ವಿಳಾಸ—ಬಿ. ನರಸಿಂಗರಾವ್,

ಎಡಿಟರ್, ಲಾ ಗೆಜೆಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಹೊಸ ನಾವೆಲ್‌ಗಳು.

ಬಹು ಸ್ವಲ್ಪ ಪ್ರತಿಗಳೇ ಉಳಿದಿವೆ. ಸರಸವಾದೀ ಹೊಸಗನ್ನಡದ ಕಾದಂಬರಿಗಳನ್ನು ತರಿಸಿಕೊಳ್ಳಲು ಹಿಂತೆಗೆದು ಪಶ್ಚಾತ್ತಾಪಪಡಬೇಡಿರಿ.

ಅನಂಗಸುಂದರಿ 5 ಆಣೆ. ತಾರಾಸುಂದರಿ 8 ಆಣೆ. ರಾಧಾಮಾಧವ 8 ಆಣೆ. ಸರಳಬಾಲೆ 8 ಆಣೆ. ಕುಮುದಿನಿ 6 ಆಣೆ. ನಿರ್ಭಾಗ್ಯಬಾಲಿಕೆ 6 ಆಣೆ. ಸಂತಾಪಕ 4 ಆಣೆ.

« ನಿರುಪಮಾ » ಹೊಸ ನಾಟಕಗಳಲ್ಲಿ ಮೇಲೆನಿಸಿ ಬಹು ಜನರ ಸ್ತೋತ್ರಕ್ಕೆ ಪಾತ್ರನಾದ ನಾಟಕ. ಕಥಾ ವಿಧಾನವೂ ಮಾತುಗಳೂ ಪದ್ಯಗಳೂ ಬಹು ರಮ್ಯತಾರತಮ್ಯಗಳಿಂದ ಸರಸವಾಗಿಯೂ ಇವೆ. ಕ್ರಯ 12 ಆಣೆ

[260-32] ವಿಳಾಸ— ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

NOW READY

Full Notes with Summary and Numerous useful questions on Circe's Palace; The Golden Fleece and Fairy Tales (L. S. Text for 1915) by Mr. A. S Rangaswamiengar, B.A., Asst. Master, Maharani's College, Mysore. Price four annas only. Yate's Primer 0-4-0; Yate's Second Reader 0-9-0; King Second Reader 0-6-0; King Third Reader 0-8-0; Macmillan's New No. IV Reader 0-12-0; Hydes Practical English Grammar—First 0-15-0, Second 0-15-0; Longman's School Geography 1-4-0; Marrison's Junior Geography of India 0-12-0.

We supply you any books in English or Canarese.

[23-28] **The General Agency, Mysore.**

ಸಿದ್ಧವಾಗಿದೆ.

1915 ನೆಯ ವರ್ಷದ ಲೋವರ್ ಸೆಕಂಡರಿ

ಕನ್ನಡ ಟೆಕ್ಸ್ಟಿನ ನೋಟ್ಸು.—ಕ್ರಯ 6 ಆಣೆ.

ಡಿಸ್ಕೌಂಟು—10 ಕ್ಕೆ 1; 25 ಕ್ಕೆ 3; 50 ಕ್ಕೆ 8; 100 ಕ್ಕೆ 20

ಮಕ್ಕಳ ಭೂವಿವರಣೆ.

ಈಗಿನ ಪಾಠಕ್ರಮಕ್ಕೆ ತಕ್ಕಂತೆ ಹೊಸದಾಗಿ ಆಗಿದೆ. ಇದರಲ್ಲಿ ಮೈಸೂರು ದೇಶದ ಬೆಳೆ, ಎತ್ತರ, ನದೀ ಪರ್ವತಾದಿಗಳು ಇವುಗಳನ್ನು ತೋರಿಸುವ ಮೂರು ಭೂಪಟಗಳೂ, ಚಿತ್ರಗಳೂ ಸೇರಿವೆ. ಕ್ರಯ 2 ಆಣೆ. [48-23]

ಇಲಾಖೆಯ 2 ನೆಯ ಪುಸ್ತಕದ ನೋಟ್ಸು 2½ ಆಣೆ. ಮಕ್ಮಿಲನ್ ರವರ 3 ನೇ ಪುಸ್ತಕದ ನೋಟ್ಸು 1½ ಆಣೆ. ಡಿಟೊ 4 ನೇ ಪುಸ್ತಕದ ನೋಟ್ಸು 1¾ ಆಣೆ. ಡಿಟೋ 5 ನೇ ಪುಸ್ತಕದ ನೋಟ್ಸು 4 ಆಣೆ. ನವಬಾಲವ್ಯಾಕರಣ (2 ನೇ ತರಗತಿ) 1 ಆಣೆ. Notes on "Tanglewood Tales," English Lower Secondary Text for 1915—As. 3. Notes on Fairy Tales—As. 2.

ನಮ್ಮ ವಿಳಾಸ:—ಯನ್. ಆರ್. ವೆಂಕಟಸುಬ್ಬಾಚಾರ್ಯ,

ಸುಬೋಧಗ್ರಂಥಾಲಯ, ಮೈಸೂರು.

ನೋಟೀಸು.

ಮೈಸೂರು ಬ್ಯಾಂಕ್, ಲಿಮಿಟೆಡ್.

ಸನ್ 1914 ನೇ ಜೂಲೈ ತಾ. 1 ರಿಂದ ಅಜೆಗೆ ಸೇವಿಂಗ್ಸ್ ಬ್ಯಾಂಕ್ ಲೇವಾದೇವಿಯನ್ನು ಹೊಸದಾಗಿ ಯಾರ ಹೆಸರಿನಲ್ಲೂ ಅಂಗೀಕರಿಸಿ ಪ್ರಾರಂಭಮಾಡುವುದಿಲ್ಲ ; ಆದರೆ ಅದಕ್ಕೆ ಪ್ರತಿಯಾಗಿ ಡೈರೆಕ್ಟರುಗಳು ಶೇಕಡಾ ವರುಷಕ್ಕೆ 4 ರೂಪಾಯಿ ಬಡ್ಡಿಯುಳ್ಳ "ಪ್ರಾವಿಡೆನ್ಷಲ್ ಡಿಪಾಜಿಟ್" ಎಂಬ ಹೊಸ ತರಹಾ ಲೇವಾದೇವಿಯನ್ನು ಪ್ರಾರಂಭಮಾಡಬೇಕೆಂದು ಗೊತ್ತು ಮಾಡಿದ್ದಾರೆ.

ಈ "ಪ್ರಾವಿಡೆನ್ಷಲ್ ಡಿಪಾಜಿಟ್" ಎಂಬ ಖಾತೆಯ ನಿಬಂಧನೆಗಳೇನೆಂದರೆ:—

1. ಡಿಪಾಜಿಟ್‌ದಾರರು ತಿಂಗಳಿಗೆ 5 ರೂಪಾಯಿಗೆ ಕಡಿಮೆ ಇಲ್ಲದೆ ಪಾವತಿ ಮಾಡಬೇಕು. ಇದಕ್ಕೆ ವರುಷಕ್ಕೆ ಶೇಕಡಾ 4 ರೂಪಾಯಿಯಂತೆ ಚಕ್ರಬಡ್ಡಿಯನ್ನು ಆರು ತಿಂಗಳಿಗೊಂದಾವರ್ತಿ ಅಂದರೆ ಜೂನ್ ತಾರೀಖು 30 ಮತ್ತು ಡಿಸೆಂಬರ್ ತಾರೀಖು 31 ಕ್ಕೆ ಲೆಕ್ಕಾಚಾರಮಾಡಿ ಸೇರಿಸಲಾಗುತ್ತದೆ

2. ಪ್ರತಿ ಅರ್ಧವರುಷಕ್ಕೂ ಬರುವ ಬಡ್ಡಿಯನ್ನು ಅಂದರೆ ಜೂನ್ ತಾ. 30 ಮತ್ತು ಡಿಸೆಂಬರ್ ತಾ. 31 ಕ್ಕೆ ಆಗುವಷ್ಟು ಬಡ್ಡಿಯನ್ನು ಅಸಲ್ ಹಣಕ್ಕೆ ಸೇರಿಸಿ ಅವರ ಕೂಡ ಪಾವತಿ ಆಗುವಂತೆ ತೋರಿಸಲಾಗುತ್ತೆ. ಮತ್ತು ಫಿಕ್ಸೆಡ್ ಡಿಪಾಜಿಟ್ಟುಗಳ ಬಡ್ಡಿ ಪಾವತಿ ಆಗುವಂತೆ ಈ ಬಡ್ಡಿಯನ್ನು ಪಾವತಿ ಮಾಡುವುದಿಲ್ಲ

3. ಡಿಪಾಜಿಟ್‌ದಾರರು ಆರು ತಿಂಗಳ ತನಕ ಡಿಪಾಜಿಟ್‌ದಾರರಾಗಿದ್ದು ಕೊಂಡೇ ಬಂದಿದ್ದಾಗ್ಯೂ ಅವರ ಡಿಪಾಜಿಟ್ ಹಣವು 30 ರೂಪಾಯಿ ಆಗದೆ ಹೋದರೆ ಆ ಷಣ್ಮಾಸಿಕದಲ್ಲಿ ಅಂಥಾ ಅಸಲ್‌ಹಣಕ್ಕೆ ಬಡ್ಡಿ ಕೊಡಲ್ಪಡುವುದಿಲ್ಲ ; ಆದರೆ ಅಸಲ್‌ಹಣವು 30 ರೂಪಾಯಿ ಅಥವಾ ಇದಕ್ಕಿಂತ ಹೆಚ್ಚಾಗಿರುವ ಸಂದರ್ಭಗಳಲ್ಲೆಲ್ಲಾ ಅಂಥ ಅಸಲ್‌ಹಣಕ್ಕೆ ಬಡ್ಡಿ ದಾಖಲ್ಮಾಡಲಾಗುತ್ತೆ.

4. ಡಿಪಾಜಿಟ್ಟುಗಳನ್ನು ವಾಪಸುಪಡೆಯಬೇಕಾದರೆ ಮೊದಲು 3 ತಿಂಗಳ ನೋಟೀಸ್ ಕೊಡಬೇಕು ; ಆದರೆ ಆ ರೀತಿ ಬಂದ ನೋಟೀಸಿನ ತಾರೀಖಿನಿಂದ ಶೇಕಡಾ 3 ರಂತೆ ಬಡ್ಡಿ ಕೊಡಲಾಗುತ್ತೆ.

5. ಡಿಪಾಜಿಟ್‌ದಾರನು (ದಾರಳು) ಕಾಲವಾದ ಪಕ್ಷದಲ್ಲಿ ಡಿಪಾಜಿಟ್ಟನ್ನೂ ಬಡ್ಡಿಯನ್ನೂ ಪೂರಾ ಆತನ ಅಥವಾ ಆಕೆಯ ವಾರಸ್‌ದಾರರಿಗೆ ಪಾವತಿ ತಕ್ಷಣವೇ ಮಾಡಲಾಗುತ್ತೆ ; ಇದಕ್ಕೆ ಸಾಮಾನ್ಯವಾಗಿ ಕೊಡಬೇಕಾದ ನೋಟೀಸ್ ಅಗತ್ಯವಿಲ್ಲ. ಹಾಗಿಲ್ಲದ ಪಕ್ಷದಲ್ಲಿ ಆ ಹಣವನ್ನೆಲ್ಲಾ ಬ್ಯಾಂಕಿನಲ್ಲೇ ಇಟ್ಟುಕೊಂಡು ಮೃತನ ಅಥವಾ ಮೃತಳ ವಾರಸ್‌ದಾರರಿಗೆ ಬಡ್ಡಿಯನ್ನು ಮೂರು ತಿಂಗಳಿಗೊಂದಾವರ್ತಿ ಅಪೇಕ್ಷಿಸಿದಾಗ್ಯೂ ಪಾವತಿ ಮಾಡುತ್ತಾರೆ. ಆದರೆ ಅಂಥಾ ವಾರಸ್‌ದಾರರ ಹೆಸರನ್ನು ಡಿಪಾಜಿಟ್‌ದಾರರು ಮೊದಲೇ ಬ್ಯಾಂಕಿನಿಂದ ಕೊಡೋಣಾಗುವ ಫಾರಮಿನಲ್ಲಿ ಬರೆದುಕೊಟ್ಟು, ಆ ಹೆಸರು ಬ್ಯಾಂಕಿನ ಪುಸ್ತಕಗಳಲ್ಲಿ ಕ್ರಮವಾಗಿ ದಾಖಲಾಗಿರಬೇಕು.

6. ಡಿಪಾಜಿಟ್‌ದಾರರು ತಮ್ಮ ಹಣವನ್ನು ಅಥವಾ ಅದರ ಒಂದು ಅಂಶವನ್ನು ಅದು ಸಂಪೂರ್ಣವಾಗುವುದಕ್ಕೆ ಮೊದಲೇ ವಾಪಸ್ ಪಡೆಯಬೇಕಾಗಿದ್ದಲ್ಲಿ ಅಂಥಾ ಹಣಕ್ಕೆ ಬ್ಯಾಂಕಿನ ಬ್ರಾಂಚು, ಅಥವಾ ಏಜನ್ಸಿಯಲ್ಲಿ ಆ ಸಮಯದಲ್ಲಿ ಜಾರಿಯಲ್ಲಿರುವ ಡಿಸ್ಕೌಂಟ್ ದರದಂತೆ ವಟಾ ಮಾಡಿಕೊಳ್ಳಲಾದೀತು. ಅಥವಾ ಅಂಥಾ ಡಿಪಾಜಿಟ್ಟಿನ ಮೇಲೆ ಸಾಧ್ಯವಾಗುವಷ್ಟು ಹಣವನ್ನು ಬ್ಯಾಂಕಿನ ಚಾಲ್ತಿ ಬಡ್ಡಿ ದರದ ಮೇಲೆ ಅಡ್ವಾನ್ಸು ಕೊಡಬಹುದು.

7. ಡಿಪಾಜಿಟ್‌ದಾರರಿಗೆ ಒಂದು ಪಾಸ್ ಬುಕ್ಕು ಕೂಡಲೇ ಕೊಡಲಾಗುವುದು. ಪ್ರತ್ಯೇಕವಾದ ರಸೀತಿ ಕೊಡಲ್ಪಡುವುದಿಲ್ಲವಾದಕಾರಣ ಹಣಕಳುಹಿಸುವಾಗಲೆಲ್ಲಾ ಡಿಪಾಜಿಟ್‌ದಾರರು ತಮ್ಮ ಪಾಸ್ ಬುಕ್ಕನ್ನು ಬ್ಯಾಂಕಿಗೆ ಹಾಜರು ಪಡಿಸಬೇಕು. ಅದರಲ್ಲೇ ಡಿಪಾಜಿಟ್ ಹಣಗಳನ್ನೆಲ್ಲಾ ಕ್ರಮವಾಗಿ ದಾಖಲ್ ಮಾಡಲಾಗುತ್ತೆ. ಇದಲ್ಲದೆ ಬಡ್ಡಿ ಲೆಕ್ಕಾಚಾರಮಾಡಿ ಸೇರಿಸುವುದಕ್ಕಾಗಿ ಪ್ರತಿ ಷಣ್ಮಾಸಿಕದಲ್ಲೂ ಅಂದರೆ ಜೂನ್ ತಾ. 30 ಕ್ಕೂ, ಡಿಸೆಂಬರ್ ತಾ. 31 ಕ್ಕೂ ಪಾಸ್ ಬುಕ್ಕನ್ನು ಬ್ಯಾಂಕಿಗೆ ಕಳುಹಿಸಬೇಕಾಗುತ್ತದೆ.

8. ಹಣ ವಾಪಸ್ ಪಡೆಯ ಬೇಕಾದಾಗ ಪಾಸ್ ಬುಕ್ಕನ್ನು ಬ್ಯಾಂಕಿಗೆ ಹಾಜರುಮಾಡುವುದೇ ಡಿಪಾಜಿಟ್‌ದಾರನ ಸರಿಯಾದ ಸಮ್ಮತಿ ಅಧಿಕಾರವೆಂದು ಎಣಿಸಲ್ಪಡುತ್ತದೆ.

9. ಈ ಡಿಪಾಜಿಟ್ಟುಗಳ ಕ್ರಮಗಳನ್ನು ಬದಲಾವಣೆಮಾಡುವ ಹಕ್ಕು ಬ್ಯಾಂಕು ವಹಿಸಿರುತ್ತದೆ. ಮತ್ತು ಕಾಗದದ ಮೂಲಕವೋ ಅಥವಾ ಬಹಿರಂಗವಾದ ಪ್ರಕಟನೆಯ ಮೂಲಕವೋ ಎರಡು ತಿಂಗಳ ನೋಟೀಸನ್ನು ಡಿಪಾಜಿಟ್‌ದಾರರಿಗೆ ಕೊಟ್ಟು ಡಿಪಾಜಿಟ್ಟುಗಳನ್ನು ವಾಪಸ್ ಪಾವತಿಮಾಡುವ ಅಧಿಕಾರವು ಬ್ಯಾಂಕಿಗೆ ಉಂಟು.

10. ಡಿಪಾಜಿಟ್‌ದಾರರು ತಮ್ಮ ಮಿಕ್ಕ ಹಣಗಳನ್ನು ಬ್ಯಾಂಕಿನ ಯಾವ ಏಜನ್ಸಿಗಾಗಲಿ ತಲುಪಿಸುವಂತೆ ಯಾವ ಖರ್ಚು ಇಲ್ಲದೆ ಯಾವ ಬ್ರಾಂಚಿಗಾಗಲಿ, ಏಜನ್ಸಿಗಾಗಲಿ ಪಾವತಿಮಾಡಬೇಕೆಂದು ಕಳುಹಬಹುದು.

ಡಬ್ಲಿಯು. ಸಿ. ರೋಸ್,

[150-4] ಮ್ಯಾನೇಜರ್.

ಸೋಲಾಪುರದ ಜವುಳಿ.

ಚಕ್ಕುಗಳು, ಶೀರೆಗಳು, ಕಿರಿಗೆಗಳು, ಖಣಗಳು.

ಇವುಗಳಲ್ಲಿ ಒಂದು ಸೇಲ್‌ಗಿಂತ ಕಡಮೆ ತರಿಸಲು ಕೋರುವವರು ಆಯಾ ಯ ಡಿಸ್ಟ್ರಿಕ್ಟುಗಳಲ್ಲಿರುವ ನಮ್ಮ ಏಜಂಟರುಗಳಲ್ಲಿ ಸಮೀಪ ಇರುವ ದಾಸ್ತಾನಿನಲ್ಲಿ ತರಿಸಿಕೊಳ್ಳಬಹುದು. ನಮೂನೆ ಬಟ್ಟೆಗಳೂ ಇವರಲ್ಲಿ ದೊರೆಯುತ್ತವೆ.

ಮೈಸೂರು, ನಂಜನಗೂಡು, ಚಾಮರಾಜನಗರ, ಈ ಪ್ರಾಂತ್ಯದವರು ಮ|| ಜಿ. ಎಸ್. ಶ್ರೀಕಂಠಯ್ಯನವರು ಕಂಪೆನಿ, ದೊಡ್ಡಪೇಟೆ, ಮೈಸೂರು, ಇವರಲ್ಲಿ ;

ತುಮಕೂರು, ಹಾಸನ, ಕಡೂರು, ಚಿತ್ರದುರ್ಗ, ಈ ಪ್ರಾಂತ್ಯದವರು ಮ|| ಎಸ್. ನಾರಾಯಣರಾಯರು, ಅರಸಿಕೆರೆ, ಇವರಲ್ಲಿ ;

ಕೊಳ್ಳೇಸ್‌ಪೇಟೆ, ಚನ್ನಪಟ್ಟಣ, ಮದ್ದೂರು, ಶ್ರೀರಂಗಪಟ್ಟಣ, ಕೋಲಾರ, ಈ ಪ್ರಾಂತದವರು ಬಿ. ಜಿ. ಕೌಶಿಕರು, 6 ಅರ್ಕಾಟ್ ಶ್ರೀನಿವಾಸಾಚಾರ್ರ ಬೀದಿ, ಚಿಕ್ಕಪೇಟೆ, ಬೆಂಗಳೂರು ಸಿಟಿ, ಇವರಲ್ಲಿಯೂ ಬೇಕಾದ ಮಾದರಿಯ ಸಣಗುಗಳನ್ನು ತರಿಸಿಕೊಳ್ಳಬಹುದು.

ಹೆಚ್ಚು ವಿಷಯಕ್ಕೆ ಕಾಗದವನ್ನೂ, ಮುಂಗಡ ಕಳುಹಿಸುವ ಹಣವನ್ನೂ ಕೆಳಗಿನ ವಿಳಾಸಕ್ಕೆ ರವಾನಿಸಬೇಕು. [28-26]

ಇಂಡಿಯನ್ ಕೋಅಪರೇಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್,
169, ಕಿಲಾರಿ ರೋಡ್ (ಕುಂಚಿಗರ ಪೇಟೆ), ಬೆಂಗಳೂರು ಸಿಟಿ.

ಹಿಂದುಸ್ಥಾನ್ ಕೋಆಪರೇಟಿವ್ ಜೀವವಿಮೆ ಸಂಘ ಲಿ.

ಹಿಂದುಸ್ಥಾನ್ ಕಟ್ಟಡಗಳು—ಕಲ್ಕತ್ತಾ.

ಕಂಪನಿಯ ಮೂಲಧನ (ಒಂದು ಕೋಟಿ ರೂಪಾಯಿ)	1,00,00,000
ಪಾವತಿಯಾದ ಮೊಬಲಗು	10,50,000
ವಸೂಲಾದ ಮೊಬಲಗು	57,00,000

ಈ ಕಂಪೆನಿಯಲ್ಲಿ ಪಾಲ್ಸಿದಾರ್ರಿಗೆ ಬಹಳ ಕಮ್ಮಿಯಾದ ದರಗಳ ಪಟ್ಟಿಯನ್ನು ಮಾಡಿರುವುದು. 1912 ನೇ ಇಸ್ವಿಯ ಇಂಡಿಯಾ ಗವರ್ನ್‌ಮೆಂಟಿನ ಜೀವವಿಮೆ ಕಂಪನಿಯ ಆಕ್ಟುಗಳ ಪ್ರಕಾರ ಸರ್ಕಾರದಲ್ಲಿ 2 ಲಕ್ಷ ರೂಪಾಯಿಗಳನ್ನು ಡಿಪಾಜಿಟ್ಟು ಮಾಡಲ್ಪಟ್ಟಿರುತ್ತೆ. ಮತ್ತು ಅನೇಕ ಮಹಾರಾಜರುಗಳು ಮುಂತಾದ ದೊಡ್ಡವರು ಪ್ರೆಸಿಡೆಂಟರಾಗಿರುವದರಿಂದ ಈ ಕಂಪನಿಯ ಅಭಿವೃದ್ಧಿಸ್ಥಿತಿಯನ್ನು ಪ್ರಕಟನೆ ಮಾಡುವುದಕ್ಕೆ ಸಂತೋಷವಾಗಿರುತ್ತದೆ.

ಸುಲಭವಾಗಿ ಹಣವನ್ನು ಪಾಲಿಸಿಯವರ ಮನೆಯಲ್ಲೇ ಜಾಗ್ರತೆ ಪಾವತಿಗೆ ಏರ್ಪಾಡು ಮಾಡಲ್ಪಡುತ್ತೆ. ಆದ್ದರಿಂದ ಪಾಲ್ಸಿದಾರ್ರು ಮತ್ತು ಇದಕ್ಕೆ ಸೇರಿದ ಏಜಂಟ್ರುಗಳು ತುಂಬಾ ಅದೃಷ್ಟವಂತರೆಂಬುವದರಲ್ಲಿ ಸಂದೇಹವಿಲ್ಲ.

ಹೆಚ್ಚಿನ ವಿಷಯಗಳಿಗೂ, ಫಾರಂ ಮತ್ತು ಪ್ರಾಸ್‌ಪೆಕ್ಟುಸುಗಳಿಗೂ ಕೆಳಗಿನ ವಿಳಾಸಕ್ಕೆ ಜಾಗ್ರತೆಯಾಗಿ ಬರೆಯಿರಿ. [243-33]

ವೆಂಕಟಾಚಲಂ ಅಂಡ್ ಸನ್ಸ್, ಚೀಫ್ ಏಜಂಟ್ರು,
166, ದೊಡ್ಡಪೇಟೆ, ಮೈಸೂರು.

ಬೆಲೆಯುಳ್ಳ ಬಾಳಿಕೆ ಬರುವ ವಾಚ್ ! ನಾಜೂಕಾದ ವಾಚ್ !!

ಸಿಸ್ಟಂ ಲೀವರ್ ವಾಚ್.

ಇದರ ಕ್ರಯ ಎಂದಿಗೂ ಕಂಡಿರದ ಸುಂದರವಾದ ವಾಚ್ ಸರಪಣಿ ಸಮೇತ
3 ರೂಪಾಯಿ ಮಾತ್ರ, 5 ವರುಷಗಳ ಖಾತ್ರಿ ಗ್ಯಾರೆಂಟಿ.



ಸ್ವಾಮಿ, ಈ ವಾಚ್ ನೂತನವಾದದ್ದು. ಅಂದರೆ ಶ್ರೇಷ್ಠವಾದ ಲೀವರ್ ಕೆಲಸದಿಂದ ತಯಾರಾದದ್ದು. ಬಲವುಳ್ಳ ಚಕ್ರಗಳಿಂದ ತಯಾರಾದದ್ದು. ಗಂಭೀರವಾದ ಘಂಟೆ ಮತ್ತು ಮಿನಿಟ್‌ಗಳು. ರಮಣೀಯವಾದ ನಮೂನೆ. ಹಲಿಯಲ್ಲಿಯೇ ಬೀಗ. ಮಣ್ಣು ಧೂಳು ಸೇರದಂತೆ ಒಳಗೂ ಸಹ ಗ್ಲ್ಯಾಸ್ ಡೋಮ್ (ಕನ್ನಡಿ ಮುಚ್ಚಳ) ಉಳ್ಳದ್ದು. ಪರಂಪರೆ ಎಂದರೆ ಅನೇಕ ವರುಷಗಳ ಪರಿಯಂತರ ಬಾಳಿಕೆ ಬರುವಂಥಾದ್ದು. ಇದಕ್ಕೆ ಯಾವ ವಿಧವಾದ ಬಹುಮಾನವೂ ಇಲ್ಲ. ಯಾಕೆಂದರೆ ವಾಚ್ ಬಹು ಶ್ರೇಷ್ಠವಾದದ್ದು. ಮನಸ್ಸು ಒಪ್ಪದಿದ್ದಲ್ಲಿ ಹಣ ವಾಪಸ್ ಮಾಡಲ್ಪಡುತ್ತೆ. ನಂಬಿಕೆಯುಳ್ಳ ವಾಚ್. [145-4] ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.

ವಿಳಾಸ—ಟಿ. ಆರ್. ವೆಂಕಟರಮಣ ಅಂಡ್ ಕಂಪೆನಿ,
ನಂ. 7 ಕೋಪ್ ವೆಂಕಟಾಚಲಯ್ಯರ್ ಬೀದಿ, ಮದರಾಸು.

ನ್ಯಾಷನಲ್ ಅಷೂರೆನ್ಸ್ ಕಂಪನಿ, ಲಿಮಿಟೆಡ್,

ವಿಜಯನಗರಂ ಸಿಟಿ.

1905 ರಲ್ಲಿ ಸ್ಥಾಪಿಸಲ್ಪಟ್ಟದ್ದು.
1912 ನೇ ಆಕ್ಟು ಪ್ರಕಾರ ಬದಲಾಯಿಸಿದೆ.
ಗವರ್ನಮೆಂಟ್ ಸೆಕ್ಯೂರಿಟಿಗಳನ್ನು ಪಡೆದಿದೆ.
ಕಂಪನಿ ಆಸ್ತಿಯನ್ನು ಹಂಚಿಕೊಳ್ಳುವ ಷೇರುದಾರರಿಲ್ಲ.
ವೈದ್ಯರ ಪರಿಕ್ಷಾ ಸರ್ಟಿಫಿಕೇಟು ಅವಶ್ಯವಿಲ್ಲ.
ಬೋನಸ್ ಹಣ ಅಪಾರವಾಗಿ ಪಾವತಿ ಮಾಡಿದೆ.

ಜೀವವಿಮೆ—ತಿಂಗಳ ಚಂದಾ 1 ನೇ ಕ್ಲಾಸ್ ರೂ. 1; 2 ನೇ ಕ್ಲಾಸ್ ರೂ. 0-8-0.
ಮದುವೆ ಫಂಡು—ತಿಂಗಳ ಚಂದಾ ರೂ. 1-0-0.

ಇದು ಬಹು ಲಾಭಕರವಾದ ಮತ್ತು ಸುರಕ್ಷಿತವಾದ ಕಂಪನಿ. ವಿಮೆ ಮಾಡತಕ್ಕವರಿಗೂ ಫಂಡು ಪಡೆಯತಕ್ಕವರಿಗೂ ತುಂಬಾ ಅನುಕೂಲವಾಗಿರುತ್ತದೆ. [138-6]

ಏಜಂಟರು ಬೇಕು. ಧಾರಾಳವಾದ ಕಮಿಷನ್ ಸಿಗುತ್ತೆ. ಕಂಪನಿಯ ಪ್ರಾಸ್ಪೆಕ್ಟಸ್ಸು ಪಟ್ಟಿ ಕೇಳಿದವರಿಗೆ ಕೊಡುತ್ತೆ. ಈ ವಿಳಾಸಕ್ಕೆ ಬರೆದುಕೊಳ್ಳಿ :—

ವಿ. ಬಿ. ಶ್ರೀಕಂಠಯ್ಯನವರು, ಮೈಸೂರು ಮತ್ತು ಕೊಡಗಿನ ಚೀಫ್ ಏಜೆಂಟ್, ಕೋಟೆ, ಬೆಂಗಳೂರು ಸಿಟಿ.	**V. B. Srikantiah,** *Chief Agent, Mysore & Coorg, Fort, Bangalore City.*

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೇನ್ ಯವರು ಹೊಟ್ಟೆಶೂಲೆ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.



3-30

ಕೆಳ ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಕೀಲುಗಳ ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ. ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನರನ್ನು ಬಹು ಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿಲ್ಲ.

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರ ನೋವನ್ನೂ ನಿಲ್ಲಿಸಿಬಿಡುತ್ತದೆ. ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಸ್ವಲ್ಪವೂ ಮುಟ್ಟದ್ದಲ್ಲ.

ಇದು ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಸೀಸೆಗೆ ೧ ರೂಪಾಯಿ. ದೊಡ್ಡ ಸೀಸೆಗೆ ೨ ರೂಪಾಯಿ.

MELLIN'S FOOD

TRADE MARK. TRADE MARK.

ಮೆಲಿನ್ಸ್ ಆಹಾರವು

[4-30]

ಕೈಸೋಕದೆ ಮಾಡಿದೆ. ಮೆಲಿನ್ಸ್ ಆಹಾರದಲ್ಲಿ ಶಿಶುಗಳು ಪುಷ್ಟಿಯಾಗಿ ಬೆಳೆಯುವವು

ಮೆಲಿನ್ಸ್ ಆಹಾರವನ್ನು ಕ್ರಮಪ್ರಕಾರ ತಯಾರ್ಮಾಡಿ ಸೇವಿಸಿದರೆ ಹುಟ್ಟಿದ ಶಿಶುಗಳು ಮೊದಲುಗೊಂಡು ಮುಪ್ಪಾಯದವರ ತನಕ ಎಲ್ಲರಿಗೂ ಸಂಪೂರ್ಣವಾದ ದೇಹಪುಷ್ಟಿಯನ್ನೂ ವಿಶೇಷವಾದ ಬಲವನ್ನೂ ಕೊಡುತ್ತದೆ.

ಮೆಲಿನ್ಸ್ ಆಹಾರದ ಮಾದ್ರಿ ಬೇಕೆಂದು ಕೇಳಿದರೆ ಕೆಳಗಿನ ವಿಳಾಸದಾರರು ಕಳುಹಿಸುತ್ತಾರೆ :—

Messrs. OAKES & Company, Mount Road, Madras.

ವಿಳಾಸ—ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ :—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಹೊಡೆತ (ಭಾರ), ಮೈ ನಡುಕ, ಶೀತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂಥ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಪಾಪ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—220 ಮಾತ್ರೆಗಳು ಕುಪ್ಪಿಗೆ 4 ಆಣೆ; 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪೀ ವರೆಗೆ ಪೋಸ್ಟೇಜು 4 ಆಣೆ. [179-46]

೨. ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕ್ಷಣಮಾತ್ರದಲ್ಲಿ ತೋರಿಗಳೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರಿಸಿ ಮೂತ್ರವು ಕಟ್ಟಿದ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿ ! ಒಂದೇ ಒಂದು ಬುಡ್ಡಿಯು ಮನೆಯಲ್ಲಿರಲಿ ! ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧೌಷಧ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುವುದು. ಬೆಲೆ ರೂ. 1; ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ :—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಈಗ ಸಾಲಾಮಿಸ್ರಿಯ ಧಾರಣೆಯು ಜಾಸ್ತಿಯಾಗಿರುವದರಿಂದ 1-8-0 ಕ್ರಯ ಇದ್ದದ್ದನ್ನು ರೂ. 2 ಮಾಡಿರುತ್ತೇವೆ.

500 ರೂಪಾಯಿಗಳು ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

ಈ ಮುರಬ್ಬಾವು "ಪಂಜಾಬ್ ಸಾಲಾಮಿಸ್ರಿ" ಅಲ್ಲವೆಂದು ವ್ಯಕ್ತಪಡಿಸುವವರಿಗೆ
500 ರೂಪಾಯಿಗಳು ಬಹುಮಾನ ಕೊಡಲ್ಪಡುವುದು.

ಕ್ರಯ 2 ರೂಪಾಯಿ.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡವರಿಗೆ ಹೃದಯ ಕೋಶವು ಬಲಹೀನವಾಗಿ, ನಾನಾ ವ್ಯಾಧಿಗಳಿಂದ ಮರಣ ಪರಿಯಂತರವೂ ದುಃಖಪಡುವರು. ಈ "ಪಂಜಾಬ್ ಸಾಲಾಮಿಸ್ರೀ ಮುರಬ್ಬಾ" ದ ಸೇವನೆಯಿಂದ ಕೈ, ಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ತಲೆಯ ನೋವೂ, ಇವುಗಳೆಲ್ಲವೂ ಪಂಜಾಬ್ ಸಾಲಾಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು, ಮೆದುಳಿಗೆ ಬಲವನ್ನುಂಟುಮಾಡುವುದು ಧಾತುವನ್ನು ಶೇಖರಿಸುವುದು, ಸೊಂಟದ ನೋವು ಸ್ವಲ್ಪ ಮಾತ್ರವೂ ಇರಲಾರದು. ಈ ಪಂಜಾಬ್ ಸಾಲಾಮಿಸ್ರಿಯ ಮುರಬ್ಬಾಕ್ಕೆ ತಾಂಬ್ರದ ಮತ್ತು ಬಂಗಾರದ ಭಸ್ಮವು ಎಷ್ಟು ಮಾತ್ರವೂ ಸಮಾನವಾಗಲಾರದು. ಹೊಟ್ಟೆಯಲ್ಲಿರುವ ಕ್ರಿಮಿಗಳನ್ನು ನಾಶಪಡಿಸುವುದು. ಶ್ವಾಸ ಕಾಸರೋಗಗಳನ್ನು ನಿರ್ಮೂಲಪಡಿಸುವುದು. ಕಾಬೂಲ್, ಕಾಂದಹಾರ್ ದೇಶಗಳ ಜನರು ಸಾಲಾಮಿಸ್ರಿಯ ಹಣ್ಣನ್ನು ಬಹಳವಾಗಿ ತಿನ್ನುವರು. ಆದ್ದರಿಂದ ಶಕ್ತಿಯಲ್ಲಿ ಬಹಳ ಗಟ್ಟಿಗರು. ಡಬ್ಬಿ 1 ಕ್ಕೆ ರೂ. 2-0-0. ಟಪಾಲ್ ಖರ್ಚು ಅಲಾಯದ. [133-6]

ಅನುಪಾನಪತ್ರಿಕೆ ಔಷಧದ ಸಂಗಡ. ಕ್ಯಾಟ್ಲಾಗ್ ಅಪೇಕ್ಷಿಸುವವರು ½ ಆಣೆಯ ಸ್ಟಾಂಪು ಕಳಿಸಿ.

ಏಜಂಟರು—ಡಿ. ಸೈಯದ್ ಉಸ್ಮಾನ್ ಅಂಡ್ ಕೊ, ದೊಡ್ಡಪೇಟೆ, ಬೆಂಗಳೂರು ಸಿಟಿ.	ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು, 5 ಹಾಜಿ ಸಾಹೇಬ್ ಮಸೀದಿ, ಅವೆನ್ಯೂ ರೋಡ್, ಬೆಂಗಳೂರು ಸಿಟಿ

ಪ್ರೊಫೆಸರ್ ಗಜ್ಜರರವರ

ಗುಣಕಂಡ ಪ್ರಖ್ಯಾತವಾದ ಔಷಧಗಳು.

ವ್ಯರ್ಥವಾದ ಔಷಧಗಳನ್ನು ಉಪಯೋಗಿಸಿ ಪ್ರಾಣಾಪಾಯಕ್ಕೆ ಗುರಿಯಾಗುವುದೇಕೆ? ವಿವೇಕದಿಂದ ತಯಾರುಮಾಡಿರುವ ನಮ್ಮ ಔಷಧಗಳನ್ನು ಸೇವನೆ ಮಾಡಬಾರದೇ?

ಟಾನಿಕ್ ಸೋಲ್ಯೂಷನ್.—ಇದರಲ್ಲಿ ಗ್ಲಿಸರಿನೋಫೇಟ್ಸ್ ಎಂಬ ಅಮೂಲ್ಯ ಪದಾರ್ಥಗಳನ್ನು ಹಾಕಿ ತಯಾರುಮಾಡಿದೆ. ಇದು ಬೇಗನೆ ಶರೀರಕ್ಕೆ ಸೇರಿಹೋಗುತ್ತೆ. ಆರೋಗ್ಯವನ್ನೂ ಚಟುವಟಿಕೆಯನ್ನೂ ಶಕ್ತಿಯನ್ನೂ ವೃದ್ಧಿಮಾಡುವುದು. ನರಗಳ ದುರ್ಬಲವನ್ನೂ ಹೋಗಲಾಡಿಸುವುದರಲ್ಲಿ ಇದು ಬಹಳ ಶ್ರೇಷ್ಠವಾದ ಔಷಧ. ಕ್ರಯ ಶೀಸೆಗೆ 2 ರೂಪಾಯಿ, ಮತ್ತು ರೂ. 1-2-0.

ರಕ್ತಶುದ್ಧಿಗೆ ಮಹೌಷದ.—ಇದು ರಕ್ತವನ್ನೂ ದೇಹದ ಎಲ್ಲಾ ಭಾಗಗಳನ್ನೂ ಶುದ್ಧಿಮಾಡುತ್ತೆ. ಬಹಳ ಚೆನ್ನಾಗಿ ಗುಣಕಂಡ ಔಷಧ. ಕ್ರಯ ಶೀಸೆಗೆ 1 ರೂಪಾಯಿ.

ಲಿವರ್ ಸೊಲ್ಯೂಷನ್.—ಪಿತ್ತಕೋಶದ ಮೇಲೆ ಇದು ಬಹಳ ಚೆನ್ನಾಗಿ ಕೆಲಸಮಾಡೋಣದರಿಂದ ಮಲಬದ್ಧತೆಯುಳ್ಳವರಿಗೆ ಮಹೋಪಕಾರಿಯಾಗಿದೆ. ಡ್ಯಾಕ್ಟರುಗಳೂ ಇದನ್ನು ಕೊಡುತ್ತಾರೆ. ಇದು ಮನೆಯಲ್ಲಿ ಇದ್ದೇ ತೀರಬೇಕು. ಕ್ರಯ ಶೀಸೆಗೆ ರೂ. 1; ಮತ್ತು ರೂ. 0-10-0.

ಜ್ವರದ ಔಷಧ.—ವಿಷಮಶೀತಜ್ವರ, ನಿಂತುಬರುವಜ್ವರ, ಅಸ್ಥಿಯಜ್ವರ, ಎಲ್ಲಾ ತರದ ಜ್ವರಗಳಿಗೂ ಇದು ಸಂಜೀವನವಾಗಿದೆ. ಇದು ಕ್ವಿನೈನ್‌ಗಿಂತ ಬಹಳ ಅಗ್ಗ. ಕ್ರಯ ಶೀಸೆಗೆ 10 ಆಣೆ; 4 ಆಣೆ.

ಹುಳುಕಡ್ಡಿ ಔಷಧ.—ಹುಳುಕಡ್ಡಿಯನ್ನು ಖಂಡಿತವಾಗಿ ಗುಣಮಾಡುತ್ತೆ. ಕ್ರಯ ಸೀಸೆಗೆ 4 ಆಣೆ.

ಹಲ್ಲುಪುಡಿ.—ಈ ಪುಡಿಯಿಂದ ಹಲ್ಲು ಉಜ್ಜಿಕೊಂಡರೆ ಬಾಯಿಗೆ ಸುವಾಸನೆ ಕೊಡುತ್ತೆ. ಹಲ್ಲು ಸವೆದು ಕೆಡದಂತೆ ಬಹಳ ಚೆನ್ನಾಗಿಟ್ಟು ಕಾಪಾಡುತ್ತೆ. ಕ್ರಯ ಸೀಸೆಗೆ 4 ಆಣೆ; 6 ಆಣೆ; 1 ರೂಪಾಯಿ.

ಇಂಗ್ಲೀಷಿನಲ್ಲೇ ನಮಗೆ ಕಾಗದವನ್ನು ಬರೆಯಬೇಕು.

ಸೋಲ್ ಏಜಂಟರು:—ಎಸ್. ವೈದ್ಯ ಮತ್ತು ಕಂಪನಿ,
ಪಾರ್ಕ್ ಟೌನ್, ಮದರಾಸ್.

[156-2]

ಮಕ್ಕಳ ಹಿತಕಾರಿ

ಎಂದು

SCOTT'S EMULSION 5-30

(ಸ್ಕಾಟ್ಸ್ ಇಮಲ್‌ಷನ್)

ಎಂಬೀ ಸೇವನಾ ಔಷಧಕ್ಕೆ ಕೋಟ್ಯಾಂತರ ತಂದೆತಾಯಿಗಳು ಹೆಸರಿಟ್ಟಿದ್ದಾರೆ. ಯಾಕೆಂದರೆ ಇದು ಮಕ್ಕಳ ಆರೋಗ್ಯವನ್ನು ವೃದ್ಧಿಪಡಿಸಿ, ದೇಹವನ್ನು ಪುಷ್ಟಿಯಾಗಿ ಬೆಳೆಸಿರುತ್ತದೆ. ಇದು ತುಂಬಾ ರುಚಿಯಾಗಿರುವುದರಿಂದ ಮಕ್ಕಳು ಬಹಳ ಸಂತೋಷವಾಗಿ ಸೇವನೆಮಾಡುತ್ತಾರೆ.

ಇದು ಕಾಯಿಲೆ ಮಕ್ಕಳನ್ನು ಆರೋಗ್ಯಮಾಡುವುದು; ಅಶಕ್ತರಾದ ಮಕ್ಕಳನ್ನು ಬಲಿಷ್ಠರನ್ನಾಗಿ ಮಾಡುವುದು.

ಕೈಸೋಕದೆ ತಯಾರಾದದ್ದು.

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ಬಿಕರಿಯಾಗುತ್ತದೆ.

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್.

ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್.

ತಾಲ್ಲೂಕು ವರ್ತಮಾನಗಳು.

ಚಿಕ್ಕನಾಯಕನಹಳ್ಳಿ.—ಈ ಊರಲ್ಲಿ ಕಾಲರಾ ಗಲಾಟೆ ವ್ಯಾಪಿಸಿ ಸುಮಾರು ಇಪ್ಪತ್ತು ಜನಗಳವರಿವಿಗೂ ತೀರಿಹೋದರು. ಈಗ ಗಲಾಟೆ ಏನೂ ಇಲ್ಲ. ಆಷಾಢ ಮಾಸದಲ್ಲಿ ಆಗಬೇಕಾದ ರಥೋತ್ಸವವು ಈ ಗಲಾಟೆಗೋಸ್ಕರ ನಿಂತುಹೋಯಿತು. ದನಕರುಗಳ ಮೇವಿಗಾಗಿ ಜನಗಳು ಪಡುತ್ತಿರುವ ಶ್ರಮ ಹೇಳತೀರದು. ಧಾರಣೆವಾಸಿ ಕ್ಷಾಮವನ್ನು ನೆನಪಿಗೆ ತರುತ್ತಿದೆ. ಮೋಡಮಾಡುತ್ತಾ ತುಂತುರುಮಳೆ ಸುರಿಯುತ್ತಿದೆ.—ಇಲ್ಲಿನ ಇಂಡಸ್ಟ್ರಿಯಲ್ ಸ್ಕೂಲ್ ದಿನೆ ದಿನೇ ಹೀನಸ್ಥಿತಿಯಲ್ಲಿ ಬರುತ್ತಿದೆ. ಕೆಲಸಗಾರರು ಕಮ್ಮಿ ಆಗುತ್ತಲಿದ್ದಾರೆ. ಕೆಲಸವು ನಡೆಯುವದಿಲ್ಲ. ಈ ಸ್ಕೂಲು ಈ ಊರಲ್ಲಿ ಇರುವದರಿಂದ ನೇಯಿಗೆ ಕೆಲಸದವರಿಗೆ ಏನೂ ಪ್ರಯೋಜನವಿಲ್ಲ. ಈ ಸ್ಕೂಲಿನಲ್ಲಿ ಒಂದು ಸಾಮಾನಿಗೆ ಹೇಳಿದರೆ ಅದು ತಯಾರಾಗಲು ಸಾವಕಾಶವಾಗುತ್ತೆ. ಸೂಪರೆಂಟರು ಊರಲ್ಲಿ ಇರುವದೇ ಅಪರೂಪ.—ಇಲ್ಲಿನ ಗರ್ಲ್ಸ್ ಸ್ಕೂಲನ್ನು ಕಮಿಟಿ ಮೆಂಬರುಗಳು ಕ್ರಮಪಡಿಸಬೇಕಾಗಿದೆ.

ಕುಣಿಗಲು.—ಇದು ಮಳೆಗಾಲವಾದಾಗ್ಯೂ ಮಳೆಯಿಲ್ಲ. ರೈತರೋ ಮಳೆಯನ್ನೇ ಎದುರುನೋಡುತ್ತಿದ್ದಾರೆ. ಕೆಲವರು ಭೂಮಿಯಲ್ಲಿ ತಕ್ಕಷ್ಟು ಹದವಿಲ್ಲದಿದ್ದರೂ ಬೀಜಬಿತ್ತುವ ಕಾಲವು ಮೀರಿಹೋಗುವದೆಂಬ ಭಯದಿಂದ ಬೀಜಗಳನ್ನು ಬಿತ್ತಿರುತ್ತಾರೆ. ಮೋಡಕವಿದು ಹಂಗಾಳಿ ಬೀಸುತ್ತಿರುವದು. ದೊಡ್ಡಕೆರೆಯಲ್ಲಿ ಮಾತ್ರ ಸ್ವಲ್ಪ ನೀರಿರುವದರಿಂದ ದನಕರುಗಳಿಗೂ ಜನರಿಗೂ ಅನುಕೂಲವಿರುತ್ತೆ. ಅನೇಕ ಗ್ರಾಮಾಂತರಗಳಲ್ಲಿ ದನಕರುಗಳಿಗೆ ಹುಲ್ಲೂ ನೀರೂ ದೊರೆಯುವದೇ ಕಷ್ಟವೆಂದೂ, ಜನರು ರಾತ್ರಿಯ ಸರಿಹೊತ್ತಿನ ಲಾಗಾಯತು ಹೊತ್ತು ಹುಟ್ಟುವವರೆಗೂ ನೀರಿಗಾಗಿ ಪಟಾಯಿಸುತ್ತಿದ್ದಾರೆಂದೂ ವರ್ತಮಾನವಿದೆ. ಜನಗಳ ಪಾಡೇ ಈ ರೀತಿ ಇರುವಾಗ್ಗೆ ಮೂಗುಪ್ರಾಣಿಗಳ ಗತಿಯೇನು?—ಕಳೆದ ಮಂಗಳವಾರ ಈ ಊರು ಕೋಟೆಭಾಗದಲ್ಲಿರುವ ಬಸವಲಿಂಗಪ್ಪನವರ ಒಂದು ಹಸು ಏಕಕಾಲದಲ್ಲಿ ಮೂರು ಕರುಗಳನ್ನು ಹಾಕಿತು. ಆದರೆ ಆ ಮೂರೂ ಹೊಟ್ಟೆಯೊಳಗೇ ಸತ್ತಿದ್ದವು. ಹಸುವಿಗೆ ಯಾವ ಹಾನಿಯೂ ಇಲ್ಲ.

ನೀಲಗಿರಿ ಜಿಲ್ಲಾ ಕೂನೂರು.—ಊರಿನಲ್ಲಿ ಈಗ 4-5 ತಿಂಗಳಿಂದ ಸೀಸನ್ ಕಾಲವೆಂದು ಹೇಳುತ್ತಾರೆ. ಈಗ ಯಾವ್ಯಾವ ದೇಶಗಳಿಂದಲೋ ಅನೇಕ ದೊಡ್ಡಮನುಷ್ಯರು, ಜಮೀನುದಾರರುಗಳು, ದೊಡ್ಡದೊಡ್ಡ ಉದ್ಯೋಗಸ್ಥರು, ದೊರೆಮಾನರು, ವಿಜಯನಗರದ ರಾಜರು, ಕೊಚ್ಚಿನ್ ರಾಜರು, ಬರೋಡೆ ರಾಜರು, ದೊರೆರಾಜರು, ಮುಂತಾದ ರಾಜರುಗಳು ಇರುತ್ತಾರಲ್ಲದೆ, ನಾಯಿಕಡಿಸಿಕೊಂಡು ಪರದೇಶಗಳಿಂದ ಬರುವ ಪ್ರಯಾಣಿಕರು ಈ ಊರಿನಲ್ಲಿ ತುಂಬಿರುತ್ತೆ. ಇಂಥಾ ಕಾಲದಲ್ಲಿ ಪೋಸ್ಟು ಮೆನ್‌ಗಳಿಗೂ, ಟೆಲಿಗ್ರಾಮ್ ಮೆಸಂಜರಿಗೂ ಇರುವ ಕಷ್ಟವನ್ನು ಹೇಳತೀರದು. ಇವರಿಗೆ 10 ರೂಪಾಯಿ ಸಂಬಳ. ಪೋಸ್ಟುಮೇನುಗಳಿಗೆ ಸರ್ವಿಸಿನಮೇಲೆ 12 ರೂಪಾಯಿನಿಂದ 20 ರೂಪಾಯಿವರೆಗೆ ಕೊಡುತ್ತಾರೆ. ಈ ನೀಲಗಿರಿ ಮಲೆಯಲ್ಲಿರುವ ಪೋಸ್ಟಾಫೀಸಿನ ಆಳುಗಳಿಗೆಲ್ಲಾ 10 ರೂಪಾಯಿನ ತಲಬುದಾರರಿಗೆ 2 ರೂಪಾಯಿ ಪಂಜಾಪಡಿ ಜಾಸ್ತಿಯಾಗಿರುತ್ತೆಂದು ಕೇಳಿದೆನು. ಇದುವರೆಗೂ ಇದು ಬರಲಿಲ್ಲ. ಮೇಲಿನ ಅಧಿಕಾರಿಗಳು ಗಮನಿಸಬೇಕೆಂದು ಬೇಡುತ್ತೇವೆ.—ನೀಲಗಿರಿ ಎಂಬ ಮಾತಿನಲ್ಲಿ ನೀರೇ ತುಂಬಿರಬಹುದೆಂದು ದೂರದೇಶದ ಜನಗಳು ತಿಳಿಯಬಹುದು. ಈ ಊರಿನಲ್ಲಿ ಕುಡಿಯಲಿಕ್ಕೆ ನೀರು ಸಿಕ್ಕುವುದು ಕಷ್ಟ. ಮಳೆ ಇಲ್ಲದೆ ದೊರೆಮನೆ ಕೋಟೆಗಳೆಲ್ಲಾ ಒಣಗುತ್ತಾ ಇರುತ್ತೆ. ಮಳೆ ಇಲ್ಲದಕಾಲದಲ್ಲಿ ತೋಟದ ಕೆಲಸಮಾಡುವವರ ಪಾಡನ್ನು ಹೇಳತೀರದು. ಈ ಊರಿನಲ್ಲಿ ರೂಪಾಯಿಗೆ 5-6 ಪಡಿ ಅಕ್ಕಿ, 10-12 ಪಡಿ ರಾಗಿ ಮಾರುತ್ತೆ. ಇಂಥ ದುರ್ಭಿಕ್ಷಕಾಲದಲ್ಲಿ ಇದೇ ಊರಿನ ಮಾವಿನಕೆರೆ ಶಿವರಾಮಯ್ಯ ಮುಂತಾದವರು ಸೇರಿ ದ್ಯಾವರಹಳ್ಳಿ ರಂಗೇಗೌಡನೆಂಬ ಬಡವನ ಮದುವೆಯನ್ನು ಬಹು ವಿಜೃಂಭಣೆಯಿಂದ ನಡಿಸಿ, ಬಹುಜನ ಕುಲಸ್ಥರಿಗೂ, ಅನೇಕ ಜನ ಬಡವರಿಗೂ ಅನ್ನಹಾಕಿಸಿ ಸಂತೋಷಪಡಿಸಿದರು.—ಇದೇ ತಿಂಗಳು 2 ತಾ. ಬಿಷಪ್ ವಿಲಿಯಮ್ಸ್ ಎಂಬ ದೊರೆಗಳು ತೀರಿಹೋದರು. ಮಾರನೇ ದಿನ ಬಹುಜನ ಯೂರೋಪಿಯನ್ ದೊರೆಮಾನರು, ಪಾರಸಿಗಳು, ಕ್ರೈಸ್ತರು, ಬ್ರಾಹ್ಮಣರು ಬಹುಜನಗಳು ಸೇರಿ, ದಂಡಿನ ವಾದ್ಯದಿಂದ ಚೆಳ್ಳಿಕಾರು ದೊಡ್ಡ ಗುಡಿಯಲ್ಲಿ ಅವರ ಶಾಸ್ತ್ರವನ್ನು ಮುಗಿಸಿ ಹೊಸ ಸಿಮಶರಿಯಲ್ಲಿ ಮಣ್ಣುಮಾಡಿಸಿದರು.

ಅದ್ಭುತವಾದ ಬಲಕಾರಿ ಮತ್ತು ಬಾಯಿನಾತಹರ.

ಜಿನತಾನ

ಜೀರ್ಣಶಕ್ತಿ ಹುಟ್ಟಿಸುವುದರಲ್ಲಿ ಇದಕ್ಕೆ ಸಮಾನವಾದದ್ದು ಇನ್ನೊಂದಿಲ್ಲ; ಅನ್ನಕೋಶವು ಎಷ್ಟೇ ದುರ್ಬಲವಾಗಿದ್ದರೂ ಇದರ ಕಾರ್ಯಗಳನ್ನು ಹೇರುಪೇರು ಮಾಡುವದಿಲ್ಲ. ಇದರ ಸೇವನೆಯಿಂದ ಎಲ್ಲಾ ರೋಗಗಳನ್ನೂ ಅಂಟದಂತೆ ತಡೆಯಬಲ್ಲದು. ಈ ಭಾಗದಲ್ಲಿ ಇದರ ಗುಣವು ಬಹು ಫಲಕಾರಿಯಾಗಿದೆ. ಇದಲ್ಲದೆ ಇದನ್ನು ಸೇವಿಸುವವರ ಬಾಯಿಯಲ್ಲಿ ಎಲ್ಲಾ ತರದ ದುರ್ನಾತವೂ ಹೋಗಿ ಸುಗಂಧವು ಹುಟ್ಟಿ ಹರ್ಷಕರವಾಗಿದ್ದೀತು.

ಗಂಟಲಿನ ನರಗಳು ಇದರ ಸೇವನೆಯಿಂದ ಬಹಳ ಬಲಗೊಳ್ಳುವವು. ಇದರ ಗುಣವನ್ನು ನೋಡಿ ಉಪನ್ಯಾಸಕರೂ, ನಾಟಕಧಾರಿಗಳೂ, ಸಂಗೀತಗಾರರೂ, ಬೋಧಕರೂ, ವಾಚಾಳಕ ಪ್ರಿಯರೂ ಈ ಮಾತ್ರೆಗಳನ್ನು ಬಹಳವಾಗಿ ಶೋಧಿಸಿ ಪ್ರೀತಿಯಿಂದ ಉಪಯೋಗಿಸುತ್ತಿದ್ದಾರೆ.

ಈ ಮಾತ್ರೆಗಳನ್ನು ಜಪಾನ್‌ನಲ್ಲಿರುವ ಒಸಾಕಾ ಪಟ್ಟಣದ ಮೋರಿಶಿತಾ ಕಂಪನಿಯವರು ತಯಾರುಮಾಡುತ್ತಾರೆ.

ಈ ಮಾತ್ರೆಗಳ	30 ಮಾತ್ರೆಗಳುಳ್ಳ ಪೊಟ್ಟಣಕ್ಕೆ $1\frac{1}{2}$ ಆಣೆ.	65 ಮಾತ್ರೆ ಪೊಟ್ಟಣಕ್ಕೆ 3 ಆಣೆ.
ಕ್ರಯ	195 ,, ಡಬ್ಬಾ ಸಮೇತ 8 ಆಣೆ.	455 ,, ಕನ್ನಡಿ ಡಬ್ಬಾಕ್ಕೆ 1 ರೂಪಾಯಿ.

ಎಲ್ಲಾ ಅಂಗಡಿಗಳಲ್ಲಿಯೂ ಬಿಕರಿಯಾಗುವುದು.

ಸೋಲ್ ಏಜಂಟರು:—

ಎಸ್. ವೈದ್ಯ ಮತ್ತು ಕಂಪನಿ,
ಪಾರ್ಕ್‌ಟೌನ್, ಮದ್ರಾಸ್.

[156-2]

CLEARANCE SALE! **CLEARANCE SALE!**

ನೀವು ಬೈಸಿಕಲ್ಲನ್ನು ಕೊಳ್ಳಬೇಕೆಂದು ಅಭಿಪ್ರಾಯಪಟ್ಟಲ್ಲಿ ವಿಶೇಷ ಪ್ರಖ್ಯಾತಿಹೊಂದಿ ಅನೇಕ ಕಾಲ ಕಷ್ಟಕೊಡದೆ ಕೆಲಸಮಾಡುವಂಥಾ

[159-1]

ಬ್ರಿಟಾನಿಯಾ ಪಾಪುಲರ್ ಬೈಸಿಕಲ್ಲನ್ನು

ಉಪಯೋಗಿಸಬೇಕು.



1. ಡನ್‌ಲಾಪ್ ಟಯರ್ಸ್.
2. ಸ್ಪ್ರಿಂಗು ಸಾಡಲ್.

ಮೇಲೆ ಹೇಳಿದ ಎರಡರ ಕೂಡ 80 ರೂಪಾಯಿಗೆ ಬಿಕರಿ ಮಾಡುವಂಥಾ ಭಾರಿ ಬೈಸಿಕಲ್ಲನ್ನು ಯಾರೇ ಆಗಲಿ ಈ ಕೆಳಗೆ ಕಾಣಿಸಿರುವ ಸ್ವಲ್ಪ ಬೆಲೆಗೆ ಮಾರಲಿಲ್ಲ. ಈ ಬೈಸಿಕಲ್ಲನ್ನು ಇಂಗ್ಲೆಂಡ್ ದೇಶದಲ್ಲಿ ಬಹುಕಾಲದಿಂದ ಪ್ರಖ್ಯಾತಿಹೊಂದಿರುವ ಕಂಪನಿಯವರಲ್ಲಿ ಒಳ್ಳೇ ಸಾಮಾನುಗಳಿಂದ ಮಾಡಿದ್ದಾಗಿದೆ.

ನಾವು ಇವುಗಳನ್ನು ಬಹಳ ಮಟ್ಟಾಗಿ ತರಿಸುವುದಕ್ಕೆ ಕಾರಣವೇನೆಂದರೆ ಇವನ್ನು ದಕ್ಷಿಣ ಇಂಡಿಯದಲ್ಲಿರುವ ಜನರಲ್ಲಿ ಪ್ರಬಲಮಾಡಬೇಕೆಂತಲೇ? ಆದ್ದರಿಂದ ಇವನ್ನು, ನೂರಕ್ಕೆ 25 ರೂಪಾಯಿ ಕಮಿಷನ್ ಕೊಟ್ಟು ಮಾರಿಬಿಡುತ್ತೇವೆ.

ಇದರ ಕ್ರಯ ರೂ. **80.**

ಈಗ ಕಮಿಷನ್ ತೆಗೆದು ಮಾರುವ ಕ್ರಯ ರೂ. **59**
ಕೇಮ್‌ಬ್ರಿಡ್ಜ್ ಟೈಯರ್ ಉಳ್ಳದ್ದರ ಕ್ರಯ ,, **55**

ಕೆಟಲಾಗು ಉಚಿತವಾಗಿ ಕಳುಹಲಾಗುತ್ತೆ.

ವಾಟ್‌ಸನ್ ಅಂಡು ಕಂಪೆನಿ, ನಂ. 164, ಬ್ರಾಡ್‌ವೆ, ಮದರಾಸ್.

BRAHMAPPA TAVANAPPANAVAR,
Merchant & Commission Agent.
Agent to Messrs. Currimbhoy Ebrahim & Co's Mills,
BOMBAY.

ನಾವು ಮುಂಬೈ ಮೆಸ್ಸರ್ಸ್ ಕರೀಂಬಾಯ್ ಇಬ್ರಾಹಿಂ ಅಂಡ್ ಕಂಪನಿಯವರ ಬಾಬತು, ಮೆಸ್ಸರ್ಸ್ ಫಜುಲ್ಭಾಯ ಮಿಲ್ಸ್ ಲಿಮಿಟೆಡ್ ಮುಂಬೈ- ದಿ ಕ್ರಿಸೆಂಟ್ ಮಿಲ್ಸ್ ಲಿಮಿಟೆಡ್ ಮುಂಬೈ, ಕರೀಂಬಾಯ್ ಮಿಲ್ಸ್ ಲಿಮಿಟೆಡ್ ಮುಂಬೈ, ದಿ ಇಂಡಿಯನ್ ಬ್ಲೀಚಿಂಗ್, ಡೈಯಿಂಗ್ ಅಂಡ್ ಪ್ರಿಂಟಿಂಗ್ ವರ್ಕ್ಸ್ ಲಿಮಿಟೆಡ್ ಮುಂಬೈ, ದಿ ಇಂಡೋರ್ ಅಂಡ್ ಮಾಳ್ವಾ ಯುನೈಟೆಡ್ ಮಿಲ್ಸ್ ಲಿಮಿಟೆಡ್ ಇಂಡೋರ್, ಇವುಗಳಲ್ಲದೆ ಇನ್ನೂ ಅನೇಕ ಮಿಲ್ಲುಗಳ ಬಟ್ಟೆಗಳನ್ನು ಮೈಸೂರು ಸೀಮೆಯಲ್ಲೆಲ್ಲಾ ವಿಕ್ರಯಮಾಡಲು ಕಮಿಷನ್ ಏಜಂಟರಾಗಿರುತ್ತೇವೆ. ನಮ್ಮ ಮುಖಾಂತರ ಮಾಲು ತರಿಸಿಕೊಳ್ಳತಕ್ಕವರಿಗೆ ಮುಂಬೈಯಲ್ಲಿ ಬಟ್ಟೆಗಳ ಮೇಲೆ ವಿಧಿಸತಕ್ಕ ದಳ್ಳಾಳಿ, ಚೋಟಾದಳ್ಳಾಳಿ, ಮೊಕ್ಕಾಮು, ಗಂಟುಕಟ್ಟುವದು, ಸ್ಟೇಷನ್ನಿಗೆ ಹೇರಿಸುವದು, ಹುಂಡೇಕರಿ ವಗೈರೆ ಯಾವ ವಿಧವಾದ ಖರ್ಚೂ ತಗಲದೆ ಇರುವದರಿಂದ ಮುಂಬೈಯಿಂದ ತರಿಸುವದಕ್ಕಿಂತಲೂ ಸುಲಭ ದರದಲ್ಲಿ ಸಿಕ್ಕುತ್ತೆ. ಮತ್ತು ಮುಂಬೈಗೆ ಹೋಗಿಬರುವ ದೇಹಶ್ರಮವೂ, ಖರ್ಚೂ ಉಳಿಯುತ್ತೆ. ಹೆಚ್ಚು ಬಟ್ಟೆಗಳನ್ನು ಏಕಕಾಲದಲ್ಲಿ ಕೊಳ್ಳತಕ್ಕವರಿಗೆ ಮಾಲಿನ ಮೇಲೆ ಶೇಕಡ 3 ರೂಪಾಯಿ ಲಾಗಾಯ್ತು 4½ ರೂಪಾಯಿ ವರಿಗೆ ಡಿಸ್ಕೌಂಟು ದೊರೆಯುತ್ತೆ. [97-14]

ನಮ್ಮ ಟ್ರಾವಲಿಂಗ್ ಏಜಂಟರ ವಶ ಬಟ್ಟೆಗಳ ನಮೂನೆಗಳನ್ನು ಕೊಟ್ಟು, ದರ ಒಬ್ಬ ವ್ಯಾಪಾರಗಾರನಿಗೆ ತೋರಿಸಿ ಆರ್ಡರು ತೆಗೆದುಕೊಳ್ಳುವ ಏರ್ಪಾಡು ಮಾಡಿರುತ್ತೆ. ನಮ್ಮ ದಾವಣಗೆರೆ ಮತ್ತು ಬೆಂಗಳೂರು ಆಫೀಸುಗಳಲ್ಲಿ ಮಾಲು ಹಾಜರು ಸಹ ದೊರೆಯುತ್ತೆ.

ಬಟ್ಟೆಗಳನ್ನು ವ್ಯಾಪಾರಮಾಡಲು ಅನುಭವಸ್ಥರಾದ ಏಜಂಟರುಗಳೂ ಮತ್ತು ಗುಮಾಸ್ತರುಗಳೂ ಬೇಕಾಗಿದೆ.

ಎಲ್ಲಾ ಕಾಗದಪತ್ರಗಳೂ ದಾವಣಗೆರೆ ಆಫೀಸಿಗೆ ಬರೆಯಲ್ಪಡಬೇಕು.

ಹೆಡ್ ಆಫೀಸು:—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್, ದಾವಣಗೆರೆ. ಬ್ರಾಂಚ್ ಆಫೀಸು:—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

ವೃತ್ತಾಂತ ಪತ್ರಿಕೆ.

—:o:—

ಸನ್ ೧೯೧೪ ನೇ ಇಸವಿ ಜೂಲೈ ತಾ. ೨೩ ನೇ ಗುರುವಾರ.

ಬಲಾತ್ಕಾರವುಳ್ಳ ವಿದ್ಯಾಭ್ಯಾಸವು.

ಮೈಸೂರು ಗವರ್ನಮೆಂಟಿನವರು ಇದೇ ಜೂಲೈ ಗುರ್ರೆ ಲಾಗಾಯಿತು ಈ ಸಂಸ್ಥಾನದ ಪ್ರತಿ ಒಂದು ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರಿನಲ್ಲೂ ಮುಂದೆ ಹೇಳುವ ಟವನುಗಳಲ್ಲೂ ಬಲಾತ್ಕಾರದಿಂದ ಮಕ್ಕಳಿಗೆ ವಿದ್ಯೆಕಲಿಸಬೇಕೆಂಬ ರೂಲಸನ್ನು ಜಾರಿಗೆ ತರಲಾಗುತ್ತದೆ ಎಂದು ಸರ್ಕಾರಿ ಗೆಜೆಟ್ಟಿನ ಮೂಲಕ ಘಾಯಿಷ್ ಮಾಡಿರುತ್ತಾರೆ. ಆ ಟವನುಗಳ್ಯಾವವೆಂದರೆ—ದೊಡ್ಡಬಳ್ಳಾಪುರ, ಶ್ರೀರಂಗಪಟ್ಟಣ, ನಂಜನಗೂಡು, ಹೊಳೆನರಸೀಪುರ, ದಾವಣಗೆರೆ, ಮಧುಗಿರಿ, ಚಿಕ್ಕಬಳ್ಳಾಪುರ.

ಇದಲ್ಲದೆ ಸರ್ಕಾರಿ ಗೆಜೆಟ್ಟಿನಲ್ಲಿ ಮೇಲ್ಕಂಡ ಕಾನೂನನ್ನು ಜಾರಿಮಾಡತಕ್ಕ ವಿಧಾನವೂ ಅಂದರೆ ರೂಲಸೂ ಪ್ರಕಟ ಮಾಡಲಾಗಿದೆ.

ಮೈಸೂರು ಸಂಸ್ಥಾನಕ್ಕೆ ಈಗಲೇ ಇಂಥಾ ಬಲಾತ್ಕಾರದ ಕಾನೂನು ಅವಶ್ಯವಿಲ್ಲವೆಂತಲೂ, ಈಗಿನ ಸ್ಥಿತಿಗತಿಯನ್ನು ನೋಡುವಲ್ಲಿ ಬಲಾತ್ಕಾರಪಡಿಸಬೇಕಾದ ಕಾನೂನು ಇಲ್ಲದೇನೇ ವಿದ್ಯೆಯನ್ನು ಹರಡುವುದಕ್ಕೆ ಎಷ್ಟೋ ಅವಕಾಶವಿದೆ ಎಂತಲೂ ನಾವು ಹಲವುವೇಳೆ ಹೇಳುತ್ತಾ ಬಂದಿದ್ದೇವೆ. ಅನೇಕ ಸ್ಥಳಗಳಲ್ಲಿ ಪ್ರಜೆಗಳು ಸ್ಕೂಲನ್ನು ಇಟ್ಟುಕೊಡಿ ಎಂದು ಕೇಳುತ್ತಾ ಬಂದಿದ್ದಾರೆ. ಈಗಲೇ ಪ್ರಜೆಗಳು ಕೇಳಿದಹಾಗೆಲ್ಲಾ ಸರ್ಕಾರದವರು ಸ್ಕೂಲುಗಳನ್ನು ಬೇಗ ಬೇಗನೆ ಇಟ್ಟುಕೊಡುತ್ತಾ ಇಲ್ಲ. ಈಗ ಅವಶ್ಯವಾಗಿರುವ ಸ್ಥಳಗಳಲ್ಲಿ ಸರ್ಕಾರದವರು ಸ್ಕೂಲುಗಳನ್ನು ನಿರ್ಬಂಧವೇನೂ ಇಲ್ಲದೆ ಮೊದಲು ಸ್ಥಾಪಿಸಿಕೊಟ್ಟು, ಪ್ರಜೆಗಳು ತಮ್ಮ ಮಕ್ಕಳನ್ನು ಸ್ಕೂಲಿಗೆ ಕಳುಹಿಸುತ್ತಾ ಇಲ್ಲವೆಂದು ಕಂಡುಬಂದಲ್ಲಿ ಆಗ್ಗೆ ಬಲಾತ್ಕಾರದ ಕಾನೂನನ್ನು ಪ್ಯಾಸ್ ಮಾಡಿ ಜಾರಿಗೆ ತರಬೇಕಾದದ್ದು ಸಹಜವಾಗಿತ್ತು. ಹ್ಯಾಗೂ ಈಗ ಕಾನೂನು ಪ್ಯಾಸಾಗಿ ಜಾರಿಗೆ ಬಂದುಹೋಗಿದೆ; ಅದು ಸಾರ್ಥಕವಾಗುವ ಭಾಗದಲ್ಲಿ ನಮ್ಮ ಕೈಲಾಗುವುದನ್ನು ಮಾಡುವೆವು.

ಸರ್ಕಾರಿ ಗೆಜೆಟ್ಟಿನಲ್ಲಿ ಕಾನೂನೂ, ರೂಲಸೂ, ಜಾರಿಗೆ ತರಲ್ಪಟ್ಟಿರುವ ಸ್ಥಳಗಳೂ ಪ್ರಕಟವಾಗಿದ್ದಾಗ್ಯೂ ಅದನ್ನು ಜಾರಿಗೆ ತರುವುದಕ್ಕೆ ನಮಗೆ ತಿಳಿದಮಟ್ಟಿಗೆ ಕಾರ್ಯದಲ್ಲಿ ಇನ್ನೂ ಏನೂ ನಡೆಯಲಿಲ್ಲ. ರೂಲಸಿನ ಪ್ರಕಾರ ಮ್ಯುನಿಸಿಪಾಲಿಟಿಗಳ ಪ್ರೆಸಿಡೆಂಟರುಗಳು ಮಾಡಬೇಕೆಂದು ವಿಧಾಯಕವಾಗಿರುವ ಕಾರ್ಯಗಳು ಕೆಲವು ಕಡೆಗಳಲ್ಲಿ ಅವರಿಂದ ಸಾಧ್ಯವಲ್ಲವೆಂದು ಕಂಡುಬಂದಿದೆ. ದೃಷ್ಟಾಂತವಾಗಿ ಬೆಂಗಳೂರು ಮತ್ತು ಮೈಸೂರು ಮ್ಯುನಿಸಿಪಲ್ ಪ್ರೆಸಿಡೆಂಟರುಗಳು ಆ ಪಟ್ಟಣಗಳಲ್ಲಿ 7 ವರುಷದ ಮೇಲೆ 11 ವರುಷದೊಳಗಿರುವಂಥಾ ಮಕ್ಕಳು ಎಷ್ಟುಮಂದಿ ಇದ್ದಾರೆಂದು ಗೊತ್ತುಮಾಡಬೇಕೆಂದು ರೂಲಸು ವಿಧಿಸಿರುತ್ತದೆ. ಅದಕ್ಕೆ ಬೇಕಾದ ಹೊಸ ಸಿಬ್ಬಂದಿಯನ್ನು ಮ್ಯುನಿಸಿಪಾಲಿಟಿಗಳಿಗೆ ಒದಗಿಸದಿದ್ದರೆ ಈ ಕೆಲಸ ಹ್ಯಾಗೆ ನಡೆದೀತು?

ಈ ಹೊಸ ಏರ್ಪಾಡಿಗೆಲ್ಲಾ ಮ್ಯುನಿಸಿಪಾಲಿಟಿಯವರೇ ಹಣವನ್ನು ಒದಗಿಸಬೇಕೋ ಅಥವಾ ಸರ್ಕಾರದವರು ಕೊಡುತ್ತಾರೆಯೋ ಸ್ಪಷ್ಟವಾಗಿ ತಿಳಿಸಿರುವುದಿಲ್ಲ. ಈ ಖರ್ಚನ್ನು ವಹಿಸಿಕೊಂಡು ಮಾಡುವಷ್ಟು ಚೈತನ್ಯವುಳ್ಳ ಮ್ಯುನಿಸಿಪಾಲಿಟಿಗಳು ಬಹಳವಾಗಿಲ್ಲವಾದಕಾರಣ ಸರ್ಕಾರದವರೇ ವಹಿಸಿಕೊಂಡು ಕೊಟ್ಟಾರೆಂದು ನಮಗೆ ತೋರುತ್ತಿದೆ.

ಈ ಕಾನೂನು ಜಾರಿಯಲ್ಲಿರುವಂಥಾ ಪಟ್ಟಣದ ಪ್ರತಿ ಒಂದು ಭಾಗದಲ್ಲೂ ಒಂದೊಂದು ಸ್ಕೂಲ್ ಕಮಿಟಿಯು ನೇಮಕವಾಗಬೇಕಾಗಿದೆ. ಈ ಕಮಿಟಿಯನ್ನು ಮ್ಯುನಿಸಿಪಲ್ ಪ್ರೆಸಿಡೆಂಟರು ನೇಮಿಸಬೇಕೋ, ಅಥವಾ ಇನ್ಸ್‌ಪೆಕ್ಟರ್ ಜನರಲ್‌ರವರೇ ನೇಮಿಸುತ್ತಾರೆಯೋ ತಿಳಿಯಲಿಲ್ಲ. ಇದಲ್ಲದೆ ಯಾವ ಪಂಗಡದ ಪ್ರತಿನಿಧಿಗಳು ಸ್ಕೂಲ್ ಕಮಿಟಿಗೆ ಚುನಾಯಿಸಲ್ಪಡಬೇಕೆಂಬುವುದನ್ನಾಗಲಿ, ಈ ಕಮಿಟಿಗೆ ಆಯಾ ಸ್ಕೂಲಿನ ಜಮಾಖರ್ಚಿನ ವಿಚಾರದಲ್ಲಿ ಏನಾದರೂ ಅಧಿಕಾರ ಉಂಟೇ ಇಲ್ಲವೇ ಎಂಬುವುದನ್ನಾಗಲಿ ಈ ರೂಲಸು ಹೇಳುವುದಿಲ್ಲ.

ಈಗ ಮೈಸೂರು ಗವರ್ನಮೆಂಟಿನವರು ಮಾಡಿರುವ ಕಾರ್ಯವನ್ನು ನೋಡಿದರೆ "ಇತರ ಸಂಸ್ಥಾನಗಳಲ್ಲಿ ಬಲಾತ್ಕಾರದ ವಿದ್ಯಾಭ್ಯಾಸದ ಕಾನೂನು ಜಾರಿಯಲ್ಲಿದೆ; ನಮ್ಮ ಸಂಸ್ಥಾನದಲ್ಲೂ ಅದರಂತೆ ಕಾನೂನು ಜಾರಿಗೆ ಬಂದರೆ ಸರಿ. ಮೈಸೂರು ಸಂಸ್ಥಾನವೂ ಯಥಾರ್ಥವಾಗಿ ಅಭಿವೃದ್ಧಿ ಹೊಂದುತ್ತಿದೆ ಎಂದು ಎಲ್ಲಾ ಕಡೆಗಳಲ್ಲೂ ಪ್ರಸಿದ್ಧಿಗೆ ಬಂದೀತು" ಎಂಬೀ ರೀತಿ ಹೇಳುವಂತೆ ಕಾಣುವುದು. ಆದರೆ ನಿಜವಾಗಿ ಇದರ ಪೂರ್ವಾಪರಗಳನ್ನೆಲ್ಲಾ ಸರ್ಕಾರದವರು ಚೆನ್ನಾಗಿ ಮೊದಲೇ ಪರಿಶೀಲನೆ ಮಾಡಿಯೂ ಇಲ್ಲ; ಅದಕ್ಕೆ ಬೇಕಾಗಿರುವ ಸಲಕರಣಗಳನ್ನೆಲ್ಲಾ ಒದಗಿಸಿಯೂ ಇಲ್ಲ. ಆದಕಾರಣ ಇದು ಸಾರ್ಥಕವಾಗುವುದು ಹ್ಯಾಗೋ ನಮಗೆ ತಿಳಿಯದು. ಸ್ಕೂಲಿಗೆ ಮಕ್ಕಳು ಕ್ರಮವಾಗಿ ಬರುತ್ತಾರೆಯೋ ಇಲ್ಲವೋ ಎಂಬುವುದನ್ನು ಮೇಲ್ವಿಚಾರಣೆ ನೋಡಿಕೊಳ್ಳುವ ಅಧಿಕಾರಿಯು ಪ್ರಜೆಗಳನ್ನು ಗಾಬರಿಪಡಿಸತಕ್ಕವನಾಗಿದ್ದರೆ ಕಾನೂನಿನ ಉದ್ದೇಶಕ್ಕೆ ಭಂಗವಾದೀತು; ಆತನಿಗೆ ಪ್ರಜೆಗಳಲ್ಲಿ ಪ್ರೀತಿವಿಶ್ವಾಸವೂ ಇರಬೇಕಲ್ಲದೆ, ಬುದ್ಧಿವಂತಿಕೆಯಿಂದ ಕೆಲಸ ನಡಿಸುವ ಸಾಮರ್ಥ್ಯವಿರಬೇಕು.

ಈ ಕಾನೂನಿನಿಂದ ಅಪಾರವಾದ ಮೇಲುಂಟಾದೀತೆಂದು ನಮಗೆ ತೋರುವುದಿಲ್ಲ; ಆದರೂ ಇದರಿಂದ ಪ್ರಜೆಗಳಿಗೆ ಹಿತವಾಗುವ ರೀತಿಯಲ್ಲಿ ನಮ್ಮ ಕೈಲಾಗುವುದನ್ನೆಲ್ಲಾ ಮಾಡುತ್ತಾ ಬರುವೆವು.

ಅನ್ಯದೇಶ ವೃತ್ತಾಂತಗಳು.

ಅಮೇರಿಕ ಖಂಡದ ಮಧ್ಯ ಪ್ರಾಂತ್ಯದಲ್ಲಿರುವ ಮೆಕ್ಸಿಕೋ ಸಂಸ್ಥಾನದಲ್ಲಿ ಕೆಲವು ಕಾಲದಿಂದ ಯುದ್ಧಗಳು ನಡೆಯುತ್ತಾ ಬಂದಿವೆಯೆಂದೂ, ಸಂಯುಕ್ತ ಸಂಸ್ಥಾನಗಳ ಗವರ್ನಮೆಂಟಿನವರು ಹಡಗುಗಳ ಸೈನ್ಯವನ್ನು ಕಳುಹಿಸಿ ವೀರಕ್ರೂಸ್ ಎಂಬ ತೀರ ಪಟ್ಟಣಕ್ಕೆ ಮುತ್ತಿಗೆ ಹಾಕಿ ಆ ಪಟ್ಟಣವನ್ನು ತಮ್ಮ ಸ್ವಾಧೀನದಲ್ಲಿಟ್ಟುಕೊಂಡಿದ್ದಾರೆಂದೂ ಮೊದಲೇ ತಿಳಿಸಿದ್ದೇವಷ್ಟೆ. ಇದುವರೆಗೆ ಮೆಕ್ಸಿಕೋ ಸಂಸ್ಥಾನವನ್ನು ಆಳುತ್ತಿದ್ದ ಹ್ಯೂಯರ್ಟ ಎಂಬ ಪ್ರೆಸಿಡೆಂಟರು ಈಚೆಗೆ ತಾವಾಗಿಯೇ ಆಳ್ವಿಕೆಯನ್ನು ಬಿಟ್ಟು ಹೊರಟುಹೋಗುತ್ತಾರೆಂದೂ, ಸೇನಾರ್ ಕಾರ್ಬಜಾಲ್ ರವರು ಕೆಲವು ಕಾಲದಮಟ್ಟಿಗೆ ಪ್ರೆಸಿಡೆಂಟರಾಗಿರಲು ಒಪ್ಪಿಕೊಂಡಿದ್ದಾರೆಂದೂ ತಿಳಿದುಬಂದಿದೆ. ಎರಡು ಪಾರ್ಟಿಗಳಿಗೂ ಇನ್ನೂ ಕದಿವಾಟಗಳೂ ಯುದ್ಧಗಳೂ ನಡೆಯುತ್ತಲೇ ಇರುವವು. ಅನೇಕ ಪ್ರಜೆಗಳು ಎರಡು ಕಡೆಗಳಲ್ಲೂ ಕೊಲೆಯಾದರು; ಬಹು ಮಂದಿ ಗಾಯಪಟ್ಟಿದ್ದಾರೆ. ಈಗ ಹೊಸ ಪ್ರೆಸಿಡೆಂಟರು ಆಳ್ವಿಕೆಯನ್ನು ವಹಿಸಿಕೊಳ್ಳೋಣದರಿಂದ ಇನ್ನು ಮುಂದಾದರೂ ಯುದ್ಧಗಳು ಕೊನೆಗಂಡು ಮೆಕ್ಸಿಕೋ ಸಂಸ್ಥಾನದ ಕಾರುಭಾರುಗಳು ಸ್ಥಿಮಿತಕ್ಕೆ ಬರುವವೆಂದು ನಿರೀಕ್ಷಿಸಲ್ಪಟ್ಟಿದೆ. ಈ ರೀತಿ ಸಮ್ಮತಿಯೂ ಸಮಾಧಾನವೂ ನೆಲೆಗೊಂಡದ್ದನ್ನು ನೋಡಿಕೊಂಡು ಸಂಯುಕ್ತಸಂಸ್ಥಾನಗಳವರು ಮೆಕ್ಸಿಕೋ ಸಂಸ್ಥಾನವನ್ನು ಬಿಟ್ಟು ಹೊರಟುಹೋಗುತ್ತಾರೆ.

* * * *

ಆಸ್ಟ್ರಿಯಾ ರಾಜ್ಯದ ಯುವರಾಜರಾಗಿದ್ದ ಆರ್ಚ್‌ಡ್ಯೂಕ್ ರವರನ್ನು ಪತ್ನಿಸಮೇತ ಕೊಂದುಬಿಟ್ಟರಷ್ಟೆ. ಈ ಕೊಲೆಯ ದೆಸೆಯಿಂದ ಆಸ್ಟ್ರಿಯದವರಿಗೂ ಸರ್ವಿಯದವರಿಗೂ ಪರಸ್ಪರ ದ್ವೇಷಾಸೂಯೆಗಳು ಹುಟ್ಟಿರುತ್ತವೆ. ಕೆಲವು ಪಟ್ಟಣಗಳಲ್ಲಿ ಗಲಭೆಗಳುಂಟಾದವು; ಆದರೂ ವಿಶೇಷವೇನೂ ನಡೆಯಲಿಲ್ಲ. ಈ ಕೊಲೆಗೆ ಕಾರಣರಾದವರನ್ನೆಲ್ಲಾ ಹಿಡಿದು ನ್ಯಾಯವಾಗಿ ಶಿಕ್ಷೆಗೆ ಗುರಿಮಾಡುತ್ತಾರೆಂದೂ, ಈಗ ಪರಸ್ಪರ ಉಂಟಾಗಿರುವ ದುರಭಿಪ್ರಾಯಗಳು ಬೇಗನೆ ನಿವಾರಣೆಯಾಗುವವೆಂದೂ ನಿರೀಕ್ಷಿಸಲ್ಪಟ್ಟಿದೆ.

* * * *

ಆಲ್ಬೇನಿಯ ಸಂಸ್ಥಾನದಲ್ಲಿ ಇನ್ನೂ ಪ್ರಜಾ ಸಮ್ಮತಿಯು ನೆಲೆಗೊಳ್ಳದೆ ಕದಿವಾಟಗಳು ನಡೆಯುತ್ತಲೇ ಬಂದಿವೆ. ಪರರಾಜ್ಯಗಳವರ ತೀರ್ಮಾನದಂತೆ ಏರ್ಪಾಡಾಗಿರುವ ಹೊಸ ಗವರ್ನಮೆಂಟು ಆಲ್ಬೇನಿಯದ ಪ್ರಜೆಗಳಿಗೆ ಸಮ್ಮತವಾಗಿಲ್ಲವೆಂದು ಕಾಣುತ್ತದೆ. ದಂಗೆಯೆದ್ದಿರುವ ಪ್ರಜೆಗಳು ಹಲವು ಪಟ್ಟಣಗಳನ್ನು ಗೆದ್ದು ಸ್ವಾಧೀನಪಡಿಸಿಕೊಂಡು, ಈಗ ಡುರಾಜೋ ಎಂಬ ರಾಜಧಾನಿಯನ್ನು ಆಕ್ರಮಿಸಿಕೊಳ್ಳಬೇಕೆಂದು ಹೊರಟಿದ್ದಾರೆ. ಇಷ್ಟಕ್ಕೇ ಈ ಗಲಭೆಯು ಶಮನವಾಗದೆ ಹೋದರೆ ಪರರಾಜ್ಯಗಳು ತಮ್ಮ ಸೈನ್ಯವನ್ನು ಆಲ್ಬೇನಿಯಕ್ಕೆ ಕಳುಹಿಸಿಕೊಡಬೇಕಾದೀತೆಂದು ಕಾಣುತ್ತಿದೆ.

* * * *

ಐರ್ಲೆಂಡಿನ ವಿದ್ಯಮಾನಗಳು ಇನ್ನೂ ಅಷ್ಟೇನೂ ಸಂತೋಷಪ್ರದವಾಗಿಲ್ಲ. ಈಗ ಅಲ್ಲಿ ಎರಡು ಕಕ್ಷಿಗಳು ಏರ್ಪಟ್ಟಿರುತ್ತವೆ. ಹೋಮ್ ರೂಲ್ ಅವಶ್ಯವಿಲ್ಲವೆಂದು ಪ್ರತಿಭಟಿಸುತ್ತಿರುವ ಅಲ್‌ಸ್ಟರ್ ವಿಭಾಗದವರು ಒಂದು ಕಕ್ಷಿಯಾಗಿದ್ದಾರೆ; ದೇಶಸೇವಕರು ಇನ್ನೊಂದು ಪಕ್ಷವಾಗಿರುವರು. ಇವೆರಡು ಕಕ್ಷಿಗಳೂ ಇದುವರೆಗೆ ಯಾವುದೊಂದು ಗಲಭೆಗೂ ಆಸ್ಪದಕೊಟ್ಟಿಲ್ಲ; ಆದರೂ ಈ ಕಕ್ಷಿಗಳಲ್ಲಿ ಯಾವಾಗ ಮನಸ್ತಾಪಗಳು ಕಾರ್ಯತಃ ಪ್ರಕಾಶವಾಗಬಹುದೋ ಹೇಳಲಿಕ್ಕಾಗದು. ಹೌಸ್ ಆಫ್ ಲಾರ್ಡ್ಸ್ ಎಂಬ ಪಾರ್ಲಿಮೆಂಟಿನ ಎರಡನೇ ಸಭೆಮನೆಯ ಮೆಂಬರುಗಳು ಹೋಮ್ ರೂಲ್ ಬಿಲ್ ಎಂಬ ಕಾನೂನಿನ ಮಸೂದೆಯನ್ನು ಬದಲಾವಣೆಮಾಡಿ, ಐರ್ಲೆಂಡಿನಲ್ಲಿ ಪಾರ್ಲಿಮೆಂಟನ್ನು ಪ್ರಾರಂಭಿಸಿದಾಗ್ಯೂ ಅದಕ್ಕೆ ಅಲ್‌ಸ್ಟರ್ ವಿಭಾಗವು ಅಧೀನವಾಗಬೇಕಾದದ್ದಿಲ್ಲವೆಂದು ಮಾಡಿದ್ದಾರೆ. ಈ ಬದಲಾವಣೆಯನ್ನು ಹೌಸ್ ಆಫ್ ಕಾಮನ್ಸ್ ಎಂಬ ಪಾರ್ಲಿಮೆಂಟಿನ ಮೊದಲನೇ ಸಭೆಮನೆಯಲ್ಲಿ ಪ್ರಜಾಪ್ರತಿನಿಧಿಗಳು ಒಪ್ಪಿಕೊಳ್ಳುವರೋ ಇಲ್ಲವೋ ಮುಂದೆ ನೋಡಬೇಕಾಗಿದೆ. ಹೊಸ್ತೆ ಬಂದಿರುವ ತಂತೀವರ್ತಮಾನವನ್ನು ನೋಡಲಾಗಿ ಸಮಸ್ತ ಕಕ್ಷಿಗಳವರೂ ಸೇರಿ ಯಾವುದೋ ಒಂದು ರೀತಿ ಒಪ್ಪಿ ಈ ಹೋರಾಟವನ್ನು ಕೊನೆಗಾಣಿಸುವರೆಂದು ಕಾಣುತ್ತದೆ.

ಭಕ್ತ್ಯಭಿವೃದ್ಧಿಯು

ಲೋಕದ ಸಕಲ ಭೋಗಭಾಗ್ಯಗಳು ತನಗೆ ಸಂಪೂರ್ಣವಾದ ಸಂತೃಪ್ತಿಯನ್ನು ಕೊಡಲಾರವೆಂಬುದು ಪ್ರತಿಯೊಬ್ಬನಿಗೂ ತಿಳಿದೇ ಇರುತ್ತದೆ. ಮನುಷ್ಯನಿಗೆ ದೇವರ ಸಂಗದ ಸಮಾಧಾನವು ಇಲ್ಲದಿದ್ದರೆ, ಅವನಿಗೆ ಎಂದಿಗೂ ಸಂತೃಪ್ತಿಯು ಇರಲಾರದು. ಅವನ ಸ್ವಭಾವವು ಇಂಥದಾಗಿದೆ ಎಲ್ಲಾ ಯುಗಗಳ ಎಲ್ಲಾ ದೇವಭಕ್ತರುಗಳು ದೇವರ ಧ್ಯಾನಮಾಡಿ, ತಮಗೆ ಸಹಾಯಮಾಡಿ ತಮ್ಮನ್ನು ನಡಿಸಬೇಕೆಂದು ಪ್ರಾರ್ಥಿಸಿ, ತಮ್ಮ ಪ್ರಾರ್ಥನೆಗಳಿಗೆ ಸದುತ್ತರಗಳನ್ನು ಹೊಂದಿಕೊಂಡಿರುತ್ತಾರೆ. ಅವರ ಆತ್ಮಗಳಲ್ಲಿ ಪರಲೋಕದ ದಿವ್ಯವಾದ ಜ್ಯೋತಿಯು ಬೆಳಗುತ್ತಿರುವುದು. ಅವರ ಪಾಪಾಪರಾಧಗಳೆಲ್ಲಾ ಕ್ಷಮಿಸಲ್ಪಟ್ಟಿರುವವು. ಸಮಾಧಾನವೂ ಸಂತೃಪ್ತಿಯೂ ಅವರ ಮನಸ್ಸುಗಳಲ್ಲಿ ತುಂಬಿ ತುಳುಕುತ್ತಿರುವವು.

ಪುರಾತನ ಕಾಲದ ಯೆಹೂದ್ಯರಲ್ಲಿ ಅನೇಕ ಮಂದಿ ದೇವಭಕ್ತರುಗಳು ಇದ್ದರು. ಇವರುಗಳು ದೇವರ ಮುಂದೆ ತಮ್ಮ ಮನಸ್ಸುಗಳನ್ನೆಲ್ಲಾ ಬಿಚ್ಚಿ ವಿಜ್ಞಾಪನೆಮಾಡುತ್ತಾ ಬರುವರು. ಅವರು ಮಾಡಿದ ಅನೇಕಾನೇಕ ಪ್ರಾರ್ಥನೆಗಳನ್ನೂ ದೇವಧ್ಯಾನಗಳನ್ನೂ ಒಂದು ಪುಸ್ತಕದಲ್ಲಿ ಬರೆದು ಪ್ರಕಟಿಸಿದರು. ಅವರ ಭಾಷೆಯು ಹೀಬ್ರು ಭಾಷೆ. ಅವರು ದೇವರನ್ನು ಯೆಹೋವನೆಂಬ ಹೆಸರಿನಿಂದ ಕರೆಯುತ್ತಿದ್ದರು. ಈ ಪುಸ್ತಕವನ್ನು ಕೆಲವು ದಿನಗಳ ಹಿಂದೆ ಕನ್ನಡಕ್ಕೆ ತಿರಿಗಿ ಭಾಷಾಂತರಮಾಡಿರುತ್ತಾರೆ. ಅದರಲ್ಲಿರುವ ದೇವರ ಧ್ಯಾನಗಳಲ್ಲಿ ಎರಡನ್ನು ಇಲ್ಲಿ ಪ್ರಕಟಿಸುತ್ತೇವೆ. ಆ ದೇವಭಕ್ತರುಗಳಿಗೆ ದೇವರಲ್ಲಿ ಎಷ್ಟರಮಟ್ಟಿನ ದೃಢವಾದ ನಂಬಿಕೆಯು ಇದ್ದಿತೆಂದೂ ತಾವು ದೇವರನ್ನು ಸೇವಿಸಬೇಕಾದರೆ, ತ್ರಿಕರಣಶುದ್ಧರಾಗಿರಬೇಕಾದುದು ಆವಶ್ಯಕವೆಂದು ಅವರು ಎಷ್ಟು ನಿಂಡಿತವಾಗಿ ತಿಳಿದುಕೊಂಡಿದ್ದರೆಂದೂ ಇವುಗಳಿಂದ ವ್ಯಕ್ತವಾಗುತ್ತದೆ.

ಈ ಪುಸ್ತಕದ ಹೆಸರು ಕೀರ್ತನೆಗಳು. ಇದು ಮೈಸೂರು ಸಿ. ಎಲ್. ಎಸ್. ಬುಕ್ ಡಿಪೋದಲ್ಲಿಯೂ ಬೆಂಗಳೂರು ಬೈಬಲ್ ಸೊಸೈಟಿಯ ಡಿಪೋದಲ್ಲಿಯೂ ಸಿಕ್ಕುತ್ತದೆ.

ಭಕ್ತರೆಂಬ ಕುರಿಗಳಿಗೆ ಯೆಹೋವನು ಒಳ್ಳೇ ಕುರುಬನೆಂಬುವದು.

ಯೆಹೋವನು ನನ್ನ ಕುರುಬನು? ಕೊರತೆಪಡೆನು.
ಆತನು ಹಸುರುಗಾವಲುಗಳಲ್ಲಿ ನನ್ನನ್ನು ತಂಗಿಸುತ್ತಾನೆ;
ವಿಶ್ರಾಂತಿಕರವಾದ ನೀರುಗಳ ಬಳಿಗೆ ಬರಮಾಡುತ್ತಾನೆ.
ನನ್ನ ಪ್ರಾಣವನ್ನು ಉಜ್ಜೀವಿಸಮಾಡಿ
ತನ್ನ ಹೆಸರಿಗೆ ತಕ್ಕಂತೆ ನೀತಿಮಾರ್ಗದಲ್ಲಿ ನನ್ನನ್ನು ನಡಿಸುತ್ತಾನೆ.
ನಾನು ಕಾರ್ಗತ್ತಲಿನ ಕಣಿವೆಯಲ್ಲಿ ನಡೆಯುವಾಗಲೂ
ನೀನು ಹತ್ತರವಿರುವದರಿಂದ ಕೇಡಿಗೆ ಹೆದರೆನು;
ನಿನ್ನಲ್ಲಿರುವ ದೊಣ್ಣೆಯೂ ಕೋಲೂ ನನಗೆ ಧೈರ್ಯಕೊಡುತ್ತವೆ.
ವೈರಿಗಳ ಮುಂದೆಯೇ ನೀನು ನನಗೋಸ್ಕರ ಔತಣವನ್ನು ಸಿದ್ಧಮಾಡುತ್ತೀ.
ನನ್ನ ತಲೆಗೆ ತೈಲವನ್ನು ಹಚ್ಚುತ್ತೀ.
ನನ್ನ ಪಾತ್ರೆ ತುಂಬಿ ಹೊರಸೂಸುತ್ತದೆ.
ನಿಶ್ಚಯವಾಗಿ ನನ್ನ ಜೀವಮಾನದಲ್ಲೆಲ್ಲಾ ಶುಭವೂ ಕೃಪೆಯೂ ನನ್ನನ್ನು
ಹಿಂಬಾಲಿಸುವವು.
ನಾನು ಸದಾಕಾಲವೂ ಯೆಹೋವನ ಮಂದಿರದಲ್ಲಿ ವಾಸಿಸುವೆನು.

ಯೆಹೋವನ ಸನ್ನಿಧಿಯಲ್ಲಿ ಸೇರತಕ್ಕವರು ಯಾರೆಂಬುವದು.

ಭೂಮಿಯೂ ಅದರಲ್ಲಿರುವ ಸಮಸ್ತವೂ ಯೆಹೋವನದು;
ಲೋಕವೂ ಅದರ ನಿವಾಸಿಗಳೂ ಆತನವೇ.
ಆತನೇ ಅದರ ಅಸ್ತಿವಾರವನ್ನು ಸಾಗರದ ಮೇಲೆ ಹಾಕಿದನು;
ಅದನ್ನು ಜಲರಾಶಿಗಳ ಮೇಲೆ ಸ್ಥಿರಪಡಿಸಿದವನು ಆತನೇ.
ಯೆಹೋವನ ಪರ್ವತವನ್ನು ಹತ್ತತಕ್ಕವನು ಯಾರು?
ಆತನ ಪವಿತ್ರಸ್ಥಾನದಲ್ಲಿ ನಿಲ್ಲುವದಕ್ಕೆ ಎಂಥವನು ಯೋಗ್ಯನು?
ಯಾವನು ಅಯೋಗ್ಯ ಕಾರ್ಯಗಳಲ್ಲಿ ಮನಸ್ಸಿಡದೆ ಮೋಸಪ್ರಮಾಣ
ಮಾಡದೆ ಶುದ್ಧಹಸ್ತವೂ ನಿರ್ಮಲಮನಸ್ಸೂ ಉಳ್ಳವನಾಗಿದ್ದಾನೋ
ಅವನೇ ಯೆಹೋವನಿಂದ ಶುಭವನ್ನು ಹೊಂದುವನು;
ತನ್ನ ರಕ್ಷಕನಾದ ದೇವರಿಂದ ನೀತಿಫಲವನ್ನು ಪಡೆಯುವನು.
ಇಂಥವರೇ ಆತನ ದರ್ಶನವನ್ನು ಬಯಸುವವರು.
ಯಾಕೋಬ್ಯರ ದೇವರೇ, ನಿನ್ನ ಸಾನ್ನಿಧ್ಯವನ್ನು ಸೇರುವವರು ಇಂಥವರೇ.
ದ್ವಾರಗಳೇ, ಉನ್ನತವಾಗಿರ್ರಿ;
ಪುರಾತನವಾದ ಕದಗಳೇ, ತೆರೆದುಕೊಂಡಿರ್ರಿ.
ಮಹಾಪ್ರಭಾವವುಳ್ಳ ಅರಸನು ಆಗಮಿಸುತ್ತಾನೆ.
ಮಹಾಪ್ರಭಾವವುಳ್ಳ ಈ ಅರಸನು ಯಾರು?
ಈತನು ಮಹಾ ಬಲಿಷ್ಠನೂ ವಿಶೇಷ ಪರಾಕ್ರಮಿಯೂ
ಯುದ್ಧವೀರನೂ ಆಗಿರುವ ಯೆಹೋವನೇ.
ದ್ವಾರಗಳೇ, ಉನ್ನತವಾಗಿರ್ರಿ;
ಪುರಾತನವಾದ ಕದಗಳೇ, ತೆರೆದುಕೊಂಡಿರ್ರಿ;
ಮಹಾಪ್ರಭಾವವುಳ್ಳ ಅರಸನು ಆಗಮಿಸುತ್ತಾನೆ.
ಮಹಾಪ್ರಭಾವವುಳ್ಳ ಈ ಅರಸನು ಯಾರು?
ಸೇನಾಧೀಶ್ವರನಾದ ಯೆಹೋವನೇ;
ಮಹಾಪ್ರಭಾವವುಳ್ಳ ಅರಸನು ಈತನೇ.

ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲ್.

ಮೈಸೂರು ಮ್ಯುನಿಸಿಪಲ್ ಕೌನ್ಸಿಲ್ ಪ್ರೆಸಿಡೆಂಟರಾದ ಮ|| ಟಿ. ಲಕ್ಷ್ಮಣರಾಯರು ಕೆಲವು ದಿನಗಳ ಹಿಂದೆ ಪೂನಾ, ಬೊಂಬಾಯಿ, ಅಹಮದಾಬಾದ್ ಮುಂತಾದ ಪಟ್ಟಣಗಳಿಗೆ ಹೋಗಿ ಅಲ್ಲಿನ ಮ್ಯುನಿಸಿಪಲ್ ಏರ್ಪಾಡುಗಳ ವಿಚಕ್ಷಣೆಯನ್ನೆಲ್ಲಾ ಕಣ್ಣಾರ ನೋಡಿಕೊಂಡು ಬಂದು ಒಂದು ಸ್ಪೆಷಲ್ ರಿಪೋರ್ಟನ್ನು ಬರೆದಿರುತ್ತಾರೆ. ಈ ರಿಪೋರ್ಟಿನಲ್ಲಿ ಕಂಡ ವಿಚಾರಗಳನ್ನು ಕುರಿತು ಚರ್ಚೆ ಮಾಡುವುದಕ್ಕೋಸ್ಕರ ಮ್ಯುನಿಸಿಪಲ್ ಕೌನ್ಸಿಲರುಗಳು ಕಳೆದ ಸೋಮವಾರ ಬೆಳಿಗ್ಗೆ ಇಲ್ಲಿನ ಟೌನ್ ಹಾಲ್ ಬಂಗಲೆಯಲ್ಲಿ ಒಂದು ಸ್ಪೆಷಲ್ ಮೀಟಿಂಗನ್ನು ನಡಿಸಿದರು. ಪ್ರೆಸಿಡೆಂಟರು ಬರೆದಿರುವ ರಿಪೋರ್ಟಿನಲ್ಲಿ ಅನೇಕ ಸಂಗತಿಗಳು ಅಡಕವಾಗಿವೆ. ಆ ದಿನ ಮೀಟಿಂಗಿನಲ್ಲಿ ಮೆಂಬರುಗಳು ಆ ಪೈಕಿ ಎರಡು ವಿಚಾರಗಳನ್ನು ಮಾತ್ರ ಚರ್ಚೆ ಮಾಡಿದರು.

ಬೀದಿ ರಸ್ತೆ ಮನೆಗಳಲ್ಲಿ ಬೀಳುವ ಕಸ ಮುಂತಾದ ಕಚರವನ್ನು ಪಟ್ಟಣದ ಹೊರಕ್ಕೆ ಸಾಗಿಸುವುದು ಮೊದಲನೇ ವಿಷಯ. ಈಗ ಪಟ್ಟಣದ ಕೊಳ್ಳನ್ನು ಮ್ಯುನಿಸಿಪಾಲಿಟಿಯವರು ಕೆಲವು ಎತ್ತಿನ ಗಾಡಿಗಳಲ್ಲಿ ದಿನಾ ಕೂಡಿಸಿ ಸಾಗಿಸುತ್ತಾರೆ. ಈಗ ಈ ಕೆಲಸವು ಬಹಳ ಅಲಕ್ಷ್ಯದಿಂದಲೂ, ತುಂಬಾ ಅತೃಪ್ತಿಕರವಾಗಿಯೂ ನಡೆಯುವುದು. ಪ್ರೆಸಿಡೆಂಟರು ಬೊಂಬಾಯಿ ಪಟ್ಟಣದಲ್ಲಿ ಮಾಡುವಂತೆ ಮೋಟರ್ ಗಾಡಿಯಲ್ಲಿ ಕಚರವನ್ನು ಸಾಗಿಸುವುದು ಅನುಕೂಲವೆಂದು ಅಭಿಪ್ರಾಯಪಟ್ಟಿದಾರೆ. ಒಂದೊಂದು ಮೋಟರಿಗೆ 10-12 ಸಾವಿರ ರೂಪಾಯಿ ಬೇಕಾಗುವುದು. ಮೆಂಬರುಗಳು ಈ ವಿಚಾರವನ್ನು ಸ್ವಲ್ಪ ಹೊತ್ತು ಚರ್ಚೆ ಮಾಡಿ, ಅದಕ್ಕೆ ಸಂಬಂಧಪಡುವ ಎಲ್ಲಾ ಸಂಗತಿಗಳನ್ನೂ ಪ್ರೆಸಿಡೆಂಟರು ವಿವರವಾಗಿ ಬರೆದುಕೊಟ್ಟರೆ ಆಲೋಚಿಸಬಹುದೆಂದು ತೀರ್ಮಾನ ಮಾಡಿದರು.

ಬಳಿಕ ಮನೆಗಳ ಬಚ್ಚಲರೊಚ್ಚೂ ಪಾಯಿಖಾನೆಯೂ ಬೀದಿಯಲ್ಲೂ ಚರಂಡಿಗಳಲ್ಲೂ ಹರಿಯದಂತೆ ತಡೆಯುವ ವಿಚಾರವನ್ನು ಕುರಿತು ಮೆಂಬರುಗಳು ಚರ್ಚೆಮಾಡಿದರು. ಕೆಲವು ಮನೆಗಳೊಳಗೆ ತೊಟ್ಟಿಗಳನ್ನಿಟ್ಟಿದಾರೆ. ಗುಡಿಸುವವರು ಬಂದು ಅದನ್ನು ಎತ್ತಿ ಪೀಪಾಯಿಗಳಿಗೆ ಹಾಕಿ ಸಾಗಿಸಿಕೊಂಡು ಹೋಗುವರು. ಈಗ ಎಲ್ಲಾ ಕಡೆಗಳಲ್ಲೂ ಭೂಮಿಯೊಳಗೆ ದೊಡ್ಡ ದೊಡ್ಡ ನಲ್ಲಿಗಳನ್ನು ಹಾಕಿಸುತ್ತಿರುವುದಾಗಿಯೂ, ಅದು ಪೂರೈಸಿದ ಮೇಲೆ ಮನೆಗಳ ರೊಚ್ಚೂ ಪಾಯಿಖಾನೆಯೂ ಈ ದೊಡ್ಡ ನಲ್ಲಿಗಳಲ್ಲಿ ಸಾಗಿಹೋಗುವುದೆಂದೂ, ಮನೆಗಳ ಬಚ್ಚಲಿಗೂ ಈ ದೊಡ್ಡ ನಲ್ಲಿಗಳಿಗೂ ಜಂಟಿಸುತ್ತೇವೆಂದೂ ಪ್ರೆಸಿಡೆಂಟರು ತಿಳಿಸಿದರು. ಈ ಏರ್ಪಾಡು ಪಟ್ಟಣದ ಪ್ರತಿ ಒಂದು ಮನೆಗೂ ಆಗದೆ ಹೋದರೆ ನಿಷ್ಪ್ರಯೋಜನ. ಪ್ರತಿ ಮನೆಯವರೂ ಸ್ವಂತ ಖರ್ಚಿನಿಂದ ಈ ಕಾಮಗಾರಿಯನ್ನು ಮಾಡಿಸುವುದು ಸಾಧ್ಯವಲ್ಲ. ಅನೇಕ ಬಡಬಗ್ಗರ ಮನೆಗಳಿಗೆ ಈ ರೀತಿಯಾದ ಬಚ್ಚಲ ಸಂಬಂಧವನ್ನು ಕಲ್ಪಿಸುವುದಕ್ಕೆ ಎಷ್ಟು ಹಣ ಖರ್ಚಾಗಬಹುದೋ ಅದನ್ನು ಲೆಕ್ಕಹಾಕಿ ಪಟ್ಟಿ ತಯಾರುಮಾಡುವುದು ಒಳ್ಳೆಯದೆಂದು ಮೆಂಬರುಗಳು ಸೂಚಿಸಿದ್ದರ ಮೇಲೆ ಪ್ರೆಸಿಡೆಂಟರು ಆ ರೀತಿ ಪಟ್ಟಿ ತಯಾರುಮಾಡಿಸುತ್ತೇವೆಂದು ಒಪ್ಪಿಕೊಂಡರು.

ಪ್ರೆಸಿಡೆಂಟರ ರಿಪೋರ್ಟಿನಲ್ಲಿ ಕಂಡ ಇತರ ವಿಷಯಗಳನ್ನು ಇನ್ನೊಂದು ದಿನ ಸ್ಪೆಷಲ್ ಮೀಟಿಂಗ್ ಮಾಡಿ ಚರ್ಚಿಸೋಣವೆಂದು ತೆಗೆದಿಟ್ಟು ಆ ಮೀಟಿಂಗನ್ನು ಮುಕ್ತಾಯಮಾಡಿದರು.

ದೇವೀಸಿಡುಬು ಹಾಕುವ ಹಾಲು.

ಕೆಲವು ಕಾಲದ ಹಿಂದೆ ದೇವೀಸಿಡುಬು ಹಾಕಿದ ಹಾಲು ಶುದ್ಧವಾಗಿರಲಿಲ್ಲವೆಂದೂ, ಅದರಿಂದ ಕೆಲವು ಮಕ್ಕಳು ತೀರಿಹೋಗಿ ಇನ್ನು ಕೆಲವು ದೀರ್ಘಕಾಲ ನರಳಿದವೆಂದೂ ಆಕ್ಷೇಪಣೆಯುಂಟಾಯಿತು. ಇದರ ನಿಜಸ್ಥಿತಿಯನ್ನು ಪರೀಕ್ಷೆಮಾಡಿ ರಿಪೋರ್ಟುಕೊಡಬೇಕೆಂದು ನಮ್ಮ ಸರ್ಕಾರದವರು ಒಂದು ಕಮಿಟಿಯನ್ನು ನೇಮಿಸಿದರು. ಈ ಕಮಿಟಿಯಲ್ಲಿ ಡಾಕ್ಟರ್ ಅಚ್ಯುತರಾಯರೂ, ಕರ್ನಲ್ ಪೋರ್ಕ್ ರವರೂ, ಡಾಕ್ಟರ್ ಆರುಮುಗಂ ಮುದಲಿಯಾರ್ರು ಮೆಂಬರುಗಳಾಗಿದ್ದು ತನಿಖೆಮಾಡಿದರು.

ಈ ಕಮಿಟಿಯವರು ಬೆಂಗಳೂರಿನಲ್ಲಿ ಸಿಡುಬಿನ ಹಾಲನ್ನು ತಯಾರುಮಾಡುವ ಎಲ್ಲಾ ಕ್ರಮಗಳನ್ನೂ ಸಲಕರಣೆಗಳನ್ನೂ ಬಹಳ ಸೂಕ್ಷ್ಮವಾಗಿ ಪರೀಕ್ಷಿಸಿದ್ದಲ್ಲದೆ ಅಲ್ಲಿ ತಯಾರಾಗುವ ಹಾಲನ್ನು ಮದರಾಸ್, ಕಲ್ಕತ್ತೆ, ಬೊಂಬಾಯಿ, ಬೆಳ್ಗಾವಿ, ಈ ಪಟ್ಟಣಗಳ ಕಾರ್ಖಾನೆಗಳಿಗೆ ಕಳುಹಿಸಿಕೊಟ್ಟು ಅಲ್ಲಲ್ಲಿರುವ ನಿಪುಣರಾದ ವೈದ್ಯರಿಂದ ಶೋಧನೆಮಾಡಿಸಿ ಅವರುಗಳ ಅಭಿಪ್ರಾಯವನ್ನು ತರಿಸಿಕೊಂಡರು. ಕಮಿಟಿಯವರು ಹೇಳಿರುವ ಮುಖ್ಯ ವಿಷಯಗಳೇನೆಂದರೆ—ಬೆಂಗಳೂರು ಸರ್ಕಾರಿ ಕಾರ್ಯಾಲಯದಲ್ಲಿ ತಯಾರಾಗುವ ದೇವೀಸಿಡುಬಿನ ಹಾಲು ಒಳ್ಳೆಯದು. ಆದರೆ ಅದರಲ್ಲಿ ಅನೇಕ ಕ್ರಿಮಿಗಳಿರುತ್ತವೆ. ಈ ಕ್ರಿಮಿಗಳಿರೋಣದರಿಂದ ಕೆಡಕೇನೂ ಆಗುವುದಿಲ್ಲ. ಈ ಕ್ರಿಮಿಗಳನ್ನೂ ನಾಶಪಡಿಸಿ ಶುದ್ಧವಾದ ಹಾಲು ತಯಾರುಮಾಡುವುದಕ್ಕೆ ಕಮಿಟಿಯವರು ಕೆಲವು ಬದಲಾವಣೆಗಳನ್ನು ಸೂಚಿಸಿರುತ್ತಾರೆ. ಈಗ ತಯಾರಿಯಲ್ಲಿ ಲಾನೋಲೀನ್ ಎಂಬುದನ್ನು ಉಪಯೋಗಿಸುವರು; ಇನ್ನು ಮುಂದೆ ಇದಕ್ಕೆ ಪ್ರತಿಯಾಗಿ ಗ್ಲಿಸರೀನ್ ಎಂಬುದನ್ನು ಉಪಯೋಗಿಸಿದರೆ ಇದು ಆ ಹಾಲಿನಲ್ಲಿ ಇರಬಹುದಾದ ಕ್ರಿಮಿಗಳನ್ನೆಲ್ಲಾ ಸಂಪೂರ್ಣವಾಗಿ ನಾಶಮಾಡಬಲ್ಲದೆಂದು ಹೇಳಿರುವರು.

ಗವರ್ನ್ಮೆಂಟಿನವರು ಈ ರಿಪೋರ್ಟಿನಲ್ಲಿ ಕಂಡ ಅಭಿಪ್ರಾಯಗಳನ್ನು ಅಂಗೀಕರಿಸಿ, ಈಗ ತಯಾರಾಗುವುದಕ್ಕಿಂತಲೂ ಬಹಳ ಶುದ್ಧವಾಗಿರುವ ಸಿಡುಬಿನ ಹಾಲು ತಯಾರಾಗುವಂತೆ ಕೆಲವು ಬದಲಾವಣೆಗಳನ್ನು ಮಾಡಬೇಕೆಂದು ಹುಕುಂ ಕೊಟ್ಟಿದಾರೆ. ಸಿಡುಬು ಹಾಕುವಂಥಾ ವ್ಯಾಕ್ಸಿನೇಟರುಗಳನ್ನು ಬೆಂಗಳೂರಿನಲ್ಲೇ ತರಪೇತು ಮಾಡುವರು. ಇದರಿಂದ ಅಂಥವರು ಸಿಡುಬುಹಾಕುವಾಗ ಯಾವ ಕ್ರಿಮಿಗಳೂ ಮನುಷ್ಯರ ದೇಹದೊಳಕ್ಕೆ ವ್ಯಾಪಿಸಲಾಗದಂತೆ ನೋಡಿಕೊಳ್ಳಲು ಸಮರ್ಥರಾಗುತ್ತಾರೆ.

ಬೆಂಗಳೂರು ಸರ್ಕಾರಿ ಕಾರ್ಯಾಲಯದಲ್ಲಿ ತಯಾರಾಗುವ ಸಿಡುಬಿನ ಹಾಲು ಒಳ್ಳೆಯದು; ಈಗ ಸರ್ಕಾರದವರು ಹುಕುಂ ಕೊಟ್ಟಿರುವಂತೆ ಬದಲಾವಣೆಗಳು ನಡೆದಲ್ಲಿ ಆ ಹಾಲು ಇನ್ನೂ ಶುದ್ಧವಾಗುವುದು. ಈ ಸಿಡುಬಿನ ವಿಷಯದಲ್ಲಿ ಮಾತ್ರ ಎಲ್ಲರೂ ಚೆನ್ನಾಗಿ ತಿಳಿಯಬೇಕಾಗಿರುವುದೊಂದೇ ವಿಷಯ. ಇದು ಬಹಳ ಕೆಟ್ಟ ಅಂಟುರೋಗ; ಈ ರೋಗಿಯನ್ನು ಇತರರ ಸಂಪರ್ಕವಿಲ್ಲದಂತೆ ಬೇರೆ ಇಟ್ಟು ಉಪಚರಿಸಬೇಕು. ಇಲ್ಲವಾದರೆ ಅದು ಒಬ್ಬರಿಂದೊಬ್ಬರಿಗೆ ವ್ಯಾಪಿಸಿ ಹರಡಿಕೊಂಡು ಬಹಳ ಕಷ್ಟನಷ್ಟಗಳನ್ನುಂಟುಮಾಡುತ್ತದೆ. ಯಾವ ಮನೆಯಲ್ಲಾದರೂ ಸಿಡುಬು ಎದ್ದ ಕೂಡಲೆ ಆ ಸಂಗತಿಯನ್ನು ಸ್ಯಾನಿಟರಿ ಆಫೀಸರಿಗೆ ತಿಳಿಸಿ, ರೋಗವು ಹರಡದಂತೆ ನೋಡಿಕೊಳ್ಳಬೇಕು. ದೇವಿ ಸಿಡುಬು ಹಾಕಿಸಿಕೊಂಡಿದ್ದ ಮಾತ್ರಕ್ಕೇ ಆ ರೋಗ ಬರುವುದಿಲ್ಲವೆಂದು ತಿಳಿಯಬಾರದು; ಆದರೆ ಪ್ರತಿ ಏಳು ಅಥವಾ ಹತ್ತು ವರುಷಕ್ಕೊಂದಾವರ್ತಿ ಸಿಡುಬು ಹಾಕಿಸಿಕೊಳ್ಳುತ್ತಾ ಬಂದರೆ ಈ ರೋಗದ ಭೀತಿ ಬಹು ಮಟ್ಟಿಗೆ ತಪ್ಪಬಹುದು. ಕೊಳಕಿಲ್ಲದೆ ಶುಚಿಯಾಗಿದ್ದರೆ ಯಾವ ವಿಧವಾದ ಅಂಟುರೋಗವೂ ಪ್ರೈಹತ್ತುವುದಿಲ್ಲ.

ಮೈಸೂರು ಗೆಜೆಟ್ ಸಂಗ್ರಹ.

ಕೃಷ್ಣರಾಜಪೇಟೆ ತಾಲ್ಲೂಕು ಕಸ್ಸಂಬಾಡಿ ಗ್ರಾಮದ ಯೂನಿಯನ್ ಪಂಚಾಯತಿಯನ್ನು ರದ್ದು ಮಾಡಿದೆ.

ಸೀನಿಯರ್ ಅ|| ಕಮಿಷನರ್ ಮ|| ಸಿ. ವೆಂಕಟರಾಯರಿಗೆ ಜೂಲೈ ತಾ. 13 ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳು ಎಂಟು ದಿನಗಳ ಪ್ರಿವಿಲೆಜ್ ರಜವೂ, ಮೂರು ತಿಂಗಳು ಇಪ್ಪತ್ತೆರಡು ದಿನಗಳ ಫರ್ಲೋ ರಜವೂ ಕೊಟ್ಟಿದೆ.

ಮ|| ಎಂ. ಚಕ್ರಪಾಣಿರಾಯರು ಹಾಸನ ತಾಲ್ಲೂಕಿನ ಅಮಲ್ದಾರ್ ಮತ್ತು 2 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿಯೂ, ಆಲೂರ್ ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್ದಾರರಾಗಿಯೂ ಬದಲಿ ನೇಮಿಸಲ್ಪಟ್ಟಿದಾರೆ.

ಮೈಸೂರು ಮೊದಲನೇ ಮುನ್ಸಿಫ್ ಮ|| ಜ. ಶ್ರೀನಿವಾಸ ಅಯ್ಯಂಗಾರವರನ್ನು ಅ|| ಕಮಿಷನರಾಗಿ ನೇಮಿಸಿ ಗವರ್ನ್ಮೆಂಟಿನ ಅ|| ಸೆಕ್ರೆಟರಿಯಾಗಿ ವರ್ಗಮಾಡಿದೆ.

ಶ್ರೀಮನ್ ಮಹಾರಾಜರವರು ಸರ್ ಲೆಸ್ಲಿ ಕ್ರೀರಿ ಮಿಲ್ಲರ್ ಯವರನ್ನು ಜೂಲೈ ತಾ. 20 ರಿಂದ ಮೈಸೂರು ಚೀಫ್ ಕೋರ್ಟಿನ ಚೀಫ್ ಜಡ್ಜರಾಗಿ ನೇಮಕ ಮಾಡಿರುತ್ತಾರೆ.

ಮುಂದೆ ಹೇಳುವ ಫಾರೆಸ್ಟ್ ಆಫೀಸರುಗಳ ವರ್ಗಾವರ್ಗಗಳನ್ನು ಹುಕುಂ ಮಾಡಿದೆ:—ಮ|| ವಿ ಯತಿರಾಜಲು ನಾಯುಡು ಯವರು ಬೆಂಗಳೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರಾಗಿ; ಮಿ|| ಎ. ಪಿ. ಮಾಸ್ಕರೆನ್ಹಾಸ್ ರವರು ಸಾಗರದಿಂದ ಹೆಗ್ಗಡದೇವನಕೋಟೆ ಸಬ್ ಡಿವಿಜನ್ಗೆ; ಮ|| ಬಿ. ವೇಣುಗೋಪಾಲಯ್ಯನವರು ಸಾಗರದ ಸಬ್ ಡಿವಿಜನ್ಗೆ; ಮ|| ಕೆ. ರೇವಣ್ಣನವರು ಶಿವಮೊಗ್ಗಾ ಸಬ್ ಡಿವಿಜನ್ಗೆ.

ಮುಂದೆ ಹೇಳುವ ಅ|| ಸರ್ಜನ್ರುಗಳ ವರ್ಗಾವರ್ಗಿಯನ್ನು ಹುಕುಂ ಮಾಡಿದೆ:—ಮ|| ಎಸ್. ಕೆ. ಹನುಮಂತರಾಯರು ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಿಂದ ಕೋಲಾರದ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರಾಗಿ; ಮ|| ಡಬ್ಲಿಯು ಶ್ರೀನಿವಾಸಯ್ಯಂಗಾರ್ರು ಕೋಲಾರದಿಂದ ಬೆಂಗಳೂರು ಹುಚ್ಚರ ಆಸ್ಪತ್ರೆಯ ಛಾರ್ಜಿಗೆ; ಮಿ|| ಜ. ಎಸ್. ಡೇವಿಡ್ಸುವರು ಕಡೂರಿನಿಂದ ಕೋಲಾರಕ್ಕೆ; ಮ|| ಪಿ. ಅಬ್ಬಾಯಿ ನಾಯುಡುಯವರು ಬೆಂಗಳೂರಿನಿಂದ ಚಿಕ್ಕಮಗಳೂರಿಗೆ.

ಮಿ|| ಪಿ. ಎಫ್. ಬೌರಿಂಗ್ ಯವರು ಜೂನ್ ತಾ. 30 ರಲ್ಲಿ ಕೋಲಾರದ ಡೆಪ್ಯುಟಿ ಕಮಿಷನರ್ ಕೆಲಸದ ಛಾರ್ಜನ್ನು ಮ|| ಬಿ. ರಾಮಸ್ವಾಮಯ್ಯನವರಿಂದ ವಹಿಸಿಕೊಂಡಿರುತ್ತಾರೆ.

ಮ|| ಕೆ. ಆರ್. ಶೇಷಾಚಾರ್ರಿಗೆ ಕಾಯಿಲೆ ರಜಾ ಕೊಟ್ಟಿರೋಣದರಿಂದ ಮ|| ಕೆ. ವಿ. ವೆಂಕಟಾಚಾರ್ಯರು 4 ನೇ ಕ್ಲಾಸ್ ಎಗ್ಸಿಕ್ಯುಟಿವ್ ಇಂಜನಿಯರಾಗಿ ಯಡತೊರೆ ಡಿವಿಜನ್ 5 ನೇ ಭಾಗದ ಛಾರ್ಜಿನಲ್ಲಿರತಕ್ಕದ್ದು.

ಒಳದೇಶದ ವೃತ್ತಾಂತಗಳು.

ಈ ವಾರ ನಮ್ಮ ಪತ್ರಿಕೆಯು ಹತ್ತು ಪುಟಗಳುಳ್ಳದ್ದಾಗಿದೆ.

* * *

ನಮ್ಮ ಬ್ರಿಟಿಷ್ ರೆಸಿಡೆಂಟರವರ ಕುಮಾರ್ತೆಯ ವಿವಾಹವು ಕಳೆದ ಶನಿವಾರ ನಡೆಯಬೇಕಾಗಿದ್ದದ್ದು ಯಾವ ಕಾರಣದಿಂದಲೋ ನಿಂತುಹೋಯಿತು.

* * *

ರಾಜಧಾನಿಯಲ್ಲಿ ಬಿರುಗಾಳಿ ಬಲವಾಗಿದೆ; ಬಿಸಿಲು ಕಾಣದಂತೆ ಯಾವಾಗಲೂ ಮೋಡ ಕವಿದು, ಆಗಾಗ್ಗೆ ತುಂತುರುಮಳೆ ಸುರಿಯುತ್ತಿರುವುದು.

* * *

ಭಾವನಗರದ ಸಂಸ್ಥಾನದ ನಾಯಬ್ ದಿವಾನರವರು ಪರಿವಾರ ಸಮೇತ ಕಳೆದ ಭಾನುವಾರ ರಾಜಧಾನಿಗೆ ಬಂದು ಸರ್ ಶೇಷಾದ್ರಯ್ಯರವರ ಬಂಗಲೆಯಲ್ಲಿ ಇಳುಕೊಂಡು, ನಮ್ಮ ಮಹಾರಾಜರವರ ಆತಿಥ್ಯವನ್ನು ಸ್ವೀಕರಿಸುತ್ತಿದಾರೆ.

* * *

ಬೆಂಗಳೂರು ದಂಡಿನ ಮಾರ್ಕೆಟ್ಟಿನಲ್ಲಿ ಒಂಭತ್ತು ಜನ ವ್ಯಾಪಾರಿಗಳು ಮಾಂಸವನ್ನು ಕಮ್ಮಿ ತೂಕದಲ್ಲಿ ಬಿಕರಿಮಾಡುತ್ತಿದ್ದು ಸಿಕ್ಕಿಬಿದ್ದು ಕಳೆದ ವಾರ ತಲಾ 5 ರೂಪಾಯಿನಂತೆ ಜುಲ್ಮಾನೆ ತೆತ್ತು ಬಂದರು.

* * *

ಕೋಲಾರದ ಚಿನ್ನದ ಗಣಿಗಳ ಸೂಪರಿಂಟೆಂಡೆಂಟರುಗಳಾದ ಮೂರು ಮಂದಿ ಸರ್ದಾರರು ಪತ್ನೀರುಗಳ ಸಮೇತ ಕಳೆದ ಶನಿವಾರ ಮೋಟರುಗಳಲ್ಲಿ ಬಂದು ಕನ್ನಂಬಾಡಿ ತಲಾವಿನ ಕಾಮಗಾರಿಯನ್ನು ನೋಡಿಕೊಂಡು ರಾಜಧಾನಿಗೆ ಬಂದು ವಾಪಸುಹೋದರು.

* * *

ಕಳೆದ ಜೂನ್ ತಾ. 30 ಕ್ಕೆ ಆಖೈರಾದ ಆರು ತಿಂಗಳಲ್ಲಿ ಮೈಸೂರು ಬ್ಯಾಂಕಿಗೆ ಲೇವಾದೇವಿಯಿಂದ 31,932 ರೂಪಾಯಿ ಲಾಭ ಉತ್ಪತ್ತಿಯಾಗಿದೆ. ಈ ಪೈಕಿ ಸುಮಾರು 16,500 ರೂಪಾಯನ್ನು ಷೇರುದಾರರಿಗೆ ಶೇಕಡಾ 4 ರೂಪಾಯಿನಂತೆ ಬಡ್ಡಿ ಬಟವಾಡೆಗೋಸ್ಕರ ತೆಗೆದಿಟ್ಟಿದಾರೆ.

* * *

ಬೆಂಗಳೂರು ಸಿಟಿ ನಾರಾಯಣಶೆಟ್ಟಿ ಪೇಟೆಯಲ್ಲಿರುವ ಸರ್ಕಾರದ ಮೇವರ್ ಸ್ಟೈಟ್ ಸ್ಕೂಲನ್ನು ಕನಿಷ್ಠಮಾಧ್ಯಮಿಕ ಕ್ರಮಪಡಿಸಬೇಕೆಂದೂ, ಅವೆನ್ಯೂ ರೋಡ್ ಬಳ್ಳಾಪುರದಪೇಟೆ ಸಮೀಪದಲ್ಲಿರುವ ಸೇಂದಿ ಅಂಗಡಿಯನ್ನು ಬೇರೆ ಕಡೆಯಲ್ಲಿ ಇಡಿಸಿದರೆ ತುಂಬಾ ಕ್ಷೇಮವಾದೀತೆಂದೂ ಒಬ್ಬ ಬಾತ್ಮೀದಾರರು ಬರೆದಿದಾರೆ.

* * *

ನಮ್ಮ ಬ್ರಿಟಿಷ್ ರೆಸಿಡೆಂಟರಾಗಿರುವ ಸರ್ ಹ್ಯೂ ಡೇಲಿಯವರು ಮುಂದಿನ ವರುಷ ಕೆಲಸದಿಂದ ಬಿಡುಗಡೆಹೊಂದಿ ಸೀಮೆಗೆ ದಯಮಾಡೋಣದರಿಂದ ಇದುವರೆಗೆ ಹೈದರಾಬಾದಿನ ರೆಸಿಡೆಂಟರಾಗಿದ್ದು ರಜಾ ಪಡೆದು ಸೀಮೆಗೆ ಹೋಗಿರುವ ಕರ್ನಲ್ ಪಿನ್ಹೆಯವರು ನಮ್ಮ ಬ್ರಿಟಿಷ್ ರೆಸಿಡೆಂಟರಾಗಿ ನೇಮಕವಾಗುವರೆಂದೂ, ಮಿ|| ಎಸ್. ಎಂ. ಫ್ರೇಸರ್ಯವರಿಗೆ ಹೈದರಾಬಾದಿನ ರೆಸಿಡೆಂಟ್ ಕೆಲಸವು ಖಾಯಂ ಆಗುವುದೆಂದೂ ತಿಳಿಯುತ್ತದೆ.

* * *

ಚಿಕ್ಕಮಗಳೂರು ಬಾಲಿಕಾಪಾಠಶಾಲೆಯಲ್ಲಿ ಕಳೆದ ತಾ. 15 ನೇ ಬುಧವಾರ ಆರ್ಯಮಹಿಳಾಸಮಾಜದ ಮೀಟಿಂಗು ನಡೆಯಿತು. ಚಿತ್ರದುರ್ಗದ ಡೆಪ್ಯುಟಿ ಇನ್ಸ್ಪೆಕ್ಟರವರ ಪತ್ನಿ ಶ್ರೀ ಯಗ್ನಮ್ಮನವರು ಐಶ್ವರ್ಯವು ಶಾಶ್ವತವಾದದ್ದಲ್ಲವೆಂಬ ವಿಚಾರವನ್ನು ಕುರಿತು ಸ್ವಾರಸ್ಯವಾಗಿ ಉಪನ್ಯಾಸಮಾಡಿದರು. ಬಳಿಕ ಚಿ|| ಸೌ|| ಸುಬ್ಬಮ್ಮನೆಂಬ ಬಾಲಿಕಿಯು ಪುಸ್ತಕಭಂಡಾರವೆಂಬ ಉಪನ್ಯಾಸವನ್ನು ಧೈರ್ಯದಿಂದ ಸ್ಫುಟವಾಗಿ ಓದಿ ಸಭೆಯನ್ನು ಸಂತೋಷಪಡಿಸಿದಳು. ಕಡೆಯಲ್ಲಿ ಸ್ತ್ರೀಯರೆಲ್ಲಾ ಕಲೆತು ದೇವರ ಪ್ರಾರ್ಥನೆಮಾಡಿ, ಸಭೆಯನ್ನು ಮುಕ್ತಾಯಮಾಡಿದರು.

* * *

ಕನ್ನಂಬಾಡಿ ತಲಾವಿನ ಕಾಮಗಾರಿಯಲ್ಲಿ ಪ್ರವಾಹದ ರಭಸದಿಂದ ಅಣೆಯ ಕೆಲವುಭಾಗಗಳಲ್ಲಿ ತೂತುಬಿದ್ದು ನೀರುಹರಿಯುತ್ತಿದೆ ಎಂದು ಕಳೆದ ವಾರ ತಿಳಿಸಿದ್ದೆವಷ್ಟೆ. ಚೀಫ್ ಇಂಜನಿಯರವರು ಅಲ್ಲಿಗೆ ದಯಮಾಡಿ, ಈ ವರ್ತಮಾನದ ನಿಜಸ್ಥಿತಿಯನ್ನು ಪರಿಕ್ಷಿಸಿ, ಅಣೆಯ ಯಾವ ಭಾಗವೂ ಸ್ವಲ್ಪಮಾತ್ರವೂ ಸಡಿಲವಾಗಲಿಲ್ಲವೆಂದೂ, ಒಂದೆರಡು ಹಂಗಾಮಿ ಗೋಡೆಗಳಲ್ಲಿ ತೂತುಬಿದ್ದು ಹರಿಯುತ್ತಿರುವುದೇನೂ ಅಪಾಯಕರವಾಗಿಲ್ಲವೆಂದೂ, ಕಾಮಗಾರಿ ಕೆಲಸಗಳೆಲ್ಲಾ ತೃಪ್ತಿಕರವಾಗಿಯೂ ಜಾಗರೂಕತೆಯಿಂದಲೂ ನಡೆಯುತ್ತಿವೆ ಎಂದೂ ತಿಳಿಸಿದಾರೆ.

ಪೆನ್ಷನ್ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜ್ ಮ|| ಬಿ. ತಿರುಮಲಾಚಾರ್ಯರು ರಾಜಧಾನಿಯಲ್ಲಿ ಕೆಲವು ಕಾಲದಿಂದ ಕಾಯಿಲೆ ಇದ್ದು ಕಳೆದ ವಾರ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ಕುಮಾರರಲ್ಲಿ ಒಬ್ಬರು ಅಸಿಸ್ಟೆಂಟ್ ಕಮಿಷನರಾಗಿಯೂ, ಇನ್ನೊಬ್ಬರು ಮುನ್ಸಿಫರಾಗಿಯೂ ಇರುತ್ತಾರೆ.—ಬೆಂಗಳೂರು ಚೀಫ್ ಕೋರ್ಟಿನಲ್ಲಿ ಬಹುಕಾಲದಿಂದ ರಿಜಿಸ್ಟ್ರಾರಾಗಿದ್ದು ಪ್ರಜೆಗಳಲ್ಲೂ ಅಧಿಕಾರಿಗಳಲ್ಲೂ ವಿಶೇಷ ಪ್ರೀತಿಗೌರವಗಳನ್ನು ಸಂಪಾದಿಸಿಕೊಂಡಿದ್ದ ಮ|| ರಾಜರತ್ನಮುದಲಿಯಾರ್ರವರು ಕಳೆದ ಶುಕ್ರವಾರ ಬೆಂಗಳೂರಿನಲ್ಲಿ ಅಕಸ್ಮಾತ್ತಾಗಿ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ.

* * *

ಶ್ರೀಮನ್ ಮಹಾರಾಜರವರ ಅನುಜ್ಞೆಯಪ್ರಕಾರ ರಾಜಧಾನಿಯಲ್ಲಿ ಅರಸುಗಳ ಹೆಣ್ಣುಮಕ್ಕಳಿಗೆ ಒಂದು ಬೋರ್ಡಿಂಗ್ ಹೋಮನ್ನು ಏರ್ಪಾಡುಮಾಡುವರು. ಸುಮಾರು 25-30 ಮಂದಿ ಹೆಣ್ಣುಮಕ್ಕಳು ಆ ನಿಲಯದಲ್ಲೇ ಇದ್ದು ವಿದ್ಯಾದಿಗಳನ್ನು ಕಲಿಯುವರು. ಅವರಿಗೆ ಊಟ ಉಪಚಾರಗಳೆಲ್ಲಾ ಅರಮನೆಯಿಂದಲೇ ನಡೆಯುವಂತೆ ಅಪ್ಪಣೆಯಾಗಿದೆ. ಇದಲ್ಲದೆ ಅರಸುಗಳ ಜನಾನಾ ಸ್ತ್ರೀಯರು ವಾರಕ್ಕೆ ಒಂದೆರಡು ದಿನ ಒಂದು ಕಡೆ ಸೇರಿ ವಿಹರಿಸುವುದಕ್ಕೆ ತಕ್ಕ ಸಲಕರಣೆಗಳನ್ನೆಲ್ಲಾ ಶ್ರೀಮನ್ ಮಹಾರಾಜರವರು ಒದಗಿಸಿಕೊಟ್ಟಿದಾರೆ. ಈ ರೀತಿ ಅರಸುಗಳ ಮನೆತನದವರನ್ನು ಎಲ್ಲಾ ಭಾಗಗಳಲ್ಲೂ ಅಭಿವೃದ್ಧಿಗೆ ತರುವುದಕ್ಕೆ ಪ್ರಭುಗಳು ಸಹಾಯಮಾಡಿ ಪ್ರೋತ್ಸಾಹಪಡಿಸುತ್ತಿರುವುದು ತುಂಬಾ ಸ್ತೋತ್ರಾರ್ಹವಾಗಿರುತ್ತದೆ.

* * *

ಹಿಂದುಸ್ಥಾನದ ಜೈನಮಂಡಲಿಯಲ್ಲಿ ರತ್ನಪ್ರಾಯರಾಗಿದ್ದ ಮ|| ಮಾಣಿಕ್ ಚಂದ್ ಪಾನಾಚಂದ್ ರವರು ಕಳೆದ ಗುರುವಾರ ರಾತ್ರಿ ಬೊಂಬಾಯಿ ಪಟ್ಟಣದಲ್ಲಿ ಅಕಸ್ಮಾತ್ತಾಗಿ ಕಾಲವಾದರೆಂದು ರಾಜಧಾನಿಗೆ ವರ್ತಮಾನ ಬಂದಿತು. ಇಲ್ಲಿರುವ ಜೈನಪ್ರಜೆಗಳು ಮೊನ್ನೆ ಮಂಗಳವಾರ ರಾತ್ರಿ ಸಾ|| ಲಕ್ಷ್ಮೀಪತಯ್ಯನವರ ಬೋರ್ಡಿಂಗ್ ಹೋಮಿನ ಮುಂದಿರದಲ್ಲಿ ಸಾ|| ಎಂ. ಅನಂತರಾಜಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ, ಅವರ ಬಂಧುಗಳಿಗೆ ಸಂತಾಪಸೂಚಕವಾದ ತಂತೀ ವರ್ತಮಾನವನ್ನು ಕಳುಹಿಸಿಕೊಟ್ಟರು. ಗತಿಸಿದ ಮಾಣಿಕ್ ಚಂದ್ ರವರು ಸ್ವಸಾಮರ್ಥ್ಯದಿಂದ ಲಕ್ಷಾಂತರ ದ್ರವ್ಯವನ್ನು ಸಂಪಾದಿಸಿ, ಹತ್ತಾರು ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಉತ್ತರ ದೇಶದ ಹಲವು ಪಟ್ಟಣಗಳಲ್ಲಿ ಜೈನವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಿ, ತಮ್ಮ ಪ್ರೋತ್ಸಾಹದಿಂದ ಕೆಲವು ನಿಲಯಗಳನ್ನು ಇಡಿಸಿದ್ದಲ್ಲದೆ ಜೈನಪುಣ್ಯಕ್ಷೇತ್ರಗಳ ಕಾರುಬಾರುಗಳನ್ನು ವಿಚಕ್ಷಣೆಯಿಂದ ನಡೆಯುವಂತೆ ಮಾಡಿಟ್ಟರು. ಇಂಥಾ ಪರೋಪಕಾರಿಯ ಹೆಸರನ್ನು ಶಾಶ್ವತಪಡಿಸುವುದಕ್ಕೆ ರಾಜಧಾನಿಯ ಜೈನಮಂಡಲಿಯವರು ಪ್ರಯತ್ನಪಟ್ಟು ಚಂದಾ ಹಣವನ್ನು ಕೂಡಿಸಲಾರಂಭಿಸಿದಾರೆ.

ಇಂಡಿಯಾ ದೇಶದ ವೃತ್ತಾಂತಗಳು.

ಹಿಂದುಸ್ಥಾನದ ಮಹಮದೀಯ ವಿದ್ಯಾವರ್ಧಕ ಮಹಾಸಭೆಯು ಈ ವರುಷ ಡಿಸೆಂಬರ್ ತಿಂಗಳಲ್ಲಿ ರಾವಲ್ಪಿಂಡಿ ಪಟ್ಟಣದಲ್ಲಿ ನಡೆಯತಕ್ಕದೆಂದು ತೀರ್ಮಾನವಾಗಿದೆ. ಬೊಂಬಾಯಿ ಅಧಿಪತ್ಯದ ಮಹಮದೀಯ ಮಹಾಸಭೆಯು ಸೆಪ್ಟಂಬರ್ ತಾ. 24 ರಲ್ಲಿ ಪೂನಾಪಟ್ಟಣದಲ್ಲಿ ಗವರ್ನರವರಿಂದ ಪ್ರಾರಂಭಿಸಲ್ಪಡುವಂತೆ ಗೊತ್ತಾಗಿದೆ.

* * *

ಪಂಜಾಬ್ ಅಧಿಪತ್ಯಕ್ಕೆ ಸೇರಿದ ಲಾಹೋರ್ ಪಟ್ಟಣದಲ್ಲಿ ಟರ್ನರ್ ಎಂಬೊಬ್ಬ ಟೆಲಿಗ್ರಾಫ್ ಇಲಾಖೆಯ ಮೇಲ್ವಿಚಾರಣಾಧಿಕಾರಿಯು ಸಂಚಾರಮಾಡದೇನೇ ಪ್ರಯಾಣದ ಖರ್ಚನ್ನು ಸರ್ಕಾರದಿಂದ ತೆಗೆದುಕೊಂಡನೆಂದು ಮೊಕದ್ದಮೆ ಆಯಿತು. ವಿಚಾರಣೆಯಾದ ಮೇಲೆ ಪಂಚಾಯಿತರು ಆತನ ಮೇಲೆ ಅಪರಾಧ ರುಜುವಾತಾಗಲಿಲ್ಲವೆಂದು ಅಭಿಪ್ರಾಯಪಟ್ಟರು. ಸೆಷನ್ಸ್ ಜಡ್ಜರು ಈ ಅಭಿಪ್ರಾಯವನ್ನು ಒಪ್ಪದೆ ಮೊಕದ್ದಮೆಯ ತೀರ್ಮಾನವನ್ನು ಚೀಫ್ ಕೋರ್ಟಿನವರಿಗೆ ಒಪ್ಪಿಸಿದಾರೆ.

* * *

ಕಳೆದ ವಾರ ಬಂಗಾಳಾ ಗವರ್ನರವರು ಪ್ರಯಾಣಮಾಡುತ್ತಾರೆಂದು ಬ್ಯಾರಕ್ಪುರದಿಂದ ಗೋಲಂದೋವರೆಗೆ ರಾತ್ರಿಯಲ್ಲಿ ರೈಲ್ ರಸ್ತೆಯ ಉದ್ದಕ್ಕೂ ಕಾವಲುಗಾರರನ್ನು ನೇಮಿಸಿದ್ದರು. ಆ ರಾತ್ರಿ ಮೂರು ಜನರು ಆ ರಸ್ತೆಯಲ್ಲಿ ರೈಲ್ ಗಾಡಿಗೆ ಸಿಕ್ಕಿ ಮೃತಪಟ್ಟಿದ್ದಂತೆ ಗೊತ್ತಾಯಿತು. ಕಾರಣವೇನೆಂದು ವಿಚಾರಣೆಮಾಡುವಲ್ಲಿ ಆ ಜನಗಳು ರೈಲ್ ಕಂಬಿಗಳ ಮೇಲೆ ಒರಗಿಕೊಂಡು ನಿದ್ದೆಮಾಡುತ್ತಿದ್ದರೆಂದೂ, ಅವರ ಮೇಲೆ ಗಾಡಿ ಹರಿದು ಕೊಂದುಬಿಟ್ಟಿತೆಂದೂ ತಿಳಿಯಲಾಯಿತು.

* * *

ಹಿಂದುಸ್ಥಾನದಲ್ಲಿ ಈಗ 2ನೇ, 3ನೇ ಕ್ಲಾಸ್ ಮ್ಯಾಜಿಸ್ಟ್ರೇಟರ ತೀರ್ಮಾನದ ಮೇಲೆ ಕಕ್ಷಿಗಾರರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಕೋರ್ಟಿಗೆ ಅಪೀಲ್ ಹೋಗಬೇಕಾಗಿದೆ. ಇದರಲ್ಲಿ ನ್ಯಾಯವು ಸರಿಯಾಗಿ ದೊರಕುವದಿಲ್ಲವೆಂದು ಅನೇಕ ದೊಡ್ಡಮನುಷ್ಯರು ಆಕ್ಷೇಪಣೆಮಾಡುತ್ತಾ ಬಂದಿದಾರೆ. ಇಂಡಿಯಾ ಗವರ್ನ್ಮೆಂಟಿನವರು ಈ ವಿಚಾರವನ್ನು ಪರ್ಯಾಲೋಚಿಸಿ, ಇನ್ನು ಮುಂದೆ ಇಂಥಾ ಅಪೀಲುಗಳನ್ನು ಸೆಷನ್ಸ್ ಕೋರ್ಟುಗಳಲ್ಲಿ ನಡೆಯುವಂತೆ ಹುಕುಂ ಮಾಡಬಹುದೇ ಎಂದು ಬೇರೆ ಬೇರೆ ಅಧಿಪತ್ಯಗಳ ಅಭಿಮತವನ್ನು ಕೇಳಿರುವರು.

* * *

ಬ್ಯಾರಕ್ಪುರದಲ್ಲಿ ಬಂಗಾಳಾ ಪೊಲೀಸ್ ಇಲಾಖೆಗೆ ಸೇರಿದ ಪ್ರಜಾಪತಿ ಎಂಬಾತನಿಗೂ ಸಿಕ್ಕರ ರಿಜಿಮೆಂಟ್ ಸಿಪಾಯಿಯಾಗಿದ್ದ ದಿವಾನ್ ಸಿಂಗ್ ಎಂಬಾತನಿಗೂ ಕಳೆದ ವಾರ ಕುಸ್ತಿ ಆಯಿತು. ಎರಡು ಕಕ್ಷಿಗಳವರೂ ಈ ಕುಸ್ತಿಯನ್ನು ನೋಡುವುದಕ್ಕೆ ಬಹಳ ಮಂದಿ ಗುಂಪುಸೇರಿದ್ದರು. ಕಡೆಗೆ ಸಿಕ್ಕರ ದಿವಾನ್ ಸಿಂಗನು ಸೋತುಹೋದನು. ಅದರಲ್ಲಿ ಏನೋ ಅನ್ಯಾಯವಾಯಿತೆಂದು ಮಾತ ಹುಟ್ಟಿ ಕಡೆಗೆ ಎರಡು ಪಾರ್ಟಿಗಳಿಗೂ ಹೊಡೆದಾಟವಾಗಿಯಿತು. ಐದಾರು ಮಂದಿ ಸಿಕ್ಕರಿಗೆ ಘೋರಾ ಗಾಯಗಳಾಗಿ ಆಸ್ಪತ್ರೆಗೆ ಸಾಗಿಸಲ್ಪಟ್ಟರು. ಪೊಲೀಸ ಸೂಪರಿಂಟೆಂಡೆಂಟರೇ ಹೋಗಿ ಗಲಭೆಯನ್ನು ಅಡಗಿಸಿದರು. ಈ ಜಗಳವನ್ನು ಯಾರು ಪ್ರಾರಂಭಮಾಡಿದರೆಂದು ತನಿಖೆಮಾಡುತ್ತಿದಾರೆ. ಪೇಟೆಗಳಲ್ಲಿ ಇನ್ನೇನಾದರೂ ಗಲಭೆಗಳಾಗಬಹುದೆಂದು ಊಹಿಸಿ ಸರ್ಕಾರದವರು ಆಯುಧಪಾಣಿಗಳಾದ ಪೊಲೀಸಿನವರನ್ನು ಬೀದಿಗಳಲ್ಲಿ ನೇಮಿಸಿ ತಿರುಗಿಸುತ್ತಿದಾರೆ.

* * *

ಹಿಂದುಸ್ಥಾನದಲ್ಲಿ ಸಾಹುಕಾರರೂ ವರ್ತಕರೂ ಲೇವಾದೇವಿ ಮಾಡುವಾಗ ದುಬಾರಿ ಬಡ್ಡಿ ಸೇರಿಸಿ ಪತ್ರಬರಸಿಕೊಂಡು ಸಾಲಗಾರರನ್ನು ಬಹಳವಾಗಿ ಕಷ್ಟನಷ್ಟಗಳಿಗೆ ಗುರಿಮಾಡುತ್ತಿದಾರೆಂಬ ಸಂಗತಿಯು ಇಂಡಿಯಾ ಗವರ್ನ್ಮೆಂಟಿಗೆ ಗೊತ್ತಾಗಿ, ಸಾಹುಕಾರರು ಇನ್ನು ಮುಂದೆ ಬಡ್ಡಿ ದರವನ್ನು ಹೆಚ್ಚು ಮಾಡದಂತೆ ತಡೆಯಬೇಕೆಂದು ಯೋಚಿಸಿ, ಈ ವಿಷಯದಲ್ಲಿ ಬೇರೆ ಬೇರೆ ಅಧಿಪತ್ಯಗಳ ಅಭಿಮತವನ್ನು ಕೇಳಿರುತ್ತಾರೆ. ಇಂಗ್ಲಾಂಡಿನಲ್ಲಿ ಜಾರಿಯಲ್ಲಿರುವಂತೆ ಈ ದೇಶದಲ್ಲೂ ಕಾನೂನು ಮಾಡಿಡಬೇಕೆಂಬ ಆಲೋಚನೆಯುಂಟಾಗಿದೆ. ಲೇವಾದೇವಿ ಮಾಡತಕ್ಕವರು ಎಷ್ಟು ಬಡ್ಡಿಯನ್ನು ಬರಸಿಕೊಂಡಿದ್ದಾಗ್ಯೂ ಕೋರ್ಟುಗಳ ಮೊಕದ್ದಮೆ ಹೋದರೆ ಬಡ್ಡಿಗಳು ಪತ್ರಗಳಲ್ಲಿ ಕಂಡ ಬಡ್ಡಿ ದರವನ್ನು ತಪ್ಪಿ ಕೋರಿದಷ್ಟಕ್ಕೆ ಇಳಿಸಬಹುದೆಂದು ಇಂಗ್ಲಾಂಡಿನಲ್ಲಿ ಅವಕಾಶ ಕಲ್ಪಿಸಿದಾರೆ.

ಬಾತ್ಮಿದಾರರಿಗೆ ನೋಟೀಸ್.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಾನ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸವನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಸ್ಥಾನ ಕೊಡಲಾರೆವು.

ಪ್ರಕಟಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು. ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ. ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ.

ಕರೆಸ್‌ಪಾಂಡೆನ್ಸ್.

ನನ್ನ ಮಗಳನ್ನು ಸ್ಕೂಲಿಗೆ ಸೇರಿಸಿದರು.

ಅಯಸ್ಯ,—ನನ್ನ ಮಗಳಾದ ಸುಂದರಾಬಾಯಿ ವಿಷಯವಾಗಿ ಮಳವಳ್ಳಿ ಸ್ಕೂಲಿಗೆ ದಾಖಲ್ ಮಾಡಿಕೊಳ್ಳಬೇಕೆಂದು 1911 ರ ಲಾಗಾಯ್ತು ಇದುವರಿವಿಗೂ 25 ಅರ್ಜಿಯ ಮೇಲೆ ನಮ್ಮ ಘನವನ್ನು ಹೊಂದಿದ ದಿವಾನ್ ಸಾಹೇಬ್ ಮಿ|| ವಿಶ್ವೇಶ್ವರಯ್ಯನವರ ಸವಾರಿಯು ಕಳೆದ ಏಪ್ರೆಲ್ ತಾ. 7 ರಲ್ಲಿ ಮಳವಳ್ಳಿಗೆ ಚಿತ್ತೈಸಿದ ಕಾಲದಲ್ಲಿ ರೂಬರೂಬು ಸನ್ನಿಧಾನದಲ್ಲಿ ಅರ್ಜಿಯನ್ನು ಒಪ್ಪಿಸಲು, ಮಹಾಸ್ವಾಮಿಯವರು ಪರಾಂಬರಿಸಿ ಬಾಲಕಿಯನ್ನು ನೋಡಿ ಬಹು ಕನಿಕರದಿಂದ ವಿಚಾರಿಸಿದ್ದಲ್ಲದೆ ಸ್ಕೂಲಿಗೆ ದಾಖಲ್‌ಮಾಡುವಂತೆ ಅಪ್ಪಣೆ ಕೊಡಲ್ಪಡುತ್ತೆ ಎಂಬದಾಗಿ ವಾಗ್ದಾನಮಾಡಿ ಮುಂದಕ್ಕೆ ಚಿತ್ತೈಸಿದರು. ನಂತರ ಅದೇ ತಾ. 8 ರಲ್ಲಿ ಸರ್ಕಲ್ ಇನ್‌ಸ್ಪೆಕ್ಟರವರು ಇಲ್ಲಿನ ಇತರ ಮೆಂಬರುಗಳು ಸಹ ಸೇರಿ ನನ್ನ ಮಗಳನ್ನು ಸ್ಕೂಲಿಗೆ ಸೇರಿಸಿಕೊಳ್ಳಲಾಯಿತು. ನಂತರ ಅದೇ ತಾ. 21 ರಲ್ಲಿ ಹುಕುಂ ಸಹಾ ತಲಪಿತು. ಇದಕ್ಕಾಗಿ ನಮ್ಮನ್ನಾಳುವ ಶ್ರೀಮನ್ ಮಹಾರಾಜ ಕೃಷ್ಣರಾಜ ಒಡೆಯರ್ ಬಹದ್ದೂರ್ ರವರಿಗೂ ಮತ್ತು ಅವರ ಪ್ರತಿನಿಧಿಗಳಾದ ನಮ್ಮ ದಿವಾನ್ ಸಾಹೇಬ್ ಮ|| ಎಂ. ವಿಶ್ವೇಶ್ವರಯ್ಯನವರಿಗೂ ಶ್ರೇಯಸ್ಸುಂಟಾಗಲೆಂದು ಬಹು ದೈನ್ಯದಿಂದ ವಂದನೆಯನ್ನು ಅರ್ಪಿಸುತ್ತೇನೆ.

ತಲಕಾಡು. ಎಸ್. ಎಲ್. ರಾಸುಂದರಂಪಿಳ್ಳೆ,
ನಾಲಾ ಮನೇಗಾರ್.

ಒಂದು ಸ್ಕೂಲ್ ಪುಸ್ತಕ.

ಅಯ್ಯಾ,—ಕಳೆದ ಜೂನ್ 16 ನೇ ತಾ. ಮೈಸೂರು ಗೆಜೆಟ್ಟಿನಲ್ಲಿ 1914-1915 ಇಸವಿಗಳಿಗೆ ಮೈಸೂರು ದೇಶೀಯ ಪರೀಕ್ಷೆಗೆ ಭೂವಿವರಣೆ I, II ನೇ ಭಾಗಗಳಿಗೆ ಪ್ರತಿಯಾಗಿ "ಭೂಗೋಳ ಸಂಗ್ರಹ" ರಾಮಸ್ವಾಮಿಶಾಸ್ತ್ರಿ ಎಂದು ಹಾಕಿದೆ. ಅದನ್ನು ಕಳುಹಿಸಿಕೊಡಬೇಕೆಂದು ಗೌರ್ನಮೆಂಟ್ ಕ್ಯೂರೇಟರಿಗೆ 2-3 ಕಾಗದ ಬರೆದಾಗ್ಯೂ, ರಿಪ್ಲೈ ಕಾರ್ಡು ಹಾಕಿದರೂ ಜವಾಬೇ ಇಲ್ಲ. ಜೂಲೈ ತಿಂಗಳು ಕಳೆಯುತ್ತಾ ಬಂತು. ಟೆಕ್ಸ್ಟ್ ಬುಕ್ಕಿಗೆ ಹೀಗೆ ಕಾಲಹರಣಮಾಡುತ್ತಾ ಬಂದರೆ ವಿದ್ಯಾರ್ಥಿಗಳ ಗತಿಯೇನು? ಮಿಷನ್ ಪ್ರೆಸ್ಸಿನಲ್ಲಿ ಅಚ್ಚಾಗಿರುವ ಟಿ. ಯಂ. ರಾಮಸ್ವಾಮಯ್ಯನವರ "ಭೂಗೋಳ ಸಂಗ್ರಹ"ವಲ್ಲದೆ ಮತ್ತಾವ ಭೂಗೋಳ ಸಂಗ್ರಹವನ್ನೂ ನಾವರಿಯೆವು. ರಾಮಸ್ವಾಮಿಶಾಸ್ತ್ರಿಗಳು ಯಾರೋ ಮೊದಲೇ ಗೊತ್ತಿಲ್ಲ. ಈ ಅನನ್ವಯವಾದ ವಿಷಯವನ್ನು ಗೊತ್ತುಮಾಡಿ ಸರ್ವರಿಗೂ ತಿಳಿಯುವಂತೆ ಪ್ರಕಟಿಸಿ ಸಹಾಯಮಾಡಬೇಕೆಂದು ಪ್ರಾರ್ಥನೆ.

ಒಬ್ಬಾನೊಬ್ಬ ಮಾಸ್ಟರು.

[ಮ|| ಟಿ. ಎಂ. ರಾಮಸ್ವಾಮಯ್ಯನವರ ಭೂಗೋಳ ಸಂಗ್ರಹವೇ ಸರಕಾರದಿಂದ ನೇಮಕವಾಗಿರುವ ಭೂಗೋಳವೆಂದು ನಾವು ತಿಳಿದಿದೇವೆ. ವಿದ್ಯಾ ಇಲಾಖೆಯವರು ಹುಕುಮನ್ನು ಪ್ರಕಟಿಸುವುದಕ್ಕೆ ಮುಂಚೆ ಸರಿಯಾದ ಹೆಸರು ಮುಂತಾದದ್ದನ್ನು ಗೊತ್ತುಮಾಡಿ ತಿಳಿದುಕೊಂಡು ಪ್ರಕಟಿಸಿದ್ದರೆ ಚೆನ್ನಾಗಿತ್ತು. ಅವರು ಈಗಲಾದರೂ ಆ ರೀತಿ ಮಾಡಬೇಕಾದದ್ದು ಅವಶ್ಯ.—ಎಡಿ.]

ಸ್ಕೂಲು ಮಾಸ್ಟರುಗಳು.

ಅಯ್ಯಾ,—ಪೂರ್ವದಲ್ಲಿ ಸ್ಕೂಲುಗಳಲ್ಲಿ ಮಾಸ್ಟರುಗಳು ಈ ಕಾಲಾನುಗುಣ್ಯವಾಗಿ ಪಾಠ ಹೇಳುತ್ತಾ ಇರಲಿಲ್ಲವೆಂದು, ಇವರುಗಳನ್ನು ನಾರ್ಮಲ್ ಸ್ಕೂಲಿಗೆ ಬರಮಾಡಿಕೊಂಡು ಅಲ್ಲಿ ಅವರುಗಳು ಪಾಠ ಹೇಳಿಕೊಡತಕ್ಕ ಕ್ರಮವನ್ನು ಬೋಧಿಸಿ ಕಳುಹಿಸುತ್ತಾ ಇರುವುದೂ ಸರಿಯಷ್ಟೆ. ಈ ಕ್ರಮವು ಸುಮಾರು 15-20 ವರ್ಷಗಳಿಂದಲೂ ನಡೆಯುತ್ತಾ ಇದೆ. ಅಲ್ಲಿ ತರಪೇತಾಗಿ ಬಂದಾಗ್ಯೂ ಉಪಾಧ್ಯಾಯರು ತಾವು ಕೆಲಸಮಾಡುತ್ತಾ ಇರುವ ಸ್ಕೂಲುಗಳಲ್ಲಿ ಆ ಕ್ರಮವನ್ನು ಅನುಸರಿಸಿ ಪಾಠ ಹೇಳಲು ತಕ್ಕ ಸಲಕರಣೆಗಳೇ ಇಲ್ಲ; ಅಂದರೆ, ಪಾಠಕ್ರಮಕ್ಕೆ ಸಂಬಂಧಪಟ್ಟ ಪುಸ್ತಕಗಳು, ಒಳ್ಳೆ ಬೋರ್ಡುಗಳು, ಭಾಷೆ, ಚರಿತ್ರೆ, ಗಣಿತ, ವಸ್ತುಪಾಠ, ವಚನ ಕಾವ್ಯ, ಇವೇ ಮೊದಲಾದವುಗಳ ವಿಷಯದಲ್ಲಿ ಟಿಪ್ಪಣಿ ಬರೆದು ಇಟ್ಟುಕೊಂಡು ಪಾಠ ಹೇಳಲು ತಕ್ಕ ಸಲಕರಣೆಗಳೇ ಇಲ್ಲದಿರುವುದು ಒಂದು ದೊಡ್ಡ ನ್ಯೂನತೆ. ಇನ್ನು ಕೆಲವರು ಅನಾದರಣೆಯಿಂದ ಬರೆಯದೇಲೂ ಇರಬಹುದು. ನಮ್ಮ ಇನ್‌ಸ್ಪೆಕ್ಟರ್ ಜನರಲ್ ಸಾಹೇಬರು ಸಂಸ್ಥಾನಾಮಳೆ ಎಲ್ಲಾ ಸ್ಕೂಲುಗಳಿಗೂ ಬೇಕಾದ ಸಲಕರಣೆಗಳನ್ನೆಲ್ಲಾ ಒದಗಿಸಿಕೊಟ್ಟಲ್ಲಿ ಟ್ರೈನಿಂಗ್ ಕೊಟ್ಟದ್ದಕ್ಕೆ ಸಾರ್ಥಕವಾಗುತ್ತದೆ.

ಸ್ಕೂಲು ಮಾಸ್ಟರುಗಳು ಈಗ ದೊರೆಯುವ ಸಂಬಳದಲ್ಲಿ ಜೀವಿಸುವುದು ತುಂಬಾ ಕಷ್ಟವೆಂಬ ಅಂಶವು ನಮ್ಮ ಘನವನ್ನು ಹೊಂದಿದ ದಿವಾನ್ ಸಾಹೇಬರ ನಿಗಾಕ್ಕೆ ಬಂದು ಜಾಸ್ತಿಮಾಡಲು 1913 ನೇ ಡಿಸೆಂಬರ್ 30 ರಲ್ಲಿ ಪ್ರೊಸೀಡಿಂಗ್ಸ್ ಸಹ ಮಾಡಿರುತ್ತಾರೆ. ಆದರೆ ಯಾವ ಕಾರಣದಿಂದಲೋ ಅದು ಇನ್ನೂ ಜಾರಿಗೆ ಬಂದಿಲ್ಲ. ವಿದ್ಯಾಭ್ಯಾಸದ ಇಲಾಖೆ ವಿಷಯದಲ್ಲಿ ನಮ್ಮ ದಿವಾನ್ ಸಾಹೇಬರ ನಿಗಾ ಸಂಪೂರ್ಣವಾಗಿರುವಾಗಲೇ ಇಷ್ಟು ನಿಧಾನವಾಗಿರುವುದನ್ನು ನೋಡಿದರೆ ವ್ಯಸನವೂ ಆಶ್ಚರ್ಯವೂ ಆಗುತ್ತದೆ.

ಒಬ್ಬ ಮಾಸ್ಟರು.

ಬಂಕಾಪುರದ ವಿದ್ಯಾ ವಿಚಾರಗಳು.

ಅಯ್ಯಾ,—ಸ್ಕೂಲಿನಲ್ಲಿ ಹುಡುಗರ ಸಂಖ್ಯೆ ಹೆಚ್ಚಾಗುತ್ತಾ ಬಂದಿರುತ್ತದೆ. ಆದರೆ ಅದಕ್ಕೆ ಸರಿಯಾದ ಬೆಂಚು, ಮ್ಯಾಪುಗಳು ಮತ್ತು ಮಾಸ್ಟರುಗಳಿಗೆ ಕುರ್ಚಿಗಳೂ ಸಹ ಸರಿಯಾದ ಸಪ್ಲೈ ಆಗಿಲ್ಲ. ಹಾಲಿ ಒಡಕು ಬೆಂಚುಗಳಿಂದ ಏನೂ ಉಪಯೋಗವಿಲ್ಲ. ಸಮಯ ಸಂದರ್ಭಗಳಲ್ಲಿ ಹುಡುಗರಿಗೆ ಅಪಾಯವನ್ನು ಉಂಟುಮಾಡುತ್ತವೆಯೇ ಹೊರತು ಮತ್ತೆ ಬೇರೆ ಇಲ್ಲ. ವಿದ್ಯಾ ಇಲಾಖಾ ಮುಖ್ಯ ಅಧಿಕಾರಸ್ಥರು ಆಗಾಗ್ಗ ಬಂದು ಅಪಮಾಯಿಸಿ ಮಾಡಿ ಸ್ಕೂಲುಗಳನ್ನು ಇನ್‌ಸ್ಪೆಕ್ಷನ್ ಮಾಡಿದಾಗ್ಯೂ ಸರಿಯಾದ ಫರ್ನಿಚರ್ ಸಪ್ಲೈ ಆಗದೆ ಇರುವದು ಆಶ್ಚರ್ಯಕಾಗಿದೆ. ಮತ್ತೂ ಪದೇ ಪದೇ ಇನ್‌ಸ್ಪೆಕ್ಷನ್‌ಗೆ ಬರುತ್ತಿರುವ ಸ್ಕೂಲುಗಳ ಡೆಪ್ಯುಟಿ ಇನ್‌ಸ್ಪೆಕ್ಟರುಗಳು ಸಹ ಶ್ರದ್ಧೆಯಿಲ್ಲದಿರುವದು ಮತ್ತಷ್ಟು ವ್ಯಸನವನ್ನು ಉಂಟುಮಾಡುತ್ತದೆ. ಇದೂ ಹಾಗಿರಲಿ. ಹಾಲಿ ಇರತಕ್ಕ ಮಾಸ್ಟರುಗಳು ಕೆಲವರಿಗೆ 15-10 ವರ್ಷಗಳ ಸರ್ವಿಸು ಆಗಿದ್ದಾಗ್ಯೂ ಪ್ರಮೋಷನ್ ಆಗದೆ ಇರುವದರಿಂದ ಮನಸ್ಸಿನಲ್ಲಿ ಭೇದ ಇಟ್ಟುಕೊಂಡು ಕ್ರಮವಾಗಿ ಸ್ಕೂಲುಗಳಲ್ಲಿ ಕೆಲಸಗಳು ನಡೆಯುತ್ತಾ ಇಲ್ಲ. ಈಚೆಗೆ ಎಳನಾಮಿಕ್ ಕಮಿಟಿಯವರಿಂದ ಏನು ಉಪಕಾರವಾದ ಕಾರ್ಯಗಳು ನಡೆಯುವುದೂ ತಿಳಿಯದೆ ಇರುತ್ತೆ. ಆದರೆ ನಮ್ಮ ಘನ ಸರ್ಕಾರದವರು ವಿದ್ಯಾಭಿವೃದ್ಧಿ ವಿಚಾರದಲ್ಲಿ ಮಾಡಿರತಕ್ಕ ಸಲಕರಣೆಗಳು, ರೂಲ್ಸುಗಳು ಮತ್ತು ಹಣದ ಏರ್ಪಾಡುಗಳೂ ಶ್ಲಾಘನೀಯವಾಗಿಯೂ, ಜನರಿಗೆ ತುಂಬಾ ಉಪಯೋಗಕರವಾಗಿಯೂ ಇರುವದರಿಂದ ಇನ್ನು ಮುಂದೆ ಈ ಊರಿನ ಎ. ವಿ. ಸ್ಕೂಲು ಉತ್ತಮ ಸ್ಥಿತಿಗೆ ಬರುತ್ತೆನ್ನುವದಕ್ಕೆ ಸಂದೇಹವಿಲ್ಲ.

ಹೋದ ಜನವರಿ ತಿಂಗಳು 10 ನೇ ತಾ. ವಿದ್ಯಾ ಇಲಾಖೆಯ ಮುಖ್ಯಾಧಿಕಾರಿಯು ದಯಮಾಡಿದ್ದ ವ್ಯಾಳೆ ಅಪ್ಪಣೆಯಾದ ಮೇರಿಗೆ ಒಂದು ವ್ಯಾಪಾರ ವಿದ್ಯಾ ಸಂಬಂಧವಾದ ಸ್ಕೂಲನ್ನು ಸ್ಥಾಪಿಸಿ ಹಾಲಿ ಇರತಕ್ಕ ವಿದ್ಯಾರ್ಥಿಗಳಿಗೆ ಸ್ಥಳವಕಾಶಮಾಡಿ ಕೀರ್ತಿವಿಡೆಯಬೇಕೆಂದು ಪ್ರಾರ್ಥಿಸುತ್ತೇವೆ. ಈಚೆಗೆ ದಶ್ತ್ರ ವರ್ಷಗಳಿಂದಲೂ ಸರಾಸರಿ ಹುಡುಗರ ಸಂಖ್ಯೆ ಹೆಚ್ಚಾಗುತ್ತಾ ಇದೆ. ಆದರೆ ಸರಿಯಾದ ಸಲಕರಣೆಗಳನ್ನು ಸರಿಪಡಿಸಿದಲ್ಲಿ ಉತ್ಕೃಷ್ಟವಾದ ಫಲವನ್ನು ಕೊಡುವದರಲ್ಲಿ ಸಂದೇಹವಿಲ್ಲ. ಇದನ್ನೆಲ್ಲಾ ಶೀಘ್ರದಲ್ಲಿ ಕ್ರಮಪಡಿಸಿ ಇನ್‌ಸ್ಪೆಕ್ಟರ್ ಜನರಲ್ ರವರು ಯಶಸ್ಸು ಪಡೆಯುವರೆಂದು ನಂಬಿದೇವೆ.

ಕೆ. ವಿ. ಸಿ.

ಮಲೆನಾಡು ಜಮೀನ್ ವಿಚಾರವು.

ಅಯ್ಯಾ,—ನಾಟಾಗಳಿಗೂ ಕಟ್ಟಿಗೆಗೂ ಅನುಪಯೋಗವಾಗಿರುವ ಅನೇಕ ಜಾತಿಯ ಗಿಡ ಮರಗಳು ಊರುಗಳೊಳಗೂ ಹೊರಗೂ ಬೆಳೆಯುತ್ತಾ ಬರುವದನ್ನು ಜಾಗಗಳ ಮಾಲೀಕರು ಕಿತ್ತುಹಾಕುವದಿಲ್ಲ. ಕಿತ್ತರೂ ಬೇರು ಸಹಿತ ನಾಶಮಾಡುವದಿಲ್ಲವಾದದ್ದರಿಂದ ಅವುಗಳು ಇನ್ನೂ ವೃದ್ಧಿಯಾಗುವದಕ್ಕೆ ಅವಕಾಶವಾಗಿ ಹುಡಿಯುವ ಸೀರಿನಲ್ಲಿ ಎಲೆಗಳುದುರಿ ನೀರನ್ನು ಕೆಡಿಸುವದಕ್ಕೂ, ಭೂಮಿಯ ಸಾರವನ್ನು ಇವುಗಳೇ ಸೆಳೆದು ನಿಸ್ಸಾರಮಾಡುವದಕ್ಕೂ ಮಾತ್ರ ಈ ಉಪಯೋಗವಿಲ್ಲದ ಗಿಡಮರಗಳೇ ಸಹಕಾರಿಯಾಗಿವೆ. ಜಾಗಗಳ ಮಾಲೀಕರು ಇಂಥಾ ಪೊದೆ ಬೆಳೆದಿರುವ ಜಾಗಗಳಿಂದ ಯಾವ ವಿಧವಾದ ಪ್ರಯೋಜನವನ್ನೂ ಹೊಂದದೆ, ಕಂದಾಯ ಕೊಡತಕ್ಕ ಭೂಮಿ ಇದೆ ಎಂದು ಸರ್ಕಾರದ ಜಾಗವನ್ನೂ, ಮಾಲೀಕರು ಮಾಲೀಕರ ಜಾಗವನ್ನೂ ಒತ್ತಿಕೊಂಡು ಸಾಗುವಳಿ ಮಾಡದೆ ಬೀಳು ಕೆಡಿಸಿಕೊಂಡಿರುವದೇ ಹೊರತು ಯಾವ ರೀತಿಯಿಂದಲೂ ಯಾರಿಗೂ ಸಾಗುವಳಿಗೆ ಕೊಡದೆ ತರಲೇ ಮಾಡುವದು ಸ್ವಭಾವವಾಗಿಹೋಗಿದೆ. ಈ ಪೈಕಿ ಸರ್ಕಾರಿ ಜಾಗವೆಂದು ಗೊತ್ತುಮಾಡಿಕೊಂಡು ಸಾಗುವಳಿಗೆ ಕೊಡಿಸಬೇಕೆಂದು ದರಖಾಸ್ತು ಮಾಡಿದರೆ ಹರಾಜಿನಲ್ಲಿ ಪೈಪೋಟಿಯಿಂದ ಹಣವಿದ್ದವರು ಮಾತ್ರ ಸದರಿ ಜಾಗವನ್ನು ಪಡೆಯುತ್ತಾರೆ. ಸ್ಥಳ ಹುಡುಕಿ ಒದ್ದಾಡಿದ ಮೊದಲನೇ ದರಖಾಸ್ತುದಾರ ಕೇವಲ ಗರೀಬನಾದರೂ ಸ್ವಯಂ ಕಷ್ಟಮಾಡಿ ಆ ಮೂಲಕ ಜಮೀನ್ ಸಾಗುವಳಿ ಮಾಡಿ ಜೀವನ ಮಾಡಿಕೊಳ್ಳುವದಕ್ಕಾಗಿ ಪ್ರಯತ್ನ ಮಾಡಿದರೆ ಕೊನೆಗೆ ಉದ್ದೇಶ್ಯ ವಿಫಲವಾಗಿ ಬಡವರು ಸ್ವಂತ ಜಮೀನ್ ಮಾಡಿಕೊಳ್ಳುವದಕ್ಕೆ ಸುತರಾಂ ಅವಕಾಶವಿಲ್ಲವಾಗಿದೆ. ಮಾಲ್ಕಿ ಕಿಮ್ಮತ್ತು ಕಟ್ಟಿ ಕೊಡಬೇಕೆಂಬದಾಗಿ ರೂಲ್ಸು ಇದ್ದರೂ ದರಖಾಸ್ತು ಜಾಗವನ್ನು ಕೊಡಕೂಡದೆಂಬ ಗ್ರಾಮಸ್ಥರ ತಕರಾರು ಏನಾದರೂ ಬಂದರೆ ಅಂಥಾ ತಕರಾರು ನಿಜವೇ ಸುಳ್ಳೇ ಎಂದು ದೃಢಪಡಿಸಿ ವ್ಯವಸ್ಥೆಮಾಡುವದು ಜಾರಿಯಲ್ಲಿ ಇಲ್ಲ. ಈ ಭಾಗದಲ್ಲಿ ಸ್ಥಳದ ರಿಕಾರ್ಡು ಅವರವರಲ್ಲಿ ಹ್ಯಾಗೆ ಬೇಕಾದರೂ ನಡೆಯುತ್ತಾ ಇವೆ. ಹೀಗಿರುವದರಿಂದ ಮಲೆನಾಡಿನಲ್ಲಿ ನಾನಾವಿಧವಾದ ಸಾಗುವಳಿಗೆ ಲಾಯಖಾದ ಭೂಪ್ರದೇಶಗಳು ಇದ್ದಾಗ್ಯೂ, ಸಕಾಲದಲ್ಲಿ ನ್ಯಾಯರೀತಿಯಿಂದ ಅಪೇಕ್ಷಕರಿಗೆ ದೊರೆಯದೆ ಅಂಥಾ ವಿಸ್ತಾರವಾದ ಸ್ಥಳಗಳೆಲ್ಲಾ ಕೆಲಸಕ್ಕೆ ಬಾರದ ಗಿಡ ಮರ ಬಳ್ಳಿ ಇವೇ ಬೆಳೆಕೊಂಡು ಜನ ಜಾನುವಾರುಗಳ ವಸತಿ ಅನಾರೋಗ್ಯಕ್ಕೂ, ಅನನುಕೂಲಗಳಿಗೂ ಒಳಪಟ್ಟು ಆಯುಸ್ಸನ್ನೆಲ್ಲಾ ನಿರುದ್ಯೋಗದಲ್ಲಿಯೇ ಕಳೆದುಕೊಳ್ಳಬೇಕಾದಂಥಾ ಅಡಚಣೆಗಳು ಹೇಳತೀರದಷ್ಟು ಉಂಟಾಗಿರುತ್ತಾದ್ದರಿಂದ ಅಭಿವೃದ್ಧಿಗೆ ಕುಂದಕವಾಗಿದೆ. ಕಂದಾಯ ಕೊಡತಕ್ಕ ಜಾಗಗಳ ಮಾಲೀಕರು ತಮ್ಮ ವಿಶಿಷ್ಟ ಜಾಗಗಳನ್ನೂ ಬೀಳು ಕೆಡವಿಕೊಳ್ಳಕೂಡದೆಂತಲೂ, ಹೊಸದಾಗಿ ದರಖಾಸ್ತು ಮಾಡತಕ್ಕವರಿಗೆ ಕೆಲವು ವರುಷದ ವರೆಗೆ ಹರಾಜಿಗೆ ಇಡದೆಯೂ, ಬಾಜೂ ಜನಗಳ ತಕರಾರನ್ನೂ ಕೇಳದೆಯೂ ದರಖಾಸ್ತು ಮಾಡಿದ ಒಂದು ತಿಂಗಳಲ್ಲಿ ಖಾಯಸ್ ಜಾಗ ಮಂಜೂರಾಗುವದಕ್ಕೂ ವಾಯಿದೆಯಲ್ಲಿ ಉತ್ಪತ್ತಿ ತೋರಿಸುವದಕ್ಕೂ ಏರ್ಪಾಡಾಗುವದಕ್ಕೆ ಸ್ಥಳತನಿಖೆಗೆ ಯುರೋಪಿಯನ್ ಅಧಿಕಾರಿಗಳೇನೇ ಇರಬೇಕೆಂದು ನಮ್ಮ ಸರ್ಕಾರದಲ್ಲಿ ಯಾರಾದರೂ ಕೇಳಿಕೊಳ್ಳಬಹುದೇ ಎಂಬ ಸಂಗತಿಯನ್ನು ಯಾವ ಮಹನೀಯರಾದರೂ ಪ್ರಜಾಸಾಮಾನ್ಯದ ಉಪಕಾರಕ್ಕಾಗಿ ತಮ್ಮ ಅಭಿಪ್ರಾಯದೊಡನೆ ಪತ್ರಿಕೆಯಲ್ಲಿ ದಸರಾ ಒಳಗೆ ಜನಗಳು ತಿಳಿದು ಅರಿಕೆ ಮಾಡುವದಕ್ಕಾಗಿ ಹಾಕಿದರೆ ಪ್ರಜೆಗಳಿಗೂ ಸರ್ಕಾರಕ್ಕೂ ಲಾಭವಾದೀತು.

ನಿಜಸ್ಥಿತಿ.

ದನಗಳ ಕ್ಷಾಮ.

ಅಯ್ಯಾ,—ರೈತನ ನಾನಾವಿಧ ಆಸ್ತಿಗಳ ಪೈಕಿ ದನಕರುಗಳೂ ಒಂದಾಗಿದೆ. ಧನಿಕನಾದ ರೈತನ ಆಸ್ತಿಗಳ ಪೈಕಿ ಸಾವಿರಾರು ರೂಪಾಯಿ ಬಾಳುವ ದನಕರುಗಳಿರುವದುಂಟು. ರೈತನಿಗೆ ದನಕರುಗಳಿಂದ ನಾನಾವಿಧ ಫಾಯಿದೆ ಉಂಟು. ಹಾಲು, ಮೊಸರು, ಬೆಣ್ಣೆ ತುಪ್ಪ, ಇವುಗಳಿಂದ ರೈತನು ತುಂಬಾ ಸುಖಪಡುವನು. ಪ್ರತಿ ವರ್ಷವೂ ರೈತನು ದನಕರುಗಳಿಂದ [illegible]ರೂಪಾಯಿ ಫಾಯಿದೆ ಹೊಂದುವನು. ರೈತರು ಬೀಜದ ಹೋರಿಗಳಿಂದು ಬಹು ಮುತುವರ್ಜಿಯಿಂದ ಸಾಕಿ ಹೆಚ್ಚು ಬೆಲೆಗೆ ಮಾರಿ ಫಾಯಿದೆ ಹೊಂದುವರು. ವ್ಯವಸಾಯಕ್ಕೆ ದನಗಳೇ ಮುಖ್ಯ ಪ್ರಾಣವು. ಸವಾರಿ ಬಂಡಿಗಳಿಗೂ, ಆಮದು ರಫ್ತಿಗೂ ದನಗಳ ಸಹಾಯವೇ ಅತಿಶಯವಾದದ್ದು. ದನಗಳಿಂದ ನಾನಾವಿಧ ಅನುಕೂಲಗಳಿರುವವಷ್ಟೆ. ಇವೆಲ್ಲಕ್ಕಿಂತಲೂ ರೈತನು ಗೊಬ್ಬರಕ್ಕೋಸ್ಕರವಾಗಿಯೇ ಉತ್ಸಾಹದಿಂದ ದನಕರುಗಳನ್ನಿಟ್ಟುಕೊಂಡಿರಬೇಕಾಗಿರುತ್ತದೆ.

ಮೊಳಕಾಲ್ಮೂರು ತಾಲ್ಲೂಕು ಬೂದಿಹಾಲ್, ಮತ್ತೋಡು, ಬೆಲಗೂರು, ಈ ಪ್ರದೇಶಗಳಲ್ಲೂ; ಅರಸಿಕೆರೆ ತಾಲ್ಲೂಕು ಗರುಡನಗಿರಿ, ಕಲ್‌ಗೂಡಿ; ಮತ್ತೂ ಕಡೂರು ತಾಲ್ಲೂಕು ಆಣೇಗೆರೇ, ಪಂಚನಹಳ್ಳಿ ಮೊದಲಾದ ಪ್ರಾಂತ್ಯಗಳಲ್ಲೂ ದನಕರುಗಳಿಗೆ ಮೇವಿರುವದಿಲ್ಲ. ರೈತರು ದಾಸ್ತಾನ್ ಮಾಡಿಕೊಂಡಿದ್ದ ಮೇವೆಲ್ಲಾ ಖರ್ಚಾಗಿ ದನಗಳ ಕ್ಷಾಮ ಉಂಟಾಗಿದೆ. ಪ್ರತಿನಿತ್ಯವೂ ಮೇವಿಲ್ಲದೆ ದನಕರುಗಳು ವಿಶೇಷವಾಗಿ ಸಾಯುತ್ತಿವೆ. ಈ ಭಾಗದಲ್ಲಿ ರೈತನಿಗೆ ಬಹಳವಾದ ಲುಕ್ಸಾನು ಉಂಟಾಗುತ್ತಾ ಇದೆ. ಕಳೆದ ವರ್ಷ ಈ ಪ್ರಾಂತ್ಯ ಮಳೆ ಬೆಳೆ ಇಲ್ಲದೆ ಎಷ್ಟೋ ತೊಂದರೆ ಪಡುತ್ತಿರುವಲ್ಲಿ ಈ ವರ್ಷವೂ ಮಳೆ ಸುತರಾಂ ಇಲ್ಲದೆ ಮುಂಗಾರು ಪೈರು ಬಿತ್ತನೆಯೇ ಆಗಿಲ್ಲ. ಈಗ 15 ದಿನಗಳಿಂದ ಒಂದೆರಡು ಹದ ಮಳೆ ಬಂದು ಈಗತಾನೇ ರೈತಜನರು ವ್ಯವಸಾಯದ ಕಡೆ ದೃಷ್ಟಿಕೊಟ್ಟಿರುವರು. ದನಕರುಗಳಿಗೆ ಮೇವಿಗಾಗಿ ಈಗ 3-4 ತಿಂಗಳಿಲಾಗಿಯು ರೈತರು 3-4 ಮೈಲುಗಳ ಫಾಸಲೆಯಲ್ಲಿ ಇರುವ ಕೇಂದಿ ವನಗಳಿಗೆ ಹೋಗಿ ಈಚಲ ಗರಿಗಳನ್ನು ಬಹು ಕಷ್ಟಪಟ್ಟು ತಂದು ದನಗಳ ಪ್ರಾಣವನ್ನು ಉಳಿಸಿಕೊಳ್ಳುತ್ತಾ ಬಂದರು. ಈಗ ಈಚಲ ವನವೆಲ್ಲಾ ಬೈಲಾಗಿ ಬೋಡಾಗಿನಿಂತಿವೆ. ಎಷ್ಟು ಹುಡುಕಿದರೂ ಗರಿಗಳಿಲ್ಲ. ಬಚ್ಚಿಟ್ಟುಕೊಂಡಿದ್ದ ಒಬ್ಬೊಬ್ಬ ರೈತನು ತನ್ನ ಹುಲ್ಲಿನ ಬಣವೆಯನ್ನು ಮಾರು ಒಂದಕ್ಕೆ 50-60 ರೂಪಾಯಿನಂತೆ ಮಾರುತ್ತಿರುವನು. ಧನಿಕರಾದ ಕೆಲವರು ನೀರ್ಯದ ತಾಲ್ಲೂಕು ಬುಕ್ಕಾಪಟ್ಟಣದ ಪ್ರಾಂತ್ಯದಿಂದಲೂ, ಹೊಳಲ್ಕೆರೇ ತಾಲ್ಲೂಕು ಪ್ರಾಂತ್ಯದಿಂದಲು, ಇನ್ನು ಕೆಲವರು ಹಳೇಬೀಡು ಮೊದಲಾದ ಪ್ರಾಂತ್ಯಗಳಿಂದಲೂ ಬಂಡಿಗಳ ಮೇಲೆ ಹುಲ್ಲು ಸಾಗಿಸಿ ತಂದು ದನಕರುಗಳ ಪ್ರಾಣವನ್ನುಳಿಸಿಕೊಳ್ಳುತ್ತಾ ಇದಾರೆ. ಆಡು ಕುರಿಗಳೆಲ್ಲಾ ಮಲಸೀಮೆಗೆ ಸಾಗಿಹೋದವು. ಬಡರೈತರು ಬಂದರಿಕೆಸೊಪ್ಪು, ತೆಂಗಿನಸೋಗೆ ಗರಿ, ಆವು, ಯಡೆ, ಇವುಗಳನ್ನು ತಂದು ಹಾಕಿ ಸಾಕುತ್ತಿದಾರೆ. ಕಣಕಟ್ಟೆ ರಸ್ತೆಯಲ್ಲಿ ರೈತರು ತಮ್ಮ ದನಕರುಗಳನ್ನೆಲ್ಲಾ ಮೇಕೆಗಳೋಪಾದಿ ಸಾಲುಮರಗಳ ಕೆಳಗೆ ಬಿಟ್ಟುಕೊಂಡು, ಗೋಣಿ ಮತ್ತು ಆಲದ ಮರಗಳ ಸೊಪ್ಪು ಕೊಯ್ದು ಹಾಕಿ ಮೇಯಿಸುತ್ತಾ ಇದ್ದದ್ದನ್ನು ಕಂಡೆನು. ಎರಡು ಪಾರ್ಶ್ವದ ಗೋಣಿ ಮತ್ತು ಆಲದ ಮರಗಳೆಲ್ಲಾ ಬೈಲಾಗಿ ನಿಂತಿರುವವು. ಜನರಿಗೆ ಕ್ಷಾಮಬಂದರೆ ಉಳಿದುಕೊಳ್ಳಬಹುದು; ದನಗಳ ಕ್ಷಾಮ ನೋಡಲಾದೀತೇ? ನಮ್ಮ ಪೂರ್ವಿಕರು ಹೇಳುವಂತೆ ದಿನದಿನಕ್ಕೆ ನಮ್ಮ ಕಷ್ಟಗಳು ಹೆಚ್ಚುತ್ತಿರುವವು. ಲೋಕದಲ್ಲಿ ಪ್ರಜೆ ಹೆಚ್ಚಿದ್ದರಿಂದ ಈ ರೀತಿ ದಿನಸಿ ದುಬಾರಿ ಆಯಿತೆಂದು ಹೇಳಬೇಕೇ? ಅಥವಾ, ಸಾಗುವಳಿ ಮಾಡುವವರು ಕಡಮೇ ಆಯಿತೋ? ಆದರೆ ಎಲ್ಲೆಲ್ಲಿ ನೋಡಿದರೂ ಹಿಡುವಳೀ ಭೂಮಿಗಳು; ಯಾರ್‍ಯಾರು ನೋಡಿದರೂ ಜಮೀನುದಾರರೇ. ನಮ್ಮ ಗೌರ್ನಮೆಂಟಿನವರು ವ್ಯವಸಾಯಾಭಿವೃದ್ಧಿಗೆ ಹಣ ವೆಚ್ಚಮಾಡುತ್ತಿರುವದಾಗಲೀ, ಅನುಕೂಲಗಳನ್ನು ಕಲ್ಪಿಸಿಕೊಡುತ್ತಿರುವದಾಗಲೀ ಅಷ್ಟಿಷ್ಟೆಂದು ಹೇಳತೀರದು. ಆದರೆ ಇವರ ಪ್ರಯತ್ನಕ್ಕೆ ಸರಿಯಾಗಿ ಮಳೆಯ ಸಹಾಯವೂ ಒದಗಿದರೆ ಆಗಲಾದರೂ ನಮ್ಮ ಪೂರ್ವಿಕರು ಹೇಳುವಂತೆ ದಿನಸಿಯ ಧಾರಣೆಯು ನೋಡುವೆವೋ ಏನೋ. ಜನರಿಗೆ ಜಮೀನಿನ ಮೇಲೆ ಖಾಯಸ್ ಹೆಚ್ಚಿದ ಹಾಗೆಲ್ಲಾ ದಿನಸಿಯು ದುಬಾರೀ ಆಗುತ್ತಿದೆ.

ಕೆ. ವೆಂಗಟರಾಯಶೆಟ್ಟಿ, ಬೆಲಗೂರು.

"ಮೈಸೂರು ಎಕನಾಮಿಕ್ ಯೂನಿಯನ್."—ಜವಾಬು.

ಅಯ್ಯಾ,—ಕಳೆದ ಜೂನ್ 18 ನೇ ತಾ. ತಮ್ಮ ಪತ್ರಿಕೆಯಲ್ಲಿ ಹೊಸದಾಗಿ ಏರ್ಪಾಟಾಗಿರುವ "ಮೈಸೂರು ಎಕನಾಮಿಕ್ ಯೂನಿಯನ್" ಎಂಬ ಎಣ್ಣೆ, ಮೇಣದಬತ್ತಿ, ಸಾಬೂನು ವಗೈರೆ ಕಾರ್ಖಾನೆಗೆ ಸಂಬಂಧಪಟ್ಟ ಕೆಲವು ವಿಷಯಗಳನ್ನು ಚರ್ಚಿಸಿ ಪ್ರಚಾರಪಡಿಸಿದ್ದನ್ನು ಕಂಪೆನಿಗೆ ಉಪಕಾರವಾಯಿತೆಂತೆ ಎಣಿಸಬೇಕು. ಸಂದೇಹಪಟ್ಟಿರುವ ಅಂಶಗಳಿಗೆ ಕಂಪೆನಿಯವರು ಪ್ರಕಟಪಡಿಸಿರುವ ಅಂದಾಜು ಪಟ್ಟಿಯನ್ನು ಸರಿಯಾಗಿ ಪರಾಂಬರಿಸಿದ್ದರೆ ತಕ್ಕ ಸಮಾಧಾನಗಳು ದೊರೆಯುತ್ತಿದ್ದವು. ಅಂದಾಜಾ ಪಟ್ಟಿಯಲ್ಲಿ ಎಣ್ಣೆಯ ಕಾರ್ಖಾನೆಯೂ, ಸ್ಟೀರಿನ್ ಕಾರ್ಖಾನೆಯೂ ಏಕಕಾಲದಲ್ಲಿ ಉಪಕ್ರಮಿಸಿ ಕೆಲಸ ನಡಿಸಿದಲ್ಲಿ ಎಷ್ಟು ಆದಾಯ ವ್ಯಯಗಳು ಆಗಿ ಎಷ್ಟು ಲಾಭ ಬರುವುದೆಂಬುದನ್ನು ತೋರಿಸಿರುತ್ತೆ. ಆದರೆ ಎಣ್ಣೆಯ ಕಾರ್ಖಾನೆಯೂ, ಸ್ಟೀರಿನ್ ಕಾರ್ಖಾನೆಯೂ ಏಕಕಾಲದಲ್ಲಿ ಉಪಕ್ರಮಿಸಲ್ಪಡುವದಿಲ್ಲ. ಎಣ್ಣೆಯ ಕಾರ್ಖಾನೆಯನ್ನು ಉಪಕ್ರಮಿಸಿ ಕೆಲಸ ನಡೆಸಿದ ಒಂದೆರಡು ವರ್ಷಗಳ ನಂತರ ಸ್ಟೀರಿನ್ ಕಾರ್ಖಾನೆಯು ಉಪಕ್ರಮಿಸಲ್ಪಡುವದು. ಆದಕಾರಣ ಈಗ ಪ್ರಕಟಿಸಿರುವ ಮೂಲಧನವು ಈ ಎಣ್ಣೆಯ ಕಾರ್ಖಾನೆಯನ್ನುಪಕ್ರಮಿಸಿ ಕೆಲಸ ನಡಿಸುವದಕ್ಕೆ ಸಾಕಾದಷ್ಟಾಗಿರುತ್ತದೆ. ಒಂದು ವೇಳೆ ಮೇಲ್ಕಂಡ ಎಣ್ಣೆಯ ಕಾರ್ಖಾನೆಯನ್ನುಪಕ್ರಮಿಸಿದ ತರುವಾಯಲ್ಲಿಯೇ ಸ್ಟೀರಿನ್ ಕಾರ್ಖಾನೆಯನ್ನುಪಕ್ರಮಿಸಿದರೂ ಭಯವಿಲ್ಲ. ಯಾಕೆಂದರೆ ಅಂದಾಜಾ ಪಟ್ಟಿಯಲ್ಲಿ ನಫೆ ವಿಲೇವಾರಿಯಲ್ಲಿ ಇದಕ್ಕಾಗಿ ಕಂಪೆನಿಯು ಮಾಡಬಹುದಾದ ಸಾಲಕ್ಕಾಗಿ ಬಡ್ಡಿಯನ್ನು ಸಹ ಕಾಣಿಸಿ, ತಕ್ಕ ಅವಕಾಶವನ್ನುಂಟುಮಾಡಿರುತ್ತೆ. ಆದಕಾರಣ ಎರಡು ಕಾರ್ಖಾನೆಗಳೂ ಏಕಕಾಲದಲ್ಲಿ ನಡೆಯುವ ಪಕ್ಷಕ್ಕೆ ಕಂಪೆನಿಯ ಕಾರ್ಯಕ್ಕೆ ಮೂಲಧನವಲ್ಲದೆ ಸಾಲದ ಮೊಬಲಗೂ ಉಪಯೋಗಿಸಲ್ಪಡುವದೆಂದು ಅಂದಾಜಾ ಪಟ್ಟಿಯಿಂದಲೇ ವ್ಯಕ್ತವಾಗುವದು. ಈ ಭಾಗದಲ್ಲಿ ವಾಚಕರಿಗೆ ಸಂಶಯಕ್ಕೆ ಆಸ್ಪದವೇನೂ ಇರುವದಿಲ್ಲ.

ಕಾರ್ಖಾನೆಯು ಪ್ರಾರಂಭವಾದ ಮೇಲೆ ಅದರಲ್ಲಿ ಕೂಲೀ ಮುಂತಾದ ಕೆಲಸಗಳನ್ನು ಮಾಡತಕ್ಕವರಿಗೆ ಎಷ್ಟು ಹಣ ಖರ್ಚಾಗುವದೂ ತೋರಿಸಿಲ್ಲವೆಂದು ಬರೆದಿರುತ್ತೀರಿ. ಆದರೆ ಎಣ್ಣೆಯ ಕಾರ್ಖಾನೆಯಲ್ಲಿ ಸಿಬ್ಬಂದಿಗೆ ವರ್ಷ ಒಂದಕ್ಕೆ 4,500 ರೂಪಾಯಿ ನಮೂದಾಗಿರುವದನ್ನು ನೋಡಿಯೂ ತಾವು ಈ ರೀತಿ ಅಭಿಪ್ರಾಯಪಡುವದಕ್ಕೆ ಆಧಾರವಿಲ್ಲ. ಕೆಲಸಗಾರರಿಗಾಗಿ 4,500 ರೂಪಾಯಿ ಮಾತ್ರ ಖರ್ಚಾಗಿ ಕಂಪೆನಿಗೆ 90,000 ರೂಪಾಯಿ ಲಾಭ ಉಂಟಾಗುವದೆಂಬ ಭಾಗ ತಮಗೆ ಅರ್ಥವಾಗಲಿಲ್ಲವೆಂಬ ಮಾತು ಸ್ವಲ್ಪ ಆಶ್ಚರ್ಯವನ್ನುಂಟುಮಾಡಿದೆ. ಮೇಲ್ಕಂಡ ನಫೆಯು ದೊರೆಯಬೇಕಾದರೆ ಕಾರ್ಖಾನೆಯಲ್ಲಿ ಕೆಲಸ ಮಾಡಬೇಕಾದ ಕೂಲಿಯವರು ಮಾತ್ರವೇ ಅಲ್ಲ; ಹುದ್ದೇದಾರರೇ ಮೊದಲಾದ ಇತರರಿಂದಲೂ ಕೆಲಸ ನಡಿಯಬೇಕಾದ್ದೆಂದು ಹೇಳಬೇಕಾದ್ದಿಲ್ಲ. ಯಾವ ತರಹಾ ನೌಕರರಿಗೆ ಎಷ್ಟೆಷ್ಟು ಹಿಡಿಯಬಹುದೆಂಬುವದನ್ನು ಬಾಬವಾರ್ ಅಂದಾಜಾ ಪಟ್ಟಿಯಲ್ಲಿ ತೋರಿಸಿರುತ್ತೆ. ಪ್ರಕೃತ ವರುಷಕ್ಕಿಂತಲೂ ಹೆಚ್ಚಾಗಿ ಕೂಲೀ ಜನಗಳನ್ನು ನೇಮಿಸಿಕೊಳ್ಳಬೇಕೆಂಬ ನಿಯಮವು ಯಾವ ಕಾರ್ಖಾನೆಯಲ್ಲಿಯೂ ಇಲ್ಲವೆಂದು ಹೇಳಲನವಶ್ಯಕ. ಕೂಲಿಗಾರರಿಗೋಸ್ಕರ ಖರ್ಚಾಗುವದು ಮೇಲ್ಕಂಡ 4,500 ರೂಪಾಯಿ ಮಾತ್ರವಲ್ಲದೆ ಎಣ್ಣೆಯಬೀಜದ ಜಮಾವಣೆಯಲ್ಲಿಯೂ, ಸೌದೆ ವಗೈರೆ ಸರಬರಾಯಿಯಲ್ಲಿಯೂ ನೂರಾರು ಮಂದಿ ಕೂಲಿಗಳಿಗೋಸ್ಕರ ಹಣವು ಖರ್ಚಾಗುವದು. ಎಣ್ಣೆಯ ಕಾರ್ಖಾನೆಯಲ್ಲಿ ಮಾತ್ರ ವರ್ಷಂಪ್ರತಿ ಕೆಲಸಮಾಡುವ ಕೂಲಿ ಸಿಬ್ಬಂದಿಗೆ ಹಿಡಿಯುವ ಖರ್ಚು 4,500 ರೂಪಾಯಿ ಎಂದು ಬರೆದಿರುವದರಲ್ಲಿ ತಪ್ಪೇನೂ ಇರುವದಿಲ್ಲ.

ಸಾದಿಲ್‌ವಾರ್ ಖರ್ಚಿನಲ್ಲಿ ಅನೇಕ ಚಿಲ್ಲರೆ ಬಾಬುಗಳು ಅಡಗಿರುವದರಿಂದ ಈ ಮೊಬಲಗು ಸ್ವಲ್ಪ ಹೆಚ್ಚಾಗಿಯೇ ಅಂದಾಜುಮಾಡಲ್ಪಟ್ಟಿರುವದು. ಕೂಲಿ ಪಾಡಿನವರಿಗೆ ಸಲ್ಲಬೇಕಾದ ಮೊಬಲಗಿಗೂ ಇದಕ್ಕೂ ಇಷ್ಟೇ ತಾರತಮ್ಯವಿರಬೇಕೆಂಬ ವಿಧಾಯಕವಿರುವದಿಲ್ಲವಾದಕಾರಣ ಇದರ ವಿವರವನ್ನು ಹೆಚ್ಚಾಗಿ ಹೇಳಬೇಕಾದ ನಿಮಿತ್ತವಿಲ್ಲ.

ಈ ಕಂಪನಿಯ ಕಾರ್ಯಗಳಿಂದ ಎಷ್ಟರ ಮಟ್ಟಿಗೆ ಲಾಭ ಉಂಟಾಗಬಹುದೆಂಬುವದನ್ನು ತೋರಿಸುವದೇ ಅಂದಾಜಾಪಟ್ಟಿಯ ಮುಖ್ಯ ಉದ್ದೇಶವಾಗಿರುವದು. ಈ ಪಟ್ಟಿಯಲ್ಲಿ ಖರ್ಚನ್ನು ಹೆಚ್ಚುಹೆಚ್ಚಾಗಿಯೂ, ಆದಾಯವನ್ನು ಕಡಮೆಯಾಗಿಯೂ ತೋರಿಸಿರುತ್ತೆಂಬ ವಿಷಯ ಈ ಬಾಬುಗಳಲ್ಲಿ ಅನುಭವವಿರುವವರಿಗೆ ಗೋಚರವಾಗದೆ ಇರಲಾರದು. ಕಾರ್ಯತಃ ಅನೇಕ ಬಾಬುಗಳಲ್ಲಿ ಖರ್ಚು ಕಡಮೆಯಾಗಿ ಆದಾಯ ಹೆಚ್ಚುವುದೆಂದು ವಾಚಕರಿಗೆ ದೃಢವಾಗಿ ಹೇಳಬಲ್ಲೆವು. ಕಾಲಕ್ರಮದಲ್ಲಿ ಚರ್ಚಾಂಶಗಳ ನಿಜತ್ವವು ಹೊರಪಡುವುದು.

ಕಾರ್ಖಾನೆಯು ಭೂಪದ ಬೀಜವು ದೊರೆಯುವ ಪ್ರಾಂತ್ಯಕ್ಕೆ ಮಧ್ಯಸ್ಥ ಪ್ರದೇಶದಲ್ಲಿರಬೇಕಾದ್ದರಿಂದ ಇದನ್ನು ಮಲೆನಾಡು ಪ್ರಾಂತ್ಯದಲ್ಲಿಯೇ ಸ್ಥಾಪಿಸಬೇಕಾಗಿರುವದು. ಇಲ್ಲವಾದರೆ ಫಸಲೆ ಹೆಚ್ಚಾಗಿ ಖರ್ಚು ಅನೇಕ ಭಾಗಗಳಲ್ಲಿ ದುಬಾರಿಯಾಗಿ ನಷ್ಟಕರವಾಗಿರುವದೆಂಬುವದನ್ನು ವಾಚಕರೇ ಊಹಿಸಬಲ್ಲರು. ಕಾರ್ಖಾನೆಗೆ ಅನುಕೂಲವಾದ ಸ್ಥಳವು ಡೈರೆಕ್ಟರುಗಳು ಸಂಪೂರ್ಣಾಲೋಚನೆಯಿಂದ ಚುನಾಯಿಸಿದ ಕೂಡಲೆ ಪ್ರಕಟಿಸಲ್ಪಡುವದು.

ಈ ಮೈಸೂರು ಎಕನಾಮಿಕ್ ಯೂನಿಯನ್ ಉದ್ದೇಶಗಳು ದೇಶದ ಕ್ಷೇಮಲಾಭಗಳಿಗೆ ಅನುಗುಣವಾದವುಗಳೆಂದು ಭಾವಿಸಿ, ತಾವು ಉದಾರಪೂರ್ವಕವಾಗಿ ತಮ್ಮ ಪತ್ರಿಕೆಯಲ್ಲಿ ಪ್ರಸ್ತಾಪಿಸಿದ್ದಕ್ಕಾಗಿ ಪುನಃಪುನಃ ತಮ್ಮ ಉಪಕಾರವನ್ನು ಸ್ಮರಿಸುತ್ತೇವೆ.

ಕೋ. ಶೇಷಯ್ಯರ್,
ಡೈರೆಕ್ಟರ್, ಮೈ. ಎ. ಯೂ., ಬೆಂಗಳೂರು.

[ಮೇಲ್ಕಂಡ ಬಾತ್ಮಿಯನ್ನು ಪ್ರಕಟಿಸಲು ನಮಗೆ ಸಂತೋಷವಾಗಿದೆ. ನಾವು ಮೊದಲು ಹೇಳಿದಂತೆ ಕಂಪನಿಯ ಮೂಲಧನವು ಎರಡು ಕಸುಬುಗಳನ್ನೂ ಏಕಕಾಲದಲ್ಲಿ ಪ್ರಾರಂಭಿಸುವುದಕ್ಕೆ ಸಾಕಾಗುವುದಿಲ್ಲವೆಂದೂ, ಸಾಲಮಾಡಬೇಕಾಗುವುದೆಂದೂ ನಿರ್ಧರವಾಯಿತು. ಎರಡನೆಯದಾಗಿ ಕೂಲಿಕಾರರಿಗೆ ಖರ್ಚು ಆಗುವ ಹಣವೂ ಬಹಳ ಸ್ವಲ್ಪವೆಂಬ ಭಾಗವೂ ನಿಶ್ಚಯವಾಯಿತು. "ಈ ಕಂಪನಿಯ ಕಾರ್ಯಗಳಿಂದ ಎಷ್ಟರಮಟ್ಟಿಗೆ ಲಾಭ ಉಂಟಾಗಬಹುದೆಂಬುವದನ್ನು

ತೋರಿಸುವದೇ ಅಂದಾಜಾ ಪಟ್ಟಿಯ ಮುಖ್ಯ ಉದ್ದೇಶವಾಗಿರುವದು" ಎಂಬೀ ಮೇಲ್ಕಂಡ ಮಾತಿನಿಂದಲೇ ಈ ಕಂಪನಿಯ ಮುಖ್ಯ ಉದ್ದೇಶವು ಈಗ ಸ್ಪಷ್ಟವಾಗಿ ಹೊರಪಟ್ಟಿರುತ್ತದೆ. ಲಾಭ ಬರುವ ವಿಚಾರವನ್ನು ಕುರಿತು ನಾವು ಪ್ರಸ್ತಾಪ ಮಾಡಲೇ ಇಲ್ಲ; ನಮ್ಮ ದೇಶದಲ್ಲಿ ಕಸಬುಗಳೂ ಕೈಗಾರಿಕೆಗಳೂ ಹೆಚ್ಚಿ ಹರಡಿಕೊಂಡು ಆ ಮೂಲಕ ಈ ಕಾರ್ಖಾನೆಯಿಂದ ನಮ್ಮ ಪ್ರಜೆಗಳಿಗೆ ಪ್ರಯೋಜನವಾಗಬೇಕೆಂದು ಸೂಚಿಸಿದೆವು.—ಎಡಿ.]

ತಾಲ್ಲೋಕು ವರ್ತಮಾನಗಳು.

ಯಡತೊರೆ ತಾ|| ಮಿರ್ಲೆ.—ಸಟಿಸಲಕ್ಷವಾದ ಧಾರೆಯ ಬಿಸಿಯಿಂದ ಮಳೆಯ ಹನಿಗಳು ಬೀಳುವ ಸಂಭವವೇ ಇಲ್ಲ. ಭೂಮಿಗೆ ಹದವೇ ಇಲ್ಲ. ನಾಲೆಗಳಿಗೆ ನೀರು ಬಿಟ್ಟು ಇದಾರೆ. ತರೀ ಫಸಲು ಮಾಡಲು ಜಮೀನುಗಳನ್ನು ಉಳುತ್ತಿರುವರು. ನಮ್ಮ ಅಮಲ್ದಾರ್ ಮ|| ಜಿ. ನಾರಾಯಣರಾಯರು ಕಾರ್ಯದಕ್ಷರೂ, ಪ್ರಜಾಪಕ್ಷಪಾತಿಗಳೂ ಆದುದರಿಂದ ತಾಲ್ಲೋಕಾಮಳೆ ಫೊಂದರ ತುಂಟಾಟಗಳು ಕಮ್ಮಿಯಾಗಿ ಪ್ರಜಾ ನೆಮ್ಮದಿಯುಂಟಾಗಿರುವುದು. ಪ್ರತಿ ಗ್ರಾಮಕ್ಕೂ ಹೋಗಿ ಪ್ರಜೆಗಳಿಗೆ ಉಂಟಾಗಿರುವ ತೊಂದರೆಗಳನ್ನು ತಪ್ಪಿಸುತ್ತ, ಒಳ್ಳೇ ನಡತೆ ಇರಬೇಕೆಂದೂ, ಪರಸ್ಪರ ಅನುರಾಗ ಇಟ್ಟುಕೊಳ್ಳಬೇಕೆಂದೂ ಬೋಧಿಸುತ್ತಲಿರುವರು. ಅಧಿಕಾರಕ್ಕೆ ತಕ್ಕ ಸಹನೆಯು ಇದಲ್ಲವೆ? ರಿಕಾರ್ಡುಗಳಾದರೋ ಬಹುಬೇಗ ಫೈಸಲಾಗುತ್ತಿವೆ. ಪ್ರಜೆಗಳು ತಮ್ಮ ಕಷ್ಟಗಳನ್ನು ಅರಿಕೆಮಾಡಿಕೊಳ್ಳಲು ತುಂಬಾ ಸೌಲಭ್ಯವುಂಟಾಗಿದೆ.—ಜಾನುವಾರುಗಳಿಗೆ ತಕ್ಕ ಮೇವು ಇಲ್ಲ. ದಾರಣೆವಾಸಿಗಳು ಹೆಚ್ಚುತ್ತಲೇ ಇವೆ.—ಗೌರ್ನಮೆಂಟ್ ಕನ್ನಡ ಸ್ಕೂಲಿನಲ್ಲಿ ಇಬ್ಬರು ಮೂವರು ಮಾತ್ರ ಕೆಲಸಮಾಡುವಂತೆ ತೋರುವುದು. ಬಾಕಿ ಮಾಸ್ಟರುಗಳು ರಜಾ ಆಗಾಗ್ಗೆ ಪಡೆಯುತ್ತಲೇ ಇರುವರು. ಬಾಲಕರಿಗೆ ಸರಿಯಾದ ವಿದ್ಯಾಭಿವೃದ್ಧಿಯು ಆಗದೆ ಕುಗ್ಗಲು ಕಾರಣವಾಗಿದೆ.—ಗ್ರಾಮಸಾಕೀಜಾ ಚೆನ್ನಾಗಿದೆ. ಇಂಥಾ ದುರ್ಭಿಕ್ಷ ಕಾಲದಲ್ಲಿ ಜಾಡಮಾಲಿಗಳಿಗೆ ಸಕಾಲಕ್ಕೆ ಸಂಬಳ ದೊರೆಯದೆ ಕಷ್ಟಪಡುವರು ಇದನ್ನು ಬೇಗನೆ ಕ್ರಮಪಡಿಸಬೇಕಾಗಿದೆ.

ಮುಳುಬಾಗಲು.—ತಾಲ್ಲೂಕಿನಲ್ಲಿ ಈಚೆಗೆ ಬಂದ ಅಲ್ಪಮಳೆಯಿಂದ ರಾಗಿ ಮೊದಲಾದ ಬೀಜವನ್ನು ಬಿತ್ತಿದ ಮೇಲೆ ಮಳೆಯೇ ಬಾರದ್ದರಿಂದ ಪೈರಿಗೆ ಕಂಬಳಿ ಹುಳು ಬಿದ್ದು ನಾಶವಾಗುತ್ತಾ ಇದೆ. ಜನಗಳಿಗೂ ಜಾನ್ವಾರುಗಳಿಗೂ ಕುಡಿಯಲು ನೀರಿಗೆ ಅಭಾವವಾಗಿದೆ. ಶೀತಗಾಳಿ ಬಲವಾಗಿ ಬೀಸುತ್ತಾ, ಮೋಡ ಮುಚ್ಚಿಕೊಂಡು ಅನಾರೋಗ್ಯಸೂಚನೆಯನ್ನುಂಟುಮಾಡುತ್ತಿದೆ. ಜನಗಳು ದೊರೆಯುವ ನೀರನ್ನೇ ಚೆನ್ನಾಗಿ ಮರಳಿಸಿ ಸೋಧಿಸಿ ಉಪಯೋಗಿಸಿದರೆ ಉತ್ತಮ. ಈ ದಿನಗಳಲ್ಲಿ ಜಲಮಲ ವಿಸರ್ಜನೆಮಾಡುತ್ತಿರುವ ಪದ್ಧತಿಯನ್ನು ದರ್ಪದಿಂದ ತಪ್ಪಿಸಬೇಕು.—ಪೋಲೀಸ್‌ನಲ್ಲಿಯೂ ತಾಲ್ಲೂಕಿನಲ್ಲಿಯೂ ಉತ್ತಮವಾದ ಬವಲಾವಣೆಗಳು ಜಾಗ್ರತೆ ನಡೆಯಬೇಕಾಗಿದೆ.—ಈ ದಿನ ಭಾಗರ್ವಾಸರ ಶಾರದಾಪೂಜೆಯನ್ನು ಮ|| ಪಿ. ಶ್ರೀನಿವಾಸಚಾರ್ಯರೆಂಬುವರು ಸ್ವಗೃಹದಲ್ಲಿ ಅಲಂಕಾರಗಳಿಂದ ಬಹಳ ನೇತ್ರಾನಂದಕರವಾಗಿ ಮಂಟಪವನ್ನು ರಚಿಸಿ ಶಾರದಾ ಪೂಜೆಯನ್ನು ನೆರವೇರಿಸಿದರು. ಸಂಗೀತವೂ ಭಜನೆಯೂ ಬಹಳ ಆಹ್ಲಾದಕರವಾಗಿತ್ತು. ವಿದ್ಯೆಯೇ ಲೋಕದಲ್ಲಿ ದೊಡ್ಡದೆಂಬ ಅರ್ಥಕ್ಕೆ ವೇ|| ಅಚ್ಯುತದಾಸರಿಂದ ಉಪನ್ಯಾಸ ನಡೆದು ಮಂಗಳಾರತಿ ಬೆಳಗಿದು ಸರ್ವರಿಗೂ ಗಂಧಪುಷ್ಪ ತಾಂಬೂಲಗಳು ಹಂಚಲ್ಪಟ್ಟವು.—ವಿದ್ಯಾ ಇಲಾಖೆಯಲ್ಲಿ ಬಡಮಾಸ್ಟರುಗಳಿಗೆ ವೇತನಾಭಿವೃದ್ಧಿಯಾಗುವುದೆಂಬ ವದಂತಿಯು ಕರ್ಣಾನಂದವಾಗುತ್ತಿದ್ದುದು ಈಗ ನಾಮಾವಶಿಷ್ಟವಾಗುವಂತಿದೆ. ಎ. ವಿ. ಸ್ಕೂಲಿಗೆ ಮಂಜೂರಾಗಿದ್ದ ಹೊಸ ಉಪಾಧ್ಯಾಯರು 4 ತಿಂಗಳಿಂದ ಬಾರದಿರುವದು ಆಶ್ಚರ್ಯವಾಗಿರುತ್ತೆ.

ಫ್ರೇಂಚ್‌ರಾಕ್ಸ್.—ಪ್ರತಿ ದಿನವೂ ಮೋಡ ಮುಚ್ಚಿಕೊಂಡಿರುತ್ತದೆಯೇ ಹೊರತು ಮಳೆ ಬರುವದಿಲ್ಲ. ಈಗ ಜನಗಳೂ ಸಹ ಕುಡಿಯುವದಕ್ಕೆ ನೀರಿಲ್ಲದೆ ಸಂಕಟಪಡುವ ಗತಿ ಬಂದಿದೆ. ಉಪ್ಪುನೀರಿನ ಭಾವಿಗಳೆಲ್ಲಾ ಬತ್ತಿಹೋದವೆಂದೇ ಹೇಳಬೇಕು. ಇಂಥಾ ನೀರಿನ ಕ್ಷಾಮದಲ್ಲಿಯೂ ಇಲ್ಲಿನ ಛತ್ರದ ಭಾವಿಯ ತಿರುಗಣೆಯನ್ನು ಜನಗಳು ನೀರು ಸೇದಿಕೊಳ್ಳದ ಹಾಗೆ ಯಾರೋ ತೆಗೆದು ಇಟ್ಟುಕೊಳ್ಳುತ್ತಾರೆ. ಈ ಧರ್ಮಕ್ಕಿಂತಲೂ ದೊಡ್ಡ ಧರ್ಮ ಉಂಟೇ? ಮೇಲ್ಕಂಡ ಭಾವಿಯ ತಿರುಗಣೆಯನ್ನು ಯಾರೂ ತೆಗೆಯದ ಹಾಗೆ ಬಂದೋಬಸ್ತು ಮಾಡುವರೆಂದು ನಂಬಿದೇವೆ.—ಊರಿನ ಮಧ್ಯದಲ್ಲಿ ಪಾಪಾಸು ಕಳ್ಳಿ ಬೆಳೆದುಕೊಂಡು ವಿಷಪ್ರಾಣಿಗಳು ಸೇರಿಕೊಳ್ಳುವದಕ್ಕೆ ಅನುಕೂಲವಾಗಿದೆ. ಹಿಂದೆ ಸರ್ಕಾರದವರು ಇದನ್ನು ತೆಗೆಸಿದ್ದರು. ಪುನಃ ಹುಟ್ಟಿಕೊಂಡಿವೆ, ಮೊದಲೇ ಸರಿಯಾಗಿ ನಾಶಪಡಿಸಿದ್ದರೆ ಪುನಃ ಬೆಳೆಯುವದಕ್ಕೆ ಆಸ್ಪದವಿರುತ್ತಿರಲಿಲ್ಲ.—ಊರಿನ ಸಂದುಗೊಂದುಗಳಲ್ಲಿ ತುಂಬಾ ಗಲೀಜಾಗಿದೆ. ಕಟದಾ ಸರಿಯಾಗಿ ಸಾಗಿಸುವ ಏರ್ಪಾಡುಮಾಡುವದು ಒಳ್ಳೇದು. ಇಲ್ಲಿರತಕ್ಕ ಮ್ಯುನಿಸಿಪಲ್ ಮೆಂಬರುಗಳು ಟವರ್ ವಿಷಯದಲ್ಲಿ ಸ್ವಲ್ಪವಾದರೂ ಚಿಂತಿಸಿದರೆ ಪ್ರಯೋಜನವಾಗಬಹುದು. ಈ ಕ್ಷಾಮಕಾಲದಲ್ಲಿ ಸ್ವಕಾರ್ಯಕ್ಕಿಂತ ಬಡಪ್ರಜೆಗಳ ಹಿತವನ್ನು ಚಿಂತಿಸಿ ಅನುಕೂಲವಾದ ಏರ್ಪಾಡುಗಳನ್ನು ಮಾಡಿಸಲು ಪ್ರಯತ್ನಪಡುವದು ಶ್ರೇಯಸ್ಕರವಾದದ್ದು. ನಮ್ಮ ಅಮಲ್ದಾರ್ರು ಕೆರೆಯ ಭಾವಿಗಳನ್ನಾದರೂ ಆಳಮಾಡಿಸಿಕೊಟ್ಟರೆ ತುಂಬಾ ಉಪಕಾರವಾಗಿರುತ್ತೆ.

ಗೋರೀಬಿದನೂರು ತಾ|| ಮಂಚೇನಹಳ್ಳಿ.—ಈ ಗ್ರಾಮದಲ್ಲಿ ಭರಣಿ ಮಳೆ ಲಾಗಾಯತು ಇದು ವರಿವಿಗೂ ಸುತರಾಂ ಮಳೆ ಬರಲಿಲ್ಲ. ಪ್ರಜೆಗಳಿಗೆ ಕ್ಷಾಮಭೀತಿಯುಂಟಾಗಿದೆ.—ಘನಹೊಂದಿದ ಲೇಡಿ ಹಾರ್ಡಿಂಗ್ ರವರ ಮರಣ ನಿಮಿತ್ತವಾಗಿ ಇಲ್ಲಿನ ಸ್ಕೂಲುಗಳೆಲ್ಲಾ ತಾ. 15 ರಲ್ಲಿ ಮುಚ್ಚಲ್ಪಟ್ಟು ಅವರ ಮರಣಕ್ಕಾಗಿ ಎಲ್ಲರೂ ತುಂಬಾ ಸಂತಾಪಪಟ್ಟರು.—ಈ ಗ್ರಾಮದಲ್ಲಿ ಈಗ 3 ವರ್ಷದ ಮುಂಚೆ ಮೈಸೂರು ಸರ್ಕಾರದ ಸಹಾಯದಿಂದ ಲಕ್ಷ್ಮೀವೆಂಕಟೇಶ್ವರಸ್ವಾಮಿ ಬ್ಯಾಂಕಿನವರು ಕಟ್ಟಿಸಿರುವ ಆಂಗ್ಲಗೀರ್ವಾಣಶಾಲಾದಲ್ಲಿ ನೆಲಕ್ಕೆ ಹಾಕಿರುವ ಗಾರೆಯನ್ನು ಭೇದಿಸಿಕೊಂಡು ಬರುತ್ತಿರುವ ಚೆದಲಿನಿಂದ ಉಂಟಾಗುವ ತೊಂದರೆಯನ್ನು ನಿವಾರಣೆಮಾಡುವುದಕ್ಕಾಗಿ ಇದೇ ಗ್ರಾಮದ ಮುಗಳಾದ ತಲ್ಲಂ ನರಸಿಂಹಯ್ಯನವರು 25 ರೂಪಾಯಿ, ಬೆಂಗಳೂರು ಚಿಕ್ಕಣ್ಣನವರ ಮಕ್ಕಳು ವೀರಭದ್ರಪ್ಪನವರು 25 ರೂಪಾಯಿ, ಹಜ ನಮುದ್ದೀರಪ್ಪನವರ ಮಕ್ಕಳು ವೀರಭದ್ರಪ್ಪನವರು 10 ರೂಪಾಯಿ, ಆರೂರು ನಂಜಯ್ಯನವರು 5 ರೂಪಾಯಿ, ಕೋಲಾಟದ ಬಾಲಣ್ಣ 5 ರೂಪಾಯಿ, ಜುಮ್ಲಾ 70 ರೂಪಾಯಿ ಖರ್ಚಿನಿಂದ ತಾಷಪತ್ರಿ ಬಂಡೆಗಳನ್ನು ಹಾಸಿಸಿ, ಸಿಮೆಂಟ್ ಮಾಡಿಸಿಕೊಟ್ಟು ಸ್ಕೂಲಿಗೆ ಸಹಾಯಮಾಡುವುದಾಗಿ ವಾಗ್ದಾನಮಾಡಿ ಕೆಲಸಕ್ಕೆ ಪ್ರಾರಂಭಿಸುತ್ತಿದಾರೆ. ಇದಲ್ಲವೇ ದೊಡ್ಡಮನುಷ್ಯರ ಸುಗುಣಕ್ಕೆ ಸಾಕ್ಷಿ? ಇದು ಬಿಟ್ಟು ಇಂಥಾ ಸ್ಕೂಲನ್ನೇ ವಜಾಮಾಡಿಸಬೇಕೆಂದು ದುಷ್ಪ್ರಯತ್ನಗಳನ್ನು ಮಾಡುತ್ತಾ ಅವರಲ್ಲಿಯೂ ಅರ್ಜಿ ಬರೆದು ಸುಳ್ಳು ರುಜು ಹಾಕಿ ರಿಜಿಸ್ಟ್ರು ಲಕ್ಕೋಟೆಯ ಮೇಲೆ ಸುಳ್ಳು ಬರವಣಿಗೆ ಬರೆಯುತ್ತಾ ಇರುವ ಕುತಂತ್ರಿಗಳ ಗುಣವೆಂಥಾದ್ದಿನ್ನೋ ನಾ?

ಹಾಸನ.—ಇಲ್ಲಿ ನೆನ್ನೆಯಿಂದ ಮಳೆ ಬಲವಾಗಿ ಬರುತ್ತಿದೆ. ರೋಗಬಾಧೆ ಪ್ಲೇಗಿನದ ಕಾಣುವುದಿಲ್ಲ. ಅಲ್ಲಲ್ಲಿ ಕಣ್ಣುನೋವು ಮಾತ್ರ ಇವೆ ಮ್ಯುನಿಸಿಪಾಲಿಟಿಯ ಕಾರ್ಯಗಳು ಅಷ್ಟು ತೃಪ್ತಿಯಾಗಿಲ್ಲ. ರೋಡ್ಗಳು ಎಲ್ಲೆಲ್ಲಿಯೂ ತುಂಬಿದೆ. ಬಿದ್ದ ನೀರು ಸಲೀಸಾಗಿ ಹೋಗುವುದಿಲ್ಲ. ರಾತ್ರಿಯಲ್ಲಿ ಕೆಲವೆಡೆ ದೀಪಗಳು ಚೆನ್ನಾಗಿ ಉರಿಯುವುದಿಲ್ಲ. ಮತ್ತು ಬೇಗನೆ ಆರಿಹೋಗುತ್ತವೆ ಈ ಅಕ್ರಮಗಳನ್ನೆಲ್ಲಾ ವೈಸ್ ಪ್ರೆಸಿಡೆಂಟರು ಸರಿಮಾಡಿಸಬೇಕಾಗಿದೆ.—ಕಳೆದ ತಾ. 15 ನೇ ಬುಧವಾರ ಘನವನ್ನೈದಿದ ಲೇಡಿ ಹಾರ್ಡಿಂಗ್‌ಯವರು ಸೀಮೆಯಲ್ಲಿ ಕಾಲವಾದರೆಂಬ ದುಃಖಕರವಾದ ವರ್ತಮಾನವು ತಲಪಿತು. ಡೆಪ್ಯುಟಿ ಕಮಿಷನರವರೂ, ಪುರವಾಸಿಗಳೂ, ಅಧಿಕಾರಿಗಳೂ ಪರಿತಾಪಯುಕ್ತರಾದುದು ಮಾತ್ರವಲ್ಲದೆ ಅದೇ ದಿನ ಸಾಯಂಕಾಲ ಇಲ್ಲಿನ ಮಿಷನ್ ದೇವಾಲಯದಲ್ಲಿ ಎಲ್ಲರೂ ಸೇರಿ ಆಕೆಯವರ ಆತ್ಮಕ್ಕೆ ನೆಮ್ಮದಿಯುಂಟಾಗಲೆಂದು ಪ್ರಾರ್ಥಿಸಿದರು. ರೆವ್. ಎ. ಬ್ರೋಕ್‌ಬ್ಯಾಂಕ್ ದೊರೆಯವರು ಈ ಸೇವೆಯನ್ನು ಎಲ್ಲರ ಮನಸ್ಸಿಗೂ ನಾಟುವಂತೆ ನಡಿಸಿದರು. ಮರುದಿನ ನಮ್ಮ ಡೆಪ್ಯುಟಿ ಕಮಿಷನರ್ ಮಿ|| ವೆದರಾಲ್‌ರವರ ಅಧ್ಯಕ್ಷತೆಯಲ್ಲಿ ಇಲ್ಲಿನ ಜೂಬಲಿ ಹಾಲ್ ಮುಂದರದಲ್ಲಿ ಪುರವಾಸಿಗಳೂ, ನೂರಾರು ಮಂದಿ ಮಕ್ಕಳೂ ಸಭೆ ಸೇರಿ, ಲೇಡಿ ಹಾರ್ಡಿಂಗ್ ರವರ ಗುಣಕಥನವನ್ನು ಮಾಡಿ, ಘನವನ್ನೈದಿದ ವೈಸ್‌ರಾಯಿಪ್ರಭುಗಳಿಗೆ ಆಕಸ್ಮಿಕವಾಗಿ ಸಂಭವಿಸಿದ ಈ ದುಃಖದಲ್ಲಿ ಸಹಭಾಗಿಗಳಾಗಿ ಅವರಿಗೆ ಆದರಣೆಯನ್ನು ಕೃಪೆಗೈಯ್ಯುವಂತೆ ಹಾರೈಸಿ, ಇದೇ ಅಭಿಪ್ರಾಯವನ್ನು ಸೂಚಿಸಿ ವೈಸ್‌ರಾಯ್ ಪ್ರಭುಗಳಿಗೆ ಈ ಪುರವಾಸಿಗಳ ಪರವಾಗಿ ಒಂದು, ಮಕ್ಕಳ ಪರವಾಗಿ ಒಂದು, ಈ ರೀತಿ ಎರಡು ಟೆಲಿಗ್ರಾಮ್‌ಗಳನ್ನು ಅವರ ಪ್ರೈವೆಟ್ ಸೆಕ್ರೆಟರಿಯವರ ಮೂಲಕ ರವಾನಿಸಿದರು.

ಮಾಲೂರು.—ಈ ತಿಂಗಳ ಪ್ರಾರಂಭದಿಂದಲೂ ವಿಪರೀತ ಮೇಘಾಡಂಬರವೇ ಹೊರತು ಮಳೆ ಸುತರಾಂ ಇಲ್ಲ. ರೈತರು ವ್ಯವಸಾಯಕೆಲಸಕ್ಕೆ ಅನುಕೂಲವಿಲ್ಲದೆ ಆಕಾಶವನ್ನೇ ನಿರೀಕ್ಷಿಸುತ್ತಾ ನಿಟ್ಟುಸಿರುಬಿಡುತ್ತಿರುವರು. ಧಾರಣೆವಾಸಿಗಳು ದಿನೇದಿನೇ ಏರುತ್ತಿರುವದು ಬಡಜನಗಳ ಜೀವನ ಬಹಳ ಕಷ್ಟವಾಗಿದೆ. ಕೆರೆ ಕಟ್ಟೆಗಳೆಲ್ಲಾ ಒಣಗಿಹೋಗಿ ನೀರಿನ ಕಷ್ಟ ಹೇಳತೀರದು. ಗೋಕಾಯಿಗಳ ಅವಸ್ಥೆ ವಿವರಿಸಲಸಾಧ್ಯವಾಗಿದೆ.—ಈಗ್ಗೆ 3 ತಿಂಗಳ ಕೆಳಗೆ ನಮ್ಮ ದಿವಾನ್‌ಸಾಹೇಬರವರ ಸವಾರಿ ಚಿತ್ತೈಸಿದ್ದ ಕಾಲದಲ್ಲಿ ನೀರಿನ ಕಷ್ಟ ಪರಿಹರಿಸಿ ಕಾಪಾಡಬೇಕೆಂದು ಈ ಊರಿನ ಮಹಾ ಜನರು ಪ್ರಾರ್ಥಿಸಿಕೊಂಡದ್ದರ ಮೇಲೆ ಅವರು ಪ್ರಜೆಗಳ ಕಷ್ಟವನ್ನು ಸಾಕ್ಷಾತ್ತಾಗಿ ತಿಳಿದು ಜಲವಸತಿ ಕಲ್ಪಿಸುವದಾಗಿ ಅಪ್ಪಣೆ ಕೊಡಿಸಿದರು. ತಹಲ್ ವರಿವಿಗೂ ಅವರ ಅನುಗ್ರಹ ಉಂಟಾಗಲಿಲ್ಲ. ಪ್ರಜೆಗಳ ಕಷ್ಟ ವಿವರಿಸಲಸಾಧ್ಯವಾಗಿದೆ.—ಪೆನ್ಷನ್ನಿಂದ ನಿವೃತ್ತರಾದ ಮ|| ಅಮಲ್ದಾರ್ ಕೇಸರಿಸಿಂಗರವರ ಕಾಲದಲ್ಲಿ ಈ ಊರಿನಲ್ಲಿ ವಾಸವಾಗಿ ಅನೇಕ ಕಾಲದಿಂದ ಕೈಮಗ್ಗಗಳನ್ನಿಟ್ಟುಕೊಂಡು ಕೆಲಸಮಾಡುತ್ತಿರುವ ನೈಗೆಯವರಿಗೆ ಅಮಲ್ದಾರರವರು ಮತ್ತು ವೀವಿಂಗ್ ಫ್ಯಾಕ್ಟರಿ ಇನ್ಸ್‌ಪೆಕ್ಟರ್ ಮ|| ಸಂಜೀವರಾಯರು ಬಂದು ಫ್ಲೈಷಟಲ್ ಎಂಬ ಹೊಸ ತರಹಾ ಮಗ್ಗಗಳನ್ನು ಅದರಲ್ಲಿ ನಡೆಯುವ ಕೆಲಸಕ್ಕೂ ಕೈಮಗ್ಗದಲ್ಲಿ ನಡೆಯುವ ಕೆಲಸಕ್ಕೂ ಇರುವ ವ್ಯತ್ಯಾಸ ಮೊದಲಾದ ಸಂಗತಿಗಳನ್ನು ವಿವರಿಸಿ ಈ ಜನರೆಲ್ಲಾ ಫ್ಲೈಷಟಲ್ ಮಗ್ಗಗಳನ್ನು ಇಟ್ಟು ಕೆಲಸಮಾಡುತ್ತಾ ಬರಬೇಕೆಂದು 30 ಮಗ್ಗಗಳನ್ನು ತರಿಸಿಕೊಟ್ಟು ಅದರಲ್ಲಿ ಕೆಲಸ ಅಭ್ಯಾಸಮಾಡಿಸುವದಕ್ಕೆ ಡಿಮಾನ್‌ಸ್ಟ್ರೇಟರ್ ಚಂಗೋಡಮೊದಲಿಯಾರ್ರನ್ನು ಕಳುಹಿಸಿರುತ್ತಾರೆ. ಇವರು 6-7 ತಿಂಗಳಿಂದಲೂ ಬಹಳ ಮುತುವರ್ಜಿಯಿಂದ 30 ಮಗ್ಗಗಳವರಿಗೂ ತಕ್ಕಮಟ್ಟಿಗೆ ಅಭ್ಯಾಸಮಾಡಿಸಿದರು. ಇಲ್ಲಿನ ಜನರಿಗೆ ಈಗ ತಮ್ಮಷ್ಟಕ್ಕೆ ಕೆಲಸಮಾಡುವಷ್ಟು ಅನುಭವವುಂಟಾಗಿದೆ. ಮ|| ಮೊದಲಿಯಾರ್ರವರು ಸಣ್ಣ ವಯಸ್ಸಿನವರಾದರೂ ಬಹಳ ಶ್ರದ್ಧೆಯಿಂದ ಕೆಲಸ ತೋರಿಸಿ, ಅನುಭವ ಮಾಡಿಸಿದರು. ಇವರು ಬಹಳ ಬುದ್ಧಿವಂತರೂ, ಗುಣಗ್ರಾಹಿಗಳೂ ಆಗಿದಾರೆ.

ಶಾನ್ತಾನಹಳ್ಳಿ ತಾ|| ಹಾರೋಹಳ್ಳಿ.—ಈ ಊರು ಬಾಯ್ಸ್ ಸ್ಕೂಲಿನಲ್ಲಿ ಉಪಾಧ್ಯಾಯರುಗಳ 2 ನೇ ಮೀಟಿಂಗು ತಾ|| 11 ನೇ ಶನಿವಾರ ನಡೆಯಿತು. ಸ್ಕೂಲ್ ಕಟ್ಟಡವು ನೇತ್ರಾನಂದಕರವಾಗಿ ಅಲಂಕರಿಸಲ್ಪಟ್ಟಿತ್ತು. ಈ ಮೀಟಿಂಗಿನ ಉದ್ದಿಷ್ಟ ಕೆಲವು ಸುತ್ತುಮುತ್ತಿನ ಗ್ರಾಮಗಳ ಉಪಾಧ್ಯಾಯರೂ, ಗ್ರಾಮದ ಕೆಲವು ದೊಡ್ಡ ಮನುಷ್ಯರೂ, ಸ್ಕೂಲ್ ಬಾಲಕ, ಬಾಲಕಿಯರೂ ಹಾಜರಿದ್ದರು. ಈ ಸಭೆಗೆ ಪಡವಾಗೆರೆ ಸ್ಕೂಲ್ ಹೆಡ್ ಮಾಸ್ಟರನ್ನು ನಾಯಕರನ್ನಾಗಿ ಮಾಡಿತ್ತು. ಬಾಯ್ಸ್ ಸ್ಕೂಲ್ ಹೆಡ್ ಮಾಸ್ಟರವರು ಸಂಘದ ಪರವಾಗಿ ಸ್ವಲ್ಪ ಸಂಭಾಷಣೆ ಮಾಡಿದ ಮೇಲೆ ಮ|| ಎಸ್. ಸುಬ್ಬಣ್ಣನವರು 1 ನೇ ತರಗತಿಗೆ ಭೂಗೋಳ ಪಾಠವನ್ನು ಪಾಠಾ ಬೋಧಿಸಿದರು. ಮ|| ವೆಂಕಟರಾಮಯ್ಯನವರು ಮಕ್ಕಳ ತರಗತಿಗೆ ಬಣ್ಣಗಳ ವಿಷಯದಲ್ಲಿ ಒಂದು ಪಾಠವನ್ನೂ, ಗಣಿತ ಪಾಠವನ್ನೂ ಹೊಸ ಮಾದರಿಯಲ್ಲಿ ಬೋಧಿಸಿದರು. ಅನಂತರ ಮ|| ಎಸ್. ಸುಬ್ಬಣ್ಣನವರು ಭಾಷಾ ಪಾಠಗಳಲ್ಲಿ ಒಂದಾದ ಪದ್ಯ ಭಾಗವನ್ನು ಬೋಧಿಸುವ ಹೊಸ ಮಾರ್ಗವನ್ನು ಕುರಿತು ಸ್ವಾರಸ್ಯವಾಗಿ ಉಪನ್ಯಾಸ ಮಾಡಿದರು. ಒಡನೆಯೇ ಹೆಡ್ ಮಾಸ್ಟರವರು ಅಲ್ಲಿ ಸೇರಿದ್ದವರ ಪರವಾಗಿ ಶ್ರೀಮದಿಂಡಿಯಾ ಚಕ್ರವರ್ತಿಯವರ ಮತ್ತು ಶ್ರೀಮನ್ ಮಹಾರಾಜರವರ ಶ್ರೇಯಃ ಪ್ರಾರ್ಥನೆ ಮಾಡುತ್ತಿರುವಲ್ಲಿ ಬಾಲಕ ಬಾಲಕಿರು ಮಂಗಳವನ್ನು ಹಾಡಿದರು. ಬಳಿಕ ಸಭೆಯು ಬರಖಾಸ್ತಾಯ್ತು. ಈ ಮೀಟಿಂಗಿಗೆ ಮ|| ವೆಂಕಟೇಶಯ್ಯನವರನ್ನು ಸೆಕ್ರೆಟರಿಯಾಗಿ ನೇಮಿಸಲಾಯ್ತು. ಮುಂದಿನ ಮೀಟಿಂಗು ಆಗಸ್ಟ್ ತಾ. 8 ರಲ್ಲಿ ನಡೆಯುವದಾಗಿಯೂ, ಆ ದಿನದ ಮೀಟಿಂಗಿಗೆ ಬರುವ ಪರಸ್ಥಳದ ಅತಿಥಿಗಳಿಗೆ ಮ|| ಸಾಹುಕಾರ್ ಸುಬ್ರಹ್ಮಣ್ಯಯ್ಯನವರು ಆತಿಥ್ಯ ನಡಿಸುವಂತೆಯೂ ಗೊತ್ತು ಮಾಡಲ್ಪಟ್ಟಿತು. ಮೀಟಿಂಗಿನ ದಿನ ಮ|| ರ್ಸ್ಯಾ. ಅನಂತಯ್ಯನವರು ಆತಿಥ್ಯ ನಡಿಸಿದರು. ದಿನೇ ದಿನೇ ಹಾರೋಹಳ್ಳಿ ಬಾಯ್ಸ್ ಸ್ಕೂಲ್ ಅಭಿವೃದ್ಧಿಗೆ ಬರುವದಕ್ಕೆ ಹೆ. ಮಾ. ಮ|| ಚಂದ್ರಶೇಖರಯ್ಯನವರ ಮುತುವರ್ಜಿಯೇ ಕಾರಣವಾಗಿರುತ್ತೆ.

ದೇವನಹಳ್ಳಿ.—ಈ ಊರಿನಲ್ಲಿ ಸ್ವಲ್ಪ ಮಳೆ ಬಿದ್ದದ್ದರಿಂದ ರೈತರು ಹದಮಾಡಿಟ್ಟಿದ್ದ ಹೊಲಗಳಲ್ಲಿ ಮನೆಯಲ್ಲಿ ತಿನ್ನುವದಕ್ಕಿಲ್ಲದೆ ಬಚ್ಚಿಟ್ಟಿದ್ದ ರಾಗಿ ವಗೈರೆ ದವಸವನ್ನು ತೆಗೆದುಕೊಂಡುಹೋಗಿ ಹೊಲಗಳಲ್ಲಿ ಹಾಕಿ ಮಳೆ ಎದುರು ನೋಡುತ್ತಾರೆ. ವಿಶೇಷಗಾಳಿ ಪ್ರಾಪ್ತವಾಗಿ ಮಳೆ ಬರುವಂತೆ ಮೋಡದ ಸೂಚನೆ ತೋರಿಸುತ್ತಾ ತುಂತುರು ಹನಿಗಳು ಬೀಳುವದು.—ಸೇದುವ ಭಾವಿಗಳಲ್ಲೂ ಕೆರೆಗಳಲ್ಲೂ ಕುಡಿಯುವದಕ್ಕೂ ಬಳಸುವದಕ್ಕೂ ನೀರಿಲ್ಲದೆ ಬಹಳ ತೊಂದರೆಪಡುತ್ತಿದಾರೆ. ಜಾನ್ವಾರುಗಳ ಕಷ್ಟವಂತು ಹೇಳತೀರದು. 1-2 ತಿಂಗಳ ಲಾಗಾಯ್ತು ರಸ್ತೆಗಳ ಉಭಯಪಾರ್ಶ್ವಗಳಲ್ಲೂ ಸಾಲುಮರಗಳಲ್ಲಿರತಕ್ಕ ಅರಳಿ, ಗೋಣಿ ಸೊಪ್ಪುಗಳನ್ನು ಕತ್ತರಿಸಿತಂದು ಹಾಕುತ್ತಾ ಇದಾರೆ. ಒಂದು ರೂಪಾಯಿ ಕೊಟ್ಟರೂ ಒಂದು ಹೊರೆ ಹುಲ್ಲು ಸಿಕ್ಕುವದೇ ಪ್ರಯಾಸವಾಗಿದೆ. ಧಾರಣೆವಾಸಿಗಳಂತು ಹೇಳತೀರದು. ರೂಪಾಯಿಗೆ 6 ಸೇರು ಅಕ್ಕಿ, 10½ ಸೇರು ರಾಗಿ ಕೊಡುತ್ತಿದಾರೆ. ಬಡವರು ಜೀವಿಸುವುದು ಬಹಳ ಕಷ್ಟವಾಗಿರುತ್ತೆ. ಇಂಥಾ ಕಷ್ಟಕಾಲದಲ್ಲಿ ದಯಾಳುವಾದ ಸರ್ಕಾರದವರು ದವಸಧಾನ್ಯಗಳನ್ನು ತರಿಸಿ ಬಡವರಿಗೆ ಮಾರುತ್ತಾ ಬಂದರೆ ಮಹೋಪಕಾರವಾಗುತ್ತೆ. ಅಲ್ಲದೆ ಕ್ಷಾಮದ ಅಲೋನ್ಸಾದರೂ ಕೊಡುವಂತೆ ಸ್ಯಾಂಕ್ಷನ್ ಮಾಡಿದರೆ ಉತ್ತಮ. ಇದೂ ಅಲ್ಲದೆ ಎಲ್ಲಾ ತಾಲ್ಲೂಕಿನ ಅಮಲ್ದಾರರೂ ಕ್ಷಾಮಪ್ರಾಪ್ತವಾಗಿರುವ ಊರುಗಳಲ್ಲಿ ಕೆಲವು ದೊಡ್ಡ ಸಂಸಾರಿಗಳಾದ ರೈತರನ್ನು ಕರಸಿ ಅವರಲ್ಲಿರತಕ್ಕ ದವಸದಲ್ಲಿ ಕೆಲವು ದವಸವನ್ನು ಪೇಟೆ ಧಾರಣೆಗಿಂತ ಸ್ವಲ್ಪ ಅಗ್ಗವಾಗಿ ಮಾರಬೇಕೆಂದು ಹೇಳಿದ್ದರ ಮೇಲೆ ಕೆಲವು ಮುಖಂಡರು ಸೇರಿ ಧಾನ್ಯಗಳನ್ನು ತಂದು ಅಗ್ಗವಾಗಿ ಮಾರುತ್ತಾ ಇರುವದರಿಂದ ಬಡವರು ಕೊಂಡುಕೊಂಡು ಜೀವಿಸುತ್ತಾರೆ. [ಇದು ನಿಜವೇ?—ಎಡಿ.] ಇವರಂತೆಯೇ ಈ ತಾಲ್ಲೂಕಿನ ಅಮಲ್ದಾರರೂ ಏರ್ಪಾಟುಮಾಡಿದರೆ ಬಡವರ ತಸ್ಸ ಕೊಂಚಮಟ್ಟಿಗೆ ಕಮನವಾಗಬಹುದು.—ಇಲ್ಲಿ ಒಂದು ಕೋಆಪರೆಟಿವ್ ಸೊಸೈಟಿ ಎಂಬುವ ಬ್ಯಾಂಕು ವಿಸರ್ಜಿತವಾದ್ದರಿಂದ ಇನ್ನು ಮುಂದೆ ಬಡವರ ಕಷ್ಟವು ನಿವಾರಣೆಯಾಯ್ತೆಂದು ತಿಳಿದುಕೊಂಡಿದ್ದೆವು. ಇದರಿಂದ ಈಗ ಇನ್ನೂ ಕಷ್ಟವು ಹೆಚ್ಚಿತು. ಹ್ಯಾಗೆಂದರೆ ನಾವು ವರ್ತಕರಲ್ಲಿ ಹಣ ತರುವಾಗ ಆಧಾರ, ಫೋರ್ಜ್, ಜಾಮೀನ್, ಈ ವಿಧವಾದ ತೊಂದರೆಗಳಿದ್ದವು ಮತ್ತು ಶೇಕಡಾ ತಿಂಗಳೊಂದಕ್ಕೆ ಒಂದು ರೂಪಾಯಿನಂತೆ ಬಡ್ಡಿ ಕೊಡುತ್ತಾ ಇದ್ದೆವು. ಈ ಸಂಘಕ್ಕೆ ಸೇರಿದ ಷೇರುದಾರ್ರುಗಳಿಗೂ ಈ ತೊಂದರೆಗಳಿರುವಾಗ ಇದರಿಂದ ಇತರರಿಗೆ ಎಷ್ಟುಮಟ್ಟಿನ ಪ್ರಯೋಜನವಿರಬಹುದೋ ಗೊತ್ತಾಗಲಿಲ್ಲ.—ಹಾಲ್ತಿ ತಿಂಗಳು 15 ನೇ ತಾ. ಬುಧವಾರ ಮಧ್ಯಾಹ್ನ 10 ಘಂಟೆ ಲಾಗಾಯ್ತು 12 ಘಂಟೆವರಿಗೆ ಯಾರೋ ಒಬ್ಬ ಪುಣ್ಯಾತ್ಮನು ಬೆಂಗಳೂರಿಂದ ಮೋಟರಿನಲ್ಲಿ ಬಂದು 300 ರೂಪಾಯಿ ಬೆಲೆಬಾಳುವಷ್ಟು ಸೀರೆ, ಪಂಚೆ, ವಗೈರೆ ಬಟ್ಟೆಗಳನ್ನು ಬಡಬಗ್ಗರಿಗೆ ದಾನಮಾಡಿ ದೊಡ್ಡಬಳ್ಳಾಪುರದ ಪ್ರಾಂತ್ಯಕ್ಕೆ ಇದೇ ರೀತಿ ನಡಿಸುವದಕ್ಕೆ ಹೊರಟುಹೋದರು. ಇಂಥಾ ಧರ್ಮವಾಡತಕ್ಕವರಿಗೆ ಭಗವಂತನು ಶ್ರೇಯಸ್ಸುಂಟುಮಾಡಲಿ! [ಇದು ನಿಜವೇ?—ಎಡಿ.]

ಅರಸೀಕೆರೆ ತಾ|| ದೊಡ್ಡಬಾಣಾವರ.—ಒಂದು ವಾರದ ಹಿಂದೆ ಒಂದೆರಡು ದಿನ ಸ್ವಲ್ಪ ಸೋನೆ ಮಳೆಯಾಗಿ ರೈತರು ಹೊಲಗಳನ್ನು ಬಿತ್ತಿ ಪುನಃ ಮಳೆಯಿಲ್ಲದೆ ಎದುರು ನೋಡುತ್ತಿದಾರೆ. ರಾಗಿಯು ರೂಪಾಯಿಗೆ 13-14 ಸೇರು, ಅಕ್ಕಿ 6-7 ಸೇರು ಮಾರುವದು. ಬಡವರು ಜೀವನಮಾಡುವದು ಬಹಳ ದುಸ್ತರ. ಜಾನುವಾರುಗಳಿಗೆ ಮೇವು ಮತ್ತು ನೀರು ಸಿಕ್ಕುವುದು ಬಹಳ ಕಷ್ಟ.—ಈ ಹೋಬಳಿಯಲ್ಲಿ 6-7 ವರ್ಷಗಳಿಂದ ಪ್ರಜಾನುರಾಗಿಗಳಾಗಿ ಕೆಲಸ ಮಾಡುತ್ತಿದ್ದ ಶೇಕ್ದಾರ್ ಮ|| ಕೇಶವರಾಯರಿಗೆ ಕಣಕಟ್ಟೆ ಹೋಬಳಿಗೆ ವರ್ಗವಾದದ್ದಕ್ಕಾಗಿ ಈ ಊರಿನ ಪ್ರಮುಖಜನರು ಅವರಿಗೆ ಒಂದು ಎಂಟರ್‌ಟೇನ್‌ಮೆಂಟ್ ಕೊಟ್ಟು ಆ ದಿವಸ ಅರಸಿಕೆರೆ ವೇ|| ತಿಮ್ಮಪ್ಪದಾಸರಿಂದಲೂ, ಮಾರನೇ ದಿನ ಅವರ ಮಕ್ಕಳು ರಾಮಣ್ಣನವರಿಂದಲೂ ಹರಿಕಥೆ ಮಾಡಿಸಿ ಸರ್ವರಿಗೂ ಕರ್ಣಾನಂದವನ್ನುಂಟುಮಾಡಿದರು. ಇವರ ಸ್ಥಾನಕ್ಕೆ ವರ್ಗವಟ್ಟು ಬಂದಿರುವ ಮ|| ಅಳಸಿಂಗ್ರಾಚಾರ್ಯರು ಪ್ರಜಾನುರಾಗಿಗಳಾಗಿದಾರೆಂದು ತಿಳಿಸಲು ಬಹಳ ಸಂತೋಷ.—ಇಲ್ಲಿನ ಕನ್ನಡ ಬಾಯ್ಸ್ ಸ್ಕೂಲಿನಲ್ಲಿ ಇರುವ 180 ಜನ ಬಾಲಕರಿಗೆ ಹಾಲಿ ಇರುವ ಕಟ್ಟಡದಲ್ಲಿ ಸ್ಥಳ ಸಾಲದೆ ತೊಂದರೆಯಾಗಿದೆ. ಇಲ್ಲಿನ ಹೆಡ್ ಮಾಸ್ಟರ್ ಮ|| ಅಹೋಬಲಶಾಸ್ತ್ರಿಗಳು ಹೊಸಪದ್ಧತಿಗನುಸಾರವಾಗಿ ಪಾಠ ಹೇಳುವದನ್ನು ಜಾರಿಗೆ ತಂದಿರುವುದಕ್ಕಾಗಿ ಇಲ್ಲಿನ ಜನರು ತುಂಬಾ ಸಂತೋಷಪಡುತ್ತಾರೆ. ಪ್ರತಿ ಭಾನುವಾರವೂ ಇಲ್ಲಿನ ಉಪಾಧ್ಯಾಯರುಗಳು ಕನ್ನಡ ಸ್ಕೂಲಿನಲ್ಲಿ ಸೇರಿ, ಉಪನ್ಯಾಸ ಮತ್ತು ಮಾದರಿ ಪಾಠ ನಡಿಸುತ್ತಾ ಇದಾರೆ. ಹಾಸನದಲ್ಲಿ ನಡೆದ ಕಾನ್ಫರೆನ್ಸಿಗೆ ಕಳಿಸಿದ್ದ ವಿದ್ಯಾರ್ಥಿಗಳಿಂದ ತಯಾರಾದ ಕೈ ಕೆಲಸದ ಸಾಮಾನುಗಳಿಗೆ ಬಹುಮಾನ ಬಂದಿರುತ್ತೆ.—ಇಲ್ಲಿನ ಕೋಆಪರೆಟಿವ್ ಸೊಸೈಟಿಯು ಚೆನ್ನಾಗಿ ಕೆಲಸಮಾಡುತ್ತಿದೆ. ಇಲ್ಲಿ ಒಂದು ಇಂಗ್ಲಿಷ್ ಸ್ಕೂಲ್ ಇಲ್ಲದೆ ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗಿದೆ. ಗ್ರಾಮಸ್ಥರು ಏಕೀಭವಿಸಿ ಒಂದು ಗ್ರ್ಯಾಂಟ್ ಸ್ಕೂಲನ್ನಾದರೂ ಇಡಿಸುವಂತೆ ಮಾಡಬೇಕು.—ಮ್ಯುನಿಸಿಪಾಲಿಟಿಯು ಕಡೆಗೆ ತುಂಬಾ ಗಮನಕೊಟ್ಟರೆ ಉತ್ತಮ. ಯಾಕೆಂದರೆ ಕುರುಬಗೇರಿ, ಬೆಸ್ತರಕೇರಿ ಮುಂತಾದ ಕಡೆ ತುಂಬಾ ಗಲೀಜಾಗಿದೆ. ಮತ್ತು ಅಂಗಡಿ ಬೀದಿಯಲ್ಲಿ ಜಲ್ಲಿ ಹಾಕಿ ಬರೀ ಮಣ್ಣನ್ನು ಹಾಕಿರುವುದರಿಂದ ಮಳೆ ಬಂದಾಗ ಬೀದಿಯೆಲ್ಲಾ ಕೆಸರಾಗುವುದರಿಂದ ಇದರ ಮೇಲೆ ಮರಳನ್ನು ಹಾಕಿದರೆ ಉತ್ತಮ. ಹಾಗೆಯೇ ಈ ಊರಿನ ಪ್ರತಿಯೊಂದು ಬೀದಿಯನ್ನೂ ಜಲ್ಲಿ ಹಾಕಿ ಗಟ್ಟಿಮಾಡಿದರೆ ತುಂಬಾ ಉಪಕಾರ. ಈಗ ಹೊಸದಾಗಿ ಬಂದಿರುವ ಅಮಲ್ದಾರರು ಈ ಊರಿನ ಮೇಲೆ ತುಂಬಾ ಗಮನ ಕೊಟ್ಟು ಈ ಊರನ್ನು ಆಬಾದಿಗೆ ತರುವುದಕ್ಕೋಸ್ಕರ ಕೇವಲ ಕೃತಜ್ಞರಾಗಿದೇವೆ. ಇವರ ಕಾಲದಲ್ಲೇ 600-700 ಮನೆಗಳಿರುವ ಈ ಊರಿನಲ್ಲಿ ರಾತ್ರಿಹೊತ್ತು ಜನರಿಗೆ ಅತ್ಯಂತ ಸಲಭವಾಗುವಂತೆ ದೀಪಗಳನ್ನಿಟ್ಟು ಬೆಳಕು ಮಾಡಿದರೆ ಬಹಳ ಅನುಕೂಲವಾದೀತು.—ಕಟುಕರ ಅಂಗಡಿಗಳಲ್ಲಿ ಉತ್ತಮವಾದ ಪದಾರ್ಥವನ್ನು ಸರಿಯಾದ ಬೆಲೆಗೆ ಕೊಡುವುದಿಲ್ಲ. ಗೌರ್ನಮೆಂಟಿನವರು ಇತರ ಕಡೆ ರೂಲ್ಸುಗಳನ್ನು ಜಾರಿಗೆ ತಂದು ಪ್ರಜೆಗಳಿಗೆ ಉತ್ತಮವಾದ ಪದಾರ್ಥವನ್ನು ಕೊಡಿಸುವಂತೆಯೇ ಈ ಗ್ರಾಮದ ಕಟುಕರ ವಿಷಯದಲ್ಲೂ ರೂಲ್ಸು ಮಾಡಿ ಪ್ರಜೆಗಳಿಗೆ ಉತ್ತಮ ಪದಾರ್ಥವನ್ನೇ ಕೊಡುವಂತೆ ತಕ್ಕ ಬಂದೋಬಸ್ತು ಮಾಡಬೇಕೆಂಬದಾಗಿ ಹಾರೈಸುವೆವು.

ವಿದೇಶ ವೃತ್ತಾಂತಗಳು.

ಮಿ|| ಚಾರಲ್ಸ್ ಅಗಸ್ಟಸ್ ವಾರ್ಡ್ ಎಂಬ ಪುಣ್ಯಾತ್ಮನು ತನ್ನ ಬಳಿ ಇದ್ದ 3,000 ಗ್ರಂಥಗಳನ್ನು ಲಂಡನ್ ಪಟ್ಟಣದ ಒಂದಾನೊಂದು ಸರಸ್ವತೀ ಗ್ರಂಥಾಲಯಕ್ಕೆ ಉಚಿತವಾಗಿ ಕೊಟ್ಟು ಇರುತ್ತಾನೆ.

*

ಸಯಾಂ ರಾಜ್ಯದಲ್ಲಿರುವ ಕೆಲವು ದೊಡ್ಡ ಮನುಷ್ಯರು ತಮ್ಮ ಮೂವತ್ತು ಮಂದಿ ಮಕ್ಕಳನ್ನು ಯೂರೋಪಿಯನ್ ರಾಜ್ಯಗಳಲ್ಲಿ ವಿದ್ಯೆಗಳನ್ನು ಕಲಿತು ಸಮರ್ಥರಾಗಿ ಬರಬೇಕೆಂದು ಹಡಗಿನ ಮೇಲೆ ಸಾಗ ಕಳುಹಿಸಿದಾರೆ.

*

ಉತ್ತರ ಅಮೇರಿಕಕ್ಕೆ ಸೇರಿದ ಮಸ್ಸಚುಸೆಟ್ಸ್‌ನಲ್ಲಿ ಸಾಲೆಂ ಎಂಬ ಪಟ್ಟಣದೊಳಗೆ ಬೆಂಕಿಯ ಅನಾಹುತವುಂಟಾಗಿ ಇಬ್ಬರು ಪ್ರಾಣಕಳೆದುಕೊಂಡರು. 630 ಲಕ್ಷ ರೂಪಾಯಿನ ಆಸ್ತಿ ಸುಟ್ಟುಹೋಯಿತು. ಸರ್ಕಾರದವರೂ ಪ್ರಜಾಪ್ರಮುಖರೂ ಮನೆಗಳನ್ನು ಕಳೆದುಕೊಂಡ 10,000 ಜನರಿಗೆ ಡೇರೆಗಳನ್ನು ಒದಗಿಸಿ ಆಹಾರಸಾಮಗ್ರಿಗಳನ್ನು ಕೊಡಿಸುತ್ತಾರೆ.

*

ಅಮೇರಿಕಕ್ಕೆ ಸೇರಿದ ಸಂಯುಕ್ತ ಆಧಿಪತ್ಯಗಳಲ್ಲಿ ಒಬ್ಬನು ಕೋಳಿ ಮೊಟ್ಟೆಗಳನ್ನು ಕಳುವು ಮಾಡಿದನು. ಅವನನ್ನು ಬಂದೀಖಾನೆಯಲ್ಲಿಟ್ಟು ಶಿಕ್ಷೆ ಮುಗಿಯುವ ತನಕ ಅವನಿಗೆ ಕೋಳಿಮೊಟ್ಟೆಗಳಲ್ಲದೆ ಇನ್ನೇನೂ ಊಟಕ್ಕೆ ಕೊಡಲಿಲ್ಲ. ಅವನು ಜೈಲ್‌ಖಾನೆಯನ್ನು ಬಿಟ್ಟು ಬಂದ ಮೇಲೆ ಇನ್ನು ಸಾಯುವತನಕ ಕೋಳಿಯನ್ನು ನೋಡುವುದಿಲ್ಲವೆಂದು ಹೇಳಿದನು.

*

ಸಿಂದಾನೊಂದು ಗವಿಯೊಳಗೆ ಪ್ರಾಚೀನ ಕಾಲದ ಒಬ್ಬ ಮನುಷ್ಯನ ದೇಹದ ಪಂಜರವು ಸಿಕ್ಕಿದೆ ಇದನ್ನು ಪ್ರಪಂಚದಲ್ಲಿರುವ ಶಾಸ್ತ್ರಜ್ಞರು ಪರೀಕ್ಷೆ ಮಾಡಿ ಆ ಮನುಷ್ಯನು ಇಲ್ಲಿಗೆ ಸುಮಾರಾಗಿ 40,000 ದಿಂದ 80,000 ವರುಷಗಳ ಹಿಂದೆ ಇದ್ದಿರಬೇಕೆಂದು ಅಭಿಪ್ರಾಯ ಪಟ್ಟಿದಾರೆ. ಈ ಪಂಜರದ ವಿಷಯದಲ್ಲಿ ಪಂಡಿತರಾದ ಸೆಲಿಗ್ಮನ್, ಪಾರ್ಕರ್ ಎಂಬುವರು ಪಂಡಿತ ಮಂಡಲಿಯಲ್ಲಿ ಉಪನ್ಯಾಸ ಮಾಡಿದರು.

*

ಚೀನಾ ರಾಜ್ಯಕ್ಕೆ ಸೇರಿದ ಷಾಂಘಾಯಿ ಪಟ್ಟಣದ ಬಳಿ ಸಮುದ್ರತೀರದಲ್ಲಿದ್ದ ತಂಗ್‌ಚಿ ಎಂಬ ಹಡಗಿನೊಳಗೆ ಪಿರಂಗಿಯು ಅಕಸ್ಮಾತ್ತಾಗಿ ಹಾರಿ ಅನಾಹುತವಾಯಿತು. ಆ ಸಮಯದಲ್ಲಿ ಆ ಪಿರಂಗಿಯ ಕೆಳಭಾಗದಲ್ಲಿ ಬಹುಜನರು ಹಡಗಿನೊಳಗೆ ಮಲಗಿ ನಿದ್ರೆಮಾಡುತ್ತಿದ್ದರು. ಆ ಪೈಕಿ ಮೂವತ್ತೈದುಮಂದಿ ಮೃತಪಟ್ಟರೆಂದೂ, ಆ ಪಿರಂಗಿ ಒಡೆಯುವುದಕ್ಕೆ ಕಾರಣವೇನೋ ತಿಳಿಯಲಿಲ್ಲವೆಂದೂ ವರ್ತಮಾನ ಬಂದಿದೆ.

*

ಲಂಡನ್ ಪಟ್ಟಣದಲ್ಲಿ ಮಿ|| ಗ್ರೆನ್‌ಫೆಲ್ ಎಂಬಾತನು ದಿವಾಳಿಯಾದನು. ಸಾಲಗಾರರು ಹೋಗಿ ಆತನ ಬಳಿ ಇದ್ದ 87 ಚಿತ್ರಪಟಗಳನ್ನು ತಂದು ಹರಾಜು ಹಾಕಿದ್ದರಲ್ಲಿ 15 ಲಕ್ಷ ರೂಪಾಯಿ ಉತ್ಪತ್ತಿಯಾಯಿತು. ದಿವಾಳಿಯಾದ ಗ್ರೆನ್‌ಫೆಲ್ಲನು ನಾಲ್ಕುವರೆ ಲಕ್ಷ ರೂಪಾಯಿಗೆ ಕೊಂಡಿಟ್ಟುಕೊಂಡಿದ್ದ ಒಂದು

ತಸ್ವೀರನ್ನು ಈ ಹರಾಜಿನಲ್ಲಿ ಸರ್ ಹ್ಯೂ ಲೇನ್ ಎಂಬಾತನು 1,96,000 ರೂಪಾಯಿ ಕೊಟ್ಟು ಕೊಂಡುಕೊಂಡನು.

ಜರ್ಮನಿ ರಾಜ್ಯದಲ್ಲಿ ಯುದ್ಧದ ಆಯುಧ ಸಾಮಗ್ರಿಗಳನ್ನು ತಯಾರ್ಮಾಡುವ ಕ್ರುಪ್ ಎಂಬ ಪ್ರಖ್ಯಾತವಾದ ಕಾರ್ಖಾನೆಯಲ್ಲಿ ಒಂದು ದೊಡ್ಡ ಫಿರಂಗಿಯನ್ನು ತಯಾರ್ಮಾಡಿ, ಮಾಪೆನ್ ಎಂಬ ಪಟ್ಟಣದ ಬತೇರಿಯ ಮೇಲಿಟ್ಟು ಗುಂಡು ಹೊಡೆದು ಅದರ ಯೋಗ್ಯತೆಯನ್ನು ಪರೀಕ್ಷೆ ಮಾಡಿದರು. ಈ ಫಿರಂಗಿಯ ತೋಳು ಅರವತ್ತು ಅಡಿ ಉದ್ದವಾಗಿದೆ. ಆದರಿಂದ ಹೊಡೆದ ಗುಂಡು ಹದಿನೈದು ಮೈಲಿ ದೂರ ಹೋಗಿ ಬಡಿಯುತ್ತದೆ. ಈ ಫಿರಂಗಿಯನ್ನು ತಯಾರ್ಮಾಡುವುದಕ್ಕೆ ಮೂರು ಲಕ್ಷ ರೂಪಾಯಿ ಖರ್ಚಾಯಿತೆಂದು ತಿಳಿಯುವುದು.

ಕ್ರಿಮಿಯಾ ಯುದ್ಧದಲ್ಲಿ ಸಿಬ್ಯಾಸ್ಟಪೂಲ್ ಪಟ್ಟಣವನ್ನು ಟರ್ಕಿಯವರು ಮುತ್ತಿಗೆ ಹಾಕಿಕೊಂಡಿದ್ದಾಗ ಅದರೊಳಗಿದ್ದ ರಷ್ಯಾ ಸೈನಿಕರು ಅಕಸ್ಮಾತ್ತಾಗಿ ಹೊರಕ್ಕೆ ಬಂದು ಟರ್ಕಿಯವರ ಮೇಲೆ ಬಿದ್ದು ಯುದ್ಧ ಮಾಡಿದರು. ಆ ಸಮಯದಲ್ಲಿ ಟರ್ಕಿಯವರು ಶತ್ರುಗಳ ಏಟನ್ನು ತಡೆಯಲಾರದೆ ಅಲ್ಲಿಂದ ಓಡಿ ಹೋಗಬೇಕಾಯಿತು. ಟರ್ಕಿಯವರ ಸೈನ್ಯದಲ್ಲಿ ಬಹಳ ಭಂಗಾರವೂ ನಾಣ್ಯವೂ ಇದ್ದು ಅವರು ಅದನ್ನೆಲ್ಲಾ ಅಲ್ಲೇ ಭೂಮಿಯೊಳಗೆ ಹೂತುಬಿಟ್ಟು ಹೊರಟುಹೋದರು. ಇದುವರೆಗೆ ಆ ನಿಧಿಯನ್ನು ತೆಗೆಯಲು ಯಾರೂ ಪ್ರಯತ್ನಪಡಲಿಲ್ಲ. ಹತ್ತು ಚೀಲಗಳ ತುಂಬಾ ಸುಮಾರು 22½ ಲಕ್ಷ ರೂಪಾಯಿನ ಚಿನ್ನದ ನಾಣ್ಯಗಳೂ, ಸುಮಾರು 4 ಲಕ್ಷ ರೂಪಾಯಿನ ಭಂಗಾರದ ಗಟ್ಟಿಗಳೂ, ಬಹು ಬೆಲೆಯುಳ್ಳ ರತ್ನಗಳೂ ಆ ಪಟ್ಟಣದ ಹೊರಪಾರ್ಶ್ವದಲ್ಲಿ ಹೂತಿಟ್ಟಿದೆಯಂತೆ. ಈಗ ಈ ದ್ರವ್ಯವನ್ನು ಟರ್ಕಿ ಸೈನ್ಯದ ಹುದ್ದೇದಾರನಾದ ಕ್ಯಾಪ್ಟನ್ ಯುಸುಫ್ ಅಹಮದ್ ಬೇ ಎಂಬುವರು ಹುಡುಕಿ ಅಗೆದು ತೆಗೆಯುತ್ತೇವೆಂದು ರಷ್ಯಾ ಚಕ್ರವರ್ತಿಯವರನ್ನು ಕೇಳಿದ್ದಕ್ಕೆ ಚಕ್ರವರ್ತಿಯವರು ಹಾಗೆ ತೆಗೆಯುವ ದ್ರವ್ಯದಲ್ಲಿ ಅರ್ಧ ಭಾಗವನ್ನು ರಷ್ಯಾ ಖಜಾನೆಗೆ ಪಾವತಿ ಮಾಡಬೇಕೆಂದೂ, ಆ ರೀತಿ ಒಪ್ಪುವುದಾದರೆ ಅಪ್ಪಣೆ ಕೊಡುತ್ತೇವೆಂದೂ ಹೇಳಿದ್ದಕ್ಕೆ ಆ ಟರ್ಕಿ ಹುದ್ದೇದಾರರು ಅದರಂತೆ ಒಪ್ಪಿಕೊಂಡು, ಆ ಪಟ್ಟಣದ ಹೊರಪಾರ್ಶ್ವದಲ್ಲಿ ಭೂಮಿಯನ್ನು ಶೋಧನೆ ಮಾಡಲಾರಂಭಿಸಿದಾರೆ.

ಇಂಗ್ಲಾಂಡಿನಲ್ಲಿ ಸ್ತ್ರೀಮಂಡಲಿಯವರು ಹೆಂಗಸರಿಗೆ ಓಟ್‌ಮಾಡುವ ಹಕ್ಕನ್ನು ಕೊಡಬೇಕೆಂದು ಹೋರಾಡುತ್ತಾ ಈ ಉದ್ದೇಶದಿಂದ ನಾನಾ ಅಕೃತ್ಯಗಳನ್ನು ಮಾಡುತ್ತಿರುವರು. ಕಳೆದ ವಾರವೂ ಕೆಲವು ದುಷ್ಕಾರ್ಯಗಳು ನಡೆದವು. ಬ್ಲಾಕ್‌ಪೂಲಿನಿಂದ ಮ್ಯಾಂಚೆಸ್ಟರಿಗೆ ಹೋದ ರೈಲ್‌ಗಾಡಿಯಲ್ಲಿ ಅಂಚೆ ಬಸ್ತಿಗಳನ್ನು ತೆಗೆದುಕೊಂಡು ಹೋಗುತ್ತಿದ್ದಾಗ ಆ ಅಂಚೆ ಬಸ್ತಿನಲ್ಲಿ ಸಿಡಿಮದ್ದಿನ ಗುಂಡುಹಾರಿತು. ಸಮೀಪದಲ್ಲಿದ್ದ ಇನ್ನೂ ಆರು ಅಂಚೆ ಬಸ್ತಿಗಳು ಹತ್ತಿಕೊಂಡದ್ದಲ್ಲದೆ ಆ ಗಾಡಿಯೇ ಬೆಂಕಿಯಿಂದ ಉರಿಯಲಾಯಿತು. ಗಾಡಿಯ ರಕ್ಷಕನಾದ ಗಾರ್ಡಿಗೆ ಬೆಂಕಿ ಆರಿಸುವುದಕ್ಕೆ ಹೋದಾಗ ಮೈಸುಟ್ಟು ಗಾಯಗಳಾದವು. ಇದಲ್ಲದೆ ಲಿಸೆಸ್ಟರ್‌ಷೈರಿಗೆ ಸೇರಿದ ಬಾಟಿ ಎಂಬ ರೈಲ್ವೆ ಸ್ಟೇಷನ್‌ಗೆ ಈ ದುರಾಗತ ಸ್ತ್ರೀಯರು ಬೆಂಕಿಹಾಕಿ ಉರಿಸಿಬಿಟ್ಟರು. ಇನ್ನೊಂದು ಕಡೆ ವೆಸ್ಟ್‌ಮಿನಿಸ್ಟರ್ ಎಂಬಲ್ಲಿ ಸೆಂಟ್ ಜಾನ್ ದೇವಾಲಯವನ್ನು ಒಡೆದು ಸುಡಬೇಕೆಂದು ಈ ಹೆಂಗಸರ್ಯಾರೋ ಒಂದು ಸಿಡಿಮದ್ದಿನ ಗುಂಡನ್ನು ದೇವಸ್ಥಾನದಲ್ಲಿ ಇಟ್ಟು ಬತ್ತಿಗೆ ಬೆಂಕಿ ಹಚ್ಚಿಸಿದ್ದರು. ಅದು ಉರಿಯುತ್ತಿರುವಷ್ಟರಲ್ಲೇ ಯಾರೋ ಕಂಡು ಬೇಗನೆ ಆರಿಸಿಬಿಟ್ಟರು. ಸ್ವಲ್ಪ ಸಾವಕಾಶವಾಗಿದ್ದರೆ ಸಿಡಿಮದ್ದಿನ ಗುಂಡು ಹಾರಿ ದೇವಾಲಯವು ನಾಶವಾಗುತ್ತಿತ್ತು. ಕಳೆದ ಮಾರ್ಚ್ ತಾ. 1 ರಲ್ಲೂ ಈ ದೇವಾಲಯಕ್ಕೆ ಬೆಂಕಿಹಾಕಿದ್ದರು. ಆಗಲೂ ಅಕಸ್ಮಾತ್ತಾಗಿ ಅದನ್ನು ಕಂಡು ಆರಿಸಿದರು. ಆದರೂ ಆಗ ದೇವಾಲಯದ ಕಿಟಕಿಗಳೂ, ಜನರು ಕೂಡುವ ಮಣೆಗಳೂ ಸುಟ್ಟು ಹಾಳಾದವು. ಕಳೆದ 1913 ನೇ ಇಸವಿಯಲ್ಲಿ ಈ ಸ್ತ್ರೀಯರ ಜೆಸಿಯಿಂದ ಇಂಗ್ಲಾಂಡಿನಲ್ಲಿ 57,60,000 ರೂಪಾಯಿನ ಆಸ್ತಿಗಳೂ ಮನೆಮಠಗಳೂ ನಾಶವಾಗಿರುತ್ತವೆ. ಇದಲ್ಲದೆ ಬಹು ಅಮೂಲ್ಯವಾದ ಪುರಾತನದಕಾಲದ ಚರಿತ್ರಾರ್ಹವಾದ ಅನೇಕ ತಸ್ವೀರುಗಳನ್ನೂ ಇವರು ಹಾಳುಮಾಡಿದರು.

ತಂಜಾವೂರು ಗೆಜ್ಜೆ ಅಡ್ಡಿಗೆ ಕ್ರಯ 7 ಆಣೆ.



ಅಡ್ಡಿಗೆ ಮಾದರಿ ನೋಡಬೇಕಾದರೆ ಬರದರೆ ಉಚಿತವಾಗಿ ಕಳುಹಿಸುತ್ತೇವೆ. ಇದು ಎಲೆಕ್ಟ್ರಿಕ್ ಚಿನ್ನದಿಂದ ಗಟ್ಟಿ ಗೆಜ್ಜೆಗಳನ್ನು ತಯಾರಿಸಿ ಸುಂದರವಾಗಿ ತುತ್ತುರುವುಗಳಿಟ್ಟು ರೇಷ್ಮೆ ಮಿಶ್ರವಾದ ಕರಿ ದಾರದಿಂದ ಕಟ್ಟಿರುತ್ತೆ. ಸ್ತ್ರೀಯರು ಕೊರಳಲ್ಲಿ ಧರಿಸುವದಕ್ಕೆ ಲಾಯಖಾದದ್ದು ನಮ್ಮಲ್ಲಿ ಜನಗಳಿಗೆ ನಂಬಿಕೆ ಹುಟ್ಟುವದಕ್ಕಾಗಿ ಮಾದರಿ ನೋಡಬೇಕೆಂದು ಬರೆಯುವವರಿಗೆ ಮಾದರಿ ಕಳುಹಿಸುತ್ತೇವೆ. [139-5]

ವಿಳಾಸ—ಎಸ್. ಎನ್. ಮೂರ್ತಿ ಅಂಡ್ ಕಂಪೆನಿ,
ತಿರುವಲಕ್ಕೇಣಿ, ಮದರಾಸು.

ಜೂಲೈ ಮಹೋತ್ಸವದ ಕೈ ಗಡಿಯಾರ.



ಅರ್ಧ ಕ್ರಯ ರೂ. 1–4–0

ಇದೇ ಜೂಲೈ ಹಬ್ಬದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದ ಕೈ ಗಡಿಯಾರವನ್ನು ಜುಲೈ ಒಳಗೆ ತರಿಸಿಕೊಳ್ಳುವವರಿಗೆ ರೂಪಾಯಿ 1-14-0 ಆಣೆಗೆ ಕೊಡಲ್ಪಡುತ್ತೆ. [69-7]

ವಿಳಾಸ—ಎ. ಕೃಷ್ಣಸ್ವಾಮಿ ಮೊದಲಿಯಾರ್, ನಂ.27 ಬಂದರ್ ಬೀದಿ, ಜಿ.ಟಿ., ಮದರಾಸು.

ಗೃಹಕೃತ್ಯದ ನೋಟೀಸು.

ಕೋಳೆನರಸೀಪುರದ ಕಸಬಾ ಕೋಟೆಯಲ್ಲಿ ಇರುವ ಯಾದವ ಮಠದ ಬಳಿ ದೊಡ್ಡರಂಗಪ್ಪನವರ ಕುಟುಂಬ ತಿಮ್ಮಮ್ಮನು ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನೆಂದರೆ—ನನ್ನ 2 ನೇ ಮಗ ಗುಂಡಪ್ಪ ಎಂಬ ಸುಮಾರು 16 ವರುಷ ವಯಸ್ಸುಳ್ಳವನು ಕೆಟ್ಟ ಜನಗಳ ಸಹವಾಸದಿಂದ ಸುಮಾರು 5-6 ತಿಂಗಳಿಂದ ಬುದ್ಧಿಸ್ಥಿಮಿತವಿಲ್ಲದೆ ಮನೆಯನ್ನು ಬಿಟ್ಟು ಹೋಗಿರುತ್ತಾನೆ ಆದ್ದರಿಂದ ತನ್ನ ದುರ್ವ್ಯಾಸಂಗಳಿಗಾಗಿ ಮೇಲ್ಕಂಡ ನನ್ನ 2 ನೇ ಮಗ ಗುಂಡಪ್ಪನು ಮಾಡಬಹುದಾದ ಸಾಲಗಳಿಗೆ ನಮ್ಮ ಸ್ವಯಾರ್ಜಿತವಾದ ಕುಟುಂಬದ ಸ್ಥಿರಸ್ವತ್ತು ಚರಸ್ವತ್ತುಗಳ ಮೇಲೆ ಸಾಲಗಳನ್ನು ಯಾರೂ ಕೊಡಕೂಡದು. ಇದರ ಮೇಲೆ ಕೊಡುವದಾದರೆ ಆ ಸಾಲಗಳಿಗೆ ಈ ಕುಟುಂಬದ ಯಾವ ಆಸ್ತಿಯೂ ಎಂದಿಗೂ ಹೊಣೆಯಾಗಲಾರದು ಎಂತ ಈ ಮೂಲಕ ಸಮಸ್ತರಿಗೂ ಎಚ್ಚರಿಕೆ ಕೊಟ್ಟಿರುತ್ತೇನೆ.

[155-2] ತಿಮ್ಮಮ್ಮನ ಗುರ್ತಿನ ರುಜು.

"ಮಧುರವಾಣಿಯ" ಅರಿಕೆ.

ರಾಜಧಾನಿಯಲ್ಲಿ ಎರಡು ವರ್ಷಗಳಿಂದ ಹೊರಡುತಿರುವ "ಮಧುರವಾಣಿ" ಎಂಬ ಮಾಸ ಪತ್ರಿಕೆಯು ರಾಜಕೀಯ ವಿಷಯವನ್ನೂ ಕುರಿತು ಚರ್ಚೆಮಾಡುವ ಅಧಿಕಾರವನ್ನು ಪಡೆಯಿತು ಇದುವರೆಗೆ ತಡವಾದುದಕ್ಕಾಗಿ ವಾಚಕರ ಕ್ಷಮೆ ಬೇಡುವುದಾಗಿಯೂ, ಆಗಸ್ಟು ಮೊದಲನೆಯ ತಾರೀಖಿಗೆ ಸಂಚಿಕೆಯು ಕಳುಹಿಸಲ್ಪಡುವುದಾಗಿಯೂ ಈ ಮೂಲಕ ಪ್ರಕಟಮಾಡಿದೆ.

ಈ ಗ್ರಂಥಗಳನ್ನು ಓದುವಿರಾ?—ನಾನಕ ಚರಿತ್ರೆ 4 ಆಣೆ, ತುಣುಕುಮಿಣುಕು 1½ ಆಣೆ, ಕೃಷ್ಣಕುಮಾರಿ 10 ಆಣೆ, ವಿವೇಕಮಂಜರಿ 3 ನೇ ಭಾಗ 6 ಆಣೆ, ಜಯ! ವಾಲ್ಮೀಕಿ 12 ಆಣೆ, ಅಶ್ವತ್ಥಮ್ಯಗ 1½ ಆಣೆ, ಸೂಕ್ತಿತಾರಾವಳಿ 4 ಆಣೆ, ನಿರ್ಮಲೆ 12 ಆಣೆ, ಕನ್ಯಾಬಲಿ 6 ಆಣೆ, ತಾರಾ 3 ಆಣೆ, ರಂಗನ ಮದುವೆ 1 ಆಣೆ, ಅಡವಿಯರಾಜ 1 ಆಣೆ, ಬಾಗಿಲುಭದ್ರ 1 ನೇ ಭಾಗ 4 ಆಣೆ, ನವನಾಗರಿಕತೆ 1 ಆಣೆ, ಸಾಹಸಿಕೆ 2½ ಆಣೆ. ವಿಲಕ್ಷಣದ್ವೈವಘಟನೆ 4 ಆಣೆ.

ಕ್ಯಾಟಲಾಗಿಗೂ "ವಾಣಿ"ಯ ಮಾದರಿ ಸಂಚಿಕೆಗೂ ಬೆಲೆಯಿಲ್ಲ.

[160–1] ವಿಳಾಸ:—ಹನುಮಾನ್ ಕಂಪೆನಿ, ಮೈಸೂರು.

ಮಧುರೆ ಜುನ್ನಡಿ ಅಂಚಿನ ಸೀರೆ ಅವ್ವಲ್ ರಖಂ ರೂ. 1–15–0.

ಇದು 18 ಮೊಳ ಧಾರಾಳವಾಗಿದೆ. ಉಡಲು ಲಾಯಖಾದದ್ದು. ಬಣ್ಣ ಹೋಗದು. ಸುಂದರವಾದ ಸೆರಗು. ಪೋಟೀ ಪ್ರಕಟನೆಗಳ ದೆಸೆಯಿಂದ ಈ ಭಾರೀ ಕ್ರಯದ ಸೀರೆಯನ್ನು ಅಸಲು ಬೆಲೆಗೆ ತಗ್ಗಿಸಿ ಮಾರುತ್ತೇವೆ. ಜಾಗ್ರತೆ ತರಿಸುವವರಿಗೆ ಮಾತ್ರ ಈ ಕ್ರಯಕ್ಕೆ ದೊರೆಯುತ್ತೆ.

ವಿಳಾಸ—ರಾಮರಾವ್, ಎಸ್. ಎಂ. ಕೋಯಿಲ್ ಬೀದಿ,
[139-5] ತಿರುವಲಕ್ಕೇಣಿ, ಮದರಾಸು.

ಕಣ್ಣು ಇಲ್ಲದಿದ್ದರೆ ಕಲಿಯುಗವೇ ಇಲ್ಲ!

ಭಾರೀಕ್ರಯದ ಕನ್ನಡಕಗಳು ಕ್ರಯ ರೂ. 3-8-0. ಸ್ಫಟಿಕದ ಕನ್ನಡಕವನ್ನು ಉಪಯೋಗಿಸಿ ನಿಮ್ಮ ದೃಷ್ಟಿಯನ್ನು ಕಾಪಾಡಿಕೊಳ್ಳಿರಿ. ಅಲ್ಪಕ್ರಯದ ಕನ್ನಡಕಗಳು ದೃಷ್ಟಿಯನ್ನು ಹೋಗಲಾಡಿಸಿ ಕಾಲಕ್ರಮೇಣ ವ್ಯಾಧಿಯನ್ನುಂಟುಮಾಡುತ್ತೆ. ಆದಕಾರಣ ಅವುಗಳನ್ನು ಉಪಯೋಗಿಸಬೇಡಿರಿ. ನಮ್ಮಲ್ಲಿ ಸ್ಫಟಿಕದ ಕನ್ನಡಕಗಳು ಕ್ರಯಕ್ಕೆ ದೊರೆಯುತ್ತೆ. ಬೇಕಾದವರು ಬರೆದರೆ ಎಲ್ಲಾ ತರಹದ ಮತ್ತು ಎಲ್ಲಾ ನಂಬರಿನ ಕನ್ನಡಕಗಳಿರುವ ಭಾರೀಕ್ರಯದ ಪಟ್ಟಿಗೆ ಒಂದನ್ನು ಉಚಿತವಾಗಿ ಕಳುಹಿಸುತ್ತೇವೆ. ಬಾಕೀ ವಿಷಯವೆಲ್ಲಾ ನಿಮ್ಮ ದರಖಾಸ್ತು ಬಂದಮೇಲೆ ಬರೆದು ತಿಳಿಸುತ್ತೇವೆ. [139-5]

ವಿಳಾಸ.—ನೀಲಕಂಠ್ ಅಂಡ್ ಬ್ರದರ್ಸ್,
ಎಸ್. ಎಂ. ಕೋಯಿಲ್ ಬೀದಿ, ತಿರುವಲ್ಲಿಕ್ಕೇಣಿ, ಮದರಾಸು.

ನಮ್ಮ ಏಜಂಟರಿಗೂ ಚಂದಾದಾರರಿಗೂ.

"ವೃತ್ತಾಂತ ಪತ್ರಿಕೆ"ಯ ಹೊಸ ವರುಷವು ಕಳೆದ ಜೂನ್ ತಿಂಗಳಿಂದ ಪ್ರಾರಂಭವಾಗಿದೆ. ನಮ್ಮ ಏಜಂಟರು ತಮ್ಮ ಸ್ಥಳದ ವಾಚಕರಿಂದ ಹೊಸ ವರುಷದ ಚಂದಾ ಒಂದು ರೂಪಾಯನ್ನು ಈ ವರೆಗೆ ಅಡ್ವಾನ್ಸಾಗಿ ವಸೂಲ್ ಮಾಡಿದಾರೆಂದು ನಿರೀಕ್ಷಿಸುತ್ತೇವೆ. ಹಾಗೆ ಅಡ್ವಾನಸು ಚಂದಾ ಕೊಡದೆ ಇರುವವರಿಗೆ ಏಜಂಟರು ಪತ್ರಿಕೆಗಳನ್ನು ಕೊಡಕೂಡದು.

ಚಂದಾದಾರರು ದಯವಿಟ್ಟು ನಮ್ಮ ಏಜಂಟರಿಗೆ ಚಾಲ್ತಿ ವರುಷದ ಚಂದಾ ಒಂದು ರೂಪಾಯಿ ಅಡ್ವಾನ್ಸಾಗಿ ಪಾವತಿಮಾಡಿ, ಅದಕ್ಕೆ ಅವರಿಂದ ಕ್ರಮವಾದ ಅಚ್ಚಾಗಿರುವ ರಸೀತಿಗಳನ್ನು ಪಡೆಯಬೇಕೆಂದು ಕೃತಪಡಿಸುತ್ತೇವೆ.

ಮ್ಯಾನೇಜರ್, "ವೃತ್ತಾಂತ ಪತ್ರಿಕೆ," ಮೈಸೂರು.

ಒಳ್ಳೆ ಸಮಯ! A Good Opportunity.

ಮೈಸೂರು ಚಾಮರಾಜ ರೋಡ್ ಎಂ. ಎಲ್. ವಾಸುದೇವಯ್ಯನವರ ಕಂಪೌಂಡಿನಲ್ಲಿ ಹೊಸದಾಗಿ ತರಿಸಿ ಸರಿಯಾಗಿ ಕೆಲಸಮಾಡುತ್ತಿರುವ ಅಕ್ಕಿ ಮತ್ತು ಹಿಟ್ಟಿನ ಮಿಷನ್, ಇದಕ್ಕೆ ಸೇರಿದ ಆರು ಕುದುರೆ ಶಕ್ತಿಯುಳ್ಳ ಒಂದು ಆಯಿಲ್ ಇಂಜನ್, ಇದಕ್ಕೆ ಸಂಬಂಧಪಟ್ಟ ಎಲ್ಲಾ ಸಾಮಾನುಗಳನ್ನೂ ಸಹ (A Rice Mill and a Grinding Mill with a six horse power oil engine, complete) ಕ್ರಯಮಾಡುತ್ತೇವೆ. ಬೇಕಾದವರು ಖುದ್ದು ಪರೀಕ್ಷೆಯಿಂದ ಕೆಳಗಿನ ವಿಳಾಸದಾರರಲ್ಲಾಗಲಿ, ಅಥವಾ ಕೃಷ್ಣಾ ರೈಸ್ ಮಿಲ್ ಪ್ರೊಪ್ರೈಟರ್ ಮ॥ ಅನಂತನಾರಾಯಣರಾಯರಿಂದಾಗಲಿ ಕೇಳಿ ತಿಳಿದುಕೊಳ್ಳಬಹುದು.

[161-1] S. R. Visvanatha Iyer.

THE

GENERAL

Assurance Society Ltd., Ajmer.

(A Popular Life Office.)

Before Insuring or taking agency elsewhere, it would be to your interest to know the rates of premium and terms of agency specially prepared by the Society's Consulting Actuary, Mr. H. E. W. Lutt, F.I.A. (one of the most eminent Actuaries in England).

First Valuation Result:—The total liabilities under all assurances issued up to 31st March 1913, are fully covered by the Society's Life Assurance Fund and Paid up Capital. Write for full particulars, Annual and Valuation Reports to the Manager, Ajmer, or Secretary,

Opposite to Minto Ophthalmic Hospital,
[131-2] Bangalore City.

ಓರಿಯಂಟಲ್ ಗ॥ ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು............ರೂ. 4,45,00,000

ಕಂಪನಿಯಿಂದ ಪಾವತಿ ಆಗಿರುವದು ,, 4,00,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದವನ್ನು ಕಳುಹಿಸುತ್ತಾರೆ.—ಮಿ. ಎಂ. ಎಸ್. ಶೇಷ ಗಿರಿ, ಚೀಫ್ ಏಜೆಂಟ್, ಬೆಂಗಳೂರು; ಮ. ಎಂ. ಎಸ್. ನಂಜಪ್ಪನವರು ಅಥವಾ ಮ. ವೆಂಕಟರಮಣಯ್ಯನವರು, ಕಂಪನಿ ಏಜಂಟರು. ಮೈಸೂರು; ಅಥವಾ

[194-43] ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ, ಮದರಾಸ್.

THE MYSORE GOVERNMENT SECURITY

Life and Marriage Assurance Co., Ltd.

Head Office: Mysore.

CAPITAL Rs. 1,00,000

(INCORPORATED UNDER THE MYSORE COMPANIES' REGULATION No. III OF 1895.)

CAUTION:—Before you go in for a Provident, Life or Marriage Policy, please ask for a copy of our Company's prospectus, which will explain to you the mode of the working of the present-day provident companies in India, and enables you to select a good institution, where your hard-earned money will be safe.

Absolute Security, Attractive Schemes, Soundest Principles.

Wanted Chief Agents and agents throughout India on Commission and Salary. For prospectuses, etc., please apply to

Mr. M. L. NAGANNAH,
Managing Agent, MYSORE.

A NOVELTY OF THE TWENTIETH CENTURY!

THE MYSORE GOVERNMENT SECURITY

MUTUAL PROPERTY INVESTMENT COMPANY, LTD.

HEAD OFFICE: MYSORE.

CAPITAL Rs. 1,00,000.

(INCORPORATED UNDER THE MYSOR COMPANIES' REGULATION No. III OF 1895.)

BANKING:—Every sort of banking business transacted. The company's shares are most valuable and are within the reach of all.

Land and house purchase and investment policies are a speciality of the company, by which the company advances loans on the security of immovable properties to purchase houses and lands or to liquidate prior debts, and recovers the same by easy monthly instalments.

WANTED

Four local directors for each and every taluk of the Mysore Province on liberal terms to represent the company. Only men of position and influence need apply. For prospectuses, etc., please apply to

It is to be kindly noted by the public that Mr. B. C. Gopalasawmy has been appointed as our District Agent for Hassan District. Our policy-holders in Hassan taluk can pay their premia to our above district agent as Mr. G. S. Ramakrishniah's services were already dispensed with.

Mr. M. L. NAGANNAH,
[161-31] *Managing Agent, MYSORE.*

ಶ್ರೀ ಶಿವಗಂಗಾ ವರ್ತಮಾನ.

ಶ್ರೀ ಶಿವಗಂಗಾ ಶ್ರೀಮಠದ ಜಗದ್ಗುರು ಶ್ರೀ ಸುಬ್ರಹ್ಮಣ್ಯಾಭಿನವ ಸಚ್ಚಿದಾನಂದ ಭಾರತೀ ಮಹಾಸ್ವಾಮಿಗಳವರು ಮೈಸೂರು ಸೀಮೆಯನ್ನೆಲ್ಲಾ ಸಂಚರಿಸಿ ಸಮ್ಮೋಧಕಿಯಿಂದ ಸರ್ವರನ್ನೂ ಕೃತಾರ್ಥರನ್ನಾಗಿ ಮಾಡಿ ದಿಗ್ವಿಜಯ ಮಾಡಿಕೊಂಡು ಇದೇ ಮಾಹೆ 4 ನೇ ತಾ ತಮ್ಮ ಸ್ವಸ್ಥಾನವಾದ ಶಿವಗಂಗಾ ಕ್ಷೇತ್ರದ ಪೀಠವನ್ನಲಂಕರಿಸಿದರು. ಮಹಾತ್ಮರಾದ ಈ ಸ್ವಾಮಿಗಳವರು ಸ್ವಸ್ಥಾನವಾದ ಈ ಶಿವಗಂಗಾ ಕ್ಷೇತ್ರದಲ್ಲಿ ಬರುವ 1915 ನೇ ವರ್ಷ (ರಾಕ್ಷಸ ಸಂವತ್ಸರದ ಚೈತ್ರಮಾಸ) ಯಲ್ಲಿ ಶ್ಯಾಮಗೊಂಡ್ಲದಲ್ಲಿರುವ ನೇ|| ನರಸಿಂಹ ಸೋಮಯಾಜಿಗಳವರಿಂದ ಗುರುದರ್ಶನಪೂರ್ವಕ ಸರ್ವಸ್ವಸ್ವಾಮ್ಯ ಯಾಗವನೆಂಬ ಮಹಾಕ್ರತುವನ್ನು ಸನ್ನಿಧಾನದ ಸರ್ವಸಹಾಯ ಪೂರ್ವಕದಿಂದ 13 ದಿನಗಳು ಮಾಡಿಸುತ್ತಾರೆಂದು ಅಪ್ಪಣೆ ಕೊಡಿಸಿದರು.

ನಿಮ್ಮ ವಾಚಕ.

ಕಾಶಿ ವರ್ತಮಾನಗಳು.

ಈ ಮಾಹೆ 2 ನೇ ತಾ. ಈ ಬನಾರಸ್ ಪಟ್ಟಣದಲ್ಲಿ ಇದಕ್ಕೆ ಸೇರಿದ ಗ್ರಾಮಾಂತರಗಳಲ್ಲಿ ಮಿಠಾಯಿ ಹಾಲು ಮೊಸರು ವಗೈರೆ ವಿಕರಿಮಾಡತಕ್ಕವರಿಗೂ ಸಹಾ ಟ್ಯಾಕ್ಸು ಹಾಕಬೇಕೆಂದು ಗೌರ್ನಮೆಂಟಿನವರು ಹುಕುಂ ನಾಡಿದರು. ಇದರ ಮೇಲೆ ಮೇಲ್ಕಂಡ ವ್ಯಾಪಾರಿಗಳು ಗುಂಪುಸೇರಿ ನಾವುಗಳು ಈ ವ್ಯಾಪಾರವನ್ನು ಇನ್ನು ಮುಂದೆ ಮಾಡಕೂಡದು, ಹಾಗೆ ಮಾಡಿದರೆ ನಮ್ಮ ಕುಲಕ್ಕೆ ದಂಡಾ ಕೊಡಬೇಕೆಂದು ಕಟ್ಟುಮಾಡಿ, ದುಕಾನುಗಳನ್ನು ಬಂದುಮಾಡಿದರು. ಇದರಿಂದ 3 ದಿವಸ ಈ ಪಟ್ಟಣದಲ್ಲಿ ಹಾಲು ಮೊಸರು ಬೆಣ್ಣೆ ಮಿಠಾಯಿ ವಗೈರೆ ಯಾವ ಪದಾರ್ಥವೂ ದೊರೆಯದೆ ಹೋಯಿತು. ಈ ಭಾರಿ ಪಟ್ಟಣದ ಜನಗಳು ಗುಂಪು ಸೇರಿ ಡೆಪುಟಿ ಕಮಿಷನರ್ ಸಾಹೇಬರವರಲ್ಲಿ ತಮಗೆ ಉಂಟಾಗಿರುವ ತೊಂದರೆಯನ್ನು ತಿಳಿಯಪಡಿಸಿದ ಮೇಲೆ ಅವರು ಗೌರ್ನಮೆಂಟಿಗೆ ತಿಳಿಸಿ ಇದನ್ನು ನಿಲ್ಲಿಸಿದರು. ಈಗ ಜನಗಳಿಗೆ ಸುಖವಾಗಿ ಎಲ್ಲಾ ಪದಾರ್ಥವೂ ದೊರೆಯುತ್ತೆ. ಜನಗಳ ಏಕಮತ್ಯದಿಂದ ಯಾವ ಕಾರ್ಯವಾದರೂ ಸುಲಭಸಾಧ್ಯವಾಗಿ ನೆರವೇರುತ್ತೆ.

ಈ ಪುನರ್ವಸು ಮಳೆ ಹುಟ್ಟಿದ ಲಾಗಾಯಿತು ಈ ಪ್ರಾಂತ್ಯ ತುಂಬಾ ವಿಶೇಷ ಮಳೆ ಉಂಟಾಗಿ ಈ ಮಾಹೆ 6 ನೇ ತಾ ರಾತ್ರಿ 2 ಗಂಟೆ ಸಮಯದಲ್ಲಿ ಈ ಬನಾರಸಿಗೆ 42 ಮೈಲಿ ದೂರದಲ್ಲಿ ಇರುವ ಗೋಮತಿ ನದೀ ದಡದಲ್ಲಿ ಇರುವ ಜವಾನ್ಪುರವೆಂಬ ಪಟ್ಟಣದಲ್ಲಿ 6 ಗಂಟೆಗಳ ಕಾಲ ಮೇಘ ಒಡೆದುಬಂದಂತೆ ಮಳೆ ಸುರಿದು ಆ ನದಿಗೆ ಕಟ್ಟಿ ಇರುವ ಸೇತುವೆಯು 60 ಅಡಿ ಪ್ರವಾಹವನ್ನು ಒತ್ತಿಹಿಡಿದಂತೆ ಎತ್ತರ ಪ್ರವೇಶವಾಗಿದ್ದರಿಂದ ಈ ಪಟ್ಟಣದಲ್ಲಿ ಸುಮಾರು ಅರ್ಧ ಭಾಗವೆಲ್ಲಾ ಮುಳುಗಿಹೋಗಿ ಅನೇಕ ಪ್ರಜೆಗಳು ಮರಗಳ ಮೇಲೂ, ಅರಣ್ಯದಲ್ಲೂ ವಾಸಮಾಡುತ್ತಾರೆ. ಈ ಅದ್ಭುತವನ್ನು ಹೇಳಲು ಸಾಧ್ಯವಿಲ್ಲ. ಗೌರ್ನಮೆಂಟಿನವರು ನಾವೆಗಳನ್ನೂ, ಪೋಲೀಸ್ ಸಿಬ್ಬಂದಿಯನ್ನೂ ಕುಮ್ಮಕ್ಕು ಮಾಡಿ, ಹೋದ ಜನಗಳನ್ನು ಪತ್ತೆ ಮಾಡುತ್ತಾ ಇದ್ದಾರೆ.

ಚಾತ್ರದಾರ.

ತಾಲ್ಲೂಕು ವರ್ತಮಾನಗಳು.

ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೊಂಡ್ಲೀವು.—ಈ ಪ್ರಾಂತ್ಯ ಇದುವರೆವಿಗೂ ಒಂದು ಹದ ಮಳೆಯಾದರೂ ಆಗದೆ ಇರುವದರಿಂದ ಧಾರಣೆವಾಸಿಗಳು ಜಡಾವಾಗಿ ಬಡಬಗ್ಗರು ಜೀವನಮಾಡುವದು ತುಂಬಾ ಕಷ್ಟವಾಗಿರುತ್ತೆ. ರೈತರು ಜಮೀನುಗಳನ್ನು ಉಳುವುದಕ್ಕೂ ಮಾರ್ಗವಿಲ್ಲದೆ ಆಕಾಶವನ್ನೇ ನೋಡುತ್ತಿದ್ದಾರೆ. ಜಾನುವಾರುಗಳಿಗಂತೂ ಹುಲ್ಲು ನೀರಿನ ತೊಂದರೆ ಹೇಳತೀರದು. ತಾ. 9 ರಲ್ಲಿ ನಮ್ಮ ತಾಲ್ಲೂಕ್ ಅಮಲ್ದಾರ್ರವರು ನಮ್ಮ ಗ್ರಾಮಕ್ಕೆ ದಯಮಾಡಿ ಗ್ರಾಮವನ್ನು ಇನ್ಸ್ಪೆಕ್ಷನ್ ಮಾಡಿಕೊಂಡು, ಸರ್ಕಾರದ ಚಾವಡಿಗೆ ಗ್ರಾಮದ ಮುಖಂಡ ಪ್ರಜೆಗಳನ್ನು ಕರೆಯಿಸಿಕೊಂಡು ಗ್ರಾಮಾಭಿವೃದ್ಧಿ ಸಭೆಯಿಂದ ಪ್ರಜೆಗಳಿಗೆ ಉಂಟಾಗತಕ್ಕ ಪ್ರಯೋಜನಗಳನ್ನು ವಿಶದವಾಗಿ ತಿಳಿಯಪಡಿಸಿ ಕಳೆದ ಮೇ ತಾ 28 ರಲ್ಲಿ ನಮ್ಮ ಶೇಕದಾರರು ನಡಸಿದ ಗ್ರಾಮಾಭಿವೃದ್ಧಿ ಸಭೆಯ ಪ್ರೊಸೀಡಿಂಗ್ಸ್ ಬುಕ್ಕಿನಲ್ಲಿ ನಮೂದಿಸಿರುವ ವಿಷಯಗಳನ್ನೆಲ್ಲಾ ನೋಡಿ ಸಂತೋಷಪಟ್ಟು ಗೌರ್ನಮೆಂಟ್ ಎ. ಇ. ಸ್ಕೂಲ್ ಇನ್ಸ್ಪೆಕ್ಷನ್ ಮಾಡಿಕೊಂಡು ಮುಂದೆ ಬೆಳಗಟ್ಟಕ್ಕೆ ಪ್ರಯಾಣ ಬೆಳೆಸಿದರು.

ತಲಕಾಡು —ಕಾಲಕ್ಕೆ ಸರಿಯಾದ ಮಳೆ ಇಲ್ಲದೆ ಜೋಳದ ಬೆಲೆಯಲ್ಲಿ ಕಾಲುಭಾಗ ಬರುವದೇ ಅಪೂರ್ವವಾಗಿದೆ. ಸದ್ಯಕ್ಕೆ ಮೋಡವಾಡುತ್ತಾ, ತುಂತುರು ಮಳೆಯಿಂದ ರಾಗಿಯ ಬಿತ್ತನೆ ಪೂರೈಸೋಗುತ್ತೆಂಬ ಆತುರದ ಮೇಲೆ ರೈತರು ರಾಗಿಯನ್ನು ಬಿತ್ತುತ್ತಾ ಇದ್ದಾರೆ. ಧಾರಣಾವಾಸಿಯಂತು ದಿನೇದಿನೇ ಹೆಚ್ಚುತ್ತಲೇ ಇರುತ್ತೆ.—ಇಲ್ಲಿನ ಮಹದೇವಮಂತ್ರಿ ಅಣೆಕಟ್ಟಿನ ಕೆಲಸವನ್ನು ಇಲ್ಲಿಗೆ ಬಂದಿದ್ದ ಇಂಜನಿಯರ್ ಇಲಾಖಾ ಸಬ್ ಡಿವಿಜನ್ ಆಫೀಸರು ಮ|| ಇ. ರಾಮಸ್ವಾಮಿ ಅಯ್ಯಂಗಾರವರು ಬಹು ಮುತುವರ್ಜಿಯಿಂದ ನಡಿಸಿ ಪೂರೈಸಿದರು. ನದಿಯಲ್ಲಿ ಪ್ರವಾಹ ಬಂದಷ್ಟಲ್ಲದೆ ನಾಲಾದಲ್ಲಿ ನೀರು ಸಲೀಸಾಗಿ ಸಂಚಾರಾಯಿಸದೆಯುತ್ತೆ.—ಹಿಂದಿನ ವರ್ಷ ಇಲ್ಲಿನ ಹಳೇಬೀದಿ ಬೆಳ್ಳಾಳ ಗೌಡರುಗಳಿಗೂ ಹೊಸಬೀದಿ ಗಂಗೇ ಕುಲದವರಿಗೂ ಲಗ್ನದ ವಿಷಯವಾಗಿ ಕಲಹ ಹುಟ್ಟಿ ವ್ಯಾಜ್ಯ ನಡೆದು ಸಬ್ ಡಿವಿಜನ್ ಕೋರ್ಟಿನಲ್ಲಿ ಎರಡು ಪಕ್ಷದವರಿಗೂ ಶಿಕ್ಷೆಯಾಗಿ ಚಾರ್ಜ್ ಮೇಲೆ ಮುಚ್ಚಳಿಕೆ ವಾಡಿಸಿಕೊಂಡು ಉಭಯಪಾರ್ಟಿಯವರೂ ಅಪೀಲ್ ಮಾಡಿರುತ್ತಾರೆ.—ಇಲ್ಲಿನ ಹೊಸಕೇರಿ ಕನ್ನಡ ಬಾಲಕ ಪಾಠಶಾಲೆಯ ಕಟ್ಟಡವನ್ನು ಗಂಗೇಕುಲದ ಮ|| ಗೂಳಬೋಯಿಯು ತನ್ನ ಸ್ವಂತ ಲಾಗೋಡಿನಿಂದಲೇ ಧರ್ಮಾರ್ಥವಾಗಿ ಕಟ್ಟಿಸಿಕೊಟ್ಟಿರುವದಲ್ಲದೆ ಅದಕ್ಕೆ ಬೇಕಾದ ಸಲಕರಣೆಗಳನ್ನು ಒದಗಿಸಿಕೊಟ್ಟು, ಬಾಲಕರಿಗೆ ಆನಂದವಾಗಿಯೂ ತಿಳುವಳಿಕೆಗಾಗಿಯೂ ರಾಜಕೀಯ ಮತ್ತು ಭಕ್ತಿಮಾರ್ಗವನ್ನು ತಿಳಿದುಕೊಳ್ಳುವಂತೆ ನಾನಾತರದ ವಿಚಿತ್ರವಾದ ಪಟಗಳಿಂದ ತುಂಬಿರುವಂಥಾ ಈ ಪಾಠಶಾಲೆಯನ್ನು ನಮ್ಮ ದಿವಾನ್ ಸಾಹೇಬರವರು ಇಲ್ಲಿಗೆ ಚಿತ್ತೈಸಿದ್ದಾಗ್ಗೆ ಪರಾಂಬರಿಸಿ ಸಂತೋಷದಿಂದ ಗೂಳಬೋಯಿಯ ಕ್ಷೇಮಲಾಭಗಳನ್ನು ವಿಚಾರಿಸಿ ದಯಮಾಡಿದರು. ಇದಕ್ಕಾಗಿ ಸ್ಕೂಲ್ ಇನ್ಸ್ಪೆಕ್ಟರ್ ಜನರಲ್ ಸಾಹೇಬರವರು ಈ ಪುಣ್ಯಪುರುಷನು ಮಾಡಿರುವ ಧರ್ಮಾರ್ಥದ ಕೆಲಸಕ್ಕಾಗಿ ಸಂತೋಷಪಟ್ಟು ಮ|| ಗೂಳಬೋಯಿಗೆ ವಂದನಾಪತ್ರಿಕೆಯನ್ನು ರೆಜಿಸ್ಟ್ರಿ ನಂಬರೊಡನೆ ದಯಪಾಲಿಸಿರುತ್ತಾರೆ. ಇದರಂತೆಯೇ ನಮ್ಮ ದೇಶದ ಮಹನೀಯರುಗಳೂ ಒಳ್ಳೇ ಕೆಲಸಗಳನ್ನು ಮಾಡಿ ಕೀರ್ತಿಯನ್ನು ಪಡೆಯುವದಕ್ಕೆ ಇದು ಒಂದು ಒಳ್ಳೆಯ ಮಾರ್ಗವಾಗಿರುತ್ತೆ.

WANTED

An active and influential Sole District Agent for the Districts of Bangalore, Tumkur, Shimoga, Kolar, and Coorg on liberal terms of Commission and monthly Office allowance. None but those who can guarantee good business need apply to

Messers. VENKATACHALAM & SONS,
Chief Agents,
Hindustan Co-operative Insurance Society, Ltd.,
166, Dodpet, near Old Taluk Cutcherry,
[224-33] *MYSORE.*

WANTED

Agents for the sale of Steel Cash and Treasure Safes, in Mysore District, for terms and other particulars, apply to

Basel Mission Mechanical Establishment,
[142-4] **Mangalore.**

ನಿನಗೆ ಮೈ ಸ್ವಸ್ಥವಿಲ್ಲವ್ರೋ ?

"ನನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ, ನಿನಗೆ ಯಾವ ನೋವೇ ಉಂಟಾಗಿರಲಿ—" ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತಿದೆಯೇ ?" ಎಂದು ನಿನ್ನನ್ನು ನೀನೇ ಕೇಳಿಕೋ; ಹಾಗೆ ಆಗದಿದ್ದರೆ ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ. ಮಾರನೇ ದಿನ ಬೆಳಿಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನಿನಗೆ ಮೈ ಸ್ವಸ್ಥವಾಗುವುದು.



(೧೨ ಆಣೆ ಬುಡ್ಡಿ ಪರಿಮಾಣ)

ಮಲಬಂಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ ಪರಿಣಮಿಸುವುದು. ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲಕಾರಣವಾಗಿರುವುದು. ಮಲಬಂಧದಿಂದ ರೋಗಗಳೇಳೆ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು. ಆ ರೋಗಗಳಾವುವೆಂದರೆ :—ಪಿತ್ತಕೋಶ ರೋಗ; ಪಿತ್ತ; ಪಿತ್ತಜ್ವರ; ಅಜೀರ್ಣ; ಅಗ್ನಿಮಾಂದ್ಯ; ಗಾಬರಿ; ಅಶಕ್ತಿ; ಎದೆಯು ತಲ್ಲಣಿಸುವುದು; ತಲೆತಿರುಗುವುದು; ತಲೆನೋವು; ಹೊಟ್ಟೆಯುಬ್ಬರ; ಹುಳಿತೇಗಿನ ಹೊಟ್ಟೆನೋವು; ಹೆಂಗಸರ ವ್ಯಾಧಿಗಳು; ಇವೇ ಮೊದಲಾದವು ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು.

ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು. ಗಂಡುಸರಿಗಾಗಲಿ ಹೆಂಗುಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ, ಕೆಟ್ಟಿಲವಾದ ವಾಯುವನ್ನೂ, ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ಶುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇಗ ನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು. [181-46]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ. ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು. ಔಷಧಗಳನ್ನು ಮಾರುವವರ ಬಳಿಯಲ್ಲಾ ದೊರೆಯುವುದು; ಅಥವಾ ಡೋನ್, ಪಿ. ಒ. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು

S U. N. & Co.,

BENARES CITY, U. P.

ಸೊಗಸಾದ ಸರಕುಗಳು !!
ದೊಡ್ಡ ಕಂಪೆನಿ !

ಈ ನಮ್ಮ ಕಂಪೆನಿಯಲ್ಲಿ ನೆಯಿದು ತಯಾರಿಸುವ ಉತ್ತಮವಾದ ಬನಾರಸ್ ರೇಷ್ಮೆ ಜರೀ ಸೀರೆಗಳು, ಶಲ್ಯ, ಪೇಟಾ, ಕಾಶ್ಮೀರ್ ಶಾಲು, ದುಪಟ್ಟಿ, ಮುಗುಟ, ಜಗನ್ನಾಥ ಚಾಗಟೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಫೋಟೋಗಳುಳ್ಳ ಕ್ಯಾಟಲಾಗ್ 1 ನ್ನು ಮತ್ತು 2 ಏಕೇಶ್ವರ ಪಟಗಳನ್ನು ಇನಾಮಾಗಿ ಕಳುಹಿಸಲಾದೀತು. [69-19]

ಎಸ್. ಯು. ಎನ್. ಮತ್ತು ಕಂಪೆನಿ, ಕಾಶಿ.

ಯಾಕೆ ಪರೀಕ್ಷಿಸಬಾರದು ? ಭಂಗಾರದ ಪದಕ ಬಂದಿದೆ.

ಸೆಂಟ್, ಅತ್ತರ್‌ಗಳೆಲ್ಲಾ ಶ್ರೇಷ್ಠವಾದದ್ದು
ಅಟೋ ಮೋಹಿನಿ

ಇದು ರಜಿಸ್ಟರ್ ಆಗಿದೆ. ಈಗಿನ ಕಾಲದಲ್ಲಿ ಇದೇ ನಿಲ್ಲುವ, ಸುವಾಸನೆಯುಳ್ಳ, ಮನೋಹರವಾದ ಮತ್ತು ಸರಿಯಾದ ಪರಿಮಳದ ದ್ರಾವಕ. ಈ ವಸ್ತ್ರಕ್ಕೆ ನಾಲ್ಕು ತೊಟ್ಟು ಹಾಕಿಕೊಂಡರೆ ನಾಲ್ಕು ದಿನಗಳ ತನಕ ಘಮಘಮಿಸುವ ಸುವಾಸನೆ ಇರುತ್ತೆ. ಹಾಗೆ ದೀರ್ಘಕಾಲ ನಿಲ್ಲತಕ್ಕದ್ದಲ್ಲವೆಂದು ರುಜುವಾತು ಮಾಡಿಕೊಡುವವರಿಗೆ ನಾವು ಒಂದು ನೂರು ರೂಪಾಯಿ ಬಹುಮತಿ ಕೊಡುತ್ತೇವೆ, ಪರೀಕ್ಷೆಮಾಡಿ ನೋಡಿ, ಬಹುಮತಿಯನ್ನು ಸಂಪಾದಿಸಿಕೊಳ್ಳಿ !

ಕ್ರಯ ½ ಔನ್ಸ್ ಗಾಜಿನ ಬಿರಡೆಯ ಬಾಟ್ಲಿಗೆ ರೂ. 2-0-0.
,, 1 ಡ್ರಾಂ ಕೊಳವೆ ,, ,, ,, 0-12-0.

ಅಟೋ ಮೋಹಿನಿ ಪರಿಮಳದ ಕಾರ್ಡುಗಳು ಡಜನ್ 1 ಕ್ಕೆ ರೂ. 0-12-0

ಎಲ್ಲರಲ್ಲೂ ವಿಕರಿಗೆ ಇಟ್ಟಿದೆ.

ಮದರಾಸ್ ಅಧಿಪತ್ಯಕ್ಕೆಲ್ಲಾ ಏಜಂಟರು—

ಷಾ ಭಗವಾನ್‌ದಾಸ್ ಚೂನಿಲಾಲ್ ಕಂಪನಿ,
[251-34] ೧೩೩, ಚೈನಾಬಜಾರ್ ರೋಡ್, ಮದರಾಸ್.

ಅಮೃತಾಂಜನ ರಿಜಿಸ್ಟರ್ಡ್

ಇದು ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು. ಇದರ ಉಪಯೋಗದಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗವಾಯು, ಉಳುಕು, ಕೆಮ್ಮು, ಸೊಂಟನೋವು, ಶೀತ, ಚರ್ಮವ್ಯಾಧಿ, ಹಲ್ಲುನೋವು, ಚೇಳು ಕಡಿತ ಮೊದಲಾದ ಎಲ್ಲಾ ತರದ ನೋವುಗಳು ಖಾತ್ರಿಯಾಗಿ ನಿಲ್ಲುವವು. ನಕಲಿ ಔಷಧಗಳನ್ನು ಪಡಕೊಳ್ಳಬೇಡಿರಿ. ಈ ನಮ್ಮ ಲೋಕಪ್ರಖ್ಯಾತವಾದ ಅಮೃತಾಂಜನವನ್ನು ನಮ್ಮ ರಜಿಸ್ಟ್ರಿಯಾದ ಮತ್ತು ಹಲವು ಭಾಷೆಗಳುಳ್ಳ ಸುಂದರವಾದ ಕರಡಿಗೆಯಲ್ಲಿ ಪ್ಯಾಕ್‌ಮಾಡಿರುತ್ತೇವೆ. ಕರಡಿಗೆ ಇಲ್ಲದ ಬಾಟ್ಲಿಗಳನ್ನು ಪಡಕೊಳ್ಳಬೇಡಿರಿ. ಬಾಟ್ಲಿ ಒಂದರ ಕಿಮ್ಮತು 0-8-0. ಡಜನ್ 1 ಕ್ಕೆ 5-4-0. ವಿ. ಪಿ. ಪ್ರತ್ಯೇಕ. ಗಜಕರ್ಣದ ಮುಲಾಮು 0-6-0. ದಂತಮಂಜನ 0-2-0. ಮೋಹಿನಿ ತೈಲ 0-12-0. ಬಿಚ್ಚು ಮುಲಾಮು 0-3-0. ಬುಲಾಬು ವಾಸ್ತಿ 0-8-0. ಸುಂದರಿ ಮುಲಾಮು 0-8-0. ಕ್ಯಾಟಲಾಗಿಗೆ ಬರೆಯಿರಿ. [52-20]

ವ್ಯಾಪಾರಸ್ಥರಿಗೆ ಬೆಲೋ ಕಮಿಷನ್ ದೊರಕುವದು.

ಅಮೃತಾಂಜನ್ ಡಿಪ್ಪೋ,

ಫೋರ್ಟ್. ಮುಂಬಯಿ, ಮತ್ತು ೯ ಜಹಂಗೀರ್ ಸ್ಟ್ರೀಟ್. ಮದ್ರಾಸು.

ಪ್ರೊಫೆಸರ್ ಬ್ರೇಸ್ಲರ್
ಇಲೆಕ್ಟ್ರೊ ಪೆಯಿನಾಡ್ಯನ್

ಮನುಷ್ಯನ ಶರೀರದಲ್ಲಿ ವಿದ್ಯುಚ್ಛಕ್ತಿ ವ್ಯಾಪಿತವಿರುವದೆಂತಲೂ, ವಿದ್ಯುಚ್ಛಕ್ತಿ ಕಡಮೆಯಾದ ಕೂಡಲೇ ನಾನಾ ತರದ ವ್ಯಾಧಿಗಳು ಲಭಿಸುವದೆಂತಲೂ, ಅಂತಹ ವ್ಯಾಧಿಗಳನ್ನು ಶೀಘ್ರ ಗುಣಪಡಿಸಲು ವಿದ್ಯುಚ್ಛಕ್ತಿ ಮಿಶ್ರವಾದ ಔಷಧದ ಉಪಯೋಗದಿಂದಲ್ಲದೆ



ಬೇರೆ ಔಷಧಗಳಿಂದ ವ್ಯಾಧಿಗಳನ್ನು ಶೀಘ್ರ ಗುಣಪಡಿಸುವದು ಕಷ್ಟವೆಂತಲೂ ಅಮೇರಿಕಾ ದೇಶದ ವೈದ್ಯಶಾಸ್ತ್ರ ಪಂಡಿತರು ವೈದ್ಯಶಾಸ್ತ್ರ ಪರಿಶೋಧನೆಯಿಂದ ಸಿದ್ಧಿಸಿರುವರು. ಈ ಔಷಧವು ಉಪಯೋಗಿಸಿದ ಕೂಡಲೇ ದೇಹಕ್ಕೆ ಸಾಕಾಗುವಷ್ಟು ವಿದ್ಯುಚ್ಛಕ್ತಿಯನ್ನುಂಟುಮಾಡಿ ವ್ಯಾಧಿಯನ್ನು ಅತಿ ಶೀಘ್ರ ಗುಣಪಡಿಸುತ್ತೆ. ಪ್ರಾಚೀನಕಾಲದ ಔಷಧಗಳಿಗೆಲ್ಲವು ಇದು ಅತ್ಯುತ್ತಮವಾದದ್ದು. ಒಂದಾವರ್ತಿ ಪರೀಕ್ಷಿಸಿ ನೋಡಿದರೆ ಇದರ ಗುಣವು ವ್ಯಕ್ತವಾಗುತ್ತೆ.

ಎಲೆಕ್ಟ್ರೊಪೆಯಿನಾಡ್ಯನ್ ತೈಲದಿಂದ ಗುಣಪಡುವ ವ್ಯಾಧಿಗಳು:—

ತಿಮರುವಾಯುವು, ಕೀಲ್ವಾಯುವು, ಪಾರ್ಶ್ವವಾಯುವು, ಕ್ಷಯ, ಕೆಮ್ಮು, ನೆಗಡಿ, ವಾಯುನೋವು (ಕೈಕಾಲು ಹಿಡಿತ), ಉಳುಕುಹಿಡಿದಿದ್ದರು, ಕಠಿನಶ್ವಾಸ, ನಡುನೋವು (ಸೊಂಟನೋವು), ಪಕ್ಕಶೂಲೆ, ಹಲ್ಲುನೋವು, ತಲೆನೋವು, ಅರೆತಲೆನೋವು, ಉಬ್ಬಸ, ವಿಷಜ್ವರದ ಗಡ್ಡೆಗಳಿಗೂ ಮತ್ತು ಮಕ್ಕಳ ಪಕ್ಕಶೂಲೆ, (ಅಳ್ಳೆ) ಶೈತ್ಯದೋಷಗಳೂ, ವಿಷಹುಳಗಳ ಕಡಿತಗಳಿಗೂ (ಚೇಳು ಮುಂತಾದದ್ದು), ಇದಕ್ಕೆಲ್ಲಾ ಬಹಳ ಶ್ಲಾಘನೀಯವಾದದ್ದು. [12-29]

ಉಪಯೋಗಿಸುವ ಕ್ರಮವು ಹಿಂದುದೇಶದ ಎಲ್ಲಾ ಭಾಷೆಗಳಲ್ಲಿಯೂ ಬುಡ್ಡಿಯ ಸಂಗಡ ಕಳುಹಿಸಲಾದೀತು.

ಬುಡ್ಡಿಯ ಕ್ರಯ ರೂ. 0-8-0. ವಿ. ಪಿ. ಖರ್ಚು 0-4-0. ಏಜಂಟರು ಬೇಕು.

ಮುಖ್ಯ ಏಜಂಟರು:—ಗುರುಬಸವ ಅಂಡ್ ಕಂಪೆನಿ, ಮದರಾಸ್.

ಪಾರ್ಶ್ವವಾಯುಪೀಡಿತರೂ ಸ್ವಸ್ಥರಾಗುತ್ತಾರೆ

ಬದುಕಿದ್ದರೂ ಅರ್ಧ ಸತ್ತಿರುವ ಪಾರ್ಶ್ವವಾಯುಪೀಡಿತರನ್ನು ಕಂಡರೆ ವ್ಯಸನವಾಗುತ್ತೆ. ಈ ಭಯಂಕರವಾದ ರೋಗದಿಂದ ಕಷ್ಟಪಡುತ್ತಿರುವ ಮಗನಾದರೂ ಮಗಳಾದರೂ ನಿಮಗಿದ್ದಾರೋ? ಇಂಥಾ ಕಷ್ಟದಿಂದಲೂ ಯತ್ನವಿಲ್ಲದಿರುವಿಕೆಯಿಂದಲೂ ಬಿಡುಗಡೆಯಾಗಲು ಮರಣವನ್ನು ಅಪೇಕ್ಷಿಸುವ ಸ್ನೇಹಿತರ್‍ಯಾರಾದರೂ ನಿಮಗಿದ್ದಾರೋ?

ಲಂಡನ್ ನಗರದ ಜಾನ್ಸ್‌ಟೌನ್ ಬೀದಿಯಲ್ಲಿರುವ ಮಿ॥ ಇ. ಜೆ. ಓರ್ಡನ್‌ರವರು ಬರೆಯುವುದು:—"ನನ್ನ ಮಗಳ ಪಾರ್ಶ್ವವಾಯುವನ್ನು ಗಟ್ಟಿಗರಾದ ಶಿರೋಮಣಿ ವೈದ್ಯರು ನೋಡಿ ಔಷಧಿಕೊಟ್ಟರು. ಆದರೆ ಆಕೆಗೆ ಯಾರೊಬ್ಬರಿಂದಲಾದರೂ ಏನೂ ಪ್ರಯೋಜನವಾಗಲಿಲ್ಲ. ಕ್ಲೆಮೆಂಟ್ಸ್ ಮ್ಯಾಜಿಕ್ ಬಾಂ ಎಂಬದನ್ನು ಉಪಯೋಗಿಸಿದಾಗಿನಿಂದ ತುಂಬಾ ಬಲವಾಸಿ ಯಾಯಿತು. ಆಕೆಯು ಇದಕ್ಕೆ ಮುಂಚೆ ಅನುಭವಿಸದಂಥಾ ಹೊಸ ಜೀವವೂ ಹೊಸ ಬಲವೂ ತನಗೆ ಬಂದಂತೆ ವರ್ಣಿಸುತ್ತಾಳೆ. ಬೇಗ ಆಕೆಯು ಪೂರ್ಣ ಸ್ವಸ್ಥಳಾಗುವಳೆಂದು ನಿಸ್ಸಂದೇಹವಾಗಿ ತಿಳಿದಿದ್ದೇನೆ."

ಸೀಸೆ 1ಕ್ಕೆ 1 ರೂ. ಮೇಲಿನ ವಿಳಾಸದಿಂದ ದೆಲ್ಲರಿಲ್ಲಿಯೂ ಸಿಗುತ್ತೆ. 101-12

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು? ಹಾಸನದ ಟೋಪಿ ಅಲ್ಲವೋ? ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

2-26

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಳೆಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ:—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ.

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ. ೮ ಆ ೧ ರೂ. ೬ ಆ.;

ಚುಕ್ಕಿಯುಳ್ಳ ಟೋಪಿಗಳು ರೂ. ೧—೮; ರೂ. ೧—೧೨.

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ. ೨.

ದಾರದ ಟೋಪಿಗಳು ೧ ರೂ. ೧೨ ಆ.; ೧ ರೂ. ೮ ಆ.; ೧ ರೂ. ೬ ಆ

ಮುಸುಕಿನ ಟೋಪಿಗಳು ೧ ರೂ. ೮ ಆ.; ೧ ರೂ. ೬ ಆ.

"In addition to cap making we are giving special attention to knitting stockings. All our stockings, for adults and children, are hand-made. Prices will be sent on enquiry."

ಮ್ಯಾನೇಜರ್, ಟೋಪಿ ಕಾರ್ಖಾನೆ,
ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ.

Apply:—

MANAGER, CAP WORKS,
GIRLS' INDUSTRIAL SCHOOL, HASSAN.

ಕುಂತಲಾನಂದ ತೈಲವು.

192-44

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಿರುದಿನ ಬಿಲ್ಲೆಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ. ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು. ಈ ತೈಲವು ಕೂದಲನ್ನು ಚನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುತ್ತದೆ.

ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದ್ದಾಗಿದೆ. ಬೆಲೆ ಬಾಟ್ಲಿಗೆ 1 ರೂಪಾಯಿ 3 ಬಾಟಲಿಗೆ 2 ರೂಪಾಯಿ 10 ಆಣೆ. ಅಂಚೆ ಹಾಸಲು ಬೇರೆ. ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ.

ನಮ್ಮ ವಿಳಾಸ:—ಬಿ. ಎಮ್. ನಾಥ ಮತ್ತು ಕಂಪೆನಿ,
ವೇಪೇರಿ, ಮದರಾಸ್

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು."

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು. ವಾಯು, ಕೀಲು, ಅರತಲೆ, ತಲೆನೋವುಗಳು; ಯಾವ ಕಾರಣದಿಂದ ಹುಟ್ಟುವ ಬಾಧೆಯಾಗಲಿ, ಉಬ್ಬಸ, ಹಲ್ಲುನೋವು, ಗಂಟ್ಲು ಗಾರೆನ್ನುವುದು, ಕೆಮ್ಮುಗಳು, ಹೊಟ್ಟೆನೆಗಡಿ, ಶ್ವಾಸರೋಗ, ದಬ್ಬು, ಉಳುಕು, ಥಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ. ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು. ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲ ಕೊಡಿ ಎಂದು ಕೇಳು. ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೋ. ಈ ಯುಕ್ತಿಯೊಂದಿಗೆ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ. ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ. ಲಕ್ಷಾಂತರ ಜನರು ಗುಣಹೊಂದಿದಾರೆ; ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ. [122-8]

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡಿ. ಅದರ ಕ್ರಯ ಬಾಟ್ಲಿಗೆ 12 ಆಣೆ; ಅಂಚೆ ವೆಚ್ಚ 4 ಆಣೆ. 3 ಅಥವಾ ಹೆಚ್ಚು ಬಾಟ್ಲು ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ. ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ. ವಿಳಾಸಗಳು:—(1) ಎಸ್. ಪೀಟರ್ಸ್, 37 ವಡಮಲೆಪಿಳ್ಳೆ ಬೀದಿ, ಪುರಸವಾಕಂ, ವೇಪೇರಿ, ಮದರಾಸ್; (2) ಜಿ. ಎಸ್ ಕನ್ನಯ್ಯಶೆಟ್ಟರು, ಜನರಲ್ ಮರ್ಚೆಂಟ್, ತುಮಕೂರು.

ಸುಖಕರ, ಆನಂದ, ಬಹಳ ಅವಶ್ಯ.

ಈಗ ತಾನೇ ಕಂಡುಹಿಡಿದಿದೆ.

ಜರ್ಮನ್ ರಾಜ್ಯದಲ್ಲಿ ನೂರಾರು ವರುಷಗಳಿಂದ ಉಪಯೋಗದಲ್ಲಿದೆ.

ಸೆಶಿಂತ್ರಾನ

ಬೆಳ್ಳಿಯ ವರಕು ಸುತ್ತಿದ ಮುತ್ತುಗಳು.

(1) ಮನಸ್ಸಿಗೆ ಹರ್ಷವನ್ನೂ ಉಲ್ಲಾಸವನ್ನೂ ಕೊಟ್ಟು ಜೀರ್ಣಶಕ್ತಿಯನ್ನುಂಟುಮಾಡುವುದು.

(2) ಹಾಡುವವರಿಗೆ ವರಪ್ರಸಾದವಾದದ್ದು.

(3) ಬಾಯಿ ದುರ್ಗಂಧ, ಗಂಟ್ಲು ಗಾರೆನ್ನುವುದು, ಉಬ್ಬಸ, ಸಮುದ್ರಯಾನದ ಜುಗುಪ್ಸೆ, ಈ ಮೊದಲಾದವನ್ನು ಹುಟ್ಟದಂತೆ ಅಡ್ಡಿಮಾಡುತ್ತದೆ.

(4) ತಾಂಬೂಲದೊಡನೆ ಸೇವಿಸುವುದಕ್ಕೆ ಅತ್ಯಂತ ಹಿತಕರವಾಗಿದೆ. [73-19]

ಒಂದು ಸಲ ಪರೀಕ್ಷೆಮಾಡಿದಲ್ಲಿ ಯಾವಾಗಲೂ ಒಂದು ಪೊಟ್ಟಣ ಇದ್ದೇ ತೀರಬೇಕೆಂದು ನೀವೇ ನಿಶ್ಚಯಿಸುವಿರಿ.

ಮುತ್ತಿನಂತಿರುವ 45 ಮಾತ್ರೆ ಉಳ್ಳ ಪೊಟ್ಟಣಕ್ಕೆ ಕ್ರಯ 2 ಆಣೆ.

,,	95	,,	,,	,,	,,	4	,,
,,	200	,,	,,	,,	,,	7	,,
,,	200	,, ಸುಂದರವಾದ ಟಿನ್ ಡಬ್ಬಾ				9	,,
,,	80	,,	,,	,,	,,	4	,,
,,	100	,, ಬಾಟ್ಲಿಯಲ್ಲಿ				4½	,,

ಈ ಕ್ರಯದಷ್ಟು ಸ್ಟಾಂಪನ್ನೂ, ಅಂಚೆ ವೆಚ್ಚಕ್ಕೆ ಜಾಸ್ತಿ ಒಂದಾಣೆಯನ್ನೂ ಸೇರಿಸಿ ಕಳುಹಿಸಬೇಕು. ಕಾಗದಪತ್ರವನ್ನೂ ವಿಳಾಸಗಳನ್ನೂ ನಮಗೆ ಇಂಗ್ಲೀಷಿನಲ್ಲೇ ಬರೆಯತಕ್ಕದ್ದು.

ನಮ್ಮ ವಿಳಾಸ—ಸೆಶಿಂತ್ರಾನ ಡಿಪೋ,
ಮಾರ್ಸೂರ್ ಬಿಲ್ಡಿಂಗ್, ಪ್ರಿನ್ಸೆಸ್ ಸ್ಟ್ರೀಟ್,
ಬೊಂಬಾಯಿ 2;
ಅಥವಾ, ಬಿ. ಸಿ. ಷಾ ಕಂಪೆನಿ,
509 ಮಿಂಟ್ ಬೀದಿ, ಮದರಾಸ್.

ಮಧುರೆ ಜುನ್ನಡಿ ಅಂಚಿನ ಸೀರೆ ಅವ್ವಲ್ ರಕಂ ರೂ. ೨-೬-೦. ಜುಲೈ ತಿಂಗಳ ಒಳಗಾಗಿ ತರಿಸಿಕೊಳ್ಳುವರಿಗೆ ಒಂದು ಸಿಂಗಪೂರು ರವಿಕೆಯನ್ನು ಪ್ರತಿ ಸೀರೆಗೂ ಇನಾಮಾಗಿ ಕೊಡುತ್ತೇವೆ. [99-7]



ಇದು ಉಡುವುದಕ್ಕೆ ದಢೂತಿಯಾಗಿಯೂ, ನೋಟಕ್ಕೆ ನಯವಾಗಿಯೂ, ಬೆಲೆ ಸುಲಭವಾಗಿಯೂ ಇದೆ. ಬಣ್ಣ ಹೋಗದು. ಸೀರೆಯ ಉದ್ದ 18 ಮೊಳ. ಸುಂದರವಾದ ಸೆರಗು ಒಂದನ್ನು ತರಿಸಿ ಪರೀಕ್ಷಿಸಿ. ವಿಳಾಸ ಪಿ. ಕೃಷ್ಣಸ್ವಾಮಿ ಮೊದಲಿಯಾರ್, ನಂ 27, ಬಂದರ್ ಬೀದಿ, ಜ. ಟ., ಮದರಾಸು.

Jain's Swadeshi Balm.

ಜೈನ್‌ರವರ ಸ್ವದೇಶೀ ಬಾಮ್ ರೆಜಿಸ್ಟರಾದ ಟ್ರೇಡ್ ಮಾರ್ಕು.

ಈ ಬಾಮ್ ವಾತ, ಸಂಧಿವಾತ, ಕುತ್ತಿಗೆ ನೋವು, ಅರೆತಲೆನೋವು, ನಡುನೋವು, ಶೀತ, ನೆಗಡಿ, ಬೆನ್ನುನೋವು, ಊದು, ಕೆಮ್ಮು, ಎದೆನೋವು, ಹೊಟ್ಟೆನೋವು, ಚಳುಕು, ಚೇಳುಕಡಿತ, ಕೈಕಾಲು ದೇಹ ಕೀಲುಗಳ ನೋವು, ಉರಿ, ಸುಟ್ಟಗಾಯ ಮೊದಲಾದವುಗಳನ್ನು ನಿರ್ಮೂಲವಾಗಿ ಹೋಗಲಾಡಿಸುತ್ತದೆ.

ಜಟ್ಟಿಗಳಿಗೂ, ಮೆದುಳಿನ ಕೆಲಸಗಾರರಿಗೂ ಸಾಮಾನ್ಯವಾಗಿ ಎಲ್ಲಾ ಕೆಲಸದವರಿಗೂ ಈ ಸ್ವದೇಶೀ ಬಾಮ್ ಬಹಳ ಪ್ರಯೋಜನಕರವಾದದ್ದು. ಕೊಬ್ಬಾಗಲಿ, ಬೇರೆ ಯಾವ ಕೆಟ್ಟ ಪದಾರ್ಥವಾಗಲಿ ಮಿಶ್ರಮಾಡಿಲ್ಲ. ಯೂರೋಪ್, ಇಂಡಿಯಾ, ಅಮೆರಿಕಾ ವೈದ್ಯಗ್ರಂಥಗಳನ್ನು ನೋಡಿ ತಯಾರುಮಾಡಿದೇವೆ. ಹಿಂದುಗಳೆಲ್ಲಾ ಇದನ್ನು ಉಪಯೋಗಿಸಬಹುದು. ಇದು ಯುಕ್ತಿಯೊಂದಿಗೆ ಮದ್ದು. ಲಕ್ಷಾಂತರ ಜನರನ್ನೆಲ್ಲಾ ವಾಸಿಮಾಡಿದೆ. ಪ್ರತಿ ಒಬ್ಬರೂ, ಪ್ರತಿ ಮನೆಯವರೂ ಇದನ್ನು ಇಟ್ಟುಕೊಳ್ಳಬೇಕು. ಇದು ಚಿನ್ನದಂಥಾ ಔಷಧ. ಎಲ್ಲಾ ವೈದ್ಯಶಾಲೆಗಳಲ್ಲೂ ಬಳಕೆಯಾಗುತ್ತಿದೆ. ಸೂರ್ಯಾಕಾರದ ಗಳ ರೆಜಿಸ್ಟರ್ ಮಾರ್ಕ್ ಇರುವುದನ್ನು ನೋಡಿ ಕೊಂಡುಕೊಳ್ಳಿ. ನಕ್ಕಲ್ ಔಷಧವನ್ನು ಕೊಂಡು ಮೋಸಹೋಗಬೇಡಿ. ಉಪಯೋಗದ ಕ್ರಮ ಬಾಟ್ಲ ಸಂಗಡಲೇ ಇಟ್ಟಿದೆ. 1 ಬಾಟ್ಲಿಗೆ 12 ಆಣೆ. 3 ಕ್ಕೆ ರೂ. 1-14-0. ವಿ. ಪಿ. ಬೇರೆ. ನಮ್ಮ ಎಲ್ಲಾ ಔಷಧಿಗಳ ಕ್ಯಾಟಲಾಗನ್ನು ಬರೆದು ತರಿಸಿಕೊಳ್ಳಿ. [25-26]

ವಿಳಾಸ—ಜೆ. ಗುಲಾಬ್ ಚಂದ್ ಜೈನ್,
50 ನೈನಪ್ಪನಾಯಕ್ ಬೀದಿ, ಪಾರ್ಕ್ ಟೌನ್, ಮದರಾಸ್

ಮೇಲಾದ ಜರ್ಮನ್ ರೇಷ್ಮೆ ಪಂಚೆಗಳು.

ಒಳ್ಳೇ ಸಮಯ! ಸಾವಿರಗಟ್ಟಲೆ ಖರ್ಚಾಗುತ್ತಿದೆ!! ಸಂತತ ದೊರೆಯಲಾರದು!!!

ಅನೇಕ ಪಂಚೆಗಳು ದಿನವೂ ಖರ್ಚಾಗುತ್ತಾ ಇರುವುದರಿಂದ ಪ್ರಕೃತ ಬೆಲೆಯು ತಗ್ಗಿಸುತ್ತೇವೆ. ವಾಚಕರೇ! ಶೃಂಗಾರವನ್ನು ನಾಗರಿಕತೆಯನ್ನು

ಹೊಂದಿರುವ ಮೇಲಾದ ಅಸಲ್ ರೇಷ್ಮೆ ಪಂಚೆಗಳು ಹಬ್ಬಗಳ ಕಾಲದಲ್ಲಿ ಹೊದಿಯಲು ಅನೇಕ ಪಂಚೆಗಳನ್ನು ತರಿಸಿಕೊಂಡಿರುವುದರಿಂದ ಮುಕ್ಕಾಲು ಪಾಲು ಸರಕು ಖರ್ಚಾಗಿಹೋಗಿರುತ್ತೆ. ಈಗ ಸ್ವಲ್ಪವೇ ಉಳಿದಿರುತ್ತೆ. ಈ ಪಂಚೆಗಳು ಸ್ತ್ರೀ ಪುರುಷರು ಬಾಲಿಕೆಗಳು ಧರಿಸಿಕೊಳ್ಳಬಹುದು. ಅಪೂರ್ವವಾದ ಪಂಚೆಗಳು. ಇದರಲ್ಲಿ ಕೆಂಪು, ಹಸರು, ಎಲೆಹಸರು, ರೋಜಾ, ನೀಲ, ಬಿಳಿ, ಇತ್ಯಾದಿ ರಂಗುಗಳುಂಟು. ಬಹಳ ಉತ್ಕೃಷ್ಟವಾದ ಪಂಚೆಗಳು. ಈ ಖರೀದಿಗೆ ನಮ್ಮಲ್ಲಿ ಅಲ್ಲದೆ ಮತ್ತೆಲ್ಲಿಯೂ ದೊರೆಯಲಾರದು.

5½ ಮೊಳ ಉದ್ದ, 2½ ಮೊಳ ಅಗಲ ಇರುವ ಪಂಚೆ ಒಂದಕ್ಕೆ ರೂ. 3. ಪಂಚೆ 1 ಕ್ಕೆ ಟಪಾಲು ಖರ್ಚು 4 ಆಣೆ. ಎರಡು ಪಂಚೆಗಳನ್ನು ಒಂದೇ ಸಲ ತರಿಸಿಕೊಂಡರೆ ಟಪಾಲು ಖರ್ಚು ಇನಾಂ

ನಮ್ಮ ವಿಳಾಸ—ಎಸ್. ಎಂ. ಸ್ವಾಮಿ ಅಂಡು ಕಂಪೆನಿ,
[109-11] ನಂ. 44, ನಂಬುಳಯ್ಯರ್ ಬೀದಿ, ಮದರಾಸು.

ಶಾಲಿವಾಹನ ಶಕೆ ವರುಷಂಗಳು 1837 ನೇ ಆನಂದ ಸಂವತ್ಸರೇ ದಕ್ಷಿಣಾಯನೆ ಗ್ರೀಷ್ಮಋತೌ ಶ್ರಾವಣ ಶುದ್ಧ ಪಾಡ್ಯಮಿ ಶುಕ್ರವಾರದಿ ಪ ಶ್ರಾವಣ ಶುದ್ಧ ಅಷ್ಟಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1914 ನೇ ಜೂಲೈ.

ತಾ	ವಾರ	ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ	ಕಟಕ ಮಾಸ ತೇದಿ
24	ಶುಕ್ರ ::	ಪಾಡ್ಯಮಿ	2-42	ಉಪರಿ, ಫ್ಲ	57-15	9
25	ಶನಿ ‡	ಬಿದಿಗೆ	56-5	ಮಖ	47 53	10
26	ಭಾನು §	ಚೌತಿ	51-9	ಪುಬ್ಬಾ	45-1	11
27	ಸೋಮ *	ಪಂಚಮಿ	45-32	ಉತ್ತರ	41-31	12
28	ಮಂಗಳ †	ಷಷ್ಠಿ	39-37	ಹಸ್ತ	37-37	13
29	ಬುಧ	ಸಪ್ತಮಿ	33-23	ಚಿತ್ತ	33-15	14
30	ಗುರು ;;	ಅಷ್ಟಮಿ	27-8	ಸ್ವಾತಿ	29-12	15

:: ಅಧಿಶುಕ್ರವಾರ, ಮೃತ್ಯುಯೋಗ, ರಂಜಾನ್ ಚಂದ್ 1, ಮಳೆ ನಕ್ಷತ್ರ—ಪುಷ್ಯ 2 ನೇ ಪಾದ. ‡ ಸಂಪದ್ಗೌರಿವ್ರತ, ಶ್ರಾವಣಾಷನವಾರ. § ನಾಗರಚತುರ್ಥಿ, ಮಳೆ ನಕ್ಷತ್ರ—ಪುಷ್ಯ 3 ನೇ ಪಾದ. * ಗರುಡಪಂಚಮಿ, ಚಿತ್ರನೇಮಿವ್ರತ. † ಮಂಗಳಗೌರಿವ್ರತ. ;; ಅಷ್ಟಮಾತಿಥಿ, ಮಳೆ ನಕ್ಷತ್ರ—ಪುಷ್ಯ 4 ನೇ ಪಾದ.

Printed and Published by the Rev. H. GULLIFORD Proprietor and Manager, Wesleyan Mission Press, Mysore. 23/7/1914.

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು. ಕ್ರಯ ೧ ದುಡ್ಡು.

ಸಂಪುಟ ೨೮ | ಮೈಸೂರು—ಸನ್ ೧೯೧೫ ನೇ ಇಸವಿ ಜೂಲೈ ತಾರೀಖು ೩೦ ನೇ ಗುರುವಾರ. | ಸಂಚಿಕೆ ೯

ಹೊಸ ಬಂಗಾಳಿ ನಾವಲ್ಸ್—ವಿಜಯದಾಸ 4 ಆ. ಸ್ವರ್ಣಲತಾ 1½ ಆ. ಅನೂಪ್ರತ 1 ಆ. ಬಿ. ವೆಂಕಟರಾಮಯ್ಯನಿಂದ ಸಂಗ್ರಹಿಸಿದ 1-1-0. ಚಂದ್ರಶೇಖರ 1-1-0. ರಜನಿ 13 ಆ. ಚಿತ್ರಸಾವಿತ್ರಿ 11 8 ಆಣೆ, ಅನ್ನಪೂರ್ಣ 11 ಆಣೆ. ದುರ್ಗೇಶನಂದಿನಿ 1-1-0. ಇಪ್ಪತ್ತು ಸುಂದರಿ ಹೊಸ ನಾವಲ್ 6 ಆಣೆ.
[68-23] ಎಂ. ಸುಬ್ಬರಾವ್, ಬುಕ್ ಸೆಲ್ಲರ್, ನಗರ್ತಪೇಟೆ, ಬೆಂಗಳೂರು ಸಿಟಿ.

ಕಳೆದುಹೋಯಿತು? ಕೆಳೆವು, ವರ್ರೋಪೆ.

ಜಡಭರತ, ಅಶ್ವಿನೀ ಪ್ರಸಂಗವು, ಜಿನಾಪುರ ಚೋರಿ, ಮಾನವನನ್ನು ಮುಕ್ತಿಮಾರ್ಗಗಳಿಗೆ ಶಿಕ್ಷಿಸುತ್ತಿರುವ ವೇದಾಂತ ಶಾಸ್ತ್ರದ ಪೂರ್ವದಲ್ಲಿ. ಶ್ರೀಮನ್ಮಹಾರಾಜರಿಂದ ರಚಿತವಾಗಿ ಈಗಿನ ಬ್ರಿಟಿಷ್ ಚಕ್ರಾಧಿಪತ್ಯದಲ್ಲಿ ಅನುಷ್ಠಾನದಲ್ಲಿ ಇಂಡಿಯಾ ಗವರ್ನರ್ ಜನರಲ್‌ರವರಿಂದ ಮುಂಚಿತವಾಗಿ ಕಲ್ಕತ್ತಾ, ಮುಂಬೈ, ಮದ್ರಾಸ್, ಮೈಸೂರು ಜಿಲ್ಲಾಗಳಲ್ಲಿ "ಕನ್ನಡ ಯೂನಿಯನ್ ಪೇಪರ್ ಬೋರ್ಡ್" ಮುಂತಾದವುಗಳಿಂದ ಪ್ರಾರಂಭ ಹೊಂದಿರುವರು. ಈ ಆಕೃತಿಗೆ ಅನೇಕ ಪತ್ರಿಕೆಗಳು ಪ್ರಶಂಸೆಯನ್ನು ಬರೆದಿರುವರು. ಅವುಗಳೂ ಈ ಪುಸ್ತಕದಲ್ಲಿ ಅಡಗಿರುವವು. ಕ್ರಯ ಪ್ರತಿ ಒಂದಕ್ಕೆ 2 ರೂಪಾಯಿ; ಜನಸಾಮಾನ್ಯರಿಗೆ ರೂ. 2-8-0.
[143-9] ವಿಳಾಸ—ಬಿ. ನರಸಿಂಗರಾವ್, ಎಡಿಟರ್, ದಿ ಗೆಜೆಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

NOW READY

Full Notes with Summary and Numerous useful questions on Circe's Palace; The Golden Fleece and Fairy Tales (L. S. Text for 1915) by Mr. A. S. Rangaswamiengar, B.A., Asst. Master, Maharani's College, Mysore. Price four annas only. Yate's Primer 0-4-0; Yate's Second Reader 0-9-0; King Second Reader 0-6-0; King Third Reader 0-8-0; Macmillan's New No. IV Reader 0-12-0; Hydes Practical English Grammar—First 0-15-0, Second 0-15-0; Longman's School Geography 1-4-0; Marrison's Junior Geography of India 0-12-0.

We supply you any books in English or Canarese.

[23-29] The General Agency, Mysore.

"ಮಧುರವಾಣಿಯ" ಅರಿಕೆ.

ರಾಜಧಾನಿಯಲ್ಲಿ ಎರಡು ವರ್ಷಗಳಿಂದ ಹೊರಡುತ್ತಿರುವ "ಮಧುರವಾಣಿ" ಎಂಬ ಮಾಸ ಪತ್ರಿಕೆಯು ರಾಜಕೀಯ ವಿಷಯವನ್ನು ಕುರಿತು ಚರ್ಚೆಮಾಡುವ ಅಧಿಕಾರವನ್ನು ಪಡೆಯುವ ಇದುವರೆಗೆ ಪಡಬೇಕಾದುದಕ್ಕಾಗಿ ವಾಚಕರ ಕ್ಷಮೆ ಬೇಡುತ್ತಿದ್ದಾಗಿಯೂ, ಆಗಸ್ಟ್ ಮೊದಲನೆಯ ತಾರೀಖಿಗೆ ಸಂಚಿಕೆಯು ಕಳುಹಿಸಲ್ಪಡುತ್ತದಾಗಿಯೂ ಈ ಮೂಲಕ ಪ್ರಕಟಿಸಲಾಗಿದೆ.

ಈ ಗ್ರಂಥಗಳನ್ನು ಓದುವಿರಾ?—ನಾಸಿಕ ಚರಿತ್ರೆ 4 ಆಣೆ, ಶುಬಶೋಭಿನಿ 1½ ಆಣೆ, ಕೃಷ್ಣಕುಮಾರಿ 10 ಆಣೆ, ವಿನೋದಮಂಜರಿ 3 ನೇ ಭಾಗ 6 ಆಣೆ, ಮಹರ್ಷಿ ವಾಲ್ಮೀಕಿ 12 ಆಣೆ, ಅಶ್ವತ್ಥಾಮ್ನ 1½ ಆಣೆ, ಸೂಕ್ತಿತಾರಾವಳಿ 4 ಆಣೆ, ಸಾವಿತ್ರಿ 12 ಆಣೆ, ಕನ್ಯಾಬಲಿ 6 ಆಣೆ, ತಾರಾ 3 ಆಣೆ, ರಂಗನ ಮದುವೆ 1 ಆಣೆ, ಅಭಿಮನ್ಯುರಾಜ 1 ಆಣೆ, ಬಾಗಿಲುಭದ್ರ 1 ನೇ ಭಾಗ 4 ಆಣೆ, ನವನಾಗರಿಕನ 1 ಆಣೆ, ಸಾಹಸಿ 2½ ಆಣೆ, ವಿಲಕ್ಷಣಪ್ಯವಘಟನೆ 1 ಆಣೆ.

ಕ್ಯಾಟಲಾಗಿಗೂ "ವಾಣಿ"ಯ ಮಾದರಿ ಸಂಚಿಕೆಗೂ ಬೆಲೆಯಿಲ್ಲ.

[169-2] ವಿಳಾಸ:—ಹನುಮಾನ್ ಕಂಪೆನಿ, ಮೈಸೂರು.

ಸಿದ್ಧವಾಗಿದೆ.

1915 ನೆಯ ವರ್ಷದ ಲೋವರ್ ಸೆಕೆಂಡರಿ ಕನ್ನಡ ಟೆಕ್‌ಸ್ಟಿನ ನೋಟ್ಸು.—ಕ್ರಯ 6 ಆಣೆ.

ಡಿಸ್ಕೌಂಟು—10 ಕ್ಕೆ 1; 25 ಕ್ಕೆ 3; 50 ಕ್ಕೆ 8; 100 ಕ್ಕೆ 20.

ಮಕ್ಕಳ ಭೂವಿವರಣೆ.

ಈಗಿನ ಪಾಠಕ್ರಮಕ್ಕೆ ಅನ್ವಯಿಸಿ ಹೊಸದಾಗಿ ಆಗಿದೆ. ಇದರಲ್ಲಿ ಮೈಸೂರು ದೇಶದ ಬೆಳೆ, ಎತ್ತರ, ನದೀ ಪರ್ವತಾದಿಗಳು ಇವುಗಳನ್ನು ತೋರಿಸುವ ಮೂರು ನಕ್ಷೆಗಳೂ, ಚಿತ್ರಗಳೂ ಸೇರಿವೆ. ಕ್ರಯ 2 ಆಣೆ. [49-24]

ಆಂಗ್ಲೇಯ 2 ನೆಯ ಪುಸ್ತಕದ ನೋಟ್ಸು 2½ ಆಣೆ. ಮೆಕ್ಮಿಲನ್ ರವರ 3 ನೇ ಪುಸ್ತಕದ ನೋಟ್ಸು 1½ ಆಣೆ. ಅದೇ 4 ನೇ ಪುಸ್ತಕದ ನೋಟ್ಸು 1½ ಆಣೆ. ಅದೇ 5 ನೇ ಪುಸ್ತಕದ ನೋಟ್ಸು 4 ಆಣೆ. ಸಮಾನಾರ್ಥವ್ಯಾಕರಣ (3 ನೇ ತರಗತಿ) 1 ಆಣೆ. Notes on "Tanglewood Tales," English Lower Secondary Text for 1915—As. 3. Notes on Fairy Tales—As. 2.

ನಮ್ಮ ವಿಳಾಸ:—ಯುಸ್. ಆರ್. ವೆಂಕಟಸುಬ್ಬಾಚಾರ್ಯ, ಸುಬೋಧಗ್ರಂಥಾಲಯ, ಮೈಸೂರು.

ದಾಸೋಹಸನಾವಳಿ ಡೆರ್ಗೇಟು.

ಬಹು ಸ್ವಲ್ಪ ಪ್ರತಿಗಳು ಉಳಿದಿವೆ. ಸರಸವಾದೀ ಹೊಸಗನ್ನಡದ ಕಾವ್ಯದ ರಿಗಳನ್ನು ನೀವು ಓದಬೇಕು; ಇಂತಹ ಪುಸ್ತಕಗಳು ದೊರೆಯುವುದು ಕಷ್ಟ.

ಆನಂದಕಂದರ 8 ಆಣೆ, ಪರಾನಂದರ 8 ಆಣೆ, ರಾಧಾಮಾಧವ 8 ಆಣೆ, ಸುಭದ್ರಾ 8 ಆಣೆ, ಕುಮುದಿನಿ 6 ಆಣೆ, ಸಭಾರಂಜನಿ 6 ಆಣೆ, ಶೃಂಗಾರಸಾರ 4 ಆಣೆ.

"ನವರಸ" ಹೊಸ ನಾಟಕಗಳಲ್ಲಿ ಮೊಟ್ಟಮೊದಲು ಬಹು ಜನರ ಮೆಚ್ಚಿಕೆಗೆ ಪಾತ್ರವಾದ ನಾಟಕ. ಕಥಾ ವಿಧಾನವೂ ಪದ್ಯಗಳೂ ಪದ್ಯಗಳೂ ಬಹು ಸರಸವಾಗಿಯೂ ಸುಲಭವಾಗಿಯೂ ಇವೆ. ಕ್ರಯ 12 ಆಣೆ.

[206-33] ವಿಳಾಸ—ಜಂಬೂಸ್ವಾಮಿ ಬುಕ್ ಸ್ಟಾಲ್, ಮೈಸೂರು.

ಒಳ್ಳೆ ಸಮಯ! A Good Opportunity!

ಮೈಸೂರು ಚಾಮರಾಜ ರೋಡ್ ಎಂ. ಎಲ್. ವಾಸುದೇವಯ್ಯನವರ ಕಂಪೌಂಡಿನಲ್ಲಿ ಮೊದಲು ಕಚೇರಿ ಸ್ಥಳದಲ್ಲಿ ಕೆಲಸವಾಡುತ್ತಿರುವ ಅಕ್ಕಿ ಮತ್ತು ಹಿಟ್ಟಿನ ಮಿಷನ್, ಇದಕ್ಕೆ ಆರು ಕುದುರೆ ಶಕ್ತಿಯುಳ್ಳ ಒಂದು ಆಯಿಲ್ ಇಂಜಿನ್, ಇದಕ್ಕೆ ಸಂಬಂಧಪಟ್ಟ ಎಲ್ಲಾ ಸಾಮಾನುಗಳನ್ನು ಸಹ (A Rice Mill and a Grinding Mill with a six horse power oil engine, complete) ಕ್ರಯವಾಗಬೇಕಾಗಿದೆ. ಬೇಕಾದವರು ಮುದ್ದು ಪರೀಕ್ಷೆಯಿಂದ ಕೆಳಗಿನ ವಿಳಾಸದಲ್ಲಾಗಲಿ, ಅಥವಾ ಕೃಷ್ಣಾ ಫ್ಲೋರ್ ಮಿಲ್ ಪ್ರೊಪ್ರೈಟರ್ ಮುಖ್ಯ ಅನಂತಪ್ರಾರಂಭ ಹಿಂದಾಗಲಿ ಕೇಳಿ ತಿಳಿದುಕೊಳ್ಳಬಹುದು.

[161-2] S. R. Visvanatha Iyer.

THE
GENERAL
Assurance Society Ltd., Ajmer.

(A Popular Life Office.)

Before Insuring or taking agency elsewhere, it would be to your interest to know the rates of premium and terms of agency specially prepared by the Society's Consulting Actuary, Mr. H. E. W. Lutt, F.I.A. (one of the most eminent Actuaries in England).

First Valuation Result:—The total liabilities under all assurances issued up to 31st March 1913, are fully covered by the Society's Life Assurance Fund and Paid up Capital. Write for full particulars, Annual and Valuation Reports to the Manager, Ajmer, or Secretary,

Opposite to Minto Ophthalmic Hospital,
[151-3] Bangalore City

BRAHMAPPA TAVANAPPANAVAR,
Merchant & Commission Agent.
Agent to Messrs. Currimbhoy Ebrahim & Co's Mills, BOMBAY.

ನಾವು ಮುಂಬೈ ಮೆಸ್ಸರ್ಸ್ ಕರೀಂಬಾಯ್ ಇಬ್ರಾಹಿಂ ಅಂಡ್ ಕಂಪೆನಿಯವರ ಬಾಬತು, ಮೆಸ್ಸರ್ಸ್ ಫಜುಲ್ಭಾಯ್ ಮಿಲ್ಸ್ ಲಿಮಿಟೆಡ್ ಮುಂಬೈ. ದಿ ಕ್ರೆಸೆಂಟ್ ಮಿಲ್ಸ್ ಲಿಮಿಟೆಡ್ ಮುಂಬೈ, ಕರೀಂಬಾಯ್ ಮಿಲ್ಸ್ ಲಿಮಿಟೆಡ್ ಮುಂಬೈ, ದಿ ಇಂಡಿಯನ್ ಬ್ಲೀಚಿಂಗ್, ಡೈಯಿಂಗ್ ಅಂಡ್ ಪ್ರಿಂಟಿಂಗ್ ವರ್ಕ್ಸ್ ಲಿಮಿಟೆಡ್ ಮುಂಬೈ, ದಿ ಇಂದೋರ್ ಅಂಡ್ ಮಾಳ್ವಾ ಯುನೈಟೆಡ್ ಮಿಲ್ಸ್ ಲಿಮಿಟೆಡ್ ಇಂದೋರ್, ಇವುಗಳಲ್ಲದೆ ಇನ್ನೂ ಅನೇಕ ಮಿಲ್ಲುಗಳ ಬಟ್ಟೆಗಳನ್ನು ಮೈಸೂರು ಸೀಮೆಯಲ್ಲೆಲ್ಲಾ ವಿಕ್ರಯಮಾಡಲು ಕಮಿಷನ್ ಏಜಂಟರಾಗಿರುತ್ತೇವೆ. ನಮ್ಮ ಮುಖಾಂತರ ಮಾಲು ತರಿಸಿಕೊಳ್ಳತಕ್ಕವರಿಗೆ ಮುಂಬೈಯಲ್ಲಿ ಬಟ್ಟೆಗಳ ಮೇಲೆ ವಿಧಿಸತಕ್ಕ ದಳ್ಳಾಳಿ, ಬೋಟುಡಳ್ಳಾಳಿ, ಹಮಾಲಿ, ಮಮಲು, ಗಂಟುಕಟ್ಟುವದು, ಸ್ಟೇಷನ್ನಿಗೆ ಸೇರಿಸುವದು, ಮುಂತಾದ ಯಾವ ವಿಧವಾದ ಖರ್ಚೂ ತಗಲದೆ ಇರುವದರಿಂದ ಮುಂಬೈಯಿಂದ ತರಿಸುವ ಧಕ್ಕಿಂತಲೂ ಸುಲಭ ದರದಲ್ಲಿ ಸಿಕ್ಕುತ್ತೆ. ಮತ್ತು ಮುಂಬೈಗೆ ಹೋಗಿಬರುವ ದೇಹಶ್ರಮವೂ, ಖರ್ಚೂ ಉಳಿಯುತ್ತೆ. ಜಾಸ್ತಿ ಬಟ್ಟೆಗಳನ್ನು ಏಕಕಾಲದಲ್ಲಿ ಕೊಳ್ಳತಕ್ಕವರಿಗೆ ಮಾಲಿನ ಮೇಲೆ ಸೇಕಡ 3 ರೂಪಾಯಿ ಲಾಗಾಯ್ತು 4½ ರೂಪಾಯಿ ವರೆಗೆ ಡಿಸ್ಕೌಂಟು ದೊರೆಯುತ್ತೆ. [97-15]

ನಮ್ಮ ಟ್ರಾವಲಿಂಗ್ ಏಜಂಟರ ವಶ ಬಟ್ಟೆಗಳ ನಮೂನೆಗಳನ್ನು ಕೊಟ್ಟು, ದರ ಒಟ್ಟು ವ್ಯಾಪಾರಗಾರರಿಗೆ ತೋರಿಸಿ ಆರ್ಡರು ತೆಗೆದುಕೊಳ್ಳುವ ಏರ್ಪಾಡು ಮಾಡಿರುತ್ತೆ. ನಮ್ಮ ದಾವಣಗೆರೆ ಮತ್ತು ಬೆಂಗಳೂರು ಆಫೀಸುಗಳಲ್ಲಿ ಮಾಲು ಹಾಜರು ಸಹ ದೊರೆಯುತ್ತೆ.

ಬಟ್ಟೆಗಳನ್ನು ವ್ಯಾಪಾರಮಾಡಲು ಅನುಭವಸ್ಥರಾದ ಏಜಂಟರುಗಳು ಮತ್ತು ಗುಮಾಸ್ತರುಗಳೂ ಬೇಕಾಗಿದೆ.

ಎಲ್ಲಾ ಕಾಗದಪತ್ರಗಳೂ ದಾವಣಗೆರೆ ಆಫೀಸಿಗೆ ಬರೆಯಬೇಕು.

ಹೆಡ್ ಆಫೀಸು:—ಬ್ರಹ್ಮಪ್ಪ ತವನಪ್ಪನವರ್, [illegible], ದಾವಣಗೆರೆ. ಬ್ರಾಂಚ್ ಆಫೀಸು:—ಬ್ರಹ್ಮಪ್ಪ ತವನಪ್ಪನವರ್, [illegible], [illegible], ಬೆಂಗಳೂರು ಸಿಟಿ.

ಸ್ತ್ರೀಯರ ಭೂಷಣವು!!!

ಸ್ತ್ರೀ ಯರಿಗೆ ತಮ್ಮ ದುಂಡುದುಂಡಾಗಿರುವ, ನೀಳವಾದ ಸುಂದರವಾದ ಕೇಶರಾಶಿಯನ್ನು ಯಾವ ಸ್ತ್ರೀಯು ತಾನೇ ಬಯಸುವದಿಲ್ಲ? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾವುದು?

ಕಾಮಿನಿಯಾ ತೈಲವೇ!
(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಬೇಗ ಕೊಡುತ್ತದೆ, ಹಾಗೆಯೇ ಮನಸ್ಸಿಗೆ ಪವಿತ್ರತೆಯನ್ನು ಕೊಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಉಪಯುಕ್ತ ಸಹಕಾರಿಯಾಗಿರುತ್ತದೆ. ಈ ತೈಲವನ್ನು ಕೂದಲಿಗೆ ಹಚ್ಚಿಕೊಳ್ಳುವುದರಿಂದ, ಮಸ್ತಕದ ಬಿಸಿಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲು ಗಳು ಅವನ್ನು ಕೊನೆಯ ತುದಿಗೆ ಬೆಳೆದು ಎಂದಿಗೂ ಉದುರಿ ಬಿದ್ದು ಹೋಗುವದಿಲ್ಲ; ಅವರೆ ಅವು ದಟ್ಟವಾಗಿ ಬೆಳೆದು ನಸ್ಸಿಗ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು.

ತಲೆಯ ಕೂದಲಿನ ಎಣ್ಣೆಗಳನ್ನು ಕೊಂಡು ಕೊಂಡು ಉಪಯೋಗಿಸಿ ನಿಮ್ಮ ಹಣವನ್ನು ಕಳೆಯುವಲ್ಲಿ ಹಾಳುಮಾಡುವ ದಕ್ಕಿಂತ ಒಂದೇ ಒಂದು ಬಾರಿ ಈ "ಕಾಮಿನಿಯಾ ತೈಲ"ವನ್ನು ಉಪಯೋಗಿಸಿ ನೋಡಿರಿ. ಈ ಎಣ್ಣೆಯು ಶ್ರೇಷ್ಠತೆಯ ಬಗ್ಗೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಆಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಇದರ ಸಾವಿರಾರು ಗ್ರಾಹಕರ ಉತ್ತಮೋತ್ತಮವಾದ ಯೋಗ್ಯಪತ್ರಗಳೂ ದೊರಕಿವೆ.

ಅವುಗಳಲ್ಲಿ ಒಂದನ್ನೇ ನೋಡಿರಿ! ನೇಗಿಸರಾಳಕರ ಬಂಧುಗಳು. ಬಳಕೆಗಳಲ್ಲಿ, ಬೆಳಗಾಂವ—ಕಾಲ ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ ತೈಲ"ವು ಕೂದಲುಗಳನ್ನು ಬೆಳೆಯಿಸುವದಕ್ಕೆ ಸರ್ವೋತ್ಕೃಷ್ಟವಾದದೆಂದು ಸಾಧನವಾಗಿರುತ್ತದೆ. ಆದ್ದರಿಂದ ಇನ್ನೆರಡು ಸೀಸೆಯನ್ನು ಕೂಡಲೇ ವಿ. ಪಿ. ದ್ವಾರಾ ರವಾನಿಸುವುದು. ಸೀಸೆಯೊಂದರ ಕ್ರಯ ರೂ. 1-0-0, ಅ. ವೆ. 0-4-0 ಬೇರೆ; 3 ಸೀಸೆಗಳ ಕ್ರಯ ರೂ. 2-10-0, ಅ. ವೆ. 0-7-0 ಬೇರೆ.

ಸೂಚನೆ.—ಅನೇಕ ದುರ್ಗಾನೀಕರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಬಿಕರಿಯಿಂದ ತಮಗೆ ಅಷ್ಟೇನೂ ನಫೆಯೇ ದೊರಕುತ್ತದೆಂದು, ನೀವು "ಕಾಮಿನಿಯಾ ತೈಲ"ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭ ದೊರಕತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸ ಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಇದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳುವದು ಮೇಲು. ವಿಳಾಸವನ್ನು ವಿಚಾರಿಸಿರಿ. ನೀವು ವಂಚಕರ ಬಲೆಯಲ್ಲಿ ಸಿಲುಕಿಬೀಳದೆ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಬಿಟೆಲ್ಲ್ಯಾ ದಿಲ್ ಬಹಾರ್!!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯು (ಆಲ್ಕೋಹೋಲ್) ಸೇರಿಲ್ಲವು. ಒಂದೇ ಒಂದು ಸಲ ನಿಮ್ಮ ಕೈಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ಸ್ವರ್ಗೀಯವಾದದೊಂದು ತೃಪ್ತಿದಾಯಕವಾದ ಪರಿಮಳವುಂಟಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವೂ ಬೇಕಾಗುವದಿಲ್ಲ. ಈ ಬಿಟೆಲ್ಲ್ಯಾ ದಿಲ್ ಬಹಾರಿನ ಗಂಧವು ಅತ್ಯುತ್ತಮ ನಿಮ್ಮ ಮನಸ್ಸನ್ನು ತನ್ನ ಕಡೆಯಿಂದ ಸೆಳೆಯುವುದು. [illegible] [19 30]

[illegible] 1½ 0-13-0. [illegible] ರೂ. 2-0-0. [illegible] ರೂ. 0-4-0. [illegible] 0-13-0.

[illegible]:—
[illegible] ಕೆಮಿಕಲ್ [illegible],
[illegible], [illegible].
[illegible].

ಜೂಲೈ ಮಹೋತ್ಸವದ ಕೈ ಗಡಿಯಾರ.
ಅರ್ಧ ಕ್ರಯ ರೂ. 1–4–0

ಅದೇ ಜೂಲೈ ಹಬ್ಬದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದ ಕೈ ಗಡಿಯಾರವನ್ನು ಜುಲೈ ಒಳಗೆ ತರಿಸಿಕೊಳ್ಳುವವರಿಗೆ ರೂಪಾಯಿ 1-14-0 ಆಣೆಗೆ ಕೊಡಲ್ಪಡುತ್ತೆ. [99-6]

ವಿಳಾಸ—ವಿ. ಕೃಷ್ಣಸ್ವಾಮಿ ಮೊದಲಿಯಾರ್, ನಂ.27 ಬಂದರ್ ಬೀದಿ, ಜಿ.ಟಿ., ಮದರಾಸು.

ಮಧುರೆ ಜುನ್ನಡಿ ಅಂಚಿನ ಸೀರೆ ಅವ್ವಲ್ ರಕಂ ರೂ. 2–6–0.

ಜುಲೈ ತಿಂಗಳ ಒಳಗಾಗಿ ತರಿಸಿಕೊಳ್ಳುವರಿಗೆ ಒಂದು ಸಿಂಗಪೂರು ರವಿಕೆಯನ್ನು ಪ್ರತಿ ಸೀರೆಗೂ ಇನಾಮಾಗಿ ಕೊಡುತ್ತೇವೆ. [99-8]

ಇದು ಉಡುವುದಕ್ಕೆ ದಪ್ಪತಿಯಾಗಿಯೂ, ನೋಟಕ್ಕೆ ನಯವಾಗಿಯೂ, ಬೆಲೆ ಸುಲಭವಾಗಿಯೂ ಇದೆ. ಬಣ್ಣ ಹೋಗದು, ಸೀರೆಯ ಉದ್ದ 18 ಮೊಳ. ಸುಂದರವಾದ ಸೆರಗು. ಒಂದನ್ನು ತರಿಸಿ ಪರೀಕ್ಷಿಸಿ. ವಿಳಾಸ—ವಿ. ಕೃಷ್ಣಸ್ವಾಮಿ ಮೊದಲಿಯಾರ್, ನಂ. 27, ಬಂದರ್ ಬೀದಿ, ಜಿ. ಟಿ., ಮದರಾಸು.

ಓರಿಯಂಟಲ್ ಗ॥ ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು..............ರೂ. 4,45,00,000

ಕಂಪನಿಯಿಂದ ಪಾವತಿ ಆಗಿರುವದು ,, 4,00,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ.—ಮಿ॥ ಎಂ. ಎಸ್. ರೆಡ್ಡಿ ಕೊ., ಚೀಫ್ ಏಜೆಂಟ್, ಬೆಂಗಳೂರು; ಮ॥ ಎಂ. ಎಸ್. ನಂಜಪ್ಪನವರು ಅಥವಾ ಮ॥ ವೆಂಕಟಪತಯ್ಯನವರು, ಕಂಪನಿ ಏಜಂಟರು, ಮೈಸೂರು; ಅಥವಾ

[194-44] ಆಕ್ಟಿಂಗ್ ಬ್ರಾಂಚ್ ಸೆಕ್ರಿಟರಿ, ಮದರಾಸ್.

ಹಿಂದುಸ್ಥಾನ್ ಕೋಆಪರೇಟಿವ್ ಜೀವವಿಮೆ ಸಂಘ ಲಿ.
ಹಿಂದುಸ್ಥಾನ್ ಕಟ್ಟಡಗಳು—ಕಲ್ಕತ್ತಾ.

ಕಂಪನಿಯ ಮೂಲಧನ (ಒಂದು ಕೋಟಿ ರೂಪಾಯಿ)	1,00,00,000
ಪಾವತಿಯಾದ ಮೊಬಲಗು	10,60,000
ವಸೂಲಾದ ಮೊಬಲಗು	87,00,000

ಈ ಕಂಪೆನಿಯಲ್ಲಿ ಪಾಲ್ಸಿದಾರ್ರಿಗೆ ಬಹಳ ಕಮ್ಮಿಯಾದ ದರಗಳ ಪಟ್ಟಿಯನ್ನು ಮಾಡಿರುವುದು. 1912 ನೇ ಇಸ್ವಿಯ ಇಂಡಿಯಾ ಗವರ್ನ್‌ಮೆಂಟಿನ ಜೀವವಿಮೆ ಕಂಪನಿಯ ಆಕ್ಟುಗಳ ಪ್ರಕಾರ ಸರ್ಕಾರದಲ್ಲಿ 2 ಲಕ್ಷ ರೂಪಾಯಿಗಳನ್ನು ಡಿಪಾಜಿಟ್ಟು ಮಾಡಲ್ಪಟ್ಟಿರುತ್ತೆ. ಮತ್ತು ಅನೇಕ ಮಹಾರಾಜರುಗಳು ಮುಂತಾದ ದೊಡ್ಡವರು ಪ್ರೆಸಿಡೆಂಟರಾಗಿರುವದರಿಂದ ಈ ಕಂಪನಿಯ ಅಭಿವೃದ್ಧಿಸ್ಥಿತಿಯನ್ನು ಪ್ರಕಟನೆ ಮಾಡುವುದಕ್ಕೆ ಸಂತೋಷವಾಗಿರುತ್ತದೆ.

ಸುಲಭವಾಗಿ ಹಣವನ್ನು ಪಾರ್ಟಿಯವರ ಮನೆಯಲ್ಲೇ ಜಾಗ್ರತೆ ಪಾವತಿಗೆ ಏರ್ಪಾಡು ಮಾಡಲ್ಪಡುತ್ತೆ. ಆದ್ದರಿಂದ ಪಾಲ್ಸಿದಾರ್ರು ಮತ್ತು ಇದಕ್ಕೆ ಸೇರಿದ ಏಜಂಟ್ರುಗಳು ತುಂಬಾ ಅದೃಷ್ಟವಂತರೆಂಬುವದರಲ್ಲಿ ಸಂದೇಹವಿಲ್ಲ.

ಹೆಚ್ಚಿನ ವಿಷಯಗಳಿಗೂ, ಫಾರಂ ಮತ್ತು ಪ್ರಾಸ್‌ಪೆಕ್ಟುಸುಗಳಿಗೂ ಕೆಳಗಿನ ವಿಳಾಸಕ್ಕೆ ಜಾಗ್ರತೆಯಾಗಿ ಬರೆಯಿರಿ. [243-34]

ವೆಂಕಟಾಚಲಂ ಅಂಡ್ ಸನ್ಸ್, ಚೀಫ್ ಏಜಂಟ್ರು,
166, ದೊಡ್ಡಪೇಟೆ, ಮೈಸೂರು.

ನ್ಯಾಷನಲ್ ಅಷೂರೆನ್ಸ್ ಕಂಪನಿ, ಲಿಮಿಟೆಡ್,
ವಿಜಯನಗರಂ ಸಿಟಿ.

1905 ರಲ್ಲಿ ಸ್ಥಾಪಿಸಲ್ಪಟ್ಟದ್ದು.

1912 ನೇ ಆಕ್ಟು ಪ್ರಕಾರ ಬದಲಾಯಿಸಿದೆ.

ಗವರ್ನ್‌ಮೆಂಟ್ ಸೆಕ್ಯೂರಿಟಿಗಳನ್ನು ಪಡೆದಿದೆ.

ಕಂಪನಿ ಆಸ್ತಿಯನ್ನು ಹಂಚಿಕೊಳ್ಳುವ ಷೇರುದಾರರಿಲ್ಲ.

ವೈದ್ಯರ ಪರಿಕ್ಷಾ ಸರ್ಟಿಫಿಕೇಟು ಅವಶ್ಯವಿಲ್ಲ.

ಬೋನಸ್ ಹಣ ಅಪಾರವಾಗಿ ಪಾವತಿ ಮಾಡಿದೆ.

ಜೀವವಿಮೆ—ತಿಂಗಳ ಚಂದಾ 1 ನೇ ಕ್ಲಾಸ್ ರೂ. 1; 2 ನೇ ಕ್ಲಾಸ್ ರೂ. 0-8-0.
ಮದುವೆ ಫಂಡು—ತಿಂಗಳ ಚಂದಾ ರೂ. 1-0-0.

ಇದು ಬಹು ಲಾಭಕರವಾದ ಮತ್ತು ಸುರಕ್ಷಿತವಾದ ಕಂಪನಿ. ವಿಮೆ ಮಾಡತಕ್ಕವರಿಗೂ ಫಂಡು ಪಡೆಯತಕ್ಕವರಿಗೂ ತುಂಬಾ ಅನುಕೂಲವಾಗಿರುತ್ತದೆ. [138–7]

ಏಜಂಟರು ಬೇಕು. ಧಾರಾಳವಾದ ಕಮಿಷನ್ ಸಿಗುತ್ತೆ. ಕಂಪನಿಯ ಪ್ರಾಸ್ಪೆಕ್ಟಸ್ಸು ಬಿಟ್ಟಿ ಕೇಳಿದವರಿಗೆ ಕೊಡುತ್ತೆ. ಈ ವಿಳಾಸಕ್ಕೆ ಬರೆದುಕೊಳ್ಳಿ:—

ವಿ. ಬಿ. ಶ್ರೀಕಂಠಯ್ಯನವರು, ಮೈಸೂರು ಮತ್ತು ಕೊಡಗಿನ ಚೀಫ್ ಏಜಂಟ್, ಕೋಟೆ, ಬೆಂಗಳೂರು ಸಿಟಿ.

V. B. Srikantiah,
Chief Agent, Mysore & Coorg, Fort, Bangalore City.

CHAMBERLAIN'S PAIN BALM.
ಚೇಂಬರ್ಲೀನ್ ಯವರು ಮಾಡಿದ ನೋವುಹರ ಔಷಧವು.



3-31

ಚಿನ್ನಲುಬಿನ ನೋವು, ಪಕ್ಕಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ತಲೆನೋವು, ಜಜ್ಜಾದ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ.

ವಾಯುನೋವೆಂದರೇನು ?

ಕೀಲುಗಳಲ್ಲೂ ಮಣಕಟ್ಟುಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಕಳೆಯುವ ಬಾಧೆ, ಖಂಡಗಳು ಇರಿಯುವುದು, ವಿಶ್ರಾಂತಿ ಕೊಡದೆ ಇರುವುದು, ನಿದ್ದೆಹತ್ತದೆ ಇರುವುದು—ಇವೇ. ಇದೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು.

ಆಗ ಚೇಂಬರ್ಲೀನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ.

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಕಾವು ಮೂಳೆಯೊಳಕ್ಕೆ ವ್ಯಾಪಿಸುತ್ತದೆ. ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ. ಮನಸ್ಸಿಗೆ ಉಲ್ಲಾಸವಾಗುತ್ತದೆ. ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಮುಟ್ಟಿದ್ದೇನೂ ಅಲ್ಲ.

ಇದು ಎಲ್ಲೆಲ್ಲೂ ವಿಕರಿಯಾಗುವುದು. ಸಣ್ಣ ಸೀಸೆಗೆ ೧ ರೂಪಾಯಿ. ದೊಡ್ಡ ಸೀಸೆಗೆ ೨ ರೂಪಾಯಿ.

Mellin's Food

ಮೆಲ್ಲಿನ್ಸ್ ಆಹಾರವು
ಕೈ ಸೋಕದೆ ಮಾಡಿದೆ
ಶಿಶುಗಳಿಗೂ ರೋಗಿಷ್ಟರಿಗೂ

ಮೆಲ್ಲಿನ್ಸ್ ಆಹಾರವು ಕ್ರಮಪ್ರಕಾರ ತಯಾರ್ಮಾಡಿ ಸೇವಿಸಿದರೆ ಹುಟ್ಟಿದ ಶಿಸುಗಳು ಮೊದಲುಗೊಂಡು ಮುದಿಪ್ರಾಯದವರ ತನಕ ಎಲ್ಲರಿಗೂ ಸಂಪೂರ್ಣವಾದ ದೇಹಪುಷ್ಟಿಯನ್ನೂ ವಿಶೇಷವಾದ ಬಲವನ್ನೂ ಕೊಡುತ್ತವೆ. [4-31]

ಮೆಲ್ಲಿನ್ಸ್ ಆಹಾರವೆಂಬ ಬೇರೆ ಬೇರೆ ತಿಂಡಿ ಪದಾರ್ಥಗಳನ್ನು ಹಿಂದುಸ್ತಾನ, ಬರ್ಮಾ ಮತ್ತು ಸಿಲೋನ್ ದ್ವೀಪಗಳಲ್ಲಿ ಎಲ್ಲಾ ವ್ಯಾಪಾರಗಾರರೂ ವಿಕರಿಮಾಡುತ್ತಾರೆ: **Messrs. OAKES & Company, Mount Road, Madras.**

ವಿಳಾಸ—ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಶಕ್ತಿಕರೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಹೊಡತ (ಭಾರ), ಮೈ ನಡುಕ, ಶೀತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂಥ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನರಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಮುಟ್ಟುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—220 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ; 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪೀ ವರೆಗೆ ಪೋಸ್ಟೇಜು 4 ಆಣೆ. [179-47]



೨. ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈಮಾರಿಂದು ತೋರಿಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರಕ್ಕೆ ಮೂತ್ರವು ಕಟ್ಟಿದರೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿ! ಒಂದೇ ಒಂದು ಬುಡ್ಡಿಯು ನಿಮ್ಮಲ್ಲಿರಲಿ! ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುವುದು. ಬೆಲೆ ರೂ. 1; ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಈಗ ಸಾಲಾಮಿಸ್ರಿಯ ಧಾರಣೆಯು ಜಾಸ್ತಿಯಾಗಿರುವದರಿಂದ 1–8–0 ಕ್ರಯ ಇದ್ದದ್ದನ್ನು ರೂ. 2 ಮಾಡಿರುತ್ತೇವೆ.

500 ರೂಪಾಯಿಗಳು ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

ಈ ಮುರಬ್ಬಾವು "ಪಂಜಾಬ್ ಸಾಲಾಮಿಸ್ರಿ" ಅಲ್ಲವೆಂದು ವ್ಯಕ್ತಪಡಿಸುವವರಿಗೆ
500 ರೂಪಾಯಿಗಳು ಬಹುಮಾನ ಕೊಡಲ್ಪಡುವುದು.

ಕ್ರಯ 2 ರೂಪಾಯಿ.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡವರಿಗೆ ಹೃದಯ ಕೋಶವು ಬಲಹೀನವಾಗಿ ನಾನಾ ವ್ಯಾಧಿಗಳಿಂದ ಮರಣ ಘೋರಯಂತ್ರವೂ ದುಃಖಪಡುವರು. ಈ "ಪಂಜಾಬ್ ಸಾಲಾಮಿಸ್ರೀ ಮುರಬ್ಬಾ" ವಿನ ಸೇವನೆಯಿಂದ ಕೈ, ಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ತಲೆಯ ನೋವೂ, ಇವುಗಳೆಲ್ಲವೂ ಪಂಜಾಬ್ ಸಾಲಾಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು, ಮೆದುಳಿಗೆ ಬಲವನ್ನುಂಟುಮಾಡುವುದು, ಧಾತುವನ್ನು ಶೇಖರಿಸುವುದು, ಸೊಂಟದ ನೋವು ಸ್ವಲ್ಪ ಮಾತ್ರವೂ ಇರಲಾರದು. ಈ ಪಂಜಾಬ್ ಸಾಲಾಮಿಸ್ರಿಯ ಮುರಬ್ಬಾಕ್ಕೆ ಕಾಂಟ್ರದ ಮತ್ತು ಭಂಗಾರದ ಭಸ್ಮವು ಎಷ್ಟು ಮಾತ್ರವೂ ಸಮಾನವಾಗಲಾರದು. ಹೊಟ್ಟೆಯಲ್ಲಿರುವ ಕ್ರಿಮಿಗಡ್ಡೆಯನ್ನು ನಾಶಪಡಿಸುವುದು. ಶ್ವಾಸ ಕಾಸರೋಗಗಳನ್ನು ನಿರ್ಮೂಲಪಡಿಸುವುದು ಕಾಬೂಲ್, ಕಾಂದಹಾರ್ ದೇಶಗಳ ಜನರು ಸಾಲಾಮಿಸ್ರಿಯ ಹಣ್ಣನ್ನು ಬಹಳವಾಗಿ ತಿನ್ನುವರು. ಆದ್ದರಿಂದ ಶಕ್ತಿಯಲ್ಲಿ ಬಹಳ ಗಟ್ಟಿಗರು. ಡಬ್ಬಿ 1 ಕ್ಕೆ ರೂ. 3-0-0. ಟಪಾಲ್ ಖರ್ಚು ಅಲಾಯದ. [133-7]

ಅನುಪಾನಪತ್ರಿಕೆ ಔಷಧದ ಸಂಗಡ. ಕ್ಯಾಟಲಾಗ್ ಅಪೇಕ್ಷಿಸುವವರು ೧ ಕಾಸಿನ ಸ್ಟಾಂಪು ಕಳಿಸಿ.

ಏಜಂಟರು—ಡಿ. ಸೈಯದ್ ಉಸ್ಮಾನ್ ಅಂಡ್ ಕೊ., ದೊಡ್ಡಪೇಟೆ, ಬೆಂಗಳೂರು ಸಿಟಿ.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
೨ ಹಾಜಿ ಸಾಹೇಬ್ ಮಸೀದಿ, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ಡೋಂಗರೆ

ಇವರ ಬಾಲಾಮೃತ

[162-1]

ಸೇವನದಿಂದ ಹುಡುಗರು ಸಶಕ್ತರೂ ನಿರೋಗಿಗಳೂ ಆಗಿ ಅವರ ಭಾರವು ಬೆಳೆಯುತ್ತದೆ. ಒಂದು ಬಾಟ್ಲಿಗೆ ೧೦ ಆಣೆ. ಟಪಾಲ್ ಖರ್ಚು ೪ ಆಣೆ.

ಕೆ ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಾಯಿ ಇವರಲ್ಲೂ ಮತ್ತು ಎಸ್. ವೈದ್ಯ ಅಂಡ್ ಕೊ, ಪಾರ್ಕ್ ಟೌನ್, ಮದರಾಸು ಇವರಲ್ಲೂ ದೊರೆಯುವುದು.

ಅದ್ಭುತವಾದ ಬಲಕಾರಿ ಮತ್ತು ಬಾಯಿನಾತಹರ.

ಜಿನತಾನ

ಜೀರ್ಣಶಕ್ತಿ ಹುಟ್ಟಿಸುವುದರಲ್ಲಿ ಇದಕ್ಕೆ ಸಮಾನವಾದದ್ದು ಇನ್ನೊಂದಿಲ್ಲ; ಅನ್ನಕೋಶವು ಎಷ್ಟೇ ದುರ್ಬಲವಾಗಿದ್ದರೂ ಅದರ ಕಾರ್ಯಗಳನ್ನು ಹೇರುಪೇರು ಮಾಡುವದಿಲ್ಲ. ಇದರ ಸೇವನೆಯಿಂದ ಎಲ್ಲಾ ರೋಗಗಳನ್ನೂ ಅಂಟದಂತೆ ತಡೆಯಬಲ್ಲದು. ಈ ಭಾಗದಲ್ಲಿ ಇದರ ಗುಣವು ಬಹು ಫಲಕಾರಿಯಾಗಿದೆ. ಇದಲ್ಲದೆ ಇದನ್ನು ಸೇವಿಸುವವರ ಬಾಯಿಯಲ್ಲಿ ಎಲ್ಲಾ ತರದ ದುರ್ನಾತವೂ ಹೋಗಿ ಸುಗಂಧವು ಹುಟ್ಟಿ ಹರ್ಷಕರವಾಗಿದ್ದೀತು.

ಗಂಟಲಿನ ನರಗಳು ಇದರ ಸೇವನೆಯಿಂದ ಬಹಳ ಬಲಗೊಳ್ಳುವವು. ಇದರ ಗುಣವನ್ನು ನೋಡಿ ಉಪನ್ಯಾಸಕರೂ, ನಾಟಕಧಾರಿಗಳೂ, ಸಂಗೀತಗಾರರೂ, ಬೋಧಕರೂ, ವಾಚಾಳಕ ಪ್ರಿಯರೂ ಈ ಮಾತ್ರೆಗಳನ್ನು ಬಹಳವಾಗಿ ಮೋಹಿಸಿ ಪ್ರೀತಿಯಿಂದ ಉಪಯೋಗಿಸುತ್ತಿದಾರೆ.

ಈ ಮಾತ್ರೆಗಳನ್ನು ಜಪಾನ್‌ನಲ್ಲಿರುವ ಒಸಾಕಾ ಪಟ್ಟಣದ ಮೋರಿಷಿತಾ ಕಂಪನಿಯವರು ತಯಾರ್ಮಾಡುತ್ತಾರೆ.

ಈ ಮಾತ್ರೆಗಳ	30 ಮಾತ್ರೆಗಳುಳ್ಳ ಪೊಟ್ಲಕ್ಕೆ 1½ ಆಣೆ.	65 ಮಾತ್ರೆ ಪೊಟ್ಲಕ್ಕೆ 3 ಆಣೆ.
ಕ್ರಯ	195 ,, ಡಬ್ಬಾ ಸಮೇತ 8 ಆಣೆ.	455 ,, ಕನ್ನಡಿ ಡಬ್ಬಾಕ್ಕೆ 1 ರೂಪಾಯಿ.

ಎಲ್ಲಾ ಅಂಗಡಿಗಳಲ್ಲಿಯೂ ವಿಕರಿಯಾಗುವುದು.

ಸೋಲ್ ಏಜಂಟರು:— ಎಸ್. ವೈದ್ಯ ಮತ್ತು ಕಂಪನಿ, ಪಾರ್ಕ್‌ಟೌನ್, ಮದ್ರಾಸ್.

[156-3]

ಮೈಸೂರು ಗವರ್ನಮೆಂಟ್ ಸೆಕ್ಯೂರಿಟಿ

ಲೈಫ್ ಮತ್ತು ಮ್ಯಾರಿಯೇಜ್ ಕಂಪನಿ, ಲಿಮಿಟೆಡ್.

ಹೆಡ್ ಆಫೀಸ್—ಮೈಸೂರು

ಮೂಲಧನ ರೂ. 1,00,000.

(1895ನೇ ಇಸವಿ 3ನೇ ಮೈಸೂರು ಕಂಪನಿಗಳ ಕಾನೂನ್ ಪ್ರಕಾರ ರೆಜಿಸ್ಟರ್ ಮಾಡಲ್ಪಟ್ಟಿರುತ್ತೆ.)

ಎಚ್ಚರಿಕೆ:—(ನೀವು ಪ್ರಾವಿಡೆಂಟ್ ಜೀವವಿಮೆ ಪಾಲಿಸಿಯಾಗಲಿ, ಮದುವೆ ವಿಮೆ ಪಾಲಿಸಿಯಾಗಲಿ ತೆಗೆದುಕೊಂಡು ಹಣ ಕಟ್ಟುವುದಕ್ಕೆ ಮುಂಚೆ ನಮ್ಮ ಕಂಪನಿಯ ಪ್ರಾಸ್ಪೆಕ್ಟಸನ್ನು ಕೇಳಿ ತರಿಸಿಕೊಂಡು ಚೆನ್ನಾಗಿ ಓದಿ ನೋಡಿ. ಇದರಿಂದ ಹಿಂದುಸ್ಥಾನದಲ್ಲಿ ಈಗಿನ ಕಾಲದ ಪ್ರಾವಿಡೆಂಟ್ ಫಂಡುಗಳ ನಡವಳಿಕೆಗಳೆಲ್ಲಾ ನಿಮಗೆ ವಿವರವಾಗಿ ಗೊತ್ತಾಗುತ್ತವೆ; ಮತ್ತು ಇದರಿಂದ ನೀವು ಯಾವ ಒಳ್ಳೇ ಕಂಪನಿಯನ್ನು ಚುನಾಯಿಸಿಕೊಳ್ಳಬೇಕೋ, ನಿಮ್ಮ ಕಷ್ಟಾರ್ಜಿತದ ಹಣವು ಯಾವ ಕಂಪನಿಯಲ್ಲಿ ಸುರಕ್ಷಿತವಾಗಿರುವುದೋ ಅದೆಲ್ಲಾ ನಿಮಗೇ ಚೆನ್ನಾಗಿ ಗೊತ್ತಾಗುತ್ತದೆ.)

ಈ ಕಂಪನಿ ಸಂಪೂರ್ಣ ನಂಬಿಕೆಯುಳ್ಳದ್ದು. ಇದರಲ್ಲಿ ದೃಷ್ಟಿಪಾತ್ರವಾದ ಭಾಗಗಳೂ, ಉಚಿತವಾದ ಕ್ರಮಗಳೂ, ಹಿಂದುಸ್ಥಾನದ ಎಲ್ಲಾ ಭಾಗಗಳಲ್ಲೂ ಚೀಫ್ ಏಜಂಟರೂ, ಏಜಂಟರೂ ಬೇಕಾಗಿದೆ. ಅವರಿಗೆ ಸಂಬಳವೂ, ಕಮೀಷನ್ನೂ ಕೊಡಲಾಗುವುದು. ಪ್ರಾಸ್ಪೆಕ್ಟಸ್ ಮುಂತಾದವುಗಳನ್ನು ಇವರಿಗೆ ಬರೆದು ತರಿಸಿಕೊಳ್ಳಿ:—

ಎಂ. ಎಲ್. ನಾಗಣ್ಣ, ಮ್ಯಾನೇಜಿಂಗ್ ಡೈರೆಕ್ಟರ್, ಮೈಸೂರು.

ಇಪ್ಪತ್ತನೇ ಶತಮಾನದ ಆಶ್ಚರ್ಯ.

ಮೈಸೂರು ಗವರ್ನಮೆಂಟ್ ಸೆಕ್ಯೂರಿಟಿ ಮ್ಯೂಚುಯೆಲ್ ಪ್ರಾಪರ್ಟಿ ಇನ್‌ವೆಸ್ಟ್‌ಮೆಂಟ್ ಕಂಪನಿ, ಲಿಮಿಟೆಡ್. ಹೆಡ್ ಆಫೀಸ್—ಮೈಸೂರು.

ಮೂಲಧನ ರೂ. 1,00,000.

(1895ನೇ ಇಸವಿ 3ನೇ ಮೈಸೂರು ಕಂಪನಿಗಳ ಕಾನೂನ್ ಪ್ರಕಾರ ರೆಜಿಸ್ಟರ್ ಮಾಡಲ್ಪಟ್ಟಿರುತ್ತೆ.)

ಲೇವಾದೇವಿ:—ಎಲ್ಲಾ ಜಾತಿಯ ಲೇವಾದೇವಿಯನ್ನೂ ನಡಿಸಲಾಗುತ್ತೆ. ಕಂಪನಿಯ ಷೇರುಗಳು ಬಹು ಅಮೂಲ್ಯವಾದವು; ಮತ್ತು ಎಲ್ಲರೂ ಪಡಕೊಳ್ಳುವನ್ನು ಸುಲಭವಾಗಿ ಮಾಡಲಾಗಿದೆ. [161-52]

ಜಮೀನು, ಮನೆ, ಮೊದಲಾದ ಆಸ್ತಿಗಳನ್ನು ಕೊಂಡು ಸ್ವಾಧೀನಪಡಕೊಳ್ಳುವುದಕ್ಕೆ ಬಹು ಶ್ರೇಷ್ಠವೂ ಅತ್ಯಂತ ಸುಲಭವೂ ಆದ ಮಾರ್ಗಗಳನ್ನು ಕಲ್ಪಿಸಲಾಗಿದೆ. ಕೊಂಡುಕೊಳ್ಳಬೇಕೆಂಬ ಜಮೀನು ಅಥವಾ ಮನೆಯ ಮೇಲೆ ಕಂಪನಿಯವರು ಅಡ್ವಾನ್ಸು ಹಣ ಕೊಡುತ್ತಾರೆ. ಸಾಲ ತೀರಿಸುವುದಕ್ಕೂ ಕಂಪನಿಯಿಂದ ಹಣ ಕೊಡುತ್ತಾರೆ. ಈ ಹಣಗಳನ್ನು ಕಂಪನಿಯವರು ತಿಂಗಳು ತಿಂಗಳಿಗೆ ಸುಲಭವಾದ ಕಂತುಗಳ ಪ್ರಕಾರ ವಸೂಲ್ಮಾಡಿಕೊಳ್ಳುವರು.

ಬೇಕಾಗಿದೆ:—ಮೈಸೂರು ಸಂಸ್ಥಾನಕ್ಕೆ ಸೇರಿದ ಪ್ರತಿ ಒಂದು ತಾಲ್ಲೂಕಿನಲ್ಲೂ ಕಂಪನಿಯ ಪರವಾಗಿ ನಾಲ್ಕುಮಂದಿ ಸ್ಥಳೀಯ ಡೈರೆಕ್ಟರುಗಳು ಬೇಕು. ಅವರಿಗೆ ಕಂಪನಿಯಿಂದ ಧಾರಾಳವಾದ ರಿಯಾಯತಿಗಳು ದೊರಕುವವು. ಘನವಂತರಾಗಿಯೂ, ಮುಖಂಡರಾಗಿಯೂ ಇರತಕ್ಕವರು ಮಾತ್ರ ಬರೆದುಕೊಳ್ಳತಕ್ಕದ್ದು. ಪ್ರಾಸ್ಪೆಕ್ಟಸ್ ಮುಂತಾದವುಗಳನ್ನು ಇವರಿಗೆ ಬರೆದು ತರಿಸಿಕೊಳ್ಳಿ:—

ಎಂ. ಎಲ್. ನಾಗಣ್ಣ, ಮ್ಯಾನೇಜಿಂಗ್ ಡೈರೆಕ್ಟರ್, ಮೈಸೂರು.

ಸನ್ ೧೮೭೬ ರಿಂದ ೧೯೦೬ ವರೆಗೆ.

ಕಾಲದ ಪರೀಕ್ಷೆ! ಮೂವತ್ತೇಳು ವರ್ಷಗಳಿಗಿಂತಲೂ ಹೆಚ್ಚಾಗಿ

SCOTTS' EMULSION

5-31

(ಸ್ಕಾಟ್ಸ್ ಇಮಲ್ ಷನ್)

ಎಂಬೀ ಸೇವನಾ ಔಷಧಿಯನ್ನು ಘನ ಪಂಡಿತರೆಲ್ಲಾ ಅನೇಕ ಪೇಳೆ ಪರಿಶೋಧನೆ ಮಾಡಿ, ಸರ್ವೋತ್ತಮವಾದದ್ದೆಂದು ಹೇಳಿರುತ್ತಾರೆ.

ಆದದರಿಂದ ಮುಂದೆ ಹೇಳುವ ರೋಗಗಳಿಗೆ ಪ್ರಪಂಚದಲ್ಲೆಲ್ಲಾ ಈಗ ಈ ಔಷಧವು ಸರ್ವ ಶ್ರೇಷ್ಠವಾದದ್ದಾಗಿ ಪರಿಣಮಿಸಿದೆ:—

ಶ್ವಾಸಕೋಶದ ಅಕ್ರಮಗಳು; ನಾನಾ ತರದ ಕೆಮ್ಮಲು;

ಸಕಲವಿಧ ಕ್ಷೈಕ್ಯಗಳು; ಮಾಂಸಖಂಡಗಳ ಕ್ಷೀಣತೆ; ಆಹಾರದಲ್ಲಿ ಅರುಚಿ. ಇದಲ್ಲದೆ ತಂದೆಗೂ ಮಗನಿಗೂ ಬಲಕಾರಿಯಾದ ಮತ್ತು ಅಂಗ ಬೆಳಸುವ ಸೇವನಾ ಔಷಧವೂ ಇದೇ.

ಕೈಸೋಕದೆ ತಯಾರಾದದ್ದು.

ಔಷಧಗಳ ಅಂಗಡಿಗಳಲ್ಲೆಲ್ಲಾ ವಿಕರಿಯಾಗುವದು.

ಈ ಚಿಹ್ನೆಯುಳ್ಳ ಇರುವ ಔಷಧವನ್ನೇ ಕೊಂಡುಕೊಳ್ಳಿ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್.

ತಾಲ್ಲೋಕು ವರ್ತಮಾನಗಳು.

ಮದ್ದಗಿರಿ.—ಆಷಾಢ ಮಾಸ ಕಳೆದರೂ ಮಳೆಯೇ ಬರಲಿಲ್ಲವಲ್ಲಾ! ಮುಂದೇನು ಗತಿ! ಬಡವರು ಬದುಕುವ ಕಾಲ ಬರಲಿಲ್ಲ! ಎಂದು ಈ ಟವನ್ನಿನ ಜನಗಳೆಲ್ಲಾ ಬಹು ಗಾಬರಿ ಪಟ್ಟುಕೊಂಡಿದ್ದರು. ಇವಕ್ಕೆ ಸರಿಯಾಗಿ ಧಾರಣೆವಾಸಿಗಳು ಪ್ರತಿ ಸಂತೆಗೂ ಪ್ರಿಯವಾಗುತ್ತಲೇ ಇರುವುದರಿಂದ ಮತ್ತೂ ಭಯಸ್ಥರಾಗಿದ್ದರು. ಆದರೆ ಈಚೆಗೆ ಕೆಲವು ದಿನಗಳಿಂದ ತುಂತುರು ಉದುರುತ್ತಿದ್ದ ಮಳೆಯು ಈಗ ಒಂದೆರಡು ದಿನಗಳಿಂದ ನೆಲವನ್ನು ಹದಗೊಳಿಸುತ್ತಿರುವುದನ್ನು ನೋಡಿ ಜನಗಳೆಲ್ಲಾ ಹಸನ್ಮುಖಿಗಳಾಗಿ ಇದಾರೆ. ಆದರೂ ಕಾಲ್ನಡೆಗಳಿಗೆ ತಕ್ಕ ಮೇವಿಲ್ಲದೆ ಬೆಟ್ಟದಲ್ಲಿದ್ದ ಸೊಪ್ಪುಸೆದೆಯನ್ನು ತಂದುಹಾಕುತ್ತಿರುವುದು ತುಂಬಾ ಪರಿತಾಪಕರವಾಗಿದೆ. ಇನ್ನು ಮುಂದೆ ನೀರಿಗೆ ಸ್ವಲ್ಪ ಮಟ್ಟಿಗೆ ಅನುಕೂಲವಾದೀತೆಂದು ಹಾರೈಸುತ್ತಿದಾರೆ.—ಈ ಊರಿನ ದಂಡಿನ ಪೇಟೆ ಬೀದಿಯ ಎರಡು ಪಕ್ಕದ ಚರಂಡಿಗಳಲ್ಲಿ ಬಚ್ಚಲ ನೀರು ನಿಂತು ವಾಸಸ್ಥರಿಗೆ ತುಂಬಾ ಅನಾರೋಗ್ಯಕ್ಕೆ ಕಾರಣವಾಗಿದೆ. ಸ್ಯಾನಿಟರಿ ಇನ್‌ಸ್ಪೆಕ್ಟರು ಇದನ್ನು ಸಂಪಡಿಸಬೇಕು. ರಾತ್ರಿ ಕಾಲದಲ್ಲಿ ಅದೇ ಬೀದಿಯಲ್ಲಿ ಕತ್ತಲೆ ಕಾಟ ಬಹಳವಾಗಿರುವದನ್ನು ತಪ್ಪಿಸಿಕೊಟ್ಟರೆ ಉತ್ತಮ.—ಪ್ರಾ|| ಕೋರ್ಟಿನಲ್ಲಿ ಹೆಡ್ ಮುನ್ಷಿಯಾಗಿದ್ದ ಸೂರ್‍ಯನಾರಣಪ್ಪನವರು ಕಳೆದ ಗುರುವಾರ ತುಮಕೂರಿಂದ ಮದ್ದಗಿರಿಗೆ ಬರುತ್ತಾ ದಾರಿಯಲ್ಲಿ ಜಟಕಾಗಾಡಿ ಬಿದ್ದು ಬಿಟ್ಟು ಅವರಿಗೆ ಕೊಂಚ ಅಪಾಯವಾಗಿ ಆ ದಿನವೆಲ್ಲಾ ಕಾನೆ ಸಂಕಟಪಟ್ಟರು. ನಮ್ಮ ಡಾಕ್ಟರವರು ಬಹಳ ಮಟ್ಟಿಗೆ ಸಾಹಸಮಾಡಿದರೂ ಪ್ರಯೋಜನವಿಲ್ಲದೆ ಅವರು ಆ ರಾತ್ರಿಯೇ ಕಾಲವಾದರು. ಅವಸಾನಕಾಲದಲ್ಲಿ ಸಂಸಾರ ಮಕ್ಕಳೂ ಯಾರೂ ಹತ್ತಿರ ಇರಲಿಲ್ಲ. ಮಾರನೇ ಬೆಳಗ್ಗೆ ಎಲ್ಲರೂ ತಮಕೂರಿಂದ ಬಂದು ಬಹಳವಾಗಿ ಗೋಳಾಡಿ ಶವವನ್ನು ಸಾಗಿಸಿದರು. 9 ಮಂದಿ ಸಣ್ಣ ಪುಟ್ಟ ಮಕ್ಕಳನ್ನು ಬಿಟ್ಟು ಹೋದದ್ದು ತುಂಬಾ ಪರಿತಾಪಕರವಾಗಿದೆ. ಇವರು ತುಂಬಾ ನಿಧಾನಿಗಳು, ಕೆಲಸದಲ್ಲಿ ಬಹು ಚಟುವಟಿಕೆಯಾಗಿದ್ದರು ಇವರಿಗೆ ಕಡೂರು ಶಿರಸ್ತೆ ನೇಮಕವಾಗಿತ್ತು. ಮತ್ತು ಅನೇಕರ ಪ್ರೀತಿ ವಿಶ್ವಾಸಕ್ಕೆ ಪಾತ್ರರಾದ್ದರಿಂದ ಎಲ್ಲರೂ ಇವರ ಮರಣವಾರ್ತೆಯನ್ನು ಕೇಳಿ ಬಹಳವಾಗಿ ವಿಷಾದಿಸುತ್ತಾರೆ.

ಚಿತ್ರದುರ್ಗದ ತಾ|| ಕಡಬನಕಟ್ಟೆ.—ಈ ಗ್ರಾಮಕ್ಕೆ ಇದುವರೆಗೆ ನಿರೀಕ್ಷಿಸಿದರೂ ಬಿತ್ತುವುದಕ್ಕೆ ಅನುಕೂಲವಾದ ಮಳೆ ಬಾರದ್ದರಿಂದ ರೈತರು ನಿರುದ್ಯೋಗಿಗಳಾಗಿ ಹಗಲೂ ರಾತ್ರಿ ಮಳೆಯ ಚಿಂತೆಯಲ್ಲೇ ಇದಾರೆ. ಧಾರಣೆವಾಸಿಗಳು ಹೇಳತೀರದ್ದಾಗಿರುತ್ತೆ. ದನಗಳ ಮೇವಿನ ವಿಷಯವಾಗಿ ರೈತರು ಪಡುವ ಕಷ್ಟಗಳು ಅಪರಿಮಿತವಾಗಿರುತ್ತೆ.—ಸ್ಕೂಲುಗಳ ಡೆಪ್ಯುಟಿ ಇನ್‌ಸ್ಪೆಕ್ಟರವರು ದಯಮಾಡಿ ಸ್ಕೂಲ್ ಪರೀಕ್ಷಿಸಿದ ನಂತರ ಬಾಲಕರಿಗೆ ಕೊಟ್ಟ ಇನಾಮು ಪುಸ್ತಕಗಳನ್ನು ಬಾಲಕರಿಗೆ ಹಂಚುವ ಉದ್ದೇಶ್ಯ ಹಿಂದಿನ ಸೋಮವಾರ ಸ್ಕೂಲಿನಲ್ಲಿ ಕಮಿಟಿ ಮೆಂಬರುಗಳೂ ಮತ್ತು ಈ ಗ್ರಾಮದ ಎಲ್ಲಾ ಕೋಮುಗಳ ಜನಗಳೂ ಸಭೆ ಸೇರಿದ್ದರು. ಮ|| ಪಟೇಲ್ ಮಹದೇವಪ್ಪನವರು ಸಭೆಯ ಅಗ್ರಾಸನವನ್ನು ವಹಿಸಿದರು. ಬಾಲಕರು ಇಂಪಾಗಿ ದೇವರ ಸ್ತೋತ್ರವೇ ಮೊದಲಾದ ಹಾಡುಗಳನ್ನು ಹೇಳಿ ಸಭಿಕರ ಮನಸ್ಸಂತೋಷಪಡಿಸಿದರು. ಸ್ಕೂಲ್ ಮಾಸ್ಟರ್ ಮ|| ಟಿ. ವಿ. ತಿಮ್ಮಯ್ಯನವರು ಕಿಂಡರ್‌ಗಾರ್ಟೆನ್ ಪದ್ಧತಿ ಪ್ರಕಾರ ವಿದ್ಯೆ ಬೋಧಿಸುವ ವಿಷಯವಾಗಿ ಸ್ವಾರಸ್ಯವಾಗಿ ಉಪನ್ಯಾಸಮಾಡಿದರು ಬಾಲಕರು ಮಹಾರಾಜರವರ ಮತ್ತು ಚಕ್ರವರ್ತಿಗಳವರ ಶ್ರೇಯಃಪ್ರಾರ್ಥನೆಗಳನ್ನು ಹಾಡಿದ ತರುವಾಯ ಸಭಿಕರಿಗೆ ಗಂಧ ಹೂವು ತಾಂಬೂಲ ಮತ್ತು ಸಕ್ಕರೆ ಹಂಚಲ್ಪಟ್ಟವು. ಸಭಾಧ್ಯಕ್ಷರು ಪ್ರಾಸಾದ ಬಾಲಕರಿಗೆ ಅನೇಕ ಬುದ್ಧಿವಾದಗಳನ್ನು ಹೇಳಿ ಪುಸ್ತಕಗಳನ್ನು ಕೊಟ್ಟರು. ಈ ಸ್ಕೂಲಿಗೆ 60 ಜನ ಬಾಲಕರು ಬರುತ್ತಾರೆ. ಒಬ್ಬ ಮಾಸ್ತರಿಂದ ಕೆಲಸ ಪೂರೈಸುವುದು ಕಾನೆ ಕಷ್ಟ. ಮತ್ತೊಬ್ಬ ಸಹಾಯೋಪಾಧ್ಯಾಯನನ್ನು ದಯಪಾಲಿಸಿದರೆ ಉತ್ತಮ ಈಗಿನ ಕಟ್ಟಡವು ಸರ್ಕಾರಿ ಚಾವಡಿಯಾದ್ದರಿಂದ ಬಾಲಕರಿಗೆ ತೋಟ ವಗ್ಯೆರೆ ಮಾಡಲು ಅನುಕೂಲವಿಲ್ಲ. ಆದ್ದರಿಂದ ಸರ್ಕಾರದವರು ಹೊಸ ಕಟ್ಟಡವನ್ನು ಮಾಡಿಸಿಕೊಟ್ಟರೆ ಇನ್ನೂ ಅನೇಕ ಬಾಲಕರು ವಿದ್ಯಾಭ್ಯಾಸಮಾಡಲು ಅನುಕೂಲವಾಗುತ್ತೆ.—ಈ ಗ್ರಾಮಕ್ಕೆ ಸುಮಾರು ಎರಡು ತಿಂಗಳ ಕೆಳಗೆ ಅಮಲ್ದಾರರವರು ದಯಮಾಡಿ ಗ್ರಾಮಾಭಿವೃದ್ಧಿ ಸಂಘವನ್ನು ಏರ್ಪಡಿಸಿದರು. ಇನ್ನೂ ಗ್ರಾಮಾಭಿವೃದ್ಧಿ ಕಾರ್ಯಗಳು ಯಾವವೂ ನಡೆಯಲಿಲ್ಲ. ಸೆಕ್ರಟರಿಗಳೂ, ಪ್ರೆಸಿಡೆಂಟರೂ ಮೊದಲು ನೀರುವ ಭಾವಿಗೆ ರಸ್ತೆ ಮಾಡಿಸಿದರೆ ತುಂಬಾ ಅನುಕೂಲವಾಗುತ್ತೆ.—ಈ ಗ್ರಾಮದ ಬೇಗಾರಿ ಜನಗಳ ನೀರಿನ ಕಷ್ಟ ಹೇಳತೀರದ್ದಾಗಿದೆ. ಇದುವರೆಗೂ ಕೆರೆಯಲ್ಲಿ ನೀರು ತಂದುಕೊಳ್ಳುತ್ತಿದ್ದರು. ಕೆರೆಯ ನೀರು ಬತ್ತಿಹೋಗಿ 2 ತಿಂಗಳಾಯಿತು. ಆಗಿನಿಂದಲೂ ಅವರು ಮನೆಮನೆಗೆ ಹೋಗಿ ನೀರು ತಿರುಪೆ ಎತ್ತುತ್ತಾರೆ. ಈ ಜನಗಳ ಮನೆಗಳು ಸುಮಾರು 50, ಜನಸಂಖ್ಯೆ ಸುಮಾರು 150 ಆಗುತ್ತೆ. ಸರ್ಕಾರದವರು ಈ ಜನಗಳಿಗೆ ಒಂದು ಭಾವಿ ತಗಿಸಿಕೊಟ್ಟರೆ ಈ ಕ್ಷಾಮಕಾಲದಲ್ಲಿ ಹೊಟ್ಟೆತುಂಬ ನೀರನ್ನಾದರೂ ಕುಡಿದು ಜೀವಿಸಲು ಮಾರ್ಗವಾಗುತ್ತೆ. ಈಗ ನಮ್ಮ ತಾಲ್ಲೂಕಿಗೆ ಬಂದಿರುವ ಅಮಲ್ದಾರರವರು ಈ ಬಡಜನಗಳ ನೀರಿನ ಕಷ್ಟ ಹೋಗಲಾಡಿಸುವರೆಂದು ನಂಬಿರುತ್ತೇವೆ.

ಯಾಕೆ ಪರೀಕ್ಷಿಸಬಾರದು ? ಭಂಗಾರದ ಪದಕ ಬಂದಿದೆ.

ಸೆಂಟ್, ಅತ್ತರ್‌ಗಳೆಲ್ಲೆಲ್ಲಾ ಶ್ರೇಷ್ಠವಾದದ್ದು

ಆತ್ಮ ಮೋಹಿನಿ

ಇದು ರೆಜಿಸ್ಟರ್ ಆಗಿದೆ. ಈಗಿನ ಕಾಲದಲ್ಲಿ ಇದೇ ನಿಲ್ಲುವ, ಸುವಾಸನೆ ಯುಳ್ಳ, ಮನೋಹರವಾದ ಮತ್ತು ಸರಿಯಾದ ಪರಿಮಳದ ದ್ರವ್ಯವು. ಕರವಸ್ತ್ರಕ್ಕೆ ನಾಲ್ಕು ತೊಟ್ಟು ಹಾಕಿಕೊಂಡರೆ ನಾಲ್ಕು ದಿನಗಳ ತನಕ ಘಮಘಮಿಸುವ ಸುವಾಸನೆ ಇರುತ್ತೆ. ಹಾಗೆ ದೀರ್ಘಕಾಲ ನಿಲ್ಲತಕ್ಕದ್ದಲ್ಲವೆಂದು ರುಜುವಾತು ಮಾಡಿಕೊಡುವವರಿಗೆ ನಾವು ಒಂದು ನೂರು ರೂಪಾಯಿ ಬಹುಮಾನ ಕೊಡುತ್ತೇವೆ. ಪರೀಕ್ಷೆಮಾಡಿ ನೋಡಿ, ಬಹುಮಾನವನ್ನು ಸಂಪಾದಿಸಿಕೊಳ್ಳಿ!

ಕ್ರಯ ½ ಔನ್ಸ್ ಗಾಜಿನ ಬಿರಡೆಯ ಬಾಟ್ಲಿಗೆ ರೂ. 2–0–0.

„ 1 ಡ್ರಾಂ ಕೊಳವೆ „ „ „ 0–12–0.

ಆತ್ಮ ಮೋಹಿನಿ ಪರಿಮಳದ ಕಾಡಿಗೆಗಳು ಡಜನ್ 1 ಕ್ಕೆ ರೂ. 0–12–0.

ಎಲ್ಲರಲ್ಲೂ ವಿಕರಿಗೆ ಇಟ್ಟಿದೆ.

ಮದರಾಸ್ ಅಧಿಕೃತ್ಯಕ್ಕೆಲ್ಲಾ ಏಜಂಟರು—

ಮಾ ಭಗವಾನ್‌ದಾಸ್ ಚೂನಿಲಾಲ್ ಕಂಪನಿ,

[251–35] ೧೨೩, ಚೈನಾಬಜಾರ್ ರೋಡ್, ಮದರಾಸ್.

ವೃತ್ತಾಂತ ಪತ್ರಿಕೆ.

—:o:—

ಸನ್ ೧೯೧೪ ನೇ ಇಸವಿ ಜೂಲೈ ತಾ. ೩೦ ನೇ ಗುರುವಾರ.

ಮೈಸೂರು ಸಂಸ್ಥಾನದ ಬಡ್ಜೆಟ್ಟು.

ದಿವಾನ್ ಬಹದೂರ್ ಜೆ. ಎಸ್. ಚಕ್ರವರ್ತಿಯವರು ಮೊನ್ನೆ ನಡೆದ ನ್ಯಾಯವಿಧಾಯಕ ಸಭೆಯಲ್ಲಿ 1914–15 ನೇ ಸಾಲಿನ ಜಮಾ ಖರ್ಚುಗಳ ಅಂದಾಜುಪಟ್ಟಿಗಳನ್ನು ಹಾಜರು ಮಾಡಿದಾಗ್ಗೆ ಅವರು ಆಡಿದ ಬಹು ಸಮರ್ಥವಾದ ಮಾತುಗಳನ್ನು ಈ ವಾರದ ಸರ್ಕಾರಿ ಗೆಜೆಟ್ಟಿನಲ್ಲಿ ಓದಿದೆವು. ಜಮಾ ಮತ್ತು ಖರ್ಚುಗಳ ಮುಖ್ಯ ಬಾಬುಗಳನ್ನು ಅವರು ಬಹಳ ಅಚ್ಚುಕಟ್ಟಾಗಿಯೂ ಪರಿಷ್ಕಾರವಾಗಿಯೂ ತೋರಿಸಿ ವಿವರಿಸಿರುತ್ತಾರೆ. ನಮ್ಮ ಸಂಸ್ಥಾನದ ಖರ್ಚುಬಾಬಿನಲ್ಲಿ ಪ್ರತಿ ಒಂದು ಅಂಶಕ್ಕೂ ಹೆಚ್ಚು ಹಣವನ್ನು ಒದಗಿಸಲಾಗಿದೆ ಎಂಬುವುದೇ ಅವರ ದೊಡ್ಡ ಪ್ರಸ್ತಾಪವಾಗಿದೆ. ಹೆಚ್ಚು ಹೆಚ್ಚಾಗಿ ಹಣ ಕೊಟ್ಟಿರುವ ಬಾಬುಗಳನ್ನು ತೋರಿಸುತ್ತಾ ಅವರು "ಹಿಂದೆ ಯಾವಾಗಲೂ ಇಷ್ಟು ಹಣ ಒದಗಿಸಿದ್ದಿಲ್ಲ; ಎಲ್ಲವನ್ನೂ ವಿಚಾರಿಸಿರುತ್ತೇವೆ" ಎಂಬದಾಗಿ ಹೇಳಿರುವರು. ರಾಜಾದಾಯವನ್ನು ಜೋಪಾಗಿ ಮಿಗಿಸಿಟ್ಟುಕೊಂಡು ಹೆಚ್ಚಳಪಡುತ್ತಿರುವುದಕ್ಕಿಂತ ಅದನ್ನು ಸಂಸ್ಥಾನದ ಅಭ್ಯುದಯ ಕಾರ್ಯಗಳಿಗೆ ವಿನಿಯೋಗಿಸುತ್ತಾ ಬರುವುದು ಎಷ್ಟೋ ಮೇಲಾದದ್ದೆಂದು ಅವರು ಹೇಳಿರುವುದು ಸಹಜವೇ ಸರಿ ಎಂದು ನಾವು ಒಪ್ಪಿಕೊಳ್ಳುತ್ತೇವೆ.

ಈಗ ನಮ್ಮ ಸಂಸ್ಥಾನದಲ್ಲಿ ನಡೆಯುತ್ತಿರುವ ದೊಡ್ಡ ದೊಡ್ಡ ಕಾರ್ಯಗಳನ್ನು ಶ್ಲಾಘಿಸಿ ವಿವರಿಸುವುದರಲ್ಲೇ ಮ॥ ಚಕ್ರವರ್ತಿಯವರು ಬಹಳ ಸಮಯವನ್ನು ಕಳೆದರು. ಅಂಥಾ ದೊಡ್ಡ ಕಾರ್ಯಗಳನ್ನು ಪ್ರಾರಂಭಿಸಿ ನಡಿಸಬೇಕಾಗಿರುವುದೇನೋ ಅವಶ್ಯವೆಂದು ಒಪ್ಪಿಕೊಳ್ಳುತ್ತೇವೆ. ಶಿವಸಮುದ್ರದಲ್ಲಿ ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡುವುದಕ್ಕೆ ನೀರಿಗೆ ಸ್ವಲ್ಪವೂ ಕೊರತೆಯುಂಟಾಗಬಾರದು ; ಸರ್ವದಾ ಅಲ್ಲಿಗೆ ನೀರು ಒದಗುವಂಥಾ ಏರ್ಪಾಡು ಆಗಲೇಬೇಕು. ಈ ದೊಡ್ಡ ಕಾರ್ಯವು ಕೈಗೂಡಿದರೆ ಈ ಆಸ್ತಿಯು ಮೈಸೂರಿಗೆ ತುಂಬಾ ಲಾಭಕರವಾದೀತೆನ್ನುವುದಕ್ಕೆ ಸಂಶಯವೇ ಇಲ್ಲ. ಅಂತಲಾಗಿ ಸಂಸ್ಥಾನದಲ್ಲಿ ಅಮದುರಪ್ತು ಹೆಚ್ಚಿ ಐಶ್ವರ್ಯಾಭಿವೃದ್ಧಿಯಾಗುವುದಕ್ಕಾಗಿ ಈಗ ಪ್ರಾರಂಭಿಸಿ ನಡಿಸುತ್ತಿರುವ ರೈಲ್ವೆ ಬಂದರಿನ ಕಾಮಗಾರಿಗಳೂ ಅವಶ್ಯವಾಗಿರುತ್ತವೆ. ಈ ಕಾಮಗಾರಿಗಳು ಬಹಳ ತೃಪ್ತಿಕರವಾಗಿ ನಡೆಯುತ್ತಿವೆ ಎಂದು ಮ॥ ಚಕ್ರವರ್ತಿಯವರು ಉತ್ಸಾಹಪಟ್ಟು ಹೇಳಿರುವ ಮಾತುಗಳನ್ನು ಓದಿದರೆ ಸಂತೋಷವಾಗುತ್ತದೆ. ವಿದ್ಯೆಯನ್ನು ಹರಡುವುದಕ್ಕೆಂದು ತೆಗೆದಿಟ್ಟಿರುವ ಹಣವನ್ನು ವಿವೇಕದಿಂದ ಖರ್ಚುಮಾಡಿದ ಪಕ್ಷದಲ್ಲಿ ಅದೂ ಕೂಡ ಪ್ರಜೆಗಳಿಗೆ ಮಹೋಪಕಾರವಾಗಿ ಪರಿಣಮಿಸುತ್ತದೆ. ಗವರ್ನಮೆಂಟಿನವರು ವ್ಯವಸಾಯದ ಇಲಾಖೆಯನ್ನು ಅಭಿವೃದ್ಧಿಮಾಡಿರೋಣದರಿಂದ ವಿಶೇಷವಾಗಿ ರೈತರಿಗೂ, ಸಾಮಾನ್ಯವಾಗಿ ಸಮಸ್ತ ಪ್ರಜೆಗಳಿಗೂ ಬಹಳ ಪ್ರಯೋಜನವಾಗಬೇಕು. ಕಸಬುಗಳನ್ನೂ ವ್ಯಾಪಾರವನ್ನೂ ಹೆಚ್ಚಿಸಬೇಕಾದದ್ದೇನೋ ಅವಶ್ಯವೇ ಸರಿ ; ಆದರೆ ಈಗ ಇದಕ್ಕಾಗಿ ಮಾಡುತ್ತಿರುವ ಕಾರ್ಯಗಳಿಂದಲೂ ಏರ್ಪಾಡುಗಳಿಂದಲೂ ಅಷ್ಟೇನೂ ಫಲವಾದೀತೆಂದು ನಮಗೆ ತೋರುವುದಿಲ್ಲ. ಯಾಕೆಂದರೆ ಮುಂದರಿಸಿ ನಿಂತು ಕಸಬುಗಳನ್ನು ನಡಿಸುವಂಥಾ ಸಮರ್ಥರು ಮೈಸೂರು ಸಂಸ್ಥಾನದಲ್ಲಿ ದೊರಕುವುದಿಲ್ಲ. ಅದಲ್ಲದೆ ಈಗಿನ ಸ್ಥಿತಿಯಲ್ಲಿ ಕಸಬು, ಕಾರ್ಖಾನೆಗಳಿಗೆ ಹಣ ಕೊಡಲು ಮೈಸೂರಿನ ಪ್ರಜೆಗಳು ಸಿದ್ಧರಾಗಿದ್ದಾರೆಂದು ಹೇಳಲು ನಮಗೆ ಸಿದ್ಧಯು ಸಾಲದು.

ಮ॥ ಚಕ್ರವರ್ತಿಯವರು ಮೈಸೂರು ಸರ್ಕಾರದ ದಿನದಿನದ ಕಾರ್ಯಗಳನ್ನು ಕುರಿತು ವಿಶೇಷವೇನೂ ಹೇಳಿಲ್ಲ. ದೃಷ್ಟಿಯೂ ಚಟುವಟಿಕೆಯೂ ಎಲ್ಲಾ ಈಗ ಪ್ರಾರಂಭಿಸಿರುವ ದೊಡ್ಡ ದೊಡ್ಡ ಕಾರ್ಯಗಳ ಮೇಲೆ ಇರುತ್ತೆಂದೂ, ಸಾಮಾನ್ಯವಾಗಿ ಪ್ರಜೆಗಳನ್ನು ಶ್ರೇಯಸ್ಸಿಗೆ ತರತಕ್ಕ ವಿಚಾರಗಳು ಹಿಂದಿರಾ ಮಟ್ಟಿಲಿ ಇಳಿದವೆಯೆಂದೂ ನಮಗೆ ಕಾಣುವುದು. ವಿದ್ಯೆಯನ್ನು ಹರಡಬೇಕೆಂದೂ, ಆರೋಗ್ಯವನ್ನು ಹೆಚ್ಚಿಸಬೇಕೆಂದೂ ಹಣಗಳನ್ನು ಕೊಟ್ಟಿರುವುದು ಹೊರತು ಪ್ರಜೆಗಳ ಶ್ರೇಯಸ್ಸಿಗೆ ಅನ್ಯಾವ ಏರ್ಪಾಡುಗಳೂ ನಡೆದಿರುವಂತೆ ನಮಗೆ ಕಾಣುವುದಿಲ್ಲ. ಖರ್ಚಾಗುತ್ತಿರುವ ಹಣಗಳಿಗೆ ತಕ್ಕಷ್ಟು ಪ್ರತಿಫಲ ಕಂಡುಬಂದಿದೆಯೇ ಎಂದು ಸಂಶಯಿಸುತ್ತೇವೆ. ದೃಷ್ಟಾಂತವಾಗಿ ಅನೇಕ ಮಾಸ್ತರುಗಳನ್ನು ಕ್ರಮವಾಗಿ ಶಿಕ್ಷಣದಲ್ಲಿ ತರಬೇತುಮಾಡಿ ವಾಪಸು ಕಳುಹಿಸುತ್ತಾರಷ್ಟೆ. ಅಂಥವರು ಆಯಾ ಸ್ಕೂಲುಗಳಲ್ಲಿ ಉಪಾಧ್ಯಾಯಗಿರಿಯನ್ನು ತಾವು ಕಲಿತುಬಂದಿರುವ ಪ್ರಕಾರ ನಡಿಸಲು ಅವರಿಗೆ ತಕ್ಕ ಸಾಧನಗಳೇ ಇಲ್ಲದೆ ಇದೆ. ಹೊಸ ತರಹಾ ಬೋಧನೆಯನ್ನು ಅವರು ಕಲಿತದ್ದು ಏನು ಫಲವಾಯಿತು ? ಉಪಾಧ್ಯಾಯರಿಗೆ ಪಾಠಗಳನ್ನು ನಡಿಸುವುದಕ್ಕೆ ಪುಸ್ತಕಗಳೂ ಇತರ ಸಾಧನಗಳೂ ಇಲ್ಲವೆಂದೂ, ಇದರಿಂದ ತೃಪ್ತಿಕರವಾಗಿ ಕೆಲಸ ನಡೆಯಲು ಅಡಚಣೆಯಾಗಿದೆಯೆಂದೂ ಹಿಂದೆ ನಮ್ಮ ಪತ್ರಿಕೆಯಲ್ಲಿ ಖಾತ್ರಿಗಳು ಪ್ರಕಟವಾಗಿರುತ್ತವೆ. ಸ್ಕೂಲುಗಳಿಗೆ ಬೇಕಾದ ಸಾಧನಗಳನ್ನೆಲ್ಲಾ ಒದಗಿಸಿಕೊಡಬೇಕು; ಅದಕ್ಕೆ ಹಣ ಖರ್ಚುಮಾಡಬೇಕಾಗುತ್ತದೆ. ಆರೋಗ್ಯದ ಇಲಾಖೆಯ ಸ್ಥಿತಿಯೂ ಹೀಗೆಯೇ ಇರುವುದು. ಪಟ್ಟಣ, ಊರು, ಗ್ರಾಮಗಳ ಜಲಾಶಯಗಳನ್ನೂ ಬೀಕ್ಕಲುರೋಕ್ಕನ್ನು ಕ್ರಮಪಡಿಸಿ ಆರೋಗ್ಯಜನಕವಾಗಿ ಮಾಡಬೇಕೆಂದು ಸ್ಯಾನಿಟರಿ ಆಫೀಸರುಗಳನ್ನು ನೇಮಕಮಾಡಿ, ಅವರು ಸೂಚಿಸುವ ಕಾಮಗಾರಿ ಮುಂತಾದದ್ದಕ್ಕೆ ಹಣ ಒದಗಿಸದಿದ್ದರೆ ಅಂಥಾ ಅಧಿಕಾರಿಯನ್ನು ನೇಮಿಸಿ ಫಲವೇನು? ಅತನು ಗ್ರಾಮಾಂತರಗಳ ಮೇಲೆ ಸಂಚರಿಸಿ ಪ್ರಜೆಗಳಿಗೆ ಹಿತೋಪದೇಶವನ್ನು ಮಾಡಬೇಕೆಂಬುವುದೇನೋ ಸಹಜ; ಆದರೆ ಪ್ರಜೆಗಳ ಆರೋಗ್ಯರಕ್ಷಣೆಗೆ ಅವಶ್ಯವಾದ ಕಾರ್ಯಗಳನ್ನು ಮಾಡಿಸುವುದಕ್ಕೂ ಅಂಥಾ ಅಧಿಕಾರಿಗೆ ಸ್ವಲ್ಪ ಅವಕಾಶವಿರಬೇಕು.

ದೊಡ್ಡ ದೊಡ್ಡ ಕಾಮಗಾರಿಗಳೂ ಏರ್ಪಾಡುಗಳೂ ಹುಟ್ಟಿಕೊಂಡು, ಅಲ್ಪವಾದರೂ ಬಹಳ ಅವಶ್ಯವಾಗಿರುವ ಕಾರ್ಯಗಳನ್ನು ಕತ್ತಲೆಗೆ ತಳ್ಳಿಬಿಟ್ಟವೆ. ಕೆಲಸಕಾರ್ಯಗಳಿಗಾಗಿ ಅಧಿಕಾರಿಗಳನ್ನೂ ಸಿಬ್ಬಂದಿಯನ್ನೂ ನೇಮಕಮಾಡಿದಾರೆ; ಆದರೆ ಅವರಿಗೆ ಹಣವನ್ನು ಒದಗಿಸದೆ ಇರೋಣದರಿಂದ ಕೆಲಸಗಳು ನಡೆಯದೆ ಇರುತ್ತವೆ.

ಖರ್ಚಿಗೆ ಬಹಳ ಹಣಗಳು ಒದಗುತ್ತಿರುವುದನ್ನು ನೋಡಿದರೆ ನಮ್ಮ ಸಂಸ್ಥಾನವು ಶ್ರೇಯಸ್ಸಿನ ಶಿಖರವನ್ನು ಪಡೆದಿದೆ ಎಂದು ಕಾಣುವುದು. ಆದಕಾರಣ ನಮ್ಮ ಸೀಮೆಯಲ್ಲಿ ಯಾವ ತರಹಾ ಹೊಸ ತೆರಿಗೆಯನ್ನೂ ಹಾಕಬೇಕಾದ ಅಗತ್ಯ ಕಾಣುವುದಿಲ್ಲ. ಸಂಸ್ಥಾನದ ಪ್ರತಿ ಒಂದು ಭಾಗದಲ್ಲೂ ಪ್ರಜೆಗಳ ಯಥಾರ್ಥವಾದ ಆರೋಗ್ಯ ಸುಖ ಸಮಾಧಾನಗಳನ್ನು ಕಾಪಾಡಿ ಹೆಚ್ಚಿಸುವುದಕ್ಕಾಗಿಯೇ ರಾಜಾದಾಯವು ವಿನಿಯೋಗವಾಗುವುದನ್ನು ನೋಡಬೇಕೆಂದು ಕುತೂಹಲಪಡುತ್ತೇವೆ.

ಅನ್ಯದೇಶ ವೃತ್ತಾಂತಗಳು.

ಆಸ್ಟ್ರಿಯ ರಾಜ್ಯದ ಯುವರಾಜರಾದ ಆರ್ಚ್‌ಡ್ಯೂಕ್ ಫರ್ಡಿನ್ಯಾಂಡ್‌ರವರ ಕೊಲೆಯ ದೆಸೆಯಿಂದ ಯೂರೋಪ್ ಖಂಡದಲ್ಲಿ ಬಹಳ ಗಲಭೆಯುಂಟಾಗುವಂತೆ ಕಾಣುತ್ತದೆ. ಸರ್ವಿಯದಲ್ಲಿ ಆಸ್ಟ್ರಿಯಾ ಯುವರಾಜರವರನ್ನು ಕೊಲೆಮಾಡಿದ್ದಕ್ಕೆ ಕಾರಣರನ್ನೂ ಕಿತೂರಿಮಾಡಿದವರನ್ನೂ ಸಂಪೂರ್ಣವಾಗಿ ವಿಚಾರಣೆಮಾಡಬೇಕೆಂತಲೂ, ಈ ವಿಚಾರಣೆಗೆ ಆಸ್ಟ್ರಿಯಾ ಅಧಿಕಾರಿಯೊಬ್ಬನನ್ನು ಜಡ್ಜಿಗಳ ಕೂಡ ಸೇರಿಸಿಕೊಳ್ಳಬೇಕೆಂತಲೂ ಆಸ್ಟ್ರಿಯದವರು ಸರ್ವಿಯದವರನ್ನು ಕೇಳಿರುತ್ತಾರೆ. ಈ ಕಾಗದಕ್ಕೆ ಸರ್ವಿಯದವರು ಒಡನೆಯೇ ಜವಾಬು ಕೊಡಬೇಕಾಗಿತ್ತು. ಈಚಿಗೆ ಅವರು ಕೊಟ್ಟಿರುವ ಜವಾಬು ಆಸ್ಟ್ರಿಯದವರಿಗೆ ತೃಪ್ತಿಕರವಾದಂತೆ ಕಾಣುವುದಿಲ್ಲವಾದಕಾರಣ ಆ ಎರಡು ರಾಜ್ಯಗಳಿಗೂ ಯಾವ ಸಮಯದಲ್ಲಿ ಯುದ್ಧ ಪ್ರಾರಂಭವಾಗುವದೋ ಹೇಳಲಾಗದು. ಈ ಯುದ್ಧವು ಆ ಎರಡು ರಾಜ್ಯಗಳಿಗೇ ಸಂಬಂಧಪಡುವುದಾಗಿದ್ದ ಪಕ್ಷದಲ್ಲಿ ಅದು ಬೇಗನೆ ಇತ್ಯರ್ಥವಾಗಬಹುದು; ಯಾಕೆಂದರೆ ಸರ್ವಿಯಾ ರಾಜ್ಯವು ಮೊನ್ನೆ ತಾನೇ ಟರ್ಕಿಯವರ ಮೇಲೆ ಯುದ್ಧಮಾಡಿ ಬಹಳ ಮಟ್ಟಿಗೆ ನಿಶ್ಶಕ್ತಿಯಾಗಿದೆ. ಇಂಥ ಸ್ಥಿತಿಯಲ್ಲಿ ಈ ರಾಜ್ಯವು ಆಸ್ಟ್ರಿಯದವರ ಮೇಲೆ ದೀರ್ಘಕಾಲ ಯುದ್ಧಕ್ಕೆ ನಿಲ್ಲುವುದು ಸಾಧ್ಯವಲ್ಲ. ಆದರೆ ಈಗ ಸರ್ವಿಯಾಕ್ಕೆ ಅನ್ಯಾಯವೇನೂ ಸಂಭವಿಸದಂತೆ ರಷ್ಯಾದವರು ನೋಡಿಕೊಳ್ಳಬೇಕಾಗಿರೋಣದರಿಂದ ಅವರು ಸರ್ವಿಯಾ ಸಹಾಯಕ್ಕೆ ನಿಲ್ಲಬಹುದು. ಅಂತಲಾಗಿ ಎರಡು ಶಕ್ತಿಗಳಲ್ಲಿ ಜರ್ಮನಿಯವರೂ ಇಟಲಿಯವರೂ ಆಸ್ಟ್ರಿಯದವರಿಗೆ ಬೆಂಬಲ ಕೊಡಬಹುದೆಂದೂ, ಬಹುಶಃ ಫ್ರಾನ್ಸಿನವರು ರಷ್ಯಾದವರ ಸಹಾಯಕ್ಕೆ ನಿಲ್ಲಬಹುದೆಂದೂ ತೋರುತ್ತದೆ. ಯೂರೋಪಿನಲ್ಲಿ ಈಗಿನ ಸ್ಥಿತಿಗತಿಯು ಬಹಳ ಭಯಂಕರವಾಗಿರುವಂತೆ ಕಾಣುತ್ತಿದೆಯಾದಕಾರಣ ಇಂಗ್ಲೆಂಡಿನವರು ಈ ವಿದ್ಯಮಾನಗಳನ್ನು ನೋಡುತ್ತಾ ಸುಮ್ಮನಿರುವುದು ಸಾಧ್ಯವಲ್ಲ. ಈಗ ರಷ್ಯಾದವರು ಈ ಮನಸ್ತಾಪದಲ್ಲಿ ತಲೆಹಾಕದಂತೆ ಆಗಿ, ಆಸ್ಟ್ರಿಯಾ ಸರ್ವಿಯಾ ರಾಜ್ಯಗಳ ವೈಷಮ್ಯಗಳನ್ನು ಪರಿಹರಿಸುವಂಥಾ ಮಾರ್ಗವು ದೊರೆಯಲೆಂದು ಹಾರೈಸುತ್ತೇವೆ.

• • • •

ಐರ್ಲೆಂಡಿನ ರಾಜಧಾನಿಯಾದ ಡಬ್ಲಿನ್ ನಗರದಲ್ಲಿ ಕಳೆದ ವಾರ ಸ್ವಲ್ಪ ಗಲಭೆಯುಂಟಾಯಿತು. ನ್ಯಾಷನಲ್ ವಾಲಂಟಿಯರ್ಸ್ ಎಂಬ ದೇಶಸೇವಕರು ಕೆಲವು ಮದ್ದುಗುಂಡನ್ನು ಗುಟ್ಟಾಗಿ ಡಬ್ಲಿನ್ ಪಟ್ಟಣದ ಬಳಿ ಇರುವ ಹೋತ್ ಎಂಬಲ್ಲಿಗೆ ತಂದು ಇಳಿಸಬೇಕೆಂದು ಪ್ರಯತ್ನಪಟ್ಟರು. ಪೋಲೀಸಿನವರೂ ಸೈನಿಕರೂ ಆ ದೇಶಸೇವಕರ ಪೈಕಿ ಕೆಲವರನ್ನು, ಮದ್ದುಗುಂಡಿನ ಸಮೇತ ಹಿಡಿಯುವುದಕ್ಕೆ ಹೋದಾಗ ಎರಡು ಕಕ್ಷಿಗಳಿಗೂ ಕಾದಾಟವಾಯಿತು. ಮದ್ದುಗುಂಡನ್ನು ಗುಟ್ಟಾಗಿ ಸಾಗಿಸುತ್ತಿದ್ದವರ ಪೈಕಿ ಒಬ್ಬನು ಗುಂಡು ಹೊಡೆದದ್ದರಿಂದ ಅದು ಒಬ್ಬ ಸೋಲ್ಜರನ ಕಾಲಿಗೆ ಬಡಿಯಿತು; ಅದರ ಮೇಲೆ ಕಾದಾಟವು ಹೆಚ್ಚಿತು. ಸೋಲ್ಜರುಗಳು ಎದುರುಕಕ್ಷಿಯವರ ಮೇಲೆ ಗುಂಡು ಹೊಡೆಯಲಾಯಿತು. ಇದರಲ್ಲಿ ಇಬ್ಬರು ಸತ್ತುಹೋದರು ; ನಾಲ್ವತ್ತು ಮಂದಿಗೆ ಗಾಯಗಳಾಗಿ ಇವರಲ್ಲೂ ಇಬ್ಬರು ಕಡೆಗೆ ತೀರಿಹೋದರು. ಈ ಕದನವು ಸಂಭವಿಸಿದ್ದರಿಂದ ಗವರ್ನಮೆಂಟಿನವರಿಗೆ ಐರ್ಲೆಂಡಿನಲ್ಲಿ ಪ್ರಜಾಶಾಂತಿಯನ್ನು ಕಾಪಾಡುವುದು ಸ್ವಲ್ಪ ಕಷ್ಟವಾಗಿದೆ. ಮತ್ತು ಪಾರ್ಲಿಮೆಂಟಿನವರು ತಮ್ಮ ಪಕ್ಷವನ್ನು ಸಮಾಧಾನಕ್ಕೆ ತಂದುಕೊಳ್ಳದಿದ್ದರೆ ಅಲ್ಲಿ ಇನ್ನೂ ಗಲಭೆಗಳೂ ಕದನಗಳೂ ಪ್ರಾಪ್ತವಾಗಬಹುದೆಂದು ಕಾಣುತ್ತದೆ.

ಆಫ್ರಿಕಾನರನು.

ಇವನು ಆಫ್ರಿಕಾ ಖಂಡದಲ್ಲಿ ಹಾಟೆಂಟಾಟ್ ಎಂಬ ಜಾತಿಯವನಾಗಿ ಮುಖ್ಯಾಧಿಕಾರಿಯಾಗಿ ಬಹುಗಾಲದಿಂದಲೂ ಕೊಳ್ಳೆಹೊಡೆಯುವದರಿಂದಲೂ ಸುತ್ತಮುತ್ತಣ ಜನಗಳಿಗೆ ಅತಿ ಭೀಕರನಾಗಿದ್ದನು. ಇವನು ಯುದ್ಧದಲ್ಲಿ ಅತಿ ಕ್ರೂರಾತ್ಮನು. ಯುದ್ಧದಲ್ಲಿ ಸೋತ ಶತ್ರುಗಳನ್ನು ಸಂಹರಿಸಿ ಅವರ ಆಸ್ತಿಪಾಸ್ತಿಗಳನ್ನು ದೋಚಿಕೊಂಡು ಅವರ ಮನೆಗಳನ್ನು ಸುಟ್ಟು ನಾಶನಮಾಡುವದು ಇವನಿಗೆ ಸರ್ವಸಾಧಾರಣ. ಮೊಫ್ಫಾಟ್ ಎಂಬ ಪಾದ್ರಿಯು ಇವನ ಪ್ರದೇಶವನ್ನು ಸುವಾರ್ತಾ ಪ್ರಸಂಗಕ್ಕೆ ಆರಿಸಿಕೊಂಡು ಅಲ್ಲಿ ಇವನ ಸಂಗಡ ಬೋಧಕರನ್ನೂ ಕಳುಹಿಸಿದನು. ಅವನಿಗೆ ಕ್ರಿಸ್ತನ ಸುವಾರ್ತೆಯನ್ನು ಬೋಧಿಸಿದನು. ಕಡೆತನಿಗೆ ಆಫ್ರಿಕಾನರನು ಕ್ರಿಸ್ತನ ಬೋಧೆಯನ್ನು ಸ್ವೀಕರಿಸಿ ತನ್ನ ನಡೆನುಡಿಯನ್ನು ತಿದ್ದಿ ತನ್ನ ದುಷ್ಕೃತ್ಯಗಳಿಗಾಗಿ ಬಹು ಪಶ್ಚಾತ್ತಾಪಪಟ್ಟನು. ಮತ್ತು ಅವನ್ನು ಮಾಡುವುದನ್ನು ಬಿಟ್ಟು ತನ್ನ ಜನಗಳಿಗೂ ಅಪ್ಪಣೆ ಕೊಟ್ಟನು. ಹೀಗೆ ಅವನು ಕ್ರಿಸ್ತನ ಭಕ್ತನಾಗಿ ಸಕಲ ದುಷ್ಕೃತ್ಯಗಳನ್ನು ನಿಲ್ಲಿಸಿದನು. ಅವನು ಕೊಲೆಗಾರನು ಎಂದು ಎಲ್ಲರೂ ಭಯಪಡುತ್ತಿದ್ದರು. ಇವನ ಸಂಗಡ ಇರುವಾಗ ಮೊಫ್ಫಾಟ್ ಪಾದ್ರಿಯು ಅವನ ಹಿಂದೆ—ಆಫ್ರಿಕಾನರನು ನನಗೆ ಒಂದು ತೊಂದರೆಯನ್ನೂ ಕೊಡಲಿಲ್ಲ. ಅವನ ಒಳ್ಳೇ ನಡತೆಯು ನನ್ನ ಜೀವನಕ್ಕೆ ಸಂತೋಷವಾಯಿತು ಎಂದು ಬರೆದಿರುವನು. ಮತ್ತು ಈ ಬೋಧಕನೂ ಆಫ್ರಿಕಾನರನೂ ಪರಸ್ಪರ ಸ್ನೇಹಿತರಾದರು. ಒಂದಾನೊಂದು ಕಾಲದಲ್ಲಿ ಮೊಫ್ಫಾಟ್ ಪಾದ್ರಿಯು ಪಟ್ಟಣದಲ್ಲಿ ಸಂಚಾರಮಾಡಬೇಕಾಗಿ ಬಂದಿತು. ಆತನು ಆಫ್ರಿಕಾನರನನ್ನು—ನೀನು ನನ್ನ ಸಂಗಡ ಬರುವಿಯೋ ಎಂದು ಕೇಳಿದನು. ಆಫ್ರಿಕಾನರನು ಕ್ರಿಸ್ತ ಭಕ್ತನಾಗುವದಕ್ಕೆ ಮೊದಲು ಆ ಪ್ರದೇಶದಲ್ಲಿದ್ದ ಕೇಪ್‌ಟೌನ್ ಮುಂತಾದ ಪಟ್ಟಣಗಳನ್ನು ಹೊಕ್ಕು ದೇಶವನ್ನು ಹಾಳುಮಾಡಿ ಅನೇಕ ಪ್ರಜೆಗಳನ್ನು ಕೊಂದುಹಾಕಿದ್ದನು. ಇವನನ್ನು ತನ್ನ ಬೋಧಕನಿಗೆ ಒಪ್ಪಿಸಿ—ಇವನನ್ನು ಕೊಂದವರನ್ನು ಶಿಕ್ಷಿಸದೆ ಇವನ ತಲೆಯನ್ನು ಕಡಿದು ಕೊಡುವವನಿಗೆ 1000 ರೂಪಾಯಿ ಬಹುಮಾನ ಕೊಡುತ್ತೇವೆಂದು ಸರಕಾರದವರು ಪ್ರಕಟಿಸಿರುವರು ನನಗೆ ತಿಳಿಯದೇ ಎಂದು ಶಂಕಿಸಿದನು. ಆದರೆ ಪಾದ್ರಿಯು ಅವನಿಗೆ ಅಭಯವನ್ನು ಕೊಟ್ಟದ್ದರಿಂದ ಅವನು ಅವನ ಸಂಗಡ ಹೊರಟನು. ಇವರಿಬ್ಬರು ಸುಮಾರು 500 ಮೈಲಿಗಳನ್ನು ಸಂಚರಿಸಿದರು. ಆ ಪ್ರದೇಶದಲ್ಲಿದ್ದ ಕ್ಷೇತ್ರದ ಪಟೇಲರೂ ಮೊಫ್ಫಾಟ್ ಪಾದ್ರಿಯನ್ನು ನೋಡಿ ಬೆರಗಾದರು. ಯಾಕೆಂದರೆ ಆಫ್ರಿಕಾನರನು ಆವಾಗಲೇ ಕೊಂದುಹಾಕಿರಬೇಕೆಂತ ನಿಶ್ಚಯಿಸಿಕೊಂಡಿದ್ದರು. ಆದರೆ ಮೊಫ್ಫಾಟ್ ಪಾದ್ರಿಯು ಜೀವದಿಂದ ಬದುಕಿರುವದು ಮಾತ್ರವಲ್ಲ; ಆಫ್ರಿಕಾನರನು ಅವನು ತನ್ನ ಇಷ್ಟ ಬಂದಂತೆ ನಡಿಸುತ್ತಾನೆಂದು ಕೇಳಿ ಆಶ್ಚರ್ಯಪಟ್ಟರು. ಮೊಫ್ಫಾಟ್ ಪಾದ್ರಿಯು ಒಬ್ಬ ಜಮೀನ್‌ದಾರನ ಭೇಟಿ ತೆಗೆದುಕೊಳ್ಳುವದಕ್ಕೆ ಹೋದನು. ಅವರು ಬೇರೆಬೇರೆ ಪ್ರಸ್ತಾಪಗಳನ್ನು ಮಾಡಿ ಕಡೆಗೆ ಜಮೀನ್‌ದಾರನು—ಅಯ್ಯಾ, ದೇವರು ನಿಮ್ಮನ್ನು ಆಫ್ರಿಕಾನರನ ಕ್ರೌರ್ಯದಿಂದ ಕಾಪಾಡಿದ್ದಕ್ಕಾಗಿ ನಾನು ಕೃತಜ್ಞನಾಗಿದ್ದೇನೆ ಅಂದನು. ಅದಕ್ಕೆ ಪಾದ್ರಿಯು—ಆಫ್ರಿಕಾನರನಿಗೆ ಭಯಪಡಲಗತ್ಯವಿಲ್ಲ. ಅವನು ಈಗ ದೇವಭಕ್ತನಾದ್ದಾನೆ ಅಂದನು. ಜಮೀನ್‌ದಾರನು—ನೀವು ಇನ್ನೇನಾದರು ಹೇಳಿದರೆ ನಂಬೇನು; ಆದರೆ ಈ ಮಾತು ಮಾತ್ರ ಹೇಳಬೇಡಿರಿ. ನಾನು ಅದನ್ನು ನಂಬಲಾರೆನು ಅಂದನು. ಅದಕ್ಕೆ ಪಾದ್ರಿಯು ಹೊರಗೆ ನಿಂತಿದ್ದ ಆಫ್ರಿಕಾನರನನ್ನು ಕರತಂದು ಅವನ ಎದುರಿಗೆ ನಿಲ್ಲಿಸಿದನು. ಆಫ್ರಿಕಾನರನು ಆ ಜಮೀನ್‌ದಾರನ

ಗೆ ಸಲಾಂ ಮಾಡಿ ವಿನಯದಿಂದ ನಿಂತುಕೊಂಡಿರಲು ಅವನು ಅತ್ಯಾಶ್ಚರ್ಯ ಪಟ್ಟು ದೇವರ ಮಹತ್ವಕ್ಕಾಗಿ ಆತನನ್ನು ಸ್ತುತಿಸಿದನು. ಮತ್ತು ಅಲ್ಲಿನ ಪ್ರಜೆಗಳು—ಮೊದಲು ನಮ್ಮನ್ನೆಲ್ಲಾ ಭಯರಕ್ಕೂ ಹಿಂಸೆಗೂ ಗುರಿಪಡಿಸುತ್ತಿದ್ದವನು ಈಗ ಸಮಾಧಾನವುಳ್ಳ ಕ್ರೈಸ್ತನಾಗಿದ್ದಾನಲ್ಲ ಎಂದು ಸಂತೋಷಪಟ್ಟರು.

ಆಫ್ರಿಕಾನರನು ಮರಳಿ ಸ್ವದೇಶಕ್ಕೆ ಬಂದು ಭಕ್ತಿಮಾರ್ಗವನ್ನು ಅರಿಯದವರಿಗೆ ಸಮುಪದೇಶವನ್ನು ಮಾಡುತ್ತಿದ್ದನು. ಮತ್ತು ತಂದೆತಾಯಿಗಳಿಲ್ಲದ ಅನಾಥರಿಗೂ ವಿಧವೆಯರಿಗೂ ಸಹಾಯಮಾಡುವದಕ್ಕೆ ಯಾವಾಗಲೂ ಸಿದ್ಧನಾಗಿದ್ದನು. ವಿರೋಧ, ಯುದ್ಧ, ಗಲಿಬಿಲಿಗಳನ್ನು ಹರಡುವದರಲ್ಲಿ ಸಂಚನಂತಿದ್ದ ಈ ಶೂರನು ಕಡೆಯಲ್ಲಿ ದಿವ್ಯ ಸಮಾಧಾನದಿಂದೊಡಗೂಡಿದವನಾಗಿದ್ದನು. ಯುದ್ಧಾಪೇಕ್ಷಿಗಳಾದ ಉಭಯ ಪಕ್ಷದವರಿಗೂ ಸಮಾಧಾನವನ್ನುಂಟುಮಾಡುವದಕ್ಕೆ ಏನು ಬೇಕಾದರೂ ಅದನ್ನು ಮಾಡುವದಕ್ಕೆ ಸಿದ್ಧನಾಗಿ ಸಂತು—ಪ್ರಿಯರೇ, ನಾನು ಹಿಂದೆ ನಡಿಸಿದ ಅನೇಕ ಯುದ್ಧಗಳಿಂದ ನನಗೆ ಪ್ರಾಪ್ತಿಸಿದ ಲಾಭವೇನು? ನಾಚಿಕೆಯೂ ದುಃಖವೂ ಅಲ್ಲವೇ? ಅದ್ದರಿಂದ ನೀವು ಜಗಳವನ್ನು ಬಿಟ್ಟು ಅನ್ಯೋನ್ಯರಾಗಿ ಬಾಳಿರಿ ಎಂದು ಅವರಿಗೆ ಬುದ್ಧಿಹೇಳುತ್ತಿದ್ದನು.

ಆಫ್ರಿಕಾನರನು 1823 ನೆ ಮಾರ್ಚಿ ತಿಂಗಳಲ್ಲಿ ದೈವಾಧೀನನಾದನು. ಇವನು ಲೋಕಯಾತ್ರೆಯನ್ನು ಪೂರೈಸುವ ಸಮಯದಲ್ಲಿ ತನ್ನ ಜನಗಳನ್ನೆಲ್ಲಾ ಸಭೆ ಸೇರಿಸಿ ಅವರಿಗೆ ಮುಂದೆ ನಡೆದುಕೊಳ್ಳುವ ರೀತಿಯನ್ನು ಬೋಧಿಸಿದನು. ಏನೆಂದರೆ—ನಾವು ಮುಂಚೆ ಕಿರಾತಕರಾಗಿದ್ದೆವಷ್ಟೆ. ಆದರೆ ಈಗ ಸುವಾರ್ತೆಯ ಸತ್ಯೋಪದೇಶವನ್ನು ಅಂಗೀಕರಿಸಿ ನಡೆಯುವವರಾಗಿದ್ದೇವೆ. ಸಾಧ್ಯವಾದ ಮಟ್ಟಿಗೆ ಒಬ್ಬರಿಗೊಬ್ಬರು ಸಮಾಧಾನದಿಂದ ಅನ್ಯೋನ್ಯವಾಗಿ ನಡೆದುಕೊಳ್ಳಿರಿ. ಇದು ಅಸಾಧ್ಯವಾಗಿ ತೋರಿಬಂದಲ್ಲಿ ನಮ್ಮ ಬೋಧಕರ ಬುದ್ಧಿವಾದವನ್ನು ಪಡೆದು ಯಾವ ಕೆಲಸವನ್ನಾದರೂ ಪ್ರವರ್ತಿಸಿರಿ. ದೇವರು ಪೂರ್ಣ ಅಯೋಗ್ಯನಾದ ನನಗೆ ಮಹಾ ಉಪಕಾರವನ್ನು ಮಾಡಿದ್ದಾನೆ ಆತನನ್ನು ನಾನು ಪ್ರೀತಿಮಾಡುತ್ತೇನೆ. ನಾನು ಪೂರ್ವದಲ್ಲಿ ಕ್ರೂರಾತ್ಮನಾಗಿ ಅನೇಕರನ್ನು ಕೊಂದುಹಾಕಿದೆನು. ಆದರೂ ಯೇಸುಸ್ವಾಮಿಯು ನನಗೆ ಮನ್ನಣೆಯನ್ನು ದಯಮಾಡಿರುವದರಿಂದ ಪರಲೋಕಕ್ಕೆ ಹೋಗುತ್ತೇನೆ. ಅಯ್ಯೋ! ನಾನು ನಿಮ್ಮನ್ನು ಪದೇಪದೆ ನಡಿಸಿದ ದುರ್ಮಾರ್ಗತನಕ್ಕೆ ತಿರಿಗಿ ಪ್ರವೇಶಮಾಡಬೇಡಿರಿ. ಆದರೆ ಅದಕ್ಕೆ ಹೊರಗಿ ಹೋಗಿ ದೇವರನ್ನು ಹುಡುಕಿರಿ. ಆಗ ಆತನೇ ನಿಮ್ಮ ಸಹಾಯಕನಾಗಿ ನಿಮ್ಮನ್ನು ನಡಿಸುವನು ಎಂಬುದಾಗಿ.

ಈ ಭಕ್ತನು ಪೂರ್ಣ ಭಕ್ತಿಯಿಂದಲೂ ನಿರೀಕ್ಷೆಯಿಂದಲೂ ಮರಣಪಟ್ಟನು.

ಒಳದೇಶದ ವೃತ್ತಾಂತಗಳು.

ಈ ವಾರ ನಮ್ಮ ಪತ್ರಿಕೆಯು ಹತ್ತು ಪುಟಗಳುಳ್ಳದ್ದಾಗಿದೆ.

ಬೆಂಗಳೂರು ದಂಡಿನ ಹೊಸಮಾರ್ಕೆಟ್ಟಿನಲ್ಲಿ ಆರು ಜನ ಸೇರಿ ಜೂಜಾಡುತ್ತಿದ್ದು ಸಿಕ್ಕಿಬಿದ್ದರು. ಇವರಿಗೆ ಮ್ಯಾಜಿಸ್ಟ್ರೇಟರು ತಲಾ 2 ರೂಪಾಯಿನಂತೆ ಜುಲ್ಮಾನೆ ಹಾಕಿರುತ್ತಾರೆ.

ರಾಜಧಾನಿಯಲ್ಲಿ ಅಲ್ಲಲ್ಲಿ ವಾಂತಿಭೇದಿ ಉಪದ್ರ ಕಾಣಿಸಿಕೊಂಡಿದೆ ಎಂದೂ, ಪ್ರಜೆಗಳು ಕೆರೆ ಕೊಳ ಭಾವಿಗಳ ನೀರನ್ನು ಉಪಯೋಗಿಸದೆ ನಲ್ಲಿಯ ನೀರನ್ನು ಚೆನ್ನಾಗಿ ಕಾಯಿಸಿ ಕುಡಿಯಬೇಕೆಂದೂ ಹೆಲ್ತ್ ಆಫೀಸರ್ ಮಿ|| ಎ. ಕೆ. ವಾಣಿಯವರು ತಿಳಿಸುತ್ತಾರೆ.

ಬೆಂಗಳೂರು ಗುಟ್ಟಹಳ್ಳಿ ನಿವಾಸಿಯಾದ ಸಯ್ಯದ್ ರಾಜಾಸಾಬ್ ಎಂಬಾತನು ಕುದುರೆಯನ್ನು ಮನೆ ಮಾಡಿಸುತ್ತಿದ್ದಾಗ ಅದು ಅಕಸ್ಮಾತ್ತಾಗಿ ತನ್ನ ಕಾಲಿನಿಂದ ಅವನ ಹೊಟ್ಟೆಯಲ್ಲಿ ಒದೆಯಿತು. ಈಗ ಅವನು ಬೆಂಗಳೂರು ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದಾನೆ.

ಬೆಂಗಳೂರು ಪೇಟೆಯನ್ನು ಅಭಿವೃದ್ಧಿಮಾಡುವದಕ್ಕೆ 16 ಲಕ್ಷ ರೂಪಾಯಿ ಬೇಕಾಗುವದೆಂದು ಕಮಿಟಿಯವರು ನಿರ್ಧರಮಾಡಿ ತಿಳಿಸಿದರು. ಮ್ಯುನಿಸಿಪಾಲಿಟಿಯಿಂದ ಒಂದು ಲಕ್ಷ ರೂಪಾಯಿ ಕೊಡುವುದಾಗಿಯೂ, ಉಳಿದ ಹಣವನ್ನು ಸರ್ಕಾರದವರು ಕೊಡಬೇಕೆಂದೂ ಮೆಂಬರುಗಳು ಒಪ್ಪಿ ತೀರ್ಮಾನಮಾಡಿದಾರೆ.

ರಾಜಧಾನಿಗೆ ಬಂದಿರುವ ಪಂ|| ಪ. ಕೇ. ನಾರಾಯಣಶಾಸ್ತ್ರಿಗಳು ಶ್ರೀಕೋಟೆ ಶ್ರೀನಿವಾಸ ದೇವಸ್ಥಾನದಲ್ಲಿ ನಿನ್ನೆಯಿಂದ ಕೀರ್ತನೆಯಾಗುವದೆಂಬ ಜಾಹೀರಾತಿನಿಂದ ಪ್ರತಿ ದಿನ ರಾತ್ರಿಯೂ ಹರಿಕಥೆ ಮಾಡಲಾರಂಭಿಸಿ ನಡಿಸುತ್ತಾರೆ. ಈ ದಾಸರು ಪುರಸಭಾಸಿಗಳಲ್ಲಿ ವಿಶೇಷವಾದ ಭಕ್ತಿ ಪ್ರೀತಿಗಳನ್ನು ಸಂಪಾದಿಸಿಕೊಂಡಿರುವರು.

ಬೆಂಗಳೂರು ಬಿನ್ನಿ ಕಂಪನಿಯಲ್ಲಿ ನೌಕರನಾಗಿದ್ದು ಕಂಪನಿಯ 41 ಸಾವಿರ ರೂಪಾಯಿ ತಿಂದುಹಾಕಿದ ನರಸಿಂಹಯ್ಯಂಗಾರಿಯು ಚೀಫ್ ಕೋರ್ಟಿನಲ್ಲಿ ಅಪೀಲ್‌ಮಾಡಿಕೊಂಡಿದ್ದನು. ಸೆಷನ್ಸ್ ಕೋರ್ಟಿನಲ್ಲಿ ಆಗಿದ್ದ 5 ವರುಷ ಕಠಿಣ ಸಜಾ, 1,000 ರೂಪಾಯಿ ಜುಲ್ಮಾನೆಯನ್ನೇ ಚೀಫ್ ಕೋರ್ಟಿನವರೂ ಖಾಯಂ ಮಾಡಿದರು.

ಮಂಡ್ಯದ ತಾಲ್ಲೂಕು ಆತಗೂರು ಹೋಬಳಿ ಹೆಮ್ಮನಹಳ್ಳಿಗ್ರಾಮದಲ್ಲಿ ಪ್ರಜೆಗಳು ಸಭೆಕೂಡಿ ಅಲ್ಲಿ ಸ್ಕೂಲನ್ನು ಇಡುವ ವಿಷಯ ಚರ್ಚೆಮಾಡಿದರು. ಮಿ|| ಕೇಶವಯ್ಯಸೆಟ್ಟರು ಒಂದೇ ಗಂಟಿನಲ್ಲಿ 60 ರೂಪಾಯಿ ದಾನಮಾಡಿದ್ದರಿಂದ ಸಭಿಕರು ಅವರನ್ನು ಕೊಂಡಾಡಿ, ಸ್ಕೂಲ್ ಇಡುವ ವಿಷಯದಲ್ಲಿ ಇಲಾಖೆಗೆ ಅರ್ಜಿ ಬರೆದುಕೊಂಡಿದ್ದಾರೆಂದು ತಿಳಿಯುತ್ತದೆ.

ಒಬ್ಬ ಚಾತ್ರಧಾರರಿಂದ—ಬಳ್ಳಾರಿಯಲ್ಲಿರುವ ಮಿ|| ಮುಳ್ಳಂಗಿ ದೊಡ್ಡಪ್ಪನವರ ಕಿರಿಯಪುತ್ತ ತಿಪ್ಪಣ್ಣನವರು ಆಷಾಢ ಬಹುಳ ತ್ರಯೋದಶಿ ಮಂಗಳವಾರ ಮಧ್ಯಾಹ್ನ 2 ಗಂಟೆಯಿಂದ ಸಾಯಂಕಾಲ 7 ಗಂಟೆ ವರೆಗೆ ಸಾವಿರಾರು ಬಡ ಪ್ರಜೆಗಳಿಗೆ ಅನ್ನೋದಕ ಹಾಕಿಸಿ ತೃಪ್ತಿಪಡಿಸಿದ್ದು ತುಂಬಾ ಪುಣ್ಯಕರವಾಗಿದೆ. ಪುರವಾಸಿಗಳು ಅವರ ಔದಾರ್ಯವನ್ನು ಕೊಂಡಾಡುತ್ತಾರೆ.

ಯಡತೊರೆ ತಾಲ್ಲೂಕು ಮಿರ್ಲೆ ಗ್ರಾಮದಲ್ಲಿ ಜವರಾಯ ಎಂಬುವನು ತನ್ನ 8 ವರುಷದ ಬಾಲಕನನ್ನು ಅಲ್ಲಿನ ಚಾಮುಂಡಿ ನಾಲೆ ಸೇತುವೆ ಮೇಲೆ ಕೂರಿಸಿಕೊಂಡಿದ್ದು ಹಾಗೇ ನಾಲೆಯೊಳಕ್ಕೆ ತಳ್ಳಿದನೆಂದೂ, ಆ ಹುಡುಗನು ನೀರಿನಲ್ಲಿ ಮುಳುಗಿ ಸತ್ತನೆಂದೂ, ಮಾರನೇ ದಿನ ಶವವು 3 ನೇ ಮೈಲಿಯಲ್ಲಿ ಸಿಕ್ಕಿತೆಂದೂ, ಈಚೆಗೆ ಅವನನ್ನು ಹಿಡಿದು ತನಿಖೆಮಾಡುತ್ತಿದ್ದಾರೆಂದೂ ವರ್ತಮಾನ ಬಂದಿದೆ.

ಸರ್ದಾರ್ ಎಂ. ಕಾಂತರಾಜ ಅರಸಿನವರಿಗೆ ಸಿ.ಎಸ್.ಐ. ಎಂಬ ಬಿರುದು ಬಂದದ್ದಕ್ಕಾಗಿ ಮೈಸೂರು ಪುರವಾಸಿಗಳು ಮುಂದಿನ ತಿಂಗಳು 8 ನೇ ತಾರೀಖಿನಲ್ಲಿ, ಅಲ್ಲಿನ ಟೌನ್ಹಾಲಿನಲ್ಲಿ ಹಬ್ಬನವರು 9 ನೇ ತಾರೀಖಿನಲ್ಲಿ ಅವರನ್ನು ಕರಸಿಕೊಂಡು ಸಂತೋಷ ಕೂಟಗಳನ್ನು ನಡಿಸುತ್ತಾರೆಂದೂ, ಇಲ್ಲಿನ ಬಾಲಬೋಧಿನಿ ಪಾಠಶಾಲೆಯವರೂ ಒಂದು ದಿನ ಅವರಿಗೆ ಅಭಿನಂದನಮಾಡುವರೆಂದೂ ಕೇಳುತ್ತೇವೆ.

ಕಳೆದ ಶನಿವಾರ ಬೆಂಗಳೂರು ಸಿಟಿ ಶ್ರೀನಿವಾಸಮಂದಿರದ ಸ್ತ್ರೀ ಸಮಾಜದ ಮೀಟಿಂಗಿನಲ್ಲಿ ಸೌ|| ಅಪವೀರಮ್ಮನವರು ವಚನಕಾವ್ಯದಲ್ಲಿ ಕೆಲವು ಭಾಗಗಳನ್ನು ಓದಿ, ಸ್ತ್ರೀಯರ ಶೀಲಸ್ವಭಾವಗಳನ್ನು ಕುರಿತು ಪ್ರಶಂಸೆಮಾಡಿದರು. ನಾಳೆ ಶನಿವಾರ ಬ್ರಿಟಿಷ್ ರೆಸಿಡೆಂಟರವರ ಪತ್ನೀಯವರು ಮಂದಿರಕ್ಕೆ ದಯಮಾಡುವರೆಂಬ ಸಂಗತಿಯನ್ನು ಸೆಕ್ರೆಟರಿಯವರು ತಿಳಿಸಿ, ಮಂಗಳದಿಂದ ಕೂಟವನ್ನು ಮುಕ್ತಾಯಮಾಡಿದರು.

ಮೈಸೂರು ಗೆಜೆಟ್ ಸಂಗ್ರಹ.

ಪಬ್ಲಿಕ್ ಹೆಲ್ತ್ ಇನ್ಸ್ಟಿಟ್ಯೂಟಿನ ಡೈರೆಕ್ಟರ್ ಮತ್ತು ಡೆಪ್ಯುಟಿ ಸ್ಯಾನಿಟರಿ ಕಮಿಷನರ್ ಡಾ|| ಎಂ. ಶ್ರೀನಿವಾಸರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಮಿ|| ಕೆ. ಆರ್. ಕೃಷ್ಣಸ್ವಾಮಯ್ಯಂಗಾರ್ಯರು ಅವರ ಚಾಲ್ತಿ ಕೆಲಸಗಳ ಛಾರ್ಜನ್ನು ವಹಿಸಿರತಕ್ಕದ್ದು.

ಮಂಡ್ಯ ತಾಲ್ಲೂಕ್ ಪ್ರೊಬೇಷನರ್ ಮಿ|| ಜಿ. ಮಲ್ಲಿಕಾರ್ಜುನಯ್ಯನವರನ್ನು, ಮಿ|| ಸಿ. ಎಸ್. ಪೂರ್ಣಯ್ಯನವರನ್ನು ಹಂಗಾಮಿ ಡೆಪ್ಯುಟಿ ಅಮಲ್ದಾರರಾಗಿ ನೇಮಿಸಿ ರೈಲ್ವೆ ಅಕ್ವಿಜಿಷನ್ ಆಫೀಸರ ಕೈಕೆಳಗೆ ಕೆಲಸಕ್ಕೆ ವರ್ಗಮಾಡಿದೆ.

ರೆವಿನ್ಯೂ ಪ್ರೊಬೇಷನರ್ ಮಿ|| ಬಿ. ಮೊಹಿಯುದ್ದೀನ್ ಷರೀಫ್‌ರವರನ್ನು ಮಳವಳ್ಳಿಯ ಅಮಲ್ದಾರ್ ಮತ್ತು 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಿದೆ.

ರೆವಿನ್ಯೂ ಪ್ರೊಬೇಷನರ್ ಮಿ|| ಜ್ಯೋತಿರಲ್ಲಿಖಾನ್‌ರವರನ್ನು ಚನ್ನರಾಯಪಟ್ಟಣದ ಅಮಲ್ದಾರ್ ಮತ್ತು 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಿದೆ. ಮಿ|| ಎಸ್. ಸುಂದರರಾಜಯ್ಯಂಗಾರ್ಯರು ಆಲೂರು ಡೆಪ್ಯುಟಿ ಅಮಲ್ದಾರರಾಗಿ ವಾಪಸು ಹೋಗತಕ್ಕದ್ದು.

ಚಿತ್ರದುರ್ಗದ ಅ|| ಕಮಿಷನರ್ ಮಿ|| ಎಂ. ಎಸ್. ರಾಮಚಂದ್ರರಾಯರನ್ನು ಗವರ್ನ್‌ಮೆಂಟ್ ಅ|| ಸೆಕ್ರೆಟರಿಯಾಗಿ ನೇಮಿಸಿದೆ. ರಜದ ಮೇಲೆ ಇರುವ ಶಿಕಾರಿಪುರದ ಅಮಲ್ದಾರ್ ಮಿ|| ಎಸ್. ಚಕ್ರಪಾಣಯ್ಯಂಗಾರ್ರನ್ನು ಅ|| ಕಮಿಷನರಾಗಿ ನೇಮಿಸಿ ಚಿತ್ರದುರ್ಗದ ಡಿಸ್ಟ್ರಿಕ್ಟಿಗೆ ವರ್ಗಮಾಡಿದೆ. ಇವರು ಕೂಡಲೆ ರಜದಿಂದ ಬಂದು ಕೆಲಸದ ಮೇಲೆ ಹಾಜರಾಗತಕ್ಕದ್ದು.

ಡೆಪ್ಯುಟಿ ಅಮಲ್ದಾರ್ ಮಿ|| ಎಸ್. ಅನಂತರಾಮಯ್ಯಂಗಾರ್ರನ್ನು ಹರಿಹರದಿಂದ ಶಿರಾಕ್ಕೂ, ಮಿ|| ಜಿ. ಆರ್. ಪದ್ಮನಾಭರಾಯರನ್ನು ಶಿರಾದಿಂದ ಹರಿಹರಕ್ಕೂ ವರ್ಗಮಾಡಿದೆ.

ಚೀಫ್ ಇಲೆಕ್ಟ್ರಿಕಲ್ ಇಂಜಿನಿಯರ್ ಮಿ|| ಸಿ. ಎಫ್. ಬ್ರಿಡ್ಜ್‌ರವರು ಜೂಲೈ ತಾ. 18 ರಿಂದ ಕೆಲಸಬಿಟ್ಟು ಹೋಗುತ್ತಾರಾದಕಾರಣ ಮಿ|| ಎಸ್. ವಿ. ಶೇಷಾದ್ರಯ್ಯಂಗಾರ್ಯರು ಆ ಕೆಲಸಕ್ಕೆ ಬದಲಿ ನೇಮಿಸಲ್ಪಟ್ಟಿದಾರೆ.

ತಾಲ್ಲೂಕು ವರ್ತಮಾನಗಳು.

ಶಿವಮೊಗ್ಗೆ.—ಈ ಪ್ರಾಂತ್ಯ ಮಳೆಯು ಪೂರ್ಣ ಹದವಾದದ್ದರಿಂದ ರೈತರೆಲ್ಲಾ ಹುರುಪಾಗಿ ಬಿತ್ತನೆಯ ಕೆಲಸಗಳನ್ನೆಲ್ಲಾ ಪೂರೈಸಿಕೊಂಡಾಗ್ಯೂ ಕರೆ ಕುಂಟೆಗಳು ಮಾತ್ರ ತುಂಬಲಿಲ್ಲವೆಂದು ವ್ಯಸನಪಡುತ್ತಾರೆ. ದವಸಧಾನ್ಯದ ಧಾರಣೆಯು ಏರುತ್ತಲೇ ಇದೆ. ಇಂಥಾದ್ದರಲ್ಲಿ ವರ್ತಕರು ಸರ್ಕಾರಿ ಹೊಸ ಸೇರಿನಂತೆಯೇ ಕಬ್ಬಿಣದ ಪಿತ್ತಾಳೆ ಬಟ್ಟುಗಳುಳ್ಳ ಅಳತೆಯ ಕಬ್ಬಿಣ ಸೇರುಗಳ ಮತ್ತು ಮೇಲ್ಭಾಗ ಆಸ್ತಾಗಿಯೂ ಕೆಳಭಾಗ ಅಗಲವಾಗಿಯೂ ಇರುವಪಡಿಗಳು ಇಂಥಾ ಸೇರುಗಳಿಂದ ಒಂದು ರೂಪಾಯಿ ಪದಾರ್ಥ ತೆಗೆದುಕೊಂಡರೆ ಸುಮಾರು ಮಿಂಚಿತವಾಗಿ ಅರ್ಧ ಸೇರಿಗಿಂತ ಹೆಚ್ಚು ಕಮ್ಮಿ ಇರುತ್ತದೆ. ಅಲ್ಲದೆ ತೂಕದ ಬಟ್ಟುಗಳು ಕ್ರಮವಾಗಿದ್ದರೆ ತಕ್ಕಡಿ ವ್ಯತ್ಯಾಸ ಉಳ್ಳದ್ದಾಗಿಯೂ, ತಕ್ಕಡಿ ಸರಿಯಾಗಿದ್ದರೆ ಬಟ್ಟುಗಳಲ್ಲಿ ವ್ಯತ್ಯಾಸವೂ ಇರುತ್ತದೆ. ಈ ಪಟ್ಟಣವು ದೊಡ್ಡ ಟವನ್‌ಗಳಲ್ಲೇ ವಿಶೇಷವಾಗಿದ್ದರೆ ಚಿಕ್ಕ ಗ್ರಾಮಗಳಲ್ಲಿ ಯಾವ ರೀತಿ ಇರಬಹುದು? ಇದೆಲ್ಲಾ ಕ್ರಮಕ್ಕೆ ಬರಬೇಕಾದರೆ ಎಷ್ಟು ಕಾಲ ಬೇಕಾಗುವದೋ ಅದುವರಿವಿಗೆ ಜನಗಳಿಗೆ ನಷ್ಟವಾಗುತ್ತದೆಂಬುದು ತಿಳಿಯದು.—ದುರಾತ್ಮಗಳಾರೋ ಬಡವರ ಹೆಣ್ಣು ಮಗುವಿನ ತಲೆ ಒಡೆದು ತಾ. 14 ನೇ ಮಂಗಳವಾರ ಮಾರ್ಕೆಟ್ಟಿನಲ್ಲಿ ಪೊಲೀಸಿನವರು ವಶಪಡಿಸಿ ಮಗುವನ್ನು ತೆಗೆದುಕೊಂಡು ಹೋದರು. ಅದು ನಾಲ್ಕುಹುಟ್ಟಿಲು ಆದಕಾರಣವಾಗಿತ್ತು. ಮಗು ಸತ್ತು 2-3 ದಿವಸವಾಗಿರಬಹುದೆಂದು ಹೇಳುತ್ತಾರೆ. ಹೀಗಿದ್ದ ಪಕ್ಷದಲ್ಲಿ 2-3 ದಿವಸವಾದರೂ ಆ ಬೀದಿಯ ಪೋಲಿಸ್ ಕಾನ್ಸ್ಟೇಬಲ್ ರಿಪೋರ್ಟು ಮಾಡದೆ ಯಾಕೆ ಮೌನವಾಗಿದ್ದನೋ ತಿಳಿಯದು.—ಸರ್ಕಾರಿ ಹೊಸ ಸೇರು ಮತ್ತು ಬಟ್ಟುಗಳು ಜಾರಿಗೆ ಬಂದ ಆಗಾಗ್ಯೂ ಕೆಲವು ಸಬ್ ತಾಲ್ಲೂಕು ಅಯನೂರು ಸಂತೆಯಲ್ಲಿ ವ್ಯಾಪಾರಗಾರರ ಕಿರುಕುಳಗಳು ಯಥಾಪ್ರಕಾರವೇ ಇದೆ. ಪೂರ್ಣಕ್ರಮಕ್ಕೆ ಬರಲಿಲ್ಲ. ನಮ್ಮ ದೇಶದಲ್ಲಿ ಎಲ್ಲಿ ಅಳೆಯುವ ಸೇರುಗಳು ಯಾವ ಕಾಲಕ್ಕೆ ಕ್ರಮಪಡುವದೋ ತಿಳಿಯದು. ಪ್ರತಿ ಸಂತೆಯಲ್ಲೂ ಎಲ್ಲವನ್ನು ಸುಮ್ಮನೆ ಮಾಡಿದರೂ ಕಮ್ಮಿ ಸೇರುಗಳಿಂದಲೇ ಅಳೆಯುತ್ತಾರೆನ್ನುವುದರಲ್ಲಿ ಸಂದೇಹವಿಲ್ಲ.—ಈ ಟವನ್ ಹಾಲ್ ಲೈನ್‌ನಲ್ಲಿ ಬಿದ್ದ ಮಳೆ ನೀರು ಹೋಗಲು ಮಾರ್ಗವಿಲ್ಲದೆ ನಿಂತು ಅಲ್ಲಿದ್ದ ಕಸ ಕಡ್ಡಿ ಎಲ್ಲಾ ಕೊಳೆತು, ದುರ್ವಾಸನೆ ಹುಟ್ಟಿ, ಜನಗಳಿಗೆ ಅನಾರೋಗ್ಯದಿಂದ ಕಾಯಿಲೆ ಉಂಟಾಗಿರುವದರಿಂದ ಸ್ಯಾನಿಟರಿ ಇಲಾಖೆಯವರು ಬೇಗ ಕೊಟ್ಟಲ್ಲಿ ಕ್ಷೇಮವಾದೀತು.—ತಾ. 19 ನೇ ಭಾನುವಾರ ರಾತ್ರಿ ಸ್ಟುಡೆಂಟ್ಸ್ ಹೋಂ ಎದುರಿನಲ್ಲಿರುವ ಮೈಲಾರ ದೇವಸ್ಥಾನದ ಕಂಪೌಂಡು ಗೋಡೆಗೆ ಶಿಥಿಲಗೊಂಡು ಪ್ಲೇಗಿನಿಂದ ಪಾಳುಬಿದ್ದಿದ್ದ ದೊಡ್ಡ ಮಳೆ ಆರಂಭವಾದ್ದು ಬಿದ್ದು ಸದರಿ ದೇವಸ್ಥಾನದ ಅರ್ಚಕರ ಎಡಭಾಗದ ಮನೆಯು ಸ್ವಲ್ಪ ಮುರಿದು ಒಳಗಿದ್ದ 3 ಕರುಗಳು ಮೃತಪಟ್ಟವು. ಮನೆಯವರಿಗೆ ಯಾವ ಅಪಾಯವೂ ಆಗಲಿಲ್ಲ.

ತರೀಕೆರೆ.—ಈಚೆಗೆ ಮಳೆ ಹೆಚ್ಚಾಯಿತು. ಬಿತ್ತನೆಗೆ ಅವಕಾಶಕೊಡುವದೇ ಇಲ್ಲ. ಭಾನುವಾರವೆಲ್ಲಾ ಬಿರುಮಳೆಯಿತ್ತು. ಮೊದಲು ಬಿತ್ತಿದ ಪೈರು ಕೊಳೆತುಹೋಗುತ್ತಾ ಇವೆ. ಕೆರೆಕಟ್ಟೆಗಳಿಗೆಲ್ಲಾ ನೀರು ಬಂದಿವೆ. ದನರು ಹೊಸನೀರನ್ನು ಚೆನ್ನಾಗಿ ಕಾಯಿಸಿ ಕುಡಿದರೆ ಕ್ಷೇಮ. ಮಳೆಯಿಂದ ಊರಲ್ಲಿ ಗೋಡೆಗಳು ಬೀಳುತ್ತಾ ಇವೆ. ರಸ್ತೆಗಳು ಅಲ್ಲಲ್ಲಿ ಬಹಳ ಕೆಸರಾಗಿವೆ. ಮತ್ತು ಕತ್ತೆಗಳ, ದನಗಳ ಮಾಲೀಕರು ಸರಿಯಾಗಿ ನೋಡಿಕೊಳ್ಳದೆ ಇರುವದರಿಂದ ಊರಲ್ಲಿ ಅಲ್ಲಲ್ಲಿ ಸಾಯುತ್ತವೆ. ಸತ್ತವುಗಳನ್ನು ದೊಡ್ಡಕೆರೆಯ ಕಡೆ ಊರಿನ ಹತ್ತಿರ ಬಿಸಾಡುವದನ್ನು ತಪ್ಪಿಸಿದರೆ ಕೆರೆ ನೀರು ಶುದ್ಧವಾಗಿರುತ್ತೆ; ಜನರಿಗೂ ಆರೋಗ್ಯ. ಇದನ್ನು ಖಂಡಿತವಾಗಿ ತಪ್ಪಿಸಬೇಕು. ಮಳೆಯಿಂದ ಸತ್ತುಹೋದ ಕತ್ತೆಯು ದಾರಿಯಲ್ಲಿ ಬಿದ್ದಿರುವಾಗ್ಗೆ ಕತ್ತಲಲ್ಲಿ ಯಾರೋ ಗಾಡಿಯನ್ನು ಹೊಡೆದರು. ಇದಕ್ಕೆ ಗಾಡಿಯವನನ್ನು ಬೆದರಿಸಿ, ಪೋಸಿಟಿವಲ್ಲದೆ ಡಾಕ್ಟರ್ ಮೂಲಕ ಅಡಮಾಯಿಷಿಯನ್ನು ಮಾಡಿಸಿದರು. ಪೋಲೀಸಿನವರು ಇಂಥಾ ಕೇಸ್ ಮಾಡುವದಕ್ಕಿಂತ ಮಾಲೀಕರಿಗೆ ತಕ್ಕ ಎಚ್ಚರಿಕೆ ಕೊಟ್ಟು, ಅವರು ಕೇಳದಿದ್ದರೆ ಅಂಥವರ ಮೇಲೆ ಕೇಸ್ ಮಾಡಲಿ. ಹಾಗಿಲ್ಲದೆ ಬಡವನನ್ನು ಗಾಬರಿಪಡಿಸುವದರಿಂದಲೂ, ಡಾಕ್ಟರವರಿಗೆ ಇಂಥಾ ಕೇಸ್ ತೋರಿಸುವದರಿಂದಲೂ ಪ್ರಯೋಜನವಿಲ್ಲ.—ಕೆಲವು ದಿನಗಳ ಹಿಂದೆ ದಿಕ್ಕಿಲ್ಲದೆಯೂ, ಅಕ್ರಮವಾಗಿಯೂ ಬಂದಿದ್ದ ಗರ್ಭಿಣಿ ಹೆಂಗಸಿಗೆ ಡಾಕ್ಟರವರು ತುಂಬಾ ಉಪಚಾರಮಾಡಿದರು, ಕಡೆಗೆ ಸತ್ತ ಮಗು ಹುಟ್ಟಿತು. ಆ ಹೆಂಗಸನ್ನು ಕೆಲವು ದಿನ ಉಪಚರಿಸಿ, ಅದೇ ಜಾತಿಯ ಲಿಂಗಾಯತರವನೊಬ್ಬನಿಗೆ ಆಕೆಯನ್ನು ಕೊಡುವಂತೆ ಮಾಡಿಕೊಟ್ಟರು. ಇನ್ನೊಬ್ಬ ಬೇವಾರ್ಸಿ ಹೆಂಗಸು ಬಂದು ಸತ್ತಳು. ಅವಳ ಕೆಲವು ಒಡವೆಗಳು ಪೋಲೀಸ್ ಆಫೀಸಿನಲ್ಲಿರುವದಾಗಿ ಕೇಳುತ್ತೇವೆ. ಇವಳೂ ಇನ್ನೂ ಇಬ್ಬರೂ ಕಾಯಿಲೆಯಾಗಿ ನಿತ್ರಾಣವಾದಾಗ್ಗೆ ಆಸ್ಪತ್ರೆಗೆ ಬಂದರು. ಆಸ್ಪತ್ರೆಗೆ ಕಳುಹಿಸಿದ ಕಾಫಿತೋಟದ ಯಜಮಾನರು ಯಾಕೆ ಮುಂದಾಗಿ ಕಳುಹಿಸಲಿಲ್ಲವೋ ತಿಳಿಯದು. ಹೀಗೆ ಕಾಫಿತೋಟದಿಂದ ಬಂದವರಲ್ಲಿ ಆಗಾಗ್ಗೆ ಗುಣವಾಗದೆ ಸಾಯುತ್ತಾರೆ. ಇದಕ್ಕೆ ಪ್ಲಾಂಟರುಗಳಿಗೆ ಕೊಡುವ ಆಜ್ಞೆಯು ಏನಾದರೂ ಉಂಟೋ ಇಲ್ಲವೋ ತಿಳಿಯದು.—ಒಂದು ತೋಟದಿಂದ ಮರ ಮುರಿದು ಬಿದ್ದು ಕೈಮುರಿದುಹೋದ ಹುಡುಗನು ಬಂದು ಆಸ್ಪತ್ರೆಯಲ್ಲಿದಾನೆ. ಇವನನ್ನು ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಗೆ ಸಾಗಿಸುವದಕ್ಕೆ ಈ ಹುಡುಗನ ಯಜಮಾನರೂ ಡಾಕ್ಟರವರೂ ಯಾಕೆ ನಿಧಾನಿಸುತ್ತಾರೋ ತಿಳಿಯದು.—ಈ ಊರಲ್ಲಿ ಅಪರೂಪವಾಗಿ ಪ್ಲೇಗ್ ಕೇಸುಗಳು ನಡೆಯುತ್ತಲೇ ಇವೆ.—ಲಕ್ಕವಳ್ಳಿ ಕಡೆ ಹಾಕುವ ರೈಲ್ ರಸ್ತೆಯು ಕೆಸರಿನಿಂದ ತುಂಬಿ ಗಾಡಿಯು ಹೋಗಿಬರುವದಕ್ಕೆ ಬಹಳ ಅಡಚಣೆಯಾಗಿದೆ. ರಸ್ತೆಹಾಕುವಾಗ್ಗೆ ಮರಳ ಕೆಳಗಿನ ನಿಸ್ಸಾರವಾದ ಕೊಳಕ ಮಣ್ಣನ್ನು ಹಾಕಿದ್ದೇ ಕಾರಣ. ಇದನ್ನು ಮೊದಲೇ ನೋಡಿ ಗಟ್ಟಿಯಾದ ಮಣ್ಣು, ಮರಳು, ಕಲ್ಲನ್ನು ಹಾಕಿಸಿದ್ದರೆ ಈಗಿನ ವ್ಯರ್ಥವೆಚ್ಚ ಉಳಿಯುತ್ತಿತ್ತು.

ಚಿಂತಾಮಣಿ.—ಒಂದೆರಡು ದಿನಗಳಿಂದ ಸ್ವಲ್ಪ ಸೋನೆ ಮಳೆ ಆಯಿತು. ರೈತರು ಸಂತೋಷಚಿತ್ತರಾಗಿ ಬಿತ್ತನೆ ಪೇರಾವು ಮಾಡುತ್ತಿದಾರೆ.—ಈ ಊರು ಸಂತೆ ಬಹು ದೊಡ್ಡದು. ಶನಿವಾರ ಮಧ್ಯಾಹ್ನದಿಂದ ಭಾನುವಾರ ರಾತ್ರಿ 9-10 ಘಂಟೆ ವರೆಗೂ ನಡೆಯುತ್ತದೆ. ಈ ಸಂತೆಯಿಂದ ಸಾಲಿಯಾನ ಸರಕಾರಕ್ಕೆ 4-5 ಸಾವಿರ ರೂಪಾಯಿ ಉತ್ಪತ್ತಿಯುಂಟು. ನೂರಾರು ಮೈಲಿ ದೂರದಿಂದ ವ್ಯಾಪಾರಸ್ಥರು ಈ ಸಂತೆಗೆ ಬರುತ್ತಾರೆ. ಬಿಸಿಲು ಕಾಲದಲ್ಲಿ ನೆರಳಾಗಲಿ, ಮಳೆಗಾಲದಲ್ಲಿ ತಕ್ಕ ಆಸರೆಯಾಗಲಿ ಇಲ್ಲದೆ ಜನರು ಬಹು ತೊಂದರೆಗೆ ಗುರಿಯಾಗಿದಾರೆ. ಶೀರುಗಳ ಒಪ್ಪಾರು ಹಾಕಿಸಿಕೊಟ್ಟರೆ ಬಹು ಅನುಕೂಲವಾದೀತು. ಅಲ್ಲದೆ ಸಂತೆ ಮಾಳದಲ್ಲಿ ಕೆಲವು ಲಾಂದ್ರಗಳನ್ನು ಇಡಿಸಿದರೆ ರಾತ್ರಿ ವೇಳೆ ಕಳ್ಳರ ಕಾಟ ತಪ್ಪಿ ಪರಸ್ಥಳದ ವ್ಯಾಪಾರಿಗಳಿಗೆ ನೆಮ್ಮದಿಯಾಗುವದು. ಪೋಲೀಸಿಗೆ ತಿಳಿಸಿದರೆ 1-2 ದಿನ ಇಲ್ಲಿಯೇ ಇರಬೇಕಾಗುತ್ತದಲ್ಲಾ ಎಂದು ಭಯಪಟ್ಟು ತಮ್ಮ ಒಡವೆಗಳನ್ನು ಕಳೆಕೊಂಡು ನಷ್ಟಪಟ್ಟು ಗೋಳಾಡಿಕೊಂಡು ಹೋಗುತ್ತಾರೆ. ಮತ್ತು ಪೋಲೀಸಿನವರ ಬಂದೋಬಸ್ತು ರಾತ್ರಿವೇಳೆ ಸಂತೆಯಲ್ಲಿ ಇನ್ನೂ ಹೆಚ್ಚಾಗಿ ಬೇಕಾಗುವ ಹಾಗೆ ಕಾಣುತ್ತದೆ. ಸಂತೆ ಮಾಳದಲ್ಲಿ ಒಂದೆರಡು ನೀರಿನ ನಲ್ಲಿಗಳನ್ನು ಇಡಿಸಿಕೊಡುವದು ಒಳ್ಳೇದು. ರಾತ್ರಿವೇಳೆ ಏರಿಗೋಸ್ಕರ ಗಾಡಿಯವರು ಕಂಪೌಂಡು ಬಿಟ್ಟು ಹೊರಗೆ ಹೋಗುವಾಗ ಮೂಟೆ ಕಳವು ಆಗುತ್ತದಂತೆ. ಸರಕಾರದವರು ಈ ವಿಷಯದಲ್ಲಿ ತಕ್ಕ ಅನುಕೂಲಗಳನ್ನು ಕಲ್ಪಿಸಿಕೊಟ್ಟಾರೆಂದು ಹಾರೈಸುತ್ತೇವೆ.—ಈ ಊರಿನ ಮಧ್ಯೆ ನಗರ್ತರ ಪೇಟೆಯಲ್ಲಿ ಮೊದಲಿದ್ದ ಸಣ್ಣ ಚರಂಡಿಯನ್ನು ಒಂದು ಗಜಗಾತ್ರವಾಗಿ ಇಳಿಸಿ ಮುಕ್ಕಾಲು ಗಜ ಅಗಲಕ್ಕೆ ಇಟ್ಟಿದಾರೆ. ಪೂರ್ವದಲ್ಲಿ ಹೋಗುತ್ತಿದ್ದ ನೀರಿನ ದಾರಿಯನ್ನು ತಪ್ಪಿಸಿ ಗಾಣಿಗರ ಮುನಿಯಪ್ಪನವರ ಮನೆ ಹಿಂಭಾಗಕ್ಕೆ ತಿರುಗಿಸಿದಾರೆ. ಈ ದೊಡ್ಡ ಚರಂಡಿಯಲ್ಲಿ ಬರತಕ್ಕ ನೀರನ್ನು ದೊಡ್ಡ ಚರಂಡಿಯ ಮುಂಭಾಗದಲ್ಲಿರುವ ಸುಮಾರು 1¼ ಅಡಿ ಪ್ರಮಾಣವುಳ್ಳ ಚರಂಡಿಯು ಹಿಡಿಯಲಾರದೆ ನೀರು ಉಕ್ಕಿ ರಸ್ತೆಯಲ್ಲಿ ಹರಿದು ಒಂದೆರಡು ಮನೆಗಳ ಗೋಡೆಯನ್ನು ಕೊರೆದು ಕೆಡವುವದಕ್ಕೆ ಕಾರಣವಾಗಿದೆ. ಮೇಲಿನ ಚರಂಡಿಯನ್ನು ಕಟ್ಟಿಸಿದವರಿಗೆ ಕೆಳಭಾಗದಲ್ಲಿ ಸಂಭವಿಸತಕ್ಕ ನಷ್ಟ ತಿಳಿಯದೆಹೋಯಿತಲ್ಲಾ! ಮೇಲಿನ ಚರಂಡಿಯ ಕೊನೇ ಭಾಗದಲ್ಲಿ ಒಬ್ಬ ಬಡ ಗಾಣಿಗರವನು ಗಾಣ ಆಡಿ ಜೀವನ ಮಾಡಿಕೊಳ್ಳುತ್ತಿದ್ದನು. ಇದು ಅವನ ಹಿರಿಯರ ಕಾಲದಿಂದಲೂ ನಡೆದು ಬಂದದ್ದು. ಈ ಚರಂಡಿಯಿಂದ ಅವನ ಗಾಣ ನಿಂತುಹೋಯಿತು. ಈ ಜಮಾನನ್ನು ಪಕ್ಕದವರು ಹೊಡಕೊಳ್ಳುವದಕ್ಕೆ ಮಾಡಿದ ತಂತ್ರವೆಂದು ಕಾಣುತ್ತದೆ. ಇದನ್ನು ಕುರಿತು ಆ ಬಡ ಗಾಣಿಗರವನು ಎಷ್ಟೋ ಅರ್ಜಿಗಳನ್ನು ಬರಕೊಂಡಾಗ್ಯೂ ಈ ವರೆಗೂ ಒಬ್ಬರೂ ಅವನನ್ನು ವಿಚಾರಿಸಲಿಲ್ಲ. ಅದುಕಾರಣ ತನ್ನವರ ಕೊಳೆಯ ಕಾಲು ಮುರಿದ ಹಾಗೆ ಆಯಿತು.—ಈ ಊರಿನಲ್ಲಿ ಅಂಚೆ ಜವಾನನಾಗಿದ್ದ ನಾರಣಪ್ಪ ಎಂಬುವವನು ಮನಿಆರ್ಡರ್ ಫೋರ್ಜರಿ ಮಾಡಿ ದೋಷವಾಗಿದವನೆಂದು ಅವನಿಗೆ 5 ವರುಷ ಸಜಾ ಆಯಿತು.

ಚನ್ನರಾಯಪಟ್ಟಣ.—ಈ ಊರಿನಲ್ಲಿ 8-10 ದಿವಸಗಳಿಂದ ಸೋನೆಮಳೆ ಹಿಡಿದು ಭೂಮಿಗೆ ತುಂಬಾ ಹದವಾಗಿರುತ್ತೆ. ಭಾರಿ ಮಳೆಯಾಗಿ ಕೆರೆ, ಕಟ್ಟೆಗಳಿಗೆ ನೀರು ಸ್ವಲ್ಪ ಬಂದಿಲ್ಲ. ಸಂತೆಯಲ್ಲಿ ಧಾರಣೆಯಾಗಿ ಇಳಿಯದೆ ಬಡಜನಗಳಿಗೆ ತುಂಬಾ ಕಷ್ಟವಾಗಿರುತ್ತೆ. ರೈತರು ಬಿತ್ತನೆ ಕೆಲಸವನ್ನು ಪೂರೈಸಿರುತ್ತಾರೆ.—ಟವನ್ ರೋಡುಗಳೆಲ್ಲಾ ಹೊಸದಾಗಿ ರಿಪೇರಿ ಆಗ ರಸ್ತೆಗಳಲ್ಲಿ ಗಲೀಜು ವಗೈರೆ ಇಲ್ಲದೆ ಬಹಳ ಶುಚಿಯಾಗಿರುತ್ತವೆ. ಪ್ರೆಸಿಡೆಂಟರು ಅವರಿಗ್ರೇಂತ್ರಗಳನ್ನೂ, ದೂಳುಮಾಲೆಗಳನ್ನೂ ಇನ್ನೂ ಸ್ವಲ್ಪ ಹೆಚ್ಚಿಸಿದರೆ ಟವನ್ ಶುಚಿಯಾಗುವುದರಲ್ಲಿ ಸಂದೇಹವಿಲ್ಲ.—ಇಲ್ಲಿನ ವೆಸ್ಲಿಯನ್ ಮಿಷನ್ ಬಾಲಿಕಾ ಪಾಠಶಾಲೆಯಲ್ಲಿ ಹಿಂದಿನ ಸೋಮವಾರ ಘನ ಬ್ರಾಕ್‌ಬ್ಯಾಂಕ್ ಸಾಹೇಬರವರು ದಾನದಿಂದ ದಯಪಾಲಿಸಿದ ಬಾಲಕಿಯರಿಗೆ ಬಹುಮಾನಗಳನ್ನು ನಮ್ಮ ಅಮಲ್ದಾರರ ಅಧ್ಯಕ್ಷತೆಯಲ್ಲಿ ದಯಪಾಲಿಸಿದರು. ಆ ಕಾಲದಲ್ಲಿ ಅಧಿಕಾರಿಗಳೂ, ಅನೇಕ ದೊಡ್ಡಮನುಷ್ಯರೂ ನೆರೆದಿದ್ದರು. ಬಾಲಕಿಯರು ದೇವರ ಪ್ರಾರ್ಥನೆ, ಪ್ರಾಚೀನಾರ್ಯ ಕಾಲದ ಚರಿತ್ರೆ, ವಿದ್ಯಾದಾನವನ್ನು ಮಾಡುತ್ತಿರುವ ಮಿಷನ್ ಸಂಘದವರ ಉಪಕಾರವನ್ನು, ಇನ್ನಿತರ ವಿಷಯವಾದ ಹಾಡುಗಳನ್ನು ಹೇಳಿ ಸಭಿಕರನ್ನು ಆನಂದಪಡಿಸಿದ ಬಳಿಕ ಹೆಡ್ ಮಾಸ್ಟರವರು ಸ್ಕೂಲ್ ರಿಪೋರ್ಟನ್ನು ಓದಿದರು. ಅಗ್ರಾಸನಾಧಿಪತಿಗಳಾದ ನಮ್ಮ ಅಮಲ್ದಾರ್ ಮಿ|| ಸುಂದರರಾಜಯ್ಯಂಗಾರ್ಯರವರು ಸ್ತ್ರೀವಿದ್ಯಾಭ್ಯಾಸದ ವಿಷಯವಾಗಿಯೂ, ಮಿಷನ್ ಸಂಘದವರು ಅವರ ಉಪಕಾರಮನಸ್ಸಿನಿಂದ ಮಾಡುತ್ತಿರುವ ಅನೇಕ ಧರ್ಮ ಕೆಲಸಗಳ ವಿಚಾರವಾಗಿಯೂ ಬಹಳ ಸ್ವಾರಸ್ಯವಾಗಿ ಉಪನ್ಯಾಸಮಾಡಿದರು. ಬಳಿಕ ಮಿ|| ಬ್ರಾಕ್‌ಬ್ಯಾಂಕ್ ಸಾಹೇಬರವರು ಸ್ವಹಸ್ತದಿಂದ ಬಾಲಕಿಯರಿಗೆ ಬೊಂಬೆ, ಪೆಟ್ಟಿಗೆ, ಹೊಲಿಗೆ ಕೆಲಸಕ್ಕೆ ಬೇಕಾದ ಸಾಮಾನುಗಳನ್ನು ಹಂಚುತ್ತಿರುವಾಗ್ಗೆ ಬಾಲಕಿಯರು ಬಹಳ ಸಂತೋಷದಿಂದ ಸಾಹೇಬರವರಿಗೂ ಬಂದಿದ್ದ ದೊಡ್ಡಮನುಷ್ಯರಿಗೂ ವಂದನೆಗಳನ್ನು ಹೇಳಿದರು. ನಮ್ಮ ಸಬ್ ರಿಜಿಸ್ಟ್ರಾರ್ ಮಿ|| ಕೃಷ್ಣಶಾಸ್ತ್ರಿಗಳು ಎದ್ದು ಸ್ಕೂಲಿನ ಪುರೋಭಿವೃದ್ಧಿ, ಮಾಸ್ತರುಗಳ ನಡವಳಿಕೆ ಮತ್ತು ಸಾಹಸ ಪ್ರಯತ್ನಗಳನ್ನು ಕುರಿತು ಶ್ಲಾಘ್ಯವಾದ ಉಪನ್ಯಾಸಮಾಡಿದರು. ಬಹುಮಾನಗಳನ್ನೆಲ್ಲಾ ಕೊಟ್ಟ ಮೇಲೆ ಶ್ರೀಮತ್ ಜಾರ್ಜ್ ಪ್ರಭುಗಳಿಗೂ ನಮ್ಮ ಶ್ರೀಮನ್ಮಹಾರಾಜರವರಿಗೂ ಬಾಲಕಿಯರು ಶ್ರೇಯಃಪ್ರಾರ್ಥನೆ ಹಾಡುಗಳನ್ನು ಬಹಳ ಮನೋಹರವಾಗಿ ಹೇಳಿದರು. ನಮ್ಮ ಅಮಲ್ದಾರ್ ಮಿ|| ಸುಂದರರಾಜಯ್ಯಂಗಾರ್ಯರವರು ಬಾಲಕಿಯರಿಗೆ ಮಿಠಾಯಿ ವಗೈರೆ ತರಿಸಿ ಹಂಚಿಸಿದ್ದನ್ನು ನೋಡಿ ಸಾಹೇಬರವರು ಬಹಳ ಸಂತೋಷಪಟ್ಟರು. ಗಂಧ, ಹೂವು, ತಾಂಬೂಲ ಹಂಚಿದ ಬಳಿಕ ಸಭೆ ಮುಕ್ತಾಯವಾಯಿತು.—ಕಳೆದ ವಾರ ನಮ್ಮ ಸಂಸ್ಥಾನದ ಸ್ಯಾನಿಟರಿ ಕಮಿಷನರ್ ಸಾಹೇಬರವರು ಇಲ್ಲಿಗೆ ದಯಮಾಡಿ ನಮ್ಮ ಅಮಲ್ದಾರ್ರ ಜೊತೆಯಲ್ಲಿ ಕೋಟೆ, ಪೇಟೆಗಳನ್ನೂ, ಸ್ಕೂಲು ಮುಂತಾದ ಕಟ್ಟಡಗಳನ್ನೂ, ವರ್ತಕರು ಮಾರತಕ್ಕ ತಿಂಡಿ ಮುಂತಾದ ಸಾಮಾನುಗಳನ್ನೂ ಪರೀಕ್ಷಿಸಿ ಮಾಡಿಕೊಂಡು ಕಿಕ್ಕೇರಿ ಮಾರ್ಗವಾಗಿ ಪ್ರಯಾಣ ಬೆಳಸಿದರು.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1914 ನೇ ಇಸವಿ ಜೂಲೈ 16 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ.

ದೇಣಿ:—(1)	ಷೇರು ಮೊಬಲಗು	ರೂ. 9,92,395
,, (2)	ಡಿಪಾಜಿಟ್ಟುಗಳು	,, 18,33,265
,, (3)	ಇತರ	,, 36,192
(ಆಣೆ, ಕಾಸು ಬಿಟ್ಟಿರುತ್ತೆ.)		ಜುಮ್ಲಾ ರೂ. 28,31,852
ಬಾಕಿ:—(1)	ಕೈಯಲ್ಲಿರುವ, ಬ್ಯಾಂಕುಗಳಲ್ಲಿರುವ ಹಣ	ರೂ. 11,31,206
,, (2)	ಖಾತೆ ಮತ್ತು ಇತರ ಸಾಲಗಳು	,, 13,64,068
,, (3)	ಡಿಸ್ಕೌಂಟು ಮಾಡಿದ ವಾಯಿದೆ ಹುಂಡಿಗಳು	,, 1,90,480
,, (4)	ಇನ್‌ವೆಸ್ಟ್‌ಮೆಂಟುಗಳು	,, 1,60,624
,, (5)	ಏಜನ್ಸಿಗಳಲ್ಲಿರುವ ಮೊಬಲಗು	,, 1,11,100
,, (6)	ಬ್ಯಾಂಕಿನಲ್ಲಿರುವ ಸಾಮಾನುಗಳು	,, 7,646
,, (7)	ಇತರೆ	,, 17,858
(ಆಣೆ, ಕಾಸು ಬಿಟ್ಟಿರುತ್ತೆ.)		ಜುಮ್ಲಾ ರೂ. 28,61,852

ಡಬ್ಲ್ಯು. ಸಿ. ರೋಸ್, ಮ್ಯಾನೇಜರ್.

ಹೊಸಕೋಟೆ ಎ. ವಿ. ಸ್ಕೂಲ್ ಉಪಾಧ್ಯಾಯರ ಸಂಘ.

ಈ ತಿಂಗಳು 19 ನೇ ತಾ. ಭಾನುವಾರ ಹೊಸಕೋಟೆ ಟವರ್ ಉಪಾಧ್ಯಾಯರುಗಳೂ, ಈ ತಾಲ್ಲೂಕಿಗೆ ಸೇರಿದ ವಿ. ಇ. ಸ್ಕೂಲಿನ ಉಪಾಧ್ಯಾಯರುಗಳೂ ಎ. ವಿ. ಸ್ಕೂಲ್ ಕಟ್ಟಡದಲ್ಲಿ ಪದ್ಧತಿ ಮೇರೆಗೆ ಸೇರಿದ್ದರು. ಬೆಂಗಳೂರು ಸ್ಕೂಲುಗಳ ಸರ್ಕಲ್ ಇನ್‌ಸ್ಪೆಕ್ಟರ್ ಸಾಹೇಬರವರಾದ ಮ|| ಬಿ. ದಾಸಪ್ಪನವರು ದಯಮಾಡಿ, ಸಭೆಯವರ ಸುಖಾಗಮನ ಪೂರ್ವಕವಾದ ಪ್ರಾರ್ಥನೆಯ ಮೇರೆಗೆ ಅಗ್ರಾಸನಾಧಿಪತ್ಯವನ್ನು ಸ್ವೀಕರಿಸಿದರು. ಊರಿನ ಕೆಲವು ದೊಡ್ಡ ಮನುಷ್ಯರುಗಳು ಬಂದಿದ್ದರು. ಕೂಟವು ಮಧ್ಯಾಹ್ನ 2 ಘಂಟೆಗೆ ಪ್ರಾರಂಭವಾಗಿ ನಾಲ್ಕುವರೆ ಘಂಟೆಯ ತನಕ ಚರಿತ್ರೆ, ಪೇಪರ್ ಫೋಲ್ಡಿಂಗ್, ಇಂಗ್ಲಿಷ್ ಉಕ್ತಲೇಖನ, ವಸ್ತುಪಾಠಗಳು ಟ್ರೈನಿಂಗ್ ಮೆಥೆಡ್ ಮೇರೆಗೆ ನಡೆಯಿಸಲ್ಪಟ್ಟವು. ಛೇರ್‌ಮನ್‌ರವರು ಸಂಘದ ಏರ್ಪಾಡುಗಳನ್ನೂ ಕಾರ್ಯಗಳನ್ನೂ ನೋಡಿ ಬಹಳ ಸಂತೋಷಪಟ್ಟು ಇದರ ಅಭಿವೃದ್ಧಿಗೆ ಬೇಕಾದ ಅನೇಕ ಹೊಸ ಸಲಹೆಗಳನ್ನು ಆದರಪೂರ್ವಕವಾಗಿ ತಿಳಿಸಿದರು. ಎ. ವಿ. ಸ್ಕೂಲ್ ಹೆಡ್ ಮಾಸ್ಟರು ಮ|| ರಾಮಕೃಷ್ಣಯ್ಯನವರು ಮೆಂಬರುಗಳ ಪ್ರತಿನಿಧಿಯಾಗಿ ಅಗ್ರಾಸನಾಧಿಪತಿಗಳ ಶ್ರೇಯಃಪ್ರಾರ್ಥನೆಗಳನ್ನು ಆದರದೊಡನೆ ಬಹಳ ಸ್ವಾರಸ್ಯವಾಗಿ ಮಾಡಿದರು. ಈ ಹೆಡ್ ಮಾಸ್ಟರವರು ಬಂದ ಮೇಲೆ ಈ ಸಭೆಯನ್ನು ಏರ್ಪಡಿಸಿ ನಾರ್ಮಲ್ ಸ್ಕೂಲಿನಲ್ಲಿ ನಡೆಯುವಂತೆ ಇಂಗ್ಲಿಷ್ ಪಾಠವೂ ಸಹ ನಡೆಯುವ ಏರ್ಪಾಡು ಮಾಡಿ ಪ್ರತಿ ತಿಂಗಳಲ್ಲಿಯೂ 2 ನೇ ಮತ್ತು 4 ನೇ ಭಾನುವಾರ ಸಾಯಂಕಾಲ ಒಂದು ಘಂಟೆಹೊತ್ತು ಎಲ್ಲಾ ಬಾಲಕರಿಗೂ ಸ್ಕೂಲಿನಲ್ಲಿ ನೀತಿ ವಿಷಯಗಳನ್ನು ತಿಳಿಸಿ ಬಾಲಕರ ನಡೆ ನುಡಿಗಳನ್ನು ತಿದ್ದಿ ಸದಾ ಸ್ಕೂಲಿನ ಅಭಿವೃದ್ಧಿ ಕಾರ್ಯದಲ್ಲಿ ಆಸಕ್ತರಾಗಿ ಪ್ರಜಾನುರಾಗಕ್ಕೆ ಪಾತ್ರರಾಗಿದ್ದಾರೆ. ಈ ಊರಿನ ಎಲ್ಲಾ ಪ್ರಜೆಗಳೂ ಹೆಡ್ ಮಾಸ್ಟರವರ ಕೆಲಸಗಳನ್ನು ಕೊಂಡಾಡುತ್ತಾ ಬಹಳ ಸಂತೋಷಪಡುತ್ತಿರುವರು. ಕೆ. ಮ.

ಮೈಸೂರು ಕುರುಡ ಮೂಕರ ಪಾಠಶಾಲೆ.

ಕಳೆದ ಶನಿವಾರ ಸಾಯಂಕಾಲ 4 ಗಂಟೆಗೆ ಮೇಲ್ಕಂಡ ಪಾಠಶಾಲೆಯಲ್ಲಿ ಕುರುಡ ಮತ್ತು ಮೂಕ ವಿದ್ಯಾರ್ಥಿಗಳ ಕೌಶಲ್ಯವನ್ನು ನೋಡಲು ಹೋಗಿದ್ದೆನು. ಇಲ್ಲಿನ ನಾರ್ಮಲ್ ಸ್ಕೂಲಿಗೆ ಓದಲು ಬಂದಿರುವ ಉಪಾಧ್ಯಾಯರುಗಳಿಗೆ ಅನುಕೂಲಿಸುವಂತೆ ಒಂದು ಸಭೆಯು ನಡಿಸಲ್ಪಟ್ಟಿತ್ತು. ಸಭೆಗೆ ನಾರ್ಮಲ್ ಸ್ಕೂಲ್ ವಿದ್ಯಾರ್ಥಿಗಳೇ ಅಲ್ಲದೆ ಇನ್ನೂ ಪಟ್ಟಣದ ಅನೇಕ ದೊಡ್ಡಮನುಷ್ಯರೂ ಸೇರಿದ್ದರು. ಸ್ಕೂಲಿನ ಹಾಲ್ ತುಂಬಿತ್ತು. ಸ್ಥಳಸಾಲದೆ ಕೆಲವರು ನಿಂತೂ ಇದ್ದರು. ಈ ಪಾಠಶಾಲೆಯ ಸಹಾಯೋಪಾಧ್ಯಾಯರಾದ ಮ|| ಪಿ. ಎನ್. ವೆಂಕಟರಾಯರು ಮೂಕ ಮತ್ತು ಕುರುಡ ವಿದ್ಯಾರ್ಥಿಗಳಿಗೆ ಏನೇನು ಬರುತ್ತದೆಂಬುದನ್ನು ಹೇಳಿದ ನಂತರ ಸಭೆಯವರು ಕುರುಡ ಮತ್ತು ಮೂಕ ವಿದ್ಯಾರ್ಥಿಗಳಿಗೆ ಲೆಕ್ಕಗಳನ್ನು ಕೊಟ್ಟರು. ಕೆಲವು ವಿದ್ಯಾರ್ಥಿಗಳು ಇದನ್ನು ಮಾಡುತ್ತಿರುವಾಗ ಸಭೆಯವರು ಬರೆದುಕೊಟ್ಟ ಕೆಲವು ವಾಕ್ಯಗಳನ್ನು ಮ|| ವೆಂಕಟರಾಯರು ಕುರುಡರ ಅಕ್ಷರದಲ್ಲಿ ಬರೆದುಕೊಡಲು ಕುರುಡರು ಕಣ್ಣಿರುವವರಿಗಿಂತಲೂ ಹೆಚ್ಚಾದ ಕುಶಲತೆಯಿಂದ ಇಂಗ್ಲಿಷ್, ಕನ್ನಡ, ಈ ಎರಡು ಭಾಷೆಗಳನ್ನೂ ಓದಿದರು. ಒಬ್ಬ ಮೂಕನು ರಾಮಾಯಣದಲ್ಲಿ ಕೆಲವು ಪಂಕ್ತಿಗಳನ್ನು ಸರಾಗವಾಗಿ ಓದಿದನು. ಇನ್ನು ಕೆಲವು ಮೂಕರು ಹೇಳಿದ ಉಕ್ತಲೇಖನವನ್ನು ಬರೆದು ಅದನ್ನೇ ಓದಿದರು. ನಂತರ ಕುರುಡರು ತಮ್ಮ ಭಾಷೆಯಲ್ಲಿ ಬರೆದಿರುವ ಪುಸ್ತಕಗಳನ್ನು ತೆಗೆದುಕೊಂಡು ಪದ್ಯವನ್ನೂ ಗದ್ಯವನ್ನೂ ಬಹಳ ರಾಗವಾಗಿ ಓದಿದರು. ಆಮೇಲೆ ಕುರುಡರಿಗೂ ಮೂಕರಿಗೂ ಕೊಟ್ಟಿದ್ದ ಲೆಕ್ಕಗಳ ಉತ್ತರಗಳು ಹೇಳಲ್ಪಟ್ಟವು.

ಬೇಸರದಲ್ಲಿರುವವರ ಬೇಸರವನ್ನು ಹೋಗಗೊಡಿಸುವ, ಸಂತಾಪಕರ ಸಂತಾಪವನ್ನು ಪರಿಹರಿಸುವ, ದುಃಖದಲ್ಲಿರುವವರ ದುಃಖವನ್ನು ಕಡಮೆಮಾಡುವ, ಮೃದುವಾದ, ಇಂಪಾದ, ಲಲಿತವಾದ ಸಂಗೀತವು ಕುರುಡ ವಿದ್ಯಾರ್ಥಿಗಳಿಂದ ಹಾಡಲ್ಪಟ್ಟಿತು. ಸಂಗೀತವಾಗುವಾಗ ಸಭಿಕರ ಮನಸ್ಸೆಲ್ಲಾ ಒಂದಾಗಿಸೇರಿ ಹಾಡುವವರಿಗೆ ಸಹಾಯಮಾಡಿತೋ ಎಂಬಂತೆ ಆ ಸಂಗೀತವು ಅಷ್ಟು ಗಂಭೀರವಾಗಿಯೂ ಮನೋಹರವಾಗಿಯೂ ಇತ್ತು. ಸಂಗೀತವಾದ ನಂತರ ಸ್ಕೂಲಿನ ಪ್ರಿನ್ಸಿಪಲ್ ಟೀಚರಾದ ಮ|| ಶ್ರೀನಿವಾಸರಾಯರಿಂದ ಒಂದು ಲೇಖನವು ಓದಲ್ಪಟ್ಟಿತು. ಇದರಲ್ಲಿ ಅವರು ತಮ್ಮಗಳ ಮೇಲೆ ದಯವಿಟ್ಟು ಇಷ್ಟು ಜನ ಉದಾರಿಗಳು ಬಂದು ತಮ್ಮ ಮನಸ್ಸನ್ನು ಸಂತೋಷಪಡಿಸುವುದಕ್ಕಾಗಿ ಬಹಳ ಕೃತಜ್ಞನಾಗಿದೇನೆಂದು ಹೇಳಿದರು. ಇದಕ್ಕೆ ಉತ್ತರವಾಗಿ ನಾರ್ಮಲ್ ಸ್ಕೂಲಿಗೆ ಓದಲು ಬಂದಿರುವ ಉಪಾಧ್ಯಾಯರೊಬ್ಬರು ಇಂಥಾ ಅಂಗಹೀನರಿಗೆ ತೊಂದರೆಯಿಲ್ಲದೆ ತಮ್ಮ ಜೀವನವನ್ನು ಸಂಪಾದಿಸಿಕೊಳ್ಳಲು ಮಾಡಿರುವ ಈ ಪಾಠಶಾಲೆಯ ವಿಷಯವಾಗಿ ಎಷ್ಟು ಸಂತೋಷಪಟ್ಟರೂ ತೀರದೆಂದು ಹೇಳಿದರು. ಗಂಧ ಪುಷ್ಪ ತಾಂಬೂಲಾದಿಗಳ ವಿನಿಯೋಗದಿಂದ ಸಭೆಯು ಮುಕ್ತಾಯವಾಯಿತು.

ಎಲ್ಲರಿಗೂ ಅಲ್ಲಿನ ವಿದ್ಯಮಾನಗಳು ಗೊತ್ತಾಗಲೆಂದು ಪಬ್ಲಿಕ್ಕಾಗಿ ಸಭೆ ಸೇರುವಂತೆ ಏರ್ಪಡಿಸಿದುದಕ್ಕಾಗಿ ಅಲ್ಲಿನ ಹೆಡ್ ಮಾಸ್ಟರ್ ಮ|| ಬಿ. ಕೃಷ್ಣಪ್ಪನವರು, ಎಂ. ಎ. ಇವರಿಗೆ ಬಹಳ ಕೃತಜ್ಞನಾಗಿರುತ್ತೇನೆ. ಇಂಥಾ ಅಂಗಹೀನರಿಗೆ ಸಹಾಯಮಾಡಲು ಯಾರೂ ಹಿಂತೆಗೆಯಲಾರರೆಂದೂ, ವಾಚಕ ಮಹಾಶಯರೂ ಇಂಥಾ ಧರ್ಮಶಾಲೆಗೆ ಸಹಾಯಮಾಡುವರೆಂದೂ ನಂಬಿರುವ

ಪ್ರೇಕ್ಷಕ.

ಕಾಫಿ ಹೋಟೇಲುಗಳೂ, ಶೇಂದಿ ಅಂಗಡಿಗಳೂ.

“ವಸಾಜಿ ಗುಲಾಮನು” ಎಂಬ ಬಾತ್ಮಿದಾರರು ಮಂಗಳೂರು “ಸ್ವದೇಶಾಭಿಮಾನಿ” ಪತ್ರಿಕೆಯಲ್ಲಿ ಬರೆಯುವುದೇನೆಂದರೆ—

ಕಾಫಿ ಹೋಟೇಲುಗಳಲ್ಲಿ ಖಾದ್ಯಗಳನ್ನು ಮಾಡುವುದಕ್ಕೆ ನೇಮಕವಡುವ ನೌಕರರು ಸಾಧಾರಣವಾಗಿ ಮದುವೆಯಾಗದ ತರುಣರು ಅಥವಾ ಹೆಂಡತಿಯನ್ನು ಕಳಕೊಂಡ ವಿಧುರರು. ಇವರಲ್ಲಿ ಬಹು ಮಂದಿ ದುರ್ನಡತೆಯಿಂದ ಅವಾಚ್ಯ ವ್ಯಾಧಿಗಳನ್ನು ಸಂಪಾದಿಸಿಕೊಂಡವರು. ರೋಗಾಕ್ರಾಂತ ಭಾಗವನ್ನು ಆಗಾಗ್ಗೆ ತುರಿಸಿಕೊಂಡು ನಂಜು ತಾಗಿದ ಬೆರಳುಗಳನ್ನು ತೊಳೆಯದೆ ತಿಂಡಿಗಳನ್ನು ತಯಾರಿಸುತ್ತಾರೆ. ಕೆಲಸ ಮಾಡುವಾಗ ತಂಬಾಕಿನ ಬೀಡಿ ಬಾಯಿಯಲ್ಲಿ ಉಂಟೇ ಉಂಟು. ಸರಿಯಾಗಿ ಬರುತ್ತಲೇ ಬಾಯಿಯಲ್ಲಿ ಉಳಿದ ಸಣ್ಣ ತುಂಡನ್ನು ಕೈಯಿಂದ ತೆಗೆದು ಬೀಸಾಡಿ ಎಂಜಲಿನ ಬೆರಳುಗಳನ್ನು ತೊಳೆಯದೆ ಖಾದ್ಯಗಳನ್ನು ಮಾಡುತ್ತಾರೆ. ಟೀ ಮತ್ತು ಕಾಫಿಯನ್ನು ಸೋಸುವುದಕ್ಕೆ ಕೊಳಕು ಬಟ್ಟೆಯನ್ನು ಉಪಯೋಗಿಸುತ್ತಾರೆ. ಅದು ಕೂಡ ಸಮಿಾಪಕ್ಕಿಲ್ಲದಿದ್ದರೆ, ಲಂಗೋಟಿ ಯಾನೆ ಕೋಮಣದಲ್ಲಿ ಟೀ ಮತ್ತು ಕಾಫಿಯನ್ನು ಬಸಿಯುತ್ತಾರೆ. ಕಪ್ಪುಗಳಿಗೆ ತುಟಿಗಳನ್ನು ತಾಗಿಸಿ ಕುಡಿಯುವದರಿಂದ ಕಪ್ಪುಗಳ ಅಂಚಿನಲ್ಲಿ ಎಂಜಲು ತಗಲಿ ದುರ್ವಾಸನೆ ಬರುತ್ತದೆ. ಕಪ್ಪುಗಳನ್ನು ಚೆನ್ನಾಗಿ ತೊಳೆಯುವುದಿಲ್ಲ. ಎಂಜಲಿನಲ್ಲಿದ್ದ ರೋಗಗಳ ಜರಮ್ಸ್ ಎಂಬ ಕ್ರಿಮಿಗಳು ಕಪ್ಪುಗಳ ಅಂಚಿನಲ್ಲಿ ಅಂಟಿಕೊಂಡಿರುವದರಿಂದ ರೋಗಗ್ರಸ್ತ ಜನರ ಎಂಜಲು ತಾಗಿದ ಕಪ್ಪುಗಳಿಂದ ಕುಡಿಯುವವರಿಗೆ ಕ್ಷಯ, ಫರಂಗಿ, ಮದಕರಿ ಮೊದಲಾದ ವ್ಯಾಧಿಗಳು ಹಿಡಿಯುವ ಸಂಭವ ಉಂಟಾಗುತ್ತದೆ. ತುಪ್ಪ ಮತ್ತು ಎಣ್ಣೆಯ ಪಾತ್ರೆಗಳಲ್ಲಿ ಎಕ್ಕಲೆ ಅಥವಾ ಇಲಿಮರಿಗಳು ಬಿದ್ದರೆ ಅವುಗಳನ್ನು ತೆಗೆದು ಬೀಸಾಡಿ ಅದೇ ತುಪ್ಪವನ್ನೂ ಎಣ್ಣೆಯನ್ನೂ ಖಾದ್ಯಗಳಿಗೆ ಉಪಯೋಗಿಸುತ್ತಾರೆ. ಹಾಲನ್ನು ಬೆಂಕಿ ಮೇಲಿಟ್ಟು ಚೆನ್ನಾಗಿ ಕಾಯಿಸದೆ ಉಪಯೋಗಿಸುವದರಿಂದ ರೋಗಗಳುಂಟಾಗುತ್ತವೆ. ಪಶುಗಳನ್ನು ಪರೀಕ್ಷಿಸದೆ, ವಿವಿಧ ಕಡೆಗಳಿಂದ ಕ್ರಯಕ್ಕೆ ತಂದ ಹಾಲನ್ನು ಚೆನ್ನಾಗಿ ಕಾಯಿಸದೆ ಟೀ, ಕಾಫಿ, ಕೋಕೋ ಮೊದಲಾದವುಗಳಿಗೆ ಹಾಕುತ್ತಾರೆ.

ಅಂಗಡಿಯಲ್ಲೇ ಕೂತು ತಿನ್ನುವಂಥಾದ್ದು ಮರ್ಯಾದೆಗೆ ಹಾನಿಕರವು. ನೀತಿಗೆ ವಿರೋಧವಾದದ್ದು. ಹಣವಂತನಾಗಲಿ ದರಿದ್ರನಾಗಲಿ ನಾಲಿಗೆಯ ರುಚಿಗೆ ಗುಲಾಮನಾಗಿ ಮನೆಯಲ್ಲಿದ್ದ ಹೆಂಡತಿ ಮಕ್ಕಳು ಮೊದಲಾದವರನ್ನು ಮರೆತು ಹೋಟೇಲಲ್ಲಿ ಕೂತು ತನ್ನ ಹೊಟ್ಟೆಯನ್ನೇ ತುಂಬಿಸಿಕೊಳ್ಳುವುದು ಪಶುಸ್ವಭಾವವನ್ನು ತೋರಿಸುತ್ತದೆ. ಕಾಫಿ ಹೋಟೇಲುಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತದೆ. ಇದು ಜನಪದದ ಕ್ಷೇಮವೃದ್ಧಿಗೆ ಹಾನಿಕರವು. ವಿದ್ಯಾರ್ಥಿಗಳಂತೂ ಹೆತ್ತವರ ಕಷ್ಟಗಳನ್ನು ಮರೆತು ಟೀ ಕಾಫಿಗೆ ಗುಲಾಮರಾಗಿ ಹೋಟೇಲುಗಳಲ್ಲಿ ಖಾಯಂ ಗಿರಾಕಿಗಳಾಗಿರುತ್ತಾರೆ. ಸರಕಾರದವರು ಕಾಫಿ ಹೋಟೇಲುಗಾರರ ವರ್ತಮಾನಗಳನ್ನು ಪರಿಶೋಧಿಸಿದರೆ ಪ್ರತಿ ಹತ್ತು ಗಿರಾಕಿಗಳಲ್ಲಿ ಎಂಟು ಮಂದಿ ಶಾಲಾ ವಿದ್ಯಾರ್ಥಿಗಳೆಂತ ತೋರುವುದು.

ನಾನು ಸ್ವತಃ ಕಾಫಿ ಹೋಟೇಲಿನ ಖಾಯಂ ಗಿರಾಕಿಯಾಗಿದ್ದೆ. ಕಾಫಿ ಹೋಟೇಲನ್ನು ಸಂದರ್ಶಿಸಿದರಿಂದ ಅಭ್ಯಾಸದ ಫಲವತ್ತಾಗಿ ಪ್ರತಿ ದಿನವೂ ಕಾಫಿ ಕುಡಿಯುವ ಸಮಯ ಬರುತ್ತಲೇ ಕಣ್ಣಿಗೆ ಕಾಣದ ಪಾಶಗಳಿಂದ ನನ್ನ ಮನಸ್ಸು ಹೋಟೇಲು ಕಡೆಗೆ ಎಳೆಯಲ್ಪಡುತ್ತಿತ್ತು. ಬಿಲ್ಲವರು ಇಟ್ಟ ಶೇಂದಿ ಅಂಗಡಿಗಳೂ, ಬ್ರಾಹ್ಮಣರು ಇಟ್ಟ ಕಾಫಿ ಹೋಟೇಲುಗಳೂ ಏಕಪ್ರಕಾರವಾಗಿ ಜನರ ಸ್ಥಿತಿಮತಿಯನ್ನು ಕೆಡಿಸುವ ಸಂಸ್ಥೆಗಳಾಗಿ ನನಗೆ ಕಾಣುತ್ತವೆ. ಶೇಂದಿ ಅಂಗಡಿಗಳನ್ನು ಸಂದರ್ಶಿಸುವ ಕೀಳು ಜಾತಿಯವರೂ, ಕಾಫಿ ಹೋಟೇಲುಗಳನ್ನು ಸಂದರ್ಶಿಸುವ ಮೇಲು ಜಾತಿಯವರೂ ನಾಲಿಗೆ ರುಚಿಯ ಗುಲಾಮತನದ ಮಟ್ಟಿಗೆ ಒಂದೇ ಜಾತಿಯ ಜೊತೆಯರಾಗಿ ನನಗೆ ತೋರುತ್ತಾರೆ.

ತೆಂಗು.

ಮೈಸೂರು ಗವರ್ನಮೆಂಟಿನಿಂದ ದಾಮೋದರದಾಸ್ ಸ್ಕಾಲರ್‌ಷಿಪ್ಪನ್ನು ಪಡೆದು ಸೀಮೆಗೆ ಹೋಗಿ ರಸಾಯನ ಶಾಸ್ತ್ರಶೋಧನಾ ವಿದ್ಯೆಯನ್ನು ಕಲಿಯುತ್ತಿರುವ ಮ|| ಎಸ್. ಗರಳಪುರಿಶಾಸ್ತ್ರಿಯವರು ಬರೆದು ಕಳುಹಿಸಿರುವ ಈ ಬಾತ್ಮಿಯನ್ನು ಬಹಳ ಸಂತೋಷದಿಂದ ವಾಚಕರಿಗಾಗಿ ಪ್ರಕಟಿಸಿರುತ್ತೇವೆ.

ನಮ್ಮ ದೇಶದಲ್ಲಿ ಕೆಲವು ಭಾಗಗಳಲ್ಲಿ ವಿಶೇಷವಾಗಿ ತೆಂಗಿನ ತೋಟಗಳಿವೆ. ಅನೇಕರು ಈ ತೆಂಗಿನ ತೋಟಗಳಿಂದ ಅಪಾರವಾದ ಲಾಭಗಳನ್ನು ಸಂಪಾದಿಸಿರುತ್ತಾರೆ ಮತ್ತು ಈಗಲೂ ಸಂಪಾದಿಸುತ್ತಾ ಇದ್ದಾರೆ. ಇವರಲ್ಲಿ ಕೆಲವರು ತೆಂಗಿನ ತೋಟಗಳನ್ನು ಇಟ್ಟುಕೊಂಡಿದ್ದರೂ ಅತ್ಯಂತ ಸೋಮಾರಿಗಳಾಗಿ, ತೆಂಗಿನಿಂದ ವರ್ಷಂಪ್ರತಿ ವರ್ಷವೂ ಫಲವನ್ನು ತೆಗೆದುಕೊಳ್ಳುವುದು ವಿನಹ ಮತ್ತೇನೂ ಮಾಡದೆ ವೃಥಾ ಕಾಲಕಳೆಯುತ್ತಿರುವರು. ತಮ್ಮ ತಾತಂದಿರೋ ಅಥವಾ ಮುತ್ತಾತಂದಿರೋ ದೂರದೃಷ್ಟಿಯಿಂದ ತೆಂಗಿನ ತೋಟವನ್ನು ಪ್ರಾರಂಭಿಸಿ ಫಲವನ್ನು ಪಡೆಯುವುದಕ್ಕೋಸ್ಕರ ಬಹಳ ಕಷ್ಟಪಟ್ಟರು. ಆ ಮಹನೀಯರುಗಳ ಮೊಮ್ಮಕ್ಕಳುಗಳು ಸುಖವಾಗಿ ಮುಂದುಗಾಣದಾಗಿ ಕಾಲ ಕಳೆಯುತ್ತಾ ಕುಳಿತಿರುವರು. ಮತ್ತೆ ಕೆಲವರು ತೆಂಗಿನ ಗಿಡದಿಂದ ಫಲವನ್ನು ಪಡೆದು ತಮ್ಮ ಕೈಲಾದ ಮಟ್ಟಿಗೆ ಹೊಸ ಸಸಿಗಳನ್ನು ಹಾಕಿ ತಮ್ಮ ತೋಟಗಳನ್ನು ಅಭಿವೃದ್ಧಿಗೆ ತರುತ್ತಿರುವರು. ಮತ್ತು ಸರಿಯಾಗಿ ಕೃಷಿ ಮಾಡಿ ಗೊಬ್ಬರಗೋಡು ಹಾಕಿ ಚೆನ್ನಾಗಿ ಸಾಕಿಕೊಂಡಿದ್ದರೆ ಹೆಚ್ಚಾದ ಫಲವನ್ನು ಕೊಡುತ್ತೆಂಬುವ ವಿಷಯವನ್ನು ಅನೇಕ ಮಂದಿ ಮನಸ್ಸಿನಲ್ಲಿ ಇಟ್ಟುಕೊಂಡಿರುವಂತೆ ಕಾಣಬರುವುದಿಲ್ಲ.

ನಮ್ಮ ದೇಶದಲ್ಲಿ ಊಟ ಮತ್ತು ತಿಂಡಿ ಪದಾರ್ಥಗಳಿಗೆ ತೆಂಗಿನ ಕಾಯನ್ನೂ ಮತ್ತು ಕೊಬ್ಬರಿಯನ್ನೂ ಅತ್ಯಂತವಾಗಿ ಉಪಯೋಗಿಸುತ್ತಿರುವುದರಿಂದ ಎಲ್ಲರಿಗೂ ಈಚೀಚೆಗೆ ತೆಂಗಿನ ಬೆಲೆ ಹೆಚ್ಚಾಗುತ್ತಿದೆ ಎಂಬುದು ವಿದಿತವಾಗಿಯೇ ಇರುತ್ತೆ. ಇದಕ್ಕೆ ಮುಖ್ಯಕಾರಣವೇನೆಂಬುವುದನ್ನು ವಿಚಾರ ಮಾಡಿದಲ್ಲಿ ಯೂರೋಪ್ ಮತ್ತು ಅಮೇರಿಕಾ ದೇಶಗಳಿಗೆ ತೆಂಗಿನ ಕಾಯಿಗಳು ರಫ್ತಾಗುತ್ತಿರುವುದೇ ಮುಖ್ಯ ಕಾರಣವೆಂದು ಗೊತ್ತಾಗುತ್ತದೆ. ಪಾಶ್ಚಿಮಾತ್ಯರು ಇಷ್ಟು ವಿಶೇಷವಾಗಿ ಏತಕಾಯೇತಕೆ ತೆಂಗನ್ನು ಯಾತಕ್ಕೆ ಉಪಯೋಗಿಸುತ್ತಾರೆಂಬುವುದನ್ನು ಸ್ವಲ್ಪ ವಿಚಾರಮಾಡಿದರೆ ಪ್ರಪಂಚದಲ್ಲಿ ತೆಂಗಿನಷ್ಟು ಮನುಷ್ಯನಿಗೆ ಉಪಯೋಗವಾದ ಗಿಡವೇ ಇಲ್ಲವೆಂದು ಸ್ಪಷ್ಟವಾಗುತ್ತೆ.

ತೆಂಗಿನ ಕೆಲವು ಉಪಯೋಗಗಳು :—

(1) ತೆಂಗಿನ ಕಾಯನ್ನು ಒಡೆಭಾಗ ಬರುವ ನೀರನ್ನು ತೆಗೆದುಕೊಂಡು “ವಿನೀಗರ್” ಎಂಬ ದ್ರವತೆಯನ್ನು ತಯಾರುಮಾಡುತ್ತಾರೆ.

(2) ತೆಂಗಿನ ಕಾಯನ್ನು ಗಾಣಕ್ಕೆ ಕೊಟ್ಟು ಅದರಲ್ಲಿ ಬಂದ ಹಾಲನ್ನು “ಮಾರ್‌ಜರೀನ್” ಎಂಬ ಸೊಗಸಾದ ಬೆಣ್ಣೆಯನ್ನು ತಯಾರುಮಾಡಲು ಉಪಯೋಗಿಸುತ್ತಾರೆ. ಇದರಲ್ಲಿ ಬಂದ ಹಿಂಡಿಯನ್ನು ರಾಸುಗಳಿಗೆ ಆಹಾರವಾಗಿ ಉಪಯೋಗಿಸುತ್ತಾರೆ.

ತೆಂಗಿನ ಕಾಯನ್ನೂ ಮತ್ತು ಕೊಬ್ಬರಿಯನ್ನೂ ತಿಂಡಿಯ ಪದಾರ್ಥಗಳಲ್ಲಿಯೂ ಮಿಠಾಯಿಗಳಲ್ಲಿಯೂ ಅತ್ಯಂತವಾಗಿ ಉಪಯೋಗಿಸುತ್ತಾರೆ.

(3) ಕೊಬ್ಬರೀ ಎಣ್ಣೆಯನ್ನು ಅನೇಕ ವಿಧವಾಗಿ ಉಪಯೋಗಿಸುತ್ತಾರೆ.—ಅಂದರೆ ಊಟದ ಪದಾರ್ಥಗಳಲ್ಲಿ ; ಬೆಣ್ಣೆ ತಯಾರುಮಾಡುವುದರಲ್ಲಿ ; ಸಾಬೋನು, ಮೇಣದಬತ್ತಿ ಮುಂತಾದ್ದನ್ನು ತಯಾರುಮಾಡುವುದರಲ್ಲಿ ; ಕೇಶ ತೈಲಗಳನ್ನು ತಯಾರುಮಾಡುವುದರಲ್ಲಿ ; ಯಂತ್ರಗಳ ಚಕ್ರಗಳಿಗೆ ಎಣ್ಣೆಯಾಗಿ.

(4) ತೆಂಗಿನ ಮಂಗಿನಿಂದ—ಸೋಫಾ ಮುಂತಾದ್ದರ ಹಾಸುವ ಮೆತ್ತೆಗಳನ್ನು ಮಾಡುತ್ತಾರೆ; ಹುರಿ, ಹಗ್ಗ ಮುಂತಾದ್ದನ್ನು ತಯಾರುಮಾಡುತ್ತಾರೆ; ಕಸಬರಲು, ಬುರುಸು, ಬಾಗಿಲ ಬಳಿ ಕಾಲೊರಸುವುದಕ್ಕೆ ಹಾಕುವ ಮಂಗಿನ ಚಾಪೆಗಳನ್ನು ಮಾಡುತ್ತಾರೆ.

(5) ತೆಂಗಿನ ಮಂಗಿನಿಂದ ಬರುವ ಹೊಟ್ಟನ್ನು ಮೆತ್ತೆಮಾಡುವುದರಲ್ಲಿಯೂ ಮತ್ತು ಅನೇಕ ವಿಧಗಳಾದ ರಟ್ಟುಗಳನ್ನು ಮಾಡುವುದರಲ್ಲಿಯೂ ಉಪಯೋಗಿಸುತ್ತಾರೆ.

(6) ಕರಟವನ್ನು ಸುಟ್ಟು ಅದರಿಂದ ಬರುವ ಹೊಗೆಯನ್ನು ರಬ್ಬರನ್ನು ಹದನಮಾಡುವುದಕ್ಕೆ ಅತ್ಯಂತವಾಗಿ ಉಪಯೋಗಿಸುತ್ತಾರೆ. ಮತ್ತು ಕರಟದ ಇದ್ದಲಿನಿಂದ ಅತ್ಯುತ್ತಮವಾದ ಧೂಮ ಶಾಯನ್ನು ತಯಾರುಮಾಡುತ್ತಾರೆ.

ಮೇಲೆ ಹೇಳಿದವುಗಳಲ್ಲದೆ ಇನ್ನೂ ಸಾವಿರಾರು ಕೆಲಸಗಳಿಗೆ ಕೊಬ್ಬರಿ ಎಣ್ಣೆಯನ್ನು ಉಪಯೋಗಿಸುತ್ತಾರೆ.

1913 ನೆ ಇಸವಿಯಲ್ಲಿ ಪ್ರಪಂಚದ ಎಲ್ಲಾ ಭಾಗಗಳಲ್ಲಿಯೂ ತೆಂಗಿನ ವ್ಯವಸಾಯದಿಂದ ಉತ್ಪತ್ತಿಯಾದ ಹಣ 105,00,00,000 ರೂಪಾಯಿಗಳೆಂದು ಗೊತ್ತಾಗಿದೆ. ಇದಲ್ಲದೆ ಕೊಬ್ಬರಿಯ ಬೆಲೆಯು ಒಂದಕ್ಕೆ ಮೂರರಷ್ಟು ಆಗಿದೆ. ಮತ್ತು ದಿನೇ ದಿನೇ ತೆಂಗಿನ ಪದಾರ್ಥಗಳನ್ನು ಹೆಚ್ಚು ಹೆಚ್ಚಾಗಿ ಉಪಯೋಗಿಸುತ್ತಿರುವುದರಿಂದ ತೆಂಗಿನ ತೋಟಗಳನ್ನು ಮಾಡತಕ್ಕವರೆಲ್ಲರೂ ಬಹಳವಾದ ಲಾಭವನ್ನು ಸಂಪಾದಿಸಬಹುದು.

ನಮ್ಮ ದೇಶದಲ್ಲಿ ಅನೇಕ ಕಡೆಗಳಲ್ಲಿ ತೆಂಗಿನ ವ್ಯವಸಾಯಕ್ಕೆ ಅನುಕೂಲವಾದ ಭೂಮಿ ಇರುತ್ತೆ. ಮಸಲಾ, ಒಂದು ಎಕರೆ ಭೂಮಿಯಲ್ಲಿ ಸರಿಯಾದ ವ್ಯವಸಾಯಮಾಡಿ ಫಲವನ್ನು ತೆಗೆದರೆ ಈ ಕೆಳಗೆ ವಿವರಿಸಿರುವಂತೆ ಲಾಭ ದೊರೆಯುತ್ತೆ:—

ಒಂದು ಎಕರೆಗೆ 50 ಗಿಡಗಳು, ಗಿಡ ಒಂದಕ್ಕೆ 100 ತೆಂಗಿನಕಾಯಿ, ಒಟ್ಟು 5,000 ಕಾಯಿಗಳು.

ಈ 5,000 ಕಾಯಿಗಳಲ್ಲಿ		3,750	ಅವ್ವಲ್	(1)
,,	,,	750	ದುಯ್ಯಂ	(2)
,,	,,	500	ಬಹಳ ಕೀಳು	(3)

ಸೀಮೆಯಲ್ಲಿ 1913 ನೇ ಇಸವಿಯಲ್ಲಿದ್ದ ಖರೀದಿಯ ಪ್ರಕಾರ

(1)	ನೇದರಿಂದ	ಸುಮಾರು	495	ರೂಪಾಯಿ
(2)	,,	,,	100	,,
(3)	,,	,,	30	,,
		ಜುಮ್ಲಾ	625	,,

ಇದರಲ್ಲಿ ತೋಟದ ಮತ್ತು ವ್ಯವಸಾಯದ ಗೊಬ್ಬರಗೋಡು ಮುಂತಾದ್ದರ ಖರ್ಚನ್ನೆಲ್ಲಾ ಕಳೆದರೆ ಸುಮಾರು 500 ರೂ. ಸಿಗುತ್ತೆ. ಸೀಮೆಯಲ್ಲಿರುವ ಖರೀದಿಗೂ, ನಮ್ಮ ದೇಶದಲ್ಲಿರುವ ಖರೀದಿಗೂ ವ್ಯತ್ಯಾಸವಿರುವುದರಿಂದ ಏನಿಲ್ಲವೆಂದರೂ 400 ರೂ. ಗಳಿಗೆ ಕಡಮೆ ಇಲ್ಲದೆ ಲಾಭ ಬರುತ್ತೆ. ತೆಂಗಿನ ಗಿಡ ಫಲಬಿಡುವುದರ ಪ್ರಾರಂಭದಿಂದ ಸುಮಾರು 85 ವರುಷಗಳ ತನಕ ಈ ಪ್ರಕಾರ ವರ್ಷ ಒಂದಕ್ಕೆ ಎಕರೆಗೆ ನಾನೂರು ರೂಪಾಯಿಗಳಂತೆ ಲಾಭ ಬರುತ್ತೆ. ತೆಂಗಿನ ಮಂಗನ್ನು ಸರಿಯಾಗಿ ಕೊಡಿಟ್ಟು ಮಾರಿದರೆ ಅದರಿಂದಲೂ ಸ್ವಲ್ಪ ಲಾಭ ಬರುತ್ತೆ.

ನಮ್ಮ ದೇಶದಲ್ಲಿ ಅನುಕೂಲವಿರುವವರೆಲ್ಲರೂ ಅವರವರ ಅನುಕೂಲವಿದ್ದಷ್ಟಾದರೂ ತೆಂಗಿನ ವ್ಯವಸಾಯ ಮಾಡಿದಲ್ಲಿ ಬಹಳ ಫಲವುಂಟು. ಆದರೆ ಎಲ್ಲಾ ಕಡೆಗಳಲ್ಲಿ ಭೂಮಿಯು ತೆಂಗಿನ ವ್ಯವಸಾಯಕ್ಕೆ ಅನುಕೂಲವಾಗಿರುವುದಿಲ್ಲ. ಸರಿಯಾದ ಭೂಮಿಯನ್ನು ಆರಿಸಿ ವ್ಯವಸಾಯವನ್ನು ಪ್ರಾರಂಭಿಸಬೇಕು. ಒಂದು ಎಕರೆಗೆ 50 ಮರಗಳಿಗಿಂತಲೂ ಹೆಚ್ಚಾಗಿ ಹಾಕಕೂಡದು. ಕಾಲಕಾಲದಲ್ಲಿ ಕಳೆ ಕಿತ್ತು ಭೂಮಿಯನ್ನು ಉತ್ತು ಗೊಬ್ಬರವನ್ನು ಸರಿಯಾಗಿ ಕೊಡುತ್ತಿರಬೇಕು. ಗಿಡಗಳಿಗೆ ಕಾಯಿಲೆ ಮುಂತಾದದ್ದು ಬರದಂತೆ ಎಚ್ಚರಿಕೆಯಿಂದ ನೋಡಿಕೊಳ್ಳಬೇಕು. ನೂರಾರು ಎಕರೆಗಳನ್ನು ತೆಗೆದುಕೊಂಡು ಸರಿಯಾಗಿ ವ್ಯವಸಾಯಮಾಡಲನುಕೂಲವುಳ್ಳವರು ಶೀಘ್ರವಲ್ಲಿಯೇ ಲಕ್ಷಾಧಿಕಾರಿಗಳಾಗಬಹುದು. ನಮ್ಮ ದೇಶದ ರೈತರೆಲ್ಲರೂ ತೆಂಗಿನ ಬೆಳೆಯಲ್ಲಿ ಬಹಳ ಗಮನ ಕೊಡಬೇಕೆಂಬುದೇ ನಮ್ಮ ಉದ್ದೇಶವಾಗಿದೆ.

ಲಂಡನ್, 7-7-1914. ಎಸ್. ಜಿ. ಶಾಸ್ತ್ರಿ.

ಮೈಸೂರು ಕೋಆಪರೇಟಿವ್ ಬ್ಯಾಂಕು.

ಮೂರನೇ ವಾರ್ಷಿಕ ಕೂಟವು

ಕಳೆದ ಭಾನುವಾರ ಬೆಳಿಗ್ಗೆ ರಾಜಧಾನಿಯ ಸದ್ವಿದ್ಯಾ ಪಾಠಶಾಲೆಯ ಕಟ್ಟಡದಲ್ಲಿ ಮೇಲ್ಕಂಡ ಕೂಟವು ಪ್ರೆಸಿಡೆಂಟ್ ಮ|| ಎಚ್. ನಂಜುಂಡರಾಜೇಅರಸಿನವರ ಅಧ್ಯಕ್ಷತೆಯಲ್ಲಿ ಜರುಗಿತು. ಮೆಂಬರುಗಳ ಪೈಕಿ ಸುಮಾರು 150 ಮಂದಿಗಿಂತಲೂ ಹೆಚ್ಚಾಗಿಯೇ ಹಾಜರಾಗಿದ್ದರು. ಸೆಕ್ರೆಟರಿ ಮ|| ಬಿ. ಎಸ್. ಕೃಷ್ಣಯ್ಯಂಗಾರ್ರವರು ಬ್ಯಾಂಕಿನ 1913-14 ನೇ ಸಾಲಿನ ಕಾರುಬಾರುಗಳನ್ನು ಕುರಿತ ರಿಪೋರ್ಟನ್ನು ಓದಿದರು. ಅದರ ಮುಖ್ಯ ಭಾಗಗಳೇನಂದರೆ—

ಮೆಂಬರುತನ.—ಈ ಸಾಲಿನ ಆದಿಯಲ್ಲಿ ಬ್ಯಾಂಕಿನಲ್ಲಿ 390 ಮೆಂಬರುಗಳು ಇದ್ದರು. ಹೊಸದಾಗಿ ಈ ವರ್ಷ 189 ಜನಗಳು ಮೆಂಬರಾಗಿ ಅಂಗೀಕರಿಸಲ್ಪಟ್ಟರು. ಹೀಗೆ ಒಟ್ಟು ಸೇರಿದ 579 ಮೆಂಬರುಗಳ ಪೈಕಿ 44 ಜನಗಳು ಮೆಂಬರುತನವನ್ನು ಕಳೆದುಕೊಂಡರು. 5 ಜನಗಳು ಷೇರು ಕಂತನ್ನು ಕೊಡಲು ಇನ್ನೂ ಪ್ರಾರಂಭಿಸಿಲ್ಲ. ಸರಿಯಾದ ಮೆಂಬರುಗಳು 530 ಜನಗಳು ಇರುತ್ತಾರೆ. ಕಳೆದ ಮಾರ್ಚಿ ತಿಂಗಳೊಳಗಾಗಿಯೇ ಬ್ಯಾಂಕಿನ ಷೇರುಗಳೆಲ್ಲಾ ಖರ್ಚಾಗಿ ಹೋದದ್ದರಿಂದ ಮೆಂಬರುಗಳ ಸಂಖ್ಯೆಯು ಇನ್ನೂ ಹೆಚ್ಚಲು ಅವಕಾಶವಿಲ್ಲದೆ ಹೋಯಿತು. ಈ ಮೆಂಬರುಗಳ ಪೈಕಿ 518 ಜನಗಳು ಗಂಡಸರು, ಉಳಿದ 12 ಜನಗಳು ಹೆಂಗಸರು. ಪ್ರಥಮ ವಾರ್ಷಿಕ ಜನರಲ್ ಮೀಟಿಂಗಿನ ತೀರ್ಮಾನವನ್ನು ಅನುಸರಿಸಿ ಹೆಂಗಸರು ವಿಶೇಷವಾಗಿ ಮೆಂಬರಾಗಲು ಪ್ರಾರಂಭಿಸಿದಾರೆ. ಹೀಗೆ ಅಬಲೆಯರೂ ಕೂಡ ಮಿತವ್ಯಯ, ಮುಂಜಾಗರೂಕತೆ, ಹಣವನ್ನು ಶೇಖರ ಮಾಡುವದು, ಇವೇ ಮುಂತಾದ ಬ್ಯಾಂಕಿನ ಉದ್ದೇಶಗಳನ್ನು ಸಾರ್ಥಕಗೊಳಿಸಲು ಪ್ರಯತ್ನಪಡುತ್ತಿದಾರೆಂದು ತಿಳಿಸಲು ಡೈರೆಕ್ಟರುಗಳು ಕುತೂಹಲಪಡುತ್ತಾರೆ.

ಷೇರು ಮತ್ತು ಷೇರು ಮೊಬಲಗು.—ಬ್ಯಾಂಕಿನ ಮೂಲಧನ 50,000 ರೂಪಾಯಿ. ಇದನ್ನು ಷೇರು 1 ಕ್ಕೆ 10 ರೂಪಾಯಿನಂತೆ 5,000 ಷೇರುಗಳಾಗಿ ವಿಭಾಗ ಮಾಡಿದೆ. ಸಾಲ್ ಆದಿಯಲ್ಲಿ 390 ಷೇರುದಾರರು 3,471 ಷೇರುಗಳನ್ನು ಪಡೆದು ರೂ. 25,243-8-0 ಪಾವತಿ ಮಾಡಿದ್ದರು. ಈ ವರ್ಷ 171 ಮೆಂಬರುಗಳು 1,795 ಷೇರು ಪಡೆದು ರೂ. 15,963-12-0 ಪಾವತಿ ಮಾಡಿದರು. ಹೀಗೆ 5,266 ಷೇರುಗಳಿಗೆ ಜಮಾ ಆದ ಒಟ್ಟು ಮೊಬಲಗು ರೂ. 41,207-4-0 ಪೈಕಿ ಈ ಸಾಲಿನಲ್ಲಿ 40 ಮೆಂಬರುಗಳಿಗೆ ವಾಪಸು ಮಾಡಿದ ಷೇರುಗಳ ಮೊಬಲಗು ರೂ. 2,529-12-0 ಕಳೆದರೆ ತಹಲ್‌ವರಿಗೆ 4,843 ಷೇರುಗಳಿಗೆ ನಿವ್ವಳ ಷೇರು ಮೊಬಲಗು ಜಮಾ ಆಗಿರುವದು ರೂ. 38,677-8-0 ಎಂತಲೂ, ಹಾಲಿ ಇರುವ ಮೆಂಬರುಗಳ ಸಂಖ್ಯೆ 530 ಎಂತಲೂ ಕಂಡುಬರುತ್ತೆ. ಆದರೆ ಈಗ ಸುಮಾರು 600 ಷೇರುಗಳಿಗೆ 60 ಕ್ಕಿಂತ ಹೆಚ್ಚಾದ ಅಪ್ಲಿಕೇಷನ್‌ಗಳು ಬಂದಿರುತ್ತವೆ. ಇನ್ನೂ ಅನೇಕ ಜನಗಳು ತಮಗೆ ಷೇರುಗಳನ್ನು ಕೊಡಿಸಬೇಕೆಂದು ನಿರ್ಬಂಧಪಡಿಸುತ್ತಿದಾರೆ. ಇದನ್ನು ಪರ್ಯಾಲೋಚಿಸಿ ಸೂಕ್ತ ತೋರಿದರೆ ಷೇರು ಸಂಖ್ಯೆಯನ್ನು ಹೆಚ್ಚಿಸಬಹುದೆಂದು ಡೈರೆಕ್ಟರುಗಳು ಸೂಚಿಸುತ್ತಾರೆ.

ಪ್ರವೇಶಧನ ಮತ್ತು ಷೇರು ಫೀ.—ಹಿಂದೆ ಪ್ರವೇಶಧನವನ್ನೂ, ಷೇರು ಫೀಯನ್ನೂ ವಿಂಗಡಿಸದೇನೇ ಎರಡನ್ನೂ ಪ್ರವೇಶಧನ ಎಂಬ ಹೆಸರಿನಿಂದಲೇ ಕರೆಯುತ್ತಿತ್ತು. ಚಾಲ್ತಿ ವರ್ಷದಲ್ಲಿ ಇದನ್ನು ಪ್ರವೇಶಧನ ಎಂತಲೂ ಷೇರು ಫೀ ಎಂಬದಾಗಿಯೂ ಪ್ರತ್ಯೇಕ ಮಾಡಿರುತ್ತೆ. ಈ ಬಾಬಿನಲ್ಲಿ ಇದುವರಿವಿಗೆ ಶಿಲ್ಕು ನಿಂತಿರುವದು ರೂ. 657-5-7 ಧನರೂಪವಾಗಿಯೂ, ರೂ. 175-12-2 ಫರ್ನಿಚರ್ ರೂಪವಾಗಿಯೂ ಸಹ ಒಟ್ಟು ರೂ. 833-1-9.

ಡಿಪಾಜಟ್ಟುಗಳು.—ಡಿಪಾಜಟ್ಟುಗಳು ಮೆಂಬರುಗಳಿಂದಲೂ, ಮೆಂಬರುಗಳಲ್ಲದವರಿಂದಲೂ ಬರುತ್ತಾ ಇದೆ. ಆದರೆ ಮೆಂಬರುಗಳಿಂದಲೇ ವಿಶೇಷವಾಗಿ ಬರುತ್ತಾ ಇದೆ. ಈ ಡಿಪಾಜಟ್ಟುಗಳಲ್ಲಿ ಕರೆಂಟು ಡಿಪಾಜಟ್ಟು ಎಂತಲೂ, ಫಿಕ್ಸೆಡ್ ಡಿಪಾಜಟ್ ಎಂತಲೂ ಎರಡು ವಿಧ. ಸಾಲ್ ಆದಿಯಲ್ಲಿ ಕರೆಂಟ್ ಡಿಪಾಜಟ್ಟು 1,485-0-5 ಇತ್ತು. ಇದಕ್ಕೆ ಈ ವರ್ಷದಲ್ಲಿ 11,442-0-7 ಜಮಾ ಆಯ್ತು. ಚಾಲ್ತಿ ವರ್ಷದಲ್ಲಿ ಈ ಬಾಬಿನಲ್ಲಿ ವಾಪಸುಮಾಡಿದ್ದು 10,875-5-7 ಜಾತಾ ಒಟ್ಟು ಬಾಕಿ 2,051-11-5 ಇದೆ.—ಗತಸಾಲ್ ಜನರಲ್ ಮೀಟಿಂಗಿನಲ್ಲಿ ಮೆಂಬರುಗಳು ಬ್ಯಾಂಕಿಗೆ 15,000 ರೂಪಾಯಿ ವರಿಗಿನ ಫಿಕ್ಸೆಡ್ ಡಿಪಾಜಟ್ಟನ್ನು ತೆಗೆದುಕೊಳ್ಳಲು ಅನುಮತಿ ಕೊಟ್ಟ ಪ್ರಕಾರ ಈ ವರ್ಷ 11,016 ರೂಪಾಯಿಗಳು ವಸೂಲಾದವು. ಈ ಪೈಕಿ 550 ರೂಪಾಯಿ ವಾಪಸು ಮಾಡಿದ್ದು ಜಾತಾ 10,466 ರೂಪಾಯಿ ನಿಂತಿತು. ಇದರ ಜೊತೆಗೆ ಸಾಲಾದಿಯ ಶಿಲ್ಕು 4,534 ರೂಪಾಯಿ ಸೇರಿ 15,000 ರೂಪಾಯಿ ಫಿಕ್ಸೆಡ್ ಡಿಪಾಜಟ್ ಆಗುತ್ತೆ. ಫಿಕ್ಸೆಡ್ ಡಿಪಾಜಟ್ಟುಗಳಿಗೆ ಪ್ರತಿ ಮಾಹೆಯಲ್ಲೂ ಬಡ್ಡಿ ಕೊಡುತ್ತಾ ಇದೆ. ಈ ಸೌಕರ್ಯಕ್ಕೋಸ್ಕರ ಅನೇಕರು ಡಿಪಾಜಟ್ಟು ಹಾಕಬೇಕೆಂದು ಕುತೂಹಲಪಡುತ್ತಾರೆ. ಫಿಕ್ಸೆಡ್ ಡಿಪಾಜಟ್ ಮೊಬಲಗನ್ನು ಇನ್ನೂ ಹೆಚ್ಚಿಸಲು ಡೈರೆಕ್ಟರುಗಳು ಅಪೇಕ್ಷಿಸುತ್ತಾರೆ.

ರಿಜರ್ವ್ ಫಂಡು.—ಷೇರ್ ಸುಸ್ತಿ ಬಾಬಿನಲ್ಲಿ ಇದುವರಿವಿಗೂ ವಸೂಲಾಗಿರುವ 110-12-6 ಸ್ನೆಯನ್ನು ರಿಜರ್ವ್ ಫಂಡಿಗೆ ಸೇರಿಸಬೇಕೆಂದು ರಜಿಸ್ಟ್ರಾರ್ ಸಾಹೇಬರವರು ಅಪ್ಪಣೆಕೊಡಿಸಿರುತ್ತಾರೆ. ಆದರೆ ಜನರಲ್ ಬಾಡಿಯವರು ಈ ಮೊಬಲಗನ್ನು ಡಿವಿಡೆಂಡ್ ಈಕ್ವಲೈಜೇಷನ್ ಫಂಡಾಗಿ ಅಲಾಯಿದಾ ತೆಗೆದಿಡಬೇಕೆಂಬ ತಮ್ಮ ಅಭಿಪ್ರಾಯದಂತೆ ಅದನ್ನು ಇನ್ನೂ ಅಲಾಯಿದಾ ಫಂಡಾಗಿಯೇ ಇಟ್ಟಿರುತ್ತಾರೆ. ಹಾಲಿ ಇರುವ ರಿಜರ್ವ್ ಫಂಡು ಮೊಬಲಗನ್ನೂ, ಮತ್ತು ಚಾಲ್ತಿ ವರ್ಷದಲ್ಲಿ ತೆಗೆದಿಡಬಹುದಾದ ಮೊಬಲಗನ್ನೂ ಒಟ್ಟು ಸೇರಿಸಿ ಬೆಂಗಳೂರು ಸೆಂಟ್ರಲ್ ಬ್ಯಾಂಕಿಗೆ ಡಿಪಾಜಟ್ಟಾಗಿ ಕಳುಹಿಸಬೇಕೆಂದು ಡೈರೆಕ್ಟರುಗಳು ತೀರ್ಮಾನ ಮಾಡಿರುತ್ತಾರೆ.

ಸಾಲಗಳು.—ಷಾರ್ಟ್ ಲೋನ್ ಬಾಬಿನಲ್ಲಿ ಪ್ರತಿ ತಿಂಗಳಲ್ಲೂ ಸರಾಸರಿ 12,779 ರೂಪಾಯಿ ಖರ್ಚು, 12,265 ರೂಪಾಯಿ ಜಮುವೂ, ತಿಂಗಳಿಗೆ 95 ರೂಪಾಯಿ ಉತ್ಪತ್ತಿಯೂ ಆಗುತ್ತಿದೆ.—ಲಾಂಗ್ ಲೋನ್ ಬಾಬಿನಲ್ಲಿ ಪ್ರತಿ ತಿಂಗಳಲ್ಲೂ 5,015 ರೂಪಾಯಿ ಖರ್ಚು, 3,166 ಜಮಾ, 348 ರೂಪಾಯಿ ಉತ್ಪತ್ತಿಯೂ ಕಂಡುಬರುತ್ತಿದೆ. ಈ ವರ್ಷ ಪ್ರತಿ ಲಾಂಗ್ ಲೋನ್ ಬಾಬಿನಲ್ಲೂ ಅಸಲಿಗೆ ಶೇಕಡಾ ಮಾಹೆಯಾನಾ ಎರಡು ರೂಪಾಯಿಗೆ ಕಮ್ಮಿ ಇಲ್ಲದಂತೆ ಕಂತು ಪಾವತಿ ಮಾಡಬೇಕೆಂದು ನಿರ್ಬಂಧಪಡಿಸಿದ್ದರಿಂದ ವಸೂಲಾತಿಯು ತಕ್ಕ ಮಟ್ಟಿಗೆ ಚೆನ್ನಾಗಿಯೇ ನಡೆದಿದೆ. ಮೆಂಬರುಗಳು ಯಾವ ಯಾವ ಉದ್ದೇಶಗಳಿಗಾಗಿ ಲಾಂಗ್ ಲೋನ್ ತೆಗೆದುಕೊಂಡಿರುತ್ತಾರೆಂಬ ವಿಷಯವನ್ನು ವಿಮರ್ಶೆ ಮಾಡಿ ನೋಡುವಲ್ಲಿ ಕಂಡುಬರುವದೇನಂದರೆ:—ಜಮೀನ್ ಆಬಾದಿಗೆ, ಜರಾಯತಿಗೆ, ದನಕರುಗಳನ್ನು ಸಾಕುವದಕ್ಕೆ, ಜಮೀನ್ ಕೊಂಡುಕೊಳ್ಳುವದಕ್ಕೆ, ಕಂದಾಯದ ಕಿಸ್ತು ಕೊಡುವದಕ್ಕೆ, ಕೈಗಾರಿಕೆಗೆ, ವ್ಯಾಪಾರಕ್ಕೆ, ಮನೆ ಕಟ್ಟುವದಕ್ಕೆ, ಗೃಹಕೃತ್ಯಕ್ಕೆ, ಹಿಂದಣ ಸಾಲ ತೀರಿಸುವದಕ್ಕೆ, ಕೋರ್ಟು ಖರ್ಚು ಮುಂತಾದ ಉದ್ದೇಶಗಳಿಗಾಗಿ 238 ಜನರು 60,175 ರೂಪಾಯಿ ಸಾಲ ಪಡೆದಿರುತ್ತಾರೆ.—ಅನೇಕ ಮೆಂಬರುಗಳು ಕಾಲಕಾಲಕ್ಕೆ ಸಾಲವನ್ನು ತೀರಿಸುವ ವಿಷಯದಲ್ಲಿ ಬಹಳ ಮುತುವರ್ಜಿ ವಹಿಸಿರುವದಕ್ಕಾಗಿ ಡೈರೆಕ್ಟರುಗಳು ವಿಶೇಷವಾಗಿ ಸಂತೋಷಪಡುತ್ತಾರೆ. ಬ್ಯಾಂಕಿನಿಂದ ಕೊಡಲ್ಪಟ್ಟ ಸಾಲಗಳ ಪೈಕಿ 3-4 ಸಾಲಗಳ ವಿಚಾರದಲ್ಲಿ ಮಾತ್ರ ತಕರಾರು ಬಂದಿರುತ್ತೆ. ಪ್ರಾಯಶಃ ಈ ಮೊಬಲಗನ್ನು ವಸೂಲು ಮಾಡುವದಕ್ಕೆ ರಜಿಸ್ಟ್ರಾರ್‌ರವರ ಕೋರ್ಟಿಗೆ ಹೋಗಬೇಕಾಗಬಹುದು. ಆದರೂ ಇಂಥಾ ಶೋಚನೀಯವಾದ ಕೆಲಸವನ್ನು ಮಾಡಲು ಸದರಿ ಮೆಂಬರುಗಳು ಅವಕಾಶವನ್ನು ಕೊಡುವುದಿಲ್ಲವೆಂದು ಡೈರೆಕ್ಟರುಗಳು ನಂಬುತ್ತಾರೆ.

ಲಾಭ.—ಈ ಸಾಲಿನಲ್ಲಿ 4,405-3-9 ನಫಾ ತೇಲಿರುತ್ತೆ. ಆದರೆ ಮೇಲ್ಕಂಡ ಮೊಬಲಗಿನಲ್ಲಿ ಕರೆಂಟ್ ಡಿಪಾಜಟ್‌ದಾರ್ರಿಗೆ 1914 ನೇ ಜೂನ್ 30 ನೇ ತಾರೀಖಿನವರೆಗೆ 39-0-2 ಬಾಕಿ ಬಡ್ಡಿಯನ್ನೂ ಮತ್ತು ಫಿಕ್ಸೆಡ್ ಡಿಪಾಜಟ್‌ದಾರ್ರಿಗೆ ಅಲ್ಲಿಯವರೆಗೆ ಕೊಡಬೇಕಾಗಿರುವ 146-1-10 ಬಾಕಿ ಬಡ್ಡಿಯನ್ನೂ ಅಂದರೆ ಒಟ್ಟು 185-2-0 ನ್ನು ತೆಗೆದು ಹಾಕಿದರೆ ನಿವ್ವಳ ನಫೆಯು 4,220-1-9 ಪೈ ಮಾತ್ರ ಆಗುತ್ತೆ. ಇವರಲ್ಲಿ ಆಡಿಟರವರಿಗೆ ಶೇಕಡಾ 2½ ಮೇರೆ ಆಗುವ 105-7-8 ಪೈಕಿ ಅಡ್ವಾನ್ಸಾಗಿ ಪಾವತಿ ಮಾಡಿರುವ 66-8-0 ಜಾತಾ 39 ರೂಪಾಯಿಯೂ, ಸೆಕ್ರೆಟರಿ ಮತ್ತು ಟ್ರೆಜರರಿಗೆ ಒಟ್ಟು ಶೇಕಡಾ 10 ರ ಮೇರೆ ಆಗುವ 422-0-2 ಸ್ನೆಯೂ ಸಹ ಒಟ್ಟು ಜುಮ್ಲಾ 461-0-2 ನ್ನು ಕಳೆದರೆ ಶಿಲ್ಕು ನಿಲ್ಲುವದು 3,759-1-7. ಈ ಸಾಲಿನಲ್ಲಿ ತುಂಬಾ ಮುತುವರ್ಜಿಯಿಂದ ಆಡಿಟರವರು ಕೆಲಸ ಮಾಡುವದರಿಂದ ಅವರಿಗೆ ಸ್ಪೆಷಲ್ಲಾಗಿ 15 ರೂಪಾಯಿ ಸನ್ಮಾನವನ್ನೂ, ಬ್ಯಾಂಕಿನ ಮೂವರು ಗುಮಾಸ್ತರೂ ಬಹಳ ಶ್ರದ್ಧೆಯಿಂದ ಕೆಲಸ ಮಾಡಿದ್ದಕ್ಕಾಗಿ ಒಟ್ಟು 63 ರೂಪಾಯಿ ಸನ್ಮಾನವನ್ನೂ ಕೊಡಬೇಕೆಂದು ಡೈರೆಕ್ಟರುಗಳು ಸಿಫಾರಸು ಮಾಡುತ್ತಾರೆ. ಹೀಗೆ ಸಿಫಾರಸು ಮಾಡುವ ಮೊಬಲಗನ್ನು ತಾವು ಸ್ಯಾಂಕ್ಷನ್ ಮಾಡುವ ಪಕ್ಷದಲ್ಲಿ ಬಾಕಿ ನಿಲ್ಲುವದು ರಿಜರ್ವ್ ಫಂಡಿಗೆ 920-4-5 ಕೊಡಬೇಕಾಗುತ್ತೆ. ಬಾಕಿ ನಿಲ್ಲುವ 2,761-13-2 ಷೇರುದಾರ್ರಿಗೆ ಬಡ್ಡಿ ಹಂಚಿಕೆಗೆ ಅರ್ಹವಾಗುತ್ತೆ. ಷೇರುದಾರ್ರಿಗೆ ತಾವುಗಳು ಶೇಕಡಾ ಸಾಲಿಯಾನಾ ಎಂಟು ರೂಪಾಯಿಯಂತೆ ಕೊಡಲು ಇಷ್ಟಪಟ್ಟರೆ 3,75,760 ರೂಪಾಯಿನ ಅಂಶವಾಗುವ ಷೇರು ಮೊಬಲಗಿಗೆ 2,505-1-0 ಹಂಚಬೇಕಾಗುತ್ತೆ. ಈ ಮೊಬಲಗು ಜಾತಾ ಉಳಿಯುವ 225-12-2 ನ್ನು ಡಿವಿಡೆಂಡ್ ಈಕ್ವಲೈಜೇಷನ್ ಫಂಡಿಗೆ ವರ್ಗಾಯಿಸಬೇಕೆಂಬದಾಗಿ ಡೈರೆಕ್ಟರುಗಳು ಅಭಿಪ್ರಾಯಪಡುತ್ತಾರೆ.

ಇತರ ವಿಷಯಗಳು.—ಮೇಲ್ಕಂಡ ವಿಷಯಗಳನ್ನು ಮೆಂಬರುಗಳ ಗಮನಕ್ಕೆ ತರುವ ವಿಷಯದಲ್ಲಿ ಡೈರೆಕ್ಟರುಗಳು ಸಂತೋಷಪಡುವವರ ಜೊತೆಗೆ ಬ್ಯಾಂಕಿನ ಮೆಂಬರುಗಳ ಪೈಕಿ ಪರಲೋಕವನ್ನೈದಿದ ಐದು ಮೆಂಬರುಗಳಿಗಾಗಿ ವಿಶೇಷ ಪರಿತಾಪವನ್ನು ಸೂಚಿಸುತ್ತಾರೆ.—ಈ ರಿಪೋರ್ಟಿನಿಂದ ಬ್ಯಾಂಕಿನ ಸ್ಥಿತಿಯು ಹಿಂದಣಸಾಲಿಗಿಂತಲೂ ಅಭಿವೃದ್ಧಿಯನ್ನು ಹೊಂದುತ್ತಿದೆ ಎಂಬುವದು ತಮ್ಮಗಳಿಗೆಲ್ಲಾ ವ್ಯಕ್ತವಾಗದೆ ಇರಲಾರದು.

ಪ್ರಜಾ ಸಮುದಾಯದ ಅಭಿವೃದ್ಧಿಯನ್ನೂ, ಕ್ಷೇಮವನ್ನೂ ಸದಾ ಮನಸ್ಸಿನಲ್ಲಿ ಇಟ್ಟಿರುವ ಶ್ರೀಮನ್ಮಹಾರಾಜಾವರ ಸರ್ಕಾರದವರು ಸ್ಥಾಪಿಸಿರುವ ಈ ತರನಾದ ಕೋಆಪರೆಟಿವ್ ಸೊಸೈಟಿಗಳ ಸರಿಯಾದ ಉದ್ದೇಶಗಳನ್ನು ಸಾರ್ಥಕಗೊಳಿಸಬೇಕಾದರೆ ತಮ್ಮಂಥಾವರುಗಳು ಸದರಿ ಸಂಘಗಳ ವಿಷಯದಲ್ಲಿ ವಿಶೇಷ ಅನುರಾಗವನ್ನು ತೋರಿಸಿ, ಅವುಗಳ ನಡವಳಿಕೆಗಳಲ್ಲಿ ವಿಶೇಷ ಶ್ರದ್ಧೆಯನ್ನು ವಹಿಸುತ್ತಾ ಬರಬೇಕು. ಹೀಗೆ ಮಾಡುತ್ತಾ ಬಂದರೆ ಪ್ರಜೆಗಳ ನೆಮ್ಮದಿಗೆ ಕುಂದಕ ಬಾರದೆ ಅವರುಗಳಿಗೆ ಮಹೋಪಕಾರವಾಗುತ್ತಾ ಪರಸ್ಪರ ನಂಬಿಕೆ, ವಿಶ್ವಾಸ, ಸಭ್ಯತೆ, ಇವೇ ಮೊದಲಾದ ಘನವಾದ ಗುಣಗಳು ಅವರುಗಳಲ್ಲಿ ದೃಢೀಕರಿಸಲ್ಪಡುತ್ತವೆ ಎಂಬುವದರಲ್ಲಿ ಯಾವ ಸಂದೇಹವೂ ಇರುವದಿಲ್ಲ. ಯಾವ ಸಂಘದ ಕೆಲಸಕಾರ್ಯಗಳಲ್ಲೇ ಆಗಲಿ ಅನೇಕ ನ್ಯೂನತೆಗಳು ಇದ್ದೇ ಇರುತ್ತವೆ. ಅಂಥಾ ನ್ಯೂನತೆಗಳನ್ನೇ ತಾವುಗಳು ವಿಶೇಷವಾಗಿ ಮನಸ್ಸಿನಲ್ಲಿಡದೆ ಅದರಲ್ಲಿರುವ ಗುಣಾಂಶವನ್ನೇ ಗ್ರಹಿಸುವಿರೆಂದು ಡೈರೆಕ್ಟರುಗಳು ದೃಢವಾಗಿ ನಂಬುತ್ತಾರೆ.

ತರುವಾಯ ಆಡಿಟರವರ ರಿಪೋರ್ಟು, ರಿಜಿಸ್ಟ್ರಾರ್‌ರವರ ಪ್ರೋತ್ಸಾಹಯುಕ್ತವಾದ ಕಾಗದವೂ ಓದಲಾಯಿತು. ಮೆಂಬರುಗಳು ಏಕವಾಕ್ಯತೆಯಿಂದ ಈ ಬಾಬುಗಳನ್ನೆಲ್ಲಾ ಒಪ್ಪಿ ಪ್ಯಾಸ್‌ಮಾಡಿದರು.

ಮೆಂಬರುಗಳು ಚರ್ಚೆಯಿಂದ ತೀರ್ಮಾನವಾಗಿರುವ ವಿಷಯಗಳೇನೆಂದರೆ:—(1) ಷೇರ್ ಸುಸ್ತಿಯನ್ನು ರಿಜರ್ವ್ ಫಂಡಿಗೆ ಸೇರಿಸದೆ ಡಿವಿಡೆಂಡ್ ಈಕ್ವಲೈಜೇಷನ್ ಫಂಡಿಗಾಗಿ ಅಲಾಯಿದಾ ಇಡಬೇಕು. (2) ಬ್ಯಾಂಕಿನಲ್ಲಿ ಹಾಲಿ ಇರುವ 5,000 ಷೇರುಗಳ ಜೊತೆಗೆ ಇನ್ನೂ 2,500 ಷೇರುಗಳನ್ನು ಹೆಚ್ಚಿಸಬೇಕು. (3) ಫಿಕ್ಸೆಡ್ ಡಿಪಾಜಟ್ ಮೊಬಲಗನ್ನು 15,000 ರೂಪಾಯಿನಿಂದ 25,000 ರೂಪಾಯಿಗೆ ಹೆಚ್ಚಿಸಬೇಕು. (4) ಮುಂದಿನ ವರುಷಕ್ಕೆ ಬ್ಯಾಂಕಿನ ಆಡಳಿತಗಳನ್ನು ನಡಿಸಲಿಕ್ಕಾಗಿ 15 ಜನ ಡೈರೆಕ್ಟರುಗಳ ಚುನಾವಣೆ ಮಾಡಲಾಯಿತು. ಇದಾದ ಮೇಲೆ ಶ್ರೀಮನ್ಮಹಾರಾಜರವರಿಗೆ ಸಭಿಕರು ಶ್ರೇಯಸ್ಸನ್ನು ಬಯಸಿ ವಾರ್ಷಿಕ ಕೂಟವನ್ನು ಮುಕ್ತಾಯಮಾಡಿದರು.

ಬಾತ್ಮಿದಾರರಿಗೆ ನೋಟೀಸ್.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಹೆಸರು ವಿಳಾಸವಿಲ್ಲವೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸವನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು. ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ. ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ.

ಬಡವರ ಹಿತಚಿಂತಕ, ಕೋಲಾರ:—ಹೈ ಸ್ಕೂಲಿನಲ್ಲಿರುವ ಅನನುಕೂಲಗಳನ್ನು ಇಲಾಖೆಯ ಅಧಿಕಾರಿಗೆ ಬರೆದುಕೊಂಡರೆ ಅವರು ತನಿಖೆಮಾಡಿಸುತ್ತಾರೆ.

ಪಾ. ಮಾಧವಾನಂದದಾಸು, ಬೆಂಗಳೂರು:—ಈ ಬಾತ್ಮಿಯಲ್ಲಿ ನೌಕರರಿಗೂ ಅಧಿಕಾರಿಗಳಿಗೂ ಈಗ ತಿಳಿಯದೆ ಇರುವಂಥಾ ಹೊಸ ವಿಚಾರವೇನೂ ಇಲ್ಲ.

ವಿದ್ಯಾ ಪಕ್ಷಪಾತಿ, ಚಿಂತಾಮಣಿ:—ಪ್ರಜೆಗಳ ಮುಖಂಡರು ಮಕ್ಕಳ ವಿದ್ಯೆಗೆ ಉಂಟಾಗಿರಬಹುದಾದ ಕುಂದುಕೊರತೆಗಳನ್ನು ದೃಷ್ಟಾಂತ ಸಮೇತ ಮೇಲ್ಪಟ್ಟ ಅಧಿಕಾರಿಗೆ ತಿಳಿಸಿದರೆ ಅವರು ವಿಚಾರದಿಂದ ಕ್ರಮಪಡಿಸುತ್ತಾರೆ.

ಹಿತಚಿಂತಕ, ದಾವಣಗೆರೆ:—ಜನರಿಗೆ ಅನುಭವಬಂದ ಹಾಗೆಲ್ಲಾ ಬುದ್ಧಿಯುಂಟಾಗುತ್ತದೆ. —ಎಡಿ.]

ಕರೆಸ್‌ಪಾಂಡೆನ್ಸ್.

ಒಬ್ಬ ಪ್ರಯಾಣಿಕನ ಅನುಭವ.

ಅಯ್ಯಾ,—ನಾನು ತಿರುಪತಿಗೆ ಹೋಗಿದ್ದೆ. ಅಲ್ಲಿ ನಮ್ಮ ಮಹಾರಾಜರವರ ಛತ್ರದ ಅಧಿಕಾರದಲ್ಲಿರುವ ಮ॥ ಶ್ರೀನಿವಾಸರಾಯರು ಬರತಕ್ಕ ಜನಗಳನ್ನು ಬಹಳ ವಿಶ್ವಾಸಪೂರ್ವಕ ನೋಡಿ ಅಲ್ಲಿ ಅವರಿಗೆ ಕೊಟ್ಟಡಿ ವಗೈರೆಗಳನ್ನು ಕೊಟ್ಟು ರಾತ್ರಿ ಕಾಲದಲ್ಲಿ ದೀಪಗಳನ್ನು ಕೊಡುವದಲ್ಲದೆ ರಾತ್ರಿಯಲ್ಲಿ 4-5 ಸಲ ಖುದ್ದಾಗಿ ತಾವು ಬಂದು ಜಾಗರೂಕರಾಗಿರಬೇಕೆಂದು ಸರ್ವರಿಗೂ ತಿಳಿಸುತ್ತಾರೆ. ಇಲ್ಲಿ ಒಂದು ವಿವಾಹವು ಸಹಾ ಅವರ ಸಹಾಯದಿಂದ ನಡೆಯಿತು.—ಬೌರಿಂಗಪೇಟೆಯಲ್ಲಿ ರೈಲಿನಿಂದ ಕೋಲಾರಕ್ಕೆ ಬರುವ ಮರದಮೆಟ್ಟಿಲ ಮೇಲೆ ಹತ್ತಿ ಬರುವ ಕಡೆ ಬೆಳಕು ಇದೆ. ಇಳಿಯುವ ಕಡೆಯಲ್ಲಿ ಬೆಳಕಿಲ್ಲದೆ ಆ ಪಾರ್ಶ್ವದ ಲಾಂದ್ರ ಹಚ್ಚದೆ ಇರುವದರಿಂದ ಜನಗಳಿಗೆ ತುಂಬಾ ತೊಂದರೆಯಾಗಿದೆ.—ಇದೇ ಮಾಹೆ 20 ನೇ ತಾ. ನಂಜನಗೂಡಿನಿಂದ ಟ್ರೈನ್‌ನಲ್ಲಿ ಬಂದೆ. ಗಾಡಿಯ ಮೇಲುಗಡೆ ನೀರು ಬಿದ್ದು ಮಣೆಗಳಲ್ಲಿ ಅಂದರೆ ಎರಡು ಕಡೆಯಲ್ಲಿಯೂ ಕೂತುಕೊಳ್ಳುವದಕ್ಕೆ ಆಗದಂತೆ ನೀರು ಬೀಳುತ್ತಾ ಇತ್ತು. ಇದನ್ನು ನೋಡಿ ಆ ರೀತಿ ನೀರು ಬೀಳದಂತೆ ತಪ್ಪಿಸುತ್ತಾರೆಂದು ನಂಬುತ್ತೇನೆ.

ಪ್ರಯಾಣಿಕ.

ದಯಾಸಾಗರವೆಂಬ ಸಂಘವಿದ್ದರೆ ಅದಕ್ಕೆ ಒಂದು ಸಲಹೆ.

ಅಯ್ಯಾ,—ಈ ಸಂಘವು ಬಹು ಆಡಂಬರವಾಗಿ ಜನಿಸಿತು. ಜನಿಸಿದ್ದು ಒಳ್ಳೇದೇ. ಆ ಸಂಘಕ್ಕೆ ನಾನೂ ಒಬ್ಬ ಮೆಂಬರು ಈ ಸಂಘವು ಹ್ಯಾಗೆ ಮುಂದರಿಯುತ್ತಾ, ಕೆಲಸ ನಡಿಸುತ್ತಾ ಇದೆಯೋ ತಿಳಿಯದು. ಇದನ್ನು ಸೂಚಿಸಿದರೆ ಸಂತೋಷ. ಈಗ ಮ್ಯುನಿಸಿಪಾಲಿಟಿಗಳಿರುವ ಕಡೆ ಕಚಡಾ ಗಾಡಿಗಳುಂಟು. ಅವಕ್ಕೆ ಕಟ್ಟುವ ಎತ್ತುಗಳಿಗೆ ಕ್ರಯಕೊಟ್ಟು ಸಂಪಾದಿಸುತ್ತಾರೋ ಏನೋ ಸಂಶಯವಾಗಿದೆ. ನಾನು ನೋಡಿದ ಮಟ್ಟಿಗೆ ಎಲ್ಲೂ ಒಳ್ಳೇ ಎತ್ತುಗಳೇ ಇಲ್ಲ. ಅವುಗಳಿಗೆ ಹುಲ್ಲು ಸಿಕ್ಕುತ್ತೋ ಇಲ್ಲವೋ ಸಂಶಯ. ಒಂದು ಸಾರಿ ತರೀಕೆರೆಯಲ್ಲಿ ಈ ಗಾಡಿಗೆ ಕಟ್ಟಿದ ಎತ್ತು ಹೋಗುತ್ತಿರುವಾಗ ಹಾಗೇ ಬಿದ್ದುಬಿಟ್ಟಿತು. ಮತ್ತು ಕತ್ತೆಗಳು ಊರಲ್ಲಿ ತುಂಬಿವೆ. ಬಾಡಿಗೆಗೆ ಬೇಕಾದರೆ ಮಾಲೀಕನು ಹುಡುಕುತ್ತಾನೆ; ಇಲ್ಲವಾದರೆ ಅವು ಎಲ್ಲಿದ್ದರೂ ಕೇಳುವವರೇ ಇಲ್ಲ. ಈ ಮಳೆಗಾಲದಲ್ಲಿ ಅವು ನೆಂದು ನೋವಿಲ್ಲದೆ ಚಳಿಯಿಂದ ಸಾಯುತ್ತವೆ. ಸಿಕ್ಕಿದ ಕಡೆ ಸಾಯುವದರಿಂದ ಗೋಡೆ ಬಿದ್ದು ಹೋಗೋಣ, ಜನರು ಎಡವಿ ಬೀಳೋಣ, ಗಾಡಿ ಹೊಡೆಯೋಣ, ಹೀಗೆಲ್ಲಾ ಆಗುತ್ತೆ. ಸತ್ತ ಮೇಲೆ ಹೀಗಾಯಿತೆಂದು ನೋಡದೆ ಜನರನ್ನು ಬೆದರಿಸುವ ಬಗ್ಗೆ ಡಾಕ್ಟರಲ್ಲಿ ಪರೀಕ್ಷಿಸುವದಕ್ಕೆ ಕೊಡುವದು ಯಾವ ನ್ಯಾಯ? ನಾಲ್ಕು ಕಾಲುಗಳಿರುವದರಿಂದ ಈ ಬಡ ಜೀವಿಗಳು ಮನುಷ್ಯನ ಲಾಭಕ್ಕೆ ಹೋರಾಡುತ್ತಾ ಇರುತ್ತವೆ. ಎರಡೇ ಕಾಲಿದ್ದರೆ ಹ್ಯಾಗೋ ಹೇಳಲಾರೆ. ಆದ್ದರಿಂದ ದಯಾಸಾಗರವೆಂಬ ಸಂಘದವರು ಇದನ್ನು ಪೂರ್ಣವಾಗಿ ಪರಿಹರಿಸಬೇಕೆಂದೂ, ಒಂದು ಕಾನೂನು ಏರ್ಪಡಿಸುವರೆಂದೂ ಪ್ರಾರ್ಥಿಸುತ್ತೇನೆ.

ಒಬ್ಬ ಮೆಂಬರು.

ಚಿತ್ರದುರ್ಗದಲ್ಲಿನ ಪ್ರಜೆಗಳ ಕಷ್ಟ.

ಅಯ್ಯಾ,—ಈಗ್ಗೆ 4-5 ವರುಷದಿಂದ ಆಹಾರಪದಾರ್ಥಗಳ ಬೆಲೆ ಹೆಚ್ಚಿ ಪ್ರಜೆಗಳು ನಾನಾ ಕಷ್ಟಗಳನ್ನು ಅನುಭವಿಸುತ್ತಿದಾರೆ. ಇವರ ಜೊತೆಗೆ ಈಗ 3-4 ತಿಂಗಳಿಂದ ನೀರಿನ ಕಷ್ಟ ಸಂಭವಿಸಿ ಪ್ರತಿ ಒಬ್ಬರೂ ರಾತ್ರಿ ಹಗಲೂ ನೀರಿಗಾಗಿ ಓಡ್ಯಾಡಲಿಕ್ಕೆ ಆರಂಭಿಸಿದಾರೆ. ಇಷ್ಟು ಕಷ್ಟಪಟ್ಟರೂ ನೀರು ಸಿಕ್ಕತಕ್ಕದ್ದು ಅಸಾಧ್ಯವಾಗಿದೆ. ಈ ಟವನ್‌ಗೆ ನೀರು ಸಪ್ಲೈಮಾಡತಕ್ಕ ಕೆರೇಲಿ ಇದುವರೆಗೆ ಇದ್ದ ಸ್ವಲ್ಪ ನೀರನ್ನು ಪೈಪಿನ ಮೂಲಕ ಎತ್ತಿ ಅನುಕೂಲಸ್ಥರ ಮನೆಗಳಿಗೆ ಬಿಡುತ್ತಿದ್ದರು. ಅದರ ಉಪಯೋಗ ಇತರರಿಗೆ ಸ್ವಲ್ಪವೂ ಇರಲಿಲ್ಲ. ಪ್ರಜೆಗಳೆಲ್ಲಾ ಕಾಮನ ಭಾವಿಯಿಂದ ನೀರು ಹೊತ್ತು ತಂದು ಜೀವಿಸುತ್ತಿದ್ದರು. ಈಗ 4-5 ದಿವಸದಿಂದ ಮ್ಯುನಿಸಿಪಾಲಿಟಿಯವರು ಆ ಭಾವಿಗೂ ಪಂಪುಹಾಕಿ ಅದರಿಂದ ಮಾಮೂಲಿನಂತೆ ಅನುಕೂಲಸ್ಥರಿಗೇನೇ ನೀರು ಸಪ್ಲೈಮಾಡುತ್ತಿದಾರೆ. ಆ ಭಾವೀಲೂ ನೀರು ಕಮ್ಮಿ ಆದ್ದಲ್ಲದೆ ಊರಿಗೆಲ್ಲಾ ಆಧಾರವಾಗಿದ್ದ ಈ ಭಾವಿಗೆ ಪಂಪುಹಾಕಿ ನೀರಿಲ್ಲದಂತೆ ಮಾಡುತ್ತಿರುವದಕ್ಕಾಗಿ ಪ್ರಜೆಗಳು ವಿಶೇಷ ಸಂಕಟಪಡುತ್ತಿದಾರೆ. ಸೇದೋ ಭಾವಿಗಳಲ್ಲೆಲ್ಲಾ ನೀರು ಬತ್ತಿಹೋಗಿದೆ. ಹಿಂದೆ ಪ್ರಜೆಗಳಿಗೆ ಯಾವವಿಧವಾದ ಕಷ್ಟಬಂದಾಗ್ಯೂ ತಕ್ಷಣ ಗೌರ್ನಮೆಂಟಿನವರು ಅದಕ್ಕೆ ಪರಿಹಾರವನ್ನುಂಟುಮಾಡಿ ಪ್ರಜೆಗಳು ಆಶ್ಚರ್ಯಪಡುವಂತೆ ನೋಡಿಕೊಳ್ಳುತ್ತಿದ್ದರು. ಈಚೀಗೆ 4-5 ವರುಷದಿಂದ ಆ ಪದ್ಧತಿಯೇ ನಿಂತುಹೋಗಿ ಬಹಿರಂಗವಾದ ಉಪನ್ಯಾಸ, ಕಾನ್‌ಫರೆನ್ಸು, ಎಗ್ಜಿಭಿಷನ್, ಇವುಗಳ ಗಲಾಟೆಯಲ್ಲೇ ಪರಿಣಮಿಸಿದೆ. ಇದರಿಂದ ಪ್ರಜೆಗಳಿಗೆ ಕಷ್ಟವೇ ಹೊರ್ತು ಅನುಕೂಲಗಳೇನೂ ಆಗಿಲ್ಲ.

ಇಲ್ಲಿಯ ಮ್ಯುನಿಸಿಪಾಲಿಟಿಯು ವಿಚಕ್ಷಣೆ ಹೇಳತಕ್ಕದ್ದಾಗಿಯೇ ಇಲ್ಲ. ಟವನ್ ಆರೋಗ್ಯಕರವಾಗಿ ಮಾಡತಕ್ಕದ್ದು, ಪ್ರತಿ ಒಬ್ಬರ ಕಷ್ಟವು ತಿಳಿದು ಅವರಿಗೆ ಸಹಾಯಮಾಡತಕ್ಕದ್ದು, ಈ ಸೌಕರ್ಯಗಳು ಪ್ರಜೆಗಳಿಗೆ ತಪ್ಪಿತು. ಮನೆ ಕಂದಾಯ, ನಲ್ಲೀ ಕಂದಾಯಗಳನ್ನು ಮಾತ್ರ ಮೊದಲೇ ವಸೂಲುಮಾಡಿಕೊಳ್ಳುತ್ತಿದಾರೆ.

ಕಷ್ಟಾನುಭವಿ.

"ಧೊರಿ ತನಕ ದೂರು, ಹೊಳೆ ತನಕ ಓಟ."

ಅಯ್ಯಾ,—ಷೇಖ್ ಇಸ್ಮಾಯಿಲ್‌ನಾದ ನಾನು ನನ್ನ 18 ನೇ ವರುಷ ವಯಸ್ಸಿನಲ್ಲಿ ಇಂಡಿಯನ್ ಆರ್ಮಿ ಇಲಾಖೆಯಲ್ಲಿ 6 ವರುಷ ಸರ್ವಿಸ್ ಮಾಡಿ ನಂತರ ಮೈಸೂರು ಸೀಮೆಯ ತುಂಕೂರು ಡಿಸ್ಟ್ರಿಕ್ಟ್ ಸಿರಾ ತಾಲ್ಲೂಕಿನಲ್ಲಿ ಗೌರ್ನಮೆಂಟ್ ಹಿಂದಿ ಬಾಯ್ಸ್ ಸ್ಕೂಲಿನಲ್ಲಿ 1902 ನೇ ಇಸ್ವಿಯಲ್ಲಿ ಕನ್ನಡ ಮುನ್‌ಷಿ ಕೆಲಸವನ್ನು ಪಡೆದೆನು. ಅಲ್ಲಿಂದ ಚಿಕ್ಕನಾಯ್ಕನಹಳ್ಳಿ ಹಿಂದಿ ಬಾಯ್ಸ್ ಸ್ಕೂಲಿಗೆ ಅದೇ ಕೆಲಸಕ್ಕೆ ವರ್ಗಪಟ್ಟೆನು. 1906 ರ ಲಾಗಾಯ್ತು 1912 ನೇ ಜೂಲೈ 25 ರ ವರಿಗೂ ಕೆಲಸದಲ್ಲಿದ್ದು ನಂತರ ಕಾಯಿಲೆಯಾದ್ದರಿಂದ ಸಿಕ್ ರಜಾಕ್ಕೆ ರಿಪೋರ್ಟು ಗುಜರಾಯಿಸಿಕೊಂಡೆನು. ಅದಕ್ಕಾಗಿ 1912 ನೇ ಜೂಲೈ 25 ರ ಲಾಗಾಯ್ತು ಒಂದು ತಿಂಗಳು ಅರ್ಧ ತಲಬು ಸಿಕ್ ರಜಾ ಮಂಜೂರಾಯಿತು. ಅಲ್ಲಿಂದೀಚೆಗೆ ಕಾಯಿಲೆ ವಾಸಿ ಇಲ್ಲದ್ದರಿಂದ ಮೇಲ್ಕಂಡಂತೆ ಸರ್ಟಿಫಿಕೇಟ್ ಸಹಿತ ರಜಾಕ್ಕೆ ರಿಪೋರ್ಟುಮಾಡಿಕೊಂಡೆನು. ಇದರೊಳಗೆ ಬೇರೆ ಕಡೆ ವರ್ಗಾಯಿಸಲೂ ಅರ್ಜಿ ಮೂಲಕ ಕೇಳಿಕೊಂಡೆನು. ಅಲ್ಲದೆ ಕನ್ನಡ ಸ್ಕೂಲುಗಳಿಗಾದರೂ ಬದಲಾಯಿಸಿಕೊಡಿ ಎಂದೂ ಅರ್ಜಿ ಮೂಲಕ ಕೇಳಿಕೊಂಡೆನು. ಮೇಲ್ಕಂಡ ರಜಾ ರಿಪೋರ್ಟುಗಳಿಗಾಗಲಿ, ವರ್ಗಾವರ್ಗಿಯ ಅರ್ಜಿಗಳಿಗಾಗಲಿ ಯಾವ ವ್ಯವಸ್ಥೆಯನ್ನೂ ಇಲಾಖೆಯವರು ಮಾಡಲಿಲ್ಲ. ಕೊನೆಗೆ ದೀರ್ಘಕಾಲ ಗೈರಹಾಜರ್ ಆದ್ದರಿಂದ 1912 ನೇ ಆಗಸ್ಟ್ 25 ರಿಂದ ಕೆಲಸದಿಂದ ವಜಾ ಮಾಡಿರುತ್ತೆಂದು ಸರ್ಕಲ್ ಇನ್‌ಸ್ಪೆಕ್ಟರ ಆಫೀಸಿನಿಂದ ಒಂದು ವರುಷ ಮೂರು ತಿಂಗಳ ನಂತರ ನನಗೆ ಆರ್ಡರು ತಲಪಿರುತ್ತೆ. ಅದುವರಿಗೂ ಇಲಾಖೆ ಆಫೀಸರವರು ಮಲಗಿದ್ದರೋ ಅಥವಾ ಆಫೀಸುಗಳೇ ಮುಚ್ಚಿಹೋಗಿದ್ದವೋ ತಿಳಿಯದು.

ಇಷ್ಟೆಲ್ಲಾ ಆಗಿ ಮೇಲ್ಕಂಡ ಮಂಜೂರಾದ ಸಿಕ್ ರಜಾದ ಅರ್ಧ ತಲಬು ಇದುವರಿಗೂ ಎಷ್ಟೋ ಅರ್ಜಿಗಳನ್ನು ಬರೆದುಕೊಂಡಾಗ್ಯೂ ಇತ್ಯರ್ಥವಿಲ್ಲ; ಸಂಬಳವೂ ಇಲ್ಲ. ಈ ಅರ್ಜಿಗಳು ಸಹ ಮೊದಲಿನ ಅರ್ಜಿಗಳ ಹಾಗೆ ಮುಳುಗಿದವೋ ಹ್ಯಾಗೋ ತಿಳಿಯಲು ಅಸಾಧ್ಯ. ಆದ್ದರಿಂದ ಈ ಪ್ರಕಟನೆಯಿಂದಾದರೂ ಮೇಲ್ಕಂಡ ಸಂಗತಿ ಬಹಿರಂಗವಾಗಿ ಬಡವನಾದ ನನ್ನ ನಿಂತಿರುವ ಸಂಬಳವನ್ನು ಇಲಾಖೆಯವರು ನನಗೆ ಕೊಡಿಸಿಕೊಟ್ಟಾರೆಂದು ನಿರೀಕ್ಷಿಸುತ್ತೇನೆ.

ಆದಿನಾಯ್ಕನಹಳ್ಳಿ, ಹೊನ್ನವಳ್ಳಿ ಪೋಸ್ಟ್.

ಷೇಕ್ ಇಸ್ಮಾಯಿಲ್, ಪ್ರೈವೆಟ್ ಸ್ಕೂಲ್ ಮಾಸ್ಟರ್.

ಕುಂಸಿ ತಾಲ್ಲೂಕು ಆಯನೂರು ಸಂತೆ.

ಅಯ್ಯಾ,—ಈ ತಾಲ್ಲೂಕಿನ ಕೆಲವು ಗ್ರಾಮಗಳ ರೈತರ ಮತ್ತು ಪ್ರಯಾಣಿಕರ ಗೋಳೊಂದಿದೆ. ಅದೇನಂದರೆ ಈ ತಾಲ್ಲೂಕು ಆಯನೂರಲ್ಲಿ ಪ್ರತಿ ಭಾನುವಾರವೂ ದೊಡ್ಡ ಸಂತೆಯಾಗುತ್ತೆ. ಈ ಸಂತೆಗೆ 3-4 ಸಾವಿರ ಜನರು ಸೇರುತ್ತಾರೆ. ಸಾವಿರಾರು ಕುರಿ, ಕೋಣ, ಎಮ್ಮೆ, ಬೇಸಗೆಕಾಲದಲ್ಲಿ 500-600 ರವರೆಗೆ ಎತ್ತುಗಳು ವಗೈರೆ ರಾಸುಗಳೂ ಮಾರಾಟಕ್ಕೆ ಬರುತ್ತವೆ. ಈ ಸಂತೆಗೆ ಬಹು ದೂರದಿಂದ ಅಂದರೆ 30-40 ಮೈಲಿಯಿಂದಲೂ ಜನಗಳು ಬರುತ್ತಾರೆ. ಆದರೆ ಬೇಸಗೆ ಕಾಲದಲ್ಲಿ ಸಂತೆ ಪ್ರಯಾಣಿಕರು ಬಹು ಕಷ್ಟನಷ್ಟಗಳಿಂದ ಸಂತೆಗೆ ಹೋಗುತ್ತಾರೆ. ಮಳೆಗಾಲದಲ್ಲಂತೂ ಇವರ ಕಷ್ಟನಷ್ಟಗಳನ್ನು ಹೇಳಲೇ ಕೂಡದು. ಇವರ ವಿನಹ ಬಂಡಿಗಳು ಓಡಾಡುವುದಕ್ಕೆ ಸುತರಾಂ ಮಾರ್ಗವೇ ಇಲ್ಲ. ಸರ್ವೇಸಮಸ್ತ ಸಾಮಾನುಗಳನ್ನೂ ಕೆಲಗ್ರಾಮಸ್ಥರು ತಲೆಹೊರೆಯಿಂದಲೇ ಸಾಗಿಸುತ್ತಾರೆ. ಇದಕ್ಕೆ ಸರಿಯಾದ ರಾಜಮಾರ್ಗ ಇಲ್ಲದಿರುವದೇ ಮುಖ್ಯ ಕಾರಣವಾಗಿರುತ್ತದೆ. ಆದ್ದರಿಂದ ದಯಾನಿಧಿಗಳಾದ ನಮ್ಮ ಸರ್ಕಾರದವರು ನಿಗಾ ಕೊಟ್ಟು ಶಿವಮೊಗ್ಗಾದಿಂದ ಸಿಕಾರಿಪುರಕ್ಕೆ ಬಿಕ್ಕೋನಹಳ್ಳಿ, ಕುಂಚೇನಹಳ್ಳಿ, ಸವಳಂಗದ ಮಾರ್ಗವಾಗಿ ರಸ್ತೆಹೋಗಿರುತ್ತದಷ್ಟೆ. ಸದರಿ ಕುಂಚೇನಹಳ್ಳಿಯಿಂದ ಕವಲೊಡೆದು ತ್ಯಾಜುವಳ್ಳಿ ಕೊನಗವಳ್ಳಿ, ಚಿನವಳ್ಳಿ ಪುಗಟೇಕೊಪ್ಪದ ಮಾರ್ಗವಾಗಿ ಎಲವಳ್ಳಿ ಬಳಿ ಶಿವಮೊಗ್ಗಾದಿಂದ ಸಾಗರಕ್ಕೆ ಆಯನೂರು ಮಾರ್ಗವಾಗಿ ಹೋಗಿರುವ ರಸ್ತೆಗೆ ಸೇರಿಸಬಿಟ್ಟರೆ ಸಾಕು. ಈ ಸ್ಥಳಗಳಲ್ಲಿ ಚರಂಡಿಗಳು ಸಹ ಸಿಕ್ಕುವಹಾಗಿಲ್ಲ; ಹೆಚ್ಚು ಲಾಗುವದು ಕೂಡ ಹಿಡಿಯುವಹಾಗಿಲ್ಲ. ಇಂಥಾ ಸ್ಥಳಗಳಲ್ಲಿ ರಸ್ತೆ ಇಲ್ಲದಿರುವದರಿಂದ ಬಹು ಜನರು ಬಹು ಕಷ್ಟನಷ್ಟಗಳನ್ನು ಅನುಭವಿಸುತ್ತಾರೆ. ಈ ವಿಷಯವನ್ನು ನಮ್ಮ ಸರ್ಕಾರದವರು ಗಮನಕ್ಕೆ ತಂದುಕೊಂಡು ಈ ರಸ್ತೆಯನ್ನು ಮಾಡಿಸಿದರೆ ಪ್ರಜೆಗಳು ಬೇಸಗೆ, ಮಳೆಗಾಲ, ಹಗಲು, ರಾತ್ರಿ ಕೂಡ ನಿರ್ಭಯವಾಗಿ ಪ್ರಯಾಣ ಮಾಡಬಹುದು. ಆದರೆ ಈ ರಸ್ತೆ ಸುಮಾರು 6-7 ಮೈಲಿ ದೂರವಾಗಬಹುದು. ಈ ಸ್ವಲ್ಪದೂರ ರಸ್ತೆ ಮಾಡಿಸುವುದರಿಂದ ಬಹು ಜನರಿಗೆ ಉಪಕಾರವಾಗುತ್ತದೆ.

ಸ್ಥಳಿಕ.

[ಈ ರಸ್ತೆ ಆಗಬೇಕೆಂದು ಕುಂಸಿಯಲ್ಲಿರುವ ಬೋರ್ಡ್ ಮೆಂಬರುಗಳು ತಾಲ್ಲೂಕ್ ಮತ್ತು ಡಿಸ್ಟ್ರಿಕ್ಟ್ ಬೋರ್ಡುಗಳಲ್ಲಿ ಚರ್ಚೆಗೆ ತಂದು ಅಧಿಕಾರಿಗೆ ಹೇಳಬೇಕು. ಹಾಗಿಲ್ಲದಿದ್ದರೆ ಅಲ್ಲಿಗೆ ಹೋಗಿ ವ್ಯಾಪಾರಾದಿಗಳನ್ನು ಮಾಡತಕ್ಕ ವರ್ತಕರೇ ಮುಂತಾದವರು ಚಂದಾ ಹಾಕಿ ಸರ್ಕಾರದವರಿಗೆ ಒಪ್ಪಿಸಿದಲ್ಲಿ ಸರ್ಕಾರದಿಂದಲೂ ಕೆಲವು ಹಣಹಾಕಿ ಅವರೇ ಮಾಡಿಸಿಕೊಡಲು ಸಹಾಯವಾಗುತ್ತದೆ. ಮುಖ್ಯವಾಗಿ ಈಗ ಸ್ವಸಹಾಯವಿಲ್ಲದ ಕಡೆ ಪರಸಹಾಯ ಒದಗುವುದು ಅಪರೂಪ.—ಎಡಿ.]

ಸ್ವಧರ್ಮರಕ್ಷಣೆ.

ಅಯ್ಯಾ,—ಪ್ರತಿಯೊಂದು ಪತ್ರಿಕೆಯೂ ಸ್ವದೇಶದ ಏಳ್ಗೆಗೆ ತಕ್ಕ ಕನುಕರಣೀಯವಾದ ಪ್ರೋತ್ಸಾಹವನ್ನು ತಿಳಿಸುತ್ತಾ ಪತ್ರಿಕಾ ಪ್ರಾರಂಭ ಕಾಲ ಮೊದಲ್ಗೊಂಡು ದೇಶ ವಿದೇಶಗಳ ವಿದ್ಯಮಾನಗಳಲ್ಲಿ ನಮ್ಮ ದೇಶದ ಅಭಿವೃದ್ಧಿಯನ್ನೂ, ಪಾಶ್ಚಾತ್ಯಾಭಿವೃದ್ಧಿಯನ್ನೂ ಹೋಲಿಸಿ, ಸ್ವದೇಶಾಭಿವೃದ್ಧಿಗೆ ಸೂಕ್ತವಾದ ಅಭಿಪ್ರಾಯವನ್ನು ಅನೇಕರು ಅನೇಕ ವಿಧವಾಗಿ ಪ್ರಕಟಿಸಿ ಪಾಶ್ಚಾತ್ಯರ ಜ್ಞಾನೋದಯದಲ್ಲಿ ಸ್ವಲ್ಪವಾದರೂ ತಿಳಿದುಕೊಂಡು ದೇಶವು ಉಚ್ಛ್ರಾಯ ಸ್ಥಿತಿಗೆ ಬರಲೆಂದು ಅನೇಕ ಪಾಶ್ಚಾತ್ಯರ ದೃಷ್ಟಾಂತದಿಂದ ಅವರು ಯಾವ ರೀತಿ ಮುಂದಕ್ಕೆ ಬಂದು ಸಮಸ್ತರಿಂದಲೂ ಗೌರವಿಸಲ್ಪಡುವಂತೆ ಆದರೋ ಅಂಥ ಮೂಲೋತ್ಪತ್ತಿಯನ್ನು ತಿಳಿಸುತ್ತ ಸ್ವದೇಶದ ಏಳ್ಗೆಯನ್ನು ಅನೇಕ ಪತ್ರಿಕಾಧಿಪರು ಬಯಸುತ್ತಾ ಇರುವುದನ್ನು ಆಯಾ ಪತ್ರಿಕಾ ಮೂಲಕವೇ ತಿಳಿಯಬಹುದಾಗಿರುತ್ತೆ. ನಾವು ಪ್ರತ್ಯಕ್ಷದಲ್ಲಿ ವಿದೇಶದ ಚಿತ್ರವಿಚಿತ್ರ ವರ್ತನೆಗಳನ್ನು ತಿಳಿಯದೆ ನಮ್ಮ ಕಣ್ಣಿನ ನೋಟವನ್ನು ತೀರಿಸಿಕೊಳ್ಳದೆ ಇದ್ದರೂ ಪರೋಕ್ಷದಲ್ಲಿ ಶ್ರೋತ್ರೇಂದ್ರಿಯಕ್ಕೆ ಪತ್ರಿಕಾ ದ್ವಾರದಿಂದ ಪ್ರತ್ಯಕ್ಷ ತಂದು ಬೀಳುತ್ತಿರುವ ಅನೇಕ ಚಿತ್ರತರವಾದ ಸಾಧನಗಳನ್ನು ಅಲ್ಪಸ್ವಲ್ಪ ನೋಡುತ್ತಲೂ, ಪತ್ರಿಕೆಗಳು ನಮ್ಮನ್ನು ಅನವರತವೂ ಎಚ್ಚರಿಸುತ್ತಲೂ, ಇದ್ದರೂ ನಾವು ಎಚ್ಚರಗೊಳ್ಳದೆ ಗಾಢ ನಿದ್ರೆಯಲ್ಲಿ ಮುಳುಗಿರುವುದು ಶೋಚನೀಯವೇ ಸರಿ. ಅವು ಎಷ್ಟೋ ವಿಧವಾಗಿ ಎಚ್ಚರಿಸುತ್ತಿದ್ದರೂ ಅದರಂತೆ ಮಾಡುವುದಕ್ಕೂ ಕೂಡ ನಮಗೆ ಸಮರ್ಥತೆ ಇಲ್ಲದ ಮೇಲೆ ನಮ್ಮವರು ಅಂಥ ಕಣ್ಣಿನ ಪಟ್ಟವನ್ನು ಹೊಂದಿ ಸ್ವದೇಶದ ಏಳ್ಗೆಗೆ ಮೇಲ್ಪಂಕ್ತಿ ಹಾಕಿ ತೋರಿಸಬಲ್ಲರೇ? ನಮಗಿಂತ ಬಹು ಉನ್ನತ ಸ್ಥಿತಿಯನ್ನನುಭವಿಸುತ್ತಿರುವ ಸ್ವದೇಶದ ಪರದೇಶದ ವಿಚಾರಗಳು

ಆಗಾಗ್ಗೆ ಅವರವರ ವಿದ್ಯಮಾನಗಳು ಪ್ರಕಟಿಸುತ್ತಿದೆಯಷ್ಟೆ. ಅವರಲ್ಲಿ ಪತ್ರಿಕಾ ಸಮುದಾಯದಲ್ಲಿಯೇ ಉಳಿದು ಚರ್ಚಿಸುತ್ತವೆಯೇ ಹೊರತು ಅವರಂತೆ ಅವ್ಯ ಅನುಕೂಲಗಳನ್ನು ಧೈರ್ಯವಾಗಿ ಉತ್ಸಾಹದಿಂದ ಕಲ್ಪಿಸಿಕೊಂಡು, ಅವ್ಯಾರು ಜನ ಒಟ್ಟಾಗಿ ಸೇರಿ ಮಾಡುವ ಕೆಲಸಗಳು ಬಹು ವಿರಳವಾಗಿ, ದಿನೇ ದಿನೇ ಜನಗಳಲ್ಲಿ ನಂಬಿಕೆ, ಸಖ್ಯ, ವಿಶ್ವಾಸ, ಧೈರ್ಯ, ಉತ್ಸಾಹ, ಇವಲ್ಲಾ ಕ್ಷೀಣಿಸುತ್ತಾ ನಡೆದಿರುವುವೇ ಇದರ ಫಲವಾಗಿರುತ್ತದೆ. ಅವರಂತೆ ಉನ್ನತ ಸ್ಥಿತಿಯಲ್ಲಿ ಪ್ರವರ್ತಿಸುವುದಕ್ಕೆ ಬದಲು ಈ ಕಾಲದಲ್ಲಿ ಪಾಶ್ಚಾತ್ಯರ ಉಡುಪು ಮುಂತಾದವುಗಳಲ್ಲಿ ಅವರಂತೆ ತಮ್ಮ ಶರೀರವನ್ನು ಅಲಂಕರಿಸುವುದ ಅಲ್ಲಿ ಆಡಂಬರವ ಪ್ರತಿಯೊಬ್ಬರಲ್ಲಿ ತುಂಬಿರುತ್ತದೆಯೇ ಹೊರತು ದೇಶವನ್ನು ಶೋಭಾಯಮಾನಗೊಳಿಸುವುದಕ್ಕೆ ಪ್ರಯತ್ನಪಡದೆ ಇರುವುದು ಬಹು ವಿಷಾದವೇ ಸರಿ. ಆದರೆ ಪಾಶ್ಚಾತ್ಯರು ತಮ್ಮ ದೇಶಕ್ಕನುಸರಿಸಿ ಉಡಿಗೆ, ತೊಡಿಗೆ, ಆಹಾರಾದಿಗಳನ್ನು ಇಟ್ಟುಕೊಂಡು ತಮ್ಮ ಜಾತಿ ಕಟ್ಟಳೆಗೆ ಬದ್ಧರಾಗಿ ದೇಶೋದ್ಧಾರ ಕಾರ್ಯದಲ್ಲಿ ಪ್ರವರ್ತಿಸುತ್ತಿರುವರೇ ಹೊರತು, ತಮ್ಮ ದೇಶದ ಉಡುಗೆಯನ್ನೂ ಆಚಾರವ್ಯವಹಾರವನ್ನೂ ಯಾತ್ತಾತ್ಕವ ವಿಧವಾಗಿಯೂ ವ್ಯತ್ಯಸ್ತಗೊಳಿಸಲಿಲ್ಲ. ಆದರೆ ನಮ್ಮ ದೇಶದವರು ತಾವು ಹುಟ್ಟಿ ಬೆಳೆದು ದೊಡ್ಡವರಾಗಿರುವ ತಮ್ಮ ತಮ್ಮ ಆಚಾರವ್ಯವಹಾರದಲ್ಲೇ ನಿಕೃಷ್ಟವರ್ತನವನ್ನು ತೋರಿಸಿ, ಸ್ವಜನಗಳನ್ನೂ ಆಹಾರವನ್ನೂ ಸ್ವದೇಶದ ವಿಳ್ಯವನ್ನೂ ಕೈ ಕೊಳ್ಳದೆ, ಇತರ ನಾನಾವಿಧವಾದ ಆಚರಣೆಗಳನ್ನು ಕೈಕೊಂಡಿರುವರು. ಆದ್ದರಿಂದ ತಮ್ಮ ಸ್ವಕೀಯವಾದ ಆಚಾರವ್ಯವಹಾರಗಳಲ್ಲಿ ತಿರಸ್ಕಾರ ಭಾವವನ್ನು ತೋರಿಸದೆ ಸಚ್ಚರಿತ್ರರಾಗಿರ ಬೇಕಾದದ್ದು ಪ್ರತಿಯೊಬ್ಬ ದೇಶಾಭಿಮಾನಿಯ ಮತ್ತು ಮುಖಂಡನ ಕರ್ತವ್ಯವಾಗಿದೆ. ಸ್ವಧರ್ಮದಲ್ಲಿ ಒಳ್ಳೇ ಗುಣಗಳಿದ್ದರೂ ಹೀಯಾಳಿಸಿ ಬಿಟ್ಟು, ಅನ್ಯರಲ್ಲಿ ಕಾಣುವ ಕೆಟ್ಟ ಲಕ್ಷಣ ಆಚಾರಗಳನ್ನು ಅನುಕರಿಸಿದರೆ ನಾವು ಅಭಿವೃದ್ಧಿಗೆ ಬರಬಹುದೇ? ತಿಳಿದು ತಿಳಿದೂ ಮಾಡತಕ್ಕವರೇ ಬಹಳ ಮಂದಿ ಆಗಿದ್ದಾರೆ. ಆದಕಾರಣ ಉತ್ತಮವಾದ ಆಚಾರ ಧರ್ಮಗಳಲ್ಲಿ ನಮ್ಮವರು ಪ್ರವರ್ತಿಸಿ, ದೇಶದೇಳ್ಗೆಗೆ ಸಾಧಕವಾದ ದೇಶಾಭಿವೃದ್ಧಿಯ ಕಾರ್ಯದಲ್ಲಿ ತೊಡಗಿ ಈಗ ಬಂದಿರುವ ಕಾಲಮಾನಕ್ಕೆ ತಕ್ಕ ಆಲೋಚನೆ ಮಾಡಿ, ಹಿತಾರೋಪಾಯವನ್ನು ಕೈಕೊಳ್ಳುವವರಾಗಲೆಂದು ಪ್ರಾರ್ಥಿಸುತ್ತೇನೆ.

ಕೆ. ಶಿವಬಸವಯ್ಯ.

ಕ್ಯಾತನಹಳ್ಳಿ.

ಪ್ರೊಫೆಸರ್ ಗಜ್ಜರರವರ

ಗುಣಕಂಡ ಪ್ರಖ್ಯಾತವಾದ ಔಷಧಗಳು.

ವ್ಯರ್ಥವಾದ ಔಷಧಗಳನ್ನು ಉಪಯೋಗಿಸಿ ಪ್ರಾಣಾಪಾಯಕ್ಕೆ ಗುರಿಯಾಗುವುದೇಕೆ? ವಿವೇಕದಿಂದ ಕಯಾಪರ್ಯಾದಿಸುವ ನಮ್ಮ ಔಷಧಗಳನ್ನು ಸೇವನೆ ಮಾಡಬಾರದೇ?

ಟಾನಿಕ್ ಸೋಲ್ಯೂಷನ್.—ಇದರಲ್ಲಿ ಗ್ಲಿಸರಿನೋಫೇಟ್ಸ್ ಎಂಬ ಅಮೂಲ್ಯ ಪದಾರ್ಥಗಳನ್ನು ಹಾಕಿ ತಯಾರುಮಾಡಿದೆ. ಇದು ಬೇಗನೆ ದೇಹಕ್ಕೆ ಸೇರಿ ಹೋಗುತ್ತೆ. ಆರೋಗ್ಯವನ್ನೂ ಚಟುವಟಿಕೆಯನ್ನೂ ಶಕ್ತಿಯನ್ನೂ ವೃದ್ಧಿಮಾಡುವುದು. ನರಗಳ ದುರ್ಬಲವನ್ನು ಹೋಗಲಾಡಿಸುವುದರಲ್ಲಿ ಇದು ಬಹಳ ಶ್ರೇಷ್ಠವಾದ ಔಷಧ. ಕ್ರಯ ಶೀಸೆಗೆ 2 ರೂಪಾಯಿ, ಚಿಕ್ಕದು ರೂ. 1-2-0.

ರಕ್ತಶುದ್ಧಿಗೆ ಮಹೌಷಧ.—ಇದು ರಕ್ತವನ್ನೂ ದೇಹದ ಎಲ್ಲಾ ಭಾಗಗಳನ್ನೂ ಶುದ್ಧಿಮಾಡುತ್ತೆ. ಬಹಳ ಚೆನ್ನಾಗಿ ಗುಣಕಂಡ ಔಷಧ. ಕ್ರಯ ಶೀಸೆಗೆ 1 ರೂಪಾಯಿ.

ಲಿವರ್ ಸೊಲ್ಯೂಷನ್.—ಪಿತ್ತಕೋಶದ ಮೇಲೆ ಇದು ಬಹಳ ಚೆನ್ನಾಗಿ ಕೆಲಸಮಾಡುವುದರಿಂದ ಮಲಬದ್ಧತೆಯುಳ್ಳವರಿಗೆ ಮಹೋಪಕಾರವಾಗಿದೆ. ಜ್ವರಕ್ಕೂ ಇದನ್ನು ಕೊಡುತ್ತಾರೆ. ಇದು ಮನೆಯಲ್ಲಿ ಇದ್ದೇ ತೀರಬೇಕು. ಕ್ರಯ ಶೀಸೆಗೆ ರೂ. 1; ಮತ್ತು ರೂ. 0-10-0.

ಜ್ವರದ ಔಷಧ.—ವಿಷಮಶೀತಜ್ವರ, ನಿಂಬುಬರುವಜ್ವರ, ಅವಧಿಯಜ್ವರ, ಎಲ್ಲಾ ತರದ ಜ್ವರಗಳಿಗೂ ಇದು ಸಂಜೀವನವಾಗಿದೆ. ಇದು ಕ್ವಿನೈನ್ಗಿಂತ ಬಹಳ ಅಗ್ಗ. ಕ್ರಯ ಶೀಸೆಗೆ 10 ಆಣೆ; 4 ಆಣೆ.

ಹುಳುಕಡ್ಡಿ ಔಷಧ.—ಹುಳುಕಡ್ಡಿಯನ್ನು ಖಂಡಿತವಾಗಿ ಗುಣಮಾಡುತ್ತೆ. ಕ್ರಯ ಸೀಸೆಗೆ 4 ಆಣೆ.

ಹಲ್ಲುಪುಡಿ.—ಈ ಪುಡಿಯಿಂದ ಹಲ್ಲು ಉಜ್ಜಿಕೊಂಡರೆ ಬಾಯಿಗೆ ಸುವಾಸನೆ ಕೊಡುತ್ತೆ. ಹಲ್ಲು ನವಮ ಕೆಡದಂತೆ ಬಹಳ ಚೆನ್ನಾಗಿಟ್ಟು ಕಾಪಾಡುತ್ತೆ. ಕ್ರಯ ಸೀಸೆಗೆ 4 ಆಣೆ; 6 ಆಣೆ; 1 ರೂಪಾಯಿ.

ಇಂಗ್ಲೀಷಿನಲ್ಲೇ ನಮಗೆ ಕಾಗದವನ್ನು ಬರೆಯಬೇಕು.

ಸೋಲ್ ಏಜಂಟರು:—ಎಸ್. ವೈದ್ಯ ಮತ್ತು ಕಂಪನಿ,
ಪಾರ್ಕ್ ಟೌನ್, ಮದರಾಸ್.

[150-3]

ನಮ್ಮ ಏಜಂಟರಿಗೂ ಚಂದಾದಾರರಿಗೂ.

"ವೃತ್ತಾಂತ ಪತ್ರಿಕೆ"ಯ ಹೊಸ ವರುಷವು ಕಳೆದ ಜೂನ್ ತಿಂಗಳಿಂದ ಪ್ರಾರಂಭವಾಗಿದೆ. ನಮ್ಮ ಏಜಂಟರು ತಮ್ಮ ಸ್ಥಳದ ವಾಚಕರಿಂದ ಹೊಸ ವರುಷದ ಚಂದಾ ಒಂದು ರೂಪಾಯನ್ನು ಈ ವರೆಗೆ ಅಡ್ವಾನ್ಸಾಗಿ ವಸೂಲ್ಮಾಡಿದಾರೆಂದು ನಿರೀಕ್ಷಿಸುತ್ತೇವೆ. ಹಾಗೆ ಅಡ್ವಾನ್ಸು ಚಂದಾ ಕೊಡದೆ ಇರುವವರಿಗೆ ಏಜಂಟರು ಪತ್ರಿಕೆಗಳನ್ನು ಕೊಡಕೂಡದು.

ಚಂದಾದಾರರು ದಯವಿಟ್ಟು ನಮ್ಮ ಏಜಂಟರಿಗೆ ಹಾಲಿ ವರುಷದ ಚಂದಾ ಒಂದು ರೂಪಾಯಿ ಅಡ್ವಾನ್ಸಾಗಿ ಪಾವತಿಮಾಡಿ, ಅವಕ್ಕೆ ಅವರಿಂದ ಕ್ರಮವಾದ ಅಚ್ಚಾಗಿರುವ ರಸೀತಿಗಳನ್ನು ಪಡೆಯಬೇಕೆಂದು ಕೃತಜ್ಞರಾಗುತ್ತೇವೆ.

ಮ್ಯಾನೇಜರ್, "ವೃತ್ತಾಂತ ಪತ್ರಿಕೆ," ಮೈಸೂರು.

ಪಾಕೆಟ್ ಲೀವರ್ ವಾಚ್.

ಇದರ ಕ್ರಯ 6 ಬಹುಮಾನ ಸಮೇತ ರೂ. 2-13-0 ಮಾತ್ರ.

ಇದು ಮಕ್ಕಳ ಆಟದ ಬೊಂಬೆಯಂತೆ ಕೆಲವು ದಿವಸಗಳು ಆಟವಾಡಿ ಸಂತರ ಕೆಟ್ಟುಹೋಗುವಂಥಾ ಅಲ್ಪ ಗಡಿಯಾರವಲ್ಲ. ಶ್ರೇಷ್ಠವಾದ ಮತ್ತು ಬಹು



ಪ್ರಸಿದ್ಧವಾದ ಲೀವರು ಕೆಲಸದಿಂದ ತಯಾರಾದದ್ದು. ಗಂಭೀರವಾದ ಘಂಟೆ ಮತ್ತು ಮಿನಿಟ್ ಗಳ ಮುಳ್ಳುಗಳುಳ್ಳದ್ದು. ಬಹು ಬಲಿಷ್ಠವಾದ ಮತ್ತು ನಾಜೂಕಾದ ಯಂತ್ರಸಾಧನಗಳಿಂದ ತಯಾರಾಗಿರುತ್ತೆ. ಅನೇಕ ವರುಷಗಳ ಪರಿಯಂತರ ಬಾಳಿಕೆ ಬರುವಂಥಾದ್ದು. ಅದಕಾರಣ ಆರ್ಡರುಗಳು ಬಂದು ಸುರಿಯುತ್ತಿವೆ. ಬಹುಮಾನಗಳ ಪಟ್ಟಿ:—1 ವಾಚ್ ಸರಪಣಿ, 2 ಉತ್ತರ ಮಣಿ, 3 ಪರಿಮಳ ಅತ್ತರ್, 4 ಕರವಸ್ತ್ರ, 5 ಮೋಹದ ಉಂಗುರ, 6 ಸ್ಟೀಲು ಪಿನ್ನು. [145-5] ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ:—

ವಿಳಾಸ—ಬಿ. ಆರ್. ವೆಂಕಟರಮಣ ಅಂಡ್ ಕಂಪನಿ,
ನಂ. 7, ಕೋಪ್ ವೆಂಕಟಾಚಲಯ್ಯರ್ ಬೀದಿ, ಮದರಾಸು.

ನರೆಕೂದಲಿಟ್ಟುಕೊಂಡು

ಮುದುಕರಾಗಿ ಕಾಣುವುದೇಕೆ?

ದರ್ಬಾರ್ ಕೂದಲು ರಂಗು

ಒಂದು ಸಲ ಹಚ್ಚಿದರೆ 20 ವರುಷದ ಪ್ರಾಯದವರಂತೆ ಕಾಣುತ್ತೀರಿ. ಈ ರಂಗು ಹಚ್ಚಿಕೊಂಡರೆ ಕೂದಲು ಅಚ್ಚ ಕಪ್ಪಾಗಿ ಹೊಳೆಯುತ್ತೆ. ಈಗ

ಮಾರಿಕೆಗೆ ಬಂದಿರುವ ಅಲ್ಪತರದ ಕೂದಲಿಗೆ ಹಚ್ಚುವ ಬಣ್ಣಗಳೂ ರಂಗುಗಳೂ ತುಂಬಾ ಕೀಳುತರದವು; ಹಚ್ಚಿದ ಮೇಲೆ ಕೂದಲು ಕೆಂಚಾಗಿ ಅಸಹ್ಯವಾಗಿ ಕಾಣುತ್ತವೆ. ನಮ್ಮ "ದರ್ಬಾರ್" ಕೂದಲ ರಂಗು ಅಂಥಾದ್ದಲ್ಲ; ಬಹು ಮೇಲಾದದ್ದು. ಒಂದಾವರ್ತಿ ತರಿಸಿ ಪರೀಕ್ಷೆ ಮಾಡಿದರೆ ನೀವೇ ಸಂತೋಷಪಡುವಿರಿ. ಕ್ರಯ ಬ್ರಷು ಸಮೇತ ಬಾಟ್ಲಿ ಒಂದಕ್ಕೆ ರೂಪಾಯಿ 1; ಅಂಚೆ ಹಾಸಲು 4 ಆಣೆ. [163-1]

ವಿಳಾಸ—ವಿ. ಎ. ಎಸ್.
ಪಾಣಿ, 3, ಇರುಳಪ್ಪನ್
ಬೀದಿ, ಮದರಾಸ್.

ಗೃಹಕೃತ್ಯದ ನೋಟೀಸು.

ದೊಡ್ಡಬಳ್ಳಾಪುರ ತಾಲ್ಲೂಕು ಕಾಗಿಗಳ ಹೋಬಳಿ ಮೆಳೇಕೋಟೆ ದಲ್ಲಿರುವ ಮರಸು ಒಕ್ಕಲಿಗರ ಜಾತಿ ರಾಮಣ್ಣನ ಮಗ ನರಸಯ್ಯನು ರಿಗೂ ತಿಳಿಸುವದೇನೆಂದರೆ—ನನ್ನ ತಂದೆ ರಾಮಣ್ಣನಿಗೆ ಈಗ 65 ವರ್ಷ ಸ್ಸಾಗಿ ಬುದ್ಧಿ ವಿಕಲ್ಪವಾಗಿದೆ. ಈತನಿಗೆ ಮಕ್ಕಳು ಮೂರು ಗಂಡು ಮ ಕೆಲವು ಮೊಮ್ಮಕ್ಕಳೂ ಇದ್ದು ಎಲ್ಲ ಒಂದೇ ಕುಟುಂಬವಾಗಿ ಜೀವಿ ಸೋಲ್ವಿಂದ ನಮ್ಮ ತಂದೆಗೆ ಬುದ್ಧಿ ಸ್ವಸ್ಥವಿಲ್ಲದೆ ನನಗೆ ಈ ಮೆಳೆಕೋ ಲ್ಲೂ, ಮಾರಸಂದ್ರದಲ್ಲೂ ಇರುವ 1 ಗದ್ದೆ, 3 ಹೊಲ, 4 ಮನೆ, 1 ಇತರ ಸ್ಥಿತಿ ಮತ್ತು ಚರಜಂಗಮಗಳನ್ನು ನಮ್ಮ ಅನುಮತಿಯಿಲ್ಲದೆ ಭೋಗ್ಯ, ಆಧಾರ ಮುಂತಾದವುಗಳ ಮೂಲಕ ಸಾಲವಮಾಡುತ್ತಿದಾನೆ. ಪಿತ್ರಾರ್ಜಿತ ಮತ್ತು ಸ್ವಯಾರ್ಜಿತವಾದ ಆಸ್ತಿಗಳು 5 ಸಾವಿರ ರೂ ಬೆಲೆ ಬಾಳತಕ್ಕದ್ದಾಗಿವೆ. ಇವುಗಳ ಸ್ವತ್ತನ್ನು ಯಾರೇ ಆಗಲಿ ಯಾವ ವಿಧವಾಗಿಯಾಗಲಿ ನಮ್ಮಗಳ ಅನುಮತಿ ಇಲ್ಲದೆ ತಂದೆಯಿಂದ ಪಡೆಯಕೂಡದು. ಹಾಗೆ ಪಡೆದುಕೊಂಡರೆ ಅದು ಊರ್ಜಿತವಾಗದೆ, ಆದರಿಂದ ನಮಗೆ ಸಂಭವಿಸುವ ಎಲ್ಲಾ ನಷ್ಟಕ್ಕೂ ಗುರಿಯಾಗಬೇಕಾಗುತ್ತೆ.

ದೊಡ್ಡಬಳ್ಳಾಪುರ [165-1] ರುಜು ನರಸಯ್ಯ

ಸೋಲಾಪುರದ ಜವುಳಿ.

ಚಕ್ಕುಗಳು, ಶೀರೆಗಳು, ಕಿರಿಗೆಗಳು, ಪಂಚೆಗಳು.

ಇವುಗಳಲ್ಲಿ ಒಂದು ತೇಲ್ಗಿಂತ ಕಡಿಮೆ ಇಲ್ಲದೆ ಕೊಳ್ಳುವವರು ಈ ಕೆಳಗೆ ಕಂಡ ಸ್ಥಳಗಳಲ್ಲಿರುವ ನಮ್ಮ ಏಜಂಟರುಗಳಲ್ಲಿ ಸಿಗುವ ಇಂಡಿಯನಲ್ಲಿ ತರಿಸಿಕೊಳ್ಳಬಹುದು. ಸಮುಪಿನ ಬಟ್ಟೆಗಳೂ ಇವರಲ್ಲಿ ದೊರೆಯುತ್ತವೆ.

ಮೈಸೂರು, ನಂಜನಗೂಡು, ಚಾಮರಾಜನಗರ, ಈ ಪ್ರಾಂತ್ಯದವರು ಜಿ. ಎಸ್. ಶ್ರೀನಿವಾಸಯ್ಯನವರು ಕಂಪನಿ, ದೊಡ್ಡಪೇಟೆ, ಮೈಸೂರು, ಇವರಲ್ಲಿ;

ತುಮಕೂರು, ಹಾಸನ, ಕೋಲಾರ, ಚಿತ್ರದುರ್ಗ, ಈ ಪ್ರಾಂತ್ಯದವರು ಎಸ್. ನಾರಾಯಣರಾಯರು, ಅರಸಿಕೆರೆ, ಇವರಲ್ಲಿ;

ಕೋಲಾರಪೇಟೆ, ಚನ್ನಪಟ್ಟಣ, ಮದ್ದೂರು, ಶ್ರೀರಂಗಪಟ್ಟಣ, ಶಿವ ಈ ಪ್ರಾಂತದವರು ಬಿ. ಜಿ. ಕೌಶಿಕರು, 6 ಆರ್ಕಾಟ್ ಶ್ರೀನಿವಾಸಾಚಾರ್ಯ ಚಿಕ್ಕಪೇಟೆ, ಬೆಂಗಳೂರು ಸಿಟಿ, ಇವರಲ್ಲಿಯೂ ಬೇಕಾದ ಸಾಮಾನುಗಳನ್ನು ತರಿಸಿಕೊಳ್ಳಬಹುದು.

ಬಟ್ಟೆ ವಿಷಯಕ್ಕೆ ಕಾಗದವನ್ನೂ, ಮುಂಗಡ ಕಳುಹಿಸುವ ಹಣ ಕೆಳಗಿನ ವಿಳಾಸಕ್ಕೆ ರವಾನಿಸಬೇಕು. [28-27]

ಇಂಡಿಯನ್ ಕೊಆಪರೇಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್
159, ಕಿಲಾರಿ ರೋಡ್ (ತುಂಜಿಗರ ಪೇಟೆ), ಬೆಂಗಳೂರು

ಮೇಲಾದ ಜರಿಗೆ ರೇಷ್ಮೆ ಪಂಚೆಗಳು.

ಒಳ್ಳೇ ಸಮಯ! ಸಾವಿರಗಟ್ಲೆ ಖರ್ಚಾಗುತ್ತಿವೆ!! ನಂತರ ದೊರೆಯುವು

ಅನೇಕ ಪಂಚೆಗಳು ದಿವಸಾ ಖರ್ಚಾಗುತ್ತಾ ಇರುವುದರಿಂದ ಬೆಲೆಯು ತಗ್ಗಿಸಿರುತ್ತೇವೆ. ಜಾಗರೂಕ! ಕೈಂಗಾರಂಗನ್ನು ನಾಜೂಕಾದ

ಹೊಂದಿರುವ ಮೇಲಾದ ಅಸಲ್ ರೇಷ್ಮೆ ಗಳು ಸಣ್ಣಗಳ ಭಾಗದಲ್ಲಿ ಹೊಂದಿರುವು ಪಂಚೆಗಳನ್ನು ಮಾರಿಕೊಂಡಿರುವುದ್ದರಿಂದ ಕ್ಕಾಲು ಪಾಲು ಸರಕು ಖರ್ಚಾಗಿದೆ ಈಗ ಸ್ವಲ್ಪವೇ ಉಳಿದಿದೆ. ಈ ಪ ಸ್ತ್ರೀ ಪುರುಷರು ಬಾಲಕರು ಧರಿಸಲು ದು. ಅಪೂರ್ವವಾದ ಪಂಚೆಗಳು. ಕೆಂಪು, ಹಸರು, ಎಲೆಹಸರು, ನೀಲಿ, ಊದ, ಇತ್ಯಾದಿ ರಂಗುಗಳುಂಟು. ಉತ್ಕೃಷ್ಟವಾದ ಪಂಚೆಗಳು. ಈ ಜೋಡಿಗೆ ನಮ್ಮಲ್ಲಿ ಅಲ್ಲದೆ ಮತ್ತೆ ಯೂ ದೊರೆಯಲಾರದು.

5½ ಮೊಳ ಉದ್ದ, 3½ ಮೊಳ ಅಗಲ ಇರುವ ಪಂಚೆ ಒಂದಕ್ಕೆ ಪಂಚೆ 1 ಕ್ಕೆ ಟಪಾಲು ಖರ್ಚು 4 ಆಣೆ. ಎರಡು ಪಂಚೆಗಳನ್ನು ಒಂದೆ ತರಿಸಿಕೊಂಡರೆ ಟಪಾಲು ಖರ್ಚು ಇನಾಂ.

ನಮ್ಮ ವಿಳಾಸ—ಎಸ್. ಎಂ. ಸ್ವಾಮಿ ಅಂಡು ಕಂ
[109-12] ನಂ. 41, ನಂಬುಳಯ್ಯರ್ ಬೀದಿ, ಮ

CLEARANCE SALE! CLEARANCE S

ನೀವು ಬೈಸಿಕಲ್ಲನ್ನು ಕೊಳ್ಳಬೇಕೆಂದು ಅಭಿಪ್ರಾಯಪಟ್ಟಲ್ಲಿ ವಿಶೇಷ ಪ್ರಖ್ಯಾತಿಹೊಂದಿ ಅನೇಕ ಕಾಲ ಕಷ್ಟ ಕೊಡದೆ ಕೆಲಸಮಾಡುವಂಥಾ

ಬ್ರಿಟಾನಿಯಾ ಪಾಪುಲರ್ ಬೈಸಿಕಲ್ಲನ್ನು

ಉಪಯೋಗಿಸಬೇಕು.



1. ಡನ್ಲಾಪ್ ಟಯರ್ಸ್.
2. ಸ್ಪ್ರಿಂಗು ಸಾಡಲ್.

ಮೇಲೆ ಹೇಳಿದ ಎರಡರ ಕೂಡ 80 ರೂಪಾಯಿಗೆ ಮಾಡುವಂಥಾ ಭಾರಿ ಬೈಸಿಕಲ್ಲನ್ನು ಯಾರೇ ಆಗಲಿ ಈ ಕಾಣಿಸಿರುವ ಸ್ವಲ್ಪ ಬೆಲೆಗೆ ಮಾರಲಿಲ್ಲ. ಈ ಬೈಸಿ ಇಂಗ್ಲೆಂಡ್ ದೇಶದಲ್ಲಿ ಬಹುಕಾಲದಿಂದ ಪ್ರಖ್ಯಾತಿಹೊಂ ಕಂಪೆನಿಯವರಲ್ಲಿ ಒಳ್ಳೇ ಸಾಮಾನುಗಳಿಂದ ಮಾಡಿದ್ದಾಗಿ

ನಾವು ಇವುಗಳನ್ನು ಬಹಳ ಹೆಚ್ಚಾಗಿ ತರಿಸುವುದಕ್ಕೆ ಏನೆಂದರೆ ಇವನ್ನು ದಕ್ಷಿಣ ಇಂಡಿಯದಲ್ಲಿರುವ ಜನರಲ್ಲಿ ಮಾಡಬೇಕೆಂತಲೇ? ಆದ್ದರಿಂದ ಇವನ್ನು ನೂರಕ್ಕೆ 25 ರೂ ಕಮಿಷನ್ ಕೊಟ್ಟು ಮಾರಿಬಿಡುತ್ತೇವೆ.

ಇದರ ಕ್ರಯ ರೂ. 80.

ಈಗ ಕಮಿಷನ್ ತೆಗೆದು ಮಾರುವ ಕ್ರಯ ರೂ.

ಕೇಮ್ಬ್ರಿಡ್ಜ್ ಟೈಯರ್ ಉಳ್ಳದ್ದರ ಕ್ರಯ ,,

ಕೆಟಲಾಗು ಉಚಿತವಾಗಿ ಕಳುಹಿಸಲಾಗುತ್ತೆ.

ವಾಟ್ಸನ್ ಅಂಡು ಕಂಪೆನಿ, ನಂ. 164, ಬ್ರಾಡ್ವೆ, ಮದರಾಸ್.

ಪ್ರಜಾಪ್ರತಿನಿಧಿಗಳಿಗೆ ಸೂಚನೆ.

ಈ ಕೆಳಗೆ ಕಂಡ ಅಂಶಗಳನ್ನು ರೆಪ್ರಜಂಟೆಟಿವ್ ಅಸಂಬ್ಲಿಯಲ್ಲಿ ಚರ್ಚಿಸಿ ಜನಗಳ ಕಷ್ಟಗಳನ್ನು ನಿವಾರಣೆಮಾಡಬೇಕಾಗಿ ಕೋರುತ್ತೇನೆ.

(1) ಕಂಪೌಂಡರುಗಳ ಸಂಬಳದ ಸ್ಕೇಲನ್ನು 8 ರೂಪಾಯಿ ತಪ್ಪಿಸಿ 12, 15, 20 ರೂಪಾಯಿಗಳಿಗೆ ಹೆಚ್ಚಿಸಿಕೊಡಬೇಕು ಮತ್ತು ಎಲ್ಲಾ ಇಲಾಖಾ ನೌಕರರುಗಳಿಗೆ ಮಲೆನಾಡು ಅಲೋಯನ್ಸು ಕೊಡುವಂತೆ ಕಂಪೌಂಡರುಗಳಿಗೂ ಸ್ಕೂಲ್ ಮಾಸ್ಟರುಗಳಿಗೂ ಮಲೆನಾಡು ಪ್ರದೇಶದಲ್ಲಿ ಮಲೆನಾಡು ಅಲೋಯನ್ಸು ಕೊಡಬೇಕು (2) ಈಗಿನ ದಿನಸಿ ಧಾರಣೆಗಳಲ್ಲಿ ಅಲ್ಪ ಸಂಬಳಗಾರರು ಜೀವನಮಾಡುವುದು ಕಷ್ಟವಾಗಿರುವುದರಿಂದ ಸಂಸ್ಥಾನಾವಳಿ 8 ರೂಪಾಯಿಗೆ ಕಡಮೆ ಇಲ್ಲದಂತೆ ಸಂಬಳ ಹೆಚ್ಚು ಮಾಡುವುದು. (3) ಸಬ್ ಅ॥ ಸರ್ಜನ್ನರುಗಳಿಗೂ ಸ್ಕೂಲ್ ಮಾಸ್ಟರುಗಳಿಗೂ ಟ್ರಾವೆಲಿಂಗ್ ಅಲೋಯನ್ಸು ದರವನ್ನು 2 ಆಣೆ ತಪ್ಪಿಸಿ 4 ಆಣೆ ಕೊಡುವಂತೆ ಮಾಡಬೇಕು. (4) ಚೈಫ್ ಇನ್ಸ್‌ಪೆಕ್ಟರ್ಸು ಪಾಲಿಸಿ ಹೋಲ್ಡರುಗಳಿಗೆ ಅವರ ಬೋನಸ್ ಮೊಬಲಗಿಗೆ ಬಡ್ಡಿ ಕೊಡಬೇಕು. (5) ಎಲ್ಲಾ ಇಲಾಖಾ ನೌಕರರುಗಳಿಗೂ ಮಲೆನಾಡು ಸ್ಥಳಗಳಲ್ಲಿ ವಾಸಕ್ಕೆ ಮನೆಯನ್ನು ಸರ್ಕಾರದಿಂದ ಕಟ್ಟಿಸಿಕೊಟ್ಟು ಅವರಿಂದ ಬಾಡಿಗೆ ತೆಗೆದುಕೊಳ್ಳುವಂತೆ ಅನುಕೂಲಪಡಿಸಬೇಕು.

ಜನಗಳ ಹಿತಚಿಂತಕ

ವಿಧವಾ ಅನಾಥಾಲಯದ ಪ್ರತಿಷ್ಠೆಯು.

ಕಳೆದ ತಾ. 21 ನೇ ಮಂಗಳವಾರ ಬೆಳಗ್ಗೆ ಬೆಂಗಳೂರಿಂದ ವಿಸ್ಲಿಯನ್ ಮಿಷನ್ ಚೇರ್‌ಮನ್ನರಾದ ರೆವ್॥ ಜೆ. ಡಬ್ಲಿಯು. ಸಾಡೆ ಧೊರೆಯವರೂ ಅವರ ಸಂಗಡ ರೆವ್. ಎಡ್ವರ್ಡ್ಸ್ ಸಾಹೇಬರೂ, ಇವರ ಪತ್ನಿಯವರೂ ದೊಡ್ಡಬಳ್ಳಾಪುರಕ್ಕೆ ದಯಮಾಡಿಸಿದರು. ಮೋರಿಬಾಯಿಯವರ ವಿಧವಾ ಅನಾಥ ಆಶ್ರಮವು ಹೊಸದಾಗಿ ಮೂರು ಸಾವಿರ ರೂಪಾಯಿಗಳಿಂದ ಹೊಸ ಕಟ್ಟಡಗಳು ಕಟ್ಟಲ್ಪಟ್ಟು ಮುಗಿದಿದ್ದವು. ಅವುಗಳನ್ನು ಪ್ರತಿಷ್ಠೆಮಾಡಲಿಕ್ಕೆ ಈ ದಿನ ನೇಮಕವಾಗಿತ್ತು. ಘನ ಚೇರ್‌ಮನ್ ಸಾಡೆ ಬೋಧಕರು ಅಗ್ರಸ್ಥರಾಗಿಯೂ ಅಪಂ ಅಳಿಯಂವರು ಸಹಾಯ ಬೋಧಕರಾಗಿಯೂ ಆರಾಧನೆಗಳನ್ನು ನಡಿಸಿದರು. 4 ಮಂದಿ ಹೆಂಗಸರೂ ಮಕ್ಕಳೂ ದೀಕ್ಷಾಸ್ನಾನ ಹೊಂದಿದರು. ಈ ನಾಲ್ಕು ಮಕ್ಕಳು ಅನಾಥ ಮನೆಗೆ ಸೇರಿದವರಲ್ಲ; ಸಾಲನ್ ಜೋಗಿಹಳ್ಳಿಯಲ್ಲಿರುವ ಕ್ರೈಸ್ತ ಬೋಧಕನ್ ಅಯ್ಯನ ಮೊಮ್ಮಕ್ಕಳಾಗಿದ್ದಾರೆ. ಈ ಹೊಸದಾಗಿ ಕಟ್ಟಲ್ಪಟ್ಟಿರುವ ಬಂಗ್ಲೆಯೂ, ಅನಾಥ ಆಶ್ರಮವೂ ಹಸರು ಚಪ್ಪರ, ತೋರಣ, ಪುಷ್ಪಗಳಿಂದ ಬಹಳ ಶೃಂಗಾರವಾಗಿತ್ತು. ಈ ಕೂಟಕ್ಕೆ ಅನೇಕ ಊರಿನ ದೊಡ್ಡ ಮನುಷ್ಯರೂ ಕರೆಯಿಸಲ್ಪಟ್ಟಿದ್ದರು. ಪ್ರತಿಷ್ಠಾ ಆರಾಧನೆಯೂ, ಸ್ಥಳಿಕ ಪ್ರಸಂಗಿಯವರಿಂದ ಭಗವತ್ ಪ್ರಾರ್ಥನೆಯೂ ನಡೆದ ಮೇಲೆ ಈ ಕಟ್ಟಡಕ್ಕೆ ಸಹಾಯ ಮಾಡಿದವರ ಹೆಸರುಗಳನ್ನೂ ಅವರ ಪ್ರೀತಿ ಉಪಕಾರ್ಯವನ್ನೂ ಮಿಸ್ ಥಾಕ್ಸ್ ಯವರು ಕನ್ನಡದಲ್ಲಿ ಓದಿದರು. ಅನಂತರ ನಡತೆ ಎಂಬ ವಿಷಯವಾಗಿ ಘನ ಸಾಡೆ ಧೊರೆಯವರು ಅತ್ಯಂತ ಬಲವಾದ ಮತ್ತು ರುಚಿಕರವಾದ ಪ್ರೋತ್ಸಾಹಪೂರ್ವಕ ಉಪನ್ಯಾಸವನ್ನು ಮಾಡಿದರು. ಈ ಮಧ್ಯೆ ಆಶ್ರಮದ ಸ್ತ್ರೀಯರ ಮಕ್ಕಳ ಸಂಗೀತಗಳೂ, ನೂತನ ಕೀರ್ತನೆಗಳೂ ಬಹು ಸಂತೋಷವಾಗಿ ನಡೆದವು. ಈ ದಿನದ ಅತಿಥಿಗಳಿಗೂ ಅಬಲಾಶ್ರಮದವರಿಗೂ ಶ್ರೇಷ್ಠವಾದ ಭೋಜನವು ಮೋರಿಬಾಯಿಯವರಿಂದ ನಡಿಸಲ್ಪಟ್ಟಿತು. ಹಿಂದೂ ಸ್ನೇಹಿತರಿಗೆಲ್ಲಾ ಗಂಧಪುಷ್ಪ ತಾಂಬೂಲಗಳು ಹಂಚಲಾಯಿತು. ಚೇರ್‌ಮನ್ ಸಾಹೇಬರೂ ಅವರ ಸುವಾರ್ತೆಯವರೂ ದೊಡ್ಡಬಳ್ಳಾಪುರಕ್ಕೆ ಹೋಗಿ ಅಲ್ಲಿರುವ ಎ. ವಿ. ಸ್ಕೂಲನ್ನು ಪರಾಂಬರಿಸಿ ಬಹಳ ಸಂತೋಷಪಟ್ಟು ವಾಪಸು ಬೆಂಗಳೂರಿಗೆ ಸಾಯಂಕಾಲ ತೆರಳಿದರು.

ಪ್ರೇಕ್ಷಕ.

ಒಂದು ಪರಸ್ಪರ ಸಹಾಯ ಸಂಘದ ಪ್ರಾರಂಭೋತ್ಸವ.

ಚಾಮರಾಜನಗರ ತಾಲ್ಲೂಕು ರಾಮಸಮುದ್ರ.

ಇದೇ ಜುಲೈ ತಾ. 10 ನೇ ಶುಕ್ರವಾರ ಸಾಯಂಕಾಲ ಈ ಊರಿನ ಗವರ್ನ್‌ಮೆಂಟ್ ಸ್ಕೂಲ್ ಕಟ್ಟಡದಲ್ಲಿ ಶ್ರೀ ಓಂಕಾರೇಶ್ವರ ಸ್ವಾಮಿಯ ಪರಸ್ಪರ ಸಹಾಯ ಸಂಘದ ಪ್ರಾರಂಭೋತ್ಸವವು ಅತ್ಯಂತ ವಿಜೃಂಭಣೆಯಿಂದ ನಡಿಸಲ್ಪಟ್ಟಿತು. ಸಾಯಂಕಾಲ 6 ಘಂಟೆಗೆ ಸೊಸೈಟಿ ಇನ್ಸ್‌ಪೆಕ್ಟರ್ ಮ॥ ಪುಟ್ಟಸಾಮಯ್ಯನವರು, ಅಮಲ್ದಾರ್‌ರು, ಪೋ. ಇನ್ಸ್‌ಪೆಕ್ಟರವರು, ಸಬ್ ರೆಜಿಸ್ಟ್ರಾರ್ ಮೊದಲಾದವರು ತಮ್ಮ ಮಿತ್ರ ಮಂಡಲಿಯೊಡನೆ ಕದಳೀ ತೋರಣಗಳಿಂದ ಅಲಂಕೃತವಾದ ಸಭಾ ಸದನವನ್ನು ಮಂಗಳವಾದ್ಯ ಘೋಷದೊಡನೆ ಪ್ರವೇಶಿಸಿದರು. ಸ್ಥಳದ ದೊಡ್ಡ ಮನುಷ್ಯರುಗಳೂ, ಸ್ಕೂಲ್ ಮಾಸ್ಟರುಗಳೂ ಹಾಜರಾಗಿದ್ದರು. ಸಭಿಕರ ಕೋರಿಕೆಯಂತೆ ಅಮಲ್ದಾರ್ ಮ॥ ವೆಂಕಟಸಾಮಯ್ಯನವರು ಅಗ್ರಾಸನವನ್ನಲಂಕರಿಸಿ, ಪರಸ್ಪರ ಸಹಾಯ ಸಂಘದ ಉದ್ದೇಶ ಮತ್ತು ಪ್ರಯೋಜನವನ್ನು ಸಂಗ್ರಹವಾಗಿ ತಿಳಿಸಿ, ಎಲ್ಲರೂ ಸಂಘಕ್ಕೆ ಸೇರಿ ಅಭಿವೃದ್ಧಿ ಹೊಂದಬೇಕೆಂದು ಅಪ್ಪಣೆ ಕೊಡಿಸಿದರು. ಸೊಸೈಟಿ ಇನ್ಸ್‌ಪೆಕ್ಟರವರು ಪ್ರಜೆಗಳ ಸಂಶಯಗಳನ್ನು ಪರಿಷ್ಕಾರವಾಗಿ ಹೋಗಲಾಡಿಸಿ ಈ ಸಂಘಕ್ಕೆ ಸೇರುವುದರಿಂದ ಯಾವ ಕೆಡಕೂ ಉಂಟಾಗುವುದಿಲ್ಲವೆಂಬುದನ್ನು ಸ್ಥಿರಪಡಿಸಿದರು. ಸಂಘದ ಚರಿತ್ರೆಯು ಸೆಕ್ರಟರಿಯವರಿಂದ ಸಂಗ್ರಹವಾಗಿ ಓದಲ್ಪಟ್ಟಿತು. ತರುವಾಯ ಧನಲಕ್ಷ್ಮೀಪೂಜೆ ನೆರವೇರಿ ಮಂಗಳಾರತಿ ಬೆಳಗಿದ ನಂತರ ನಮ್ಮನ್ನಾಳುವ ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನೆ ನಡೆದು ಸಭೆ ಮುಕ್ತಾಯವಾಯಿತು.

ಒಬ್ಬ ಸಭಿಕ.

ಒಂದು ಜನರಲ್ ಮೀಟಿಂಗು.

ಸಿರಾ ತಾಲ್ಲೂಕು ಮದಲೂರು ಶ್ರೀ ಆಂಜನೇಯ ಪರಸ್ಪರ ಸಹಾಯ ಸಂಘದ ಜನರಲ್ ಮೀಟಿಂಗು ಪ್ರೆಸಿಡೆಂಟ್ ಮ॥ ಚಿಕ್ಕತಿಮ್ಮೇಗೌಡರ ಅಧ್ಯಕ್ಷತೆಯಿಂದ ತಾ. 16 ನೇ ಗುರುವಾರ ಗೌರ್ನಮೆಂಟ್ ವಿ. ಇ ಸ್ಕೂಲ್ ಕಟ್ಟಡದಲ್ಲಿ ನಡಿಸಲ್ಪಟ್ಟಿತು. ಸೆಕ್ರಟರಿ ಮ॥ ವೆಂಕಟರಾಮಯ್ಯನವರು ಪರಸ್ಪರ ಸಹಾಯ ಸಂಘಗಳಿಂದುಂಟಾಗುವ ಪ್ರಯೋಜನಗಳನ್ನು ಕುರಿತು ಉಪನ್ಯಾಸಮಾಡಿದರು. ಮ॥ ಕರಣಂ ಎಂ ರಾಮಣ್ಣನವರು ವರ್ತಮಾನ ಪತ್ರಿಕೆಗಳಿಂದುಂಟಾಗುವ ಪ್ರಯೋಜನಗಳನ್ನು ಸಂಭಾಷಣೆಮಾಡಿದ ನಂತರ ಸಭಿಕರಿಗೆ ಗಂಧಪುಷ್ಪ ತಾಂಬೂಲಾದಿಗಳು ಹಂಚಲ್ಪಟ್ಟು ಸಭೆ ಮುಕ್ತಾಯವಾಯಿತು.

ವಾಚಕ.

ಸಚಿತ್ರ. ಚಾತುರ್ಯ. ಮಾಸಪತ್ರಿಕೆ.

ಈ ಮಾಸಪತ್ರಿಕೆಯಲ್ಲಿ ಪ್ರತಿ ತಿಂಗಳಲ್ಲಿಯೂ ವಿನೋದ, ಹಾಸ್ಯ, ನೀತಿ, ಧರ್ಮ ವಿಷಯಕವಾದ ಲೇಖನಗಳೂ, ಅದಕ್ಕೆ ಅನುಗುಣವಾದ ಚಿತ್ರಗಳೂ ಪ್ರಕಟಿಸಲ್ಪಡುತ್ತೆ. ಈ ಪತ್ರಿಕೆಯನ್ನು ಓದುವದರಿಂದ ವಾಚಕರಿಗೆ ಮನಸ್ಸಿಗೆ ಉತ್ಸಾಹವೂ, ಧರ್ಮಬುದ್ಧಿಯೂ, ಜ್ಞಾನವೂ ಉಂಟಾಗುವದರಲ್ಲಿ ಸಂದೇಹವಿಲ್ಲ. ವಾರ್ಷಿಕ ಚಂದಾ ಅಂಚೆ ವೆಚ್ಚ ಸೇರಿ 1 ರೂಪಾಯಿ.

ವಿಳಾಸ:—ಮ್ಯಾನೇಜರ್, "ಚಾತುರ್ಯ" ಆಫೀಸ್,

[164-1] ಚಾಮರಾಜಪೇಟೆ, ಬೆಂಗಳೂರು ಸಿಟಿ.

Full Notes and **Examiner** on L. S. E. Texts (1915)—**Both Tanglewood and Fairy Tales**, with Author's life, meanings, explanations, summaries, constructions and questions. Price **Annas 5. English Papers.**—Subscription **Re. 1¼ only.** Special copy **As. 6. Spelling Book As. 4.** (Postage extra).

Apply to, **M. N. Sitarama Rao,**

[100-13] **Krishnaraja Mohalla, Mysore.**

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ:— ಬೆನ್ನಿನಲ್ಲಿ ಛಳುಕು; ನಿದ್ದೆಯಿಲ್ಲದೆ ಇರುವುದು; ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಿಳುಪಾಗಿಯೋ ಇಳಿಯುವುದು; ಬಿಡದೆ ಬಾಯಾರಿಕೆ; ಬಳಲಿಕೆ; ಎದೆ ಕಲ್ಲಣಿಸುವುದು; ತಲೆನೋವು; ಗಾಬರಿ; ಕಣ್ಣುಮೊಬ್ಬು; ತಲೆ ತಿರುಗುವಿಕೆ; ಮೈನೋವು, ಕೀಲುನೋವು; ಮರವು; ನಿಶ್ಶಕ್ತಿ; ಇವೇ ಮೊದಲಾದುವು. ಅಲಕ್ಷ್ಯಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [181-47]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ಸ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು.



ರೂ. ೨—೦—೦; ಅಥವಾ ೬ ಬುಡ್ಡಿಗಳಿಗೆ ರೂ. ೧೦—೮—೦. ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುವು. ಅಥವಾ ಡೋನ್ಸ್ ಪಿ. ಒ. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು

S U. N. & Co.,

BENARES CITY, U. P.

ಸೊಗಸಾದ ಸರಕುಗಳು !!
ದೊಡ್ಡ ಕಂಪೆನಿ !

ಈ ನಮ್ಮ ಕಂಪನಿಯಲ್ಲಿ ನೆಯಿದು ತಯಾರಿಸುವ ಉತ್ತಮವಾದ ಬನಾರಸ್ ರೇಷ್ಮೆ ಜರೀ ಸೀರೆಗಳು, ಕಣ; ಪೇಟಾ, ಕಾಶ್ಮೀರ್ ಶಾಲು, ದುಪ್ಪಟ್ಟಿ, ಮಗುಟ, ಜಗನ್ನಾಥ ಜಾಗಟೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಕ್ಯಾಟಲಾಗ್ 1 ನ್ನು ಮತ್ತು 2 ವಿಶ್ವೇಶ್ವರ ಪಟಗಳನ್ನು ಇನಾಮಾಗಿ ಕಳುಹಿಸಲಾದೀತು. [69-20]

ಎಸ್. ಯು. ಎನ್. ಮತ್ತು ಕಂಪೆನಿ, ಕಾಶಿ.

ಶ್ರೀ ಕೃಷ್ಣ ಕಸ್ತೂರಿ ಮಾತ್ರೆ

ಬಿ. ವಿ. ಪಂಡಿತರ

250 ಮಾತ್ರೆಯುಳ್ಳ ಸೀಸೆಗೆ 4 ಆ.; 5 ಸೀಸೆಗಳಿಗೆ 1 ಇನಾಂ.

ಈ ಮಾತ್ರೆಗಳ ಬೆಲೆಯನ್ನು ನೋಡಿ ಇವರ ಗುಣವನ್ನು ಊಹಿಸಲಾಗದು. ಟಿಬೆಟ್ ದೇಶದ ಕಸ್ತೂರಿಯಿಂದಲೇ ಶಾಸ್ತ್ರೋಕ್ತವಾಗಿ ತಯಾರಿಸಲ್ಪಡುತ್ತಿರುವ ಈ ಶ್ರೀಕೃಷ್ಣ ಕಸ್ತೂರಿ ಮಾತ್ರೆಗಳು ಸುವಾಸನೆಯಾಗಿರುವುದು ಮಾತ್ರವಲ್ಲದೆ ತಾಂಬೂಲದೊಡನೆ ಅಥವಾ ಹಾಗೆಯೇ ಸೇವಿಸಿದರೆ ಎಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸುವುದು. ಮಕ್ಕಳಿಗೆ ಉಂಟಾಗುವ ಅಜೀರ್ಣಭೇದಿ-ಜ್ವರ-ಕೆಮ್ಮು-ನೆಗಡಿ-ಉಳವು-ಹೊಟ್ಟೆಯುಬ್ಬರ-ಈ ರೋಗಗಳನ್ನು ಸವಿಾಪದಲ್ಲಿಯೇ ವೈದ್ಯನಿದ್ದಂತೆ ಕ್ಷಣ ಗುಣಪಡಿಸುವುದು. ಪ್ರಯಾಣಿಕರಿಗೂ ಸೊಂಕು ರೋಗಸ್ಥಳದಲ್ಲಿರುವವರಿಗೂ ಮಲೆನಾಡಿನಲ್ಲಿರುವವರಿಗೂ ಇದರಂತೆ ಮತ್ಯಾವುದೂ ಆರೋಗ್ಯವನ್ನು ಕೊಟ್ಟು ಕಾಪಾಡಲಾರದು. [220-39]

ವಿಷಮಜ್ವರಗಳು-ನೆಗಡಿ-ಕೆಮ್ಮು-ತಲೆನೋವು-ಅಗ್ನಿಮಾಂದ್ಯ-ಶೀತವಾಯು-ಹಲ್ಲುನೋವು-ಮಲಬಂಧ-ಅರೋಚಕ-ನರಗಳ ದೌರ್ಬಲ್ಯ—ಈ ರೋಗಗಳನ್ನು ಪ್ರತಿಯೊಬ್ಬರಿಗೂ ಗುಣಪಡಿಸಿ ರಕ್ತವೃದ್ಧಿಯನ್ನುಂಟುಮಾಡುವುದು. ಸಾವಿರಾರು ಜನರು ಪರೀಕ್ಷಿಸಿದ್ದಾರೆ. ಟಪಾಲ್ ಖರ್ಚು 12 ಸೀಸೆ ವರೆಗೆ 4 ಆಣೆ.

ವಿಳಾಸ—ಮ್ಯಾನೇಜರ್, ಸದ್ವೈದ್ಯಶಾಲಾ, ನಂಜನಗೂಡು.

ಅಮೃತಾಂಜನ ರಿಜಿಸ್ಟರ್ಡ್

ಇದು ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು. ಇದರ ಉಪಯೋಗದಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗವಾಯು, ಉಳುಕು, ಕೆಮ್ಮು, ಸೊಂಟದನೋವು, ಶೀತ, ಚರ್ಮ ವ್ಯಾಧಿ, ಹಲ್ಲುನೋವು, ಚೇಳು ಕಡಿತ ಮೊದಲಾದ ಎಲ್ಲಾ ತರದ ನೋವುಗಳು ಖಾತ್ರಿಯಾಗಿ ನಿಲ್ಲುವವು. ನಕಲಿ ಔಷಧಗಳನ್ನು ಪಡಕೊಳ್ಳಬೇಡಿರಿ. ಈ ನಮ್ಮ ಲೋಕಪ್ರಖ್ಯಾತವಾದ ಅಮೃತಾಂಜನವನ್ನು ನಮ್ಮ ರಿಜಿಸ್ಟ್ರರ್ಡಾದ ಮತ್ತು ಹಲವು ಭಾಷೆಗಳುಳ್ಳ ಸುಂದರವಾದ ಕರಡಿಗೆಯಲ್ಲಿ ಪ್ಯಾಕ್‌ಮಾಡಿರುತ್ತೇವೆ. ಕರಡಿಗೆ ಇಲ್ಲದ ಬಾಟ್ಲಿಗಳನ್ನು ಪಡಕೊಳ್ಳಬೇಡಿರಿ. ಬಾಟ್ಲಿ ಒಂದರ ಕಿಮ್ಮತು 0-8-0. ಡಜನ್ 1 ಕ್ಕೆ 5-4-0. ವಿ. ಪಿ. ಪ್ರತ್ಯೇಕ. ಗಜಕರ್ಣದ ಮುಲಾಮು 0-6-0. ದಂತಮಂಜನ 0-2-0. ಮೋಟಿನ ತೈಲ 0-12-0. ಖಜ್ಜಿ ಮುಲಾಮು 0-3-0. ಮಲಾಬು ಮಾತ್ರೆ 0-8-0. ಸುಂದರಿ ಮುಲಾಮು 0-8-0. ಕ್ಯಾಟಲಾಗಿಗೆ ಬರೆಯಿರಿ. [52-21]

ವ್ಯಾಪಾರಸ್ಥರಿಗೆ ಚೆಲೋ ಕಮಿಷನ್ ದೊರಕುವದು.

ಅಮೃತಾಂಜನ ಡಿಪೋ,

ಫೋರ್ಟ್. ಮುಂಬಯಿ, ಮತ್ತು ೯ ಜಹಂಗೀರ್ ಸ್ಟ್ರೀಟ್, ಮದ್ರಾಸು.

ಪ್ರೊಫೆಸರ್ ಬ್ಲೇಸ್ಸರ್
ಎಲೆಕ್ಟ್ರೋ ಪೆಯಿನಾಡೈನ್

ಮನುಷ್ಯನ ಶರೀರದಲ್ಲಿ ವಿದ್ಯುಚ್ಛಕ್ತಿ ವ್ಯಾಪಿತವಿರುವದೆಂತಲೂ, ವಿದ್ಯುಚ್ಛಕ್ತಿ ಕಡಮೆಯಾದ ಕೂಡಲೇ ನಾನಾ ತರದ ವ್ಯಾಧಿಗಳು ಲಭಿಸುವದೆಂತಲೂ, ಅಂತಹ ವ್ಯಾಧಿಗಳನ್ನು ಶೀಘ್ರ ಗುಣಪಡಿಸಲು ವಿದ್ಯುಚ್ಛಕ್ತಿ ಮಿಶ್ರವಾದ ಔಷಧದ ಉಪಯೋಗದಿಂದಲ್ಲದೆ



ಬೇರೆ ಔಷಧಗಳಿಂದ ವ್ಯಾಧಿಗಳನ್ನು ಶೀಘ್ರ ಗುಣಪಡಿಸುವದು ಕಷ್ಟವೆಂತಲೂ ಅಮೇರಿಕಾ ದೇಶದ ವೈದ್ಯಶಾಸ್ತ್ರ ಪಂಡಿತರು ವೈದ್ಯಶಾಸ್ತ್ರ ಪರಿಶೋಧನೆಯಿಂದ ಸಿದ್ಧಿಸಿರುವರು. ಈ ಔಷಧವು ಉಪಯೋಗಿಸಿದ ಕೂಡಲೇ ದೇಹಕ್ಕೆ ಸಾಕಾಗುವಷ್ಟು ವಿದ್ಯುಚ್ಛಕ್ತಿಯನ್ನುಂಟುಮಾಡಿ ವ್ಯಾಧಿಯನ್ನು ಅತಿ ಶೀಘ್ರ ಗುಣಪಡಿಸುತ್ತೆ. ಪ್ರಾಚೀನಕಾಲದ ಔಷಧಗಳಿಗೆಲ್ಲವು ಇದು ಅತ್ಯುತ್ತಮವಾದದ್ದು. ಒಂದಾವರ್ತಿ ಪರೀಕ್ಷಿಸಿ ನೋಡಿದರೆ ಇದರ ಗುಣವು ವ್ಯಕ್ತವಾಗುತ್ತೆ.

ಎಲೆಕ್ಟ್ರೋಪೆಯಿನಾಡೈನ್ ತೈಲದಿಂದ ಗುಣಪಡುವ ವ್ಯಾಧಿಗಳು:—

ತಿಮರುವಾಯುವು, ಕೀಲ್ವಾಯುವು, ಪಾರ್ಶ್ವವಾಯುವು, ಕ್ಷಯ, ಕೆಮ್ಮು, ನೆಗಡಿ, ವಾಯುನೋವು (ಕೈಕಾಲು ಹಿಡಿತ), ಉಳುಕು ಹಿಡಿದಿದ್ದರು, ಕಠಿನಶ್ವಾಸ, ನಡುನೋವು (ಸೊಂಟನೋವು), ಪಕ್ಕಶೂಲೆ, ಹಲ್ಲುನೋವು, ತಲೆನೋವು, ಅರೆತಲೆನೋವು, ಉಬ್ಬಸ, ವಿಷಜ್ವರದ ಗಡ್ಡೆಗಳಿಗೂ ಮತ್ತು ಮಕ್ಕಳ ಪಕ್ಕಶೂಲೆ, (ಅಳ್ಳೆ) ಶೈತ್ಯದೋಷಗಳೂ, ವಿಷಹುಳಗಳ ಕಡಿತಗಳಿಗೂ (ಚೇಳು ಮುಂತಾದದ್ದು), ಇದಕ್ಕೆಲ್ಲಾ ಬಹಳ ಶ್ಲಾಘನೀಯವಾದದ್ದು. [12—30]

ಉಪಯೋಗಿಸುವ ಕ್ರಮವು ಹಿಂದುದೇಶದ ಎಲ್ಲಾ ಭಾಷೆಗಳಲ್ಲಿಯೂ ಬುಡ್ಡಿಯ ಸಂಗಡ ಕಳುಹಿಸಲಾದೀತು.

ಬುಡ್ಡಿಯ ಕ್ರಯ ರೂ. ೧-8-0. ವಿ. ಪಿ. ಖರ್ಚು 0-4-0. ಏಜಂಟರು ಬೇಕು.

ಮುಖ್ಯ ಏಜಂಟರು:—ಗುರುಬಸವ ಅಂಡ್ ಕಂಪನಿ, ಮದರಾಸ್.

ಲೆಕ್ಕವಿಲ್ಲದಷ್ಟು ಮಂದಿ ಗುಣ ಹೊಂದಿರುತ್ತಾರೆ.

ಕುಂಟರು ನಡೆಯುವಂತೆ ಆಯಿತು. ವಾಯುವಿನಿಂದ ಹಾಸಿಗೆಯಲ್ಲಿ ಬಿದ್ದಿದ್ದು, ಹಿಂಸೆಗೆ ಗುರಿಯಾಗಿದವರನೇಕರು ಸ್ವಸ್ಥರೊಂದಿ ಎದ್ದಿದ್ದಾರೆ. ವೈದ್ಯರಿಂದಲೂ ಆಸ್ಪತ್ರೆಗಳವರಿಂದಲೂ ಬನ್ನ ಬಿಸಿಬಿಡಾಗುವದಿಲ್ಲವೆಂದು ಹೇಳಲ್ಪಟ್ಟವರು ಲಿಟಿಲ್ಸ್ ಓರಿಯಂಟಲ್ ಬಾಂ ಎಂಬದನ್ನು ಉಪಯೋಗಿಸಿ, ತಕ್ಷಣ ಕ್ಷೇಮ ಹೊಂದುತ್ತಾರೆ. ಬರ್ಮಿಂಗ್ಹ್ಯಾಂ ನಗರದ ನ್ಯೂಹಾಲ್ ಬೀದಿಯಲ್ಲಿರುವ ಮಿ ಸಾಮರ್ ಎಂಬವರು ಬರೆಯುವುದು:— "ಸುಮಾರು ೩ ವರುಷಗಳ ಹಿಂದೆ ನನ್ನ ಕೆಲಸಕ್ಕೆ ಹೋಗಲಾರದಷ್ಟು ಕಾಣವಾಯು ನನ್ನ ಎಡ ಮೊಣಕಾಲಿನಲ್ಲಿ ಬಂದಿತು. ವೈದ್ಯರಿಗೂ ಬೇರೆ ಖರ್ಚುಗಳಿಗೂ ಬಹಳ ಖರ್ಚಾಯಿತು. ಆದರೂ ಏನೂ ಪ್ರಯೋಜನವಾಗಲಿಲ್ಲ. ಲಿಟಿಲ್ಸ್ ಓರಿಯಂಟಲ್ ಬಾಂ ಎಂಬದನ್ನು ಉಪಯೋಗಿಸೆಂದು ಒಬ್ಬ ಸ್ನೇಹಿತರು ಹೇಳಿದ್ದನ್ನು ಕೇಳಿ, 1 ಸೀಸೆಯ ತೈಲವನ್ನು ಕೊಂಡುಕೊಂಡೆನು. ಅದನ್ನು ಉಪಯೋಗಿಸಿದ ೩ ದಿನಗಳಲ್ಲಿ ನೋವು ಪೂರ್ಣ ಬಿಟ್ಟಿತು. ಇದರಿಂದ ನನ್ನಲ್ಲಿ ಆಶ್ಚರ್ಯವೂ ಕೃತಜ್ಞತೆಯೂ ಉಂಟಾದವು. ಅಂದಿನಿಂದ ಅದು ತಿರಿಗಿ ಕಾಣಿಸಲಿಲ್ಲ."

ಸೀಸೆ 1ಕ್ಕೆ 1 ರೂ. ಮೋರಿಗೆ ಔಷಧಗಾರರಲ್ಲೆಲ್ಲಿಯೂ ಸಿಗುತ್ತೆ. 101-13

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ 2-27

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಳಕೆಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಕಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ:—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ.

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ. ೮ ಆ.; ೧ ರೂ. ೬ ಆ.;

ಕುಚ್ಚುಯುಳ್ಳ ಟೋಪಿಗಳು ರೂ. ೧–೮; ರೂ. ೧–೧೨.

ರೇಷ್ಮೆ ಕುಚ್ಚುಯುಳ್ಳ ಟೋಪಿಗಳು ರೂ. ೨.

ಹಾರದ ಟೋಪಿಗಳು ೧ ರೂ. ೧೨ ಆ.; ೧ ರೂ. ೮ ಆ.; ೧ ರೂ. ೬ ಆ.

ಮುಸುಕಿನ ಟೋಪಿಗಳು ೧ ರೂ. ೮ ಆ.; ೧ ರೂ. ೬ ಆ.

"In addition to cap making we are giving special attention to knitting stockings. All our stockings, for adults and children, are hand-made. Prices will be sent on enquiry."

ಮ್ಯಾನೇಜರ್, ಟೋಪಿ ಕಾರ್ಖಾನೆ,

ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ.

Apply:—

MANAGER, CAP WORKS,
GIRLS' INDUSTRIAL SCHOOL, HASSAN.

ಕುಂತಳಾನಂದ ತೈಲವು.

192-45

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಿರುದಿನ ಬಿಲ್ಲೆಗಳನ್ನು ಎಂಟು ಸರ್ಟಿಫಿಕೇಟುಗಳನ್ನು ಪಡೆದಿದೆ. ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು.

ಈ ತೈಲವು ಕೂದಲನ್ನು ಚನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುತ್ತದೆ. ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದ್ದಾಗಿದೆ. ಬೆಲೆ ಬಾಟ್ಲಿಗೆ 1 ರೂಪಾಯಿ 3 ಬಾಟಲಿಗೆ 2 ರೂಪಾಯಿ 10 ಆಣೆ. ಅಂಚೆ ಹಾಸಲು ಬೇರೆ. ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ.

ನಮ್ಮ ವಿಳಾಸ:—ಬಿ. ಎಲ್. ನಾಥ ಮತ್ತು ಕಂಪೆನಿ,
ವೇಪೇರಿ, ಮದರಾಸ್.

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು."

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು. ವಾಯು, ಕೀಲು, ಆರಶಲೆ, ತಲೆನೋವುಗಳು; ಯಾವ ಕಾರಣದಿಂದ ಹುಟ್ಟುವ ಬಾಧೆಯಾಗಲಿ, ಉಬ್ಬಸ, ಹಲ್ಲುನೋವು, ಗಂಟಲು ಗೊರೆನ್ನುವುದು, ಕೆಮ್ಮುಗಳು, ಶೀತನೆಗಡಿ, ಶ್ವಾಸರೋಗ, ಚಚ್ಚು, ಉಳುಕು, ಥಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೊ. ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು. ಕ್ಲೆಮಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲಿ ಕೊಡಿ ಎಂದು ಕೇಳು. ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೋ. ಈ ಯುಕ್ತಿಯೋಪಾಧಿಗಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ. ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ. ಲಕ್ಷಾಂತರ ಜನರು ಗುಣಹೊಂದಿದಾರೆ; ನಮಗೂ ಖಂಡಿತವಾಗಿ ವಾಸಿಯಾಗುತ್ತದೆ. [122-9]

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡಿ. ಅದರ ಕ್ರಯ ಬಾಟ್ಲಿಗೆ 12 ಆಣೆ; ಅಂಚೆ ವೆಚ್ಚ 4 ಆಣೆ. 3 ಅಥವಾ ಹೆಚ್ಚು ಬಾಟ್ಲಿ ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ. ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ. ವಿಳಾಸಗಳು:—(1) ಎಸ್. ಪೀಟರ್ಸ್, 37 ವಡಮಲೆಪಿಳ್ಳೆ ಬೀದಿ, ಪುರಸವಾಕಂ, ವೇಪೇರಿ, ಮದರಾಸ್; (2) ಟಿ. ಎಸ್ ಕೆನ್ನಯ್ಯಶೆಟ್ಟರು, ಜನರಲ್ ಮರ್ಚಂಟ್, ತುಮಕೂರು.

ಸುಖಕರ, ಆನಂದ,
ಬಹಳ್ ಅವಶ್ಯ.
ಈಗ ತಾನೇ ಕಂಡುಹಿಡಿದಿದೆ.

ಜಪಾನ್ ರಾಜ್ಯದಲ್ಲಿ ನೂರಾರು ವರುಷಗಳಿಂದ ಉಪಯೋಗದಲ್ಲಿದೆ.

ಸೆಂಶಿಂತಾನ
ಬೆಳ್ಳಿಯ ವರಕು ಸುತ್ತಿದ ಮುತ್ತುಗಳು

(1) ಮನಸ್ಸಿಗೆ ಹರ್ಷವನ್ನೂ ಉಲ್ಲಾಸವನ್ನೂ ಕೊಟ್ಟು ಜೀರ್ಣಶಕ್ತಿಯನ್ನುಂಟುಮಾಡುವುದು.

(2) ಹಾಡುವವರಿಗೆ ವರಪ್ರಸಾದವಾದದ್ದು.

(3) ಬಾಯಿ ದುರ್ಗಂಧ, ಗಂಟಲು ಗೊರೆನ್ನುವುದು, ಉಬ್ಬಸ, ಸಮುದ್ರಯಾನದ ಜುಗುಪ್ಸೆ, ಈ ಮೊದಲಾದವನ್ನು ಹುಟ್ಟದಂತೆ ಅಡ್ಡಿಮಾಡುತ್ತದೆ.

(4) ತಾಂಬೂಲದೊಡನೆ ಸೇವಿಸುವುದಕ್ಕೆ ಅತ್ಯಂತ ಹಿತಕರವಾಗಿದೆ. [73-20]

ಒಂದು ಸಲ ಪರೀಕ್ಷೆಮಾಡಿದಲ್ಲಿ ಯಾವಾಗಲೂ ಒಂದು ಪೊಟ್ಟಣ ಇದ್ದೇ ತೀರಬೇಕೆಂದು ನೀವೇ ನಿಶ್ಚಯಿಸುವಿರಿ.

ಮುತ್ತಿನಂತಿರುವ 45 ಮಾತ್ರೆ ಉಳ್ಳ ಪೊಟ್ಟಣಕ್ಕೆ ಕ್ರಯ 2 ಆಣೆ.

,,	95	,, ,, ,, ,,	4	,,
,,	200	,, ,, ,, ,,	7	,,
,,	200	,, ಸುಂದರವಾದ ಟಿನ್ ಡಬ್ಬಾ	9	,,
,,	80	,, ,, ,, ,,	4	,,
,,	100	,, ಬಾಟ್ಲಿಯಲ್ಲಿ	4½	,,

ಈ ಕ್ರಯದಷ್ಟು ಸ್ಟಾಂಪನ್ನೂ, ಅಂಚೆ ವೆಚ್ಚಕ್ಕೆ ಜಾಸ್ತಿ ಒಂದಾಣೆಯನ್ನೂ ಸೇರಿಸಿ ಕಳುಹಿಸಬೇಕು. ಕಾಗದಪತ್ರವನ್ನೂ ವಿಳಾಸಗಳನ್ನೂ ನಮಗೆ ಇಂಗ್ಲೀಷಿನಲ್ಲೇ ಬರೆಯತಕ್ಕದ್ದು.

ನಮ್ಮ ವಿಳಾಸ—ಸೆಂಶಿಂತಾನ ಡಿಪೋ,
ಮಾರ್ಸೂರ್ ಬಿಲ್ಡಿಂಗ್, ಪ್ರಿನ್ಸೆಸ್ ಸ್ಟ್ರೀಟ್,
ಬೊಂಬಾಯಿ 2;
ಅಥವಾ, ಬಿ. ಸಿ. ಷಾ ಕಂಪೆನಿ,
509 ಮಿಂಟ್ ಬೀದಿ, ಮದರಾಸ್.

WANTED

An active and influential Sole District Agent for the Districts of Bangalore, Tumkur, Shimoga, Kolar, and Coorg on liberal terms of Commission and monthly Office allowance. None but those who can guarantee good business need apply to

Messers. VENKATACHALAM & SONS,
Chief Agents,
Hindustan Co-operative Insurance Society, Ltd.,
166, Dodpet, near Old Taluk Cutcherry,
[224-34] *MYSORE.*

Jain's Best Ointment.

ಜೈನ್‌ರವರ ಉತ್ತಮೋತ್ತಮ ಆಯಿಂಟ್‌ಮೆಂಟು

ಇದು ವೈದ್ಯಶಾಸ್ತ್ರ ಪ್ರಕಾರ ತಯಾರಾದ ಉತ್ತಮವಾದ ತೈಲವು. ಇದನ್ನು ಹಚ್ಚಿದರೆ ಬಹಳ ದಿನಗಳಿಂದಲೂ ಇರತಕ್ಕ ಪಡೆ, ಕೆಂಪು, ಕಪ್ಪು, ತುರಿ, ಹುಳುಕಡ್ಡಿ, ನಡುವಿನ ಕೆರತ, ಎಲ್ಲಾ ತರದ ರಣಗಳು, ಹುಣ್ಣುಗಳು ಬಹು ವೇಗವಾಗಿ ಬೆಂಕಿಯಲ್ಲಿ ಬಿದ್ದ ಹತ್ತಿಯಂತೆ ಧ್ವಂಸವಾಗಿ ಮಾಯವಾಗುತ್ತವೆ. ಕತ್ತಿ, ಚಾಕು ಮೊದಲಾದ ಆಯುಧಗಳಿಂದ

ಉಂಟಾಗುವ ಗಾಯಗಳಿಗೆ ಪ್ಲಾಸ್ತ್ರಿಗೆ ಬದಲಾಗಿ ಈ ತೈಲವನ್ನೇ ಉಪಯೋಗಿಸಬಹುದು. ಇದನ್ನು ಗೋವಾಯಿಗಳ ಹುಣ್ಣುಗಳಿಗೂ, ಕುದುರೆ, ನಾಯಿ ಮೊದಲಾದ ಪ್ರಾಣಿಗಳ ಗಾಯಗಳಿಗೂ ಲಕ್ಷಣೆಯಂಥಾ ಔಷಧ. ಈ ಔಷಧವನ್ನು ಕಂಡುಹಿಡಿದು ತಯಾರುಮಾಡುವುದಕ್ಕೆ ಬಹಳ ಶ್ರಮವನ್ನೂ, ಕಾಲವನ್ನೂ, ಹಣವನ್ನೂ ಖರ್ಚುಮಾಡಿರುತ್ತೇವೆ. ಈ ಆಯಿಂಟ್‌ಮೆಂಟಿನಿಂದ ಸಾವಿರಾರು ಜನರಿಗೆ ಗುಣವಾಗಿರುತ್ತದೆ. ನಕ್ಲಿ ತೈಲಗಳನ್ನು ನೋಡಿ ಮೋಸಹೋಗಬೇಡಿ ನಮ್ಮ ಗುರುತಿರುವದನ್ನು ನೋಡಿ ಕೊಂಡುಕೊಳ್ಳಿ. ಔಷಧದ ಕೂಡ ಅನುಪಾನ ಪತ್ರಿಕೆ ಉಂಟು. ಕ್ರಯ 1 ಬಾಟ್ಲಿಗೆ ರೂ 1; ಸಣ್ಣ ಬಾಟ್ಲಿಗೆ 10 ಆಣೆ ವಿ. ಪಿ. ಛಾರ್ಜು ಬೇರೆ. ಗುಲಾಬ್‌ಸುಂದರ ಪ್ರಕಾಶ ಕೂದಲೆಣ್ಣೆ—ಮೆದುಳಿನ ಕೆಲಸದವರಿಗೂ ಇತರರಿಗೂ ಬಹಳ ಗುಣಕಾರಿ. ಕ್ರಯ ಬಾಟ್ಲಿಗೆ ರೂ. 1-0-0. ಇದನ್ನು ಒಂದು ಸಲ ತರಿಸಿ ಪರೀಕ್ಷಿಸಿ. [25-27]

ವಿಳಾಸ—ಜಿ. ಗುಲಾಬ್ ಚಂದ್ ಪೌವಾರ್,

50 ನೈನಪ್ಪನಾಯಕ್ ಬೀದಿ, ಪಾರ್ಕ್ ಟೌನ್, ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

26—6—1914 ರಿಂದ 17—7—1914 ರ ವರೆಗೆ

ಸ್ಥಳ		ಪ್ಲೇಗ್ ಹಿಡಿದದ್ದು.	ಪ್ಲೇಗ್ ಸತ್ತದ್ದು.	ಕಾಲರಾ ಹಿಡಿದದ್ದು.	ಕಾಲರಾ ಸತ್ತದ್ದು
ಬೆಂಗಳೂರು	ಪಟ್ಟಣ	0	0	0	0
ಮೈಸೂರು	,,	0	1	0	0
ಬೆಂಗಳೂರು ಡಿಸ್ಟ್ರಿಕ್ಟು		1	1	8	5
ಮೈಸೂರು	,,	11	9	0	0
ಕೋಲಾರ್	,,	4	4	0	0
ಕೋಲಾರ್ ಚಿನ್ನದ ಗಣಿಗಳು		2	2	0	0
ತುಂಕೂರು ಡಿಸ್ಟ್ರಿಕ್ಟು		1	0	0	1
ಹಾಸನ	,,	0	0	0	0
ಚಿತ್ರದುರ್ಗ	,,	0	0	0	0
ಕಡೂರ್	,,	2	3	0	0
ಶಿವಮೊಗ್ಗ	,,	4	2	0	0
	ಜುಮ್ಲಾ	25	22	8	6

ಶಾಲಿವಾಹನ ಶಕ ವರುಷಂಗಳು 1837 ನೇ ಆನಂದ ಸಂವತ್ಸರದ ದಕ್ಷಿಣಾಯನ ಗ್ರೀಷ್ಮ ಋತು ಶ್ರಾವಣ ಶುದ್ಧ ನವಮಿ ಶುಕ್ರವಾರದಿಂದ ಶ್ರಾವಣ ಬಹುಳ ಪಾಡ್ಯಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1914 ನೇ ಜುಲೈ ಮತ್ತು ಆಗಸ್ಟ್.

ತಾ.	ವಾರ.	ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ	ಶಕ ಮಾಸ ದಿನ
31	ಶುಕ್ರ ::	ನವಮಿ	21-4	ವಿಶಾಖ	25-5	16
1	ಶನಿ ‡	ದಶಮಿ	15-27	ಅನೂರಾಧ	21-30	17
2	ಭಾನು §	ಏಕಾದಶಿ	10-18	ಜ್ಯೇಷ್ಠಾ	18-27	18
3	ಸೋಮ *	ದ್ವಾದಶಿ	5-55	ಮೂಲ	16-7	19
4	ಮಂಗಳ †	ತ್ರಯೋದಶಿ	2-26	ಪೂಷಾ, ಪೂ.	56-58	20
5	ಬುಧ ,,	ಪೌರ್ಣಮಿ	58-4	ಉತ್ತರಾಷಾಢ	14-22	21
6	ಗುರು ;;	ಪಾಡ್ಯಮಿ	58-3	ಶ್ರವಣ	15-8	22

:: ತಿಥಿದ್ವಯಂ, ವರಮಹಾಲಕ್ಷ್ಮೀವ್ರತ, ಆದಿಶುಕ್ರವಾರ. ‡ ವ... ತಿಥಿ, ಶ್ರಾವಣಶನಿವಾರ. § ಪಾಶಾಂಭಾವ, ಸರ್ವತ್ರ ಏಕಾದಶಿ, ಪದಿನೆಟ್ಟು... ಕ್, ಮಳೆ ನಕ್ಷತ್ರ—ಆಶ್ಲೇಷ 1 ನೇ ಪಾದ. * ಪ್ರದೋಷ. † ಮಂ... ವ್ರತ. ,, ಯಜುರುಪಾಕರ್ಮ. ;; ಋಗ್ಯುಪಾಕರ್ಮ, ಗಾಯತ್ರೀ... ಹಯಗ್ರೀವಜಯಂತಿ, ಮಳೆ ನಕ್ಷತ್ರ—ಆಶ್ಲೇಷ 2 ನೇ ಪಾದ.

Printed and Published by the Rev. H. Gu... Proprietor and Manager, Wesleyan Mission ... Mysore. 30/7/1914.

REGISTERED
M. 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೮ ಮೈಸೂರು—ಸನ್ ೧೯೧೫ ನೇ ಇಸವಿ ಆಗಸ್ಟ್ ತಾರೀಖು ೫ ನೇ ಗುರುವಾರ. ಸಂಚಿಕೆ ೧೦

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶದಾಮವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು ? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಾಪ ಉಪಕರಣವಾವುದೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಆವಶ್ಯಕ ಸಹಕಾರಿಯಾಗಿರುತ್ತದೆ. ಈ ತೈಲವನ್ನು ಹಚ್ಚಿಕೊಳ್ಳುತ್ತಲೇ, ಮಸ್ತಿಷ್ಕದ ಬೇಗೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ತೊಡೆಯ ತೊಡಗಿದ ಬಳಿಕ ಎಂದಿಗೂ ಜಗುಳಿ ಬಿದ್ದು ಹೋಗಲಾರವು; ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು.

ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ಕಟಿಯನ್ನೂ ಹಾಳುಮಾಡುವದಕ್ಕಿಂತ ಒಂದೇ ಒಂದು ಬಾರಿ ಈ "ಕಾಮಿನಿಯಾ ತೈಲ" ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಆಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಹಲವು ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಅವುಗಳಲ್ಲಿ ಒಂದನ್ನೇ ನೋಡಿರಿ! ನೇಗಿನಹಾಳಕರ ಬಂಧುಗಳು. ಬಸವನಗಲ್ಲಿ, ಬೆಳಗಾಂವ—ತಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವುದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ. ಆದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ. ಪಿ. ದ್ವಾರಾ ರವಾನಿಸುವುದು. ಸೀಸೆಯೊಂದರ ಕ್ರಯ ರೂ. 1-0-0, ಅ. ವೆ. 0-4-0 ಬೇರೆ; 3 ಸೀಸೆಗಳ ಕ್ರಯ ರೂ. 2-10-0, ಅ. ವೆ. 0-7-0 ಬೇರೆ.

ಸೂಚನೆ.—ಅನೇಕ ದುರ್ನೀತರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಬಿಕರಿಯಿಂದ ತಮಗೆ ಅತ್ಯಲ್ಪ ನಫೆಯೇ ದೊರಕುತ್ತದೆಂದು, ನೀವು "ಕಾಮಿನಿಯಾ ತೈಲ" ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭ ದೊರಕತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಇದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳುವಷ್ಟು ಮುತುರುಬಾನ್ ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಬೇಕಾದ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಒಟ್ಟೊ ದಿಲ್ ಬಹಾರ್ !!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಆಲ್ಕೋಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ತಟಕುಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ಸ್ವಸರ್ಗೀಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ. ಈ ಒಟ್ಟೊ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವುದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ. [19-29]

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಡ್ರಾಮಿನ (ವಿಯಾಲಿಯಂ) ಸೀಸೆ 1ಕ್ಕೆ 0-12-0. ಅರ್ಧ ಪಿನ್ನಿನ ದೊಡ್ಡ ಸೀಸೆಯ ಬೆಲೆ ರೂ. 2-0-0. ಅಂಚೆಯ ವೆಚ್ಚ ಬೇರೆ ರೂ. 0-4-0. ಒಟ್ಟೊ-ದಿಲ್ ಬಹಾರ್ ಪರಿಮಳದ ಕಾರ್ಡುಗಳು ಡಜನ್ ಒಂದಕ್ಕೆ 0-12-0.

ಮೇಲೆ ಕಂಡ ಎಲ್ಲಾ ಸುಗಂಧಗಳು ಸಿಕ್ಕುವ ಪತ್ತೆ :—

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸಜಿದ್, ಬೊಂಬಾಯಿ.

ಏಜೆಂಟ್, ಡಿ. ಉಲ್ ಮಾರ್ಕೆಟ್, ಮಂಗಳೂರು.

ಹೊಸ ಬಂಗಾಳಿ ನಾವೆಲ್—ವಿಷವಿವಾಹ 4 ಆ. ಸನ್ಯಾಸಿನಿ 1½ ಆ. ಅನಾಥಪ್ರೇತ 1 ಆ. ಬಿ. ವೆಂಕಟಾಚಾರ್ಯರಿಂದ ವಂಗವಿಜೇತ 1-4-0. ಚಂದ್ರಶೇಖರ 1-1-0. ರಜನಿ 13 ಆ. ಚಿತ್ರವಿಚಿತ್ರಾವಳಿ II 8 ಆಣೆ. ಅಮೃತಪುಲಿನ 11 ಆಣೆ. ದುರ್ಗೇಶನಂದಿನಿ 1-4-0. ಇತ್ಯಾದಿ. ಸುಶೀಲೆ ಹೊಸ ನಾವೆಲ್ 6 ಆಣೆ.
[53-24] ಎಂ. ಸುಬ್ಬರಾವ್, ಬುಕ್ ಸೆಲರ್, ಶಂಕರಪುರ, ಬೆಂಗಳೂರು ಸಿಟಿ.

ಕಳವು, ದರೋಡೆ.

ಡಕಾಯಿತಿ, ಅಕ್ರಮ ಸ್ತ್ರೀಸಂಗಮ, ಆಸಾಮಿ ಚೋರಿ, ಮಾನನಷ್ಟ ಮುಂತಾದವುಗಳಿಗೆ ಶಿಕ್ಷೆವಿಧಿಸಿರುವ ದಂಡನೀತಿ ಶಾಸ್ತ್ರವು ಪೂರ್ವದಲ್ಲಿ ಶುಕ್ರಾಚಾರ್ಯರಿಂದ ರಚಿತವಾಗಿ ಈಗಿನ ಬ್ರಿಟಿಷ್ ಚಕ್ರಾಧಿಪತ್ಯದಲ್ಲಿ ಅನುಮೋದಿಸಿ ಇಂಡಿಯಾ ಗವರ್ನರ್ ಜನರಲ್‌ರವರಿಂದ ಮುಂಜೂರಾಗಿ ಕಲ್ಕತ್ತಾ, ಮುಂಬೈ, ಮದ್ರಾಸ್, ಮೈಸೂರು ಜಿಲ್ಲೆಗಳಲ್ಲಿ "ಕನ್ನಡ ಇಂಡಿಯನ್ ಪೆನಲ್ ಕೋಡ್" ಎಂಬ ಅಭಿದಾನದಿಂದ ಜಾರೀಗೆ ತಂದಿರುವರು. ಈ ಆಕ್ಟಿಗೆ ಅನೇಕ ಜಡ್ಜಿಗಳು ಟಿಪ್ಪಣಿಗಳನ್ನು ಬರೆದಿರುವರು. ಅವುಗಳೂ ಈ ಪುಸ್ತಕದಲ್ಲಿ ಅಡಗಿರುವವು. ಕ್ರಯ ಥಪ್ಪ ಕಾಗದವು 2 ರೂಪಾಯಿ; ತೆಳುಕಾಗದವು ರೂ 2-8-0.

[143-6] ವಿಳಾಸ—ಪಿ. ನರಸಿಂಗರಾವ್,
ಎಡಿಟರ್, ಲಾ ಗೆಜೆಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

NOW READY

Full Notes with Summary and Numerous useful questions on Circe's Palace; The Golden Fleece and Fairy Tales (L. S. Text for 1915) by Mr. A. S Rangaswamiengar, B.A., Asst. Master, Maharani's College, Mysore. Price four annas only. Yate's Primer 0-4-0; Yate's Second Reader 0-9-0; King Second Reader 0-6-0; King Third Reader 0-8-0; Macmillan's New No. IV Reader 0-12-0; Hydes Practical English Grammar—First 0-15-0, Second 0-15-0; Longman's School Geography 1-4-0; Marrison's *Junior Geography of India* 0-12-0.

We supply you any books in English or Canarese.

[23-30] **The General Agency, Mysore.**

"ಮಧುರವಾಣಿಯ" ಅರಿಕೆ.

ರಾಜಧಾನಿಯಲ್ಲಿ ಎರಡು ವರ್ಷಗಳಿಂದ ಹೊರಡುತಿರುವ "ಮಧುರವಾಣಿ" ಎಂಬ ಮಾಸ ಪತ್ರಿಕೆಯು ರಾಜಕೀಯ ವಿಷಯವನ್ನೂ ಕುರಿತು ಚರ್ಚೆಮಾಡುವ ಅಧಿಕಾರವನ್ನು ಪಡೆಯಿತು. ಇದುವರೆಗೆ ತಡವಾದುದಕ್ಕಾಗಿ ವಾಚಕರ ಕ್ಷಮೆ ಬೇಡುವುದಾಗಿಯೂ, ಆಗಸ್ಟು ಮೊದಲನೆಯ ತಾರೀಖಿಗೆ ಸಂಚಿಕೆಯು ಕಳುಹಿಸಲ್ಪಡುವುದಾಗಿಯೂ ಈ ಮೂಲಕ ಪ್ರಕಟಿಸಲಾಗಿದೆ.

ಈ ಗ್ರಂಥಗಳನ್ನು ಓದುವಿರಾ?—ನಾವಿಕ ಚರಿತ್ರೆ 4 ಆಣೆ, ತುಳುಕುಮಿಡುಕು 1½ ಆಣೆ, ಕೃಷ್ಣಕುಮಾರಿ 10 ಆಣೆ, ವಿವೇಕಮಂಜರಿ 3 ನೇ ಭಾಗ 6 ಆಣೆ, ಜಯ! ವಾಲ್ಮೀಕಿ 12 ಆಣೆ, ಅಶ್ವತ್ಥವ್ಯಾಗ 1½ ಆಣೆ, ಸೂಕ್ತಿತಾರಾವಳಿ 4 ಆಣೆ, ನಿವರ್ತಲೆ 12 ಆಣೆ, ಕನ್ಯಾಬಲಿ 6 ಆಣೆ, ತಾರಾ 3 ಆಣೆ, ರಂಗನ ಮದುವೆ 1 ಆಣೆ, ಅಜವಿಯರಾಜ 1 ಆಣೆ, ಬಾಗಿಲುಭದ್ರ 1 ನೇ ಭಾಗ 4 ಆಣೆ, ನವನಾಗರಿಕನ 1 ಆಣೆ, ಸಾಹಸಿಕ 2½ ಆಣೆ, ವಿಲಕ್ಷಣದೈವಘಟನೆ 4 ಆಣೆ.

ಕ್ಯಾಟಲಾಗಿಗೂ "ವಾಣಿ"ಯ ಮಾದರಿ ಸಂಚಿಕೆಗೂ ಬರೆಯಿರಿ.

[160—3] ವಿಳಾಸ :—ಹನುಮಾನ್ ಕಂಪೆನಿ, ಮೈಸೂರು.

ಸಿದ್ಧವಾಗಿದೆ.

1915 ನೆಯ ವರ್ಷದ ಲೋವರ್ ಸೆಕಂಡರಿ

ಕನ್ನಡ ಟೆಕ್ಸ್ಟಿನ ನೋಟ್ಸು.—ಕ್ರಯ 6 ಆಣೆ.

ಡಿಸ್ಕೌಂಟು—10 ಕ್ಕೆ 1; 25 ಕ್ಕೆ 3; 50 ಕ್ಕೆ 8; 100 ಕ್ಕೆ 20.

ಮಕ್ಕಳ ಭೂವಿವರಣೆ.

ಈಗಿನ ಪಾಠಕ್ರಮಕ್ಕೆ ತಕ್ಕಂತೆ ಹೊಸದಾಗಿ ಆಗಿದೆ. ಇದರಲ್ಲಿ ಮೈಸೂರು ದೇಶದ ಬೆಳೆ, ಎತ್ತರ, ನದೀ ಪರ್ವತಾದಿಗಳು ಇವುಗಳನ್ನು ತೋರಿಸುವ ಮೂರು ಭೂಪಟಗಳೂ, ಚಿತ್ರಗಳೂ ಸೇರಿವೆ. ಕ್ರಯ 2 ಆಣೆ. [49-25]

ಇಲಾಖೆಯ 2 ನೆಯ ಪುಸ್ತಕದ ನೋಟ್ಸು 2½ ಆಣೆ. ಮೆಕ್ಮಿಲನ್ ರವರ 3 ನೇ ಪುಸ್ತಕದ ನೋಟ್ಸು 1½ ಆಣೆ. ಡಿಟ್ಟೊ 4 ನೇ ಪುಸ್ತಕದ ನೋಟ್ಸು 1¾ ಆಣೆ. ಡಿಟ್ಟೋ 5 ನೇ ಪುಸ್ತಕದ ನೋಟ್ಸು 4 ಆಣೆ. ನವಬಾಲವ್ಯಾಕರಣ (2 ನೇ ತರಗತಿಗೆ) 1 ಆಣೆ. Notes on "Tanglewood Tales," English Lower Secondary Text for 1915—As. 3. Notes on Fairy Tales—As. 2.

ನಮ್ಮ ವಿಳಾಸ:—ಯಸ್. ಆರ್. ವೆಂಕಟಸುಬ್ಬಾಚಾರ್ಯ,
ಸುಬೋಧಗ್ರಂಥಾಲಯ, ಮೈಸೂರು.

ಹೊಸ ನಾವೆಲ್‌ಗಳು.

ಬಹು ಸ್ವಲ್ಪ ಪ್ರತಿಗಳೇ ಉಳಿದಿವೆ. ಸರಸವಾದೀ ಹೊಸಗನ್ನಡದ ಕಾದಂಬರಿಗಳನ್ನು ತರಿಸಿಕೊಳ್ಳಲು ಹಿಂತೆಗೆದು ಪಶ್ಚಾತ್ತಾಪಪಡಬೇಡಿರಿ.

ಅನಂಗಸುಂದರಿ 8 ಆಣೆ. ತಾರಾಸುಂದರಿ 8 ಆಣೆ. ರಾಧಾಮಾಧವ 8 ಆಣೆ. ಸರಳಬಾಲೆ 8 ಆಣೆ. ಕುಮುದಿನಿ 6 ಆಣೆ. ಸೌಭಾಗ್ಯಚಾಣಕ್ಯ 6 ಆಣೆ. ಸಂತಾಪಕ 4 ಆಣೆ.

"ನವಮಲ್ಲಿಕಾ" ಹೊಸ ನಾಟಕಗಳಲ್ಲಿ ಮೇಲೆನಿಸಿ ಬಹು ಜನರ ಸ್ತೋತ್ರಕ್ಕೆ ಪಾತ್ರವಾದ ನಾಟಕ. ಕಥಾ ವಿಧಾನವೂ ಮಾತುಗಳೂ ಪದ್ಯಗಳೂ ಬಹು ಚಮತ್ಕಾರವಾಗಿಯೂ ಸರಸವಾಗಿಯೂ ಇವೆ. ಕ್ರಯ 12 ಆಣೆ.

[266—34] ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

ಒಳ್ಳೆ ಸಮಯ! A Good Opportunity!

ಮೈಸೂರು ಚಾಮರಾಜ ರೋಡ್ ಎಂ. ಎಲ್. ವಾಸುದೇವಯ್ಯನವರ ಕಂಪೌಂಡಿನಲ್ಲಿ ಹೊಸದಾಗಿ ತರಿಸಿ ಸರಿಯಾಗಿ ಕೆಲಸಮಾಡುತ್ತಿರುವ ಅಕ್ಕಿ ಮತ್ತು ಹಿಟ್ಟಿನ ಮಿಷನ್, ಇದಕ್ಕೆ ಸೇರಿದ ಆರು ಕುದುರೆ ಶಕ್ತಿಯುಳ್ಳ ಒಂದು ಆಯಿಲ್ ಇಂಜನ್, ಇದಕ್ಕೆ ಸಂಬಂಧಪಟ್ಟ ಎಲ್ಲಾ ಸಾಮಾನುಗಳನ್ನೂ ಸಹ (A Rice Mill and a Grinding Mill with a six horse power oil engine, complete) ಕ್ರಯಮಾಡುತ್ತೇವೆ. ಬೇಕಾದವರು ಖುದ್ದು ಪರೀಕ್ಷೆಯಿಂದ ಕೆಳಗಿನ ವಿಳಾಸದಾರರಲ್ಲಾಗಲಿ, ಅಥವಾ ಕೃಷ್ಣಾ ಫ್ಲೈಸ್ ಮಿಲ್ ಪ್ರೊಪ್ರೈಟರ್ ಮ|| ಅನಂತನಾರಾಯಣರಾಯರಿಂದಾಗಲಿ ಕೇಳಿ ತಿಳಿದುಕೊಳ್ಳಬಹುದು.

[161-3] S. R. Visvanatha Iyer.

THE

GENERAL

Assurance Society Ltd., Ajmer.

(*A Popular Life Office.*)

Before Insuring or taking agency elsewhere, it would be to your interest to know the rates of premium and terms of agency specially prepared by the Society's Consulting Actuary, Mr. H. E. W. Lutt, F.I.A. (one of the most eminent Actuaries in England).

First Valuation Result:—The total liabilities under all assurances issued up to 31st March 1913, are fully covered by the Society's Life Assurance Fund and Paid up Capital. Write for full particulars, Annual and Valuation Reports to the Manager, Ajmer, or Secretary,

Opposite to Minto Ophthalmic Hospital,

[131-4] Bangalore City

BRAHMAPPA TAVANAPPANAVAR,

Merchant & Commission Agent.

Agent to Messrs. Currimbhoy Ebrahim & Co's Mills,

BOMBAY.

ನಾವು ಮುಂಬೈ ಮೆಸ್ಸರ್ಸ್ ಕರೀಂಬಾಯ್ ಇಬ್ರಾಹಿಂ ಅಂಡ್ ಕಂಪೆನಿಯವರ ಬಾಬತು, ಮೆಸ್ಸರ್ಸ್ ಫಜುಲ್ಭಾಯ ಮಿಲ್ಸ್ ಲಿಮಿಟೆಡ್ ಮುಂಬೈ; ದಿ ಕ್ರೆಸೆಂಟ್ ಮಿಲ್ಸ್ ಲಿಮಿಟೆಡ್ ಮುಂಬೈ, ಕರೀಂಬಾಯ್ ಮಿಲ್ಸ್ ಲಿಮಿಟೆಡ್ ಮುಂಬೈ, ದಿ ಇಂಡಿಯನ್ ಬ್ಲೀಚಿಂಗ್, ಡೈಯಿಂಗ್ ಅಂಡ್ ಪ್ರಿಟಿಂಗ್ ವರ್ಕ್ಸ್ ಲಿಮಿಟೆಡ್ ಮುಂಬೈ, ದಿ ಇಂಡೋರ್ ಅಂಡ್ ಮಾಳ್ವಾ ಯುನೈಟೆಡ್ ಮಿಲ್ಸ್ ಲಿಮಿಟೆಡ್ ಇಂದೋರ್, ಇವುಗಳಲ್ಲದೆ ಇನ್ನೂ ಅನೇಕ ಮಿಲ್ಲುಗಳ ಬಟ್ಟೆಗಳನ್ನು ಮೈಸೂರು ಸೀಮೆಯಲ್ಲೆಲ್ಲಾ ವಿಕ್ರಯಮಾಡಲು ಕಮಿಷನ್ ಏಜಂಟರಾಗಿರುತ್ತೇವೆ. ನಮ್ಮ ಮುಖಾಂತರ ಮಾಲು ತರಿಸಿಕೊಳ್ಳತಕ್ಕವರಿಗೆ ಮುಂಬೈಯಲ್ಲಿ ಬಟ್ಟೆಗಳ ಮೇಲೆ ವಿಧಿಸತಕ್ಕ ದಲ್ಲಾಳಿ, ಜೋಟಾದಲ್ಲಾಳಿ, ಮೊಕ್ತಾದುಮ್ಮ, ಗಂಟುಕಟ್ಟುವದು, ಸ್ಟೇಷನ್ನಿಗೆ ಹೇರಿಸುವದು, ಹುಂಡೇಕರಿ ವಗೈರೆ ಯಾವ ವಿಧವಾದ ಖರ್ಚುಗಳ ತಗಲದೆ ಇರುವದರಿಂದ ಮುಂಬೈಯಿಂದ ತರಿಸುವದಕ್ಕಿಂತಲೂ ಸುಲಭ ದರದಲ್ಲಿ ಸಿಕ್ಕುತ್ತೆ. ಮತ್ತು ಮುಂಬೈಗೆ ಹೋಗಿಬರುವ ದೇಹಶ್ರಮವೂ, ಖರ್ಚೂ ಉಳಿಯುತ್ತೆ. ಹೆಚ್ಚು ಬಟ್ಟೆಗಳನ್ನು ಏಕಕಾಲದಲ್ಲಿ ಕೊಳ್ಳತಕ್ಕವರಿಗೆ ಮಾಲಿನ ಮೇಲೆ ಶೇಕಡ 3 ರೂಪಾಯಿ ಆಗಾಯ್ತು 4½ ರೂಪಾಯಿ ವರಿಗೆ ಡಿಸ್ಕೌಂಟು ದೊರೆಯುತ್ತೆ. [97-16]

ನಮ್ಮ ಟ್ರಾವಲಿಂಗ್ ಏಜಂಟರ ವಶ ಬಟ್ಟೆಗಳ ನಮೂನೆಗಳನ್ನು ಕೊಟ್ಟು, ದರ ಒಬ್ಬ ವ್ಯಾಪಾರಗಾರನಿಗೆ ತೋರಿಸಿ ಆರ್ಡರು ತೆಗೆದುಕೊಳ್ಳುವ ಏರ್ಪಾಡು ಮಾಡಿರುತ್ತೆ. ನಮ್ಮ ದಾವಣಗೆರೆ ಮತ್ತು ಬೆಂಗಳೂರು ಆಫೀಸುಗಳಲ್ಲಿ ಮಾಲು ಹಾಜರು ಸಹ ದೊರೆಯುತ್ತೆ.

ಬಟ್ಟೆಗಳನ್ನು ವ್ಯಾಪಾರಮಾಡಲು ಅನುಭವಸ್ಥರಾದ ಏಜಂಟರುಗಳೂ ಮತ್ತು ಗುಮಾಸ್ತರುಗಳೂ ಬೇಕಾಗಿದೆ.

ಎಲ್ಲಾ ಕಾಗದಪತ್ರಗಳೂ ದಾವಣಗೆರೆ ಆಫೀಸಿಗೆ ಬರೆಯಲ್ಪಡಬೇಕು.

ಹೆಡ್ ಆಫೀಸು :—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್, ದಾವಣಗೆರೆ. ಬ್ರಾಂಚ್ ಆಫೀಸು :—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್,

ಚಿಕ್ಕಪೇಟೆ, ಬೆಂಗಳೂರು ಸಿಟಿ.

Jain's Swadeshi Balm.

ಜೈನ್‍ರವರ ಸ್ವದೇಶೀ ಬಾಮ್ ರಜಿಸ್ಟರಾದ ಟ್ರೇಡ್ ಮಾರ್ಕು.

ಈ ಬಾಮ್ ವಾತ, ಸಂಧಿವಾತ, ಕುತ್ತಿಗೆ ನೋವು, ಅರೆತಲೆನೋವು, ನಡು ನೋವು, ಶೀತ, ಸೆಳೆತ, ಬೆನ್ನುನೋವು, ಊದು, ಕೆಮ್ಮು, ಎದೆನೋವು, ಹೊಟ್ಟೆ ನೋವು, ಚಳುಕು, ಚೇಳುಕಡಿತ, ಕೈಕಾಲು ದೇಹ ಕೀಲುಗಳ ನೋವು, ಉಂ, ಸುಟ್ಟಗಾಯ ಮೊದಲಾದವುಗಳನ್ನು ನಿರ್ಮೂಲವಾಗಿ ಹೋಗಲಾಡಿಸುತ್ತದೆ. ಬಡ್ಡಿಗಳಿಗೂ, ಮಿದುಳಿನ ಕೆಲಸಗಾರರಿಗೂ ಸಾಮಾನ್ಯವಾಗಿ ಎಲ್ಲಾ ಕೆಲಸದವರಿಗೂ ಈ ಸ್ವದೇಶೀ ಬಾಮ್ ಬಹಳ ಪ್ರಯೋಜನಕರವಾದದ್ದು. ಕೊಬ್ಬಾಗಲಿ, ಬೇರೆ ಯಾವ ಕೆಟ್ಟ ಪದಾರ್ಥವಾಗಲಿ ಮಿಶ್ರಮಾಡಿಲ್ಲ, ಯೂರೋಪ್, ಇಂಡಿಯಾ, ಅಮೆರಿಕಾ ವೈದ್ಯಗ್ರಂಥಗಳನ್ನು ನೋಡಿ ತಯಾರ್ಮಾಡಿದೇವೆ, ಹಿಂದುಗಳೆಲ್ಲಾ ಇದನ್ನು ಉಪಯೋಗಿಸಬಹುದು ಇದು ಯಕ್ಷಿಣಿಯಂಥಾ ಮದ್ದು. ಲಕ್ಷಾಂತರ ಜನರನ್ನೆಲ್ಲಾ ವಾಸಿಮಾಡಿದೆ. ಪ್ರತಿ ಒಬ್ಬರೂ, ಪ್ರತಿ ಮನೆಯವರೂ ಇದನ್ನು ಇಟ್ಟೇ ಇರಬೇಕು. ಇದು ಚಿನ್ನದಂಥಾ ಔಷಧ. ಎಲ್ಲಾ ವೈದ್ಯಶಾಲೆಗಳಲ್ಲೂ ಬಿಕರಿಯಾಗುತ್ತಿದೆ, ಸೂರ್ಯಕಿರಣಗಳ ರಜಿಸ್ಟರ್ ಮಾರ್ಕ್ ಇರುವುದನ್ನು ನೋಡಿ ಕೊಂಡುಕೊಳ್ಳಿ. ನಕ್ಕಲ್ ಔಷಧವನ್ನು ಕೊಂಡು ಮೋಸಹೋಗಬೇಡಿ. ಉಪಯೋಗದ ಕ್ರಮ ಬಾಟ್ಲಿ ಸಂಗಡಲೇ ಇಟ್ಟಿದೆ. 1 ಬಾಟ್ಲಿಗೆ 12 ಆಣೆ; 3 ಕ್ಕೆ ರೂ. 1-14-0. ವಿ ಪಿ ಬೇರೆ. ನಮ್ಮ ಎಲ್ಲಾ ಔಷಧಿಗಳ ಕ್ಯಾಟ್ಲಾಗನ್ನು ಬರೆದು ತರಿಸಿಕೊಳ್ಳಿ. [25-28]

ವಿಳಾಸ—ಜೆ. ಗುಲಾಬ್ ಚೆಂದ್ ಪೌವಾರ್,

50 ನೈನಪ್ಪನಾಯರ್ ಬೀದಿ, ಪಾರ್ಕ್ ಟೌನ್, ಮದರಾಸ್.

ಪಾಕೆಟ್ ಲೀವರ್ ವಾಚ್.

ಇದರ ಕ್ರಯ 6 ಬಹುಮಾನ ಸಮೇತ ರೂ. 2-13-0 ಮಾತ್ರ.

ಇದು ಮಕ್ಕಳ ಆಟದ ಬೊಂಬೆಯಂತೆ ಕೆಲವು ದಿವಸಗಳು ಆಟವಾಡಿ ನಂತರ ಕೆಟ್ಟುಹೋಗುವಂಥಾ ಅಲ್ಪ ಗಡಿಯಾರವಲ್ಲ. ಶ್ರೇಷ್ಠವಾದ ಮತ್ತು ಬಹು



ಪ್ರಸಿದ್ಧವಾದ ಲೀವರು ಕೆಲಸದಿಂದ ತಯಾರಾದದ್ದು. ಗಂಭೀರವಾದ ಘಂಟೆ ಮತ್ತು ಮಿನಿಟ್‍ಗಳು ಮುಳ್ಳುಗಳುಳ್ಳದ್ದು. ಬಹು ಬಲಿಷ್ಠವಾದ ಮತ್ತು ನಾಜೂಕಾದ ಯಂತ್ರಸಾಮಾನುಗಳಿಂದ ತಯಾರಾಗಿರುತ್ತೆ. ಅನೇಕ ವರುಷಗಳ ಪರಿಯಂತರ ಬಾಳಿಕೆ ಬರುವಂಥಾದ್ದು. ಆದಕಾರಣ ಆರ್ಡರುಗಳು ಬಂದು ಸುರಿಯುತ್ತಿವೆ. ಬಹುಮಾನಗಳ ತಪಸೀಲು :—1 ವಾಚ್ ಸರಪಣಿ, 2 ಉತ್ತರ ಮುಖಿ, 3 ಪರಿಮಳ ಅತ್ತರ್, 4 ಕರವಸ್ತ್ರ, 5 ಷೋಕಾದ ಉಂಗರ, 6 ಸ್ಟೀಲು ಪಿಟ್ಟು. [145-6] ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ:—

ವಿಳಾಸ—ಬಿ. ಆರ್. ವೆಂಕಟರಮಣ ಅಂಡ್ ಕಂಪೆನಿ,

ನಂ. 7, ಕೋಪ್ ವೆಂಕಟಾಚಲಯ್ಯರ್ ಬೀದಿ, ಮದರಾಸು.

ಮೇಲಾದ ಜರ್ಪಾ ರೇಷ್ಮೆ ಪಂಚೆಗಳು.

ಒಳ್ಳೇ ಸಮಯ ! ಸಾವಿರಗಟ್ಲೆ ಖರ್ಚಾಗುತ್ತಿದೆ !! ನಂತರ ದೊರೆಯಲಾರದು !!!

ಅನೇಕ ಪಂಚೆಗಳು ದಿನವೂ ಖರ್ಚಾಗುತ್ತಾ ಇರುವುದರಿಂದ ಪ್ರಕೃತ ಬೆಲೆಯು ತಗ್ಗಿಸಿರುತ್ತೇವೆ. ವಾಚಕರೇ ! ಶೃಂಗಾರವನ್ನೂ ನಾಗರಿಕತೆಯನ್ನೂ

ಹೊಂದಿರುವ ಮೇಲಾದ ಅಸಲ್ ರೇಷ್ಮೆ ಪಂಚೆಗಳು ಹಬ್ಬಗಳ ಕಾಲದಲ್ಲಿ ಹೊದಿಯಲು ಅನೇಕ ಪಂಚೆಗಳನ್ನು ತರಿಸಿಕೊಂಡಿರುವದರಿಂದ ಮಿಕ್ಕಾಲು ಪಾಲು ಸರಕು ಖರ್ಚಾಗಿಹೋಗಿರುತ್ತೆ. ಈಗ ಸ್ವಲ್ಪವೇ ಉಳಿದಿರುತ್ತೆ. ಈ ಪಂಚೆಗಳು ಸ್ತ್ರೀ ಪುರುಷರು ಬಾಲಿಕೆಗಳು ಧರಿಸಿಕೊಳ್ಳಬಹುದು. ಅಪೂರ್ವವಾದ ಪಂಚೆಗಳು. ಇವರಲ್ಲಿ ಕೆಂಪು, ಹಸರು, ಎಲೆಹಸರು, ರೋಜಾ, ಮೇಘವರ್ಣ, ಇತ್ಯಾದಿ ರಂಗುಗಳುಂಟು. ಬಹಳ ಉತ್ಕೃಷ್ಟವಾದ ಪಂಚೆಗಳು. ಈ ಪರೀದಿಗೆ ನಮ್ಮಲ್ಲಿ ಅಲ್ಲದೆ ಮತ್ತೆ ಯಾರಲ್ಲಿಯೂ ದೊರೆಯಲಾರದು.

6½ ಮೊಳ ಉದ್ದ, 2½ ಮೊಳ ಅಗಲ ಇರುವ ಪಂಚೆ ಒಂದಕ್ಕೆ ರೂ. 2 ಪಂಚೆ 1 ಕ್ಕೆ ಟಪಾಲು ಖರ್ಚು 4 ಆಣೆ. ಎರಡು ಪಂಚೆಗಳನ್ನು ಒಂದೇ ಸಲ ತರಿಸಿಕೊಂಡರೆ ಟಪಾಲು ಖರ್ಚು ಇನಾಂ.

ನಮ್ಮ ವಿಳಾಸ—ಎಕ್. ಎಂ. ಸ್ವಾಮಿ ಅಂಡು ಕಂಪೆನಿ,

[109-13] ನಂ. 44, ನಂಬುಳಯ್ಯರ್ ಬೀದಿ, ಮದರಾಸು.

ಮರೆಯಬ್ಯಾಡಿರಿ. ಮರೆಯಬ್ಯಾಡಿರಿ.

ದರ್ಬಾರ್ ಸಾಬೂನು.

ಏಜಂಟುಗಳು ಬೇಕಾಗಿದೆ!

ಒಳ್ಳೇ ಕಮೀಷನ್ ದೊರೆಯುವದು.

ಅಪಾಯವಿಲ್ಲದ ರೋಮಸಂಹಾರಿ, ಈ ಸಾಬೂನನ್ನು ರೋಮವಿರುವ ಸ್ಥಳದಲ್ಲಿ ತಟ್ಟಿದರೆ 5 ನಿಮಿಷಗಳೊಳಗಾಗಿ ರೋಮವು ಮಾಯವಾಗುವದು.

ಉರಿ, ನವೆ ಮುಂತಾದ ಬಾಧೆಗಳಿಲ್ಲವು. ಒಂದು ಸಾರಿ ಉಪಯೋಗಿಸಿದರೆ ಗೊತ್ತಾಗುವದು ಮರೆಯಬ್ಯಾಡಿರಿ.

3 ಸಾಬೂನುಗಳಿರುವ ಪೆಟ್ಟಿಗೆ 1 ಕ್ಕೆ ಕ್ರಯ 14 ಆಣೆ.

2 ಪೆಟ್ಟಿಗೆ ಒಂದೇ ಸಾರಿ ತೆಗೆದುಕೊಳ್ಳುವವರಿಗೆ ರೂ. 1-10-0 ಅಂಚೇ ಹಾಸಲು 4 ಆಣೆ.

[163-2] ವರ್ತಕರಿಗೆ ಅನುಕೂಲವಾಗಿ ಕೊಡಲ್ಪಡುತ್ತದೆ.

ವಿಳಾಸ :—ವಿ. ಎ. ಎಸ್. ಪಾಣಿ ಕಂಪೆನಿ,

ನಂಬರ್ 3, ಇರುಳಪ್ಪನ್ ಪೇಟೆ, ಮದರಾಸು.

CHAMBERLAIN'S COUGH REMEDY.

ಚೇಂಬರ್ಲೇನ್‍ಯವರು ಕಂಡುಹಿಡಿದ ಕೆಮ್ಮಿನ ಔಷಧವು.

3-32



ಶೀತದ ಕೆಮ್ಮು, ಗಂಟ್ಲು ಗಾರೆನ್ನುವುದು, ಹುಡಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟ್ಲಿನಲ್ಲೂ ಎದೆಯಲ್ಲೂ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವೇ ಬಾಣಪ್ರಾಯವಾದೆ.

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ, ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ. ಅದರ ಮೇಲೆ ನ್ಯುಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು. ತರುವಾಯ ಉಗುಳಿನಲ್ಲಿ ರಕ್ತಬೀಳುವುದು. ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು.

ಚೇಂಬರ್ಲೇನ್‍ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟ್ಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಖಂಡಿತವಾಗಿ ನಿವಾರಣೆಮಾಡುತ್ತದೆ. ಉಸುರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ. ಅಪಾಯಕರವಾದ ಕೆಮ್ಮಿನ ಶಬ್ದವನ್ನು ನಿಲ್ಲಿಸಿಬಿಡುತ್ತದೆ. ಎದೆ ಒಣಗುವಂಥಾ ಕೆಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ವಾಸಿಮಾಡಬಲ್ಲದು. ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ದೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ.

ಚೇಂಬರ್ಲೇನ್‍ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ.

ಈ ಔಷಧವು ವನಸ್ಪತಿಗಳ ತಯಾರಿ.

ಕೈಯಿಂದ ಮುಟ್ಟದೆ ತಯಾರಾಗಿದೆ.

ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಶೀಸೆಗೆ ೧ ರೂಪಾಯಿ. ದೊಡ್ಡ ಶೀಸೆಗೆ ೨ ರೂಪಾಯಿ.

ವೈದ್ಯ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.



ಲೋಕಾಮಯಹರ ಕಸ್ತೂರಿ ಮಾತ್ರೆ :—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇ ಶೂಲೆ. ಸಂದುಗಳ ನೋವು, ಮೈ ಕಾಲು ಜೊಡತ (ಭಾರ), ಮೈ ನಡುಕ, ಶೀತಕಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂಥ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ಬಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚು ಜ್ವರ, ಕ್ಷಯಕ್ಕೆಗಳನ್ನು ಗುಣಪಡಿಸುತ್ತದೆ. ಇವನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವವಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—320 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ; 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪೀ ವರೆಗೆ ಪೋಸ್ಟೇಜು 4 ಆಣೆ. [179-48]

೨. ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈಮಾರಿನಂದು ಕಾರಿಂಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರಿಸಿ, ಮೂತ್ರವು ಕಟ್ಟಿದೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿ। ಒಂದೇ ಒಂದು ಬುದ್ದಿಯು ನಿಮ್ಮಲ್ಲಿರಲಿ। ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುವುದು. ಬೆಲೆ ರೂ. 1; ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ :—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

---

500 ರೂಪಾಯಿಗಳು ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

ಈ ಮುರಬ್ಬಾವು "ಪಂಜಾಬ್ ಸಾಲಾಮಿಸ್ರಿ" ಅಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡಲ್ಪಡುವುದು.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡವರಿಗೆ ಹೃದಯ ಕೋಶವು ಬಲಹೀನವಾಗಿ ನಾನಾ ವ್ಯಾಧಿಯಿಂದ ಮರಣ ಪರಿಯಂತರವೂ ದುಃಖಪಡುವರು. ಈ "ಪಂಜಾಬ್ ಸಾಲಾಮಿಸ್ರೀ ಮುರಬ್ಬಾ" ದ ಸೇವನೆಯಿಂದ ಕೈ, ಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದಾಗ್ಯೂ, ತಲೆಯ ನೋವೂ, ಇವುಗಳೆಲ್ಲವೂ ಪಂಜಾಬ್ ಸಾಲಾಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು, ಮಿದುಳಿಗೆ ಬಲವನ್ನುಂಟುಮಾಡುವುದು, ಧಾತುವನ್ನು ಶೇಖರಿಸುವುದು, ಸೊಂಟದ ನೋವು ಸ್ವಲ್ಪ ಮಾತ್ರವೂ ಇರಲಾರದು. ಈ ಪಂಜಾಬ್ ಸಾಲಾಮಿಸ್ರಿಯ ಮುರಬ್ಬಾಕ್ಕೆ ತಾಂಬ್ರದ ಮತ್ತು ಭಂಗಾರದ ಭಸ್ಮವು ಎಷ್ಟು ಮಾತ್ರವೂ ಸಮಾನವಾಗಲಾರದು. ಹೊಟ್ಟೆಯಲ್ಲಿರುವ ಜ್ವರದ ಗಡ್ಡೆಯನ್ನು ನಾಶಪಡಿಸುವುದು. ಶ್ವಾಸ ಕಾಸರೋಗಗಳನ್ನು ನಿರ್ಮೂಲಪಡಿಸುವುದು. ಕಾಬೂಲ್, ಕಾಂದಹಾರ್ ದೇಶಗಳ ಜನರು ಸಾಲಾಮಿಸ್ರಿಯ ಹಣ್ಣನ್ನು ಬಹಳವಾಗಿ ತಿನ್ನುವರು. ಆದ್ದರಿಂದ ಶಕ್ತಿಯಲ್ಲಿ ಬಹಳ ಗಟ್ಟಿಗರು. ಡಬ್ಬಾ 1 ಕ್ಕೆ ರೂ. 2-0-0. ಟಪಾಲ್ ಖರ್ಚು ಅಲಾಯದ. [133-8]

ಅನುಪಾನಪತ್ರಿಕೆ ಔಷಧದ ಸಂಗಡ. ಕ್ಯಾಟ್ಲಾಗ್ ಅಪೇಕ್ಷಿಸುವವರು ೧ ಕಾಸಿನ ಸ್ಟಾಂಪು ಕಳಿಸಿ.

ಏಜಂಟರು—ಡಿ. ಸೈಯದ್ ಉಸ್ಮಾನ್ ಅಂಡ್ ಕೊ, ದೊಡ್ಡಪೇಟೆ, ಬೆಂಗಳೂರು ಸಿಟಿ.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು, ೩ ಹಾಜಿ ಸಾಹೇಬ್ ಮಹಡಿ, ಆನೇಪ್ಲಾ ರೋಡ್, ಬೆಂಗಳೂರು ಸಿಟಿ.

Mellin's Food

ಮೆಲ್ಲಿನ್ಸ್ ಆಹಾರವು

ಕೈಸೋಕದೆ ಮಾಡಿದ

ಶಿಶುಗಳಿಗೂ ರೋಗಿಷ್ಠರಿಗೂ

ಮೆಲ್ಲಿನ್ಸ್ ಆಹಾರದ ಬಿಸ್ಕತ್ತುಗಳು [4-39]

ಬೆಳೆಯುವ ಮಕ್ಕಳಿಗೆ ಎದೆಹಾಲು ತಪ್ಪುವ ಕಾಲದಲ್ಲಿ ಇದು ಶ್ರೇಷ್ಠವಾದ ಆಹಾರ; ಮತ್ತು ದೊಡ್ಡವರಿಗೆ ದೇಹ ಪುಷ್ಟಿಯನ್ನೂ ಬಲವನ್ನೂ ಕೊಡತಕ್ಕದ್ದು.

Messrs. OAKES & Company, Mount Road, Madras.

ವಿಳಾಸ—ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

WANTED

An active and influential Sole District Agent for the Districts of Bangalore, Tumkur, Shimoga, Kolar, and Coorg on liberal terms of Commission and monthly Office allowance. None but those who can guarantee good business need apply to,

Messors. VENKATACHALAM & SONS,
Chief Agents,
Hindustan Co-operative Insurance Society, Ltd.,
166, Dodpet, near Old Taluk Cutcherry,
[224-35] *MYSORE.*

ಮಧುರೆ ಜುನ್ನಡಿ ಅಂಚಿನ ಸೀರೆ ಅವ್ವಲ್ ರಖಂ ರೂ. 2-6-0.

ಜುಲೈ ತಿಂಗಳ ಒಳಗಾಗಿ ತರಿಸಿಕೊಳ್ಳುವರಿಗೆ ಒಂದು ಸಿಂಗಪೂರು ರವಿಕೆಯನ್ನು ಪ್ರತಿ ಸೀರೆಗೂ ಇನಾಮಾಗಿ ಕೊಡುತ್ತೇವೆ. [99-9]



ಇದು ಉಡುವುದಕ್ಕೆ ದಢೂತಿಯಾಗಿಯೂ, ನೋಟಕ್ಕೆ ನಯವಾಗಿಯೂ, ಬೆಲೆ ಸುಲಭವಾಗಿಯೂ ಇದೆ. ಬಣ್ಣ ಹೋಗದು. ಸೀರೆಯ ಉದ್ದ 18 ಮೊಳ. ಸುಂದರವಾದ ಸೆರಗು. ಒಂದನ್ನು ತರಿಸಿ ಪರೀಕ್ಷಿಸಿ. ವಿಳಾಸ—ವಿ. ಕೃಷ್ಣಸ್ವಾಮಿ ಮೊದಲಿಯಾರ್, ನಂ. 27, ಬಂದರ್ ಬೀದಿ, ಜಿ. ಟಿ., ಮದರಾಸು.

ಓರಿಯಂಟಲ್ ಗ॥ ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು.............ರೂ. 4,45,00,000

ಕಂಪನಿಯಿಂದ ಪಾವತಿ ಆಗಿರುವದು ,, 4,00,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ.—ಮಿ॥ ಎಂ. ಎಸ್. ರಚಿದಿ, ಚೀಫ್ ಏಜೆಂಟ್, ಬೆಂಗಳೂರು; ಮ॥ ಎಂ ಎಸ್. ನಂಜಪ್ಪನವರು ಅಥವಾ ಮ॥ ವೆಂಕಟಪತಯ್ಯನವರು, ಕಂಪನಿ ಏಜಂಟರು, ಮೈಸೂರು; ಅಥವಾ

[194-45] ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ, ಮದರಾಸ್.

ಹಿಂದುಸ್ಥಾನ್ ಕೋಆಪರೆಟೀವ್ ಜೀವವಿಮೆ ಸಂಘ ಲಿ. ಹಿಂದುಸ್ಥಾನ್ ಕಟ್ಟಡಗಳು—ಕಲ್ಕತ್ತಾ.

ಕಂಪನಿಯ ಮೂಲಧನ (ಒಂದು ಕೋಟಿ ರೂಪಾಯಿ)	1,00,00,000
ಪಾವತಿಯಾದ ಮೊಬಲಗು	10,50,000
ವಸೂಲಾದ ಮೊಬಲಗು	87,00,000

ಈ ಕಂಪನಿಯಲ್ಲಿ ಪಾಲಿಸಿದಾರರಿಗೆ ಬಹಳ ಕಮ್ಮಿಯಾದ ದರಗಳ ಪಟ್ಟಿಯನ್ನು ಮಾಡಿರುವುದು. 1912 ನೇ ಇಸ್ವಿಯ ಇಂಡಿಯಾ ಗವರ್ನಮೆಂಟಿನ ಜೀವವಿಮೆ ಕಂಪನಿಯ ಆಕ್ಟಿನ ಪ್ರಕಾರ ಸರ್ಕಾರದಲ್ಲಿ 2 ಲಕ್ಷ ರೂಪಾಯಿಗಳನ್ನು ಡಿಪಾಜಿಟ್ಟು ಮಾಡಲ್ಪಟ್ಟಿರುತ್ತೆ. ಮತ್ತು ಅನೇಕ ಮಹಾರಾಜರುಗಳು ಮುಂತಾದ ದೊಡ್ಡವರು ಪ್ರೆಸಿಡೆಂಟರಾಗಿರುವದರಿಂದ ಈ ಕಂಪನಿಯ ಅಭಿವೃದ್ಧಿಸ್ಥಿತಿಯನ್ನು ಪ್ರಕಟನೆ ಮಾಡುವುದಕ್ಕೆ ಸಂತೋಷವಾಗಿರುತ್ತದೆ.

ಸುಲಭವಾಗಿ ಹಣವನ್ನು ಪಾರ್ಟಿಯವರ ಮನೆಯಲ್ಲೇ ಜಾಗ್ರತೆ ಪಾವತಿಗೆ ಏರ್ಪಾಡು ಮಾಡಲ್ಪಡುತ್ತೆ. ಆದ್ದರಿಂದ ಪಾಲಿಸಿದಾರರು ಮತ್ತು ಇದಕ್ಕೆ ಸೇರಿದ ಏಜಂಟ್ರುಗಳು ತುಂಬಾ ಅದೃಷ್ಟವಂತರೆಂಬುವದರಲ್ಲಿ ಸಂದೇಹವಿಲ್ಲ.

ಹೆಚ್ಚಿನ ವಿಷಯಗಳಿಗೂ, ಫಾರಂ ಮತ್ತು ಪ್ರಾಸ್‌ಪೆಕ್ಟುಸುಗಳಿಗೂ ಕೆಳಗಿನ ವಿಳಾಸಕ್ಕೆ ಜಾಗ್ರತೆಯಾಗಿ ಬರೆಯಿರಿ. [243-35]

ವೆಂಕಟಾಚಲಂ ಅಂಡ್ ಸನ್ಸ್, ಚೀಫ್ ಏಜಂಟ್ರು,
166, ದೊಡ್ಡಪೇಟೆ, ಮೈಸೂರು.

ನ್ಯಾಷನಲ್ ಇನ್ಸೂರೆನ್ಸ್ ಕಂಪನಿ, ಲಿಮಿಟೆಡ್, ವಿಜಯನಗರಂ ಸಿಟಿ.

1905 ರಲ್ಲಿ ಸ್ಥಾಪಿಸಲ್ಪಟ್ಟದ್ದು.

1912 ನೇ ಆಕ್ಟು ಪ್ರಕಾರ ಬದಲಾಯಿಸಿದೆ.

ಗವರ್ನಮೆಂಟ್ ಸೆಕ್ಯೂರಿಟಿಗಳನ್ನು ಪಡೆದಿದೆ.

ಕಂಪನಿ ಆಸ್ತಿಯನ್ನು ಹಂಚಿಕೊಳ್ಳುವ ಷೇರುದಾರರಿಲ್ಲ.

ವೈದ್ಯರ ಪರೀಕ್ಷಾ ಸರ್ಟಿಫಿಕೇಟು ಅವಶ್ಯವಿಲ್ಲ.

ಬೋನಸ್ ಹಣ ಅಪಾರವಾಗಿ ಪಾವತಿ ಮಾಡಿದೆ.

ಜೀವವಿಮೆ—ತಿಂಗಳ ಚಂದಾ 1 ನೇ ಕ್ಲಾಸ್ ರೂ. 1; 2 ನೇ ಕ್ಲಾಸ್ ರೂ. 0-8-0.
ಮದುವೆ ಫಂಡು—ತಿಂಗಳ ಚಂದಾ ರೂ. 1-0-0.

ಇದು ಬಹು ಲಾಭಕರವಾದ ಮತ್ತು ಸುರಕ್ಷಿತವಾದ ಕಂಪನಿ. ವಿಮೆ ಮಾಡತಕ್ಕವರಿಗೂ ಫಂಡು ಪಡೆಯತಕ್ಕವರಿಗೂ ತುಂಬಾ ಅನುಕೂಲವಾಗಿರುತ್ತದೆ. [138-8]

ಏಜಂಟರು ಬೇಕು. ಧಾರಾಳವಾದ ಕಮಿಷನ್ ಸಿಗುತ್ತೆ. ಕಂಪನಿಯ ಪ್ರಾಸ್ಪೆಕ್ಟಸ್ಸು ಬಿಟ್ಟಿ ಕೇಳಿದವರಿಗೆ ಕೊಡುತ್ತೆ. ಈ ವಿಳಾಸಕ್ಕೆ ಬರೆದುಕೊಳ್ಳಿ:—

ವಿ. ಬಿ. ಶ್ರೀಕಂಠಯ್ಯನವರು, ಮೈಸೂರು ಮತ್ತು ಕೊಡಗಿನ ಚೀಫ್ ಏಜಂಟ್, ಕೋಟೆ, ಬೆಂಗಳೂರು ಸಿಟಿ.

V. B. Srikantiah.
Chief Agent, Mysore & Coorg, Fort, Bangalore City.

ಸ್ವಚ್ಛ ಬೆಳ್ಳಿಯಿಂದ ಕಟ್ಟಿ ಚಿನ್ನದ ಗಿಲ್ಟು ಹಾಕಿದ ಆಭರಣಗಳು.

ಈಗ ನಾವು ಹೊರದಾಗಿ ಒಂದು ಕಂಪನಿಯನ್ನು ಏರ್ಪಡಿಸಿ ಇದರಲ್ಲಿ ಕಂಡ ನಗಗಳನ್ನು ಸ್ವಚ್ಛ ಬೆಳ್ಳಿಯಿಂದ ತಯಾರಿಸಿ ಬಲವಾದ ಚಿನ್ನದ ಗಿಲ್ಟುಕೊಟ್ಟು ನಮ್ಮ ಮಿಷ್ಷಿನ ಅಭಿವೃದ್ಧಿಯಿಂದ ಬಹು ನಾಜೂಕಾಗಿ ತಯಾರು ಮಾಡಿರುತ್ತವೆ. ನೋಡಿದವರು ಶ್ಲಾಘನೆ ಮಾಡತಕ್ಕದ್ದು. ಗಿಲ್ಟಿಗೆ ನಾನು ಜವಾಬ್ದಾರಿ. ಒಂದನ್ನು ತರಿಸಿ ನೋಡಿದರೆ ಗೊತ್ತಾಗುವದು. ಕಮ್ಮಲು ಜೊತೆ 1 ಕ್ಕೆ 2-6-0. ಹಸ್ತಕಡಗು ಜೊತೆ 1 ಕ್ಕೆ 1-14-0. ಬುಲಾಕು 1-14-0. ಮೂಗುಬಟ್ಟು 8 ಆ.



ಸೀಮೆ ಇಮಿಟೇಷನ್ ವಜ್ರದ ಆಭರಣಗಳು.



ಪ್ರಖ್ಯಾತಿಯನ್ನು ಪಡೆದ ಅನೇಕ ಕೆಲಸಗಾರರಿಂದ ತಯಾರಿಸಿದ್ದು. ಇದು ಎಷ್ಟು ವರುಷಗಳಾದರೂ ಕೆಡುವುದಿಲ್ಲ. ಬೆಲೆ ಬಹಳ ಸುಲಭ. ಕಮ್ಮಲು ಜೊತೆ 1 ಕ್ಕೆ 1 ರೂ. ಹಸ್ತಕಡುಕು ಜೊತೆ 1 ಕ್ಕೆ 14 ಆ. ಕುರಡಿಬಾವಲಿ ಜೊತೆ 1 ಕ್ಕೆ 1-8-0. ಮೂಗುಬೊಟ್ಟು 4 ಆ. ಬೇಸರಿ 1 ಕ್ಕೆ 10 ಆ. ಬುಲಾಕು 1 ಕ್ಕೆ 12 ಆ. ಎಲೆಕ್ಟ್ರೋ ಚಿನ್ನದ ಗಿಲ್ಟು ಮಾಡಿದ ತಂಜಾವೂರು ಗೆಜ್ಜೆ ಅಡ್ಡಿಗೆ ಬೆಲೆ 6 ಆ. ವಿಳಾಸ—ಎ. ಮುನಿಸಾಮಿ ನಾಯುಡು, ಆರುಮುಗ ಚೆಟ್ಟಿ ಬೀದಿ, ತಿರುವಲ್ಲಿಕೈಣಿ, ಮದರಾಸು.

[171-1]

ಹಾರಮೋನಿಯಂ ಕಲಿಯುವ ಪುಸ್ತಕ. ಕ್ರಯ 6 ಆಣೆ.

ಇದು ಪಂಡಿತ ಮಿತ್ರದಾಸರವರಿಂದ ಪ್ರಚುರಿಸಲ್ಪಟ್ಟಿರುತ್ತೆ. ಇದರಲ್ಲಿ 40 ಪಾರಸಿ ಹಾಡುಗಳು ಹಾರಮೋನಿಯಂನುಡಿಸುವ ವಿಧಾನ, ಆರೋಹಣ ಅವರೋಹಣಗಳು, ಮತ್ತು ಸೌಖ್ಯಗುರುತುಗಳು ತಿಳುಹಿಸಲ್ಪಟ್ಟಿರುತ್ತೆ. ಸ್ವಲ್ಪ ಇಂಗ್ಲೀಷು ಭಾಷಾ ಪರಿಶ್ರಮವಿರುವವರೆಲ್ಲರೂ ಈ ಗ್ರಂಥದ ಸಹಾಯದಿಂದ ಹಾರಮೋನಿಯಂ ನುಡಿಸುವದನ್ನೂ ಹಾಡುವದನ್ನೂ ಕಲಿಯಬಹುದು.

ತಂಜಾವೂರು ಗೆಜ್ಜೆ ಅಡ್ಡಿಗೆ ಕ್ರಯ 6 ಆಣೆ.

ಇದು ಕೆನಡಿಯನ್ ಗೋಲ್ಡ್ ನಂತಹ ಲೋಹದಿಂದ ಗಟ್ಟಿ ಗೆಜ್ಜೆಗಳನ್ನು ತಯಾರಿಸಿ ಸುಂದರವಾಗಿ ಕೊಕ್ಕೆಗಳು ಮತ್ತು ತುರ್ಮಪುಗಳು ಇಟ್ಟು ಎಲೆಕ್ಟ್ರಿಕ್ ಶಕ್ತಿಯಿಂದ ಗಟ್ಟಿಯಾದ ಚಿನ್ನವನ್ನು ಹಾಕಿ ನೋಡುವವರಿಗೆ ಬಹು ಆಶ್ಚರ್ಯವಾಗುವ ಹಾಗೆ ಸ್ವಲ್ಪ ಕ್ರಯವನ್ನಿಟ್ಟು ಅಡ್ಡಿಗೆಯನ್ನು ತಯಾರಿಸಿರುತ್ತೇವೆ. ಇದು ಗಾಜಿನ ಮಣಿಗಳಲ್ಲ. ನಿಜವಾದ ಗಟ್ಟಿ ಗೆಜ್ಜೆಗಳು. ಸ್ತ್ರೀಯರೂ ಹುಡುಗಿಯರೂ ಕೊರಳಿಗೆ ಧರಿಸಿಕೊಳ್ಳುವದಕ್ಕೆ ಲಾಯಖಾದದ್ದು. [161-2]

ವಿಳಾಸ—ಎಸ್. ನರಸಿಂಹನಾಯುಡು, ಟ್ರಿಪ್ಲಿಕೇನ್, ಮದರಾಸ್.

ಮಲೇರಿಯಾ

ಮತ್ತು ಹವಾ ದೋಷದಿಂದುಂಟಾಗುವ ಎಲ್ಲಾ ತರದ ಜ್ವರವೂ

ಈಸಾನೋಫೆಲಿ

ಯ ಸೇವನೆಯಿಂದ ಬೇಗನೆ ನಿವಾರಣೆಯಾಗುತ್ತೆ.

ಕ್ವಿನೈನ್ ಜ್ವರವನ್ನು ಅಣಗಿಸುವುದು; ಆದರೆ ನಮ್ಮ ಈ ಸಾನೋಫೆಲಿಯು 15 ದಿನದಲ್ಲಿ ವಾಸಿಮಾಡುತ್ತದೆ. ಹಗಲು ರಾತ್ರಿ ಒಂದೊಂದು ಮಾತ್ರೆ ತೆಗೆದುಕೊಳ್ಳುತ್ತಾ ಬಂದರೆ ಜ್ವರ ಬಾರದಂತೆ ಸಂರಕ್ಷಣೆ ಮಾಡಬಲ್ಲದು.

ಜ್ವರವು ಸಂಪೂರ್ಣವಾಗಿ ವಾಸಿಯಾಗುವುದಕ್ಕೆ ಎರಡು ಬಾಟ್ಲಿ ಔಷಧ ಹದಿನೈದು ದಿನಕ್ಕೆ ಸಾಕು.

ಬಾಟ್ಲಿಗೆ ಕ್ರಯ 2 ರೂಪಾಯಿ.

ಬಿಕರಿಯಾಗುವ ಸ್ಥಳಗಳು.

1. ಫಾಸ್ಟರ್ ಕಂಪನಿ, ಕೆಮಿಸ್ಟ್ಸ್, ಬೆಂಗಳೂರು;
2. ಬಿ. ಜಿ. ಗೌಡ್ ಕಂಪನಿ, ವಾಲೆಸ್ ಬೀದಿ,

[172-1] ಬೊಂಬಾಯಿ;

ಇದಲ್ಲದೆ

ಎಲ್ಲಾ ಔಷಧ ಮಾರಾಟದ ಷಾಪಿನಲ್ಲೂ ಸಿಕ್ಕುವುದು.



ಜೂಬಿಲಿ ಮಹೋತ್ಸವದ ಕೈ ಗಡಿಯಾರ.
ಅರ್ಧ ಕ್ರಯ ರೂ. 1-14-0

ಇದೇ ಜೂಲೈ ಹಬ್ಬದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದ ಕೈ ಗಡಿಯಾರವನ್ನು ಜುಲೈ ಒಳಗೆ ತರಿಸಿಕೊಳ್ಳುವವರಿಗೆ ರೂಪಾಯಿ 1-14-0 ಆಣೆಗೆ ಕೊಡಲ್ಪಡುತ್ತೆ. [99-9]

ವಿಳಾಸ—ವಿ. ಕೃಷ್ಣಸ್ವಾಮಿ ಮೊದಲಿಯಾರ್, ನಂ.27 ಬಂದರ್ ಬೀದಿ, ಜಿ.ಟಿ., ಮದರಾಸು.

ನಿನಗೆ ಮೈ ಸ್ವಸ್ಥವಿಲ್ಲವೋ?

ನಿನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ, ನಿನಗೆ ಯಾವ ನೋವೇ ಉಂಟಾಗಿರಲಿ—"ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತಿದೆಯೇ?" ಎಂದು ನಿನ್ನನ್ನು ನೀನೇ ಕೇಳಿಕೋ; ಹಾಗೆ ಆಗದಿದ್ದರೆ ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ. ಮಾರನೇ ದಿನ ಬೆಳಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನಿನಗೆ ಮೈ ಸ್ವಸ್ಥವಾಗುವುದು. ಮಲಬಂಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ ಪರಿಣಮಿಸುವುದು. ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲಕಾರಣವಾಗಿರುವುದು. ಮಲಬಂಧದಿಂದ ರೋಗಗಳೇಕೆ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು. ಆ ರೋಗಗಳಾವುವೆಂದರೆ:—ಪಿತ್ತಕೋಶ ರೋಗ; ಪಿತ್ತ; ಪಿತ್ತಜ್ವರ; ಅಜೀರ್ಣ; ಅಗ್ನಿಮಾಂದ್ಯ; ಗಾಬರಿ; ಅಶಕ್ತಿ; ಎದೆಯು ತಲ್ಲಣಿಸುವುದು; ತಲೆತಿರುಗುವುದು; ತಲೆನೋವು; ಹೊಟ್ಟೆಯುಬ್ಬರ; ಹುಳಿತೇಗಿನ ಹೊಟ್ಟೆನೋವು; ಹೆಂಗಸರ ವ್ಯಾಧಿಗಳು; ಇವೇ ಮೊದಲಾದವು. ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು.

(೧೨ ಆಣೆ ಬುಡ್ಡಿ ಪರಿಮಾಣ)

ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು. ಗಂಡುಸರಿಗಾಗಲಿ ಹೆಂಗುಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ, ಕಶ್ಮಲವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ಶುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇನೆ ನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು. [181-48]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ. ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು. ಔಷಧಗಳನ್ನು ಮಾರುವವರ ಬಳಿಯೆಲ್ಲಾ ದೊರೆಯುವುದು; ಅಥವಾ ಡೋನ್, ಪಿ. ಒ. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1914 ನೇ ಇಸವಿ ಜೂಲೈ 23 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ.

ಲೇಣೆ:—(1) ಷೇರು ಮೊಬಲಗು	....	ರೂ. 9,92,395
,, (2) ಡಿಪಾಜಿಟ್ಟುಗಳು	....	,, 18,13,748
,, (3) ಇತರೆ	....	,, 37,004
(ಆಣೆ, ಕಾಸು ಬಿಟ್ಟಿರುತ್ತೆ.)	ಜುಮ್ಲಾ	ರೂ. 28,43,147
ದೇಣೆ:—(1) ಕೈಯಲ್ಲಿರುವ, ಬ್ಯಾಂಕುಗಳಲ್ಲಿರುವ ಹಣ		ರೂ. 11,30,822
,, (2) ಖಾತೆ ಮತ್ತು ಇತರ ಸಾಲಗಳು	......	,, 13,32,222
,, (3) ಡಿಸ್ಕೌಂಟು ಮಾಡಿದ ವಾಯಿದೆ ಹುಂಡಿಗಳು		,, 1,94,550
,, (4) ಏಜನ್ಸಿಗಳಲ್ಲಿರುವ ಮೊಬಲಗು	......	,, 1,59,604
,, (5) ಬ್ಯಾಂಕಿನಲ್ಲಿರುವ ಸಾಮಾನುಗಳು	......	,, 8,004
,, (6) ಇತರೆ	....	,, 17,945
(ಆಣೆ, ಕಾಸು ಬಿಟ್ಟಿರುತ್ತೆ.)	ಜುಮ್ಲಾ	ರೂ. 28,43,147

ಡಬ್ಲಿಯು. ಸಿ. ರೋಸ್, ಮ್ಯಾನೇಜರ್

ಒಂದು ಸಂತೋಷ ಸಭೆ.

ಹಿರಿಯೂರು ತಾಲ್ಲೂಕು ಸೊಂಡೇಕೆರೆ.

ಕಳೆದ 20 ನೇ ತಾ. ಸೋಮವಾರ ಮಧ್ಯಾಹ್ನ ಸ್ಕೂಲ್ ಕಟ್ಟಡದಲ್ಲಿ ಈ ಊರಿನ ಪ್ರಮುಖರು ಸುಮಾರು 200-300 ಜನದ ವರೆವಿಗೂ ಸಭೆಸೇರಿ ವಿದ್ಯಾಭ್ಯಾಸದ ಇಲಾಖೆಯಲ್ಲಿ ಉತ್ತಮವಾದ ಸರ್ವೀಸ್ ಮಾಡಿ ಬಡ್ತಿಯಿಂದ ವರ್ಗಪಟ್ಟ ಸ್ಕೂಲ್ ಹೆಡ್ ಮಾಸ್ಟರ್ ಮ॥ ಎಂ. ಸುಬ್ಬರಾಯರಿಗೆ ತಕ್ಕ ಸನ್ಮಾನವನ್ನು ಮಾಡಿದರು. ಸಭೆಯವರ ಅನುಮತಿಯಂತೆ ಹೆಡ್ ಮಾಸ್ಟರವರ ಸಭಾಧ್ಯಕ್ಷತೆಯನ್ನು ವಹಿಸಿದರು. ಹಾಲಿ ಹೆಡ್ ಮಾಸ್ಟರ್ ಕೆಲಸಕ್ಕೆ ತುರುಮನೂರು ಸ್ಕೂಲಿನಿಂದ ವರ್ಗಪಟ್ಟು ಬಂದಿರುವ ಮ॥ ಎಂ. ರಾಮಯ್ಯನವರು ವಿದ್ಯಾಭ್ಯಾಸದ ವಿಷಯವಾಗಿಯೂ, ಸಾಹುಕಾರ್ ಚನ್ನಬಸಪ್ಪನವರು ಸನ್ಮಾರ್ಗ ವಿಚಾರವಾಗಿಯೂ ಸ್ವಾರಸ್ಯವಾಗಿ ಉಪನ್ಯಾಸಮಾಡಿದರು. ಶಿಷ್ಯಮಂಡಲಿಯ ಪರವಾಗಿ ಸಾಹುಕಾರ್ ವೀರಣ್ಣನವರೂ, ಮ॥ ಶರಣಪ್ಪನವರೂ ಹೆಡ್ ಮಾಸ್ಟರ ಗುಣಕಥನ ಮಾಡಿ ವಂದಿಸಿದರು. ಸಾಹುಕಾರ್ ಕೃಷ್ಣಪ್ಪನವರು ಸುಬ್ಬರಾಯರವರ ಉತ್ತಮವಾದ ಸರ್ವೀಸನ್ನೂ, ಅವರಿಂದ ವೃದ್ಧಿಗೆ ಬಂದಿರುವ ಮಕ್ಕಳ ವಿದ್ಯಾಭ್ಯಾಸವನ್ನೂ, ಇವರ ಗುಣನಡತೆಗಳಿಂದ ಈ ಊರಿನ ಪ್ರಜೆಗಳಿಗೆ ಉಂಟಾಗಿರುವ ಉತ್ಸಾಹ ಸಹಾಯಗಳನ್ನೂ ವಿವರಿಸಿ, ಹಾರ ಹಾಕಿದರು. ಹೆಡ್ ಮಾಸ್ಟರ್ ಎಂ. ರಾಮಯ್ಯನವರು ಪ್ರಜೆಗಳಿಗೂ, ಉಪಾಧ್ಯಾಯರುಗಳಿಗೂ ಇರಬೇಕಾದ ಅನ್ಯೋನ್ಯ ಸಂಬಂಧವನ್ನೂ, ಅದರಿಂದ ಉಂಟಾಗುವ ಪ್ರಯೋಜನಗಳನ್ನೂ ವ್ಯಕ್ತಪಡಿಸಿದ ಮೇಲೆ ಮ॥ ಸುಬ್ಬರಾಯರು ಸಭೆಯವರು ತಮಗೆ ಮಾಡಿದ ಮರ್ಯಾದೆಗಾಗಿ ಅವರನ್ನು ವಿನಯೋಕ್ತಿಗಳಿಂದ ವಂದಿಸಿ ತಮ್ಮ ಕೃತಜ್ಞತೆಯನ್ನು ತೋರ್ಪಡಿಸಿದರು. ಬಳಿಕ ಅ॥ ಮಾಸ್ಟರ್ ರಾಮಾಚಾರ್ರ ಇಂಪಾದ ಸಂಗೀತ ನಡೆದು, ಸ್ಕೂಲ್ ಬಾಲಕರಿಂದ ದೇವರ ಪ್ರಾರ್ಥನೆಯೂ, ಚಕ್ರವರ್ತಿ ಸಾರ್ವಭೌಮರವರ ಮತ್ತು ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಗಳೂ ಜರುಗಿಸಲ್ಪಟ್ಟುವು. ಬಳಿಕ ಸಭೆಗೆ ಗಂಧ, ಪುಷ್ಪ, ತಾಂಬೂಲವೂ ಮಕ್ಕಳಿಗೆ ಮಿಠಾಯಿಯೂ ಹಂಚಲ್ಪಟ್ಟು, ಸಭೆಯನ್ನು ಮುಕ್ತಾಯ ಮಾಡಿದರು. ಗ್ರಾಮದ ಆಬಾಲವೃದ್ಧರೂ ಸೇರಿ ಒಂದು ಮೈಲಿ ವರೆವಿಗೂ ಮ॥ ಸುಬ್ಬರಾಯರನ್ನು ಪ್ರಯಾಣ ಬೆಳಸಿ, ತಮ್ಮನ್ನು ಅಗಲಿದ್ದಕ್ಕಾಗಿ ಬಹಳವಾಗಿ ವ್ಯಸನವನ್ನು ಸೂಚಿಸಿದರು.

ಗ್ರಾಮವಾಸಿ.

ಗೃಹಕೃತ್ಯದ ನೋಟೀಸು.

ತಿರುಮಕೂಡ್ಲು ನರಸಿಪುರ ತಾಲ್ಲೋಕು ಬನ್ನೂರಲ್ಲಿರುವ ಸಬ್ಬಗ್ಗಿ ವೆಂಕಟಕೃಷ್ಣಯ್ಯ, ಇವನ ಅಣ್ಣ ಚಂದ್ರ ವೆಂಕಟಪ್ಪ ಸಹ ಈ ಮೂಲಕ ಸಮಸ್ತರಿಗೂ ತಿಳಿಸುವದೇನೆಂದರೆ—ಬನ್ನೂರಲ್ಲಿದ್ದು ಫವತಿ ಆದ ಸಬ್ಬಗಿ ತಮ್ಮಣ್ಣನ ಬಾಬ್ತು ಬೀಡನಹಳ್ಳಿ ಗ್ರಾಮದ ಹೊಲ, ಬನ್ನೂರು ಗ್ರಾಮದ ಮಾನ್ಯದ ಗದ್ದೆ ಮತ್ತು ಮನೆ ಸಹ ವಾಹಕ್ಕುದಾರಳಾದ ಅರಕಲಗೂಡು ತಾಲ್ಲೋಕು ದುದ್ದಿಯಲ್ಲಿ ಇರುವ ಲಕ್ಷ್ಮಮ್ಮನೆಂಬುವಳು ಪರಾಧೀನಮಾಡುವಂತೆ ತಿಳಿಯಬರುತ್ತೆ. ಈ ಸ್ವತ್ತು ಮೃತನಪ್ಪನ ಸ್ವತ್ತಾಗಿಯೂ, ವಾರಸದಾರರಾದ ನಮಗೆ ಆ ಪ್ರಕಾರ ಸೇರಿದ್ದಾಗಿಯೂ ಇರುವದರಿಂದ ಈ ಸ್ವತ್ತನ್ನು ಸದರಿ ಲಕ್ಷ್ಮಮ್ಮನಿಂದ ಕ್ರಯ ಭೋಗ್ಯ ಆಧಾರ ವಗೈರೆ ಯಾರೂ ಮಾಡಿಕೊಳ್ಳಕೂಡದೆಂದು ಎಚ್ಚರಿಸಿರುತ್ತೇನೆ.

[173-1] ರುಜು ಸಬ್ಬಗಿ ವೆಂಕಟಕೃಷ್ಣಯ್ಯ.

ವೃತ್ತಾಂತ ಪತ್ರಿಕೆ.

—:o:—

ಸನ್ ೧೯೧೪ ನೇ ಇಸವಿ ಆಗಸ್ಟ್ ತಾ. ೬ ನೇ ಗುರುವಾರ.

ಮೈಸೂರು ವಿದ್ಯಾಭ್ಯಾಸದ ಇಲಾಖೆಯು.

ನಮ್ಮ ಗವರ್ನ್‌ಮೆಂಟಿನವರು ಈಗತಾನೇ ಏರ್ಪಾಡು ಮಾಡಬೇಕೆಂದು ಸ್ಯಾಂಕ್ಷನ್‌ಮಾಡಿರುವ ಪ್ರಕಾರ ಸರಿಯಾಗಿ ಕಾರ್ಯಗಳು ನಡೆಯುವುದಾದರೆ ಇದರಿಂದ ಪ್ರಜೆಗಳಿಗೆ ಶಾಶ್ವತ ಪ್ರಯೋಜನವಾದೀತೆನ್ನುವುದಕ್ಕೆ ಸಂಶಯವಿಲ್ಲ. ಇನ್ನು ಮುಂದೆ ಅನೇಕ ಮಂದಿ ಉಪಾಧ್ಯಾಯರುಗಳನ್ನು ತರಪೇತು ಮಾಡಲು ಏರ್ಪಾಡಾಗಿರುತ್ತದೆ. ಈಗ ವರುಷಕ್ಕೆ ೭೫ ಮಂದಿ ಉಪಾಧ್ಯಾಯರು ತರಪೇತಾಗುವರು; ಇನ್ನು ಮುಂದೆ ೪೦ ಉಪಾಧ್ಯಾಯರಂತೆ ತರಪೇತಾಗುತ್ತಾರೆ. ಇದು ಸಾಕಾಗುವುದೆಂದು ನಮಗೇನೋ ತೋರುವುದಿಲ್ಲ. ರಾಜಧಾನಿಯಲ್ಲಿರುವ ನಾರ್ಮಲ್ ಸ್ಕೂಲನ್ನು ಹೆಚ್ಚಿಸಿ ಟ್ರೈನಿಂಗ್ ಕಾಲೇಜ್ ಎಂಬ ಹೆಸರು ಇಟ್ಟಿದ್ದಾರೆ. ತುಮಕೂರಿನಲ್ಲಿ ಹೊಸದಾಗಿ ಒಂದು ನಾರ್ಮಲ್ ಸ್ಕೂಲ್ ಏರ್ಪಾಡಾಗುತ್ತದೆ. ಇವಲ್ಲದೆ ಇನ್ನೆರಡು ನಾರ್ಮಲ್ ಸ್ಕೂಲುಗಳನ್ನು ಏರ್ಪಾಡುಮಾಡಬೇಕೆಂಬ ಯೋಚನೆಯುಂಟು. ಈ ನಾರ್ಮಲ್ ಸ್ಕೂಲುಗಳಲ್ಲಿ ಉಪಾಧ್ಯಾಯರನ್ನು ತರಪೇತು ಮಾಡುವುದಕ್ಕೆ ಈಗಿರುವುದಕ್ಕಿಂತಲೂ ಸಮರ್ಥರಾದ ಶಿಕ್ಷಕರನ್ನು ನೇಮಿಸಲು ಅವಕಾಶ ಕಲ್ಪಿಸಲಾಗಿದೆ. ಇವೆಲ್ಲಾ ಸರಿಯಾದ ಏರ್ಪಾಡುಗಳೆಂದು ಒಪ್ಪಿಕೊಳ್ಳುತ್ತೇವೆ.

ಮೈಸೂರು ಟ್ರೈನಿಂಗ್ ಕಾಲೇಜಿನಲ್ಲಿ ಮದರಾಸ್ ಯೂನಿವರ್ಸಿಟಿಯ ಎಲ್.ಟಿ. ಡಿಗ್ರಿ ಪರೀಕ್ಷೆಗೆ ವಿದ್ಯಾರ್ಥಿಗಳನ್ನು ತರಪೇತುಮಾಡುವುದಕ್ಕೆ ಏರ್ಪಾಡು ಮಾಡಲಾಗುವುದು. ಈಗ ಮೈಸೂರು ವಿದ್ಯಾರ್ಥಿಗಳು ಇತರ ಕಡೆ ಅಂಥಾ ವಿದ್ಯಾಶಾಲೆಗಳಿಗೆ ಹೋಗಿ ಸೇರಲು ಅವಕಾಶ ಕಡಮೆಯಾಗಿದೆ. ಆದಕಾರಣ ಮೈಸೂರು ಸಂಸ್ಥಾನಕ್ಕೆ ಬೇಕಾಗುವ ಉಪಾಧ್ಯಾಯರನ್ನು ಇಲ್ಲೇ ತರಪೇತುಮಾಡಿಕೊಳ್ಳುವುದೇ ಸರಿ. ನಮ್ಮ ಗವರ್ನ್‌ಮೆಂಟಿನವರು ಮೈಸೂರು ಟ್ರೈನಿಂಗ್ ಕಾಲೇಜಿಗೆ ಬೇಕಾಗುವ ಉಪಕರಣಗಳನ್ನೂ, ಬಹು ನಿಪುಣರಾದ ಶಿಕ್ಷಕರನ್ನೂ ಒದಗಿಸುವುದಕ್ಕೆ ಬೇಕಾಗುವಷ್ಟು ದ್ರವ್ಯವನ್ನು ಧಾರಾಳವಾಗಿ ದಯಪಾಲಿಸುತ್ತಾರೆಂದು ನಂಬಿ ನಿರೀಕ್ಷಿಸುತ್ತೇವೆ. ವಿದ್ಯಾರ್ಥಿಗಳನ್ನು ಬಿ.ಎ. ಪರೀಕ್ಷೆಗೆ ತರಪೇತುಮಾಡುವುದಕ್ಕಿಂತಲೂ ಉಪಾಧ್ಯಾಯರನ್ನು ಶಿಕ್ಷಣಕೆಲಸಕ್ಕೆ ತರಪೇತುಮಾಡುವುದು ಬಹಳ ಕಷ್ಟವೆಂದು ನಮಗೆ ತೋರುತ್ತದೆ. ಆದಕಾರಣ ಬಿ.ಎ. ತರಗತಿಗಳನ್ನು ಹಡೆದಿರುವ ಕಾಲೇಜುಗಳಲ್ಲಿ ಉಪಾಧ್ಯಾಯರಾಗಿರುವವರಿಗಿಂತಲೂ ಟ್ರೈನಿಂಗ್ ಕಾಲೇಜಿನ ಉಪಾಧ್ಯಾಯರು ಎಷ್ಟೋ ಮೀರಿದವರಾಗಿಯೂ, ಇಲ್ಲವೇ ಅವರಷ್ಟಾದರೂ ಸಾಮರ್ಥ್ಯವನ್ನು ಪಡೆದವರಾಗಿಯೂ ಇರಬೇಕೆಂದು ಒತ್ತಿ ಹೇಳುತ್ತೇವೆ.

ಇದಲ್ಲದೆ ನಮ್ಮ ಗವರ್ನ್‌ಮೆಂಟಿನವರು ಕಸಬುಗಳ ಪಾಠಶಾಲೆಗಳಲ್ಲಿ ಮಕ್ಕಳನ್ನು ತರಪೇತುಮಾಡುವ ಶಿಕ್ಷಕರನ್ನೂ, ರೈಲ್ವೆ ನೌಕರರನ್ನೂ, ತಂತೀವರ್ತಮಾನ ಕೊಟ್ಟು ತರಿಸುವ ಸಿಗ್ನಲರುಗಳನ್ನೂ ಬೆಂಗಳೂರು ಮೆಕ್ಯಾನಿಕಲ್ ಇಂಜನಿಯರ್ ಸ್ಕೂಲಿನಲ್ಲಿ ತರಗತಿಗಳನ್ನಿಟ್ಟು ತಯಾರುಮಾಡಿಸುವವರಾಗಿದ್ದಾರೆ. ಈ ತರಗತಿಗಳಲ್ಲಿ ತರಪೇತಾಗುವವರನ್ನು ರೈಲ್ ಬಡಾವಣೆ ಆದ ಮೇಲೆ ರೈಲ್ವೆ ಇಲಾಖೆಯಲ್ಲಿ ಸೇರಿಕೊಂಡು ಕೆಲಸಮಾಡುವುದಕ್ಕೆ ನೇಮಿಸಲು ಅನುಕೂಲಿಸುತ್ತದೆ. ಅವರೂ ಈ ತರಗತಿಗಳು ಹಂಗಾಮಿಯಾಗಿರುವವಲ್ಲದೆ ಶಾಶ್ವತವಾಗಿ ನಡೆಯಲಾರವು.

ನಮ್ಮ ಸರ್ಕಾರದವರು ಸಂಸ್ಥಾನಾದ್ಯಂತ 1,000 ಗ್ರಾಂಟ್ ಪಡೆಯುವ ಗ್ರಾಮ ಪಾಠಶಾಲೆಗಳನ್ನು ಪ್ರಾರಂಭಿಸಬೇಕೆಂದು ಸ್ಯಾಂಕ್ಷನ್ ಮಾಡಿದ್ದಾರೆ. ಈ ಪಾಠಶಾಲೆಗಳ ಒಟ್ಟು ಖರ್ಚನ್ನು ಸರ್ಕಾರದವರು ವಹಿಸುವುದಿಲ್ಲವಾಗಿ ಆಯಾ ಗ್ರಾಮಸ್ಥರು ಆ ಖರ್ಚಿನಲ್ಲಿ ಕೆಲವು ಭಾಗವನ್ನು ದ್ರವ್ಯರೂಪವಾಗಿಯೋ ಧಾನ್ಯರೂಪವಾಗಿಯೋ ಒದಗಿಸಬೇಕಾಗಿರುತ್ತದೆ. ಇದನ್ನು ನೋಡಿದರೆ ನಾವು ಹಿಂದೆ ಅನೇಕ ವೇಳೆ ಹೇಳಿರುವ ಮಾತು ಸಿದ್ಧಾಂತವಾಗುವುದು. ಗವರ್ನ್‌ಮೆಂಟಿನವರು ಹೊಸ ಗ್ರಾಂಟ್ ರೂಲಿನಲ್ಲಿ ಕಾಣಿಸಿರುವ ಪ್ರಕಾರ ಕೊಡುವ ಹಣ ಸಾಲದೆಂಬುವುದು ಅವರಿಗೇ ಗೊತ್ತಾಗಿರುವಂತೆ ಕಾಣುತ್ತದೆ. ಈಗ ಯಾವ ಪಾಠಶಾಲೆಯಲ್ಲಿ 15 ಹುಡುಗರು ಇದ್ದು ಸರಾಸರಿ 10 ಹುಡುಗರಾದರೂ ಹಾಜರಾಗುತ್ತಾರೆಯೋ ಅಂಥಾ ಪಾಠಶಾಲೆಗೆ ಸರ್ಕಾರದವರು ತಿಂಗಳಿಗೆ 7 ರೂಪಾಯಿ ಗ್ರಾಂಟು ಕೊಡುತ್ತೇವೆಂದು ಅಪ್ಪಣೆ ಕೊಡಿಸಿರುವರು. ಕೋಡಿನ ಪ್ರಕಾರ ಸ್ಕೂಲ್ ಮ್ಯಾನೇಜರುಗಳಿಗೆ ವರುಷಕ್ಕೆ ೬೦ ರೂಪಾಯಿ ಸಲ್ಲಬೇಕೆಂದು ವಿಧಾಯಕವಾಗಿದೆ; ಈಗ ಸರ್ಕಾರದವರು ಅದನ್ನು ಬಿಟ್ಟು ವರುಷಕ್ಕೆ ೮೪ ರೂಪಾಯಿ ಗ್ರಾಂಟು ಕೊಡುತ್ತೇವೆಂದು ಒಪ್ಪಿ ಸ್ಯಾಂಕ್ಷನ್ ಮಾಡಿದ್ದಾರೆ.

ಮೇಲ್ಕಂಡ ಈ ಹೊಸ ಏರ್ಪಾಡು ಗವರ್ನ್‌ಮೆಂಟಿನವರ ಎರಡು ಹುಕುಮುಗಳಿಗೆ ಖಂಡಿತವಾಗಿ ವಿರೋಧವಾಗಿರುವುದು. ಇದರಿಂದ ಸರ್ಕಾರದ ಗ್ರಾಂಟ್ ಕೋಡು ತಿರಸ್ಕಾರ ಮಾಡಲಾಯಿತು; ಮತ್ತು ಪ್ರಥಮ ವಿದ್ಯಾಭ್ಯಾಸವು ಸಂಸ್ಥಾನಾದ್ಯಂತ ಫೀಜು ಇಲ್ಲದೇನೇ ನಡಿಸಲ್ಪಡುತ್ತದೆ ಎಂಬ ಗವರ್ನ್‌ಮೆಂಟ್ ಹುಕುಮು ಕೂಡ ತಿರಸ್ಕಾರವಾಯಿತು. ನಮ್ಮ ಗವರ್ನ್‌ಮೆಂಟಿನವರಾದರೋ ಯಾವ ಬಾಬಿನಲ್ಲಾದರೂ ಇದು ತಪ್ಪಾಯಿತೆಂದು ಹೇಳಿ ಒಪ್ಪಿಕೊಳ್ಳುವುದೇ ಇಲ್ಲ. ಈಗ ಆ ಎರಡು ಹುಕುಮುಗಳನ್ನೂ ರದ್ದುಮಾಡಬೇಕೂ, ಅವನ್ನು ಜಾರಿಗೆ ತರುವುದಿಲ್ಲವೆಂದಾದರೂ ಹೇಳದೇನೂ ಹೊಸ ಹುಕುಮನ್ನು ಕೊಟ್ಟಿರುತ್ತಾರೆ. ಇದರಿಂದ ಒಂದಕ್ಕೊಂದು ಪರಸ್ಪರ ವಿರೋಧವಾಗಿರುವಂಥಾ ಎರಡು ಹುಕುಮುಗಳು ಜಾರಿಗೆ ಬಂದಂತಾಗಿರುತ್ತದೆ. ಪ್ರಥಮ ವಿದ್ಯಾಭ್ಯಾಸವು ಫೀಜಿಲ್ಲದೆ ನಡೆಯಬೇಕೆಂದು ಒಂದು ಹುಕುಮು ಹೇಳುವುದು; ಈಗ ಕೊಟ್ಟಿರುವ ಹುಕುಮನ್ನು ನೋಡಿದರೆ ಗ್ರಾಮಸ್ಥರು ತಮ್ಮ ತಮ್ಮ ಸ್ಕೂಲಿಗಾಗಿ ತಿಂಗಳಿಗೆ ೩ ರೂಪಾಯಿ ಇಲ್ಲವೇ ಅದಕ್ಕೆ ತಕ್ಕಷ್ಟು ಧಾನ್ಯವನ್ನು ಕೊಡಬೇಕೆಂದು ಹೇಳುತ್ತದೆ. ಒಂದು ಪಾಠಶಾಲೆಗೆ ಒಬ್ಬ ಉಪಾಧ್ಯಾಯನ ಸಂಬಳ 10 ರೂಪಾಯಿಯಲ್ಲಿ 7 ರೂಪಾಯಿ ಸರ್ಕಾರದವರು ಗ್ರಾಂಟು ಕೊಡುವುದರಿಂದ ಉಳಿದ ೩ ರೂಪಾಯನ್ನು ಗ್ರಾಮಸ್ಥರೇ ಒದಗಿಸಬೇಕಾಯಿತು. ಮತ್ತು ಇಷ್ಟು ಸ್ಕೂಲುಗಳನ್ನೂ ಸರಿಯಾಗಿ ಮೇಲ್ವಿಚಾರಣೆ ನೋಡಿಕೊಳ್ಳುವುದಕ್ಕೆ ತಕ್ಕ ಏರ್ಪಾಡುಮಾಡಿಲ್ಲವೆಂದು ಸಂಶಯಪಡುತ್ತೇವೆ.

ನಮ್ಮ ಗವರ್ನ್‌ಮೆಂಟಿನವರು ನಮ್ಮ ಜನಗಳಲ್ಲಿ ವಿದ್ಯೆಯನ್ನು ಹರಡಬೇಕೆಂದು ಬಹಳ ಕುತೂಹಲಪಡುತ್ತಿರುವುದನ್ನು ನೋಡಿ ಸಂತೋಷಪಡುತ್ತೇವಾದರೂ ಅದು ತೃಪ್ತಿಕರವಾಗಿಯೂ ಸಾರ್ಥಕವಾಗಿಯೂ ನೆರವೇರುವ ಭಾಗದಲ್ಲಿ ಅವರು ಮಾಡುತ್ತಿರುವ ಕಾರ್ಯಗಳು ಸಮಂಜಸವಾಗಿಲ್ಲವಲ್ಲಾ ಎಂದು ಚಿಂತೆಪಡುವೆವು.

ಮೈಸೂರು ಸರ್ಕಾರಿ ಹುಕುಮುಗಳು.

ಕೋಲಾರ್ ಡಿಸ್ಟ್ರಿಕ್ಟಿನಲ್ಲಿ ರೇಷ್ಮೆ ವ್ಯವಸಾಯದ ಸ್ಥಿತಿಯನ್ನು ಕುರಿತು ಸರ್ಕಾರದಿಂದ ಪ್ರಕಟವಾದ ರಿಪೋರ್ಟಿನ ಮುಖ್ಯಾಂಶವನ್ನು ಹಿಂದೆಯೇ ನಾವು ಪ್ರಕಟಿಸಿ ನಮ್ಮ ಅಭಿಪ್ರಾಯವನ್ನು ಸೂಚಿಸಿರುತ್ತೇವೆ. ಇಂಗ್ಲೀಷಿನಲ್ಲಿ ಬರೆದದ್ದು ಆ ರಿಪೋರ್ಟನ್ನು ನೋಡಿ ಅದನ್ನು ಅಚ್ಚುಹಾಕುವುದರಲ್ಲಿ ಅಷ್ಟೇನೂ ಪ್ರಯೋಜನವಾಗಲಾರದೆಂದು ಮೊದಲೇ ಹೇಳಿದೆವು. ಈಗ ಅದರ ಕನ್ನಡ ಪ್ರತಿಯನ್ನು ನಮಗೆ ಕಳುಹಿಸಿರುತ್ತಾರೆ. ಸರ್ಕಾರದವರು ಇದನ್ನು ಅಚ್ಚುಹಾಕಿಸಿದ್ದು ದ್ರವ್ಯನಷ್ಟವೇ ಹೊರತು ಇದರಿಂದ ಯಾವ ಫಲವೂ ಆಗಲಾರದೆಂದು ನಮಗೆ ತೋರುವುದು.

ಮೈಸೂರು ಗವರ್ನ್‌ಮೆಂಟಿನವರು ಸಂಸ್ಥಾನದಲ್ಲಿ ಜಮಾ ಬಾಬು ಮಾಡಿಕೊಳ್ಳುವುದಕ್ಕೂ ತಕಾವಿ ಸಾಲಗಳಿಗೂ ರೈತರಿಗೆ ಸಹಾಯಮಾಡಬೇಕೆಂದು ಕಳೆದ ಜೂಲೈ ತಾ. 3 ರಲ್ಲಿ ರೆವಿನ್ಯೂ ಕಮಿಷನರವರ ವಶಕ್ಕೆ ಒಂದು ಲಕ್ಷ ರೂಪಾಯನ್ನು ಕೊಡುವಂತೆ ಸ್ಯಾಂಕ್ಷನ್ ಮಾಡಿದರು. ಅದರ ಮೇಲೆ ರೆವಿನ್ಯೂ ಕಮಿಷನರವರು ಆ ಹಣವನ್ನು ಡಿಸ್ಟ್ರಿಕ್ಟುಗಳಿಗೆಲ್ಲಾ ಹಂಚಿಕೊಟ್ಟು ಅದು ಸಾಲದೆಂದೂ, ಡೆಪ್ಯುಟಿ ಕಮಿಷನರುಗಳು ಸುಮಾರು ನಾಲ್ಕು ಲಕ್ಷ ರೂಪಾಯಿ ಬೇಕಾಗುತ್ತೆಂದು ಬರೆದಿರುವುದಾಗಿಯೂ ಗವರ್ನ್‌ಮೆಂಟಿಗೆ ತಿಳಿಸಿದರು. ಸರ್ಕಾರದವರು ಅದರ ಮೇಲೆ ಇದೇ ಜೂಲೈ ತಾ. 21 ರಲ್ಲಿ ಇನ್ನೊಂದು ಲಕ್ಷ ರೂಪಾಯನ್ನು ರೆವಿನ್ಯೂ ಕಮಿಷನರವರಿಗೆ ಕೊಡುವಂತೆ ಸ್ಯಾಂಕ್ಷನ್ ಮಾಡಿದ್ದಾರೆ. ಸರ್ಕಾರದವರು ಹಣ ಸ್ಯಾಂಕ್ಷನ್ ಮಾಡುವುದು ಹೆಚ್ಚಲ್ಲ; ಗ್ರಾಮಾಂತರಗಳಲ್ಲಿ ಸಾಲಬೇಕೆಂದು ಅರ್ಜಿಬರೆದುಕೊಳ್ಳುವ ರೈತಪ್ರಜೆಗಳಿಗೆ ಬೇಗಬೇಗನೆ ಸಾಲ ದೊರಕುವಂತೆ ಏರ್ಪಾಡಾದರೆ ಎಷ್ಟೋ ಉಪಕಾರವಾದೀತು. ಸ್ಥಳಾಧಿಕಾರಿಗಳು ಸರ್ಕಾರದವರ ಉದ್ದೇಶವನ್ನು ಸಾರ್ಥಕಪಡಿಸುತ್ತಾರೆಂದು ನಂಬಿ ನಿರೀಕ್ಷಿಸುತ್ತೇವೆ.

ನಮ್ಮ ಸಂಸ್ಥಾನದಲ್ಲಿ ಕಾಲಸ್ಥಿತಿಯು.

ಸಂಸ್ಥಾನದಲ್ಲಿ ಈ ಸಲ ಮಳೆಗಳಾಗಿರುವುದು ಸಾಲದೆಂದೂ, ಜನ ಜಾನುವಾರುಗಳಿಗೆ ನೀರಿಗೂ ಆಹಾರಕ್ಕೂ ಕೊರತೆಯುಂಟಾಗಿವೆಯೆಂದೂ ನಮ್ಮ ಗವರ್ನ್‌ಮೆಂಟಿನವರಿಗೆ ಸರಿಯಾಗಿ ತಿಳಿದಿರುವುದನ್ನು ನೋಡಿ ನಾವು ಸಂತೋಷಪಡುತ್ತೇವೆ. ಸರ್ಕಾರದವರು ಜಾನುವಾರುಗಳ ಮೇವಿಗೆ ಬೇಕಾಗುವ ಹುಲ್ಲನ್ನು ಒದಗಿಸಿ ಕೊಳ್ಳುವುದಕ್ಕಾಗಿ ಫಾರೆಸ್ಟ್ ಇಲಾಖೆಯ ಮುಖ್ಯಾಧಿಕಾರಿಗಳಾದ ಕನ್ಸರ್ವೇಟರವರಿಗೆ ಮೈಸೂರು, ಕಡೂರು, ಶಿವಮೊಗ್ಗಾ ಡಿಸ್ಟ್ರಿಕ್ಟುಗಳ ಜಂಗಲುಗಳಲ್ಲಿ ಹುಲ್ಲನ್ನು ಕೂಡಿಸಿ ಮೂಟೆಗಳು ಕಟ್ಟಿ ಮೂರು ಟನ್ನುಗಳಷ್ಟನ್ನು ಬೆಂಗಳೂರು, ಕೋಲಾರ, ತುಮಕೂರು, ಚಿತ್ರದುರ್ಗ ಡಿಸ್ಟ್ರಿಕ್ಟುಗಳಿಗೆ ರವಾನೆಮಾಡಿಸಬೇಕೆಂದಾಗಿ ಹುಕುಂ ದಯಪಾಲಿಸಿರುತ್ತಾರೆ.

ಫಾರೆಸ್ಟ್ ಅಧಿಕಾರಿಗಳು ಕಳುಹಿಸಿಕೊಡುವ ಮೇಲ್ಕಂಡ ಹುಲ್ಲನ್ನು ಆಯಾ ಡಿಸ್ಟ್ರಿಕ್ಟುಗಳ ಡೆಪ್ಯುಟಿ ಕಮಿಷನರು ಅನುಕೂಲವಾದ ಮೂರು ನಾಲ್ಕು ಸ್ಥಳಗಳಲ್ಲಿ ಇಡಿಸಿಕೊಂಡು, ಅವಶ್ಯವಿರುವ ತಾಲ್ಲೂಕುಗಳಿಗೆ ಕಂಟ್ರಾಕ್ಟರುಗಳ ಮೂಲಕ ಕಳುಹಿಸತಕ್ಕದ್ದೆಂದು ಸರ್ಕಾರದ ಅಪ್ಪಣೆಯಾಗಿರುತ್ತದೆ.

ಅವಶ್ಯ ಕಂಡುಬಂದಲ್ಲಿ ಡೆಪ್ಯುಟಿ ಕಮಿಷನರುಗಳು ಗೋಗ್ರಾಸವನ್ನು ಕೊಂಡುಕೊಳ್ಳಬಹುದೆಂದೂ, ಅದಕ್ಕಾಗಿ ಅವರಿಗೆ ಅಡ್ವಾನ್ಸು ಕೊಡಬಹುದೆಂದೂ ರೆವಿನ್ಯೂ ಕಮಿಷನರಿಗೆ ಸರ್ಕಾರದಿಂದ ತಿಳುವಳಿಕೆ ಕೊಡಲಾಗಿದೆ. ಇದಕ್ಕಾಗಿ 10,000 ರೂಪಾಯಿ ಸ್ಯಾಂಕ್ಷನ್ ಮಾಡಿದ್ದಾರೆ.

ಒಳಗೆರೆಗಳನ್ನು ವ್ಯವಸಾಯಕ್ಕೆ ಕೊಡಬಹುದು; ಅಂದರೆ ದನಗಳ ಮೇವಿಗೆ ಅನುಕೂಲವಾಗುವಂಥಾ ಬೆಳೆಯನ್ನು ಮಾಡುವುದಕ್ಕೆ ಹಂಗಾಮಿಯಾಗಿ ಅಂಥಾ ಜಮೀನನ್ನು ಕೊಡಬಹುದೆಂದು ವಿಧಿಸಿರುತ್ತಾರೆ. ಇದಲ್ಲದೆ ಬೆಂಗಳೂರು, ಕೋಲಾರ, ತುಮಕೂರು, ಚಿತ್ರದುರ್ಗ ಡಿಸ್ಟ್ರಿಕ್ಟುಗಳಲ್ಲಿ ಒಳಗೆರೆಗಳಲ್ಲೂ ನಾಲಾಗಳಲ್ಲೂ ಕುಡಿಯುವ ನೀರಿನ ಭಾವಿಗಳನ್ನು ತೋಡಿಸುವುದಕ್ಕಾಗಿ ಗವರ್ನ್‌ಮೆಂಟಿನವರು ರೆವಿನ್ಯೂ ಕಮಿಷನರವರ ವಶಕ್ಕೆ 40,000 ರೂಪಾಯಿ ಕೊಡಿಸಿ, ಅವರು ಡಿಸ್ಟ್ರಿಕ್ಟ್ ಒಂದಕ್ಕೆ 10,000 ರೂಪಾಯಿ ವರೆಗೆ ಹಂಚಿಕೊಡಬಹುದೆಂದು ಅಪ್ಪಣೆ ದಯಪಾಲಿಸಿದ್ದಾರೆ.

ಬರಗಾಲ ಅಥವಾ ಕ್ಷಾಮ ಪ್ರಾಪ್ತವಾಗಬಹುದೆಂದು ಯೋಚಿಸಿ ಸರ್ಕಾರದವರು ಗ್ರಾಮಾಂತರಗಳಲ್ಲಿ ರಿಲೀಫ್ ಕಾಮಗಾರಿಗಳು ನಡೆಯತಕ್ಕವುಗಳನ್ನು ನೋಡಿ ಪಟ್ಟಿ ಮಾಡಿಸಬೇಕೆಂದು ಡೆ. ಕಮಿಷನರಿಗೆ ಎಚ್ಚರಿಕೆ ಕೊಟ್ಟಿದ್ದಾರೆ.

ಕಳೆದ ಜೂಲೈ ತಿಂಗಳ ಕಡೇ ವಾರದಲ್ಲಿ ಮೇಲ್ಕಂಡ ಹುಕುಮು ಸ್ಯಾಂಕ್ಷನ್ ಆದ ಬಳಿಕ ಸಂಸ್ಥಾನದ ಹಲವು ಭಾಗಗಳಲ್ಲಿ ತಕ್ಕ ಮಟ್ಟಿಗೆ ಮಳೆಗಳು ಆಗಿರುತ್ತವೆ. ಆದಕಾರಣ ಈಗ ಈ ಏರ್ಪಾಡುಗಳೆಲ್ಲಾ ನಡೆಯಬೇಕಾದ ಅಗತ್ಯ ಕಂಡುಬರಲಾರದೆಂದು ಊಹಿಸುತ್ತೇವೆ. ಆದರೆ ಸರ್ಕಾರದವರು ಈ ರೀತಿ ಪ್ರಜೆಗಳ ಮತ್ತು ಗೋವುಗಳ ಶ್ರೇಯಸ್ಸನ್ನು ಬಯಸಿ ಮುಂಜಾಗ್ರತೆಯ ಕಾರ್ಯಗಳನ್ನು ನಡಸುವಂತೆ ಏರ್ಪಾಡುಮಾಡಿದ್ದು ತುಂಬಾ ಸಂತೋಷಪ್ರದವಾಗಿರುತ್ತದೆ. ಮೈಸೂರು ಡಿಸ್ಟ್ರಿಕ್ಟಿನ ಕೆಲವು ತಾಲ್ಲೂಕುಗಳಲ್ಲೂ ಬಹಳ ಕಷ್ಟನಷ್ಟಗಳು ಪ್ರಾಪ್ತವಾಗಿದ್ದರೂ ಸರ್ಕಾರದವರು ಮೇಲ್ಕಂಡ ಹುಕುಮಿನಲ್ಲಿ ಈ ಡಿಸ್ಟ್ರಿಕ್ಟನ್ನು ಯಾಕೆ ಸೇರಿಸದೆ ಹೋದರೋ ನಮಗೆ ಗೊತ್ತಾಗುವುದಿಲ್ಲ.

ಔಷಧಗಳು ಮತ್ತು ಆಲ್‌ಕೊಹಾಲ್

ಅನೇಕ ಔಷಧಗಳು ಅವುಗಳನ್ನು ಸೇವನೆಮಾಡುವವರಿಗೆ ಮೇಲುಮಾಡುವುದಕ್ಕಿಂತಲೂ ಹೆಚ್ಚಾಗಿ ಕೇಡುಮಾಡುತ್ತವೆ. ಇಂತಹ ನಾನಾ ವಿಧವಾದ ಔಷಧಗಳು ಅನೇಕ ಅಂಗಡಿಗಳಲ್ಲಿ ಮಾರಲ್ಪಡುತ್ತವೆ. ಈ ಔಷಧಗಳಲ್ಲಿ ಕೆಲವು ಬರೀ ಆಲ್‌ಕೊಹಾಲೇ ಹೊರತು ಮತ್ತೇನೂ ಅಲ್ಲ. ಅವರ ಹೆಸರು ಮಾತ್ರ ಬೇರೆಯಾಗಿರುವುದು. ಅವುಗಳು ಬಲಹೀನರಿಗೆ ಶಕ್ತಿಯನ್ನು ಕೊಡುತ್ತವೆಂದೂ ಹಸಿವೆಯನ್ನು ಹೆಚ್ಚಿಸುತ್ತವೆಂದೂ ಹೇಳಿ ಅವುಗಳನ್ನು ಮಾರುವುದುಂಟು. ಅವುಗಳಿಗೆ ಔಷಧಮಿಶ್ರವಾದ ದ್ರಾಕ್ಷಾರಸವೆಂಬ ಹೆಸರಿಟ್ಟಿರುವರು. ಬ್ರಾಂದಿ, ವಿಸ್ಕಿ, ಸಾರಾಯಿ, ಬೀರ್ ಇವೇ ಮುಂತಾದವುಗಳಲ್ಲಿರುವ ಆಲ್‌ಕೊಹಾಲ್ ಎಂಬ ಪದಾರ್ಥವೇ ಅವುಗಳಲ್ಲಿ ಮುಖ್ಯವಾಗಿ ಸೇರಿರುವುದು.

ಈ ಔಷಧಗಳಿಗೆ ಕೆಲವು ಸಂದರ್ಭಗಳಲ್ಲಿ ಅಗ್ನಿವರ್ಧಕ ದ್ರಾಕ್ಷಾರಸವೆಂಬ ಹೆಸರನ್ನು ಸಹ ಇಟ್ಟಿರುವುದುಂಟು. ಕಾಯಿಲೆಯಾಗಿದ್ದವರು ಇದನ್ನು ಸೇವನೆ ಮಾಡಿದರೆ ಅವರಿಗೆ ಬಲು ಬೇಗನೆ ಬಲವು ಬರುವುದೆಂದು ಹೇಳುವರು. ಅವುಗಳು ಮನುಷ್ಯನನ್ನು ಸ್ವಲ್ಪ ಹೊತ್ತಿನ ವರೆಗೂ ಉತ್ತೇಜನಪಡಿಸುವುವು. ಸ್ವಲ್ಪ ಹೊತ್ತಾದ ಮೇಲೆ ತಿರುಗಿ ಅವನ್ನು ಕುಡಿಯಬೇಕಾಗುವುದು. ಅವುಗಳಿಂದ ಜನಕ್ಕೆ ಪ್ರಯೋಜನವಿಲ್ಲಾ ಇಷ್ಟೆ. ಈ ಔಷಧಮಿಶ್ರವಾದ ದ್ರಾಕ್ಷಾರಸಗಳಲ್ಲಿ ವಾಸ್ತವವಾಗಿ ಶಕ್ತಿಯನ್ನುಂಟುಮಾಡುವಂಥದು ಏನೂ ಇರುವುದಿಲ್ಲ. ಅವುಗಳು ಸಾಧಾರಣವಾಗಿ ಮನುಷ್ಯನನ್ನು ಮುಂಚೆಗಿಂತಲೂ ಬಲಹೀನನನ್ನಾಗಿ ಮಾಡುವುವು. ಅವುಗಳಿಂದಾಗುವ ಕೇಡು ಇಷ್ಟೇ ಅಲ್ಲ. ಜನರು ಕೆಲವು ಕಾಲದ ವರೆಗೆ ಈ ಬಗೆಯುಳ್ಳ ಔಷಧಗಳನ್ನು ಸೇವನೆಮಾಡಿದ ಮೇಲೆ ಅವುಗಳನ್ನು ಬಿಡಲಾರದ ಅಭ್ಯಾಸವನ್ನು ಪಡೆದು ಮಟ್ಟಿಗೆ ಅವುಗಳನ್ನೇ ಪುನಃ ಬಯಸುತ್ತಿರುವರು. ಅವುಗಳು ಇಷ್ಟರ ಮಟ್ಟಿನ ಅಪೇಕ್ಷೆಯನ್ನು ಅವರಲ್ಲಿ ಹುಟ್ಟಿಸುವುವು.

ಔಷಧಮಿಶ್ರವಾದ ದ್ರಾಕ್ಷಾರಸಗಳಲ್ಲಿ ಮನುಷ್ಯನಿಗೆ ಶಕ್ತಿಯನ್ನು ಕೊಡತಕ್ಕಂಥ ಗುಣವು ಇರುವುದಿಲ್ಲ. ಮತ್ತು ಅವುಗಳನ್ನು ಕುಡಿಯೋಣದರಿಂದ ಜನರಿಗೆ ತುಂಬಾ ಅನರ್ಥವು ಉಂಟಾಗುತ್ತದೆ ಎಂಬುದನ್ನು ಇಂಗ್ಲಾಂಡಿನ ಅನೇಕ ಮಂದಿ ವೈದ್ಯರುಗಳು ವ್ಯಕ್ತಪಡಿಸಿರುತ್ತಾರೆ. ಇಂತಹ ಔಷಧಗಳಲ್ಲಿ ಯಾವುದನ್ನಾದರೂ ತೆಗೆದುಕೊಳ್ಳಬೇ ಬಾರದು. ನಿಶ್ಶಕ್ತರಾದವರು ಬಗೆಯುಳ್ಳ ಈ ಔಷಧಮಿಶ್ರವಾದ ದ್ರಾಕ್ಷಾರಸಗಳನ್ನು ಸೇವನೆಮಾಡುವುದಕ್ಕೆ ಬದಲಾಗಿ ಆಸ್ಪತ್ರೆಗೆ ಹೋಗಿ ಒಳ್ಳೆಯ ಔಷಧವನ್ನು ತೆಗೆದುಕೊಂಡು ಕುಡಿದರೆ, ಅವರಿಗೆ ಎಷ್ಟೋ ಮೇಲಾಗುವುದು.

ಇಂತಿಂತಹ ಔಷಧಗಳಲ್ಲಿ ಇಂತಿಂತಹ ಗುಣಗಳುಂಟೆಂದು ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟಿಸುವುದನ್ನೆಲ್ಲಾ ನಮ್ಮ ದೇಶೀಯರು ನಿಜವೆಂದು ನಂಬುವುದಕ್ಕೆ ಸಿದ್ಧರಾಗಿರುವರು. ಅವುಗಳನ್ನು ಮಾರಾಟಮಾಡುವವರು ಅವುಗಳಿಂದ ಹಣವನ್ನು ಸಂಪಾದಿಸಬೇಕೆಂದಿರುತ್ತಾರೆ. ಆದಕಾರಣ ಅವರು ತಾವು ಮಾರುವ ಪದಾರ್ಥವು ಸರ್ವೋತ್ಕೃಷ್ಟವಾದುದೆಂದು ಶ್ಲಾಘಿಸುವುದು ಸ್ವಾಭಾವಿಕವಾಗಿರುತ್ತದೆ. ಔಷಧಗಳ ವಿಷಯದಲ್ಲಿ ವರ್ತಮಾನ ಪತ್ರಿಕೆಗಳಲ್ಲಿರುವ ಪ್ರಕಟನೆಗಳನ್ನು ತುಂಬಾ ಜಾಗರೂಕತೆಯಿಂದ ಓದಿನೋಡಬೇಕಾದುದು ಅವಶ್ಯಕ. ಕೆಲವು ಔಷಧಗಳು ಎಲ್ಲಾ ವಿಧವಾದ ರೋಗಗಳನ್ನು ಗುಣಮಾಡಿ ಮನುಷ್ಯನನ್ನು ಕಾಯಶಕ್ತಿಯುಳ್ಳವನನ್ನಾಗ ಮಾಡುತ್ತವೆಂದು ಹೇಳುವರು. ಹೀಗೆ ಮಾಡುವಂತಹ ಒಂದೇ ಔಷಧವು ಯಾವುದೂ ಇಲ್ಲ. ಕಾಯಿಲೆಯಾಗಿರುವ ಅಥವಾ ಬಲಹೀನನಾಗಿರುವ ಯಾರಾದರೂ ತನ್ನನ್ನು ತಾನೇ ಗುಣಮಾಡಿಕೊಳ್ಳುವುದಕ್ಕೆ ಪ್ರಯತ್ನಿಸಬಾರದು. ಅಂಥವರು ಒಬ್ಬ ವೈದ್ಯನ ಬಳಿಗೆ ಹೋಗಬೇಕು. ನಮ್ಮ ನಾಡಿಯ ಎಲ್ಲಾ ಕಡೆಗಳಲ್ಲಿಯೂ ಆಸ್ಪತ್ರೆಗಳೂ ವೈದ್ಯಶಾಲೆಗಳೂ ಇರುತ್ತವೆ. ಸರ್ವರೋಗಗಳನ್ನೂ ಗುಣಮಾಡತಕ್ಕುದೆಂದು ಪತ್ರಿಕೆಯಲ್ಲಿ ಪ್ರಕಟಿಸಿದ ಒಂದು ಔಷಧವನ್ನು ತರಿಸಿಕೊಂಡು ಸೇವನೆಮಾಡುವುದಕ್ಕಿಂತ ಸ್ವಲ್ಪ ಕಷ್ಟಪಟ್ಟು ತರಪೇತಾದ ಒಬ್ಬ ವೈದ್ಯರ ಬಳಿಗೆ ಹೋಗಿ ಅವರ ಅನುಮತಿಯನ್ನು ಕೇಳುವುದು ಉತ್ತಮ. ಈ ಔಷಧಗಳಲ್ಲಿ ಯಾವುದನ್ನಾದರೂ ತೆಗೆದುಕೊಳ್ಳಬಹುದೆಂದು ವೈದ್ಯರು ಅಪ್ಪಣೆಕೊಟ್ಟರೆ ಆಗ ಅದನ್ನು ತೆಗೆದುಕೊಳ್ಳಬಹುದು.

ವರ್ತಮಾನ ಪತ್ರಿಕೆಗಳಲ್ಲಿ ಕೆಲವು ಬಹು ಒಳ್ಳೆಯ ಔಷಧಗಳು ಪ್ರಕಟಿಸಲ್ಪಟ್ಟಿರುತ್ತವೆ. ಡಾಕ್ಟರುಗಳು ಅವುಗಳನ್ನು ಬಹಳವಾಗಿ ಶ್ಲಾಘಿಸಿ, ತೆಗೆದುಕೊಳ್ಳಬಹುದೆಂದು ಹೇಳುತ್ತಾರೆ. ಅಂಥವುಗಳನ್ನು ನಿರ್ಭಯವಾಗಿ ತೆಗೆದುಕೊಳ್ಳಬಹುದು. ಆದರೆ ಅನೇಕ ಔಷಧಗಳಿಂದ ತಿಲಾಂಶವಾದರೂ ಪ್ರಯೋಜನವಾಗವುದಿಲ್ಲ. ಅದಕ್ಕೆ ಬದಲಾಗಿ ತುಂಬಾ ಕೇಡಾಗುವುದುಂಟು.

ಡಾಕ್ಟರ್ ವಾಲ್ಲೀಸ್ ಸ್ಮಿತ್ ರವರು ಔಷಧಮಿಶ್ರವಾದ ದ್ರಾಕ್ಷಾರಸಗಳನ್ನು ತುಂಬಾ ಜಾಗರೂಕತೆಯಿಂದ ಪರೀಕ್ಷೆಮಾಡಿ ಹೇಳಿರುವುದೇನಂದರೆ— ಇವುಗಳಿಂದ ಜೀರ್ಣಶಕ್ತಿಯು ವೃದ್ಧಿಯಾಗುವುದಿಲ್ಲ ; ದೇಹಕ್ಕೆ ಬಲವೂ ಬರುವುದಿಲ್ಲ ; ಅನೇಕ ಸಂದರ್ಭಗಳಲ್ಲಿ ಹಿಂದೆ ಇದ್ದುದಕ್ಕಿಂತ ಕೇಡಾಗುವುದುಂಟು. ಅನೇಕರು ಕುಡಿತಕರಾಗಿ ಸಾಯುವರು ಎಂಬುವುದೇ. ನಾವು ನಮ್ಮ ಕೆಲಸಗಳನ್ನು ಚೆನ್ನಾಗಿ ಮಾಡುವುದಕ್ಕೂ ಸತ್ಯಸಂಧರಾಗಿಯೂ ತ್ರಿಕರಣಶುದ್ಧರಾಗಿಯೂ ಜೀವಿಸಿ ದೇವರು ನಮಗೆ ದಯಪಾಲಿಸಿರುವ ಎಲ್ಲಾ ಶಕ್ತಿಗಳಿಂದ ಆತನನ್ನು ಸೇವಿಸುತ್ತಾ ಬರುವುದಕ್ಕೂ ಇಂತಹ ಔಷಧಗಳು ನಮಗೆ ಸಹಕಾರಿಗಳಾಗಿರುವುದಿಲ್ಲ. ಇದಕ್ಕೆ ಬದಲಾಗಿ ಇವುಗಳು ಅನೇಕ ಸಂದರ್ಭಗಳಲ್ಲಿ ನಮ್ಮ ದೇಹವನ್ನೂ ಮನಸ್ಸನ್ನೂ ಆತ್ಮವನ್ನೂ ಕೆಡಿಸಿ ನಮ್ಮನ್ನು ನಿಷ್ಪ್ರಯೋಜಕರನ್ನಾಗಮಾಡುತ್ತವೆ. ಈ ಔಷಧಗಳನ್ನು ಸೇವನೆಮಾಡುವುದರಲ್ಲಿ ತುಂಬಾ ಜಾಗರೂಕರಾಗಿರತಕ್ಕದು.

ಯುದ್ಧದ ಸಮಾಚಾರಗಳು.

ತಂತೀ ವರ್ತಮಾನಗಳ ಸಾರ.

ಆಸ್ಟ್ರಿಯಾ ರಾಜ್ಯದ ಯುವರಾಜನಾದ ಆರ್ಚ್‌ಡ್ಯೂಕ್ ಫರ್ಡಿನೆಂಡ್‌ನನ್ನು ಒಬ್ಬ ವಿದ್ಯಾರ್ಥಿಯು ಪಿಸ್ತೂಲಿನಿಂದ ಗುಂಡು ಹೊಡೆದು ಕೊಂದುದು ಯೂರೋಪ್ ಖಂಡವೇ ಹತ್ತಿಕೊಂಡು ಬೇಯುವಂತೆ ಮಾಡಿದೆ. ಇದುವರೆಗೆ ಬಂದಿರುವ ತಂತೀ ವರ್ತಮಾನಗಳು ಈಗ ಅಲ್ಲಿ ನಡೆಯುತ್ತಿರುವ ವರ್ತಮಾನಗಳನ್ನು ಖಚಿತವಾಗಿ ತಿಳಿಸುವುದಿಲ್ಲ ; ವರ್ತಮಾನಗಳು ಒಂದಕ್ಕೊಂದು ಸಮಂಜಸವಾಗಿಯೂ ಇರುವುದಿಲ್ಲ. ಆದಕಾರಣ ಯೂರೋಪಿನ ರಾಜ್ಯಗಳಲ್ಲಿ ಅಧಿಪತಿಗಳೂ ಸೈನ್ಯಗಳೂ ನಡಿಸುತ್ತಿರುವ ಕಾರ್ಯಗಳು ಏನೋ ಊಹಿಸಿ ಹೇಳುವುದು ಬಹಳ ಕಷ್ಟವಾಗಿದೆ. ಇಲ್ಲಿಂದ ಮುಂದಕ್ಕೂ ಇನ್ನು ಕೆಲವು ದಿನಗಳ ತನಕ ನಾನಾ ಬಗೆಯ ವರ್ತಮಾನಗಳು ಹುಟ್ಟಿ ಪ್ರಪಂಚದ ಎಲ್ಲಾ ಕಡೆಗಳಿಗೂ ಹರಡಿಕೊಳ್ಳುತ್ತವೆ; ಅವುಗಳಲ್ಲಿ ನಿಶ್ಚಯವಾದ್ದುದೋ, ಪರೀಕ್ಷೆಯಾದುದೋ, ಅಪದ್ಧವಾದ್ದುದೋ ಗೊತ್ತುಮಾಡಿ ತಿಳಿದುಕೊಳ್ಳುವುದು ಕಷ್ಟವಾದೀತು. ಈಗ ಸೀಮೆಯಿಂದ ಬಂದಿರುವ ತಂತೀ ವರ್ತಮಾನಗಳನ್ನೆಲ್ಲಾ ಕನ್ನಡದಲ್ಲಿ ಪ್ರಕಟಿಸುವುದಕ್ಕೆ ಬದಲಾಗಿ ಅವುಗಳ ಪೈಕಿ ನಿಜಾಂಶವೆಂದು ನಮಗೆ ಕಂಡುಬಂದಿರುವವುಗಳನ್ನು ಕ್ರೋಢೀಕರಿಸಿ ಇಲ್ಲಿ ಪ್ರಕಟಿಸಿರುತ್ತೇವೆ.

ಈ ಯುದ್ಧವೇನೋ ಆಸ್ಟ್ರಿಯದವರಿಗೂ ಸರ್ವಿಯದವರಿಗೂ ಪ್ರಾರಂಭವಾಯಿತು. ಸರ್ವಿಯಾ ರಾಜಧಾನಿಯಾದ ಬೆಲ್‌ಗ್ರೇಡ್ ಪಟ್ಟಣವು ಸಾವೆ ನದಿಯು ಡ್ಯಾನ್ಯೂಬ್ ನದಿಯ ಕೂಡ ಸಂಗಮವಾಗುವ ಬಳಿ ಆಸ್ಟ್ರಿಯಾ ಸೀಮೆಯ ಕಟ್ಟಿನಲ್ಲಿರುವುದು. ಈ ಬೆಲ್‌ಗ್ರೇಡ್ ಪಟ್ಟಣದಲ್ಲಿ ಶತ್ರುಗಳು ಎದುರುಬಿದ್ದು ಕಾದಾಡಲಾರಂಭಿಸಿದರು. ಬೆಲ್‌ಗ್ರೇಡ್ ಪಟ್ಟಣವು ಹತ್ತಿ ಉರಿಯುತ್ತಿದೆ ಎಂದು ಒಂದು ತಂತೀವರ್ತಮಾನ ತಿಳಿಸುತ್ತದೆ ; ಆದರೆ ಆಸ್ಟ್ರಿಯದವರು ನದಿಯನ್ನು ದಾಟಿಹೋಗಿದಾರೆಂಬ ಅರ್ಥಕ್ಕೆ ಖಂಡಿತವಾದ ವರ್ತಮಾನ ಬಂದಿಲ್ಲ. ಅವರು ನದಿಯನ್ನು ದಾಟಿಹೋಗಿರಬಹುದು ; ಆದರೆ ಸೈನಿಕರ ಕೂಡ ವರ್ತಮಾನ ಪತ್ರಿಕೆಗಳ ಬಾತ್ಮಿದಾರರು ಹೋಗಲು ಅವಕಾಶವೇ ಕೊಡುವುದಿಲ್ಲ. ಆದಕಾರಣ ಯುದ್ಧಭೂಮಿಯಲ್ಲಿ ಜರುಗುವ ನಿಜವಾದ ವಿದ್ಯಮಾನಗಳೇನೆಂಬುದು ಪ್ರಪಂಚಕ್ಕೆ ಗೋಚರವಾಗುವುದು ಪ್ರಯಾಸ. ಬಹುಶಾ ಅಲ್ಲಿ ಯುದ್ಧವು ನಡೆಯುತ್ತಲೇ ಇರಬಹುದು.

ಈಗ ರಷ್ಯಾದವರು ಏನುಮಾಡುತ್ತಿದಾರೆಂದು ಅನೇಕರು ಕೇಳುತ್ತಿರುವರು. ಅವರು ತಮ್ಮ ಸೈನ್ಯಕ್ಕೆಲ್ಲಾ ಯುದ್ಧಕ್ಕೆ ಹೊರಡಲು ಸಿದ್ಧರಾಗಬೇಕೆಂದು ಸಾರಿಸುತ್ತಾರೆ; ಆದರೆ ರಷ್ಯಾದವರಿಗೂ ಆಸ್ಟ್ರಿಯಾದವರಿಗೂ ಯುದ್ಧಪ್ರಾಪ್ತವಾಗಿದೆ ಎಂದು ತಿಳಿಸಿರುವಂತೆ ಕಾಣುವುದಿಲ್ಲ ; ಮತ್ತು ಇದುವರೆಗೆ ನೋಡಿದ್ದಲ್ಲಿ ಆ ಎರಡು ರಾಜ್ಯಗಳಿಗೂ ಕದನಗಳೇನೂ ನಡೆದಿರುವಂತೆ ಸಮಾಚಾರಬಂದಿಲ್ಲ. ಇತ್ತೀಚೆಗೆ ಬಂದಿರುವ ಒಂದು ತಂತೀವರ್ತಮಾನವು ಒಂದು ಕಡೆ ರಷ್ಯಾದವರಿಗೂ ಆಸ್ಟ್ರಿಯಾದವರಿಗೂ, ಇನ್ನೊಂದು ಕಡೆ ಜರ್ಮನಿಯವರಿಗೂ ಫ್ರೆಂಚರಿಗೂ ಇನ್ನೂ ಸಂಧಾನಗಳೂ ನಿನಾಲ್ ಜವಾಬುಗಳೂ ನಡೆಯುತ್ತಿರುವಂತೆ ತಿಳಿಸುತ್ತದೆ. ಯುದ್ಧಕ್ಕೆ ಹೊರಟಿದ್ದ ಪಕ್ಷದಲ್ಲಿ ಈ ಸಂಧಾನಗಳ ಸುದ್ದಿಯೆಲ್ಲಾ ನಿಂತುಹೋಗಬೇಕಾಗಿತ್ತು.

ಈಗ ನಡೆದಿರುವ ವಿದ್ಯಮಾನಗಳನ್ನು ನೋಡಿದ್ದರಲ್ಲಿ ಇಷ್ಟೊಂದು ಗಲಭೆಗೂ ಗಾಬರಿಗೂ ಜರ್ಮನಿಯವರೇ ಕಾರಣರೆಂದು ಕಾಣುತ್ತಿದೆ. ಜರ್ಮನಿಯವರು ರಷ್ಯಾದವರ ಮೇಲೆ ಯುದ್ಧಕ್ಕೆ ಹೊರಟಿರುವಂತೆ ಒಂದು ವರ್ತಮಾನವೂ, ರಷ್ಯಾ ರಾಜಧಾನಿಯಾದ ಸೇಂಟ್ ಪೀಟರ್ಸ್‌ಬರ್ಗಿನಲ್ಲಿರುವ ಜರ್ಮನಿ ರಾಯಭಾರಿಯು ಅಲ್ಲಿಂದ ವಾಪಸುಹೋದನೆಂದು ಇನ್ನೊಂದು ವರ್ತಮಾನವೂ ತಿಳಿಸುತ್ತದೆ. ಇದನ್ನು ನೋಡಿದರೆ ಜರ್ಮನಿಗೂ ರಷ್ಯಾಕ್ಕೂ ಯುದ್ಧಪ್ರಾಪ್ತವಾಗಿರುವಂತೆ ಕಂಡುಬರುವುದು.

ಇನ್ನೂ ಈಚೆಗೆ ಬಂದಿರುವ ತಂತೀ ವರ್ತಮಾನಗಳು ರಷ್ಯಾ ಸೈನ್ಯದವರು ಜರ್ಮನಿಯ ಪೂರ್ವದಿಗ್ಭಾಗದ ಎಲ್ಲೆಕಟ್ಟಿನಲ್ಲಿರುವ ಪ್ರೋಸ್ಟ್‌ಕೆನ್ ಎಂಬಲ್ಲಿ ಮೂರು ಸ್ಥಳಗಳಲ್ಲೂ ಎಲ್ಲೆಯನ್ನು ಅತಿಕ್ರಮಿಸಿಕೊಂಡು ನುಗ್ಗಿಹೋಗಿ ಜರ್ಮನಿಯವರ ಮೇಲೆ ಯುದ್ಧಮಾಡಿದರೆಂದು ಹೇಳುವವು. ಈ ಕದನದಲ್ಲಿ ಕೊಲೆಗಳೇನೂ ಆಗಲಿಲ್ಲವಂತೆ. ಬಹಳ ನಷ್ಟವಾಗಿದೆ ಎಂದು ಮಾತ್ರ ತಿಳಿಸಿ, ಕಡೆಯಲ್ಲಿ ಆ ತಂತೀ ವರ್ತಮಾನವು “ ಈಗ ವರ್ತಮಾನವೆಲ್ಲಾ ನಿಂತುಹೋಗಿವೆ ” ಎಂದು ಮುಗಿಸಿದೆ. ಬಹುಶಾ ಅಲ್ಲಿ ನಡೆಯುತ್ತಿರುವ ಯುದ್ಧಸಮಾಚಾರಗಳೊಂದೂ ಇನ್ನು ಕೆಲವು ದಿನಗಳು ಕಳೆಯುವ ತನಕ ನಮಗೆ ಗೊತ್ತಾಗುವುದಿಲ್ಲವೆಂದು ಊಹಿಸುತ್ತೇವೆ.

ಈಗ ಅತ್ಯಂತ ಭಯಂಕರವಾದ ವಿಚಾರವೇನೆಂದರೆ, ಜರ್ಮನಿಯವರು ಫ್ರೆಂಚರ ಕೂಡ ಸಂಧಾನಗಳನ್ನು ನಡಿಸುತ್ತಿರುವರು. ಫ್ರೆಂಚರು ತಮ್ಮ ಎಲ್ಲೆಕಟ್ಟಿನಲ್ಲಿದ್ದ ಸೈನ್ಯಗಳನ್ನು ಅಲ್ಲಿ ಕದನಗಳಿಗೆ ಅವಕಾಶವಾಗದಂತೆ ಐದು ಮೈಲಿ ಹಿಂದಕ್ಕೆ ಕರಸಿಕೊಂಡುಬಿಟ್ಟರು. ಆದರೆ ಜರ್ಮನಿಯವರು ತಮ್ಮ ಸೈನ್ಯಗಳನ್ನು ತಮ್ಮ ಸರಹದ್ದನ್ನು ದಾಟಿಸಿ ಫ್ರೆಂಚರ ಸ್ಯರೆ ಎಂಬ ಗ್ರಾಮಕ್ಕೆ ನುಗ್ಗಿಸಿದ್ದಲ್ಲದೆ ಲಕ್ಸೆಂಬರ್ಗ್ ಎಂಬಲ್ಲಿ ಇರುವ ರೈಲ್ವೆಗಳನ್ನು ಆಕ್ರಮಿಸಿಕೊಂಡಿದಾರೆ. [ಲಕ್ಸೆಂಬರ್ಗ್ ಬೆಲ್ಜಿಯಂಗೆ ದಕ್ಷಿಣದಲ್ಲಿದ್ದು ಎಲ್ಲಾ ರಾಜ್ಯಗಳಿಗೂ ಮಧ್ಯಕವಾದ ರಾಜ್ಯವಾಗಿರುತ್ತದೆ. ಈ ರಾಜ್ಯವನ್ನು ಯಾರೊಬ್ಬರೂ ಆಕ್ರಮಿಸಿಕೊಳ್ಳಕೂಡದೆಂಬ ಕರಾರು ಉಂಟು.] ಜರ್ಮನಿಯವರು ಈ ಕರಾರನ್ನು ತಿರಸ್ಕಾರಮಾಡಿ ಆ ರಾಜ್ಯವನ್ನು ಹಿಡಿದುಕೊಂಡದ್ದಲ್ಲದೆ ಅವರ ಅನೇಕ ಸೈನಿಕರು ಫ್ರೆಂಚ್ ಸೀಮೆಯೊಳಕ್ಕೆ ನುಗ್ಗಿಬಂದು ಲಾಂಗ್ವಿ ಎಂಬ ಸ್ಥಳವನ್ನು ಕುರಿತು ಹೋಗುತ್ತಿದಾರೆ. ಲಾಂಗ್ವಿಯಲ್ಲಿ ಒಂದು ಕದನವೂ ನಡೆದು, ಜರ್ಮನಿ ಸೈನ್ಯದಲ್ಲಿ ಇಬ್ಬರು ಹುದ್ದೆದಾರರು ಮಡಿದುಹೋದರು. ಆದರೆ ಜರ್ಮನಿಗೂ ಫ್ರಾನ್ಸಿಗೂ ಯುದ್ಧ ಪ್ರಾರಂಭವಾಯಿತೆಂಬುವುದನ್ನು ಸೂಚಿಸುವುದಕ್ಕೆ ಜರ್ಮನಿಯ ರಾಯಭಾರಿಯು ಫ್ರಾನ್ಸ್ ರಾಜಧಾನಿಯಾದ ಪ್ಯಾರಿಸ್ ನಗರವನ್ನು ಬಿಟ್ಟು ವಾಪಸು ಹೋಗಲಿಲ್ಲ. ಆತನು ಯಾವಾಗ ಹಿಂತಿರುಗಿ ಹೊರಟರೂ ಹೊರಡಬಹುದಾಗಿದೆ. ಇದಲ್ಲದೆ ಫ್ರಾನ್ಸಿಗೂ ಜರ್ಮನಿಗೂ ಯುದ್ಧವು ಪ್ರಾರಂಭವಾಗಿದೆಯೆಂದು ಸಾರಲ್ಪಡದೇಹೋಗಿರುವಲ್ಲಿ ಫ್ರಾನ್ಸಿನ ಒಬ್ಬ ಪ್ರಜೆಯು ವಿಮಾನಯಂತ್ರದಲ್ಲಿ ಹೋಗಿ ಅಂತರಿಕ್ಷದಿಂದ ಜರ್ಮನಿಗೆ ಸೇರಿದ ನ್ಯೂರೆಂಬರ್ಗ್ ಎಂಬ ನಗರದೊಳಕ್ಕೆ ಒಂದು ಸಿಡಿಮದ್ದಿನ ಗುಂಡನ್ನು ಎಸೆದು ಇರುತ್ತಾನೆಂದು ಒಂದು ವರ್ತಮಾನ ಹುಟ್ಟಿರುವುದರಿಂದ ಈ ವಿಚಾರವು ಕಳ್ಳ ಪುಟ್ಟಿಗೆ ಗಲಭೆಯನ್ನುಂಟುಮಾಡುವುದಾಗಿ ಕಾಣುತ್ತಿದೆ.

ಫ್ರಾನ್ಸಿನ ಪ್ರಸಿಡೆಂಟರು ರಷ್ಯಾ ಚಕ್ರವರ್ತಿಯವರನ್ನು ಕಂಡು ಅವರ ಆತಿಥ್ಯವನ್ನು ಸ್ವೀಕರಿಸಿ ಬರುವುದಕ್ಕಾಗಿ ಹೋಗಿದ್ದದ್ದನ್ನು ನೋಡಿದರೆ ಫ್ರೆಂಚರು ಯುದ್ಧ ಮಾಡುವವರಾಗಿರುವಂತೆ ತೋರುವುದಿಲ್ಲ. ಪ್ರಸಿಡೆಂಟರು ಸಂಚಾರವನ್ನು ತೀರಿಸಿಕೊಂಡು ಪ್ಯಾರಿಸ್ಸಿಗೆ ದಯಮಾಡಿದ ಮೇಲೆ ಫ್ರೆಂಚ್ ಸೈನ್ಯವೆಲ್ಲಾ ಯುದ್ಧಕ್ಕೆ ಹೊರಡುವುದಕ್ಕೆ ಸಿದ್ಧವಾಗಿರಬೇಕೆಂದು ಹುಕುಂ ಕೊಟ್ಟು ಸಾರಿಸಿದರು. ಹಿಂದೆ ಜರ್ಮನಿಯವರು ಫ್ರಾನ್ಸಿಗೆ ಸೇರಿದ್ದ ಆಲ್ಸೇಸ್ ಮತ್ತು ಲೋರೇನ್ ಎಂಬೆರಡು ಅಧಿಪತ್ಯಗಳನ್ನು ಅವರಿಂದ ಕಿತ್ತುಕೊಂಡಿರುವುದರಿಂದ ಅವೆರಡನ್ನೂ ಜರ್ಮನಿಯವರಿಂದ ಸಂಪಾದಿಸಿಕೊಳ್ಳಬೇಕೆಂಬ ಕುತೂಹಲವು ಫ್ರೆಂಚರಿಗೆ ಯಾವಾಗಲೂ ಇದ್ದೇ ಇದೆ. ಈಗ ಅಂಥಾ ಸಮಯ ಒದಗಿದೆ ಎಂದು ಫ್ರೆಂಚರು ಬಹಳ ಲವಲವಿಕೆಪಡುತ್ತಿದಾರೆ. ಫ್ರೆಂಚ್ ಪ್ರಸಿಡೆಂಟರವರು ತನ್ನ ಸಮಸ್ತ ಪ್ರಜಾಕೋಟಿಗಳಿಗೂ ಗಾಂಭೀರ್ಯಯುಕ್ತವಾದ ಇಸ್ತಿಹಾರನ್ನು ಪ್ರಕಟಮಾಡಿರುತ್ತಾರೆ. ಅದರಲ್ಲಿ ಅವರು ಫ್ರೆಂಚ್ ಜನಾಂಗಕ್ಕೆ ತಿಳಿಸಿರುವ ಅಭಿಪ್ರಾಯವೇನೆಂದರೆ— “ ಇತರ ರಾಜ್ಯಗಳವರು ಹ್ಯಾಗೋ ಹಾಗೆ ಫ್ರೆಂಚ್ ಜನಾಂಗವೂ ತಮ್ಮ ದೇಶವನ್ನು ಸುರಕ್ಷಿತವಾಗಿ ಕಾಪಾಡಿಕೊಳ್ಳುವುದಕ್ಕೋಸ್ಕರಲೇ ಸೈನ್ಯಗಳನ್ನು ಜೊತೆಮಾಡಬೇಕಾಗಿರುತ್ತೆ. ಸೈನ್ಯಕ್ಕೆಲ್ಲಾ ಯುದ್ಧಸನ್ನದ್ಧರಾಗಿರಬೇಕೆಂದು ಹುಕುಂ ಕೊಟ್ಟ ಮಾತ್ರಕ್ಕೇ ಯುದ್ಧವಾಗುತ್ತದೆಂದು ತಿಳಿಯಬಾರದು. ಈಗಿನ ಸಂದರ್ಭದಲ್ಲಿ ಅದು ಗೌರವಕ್ಕೆ ಚ್ಯುತಿಯುಂಟಾಗದಂತೆ ನೆಮ್ಮದಿಯನ್ನು ಕಾಪಾಡಿಕೊಳ್ಳಲು ಸಹಾಯಮಾಡತಕ್ಕದ್ದಾಗಿದೆ. ಯುದ್ಧಕ್ಕೆ ಅವಶ್ಯವಾದ ಮುಂಜಾಗ್ರತೆಯ ಏರ್ಪಾಡುಗಳನ್ನೆಲ್ಲಾ ಸಿದ್ಧಪಡಿಸಿಕೊಂಡು, ಫ್ರೆಂಚ್ ಗವರ್ನ್‌ಮೆಂಟಿನವರು ಪರರಾಜ್ಯಗಳವರ ಕೂಡ ನೆಮ್ಮದಿಯನ್ನು ಕಾಪಾಡಿಕೊಂಡುಬರುವುದಕ್ಕೆ ಸಂಧಾನಗಳನ್ನು ನಡಿಸುತ್ತಾ ಬರುವರು. ಮತ್ತು ಅವರ ಪ್ರಯತ್ನವು ಸಾರ್ಥಕವಾಗಬಹುದೆಂಬ ನಿರೀಕ್ಷೆಯೂ ಉಂಟು. ಸದಾ ಕ್ರಮವುಳ್ಳ ಫ್ರೆಂಚ್ ಜನಾಂಗವು ಘನತರವಾದ ಸ್ವದೇಶವಾತ್ಸಲ್ಯದಿಂದ ಕೂಡಿ ತನ್ನ ಗವರ್ನ್‌ಮೆಂಟಿಗೆ ಬೆಂಬಲವಾಗಿ ನಿಲ್ಲುವುದೆಂದು ಎಣಿಸಲ್ಪಟ್ಟಿದೆ ” ಎಂಬದಾಗಿ ಪ್ರಸಿಡೆಂಟರವರು ಸಾರಿಸಿರುತ್ತಾರೆ.

ಅತ್ತಲಾಗಿ ಜರ್ಮನಿ ಚಕ್ರವರ್ತಿಯವರು ತಮ್ಮ ಪ್ರಜೆಗಳಿಗೆ ಕೊಟ್ಟಿರುವ ಇಸ್ತಿಹಾರು ಅವರ ಮನಸ್ಸಿನಲ್ಲಿರುವ ಯುದ್ಧಾಪೇಕ್ಷೆಯ ಲವಲವಿಕೆಯನ್ನು ಪ್ರಕಾಶಪಡಿಸುವುದು. ಅವರು ಜರ್ಮನಿಯ ಪ್ರಜೆಗಳಿಗೆ ತಿಳಿಸಿರುವುದೇನೆಂದರೆ— “ ಜರ್ಮನಿಗೆ ಕತ್ತಲೆಯಾದ ಸಮಯ ಪ್ರಾಪ್ತವಾಗಿರುತ್ತದೆ. ಬಲಾತ್ಕಾರದಿಂದ ನಮ್ಮ ಕೈಗೆ ಕತ್ತಿಯನ್ನು ನುಗ್ಗಿಸಿರುತ್ತಾರೆ. ನೆಮ್ಮದಿಯನ್ನು ಕಾಪಾಡುವುದು ಅಸಾಧ್ಯವಾದ ಪಕ್ಷದಲ್ಲಿ ನಾವು ಕತ್ತಿಯನ್ನು ಝಳಪಿಸಿ ಕಾದಾಡಿ ಜಯಪ್ರದ ಹೊಂದಿಯೇ ಅದನ್ನು ಒರೆಯೊಳಕ್ಕೆ ಹಾಕುವೆವೆಂದು ನಿರೀಕ್ಷಿಸುತ್ತೇವೆ. ಈ ಯುದ್ಧದ ದೆಸೆಯಿಂದ ನಮ್ಮ ಜನಾಂಗವು ಅಪಾರವಾದ ಕಷ್ಟನಷ್ಟಗಳನ್ನು ಅನುಭವಿಸಬೇಕಾಗುತ್ತದೆ. ಆದರೂ ಜರ್ಮನಿಯ ಮೇಲೆ ದಂಡುಕಟ್ಟಿ ಬರುವುದರ ಫಲಿತಾಂಶವೇನೆಂಬುವುದನ್ನು ನಾವು ನಮ್ಮ ಎದುರಾಳುಗಳಿಗೆ ಪರಿಷ್ಕಾರವಾಗಿ ತೋರಿಸಿಕೊಡಬೇಕು. ಅಷ್ಟಬದ್ದು—ದೇವರೇ, ನಮ್ಮ ಸೈನ್ಯಕ್ಕೆ ಜಯಪ್ರದವನ್ನು ದಯಪಾಲಿಸು ಎಂದು ಬೇಡಿಕೊಳ್ಳಿ ” ಎಂಬದಾಗಿ ಚಕ್ರವರ್ತಿಯವರು ಅರಮನೆಯ ಬಾಲಾಖಾನೆಯ ಮೇಲೆ ನಿಂತು ಅಪ್ಪಣೆ ಕೊಡಿಸಿರುತ್ತಾರೆ.

ಇಟಲಿ, ಡೆನ್ಮಾರ್ಕ್, ನಾರ್ವೆ, ಸ್ವೀಡನ್ ಎಂಬೀ ಯೂರೋಪಿಯನ್ ರಾಜ್ಯಗಳು ಯುದ್ಧದಲ್ಲಿ ತಾವು ಯಾವ ಪಕ್ಷವನ್ನೂ ವಹಿಸುವುದಿಲ್ಲವೆಂದು ಪ್ರಕಟ ಮಾಡಿರುತ್ತಾರೆ.

ಸ್ವಿಟ್ಸರ್‌ಲೆಂಡ್ ಮತ್ತು ಬೆಲ್ಜಿಯಂ ರಾಜ್ಯಗಳು ತಮ್ಮ ತಮ್ಮ ಸೈನ್ಯಗಳನ್ನು ಜೊತೆಮಾಡಿಕೊಳ್ಳುತ್ತಿರುವವು ; ಆದರೆ ಇವರು ತಮ್ಮ ರಾಜ್ಯಗಳ ಎಲ್ಲೆಕಟ್ಟನ್ನು ಸಂರಕ್ಷಣೆ ಮಾಡಿಕೊಳ್ಳುವರಲ್ಲದೆ, ಯುದ್ಧದಲ್ಲಿ ಪಕ್ಷ ಪರಪಕ್ಷಗಳನ್ನು ಹಿಡಿದು ಕಾದಾಡುವುದಕ್ಕೆ ನಿಲ್ಲುವವರಾಗಿಲ್ಲವೆಂದು ಕಾಣುವುದು

ಗ್ರೇಟ್ ಬ್ರಿಟನ್ (ಇಂಗ್ಲಿಷ್) ಗವರ್ನ್‌ಮೆಂಟಿನವರು ಏನುಮಾಡುವರು ಎಂಬುವುದು ಈಗ ಮುಖ್ಯ ವಿಚಾರವಾಗಿದೆ. ಇಂಗ್ಲಿಷರು ಅವಶ್ಯವಾದ ಏರ್ಪಾಡುಗಳನ್ನೂ ಸನ್ನಾಹಗಳನ್ನೂ ಮಾಡಿಕೊಳ್ಳುತ್ತಾ ಇದಾರೆ. ಯುದ್ಧಕ್ಕೆ ಹೊರಡುವುದರಲ್ಲಿ ಅವರಿಗೇನೋ ಇಷ್ಟವಿಲ್ಲ ; ಆದರೂ ಬಲಾತ್ಕಾರದಿಂದ ಯುದ್ಧಕ್ಕೆ ಹೊರಡಬೇಕಾಗುವುದೋ ಏನೋ ಹೇಳಲಾಗದು. ಸ್ವಾಸ್ತ್ಯಗಳಾಗಿರುವ ಕಾನಡಾ ಮತ್ತು ನ್ಯೂಜಿಲೆಂಡ್ ಪ್ರಜೆಗಳು ತಮ್ಮ ತಾಯಿಯಾದ ಇಂಗ್ಲೆಂಡಿಗೆ ಕಷ್ಟಕಾಲ ಒದಗಿದರೆ ತಮ್ಮ ಸರ್ವಸ್ವವನ್ನೂ ವಿನಿಯೋಗಿಸಿ ಸಹಾಯಕ್ಕೆ ಬಂದು ಕಾದಾಡಲು ಸಿದ್ಧರಾಗಿದೇವೆಂದು ತಿಳಿಸಿದಾರೆ. ಇಂಗ್ಲಿಷ್ ರಾಜ್ಯವು ಯುದ್ಧಕ್ಕೆ ಸೆಳೆಯಲ್ಪಟ್ಟರೆ ಜಪಾನ್‌ನವರು ಕರಾರಿನಂತೆ ಅವರಿಗೆ ಸಹಾಯಮಾಡುವೆವೆಂದು ಒಪ್ಪಿಕೊಂಡಿರುವರು. ಇಂಗ್ಲಿಷರು ಯುದ್ಧವನ್ನು ತಪ್ಪಿಸಿ ಸಮಾಧಾನವನ್ನು ನೆಲೆಗೊಳಿಸುವಂತೆ ಆಗಬೇಂದು ಪ್ರಾರ್ಥಿಸುತ್ತೇವೆ. ಅವಶ್ಯವಾಗುವ ಸಂದರ್ಭದಲ್ಲಿ ಹಿಂದುಸ್ಥಾನವು ಬ್ರಿಟಿಷ್ ಗವರ್ನ್‌ಮೆಂಟಿಗೆ ಸಹಾಯ ಮಾಡುವುದಕ್ಕೆ ಸಿದ್ಧವಾಗಿದೆ ಎಂದು ನಮ್ಮ ವೈಸ್‌ರಾಯ್ ಪ್ರಭುಗಳು ತಂತೀ ಮೂಲಕ ಅರಿಕೆ ಮಾಡಿರುತ್ತಾರೆ.

ಈಗ ಯೂರೋಪಿನಲ್ಲಿ ಪ್ರಾಪ್ತವಾಗಿರುವ ಗಲಭೆಗಳ ದೆಸೆಯಿಂದ ಹಿಂದುಸ್ಥಾನದೊಳಗೂ ವ್ಯಾಪಾರಕ್ಕೂ ಲೇವಾದೇವಿಗೂ ಸ್ವಲ್ಪ ಅಡಚಣೆಗಳು ಪ್ರಾಪ್ತವಾಗಿರುತ್ತವೆ. ನಾಣ್ಯ ಮತ್ತು ವ್ಯಾಪಾರದ ಮುಂಡಿಗಳ ಧಾರಣೆ ಹೆಚ್ಚಾಯಿತು. ಜಹಜುಗಳನ್ನು ಶತ್ರುಗಳು ಹಿಡಿಯಬಹುದೆಂಬ ಸಂಶಯವುಂಟಾಗಿರೋಣದರಿಂದ ಹಡಗಿನ ಪ್ರಯಾಣಕ್ಕೆ ಅಡಚಣೆಯಾಗಿದೆ. ಜಹಜುಗಳು ಸರ್ಕಾರದ ಅಪ್ಪಣೆಯಿಲ್ಲದೆ ಯಾವ ತೀರಪಟ್ಟಣದಿಂದಲೂ ಹೊರಡಕೂಡದೆಂದು ಖಂಡಿತವಾದ ನಿರ್ಬಂಧ ಮಾಡಲ್ಪಟ್ಟಿದೆ. ಸೈನಿಕರ ಹುದ್ದೇದಾರರಿಗೆ ರಜಾಕೊಡದಂತೆ ನಿಲ್ಲಿಸಿಬಿಟ್ಟಿದಾರೆ. ಫ್ರಾನ್ಸ್ ರಾಜ್ಯವೊಳಗೆ ಯುದ್ಧವು ಹರಡಿಕೊಂಡ ಪಕ್ಷದಲ್ಲಿ ಇಂಗ್ಲೆಂಡಿನಿಂದ ಹಿಂದುಸ್ಥಾನಕ್ಕೆ ಬರುವ ಅಂಚೆ ಟಪ್ಪಾಲನ್ನೆಲ್ಲಾ ಸಮುದ್ರಮಾರ್ಗವಾಗಿಯೇ ಸಾಗಿಸಿ ತರಬೇಕಾಗುವುದು. ಇದರಿಂದ ಸಮುದ್ರ ಪ್ರಯಾಣವು ಇನ್ನೊಂದು ವಾರ ಹೆಚ್ಚು ಹಿಡಿಯುತ್ತದೆ ಇಂಗ್ಲಿಷರು ಯುದ್ಧಕ್ಕೆ ನಿಂತರೆ ಹಿಂದುಸ್ಥಾನದಿಂದ ಹೋಗುವ ಜಹಜುಗಳನ್ನು ಶತ್ರುಗಳು ಹಿಡಿದು ವಶಮಾಡಿಕೊಳ್ಳಬಹುದು.

ಹೀಗೆ ಎಲ್ಲಾ ವಿಚಾರಗಳೂ ಸಂಶಯಾಸ್ಪದವಾಗಿರೋಣದರಿಂದ ಪ್ರಪಂಚದ ಎಲ್ಲಾ ಕಡೆಗಳಲ್ಲೂ ಕಳವಳವುಂಟಾಗಿದೆ. ಪರರಾಜ್ಯಗಳವರಲ್ಲಿ ಈಗ ಪರಸ್ಪರ ನಡೆಯುತ್ತಿರುವ ಸಂಧಾನಗಳು ದೀರ್ಘಕಾಲ ಎಳೆದಪಕ್ಷದಲ್ಲಿ ಯುದ್ಧಪ್ರಮೇಯವು ಹರಡಿಕೊಳ್ಳದೆ ಸ್ವಲ್ಪದರಲ್ಲೇ ಇತ್ಯರ್ಥವಾದೀತು. ಆದರೆ ಈಗಿನ ಸ್ಥಿತಿಗತಿಯು ಬಹಳ ಗಾಬರಿಯನ್ನುಂಟುಮಾಡುತ್ತಿದೆ.

ಈಗ ಒಂದೆರಡು ದಿನಗಳಿಂದ ವರ್ತಮಾನಗಳೇನೂ ಬಂದಿರುವುದಿಲ್ಲ. ಹೋರಾಟದಲ್ಲಿರುವ ರಾಜ್ಯಗಳವರು ತಮ್ಮ ಕಾರುಬಾರುಗಳು ಪ್ರಕಟವಾಗಬಾರದೆಂದು ಕಠಿಣವಾದ ನಿರ್ಬಂಧಗಳನ್ನು ಕಲ್ಪಿಸಿಕೊಂಡಿದಾರೆ ; ಕೆಲವು ಕಡೆ ವರ್ತಮಾನದ ತಂತಿಗಳನ್ನು ಕಿತ್ತುಹಾಕಿಬಿಟ್ಟಿರುವರು

ಒಳದೇಶದ ವೃತ್ತಾಂತಗಳು.

ಈ ವಾರ ನಮ್ಮ ಪತ್ರಿಕೆಯು ಹತ್ತು ಪುಟಗಳುಳ್ಳದ್ದಾಗಿದೆ.

* * *

ಕಳೆದ ಸೋಮವಾರ ಶ್ರೀಮನ್ಮಹಾರಾಜರವರು ನೀಲಗಿರಿಯಿಂದಲೂ, ಮಹಾಮಾತೃಶ್ರೀಯವರೂ ರಾಣಿವಾಸದವರೂ ಬೆಂಗಳೂರಿನಿಂದಲೂ ಮೋಟರುಗಳಲ್ಲಿ ರಾಜಧಾನಿಗೆ ದಯಮಾಡಿಸಿದರು. ಮಹಾರಾಜರವರು ನೆನ್ನೆ ನಂಜನಗೂಡಿಗೆ ದಯಮಾಡುವವರಾಗಿದ್ದರು. ಅವರು ಮುಂದಿನ ಭಾನುವಾರ ಬೆಂಗಳೂರಿಗೆ ಚಿತ್ತೈಸುತ್ತಾರೆಂದು ವರ್ತಮಾನವಿದೆ.

ಈ ತಿಂಗಳು 15ನೇ ತಾರೀಖಿನಿಂದ ಹುಣಸೂರಿನ ಒಬ್ಬ ದೊಡ್ಡಮನುಷ್ಯರು ಮೈಸೂರಿಗೂ ಹುಣಸೂರಿಗೂ ಮೋಟರ್ ಟಪ್ಪಾಲನ್ನು ಇಟ್ಟು ನಡಿಸುತ್ತಾರೆಂದೂ, 1ನೇ ಕ್ಲಾಸಿಗೆ 3½ ರೂಪಾಯಿ. 2ನೇ ಕ್ಲಾಸಿಗೆ ರೂ. 1-2-0 ಛಾರ್ಜು ಇಡುವರೆಂದೂ ಕೇಳುತ್ತೇವೆ.

* * *

ನಂಜನಗೂಡಿನಲ್ಲಿ ಉತ್ಸವ ವಿಗ್ರಹದ ಸಮೇತ ತೆಪ್ಪವು ಮುಳುಗಿಹೋದದ್ದರ ನಿಮಿತ್ತ ಕೆಲವು ವಿಶೇಷವಾದ ಶಾಂತಿಕ್ರಿಯೆಗಳೂ ಅರ್ಚನೆ ಅಭಿಷೇಕ ಉತ್ಸವಾದಿಗಳೂ ಕಳೆದ ವಾರ ನಡೆದವೆಂದೂ, ಇದಕ್ಕಾಗಿ ಅರಮನೆಯಿಂದಲೂ 600 ರೂಪಾಯಿ ಕೊಡಲಾಯಿತೆಂದೂ ಕೇಳುತ್ತೇವೆ.

* * *

ನಮ್ಮ ಬ್ರಿಟಿಷ್ ರೆಸಿಡೆಂಟರವರ ಪತ್ನೀರವರು ಬೆಂಗಳೂರು ಶ್ರೀನಿವಾಸ ಮಂದಿರಕ್ಕೆ ಕಳೆದ ಶನಿವಾರ ದಯಮಾಡಿ ಸ್ತ್ರೀಯರ ಮಂಡಲಿಯಲ್ಲಿ ಆ ಕಟ್ಟಡದ ವಿದ್ಯುಚ್ಛಕ್ತಿ ಬೆಳಕನ್ನು ತಿರುಗಿಸಿ ಪ್ರಾರಂಭಿಸಿದರು. ಈ ದೀಪಗಳನ್ನು ಮಾಜಿ ದಿವಾನ್ ಮ|| ಟಿ. ಆನಂದರಾವ್, ಸಿ.ಐ.ಇ. ರವರ ಪತ್ನೀರವರು ಧರ್ಮಾರ್ಥವಾಗಿ ಸ್ವಂತಖರ್ಚಿನಿಂದ ಇಡಿಸಿಕೊಟ್ಟಿದಾರೆಂದು ತಿಳಿದು ಸಂತೋಷಪಡುತ್ತೇವೆ.

* * *

ರಾಜಧಾನಿಯಲ್ಲಿ ಸರ್ದಾರ್ ಲಕ್ಷ್ಮೀಕಾಂತರಾಜೆಅರಸಿನವರ ಪ್ರ್ಯಾವರ್ಷನೊಳಗೆ ದೇವರಪೂಜೆಮಾಡುತ್ತಿದ್ದ ಕೃಷ್ಣಶಾಸ್ತ್ರಿ ಎಂಬವನು ಅವರ ಕೆಲವು ವಿಗ್ರಹಾದಿಗಳನ್ನು ಕಳುವುಮಾಡಿದ್ದು ಸಿಕ್ಕಿ ಪತ್ತೆ ಆಯಿತು. ಸಿಟಿ ಮ್ಯಾಜಿಸ್ಟ್ರೇಟರು ಅವನಿಗೆ ಒಂದು ವರುಷ ಕಠಿಣಸಜಾ ವಿಧಿಸಿದರು. ಈ ಅಪರಾಧಿಯ ತಾಯಿ ಸತ್ತು ಅಲ್ಲಿಗೆ 5-6 ದಿನಗಳಾಗಿ ಅವನು ಉತ್ತರಕ್ರಿಯೆಗಳನ್ನು ಮಾಡುವುದಕ್ಕೂ ಅವಕಾಶವಿಲ್ಲದೆ ಬಂದೀಖಾನೆಗೆ ಹೋಗಬೇಕಾಯಿತು. ಇದಲ್ಲದೆ ಅವನಿಗೆ ಅರಮನೆ ಚಾಮುಂಡಿ ತೊಟ್ಟಿಯಲ್ಲಿ ಗೌರವವಾದ ನೌಕರಿಯೂ ಇದ್ದಂತೆ ತಿಳಿದುಬಂದಿದೆ.

* * *

ರಾಜಧಾನಿಯ ಸಂತೇಪೇಟೆಯಲ್ಲಿರುವ ಲೇಟ್ ಸಾಹುಕಾರ್ ಬಜ್ಜಣ್ಣನವರ ಕುಟುಂಬ ಮದ್ದಮ್ಮನವರು ಅಕ್ಕಿ ರಾಗಿಯ ಧಾರಣೆ ಹೆಚ್ಚಿರುವುದನ್ನು ನೋಡಿ ಕನಿಕರಪಟ್ಟು ದವಸವನ್ನು ಕೊಂಡು ತಮ್ಮ ಅಂಗಡಿಯಲ್ಲಿ ಸುರಿಸಿಕೊಂಡು ಬಡಬಗ್ಗರಿಗೆಲ್ಲಾ ರೂಪಾಯಿಗೆ 14 ಸೇರು ರಾಗಿ, 7 ಸೇರು ಅಕ್ಕಿಯಂತೆ ಒಂದು ವಾರದಿಂದ ಬಿಕರಿ ಮಾಡುತ್ತಿದಾರೆ. ದಿನಕ್ಕೆ 460-500 ರೂಪಾಯಿ ತನಕ ಧಾನ್ಯ ಬಿಕರಿಯಾಗುತ್ತಿದೆ. ಬೆಳಿಗ್ಗೆ 10 ಗಂಟೆಯಿಂದ ರಾತ್ರಿ 8 ಗಂಟೆ ತನಕ ಪಟ್ಟಣದ ಎಲ್ಲಾ ಭಾಗಗಳಿಂದಲೂ ನೂರಾರು ಮಂದಿ ಬಡಬಗ್ಗರು ಅಲ್ಲಿ ಅಗ್ಗದ ಧಾನ್ಯವನ್ನು ಕೊಂಡುಕೊಂಡು ಆಕೆಯ ಔದಾರ್ಯವನ್ನು ಕೊಂಡಾಡುತ್ತಿದಾರೆ. ಈ ರೀತಿ ಕಷ್ಟ ಕಾಲದಲ್ಲಿ ಬಡಜನರ ಮೇಲೆ ಕರುಣವಿಟ್ಟು ಈಕೆ ಸಹಾಯಮಾಡುತ್ತಿರುವುದು ಪುಣ್ಯಕರವೂ ಕೀರ್ತಿಪ್ರದವೂ ಆಗಿದೆ.

* * *

ರಾಜಧಾನಿಯ ಕೃಷ್ಣರಾಜಮೊಹಲ್ಲೆಯಲ್ಲಿ ಮೊಹದೀನ್‌ಖಾನ್ ಮತ್ತು ಗೋವಿಂದರಾಜು ಎಂಬಿಬ್ಬರು ವರ್ತಕರು ತಮ್ಮ ಅಂಗಡಿಯಲ್ಲಿ ಸಿರಿಾರು ಸೇರಿಗಿಂತ ಕಡಮೆ ಮತ್ತು ಹೆಚ್ಚಾಗಿದ್ದ ಸಾಧನಗಳನ್ನು ಇಟ್ಟುಕೊಂಡಿದ್ದರೆಂದು ಮೊಕದ್ದಮೆ ಆಗಿ ಅವರಿಗೆ ತಲಾ 10-8 ರೂಪಾಯಿ ಜುಲ್ಮಾನೆ ವಿಧಿಸಲ್ಪಟ್ಟಿತು. ಇದಲ್ಲದೆ ಸಿಟಿ ಮ್ಯಾಜಿಸ್ಟ್ರೇಟರು ತಮ್ಮ ಮನೆಗೆ ಹಾಲು ಕೊಡುತ್ತಿದ್ದ ಸೀತಾರಾಮಸಿಂಗ್ ಎಂಬುವನು ಕಮ್ಮಿ ಹಾವಿನಲ್ಲಿ ಅಳೆದು ಕೊಡುತ್ತಿದ್ದುದನ್ನು ಹಿಡಿದು ಪೋಲೀಸಿಗೆ ಒಪ್ಪಿಸಿದರು. ತಾಲ್ಲೂಕ್ ಮ್ಯಾಜಿಸ್ಟ್ರೇಟರು ಅವನಿಗೆ 3 ರೂಪಾಯಿ ಜುಲ್ಮಾನೆ ಹಾಕಿದರು. ಇಟ್ಟಿಗೇಗೂಡಿನ ಮುನಿಸ್ವಾಮಿನಾಯ್ಡು ಎಂಬುವನು ಒಬ್ಬ ಹೆಂಗಸಿನ ಮೇಲೆ ಬೈಸಿಕಲ್ ಹರಿಸಿ ಗಾಯಪಡಿಸಿದ್ದಕ್ಕೆ ಅವನಿಗೆ ಮ್ಯಾಜಿಸ್ಟ್ರೇಟರು 8 ರೂಪಾಯಿ ಜುಲ್ಮಾನೆ ವಿಧಿಸಿದರು. ಪೋಲೀಸಿನವರು ವ್ಯಾಪಾರಸ್ಥರ ಅಳತೆ ಮತ್ತು ತೂಕದ ಮೋಸಕೃತ್ಯಗಳನ್ನು ಕಂಡುಹಿಡಿಯುತ್ತಿರುವುದಕ್ಕಾಗಿ ಸಂತೋಷಪಡುತ್ತೇವೆ. ಇದರಿಂದ ಬಡಬಗ್ಗರಿಗೆ ಉಪಕಾರವಾಗಿ ನಮ್ಮ ವರ್ತಕರಲ್ಲಿ ಸತ್ಯಸಂಧತೆಯು ನೆಲೆಗೊಳ್ಳುವುದಕ್ಕೆ ಎಷ್ಟೋ ಸಹಾಯವಾಗುವುದು. ಸರ್ಕಾರದವರು ಜಾರಿಗೆ ತಂದಿರುವ ಹೊಸ ಸೇರುಗಳನ್ನಲ್ಲದೆ ವರ್ತಕರು ಇನ್ಯಾವ ನಕ್ಕಲ್ ಸಾಧನಗಳನ್ನೂ ಅಂಗಡಿಗಳಲ್ಲಿ ಉಪಯೋಗಿಸಲೇ ಕೂಡದೆಂದು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಯಾಕೆ ಸಾರಿಸಬಾರದೋ ತಿಳಿಯುವುದಿಲ್ಲ.

ಮೈಸೂರು ಗೆಜೆಟ್ ಸಂಗ್ರಹ.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಖಜಾನೆ ಅ|| ಕಮಿಷನರ್ ಮ|| ಬಿ. ಭೀಮರಾಯರಿಗೆ ಕೊಟ್ಟಿರುವ ಒಂದು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೊಂದು ತಿಂಗಳು ಜಾಸ್ತಿ ಮಾಡಿದೆ.

ಸಾಗರದ ಮುನ್ಸಿಫ್ ಮ|| ಬಿ. ರಾಘವಾಚಾರ್ರಿಗೆ ಜೂಲೈ ತಾ. 17 ರಿಂದ ಇಪ್ಪತ್ತು ದಿನಗಳ ಸಂಬಳವಿಲ್ಲದ ರಜಾ ಕೊಟ್ಟಿದೆ. ಶಿವಮೊಗ್ಗಾ ಸೆಷನ್ಸ್ ಕೋರ್ಟ್ ಹೆಡ್ ಮುನ್ಷಿ ಮ|| ಎಸ್. ರಾಮಚಂದ್ರಶಾಸ್ತ್ರಿಗಳು ಸಾಗರದ ಮುನ್ಸಿಫರಾಗಿ ಬದಲಿ ನೇಮಿಸಲ್ಪಟ್ಟಿದಾರೆ.

ಹೊಳೆನರಸೀಪುರದ ಲೈಲ್ಸ್ ಆಸ್ಪತ್ರೆಯ ಅ|| ಸರ್ಜನ್ ಮ|| ಎನ್. ಎಸ್. ನಂಜುಂಡಯ್ಯನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಡೆಪ್ಯುಟಿ ಕಮಿಷನರ ದರ್ಜೆಯಲ್ಲಿ ಮ|| ಕೆ. ಚಾಂಡಿಯವರನ್ನು 1 ನೇ ಕ್ಲಾಸಿಗೂ, ಮ|| ಎಂ. ಎ. ನಾರಾಯಣಯ್ಯಂಗಾರ್ರನ್ನು 2 ನೇ ಕ್ಲಾಸಿಗೂ ಬಡ್ತಿ ಮಾಡಿದೆ.

ಮುಂದೆ ಹೇಳುವ ಮುನ್ಸಿಫರ ವರ್ಗಾವರ್ಗಿ ಹುಕುಂ ಮಾಡಿದೆ:— ಬೆಂಗಳೂರು ಅಡ್ವೊಕೇಟ್ ಮ|| ಎಚ್. ಕೆ. ವೀರಬಸವಯ್ಯನವರನ್ನು ಮುನ್ಸಿಫರಾಗಿ ನೇಮಿಸಿ ಹೊಳೆನರಸೀಪುರಕ್ಕೆ ವರ್ಗಮಾಡಿದೆ. ಮ|| ಡಿ. ಕೆ. ರಾಮರಾಯರನ್ನು ಕೋಲಾರ್ ಚಿನ್ನದಗಣಿಗಳಿಂದ ಮೈಸೂರಿಗೂ, ಮ|| ಪಿ ಮಹದೇವಯ್ಯನವರನ್ನು ದೊಡ್ಡಬಳ್ಳಾಪುರದಿಂದ ಕೋಲಾರ್ ಚಿನ್ನದಗಣಿಗಳಿಗೂ, ಮ|| ಎನ್. ಕೆ. ಶ್ರೀನಿವಾಸರಾಯರನ್ನು ಹೊಳೆನರಸೀಪುರದಿಂದ ದೊಡ್ಡಬಳ್ಳಾಪುರಕ್ಕೂ ವರ್ಗಮಾಡಿದೆ.

ಅ|| ಸರ್ಜನ್ ಮ|| ಸಿ. ರಾಜಾರಾಮರಾಯರನ್ನು ಜೂಲೈ ತಾ. 16 ರಿಂದ 3 ನೇ ಕ್ಲಾಸಿಗೆ ಬಡ್ತಿಮಾಡಿದೆ.

ರಾಜಮಂತ್ರಪ್ರವೀಣ ಮ|| ಎಚ್. ವಿ. ನಂಜುಂಡಯ್ಯ, ಸಿ.ಐ.ಇ. ಯವರಿಂದ ಜೂಲೈ ತಾ. 20 ರಲ್ಲಿ ಸರ್ ಎಲ್. ಸಿ. ಮಿಲ್ಲರ್, ಕೆಟಿ. ಯವರು ಚೀಫ್ ಜಡ್ಜಿ ಪದವಿಯ ಛಾರ್ಜನ್ನು ವಹಿಸಿಕೊಂಡಿದಾರೆ.

ಮ|| ಟಿ. ಕೆ. ಅರುಣಾಚಲ ಅಯ್ಯರವರನ್ನು ಮೈಸೂರು ಅರಸೀಕೆರೆ ರೈಲ್ವೆ 1 ನೇ ಡಿವಿಜನ್ ಅ. ಎಗ್ಜಿಕ್ಯುಟಿವ್ ಇಂಜನಿಯರಾಗಿ ನೇಮಿಸಿದೆ.

ಮಂಜರಾಬಾದ್ ತಾಲ್ಲೂಕು ಅಮಲ್ದಾರ್ ಮ|| ಆರ್. ತಿರುನಾರಾಯಣಯ್ಯಂಗಾರ್ರಿಗೆ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಶಿರಸ್ತೆದಾರ್ ಮ|| ಎಸ್. ವೆಂಕಟಾಚಲಯ್ಯನವರು ತಾಲ್ಲೂಕ್ ಛಾರ್ಜನ್ನು ವಹಿಸಿರತಕ್ಕದ್ದು.

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು.

ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲರುಗಳು ಕಳೆದ ಗುರುವಾರವೂ ಶುಕ್ರವಾರವೂ ಟೌನ್ ಹಾಲ್ ಬಂಗಲೆಯಲ್ಲಿ ಸಭೆ ಸೇರಿ ತಿಂಗಳುಗಟ್ಟಲೆಯ ಮೀಟಿಂಗನ್ನು ನಡಿಸಿ ತೀರ್ಮಾನ ಮಾಡಿರುವ ವಿಚಾರಗಳೇನೆಂದರೆ—ಇಟ್ಟಿಗೇ ಗೂಡಿನಲ್ಲಿ ಮ|| ತಿರುವೆಂಗಡಂ ಮೊದಲಿಯಾರ್ರು ಒಂದು ಸ್ಕೂಲ್ ಮನೆಯನ್ನು ಕಟ್ಟಿಸಿ ಎರಡು ವರುಷಗಳಿಂದ ಬಾಲಿಕಾ ಪಾಠಶಾಲೆಯನ್ನಿಟ್ಟು ನಡಿಸುತ್ತಿದಾರೆ. ಇದಕ್ಕೆ 16 ರೂಪಾಯಿ ಗ್ರಾಂಟು ಇದೆ. ಇದನ್ನು 30 ರೂಪಾಯಿ ಮಾಡಿಕೊಡದಿದ್ದರೆ ಆ ಸ್ಕೂಲನ್ನು ಮುಚ್ಚಿಬಿಡುವುದಾಗಿ ತಿಳಿಯಿತು. ಮೆಂಬರುಗಳು 30 ರೂಪಾಯಿ ಗ್ರಾಂಟು ಕೊಡುವುದು ಅವಶ್ಯವೆಂದೂ, ಅದನ್ನು ಸ್ಯಾಂಕ್ಷನ್ ಮಾಡಬೇಕೆಂದೂ ಗವರ್ನ್‌ಮೆಂಟಿಗೆ ತಿಳಿಸಿದಾರೆ.—ಮೈಸೂರಿನಲ್ಲಿ ಸೋಡಾ ಲೆಮನೆಡ್ ತಯಾರುಮಾಡುವವರು ಭಾವಿ ನೀರನ್ನು ಉಪಯೋಗಿಸದೆ ನಲ್ಲಿ ಇಡಿಸಿಕೊಂಡು ಆ ನೀರನ್ನು ಉಪಯೋಗಿಸಬೇಕೆಂದು ವಿಧಾಯಕವಾಯಿತು.—ಮಾಂಸಕ್ಕಾಗಿ ಕೊಲ್ಲುವ ದನಗಳ ಆರೋಗ್ಯಸ್ಥಿತಿಯನ್ನು ತನಿಖೆ ಮಾಡುವ ಇನ್ಸ್‌ಪೆಕ್ಟರ ಸಂಬಳವನ್ನು 30 ರಿಂದ 35 ರೂಪಾಯಿಗೆ ಬಡ್ತಿಮಾಡುವಂತೆ ಒಪ್ಪಲಾಯಿತು.—ಮಿಷನ್ ಹೈಸ್ಕೂಲಿನ ಬಡಾವಣೆಗೆ ಅದರ ಬಳಿ ಇರುವ 15¾ ಚದರಗಜ ಸ್ಥಳವನ್ನು ಮುಫತ್ತಾಗಿಯೂ, ಮಿಷನ್ ಬುಕ್ ಡಿಪೋ ಮುಂಭಾಗದಲ್ಲಿರುವ ಸ್ವಲ್ಪ ನಿವೇಶನವನ್ನು 27¾ ಚದರಗಜ 4 ಆಣೆಯಂತೆ ಡಿಪೋವಿಗೆ ಸೇರಿಸಿಕೊಡಬೇಕೆಂದೂ ಗೊತ್ತಾಯಿತು.—ಪ್ರೆಸಿಡೆಂಟರಿಗೆ 600 ರೂಪಾಯಿ ಸಂಬಳದಲ್ಲಿ ಒಂದು ಭಾಗವನ್ನು ಮ್ಯುನಿಸಿಪಾಲಿಟಿಯಿಂದಲೂ, ಎರಡು ಭಾಗವನ್ನು ಟ್ರಸ್ಟ್ ಬೋರ್ಡಿನಿಂದಲೂ ಕೊಡತಕ್ಕದ್ದೆಂದು ಸರ್ಕಾರದವರು ಹುಕುಂ ಕೊಟ್ಟಿದಾರೆ.—ಗೌರ್ನಮೆಂಟ್ ಹೌಸ್ ಪಕ್ಕದಲ್ಲಿರುವ ಮ್ಯುನಿಸಿಪಲ್ ಪಾರ್ಕಿನ 5 ಮಂದಿ ಕಾವಲುಗಾರರಿಗೂ ಇಬ್ಬರು ಗುಡಿಸುವವರಿಗೂ ತಲಾ ಒಂದು ರೂಪಾಯಿ ಬಡ್ತಿ ಕೊಡುವಂತೆ ಒಪ್ಪಲಾಯಿತು.—ಕರ್ಸನ್ ಪಾರ್ಕಿನಲ್ಲಿ ಪ್ರತಿಮೆಯನ್ನು ನಿಲ್ಲಿಸುವ ಕಡೆ ಅಲಂಕಾರವಾಗಿ ಮಾಡಿದ್ದಕ್ಕೆ ತಗಲಿದ 1,340 ರೂಪಾಯಿ ಖರ್ಚನ್ನು ಟ್ರಸ್ಟ್ ಬೋರ್ಡಿನಿಂದ ಕೊಡಬೇಕೆಂದೂ, ಇನ್ನು ಮುಂದೆ ಮ್ಯುನಿಸಿಪಾಲಿಟಿಯವರು ಅದರ ಉಸ್ತುವಾರಿ ನೋಡಿಕೊಳ್ಳಬೇಕೆಂದೂ ಸರ್ಕಾರದವರು ಹುಕುಂ ಕೊಟ್ಟಿದಾರೆ.

ಮ್ಯುನಿಸಿಪಲ್ ಕಾನೂನ್ ವಿಾರಿದವರನ್ನು ಹಿಡಿದುಕೊಟ್ಟವರಿಗೆ ಪ್ಯಾನಿಜಿಂಗ್ ಕಮಿಟಿಯವರು ಇಷ್ಟಪಟ್ಟರೆ ಇನಾಮು ಕೊಡುವಂತೆ ಸ್ಯಾಂಕ್ಷನ್ ಮಾಡಬಹುದೆಂದು ನಿಬಂಧನೆಮಾಡಲಾಯಿತು.—ಬೇರೆಬೇರೆ ಮೊಹಲ್ಲೆಗಳಲ್ಲಿ ಮುಸಾಫರ್ ಖಾನೆಗಳನ್ನು ಬಿಡಿಸಿಕೊಡುವುದಕ್ಕೆ ಮ್ಯುನಿಸಿಪಾಲಿಟಿಯವರು ಚುನಾಯಿಸಿದ್ದ ಸುಮಾರು 48 ಎಕರೆ ಖುಷ್ಕಿ ಜಮೀನನ್ನು 3,090 ರೂಪಾಯಿಗೆ ಕೊಂಡುಕೊಳ್ಳಬಹುದೆಂದು ಸರ್ಕಾರದವರು ಒಪ್ಪಿ ಸ್ಯಾಂಕ್ಷನ್ ಮಾಡಿದಾರೆ.—ಈಗಿರುವ ಮ್ಯುನಿಸಿಪಲ್ ಇಂಜನಿಯರನ್ನು ಬದಲಾಯಿಸಬೇಕೆಂದೂ, ಇನ್ನೊಬ್ಬರನ್ನು ಹುಡುಕಿ ನೇಮಿಸಿಕೊಳ್ಳುವುದಕ್ಕೆ ಪ್ರೆಸಿಡೆಂಟರು ಪ್ರಯತ್ನಪಡಬೇಕೆಂದೂ ಇತ್ಯರ್ಥವಾಡಲಾಯಿತು.—ಮಹಾರಾಣಿ ಆಸ್ಪತ್ರೆಯಲ್ಲಿ ರೋಗಿಗಳಿಗೆ ಅಡಿಗೆ ಮಾಡುವುದಕ್ಕೆ 10 ರೂಪಾಯಿ ಸಂಬಳದ ಮೇಲೆ ಒಬ್ಬ ಬ್ರಾಹ್ಮಣನನ್ನೂ, ಒಬ್ಬ ಲಿಂಗಾಯಿತನನ್ನೂ ನೇಮಕ ಮಾಡಿಕೊಳ್ಳಬಹುದೆಂದು ಸರ್ಕಾರದವರು ಒಪ್ಪಿ ಸ್ಯಾಂಕ್ಷನ್ ಮಾಡಿದಾರೆ.—ಆರೋಗ್ಯ ವಿಚಾರಗಳನ್ನು ಕುರಿತು ಪ್ರಜೆಗಳಿಗೆ ಉಪನ್ಯಾಸ ಮಾಡಬೇಕಾಗಿರುವುದರಿಂದ ಉಪನ್ಯಾಸದ ಖರ್ಚು ಮುಂತಾದದ್ದಕ್ಕೆ ಐವತ್ತು ರೂಪಾಯಿ ಸ್ಯಾಂಕ್ಷನ್ ಮಾಡಬೇಕೆಂದು ಹೆಲ್ತ್ ಆಫೀಸರು ಸೂಚಿಸಿದ್ದನ್ನು ಮೆಂಬರುಗಳು ಒಪ್ಪಿಕೊಂಡರು.—ಮ್ಯುನಿಸಿಪಲ್ ಇಂಜನಿಯರ್ ಮ|| ಕಾಶೀಪತಿಶಾಸ್ತ್ರಿಗಳಿಗೆ 35 ರೂಪಾಯಿ ಅಲೋಯನ್ಸು ಕೊಡಬಹುದೆಂದು ಸರ್ಕಾರದವರು ಸ್ಯಾಂಕ್ಷನ್ ಮಾಡಿದಾರೆ.—ಪಟ್ಟಣದಲ್ಲಿರುವ ಅಂಗಡಿಗಳಿಗೆಲ್ಲಾ ವರ್ತಕರು ಪಾವತಿಮಾಡುವ ಬಾಡಿಗೆ ದರದ ಮೇಲೆ ಶೇಕಡಾ ಒಂದು ರೂಪಾಯಿನಂತೆ ನೀರಿನ ತೆರಿಗೆ ಹಾಕಿ ವಸೂಲ್ಮಾಡಬೇಕೆಂಬ ವಿಚಾರವು ಸ್ವಲ್ಪ ಹೊತ್ತು ಚರ್ಚೆಯಾಗಿ ಪ್ಯಾನಿಜಿಂಗ್ ಕಮಿಟಿಯವರ ಅಭಿಪ್ರಾಯವನ್ನು ತಿಳಿಯೋಣವೆಂದು ತೆಗೆದಿಟ್ಟರು.—ದೊಡ್ಡಕೆರೆ ಏರಿ ಕೆಳಗೆ ಸೂಯಿಜ್ ಫಾರಮುಗಾಗಿ 1888 ನೇ ಇಸವಿಯಲ್ಲಿ ರೂ. 211-8-2 ಕ್ಕೆ ಒಂದು ಜಮೀನನ್ನು ಕೊಂಡುಕೊಂಡಿದ್ದರು. ಬಸವಲಿಂಗಸ್ವಾಮಿಗಳು ಆ ಹಣವನ್ನು ವಾಪಸು ಕೊಡುತ್ತೇವೆಂದೂ, ಜಮೀನನ್ನು ತಮಗೆ ಹಿಂತಿರುಗಿ ಕೊಡಿಸಬೇಕೆಂದೂ ಅರ್ಜಿ ಬರೆದುಕೊಂಡಿದ್ದರು. ಮೆಂಬರುಗಳು ಹಣವನ್ನು ತೆಗೆದುಕೊಂಡು ಜಮೀನನ್ನು ಸ್ವಾಮಿಗಳಿಗೆ ಬಿಟ್ಟುಕೊಡುವಂತೆ ಒಪ್ಪಿ ತೀರ್ಮಾನಮಾಡಿದಾರೆ.

ದೇವರಾಜ ಮಾರ್ಕೆಟ್ಟಿನೊಳಗೆ ಚಿಲ್ಲರೆ ಅಂಗಡಿ ಇಟ್ಟಿರುವ ವರ್ತಕರು ಬಾಡಿಗೆಯನ್ನು ಕಡಮೆಮಾಡಿಕೊಡಬೇಕೆಂದು ಬರೆದುಕೊಂಡಿದ್ದರು. ಅದು ಆಗತಕ್ಕದ್ದಲ್ಲವೆಂದು ಅವರಿಗೆ ಜವಾಬು ಕೊಡುವಂತೆ ಇತ್ಯರ್ಥವಾಯಿತು. ವೈಸ್ ಪ್ರೆಸಿಡೆಂಟರು, ಮ|| ಗಳಾದ ಪಂಡಿತರು, ಶ್ರೀಕಂಠಯ್ಯನವರು, ಬನುಮಯ್ಯನವರು ಮಾರ್ಕೆಟ್ ಕಮಿಟಿಯಾಗಿ ನೇಮಿಸಲ್ಪಟ್ಟರು.—ಮ್ಯುನಿಸಿಪಲ್ ಕೌನ್ಸಿಲ್‌ನವರು ಖರ್ಚುಬಾಬಿನಲ್ಲಿ ಬಾಬುಹೊಂದಿಸಿಕೊಳ್ಳುವುದಕ್ಕೂ, ಖಾಯಂ ಸಿಬ್ಬಂದಿಯನ್ನು ಕೆಲವು ಮಟ್ಟಿಗೆ ಬದಲಾಯಿಸುವುದಕ್ಕೂ ಹೆಚ್ಚು ಕಡಮೆ ಮಾಡುವುದಕ್ಕೂ, ಹಂಗಾಮಿ ಕಾಮಗಾರಿಗಳನ್ನು ಮಾಡಿಸುವುದಕ್ಕೂ, ರಿಪೇರಿಗಳನ್ನೆಲ್ಲಾ ಮಾಡಿಕೊಳ್ಳುವುದಕ್ಕೂ ಸ್ವತಂತ್ರರಾಗಿರಬೇಕೆಂಬ ಅರ್ಥಕ್ಕೆ ಕಾನೂನನ್ನು ಬದಲಾವಣೆ ಮಾಡಬೇಕೆಂದು ಒಪ್ಪಿ ಪ್ಯಾಸ್ ಮಾಡಿರುತ್ತಾರೆ.—ಕಾರಂಜಿಕೆರೆ ಏರಿಯ ಮೇಲೆ ಕಾಮಗಾರಿ ನಡಿಸಿದ್ದಕ್ಕೆ ತಗಲಿದ 7,334 ರೂಪಾಯನ್ನು ಟ್ರಸ್ಟ್ ಬೋರ್ಡಿನಿಂದ ಪಾವತಿಮಾಡಬೇಕೆಂದು ಸರ್ಕಾರದವರು ಹುಕುಂ ಕೊಟ್ಟಿದಾರೆ.—ಆಯುರ್ವೇದ ಮತ್ತು ಯುನಾನಿ ಆಸ್ಪತ್ರೆಗಳ ಭಾರ್ಜನ್ನು ವಹಿಸಿರುವ ಮ|| ಎಸ್. ವೆಂಕೋಬರಾಯರ ಸಂಬಳಕ್ಕೆ ಮ್ಯುನಿಸಿಪಾಲಿಟಿಯಿಂದ 17 ರೂಪಾಯನ್ನು ಮಾಹೆಯಾನಾ ಕೊಟ್ಟೇ ತೀರಬೇಕೆಂದು ಸರ್ಕಾರದವರು ಹುಕುಂ ಕೊಟ್ಟಿದಾರೆ.—ಪಟ್ಟಣದಲ್ಲಿ ಪ್ರತಿ ಒಂದು ಮನೆಯಲ್ಲೂ ಪ್ರತ್ಯೇಕವಾದ ಹಿತ್ತಲ ಮನೆ ಇರುವಂತೆಯೂ, ಪ್ರತಿ ದಿನವೂ ಅದನ್ನು ಗುಡಿಸಿಕೊಂಡು ಹೋಗುವಂತೆಯೂ ಏರ್ಪಾಡುಮಾಡಬೇಕೆಂತಲೂ, ಕುಂಬಾ ದರಿದ್ರರಾದವರ ಮನೆಗೆ ಮ್ಯುನಿಸಿಪಾಲಿಟಿಯಿಂದ ಹಿತ್ತಲುಮನೆ ಕಟ್ಟಿಸಿಕೊಟ್ಟು ಸುಲಭವಾದ ಕಂತುಗಳಿಂದ ವಸೂಲ್ಮಾಡಿಕೊಳ್ಳಬೇಕೆಂತಲೂ ಗೊತ್ತುಮಾಡಿ ಈ ಕಾಮಗಾರಿಗೋಸ್ಕರ 5,000 ರೂಪಾಯಿ ಸ್ಯಾಂಕ್ಷನ್ ಮಾಡಿರುತ್ತಾರೆ.—ಕೋಟೆಗೋಡೆಯಲ್ಲಿ ಸುತ್ತಲೂ ಬೆಳೆದಿರುವ ಗಿಡಗಳನ್ನು ಕತ್ತರಿಸಿ ಸಂದುಗಳನ್ನು ಮುಚ್ಚುವುದಕ್ಕೆ ಟ್ರಸ್ಟ್ ಬೋರ್ಡಿನಿಂದ 1,600 ರೂಪಾಯಿ ಖರ್ಚುಮಾಡಿದ್ದರು. ಈಗ ಮತ್ತೆ ಗಿಡಗಳು ಬೆಳೆದಿವೆ. ಈಗ ಮ್ಯುನಿಸಿಪಲ್ ಖರ್ಚಿನಿಂದ ಅದನ್ನು ಕತ್ತರಿಸಬೇಕೆಂದು ಸೂಚನೆಯಾಯಿತು. ಕೋಟೆಕೊತ್ತಲವು ಮ್ಯುನಿಸಿಪಾಲಿಟಿಗೆ ಸೇರಿದ್ದಲ್ಲವಾದ ಕಾರಣ ಈ ಕೆಲಸವನ್ನು ಮ್ಯುನಿಸಿಪಲ್ ಹಣದಿಂದ ಮಾಡಕೂಡದೆಂದು ಮೆಂಬರುಗಳು ತೀರ್ಮಾನಮಾಡಿದರು.

ಚಾಮರಾಜಪೇಟೆಯಲ್ಲಿ ಅಡ್ವೊಕೇಟ್ ಮ|| ರಾಮಚಂದ್ರಯ್ಯನವರು ತಮ್ಮ ಮನೆ ಪಕ್ಕದಲ್ಲಿರುವ ವಿದ್ಯುಚ್ಛಕ್ತಿಯ ಛತ್ರದ ಯಂತ್ರದಿಂದ ತಮಗೆ ಅನನುಕೂಲವಾಗಿದೆ ಎಂದೂ, ಅದನ್ನು ತಪ್ಪಿಸದಿದ್ದರೆ ಮ್ಯುನಿಸಿಪಾಲಿಟಿಯ ಮೇಲೆ ಮೊಕದ್ದಮೆಮಾಡುವುದಾಗಿಯೂ ನೋಟೀಸ್ ಕೊಟ್ಟಿದಾರೆ. ಈ ವಿಚಾರವು ಸ್ವಲ್ಪ ಹೊತ್ತು ಚರ್ಚೆಯಾಯಿತು. ಮನೆಗಳ ನಡುವೆ ಕಾರ್ಖಾನೆ ಇಡುವುದಕ್ಕೆ ಲೈಸನ್ಸು ಕೊಡುವುದಕ್ಕೆ ಮೊದಲು ಆ ಸುತ್ತುಮುತ್ತಿನ ನಿವಾಸಿಗಳ ಅಭಿಮತವನ್ನು ಕೇಳಬೇಕಾಗಿತ್ತೆಂದು ಕೆಲವು ಮೆಂಬರುಗಳು ಅಭಿಪ್ರಾಯಪಟ್ಟರು. ಅದರ ಮೇಲೆ ರೆವ್. ಗಲ್ಲಿಫರ್ಡ್‌ರವರೂ ಮ|| ವೆಂಕಟಕೃಷ್ಣಯ್ಯನವರೂ ಮೊಖ್ತಾಹೋಗಿ ಆ ಯಂತ್ರದ ಸ್ಥಿತಿಯನ್ನು ನೋಡಿ, ಅದರಿಂದ ಅಕ್ಕಪಕ್ಕದ ಜನರಿಗೆ ಎಷ್ಟು ಮಟ್ಟಿಗೆ ಅನನುಕೂಲವಾಗಿದೆ ಎಂಬುದನ್ನು ವಿಚಾರಿಸಿ ರಿಪೋರ್ಟು ಕೊಡುವಂತೆ ಇತ್ಯರ್ಥವಾಡಿದರು.—ಟೌನ್ ಹಾಲ್ ಬಂಗಲೆಗೆ ವಿದ್ಯುಚ್ಛಕ್ತಿಯ ದೀಪಗಳನ್ನು ಇಡಿಸಿದ್ದಕ್ಕೆ 3,000 ರೂಪಾಯಿ ಖರ್ಚಾಗಿರುವುದನ್ನು ಮೆಂಬರುಗಳು ಒಪ್ಪಿಕೊಂಡರು.—ಆಕ್ಟ್ರಾಯಿ ಬಾಬಿನಲ್ಲಿ 11 ವಿಧದ ಸಣ್ಣ ಸುಂಕಗಳನ್ನು ವಜಾ ಮಾಡಿ, ಟೋಲ್ ಗೇಟುಗಳ ದರಗಳನ್ನು ಎರಡರಷ್ಟು ಹೆಚ್ಚಿಸಬೇಕೆಂದೂ, ಆರು ಬಾಬುಗಳನ್ನು ಮಾತ್ರ ಅಂದರೆ ಜವಳಿ, ಚೀನಾಜವಳಿ, ಸೀಮೆಯೆಣ್ಣೆ, ಸಕ್ಕರೆ, ತುಪ್ಪ, ಸಾಗುವಾನಿ ಬಾಬುಗಳನ್ನು ಇಟ್ಟುಕೊಂಡರೆ ಅನುಕೂಲವೆಂದೂ ಮೆಂಬರುಗಳು ಸ್ವಲ್ಪ ಹೊತ್ತು ಚರ್ಚೆಮಾಡಿದರು. ಸುಮಾರು 60 ಮೈಲಿ ಆಚೆಯಿಂದ ರಾಜಧಾನಿಗೆ ಬರುವ ಪ್ರಯಾಣಿಕರಿಂದಲೂ ಶಲಾಕೆಗೆಯಂತೆ ಒಂದು ಸುಂಕವನ್ನು ಹಾಕಿ ರೈಲ್ ಕಂಪನಿಯವರ ಮೂಲಕ ವಸೂಲ್ಮಾಡಿಸಬೇಕೆಂದು ಸೂಚಿಸಲ್ಪಟ್ಟದ್ದರಿಂದ ಮೊದಲು ರೈಲ್ವೆಯವರಿಗೆ ಬರೆದು ಸಂಗತಿಯನ್ನು ತಿಳಿದುಕೊಂಡು ಆ ಬಳಿಕ ಮ್ಯುನಿಸಿಪಲ್ ಕೌನ್ಸಿಲ್‌ನಲ್ಲಿ ಈ ಆಕ್ಟ್ರಾಯಿ ಬಾಬುಗಳ ಬದಲಾವಣೆಯನ್ನು ಇತ್ಯರ್ಥವಾಡುವಂತೆ ಗೊತ್ತುಮಾಡಿದರು.

ಗ್ರಾಮಾಭಿವೃದ್ಧಿಗೆ ಬೇಕಾದ ಕಟ್ಟಳೆಗಳು.

[ಮೈಸೂರು ಗವರ್ನ್‌ಮೆಂಟಿನವರು ಗ್ರಾಮಗಳಲ್ಲಿರುವ ಪ್ರಜೆಗಳ ಹಿತವನ್ನು ಬಯಸಿ, ಅವರು ಓದಿ ತಿಳಿದುಕೊಂಡು ಅದರಲ್ಲಿ ಕಂಡಂತೆ ನಡೆದುಕೊಳ್ಳುತ್ತಾ ಬರಬೇಕೆಂದು ಕೆಳಗೆ ಕಂಡ ಕಟ್ಟಳೆಗಳನ್ನು ಪ್ರಕಟಿಸಿರುತ್ತಾರೆ. ಗ್ರಾಮಸ್ಥರು ಆ ರೀತಿ ಮಾಡಿ ಅಭಿವೃದ್ಧಿ ಹೊಂದುತ್ತಾರೆಂದು ನಂಬಿ ನಿರೀಕ್ಷಿಸುವೆವು.—ಎಡಿ.]

ಗ್ರಾಮನಿವಾಸಿಗಳೆಲ್ಲರೂ ಆಚರಿಸಲು ಯತ್ನಿಸಬೇಕಾದ ಕಟ್ಟಳೆಗಳು.

1. “ಉದ್ಯೋಗಃ ಪುರುಷಲಕ್ಷಣಂ” ಎಂದು ಶಾಸ್ತ್ರವು ಸಾರುತ್ತದೆ ನಿರುದ್ಯೋಗಿಗಳು ಗ್ರಾಮದಲ್ಲಿ ಎಷ್ಟೆಷ್ಟು ಕಡಮೆಯಾಗುವರೋ ಅಷ್ಟಷ್ಟು ಆ ಗ್ರಾಮದ ಸಂಪತ್ತು ಹೆಚ್ಚುತ್ತದೆ.—ತನ್ನ ಮನೆ ಜನರೂ ತನ್ನ ಊರಿನ ಜನರೂ ಅವರವರ ಯೋಗ್ಯತಾನುಸಾರವಾಗಿ ಯಾವುದಾದರೂ ಒಂದು ಉಪಯೋಗವಾದ ಕೆಲಸವನ್ನು ಮಾಡುತ್ತಲೇ ಇರುವಂತೆ ಪ್ರತಿಯೊಬ್ಬರೂ ನೋಡಿಕೊಳ್ಳಬೇಕು. ಒಬ್ಬೊಬ್ಬರೂ ಹೀಗೆ ಮಾಡಿದರೆ ಎಲ್ಲರಿಗೂ ಲಾಭಕರ —ಪ್ರತಿಯೊಬ್ಬನೂ ತಾನು ವಹಿಸಿರುವ ಕೆಲಸವನ್ನು ಮುತ್ತೂಟ್ಟರಿಂದ ಹೇಳಿಸಿಕೊಳ್ಳದೆಯೇ ಶಕ್ತ್ಯಾನುಸಾರವಾಗಿ ಶ್ರದ್ಧೆಯಿಂದ ಜರುಗಿಸುವುದು ತನಗೆ ಭೂಷಣವೆಂದು ತಿಳಿಯಬೇಕು.

2. ಪ್ರತಿಯೊಬ್ಬನೂ ಪ್ರತಿ ದಿನವೂ 6 ಘಂಟೆಗಳಿಂದ 9 ಘಂಟೆಗಳ ವರೆಗೆ ಕೆಲಸ ಮಾಡಬೇಕು. ಮೇಲ್ವಿಚಾರಣೆ ಇರಲಿ, ಇಲ್ಲದಿರಲಿ, ತನ್ನ ಕೆಲಸವನ್ನು ನಿಲ್ಲಿಸದೆಯೂ ಒಂದೇ ಸಮನಾಗಿಯೂ ಮಾಡುವುದನ್ನು ಕಲಿಯಬೇಕು.

3. ಮಳೆ ಹುಯ್ಯದರೇನೆ ಬೆಳೆಯಾಗುವ ನಮ್ಮ ದೇಶದಲ್ಲಿ ಬೇಸಾಯಗಾರರು ತಮ್ಮ ಆರಂಭದ ಜತೆಗೆ ಬೇರೆಯೊಂದು ಕಸಬನ್ನು ಕಲಿತು ಆಚರಣೆಯಲ್ಲಿಟ್ಟುಕೊಂಡಿರಲೇ ಬೇಕು. ಹಾಗೆ ಮಾಡಿದರೆ ಬರಗಾಲದಲ್ಲಿ ಇದು ಇವರಿಗೆ ಸಹಾಯವಾಗುವುದು.

4. ಎಲ್ಲಾ ವಿಧವಾದ ಅಭಿವೃದ್ಧಿಗೂ ವಿದ್ಯಾಭ್ಯಾಸವೇ ಬೇರಾಗಿದೆ.—ಹೆಣ್ಣು ಹುಡುಗರಾಗಲೀ ಗಂಡು ಹುಡುಗರಾಗಲೀ ಪ್ರತಿಯೊಬ್ಬರೂ ಲೆಕ್ಕವನ್ನೂ ಓದುಬರಹಗಳನ್ನೂ ಕಲಿಯಲೇ ಬೇಕು. ವಿದ್ಯೆಯನ್ನು ಕಲಿಯುವುದಕ್ಕೆ ಕಾಲವು ಮೀರಿತೆಂದು ವಯಸ್ಸಾದವರು ಸುಮ್ಮನಿರಬಾರದು. ಓದು ಬರಹದ ಜತೆಗೆ ಯಾವುದಾದರೂ ಒಂದು ಕಸಬಿನಲ್ಲಿ ಕೈನಿಪುಣತೆಯನ್ನು ಪ್ರತಿಯೊಬ್ಬನೂ ಸಂಪಾದಿಸಿಕೊಳ್ಳಬೇಕು.

5. ಕೆಲಸದಲ್ಲಿ ಮಮತೆ ಹುಟ್ಟುವಂತೆಯೂ ಸರಸರಾಗಿರುವಂತೆಯೂ ಹುಡುಗರಿಗೆ ಚಿಕ್ಕಂದಿನಿಂದಲೂ ಕಲಿಸಬೇಕು. ಆಯಾ ದಿವಸದ ಕೆಲಸವು ಮುಗಿದ ಮೇಲೆ ಗುಂಪಾಗಿ ಸೇರಿ ಆಟವಾಡುವಂತೆ ಮಕ್ಕಳನ್ನು ಪ್ರೋತ್ಸಾಹಿಸಬೇಕು. ಸಾಧನೆಯಿಂದ ಶರೀರಕ್ಕೆ ಬಲ ಹೆಚ್ಚುವುದು.

6. ಗ್ರಾಮಗಳಲ್ಲಿ ಪ್ರತಿ ಸಂಸಾರಿಯೂ ಧನವನ್ನಾಗಲಿ ಧಾನ್ಯವನ್ನಾಗಲಿ ತನ್ನ ಸಂಸಾರಕ್ಕೆ ಎರಡು ವರ್ಷಕ್ಕಾಗುವಷ್ಟಾದರೂ ಶೇಖರ ಮಾಡಿ ಇಡಬೇಕು.—ಪ್ರತಿಯೊಬ್ಬ ಕುಟುಂಬಿಯೂ ಇಟ್ಟಿಗೆಯಿಂದಲಾಗಲಿ ಕಲ್ಲಿನಿಂದಲಾಗಲಿ ತನ್ನ ವಾಸಕ್ಕೆ ಒಂದು ಅನುಕೂಲವಾದ ಮನೆಯನ್ನು ಸಂಪಾದಿಸಿಕೊಳ್ಳಲು ಪ್ರಯತ್ನಿಸಬೇಕು.

7. ಕ್ಲುಪ್ತವಾದ ವಾಯಿದೆಯಲ್ಲಿ ಕೈಗೊಂಡಕೆಲಸವನ್ನು ಪೂರಯಿಸಿಕೊಟ್ಟು ತನ್ನ ಮಾತನ್ನು ಉಳಿಸಿಕೊಳ್ಳಬೇಕು.

8. ಆದಾಯ ವೆಚ್ಚಗಳ ಲೆಕ್ಕವನ್ನಿಡಬೇಕು. ಸಂಪಾದಿಸಿದ್ದನ್ನೆಲ್ಲಾ ಖರ್ಚು ಮಾಡಿಬಿಡದೆ ಸಾಧ್ಯವಾದಷ್ಟನ್ನು ಉಳಿಸಬೇಕು, ಲಾಭವಿಲ್ಲದ ಕೆಲಸಕ್ಕೆ ಸಾಲ ಮಾಡಬಾರದು. ದುಂದುವೆಚ್ಚ ಮಾಡಬಾರದು. ಮುಖ್ಯವಾಗಿ ಮದುವೆ ಮುಂಜಿ ಮುಂತಾದ ಪ್ರಸ್ತಗಳಲ್ಲೂ ಶ್ರಾದ್ಧಾದಿ ಕರ್ಮಗಳಲ್ಲೂ ಮಿತಿಮೀರಿ ವೆಚ್ಚಮಾಡಲೇಬಾರದು.—ಮಿತವಾಗಿ ಖರ್ಚುಮಾಡಿ, ಉಳಿಸಿದ ಹಣವನ್ನು ಲಾಭಬರುವ ಬಾಬುಗಳಲ್ಲಿ ವಿನಿಯೋಗಿಸುವುದೇ ಐಶ್ವರ್ಯವಂತನಾಗುವುದಕ್ಕೆ ದಾರಿಯು.

9. ಈಗಿನ ಕಾಲದಲ್ಲಿ ಐಕಮತ್ಯವೂ ಪರಸ್ಪರ ಸಹಾಯವೂ ಇಲ್ಲದೆ ದೊಡ್ಡ ದೊಡ್ಡ ಕೆಲಸಗಳುವುವೂ ಸಾಧ್ಯಗಳಾಗಲಾರವು. ಒಂದೇ ಮನಸ್ಸಿನಿಂದ ಅನೇಕರು ಸೇರಿ ಒಗ್ಗಟ್ಟಾಗಿ ಕೆಲಸಮಾಡಬೇಕು —ಪ್ರತಿಯೊಬ್ಬನೂ ತನ್ನತನ್ನ ದಾರಿಯನ್ನೇ ಹಿಡಿದು ಕೊಂಡು ಹೋಗುವುದಾದರೆ ದೇಶವು ಅಭಿವೃದ್ಧಿಯಾಗುವುದಕ್ಕೆ ಸಾಧ್ಯವಾಗುವುದಿಲ್ಲ.—ಒಟ್ಟು ಗ್ರಾಮಕ್ಕೇನೇ ಉಪಯೋಗಕರವಾದ ಕೆಲಸದಲ್ಲಿ ಆ ಗ್ರಾಮಸ್ಥರು ಪರಸ್ಪರ ವೈಷಮ್ಯಗಳನ್ನು ತೊರೆದು ಒಟ್ಟಾಗಿ ಸೇರಿ ಕೆಲಸವನ್ನು ನಿರ್ವಹಿಸಬೇಕು —ಗ್ರಾಮಸ್ಥರಲ್ಲಿ ಹೆಚ್ಚಾದ ಜನರು ಒಂದು ಒಳ್ಳೆಯ ಕೆಲಸದ ವಿಚಾರದಲ್ಲಿ ಹೀಗೆಯೇ ನಡೆಯತಕ್ಕದ್ದೆಂದು ನಿರ್ಧರಿಸಿದರೆ ತಾನೂ ಅದರಂತೆಯೇ ನಡೆದುಕೊಳ್ಳಬೇಕು.—ಗ್ರಾಮಗಳಲ್ಲಿ ಪರಸ್ಪರ ವಿರೋಧಗಳೂ ವ್ಯಾಜ್ಯಗಳೂ ಹುಟ್ಟಿದರೆ ಇಬ್ಬರಿಗೂ ಕಷ್ಟನಷ್ಟಗಳು ಉಂಟಾಗುತ್ತವೆ. ಕಡೆಗೆ ಉಭಯತ್ರರೂ ಕೆಟ್ಟುಹೋಗುವುದೂ ಉಂಟು.—ಗ್ರಾಮಸ್ಥರ ವ್ಯಾಜ್ಯಗಳೆಲ್ಲವೂ ಸಾಧ್ಯವಾದ ಮಟ್ಟಿಗೆ ಗ್ರಾಮದಲ್ಲಿಯೇ ಫೈಸಲಾಗುವಂತೆ ಮಾಡಿಕೊಳ್ಳಬೇಕು. ಅವಶ್ಯಕವಿದ್ದಲ್ಲಿ ಪಂಚಾಯಿತರನ್ನು ಏರ್ಪಡಿಸಿಕೊಳ್ಳಬೇಕು.

10. ಅನೇಕರು ಸೇರಿ ಮಾಡುವ ಕೆಲಸವು ನೆರವೇರಬೇಕಾದರೆ ಎಲ್ಲರೂ ಒಂದು ಕಟ್ಟಿಗೆ ಒಳಗಾಗಬೇಕು.—ತನ್ನ ಮೇಲ್ಪಟ್ಟವರಿಗೆ ವಿಧೇಯನಾಗಿರುವುದನ್ನೂ ತನ್ನ ಕೈಕೆಳಗಿನವರನ್ನು ತನ್ನ ಹತೋಟಿಯಲ್ಲಿಟ್ಟುಕೊಂಡಿರುವುದನ್ನೂ ಕಲಿತುಕೊಳ್ಳಬೇಕು.

11. ಯಾವ ಕೆಲಸ ನೆರವೇರಬೇಕಾದರೂ ಚಾತುರ್ಯವೂ ವಿನಯವೂ ಅವಶ್ಯಕ. ಯಾವಾಗಲು ಸಂತೋಷಿಯಾಗಿದ್ದುಕೊಂಡು ಇತರರೊಡನೆ ಮರ್ಯಾದೆಯಿಂದ ಮಾತನಾಡಬೇಕು.

12. ನೆರೆಹೊರೆಗಳ ಸಮಾಚಾರಗಳನ್ನು ತಿಳಿಯುತ್ತಿರಬೇಕು. ದೇಶಾಂತರಗಳಲ್ಲಿ ನಡೆಯುವ ಸಮಾಚಾರಗಳನ್ನೂ ಸಾಧ್ಯವಾದ ಮಟ್ಟಿಗೆ ತಿಳಿಯುತ್ತಿರಬೇಕು. ಇತರರನ್ನು ಕಂಡಾಗಲೂ ಪ್ರಯಾಣಮಾಡುವಾಗಲೂ ಹೊಸಹೊಸ ಸಂಗತಿಗಳನ್ನು ಗ್ರಹಿಸುತ್ತಿರಬೇಕು. ವರ್ತಮಾನ ಪತ್ರಿಕೆಗಳನ್ನು ಸ್ವತಃ ಓದುವುದರಿಂದ ಅಥವಾ ಓದಿಸಿ ಕೇಳುವುದರಿಂದ ಲೋಕದ ಸಮಾಚಾರಗಳನ್ನೂ ತಿಳಿದುಕೊಳ್ಳಬಹುದು. ನಮಗಿಂತಲೂ ಹೆಚ್ಚು ನಾಗರಿಕ ಸ್ಥಿತಿಯಲ್ಲಿರುವ ದೇಶದ ಜನರು ಹೇಗೆ ಬಾಳುತ್ತಾರೆ, ಹೇಗೆ ಕೆಲಸಮಾಡುತ್ತಾರೆ, ಅವರ ನಡತೆ ಹೇಗಿದೆ, ಇದೆಲ್ಲವನ್ನೂ ತಿಳಿದುಕೊಂಡು ಅವರ ಸುಗುಣಗಳನ್ನು ಶ್ರದ್ಧೆಯಿಂದ ಆಚರಿಸಬೇಕು.

ಗ್ರಾಮಾರೋಗ್ಯ ನಿಯಮಗಳು.

ಆರೋಗ್ಯರಕ್ಷಣಾ ವಿಧಿ.

ಗ್ರಾಮ ನಿವಾಸಿಗಳೆಲ್ಲರೂ ಆಚರಿಸಬೇಕಾದ ವಿಧಿಗಳು.

1. ಸ್ನಾನಮಾಡಿ ಮೈಯನ್ನು ಚೊಕ್ಕಟವಾಗಿ ಇಟ್ಟುಕೊಳ್ಳಬೇಕು. ಬಟ್ಟೆಗಳನ್ನು ಚೊಕ್ಕಟವಾಗಿ ಒಗೆದು ಉಪಯೋಗಿಸಬೇಕು —ತನ್ನ ಮನೆಯವರು ತನ್ನ ಮಾತನ್ನು ಮೀರದೇ ಇರತಕ್ಕ ಇತರರೂ ಸಹಾ ಈ ಪ್ರಕಾರ ಸ್ನಾನಮಾಡಿ ಒಗೆದ ಮಡಿ ಬಟ್ಟೆಯನ್ನು ಹಾಕಿಕೊಳ್ಳಬೇಕೆಂದು ಎಲ್ಲರಿಗೂ ಒತ್ತಿ ಹೇಳಬೇಕು —ಹಾಸಿಗೆ ಹೊದ್ದಿಕೆಗಳನ್ನೂ, ನೀರಿಗೆ ಹಾಕದ ಇತರ ಬಟ್ಟೆಬರೆಗಳನ್ನೂ ಪದೇಪದೆ ಬಿಸಿಲಿಗೆ ಹಾಕುತ್ತಿರಬೇಕು.

2. ಕುಡಿಯುವ ನೀರನ್ನು ಸಾಧ್ಯವಾದಮಟ್ಟಿಗೂ ಚೊಕ್ಕಟವಾದ ಬಾವಿಗಳಿಂದಲೋ ಬಿಲಮುಗಳಿಂದಲೋ ತರಿಸಬೇಕು.—ಸಿಹಿನೀರಿನ ಕೆರೆ, ಬಾವಿ, ಕೊಳ ಮತ್ತು ಇತರ ಜಲಾಶ್ರಯಗಳು, ಇವುಗಳಲ್ಲಿ ನೀರು ಕೆಡಿಸದಂತೆ ನೋಡಿಕೊಳ್ಳಬೇಕು.—ಎಲೆಗಳು ಅಥವಾ ಇತರ ಕೊಳೆಯುವ ಪದಾರ್ಥಗಳು ಆ ನೀರಿಗೆ ಸೇರದ ಹಾಗೆ ನೋಡಿಕೊಳ್ಳಬೇಕು. ಅದರಲ್ಲಿ ಪಾತ್ರೆಯನ್ನು ತೊಳೆಯಬಾರದು, ಬಟ್ಟೆಯನ್ನು ಒಗೆಯಬಾರದು.—ದನಕರುಗಳ ನೀರಿಗೆ ಪ್ರತ್ಯೇಕವಾದ ಏರ್ಪಾಡನ್ನು ಮಾಡಿಕೊಳ್ಳಬೇಕು.—ಆರೋಗ್ಯಕರವಲ್ಲದ, ಸುಲಭದಲ್ಲಿ ಜೀರ್ಣವಾಗದ ಮತ್ತು ಚೆನ್ನಾಗಿ ಬೇಯದೆ ಇರುವ ಆಹಾರವನ್ನು ಸೇವಿಸಬಾರದು.

3. ಮಂಡಿಮುಚ್ಚುವ ಮಟ್ಟಿಗಾದರೂ ಮೈತುಂಬ ಬಟ್ಟೆ ಹಾಕಿಕೊಳ್ಳಬೇಕು. ಚಳಿಗಾಲದಲ್ಲಿ ಬೆಚ್ಚಗಿರುವ ಬಟ್ಟೆಗಳನ್ನು ಹಾಕಿಕೊಳ್ಳಬೇಕು. ಬೇಸಿಗೆಯಲ್ಲಿಯೂ ಮಳೆಯಲ್ಲಿಯೂ ಬಿಸಿಲಿಗೂ ಮಳೆಗೂ ಬರೀ ತಲೆ ಬಿಟ್ಟುಕೊಂಡು ಕೆಲಸ ಮಾಡಬಾರದು.

4. ಎತ್ತರವಾಗಿರುವ ಮತ್ತು ತೇವವಿಲ್ಲದ ಜಾಗದಲ್ಲಿ ಕ್ರಮವಾದ ಪಾಯ ಹಾಕಿ ಮನೆ ಕಟ್ಟಬೇಕು. ನೀರುನಿಲ್ಲುವಕೆರೆಯಲ್ಲಾಗಲಿ ಹಳ್ಳದ ಸಮೀಪದಲ್ಲಾಗಲಿ ಗದ್ದೆಯ ಹತ್ತಿರವಾಗಲಿ ಮನೆ ಕಟ್ಟಬಾರದು.—ಗಾಳಿಯು ಧಾರಾಳವಾಗಿ ಒಳಗೆಲ್ಲಾ ಬೀಸುವಂತೆ ಮನೆಗೆ ಸಾಕಾದಷ್ಟು ಬಾಗಿಲುಗಳೂ ಕಿಟಕಿಗಳೂ ಇರಬೇಕು.—ಮನೆಯ ಪದಾರ್ಥಗಳನ್ನು ಅವವುಗಳ ಸ್ಥಳಗಳಲ್ಲಿ ಇಟ್ಟಿರಬೇಕು; ಅವುಗಳ ಮೇಲೆ ಸೇರುವ ಧೂಳನ್ನು ಪದೇಪದೆ ಚೆನ್ನಾಗಿ, ಒರಸುತ್ತಿರಬೇಕು; ಮೂಲೆಮೂಲೆಗಳಲ್ಲಿ ಕಸವು ಕೊಂಚವೂ ಸೇರಿರಕೂಡದು.—ಮನೆಯಲ್ಲಾಗಲಿ ಮನೆಯ ಸಮೀಪದಲ್ಲಾಗಲೀ ಯಾವ ಪದಾರ್ಥವೂ ಕೊಳೆಯದಂತೆ ನೋಡಿಕೊಳ್ಳಬೇಕು.

5. ದನ ಕುರಿ ಮುಂತಾದುವುಗಳನ್ನು ಬೇರೆ ಕೊಟ್ಟಿಗೆಗಳಲ್ಲಿ ಕಟ್ಟಬೇಕು; ಅವುಗಳು ವಾಸದ ಮನೆಗೆ ಸ್ವಲ್ಪ ದೂರವಾಗಿರಬೇಕು ಕೊಟ್ಟಿಗೆಯ ನೆಲವು ತೇವವಿಲ್ಲದೆ ಚೊಕ್ಕಟವಾಗಿಟ್ಟಿರಬೇಕು.—ಗಂಜಳವು ಒಂದು ಗುಂಡಿಗೆ ಹರಿದು ಹೋಗುವಂತೆ ಇರಬೇಕು. ಅದನ್ನು ಗೊಬ್ಬರಕ್ಕಾಗಿ ಉಪಯೋಗಿಸಬೇಕು; ತಿಪ್ಪೆಯನ್ನು ಗುಂಡಿಗೆ ಹಾಕಿ ವಾರಕ್ಕೊಂದಾವರ್ತಿ ಹೊಸಮಣ್ಣನ್ನೋ ತರಗೆಯನ್ನೋ ಅದರಮೇಲೆ ಹರಡುತ್ತ ಬರಬೇಕು.

6. ಮನೆಯೊಳಗೇ ಆಗಲಿ ಸಮೀಪದಲ್ಲೇ ಆಗಲಿ ಕಸ, ಬೂದಿ, ಎಂಜಲು ಮುಂತಾದುವು ಸೇರಕೂಡದು ಮನಸ್ಸು ಬಂದಂತೆ ಬೀದಿಯಲ್ಲಿಯೇ ಆಗಲಿ ಜನರು ತಿರುಗಾಡುವ ಇತರ ಸ್ಥಳಗಳಲ್ಲಿಯೇ ಆಗಲಿ ಅವುಗಳನ್ನು ಬಿಸಾಡಕೂಡದು. ಅವುಗಳಿಗಾಗಿ ಏರ್ಪಡಿಸಿದ ಜಾಗಗಳಲ್ಲಿ ಅವನ್ನು ಹಾಕಿ ಆಗಾಗ ಅವುಗಳನ್ನು ಹೊರಗೆ ಸಾಗಿಸುತ್ತಿರಬೇಕು —ಸೊಳ್ಳೆ, ಹುಳು, ಹುಪ್ಪಟೆ, ನೊಣಗಳು ಸೇರದಂತೆ ಮನೆಯನ್ನು ಒಳಗೂ ಹೊರಗೂ ಚೊಕ್ಕಟವಾಗಿ ಇಟ್ಟುಕೊಳ್ಳಬೇಕು.

7. ಕಕ್ಕಸುಗಳಿಲ್ಲದ ಕಡೆ ಜನರು ಊರಿಂದಾಚೆ ದೂರವಾಗಿ ಹೋಗಬೇಕು ಬೀದಿಗಳಲ್ಲಿಯೇ ಆಗಲಿ, ಜನರು ಓಡಾಡುವ ಕಡೆಗಳಲ್ಲಿಯೇ ಆಗಲಿ ಮನೆಗೆ ನೂರು ಗಜಗಳಿಗೆ ಕಡಮೆಯಾಗಿರುವ ಯಾವ ಪ್ರದೇಶದಲ್ಲಿಯೇ ಆಗಲಿ ಜನರು ಹೇಸಿಗೆಯನ್ನು ಮಾಡಕೂಡದು. ಕಕ್ಕಸಿಗಾಗಿ ಆಳವಾದ ಹಳ್ಳಗಳನ್ನು ಉಪಯೋಗಿಸುವ ದುರ್ಬಾಲನ್ನು ಒಡನೆಯೇ ಬಿಡಬೇಕು. ಮಲವಿಸರ್ಜನೆಯನ್ನು ಮಾಡಿದಾಗ, ಮುಚ್ಚಿಹೋಗುವಂತೆ ಅದರಮೇಲೆ ಒಣಗಿದ ಮಣ್ಣನ್ನೋ ಬೂದಿಯನ್ನೋ ಹಾಕಬೇಕು

8. ಬಚ್ಚಲನೀರು ಮನೆಯೊಳಗೇ ಆಗಲಿ ಹೊರಗೇ ಆಗಲಿ ನೆಲದಲ್ಲಿ ನಿಲ್ಲಬಾರದು ಚರಂಡಿಗಳು ಕಟ್ಟದೆಯೇ ಇರುವ ಊರುಗಳಲ್ಲಿ ಬಚ್ಚಲ ನೀರಿಗೆ ಎರಡಡಿಗಳಿಗಿಂತಲೂ ಆಳವಿಲ್ಲದ ಗಾರೆಯ ತೊಟ್ಟಿಗಳನ್ನಾಗಲಿ ಪಾತ್ರೆಗಳನ್ನಾಗಲಿ ಏರ್ಪಡಿಸಿಕೊಂಡು ಅವುಗಳಿಂದ ಆ ನೀರನ್ನು ವಾರಕ್ಕೊಂದಾವರ್ತಿಯಾದರೂ ದೂರವಾದ ಸ್ಥಳಕ್ಕೆ ಸಾಗಿಸಬೇಕು —ಅನೇಕ ಗ್ರಾಮಗಳಲ್ಲಿ ಬಚ್ಚಲ ನೀರನ್ನು ತೊಟ್ಟಿಗಳಿಂದ ಸಾಗಿಸುವುದು ಜಾತಿಪದ್ಧತಿಗೆ ವಿರುದ್ಧವೆಂದು ಜನರು ಹಿಂಜರಿಯುವುದೂ ಉಂಟು ಅಂಥ ಸ್ಥಳಗಳಲ್ಲಿ ಅದಕ್ಕಾಗಿ ಪ್ರತ್ಯೇಕವಾದ ಏರ್ಪಾಡನ್ನು ಮಾಡಬೇಕು.

9. ಸಣ್ಣ ಗ್ರಾಮವಾದರೆ ಅದಕ್ಕೆ ಒಂದು ಫರ್ಲಾಂಗು (220 ಗಜ), ದೊಡ್ಡ ಗ್ರಾಮವಾದರೆ ಅದಕ್ಕೆ ಎರಡು ಫರ್ಲಾಂಗು (ಕಾಲುಮೈಲಿ) ಫಾಸಲೆಯೊಳಗಿರುವ ಖಾಲಿ ಜಾಗಗಳಲ್ಲಿ ಜೌಗೇರದಂತೆಯೂ ಪೊದೆಗಳು ಬೆಳೆಯದಂತೆಯೂ ನೋಡಿ ಕೊಳ್ಳಬೇಕು.—ಮೇಲ್ಕಂಡ ಫಾಸಲೆಯಲ್ಲಿಯೂ ಗ್ರಾಮದೊಳಗೂ ಇರುವ ಗುಂಡಿಗಳಲ್ಲಿಯೂ ತಗ್ಗು ಪ್ರದೇಶಗಳಲ್ಲಿಯೂ ನಿಲ್ಲುವ ನೀರನ್ನು ಹೊರಗೆ ಹರಿದುಹೋಗುವಂತೆ ಮಾಡಬೇಕು. ಅಥವಾ ಅವುಗಳನ್ನು ಮಣ್ಣಿನಿಂದ ಮುಚ್ಚಬೇಕು.

10. ರಸ್ತೆಗಳಿಗೆ ಜಲ್ಲಿ, ಮರಳು ಅಥವಾ ಗ್ರಾವಲ್ಲು, ಇವುಗಳನ್ನು ಹಾಕಿ ಚೆನ್ನಾಗಿ ತಯಾರು ಮಾಡಬೇಕು. ಪಕ್ಕಗಳಲ್ಲಿ ಕಲ್ಲುಚಪ್ಪಡಿಯಿಂದಲಾಗಲಿ ಇಟ್ಟಿಗೆ ಗಾರೆಯಿಂದಲಾಗಲಿ ಚರಂಡಿಯನ್ನು ಚೆನ್ನಾಗಿ ಕಟ್ಟಬೇಕು.

11. ಹಲಗೆಯಮೇಲೆ, ಇಲ್ಲವೆ ಮಂಚದಮೇಲೆ, ಎಂತೂ ನೆಲಕ್ಕೆ ಸ್ವಲ್ಪ ಎತ್ತರವಾದಲ್ಲಿಯೇ ಮಲಗಬೇಕು; ಗಾಳಿ ಚೆನ್ನಾಗಿ ಬೀಸದೆ ಇರುವ ಕೊಠಡಿಯಲ್ಲಾಗಲಿ, ಜನರ ಸಂದಣಿಯಲ್ಲಾಗಲಿ ಮಲಗಬಾರದು.—ಮನೆಯಲ್ಲಿ ನೆಲದ ಮೇಲಾಗಲಿ, ಗೋಡೆಯಮೇಲಾಗಲಿ ಎಂದಿಗೂ ಉಗುಳಬಾರದು.—ಶಕ್ತಿಗೆ ತಕ್ಕಷ್ಟಿಗೆ ದಿನಾಗಲೂ ಅಂಗಸಾಧನೆಯನ್ನು ಮಾಡಬೇಕು ಆದಷ್ಟು ಹೊತ್ತು ನಿರ್ಮಲವಾದ ಗಾಳಿಯಿರುವ ಬೈಲಿನಲ್ಲಿ ಕಾಲವನ್ನು ಕಳೆಯಬೇಕು.

12. ಸಿಡುಬು ಏಳದಂತೆ ಸಿಡುಬನ್ನು ಹಾಕಿಸಿಕೊಳ್ಳಬೇಕು. ಇಲಿ ಬಿದ್ದ ಕೂಡಲೆ ಮನೆಯನ್ನು ಬಿಟ್ಟು ಪ್ಲೇಗಿನ ಬಾಧೆಯಿಂದ ತಪ್ಪಿಸಿಕೊಳ್ಳಬಹುದು. ಬಿಸಿಯಾದ ಊಟವನ್ನು ಮಾಡಿ ಮರಳಿಸಿದ ನೀರನ್ನು ಕುಡಿಯುವುದರಿಂದ ವಾಂತಿಭೇದಿರೋಗದ ಸೋಂಕನ್ನು ತಪ್ಪಿಸಿಕೊಳ್ಳಬಹುದು. ಸೊಳ್ಳೆಗಳು ಸೇರದ ಹಾಗೂ ನೆಲಕ್ಕೆ ಜೌಗು ಏರದಹಾಗೂ ನೋಡಿಕೊಂಡರೆ ಚಳಿಜ್ವರದಿಂದ ತಪ್ಪಿಸಿಕೊಳ್ಳಬಹುದು. ಬಂದ ಜ್ವರವನ್ನು ವಾಸಿಮಾಡಿಕೊಳ್ಳುವುದಕ್ಕೆ ಕ್ವಿನೈನನ್ನು ಉಪಯೋಗಿಸಬೇಕು.

ಬಾತ್ಮಿದಾರರಿಗೆ ನೋಟೀಸ್.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜಾಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸವನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಜಾಗಾ ಕೊಡಲಾರೆವು.

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲುಪುವಂತೆ ಕಳುಹಬೇಕು. ಮಂಗಳವಾರ, ಬು

ವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ. ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ.

ಕರೆಸ್ಪಾಂಡೆನ್ಸ್.

ಪರಸ್ಪರ ಸಹಾಯಸಂಘಗಳು.

ಅಯ್ಯಾ,—ಪರಸ್ಪರ ಸಹಾಯಸಂಘಗಳಿಂದ ಉಂಟಾಗುತ್ತಿರುವ ಪ್ರಯೋಜನವು ಗ್ರಾಮಾಂತರಗಳಲ್ಲಿರುವ ಕೆಲವರಿಗೆ ಚೆನ್ನಾಗಿ ತಿಳಿಯದೆ ಇದೆ ಎನ್ನುವ ಭಾಗ ಅವರುಗಳು ಮಾತನಾಡುತ್ತಿರುವುದರಿಂದ ಅಂಥವರುಗಳು ಗಮನಿಸಲು ಕೆಲ ವಿಷಯಗಳನ್ನು ಈ ಕೆಳಗೆ ಅರಿಕೆ ಮಾಡಿರುವೆನು.

ನಮ್ಮ ಪೂರ್ವಿಕರು ಅನೇಕ ಧರ್ಮಕಾರ್ಯಗಳನ್ನು ಮಾಡುತ್ತಿದ್ದರೆನ್ನುವುದಕ್ಕೆ ಭಾವಿ, ಕೆರೆ, ತೋಪು, ಛತ್ರ, ಮೊದಲಾದ ಎಷ್ಟೋ ನಿದರ್ಶನಗಳಿವೆ. ಅವರುಗಳಿಗೆ ಧರ್ಮಲಾಭದ ಮೇಲೆ ಅಪೇಕ್ಷೆ ಹೊರತು ತಮ್ಮ ಧನದ ಮೇಲಿನ ಉತ್ಪತ್ತಿಯ ಗಣನೆಯಿಲ್ಲ. ಪ್ರಕೃತ ತಿಪಟೂರಿನಲ್ಲಿ ಅನೇಕ ಧರ್ಮಾತ್ಮರು ಸೇರಿ ಸಾವಿರಾರು ರೂಪಾಯಿಗಳ ಖರ್ಚಿನಲ್ಲಿ ವೀರಶೈವಾಶ್ರಮವೆಂಬ ವಿದ್ಯಾಸದನವನ್ನು ಏರ್ಪಡಿಸಿ ಬಡವಿದ್ಯಾರ್ಥಿಗಳಿಗೆ ಉಚಿತವಾಗಿ ವಿದ್ಯಾದಾನ ಮಾಡುತ್ತಿರುವ ವಿಷಯ ಸರ್ವರಿಗೂ ತಿಳಿದೇ ಇದೆ. ಈ ಮಹನೀಯರುಗಳಿಗೂ ಲಭ್ಯವಾಗುವುದು ಧರ್ಮವೊಂದೇ ಅಲ್ಲದೆ ವ್ಯಯಮಾಡಿರುವ ಧನವಾಗಲಿ ಲಾಭ (ಬಡ್ಡಿ) ವಾಗಲಿ ದೊರೆಯುವುದುಂಟೇ?

ಪರಸ್ಪರ ಸಹಾಯಸಂಘಗಳಾದರೋ ಜನರಿಂದ ಪಡೆದಹಣವನ್ನು ಭದ್ರಪಡಿಸಿ ಆ ಮೊಬಲಗಿಗೆ ಬಡ್ಡಿ ರೂಪವಾಗಿ ಲಾಭವನ್ನು ಕೊಟ್ಟು ಬಡವರಿಗೆ ಕಷ್ಟಕಾಲದಲ್ಲಿ ಅಲ್ಪವ್ಯಯವಾಗಿ ಹಣವನ್ನು ಕೊಟ್ಟು ಅವರ ಸಮೆಯುವನ್ನು ನೀಗಿಸುತ್ತವೆ. ಸಾಹುಕಾರರಲ್ಲಿ ಬಡವರು ಹಣ ಯಾಚನೆಮಾಡುವ ವೇಳೆ ತೋರಿಸುವ ನಿವೃತ್ತಿಯು ಅನುಭವದಿಂದಲ್ಲದೇ ತಿಳಿಯಬೇಕು! ಇಷ್ಟು ಅಲ್ಲದೆ ಬಡ್ಡಿಯ ಕೆಲಭಾಗದಲ್ಲಿ ಸಂಘದಲ್ಲಿ ಕೆಲಸಮಾಡುವ ಬಡವರ ಕುಟುಂಬ ಪೋಷಣೆಯೂ ಆಗಿ ತಮ್ಮ ಗ್ರಾಮಗಳ ಅಭಿವೃದ್ಧಿಗಾಗಿ ಹಣವನ್ನೂ ಸಿದ್ಧಮಾಡಿಕೊಂಡು ತಕ್ಕ ಸಮಯದಲ್ಲಿ ವಿನಿಯೋಗಮಾಡುವರು. ಈ ಸಂಘಗಳಿಂದ ಜನರು ಇರಿಸಿರುವ ಹಣಕ್ಕೆ ಲೋಪವಿಲ್ಲದೆಯೂ, ಬಡ್ಡಿ ರೂಪವಾದ ಲಾಭವೂ ದೊರೆಕುವುದಲ್ಲದೆ ಧರ್ಮವೂ ಸಂಪಾದನೆಯಾಗುತ್ತಿರುವುದನ್ನು ತಿಳಿಯದೆ ತಮ್ಮ ಹಣಕ್ಕೆ ಹೆಚ್ಚು ಬರುವುದಿಲ್ಲವೆಂದೂ, ಈ ಸಂಘಗಳಿಂದ ಅನ್ಯೇನೂ ಪ್ರಯೋಜನವಾಗುವುದಿಲ್ಲವೆಂದೂ ಮಾತನಾಡುತ್ತಿರುವ ಜನರಿಗೆ ಆಯಾ ಸ್ಥಳದ ತಿಳುವಳಿಕೆಯುಳ್ಳ ದೊಡ್ಡ ಮನುಷ್ಯರು ಬೋಧಿಸಿ ಈ ಸಂಘಗಳ ಅಭಿವೃದ್ಧಿಗೆ ಸಹಾಯಮಾಡುತ್ತಾರೆಂದು ನಂಬಿರುವೆನು.

ಹೀಗೆ ತಮ್ಮ ಹಣಕ್ಕೆ ಲೋಪಬಾರದ ರೀತಿ ಧರ್ಮ ಸಂಪಾದಿಸಲು ಮಾರ್ಗ ತೋರಿಸಿ ಕೊಟ್ಟು ನಡಿಸುತ್ತಿರುವ ನಮ್ಮ ಮಹಾರಾಜಾ ಸರ್ಕಾರದವರಿಗೆ ನಾವು ಎಷ್ಟು ವಂದನೆಗಳನ್ನು ಅರ್ಪಿಸಿದರೂ ಸಾಲದ್ದಾಗಿರುತ್ತೆ.

ಒಬ್ಬ ಗ್ರಾಮವಾಸಿ.

ಗ್ರಾಮಾಧಿಕಾರಿಗಳು ದಾಂಧಲೆ ಮಾಡಿದರಂತೆ.

ಅಯ್ಯಾ,—ಶಿಡ್ಲಘಟ್ಟದ ತಾಲ್ಲೂಕ್ ಸಾದಲಿ ಹೋಬಳಿ ಉಪ್ಪಕುಂಟೆ ಹಳ್ಳಿ ವಾಸಿಗಳಾದ ಮುನಿವೆಂಕಟಪ್ಪ ವಗೈರೆಯರು ಅರಿಕೆಮಾಡುವದೇನಂದರೆ ನಮ್ಮ ಗ್ರಾಮದಲ್ಲಿ ಕಳೆದ ಮೇ 17 ನೇ ತಾರೀಖಿನಲ್ಲಿ ನಡೆದ ನಿಶ್ಯಬ್ದವಾದ ದೊಂಬಿಯನ್ನು ತಿಳಿಸುತ್ತೇವೆ. ನಮ್ಮ ಗ್ರಾಮಕ್ಕೆ ಪೂರ್ವದಲ್ಲಿ ಬಟಾಯಿಸಾಗುವಳಿ ನಡೆಯುತ್ತಿದ್ದಾಗ ತೋಟಿ ಎನ್ನಿಸಿಕೊಂಡಿದ್ದ ಕೊಂಡ ಎಂಬುವನು ಕೆಲವು ದಿನಗಳು ನೌಕರಿ ಮಾಡುತ್ತಿದ್ದು 49 ವರ್ಷಗಳ ಕೆಳಗೆ ಮೃತಪಟ್ಟನು. ಆ ಲಾಗಾಯ್ತು ಇದುವರೆಗೆ ನಮ್ಮ ಗ್ರಾಮಕ್ಕೆ ತೋಟಿ ನೌಕರನಾಗಿ ಒಂದು ದಿನವಾದರೂ ಹಗಲೇ ಆಗಲಿ ರಾತ್ರಿಕಾವಲಿಗೇ ಆಗಲಿ ನಮ್ಮ ಗ್ರಾಮದ ಸರ್ಕಾರಿ ನೌಕರಿಮಾಡಿದ್ದು ನಾವು ಕಾಣೆವು. ನಮ್ಮ ಗ್ರಾಮ ಸಾದಲೀಗೆ ಸಮೀಪದಲ್ಲಿ ಇರುವ ಸಬಬು ಮೇಲ್ಕಂಡ ತೋಟಿ ಕೊಂಡನ ದಾಯಾದಿ ಸಜಾ ಅನುಭವಿಸಿ ಸರ್ಕಾರಕ್ಕೆ ಕೇಡಿ ಮನುಷ್ಯ ಅನ್ನಿಸಿಕೊಂಡಿರುವ ತೋಟಿ ವೆಂಕಟರಮಣನೆಂಬುವನನ್ನು ಸಾದಲಿ ಗ್ರಾಮಾಧಿಕಾರಿಗಳು ತೋಟಿಯಾಗಿ ನೇಮಿಸಿಕೊಂಡು ಸದರಿ ಗ್ರಾಮದಲ್ಲಿ ನೌಕರಿ ತಗೆದುಕೊಳ್ಳುವುದಲ್ಲದೆ ಸದರಿ ವೆಂಕಟರಮಣನಿಂದ ಸಾದಲಿ ಗ್ರಾಮಾಧಿಕಾರಿಗಳಿಗೆ ನಡೆಯುವ ಸ್ವಂತ ಜರಾಯತಿ ಕೆಲಸಗಳಿಗೆ ಸದರಿ ತೋಟಿಗನು ಹೆಚ್ಚಾದ ಸಹಾಯ ನಡಿಸುವುದರೊಳಗೆ ಸಂಪೂರ್ಣವಾಗಿ ತೃಪ್ತಿಪಟ್ಟು ನಮ್ಮ ಗ್ರಾಮದಿಂದ ಸದರಿ ತೋಟಿಗೆ ಮಿರಾಸಿ ಹಕ್ಕು ಸಂಪಾದಿಸಿಕೊಡಬೇಕೆಂದು ತೋಟಿಯಿಂದ ಅರ್ಜಿಕೊಡಿಸಿ ನಮ್ಮಗಳಿಗೆ ಸಮಕ್ಷ ಮಾಡಿಸಿ ಸರ್ಕಾರದವರು ನ್ಯಾಯಾನ್ಯಾಯ ವಿಮರ್ಶೆಮಾಡುವಷ್ಟರೊಳಗೆ ಸಾದಲಿ ಗ್ರಾಮಾಧಿಕಾರಿಗಳು, 3 ಜನ ತಳವಾರರು, ಮಿರಾಸಿ ಹಕ್ಕು ಸಂಪಾದಿಸಿಕೊಳ್ಳುವ ತೋಟಿ, ಒಬ್ಬ ತೈನಾತಿ, ಇವರುಗಳೆಲ್ಲರೂ ಒಟ್ಟಾಗಿ ಸೇರಿ ಮೇಲ್ಕಂಡ ತಾರೀಖಿನಲ್ಲಿ 10 ಘಂಟೆ ಸಮಯದೊಳಗೆ ನಮ್ಮ ಗ್ರಾಮಕ್ಕೆ ಬಂದು ಮುತ್ತಿಗೆ ಹಾಕಿ ಸದರಿ ತೈನಾತಿಯವನು ರೈತರ ಮೇಲೆ ಬಿದ್ದು ಮನಸ್ಸೀ ಮಾತುಗಳಿಂದ ಅವಮಾನವಾದ ಗಲಾಟೆ ನಡಿಸಲಾಗಿ ನಮ್ಮ ಗ್ರಾಮದಲ್ಲಿ ಒಬ್ಬರಾದರೂ ಓದುಬರಹ ಇಲ್ಲದ್ದರಿಂದ ಸದರಿ ಬಾಬಿನ ರಿಕಾರ್ಡು ನಿಜಸ್ಥಿತಿ ಸಾದಲೀಗೆ ಹೋಗಿ ವಿದ್ಯಾವಂತರಿಂದ ನಿಜಸ್ಥಿತಿ ತಿಳಿದುಕೊಂಡು ಬರಬೇಕೆಂತ ಎತ್ನಿಸಲು ನೌಕರರನ್ನು ನಾಲ್ಕು ದಿಕ್ಕಿನಲ್ಲಿಯೂ ಪಹರೆ ಇಟ್ಟು ಜನಗಳನ್ನು ಆಚೆ ಈಚೆ ಹೋಗದಂತೆ ಭದ್ರಪಡಿಸಿಕೊಂಡು ನ್ಯಾಯಕ್ಕೆ ವಿರೋಧವಾಗಿ ಹಿಂದಿನ ವರ್ಷದ್ದು ಮತ್ತು ಈ ವರ್ಷದ್ದು ಸಹ 3 ಖಂಡುಗ ಧಾನ್ಯವನ್ನು ಈ ಕ್ಷಾಮಕಾಲದಲ್ಲಿ ಬಲಾತ್ಕಾರದೊಳಗೆ ಸುಲಿಗೆಹೊಡೆದು ಮಿರಾಸಿಯಾಗಿ ಸಾದಲಿ ತೋಟಿಯವನಿಗೆ ಕೊಡಿಸಿದರು.

ಯಾವಾಗ್ಗೂ ಗ್ರಾಮಾಂತರಗಳಲ್ಲಿ ಕೆಲಸಮಾಡತಕ್ಕ ಗ್ರಾಮನೌಕರರಿಗೆ ಮಿರಾಸಿ ಕೊಡಬೇಕಾಗಿದ್ದರೆ ಸರ್ಕಾರದವರು ಬಡ ರೈತರ ಮೇಲೆ ಎಷ್ಟೋ ಧರ್ಮದಿಂದ ಕೊಡಿಸಿಕೊಡುವರು. ಮಿರಾಸಿ ತಗೆದುಕೊಂಡ ನೌಕರನು ಒಂದು ದಿನವಾದರೂ ನಮ್ಮ ಗ್ರಾಮದಲ್ಲಿ ರಾತ್ರಿಕಾವಲು ವಗೈರೆ ಕೆಲಸವನ್ನು ಮಾಡಿದವನಲ್ಲ; ನಮ್ಮ ಗ್ರಾಮಕ್ಕೆ ರಿಜಸ್ಟರುದಾರನಲ್ಲ. ಸರ್ಕಾರದಿಂದ ಯಾವ ವಿಧವಾದ ಆಧಾರ ಹೊಂದದ ಖರ್ ಕೇಡಿ ಆಸಾಮಿಯನ್ನು ಬೇರೆ ಗ್ರಾಮದಲ್ಲಿ ನೌಕರಿಮಾಡಿಸಿಕೊಂಡು, ನಮ್ಮ ಗ್ರಾಮದಲ್ಲಿ ಬಡರೈತರ ಮನೆಗಳ ಬೋಚಿ, ಜೀವನ ನಡೆಯದ ಕಾಲದಲ್ಲಿ ಬಡರೈತರ ಮನೆಗಳು ಹಾಳುಮಾಡಿ ಗ್ರಾಮಾಧಿಕಾರಿಗಳ ಸ್ವಂತಕೆಲಸಕ್ಕೆ ಆಧಾರನಾಗಿರುವ ತೋಟಿಗೆ ಮಿರಾಸಿ ಕೊಡಿಸಿದಾರೆ ಘನವನ್ನೈದ ನಮ್ಮ ಮಹಾರಾಜರವರು ಈಗಿನ ಕಾಲದಲ್ಲಿ ತಮ್ಮ ಮಕ್ಕಳಾದ ನಮ್ಮಗಳಿಗೆ ದುರ್ಭಿಕ್ಷ ಪ್ರಾಪ್ತಿಯನ್ನು ಹೋಗಲಾಡಿಸಬೇಕೆಂದೂ, ಪ್ರಜೆಗಳಿಗೆ ಸುಖವನ್ನೂ ವೃದ್ಧಿಪಡಿಸಬೇಕೆಂದೂ ಎಷ್ಟೋ ಏರ್ಪಾಟುಗಳು ನಡಿಸುತ್ತಲಿದಾರೆ. ಹೀಗಿರುವುದರೊಳಗೆ ಸಾದಲಿ ಗ್ರಾಮದ ಕೆಲವು ಅಕ್ರಮಸಂಘದವರಿಂದ ಮುಂದೆ ನಮಗೆ ಏನೇನು ತೊಂದರೆ ಸಂಭವಿಸುವುದೋ ಎಂದು ಗ್ರಾಮ ಚಿಂತೆ ಇಲ್ಲದೆ ಬೇಯುತ್ತಾ ಇದೆ. ಇದು ಸರ್ಕಾರದವರ ನೋಟೀಸಿಗೆ ಬಂದು ಅವರು ತಮ್ಮ ಮಕ್ಕಳಾದ ನಮ್ಮಗಳನ್ನು ಸಾದಲಿ ಗ್ರಾಮದವರಿಂದ ಯಾವ ವಿಧವಾದ ತೊಂದರೆ ಉಂಟಾಗದಂತೆ ಕಾಪಾಡ್ಯಾರೆಂದು ಪ್ರಾರ್ಥಿಸುತ್ತೇವೆ.

ಉಪ್ಪಕುಂಟೆಹಳ್ಳಿ ಮುನಿವೆಂಕಟ.

[ಬಾತ್ಮಿದಾರರು ಈ ವಿಚಾರಗಳನ್ನು ಕಾಣಿಸಿ ನಮ್ಮ ಡೆಪ್ಟಿ ಕಮಿಷನರವರಿಗೂ ದಿವಾನ್‌ರವರಿಗೂ ಅರ್ಜಿ ಬರೆದುಕೊಂಡರೆ ಅವರು ತನಿಖೆಮಾಡಿ ಕ್ರಮಪಡಿಸುತ್ತಾರೆ.—ಎಡಿ.]

ತಾಲ್ಲೂಕು ವರ್ತಮಾನಗಳು.

ಕಾಶಿ (ಬನಾರಸ್).—ಈಗ ಸುಮಾರು 15-20 ದಿವಸಗಳಿಂದಲೂ ವಿಶೇಷ ಮಳೆ ಬಂದು ಸುಮಾರು 200-300 ಮನೆಗಳು ಬಿದ್ದುಹೋದವು. ಸುಮಾರು 150 ಜನಗಳ ವರಿವಿಗೆ ಮರಣವನ್ನು ಹೊಂದಿದರು. ಗಂಗಾ ಪ್ರವಾಹ ಸಂಪೂರ್ಣವಾಗಿ ಬಂದಿರುತ್ತೆ.—ಈಗ ಸುಮಾರು 6 ನೇ ದಿನ ಅಂದರೆ ಶನಿವಾರ ರಾತ್ರಿ ಅಶಿಘಾಟಿನಲ್ಲಿ ಇರುವ ಒಬ್ಬ ಮಹಂತನ ಮನೆಯ ಮುಂದೆ ಯಜಮಾನನು ಮಲಗಿದ್ದನು. ಇವನ ಸುತ್ತಲು 8-10 ಜನಗಳು ಮಲಗಿದ್ದರು. ಈ ಯಜಮಾನನ ಮೂಗು, ನಾಲಿಗೆ, ಕಣ್ಣು ಇವುಗಳನ್ನು ಕೊಯಿದುಕೊಂಡು ಹೋಗಿರುತ್ತಾರೆ. ಅಲ್ಲಿ ಇರತಕ್ಕವರಿಗೆ ಗೊತ್ತೇ ಇಲ್ಲ.—ಇದೇ ದಿವಸ ಸುಮಾರು 7-8 ಗಂಟೆ ಸಮಯದಲ್ಲಿ ಸೊನಾರುಪುರದ ರಸ್ತೆಯಲ್ಲಿ ಹೋಗುತ್ತಾ ಇದ್ದ ಒಬ್ಬ ಹಿಂದೂಸ್ಥಾನಿಯವನನ್ನು ಯಾರೋ ಚಾಕಿನಿಂದ ಎರಡು ಕಡೆ ಪಕ್ಕದಲ್ಲೂ ತಿವಿದು ಇರುತ್ತಾರೆ ಆಸ್ಪತ್ರೆಯಲ್ಲಿ ಇದಾನೆ. ಇದು ಬಹಳ ದೊಡ್ಡ ರಸ್ತೆ. ನೂರಾರು ಜನಗಳು ಸಂಚಾರಮಾಡುತ್ತಾ ಇದಾರೆ. ಪೋಲೀಸ್ ಸಿಬ್ಬಂದಿಯೂ ಇರುತ್ತೆ.

ಅರಕಲಗೂಡು.—ಈ ಊರಿನಲ್ಲಿ ಈಗ ತಿಂಗಳಿಂದಲೂ ಮಳೆ ವಿಪರೀತವಾಗಿ ಸೋನೆಯಂತೆ ಬರುತ್ತಲಿದೆ. ಬಂದರೂ ಸರಿಯಾಗಿ ಕೆರೆಕಟ್ಟೆಗಳು ತುಂಬಿಲ್ಲ. ಧಾರಣೆವಾಸಿಗಳು ಎಂದಿನಂತೆ ಇವೆ. ದನಕರುಗಳಿಗೆ ಮಳೆಯ ದೆಸೆಯಿಂದ ಹುಲ್ಲು ಇಲ್ಲದೆ ಬಹಳ ತೊಂದರೆಯಾಗಿ ರಾಸುಗಳು ನಾಶಹೊಂದುತ್ತಲಿವೆ.—ರಸ್ತೆಗಳು ಕಾಲುನಡಿಗೆಗಳೂ ಗಾಡಿಗಳೂ ತಿರುಗುವುದಕ್ಕೆ ಆಗದೆ ಬಹಳ ಹೀನಸ್ಥಿತಿಗೆ ಬಂದಿರುತ್ತವೆ.—ಈ ಊರಿಗೆ 5 ಮೈಲಿದೂರದಲ್ಲಿರುವ ಗೊರೂರು, ಹೇಮಾವತಿ ನದಿಯು ಪೂರ್ಣಪ್ರವಾಹಬಂದು 4 ದಿನಗಳಿಂದಲೂ ಜನಗಳ ಸಂಚಾರಕ್ಕೆ ಅನನುಕೂಲವಾಗಿದೆ. ಅಲ್ಲದೆ ಹಾಸನದ ಮಾರ್ಗದಿಂದ ಬರತಕ್ಕ ಅಂಚೆಯು 3 ದಿನದಿಂದ ಈ ಊರಿಗೆ ಬರಲಿಲ್ಲ. ಈ ಊರಿನಿಂದ ಹೋಗತಕ್ಕ ಟಪ್ಪಾಲನ್ನು ಹೊಳೆನರಸೀಪುರದ ಮಾರ್ಗವಾಗಿ ರವಾನೆಮಾಡಿದಾರೆ. ಆದರೆ ಇಲ್ಲಿಗೆ ಬರತಕ್ಕ ಮೆಯಿಲ್ ಬಾರದೆ ಜನಗಳಿಗೆ ತುಂಬಾ ತೊಂದರೆಯಾಗಿದೆ. ಸರ್ಕಾರದವರು ಈ ನದಿಗೆ ಸೇತುವೆಯನ್ನು ಕಟ್ಟಿಸುವರೆಂಬ ವದಂತಿಯು ಈಗ ಎರಡು ವರುಷಗಳಿಂದ ಇದೆ. ಆದರೆ ಇದರ ವಿಷಯದಲ್ಲಿ ಯಾವದೊಂದು ಚಿಹ್ನೆಯೂ ಕಂಡುಬಂದಿಲ್ಲ. ಈಗಲಾದರೂ ಸರ್ಕಾರದವರು ಜನಗಳಿಗೆ ಅನುಕೂಲ ಮಾಡಿಕೊಡುವರೆಂದು ಪಾರ್ಥಿಸುತ್ತೇವೆ.

ಚನ್ನರಾಯಪಟ್ಟಣ.—ಮಳೆ ಸುತರಾಂ ಆಗಿಲ್ಲ. ಹೊಲ, ಗದ್ದೆಗಳಲ್ಲಿ ಹಾಕಿರುವ ಪೈರುಗಳೆಲ್ಲಾ ಒಣಗಿಹೋಗುತ್ತಾ ಇವೆ. ನಮ್ಮ ಅಮಲ್ದಾರ್ ಮ॥ ಸುಂದರರಾಜಯ್ಯಂಗಾರ್ರವರಿಗೆ ಆಲೂರಿಗೆ ವರ್ಗವಾಗಿ ಅವರ ಸ್ಥಾನಕ್ಕೆ ಮ॥ ಹೈದರಲ್ಲಿಖಾನ್‌ರವರು ದಯಮಾಡಿರುತ್ತಾರೆ. ಮ॥ ಸುಂದರರಾಜಯ್ಯಂಗಾರ್ರವರಿಗೆ ಇಲ್ಲಿನ ತಾಲ್ಲೋಕು ಅಧಿಕಾರಿಗಳೆಲ್ಲಾ ಸೇರಿ ನೌಕರಮಾನೇರನ್ನೆಲ್ಲಾ ಬರಮಾಡಿಕೊಂಡು ಸಭೆ ನಡಿಸಿ ಡಿ. ಪಿ. ಡಬ್ಲ್ಯು. ಆಫೀಸರ್ ಮ॥ ಕೃಷ್ಣಸ್ವಾಮಯ್ಯಂಗಾರ್ರವರ ಅಧ್ಯಕ್ಷತೆಯಲ್ಲಿ ಅವರ ಗುಣಕಥನವನ್ನು ಮಾಡಿ ಒಂದು ಟೀ ಪಾರ್ಟಿಯನ್ನು ಏರ್ಪಡಿಸಿ ಫಲಹಾರವಾದ ಬಳಿಕ ಸರ್ವರಿಗೂ ಗಂಧ ಪುಷ್ಪ ತಾಂಬೂಲವನ್ನು ಹಂಚಿದರು. ಕಳೆದ ಮಾಹೆ 29 ನೇ ತಾ. ಇಲ್ಲಿ ರೀಡಿಂಗ್ ರೂಮಿನ ಮೆಂಬರುಗಳೆಲ್ಲಾ ಸೇರಿ ಮುಸಾಫರ ಬಂಗಲೆಯಲ್ಲಿ ಡಿಸ್ಟ್ರಿಕ್ಟ್ ಸ್ಯಾನಿಟರಿ ಇನ್‌ಸ್ಪೆಕ್ಟರ ಅಧ್ಯಕ್ಷತೆಯಲ್ಲಿ ನಮ್ಮ ಅಮಲ್ದಾರರಿಗೆ ಟೀ ಪಾರ್ಟಿ ಮಾಡಿ ಅವರ ಗುಣಕಥನ ಮಾಡಿದರು. ಮರುದಿನ ಕೆಲವು ಶ್ಯಾನುಭೋಗರುಗಳೆಲ್ಲಾ ಸೇರಿ ಸಂಸ್ಕೃತ ಪಾಠಶಾಲೆಯಲ್ಲಿ ಅಮಲ್ದಾರ್ರಿಗೆ ನಮ್ಮ ಹೊಸ ಅಮಲ್ದಾರ್ ಮ॥ ಹೈದರಲ್ಲಿಖಾನ್‌ರವರ ಅಧ್ಯಕ್ಷತೆಯಲ್ಲಿ ಒಂದು ಟೀ ಪಾರ್ಟಿ ಮಾಡಿದರು. ಶ್ಯಾ. ನರಸಿಂಹಮೂರ್ತಿಗಳೂ, ಮ॥ ವೆಂಕಟರಾಮಯ್ಯನವರೂ, ಮ॥ ನರಸಿಂಹಯ್ಯನವರೂ ಅಮಲ್ದಾರ್ರ ಗುಣಕಥನವನ್ನು ಮಾಡಿದರು.

ದೇವನಹಳ್ಳಿ.—ಈ ಊರಿನಲ್ಲಿ ಮಳೆ ಸುರಾಂ ಇಲ್ಲದೆ ವಿಶೇಷ ಗಾಳಿಯಿಂದ ಕೂಡಿ 2-3 ದಿವಸಗಳು ಮಾತ್ರ ಜಡಿ ಹಿಡಿದು ಭೂಮಿಯು ನೆನೆಯದಂತೆಯೂ, ಪೈರುಗಳಿಗೆ ಹದವಾಗದಂತೆಯೂ ಮಳೆ ಬಿತ್ತು. ದೊಡ್ಡಮಳೆ ಬರಲಿಲ್ಲ. ಸೇದುವ ಭಾವಿಗಳಲ್ಲಿ ಸುತರಾಂ ನೀರು ಇಲ್ಲ. ಹೊಲಗಳೆಲ್ಲಾ ಬಾಡಿ ಹೋಗುತ್ತಾ ಇವೆ. ಅಕ್ಕಿ 8 ಸೇರು, ರಾಗಿ 10½ ಸೇರು ಕೊಡುತ್ತದಾರೆ. ಸರ್ಕಾರದವರು ಏರ್ಪಾಡುಮಾಡಿರುವ ಸೇರುಗಳೂ ಬಟ್ಟುಗಳೂ ಇನ್ನೂ ಜಾರಿಗೆ ಬರಲಿಲ್ಲ. ಸಂತೆಗಳಲ್ಲೂ ಮನೆಗಳಲ್ಲೂ ಅನೇಕ ಜನ ವರ್ತಕರ ಹೆಂಗಸರು ಕಮ್ಮಿ ಸೇರು ಇಟ್ಟುಕೊಂಡು ತಿಳಿಯದ ಜನಗಳಿಗೆ ಮೋಸಪಡಿಸುತ್ತದಾರೆ. ಈ ವಿಚಾರವನ್ನು ನಮ್ಮ ಪೊ॥ ಅಧಿಕಾರಿಗಳು ಸರಿಪಡಿಸುವರೆಂತ ನಂಬುತ್ತೇನೆ. ಈಗ ಸರ್ಕಾರದವರು ರೈಲ್ವೆ ಕಾಮಗಾರಿ ನಡಿಸುತ್ತಾ ಇರುವದರಿಂದ ಅನೇಕ ಬಡಬಗ್ಗರ ಜೀವನಕ್ಕೆ ಅನುಕೂಲವಾಗಿರುತ್ತೆ. ಕೆಲವು ಸಂದುಗಳಲ್ಲಿ ರಾತ್ರಿ ಲಾಂದ್ರಗಳನ್ನು ಹಚ್ಚುವದೇ ಇಲ್ಲ; ಹಚ್ಚಿದರೂ ಸರಿಯಾಗಿ ಉರಿಯುವದಿಲ್ಲ.—ಸಾಹುಕಾರ್ ಮ॥ ಎಲಿ ಕೃಷ್ಣಪ್ಪನವರು 2-3 ವರ್ಷದ ಹಿಂದೆ ಕ್ಷಾಮಕಾಲದಲ್ಲಿ ಬಡ ಜನಗಳ ಕಷ್ಟವನ್ನು ನಿವಾರಣೆ ಮಾಡಬೇಕೆಂದು ಪರಸ್ಥಳಗಳಿಂದ ದವಸಧಾನ್ಯಗಳನ್ನು ತರಿಸಿ 8 ಸೇರು ಅಕ್ಕಿ, 12 ಸೇರು ರಾಗಿ ಮಾರಿಸಿದಂತೆ ಈಗಲೂ ಮಾಡಿ ಬಡಬಗ್ಗರನ್ನು ಕಾಪಾಡಿ ಕೀರ್ತಿಪಡೆಯುತ್ತಾರೆಂದು ನಂಬುತ್ತೇನೆ.

ಸಕಲೇಶಪುರ.—ಈ ಸಂವತ್ಸರ ಮುಂಗಾರು ಮಳೆ ಸರಿಯಾಗಿ ನಡಿಸಲಿಲ್ಲವಾಗಿ ಬೇಸಿಗೆಯಲ್ಲಿ ದನಗಳು ತುಂಬಾ ಲಾಚಾರ್ ಸ್ಥಿತಿಯಲ್ಲಿದ್ದವು. ಈಚೆಗೆ ವಿಪರೀತವಾದ ಘಾಳಿ ಮತ್ತು ಸೋನೆ ಮಳೆ ದೆಸೆಯಿಂದಲೂ, ಸರಿಯಾದ ಮೇವು ಇಲ್ಲದ್ದರಿಂದಲೂ ಈ ಪ್ರಾಂತ್ಯ ಮೃತಪಟ್ಟ ದನಗಳ ಸಂಖ್ಯೆ ಹೇಳಲು ಸಾಧ್ಯವಿಲ್ಲ. ಇದರಿಂದ ಬಡರೈತರಿಗೆ ತುಂಬಾ ನಷ್ಟವಾಗಿರುತ್ತೆ. ದವಸಧಾನ್ಯದ ಧಾರಣೆಯೂ ಬಡಬಗ್ಗರಿಗೆ ಅನುಕೂಲವಾಗಿಲ್ಲ.—ಮುನ್‌ಸಿಪಲ್ ಲಾಂದ್ರಗಳಲ್ಲಿ ಸರಿಯಾಗಿ ದೀಪವನ್ನೇ ಹಚ್ಚಿಸುವದಿಲ್ಲ. ಕೆಲವು ಕಂಭಗಳಲ್ಲಿನ ಕನ್ನಡಿಗಳು ಒಡೆದುಹೋಗಿರುತ್ತವೆ; ಕೆಲವು ಕಂಬಗಳಲ್ಲಿ ದೀಪವು ರಾತ್ರಿ 10 ಗಂಟೆವರೆಗೆ ಕೂಡ ಇರುವದಿಲ್ಲ. ಕಡದೀ ಈ ಲೋಪಗಳು ಸರಿಪಡುತ್ತವೆಂದು ಆಪೇಕ್ಷಿಸಲ್ಪಟ್ಟಿರುತ್ತೆ. ಗ್ರಾಮಪಾರೀಜಾ ವಿಚಾರವಾಗಿ ಅವಶ್ಯಕವಾದ ಏರ್ಪಾಡು ಸಹ ಮಾಡಲ್ಪಡಬೇಕು.—ಈ ಊರಿನ ಎ. ವಿ. ಸ್ಕೂಲಿನಲ್ಲಿ ನಡೆಯುವ ಬೋಧನಾಕ್ರಮವು ಅಷ್ಟೇನೂ ತೃಪ್ತಿಕರವಾಗಿಲ್ಲ. ಮನೆಯಲ್ಲಿ ಹುಡುಗರ ತೊಂದರೆ ಸಹಿಸಲಾರದೆ ಸ್ಕೂಲಿಗೆ ಕಳುಹಿಸತಕ್ಕದ್ದಾಗಿದೆ. ಸ್ಕೂಲಿನಲ್ಲಿ ಉಪಾಧ್ಯಾಯರಾಗಿ ಕೆಲಸಮಾಡತಕ್ಕ ಕಾಲಕ್ಕಿಂತಲೂ ಹೆಚ್ಚಾಗಿ, ಸರ್ಕಾರದವರು ಕೊಡುವ ವೇತನಕ್ಕಿಂತಲೂ ಹೆಚ್ಚು ಲಾಭ ಉಂಟಾಗಬಹುದಾದ ಕಡೆಗಳಲ್ಲಿ ಪ್ರತಿ ಒಬ್ಬ ಟೀಚರ್ ಸಹ ಪ್ರೈವೇಟ್ ಟೀಚಿಂಗ್ ಇಟ್ಟುಕೊಂಡಿರುವದರಿಂದ ಸ್ಕೂಲಿನಲ್ಲಿ ಮಾಡತಕ್ಕ ಕೆಲಸದಲ್ಲಿ ಮುತುವರ್ಜಿ ಕಡಮೆ.—ಈ ಊರಿನ ಕೋಆಪರೆಟಿವ್ ಸೊಸೈಟಿಯ ವಾರ್ಷಿಕ ಜನರಲ್ ಮೀಟಿಂಗು ಇದುವರಿಗೂ ನಡೆದೇ ಇಲ್ಲ ಸಧ್ಯದಲ್ಲಿಯೇ ನಡಿಸುತ್ತಾರೆಂತ ವರ್ತಮಾನವಿದೆ.

ತುಂಕೂರು ತಾ॥ ಊರುಕೆರೆ ಗ್ರಾಮ.—ಕಳೆದ ಜೂನ್ ಮಾಹೆ ಆದಿಭಾಗದಲ್ಲಿ ಈ ಗ್ರಾಮಕ್ಕೆ ನಮ್ಮ ಅಮಲ್ದಾರ್ರವರು ದಯಮಾಡಿ ಒಂದು ದಿನ ರಾತ್ರಿ ಈ ಗ್ರಾಮಸ್ಥರಲ್ಲಿ ಕೆಲ ಮುಖ್ಯಸ್ಥರನ್ನು ಬರಮಾಡಿಕೊಂಡು ಗ್ರಾಮಾಭಿವೃದ್ಧಿಗಾಗಿ ಅನೇಕ ಸದ್ಬೋಧೆಮಾಡಿ ಜನಗಳನ್ನು ಸಂತೋಷಪಡಿಸಿ ಇಲ್ಲಿ ಒಂದು ಸ್ಕೂಲ್ ಸ್ಥಾಪಿಸಬೇಕೆಂತ ಏರ್ಪಾಡುಮಾಡಿ ಸ್ಕೂಲ್ ಕಟ್ಟಡಕ್ಕೆ ಗ್ರಾಮಸ್ಥರು ಅರ್ಧ ಖರ್ಚು ಕೊಟ್ಟರೆ ಸರ್ಕಾರದಿಂದ ಅರ್ಧ ಖರ್ಚು ಕೊಟ್ಟು ಸ್ಕೂಲ್ ಮನೆ ಕಟ್ಟಿಸುತ್ತೇವೆಂತ ಅಪ್ಪಣೆಮಾಡಿದ್ದರ ಮೇಲೆ ಎಲ್ಲರೂ ಸಮ್ಮತಿಸಿ ಕೊಡ್ಲೆ ಚಂದಾ ವಸೂಲ್ಮಾಡಿ ಮೊಬಲಗನ್ನು ಅಮಲ್ದಾರ್ರ ವಶಕ್ಕೆ ಒಪ್ಪಿಸಲಾಗಿ ಸರ್ಕಾರದವರು ಇಲ್ಲಿನವರಿಗೇ ಕಂಟ್ರಾಕ್ಟು ಕೊಟ್ಟು ಕಟ್ಟಡಮಾಡಿಸಿದರು. ನಮ್ಮ ಅಮಲ್ದಾರ್ರವರು ಜೂಲೈ ಮಾಹೆಯಲ್ಲೇ ಸ್ಕೂಲ್ ಮಂಜೂರು ಮಾಡಿಸಿದರು. ಸ್ಕೂಲ್ ಕಟ್ಟಡವಾದರೋ ಮ॥ ಪ. ವೀರಪ್ಪಗೌಡರೂ, ಶ್ಯಾನುಭೋಗರೂ ತಮ್ಮ ಸ್ವಂತ ಕೆಲಸವನ್ನು ಬಿಟ್ಟು ಗಾರೆ ಕೆಲಸ ಮರಗೆಲಸ ವಗೈರೆ ಕೂಲೀ ಜನಗಳಿಗೆ ನಿತ್ಯವೂ ತಮ್ಮ ಮನೆಯಲ್ಲೇ ಅನ್ನಹಾಕಿಕೊಂಡು ಮಾಡಿಸಿದರು.—ಪರಂತು ಈ ವರ್ಷ ಆನಂದ ಸಂವತ್ಸರವಾಗಿಯೂ 6 ಗ್ರಹಗಳು ಉತ್ತಮ ಸ್ಥಾನದಲ್ಲಿರುವುದಾಗಿಯೂ ಇದ್ದಾಗ್ಯೂ ಈ ವರ್ಷದಂಥಾ ದುರ್ಭಿಕ್ಷ ನಾನು ನೋಡಲಿಲ್ಲ. ಹ್ಯಾಗಂದರೆ ಶ್ರಾವಣಮಾಸ ಹುಟ್ಟಿದಾಗ್ಯೂ ಈ ಪ್ರಾಂತ್ಯ ಒಂದು ಹನಿ ಮಳೆ ಬಂದಿಲ್ಲ. ರೈತರಾದರೋ ದಿಗ್ಭ್ರಮೆ ಹೊಂದಿ 10 ಕ್ಕೆ 6 ಕುಟುಂಬದವರೇ ಅರ್ಧಗ್ರಾಸದಿಂದ ಜೀವನ ಮಾಡುತ್ತಾರೆ. ಬಾಕಿಯವರು ಸೊಪ್ಪು ಗೆಡ್ಡೆಗೆಣಸುಗಳಿಂದ ಪ್ರಾಣ ಉಳಿಸಿಕೊಂಡಿರುವರು.—ಈಪ್ರಾಂತ್ಯ ಕಳ್ಳರ ಅವಾಂತ್ರ ಎಲ್ಲಾ ಕಡೆಯೂ ಭೀತಿಯನ್ನುಂಟುಮಾಡುತ್ತದೆ. ಒಬ್ಬ ಬಡರೈತನ ಎರಡು ಆಕಳುಗಳನ್ನು ಯಾರೋ ದುರಾತ್ಮರು ಕಳುವಿನಿಂದ ಹೊಡೆದರು. ಅವು ಪತ್ತೆಯೇ ಇಲ್ಲ. ಮತ್ತಾ ಸಣ್ಣ ಕಳ್ಳತನಗಳ ಪತ್ತೆಗೆ ಅವಕಾಶವೇ ಇಲ್ಲ.—ಇಲ್ಲಿಗೆ ಸುಮಾರು ಒಂದು ಮೈಲಿಯಲ್ಲಿರುವ ಹಂಚೀಹಳ್ಳಿಗ್ರಾಮದಲ್ಲಿ ಒಬ್ಬ ಯವ್ವನಸ್ತ್ರೀಯು ಯಾವ ಕಾರಣದಿಂದಲೋ 20 ದಿವಗಳ ಮುಂಚೆ ಆತ್ಮಹತ್ಯಮಾಡಿಕೊಂಡಳೆಂದು ಸರ್ಕಾರದವರು ಗ್ರಾಮದಲ್ಲಿ ಕೆಲವರನ್ನು ವಿಚಾರಣೆಗೆ ಗುರಿಪಡಿಸಿರುತ್ತಾರೆ. ಇದರ ಸಿದ್ಧಾಂತ ಏನೋ ಗೊತ್ತಿಲ್ಲ.—ಹೊಸ ಸ್ಕೂಲ್ ಕಟ್ಟಡಕ್ಕೆ ಈ ಗ್ರಾಮದ ಪಟೇಲ್ ಸಿದ್ದಲಿಂಗೇಗೌಡನ ಖಾತೆ ಜಮೀನಿನಲ್ಲಿ ಈತನ ತಾಯಿ ಮರಿಬಸಮ್ಮನು ಸ್ಕೂಲ್ ಚಂದಾ ಮೊಬಲಗು ಪಟ್ಟೀ ಪ್ರಕಾರ ಕೊಟ್ಟದ್ದಲ್ಲದೆ ತಮ್ಮ ಹಿಡುವಳಿ ಜಮೀನಿನಲ್ಲಿ 5 ಗುಂಟೆ ಜಮೀನನ್ನು ಉಚಿತಾರ್ಥವಾಗಿ ಕೊಟ್ಟಿರುವದು ತುಂಬಾ ಶ್ಲಾಘನೀಯವಾಗಿದೆ.

ದೊಡ್ಡಬಳ್ಳಾಪುರ.—ಈ ಊರಿನಲ್ಲಿ ಮಳೆ ಆಗಿ ಕೊಂಚ ಪಶುಗಳಿಗೂ ಹೊಲಗಳು ಉಳಲೂ ಅನುಕೂಲವಾಯ್ತು. ಪುನಹ ಮಳೆ ಹಿಂದಾದ್ದಕ್ಕೆ ಜನರು ಚಿಂತೆ ಪಡುತ್ತಾರೆ.—ಕಳ್ಳತನಗಳು ತಲೆದೋರಿರುವದರಿಂದ ಪೋಲೀಸಿನವರು ಮುತುವರ್ಜಿ ಮಾಡಿದರೆ ಪ್ರಜೆಗಳಿಗೆ ಕ್ಷೇಮವಾಗುತ್ತೆ.—ಮ್ಯುನಿಸಿಪಲ್ ಲಾಂದ್ರಗಳ ವಿಚಾರಕ್ಕೆ ವೈಸ್ ಪ್ರೆಸಿಡೆಂಟರು ನಿಗಾಕೊಟ್ಟು ಸರಿಯಾಗಿ ದೀಪಗಳು ಹಚ್ಚಲು ಏರ್ಪಾಡು ಮಾಡದಿರುವ ಕಾರಣವೇನೆಂದು ಪ್ರಜೆಗಳು ಯೋಚಿಸುತ್ತಾರೆ. ಇದಕ್ಕೆ ಅವರು ನಿಗಾ ಕೊಡದಿದ್ದರೆ ರಾತ್ರಿವೇಳೆ ಓಡ್ಯಾಡುವವರಿಗೆ ಕೇಡಾಗಲು ಅವಕಾಶವಾಗುತ್ತೆ.—ಸಾಹುಕಾರ್ ರುಮಾಲೆ ರುದ್ರಪ್ಪನವರ ಸೊಸೆ ಗರ್ಭಿಣಿಯಾಗಿ ಪ್ರಸುವವಾಗಲು ತೊಂದರೆ ಆಗಿ ಈಗ ಬೆಂಗಳೂರು ಆಸ್ಪತ್ರೆಯಲ್ಲಿ ಸುಖಪ್ರಸುವಾಗಿ ಮಗು ಬಾಣಂತಿ ಆರೋಗ್ಯವಾಗಿರುವದು ಈ ಊರಿನವರಿಗೆಲ್ಲಾ ಸಂತೋಷವನ್ನುಂಟುಮಾಡಿದೆ.—ಕಳೆದ ಶನಿವಾರ ನಡೆದ ಸ್ಪೆಷಲ್ ಮ್ಯುನಿಸಿಪಲ್ ಮೀಟಿಂಗಿನಲ್ಲಿ ಎಲ್ಲಾ ಮೆಂಬರುಗಳೂ ಮುನ್‌ಸಿಫ್ ಮ॥ ಮಹದೇವಯ್ಯನವರೂ, ಕೆಲವು ಪುರವಾಸಿಗಳೂ ಸೇರಿದ್ದರು. ಮೂರು ವಿಷಯಗಳು ತೀರ್ಮಾನವಾದವು. 1 ನೇದು, ದೊಡ್ಡಬಳ್ಳಾಪುರಕ್ಕೆ ನೀರು ಸರಬರಾಜಿಗೆ ಬೇಕಾಗಿರುವ 70 ಸಾವಿರ ರೂಪಾಯಿನಲ್ಲಿ ಸರ್ಕಾರದವರು ಕೊಡುವ ಅರ್ಧ ಮೊಬಲಗು ಜಾತಾ ಬಾಕಿ 35 ಸಾವಿರ ರೂಪಾಯನ್ನು ಕೊಡಿಸಿದ್ದು ಹ್ಯಾಗಂದರೆ, ಈ ಊರಿನ ಮುಖ್ಯ ಮಹನೀಯರು ಕೊಟ್ಟಿರುವದು 18 ಸಾವಿರ; ಮ್ಯುನಿಸಿಪಾಲಿಟಿಯಿಂದ 2 ಸಾವಿರ; ಬಾಕಿ 15 ಸಾವಿರ ರೂಪಾಯನ್ನು ಸರ್ಕಾರದಿಂದ ಸಾಲ ತೆಗೆದುಕೊಂಡು 30 ವರ್ಷಗಳಲ್ಲಿ ಮ್ಯುನಿಸಿಪಾಲಿಟಿಯವರು ತೀರಿಸುವಂತೆ ತೀರ್ಮಾನವಾಯಿತು. 2 ನೇದು, ಬಡಜನಗಳಿಗೆ ರಾಗಿ 14 ಸೇರು ಮಾರುವಂತೆ ಮ್ಯುನಿಸಿಪಲ್ ಮೆಂಬರುಗಳು ತಲಾ 100 ರೂಪಾಯಿ ವರಿಗೂ ಕೊಟ್ಟಿರುತ್ತಾರೆ. ಈಗ 12 ಸೇರು ಮಾತ್ರ ಮಾರುತ್ತಿದೆ. ಮುಂದೆ ಚೆನ್ನಾಗಿ ಮಳೆ ಬರುವ ವರಿಗೂ 14 ಸೇರಿನಂತೆ ಮಾರಿ ಅದರಿಂದ ಉಂಟಾಗುವ ನಷ್ಟವನ್ನು ಈ ದೊಡ್ಡಮನುಷ್ಯರು ಉದಾರಭಾವದಿಂದ ವಹಿಸಿಕೊಳ್ಳುವರು. ನಾಳೆ ಸಂತೆಯಿಂದ ಈ ಏರ್ಪಾಡು ಜಾರಿಗೆ ಬರತಕ್ಕದ್ದಾಗಿದೆ. 3 ನೇದು, ಈ ತಿಂಗಳು 19 ರಲ್ಲಿ "ಪೇರೆಂಟ್ಸ್ ಡೇ" ಎಂಬದಾಗಿ ಒಂದು ಎಗ್ಜಿಭಿಷನ್ ಮಹೋತ್ಸವ ನಡೆಯುವಂತೆಯೂ, ಅದಕ್ಕೆ ತಂದೆತಾಯಿಗಳೂ ಈ ಊರಿನ ದೊಡ್ಡಮನುಷ್ಯರೂ ಸಹಾಯಮಾಡಿ ನಡಿಸುವಂತೆಯೂ ಗೊತ್ತಾಗಿದೆ. ಈ ಉತ್ಸವವನ್ನು ಸಂಭ್ರಮದಿಂದ ನಡಿಸಲು ವಿದ್ಯಾ ಇಲಾಖೆಯ ಇನ್. ಜ. ಸಾಹೇಬರವರು ಪ್ರೆಸಿಡೆಂಟರಾಗಿರಲು ಒಪ್ಪಿರುತ್ತಾರಲ್ಲದೆ ಅನೇಕ ಇತರ ದೊಡ್ಡಮನುಷ್ಯರೂ ದಯಮಾಡಿಸುವರು. ಮತ್ತು ಈ ಬೆಂಗಳೂರ್ ಡಿಸ್ಟ್ರಿಕ್ಟಿನ ಎಲ್ಲಾ ಎ. ವಿ. ಸ್ಕೂಲುಗಳ ಉಪಾಧ್ಯಾಯರೂ ಅವರ ಬಾಲಕರಿಂದ ತಯಾರ್ಮಾಡಲ್ಪಟ್ಟ ಸಾಮಾನಿನೊಡನೆ ದಯಮಾಡಿಸುವಂತೆ ಏರ್ಪಾಡುಮಾಡಲ್ಪಟ್ಟಿದೆ.—ಈ ತಾಲ್ಲೋಕಿನ ತಿಮ್ಮಸಂದ್ರ ಒಬ್ಬ ಮಾದಿಗರವನನ್ನು ಈ ಬೆಳಿಗ್ಗೆ 11 ಗಂಟೆಯಲ್ಲಿ ತಾಲ್ಲೋಕು ಅಮಲ್ದಾರ್ರವರೂ, ಮುನ್‌ಸಿಫ್ ಸಾಹೇಬರೂ, ಇತರ ದೊಡ್ಡಮನುಷ್ಯರೂ ನೋಡಲಾಗಿ ಅವನ ಎಡ ಮುಂಗಾಲಿನ ಮೇಲೆ ತೊಡೆ ವರಿಗೂ ಸುಮಾರು 30 ಸೇರು ನೀರು ಹಿಡಿಯುವಷ್ಟು ದೊಡ್ಡದಾದ ಬಾವೆಯುಂಟಿರುವ ಊತವು ಕಂಡುಬಂತು. ಇವನು ಆರೋಗ್ಯವಾಗಿದಾನೆ ಇವನಿಗೆ ಮಕ್ಕಳೂ ಇದಾರೆ.—ಮುನ್‌ಸಿಫ್ ಮ॥ ಪಿ. ಮಹದೇವಯ್ಯನವರಿಗೆ ಕೋಲಾರ್ ಚಿನ್ನದ ಗಣಿಗಳಿಗೆ ವರ್ಗವಾಗಿದೆ. ಇವರ ನಿಷ್ಪಕ್ಷಪಾತತೆ, ಕಾರ್ಯದಕ್ಷತೆ, ಸಾಮರ್ಥ್ಯ, ಚಟುವಟಿಕೆ, ಪರಪ್ರೀತಿ ಅನುರಾಗದಿಂದ ಈ ಊರಿನವರು ಮಾತ್ರವಲ್ಲದೆ ಈ ಸಬ್ ಡಿವಿಜನ್‌ಗೆ ಸೇರಿದವರೆಲ್ಲಾ ಇವರ ವರ್ಗವನ್ನು ಕೇಳಿ ವ್ಯಸನಪಡುತ್ತಾರೆ.—ಸಂತೆ ದಿನ ಮಾರ್ಕೆಟ್ಟಿನಲ್ಲಿ ಚಮ್ಮರಾಗಿಯನ್ನು ಮಾರುವ, ಕಮ್ಮಿಸೇರುಗಳನ್ನು ಉಪಯೋಗಿಸುವ ವರ್ತಕರಿಗೆ ತಕ್ಕ ಶಿಕ್ಷೆ ಆಗಬೇಕಾಗಿದೆ.

ನೀಲಗಿರಿ ಜಿಲ್ಲೆ ಕುನ್ನೂರು.—ಈ ಊರಿನಲ್ಲಿ ಅನೇಕ ಜನರಿಗೆ ತಾಯೋವಾದಿಯಲ್ಲಿ ಒಪ್ಪುವಂಥ ನಾಯಿ ಆಸ್ಪತ್ರೆ ಇರುತ್ತೆ. ನಾಯಿಕಡಿಸಿಕೊಂಡು ದಕ್ಷಿಣ ಇಂಡಿಯದಿಂದ ಬರುವ ಅನೇಕ ಜನರು ಈ ಆಸ್ಪತ್ರೆಯಲ್ಲಿ ತುಂಬಿರುತ್ತಾರೆ. ಒಂದು ದಿವಸಕ್ಕೆ 50-60 ಜನರು ಬರುತ್ತಾರೆ, 50-60 ಜನರು ಹೋಗುತ್ತಾರೆ. ಹೀಗಿರುವಲ್ಲಿ ಇಲ್ಲಿ 30 ವಾರ್ಡುಗಳು ಮಾತ್ರ ಇರುತ್ತೆ. ಒಂದು ರೂಮಿನಲ್ಲಿ 3-4 ಜನರು ಅಡಿಗೆ ಮಾಡಿಕೊಂಡು ಊಟಮಾಡುತ್ತಾರೆ. ಬ್ರಾಹ್ಮಣರು, ವೈಶ್ಯರು, ಶೂದ್ರರು, ಕ್ರೈಸ್ತರು, ಹೊಲೆಯಮಾದಿಗರು, ಮಹಮ್ಮದೀಯರು, ಎಲ್ಲಾ ಒಂದೇ ರೂಮಿನಲ್ಲಿ ಊಟಮಾಡಬೇಕಾಗುತ್ತೆ. ಇದನ್ನು ಇಲ್ಲಿ ವಿಚಾರಿಸುವವರೇ ಇಲ್ಲ. ಪರಸ್ಥಳಗಳಿಂದ ಬರುವ ರೋಗಿಗಳಿಗೆ ಇಲ್ಲಿನ ಡಾಕ್ಟರಾದ ಮ॥ ರಾಮಸ್ವಾಮಯ್ಯನವರು ಬಹು ಮುತುವರ್ಜಿವಹಿಸಿ ಕೆಲಸ ಮಾಡುತ್ತಾರೆ. ಇಲ್ಲಿ ಕೊಡುವ 6 ಆಣೆ ಭತ್ಯ ಸಾಕಾಗಲಾರದು. ಮೇಲಿನ ಧಣಿಗಳು ಇನ್ನು 2 ಆಣೆ ಹೆಚ್ಚಿಸಿಕೊಡಬೇಕೆಂದು ಬೇಡುತ್ತೇವೆ. ಇಲ್ಲದಿದ್ದರೆ ಆಯಾ ಜಾತಿಯವರ ಪ್ರಕಾರ ಹೋಟೇಲ್ ಇಡಿಸಿ ಅನ್ನ ಹಾಕಿದರೆ ಉತ್ತಮವೆಂದು ತೋರುತ್ತೆ. ಆದ್ದರಿಂದ ಮೇಲಿನ ಧಣಿಗಳು ಯಾವದಾದರೂ ಉಪಾಯದಿಂದ ಬರುವಂಥಾ ರೋಗಿಗಳನ್ನು ಕಾಪಾಡಬೇಕೆಂದು ಬೇಡುತ್ತೇವೆ.—ಕುನ್ನೂರು ಮಲೆಯಲ್ಲಿ 27 ನೆ ತಾ. ಸೋಮವಾರ ರಾತ್ರಿ 7 ಗಂಟೆಯಿಂದ ಬೆಳಿಗ್ಗೆ 8 ಗಂಟೆ ವರಿಗೆ ಮಹತ್ತರವಾದ ಬಿರುಗಾಳಿ ಎದ್ದು ಬೀಸಿತು. ಇದರಿಂದ ಈ ಊರಿನಲ್ಲಿ ಅನೇಕ ದೊಡ್ಡ ಕರ್ಪೂರದ ಮರಗಳು, ಇನ್ನು ಇತರ ಮರಗಳೂ ಮುರಿದು ಬಿದ್ದು ಅನೇಕ ಮುನಿಸಿಪಲ್ ರೋಡಿನಲ್ಲಿದ್ದ ಲಾಂದ್ರಾ ಕಂಭಗಳು ಮುರಿದು ಬಿದ್ದಿರುತ್ತೆ. ಇದು ಅಲ್ಲದೆ ಅನೇಕ ಜನರು ಕೈಕಾಲು ಮುರಿದುಕೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆಹೊಂದುತ್ತಾ ಇದ್ದಾರೆ. ಮರಗಳು ಮುರಿದು ತಂತಿ ಕಂಬಿಮೇಲೆ ಬಿದ್ದು 3 ದಿವಸ ಟೆಲಿಗ್ರಾಫ್ ಆಫೀಸೇ ನಿಂತುಹೋಗಿತ್ತು. ಮತ್ತು ರೈಲು ಮಾರ್ಗದಲ್ಲಿ ದೊಡ್ಡಮರಗಳು ಬಿದ್ದು ರೈಲು ಸಹ ಆ ದಿವಸ 9 ಗಂಟೆಗೆ ಒಂದು, 12½ ಗಂಟೆಗೆ ಒಂದು ಬರಬೇಕಾಗಿದ್ದು 2 ಸೇರಿ ರಾತ್ರಿ 8 ಘಂಟೆಗೆ ಬಂದಿರುತ್ತೆ. ಮತ್ತೆ ಇದು ಅಲ್ಲದೆ ಅನೇಕ ಮನೆಗಳ ಸಹ ಬಿದ್ದು ಇರುತ್ತೆ.

ಇಂಥ ಗಾಳಿಯಿಂದ ಸರ್ಕಾರಕ್ಕೂ ಪ್ರಜೆಗಳಿಗೂ ತುಂಬಾ ನಷ್ಟವಾಗಿ ಸಂತಾಪವನ್ನು ಉಂಟುಮಾಡಿರುತ್ತೆ.—ಈಸ್ಥಳದಲ್ಲಿ ಬಕಾಸುರನಬೆ ಎಂದು ಒಂದು ಬೆಟ್ಟವಿದೆ. ಈ ಬೆಟ್ಟಕ್ಕೆ ಬಕಾಸುರನಬೆ ಎಂಬ ಹೆಸರು ಬರಲು ಕಾರಣವೇನೆಂದರೆ ಹಿಂದೆ ಭೀಮನು ಬಕಾಸುರನನ್ನು ಜಗಳಮಾಡಿದನಂತೆ. ಈ ಬೆಟ್ಟಕ್ಕೆ ಇಲ್ಲಿನ ಅನೇಕ ದೊರೆಮಾನವರುಗಳು ತಮ್ಮ ಆಳುಗಳ ಸಮೇತ ಈ ಬೆಟ್ಟಕ್ಕೆ ಬೇಟೆಗೆ ಹೋದರು. ಅಲ್ಲಿ ಒಂದು ಹುಲಿಯನ್ನು ಒಬ್ಬ ದೊರೆ ಗುಂಡಿನಿಂದ ಹೊಡೆಯಲು, ಹುಲಿಗೆ ಕಡಲಿ ರೋಷಬಂದು ಅದು ಅಲ್ಲಿ ನಿಂತಿದ್ದ ಜನರ ಮೇಲೆ ಹಾರಲು ಎಲ್ಲಾ ತಪ್ಪಿಸಿಕೊಂಡು ಓಡಿಹೋದರು. ಅಂತೋನಿಯಪ್ಪ ಎಂಬ ಒಬ್ಬನು ಮಾತ್ರ ಸಿಕ್ಕಿಬಿದ್ದನು. ಆ ಹುಲಿಯು ರೋಷಬಂದು ಅವನನ್ನು ಕೊಂದು ಅದು ಸಹ ಸತ್ತುಹೋಯಿತು. ಬಳಿಕ ಅವನನ್ನು ಸರ್ಕಾರದ ಮೂಲಕ ಮಣ್ಣುಮಾಡಿಸಿ, ಹುಲಿಯ ಚರ್ಮವನ್ನು ತೆಗಿಸಿ ಕಲೆಕ್ಟರವರಿಗೆ ಕಳಿಸಿದರು. ಇದರಿಂದ ಆ ದೊರೆಗೆ 100 ರೂಪಾಯಿ ಇನಾಂ ಬಂತು.—ಇಲ್ಲಿ ಈ ಕಾಲದಲ್ಲಿ ಹಿಡಿದಮಳೆ ಬಿಡುತ್ತಿರಲಿಲ್ಲ. ಈಗ ಇಂಥ ಊರಿನಲ್ಲಿ ಮಳೆ ಇಲ್ಲದೆ ಬಿರುಗಾಳಿ ಬೀಸುತ್ತ ಮೋಡ ಕವಿದುಕೊಂಡಿರುತ್ತದೆ. ಆದ್ದರಿಂದ ಈ ಊರಿನಲ್ಲಿ 5-6 ಪಡಿ ಅಕ್ಕಿ, 10-12 ಪಡಿ ರಾಗಿ ಮಾರುತ್ತೆ. ಯಾಕಕ್ಕೆಂದರೆ ಮಳೆ ಏರಿ ಬರಬೇಕಾದ್ದರಿಂದ ಧಾರಣೆ ಅಷ್ಟು ಮಬ್ಬಾರಿಯಾಗಿರುತ್ತೆ. ಇಂಥ ಕಾಲದಲ್ಲಿ ಕೂಲಿಮಾಡುವ ಜನಗಳ ಪಾಡನ್ನು ಕೇಳತೀರದು.—ಈಗ ಈ ಊರಿನಲ್ಲಿ ಹವ ಚೆನ್ನಾಗಿರುತ್ತೆ. ಅನೇಕ ದೊಡ್ಡಮನುಷ್ಯರು ಹವಕ್ಕೋಸ್ಕರ ಈ ಊರಿನಲ್ಲಿ ವಾಸಿಸುತ್ತಾರೆ. ರೋಗಬಾಧೆಗಳೇನೂ ಇಲ್ಲ. ಮಳೆಯಿಲ್ಲದೆ ದೊರೆಮನೆ ತೋಟಗಳೆಲ್ಲಾ ಒಣಗುತ್ತಲಿವೆ. ತೋಟದ ಕೆಲಸ ಮಾಡುವವರು ಮಳೆಯನ್ನೇ ಎದುರು ನೋಡುತ್ತಲಿದ್ದಾರೆ.

ತೀರ್ಥಹಳ್ಳಿ.—ಈ ಸಾರಿ ಮಳೆಗಾಲವು ಜನಗಳಿಗೆ ಬೇಸರಿಕೆಯನ್ನುಂಟು ಮಾಡುವಷ್ಟು ವಿಶೇಷವಾಗಿದೆ. ಜೂಲೈ ತಿಂಗಳಲ್ಲಿ ಒಂದು ದಿನವೂ ತಪ್ಪದೆ ಮಳೆ ಬಂತು. ಅನೇಕ ಸಾರಿ ಹೊಳೆಯಲ್ಲಿ ಪ್ರವಾಹ ಹೆಚ್ಚಿ ಸಮೀಪದಲ್ಲಿದ್ದ ಗದ್ದೆಗಳಿಗೆ ಬಹಳ ನಷ್ಟ ಉಂಟಾಗಿದೆ. ತೋಟಗಳಿಗೆಲ್ಲಾ ಭಾರೀ ಮಳೆಯಿಂದ ವಿಶೇಷ ನಷ್ಟ. ಅಲ್ಲಲ್ಲಿ ಕೊಳೆರೋಗದಿಂದ ಅಡಿಕೆ ಫಸಲು ಉದುರುತ್ತಿದೆ. ಶಿವಮೊಗ್ಗದಿಂದ ಆಗುಂಬೆಯ ವರೆಗೂ ರಸ್ತೆಯಲ್ಲಿ ನೀರು ಅನೇಕ ಸ್ಥಳಗಳಲ್ಲಿ ನಿಂತು ಜನರ ಪ್ರಯಾಣಕ್ಕೆ ಅಡ್ಡಿಯಾಯ್ತು. ಮಾಳೂರು ಮುಂದಗದ್ದೆ ಕಡೆ ಒಬ್ಬ ಗಂಡಸೂ, ಒಬ್ಬ ಹೆಂಗಸೂ ಹೊಳೆಯಲ್ಲಿ ಕೊಚ್ಚಿಕೊಂಡುಹೋದರೆಂದು ತಿಳಿದು ಬಂದಿದೆ. ತೀರ್ಥಹಳ್ಳಿಯಲ್ಲಿ ಮಳೆಗಾಲದಲ್ಲಿ ಹೊಳೆ ದಾಟುವದು ಬಹಳ ಪ್ರಯಾಸ. ಮಳೆಗಾಲದಲ್ಲಂತು ಗಾಡಿಗಳು ಯಾವ ಪ್ರಯಾಣವನ್ನು ಮಾಡಲು ಅಂದರೆ ಹೊಳೆ ದಾಟಲು ಸಾಧ್ಯವಿಲ್ಲ. ಈ ತುಂಗಾ ಹೊಳೆಯು ಸರಿಯಾಗಿ ತೀರ್ಥಹಳ್ಳಿ ತಾಲ್ಲೂಕಿನ ಮಧ್ಯದಲ್ಲಿ ಹರಿಯುತ್ತದೆ. ಜನರ, ದನಕರುಗಳ ಮತ್ತು ಗಾಡಿಗಳ ತಿರುಗಾಟಕ್ಕೆ ಬಹಳ ಅಡಚಣೆಯಾಗಿದೆ. ತೀರ್ಥಹಳ್ಳಿಯಿಂದ ಕೊಪ್ಪಕ್ಕೆ ಹೋಗುವ ಗಾಡಿಗಳಿಗೆ ಮಾರ್ಗವೇ ಕಟ್ಟುಹೋಗಿದೆ. ದಿವಾನ್ ರವರ ಸವಾರಿಯು ಇಲ್ಲಿಗೆ ಬಂದಿದ್ದಾಗ ಸೇತುವೆ ಕಟ್ಟುವ ಯೋಚನೆ ನಡೆಯಿತು; ಮತ್ತು ಬೇಗನೆ ನಿರ್ಮಾಣ ಆಗುವದಾಗಿತ್ತು. ಈ ವರೆಗೂ ಕೆಲಸ ಪ್ರಾರಂಭವಿಲ್ಲ.—ಇಲ್ಲಿ ಕೆಲವು ವರುಷಗಳಿಂದಲೂ ಡಾಕ್ಟರ್ ಆಗಿದ್ದು ಪೆನ್ಷನ್ ಪಡೆದು ಸ್ವತಃ ವೈದ್ಯಮಾಡುತ್ತಿದ್ದ ಮಿ॥ ಜಿ. ಸಾಮುವೇಲ್ ಅಯ್ಯನವರು ಶಿವಮೊಗ್ಗ ಆಸ್ಪತ್ರೆಯಲ್ಲಿ ದೈವಾಧೀನರಾದದ್ದು ಇಲ್ಲಿನ ಜನರಿಗೆಲ್ಲಾ ಬಹು ದುಃಖವಾಗಿದೆ. ಇವರು ಎಲ್ಲಾ ಜನರಲ್ಲೂ ವಿಶ್ವಾಸ ಸಂಪಾದಿಸಿಕೊಂಡು ಮುಖ್ಯವಾಗಿ ಬಡವರ ಹಿತಚಿಂತಕರಾಗಿದ್ದರು.

ಗೃಹಕೃತ್ಯದ ನೋಟೀಸು.

ಶ್ರೀರಂಗಪಟ್ಟಣದ ಕಸಬಾಕ್ಕೆ ಸೇರಿದ ವೆಲ್ಲಸ್ಲಿ ಸೇತುವೆ ಮೇಲೆ ವಾಸವಾಗಿರುವ ಪಾಣೇ ಮಂಗಳೂರು ಗೌಸೂಖಾಯಾ ಸಾಹೇಬರ ಮಗ ನಾಲ್‌ಬಂದ್ ಮಹಮ್ಮದ್ ಸಾಬಿ ತಿಳಿಯಪಡಿಸುವದೇನೆಂದರೆ.—

ಮೇಲ್ಕಂಡ ಗೌಸೂಖಾಯಾ ಸಾಹೇಬರು ನಮ್ಮಗಳ ಸ್ವಂತ ಸ್ಥಳವಾದ ಚೆಂನ್ನಪ್ರಯಪಟ್ಟಣದ ತಾಲ್ಲೋಕು ಹೊನ್ನಸೆಟ್ಟಿಹಳ್ಳಿಯಲ್ಲಿ ಇದ್ದ ನಮ್ಮ ಪಿತ್ರಾರ್ಜಿತವಾದ ಜಮೀನು ಮತ್ತು ಮನೆ ವಗೈರೆಗಳನ್ನು ಕ್ರಯಕ್ಕೆ ಕೊಟ್ಟು ಆ ಮೊಬಲಗಿನಲ್ಲಿ ಶ್ರೀರಂಗಪಟ್ಟಣದ ತಾಲ್ಲೋಕು ಕಸಬಾ ಕಿರಂಗೂರು ಗ್ರಾಮದಲ್ಲಿ ಜಮೀನು ತೆಗೆದುಕೊಂಡಿರುತ್ತಾರೆ. ಈ ಜಮೀನನ್ನು ನಮ್ಮಗಳಿಗೆ ತಿಳಿಯಪಡಿಸದೇ ನಮ್ಮಗಳಿಗೆ ಮೋಸಪಡಿಸಬೇಕೆಂಬ ಇರಾದೆಯಿಂದ ಈ ಜಮೀನನ್ನು ಖರೀದಿ ಮಾಡಬೇಕೆಂತ ಉದ್ಯುಕ್ತರಾಗಿರುತ್ತಾರೆ. ಆದ್ದರಿಂದ ಈ ಮೇಲ್ಕಂಡ ಜಮೀನು ಮತ್ತು ಇತರ ಯಾವ ವಿಧವಾದ ಆಸ್ತಿಯನ್ನು ನಮ್ಮ ಅನುಮತಿಯಿಲ್ಲದೆ ತೆಗೆದುಕೊಳ್ಳಕೂಡದು. ಹಾಗೆ ತೆಗೆದುಕೊಂಡಲ್ಲಿ ಅದರ ಲುಕ್ಸಾನಿಗೆ ನೀವೇ ಬಾಧ್ಯರಾಗಬೇಕು. ಈ ಆಸ್ತಿಗಳು ನಮ್ಮ ಪಿತ್ರಾರ್ಜಿತದ ಮೊಬಲಗಿನಲ್ಲಿ ಕ್ರಯಕ್ಕೆ ತೆಗೆದುಕೊಂಡದ್ದಾಗಿದೆ. ಆದ್ದರಿಂದ ಯಾರೂ ಕ್ರಯ ಭೋಗ್ಯ ವಗೈರೆ ತೆಗೆದುಕೊಳ್ಳಕೂಡದೆಂತ ಈ ಮೂಲಕ ತಿಳಿಯಪಡಿಸಿದೇನೆ.

[170-1] ನಾಲ್‌ಬಂದ್ ಮಹಮ್ಮದ್ ಸಾಹೇಬನ ರುಜು.

ಅಪಾಯದ ಕುರುಹುಗಳು.

ಸ್ವಾಭಾವಿಕವಾಗಿ ಅಪಾಯ ಬರಬಹುದಾದ ಕುರುಹುಗಳನ್ನು ಕಂಡುಹಿಡಿಯಬಹುದು. ಕೆಮ್ಮು ಅಪಾಯದ ಕುರುಹು !

ಶ್ವಾಸಕೋಶಗಳು ಬಲಹೀನವುಳ್ಳವುಗಳೆಂದು ಇದರಿಂದ ತೋರಿಬರುತ್ತದೆ. ಅವನ್ನು ಬೇಗನೇ ಬಲಪಡಿಸತಕ್ಕದ್ದು ಬಹು ಆವಶ್ಯಕ.

SCOTT'S EMULSION 5-32

(ಸ್ಕಾಟ್ಸ್ ಇಮಲ್ಷನ್)

ಎಂಬೀ ಔಷಧವು ಈ ಕುರುಹುಗಳನ್ನು ಹೋಗಲಾಡಿಸುವದು.

ಬಲಹೀನವಾದ ಶ್ವಾಸಕೋಶಗಳನ್ನು ಬಲಪಡಿಸಿ, ಕೆಮ್ಮನ್ನು ನಿಲ್ಲಿಸುತ್ತದೆ.

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ.

ಎಲ್ಲಾ ಔಷಧ ಮಾರಾಟಗಾರರಲ್ಲೂ ದೊರಕುತ್ತದೆ.

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್.

ಗೃಹಕೃತ್ಯದ ನೋಟೀಸು.

ಈ ಕೆಳಗೆ ರುಜುಮಾಡುವವರು ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ—ನಮ್ಮ ಚಿಕ್ಕಪ್ಪನವರಾದ ಮೃತಪಟ್ಟ ಮೈಸೂರು ಮುನಿಸಿಪಾಲಿಟಿ ಸ್ಟೋರ್ ಕೀಪರ್ ಆಲತೂರು ವೆಂಕಟರಾಯರ ಹೆಂಡತಿ ಕಾವೇರಮ್ಮನೆಂಬುವರು ನಮ್ಮ ಪಿತರಾರ್ಜಿತವಾದ ಚರ, ಸ್ಥಿರ ಸ್ವತ್ತುಗಳನ್ನು ಪರಾಧೀನ ಮಾಡಬೇಕೆಂಬ ಇರಾದೆಯಿಂದ ಸಾಲ ವಗೈರೆ ಮಾಡುತ್ತಾ ಇರುತ್ತಾರೆ. ಮೇಲ್ಕಂಡ ಆಸ್ತಿಗಳನ್ನು ಕ್ರಯ, ಆಧಾರ, ಭೋಗ್ಯ, ಮೊದಲಾದದ್ದನ್ನು ಮಾಡಲು ಅವರಿಗೆ ಅಧಿಕಾರವಿಲ್ಲ. ಅವುಗಳಿಗೆ ವಾರಸ್‌ದಾರ್ರುಗಳು ಬೇರೆ ಇರುತ್ತಾರೆ.

[167-1] ಎ. ಆರ್. ವ್ಯಾಸರಾವ್, ಪೀಪಲ್ಸ ಕ್ಲಬ್, ಮೈಸೂರು.

ನಂಬಿ ಮೋಸಹೋಗಬೇಡಿ.

ಇತರರು ಶಾಲುಗಳನ್ನು ಬಳ್ಳಿಯೆಂದೂ, ಕಮ್ಮಿ ಬೆಲೆಗೆ ಕೊಡುತ್ತೇವೆಂದೂ ಹೇಳುವರು. ಇದನ್ನು ನಂಬಿ ಮೋಸ ಹೋಗಬೇಡಿ. ನಮ್ಮಲ್ಲಿ ಕಾಶ್ಮೀರಿ ಮತ್ತು ಎಲ್ಲಾ ತರಹದ ವಂಕಿ ಶಾಲುಗಳೂ 5 ರೂ. ನಿಂದ 7, 10, 50, ರೂ. ಗಳ ವರಿಗೂ ಸಿಕ್ಕುತ್ತವೆ. ಖಾಯಿಷಿಲ್ಲದಿದ್ದರೆ ಹಣ ವಾಪಸು ಮಾಡುತ್ತೇವೆ. ನಮ್ಮ ಕಾರಖಾನೆಗೆ ಲಂಡನ್, ಚಿಕಾಗೋ ಮುಂತಾದ ಅನೇಕ ಪ್ರದರ್ಶನಗಳಲ್ಲಿ ಚಿನ್ನ ಮತ್ತು ಬೆಳ್ಳಿಯ ಮೆಡಲುಗಳು ಮತ್ತು ಸರ್ಟಿಫಿಕೇಟುಗಳು ಬಂದಿವೆ. ಯಾವ ತರಹ ಬಣ್ಣದ್ದು ಎಷ್ಟು ಬೆಲೆಯದು ಬೇಕಾದರೂ ನಮ್ಮಲ್ಲಿ ಸಿಕ್ಕುತ್ತವೆ. ಇಂಗ್ಲೀಷಿನಲ್ಲಾಗಲಿ, ಹಿಂದುಸ್ತಾನಿಯಲ್ಲಾಗಲಿ ನಮಗೆ ಬರೆಯಬೇಕು.

ನಮ್ಮ ಅಡ್ರೆಸ್ಸು—ಪೀರ್ ಬ್ರದರ್ಸ್,
ಶಾಲ್ ಮರ್ಚೆಂಟ್ಸ್, ಅಮೃತಸರ, ಪಂಜಾಬು.

PEER BROS., SHAWL MERCHANTS,
AMRITSAR, PANJAB.

[166-1]

ಬಹಳ ಮೇಲಾದ ನಸ್ಯ ಇನ್ನೆಲ್ಲೂ ಸಿಕ್ಕದು.

ನಮ್ಮಲ್ಲಿ ತಯಾರಾಗುವ ನಸ್ಯದ ಪುಡಿಯನ್ನು ಹಿಂದುಸ್ಥಾನದ ಸಮಸ್ತ ಭಾಗಗಳವರೂ, ಅನ್ಯದೇಶಗಳವರೂ ಹತ್ತಾರು ವರುಷಗಳಿಂದ ತರಿಸಿಕೊಂಡು ಉಪಯೋಗಿಸುತ್ತಿದ್ದಾರೆ. ನಮ್ಮ ನಸ್ಯವು ಬಹಳ ಪ್ರಖ್ಯಾತಿ ಪಡೆದಿದೆ. ಬಹು ಮೇಲಾದ "ಬಂದರ್" ಸೊಪ್ಪಿನಿಂದ ಸುವಾಸನೆಯಾದ ಅಚ್ಚ ಶುದ್ಧ ಪಾಕ ವಿಶೇಷ ರುಚಿಕರವಾಗಿಯೂ ಸ್ವಚ್ಛವಾಗಿಯೂ ತಯಾರುಮಾಡುತ್ತೇವೆ. ಕೊಡಿಕ ಮಟ್ಟಿಗೂ ನಮ್ಮ ಧಾರಣೆ ಕಡಮೆಯಾಗಿರುವುದು. ನಮ್ಮ ಪದಾರ್ಥವನ್ನು ನಾವೇ ಹೊಗಳಿಕೊಳ್ಳುವದರಿಂದ ಫಲವೇನು ? ವಾಚಕರು ಒಂದಾವರ್ತಿ ಪರೀಕ್ಷೆಗಾಗಿ ತರಿಸಿಕೊಂಡರೆ ಚೆನ್ನಾಗಿ ವೇದ್ಯವಾಗುತ್ತೆ. ಕ್ರಯ ಪಂಭೇರಿಗೆ 3 ರೂಪಾಯಿ; 1 ಸೇರಿಗೆ 10 ಆಣೆ. ಪೋಸ್ಟೇಜ್ ಬೇರೆ. ನಸ್ಯವನ್ನು ಅಂಚೆಯ ಮೂಲಕವೋ, ರೈಲಿನಲ್ಲೋ ಹ್ಯಾಗೆ ಕಳಿಸಬೇಕೆಂದು ಬರಿಯಿರಿ.

ನಮ್ಮ ವಿಳಾಸ—ಪಿ. ನಾರಾಯಣಸಾಮಿ ನಾಯುಡು,
43, ಪಳಯಪ್ಪನ್ ಸ್ಟ್ರೀಟ್, ಮಿಂಟ್ ಬಿಲ್ಡಿಂಗ್ ಪೋಸ್ಟ್,
[168-1] ಮದರಾಸ್, ಇ.

ಬೇಕಾದವರು ಗಮನಿಸಿ.

ತ್ವರೆಮಾಡಿ ! ಕೆಲವು ದಿನಗಳು ಮಾತ್ರ

ಸೋಲಾಪುರದ ಚೆಕ್ಕು, ಶೀರೆ, ಖಣ, ಕಿರಿಗೆ.

ಹಣ ಮುಂಗಡವಾಗಿ ಕಳುಹಿಸತಕ್ಕ ವ್ಯಾಪಾರಿಗಳಿಗೆ ಮಾತ್ರ ತರಹವಾರಿ ಚೆಕ್ಕು, ಶೀರೆ, ಖಣ, ಕಿರಿಗೆ ಇವು ಬಹಳ ಸುಲಭ ಖರೀದಿಗೆ ಒದಗಿಸುವ ಏರ್ಪಾಡು ಮಾಡಲ್ಪಟ್ಟಿದೆ. ನಮ್ಮ ಕಾಯಂ ಗಿರಾಕಿಗಳಿಗೆ ಎಲ್ಲರಿಗಿಂತ ಸುಲಭ ಕ್ರಯಕ್ಕೆ ದೊರೆಯುವುದು.

ಹೊಸ ಗಿರಾಕಿಗಳು ತಮಗೆ ಬೇಕಾದನ್ನು ನನಗೆ ಬರೆದು ಹಣ ಮುಂಗಡ ರವಾನಿಸಿದರೆ ಅವರಿಗೂ ಕಾಯಂ ಗಿರಾಕಿಗಳ ದರಕ್ಕೆ ಜವಳಿ ದೊರೆಯುವುದು.

ಹಣ ಕಳುಹಿಸದೆ ಬರೆಯತಕ್ಕ ಕಾಗದಗಳಿಗೆ ಬೇಗ ಗಮನಕೊಡಲು ಅನುಕೂಲವಿಲ್ಲ. ಕಾಗದ ಪತ್ರಗಳನ್ನು ಬೆಳಸುವದರಿಂದ ಖರೀದಿಗಳು ಬದಲಾಯಿಸುವದಿಲ್ಲವೆಂಬ ವಿಷಯ ಜ್ಞಾಪಕದಲ್ಲಿಡಬೇಕು. [28-28]

ಇಂಡಿಯನ್ ಕೊಆಪರೇಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್,
169, ಕಿಲಾರಿ ರೋಡ್ (ಕುಂಚಿಗರ ಪೇಟೆ), ಬೆಂಗಳೂರು ಸಿಟಿ.

ಗೃಹಕೃತ್ಯದ ನೋಟೀಸು.

ಶಿವಮೊಗ್ಗ ಡಿಸ್ಟ್ರಿಕ್ಟ್ ತೀರ್ಥಹಳ್ಳಿ ತಾಲ್ಲೂಕು ನವಿ ಆಬೆ ಬೊಮ್ಮರೆಯ್ಯನ ಅಗ್ರಹಾರದಲ್ಲಿರುವ ಗುರುನಾಥದೀಕ್ಷಿತರ ಮಕ್ಕಳು ಕಾಶಿಸೂರ್ಯನಾರಾಯಣದೀಕ್ಷಿತನು ನನ್ನ ಹಿರೀಮಗನಾದ ಮಲ್ಲಾರಿದೀಕ್ಷಿತನಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ.—ಅನಾಚೀನವಾಗಿ ಎಲ್ಲರೂ ಏಕಗೃಹಕೃತ್ಯದಲ್ಲಿರುವುದು ಸರಿಯಷ್ಟೆ. ಈಚೆಗೆ ಎರಡು ವರ್ಷದಿಂದ ನೀನು ಕಾಳಿಂಗಯ್ಯನ ಪುಟ್ಟೋ ರಾಯ, ಅವನ ವ್ಯಕ್ತಿ ಲಂಬಾಬಾಯಿ ಎಂಬುವಳನ್ನೂ ಕೂಡ ನನ್ನ ಮನೆ ಸಮೀಪದಲ್ಲಿ ತಂದು ಇಟ್ಟುಕೊಂಡು ಇವರ ದುಬೋಧನೆಗೆ ಒಳಪಟ್ಟು ಸಂಸಾರ ಆಡಳಿತ ಸಾಲಮೂಲ ವಗೈರೆ ಕೆಲಸಗಳಿಗೆ ನೀನು ಕುಂದಕ ತಂದು ಮುಂದೆ ಗೃಹಕೃತ್ಯ ವಗೈರೆ ಕೆಲಸಗಳನ್ನು ನಿರ್ವಹಿಸಿಕೊಂಡು ಹೋಗಲಿಕ್ಕೆ ಆತಂಕಪಡಿಸಿ ನನ್ನ ಹೆಂಡತಿಮಕ್ಕಳು ಮತ್ತು ನನ್ನ ಮನೆಗೆ ಸೇರಿದ ಹೆಣ್ಣುಮಕ್ಕಳಿಗೂ ಕೂಡ ಅತಂತ್ರವಾಡಿ ಭೀತಿಪಡಿಸಿ ಮನೆಯಿಂದ ಹೊರಹೊರಡಿಸಿ ಇರುವುದಲ್ಲದೆ ಇದೇ ತಿಂಗಳು ತಾರೀಖು 26-7-1914 ರಲ್ಲೂ ನೀನು ನನ್ನಿಂದ ಸದರಿ ಪುಟ್ಟೋರಾಯನ ನಿರ್ಬಂಧದ ಮೇಲೆ ನಿನ್ನ ಹೆಸರಿನ ಛಾಪಾ ಕಾಗದದಲ್ಲಿ ಕಟ್ಟುನಾಗ ಎಂಬುದನ್ನು ಬರಸಿಕೊಂಡಿರುತ್ತಿ. ಆ ನಿರ್ಬಂಧಕಾಲದಲ್ಲಿ ನಾನು ಬರೆದುಕೊಡಲೇ ಬೇಕಾಗಿ ಬಂತು. ಸದರಿ ಕಟ್ಟುಡಕವನ್ನು ನಾನು ಉದ್ದೇಶಪೂರ್ವಕವಾಗಿ ಬರೆದುಕೊಟ್ಟಿದ್ದಲ್ಲ; ಈ ನೋಟೀಸು ಮೂಲಕ ಆ ಕಟ್ಟುಡಕವನ್ನು ರದ್ದು ಪಡಿಸಿರುತ್ತೇನೆ. ಇನ್ನು ಮುಂದೆ ನನ್ನ ಸಂಸಾರಕ್ಕೆ ಸಂಬಂಧಪಟ್ಟ ಚರ ಸ್ಥಿರ ಆಸ್ತಿಗಳ ಜವಾಬ್ದಾರಿ ಮೇಲೆ ಯಾರೂ ಸಾಲ ಸಂಬಂಧ ವಗೈರೆ ಕೊಡಕೂಡದು. ಹಾಗೆ ಕೊಟ್ಟಾಗ್ಯೂ ಪರಾ ಇದರಿಂದ ರದ್ದುಪಡಿಸಿರುತ್ತೆ. ಮತ್ತು ಈ ಆಸ್ತಿಗೆ ಸಂಬಂಧಪಟ್ಟ ವ್ಯವಹಾರಗಳೂ ಸಹ ಇರುತ್ತಾರೆ [174-1]

ಕ. ಸೂರ್ಯನಾರಾಯಣದೀಕ್ಷಿತನ ರುಜು.

CLEARANCE SALE! CLEARANCE SALE

ನೀವು ಬೈಸಿಕಲ್ಲನ್ನು ಕೊಳ್ಳಬೇಕೆಂದು ಅಭಿಪ್ರಾಯಪಟ್ಟಲ್ಲಿ ವಿಶೇಷ ಪ್ರಖ್ಯಾತಿಹೊಂದಿ ಅನೇಕ ಕಾಲ ಕೆಟ್ಟುಹೋಗದೆ ಕೆಲಸಮಾಡುವಂಥಾ

ಬ್ರಿಟಾನಿಯಾ ಪಾಪ್ಯುಲರ್ ಬೈಸಿಕಲ್ಲನ್ನು

ಉಪಯೋಗಿಸಬೇಕು.

[159-3]



1. ಡನ್‌ಲಾಪ್ ಟಯರ್ಸ್.
2. ಸ್ಪ್ರಿಂಗು ಸಾಡಲ್.

ಮೇಲೆ ಹೇಳಿದ ಎರಡರ ಕೂಡ 80 ರೂಪಾಯಿಗೆ ಬಿಕರಿ ಮಾಡುವಂಥಾ ಭಾರಿ ಬೈಸಿಕಲ್ಲನ್ನು ಯಾರೇ ಆಗಲಿ ಈ ಕೆಳಗೆ ಕಾಣಿಸಿರುವ ಸ್ವಲ್ಪ ಬೆಲೆಗೆ ಮಾರಲಿಲ್ಲ. ಈ ಬೈಸಿಕಲ್ಲನ್ನು ಇಂಗ್ಲೆಂಡ್ ದೇಶದಲ್ಲಿ ಬಹುಕಾಲದಿಂದ ಪ್ರಖ್ಯಾತಿಹೊಂದಿರುವ ಕಂಪೆನಿಯವರಲ್ಲಿ ಒಳ್ಳೇ ಸಾಮಾನುಗಳಿಂದ ಮಾಡಿದ್ದಾಗಿದೆ.

ನಾವು ಇವುಗಳನ್ನು ಬಹಳ ಜೆಲ್ದಾಗಿ ತರಿಸುವುದಕ್ಕೆ ಕಾರಣವೇನೆಂದರೆ ಇವನ್ನು ದಕ್ಷಿಣ ಇಂಡಿಯದಲ್ಲಿರುವ ಜನರಲ್ಲಿ ಪ್ರಚಾರ ಮಾಡಬೇಕೆಂತಲೇ ! ಆದ್ದರಿಂದ ಇವನ್ನು, ನೂರಕ್ಕೆ 25 ರೂಪಾಯಿ ಕಮಿಷನ್ ಕೊಟ್ಟು ಮಾರಿಬಿಡುತ್ತೇವೆ.

ಇದರ ಕ್ರಯ ರೂ. 80.

ಈಗ ಕಮಿಷನ್ ತೆಗೆದು ಮಾರುವ ಕ್ರಯ ರೂ. 59
ಕೇಮ್‌ಬ್ರಿಡ್ಜ್ ಟೈಯರ್ ಉಳ್ಳದ್ದರ ಕ್ರಯ ,, 55

ಕೆಟಲಾಗು ಉಚಿತವಾಗಿ ಕಳುಹಲಾಗುತ್ತೆ.

ವಾಟ್ಸನ್ ಅಂಡು ಕಂಪೆನಿ, ನಂ. 164, ಬ್ರಾಡ್‌ವೆ, ಮದರಾಸ್.

ತಾಲ್ಲೋಕು ವರ್ತಮಾನಗಳು.

ಶಿಡ್ಲಘಟ್ಟ ತಾ॥ ಗಂಜಿಗುಂಟೆ.—ಈ ವರುಷ ಮುಂಗಾರು ಮಳೆ ಬಾರದೆ ಜನ ದನಗಳಿಗೆ ಕುಡಿಯುವದಕ್ಕೆ ನೀರು ಸಹ ಸಿಕ್ಕದೆ ತುಂಬಾ ತೊಂದರೆಯಾಗಿದೆ. ಬಡವರಂತು ಒಪ್ಪತ್ತು ಸಹ ತಿಂಡಿ ತಿನ್ನುವಹಾಗೆ ಕಾಣಲಿಲ್ಲ. ಈ ಬಡಜನಗಳು ಕೂಲಿಯಾದರೂ ಮಾಡಿ ಜೀವನವಮಾಡುವದಕ್ಕೆ ಕೆಲಸಮಾಡಿಸತಕ್ಕವರು ಇಲ್ಲ.—ಕಳೆದ ತಾ. 13 ರಲ್ಲಿ ನಮ್ಮ ಕೋಲಾರದ ಡೆಪ್ಯುಟಿ ಕಮಿಷನರ್ ಮಿ॥ ಪಿ. ಎಫ್. ಬವರಿಂಗ್‌ಯವರು ಚಿಂತಾಮಣಿಯಿಂದ ಬಾಗೇಪಲ್ಲಿಗೆ ಹೋಗುವದಕ್ಕಾಗಿ ಈ ಮಾರ್ಗವಾಗಿ ದಯಮಾಡಿಸಿದಾಗ ಈ ಗ್ರಾಮದ ದೊಡ್ಡಮನುಷ್ಯರು ಮ॥ ಕೆ. ಮುನಿಸ್ವಾಮಿ ಮೊದಲಿಯಾರ್ ವಗೈರೇರು ಸೇರಿ ಈ ಕ್ಷಾಮದ ವಿಚಾರ ಕುರಿತು ಅರ್ಜಿಕೊಟ್ಟರು. ಅದರ ಮುಖ್ಯ ಅಂಶವೇನೆಂದರೆ ಈ ಪ್ರಾಂತ್ಯ ಮಳೆಗಳು ೩-೩ ವರುಷಗಳಿಂದ ಇಲ್ಲದೆ ಜನಗಳಿಗೆ ತುಂಬಾ ತೊಂದರೆಯಾಗಿದೆ. ಬಡಜನಗಳು ತಿಂಡಿಗೆ ಇಲ್ಲದೆ ಕಳ್ಳತನಮಾಡಿ ಹೊಟ್ಟೆಹೊರಕೊಳ್ಳಬೇಕಾಗಿದೆ. ಆದ್ದರಿಂದ ಈ ಗ್ರಾಮದ ಪೂರ್ವಭಾಗದಲ್ಲಿರುವ ಹಿರಿಕೆರೆ ಎಂಬ ಮೈನರ್ ಕೆರೆಗೆ ರಿಲೀಫ್ ಕಾಮಗಾರಿ ಮಾಡಿಸಿಕೊಡಬೇಕೆಂತ ಕೇಳಿಕೊಂಡದ್ದಕ್ಕೆ ಸಾಹೇಬರವರು ಈ ವಿಚಾರ ನೋಟ್‌ಮಾಡಿಕೊಂಡು ಇರುತ್ತಾರೆ. ಅವರು ಬಂದದ್ದರಿಂದ ನಮ್ಮಗಳಿಗೆ ಹೊಟ್ಟೆತುಂಬಾ ಅನ್ನಾ ಸಿಕ್ಕುವಹಾಗೆ ಇದೆ ಎಂತ ಜನರು ಸಂತೋಷಪಡುತ್ತಾ ಇದಾರೆ. ಜಾಗ್ರತೆಯಾಗಿ ಆರ್ಡರು ಬರುತ್ತದೆಂದು ನಂಬಿರುತ್ತೇನೆ.—ಈ ಗ್ರಾಮದಲ್ಲಿ 30 ವರುಷಗಳಿಂದ ಸ್ಕೂಲ್ ಇತ್ತು. ಸರ್ಕಾರದವರು ಅದನ್ನು ಬಾಲಕರು ಇಲ್ಲವೆಂದು ವಜಾಮಾಡಿ 6 ತಿಂಗಳಾಯಿತು. ಈಚೆಗೆ ಪುನಹ ಸ್ಕೂಲ್ ಆಗಬೇಕೆಂತಲೂ, 40 ಜನ ಹುಡುಗರನ್ನು ಜಮಾಯಿಸಿಕೊಡುತ್ತೇವೆಂತಲೂ ಬರೆದುಕೊಟ್ಟಿರುತ್ತಾರೆ. ಇದನ್ನು ಸರ್ಕಾರದವರು ಮಂಜೂರು ಮಾಡಿಸಿಕೊಡುತ್ತಾರೆಂತ ನಂಬಿರುತ್ತೇನೆ.

ಮಂಡ್ಯ.—ಪ್ಲೇಗ್ ವ್ಯಾಧಿಯು ತಲೆದೋರಿ ಈ ವರೆವಿಗೂ ಕೆಲವು ಮರಣಗಳಾದವು. ಕೆರೆಪೇಟೆಯ ಕಡೆ ಸೋಂಕು ಸೂಚನೆಗಳು ಆಗಾಗ್ಗೆ ಕಂಡುಬರುತ್ತಿವೆ. ಅನೇಕರು ಊರನ್ನು ಬಿಡುವ ತರದೂದಿನಲ್ಲಿದಾರೆ. ಅನೇಕರು ಬಿಟ್ಟಿದಾರೆ. ತಾ. 20 ರಲ್ಲಿ ಮೈಸೂರು ಡಿ॥ ಹೆಲ್ತ್ ಆಫೀಸರ್ ಮ॥ ಕೃಷ್ಣರಾಯರು ನಮ್ಮೂರಿನ ಡಾಕ್ಟರು ಮತ್ತು ಅಮಲ್ದಾರು ಮೊದಲಾದವರೊಂದಿಗೆ ಸಂಶಯದಲ್ಲಿದ್ದ ರೋಗಿಗಳ ಮನೆಗಳಿಗೆ ಹೋಗಿ ಪರೀಕ್ಷಿಸಿಕೊಂಡು ಪ್ಲೇಗ್ ವ್ಯಾಧಿಯೂ ಅಲ್ಲದೆ ಡೆಂಗ್ಯು ಜ್ವರವೆಂಬ ಜಾಡ್ಯವೆಂಬ ಜಾಡ್ಯವೂ [sic] ಹರಡಿದೆ ಎಂದು ತಿಳಿದುಕೊಂಡರು. ಮ್ಯುನಿಸಿಪಾಲಿಟಿ ವಿಚಾರವೂ, ಸೀಸೀರಿನ ವಿಚಾರವೂ, ಹವಾಸ್ಥಿತಿಯೂ ಈಗ ಅಧಿಕಾರಿಗಳ ಗಮನಕ್ಕೆ ಬಂದಿರುವುದು ಸಂತೋಷ.—ತಾ. 18 ರಲ್ಲಿ ಮೈಸೂರಿನಿಂದ ವಿಸರ್ಜ್ ಲೇಡಿ ಡಾಕ್ಟರುಗಳಿಬ್ಬರು ಮಂಡ್ಯಕ್ಕೆ ಬಂದು ಇಲ್ಲಿನ ಸ್ಥಿತಿಗತಿಯನ್ನು ವಿಚಾರಿಸಿ ಪ್ರತಿ ಗುರುವಾರವೂ ಹೆಂಗಸರು ಮಕ್ಕಳ ರೋಗ ಚಿಕಿತ್ಸೆಗಾಗಿ ಔಷಧಶಾಲೆಯೊಂದನ್ನು ಏರ್ಪಡಿಸಬೇಕೆಂದು ಆಲೋಚನೆಮಾಡಿಕೊಂಡು ಹೋದರು.—ಆಗಾಗ್ಗೆ ಸೋನೆಮಳೆಯಾಗುತ್ತಿದ್ದರೂ ಬೆಳೆಗಳಿಗೆ ಏನೂ ಪ್ರಯೋಜನವಿಲ್ಲ. ಧಾರಣೆ ಏರಿದೆ. ರಾಗಿ 10-11 ಸೇರಿನ ಮೇಲಿಲ್ಲ. ಇತರ ದವಸ ಧಾನ್ಯಗಳ ಬೆಲೆಯನ್ನು ಹೇಳಬೇಕಾದದಿಲ್ಲ. ಈಗೀಗ ಅಳತೆ ಸೇರುಗಳ ಮತ್ತು ಬಟ್ಟುಗಳ ಸಾಗದಿಯು ಜಾರಿಯಲ್ಲಿ ಬಂದಿದ್ದರೂ ದವಸ ಧಾನ್ಯಗಳಲ್ಲಿ ಕಲ್ಲು ಮಣ್ಣು ಮಿಶ್ರಮಾಡಿ ಮಾರುವ ಗುಪ್ತಮೋಸ ಬೇರೆ ಹುಟ್ಟಿದೆ. ಬಡಬಗ್ಗರು ಬದುಕುವುದು ದುರ್ಲಭವಾಗಿದೆ. ಸರ್ಕಾರದ ಕಡೆಯಿಂದ ಒಂದು ಅಂಗಡಿಯು ಈ ಕಾಲಕ್ಕೆ ಆದರೆ ಎಷ್ಟೋ ಉಪಕಾರವಾದೀತು.—ಊರೊಳಗೂ ರಸ್ತೆ ಪಕ್ಕಗಳಲ್ಲಿರುವ ಹಳ್ಳಗಳ ಬಳಿಯಲ್ಲೂ ಮೋಟರ್ ಗಾಡಿಗಳ ವೇಗವನ್ನು ಕಡಮೆ ಮಾಡುವಂತೆ ಸರ್ಕಾರದವರು ಆರ್ಡರ್ ಮಾಡಿ ಜಾರಿಗೆ ತಂದರೆ ಅನರ್ಥಗಳು ಬಹು ಮಟ್ಟಿಗೆ ಕಡಮೆಯಾಗುವವು.—ಕಳ್ಳರ ಅವಾಂತ್ರ ಹೇಳತೀರದು. ಕಳೆದ ಮಂಗಳವಾರ ಶ್ರೀನಿವಾಸರಾಯರ ಛತ್ರದಲ್ಲಿ ಕಳ್ಳರು ಪ್ರವೇಶಿಸಿ ನೂರಾರು ರೂಪಾಯಿ ಬಾಳುವ ವಸ್ತುಗಳನ್ನು ದೋಚಿಕೊಂಡು ಹೋದದಲ್ಲದೆ ಅಲ್ಲಲ್ಲಿ ಕಲ್ಲು ದೊಣ್ಣೆಗಳನ್ನು ಇಟ್ಟು ಹೋಗಿದ್ದರು. ಪೊಲೀಸ್ ಇನ್ಸ್‌ಪೆಕ್ಟರ ವಾಸ ಮಧ್ಯದಲ್ಲಿ ಆದರೂ ಈಗ ಹೊಸದಾಗಿ ಬಂದಿರುವ ಜಮೇದಾರ್ ಕಾಶೀಪತಯ್ಯನವರು ಇನ್ನು ಮುಂದೆ ಕಳ್ಳತನ ನಡೆಯದಂತೆ ಪ್ರಯತ್ನಪಡುತ್ತಿರುವದಕ್ಕಾಗಿ ಅನೇಕರು ಸಂತೋಷಪಡುತ್ತಾರೆ.

ಹುಣಸೂರು.—ಇಲ್ಲಿ ಇನ್ನೂ ಪಡಿಮಳೆಯಾಗುತ್ತಲೇ ಇದ್ದು ಶೀತಗಾಳಿ ಬೀಸುತ್ತಿದೆ. ಲಕ್ಷ್ಮಣತೀರ್ಥ ಹೊಳೆಯಲ್ಲಿ ಕೊಡಗಿನಲ್ಲಿ ಯಥೇಷ್ಟ ಮಳೆಯಾಗುತ್ತಿರುವುದರಿಂದ ಪೂರ್ಣಪ್ರವಾಹ ಬಂದಿದೆ. ಸುಮಾರು 17॥ ಅಡಿಯ ಪ್ರಮಾಣದ ನೀರು ಸೇತುವೆಯ ಕಮಾನುಗಳ ಮೂಲಕ ಹೊರಳಿಹೋಗುತ್ತಿದೆ.— ಮ್ಯುನಿಸಿಪಾಲಿಟಿಯವರು ಬ್ರಾಹ್ಮಣರ ಕೇರಿಯಲ್ಲಿ ಜಲ್ಲಿ ಹರಡಿ 15 ದಿನಗಳಿಗೆ ಹೆಚ್ಚಾಗಿದ್ದರೂ ಗ್ರಾವಲ್ ಹಾಕಿ ಮುಚ್ಚದೆ ಬಿಟ್ಟಿದಾರೆ. ಕತ್ತಲೆಕಾಲದಲ್ಲಿ ಧಾರಾಳವಾಗಿ ಸಂಚರಿಸಲು ಅಡಚಣೆಯಾಗಿದೆ. ನಡುಪೇಟೆಯಲ್ಲಿ ರಸ್ತೆ ಬಹಳ ಕೊಚ್ಚಾಗಿ ಕೆಟ್ಟುಹೋಗಿದೆ. ಈಗಲಾದರೂ ಮ್ಯುನಿಸಿಪಾಲಿಟಿಯವರು ಕೆರೂಹ ಎಟ್ಟು ರಸ್ತೆಗೆ ಜಲ್ಲಿ ಗ್ರಾವಲ್ ಹಾಕಿಸಿ ರಸ್ತೆಯನ್ನು ಗಟ್ಟಿಯಾಗಿ ಮಾಡಿಸಿಕೊಡಬೇಕಾಗಿದೆ. ಡೆಪ್ಯುಟಿ ಇನ್ಸ್‌ಪೆಕ್ಟರವರು ಬಂದು ಗೌ॥ ಎ. ವಿ. ಮತ್ತು ವೆ. ಮಿ. ಗರ್ಲ್ಸ್, ಪಂಚಮ ಸ್ಕೂಲುಗಳನ್ನು ಇನ್ಸ್‌ಪೆಕ್ಟ್ ಮಾಡಿಕೊಂಡು ಮೈಸೂರಿಗೆ ಹೋದರು.—ಗುರುವಾರ ಸಾಯಂಕಾಲ ಗೌ॥ ಎ. ವಿ. ಸ್ಕೂಲಿನಲ್ಲಿ ಒಬ್ಬ ಮುಸಲ್ಮಾನರ ಮೌಲ್ವಿಯವರು ಇಂಗ್ಲಿಷ್ ಹಿಂದುಸ್ಥಾನಿ ಭಾಷೆಗಳಲ್ಲಿ ಪ್ರೀತಿ ಎಂಬ ವಿಷಯ ಉಪನ್ಯಾಸಮಾಡಿದರು. ಅಮಲ್ದಾರರು ಚೇರ್ಮನ್ ರಾಗಿದ್ದರು. ಇಂಗ್ಲಿಷ್ ಹಿಂದುಸ್ಥಾನಿ ಭಾಷೆಗಳನ್ನು ತಿಳಿದ ದೊಡ್ಡಮನುಷ್ಯರು ಹಾಜರಾಗಿ ಕೇಳಿ ತುಂಬಾ ಸಂತೋಷಪಟ್ಟರು.—ಕುಡಿಯುವ ನೀರಿಗಾಗಿ ಸ್ಟಾಂಡಿಷ್ ಲೀ ಸಾಹೇಬರ ಕಾಲದಲ್ಲಿ ರಿಜರ್ವಾಯರ್ ಕಟ್ಟಿ ಪೈಪ್ ಹಾಕಿದ್ದು ಪೈಪುಗಳು ಮಣ್ಣುಹಿಡಿದು ಮುಕ್ಕಾಲು ನೀರೆಲ್ಲಾ ಭೂಮಿಯಲ್ಲೇ ಇಂಗಿಹೋಗುತ್ತೆ. ಹೆಸರಿಗೆ 10-12 ನಲ್ಲಿಗಳಿವೆ. ಈಗ ಎರಡು ನಲ್ಲಿ ಮಾತ್ರ ಸಾಧಾರಣವಾಗಿವೆ. ಬಾಕಿ ನಲ್ಲಿಗಳಿಗೆ ನೀರೇ ಹತ್ತುವುದಿಲ್ಲ. ಇದಕ್ಕಾಗಿ 3 ಜನ ಕ್ಲೀನರುಗಳು, ಒಬ್ಬ ಟರ್ನ್‌ಕೀ ಇರುತ್ತಾರೆ. ನಲ್ಲಿಗಳ ಹತ್ತಿರ ಗಲೀಜು ಹೇಳಬೇಕಾದದ್ದೇ ಇಲ್ಲ.—ಸಂತೇಲಿ ಮಳೆ ಬಂದರೆ ಸಂತೆಗಾಗಿ ಬರುವ ಜನರು ಸರಿಯಾಗಿ ಕೂತು ವ್ಯಾಪಾರಮಾಡಲು ಅನುಕೂಲವಿಲ್ಲ. ಕೆಸರು ಕೊಚ್ಚೆ ಹೇಳಬೇಕಾದದ್ದೇ ಇಲ್ಲ. ಮ್ಯುನಿಸಿಪಾಲಿಟಿಯವರು ಜನರಿಂದ ತೆರಿಗೆ ವಸೂಲುಮಾಡುವುದರಲ್ಲಿ ಇರುವ ಮುತುವರ್ಜಿಯಲ್ಲಿ ಅರ್ಧದಷ್ಟಾದರೂ ಅವರ ಅನುಕೂಲಕ್ಕಾಗಿ ತೋರಿಸಿದಲ್ಲಿ ಗ್ರಾಮಸ್ಥರು ಮ್ಯುನಿಸಿಪಾಲಿಟಿಯವರಿಗೆ ತುಂಬಾ ಕೃತಜ್ಞರಾಗಿರುತ್ತಾರೆ.

ನಮ್ಮ ಏಜಂಟರಿಗೂ ಚಂದಾದಾರರಿಗೂ.

"ವೃತ್ತಾಂತ ಪತ್ರಿಕೆ" ಯ ಹೊಸ ವರುಷವು ಕಳೆದ ಜೂನ್ ತಿಂಗಳಿಂದ ಪ್ರಾರಂಭವಾಗಿದೆ. ನಮ್ಮ ಏಜಂಟರು ತಮ್ಮ ಸ್ಥಳದ ವಾಚಕರಿಂದ ಹೊಸ ವರುಷದ ಚಂದಾ ಒಂದು ರೂಪಾಯಿಯನ್ನು ಈ ವರೆಗೆ ಅಡ್ವಾನ್ಸಾಗಿ ವಸೂಲ್ಮಾಡಿದಾರೆಂದು ನಿರೀಕ್ಷಿಸುತ್ತೇವೆ. ಹಾಗೆ ಅಡ್ವಾನಸು ಚಂದಾ ಕೊಡದೆ ಇರುವವರಿಗೆ ಏಜಂಟರು ಪತ್ರಿಕೆಗಳನ್ನು ಕೊಡಕೂಡದು.

ಚಂದಾದಾರರು ದಯವಿಟ್ಟು ನಮ್ಮ ಏಜಂಟರಿಗೆ ಪೂರ್ತಿ ವರುಷದ ಚಂದಾ ಒಂದು ರೂಪಾಯಿ ಅಡ್ವಾನ್ಸಾಗಿ ಪಾವತಿಮಾಡಿ, ಅಬಳ್ಳೆ ಅವರಿಂದ ಕ್ರಮವಾದ ಅಚ್ಚಾಗಿರುವ ರಸೀತಿಗಳನ್ನು ಪಡೆಯಬೇಕೆಂದು ಕೃತಪಡಿಸುತ್ತೇವೆ.

ಮ್ಯಾನೇಜರ್, "ವೃತ್ತಾಂತ ಪತ್ರಿಕೆ," ಮೈಸೂರು.

ಕುಂತಲಾನಂದ ತೈಲವು.

192-46

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಿರುದಿನ ಬಿಲ್ಲೆಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ. ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳನ್ನು ಶ್ಲಾಘಿಸಿರುವರು.

ಈ ತೈಲವು ಕೂದಲನ್ನು ಚನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ತಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುತ್ತದೆ. ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದಾಗಿದೆ. ಬೆಲೆ ಬಾಟ್ಲಿಗೆ 1 ರೂಪಾಯಿ 3 ಬಾಟಲಿಗೆ 2 ರೂಪಾಯಿ 10 ಅಣೆ. ಅಂಚೆ ಹಾಸಲು ಬೇರೆ. ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ.

ನಮ್ಮ ವಿಳಾಸ:—ಬಿ. ಎಮ್. ನಾಥ ಮತ್ತು ಕಂಪೆನಿ,
ವೇಪೇರಿ, ಮದರಾಸ್

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು"

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು. ವಾಯು, ಕೀಲು, ಆರತಲೆ, ತಲೆನೋವುಗಳು; ಯಾವ ಕಾರಣದಿಂದ ಹುಟ್ಟುವ ಬಾಧೆಗಳೂ, ಉಬ್ಬಸ, ಹಲ್ಲುನೋವು, ಗಂಟಲು ಗಾರೆನ್ನುವುದು, ಕೆಮ್ಮುಗಳು, ಚಿತಸೆಳಿ, ಶ್ವಾಸರೋಗ, ಜಡ್ಡು, ಉಳುಕು, ಥಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ. ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು. ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲು ಕೊಡಿ ಎಂದು ಕೇಳು. ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೋ. ಈ ಯುಕ್ತಿಯೋಪಾಧಿ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ. ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ. ಲಕ್ಷಾಂತರ ಜನರು ಗುಣಹೊಂದಿದಾರೆ; ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ. [122-10]

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡಿ. ಅದರ ಕ್ರಯ ಬಾಟ್ಲಿಗೆ 12 ಆಣೆ; ಅಂಚೆ ವೆಚ್ಚ 4 ಆಣೆ. 3 ಅಥವಾ ಹೆಚ್ಚು ಬಾಟ್ಲು ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ. ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ. ವಿಳಾಸಗಳು:—(1) ಎಸ್. ಪೀಟರ್ಸ್, 37 ವಡಮಲೆಪಿಳ್ಳೆ ಬೀದಿ, ಪುಸೆವಾಕಂ, ವೇಪೇರಿ, ಮದರಾಸ್; (2) ಕೆ. ಎಸ್ ಕನ್ನಯ್ಯಶೆಟ್ಟರು, ಜನರಲ್ ಮರ್ಚೆಂಟ್, ತುಮಕೂರು.

ಸುಖಕರ, ಆನಂದ, ಬಹಳ ಅವಶ್ಯ.

ಈಗ ತಾನೇ ಕಂಡುಹಿಡಿದಿದೆ.

ಜಪಾನ್ ರಾಜ್ಯದಲ್ಲಿ ನೂರಾರು ವರುಷಗಳಿಂದ ಉಪಯೋಗದಲ್ಲಿದೆ.

ಸೆಶಿಂತಾನ

ಬೆಳ್ಳಿಯ ವರಕು ಸುತ್ತಿದ ಮುತ್ತುಗಳು.

(1) ಮನಸ್ಸಿಗೆ ಹರ್ಷವನ್ನೂ ಉಲ್ಲಾಸವನ್ನೂ ಕೊಟ್ಟು ಜೀರ್ಣಶಕ್ತಿಯನ್ನುಂಟುಮಾಡುವುದು.

(2) ಹಾಡುವವರಿಗೆ ವರಪ್ರಸಾದವಾದದ್ದು.

(3) ಬಾಯಿ ದುರ್ಗಂಧ, ಗಂಟಲು ಗಾರೆನ್ನುವುದು, ಉಬ್ಬಸ, ಸಮುದ್ರಯಾನದ ಜುಗುಪ್ಸೆ, ಈ ಮೊದಲಾದವನ್ನು ಸುಟ್ಟಂತೆ ಅಡ್ಡಿಮಾಡುತ್ತದೆ.

(4) ತಾಂಬೂಲದೊಡನೆ ಸೇವಿಸುವುದಕ್ಕೆ ಅತ್ಯಂತ ಹಿತಕರವಾಗಿದೆ. [73-21]

ಒಂದು ಸಲ ಪರೀಕ್ಷೆಮಾಡಿದಲ್ಲಿ ಯಾವಾಗಲೂ ಒಂದು ಪೊಟ್ಟಣ ಇದ್ದೇ ತೀರಬೇಕೆಂದು ನೀವೇ ನಿಶ್ಚಯಿಸುವಿರಿ.

ಮುತ್ತಿನಂತಿರುವ	45 ಮಾತ್ರೆ	ಉಳ್ಳ	ಪೊಟ್ಟಣಕ್ಕೆ	ಕ್ರಯ	2	ಆಣೆ.
,,	95	,,	,,	,,	4	,,
,,	200	,,	,,	,,	7	,,
,,	200	,, ಸುಂದರವಾದ ಟಿನ್ ಡಬ್ಬಿ			9	,,
,,	80	,,	,,	,,	4	,,
,,	100	,, ಬಾಟ್ಲಿಯಲ್ಲಿ			4½	,,

ಈ ಕ್ರಯದಷ್ಟು ಸ್ಟಾಂಪನ್ನೂ, ಅಂಚೆ ವೆಚ್ಚಕ್ಕೆ ಜಾಸ್ತಿ ಒಂದಾಣೆಯನ್ನೂ ಸೇರಿಸಿ ಕಳುಹಿಸಬೇಕು. ಕಾಗದಪತ್ರವನ್ನೂ ವಿಳಾಸಗಳನ್ನೂ ನಮಗೆ ಇಂಗ್ಲೀಷಿನಲ್ಲೇ ಬರೆಯತಕ್ಕದ್ದು.

ನಮ್ಮ ವಿಳಾಸ—ಸೆಶಿಂತಾನ ಡಿಪೋ,
ಮೊಸೂರ್ ಬಿಲ್ಡಿಂಗ್, ಪ್ರಿನ್ಸೆಸ್ ಸ್ಟ್ರೀಟ್,
ಬೊಂಬಾಯಿ 2;
ಅಥವಾ, ಬಿ. ಸಿ. ಷಾ ಕಂಪೆನಿ,
509 ಮಿಂಟ್ ಬೀದಿ, ಮದರಾಸ್.

ಯಾಕೆ ಪರೀಕ್ಷಿಸಬಾರದು ? ಭಂಗಾರದ ಪದಕ ಬಂದಿದೆ.

ಸೆಂಟ್, ಅತ್ತರ್‌ಗಳಲ್ಲೆಲ್ಲಾ ಶ್ರೇಷ್ಠವಾದದ್ದು

ಆಟೋ ಮೋಹಿನಿ

ಇದು ರಜಿಸ್ಟರ್ ಆಗಿದೆ. ಈಗಿನ ಕಾಲದಲ್ಲಿ ಇದೇ ನಿಲ್ಲುವ, ಸುವಾಸನೆಯುಳ್ಳ, ಮನೋಹರವಾದ ಮತ್ತು ಸರಿಯಾದ ಪರಿಮಳದ ದ್ರಾವಕ. ಈ ವಸ್ತ್ರಕ್ಕೆ ನಾಲ್ಕು ತೊಟ್ಟು ಹಾಕಿಕೊಂಡರೆ ನಾಲ್ಕು ದಿನಗಳ ತನಕ ಘಮಘಮಿಸುವ ಸುವಾಸನೆ ಇರುತ್ತೆ. ಹಾಗೆ ದೀರ್ಘಕಾಲ ನಿಲ್ಲತಕ್ಕದ್ದಲ್ಲವೆಂದು ರುಜುವಾತು ಮಾಡಿಕೊಡುವವರಿಗೆ ನಾವು ಒಂದು ನೂರು ರೂಪಾಯಿ ಬಹುಮಾನ ಕೊಡುತ್ತೇವೆ. ಪರೀಕ್ಷೆಮಾಡಿ ನೋಡಿ, ಬಹುಮಾನವನ್ನು ಸಂಪಾದಿಸಿಕೊಳ್ಳಿ !

ಕ್ರಯ ½ ಔನ್ಸ್ ಗಾಜಿನ ಬಿರಡೆಯ ಬಾಟ್ಲಿಗೆ ರೂ. 2-0-0.
,, 1 ಡ್ರಾಂ ಕೊಳವೆ ,, ,, ,, 0-12-0.
ಆಟೋ ಮೋಹಿನಿ ಪರಿಮಳದ ಕಾರ್ಡುಗಳು ಡಜನ್ 1 ಕ್ಕೆ ರೂ. 0-12-0

ಎಲ್ಲರಲ್ಲೂ ವಿಕರಿಗೆ ಇಟ್ಟಿದೆ.

ಮದರಾಸ್ ಅಧಿಕಕ್ಕೆಲ್ಲಾ ಏಜಂಟರು—

ಷಾ ಭಗವಾನ್‌ದಾಸ್ ಚೂನಿಲಾಲ್ ಕಂಪೆನಿ,
[261-36] ೧೩೭, ಚೈನಾಬಜಾರ್ ರೋಡ್, ಮದರಾಸ್.

ಪ್ರೊಫೆಸರ್ ಗಜ್ಜರರವರ

ಗುಣಕಂಡ ಪ್ರಖ್ಯಾತವಾದ ಔಷಧಗಳು.

ವ್ಯರ್ಥವಾದ ಔಷಧಗಳನ್ನು ಉಪಯೋಗಿಸಿ ಪ್ರಾಣಾಪಾಯಕ್ಕೆ ಗುರಿಯಾಗುವುದೇಕೆ ? ವಿವೇಕದಿಂದ ತಯಾರ್ಮಾಡಿರುವ ನಮ್ಮ ಔಷಧಗಳನ್ನು ಸೇವನೆ ಮಾಡಬಾರದೇ ?

ಟಾನಿಕ್ ಸೋಲ್ಯೂಷನ್.—ಇದರಲ್ಲಿ ಗ್ಲಿಸರಿನೊಫೇಟ್ಸ್ ಎಂಬ ಅಮೂಲ್ಯ ಪದಾರ್ಥಗಳನ್ನು ಹಾಕಿ ತಯಾರ್ಮಾಡಿದೆ. ಇದು ಬೇಗನೆ ಶರೀರಕ್ಕೆ ಸೇರಿಹೋಗುತ್ತೆ. ಆರೋಗ್ಯವನ್ನೂ ಚಟುವಟಿಕೆಯನ್ನೂ ಶಕ್ತಿಯನ್ನೂ ವೃದ್ಧಿಮಾಡುವುದು. ನರಗಳ ದುರ್ಬಲವನ್ನೂ ಹೋಗಲಾಡಿಸುವುದರಲ್ಲಿ ಇದು ಬಹಳ ಶ್ರೇಷ್ಠವಾದ ಔಷಧ. ಕ್ರಯ ಶೀಸೆಗೆ 2 ರೂಪಾಯಿ, ಮತ್ತು ರೂ. 1-2-0.

ರಕ್ತಶುದ್ಧಿಗೆ ಮಹೌಷಧ.—ಇದು ರಕ್ತವನ್ನೂ ದೇಹದ ಎಲ್ಲಾ ಭಾಗಗಳನ್ನೂ ಶುದ್ಧಮಾಡುತ್ತೆ. ಬಹಳ ಚೆನ್ನಾಗಿ ಗುಣಕಂಡ ಔಷಧ. ಕ್ರಯ ಶೀಸೆಗೆ 1 ರೂಪಾಯಿ.

ಲಿವರ್ ಸೊಲ್ಯೂಷನ್.—ಪಿತ್ತಕೋಶದ ಮೇಲೆ ಇದು ಬಹಳ ಚೆನ್ನಾಗಿ ಕೆಲಸಮಾಡೋಣದರಿಂದ ಮಲಬದ್ಧತೆಯುಳ್ಳವರಿಗೆ ಮಹೋಪಕಾರಿಯಾಗಿದೆ. ಜ್ವರಕ್ಕೂ ಇದನ್ನು ಕೊಡುತ್ತಾರೆ. ಇದು ಮನೆಯಲ್ಲಿ ಇದ್ದೇ ತೀರಬೇಕು. ಕ್ರಯ ಶೀಸೆಗೆ ರೂ. 1; ಮತ್ತು ರೂ. 0-10-0.

ಜ್ವರದ ಔಷಧ.—ವಿಷಮಶೀತಜ್ವರ, ನಿಂತುಬರುವಜ್ವರ, ಅವಧಿಯಜ್ವರ, ಎಲ್ಲಾ ತರದ ಜ್ವರಗಳಿಗೂ ಇದು ಸಂಜೀವನವಾಗಿದೆ. ಇದು ಕ್ವಿನೈನ್‌ಗಿಂತ ಬಹಳ ಅಗ್ಗ. ಕ್ರಯ ಶೀಸೆಗೆ 10 ಆಣೆ ; 4 ಆಣೆ.

ಹುಳುಕಡ್ಡಿ ಔಷಧ.—ಹುಳುಕಡ್ಡಿಯನ್ನು ಖಂಡಿತವಾಗಿ ಗುಣಮಾಡುತ್ತೆ. ಕ್ರಯ ಸೀಸೆಗೆ 4 ಆಣೆ.

ಹಲ್ಲುಪುಡಿ.—ಈ ಪುಡಿಯಿಂದ ಹಲ್ಲು ಉಜ್ಜಿಕೊಂಡರೆ ಬಾಯಿಗೆ ಸುವಾಸನೆ ಕೊಡುತ್ತೆ. ಹಲ್ಲು ಸವೆದು ಕೆಡದಂತೆ ಬಹಳ ಚೆನ್ನಾಗಿಟ್ಟು ಕಾಪಾಡುತ್ತೆ. ಕ್ರಯ ಸೀಸೆಗೆ 4 ಆಣೆ ; 6 ಆಣೆ ; 1 ರೂಪಾಯಿ.

ಇಂಗ್ಲೀಷಿನಲ್ಲೇ ನಮಗೆ ಕಾಗದವನ್ನು ಬರೆಯಬೇಕು.

ಸೋಲ್ ಏಜಂಟರು :—ಎಸ್. ವೈದ್ಯ ಮತ್ತು ಕಂಪನಿ,
[156-4] ಪಾರ್ಕ್ ಟೌನ್, ಮದರಾಸ್.

ಇಂಗ್ಲಾಂಡಿನ ಬಾತ್ ನಗರದ ಟ್ರೌಬ್ರಿಡ್ಜ್‌ಂಟ್ ಪೇಟೆಯಲ್ಲಿರುವ ಮಿ॥ ಡಬ್ಲ್ಯು. ನೋಲ್ಸ್ ಬರೆಯುವುದು :—"ರಾತ್ರೀ ಹಗಲು ರೊಂಡಿ ನೋವಿನಿಂದ ಕಷ್ಟಪಟ್ಟೆನು. ನನ್ನ ಬೆನ್ನು ತೊಡೆಯುವೇಳೆನಿಂದ ಅಂಗಾಲಿನ ಪರ್ಯಂತರ ವಾಯುವಿನ ಹೊಡೆತದಿಂದ ಬಾಧೆಹೊಂದಿತು. ರಾತ್ರೀ ಹಗಲು ಕಷ್ಟಪಟ್ಟು ನನಗೆ ತಿಳಿದಿದ್ದ ಮದ್ದುಗಳನ್ನೆಲ್ಲಾ ಉಪಯೋಗಿಸಿದೆನು; ಅವರೂ ಯಾವುದೂ ಗುಣವಾಗಿಲ್ಲ. ಲಿಟಲ್ಸ್ ಓರಿಯಂಟಲ್ ಬಾಂ ಎಂಬ ತೈಲದ ಮೊದಲನೇ ಸೀಸಾಯು ಅರ್ಧ ಮುಗಿದದು. 2 ಸೀಸಾಯಿಗಳನ್ನು ಉಪಯೋಗಿಸಿದ್ದರಷ್ಟೇಲೆ ಅದರ ನೋವೇ ಇಲ್ಲವಾಯಿತು, ನನಗೆ ಪೂರ್ಣ ಗುಣವಾಯಿತೆಂದು ನಂಬುತ್ತೇನೆ."

ನಿನಗೆ ರೊಂಡೀ ನೋವಿದ್ದರೆ, ಅನುಮಾನಗಳನ್ನೆಲ್ಲಾ ಬಿಟ್ಟು, ನಿನ್ನ ಪ್ರಯೋಜನಕ್ಕೋಸ್ಕರವೂ ಈ ಮಹಾ ಔಷಧದ ಪರೀಕ್ಷೆಗೋಸ್ಕರವೂ ಪರೀಕ್ಷಿಸಿ ನೋಡು.

ಸೀಸೆ 1ಕ್ಕೆ 1 ರೂ. ಮೇಲಿಗೆ ಎಲ್ಲಾ ಔಷಧಗಾರರಲ್ಲಿಯೂ ಸಿಗುತ್ತೆ.

101-14

ಡೋಂಗರೆ

ಬಾಲಾಮೃತ್

[163-2]

ಸೇವನದಿಂದ ಹುಡುಗರು ಸಶಕ್ತರೂ ನಿರೋಗಿಗಳೂ ಆಗಿ ಅವರ ಭಾರವು ಬೆಳೆಯುತ್ತದೆ. ಒಂದು ಬಾಟ್ಲಿಗೆ ೧೦ ಆಣೆ. ಟಪಾಲ್ ಖರ್ಚು ೪ ಆಣೆ.

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಾಯಿ ಇವರಲ್ಲೂ ಮತ್ತು ಎಸ್. ವೈದ್ಯ ಅಂಡ್ ಕೊ, ಪಾರ್ಕ್ ಟವರ್, ಮದರಾಸು ಇವರಲ್ಲೂ ದೊರೆಯುವುದು.

S U. N. & Co.,

BENARES CITY, U. P.

ಸೊಗಸಾದ ಸರಕುಗಳು !!

ದೊಡ್ಡ ಕಂಪೆನಿ !

ಈ ನಮ್ಮ ಕಂಪನಿಯಲ್ಲಿ ನೆಯಿದು ತಯಾರಿಸುವ ಉತ್ತಮವಾದ ಬನಾರಸ್ ರೇಷ್ಮೆ ಜರಿ ಸೀರೆಗಳು, ಕಡ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ್ಟ, ಮುಗುಟ, ಜಗನ್ನಾಥ ಚಾಗಟೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಕ್ಯಾಟಲಾಗ್ 1 ನ್ನು ಮತ್ತು 2 ಪತ್ರಕೇಶ್ವರ ಪಟಗಳನ್ನು ಇನಾಮವಾಗಿ ಕಳುಹಿಸಲಾಗುವದು. [69-31]

ಎಸ್. ಯು. ಎನ್. ಮತ್ತು ಕಂಪೆನಿ, ಕಾಶಿ.

ಅಮೃತಾಂಜನ ರಿಜಿಸ್ಟರ್ಡ್

ಇದು ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು. ಇದರ ಉಪಯೋಗದಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗವಾಯು, ಉಳುಕು, ಕೆಮ್ಮು, ಸೊಂಟನೋವು, ಶೀತ, ಚರ್ಮ ವ್ಯಾಧಿ, ಹಲ್ಲುನೋವು, ಚೇಳು ಕಡಿತ ಮೊದಲಾದ ಎಲ್ಲಾ ತರದ ನೋವುಗಳು ಖಾತ್ರಿಯಾಗಿ ನಿಲ್ಲುವವು. ನಕಲಿ ಔಷಧಗಳನ್ನು ಪಡಕೊಳ್ಳಬೇಡಿರಿ. ಈ ನಮ್ಮ ಲೋಕಪ್ರಖ್ಯಾತವಾದ ಅಮೃತಾಂಜನವನ್ನು ನಮ್ಮ ರಿಜಿಸ್ಟ್ರಿಯಾದ ಮತ್ತು ಹಲವು ಭಾಷೆಗಳುಳ್ಳ ಸುಂದರವಾದ ಕರಡಿಗೆಯಲ್ಲಿ ಪ್ಯಾಕ್ ಮಾಡಿರುತ್ತೇವೆ. ಕರಡಿಗೆ ಇಲ್ಲದ ಬಾಟ್ಲಿಗಳನ್ನು ಪಡಕೊಳ್ಳಬೇಡಿರಿ. ಬಾಟ್ಲಿ ಒಂದರ ಕಿಮ್ಮತ್ತು 0-8-0. ಡಜನ್ 1 ಕ್ಕೆ 5-4-0. ವಿ. ಪಿ. ಪ್ರತ್ಯೇಕ. ಗಜಕರ್ಣದ ಮುಲಾಮು 0-6-0. ದಂತಮಂಜನ 0-2-0. ಮೋಹಿನಿ ತೈಲ 0-12-0. ಖಜ್ಜಿ ಮುಲಾಮು 0-3-0. ಜುಲಾಬು ಮಾತ್ರ 0-8-0. ಸುಂದರ ಮುಲಾಮು 0-8-0. ಕ್ಯಾಟಲಾಗಿಗೆ ಬರಿಯಿರಿ. [52-22]

ವ್ಯಾಪಾರಸ್ಥರಿಗೆ ಬೆಲೋ ಕಮಿಷನ್ ದೊರಕುವದು.

ಅಮೃತಾಂಜನ ಡಿಪೋ,

ಫೋರ್ಟ್, ಮುಂಬಯಿ, ಮತ್ತು ೯ ಜಹಂಗೀರ್ ಸ್ಟ್ರೀಟ್, ಮದ್ರಾಸು.

ಶ್ರೀ ಕಸ್ತೂರಿ ಮಾತ್ರೆ

ಬಿ. ವಿ. ಪಂಡಿತರ

250 ಮಾತ್ರೆಯುಳ್ಳ ಸೀಸೆಗೆ 4 ಟ.; 5 ಸೀಸೆಗಳಿಗೆ 1 ಇನಾಂ.

ಈ ಮಾತ್ರೆಗಳ ಬೆಲೆಯನ್ನು ನೋಡಿ ಇವರ ಗುಣವನ್ನು ಊಹಿಸಲಾಗದು. ಟಿಬೆಟ್ ದೇಶದ ಕಸ್ತೂರಿಯಿಂದಲೇ ಶಾಸ್ತ್ರೋಕ್ತವಾಗಿ ತಯಾರಾಗಲ್ಪಡುತ್ತಿರುವ ಈ ಶ್ರೀಕರ ಕಸ್ತೂರಿ ಮಾತ್ರೆಗಳು ಸುವಾಸನೆಯಾಗಿರುವುದು ಮಾತ್ರವಲ್ಲದೆ ತಾಂಬೂಲದೊಡನೆ ಅಥವಾ ಹಾಗೆಯೇ ಸೇವಿಸಿದರೆ ಎಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸುವುವು. ಮಕ್ಕಳಿಗೆ ಉಂಟಾಗುವ ಅಜೀರ್ಣಭೇದಿ-ಜ್ವರ-ಕೆಮ್ಮು-ನೆಗಡಿ-ಉಳವು-ಹೊಟ್ಟೆಯುಬ್ಬರ-ಈ ರೋಗಗಳನ್ನು ಸಮಾಪದಲ್ಲಿಯೇ ವೈದ್ಯನಿದ್ದಂತೆ ತಕ್ಷಣ ಗುಣಪಡಿಸುವುದು. ಪ್ರಯಾಣಿಕರಿಗೂ ಸೊಂಕು ರೋಗಸ್ಥಳದಲ್ಲಿರುವವರಿಗೂ ಮಲೆನಾಡಿನಲ್ಲಿರುವವರಿಗೂ ಇದರಂತೆ ಪುಷ್ಟಿಯನ್ನೂ ಆರೋಗ್ಯವನ್ನು ಕೊಟ್ಟು ಕಾಪಾಡಲಾರದು. [220-10]

ವಿಷಮಜ್ವರಗಳು-ನೆಗಡಿ-ಕೆಮ್ಮು-ತಲೆನೋವು-ಅಗ್ನಿಮಾಂದ್ಯ-ಶೀತವಾಯು-ಹಲ್ಲುನೋವು-ಮಲಬಂಧ-ಅರೋಚಕ-ನರಗಳ ದೌರ್ಬಲ್ಯ—ಈ ರೋಗಗಳನ್ನು ಪ್ರತಿಯೊಬ್ಬರಿಗೂ ಗುಣಪಡಿಸಿ ರಕ್ತವೃದ್ಧಿಯನ್ನುಂಟುಮಾಡುವುದು. ಸಾವಿರಾರು ಜನರು ಪರೀಕ್ಷಿಸಿದ್ದಾರೆ. ಟಪಾಲ್ ಖರ್ಚು 12 ಸೀಸೆ ವರೆಗೆ 4 ಆಣೆ.

ವಿಳಾಸ—ಮ್ಯಾನೇಜರ್, ಸದ್ವೈದ್ಯಶಾಲಾ, ನಂಜನಗೂಡು.

ಅದ್ಭುತವಾದ ಬಲಕಾರಿ ಮತ್ತು ಬಾಯಿನಾತಹರ.

ಜಿನತಾನ

ಜೀರ್ಣಶಕ್ತಿ ಹುಟ್ಟಿಸುವುದರಲ್ಲಿ ಇದಕ್ಕೆ ಸಮಾನವಾದದ್ದು ಇನ್ನೊಂದಿಲ್ಲ; ಅನ್ನಕೋಶವು ಎಷ್ಟೇ ದುರ್ಬಲವಾಗಿದ್ದರೂ ಅದರ ಕಾರ್ಯಗಳನ್ನು ಹೇರುಪೇರು ಮಾಡುವದಿಲ್ಲ. ಇದರ ಸೇವನೆಯಿಂದ ಎಲ್ಲಾ ರೋಗಗಳನ್ನೂ ಅಂಟದಂತೆ ತಡೆಯಬಲ್ಲದು. ಈ ಭಾಗದಲ್ಲಿ ಇದರ ಗುಣವು ಬಹು ಫಲಕಾರಿಯಾಗಿದೆ. ಇದಲ್ಲದೆ ಇದನ್ನು ಸೇವಿಸುವವರ ಬಾಯಿಯಲ್ಲಿ ಎಲ್ಲಾ ತರದ ದುರ್ನಾತವೂ ಹೋಗಿ ಸುಗಂಧವು ಹುಟ್ಟಿ ಹರ್ಷಕರವಾಗಿದ್ದೀತು.

ಗಂಟಲಿನ ನರಗಳು ಇದರ ಸೇವನೆಯಿಂದ ಬಹಳ ಬಲಗೊಳ್ಳುವವು. ಇದರ ಗುಣವನ್ನು ನೋಡಿ ಉಪನ್ಯಾಸಕರೂ, ನಾಟಕಧಾರಿಗಳೂ, ಸಂಗೀತಗಾರರೂ, ಬೋಧಕರೂ, ವಾಚಾಳಕ ಪ್ರಿಯರೂ ಈ ಮಾತ್ರೆಗಳನ್ನು ಬಹಳವಾಗಿ ಮೋಹಿಸಿ ಪ್ರೀತಿಯಿಂದ ಉಪಯೋಗಿಸುತ್ತಿದ್ದಾರೆ.

ಈ ಮಾತ್ರೆಗಳನ್ನು ಜಪಾನ್‌ನಲ್ಲಿರುವ ಒಸಾಕಾ ಪಟ್ಟಣದ ಮೋರಿಷಿತಾ ಕಂಪನಿಯವರು ತಯಾರ್ಮಾಡುತ್ತಾರೆ.

ಈ ಮಾತ್ರೆಗಳ	30 ಮಾತ್ರೆಗಳುಳ್ಳ ಪೊಟ್ಲಕ್ಕೆ 1½ ಆಣೆ.	65 ಮಾತ್ರೆ ಪೊಟ್ಲಕ್ಕೆ 3 ಆಣೆ.
ಕ್ರಯ	195 ,, ಡಬ್ಬಾ ಸಮೇತ 8 ಆಣೆ.	455 ,, ಕನ್ನಡಿ ಡಬ್ಬಾಕ್ಕೆ 1 ರೂಪಾಯಿ.

ಎಲ್ಲಾ ಅಂಗಡಿಗಳಲ್ಲಿಯೂ ಬಿಕರಿಯಾಗುವುದು.

ಸೋಲ್ ಏಜಂಟರು:— ಎಸ್. ವೈದ್ಯ ಮತ್ತು ಕಂಪನಿ, ಪಾರ್ಕ್‌ಟೌನ್, ಮದ್ರಾಸ್

[166-4]

ಪ್ರೊಫೆಸರ್ ಬ್ರೇಸ್ಲರ್
ಇಲೆಕ್ಟ್ರೋ ಪೆಯಿನಾಡೈನ್

ಮನುಷ್ಯನ ಶರೀರದಲ್ಲಿ ವಿದ್ಯುಚ್ಛಕ್ತಿ ವ್ಯಾಪಿತವಿರುವದೆಂತಲೂ, ವಿದ್ಯುಚ್ಛಕ್ತಿ ಕಡಮೆಯಾದ ಕೂಡಲೇ ನಾನಾ ತರದ ವ್ಯಾಧಿಗಳು ಲಭಿಸುವದೆಂತಲೂ, ಅಂತಹ ವ್ಯಾಧಿಗಳನ್ನು ಶೀಘ್ರ ಗುಣಪಡಿಸಲು ವಿದ್ಯುಚ್ಛಕ್ತಿ ಮಿಶ್ರವಾದ ಔಷಧದ ಉಪಯೋಗದಿಂದಲ್ಲದೆ ಬೇರೆ ಔಷಧಗಳಿಂದ ವ್ಯಾಧಿಗಳನ್ನು ಶೀಘ್ರ ಗುಣಪಡಿಸುವದು ಕಷ್ಟವೆಂತಲೂ ಅಮೇರಿಕಾ ದೇಶದ ವೈದ್ಯಶಾಸ್ತ್ರ ಪಂಡಿತರು ವೈದ್ಯಶಾಸ್ತ್ರ ಪರಿಶೋಧನೆಯಿಂದ ಸಿದ್ಧಿಸಿರುವರು. ಈ ಔಷಧವು ಉಪಯೋಗಿಸಿದ ಕೂಡಲೇ ದೇಹಕ್ಕೆ ಸಾಕಾಗುವಷ್ಟು ವಿದ್ಯುಚ್ಛಕ್ತಿಯನ್ನುಂಟುಮಾಡಿ ವ್ಯಾಧಿಯನ್ನು ಅತಿ ಶೀಘ್ರ ಗುಣಪಡಿಸುತ್ತೆ. ಪ್ರಾಚೀನಕಾಲದ ಔಷಧಗಳಿಗೆಲ್ಲವು ಇದು ಅತ್ಯುತ್ತಮವಾದದ್ದು. ಒಂದಾವರ್ತಿ ಪರೀಕ್ಷಿಸಿ ನೋಡಿದರೆ ಇದರ ಗುಣವು ವ್ಯಕ್ತವಾಗುತ್ತೆ.



ಎಲೆಕ್ಟ್ರೊಪೆಯಿನಾಡೈನ್ ತೈಲದಿಂದ ಗುಣಪಡುವ ವ್ಯಾಧಿಗಳು:—

ತಿಮರುವಾಯುವು, ಕೀಲ್ವಾಯುವು, ಪಾರ್ಶ್ವವಾಯುವು, ಕ್ಷಯ, ಕೆಮ್ಮು, ನೆಗಡಿ, ವಾಯುನೋವು (ಕೈಕಾಲು ಹಿಡಿತ), ಉಳುಕುಹಿಡಿದಿದ್ದರು, ಕಠಿನಶ್ವಾಸ, ನಡುನೋವು (ಸೊಂಟನೋವು), ಪಕ್ಕಶೂಲೆ, ಹಲ್ಲುನೋವು, ತಲೆನೋವು, ಅರೆತಲೆನೋವು, ಉಬ್ಬಸ, ವಿಷಜ್ವರದ ಗಡ್ಡೆಗಳಿಗೂ ಮತ್ತು ಮಕ್ಕಳ ಪಕ್ಕಶೂಲೆ, (ಅಳ್ಳಿ) ಶೈತ್ಯದೋಷಗಳೂ, ವಿಷಹುಳಗಳ ಕಡಿತಗಳಿಗೂ (ಚೇಳು ಮುಂತಾದದ್ದು), ಇದೆಕ್ಕೆಲ್ಲಾ ಬಹಳ ಶ್ಲಾಘನೀಯವಾದದ್ದು. [12-31]

ಉಪಯೋಗಿಸುವ ಕ್ರಮವು ಹಿಂದುದೇಶದ ಎಲ್ಲಾ ಭಾಷೆಗಳಲ್ಲಿಯೂ ಬುದ್ದಿಯ ಸಂಗಡ ಕಳುಹಿಸಲಾದೀತು.

ಬುದ್ದಿಯ ಕ್ರಯ ರೂ. ೮-8-0. ವಿ. ಪಿ. ಖರ್ಚು 0-4-0. ಏಜಂಟರು ಬೇಕು.

ಮುಖ್ಯ ಏಜಂಟರು:—ಗುರುಬಸವ ಅಂಡ್ ಕಂಪನಿ, ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

17—7—1914 ರಿಂದ 24—7—1914 ರ ವರೆಗೆ

ಸ್ಥಳ		ಪ್ಲೇಗ್ ಹಗಲಿದ್ದು.	ಪ್ಲೇಗ್ ಸತ್ತದ್ದು.	ಕಾಲರಾ ಹಗಲಿದ್ದು.	ಕಾಲರಾ ಸತ್ತದ್ದು
ಬೆಂಗಳೂರು	ಪಟ್ಟಣ	1	1	0	0
ಮೈಸೂರು	,,	3	1	4	4
ಬೆಂಗಳೂರು	ಡಿಸ್ಟ್ರಿಕ್ಟು	21	8	1	1
ಮೈಸೂರು	,,	21	20	3	2
ಕೋಲಾರ್	,,	0	0	0	0
ಕೋಲಾರ್ ಚಿನ್ನದ ಗಣಿಗಳು		0	0	0	0
ತುಂಕೂರು	ಡಿಸ್ಟ್ರಿಕ್ಟು	0	0	0	0
ಹಾಸನ	,,	0	0	0	0
ಚಿತ್ರದುರ್ಗ	,,	0	0	0	0
ಕಡೂರ್	,,	3	1	0	0
ಶಿವಮೊಗ್ಗಾ	,,	14	5	1	0
	ಜುಮ್ಲಾ	62	36	9	7

ಶಾಲಿವಾಹನ ಶಕೆ ವರುಷಂಗಳು 1837 ನೇ ಆನಂದ ಸಂವತ್ಸರೇ ದಕ್ಷಿಣಾಯನೆ ಗ್ರೀಷ್ಮಋತೌ ಶ್ರಾವಣ ಬಹುಳ ಬಿದಿಗೆ ಶುಕ್ರವಾರದಿಂದ ಶ್ರಾವಣ ಬಹುಳ ಸಪ್ತಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1914 ನೇ ಆಗಸ್ಟು.

ತಾ.	ವಾರ.	ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ	ಕಟಕ ಮಾಸ ತೇದಿ
7	ಶುಕ್ರ ::	ಬಿದಿಗೆ	59-13	ಧನಿಷ್ಠ	17-12	23
8	ಶನಿ ‡	ತದಿಗೆ	60-0	ಶತಭಿಷ	20-26	24
9	ಭಾನು §	ತದಿಗೆ	2-12	ಪೂಭಾದ್ರ	24-54	25
10	ಸೋಮ	ಚೌತಿ	6-50	ಉ.ಭಾದ್ರ	30-20	26
11	ಮಂಗಳ †	ಪಂಚಮಿ	10-12	ರೇವತಿ	36-28	27
12	ಬುಧ *	ಷಷ್ಠಿ	15-11	ಅಶ್ವಿನಿ	43-3	28
13	ಗುರು ;;	ಸಪ್ತಮಿ	20-14	ಭರಣಿ	49-34	29

:: ಆದಿಶುಕ್ರವಾರ. ‡ ಶ್ರಾವಣಶನಿವಾರ. § ಸಂಕಟಹರಚತುರ್ಥಿ, ಮಳೆ ನಕ್ಷತ್ರ—ಆಶ್ಲೇಷ 3 ನೇ ಪಾದ. † ಮಂಗಳಗೌರಿವ್ರತ, ದಗ್ಧಯೋಗ. * ಸಪ್ತಮೀ ತಿಥಿ, ಮೃತ್ಯುಯೋಗ. ;; ಶೂನ್ಯತಿಥಿ, ಜನ್ಮಾಷ್ಟಮಿ, ಮಳೆ ನಕ್ಷತ್ರ—ಆಶ್ಲೇಷ 4 ನೇ ಪಾದ.

Printed and Published by the Rev. H. Gulliford, Proprietor and Manager, Wesleyan Mission Press, Mysore. 6/8/1914.

REGISTERED
M. 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೩೮ ಮೈಸೂರು—ಸನ್ ೧೯೧೫ ನೇ ಇಸವಿ ಆಗಸ್ಟ್ ತಾರೀಖು ೧೯ ನೇ ಗುರುವಾರ. ಸಂಚಿಕೆ ೧೧

NOW READY

A faithful, literal and charming translation in Kannada of Oliver Goldsmith's "She Stoops to Conquer" by the name "Nirmale" with the original author's life-sketch. Patronised by the Govt. of Mysore. Very useful for School Final and Intermediate students. Price for Intermediate candidates only by V.P.P. As. 12 only; for others As. 14.

Apply to—Messrs. HANUMAN & Co.,
[160-4] *MYSORE.*

ಹೊಸನಾವೆಲ್‌ಗಳು.

ಬಹು ಸ್ವಲ್ಪ ಪ್ರತಿಗಳೇ ಉಳಿದಿವೆ. ಸರಸವಾದೀ ಹೊಸಗನ್ನಡದ ಕಾದಂಬರಿಗಳನ್ನು ತರಿಸಿಕೊಳ್ಳಲು ಹಿಂತೆಗೆದು ಪಶ್ಚಾತ್ತಾಪಪಡಬೇಡಿರಿ.

ಅನಂಗಸುಂದರಿ 8 ಆಣೆ. ಶಾರದಾಸುಂದರಿ 8 ಆಣೆ. ರಾಧಾಮಾಧವಿ 8 ಆಣೆ. ಸರಳಬಾಲೆ 8 ಆಣೆ. ಕುಮುದಿನಿ 6 ಆಣೆ. ನಿರ್ಭಾಗ್ಯಚಾಣಕ್ಯ 6 ಆಣೆ. ಸಂತಾಪಕ 4 ಆಣೆ.

"ನಿರುಪಮಾ" ಹೊಸ ನಾಟಕಗಳಲ್ಲಿ ಮೇಲೆನಿಸಿ ಬಹು ಜನರ ಸ್ತೋತ್ರಕ್ಕೆ ಪಾತ್ರವಾದ ನಾಟಕ. ಕಥಾ ವಿಧಾನವೂ ಮಾತುಗಳೂ ಪದ್ಯಗಳೂ ಬಹು ಚಮತ್ಕಾರವಾಗಿಯೂ ಸರಸವಾಗಿಯೂ ಇವೆ. ಕ್ರಯ 12 ಆಣೆ.

[266-35] ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

ಕಳವು, ದರೋಡೆ.

ದರಾಯಿತಿ, ಅಕ್ರಮ ಸ್ತ್ರೀಸಂಗವು, ಅಸಾಧಾ ಚೋರಿ, ಮಾನನಷ್ಟ ಮುಂತಾದವುಗಳಿಗೆ ಶಿಕ್ಷೆ ವಿಧಿಸಿರುವ ದಂಡನೀತಿ ಶಾಸ್ತ್ರವು ಪೂರ್ವದಲ್ಲಿ ಶುಕ್ರಾಚಾರ್ಯರಿಂದ ರಚಿತವಾಗಿ ಈಗಿನ ಬ್ರಿಟಿಷ್ ಚಕ್ರಾಧಿಪತ್ಯದಲ್ಲಿ ಅನುಮೋದಿಸಿ ಇಂಡಿಯಾ ಗವರ್ನರ್ ಜನರಲ್‌ರವರಿಂದ ಮುಂಚಾಗಿ ಕಲ್ಕತ್ತಾ, ಮುಂಬೈ, ಮದ್ರಾಸ್, ಮೈಸೂರು ಜಿಲ್ಲಾಗಳಲ್ಲಿ "ಕನ್ನಡ ಇಂಡಿಯನ್ ಪೀನಲ್ ಕೋಡ್" ಎಂಬ ಅಭಿದಾನದಿಂದ ಜಾರೀಲಿ ತಂದಿರುವರು. ಈ ಆಕ್ಟಿಗೆ ಅನೇಕ ಜಡ್ಜಿಗಳು ಅಪ್ಪಣೆಗಳನ್ನು ಬರೆದಿರುವರು. ಅವುಗಳೂ ಈ ಪುಸ್ತಕದಲ್ಲಿ ಅಡಗಿರುವವು. ಕ್ರಯ ಧಪ್ಪ ಕಾಗದದ್ದು 2 ರೂಪಾಯಿ; ಹಸನುಕಾಗದದ್ದು ರೂ. 2-8-0.

[143-7] ವಿಳಾಸ—ಬಿ. ನರಸಿಂಗರಾವ್,
ಎಡಿಟರ್, ಲಾ ಗೆಜೆಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

NOW READY

Full Notes with Summary and Numerous useful questions on Circe's Palace; The Golden Fleece and Fairy Tales (L. S. Text for 1915) by Mr. A. S Rangaswamiengar, B.A., Asst. Master, Maharani's College, Mysore. Price four annas only. Yate's Primer 0-4-0; Yate's Second Reader 0-9-0; King Second Reader 0-6-0; King Third Reader 0-8-0; Macmillan's New No. IV Reader 0-12-0; Hydes Practical English Grammar—First 0-15-0, Second 0-15-0; Longman's School Geography 1-4-0; Marrison's Junior Geography of India 0-12-0.

We supply you any books in English or Canarese.

[23-31] **The General Agency, Mysore.**

ಸಿದ್ಧವಾಗಿದೆ.

1915 ನೆಯ ವರ್ಷದ ಲೋವರ್ ಸೆಕಂಡರಿ

ಕನ್ನಡ ಟೆಕ್‌ಸ್ಟಿನ ನೋಟ್ಸು.—ಕ್ರಯ 6 ಆಣೆ.

ಡಿಸ್ಕೌಂಟು—10 ಕ್ಕೆ 1; 25 ಕ್ಕೆ 3; 50 ಕ್ಕೆ 8; 100 ಕ್ಕೆ 20.

ಮಕ್ಕಳ ಭೂವಿವರಣೆ.

ಈಗಿನ ಪಾಠಕ್ರಮಕ್ಕೆ ತಕ್ಕಂತೆ ಹೊಸದಾಗಿ ಆಗಿದೆ. ಇದರಲ್ಲಿ ಮೈಸೂರು ದೇಶದ ಬೆಳೆ, ಎತ್ತರ, ನದೀ ಪರ್ವತಾದಿಗಳು ಇವುಗಳನ್ನು ತೋರಿಸುವ ಮೂರು ಫೋಟೋಗಳೂ, ಚಿತ್ರಗಳೂ ಸೇರಿವೆ. ಕ್ರಯ 2 ಆಣೆ. [49-26]

ಇಕಾಬೆಯ 2 ನೆಯ ಪುಸ್ತಕದ ನೋಟ್ಸು 2½ ಆಣೆ, ಮೆಕ್ಮಿಲನ್ ರವರ 3 ನೇ ಪುಸ್ತಕದ ನೋಟ್ಸು 1½ ಆಣೆ, ಡಿಟೊ 4 ನೇ ಪುಸ್ತಕದ ನೋಟ್ಸು 1¾ ಆಣೆ, ಡಿಟೋ 5 ನೇ ಪುಸ್ತಕದ ನೋಟ್ಸು 4 ಆಣೆ. ನವಬಾಲವ್ಯಾಕರಣ (2 ನೇ ತರಗತಿ) 1 ಆಣೆ. Notes on "Tanglewood Tales," English Lower Secondary Text for 1915—As. 3. Notes on Fairy Tales—As. 2.

ನಮ್ಮ ವಿಳಾಸ:—ಎನ್. ಆರ್. ವೆಂಕಟಸುಬ್ಬಾಚಾರ್ಯ,
ಸುಬೋಧಗ್ರಂಥಾಲಯ, ಮೈಸೂರು.

ಮಿಡ್‌ವೈಫರಿ—**Midwifery.**

ಗರ್ಭಿಣೀಶಿಶುಸಂರಕ್ಷಣೆ

ಕ್ರಯ 12 ಆಣೆ. ದೊರಕುವ ಸ್ಥಳ:—
ಎಂ. ಡಿ. ತಿರುಮಲಾಚಾರ್, 352, ಡಿ. ಸುಬ್ಬಯ್ಯ ರೋಡ್, ಮೈಸೂರು.

ನಂಬಿ ಮೋಸಹೋಗಬೇಡಿ.

ಇತರರು ಷಾಲುಗಳನ್ನು ಒಳ್ಳೇದೆಂದೂ, ಕಮ್ಮಿ ಕಿಮ್ಮತ್ತಿಗೆ ಕೊಡುತ್ತೇವೆಂದೂ ಹೇಳುವರು. ಇದನ್ನು ನಂಬಿ ಮೋಸ ಹೋಗಬೇಡಿ. ನಮ್ಮಲ್ಲಿ ಕಾಶ್ಮೀರಿ ಮತ್ತು ಎಲ್ಲಾ ತರಹದ ಪಂಚೆ ಷಾಲುಗಳೂ 5 ರೂ. ನಿಂದ 7, 10, 50, ರೂ. ಗಳ ವರಿಗೂ ಸಿಕ್ಕುತ್ತವೆ. ಖಾಯಿಷಿಲ್ಲದಿದ್ದರೆ ಹಣ ವಾಪಸು ಕೊಡುತ್ತೇವೆ. ನಮ್ಮ ಕಾರಖಾನೆಗೆ ಲಂಡನ್, ಚಿಕಾಗೋ ಮುಂತಾದ ಅನೇಕ ಪ್ರದರ್ಶನಗಳಲ್ಲಿ ಚಿನ್ನ ಮತ್ತು ಬೆಳ್ಳಿಯ ಮೆಡಲುಗಳು ಮತ್ತು ಸರ್ಟಿಫಿಕೇಟುಗಳು ಬಂದಿವೆ. ಯಾವ ತರಹ ಬಟ್ಟೆ ಎಷ್ಟು ಕಿಮ್ಮತ್ತಿಗೆ ಬೇಕಾದರೂ ನಮ್ಮಲ್ಲಿ ಸಿಕ್ಕುತ್ತವೆ. ಇಂಗ್ಲೀಷಿನಲ್ಲಾಗಲಿ, ಹಿಂದುಸ್ಥಾನಿಯಲ್ಲಾಗಲಿ ನಮಗೆ ಬರೆಯಬೇಕು.

ನಮ್ಮ ಅಡ್ರೆಸ್ಸು—ಪೀರ್ ಬ್ರದರ್ಸ್,
ಷಾಲ್ ಮರ್ಚೆಂಟ್ಸ್, ಅಮೃತಸರ್ ಪಂಜಾಬು.

PEER BROS., SHAWL MERCHANTS,
[166-2] *AMRITSAR, PANJAB.*

ಪುಸ್ತಕಗಳು

ಬಹಳ ಕಡಮೆ ಕ್ರಯಕ್ಕೆ ಸಿಕ್ಕುತ್ತವೆ.

[169-1]

ಬಿ. ಟಿ. ಬಿ. ಎಸ್. ಡೆಪೋ, ಸೆಂಟ್ ಮಾರ್ಕ್ಸ್ ರೋಡ್, ಬೆಂಗಳೂರು ಎಂಬ ವಿಳಾಸಕ್ಕೆ ಬರೆದು ತರಿಸಿಕೊಳ್ಳಿರಿ.

ಸತ್ಯವೇದಕ್ಕೆ ಸಂಬಂಧಪಟ್ಟ ಪುಸ್ತಕಗಳು :	ರೂ. ಆ. ಪೈ.
ಆದಿಕಾಂಡ ಸಟೀಕ	1—8—0
ಯೆಶಾಯನ ಪ್ರವಾದಗಳು	0—3—0
ಹಳೇ ಒಡಂಬಡಿಕೆಗೂ ಹೊಸ ಒಡಂಬಡಿಕೆಗೂ ಇರುವ ಚರಿತ್ರ ಸಂಬಂಧ	0—3—0
ಮಾರ್ಕನ ಸುವಾರ್ತೆಯ ವ್ಯಾಖ್ಯಾನವು	0—4—0
ಶ್ರೀ ಪೌಲನು ಬರೆದ ಪತ್ರಿಕೆಗಳು	0—6—0
ಕ್ರಿಸ್ತ ಜೀವನ್ಮುಕ್ತಿ ವಿವೇಕವು	0—3—0
ಶ್ರೀ ಪೇತ್ರನು ಬರೆದ ಮೊದಲನೇ ಪತ್ರಿಕೆಯು	0—3—0
ಆದಿ ಸಭೆಯ ಚರಿತ್ರೆಯೂ ಬೋಧನೆಯೂ	0—8—0
ಯೇಸು ಕ್ರಿಸ್ತನ ಚರಿತ್ರೆಯ ಸಾರಾಂಶಾವಳಿ	0—4—0
ದಾವೀದನ ಚರಿತ್ರೆ	0—4—0
ಶ್ರೀ ಪೌಲನ ಚರಿತ್ರೆ	0—3—0
ದೈವಜ್ಞಾನ ಶಾಸ್ತ್ರವೂ ಭಕ್ತಿವರ್ಧಕ ಪುಸ್ತಕಗಳೂ :	
ಕ್ರೈಸ್ತ ವೇದಾಂತಸಾರ	1—0—0
ಪವಿತ್ರಾತ್ಮ	0—3—0
ಬೆಂಕಿಯಿಂದುರಿಯುವ ನಾಲಿಗೆ	0—4—0
ಆತ್ಮ ಧ್ಯಾನಗಳು ೧-೨ ನೇ ಭಾಗ	0—2—0
,, ೩ ನೇ ಭಾಗ	0—2—0
ಅಗಸ್ಟಿನ್ ಬಿನ್ನಪಂ	0—6—0
ಕ್ರೈಸ್ತ ಸಭಾಚರಿತ್ರೆ ಸಾರವು	0—8—0
ಕಥೆಗಳೂ ಜೀವಚರಿತ್ರೆಗಳೂ :—	
ಸುಂದರರಾಜನ ಪ್ರವಾಸ	0—4—0
ಕುರುಡಿಯು ಬೆಳಕನ್ನು ಹುಡುಕಿದ್ದು	0—4—0
ಹೇಮಲತೆ ಪ್ರಭಾಕರ	0—3—0
ಸಾಧು ಚಂಪ್ರಲೀಲೆ	0—1—6
ಭಕ್ತಿಗೀತಾವಳಿ (24 ಹಾಡುಗಳು)	0—0—6
ಕಿರಣಮಾಲಿಕೆ ೧ ನೇ ಭಾಗ ಗುರುವನ್ನು ಕುರಿತದ್ದು	0—0—3
,, ೨ ನೇ ,, ಶಾಸ್ತ್ರವನ್ನು ,,	0—0—3
,, ೩ ನೇ ,, ಪಾಪವನ್ನು ,,	0—0—3
,, ೪ ನೇ ,, ಮನುಷ್ಯನನ್ನು ,,	0—0—3
,, ೫ ನೇ ,, ಪಾಪಪರಿಹಾರವನ್ನು ,,	0—0—3

ತಾಮಸ ಮಾಡಬೇಡಿರಿ; ಕೂಡಲೇ ಬೆಂಗಳೂರು ಬಿ. ಟಿ. ಬಿ. ಎಸ್. ಡೆಪೋಗೆ ಬರೆದು ತರಿಸಿಕೊಳ್ಳಿರಿ.

ಹೊಸ ಬಂಗಾಳಿ ನಾವಿಲ್ಸು—ವಿಷವಿವಾಹ 4 ಆ. ಸನ್ಯಾಸಿ 1½ ಆ. ಆಶಾಭಪ್ರೇಕ 1 ಆ. ಬಿ. ವೆಂಕಟಾಚಾರ್ಯರಿಂದ ವಂಗವಿಜೇತ 1-4-0. ಚಂದ್ರಶೇಖರ 1-1-0. ರಜನಿ 13 ಆ. ಚಿತ್ರವಿಚಿತ್ರಾವಳಿ II 8 ಆಣೆ. ಅಮೃತಪುಲಿನ 11 ಆಣೆ. ದುರ್ಗೇಶನಂದಿನಿ 1-4-0. ಇತ್ಯಾದಿ. ಸುಶೀಲಿ ಹೊಸ ನಾವೆಲ್ 6 ಆಣೆ.
[53-25] ಎಂ. ಸುಬ್ಬರಾವ್, ಬುಕ್ ಸೆಲರ್, ಶಂಕರಪುರ, ಬೆಂಗಳೂರು ಸಿಟಿ.

We the undersigned inform the policy holders and public that we have appointed Pandit K. Bhaskara Sastri, Editor and Proprietor of "The Sahithya Chandrika," Basavangudi, Bangalore City, as our Sole District Agent for Bangalore, Kolar and Shimoga Districts.

Messers. VENKATACHALAM & SONS,
Chief Agents,
Hindustan Co-operative Insurance Society, Ltd.,
166, Dodpet, near Old Taluk Cutcherry,
[243-36] *MYSORE.*

ಒಳ್ಳೆ ಸಮಯ! A Good Opportunity!

ಮೈಸೂರು ಚಾಮರಾಜ ರೋಡ್ ಎಂ. ಎಲ್. ವಾಸುದೇವಯ್ಯನವರ ಕಂಪೌಂಡಿನಲ್ಲಿ ಹೊಸದಾಗಿ ತರಿಸಿ ಸರಿಯಾಗಿ ಕೆಲಸಮಾಡುತ್ತಿರುವ ಅಕ್ಕಿ ಮತ್ತು ಹಿಟ್ಟಿನ ಮಿಷನ್, ಇದಕ್ಕೆ ಸೇರಿದ ಆರು ಕುದುರೆ ಶಕ್ತಿಯುಳ್ಳ ಒಂದು ಆಯಿಲ್ ಇಂಜನ್, ಇದಕ್ಕೆ ಸಂಬಂಧಪಟ್ಟ ಎಲ್ಲಾ ಸಾಮಾನುಗಳನ್ನೂ ಸಹ (A Rice Mill and a Grinding Mill with a six horse power oil engine, complete) ಕ್ರಯಮಾಡುತ್ತೇವೆ. ಬೇಕಾದವರು ಖುದ್ದು ಪರೀಕ್ಷೆಯಿಂದ ಕೆಳಗಿನ ವಿಳಾಸದಾರರಲ್ಲಾಗಲಿ, ಅಥವಾ ಕೃಷ್ಣಾ ರೈಸ್ ಮಿಲ್ ಪ್ರೊಪ್ರೈಟರ್ ಮ॥ ಅನಂತನಾರಾಯಣರಾಯರಿಂದಾಗಲಿ ಕೇಳಿ ತಿಳಿದುಕೊಳ್ಳಬಹುದು.

[161-4] S. R. Visvanatha Iyer.

THE
GENERAL
Assurance Society Ltd., Ajmer.
(A Popular Life Office.)

Before Insuring or taking agency elsewhere, it would be to your interest to know the rates of premium and terms of agency specially prepared by the Society's Consulting Actuary, Mr H. E. W. Lutt, F.I.A. (one of the most eminent Actuaries in England).

First Valuation Result:—The total liabilities under all assurances issued up to 31st March 1913, are fully covered by the Society's Life Assurance Fund and Paid up Capital. Write for full particulars, Annual and Valuation Reports to the Manager, Ajmer, or Secretary,

Opposite to Minto Ophthalmic Hospital,
[131-5] Bangalore City

BRAHMAPPA TAVANAPPANAVAR,
Merchant & Commission Agent.
Agent to Messrs. Currimbhoy Ebrahim & Co's Mills, BOMBAY.

ನಾವು ಮುಂಬೈ ಮೆಸ್ಸರ್ಸ್ ಕರೀಂಬಾಯ್ ಇಬ್ರಾಹಿಂ ಅಂಡ್ ಕಂಪೆನಿಯವರ ಬಾಬತು, ಮೆಸ್ಸರ್ಸ್ ಫಜುಲ್ಭಾಯ ಮಿಲ್ಸ್ ಲಿಮಿಟೆಡ್ ಮುಂಬೈ; ದಿ ಕ್ರಿಸೆಂಟ್ ಮಿಲ್ಸ್ ಲಿಮಿಟೆಡ್ ಮುಂಬೈ, ಕರೀಂಬಾಯ್ ಮಿಲ್ಸ್ ಲಿಮಿಟೆಡ್ ಮುಂಬೈ, ದಿ ಇಂಡಿಯನ್ ಬ್ಲೀಚಿಂಗ್, ಡೈಯಿಂಗ್ ಅಂಡ್ ಪ್ರಿಂಟಿಂಗ್ ವರ್ಕ್ಸ್ ಲಿಮಿಟೆಡ್ ಮುಂಬೈ, ದಿ ಇಂಡೋರ್ ಅಂಡ್ ಮಾಲ್ವಾ ಯುನೈಟೆಡ್ ಮಿಲ್ಸ್ ಲಿಮಿಟೆಡ್ ಇಂಡೋರ್, ಇವುಗಳಲ್ಲದೆ ಇನ್ನೂ ಅನೇಕ ಮಿಲ್ಲುಗಳ ಬಟ್ಟೆಗಳನ್ನು ಮೈಸೂರು ಸೀಮೆಯಲ್ಲೆಲ್ಲಾ ವಿಕ್ರಯಮಾಡಲು ಕಮಿಷನ್ ಏಜಂಟರಾಗಿರುತ್ತೇವೆ. ನಮ್ಮ ಮುಖಾಂತರ ಮಾಲು ತರಿಸಿಕೊಳ್ಳತಕ್ಕವರಿಗೆ ಮುಂಬೈಯಲ್ಲಿ ಬಟ್ಟೆಗಳ ಮೇಲೆ ವಿಧಿಸತಕ್ಕ ದಳ್ಳಾಳಿ, ಜೋಡಾದಳ್ಳಾಳಿ, ಮೊಕ್ತಾದುಮ್ಮ, ಗಂಟುಕಟ್ಟುವದು, ಸ್ಟೇಷನ್ನಿಗೆ ಹೇರಿಸುವದು, ಹುಂಡೇಕರಿ ವಗೈರೆ ಯಾವ ವಿಧವಾದ ಖರ್ಚೂ ತಗಲದೆ ಇರುವದರಿಂದ ಮುಂಬೈಯಿಂದ ತರಿಸುವದಕ್ಕಿಂತಲೂ ಸುಲಭ ದರದಲ್ಲಿ ಸಿಕ್ಕುತ್ತೆ. ಮತ್ತು ಮುಂಬೈಗೆ ಹೋಗಿಬರುವ ದೇಹಶ್ರಮವೂ, ಖರ್ಚೂ ಉಳಿಯುತ್ತೆ. ಹೆಚ್ಚು ಬಟ್ಟೆಗಳನ್ನು ಏಕಕಾಲದಲ್ಲಿ ಕೊಳ್ಳತಕ್ಕವರಿಗೆ ಮಾಲಿನ ಮೇಲೆ ಸೇಕಡ 3 ರೂಪಾಯಿ ಲಾಗಾಯ್ತು 4½ ರೂಪಾಯಿ ವರಿಗೆ ಡಿಸ್ಕೌಂಟು ದೊರೆಯುತ್ತೆ. [97-17]

ನಮ್ಮ ಟ್ರಾವಲಿಂಗ್ ಏಜಂಟರ ವಶ ಬಟ್ಟೆಗಳ ನಮೂನೆಗಳನ್ನು ಕೊಟ್ಟು, ದರ ಒಟ್ಟು ವ್ಯಾಪಾರಗಾರರಿಗೆ ತೋರಿಸಿ ಆರ್ಡರು ತೆಗೆದುಕೊಳ್ಳುವ ಏರ್ಪಾಡು ಮಾಡಿರುತ್ತೆ. ನಮ್ಮ ದಾವಣಗೆರೆ ಮತ್ತು ಬೆಂಗಳೂರು ಆಫೀಸುಗಳಲ್ಲಿ ಮಾಲು ಹಾಜರು ಸಹ ದೊರೆಯುತ್ತೆ.

ಬಟ್ಟೆಗಳನ್ನು ವ್ಯಾಪಾರಮಾಡಲು ಅನುಭವಸ್ಥರಾದ ಏಜಂಟರುಗಳೂ ಮತ್ತು ಗುಮಾಸ್ತರುಗಳೂ ಬೇಕಾಗಿದೆ.

ಎಲ್ಲಾ ಕಾಗದಪತ್ರಗಳೂ ದಾವಣಗೆರೆ ಆಫೀಸಿಗೆ ಬರೆಯಲ್ಪಡಬೇಕು.

ಹೆಡ್ ಆಫೀಸು:—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್, ದಾವಣಗೆರೆ. ಬ್ರಾಂಚ್ ಆಫೀಸು:—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

Jain's Best Ointment.

ಜೈನ್‌ರವರ ಉತ್ತಮೋತ್ತಮ ಆಯಿಂಟ್‌ಮೆಂಟು.

ಇದು ವೈದ್ಯಶಾಸ್ತ್ರ ಪ್ರಕಾರ ತಯಾರಾದ ಉತ್ಕೃಷ್ಟವಾದ ತೈಲವು. ಇದನ್ನು ಹಚ್ಚಿದರೆ ಬಹಳ ದಿನಗಳಿಂದಲೂ ಇರತಕ್ಕ ಪಡೆ, ಕೆಂಡ್ತಿ, ಕಜ್ಜಿ, ತುರಿ, ಹುಳು ಕಡ್ಡಿ, ನಡುವಿನ ಕೆರತ, ಎಲ್ಲಾ ತರದ ರಣಗಳು, ದುಷ್ಟುಗಳು ಬಹು ವೇಗವಾಗಿ ಬಂಕಿಯಲ್ಲಿ ಬಿದ್ದ ಹತ್ತಿಯಂತೆ ಧ್ವಂಸವಾಗಿ ವಾಸಿಯಾಗುತ್ತವೆ. ಕತ್ತಿ, ಚಾಕು ಮೊದಲಾದ ಆಯುಧಗಳಿಂದ ಉಂಟಾಗುವ ಗಾಯಗಳಿಗೆ ಪ್ರಾಪ್ತಿಗೆ ಬದಲಾಗಿ ಈ ತೈಲವನ್ನೇ ಉಪಯೋಗಿಸಬಹುದು. ಇದನ್ನು ಗೋಕಾಯಿಗಳ ಹುಣ್ಣುಗಳಿಗೂ, ಕುದುರೆ, ನಾಯಿ ಮೊದಲಾದ ಪ್ರಾಣಿಗಳ ಗಾಯಗಳಿಗೂ ಯಕ್ತಯುಂಥಾ ಔಷಧ. ಈ ಔಷಧವನ್ನು ಕಂಡುಹಿಡಿದು ತಯಾರ್ಮಾಡುವುದಕ್ಕೆ ಬಹಳ ಶ್ರಮವನ್ನೂ, ಕಾಲವನ್ನೂ, ಹಣವನ್ನೂ ಖರ್ಚುಮಾಡಿರುತ್ತೇವೆ. ಈ ಆಯಿಂಟ್‌ಮೆಂಟಿನಿಂದ ಸಾವಿರಾರು ಜನರಿಗೆ ಗುಣವಾಗಿರುತ್ತದೆ. ನಕ್ಕಲ್ ತೈಲಗಳನ್ನು ನೋಡಿ ಮೋಸಹೋಗಬೇಡಿ. ನಮ್ಮ ಗುರುತುಗಳನ್ನು ನೋಡಿ ಕೊಂಡುಕೊಳ್ಳಿ. ಔಷಧದ ಕೂಡ ಅನುಪಾನ ಪತ್ರಿಕೆ ಉಂಟು. ಕ್ರಯ 1 ಬಾಟ್ಲಿಗೆ ರೂ. 1; ಸಣ್ಣ ಬಾಟ್ಲಿಗೆ 10 ಆಣೆ. ವಿ. ಪಿ. ಛಾರ್ಜು ಬೇರೆ. ಗುಲಾಬ್‌ಸುಂದರ ಪ್ರಕಾಶ ಕೂದಲೆಣ್ಣೆ—ಮೆದುಳಿನ ಕೆಲಸದವರಿಗೂ ಇತರರಿಗೂ ಬಹಳ ಗುಣಕಾರಿ. ಕ್ರಯ ಬಾಟ್ಲಿಗೆ ರೂ. 1-6-0. ಇದನ್ನು ಒಂದು ಸಲ ಶೋಧಿಸಿ ಪರೀಕ್ಷಿಸಿ. [26-29]

ವಿಳಾಸ—ಜೆ. ಗುಲಾಬ್ ಚಂದ್ ಪೌರ್ವಾಳ್,

50 ಸ್ವಿನಪ್ಪನಾಯಕ್ ಬೀದಿ, ಪಾರ್ಕ್ ಟೌನ್, ಮದರಾಸ್.

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೇನ್ ಯವರು ಹೊಟ್ಟೆಶೂಲೆ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.

3-33

ಕೆಳ ಹೊಟ್ಟೆಯ ನೋವು, ಬಿರೀ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರವ, ಕೀಲುಗಳ ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ. ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನರನ್ನು ಬಹು ಕಿಸಿರುವನ್ನು ಮತ್ತು ನೋವನ್ನು ಬಾಧೆಯನ್ನೂ ನಿವಾರಣೆ ಮಾಡಿರುವನ್ನು ಪ್ರಪಂಚದಲ್ಲೇ ಇನ್ನಾವ ಔಷಧವೂ ಮಾಡಿರುವುದಿಲ್ಲ.

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರ ನೋವನ್ನೂ ನಿಲ್ಲಿಸಿಬಿಡುತ್ತದೆ. ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಸ್ವಲ್ಪವೂ ಮುಟ್ಟಿದ್ದಿಲ್ಲ.

ಇದು ಎಲ್ಲೆಲ್ಲೂ ವಿಕರಿಯಾಗುವುದು. ಸಣ್ಣ ಶೀಸೆಗೆ ೧ ರೂಪಾಯಿ. ದೊಡ್ಡ ಶೀಸೆಗೆ ೨ ರೂಪಾಯಿ.

ಅದ್ಭುತವಾದ ಬಲಕಾರಿ ಮತ್ತು ಬಾಯಿನಾತಹರ.

ಜಿನತಾನ

ಜೀರ್ಣಶಕ್ತಿ ಹುಟ್ಟಿಸುವುದರಲ್ಲಿ ಇದಕ್ಕೆ ಸಮಾನವಾದದ್ದು ಇನ್ನೊಂದಿಲ್ಲ; ಅನ್ನಕೋಶವು ಎಷ್ಟೇ ದುರ್ಬಲವಾಗಿದ್ದರೂ ಅದರ ಕಾರ್ಯಗಳನ್ನು ಸರಿಯಾಗಿ ಮಾಡುವದಿಲ್ಲ. ಇದರ ಸೇವನೆಯಿಂದ ಎಲ್ಲಾ ರೋಗಗಳನ್ನೂ ಅಂಟದಂತೆ ತಡೆಯಬಲ್ಲದು. ಈ ಭಾಗದಲ್ಲಿ ಇದರ ಗುಣವು ಬಹು ಫಲಕಾರಿಯಾಗಿದೆ. ಇದಲ್ಲದೆ ಇದನ್ನು ಸೇವಿಸುವವರ ಬಾಯಿಯಲ್ಲಿ ಎಲ್ಲಾ ತರದ ದುರ್ನಾತವೂ ಹೋಗಿ ಸುಗಂಧವು ಹುಟ್ಟಿ ಹರ್ಷಕರವಾಗಿದ್ದೀತು.

ಗಂಟಲಿನ ನರಗಳು ಇದರ ಸೇವನೆಯಿಂದ ಬಹಳ ಬಲಗೊಳ್ಳುವವು. ಇದರ ಗುಣವನ್ನು ನೋಡಿ ಉಪನ್ಯಾಸಕರೂ, ನಾಟಕಧಾರಿಗಳೂ, ಸಂಗೀತಗಾರರೂ, ಬೋಧಕರೂ, ವಾಚಾಳಕ ಪ್ರಿಯರೂ ಈ ಮಾತ್ರೆಗಳನ್ನು ಬಹಳವಾಗಿ ಮೋಹಿಸಿ ಪ್ರೀತಿಯಿಂದ ಉಪಯೋಗಿಸುತ್ತಿದಾರೆ.

ಈ ಮಾತ್ರೆಗಳನ್ನು ಜಪಾನ್‌ನಲ್ಲಿರುವ ಒಸಾಕಾ ಪಟ್ಟಣದ ಮೋರಿಸಿತಾ ಕಂಪನಿಯವರು ತಯಾರ್ಮಾಡುತ್ತಾರೆ.

ಈ ಮಾತ್ರೆಗಳ	30 ಮಾತ್ರೆಗಳುಳ್ಳ ಪೊಟ್ಟಣಕ್ಕೆ 1½ ಆಣೆ.	65 ಮಾತ್ರೆ ಪೊಟ್ಟಣಕ್ಕೆ 3 ಆಣೆ.
ಕ್ರಯ	195 ,, ಡಬ್ಬಾ ಸಮೇತ 8 ಆಣೆ.	455 ,, ಕನ್ನಡಿ ಡಬ್ಬಕ್ಕೆ 1 ರೂಪಾಯಿ.

ಎಲ್ಲಾ ಅಂಗಡಿಗಳಲ್ಲಿಯೂ ವಿಕರಿಯಾಗುವುದು.

ಸೋಲ್ ಏಜಂಟರು:— ಎಸ್. ವೈದ್ಯ ಮತ್ತು ಕಂಪನಿ,

[156-5] ಪಾರ್ಕ್‌ಟೌನ್, ಮದ್ರಾಸ್.

ಓರಿಯಂಟಲ್ ಗವರ್ನ್‌ಮೆಂಟ್ ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು .... ರೂ. 4,45,00,000

ಕಂಪನಿಯಿಂದ ಪಾವತಿ ಆಗಿರುವದು ,, 4,00,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ.—ಮಿ॥ ಎಂ. ಎಸ್. ರೆಡಿ ಲಿ., ಚೀಫ್ ಏಜೆಂಟ್, ಬೆಂಗಳೂರು; ಮಿ॥ ಎಂ. ಎಸ್. ನಂಜಪ್ಪನವರು ಅಥವಾ ಮಿ॥ ವೆಂಕಟಕಷ್ಣಯ್ಯನವರು, ಕಂಪನಿ ಏಜಂಟರು, ಮೈಸೂರು; ಅಥವಾ

[194-46] ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ, ಮದರಾಸ್.

ಹಿಂದೂಸ್ಥಾನ್ ಕೋಆಪರೇಟಿವ್ ಜೀವವಿಮೆ ಸಂಘ ಲಿ.

ಹಿಂದೂಸ್ಥಾನ್ ಕಟ್ಟಡಗಳು—ಕಲ್ಕತ್ತಾ.

ಕಂಪನಿಯ ಮೂಲಧನ (ಒಂದು ಕೋಟಿ ರೂಪಾಯಿ)	1,00,00,000
ಪಾವತಿಯಾದ ಮೊಬಲಗು	10,50,000
ವಸೂಲಾದ ಮೊಬಲಗು	87,00,000

ಈ ಕಂಪೆನಿಯಲ್ಲಿ ಪಾಲ್ದಾರರಿಗೆ ಬಹಳ ಅನ್ಯೂಯಾದ ದರಗಳ ಪಟ್ಟಿಯನ್ನು ಮಾಡಿರುವುದು. 1912 ನೇ ಇಸ್ವಿಯ ಇಂಡಿಯಾ ಗವರ್ನ್‌ಮೆಂಟಿನ ಜೀವವಿಮೆ ಕಂಪನಿಯ ಆಕ್ಟಿನ ಪ್ರಕಾರ ಸರ್ಕಾರದಲ್ಲಿ 2 ಲಕ್ಷ ರೂಪಾಯಿಗಳನ್ನು ಡಿಪಾಜಿಟ್ಟು ಮಾಡಲ್ಪಟ್ಟಿರುತ್ತೆ. ಮತ್ತು ಅನೇಕ ಮಹಾರಾಜರುಗಳು ಮುಂತಾದ ದೊಡ್ಡವರು ಪ್ರೆಸಿಡೆಂಟರಾಗಿರುವವರಿಂದ ಈ ಕಂಪನಿಯ ಅಭಿವೃದ್ಧಿ ಸ್ಥಿತಿಯನ್ನು ಪ್ರಕಟನೆ ಮಾಡುವುದಕ್ಕೆ ಸಂತೋಷವಾಗಿರುತ್ತದೆ.

ಸುಲಭವಾಗಿ ಹಣವನ್ನು ಪಾರ್ಟಿಯವರ ಮನೆಯಲ್ಲೇ ಜಾಗ್ರತೆ ಪಾವತಿಗೆ ಏರ್ಪಾಡು ಮಾಡಲ್ಪಡುತ್ತೆ. ಆದ್ದರಿಂದ ಪಾಲ್ದಾರರು ಮತ್ತು ಇದಕ್ಕೆ ಸೇರಿದ ಏಜಂಟ್ಸುಗಳು ತುಂಬಾ ಅದೃಷ್ಟವಂತರೆಂಬುವದರಲ್ಲಿ ಸಂದೇಹವಿಲ್ಲ.

ಹೆಚ್ಚಿನ ವಿಷಯಗಳಿಗೂ, ಫಾರಂ ಮತ್ತು ಪ್ರಾಸ್‌ಪೆಕ್ಟಸುಗಳಿಗೂ ಕೆಳಗಿನ ವಿಳಾಸಕ್ಕೆ ಜಾಗ್ರತೆಯಾಗಿ ಬರೆಯಿರಿ. [243-36]

ವೆಂಕಟಾಚಲಂ ಅಂಡ್ ಸನ್ಸ್, ಚೀಫ್ ಏಜಂಟ್ಸು,

166, ದೊಡ್ಡಪೇಟೆ, ಮೈಸೂರು.

S U. N. & Co.,

BENARES CITY, U. P.

ಸೊಗಸಾದ ಸರಕುಗಳು !! ದೊಡ್ಡ ಕಂಪೆನಿ !

ಈ ನಮ್ಮ ಕಂಪನಿಯಲ್ಲಿ ನೆಯಿದು ತಯಾರಿಸುವ ಉತ್ಕೃಷ್ಟವಾದ ಬನಾರಸ್ ರೇಷ್ಮೆ ಜರಿ ಸೀರೆಗಳು, ಶಲೆ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ್ಟಿ, ಮಗುಟ, ಜಗನ್ನಾಥ ಜಾಗಟೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಕ್ಯಾಟಲಾಗ್ 1 ನ್ನು ಮತ್ತು 2 ವಿಶ್ವೇಶ್ವರ ಪಟಗಳನ್ನು ಇನಾಮಾಗಿ ಕಳುಹಿಸಲಾದೀತು. [69-22]

ಎಸ್. ಯು. ಎನ್. ಮತ್ತು ಕಂಪನಿ, ಕಾಶಿ.

ಕುಂತಳಾನಂದ ತೈಲವು.

192-47

ಹಿಂದೂಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಿರುದಿನ ಬಿಲ್ಲೆಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ. ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು. ಈ ತೈಲವು ಕೂದಲನ್ನು ದಟ್ಟವಾಗಿಯೂ ಕಪ್ಪಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುತ್ತದೆ. ಶಿರೋವ್ಯಾಧಿಗಳನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದ್ದಾಗಿದೆ. ಬೆಲೆ ಬಾಟ್ಲಿಗೆ 1 ರೂಪಾಯಿ 3 ಬಾಟಲಿಗೆ 2 ರೂಪಾಯಿ 10 ಆಣೆ. ಅಂಚೆ ಹಾಸಲು ಬೇರೆ. ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ.

ನಮ್ಮ ವಿಳಾಸ:—ಬಿ. ಎನ್. ನಾಥ ಮತ್ತು ಕಂಪೆನಿ,

ವೇಪೇರಿ, ಮದರಾಸ್.

ನ್ಯಾಷನಲ್ ಅಷೂರೆನ್ಸ್ ಕಂಪನಿ, ಲಿಮಿಟೆಡ್,

ವಿಜಯನಗರಂ ಸಿಟಿ.

1905 ರಲ್ಲಿ ಸ್ಥಾಪಿಸಲ್ಪಟ್ಟದ್ದು.

1912 ನೇ ಆಕ್ಟು ಪ್ರಕಾರ ಬದಲಾಯಿಸಿದೆ.

ಗವರ್ನ್‌ಮೆಂಟ್ ಸೆಕ್ಯೂರಿಟಿಗಳನ್ನು ಪಡೆದಿದೆ.

ಕಂಪನಿ ಆಸ್ತಿಯನ್ನು ಹಂಚಿಕೊಳ್ಳುವ ಷೇರುದಾರರಿಲ್ಲ.

ವೈದ್ಯರ ಪರೀಕ್ಷಾ ಸರ್ಟಿಫಿಕೇಟು ಅವಶ್ಯವಿಲ್ಲ.

ಬೋನಸ್ ಹಣ ಅಪಾರವಾಗಿ ಪಾವತಿ ಮಾಡಿದೆ.

ಜೀವವಿಮೆ—ತಿಂಗಳ ಚಂದಾ 1 ನೇ ಕ್ಲಾಸ್ ರೂ. 1; 2 ನೇ ಕ್ಲಾಸ್ ರೂ. 0-8-0. ಮದುವೆ ಫಂಡು—ತಿಂಗಳ ಚಂದಾ ರೂ. 1-0-0.

ಇದು ಬಹು ಲಾಭಕರವಾದ ಮತ್ತು ಸುರಕ್ಷಿತವಾದ ಕಂಪನಿ. ವಿಮೆ ಮಾಡತಕ್ಕವರಿಗೂ ಫಂಡು ಪಡೆಯತಕ್ಕವರಿಗೂ ತುಂಬಾ ಅನುಕೂಲವಾಗಿರುತ್ತದೆ. [138-9]

ಏಜಂಟರು ಬೇಕು. ಧಾರಾಳವಾದ ಕಮೀಷನ್ ಸಿಗುತ್ತೆ. ಕಂಪನಿಯ ಪ್ರಾಸ್ಪೆಕ್ಟಸ್ಸು ಪಟ್ಟಿ ಕೇಳಿದವರಿಗೆ ಕೊಡುತ್ತೆ. ಈ ವಿಳಾಸಕ್ಕೆ ಬರೆದುಕೊಳ್ಳಿ:—

ವಿ. ಬಿ. ಶ್ರೀಕಂಠಯ್ಯನವರು, ಮೈಸೂರು ಮತ್ತು ಕೊಡಗಿನ ಚೀಫ್ ಏಜೆಂಟ್, ಕೋಟೆ, ಬೆಂಗಳೂರು ಸಿಟಿ.	**V. B. Srikantiah,** *Chief Agent, Mysore & Coorg, Fort, Bangalore City.*

ಶ್ರೀಕರಕಸ್ತೂರಿಮಾತ್ರೆ

ಬಿ. ವಿ. ಪಂಡಿತರ

250 ಮಾತ್ರೆಯುಳ್ಳ ಸೀಸೆಗೆ 4 ಆ.; 5 ಸೀಸೆಗಳಿಗೆ 1 ಇನಾಂ.

ಈ ಮಾತ್ರೆಗಳ ಬೆಲೆಯನ್ನು ನೋಡಿ ಇದರ ಗುಣವನ್ನು ಊಹಿಸಲಾಗದು. ಟಿಬೆಟ್ ದೇಶದ ಕಸ್ತೂರಿಯಿಂದಲೇ ಶಾಸ್ತ್ರೋಕ್ತವಾಗಿ ತಯಾರ್ಮಾಡಲ್ಪಡುತ್ತಿರುವ ಈ ಶ್ರೀಕರ ಕಸ್ತೂರಿ ಮಾತ್ರೆಗಳು ಸುವಾಸನೆಯಾಗಿರುವುದು ಮಾತ್ರವಲ್ಲದೆ ತಾಂಬೂಲದೊಡನೆ ಅಥವಾ ಹಾಗೆಯೇ ಸೇವಿಸಿದರೆ ಎಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸುವುದು. ಮಕ್ಕಳಿಗೆ ಉಂಟಾಗುವ ಅಜೀರ್ಣಭೇದಿ-ಜ್ವರ-ಕೆಮ್ಮು-ನೆಗಡಿ-ಉಳುಕು-ಹೊಟ್ಟೆಯುಬ್ಬರ-ಈ ರೋಗಗಳನ್ನು ಸವಿಸಾಪದಲ್ಲಿಯೇ ವೈದ್ಯನಿದ್ದಂತೆ ಶೀಘ್ರ ಗುಣಪಡಿಸುವುದು. ಪ್ರಯಾಣಿಕರಿಗೂ ಸಮಿಂಕು ರೋಗಕ್ಕೆ ಆದಲ್ಪಿಂಬವರಿಗೂ ಮನೆಯಿಂದಿಲ್ಲಿರುವವರಿಗೂ ಇದರಿಂದ ಮತ್ತು ಫಲ ಅರೋಗ್ಯವನ್ನು ಕೊಟ್ಟು ಕಾಪಾಡಲಾರದು. [220-41]

ವಿಷಮಜ್ವರ-ನೆಗಡಿ-ಕೆಮ್ಮು-ಕಫನೋವು-ಅಗ್ನಿಮಾಂದ್ಯ-ಶೀತವಾಯು-ಹಲ್ಲುನೋವು-ಮಲಬಂಧ-ಅನೇಕ-ನರಗಳ ದೌರ್ಬಲ್ಯ—ಈ ರೋಗಗಳನ್ನು ಪ್ರತಿಬಿಂಬದಂತೆ ಗುಣಪಡಿಸಿ ರಕ್ತವೃದ್ಧಿಯನ್ನುಂಟುಮಾಡುವುದು. ಸಾವಿರಾರು ಜನರು ಪರೀಕ್ಷಿಸಿದ್ದಾರೆ. ಟಪಾಲ್ ಖರ್ಚು 12 ಸೀಸೆ ವರೆಗೆ 4 ಆಣೆ

ವಿಳಾಸ—ಮ್ಯಾನೇಜರ್, ಸದ್ವೈದ್ಯಶಾಲಾ, ನಂಜನಗೂಡು.

" ವಾಸಿಮಾಡಿಕೊಳ್ಳುತ್ತೇನೆಂದು ಹೇಳು."

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು. ವಾಯು, ಕೀಲು, ಆದಿತರೆ, ಕಲೆನೋವುಗಳು; ಯಾವ ಕಾರಣದಿಂದ ಹುಟ್ಟುವ ಬಾಧೆಯಾಗಲಿ, ಉಬ್ಬಸ, ಹಲ್ಲುನೋವು, ಗಂಟು ಗಾಣಿಸ್ಸುವುದು, ಕೆಮ್ಮುಗಳು, ಶೀತನೆಗಡಿ, ಕ್ಷಯರೋಗ, ಬಚ್ಚು, ಉಳುಕು, ಭಗಳು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನು ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ. ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು. ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲಿ ಕೊಡಿ ಎಂದು ಕೇಳು. ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೋ. ಈ ಯಕ್ತಿಸಿಯೋಚಿತ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ. ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ. ಲಕ್ಷಾಂತರ ಜನರು ಸುಖಹೊಂದಿದಾರೆ; ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ. [122-11]

" ಕ್ಲೆಮೆಂಟರ ಮ್ಯಾಜಿಕ್ ಬಾಂ " ಎಂಬ ಹೆಸರನ್ನು ಮರೆಯಬೇಡಿ ಅದರ ಕ್ರಯ ಬಾಟ್ಲಿಗೆ 12 ಆಣೆ; ಅಂಚೆ ವೆಚ್ಚ 4 ಆಣೆ. 3 ಅಥವಾ ಹೆಚ್ಚು ಬಾಟ್ಲಿ ಬೇಕಾದರೆ ಪ್ಯಾಕಿಂಗ್ ಫ್ರೀಸ್ಟೇಜ್ ಮಾಫಿ. ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ. ವಿಳಾಸಗಳು:—(1) ಎನ್. ಪಿ. ಟರ್ನ್, 37 ಪಡಮುಟಪಿಳ್ಳೆ ಬೀದಿ, ಪುರಸವಾಕಂ, ವೇಪೇರಿ, ಮದರಾಸ್; (2) ಜಿ. ಎಸ್. ಕನ್ನಯ್ಯಶೆಟ್ಟರು, ಜನರಲ್ ಮರ್ಚೆಂಟ್, ತುಮಕೂರು.



ಅಮೃತಾಂಜನ ರಿಜಿಸ್ಟರ್ಡ್

ಇದು ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು. ಇದರ ಉಪಯೋಗದಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗವಾಯು, ಉಳುಕು, ಕೆಮ್ಮು, ಸೊಂಟದನೋವು, ಶೀತ, ಚರ್ಮ ವ್ಯಾಧಿ, ಹಲ್ಲುನೋವು, ಚೇಳು ಕಡಿತ ಮೊದಲಾದ ಎಲ್ಲಾ ತರದ ನೋವುಗಳು ಮಾತ್ರಿಯಾಗಿ ನಿಲ್ಲುವವು. ಕಳಾರಿ ಔಷಧಗಳನ್ನು ಪಡೆಕೊಳ್ಳಬೇಡಿರಿ. ಈ ನಮ್ಮ ಲೋಕಪ್ರಖ್ಯಾತವಾದ ಅಮೃತಾಂಜನವನ್ನು ನಮ್ಮ ರಿಜಿಸ್ಟ್ರಿಯಾದ ಮತ್ತು ಹಲವು ಭಾಷೆಗಳುಳ್ಳ ಸುಂದರವಾದ ಲೇಬಲುಗಳಲ್ಲಿ ಪ್ಯಾಕ್‌ಮಾಡಿರುತ್ತೇವೆ. ಲೇಬಲಿಗೆ ಇಲ್ಲದ ಬಾಟ್ಲಿಗಳನ್ನು ಪಡೆಕೊಳ್ಳಬೇಡಿರಿ. ಬಾಟ್ಲಿ ಒಂದರ ಕಿಮ್ಮತು 0-8-0. ಡಜನ್ 1 ಕ್ಕೆ 5-4-0. ವಿ. ಪಿ. ಪ್ರತ್ಯೇಕ. ಗಜಕರ್ಣದ ಮುಲಾಮು 0-6-0. ದಂತಮಂಜನ 0-2-0. ಮೋಹಿನಿ ತೈಲ 0-12-0. ಬಿಜ್ಜ ಮುಲಾಮು 0-3-0. ಜುಲಾಬು ಮಾತ್ರೆ 0-3-0. ಸುಂದರಿ ಮುಲಾಮು 0-8-0. ಕ್ಯಾಟಲಾಗಿಗೆ ಬರೆಯಿರಿ. [52-23]

ವ್ಯಾಪಾರಸ್ಥರಿಗೆ ಜಾಸ್ತಿ ಕಮಿಷನ್ ದೊರಕುವದು.

ಅಮೃತಾಂಜನ್ ಡಿಪ್ಪೋ,

ಫೋರ್ಟು. ಮುಂಬಯಿ, ಮತ್ತು ೯ ಜಹಂಗೀರ್ ಸ್ಟ್ರೀಟ್, ಮದ್ರಾಸು.

ಡೋಂಗರೆ

ಇವರ ಬಾಲಾಮೃತ

[162-3]

ಸೇವನದಿಂದ ಹುಡುಗರು ಸಶಕ್ತರೂ ನಿರೋಗಿಗಳೂ ಆಗಿ ಅವರ ಭಾರವು ಬೆಳೆಯುತ್ತದೆ. ಒಂದು ಬಾಟ್ಲಿಗೆ ೧-೦ ಆಣೆ. ಟಪಾಲ್ ಖರ್ಚು ೪ ಆಣೆ.

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಾಯಿ ಇವರಲ್ಲೂ ಮತ್ತು ಎಸ್. ವೈದ್ಯ ಅಂಡ್ ಕೊ., ಪಾರ್ಕ್ ಟೌನ್, ಮದರಾಸು ಇವರಲ್ಲೂ ದೊರೆಯುವುದು.

Mellin's Food

ಮೆಲಿನ್ಸ್ ಆಹಾರವು

ಕೈಸೋಕದೆ ತಯಾರ್ಮಾಡಿರುವದು.

[4-33]

ಮೆಲಿನರವರ ಲಾಕ್ಟೋ ಎಂಬಾಹಾರ.

ಇದರಲ್ಲಿ ಮೆಲಿನ್ಸ್ ಆಹಾರವೂ ಹಾಲೂ ಮಿಶ್ರವಾಗಿದೆ. ಕೆಲವು ನಿಮಿಷಗಳಲ್ಲಿ ತಯಾರ್ಮಾಡಿಕೊಳ್ಳಬಹುದು. ಶಿಶುಗಳಿಗೂ ದೊಡ್ಡವರಿಗೂ ಸಂಪೂರ್ಣ ಆಹಾರ.

ಬೆಳಗಿನ ಊಟಕ್ಕೆ ಮೆಲಿನ್ಸ್ ಲಾಕ್ಟೋ ಉಪಯೋಗಿಸಿದರೆ ಶರೀರಪುಷ್ಟಿಯನ್ನೂ ಬಲವರ್ಧಕೆಯನ್ನೂ ಕೊಡುತ್ತದೆ.

Messrs. OAKES & Company, Mount Road, Madras.

ವಿಳಾಸ—ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

ಪ್ರೊಫೆಸರ್ ಬ್ರೇಸ್ಲರ್

ಇಲೆಕ್ಟ್ರೊ ಪೆಯಿನಾಡ್ವೈನ್

ಮನುಷ್ಯನ ಶರೀರದಲ್ಲಿ ವಿದ್ಯುಚ್ಛಕ್ತಿ ವ್ಯಾಪಿತವಿರುವದೆಂತಲೂ, ವಿದ್ಯುಚ್ಛಕ್ತಿ ಕಡಮೆಯಾದ ಕೂಡಲೇ ನಾನಾ ತರದ ವ್ಯಾಧಿಗಳು ಲಭಿಸುವದೆಂತಲೂ, ಅಂತಹ ವ್ಯಾಧಿಗಳನ್ನು ಶೀಘ್ರ ಗುಣಪಡಿಸಲು ವಿದ್ಯುಚ್ಛಕ್ತಿ ಮಿಶ್ರವಾದ ಔಷಧದ ಉಪಯೋಗದಿಂದಲ್ಲದೆ ಬೇರೆ ಔಷಧಗಳಿಂದ ವ್ಯಾಧಿಗಳನ್ನು ಶೀಘ್ರ ಗುಣಪಡಿಸುವದು ಕಷ್ಟವೆಂತಲೂ ಅಮೇರಿಕಾ ದೇಶದ ವೈದ್ಯಶಾಸ್ತ್ರ ಪಂಡಿತರು ವೈದ್ಯಶಾಸ್ತ್ರ ಪರಿಶೋಧನೆಯಿಂದ ಸಿದ್ಧಿಸಿರುವರು.



ಈ ಔಷಧವು ಉಪಯೋಗಿಸಿದ ಕೂಡಲೇ ದೇಹಕ್ಕೆ ಸಾಕಾಗುವಷ್ಟು ವಿದ್ಯುಚ್ಛಕ್ತಿಯನ್ನುಂಟುಮಾಡಿ ವ್ಯಾಧಿಯನ್ನು ಅತಿ ಶೀಘ್ರ ಗುಣಪಡಿಸುತ್ತೆ. ಪ್ರಾಚೀನಕಾಲದ ಔಷಧಗಳಿಗೆಲ್ಲವು ಇದು ಅತ್ಯುತ್ತಮವಾದದ್ದು. ಒಂದಾವರ್ತಿ ಪರೀಕ್ಷಿಸಿ ನೋಡಿದರೆ ಇದರ ಗುಣವು ವ್ಯಕ್ತವಾಗುತ್ತೆ.

ಎಲೆಕ್ಟ್ರೊಪೆಯಿನಾಡ್ವೈನ್ ತೈಲದಿಂದ ಗುಣಪಡುವ ವ್ಯಾಧಿಗಳು:—

ತಿಮರುವಾಯುವು, ಕೀಲ್ವಾಯುವು, ಪಾರ್ಶ್ವವಾಯುವು, ಕ್ಷಯ, ಕೆಮ್ಮು, ನೆಗಡಿ, ವಾಯುನೋವು (ಕೈಕಾಲು ಹಿಡಿತ), ಉಳುಕುಹಿಡಿದಿದ್ದರು, ಕಠಿನಶ್ವಾಸ, ನಡುನೋವು (ಸೊಂಟನೋವು), ಪಕ್ಕಶೂಲೆ, ಹಲ್ಲುನೋವು, ತಲೆನೋವು, ಅರೆತಲೆನೋವು, ಉಬ್ಬಸ, ವಿಷಜ್ವರದ ಗಡ್ಡೆಗಳಿಗೂ ಮತ್ತು ಮಕ್ಕಳ ಪಕ್ಕಶೂಲೆ, (ಅಳ್ಳೆ) ಶೈತ್ಯದೋಷಗಳೂ, ವಿಷಹುಳಗಳ ಕಡಿತಗಳಿಗೂ (ಚೇಳು ಮುಂತಾದದ್ದು), ಇದಕ್ಕೆಲ್ಲಾ ಬಹಳ ಶ್ಲಾಘನೀಯವಾದದ್ದು. [12-32]

ಉಪಯೋಗಿಸುವ ಕ್ರಮವು ಹಿಂದುದೇಶದ ಎಲ್ಲಾ ಭಾಷೆಗಳಲ್ಲಿಯೂ ಬುಡ್ಡಿಯ ಸಂಗಡ ಕಳುಹಿಸಲಾದೀತು.

ಬುಡ್ಡಿಯ ಕ್ರಯ ರೂ. 0–8–0. ವಿ. ಪಿ. ಖರ್ಚು 0–4–0. ಏಜಂಟರು ಬೇಕು.

ಮುಖ್ಯ ಏಜಂಟರು:—ಗುರುಬಸವ ಅಂಡ್ ಕಂಪನಿ, ಮದರಾಸ್.

ನಮ್ಮ ಏಜಂಟರಿಗೂ ಚಂದಾದಾರರಿಗೂ.

“ವೃತ್ತಾಂತ ಪತ್ರಿಕೆ” ಯ ಹೊಸ ವರುಷವು ಕಳೆದ ಜೂನ್ ತಿಂಗಳಿಂದ ಪ್ರಾರಂಭವಾಗಿದೆ. ನಮ್ಮ ಏಜಂಟರು ತಮ್ಮ ಸ್ಥಳದ ವಾಚಕರಿಂದ ಹೊಸ ವರುಷದ ಚಂದಾ ಒಂದು ರೂಪಾಯನ್ನು ಈ ವರೆಗೆ ಅಡ್ವಾನ್ಸಾಗಿ ವಸೂಲ್ಮಾಡಿದಾರೆಂದು ನಿರೀಕ್ಷಿಸುತ್ತೇವೆ. ಹಾಗೆ ಅಡ್ವಾನ್ಸು ಚಂದಾ ಕೊಡದೆ ಇರುವವರಿಗೆ ಏಜಂಟರು ಪತ್ರಿಕೆಗಳನ್ನು ಕೊಡಕೂಡದು.

ಚಂದಾದಾರರು ದಯವಿಟ್ಟು ನಮ್ಮ ಏಜಂಟರಿಗೆ ಚಾಲ್ತಿ ವರುಷದ ಚಂದಾ ಒಂದು ರೂಪಾಯಿ ಅಡ್ವಾನ್ಸಾಗಿ ಪಾವತಿಮಾಡಿ, ಅವಕ್ಕೆ ಅವರಿಂದ ಕ್ರಮವಾದ ಅಚ್ಚಾಗಿರುವ ರಸೀತಿಗಳನ್ನು ಪಡೆಯಬೇಕೆಂದು ಕೃತಪಡಿಸುತ್ತೇವೆ.

ಮ್ಯಾನೇಜರ್, “ವೃತ್ತಾಂತ ಪತ್ರಿಕೆ,” ಮೈಸೂರು.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ:— ಬೆನ್ನಿನಲ್ಲಿ ಛಳುಕು; ನಿದ್ದೆಯಿಲ್ಲದೆ ಇರುವುದು; ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಿಳುಪಾಗಿಯೋ ಇಳಿಯುವುದು; ಬಿಡದೆ ಬಾಯಾರಿಕೆ; ಬಳಲಿಕೆ; ಎದೆ ತಲ್ಲಣಿಸುವುದು; ಕಲಿನೋವು; ಗಾಬರಿ; ಕಣ್ಣುಮೊಬ್ಬು; ತಲೆ ತಿರುಗುವಿಕೆ; ಮೈನೋವು; ಕೀಲುನೋವು; ಮರವು; ನಿಶ್ಶಕ್ತಿ; ಇವೇ ಮೊದಲಾದುವು. ಅಲಕ್ಷ್ಯಮಾಡಿದರೆ ಮೂತ್ರೋಪದ್ರವ, ಶಾಯು, ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [181-49]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು.



ರೂ. ೨—೦—೦; ಅಥವಾ ೬ ಬುಡ್ಡಿಗಳಿಗೆ ರೂ. ೧೦—೮—೦. ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುತ್ತದೆ. ಅಥವಾ ಡೋನ್ಸ್ ಪಿ. ಒ. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು

ಮೈಸೂರು ಸಂಸ್ಥಾನದ 1914–15ನೇ ಸಾಲಿನ ಬಡ್ಜೆಟ್ಟು.

ಜಮಾ ಬಾಬುಗಳು.

ಬಾಬುಗಳು.	ಬಡ್ಜೆಟ್ಟು 1914-15	ಕೋಧನೀರ 1913-14
ಜಮೀನ್ ಕಂದಾಯ ..	1,06,40,006	1,05,00,000
ಫಾರೆಸ್ಟು ..	28,20,000	33,14,000
ಎಕ್ಸೈಸ್ ..	46,00,000	52,20,900
ತೆರಿಗೆಗಳು ..	2,65,000	2,63,000
ಸ್ಟಾಂಪುಗಳು ..	9,75,000	10,30,000
ರಜಿಸ್ಟ್ರೇಷನ್	1,86,000	1,95,000
ಗಣಿಗಳು	19,00,000	19,36,000
ದಂಡಿನ ಶಿಲ್ಕು	13,43,000	30,00,000
ಬಡ್ಡಿ	13,94,000	17,30,000
ಕೋರ್ಟುಗಳು	49,000	51,000
ಬಂದೀಖಾನೆಗಳು	38,000	31,000
ಪೋಲೀಸು	30,000	27,000
ವಿದ್ಯಾಭ್ಯಾಸ	1,76,000	1,77,000
ವ್ಯವಸಾಯ	1,000	.....
ವೈದ್ಯ	1,32,000	1,17,000
ಶಾಸ್ತ್ರೀಯ ಮತ್ತು ಚಿಲ್ರೆ ಇಲಾಖೆಗಳು	86,000	1,07,000
ಅಲೋಯನ್ಸ್ ಮತ್ತು ಪೆನ್ಷನ್ ಗಳು	2,000	2,000
ಸಾದಿಲ್ವಾರು ಮತ್ತು ಛಾಪಾಖಾನೆ	9,000	10,000
ಇತರ ಚಿಲ್ಲರೆ ಬಾಬುಗಳು	1,57,000	1,71,000
ಸೈನ್ಯ ಮತ್ತು ಖಿಲ್ಜೇರಿ ಕಾಮಗಾರಿಗಳು	94,000	84,000
ರೈಲ್ವೆಗಳು	16,00,000	16,90,000
ಮರಾಮತ್ತು	3,38,000	3,63,000
ಕಾವೇರಿ ವಿದ್ಯುಚ್ಛಕ್ತಿ	17,58,000	17,12,000
ಜುಮ್ಲಾ ಹುಟ್ಟುವಳಿ ರೂಪಾಯಿ	2,84,92,000	3,17,30,000

ಲಂಡನ್ ಪಟ್ಟಣದಲ್ಲಿ ಲೆಡನ್ ಹಾಲ್ ಎಂಬ ಬೀದಿಯನ್ನು ಅಗಲವಾಗಿ ಮಾಡುವುದಕ್ಕೆ ಅದರ ಎರಡು ಕಡೆಗಳಲ್ಲೂ ಇರುವ ಮನೆಮಠಗಳನ್ನು ಕೊಂಡು ಕೊಳ್ಳಬೇಕೆಂದು ಮ್ಯುನಿಸಿಪಾಲಿಟಿಯವರು 5,56,000 ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ.

***

ಲಂಡನ್ನಿಂದ ಪ್ಯಾರಿಸ್ ನಗರಕ್ಕೆ ವಿಮಾನಯಂತ್ರದಲ್ಲಿ ಹೋಗಿ ವಾಪಸು ಬರತಕ್ಕವರಿಗೆ ಬಹುಮಾನ ಸಿಕ್ಕುವುದೆಂದು ಪ್ರಕಟಿಸಿದ್ದಂತೆ ಅನೇಕ ಕಾರೀಗಾರರು ಈ ಪಂದ್ಯಕ್ಕೆ ಸೇರಿದರು. ಅಲ್ಲಿಂದಲ್ಲಿಗೆ ಆಗುವ 500 ಮೈಲಿ ಫಾಸಲೆಯನ್ನು ಎಲ್. ಬ್ರಾಕ್ ಎಂಬೊಬ್ಬ ಅಮೇರಿಕದ ಕಾರೀಗಾರನು ಏಳು ಗಂಟೆಗಳಲ್ಲಿ ಹೋಗಿಬಂದು ಮುಗಿಸಿ ಮೊದಲನೆ ಬಹುಮಾನವನ್ನು ಪಡೆದನು. ಈತನು ಅಂತರಿಕ್ಷದಲ್ಲಿ ಗಂಟೆಗೆ ಸುಮಾರು 73 ಮೈಲಿಯಂತೆ ಸಂಚರಿಸದಂತಾಯಿತು. ಈತನಿಗೆ ಏಳು ಬಹುಮಾನದ ಬಟ್ಟಲುಗಳೂ, 30,000 ರೂಪಾಯೂ ಈ ಪಂದ್ಯದಲ್ಲಿ ಸಿಕ್ಕಿದವು.

ಯಾಕೆ ಪರೀಕ್ಷಿಸಬಾರದು ? ಭಂಗಾರದ ಪದಕ ಬಂದಿದೆ.

ಸೆಂಟ್, ಅತ್ತರ್‌ಗಳೆಲ್ಲಕ್ಕಿಂತಲೂ ಶ್ರೇಷ್ಠವಾದದ್ದು

ಆಟೋ ಮೋಹಿನಿ

ಇದು ರೆಜಿಸ್ಟರ್ ಆಗಿದೆ. ಈಗಿನ ಕಾಲದಲ್ಲಿ ಇತರ ನಿಲುವ, ಸುವಾಸನೆಯುಳ್ಳ, ಮನೋಹರವಾದ ಮತ್ತು ಸರಿಯಾದ ಪರಿಮಳದ ದ್ರವ್ಯವು. ಇದ ವಸ್ತ್ರಕ್ಕೆ ನಾಲ್ಕು ತೊಟ್ಟು ಹಾಕಿಕೊಂಡರೆ ನಾಲ್ಕು ದಿವಸಗಳ ತನಕ ಘಮಘಮಿಸುವ ಸುವಾಸನೆ ಇರುತ್ತೆ. ಹಾಗೆ ದೀರ್ಘಕಾಲ ನಿಲ್ಲತಕ್ಕದ್ದಲ್ಲವೆಂದು ರುಜುಪಡಿಸುವ ಮಾಡಿಕೊಡುವವರಿಗೆ ನಾವು ಒಂದು ನೂರು ರೂಪಾಯಿ ಬಹುಮಾನ ಕೊಡುತ್ತೇವೆ. ಪರೀಕ್ಷೆಮಾಡಿ ನೋಡಿ, ಬಹುಮಾನವನ್ನು ಸಂಪಾದಿಸಿಕೊಳ್ಳಿ !

ಕ್ರಯ ½ ಔನ್ಸ್ ಗಾಜಿನ ಬಿರಡೆಯ ಬಾಟ್ಲಿಗೆ ರೂ. 2–0–0.

„ 1 ಡ್ರಾಂ ಕೊಳವೆ „ „ „ 0–12–0.

ಆಟೋ ಮೋಹಿನಿ ಪರಿಮಳದ ಕಾರ್ಡುಗಳು ಡಜನ್ 1 ಕ್ಕೆ ರೂ. 0-12-0

ಎಲ್ಲರಲ್ಲಿಯೂ ವಿಕರಿಗೆ ಇಟ್ಟಿದೆ.

ಮದರಾಸ್ ಅಧಿಪತ್ಯಕ್ಕೆಲ್ಲಾ ಏಜಂಟರು—

ಷಾ ಭಗವಾನ್‌ದಾಸ್ ಛೂನಿಲಾಲ್ ಕಂಪನಿ,

[251–37] ೧೩೩, ಚೈನಾಬಜಾರ್ ರೋಡ್, ಮದರಾಸ್.

ವೃತ್ತಾಂತ ಪತ್ರಿಕೆ.

—:o:—

ಸನ್ ೧೯೧೪ ನೇ ಇಸವಿ ಆಗಸ್ಟ್ ತಾ. ೧೩ ನೇ ಗುರುವಾರ.

ಯೂರೋಪ್ ಖಂಡದ ಯುದ್ಧವು.

ಯೂರೋಪ್ಪಿನಲ್ಲಿ ಪ್ರಾರಂಭವಾಗಿರುವ ಯುದ್ಧದಲ್ಲಿ ಗ್ರೇಟ್ ಬ್ರಿಟನ್ ರಾಜ್ಯವು ಪಕ್ಷವನ್ನು ವಹಿಸಿ ಹೊರಡಬೇಕಾಯಿತು. ಇದಕ್ಕೆ ಕಾರಣವೇನೆಂಬುದನ್ನು ಕುರಿತು ಇಲ್ಲಿ ಸಂಕ್ಷೇಪವಾಗಿ ಪ್ರಸ್ತಾಪಮಾಡುವೆವು. ಇಂಗ್ಲಿಷ್ ಗವರ್ನ್‌ಮೆಂಟಿನ ಫಾರಿನ್ ಸೆಕ್ರೆಟರಿ ಸರ್ ಎಡ್ವರ್ಡ್ ಗ್ರೇರವರು ಪಾರ್ಲಿಮೆಂಟಿನಲ್ಲಿ ಹೇಳಿದ ಸಂಗತಿಗಳನ್ನು ಇನ್ನೊಂದು ಕಡೆ ಪ್ರಕಟಿಸಿದೇವೆ ಅದನ್ನು ಓದಿದರೆ ಯುದ್ಧದ ಕಾರಣವು ಸ್ಪಷ್ಟವಾಗಿ ಗೊತ್ತಾಗುವುದು.

ಸರ್ವಿಯದ ಒಬ್ಬ ವಿದ್ಯಾರ್ಥಿಯು ಆಸ್ಟ್ರಿಯಾ ಯುವರಾಜರನ್ನು ಅವರ ಪತ್ನೀ ಸಮೇತ ಕೊಂದುಹಾಕಿದನಷ್ಟೆ. ಇದಕ್ಕಾಗಿ ಸರ್ವಿಯದಲ್ಲಿ ಒಂದು ಫಿತೂರಿ ನಡೆಯಿತಂತೆ. ಆಸ್ಟ್ರಿಯದವರು ಕ್ರೂರಕೃತ್ಯ ನಡಿಸಿದವರನ್ನು ಶಿಕ್ಷಿಸಬೇಕೆಂದು ಕೇಳಿದರು ; ಮತ್ತು ಅಪರಾಧಿಗಳನ್ನು ಸರಿಯಾಗಿ ಶಿಕ್ಷಿಸುವರೋ ಇಲ್ಲವೋ ಎಂಬುವುದನ್ನು ನೋಡಿಕೊಳ್ಳುವುದಕ್ಕೆ ಆಸ್ಟ್ರಿಯದವರು ತಮ್ಮ ಕಡೆಯ ಒಬ್ಬ ಅಧಿಕಾರಿಯನ್ನು ಅಲ್ಲಿಗೆ ಕಳುಹಿಸುತ್ತೇವೆಂದೂ ಹೇಳಿದರು. ಈ ಎರಡನೇ ಭಾಗವನ್ನು ಸರ್ವಿಯದವರು ಒಪ್ಪದೆಹೋದಕಾರಣ ಆಸ್ಟ್ರಿಯಕ್ಕೂ ಸರ್ವಿಯಾಕ್ಕೂ ಯುದ್ಧವುಂಟಾಯಿತು.

ಅಲ್ಲಿಂದ ಮುಂದಕ್ಕೆ ನಡೆದ ಸಂಗತಿಗಳು ಸ್ಪಷ್ಟವಾಗಿ ಗೊತ್ತಾಗಲಿಲ್ಲ. ಬಹುಶಾ ರಷ್ಯಾದವರು ಸರ್ವಿಯಾ ಸಹಾಯಕ್ಕೆ ಹೊರಟದ್ದರಿಂದ ಆಸ್ಟ್ರಿಯಕ್ಕೆ ರಷ್ಯವೂ ಶತ್ರುವಾಗಿ ಪರಿಣಮಿಸಿತು.

ಈ ರಗಳೆಯಲ್ಲಿ ಜರ್ಮನಿಯು ತಲೆಹಾಕಿ ಈ ಕಡೆ ರಷ್ಯಾದವರನ್ನೂ ಆ ಕಡೆ ಫ್ರೆಂಚರನ್ನೂ ಹೆದರಿಸಿತು. ಗ್ರೇಟ್ ಬ್ರಿಟನ್‌ನವರು ಬೆಲ್ಜಿಯಮ್ಮನ್ನು ಸುರಕ್ಷಿತವಾಗಿ ಕಾಪಾಡುತ್ತೇವೆಂದು ಮಾತುಕೊಟ್ಟಿರೋಣವರಿಂದ ಬೆಲ್ಜಿಯಂ ರಾಜ್ಯದ ವಿಷಯದಲ್ಲಿ ನಿಮ್ಮ ಅಭಿಮತವೇನೆಂದು ಜರ್ಮನಿಯವರನ್ನು ಪ್ರಶ್ನೆಮಾಡಿದರು. ಜರ್ಮನಿಯವರು ಅದಕ್ಕೆ ಸಮಂಜಸವಾದ ಉತ್ತರವನ್ನು ಕೊಡದೆ ಗ್ರೇಟ್ ಬ್ರಿಟನ್‌ನವರ ಕೂಡ ಸಂಧಾನಮಾಡಿಕೊಳ್ಳುವುದಕ್ಕೆ ಪ್ರಯತ್ನಪಟ್ಟರು. ಜರ್ಮನಿಯವರು ಗ್ರೇಟ್ ಬ್ರಿಟನ್‌ನವರನ್ನು ಕೇಳಿದ್ದೇನೆಂದರೆ—ಸದ್ಯಕ್ಕೆ ನಾವು ಬೆಲ್ಜಿಯಂ ಮೂಲಕ ನಮ್ಮ ಸೈನ್ಯಗಳನ್ನು ಸಾಗಿಸುವೆವು. ನಾವು ಇಂಗ್ಲಿಷ್ ಕಡಲು ಕಾಲುವೆಗೆ ಪ್ರವೇಶಿಸುವುದೂ ಇಲ್ಲ; ಫ್ರಾನ್ಸಿನ ಉತ್ತರ ಸಮುದ್ರ ತೀರಕ್ಕೆ ನಮ್ಮ ಹಡಗುಗಳನ್ನು ಕಳುಹಿಸಿ ಫ್ರೆಂಚರ ತೀರಪಟ್ಟಣಗಳಿಗೆ ಮುತ್ತಿಗೆಹಾಕುವುದೂ ಇಲ್ಲ ಎಂದು ಹೇಳಿದರು. ಇದಕ್ಕೆ ಇಂಗ್ಲಿಷರು ಒಪ್ಪಲಿಲ್ಲ. ಬೆಲ್ಜಿಯಂ ಮೂಲಕ ಜರ್ಮನಿ ಸೈನ್ಯಗಳು ಬರಕೂಡದೆಂದು ಜವಾಬು ಕೊಟ್ಟರು. ಬೆಲ್ಜಿಯಮ್ಮಿನ ಸ್ವಾತಂತ್ರ್ಯಕ್ಕೆ ಜರ್ಮನಿಯಿಂದ ಲೋಪವುಂಟಾಯಿತು. ಇದನ್ನು ಪ್ರತ್ಯೇಕವಾಗಿ ಬಿಟ್ಟಿರುತ್ತೇವೆಂದು ಹಿಂದೆಯೇ 1870 ನೇ ಇಸವಿಯಲ್ಲಿ ಜರ್ಮನಿ, ಗ್ರೇಟ್ ಬ್ರಿಟನ್, ಫ್ರಾನ್ಸ್ ರಾಜ್ಯಗಳವರು ಒಪ್ಪಿ ಕರಾರಿಗೆ ರುಜು ಮಾಡಿರುತ್ತಾರೆ. ಇದಲ್ಲದೆ ಪ್ರತ್ಯೇಕವಾಗಿದ್ದ ಲಕ್ಸಂಬರ್ಗ್ ಎಂಬ ಅಧಿಪತ್ಯದೊಳಗೆ ಜರ್ಮನಿಯವರು ಪ್ರವೇಶಿಸಿ ಲಂಡನ್ ಪಟ್ಟಣದ ಕರಾರನ್ನು ಮೀರಿರುತ್ತದೆ. ಆದಕಾರಣ ಬೆಲ್ಜಿಯಮ್ಮಿನ ಸ್ವಾತಂತ್ರ್ಯವನ್ನು ಕಾಪಾಡುವುದಕ್ಕೋಸ್ಕರ ಗ್ರೇಟ್ ಬ್ರಿಟನ್‌ನವರು ಜರ್ಮನಿಯವರ ಮೇಲೆ ಯುದ್ಧಕ್ಕೆ ಹೊರಡಬೇಕಾಯಿತು. ಬಹುಶಾ ಗ್ರೇಟ್ ಬ್ರಿಟನ್‌ನವರಿಗೆ ಆಸ್ಟ್ರಿಯದ ಮೇಲೆ ಶತ್ರುತ್ವವೇನೂ ಇರಲಾರದು. ಜರ್ಮನಿಯ ಕೂಡ ಆಸ್ಟ್ರಿಯವು ಸೇರಿಕೊಂಡು ಯುದ್ಧಕ್ಕೆ ಬಂದರೆ ಗ್ರೇಟ್ ಬ್ರಿಟನ್‌ನವರು ತಮಗೆ ಅಭಿಮತವಲ್ಲದಿದ್ದರೂ ಆಸ್ಟ್ರಿಯದವರಿಗೆ ಎದುರುಬೀಳಬೇಕಾಗುವುದು. ಈ ಸಮಯವು ಅನಿರೀಕ್ಷ್ಯವಾದದ್ದೇನಾದರೂ ಸಂಭವಿಸಿ ಅಲ್ಲಲ್ಲಿಗೆ ಹರಿಯದೆಹೋದ ಪಕ್ಷದಲ್ಲಿ ಅತ್ಯಂತ ಭಯಂಕರವಾದದ್ದಾಗಿ ಪರಿಣಮಿಸುವುದು. ಘೋರವಾದ ಕದನಗಳು ಭೂಮಿಯ ಮೇಲೂ ಸಮುದ್ರದ ಮೇಲೂ ಏಕಪ್ರಕಾರವಾಗಿ ನಡೆಯುತ್ತವೆ. ಈ ಯುದ್ಧವು ಯಾವ ಪಕ್ಷವಾದರೂ ಸಂಪೂರ್ಣವಾಗಿ ಸೋತು ಪತನವಾಗುವ ತನಕ ಅಂತ್ಯವಾಗುವಂತೆ ಕಾಣುವುದಿಲ್ಲ. ಇಂಗ್ಲಿಷರ ಹಡಗುಗಳೂ ಜರ್ಮನಿಯವರ ಹಡಗುಗಳೂ ಉತ್ತರ ಸಮುದ್ರದಲ್ಲಿ ಎದುರುಬಿದ್ದಿರೋಣವರಿಂದ ಮುಖ್ಯವಾದ ಯುದ್ಧಗಳು ಅಲ್ಲಿ ನಡೆಯಬೇಕಾಗಿದೆ. ಈ ಉತ್ತರ ಸಮುದ್ರಕ್ಕೆ ಪಶ್ಚಿಮ ಪಾರ್ಶ್ವದಲ್ಲಿ ಗ್ರೇಟ್ ಬ್ರಿಟನ್ ರಾಜ್ಯವೂ ಪೂರ್ವ ಪಾರ್ಶ್ವದಲ್ಲಿ ಡೆನ್‌ಮಾರ್ಕ್, ಜರ್ಮನಿ, ಹಾಲೆಂಡ್, ಬೆಲ್ಜಿಯಂ ರಾಜ್ಯಗಳೂ ಆವರಿಸಿಕೊಂಡಿವೆ. ಈ ಸಮುದ್ರಯುದ್ಧದಲ್ಲಿ ಜಯಪ್ರದಹೊಂದುವವರೇ ಗಟ್ಟಿಗರೆನಿಸಿಕೊಳ್ಳುತ್ತಾರೆ.

ಹಿಂದುಸ್ಥಾನದ ಸಾಮಂತ ರಾಜರುಗಳೂ ಪ್ರಜೆಗಳೂ ಇಂಥಾ ಸಮಯದಲ್ಲಿ ಇಂಗ್ಲಿಷ್ ಪ್ರಭುತ್ವಕ್ಕೆ ತಮ್ಮ ಕೈಲಾಗುವ ಮಟ್ಟಿಗೂ ಸಹಾಯಮಾಡುವೆವೆಂದು ಉತ್ಸಾಹಪೂರ್ವಕವಾಗಿಯೂ ಘಂಟಾಘೋಷವಾಗಿಯೂ ಅರಿಕೆ ಮಾಡುತ್ತಿರುವುದನ್ನು ನೋಡಿದರೆ ಎಷ್ಟೋ ಹರ್ಷವಾಗುತ್ತದೆ. ಐರ್ಲೆಂಡಿನಲ್ಲಿ ಅಲ್‌ಸ್ಟರಿನವರೂ ದೇಶಸೇವಕರೂ ತಮ್ಮ ಒಳದೇಶದ ಕುಂದುಕೊರತೆಗಳನ್ನು ಮರೆತುಬಿಟ್ಟು ಹೊರಗಿನ ಶತ್ರುಗಳನ್ನು ಓಡಿಸುವುದಕ್ಕೆ ಹೇಗೆ ಒಂದಾಗಿ ಹೊರಟಿರುವರೋ ಹಾಗೆಯೇ ಹಿಂದುಸ್ಥಾನದಲ್ಲೂ ಸಕಲ ಪ್ರಜೆಗಳೂ ಸ್ಥಳೀಯ ರಾಜ್ಯಭಾರ ಕ್ರಮಗಳಲ್ಲಿ ತಮಗಿರುವ ಭಿನ್ನಾಭಿಪ್ರಾಯಗಳನ್ನು ಒತ್ತಟ್ಟಿಗಿಟ್ಟು, ಎಲ್ಲರೂ ಏಕವಾಗಿ ರಾಜಭಕ್ತಿ ಪ್ರೀತಿಗಳನ್ನು ಪ್ರಕಾಶಪಡಿಸಿರುತ್ತಾರೆ. ಮೈಸೂರಿನಲ್ಲಿರುವ ನಮ್ಮ ಪ್ರಜೆಗಳಾದರೋ ಅಂಥಾ ರಾಜಭಕ್ತಿಯಲ್ಲಿ ಯಾರಿಗೂ ಕಡಮೆಯಾದವರಾಗಿಲ್ಲ. ನಮ್ಮ ಮಹಾರಾಜರವರು ಸಂಸ್ಥಾನದ ಸರ್ವಸ್ವವನ್ನೂ ಚಕ್ರವರ್ತಿ ಸಾರ್ವಭೌಮರವರ ಬೆಂಬಲಕ್ಕೋಸ್ಕರ ಒಪ್ಪಿಸುವುದರಲ್ಲಿ ಸಿದ್ಧರಾಗಿರುತ್ತಾರೆಂದು ತಿಳಿಸಲು ಆನಂದಪಡುತ್ತೇವೆ.

ಯುದ್ಧದ ವಿಷಯದಲ್ಲಿ ಪ್ರತಿ ವಾರವೂ ಪ್ರಕಟವಾಗುವ ತಂತೀವರ್ತಮಾನಗಳಲ್ಲಿ ಯಥಾರ್ಥವಾದವುಗಳನ್ನು ಕ್ರೋಢೀಕರಿಸಿ ಪ್ರಕಟಿಸುತ್ತಾ ಬರುವೆವು. ಬರುವ ವರ್ತಮಾನಗಳನ್ನು ಶೋಧನೆಮಾಡಿ ಪ್ರಕಟಿಸದಿದ್ದರೆ ವಾಚಕರು ಈ ಯುದ್ಧದ ಸಮಾಚಾರಗಳನ್ನು ಸರಿಯಾಗಿ ತಿಳಿದುಕೊಳ್ಳುವುದು ಪ್ರಯಾಸವಾಗುತ್ತದೆ.

ಯುದ್ಧವು.

ಕ್ರೈಸ್ತರೆಂಬ ನಾಮಧೇಯವುಳ್ಳ ಅನೇಕ ದೊಡ್ಡ ದೊಡ್ಡ ಜನಾಂಗದವರು ಈಗ ಯುದ್ಧೋನ್ಮುಖರಾಗಿ ಕಾದಾಡುವುದು ತುಂಬಾ ವಿಷಾದಕರವಾಗಿದೆ. ಈ ಜನಾಂಗಗಳವರು ಕ್ರೈಸ್ತರೆಂದು ಕರಿಸಿಕೊಳ್ಳುವವರಾದಾಗ್ಯೂ ಕ್ರಿಸ್ತನ ಬೋಧನೆಗೆ ಅನುಗುಣವಾಗಿ ನಡೆಯುವವರಲ್ಲವೆಂಬುದು ವ್ಯಕ್ತವಾಗುತ್ತದೆ. ಯುದ್ಧಮಾಡುವುದು ಪಾಪವೆಂದು ಯೇಸು ಕ್ರಿಸ್ತನು ಎಂದಾದರೂ ಹೇಳಿರುವುದಿಲ್ಲ. ಆದರೆ ಆತನ ಬೋಧನೆಗನುಸಾರವಾಗಿ ನಡೆಯುವದಾದರೆ ಆತನ ಶಿಷ್ಯಮಂಡಲಿಯವರು ಯುದ್ಧಮಾಡುವುದನ್ನು ನಿಲ್ಲಿಸಿಬಿಡಬೇಕು.

ಪಕ್ಷಗಳ ವಿಷಯದಲ್ಲಿ ವ್ಯವಹಾರ ಹುಟ್ಟಿದರೆ ದಂಡೋಪಾಯವೇ ಅದಕ್ಕೆ ತಕ್ಕ ಪರಿಹಾರವಾಗಿದೆಯೆಂದೂ ದೇವರು ಸರ್ವದಾ ಅತ್ಯಂತ ಬಲಿಷ್ಠರ ಭಾಗದಲ್ಲಿರುತ್ತಾನೆಂದೂ ಯುದ್ಧಮಾಡುವವರು ನಂಬಿರುವರು. ಇದು ಯೇಸು ಕ್ರಿಸ್ತನ ಬೋಧನೆಗೆ ಪೂರ್ಣ ವಿರುದ್ಧವಾಗಿರುತ್ತದೆ ವಿರೋಧಗಳಿಗೂ ಭಿನ್ನಾಭಿಪ್ರಾಯಗಳಿಗೂ ಕಾರಣಗಳು ಹುಟ್ಟುವುವೆಂಬುದು ಆತನಿಗೆ ತಿಳಿದಿತ್ತು. ಆದರೆ ಇಂತಹ ಭೇದಗಳು ಹುಟ್ಟುವಲ್ಲಿ ಪರಸ್ಪರ ಸಂಭಾಷಣೆಯಿಂದಲೂ ಮಿತ್ರಮಂಡಲಿಯವರ ಸಹಾಯದಿಂದಲೂ ಅವುಗಳನ್ನು ಇತ್ಯರ್ಥಮಾಡಿಕೊಳ್ಳಬೇಕೆಂದು ಆತನು ಉಪದೇಶಮಾಡಿರುತ್ತಾನೆ. ಇವರು ಸತ್ಯಕ್ಕೂ ನೀತಿಗೂ ಅನುಗುಣವಾಗಿ ಕಾರ್ಯಾಕಾರ್ಯಗಳನ್ನು ಪರಿಶೋಧಿಸಿ ತಿಳಿದು ವ್ಯಾಜ್ಯವನ್ನು ಬಗೆಹರಿಸತಕ್ಕದು. ನೀತಿಯನ್ನು ಉಲ್ಲಂಘಿಸಿ, ಸತ್ಯಕ್ಕೆ ವಿರೋಧವಾಗಿ ನಡೆಯುವ ಜನರನ್ನಾಗಲಿ ರಾಜ್ಯಗಳನ್ನಾಗಲಿ ದೂರೀಕರಿಸತಕ್ಕದು.

ವ್ಯಕ್ತಿಗಳ ಸಂಮೇಳನವೇ ಜನಾಂಗವಾಗಿರುತ್ತದೆ. ಅವರಲ್ಲಿ ಅನೇಕರು ಯೇಸು ಕ್ರಿಸ್ತನ ಬೋಧನೆಯನ್ನು ಕೈಕೊಂಡು ನಡೆಯುವವರಲ್ಲ. ಅವರಿಗೆ ತಮ್ಮ ಸ್ವಾರ್ಥತೆಯ ಉದ್ದೇಶಗಳು ಕೈಗೂಡಿದರೆ ಅಷ್ಟೇ ಸಾಕು. ಇವರು ಸತ್ಯಕ್ಕೂ ನೀತಿಗೂ ವಿರೋಧವಾಗಿ ಹೋರಾಡುವಲ್ಲಿ ಒಂದು ಪಕ್ಷಕ್ಕೆ ಸೇರಿ, ತಮ್ಮ ಇಷ್ಟಸಿದ್ಧಿಯನ್ನು ಪಡೆಕೊಳ್ಳುವುದಕ್ಕಾಗಿ ದಂಡೋಪಾಯವನ್ನು ಪ್ರಯೋಗಿಸುತ್ತಾರೆ. ಆದಕಾರಣ ಯೇಸು ಕ್ರಿಸ್ತನ ಬೋಧನೆಯನ್ನು ಅನುಸರಿಸಿ ನಡೆಯುದಿರುವವರ ದೆಸೆಯಿಂದ ಕ್ರೈಸ್ತ ನಾಮಾಂಕಿತವುಳ್ಳ ಜನಾಂಗಗಳು ಆ ಬೋಧನೆಯನ್ನು ಅಸಹ್ಯಪಡಿಸುತ್ತಾರೆ.

ಯಾವ ಸಂದರ್ಭಗಳಲ್ಲಾದರೂ ಯುದ್ಧಮಾಡುವುದು ಕೆಟ್ಟದೆಂದು ನಂಬಿರುವ ಕೆಲವು ಮಂದಿ ಕ್ರೈಸ್ತರು ಇರುತ್ತಾರೆ. ಆದರೆ ಯೇಸು ಕ್ರಿಸ್ತನು ಯುದ್ಧಗಳೂ ಜಗಳಗಳೂ ಇದ್ದೇ ಇರುವುವೆಂದೂ ಧರ್ಮವನ್ನು ಕಾಪಾಡುವುದಕ್ಕಾಗಿ ತನ್ನ ಶಿಷ್ಯಮಂಡಲಿಯವರು ಆಯುಧಪಾಣಿಗಳಾಗಬೇಕಾದೀತೆಂದೂ ಸೂಚಿಸಿದನು. ಭಯಂಕರವಾದ ಶಸ್ತ್ರಯುದ್ಧದಿಂದ ಉಂಟಾಗಬಹುದಾದ ನ್ಯಾಯವಾದ ಪ್ರಯೋಜನವು ಇದೊಂದೇ. ಧರ್ಮವನ್ನು ನೆಲೆಗೊಳಿಸುವ ಉದ್ದೇಶದಿಂದ ಶಸ್ತ್ರಪ್ರಯೋಗ ಮಾಡಲು ಬಲಾತ್ಕರಿಸಲ್ಪಟ್ಟವರಿಗೂ ಅಧರ್ಮಿಗಳಾಗಿ ನಡೆದು ಶಿಕ್ಷಾಪಾತ್ರರಾಗಿರುವವರಿಗೂ ಯುದ್ಧವು ಮಹಾ ಅನರ್ಥಕ್ಕೆ ಕಾರಣವು.

ಕೆಲವು ವರುಷಗಳಿಂದೀಚೆಗೆ ಯುದ್ಧದಲ್ಲಿ ಬಹಳ ಮಟ್ಟಿಗೆ ಕರುಣೆಯು ತೋರಿಸಲ್ಪಡುವುದು. ಸೆರೆಯಾಗಿ ಸಿಕ್ಕಿದವರನ್ನು ಕೊಂದುಹಾಕುವುದಕ್ಕೆ ಬದಲಾಗಿ ತಕ್ಕಮಟ್ಟಿಗೆ ಅವರಿಗೆ ಅನುಕೂಲತೆಯನ್ನು ಕಲ್ಪಿಸಿಕೊಡುವರು. ಗಾಯಪಟ್ಟವರಿಗೆ ವೈದ್ಯರುಗಳೂ ಅವರ ಸಹಾಯಕರೂ ಶೈತ್ಯೋಪಚಾರಗಳನ್ನು ನಡಿಸುವರು. ಇಂಥವರನ್ನು ರಣರಂಗದಲ್ಲಿ ಮಡಿದು ಹೋಗುವುದಕ್ಕೆ ಬಿಟ್ಟುಬಿಡುವುದಿಲ್ಲ. ಎಷ್ಟೇ ಉಪಶಮನಗಳನ್ನು ಕಲ್ಪಿಸಿದರೂ ಯುದ್ಧವೇನೋ ಮಹಾ ಕ್ರೂರಕೃತ್ಯ. ಯುದ್ಧಮಾಡಿ ವ್ಯಾಜ್ಯಗಳನ್ನು ಇತ್ಯರ್ಥಮಾಡಿಕೊಳ್ಳುವುದು ಮೃಗಗಳಿಗೆ ಯುಕ್ತವೇ ಹೊರತು ಮನುಷ್ಯರಿಗೆ ಯುಕ್ತವಾದುದಲ್ಲ.

ನೀತಿಯನ್ನೂ ಸತ್ಯವನ್ನೂ ನೆಲೆಗೊಳಿಸಬೇಕೆಂಬುದು ಕ್ರೈಸ್ತ ಧರ್ಮವಾಗಿದೆ. ಈ ಸದುದ್ದೇಶವನ್ನು ಸಿದ್ಧಿಗೆತರುವುದಕ್ಕೆ ಪಂಚಾಯತರ ಮೂಲಕ ವ್ಯಾಜ್ಯವನ್ನು ಬಗೆಹರಿಸಿಕೊಳ್ಳುವುದೇ ಅತ್ಯುತ್ತಮವಾದ ಮಾರ್ಗ. ವಿದ್ಯಾವಂತರು ಸತ್ಯಸಂಧರೂ ಆಗಿರುವಂಥ ಮಹನೀಯರುಗಳು ವ್ಯಾಜ್ಯದ ಕಾರಣಗಳನ್ನು ತೂಗಿನೋಡಿ, ನೀತಿಯನ್ನು ನೆಲೆಗೊಳಿಸಲು ತಕ್ಕ ಉಪಾಯವನ್ನು ಕಲ್ಪಿಸಿಕೊಡುವುದಕ್ಕೆ ಸಮರ್ಥರಾಗಿರುತ್ತಾರೆ. ನಷ್ಟವನ್ನನುಭವಿಸಿದವರು ದೊಡ್ಡ ಮನಸ್ಸುಮಾಡಿ, ಕ್ಷಮಾಪಣೆ ಮಾಡುವ ಶ್ರೇಷ್ಠವಾದ ಕ್ರೈಸ್ತ ಧರ್ಮವನ್ನು ಕೈಕೊಳ್ಳುವುದು ಅನೇಕ ಸಂದರ್ಭಗಳಲ್ಲಿ ಆವಶ್ಯಕವಾಗಿರಬಹುದು. ಜನರು ಯಾವಾಗ ತಾವು ಮಾಡಿದ ಕೆಟ್ಟ ಕೆಲಸಕ್ಕಾಗಿ ಯಥಾರ್ಥವಾಗಿ ಪಶ್ಚಾತ್ತಾಪಪಟ್ಟು, ಮುಂದೆ ಎಂದಿಗೂ ಅಂತಹ ಕಾರ್ಯಗಳನ್ನು ಮಾಡಬಾರದೆಂದು ಮನಸ್ಸನ್ನು ಪ್ರಕಾಶಪಡಿಸುತ್ತಾರೋ ಆಗ ಅವರಿಗೆ ಪ್ರೀತಿ ಎಂಬ ಕ್ರೈಸ್ತ ಧರ್ಮವು—ನಿಮ್ಮ ಶತ್ರುಗಳಿಗಾಗಿ ಪ್ರಾರ್ಥಿಸಿರಿ, ಅವರ ಅಪರಾಧಗಳನ್ನು ಕ್ಷಮಿಸಿಬಿಡಿರಿ ಎಂಬೀ ಕಟ್ಟಳೆಯನ್ನು ವಿಧಿಸುವುದು.

ಈ ಬೋಧನೆಯು ಪ್ರತಿಯೊಬ್ಬರೂ ಶ್ಲಾಘಿಸತಕ್ಕದಾಗಿದೆ. ಜನಗಳು ಎಷ್ಟರಮಟ್ಟಿಗೆ ವ್ಯಾವಹಾರಿಕ ಕಾರ್ಯಗಳಿಗಿಂತಲೂ ಹೆಚ್ಚಾಗಿ ಪಾರಮಾರ್ಥಿಕ ಕಾರ್ಯಗಳನ್ನು ಕುರಿತು ಚಿಂತಿಸುತ್ತಾ ಬರುವರೋ ಅಷ್ಟರ ಮಟ್ಟಿಗೆ ಸತ್ಯತೆ, ನೀತಿ, ಪ್ರೀತಿ, ಕ್ಷಮೆ ಎಂಬೀ ಧರ್ಮಗಳು ಹಿಂದಿತವಾಗಿ ಹೆಚ್ಚುವುವು. ಅಲ್ಲಿಯ ವರೆಗೂ ಯುದ್ಧಗಳು ನಡವೇ ನಡೆಯುವುವು. ಅವುಗಳಿಗೆ ಕಾರಣಭೂತರಾದವರ ವಿಷಯವಾಗಿ ನಾವು ಏನು ಹೇಳೋಣ ? ಅಕಟಾ ! ನಮ್ಮ ಜೊತೆ ಸೃಷ್ಟಿಗಳಲ್ಲಿ ಲಕ್ಷೋಪಲಕ್ಷ ಮಂದಿಯ ದುಃಖಕಷ್ಟಗಳಿಗೆ ಇವರು ಕಾರಣರಾಗಿರುತ್ತಾರಲ್ಲಾ !!

ಈ ದೇಶದ ಒಂದು ಪುಸ್ತಕದಲ್ಲಿ ಕೆಲವು ದಿನಗಳ ಹಿಂದೆ ನಾವು ಒಂದು ಚಿತ್ರಪಟವನ್ನು ನೋಡಿದೆವು. ಅದರಲ್ಲಿ ಒಂದು ಆಕಳೂ ಒಂದು ಹುಲಿಯೂ ಒಂದೇ ಪಾತ್ರೆಯಲ್ಲಿ ನೀರುಕುಡಿಯುತ್ತಿದ್ದುವು. ಮತ್ತು ಹುಲಿಯ ಮರಿಯು ಆಕಳಲ್ಲಿಯೂ ಕರುವು ಹುಲಿಯಲ್ಲಿಯೂ ಹಾಲುಕುಡಿಯುತ್ತಿದ್ದುವು. ಪಶುಸ್ವಭಾವಗಳಲ್ಲಿ ಇಂತಹ ನೋಟವು ಈ ಲೋಕದಲ್ಲಿ ಎಂದಿಗೂ ಸಿಕ್ಕದು. ಆದರೆ ಮಾನವರಲ್ಲಿ ಅಂತಹ ಕಾಲವು ಬಂದೇಬರಬೇಕು. ಅವರು ಮೃಗಗಳಂತೆ ಹೋರಾಡಿ ತಮ್ಮ ವ್ಯಾಜ್ಯಗಳನ್ನು ಬಗೆಹರಿಸಿಕೊಳ್ಳುವುದನ್ನು ಬಿಟ್ಟುಬಿಡಬೇಕು. ಈಗ ನಡೆಯುತ್ತಲಿರುವ ಘೋರವಾದ ಯುದ್ಧವನ್ನು ಬೇಗ ನಿಲ್ಲಿಸಿಬಿಡುವಂತೆಯೂ ಲೋಕದ ಎಲ್ಲಾ ಜನಾಂಗಗಳವರು ನೀತಿಯನ್ನು ತಿಳಿದು, ತಮ್ಮ ವ್ಯಾಜ್ಯಗಳನ್ನು ವಿವೇಕದಿಂದಲೂ ಕ್ರೈಸ್ತ ರೀತಿಗನುಸಾರವಾಗಿಯೂ ಇತ್ಯರ್ಥಮಾಡಿಕೊಳ್ಳುವಂತೆಯೂ ನಾವೆಲ್ಲರೂ ದೇವರಿಗೆ ಪ್ರಾರ್ಥನೆಮಾಡುತ್ತಾ ಬರೋಣ.

ಯುದ್ಧದ ಸಮಾಚಾರಗಳು.

ಜರ್ಮನಿಗೂ ಬೆಲ್ಜಿಯಂಗೂ ಘೋರಯುದ್ಧ.

ಆಸ್ಟ್ರಿಯಾ ಸರ್ವಿಯವನ್ನು ಗೆಲ್ಲುವುದಿಲ್ಲ.

ತಂತೀ ವರ್ತಮಾನಗಳ ಸಾರ.

ಯುದ್ಧದ ವಿಷಯವಾಗಿ ಬರತಕ್ಕ ತಂತೀ ವರ್ತಮಾನಗಳನ್ನೆಲ್ಲಾ ಬಂದದ್ದು ಬಂದಹಾಗೆ ನಾವು ಪ್ರಕಟಮಾಡಲಾರೆವು. ಹಾಗೆ ಪ್ರಕಟಿಸುವುದು ವಿವೇಕಿಗಳ ಕಾರ್ಯವಲ್ಲ ; ಯಾಕೆಂದರೆ ಅನೇಕ ತಂತೀ ವರ್ತಮಾನಗಳು ನಡೆದ ಸಂಗತಿಗಳನ್ನು ತಿಳಿಸದೆ ಊಹೆಗಳನ್ನೂ ಬರೀ ವದಂತಿಗಳನ್ನೂ ಹೇಳುವವು. ಇದುವರೆಗೆ ಯಾರ್ಯಾರಿಗೆ ಯುದ್ಧ ಪ್ರಾರಂಭವಾಗಿದೆ ಎಂದರೆ—ಗ್ರೇಟ್ ಬ್ರಿಟನ್‌ನವರು ಜರ್ಮನಿಯವರ ಮೇಲೆ ಮಾತ್ರ ಯುದ್ಧಮಾಡುವರು ; ಫ್ರಾನ್ಸಿನವರು ಜರ್ಮನಿಯ ಮತ್ತು ಆಸ್ಟ್ರಿಯದ ಮೇಲೆ ಯುದ್ಧಮಾಡುತ್ತಿದ್ದಾರೆ ; ಬೆಲ್ಜಿಯಂನವರು ತಮ್ಮ ರಾಜ್ಯವನ್ನು ಸಂರಕ್ಷಿಸಿಕೊಳ್ಳುವುದಕ್ಕೋಸ್ಕರ ಜರ್ಮನಿಯವರ ಮೇಲೆ ಯುದ್ಧಮಾಡುವರು ; ರಷ್ಯಾದವರು ಜರ್ಮನಿ ಮತ್ತು ಆಸ್ಟ್ರಿಯಾ ರಾಜ್ಯಗಳ ಮೇಲೆ ಯುದ್ಧಮಾಡುತ್ತಿದ್ದಾರೆ ; ಆಸ್ಟ್ರಿಯದವರು ಸರ್ವಿಯ, ಫ್ರಾನ್ಸ್ ಮತ್ತು ರಷ್ಯಾ ರಾಜ್ಯಗಳನ್ನು ಎದುರಿಸಿ ಕಾದಾಡುತ್ತಿರುವರು. ಇಟಲಿ, ಸ್ವಿಟ್‌ಜರ್‌ಲೆಂಡ್, ಸ್ಪೈಯಿನ್, ರೊಮೇನಿಯ, ಹಾಲೆಂಡ್, ಸ್ವೀಡನ್, ನಾರ್ವೆ, ಡೆನ್‌ಮಾರ್ಕ್, ಟರ್ಕಿ, ಈ ರಾಜ್ಯಗಳು ಈ ಯುದ್ಧಗಳಲ್ಲಿ ಯಾವುದೊಂದು ಪಕ್ಷವನ್ನೂ ವಹಿಸದೆ ಪ್ರತ್ಯೇಕವಾಗಿರುವವು ; ಆದರೂ ಈ ಪೈಕಿ ಹಾಲೆಂಡ್, ಸ್ವಿಟ್‌ಜರ್‌ಲೆಂಡ್, ಟರ್ಕಿ ರಾಜ್ಯಗಳು ಯುದ್ಧಕ್ಕಾಗಿ ಸನ್ನಾಹಗಳನ್ನು ಮಾಡಿಕೊಂಡು ಸಿದ್ಧವಾಗಿರುತ್ತವೆ. ಕಳೆದ ವಾರ ಮೇಲ್ಕಂಡ ಕಕ್ಷಿ ಪ್ರತಿಕಕ್ಷಿಗಳಿಗೆ ನಡೆದಿರುವ ಯುದ್ಧಕಾರ್ಯಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ತಿಳಿಸುವೆವು.

ಗ್ರೇಟ್ ಬ್ರಿಟನ್ ಮತ್ತು ಜರ್ಮನಿ.

ಗ್ರೇಟ್ ಬ್ರಿಟನ್‌ಗೂ ಜರ್ಮನಿಗೂ ಯುದ್ಧಪ್ರಕರಣ ಉಂಟಾಗಿದೆ ಎಂದು ಆಗಸ್ಟ್ ತಾ. 4 ನೇ ಮಂಗಳವಾರ ಪ್ರಕಟಿಸಲಾಯಿತು. ಇದರಿಂದ ಇಂಗ್ಲಿಷ್ ಗವರ್ನ್‌ಮೆಂಟಿನಲ್ಲಿ ಕೆಲವು ಅಧಿಕಾರಿಗಳ ಬದಲಾವಣೆಗಳುಂಟಾಗಿರುತ್ತವೆ. ಬ್ರಿಟಿಷ್ ಕ್ಯಾಬಿನೆಟ್ ಎಂಬ ಮಂತ್ರಿ ಸಭೆಯಲ್ಲಿದ್ದ ಲಾರ್ಡ್ ಮಾರ್ಲೀ, ಮಿ॥ ಜಾನ್ ಬರ್ನ್ಸ್, ಮಿ॥ ಟ್ರೆವಿಲಿಯನ್ ಎಂಬೀ ಮೂರು ಮಂದಿ ಮೆಂಬರುಗಳು ರಾಜೀನಾಮೆ ಕೊಟ್ಟುಬಿಟ್ಟರು. ಈ ಪೈಕಿ ಮೊದಲನೇ ಇಬ್ಬರ ಸ್ಥಾನಗಳಿಗೆ ಮಿ॥ ರನ್‌ಸಿಮನ್‌ರವರೂ, ಅರಲ್ ಬೀಚಮ್‌ರವರೂ ನೇಮಕವಾಗಿರುತ್ತಾರೆ. ಕೆಲವು ವರುಷಗಳ ಹಿಂದೆ ಹಿಂದುಸ್ಥಾನದಲ್ಲಿ ಸರ್ವ ಸೇನಾಪತಿಯಾಗಿದ್ದ ಲಾರ್ಡ್ ಕಿಚ್ನರ್ ಯವರು ಯುದ್ಧದ ಇಲಾಖೆಯ ಸಕ್ರೆಟರಿಯಾಗಿದ್ದಾರೆ. ಲಾರ್ಡ್ ರಾಬರ್ಟ್ಸ್‌ರವರು ಅವರಿಗೆ ಸಹಾಯಮಾಡುತ್ತಾರೆ. ಗ್ರೇಟ್ ಬ್ರಿಟನ್‌ನವರ ಯುದ್ಧಗಳೆಲ್ಲಾ ಸಮುದ್ರದ ಮೇಲೆ ನಡೆಯೋಣದರಿಂದ ಅವರು ತಮ್ಮ ಭೂಸೈನ್ಯಗಳನ್ನು ಸಹಾಯಕ್ಕಾಗಿ ಬೆಲ್ಜಿಯಂಗೂ, ಫ್ರಾನ್ಸಿಗೂ ಕಳುಹಿಸಿಕೊಡುತ್ತಾರೆ. ಲಾರ್ಡ್ ಕಿಚ್ನರ್ ಯವರು 5,00,000 ಸೈನ್ಯ ಬೇಕಾಗುತ್ತೆಂದು ತಿಳಿಸಿದ್ದರಿಂದ ಸಾವಿರಾರು ಜನರು ಸೈನ್ಯಕ್ಕೆ ಸೇರಿಕೊಳ್ಳುತ್ತೇವೆಂದು ಹೇಳಿ ತಮ್ಮ ಹೆಸರುಗಳನ್ನು ಬರಸಿ ಸೇರಿಕೊಳ್ಳುತ್ತಿದ್ದಾರೆ. ಬ್ರಿಟಿಷ್ ಸಾಮ್ರಾಜ್ಯವೆಲ್ಲಾ ಏಕ

ವಾಗಿರುವುದು. ಸಣ್ಣದಾದ ವೇಲ್ಸ್ ದೇಶವು 1,200 ಯುದ್ಧಸವಾರರನ್ನು ಒದಗಿಸಿದೆ; ಕ್ಯಾನಡಾದವರು 1,00,000 ಜನರು ಸೈನಿಕರಾಗಿ ಬರುತ್ತೇವೆಂದು ಹೇಳಿದಾರೆ. ಇದಲ್ಲದೆ ಅಲ್ಲಿನವರು ಹಣ ಹಾಕಿ ಎರಡು ಹಡಗುಗಳನ್ನು ಕ್ರಯಕ್ಕೆ ಕೊಂಡುಕೊಂಡಿರುವುದಲ್ಲದೆ 10,00,000 ಚೀಲಗಳ ತುಂಬಾ ಗೋಧಿ ಹಿಟ್ಟನ್ನು ಕಳುಹಿಸಿ ಇಂಗ್ಲೆಂಡಿಗೆ ಕಳುಹಿಸುವ ಏರ್ಪಾಡು ಮಾಡಿದಾರೆ; ಆಸ್ಟ್ರೇಲಿಯದವರು 30,000 ಸೈನ್ಯವನ್ನು ಒದಗಿಸುವಂತೆ ಒಪ್ಪಿಕೊಂಡಿರುವರು; ನ್ಯೂಜೀಲೆಂಡ್ ಮತ್ತು ದಕ್ಷಿಣ ಆಫ್ರಿಕಾ ಎಂಬೀ ಎರಡು ಸ್ವಾಸ್ಥ್ಯಗಳಿಂದಲೂ ಅನೇಕ ಸೈನ್ಯವನ್ನು ಕಳುಹಿಸುವುದರಲ್ಲಿದಾರೆ. ಈ ವೃಕೆ ಬ್ರಿಟಿಷ್ ಗವರ್ನ್‌ಮೆಂಟಿನವರು ಆಸ್ಟ್ರೇಲಿಯದವರ ಸಹಾಯವನ್ನು ಅಂಗೀಕರಿಸಿಕೊಂಡಿರುವರು. ಹಿಂದುಸ್ಥಾನದಿಂದಲೂ ಎರಡು ಡಿವಿಜನ್ ಸೈನ್ಯಗಳನ್ನು ಕಳುಹಿಸಿಕೊಡುತ್ತಾರೆ. ಈ ಪ್ರಕಾರ ಎಲ್ಲಾ ಕಡೆಗಳಲ್ಲೂ ಅಪರಿಮಿತವಾದ ಉತ್ಸಾಹವೂ ದೇಶವಾತ್ಸಲ್ಯವೂ ರಾಜಭಕ್ತಿಯೂ ಪ್ರಕಾಶವಾಗುತ್ತಿದೆ. ಪ್ರಿನ್ಸ್ ಆಫ್ ವೇಲ್ಸ್‌ರವರು ಮುಂದಕ್ಕೆ ಬಂದು ಗ್ರೆನೆಡಿಯರ್ ಗಾರ್ಡ್ಸ್ ಎಂಬ ಸವಾರರ ಸೈನ್ಯದಲ್ಲಿ ಒಬ್ಬ ಉದ್ಯೋಗಸ್ಥರಾಗಿ ಸೇರಿಕೊಂಡಿದಾರೆ. ಐರ್ಲೆಂಡಿನಲ್ಲಿ ಹೋಮ್ ರೂಲ್ ಎಂಬ ಕಾನೂನಿನ ನಿಮಿತ್ತದಿಂದ ಪ್ರಜೆಗಳು ಎರಡು ಪಕ್ಷಗಳಾಗಿ ಘೋರವಾದ ಕದನಗಳೂ ಕಾದಾಟಗಳೂ ಪ್ರಾಪ್ತವಾಗುವಂತಿತ್ತು. ಈಗ ಈ ಪಕ್ಷಗಳೆಲ್ಲಾ ತಮ್ಮ ವೀರವೈಷಮ್ಯಗಳನ್ನೆಲ್ಲಾ ತ್ಯಜಿಸಿ ಏಕವಾಗಿರುವುದಲ್ಲದೆ ಅನೇಕರು ಸೈನ್ಯಗಳಿಗೆ ಸೇರಿಕೊಳ್ಳಬೇಕೆಂದು ಕುತೂಹಲಪಟ್ಟು ಉತ್ಸಾಹದಿಂದ ಕೇಳಿಕೊಳ್ಳುತ್ತಿದಾರೆ. ಆ ವೃಕೆ 2,00,000 ಜನರು ಯುದ್ಧಕ್ಕೆ ಹೊರಡಲು ಸಿದ್ಧರಾಗಿರುವರು. ಇಂಗ್ಲಿಷ್ ಸೈನ್ಯಗಳು ಇದುವರೆಗೆ ಇಂಗ್ಲಾಂಡಿನಿಂದ ಹೊರಟಿರಬಹುದು; ಆದರೆ ಅವರ ಚಲನೆಗಳೆಲ್ಲಾ ಗುಟ್ಟಿನಲ್ಲಿಟ್ಟುಕೊಂಡಿದಾರೆ. ಇಂಗ್ಲಿಷ್ ಪಾರ್ಲಿಮೆಂಟಿನವರು ಯುದ್ಧದ ಖರ್ಚಿಗೆ 20,50,00,000 ಪೌಂಡುಗಳನ್ನು (307½ ಕೋಟಿ ರೂಪಾಯಿ) ಸ್ಯಾಂಕ್ಷನ್ ಮಾಡಿರುತ್ತಾರೆ. ಯುದ್ಧದ ದೆಸೆಯಿಂದ ಕಷ್ಟನಷ್ಟಗಳಿಗೆ ಗುರಿಯಾಗುವಂಥವರಿಗೆ ಸಹಾಯಮಾಡುವುದಕ್ಕೋಸ್ಕರ ಒಂದು ರಿಲೀಫ್ ಫಂಡು ಪ್ರಾರಂಭವಾಗಿ ಇದುವರೆಗೆ 4,00,000 ಪೌಂಡುಗಳು (60 ಲಕ್ಷ ರೂಪಾಯಿ) ಚಂದಾ ಮೂಲಕ ಕೂಡಿಸಲ್ಪಟ್ಟಿದೆ.

ಸಮುದ್ರದ ಯುದ್ಧವು.

ಗ್ರೇಟ್ ಬ್ರಿಟನ್ ರಾಜ್ಯಕ್ಕೂ ಡೆನ್ಮಾರ್ಕ್ ಮತ್ತು ನಾರ್ವೆ ರಾಜ್ಯಗಳಿಗೂ ನಡುವೆ ಇರುವ ಉತ್ತರ ಸಮುದ್ರಕ್ಕೆ ಕೆಲವು ಜರ್ಮನಿಯ ಹಡಗಿನ ಸೈನ್ಯ ಬಂದಿದೆ. ಇಂಗ್ಲಿಷರ ಕೆಲವು ಹಡಗಿನ ಸೈನ್ಯವೂ ಅಲ್ಲಿರುವುದು. ಇದುವರೆಗೆ ಯುದ್ಧವೇನೂ ನಡೆದಿಲ್ಲ.

ಜರ್ಮನಿಯ ಕೊನಿಗಿನ್ ಲೂಯಿಸ್ ಎಂಬ ಒಂದು ಹಡಗು ಥೇಮ್ಸ್ ನದೀಮುಖದಲ್ಲಿ (ನದಿಯು ಸಮುದ್ರಕ್ಕೆ ಸೇರುವ ಪ್ರದೇಶ) ಸಮುದ್ರದೊಳಗೆ ಸಿಡಿಮದ್ದಿನ ಗುಂಡುಗಳನ್ನು ಗುಟ್ಟಾಗಿ ಇಡುತ್ತಿದೆ ಎಂದೂ ಗೊತ್ತಾಯಿತು. ಈ ಗುಂಡುಗಳನ್ನು ಪಾತ್ರೆಗಳಲ್ಲಿಟ್ಟು ಸಮುದ್ರದೊಳಗೆ ಬಿಡುವರು. ಜಹಜುಗಳು ಸಮುದ್ರದ ಮೇಲೆ ಹೋಗುವಾಗ್ಗೆ ಕಾಣದೆ ಈ ಪಾತ್ರೆಗಳಿಗೆ ತಗಲಿದರೆ ಆ ಕೂಡಲೇ ಅವು ಒಡೆದು ಮೊದಲೆ ಹಾರಿ ಜಹಜುಗಳನ್ನು ನಾಶಪಡಿಸುವವು. ಆಂಫಿಯನ್ ಎಂಬ ಇಂಗ್ಲಿಷ್ ಜಹಜು ಆ ಜರ್ಮನಿ ಹಡಗಿನ ಮೇಲೆ ಬಿದ್ದು ಅದನ್ನು ಮುಳುಗಿಸಿಬಿಟ್ಟಿತು. ಆದರೆ ಸ್ವಲ್ಪ ಹೊತ್ತಿನೊಳಗಾಗಿ ಅಂಫಿಯನ್ ಅಂಥಾ ಒಂದು ಪಾತ್ರೆಗೆ ಬಡಿದು ಒಡೆದುಹೋಯಿತು. 130 ಜನರು ಸಮುದ್ರದ ಪಾಲಾದರು; ಕೊನಿಗಿನ್ ಲೂಯಿಸ್‌ನಿಂದ ಬದುಕಿಸಿ ಕೈಸೆರೆಯಾಗಿ ಹಿಡಿದುತಂದಿದ್ದ 20 ಮಂದಿ ಜರ್ಮನಿಯವರೂ ಮುಳುಗಿ ಸತ್ತರು. ಅಂಫಿಯನ್ ಜಹಜಿನಲ್ಲಿದ್ದ ಕ್ಯಾಪ್ಟನ್, 16 ಮಂದಿ ಉದ್ಯೋಗದಾರರೂ, 135 ಜನರೂ ಬದುಕಿಕೊಂಡರು.

ಡೆನ್ಮಾರ್ಕಿನ ಸಮುದ್ರತೀರದಿಂದ ಸ್ವಲ್ಪ ದೂರದಲ್ಲಿ ಜರ್ಮನಿಯ ಒಂದು ಟಾರ್ಪಿಡೊ ಬೋಟ್ ಎಂಬ ಹಡಗು ನಾಶವಾಡಲ್ಪಟ್ಟಿತು. ಅದರಲ್ಲಿದ್ದ 30 ಮಂದಿ ಸಮುದ್ರದಲ್ಲಿ ಮುಳುಗಿಹೋದರು.

ಜರ್ಮನಿಯವರು ನೀರಿನೊಳಗೇ ಹೋಗುವಂಥಾ ಸಬ್‌ಮರೀನ್ ಎಂಬ ಹಡಗುಗಳನ್ನು ಬ್ರಿಟಿಷರ ಕೆಲವು ಜಹಜುಗಳ ಮೇಲೆ ನುಗ್ಗಿಸಿದರು. ಆದರೆ ಇದರಲ್ಲಿ ಇಂಗ್ಲಿಷ್ ಜಹಜುಗಳಿಗೆ ನಷ್ಟವೇನೂ ಸಂಭವಿಸಲಿಲ್ಲ. ಇಂಗ್ಲಿಷರು ಅವುಗಳನ್ನೆಲ್ಲಾ ಹಿಂದಕ್ಕೆ ಓಡಿಸಿದ್ದಲ್ಲದೆ ಆ ವೃಕೆ ಒಂದನ್ನು ನಾಶಮಾಡಿದರು. ಇದು ನಡೆದಿರುವುದು ನಿಜವೆಂಬ ಅರ್ಥಕ್ಕೆ ನಮ್ಮ ವೈಸ್‌ರಾಯರವರಿಗೆ ತಂತೀ ವರ್ತಮಾನ ಬಂದಿದೆ.

ಮೆಡಿಟರ್ರೇನಿಯನ್ ಕಡಲಿನಲ್ಲಿ ಜರ್ಮನಿಯ ಒಂದು ಯುದ್ಧದ ಹಡಗು ಆಲ್ಜೀರಿಯಾ ಸೀಮೆಗೆ ಸೇರಿದ ಕೆಲವು ತೀರಪಟ್ಟಣಗಳಿಗೆ ಮುತ್ತಿಗೆ ಹಾಕಿ ಕೆಲವು ನಷ್ಟವನ್ನುಂಟುಮಾಡಿತು. ಆದರೆ ಫ್ರೆಂಚರ ಜಹಜುಗಳು ನುಗ್ಗಿ ಹೋಗಿ ಜರ್ಮನಿಯ ಪಾಂಥರ್ ಎಂಬ ಹಡಗನ್ನು ಮುಳುಗಿಸಿರುತ್ತವೆ.

ಚೀನಾದಲ್ಲಿ ಜರ್ಮನಿಗೆ ಸೇರಿದ ವೈಹೈವೈ ಸಮುದ್ರ ತೀರದಲ್ಲಿ ರಷ್ಯಾದವರ ಆಸ್ಕಾಲ್ಡ್ ಎಂಬ ಜಹಜಗೂ ಜರ್ಮನಿಯ ಎಂಬ್‌ಡೆನ್ ಎಂಬ ಜಹಜಿಗೂ ಯುದ್ಧವಾಗಿ ಎರಡೂ ಮುಳುಗಿಹೋದವೆಂದು ವರ್ತಮಾನವಿದೆ. ಇದರ ನಿಜಸ್ಥಿತಿ ತಿಳಿಯಲಿಲ್ಲ.

ಜಪಾನ್ ನವರ ಜಹಜುಗಳ ಸೈನ್ಯವು ಸಿದ್ಧವಾಗಿದೆ; ಜಪಾನ್‌ನವರು ಅವಶ್ಯ ಬೀಳುವಾಗ್ಗೆ ಕರಾರಿನಲ್ಲಿ ಕಂಡಂತೆ ಇಂಗ್ಲಿಷರಿಗೆ ಸಹಾಯಮಾಡಲು ಒಪ್ಪಿಕೊಂಡಿರುತ್ತಾರೆ.

ಕೆಲವು ಜರ್ಮನಿ ಜಹಜುಗಳು ಸರಕನ್ನು ಸಾಗಿಸಿಕೊಂಡು ಹೋಗುತ್ತಿದ್ದವು. ಇಂಗ್ಲಿಷ್ ಹಡಗುಗಳು ಅವುಗಳನ್ನು ಹಿಡಿದು ಇಂಗ್ಲಿಷ್ ತೀರಪಟ್ಟಣಗಳಲ್ಲಿ ತಂದಿಟ್ಟುಕೊಂಡಿರುವವು.

ಜರ್ಮನಿ ಮತ್ತು ಬೆಲ್ಜಿಯಂ.

ಬಹುಶಾ ಜರ್ಮನಿಯವರು ಇನ್ನೂ ಫ್ರಾನ್ಸಿನ ಎಲ್ಲೆಯೊಳಕ್ಕೆ ನುಗ್ಗಿ ಹೋಗಿಲ್ಲವಾದಕಾರಣ ಇದುವರೆಗೆ ಆ ಎರಡು ಕಡೆಗಳ ಸೈನ್ಯಗಳಿಗೂ ದೊಡ್ಡ ಯುದ್ಧಗಳೇನೂ ಆಗಿಲ್ಲ. ಆದರೆ ಜರ್ಮನಿಯವರಿಗೂ ಬೆಲ್ಜಿಯಂನವರಿಗೂ ಲಿಯೇಜ್ ಎಂಬಲ್ಲಿ ಘೋರವಾದ ಯುದ್ಧ ನಡೆಯಿತು.

ಬೆಲ್ಜಿಯಂ ಈ ಯುದ್ಧದಲ್ಲಿ ಯಾವ ಪಕ್ಷವನ್ನೂ ವಹಿಸದೆ ಪ್ರತ್ಯೇಕವಾಗಿರುವ ರಾಷ್ಟ್ರ. ಆದರೆ ಜರ್ಮನಿಯವರು ಫ್ರಾನ್ಸಿನ ಮೇಲೆ ಯುದ್ಧಮಾಡುವುದಕ್ಕಾಗಿ ಬೆಲ್ಜಿಯಂ ರಾಜ್ಯದ ಮೂಲಕ ಹಾದುಹೋಗುವುದಾಗಿಯೂ, ಈ ಯುದ್ಧವು ಮುಕ್ತಾಯವಾದಾಗ ಬೆಲ್ಜಿಯಂ ರಾಜ್ಯವನ್ನು ಪ್ರತ್ಯೇಕ ರಾಜ್ಯವಾಗಿ ಬಿಟ್ಟುಕೊಡುವುದಾಗಿಯೂ ಬೆಲ್ಜಿಯಂ ರಾಜ್ಯದವರನ್ನು ಕೇಳಿದರು. ಈ ಸಲಹೆಯನ್ನು ಬೆಲ್ಜಿಯಂನವರು ಒಪ್ಪದೆ ತಿರಸ್ಕಾರಮಾಡಿದರು. ಆದಕಾರಣ ಜರ್ಮನಿಯವರು ಬೆಲ್ಜಿಯಂ ಮೇಲೆ ಆಗಸ್ಟ್ ತಾ. 5 ರಲ್ಲಿ ಯುದ್ಧವನ್ನು ಪ್ರಾರಂಭಿಸಿ ಸೈನ್ಯವನ್ನು ಲಿಯೇಜ್ ಎಂಬ ನಗರದ ಬಳಿಯಲ್ಲಿ ನುಗ್ಗಿಸಿದರು. ಈ ನಗರವು ಮ್ಯೂಸ್ ನದಿಯ ದಡದ ಮೇಲಿದೆ; ಅದರಲ್ಲಿ ಸುಮಾರು 2,00,000 ಪ್ರಜೆಗಳಿದಾರೆ. ಪಟ್ಟಣವನ್ನು ಕೋಟೆ ಕೊತ್ತಲಗಳು ಕಟ್ಟಿ ಬಲಪಡಿಸಿಕೊಂಡಿರುವರು. ಈ ಕೋಟೆಗಳ ದೆಸೆಯಿಂದಲೂ, ಬೆಲ್ಜಿಯಂ ಸೈನ್ಯದ ಪರಾಕ್ರಮದಿಂದಲೂ ಜರ್ಮನಿಯ ಸೈನಿಕರು ನುಗ್ಗಿಬರಲು ಸಾಧ್ಯವಾಗದೆ ಹೋಯಿತು. ಜರ್ಮನಿಯವರು ಎರಡು ಗ್ರಾಮಗಳನ್ನು ಸುಟ್ಟು, ಅನೇಕ ಪ್ರಜೆಗಳನ್ನು ಕಡಿದುಹಾಕಿದರು. ಉಳಿದ ಅನೇಕ ಪ್ರಜೆಗಳು ಓಡಿಹೋಗಿ ಹಾಲೆಂಡ್ ರಾಜ್ಯದೊಳಗೆ ಸೇರಿಕೊಂಡರು. ಈ ಯುದ್ಧದಲ್ಲಿ 30,000 ಬೆಲ್ಜಿಯಂ ಸೈನಿಕರು 80,000 ಜರ್ಮನಿಯವರ ಮೇಲೆ ಬಿದ್ದು ಕಾದಾಡಿ ಸೋಲಿಸಿ ಓಡಿಸಿರುತ್ತಾರೆ. ರಣರಂಗದಲ್ಲಿ 1,200 ಜರ್ಮನಿಯವರು ಗಾಯಪಟ್ಟು ಬಿದ್ದಿದ್ದರು. ಈ ವೃಕೆ 800 ಮಂದಿಯನ್ನು ಬೆಲ್ಜಿಯನ್ನರು ತಮ್ಮ ರಾಜಧಾನಿಯಾದ ಬ್ರಸೆಲ್ಸ್ ನಗರಕ್ಕೆ ಸಾಗಿಸಿಕೊಂಡು ಹೋದರು. ಈ ಯುದ್ಧದಲ್ಲಿ ಜರ್ಮನಿಯವರು 25,000 ಸೈನ್ಯವನ್ನೂ, 7 ಫಿರಂಗಿಗಳನ್ನೂ ಕಳೆದುಕೊಂಡಂತೆ ತಿಳಿದು ಬಂದಿದೆ. ಅವರು ಮ್ಯೂಸ್ ನದಿಯನ್ನು ಕೆಳಗಡೆಯಿಂದ ದಾಟಿ ಆಚೇ ದಡವನ್ನು ತಲಪಿದರು. ಬೆಲ್ಜಿಯನ್ನರು ದಾಟಿಬಂದವರನ್ನೆಲ್ಲಾ ಹಿಡಿದು ಕೈಸೆರೆ ಹಾಕಿಕೊಂಡರು. ಇದಲ್ಲದೆ ಅವರು ಅಲ್ಲಿಂದ ಇನ್ನೂ ಸ್ವಲ್ಪ ದಕ್ಷಿಣ ಭಾಗದಲ್ಲಿ ಜರ್ಮನಿಯ ಸವಾರ್ ಸೈನ್ಯದ ಮೇಲೆ ಬಿದ್ದು ಕಾದಾಡಿ ಸೋಲಿಸಿ ಓಡಿಸಿರುತ್ತಾರೆ. ಜರ್ಮನಿಯವರು 24 ಗಂಟೆಗಳ ಹೊತ್ತು ವಿರಾಮ ಕೊಡಬೇಕೆಂದು ಬೆಲ್ಜಿಯನ್ನರನ್ನು ಕೇಳಿಕೊಂಡಿರುವರು. ಬೆಲ್ಜಿಯನ್ ಸೈನಿಕರ ಪರಾಕ್ರಮವು ಎಲ್ಲೆಲ್ಲೂ ಹರಡಿಕೊಂಡಿದೆ.

ಜರ್ಮನಿಯವರು ಲಿಯೇಜ್ ಪಟ್ಟಣಕ್ಕೆ ತಿರಿಗಿ ಮುತ್ತಿಗೆಹಾಕಿಕೊಂಡಿದಾರೆ. ಅವರು ಕೋಟೆಗಳನ್ನು ಸ್ವಾಧೀನಪಡಿಸಿಕೊಳ್ಳಲಾರದೆ ಹೋದರೂ ಆ ಪಟ್ಟಣದೊಳಕ್ಕೆ ಪ್ರವೇಶಮಾಡಿರುವರೆಂದು ವರ್ತಮಾನಬಂದಿದೆ. ಅಲ್ಲಿ ಬೆಲ್ಜಿಯಂನವರಿಗೆ ಬೇಕಾದಷ್ಟು ಆಹಾರ ಮತ್ತು ಯುದ್ಧಸಾಮಗ್ರಿಗಳು ಇರುತ್ತವೆಂದೂ, ಬೆಲ್ಜಿಯನ್ನರೂ ಫ್ರೆಂಚರೂ ಆ ಪಟ್ಟಣವನ್ನು ಬಿಡಿಸಿಕೊಳ್ಳಲು ನುಗ್ಗಿ ಹೋಗುತ್ತಿದಾರೆಂದೂ ತಿಳಿಯುವುದು.

ಫ್ರಾನ್ಸ್ ಮತ್ತು ಜರ್ಮನಿ.

ಫ್ರೆಂಚರು ಸ್ವಿಟ್ಜರ್ಲೆಂಡಿಗೆ ಸೇರಿದಂತಿರುವ ಆಲ್‌ಸಾಸ್ ಎಂಬ ಆಧಿಪತ್ಯದ ಮೂಲಕ ಸೈನ್ಯಗಳ ಸಹಿತ ಜರ್ಮನಿಯೊಳಕ್ಕೆ ಪ್ರವೇಶಿಸಿದಾರೆ. ಈ ಸೈನಿಕರು ಆಲ್ಟ್‌ಕಿರ್ಕ್ ಎಂಬ ಬಲವಾದ ಜರ್ಮನಿ ಪಟ್ಟಣಕ್ಕೆ ಮುತ್ತಿಗೆ ಹಾಕಿ, ಸಂಗೀನುಗಳ ಯುದ್ಧಮಾಡಿ ಅಲ್ಲಿದ್ದ ಜರ್ಮನಿಯವರನ್ನು ಹೊರಕ್ಕೆ ಹೊರಡಿಸಿಬಿಟ್ಟರು. ಸೋತ ಜರ್ಮನಿಯವರು ಅಲ್ಲಿಂದ ಮುಲ್‌ಹೌಸನ್ ಎಂಬಲ್ಲಿಗೆ ಹಿಮ್ಮೆಟ್ಟಿ ಹೋದರೂ ಫ್ರೆಂಚರು ಬಿಡದೆ ಅಲ್ಲಿಯೂ ಅವರನ್ನು ಚೆನ್ನಾಗಿ ಓಡಿಸಿಕೊಂಡು ಬಂದು ಅಲ್ಲಿಂದಲೂ ಹೊರಡಿಸಿ ಆ ಪಟ್ಟಣವನ್ನೂ ಸ್ವಾಧೀನಪಡಿಸಿಕೊಂಡರು. ಮೊದಲು ಆಲ್‌ಸಾಸ್ ಆಧಿಪತ್ಯ ಫ್ರೆಂಚರಿಗೆ ಸೇರಿತ್ತು. 1870 ನೇ ಇಸವಿಯಲ್ಲಿ ನಡೆದ ಯುದ್ಧದಲ್ಲಿ ಅದನ್ನು ಜರ್ಮನಿಯವರು ಕಿತ್ತುಕೊಂಡಿದ್ದರು. ಈಗ ಮತ್ತೆ ಫ್ರೆಂಚರು ಅದನ್ನು ಸ್ವಾಧೀನಪಡಿಸಿಕೊಂಡಿರುವುದು ಅಲ್ಲಿನ ಪ್ರಜೆಗಳಿಗೆ ಸಂತೋಷವನ್ನುಂಟುಮಾಡಿದೆ.

ಜರ್ಮನಿ ಮತ್ತು ರಷ್ಯಾ.

ರಷ್ಯಾ ಚಕ್ರಾಧಿಪತ್ಯವು ಸೈನ್ಯ ಮುಂತಾದದ್ದನ್ನು ಕೂಡಿಸಿಕೊಂಡು ಯುದ್ಧಕ್ಕೆ ಹೊರಡಲು ಸಿದ್ಧವಾಗಿದೆ. ಇಷ್ಟೇ ಅಲ್ಲ. ಈ ಸೈನ್ಯವು ಕಳೆದ ವಾರ ನಾವು ಸೂಚಿಸಿದ ಪ್ರಕಾರ ಜರ್ಮನಿಯೊಳಕ್ಕೆ ಈಶಾನ್ಯದಿಕ್ಕಿನ ಎಲ್ಲೆಯನ್ನು ಅತಿಕ್ರಮಿಸಿ ಹೋಗಿರುವುದು. ಕದನಗಳೂ ನಡೆದವು; ರಷ್ಯಾದವರು ಸೋತರೆಂದು ಒಂದು ಸುದ್ದಿಯೂ, ಜರ್ಮನಿಯವರಲ್ಲಿ 100 ಮಂದಿ ನಷ್ಟಪಟ್ಟರೆಂದು ಇನ್ನೊಂದು ಸುದ್ದಿಯೂ ತಿಳಿಸುತ್ತದೆ.

ಜರ್ಮನಿಯ ಕೆಲವು ಯುದ್ಧದ ಹಡಗುಗಳು ಬಾಲ್ಟಿಕ್ ಕಡಲಿನ ತೀರದಲ್ಲಿರುವ ಲಿಬೊ ಎಂಬ ರಷ್ಯಾ ನಗರದೊಳಕ್ಕೆ ಗುಂಡುಗಳ ಮಳೆ ಸುರಿಸಿದ್ದರಿಂದ ಸ್ವಲ್ಪ ಕಷ್ಟನಷ್ಟಗಳು ಪ್ರಾಪ್ತವಾದವು. ಇದಲ್ಲದೆ ರಷ್ಯಾದವರ ಜಹಜುಗಳಿಗೂ ಗುಂಡುಗಳನ್ನು ಹೊಡೆದರು. ಅದರಿಂದ ರಷ್ಯಾ ಜಹಜುಗಳು ಫಿನ್‌ಲೆಂಡ್ ಕೊಲ್ಲಿಗೆ ಹೋಗಿ ಸೇರಿಕೊಳ್ಳಬೇಕಾಯಿತು. ಈ ಕೊಲ್ಲಿಯ ಅಂತ್ಯದಲ್ಲೇ ರಷ್ಯಾ ರಾಜಧಾನಿಯಾದ ಸೆಂಟ್ ಪೀಟರ್ಸ್‌ಬರ್ಗ್ ನಗರವಿದೆ. ಅದೇ ಫಿನ್‌ಲೆಂಡ್ ಕೊಲ್ಲಿಯ ಉತ್ತರಭಾಗದಲ್ಲಿರುವ ಅಲಾಂಡ್ ಎಂಬ ದ್ವೀಪಗಳ ಸಮುದಾಯವನ್ನು ಜರ್ಮನಿಯವರು ಸ್ವಾಧೀನಪಡಿಸಿಕೊಂಡಿದಾರೆಂದೂ, ಆ ಸಮೀಪದಲ್ಲೇ ರಷ್ಯಾದವರ ಒಂದು ಯುದ್ಧದ ಹಡಗು ನೆಲವನ್ನು ತಾಕಿತೆಂದೂ ಹೇಳುತ್ತಾರೆ.

ರಷ್ಯಾ ಮತ್ತು ಆಸ್ಟ್ರಿಯಾ.

ಇವೆರಡು ರಾಜ್ಯಗಳಿಗೂ ಆಗಸ್ಟ್ ತಾ. 6 ರಲ್ಲಿ ಯುದ್ಧಾರಂಭವಾಯಿತು. ಆಗಿನಿಂದ ಸೈನ್ಯಗಳನ್ನು ಕೂಡಿಸಿ ನಾನಾ ಕಡೆಗಳಿಗೆ ಕಳುಹಿಸುತ್ತಿರುವುದಲ್ಲದೆ ಯುದ್ಧಗಳೇನೂ ನಡೆದಿರುವುದಿಲ್ಲ.

ರಷ್ಯಾದವರು ಆಸ್ಟ್ರಿಯದೊಳಕ್ಕೆ ಸ್ಟೀರ್ ಎಂಬ ನದಿಯ ಕಣಿವೆ ಮಾರ್ಗವಾಗಿ ನುಗ್ಗಿ ಹೋಗುತ್ತಿದಾರೆ. ಆಸ್ಟ್ರಿಯದ ಈಶಾನ್ಯ ಭಾಗದಲ್ಲಿರುವ ಲೆಂಬರ್ಗ್ ಪಟ್ಟಣವನ್ನು ಮುತ್ತಿಗೆ ಹಾಕಬೇಕೆಂಬುವುದೇ ಅವರ ಉದ್ದೇಶವೆಂದು ಕಾಣುವುದು.

ಆಸ್ಟ್ರಿಯಾ ಮತ್ತು ಸರ್ವಿಯಾ.

ಇವೆರಡು ರಾಜ್ಯಗಳಿಗೂ ಸರ್ವಿಯಾ ರಾಜಧಾನಿಯಾದ ಬೆಲ್‌ಗ್ರೇಡಿನಲ್ಲೂ ಡ್ಯಾನ್ಯೂಬ್ ಮತ್ತು ಡ್ರೀನಾ ಎಂಬ ನದಿಗಳ ಉದ್ದಕ್ಕೂ ಯುದ್ಧಗಳಾಗುತ್ತಲೇ ಇರುವುದಾಗಿ ಪ್ರತಿ ದಿನವೂ ತಂತೀ ವರ್ತಮಾನಗಳು ಬರುತ್ತವೆ. ಈ ವರ್ತಮಾನಗಳನ್ನು ನೋಡಿದರೆ ಆಸ್ಟ್ರಿಯದವರು ಮುಂದರಿಸಿ ಹೋಗಲು ಸಾಧ್ಯವಾಗಲಿಲ್ಲವೆಂದೂ, ಸರ್ವಿಯಾದವರು ಏಳು ಸಲ ಶತ್ರುಗಳನ್ನು ಹಿಮ್ಮೆಟ್ಟಿಸಿ ಓಡಿಸಿಬಿಟ್ಟರೆಂದೂ ಕಾಣುವುದು. ಸರ್ವಿಯಾದವರು ಡ್ರೀನಾ ನದಿಯನ್ನು ದಾಟಿ ಆಸ್ಟ್ರಿಯಾ ಸೀಮೆಯೊಳಕ್ಕೆ ನುಗ್ಗಿ ಹೋಗಿದಾರೆಂದು ಒಂದು ತಂತೀ ವರ್ತಮಾನ ತಿಳಿಸುವುದು. ದೊಡ್ಡ ಕದನಗಳೇನೂ ಇನ್ನೂ ನಡೆದಿಲ್ಲ.

ಆಸ್ಟ್ರಿಯ ಮತ್ತು ಮಾಂಟಿನೀಗ್ರೊ.

ಆಸ್ಟ್ರಿಯದ ಯುದ್ಧದ ಜಹಜುಗಳು ಮಾಂಟಿನೀಗ್ರೊ ಸೀಮೆಯ ಅಂತಿವರಿ ಎಂಬ ತೀರಪಟ್ಟಣಕ್ಕೆ ಗುಂಡುಗಳನ್ನು ಹೊಡೆದರು. ಮಾಂಟಿನೀಗ್ರೋದವರು ಆಸ್ಟ್ರಿಯದೊಳಕ್ಕೆ ನುಗ್ಗಿಹೋಗಿ ಸ್ಪಿಜ಼ ಎಂಬ ಪಟ್ಟಣವನ್ನು ಆಕ್ರಮಿಸಿಕೊಂಡಿದಾರೆ.

ಅಂತರಿಕ್ಷದಲ್ಲಿ ಕದನಗಳು.

ಅಂತರಿಕ್ಷದಲ್ಲಿ ಯುದ್ಧಮಾಡುವುದಕ್ಕೆ ಅನುಕೂಲವಾದ ವಿಮಾನ ಯಂತ್ರಗಳನ್ನು ರಚಿಸಿರುತ್ತಾರೆ. ಇಂಥಾ ಯಂತ್ರಗಳಲ್ಲಿ ಕುಳಿತು ಆಕಾಶದಲ್ಲಿ ಶತ್ರುಗಳು ಕಾದಾಡಿದ್ದು ಪ್ರಪಂಚದ ಚರಿತ್ರೆಯಲ್ಲಿ ಇದೇ ಮೊದಲಾಗಿರುತ್ತದೆ. ಕೆಲವು ಫ್ರೆಂಚ್ ವಿಮಾನ ಯಂತ್ರಗಳು ಅಂತರಿಕ್ಷದಿಂದ ಜರ್ಮನಿ ಸೀಮೆಯೊಳಕ್ಕೆ ಸಿಡಿಮದ್ದಿನ ಗುಂಡುಗಳು ಬೀಳಿಸಿದವು; ಹಾಗೆಯೇ ಫ್ರೆಂಚ್ ಸೀಮೆಯ ಮೇಲೆ ಜರ್ಮನಿ ವಿಮಾನ ಯಂತ್ರಗಳಿಂದ ಸಿಡಿಮದ್ದಿನ ಗುಂಡುಗಳನ್ನು ಸುರಿಸಿರುತ್ತಾರೆ. ಲಿಯೇಜ್ ಎಂಬ ಪಟ್ಟಣದಲ್ಲಿ ಒಬ್ಬ ಬೆಲ್ಜಿಯನ್ ಸವಾರನು ತನ್ನ ವಿಮಾನದಲ್ಲಿ ಕುಳಿತು ಅಂತರಿಕ್ಷಕ್ಕೆ ಹೋಗಿ ಜರ್ಮನಿಯ ಒಂದು ವಿಮಾನ ಯಂತ್ರದ ಮೇಲೆ ಬಿದ್ದು ಅದನ್ನು ಕತ್ತರಿಸಿ ಕೆಡವಿ, ಮುಂದಕ್ಕೆ ಹಾರಿಕೊಂಡು ಹೋದನು. ಇದಲ್ಲದೆ ಜರ್ಮನಿಯ ಜೆಪ್ಪೆಲಿನ್ ಎಂಬ ಒಂದು ಭಾರಿ ವಿಮಾನ ಯಂತ್ರವನ್ನು ಅದೇ ಲಿಯೇಜ್ ಪಟ್ಟಣದಲ್ಲಿ ಬೆಲ್ಜಿಯನ್ನರು ಒಡೆದು ನಾಶಪಡಿಸಿರುತ್ತಾರೆ.

ಆಫ್ರಿಕದಲ್ಲಿ.

ಆಫ್ರಿಕಾ ಖಂಡದ ಪಶ್ಚಿಮದಿಕ್ಕಿನಲ್ಲಿರುವ ಗಿನಿ ಕೋಸ್ಟ್ ಎಂಬ ವಿಭಾಗದೊಳಗೆ ಜರ್ಮನಿಗೆ ಸೇರಿದ ಕೆಲವು ಸ್ವಾಸ್ಥ್ಯಗಳಿರುವವು. ಈ ವೃಕೆ ಟೋಗೊಲೆಂಡ್ ಎಂಬುವುದು ಒಂದು. ಇದು ಬ್ರಿಟಿಷ್ ಸ್ವಾಸ್ಥ್ಯದ ನೆರೆಯಲ್ಲಿರುವುದು. ಇದನ್ನು ಇಂಗ್ಲಿಷರೂ ಫ್ರೆಂಚರೂ ಸೇರಿ ಆಕ್ರಮಿಸಿಕೊಂಡಿರುತ್ತಾರೆ. ಅಲ್ಲಿ ಜರ್ಮನಿಯವರು ಹೆಚ್ಚಾಗಿ ಸೈನ್ಯವನ್ನು ಇಟ್ಟಿರಲಿಲ್ಲವೆಂದು ಕಾಣುತ್ತದೆ. ಅಲ್ಲಿ ಯುದ್ಧವೇನಾದರೂ ಆಯಿತೋ ಇಲ್ಲವೋ ತಿಳಿದುಬರಲಿಲ್ಲ.

ಒಳದೇಶದ ವೃತ್ತಾಂತಗಳು.

ಈ ವಾರ ನಮ್ಮ ಪತ್ರಿಕೆಯು ಹತ್ತು ಪುಟಗಳುಳ್ಳದ್ದಾಗಿದೆ.

* * *

ಬೆಂಗಳೂರಿನಲ್ಲಿ ನರಸಿಂಹಲು ಎಂಬೊಬ್ಬ ಪೊಲೀಸಿನವನು ಏನೋ ಅಕೃತ್ಯವನ್ನು ಮಾಡಿ, ರೈಲ್ವೆ ಕಂಬಿಗಳ ಮೇಲೆ ಮಲಗಿರುವಾಗ್ಗೆ ರೈಲುಗಾಡಿ ಹರಿದು ಅವನನ್ನು ಕೊಂದುಬಿಟ್ಟಿತು.

ಶ್ರೀಮನ್ಮಹಾರಾಜರವರು ಮಹಾಮಾತೃಶ್ರೀಯವರ ಮತ್ತು ಮಹಾರಾಣೀರವರ ಸಮೇತ ಕಳೆದ ಭಾನುವಾರ ಮಧ್ಯಾಹ್ನ ರಾಜಧಾನಿಯಿಂದ ಮೋಟರಿನಲ್ಲಿ ಬೆಂಗಳೂರಿಗೆ ಪ್ರಯಾಣ ಬೆಳಸಿದರು.

* * *

ಸಂಸ್ಥಾನದಲ್ಲಿ 20 ರೂಪಾಯಿನೊಳಗಿರುವ ಸರ್ಕಾರಿ ಕೆಲಸಗಾರರಿಗೆಲ್ಲಾ ಕ್ಷಾಮನಿವಾರಣಾರ್ಥವಾದ ಅಲೋಯನ್ಸನ್ನು ಕೊಡಿಸಬೇಕೆಂದು ಗವರ್ನ್‌ಮೆಂಟಿನವರು ಸ್ಯಾಂಕ್ಷನ್ ಮಾಡಿರುತ್ತಾರೆ.

* * *

ಕಳೆದ 8 ನೇ ತಾ. ಶನಿವಾರವು ನಮ್ಮ ಮಹಾರಾಜರವರಿಗೆ ರಾಜ್ಯಾಭಿಷೇಕವಾದ ಸಂತೋಷದಿವಸವಾದದ್ದರಿಂದ ಅದಿನ ಬೆಳಗ್ಗೆ 31 ತೋಪುಗಳು ರಾಜಧಾನಿಯ ಕೋಟೆಕೊತ್ತಲದಿಂದ ಹಾರಿಸಲ್ಪಟ್ಟವು.

* * *

ಬೆಂಗಳೂರು ಸಿಟಿಯಲ್ಲಿ ಚಿನ್ನ, ಮಸ್ತಾನ್, ಮುರುಗೇಶಂ ಎಂಬ ಮೂರು ಮಂದಿ ಪೊಲೀಸಿನವರು ಕಳುವು ಮಾಡಿದರೆಂದು ರುಜುವಾತು ಬಂದದ್ದರಿಂದ ಸಿಟಿ ಮ್ಯಾಜಿಸ್ಟ್ರೇಟರು ಅವರಿಗೆಲ್ಲಾ ಸಜಾ ಶಿಕ್ಷೆಯನ್ನು ವಿಧಿಸಿದರು.

* * *

ರಾಜಧಾನಿಯೊಳಗೆ ದಕ್ಷಿಣ ಭಾಗದಲ್ಲಿ ಪ್ಲೇಗ್ ಕಾಣಿಸಿಕೊಂಡು 10-15 ಮರಣಗಳಾದವು. ಇಲಿ ಬೀಳುವುದೂ, ಕಾಯಿಲೆಯಾಗುವುದೂ ತಪ್ಪಿಲ್ಲ. ಉತ್ತರ ಭಾಗದಲ್ಲಿ ವಾಂತಿಭೇದಿ ಉಪದ್ರ ಪ್ರಾಪ್ತವಾಗಿ ಇಬ್ಬರು ತೀರಿಹೋದರು.

* * *

ಅರಸೀಕೆರೆಯ ಮ|| ಬಲವಂತರಾಯರ ಕುಮಾರಿ ಮಧುರಾಬಾಯಮ್ಮನವರು ಈ ಸಲ ಬೊಂಬಾಯಿನಲ್ಲಿ ವೈದ್ಯಪರೀಕ್ಷೆ ಕೊಟ್ಟು ತೇರ್ಗಡೆಹೊಂದಿದ್ದು ಸಂತೋಷವಾಗಿದೆ. ಬ್ರಾಹ್ಮಣ ಸ್ತ್ರೀಯರಲ್ಲಿ ವೈದ್ಯಪರೀಕ್ಷೆಯನ್ನು ಇದುವರೆಗೆ ಮೈಸೂರಿನವರ್‍ಯಾರೂ ಕೊಟ್ಟಿರಲಿಲ್ಲ.

* * *

ತಾ. 2 ನೇ ಭಾನುವಾರ ಪ್ರಾತಃಕಾಲ ಹೊಳಲ್ಕೆರೆಯ ಹೋಬಳಿ ಉತ್ತನಹಳ್ಳಿ ಗ್ರಾಮದಲ್ಲಿ ಸಣ್ಣ ದ್ಯಾವಣ್ಣನ ಮಗಳು ನಾಲ್ಕು ಹೆಣ್ಣು ಮಕ್ಕಳನ್ನು ಹೆತ್ತಳು. ಆಕೆಯು ಸುಖವಾಗಿದಾಳೆ. ಮಕ್ಕಳು ನಾಲ್ಕೂ ಮೃತಪಟ್ಟವು ಎಂದು ಒಬ್ಬ ಬಾತ್ಮಿದಾರರು ಬರೆಯುತ್ತಾರೆ.

* * *

ಬೆಂಗಳೂರು ಪುರವಾಸಿಗಳಲ್ಲಿ ಗಣ್ಯರಾದ ದೊಡ್ಡಮನುಷ್ಯರು ಸೇರಿ ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರನ್ನು ಕಂಡು, ಆ ಪಟ್ಟಣದಲ್ಲಿ ಪೊಲೀಸ್ ಉಸ್ತುವಾರಿ ಸಾಲದೆಂದೂ ಬಹು ಮಂದಿ ತೈನಾತಿಯಲ್ಲೇ ಇರುತ್ತಾರೆಂದೂ ತಿಳಿಸಿದ್ದಕ್ಕೆ ಅಧಿಕಾರಿಯು ಬೇಗನೆ ಉಸ್ತುವಾರಿ ವಿಷಯವನ್ನು ಹೆಚ್ಚಿಸಿ ಕ್ರಮಪಡಿಸುತ್ತೇವೆಂದು ತಿಳಿಸಿದಾರೆ.

* * *

ತಾ. 15 ನೇ ಶನಿವಾರ ಮಧ್ಯಾಹ್ನ ರಾಜಧಾನಿಯ ಜಗನ್ಮೋಹನಬಂಗಲೆಯಲ್ಲಿ ಫಲಪುಷ್ಪಗಳ ಮೊದಲನೆಯ ಪ್ರದರ್ಶನವು ನಡೆಯುತ್ತದೆ. ಶ್ರೀಮನ್ಮಹಾರಾಜರವರು ಬೆಂಗಳೂರಿನಿಂದ ದಯಮಾಡಿ ಪ್ರಾರಂಭೋತ್ಸವವನ್ನು ಜರುಗಿಸುವರೆಂದು ವರ್ತಮಾನವಿದೆ. ಮರುದಿನ ಬೆಳಗ್ಗೆ ಸ್ತ್ರೀಯರನ್ನು ಪ್ರದರ್ಶನ ನೋಡಲು ಮುಫತ್ತಾಗಿ ಬಿಡುವರೆಂದು ಕೇಳುತ್ತೇವೆ.

* * *

ಬೆಂಗಳೂರು ಶ್ರೀನಿವಾಸಮಂದಿರದ ಸ್ತ್ರೀಸಮಾಜದ ಮೀಟಿಂಗು ಕಳೆದ ಶನಿವಾರ ಬೆಳೆದು, ಶ್ರೀಮತಿ ಲಕ್ಷ್ಮಮ್ಮನವರು ಸತ್ಯ ಮತ್ತು ಸತ್ಯವಂತರು ಎಂಬುದನ್ನು ಕುರಿತು ವಿಸ್ತಾರವಾಗಿ ಉಪನ್ಯಾಸಮಾಡಿ, ಶೀಲವೂ ಸ್ವಭಾವವೂ ಮನುಷ್ಯರಿಗೂ ಸಂಘಗಳಿಗೂ ನಿರ್ದೋಷವಾಗಿರಬೇಕೆಂದು ತಿಳಿಸಿದರು. ಬಳಿಕ ಬ್ರಿಟಿಷ್ ಸಾಮ್ರಾಜ್ಯಕ್ಕೆ ಜಯವನ್ನು ಕೋರಿ ಸಭೆಯನ್ನು ಮುಗಿಸಿದರು.

* * *

ಒಬ್ಬ ಬಾತ್ಮಿದಾರರಿಂದ—ದಾವಣಗೆರೆ ತಾಲ್ಲೂಕು ಆನಜಿ ಗ್ರಾಮದಲ್ಲಿ ತಾ. 3 ರಲ್ಲು ಗ್ರಾಮಾಭಿವೃದ್ಧಿ ಸಂಘದವರು ಈ ಸಮ್ಮತಿನಲ್ಲಿ ಇದುವರೆಗೂ ನಿಸ್ಪೃಹರಾಗಿ ಕೆಲಸಮಾಡಿ ಪ್ರಜೆಗಳ ಅನುರಾಗ ಸಂಪಾದನೆಮಾಡಿಕೊಂಡು ಬೇರೆ ಕಡೆಗೆ ವರ್ಗವಾದ ಮ|| ಶೇಕ್‌ದಾರ್ ಎಂ. ವೆಂಕಟರಾಮಯ್ಯನವರಿಗೆ ಬಹು ವಿಶ್ವಾಸದಿಂದ ಸಂತೋಷಸಭೆಯನ್ನು ಸೇರಿಸಿ ತಮ್ಮ ನೈಜವಾದ ಭಕ್ತಿಪ್ರದರ್ಶನ ಮಾಡಿ ಸನ್ಮಾನಿಸಿದರು.

* * *

ಒಬ್ಬ ಬಾತ್ಮಿದಾರರು ಬರೆಯುವುದೇನೆಂದರೆ—ಕಳೆದ 30 ನೇ ತಾ. ಸಾಯಂಕಾಲ 4½ ಗಂಟೆ ಸಮಯದಲ್ಲಿ ತರೀಕೆರೆಯಿಂದ ಯಡೆಹಳ್ಳಿಗೆ ಹೋಗುವ ರೈಲ್ ರಸ್ತೆಯಲ್ಲಿ ಭಾವಿಕೆರೆ ಕಟಿಂಗಿನಲ್ಲಿ ಇಂಜನ್ನೂ ಎರಡು ಗಾಡಿಗಳೂ ಕಂಬಿ ಬಿಟ್ಟು ಮಗುಚಿಕೊಂಡವು. ಡ್ರೈವರ್ ಗೋಪಾಲ್, ಫೈರ್‌ಮನ್ ಯೂಸುಫ್, ಗಾರ್ಡ್ ಶ್ರೀಕಂಠಯ್ಯ, ಈ ಮೂವರೂ ಗಾಡಿಯಿಂದ ಧುಮುಕಿ ಈ ಅಪಾಯದಿಂದ ಪಾರಾದರು. ಹೀಗೆ ಇಂಜನ್ನು ಬಿದ್ದದ್ದು ಇದು ಎರಡನೇ ಸಲ.

* * *

ಒಬ್ಬ ಬಾತ್ಮಿದಾರರು ಬರೆಯುವುದು.—ಬೆಂಗಳೂರು ಚಾಮರಾಜಪೇಟೆಯಲ್ಲಿರುವ ಶ್ರೀ ಶಾರದಾ ಸ್ತ್ರೀ ಸಮಾಜದಲ್ಲಿ ಆ ಸಮಾಜದ ಸೆಕ್ರೆಟರಿಯವರು ಕುಟುಂಬ ಪೋಷಣೆಯನ್ನು ಕುರಿತು ಬಹು ಸ್ವಾರಸ್ಯವಾದ ಉಪನ್ಯಾಸ ಕೊಟ್ಟರು. ಪ್ರೆಸಿಡೆಂಟರು ಮೆಂಬರುಗಳು ವಿಜಿಟರುಗಳು ಎಲ್ಲರೂ ಹಾಜರಾಗಿದ್ದರು. ಉಪನ್ಯಾಸವಾದ ಮೇಲೆ ಹಾರ್ಮೋನಿಯಂ ನುಡಿಸಲ್ಪಟ್ಟಿತು. ತರುವಾಯ ಗಂಧಪುಷ್ಪಗಳನ್ನು ಸಭಿಕರಿಗೆ ಹಂಚಿ ಶ್ರೀಮನ್ಮಹಾರಾಜರವರಿಗೂ ಚಕ್ರವರ್ತಿಯವರಿಗೂ ಶ್ರೇಯಸ್ಸನ್ನು ಬಯಸಿ ಸಭೆಯನ್ನು ಮುಗಿಸಿದರು.

* * *

ಮೈಸೂರು ಸರ್ಕಾರದವರು ಬೆಂಗಳೂರಿನಲ್ಲೂ ಮೈಸೂರಿನಲ್ಲೂ ಒಂದೊಂದು ಪಬ್ಲಿಕ್ ಫ್ರೀ ಲೈಬ್ರರಿಯನ್ನೂ ರೀಡಿಂಗ್ ರೂಮನ್ನೂ ಇಷ್ಟರಲ್ಲೇ ಪ್ರಾರಂಭಿಸುವ ಯೋಚನೆ ಮಾಡಿದಾರೆ. ಇದಕ್ಕಾಗಿ ಬೆಂಗಳೂರಿಗೆ 20,000 ರೂಪಾಯಿ, ಮೈಸೂರಿಗೆ 15,000 ರೂಪಾಯಿ ಸ್ಯಾಂಕ್ಷನ್ ಆಗಿರುತ್ತೆ. ಇದಲ್ಲದೆ ಸಿಬ್ಬಂದಿ ಮೊದಲಾದ ಖರ್ಚಿಗೆ ವರುಷಕ್ಕೆ 23,000 ರೂಪಾಯನ್ನು ಬೆಂಗಳೂರಿಗೂ, 18,200 ರೂಪಾಯನ್ನು ಮೈಸೂರಿಗೂ ಕೊಡುತ್ತಾ ಬರುವರು. ಸದ್ಯಕ್ಕೆ ಬೆಂಗಳೂರು ಲೈಬ್ರರಿಯನ್ನು ಸರ್ ಶೇಷಾದ್ರಿ ಮೆಮೋರಿಯಲ್ ಹಾಲ್‌ನಲ್ಲೂ, ಮೈಸೂರಿನದನ್ನು ಜನರಲ್ ಆಸ್ಪತ್ರೆ ಎದುರಿಗಿರುವ ಇಂಡಸ್ಟ್ರಿಯಲ್ ಸ್ಕೂಲಿನಲ್ಲೂ ಇಡಿಸುತ್ತಾರೆ.

* * *

ಕೋಲಾರ್ ಚಿನ್ನದ ಗಣಿಯಿಂದ 8 ಮೈಲಿ ದೂರದಲ್ಲಿ ಕುಪ್ಪಂ ತಾಲ್ಲೂಕಿಗೆ ಸೇರಿದ ಬನ್ನಗೊಲ್ಲಪಲ್ಲಿಯಲ್ಲಿ ಒಬ್ಬ ರೆಡ್ಡಿಯು ತನ್ನ ಹೊದೆಗೆ ಬೆಂಕಿ ಹಾಕಿಯಾರೆಂಬ ಹೆದರಿಕೆಯಿಂದ ಮನೆಬಿಟ್ಟು ರಾತ್ರಿ ಹೊತ್ತು ಕಾಯುವುದಕ್ಕೆ ಹೋಗುತ್ತಿದ್ದನು. 15 ಜನರು ಅವನ ಮನೆಗೆ ನುಗ್ಗಿ ಹೆಂಗಸರು ಮಕ್ಕಳನ್ನು ಕಟ್ಟಿಹಾಕಿ ಸೀರೆಯನ್ನು ತುಪ್ಪದಲ್ಲಿ ಅದ್ದಿ ಉರಿಮಾಡಿ ಮನೆಯನ್ನೆಲ್ಲಾ ಶೋಧಿಸಿ ನಗದು 2,000 ರೂಪಾಯನ್ನೂ 2,000 ರೂಪಾಯಿ ಒಡವೆಗಳನ್ನೂ ದೋಚಿಕೊಂಡು ಹೋದರು. ರೆಡ್ಡಿಯು ಈ ಆಸ್ತಿಯನ್ನು ರಾಗಿ ಗುಣೆಯೊಳಗೆ ಇಟ್ಟಿದ್ದನು. ಕಳ್ಳರು ರಾಗಿಯನ್ನೆಲ್ಲಾ ಎತ್ತಿ ಸುರಿದು ತಳದಲ್ಲಿದ್ದ ನಗನಾಣ್ಯಗಳನ್ನು ಎತ್ತಿಕೊಂಡು ಪರಾರಿಯಾಗಿರುತ್ತಾರೆ.

ಹಿಂದುಸ್ಥಾನವೂ ಯುದ್ಧವೂ.

ಬ್ರಿಟಿಷ್ ಗವರ್ನ್‌ಮೆಂಟಿನವರು ಯುದ್ಧಕ್ಕೆ ಹೊರಟಿರುವುದನ್ನು ನೋಡಿ ಹಿಂದುಸ್ಥಾನದ ಎಲ್ಲಾ ಭಾಗಗಳಿಂದಲೂ ತಮ್ಮಿಂದಾಗುವ ಸಹಾಯವನ್ನೆಲ್ಲಾ ಮಾಡಲು ಸಿದ್ಧರಾಗಿದೇವೆಂದು ಇಂಡಿಯಾ ಗವರ್ನ್‌ಮೆಂಟಿಗೆ ಅರಿಕೆ ಮಾಡುತ್ತಿರುವುದನ್ನು ವರ್ತಮಾನ ಪತ್ರಿಕೆಗಳು ಪ್ರಕಟಿಸುತ್ತಲಿವೆ. ಅವರಲ್ಲೆಲ್ಲಾ ನಮ್ಮ ಮೈಸೂರು ಮಹಾರಾಜರವರೇ ಮೊದಲನೆಯವರಾಗಿದ್ದಾರೆಂದು ತಿಳಿಸಲು ಆನಂದವಾಗುತ್ತದೆ. ಇವರು ತಮ್ಮ ಸೈನ್ಯಗಳನ್ನೂ ತಮ್ಮ ಸಂಸ್ಥಾನದ ಸರ್ವಸ್ವವನ್ನೂ ಬ್ರಿಟಿಷ್ ಗವರ್ನ್‌ಮೆಂಟಿನವರ ಬೆಂಬಲಕ್ಕಾಗಿ ಒದಗಿಸಲು ಸಿದ್ಧರಾಗಿರುತ್ತೇವೆಂದು ವೈಸ್‌ರಾಯ್ ಪ್ರಭುಗಳಿಗೆ ತಿಳಿಸಿರುವರು. ನಮ್ಮ ಪ್ರಜೆಗಳೆಲ್ಲಾ ನಮ್ಮ ಪ್ರಭುಗಳ ಅಭಿಮತವನ್ನು ಮನಃಪೂರ್ವಕವಾಗಿಯೂ ಸಂತೋಷದಿಂದಲೂ ಒಪ್ಪಿಕೊಂಡು, ತಮ್ಮ ಕೈಲಾಗುವ ಸಹಾಯವನ್ನು ಮಾಡುವುದರಲ್ಲಿ ಸಿದ್ಧರಾಗಿರುತ್ತಾರೆನ್ನುವುದಕ್ಕೆ ಸಂಶಯವಿಲ್ಲ.

ಹೈದರಾಬಾದಿನ ನೈಜಾಮರವರು, ನೇಪಾಳದ ಮಹಾರಾಜರವರು, ಬಿಕಾನೀರ್ ಮಹಾರಾಜರವರು, ಕಪೂರ್ಥಲದ ಮಹಾರಾಜರವರು, ಬರೋಡಾ ಮಹಾರಾಜರವರು, ಹೋಲ್ಕರ್ ಮಹಾರಾಜರವರು, ಕಾಶ್ಮೀರದ ಮಹಾರಾಜರವರು, ಗ್ವಾಲಿಯರ್ ಮಹಾರಾಜರವರು, ಪಾಟಿಯಾಲ, ರೇವಾ, ಭರತಪುರ, ಝೀಂದ್, ನಭಾ, ಸಿಖಿಂ, ಭಾವಾನಗರ, ಜೋಧಪುರ ಸಂಸ್ಥಾನಗಳ ಮಹಾರಾಜರುಗಳು; ಪಾಲನ್‌ಪುರ, ರಾಮ್‌ಪುರ, ಮಾಲೇರ್ ಕೋಟ್ಲಾ ನವಾಬರುಗಳು; ಐದಾರ್ ಮಹಾರಾಜರು, ಸೇಚಿನ್ ನವಾಬರು, ಕಚ್ ರಾಜರು, ಧೋಳ್‌ಪುರದ ರಾಜರು; ಸಾಲೀಮಾ, ಹಿಲ್ ಟಿಪ್ಪಾರಾ ರಾಜರುಗಳು, ಆಗಾಖಾನ್ ರವರು, ಲಿಂಬ್ಡಿ ರಾಜರು, ಈ ಮೊದಲಾದ ಅನೇಕಾನೇಕ ದೇಶೀಯ ಸಾಮಂತ ರಾಜರುಗಳು ತಮ್ಮ ತಮ್ಮ ಸಂಸ್ಥಾನದ ಆಯತಿಯನ್ನೆಲ್ಲಾ ಬ್ರಿಟಿಷರ ಸಹಾಯಕ್ಕಾಗಿ ಒಪ್ಪಿಸಲು ಸಿದ್ಧರಾಗಿದೇವೆಂದು ಅರಿಕೆಮಾಡಿರುವರು. ಬೊಬ್ಬಿಲಿ ಮಹಾರಾಜರವರೂ ಅದೇ ರೀತಿ ತಿಳಿಸಿರುವುದಲ್ಲದೆ ಒಂದು ಲಕ್ಷ ರೂಪಾಯನ್ನೂ ಕೊಡುತ್ತೇವೆಂದು ವಾಗ್ದಾನಮಾಡಿದ್ದಾರೆ.

ಇದಲ್ಲದೆ ಕಲ್ಕತ್ತಾ, ಕರಾಚಿ, ಮದರಾಸ್, ಲಾಹೋರ್, ಬೊಂಬಾಯಿ, ಕೊಯಮುತ್ತೂರು ಮೊದಲಾದ ಅನೇಕ ಪಟ್ಟಣಗಳಲ್ಲಿ ಸಾವಿರಾರು ಪ್ರಜೆಗಳು ಸೇರಿ ಸಭೆಗಳನ್ನು ನಡಿಸಿ, ಹಿಂದುಸ್ಥಾನದ ಪ್ರಜೆಗಳ ರಾಜಭಕ್ತಿಯನ್ನು ಘಂಟಾಘೋಷವಾಗಿ ಸಾರಿರುತ್ತಾರಲ್ಲದೆ ಬ್ರಿಟಿಷ್ ಗವರ್ನ್‌ಮೆಂಟಿಗೆ ತಮ್ಮ ಕೈಲಾಗುವಷ್ಟು ಸಹಾಯಮಾಡಲು ಸಿದ್ಧರಾಗಿರುತ್ತೇವೆಂದೂ ಅರಿಕೆಮಾಡಿಕೊಂಡಿದ್ದಾರೆ. ಹಿಂದುಸ್ಥಾನದಲ್ಲಿರುವ ನಾನಾ ಬಗೆಯ ನೂರಾರು ಸಂಘಗಳಿಂದಲೂ ಸಮಾಜಗಳಿಂದಲೂ ತಂತೀ ವರ್ತಮಾನಗಳನ್ನು ವೈಸ್‌ರಾಯ್ ಪ್ರಭುಗಳಿಗೆ ಕಳುಹಿಸಿ ನಮ್ಮ ಸಹಾಯವನ್ನು ಅಂಗೀಕರಿಸಬೇಕೆಂದು ಬೇಡಿಕೊಂಡಿರುವವು.

ಕೋಲಾರದಲ್ಲಿ ಕೆಲವು ಮಹಮದೀಯ ದೊಡ್ಡ ಮನುಷ್ಯರು ಟರ್ಕಿ ಯುದ್ಧದಲ್ಲಿ ಗಾಯಪಟ್ಟವರಿಗೆ ಚಿಕಿತ್ಸೆ ಮುಂತಾದ ಸಹಾಯ ಮಾಡಿದ್ದರು. ಈಗ ಇವರು ಅದೇ ರೀತಿ ಬ್ರಿಟಿಷ್ ಗವರ್ನ್‌ಮೆಂಟಿಗೆ ಸಹಾಯಮಾಡುತ್ತೇವೆಂದು ಒಪ್ಪಿ ಬಿನ್ನೈಸಿಕೊಂಡಿದ್ದಾರೆ. ಇತ್ತಲಾಗಿ ಕಲ್ಕತ್ತೆಯ ವೈದ್ಯಸಂಘದವರು ಅದೇ ರೀತಿ ಸಹಾಯಮಾಡುವುದಕ್ಕೆ ಸಮ್ಮತಿಪಟ್ಟು ವಿಜ್ಞಾಪಿಸಿರುವರು. ನಮ್ಮ ರಾಷ್ಟ್ರದ ಪ್ರಜೆಗಳು ಈ ಪ್ರಕಾರ ತಮ್ಮ ಕೈಲಾಗುವ ಮಟ್ಟಿಗೆ ಸಹಾಯಮಾಡಿಯಾರೆನ್ನುವುದಕ್ಕೆ ಸಂಶಯವಿಲ್ಲ. ಯುದ್ಧಭೂಮಿಯಲ್ಲಿ ಕದನಗಳೂ ಕಾದಾಟಗಳೂ ಘೋರವಾಗಿ ನಡೆದ ಪಕ್ಷದಲ್ಲಿ ಗಾಯಪಟ್ಟವರನ್ನು ಉಪಚರಿಸುವುದಕ್ಕೂ ಅವರಿಗೆ ಚಿಕಿತ್ಸೆ ಮುಂತಾದದ್ದನ್ನು ಮಾಡುವುದಕ್ಕೂ ಅನೇಕ ಮಂದಿ ವೈದ್ಯರೂ ನರ್ಸುಗಳೂ (ಉಪಚರಿಸುವವರು) ಬೇಕಾಗುತ್ತಾರೆ. ಅಂಥಾ ಸಂದರ್ಭದಲ್ಲಿ ಮೇಲ್ಕಂಡಂಥಾ ಸಹಾಯವು ಮಹೋಪಕಾರವಾಗುವುದು. ಅಂಥಾ ಸಹಾಯವು ಬೇಕಾಗುವುದೋ ಇಲ್ಲವೋ ಎಂಬ ಅಂಶವು ನಮ್ಮ ವೈಸ್‌ರಾಯರವರಿಗೆ ಗೊತ್ತಾಗುವುದೆಂದೂ, ಅವಶ್ಯವಾದ ಪಕ್ಷದಲ್ಲಿ ಆ ರೀತಿ ಅಪ್ಪಣೆ ಕೊಡಿಸುವರೆಂದೂ ನಂಬತಕ್ಕದಾಗಿದೆ

ಈ ಸಂದರ್ಭದಲ್ಲಿ ನಮ್ಮ ದೇಶದೊಳಗೆ ಒಂದು ಅಸಂಗತವಾದ ಕಾರ್ಯ ನಡೆಯುತ್ತಿದೆ; ಇದು ತುಂಬಾ ವಿಷಾದಕರವಾದದ್ದು. ಅನೇಕ ಸ್ಥಳಗಳಲ್ಲಿ ವರ್ತಕರು ಪ್ರಜೆಗಳಿಗೆ ನಿತ್ಯಗಟ್ಟಲೆ ಜೀವನಕ್ಕೆ ಬೇಕಾಗಿರುವಂಥಾ ಆಹಾರಧಾನ್ಯಾದಿ ಪದಾರ್ಥಗಳ ಧಾರಣೆಯನ್ನು ಹೆಚ್ಚು ಮಾಡುತ್ತಿದ್ದಾರೆ. ಈ ಯುದ್ಧದ ನಿಮಿತ್ತವಾಗಿ ದಿನಸಿಗಳ ಧಾರಣೆಯನ್ನು ಹೆಚ್ಚಿಸಬೇಕಾದ ಆಗತ್ಯವೇನೋ ನಮಗೆ ತಿಳಿಯದು ಹಾಗೆ ಹೆಚ್ಚಿಸುವಂಥಾ ಪ್ರತಿ ಒಬ್ಬ ವ್ಯಾಪಾರಿಗೂ ತನ್ನ ಲಾಭದ ಮೇಲಣ ದುರಾಶೆ ಹೆಚ್ಚಾಗಿದೆಯಲ್ಲದೆ ತನ್ನ ದೇಶ ಅಥವಾ ಸಹೋದರ ಪ್ರಜೆಗಳ ಮೇಲೆ ಪ್ರೀತಿವಾತ್ಸಲ್ಯವಿಲ್ಲವೆಂದು ಪ್ರಕಾಶವಾಗುತ್ತದೆ. ಮೈಸೂರು ಪಟ್ಟಣದಲ್ಲೂ ಬೆಂಗಳೂರಿನಲ್ಲೂ ವರ್ತಕರು ಈ ರೀತಿ ಮಾಡಿರುತ್ತಾರೆ ನಿಷ್ಕಾರಣವಾಗಿ ಹೀಗೆ ಮಾಡುವುದು ಶುದ್ಧ ತಪ್ಪು. ಹಿಂದುಸ್ಥಾನದಲ್ಲಿ ಆಹಾರ ದಿನಸಿಗಳು ಅಪಾರವಾಗಿರುತ್ತವೆ; ಇನ್ನು ಕೆಲವು ವಾರಗಳೊಳಗಾಗಿ ಹಿಂದುಸ್ಥಾನದ ವ್ಯಾಪಾರವೂ ಆಮದು ರಫ್ತೂ ಎಂದಿನಂತೆ ನಡೆಯುವಹಾಗಾಗುವುದು.

ಹಿಂದುಸ್ಥಾನದೊಳಗೆ ಹಣಕಾಸಿಗೆ ಸ್ವಲ್ಪವೂ ಕೊರತೆಯುಂಟಾಗಿಲ್ಲ; ನಾಣ್ಯವು ಅಪಾರವಾಗಿರುತ್ತದೆ. ಪ್ರಜೆಗಳು ಗಾಬರಿಬಿದ್ದು ಕರೆನ್ಸಿ ನೋಟುಗಳನ್ನೂ ಸರ್ಕಾರಿ ಪತ್ರಗಳನ್ನೂ ಮುರಿಸಿ ನಾಣ್ಯವನ್ನು ಕೂಡಿಟ್ಟುಕೊಳ್ಳಬೇಕಾದ ಸಂದರ್ಭವೂ ಆಗತ್ಯವೂ ಸ್ವಲ್ಪವೂ ಉಂಟಾಗಿಲ್ಲ. ಜನರು ಎಂದಿನಂತೆ ನೋಟುಗಳನ್ನೂ ಪತ್ರಗಳನ್ನೂ ಕೊಂಡಿಟ್ಟುಕೊಳ್ಳಬಹುದು. ಹಿಂದುಸ್ಥಾನದ ಸ್ಥಿತಿಯು ತುಂಬಾ ತೃಪ್ತಿಕರವಾಗಿರೋಣದರಿಂದ ಬ್ರಿಟಿಷ್ ಗವರ್ನ್‌ಮೆಂಟಿನವರು ನಮ್ಮ ಹಣವನ್ನು ಅಂದರೆ ಮೂರು ಕೋಟಿ ರೂಪಾಯನ್ನು ಲಂಡನ್ ಪಟ್ಟಣದಲ್ಲಿ ಸಾಲವಾಗಿ ತೆಗೆದುಕೊಂಡಿದ್ದಾರೆ. ಹೀಗಿರುವಲ್ಲಿ ವರ್ತಕರಾಗಲಿ ಇತರರ್‍ಯಾರೇ ಆಗಲಿ ಕರೆನ್ಸಿ ನೋಟುಗಳನ್ನು ತಿರಸ್ಕರಿಸಿದರೂ, ಕಮ್ಮಿ ವಟ್ಟ ಕೇಳಿದರೂ ಅಂಥವರು ನಮ್ಮ ದೇಶಕ್ಕೆ ಕೆಡುಕರಾಗುತ್ತಾರಲ್ಲದೆ ಉಪಕಾರಿಗಳಾಗಲಾರರು.

ಹಿಂದುಸ್ಥಾನದ ಪ್ರಜೆಗಳು ಯಾವ ವಿಷಯದಲ್ಲೂ ಗಾಬರಿಪಡಲು ಕಾರಣವೇನೂ ಇರುವುದಿಲ್ಲ ಈ ಯುದ್ಧವು ಹಿಂದುಸ್ಥಾನಕ್ಕೆ ವ್ಯಾಪಿಸುವುದಿಲ್ಲ. ಎಂದಿನಂತೆ ಪ್ರಜೆಗಳು ತಮ್ಮ ತಮ್ಮ ಕೆಲಸಕಾರ್ಯಗಳನ್ನು ನೆಮ್ಮದಿಯಾಗಿಯೂ ಸತ್ಯವಾಗಿಯೂ ನಡಿಸುತ್ತಾ ಬರಬೇಕಲ್ಲದೆ ತಿಳುವಳಿಕೆ ಸಾಲದ ಜನರನ್ನು ಮೋಸಪಡಿಸಿ ಹೆದರಿಸಿ ದುರಾಶೆಯಿಂದ ಲಾಭ ಸಂಪಾದಿಸುವುದಕ್ಕೆ ಪ್ರಯತ್ನಪಡುವುದು ಧರ್ಮವಾದದ್ದಲ್ಲ. ಜನರ ಸಂಶಯವನ್ನು ಪರಿಹರಿಸಿ ಸಮಾಧಾನಪಡಿಸಿ ಧಾನ್ಯಾದಿ ಆವಶ್ಯ ಪದಾರ್ಥಗಳನ್ನು ಎಂದಿನಂತೆ ಸಹಜವಾದ ಧಾರಣೆಗೆ ಬಿಕರಿಮಾಡುತ್ತಾ ಬರಬೇಕಾದದ್ದೇ ಅವರ ಕರ್ತವ್ಯವಾಗಿದೆ. ಬೆಂಗಳೂರಿನಲ್ಲಿರುವ ಸ್ಪೆನ್ಸರ್ ಕಂಪನಿಯವರು ಇತರರಂತೆ ಪದಾರ್ಥಗಳ ಬೆಲೆಯನ್ನು ಹೆಚ್ಚಿಸದೆ ವರ್ತಕರಿಗೆ ಮೇಲ್ಪಂಕ್ತಿಯನ್ನು ಹಾಕಿಕೊಟ್ಟಿರುವುದು ಸಂತೋಷಕರವಾಗಿದೆ. ದೇಶವತ್ಸಲರಾದ ವರ್ತಕರೆಲ್ಲಾ ಅವರಂತೆ ಮಾಡುವರೆಂದು ಕೋರಲ್ಪಟ್ಟಿದೆ.

ಕೆಲವು ವಾರಗಳಿಂದ ಈಚೆಗೆ ಯೂರೋಪ್ ಖಂಡದಿಂದ ಬರುತ್ತಿದ್ದ ಜಹಜುಗಳೂ ಹಡಗುಗಳೂ ಎಂದಿನಂತೆ ಬರುತ್ತಾ ಇಲ್ಲ. ಇಂಗ್ಲಾಂಡಿನ ಅಂಚೆ ಟಪ್ಪಾಲುಗಳು ಫ್ರಾನ್ಸಿನಲ್ಲಿ ಹಾದು ಇಟಲಿಯ ಮಾರ್ಗವಾಗಿ ಎರಡು ವಾರಗಳಲ್ಲಿ ಹಿಂದುಸ್ಥಾನಕ್ಕೆ ಬರುತ್ತಿದ್ದವು. ಈಗ ಯುದ್ಧದ ದೆಸೆಯಿಂದ ಮೆಯಿಲ್ ಜಹಜು ಆ ಮಾರ್ಗವನ್ನು ಬಿಟ್ಟು ಸ್ಪೇಯಿನ್ ರಾಜ್ಯವನ್ನು ಸುತ್ತಿಕೊಂಡು ಬರಬೇಕಾಗಿರೋಣದರಿಂದ ಇನ್ನೂ 6-7 ದಿನ ಹೆಚ್ಚು ಹಿಡಿಯುತ್ತದೆ. ಇನ್ಯಾವ ವಿಧವಾಗಿಯೂ ಹಿಂದುಸ್ಥಾನಕ್ಕೆ ಯಾವುದೊಂದು ಅನನುಕೂಲವೂ ಕಷ್ಟವೂ ಉಂಟಾಗುವುದಿಲ್ಲ. ಆದಕಾರಣ ಜನರು ನಿಶ್ಚಿಂತೆಯಾಗಿ ತಮ್ಮ ತಮ್ಮ ಕೆಲಸಗಳನ್ನು ಮಾಡಿಕೊಳ್ಳುತ್ತಾ ಬರಬೇಕೆಂದು ಸೂಚಿಸುತ್ತೇವೆ.

ಯುದ್ಧದ ವಿಷಯದಲ್ಲಿ ಇಂಗ್ಲಿಷ್ ಗವರ್ನ್‌ಮೆಂಟಿನ ಅಭಿಮತವು.

ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಸರ್ ಎಡ್ವರ್ಡ್ ಗ್ರೇ ಯವರ ಭಾಷಣವು

ಲಂಡನ್ ಪಟ್ಟಣದ ಹೌಸ್ ಆಫ್ ಕಾಮನ್ಸ್ ಎಂಬ ಪಾರ್ಲಿಮೆಂಟ್ ಸಭೆಮನೆಯಲ್ಲಿ ಕಳೆದ 3 ನೇ ತಾ. ಸೋಮವಾರ ಮಧ್ಯಾಹ್ನ ಗ್ರೇಟ್ ಬ್ರಿಟನ್ ರಾಜ್ಯದ ಪ್ರಜಾಪ್ರತಿನಿಧಿಗಳ ವಿಶೇಷ ಸಭೆ ನಡೆಯಿತು. ಮೆಂಬರುಗಳ ಹಾಜರಾತಿಯು ಆ ದಿನದಷ್ಟು ಹಿಂದೆ ಯಾವಾಗಲೂ ನೋಡಿದ್ದಿಲ್ಲವೆಂದೂ, ಸಭಿಕರು ವಿಶೇಷ ಕಳವಳದಿಂದ ಕೂಡಿ ಆ ದಿನದ ವಿಷ್ಯಮಾನಗಳನ್ನು ತಿಳಿದುಕೊಳ್ಳಬೇಕೆಂದು ಕವಕಪಡುತ್ತಿದ್ದರೆಂದೂ ಪ್ರಕಟವಾಗಿದೆ ಸಭೆಮನೆಯ ಹೊರಪಾರ್ಶ್ವದಲ್ಲಿ ಲಕ್ಷಾಂತರ ಪ್ರಜೆಗಳು ನಿಂತು ಅಪರಿಮಿತವಾದ ಉತ್ಸಾಹದಿಂದ ಕೂಡಿದವರಾಗಿದ್ದರಲ್ಲದೆ ಗವರ್ನ್‌ಮೆಂಟಿನ ಮುಖ್ಯ ಮುಖ್ಯ ಮಂತ್ರಿಗಳು ಸಭೆಮನೆಯೊಳಕ್ಕೆ ಪ್ರವೇಶಿಸುವಾಗಲೂ, ಹಿಂತಿರುಗಿ ಬಂದಾಗಲೂ ಜಯಘೋಷವನ್ನು ಮಾಡಿದರು.

ಬ್ರಿಟಿಷ್ ಗವರ್ನ್‌ಮೆಂಟಿನ ಫಾರಿನ್ ಸೆಕ್ರೆಟರಿಯವರಾದ ಸರ್ ಎಡ್‌ವರ್ಡ್ ಗ್ರೇಯವರು ಪ್ರಜಾಪ್ರತಿನಿಧಿಗಳನ್ನು ಕುರಿತು ಹೇಳಿದ ರಾಜಕೀಯ ವಿಚಾರಗಳ ಮುಖ್ಯಾಂಶಗಳೇನೆಂದರೆ—

ನೆಮ್ಮದಿಯನ್ನು ಕಾಪಾಡುವ ಪ್ರಯತ್ನ.

ಗ್ರೇಟ್ ಬ್ರಿಟನ್ ರಾಜ್ಯಕ್ಕೂ ಪರರಾಜ್ಯಗಳಿಗೂ ಸುಹೃದಯ ಸಮಾಧಾನಗಳನ್ನು ಕಾಪಾಡಬೇಕೆಂದೂ, ಯೂರೋಪ್ ಖಂಡದ ಸಮಸ್ತ ರಾಜ್ಯಗಳಿಗೂ ಪರಸ್ಪರವಾದ ಸುಹೃದಯ ಸಮಾಧಾನಗಳನ್ನು ನೆಲೆಗೊಳಿಸಬೇಕೆಂದೂ ನಾವು (ಬ್ರಿಟಿಷ್ ಗವರ್ನ್‌ಮೆಂಟಿನವರು) ಬಹಳವಾಗಿ ಸಾಹಸಪಡುತ್ತಾ ಬಂದೆವು ಅದು ಸಾಧ್ಯವಲ್ಲವೆನ್ನುವುದು ಈಗ ಸ್ಪಷ್ಟವಾಯಿತು. ಈಗಿನ ಸ್ಥಿತಿ ಹ್ಯಾಗಿದೆ ಎಂದು ನೀವು ಗ್ರಹಿಸಿಕೊಳ್ಳುವುದಕ್ಕೆ ಮುಂಚೆ ಇದುವರೆಗೆ ನಡೆದಿರುವ ವಿದ್ಯಮಾನಗಳನ್ನು ನಿಮಗೆ ಸವಿಸ್ತಾರವಾಗಿ ಹೇಳುತ್ತೇನೆ. ಸಮಾಧಾನವನ್ನು ಕಾಪಾಡಿಕೊಂಡು ಬರಬೇಕೆಂದು ಬಹಳ ಮುತುವರ್ಜಿವಹಿಸಿ ನಮ್ಮ ಕೈಲಾದ ಸಾಹಸ ಪ್ರಯತ್ನಗಳನ್ನೆಲ್ಲಾ ಮಾಡಿದೆವು. ಹಿಂದೆ ಬಾಲ್ಕನ್ ರಾಜ್ಯಗಳಲ್ಲಿ ಗಲಭೆಯುಂಟಾದಾಗ ಅವರಲ್ಲಿ ಸುಹೃದಯವನ್ನುಂಟುಮಾಡಬೇಕೆಂದು ನಾವು ಪ್ರಯತ್ನಪಟ್ಟೆವು. ಪರರಾಜ್ಯಗಳವರೂ ಸಹಾಯಮಾಡಿದ್ದರಿಂದ ನೆಮ್ಮದಿಯು ನೆಲೆಗೊಂಡಿತು. ಆಗ್ಗೆ ಪರರಾಜ್ಯಗಳು ನೆಮ್ಮದಿಯುಂಟಾಗಬೇಕೆಂದು ಕುತೂಹಲ ಪಟ್ಟವಲ್ಲದೆ ತಮ್ಮ ತಮ್ಮ ಸಣ್ಣ ಪುಟ್ಟ ವೈಮನಸ್ಯಗಳನ್ನು ಹೆಚ್ಚಿಸಿಕೊಳ್ಳುವುದರಲ್ಲಿ ಅಭಿಮತಪಡಲಿಲ್ಲ. ಈಗಲಾದರೋ ತಕ್ಕ ಮಟ್ಟಿಗೆ ಪ್ರಯತ್ನಪಡಲು ಸಮಯವೇ ಸಾಲದು; ಇದಲ್ಲದೆ ಕೆಲವು ರಾಜ್ಯಗಳವರು ಯುದ್ಧಕ್ಕೆ ಹೊರಡುವುದರಲ್ಲೇ ಮನಸ್ಸುಮಾಡಿ ಅಂತ್ಯಕ್ಕೆ ತಂದುಬಿಟ್ಟರು. ಆದಕಾರಣ ದೊಡ್ಡ ದೊಡ್ಡ ರಾಜ್ಯಗಳಿಗೆ ಪರಸ್ಪರ ಸುಹೃದಯವನ್ನೂ ನೆಮ್ಮದಿಯನ್ನೂ ಉಂಟುಮಾಡಬೇಕೆಂಬ ಪ್ರಯತ್ನವು ನಿಷ್ಪ್ರಯೋಜನವಾಯಿತು. ಹೀಗಾಗಲು ಕಾರಣವೇನೆಂದು ನಾನು ಹೇಳುವುದಿಲ್ಲ. ಇದುವರೆಗೆ ಈ ವಿಚಾರದಲ್ಲಿ ನಮ್ಮ ಗವರ್ನ್‌ಮೆಂಟಿಗೂ ಪರರಾಜ್ಯಗಳಿಗೂ ನಡೆದಿರುವ ಕಾಗದ ಪತ್ರಗಳನ್ನು ಇಷ್ಟರೊಳಗೇ ಪ್ರಕಟಿಸುತ್ತೇವೆ. ಅದನ್ನು ನೋಡುವಾಗ ಸಂಗತಿಗಳೆಲ್ಲಾ ನಿಮಗೇ ಗೋಚರವಾದೀತು.

ನಮ್ಮ ಕರ್ತವ್ಯ.

ಮಂತ್ರಿಶ್ರೇಷ್ಠರಾದ ಮಿ. ಆಸ್ಕಿತ್‌ರವರು ನಿಮಗೆ ಮೊದಲೇ ತಿಳಿಸಿರುವುದನ್ನು ನಾನೂ ಒತ್ತಿ ಹೇಳುವುದೇನೆಂದರೆ—ನಮ್ಮ ಗವರ್ನ್‌ಮೆಂಟಿಗೆ ಕಷ್ಟಕಾಲ ಒದಗಿದರೆ ಅದನ್ನು ನಿಮಗೆ (ಈ ಸಭೆಗೆ) ತಿಳಿಸುವೆವು. ಅಂತರಂಗವಾಗಿ ಯಾವ ಏರ್ಪಾಡನ್ನೂ ನಾವು ಮಾಡಿಕೊಳ್ಳುವುದಿಲ್ಲ. ವಿಷಯಗಳು ನಿಮಗೆ ತಿಳಿದ ಮೇಲೆ ನೀವು ಬ್ರಿಟಿಷರ ಜವಾಬ್ದಾರಿ ಎಷ್ಟು ಮಟ್ಟಿಗಿದೆ, ಬ್ರಿಟಿಷರ ಕರ್ತವ್ಯವೇನು ಎಂಬುವುದನ್ನು ಯೋಚಿಸಿ ಗೊತ್ತುಮಾಡುವ ಭಾಗದಲ್ಲಿ ನೀವು ಸರ್ವಸ್ವತಂತ್ರರಾಗಿರುತ್ತೀರಿ.—ಯೂರೋಪ್ ಖಂಡದ ರಾಜ್ಯಗಳಲ್ಲಿ ಜರ್ಮನಿ, ಆಸ್ಟ್ರಿಯ ಮತ್ತು ಇಟಲಿ ರಾಜ್ಯಗಳು ಒಂದಾಗಿರುತ್ತವೆ; ಮತ್ತು ಫ್ರಾನ್ಸ್, ರಷ್ಯ, ಗ್ರೇಟ್ ಬ್ರಿಟನ್ ರಾಜ್ಯಗಳು ಎರಡನೇ ಗುಂಪು. 1908 ರಲ್ಲಿ ಬೋಸ್ನಿಯ ಮತ್ತು ಹೆರಿಸ್‌ಗೋವಿನಾ ಅಧಿಪತ್ಯಗಳ ವಿಚಾರವಾಗಿ ಹೋರಾಟ ಹುಟ್ಟಿದಾಗ್ಗೆ ರಷ್ಯಾ ಮಂತ್ರಿಯು ಲಂಡನ್ ಪಟ್ಟಣಕ್ಕೆ ಬಂದು ಇಂಗ್ಲಿಷರ ಸಹಾಯವನ್ನು ಕೇಳಿದ್ದಕ್ಕೆ ಅದು ಬಾಲ್ಕನ್ ರಾಜ್ಯಗಳಿಗೆ ಸಂಬಂಧಪಟ್ಟ ವಿಚಾರವೆಂದೂ, ವಾಕ್‌ಸಹಾಯವಲ್ಲದೆ ಹೆಚ್ಚೇನೂ ಭರವಸೆ ಕೊಡುವುದು ಸಾಧ್ಯವಲ್ಲವೆಂದೂ ನಾವು ಹೇಳಿಬಿಟ್ಟೆವು. ಆಗ್ಗೆ ರಷ್ಯಾದವರು ನಮ್ಮನ್ನು ಹೆಚ್ಚು ಕೇಳಲೂ ಇಲ್ಲ, ನಾವು ಇನ್ಯಾವ ಹೆಚ್ಚು ಭರವಸೆಯನ್ನೂ ಕೊಡಲೂ ಇಲ್ಲ. ನಿನ್ನೆ ತನಕಲೂ ನಾವು ಅವರಿಗೆ ವಾಕ್‌ಸಹಾಯವೆಷ್ಟೋ ಅಷ್ಟುಮಾತ್ರ ಹೇಳಿರುವೆವು. ಈ ಸಂದರ್ಭದಲ್ಲಿ ನಮ್ಮ ಕರ್ತವ್ಯವನ್ನು ನಿಮಗೆ ಸ್ಪಷ್ಟವಾಗಿ ತಿಳಿಸಬಿಡುತ್ತೇವೆ. ಹಿಂದೆ 1906 ನೇ ಇಸವಿಯಲ್ಲಿ ಮೊರೊಕೊ ಸೀಮೆಯ ವಿಚಾರವಾಗಿ ಅಲ್‌ಜೆಸಿರಾಸ್ ಪಂಚಾಯಿತಿ ನಡೆದಾಗ್ಗೆ ಫ್ರಾನ್ಸ್ ಮತ್ತು ಜರ್ಮನಿ ರಾಜ್ಯಗಳಿಗೆ ಯುದ್ಧಪ್ರಮೇಯ ಬೀಳಬಹುದೆಂದು ಕಂಡುಬಂದಾಗ ಫ್ರೆಂಚರು ನಮ್ಮನ್ನು ಸೈನ್ಯದೊಡನೆ ಸಹಾಯ ಮಾಡುತ್ತೀರಾ ಎಂದು ಕೇಳಿದರು. ಆಗ ನಾವು ಅವರಿಗೆ ಇಂಗ್ಲಿಷ್ ಪ್ರಜೆಗಳ ಬಹುಮತವನ್ನು ಪಡೆಯದೆ ಯಾವ ವಾಗ್ದಾನವೂ ಮಾಡಲಾರೆವೆಂದು ಜವಾಬು ಕೊಟ್ಟೆವು. ಆದರೆ ಮೊರೊಕೊ ವಿಚಾರದಲ್ಲಿ ಆಗ ಯುದ್ಧ ಸಂಭವಿಸಿದ್ದರೆ ಫ್ರೆಂಚರಿಗೆ ಸಹಾಯ ಮಾಡಬೇಕೆಂದು ಇಂಗ್ಲಿಷ್ ಪ್ರಜೆಗಳು ಬಹು ಸಂತೋಷದಿಂದ ಒಪ್ಪಿಕೊಳ್ಳಲು ಸಿದ್ಧರಾಗಿದ್ದರು. ಆದರೂ ನಾವು ಫ್ರೆಂಚರಿಗೆ ಅಂಥಾ ಯಾವುದೊಂದು ಭರವಸೆಯನ್ನೂ ಕೊಡಲಿಲ್ಲ. ಫ್ರೆಂಚ್ ಗವರ್ನ್‌ಮೆಂಟಿನವರೂ ನಮ್ಮ ಮಾತಿನಂತೆ ಒಪ್ಪಿಕೊಂಡರು.—ಬಳಿಕ ಅಗದಿರ್ ಅಧಿಪತ್ಯದ ವಿಚಾರವಾಗಿ ಫ್ರೆಂಚರಿಗೆ ಚಿಂತೆಯುಂಟಾಯಿತು. ಆಗಲೂ ಬ್ರಿಟಿಷ್ ಗವರ್ನ್‌ಮೆಂಟಿನವರು ಅವರಿಗೆ ವಾಕ್‌ಸಹಾಯ ಮಾತ್ರ ಮಾಡುವುದಾಗಿ ಹೇಳಿದರು. ಈಚೆಗೆ 1912 ನೇ ಇಸವಿಯಲ್ಲಿ ನಮಗೂ ಫ್ರೆಂಚರಿಗೂ ಪರಸ್ಪರವಾದ ಸುಹೃದಯವನ್ನೂ ನೆಮ್ಮದಿಯನ್ನೂ ಖಂಡಿತಮಾಡಿಕೊಳ್ಳಬೇಕೆಂದು ನಾನು ಅದೇ ನವೆಂಬರ್ ತಾ. 22 ರಲ್ಲಿ ಫ್ರೆಂಚರ ರಾಯಭಾರಿಗೆ ಕಾಗದ ಬರೆದು ಕೇಳಿದೆನು. ಅದಕ್ಕೆ ಅವರು ಕೊಟ್ಟಿರುವ ಜವಾಬನ್ನು ನೀವೇ ಸ್ವತಃ ಓದಿ ತಿಳಿದುಕೊಳ್ಳಬಹುದಾಗಿದೆ. ಆ ಜವಾಬನ್ನು ಪ್ರಕಟ ಮಾಡುವೆವು ಅದರಲ್ಲಿ ಒಬ್ಬರಿಗೊಬ್ಬರು ಸಹಾಯ ಮಾಡಬೇಕೆಂಬ ವಿಧಿಯೇನೂ ಇರುವುದಿಲ್ಲ.

ಈಗ ಪ್ರಾಪ್ತವಾಗಿರುವ ಸಂದರ್ಭ.

ಈಗ ಒದಗಿರುವ ಸಂದರ್ಭವು ಹಿಂದೆ ಯಾವಾಗಲೂ ಪ್ರಾಪ್ತವಾಗಿರಲಿಲ್ಲ; ಈಗಿನ ಸಂದರ್ಭಕ್ಕೆ ಕಾರಣ ಪ್ರತ್ಯೇಕವಾಗಿದೆ. ಆಸ್ಟ್ರಿಯಕ್ಕೂ ಸರ್ವಿಯಕ್ಕೂ ಜಗಳ ಹುಟ್ಟಿತು. ಈ ಜಗಳದಲ್ಲಿ ಪಕ್ಷ ಪರಪಕ್ಷಗಳನ್ನು ವಹಿಸಬೇಕೆಂಬ ಅಪೇಕ್ಷೆಯು ಫ್ರೆಂಚರಿಗೆ ಸ್ವಲ್ಪಮಾತ್ರವೂ ಇರಲಿಲ್ಲ. ಫ್ರೆಂಚರು ರಷ್ಯಾದವರ ಕೂಡ ಖಂಡಿತವಾದ ಒಪ್ಪಂದ ಮಾಡಿಕೊಂಡಿರೋಣದರಿಂದ ಫ್ರೆಂಚರು ಈ ಜಗಳದಲ್ಲಿ ಸೇರಲೇ ಬೇಕಾಯಿತು. ನಮಗೆ ಅಂಥಾ ಪ್ರಸಕ್ತಿಯೇನೂ ಇರುವುದಿಲ್ಲ. ಫ್ರೆಂಚರಿಗೂ ರಷ್ಯನರಿಗೂ ನಡೆದಿರುವ ಒಪ್ಪಂದಕ್ಕೆ ನಾವು ಸೇರಿದವರಲ್ಲ. ಮತ್ತೂ ಅವರವರಿಗೆ ನಡೆದಿರುವ ಒಪ್ಪಂದದ ಅಂಶಗಳೇನೋ ನಮಗೆ ತಿಳಿಯಲೂ ತಿಳಿಯದು.

ಇಂಗ್ಲಿಷರಿಗೂ ಫ್ರೆಂಚರಿಗೂ ಇರುವ ಅನುರಾಗ.

ಅನೇಕ ವರುಷಗಳಿಂದ ನಮಗೂ ಫ್ರೆಂಚರಿಗೂ ಸ್ನೇಹವಿರುತ್ತದೆ. ನಮ ನಮಗೆ ಇದ್ದ ದೀರ್ಘದ್ವೇಷವು ಮೇಲ್ಕಂಡ ಒಪ್ಪಂದದ ದೆಸೆಯಿಂದ ಎಂದೆಂದಿಗೂ ನಿವಾರಣೆಯಾಗಿ ಪರಸ್ಪರ ಪ್ರೀತಿವಿಶ್ವಾಸಗಳು ಬೆಳೆದಿರುವವು. ಈ ಸ್ನೇಹದ ದೆಸೆಯಿಂದ ಅವರ ವಿಷಯದಲ್ಲಿ ನಮ್ಮ ಕರ್ತವ್ಯವೇನೆಂಬುವುದನ್ನು ನೀವುಗಳೇ ನಿಮ್ಮ ನಿಮ್ಮ ಮನಸ್ಸಿನಲ್ಲಿ ಯೋಚಿಸಿ ಗೊತ್ತುಮಾಡಿಕೊಳ್ಳಬಹುದಾಗಿದೆ. ಫ್ರೆಂಚರಿಗೂ ನಮಗೂ ಐಕಮತ್ಯವಿಲ್ಲದಿದ್ದಾಗ ಅವರು ತಮ್ಮ ರಾಜ್ಯದ ಉತ್ತರ ಪಶ್ಚಿಮ ಭಾಗಗಳಲ್ಲಿ ಜಹಜುಗಳನ್ನು ನೇಮಿಸಿ ತಮ್ಮ ತೀರಪಟ್ಟಣಗಳನ್ನು ಸಂರಕ್ಷಣೆಮಾಡಿಕೊಳ್ಳುತ್ತಿದ್ದರು ಈಗ ಅವರಿಗೂ ನಮಗೂ ಸ್ನೇಹವುಂಟಾದ್ದರಿಂದ ಅವರು ತಮ್ಮ ಜಹಜುಗಳನ್ನು ಫ್ರಾನ್ಸಿನ ದಕ್ಷಿಣ ತೀರವನ್ನು ಕಾಪಾಡಿಕೊಳ್ಳುವುದಕ್ಕಾಗಿ ಮೆಡಿಟರ್ರೇನಿಯನ್ ಕಡಲಿಗೆ ಕಳುಹಿಸಿರುತ್ತಾರೆ. ಫ್ರಾನ್ಸಿನ ಉತ್ತರ ಪಶ್ಚಿಮ ಭಾಗಗಳಲ್ಲಿ ಅವರು ಯಾವ ವಿಧವಾದ ಪಹರೆಯನ್ನೂ ಇಟ್ಟುಕೊಂಡಿಲ್ಲ. ಯಾಕಂದರೆ ನಾವು ಸ್ನೇಹಿತರಾಗಿರುತ್ತೇವೆಂದು ಅವರಿಗೆ ಭರವಸೆಯುಂಟಾಗಿದೆ ಇಂಥಾ ಸಂದರ್ಭದಲ್ಲಿ ನನಗೆ ತೋರುವುದೇನೆಂದರೆ, ಫ್ರೆಂಚರು ತಾವಾಗಿಯೇ ಇತರರ ಮೇಲೆ ಬಿದ್ದು ಯುದ್ಧಮಾಡುವವರಾಗಿಲ್ಲದೇನೂ, ಇತರರು ಹೋರಾಡುವ ಜಗಳದಲ್ಲಿ ಫ್ರೆಂಚರು ಬೇಕೆಂದು ತಲೆಹಾಕಿದೇನೂ ಇರುವ ಸಂದರ್ಭದಲ್ಲಿ ಪರರಾಜ್ಯದವರು ಬಂದು ಫ್ರಾನ್ಸನ್ನು ಉತ್ತರ ಭಾಗದಲ್ಲಿ ಮುತ್ತಿಗೆಹಾಕಿ ನಮ್ಮ ಕಣ್ಣಮುಂದೆ ಅವರನ್ನು ಕಷ್ಟನಷ್ಟಗಳಿಗೆ ಗುರಿಮಾಡುತ್ತಿದ್ದರೆ ನಾವು ಅದನ್ನು ನೋಡುತ್ತಾ ಕೈಕಟ್ಟಿಕೊಂಡು ಸುಮ್ಮನಿರುವುದು ಸಹಜವಲ್ಲವೆಂದು ನನಗೆ ತೋರುವುದು. ಮತ್ತು ಈ ರಾಜ್ಯದಲ್ಲಿ ಸಮಸ್ತರೂ ನನ್ನಂತೆಯೇ ಅಭಿಪ್ರಾಯಪಡುತ್ತಾರೆಂದು ಹೇಳಬಲ್ಲೆನು.

ಬ್ರಿಟಿಷರಿಗೆ ಉಂಟಾಗುವ ನಷ್ಟಗಳು.

ಅಂಥಾ ಸಂದರ್ಭದಲ್ಲಿ ನಾವು ಸುಮ್ಮನಿದ್ದು ಫ್ರೆಂಚರಿಗೆ ಯಾವುದೊಂದು ಮಾತನ್ನೂ ಹೇಳದಿದ್ದರೆ ಫ್ರೆಂಚರು ತಮ್ಮ ಜಹಜುಗಳನ್ನು ಮೆಡಿಟರ್ರೇನಿಯನ್ ಕಡಲಿನಿಂದ ಪಶ್ಚಿಮ ಮತ್ತು ಉತ್ತರ ಸಮುದ್ರ ತೀರಗಳಿಗೆ ತಂದುಕೊಂಡು, ಶತ್ರುಗಳು ಆ ಮೂಲಕ ತಮ್ಮ ರಾಜ್ಯದೊಳಕ್ಕೆ ಪ್ರವೇಶಿಸದಂತೆ ತಡೆಯುವ ಪ್ರಯತ್ನ ಮಾಡಿಯೇ ತೀರಬೇಕು. ಫ್ರೆಂಚರು ಒಂದು ವೇಳೆ ಹಾಗೆ ಮಾಡಿದ ಪಕ್ಷದಲ್ಲಿ ಮತ್ತು "ಸುಮ್ಮನೆ ಇರುತ್ತೇವೆ, ಯಾವ ಪಕ್ಷವನ್ನೂ ವಹಿಸುವುದಿಲ್ಲ" ಎಂದು ಬಾಯಿಂದ ಈಗ ನಟನೆಮಾಡುತ್ತಿರುವ ಇಟಲಿ ರಾಜ್ಯದವರು ಜರ್ಮನಿಯ ಪಕ್ಷವನ್ನು ವಹಿಸುವುದಾದರೆ ನಾವು ಯುದ್ಧಕ್ಕೆ ನಿಲ್ಲಲೇ ಬೇಕಾಗುವುದು. ಅಲ್ಲಿಗೆ ಮೆಡಿಟರ್ರೇನಿಯನ್ ಕಡಲಿನ ಮೂಲಕ ನಮ್ಮ ಜಹಜುಗಳು ಹೋಗಿಬರದಂತೆ ಅಡಚಣೆಯಾದೀತು. ಇದರಿಂದ ನಮ್ಮ ಮುಖ್ಯಾಧಾರವಾದ ಆಮದು ರಫ್ತು ನಿಂತುಹೋದೀತು. ಈಗಲೇ ಇನ್ನು ಕೆಲವು ವಾರಗಳೊಳಗಾಗಿ ನಮಗಿರುವ ಯಾವ ಯಾವ ಆಮದು ರಫ್ತಿನ ಮಾರ್ಗಗಳು ಕಟ್ಟುಹೋಗುವವೋ ಯಾರೂ ಹೇಳಲಾರರು. ಆಗ್ಗೆ ನಮ್ಮ ಗತಿ ಏನು?— ಮೆಡಿಟರ್ರೇನಿಯನ್‌ನಲ್ಲಿರುವ ನಮ್ಮ ಜಹಜುಗಳೂ ಫ್ರೆಂಚರ ಜಹಜುಗಳೂ ಒಂದಾಗಿ ಸೇರಿಕೊಂಡರೂ ಶತ್ರುಗಳನ್ನು ಓಡಿಸಲು ಸಮರ್ಥವಾಗಿಲ್ಲ. ಅಂಥಾದರಲ್ಲಿ ಫ್ರೆಂಚರು ತಮ್ಮ ಜಹಜುಗಳನ್ನು ಅಲ್ಲಿಂದ ಇತರ ಕಡೆಗೆ ಕರಸಿಕೊಂಡರೆ ಅಲ್ಲಿಗೆ ನಾವು ನಮ್ಮ ಜಹಜುಗಳನ್ನು ಅಂಥಾ ಸಮಯದಲ್ಲಿ ಇಲ್ಲಿಂದ ಕಳುಹಿಸುವುದು ಅಪಾಯಕರವಾದೀತು ಇಲ್ಲಿರುವ ನಮ್ಮ ಜಹಜುಗಳು ನಮ್ಮ ಎಲ್ಲೆಕಟ್ಟುಗಳನ್ನು ಕಾಯಬೇಕಾಗುತ್ತದೆ. ಈಗ ನಾವು ಮೌನವಾಗಿದ್ದರೆ ಮುಂದೆ ನಮ್ಮ ಸ್ಥಿತಿಯು ಬಹು ಭಯಂಕರವಾದೀತು ಬ್ರಿಟಿಷ್ ರಾಜ್ಯದ ಕ್ಷೇಮವನ್ನು ಬಯಸಿಯೇ ನಾನು ಇಷ್ಟು ದೂರ ಹೇಳುವೆನು. ಜರ್ಮನಿಯವರು ಫ್ರೆಂಚರ ಉತ್ತರ ಅಥವಾ ಪಶ್ಚಿಮ ತೀರಪಟ್ಟಣಗಳ ಮೇಲೆ ನುಗ್ಗಿ ಬರುವುದಕ್ಕೆ ಮೊದಲೇ ನಾವು ಫ್ರೆಂಚರಿಗೆ ಸಹಾಯಮಾಡುವುದೂ ಇಲ್ಲವೋ ತತ್‌ಕ್ಷಣವೇ ಫ್ರೆಂಚರಿಗೆ ಖಂಡಿತವಾಗಿ ತಿಳಿಸುವುದು ಮೇಲು.—ಈಗ ಒದಗಿರುವ ಕಷ್ಟವೂ ಆವಿಗ್ನವೂ ಆದ ಸಂದರ್ಭವನ್ನು ನೋಡಿ ನಿನ್ನೆ ಮಧ್ಯಾಹ್ನ ಫ್ರೆಂಚ್ ರಾಯಭಾರಿಗೆ ಬರೆದು ತಿಳಿಸಿದ್ದೇನೆಂದರೆ—"ಇಂಗ್ಲಿಷ್ ಕಡಲುಕಾಲುವೆಗಾಗಲಿ, ಉತ್ತರ ಸಮುದ್ರಕ್ಕಾಗಲಿ ಜರ್ಮನಿಯ ಜಹಜು ಬಂದು ಫ್ರೆಂಚರ ಮೇಲೆ ಯುದ್ಧ ಕಾರ್ಯಗಳನ್ನು ನಡಿಸಿದ ಪಕ್ಷದಲ್ಲಿ ಬ್ರಿಟಿಷ್ ಜಹಜುಗಳು ಫ್ರೆಂಚರಿಗೆ ಕೈಲಾಗುವ ಮಟ್ಟಿಗೂ ಸಹಾಯಮಾಡುವವು ಎಂದು ತಿಳಿಸಲು ನನಗೆ ಅಪ್ಪಣೆಯಾಗಿದೆ. ಈ ಭರವಸೆಯನ್ನು ಪಾರ್ಲಿಮೆಂಟಿನವರು ಒಪ್ಪಿಕೊಳ್ಳಬೇಕಾಗಿದೆ ಜರ್ಮನಿಯವರು ಯುದ್ಧಸನ್ನದ್ಧರಾಗಿ ಬಂದ ಹೊರತು ಈ ಭರವಸೆಯು ಜಾರಿಗೆ ಬರುವುದಿಲ್ಲ." ಆದರೆ ನಾವು ಸುಮ್ಮನಿರುವುದಾದರೆ ಜರ್ಮನಿಯವರು ಫ್ರಾನ್ಸಿನ ಉತ್ತರ ಭಾಗಕ್ಕೆ ಬಂದು ಫ್ರೆಂಚರ ತೀರಪಟ್ಟಣಗಳನ್ನು ಮುತ್ತುವುದಿಲ್ಲವೆಂದು ಭರವಸೆ ಕೊಡುತ್ತಾರೆಂದು ನಾನು ಈ ಸಭೆಮನೆಗೆ ಬರುವಾಗ ತಿಳಿಯಿತು. ಇದು ಬಹಳ ಬಿಕ್ಕಟ್ಟಾದ ಭರವಸೆ.

ಬೆಲ್ಜಿಯಂ ರಾಜ್ಯದ ವಿಚಾರ.

ಇದಕ್ಕಿಂತಲೂ ವಿಶೇಷವಾದದ್ದು ಬೆಲ್ಜಿಯಂ ರಾಜ್ಯದ ವಿಚಾರವು. ಅದು ಈ ಗಲಭೆಯೊಳಗೆ ಸೇರದೆ ಪ್ರತ್ಯೇಕವಾಗಿರಬೇಕಾದದ್ದು ಪರಮಾವಶ್ಯಕ. ಇದೇ ಅರ್ಥಕ್ಕಾಗಿ 1839 ನೇ ಇಸವಿಯಲ್ಲಿ ಒಂದು ಕರಾರು ನಡೆದಿದೆ. ಇದಲ್ಲದೆ 1870 ನೇ ಇಸವಿಯಲ್ಲಿ ಜರ್ಮನಿಯ ಪ್ರಿನ್ಸ್ ಬಿಸ್ಮಾರ್ಕ್ ಎಂಬಾತನು ಬೆಲ್ಜಿಯಂ ರಾಜ್ಯವು ಪ್ರತ್ಯೇಕವಾಗಿರತಕ್ಕ ಭಾಗದಲ್ಲಿ ಜರ್ಮನಿ ಗವರ್ನ್‌ಮೆಂಟು ಒಪ್ಪಿಕೊಂಡಿದೆ ಎಂದು ಮಾತು ಕೊಟ್ಟಿರುತ್ತಾನೆ. ಈ ಕರಾರು ಪುರಾತನವಾದದ್ದು; ಅದರ ಬಿಗಿಯೂ ಗೌರವವೂ 1870 ರಲ್ಲಿ ಹ್ಯಾಗಿತ್ತೋ ಈಗಲೂ ಹಾಗೆಯೇ ನಡದು ಬಂದಿದೆ. ಈ ಕರಾರಿನ ವಿಷಯದಲ್ಲಿ ನಮ್ಮ ನಿಶ್ಚಯವು ಸ್ವಲ್ಪವೂ ಕುಂದಿ ಇಲ್ಲ.

ಜರ್ಮನಿಯ ನಡವಳಿಕೆಯು ತೃಪ್ತಿಕರವಾಗಿಲ್ಲ.

ಪರರಾಜ್ಯಗಳವರು ಕಳೆದ ವಾರ ಯುದ್ಧಸನ್ನದ್ಧರಾಗುತ್ತಿದ್ದದ್ದನ್ನು ನೋಡಿ ನಾನು ಜರ್ಮನಿಯವರಿಗೂ ಫ್ರಾನ್ಸಿನವರಿಗೂ ಕಾಗದ ಬರೆದು ಮೇಲ್ಕಂಡ ಒಪ್ಪಂದದಂತೆ ಬೆಲ್ಜಿಯಂ ರಾಜ್ಯದ ಗೋಜಿಗೆ ಯಾರೂ ಹೋಗದಿರುವುದನ್ನು ಒಪ್ಪುತ್ತೀರಾ ಎಂದು ಕೇಳಿದೆನು. ಫ್ರೆಂಚ್ ಗವರ್ನ್‌ಮೆಂಟಿನವರು ಆ ರೀತಿ ಒಪ್ಪಿ ನಡೆದುಕೊಳ್ಳುತ್ತೇವೆಂದೂ, ಆದರೆ ಇತರ ರಾಜ್ಯಗಳವರು ಆ ಕರಾರನ್ನು ಅತಿಕ್ರಮಿಸಿದರೆ ತಾವೂ ಅತಿಕ್ರಮಿಸಬೇಕಾಗುವುದೆಂದೂ ಜವಾಬು ಕೊಟ್ಟರು. ಜರ್ಮನಿಯವರಾದರೋ ಈಗಲೇ ಜವಾಬು ಕೊಡಲಾಗದೆಂದೂ, ಜವಾಬು ಕೊಟ್ಟರೆ ತಮ್ಮ ಯುದ್ಧದ ಕಾರ್ಯಕ್ರಮವು ಹೊರಪಡುವುದೆಂದೂ ತಿಳಿಸಿದ್ದಾರೆ.—ಈಗ ಜರ್ಮನಿಯವರು ಬೆಲ್ಜಿಯಂ ರಾಜ್ಯಕ್ಕೆ "ನಿಮ್ಮ ರಾಜ್ಯದ ಮೂಲಕ ನಮ್ಮ ಸೈನ್ಯಗಳನ್ನು ಸಾಗಿಸಿ ಕಳುಹಿಸುವುದಕ್ಕೆ ಅವಕಾಶ ಕೊಡುತ್ತೀರೋ ಇಲ್ಲವೋ" ಎಂದು ಕಾಗದ ಬರೆದು ಕೇಳಿದರು. ಇತ್ತಲಾಗಿ ಕಳೆದ ವಾರ ಜರ್ಮನಿಯವರು ನಮಗೆ ಕಾಗದ ಬರೆದು—"ಯುದ್ಧವೆಲ್ಲಾ ಮುಕ್ತಾಯವಾದ ಬಳಿಕ ಬೆಲ್ಜಿಯಂ ರಾಜ್ಯವನ್ನು ಈಗಿನಂತೆಯೇ ಪ್ರತ್ಯೇಕವಾಗಿರುವಂತೆ ಮಾಡಿದ ಪಕ್ಷದಲ್ಲಿ ನಿಮಗೆ ಸಮಾಧಾನವಾದೀತೇ?" ಎಂದು ಕೇಳಿದರು. ಆ ರೀತಿ ಒಪ್ಪಲಾರೆವೆಂದು ನಾವು ಜವಾಬು ಕೊಟ್ಟಿದೇವೆ.—ಚಾರ್ಟೀ ದೊರೆಯವರಿಗೆ ಬೆಲ್ಜಿಯಂ ದೊರೆಯವರು 1870 ನೇ ಇಸವಿಯಲ್ಲಿ ಬೆಲ್ಜಿಯಂ ರಾಜ್ಯದ ವಿಷಯದಲ್ಲಿ ನಡೆದಿರುವ ಒಪ್ಪಂದವನ್ನು ಕಾಪಾಡುವುದಕ್ಕೆ ಸಹಾಯ ಮಾಡಬೇಕೆಂದು ಬರೆದು ಕೇಳಿದರು. ನಾವು ಅದರ ಮೇಲೆ ಕಾಗದ ಬರೆದೆವು. ಇದರಿಂದ ಫಲವೇನೂ ಆಗಲಿಲ್ಲ ಬೆಲ್ಜಿಯಂ ರಾಜ್ಯವು ಪ್ರತ್ಯೇಕವಾಗಿಲ್ಲದೆಹೋದರೆ ಅದರ ಸ್ವಾತಂತ್ರ್ಯಕ್ಕೆ ಕುಂದಕವು ಬರುತ್ತದೆ, ಅದು ಹೋದ ಮೇಲೆ ಅದರ ಪಕ್ಕದಲ್ಲಿರುವ ಹಾಲೆಂಡ್ ರಾಜ್ಯದ ಸ್ವಾತಂತ್ರ್ಯವೂ ಹಾಳಾಗುವುದು.

ಇಂಗ್ಲಿಷರ ಕರ್ತವ್ಯ.

ಆದಕಾರಣ ನಾವು ಈಗ ತಟಸ್ಥರಾಗಿ ಸುಮ್ಮನಿರುವುದು ತಕ್ಕದ್ದಲ್ಲ. ನಮ್ಮ ಜಹಜಿನ ಸೈನ್ಯವು ಅಪಾರವಾದದ್ದು. ಯುದ್ಧಕ್ಕೆ ಹೊರಟರೂ ನಮಗೆ ವಿಶೇಷ ನಷ್ಟವೇನೂ ಆಗುವುದಿಲ್ಲ. ನಾವು ಸುಮ್ಮನಿದ್ದರೆ ನಮ್ಮ ನಷ್ಟವು ಬಹು ಹೆಚ್ಚಾದೀತು. ನಾವು ಯುದ್ಧದಲ್ಲಿ ಸೇರಿದರೂ, ಸೇರದಿದ್ದರೂ ನಮಗೇನೋ ಬಹಳ ನಷ್ಟ ಸಂಭವಿಸುವುದು. ಪರದೇಶಗಳಿಗೂ ನಮಗೂ ಇರುವ ಆಮದು ರಫ್ತೆಲ್ಲಾ ನಿಂತುಹೋಗಿ ನಮ್ಮ ವ್ಯಾಪಾರ ಹಾಳಾದೀತು. ಬೆಲ್ಜಿಯಂ ವಿಚಾ

ದ್ದು ನಾನು ನಿಮಗೆ ಹೇಳಿರುವುದು ಯಥಾರ್ಥವಾಗಿದ್ದಲ್ಲಿ ಅದರ ಸ್ವಾತಂತ್ರ್ಯವನ್ನು ಕಾಪಾಡುವುದು ನಮ್ಮ ಧರ್ಮ. ಆದಕ್ಕಾಗಿ ನಾವು ಯುದ್ಧ ಮಾಡಬೇಕು. ನಾವು ಯುದ್ಧದ ಸನ್ನಾಹಗಳನ್ನೆಲ್ಲಾ ಮಾಡಿಕೊಳ್ಳುತ್ತಾ ಬಂದಿದೇವೆ. ಪ್ರೇಯಲ್ಲಿ ಹುಟ್ಟಿದ್ದ ನಮ್ಮ ಪ್ರಜೆಗಳ ಮನಸ್ತಾಪವು ಅವರ ಸುಹೃದಯ ರಾಜಭಕ್ತಿಯ ದೆಸೆಯಿಂದ ನಿವಾರಣೆಯಾಗಿರುತ್ತದೆ. ಈ ಯುದ್ಧದ ವಿಚಾರವು ಮುಕ್ತಾಯವಾಗುವ ತನಕ ಈ ನಮ್ಮ ಪ್ರಜೆಗಳು ತಮ್ಮ ಮನೋವ್ಯಥೆಗಳನ್ನು ಮರೆಯುವುದಾಗಿ ಒಪ್ಪಿಕೊಂಡಿದಾರೆ. ನಮ್ಮ ಸೈನ್ಯವೆಲ್ಲಾ ಸಿದ್ಧವಾಗಿದೆ. ನಮ್ಮ ದೇಶವನ್ನೂ ಲೋಕದಲ್ಲಿ ನಮ್ಮ ವ್ಯಾಪಾರವನ್ನೂ ನಮ್ಮ ಜೀವಾದಿಯನ್ನೂ ನಮ್ಮ ಘನತೆಯನ್ನೂ ಕಾಪಾಡಿಕೊಳ್ಳುವುದಕ್ಕಾಗಿಯೇ ನಾವೀಗ ಯುದ್ಧಕ್ಕೆ ಹೊರಡಬೇಕಾಗಿದೆ.

ಈಗ ನಾನು ಸಂಗತಿಗಳನ್ನೆಲ್ಲಾ ಸಾಂಗವಾಗಿ ಸಭಿಕರಿಗೆ ತಿಳಿಸಿರುವೆನು. ಮಹಾಸಭೆಯವರೂ, ಇಂಗ್ಲಿಷ್ ಪ್ರಜೆಗಳೂ ನಮ್ಮ ಸಂಕಲ್ಪವನ್ನು ಒಪ್ಪಿಕೊಂಡು, ನಮಗೆ ಸಹಾಯ ಮಾಡುವರೆಂದು ನಿರೀಕ್ಷಿಸುತ್ತೇನೆ.

ಈ ಪ್ರಕಾರ ಫಾರಿನ್ ಸೆಕ್ರೆಟರಿಯವರು ತಿಳಿಸಿದ ಬಳಿಕ ಸಭೆಯಲ್ಲಿ ಮೆಂಬರುಗಳು ಚರ್ಚೆಮಾಡಿ, ಯುದ್ಧಕ್ಕೆ ಹೊರಡುವುದೇ ಸಿದ್ಧವೆಂದು ಜಯಧ್ವನಿಯಿಂದ ಒಪ್ಪಿಕೊಂಡರು.

ಇಂಡಿಯಾ ದೇಶದ ವೃತ್ತಾಂತಗಳು.

ಕಲ್ಕತ್ತಾ ಪಟ್ಟಣದಲ್ಲಿ ಫುಟ್‌ಬಾಲ್ ಎಂಬ ಚೆಂಡಾಟವನ್ನು ಆಡುತ್ತಿದ್ದಾಗ ಚೆಂಡಿನ ಏಟು ಎದೆಗೆ ತಗಲಿ ಒಬ್ಬ ಹುಡುಗನು ಮೃತಪಟ್ಟನು.

ವಿಜಯನಗರದಲ್ಲಿ ಕಳೆದ ವಾರ ಇಬ್ಬರು ತಮ್ಮ ಹೊಲವನ್ನು ಉಳುತ್ತಿದ್ದಾಗ ಸಿಡಿಲು ಬಡಿದು ಇಬ್ಬರೂ ಮೃತಪಟ್ಟರು. ಆದರೆ ಅವರ ನೇಗಿಲಿಗೆ ಕಟ್ಟಿದ್ದ ಎತ್ತುಗಳಿಗೆ ಅಪಾಯವೇನೂ ಸಂಭವಿಸಲಿಲ್ಲ.

ಪಂಜಾಬ್ ಆಧಿಪತ್ಯದ ಹಿಂದೂ ಪ್ರಜೆಗಳ ಮಹಾ ಸಭೆಯು ಈ ವರುಷ ಫಿರೋಜ್‌ಪುರದಲ್ಲಿ ನಡೆಯುತ್ತದೆ. ಅಂಬಾಲಾ ನಗರದಲ್ಲಿ ಗೌವರ್ನ್‌ಮೆಂಟ್ ಪ್ಲೀಡರಾಗಿದ್ದ ರಾಯಸಾಹೇಬ್ ಮುಳೀಗಂಗರ್ ಎಂಬವರನ್ನು ಸಭೆಯ ಅಧ್ಯಕ್ಷರಾಗಿ ನೇಮಕ ಮಾಡಿರುವರು.

ಹಿಂದುಸ್ಥಾನದ ಅಕ್ಕಿಯು ಸಿಲೋನ್, ಸ್ಟ್ರೈಟ್ ಸೆಟ್ಲ್‌ಮೆಂಟ್, ಜಪಾನ್ ದೇಶಗಳಿಗಲ್ಲದೆ ಆಸ್ಟ್ರಿಯಾ ಹಂಗೆರಿಗೆ ವಿಶೇಷವಾಗಿ ರಫ್ತಾಗುತ್ತದೆ. ಈ ರಾಜ್ಯಕ್ಕೆ ಕಳೆದ 1913 ನೇ ವರುಷದಲ್ಲಿ 1,86,030 ಟನ್‌ಗಳಷ್ಟು ಅಕ್ಕಿ ಸಾಗಿಹೋಯಿತು. ಇದಲ್ಲದೆ ಅದೇ ಆಸ್ಟ್ರಿಯಾ ರಾಜ್ಯವು ಕಳೆದ ವರುಷ 1,060 ಟನ್‌ನಷ್ಟು ಚರ್ಮವನ್ನು ಹಿಂದುಸ್ಥಾನದಿಂದ ತರಿಸಿಕೊಂಡಿದೆ.

ಚಿಟಗಾಂಗ್ ಡೆಪ್ಯುಟಿ ಮ್ಯಾಜಿಸ್ಟ್ರೇಟರು ಒಂದು ರಾಜದ್ರೋಹದ ಕೊಲೆ ಮೊಕದ್ದಮೆಯನ್ನು ತನಿಖೆಮಾಡುತ್ತಿದಾರೆ. ಅವರಿಗೆ ಯಾವನೋ ಒಬ್ಬ ದುಷ್ಟನು ಒಂದು ಪೋಸ್ಟ್ ಕಾರ್ಡು ಬರೆದು ಎಚ್ಚರಿಕೆಯಿಂದ ಇಲ್ಲದೆ ಹೋದರೆ ನಿಮ್ಮ ಪ್ರಾಣವನ್ನು ತೆಗೆದುಬಿಡುತ್ತೇವೆಂದು ಹೆದರಿಸಿರುತ್ತಾನೆ. ಮ್ಯಾಜಿಸ್ಟ್ರೇಟರು ಆ ಕಾಗದವನ್ನು ತನಿಖೆ ಮತ್ತು ಪತ್ತೆಗಾಗಿ ಪೋಲೀಸಿಗೆ ಒಪ್ಪಿಸಿದಾರೆ.

ಸೂರತ್ ಪಟ್ಟಣದಲ್ಲಿ ರಾವ್ ಬಹದೂರ್ ದಾಮೋದರದಾಸ್ ಸೇಟನಿಗೆ ಖಾಯಿಲೆಯಾಗಿದೆ. ಡಾಕ್ಟರುಗಳು ಆತನ ದೇಹಸ್ಥಿತಿಯನ್ನು ಪರೀಕ್ಷಿಸಿ ಆತನು ಬದುಕುವುದಿಲ್ಲವೆಂದು ಹೇಳಿಬಿಟ್ಟರು. ಆತನ ಮೂರನೆಹೆಂಡತಿಯು ಈ ವಾರ್ತೆಯನ್ನು ಕೇಳಿ ಪತಿವಿಯೋಗದುಃಖವನ್ನು ಸೈರಿಸಲಾರದೆ ಒಂದು ಕೊಟಡಿಗೆ ಹೋಗಿ ಎಣ್ಣೆ ಸುರಿದುಕೊಂಡು ಬಟ್ಟೆಗೆ ದೀಪಹಚ್ಚಿ ಜೀವಸಹಿತ ಸುಟ್ಟುಹೋದಳು.

ಕಲ್ಕತ್ತಾ ಪಟ್ಟಣದಲ್ಲಿ ಯುದ್ಧಕಾಲದ ಕಠಿಣತರವಾದ ಕಾನೂನನ್ನು ಜಾರಿಗೆ ತರುತ್ತಾರೆಂದು ಯಾರೋ ಸುಳ್ಳು ಸುದ್ದಿ ಹುಟ್ಟಿಸಿದರು. ಇದು ಬೆಂಕಿಯಂತೆ ಪಟ್ಟಣದಲ್ಲೆಲ್ಲಾ ಹರಡಿಕೊಂಡಿತು. ಮಾರ್ವಾಡಿಗಳು ತಮ್ಮ ಬಳಿ ಇದ್ದ ಕರೆನ್ಸಿ ನೋಟುಗಳನ್ನೆಲ್ಲಾ ಕೊಟ್ಟು ಹಣ ಹೂಡಿಸಿಕೊಂಡು ತಮ್ಮ ಸಂಸಾರ ಮಕ್ಕಳ ಸಮೇತ ನೂರಾರು ಮಂದಿ ಕಲ್ಕತ್ತೆಯನ್ನು ಬಿಟ್ಟು ತಮ್ಮ ಸ್ವಸ್ಥಳವಾದ ರಾಜಪುಟಾನಾಕ್ಕೆ ಪ್ರಯಾಣಮಾಡಿದರು.

ಈ ವರುಷ ಸಿಂಧು ನದಿಯಲ್ಲಿ ಬಂದಷ್ಟು ಪ್ರವಾಹವು ಹಿಂದೆ ಅನೇಕ ವರುಷಗಳಿಂದ ಕಂಡಿರಲಿಲ್ಲ. ನೀರು ದಡಗಳಿಂದಲೂ ಏರಿಕಟ್ಟೆಗಳಿಂದಲೂ ಊರಿನ ಮೇಲೆ ಹೋಗಿ ನೂರಾರು ಮೈಲಿಗಳ ತನಕ ಕಾಡುಗಳನ್ನೂ ಗ್ರಾಮಗಳನ್ನೂ ಎರಡು ಮೂರು ಭಾರಿ ಊರುಗಳನ್ನೂ ಮುಳುಗಿಸಿಬಿಟ್ಟಿತು. ಸಾವಿರಾರು ಪ್ರಜೆಗಳು ಮನೆಮಠಗಳನ್ನು ಕಳೆದುಕೊಂಡು ಜೀವನಕ್ಕಿಲ್ಲದೆ ಅಲೆಯುತ್ತಿರುವುದನ್ನು ನೋಡಿ ಅವರ ಸಹಾಯಕ್ಕಾಗಿ ರಿಲೀಫ್ ಫಂಡುಗಳು ಏರ್ಪಾಡಾಗಿವೆ.

ಜಲಂಧರ್ ಡಿಸ್ಟ್ರಿಕ್ಟಿಗೆ ಸೇರಿದ ರಹನ್ ಎಂಬ ಸ್ಥಳದಲ್ಲಿ ಬಹು ಭಯಂಕರವೂ ಅತ್ಯಂತ ದುಃಖಕರವೂ ಆದ ಅನಾಹುತ ನಡೆಯಿತು. ಬಹು ವಿಸ್ತಾರವಾದ ಒಂದು ದೊಡ್ಡ ಕಟ್ಟಡದಲ್ಲಿ ಒಂದು ಹಬ್ಬದ ನಿಮಿತ್ತ ಸುಮಾರು 1,000 ಹೆಂಗಸರು ಸೇರಿದ್ದಾಗ ಆ ಕಟ್ಟಡದ ಮೇಲ್ಮಾಳಿಗೆಯು ಅಕಸ್ಮಾತ್ತಾಗಿ ಕಳಚಿ ಬಿದ್ದುಬಿಟ್ಟಿತು. ಸುಮಾರು ನೂರು ಮಂದಿ ಹತರಾದರು. ಅದು ಬಿದ್ದ ರಭಸಕ್ಕೆ ಸಮೀಪದಲ್ಲಿದ್ದ ಇನ್ನೊಂದು ಕಟ್ಟಡದ ಗೋಡೆ ಮುಗುಚಿಕೊಂಡದ್ದರಿಂದ ಅದರ ಕೆಳಗೆ 60 ಮಂದಿ ಸಿಕ್ಕಿ ಹತರಾದರು.

ಶಾಹ್‌ಪುರ ಡಿಸ್ಟ್ರಿಕ್ಟಿಗೆ ಸೇರಿದ ಮುಖಂಡರಾದ ಹಿಂದೂ ಜಮಿನ್‌ದಾರರು ಸಭೆಸೇರಿ ತಮ್ಮ ಧಣಿಗಳ ಮತ್ತು ಶಾಸ್ತ್ರಿಗಳ ಅಭಿಮತವನ್ನು ಪಡೆದು ಇನ್ನು ಮುಂದೆ ಯಾವ ಭಕ್ತರೂ ಶ್ರೀದೇವಿ ಎಂಬ ಆ ಪ್ರಾಂತ್ಯದ ದೊಡ್ಡ ದೇವಾಲಯದಲ್ಲಿ ಪ್ರಾಣಿಗಳನ್ನು ಬಲಿಕೊಡಬೇಕೆಂದೂ, ಹೂವು ಹಣ್ಣು ಹಂಪಲುಗಳನ್ನು ಮಾತ್ರ ಅರ್ಪಿಸಬೇಕೆಂದೂ, ಆದು ಕುರಿ ಕೋಣಗಳನ್ನು ಕೊಂದು ರಕ್ತ ಹರಿಸುವದು ಮಹಾ ಪಾತಕವೆಂಬೂ ನಿರ್ಧರಿಯಮಾಡಿಕೊಂಡು, ಆ ಪ್ರಾಂತ್ಯದ ಹಿಂದೂ ಭಕ್ತಾದಿಗಳಿಗೆಲ್ಲಾ ಪ್ರಕಟಮಾಡಿರುತ್ತಾರೆ.

ನಾಸಿಕ್‌ಜಿಲ್ಲೆಯ ಬಳಿ ಕಾಡಿನಲ್ಲಿ ಒಂದು ಕೋತಿಯು ಹೆಣ್ಣುಮಗು ಸಿಕ್ಕಿದ್ದನ್ನು ತಂದು ಆಸ್ಪತ್ರೆಯಲ್ಲಿ ಇಟ್ಟಿದಾರೆ. ಸಾವಿರಾರು ಪ್ರಜೆಗಳು ಅದನ್ನು ಹೋಗಿ ನೋಡಿ ಬರುತ್ತಿರುವರು. ಈ ಮಗುವು ಕಾಡು ಮಗುವಿನಂತೆ ಕಾಣುತ್ತದೆ. ಅದರ ದೇಹದ ಚರ್ಮವು ಬಹಳ ದಪ್ಪನಾಗಿರುವುದು. ತೋಳು, ಕಾಲು, ಶರೀರದ ಮೇಲೆ ಉದ್ದವಾಗಿ ಕೂದಲು ಬೆಳೆದಿದೆ. ಉಗುರು ಚೂಪಾಗಿವೆ. ಮೊದಲು ಅದಕ್ಕೆ ಹಾಲು ಮುಂತಾದದ್ದನ್ನು ಹಾಕುತ್ತಿದ್ದರು. ಈಗ ಅದು ಹಸಿಯ ಮಾಂಸವನ್ನು ತಿನ್ನುವುದು; ಹಣ್ಣುಗಳನ್ನು ತಿನ್ನುವುದಿಲ್ಲ. ಈಗ ಅದು ಚೆನ್ನಾಗಿ ಬೆಳೆಯುತ್ತಿದೆ.

ಹೈದರಾಬಾದ್ ಸಂಸ್ಥಾನದ ನೈಜಾಮರವರು ನವಾಬ್ ಸಾಲಾರ್ ಜಂಗ್ ರವರಿಗೆ ಮಂತ್ರಿ ಪದವಿಯನ್ನು ದಯಪಾಲಿಸಿ ಎರಡು ವರುಷಗಳಿಂದ ಅವರ ಕೆಲಸ ಕಾರ್ಯಗಳನ್ನು ಪರೀಕ್ಷಿಸಿ ನೋಡಿ, ಈಗ ಅವರಿಗೆ ಆ ಪದವಿಯನ್ನು ಖಾಯಂ ಮಾಡಿರುತ್ತಾರೆ. ಈಗ ಅವರಿಗೆ ಖಿಲ್ಲತ್ತು ಕೊಡುವುದಕ್ಕೋಸ್ಕರ ಒಂದು ಲಕ್ಷ ರೂಪಾಯಿ ಸ್ಯಾಂಕ್ಷನ್ ಆಗಿದೆ. ಮಂತ್ರಿಯು ತಮ್ಮ ಬಂಗಲೆಯಿಂದ ಆನೆಯ ಮೇಲೆ ಮೆರವಣಿಗೆಯಲ್ಲಿ ಅರಮನೆಯನ್ನು ತಲುಪಿ, ಅಲ್ಲಿ ನೈಜಾಮರವರಿಂದ ದರ್ಬಾರಿನಲ್ಲಿ ಖಿಲ್ಲತ್ತುಗಳನ್ನು ಪಡೆದು ಪುನಃ ಹಾಗೇ ಮೆರವಣಿಗೆ ಮಾಡಿಕೊಂಡು ವಾಪಸು ಬರುತ್ತಾ ದಾರಿಯ ಉದ್ದಕ್ಕೂ ರೂಪಾಯಿಗಳನ್ನು ಬಡಬಗ್ಗರಿಗಾಗಿ ಚಲ್ಲುತ್ತಾರೆ.

ಉತ್ತರ ದೇಶದಲ್ಲಿ ಪ್ರಕಟವಾಗುವ ಬಿಹಾರಿ ಎಂಬ ಪತ್ರಿಕೆಗೆ ಮುಂಗಾ ಎಂಬ ಊರಿನಿಂದ ಒಬ್ಬ ಬಾತ್ಮಿದಾರನು ಬರೆದಿರುವುದೇನೆಂದರೆ—ಸೂರಜ್ ತಾಲ್ಲೂಕಿಗೆ ಸೇರಿದ ಪರ್ಥಪಟಿ ಎಂಬ ಗ್ರಾಮದಲ್ಲಿ ಒಬ್ಬನಿಗೆ ಇಬ್ಬರು ಹೆಂಡತಿಯರು; ಪ್ರತಿ ಒಬ್ಬ ಹೆಂಡತಿಯಲ್ಲೂ ಒಬ್ಬ ಗಂಡುಕೂಸು ಹುಟ್ಟಿವೆ. ಮೊದಲನೇ ಹೆಂಡತಿ ಸತ್ತುಹೋದಳು. ಎರಡನೇ ಹೆಂಡತಿಯು ತನ್ನ ಬಲಮಗನನ್ನು ಕತ್ತರಿಸಿ ಅಡಿಗೆಮಾಡಿ ಗಂಡನಿಗೆ ಬಡಿಸಿದಳು. ಊಟವಾದ ಮೇಲೆ ಆ ಎರಡನೇ ಹೆಂಡತಿಯ ಮಗು ತಂದೆಯ ಕೂಡ ತನ್ನ ತಾಯಿ ಆ ಮಗನನ್ನು ಕೊಂದುಹಾಕಿದಳೆಂದೂ ಅಡಿಗೆ ಮಾಡಿಟ್ಟಳೆಂದೂ ಹೇಳಿಬಿಟ್ಟನು. ಗಂಡನಿಗೆ ರೋಷಬಂದು ಹೆಂಡತಿಯನ್ನು ಕ್ರೂರವಾಗಿ ಹೊಡೆದು ಕೊಂದುಹಾಕಿ ಮನೆಯೊಳಗೆ ಬೆಂಕಿ ಒಟ್ಟಿ ಸುಟ್ಟುಬಿಟ್ಟನು. ಈಗ ಪೋಲೀಸಿನವರು ಅವನನ್ನು ಹಿಡಿದಿಟ್ಟುಕೊಂಡಿದಾರೆ; ಕೋರ್ಟಿನಲ್ಲಿ ಮೊಕದ್ದಮೆ ವಿಚಾರಣೆಯಾಗುತ್ತಿದೆ.

ಇಂಗ್ಲಿಷ್ ಗವರ್ನ್‌ಮೆಂಟಿನವರು ಯುದ್ಧವನ್ನು ಪ್ರಾರಂಭಿಸಿದರೆಂದು ಪ್ರಕಟಮಾಡಿದಾಕ್ಷಣ ಹಿಂದುಸ್ಥಾನದ ಅನೇಕ ಪಟ್ಟಣಗಳಲ್ಲಿ ಆಹಾರ ಧಾನ್ಯಾದಿಗಳನ್ನು ವರ್ತಕರು ಬಹಳ ತಗ್ಗುಮಾಡಿರುತ್ತಾರೆ. ಕಲ್ಕತ್ತೆಯಲ್ಲಿ ಇಂಗ್ಲಿಷ್ ವರ್ತಕಮಂಡಲಿಯವರು ಸಭೆ ನಡಿಸಿ, ವರ್ತಕರು ಆಹಾರದಿನಸಿಗಳ ಧಾರಣೆ ಹೆಚ್ಚಿಸದಂತೆ ತಡೆಯನ್ನು ಕಲ್ಪಿಸಬೇಕೆಂದು ಗವರ್ನ್‌ಮೆಂಟಿಗೆ ಅರಿಕೆಮಾಡಿಕೊಂಡಿದಾರೆ. ರಂಗೂನ್ ಪಟ್ಟಣದಲ್ಲಿ ಇದೇ ವಿಚಾರಕ್ಕಾಗಿ ಮ್ಯುನಿಸಿಪಲ್ ಕಮಿಷನರುಗಳು ಸೇರಿ ಮೀಟಿಂಗು ನಡಿಸಿ, ವರ್ತಕರು ಧಾರಣೆಯನ್ನು ಏರಿಸದಂತೆ ಏರ್ಪಾಡುಮಾಡಬೇಕೆಂದು ತೀರ್ಮಾನಮಾಡಿರುತ್ತಾರೆ. ಇತ್ತಲಾಗಿ ಬೊಂಬಾಯಿ ಗವರ್ನ್‌ಮೆಂಟಿನವರು ಇಸ್ತಿಹಾರು ಮೂಲಕ ಸಾರಿಸಿರುವುದೇನೆಂದರೆ—ಆಹಾರ ಧಾನ್ಯಗಳ ಧಾರಣೆಯನ್ನು ಹೆಚ್ಚಿಸುವಂಥಾ ವರ್ತಕರನ್ನು ಹಿಡಿದು ಶಿಕ್ಷೆಗೆ ಗುರಿಮಾಡುವೆವು. ಮುಖ್ಯರಾದ ಕೆಲವು ಪ್ರಜೆಗಳನ್ನು ಸೇರಿಸಿ ಒಂದು ಕಮಿಟಿ ಏರ್ಪಾಡುಮಾಡುತ್ತೇವೆ. ಈ ಕಮಿಟಿಯವರು ಧಾನ್ಯಗಳ ಧಾರಣೆಯನ್ನು ನಿರ್ಣಯಮಾಡುವರು. ಅವಶ್ಯವಿದ್ದರೆ ಹೊರಗಿನಿಂದ ಧಾನ್ಯಗಳನ್ನು ತರಿಸುತ್ತಾರೆ. ಈ ಪಟ್ಟಣದಲ್ಲಿರುವ ಧಾನ್ಯಗಳನ್ನು ಇತರ ಕಡೆಗಳಿಗೆ ಹೆಚ್ಚಾಗಿ ರವಾನೆಮಾಡದಂತೆ ತಡೆಯಲ್ಪಟ್ಟೀತು. ಪ್ರಜೆಗಳ ಮುಖಂಡರು ಸರ್ಕಾರದವರಿಗೆ ಈ ಭಾಗದಲ್ಲಿ ಸಹಾಯ ಮಾಡುತ್ತಾರೆಂದು ನಿರೀಕ್ಷಿಸಲ್ಪಟ್ಟಿದೆ ಎಂಬದಾಗಿ ಪ್ರಕಟಿಸಿದಾರೆ.

ಮೈಸೂರು ಗೆಜೆಟ್ ಸಂಗ್ರಹ.

ತೀರ್ಥಹಳ್ಳಿಯ ಸ್ಪೆಷಲ್ ಸಬ್ ರೆಜಿಸ್ಟ್ರಾರ್ ಮ॥ ಎಂ. ಕೃಷ್ಣಮೂರ್ತಿರಾಯರು ತೀರ್ಥಹಳ್ಳಿ ತಾಲ್ಲೂಕ್ ಬೋರ್ಡಿನ ವೈಸ್ ಪ್ರೆಸಿಡೆಂಟರಾಗಿ ಚುನಾಯಿಸಲ್ಪಟ್ಟದಾರೆ.

ನಾಗಮಂಗಲ ತಾಲ್ಲೂಕು ಚಿಣ್ಯಗ್ರಾಮವನ್ನು ಯೂನಿಯನ್ ಪಂಚಾಯತಿಯಾಗಿ ಮಾಡಿದೆ.

ತಾಲ್ಲೂಕು ಶಿರಸ್ತೆದಾರ್ ಮ॥ ಕೆ. ಸುಬ್ಬರಾಯ ಹಿರಿಯೂರು ತಾಲ್ಲೂಕ್ ಬೋರ್ಡಿನ ವೈಸ್ ಪ್ರೆಸಿಡೆಂಟರಾಗಿ ಚುನಾಯಿಸಲ್ಪಟ್ಟಿರುವುದು ಮಂಜೂರಾಗಿದೆ.

ರೆವ್. ಡಬ್ಲ್ಯು. ಪರ್ಸ್ಟನ್ ರವರನ್ನು ಗುಬ್ಬಿ ಮ್ಯುನಿಸಿಪಲ್ ಕೌನ್ಸಿಲ್ ಮೆಂಬರಾಗಿ ನೇಮಿಸಲಾಗಿದೆ.

ಅ॥ ಕಮಿಷನ್‌ರಾಗಿ ಬದಲಿ ನೇಮಿಸಲ್ಪಟ್ಟಿರುವ ಮ॥ ಎಸ್. ಚಕ್ರಪಾಣಿ ಅಯ್ಯಂಗಾರ್ರನ್ನು ಗವರ್ನ್‌ಮೆಂಟ್ ಅ॥ ಸೆಕ್ರೆಟರಿಯವರಾಗಿ ವರ್ಗಮಾಡಿದೆ.

ಮುಂದೆ ಹೇಳುವ ಸಬ್ ರಿಜಿಸ್ಟ್ರಾರ್ರುಗಳ ವರ್ಗಾವರ್ಗಿ ಹುಕುಂ ಮಾಡಿದೆ:—ಮ॥ ಗಳಾದ ಎಂ. ಶ್ರೀನಿವಾಸರಾಯರನ್ನು ನೆಲಮಂಗಲದಿಂದ ಚನ್ನಪಟ್ಟಣಕ್ಕೆ, ಸುಬ್ಬರಾವ್ ವಿ. ಬಾಪಟ್‌ರವರನ್ನು ಚನ್ನಪಟ್ಟಣದಿಂದ ಗೋರಿಬಿದನೂರಿಗೆ, ಎಂ. ವೆಂಗಯ್ಯಶೆಟ್ಟರು ಗೋರಿಬಿದನೂರಿನಿಂದ ಬೇಲೂರಿಗೆ, ಎಲ್. ಕೃಷ್ಣರಾಯರು ಬೇಲೂರಿನಿಂದ ನಂಜನಗೂಡಿಗೆ, ಎಚ್. ದ್ವೈಪಾಯನಾಚಾರ್ರು ನಂಜನಗೂಡಿನಿಂದ ಹೊಸಕೋಟೆಗೆ, ಸಿ. ಮಿರ್‌ಕಾಸಿಂ ಅಲಿಯವರು ಹೊಸಕೋಟೆಯಿಂದ ಕೃಷ್ಣರಾಜಪೇಟೆಗೆ, ವಿ. ಟಿ. ಪುಟ್ಟಣ್ಣನವರು ಕೃಷ್ಣರಾಜಪೇಟೆಯಿಂದ ಶಿವಮೊಗ್ಗೆಗೆ, ಎಂ. ಶ್ರೀನಿವಾಸಯ್ಯಂಗಾರ್ರು ಶಿವಮೊಗ್ಗೆಯಿಂದ ನೆಲಮಂಗಲಕ್ಕೆ; ಎ. ನರಸಿಂಗರಾಯರು ತೀರ್ಥಹಳ್ಳಿಯಿಂದ ಮಾಲೂರಿಗೆ (ಎಂ. ನಂಜುಂಡಯ್ಯನವರು ಪೆನ್ಷನ್ ಮೇಲೆ ನಿವೃತ್ತಿಹೊಂದುವರು), ಎಂ. ಎಸ್. ರಾಮದಾಸಪ್ಪನವರು ಚಿಂತಾಮಣಿಗೆ (ಬೇರೆ ಕೆಲಸದಿಂದ ವಾಪಸು ಬಂದ ಮೇಲೆ), ಎಸ್. ವೆಂಕಟರಂಗಯ್ಯಂಗಾರ್ರು ತೀರ್ಥಹಳ್ಳಿಗೆ (ರಜಾ ಪೂರೈಸಿದ ಮೇಲೆ).

ಸಾಗರದ ಸಬ್ ಡಿವಿಜನ್ ಅ॥ ಕಮಿಷನರ್ ಮ॥ ಎಸ್. ನಾರಾಯಣರಾಯರಿಗೆ ಅವರು ದರ್ಯಾಪ್ತಿಮಾಡುವ ಮೊಕದ್ದಮೆಗಳಲ್ಲಿ ಸಾಕ್ಷಿಗಳ ಕೈಫಿಯತ್ತನ್ನು ಸ್ವಹಸ್ತ ಇಂಗ್ಲಿಷಿನಲ್ಲಿ ಬರೆದುಕೊಳ್ಳುವ ಅಧಿಕಾರ ಕೊಟ್ಟಿದೆ.

ಬೆಂಗಳೂರು ಡಿವಿಜನ್ ಎಗ್ಸಿಕ್ಯುಟಿವ್ ಇಂಜನಿಯರ್ ಮಿ॥ ಜೆ. ಇ. ಎ. ಡಿಕ್ರೂಸ್ ರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.—ಅ॥ ಇಂಜನಿಯರ್ ಮ॥ ಸಿ. ವಿಜಯರಂಗಂ ನಾಯುಡುರವರು ರಜದಿಂದ ಕೂಡಲೆ ಬಂದು ಬೆಂಗಳೂರು ಡಿವಿಜನ್ ಛಾರ್ಜನ್ನು ವಹಿಸತಕ್ಕದ್ದು. ಇವರನ್ನು 4ನೇ ಕ್ಲಾಸ್ ಅ॥ ಎಗ್ಸಿಕ್ಯುಟಿವ್ ಇಂಜನಿಯರಾಗಿ ನೇಮಿಸಿದೆ.

ಸಬ್ ಅ॥ ಇಂಜನಿಯರ್ ಮ॥ ವಿ. ರಾಮಾನುಜಲು ನಾಯುಡುರವರನ್ನು ಹಾಸನ್ ಡಿವಿಜನ್‌ನಿಂದ ರೈಲ್ವೆ ಕಾಮಗಾರಿ ಇಲಾಖೆಗೆ ವರ್ಗಮಾಡಿದೆ.—ಸಬ್ ಅ॥ ಇಂಜನಿಯರ್ ಮ॥ ಪಿ. ರಾಜಗೋಪಾಲನ್‌ರವರನ್ನು ಕಾವೇರಿ ತಲಾವಿನ ಕಾಮಗಾರಿ ಡಿವಿಜನ್‌ನಿಂದ ಹಾಸನ್ ಡಿವಿಜನ್‌ಗೆ ವರ್ಗಮಾಡಿದೆ.

ಬಾತ್ಮಿದಾರರಿಗೆ ನೋಟೀಸ್.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜಾಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸವನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಜಾಗಾ ಕೊಡಲಾರೆವು.

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು. ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಅದೇ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ. ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ.

ಸತ್ಯಕಾಂಕ್ಷಿ, ಚಿತ್ರದುರ್ಗ:—ಪೋಲೀಸ್ ಮತ್ತು ಸ್ಯಾನಿಟರಿ ಇನ್ಸ್‌ಪೆಕ್ಟರುಗಳ ವಿಷಯದಲ್ಲಿ ನೀವು ಬರೆಯುವುದು ನಿಜವಾಗಿದ್ದಲ್ಲಿ ಮುಖಂಡರಾದ ಪ್ರಜೆಗಳು ಡೆಪ್ಯುಟಿ ಕಮಿಷನರಿಗೆ ತಿಳಿಸಿ ಅರ್ಜಿಕೊಟ್ಟು ರುಜುವಾತು ತೋರಿಸಿಕೊಡುವುದು ಕಷ್ಟವಾಗಿರಲಾರದು. ಜನರು ಸತ್ಯವಂತರಾಗಿ ಧೈರ್ಯದಿಂದ ವರ್ತಿಸುವುದನ್ನು ಕಲಿಯುವ ತನಕ ಕಷ್ಟನಷ್ಟಗಳನ್ನು ಅನುಭವಿಸಬೇಕಾಗಿದೆ.

ಗ್ರಾಮವಾಸಿ, ಮುದಿಗೆರೆ; ಗ್ರಾಮವಾಸಿ, ಹಿರಿಯೂರು; ಪುರವಾಸಿ, ಶ್ರೀರಂಗಪಟ್ಟಣ; ಚಂದಾದಾರ, ಗಂಡಸಿ; ಹಾಸನದ ಬಾತ್ಮಿ; ಪ್ರಜಾಹಿತಚಿಂತಕ, ಕಡಬ; ಪ್ರಜಾಹಿತಚಿಂತಕ, ಮುಳಬಾಗಲು:—ಈ ಬಾತ್ಮಿಗಳನ್ನು ಪ್ರಕಟಿಸಲಾರೆವೆಂದು ವಿಷಾದಿಸುತ್ತೇವೆ. ಬರೀ ಹೆಸರು, ಊರು ಮಾತ್ರ ಕಾಣಿಸಿ ಬಾತ್ಮಿಗಳನ್ನು ಬರೆಯುವರು. ಸಂಪೂರ್ಣವಾದ ವಿಳಾಸವನ್ನು ಬಾತ್ಮಿಗಳಲ್ಲಿ ಬರೆಯದಿದ್ದರೆ ನಾವು ಜಾಗಾ ಕೊಡಲಾರೆವು.

ಗೋ. ರಾ. ವೆಂಕಪ್ಪ ಗೌಡ, ಗೋವಿನಹಳ್ಳಿ:—ನೀವು ಹೇಳುವ ವಿಚಾರ ಕೋರ್ಟಿನಲ್ಲಿ ವಿಚಾರಣೆಯಾಗುತ್ತಿದೆ. ದೀರ್ಘಕಾಲವಾಗಿ ಕಷ್ಟನಷ್ಟಗಳಿಗೆ ಕಾರಣವಾಗಿದ್ದರೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ಅರ್ಜಿ ಬರೆದುಕೊಳ್ಳಬೇಕು. ಮೊಕದ್ದಮೆ ಇತ್ಯರ್ಥವಾಗುವುದಕ್ಕೆ ಮುಂಚೆ ಬಾತ್ಮಿ ಪ್ರಕಟಿಸಲಾರೆವು

—ಎಡಿ.]

ಕರೆಸ್‌ಪಾಂಡೆನ್ಸ್.

ವಿಷಯ ತಿಳಿಯಬೇಕು.

ಅಯ್ಯಾ,—ಹುಚ್ಚುನಾಯಿ ಕಡಿದಿದ್ದಕ್ಕೆ ಕೂನೂರಿಗೆ ಹೋಗಲು ಮೈಸೂರು ಸರ್ಕಾರದವರು ಮತ್ತು ರೈಲ್ವೆಯವರು ಸಹಾಯಮಾಡುತ್ತಾರೆಂದು ಪ್ರಕಟಿಸಿರುವದನ್ನು ಓದಿನೋಡಿದೆ. ಆದರೆ ಎಂಥಾವರಿಗೆ ಮೇಲ್ಕಂಡವರು ಸಹಾಯಮಾಡುತ್ತಾರೆ? ಕೇವಲ ಬಡವರಿಗೇನೋ? ಸಾಧಾರಣ ಜನರಿಗೂ ಸಹಾಯಮಾಡುತ್ತಾರೆಯೇ? ನಮ್ಮ ಸರ್ಕಾರದವರು ತಿಂಡಿ ಖರ್ಚನ್ನು ಮುನಸಿಪಾಲಿಟಿಯಿಂದ ಕೊಡಿಸುತ್ತಾರೆಯೇ? ರೈಲ್ವೆಯವರು ಫ್ರೀ ಟಿಕೆಟ್ ಕೊಡುತ್ತಾರೆಯೇ? ಮುನಸಿಪಾಲಿಟಿಯಿಂದ ತಿಂಡಿ ಖರ್ಚು ತೆಗೆದುಕೊಳ್ಳದೆ ಕೂನೂರಿಗೆ ಹೋಗುವವರಿಗೆ ಫ್ರೀ ಟಿಕೆಟ್ಟು ಸಿಕ್ಕುತ್ತಯೇ? ಫ್ರೀ ಟಿಕೆಟ್ಟು ಸಿಕ್ಕಬೇಕಾದರೆ ಊರಿನ ಯಾವ ದೊಡ್ಡ ಮನುಷ್ಯರ ಶಿಫಾರಸು ಚೀಟಿ ಬೇಕು? ಮೇಲ್ಕಂಡ ವಿಷಯಗಳನ್ನು ದಯವಿಟ್ಟು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸುವಿರೆಂದು ನಂಬಿರುತ್ತೇನೆ.

ಪ್ರಜಾ ಹಿತಚಿಂತಕ.

[ಸ್ಥಳದ ಸರ್ಕಾರಿ ವೈದ್ಯರಿಗೆ ರೋಗಿಯನ್ನು ತೋರಿಸಿದರೆ ಅವರು ಚೀಟಿ ಕೊಡುತ್ತಾರೆ. ಅದನ್ನು ರೈಲ್ವೆ ಸ್ಟೇಷನ್ ಮಾಸ್ಟರಿಗೆ ತೋರಿಸಿದರೆ ಕೂನೂರು ಆಸ್ಪತ್ರೆಗೆ ಹೋಗಲು ರೋಗಿಗೂ ಅವನ ಕೂಡ ಹೋಗುವ ಒಬ್ಬನಿಗೂ ಫ್ರೀ ಟಿಕೆಟ್ಟು ಕೊಡುವರು. ಕೂನೂರಿನ ಆಸ್ಪತ್ರೆಯೊಳಗೆ ರೋಗಿಯು ಹೆಂಗಸು ಅಥವಾ ಸಣ್ಣ ವಯಸ್ಸಿನವನಾಗಿದ್ದರೆ ರೋಗಿಗೂ ಅವನ ಸಂಗಡ ಹೋದವರಿಗೂ ಕಲೆಗೆ ದಿನಕ್ಕೆ 6 ಆಣೆಯಂತೆ ಭತ್ಯವನ್ನು ಕೊಡುವರು.—ಎಡಿ.]

ಸರ್ಕಾರವೂ ಗ್ರಾಮವಾಸಿಗಳೂ.

ಅಯ್ಯಾ,—ಈಚೆಗೆ ನಮ್ಮ ಸರ್ಕಾರದವರು ಪ್ರಜೆಗಳನ್ನು ಅಭಿವೃದ್ಧಿಗೆ ತರಬೇಕೆಂದು ಎಲ್ಲಾ ಭಾಗದಲ್ಲೂ ಬಹಳ ಏರ್ಪಾಡು ಮಾಡುತ್ತಿದಾರೆ. ಈ ಕೀರ್ತಿಯು ನಮ್ಮ ದಿವಾನ್‌ರಾದ ಶ್ರೀಮಾನ್ ಎಂ. ವಿಶ್ವೇಶ್ವರಯ್ಯನವರಿಗೇನೇ ಸೇರತಕ್ಕದ್ದಾಗಿರುತ್ತೆ. ಆದರೆ ಹಾಲಿ ಸರ್ಕಾರದಿಂದ ನಿಯಮಿತವಾಗಿರುವ ಕಟ್ಟಳೆಗಳೂ, ಅಪ್ಪಣೆ ಆಗುವ ಹುಕುಂಗಳೂ ಸರಿಯಾಗಿ ಜಾರಿಗೆ ಬಂದಿರುತ್ತವೆಯೋ? ಹಾಗೆ ಬಾರದೇ ಇದ್ದರೆ ಇದಕ್ಕೆ ಜನಗಳು ಜವಾಬ್ದಾರರೇ? ಅಥವಾ ಸರ್ಕಾರದ ನೌಕರರು ಮೇಲ್ಪಟ್ಟವುಗಳಿಗೆ ಜಾಗಾ ಕೊಡಲಾರದೆ ಜನಗಳ ಮೇಲೆ ಹಾಕುತ್ತಿದಾರೆಯೋ? ಇದನ್ನು ಪರಿಶೋಧಿಸಿ ದರ್ಪದಿಂದ ಕ್ರಮಪಡಿಸಿ ಸರ್ಕಾರದವರಿಂದ ನಿಯಮಿತವಾದ ಕಟ್ಟಳೆ ಕಾನೂನ್‌ಗಳು ಆಯಾಯ ಕಡೆ ಜಾರಿಗೆ ಬರುವಂತೆ ಮಾಡಬೇಕಾಗಿರುತ್ತದೆ. ಇದರಿಂದ ಸರ್ಕಾರಕ್ಕೆ ಕೀರ್ತಿಯೂ ಪ್ರಜೆಗಳಿಗೆ ವೃದ್ಧಿಯೂ ಉಂಟಾಗುತ್ತೆ. ಮೈಸೂರಿನಲ್ಲಿ ಅನೇಕವಾಗಿ ದಿನಚರಿ ಕಟ್ಟಳೆ ಕಾನೂನ್‌ಗಳು ನಿಯಮಿಸಲ್ಪಟ್ಟು ಜಾರಿಗೆ ಮಾತ್ರ ಬಾರದೇ ಬುಕ್ಕುಗಳಲ್ಲಿ ತುಂಬುತ್ತಾ ಇವೆ.

ಇದಕ್ಕೆ ಜವಾಬ್ ಕೇಳಿದರೆ ಹೆಚ್ಚು ಸಂಬಳ ತೆಗೆದುಕೊಳ್ಳುವ ಅನೇಕರು ಜನಗಳ ಮೇಲೂ ಗ್ರಾಮವಾಸಿಗಳ ಮೇಲೂ ತಪ್ಪನ್ನು ಆಪಾದಿಸಿ ಅವರುಗಳಿಗೆ ತಿಳುವಳಿಕೆ ಇಲ್ಲದ್ದರಿಂದ ಕಟ್ಟಳೆಗಳು ಜಾರಿಗೆ ಬರಲು ಸಾವಕಾಶವಾಗುತ್ತೆಂದು ಹೇಳುತ್ತಾರೆ. ನಮ್ಮ ದೇಶದಲ್ಲಿ ವಿದ್ಯಾಭ್ಯಾಸ ಕಮ್ಮಿಯಾಗಿರುವದು ನಿಜವಾಗಿದ್ದಾಗ್ಯೂ ಅವಶ್ಯವಾದ ನಿಯಮಗಳನ್ನು ತಿರಸ್ಕರಿಸುವಷ್ಟು ಕಮ್ಮಿಯಾಗಿರಲಾರದು. ಸರ್ಕಾರದವರು ಗ್ರಾಮಾಭಿವೃದ್ಧಿ ಕಟ್ಟಳೆಗಳನ್ನು ಪ್ರಕಟಿಸಿರುತ್ತಾರಷ್ಟೆ. ಅವುಗಳಂತೆ ನಡೆಯಲು ಗ್ರಾಮವಾಸಿಗಳಿಗೆ ನ್ಯಾಯವಾದ ಸಹಾಯವನ್ನು ಮಾಡಿಕೊಡುತ್ತಿದಾರೇನೋ ತಿಳಿಯಬೇಕಾಗಿದೆ.

ಗ್ರಾಮವಾಸಿ.

ಕಪಟ ವೈದ್ಯರಿಂದಾದ ಮೋಸ.

ಅಯ್ಯಾ,—ಬೇಲೂರು ತಾಲ್ಲೂಕು ಜೋಡಿ ಘಟ್ಟದಹಳ್ಳಿ ಪ್ರಾಂತ್ಯ ಸುಮಾರು 15 ದಿವಸದ ಹಿಂದೆ ಘಟ್ಟದತಗ್ಗಿನ ಸೀಮೆಯ ನಾಲ್ಕು ಜನ ಯೌವನಸ್ಥರು ಹಳೆಬೀಡಿಗೆ ಬಂದು ಅಲ್ಲಿನ ಸ್ಕೂಲ್ ಎದುರಿಗೆ ಒಂದು ಮನೆಯಲ್ಲಿ ಇಳಿದುಕೊಂಡು ವೈದ್ಯಭಾಗದಲ್ಲಿ ತಾವು ನಿಪುಣರು ಎಂದು ಅಲ್ಲಿನ ಅಂಗಡಿ ಬ್ರಹ್ಮಯ್ಯನವರಿಗೂ ಇನ್ನು ಕೆಲವು ಜನಗಳಿಗೂ ಔಷಧಿಕೊಡುತ್ತಾ ಇದ್ದ ಸಂಗತಿಯು ಪಟ್ವಾರಿ ವಗೈರೆ ಅನೇಕ ಗ್ರಾಮಗಳ ಜನಗಳಿಗೆ ತಿಳಿದು ಈ ಕುಟಿಲ ವೈದ್ಯರನ್ನು ಕರೆದುಕೊಂಡು ಹೋಗಿ ರೋಗಿಗಳನ್ನು ತೋರಿಸಿದರು. ಎಂಥಾ ರೋಗಕ್ಕಾದರೂ ಔಷಧಿಕೊಟ್ಟು 8-10 ದಿವಸಗಳೊಳಗಾಗಿ ಗುಣಮಾಡುತ್ತೇವೆಂದು ಮುಂಗಡವಾಗಿ ಔಷಧಿ ಖರ್ಚಿಗೆ 10-20 ರೂಪಾಯಿಗಳನ್ನು ತೆಗೆದುಕೊಂಡು ಗ್ರಾಮಗಳಿಗೆ ಹೋಗಿಬರುತ್ತಾ ಇದ್ದರು. ಈ ಸಂಗತಿ ನಮ್ಮ ಊರಿನ ಸೀತಾರಾಮಯ್ಯನವರಿಗೆ ತಿಳಿದು ತಮ್ಮ ಕುಟುಂಬದ ಕಾಯಿಲೆ ವಾಸಿಮಾಡಿಸಬೇಕೆಂದು ಆತ್ಮತುರದಿಂದ ಕರೆದುಕೊಂಡು ಬಂದು ತೋರಿಸಿ ಅವರಿಂದ 15 ರೂಪಾಯಿ ತೆಗೆದುಕೊಂಡು ಎರಡು ದಿನ ಬಂದುನೋಡಿ ಎಂಥಾದ್ದೋ ಒಂದು ಎಣ್ಣೆಯನ್ನು ಕೊಟ್ಟು ಇದನ್ನು ಹೊಟ್ಟೆಗೆ ಕೊಡುತ್ತಾ ಇರಿ, ಮೂರು ದಿವಸದಲ್ಲಿ ಬರುತ್ತೇವೆ ಎಂದು ಹೇಳಿದರು. ಈ ಊರ ಗಾಣಿಗನಂಜನ ಎತ್ತಿನ ಗಾಲು ಸವಾರಿ ಕೊಡುವದಾಗಿ ಹೇಳಿ ಐದು ರೂಪಾಯಿ ತೆಗೆದುಕೊಂಡು ಹಳೆಬೀಡಿಗೆ ಹೋದರು. ಈ ನಾಲ್ಕು ಜನ ಕಪಟ ವೈದ್ಯರು ನಿನ್ನೆ ಬೆಳಗ್ಗೆ ಅಲ್ಲಿಂದ ಎಲ್ಲೋ ಪರಾರಿಯಾದರೆಂದು ತಿಳಿಯಬಂದಿತು. ಇವರಿಗೆ ಸುಮಾರು 200 ರೂಪಾಯಿ ವರೆಗೆ ಸಿಕ್ಕಿರುವಂತೆ ತಿಳಿಯುತ್ತೆ. ಈ ಜನಗಳು ಪರಾರಿಯಾದ ಪಂಡಿತರನ್ನು ಹುಡುಕುತ್ತಾ ಇದಾರೆ.

ನಾಲ್ಕು ಜನರು ತುಳುವು, ತಮಿಳು ಭಾಷೆಯಾಡುತ್ತಾರೆ. ಕನ್ನಡವೂ ಬರುತ್ತೆ. ಒಳ್ಳೇ ಸ್ಫುರದ್ರೂಪಿಗಳು. ತಮಿಳು ಭಾಷೆ ಗ್ರಂಥಗಳನ್ನು ಹೇಳಿ ಔಷಧಿ ಹೆಸರುಗಳನ್ನು ಹೇಳುತ್ತಾರೆ. ಈ ಜನಗಳಿಗೆ ಮೋಸಹೋಗಿ ಔಷಧಿ ತೆಗೆದುಕೊಳ್ಳುತ್ತೇವೆಂದು ರೂಪಾಯಿ ಕೊಟ್ಟು ನಂತರ ವ್ಯಥೆಪಡಬಾರದಾಗಿ ಸರ್ವಜನರಿಗೂ ತಿಳಿಸಿರುವೆವು. ಈ ಕಪಟಪಂಡಿತರನ್ನು ಸರ್ಕಾರದವರು ಪತ್ತೆ ಮಾಡಿಸಿ ಪ್ರಜೆಗಳಿಗೆ ಅನನುಕೂಲವಾಗದ ಹಾಗೆ ಮಾಡುವ ಏರ್ಪಾಡು ಇಡಬೇಕಾಗಿ ಪ್ರಾರ್ಥಿಸುತ್ತೇವೆ. ನಮ್ಮ ಸರ್ಕಾರದವರು ಜನಗಳ ಉಪಯೋಗಕ್ಕಾಗಿ ವೈದ್ಯಶಾಲೆಗಳನ್ನು ಕಟ್ಟಿಸಿಕೊಟ್ಟಿರುತ್ತಾರೆ. ಅಲ್ಲಿ ಔಷಧಗಳನ್ನು ಪಡೆದು ರೋಗ ನಿವಾರಣೆ ಮಾಡಿಕೊಂಡು ದುಡ್ಡು ಖರ್ಚಿಲ್ಲದೆ ಸುಖವಾಗಿರದೆ ಇಂಥಾ ವೈದ್ಯರ ಮರುಳುಮಾತುಗಳಿಗೆ ಸಿಕ್ಕಿ ಭ್ರಾಂತಿಹೊಂದಿ ವ್ಯಥೆಪಡುವದು ಉಚಿತವಲ್ಲ.

ಘಟ್ಟದಹಳ್ಳಿ. ಜಿ. ರಾಮಯ್ಯ, ಜೋಡಿದಾರ್.

ಸರ್ದಾರ್ ಎಂ. ಕಾಂತರಾಜೆ ಅರಸಿನವರು.

ಈ ಸಲ ನಮ್ಮ ಚಕ್ರವರ್ತಿ ಸಾರ್ವಭೌಮರವರು ತಮ್ಮ ಜನ್ಮೋತ್ಸವದ ದಿನ ನಮ್ಮ ಸಂಸ್ಥಾನದ ಎರಡನೇ ಕೌನ್ಸಿಲರಾದ ಸರ್ದಾರ್ ಎಂ. ಕಾಂತರಾಜೆ ಅರಸಿನವರಿಗೆ ಸಿ. ಎಸ್. ಐ. ಎಂಬ ಬಿರುದನ್ನು ದಯಪಾಲಿಸಿದರು. ಈ ಸಂತೋಷವು ಮೈಸೂರು ಪಟ್ಟಣದಲ್ಲಿ ಕಳೆದ ವಾರ ಮೂರು ಕಡೆ ಪ್ರಕಾಶ ವಾಯಿತು. ಕಳೆದ ಶುಕ್ರವಾರ ರಾತ್ರಿ ಅರಸುಗಳ ಕ್ಲಬ್ಬಿನ ಮೆಂಬರುಗಳು ಸರ್ದಾರ್ ಕಾಂತರಾಜೆ ಅರಸಿನವರಿಗೆ ಕ್ಲಬ್ಬಿನಲ್ಲಿ ದಿವ್ಯವಾದ ಔತಣವನ್ನು ಮಾಡಿ, ಭೋಜನಾನಂತರ ಸಂಗೀತವನ್ನು ನಡಿಸಿ ಅಡ್ರೆಸ್ ಒಪ್ಪಿಸಿ ಅವರಿಗೆ ಬಿರುದು ಬಂದದ್ದು ಅರಸುಮಂಡಲಿಗೆಲ್ಲಾ ಮಹದಾನಂದವಾಯಿತೆಂದು ತಿಳಿಸಿದರು. ಮರುದಿನ (ತಾ. ೮ ನೇ ಶನಿವಾರ) ಪ್ರಜೆಗಳು ಟೌನ್ ಹಾಲ್ ಮಂದಿರದಲ್ಲಿ ಸಭೆಸೇರಿ ಸರ್ದಾರರನ್ನು ಕರಸಿಕೊಂಡು ಬಹಳ ವೈಭವ್ಯವಾದ ಸಂತೋಷ ಕೂಟವನ್ನು ನಡಿಸಿದರು. ಸಂಗೀತವೂ ಹಾಡುಗಾರಿಕೆಯೂ ಜರಿದ ಮೇಲೆ ಶ್ರೀಮಂತ ವರ್ಧಮಾನಯ್ಯನವರೂ, ಮ|| ಅಂಬಳೆ ಅಣ್ಣಯ್ಯಪಂಡಿತರೂ, ಮೌಲ್ವಿ ದರ್ವೇಶ್ ಪೀರ್ ಸಾಹೇಬರೂ ಸರ್ದಾರ್ ಕಾಂತರಾಜೆ ಅರಸಿನವರ ಗುಣಕಥನ ವನ್ನು ಮಾಡಿ, ಅವರಿಗೆ ದೊರಕಿದ ಬಿರುದು ಸಕಲ ಪ್ರಜೆಗಳಿಗೂ ಮಹದಾನಂದ ವನ್ನುಂಟುಮಾಡಿತೆ ಎಂದು ಅರಿಕೆ ಮಾಡಿದರು. ಮ|| ವರದಾಚಾರ್ಯರ ನಾಟಕದ ಕಂಪನಿಯವರು ಒಂದೆರಡು ಸೀನು ನಾಟಕವನ್ನು ಅಭಿನಯಿಸಿ ತಮ್ಮ ಸಂತೋಷವನ್ನೂ ಕೃತಜ್ಞತೆಯನ್ನೂ ಪ್ರಕಾಶಪಡಿಸಿದರು. ಮರುದಿನ (ತಾ. 9 ನೇ ಭಾನುವಾರ) ಸಾಯಂಕಾಲ ರಾಜಧಾನಿಯ ಕಾಸ್ಮಾಪಾಲಿಟನ್ ಕ್ಲಬ್ಬಿನ ಮೆಂಬರುಗಳೆಲ್ಲಾ ಸೇರಿ ಸರ್ದಾರರನ್ನು ಕರಸಿಕೊಂಡು ಅವರಿಗೆ ಒಂದು ಸಂತೋಷ ಕೂಟವನ್ನು ನಡಿಸಿದರು. ಫಲಾಹಾರವೂ, ವಿನೋದಗಳೂ, ಸಂಗೀತವೂ, ಭಾರತ ವಾಚನವೂ ನಡೆದ ಮೇಲೆ ಮೆಂಬರುಗಳ ಪರವಾಗಿ ಮ|| ಟಿ. ಲಕ್ಷ್ಮಣರಾಯರು ಸರ್ದಾರರಿಗೆ ಒಂದು ಅಡ್ರೆಸ್ಸನ್ನು ಓದಿ ಅವರ ಗುಣಕಥನವನ್ನು ಮಾಡಿದರು. ಸರ್ದಾರರು ಸಮಯೋಚಿತವಾದ ವಾಕ್ಯಗಳಿಂದ ತಮ್ಮ ಸಂತೋಷವನ್ನೂ ಕೃತಜ್ಞತೆಯನ್ನೂ ಪ್ರಕಾಶಪಡಿಸಿದರು. ಈ ಕೂಟಗಳೆಲ್ಲಾ ಬಹು ವಿಶದತೆ ಯಿಂದಲೂ, ಅಚ್ಚುಕಟ್ಟಾಗಿಯೂ, ಸಂತೋಷಪ್ರದವಾಗಿಯೂ ನೆರವೇರಿ, ಅವು ಗಳನ್ನು ಏರ್ಪಡಿಸಿ ನಡಿಸಿದ ಮುಖಂಡರ ಕಾರ್ಯದಕ್ಷತೆಯನ್ನೂ ಉತ್ಸಾಹ ವನ್ನೂ ಪ್ರಕಾಶಪಡಿಸಿರುತ್ತವೆ. ಈ ಸಂತೋಷದ ನಿಮಿತ್ತ ಶನಿವಾರ ಸಾಯಂಕಾಲ ಟೌನ್ ಹಾಲ್ ಮಂದಿರದಲ್ಲಿ ದಿವ್ಯವಾದ ದೀಪೋತ್ಸವವು ನಡಿಸಲಾಯಿತು.

ಮಧುರೆ ಜುನ್ನಡಿ ಅಂಚಿನ ಸೀರೆ ಅವ್ವಲ್ ರಖಂ ರೂ. 1-14-0.

ಇದು 18 ಮೊಳ ಧಾರಾಳವಾಗಿದೆ. ಉಡಲು ಲಾಯಖಾದದ್ದು. ಬಣ್ಣ ಜೋಗದು. ಸುಂದರವಾದ ಸೆರಗು. ಫೋಟೋ ಪ್ರಕಟಣೆಗಳ ಪೆಸೆಯಿಂದ ಈ ಭಾರೀ ಕ್ರಯದ ಸೀರೆಯನ್ನು ಅಸಲು ಬೆಲೆಗೆ ತಗ್ಗಿಸಿ ಮಾರುತ್ತೇವೆ. ಜಾಗ್ರತೆ ತರಿಸುವವರಿಗೆ ಮಾತ್ರ ಈ ಕ್ರಯಕ್ಕೆ ದೊರೆಯುತ್ತೆ.

[151-3] ವಿಳಾಸ—ಎಸ್. ನರಸಿಂಹನಾಯುಡು, ಟ್ರಿಪ್ಲಿಕೇನ್, ಮದರಾಸ್.

ಮೇಲಾದ ಜರ್ದಾ ರೇಷ್ಮೆ ಪಂಚೆಗಳು.

ಒಳ್ಳೇ ಸಮಯ ! ಸಾವಿರಗಟ್ಲೆ ಖರ್ಚಾಗುತ್ತಿದೆ !! ನಂತರ ದೊರೆಯಲಾರದು !!!

ಅನೇಕ ಪಂಚೆಗಳು ದಿನವೂ ಖರ್ಚಾಗುತ್ತಾ ಇರುವುದರಿಂದ ಪ್ರಕೃತ ಬೆಲೆಯು ತಗ್ಗಿಸಿರುತ್ತೇವೆ. ವಾಚಕರೇ ! ಶೃಂಗಾರವನ್ನೂ ನಾಗರಿಕತೆಯನ್ನೂ

ಹೊಂದಿರುವ ಮೇಲಾದ ಅಸಲ್ ರೇಷ್ಮೆ ಪಂಚೆಗಳು ಹಬ್ಬಗಳ ಕಾಲದಲ್ಲಿ ಹೊದಿಯಲು ಅನೇಕ ಪಂಚೆಗಳನ್ನು ತರಿಸಿಕೊಂಡಿರುವದರಿಂದ ಮುಕ್ಕಾಲು ಪಾಲು ಸರಕು ಖರ್ಚಾಗಿಹೋಗಿರುತ್ತೆ, ಈಗ ಸ್ವಲ್ಪವೇ ಉಳಿದಿರುತ್ತೆ. ಈ ಪಂಚೆಗಳು ಸ್ತ್ರೀ ಪುರುಷರು ಬಾಲಿಕೆಗಳು ಧರಿಸಿಕೊಳ್ಳಬಹುದು. ಅಪೂರ್ವವಾದ ಪಂಚೆಗಳು. ಇದರಲ್ಲಿ ಕೆಂಪು, ಹಸರು, ಎಲೆಹಸರು, ರೋಜಾ, ಮೇಘವರ್ಣ, ಇತ್ಯಾದಿ ರಂಗುಗಳುಂಟು. ಬಹಳ ಉತ್ಕೃಷ್ಟವಾದ ಪಂಚೆಗಳು. ಈ ಖರೀದಿಗೆ ನಮ್ಮಲ್ಲಿ ಅಲ್ಲದೆ ಮತ್ತೆ ಯಾರಲ್ಲಿಯೂ ದೊರೆಯಲಾರದು.

5½ ಮೊಳ ಉದ್ದ, 2½ ಮೊಳ ಅಗಲ ಇರುವ ಪಂಚೆ ಒಂದಕ್ಕೆ ರೂ. 2. ಪಂಚೆ 1 ಕ್ಕೆ ಟಪಾಲು ಖರ್ಚು 4 ಆಣೆ. ಎರಡು ಪಂಚೆಗಳನ್ನು ಒಂದೇ ಸಲ ತರಿಸಿಕೊಂಡರೆ ಟಪಾಲು ಖರ್ಚು ಇನಾಂ.

ನಮ್ಮ ವಿಳಾಸ—ಎನ್. ಎಂ. ಸ್ವಾಮಿ ಅಂಡು ಕಂಪೆನಿ,
[100-14] ನಂ. 44, ನಂಬುಳಯ್ಯರ್ ಬೀದಿ, ಮದರಾಸು.

ನರೆಕೂದಲಿಟ್ಟುಕೊಂಡು

ಮುದುಕರಾಗಿ ಕಾಣುವುದೇಕೆ?

ದರ್ಬಾರ್ ಕೂದಲು ರಂಗು

ಒಂದು ಸಲ ಹಚ್ಚಿದರೆ 20 ವರುಷದ ಪ್ರಾಯಸಮರ್ಥರಂತೆ ಕಾಣುತ್ತೀರಿ. ಈ ರಂಗು ಹಚ್ಚಿಕೊಂಡರೆ ಕೂದಲು ಅಚ್ಚ ಕಪ್ಪಾಗಿ ಹೊಳೆಯುತ್ತೆ. ಈಗ

ಮಾರಿಕೆಗೆ ಬಂದಿರುವ ಅಲ್ಪತರದ ಕೂದಲಿಗೆ ಹಚ್ಚುವ ಬಣ್ಣಗಳೂ ರಂಗುಗಳೂ ತುಂಬಾ ಕೀಳುಜಾತಿಯವು; ಹಚ್ಚಿದ ಮೇಲೆ ಕೂದಲು ಕೆಂಚುತಿರುಗಿ ಅಸಹ್ಯವಾಗಿ ಕಾಣುತ್ತದೆ. ನಮ್ಮ "ದರ್ಬಾರ್ ಕೂದಲ ರಂಗು" ಅಂಥಾದ್ದಲ್ಲ; ಬಹು ಮೇಲಾದದ್ದು. ಒಂದಾವರ್ತಿ ತರಿಸಿ ಪರೀಕ್ಷೆ ಮಾಡಿದರೆ ನೀವೇ ಸಂತೋಷಪಡುವಿರಿ. ಕ್ರಯ ಬುರುಸು ಸಮೇತ ಬಾಟ್ಲು ಒಂದಕ್ಕೆ ರೂಪಾಯಿ 1; ಅಂಚೆ ಹಾಸಲು 4 ಆಣೆ. [163-3]

ವಿಳಾಸ—ವಿ. ಎ. ಎಸ್.
ಸಾಣೆ, 3, ಇರುಳಪ್ಪನ್
ಬೀದಿ, ಮದರಾಸ್.

English Papers with Full Answers:—Price for 1 set Rs. 1-4-0, 2 sets, Rs. 2-4-0; 3, Rs. 3-0-0; 4, Rs. 3-12-0; 5, Rs. 4-8-0; 6, Rs. 5-4-0; 9, Rs. 7-4-0; 12, Rs. 9; 25, Rs. 16; 50, Rs. 30; 100 sets, Rs. 50. (in advance).

Further concession, this week only:—a copy of Full Notes on L.S.E. Texts (5 As.); or spelling Book (4 As.)

Apply sharp to,— **M. N. SITARAMA RAO,**
[178-1] **Krishnaraja Mohalla,** *MYSORE.*

ಔಷಧಿ ತೆಗೆದುಕೊಂಡು ಗುಣವಾಗುವದಕ್ಕಿಂತಲೂ
ತಕ್ಕ ಕ್ರಮದಲ್ಲಿರುವದು ಉತ್ತಮ.

SCOTT'S EMULSION. 6-33

(ಸ್ಕಾಟ್ಸ್ ಇಮಲ್ಷನ್)

ಭಟ್ಟ ಶರೀರವುಳ್ಳವರ್‍ಯಾರೂ ಪ್ಲೇಗ್, ಮಹಾಮಾರಿರೋಗ, ವಾಂತಿಭೇದಿ ಅಥವಾ ಶ್ವಾಸಕೋಶದ ರೋಗಗಳ ಭಯಕ್ಕೆ ಒಳಪಡುವ ಅಗತ್ಯವಿಲ್ಲ.

Always get the Emulsion with this mark—the Fishman the mark of the "Scott" process!

ರೋಗವು ಬಲಹೀನರನ್ನೂ ದುರ್ಬಲರನ್ನೂ ಬೇಗನೆ ತಗಲಿ ಹಿಡಿಯುತ್ತದೆ.

ಅಸ್ವಸ್ಥವನ್ನು ದೂರ ಹೋಗಲಾಡಿಸಿ, ಶರೀರದಲ್ಲಿರುವ ಬಲಹೀನ ಭಾಗಗಳನ್ನು ಬಲಪ್ರಾಣಗೊಳಿಸಿ, ಸಂಪೂರ್ಣ ಸೌಖ್ಯವನ್ನು ಉಂಟುಮಾಡುತ್ತದೆ.

ಕೈಸೋಕದೆ ತಯಾರಾದದ್ದು.

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ.

ಎಲ್ಲಾ ಔಷಧಿ ವ್ಯಾಪಾರಗಾರರಲ್ಲೂ ಮಾರಾಟವಾಗುತ್ತದೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್.

ಹಾರಮೋನಿಯಂ ಕಲಿಯುವ ಪುಸ್ತಕ. ಕ್ರಯ 6 ಆಣೆ.

ಇದು ಪಂಡಿತ ವಿಶ್ವದಾಸರವರಿಂದ ಪ್ರಚುರಿಸಲ್ಪಟ್ಟಿರುತ್ತೆ. ಇದರಲ್ಲಿ 40 ಪಾರಸಿ ಹಾಡುಗಳು ಹಾರಮೋನಿಯಂ ನುಡಿಸುವ ವಿಧಾನ, ಆರೋಹಣ ಅವರೋಹಣಗಳು, ಮತ್ತು ಸೌಖ್ಯಗುರ್ತುಗಳು ತಿಳುಹಿಸಲ್ಪಟ್ಟಿರುತ್ತೆ. ಸ್ವಲ್ಪ ಇಂಗ್ಲೀಯ ಭಾಷಾ ಪರಿಶ್ರಮವಿರುವವರೆಲ್ಲರೂ ಈ ಗ್ರಂಥದ ಸಹಾಯದಿಂದ ಹಾರಮೋನಿಯಂ ನುಡಿಸುವದನ್ನೂ ಹಾಡುವದನ್ನೂ ಕಲಿಯಬಹುದು.

ತಂಜಾವೂರು ಗೆಜ್ಜೆ ಅಡ್ಡಿಗೆ ಕ್ರಯ 5 ಆಣೆ.

ಇದು ಕೆನಡಿಯನ್ ಗೋಲ್ಡ್ ನಂತಹ ಲೋಹದಿಂದ ಗಟ್ಟಿ ಗೆಜ್ಜೆಗಳನ್ನು ತಯಾರಿಸಿ ಸುಂದರವಾಗಿ ಕೊಳ್ಳಿಗಳು ಮತ್ತು ತುರ್ತುವುಗಳು ಇಟ್ಟು ಎಲೆಕ್ಟ್ರಿಕ್ ಶಕ್ತಿಯಿಂದ ಗಟ್ಟಿಯಾದ ಚಿನ್ನವನ್ನು ಹಾಕಿ ನೋಡುವವರಿಗೆ ಬಹು ಆಶ್ಚರ್ಯವಾಗುವ ಹಾಗೆ ಸ್ವಲ್ಪ ಕ್ರಯವನ್ನಿಟ್ಟು ಅಡ್ಡಿಗೆಯನ್ನು ತಯಾರಿಸಿರುತ್ತೇವೆ. ಇದು ಗಾಜಿನ ಮಣಿಗಳಲ್ಲ. ನಿಜವಾದ ಗಟ್ಟಿ ಗೆಜ್ಜೆಗಳು. ಸ್ತ್ರೀಯರೂ ಹುಡುಗಿಯರೂ ಕೊರಳಿಗೆ ಧರಿಸಿಕೊಳ್ಳುವದಕ್ಕೆ ಲಾಯಖಾದದ್ದು. [151-3]

ವಿಳಾಸ—ಎಸ್. ನರಸಿಂಹನಾಯುಡು, ಟ್ರಿಪ್ಲಿಕೇನ್, ಮದರಾಸ್.

ಪ್ರೊಫೆಸರ್ ಗಜ್ಜರರವರ

ಗುಣಕಂಡ ಪ್ರಖ್ಯಾತವಾದ ಔಷಧಗಳು.

ವ್ಯರ್ಥವಾದ ಔಷಧಗಳನ್ನು ಉಪಯೋಗಿಸಿ ಪ್ರಾಣಾಪಾಯಕ್ಕೆ ಗುರಿಯಾಗುವುದೇಕೆ? ವಿವೇಕದಿಂದ ತಯಾರ್ಮಾಡಿರುವ ನಮ್ಮ ಔಷಧಗಳನ್ನು ಸೇವನೆ ಮಾಡಬಾರದೇ ?

ಟಾನಿಕ್ ಸೋಲ್ಯೂಷನ್.—ಇದರಲ್ಲಿ ಗ್ಲಿಸರಿನೊಫೇಟ್ಸ್ ಎಂಬ ಅಮೂಲ್ಯ ಪದಾರ್ಥಗಳನ್ನು ಹಾಕಿ ತಯಾರ್ಮಾಡಿದೆ. ಇದು ಬೇಗನೆ ಶರೀರಕ್ಕೆ ಸೇರಿ ಹೋಗುತ್ತೆ. ಆರೋಗ್ಯವನ್ನೂ ಚಟುವಟಿಕೆಯನ್ನೂ ಶಕ್ತಿಯನ್ನೂ ವೃದ್ಧಿಮಾಡುವುದು. ನರಗಳ ದುರ್ಬಲವನ್ನು ಹೋಗಲಾಡಿಸುವುದರಲ್ಲಿ ಇದು ಬಹಳ ಶ್ರೇಷ್ಠವಾದ ಔಷಧ. ಕ್ರಯ ಶೀಸೆಗೆ 3 ರೂಪಾಯಿ, ಮತ್ತು ರೂ. 1-2-0.

ರಕ್ತಶುದ್ಧಿಗೆ ಮಹೌಷಧ.—ಇದು ರಕ್ತವನ್ನು ದೇಹದ ಎಲ್ಲಾ ಭಾಗಗಳನ್ನು ಶುದ್ಧಿಮಾಡುತ್ತೆ. ಬಹಳ ಚೆನ್ನಾಗಿ ಗುಣಕಂಡ ಔಷಧ. ಕ್ರಯ ಶೀಸೆಗೆ 1 ರೂಪಾಯಿ.

ಲಿವರ್ ಸೊಲ್ಯೂಷನ್.—ಪಿತ್ತಕೋಶದ ಮೇಲೆ ಇದು ಬಹಳ ಚೆನ್ನಾಗಿ ಕೆಲಸಮಾಡೋಣದರಿಂದ ಮಲಬದ್ಧತೆಯುಳ್ಳವರಿಗೆ ಮಹೋಪಕಾರಿಯಾಗಿದೆ. ಜ್ವರಕ್ಕೂ ಇದನ್ನು ಕೊಡುತ್ತಾರೆ. ಇದು ಮನೆಯಲ್ಲಿ ಇದ್ದೇ ತೀರಬೇಕು. ಕ್ರಯ ಶೀಸೆಗೆ ರೂ. 1; ಮತ್ತು ರೂ. 0-10-0.

ಜ್ವರದ ಔಷಧ.—ವಿಷಮಶೀತಜ್ವರ, ನಿಂತುಬರುವಜ್ವರ, ಅವಧಿಯಜ್ವರ, ಎಲ್ಲಾ ತರದ ಜ್ವರಗಳಿಗೂ ಇದು ಸಂಜೀವನವಾಗಿದೆ. ಇದು ಕ್ವಿನೈನ್‌ಗಿಂತ ಬಹಳ ಅಗ್ಗ. ಕ್ರಯ ಶೀಸೆಗೆ 10 ಆಣೆ; 4 ಆಣೆ.

ಹುಳುಕಡ್ಡಿ ಔಷಧ.—ಹುಳುಕಡ್ಡಿಯನ್ನು ಖಂಡಿತವಾಗಿ ಗುಣಮಾಡುತ್ತೆ. ಕ್ರಯ ಸೀಸೆಗೆ 4 ಆಣೆ.

ಹಲ್ಲುಪುಡಿ.—ಈ ಪುಡಿಯಿಂದ ಹಲ್ಲು ಉಜ್ಜಿಕೊಂಡರೆ ಬಾಯಿಗೆ ಸುವಾಸನೆ ಕೊಡುತ್ತೆ. ಹಲ್ಲು ಸವೆದು ಕೆಡದಂತೆ ಬಹಳ ಚೆನ್ನಾಗಿಟ್ಟು ಕಾಪಾಡುತ್ತೆ. ಕ್ರಯ ಸೀಸೆಗೆ 4 ಆಣೆ; 6 ಆಣೆ; 1 ರೂಪಾಯಿ.

ಇಂಗ್ಲೀಷಿನಲ್ಲೇ ನಮಗೆ ಕಾಗದವನ್ನು ಬರೆಯಬೇಕು.

ಸೋಲ್ ಏಜಂಟರು :—ಎಸ್. ವೈದ್ಯ ಮತ್ತು ಕಂಪನಿ,
[150-5] ಪಾರ್ಕ್ ಟೌನ್, ಮದರಾಸ್.

ಪಾಕೆಟ್ ಲೀವರ್ ವಾಚ್.

ಇದರ ಕ್ರಯ 6 ಬಹುಮಾನ ಸಮೇತ ರೂ. 2-13-0 ಮಾತ್ರ.

ಇದು ಮಕ್ಕಳ ಆಟದ ಬೊಂಬೆಯಂತೆ ಕೆಲವು ದಿವಸಗಳು ಆಟವಾಡಿ ನಂತರ ಕೆಟ್ಟುಹೋಗುವಂಥಾ ಅಲ್ಪ ಗಡಿಯಾರವಲ್ಲ. ಶ್ರೇಷ್ಠವಾದ ಮತ್ತು ಬಹು



ಪ್ರಸಿದ್ಧವಾದ ಲೀವರು ಕೆಲಸದಿಂದ ತಯಾರಾದದ್ದು. ಗಂಭೀರವಾದ ಘಂಟೆ ಮತ್ತು ಮಿನಿಟ್‌ಗಳ ಮುಳ್ಳುಗಳುಳ್ಳದ್ದು. ಬಹು ಬಲಿಷ್ಠವಾದ ಮತ್ತು ನಾಜೂಕಾದ ಯಂತ್ರಸಾಮಾನುಗಳಿಂದ ತಯಾರಾಗಿರುತ್ತೆ. ಅನೇಕ ವರುಷಗಳ ಪರಿಯಂತರ ಬಾಳಿಕೆ ಬರುವಂಥಾದ್ದು. ಈ ಕಾರಣ ಆರ್ಡರುಗಳು ಬಂದು ಸುರಿಯುತ್ತಿವೆ. ಬಹುಮಾನಗಳ ತಪಸೀಲು :—1 ವಾಚ್ ಸರಪಣಿ, 2 ಉತ್ತರ ಗುಂಡಿ, 3 ಪರಿಮಳ ಅತ್ತರ್, 4 ಕರವಸ್ತ್ರ, 5 ಪೋಕಾದ ಉಂಗುರ, 6 ಸ್ಕಾರ್ಫ್ ಪಿನ್ನು. [145-7] ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ:—

ವಿಳಾಸ—ವಿ. ಆರ್. ವೆಂಕಟರಮಣ ಅಂಡ್ ಕಂಪೆನಿ,
ನಂ. 7, ಕೋಪ್ ವೆಂಕಟಾಚಲಯ್ಯರ್ ಬೀದಿ, ಮದರಾಸು.

ಸ್ತ್ರೀಯರ ಖುಷಿನಾವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶದಾಮವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು ? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾದರೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತಿದೆಯೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಆಗತ್ಯದ ಸಹಕಾರಿಯಾಗಿರುತ್ತದೆ.



ಈ ತೈಲವನ್ನು ಹೊಡೆದುಕೊಳ್ಳುತ್ತಲೇ, ಮಸ್ತಿಷ್ಕದ ಬೇಗೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ತೊಡೆಯ ತೊಡಗಿದ ಬಳಿಕ ಎಂದಿಗೂ ಜಗುಳಿ ಬಿದ್ದುಹೋಗಲಾರವು; ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು.

ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡುವುದಕ್ಕಿಂತ ಒಂದೇಯೊಂದು ಬಾರಿ ಈ "ಕಾಮಿನಿಯಾ ತೈಲ" ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಒಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಸ್ವಹಸ್ತದ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಅವುಗಳಲ್ಲಿ ಒಂದನ್ನೇ ನೋಡಿರಿ! ಸೇಗಿನಹಾಳಕರ ಬಂಧುಗಳು. ಬಸವನಗಲ್ಲಿ, ಬೆಳಗಾಂವ—ತಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವುದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ. ಆದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ. ಪಿ. ದ್ವಾರಾ ರವಾನಿಸುವುದು. ಸೀಸೆಯೊಂದರ ಕ್ರಯ ರೂ. 1-0-0, ಅ. ವೆ. 0-4-0 ಬೇರೆ; 3 ಸೀಸೆಗಳ ಕ್ರಯ ರೂ. 2-10-0, ಅ. ವೆ. 0-7-0 ಬೇರೆ.

ಸೂಚನೆ.—ಅನೇಕ ದುರ್ವಿನೀತರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಬಿಕರಿಯಿಂದ ತಮಗೆ ಅತ್ಯಲ್ಪ ನಫೆಯೇ ದೊರಕುತ್ತದೆಂದು, ನೀವು "ಕಾಮಿನಿಯಾ ತೈಲ" ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭ ದೊರಕತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಇದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳುವಷ್ಟು ಮೆಹರುಬಾನ್ ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಬೇಕಾದ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಒಟ್ಟೊ ದಿಲ್ ಬಹಾರ್!!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಆಲ್ಕೋಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ತಟಕುಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ. ಈ ಒಟ್ಟೊ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವುದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ. [19-30]

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಡ್ರಾಮಿನ (ಮೀಡಿಯಂ) ಸೀಸೆ 1ಕ್ಕೆ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0. ಅಂಚೆಯ ವೆಚ್ಚ ಬೇರೆ ರೂ. 0-4-0. ಒಟ್ಟೊ-ದಿಲ್ ಬಹಾರ್ ಪರಿಮಳದ ಕಾರ್ಡುಗಳು ಡಜನ್ ಒಂದಕ್ಕೆ 0-12-0.

ಮೇಲೆ ಕಂಡ ಎಲ್ಲಾ ಸುಗಂಧಗಳು ಸಿಕ್ಕುವ ಪತ್ತೆ :—

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,
ಜುಮ್ಮಾಮಸ್‌ಜಿದ್, ಬೊಂಬಾಯಿ.
ಏಜೆಂಟ್, ಡಿ. ಕುಲಕ್ ಮಾರ್ಟ್, ಮಂಗಳೂರು.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1914 ನೇ ಇಸವಿ ಜೂಲೈ 31 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ.

ಜಮಾ—(1) ಷೇರು ಮೊಬಲಗು	ರೂ. 9,92,806
(2) ಡಿಪಾಜಿಟ್ಟುಗಳು	,, 18,63,531
(3) ಇತರೆ	,, 38,835
(ಆನೆ, ಕಾಸು ಬಿಟ್ಟಿರುತ್ತೆ.) ಜುಮ್ಲಾ	ರೂ. 28,95,161

ಖರ್ಚು—(1) ಕೈಯಲ್ಲಿರುವ, ಬ್ಯಾಂಕುಗಳಲ್ಲಿರುವ ಹಣ ರೂ.	9,01,449
(2) ಖಾತೆ ಮತ್ತು ಇತರ ಸಾಲಗಳು	,, 13,05,066
(3) ಡಿಸ್ಕೌಂಟು ಮಾಡಿದ ವಾಯಿದೆ ಹುಂಡಿಗಳು	,, 2,13,325
(4) ಇನ್‌ವೆಸ್ಟ್‌ಮೆಂಟುಗಳು	,, 2,50,000
(5) ಏಜೆನ್ಸಿಗಳಲ್ಲಿರುವ ಮೊಬಲಗು	,, 1,04,968
(6) ಬ್ಯಾಂಕಿನಲ್ಲಿರುವ ಸಾಮಾನುಗಳು	,, 10,725
(7) ಇತರೆ	,, 19,628
(ಆನೆ, ಕಾಸು ಬಿಟ್ಟಿರುತ್ತೆ.) ಜುಮ್ಲಾ	ರೂ. 28,95,161

ಡಬ್ಲ್ಯು. ಸಿ. ರೋಸ್, ಮ್ಯಾನೇಜರ್.

ಬೆಂಗಳೂರಿನಲ್ಲಿ ಮೈಸೂರು ಸರ್ಕಾರದವರು ಬಾಡಿಗೆ ಕೊಡುವುದು.

ಬೆಂಗಳೂರು ಸಿಟಿಯಲ್ಲಿ ಮೈಸೂರು ಸರ್ಕಾರದವರು ತಮ್ಮ ಇಲಾಖಾ ಕೆಲಸಗಳನ್ನು ಮಾಡುವುದಕ್ಕೆ ಸ್ವಂತ ಕಟ್ಟಡಗಳಿಲ್ಲದೆ ಮುಂದೆ ಹೇಳುವ ಖಾಸಗಿ ಬಂಗಲೆಗಳನ್ನು ಬಾಡಿಗೆಗೆ ತೆಗೆದುಕೊಂಡು ಆಫೀಸುಗಳನ್ನು ಅವುಗಳಲ್ಲಿ ಮಾಡುತ್ತಿದ್ದಾರೆ. ಅವು ಯಾವವೆಂದರೆ—

ಕಚೇರಿಗಳಿಗೆ ತಿಂಗಳಿಗೆ 1,600 ರೂಪಾಯಿ ಬಾಡಿಗೆ.

ಡಿವಿಷನ್ ಕಮಿಷನರವರ ಆಫೀಸಿಗೆ 150 ರೂ, ಪೋಲೀಸ್ ಇನ್‌ಸ್ಪೆಕ್ಟರ್ ಜನರಲ್‌ರವರ ಆಫೀಸಿಗೆ 80 ರೂ., ವಿದ್ಯಾ ಇಲಾಖೆಯ ಇನ್‌ಸ್ಪೆಕ್ಟರ್ ಜನರಲ್‌ರವರ ಆಫೀಸಿಗೆ 125 ರೂ., ಸ್ಕೂಲ್ ಇನ್‌ಸ್ಪೆಕ್ಟರುಗಳ ಆಫೀಸಿಗೆ 100 ರೂ, ಫಾರೆಸ್ಟ್ ಕನ್‌ಸರ್ವೇಟರವರ ಆಫೀಸಿಗೆ 100 ರೂ., ಎಕ್ಸೈಸ್ ಕಮಿಷನರ್‌ರವರ ಆಫೀಸಿಗೆ 100 ರೂ., ರೈಲ್ವೆ ಸೆಕ್ರೆಟರಿಯವರ ಆಫೀಸಿಗೆ 85 ರೂ., ರೈಲ್ವೆ ಚೀಫ್ ಇಂಜನೀಯರವರ ಆಫೀಸಿಗೆ 150 ರೂ, ಬೌರಿಂಗ್‌ಪೇಟೆ ಚಿಕ್ಕಬಳ್ಳಾಪುರ್ ರೈಲ್ವೆ ಎಗ್ಸಿಕ್ಯುಟಿವ್ ಇಂಜನಿಯರವರ ಆಫೀಸಿಗೆ 100 ರೂ, ಚೀಫ್ ಅಕೌಂಟೆಂಟರವರ ಆಫೀಸಿಗೆ 150 ರೂ., ಪ್ರಾಚೀನ ಲಿಪ್ಯನ್ವೇಷಣದ ಸೂಪರಿಂಟೆಂಡೆಂಟರವರ ಆಫೀಸಿಗೆ 60 ರೂ., ಕೋಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರರವರ ಆಫೀಸಿಗೆ 50 ರೂ, ಕಸಬು ಮತ್ತು ವ್ಯಾಪಾರದ ಡೈರೆಕ್ಟರವರ ಆಫೀಸಿಗೆ 150 ರೂ., ಸ್ಯಾನಿಟರಿ ಇಂಜನಿಯರವರ ಆಫೀಸಿಗೆ 45 ರೂ, ಸಿಟಿ ಮುನಿಸಿಪಲ್ ಸರಬರಾಯಿ ಆಫೀಸಿಗೆ 20 ರೂ, ರೆವಿನ್ಯೂ ಸರ್ವೆ ಸೂಪರಿಂಟೆಂಡೆಂಟರವರ ಆಫೀಸಿಗೆ 76 ರೂ., ಈ ರೀತಿ ಬಾಡಿಗೆ ಕೊಟ್ಟು ಆಫೀಸುಗಳನ್ನು ಮಾಡುತ್ತಿದ್ದಾರೆ.

ಸ್ಕೂಲುಗಳಿಗೆ ತಿಂಗಳಿಗೆ 538 ರೂಪಾಯಿ ಬಾಡಿಗೆ.

ಮಲ್ಲೇಶ್ವರದ ಎ. ವಿ. ಸ್ಕೂಲಿಗೆ ರೂ. 20, ಆಣೆಪ್ಪನ ಹಿಂದೂಸ್ಥಾನಿ ಸ್ಕೂಲು ರೂ 30, ಬಸವನಗುಡಿ ಕನ್ನಡ ಸ್ಕೂಲು ರೂ. 20, ಉಪ್ಪಾರಹಳ್ಳಿ ಕನ್ನಡ ಸ್ಕೂಲು ರೂ. 10, ತಾರಾಮಂಡಲಪೇಟೆ ಹಿಂದೂಸ್ಥಾನಿ ಸ್ಕೂಲು ರೂ. 8, ಸುಣ್ಣಕಲ್ಲುಪೇಟೆ ಹಿಂದೂಸ್ಥಾನಿ ಸ್ಕೂಲು ರೂ. 5, ಕಲಾಸಿಪಾಳ್ಯದ ಹಿಂದೂಸ್ಥಾನಿ ಸ್ಕೂಲ್ ರೂ. 5, ಕನ್ನಡ ಗರಲ್ಸ್ ಸ್ಕೂಲು ರೂ. 50, ಆರ್ಯಬಾಲಿಕಾ ಪಾಠಶಾಲೆ ರೂ. 60, ಚಾಮರಾಜಪೇಟೆ ಗರಲ್ಸ್ ಸ್ಕೂಲು ರೂ. 35, ಮಲ್ಲೇಶ್ವರದ ಗರಲ್ಸ್ ಸ್ಕೂಲು ರೂ. 35, ಹಿಂದೂಸ್ಥಾನಿ ಗರಲ್ಸ್ ಸ್ಕೂಲು ರೂ. 20, ಹೊಸಹಳ್ಳಿ ಗರಲ್ಸ್ ಸ್ಕೂಲು ರೂ. 8, ಸರ್ ಶೇಷಾದ್ರಿ ಮೆಮೋರಿಯಲ್ ಹಾಲ್‌ನಲ್ಲಿ ವ್ಯಾಖ್ಯಾನದ ವಸ್ತುಪ್ರದರ್ಶನದ ಕಟ್ಟಡಕ್ಕೆ ರೂ. 250, ಈ ರೀತಿ ಬಾಡಿಗೆ ಕೊಟ್ಟು ಸ್ಕೂಲುಗಳನ್ನು ನಡೆಸುತ್ತಿದ್ದಾರೆ.



ಆಗಸ್ಟ್ ಮಹೋತ್ಸವದ ಕೈ ಗಡಿಯಾರ.

ಅರ್ಧ ಕ್ರಯ ರೂ. 1-14-0

ಇದೇ ಆಗಸ್ಟ್ ಪಕ್ಷದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದ ಕೈ ಗಡಿಯಾರವನ್ನು ಆಗಸ್ಟ್ ಒಳಗೆ ತರಿಸಿಕೊಳ್ಳುವವರಿಗೆ ರೂಪಾಯಿ 1-14-0 ಆಣೆಗೆ ಕೊಡಲ್ಪಡುತ್ತೆ. [99-10]

ವಿಳಾಸ— ವಿ. ಕೃಷ್ಣಸ್ವಾಮಿ ಮೊದಲಿಯಾರ್, ನಂ. 27 ಬಂದರ್ ಬೀದಿ, ಜಿ.ಟಿ., ಮದರಾಸು.

ಬಹಳ ಮೇಲಾದ ನಸ್ಯ ಇನ್ನೆಲ್ಲೂ ಸಿಕ್ಕದು.

ನಮ್ಮಲ್ಲಿ ತಯಾರಾಗುವ ನಸ್ಯದ ಪುಡಿಯನ್ನು ಹಿಂದುಸ್ಥಾನದ ಸಮಸ್ತ ಭಾಗಗಳವರೂ, ಅನ್ಯದೇಶಗಳವರೂ ಹತ್ತಾರು ವರುಷಗಳಿಂದ ತರಿಸಿಕೊಂಡು ಉಪಯೋಗಿಸುತ್ತಿದ್ದಾರೆ. ನಮ್ಮ ನಸ್ಯವು ಬಹಳ ಪ್ರಖ್ಯಾತಿ ಪಡೆದಿದೆ. ಬಹು ಮೇಲಾದ "ಬಂದರ್" ಸೊಪ್ಪಿನಿಂದ ಸುವಾಸನೆಯಾದ ಅತ್ತರು ಹುಷ್ಪ ಹಾಕಿ ವಿಶೇಷ ರುಚಿಕರವಾಗಿಯೂ ಸ್ವಚ್ಛವಾಗಿಯೂ ತಯಾರ್ಮಾಡುತ್ತೇವೆ. ಕೂಡಿದ ಮಟ್ಟಿಗೂ ನಮ್ಮ ಧಾರಣೆ ಕಡಮೆಯಾಗಿರುವುದು. ನಮ್ಮ ಪದಾರ್ಥವನ್ನು ನಾವೇ ಹೊಗಳಿಕೊಳ್ಳುವದರಿಂದ ಫಲವೇನು? ವಾಚಕರು ಒಂದಾವರ್ತಿ ಪರೀಕ್ಷೆಗಾಗಿ ತರಿಸಿಕೊಂಡರೆ ಚೆನ್ನಾಗಿ ವೇದ್ಯವಾಗುತ್ತೆ. ಕ್ರಯ ಸಂಥೇರಿಗೆ 3 ರೂಪಾಯಿ; 1 ಸೇರಿಗೆ 10 ಆಣೆ. ಪೋಸ್ಟೇಜ್ ಚೇರಿ. ನಸ್ಯವನ್ನು ಅಂಚೆಯ ಮೂಲಕವೋ, ರೈಲಿನಲ್ಲೋ ಹ್ಯಾಗೆ ಕಳಿಸಬೇಕೆಂದು ಬರೆಯಿರಿ.

ನಮ್ಮ ವಿಳಾಸ—ಜೆ. ನಾರಾಯಣಸಾಮಿ ನಾಯುಡು, 13, ಪಳಯಪ್ಪನ್ ಸ್ಟ್ರೀಟ್, ಮಿಂಟ್ ಬಿಲ್ಡಿಂಗ್ ಪೋಸ್ಟ್, ಮದರಾಸ್, ಇ.

[168-2]

ನಡುವಿನ ನೋವು.

ಹಾಸಿಗೆಯಲ್ಲಿ ನೋವಿನಿಂದ ಹೊರಳಾಡುತ್ತಾ ಇದ್ದು, ಕೆಲಸ ಮಾಡಲಾಗದಂಥಾ ರೀತಿಯಲ್ಲಿ ಎಂದು ಸಂತೋಷವಿಲ್ಲದವರಾಗಿದ್ದೀರೋ? ಹಾಗಿದ್ದರೆ ಬಹಳ ನಡುವಿನ ನೋವು ನಿಮಗೆ ಬಿಟ್ಟು ... ಉದಾಸೀನ ಮಾಡಲಾಗದು. ಜಲ್ದಿ ತೀಗಿ ಸರಿಮಾಡಿದು." ಲಿಟಲ್‌ಸ್ ಓರಿಯಂಟಲ್ ಬಾಂ ಎಂಬುದನ್ನು ಉಜ್ಜುವದರಿಂದ ಅದನ್ನು ನಿಲ್ಲಿಸಬೇಕು.

ವಿಸ್ಕಾನ್ಸಿನ ಮ್ಯೂಪೋರಿನಲ್ಲಿರುವ ಮಿ॥ ಸಿ. ಸಕ್ನರ್ ಬರೆಯುತ್ತದು:— "ಮೂರು ತಿಂಗಳು ನಡುನೋವಿನಿಂದ ನಾನು ಬಹು ಹಿಂಸೆಪಟ್ಟು ಯಾವ ಕೆಲಸಕ್ಕೂ ಅಯೋಗ್ಯನಾಗಿ ಹಾಸಿಗೆಯಲ್ಲಿಯೇ ಬಿದ್ದಿದ್ದೆನು.

ಲಿಟಲ್‌ಸ್ ಓರಿಯಂಟಲ್ ಬಾಂ ಎಂಬುದನ್ನು ಉಪಯೋಗಿಸಬೇಕೆಂದು ಶಿಫಾರಸ್ಸು ಮಾಡಿತು. ಆದರಂತೆಯೇ ಮಾಡಿ ಅದರ ಫಲಿತಾಂಶವನ್ನು ಕಂಡು ಆಶ್ಚರ್ಯಪಟ್ಟೆನು— 6 ಸೀಸೆಗಳ ತೈಲವನ್ನು ಉಪಯೋಗಿಸಿ ಈಗ ಚೆನ್ನಾಗಿ ಸಿದ್ಧವಾಗುತ್ತೇನೆ. ಕೆಲಸಕ್ಕೆ ಹೋಗುತ್ತೇನೆ."

ಸೀಸೆ 1ಕ್ಕೆ 1 ರೂ. ಮೇರಿಗೆ ಔಷಧಿಗಾರರೆಲ್ಲರಲ್ಲಿಯೂ ಸಿಗುತ್ತೆ.

101-15

ಮಧುರೆ ಜುನ್ನಡಿ ಅಂಚಿನ ಸೀರೆ ಅಸ್ಸಲ್ ರವಿಂ ರೂ. 2-8-0. ಆಗಸ್ಟ್ ತಿಂಗಳ ಒಳಗಾಗಿ ತರಿಸಿಕೊಳ್ಳುವರಿಗೆ ಒಂದು ಸಿಂಗಪೂರು ರವಿಕೆಯನ್ನು ಪ್ರತಿ ಸೀರೆಗೂ ಇನಾಮಾಗಿ ಕೊಡುತ್ತೇವೆ. [99-10]

ಇದು ಉಡುವುದಕ್ಕೆ ದಪ್ಪತಿಯಾಗಿಯೂ, ನೋಟಕ್ಕೆ ನಯವಾಗಿಯೂ, ಬಲ ಸುಲಭವಾಗಿಯೂ ಇದೆ. ಬಣ್ಣ ಹೋಗದು. ಸೀರೆಯ ಉದ್ದ 18 ಮೊಳ. ಸುಂದರವಾದ ಸೆರಗು. ಒಂದನ್ನು ತರಿಸಿ ಪರೀಕ್ಷಿಸಿ. ವಿಳಾಸ—ವಿ. ಕೃಷ್ಣಸ್ವಾಮಿ ಮೊದಲಿಯಾರ್, ನಂ. 27, ಬಂದರ್ ಬೀದಿ, ಜಿ. ಟಿ., ಮದರಾಸು.

ಮಲೇರಿಯಾ

ಮತ್ತು ಹವಾ ದೆಸೆಯಿಂದುಂಟಾಗುವ ಎಲ್ಲಾ ತರದ ಜ್ವರವೂ

ಈಸಾನೊಫೆಲೆ

ಯ ಸೇವನೆಯಿಂದ ಬೇಗನೆ ನಿವಾರಣೆಯಾಗುತ್ತೆ.

ಕ್ವೈನೈನ್ ಜ್ವರವನ್ನು ಅಡಗಿಸುವುದು; ಆದರೆ ನಮ್ಮ ಈ ಸಾನೊಫೆಲೆಯು 15 ದಿನದಲ್ಲಿ ವಾಸಿಮಾಡುತ್ತದೆ. ಹಗಲು ರಾತ್ರಿ ಒಂದೊಂದು ಮಾತ್ರೆ ತೆಗೆದುಕೊಳ್ಳುತ್ತಾ ಬಂದರೆ ಜ್ವರ ಬಾರದಂತೆ ಸಂರಕ್ಷಣೆ ಮಾಡಬಲ್ಲದು.

ಜ್ವರವು ಸಂಪೂರ್ಣವಾಗಿ ವಾಸಿಯಾಗುವುದಕ್ಕೆ ಎರಡು ಬಾಟ್ಲು ಔಷಧ ಹದಿನೈದು ದಿನಕ್ಕೆ ಸಾಕು.

ಬಾಟ್ಲಿಗೆ ಕ್ರಯ 2 ರೂಪಾಯಿ.

ಬಿಕರಿಯಾಗುವ ಸ್ಥಳಗಳು.

1. ಫಾಸ್ಟರ್ ಕಂಪನಿ, ಕೆಮಿಸ್ಟ್ಸ್, ಬೆಂಗಳೂರು;
2. ಬಿ. ಜಿ. ಗೌಡ ಕಂಪನಿ, ವಾರೆನ್ ಬೀದಿ, ಬೊಂಬಾಯಿ;

[172-2]

ಇದಲ್ಲದೆ

ಎಲ್ಲಾ ಔಷಧ ಮಾರಾಟದ ಷಾಪಿನಲ್ಲೂ ಸಿಕ್ಕುವುದು.

CLEARANCE SALE! **CLEARANCE SALE!**

ನೀವು ಬೈಸಿಕಲ್ಲನ್ನು ಕೊಳ್ಳಬೇಕೆಂದು ಅಭಿಪ್ರಾಯಪಟ್ಟಲ್ಲಿ ವಿಶೇಷ ಪ್ರಖ್ಯಾತಿಯೊಂದ ಅನೇಕ ಕಾಲ ಕಷ್ಟಕೊಡದೆ ಕೆಲಸಮಾಡುವಂಥಾ

ಬ್ರಿಟಾನಿಯಾ ಪಾಪುಲರ್ ಬೈಸಿಕಲ್ಲನ್ನು ಉಪಯೋಗಿಸಬೇಕು.

[159-4]



1. ಡನ್‌ಲಾಪ್ ಟಯರ್ಸ.
2. ಸ್ಪ್ರಿಂಗು ಸಾಡಲ್.

ಮೇಲೆ ಹೇಳಿದ ಎರಡರ ಕೂಡ 80 ರೂಪಾಯಿಗೆ ಬಿಕರಿ ಮಾಡುವಂಥಾ ಭಾರಿ ಬೈಸಿಕಲ್ಲನ್ನು ಯಾರೇ ಆಗಲಿ ಈ ಕೆಳಗೆ ಕಾಣಿಸಿರುವ ಸ್ವಲ್ಪ ಬೆಲೆಗೆ ಮಾರಲಿಲ್ಲ. ಈ ಬೈಸಿಕಲ್ಲನ್ನು ಇಂಗ್ಲೆಂಡ್ ದೇಶದಲ್ಲಿ ಬಹುಕಾಲದಿಂದ ಪ್ರಖ್ಯಾತಿಹೊಂದಿರುವ ಕಂಪನಿಯವರಲ್ಲಿ ಒಳ್ಳೇ ಸಾಮಾನುಗಳಿಂದ ಮಾಡಿದ್ದಾಗಿದೆ.

ನಾವು ಇವುಗಳನ್ನು ಬಹಳ ಹೆಚ್ಚಾಗಿ ತರಿಸುವುದಕ್ಕೆ ಕಾರಣವೇನೆಂದರೆ ಇವನ್ನು ದಕ್ಷಿಣ ಇಂಡಿಯದಲ್ಲಿರುವ ಜನರಲ್ಲಿ ಪ್ರಬಲ ಮಾಡಬೇಕೆಂತಲೇ! ಆದ್ದರಿಂದ ಇವನ್ನು, ನೂರಕ್ಕೆ 25 ರೂಪಾಯಿ ಕಮಿಷನ್ ಕೊಟ್ಟು ಮಾರಿಬಿಡುತ್ತೇವೆ.

ಇದರ ಕ್ರಯ ರೂ. **80.**

ಈಗ ಕಮಿಷನ್ ತೆಗೆದು ಮಾರುವ ಕ್ರಯ ರೂ. **59**
ಕೇಮ್‌ಬ್ರಿಡ್ಜ್ ಟೈಯರ್ ಉಳ್ಳದ್ದರ ಕ್ರಯ ,, **55**

ಕೆಟಲಾಗು ಉಚಿತವಾಗಿ ಕಳುಹಲಾಗುತ್ತೆ.

ವಾಟ್ಸನ್ ಅಂಡು ಕಂಪನಿ, ನಂ. 164, ಬ್ರಾಡ್‌ವೆ, ಮದರಾಸ್.

ಸುಖಕರ, ಆನಂದ, ಬಹಳ ಅವಶ್ಯ.

ಈಗ ತಾನೇ ಕಂಡುಹಿಡಿದಿದೆ.

ಜರ್ಮನ್ ರಾಜ್ಯದಲ್ಲಿ ನೂರಾರು ವರುಷ ಗಳಿಂದ ಉಪಯೋಗದಲ್ಲಿದೆ.

ಸೆಶಿಂತಾನ

ಬೆಳ್ಳಿಯ ವರಕು ಸುತ್ತಿದ ಮುತ್ತುಗಳು.

(1) ಮನಸ್ಸಿಗೆ ಹರ್ಷವನ್ನೂ ಉಲ್ಲಾಸವನ್ನೂ ಕೊಟ್ಟು ಜೀರ್ಣಶಕ್ತಿಯನ್ನುಂಟುಮಾಡುವುದು.

(2) ಹಾಡುವವರಿಗೆ ವರಪ್ರಸಾದವಾದದ್ದು.

(3) ಬಾಯಿ ದುರ್ಗಂಧ, ಗಂಟ್ಲು ಗಾರೆನ್ನುವುದು, ಉಬ್ಬಸ, ಸಮುದ್ರಯಾನದ ಜುಗುಪ್ಸೆ, ಈ ಮೊದಲಾದವನ್ನು ಹುಟ್ಟದಂತೆ ಅಡ್ಡಿಮಾಡುತ್ತದೆ.

(4) ತಾಂಬೂಲದೊಡನೆ ಸೇವಿಸುವುದಕ್ಕೆ ಅತ್ಯಂತ ಹಿತಕರವಾಗಿದೆ. [73-22]

ಒಂದು ಸಲ ಪರೀಕ್ಷೆಮಾಡಿದಲ್ಲಿ ಯಾವಾಗಲೂ ಒಂದು ಪೊಟ್ಲ ಇದ್ದೇ ತೀರಬೇಕೆಂದು ನೀವೇ ನಿಶ್ಚಯಿಸುವಿರಿ.

ಮುತ್ತಿನಂತಿರುವ 45 ಮಾತ್ರೆ ಉಳ್ಳ ಪೊಟ್ಲಕ್ಕೆ ಕ್ರಯ	2 ಆಣೆ.	
,, 95 ,, ,, ,,	4	,,
,, 200 ,, ,, ,, ,,	7	,,
,, 200 ,, ಸುಂದರವಾದ ಟಿನ್ ಡಬ್ಬಾ	9	,,
,, 80 ,, ,, ,,	4	,,
,, 100 ,, ಬಾಟ್ಲಿಯಲ್ಲಿ	4½	,,

ಈ ಕ್ರಯದಷ್ಟು ಸ್ಟಾಂಪನ್ನೂ, ಅಂಚೆ ವೆಚ್ಚಕ್ಕೆ ಜಾಸ್ತಿ ಒಂದಾಣೆಯನ್ನೂ ಸೇರಿಸಿ ಕಳುಹಿಸಬೇಕು. ಕಾಗದಪತ್ರವನ್ನೂ ವಿಳಾಸಗಳನ್ನೂ ನಮಗೆ ಇಂಗ್ಲೀಷಿನಲ್ಲೇ ಬರೆಯತಕ್ಕದ್ದು.

ನಮ್ಮ ವಿಳಾಸ—ಸೆಶಿಂತಾನ ಡಿಪೋ,
ಮಾನಸೂರ್ ಬಿಲ್ಡಿಂಗ್, ಪ್ರಿನ್ಸೆಸ್ ಸ್ಟ್ರೀಟ್,
ಬೊಂಬಾಯಿ 2;

ಅಥವಾ, ಬಿ. ಸಿ. ಷಾ ಕಂಪೆನಿ,
509 ಮಿಂಟ್ ಬೀದಿ, ಮದರಾಸ್.

ಬೇಕಾದವರು ಗಮನಿಸಿ.

ಕೆಲವು ದಿನಗಳು ಮಾತ್ರ!

ತ್ವರೆಮಾಡಿ!

ಸೋಲಾಪುರದ ಚೆಕ್ಕು, ಸೀರೆ, ಖಣ, ಕಿರಿಗೆ.

ಹಣ ಮುಂಗಡವಾಗಿ ಕಳುಹಿಸತಕ್ಕ ವ್ಯಾಪಾರಿಗಳಿಗೆ ಮಾತ್ರ ಸಹವಾರಿ ಚೆಕ್ಕು, ಸೀರೆ ಖಣ ಕಿರಿಗೆ ಇವು ಬಹಳ ಸುಲಭ ಕ್ರಯದಿಗೆ ಒದಗಿಸುವ ಏರ್ಪಾಡು ಮಾಡಲ್ಪಟ್ಟಿದೆ. ನಮ್ಮ ಕಾರ್ಯಂ ಗಿರಾಕಿಗಳಿಗೆ ಎಲ್ಲರಿಗಿಂತ ಸುಲಭ ಕ್ರಯಕ್ಕೆ ದೊರೆಯುವುದು.

ಹೊಸ ಗಿರಾಕಿಗಳು ತಮಗೆ ಬೇಕಾದಷ್ಟು ಸನಗೆ ಬರೆದು ಹಣ ಮುಂಗಡ ರವಾನಿಸಿದರೆ ಅವರಿಗೂ ಕಾಯಂ ಗಿರಾಕಿಗಳ ದರಕ್ಕೆ ಸವಾಳಿ ದೊರೆಯುವುದು.

ಹಣ ಕಳುಹಿಸದೆ ಬರೆಯತಕ್ಕ ಕಾಗದಗಳಿಗೆ ಬೇಗ ಗಮನಕೊಡಲು ಅನುಕೂಲವಿಲ್ಲ. ಕಾಗದ ಪತ್ರಗಳನ್ನು ಬರೆಯುವದರಿಂದ ಖರೀದಿಗಳು ಬದಲಾಯಿಸುವದಿಲ್ಲವೆಂಬ ವಿಷಯ ಜ್ಞಾಪಕದಲ್ಲಿಡಬೇಕು. [28-29]

ಇಂಡಿಯನ್ ಕೋಆಪರೆಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್,
159, ಕಿಲಾರಿ ರೋಡ್ (ಉಂಚಿಗರ ಪೇಟೆ), ಬೆಂಗಳೂರು ಸಿಟಿ.

ತಂಜಾವೂರು ಗೆಜ್ಜೆ ಅಡ್ಡಿಗೆಯು.

ಸ್ತ್ರೀಯರು ಕೊರಳಿನಲ್ಲಿ ಧರಿಸಿಕೊಳ್ಳುವ ಅಂದವಾದ ಈ ಆಭರಣವನ್ನು ಶೃಂಗಾರವಾದ ಅಕ್ಕಸಾಲಿಗರಿಂದ ಬಹಳ ಸುಂದರವಾಗಿಯೂ ಮನೋಹರವಾಗಿಯೂ



ಗುಂಡುಗಳನ್ನು ಮಾಡಿಸಿ ಭಂಗಾರದ ಮುಲಾಮನ್ನು ಕೊಟ್ಟು ಅಪ್ಪಣೆಪ್ರಕಾರವಾಗಿ ಕಟ್ಟ ನೋಡುವವರ ಮನಸ್ಸನ್ನು ಗ್ರಹಿಸುವಷ್ಟು ಅಂದವಾಗಿ ತಯಾರಿಸಿ ನಮ್ಮ ಕಂಪನಿಯು ಹೆಸರು ಪ್ರಸಿದ್ಧಿ ಹೊಂದಲು ಕಮ್ಮಿ ಕ್ರಯಕ್ಕೆ ಬಿಕರಿ ಮಾಡುವೆವು. ಭಂಗಾರದ ಒಡವೆಗೂ ಇದಕ್ಕೂ ಯಾವ ವ್ಯತ್ಯಾಸವೂ ಇರುವದಿಲ್ಲ. ಇದರ ಅಂದವೂ, ಕೆಲಸಗಾರಿಕೆಯೂ, ನಾಜೂಕೂ ನೋಡಿ ತೃಪ್ತರಾಗಬೇಕಲ್ಲದೆ ಹೇಳುವದರಿಂದ ಪ್ರಯೋಜನವಿಲ್ಲ. ಒಂದು ಸಲ ತರಿಸಿ ನೋಡಿರಿ. ಕ್ರಯ 60 ಗುಂಡುಗಳ ಸರಕ್ಕೆ 6 ಆಣೆ.

ಮಧುರೆ ಚುನ್ನಡಿ ಅಂಚಿನ ಸೀರೆಗಳು.

ಉಡುವದಕ್ಕೆ ಲಾಯಕ್ಕಾಗಿಯೂ, ನೋಡಲು ಅಂದವಾಗಿಯೂ, ದೃಢವಾಗಿಯೂ, ಗಟ್ಟಿ ಬಣ್ಣದ್ದಾಗಿಯೂ, ಸರಿಯಾಗಿ 18 ಮೊಳ ಉದ್ದವಿರುವದಾಗಿ

ಯೂ, ನಮ್ಮ ಸಹೋದರಿಯರ ಮನಸ್ಸಿಗೆ ತೃಪ್ತಿಯಾಗಿರುವಂತೆಯೂ ನಮ್ಮ ಕಂಪೆನಿಯಲ್ಲೇ ನೇಯಿಸಿ ಬಹಳ ಕಮ್ಮಿ ಬೆಲೆಗೆ ವಿಕರಿಮಾಡುತ್ತಿರುವೆವು. ಇದು ಕೆಂಪು, ಕಪ್ಪು ಮುಂತಾದ ರಂಗುಗಳಲ್ಲಿ ದೊರೆಯುವುದು. ಇದರ ಬಾಳಿಕೆಯೂ, ಬಣ್ಣವೂ, ನಾಜೋಕು ಮುಂತಾದ್ದೂ ಒಂದು ಸಲ ಪರೀಕ್ಷಿಸಿ ನೋಡಿದರೆ ಗೊತ್ತಾಗುತ್ತೆ. ಕ್ರಯ 1 ನೇ ಸೀರೆ 1 ಕ್ಕೆ ರೂ. 2-4-0; 2 ನೇ ಸೀರೆ 1 ಕ್ಕೆ ರೂ. 1-14-0.

ವಿಳಾಸ:—ದಿ ಇಂಡಿಯನ್ ಮೆಡಿಕಲ್ ಹಾಲ್,
[176-1] ಸಾಹುಕಾರ್‌ಪೇಟೆ ಪೋಸ್ಟ್, ಮದರಾಸ್.

ಎಲೆಕ್ಟ್ರಿಕ್ ಪಾಕೆಟ್ ಸಿಗಾರ್ ದೀಪಗಳು.



ಈ ದೀಪಗಳು ರಾತ್ರೀ ಕಾಲದಲ್ಲಿ ಬೆಳಕು ಉಂಟುಮಾಡುವ ದಕ್ಕೂ ಸಿಗರೇಟು ಚುಟ್ಟಾ ವಗೈರೆ ಹತ್ತಿಸಿಕೊಳ್ಳುವುದಕ್ಕೂ ಅತ್ಯಂತ ಉಪಯುಕ್ತವಾದವು. ಈ ದೀಪವನ್ನು ಹತ್ತಿಸಬೇಕಾಗಿದ್ದರೆ ಇದರಲ್ಲಿ ರತಕ್ಕ ಬಟನ್ ಎಂಬ ಗುಂಡಿಯನ್ನು ಅಮುಕಿದರೆ ತಾನಾಗಿಯೇ ಹತ್ತಿ ಕೊಂಡು ಬೆಳಗಾಗುತ್ತೆ. ಬಾಕೀ ವಿಷಯಗಳನ್ನು ನೋಟೀಸಿನ ಮೂಲಕ ತಿಳಿದುಕೊಳ್ಳಬಹುದು. ಇದರ ಬೆಲೆ ೧ ಕ್ಕೆ ೧ ರೂಪಾಯಿ ೪ ಆಣೆ. ವಿ.ಪಿ. ಖರ್ಚು ಪ್ರತ್ಯೇಕವಾಗುತ್ತದೆ.

ಮಹಾರಾಜಾ ಸೋಪ್.

ಈ ಸೋಪು ಯಾವ ಸ್ಥಳದಲ್ಲಿ ಕೂದಲನ್ನು ತೆಗಿಸಬೇಕೆಂದು ಅಪೇಕ್ಷಿಸುವಿರೋ ಸದರಿ ಸ್ಥಳದಲ್ಲಿ ತಣ್ಣೀರಿನಿಂದ ಈ ಸೋಪನ್ನು ತಿಕ್ಕಿ ೫ ನಿಮಿಷದ ನಂತರ ಬಟ್ಟೆಯಿಂದ ಒರಸಿದರೆ ಸಂಪೂರ್ಣವಾಗಿ ಯಾವದೊಂದು ಕಲೆಯೂ ಇಲ್ಲದೆ ಹೊರಟುಹೋಗುತ್ತೆ. ಇದರ ಬೆಲೆ ಸೋಪು ೧ ಕ್ಕೆ ೫ ಆಣೆ. ಪೆಟ್ಟಿ ೧ ಕ್ಕೆ ೧೦ ಆಣೆ. ವಿ.ಪಿ. ಚಾರ್ಜು ಪ್ರತ್ಯೇಕ.

ವಿಳಾಸ—ಪಾಂಡಿಯ ಅಂಡ್ ಬ್ರದರ್ಸ್,
104, ನಾಯನಪ್ಪನಾಯಕ್ ಬೀದಿ,
[177-1] ಪಾರ್ಕ್ ಟೌನ್, ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

24—7—1914 ರಿಂದ 31—7—1914 ರ ವರೆಗೆ

ಸ್ಥಳ	ಪ್ಲೇಗ್		ಕಾಲರಾ	
	ತಗಲಿದ್ದು.	ಸತ್ತದ್ದು.	ತಗಲಿದ್ದು.	ಸತ್ತದ್ದು.
ಬೆಂಗಳೂರು ಪಟ್ಟಣ	0	0	1	1
ಮೈಸೂರು ,,	10	7	3	3
ಬೆಂಗಳೂರು ಡಿಸ್ಟ್ರಿಕ್ಟ್	8	4	0	0
ಮೈಸೂರು ,,	16	11	0	0
ಕೋಲಾರ್ ,,	4	3	0	0
ಕೋಲಾರ್ ಚಿನ್ನದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟ್	3	3	7	4
ಹಾಸನ ,,	0	0	0	0
ಚಿತ್ರದುರ್ಗ ,,	0	0	0	0
ಕಡೂರ್ ,,	7	2	0	0
ಶಿವಮೊಗ್ಗ ,,	6	4	4	2
ಜುಮ್ಲಾ....	54	34	15	10

ಶಾಲಿವಾಹನ ಶಕ ವರುಷಂಗಳು 1837 ನೇ ಆನಂದ ಸಂವತ್ಸರೇ ದಕ್ಷಿಣಾಯನೆ ವರ್ಷಋತೌ ಶ್ರಾವಣ ಬಹುಳ ಅಷ್ಟಮಿ ಶುಕ್ರವಾರದಿಂದ ಶ್ರಾವಣ ಬಹುಳ ಚತುರ್ದಶಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ.

1914 ನೇ ಆಗಸ್ಟ್.

ತಾ.	ವಾರ.	ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ	ಕಟಕ ಸಂಕ್ರಾಂತಿ
14	ಶುಕ್ರ ::	ಅಷ್ಟಮಿ	25-1	ಕೃತ್ತಿಕೆ	56-46	30
15	ಶನಿ ‡	ನವಮಿ	29-12	ರೋಹಿಣಿ	60-0	31
16	ಭಾನು §	ದಶಮಿ	32-32	ರೋಹಿಣಿ	0-38	1
17	ಸೋಮ *	ಏಕಾದಶಿ	34-16	ಮೃಗಶಿರ	4-47	2
18	ಮಂಗಳ †	ದ್ವಾದಶಿ	31-54	ಆರಿದ್ರಾ	7-41	3
19	ಬುಧ ,,	ತ್ರಯೋದಶಿ	34-22	ಪುನರ್ವಸು	9-23	4
20	ಗುರು ;;	ಚತುರ್ದಶಿ	32-30	ಪುಷ್ಯ	9-48	5

:: ಅಷ್ಟಮೀ ತಿಥಿ, ಆದಿಶುಕ್ರವಾರ, ದಗ್ಧಯೋಗ. ‡ ಶ್ರಾವಣಶನಿವಾರ. § ವಿಷ್ಣುಪದಪುಣ್ಯಕಾಲ, ಮಳೆ ನಕ್ಷತ್ರ—ಮಘೆ 1 ನೇ ಪಾದ. * ಸರ್ವತ್ರ ಏಕಾದಶಿ, ದಗ್ಧಯೋಗ. † ಮಂಗಳಗೌರೀ ವ್ರತ. ,, ಪ್ರದೋಷ, ಮಾಸಶಿವರಾತ್ರಿ. ;; ಅಮೃತಸಿದ್ಧಿಯೋಗ, ಮಳೆ ನಕ್ಷತ್ರ—ಮಘೆ 2 ನೇ ಪಾದ.

500 ರೂಪಾಯಿಗಳು ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

ಈ ಮುರಬ್ಬಾವು "ಪಂಜಾಬ್ ಸಾಲಾಮಿಸ್ರಿ" ಅಲ್ಲವೆಂದು ವ್ಯಕ್ತಪಡಿಸುವವರಿಗೆ 500 ರೂಪಾಯಿಗಳು ಬಹುಮಾನ ಕೊಡಲ್ಪಡುವುದು.

ಕ್ರಯ 2 ರೂಪಾಯಿ.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡವರಿಗೆ ಹೃದಯ ಕೋಶವು ಬಲಹೀನವಾಗಿ ನಾನಾ ವ್ಯಾಧಿಗಳಿಂದ ಮರಣ ಪರಿಯಂತರವೂ ದುಃಖಪಡುವರು. ಈ "ಪಂಜಾಬ್ ಸಾಲಾಮಿಸ್ರೀ ಮುರಬ್ಬಾ" ವಿನ ಸೇವನೆಯಿಂದ ಕೈ, ಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ತಲೆಯ ನೋವೂ, ಇವುಗಳೆಲ್ಲವೂ ಪಂಜಾಬ್ ಸಾಲಾಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೆ ಸ್ಥಿತಿಯಲ್ಲಿಡುವುದು, ಮೆದುಳಿಗೆ ಬಲವನ್ನುಂಟುಮಾಡುವುದು, ಧಾತುವನ್ನು ಶೀಘ್ರಿಸುವುದು, ಸೊಂಟದ ನೋವು ಸ್ವಲ್ಪ ಮಾತ್ರವೂ ಇರಲಾರದು. ಈ ಪಂಜಾಬ್ ಸಾಲಾಮಿಸ್ರಿಯ ಮುರಬ್ಬಾಕ್ಕೆ ತಾಂಬ್ರದ ಮತ್ತು ಭಂಗಾರದ ಭಸ್ಮವು ಎಷ್ಟು ಮಾತ್ರವೂ ಸಮಾನವಾಗಲಾರದು. ಹೊಟ್ಟೆಯಲ್ಲಿರುವ ಜ್ವರದ ಗಡ್ಡೆಯನ್ನು ನಾಶಪಡಿಸುವುದು. ಶ್ವಾಸ ಕಾಸರೋಗಗಳನ್ನು ನಿರ್ಮೂಲಪಡಿಸುವುದು. ಕಾಬೂಲ್, ಕಾಂದಹಾರ್ ದೇಶಗಳ ಜನರು ಸಾಲಾಮಿಸ್ರಿಯ ಹಣ್ಣನ್ನು ಬಹಳವಾಗಿ ತಿನ್ನುವರು. ಆದ್ದರಿಂದ ಶಕ್ತಿಯಲ್ಲಿ ಬಹಳ ಗಟ್ಟಿಗರು. ಡಬ್ಬಾ 1 ಕ್ಕೆ ರೂ. 2-0-0. ಟಪಾಲ್ ಖರ್ಚು ಅಲಾಯದ. [133-9]

ಅನುಪಾನಪತ್ರಿಕೆ ಔಷಧದ ಸಂಗಡ. ಕ್ಯಾಟಲಾಗ್ ಅಪೇಕ್ಷಿಸುವವರು ½ ಕಾಸಿನ ಸ್ಟಾಂಪು ಕಳಿಸಿ.

ಏಜಂಟರು—ಡಿ. ಸೈಯದ್ ಉಸ್ಮಾನ್ ಅಂಡ್ ಕೊ,
ದೊಡ್ಡಪೇಟೆ, ಬೆಂಗಳೂರು ಸಿಟಿ.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
5 ಹಾಜಿ ಸಾಹೇಬ್ ಮಹಡಿ, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆ ಶೂಲೆ, ಸಂದುಗಳ ನೋವು, ಮೈ ಕಾಲು ಹೊಡೆತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ಪಾರಿಕೊಡದೆ, ನರಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಮುಟ್ಟುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೆ ಶಕ್ತಿವರ್ಧಕವಾಗಿದೆ.—220 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ; 6 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪಿ ವರೆಗೆ ಪೋಸ್ಟೇಜು 4 ಆಣೆ. [179-48]

೨. ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈಕಾಲಿನಿಂದು ಶೂಲೆಯೊಡಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರಿಕೆಗೆ ಮೂತ್ರವು ಕಟ್ಟಿದ್ದರೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿ! ಒಂದೇ ಒಂದು ಬುದ್ಧಿಯು ಮನ್ನಲ್ಲಿರಲಿ! ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುವುದು. ಬೆಲೆ ರೂ. 1; ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

Printed and Published by the Rev. H. Gulliford, Proprietor and Manager, Wesleyan Mission Press, Mysore. 13/8/1914.

REGISTERED
M. 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೮ ಮೈಸೂರು—ಸನ್ ೧೯೧೪ ನೇ ಇಸವಿ ಆಗಸ್ಟ್ ತಾರೀಖು ೨೦ ನೇ ಗುರುವಾರ. ಸಂಚಿಕೆ ೧೨

ಹೊಸ ಬಂಗಾಳಿ ನಾವಿಲ್ಸ್—ವಿಷವಿವಾಹ 4 ಆ. ಸನ್ಯಾಸಿನಿ 1½ ಆ. ಆನಾಕ್ಷಿ 1 ಆ. ಬಿ. ವೆಂಕಟಾಚಾರ್ಯರಿಂದ ವಂಗವಿಜೇತ 1-4-0. ಚಂದ್ರಶೇಖರ 1-4-0. ರಜನಿ 13 ಆ. ಚಿತ್ರವಿಚಿತ್ರಾವಳಿ 1½ 8 ಆಣೆ. ಅಮೃತಪುಳಿನ 11 ಆಣೆ. ಮೃಣಾಲಿನಿ 1-4-0. ಇತ್ಯಾದಿ. ಸುಶೀಲೆ ಹೊಸ ನಾವಿಲ್ 6 ಆಣೆ.
[8-36] ಎಂ. ಸುಬ್ಬರಾವ್, ಬುಕ್ ಸೆಲರ್, ಶಂಕರಪುರ, ಬೆಂಗಳೂರು ಸಿಟಿ

ಸಿದ್ಧವಾಗಿದೆ.

1915 ನೆಯ ವರ್ಷದ ಲೋವರ್ ಸೆಕೆಂಡರಿ

ಕನ್ನಡ ಟೆಕ್ಸ್ಟಿನ ನೋಟ್ಸು.—ಕ್ರಯ 6 ಆಣೆ.

ಡಿಸ್ಕೌಂಟು—10 ಕ್ಕೆ 1; 25 ಕ್ಕೆ 3; 50 ಕ್ಕೆ 8; 100 ಕ್ಕೆ 20.

ಮಕ್ಕಳ ಭೂವಿವರಣೆ.

ಈಗಿನ ಪಾಠಕ್ರಮಕ್ಕೆ ತಕ್ಕಂತೆ ಹೊಸದಾಗಿ ಆಗಿದೆ. ಇದರಲ್ಲಿ ಮೈಸೂರು ದೇಶದ ಬೆಳೆ, ಎತ್ತರ, ನದೀ ಪರ್ವತಾದಿಗಳು ಇವುಗಳನ್ನು ತೋರಿಸುವ ಮೂರು ಪಟಗಳೂ, ಚಿತ್ರಗಳೂ ಸೇರಿವೆ. ಕ್ರಯ 2 ಆಣೆ. [49-27]

ಬಾಲಬೋಧೆ 2 ನೆಯ ಪುಸ್ತಕದ ನೋಟ್ಸು 2½ ಆಣೆ. ಮೆಕ್ಮಿಲನ್ ರವರ 1ನೇ ಪುಸ್ತಕದ ನೋಟ್ಸು 1½ ಆಣೆ ಡಿಟೋ 4 ನೇ ಪುಸ್ತಕದ ನೋಟ್ಸು 1½ ಆಣೆ. ಡಿಟೋ 5 ನೇ ಪುಸ್ತಕದ ನೋಟ್ಸು 4 ಆಣೆ. ನವಬಾಲವ್ಯಾಕರಣ (2 ನೇ ಆವೃತ್ತಿ) 1 ಆಣೆ. Notes on "Tanglewood Tales," English Lower Secondary Text for 1915—As. 3. Notes on Fairy Tales—As. 2.

ನಮ್ಮ ವಿಳಾಸ:—ಎಸ್. ಆರ್. ವೆಂಕಟಸುಬ್ಬಾಚಾರ್ಯ,
ಸುಬೋಧಗ್ರಂಥಾಲಯ, ಮೈಸೂರು.

ಪುಸ್ತಕಗಳು

ಬಹಳ ಕಡಮೆ ಕ್ರಯಕ್ಕೆ ಸಿಕ್ಕುತ್ತವೆ.

[169-3]

ಬಿ. ಟಿ. ಬಿ. ಎಸ್. ಡಿಪೋ, ಸೆಂಟ್ ಮಾರ್ಕ್ಸ್ ರೋಡ್, ಬೆಂಗಳೂರು ಎಂಬ ವಿಳಾಸಕ್ಕೆ ಬರೆದು ತರಿಸಿಕೊಳ್ಳಿರಿ.

ಸತ್ಯವೇದಕ್ಕೆ ಸಂಬಂಧಪಟ್ಟ ಪುಸ್ತಕಗಳು :	ರೂ. ಆ. ಪೈ.
ಅಧಿಕಾಂಡ ಸಟೀಕ	1—8—0
ಯೆಶಾಯನ ಪ್ರಸಂಗಗಳು	0—8—0
ಹಳೇ ಒಡಂಬಡಿಕೆಗೂ ಹೊಸ ಒಡಂಬಡಿಕೆಗೂ ಇರುವ ಚರಿತ್ರ ಸಂಬಂಧ	0—3—0
ಪ್ರಕಟನ ಸುವಾರ್ತೆಯ ವ್ಯಾಖ್ಯಾನವು	0—4—0
ಶ್ರೀ ಪೌಲನು ಬರೆದ ಪತ್ರಿಕೆಗಳು	0—6—0
ಕ್ರಿಸ್ತ ಜನನ್ಮುಕ್ತಿ ನಿವೇದನ	0—2—0
ಶ್ರೀ ಪೇತ್ರನು ಬರೆದ ಮೊದಲನೇ ಪತ್ರಿಕೆಯು	0—2—0
ಆದಿ ಸಭೆಯ ಚರಿತ್ರೆಯೂ ಬೋಧನೆಯೂ	0—8—0
ಯೇಸು ಕ್ರಿಸ್ತನ ಚರಿತ್ರೆಯ ಸಾರಾಂಶಾವಳಿ	0—4—0
ದಾವೀದನ ಚರಿತ್ರೆ	0—4—0
ಶ್ರೀ ಪೌಲನ ಚರಿತ್ರೆ	0—2—0
ಸುಜ್ಞಾನ ಶಾಸ್ತ್ರವೂ ಭಕ್ತಿವರ್ಧಕ ಪುಸ್ತಕಗಳೂ :	
ಕ್ರಿಸ್ತ ವೇದಾಂತಸಾರ	1—0—0
ಶಿಶುಕೃತ್ಯ	0—2—0
ಬೆಂಕಿಯಿಂದುರಿಯುವ ಸಾಲಿಗೆ	0—4—0
ಆತ್ಮ ಧ್ಯಾನಗಳು ೧-೨ ನೇ ಭಾಗ	0—2—0
,, ೩ ನೇ ಭಾಗ	0—2—0
ಆಗಸ್ಟೀನ್ ಬಿನ್ನಪ	0—6—0
ಕ್ರಿಸ್ತ ಸಭಾಚರಿತ್ರ ಸಾರವು	0—8—0
ಕಥೆಗಳೂ ಜೀವಚರಿತ್ರೆಗಳೂ :—	
ಸುಂದರರಾಜನ ಪ್ರವಾಸ	0—4—0
ಕುರುಡಿಯು ಬೆಳಕನ್ನು ಹುಡುಕಿದ್ದು	0—4—0
ಹೇಮಲತ ಪ್ರಭಾಕರ	0—2—0
ಸಾಧು ಚಂದ್ರಲೀಲೆ	0—1—6
ಭಕ್ತಿಗೀತಾವಳಿ (೨೪ ಹಾಡುಗಳು)	0—0—6
ಕಿರುಹೊತ್ತಿಗೆ ೧ ನೇ ಭಾಗ ಗುರುವನ್ನು ಕುರಿತದ್ದು	0—0—3
,, ೨ ನೇ ,, ಶಾಸ್ತ್ರವನ್ನು ,,	0—0—3
,, ೩ ನೇ ,, ಪಾಪವನ್ನು ,,	0—0—3
,, ೪ ನೇ ,, ಮನುಷ್ಯನನ್ನು ,,	0—0—3
,, ೫ ನೇ ,, ಪಾಪಪರಿಹಾರವನ್ನು ,,	0—0—3

ತಾಮಸ ಮಾಡಬೇಡಿರಿ; ಕೂಡಲೇ ಬೆಂಗಳೂರು ಬಿ. ಟಿ. ಬಿ. ಎಸ್. ಡಿಪೋಗೆ ಬರೆದು ತರಿಸಿಕೊಳ್ಳಿರಿ.

We the undersigned inform the policy holders and public that we have appointed Pandit K. Bhaskara Sastri, Editor and Proprietor of "The Sahithya Chandrika," Basavangudi, Bangalore City, as our Sole District Agent for Bangalore, Kolar and Shimoga Districts.

Messers. VENKATACHALAM & SONS,
Chief Agents,
Hindustan Co-operative Insurance Society, Ltd.,
166, Dodpet, near Old Taluk Cutcherry,
[243-37] *MYSORE.*

English Papers with Full Answers:—Price for 1 set Rs. 1-4-0; 2 sets, Rs. 2-4-0; 3, Rs. 3-0-0; 4, Rs. 3-12-0; 5, Rs. 4-8-0; 6, Rs. 5-4-0; 9, Rs. 7-4-0; 12, Rs. 9; 25, Rs. 16; 50, Rs. 30; 100 sets, Rs. 50. (in advance).

Further concession, this week only:—a copy of Full Notes on L.S.E. Texts (5 As.); or spelling Book (4 As.)

Apply sharp to,—S. N. SITARAMA RAO,
[178-2] Krishnaraja Mohalla, *MYSORE.*

NOW READY

A faithful, literal and charming translation in Kannada of Oliver Goldsmith's "She Stoops to Conquer" by the name "Nirmale" with the original author's life-sketch. Patronised by the Govt. of Mysore. Very useful for School Final and Intermediate students. Price for Intermediate candidates only by V.P.P. As. 12 only; for others As. 14.

Apply to---Messrs. HANUMAN & Co.,
[160-5] *MYSORE.*

ಹೊಸನಾವೆಲ್‌ಗಳು.

ಬಹು ಸ್ವಲ್ಪ ಪ್ರತಿಗಳೇ ಉಳಿದಿವೆ. ಸರಸವಾದೀ ಹೊಸಗನ್ನಡದ ಕಾದಂಬರಿಗಳನ್ನು ತರಿಸಿಕೊಳ್ಳಲು ಹಿಂಜರಿದು ಪಶ್ಚಾತ್ತಾಪಪಡಬೇಡಿರಿ.

ಅನಂಗಸುಂದರಿ 8 ಆಣೆ. ತಾರಾಸುಂದರಿ 8 ಆಣೆ. ರಾಧಾಮಾಧವ 8 ಆಣೆ. ಸರಳಬಾಲೆ 8 ಆಣೆ. ಕುಮುದಿನಿ 6 ಆಣೆ. ಸೌಭಾಗ್ಯಲಕ್ಷ್ಮಿ 6 ಆಣೆ. ಸಂತಾಪಕ 4 ಆಣೆ.

"ನಿರುಪಮಾ" ಹೊಸ ನಾಟಕಗಳಲ್ಲಿ ಮೇಲೆನಿಸಿ ಬಹು ಜನ ಸ್ತ್ರೀ ಪ್ರಕೃತಿ ಪಾತ್ರವಾದ ನಾಟಕ. ಕಥಾ ವಿಧಾನವೂ ಮಾತುಗಳೂ ಪದ್ಯಗಳೂ ಬಹು ರಸವತ್ತಾದವಾಗಿಯೂ ಸರಸವಾಗಿಯೂ ಇವೆ. ಕ್ರಯ 12 ಆಣೆ.

[266-26] ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

ಕಳವು, ದರೋಡೆ.

ದರೋಡೆ, ಅತ್ಯಾಚಾರ ಸ್ತ್ರೀಸಂಗಮ, ಅಸ್ವಾಭಾವಿಕ ಸಂಭೋಗ, ಮಾನನಷ್ಟ ಮುಂತಾದವುಗಳಿಗೆ ಶಿಕ್ಷೆ ವಿಧಿಸಿರುವ ದಂಡನೀತಿ ಶಾಸ್ತ್ರವು ಪೂರ್ವದಲ್ಲಿ ಶಾಸ್ತ್ರಕಾರರಿಂದ ರಚಿತವಾಗಿ ಈಗಿನ ಬ್ರಿಟಿಷ್ ಚಕ್ರಾಧಿಪತ್ಯದಲ್ಲಿ ಅನುಮೋದಿಸಿ ಇಂಡಿಯಾ ಗವರ್ನರ್ ಜನರಲ್‌ರವರಿಂದ ಮುಂಚಿನಿಂದ ಕಲ್ಕತ್ತಾ, ಮುಂಬೈ, ಮದ್ರಾಸ್, ಮೈಸೂರು ಜಿಲ್ಲೆಗಳಲ್ಲಿ "ಕನ್ನಡ ಇಂಡಿಯನ್ ಪೀನಲ್ ಕೋಡ್" ಎಂಬ ಅಭಿಧಾನದಿಂದ ಜಾರೀಲಿ ತಂದಿರುವರು. ಈ ಆಕ್ಟಿಗೆ ಅನೇಕ ಜಡ್ಜಿಗಳು ಟಿಪ್ಪಣಿಗಳನ್ನು ಬರೆದಿರುವರು. ಅವುಗಳೂ ಈ ಪುಸ್ತಕದಲ್ಲಿ ಅಡಗಿರುವವು. ಕ್ರಯ ಬಟ್ಟೆ ಕಾಗದದ್ದು 2 ರೂಪಾಯಿ; ಹಸನು ಕಾಗದದ್ದು ರೂ. 1-8-0.

[143-8] ವಿಳಾಸ—ಬಿ. ನರಸಿಂಗರಾವ್,
ಎಡಿಟರ್, ಲಾ ಗೆಜೆಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

NOW READY

Full Notes with Summary and Numerous useful questions on Circe's Palace; The Golden Fleece and Fairy Tales (L. S. Text for 1915) by Mr. A. S Rangaswamiengar, B.A., Asst. Master, Maharani's College, Mysore. Price four annas only. Yate's Primer 0-4-0; Yate's Second Reader 0-9-0; King Second Reader 0-6-0; King Third Reader 0-8-0; Macmillan's New No. IV Reader 0-12-0; Hydes Practical English Grammar—First 0-15-0, Second 0-15-0; Longman's School Geography 1-4-0; Marrison's Junior Geography of India 0-12-0.

We supply you any books in English or Canarese.

[23-32] The General Agency, Mysore.

THE
GENERAL
Assurance Society Ltd., Ajmer.
(A Popular Life Office.)

Before Insuring or taking agency elsewhere, it would be to your interest to know the rates of premium and terms of agency specially prepared by the Society's Consulting Actuary, Mr. H. E. W. Lutt, F.I.A. (one of the most eminent Actuaries in England).

First Valuation Result:—The total liabilities under all assurances issued up to 31st March 1913, are fully covered by the Society's Life Assurance Fund and Paid up Capital. Write for full particulars, Annual and Valuation Reports to the Manager, Ajmer, or Secretary,

Opposite o Minto Ophthalmic Hospital,
[131-6] Bangalore City

ಓರಿಯಂಟಲ್ ಗೌ॥ ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು..............ರೂ. 4,45,00,000

ಕಂಪನಿಯಿಂದ ಪಾವತಿ ಆಗಿರುವದು ,, 4,00,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ.—ಮಿ॥ ಎಂ. ಎಸ್. ರಾವ್ ಬಿ.ಎ., ಚೀಫ್ ಏಜೆಂಟ್, ಬೆಂಗಳೂರು; ಮ॥ ಎಂ. ಎಸ್. ಸಂಪತ್ತಯ್ಯನವರು ಅಥವಾ ಮ॥ ವೆಂಕಟಸುಬ್ಬಯ್ಯನವರು, ಕಂಪನಿ ಏಜಂಟರು, ಮೈಸೂರು; ಅಥವಾ

[194-47] ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ, ಮದರಾಸ್.

ಹಿಂದುಸ್ಥಾನ್ ಕೋಆಪರೇಟಿವ್ ಜೀವವಿಮೆ ಸಂಘ ಲಿ.

ಹಿಂದುಸ್ಥಾನ್ ಕಟ್ಟಡಗಳು—ಕಲ್ಕತ್ತಾ.

ಕಂಪನಿಯ ಮೂಲಧನ (ಒಂದು ಕೋಟಿ ರೂಪಾಯಿ)	1,00,00,000
ಪಾವತಿಯಾದ ಮೊಬಲಗು	10,50,000
ವಸೂಲಾದ ಮೊಬಲಗು	67,00,000

ಈ ಕಂಪೆನಿಯಲ್ಲಿ ಪಾಲಿಸಿದಾರರಿಗೆ ಬಹಳ ಕಮ್ಮಿಯಾದ ದರಗಳ ಪಟ್ಟಿಯನ್ನು ಮಾಡಿರುವುದು. 1912 ನೇ ಇಸ್ವಿಯ ಇಂಡಿಯಾ ಗವರ್ನ್ಮೆಂಟಿನ ಜೀವವಿಮೆ ಕಂಪನಿಯ ಆಕ್ಟಿನ ಪ್ರಕಾರ ಸರ್ಕಾರದಲ್ಲಿ 2 ಲಕ್ಷ ರೂಪಾಯಿಗಳನ್ನು ಡಿಪಾಜಿಟ್ಟು ಮಾಡಲ್ಪಟ್ಟಿರುತ್ತೆ ಮತ್ತು ಅನೇಕ ಮಹಾರಾಜರುಗಳು ಮುಂತಾದ ದೊಡ್ಡವರು ಪ್ರೆಸಿಡೆಂಟರಾಗಿರುವದರಿಂದ ಈ ಕಂಪನಿಯ ಅಭಿವೃದ್ಧಿಸ್ಥಿತಿಯನ್ನು ಪ್ರಕಟನೆ ಮಾಡುವುದಕ್ಕೆ ಸಂತೋಷವಾಗಿರುತ್ತದೆ.

ಸುಲಭವಾಗಿ ಹಣವನ್ನು ಪಾಲಿಸಿಯವರ ಮನೆಯಲ್ಲೇ ಜಾಗ್ರತೆ ಪಾವತಿ ಏರ್ಪಾಡು ಮಾಡಲ್ಪಡುತ್ತೆ. ಆದ್ದರಿಂದ ಪಾಲಿಸಿದಾರರು ಮತ್ತು ಇದಕ್ಕೆ ಸೇರಿದ ಏಜಂಟ್ರುಗಳು ತುಂಬಾ ಅದೃಷ್ಟವಂತರೆಂಬುವದರಲ್ಲಿ ಸಂದೇಹವಿಲ್ಲ.

ಹೆಚ್ಚಿನ ವಿಷಯಗಳಿಗೂ, ಫಾರಂ ಮತ್ತು ಪ್ರಾಸ್ಪೆಕ್ಟಸುಗಳಿಗೂ ಕೆಳಗಿನ ವಿಳಾಸಕ್ಕೆ ಜಾಗ್ರತೆಯಾಗಿ ಬರೆಯಿರಿ. [243-37]

ವೆಂಕಟಾಚಲಂ ಅಂಡ್ ಸನ್ಸ್, ಚೀಫ್ ಏಜಂಟ್ರು,
166, ದೊಡ್ಡಪೇಟೆ, ಮೈಸೂರು.

ನಂಬಿ ಮೋಸಹೋಗಬೇಡಿ.

ಇತರರು ಶಾಲುಗಳನ್ನು ಒಳ್ಳೇದೆಂದೂ, ಕಮ್ಮಿ ಬೆಲೆಗೆ ಕೊಡುತ್ತೇವೆಂದೂ ಹೇಳುವರು. ಇದನ್ನು ನಂಬಿ ಮೋಸಹೋಗಬೇಡಿ. ನಮ್ಮಲ್ಲಿ ಕಾಶ್ಮೀರಿ ಮತ್ತು ಎಲ್ಲಾ ತರಹದ ವಂಟಿ ಶಾಲುಗಳೂ 5 ರೂ. ನಿಂದ 7, 10, 50, ರೂ. ಗಳವರೆಗೂ ಸಿಕ್ಕುತ್ತವೆ. ಖಾಯಿಷಿಲ್ಲದಿದ್ದರೆ ಹಣ ವಾಪಸು ಮಾಡುತ್ತೇವೆ. ನಮ್ಮ ಕಾರಖಾನೆಗೆ ಲಂಡನ್, ಚಿಕಾಗೋ ಮುಂತಾದ ಅನೇಕ ಪ್ರದರ್ಶನಗಳಲ್ಲಿ ಚಿನ್ನ ಮತ್ತು ಬೆಳ್ಳಿಯ ಮೆಡಲುಗಳು ಮತ್ತು ಸರ್ಟಿಫಿಕೇಟುಗಳು ಬಂದಿವೆ. ಯಾವ ತರಹ ಬಟ್ಟೆಯು ಎಷ್ಟು ಬೆಲೆಗೆ ಬೇಕಾದರೂ ನಮ್ಮಲ್ಲಿ ಸಿಕ್ಕುತ್ತವೆ. ಇಂಗ್ಲೀಷಿನಲ್ಲಾಗಲಿ, ಹಿಂದುಸ್ಥಾನಿಯಲ್ಲಾಗಲಿ ನಮಗೆ ಬರೆಯಬೇಕು.

ನಮ್ಮ ಅಡ್ರೆಸ್ಸು—ಪೀರ್ ಬ್ರದರ್ಸ್,
ಶಾಲ್ ಮರ್ಚೆಂಟ್ಸ್, ಅಮೃತಸರ, ಪಂಜಾಬು.
PEER BROS., SHAWL MERCHANTS,
[166-3] *AMRITSAR, PANJAB.*

ಕುಂತಳಾನಂದ ತೈಲವು.

192-48

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಗೆಯ ಚಿನ್ನದ ಪದಕಗಳು ಎಂಬ ಸರ್ಟಿಫಿಕೇಟುಗಳನ್ನು ಪಡೆದಿದೆ. ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು. ಈ ತೈಲವು ಕೂದಲನ್ನು ದಟ್ಟವಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಗೊಳಿಸುತ್ತದೆ. ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದ್ದಾಗಿದೆ. ಬೆಲೆ ಬಾಟ್ಲಿಗೆ 1 ರೂಪಾಯಿ 3 ಬಾಟಲಿಗೆ 2 ರೂಪಾಯಿ 10 ಆಣೆ. ಅಂಚೆ ಹಾಸಲು ಬೇರೆ. ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ.

ನಮ್ಮ ವಿಳಾಸ:—ಬಿ. ಎಮ್. ನಾಥ ಮತ್ತು ಕಂಪೆನಿ,
ವೇಪೇರಿ, ಮದರಾಸ್.

CHAMBERLAIN'S PAIN BALM.

ಛೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು.

3-34



ಬೆನ್ನೆಲುಬಿನ ನೋವು, ಪಕ್ಕಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ತಲೆನೋವು, ಜಜ್ಜಾದ ಕಡೆಯ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ.

ವಾಯುನೋವೆಂದರೇನು ?

ಕೀಲುಗಳಲ್ಲೂ ಮಣಿಕಟ್ಟುಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಸೆಳೆಯುವ ಬಾಧೆ, ಖಂಡಗಳಲ್ಲಿ ಇರಿಯುವುದು, ವಿಶ್ರಾಂತಿ ಕೊಡದೆ ಇರುವುದು, ನಿದ್ದೆ ಹತ್ತದೆ ಇರುವುದು—ಇವೇ. ಇದೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು.

ಆಗ ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ.

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಕಾವು ಮೂಳೆಯೊಳಕ್ಕೆ ವ್ಯಾಪಿಸುತ್ತದೆ ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ. ಮನಸ್ಸಿಗೆ ಉಲ್ಲಾಸವಾಗುತ್ತದೆ. ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಮುಟ್ಟಿದ್ದೇನೂ ಅಲ್ಲ.

ಇದು ಎಲ್ಲೆಲ್ಲೂ ಬಿಕರಿಯಾಗುತ್ತದೆ. ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ

" ವಾಸಿಮಾಡಿಕೊಳ್ಳುತ್ತೇನೆಂದು ಹೇಳು."

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು. ವಾಯು, ಕೀಲು, ಅರಶಲೆ, ತಲೆನೋವುಗಳು; ಯಾವ ಕಾರಣದಿಂದ ಹುಟ್ಟುವ ಬಾಧೆಯಾಗಲಿ, ಉಬ್ಬಸ, ಹಲ್ಲುನೋವು, ಗಂಟ್ಲು ಗಾರೆನ್ನುವುದು, ಕೆಮ್ಮುಗಳು, ಶೀತನೆಗಡಿ, ಶ್ವಾಸರೋಗ, ಜಜ್ಜು, ಉಳುಕು, ಛಳುಕು, ಚೇಳು ಕಡಿದ ಬಾಧೆ ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ. ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು. ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲಿ ಕೊಡಿ ಎಂದು ಕೇಳು. ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತಗೆದುಕೋ. ಈ ಯಕ್ಷಿಣಿಯೋಪಾದಿ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ. ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ. ಲಕ್ಷಾಂತರ ಜನರು ಗುಣಹೊಂದಿದಾರೆ; ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ. [122-12]

" ಕ್ಲೆಮೆಂಟರ ಮ್ಯಾಜಿಕ್ ಬಾಂ " ಎಂಬ ಹೆಸರನ್ನು ಮರೆಯಬೇಡಿ ಅದರ ಕ್ರಯ ಬಾಟ್ಲಿಗೆ 12 ಆಣೆ; ಅಂಚೆ ವೆಚ್ಚ 4 ಆಣೆ. 3 ಅಥವಾ ಹೆಚ್ಚು ಬಾಟ್ಲಿ ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ. ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ. ವಿಳಾಸಗಳು:—(1) ಎಸ್. ಪೀಟರ್ಸ್, 37 ವಡಮಲೆಪಿಳ್ಳೆ ಬೀದಿ, ಪುರಸವಾಕಂ, ವೇಪೇರಿ, ಮದರಾಸ್; (2) ಜೆ. ಎಸ್ ಕನ್ನಯ್ಯಶೆಟ್ಟರು, ಜನರಲ್ ಮರ್ಚೆಂಟ್, ತುಮಕೂರು.

ಶ್ರೀಕರಕಸ್ತೂರಿಮಾತ್ರೆ

ಬಿ. ವಿ. ಪಂಡಿತರ

250 ಮಾತ್ರೆಯುಳ್ಳ ಸೀಸೆಗೆ 4 ಆ.; 5 ಸೀಸೆಗಳಿಗೆ 1 ಇನಾಂ.

ಈ ಮಾತ್ರೆಗಳ ಬೆಲೆಯನ್ನು ನೋಡಿ ಇವರ ಗುಣವನ್ನು ಊಹಿಸಲಾಗದು. ಟಿಬೆಟ್ ದೇಶದ ಕಸ್ತೂರಿಯಿಂದಲೇ ಶಾಸ್ತ್ರೋಕ್ತವಾಗಿ ತಯಾರ್ಮಾಡಲ್ಪಡುತ್ತಿರುವ ಈ ಶ್ರೀಕರ ಕಸ್ತೂರಿ ಮಾತ್ರೆಗಳು ಸುವಾಸನೆಯಾಗಿರುವುದು ಮಾತ್ರವಲ್ಲದೆ ತಾಂಬೂಲದೊಡನೆ ಅಥವಾ ಹಾಗೆಯೇ ಸೇವಿಸಿದರೆ ಎಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸುವುದು ಮಕ್ಕಳಿಗೆ ಉಂಟಾಗುವ ಅಜೀರ್ಣಭೇದಿ-ಜ್ವರ-ಕೆಮ್ಮು-ನೆಗಡಿ-ಎಳವು-ಹೊಟ್ಟೆಯುಬ್ಬರ-ಈ ರೋಗಗಳನ್ನು ಸಮೀಪದಲ್ಲಿಯೇ ವೈದ್ಯನಿದ್ದಂತೆ ತಕ್ಷಣ ಗುಣಪಡಿಸುವುದು. ಪ್ರಯಾಣಿಕರಿಗೂ ಸೊಂಕು ರೋಗಸ್ಥಳದಲ್ಲಿರುವವರಿಗೂ ಮಲೆನಾಡಿನಲ್ಲಿರುವವರಿಗೂ ಇದರಂತೆ ಮತ್ತಾವುದೂ ಆರೋಗ್ಯವನ್ನು ಕೊಟ್ಟು ಕಾಪಾಡಲಾರದು. [220-42]

ವಿಷಮಜ್ವರಗಳು-ನೆಗಡಿ-ಕೆಮ್ಮು-ತಲೆನೋವು-ಅಗ್ನಿಮಾಂದ್ಯ-ಶೀತವಾಯು-ಹಲ್ಲುನೋವು-ಮಲಬಂಧ-ಅರೋಚಕ-ನರಗಳ ದೌರ್ಬಲ್ಯ—ಈ ರೋಗಗಳನ್ನು ಪ್ರತಿಯೊಬ್ಬರಿಗೂ ಗುಣಪಡಿಸಿ ರಕ್ತವೃದ್ಧಿಯನ್ನುಂಟುಮಾಡುವುದು. ಸಾವಿರಾರು ಜನರು ಪರೀಕ್ಷಿಸಿದ್ದಾರೆ. ಟಪಾಲ್ ಖರ್ಚು 12 ಸೀಸೆ ವರೆಗೆ 4 ಆಣೆ.

ವಿಳಾಸ—ಮ್ಯಾನೇಜರ್, ಸದ್ವೈದ್ಯಶಾಲಾ, ನಂಜನಗೂಡು.

Jain's Swadeshi Balm.

ಜೈನ್ ರವರ ಸ್ವದೇಶೀ ಬಾಮ್ ರೆಜಿಸ್ಟರಾದ ಟ್ರೇಡ್ ಮಾರ್ಕು.

ಈ ಬಾಮ್ ವಾತ, ಸಂಧಿವಾತ, ಕುತ್ತಿಗೆ ನೋವು, ಅರೆತಲೆನೋವು, ನಡುನೋವು, ಶೀತ, ಸೆಳೆತ, ಬೆನ್ನುನೋವು, ಊದು, ಕೆಮ್ಮು, ಎದೆನೋವು, ಹೊಟ್ಟೆನೋವು, ಚಳುಕು, ಚೇಳುಕಡಿತ, ಕೈಕಾಲು ದೇಹ ಕೀಲುಗಳ ನೋವು, ಉರಿ, ಸುಟ್ಟಗಾಯ ಮೊದಲಾದವುಗಳನ್ನು ನಿರ್ಮೂಲವಾಗಿ ಹೋಗಲಾಡಿಸುತ್ತದೆ. ಜಟ್ಟಿಗಳಿಗೂ, ಮೆದುಳಿನ ಕೆಲಸಗಾರರಿಗೂ ಸಾಮಾನ್ಯವಾಗಿ ಎಲ್ಲಾ ಕೆಲಸದವರಿಗೂ ಈ ಸ್ವದೇಶೀ ಬಾಮ್ ಬಹಳ ಪ್ರಯೋಜನಕರವಾದದ್ದು. ಕೊಬ್ಬಾಗಲಿ, ಬೇರೆ ಯಾವ ಕೆಟ್ಟ ಪದಾರ್ಥವಾಗಲಿ ಮಿಶ್ರಮಾಡಿಲ್ಲ. ಯೂರೋಪ್, ಇಂಡಿಯಾ, ಅಮೆರಿಕಾ ವೈದ್ಯಗ್ರಂಥಗಳನ್ನು ನೋಡಿ ತಯಾರ್ಮಾಡಿದೇವೆ, ಹಿಂದುಗಳೆಲ್ಲಾ ಇದನ್ನು ಉಪಯೋಗಿಸಬಹುದು. ಇದು ಯಕ್ಷಿಣಿಯಂಥಾ ಮದ್ದು. ಲಕ್ಷಾಂತರ ಜನರನ್ನೆಲ್ಲಾ ವಾಸಿಮಾಡಿದೆ. ಪ್ರತಿ ಒಬ್ಬರೂ, ಪ್ರತಿ ಮನೆಯವರೂ ಇದನ್ನು ಇಟ್ಟೇ ಇರಬೇಕು. ಇದು ಚಿನ್ನದಂಥಾ ಔಷಧ. ಎಲ್ಲಾ ವೈದ್ಯಶಾಲೆಗಳಲ್ಲೂ ಬಿಕರಿಯಾಗುತ್ತಿದೆ, ಸೂರ್ಯಕಿರಣಗಳ ರೆಜಿಸ್ಟರ್ ಮಾರ್ಕ ಇರುವುದನ್ನು ನೋಡಿ ಕೊಂಡುಕೊಳ್ಳಿ. ನಕ್ಕಲ್ ಔಷಧವನ್ನು ಕೊಂಡು ಮೋಸಹೋಗಬೇಡಿ. ಉಪಯೋಗದ ಕ್ರಮ ಬಾಟ್ಲಿ ಸಂಗಡಲೇ ಇಟ್ಟಿದೆ. 1 ಬಾಟ್ಲಿಗೆ 12 ಆಣೆ; 3 ಕ್ಕೆ ರೂ. 1-14-0. ವಿ. ಪಿ ಬೇರೆ. ನಮ್ಮ ಎಲ್ಲಾ ಔಷಧಿಗಳ ಕ್ಯಾಟಲಾಗನ್ನು ಬರೆದು ತರಿಸಿಕೊಳ್ಳಿ. [25-30]

ವಿಳಾಸ—ಜೆ. ಗುಲಾಬ್ ಚಂದ್ ಪೋರ್ವಾಳ್,
60 ವೈನಪ್ಪನಾಯಕ್ ಬೀದಿ, ಪಾರ್ಕ್ ಟೌನ್,-ಮದರಾಸ್.

MELLIN'S FOOD

ಮೆಲಿನ್ಸ್ ಆಹಾರವು

[4-34]

ಕೈಸೋಕಬೆ ಮಾಡಿದೆ. ಮೆಲಿನ್ಸ್ ಆಹಾರದಲ್ಲಿ ಶಿಶುಗಳು ಪುಷ್ಟಿಯಾಗಿ ಬೆಳೆಯುವವು

ಮೆಲಿನ್ಸ್ ಆಹಾರವನ್ನು ಕ್ರಮಪ್ರಕಾರ ತಯಾರ್ಮಾಡಿ ಸೇವಿಸಿದರೆ ಹುಟ್ಟಿದ ಶಿಶುಗಳು ಮೊದಲುಗೊಂಡು ಮುಪ್ಪಾಯದವರ ತನಕ ಎಲ್ಲರಿಗೂ ಸಂಪೂರ್ಣವಾದ ದೇಹಪುಷ್ಟಿಯನ್ನೂ ವಿಶೇಷವಾದ ಬಲವನ್ನೂ ಕೊಡುತ್ತದೆ.

ಮೆಲಿನ್ಸ್ ಆಹಾರದ ಮಾದರಿ ಬೇಕೆಂದು ಕೇಳಿದರೆ ಕೆಳಗಿನ ವಿಳಾಸದಾರರು ಕಳುಹಿಸುತ್ತಾರೆ:—

Messrs. OAKES & Company, Mount Road, Madras.

ವಿಳಾಸ—ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.



ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಹೊಡೆತ (ಭಾರ), ಮೈ ನಡುಕ, ಶೀತದ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಸೊಕ್ಕು, ಸುವಾಸನೆಯಾಗಿರುತ್ತಾ, ಎಂಥ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೈಶಪ್ಪಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—320 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ; 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪಿ ವರೆಗೆ ಪೋಸ್ಟೇಜು 4 ಆಣೆ. [179-50]

೨. ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈವಿಡಾಂತೆಂದು ತೋರಿದಾಗಲೂ ಆಶ್ಚರ್ಯವಾಗುವಂತ ರೋಗದ ಮೇಲೆ ಕೆಲಸ ಮಾಡುತ್ತದೆ ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರಿಸಿ, ಮೂತ್ರವು ಕಟ್ಟಿದ್ದರೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿ ! ಒಂದೇ ಒಂದು ಬುದ್ಧಿಯು ನಿಮ್ಮಲ್ಲಿರಲಿ ! ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುವುದು. ಬೆಲೆ ರೂ. 1; ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ :—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

500 ರೂಪಾಯಿಗಳು ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

ಈ ಮುರಬ್ಬಾವು " ಪಂಜಾಬ್ ಸಾಲಾಮಿಸ್ರಿ " ಅಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡಲ್ಪಡುವುದು.

ಕ್ರಯ ೨ ರೂಪಾಯಿ.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡವರಿಗೆ ಹೃದಯ ಕೋಶವು ಬಲಹೀನವಾಗಿ ನಾನಾ ವ್ಯಾಧಿಗಳಿಂದ ಮರಣ ಪರಿಯಂತರವೂ ದುಃಖಪಡುವರು. ಈ " ಪಂಜಾಬ್ ಸಾಲಾಮಿಸ್ರೀ ಮುರಬ್ಬಾ " ದಿನ ಸೇವನೆಯಿಂದ ಕೈ, ಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ತಲೆಯ ನೋವೂ, ಇವುಗಳೆಲ್ಲವೂ ಪಂಜಾಬ್ ಸಾಲಾಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು, ಮೆದುಳಿಗೆ ಬಲವನ್ನುಂಟುಮಾಡುವುದು, ಧಾತುವನ್ನು ಶೇಖರಿಸುವುದು, ಸೊಂಟದ ನೋವು ಸ್ವಲ್ಪ ಮಾತ್ರವೂ ಇರಲಾರದು. ಈ ಪಂಜಾಬ್ ಸಾಲಾಮಿಸ್ರಿಯ ಮುರಬ್ಬಾಕ್ಕೆ ತಾಂಬ್ರದ ಮತ್ತು ಬಂಗಾರದ ಭಸ್ಮವು ಎಷ್ಟು ಮಾತ್ರವೂ ಸಮಾನವಾಗಲಾರದು. ಹೊಟ್ಟೆಯಲ್ಲಿರುವ ಪ್ಲೀಹೆ ಗಡ್ಡೆಯನ್ನು ನಾಶಪಡಿಸುವುದು. ಶ್ವಾಸ ಕಾಸರೋಗಗಳನ್ನು ನಿರ್ಮೂಲಪಡಿಸುವುದು. ಕಾಬೂಲ್, ಕಾಂದಹಾರ್ ದೇಶಗಳ ಜನರು ಸಾಲಾಮಿಸ್ರಿಯ ಹಣ್ಣನ್ನು ಬಹಳವಾಗಿ ತಿನ್ನುವರು. ಆದ್ದರಿಂದ ಶಕ್ತಿಯಲ್ಲಿ ಬಹಳ ಗಟ್ಟಿಗರು. ಡಬ್ಬಿ 1 ಕ್ಕೆ ರೂ. 2-0-0. ಟಪಾಲ್ ಖರ್ಚು ಅಲಾಯದ. [133-10]

ಅನುಪಾನಪತ್ರಿಕೆ ಔಷಧದ ಸಂಗಡ. ಕ್ಯಾಟ್ಲಾಗ್ ಅಪೇಕ್ಷಿಸುವವರು 6 ಕಾಸಿನ ಸ್ಟ್ಯಾಂಪು ಕಳಿಸಿ.

ಏಜಂಟರು—ಡಿ. ಸೈಯದ್ ಉಸ್ಮಾನ್ ಅಂಡ್ ಕೊ,
ದೊಡ್ಡಪೇಟೆ, ಬೆಂಗಳೂರು ಸಿಟಿ.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
5 ಹಾಜಿ ಸಾಹೇಬ್ ಮಹಡಿ, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

S U. N. & Co.,

BENARES CITY, U. P.

ಸೊಗಸಾದ ಸರಕುಗಳು !!

ದೊಡ್ಡ ಕಂಪೆನಿ !

ಈ ನಮ್ಮ ಕಂಪನಿಯಲ್ಲಿ ನೆಯಿದು ತಯಾರಿಸುವ ಉತ್ತಮವಾದ ಬನಾರಸ್ ರೇಷ್ಮೆ ಜರೀ ಸೀರೆಗಳು, ಶಲ್ಯ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ್ಟಿ, ಮಗುಟ, ಜಗನ್ನಾಥ ಚಾಗಟೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಫೊಟೊಗಳುಳ್ಳ ಕ್ಯಾಟಲಾಗ್ 1 ನ್ನು ಮತ್ತು 2 ವಿಶ್ವೇಶ್ವರ ಪಟಗಳನ್ನು ಇನಾಮಾಗಿ ಕಳುಹಿಸಲಾದೀತು. [69-23]

ಎಸ್. ಯು. ಎನ್. ಮತ್ತು ಕಂಪೆನಿ, ಕಾಶಿ.

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶಪಾಶವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು ? ಇಂತಹ ಕೇಶಪಾಶವನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾದರೋ:

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ.

ಈ ತೈಲವನ್ನು ತೊಡೆದುಕೊಳ್ಳುತ್ತಲೇ, ಮಸ್ತಿಷ್ಕದ ಬೇಗೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ತೊಡೆಯ ತೊಡಗಿದ ಬಳಿಕ ಎಂದಿಗೂ ಜಗುಳಿ ಬಿದ್ದು ಹೋಗಲಾರವು; ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವದು.

ಕೀಳುತರದ ಎಣ್ಣೆಗಳನ್ನು ಕೊಂಡು ಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡುವದಕ್ಕಿಂತ ಒಂದೇಒಂದು ಬಾರಿ ಈ "ಕಾಮಿನಿಯಾ ತೈಲ"ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಒಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಅವುಗಳಲ್ಲಿ ಒಂದನ್ನೇ ನೋಡಿರಿ! ನೇಗಿನಹಾಳಕರ ಬಂಧುಗಳು. ಬಸವನಕಲ್ಲು, ಬೆಳಗಾಂವ—ತಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ. ಆದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ. ಪಿ ದ್ವಾರಾ ಕಳಿಸುವುದು. ಸೀಸೆಯೊಂದರ ಕ್ರಯ ರೂ. 1-0-0, ಅ. ವೆ. 0-4-0 ಬೇರೆ; 3 ಸೀಸೆಗಳ ಕ್ರಯ ರೂ. 2-10-0, ಅ. ವೆ. 0-7-0 ಬೇರೆ

ಸೂಚನೆ.—ಅನೇಕ ಮರ್ಯಾದಸ್ಥರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ವಿಕರಿಯಿಂದ ತಮಗೆ ಅತ್ಯಲ್ಪ ನಫೆಯೇ ದೊರಕುತ್ತದೆಂದು, ನೀವು "ಕಾಮಿನಿಯಾ ತೈಲ"ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭ ದೊರಕತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಇದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳಿರಿ ಮತ್ತು ಮಾಸರುಬಾನ್ ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಿಬೀಳದೆ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಒಟ್ಟೊ ದಿಲ್ ಬಹಾರ್ !!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಆಲ್ಕೋಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಉಷ್ಣವಾಹಿಕೆಯು ಆವರಿಸಿದಂತಾಗುವದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೀಗೂ ಇರಲಿ. ಈ ಒಟ್ಟೊ-ದಿಲ್ ಬಹಾರಿನ ಗಂಧವು ಆವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ. [19-31]

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಡ್ರಾಮಿನ (ಮಾಡಿಯಂ) ಸೀಸೆ 1ಕ್ಕೆ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0. ಅಂಚೆಯ ವೆಚ್ಚ ಬೇರೆ ರೂ. 0-4-0. ಒಟ್ಟೊ-ದಿಲ್ ಬಹಾರ್ ಪರಿಮಳದ ಕಾಡುಗಳು ಡಜನ್ ಒಂದಕ್ಕೆ 0-12-0.

ಕಂದ ಎಲ್ಲಾ ಸುಗಂಧಗಳು ಸಿಕ್ಕುವ ಪತ್ತೆ:—

ಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್ಜಿದ್, ಬೊಂಬಾಯಿ.

ಏಜಂಟ್, ವಿ. ಕುಲಕರ್ಣಿ ವಾರ್ಕರ್, ಮಂಗಳೂರು.

ಮೇಲಾದ ಜರಿ ರೇಷ್ಮೆ ಪಂಚೆಗಳು.

ಒಳ್ಳೇ ಸಮಯ ! ಸಾವಿರಗಟ್ಟಲೆ ಖರ್ಚಾಗುತ್ತದೆ !! ನಂತರ ದೊರೆಯಲಾರದು !!!

ಅನೇಕ ಪಂಚೆಗಳು ದಿನವೂ ಖರ್ಚಾಗುತ್ತಾ ಇರುವುದರಿಂದ ಪ್ರಕೃತ ಬೆಲೆಯು ತಗ್ಗಿಸಿರುತ್ತೇವೆ. ವಾಚಕರೇ! ಶೃಂಗಾರವನ್ನೂ ನಾಗರಿಕತೆಯನ್ನೂ

ಹೊಂದಿರುವ ಮೇಲಾದ ಅಸಲ್ ರೇಷ್ಮೆ ಪಂಚೆಗಳು ಹಬ್ಬಗಳ ಕಾಲದಲ್ಲಿ ಹೊದಿಯಲು ಅನೇಕ ಪಂಚೆಗಳನ್ನು ತರಿಸಿಕೊಂಡಿರುವದ್ದರಿಂದ ಮುಕ್ಕಾಲು ಪಾಲು ಸರಕು ಖರ್ಚಾಗಿಹೋಗಿರುತ್ತೆ. ಈಗ ಸ್ವಲ್ಪವೇ ಉಳಿದಿರುತ್ತೆ. ಈ ಪಂಚೆಗಳು ಸ್ತ್ರೀ ಪುರುಷರು ಬಾಲಿಕೆಗಳು ಧರಿಸಕೊಳ್ಳಬಹುದು. ಅಪೂರ್ವವಾದ ಪಂಚೆಗಳು. ಇದರಲ್ಲಿ ಕೆಂಪು, ಹಸರು, ಎಲೆಹಸರು, ರೋಜಾ, ಮೇಘವರ್ಣ, ಇತ್ಯಾದಿ ರಂಗುಗಳುಂಟು. ಬಹಳ ಉತ್ಕೃಷ್ಟವಾದ ಪಂಚೆಗಳು. ಈ ಖರೀದಿಗೆ ನಮ್ಮಲ್ಲಿ ಅಲ್ಲದೆ ಮತ್ತೆ ಯಾರಲ್ಲಿಯೂ ದೊರೆಯಲಾರದು.

5½ ಮೊಳ ಉದ್ದ, 2½ ಮೊಳ ಅಗಲ ಇರುವ ಪಂಚೆ ಒಂದಕ್ಕೆ ರೂ. 2. ಪಂಚೆ 1 ಕ್ಕೆ ಟಪಾಲು ಖರ್ಚು 4 ಆಣೆ. ಎರಡು ಪಂಚೆಗಳನ್ನು ಒಂದೇ ಸಲ ತರಿಸಿಕೊಂಡರೆ ಟಪಾಲು ಖರ್ಚು ಇನಾಂ.

ನಮ್ಮ ವಿಳಾಸ—ಎನ್. ಎಂ. ಸ್ವಾಮಿ ಅಂಡು ಕಂಪೆನಿ,

[109-35] ನಂ. 44, ನಂಬುಳಯ್ಯರ್ ಬೀದಿ, ಮದರಾಸು.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ:— ಬೆನ್ನಿನಲ್ಲಿ ಛಳುಕು; ನಿದ್ರೆಯಿಲ್ಲದೆ ಇರುವುದು; ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಿಳುಪಾಗಿಯೋ ಇಳಿಯುವುದು; ಬಿಡದೆ ಬಾಯಾರಿಕೆ; ಬಂಳಿಕೆ; ಎದೆ ತಲ್ಲಣಿಸುವುದು; ತಲೆನೋವು; ಗಾಬರಿ; ಕಣ್ಣುಮೊಬ್ಬು; ತಲೆ ತಿರುಗುವಿಕೆ; ಮೈನೋವು; ಕೀಲುನೋವು; ಮರವು; ನಿದ್ರಾಭಂಗ; ಇವೇ ಮೊದಲಾದುವು. ಅಲಕ್ಷ್ಯ ಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [181-50]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ಸ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು.



ಬುಡ್ಡಿಗೆ ರೂ. ೨—೦—೦; ಅಥವಾ ೬ ಬುಡ್ಡಿಗಳಿಗೆ ರೂ. ೧೨—೮—೦ ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು. ಅಥವಾ ಡೋನ್ಸ್, ಪಿ ಒ ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು

ಎಲೆಕ್ಟ್ರಿಕ್ ಪಾಕೆಟ್ ಸಿಗಾರ್ ದೀಪಗಳು.



ಈ ದೀಪಗಳು ರಾತ್ರಿ ಕಾಲದಲ್ಲಿ ಬೆಳಕು ಉಂಟುಮಾಡುವುದಕ್ಕೂ ಸಿಗರೇಟು ಚುಟ್ಟಾ ವಗೈರೆ ಹತ್ತಿಸಿಕೊಳ್ಳುವದಕ್ಕೂ ಅತ್ಯುತ್ತಮವಾದವು. ಈ ದೀಪವನ್ನು ಹತ್ತಿಸಬೇಕಾಗಿದ್ದರೆ ಇದರಲ್ಲಿರತಕ್ಕ ಬಟನ್ ಎಂಬ ಗುಂಡಿಯನ್ನು ಅಮುಕಿದರೆ ತಾನಾಗಿಯೇ ಹತ್ತಿಕೊಂಡು ಬೆಳಕಾಗುತ್ತೆ. ಬಾಕೀ ವಿಷಯಗಳನ್ನು ನೋಟೀಸಿನ ಮೂಲಕ ತಿಳಿದುಕೊಳ್ಳಬಹುದು. ಇದರ ಬೆಲೆ ೧ ಕ್ಕೆ ೧ ರೂಪಾಯಿ ೮ ಆಣೆ. ವಿ.ಪಿ. ಖರ್ಚು ಪ್ರತ್ಯೇಕವಾಗುತ್ತದೆ.

ಮಹಾರಾಜಾ ಸೋಪ್.

ಈ ಸೋಪು ಯಾವ ಸ್ಥಳದಲ್ಲಿ ಕೂದಲನ್ನು ತೆಗೆಸಬೇಕೆಂದು ಅಪೇಕ್ಷಿಸುವಿರೋ ಸದರಿ ಸ್ಥಳದಲ್ಲಿ ತಣ್ಣೀರಿನಿಂದ ಈ ಸೋಪನ್ನು ತಿಕ್ಕಿ ೫ ನಿಮಿಷದ ನಂತರ ಬಟ್ಟೆಯಿಂದ ಒರಸಿದರೆ ಸಂಪೂರ್ಣವಾಗಿ ಯಾವದೊಂದು ಕಲೆಯೂ ಇಲ್ಲದೆ ಹೊರಟುಹೋಗುತ್ತೆ. ಇದರ ಬೆಲೆ ಸೋಪು ೧ ಕ್ಕೆ ೫ ಆಣೆ. ಪೆಟ್ಟಿ ೧ ಕ್ಕೆ ೧೦ ಆಣೆ. ವಿ.ಪಿ. ಚಾರ್ಜು ಪ್ರತ್ಯೇಕ.

ವಿಳಾಸ—ಪಾಂಡಿಯ ಅಂಡ್ ಬ್ರದರ್ಸ್,

104, ನಾಯನಪ್ಪನಾಯಕ್ ಬೀದಿ,

[177-2] ಪಾರ್ಕ್ ಟೌನ್, ಮದರಾಸ್.

ತಾಲ್ಲೂಕು ವರ್ತಮಾನಗಳು.

ಶಿವಮೊಗ್ಗ.—ಈ ಪ್ರಾಂತ್ಯ ಬಹಳ ಮಳೆ ಬಂದು ಕೆರೆ ಕುಂಟೆಗಳೆಲ್ಲಾ ಕೋಡಿಬಿದ್ದು ತುಂಗಾ ನದಿಯ ಪ್ರವಾಹ ಹೆಚ್ಚಿ ಈಗ ತಗ್ಗಿರುತ್ತೆ. ಎಲ್ಲೆಲ್ಲೂ ಜಲಮಯವಾಗಿದೆ. ಟವನ್ನಲ್ಲಿ ಕೆಲವು ರಸ್ತೆಗಳು ನೀರಿನಿಂದ ಕೊರಕಲು ಬಿದ್ದು ಸಂಚಾರಕ್ಕೆ ತುಂಬಾ ತೊಂದರೆಯಾಗಿದೆ. ಡೆಪ್ಯುಟಿ ಕಮೀಷನರ್ ಸಾಹೇಬರೂ, ವೈಸ್ ಪ್ರೆಸಿಡೆಂಟರೂ ಆಗಾಗ್ಗೆ ಟವನ್ನಲ್ಲಿ ಸಂಚರಿಸುತ್ತಿರುವದರಿಂದ ಚೊಕ್ಕಟವಾಗಿಯೂ, ರಾತ್ರಿ ಬೆಳಕು ವಗೈರೆ ಕ್ರಮವಾಗಿಯೂ ಇದೆ. ಚರಂಡಿಗಳಲ್ಲಿ ಮೂತ್ರವಿಸರ್ಜನೆ ಮಾಡಿದ ಕೆಲವರಿಗೆ ಶಿಕ್ಷೆಯಾದ್ದರಿಂದ ಗಲೀಜಾಗದಂತೆ ಅಡ್ಡಮಾಡಿದ್ದಕ್ಕಾಗಿ ಕೊಂಡಾಡುತ್ತೇನೆ.—ಶಿವಮೊಗ್ಗೆಯಿಂದ ಹೊಳೆಹೊನ್ನೂರಿಗೆ ಹೋಗುವ ರಸ್ತೆಯು ಗುಡ್ಡೆಕಲ್ ಹವಿನಿಂದ ಸುಮಾರು 1 ಫರ್ಲಾಂಗ್ ದೂರ 8-10 ದಿವಸದಿಂದಲೂ ನೀರು ರಸ್ತೆಯ ಮೇಲೆ ಹರಿಯುತ್ತಾ ಇದೆ. ಇದರಿಂದ ಒಂದು ಸಣ್ಣ ಸೇತುವೆ ಕಲ್ಲುಗಳೆಲ್ಲಾ ಕುಸಿದುಹೋಗಿವೆ. ಇನ್ನೊಂದು ಮಧ್ಯ ರಸ್ತೆಯಲ್ಲಿ ಬಿದ್ದು ಸುಮಾರು 2 ಗಜ ಸುತ್ತಳತೆಯಗಲವಾಗಿದೆ. ಗಾಡಿ ವಗೈರೆ ತಿರುಗಾಡಲು ತುಂಬಾ ಅಪಾಯಕರವಾಗಿದೆ. ಇಲಾಖೆಯವರು ಕ್ರಮಪಡಿಸಿದರೆ ಮೇಲಾದೀತೆಂದು ಕೋರುತ್ತೇನೆ.

ಅರಸೀಕೆರೆ.—ಈಚೆಗೆ ಸ್ವಲ್ಪ ಮಟ್ಟಿಗೆ ಮಳೆ ಬಂದದ್ದರಿಂದ ರೈತರ ಬಿತ್ತನೆಗೆ ಅನುಕೂಲವಾಯಿತು. ರಾಗಿ, ಮುಸುಕು ತಕ್ಕ ಮಟ್ಟಿಗೆ ಫಸಲು ಚೆನ್ನಾಗಿವೆ. ದನಕರುಗಳಿಗೆ ಸ್ವಲ್ಪ ಮೇವು ಸಿಕ್ಕಿದಾಗ್ಯೂ ಕೆರೆ ಕುಂಟೆ ಭಾವಿಗಳಿಗೆ ಸರಿಯಾಗಿ ನೀರು ಬಾರದೆ ಬಹಳ ಅಡಚಣೆಯುಂಟಾಗಿದೆ. ದಿನಸಿ ಧಾರಣೆಗಳು ಇನ್ನೂ ಛಡಾವಿನಲ್ಲಿಯೇ ಇರುತ್ತವೆ. ಈ ಮಧ್ಯೆ ಹರಿಯರಿಗೆ ಆಚೆ ರೈಲ್ವೆ ಸೇತುವೆ ಮೇಲೆ ಪ್ರವಾಹ ಬಹಳವಾಗಿ ಬಂದದ್ದರಿಂದ ರೈಲು ಮುಂದಕ್ಕೆ ಹೊರಡದೆಯೂ, ದಿನಸಿಗಳು ಬಾರದೆಯೂ, ಈಗ ಸಂಭವಿಸಿರುವ ಯುದ್ಧದ ಗಲಭೆಯಿಂದಲೂ ಇಲ್ಲಿನ ವರ್ತಕರು ಧಾರಣೆ ಹೆಚ್ಚಿಸಿರುತ್ತಾರೆ. ಇದರಿಂದ ಬಡಬಗ್ಗರು ಜೀವಿಸುವದು ಕಷ್ಟವಾಗಿದೆ. ತಾಲ್ಲೋಕು ಮುಖ್ಯಸ್ಥರು ಈ ಸಮಯದಲ್ಲಿ ವರ್ತಕರನ್ನೆಲ್ಲಾ ಕರಸಿ ಅವರಿಗೆ ತಕ್ಕಮಟ್ಟಿಗೆ ಬುದ್ಧಿ ಹೇಳಿ ಧಾರಣೆಗಳನ್ನು ನಿಗದಿಮಾಡುವದು ಪರೋಪಕಾರವಾಗಿರುತ್ತದೆ.—ಮ್ಯುನಿಸಿಪಲ್ ಲಾಂದ್ರ ಕಂಭಗಳು ಸ್ವಲ್ಪವೇ ಇರುತ್ತವೆ. ಇವರಲ್ಲೂ ಸ್ವಲ್ಪ ಕಡೆ ಲಾಂದ್ರ ಹಚ್ಚುತ್ತಾರೆ. ರಾತ್ರಿ ಕಾಲದಲ್ಲಿ ಸಂಚರಿಸುವದು ಬಹಳ ಕಷ್ಟವಾಗಿದೆ. ಅಧಿಕಾರಿಗಳು ಗಮನಕೊಡಬೇಕಾಗಿರುತ್ತದೆ—ಇಲ್ಲಿ ಮಾಂಸದ ಅಂಗಡಿ ಒಂದೇ ಇದ್ದು ಸರಿಯಾದ ಒಳ್ಳೇ ಮಾಂಸವನ್ನು ಮಾರುವದಿಲ್ಲ. ಸ್ಯಾನಿಟರಿ ಇನ್ಸ್‌ಪೆಕ್ಟರೂ, ಹೆಲ್ತ್ ಆಫೀಸರೂ ಆಗಾಗ್ಗೆ ಶೋಧಮಾಡಿಸಿ ಮಾಡಿ ಒಂದು ನಿರುಖು ಇಟ್ಟು ಎಲ್ಲರಿಗೂ ಅನುಕೂಲವಾಗುವಂತೆ ಮಾಡುವದು ಉತ್ತಮ.

ಚಿತ್ರದುರ್ಗ.—ಈ ಪ್ರಾಂತ್ಯ ಸಾಮಾನ್ಯ ಮಳೆಯಾಗಿರುತ್ತದೆ. ಕೇರೀ ಭೂಮಿಗೆ ನೀರು ಸಾಲದು. ಆದರೂ ಬೇಸಾಯಗಾರರು ಬೀಜ ಬಿತ್ತುವ ಪ್ರಯತ್ನ ಮಾಡುತ್ತಿರುವರು. ಆಗಾಗ್ಗೆ ಸಣ್ಣಗೆ ತುಂತುರು ಮಳೆ ಬರುವದೇ ಹೊರತು ದೊಡ್ಡ ಮಳೆಗಳಿಲ್ಲ. ಕೆರೆಗಳಿಗೆ ನೀರು ಬಂದಿಲ್ಲ. ಜನಗಳಿಗೆ ನೀರಿನ ಕ್ಷಾಮ ಅತಿಶಯವಾಗಿದೆ. ನಲ್ಲಿಗಳಲ್ಲಿ ನೀರು ದೊರೆಯುವದು ಕಷ್ಟ. ಕೆಲವರು ಸಣ್ಣ ನೌಕರರ ಮೇಲೆ ಗುಣುಗುಟ್ಟುವರು. ಕೆಲವರು ಭಾವಿಗಳಿಗೆ ಅಲೆದಾಡುವರು. ಈ ಗ್ರಾಮಕ್ಕೆ ಪದೇ ಪದೇ ಇಂಥಾ ಕ್ಷಾಮಗಳು ಉಂಟಾಗುತ್ತಲೇ ಇರುವದು. ಮಾಂಕಣವೆಯಿಂದಾದರೂ ನೀರನ್ನು ಒದಗಿಸಿ ಜನಗಳ ಕಷ್ಟವನ್ನು ತಪ್ಪಿಸಬಾರದೇ ಎಂದು ಪ್ರಾರ್ಥಿಸುವವ.—ಧಾನ್ಯಾದಿಗಳೆಲ್ಲಾ ಬಹಳ ತಗ್ಗಾಗಿರುವವು. ರೂಪಾಯಿಗೆ 6 ಸೇರು ಅಕ್ಕಿ, 5 ಸೇರು ಬೇಳೆ, 12 ಸೇರು ರಾಗಿ, 2 ಸೇರು ತುಪ್ಪ, ಈ ರೀತಿ ಮಾರುತ್ತಿದೆ. ಬಡವರ ಜೀವನ ಬಹು ಕಷ್ಟವಾಗಿದೆ. ಇದಕ್ಕಿಂತಲೂ ಕ್ಷಾಮ ಉಂಟೇ ಎಂದು ಜನಗಳು ಹೇಳುತ್ತಿರುವರು. ಸಣ್ಣನೌಕರರಿಗೆ ಅಲೋಯನ್ಸಾದರೂ ಕೊಡಿಸಿದರೆ ಮಹೋಪಕಾರವಾದೀತು.—ಇನರಲ ಅ॥ ಕಮಿಷನರ್ ಮ॥ ರಾಮಚಂದ್ರರಾಯರಿಗೆ ದಿವಾನರ ಆಫೀಸಿಗೆ ವರ್ಗವಾಗಿದೆ ಇವರು ಇಲ್ಲಿಗೆ ಬಂದು ೩ ವರ್ಷವಾಯಿತು. ಜನಾನುರಾಗಿಗಳಾಗಿದ್ದರು.—15-20 ದಿನಗಳ ಕೆಳಗೆ ಥಿಯೊಸಾಫಿಕಲ್ ಸಂಘದ ಉಪನ್ಯಾಸಕರು ಬಂದಿದ್ದರು. ೫ ಉಪನ್ಯಾಸಗಳಾದವು. ಅನೇಕರು ಸೇರುತ್ತಿದ್ದರು. ಉಪನ್ಯಾಸಕರು ಸ್ತ್ರೀಯರುಗಳಿಗೇ ಒಂದು ಸಂಘವನ್ನು ಸ್ಥಾಪಿಸಿದಂತೆ ಕಾಣುವದು ಈಚೆಗೆ ಪ್ರತಿ ಭಾನುವಾರವೂ ಕೆಲವು ಸ್ತ್ರೀಯರು ಗರಲ್ಸ್ ಸ್ಕೂಲಲ್ಲಿ ಸೇರುತ್ತಾರೆ. ಅದರ ವಿದ್ಯಾವತಿಯರಾದ ಸ್ತ್ರೀಯರೇ ಸೇರಬೇಕೆಂಬ ನಿಬಂಧನೆ ಮಾಡಿಕೊಂಡಿರುವರಂತೆ ಇದಕ್ಕಿಂತ ಇಷ್ಟಪಟ್ಟವರೆಲ್ಲಾ ಸೇರಬಹುದೆಂದು ಮಾಡಿದರೆ ಹಿಂದುಳಿದ ಅನೇಕ ಸ್ತ್ರೀಯರಿಗೂ ಬಹಳ ಪ್ರಯೋಜನವಾಗುವುದು.

ಚಾಮರಾಜನಗರ.—ನಮ್ಮ ತಾಲ್ಲೋಕು ಶಿರಸ್ತೇದಾರ್ ಸಯ್ಯದ ಅಬ್ದುಲ್ ಮಾಲಿಕ್ ಸಾಹೇಬರಿಗೆ ಮೈಸೂರಿಗೆ ವರ್ಗವಾಯಿತು. ಮುಸಲ್ಮಾನರಲ್ಲಿ ಇಂಥವರನ್ನು ನೋಡಿದ್ದು ಅಪರೂಪ. ಇವರು ನಿಷ್ಪಕ್ಷಪಾತವಂತರೂ ಆಗಿದ್ದಾರೆ. ಜಾತಿ ಪಕ್ಷಪಾತವಿಲ್ಲ. ಎಲ್ಲರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿದ್ದರೆಂದು ಎಲ್ಲಾ ಕೋಮಿನವರೂ ಹೇಳುತ್ತಿದಾರೆ. ಮೊನ್ನೆ 9 ನೇ ತಾ ಇಲಾಖೆಗಳ ಅಧಿಕಾರಿಗಳೂ, ನೌಕರರೂ, ಮ್ಯುನಿಸಿಪಲ್ ಮೆಂಬರುಗಳೂ ವರ್ತಕಮಂಡಲಿಯವರೂ, ಬೇರೆಬೇರೆ ಕೋಮಿನವರೂ ಸೇರಿ ಅವರಿಗೆ ಮರ್ಯಾದೆ ಮಾಡಬೇಕೆಂದು ಇಂಗ್ಲಿಷ್ ಬ್ಯಾಂಡ್ ಸಮೇತ ಅವರನ್ನು ಎ.ವಿ ಸ್ಕೂಲಿಗೆ ಕರೆತಂದು ಅವರ ಗುಣಕಥನವನ್ನು ಮಾಡಿ, ಹಾರ ತುರಾಯಿಗಳನ್ನರ್ಪಿಸಿದರು. ಶಿರಸ್ತೇದಾರರು ಸಮಯೋಚಿತವಾದ ಮಾತುಗಳಿಂದ ಸಭಾಸದರನ್ನು ಸಂತೋಷಪಡಿಸಿದರು. ಅಲ್ಲಿಂದ ಬ್ಯಾಂಡಿನೊಂದಿಗೆ ಜನನ ಮಂಟಪಕ್ಕೆ ಬಂದು ಎಲ್ಲರೊಂದಿಗೆ ಫೋಟೋ ತೆಗೆದರು. ಅನಂತರ ಕದಳಿ, ಪುಷ್ಪ, ಚಿತ್ರಪಟಾದಿಗಳಿಂದ ಅಲಂಕೃತವಾಗಿದ್ದ ಹಿಂದುಸ್ತಾನಿ ಸ್ಕೂಲಿಗೆ ಬರೋಣವಾಯಿತು ಅಲ್ಲಿ ಸಭೆಯು ತುಂಬಿತುಳುಕುತ್ತಾ ಇತ್ತು. ಹಿಂದುಸ್ತಾನಿ ಸ್ಕೂಲ್ ಹೆಡ್ ಮಾಸ್ಟರು ಸಯ್ಯದ್ ಮೊಹಿದೀನ್ ಸಾಹೇಬರೂ, ಮಹಮ್ಮದ್ ಉಮ್ಮರ್ ಸಾಹೇಬರೂ, ಗುಲಾಂ ಹುಸೇನ್ ಅನ್ಸಾರಿ ಸಾಹೇಬರೂ ಅಡ್ರೆಸ್ಸುಗಳನ್ನು ಓದಿದರು. ಅವುಗಳ ಸಾರಾಂಶವೇನೆಂದರೆ—ಅವರ ಉಪಕಾರಸ್ಮರಣೆಯೂ ಟರ್ಕಿ ಯುದ್ಧದಲ್ಲಿ ಗಾಯಪಟ್ಟವರ ಕಷ್ಟ ನಿವಾರಣೆಗಾಗಿ ಒಂದು ಫಂಡ್ ರವಾನಿಸಲು ಎಲ್ಲರನ್ನೂ ಪ್ರೇರೇಪಿಸಿ 900 ರೂಪಾಯಿ ವರೆಗೂ ಕೂಡಿಸಿ ರವಾನಿಸಿದ್ದು ಒಂದು, ಇಲ್ಲಿರುವ ಹಿಂದುಸ್ತಾನಿ ಬಡಹುಡುಗರು ಇಂಗ್ಲಿಷ್ ಮತ್ತು ಕನ್ನಡ ಕಲಿಯಲು ಫಂಡು ಮಾಡಬೇಕೆಂದು ಪ್ರೇರೇಪಿಸಿದ್ದು ಒಂದು, ಈ ವಿಚಾರವಾಗಿ ಹೇಳಿದರು. ಶಿರಸ್ತೇದಾರರು ಅವರವರಿಗೆ ತಕ್ಕ ಹಾಗೆ ಉತ್ತರಕೊಟ್ಟು ಸಮಾಧಾನಪಡಿಸಿದರು ಬಳಿಕ ಸಂಗೀತವಾಗುವಾಗ್ಗೆ ಸಭೆಗೆಲ್ಲಾ ಗಂಧ ಪುಷ್ಪ ಫಲತಾಂಬೂಲಗಳನ್ನು ಹಂಚಿದರು. ಅಲ್ಲಿಂದ ಎಲ್ಲರೂ ಹೊರಟು ಬಾಜಾದೊಂದಿಗೆ ಕೆಲವರು ಮನೆಗಳಿಗೂ ಅಂಗಡಿಗಳಿಗೂ ಕರಕೊಂಡು ಹೋಗಿ ಮರ್ಯಾದೆ ಮಾಡಿದರು. 10 ನೇ ತಾ. ಬೆಳಗ್ಗೆ ಅವರನ್ನು ಸಾಗಕಳುಹಿಸುವಾಗ್ಗೆ ಬ್ರಾಹ್ಮಣರೂ ಇತರರೂ ಬಹಳ ದೂರದವರೆಗೂ ಹೋಗಿದ್ದರು.—ಈ ಊರಿನ ಒಬ್ಬ ದೇವಾಂಗದವರ ಮನೆಯಲ್ಲಿ ಇಸ್ಪೀಟು ಆಟ ರಾತ್ರಿ ಹಗಲೂ ನಡೆಯುತ್ತದೆಂದು ಅನೇಕರು ಅಸಮಾಧಾನದಿಂದ ಮಾತನಾಡುತ್ತಾರೆ ಅವರು ಈ ದುಸ್ಸಾಧ್ಯಕ್ಕೆ ಸ್ಥಳ ಕೊಟ್ಟಿರುವದು ತುಂಬಾ ವ್ಯಸನವೂ ಶೋಚನೀಯವೂ ಆಗಿದೆ ಇಮುಂದೆ ಹಾಗೆ ಮಾಡಲಾರರೆಂದು ನಂಬುತ್ತೇವೆ.—ಮಳೆಯಿಲ್ಲದೆ ರಾಗಿ ಪೈರೆಲ್ಲಾ ಒಣಗಿ ಹೋಯಿತು. ಮತ್ತು ಯುದ್ಧದ ನೆವದಿಂದ ವರ್ತಕರು ಪದಾರ್ಥಗಳನ್ನು ಪ್ರಿಯವಾಗಿ ಮಾರುತ್ತಾರೆ ಬಡವರಿಗೆ ತುಂಬಾ ಕಷ್ಟ ಬಂದಿದೆ. ಸರ್ಕಾರದವರು ಇದರ ವಿಷಯ ತುಂಬಾ ನಿಗಾಯಿಟ್ಟು ಬಡವರನ್ನು ಕಾಪಾಡುತ್ತಾರೆಂದು ನಂಬಿದೇವೆ.

ಕುಂತಳಾನಂದ ತೈಲವು.

192-48

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಿರುದಿನ ಪದಕಗಳನ್ನು ಎಂಟು ಸರ್ಟಿಫಿಕೇಟುಗಳನ್ನು ಪಡೆದಿದೆ. ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು. ಈ ತೈಲವು ಕೂದಲನ್ನು ಚನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಗೊಳಿಸುತ್ತದೆ. ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದಾಗಿದೆ. ಬೆಲೆ ಬಾಟ್ಲಿಗೆ 1 ರೂಪಾಯಿ 3 ಬಾಟಲಿಗೆ 1 ರೂಪಾಯಿ 10 ಆಣೆ. ಅಂಚೆ ಹಾಸಲು ಬೇರೆ. ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ.

ನಮ್ಮ ವಿಳಾಸ:—ಪಿ. ಎಮ್. ನಾಥ ಮತ್ತು ಕಂಪೆನಿ,
ವೇಪೇರಿ, ಮದರಾಸ್.

CHAMBERLAIN'S PAIN BALM.

ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು.

3-34



ಬೆನ್ನೆಲುಬಿನ ನೋವು, ಪಕ್ಕಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ತಲೆನೋವು, ದಜ್ಜಾದ ಕಡ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ.

ವಾಯುನೋವೆಂದರೇನು ?

ಕೀಲುಗಳಲ್ಲೂ ಮಣಕಟ್ಟುಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಸೆಳೆಯುವ ಬಾಧೆ, ಖಂಡಗಳು ಇರಿಯುವುದು, ವಿಶ್ರಾಂತಿ ಕೊಡದೆ ಇರುವುದು, ನಿದ್ದೆ ಹತ್ತದೆ ಇರುವುದು—ಇವೇ. ಇದೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು.

ಆಗ ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ.

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಕಾವು ಮೂಳೆಯೊಳಕ್ಕೆ ವ್ಯಾಪಿಸುತ್ತದೆ. ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ. ಮನಸ್ಸಿಗೆ ಉಲ್ಲಾಸವಾಗುತ್ತದೆ. ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಮುಟ್ಟಿದ್ದೇನೂ ಅಲ್ಲ.

ಇದು ಎಲ್ಲೆಲ್ಲೂ ಬಿಕರಿಯಾಗುವುದು. ಚಿಕ್ಕ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ.

MELLIN'S FOOD

TRADE MARK. TRADE MARK.

ಮೆಲಿನ್ಸ್ ಆಹಾರವು

[4-34]

ಕೈಸೋಕದೆ ಮಾಡಿದೆ. ಮೆಲಿನ್ಸ್ ಆಹಾರದಲ್ಲಿ ಶಿಶುಗಳು ಪುಷ್ಟಿಯಾಗಿ ಬೆಳೆಯುವವು.

ಮೆಲಿನ್ಸ್ ಆಹಾರವನ್ನು ಕ್ರಮಪ್ರಕಾರ ತಯಾರುಮಾಡಿ ಸೇವಿಸಿದರೆ ಹುಟ್ಟಿದ ಶಿಶುಗಳು ಮೊದಲುಗೊಂಡು ಮುದಿಪ್ರಾಯದವರ ತನಕ ಎಲ್ಲರಿಗೂ ಸಂಪೂರ್ಣವಾದ ದೇಹಪುಷ್ಟಿಯನ್ನೂ ವಿಶೇಷವಾದ ಬಲವನ್ನೂ ಕೊಡುತ್ತದೆ.

ಮೆಲಿನ್ಸ್ ಆಹಾರದ ಮಾದ್ರಿ ಬೇಕೆಂದು ಕೇಳಿದರೆ ಕೆಳಗಿನ ವಿಳಾಸದಾರರು ಕಳುಹಿಸುತ್ತಾರೆ:—

Messrs. OAKES & Company, Mount Road, Madras.
ವಿಳಾಸ—ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

" ವಾಸಿಮಾಡಿಕೊಳ್ಳುತ್ತೇನೆಂದು ಹೇಳು."

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು. ವಾಯು, ಕೀಲು, ಅರತಲೆ, ತಲೆನೋವುಗಳು; ಯಾವ ಕಾರಣದಿಂದ ಹುಟ್ಟುವ ಬಾಧೆಯಾಗಲಿ, ಉಬ್ಬಸ, ಹಲ್ಲುನೋವು, ಗಂಟ್ಲು ಗಾರೆನ್ನುವುದು, ಕೆಮ್ಮುಗಳು, ಶೀತನೆಗಡಿ, ಶ್ವಾಸರೋಗ, ಜಜ್ಜು, ಉಳುಕು, ಥಳುಕು, ಚೇಳು ಕಡಿದ ಬಾಧೆ ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ. ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು. ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲಿ ಕೊಡಿ ಎಂದು ಕೇಳು. ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತಗೆದುಕೋ. ಈ ಯಕ್ಷಿಣಿಯೋಪಾದಿ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ. ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ. ಲಕ್ಷಾಂತರ ಜನರು ಗುಣಹೊಂದಿದಾರೆ; ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ. [122-12]

" ಕ್ಲೆಮೆಂಟರ ಮ್ಯಾಜಿಕ್ ಬಾಂ " ಎಂಬ ಹೆಸರನ್ನು ಮರೆಯಬೇಡಿ ಅದರ ಕ್ರಯ ಬಾಟ್ಲಿಗೆ 12 ಆಣೆ; ಅಂಚೆ ವೆಚ್ಚ 4 ಆಣೆ. 3 ಅಥವಾ ಹೆಚ್ಚು ಬಾಟ್ಲಿ ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ. ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ. ವಿಳಾಸಗಳು:—(1) ಎಸ್. ಪೀಟರ್ಸ್, 37 ವಡಮಲೆಪಿಳ್ಳೆ ಬೀದಿ, ಪುರಸವಾಕಂ, ವೇಪೇರಿ, ಮದರಾಸ್; (2) ಜೆ. ಎಸ್ ಕನ್ನಯ್ಯಶೆಟ್ಟರು, ಜನರಲ್ ಮರ್ಚಂಟ್, ತುಮಕೂರು.

ಶ್ರೀಕರಕಸ್ತೂರಿಮಾತ್ರೆ

ಬಿ. ವಿ. ಪಂಡಿತರ

250 ಮಾತ್ರೆಯುಳ್ಳ ಸೀಸೆಗೆ 4 ಆ.; 5 ಸೀಸೆಗಳಿಗೆ 1 ಇನಾಂ.

ಈ ಮಾತ್ರೆಗಳ ಬೆಲೆಯನ್ನು ನೋಡಿ ಇವರ ಗುಣವನ್ನು ಊಹಿಸಲಾಗದು. ಟಿಬೆಟ್ ದೇಶದ ಕಸ್ತೂರಿಯಿಂದಲೇ ಶಾಸ್ತ್ರೋಕ್ತವಾಗಿ ತಯಾರುಮಾಡಲ್ಪಡುತ್ತಿರುವ ಈ ಶ್ರೀಕರ ಕಸ್ತೂರಿ ಮಾತ್ರೆಗಳು ಸುವಾಸನೆಯಾಗಿರುವುದು ಮಾತ್ರವಲ್ಲದೆ ತಾಂಬೂಲದೊಡನೆ ಅಥವಾ ಹಾಗೆಯೇ ಸೇವಿಸಿದರೆ ಎಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸುವುದು ಮಕ್ಕಳಿಗೆ ಉಂಟಾಗುವ ಅಜೀರ್ಣಭೇದಿ-ಜ್ವರ-ಕೆಮ್ಮು-ನೆಗಡಿ-ಯಳವು-ಹೊಟ್ಟೆಯುಬ್ಬರ-ಈ ರೋಗಗಳನ್ನು ಸಮೀಪದಲ್ಲಿಯೇ ವೈದ್ಯನಿದ್ದಂತೆ ತಕ್ಷಣ ಗುಣಪಡಿಸುವುದು. ಪ್ರಯಾಣಿಕರಿಗೂ ಸಾಂಕ್ರಾಮಿಕ ರೋಗಸ್ಥಳದಲ್ಲಿರುವವರಿಗೂ ಮಲೆನಾಡಿನಲ್ಲಿರುವವರಿಗೂ ಇದರಂತೆ ಮತ್ತಾವುದೂ ಆರೋಗ್ಯವನ್ನು ಕೊಟ್ಟು ಕಾಪಾಡಲಾರದು. [220-42]

ವಿಷಮಜ್ವರಗಳು-ನೆಗಡಿ-ಕೆಮ್ಮು-ತಲೆನೋವು-ಅಗ್ನಿಮಾಂದ್ಯ-ಶೀತವಾಯು-ಹಲ್ಲುನೋವು-ಮಲಬಂಧ-ಅರೋಚಕ-ನರಗಳ ದೌರ್ಬಲ್ಯ—ಈ ರೋಗಗಳನ್ನು ಪ್ರತಿಯೊಬ್ಬರಿಗೂ ಗುಣಪಡಿಸಿ ರಕ್ತವೃದ್ಧಿಯನ್ನುಂಟುಮಾಡುವುದು. ಸಾವಿರಾರು ಜನರು ಪರೀಕ್ಷಿಸಿದ್ದಾರೆ. ಟಪಾಲ್ ಖರ್ಚು 12 ಸೀಸೆ ವರೆಗೆ 4 ಆಣೆ.

ವಿಳಾಸ—ಮ್ಯಾನೇಜರ್, ಸದ್ವೈದ್ಯಶಾಲಾ, ನಂಜನಗೂಡು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಸೆಡೆತ (ಭಾರ), ಮೈ ನಡುಕ, ಶೀತಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಯಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದಾಗ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಹುತುಶೂಲೆ, ಮಕ್ಕಳ ಎಳವು, ಜ್ವರ, ಸೆಟ್ಟುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ —220 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ; 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪೀ ವರೆಗೆ ಪೋಸ್ಟೇಜು 4 ಆಣೆ. [179-50]

೨. ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈವಿಟಿವಿಕೆಂದು ಕೋರಿದವರಿಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ನಡೆಸುತ್ತದೆ ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರಕ್ಕೆ, ಮೂತ್ರವು ಕಟ್ಟಿದ ಕೂಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿ! ಒಂದೇ ಒಂದು ಬುದ್ಧಿಯು ಮನೆಯಲ್ಲಿರಲಿ! ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುವುದು. ಬೆಲೆ ರೂ. 1; ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

Jain's Swadeshi Balm.

ಜೈನ್ ರವರ ಸ್ವದೇಶೀ ಬಾಮ್ ರೆಜಿಸ್ಟರಾದ ಟ್ರೇಡ್ ಮಾರ್ಕು.

ಈ ಬಾಮ್ ವಾತ, ಸಂಧಿವಾತ, ಕುತ್ತಿಗೆ ನೋವು, ಅರೆತಲೆನೋವು, ನಡುನೋವು, ಶೀತ, ಸೆಳೆತ, ಬೆನ್ನುನೋವು, ಊದು, ಕೆಮ್ಮು, ಎದೆನೋವು, ಹೊಟ್ಟೆನೋವು, ಚಳುಕು, ಚೇಳುಕಡಿತ, ಕೈಕಾಲು ದೇಹ ಕೀಲುಗಳ ನೋವು, ಉರಿ, ಸುಟ್ಟಗಾಯ ಮೊದಲಾದವುಗಳನ್ನು ನಿರ್ಮೂಲವಾಗಿ ಹೋಗಲಾಡಿಸುತ್ತದೆ. ಜಡ್ಜಿಗಳಿಗೂ, ಮೆದುಳಿನ ಕೆಲಸಗಾರರಿಗೂ ಸಾಮಾನ್ಯವಾಗಿ ಎಲ್ಲಾ ಕೆಲಸದವರಿಗೂ ಈ ಸ್ವದೇಶೀ ಬಾಮ್ ಬಹಳ ಪ್ರಯೋಜನಕರವಾದದ್ದು. ಕೊಬ್ಬಾಗಲಿ, ಬೇರೆ ಯಾವ ಕೆಟ್ಟ ಪದಾರ್ಥವಾಗಲಿ ಮಿಶ್ರಮಾಡಿಲ್ಲ, ಯೂರೋಪ್, ಇಂಡಿಯಾ, ಅಮೆರಿಕಾ ವೈದ್ಯಗ್ರಂಥಗಳನ್ನು ನೋಡಿ ತಯಾರುಮಾಡಿದೇವೆ. ಹಿಂದುಗಳೆಲ್ಲಾ ಇದನ್ನು ಉಪಯೋಗಿಸಬಹುದು. ಇದು ಯಕ್ಷಿಣಿಯಂಥಾ ಮದ್ದು. ಲಕ್ಷಾಂತರ ಜನರನ್ನೆಲ್ಲಾ ವಾಸಿಮಾಡಿದೆ. ಪ್ರತಿ ಒಬ್ಬರೂ, ಪ್ರತಿ ಮನೆಯವರೂ ಇದನ್ನು ಇಟ್ಟೇ ಇರಬೇಕು. ಇದು ಚಿನ್ನದಂಥಾ ಔಷಧ. ಎಲ್ಲಾ ವೈದ್ಯಶಾಲೆಗಳಲ್ಲೂ ಬಿಕರಿಯಾಗುತ್ತಿದೆ. ಸೂರ್ಯಕಿರಣಗಳ ರೆಜಿಸ್ಟರ್ ಮಾರ್ಕ್ ಇರುವುದನ್ನು ನೋಡಿ ಕೊಂಡುಕೊಳ್ಳಿ. ನಕ್ಕಲ್ ಔಷಧವನ್ನು ಕೊಂಡು ಮೋಸಹೋಗಬೇಡಿ. ಉಪಯೋಗದ ಕ್ರಮ ಬಾಟ್ಲಿ ಸಂಗಡಲೇ ಇಟ್ಟಿದೆ. 1 ಬಾಟ್ಲಿಗೆ 12 ಆಣೆ; 3 ಕ್ಕೆ ರೂ. 1-14-0. ವಿ ಪಿ ಬೇರೆ. ನಮ್ಮ ಎಲ್ಲಾ ಔಷಧಿಗಳ ಕ್ಯಾಟ್ಲಾಗನ್ನು ಬರೆದು ತರಿಸಿಕೊಳ್ಳಿ. [25-30]

ವಿಳಾಸ—ಜೆ. ಗುಲಾಬ್ ಚಂದ್ ಪೌರ್ವಾಲ್,
60 ನೈನಪ್ಪನಾಯಕ್ ಬೀದಿ, ಪಾರ್ಕ್ ಟೌನ್, ಮದರಾಸ್.

500 ರೂಪಾಯಿಗಳು ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

ಈ ಮುರಬ್ಬಾವು " ಪಂಜಾಬ್ ಸಾಲಾಮಿಸ್ರಿ " ಅಲ್ಲವೆಂದು ವ್ಯಕ್ತಪಡಿಸುವವರಿಗೆ
500 ರೂಪಾಯಿಗಳ ಬಹುಮಾನ ಕೊಡಲ್ಪಡುವುದು.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡವರಿಗೆ ಹೃದಯ ಕೋಶವು ಬಲಹೀನವಾಗಿ ನಾನಾ ವ್ಯಾಧಿಗಳಿಂದ ಮರಣ ಪರಿಯಂತರವೂ ದುಃಖಪಡುವರು. ಈ " ಪಂಜಾಬ್ ಸಾಲಾಮಿಸ್ರೀ ಮುರಬ್ಬಾ " ವಿನ ಸೇವನೆಯಿಂದ ಕೈ, ಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ತಲೆಯ ನೋವೂ, ಇವುಗಳೆಲ್ಲವೂ ಪಂಜಾಬ್ ಸಾಲಾಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು, ಮೆದುಳಿಗೆ ಬಲವನ್ನುಂಟುಮಾಡುವುದು, ಧಾತುವನ್ನು ಶೇಖರಿಸುವುದು, ಸೊಂಟದ ನೋವು ಸ್ವಲ್ಪ ಮಾತ್ರವೂ ಇರಲಾರದು. ಈ ಪಂಜಾಬ್ ಸಾಲಾಮಿಸ್ರಿಯ ಮುರಬ್ಬಾಕ್ಕೆ ತಾಂಬ್ರದ ಮತ್ತು ಭಂಗಾರದ ಭಸ್ಮವು ಎಷ್ಟು ಮಾತ್ರವೂ ಸಮಾನವಾಗಲಾರದು. ಹೊಟ್ಟೆಯಲ್ಲಿರುವ ಜ್ವರದ ಗಡ್ಡೆಯನ್ನು ನಾಶಪಡಿಸುವುದು. ಶ್ವಾಸ ಕಾಸರೋಗಗಳನ್ನು ನಿರ್ಮೂಲಪಡಿಸುವುದು. ಕಾಬೂಲ್, ಕಾಂದಹಾರ್ ದೇಶಗಳ ಜನರು ಸಾಲಾಮಿಸ್ರಿಯ ಹಣ್ಣನ್ನು ಬಹಳವಾಗಿ ತಿನ್ನುವರು. ಆದ್ದರಿಂದ ಶಕ್ತಿಯಲ್ಲಿ ಬಹಳ ಗಟ್ಟಿಗರು. ಡಬ್ಬಾ 1 ಕ್ಕೆ ರೂ. 2-0-0. ಟಪಾಲ್ ಖರ್ಚು ಅಲಾಯದ. [133-10]

ಅನುಪಾನಪತ್ರಿಕೆ ಔಷಧದ ಸಂಗಡ. ಕ್ಯಾಟ್ಲಾಗ್ ಅಪೇಕ್ಷಿಸುವವರು 6 ಕಾಸಿನ ಸ್ಟಾಂಪು ಕಳಿಸಿ.

ಏಜಂಟರು—ಡಿ. ಸೈಯದ್ ಉಸ್ಮಾನ್ ಅಂಡ್ ಕೊ,
ದೊಡ್ಡಪೇಟೆ, ಬೆಂಗಳೂರು ಸಿಟಿ.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
5 ಹಾಜಿ ಸಾಹೇಬ್ ಮಹಡಿ, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

S U. N. & Co.,

BENARES CITY, U. P.

ಸೊಗಸಾದ ಸರಕುಗಳು !!

ದೊಡ್ಡ ಕಂಪೆನಿ !

ಈ ನಮ್ಮ ಕಂಪನಿಯಲ್ಲಿ ನೆಯ್ದು ತಯಾರಿಸುವ ಉತ್ತಮವಾದ ಬನಾರಸ್ ರೇಷ್ಮೆ ಜರೀ ಶೀರೆಗಳು, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ್ಟಿ, ಮಗುಟ, ಜಗನ್ನಾಥ ಜಾಗಟೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಕ್ಯಾಟಲಾಗ್ 1 ನ್ನು ಮತ್ತು 2 ವಿಶ್ವೇಶ್ವರ ಪಟಗಳನ್ನು ಇನಾಮಾಗಿ ಕಳುಹಿಸಲಾದೀತು. [69-23]

ಎಸ್. ಯು. ಎನ್. ಮತ್ತು ಕಂಪೆನಿ, ಕಾಶಿ.

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶದಾಮವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು ? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಾವ ಉಪಕರಣವಾದರೋ:

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ. ಈ ತೈಲವನ್ನು ತೊಡೆದುಕೊಳ್ಳುತ್ತಲೇ, ಮಸ್ತಿಷ್ಕದ ಬೇಗೆಯು ಕಡ್ಡಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ತೊಡೆಯ ತೊಡಗಿದ ಬಳಿಕ ಎಂದಿಗೂ ಜಗುಳಿ ಬಿದ್ದು ಹೋಗಲಾರವು; ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವದು.

ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡುವದಕ್ಕಿಂತ ಒಂದೇಸಾರೆ ಈ "ಕಾಮಿನಿಯಾ ತೈಲ" ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಒಫ್ ಮೇರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಅವುಗಳಲ್ಲಿ ಒಂದನ್ನೇ ನೋಡಿರಿ! ಸೀಗಿನಹಾಳಕರ ಬಂಧುಗಳು ಬಸವನಗಲ್ಲಿ, ಬೆಳಗಾಂವ—ತಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವುದಕ್ಕೆ ಸಪ್ರೋತ್ಸಾಹ್ಯವಾದೊಂದು ಸಾಧನವಾಗಿರುತ್ತದೆ. ಆದಕಾರಣ ಇನ್ನೊಂದು ಸೀಸೆಯನ್ನು ಕೂಡಲೇ ವಿ. ಪಿ. ದ್ವಾರಾ ರವಾನಿಸುವುದು. ಸೀಸೆಯೊಂದರ ಕ್ರಯ ರೂ. 1-0-0, ಅ. ವೆ. 0-4-0 ಬೇರೆ. 3 ಸೀಸೆಗಳ ಕ್ರಯ ರೂ. 2-10-0, ಅ. ವೆ. 0-7-0 ಬೇರೆ.

ಸೂಚನೆ.—ಅನೇಕ ಮರ್ಯಾದೆಗೇಡಿಗಳಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ವಿಕರಿಯಿಂದ ತಮಗೆ ಅತ್ಯಲ್ಪ ನಫೆಯೇ ದೊರಕುತ್ತದೆಂದು, ನೀವು "ಕಾಮಿನಿಯಾ ತೈಲ" ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭ ದೊರಕತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಅದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳುವಷ್ಟು ಮೆಹರಬಾನ್ ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಬೇಕಾಗದೆ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು !

ಒಟ್ಟೊ ದಿಲ್ ಬಹಾರ್ !!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಆಲ್ಕೋಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈಚೀಲದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ. ಈ ಒಟ್ಟೊ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ. [19-31]

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಡ್ರಾಮಿನ (ವಿನಾಡಿಯಂ) ಸೀಸೆ 1ಕ್ಕೆ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0. ಅಂಚೆಯ ವೆಚ್ಚ ಬೇರೆ ರೂ. 0-4-0. ಒಟ್ಟೊ-ದಿಲ್ ಬಹಾರ್ ಪರಿಮಳದ ಕಾರ್ಡುಗಳು ಡಜನ್ ಒಂದಕ್ಕೆ 0-12-0.

ಮೇಲೆ ಕಂಡ ಎಲ್ಲಾ ಸುಗಂಧಗಳು ಸಿಕ್ಕುವ ಪತ್ತೆ :—

ಅಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪೆನಿ,

ಜುಮ್ಮಾಮಸ್ಜಿದ್, ಬೊಂಬಾಯಿ.

ಏಜೆಂಟ್, ವಿ. ಎಲ್. ನಾಯಕ್, ಮಂಗಳೂರು.

ಮೇಲಾದ ಜರ್ಮನ್ ರೇಷ್ಮೆ ಪಂಚೆಗಳು.

ಒಳ್ಳೇ ಸಮಯ ! ಸಾವಿರಗಟ್ಟಲೆ ಖರ್ಚಾಗುತ್ತದೆ !! ನಂತರ ದೊರೆಯಲಾರದು !!!

ಅನೇಕ ಪಂಚೆಗಳು ದಿನವೂ ಖರ್ಚಾಗುತ್ತಾ ಇರುವುದರಿಂದ ಪ್ರಕೃತ ಬೆಲೆಯು ತಗ್ಗಿಸಿರುತ್ತೇವೆ. ವಾಚಕರೇ ! ಶೃಂಗಾರವನ್ನೂ ನಾಗರಿಕತೆಯನ್ನೂ

ಹೊಂದಿರುವ ಮೇಲಾದ ಅಸಲ್ ರೇಷ್ಮೆ ಪಂಚೆಗಳು ಹಬ್ಬಗಳ ಕಾಲದಲ್ಲಿ ಹೊದಿಯಲು ಅನೇಕ ಪಂಚೆಗಳನ್ನು ತರಿಸಿಕೊಂಡಿರುವದ್ದರಿಂದ ಮುಕ್ಕಾಲು ಪಾಲು ಸರಕು ಖರ್ಚಾಗಿಹೋಗಿರುತ್ತೆ. ಈಗ ಸ್ವಲ್ಪವೇ ಉಳಿದಿರುತ್ತೆ. ಈ ಪಂಚೆಗಳು ಸ್ತ್ರೀ ಪುರುಷರು ಬಾಲಿಕೆಗಳು ಧರಿಸಿಕೊಳ್ಳಬಹುದು. ಅಪೂರ್ವವಾದ ಪಂಚೆಗಳು. ಇದರಲ್ಲಿ ಕೆಂಪು, ಹಸರು, ಎಳೆಹಸರು, ರೋಜಾ, ನೇರಿಳೆ ವರ್ಣ, ಇತ್ಯಾದಿ ರಂಗುಗಳುಂಟು. ಬಹಳ ಉತ್ಕೃಷ್ಟವಾದ ಪಂಚೆಗಳು. ಈ ಖರೀದಿಗೆ ನಮ್ಮಲ್ಲಿ ಅಲ್ಲದೆ ಮತ್ತೆ ಯಾರಲ್ಲಿಯೂ ದೊರೆಯಲಾರದು.

5½ ಮೊಳ ಉದ್ದ, 2½ ಮೊಳ ಅಗಲ ಇರುವ ಪಂಚೆ ಒಂದಕ್ಕೆ ರೂ. 3. ಪಂಚೆ 1 ಕ್ಕೆ ಟಪಾಲು ಖರ್ಚು 4 ಆಣೆ. ಎರಡು ಪಂಚೆಗಳನ್ನು ಒಂದೇ ಸಲ ತರಿಸಿಕೊಂಡರೆ ಟಪಾಲು ಖರ್ಚು ಇನಾಂ.

ನಮ್ಮ ವಿಳಾಸ—ಎನ್. ಎಂ. ಸ್ವಾಮಿ ಅಂಡು ಕಂಪೆನಿ,

[109-15] ನಂ. 44, ನಂಬುಳಯ್ಯರ್ ಬೀದಿ, ಮದರಾಸು.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ:—ಬೆನ್ನಿನಲ್ಲಿ ಛಳುಕು; ನಿದ್ದೆಯಿಲ್ಲದೆ ಇರುವುದು; ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಿಳುಪಾಗಿಯೋ ಇಳಿಯುವುದು; ಬಿಡದೆ ಬಾಯಾರಿಕೆ; ಬಳಲಿಕೆ; ಎದೆ ತಲ್ಲಣಿಸುವುದು; ತಲೆನೋವು; ಗಾಬರಿ; ಕಣ್ಣುಮೊಬ್ಬು; ತಲೆ ತಿರುಗುವಿಕೆ; ಮೈನೋವು; ಕೀಲುನೋವು; ಮರವು; ನಿಶ್ರಾಣ; ಇವೇ ಮೊದಲಾದುವು. ಅಲಕ್ಷ್ಯಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [181-5]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು



ಸೀಸೆ ೨—೨—೦; ಅಥವಾ ೬ ಬುದ್ದಿಗಳಿಗೆ ರೂ. ೧೨—೮—೦ ಔಷಧಿಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು. ಅಥವಾ ಡೋನ್ಸ್, ಪಿ. ಓ. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುವು

ಎಲೆಕ್ಟ್ರಿಕ್ ಪಾಕೆಟ್ ಸಿಗಾರ್ ದೀಪಗಳು.



ಈ ದೀಪಗಳು ರಾತ್ರಿ ಕಾಲದಲ್ಲಿ ಬೆಳಕು ಉಂಟುಮಾಡುವುದಕ್ಕೂ ಸಿಗರೇಟು ಚುಟ್ಟಾ ವಗೈರೆ ಹತ್ತಿಸಿಕೊಳ್ಳುವುದಕ್ಕೂ ಅತ್ಯುತ್ತಮವಾದವು. ಈ ದೀಪವನ್ನು ಹತ್ತಿಸಬೇಕಾಗಿದ್ದರೆ ಇದರಲ್ಲಿರತಕ್ಕ ಬಟನ್ ಎಂಬ ಗುಂಡಿಯನ್ನು ಅಮುಕಿದರೆ ತಾನಾಗಿಯೇ ಹತ್ತಿಕೊಂಡು ಬೆಳಗಾಗುತ್ತೆ. ಬಾಕೀ ವಿಷಯಗಳನ್ನು ನೋಟೀಸಿನ ಮೂಲಕ ತಿಳಿದುಕೊಳ್ಳಬಹುದು. ಇದರ ಬೆಲೆ ೧ ಕ್ಕೆ ೧ ರೂಪಾಯಿ ೮ ಆಣೆ. ವಿ.ಪಿ. ಖರ್ಚು ಪ್ರತ್ಯೇಕವಾಗುತ್ತದೆ.

ಮಹಾರಾಜಾ ಸೋಪ್.

ಈ ಸೋಪು ಯಾವ ಸ್ಥಳದಲ್ಲಿ ಕೂದಲನ್ನು ತೆಗಿಸಬೇಕೆಂದು ಅಪೇಕ್ಷಿಸುವಿರೋ ಆ ಸ್ಥಳದಲ್ಲಿ ತಣ್ಣೀರಿನಿಂದ ಈ ಸೋಪನ್ನು ತಿಕ್ಕಿ ೫ ನಿಮಿಷದ ನಂತರ ಬಟ್ಟೆಯಿಂದ ಒರಸಿದರೆ ಸಂಪೂರ್ಣವಾಗಿ ಯಾವದೊಂದು ಕಲೆಯೂ ಇಲ್ಲದೆ ಹೊರಟುಹೋಗುತ್ತೆ. ಇದರ ಬೆಲೆ ಸೋಪು ೧ ಕ್ಕೆ ೫ ಆಣೆ. ಪೆಟ್ಟಿ ೧ ಕ್ಕೆ ೧೨ ಆಣೆ. ವಿ.ಪಿ. ಚಾರ್ಜು ಪ್ರತ್ಯೇಕ.

ವಿಳಾಸ—ಪಾಂಡಿಯ ಅಂಡ್ ಬ್ರದರ್ಸ್,

104, ನಾಯನಪ್ಪನಾಯಕ್ ಬೀದಿ,

[177-2] ಪಾರ್ಕ್ ಟೌನ್, ಮದರಾಸ್.

ತಾಲ್ಲೂಕು ವರ್ತಮಾನಗಳು.

ಶಿವಮೊಗ್ಗ.—ಈ ಪ್ರಾಂತ್ಯ ಬಹಳ ಮಳೆ ಬಂದು ಕೆರೆ ಕುಂಟೆಗಳೆಲ್ಲಾ ಕೋಡಿಬಿದ್ದು ತುಂಗಾ ನದಿಯ ಪ್ರವಾಹ ಹೆಚ್ಚಿ ಈಗ ತಗ್ಗಿರುತ್ತೆ. ಎಲ್ಲೆಲ್ಲೂ ಜಲಮಯವಾಗಿದೆ. ಟೌನ್ನಲ್ಲಿ ಕೆಲವು ರಸ್ತೆಗಳು ನೀರಿನಿಂದ ಕೊರಕಲು ಬಿದ್ದು ಸಂಚಾರಕ್ಕೆ ತುಂಬಾ ತೊಂದರೆಯಾಗಿದೆ. ಡೆಪ್ಯುಟಿ ಕಮಿಷನರ್ ಸಾಹೇಬರೂ, ಪ್ರೆಸಿಡೆಂಟರೂ ಆಗಾಗ್ಗೆ ಟೌನ್ನಲ್ಲಿ ಸಂಚರಿಸುತ್ತಿರುವದರಿಂದ ಚೊಕ್ಕಟವಾಗಿಯೂ, ರಾತ್ರಿ ಬೆಳಕು ವಗೈರೆ ಕ್ರಮವಾಗಿಯೂ ಇದೆ. ಚರಂಡಿಗಳಲ್ಲಿ ಮೂತ್ರವಿಸರ್ಜನೆ ಮಾಡಿದ ಕೆಲವರಿಗೆ ಶಿಕ್ಷೆಯಾದ್ದರಿಂದ ಗಲೀಜಾಗದಂತೆ ಅಡ್ಡಿಮಾಡಿದ್ದಕ್ಕಾಗಿ ಕೊಂಡಾಡುತ್ತೇನೆ.—ಶಿವಮೊಗ್ಗೆಯಿಂದ ಹೊಳೆಹೊನ್ನೂರಿಗೆ ಹೋಗುವ ರಸ್ತೆಯು ಗುಡ್ಡೆಕಲ್ ಸಮೀಪ ಸುಮಾರು 1 ಫರ್ಲಾಂಗ್ ದೂರ 8-10 ದಿವಸದಿಂದಲೂ ನೀರು ರಸ್ತೆಯ ಮೇಲೆ ಹರಿಯುತ್ತಾ ಇದೆ. ಇದರಿಂದ ಒಂದು ಸಣ್ಣ ಸೇತುವೆ ಕಲ್ಲುಗಳೆಲ್ಲಾ ಕುಸಿದುಹೋಗಿವೆ. ಇನ್ನೊಂದು ಮಧ್ಯ ರಸ್ತೆಯಲ್ಲಿ ಬಿದ್ದು ಸುಮಾರು 2 ಗಜ ಸುತ್ತಳತೆಯಗಲವಾಗಿದೆ. ಗಾಡಿ ವಗೈರೆ ತಿರುಗಾಡಲು ತುಂಬಾ ಅಪಾಯಕರವಾಗಿದೆ. ಇಲಾಖೆಯವರು ಕ್ರಮಪಡಿಸಿದರೆ ಮೇಲಾದೀತೆಂದು ಕೋರುತ್ತೇನೆ.

ಅರಸೀಕೆರೆ.—ಈಚೆಗೆ ಸ್ವಲ್ಪ ಮಟ್ಟಿಗೆ ಮಳೆ ಬಂದದ್ದರಿಂದ ರೈತರ ಬಿತ್ತನೆಗೆ ಅನುಕೂಲವಾಯಿತು. ರಾಗಿ, ಮೆಣಸು ತಕ್ಕ ಮಟ್ಟಿಗೆ ಫಸಲು ಚೆನ್ನಾಗಿವೆ. ದನಕರುಗಳಿಗೆ ಸ್ವಲ್ಪ ಮೇವು ಸಿಕ್ಕಿದಾಗ್ಯೂ ಕೆರೆ ಕುಂಟೆ ಭಾವಿಗಳಿಗೆ ಸರಿಯಾಗಿ ನೀರು ಬಾರದೆ ಬಹಳ ಅಡಚಣೆಯುಂಟಾಗಿದೆ. ದಿನಸಿ ಧಾರಣೆಗಳು ಇನ್ನೂ ಛಡಾವಿನಲ್ಲಿಯೇ ಇರುತ್ತವೆ. ಈ ಮಧ್ಯೆ ಹರಿಯರಿಗೆ ಆಚೆ ರೈಲ್ವೆ ಸೇತುವೆ ಮೇಲೆ ಪ್ರವಾಹ ಬಹಳವಾಗಿ ಬಂದದ್ದರಿಂದ ರೈಲು ಮುಂದಕ್ಕೆ ಹೊರಡದೆಯೂ, ದಿನಸಿಗಳು ಬಾರದೆಯೂ, ಈಗ ಸಂಭವಿಸಿರುವ ಯುದ್ಧದ ಗಲಭೆಯಿಂದಲೂ ಇಲ್ಲಿನ ವರ್ತಕರು ಧಾರಣೆ ಹೆಚ್ಚಿಸಿರುತ್ತಾರೆ. ಇದರಿಂದ ಬಡಬಗ್ಗರು ಜೀವಿಸುವದು ಕಷ್ಟವಾಗಿದೆ. ತಾಲ್ಲೋಕು ಮುಖ್ಯಸ್ಥರು ಈ ಸಮಯದಲ್ಲಿ ವರ್ತಕರನ್ನೆಲ್ಲಾ ಕರಸಿ ಅವರಿಗೆ ತಕ್ಕಮಟ್ಟಿಗೆ ಬುದ್ಧಿ ಹೇಳಿ ಧಾರಣೆಗಳನ್ನು ನಿಗದಿಮಾಡುವದು ಪರೋಪಕಾರವಾಗಿರುತ್ತದೆ.—ಮ್ಯುನಿಸಿಪಲ್ ಲಾಂದ್ರಾ ಕಂಭಗಳು ಸ್ವಲ್ಪವೇ ಇರುತ್ತವೆ. ಇದರಲ್ಲೂ ಸ್ವಲ್ಪ ಕಡೆ ಲಾಂದ್ರಾ ಹಚ್ಚುತ್ತಾರೆ. ರಾತ್ರಿ ಕಾಲದಲ್ಲಿ ಸಂಚರಿಸುವದು ಬಹಳ ಕಷ್ಟವಾಗಿದೆ. ಅಧಿಕಾರಿಗಳು ಗಮನಕೊಡಬೇಕಾಗಿರುತ್ತದೆ.—ಇಲ್ಲಿ ಮಾಂಸದ ಅಂಗಡಿ ಒಂದೇ ಇದ್ದು ಸರಿಯಾದ ಒಳ್ಳೇ ಮಾಂಸವನ್ನು ಮಾರುವದಿಲ್ಲ. ಸ್ಯಾನಿಟರಿ ಇನ್ಸ್ಪೆಕ್ಟರೂ, ಹೆಲ್ತ್ ಆಫೀಸರೂ ಆಗಾಗ್ಗೆ ಪರಿಶೀಲಿಸಿ ಮಾಡಿ ಒಂದು ನಿರಖು ಇಟ್ಟು ಎಲ್ಲರಿಗೂ ಅನುಕೂಲವಾಗುವಂತೆ ಮಾಡುವದು ಉತ್ತಮ.

ಚಿತ್ರದುರ್ಗ.—ಈ ಪ್ರಾಂತ್ಯ ಸಾಮಾನ್ಯ ಮಳೆಯಾಗಿರುತ್ತದೆ. ಕೆಂಪು ಭೂಮಿಗೆ ನೀರು ಸಾಲದು. ಆದರೂ ಬೇಸಾಯಗಾರರು ಬೀಜ ಬಿತ್ತುವ ಪ್ರಯತ್ನ ಮಾಡುತ್ತಿರುವರು. ಆಗಾಗ್ಗೆ ಸಣ್ಣಗೆ ತುಂತುರು ಮಳೆ ಬರುವದೇ ಹೊರ್ತು ದೊಡ್ಡ ಮಳೆಗಳಿಲ್ಲ. ಕೆರೆಗಳಿಗೆ ನೀರು ಬಂದಿಲ್ಲ. ಜನಗಳಿಗೆ ನೀರಿನ ಕ್ಷಾಮ ಅತಿಶಯವಾಗಿದೆ. ನಲ್ಲಿಗಳಲ್ಲಿ ನೀರು ದೊರೆಯುವದು ಕಷ್ಟ. ಕೆಲವರು ಸಣ್ಣ ನೌಕರರ ಮೇಲೆ ಗುರುಗುಟ್ಟುವರು. ಕೆಲವರು ಭಾವಿಗಳಿಗೆ ಅಲೆದಾಡುವರು. ಈ ಗ್ರಾಮಕ್ಕೆ ಪದೇ ಪದೇ ಇಂಥಾ ಕ್ಷಾಮಗಳು ಉಂಟಾಗುತ್ತಲೇ ಇರುವದು. ಮಾರಿಕಣಿವೆಯಿಂದಾದರೂ ನೀರನ್ನು ಒದಗಿಸಿ ಜನಗಳ ಕಷ್ಟವನ್ನು ತಪ್ಪಿಸಬಾರದೇ ಎಂದು ಪ್ರಾರ್ಥಿಸುವೆನು.—ಧಾನ್ಯಾದಿಗಳೆಲ್ಲಾ ಬಹಳ ತಗ್ಗಾಗಿರುವವು. ರೂಪಾಯಿಗೆ 6 ಸೇರು ಅಕ್ಕಿ, 5 ಸೇರು ಬೇಳೆ, 12 ಸೇರು ರಾಗಿ, 2 ಸೇರು ತುಪ್ಪ, ಈ ರೀತಿ ಮಾಯ್ತಿನೆ. ಬಡವರ ಜೀವನ ಬಹು ಕಷ್ಟವಾಗಿದೆ. ಇದಕ್ಕಿಂತಲೂ ಕ್ಷಾಮ ಉಂಟೇ ಎಂದು ಜನಗಳು ಹೇಳುತ್ತಿರುವರು. ಸಣ್ಣ ನೌಕರರಿಗೆ ಅಲೋಯನ್ಸಾದರೂ ಕೊಡಿಸಿದರೆ ಮಹೋಪಕಾರವಾದೀತು.—ಜನರಲ್ ಅಸಿಸ್ಟೆಂಟ್ ಕಮಿಷನರ್ ಮಿ. ರಾಮಚಂದ್ರರಾಯರಿಗೆ ದಿವಾನರ ಆಫೀಸಿಗೆ ವರ್ಗವಾಗಿದೆ. ಇವರು ಇಲ್ಲಿಗೆ ಬಂದು 3 ವರ್ಷವಾಯಿತು. ಜನಾನುರಾಗಿಗಳಾಗಿದ್ದರು.—15-20 ದಿನಗಳ ಕೆಳಗೆ ಥಿಯೊಸಾಫಿಕಲ್ ಸಂಘದ ಉಪನ್ಯಾಸಕರು ಬಂದಿದ್ದರು. 5 ಉಪನ್ಯಾಸಗಳಾದವು. ಅನೇಕರು ಸೇರುತ್ತಿದ್ದರು. ಉಪನ್ಯಾಸಕರು ಸ್ತ್ರೀಯರುಗಳಿಗೇ ಒಂದು ಸಂಘವನ್ನು ಸ್ಥಾಪಿಸಿದಂತೆ ಕಾಣುವದು. ಈಚೆಗೆ ಪ್ರತಿ ಭಾನುವಾರವೂ ಕೆಲವು ಸ್ತ್ರೀಯರು ಗರ್ಲ್ಸ್ ಸ್ಕೂಲಲ್ಲಿ ಸೇರುತ್ತಾರೆ. ಆದರೆ ವಿದ್ಯಾವತಿಯರಾದ ಸ್ತ್ರೀಯರೇ ಸೇರಬೇಕೆಂಬ ನಿಬಂಧನೆ ಮಾಡಿಕೊಂಡಿರುವರಂತೆ. ಇದಕ್ಕಿಂತ ಇಷ್ಟವುಳ್ಳವರೆಲ್ಲಾ ಸೇರಬಹುದೆಂದು ಮಾಡಿದರೆ ಹಿಂದುಳಿದ ಅನೇಕ ಸ್ತ್ರೀಯರಿಗೂ ಬಹಳ ಪ್ರಯೋಜನವಾಗುವುದು.

ಚಾಮರಾಜನಗರ.—ನಮ್ಮ ತಾಲ್ಲೋಕು ಶಿರಸ್ತೇದಾರ್ ಸಯ್ಯದ್ ಅಬ್ದುಲ್ ಮಾಲಿಕ್ ಸಾಹೇಬರಿಗೆ ಮೈಸೂರಿಗೆ ವರ್ಗವಾಯಿತು. ಮುಸಲ್ಮಾನರಲ್ಲಿ ಇಂಥವರನ್ನು ನೋಡಿದ್ದು ಅಪರೂಪ. ಇವರು ನಿಷ್ಪಕ್ಷಪಾತಿಗಳೂ ಸುಶೀಲವಂತರೂ ಆಗಿದ್ದಾರೆ. ಜಾತಿ ಪಕ್ಷಪಾತವಿಲ್ಲ. ಎಲ್ಲರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿದ್ದರೆಂದು ಎಲ್ಲಾ ಕೋಮಿನವರೂ ಹೇಳುತ್ತಿದ್ದಾರೆ. ಮೊನ್ನೆ 9 ನೇ ತಾರೀಖು ಇಲಾಖೆಗಳ ಅಧಿಕಾರಿಗಳೂ, ನೌಕರರೂ, ಮ್ಯುನಿಸಿಪಲ್ ಮೆಂಬರುಗಳೂ, ವರ್ತಕಮಂಡಲಿಯವರೂ, ಬೇರೆಬೇರೆ ಕೋಮಿನವರೂ ಸೇರಿ ಅವರನ್ನು ಮರ್ಯಾದೆ ಮಾಡಬೇಕೆಂದು ಇಂಗ್ಲಿಷ್ ಬ್ಯಾಂಡ್ ಸಮೇತ ಅವರನ್ನು ಎ.ವಿ. ಸ್ಕೂಲಿಗೆ ಕರೆತಂದು ಅವರ ಗುಣಕಥನವನ್ನು ಮಾಡಿ, ಹಾರ ತುರಾಯಿಗಳನ್ನರ್ಪಿಸಿದರು. ಶಿರಸ್ತೇದಾರರು ಸಮಯೋಚಿತವಾದ ಮಾತುಗಳಿಂದ ಸಭಾಸದರನ್ನು ಸಂತೋಷಪಡಿಸಿದರು. ಅಲ್ಲಿಂದ ಬ್ಯಾಂಡಿನೊಂದಿಗೆ ಜನರ ಮಂಟಪಕ್ಕೆ ಬಂದು ಎಲ್ಲರೊಂದಿಗೆ ಫೋಟೋ ತೆಗೆದರು. ಅನಂತರ ಕದಳಿ, ಪುಷ್ಪ, ಚಿತ್ರಪಟಾದಿಗಳಿಂದ ಅಲಂಕೃತವಾಗಿದ್ದ ಹಿಂದುಸ್ತಾನಿ ಸ್ಕೂಲಿಗೆ ಬರೋಣವಾಯಿತು. ಅಲ್ಲಿ ಸಭೆಯು ತುಂಬಿತುಳುಕುತ್ತಾ ಇತ್ತು. ಹಿಂದುಸ್ತಾನಿ ಸ್ಕೂಲ್ ಹೆಡ್ ಮಾಸ್ಟರು ಸಯ್ಯದ್ ಮೊಹಿದೀನ್ ಸಾಹೇಬರೂ, ಮಹಮ್ಮದ್ ಉಮ್ಮರ್ ಸಾಹೇಬರೂ, ಗುಲಾಂ ಹುಸೇನ್ ಅನ್ಸಾರಿ ಸಾಹೇಬರೂ ಅಡ್ರೆಸ್ಸುಗಳನ್ನು ಓದಿದರು. ಅವುಗಳ ಸಾರಾಂಶವೇನೆಂದರೆ—ಅವರ ಉಪಕಾರಸ್ಮರಣೆಯೂ ಟರ್ಕಿ ಯುದ್ಧದಲ್ಲಿ ಗಾಯಪಟ್ಟವರ ಕಷ್ಟ ನಿವಾರಣೆಗಾಗಿ ಒಂದು ಫಂಡ ರವಾನಿಸಲು ಎಲ್ಲರನ್ನೂ ಪ್ರೇರೇಪಿಸಿ 900 ರೂಪಾಯಿ ವರಿಗೂ ಕೂಡಿಸಿ ರವಾನಿಸಿದ್ದು ಒಂದು, ಇಲ್ಲಿರುವ ಹಿಂದುಸ್ತಾನಿ ಬಡಹುಡುಗರು ಇಂಗ್ಲಿಷ್ ಮತ್ತು ಕನ್ನಡ ಕಲಿಯಲು ಫಂಡು ಮಾಡಬೇಕೆಂದು ಪ್ರೇರೇಪಿಸಿದ್ದು ಒಂದು, ಈ ವಿಚಾರವಾಗಿ ಹೇಳಿದರು. ಶಿರಸ್ತೇದಾರರು ಅವರವರಿಗೆ ತಕ್ಕ ಹಾಗೆ ಉತ್ತರಕೊಟ್ಟು ಸಮಾಧಾನಪಡಿಸಿದರು. ಬಳಿಕ ಸಂಗೀತವಾಗುವಾಗ್ಗೆ ಸಭೆಗೆಲ್ಲಾ ಗಂಧ ಪುಷ್ಪ ಫಲತಾಂಬೂಲಗಳನ್ನು ಹಂಚಿದರು. ಅಲ್ಲಿಂದ ಎಲ್ಲರೂ ಹೊರಟು ಬ್ಯಾಂಡಿನೊಂದಿಗೆ ಕೆಲವರು ಮನೆಗಳಿಗೂ ಅಂಗಡಿಗಳಿಗೂ ಕರಕೊಂಡು ಹೋಗಿ ಮರ್ಯಾದೆ ಮಾಡಿದರು. 10 ನೇ ತಾ. ಬೆಳಿಗ್ಗೆ ಅವರನ್ನು ಸಾಗಕಳುಹಿಸುವಾಗ್ಗೆ ಬ್ರಾಹ್ಮಣರೂ ಇತರರೂ ಬಹಳ ದೂರದವರಿಗೂ ಹೋಗಿದ್ದರು.—ಈ ಊರ ಒಬ್ಬ ದೇವಾಂಗದವರ ಮನೆಯಲ್ಲಿ ಇಸ್ಪೀಟು ಆಟ ರಾತ್ರಿ ಹಗಲು ನಡೆಯುತ್ತಿದೆಂದು ಅನೇಕರು ಅಸಮಾಧಾನದಿಂದ ಮಾತನಾಡುತ್ತಾರೆ. ಅವರು ಈ ದುಷ್ಕಾರ್ಯಕ್ಕೆ ಸ್ಥಳ ಕೊಟ್ಟಿರುವದು ತುಂಬಾ ವ್ಯಸನವೂ ಶೋಚನೀಯವೂ ಆಗಿದೆ. ಮುಂದೆ ಹಾಗೆ ಮಾಡಲಾರರೆಂದು ನಂಬುತ್ತೇನೆ.—ಮಳೆಯಿಲ್ಲದೆ ರಾಗಿ ಪೈರೆಲ್ಲಾ ಒಣಗಿ ಹೋಯಿತು. ಮತ್ತು ಯುದ್ಧದ ನೆವದಿಂದ ವರ್ತಕರು ಪದಾರ್ಥಗಳನ್ನು ಪ್ರಿಯವಾಗಿ ಮಾರುತ್ತಾರೆ. ಬಡವರಿಗೆ ತುಂಬಾ ಕಷ್ಟ ಬಂದಿದೆ. ಸರ್ಕಾರದವರು ಇದರ ವಿಷಯ ತುಂಬಾ ನಿಗಾಯಿಟ್ಟು ಬಡವರನ್ನು ಕಾಪಾಡುತ್ತಾರೆಂದು ನಂಬಿದ್ದೇವೆ.

ವೃತ್ತಾಂತ ಪತ್ರಿಕೆ.

—:o:—

ಸನ್ ೧೯೧೪ ನೇ ಇಸವಿ ಆಗಸ್ಟ್ ತಾ. ೨೦ ನೇ ಗುರುವಾರ.

ಯೂರೋಪ್ ಖಂಡದಲ್ಲಿ ಯುದ್ಧ.

ಕಳೆದ ವಾರ ನಡೆದ ಯುದ್ಧಗಳ ವೃತ್ತಾಂತವನ್ನು ಇನ್ನೊಂದು ಕಡೆ ಪ್ರಕಟಿಸಿದ್ದೇವೆ. ಅವುಗಳ ಸಾರಾಂಶವನ್ನು ಕುರಿತು ಇಲ್ಲಿ ಪ್ರಸ್ತಾಪಮಾಡುವೆವು. ದೊಡ್ಡ ಯುದ್ಧಗಳೇನೂ ನಡೆಯಲಿಲ್ಲ; ಶತ್ರುಗಳು ತಮ್ಮ ತಮ್ಮ ಸೈನ್ಯಗಳನ್ನು ಎದುರುಬದುರಾಗಿ ತಂದು ನಿಲ್ಲಿಸಿಕೊಳ್ಳುತ್ತಿದ್ದಾರೆ. ಇಷ್ಟರಲ್ಲೇ ಜರ್ಮನಿಯವರಿಗೂ ಫ್ರೆಂಚರಿಗೂ ದೊಡ್ಡ ಯುದ್ಧವಾಗುವುದೆಂಬ ಸೂಚನೆಯುಂಟು. ಜರ್ಮನಿಯವರು ಬೆಲ್ಜಿಯಂ ರಾಜ್ಯದೊಳಕ್ಕೆ ನುಗ್ಗಿಬಂದು, ಆಗಲೇ ಅವರಿಗೂ ಬೆಲ್ಜಿಯರ್ಸರಿಗೂ ಕೆಲವು ಕದನಗಳು ನಡೆದಿರುವವು. ಆದರೂ ತೀರ್ಮಾನವಾಗುವಂಥಾ ಯುದ್ಧವೇನೂ ನಡೆಯಲಿಲ್ಲ. ಆಸ್ಟ್ರಿಯದವರು ಮತ್ತೆ ಸರ್ವಿಯದ ಮೇಲೆ ಸೈನ್ಯವನ್ನು ಕಳುಹಿಸಿದ್ದಾರೆ. ಅತ್ತಲಾಗಿ ರಷ್ಯಾದವರೂ ಜರ್ಮನಿ ಮತ್ತು ಆಸ್ಟ್ರಿಯಾ ಸೀಮೆಗಳ ಎಲ್ಲೆಕಟ್ಟುಗಳಲ್ಲಿ ಯುದ್ಧಕಾರ್ಯಗಳನ್ನು ನಡಿಸುತ್ತಿರುವರು. ಎಲ್ಲರೂ ನೆನಸಿದಂತೆ ಇಂಗ್ಲೀಷರು ಆಸ್ಟ್ರಿಯದ ಮೇಲೆ ಶತ್ರುತ್ವವನ್ನು ಸಾರಿದರು. ಜರ್ಮನಿಯವರು ಅವರ ಕೂಡ ಸೇರಿರುವಾಗ್ಗೆ ಇಂಗ್ಲೀಷರು ಜರ್ಮನಿಯವರನ್ನು ಮಾತ್ರ ಶತ್ರುಗಳೆಂದು ಎಣಿಸುವುದು ಸಮಂಜಸವಾಗುವುದಿಲ್ಲ.

ಸಮುದ್ರದ ಮೇಲೆ ಯುದ್ಧವೇನೂ ನಡೆಯಲಿಲ್ಲ; ಸೈನ್ಯಗಳ ಚಲನೆಗಳೆಲ್ಲಾ ಗೋಪ್ಯವಾಗಿ ನಡೆಯುತ್ತಿವೆ. ಅಸಮಂಜಸವಾದ ಅನೇಕ ತಂತೀವರ್ತಮಾನಗಳು ಬಂದು, ಯಥಾರ್ಥವಾಗಿ ನಡೆದಿರುವ ವಿದ್ಯಮಾನಗಳನ್ನು ತಿಳಿಯುವುದೇ ಪ್ರಯಾಸವಾಗಿದೆ. ಆದಕಾರಣ ನಾವು ಸೀಮೆಯಿಂದ ಬರುವ ತಂತೀವರ್ತಮಾನಗಳನ್ನೆಲ್ಲಾ ಬಂದದ್ದು ಬಂದ ಹಾಗೇ ಭಾಷಾಂತರಮಾಡಿ ಪ್ರಕಟಿಸದೆ, ಅವುಗಳಿಂದ ಅಲ್ಲಿ ನಡೆದಿರಬಹುದಾದ ಖಂಡಿತವಾದ ಭಾಗಗಳನ್ನು ಕ್ರೋಢೀಕರಿಸಿ ತಿಳಿಸುತ್ತಾ ಬರುವೆವು.

ಇತ್ತಲಾಗಿ ಹಿಂದುಸ್ಥಾನದೊಳಗೆ ಸಕಲರೂ ಗವರ್ನಮೆಂಟಿಗೆ ಸಹಾಯಮಾಡುವುದರಲ್ಲಿ ಒಂದಾಗಿರುತ್ತಾರೆ. ವೈಸ್‌ರಾಯಿ ಪ್ರಭುಗಳು ಹಿಂದುಸ್ಥಾನದಲ್ಲಿ ಈ ಯುದ್ಧದ ದೆಸೆಯಿಂದ ಕಷ್ಟನಷ್ಟಗಳಿಗೆ ಗುರಿಯಾಗುವಂಥವರಿಗೆ ಸಹಾಯ ಮಾಡುವುದಕ್ಕೋಸ್ಕರ ಒಂದು ಧರ್ಮದ ಫಂಡನ್ನು ಕೂಡಿಸಬೇಕೆಂದೂ, ಅದಕ್ಕೆ ದ್ರವ್ಯಸಹಾಯಮಾಡಬೇಕೆಂದೂ ಕೇಳಿಕೊಂಡಿದ್ದಾರೆ. ವೈಸ್‌ರಾಯರವರು ಅಪ್ಪಣೆ ಕೊಡಿಸಿರುವಂತೆ ಯುದ್ಧಭೂಮಿಗೆ ಕಳುಹಲ್ಪಡತಕ್ಕವರು ಇಂಗ್ಲೀಷ್ ಸೈನ್ಯಗಳು ಮಾತ್ರವೇ ಅಲ್ಲ; ದೇಶೀಯ ಸೈನಿಕರನ್ನೂ, ಸಾಮಂತ ರಾಜರುಗಳು ತರಪೇತುಮಾಡಿಟ್ಟುಕೊಂಡಿರುವ ಇಂಪೀರಿಯಲ್ ಸರ್ವಿಸ್ ಸೈನಿಕರನ್ನೂ ಯುದ್ಧಭೂಮಿಗೆ ಕಳುಹಿಸುವರು. ಇಂಥವರ ಸಂಸಾರಗಳಿಗೆ ಸಹಾಯಮಾಡುವುದಕ್ಕಾಗಿಯೇ ಈ ಫಂಡು ಕೂಡಿಸಲಾಗುತ್ತದೆ. ಈ ಫಂಡಿನ ಮೇಲ್ವಿಚಾರಣೆಯನ್ನು ವೈಸ್‌ರಾಯರವರೇ ಪ್ರೆಸಿಡೆಂಟರಾಗಿ ನಿಂತು ನೋಡಿಕೊಳ್ಳುವರು; ನಮ್ಮ ಮೈಸೂರು ಮಹಾರಾಜರವರೂ ಕಮಿಟಿಯ ಮೆಂಬರಾಗಿ ನೇಮಿಸಲ್ಪಟ್ಟಿರುತ್ತಾರೆ. ಇಂಥಾ ಫಂಡಿಗೆ ಇಂಗ್ಲೆಂಡಿನಲ್ಲಿ ಆಗಲೇ 1,50,00,000 ರೂಪಾಯಿ ಚಂದಾ ಕೂಡಿಸಲ್ಪಟ್ಟಿದೆ. ಹಿಂದುಸ್ಥಾನದವರೂ ಈ ಭಾಗದಲ್ಲಿ ರಾಜಭಕ್ತಿ ಪ್ರೀತಿಗಳನ್ನು ಕಾರ್ಯತಃ ಪ್ರಕಾಶಪಡಿಸುತ್ತಾರೆಂದು ಧಾರಾಳವಾಗಿ ಹೇಳುತ್ತೇವೆ.

ಅನೇಕಾನೇಕ ವರ್ತಕರು ಇದೇ ಸಮಯವೆಂದು ನೆನಸಿ ದಿನಸಿಗಳ ಮತ್ತೂ ಪದಾರ್ಥಗಳ ಧಾರಣೆಯನ್ನು ಅನಾವಶ್ಯವಾಗಿ ಹೆಚ್ಚಿಸಿಬಿಟ್ಟಿದ್ದಾರೆ. ಹಿಂದುಸ್ಥಾನದಲ್ಲಿ ಅವುಗಳಿಗೆ ಕೊರತೆಯೇನೂ ಇಲ್ಲ. ಈ ಯುದ್ಧದ ಹೆಸರು ಹೇಳಿ ಬೆಲೆಯನ್ನು ಹೆಚ್ಚಿಸಿರುವಂಥಾ ವ್ಯಾಪಾರಸ್ಥರಿಗೆ ಸ್ವಲ್ಪವೂ ಸಹೋದರ ಪ್ರೀತಿಯಾಗಲಿ ದೇಶವಾತ್ಸಲ್ಯವಾಗಲಿ ಇಲ್ಲವೆಂದು ಹೇಳಬೇಕಾಗಿದೆ. ಕೆಲವು ದಿನಗಳ ಹಿಂದೆ ಒಬ್ಬ ಜಮೀನ್ದಾರರು 14½ ರೂಪಾಯಿನಂತೆ ಭತ್ತವನ್ನು ಖರೀದಿಮಾಡಿ, ವರ್ತಕನು ರೂಪಾಯಿಗೆ 7 ಸೇರಿನಂತೆ ಜನರಿಗೆ ಮಾರಬೇಕೆಂದು ಅವನಿಂದ ಒಪ್ಪಂದಮಾಡಿಕೊಂಡರೆಂದು ಅವರೇ ನಮ್ಮ ಕೂಡ ಹೇಳಿದರು. ಸಕಾಲದಲ್ಲಿ ಮಳೆ ಆಗದೆ ಧಾನ್ಯಗಳು ಪ್ರಿಯವಾಗಿರುತ್ತವೆ; ಆದರೆ ಈ ಯುದ್ಧದ ನಿಮಿತ್ತ ಧಾರಣೆಗಳು ರಾಜಧಾನಿಯಲ್ಲಾಗಲಿ ಇತರ ಕಡೆಗಳಲ್ಲಾಗಲಿ ಹೆಚ್ಚುವುದಕ್ಕೆ ಸ್ವಲ್ಪವೂ ಕಾರಣವಿಲ್ಲ. ಕೆಲವರು ಕರೆನ್ಸಿ ನೋಟಿಗೆ ಪೂರಾ ಹಣ ಕೊಡದೆ ವಟ್ಟ ಕೊಡಬೇಕೆಂದು ಕೇಳುವರು. ಇದು ಎಷ್ಟು ಮಾತ್ರವೂ ಯೋಗ್ಯವಲ್ಲ. ಇಂಡಿಯಾ ಗವರ್ನಮೆಂಟಿನವರು ವಟ್ಟವೇನೂ ಕೇಳದೆ ಪೂರಾ ಹಣ ಕೊಡುತ್ತಾರೆ. ನೋಟಿಗೆ ಹಣ ಬೇಕೆನ್ನುವವರು ಸರ್ಕಾರದ ಖಜಾನೆಗಳಿಗಾಗಲಿ, ಪೋಸ್ಟ್ ಆಫೀಸುಗಳಿಗಾಗಲಿ ಹೋಗಿ ಕೊಟ್ಟರೆ ವಟ್ಟವೇನೂ ಇಲ್ಲದೆ ಪೂರಾ ಹಣ ಸಿಕ್ಕುತ್ತದೆ.

ಮೈಸೂರು ಸರ್ಕಾರದವರು ಒಂದು ಹೊಸ ಕಾನೂನನ್ನು ಕಳೆದ ವಾರ ಜಾರಿಗೆ ತಂದಿದ್ದಾರೆ. ಸೈನ್ಯಗಳ ಅಥವಾ ಯುದ್ಧದ ಜಹಜುಗಳ ಚಲನೆಯ ವಿಷಯದಲ್ಲಿ ಯಾವ ವರ್ತಮಾನ ಪತ್ರಿಕೆಯೂ ಯಾವುದೊಂದು ವರ್ತಮಾನವನ್ನೂ ಪ್ರಕಟಮಾಡಕೂಡದೆಂಬುವುದೇ ಈ ಕಾನೂನಿನ ಉದ್ದೇಶ. ಇಂಡಿಯಾ ಗವರ್ನಮೆಂಟಿನವರೂ ಇಂಥಾ ಕಾನೂನನ್ನು ಮಾಡಿ ಜಾರಿಗೆ ತಂದಿದ್ದಾರೆ. ಇಂಗ್ಲೆಂಡಿನಿಂದ ಫ್ರಾನ್ಸಿಗೂ ಬೆಲ್ಜಿಯಂಗೂ, ಹಿಂದುಸ್ಥಾನದಿಂದಲೂ ಇತರ ಬ್ರಿಟಿಷ್ ಸಾಮ್ರಾಜ್ಯಗಳಿಂದಲೂ ಯುದ್ಧಭೂಮಿಗೂ ಸೈನ್ಯಗಳ ಚಲನೆಯೊಂದೂ ಯಾವ ವರ್ತಮಾನ ಪತ್ರಿಕೆಯಲ್ಲೂ ಪ್ರಕಟವಾಗದೆ ಇರುವುದಕ್ಕೆ ಇದೇ ಕಾರಣ. ಇದೊಂದೂ ಪ್ರಕಟವಾಗದೆ ಇದ್ದ ಮಾತ್ರಕ್ಕೇ ಯುದ್ಧಸನ್ನಾಹವೇನೂ ನಡೆಯುತ್ತಾ ಇಲ್ಲವೆಂದು ವಾಚಕರು ತಿಳಿದುಕೊಳ್ಳಬಾರದು. ಸನ್ನಾಹಗಳೇನೋ ಅಪಾರವಾಗಿ ನಡೆದೂ ನಡೆಯುತ್ತಲೂ ಇವೆ; ಮುಂದೆ ಇದರ ಫಲಿತಾಂಶ ಪ್ರಕಟವಾಗುವುದು.

ನಾವು ತಾಳ್ಮೆಯಿಂದ ಇದ್ದರೆ ಈ ಯುದ್ಧದಲ್ಲಿ ಜಯಾಪಜಯಗಳನ್ನು ಸೂಚಿಸುವ ಘೋರವಾದ ಕದನಗಳು ನಡೆದದ್ದು ನಡೆದ ಹಾಗೆ ಪ್ರಕಟವಾಗುತ್ತವೆ. ಸದ್ಯದಲ್ಲಿ ವಿಶೇಷವೇನೂ ಹೇಳಲಾಗುವುದಿಲ್ಲ. ಜರ್ಮನಿಯವರು ಊಹಿಸಿದ್ದಷ್ಟು ಬೇಗನೆ ಅವರು ಫ್ರಾನ್ಸಿನ ಮೇಲಾಗಲಿ, ಆಸ್ಟ್ರಿಯದವರು ಸರ್ವಿಯದ ಮೇಲಾಗಲಿ ತಮ್ಮ ಪರಾಕ್ರಮವನ್ನು ತೋರಿಸಲು ಸಾಧ್ಯವಾಗಲಿಲ್ಲ. ಯುದ್ಧವು ಮಹಾ ಘೋರವಾದದ್ದು; ಇದನ್ನು ಬೇಗನೆ ಕೊನೆಮುಟ್ಟಿಸುವಂತೆ ನಾವೆಲ್ಲಾ ಪ್ರಾರ್ಥಿಸುತ್ತಾ ಬರೋಣ.

ರಾಜಧಾನಿಯಲ್ಲಿ ಫಲಪುಷ್ಪಾದಿಗಳ ಪ್ರದರ್ಶನವು.

ಶ್ರೀಮನ್ ಮಹಾರಾಜರವರ ಭಾಷಣ.

ಕಳೆದ ಶನಿವಾರ ಸಾಯಂಕಾಲ 4 ಗಂಟೆಗೆ ರಾಜಧಾನಿಯ ಜಗನ್ಮೋಹನ ಬಂಗಲೆ ಮುಂಭಾಗದ ಮಂಟಪದಲ್ಲಿ ಮೊದಲನೇ ಫಲಪುಷ್ಪಾದಿಗಳ ಪ್ರದರ್ಶನವು ನಡಿಸಲ್ಪಟ್ಟಿತು. ರಾಜಧಾನಿಯಲ್ಲಿರುವ ಬೇರೆ ಬೇರೆ ಕೋಮುಗಳ ಮತ್ತು ಕಸುಬುಗಳ ದೊಡ್ಡ ಮನುಷ್ಯರೂ ಹಾಜರಾಗಿದ್ದರು. ಶ್ರೀಮನ್ ಮಹಾರಾಜರವರು ಈ ಪ್ರದರ್ಶನದ ಪ್ರಾರಂಭೋತ್ಸವಕ್ಕಾಗಿ ಬೆಂಗಳೂರಿಂದ ದಯಮಾಡಿದರು. ಮೈಸೂರು ಉದ್ಯಾನವನಗಳ ಸೂಪರಿಂಟೆಂಡೆಂಟರಾದ ಮಿ॥ ಜ. ಎಚ್. ಕ್ರಂಬೀಗಲ್‌ರವರು ಮಹಾರಾಜರವರನ್ನು ಕುರಿತು ಈ ಪ್ರದರ್ಶನದ ವೃತ್ತಾಂತವನ್ನು ಓದಿ ಅರಿಕೆ ಮಾಡಿದರು. ಬಳಿಕ ಶ್ರೀಮನ್ ಮಹಾರಾಜರವರು ಪ್ರಜೆಗಳ ಮುಂದಾಳುಗಳಾಗಿದ್ದ ದೊಡ್ಡ ಮನುಷ್ಯರನ್ನು ಕುರಿತು ಅಪ್ಪಣೆ ಕೊಡಿಸಿದ ವಾಕ್ಯಗಳ ಸಾರಾಂಶವೇನೆಂದರೆ—

ಮಿ॥ ಕ್ರಂಬೀಗಲ್‌ರವರು ಈಗ ಓದಿ ಹೇಳಿದ ರಿಪೋರ್ಟನ್ನು ಕೇಳಿ ನನಗೆ ಬಹಳ ಸಂತೋಷವಾಗಿದೆ. ತೋಟಗಳನ್ನು ಮಾಡುವುದರಲ್ಲಿ ನೀವು ಉತ್ಸಾಹಶೀಲರಾಗಬೇಕೆಂದು ಅವರು ನಿಮ್ಮನ್ನು ಬಹಳವಾಗಿ ಕೇಳಿಕೊಂಡಿರುತ್ತಾರೆ. ಅದಕ್ಕೆ ನೀವು ಮನಸ್ಸುಕೊಡುತ್ತೀರೆಂದು ನಾವು ನಿರೀಕ್ಷಿಸುವೆವು. ಮಿ॥ ಕ್ರಂಬೀಗಲ್‌ರವರು ಈ ಭಾಗದಲ್ಲಿ ಬಹಳ ಉತ್ಸಾಹಶಾಲಿಗಳು; ಮನೋಹರವೂ ನೇತ್ರಾನಂದಕರವೂ ಆಗಿರುವುದರಲ್ಲಿ ಅವರಿಗೆ ಅಭಿರುಚಿಯುಂಟು. ಆದಕಾರಣ ಅವರು ಬೆಂಗಳೂರು ಲಾಲ್ ಬಾಗ್ ಉದ್ಯಾನವನದಲ್ಲಿ ಫಲಪುಷ್ಪಾದಿಗಳ ಪ್ರದರ್ಶನವನ್ನು ಏರ್ಪಡಿಸುವ ಪ್ರಕಾರ ಮೈಸೂರಿನ ಪುಷ್ಪಪ್ರದರ್ಶನಗಳನ್ನೂ ಬಹಳ ಅಲಂಕಾರವಾಗಿಯೂ, ಮನಸ್ಸನ್ನೂ ಕಣ್ಣುಗಳನ್ನೂ ಆಕರ್ಷಿಸುವಂಥಾದ್ದಾಗಿಯೂ ಮಾಡುತ್ತಾರೆಂದು ಚೆನ್ನಾಗಿ ತಿಳಿದಿರುತ್ತೇವೆ.—ಈಗ ನಾವು ಪ್ರಾರಂಭಿಸುವ ಪ್ರದರ್ಶನವು ರಾಜಧಾನಿಗೆ ಮೊದಲನೆಯದಾಗಿರುತ್ತದೆ. ಹೀಗೆಯೇ ಇದು ಪ್ರತಿ ವರುಷವೂ ನಡೆಯುತ್ತಾ ಬರುವುದೆಂದು ನಿರೀಕ್ಷಿಸುವೆವು. ಬೆಂಗಳೂರನ್ನೂ ಮೈಸೂರನ್ನೂ ನೋಡಿದವರೆಲ್ಲಾ ಮೈಸೂರಿನಲ್ಲಿ ತೋಟಗಳಿಗೇ ಅಭಾವವಾಗಿದೆ ಎಂದು ಪರಿಷ್ಕಾರವಾಗಿ ತಿಳಿದುಕೊಳ್ಳುತ್ತಾರೆ. ನಿಜಸ್ಥಿತಿಯನ್ನು ನೋಡಿದರೆ ಕಾರಣವೇನೂ ಇರುವುದಿಲ್ಲ. ಈ ಎರಡು ಪಟ್ಟಣಗಳ ಭೂಗುಣವೂ ಸುಮಾರಾಗಿ ಒಂದೇ ಎಂದು ಹೇಳಬಹುದು; ಮತ್ತು ಅಲ್ಲಿನಷ್ಟೇ ಇಲ್ಲೂ ಮಳೆಯಾಗುತ್ತದೆ. ಆದಕಾರಣ ಫಲಪುಷ್ಪಾದಿಗಳ ಪ್ರದರ್ಶನವನ್ನು ಮೈಸೂರಿನಲ್ಲೂ ನಡಿಸುತ್ತಾ ಬಂದರೆ ಇಲ್ಲಿನ ಪ್ರಜೆಗಳಿಗೂ ಅಭಿರುಚಿ ಹುಟ್ಟಿ ತಮ್ಮ ತಮ್ಮ ಮನೆಗಳಲ್ಲಿ ಅಲಂಕಾರವಾದ ಕೈತೋಟಗಳನ್ನು ಮಾಡುವುದಕ್ಕೆ ಅನುಕೂಲವೂ ಪ್ರೋತ್ಸಾಹವೂ ಉಂಟಾಗುವುದೆಂದು ನಿರೀಕ್ಷಿಸುತ್ತೇವೆ. ಈ ಸಂದರ್ಭದಲ್ಲಿ ಇನ್ನೊಂದು ವ್ಯಸನಕರವಾದ ವಿಷಯವನ್ನು ಸೂಚಿಸುವೆವು. ಮೈಸೂರಿನ ಮಾರ್ಕೆಟ್ಟುಗಳಲ್ಲಿ ಇಂಗ್ಲಿಷ್ ತರಕಾರಿ ಒಂದಾದರೂ ಸಿಕ್ಕುವುದಿಲ್ಲ. ಬೆಂಗಳೂರಿನಲ್ಲಾದರೋ ಅನೇಕ ಜನರು ತರಕಾರಿ ಹಣ್ಣುಹಂಪಲುಗಳನ್ನು ವಿಶೇಷವಾಗಿ ಬೆಳೆದು ಮಾರಿ ಲಾಭಸಂಪಾದನೆ ಮಾಡುತ್ತಿದ್ದಾರೆ. ಮೈಸೂರು ಪ್ರಜೆಗಳಾದ ನಿಮ್ಮನ್ನು ನೀವೂ ಪ್ರಯತ್ನಪಟ್ಟು ಬೆಂಗಳೂರಿನವರ ಮೇಲೆ ಹುರುಡು ಕಟ್ಟಿ ಮೈಸೂರನ್ನು ಉದ್ಯಾನವನಗಳ ಪಟ್ಟಣವಾಗಿ ಮಾಡಬೇಕೆಂದು ಕುತೂಹಲಪಟ್ಟು ಕೇಳಿಕೊಳ್ಳುತ್ತೇವೆ.

ಈ ಪ್ರಕಾರ ಭಾಷಣಮಾಡಿದ ಮೇಲೆ ಶ್ರೀಮನ್ ಮಹಾರಾಜರವರು ಪ್ರದರ್ಶನದ ಬಾಗಿಲಿಗೆ ಕಟ್ಟಿದ್ದ ಹೂವಿನ ದಂಡೆಯನ್ನು ಮಧ್ಯೆ ಬಿಚ್ಚಿ ಒಳಕ್ಕೆ ಪ್ರವೇಶಮಾಡಿದರು. ಅವರನ್ನು ಹಿಂಬಾಲಿಸಿ ಸಕಲರೂ ಹೊರಟರು. ಒಳಗಡೆ ಸಾಲುಸಾಲಾಗಿ ಅಣಿಮಾಡಿಟ್ಟಿದ್ದ ಫಲಪುಷ್ಪಾದಿಗಳನ್ನೂ, ತರಕಾರಿಗಳನ್ನೂ ಪರಾಂಬರಿಸಿ ಸಂತೋಷಪಟ್ಟು ಮಂದಿರದ ಮುಂಭಾಗಕ್ಕೆ ಬಂದು ನಿಂತುಕೊಂಡರು. ಚಿಣ್ಣ ಮಕ್ಕಳು ಪುಷ್ಪಗಳಿಂದ ವಿಚಿತ್ರವಾಗಿ ಅಲಂಕರಿಸಿದ್ದ ಬೈಸಿಕಲ್ ಮೇಲೂ, ಸಣ್ಣಪುಟ್ಟ ಗಾಡಿಗಳಲ್ಲೂ ಪ್ರಭುಗಳ ಮುಂದೆ ಹಾದುಹೋದರು. ಮಹಾರಾಜರವರು ಅವರಿಗೆ ಬಹುಮಾನಗಳನ್ನು ದಯಪಾಲಿಸಿ ಸಭಿಕರೆಲ್ಲಾ ವಂದಿಸುತ್ತಿರುವಲ್ಲಿ ಸಾರೋಟನ್ನು ಹತ್ತಿ ದಯಮಾಡಿದರು.

ಪ್ರದರ್ಶನಕ್ಕೆ ಕಳುಹಲ್ಪಟ್ಟಿದ್ದ ಗಿಡ, ಫಲ, ತರಕಾರಿಗಳನ್ನೆಲ್ಲಾ ಕಮಿಟಿಯವರು ಪರೀಕ್ಷಿಸಿ ಬಹುಮಾನಗಳನ್ನು ಕೊಟ್ಟರು. ಅವುಗಳನ್ನೆಲ್ಲಾ ಹೆಸರುಹೆಸರಾಗಿ ಪ್ರಕಟಿಸಲು ಸ್ಥಳ ಸಂಕೋಚದಿಂದ ಬಿಡಬೇಕಾಗಿದೆ. ಆ ದಿನವೂ ಮರುದಿನವೂ ಪಟ್ಟಣದ ಪ್ರಜೆಗಳು ಬೇರಳವಾಗಿ ಹೋಗಿ ಮುಫತ್ತಾಗಿ ಪ್ರದರ್ಶನದ ವಸ್ತುಗಳನ್ನು ನೋಡಿ ಸಂತೋಷಪಟ್ಟು ಬಂದರು. ಮೈಸೂರಿನ ಪ್ರಜೆಗಳು ಶ್ರೀಮನ್ ಮಹಾರಾಜರವರ ಕುತೂಹಲವನ್ನು ಸಾರ್ಥಕಪಡಿಸುವ ಭಾಗದಲ್ಲಿ ಉತ್ಸಾಹವನ್ನೂ ಕಾರ್ಯಸಾಧನೆಯನ್ನೂ ಮಾಡುವರೆಂದು ನಿರೀಕ್ಷಿಸುತ್ತೇವೆ.

ಒಳದೇಶದ ವೃತ್ತಾಂತಗಳು.

ಈ ವಾರ ನಮ್ಮ ಪತ್ರಿಕೆಯು ಹತ್ತು ಪುಟಗಳುಳ್ಳದ್ದಾಗಿದೆ.

* * *

ರಾಜಧಾನಿಯ ಮಹಾರಾಣಿ ಕಾಲೇಜಿನ ಪ್ರೈಮರಿ ತರಗತಿಗಳನ್ನೆಲ್ಲಾ ತೆಗೆದುಹಾಕಿ, ಬೇರೆ ಬೇರೆ ಮೊಹಲ್ಲೆಗಳಲ್ಲಿ ಬಾಲಿಕಾ ಪಾಠಶಾಲೆಗಳನ್ನು ಇಟ್ಟು ನಡಿಸಬೇಕೆಂದು ತೀರ್ಮಾನವಾಗಿರೋಣದರಿಂದ ಅದಕ್ಕಾಗಿ ಯೋಗ್ಯವಾದ ಕಟ್ಟಡಗಳನ್ನು ಹುಡುಕುತ್ತಿದ್ದಾರೆ.

* * *

ಹಾಸನದ ಡಿಸ್ಟ್ರಿಕ್ಟಿಗೆ ಸೇರಿದ ಮುಗ್ಗ ಮತ್ತು ಆಲೂರು ಸಂತೆಗಳ ಆಮದು ರಫ್ತಿಗೆ ಅನುಕೂಲವಾಗುವಂತೆ ಬೈರಾಪುರಕ್ಕೂ ಕುಂದೂರಿಗೂ ನಡುವೆ 8,000 ರೂಪಾಯಿ ಮುಟ್ಟಿಸಿ ರ‍್ಯಾಂಟೀರ್ಥವೆಂಬ ಹೊಳೆಗೆ ಸೇತುವೆಯನ್ನು ಡಿಸ್ಟ್ರಿಕ್ಟ್ ಫಂಡಿನಿಂದ ಕಟ್ಟಿಸಿ ಬೈರಾಪುರದಲ್ಲೂ ಕುಂದೂರಿನಲ್ಲೂ ಟೋಲ್ ಗೇಟುಗಳನ್ನು ಇಡಬೇಕೆಂದು ತೀರ್ಮಾನವಾಗಿದೆ.

* * *

ಮೈಸೂರು ಡಿಸ್ಟ್ರಿಕ್ಟಿನಲ್ಲಿ ಕಾಡುಹಂದಿಗಳನ್ನು ಶಿಕಾರಿಮಾಡಿ ತಂದವರಿಗೆ ಆಯಾ ತಾಲ್ಲೂಕಿನ ಅಮಲ್ದಾರರುಗಳ ಮೂಲಕ 8 ಆಣೆಯಂತೆ ಇನಾಮು ಕೊಡಿಸಬೇಕೆಂದೂ, ಇದಕ್ಕಾಗಿ 300 ರೂಪಾಯಿ ತೆಗೆದಿಡಬೇಕೆಂದೂ ಮೈಸೂರು ಡಿಸ್ಟ್ರಿಕ್ಟ್ ಬೋರ್ಡಿನವರು ಗೊತ್ತುಮಾಡಿದ್ದಾರೆ.

* * *

ರಾಜಧಾನಿಯಲ್ಲಿ ಈ ಸಲ ನಡೆಯುವ ದಸರಾ ಪ್ರದರ್ಶನ ಶಾಲೆಯಲ್ಲಿ ವಿದ್ಯಾಭ್ಯಾಸದ ಸೆಕೆಂಡರಿ ಮತ್ತು ಪ್ರೈಮರಿ ಪಾಠಶಾಲೆಗಳಿಂದ ಉತ್ಕೃಷ್ಟವಾದ ವಸ್ತುಗಳನ್ನು ತರಿಸಿಟ್ಟು ಪ್ರತ್ಯೇಕವಾಗಿ ಪ್ರದರ್ಶನ ನಡಿಸಬೇಕೆಂದು ಇನ್ಸ್‌ಪೆಕ್ಟರ್ ಜನರಲ್‌ರವರು ಅಪ್ಪಣೆ ಕೊಡಿಸಿರುತ್ತಾರೆ.

* * *

ನಾಳೆ ಸೂರ್ಯಗ್ರಹಣವಾದದ್ದರಿಂದ ಅದು ಮೈಸೂರು ಸೀಮೆಯಲ್ಲಿ ಕಾಣುವುದೇ ಇಲ್ಲವೆಂದೂ, ಗ್ರಹಣ ನಿಮಿತ್ತವಾದ ಯಾವ ಕರ್ಮವನ್ನೂ ಆಚರಿಸಬೇಕಾದದ್ದಿಲ್ಲವೆಂದೂ ಬೆಂಗಳೂರಿನಲ್ಲಿರುವ ಮಹಾಸಿದ್ಧಾಂತಿ ಆಸ್ಥಾನ ತಳ್ಳಿ ವೇ॥ ನರಸಿಂಹಶಾಸ್ತ್ರಿಗಳವರು ಗುಣಿಸಿ ನೋಡಿ ಪ್ರಕಟಮಾಡಿರುತ್ತಾರೆ.

* * *

ನಂಜನಗೂಡು ತಾಲ್ಲೂಕು ಉಡಿಗಾಲದಲ್ಲಿ ಒಂದು ವೈದ್ಯಶಾಲೆಯನ್ನು ಇಟ್ಟು ಪಂಡಿತನಿಗೆ ಸಂಬಳ 10 ರೂಪಾಯಿ, ಔಷಧಿ ಖರ್ಚಿಗೆ 10 ರೂಪಾಯಿ ಖರ್ಚುಮಾಡಬೇಕೆಂದೂ, ಈ ಖರ್ಚನ್ನು ಉಡಿಗಾಲ, ಮಲೆಯೂರು, ಕೊತ್ತವಾಡಿ, ಹರವೆ ಯೂನಿಯನ್‌ಗಳಿಗೆ ಹಂಚಿಹಾಕಬೇಕೆಂದೂ ಇತ್ಯರ್ಥವಾಗಿದೆ.

* * *

ಕಳೆದ ವಾರ ರಾಜಧಾನಿಯ ಪುರನಿವಾಸಿಗಳು ಟೌನ್ ಹಾಲ್ ಬಂಗಲೆಯಲ್ಲಿ ಒಂದು ಸಭೆಯನ್ನು ನಡಿಸಿ ಸಾರ್ವಭೌಮ ಸರ್ಕಾರದ ವಿಷಯದಲ್ಲಿ ಮೈಸೂರು ಪ್ರಜೆಗಳ ಭಕ್ತಿಪ್ರೀತಿಗಳನ್ನು ಪ್ರಕಾಶಪಡಿಸಬೇಕೆಂದೂ, ಇದಕ್ಕಾಗಿ ಸರ್ದಾರ್ ಕಾಂತರಾಜ ಅರಸಿನವರ ಅಧ್ಯಕ್ಷತೆಯಲ್ಲಿ ಒಂದು ಮಹಾಜನ ಸಭೆಯನ್ನು ನಡಿಸಬೇಕೆಂದೂ ಇತ್ಯರ್ಥಮಾಡಿರುತ್ತಾರೆ.

* * *

ರಾಜಧಾನಿಯಲ್ಲಿ ಮೈಸೂರು ಸಂಸ್ಥಾನದ ಪರಸ್ಪರ ಸಹಾಯ ಸಂಘಗಳ ನಾಲ್ಕನೇ ಮಹಾ ಸಭೆಯು ಸೆಪ್ಟಂಬರ್ ತಾ. 22 ರಲ್ಲಿ ಪ್ರಾರಂಭವಾಗಿ ಮೂರು ದಿನ ನಡೆಯುವಂತೆ ಏರ್ಪಾಡಾಗಿದೆ. ಈ ಸಭೆಗೆ ಪ್ರತಿನಿಧಿಗಳಾಗಿ ಬರತಕ್ಕವರೆಲ್ಲ ಈ ತಿಂಗಳ ಆಖೈರಿನೊಳಗಾಗಿ ರೆಜಿಸ್ಟ್ರಾರವರಿಗೆ ತಿಳಿಸಿದರೆ ಅವರು ಸ್ಥಳವಸತಿಯನ್ನು ಕಲ್ಪಿಸಿಕೊಡಲು ಅನುಕೂಲವಾಗುತ್ತದೆ.

* * *

ಶ್ರೀಮನ್ ಮಹಾರಾಜರವರು ಮೂರನೇ ಮಹಾರಾಜ ಕುಮಾರಿಯವರೊಡನೆ ಮೊನ್ನೆ ಶನಿವಾರ ಬೆಳಗ್ಗೆ ಮೋಟಾರಿನಲ್ಲಿ ಬೆಂಗಳೂರಿನಿಂದ ರಾಜಧಾನಿಗೆ ದಯಮಾಡಿ ಒಂದು ದಿನ ಇದ್ದು ಮರುದಿನ ಮಧ್ಯಾಹ್ನ ಸುಮಾರು 3 ಗಂಟೆಗೆ ಕಾಫೋಬ್ಬರೇ ವಾಪಸು ಬೆಂಗಳೂರಿಗೆ ಚಿತ್ತೈಸಿದರು. ಈ ಸಲ ಗೌರಿ ಗಣೇಶ ಹಬ್ಬಗಳು ಬೆಂಗಳೂರು ಅರಮನೆಯಲ್ಲೇ ನಡೆಯುವವೆಂದು ಕೇಳುತ್ತೇವೆ.

* * *

ಮೈಸೂರು ಸಂಸ್ಥಾನದಲ್ಲಿ ವಕಾಲತ್ತು ನಡಿಸುವ ಲಾಯರುಗಳೆಲ್ಲಾ ತಮ್ಮ ತಮ್ಮ ಆಫೀಸುಗಳಲ್ಲಿ ಕಕ್ಷಿಗಾರರಿಂದ ತಮಗೆ ಬಾಬತ್ತು ಆಗುವ ಹಣಕಾಸಿನ ಜಮಾಖರ್ಚನ್ನು ಕ್ರಮವಾಗಿ ಇಟ್ಟಿರಬೇಕೆಂದೂ, ಹಾಗೆ ಪ್ರತಿ ಮೊಕದ್ದಮೆಗೂ ಲೆಕ್ಕಗಳನ್ನು ಇಡದೆ ತಪ್ಪಿದವರನ್ನು ವಕಾಲತ್ತು ನಡಿಸದಂತೆ ಸಸ್ಪೆಂಡ್ ಮಾಡಬೇಕಾಗುವುದೆಂದೂ ಚೀಫ್ ಕೋರ್ಟಿನವರು ಒಂದು ಸರ್ಕ್ಯುಲರನ್ನು ಪ್ರಕಟಿಸಿದ್ದಾರೆ.

* * *

ರಾಜಧಾನಿಗೆ ಕಳೆದ ವರುಷ ಬಂದಿದ್ದ ತಮಿಳು ನಾಟಕದ ಕಂಪನಿ ಮ್ಯಾನೇಜರ್ ಮ॥ ಕಂದಸಾಮಿ ಮೊದಲಿಯಾರ್ರು ತಮ್ಮ ನಾಟಕಶಾಲೆಗೆ ಬಂದಿದ್ದ ನೋಟಕರ ಪೈಕಿ ಮೈಸೂರು ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರ್ ಮ॥ ಬಿ. ಕೃಷ್ಣರಾಯರು ಮೈಮೇಲೆ ಸ್ಮರಣೆಯಿಲ್ಲದಂತೆ ಗಲಭೆಯನ್ನುಂಟುಮಾಡಿ ನಾಟಕದಲ್ಲಿ ಆಭಾಸಮಾಡಿದರೆಂದು ಮುಂತಾಗಿ ಅವರ ಮೇಲೆ ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಫಿರ್ಯಾದು ಮಾಡಿದ್ದರಷ್ಟೆ. ಮ॥ ಕೃಷ್ಣರಾಯರು ಮೊಕದ್ದಮೆಯನ್ನು ಅರ್ಜಿಕೊಟ್ಟು ಮ॥ ಬಿ. ವೆಂಕೋಬರಾಯರ ಕೋರ್ಟಿಗೆ ವರ್ಗಮಾಡಿಸಿಕೊಂಡರು. ಮ॥ ವೆಂಕೋಬರಾಯರು ದರ್ಯಾಫ್ತಿ ಮಾಡಿ ಕಳೆದ ಶನಿವಾರ ಮೊಕದ್ದಮೆ ರುಜುವಾತಾಗಲಿಲ್ಲವೆಂದು ಹೇಳಿ ಅಪರಾಧಿಯನ್ನು ಖುಲಾಸ್ ಮಾಡಿದರು. ಈ ಮೊಕದ್ದಮೆಯಲ್ಲಿ ದೊಡ್ಡ ಮನುಷ್ಯರೇ ಸಾಕ್ಷಿ ಹೇಳಿದರು.

* * *

ಬೆಂಗಳೂರು ಪೇಟೆಯಲ್ಲಿ ವೆಸ್ಲಿಯನ್ ಮಿಷನ್ ದೇಶೀಯ ಬೋಧಕರಾಗಿದ್ದ ಘನ ಡಿ. ಸತ್ಯನಾರಾಯಣನವರು ಅದೇ ಸ್ಥಳದಲ್ಲಿ ಕಳೆದ ಭಾನುವಾರ ಸ್ವರ್ಗಸ್ಥರಾದರೆಂಬ ದುಃಖಕರವಾದ ಸಮಾಚಾರವನ್ನು ಪ್ರಕಟಿಸಲು ತುಂಬಾ ವಿಷಾದಪಡುತ್ತೇವೆ. ಇವರು ರಾಜಧಾನಿಯಲ್ಲಿ ಹುಟ್ಟಿ, ವೆಸ್ಲಿಯನ್ ಹೈ ಸ್ಕೂಲಿನಲ್ಲಿ ವಿದ್ಯಾಭ್ಯಾಸಮಾಡಿ, ಅನೇಕ ವರುಷಗಳ ವರೆಗೂ ಉಪದೇಶಿಗಳಾಗಿದ್ದು 1904 ರಲ್ಲಿ ಬೋಧಕೋದ್ಯೋಗಕ್ಕೆ ಬಂದರು. ಇವರು ಶಿವಮೊಗ್ಗೆ, ಹಾಸನ ಮುಂತಾದ ಮೈಸೂರು ಸೀಮೆಯ ಅನೇಕ ಸ್ಥಳಗಳಲ್ಲಿ ಕೆಲಸಮಾಡಿರುತ್ತಾರೆ. ಕಳೆದ ಎರಡುವರೆ ವರುಷಗಳಿಂದ ಇವರು ಬೆಂಗಳೂರು ಪೇಟೆಯಲ್ಲಿ ಕೆಲಸಮಾಡುತ್ತಿದ್ದರು. ಕೆಲವು ತಿಂಗಳ ಹಿಂದೆ ಇವರು ಬಹಳ ಕಾಯಿಲೆಯಾಗಿದ್ದು ಅನೇಕ ದಿನಗಳ ವರೆಗೂ ವಿಕ್ಟೋರಿಯಾ ಆಸ್ಪತ್ರೆಯಲ್ಲಿದ್ದು ಗುಣವನ್ನು ಹೊಂದಿದ್ದರು. ಈಗ ಇವರಿಗೆ ಹ್ಯಾಗೋ ಅಕಸ್ಮಾತ್ತಾಗಿ ಮರಣವು ಪ್ರಾಪ್ತವಾಯಿತು. ಇವರ ಮರಣವಾರ್ತೆಯನ್ನು ಕೇಳಿ ಅನೇಕರು ದುಃಖಪಡುವರೆಂಬುದಕ್ಕೆ ಸಂದೇಹವಿಲ್ಲ.

* * *

ಮೈಸೂರು ಪ್ರಜಾಪ್ರತಿನಿಧಿ ಮಂದಿರದ ಸೆಕ್ರೆಟರಿ ಮ॥ ಕೆರೆಕೆರೆ ಕೃಷ್ಣಮೂರ್ತಿರಾಯರು ತಿಳಿಸುವುದೇನೆಂದರೆ—ವಾಡಿಕೆಯಂತೆ ಪ್ರಜಾಪ್ರತಿನಿಧಿಗಳ ಉಪಯೋಗಕ್ಕೋಸ್ಕರ ಪ್ರತಿನಿಧಿಮಂದಿರವು ಈ ವರ್ಷವೂ ಮೈಸೂರಿನಲ್ಲಿ ಸೆಪ್ಟಂಬರ್ 24 ನೇ ತಾ. ಗುರುವಾರ ಶುರು ಮಾಡಲ್ಪಡುತ್ತೆ. ಸೇರತಕ್ಕ ಅಪೇಕ್ಷೆ ಇರುವವರು ಆಗಸ್ಟು 25 ನೇ ತಾ. ಒಳಗೆ ಬೆಂಗಳೂರು ಸಿಟಿ ಬಸವನಗುಡಿಯಲ್ಲಿರುವ ಮಂದಿರದ ಸೆಕ್ರೆಟರಿ ಮ॥ ಕೆರೆಕೆರೆ ಕೃಷ್ಣಮೂರ್ತಿರಾಯರ ಹೆಸರಿಗೆ ಇಸಂ‌ಗೆ 10 ರೂ ನಂತೆ ಮಣಿಯಾರ್ಡರ್ ಸಹಿತ ದರಖಾಸ್ತು ಕಳುಹಿಸಬಹುದು. ರೈಲ್ವೆ ಕನ್ಸೆಷನ್ :—ಪ್ರತಿನಿಧಿಗಳ ಪ್ರಯಾಣಕ್ಕಾಗಿ ಪ್ರತಿನಿಧಿ ಮಂದಿರದ ಸೆಕ್ರೆಟರಿ ಸರ್ಟಿಫಿಕೇಟು ಹಾಜರ್ಮಾಡಿದರೆ ರೈಲಿನಲ್ಲಿ ಮೆಂಬರುಗಳಿಗೂ ಅವರ ಸಂಸಾರಕ್ಕೂ ಒಂದು, ಎರಡನೇ ತರಗತಿಯಲ್ಲಿ ಹೋಗಿಬರಲು ಒಂದೇ ಪ್ರಯಾಣದ ಚಾರ್ಜು, ಅಡಿಗೆಯವನು, ಆಳು, ಇವರಿಗೆ ಮಾತ್ರ ಹೋಗಿಬರಲು ಮೂರನೇ ತರಗತಿಯಲ್ಲಿ ಒಂದೂವರೆ ಪ್ರಯಾಣದ ಚಾರ್ಜಿನ ಟಿಕೇಟುಗಳನ್ನು ಕೊಡುತ್ತಾರೆ. ಈ ಟಿಕೇಟುಗಳನ್ನು ಸೆಪ್ಟಂಬರ್ ತಾ. 15 ರಿಂದ ಅಕ್ಟೋಬರ್ 6 ನೇ ತಾ. ಒಳಗಾಗಿ ಮೈಸೂರು ಸಂಸ್ಥಾನದ ಎಲ್ಲಾ ರೈಲ್ವೆ ಸ್ಟೇಷನ್‌ಗಳಲ್ಲಿ ಕೊಡುತ್ತಾರೆ. ಅಕ್ಟೋಬರ್ 15 ನೇ ತಾ. ಒಳಗೆ ವಾಪಸು ಬರಬಹುದು. ಮೆಂಬರುಗಳು ಯಾವ ಕ್ಲಾಸಿನಲ್ಲಿ ಎಷ್ಟೆಷ್ಟು ಟಿಕೇಟು ಬೇಕೋ ಯಾವ ಸ್ಟೇಷನ್ನಿಂದ ಪ್ರಯಾಣಮಾಡುತ್ತಾರೋ ತಪಸೀಲ್ ನಿಶಿ, ವಿಲಾಸ ಬರೆದ ಅರ್ಜಿ ಕವರು ಇಟ್ಟು ಬರೆದುಕೊಂಡಲ್ಲಿ ಸರ್ಟಿಫಿಕೇಟು ಕೊಡಲ್ಪಡುತ್ತೆ. ಒಬ್ಬ ಮೆಂಬರು ಹಿಂದೆ ಬರತಕ್ಕ ನೌಕರರಿಗೆ 2 ಇಸಂಗೆ ಜಾಸ್ತಿ 3 ನೇ ತರಗತಿ ಸರ್ಟಿಫಿಕೇಟು ದೊರೆಯುವುದಿಲ್ಲ.

ಯುದ್ಧದ ಸಮಾಚಾರಗಳು.

ಬೆಲ್ಜಿಯಂ ತನ್ನ ದೇಶವನ್ನು ಕಾಪಾಡಿಕೊಳ್ಳುತ್ತಿದೆ.

ಆಸ್ಟ್ರಿಯವು ಮತ್ತೆ ಸರ್ವಿಯದ ಮೇಲೆ ಬೀಳುತ್ತೆ.

ರಷ್ಯವು ಆಸ್ಟ್ರಿಯದೊಳಕ್ಕೆ ನುಗ್ಗುತ್ತೆ.

...ವು ಕಳೆದ ವಾರದಂತೆ ಈ ಸಲವೂ ಬೇರೆ ಬೇರೆ ಸ್ಥಳಗಳಲ್ಲಿ ನಡೆಯುವ ಯುದ್ಧಕಾರ್ಯಗಳನ್ನು ವಿಂಗಡಿಸಿ, ಪ್ರತ್ಯೇಕ ಪ್ರತ್ಯೇಕವಾಗಿಯೂ ಸ್ಪಷ್ಟವಾಗಿ ...ಯುವಂತೆ ಪ್ರಕಟಮಾಡುವೆವು. ಕಳೆದ ವಾರ ಗ್ರೇಟ್ ಬ್ರಿಟನ್ ...ವು ಆಸ್ಟ್ರಿಯದವರ ಮೇಲೆ ಯುದ್ಧವನ್ನು ಸಾರಿತು. ಮಾಂಟಿನೀಗ್ರೋ ...ಯು ಆಸ್ಟ್ರಿಯದವರ ಮೇಲೆ ಕಾದಾಡಲು ಸರ್ವಿಯದವರ ಪಕ್ಷವನ್ನು ...ತು. ಈಗ ನೋಡುವರೆ ಒಂದು ಪಕ್ಷದಲ್ಲಿ ಗ್ರೇಟ್ ಬ್ರಿಟನ್, ಫ್ರಾನ್ಸ್, ...ಯಂ, ರಷ್ಯ, ಸರ್ವಿಯ, ಮಾಂಟಿನೀಗ್ರೋ ರಾಜ್ಯಗಳೂ; ಎದುರು ಪಕ್ಷ... ಜರ್ಮನಿ ಮತ್ತು ಆಸ್ಟ್ರಿಯ ರಾಜ್ಯಗಳೂ ನಿಂತಿರುವವು. ಈ ಯುದ್ಧ... ...ಯ ನಕ್ಷೆಯನ್ನು ಮುಂದಿನ ವಾರ ಕನ್ನಡದಲ್ಲಿ ಪ್ರಕಟಿಸಬೇಕೆಂದಿದ್ದೇವೆ ...ಕರು ಅದನ್ನು ಎದುರಿಗಿಟ್ಟುಕೊಂಡರೆ ಯುದ್ಧಕಾರ್ಯಗಳನ್ನು ಕ್ರಮವಾ... ...ಚೆನ್ನಾಗಿಯೂ ಗ್ರಹಿಸಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ.

ಬೆಲ್ಜಿಯಂನಲ್ಲಿ.

...ಜ್‌ನಲ್ಲಿ ಒಂದು ಯುದ್ಧವಾಯಿತೆಂದೂ ಜರ್ಮನಿಯವರನ್ನು ...ಯನ್‌ರು ಓಡಿಸಿದರೆಂದೂ ಕಳೆದ ವಾರ ಹೇಳಿದೆವು. ಜರ್ಮನಿಯವರು ...ತ್ತೆ ನುಗ್ಗಿ ಬಂದು ಮ್ಯೂಸ್‌ನದಿ ದಾಟಿ ಬೆಲ್ಜಿಯಂ ಒಳಕ್ಕೆ ಹೋದರು. ...ಮತ್ತೆ ಯುದ್ಧವಾಯಿತು. ತಾ. 12 ನೇ ಬುಧವಾರ ಹೇಲೆನ್‌ನಲ್ಲಿ ಜರ್ಮ... ...ಗೂ ಬೆಲ್ಜಿಯನ್‌ರಿಗೂ ಯುದ್ಧವಾಯಿತು. ಈ ಸ್ಥಳವು ಬೆಲ್ಜಿಯಂನಲ್ಲಿ ...ಜ್‌ನಿಂದ ಹಿಂದೆ ಸುಮಾರು 30 ಮೈಲಿಯಲ್ಲಿದೆ. ಜರ್ಮನಿಯವರ ಕಡೆ ...ಸೈನ್ಯವೂ, ಬೆಲ್ಜಿಯನ್‌ರ ಕಡೆ 7,000 ಇದ್ದು ಕದನವಾದದ್ದರಲ್ಲಿ ಜರ್ಮ... ...ಯು ಬಹಳ ನಷ್ಟಪಟ್ಟು ಸೋತುಹೋದರು. ಮೃತಪಟ್ಟವರೂ ಗಾಯಪ... ...ರೂ ಸುಮಾರು 2,000 ಆಗಬಹುದು. ಜರ್ಮನಿಯವರು ಹಿಮ್ಮೆಟ್ಟ... ...ಬೇಕಾಯಿತು. ಅಲ್ಲಿಂದ ದಕ್ಷಿಣಕ್ಕೂ ಮತ್ತೆ ಯುದ್ಧನಡೆಯಿತೆಂದೂ, ...ನಿಯವರಿಗೇ ಸೋಲಾಗಿ ಅವರು ಹಿಮ್ಮೆಟ್ಟಿದರೆಂದೂ ವರ್ತಮಾನವಿದೆ.

ಜರ್ಮನಿಯವರು ನದಿಯನ್ನು ದಾಟಿ ಬೆಲ್ಜಿಯಂನೊಳಕ್ಕೆ 20-30 ಮೈಲಿ ...ನುಗ್ಗಿಹೋಗಿದ್ದರೂ ಅವರು ಇನ್ನೂ ಲಿಯೇಜ್ ಪಟ್ಟಣದ ಕೋಟೆಗಳನ್ನು ...ಧೀನಪಡಿಸಿಕೊಂಡಿಲ್ಲವೆಂದು ಗೊತ್ತಾಗುವುದು. ಈ ಕೋಟೆಗಳ ಪೈಕಿ ಒಂದರ ...ರಿಗೆ ಎರಡು ಸಲ ಗಾಯವಾಗಿದೆ; ಆದರೂ ಆತನು ಕುರ್ಚಿಯಲ್ಲಿ ...ಕೊಂಡು ತನ್ನ ಸೈನಿಕರನ್ನು ನಡೆಸುತ್ತಿದ್ದಾನೆ. ಇದುವರೆಗೆ ಜರ್ಮನಿಯ... ...ಸಾವಿರಾರುಮಂದಿ ಮೃತಪಟ್ಟರು, ಇಲ್ಲವೇ ಗಾಯಪಟ್ಟರು; ಇದ... ...,000 ಸೈನಿಕರು ಶತ್ರುಗಳಿಗೆ ಕೈಸೆರೆ ಸಿಕ್ಕಿರುತ್ತಾರೆ. ಈ ಪೈಕಿ 2,000 ...ಯನ್ನು ಕಳುಹಿಸೋಣವೇ ಎಂದು ಬೆಲ್ಜಿಯನ್‌ರು ಫ್ರೆಂಚರನ್ನು ಕೇಳಿ... ...ರೆ. ಫ್ರೆಂಚರು ಈಗ ಬೆಲ್ಜಿಯಂನೊಳಕ್ಕೆ ಪ್ರವೇಶಿಸಿ ಬೆಲ್ಜಿಯನ್‌ರಿಗೆ ಸಹಾಯ ...ಮಾಡುತ್ತಿದ್ದಾರೆ. ಅವರಿಂದ ಬಲವಾದ ಫೌಜು ಜರ್ಮನಿಯವರ ಮೇಲೆ ...ಕ್ಕೆ ಹೊರಟಂತಾಯಿತು. ಬೆಲ್ಜಿಯನ್‌ರ ಕಡೆ ಅನೇಕರಿಗೆ ಗಾಯಗಳಾ... ...ಬಹಳ ನಷ್ಟವೇನೂ ಆಗಿಲ್ಲ.

ಅಂತರಿಕ್ಷದಲ್ಲೂ ಯುದ್ಧವಾಯಿತು. ಬೆಲ್ಜಿಯನ್‌ರ ಪಿರಂಗಿ ಗುಂಡು ...ಬಿದ್ದು ಜರ್ಮನಿಯ ಇಬ್ಬರು ವಿಮಾನಕಾರರು ಕೊಲ್ಲಲ್ಪಟ್ಟರು; ಇನ್ನೊ... ...ಗೆ ಘೋರ ಗಾಯವಾಗಿದೆ.

ಬೆಲ್ಜಿಯನ್‌ರು ಬಹು ಪರಾಕ್ರಮದಿಂದ ತಮ್ಮ ಸ್ಥಾನಗಳನ್ನು ಕಾಪಾಡಿ...ಕೊಂಡು ಜರ್ಮನಿಯವರನ್ನು ನುಗ್ಗಿ ಬರದಂತೆ ತಡೆದಿರುತ್ತಾರೆ. ಇದರಿಂದ ...ಫ್ರೆಂಚರೂ ಇತರ ಕಡೆಯವರೂ ಸನ್ನಾಹಮಾಡಿಕೊಳ್ಳುವುದಕ್ಕೆ ಒಳ್ಳೇ ಅವಕಾಶ ...ದೊರೆಯಿತು. ಅವರೂ ಮಹಾ ಘೋರವಾದ ಯುದ್ಧಗಳು ನಡೆಯುವುದಕ್ಕೆ ...ಪ್ರಾರಂಭವಾಗಿರುತ್ತವೆ. ಈ ಯುದ್ಧಗಳು ಒಂದೆರಡು ವಾರಗಳ ತನಕ ...ಬಹು ಭಯಂಕರವಾಗಿ ನಡೆಯಬಹುದು. ಅದು ಯಾವಾಗಲೋ ಯಾರಿಂದಲೂ ...ಹೇಳಲಾಗುವುದಿಲ್ಲ; ಯಾವ ದಿನ ಪ್ರಾರಂಭವಾದರೂ ಆಗಬಹುದು. ಈಚೆಗೆ ...ಬಂದಿರುವ ಒಂದು ವರ್ತಮಾನವು ಯುದ್ಧ ನಡೆಯುತ್ತಿದೆ ಎಂದು ಹೇಳುವುದು. ...ಲಕ್ಷಾಂತರ ಸೈನ್ಯಗಳು ಎದುರುಬದುರಾಗಿ ನಿಂತು ಕಾದಾಡೋಣದರಿಂದ ...ಫಲಿತಾಂಶವು ಇನ್ನೂ ಕೆಲವು ದಿನಗಳ ತನಕ ಹೊರಪಡುವಹಾಗಿಲ್ಲ.

ಫ್ರಾನ್ಸ್ ಮತ್ತು ಜರ್ಮನಿ.

ಫ್ರೆಂಚರು ಆಲ್ಸಾಸ್ ಪ್ರಾಂತ್ಯದೊಳಕ್ಕೆ ಪ್ರವೇಶಿಸಿ ಮುಲ್ಹೌಸೆನ್ ಎಂಬು...ದನ್ನು ಸ್ವಾಧೀನಪಡಿಸಿಕೊಂಡರೆಂದು ಕಳೆದ ವಾರ ತಿಳಿಸಿದೆವು. ಜರ್ಮನಿಯ...ವರು ಈಚೆಗೆ ದೊಡ್ಡ ಸೈನ್ಯವನ್ನು ಕಳುಹಿಸಿದ್ದರಿಂದ ಫ್ರೆಂಚರು ಹಿಮ್ಮೆಟ್ಟಿ ಬರ...ಬೇಕಾಯಿತು. ಅಲ್ಲಿ ನಡೆದ ಯುದ್ಧದಲ್ಲಿ ಫ್ರೆಂಚರಲ್ಲಿ 100 ಮಂದಿ ಮಾತ್ರ ...ನಷ್ಟವಾದರು. ಜರ್ಮನಿಯವರು ಅನೇಕರನ್ನು ಕೈಸೆರೆ ಹಿಡಿದರೆಂಬ ಮಾತು ...ಸರಿಯಲ್ಲವೆಂದು ಹೇಳಿದೆ. ಫ್ರೆಂಚರು ಬಿಟ್ಟುಹೋಗಿದ್ದ ಕೆಲವು ಸ್ಥಳಗಳನ್ನು ...ಪುನಃ ನುಗ್ಗಿಹೋಗಿ ಮತ್ತೆ ಸ್ವಾಧೀನಪಡಿಸಿಕೊಂಡಿದ್ದಾರೆ. ಬಹುಶಃ ಆಲ್ಸಾ...ಸಿಗೆ ಆಸ್ಟ್ರಿಯದವರೂ ಬಂದು ಜರ್ಮನಿಯವರಿಗೆ ಸಹಾಯಮಾಡಿರಬೇಕು.

ಫ್ರೆಂಚ್ ಸೈನ್ಯಗಳು ಸುಮ್ಮನಿಲ್ಲ; ಆದರೆ ಅವರು ನಡೆಸಿದ ಕಾರ್ಯಗಳು ...ಸ್ಪಷ್ಟವಾಗಿ ತಿಳಿಯುವುದು ಕಷ್ಟ. ಫ್ರಾನ್ಸಿಗೂ ಜರ್ಮನಿಗೂ ನಡುವೆ ಎಲ್ಲೆಕ...ಟ್ಟಿನಲ್ಲಿ ಅತೀ ಎಂಬೊಂದು ಹೊಳೆ ಹರಿಯುತ್ತದೆ. ಈ ಬಳಿಯಲ್ಲಿ ಎರಡು ...ದಿನಗಳ ತನಕ ಶತ್ರುಗಳು ಸಂಧಿಸಿ ಯುದ್ಧಮಾಡಿದರೆಂದೂ, ಫ್ರೆಂಚರು ಜರ್ಮನಿ...ಯವರನ್ನು ಸೋಲಿಸಿ ಓಡಿಸಿಬಿಟ್ಟದ್ದಲ್ಲದೆ 1,000 ಮಂದಿಯನ್ನು ಕೈಸೆರೆ ಹಿಡಿದಿ...ರುತ್ತಾರೆಂದೂ, ಹನ್ನೆರಡು ಪಿರಂಗಿಗಳೂ ಇತರ ಸಾಮಗ್ರಿಗಳೂ ಫ್ರೆಂಚರಿಗೆ ಸಿಕ್ಕಿ...ದುವೆಂದೂ ವರ್ತಮಾನವಿದೆ.

ಅಲ್ಲಿಂದ ದಕ್ಷಿಣಕ್ಕೆ ಫ್ರೆಂಚರು ನುಗ್ಗಿಹೋಗಿ ಐದು ದಿನ ಜರ್ಮನಿಯವರ ...ಮೇಲೆ ಕದನಗಳನ್ನು ನಡಿಸಿ ಸ್ಟ್ರಾಸ್‌ಬರ್ಗ್ ದಾರಿಯಲ್ಲಿ ಸಿಕ್ಕುವ ಸಾಲೆ ...ಎಂಬ ಕಣಿವೆ ಮಾರ್ಗವನ್ನು ಸ್ವಾಧೀನಪಡಿಸಿಕೊಂಡಿದ್ದಾರೆ. ಈ ಸ್ಥಳವು ಬಹಳ ...ವಿಶೇಷವಾದದ್ದು; ಅಲ್ಲಿಂದ ಫ್ರೆಂಚರು ಜರ್ಮನಿಯವರ ಬೆನ್ನುಹತ್ತಿ ಅವರನ್ನು ...ಓಡಿಸಿಕೊಂಡುಹೋಗುವುದಕ್ಕೆ ಅನುಕೂಲವಾಗಿದೆ. ಎಲ್ಲೆಕಟ್ಟಿನ ಹಲವು ಸ್ಥಳಗ...ಳಲ್ಲಿ ಕದನಗಳು ನಿಲುಗಡೆಯಿಲ್ಲದೆ ನಡೆಯುತ್ತಿರುವವು. ಫ್ರೆಂಚರು ಜರ್ಮನಿ...ಯವರನ್ನು ಬಹಳ ನಷ್ಟಪಡಿಸಿ ಹಿಮ್ಮೆಟ್ಟಿಸಿದರೆಂದು ತಂತೀವರ್ತಮಾನ ಹೇಳು...ತ್ತದೆ. ದೊಡ್ಡ ಯುದ್ಧಗಳು ನಡೆಯುವುದಕ್ಕೆ ಇದೇ ಪ್ರಾರಂಭ. ಸುಮಾರು ...200 ಮೈಲಿ ಫಾಸಲೆ ತನಕ ಹರಡಿಕೊಳ್ಳುತ್ತದೆ.

ಆಸ್ಟ್ರಿಯ ಮತ್ತು ಸರ್ವಿಯ.

ಬಹುಶಃ ಆಸ್ಟ್ರಿಯದವರು ಸರ್ವಿಯವನ್ನು ಸಂಪೂರ್ಣವಾಗಿ ಹತಮಾಡಿ...ಬಿಡಬೇಕೆಂದು ಪ್ರಯತ್ನಪಟ್ಟಿರುವಂತೆ ಕಾಣುವುದು. 4,00,000 ಆಸ್ಟ್ರಿಯಾ ...ಸೈನಿಕರು ಡ್ಯಾನ್ಯೂಬ್ ಮತ್ತು ಡ್ರೀನ ನದಿಗಳನ್ನು ದಾಟಬೇಕೆಂದು ವಿಶೇಷ...ವಾದ ಪ್ರಯತ್ನಗಳನ್ನು ಮಾಡಿದರು. ಆದರೆ ಅದು ಸಾಧ್ಯವಾಗದೆ ಅವರು ...ಹಿಮ್ಮೆಟ್ಟಬೇಕಾಯಿತು. ಆಸ್ಟ್ರಿಯದವರು ಸರ್ವಿಯಾ ರಾಜಧಾನಿಯಾದ ಬೆಲ್...ಗ್ರೇಡ್ ಪಟ್ಟಣಕ್ಕೆ ಪಶ್ಚಿಮದಲ್ಲಿರುವ ಶಾಬಟ್ಸ್ ಎಂಬ ಪಟ್ಟಣವನ್ನು ಸ್ವಾಧೀನ...ಪಡಿಸಿಕೊಂಡರೆಂದು ಹೇಳುತ್ತಾರೆ. ಆಸ್ಟ್ರಿಯದವರು ಅಲ್ಲಿಂದ ಇನ್ನೂ ಪಶ್ಚಿ...ಮಕ್ಕೆ ನುಗ್ಗಿಹೋಗಿ ಡ್ರೀನ ನದಿಯನ್ನು ದಾಟಿ ಲೋಜ್ನಿತ್ಸ ನಗರಕ್ಕೆ ಮುತ್ತಿಗೆ ...ಹಾಕಿರುವರು. ಎರಡು ಕಡೆಗಳಲ್ಲೂ ಅನೇಕರು ನಷ್ಟಪಟ್ಟರು; ಸಂಖ್ಯೆಗಳು ತಿಳಿದು ಬಂದಿಲ್ಲ. ಸರ್ವಿಯದವರು ತಮ್ಮ ದೇಶವನ್ನು ಬಹು ಪರಾಕ್ರಮದಿಂದ ಸಂರಕ್ಷಿಸಿಕೊಳ್ಳುತ್ತಿದ್ದಾರೆ. ಈಗ ಅವರಿಗೆ ಮಾಂಟಿನೀಗ್ರೋದವರ ಸಹಾಯ ದೊರಕಿದೆ. ಆದಾಗ್ಯೂ ಆಸ್ಟ್ರಿಯದವರು ಸರ್ವಿಯದವರನ್ನು ಸೋಲಿಸಿ ಓಡಿಸುವುದರಲ್ಲಿ ಆಶ್ಚರ್ಯವೇನೂ ಕಾಣುವುದಿಲ್ಲ.

ರಷ್ಯಾ ಮತ್ತು ಆಸ್ಟ್ರಿಯ.

ಆಸ್ಟ್ರಿಯ ಹಂಗೇರಿಯ ಪೂರ್ವ ದಿಕ್ಕಿನಲ್ಲಿ ಗಲಿಸಿಯ ಆಧಿಪತ್ಯದೊಳಗೆ ಕೆಲವು ಕದನಗಳು ನಡೆದವು. ಆಸ್ಟ್ರಿಯದವರು ಎಲ್ಲೆಕಟ್ಟಿನಿಂದ ಲೆಂಬರ್ಗಿನ ಬಳಿ ಹಿಮ್ಮೆಟ್ಟಿ ಹೋದರೆಂದೂ, ಆಸ್ಟ್ರಿಯದವರನ್ನು ರಷ್ಯಾದವರು ನೀಸ್ಟರ್ ನದಿಯ ಹತ್ತಿರ ಸೋಲಿಸಿ ಓಡಿಸಿದ್ದಲ್ಲದೆ ಒಂದು ರಿಜಿಮೆಂಟು ಕಾಲ್ಬಲವನ್ನೂ ಒಂದು ರಿಜಿಮೆಂಟು ಸವಾರರನ್ನೂ ನಾಶಮಾಡಿದರೆಂದೂ ಹೇಳಲಾಗಿದೆ. ರಷ್ಯಾದವರಿಗೂ ಆಸ್ಟ್ರಿಯದವರಿಗೂ ಯುದ್ಧವಾಗುವುದಕ್ಕೆ ಇದೇ ಪ್ರಾರಂಭವು. ಎಲ್ಲರೂ ನಿರೀಕ್ಷಿಸಿದ್ದದ್ದಕ್ಕಿಂತಲೂ ಬಹು ಬೇಗನೆ ರಷ್ಯಾದವರು ಯುದ್ಧ ಸನ್ನಾಹಗಳನ್ನು ಮಾಡಿಕೊಂಡು ಸಿದ್ಧರಾಗಿರುತ್ತಾರೆ.

ರಷ್ಯಾ ಮತ್ತು ಜರ್ಮನಿ.

ರಷ್ಯಾದವರು ತಮ್ಮ ಪ್ರಜೆಗಳಿಗೆಲ್ಲಾ ತಮಗೆ ಬೆಂಬಲವಾಗಿ ನಿಲ್ಲಬೇಕೆಂದು ಕುತೂಹಲಪಡುತ್ತಿದ್ದಾರೆ. ರಷ್ಯವು ಜರ್ಮನಿಗೆ ಸೇರುವ ಕಡೆಯಲ್ಲಿ ಪೋಲೆಂಡ್ ಎಂಬ ದೇಶವಿದೆ. ಇದಕ್ಕೆ ವಾರ್ಸಾ ಎಂಬುವುದು ರಾಜಧಾನಿಯಾಗಿತ್ತು. ಈ ಪೋಲೆಂಡ್ ಸೀಮೆಯು ಪೂರ್ವದಲ್ಲಿ ಸ್ವತಂತ್ರ ರಾಜ್ಯಾಂಗವಾಗಿತ್ತು. ಈಚೆಗೆ ಇದು ರಷ್ಯಕ್ಕೆ ಸೇರಿದೆ. ಈಗ ರಷ್ಯಾದವರು ಈ ಪೋಲೆಂಡಿಗೆ ಸ್ವತಂತ್ರಾಧಿಕಾರವನ್ನು ವಹಿಸಿ ಅದರ ಆಳ್ವಿಕೆಗಾಗಿ ಒಬ್ಬ ವೈಸ್ರಾಯನ್ನು ನೇಮಕಮಾಡಿದರು. ಪೋಲೆಂಡಿನವರಿಗೆ ಈ ಏರ್ಪಾಡು ತೃಪ್ತಿಕರವಾದೀತೆಂದೂ, ಅವರು ರಷ್ಯಾದವರ ವಿಷಯದಲ್ಲಿ ಸ್ವಾಮಿಭಕ್ತಿಯನ್ನು ಪಡೆಯುತ್ತಾರೆಂದೂ ನಂಬಿ ನಿರೀಕ್ಷಿಸುತ್ತೇವೆ.

ಈಗ ಜರ್ಮನಿಯವರು ಪೋಲೆಂಡಿನೊಳಕ್ಕೆ ನುಗ್ಗಿ ಅಲ್ಲಿನವರನ್ನು ಹೆದರಿಸುತ್ತಿದ್ದಾರೆ. ಆದರೆ ಅಲ್ಲಿ ವಿಶೇಷ ಯುದ್ಧವೇನೂ ನಡೆದಿಲ್ಲ.

ರಷ್ಯಾದವರು ಜರ್ಮನಿಯ ಪೂರ್ವದಿಗ್ಭಾಗದೊಳಕ್ಕೆ ನುಗ್ಗಿಹೋಗಿ ಮೆಮೆಲ್‌ಗೂ ಟಿಲ್ಸಿಟ್‌ಗೂ ನಡುವಣ ರೈಲ್‌ಮಾರ್ಗವನ್ನು ನಾಶಪಡಿಸಿದರು. ಇಲ್ಲೂ ಕದನಗಳೇನೂ ನಡೆಯಲಿಲ್ಲ.

ಸಮುದ್ರದ ಮೇಲೆ.

ಮೆಡಿಟರ್ರೇನಿಯನ್ ಕಡಲಿನಲ್ಲಿ ಬಹುಶಃ ಜರ್ಮನಿಯ ಯುದ್ಧದ ಹಡಗುಗಳು ಇಲ್ಲದೆ ಸುರಕ್ಷಿತವಾಗಿರಬಹುದು. ಗೀಬೆನ್ ಮತ್ತು ಬ್ರೆಸ್ಲೌ ಎಂಬ ಜರ್ಮನಿ ಯುದ್ಧದ ಹಡಗುಗಳು ಡಾರ್ಡನೆಲ್ಸ್ ಜಲಸಂಧಿಗೆ ಹೋಗಿ ಸೇರಿಕೊಂಡಿವೆ. ಇವೆರಡನ್ನೂ ಟರ್ಕಿಯವರಿಗೆ ಮಾರಿಬಿಟ್ಟಂತೆ ವರ್ತಮಾನವಿದೆ. ಒಂದಾಗಿರುವ ಪರರಾಜ್ಯಗಳವರು ಟರ್ಕಿಯವರನ್ನು ಆ ಹಡಗುಗಳಲ್ಲಿರುವ ಮದ್ದುಗುಂಡು ಪಿರಂಗಿ ಮುಂತಾದ ಯುದ್ಧ ಸಾಮಗ್ರಿಗಳನ್ನು ತೆಗೆದು ಹಾಕಬೇಕೆಂದು ಕೇಳಿದ್ದಕ್ಕೆ ಟರ್ಕಿಯವರು ಆ ರೀತಿ ಮಾಡಲು ಇಷ್ಟಪಡುವವರಾಗಿಲ್ಲ; ಅಥವಾ ಅವರಿಗೆ ಹೆದರಿಕೆಯುಂಟಾಗಿರುವಂತೆ ಕಾಣುವುದು.

ಅಟ್ಲಾಂಟಿಕ್ ಸಾಗರದಲ್ಲಿ ಫ್ರೆಂಚರ ಮತ್ತು ಇಂಗ್ಲೀಷರ ಯುದ್ಧದ ಹಡಗುಗಳು ಸಂಚರಿಸುತ್ತಾ ಜರ್ಮನಿಯ ಹಡಗುಗಳನ್ನು ಹುಡುಕುತ್ತಿರುವಂತೆ ತೋರುವುದು. ಆದರೆ ಸದ್ಯಕ್ಕೆ ಆ ಸಾಗರದಲ್ಲಿ ಅಪಾಯವೇನೂ ಇರುವಂತೆ ಕಾಣುವುದಿಲ್ಲ. ಇದರಿಂದ ಪ್ರಪಂಚದ ವ್ಯಾಪಾರವು ನಡೆಯಲು ಅನುಕೂಲವಾಯಿತೆಂದು ನಿರೀಕ್ಷಿಸುತ್ತೇವೆ.

ಪೂರ್ವ ಆಫ್ರಿಕಾದಲ್ಲಿ ಮೊಂಬಾಸಾದ ಸಮೀಪದಲ್ಲಿ ಬ್ರಿಟಿಷರು ದಾರ್-ಎಸ್-ಸಲಾಮ್ ಎಂಬಲ್ಲಿದ್ದ ಜರ್ಮನಿಯವರ ಒಂದು ದೊಡ್ಡ ಟೆಲಿಗ್ರಾಫ್ ಸ್ಟೇಷನನ್ನೂ, ಹಡಗುಗಳನ್ನು ರಿಪೇರಿಮಾಡುವ ಸಮುದ್ರತೀರ ಕಟ್ಟಡಗಳನ್ನೂ ನಾಶಪಡಿಸಿದ್ದಲ್ಲದೆ ಅವರ ಒಂದು ಹಡಗನ್ನೂ ಸ್ವಾಧೀನಪಡಿಸಿಕೊಂಡಿದ್ದಾರೆ.

ಪೂರ್ವ ಆಫ್ರಿಕದ ಮಧ್ಯಪ್ರದೇಶದಲ್ಲಿ ನ್ಯಾಸ ಎಂಬ ಒಂದು ದೊಡ್ಡ ಕೆರೆ ಇದೆ. ಇದರಲ್ಲಿ ಒಂದು ಭಾಗ ಇಂಗ್ಲೀಷರಿಗೂ, ಇನ್ನೊಂದು ಭಾಗ ಜರ್ಮನಿಯವರಿಗೂ ಸೇರಿದೆ. ಈ ಎರಡು ರಾಜ್ಯಗಳವರೂ ಸೇರಿ ಅಲ್ಲಿ ಒಂದೊಂದು ಆಯುಧವಾಣಿಯಾದ ಹಡಗನ್ನು ಇಟ್ಟಿದ್ದಾರೆ. ಈಗ ಇಂಗ್ಲೀಷ್ ಹಡಗಿನವರು ಸಾಹಸಪಟ್ಟು ಜರ್ಮನಿ ಹಡಗನ್ನು ಸ್ವಾಧೀನಮಾಡಿಕೊಂಡದ್ದಲ್ಲದೆ ಅದರ ಕ್ಯಾಪ್ಟನ್ ಎಂಬ ಅಧಿಪತಿಯನ್ನೂ ಕೆಲಸಗಾರರನ್ನೂ ಕೈಸೆರೆ ಹಿಡಿದುಕೊಂಡರು.

ಇಂಗ್ಲೀಷರೂ ರಷ್ಯಾದವರೂ ಪ್ರಪಂಚದ ನಾನಾ ಕಡೆಗಳಲ್ಲಿ ಜರ್ಮನಿಯ ಹಲವು ವ್ಯಾಪಾರದ ಹಡಗುಗಳನ್ನು ಹಿಡಿದುಕೊಂಡಿದ್ದಾರೆ. ಹಿಂದುಸ್ಥಾನದಲ್ಲೂ ಬೊಂಬಾಯಿ, ಕಲ್ಕತ್ತೆ, ಕರಾಚಿ, ರಂಗೂನ್, ಕೊಲಂಬೋ ತೀರಪಟ್ಟಣಗಳಲ್ಲಿದ್ದ ಜರ್ಮನಿ ಹಡಗುಗಳನ್ನು ಕಿತ್ತಿಟ್ಟುಕೊಂಡದ್ದಾಯಿತು. ಬಾಲ್ಟಿಕ್ ಕಡಲೊಂದು ಹೊರತು ಎಲ್ಲಾ ಕಡೆಗಳಲ್ಲೂ ಜರ್ಮನಿಯವರ ವ್ಯಾಪಾರವು ಸಂಪೂರ್ಣವಾಗಿ ನಿಂತುಹೋದಂತೆ ಕಾಣುತ್ತದೆ.

ಪಶ್ಚಿಮ ಆಫ್ರಿಕದಲ್ಲಿ ಇಂಗ್ಲೀಷರೂ ಫ್ರೆಂಚರೂ ಸೇರಿ ಟೊಗೊಲೆಂಡ್ ಎಂಬ ಜರ್ಮನಿಯವರ ಆಧಿಪತ್ಯವನ್ನು ಸ್ವಾಧೀನಪಡಿಸಿಕೊಂಡರೆಂದು ಕಳೆದ ವಾರ ತಿಳಿಸಿದೆವು. ಅಲ್ಲಿ ಒಂದಾನೊಂದು ಸ್ಟೇಷನ್‌ನಿಂದ ತಂತಿಗಳಿಲ್ಲದೇನೇ 3,000 ಮೈಲಿಗೆ ವರ್ತಮಾನಗಳನ್ನು ಕೊಟ್ಟು ತರಿಸುವ ಏರ್ಪಾಡಿದೆ. ಇದು ಜರ್ಮನಿಯವರ ಸ್ವಾಧೀನ ತಪ್ಪಿದ್ದರಿಂದ ಇಂಗ್ಲೀಷರಿಗೂ ಫ್ರೆಂಚರಿಗೂ ಬಹಳ ಪ್ರಯೋಜನವಾಗುತ್ತದೆ.

ಜಪಾನ್.

ಜಪಾನ್‌ನವರು ಜರ್ಮನಿಯವರಿಗೆ ಚೀನಾದಲ್ಲಿರುವ ಜರ್ಮನಿ ಯುದ್ಧದ ಹಡಗುಗಳನ್ನೆಲ್ಲಾ ವಾಪಸು ಕರಸಿಕೊಳ್ಳಬೇಕೆಂದೂ, ಅವುಗಳಲ್ಲಿರುವ ಯುದ್ಧ ಸಾಮಗ್ರಿಗಳನ್ನು ತೆಗೆದುಹಾಕಬೇಕೆಂದೂ, ಚೀನಾದಲ್ಲಿರುವ ಜರ್ಮನಿ ಸ್ಥಿರ ಆಸ್ತಿಗಳನ್ನೂ ಪಟ್ಟಣಗಳನ್ನೂ ಚೀನೆಯವರಿಗೆ ಕೊಡುವುದಕ್ಕೋಸ್ಕರ ಜಪಾನ್‌ನವರ ವಶಕ್ಕೆ ಬಿಟ್ಟುಕೊಡಬೇಕೆಂದೂ, ಇದಕ್ಕೆಲ್ಲಾ ಇದೇ ಆಗೋಸ್ಟು ತಾ. 23 ನೇ ಭಾನುವಾರ ಮಧ್ಯಾಹ್ನದೊಳಗಾಗಿ ಜವಾಬು ಕಳುಹಿಸದಿದ್ದರೆ ಯುದ್ಧಕ್ಕೆ ನಿಲ್ಲಬೇಕಾಗುವುದೆಂದೂ ಬರೆದು ತಿಳಿಸಿದ್ದಾರೆ.

ಇಂಗ್ಲೆಂಡಿನಲ್ಲಿ.

ಇಂಗ್ಲೆಂಡಿನಲ್ಲಿ ಎರಡನೇ ಸೈನ್ಯವನ್ನು ಜೊತೆಮಾಡಲು ಆತುರವಾಗಿ ಸನ್ನಾಹಗಳು ನಡೆಯುತ್ತಿವೆ. ದಿನ ಒಂದಕ್ಕೆ ಮೂರು ನಾಲ್ಕು ಸಾವಿರದಂತೆ ಜನರು ಬಂದು ಸೈನ್ಯಕ್ಕೆ ಸೇರಿಕೊಳ್ಳುತ್ತಿರುವರು.

ಗ್ರೇಟ್ ಬ್ರಿಟನ್‌ನೊಳಗಿರುವ ಅನೇಕಾನೇಕ ಜರ್ಮನಿಯ ಪ್ರಜೆಗಳನ್ನು ಇಂಗ್ಲೀಷರು ಕೈಸೆರೆ ಹಿಡಿದುಬಿಟ್ಟರು. ಇವರಲ್ಲಿ ಬಹು ಮಂದಿ ಬಹುಶಃ ಗೂಢಚಾರರಾಗಿದ್ದಿರಬಹುದು.

ಯುದ್ಧದ ರಿಲೀಫ್ ಫಂಡಿಗೆ 1,50,00,000 ರೂಪಾಯಿ ವಸೂಲಾಗಿದೆ; ಈ ಫಂಡಿಗೆ ಗ್ವಾಲಿಯರ್ ಸಂಸ್ಥಾನದ ಸಿಂಧಿಯಾ ಮಹಾರಾಜರವರು 1,50,000 ರೂಪಾಯಿಯನ್ನು ಚಂದಾ ಕಳುಹಿಸಿಕೊಟ್ಟರು.

ಇಂಗ್ಲೆಂಡಿನಲ್ಲಿ ಆಹಾರ ಹಣವಿದೆ; ಆಹಾರಸಾಮಗ್ರಿಗಳ ಧಾರಣೆಯನ್ನು ಎಂದಿಗಿಂತಲೂ ಹೆಚ್ಚದಂತೆ ನೋಡಿಕೊಳ್ಳುತ್ತಿದ್ದಾರೆ.

ಉತ್ತರ ಸಮುದ್ರದಲ್ಲಿ ಬಹು ಭಾಗ ಸುರಕ್ಷಿತವಾಗಿರುವಂತೆ ಕಾಣುವುದು; ವ್ಯಾಪಾರ ಸಾಮಗ್ರಿಗಳ ಹಡಗುಗಳು ಇಂಗ್ಲೆಂಡಿಗೂ ನಾರ್ವೆಗೂ, ಡೆನ್ಮಾರ್ಕಿಗೂ ಹಾಲೆಂಡಿಗೂ ಧಾರಾಳವಾಗಿ ಹೋಗಿ ಬರುತ್ತಿರುವವು.

ಇಂಗ್ಲೆಂಡಿನಿಂದ ಹೆಚ್ಚು ವರ್ತಮಾನಗಳನ್ನು ಹೊರಕ್ಕೆ ಬಿಡುವುದಿಲ್ಲ. ಸಮುದ್ರ ಯುದ್ಧಗಳಾವವೂ ಇನ್ನೂ ನಡೆಯಲಿಲ್ಲ.

ಇಂಗ್ಲಿಷ್ ಸ್ವಾಸ್ಥ್ಯಗಳು.

ಇಂಗ್ಲೆಂಡಿನ ಸ್ವಾಸ್ಥ್ಯಗಳೆಲ್ಲಾ ಪ್ರಜೆಗಳು ಸಾರ್ವಭೌಮ ಸರ್ಕಾರಕ್ಕೆ ಸಹಾಯಮಾಡುವ ವಿಷಯದಲ್ಲಿ ಬಹಳ ಉತ್ಸಾಹಪಡುತ್ತಿದ್ದಾರೆ. ಕ್ಯಾನಡಾದಲ್ಲಿ ಜನರು ಸೈನ್ಯಕ್ಕೆ ಸೇರಿಕೊಳ್ಳಲು ವಿಶೇಷವಾಗಿ ಆತುರಪಟ್ಟು ಬರುತ್ತಿರುವುದನ್ನು ಕಂಡು, ಹೆಸರು ಬರೆದುಕೊಳ್ಳುವುದನ್ನು ಸದ್ಯಕ್ಕೆ ನಿಲ್ಲಿಸಬೇಕಾಯಿತು. ಎಷ್ಟು ಮಂದಿಯನ್ನು ಕರೆಸಬೇಕು ಮಾಡಬಹುದೋ ಅಷ್ಟು ಮಂದಿಯನ್ನು ಸೇರಿಸಿಕೊಂಡಿದ್ದಾರೆ. ಇದಲ್ಲದೆ ಅವರು ಇಂಗ್ಲೆಂಡಿಗೆ 10 ಲಕ್ಷ ಬುಷೆಲ್‌ನಷ್ಟು ಓಟ್ಸ್ ಎಂಬ ಧಾನ್ಯವನ್ನು ಕೊಟ್ಟಿರುವರು.

ದಕ್ಷಿಣ ಆಫ್ರಿಕದಲ್ಲಿರುವ ಬೋಅರರೂ ಬ್ರಿಟನ್‌ರೂ ಆ ದೇಶವನ್ನು ಸಂರಕ್ಷಿಸಿಕೊಳ್ಳುವುದಕ್ಕೆ ಒಪ್ಪಿ ಸಿದ್ಧರಾಗಿರೋಣದರಿಂದ ಅಲ್ಲಿರುವ ಇಂಗ್ಲಿಷ್ ಸೈನ್ಯಗಳನ್ನೆಲ್ಲಾ ಯುದ್ಧಭೂಮಿಗೆ ಕರಸಿಕೊಳ್ಳಬಹುದಾಗಿದೆ.

ಆಸ್ಟ್ರೇಲಿಯ, ನ್ಯೂಜೀಲೆಂಡ್, ಟಾಸ್ಮೇನಿಯ ಮೊದಲಾದ ಸ್ವಾಸ್ಥ್ಯಗಳಲ್ಲೂ ಕೆಲಕೆಲವು ಸೈನ್ಯಗಳನ್ನು ಇಂಗ್ಲೀಷರ ಸಹಾಯಕ್ಕಾಗಿ ಕಳುಹಿಸಿಕೊಡಲು ಸನ್ನಾಹಗಳು ನಡೆಯುತ್ತಿವೆ.

ಹಿಂದುಸ್ಥಾನದಲ್ಲಿ.

ನಮ್ಮ ದೇಶದವರು ಎಲ್ಲಾ ಕಡೆಗಳಲ್ಲೂ ಅಪಾರವಾದ ರಾಜಭಕ್ತಿಯನ್ನೂ, ಸಹಾಯಮಾಡುತ್ತೇವೆಂಬ ಕುತೂಹಲವನ್ನೂ ಪ್ರಕಾಶಪಡಿಸುತ್ತಿದ್ದಾರೆ. ಎಲ್ಲಾ ಸ್ಥಳಗಳಲ್ಲೂ ದೊಡ್ಡದೊಡ್ಡ ಸಭೆಗಳು ನಡೆದು ಸಹಾಯಮಾಡುತ್ತೇವೆಂಬದಾಗಿ ವೈಸ್‌ರಾಯ್ ಪ್ರಭುಗಳಿಗೆ ಅರಿಕೆಮಾಡುತ್ತಿರುವರು. ಇದುವರೆಗೆ ಅಂಥಾ ಸಭೆಗಳು ನಡೆದಿರುವ ಸ್ಥಳಗಳನ್ನೂ, ಸಹಾಯಮಾಡಲು ಒಪ್ಪಿರುವವರನ್ನೂ ಹೆಸರಿಟ್ಟು ಹೇಳುವುದು ಸಾಧ್ಯವಲ್ಲ.

ಬರೋಡಾ ಮಹಾರಾಜರವರು ಫ್ರಾನ್ಸಿನಲ್ಲಿದ್ದುಕೊಂಡು, ತಮ್ಮ ಸರ್ವಸ್ವವನ್ನೂ ಸಾರ್ವಭೌಮರವರ ಸಹಾಯಕ್ಕಾಗಿ ಒಪ್ಪಿಸುತ್ತೇವೆಂದು ಅರಿಕೆಮಾಡಿದ್ದಾರೆ. ದಕ್ಷಿಣ ದೇಶದಲ್ಲಿ ತಿರುವಾಂಕೂರು, ವಿಜಯನಗರ, ವೆಂಕಟಗಿರಿ ರಾಜರುಗಳು ಸಹಾಯಮಾಡುವುದಾಗಿ ತಿಳಿಸಿದ್ದಾರೆ. ಇದಲ್ಲದೆ ವೆಂಕಟಗಿರಿ ರಾಜರು ಮೂರು ಲಕ್ಷ ರೂಪಾಯಿ ಚಂದಾ ಕೊಡುತ್ತೇವೆಂದೂ ವಾಗ್ದಾನಮಾಡಿರುತ್ತಾರೆ.

ಗ್ವಾಲಿಯರ್ ಸಂಸ್ಥಾನದ ಸಿಂಧಿಯಾ ಮಹಾರಾಜರವರೂ ಉತ್ತರ ದೇಶದ ಇತರ ದೇಶೀಯ ರಾಜರುಗಳೂ ಗಾಯಪಟ್ಟವರಿಗೆ ಔಷಧೋಪಚಾರಗಳು ನಡೆಯುವುದಕ್ಕೆ ಅನುಕೂಲಿಸುವಂತೆ ಒಂದು ಹಡಗನ್ನು ಆಸ್ಪತ್ರೆಯಂತೆ ಅಣಿಮಾಡಿ ಒಪ್ಪಿಸುತ್ತೇವೆಂದು ವಾಗ್ದಾನಮಾಡಿದರು. ವೈಸ್‌ರಾಯ್ ಪ್ರಭುಗಳು ವಂದನಾ ಪೂರ್ವಕವಾಗಿ ಅದನ್ನು ಅಂಗೀಕರಿಸುವುದಾಗಿ ಅಪ್ಪಣೆ ದಯಪಾಲಿಸಿದ್ದಾರೆ.

ಅನೇಕ ಸ್ಥಳಗಳಲ್ಲಿ ಮುಸಲ್ಮಾನ್ ಪ್ರಜೆಗಳು ಸಭೆಗಳನ್ನು ನಡಿಸಿ ತಮ್ಮ ರಾಜಭಕ್ತಿಯನ್ನು ಪ್ರಕಾಶಪಡಿಸಿ, ಸಹಾಯಮಾಡಲು ಸಿದ್ಧರಾಗಿರುತ್ತೇವೆಂದು ವಿಜ್ಞಾಪನೆಗಳನ್ನು ಕಳುಹಿಸುತ್ತಿದ್ದಾರೆ. ಹೀಗೆಯೇ ಹಿಂದುಸ್ಥಾನದ ಮುಸಲ್ಮಾನ್ ಪ್ರಜೆಗಳು ತಮ್ಮ ರಾಜಭಕ್ತಿಯನ್ನು ಪ್ರಕಟಿಸುತ್ತಾ ಬಂದಾರೆಂದು ಹಾರೈಸುತ್ತೇವೆ. ಯಾಕೆಂದರೆ ಟರ್ಕಿಯವರು ಇದನ್ನು ನೋಡಿ ತಾವು ಈ ಯುದ್ಧದಲ್ಲಿ ಸೇರದೆ ತಟಸ್ಥರಾಗಿರುವುದೇ ಒಳ್ಳೇದೆಂದು ಸುಮ್ಮನಿರಲು ಅನುಕೂಲವಾದೀತು.

ಹಿಂದುಸ್ಥಾನದಲ್ಲಿ ಪ್ರಕಾಶವಾಗುತ್ತಿರುವ ಅಪರಿಮಿತವಾದ ರಾಜಭಕ್ತಿ ಪ್ರೀತಿಗಳನ್ನು ಕೇಳಿ ಇಂಗ್ಲಿಷ್ ಪ್ರಜೆಗಳು ಆನಂದಪಡುತ್ತಿದ್ದಾರೆ.

ಇಂಡಿಯಾ ಗವರ್ನ್‌ಮೆಂಟಿನವರು ತಮ್ಮ ಕೆಲಸಕ್ಕೆ ಬೇಕಾಗುವ ಯಾವ ಹಡಗನ್ನಾದರೂ ಹಿಡಿದು ಇಟ್ಟುಕೊಂಡು ಉಪಯೋಗಪಡಿಸಿಕೊಳ್ಳುವಂತೆ ಸಾರಿಸಿ ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ಆದಕಾರಣ ಹಡಗುಗಳು ಮದರಾಸಿನಿಂದ ರಂಗೂನಿಗೂ, ಟ್ಯುಟಿಕೋರಿನ್‌ನಿಂದ ಸಿಲೋನ್‌ಗೂ ಹೋಗಿಬರುವುದು ನಿಂತುಹೋಗಿದೆ. ಬಹುಶಃ ಹಿಂದುಸ್ಥಾನದಿಂದ ಯುರೋಪಿಗೆ ಸೈನ್ಯಗಳನ್ನು ಸಾಗಿಸುವುದಕ್ಕಾಗಿ ಹೀಗೆ ಮಾಡಿರುವಂತೆ ತೋರುತ್ತದೆ.

ಗ್ರೇಟ್ ಬ್ರಿಟನ್‌ನಿಂದ ಹಿಂದುಸ್ಥಾನಕ್ಕೆ ಎರಡು ವಾರಗಳಿಗೊಂದಾವರ್ತಿ ಕ್ರಮವಾಗಿ ಬರುತ್ತಿದ್ದ ಅಂಚೇ ಕಾಗದ ಮುಂತಾದವು ಅಷ್ಟು ಕ್ರಮವಾಗಿ ಬರುವುದಿಲ್ಲ; ಸಾವಕಾಶವಾಗಿಯೂ ಕ್ರಮವಿಲ್ಲದೆಯೂ ಬರುವವು. ಕಳೆದ ವಾರ ಎರಡು ದಿನ ಸಾವಕಾಶವಾಯಿತು. ಕಾಗದಗಳು (ಮೆಯಿಲ್) ಸಮುದ್ರದ ಮೇಲೆಯೇ ಉದ್ದಕ್ಕೂ ಬರಬೇಕಾಗಿರೋಣದರಿಂದ ಒಂದು ವಾರ ಸಾವಕಾಶವಾಗುತ್ತವೆ. ಈ ಕಾರಣದಿಂದಲೇ ಈ ವಾರ ಇಂಗ್ಲೆಂಡಿನ ಕಾಗದಗಳು ಬರುವುದಿಲ್ಲ. ಆದರೂ ಕೂಡಿದ ಮಟ್ಟಿಗೂ ಜಾಗ್ರತೆಯಾಗಿ ಬರುವಂತೆ ಆದೀತು.

ಪ್ರಾರಂಭದಲ್ಲಿ ಹಿಂದುಸ್ಥಾನದ ಎಲ್ಲಾ ಕಡೆಗಳಲ್ಲೂ ಧಾರಣೆವಾಸಿಗಳು ಏರಿಹೋಗಿದ್ದವು; ಈಚೆಗೆ ದಿನಕ್ರಮೇಣ ಇಳಿತರಕ್ಕೆ ಬಂದಿರುತ್ತವೆ. ಹೀಗೆಯೇ ಹಿಂದುಸ್ಥಾನದಿಂದ ವ್ಯಾಪಾರವಸ್ತುಗಳು ಹೊರಕ್ಕೆ ಸಾಗಿಹೋಗುವುದೂ ಮತ್ತೆ ಪ್ರಾರಂಭವಾಗಿ ಎಂದಿನಂತೆ ಕ್ರಮಪಟ್ಟೀತೆಂದು ನಿರೀಕ್ಷಿಸುವೆವು.

ವಿಶೇಷ ವೃತ್ತಾಂತಗಳು.

ಇಟಲಿಯ ದಕ್ಷಿಣ ಭಾಗದಲ್ಲಿರುವ ಸಿಸಿಲಿ ದ್ವೀಪಕ್ಕೆ ಸೇರಿದ ಕ್ಯಾಸ್ಟೆಲ್ಲಾ ಮೇರ್ ಎಂಬ ಸ್ಥಳದಲ್ಲಿ ಕಳೆದ ತಿಂಗಳು ಅಂತ್ಯ ಭಾಗದಲ್ಲಿ ಸಿಡಿಮದ್ದಿನ ಬಾಣಗಳ ಕಾರ್ಖಾನೆಯಲ್ಲಿ ಮದ್ದು ಹತ್ತಿಕೊಂಡು ಮಹಾ ಶಬ್ದದೊಡನೆ ಹಾರಿ ಅನೇಕ ಜನರು ಮೃತಪಟ್ಟರು. ಆ ಕಾರ್ಖಾನೆಯು ಕಟ್ಟಡವೆಲ್ಲಾ ಹಾಳಾಯಿತು.

* * *

ಬೆಲ್ಜಿಯಂ ರಾಜ್ಯಕ್ಕೆ ಸೇರಿದ ಲೋರಿಯರ್ ಎಂಬ ಪಟ್ಟಣ ದೇವಸ್ಥಾನದಲ್ಲಿ ಅನೇಕ ಮಂದಿ ಗಂಡಸರೂ ಹೆಂಗಸರೂ ಸೇರಿ ದೇವರ ಪ್ರಾರ್ಥನೆ ಮಾಡುತ್ತಿದ್ದಾಗ ಅಕಸ್ಮಾತ್ತಾಗಿ ದೇವಾಲಯವು ಹತ್ತಿಕೊಂಡು ಸ್ವಲ್ಪ ಮಾತ್ರ ಉರಿದುಹೋಯಿತು. ಆದರೂ ಆಗಲಭೆಯಲ್ಲೂ ತುಳಿದಾಟದಲ್ಲೂ ಒಳಗಿದ್ದ ಹೆಂಗಸರಲ್ಲಿ 14 ಮಂದಿ ಮೃತಪಟ್ಟರೆಂದೂ, 50 ಮಂದಿಗೆ ಸುಟ್ಟು ಗಾಯಗಳಾದವೆಂದೂ ತಂತೀವರ್ತಮಾನ ಬಂದಿದೆ.

* * *

ಟರ್ಕಿಯವರಿಗೂ ಬಲ್ಗೇರಿಯದವರಿಗೂ ನಡೆದ ಯುದ್ಧಕ್ಕೆ ಮುಂಚೆ ಸರ್ವಿಯಾ ರಾಜ್ಯವು 18 ಡಿಸ್ಟ್ರಿಕ್ಟುಗಳನ್ನು ಪಡೆದಿತ್ತು. ಆ ರಾಜ್ಯವು 18,644 ಚದರಮೈಲಿ ವಿಸ್ತಾರವಾಗಿಯೂ, 29,11,701 ಪ್ರಜೆಗಳನ್ನುಳ್ಳದ್ದಾಗಿಯೂ ಇತ್ತು. ಆ ಯುದ್ಧ ಮುಗಿದ ಮೇಲೆ ಪಂಚಾಯತರ ತೀರ್ಮಾನದಂತೆ ಸರ್ವಿಯಾ ರಾಜ್ಯಕ್ಕೆ 14,668 ಚದರಮೈಲಿಯ ಹೊಸ ಪ್ರದೇಶವೂ 14,81,614 ಪ್ರಜೆಗಳೂ ಸೇರಿಸಲ್ಪಟ್ಟರು. ಈಗ ಸರ್ವಿಯಾ ರಾಜ್ಯವು ಒಟ್ಟು 33,312 ಚದರ ಮೈಲಿ ವಿಸ್ತಾರವಾಗಿದೆ; ಅದರಲ್ಲಿ ಒಟ್ಟು 43,93,315 ಪ್ರಜೆಗಳಿರುವರು. ರಾಜ್ಯವೆಲ್ಲಾ ಈಗ 30 ಡಿಸ್ಟ್ರಿಕ್ಟುಗಳಾಗಿ ವಿಭಾಗಿಸಲ್ಪಟ್ಟು ಆಳ್ವಿಕೆಯ ಏರ್ಪಾಡು ಮಾಡಲಾಗಿದೆ.

* * *

ನಮ್ಮ ಐದನೇ ಜಾರ್ಜ್ ಚಕ್ರವರ್ತಿ ಸಾರ್ವಭೌಮರವರಿಗೆ ಕಿರೀಟಧಾರಣೆಯ ಉತ್ಸವ ನಡೆದಾಗ್ಗೆ ಅವರ ಪ್ರಜೆಗಳಲ್ಲಿ "ಜಾರ್ಜ್" ಎಂಬ ಹೆಸರಿನವರೆಲ್ಲಾ ಸೇರಿ ಚಂದಾ ಕೊಟ್ಟು ಒಂದು ಫಂಡುಮಾಡಿ, ಅದನ್ನು ಆ ಉತ್ಸವದ ಜ್ಞಾಪಕಾರ್ಥವಾಗಿ ವಿಶೇಷ ಕಾರ್ಯಕ್ಕೆ ವಿನಿಯೋಗಿಸಬೇಕೆಂದು ಗೊತ್ತುಮಾಡಿದ್ದರು. ಸಾರ್ವಭೌಮರವರು ಈ ಫಂಡಿನ ಹಣದಿಂದ ಯೌವನಸ್ಥರಿಗೆ ಸೈನ್ಯಕ್ಕೆ ಸೇರಿಕೊಂಡು ತರಪೇತಾಗುವಂತೆ ದ್ರವ್ಯಸಹಾಯ ಮಾಡಬೇಕೆಂದು ಕುತೂಹಲಪಟ್ಟು ಅಪ್ಪಣೆಕೊಡಿಸಿದರು. ಫಂಡಿನ ಕಮಿಟಿಯವರು ಅದೇ ರೀತಿ ವೇತನಗಳನ್ನು ಕೊಡಲು ಒಪ್ಪಿಕೊಂಡಿರುತ್ತಾರೆ. ಈ ಫಂಡಿನಲ್ಲಿ 61,106 ರೂಪಾಯಿ ಚಂದಾ ಕೂಡಿದೆ. ಜಾರ್ಜ್ ಎಂಬ ಹೆಸರಿನ ಸುಮಾರು 35,000 ಮಂದಿ ಈ ಹಣವನ್ನು ಕೂಡಿಸಿ ಕೊಟ್ಟಿದ್ದಾರೆಂದೂ, ಈ ಪೈಕಿ ಅನೇಕ ಜನರು ಕೂಲಿಮಾಡಿ ಜೀವನ ಮಾಡತಕ್ಕವರೆಂದೂ ತಿಳಿದು ಬಂದಿದೆ.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1914 ನೇ ಇಸವಿ ಆಗಸ್ಟ್ 6 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ.

ಲೇಣೆ:—(1) ಷೇರು ಮೊಬಲಗು	....	ರೂ. 9,93,015
,, (2) ಡಿಪಾಜಿಟ್ಟುಗಳು	....	,, 19,83,312
,, (3) ಇತರೆ	....	,, 39,305
(ಆಣೆ, ಕಾಸು ಬಿಟ್ಟಿರುತ್ತೆ.)	ಜುಮ್ಲಾ	ರೂ. 30,16,632

ದೇಣೆ:—(1) ಕೈಯಲ್ಲೂ, ಬ್ಯಾಂಕುಗಳಲ್ಲಿರುವ ಹಣ		ರೂ. 9,70,892
,, (2) ಖಾತೆ ಮತ್ತು ಇತರ ಸಾಲಗಳು	.....	,, 13,65,110
,, (3) ಡಿಸ್ಕಾಂಟು ಮಾಡಿದ ವಾಯಿದೆ ಹುಂಡಿಗಳು		,, 2,11,526
,, (4) ಇನ್‌ವೆಸ್ಟ್‌ಮೆಂಟುಗಳು	.....	,, 2,50,000
,, (5) ಏಜನ್ಸಿಗಳಲ್ಲಿರುವ ಮೊಬಲಗು	.....	,, 1,87,403
,, (6) ಬ್ಯಾಂಕಿನಲ್ಲಿರುವ ಸಾಮಾನುಗಳು	.....	,, 10,722
,, (7) ಇತರೆ	....	,, 19,980
(ಆಣೆ, ಕಾಸು ಬಿಟ್ಟಿರುತ್ತೆ.)	ಜುಮ್ಲಾ	ರೂ. 30,16,632

ಡಬ್ಲ್ಯು. ಸಿ. ರೋಸ್, ಮ್ಯಾನೇಜರ್.

ಅತ್ಯಂತ ಭಯಂಕರವಾದ ಪ್ರವಾಹ.

ಬೆಳಗಾವ, ಬಿಜಾಪುರ, ಹುಬ್ಬಳ್ಳಿ ಮುಂತಾದ 15 ಜಿಲ್ಲೆಗಳಲ್ಲಿ ಕಳೆದ ವಾರ ಅಪರಿಮಿತವಾದ ಮಳೆ ಸುರಿಯಿತು. ಮಂಗಳವಾರ ಪ್ರಾರಂಭವಾದ ಘೋರವಾದ ಮಳೆಯು ಗುರುವಾರವೂ ಬಿಡಲಿಲ್ಲ. ನೂರಾರು ಮನೆಗಳು ಪ್ರವಾಹದ ದೆಸೆಯಿಂದ ಕೊಚ್ಚಿ ಹೋದವು. ಪ್ರಜೆಗಳ ಕಷ್ಟನಷ್ಟಗಳು ವಿವರಿಸಲಶಕ್ಯವಾಗಿವೆ. ಧರ್ಮಾತ್ಮರು ಹಣವನ್ನೂ ಧಾನ್ಯವನ್ನೂ ಬಟ್ಟೆಗಳನ್ನೂ ಆ ಜನರಿಗೆ ಕಳುಹಿಸುತ್ತಿದ್ದಾರೆ. ಅಲ್ಲಿನ ಮಿಷನ್ ಸಂಘದವರು ನೂರಾರು ಜನರಿಗೆ ಸ್ಥಳ ಕೊಟ್ಟಿರುವುದಲ್ಲದೆ 100-200 ಜನರನ್ನು ಅನ್ನಹಾಕಿ ಸಂರಕ್ಷಣೆಮಾಡುತ್ತಿರುವರು. ಆ ಪ್ರಾಂತ್ಯದಲ್ಲಿ ಹರಿಯುವ ಮಲಾಪಹಾರಿ, ಕೃಷ್ಣಾ, ಘಟಪ್ರಭಾ ನದಿಗಳಲ್ಲಿ ಮತ್ತೆ ಮತ್ತೆ ಪ್ರವಾಹಗಳು ಬರುತ್ತಿರುವವು. ಬಾಗಲಕೋಟೆ ರೈಲ್ ರಸ್ತೆ ಕಿತ್ತುಹೋಯಿತು; ತಂತೀ ಕಂಭಗಳು ಬಿದ್ದುಹೋದವು. ರೈಲ್‌ಗಾಡಿಗಳ ಸಂಚಾರಕ್ಕೆ ತುಂಬಾ ಅಡಚಣೆಯಾಗಿದೆ.

ಆಲೂರಿನ ಒಬ್ಬ ಬಾತ್ಮಿದಾರರು ಬರೆಯುವುದೇನೆಂದರೆ—ಇದೇ ತಿಂಗಳು 6 ನೇ ತಾ. ಗುರುವಾರ ಪಶ್ಚಿಮಘಟ್ಟಗಳಲ್ಲಿ ಸಂಭವಿಸಿದ ಅತಿವೃಷ್ಟಿಯ ದೆಸೆಯಿಂದ ಕೃಷ್ಣಾ ನದಿಯ ಉಪನದಿಯಾದ ಮಲಪ್ರಭಾ (ಮಲಾಪಹಾರಿ) ಎಂಬ ನದಿಯ ಪ್ರವಾಹವು ಸುತ್ತುಮುತ್ತು ಇದ್ದ ಊರುಗಳನ್ನು ನಾಶಮಾಡಿದ್ದಲ್ಲದೆ ನದಿಯ ಪಾತ್ರದಿಂದ ಸುಮಾರು ಐವತ್ತು ಅಡಿ ಎತ್ತರವಿರುವ ಆಲೂರು ಎಂಬ ರೈಲ್ವೆ ಸ್ಟೇಷನ್ ಬಳಿ ನೀರು ನುಗ್ಗಿ ಅಲ್ಲಿಯ ನೌಕರರ ಮನೆಗಳನ್ನು ಕೆಡವಿ ಮುಂದೆ ಅರ್ಧ ಮೈಲಿ ವರಿವಿಗೂ ನೀರು ಸಮುದ್ರದಂತೆ ಎಲ್ಲೆಲ್ಲಿ ನೋಡಿದರೂ ಅತ್ಯಂತ ಭಯಂಕರವಾಗಿ ಕಾಣುತ್ತಿತ್ತು. ಕೆಲವು ಜನಗಳು ಆ ಕಾಲದಲ್ಲಿ ಎಲ್ಲಿಯೂ ಹೋಗುವುದಕ್ಕೆ ಮಾರ್ಗವಿಲ್ಲದೆ ಗಿಡಗಳ ಮೇಲೆಯೂ, ಗುಡ್ಡದ ಮೇಲೆಯೂ ಮತ್ತು ಗುಡಿ ಗೋಪುರಗಳ ಮೇಲೆಯೂ ಎರಡು ರಾತ್ರಿಗಳನ್ನು ಕಳೆದರು. ಇಂಥಾ ಅತ್ಯಂತ ಭಯಂಕರವಾದ ಪ್ರವಾಹವು ಈಗ ಸುಮಾರು 80-90 ವರುಷಗಳಿಂದ ನೋಡಿಲ್ಲವೆಂದು ಹೇಳುತ್ತಾರೆ. ಇದೂ ಅಲ್ಲದೆ ಕೃಷ್ಣಾ ಮತ್ತು ಘಟಪ್ರಭಾ ಎಂಬ ನದಿಗಳಲ್ಲಿ ಇದೇ ರೀತಿಯಾಗಿ ಎಂದೂ ಕಾಣದಂಥಾ ಪ್ರವಾಹವು ಬಂದು ಬಿಜಾಪುರದಿಂದ ಬರತಕ್ಕ ರೈಲ್ವೆ ಮಾರ್ಗವನ್ನೂ ಸೇತುವೆಗಳನ್ನೂ ಕೊರೆದು ದಾರಿಯನ್ನು ಕಟ್ಟಿಬಿಟ್ಟದ್ದರಿಂದ ಎರಡು ದಿನಗಳು ರೈಲ್ವೆ ಗಾಡಿಗಳ ಸಂಚಾರ ನಿಂತುಹೋಗಿ ಜನಗಳಿಗೆ ಬಹಳ ಅನನುಕೂಲವಾಯಿತು. ಆದರೆ ಪ್ರವಾಹವು ಸುಮಾರು ಮಧ್ಯಾಹ್ನ 4 ಘಂಟೆ ಕಾಲದಲ್ಲಿಯೇ ಎಲ್ಲರಿಗೂ ತನ್ನ ಅದ್ಭುತವಾದ ಏರಿಕೆಯನ್ನು ಸೂಚಿಸಿದ್ದರಿಂದ ಯಾರೂ ನದಿಯ ಪಾಲಾದಂತೆ ಕಾಣುವುದಿಲ್ಲ. ಇಂಥಾ ಕಾಲದಲ್ಲಿ ರೈಲ್ವೆ ಸ್ಟೇಷನ್ ನೌಕರರು ತಮ್ಮ ಆಶ್ರಯವನ್ನು ಅಪೇಕ್ಷಿಸಿ ಬಂದ ಜನಗಳನ್ನು ಪಕ್ಷಪಾತವಿಲ್ಲದೆ ಕಂಡು ಅವರಿಗೆ ಸಾಧ್ಯವಾದ ಮಟ್ಟಿಗೆ ಅನುಕೂಲಗಳನ್ನು ಕಲ್ಪಿಸಿಕೊಟ್ಟು ಕಾಪಾಡಿದರು. ಮಳೆಗಾಲದ ಪ್ರಾರಂಭದಲ್ಲಿಯೇ ಇಷ್ಟು ಅನಾಹುತ ಸಂಭವಿಸಿದರೆ ಮುಂದೆ ಬರುವ ಮಳೆಗಳನ್ನು ಹೇಗೆ ಕಳೆಯಬೇಕೋ ತಿಳಿಯದು.

ಚಿತ್ರದುರ್ಗ ಡಿಸ್ಟ್ರಿಕ್ಟು ವಿದ್ಯಾಭಿವೃದ್ಧಿಯ ಸಂಘ.

ಆಗಸ್ಟ್ ಮಾಹೆಯ ಮೀಟಿಂಗು.

ಆಗಸ್ಟು ಮಾಹೆಯ ಮೀಟಿಂಗು 9 ನೇ ತಾ. ಭಾನುವಾರ ಟೌನ್ ಹಾಲಿನಲ್ಲಿ ನಡೆಯತಕ್ಕದ್ದೆಂದು ಕಳೆದ ತಿಂಗಳಲ್ಲಿಯೇ ಸ್ಥಳನಿರ್ದೇಶವಾಗಿತ್ತು. ಅದಕ್ಕಾಗಿ ಹಳ್ಳಿಗಳಿಂದ ಅನೇಕ ಜನ ಉಪಾಧ್ಯಾಯರುಗಳು ಬಂದು ಕಾದಿದ್ದರು. ಡಿಸ್ಟ್ರಿಕ್ಟು ಎಕನಾಮಿಕ್ ಕಾನ್‌ಫರೆನ್ಸಿನವರ ದಯೆ ದೊರೆಯದ್ದರಿಂದ 4 ಗಂಟೆಯ ಮೇಲೆ ಎ.ವಿ. ಸ್ಕೂಲ್ ಹಾಲಿಗೆ ಹೋಗಿ ಮಾಮೂಲ್ ಸ್ಥಳದಲ್ಲಿಯೇ ನಡಿಸಬೇಕಾಯಿತು. ಈ ಚಿತ್ರದುರ್ಗದಲ್ಲಿರುವ ವ್ಯವಸಾಯ (ಅಗ್ರಿಕಲ್ಚರ್) ಇಲಾಖೆಯ ಪುಸ್ತಕ ಭಂಡಾರವನ್ನೂ, ಮಾಧವ ಮಂತ್ರಿ ಲೈಬ್ರರಿಯನ್ನೂ ನೋಡಬೇಕೆಂದೂ, ಅದರಲ್ಲಿರುವ ಪುಸ್ತಕಗಳನ್ನು ಓದಬೇಕೆಂದೂ ಅನೇಕ ಜನ ಹೋಬಳಿ ಸ್ಕೂಲ್ ಮಾಸ್ಟರುಗಳೂ, ಗ್ರಾಮಗಳ ಕೆಲವು ರೈತರುಗಳೂ ಆ ದಿನ 12 ಗಂಟೆಗೆ ಬಂದಿದ್ದರು. ಬಹಳ ಹೊತ್ತಿನ ವರಿವಿಗೂ ಬಾಗಿಲನ್ನೇ ತೆರೆಯಲಿಲ್ಲ. ಅನಂತರ ಪುಸ್ತಕಗಳನ್ನು ಕೊಡತಕ್ಕವರು ಬಾರದೆಹೋದದ್ದರಿಂದ ಅವರೆಲ್ಲಾ ವ್ಯರ್ಥವಾಗಿ ವಾಪಸು ತಮ್ಮ ಗ್ರಾಮಗಳಿಗೆ ತೆರಳಬೇಕಾಯಿತು. ಮುಂದಿನ ಮೀಟಿಂಗಿಗಾದರೂ ಗ್ರಾಮಾಂತರದ ರೈತರುಗಳಿಗೆ ಅವಕಾಶಕೊಡಬೇಕಾಗಿ ಪ್ರಾರ್ಥಿಸಲ್ಪಟ್ಟಿದೆ.

ಮೀಟಿಂಗು 4½ ಗಂಟೆಗೆ ಪ್ರಾರಂಭವಾಯಿತು. ಹೈ ಸ್ಕೂಲ್ ಹೆಡ್ ಮಾಸ್ಟರು, ಕೆಲವು ಅ|| ಮಾಸ್ಟರುಗಳು, ಡಿಸ್ಟ್ರಿಕ್ಟು ಡೆಪ್ಯುಟಿ ಇನ್‌ಸ್ಪೆಕ್ಟರವರು, ಎ.ವಿ. ಸ್ಕೂಲು ಹೆಡ್ ಮಾಸ್ಟರು, ಬ್ರಾಂಚ್ ಸ್ಕೂಲು ಮತ್ತು ಹೋಬಳಿ ಸ್ಕೂಲು ಮಾಸ್ಟರುಗಳು, ಕೆಲವು ರೈತರು, ವಿದ್ಯಾರ್ಥಿಗಳು ಸೇರಿದ್ದರು. ಹೈ ಸ್ಕೂಲ್ ಅ|| ಮಾಸ್ಟರ್ ಮ|| ಲಕ್ಷ್ಮೀಪತಯ್ಯನವರ ಅಗ್ರಾಸನಾಧಿಪತ್ಯದಲ್ಲಿ ಆ ದಿನದ ಕಾರ್ಯಗಳು ನಡೆದವು. ಸಂಘದ ಸೆಕ್ರೆಟರಿಯವರು ಕಳೆದ ತಿಂಗಳ ಮುಖ್ಯಾಂಶಗಳನ್ನು ಕುರಿತು ರೆಕಾರ್ಡುಮಾಡಿಸಿದರು. ಪ್ರೋಗ್ರಾಂ ಪ್ರಕಾರ ಎ.ವಿ. ಸ್ಕೂಲ್ ಅ|| ಮಾಸ್ಟರು ಮ|| ವೀರಭದ್ರಪ್ಪನವರು ಭೂಗೋಳಕ್ಕೂ, ಖಗೋಳಕ್ಕೂ ಇರುವ ಸಂಬಂಧವನ್ನು ಕುರಿತು ಉಪನ್ಯಾಸ ಮಾಡಿದರು. ನಿದರ್ಶನಕ್ಕಾಗಿ ನಾನಾ ಉಪಕರಣಗಳು ಒದಗಿಸಲ್ಪಟ್ಟಿದ್ದವು. ಕಾಗದದಿಂದ ಗೋಳಗಳನ್ನು ಮಾಡಿಸಿ ಒಂದು ದೊಡ್ಡದಾದ ವರಕ್ಕೆ ನೇತು ಹಾಕಿದ್ದರು. ಅವುಗಳು ಸುತ್ತುವಂತೆಯೂ ಏರ್ಪಡಿಸಿದ್ದದ್ದು ಒಳ್ಳೇ ಮಾದರಿಯಾಗಿತ್ತು. ಅವರ ಉಪನ್ಯಾಸದಿಂದ ತಿಳಿದ ಮುಖ್ಯಾಂಶಗಳೇನೆಂದರೆ—(1) ಸೂರ್ಯನಿಂದ ಭೂಮಿಗೆ ಆಗುವ ಪ್ರಯೋಜನ; (2) ಇತರೆ ಗ್ರಹಗಳಿಗೆ ಸೂರ್ಯನ ಸಹಾಯ; (3) ನಮ್ಮ ಭೂಮಿಗೆ ಬುಧ, ಶುಕ್ರ, ಗುರು, ಕುಜ, ಚಂದ್ರ, ಶನಿ ಗ್ರಹಗಳಿಂದ ಆಗುವ ಪ್ರಯೋಜನ; (4) ಇಂಗ್ಲಿಷ್ ಸಿದ್ಧಾಂತಗಾರರೂ, ನಮ್ಮ ಹಿಂದೂ ಸಿದ್ಧಾಂತಗಾರರೂ ಈ ವರಿವಿಗೂ ಕಂಡುಹಿಡಿದಿರುವ ಅಂಶಗಳು; (5) ಹಿಂದೂ ಸಿದ್ಧಾಂತದ ರೀತ್ಯ ಇತರೆ ಗ್ರಹಗಳಿಂದ ಭೂಮಿಯ ಮೇಲಿರುವ ಸಮಸ್ತ ಚರಾಚರ ವಸ್ತುಗಳಿಗೆ ಆಗುವ ಪ್ರಯೋಜನವನ್ನು ಕುರಿತು ಬಹು ದೀರ್ಘವಾಗಿ ಹೇಳಿದರು. ತರುವಾಯ ಛೇರ್‌ಮನ್‌ರವರು (1) ಗ್ರಹಗಳ ಆಕರ್ಷಣೆ, (2) ಅವು ಸುತ್ತುವದಕ್ಕೆ ಕಾರಣ, (3) ಅವುಗಳ ಫಲ, ಈ ಅಂಶಗಳನ್ನು ಕುರಿತು ಸ್ವಾರಸ್ಯವಾಗಿ ಹೇಳಿದರು. ಅಲ್ಲಿಗೆ ಸಾಯಂಕಾಲವಾದದ್ದರಿಂದ ಉಳಿದ ವಿಷಯಗಳನ್ನು ಮುಂದಿನ ಮೀಟಿಂಗಿನಲ್ಲಿ ನಡಿಸುವಂತೆ ಇತ್ಯರ್ಥ ಮಾಡಿದರು. ಆರೋಗ್ಯ ಮತ್ತು ವ್ಯವಸಾಯ ಶಾಸ್ತ್ರಗಳಲ್ಲಿ ಸಂದೇಹವುಳ್ಳ ಪ್ರಶ್ನೆಗಳಿಗೆಲ್ಲಾ ಮುಂದಿನ ಮೀಟಿಂಗಿನಲ್ಲಿ ಉತ್ತರ ಕೊಡಿಸುವದಾಗಿ ಹೈ ಸ್ಕೂಲ್ ಹೆಡ್ ಮಾಸ್ಟರವರು ಅಪ್ಪಣೆ ಕೊಡಿಸಿರುವರು. ಇದಕ್ಕಾಗಿ ಹೋಬಳಿ ಸ್ಕೂಲು ಮಾಸ್ಟರುಗಳು ಬಹಳವಾಗಿ ಕೃತಜ್ಞರಾಗಿರುತ್ತಾರೆ. ಅಂಥಾ ಸಂದೇಹವಾದ ಪ್ರಶ್ನೆಗಳನ್ನು ಮೊದಲೇ ಬರೆದು ಕಳುಹಿಸಬಹುದು; ಇಲ್ಲವೇ ಆ ಕಾಲಕ್ಕಾದರೂ ತಂದು ಹೇಳಬಹುದು.

ಮುಂದಿನ ತಿಂಗಳ ಮೀಟಿಂಗು ಸೆಪ್ಟಂಬರ್ ತಾ. 13 ನೇ ಭಾನುವಾರ ನಡೆಯತಕ್ಕದ್ದೆಂದು ನಿಷ್ಕರ್ಷೆಯಾಯಿತು.

ವೀರಭದ್ರಪ್ಪ, ಜಾ: ಸೆಕ್ರೆಟರಿ.

ಕೋಆಪರೆಟಿವ್ ಸೊಸೈಟಿ ಜನರಲ್ ಮೀಟಿಂಗು.

ತುಂಕೂರು ಸಮ್ಮತು ಹನ್ನೆನಹಳ್ಳಿ.

ತುಂಕೂರು ಸಮ್ಮತು ಹನ್ನೆನಹಳ್ಳಿ ಪರಸ್ಪರಸಹಾಯಕ ಸೊಸೈಟಿ ಜನರಲ್ ಮೀಟಿಂಗು ತಾ. 10 ನೇ ಸೋಮವಾರ ಸ್ಕೂಲ್ ಕಟ್ಟಡದಲ್ಲಿ ನಡಿಸಲಾಯಿತು. ಸೆಕ್ರೆಟರಿ ವೆಂಕಟಕೃಷ್ಣಪ್ಪನವರು, ಪ್ರೆಸಿಡೆಂಟ್ ದೊಡ್ಡೆಗೌಡರು, ಪಟೇಲ್ ವನಮಾಲೀಗೌಡರು, ರಾ|| ಸಾಗರಸಯ್ಯನವರು, ಪಂಚಾಯಿತರೂ ಸಭೆ ಸೇರಿದ್ದರು. ಈ ಮೀಟಿಂಗಿಗೆ ಸೂಪರ್‌ವೈಜರ್ ರಾಮಚಂದ್ರರಾಯರು ಅಗ್ರಾಸನಾಧಿಪತಿಗಳಾಗಿದ್ದರು. ಸೊಸೈಟಿ ಜಮಾ ಖರ್ಚು ಲೆಕ್ಕಗಳನ್ನು ಓದಿ ಹೇಳಲಾಯಿತು. ಅದನ್ನು ಸರ್ವರೂ ಒಪ್ಪಿಕೊಂಡರು. ನಫಾ ಉಳಿದ ರೂ. 44-6-9 ಪೈಯನ್ನು ಹಂಚಿಗೆ ಪ್ರಕಾರ ಸೇರುದಾರರಿಗೆ ಕೊಡಲು ಕೇಳಿದ್ದರಿಂದ ಎಲ್ಲರೂ ಈ ಮೊಬಲಗು ಮುಂದಣ ಸಾಲಿಗೆ ಹಂಚಬೇಕೆಂತಲೂ, ನಮ್ಮ ಸೊಸೈಟಿ ಅಭಿವೃದ್ಧಿಗೆ ಬರಬೇಕೆಂತಲೂ, ಈ ಸಾಲಿನಲ್ಲಿ ಮಳೆ ಇಲ್ಲದ್ದರಿಂದ ಬಡ್ಡಿ ಕೊಡಲಾರೆವೆಂತಲೂ ರಾಮಚಂದ್ರರಾಯರಿಗೆ ಅರಿಕೆಮಾಡಿದರು. ಅವರು ಅದಕ್ಕೆ ರೆಜಿಸ್ಟ್ರಾರವರಿಗೆ ಬರೆಯುತ್ತೇವೆಂದು ಅಪ್ಪಣೆಕೊಡಿಸಿದರು. ಈ ಸೊಸೈಟಿ ಅಭಿವೃದ್ಧಿಗೆ ಬರಬೇಕೆಂಬ ಕುತೂಹಲದಿಂದ ಪ್ರೆಸಿಡೆಂಟ್ ದೊಡ್ಡೇಗೌಡರು ಶ್ರಮಪಡುತ್ತಿದ್ದಾರೆ.

ಒಬ್ಬ ಮೆಂಬರು.

ಅರಸೀಕೆರೆ.

ಈ ಊರಿನಲ್ಲಿ ಕೋಆಪರೆಟಿವ್ ಸೊಸೈಟಿಯ ವಾರ್ಷಿಕ ಜನರಲ್ ಮೀಟಿಂಗು ಕಳೆದ 9 ನೇ ತಾ. ಭಾನುವಾರ ಇನ್‌ಸ್ಪೆಕ್ಷನ್ ಛತ್ರದಲ್ಲಿ ಬಹಳ ವಿಜೃಂಭಣೆಯಿಂದ ಹಗಲು 2 ಗಂಟೆ ಲಾಗಾಯಿತು ರಾತ್ರಿ 8 ಗಂಟೆ ವರಿವಿಗೂ ನಡಿಸಲ್ಪಟ್ಟಿತು. ನಮ್ಮ ಅಮಲ್ದಾರ್ ಮ|| ಆರ್. ತಿರುನಾರಾಯಣ ಅಯ್ಯಂಗಾರ್ರವರು ಪ್ರೆಸಿಡೆಂಟರಾಗಿ ಅಗ್ರಾಸನವನ್ನು ವಹಿಸಿದ್ದರು. ಸೊಸೈಟಿಯ ಮೆಂಬರುಗಳ ಪೈಕಿ ಸುಮಾರು ಅರ್ಧ ಪಾಲು ಜನ ಸೇರಿದ್ದರು. ಸೊಸೈಟಿಯು ಇನ್ನೂ ಬಾಲ್ಯಾವಸ್ಥೆಯಲ್ಲಿದೆ; ಅಂದರೆ ಸ್ಥಾಪಿತವಾಗಿ ಒಂದು ವರ್ಷವಾಗಿರುತ್ತೆ. ಸೊಸೈಟಿಯ ಸೆಕ್ರೆಟರಿಯವರ ರಿಪೋರ್ಟು ಓದಲ್ಪಟ್ಟಿತು. ಸೊಸೈಟಿಯ ನ್ಯೂನತೆಗಳನ್ನು ಕುರಿತು ಚರ್ಚಿಸಬೇಕೆಂತ ಅನೇಕ ಮೆಂಬರುಗಳು ಅಭಿಪ್ರಾಯಪಟ್ಟುಕೊಂಡಿದ್ದರು. ಮತ್ತು 1-2 ಅರ್ಜಿಗಳೂ ಸಹ ಪ್ರೆಸಿಡೆಂಟರವರಿಗೆ ಹಾಜರ್ಮಾಡಲ್ಪಟ್ಟವು. ರಿಪೋರ್ಟಿನ ವಿದ್ಯಮಾನಗಳಿಂದ ಸೊಸೈಟಿಯಲ್ಲಿನ ನ್ಯೂನಾತಿರಿಕ್ತಗಳನ್ನೂ, ಮುಂದೆ ನಡೆಯಬೇಕಾದ ನಿರಾಕ್ಷೇಪಣೀಯವಾದ ಏರ್ಪಾಡುಗಳನ್ನೂ ಸಹ ಸೂಚಿಸಿದ ನಮ್ಮ ಪ್ರೆಸಿಡೆಂಟನ್ನು ಎಷ್ಟು ವಂದಿಸಿದರೂ ತೀರದು. ಸೊಸೈಟಿಯಲ್ಲಿ ಅನುಕೂಲಸ್ಥರೇ ಡೈರೆಕ್ಟರುಗಳೂ ಆಗಿ ತಮ್ಮಲ್ಲಿರುವ ಹಣಕ್ಕೆ ಹೆಚ್ಚು ಬಡ್ಡಿ ಬರುವ ದುರಾಲೋಚನೆಯನ್ನು ಬಿಟ್ಟು ಬಡವರನ್ನು ತಮ್ಮ ಅಣ್ಣತಮ್ಮಂದಿರಂತೆ ಭಾವಿಸಿ ಅವರುಗಳಿಗೆ ಶಾಕ್ತವಷ್ಟು ಸಹಾಯವಾಗುವಂತೆ ಅನುಕೂಲಪಡಿಸುವ ಬಗ್ಗೆ ಹಣ ಒದಗಿಸುವಾಗ ಅದುವೂ ಅದರ ಮೂಲಕ ಸೊಸೈಟಿಯ ಅಭಿವೃದ್ಧಿಗೆ ಪೂರ್ಣ ಗಮನಕೊಟ್ಟರೆ ಅಂಥಾ ಅನುಕೂಲಶಾಲಿಗಳ ಹೆಸರು ಪ್ರಖ್ಯಾತಿಹೊಂದುವುದರಲ್ಲಿ ಏನೂ ಸಂದೇಹವಿಲ್ಲ. ಈ ಊರಿನಲ್ಲೂ ಆ ರೀತಿ ನಡಿಸಲ್ಪಡುವುದೆಂದು ಕೋರಲ್ಪಟ್ಟಿದೆ. ಮತ್ತು ಸಾಮಾನ್ಯವಾಗಿ ಡೈರೆಕ್ಟರುಗಳೇ ಸೊಸೈಟಿಯಲ್ಲಿ ಸಾಲ ಅಪೇಕ್ಷಿಸದೆ ಬಡವರಿಗೇನೇ ಸಹಾಯ ತೋರಿಸಿದರೆ ಅವರಿಗೆ ತುಂಬಾ ಗೌರವವು ಉಂಟಾಗುವುದರಲ್ಲಿ ಸಂದೇಹವಿಲ್ಲ. ಇಲ್ಲಿ ಪರಸ್ಪರ ಸಹಾಯವೆಂಬುವದನ್ನು ಜನರು ಕಾಣರು. ಇಂಥಾದ್ದರಲ್ಲಿ ಈ ರೀತಿ ಪರಸ್ಪರ ಸಹಾಯ ಸಂಘವನ್ನು ಏರ್ಪಡಿಸಿ ಜನಗಳಿಗೆ ಪ್ರೋತ್ಸಾಹ ಕೊಟ್ಟು ಇಷ್ಟರ ಮಟ್ಟಿಗೆ ಸಂಘವನ್ನು ಅಭಿವೃದ್ಧಿಗೆ ತಂದ ಮ|| ನಂಜುಂಡರಾಮಚಂದ್ರರವರಿಗೆ ಎಷ್ಟು ವಂದನೆಮಾಡಿದರೂ ಸ್ವಲ್ಪವೇ. ಮರೂ ಈ ಸೊಸೈಟಿಯು 10,000 ರೂಪಾಯಿ ಬಂಡವಾಳವುಳ್ಳದ್ದಾಗಿತ್ತು. ಈಗ ಈ ಬಂಡವಾಳವನ್ನು 25,000 ರೂಪಾಯಿಗೆ ಹೆಚ್ಚಿಸಬೇಕೆಂತ ಮೀಟಿಂಗಿನಲ್ಲಿ ನಿರ್ಧರಿಸಲ್ಪಟ್ಟಿರುತ್ತೆ. ಈ ಸೊಸೈಟಿಯನ್ನು ಅಭಿವೃದ್ಧಿಗೆ ತರುವ ವಿಚಾರದಲ್ಲೂ, ನ್ಯೂನತೆಗಳನ್ನು ಸರಿಪಡಿಸುವುದರಲ್ಲೂ ನಮ್ಮ ಪ್ರೆಸಿಡೆಂಟರವರು ಪೂರ್ಣ ಗಮನವನ್ನು ಕೊಟ್ಟಿರುತ್ತಾರೆಂದು ತಿಳಿಸಲು ತುಂಬಾ ಸಂತೋಷಪಡುತ್ತೇವೆ. ಈ ಸೊಸೈಟಿಯಲ್ಲಿ ಹಿಂದೆ ನಡಿಸಿರುವ ದೋಷಗಳನ್ನೆಲ್ಲಾ ಪ್ರಚುರಪಡಿಸುವದು ಯುಕ್ತವಲ್ಲವಾದಕಾರಣ ಇನ್ನು ಮುಂದಾದರೂ ನಿರಾಕ್ಷೇಪಣೆಯಾಗಿ ಲೇವಾದೇವಿ ನಡಿಸುವದರಲ್ಲಿ ಮುಖ್ಯವಾಗಿ ಷೇರು ಒಂದಕ್ಕೆ 12-14 ರೂಪಾಯಿ ಧಾರಣೆ ಇರುವ ಮೂರು ಷೇರು ಭತ್ತವನ್ನು ಕೇಳದ ಒಂದಕ್ಕೆ ಬಡ್ಡಿ ತೆರುತ್ತಾ ಆಸ್ತಿಯನ್ನು ಕಳೆದುಕೊಳ್ಳುವದಕ್ಕೆ ಗುರಿಯಾಗಿರುವ ಬಡವರಾದ ಮೆಂಬರುಗಳಿಗೆ ಅನುಕೂಲಪಡಿಸುತ್ತಾರೆಂತ ನಂಬಲ್ಪಟ್ಟಿದೆ. ಏವಂಚ ದುಬಾರಿ ಬಡ್ಡಿ ತೆರುತ್ತಿರುವ ಸೊಸೈಟಿಯಲ್ಲಿ ಮೆಂಬರುಗಳೂ ಆಗಿರುವವರನ್ನು ಋಣಮುಕ್ತರನ್ನಾಗಿ ಮಾಡಲು ಡೈರೆಕ್ಟರುಗಳು ಪೂರ್ಣ ಗಮನಕೊಟ್ಟರೆ "ಪರಸ್ಪರಸಹಾಯ" ವೆಂಬುವದರ ನಿಜವಾದ ಅರ್ಥವು ಶಾಶ್ವತವಾಗಿ ನಮ್ಮಲ್ಲಿ ನೆಲೆಗೊಳ್ಳುವದರಲ್ಲಿ ಏನೂ ಸಂದೇಹವಿಲ್ಲ.

ಒಬ್ಬ ಮೆಂಬರು.

ಮೈಸೂರು ಗೆಜೆಟ್ ಸಂಗ್ರಹ.

ರೆವ್|| ಡಬ್ಲ್ಯು. ಎಚ್. ಹಾಲಿಸ್ಟರ್‌ಯವರನ್ನು ಕೋಲಾರ್ ಟೌನ್ ಮ್ಯುನಿಸಿಪಲ್ ಕೌನ್ಸಿಲ್ ಮೆಂಬರಾಗಿ ನೇಮಕಮಾಡಿದೆ.

ಅರಕಲಗೂಡು ತಾಲ್ಲೂಕು ಅಮಲ್ದಾರ್ ಮ|| ಜಿ. ಎಸ್. ರಾಮಸ್ವಾಮಿಅಯ್ಯಂಗಾರ್ರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಆಲೂರ್ ಡೆಪ್ಯುಟಿ ಅಮಲ್ದಾರ್ ಮ|| ಎಸ್. ಸುಂದರರಾಜಯ್ಯಂಗಾರ್ರು ಅರಕಲಗೂಡು ತಾಲ್ಲೂಕಿನ ಅಮಲ್ದಾರ್ ಮತ್ತು 2 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿಯೂ, ಸಬ್ ರೆಜಿಸ್ಟ್ರಾರ್ ಮ|| ಎಂ. ಚಕ್ರಪಾಣಿರಾಯರು ಆಲೂರು ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್ದಾರ್ ಮತ್ತು 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿಯೂ ಬದಲಿ ನೇಮಿಸಲ್ಪಟ್ಟಿದ್ದಾರೆ.

ಅಮಲ್ದಾರ್ ಮ|| ಟಿ. ಹನುಮಂತರಾಯರು ಬೇರೆ ಕೆಲಸದ ಮೇಲಿರುವಾಗ್ಗೆ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಹಾಸನದ ಡಿಸ್ಟ್ರಿಕ್ಟ್ ಶಿರಸ್ತೇದಾರ್ ಮ|| ಬಿ. ಎಂ. ವೆಂಕಟೇಶಯ್ಯನವರನ್ನು ಕುಣಿಗಲ್ ತಾಲ್ಲೂಕಿನ ಅಮಲ್ದಾರ್ ಮತ್ತು 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಕಮಾಡಿದೆ.

ಮ|| ಜಿ. ಶ್ರೀನಿವಾಸಅಯ್ಯರವರನ್ನು ದಿವಾನರ ಆಫೀಸಿಗೆ ವರ್ಗಮಾಡಿದ್ದರಿಂದ ಮ|| ಡಿ. ಕೆ. ರಾಮರಾಯರು ಬಂದು ಛಾರ್ಜು ತೆಗೆದುಕೊಳ್ಳುವ ತನಕ ಬೆಂಗಳೂರು ಸೆಷನ್ಸ್ ಕೋರ್ಟಿನ ಶಿರಸ್ತೇದಾರ್ ಮ|| ಎಸ್. ವೈದೀಶ್ವರಅಯ್ಯರವರು ಮೈಸೂರು 1 ನೇ ಮುನ್ಸಿಫರಾಗಿ ಬದಲಿ ನೇಮಿಸಲ್ಪಟ್ಟಿದ್ದಾರೆ.

ಶಿವಮೊಗ್ಗಾ ಡಿಸ್ಟ್ರಿಕ್ಟ್ ಖಜಾನೆಯ ಅ|| ಕಮಿಷನರ್ ಮ|| ಮಹಮದ್ ಜಹಿರುದ್ದೀನ್ ಮೆಕ್ಕಿಯವರಿಗೆ ಮತ್ತೆ 2 ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಟ್ಟಿದೆ.

ಎಕ್ಸೈಸ್ ಕಮಿಷನರವರ ಅಸಿಸ್ಟೆಂಟರಾದ ಮ|| ಟಿ. ರಾಯಲುಚೆಟ್ಟಿಯವರನ್ನು ಅ|| ಕಮಿಷನರ ದರ್ಜೆಯಲ್ಲಿ ಜೂನ್ ತಾ. 1 ರಿಂದ 1 ನೇ ಕ್ಲಾಸಿಗೆ ಬಡ್ತಿಮಾಡಿದೆ.

ಭಾವಿಗಳನ್ನು ತೋರೆಯುವುದಕ್ಕಾಗಿ ನೇಮಕವಾಗಿರುವ ಮ|| ಕೆ. ಶ್ರೀರಂಗಸ್ವಾಮಿಅಯ್ಯಂಗಾರ್ರನ್ನು ಜೂನ್ ತಾ. 30 ರಿಂದ ಇನ್‌ಜನಿಯರ್ ಇಲಾಖೆಗೆ ತೆಗೆದುಕೊಂಡು, 80 ರೂಪಾಯಿ ಸಂಬಳದ ಮೇಲೆ 2 ನೇ ಕ್ಲಾಸ್ ಹಂಗಾಮಿ ಓವರ್ಸಿಯರಾಗಿ ನೇಮಿಸಿ, ಕಾವೇರಿ ರಿಜರ್ವಾಯರ್ ಕಾಮಗಾರಿಗೆ ವರ್ಗ ಮಾಡಿದೆ.

ಬಾತ್ಮಿದಾರರಿಗೆ ನೋಟೀಸ್.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜಾಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸವನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಜಾಗಾ ಕೊಡಲಾರೆವು.

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲುಪುವಂತೆ ಕಳುಹಿಸಬೇಕು. ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕೊಡೆವು. ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಬಯಸಿ ಹೇಳುತ್ತೇವೆ.

ಕರೆಸ್ಪಾಂಡೆನ್ಸ್.

ನದಿಯನ್ನು ದಾಟಿಸುವ ತೆಪ್ಪ.

ಅಯ್ಯಾ,—ಅರ್ಕಲ್‌ಗೂಡಿನಿಂದ ಹಾಸನಕ್ಕೆ ಹೋಗತಕ್ಕ ಮಾರ್ಗದಲ್ಲಿ ಹೇಮಾವತಿ ನದಿ ಇರುತ್ತೆ. ಈ ನದಿಗೆ ಜಂಜಾಲ್ ದೋಣಿ ಸರ್ಕಾರದವರು ಇಟ್ಟು ಜನಗಳನ್ನು ಪಾರ್‌ಮಾಡತಕ್ಕ ಬಗ್ಗೆ ಕಂಟ್ರಾಕ್ಟು ಕೊಟ್ಟಿರುತ್ತಾರೆ. ಈ ಕಂಟ್ರಾಕ್ಟರು ಅನೇಕ ಜನಗಳಿಂದ ಇಸಂ 1 ಕ್ಕೆ 2 ಆಣೆ ಲಾಗಾಯ್ತು 4 ಆಣೆ ವರಿಗೂ, ಗಾಡಿಗೆ 8 ಆಣೆ ಲಾಗಾಯ್ತು 2 ರೂಪಾಯಿ ವರಿಗೂ ಸುಂಕ ವಸೂಲ್ಮಾಡುತ್ತಾರೆ. ಈ ಬಗ್ಗೆ ಬಡರೈತರು ಕಂಟ್ರಾಕ್ಟರು ಹೇಳಿದಷ್ಟು ಸುಂಕ ಕೊಡಲಾರದೆ 1-2 ದಿವಸಗಳು ಚರ್ಚೆಮಾಡಿಯೂ ಕೊನೆಗೆ ಕಂಟ್ರಾಕ್ಟರನ ಇಷ್ಟ ಪ್ರಕಾರ ಸುಂಕ ಕೊಟ್ಟು ಪಾರಾಗುತ್ತಾರೆ. ಈ ವಿಷಯದಲ್ಲಿ ಸರ್ಕಾರದವರು ಗಮನಕೊಟ್ಟು ಇನ್ನು ಮುಂದೆ ಕಂಟ್ರಾಕ್ಟರು ಹೀಗೆ ಜನಗಳಿಗೆ ತೊಂದರೆಪಡಿಸದಂತೆ ತಕ್ಕ ಏರ್ಪಾಡು ಮಾಡುತ್ತಾರೆಂತ ನಂಬಿರುತ್ತೇನೆ. ಬಾತ್ಮಿದಾರ.

ದೊಡ್ಡಬಳ್ಳಾಪುರದಲ್ಲಿ ಒಂದು ಕೊರತೆ.

ಅಯ್ಯಾ,—ಈ ಊರು ಕೋಟೆಯಲ್ಲಿ ಕೆಲವು ಮುಸಲ್ಮಾನರ ಮನೆಗಳಿರುತ್ತೆ. ಆಸ್ಪತ್ರೆಗೂ ಮಾರ್ಕೆಟ್ಟಿಗೂ ಹೋಗತಕ್ಕ ದಾರಿ ಈ ಕೋಟೆಯಲ್ಲಿ ಇರುತ್ತೆ. ದಿನಂಪ್ರತಿ ಹಿಂದೂ ಹೆಂಗಸರು ಆಸ್ಪತ್ರೆಗೂ, ಮಾರ್ಕೆಟ್ಟಿಗೂ ಹೋಗುತ್ತಾರೆ. ಈ ಕೋಟೆಯ ಕೆಲವು ಮುಸಲ್ಮಾನ್ ಹುಡುಗರು ಹೆಂಗಸರ ಮೇಲೆ ಬಗ್ಗುವದು, ಉಗಿಯುವದು, ಇಂಥಾ ಅಸಭ್ಯವಾದ ಕೆಲಸಗಳು ಮಾಡುತ್ತಾರೆ. ಪದೇ ಪದೇ ಈ ಕೆಲಸಗಳು ನಡೆಯುವದರಿಂದ ಈ ಹುಡುಗರ ದೊಡ್ಡವರು ಇಲ್ಲಿರುವ ಮುಸಲ್ಮಾನ್ ಪ್ರಮುಖರೂ ಈ ಹುಡುಗರಿಗೆ ಬಂದೋಬಸ್ತು ಮಾಡದಿರುವದರಿಂದ ಇವರ ಹಾವಳಿ ಜಾಸ್ತಿಯಾಗಿ ಹೆಚ್ಚು ಗಲಾಟೆಗಳಿಗೆ ಅವಕಾಶವಾಗುತ್ತೆ. ಆದ್ದರಿಂದ ಘನವುಳ್ಳ ಸರ್ಕಾರದವರು ಪ್ರಜಾ ನೆಮ್ಮದಿಯನ್ನು ಕಾಪಾಡಬೇಕು. ಸತ್ಯವಾದಿ.

[ಪೋಲೀಸಿನವರು ಎಚ್ಚರಿಕೆಯಿಂದ ನೋಡಿಕೊಳ್ಳಬೇಕಲ್ಲದೆ ಪ್ರಜೆಗಳ ಮುಖಂಡರು ಇಂಥಾ ಕೃತ್ಯಗಳು ನಡೆಯದಂತೆ ಹುಡುಗರನ್ನು ಹತೋಟಿಯಲ್ಲಿಟ್ಟುಕೊಳ್ಳಬೇಕಾದದ್ದು ಅವಶ್ಯ.—ಎಡಿ.]

ಬಿರುದುಗಳ ವ್ಯಾಜ್ಯ.

ಅಯ್ಯಾ,—ನಮ್ಮ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ನಾಮಧಾರಿಗಳಿಗೂ ಹಸೈಕದವರೆಂಬ ಜಾತಿಯವರಿಗೂ ಲಗ್ನ ಮುಹೂರ್ತಗಳಲ್ಲಿನ ಬಿರುದಾವಳಿ ವಿಷಯವಾಗಿ ಈಗ ಒಂದು ವರುಷದಿಂದಲೂ ಅಮಲ್ದಾರ್ರವರ ಕೋರ್ಟಿನಲ್ಲಿ ವಿಚಾರ ನಡೆಯುತ್ತಾ ಇದೆ. ಇದರಲ್ಲಿ ನಾಮಧಾರಿಗಳು ಮಾತ್ರ ಒಂದು ಪಾರ್ಟಿ. ಹಸೈಕದವರ ಕಡೆಯಾದರೋ ಹಳ್ಳಿಪಳ್ಳಿಯಲ್ಲಿರುವ ಬ್ರಾಹ್ಮಣ ದೊಡ್ಡಮನುಷ್ಯರು ಮತ್ತು ತೀರ್ಥಹಳ್ಳಿ ಕಸಬಾದಲ್ಲಿರುವ ಬ್ರಾಹ್ಮಣ ಸಾಹುಕಾರರುಗಳು ಮೊಖ್ತೇಸರರು ಮತ್ತು ಗೌಡ ಸಾರಸ್ವತ ಬ್ರಾಹ್ಮಣ ದೊಡ್ಡಮನುಷ್ಯರುಗಳು ಸಹ ಸೇರಿ ಒಂದು ಪಾರ್ಟಿಯಾಗಿದ್ದಾರೆ. ಲಗ್ನದಕಾಲದಲ್ಲಿ ಬಾಜಾ ಬಜಂತ್ರಿಗಳೊಡನೆ ಕುದುರೆ ಮೇಲೆ ಏರಿಕೊಂಡು ಹೋಗಬೇಕೆಂಬುವದೇ ಹಳೆಪೈಕದವರ ಹೊಸದಾಟ. ಇದು ಮಾಮೂಲಿಗೆ ವಿರೋಧವಾದ ಆಚರಣೆ; ಆ ರೀತಿ ನಡೆಯಕೂಡದೆಂಬುವದೇ ನಾಮಧಾರಿಗಳ ತಕರಾರು. ಈ ಮೇರೆಗೆ ಕಲಹ ಮೊದಲು ಸರಕಾರಕ್ಕೆ ಹೋದದ್ದರಿಂದ ನಾಮಧಾರಿಗಳಿಗೆ ಸಾವಿರಾರು ರೂಪಾಯಿ ಖರ್ಚು, ಹಳೆಪೈಕದವರಿಗೆ 4-5 ಸಾವಿರ ರೂಪಾಯಿ ಖರ್ಚು ಆಗಬಹುದು. ಹಳೆಪೈಕದವರಿಗೆ ಅಷ್ಟು ಹೆಚ್ಚು ಖರ್ಚುಗಳು ಬ್ರಾಹ್ಮಣ ದೊಡ್ಡಮನುಷ್ಯರಿಗೆ ಫಲಪೂಜೆ ಮಾಡಿಸಿದ್ದೇ ಕಾರಣ. ನಾನು ಶಿವಮೊಗ್ಗದಿಂದ ಟ್ರಾನ್ಸಿಟ್ ಗಾಡಿ ಮೇಲೆ ಬರುತ್ತಾ, ಈ ಕೇಸಿಗೆ ಸೇರಿರುವ ಒಬ್ಬ ದೊಡ್ಡಮನುಷ್ಯರಾದ ಬ್ರಾಹ್ಮಣ ಮೊಖ್ತೇಸರರ ಸಂಗಡ ಈ ವಿಷಯವಾಗಿ ಚರ್ಚೆಮಾಡಿದರೆ ಅವರು ಈ ಬಿರುದಾವಳಿಗಳೆಲ್ಲಾ ಹಳೆಪೈಕದವರಿಗೆ ಸಲ್ಲಬಹುದೆಂತ ಅಭಿಪ್ರಾಯಪಟ್ಟರೇ ವಿನಾ ಹಳೆಪೈಕದವರನ್ನು ಬ್ರಾಹ್ಮಣರ ಮನೆ ಒಳಕ್ಕೆ ಸೇರಿಸಿಕೊಳ್ಳುವದಕ್ಕೂ, ಅವರನ್ನು ಮುಟ್ಟಿ ಬಳಸುವದಕ್ಕೂ, ದೇವಸ್ಥಾನದ ಒಳಕ್ಕೆ ಬರುವದಕ್ಕೂ ಆಗದೆಂದು ಹೇಳಿಬಿಟ್ಟರು. ನೋಡಿದಿರಾ, ಬ್ರಾಹ್ಮಣರ ಕುತಂತ್ರವಾಯು ಹ್ಯಾಗಿದೆ? ಎರಡು ಪಾರ್ಟಿಯವರಿಗೂ ವ್ಯಾಜ್ಯ ಹಚ್ಚಿಹಾಕಿ, ಕಡೆಗೆ ಪಾರ್ಟಿಯವರಿಂದ ದುಡ್ಡು ಸುಲಿಗೆ ಮಾಡಿಕೊಳ್ಳುವದೊಂದು ಇವರ ಮುಖ್ಯ ಗುರಿ ಆಗಿರುತ್ತಲ್ಲದೆ ಹಳೆಪೈಕದವರನ್ನು ಮುಂದಕ್ಕೆ ತರಬೇಕೆಂಬ ಉದ್ದೇಶ ಇವರಲ್ಲಿ ಕಾಣಲಿಲ್ಲ. ಆದರೆ ಹಳೆಪೈಕದವರನ್ನು ಬ್ರಾಹ್ಮಣರುಗಳು ಮೇಲ್ಕಂಡ ಬಾಬುಗಳಲ್ಲಿ ಸೇರಿಸಿಕೊಳ್ಳುವ ಪಕ್ಷದಲ್ಲಿ ನಾಮಧಾರಿಗಳು ಕೂಡ ಈ ಬಿರುದಿನ ವಿಷಯದಲ್ಲಿ ತಕರಾರು ಮಾಡಲಾರರೆಂತ ನಂಬಿದ್ದೇನೆ. ಆದರೆ ಈಗಿನ ನವನಾಗರಿಕ ಕಾಲದಲ್ಲಿ ಜಾತಿಭೇದವನ್ನು ಎಣಿಸುವದು ತಿಳಿದವರ ಕೆಲಸವಲ್ಲ. ಆದರೆ ಏನು ಮಾಡುವ

...ಮ ಜಾತಿಯವರೆಂತ ಹೆಸರಿಟ್ಟುಕೊಂಡು, ಈಚೆಗೆ ವಿಷರ್ ಸಂಘದವರಿಂದ ಶಲ್ಲಿ ಕರೆಯುತ್ತಿರುವ ಕಡಮೆ ಜಾತಿಯವರೆಂಬ ಜನಗಳನ್ನು ಕಂಡು ...ಮುಕಟ್ಟು ಕಿತಾಪತಿಯನ್ನು ಹಚ್ಚುತ್ತಿರುವವರ ಮಟ್ಟಿಗೆ ಬರೆಯಬೇಕಾಗಿ ...ದ್ದರಿಂದ ಉಳಿದ ಮಹಾನುಭಾವರು ನನ್ನ ಮೇಲೆ ತಪ್ಪು ಆರೋಪಿಸಬಾರ ...ದೆಂದು ಬೇಡುತ್ತೇನೆ

ಜಿ. ಆರ್. ವಿ.

ನಾಮಧಾರಿಗಳ ಕೆಲವು ಪದ್ಧತಿಗಳು.

ಆಚ್ಯಾ.—ಈ ನಾಮಧಾರಿ ಮತದವರು ಸಾಮಾನ್ಯವಾಗಿ ಮಲೆನಾಡು ... ಶಾಸ್ತ್ರಿಯಾಗಿರುತ್ತಾರೆ. ಆದರೆ ಇವರ ಮತದಲ್ಲಿ ಹೆಣ್ಣು ಸಾಮಾನ್ಯ ... ಸಾಕಾಗುವಷ್ಟು ಇದ್ದಾಗ್ಯೂ ಒಂದು ಗಂಡಿಗೆ ಹೆಣ್ಣು ತರಬೇಕಾದರೆ 50, 200, 300, 400 ರೂಪಾಯಿ ತೆರವೆಂಬ ದಂಡಕೊಟ್ಟರೆ ಹೆಣ್ಣು ದೊರೆ ... . ಅವನೂ ಒಬ್ಬನು ಬಂದು ತೆರ ನಿಷ್ಕರ್ಷಿಸಿಕೊಂಡು ಹೋದಬಳಿಕ ...ಬ್ಬನು ಬಂದು ಮೊದಲಿನ ನಿಷ್ಕರ್ಷೆಗಿಂತ ಸ್ವಲ್ಪ ಜಾಸ್ತಿ ಕೊಡುತ್ತೇ ...ನು ಹೇಳಿದರೆ ಮೊದಲು ಗೊತ್ತುಮಾಡಿಕೊಂಡು ತಾರಾನುಕೂಲ ನೋಡಿಸಿದ ...ವನ್ನು ಹಲವು ಉಪಾಯಗಳಿಂದ ಬಿಟ್ಟುಬಿಡುತ್ತಾರೆ. ಇದು ಕಷ್ಟವಾದಲ್ಲಿ ... ಮತ ಸಂಪ್ರದಾಯದಂತೆ ನಡೆಯುವ ಒಪ್ಪು ವೀಳಯದ ದಿವಸ ದಾರಿ ...ದೆಂಬುದೊಂದು ಹೆಳೆಮಾಡಿ - ನಿಮಿತ್ತ ಸರಿಹೋಗಲಿಲ್ಲ; ನಾವು ಕೊಡಲಾರೆವು - ... ನಿಶ್ಚಯಮಾಡಿಬಿಡುತ್ತಾರೆ. ಇದೆಂಥಾ ನೆಂಟಸ್ತಿಕೆಮಾಡುವುದೋ ನಾನು ... ಇದು ವಿಹಿತ ಧರ್ಮವಲ್ಲ, ವ್ಯಾಪಾರ ಧರ್ಮ ಇದಕ್ಕೆ ಪ್ರತಿಯಾಗಿ ...ಸ್ಥಾನಮೇಲೆ ಫೋಟೋಫ್ಲೋಟ ತಂದು ಹರಾಜುಮಾಡುವದಾದರೆ ಉತ್ತಮ. ...ವರ ಯಾರಿಗೂ ಮಾತುಕೊಟ್ಟು ತಪ್ಪಿದಂತಾಗುವದಿಲ್ಲ. ಎಷ್ಟನೇ ಮೌಲ್ಯ ... ಅಪ್ಪಸ್ವಲ್ಪ ತೆರಕ್ಕಿಂತ ಜಾಸ್ತಿ ದೊರೆಯಬಲ್ಲದು. ಇಂಥಾ ಮೌಢ್ಯಪೂರ್ಣ ... ಆಧಮರ್ಣರಿಗೆ ವಿಷಯ ಗವರ್ನಮೆಂಟಿನವರಾಗಲೀ ಆ ಮತದವರೇ ... ಅವಗಾಹನೆಗೆ ತಂದುಕೊಂಡು ಏಕೆ ಕಟ್ಟುಮಾಡಬಾರದು? ಈ ಮ್ಯತಸ್ತ ... ಕೊಪ್ಪ, ತೀರ್ಥಹಳ್ಳಿ, ನಗರ ತಾಲ್ಲೂಕುಗಳ ಕೆಲವರು ಮನೆ ಸಂಪ್ರದಾಯದಂತೆ - ಶ್ರೀ ಅರುಣಗಿರಿ ವೆಂಕಟರಮಣಸ್ವಾಮಿ - ದೇವಸ್ಥಾನಕ್ಕೆ ನಾಲಾವಳಿ ... ಎಂಬುವನ್ನು ಮಂಗಳಾರ್ಥವಾಗಿ ತರುವದುಂಟು. ಇದು ಅನುಚಾನವಾಗಿ ... ಬಂದು ಈಗಲೂ ಆಚರಣೆಯಲ್ಲಿರುತ್ತೆ. ಈ ವರುಷ ಒಂದೆರಡು ಕುಳ್ಳಿ ... ವರು ವಾತ್ರ - ಶ್ರೀ ಭಂಡಾರಕ್ಕೆ - ಸಲ್ಲಿಸತಕ್ಕ ಕಾಣಿಕೆ ಕಷ್ಟಕ್ಕೆ ಲೋಪ ... ಸಿದ್ದರಿಂದಲೂ, ಸ್ಥಳಪಕ್ಷತಿ ವಿಸಾರಿ ಕಡಳೆ ಹೂಡಿದ್ದರಿಂದಲೂ ಶ್ರೀ ... ಸ್ಥಾನದ ಆರ್ಚಕರಿಗೂ ಇವರಿಗೂ ಸ್ವಲ್ಪ ಮಾತುಕಥೆ ನಡೆಯಿತಂತೆ.

ಮರಾಟರಿಗಳ ವೈರಿ.

ಮೈಸೂರು ಸೀಮೆಯ ಸಂಪದಭಿವೃದ್ಧಿ.

ಆಚ್ಯಾ.—ಈ ವರುಷದ ದಸರಾ ವಿಸಾಟಂಗಿಗಾಗಿ ದಯಮಾಡಿಸತಕ್ಕ ...ಡೆಂಟಿವ್ ಮೆಂಬರುಗಳಲ್ಲಿ ವಿಜ್ಞಾಪನೆ ಎನಂದರೆ ಸರ್ಕಾರದವರು ಈ ...ರ್ಯಕ್ಕಾಗಿ ವಿಶೇಷ ಆಲೋಚನೆಯೂ ದುಡ್ಡು ಸಹಾ ವ್ಯಯಮಾಡುವುದಾಗಿ ...ಬರುತ್ತದೆ. ಬರೀ ಆಲೋಚನೆ ಮತ್ತು ದುಡ್ಡು ವ್ಯಯದಿಂದ ಬೇಗ ...ಪದಭಿವೃದ್ಧಿ ಯೋಂದಲಾಗದು. ಪ್ರಜೆಗಳು ತಮ್ಮ ತಮ್ಮ ಕರ್ತವ್ಯಗಳನ್ನು ...ದ್ಧೆಯಿಂದಲೂ, ಚಾತುರ್ಯದಿಂದಲೂ ಮಾಡುತ್ತಾ ಬಂದಲ್ಲಿ ಜಾಗ್ರತೆ ಸಂಪದ ...ವೃದ್ಧಿಯಾದೀತು. ಪ್ರಜೆಗಳು ಮಾಡಲು ಪ್ರಯತ್ನಿಸುವ ಪ್ರತಿ ಕೆಲಸಕ್ಕೂ ...ರ್ಕಾರದವರ ಸಹಾಯ ಬೇಕಾಗಿರುವದರಿಂದ ಇದು ಒಂದು ದೊಡ್ಡ ತೊಂದರೆಯಾಗಿದೆ. ಹ್ಯಾಗಂದರೆ,

ವ್ಯವಸಾಯಕ್ಕೆ ಪ್ರಾರಂಭಿಸಬೇಕೆಂಬ ಇಚ್ಛೆಯುಳ್ಳ ರೈತನು ದ್ಯಾಮುಖೋಗದ ... ದಯಾಸ್ತು ಬರೆಸುವವರಲ್ಲೇ ಸ್ವಾನೇ ಕಷ್ಟವಾಗುತ್ತೆ. ಬರೆಸಿದ ಮೇಲೆ ತಾಲ್ಲೂಕು ಕಚೇರಿಗಳಿಗೆ ಕೊಟ್ಟು ಅಲ್ಲಿಂದ ಅಮಲ್ದಾರರಲ್ಲಿಯೂ, ಅಸಿಸ್ಟಂಟರವರಲ್ಲಿಯೂ ಓಡಾಡಿ ಸಾಕಾಗಿ ತನ್ನ ಕೆಲಸಗಳನ್ನೆಲ್ಲಾ ನಷ್ಟಮಾಡಿಕೊಂದು ಬೇಸತ್ತು ... ಸೆಲೆಕ್ಷನ್ ಆಗುವ ವರಿಗೂ ನಾಗುವಳಿ ಚೀಟಿ ಸಿಕ್ಕುವುದರಲ್ಲೇ ಇರುತ್ತೆ.

ತಕಾವಿಗೆ ಅರ್ಜಿ ಕೊಟ್ಟವನು ಸಾಹುಕಾರರಲ್ಲಿ ಮುಬಾರಿ ಬಡ್ಡಿ ತೆತ್ತು ...ರ್ಕ್ ಕಂದಾಯ ಬಾಕಿಯಾಗುವವರಿಗೂ ತಕಾವಿ ವಿಚಾರ್ ಕೆಳಗೆ ಮೇಲೆ ...ಗಿಸಾಡುತ್ತೆ. ಕಂದಾಯ ಬಾಕಿಯಾದ ಕೂಡ್ಲೆ ತಕಾವಿ ಹಣ್ಣು ಕೆಳಕೊಳ್ಳುತ್ತಾನೆ. ಅನಂತರ ಜಮೀನ್ ಹರಾಜಿನಲ್ಲಿಯೂ ಕೂಡ ಯಾರೂ ತೆಗೆದುಕೊಳ್ಳದೆ ... ಸರ್ಕಾರಿ ಸುಪರ್ದಿನಲ್ಲಿ ಬಂಜರಾಗಿರುತ್ತೆ. ಯಾವನಾದರು ಸಾಹಸಪಟ್ಟು ... ತೆಗೆದುಕೊಂಡರೂ ಕಚೇರಿಯಲ್ಲಿನ ತೊಂದರೆ ಸಹಿಸ ಈಚೆಗೆ ಬಂದವನ ... ಯಾರೂ ಇಲ್ಲ. ಇವನು ಒಳ್ಳೇ ಸಾಹಸವಂತನೆಂತ ಜನಗಳು ... ಕೊಳ್ಳುವ ರೂಢಿಯುಂಟಾಗಿದೆ. ಈ ತೊಂದರೆಗಳೆಲ್ಲಾ ಎಂದಿಗೆ ನಿವಾರಣೆ ಆಗುತ್ತೋ ಅಂದಿಗೆ ಸಂಪದಭಿವೃದ್ಧಿಯು ತನ್ನಷ್ಟಕ್ಕೆ ತಾನೇ ಆಗುತ್ತೆ. ಪ್ರಜಾ ಹಿತಚಿಂತಕರಾದ ಮೆಂಬರುಗಳು ಚೆನ್ನಾಗಿ ಆಲೋಚಿಸಿ ಇದಕ್ಕೆ ಯಾವದಾದರೂ ...ಪರಿಹಾರವನ್ನು ಸೂಚಿಸಬೇಕಾಗಿ ಬೇಡುವ

ಪ್ರಜಾ ಹಿತಚಿಂತಕ.

ಬಲಾತ್ಕಾರ ವಿದ್ಯಾಭ್ಯಾಸದ ಕಾನೂನ್ ಜಾರಿಗೆ ಬರಬೇಕು.

ಆಚ್ಯಾ.—ನಮ್ಮ ಗೌರ್ನಮೆಂಟಿನವರು ವಿದ್ಯಾಭಿವೃದ್ಧಿಗೋಸ್ಕರ ಬಹಳ ...ಬಾರಿ ಖರ್ಚನ್ನಿಟ್ಟು ಪ್ರಜೆಗಳ ಅನುಕೂಲಕ್ಕೋಸ್ಕರ ಅನೇಕ ಸ್ಕೂಲುಗಳನ್ನು ಸ್ಥಾಪಿಸಿಯೂ ಸ್ಥಾಪಿಸುತ್ತಲೂ ಇದ್ದಾರೆ. ಈ ವಿಷಯದಲ್ಲಿ ನಾವು ಗೌರ್ನಮೆಂಟಿನವರನ್ನು ಎಷ್ಟು ವಂದಿಸಿದರೂ ಸ್ವಲ್ಪವೇ. ಆದರೆ ಗ್ರಾಮಾಂತರಗಳಲ್ಲಿರುವ ...ಕರಾದವರೋ ಪ್ರಥಮದಲ್ಲಿ ಸ್ಕೂಲ್ ಮೇಲೆ ಅಭಿಲಾಷೆಯುಂಟಾಗಿ ಬಾಲಕರು ...ವಿದ್ಯೆಯಿಲ್ಲದೆ ಮೂಢರಾದರೆಂದೂ, ಗ್ರಾಮಕ್ಕೆ ಸ್ಕೂಲ್ ಕೊಡಿಸಬೇಕೆಂದೂ ...ದಾಚೆಗೆ 8 ದಿನಕ್ಕೆ ಒಂದಾವರ್ತಿ ಅರ್ಜಿ ಬರೆದುಕೊಳ್ಳುವರು. ಮತ್ತು ಗ್ರಾಮಕ್ಕೆ ಯಾವ ಆಫೀಸರು ಬಂದಾಗ್ಯೂ ಇದೇ ವಿಚಾರದಲ್ಲಿ ಅರ್ಜಿ ಕೊಡುವನು, ಹೇಳಿಕೊಳ್ಳುವರು ಈ ವಿಧವಾದ ಉತ್ಸಾಹವು ಅಷ್ಟಿಷ್ಟೆಂದು ಹೇಳಲಸಾಧ್ಯ. ಅನಂತರ ಗೌರ್ನಮೆಂಟಿನವರು ಕೃಪೆಯಿಟ್ಟು ಅಂಥಾ ಗ್ರಾಮಕ್ಕೆ ಒಂದು ಸ್ಕೂಲ್ ಸ್ಯಾಂಕ್ಷನ್ ಮಾಡಿದರೆ ರೈತರೂ ಮೆಂಬರುಗಳೂ ತಮ್ಮ ಬಾಲಕರು, ...ದ ಗ್ರಾಮದ ಬಾಲಕರು ಮತ್ತು ತಮ್ಮ ಬಂಧುಗಳ ಕಡೆ ಬಾಲಕರನ್ನು ಜಮಾಯಿಸಿ ಬಹಳ ವಿಜೃಂಭಣೆಯಿಂದ ಪ್ರಾರಂಭೋತ್ಸವವನ್ನು ನೆರವೇರಿಸಿ 3-4 ತಿಂಗಳ ವರಿಗೂ ಬಹಳ ಉತ್ಸಾಹದಿಂದ ಕೆಲಸನಡಿಸುತ್ತಾ ಬರುವರು. 1-2 ತಿಂಗಳು ಕಳೆದ ಮೇಲೆ ಸ್ಕೂಲ್ ವಿಚಾರದಲ್ಲಿ ಗ್ರಾಮಸ್ಥರಿಗೂ, ಮೆಂಬರಿಗೂ, ಮಾಸ್ಟರಿಗೂ ಅಭಿಮಾನವು ಸ್ವಲ್ಪವೂ ಇರುವಂತೆ ತೋರುವದಿಲ್ಲ. ಹೀಗೆ ಕಾಲಕ್ರಮೇಣ ಅಂದರೆ ಒಂದು ವರ್ಷದೊಳಗಾಗಿ ಗ್ರಾಮಸ್ಥರಿಗೆ ಪ್ರಥಮದಲ್ಲಿದ್ದ ಉತ್ಸಾಹವೆಲ್ಲಾ ಅಡಗಿಹೋಗಿ ಸ್ಕೂಲ್ ನಾಶನಕ್ಕೆ ಕಾರಣವಾಗುವದಲ್ಲದೆ ಗ್ರಾಮವೂ ದುರ್ಯಶಸ್ಸಿಗೆ ಪಾತ್ರವಾಗುತ್ತವೆ. ಮೆಂಬರುಗಳಾದರೋ ನಾಮಮಾತ್ರಕ್ಕೆ ಮೆಂಬರುಗಳಲ್ಲದೆ ಸ್ಕೂಲ್ ಅಭಿವೃದ್ಧಿಸ್ಥಿತಿಗೆ ಬರಲು ಪ್ರಯತ್ನಮಾಡದೆ ತಟಸ್ಥರಾಗುತ್ತಾರೆ. ಈ ರೀತಿ ಗ್ರಾಮಗಳಲ್ಲಿ ನಡೆಯುತ್ತಾ ಬಂದರೆ ಗೌರ್ನಮೆಂಟಿನವರು ವಿದ್ಯಾಭಿವೃದ್ಧಿಗೋಸ್ಕರ ಮಾಡುವ ಖರ್ಚಿಗೆ ಸಾರ್ಥಕವೇನಾಯಿತು? ಗೌರ್ನಮೆಂಟಿಗೆ ನಷ್ಟ, ವಿದ್ಯಾಭಿವೃದ್ಧಿ ಆಗಲಿಲ್ಲ, ಈ ರೀತಿ ಪರಿಣಮಿಸುತ್ತದೆ. ಪ್ರಜೆಗಳ ನಿರುತ್ಸಾಹ, ಮೆಂಬರುಗಳ ತಾಟಸ್ಥ್ಯ, ಮಾಸ್ಟರ ಉದಾಸೀನ, ಈ ಕಾರಣಗಳಿಂದ ಸ್ಕೂಲು ಸ್ವಲ್ಪ ದಿವಸಕ್ಕೇ ಕ್ಷೀಣವಾಗುತ್ತದೆ. ಆದ್ದರಿಂದ ದಯಾಳುಗಳಾದ ಸರ್ಕಾರದವರು ಈ ವಿಷಯಗಳನ್ನು ಘನವಾದ ಚಿತ್ತಕ್ಕೆ ತಂದುಕೊಂಡು ಇಂಥಾ ಸ್ಕೂಲುಗಳಿರುವ ಗ್ರಾಮಗಳಲ್ಲಿ ಬಲಾತ್ಕಾರ ವಿದ್ಯಾಭ್ಯಾಸದ ಕಾನೂನನ್ನು ಜಾರಿಗೆ ತಂದು ಬಾಲಕರ ವಿದ್ಯಾಭಿವೃದ್ಧಿಗೆ ಅವಕಾಶವನ್ನುಂಟುಮಾಡಿ, ...ಗುವ ದ್ರವ್ಯಕ್ಕೆ ಸಾರ್ಥಕಪಡಿಸಬೇಕಾಗಿ ಪ್ರಾರ್ಥಿಸುತ್ತೇನೆ.

ವಾಗರಗಟ್ಟಗ್ರಾಮ. ಎಚ್. ಎಸ್. ಭಾಗವತಕೃಷ್ಣಪ್ಪ.

ತಾಲ್ಲೂಕು ವರ್ತಮಾನಗಳು.

ತರೀಕೆರೆ.—ಈ ಊರಲ್ಲಿ ಪ್ಲೇಗು ಹೆಚ್ಚುತ್ತಿದೆ. ಪ್ಲೇಗ್‌ನಿಂದಾಗುವ ಮರಣ ಹೆಚ್ಚಾಗಿದ್ದರೂ ಸ್ಯಾನಿಟರಿ ಆಫೀಸರಿಗೆ ಜನರು ಸರಿಯಾಗಿ ತಿಳಿಸದೆ ಮುಚ್ಚಿಕೊಳ್ಳುತ್ತಾರೆ. ಮತ್ತೆ ಕೆಲವು ಮನೆಗಳಲ್ಲಿ ಇಲಿ ಸಾಯುತ್ತಿದ್ದರೂ ಮನೆ ಬಿಡದೆಯೂ, ತಿಳಿಸದೆಯೂ ಇದ್ದಾರೆ. ಜನರು ಷೆಡ್ಡು ಹಾಕಲು ಗಳ, ಮರ, ಹುಲ್ಲು ಸಿಕ್ಕುವದು ತುಂಬಾ ಪ್ರಯಾಸವಾದ್ದರಿಂದಲೂ, ಮಳೆಯಿಂದ ನೆಲವು ತೇವವಾಗುವದರಿಂದಲೂ ಪ್ಲೇಗ್ ಹೆಚ್ಚುವದಕ್ಕೆ ಅವಕಾಶವಾಗಿದೆ. ಡಿಸ್ಟ್ರಿಕ್ಟ್ ಸ್ಯಾನಿಟರಿ ಆಫೀಸರು ಬಂದು ಅನೇಕರಿಗೆ ಇನಾಕ್ಯುಲೇಷನ್ ಮಾಡುತ್ತಾ ಇದ್ದಾರೆ.—ಆಗಾಗ್ಗೆ ಸಂತೆಯಲ್ಲಿ ಮೊಂಡಫಕೀರರ ಕಾಟ ಹೆಚ್ಚು. ಇದನ್ನು ತಡೆಯುವದು ವರ್ತಕರಿಗೆ ಬಹಳ ಕಷ್ಟ. ಅಲ್ಲದೆ ಸಂತೆಯಲ್ಲಿ ಜೂಜಾಟವು ನಿರ್ಭಯವಾಗಿ ನಡೆಯುತ್ತೆ. ಇದನ್ನು ನಮ್ಮ ಅಮಲ್ದಾರ್ರು ಚಿತ್ತಕ್ಕೆ ತಂದುಕೊಂಡು ಖಂಡಿತವಾದ ಅಪ್ಪಣೆ ಕೊಟ್ಟು ಅಡಗಿಸುವರೆಂದು ನಂಬುತ್ತೇವೆ.—ಧಾರಣೆವಾಸಿಗಳು ಬಹಳ ಏರುತ್ತಿವೆ. ವರ್ತಕರಿಗೆ ತಕ್ಕ ಅಪ್ಪಣೆ ಕೊಡದಿದ್ದರೆ ಬಡವರ ಕಷ್ಟ ಹೇಳಲಾರದಷ್ಟಾಗುತ್ತೆ.—ಕೆಲವು ದಿನಗಳ ಹಿಂದೆ ನಂದಿಬಟ್ಟಿನಲ್ಲಿ 9 ವರ್ಷದ ಒಕ್ಕಲಿಗರ ಹುಡುಗನು ನೇಣುಹಾಕಿಕೊಂಡು ಸತ್ತನು. ಇದಕ್ಕೆ ಕಾರಣವೇನೋ ತಿಳಿಯದು. ಕೂಲಿ ಮಠದಲ್ಲಿ ಕೋದಂಡ ಹಾಕಿ ಹೊಡೆಯುತ್ತಿದ್ದದ್ದರಿಂದ ತಾನೇ ಹೀಗೆ ಮಾಡಿಕೊಂಡನೆಂದು ಪಂಚಾಯತಿಯಲ್ಲಿ ತೀರ್ಮಾನವಾಯಿತಂತೆ. ಇದು ಎಷ್ಟರ ಮಟ್ಟಿಗೆ ನಿಜವೋ ಹೇಳಲಾಗದು. ವಯಸ್ಸು, ಸ್ಥಳ, ಕೃತ್ಯ ಮುಂತಾದ ವಿದ್ಯಮಾನಗಳೆಲ್ಲಾ ಆಶ್ಚರ್ಯವಾಗಿವೆ. ಈ ಗ್ರಾಮದಲ್ಲಿ ಆಗಾಗ್ಗೆ ಖೂನಿಯಾಗುತ್ತಲೇ ಇವೆ. ಗ್ರಾಮದವರು ಏಕವಾಗಿ ಗುಟ್ಟು ಹೊರಪಡಿಸುವದಿಲ್ಲವೆಂಬ ಪುಕಾರೂ ಉಂಟು.

ಚನ್ನರಾಯಪಟ್ಟಣ.—ಕೆಲವು ವಾರಗಳಿಂದ ಸೋನೆ ಮಳೆ ಹಿಡಿದು ಪೈರುಗಳಿಗೆ ಸ್ವಲ್ಪ ಮಟ್ಟಿಗೆ ಅನುಕೂಲವಾಗಿದೆ. ಆದರೂ ಗೋಶಾಯಿಗಳಿಗೆ ಹುಲ್ಲು ವಗೈರೆಗಳಿಗೆ ತುಂಬಾ ತೊಂದರೆಯಾಗಿದೆ. ಸಂತೆಯಲ್ಲಿ ಧಾರಣೆವಾಸಿಗಳು ದಿನದಿನಕ್ಕೆ ಬಹಳ ಪ್ರಿಯವಾಗುತ್ತಿದೆ. ಸಬ್ ರೆಜಿಸ್ಟ್ರಾರ್ ಮ|| ಕೃಷ್ಣಮೂರ್ತಿ ಶಾಸ್ತ್ರಿಗಳವರಿಗೆ ಗಂಡು ಮಗುವಾದದ್ದರಿಂದ ಅವರು ಇಲ್ಲಿನ ಅಮಲ್ದಾರರು ಮತ್ತು ಶಿರಸ್ತೇದಾರರೇ ಆದಿಯಾಗಿ ತಾಲ್ಲೂಕು ಅಧಿಕಾರಿಗಳನ್ನು, ಈ ಗ್ರಾಮದ ಸಮಸ್ತ ಮಹಾಜನಗಳನ್ನೂ ತಮ್ಮ ಮನೆಗೆ ಬರಮಾಡಿಕೊಂಡು ಫಲಾಹಾರಾದಿಗಳಿಂದ ಸಂತೋಷಪಡಿಸಿದರು. ಬಳಿಕ ಸಂಗೀತ ವಿದ್ವಾನ್ ಮ|| ಸುಬ್ಬಣ್ಣನವರ ವೀಣಾಗಾನವೂ, ಫಿಟಿಲ್ಲಿ ತುಂಬಾ ಸಂತೋಷಪಡಿಸಿದವು. ಇದಾದ ನಂತರ ಇಲ್ಲಿನ ಕೋಆಪರೇಟಿವ್ ಸೊಸೈಟಿ ಸೆಕ್ರೆಟರಿ ಮ|| ಶ್ರೀಕಂಠಯ್ಯನವರು ರಿಪೋರ್ಟು ಓದಿದರು. ಸಬ್ ರೆಜಿಸ್ಟ್ರಾರ್ರವರು ಸಭೆಯನ್ನು ಕುರಿತು ಈ ಸೊಸೈಟಿಯಿಂದ ಬಡವರಿಗೂ ಐಶ್ವರ್ಯವಂತರಿಗೂ ಏಕರೀತಿಯಾದ ಅನುಕೂಲತೆ ದೊರೆಯುವ ವಿಚಾರವನ್ನು ಕುರಿತು ಬಹಳ ಸ್ವಾರಸ್ಯವಾಗಿ ಉಪನ್ಯಾಸ ಮಾಡಿದರು. ಅಮಲ್ದಾರ್ರವರು ಈ ಗ್ರಾಮದ ಪ್ರಜೆಗಳೆಲ್ಲರೂ ಈ ಸಂಘದಲ್ಲಿ ಷೇರುಗಳನ್ನು ಪಡೆಯಬೇಕೆಂದೂ, ಅನೇಕರು ಸಾಹುಕಾರರ ಬಳಿಗೆ ಹೋಗಿ ತಮ್ಮ ಆಸ್ತಿಪಾಸ್ತಿಗಳನ್ನು ಈಡುಮಾಡಿ ಸಾಲ ತೆಗೆದುಕೊಂಡ ಮೊಬಲಗಿಗೆ ಹೆಚ್ಚು ಬಡ್ಡಿ ತೆತ್ತು ತೊಂದರೆಪಡುತ್ತಿರುವುದನ್ನೂ, ಈ ಸಂಘದಿಂದ ಉಂಟಾಗುವ ಪ್ರಯೋಜನವನ್ನೂ ಕುರಿತು ಉಪನ್ಯಾಸ ಮಾಡಿದ ಕೂಡಲೆ ಅನೇಕ ಜನರು ಷೇರ್‌ದಾರರಾಗಲು ಒಪ್ಪಿದರು.—ನಮ್ಮ ಅಮಲ್ದಾರರವರು ಇಲ್ಲಿಗೆ ವರ್ಗವಾಗಿ ಸ್ವಲ್ಪ ದಿವಸಗಳಾದಾಗ್ಯೂ, ಜನಗಳಲ್ಲಿ ಪ್ರೀತಿ ಗೌರವಗಳನ್ನು ಸಂಪಾದಿಸಿಕೊಂಡಿರುತ್ತಾರಲ್ಲದೆ ಸರ್ಕಾರಿ ಕೆಲಸವನ್ನು ಚಟುವಟಿಕೆಯಿಂದ ನಡಿಸುತ್ತಿರುವರು.

ಹೊಸಕೋಟೆ.—ಇಲ್ಲಿ ಸುಮಾರು ಎರಡು ತಿಂಗಳಿಂದ ಆಗಾಗ್ಗೆ ಮೋಡ ಮುಚ್ಚಿಕೊಂಡು ಸ್ವಾಡಾ ಮಳೆ ಬರುವ ಹಾಗೆ ತೋರುವದೂ, ಇಲ್ಲವೆ 5-6 ನಿಮಿಷಗಳು ಸಣ್ಣ ಹನಿ ಬೀಳುವದೇ ಹೊರ್ತು ಇದುವರಿಗೂ ಭೂಮಿ ನೆನೆಯುವ ಹಾಗೂ, ಕೆರೆ ಕುಂಟೆಗಳಿಗೆ ನೀರು ಬರುವಹಾಗೂ ಒಳ್ಳೇ ಮಳೆ ಬರಲಿಲ್ಲ. ಮೊಳೆತಿದ್ದ ಪೈರುಗಳು ಬಾಡುತ್ತಾ ಬಂದವು. ನೆನ್ನೆ ಕಾಲು ಹದ ಮಳೆ ಬಿತ್ತು. ಕೆರೆಗಳು ಒಣಗಿಹೋದವು. ಊರಿನೊಳಗೆ ಉಪ್ಪುನೀರು ಭಾವಿಗಳೆಲ್ಲಾ ಬತ್ತುತ್ತಾ ಬಂದವು. ಊರಾಚೆ ಒಂದು ಮೈಲಿ ಫಾಸಲೆಯಲ್ಲಿರುವ ಸೀನೀರು ಭಾವಿಗಳಲ್ಲಿ ನೀರು ಸಿಕ್ಕುವದು ಕಷ್ಟ. ಧಾರಣೆವಾಸಿಗಳು ಏರುತ್ತಾ ಇವೆ. ಗೋವುಗಳ ಮೇವಿಗೆ ಬಹುಕಷ್ಟ; ಅಲ್ಲದೆ ಅವುಗಳಿಗೆ ಕುಡಿಯುವದಕ್ಕೆ ನೀರು ಸಿಕ್ಕುವದು ದುರ್ಲಭ. ಬಡವರ ಪಾಡೋ ಹೇಳತೀರದು ಅಕ್ಕಿ 6 ಸೇರು. ರಾಗಿ 10½ ಸೇರು ಮಾರುತ್ತಾವೆ. ಇಂಥಾ ಕಾಲದಲ್ಲಿ ಸಣ್ಣ ನೌಕರರಿಗೆ ಸರ್ಕಾರದವರು ಕಾಪ್ತಮಾನ ಅಲೋಯನ್ಸು ಸ್ಯಾಂಕ್ಷನ್ ಮಾಡಿರುವದು ತುಂಬಾ ಸ್ತೋತ್ರಾರ್ಹವಾಗಿದೆ. ಪೊಲೀಸ್ ಸಿಬ್ಬಂದಿಗೆ ಒಂದೊಂದು ರೂಪಾಯಿ ಸಂಬಳ ಬಡ್ತಿ ಆಗಿ ಮೂರು ತಿಂಗಳಾಗುತ್ತಾ ಬಂತು ಆದರೆ ರೆವಿನ್ಯೂ ಸಿಬ್ಬಂದಿಗೆ ಕಂಟ್ರೋಲರವರಿಂದ ಸ್ಯಾಂಕ್ಷನ್ ಆಗಿದ್ದರೂ ಇದುವರಿಗೂ ಅವರಿಗೆ ಕೊಡದಿರುವ ಕಾರಣವೇನೋ ತಿಳಿಯಲಿಲ್ಲ. ಅದೇ ಪ್ರಕಾರ ಬಾರ್ ಸಿಪಾಯಿಗಳೂ ಸಂಕಟಪಡುತ್ತಾರೆ.—ಇಂಡಿಗನಾಳ್ ಮತ್ತು ಬೈಲ್ ನರಸಾಪುರದ ಮುಸಲ್ಮಾನರಿಗೆ ಯಾವ ಕಾರಣದಿಂದಲೋ ಉಭಯತ್ರರಿಗೂ ವಿಶೇಷ ಮಾರಾಮಾರಿ ನಡೆದು ಎಂಟು ತಿಂಗಳಿಂದ ಕೋರ್ಟಿನಲ್ಲಿ ವ್ಯಾಜ್ಯ ಬಿದ್ದಿತ್ತು. ಬೈಲ್ ನರಸಾಪುರದ ಮುಸಲ್ಮಾನರ ಮೇಲೆ ತಪ್ಪು ಸಾಬೀತಾಗಿ ಒಬ್ಬೊಬ್ಬರಿಗೆ 30 ರೂಪಾಯಿಯಂತೆ 12 ಜನಕ್ಕೆ 720 ರೂಪಾಯಿ ಜುಲ್ಮಾನೆಯೂ, ಒಂದು ವರ್ಷದವರಿಗೂ ನೇಕ್ ಚಾಲಿನ ವಿಷಯ ಜಾಮಿನ್ ಕೊಡಬೇಕೆಂತಲೂ ಫೈಸಲಾಯಿತು.—ಈಗ ಇಲ್ಲಿ ಪ್ಲೇಗ್ ಪ್ರಾರಂಭವಾಗಿ 12 ಜನಕ್ಕೆ ಬಾಯಿತೆ ತಗಲಿ 8 ಮರಣವಾಯಿತು. ಇಲ್ಲಿನ ಪೊಲೀಸ್ ಇನ್ಸ್‌ಪೆಕ್ಟರ್ ಮ|| ಬಸವರಾಜೆ ಅರಸಿನವರಿಗೆ ವರ್ಗವಾಗಿ ನಾಗಮಂಗಲಕ್ಕೆ ಹೋದರು. ಅವರ ಬದಲು ಬೆಂಗಳೂರಿನಿಂದ ಮ|| ಬಾಲ್ ಸಾಹೇಬರು ಬಂದಿದ್ದಾರೆ.

ತೀರ್ಥಹಳ್ಳಿ ತಾ|| ಆರಗ.—ಇಲ್ಲಿನ ಪುರನಿವಾಸಿಗಳ ಮನವಿಯಂತೆ ಸರ್ಕಾರದವರು ಮ್ಯುನಿಸಿಪಾಲಿಟಿಯನ್ನೂ, ಪುರವಾಸಿಗಳ ಉಪಯೋಗಾರ್ಥವಾಗಿ ಒಂದು ಆಸ್ಪತ್ರೆಯನ್ನೂ, ನೀರಿನ ಭಾವಿಯೊಂದನ್ನೂ ಸ್ಥಾಪಿಸಿಕೊಡುವರೆ ಅನುಮೋದಿಸಿರುತ್ತಾರೆಂಬುದಾಗಿ ವರ್ತಮಾನವಿರುತ್ತೆ. ಆದರೆ ಮ್ಯುನಿಸಿಪಲ್ ಜಾರಿಗೆ ಬಂದು ಸುಮಾರು ತಿಂಗಳೆರಡಾಯಿತು. ಅಮಲ್ದಾರ್ ಮ|| ಎಸ್. ಧರ್ಮರಾಯರವರು ಹೋದ ಸಾಲ್ ಜಮಾಬಂದಿಗೆ ಗ್ರಾಮಾಂತರ ಸರ್ಕೀಟು ಹೊರಟದ್ದಾಗ್ಯೂ ಆಸ್ಪತ್ರೆಯನ್ನು ಆರಗದಲ್ಲಿ ಸ್ಥಾಪಿಸಬೇಕಾಗಿ ಚಂದಾ ವಗೈರೇ ನಡಿಸಿದ್ದರು. ಈ ತಹಲು ವರೆಗೂ ಯಾವ ಕಾರಣದಿಂದಲೋ ಜಾರಿಗೆ ಬಾರದೇ ನಿಂತಿರುತ್ತೆ. ಆರಗ ಮತ್ತೂ ಇಲ್ಲಿಗೆ ಸಂಬಂಧಿಸಿದ ಗಡೀ ವರೆಗಿರುವ ಹಳ್ಳಿಗಾಡಿನವರು ಬಹಳ ಕಷ್ಟಪಡುತ್ತಾರೆ.—ಈ ಊರಿನವರು ಬೇಸಿಗೇ ಕಾಲದಲ್ಲಿ ನೀರಿಗೆ ಕಷ್ಟಪಡುವದನ್ನು ನೋಡಿದ್ದಾದರೆ ಬಹು ದುಃಖವಾಗುತ್ತೆ. ಸಾಮಾನ್ಯವಾಗಿ ಒಂದು ಮೈಲು ಫಾಸಲೆನಲ್ಲಿರುವ ಶ್ರೀಗೋಪಿನಾಥ ನದಿಯಿಂದ ನೀರಿಯುವರೂ, ಸದಾಶಿವ ಪುರದವರೂ ಸ್ವಲ್ಪದೂರ ಫಾಸಲೆಯಿಂದಲೂ ನೀರು ತಂದುಕೊಳ್ಳಬೇಕಾಗಿರುತ್ತೆ. ಪೇಟೆಗೂ ಅಗ್ರಹಾರಕ್ಕೂ ಮಧ್ಯೆ ಇರುವ ಹಿರೇಕೆರೆಯಿಂದ (ನಿರುಪ ಸಮುದ್ರದಿಂದ) ತಂದುಕೊಂಡಾರೆಂದರೆ ಅದು ಪೂರ್ವದಲ್ಲಿ ಈ ಆರಗ ಸಂಸ್ಥಾನ ಇದ್ದಾಗ ಶೋಧಿಸಿದ್ದರೋ ಏನೋ; ಈ ಕೆರೇ ನೀರು ಉಪಯೋಗಿಸಿದ್ದಾದರೆ ಕಾಲರಾ ವಗೈರೆ ರೋಗೋತ್ಪತ್ತಿಯಾಗುತ್ತೆಂಬುದಕ್ಕೇನೂ ಸಂದೇಹವಿಲ್ಲ. ಇನ್ನು ಮುಂದಾದರೂ ಗಮನಕ್ಕೆ ತಂದುಕೊಂಡು ಆದಷ್ಟು ಶೀಘ್ರದಿಂದ ಪ್ರಜಾರಕ್ಷಣೆಗೆ ಅನುಕೂಲವಾದ ಏರ್ಪಾಟು ಮಾಡಿಸ್ಯಾರೆಂದು ಕೋರುತ್ತೇವೆ.—ಇದೇ ಊರಿಗೆ ಸಂಬಂಧಿಸಿದ ಯಕನಾತಿ ತಿಮ್ಮಣ್ಣನೆಂಬ ನಾಮಧಾರಿ ಗೌಡನಿಗೆ ಇದೇ ಊರಿನ ಬೀರತ್ತಮಠದ ಮಾದಾರ ಗಾಜಿಗಣ್ಣನ ಸಿದ್ದನ ಮಗ ಹಾಲನೆಂಬುವವನು ಚಾಕೂ ಹಾಕುತ್ತೇನೆಂದು ಬೆದರಿಸಿಕೊಂಡು ಬಂದಿದ್ದಾಗಿಯೂ, ಮ್ಯಾಜಿಸ್ಟ್ರೇಟರಲ್ಲಿ ತಿಮ್ಮಣ್ಣಗೌಡನು ಫಿರ್ಯಾದು ಕೊಟ್ಟಿರುವುದಾಗಿಯೂ ವರ್ತಮಾನವಿರುತ್ತೆ. ಈ ಊರಿನ ಆಸುಪಾಸುಗಳಲ್ಲಿ ಇಂಥಾ ಸದ್ದುಕೃತ್ಯಗಳೂ, ಕಳವು, ಶಿಶುಹತ್ಯ, ಗೋಹತ್ಯ ಮೊದಲಾದ ಅಕೃತ್ಯ ಹಲವು ನಡೆಯುತ್ತಿವೆ ಎಂಬುದಾಗಿ ಅಲಲ್ಲಿ ಗುಜುಗುಟ್ಟುತ್ತಿದೆ. ಈ ವಿಷಯಗಳನ್ನು ಈಗಲೇ ಗೌರ್ನಮೆಂಟಿನವರು ಗಮನಕ್ಕೆ ತಂದುಕೊಂಡಾರಾಗಿ ನಂಬಿದೇನೆ. ಇಲ್ಲಿನ ಬೀಟ್ ಪೋಸ್ಟನ್ನು ವಜಾ ಮಾಡಿದಲಾಗಾಯಿತು ಇಂಥಾ ಕೆಲಸಗಳು ನಡೆಯುತ್ತಿರುವದಾಗಿ ಸ್ವಲ್ಪ ವಯಸ್ಸಾದವರು ಹೇಳುತ್ತಾರೆ.

ಇಂಡಿಯಾ ದೇಶದ ವೃತ್ತಾಂತಗಳು.

ಸಂಯುಕ್ತ ಆಧಿಪತ್ಯಕ್ಕೆ ಸೇರಿದ ಸಾಲಿಂಪೂರ್ ಸಂಸ್ಥಾನದ ರಾಜರಾದ ಸರ್ ಮಹಬಾಬ್ ಆಲಿ, ಕೆ.ಸಿ.ಐ.ಇ.ರವರೂ, ಅಲಹಾಬಾದಿನಲ್ಲಿ ಕೋಟೆ ಸಂಸ್ಥಾನದ ರಾಜಾಬಹದೂರ್ ಅವಾಂಧೇಂದ್ರಸಿಂಗ್‌ರವರೂ ಕಳೆದ ಮಂಗಳವಾರ ಕಾಲವಾದರೆಂದು ಪ್ರಕಟವಾಗಿದೆ.

* * *

ಸಿಲೋನ್ ದ್ವೀಪಕ್ಕೆ ಸೇರಿದ ಕೊಲಂಬೊ ಪಟ್ಟಣದಲ್ಲಿ ಒಂದು ಸೆಷನ್ಸ್ ಮೊಕದ್ದಮೆಯು ದರ್ಯಾಫ್ತಿಯಾಗುತ್ತಿರುವ ವೇಳೆ ಒಬ್ಬ ಪಂಚಾಯತಿಗಾರನು ನಿದ್ದೆಮಾಡುತ್ತಿದ್ದನು. ಜಡ್ಜಿಯವರು ನೋಡಿ ದರ್ಯಾಫ್ತಿಯನ್ನು ಅಲ್ಲಿಗೆ ನಿಲ್ಲಿಸಿ ಮರುದಿನ ಅವನ ಮೇಲೆ ಮೊಕದ್ದಮೆ ಮಾಡಿದಾಗ ಆ ಪಂಚಾಯತಿಗಾರನು ತನ್ನ ಅನಿವಾರ್ಯಗಳನ್ನು ಹೇಳಿ ಜಡ್ಜಿಯವರ ಕ್ಷಮೆ ಬೇಡಿದ್ದರಿಂದ ಅವರು ಎಚ್ಚರಿಕೆ ಹೇಳಿ ಬಿಟ್ಟುಬಿಟ್ಟರು.

* * *

ಗುಂಟೂರಿನಲ್ಲಿ ಹರಿಯುವ ಕೃಷ್ಣಾ ನದಿಯು ಈ ವರುಷ ಎರಡನೇ ಸಲ ಪ್ರವಾಹ ಬಂದು ದಡಗಳ ಮೇಲೆ ಮತ್ತೆ ಹೊರಳಿ ಅನೇಕ ಗ್ರಾಮಗಳನ್ನೂ ಫಲಭರಿತವಾದ ಜಮೀನುಗಳನ್ನೂ ಕೊಚ್ಚಿಬಿಟ್ಟಿದೆ. ಸಾವಿರಾರು ಪ್ರಜೆಗಳು ಜೀವನಕ್ಕೆ ಮಾರ್ಗವಿಲ್ಲದೆ ಬಹಳ ಕಷ್ಟಪಡುತ್ತಿದ್ದಾರೆ. ಸರ್ಕಾರದ ಅಧಿಕಾರಿಗಳು ಕಷ್ಟನಿವಾರಣೆಯ ಏರ್ಪಾಡುಗಳನ್ನು ಮಾಡಿರುವರು. ಮ|| ಮುದ್ದುಲ ವಾಣೆಕ್ಯಂ ಎಂಬ ಸಾಹುಕಾರನು ಅವರಿಗೆಲ್ಲಾ ಧರ್ಮಾರ್ಥವಾಗಿ ಅನ್ನ ಹಾಕುತ್ತಿದ್ದಾನೆ.

* * *

ಮದರಾಸ್ ಪಟ್ಟಣದ ಮ್ಯುನಿಸಿಪಲ್ ಆಫೀಸಿನಲ್ಲಿ ಗುಮಾಸ್ತೆಯಾಗಿದ್ದ ಸುಬ್ರಹ್ಮಣ್ಯ ಅಯ್ಯರ್ ಎಂಬ 23 ವರುಷದ ಬ್ರಾಹ್ಮಣನು ಕಳೆದ ಸೋಮವಾರ ಸಾಯಂಕಾಲ ಮನೆಯಲ್ಲಿ ಮಂಗಳಾರತಿ ಮಾಡಿ ನಮಸ್ಕಾರಮಾಡುವಾಗ್ಗೆ ಅವನ ಬಟ್ಟೆಯು ಕರ್ಪೂರದ ಆರತಿಗೆ ತಗಲಿ ಹತ್ತಿಕೊಂಡು ಮೈಯೆಲ್ಲಾ ಸುಟ್ಟುಹೋಯಿತು. ಅವನ ತಂದೆ ಮುಂತಾದವರು ಕೂಡಲೇ ಆಸ್ಪತ್ರೆಗೆ ಸಾಗಿಸಿ ಚಿಕಿತ್ಸೆ ಮಾಡಿಸಿದರೂ ಪ್ರಯೋಜನವಾಗದೆ ಅವನು ಮರುದಿನ ಬೆಳಿಗ್ಗೆ ಸತ್ತುಹೋದನು.

* * *

ಬೊಂಬಾಯಿನಲ್ಲಿ ದಿವಾಳಿಯಾದ ಕ್ರೆಡಿಟ್ ಬ್ಯಾಂಕಿನಲ್ಲಿ ಮ್ಯಾನೇಜರಾಗಿದ್ದ ಜಾಸ್ಪರ್ ಜೂಸೆಫ್ ಎಂಬವನು ಬ್ಯಾಂಕಿನ ಹಣಗಳನ್ನು ಸರಿಯಾದ ಆಧಾರವೇನೂ ಇಲ್ಲದೇನೇ ತನಗೆ ಬೇಕಾದವರಿಗೆ ಸಾಲಕೊಟ್ಟು ಮೋಸಮಾಡಿದನೆಂದು ಮೊಕದ್ದಮೆ ಆಗಿ ಕಳೆದ ವಾರ ಹೈಕೋರ್ಟ್ ಸೆಷನ್ಸ್ ಜಡ್ಜರು ಅವನಿಗೆ ಮೂರು ವರುಷ ಬಂದೋಬಸ್ತ್ ಶಿಕ್ಷೆಯನ್ನು ವಿಧಿಸಿದರು. ಇವನಿಗೆ ಅದೇ ಬ್ಯಾಂಕಿಗೆ ಸಂಬಂಧಪಟ್ಟ ಇನ್ನೊಂದು ಮೊಕದ್ದಮೆಯಲ್ಲಿ ಏಳು ವರುಷದ ಬಂದೋಬಸ್ತ್ ಶಿಕ್ಷೆ ಆಗಿರುತ್ತದೆ.

* * *

ಮಂಗಳೂರಿನಿಂದ ದಕ್ಷಿಣಕ್ಕೆ ಸುಮಾರು 11 ಮೈಲಿಯಲ್ಲಿರುವ ಮಂಜೇಶ್ವರದಲ್ಲಿ ಜನರು ಕಳೆದ 6 ನೇ ತಾ. ಗುರುವಾರ ಮಧ್ಯಾಹ್ನದಲ್ಲಿ ಒಂದು ವಿಚಿತ್ರವಾದ ನೋಟವನ್ನು ನೋಡಿ ಬೆರಗಾದರು. ಸಮುದ್ರದ ಮೇಲಿನಿಂದ ಒಂದು ದೊಡ್ಡ ಮೇಘವು ತೀರದ ತನಕ ಬಂದು ಅಲ್ಲಿ ಸ್ವಲ್ಪ ಹೊತ್ತು ನಿಂತಿದ್ದು ನೀರನ್ನು ಚೆನ್ನಾಗಿ ಕುಡಿದು ಅಲ್ಲಿಂದ ನೈಋತ್ಯ ದಿಕ್ಕಿಗೆ ನುಗ್ಗಿ ರಭಸವಾಗಿ ಹೋಗುತ್ತಾ ತನ್ನೆದುರಿಗೆ ಸಿಕ್ಕಿದ ಮರಗಳನ್ನೂ ಮನೆಗಳ ಮುಲ್ಲಾ ವಣೆಗಳನ್ನೂ ಹಾಳುಮಾಡಿರುತ್ತದೆ. ಇಂಥಾ ಅಪೂರ್ವವಾದ ನೋಟವನ್ನು ಇದುವರೆಗೆ ಯಾರು ನೋಡಿದ್ದಿಲ್ಲ.

* * *

ಸಿಲೋನ್ ದ್ವೀಪದ ಮುಖ್ಯಪಟ್ಟಣವಾದ ಕೊಲಂಬೋದಲ್ಲಿ ಇಟಲೀ ರಾಜ್ಯದ ರಾಯಭಾರಿಯಾಗಿದ್ದ ಮಿ|| ನಿಕೋಡೆಮಸ್ ಫ್ರಿಸ್ ಎಂಬಾತನು ಕಳೆದ 11 ನೇ ತಾ. ಮೋಟಾರಿನಲ್ಲಿ ಎಲ್ಲಿಗೋ ಹೋಗಿ ತನ್ನ ಬಂಗಲೆಗೆ ವಾಪಸು ಬಂದು ಹಾಸಿಗೆಯ ಮೇಲೆ ಕುಳಿತುಕೊಂಡು ಪಿಸ್ತೂಲು ಬಾರ್‌ಮಾಡಿ ಹೊಡೆದುಕೊಂಡು ಆತ್ಮಹತ್ಯ ಮಾಡಿಕೊಂಡನು. ಕೊಲಂಬೋ ಪಟ್ಟಣದಲ್ಲಿರುವ ಜರ್ಮನಿ ಪ್ರಜೆಗಳ ಕಡೆ ಈತನೂ ಯಾವ ವಿರೋಧಕಾರ್ಯದಲ್ಲೂ ಕೈ ಹಾಕುವುದಿಲ್ಲವೆಂದು ಇಂಗ್ಲಿಷ್ ಸ್ಥಳಾಧಿಕಾರಿಗಳಿಗೆ ಮಾತು ಕೊಟ್ಟಿದ್ದನು. ಇನ್ನೂ 35 ವರುಷದ ಈ ಅಧಿಕಾರಿಯು ಅಕಸ್ಮಾತ್ತಾಗಿ ಆತ್ಮಹತ್ಯ ಮಾಡಿಕೊಂಡದ್ದಕ್ಕೆ ಕಾರಣವೇನೋ ಹೊರಪಡಲಿಲ್ಲ.

* * *

ಅನಂತಪುರದಲ್ಲಿ ಒಬ್ಬ ಕಕ್ಷಿಗಾರನು ತನ್ನ ಮೊಕದ್ದಮೆಯನ್ನು ದೊಡ್ಡ ವಕೀಲನಿಗೆ ವಹಿಸಬೇಕೆಂದು ತಿರುವಾನಂದಪುರಕ್ಕೆ ಹೋಗುತ್ತಿದ್ದಾಗ ನಾಲ್ಕು ಜನ ಅವನನ್ನು ನಿಲ್ಲಿಸಿಕೊಂಡರು. ಆ ವ್ಯಕ್ತಿ ಒಬ್ಬನು ತಾನೇ ಆ ದೊಡ್ಡ ಲಾಯರೆಂದು ನಟಿಸಿ ಆ ಕಕ್ಷಿಗಾರನಿಗೆ ನಂಬಿಕೆ ಹುಟ್ಟಿಸಿ ಅವನಿಂದ ಎರಡು ಸವರಿನ್‌ಗಳನ್ನು ತೆಗೆದುಕೊಂಡನು. ಇದು ಪತ್ತೆ ಆಗಿ ಆ ನಾಲ್ಕು ಜನರ ಮೇಲೂ ಕ್ರಿಮಿನಲ್ ಮೊಕದ್ದಮೆ ಆಯಿತು. ಸೆಷನ್ಸ್ ಜಡ್ಜರು ಆ ವ್ಯಕ್ತಿ ಮೂರು ಮಂದಿಗೆ ತಲಾ ಒಂದು ವರುಷ ಕಠಿಣ ಸಜವನ್ನೂ 100 ರೂಪಾಯಿ ಜುಲ್ಮಾನೆಯನ್ನೂ ವಿಧಿಸಿದರು. ನಾಲ್ಕನೇ ಅಪರಾಧಿಗೆ 18 ತಿಂಗಳ ಕಠಿಣ ಸಜವೂ 100 ರೂಪಾಯಿ ಜುಲ್ಮಾನೆಯೂ ಆಯಿತು.

* * *

ಹಿಂದುಸ್ಥಾನದಲ್ಲಿ ಚಲಾವಣೆಯಲ್ಲಿರುವಂಥಾ 5-10 ರೂಪಾಯಿ ಕರೆನ್ಸಿ ನೋಟುಗಳ ಛಾಪಾವನ್ನು ಜರ್ಮನಿನಲ್ಲಿ ವಸ್ತ್ರಗಳಿಗೆ ಹಾಕಿ ಅಂಥಾ ವಸ್ತ್ರಗಳನ್ನು ಹಿಂದುಸ್ಥಾನಕ್ಕೆ ವಿಶೇಷವಾಗಿ ಕಳುಹಿಸಿ ಬಿಕರಿಮಾಡಿಸುತ್ತಿದ್ದರು. ಇಂಥಾ ವಸ್ತ್ರಗಳನ್ನು ಮುಂದಿನ ಅಕ್ಟೋಬರ್ 1 ನೇ ತಾರೀಖಿನಿಂದಾಚೆಗೆ ಹಿಂದುಸ್ಥಾನಕ್ಕೆ ಯಾವ ವರ್ತಕರೂ ತರಿಸಿ ಬಿಕರಿ ಮಾಡಕೂಡದೆಂದು ನಮ್ಮ ವೈಸ್‌ರಾಯರವರು ಇಸ್ತಿಹಾರ್ನಾಮೆಯನ್ನು ಪ್ರಕಟಮಾಡಿರುತ್ತಾರೆ. ಕೆಲವು ದಿನಗಳ ಹಿಂದೆ ಅಂಥಾ ಚಿತ್ರವನ್ನು ದೀಪದಕಡ್ಡಿ ಪೆಟ್ಟಿಗೆಗಳ ಮೇಲೆ ಛಾಪಾಮಾಡಿ ಜರ್ಮನಿಂದ ಹಿಂದುಸ್ಥಾನಕ್ಕೆ ಕಳುಹಿಸುತ್ತಿದ್ದರು. ಅದನ್ನೂ ಆಗಲೇ ನಮ್ಮ ಸಾರ್ವಭೌಮ ಸರ್ಕಾರದವರು ಮೊಲ್ಕಂಡಂತೆ ಹುಕುಂ ಕೊಟ್ಟು ತಡೆದುಬಿಟ್ಟರು.

* * *

ಕ್ಯಾಂಡೆಲ್, ಆಡಂಸನ್ ಎಂಬಿಬ್ಬರು ಸೋದರುಗಳೂ ಮತ್ತು ಮೂರು ಹಿಂದುಗಳೂ ಮಸಲತ್ತುಮಾಡಿಕೊಂಡು, ಕರ್ನೂಲಿನಲ್ಲಿ ಭಾರೀ ಲೇವಾದೇವಿ ಮಾಡುತ್ತಿರುವ ಮರಾಟೆ ವೆಂಕಟರಾಯನನ್ನು ಧೋನೆ ಎಂಬ ಸ್ಥಳಕ್ಕೆ ಕರಸಿ ಆ ಸಾಹುಕಾರನಿಗೆ ಬಂಗಾರದ ಧೂಳು ಎಂದು ಹೇಳಿ ಮೋಸದಿಂದ 1,478 ತೋಲಾ ಭಾರವಾದ ಕಪ್ಪು ಧೂಳನ್ನು ಒಂದು ಚೀಲದಲ್ಲಿ ಕಟ್ಟಿಕೊಟ್ಟು ಅವನಿಂದ

10,250 ರೂಪಾಯಿ ಕರೆನ್ಸಿ ನೋಟುಗಳನ್ನು ಕೆಗೆದುಕೊಂಡು ಹೋದರು. ಕೆನ್ನೋಲ್ ಸೆರ್ವಿಸ್ ಜಡ್ಜರು ಈ ವೋಸ ಕೃತ್ಯದ ಮೊಕದ್ದಮೆಯನ್ನು ವಿಚಾರಣೆ ಮಾಡಿ, ಆ ಇಬ್ಬರು ನೌಕರರುಗಳಿಗೂ 3-6 ತಿಂಗಳ ಸಾದಾ ಕಠಿನವನ್ನೂ, ಉಳಿದ ಮೂವರು ಮುಂದೆ ಹಿಂದುಗಳಿಗೂ ತಲಾ ಎರಡು ವರುಷ ಕಠಿಣ ಕಠಿನವನ್ನೂ ವಿಧಿಸಿದರು. ಅವರ ಮೇಲೆ ಇವರೆಲ್ಲಾ ಮದರಾಸ್ ಹೈ ಕೋರ್ಟಿನಲ್ಲಿ ಅಪೀಲ್ ಮಾಡಿಕೊಂಡರು. ಹೈ ಕೋರ್ಟಿನಲ್ಲಿ ಜಡ್ಜಿಗಳು ಮೊಕದ್ದಮೆಯ ವಾಜ್ಯಾವಳಿಯನ್ನು ಪರಿಶೋಧನೆ ಮಾಡಿ, ಕೆಳಕೋರ್ಟಿನ ಶಿಕ್ಷೆಗಳನ್ನೇ ಖಾಯಂ ಮಾಡಿ, ಅಪೀಲ್ ವಜಾ ಮಾಡಿರುತ್ತಾರೆ.

ಇಂಗ್ಲಿಷ್ ಪಾರ್ಲಿಮೆಂಟಿನಲ್ಲಿ ಮಿ|| ರೂಪರ್ಟ್ ಗ್ವಿನ್ ಎಂಬ ಮೆಂಬರು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರನ್ನು ಕುರಿತು ಕಳೆದ ಐದು ವರುಷಗಳಲ್ಲಿ ಹಿಂದುಸ್ಥಾನದೊಳಗೆ ಸವರ್ಣಗಳನ್ನು ಭಂಗಾರದ ಗಟ್ಟಿಗಳನ್ನು ಪ್ರಜೆಗಳು ಎಷ್ಟೆಷ್ಟು ಕೊಂಡಿಟ್ಟುಕೊಂಡಿದಾರೆಂದು ಪ್ರಶ್ನೆಮಾಡಿದ್ದಕ್ಕೆ ಸೆಕ್ರೆಟರಿಯವರು ಆ ಲೆಕ್ಕವನ್ನು ಪ್ರಕಟಿಸಿರುವುದಾದರೆ ಅವರಿಂದ ಲೆಕ್ಕಗಳನ್ನು ರೂಪಾಯಿ ಮಾಡಿ ಇಲ್ಲಿ ತಿಳಿಸಿರುವೆವು.

ಇಸವಿ.	ಸವರ್ಣಗಳು.	ಗಟ್ಟಿಭಂಗಾರ.
1909–10	4,31,10,000	7,63,90,500
1910–11	13,15,45,000	11,41,62,000
1911–12	13,32,60,000	10,06,90,500
1912–13	16,65,15,000	10,02,12,000
1913–14	18,14,40,000	11,77,63,500

ನಮ್ಮ ಮೈಸೂರಾಯರವರ ಪತ್ನಿಯರವರ ಹೆಸರಿನಲ್ಲಿ ದೆಹಲಿಪಟ್ಟಣದಲ್ಲಿ ಹೆಂಗಸರ ವೈದ್ಯವಿದ್ಯಾಶಾಲೆಯನ್ನು ಅದಕ್ಕೆ ಸೇರಿದಂತೆ ಹೆಂಗಸರ ಆಸ್ಪತ್ರೆಯನ್ನೂ ಕಟ್ಟಿಸುತ್ತಾ ಇದಾರೆ. ಅರಸಿಯವರು ಕಾಲವಾದ ಕಾರಣ ಅರಸಿಯ ಹೆಸರನ್ನು ಶಾಶ್ವತಪಡಿಸುವುದಕ್ಕೆಂದು ಒಂದು ಫಂಡು ಸಿಂಲಾ ಪಟ್ಟಣದಲ್ಲಿ ಏರ್ಪಾಡಾಗಿದೆ. ಈ ಫಂಡಿಗೆ ವಸೂಲಾಗುವ ಹಣಗಳನ್ನು ಈಗ ಆ ಕಟ್ಟಡಗಳಿಗೆ ವಿನಿಯೋಗಿಸಬೇಕೆಂದು ತೀರ್ಮಾನವಾಗಿರುತ್ತದೆ. ಇದುವರೆಗೆ ಆಗಲೇ 15,30,600 ರೂಪಾಯಿ ಚಂದಾಹಣ ವಾಗ್ದಾನವಾಗಿರುವುದು. ಇವರ ಪೈಕಿ ಮುಖ್ಯ ಚಂದಾದಾರರುಗಳ್ಯಾರೆಂದರೆ—ಪಾಟಿಯಾಲಾ ಮಹಾರಾಜರು 1] ಲಕ್ಷ ರೂಪಾಯಿ; ಸಿಂಧಿಯಾ ಮಹಾರಾಜರು 3 ಲಕ್ಷ; ಜಯಪುರ 3 ಲಕ್ಷ; ಹೈದರಾಬಾದ್, ಕೋಟೆ, ದರ್ಭಾಂಗ, ಬರೋಡ, ಉದಯಪುರ, ಹಕ್ಸ, ಜೋಧಪುರ, ಈ ಸಂಸ್ಥಾನಗಳ ರಾಜರು ತಲಾ 1 ಲಕ್ಷ; ಇಂದೋರ್, 50,000; ವಾಡಿಯಾ ಟ್ರಸ್ಟ್ ಫಂಡು 25,000; ಈ ಪ್ರಕಾರ ಚಂದಾ ವಾಗ್ದಾನವಾಗಿದೆ. ಕಾಶ್ಮೀರದ ಮಹಾರಾಜರು ವರುಷಕ್ಕೆ 3,500 ರೂಪಾಯಿ ಕೊಡುವಂತೆ ಒಪ್ಪಿಕೊಂಡಿದಾರೆ.

ಪಾಕೆಟ್ ಲೀವರ್ ವಾಚ್.

ಇದರ ಕ್ರಯ 6 ಬಹುಮಾನ ಸಮೇತ ರೂ. 2-13-0 ಮಾತ್ರ.

ಇದು ಮಕ್ಕಳ ಆಟದ ಬೊಂಬೆಯಂತೆ ಕೆಲವು ದಿವಸಗಳು ಆಟವಾಡಿ ನಂತರ ಕೆಟ್ಟುಹೋಗುವಂಥಾ ಅಲ್ಪ ಗಡಿಯಾರವಲ್ಲ. ಶ್ರೇಷ್ಠವಾದ ಮತ್ತು ಬಹು



ಪ್ರಸಿದ್ಧವಾದಲೀವರು ಕೆಲಸದಿಂದ ತಯಾರಾದದ್ದು, ಗಂಭೀರವಾದ ಘಂಟೆ ಮತ್ತು ಮಿನಿಟ್‌ಗಳು ಮುಳ್ಳುಗಳುಳ್ಳದ್ದು. ಬಹು ಬಲಿಷ್ಠವಾದ ಮತ್ತು ನಾಜೂಕಾದ ಯಂತ್ರಸಾಮಾನುಗಳಿಂದ ತಯಾರಾಗಿರುತ್ತೆ. ಅನೇಕ ವರುಷಗಳವರೆಗೂ ಬಾಳಿಕೆ ಬರುವಂಥದ್ದು. ಆದಕಾರಣ ಆರ್ಡರುಗಳು ಬಂದು ಸುರಿಯುತ್ತಿವೆ. ಬಹುಮಾನಗಳ ತಪಸೀಲು:—1 ವಾಚ್ ಸರಪಣಿ, 2 ಉತ್ತರ ಮುಖ, 3 ಪರಿಮಳ ಅತ್ತರ್, 4 ಕರವಸ್ತ್ರ, 5 ಜೋಡಾದ ಉಂಗುರ, 6 ಸ್ಪ್ರಿಂಗು ಕಡ್ಡಿ. [148-8] ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ:—

ವಿಳಾಸ—ಬಿ. ಆರ್. ವೆಂಕಟರಮಣ ಅಂಡ್ ಕಂಪೆನಿ, ನಂ. 7, ಕೋತ್ ವೆಂಕಟಾಚಲಯ್ಯರ್ ಬೀದಿ, ಮದರಾಸು.

ಪ್ರೊಫೆಸರ್ ಗಜ್ಜಾರರವರ

ಗುಣಕಂಡ ಪ್ರಖ್ಯಾತವಾದ ಔಷಧಗಳು.

ವ್ಯರ್ಥವಾದ ಔಷಧಗಳನ್ನು ಉಪಯೋಗಿಸಿ ಪ್ರಾಣಾಪಾಯಕ್ಕೆ ಗುರಿಯಾಗುವರೇಕೆ? ವಿವೇಕದಿಂದ ತಯಾರುಮಾಡಿರುವ ನಮ್ಮ ಔಷಧಗಳನ್ನು ಸೇವನೆ ಮಾಡಬಾರದೇ?

ಟಾನಿಕ್ ಸೋಲ್ಯೂಷನ್.—ಇದರಲ್ಲಿ ಗ್ಲಿಸರಿಫಾಸ್ಫೇಟ್ಸ್ ಎಂಬ ಅಮೂಲ್ಯ ಪದಾರ್ಥಗಳನ್ನು ಬೆರಸಿ ತಯಾರುಮಾಡಿದೆ. ಇದು ಬೇಗನೆ ಶರೀರಕ್ಕೆ ಸೇರಿಹೋಗುತ್ತೆ. ಆರೋಗ್ಯವನ್ನು ಚಟುವಟಿಕೆಯನ್ನೂ ಶಕ್ತಿಯನ್ನೂ ವೃದ್ಧಿಮಾಡುವುದು. ನರಗಳ ದುರ್ಬಲತ್ವವನ್ನು ಹೋಗಲಾಡಿಸುವುದರಲ್ಲಿ ಇದು ಬಹಳ ಶ್ರೇಷ್ಠವಾದ ಔಷಧ. ಕ್ರಯ ಸೀಸೆಗೆ 3 ರೂಪಾಯಿ, ಮತ್ತು ರೂ. 1-3-0.

ರಕ್ತಶುದ್ಧಿಗೆ ಮಹೌಷಧ—ಇದು ರಕ್ತವನ್ನು ದೇಹದ ಎಲ್ಲಾ ಭಾಗಗಳನ್ನು ಶುದ್ಧಿಮಾಡುತ್ತೆ. ಬಹಳ ಚೆನ್ನಾಗಿ ಗುಣಕಂಡ ಔಷಧ. ಕ್ರಯ ಸೀಸೆಗೆ 1 ರೂಪಾಯಿ.

ಲಿವರ್ ಸೋಲ್ಯೂಷನ್—ಪಿತ್ತಕೋಶದ ನೋವಿಗೆ ಇದು ಬಹಳ ಚೆನ್ನಾಗಿ ಕೆಲಸಮಾಡುತ್ತಿರುವುದರಿಂದ ಮಲಬದ್ಧತೆಯುಳ್ಳವರಿಗೆ ಮಹೋಪಕಾರಿಯಾಗಿದೆ. ಮಕ್ಕಳಿಗೂ ಇದನ್ನು ಕೊಡುತ್ತಾರೆ. ಇದು ಮನೆಯಲ್ಲಿ ಇದ್ದರೆ ತೀರಬೇಕು. ಕ್ರಯ ಸೀಸೆಗೆ ರೂ. 1; ಮತ್ತು ರೂ. 0-10-0.

ಜ್ವರದ ಔಷಧ—ವಿಷಮಶೀತಜ್ವರ, ಸಿಂತುಬರುವಜ್ವರ, ಅನಿಯತಜ್ವರ, ಎಲ್ಲಾ ತರದ ಜ್ವರಗಳಿಗೂ ಇದು ಸಂಜೀವನವಾಗಿದೆ. ಇದು ಕ್ವಿನೈನ್‌ಗಿಂತ ಬಹಳ ಅಗ್ಗ. ಕ್ರಯ ಸೀಸೆಗೆ 10 ಆಣೆ; 4 ಆಣೆ.

ತುರುಕಡ್ಡಿ ಔಷಧ—ತುರುಕಡ್ಡಿಯನ್ನು ಖಂಡಿತವಾಗಿ ಗುಣಮಾಡುತ್ತೆ. ಕ್ರಯ ಸೀಸೆಗೆ 4 ಆಣೆ.

ಹಲ್ಲುಪುಡಿ.—ಈ ಪುಡಿಯಿಂದ ಹಲ್ಲು ಉಜ್ಜಿಕೊಂಡರೆ ಬಾಯಿಗೆ ಸುವಾಸನೆ ಕೊಡುತ್ತೆ. ಹಲ್ಲು ಸವೆದು ಕೆಡದಂತೆ ಬಹಳ ಚೆನ್ನಾಗಿಟ್ಟು ಕಾಪಾಡುತ್ತೆ. ಕ್ರಯ ಸೀಸೆಗೆ 4 ಆಣೆ; 6 ಆಣೆ; 1 ರೂಪಾಯಿ.

ಇಂಗ್ಲೀಷಿನಲ್ಲೇ ನಮಗೆ ಕಾಗದವನ್ನು ಬರೆಯಬೇಕು.

ಸೋಲ್ ಏಜಂಟರು:—ಎಸ್. ವೈದ್ಯ ಮತ್ತು ಕಂಪೆನಿ, ಪಾರ್ಕ್ ಟೌನ್, ಮದರಾಸ್. [156-6]

ಹಿಂದುಸ್ಥಾನದಲ್ಲಿ ಮಕ್ಕಳು

ಬಹಳ ಉಷ್ಣರಾಜ್ಯವಾದದ್ದರಿಂದ ನಾನಾ ದೇಹಬಾಧೆಗಳನ್ನು ಸಹಿಸಿಕೊಂಡು ಬೆಳೆಯಬೇಕಾಗಿದೆ. ಅವರ ಸಣ್ಣಸಣ್ಣ ಮೂಳೆಗಳೂ ಮಾಂಸಖಂಡಗಳೂ ಸರಿಯಾಗಿ ಬಲಗೊಂಡು ಬೆಳೆಯುವುದಕ್ಕೆ ಅವರಿಗೆ ಚಿಕ್ಕಂದಿನಿಂದಲೇ ಬಲಕಾರಿಯಾದ ಸೇವನಾ ಔಷಧವನ್ನು ಕೊಡುವುದು ಅವಶ್ಯಕ.

SCOTT'S EMULSION

5-34

(ಸ್ಕಾಟ್ಸ್ ಇಮಲ್‌ಷನ್)

ಎಂಬೀ ಸೇವನಾ ಔಷಧದಲ್ಲಿ ಮಕ್ಕಳ ಸಮಸ್ತ ಅಂಗಗಳನ್ನೂ ಬಲಪಡಿಸಿ ಬೆಳೆಸುವಂಥಾ ಬಹು ಉತ್ಕೃಷ್ಟವಾದ ಗುಣಗಳಿರುತ್ತವೆ.

ಇದಕ್ಕೆ ಸಮಾನವಾದದ್ದು ಮತ್ತಾವುದೂ ಇಲ್ಲ.

ಈ ಔಷಧವನ್ನು ಸೇವನೆ ಮಾಡುತ್ತಾ ಬಂದ ಒಡನೆಯೇ ಅದರ ಗುಣಗಳು ಕಂಡುಬರುವುವು.

ಕೈಯಿಂದ ಮುಟ್ಟದೇನೇ ತಯಾರಾದದ್ದು.

ಮೀನುಮನುಷ್ಯ ಇರುವ ಈ ಔಷಧದ ಗುರುತು. ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ಬಿಕರಿಯಾಗುತ್ತದೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್, ಔಷಧಗಳ ಕಾರ್ಖಾನೆ, ಲಂಡನ್, ಇಂಗ್ಲೆಂಡ್.

ತಂಜಾವೂರು ಗೆಜ್ಜೆ ಅಡ್ಡಿಗೆಯು.

ಸ್ತ್ರೀಯರು ಕೊರಳಿನಲ್ಲಿ ಧರಿಸಿಕೊಳ್ಳುವ ಅಂದವಾದ ಈ ಆಭರಣವನ್ನು ಶೃಂಗಾರವಾದ ಅಕ್ಕಸಾಲಿಗರಿಂದ ಬಹಳ ಸುಂದರವಾಗಿಯೂ ಮನೋಹರವಾಗಿಯೂ



ಮುಂದುಗಳನ್ನು ಮಾಡಿಸಿ ಭಂಗಾರದ ಮುಲಾಮನ್ನು ಕೊಟ್ಟು ಕಪ್ಪುರೇಷ್ಮೆ ದಾರದಿಂದ ಕಟ್ಟಿ ನೋಡುವವರ ಮನಸ್ಸನ್ನು ಆಕರ್ಷಿಸುವಷ್ಟು ಅಂದವಾಗಿಸಯಾರಿಸಿ ನಮ್ಮ ಕಂಪೆನಿಯ ಹೆಸರು ಪ್ರಸಿದ್ಧಿಯೊಂದಲು ಕಮ್ಮಿ ಕ್ರಯಕ್ಕೆ ಬಿಕರಿ ಮಾಡುತೇವೆ. ಭಂಗಾರದ ಒಡವೆಗೂ ಇದಕ್ಕೂ ಯಾವ ವ್ಯತ್ಯಾಸವೂ ಇರುವದಿಲ್ಲ. ಇದರ ಅಂದವನ್ನೂ, ಕೆಲಸಗಾರಿಕೆಯೂ, ನಾಜೂಕೂ ನೋಡಿ ತೃಪ್ತರಾಗಬೇಕಲ್ಲದೆ ಹೇಳುವದರಿಂದ ಪ್ರಯೋಜನವಿಲ್ಲ. ಒಂದು ಸಲ ತರಿಸಿ ನೋಡಿ. ಕ್ರಯ 10 ಗುಂಡುಗಳ ಸರಕ್ಕೆ 6 ಆಣೆ.

ಮಧುರೆ ಚುನ್ನಡಿ ಅಂಚಿನ ಸೀರೆಗಳು.

ಉಡುವದಕ್ಕೆ ಲಾಯಕ್ಕಾಗಿಯೂ, ನೋಡಲು ಅಂದವಾಗಿಯೂ, ಕೃಪವಾಗಿಯೂ, ಗಟ್ಟಿ ಬಣ್ಣದ್ದಾಗಿಯೂ, ಸರಿಯಾಗಿ 18 ಮೊಳ ಉದ್ದವಿರುವವಾಗಿಯೂ,

ನಮ್ಮ ಸಹೋದರಿಗಳ ಮನಸ್ಸಿಗೆ ತೃಪ್ತಿಯಾಗಿರುವಂತೆಯೂ ನಮ್ಮ ಕಂಪೆನಿಯಲ್ಲಿ ಸೀರೆಗಳು ಬಹಳ ಕಮ್ಮಿ ಬೆಲೆಗೆ ಬಿಕರಿಯಾಗುತ್ತಿರುವುವು. ಇದು ಕೆಂಪು, ಕಪ್ಪು ಮುಂತಾದ ರಂಗುಗಳಲ್ಲಿ ದೊರೆಯುವುವು. ಇದು ಬಾಳಿಕೆಯೂ, ಬಣ್ಣವೂ, ನಾಜೋಕು ಮುಂತಾದ್ದು ಒಂದು ಸಲ ಪರೀಕ್ಷಿಸಿ ನೋಡಿದರೆ ಗೊತ್ತಾಗುತ್ತೆ. ಕ್ರಯ 1 ನೇ ಸೀರೆ 1ಕ್ಕೆ ರೂ 2-4-0; 3 ನೇ ಸೀರೆ 1ಕ್ಕೆ ರೂ. 1-14-0.

ವಿಳಾಸ:—ದಿ ಆರಿಯನ್ ಮೆಡಿಕಲ್ ಹಾಲ್, ಸಾಹುಕಾರ್ ಪೇಟ ಪೋಸ್ಟ್, ಮದರಾಸ್. [176-2]

ಸುಂದರವಾದ ಮಧುರೆ ಚುನ್ನಡಿ ಅಂಚಿನ ಸೀರೆ ಅನ್ವಲಾ ರಕಂ

ರೂ. 2-3-0; ದುಯ್ಯಂ ರಕಂ ರೂ. 1-14-0.



ನಮ್ಮ ಕಂಪನಿ ಹೊಸದಾಗಿ ಇರುವದರಿಂದ ಪ್ರಖ್ಯಾತಿಪಡಿಸಲಿಕ್ಕಾಗಿ ನಾವೇ ಈ ಸೀರೆ ಸ್ವಂತ ತಯಾರು ಮಾಡಿಸಿ ಇರುತ್ತವೆ. ಇತರರ ಮಾತು ನಂಬದಂತೆ ನಮ್ಮ ಸರಕು ಪರೀಕ್ಷೆ ಮಾಡಿ ನೋಡಿರಿ. ಇದು ಉಡುವುದಕ್ಕೆ ಭದ್ರವಾಗಿಯೂ ನೋಡಕ್ಕೆ ನಯವಾಗಿಯೂ ಬೆಲೆ ಸುಲಭವಾಗಿಯೂ ಇವೆ. ಬಣ್ಣ ಹೋಗದು. ಸೀರೆಯ ಉದ್ದ 18 ಮೊಳ. ಸುಂದರವಾದ ಸೆರಗು

ದಸರಾಮಹೋತ್ಸವದ ಕೈಗಡಿಯಾರ ಅರ್ಧಕ್ರಯ ರೂ. 1-13-0.



ಈ ಬರುವ ದಸರಾ ಮಹೋತ್ಸವಕ್ಕಾಗಿ ಉಪಯೋಗಪಡಿಸುವ ಈ ಹೆಚ್ಚು ಕ್ರಯವುಳ್ಳ ಕೈಗಡಿಯಾರವನ್ನು ಈ ಕೆಳಗೆ ನಮೂದುಮಾಡಿದ ಅಲ್ಪ ಕ್ರಯಕ್ಕೆ ನಮ್ಮ ಕಂಪನಿ ಪ್ರಖ್ಯಾತಿಹೊಂದುವದಕ್ಕಾಗಿ ವಿಕ್ರಯ ಮಾಡಲ್ಪಡುತ್ತೆ. ಈ ಸಮಯ ಬಹು ಜಾಗ್ರತೆಕರವಾದದ್ದು. ನಿರಾಕರಿಸಬೇಡಿರಿ.

ತಂಜಾವೂರು ಗೆಜ್ಜೆ ಅಡ್ಡಿಗೆ ಕ್ರಯ 6 ಆಣೆ.

ತಂಜಾವೂರು ಕೆಲಸಗಾರರಿಂದ ತಯಾರಿಸಲ್ಪಟ್ಟ ಘಟ್ಟಿ ಗೆಜ್ಜೆಗಳನ್ನು ಒಳ್ಳೇ ಭಂಗಾರದ ಮುಲಾಮು ಎಲೆಕ್ಟ್ರಿಕ್ ಶಕ್ತಿಯಿಂದ ಪಾಕ ಕೊಡುವವರಿಗೆ ಬಹು ದಮನೀಯಕರವಾದ ಅಡ್ಡಿಗೆಗಳನ್ನು ಸ್ವಲ್ಪ ಕ್ರಯಕ್ಕೆ ಕಂಪನಿ ಅಭಿವೃದ್ಧಿ ಉದ್ದೇಶವಾಗಿ ವಿಕ್ರಯಿಸಲ್ಪಡುತ್ತದೆ. ಸ್ತ್ರೀಯರೂ ಹುಡುಗಿಯರೂ ಕೊರಳಿಗೆ ಧರಿಸಿಕೊಳ್ಳುವದಕ್ಕೆ ಲಾಯಖಾದದ್ದು.

ವಿಳಾಸ—ಕೆ. ರಾಧಾಕೃಷ್ಣ, 313, ಕಾರ್ ಸ್ಟ್ರೀಟ್, ಟ್ರಿಪ್ಲಿಕೇನ್, ಮದರಾಸ್. [181-1]

1915ನೆ ಮ್ಯಾ. ಲೋ. ಸೆ. ಟೆಕ್ಸ್ಟ್ ಪ್ರಶ್ನೋತ್ತರ.—ಕ್ರಯ 1ಕ್ಕೆ 1 ಪೆಟ್ಟು. ಪರೀಕ್ಷಾ ವಿದ್ಯಾರ್ಥಿಗಳಿಗೆ ಅತ್ಯಂತ ಉಪಯುಕ್ತವಾದ ಮನೆಪಾಠ ನವರುಗಳಿಗೆ ಆಗಸ್ಟ್ ಒಳಗೆ (ರೂ. 1-4-0) ಬಂದಾದಾರರಾದ ಪ್ರಶ್ನೋತ್ತರ ಬರುವಾಗ. ವ್ಯವಸಾಯ ಪ್ರಶ್ನೋತ್ತರ (1891-14) 5 ಆಣೆ. ವಿಳಾಸ—ಸಿ. ಭಟ್ಟಯ್ಯ, ಮ್ಯಾನೇಜರ್, ಎಗ್ಮೋರ್, ಚಿಕ್ಕಬಳ್ಳಾಪುರ.



ಅಗಸ್ಟ್ ಮಹೋತ್ಸವದ ಕೈ ಗಡಿಯಾರ ಅರ್ಧ ಕ್ರಯ ರೂ. 1-14-0.

ಇದೇ ಅಗಸ್ಟ್ ಹಬ್ಬದ ಮಹೋತ್ಸವಕ್ಕಾಗಿ ಭಾರೀ ಕ್ರಯದ ಕೈಗಡಿಯಾರವನ್ನು ಅಗಸ್ಟ್ ತರಿಸಿಕೊಳ್ಳುವವರಿಗೆ ರೂಪಾಯಿ 1-14-0 ಕ್ಕೆ ಕೊಡಲ್ಪಡುತ್ತೆ. [99

ವಿಳಾಸ—ವಿ. ಕೃಷ್ಣಸ್ವಾಮಿ ನಾಯರ್, ನಂ.27 ಬಂದರ್ ಬೀದಿ, ಟಿ. ಮದರಾಸು.

ಬೇಕಾದವರು ಗಮನಿಸಿ.

ತ್ವರೆಮಾಡಿ! ಕೆಲವು ದಿವಸಗಳು ಮಾತ್ರ

ಸೋಲಾಪುರದ ಚಿಕ್ಕು, ತೀರೆ, ಖಣ, ಕಿರಿಗೆ.

ಹಣ ಮುಂಗಡವಾಗಿ ಕಳುಹಿಸತಕ್ಕ ವ್ಯಾಪಾರಿಗಳಿಗೆ ಮಾತ್ರ ತರಿಸುವ ಚಿಕ್ಕು, ಸೀರೆ, ಖಣ, ಕಿರಿಗೆ ಇವು ಬಹಳ ಸುಲಭ ಬೆಲೆಗೆ ಒದಗಿಸುವ ಏರ್ಪಾಡು ಮಾಡಲ್ಪಟ್ಟಿದೆ. ನಮ್ಮ ಖಾಯಂ ಗಿರಾಕಿಗಳಿಗೆ ಎಲ್ಲರಿಂದ ಸುಲಭ ಕ್ರಯ ದೊರೆಯುವುದು.

ಹೊಸ ಗಿರಾಕಿಗಳು ತಮಗೆ ಬೇಕಾದದ್ದು ನಮಗೆ ಬರೆದು ಹಣ ಮುಂದಾಗಿ ಕಳುಹಿಸಿದರೆ ಅವರಿಗೂ ಖಾಯಂ ಗಿರಾಕಿಗಳ ದರಕ್ಕೆ ಜವಳಿ ದೊರೆಯುವುದು.

ಹಣ ಕಳುಹಿಸದೆ ಬರೆಯತಕ್ಕ ಕಾಗದಗಳಿಗೆ ಬೇಗ ಗಮನಕೊಡಲು ಆಗಲಿಲ್ಲ. ಕಾಗದ ಪತ್ರಗಳನ್ನು ಬೆಳಸುವದರಿಂದ ಖರೀದಿಗಳು ಬದಲಾಗುವುದಿಲ್ಲವೆಂಬ ವಿಷಯ ಜ್ಞಾಪಕದಲ್ಲಿಡಬೇಕು. [28-20]

ಇಂಡಿಯನ್ ಕೋಆಪರೆಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್ 159, ಕಿಲಾರಿ ರೋಡ್ (ಕುಂಚಿಗರ ಪೇಟೆ), ಬೆಂಗಳೂರು.

ಮರೆಯಬ್ಯಾಡಿ. ಮರೆಯಬ್ಯಾಡಿ.

ದರ್ಬಾರ್ ಸಾಬೂನು.

ಏಜಂಟುಗಳು ಬೇಕಾಗಿದೆ!

ಒಳ್ಳೇ ಕಮೀಷನ್ ದೊರೆಯುವುದು.

ಅಪಾಯವಿಲ್ಲದ ರೋಮಸಂಹಾರ ಈ ಸಾಬೂನನ್ನು ಲೇಪಿಸಿದರೆ ಅದಲ್ಲಿ ಸಾಬೂನು 5 ನಿಮಿಷಗಳೊಳಗಾಗಿ ರೋಮವು ಮಾಯವಾಗುವುದು. ಕಿವಿ ಮುಂತಾದ ಬಾಧೆ ಇಲ್ಲ. ಒಂದು ಸಾರಿ ಉಪಯೋಗಿಸಿದರೆ ಗೊತ್ತಾಗುವುದು. ಮರೆಯಬ್ಯಾಡಿ.

3 ಸಾಬೂನುಗಳಿರುವ ಪೆಟ್ಟಿಗೆ ಕ್ರಯ 14 ಆಣೆ

2 ಪೆಟ್ಟಿಗೆ ಒಂದೇ ಸಾರಿ ತರಿಸಿಕೊಳ್ಳುವವರಿಗೆ ರೂ. 1-10-0 ಅಂಚೆ ಖರ್ಚು 4 ಆಣೆ.

[103-4] ವರ್ತಕರಿಗೆ ಅನುಕೂಲವಾಗಿ ಕೊಡಲ್ಪಡುತ್ತದೆ

ವಿಳಾಸ:—ವಿ. ಎ. ಎಸ್. ನಾಗ್ ಕಂಪೆನಿ, ನಂಬರ್ 3, ಐರುಲಪ್ಪನ್ ಬೀದಿ, ಮದರಾಸು.

ಶ್ರೇಷ್ಠವಾದ ವಾಚ್! ಸೂಕ್ಷ್ಮವಾದ ವಾಚ್! ನಾಜೂಕಾದ ವಾಚ್!

ಸ್ಪ್ರಿಂಗ್ ಪಾಕೆಟ್ ಲೀವರ್ ವಾಚ್.

ಇದರ ಕ್ರಯ 7 ಬಹುಮಾನಗಳ ಸಮೇತ ರೂ. 3-8-0 ಮಾತ್ರ

ಏಳು ವರ್ಷಗಳ ಖಾತ್ರಿಯಾದ ಗ್ಯಾರಂಟಿ.



ಫೋನೋಸಂಕರ.

ಈ ನೂತನ ಸ್ಪ್ರಿಂಗ್ ವಾಚ್ ಈಗ ತಾನೇ ಬಂದಿರುತ್ತೆ. ಪ್ರಸಿದ್ಧಿಯಾದ ಹೆಸರುವಾಸಿಯಾದ ಮತ್ತು ಶ್ರೇಷ್ಠವಾದ ಲೀವರ್ ಕೆಲಸದಿಂದಲೂ, ಬಲಿಷ್ಠ ಮತ್ತು ನಾಜೂಕಾದ ಯಂತ್ರ ಸಾಮಾನುಗಳಿಂದಲೂ ತಯಾರಾಗಿ ಬಂದಿದೆ. ಈಗ ತಾನೆ ಹೊಸದಾಗಿ ನಾವು ಪ್ರತ್ಯೇಕವಾಗಿ ತರಿಸಿರುತ್ತೇವೆ. ಗೌರವ ಮತ್ತು ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದದ್ದು. ಯಾವ ದೀರ್ಘಕಾಲ ಅನೇಕ ವರ್ಷಗಳ ಪರ್ಯಂತ ಬಾಳಿಕೆ ಬರುವಂಥದ್ದು. ಬಹು ರಮಣೀಯವಾದ ವಾಚ್. ಹಾ! ನಾಜೂಕಾದದ್ದು! ಸರಿಯಾಗಿ ಬರುವ ವಾಚ್ ಇದೇ. ಇದರ 7 ಬಹುಮಾನಗಳ ತಪಸೀಲ್:—(1) ಸುಂದರವಾದ ವಾಚ್ ಸರಪಣಿ, (2) ದಿಕ್ಕುಗಳನ್ನು ತೋರಿಸುವ ಉತ್ತರಮುಖ, (3) ವಾಚ್‌ಗೆ ಧೂಳು ಸೇರದಂತೆ ಭದ್ರಪಡಿಸುವ ಪೌಚ್, (4) ಕೈಗೆ ವಾಚ್ ಸೊಗಸ ಧರಿಸಿಕೊಳ್ಳುವ ರೇಷ್ಮೆ ದಾರ, (5) ವಾಚ್ ಪೆಟ್ಟಿಗೆ, (6) ಸುಂದರವಾದದ್ದು, (7) ಪರಿಮಳ ಸುವಾಸನೆ ಸೀಸೆ, (7) ಕನ್ನಡಿ.

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.—

ಟಿ. ಸೀತಾರಾಮ ಮೊದಲಿಯಾರ್, ನಂ 3, ಕಂದಸ್ವಾಮಿ ಮೊದಲಿ ಬೀದಿ, ತಿರುವಲ್ಲಿಕೇಣಿ, ಮದರಾಸು. [180-1]

ತಾಲ್ಲೋಕು ವರ್ತಮಾನಗಳು.

ಚಿತ್ರದುರ್ಗ ತಾಲ್ಲೂಕು ತುರುವನೂರು.—ಗ್ರಾಮದ ಪಾಕೀಜಾ ಬಾವಿಯು ಬತ್ತಿಹೋಗಿವೆ. ಬಾವಿ ಊರಿಗೆ 4 ಫರ್ಲಾಂಗ್ ದೂರದಲ್ಲಿದ್ದು ನೀರು ತರುವುದು ಬಹಳ ಕಷ್ಟ. ಇಷ್ಟು ದೊಡ್ಡ ಗ್ರಾಮಕ್ಕೆ ಮುನಿಸಿಪಲ್ ಲಾಂದ್ರ ಒಂದಾದರೂ ಇಲ್ಲ. ರಾತ್ರಿಯಲ್ಲಿ ಜನಗಳಿಗೂ ಭಂಡಿಗಳಿಗೂ ಕಷ್ಟ. ಈ ಗ್ರಾಮದಲ್ಲಿ ತಿರುಪೆಗಾರರ ಕಾಟವಂತೂ ಹೇಳತೀರದು. ಜೋಗಿ, ಬುಡುಬುಡಿಕೆ, ಕೊರಚ, ಇವೇ ಮುಂತಾದ ಜನಗಳು ... ವರೆಗೂ ತಿರುಪೆ ಎತ್ತುವರು. ಇವರ ಕಾಟವನ್ನು ಸಹಿಸಲಾರದೆ ಜನ ... ದಣಿಸುತ್ತಿದಾರೆ. ಜಾನುವಾರುಗಳಿಗೆ ಅಡವಿಯಲ್ಲಿ ಮೇವು ಇಲ್ಲದೆ ಎಷ್ಟೋ ದನಗಳು ಸತ್ತುಹೋದವು.—ಈ ಗ್ರಾಮದಲ್ಲಿ ಕಮ್ಮಾರ ಹನುಮಂತಾಚಾರಿ ... ಹುಡುಗನಿಗೆ 19 ವರ್ಷ ವಯಸ್ಸು. ಬಲಗೈ 2 ಅಂಗುಲ ಉದ್ದವಾಗಿ ... ಒಂದು ಬೆರಳಿನಂತೆ ಇದೆ. ಎಡಗೈ, ಒಂದು ಗೇಣು ಉದ್ದವಾಗಿದೆ. ... 8 ಅಂಗುಲ ಉದ್ದವುಳ್ಳ 2 ಬೆರಳುಗಳು ಎದುರುಬದುರಾಗಿವೆ. ಈಗ ಎಡಗೈ ಬೆರಳುಗಳಿಂದಲೇ ಚಿತ್ರ ನಕ್ಷೆ ಮುಂತಾದುವುಗಳನ್ನು ಅಂದವಾಗಿ ... ಯುವುದಲ್ಲದೆ ಬಾಯಿಯಿಂದ ತಬಲಾ ಬಾರಿಸಿದಂತೆ ಬಾರಿಸುತ್ತಾನೆ. ಈ ... ಕನ್ನಡ ಲೊ. ಸೆ. ಪರೀಕ್ಷೆಗೆ ಕಟ್ಟುವುದಾಗಿ ಹೇಳುತ್ತಾನೆ.

ಶಿಕಾರಿಪುರ.—ಈ ವರುಷದ ಮಳೆ ಬೇಸರಿಕೆ ಹುಟ್ಟಿಸಿದೆ. ಹಿಡಿದ ಮಳೆ ... ಕಾಲುವೆಲು ಜಮೀನುಗಳಿಗೆ ಬಿತ್ತನೆ ಆಗಲಿಲ್ಲ. ಎಲ್ಲಿ ನೋಡಿದರೂ ... ತುಂಬಿದೆ. ಚಿಕ್ಕ ದೊಡ್ಡ ಕೆರೆಗಳೆಲ್ಲಾ ಕೋಡಿ ಬಿದ್ದಿವೆ. ಗದ್ದೆ ಪೈರುಗಳೆಲ್ಲಾ ಕೆರೆ ನಾಶವಾಗುತ್ತಿರುವವು.—ಈ ಊರು ಪೇಟೆಯ ಕೈ ರೋಡಿನ ... ಪಾರ್ಶ್ವಗಳಲ್ಲಿ ಮೂಡ ಚರಂಡಿಗಳಿಲ್ಲದೆ ಮನೆಗಳ ಮುಂಭಾಗದಲ್ಲಿ ರಸ್ತೆ ... ಅರ್ಧ ಅಡಿಯಷ್ಟು ನೀರು ನಿಂತು ಹೊಲಸಾಗುತ್ತಾ ಅನಾರೋಗ್ಯಕ್ಕೆ ... ವಾಗಿದೆ ಮ್ಯುನಿಸಿಪಾಲಿಟಿಯವರು ಕಲ್ಲಿನ ಚರಂಡಿ ಕಟ್ಟಿಸದೆ ಇರುವದು ... ವಾಗಿದೆ.—ಎರಡು ಮೂರು ತಲೆಗಳಿಂದ (ಸುಮಾರು 100 ವರುಷ) ಪ್ರ... ಕಕ್ಕೆ ವಿಜ್ಞಾಪಿಸಿಕೊಳ್ಳುತ್ತಾ ಬಂದ ತಿರುಗಣಿಮಡು ಮತ್ತು ಅಂಬ... ದ ಕೆರೆಗಳ ಕಾಮಗಾರಿಗಾಗಿ ಈಗ ಸರ್ಕಾರದವರು ತಲಾ 20 ಸಾವಿರ ರೂಪಾಯಿ ಸ್ಯಾಂಕ್ಷನ್ ಮಾಡಿರುವದನ್ನು ನೋಡಿ ಪ್ರಜೆಗಳೆಲ್ಲಾ ಮಹದಾನಂದ ಪಟ್ಟರು. ಕ್ಷಿಪ್ರದಲ್ಲೀ ಸದರಿ ಕಾಮಗಾರಿಯನ್ನು ಪ್ರಾರಂಭಿಸಿ, ಪ್ರಜೆಗಳಿಗೆ ... ವನ್ನು ಮಾಡುವರಾಗಿ ನಿರೀಕ್ಷಿಸುತ್ತಾರೆ. ಈ ಊರಿನ ಸಂತೆಯು ಪೇಟೆಯು ... ನಡೆಯುವದು ಜನಗಳಿಗೆ ತುಂಬಾ ಇಕ್ಕಟ್ಟು, ಪ್ರಯಾಸವೂ ಆಗಿರುತ್ತೆ. ... ಉಭಯ ಪಾರ್ಶ್ವದಲ್ಲೂ ವ್ಯಾಪಾರಿಗಳು ದಿನಸುಗಳನ್ನು ರಸ್ತೆಯಲ್ಲೀ ... ದರಿಂದ ತಿರುಗಾಡುವ ಜನರಿಗೆ ಧಾರಾಳವಾಗಿ ಒಂದು ಮಾರಗಲ ದಾರಿ ... ವದಿಲ್ಲ. ಈ ಮಳೆಗಾಲದ ಕೆಸರು, ಹೇಸಿಕೆಗಳಿಂದ ಬೇಸರವಾಗುವದಲ್ಲದೆ ... ಅನಾರೋಗ್ಯಕ್ಕೆ ಆಸ್ಪದವಾಗಿವೆ. ನಮ್ಮ ಅಮಲ್ದಾರರವರೂ, ಮ್ಯುನಿಸಿಪಾಲಿಟಿಯವರೂ ಆಲೋಚಿಸಿ, ಸಂತೆಯು ಆಸ್ಪತ್ರೆ ಬಳಿ ಮೈದಾನದಲ್ಲಿ ಜರುಗು... ಮಾಡಿದರೆ ಆರೋಗ್ಯವೂ ಅನುಕೂಲವೂ ಆಗಿರುತ್ತೆ.

ಆನೆಕಲ್ಲು.—ಕೆಲವು ವಾರಗಳಿಂದೀಚೆಗೆ ಸ್ವಲ್ಪ ಮಟ್ಟಿಗೆ ಮಳೆಯಾಗಿ ... ತನೆ ಕೆಲಸಗಳು ಆಗಿ ಪೈರುಗಳು ತಕ್ಕಮಟ್ಟಿಗೆ ಇವೆ. ಕೆರೆ ಕುಂಟೆಗಳಿಗೆ ... ಬಂದಿಲ್ಲ. ಧಾರಣೆವಾಸಿಗಳು ದಿನೇದಿನೆ ಹೆಚ್ಚುತ್ತಲೇ ಇವೆ.—ಈ ಮಾಹೆ ... ತಾ. ಭಾನುವಾರ ಬೆಳಗ್ಗೆ 8 ಗಂಟೆಗೆ ನಮ್ಮ ಸಂಸ್ಥಾನದ ದಿವಾನ್ ... ಬರವರು ನಮ್ಮ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ರೊಡನೆ ಇಲ್ಲಿಗೆ ದಯ... ಮಾಡಿ ಟೌನ್ ಇನ್ಸ್ಪೆಕ್ಷನ್ ಮಾಡಿಕೊಂಡು ತಾಲೂಕ್ ಕಛೇರಿಯಲ್ಲಿ ... ಇನ್ಸ್ಪೆಕ್ಷನ್ ಮಾಡಿ ಪ್ರಜೆಗಳ ಅಹವಾಲ್ ಚಕ್ಕೆಕ್ಕೆ ತಂದುಕೊಂಡು ... ಉತ್ತರವನ್ನು ದಯಪಾಲಿಸಿರುತ್ತಾರೆ. ಮ್ಯುನಿಸಿಪಲ್ ಮೆಂಬರುಗಳು ಈ ಊರಿಗೆ ಸಮೀಪವಾಗಿ ರೈಲ್ ಹಾಕಿಸಿಕೊಡಬೇಕೆಂದು ವಿಜ್ಞಾಪಿಸಿಕೊಂಡಂತೆ ... ವಾದ ಮಟ್ಟಿಗೆ ನಿಮ್ಮಗಳ ಇಚ್ಛೆಯಂತೆ ಗ್ರಾಮಕ್ಕೆ ಸಮೀಪವಾಗಿಯೇ ... ರೈಲ್ ರಸ್ತೆ ಆಗುವಂತೆ ಏರ್ಪಾಟುಮಾಡಿಸಿಕೊಡುತ್ತೇವೆಂದು ಅಪ್ಪಣೆಕೊಡಿಸಿದರು. ತರುವಾಯ ಗ್ರಾಮಕ್ಕೆ ದೂರದ ದೊಡ್ಡ ಮನುಷ್ಯರಿಂದ ಮರ್ಯಾದಾರ್ಥವಾಗಿ ತರಲ್ಪಟ್ಟ ಹಾರ ತುರಾಯಿಗಳನ್ನು ಸ್ವೀಕರಿಸಿ ಅತ್ತರು, ಸಜ್ಜಾಪುರದ ಮಾರ್ಗವಾಗಿ ಹೊಸಕೋಟೆಗೆ ದಯಮಾಡಿಸಿದರು.—ಅದೇ ದಿನ ಮಧ್ಯಾಹ್ನ 2 ಗಂಟೆ ಸಮಯದಲ್ಲಿ ಆನೆಕಲ್ ಶ್ರೀ ಲಕ್ಷ್ಮೀನಿಲಯ ಕೋಆಪರೇಟಿವ್ ಸೊಸೈಟಿಯ ಸಾಂವತ್ಸರಿಕ ಜನರಲ್ ಮೀಟಿಂಗು ನಡೆಸುವ ಉದ್ದೇಶ ಕೋಆಪರೇಟಿವ್ ಸೊಸೈಟಿಗಳ ಅ|| ರಿಜಿಸ್ಟ್ರಾರ್ ಮ|| ರಂಗರಾಯರು ಇಲ್ಲಿಗೆ ಬಂದು ಸಭೆಯ ಅಧ್ಯಕ್ಷಾಸನವನ್ನಲಂಕರಿಸಿ, ಸೊಸೈಟಿಯನ್ನೇರ್ಪಡಿಸುವದರಿಂದಾಗುವ ಉಪಯೋಗವನ್ನು ಸಭಾಸದರಿಗೆ ಉಪನ್ಯಸಿಸಿ, ನಡೆಯಬೇಕಾಗಿದ್ದ ಕಾರ್ಯಗಳನ್ನು ನಡೆಸಿ ಪುಷ್ಪಮಾಲಾಲಂಕೃತರಾಗಿ ಬಿಜಯಂಗೈದರು. ತರುವಾಯ ಸೊಸೈಟಿಯ ಮೆಂಬರುಗಳೇ ಮೊದಲಾದ ಸಕಲರೂ ಪುಷ್ಪಹಾರಾಲಂಕೃತರಾಗಿ ಸ್ವಗೃಹಂಗಳಿಗೆ ತೆರಳಿದರು.

ಮಧುಗಿರಿ.—ಇತರ ಸ್ಥಳಗಳಲ್ಲಿ ಕೊಂಚ ಮಟ್ಟಿಗೆ ಮಳೆ ಆಗಿರುವುದಾಗಿ ಪತ್ರಿಕೆ ಮೂಲಕ ತಿಳಿದು ಸಂತೋಷವಾದರೂ ನಮ್ಮ ತಾಲ್ಲೂಕಿನಲ್ಲಾದರೂ, ತಾಲ್ಲೂಕಿನ ಸರಹದ್ದಿನಲ್ಲಾದರೂ ಸುತರಾಂ ಮಳೆಯ ಸುದ್ದಿಯೇ ಇಲ್ಲ. ಗಾಳಿ ಮಾತ್ರ ವಿಪರೀತವಾಗಿ ಬೀಸುತ್ತಾ, ಮಳೆ ಮೋಡಗಳನ್ನು ಚದರಿಸುತ್ತಾ ಇದೆ. ಬಿತ್ತಿದ್ದ ಧಾನ್ಯಗಳೆಲ್ಲಾ ಮೊಳಕೆಯಾಗಿ ಹಾಗೆಯೇ ಬತ್ತಿಹೋಗುತ್ತಾ ಇವೆ. ಈ ವರ್ಷ ಕುಸ್ಕಿ ಫಸಲಿನ ನಿರೀಕ್ಷೆಯೇ ಇಲ್ಲ. ಮುಂದೆಯಾದರೂ ಮಳೆ ಆದರೆ ಗೋಕಾಯಿಗಳಿಗೆ ಸ್ವಲ್ಪ ಅನುಕೂಲವಾದೀತು. ಈಗಲಂತು ಅವುಗಳ ಸಂಕಟ ಹೇಳತೀರದು. ರೂಪಾಯಿಗೆ ಒಂದು ಹೊರೆ ಹುಲ್ಲು ಕೊಡುವವರೇ ಇಲ್ಲ. ಕಾಡಿನಲ್ಲಂತು ಸುತರಾಂ ಹುಲ್ಲು ಇಲ್ಲವೇ ಇಲ್ಲ. ನಾಲು ಮರಗಳಿಂದಾದರೂ ಸೊಪ್ಪನ್ನು ಕಂಡು ಹಾಕಿ ಅವುಗಳ ಪ್ರಾಣ ಕಾಪಾಡೋಣವೆಂದರೆ ಸರ್ಕಾರದವರ ನಿರ್ಬಂಧ ಬಹಳವಾಗಿದೆ. ಇದನ್ನು ಬಿಟ್ಟರೆ ಬೇರೆ ಯತ್ನವೇ ಇಲ್ಲ. ಆದುದರಿಂದ ದಯಾಳುಗಳಾದ ನಮ್ಮ ಸರ್ಕಾರದವರು ದನಗಳ ಗೋಳನ್ನು ತಪ್ಪಿಸುವದಕ್ಕೆ ಏನಾದರೂ ಒಂದು ಏರ್ಪಾಡನ್ನು ಮಾಡಿಕೊಡುವರೆಂದು ಪ್ರಾರ್ಥಿಸುತ್ತೇವೆ. ಈಗಿನ ಕಾಲಸ್ಥಿತಿ ನೋಡಿದರೆ ಬಡವರು ಬದುಕುವುದು ಕೇವಲ ಕಷ್ಟವಾಗಿದೆ. ಇಂಥಾದ್ದರಲ್ಲಿ ಕೂಲಿ ಸಿಕ್ಕುವುದೇ ಅಪರೂಪ. ಧಾರಣೆ ವಾಸಿಗಳಂತೂ ಹೇಳಬೇಕಾದದ್ದೇ ಇಲ್ಲ. ನಂಜನಗೂಡಿನಿಂದ ಹರಿಹರದ ತನಕ ಎಲ್ಲಿ ಕೇಳಿದರೂ ಒಂದೇ ಧಾರಣೆಯಾಗಿದೆ. ಈ ಮಧ್ಯೆ ನಮ್ಮ ದಿವಾನ್ ಸಾಹೇಬರವರು ಮಧುಗಿರಿ ಪ್ರಾಂತ್ಯ ಚಿತ್ತೈಸುತ್ತಾರೆಂಬ ವದಂತಿ ಬಹಳವಾಗಿದೆ. ಅದು ವಾಸ್ತವವಾದರೆ ಬಡಬಗ್ಗರಿಗೆ ರಿಲೀಫ್ ಕಾಮಗಾರಿಗೂ, ಮುಖ್ಯವಾಗಿ ಗೋಕಾಯಿಗಳ ರಕ್ಷಣೆಗೂ ತಕ್ಕ ಏರ್ಪಾಟು ಮಾಡಿಕೊಟ್ಟಾರೆಂದು ಹಾರೈಸುತ್ತೇವೆ.—... ಕೋಆಪರೇಟಿವ್ ಸೊಸೈಟಿಯು ದಿನೇ ದಿನೇ ತುಂಬಾ ವೃದ್ಧಿಸ್ಥಿತಿಗೆ ಬರುತ್ತಿರುವುದನ್ನು ನೋಡಿದರೆ ಸಕ್ರೆಟರಿಯವರು ಕೇವಲ ಶ್ರದ್ಧೆ ವಹಿಸಿ ಅವರೂ ... ಕೈಕೆಳಗಿನವರೂ ಕೆಲಸಮಾಡುತ್ತಾರೆಂದು ವ್ಯಕ್ತವಾಗುತ್ತೆ. ಆದರೆ ಇದರಲ್ಲಿ ಬಡವರಿಗೆ ಅನುಕೂಲ ಕಡಮೆ. ಸಾಲ ದೊರೆಯುವದು ಕಸ್ತು. ಅಲ್ಲದೆ ಮೆಂಬರುಗಳು ಬಡ್ಡಿ ಕಪ್ಪಿಯೆಂತಲೂ, ಹಣಕ್ಕೆ ಜಾಸ್ತಿಯಾಗುತ್ತೆಂತಲೂ ಅಭಿಪ್ರಾಯಪಡುವಂತೆ ಕಾಣುತ್ತೆ. ನಾಳೆ 15ನೇ ತಾ. ಶನಿವಾರ ನಡೆಯುವ ಮೀಟಿಂಗಿನಲ್ಲಿ ಈ ಕೊರತೆಯನ್ನು ತಪ್ಪಿಸಿ ಬಡವರಿಗೆ ಅನುಕೂಲಪಡಿಸುವರೆಂದು ನಂಬುತ್ತೇವೆ.

ಸುಖಕರ, ಆನಂದ, ಬಹಳ್ ಅವಶ್ಯ.

ಈಗ ತಾನೇ ಕಂಡುಹಿಡಿದಿದೆ.

ಜಪಾನ್ ರಾಜ್ಯದಲ್ಲಿ ನೂರಾರು ವರುಷಗಳಿಂದ ಉಪಯೋಗದಲ್ಲಿದೆ.

ಸೆಶಿಂತಾನ

ಬೆಳ್ಳಿಯ ವರಕು ಸುತ್ತಿದ ಮುತ್ತುಗಳು

(1) ಮನಸ್ಸಿಗೆ ಹರ್ಷವನ್ನೂ ಉಲ್ಲಾಸವನ್ನೂ ಕೊಟ್ಟು ಜೀರ್ಣಶಕ್ತಿಯನ್ನುಂಟುಮಾಡುವುದು.

(2) ಹಾಡುವವರಿಗೆ ವರಪ್ರಸಾದವಾದದ್ದು.

(3) ಬಾಯಿ ದುರ್ಗಂಧ, ಗಂಟ್ಲು ಗಾರೆನ್ನುವುದು, ಉಬ್ಬಸ, ಸಮುದ್ರಯಾನದ ಜುಗುಪ್ಸೆ, ಈ ಮೊದಲಾದವನ್ನು ಹುಟ್ಟದಂತೆ ಅಡ್ಡಿಮಾಡುತ್ತದೆ.

(4) ತಾಂಬೂಲದೊಡನೆ ಸೇವಿಸುವುದಕ್ಕೆ ಅತ್ಯಂತ ಹಿತಕರವಾಗಿದೆ. [73-23]

ಒಂದು ಸಲ ಪರೀಕ್ಷೆ ಮಾಡಿದಲ್ಲಿ ಯಾವಾಗಲೂ ಒಂದು ಪೊಟ್ಟಣ ಇದ್ದೇ ತೀರಬೇಕೆಂದು ನೀವೇ ನಿಶ್ಚಯಿಸುವಿರಿ.

ಮುತ್ತಿನಂತಿರುವ 45 ಮಾತ್ರೆ ಉಳ್ಳ ಪೊಟ್ಟಣಕ್ಕೆ ಕ್ರಯ		2 ಆಣೆ.
,, 95 ,, ,, ,, ,,		4 ,,
,, 200 ,, ,, ,, ,,		7 ,,
,, 200 ,, ಸುಂದರವಾದ ಟಿನ್ ಡಬ್ಬಾ		9 ,,
,, 80 ,, ,, ,, ,,		4 ,,
,, 100 ,, ಬಾಟ್ಲಿಯಲ್ಲಿ		4½ ,,

ಈ ಕ್ರಯದನ್ನು ಸ್ಟಾಂಪನ್ನು, ಅಂಚೆ ವೆಚ್ಚಕ್ಕೆ ಜಾಸ್ತಿ ಒಂದಾಣೆಯನ್ನೂ ಸೇರಿಸಿ ಕಳುಹಿಸಬೇಕು. ಕಾಗದಪತ್ರವನ್ನೂ ವಿಳಾಸಗಳನ್ನೂ ನಮಗೆ ಇಂಗ್ಲೀಷಿನಲ್ಲೇ ಬರೆಯತಕ್ಕದ್ದು.

ನಮ್ಮ ವಿಳಾಸ—ಸೆಶಿಂತಾನ ಡಿಪೋ,
ಮಾರ್ಸೂರ್ ಬಿಲ್ಡಿಂಗ್, ಪ್ರಿನ್ಸೆಸ್ ಸ್ಟ್ರೀಟ್,
ಬೊಂಬಾಯಿ 2;
ಅಥವಾ, ಬಿ. ಸಿ. ಷಾ ಕಂಪೆನಿ,
509 ಮಿಂಟ್ ಬೀದಿ, ಮದರಾಸ್.

THE PLACE FOR HASSAN CAPS IS
HASSAN.

ನಿಮ್ಮ ತಲೆಯ ಮೇಲಿರುವುದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

2-38

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ಮಾದರಿಯೆಲ್ಲಾ ಬೇರಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ:—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ಸಾರವೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು. (೨) ಟೋಪಿಗಳನ್ನು ಶುದ್ಧವಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದೂ ಚನ್ನಾಗಿಲ್ಲದ್ದು ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ.

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ. ೮ ಆ; ೧ ರೂ. ೬ ಆ.;

ಚುಕ್ಕಿಯುಳ್ಳ ಟೋಪಿಗಳು ರೂ. ೧—೮; ರೂ. ೧—೧೨.

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ. ೨.

ಜರಿಯ ಟೋಪಿಗಳು ೧ ರೂ. ೧೨ ಆ.; ೧ ರೂ. ೮ ಆ.; ೧ ರೂ. ೬ ಆ.

ಮುಸುಕಿನ ಟೋಪಿಗಳು ೧ ರೂ. ೮ ಆ.; ೧ ರೂ. ೬ ಆ.

"In addition to cap making we are giving special attention to knitting stockings. All our stockings, for adults and children, are hand-made. Prices will be sent on enquiry."

ಮ್ಯಾನೇಜರ್, ಟೋಪಿ ಕಾರ್ಖಾನೆ,
ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ.

Apply:—
MANAGER, CAP WORKS,
GIRLS' INDUSTRIAL SCHOOL, HASSAN.

ಅಮೃತಾಂಜನ ರಿಜಿಸ್ಟರ್ಡ್

ಇದು ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು. ಇದರ ಉಪಯೋಗದಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗವಾಯು, ಉಳುಕು, ಕೆಮ್ಮು, ಸೊಂಟನೋವು, ಶೀತ, ಚರ್ಮವ್ಯಾಧಿ, ಹಲ್ಲುನೋವು, ಚೇಳು ಕಡಿತ ಮೊದಲಾದ ಎಲ್ಲಾ ತರದ ನೋವುಗಳು ಖಾತ್ರಿಯಾಗಿ ನಿಲ್ಲುವವು. ಕೆಟ್ಟ ಔಷಧಗಳನ್ನು ತಡಕೊಳ್ಳಬೇಡಿರಿ. ಈ ನಮ್ಮ ಲೋಕಪ್ರಖ್ಯಾತವಾದ ಅಮೃತಾಂಜನವನ್ನು ನಮ್ಮ ರಿಜಿಸ್ಟ್ರಿಯಾದ ಮತ್ತು ಹಲವು ಭಾಷೆಗಳುಳ್ಳ ಸುಂದರವಾದ ಕರಡಿಗೆಯಲ್ಲಿ ಪ್ಯಾಕ್ ಮಾಡಿರುತ್ತೇವೆ. ಕರಡಿಗೆ ಇಲ್ಲದ ಬಾಟ್ಲಿಗಳನ್ನು ಪಡಕೊಳ್ಳಬೇಡಿರಿ. ಬಾಟ್ಲಿ ಒಂದರ ಕಿಮ್ಮತು 0-8-0. ಡಜನ್ 1 ಕ್ಕೆ 5-4-0. ವಿ. ಪಿ. ಪ್ರತ್ಯೇಕ. ಗಡಕರ್ಣದ ಮುಲಾಮು 0-6-0. ದಂತಮಂಜನ 0-2-0. ಮೋಹಿನಿ ತೈಲ 0-12-0. ಖಿದ್ದ ಮುಲಾಮು 0-3-0. ಜುಲಾಬು ಮಾತ್ರೆ 0-8-0. ಸುಂದರಿ ಮುಲಾಮು 0-8-0. ಕ್ಯಾಟಲಾಗು ಬರೆಯಿರಿ. [63-24]

ವ್ಯಾಪಾರಸ್ಥರಿಗೆ ಚಲೋ ಕಮಿಷನ್ ದೊರಕುವದು.

ಅಮೃತಾಂಜನ ಡಿಪೋ,

ಫೋರ್ಟ್. ಮುಂಬಯಿ, ಮತ್ತು ೯ ಜಹಂಗೀರ್ ಸ್ಟ್ರೀಟ್, ಮದ್ರಾಸು.

ಅದ್ಭುತವಾದ ಬಲಕಾರಿ ಮತ್ತು ಬಾಯಿನಾತಹರ.

ಜಿನತಾನ



ಜೀರ್ಣಶಕ್ತಿ ಹುಟ್ಟಿಸುವುದರಲ್ಲಿ ಇದಕ್ಕೆ ಸಮಾನವಾದದ್ದು ಅನ್ಯೊಂದಿಲ್ಲ; ಅನ್ನಕೋಶವು ಎಷ್ಟೇ ದುರ್ಬಲವಾಗಿದ್ದರೂ ಅದರ ಕಾರ್ಯಗಳನ್ನು ಹೇರುಪೇರು ಮಾಡುವದಿಲ್ಲ. ಇದರ ಸೇವನೆಯಿಂದ ಎಲ್ಲಾ ರೋಗಗಳನ್ನೂ ಅಂಟದಂತೆ ತಡೆಯಬಲ್ಲದು. ಈ ಭಾಗದಲ್ಲಿ ಇದರ ಗುಣವು ಬಹು ಫಲಕಾರಿಯಾಗಿದೆ. ಇದಲ್ಲದೆ ಇದನ್ನು ಸೇವಿಸುವವರ ಬಾಯಿಯಲ್ಲಿ ಎಲ್ಲಾ ತರದ ದುರ್ನಾತವೂ ಹೋಗಿ ಸುಗಂಧವು ಹುಟ್ಟಿ ಹರ್ಷಕರವಾಗಿದ್ದೀತು.

ಗಂಟಲಿನ ನರಗಳು ಇದರ ಸೇವನೆಯಿಂದ ಬಹಳ ಬಲಗೊಳ್ಳುವವು. ಇದರ ಗುಣವನ್ನು ನೋಡಿ ಉಪನ್ಯಾಸಕರೂ, ನಾಟಕಧಾರಿಗಳೂ, ಸಂಗೀತಗಾರರೂ, ಬೋಧಕರೂ, ವಾಚಾಳಕ ಪ್ರಿಯರೂ ಈ ಮಾತ್ರೆಗಳನ್ನು ಬಹಳವಾಗಿ ಪೋಷಿಸಿ ಪ್ರೀತಿಯಿಂದ ಉಪಯೋಗಿಸುತ್ತಿದಾರೆ.

ಈ ಮಾತ್ರೆಗಳನ್ನು ಜಪಾನ್ನಲ್ಲಿರುವ ಒಸಾಕಾ ಪಟ್ಟಣದ ಮೋರಿಶಿತಾ ಕಂಪನಿಯವರು ತಯಾರುಮಾಡುತ್ತಾರೆ.

ಈ ಮಾತ್ರೆಗಳ ಕ್ರಯ	30 ಮಾತ್ರೆಗಳುಳ್ಳ ಪೊಟ್ಟಣಕ್ಕೆ 1½ ಆಣೆ.	65 ಮಾತ್ರೆ ಪೊಟ್ಟಣಕ್ಕೆ 3 ಆಣೆ.
	195 ,, ಡಬ್ಬಾ ಸಮೇತ 8 ಆಣೆ.	455 ,, ಕನ್ನಡಿ ಡಬ್ಬಾಕ್ಕೆ 1 ರೂಪಾಯಿ.

ಎಲ್ಲಾ ಅಂಗಡಿಗಳಲ್ಲಿಯೂ ಬಿಕರಿಯಾಗುವುದು.

ಸೋಲ್ ಏಜಂಟರು:—

ಎಸ್. ವೈದ್ಯ ಮತ್ತು ಕಂಪೆನಿ,
ಪಾರ್ಕ್‌ಟೌನ್, ಮದ್ರಾಸ್.

[156-6]

MADRAS SNUFF.

ಬಹಳ ಮೇಲಾದ ನಸ್ಯ ಇನ್ನೆಲ್ಲೂ ಸಿಕ್ಕದು.

ನಮ್ಮಲ್ಲಿ ತಯಾರಾಗುವ ನಸ್ಯದ ಪುಡಿಯನ್ನು ಹಿಂದುಸ್ಥಾನದ ಸಮಸ್ತ ಭಾಗಗಳವರೂ, ಅನ್ಯದೇಶಗಳವರೂ ಹತ್ತಾರು ವರುಷಗಳಿಂದ ತರಿಸಿಕೊಂಡು ಉಪಯೋಗಿಸುತ್ತಿದ್ದಾರೆ. ನಮ್ಮ ನಸ್ಯವು ಬಹಳ ಪ್ರಖ್ಯಾತಿ ಪಡೆದಿದೆ. ಬಹು ಮೇಲಾದ "ಬಂದರ್" ಸೊಪ್ಪಿನಿಂದ ಸುವಾಸನೆಯಾದ ಅಚ್ಚ ತುಪ್ಪ ಹಾಕಿ ವಿಶೇಷ ರುಚಿಕರವಾಗಿಯೂ ಸ್ವಚ್ಛವಾಗಿಯೂ ತಯಾರಿಸುತ್ತೇವೆ. ಕಡಿದ ಮಟ್ಟಿಗೂ ನಮ್ಮ ಧಾರಣೆ ಕಡಿಮೆಯಾಗಿರುವುದು. ನಮ್ಮ ಪದಾರ್ಥವನ್ನು ಹಾಡೀ ಹೊಗಳಿಕೊಳ್ಳುವದರಿಂದ ಫಲವೇನು? ವಾಚಕರು ಒಂದಾವರ್ತಿ ಪರೀಕ್ಷೆಗಾಗಿ ತರಿಸಿಕೊಂಡರೆ ಚೆನ್ನಾಗಿ ವೇದ್ಯವಾಗುತ್ತೆ. ಕ್ರಯ ಪಂಭೇರಿಗೆ 3 ರೂಪಾಯಿ; 1 ಸೇರಿಗೆ 10 ಆಣೆ. ಪೋಸ್ಟೇಜ್ ಬೇರೆ. ನಸ್ಯವನ್ನು ಅಂಚೆಯ ಮೂಲಕವೋ, ರೈಲಿನಲ್ಲಿಯೋ ಹ್ಯಾಗೆ ಕಳಿಸಬೇಕೆಂದು ಬರೆಯಿರಿ.

ನಮ್ಮ ವಿಳಾಸ—ಜಿ. ನಾರಾಯಣಸಾಮಿ ನಾಯುಡು,
43, ಪಳಯಪ್ಪನ್ ಸ್ಟ್ರೀಟ್, ಮಿಂಟ್ ಬಿಲ್ಡಿಂಗ್ ಪೋಸ್ಟ್,
ಮದರಾಸ್, ಇ.
[168–3]

ಹುಚ್ಚು ಹಿಡಿಸತಕ್ಕ ತಲೆ ನೋವುಗಳು.

ಲಿಟಿಲ್‌ಸ್ ಓರಿಯೆಂಟಲ್ ಬಾಂ ಎಂಬ ತೈಲವನ್ನು ಉಪಯೋಗಿಸುವದರಿಂದ ತಲೆ ಸಿಡಿತ, ತಲೆ ಹೊಡೆತ, ಕಣ್ಣುಪ್ಪಿನ ನೋವು, ಜೀವನ ನೋವು, ತಿವಿತ, ಕಣತಲೆ ನೋವು ಕನ್ನೆಗಳ ನೋವು, ತಲೆಯಲ್ಲಿರುವ ನಾನಾ ಜಾತಿಯ ತಿವಿತಗಳೂ, ಅನೇಕ ರೀತಿಯಲ್ಲಿ ಬಾಧೆಪಡಿಸುವ ನೋವುಗಳೆಲ್ಲವೂ, ಒಡನೇ ಸ್ವಸ್ಥವಾಗುತ್ತವೆ. ನ್ಯೂಜೆರ್ಸಿನ ನ್ಯಾಗ್ರಹಿಯದ ಮಿ|| ಜೆ. ವಿಲ್ಕಾಕ್ಸ್ ಬರೆಯುವುದು:—"ತಲೆಯಲ್ಲಿದ್ದ ಕಠಿಣನೋವುಗಳೆಲ್ಲವೂ, ನನ್ನನ್ನು ಹುಚ್ಚನಂತೆ ಮಾಡಿದ್ದ ಭಯಂಕರ ನೋವುಗಳೆಲ್ಲವೂ, ಲಿಟಿಲ್‌ಸ್ ಓರಿಯೆಂಟಲ್ ಬಾಂ ಎಂಬ ತೈಲವನ್ನು ನನ್ನ ಹಣೆಯ ಮೇಲೆಯೂ ಕಣತಲೆಯ ಮೇಲೆಯೂ ಉಪಯೋಗಿಸಿದ ಒಡನೇ ಅದ್ಭುತ ರೀತಿಯಲ್ಲಿ ವಾಸಿಯಾಯಿತು."

ಸೀಸೆ 1ಕ್ಕೆ 1 ರೂ. ಮೇರೆಗೆ ಔಷಧಗಾರರೆಲ್ಲರಲ್ಲಿಯೂ ಸಿಗುತ್ತೆ.

101-16

ನ್ಯಾಷನಲ್ ಅಷೂರೆನ್ಸ್ ಕಂಪನಿ, ಲಿಮಿಟೆಡ್,

ವಿಜಯನಗರಂ ಸಿಟಿ.

1905 ರಲ್ಲಿ ಸ್ಥಾಪಿಸಲ್ಪಟ್ಟದ್ದು.

1912 ನೇ ಆಕ್ಟು ಪ್ರಕಾರ ಬದಲಾಯಿಸಿದೆ.

ಗವರ್ನಮೆಂಟ್ ಸೆಕ್ಯೂರಿಟಿಗಳನ್ನು ಪಡೆದಿದೆ.

ಕಂಪನಿ ಆಸ್ತಿಯನ್ನು ಹಂಚಿಕೊಳ್ಳುವ ಷೇರುದಾರರಿಲ್ಲ.

ವೈದ್ಯರ ಪರೀಕ್ಷಾ ಸರ್ಟಿಫಿಕೇಟು ಅವಶ್ಯವಿಲ್ಲ.

ಬೋನಸ್ ಹಣ ಅಪಾರವಾಗಿ ಪಾವತಿ ಮಾಡಿದೆ.

ಜೀವವಿಮೆ—ತಿಂಗಳ ಚಂದಾ 1 ನೇ ಕ್ಲಾಸ್ ರೂ. 1; 2 ನೇ ಕ್ಲಾಸ್ ರೂ. 0-8-0.

ಮದುವೆ ಫಂಡು—ತಿಂಗಳ ಚಂದಾ ರೂ. 1-0-0.

ಇದು ಬಹು ಲಾಭಕರವಾದ ಮತ್ತು ಸುರಕ್ಷಿತವಾದ ಕಂಪನಿ. ವಿಮೆ ಮಾಡತಕ್ಕವರಿಗೂ ಫಂಡು ಪಡೆಯತಕ್ಕವರಿಗೂ ತುಂಬಾ ಅನುಕೂಲವಾಗಿರುತ್ತದೆ. [138–10]

ಏಜಂಟರು ಬೇಕು. ಧಾರಾಳವಾದ ಕಮೀಷನ್ ಸಿಗುತ್ತೆ. ಕಂಪನಿಯ ಪ್ರಾಸ್ಪೆಕ್ಟಸ್ಸು ಬಿಟ್ಟಿ ಕೇಳಿದವರಿಗೆ ಕೊಡುತ್ತೆ. ಈ ವಿಳಾಸಕ್ಕೆ ಬರೆದುಕೊಳ್ಳಿ:—

ವಿ. ಬಿ. ಶ್ರೀಕಂಠಯ್ಯನವರು, ಮೈಸೂರು ಮತ್ತು ಕೊಡಗಿನ ಚೀಫ್ ಏಜೆಂಟ್, ಕೋಟೆ, ಬೆಂಗಳೂರು ಸಿಟಿ.	**V. B. Srikantiah,** *Chief Agent, Mysore & Coorg, Fort, Bangalore City.*

BRAHMAPPA TAVANAPPANAVAR,

Merchant & Commission Agent.

Agent to Messrs. Currimbhoy Ebrahim & Co's Mills, BOMBAY.

ನಾವು ಮುಂಬೈ ಮೆಸ್ಸರ್ಸ್ ಕರೀಂಬಾಯ್ ಇಬ್ರಾಹಿಂ ಅಂಡ್ ಕಂಪೆನಿಯವರ ಬಾಬತು, ಮೆಸ್ಸರ್ಸ್ ಫಜುಲ್ಭಾಯ ಮಿಲ್ಸ್ ಲಿಮಿಟೆಡ್ ಮುಂಬೈ: ದಿ ಕ್ರೆಸೆಂಟ್ ಮಿಲ್ಸ್ ಲಿಮಿಟೆಡ್ ಮುಂಬೈ, ಕರೀಂಬಾಯ್ ಮಿಲ್ಸ್ ಲಿಮಿಟೆಡ್ ಮುಂಬೈ, ದಿ ಇಂಡಿಯನ್ ಬ್ಲೀಚಿಂಗ್, ಡೈಯಿಂಗ್ ಅಂಡ್ ಪ್ರಿಂಟಿಂಗ್ ವರ್ಕ್ಸ್ ಲಿಮಿಟೆಡ್ ಮುಂಬೈ, ದಿ ಇಂದೋರ್ ಅಂಡ್ ಮಾಳ್ವಾ ಯುನೈಟೆಡ್ ಮಿಲ್ಸ್ ಲಿಮಿಟೆಡ್ ಇಂದೋರ್, ಇವುಗಳಲ್ಲದೆ ಇನ್ನೂ ಅನೇಕ ಮಿಲ್ಲುಗಳ ಬಟ್ಟೆಗಳನ್ನು ಮೈಸೂರು ಸೀಮೆಯಲ್ಲೆಲ್ಲಾ ವಿಕ್ರಯಮಾಡಲು ಕಮೀಷನ್ ಏಜಂಟರಾಗಿರುತ್ತೇವೆ. ನಮ್ಮ ಮುಖಾಂತರ ಮಾಲು ತರಿಸಿಕೊಳ್ಳತಕ್ಕವರಿಗೆ ಮುಂಬೈಯಲ್ಲಿ ಬಟ್ಟೆಗಳ ಮೇಲೆ ವಿಧಿಸತಕ್ಕ ದಳ್ಳಾಳಿ, ಚೋಟಾದಳ್ಳಾಳಿ, ಮುಕ್ಕಾದಮ್ಮ, ಗಂಟುಕಟ್ಟುವದು, ಸ್ಟೇಷನ್ನಿಗೆ ಹೇರಿಸುವದು, ಹುಂಡೇಕರಿ ವಗೈರೆ ಯಾವ ವಿಧವಾದ ಖರ್ಚು ತಗಲದೆ ಇರುವದರಿಂದ ಮುಂಬೈಯಿಂದ ತರಿಸುವದಕ್ಕಿಂತಲೂ ಸುಲಭ ದರದಲ್ಲಿ ಸಿಕ್ಕುತ್ತೆ. ಮತ್ತು ಮುಂಬೈಗೆ ಹೋಗಿಬರುವ ದೇಹಶ್ರಮವೂ, ಖರ್ಚೂ ಉಳಿಯುತ್ತೆ. ಪೆಟ್ಟು ಬಟ್ಟೆಗಳನ್ನು ಏಕಕಾಲದಲ್ಲಿ ಕೊಳ್ಳತಕ್ಕವರಿಗೆ ಮಾಲಿನ ಮೇಲೆ ಶೇಕಡ 3 ರೂಪಾಯಿ ಲಾಗಾಯ್ತು 4½ ರೂಪಾಯಿ ವರೆಗೆ ಡಿಸ್ಕೌಂಟು ದೊರೆಯುತ್ತೆ. [97-18]

ನಮ್ಮ ಟ್ರಾವಲಿಂಗ್ ಏಜಂಟರ ವಶ ಬಟ್ಟೆಗಳ ನಮೂನೆಗಳನ್ನು ಕೊಟ್ಟು, ದರ ಒಟ್ಟು ವ್ಯಾಪಾರಗಾರರಿಗೆ ತೋರಿಸಿ ಆರ್ಡರು ತೆಗೆದುಕೊಳ್ಳುವ ಏರ್ಪಾಡು ಮಾಡಿರುತ್ತೆ. ನಮ್ಮ ದಾವಣಗೆರೆ ಮತ್ತು ಬೆಂಗಳೂರು ಆಫೀಸುಗಳಲ್ಲಿ ಮಾಲು ಹಾಜರು ಸಹ ದೊರೆಯುತ್ತೆ.

ಬಟ್ಟೆಗಳನ್ನು ವ್ಯಾಪಾರಮಾಡಲು ಅನುಭವಸ್ಥರಾದ ಏಜಂಟರುಗಳೂ ಮತ್ತು ಗುಮಾಸ್ತರುಗಳೂ ಬೇಕಾಗಿದೆ.

ಎಲ್ಲಾ ಕಾಗದಪತ್ರಗಳೂ ದಾವಣಗೆರೆ ಆಫೀಸಿಗೆ ಬರೆಯಲ್ಪಡಬೇಕು.

ಹೆಡ್ ಆಫೀಸು:—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮೀಷನ್ ಏಜಂಟ್, ದಾವಣಗೆರೆ. ಬ್ರಾಂಚ್ ಆಫೀಸು:—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮೀಷನ್ ಏಜಂಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಮಧುರೆ ಜುನ್ನಡಿ ಅಂಚಿನ ಸೀರೆ ಅವ್ವಲ್ ರಖಂ ರೂ. 2–8–0

ಆಗಸ್ಟ್ ತಿಂಗಳ ಒಳಗಾಗಿ ತರಿಸಿಕೊಳ್ಳುವರಿಗೆ ಒಂದು ಸಿಂಗಪೂರು ರವಿಕೆಯು ಪ್ರತಿ ಸೀರೆಗೂ ಇನಾಮಾಗಿ ಕೊಡುತ್ತೇವೆ. [99-11]

ಇದು ಉಡುವುದಕ್ಕೆ ಘನತೆಯಾಗಿಯೂ, ನೋಟಕ್ಕೆ ನಯವಾಗಿಯೂ, ಬೆಲೆಯಲ್ಲಿ ಸುಲಭವಾಗಿಯೂ ಇದೆ. ಇನ್ನು ಹೋಗದು ಸೀರೆ ಉದ್ದ 18 ಮೊಳ. ಸುಂದರವಾದ ಸೆರಗು. ಒಂದನ್ನು ತರಿಸಿ ಪರೀಕ್ಷಿಸಿ. ವಿಳಾಸ—

ವಿ. ಕೃಷ್ಣಸ್ವಾಮಿ ಮೊದಲಿಯಾರ್, ನಂ. 27, ಬಂದರ್ ಬೀದಿ, ಜಿ. ಟಿ., ಮದರಾಸು.

ಯಾಕೆ ಪರೀಕ್ಷಿಸಬಾರದು? ಭಂಗಾರದ ಪದಕ ಬಂದಿದೆ.

ಸೆಂಟ್, ಅತ್ತರುಗಳಲ್ಲೆಲ್ಲಾ ಶ್ರೇಷ್ಠವಾದವು.

ಅಟೋ ಮೋಹಿನಿ.

ಇದು ರೆಜಿಸ್ಟರ್ ಆಗಿದೆ. ಈಗಿನ ಕಾಲದಲ್ಲಿ ಇದೇ ನಿಲ್ಲುವ, ಸುವಾಸನೆಯುಳ್ಳ, ಮನೋಹರವಾದ ಮತ್ತು ಸರಿಯಾದ ಪರಿಮಳದ ದ್ರಾವಕ. ಈ



ವಸ್ತ್ರಕ್ಕೆ ನಾಲ್ಕು ತೊಟ್ಟು ಹಾಕಿಕೊಂಡರೆ ನಾಲ್ಕು ದಿನಗಳ ತನಕ ಘಮಘಮಿಸುವ ಸುವಾಸನೆ ಇರುತ್ತೆ. ಹಾಗೆ ದೀರ್ಘಕಾಲ ನಿಲ್ಲತಕ್ಕದ್ದಲ್ಲವೆಂದು ರುಜುವಾತು ಮಾಡಿಕೊಡುವವರಿಗೆ ನಾವು ಒಂದು ನೂರು ರೂಪಾಯಿ ಬಹುಮಾನ ಕೊಡುತ್ತೇವೆ. ಪರೀಕ್ಷೆಮಾಡಿ ನೋಡಿ ಬಹುಮತಿಯನ್ನು ಸಂಪಾದಿಸಿಕೊಳ್ಳಿ.

ಕ್ರಯ ½ ಔನ್ಸ್ ಗಾಜಿನ ಬುಡ್ಡಿಯ ಬಾಟ್ಲಿಗೆ ರೂಪಾಯಿ 2-0-0.

1 ಡ್ರಾಂ ಕೊಳವೆ 12 ಆಣೆ.

ಅಟೊ ಮೋಹಿನಿ ಪರಿಮಳದ ಸಾಬೂನುಗಳು ಡಜನ್ 1 ಕ್ಕೆ 12 ಆಣೆ

ಎಲ್ಲರಲ್ಲೂ ಬಿಕರಿಗೆ ಇಟ್ಟದೆ. ಮದರಾಸ್ ಅಧಿಪತ್ಯಕ್ಕೆಲ್ಲಾ ಏಜಂಟರು—

ಸಾ ಭಗವಾನ್ ದಾಸ್ ಚೂನಿಲಾಲ್ ಕಂಪನಿ,

[251-38] 177, ಚೈನಾಬಜಾರ್ ರೋಡ್, ಮದರಾಸು.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

31—7—1914 ರಿಂದ 7—8—1914 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಕಾಲರಾ ತಗಲಿದ್ದು.	ಕಾಲರಾ ಸತ್ತದ್ದು.
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	25	11	3	3
ಬೆಂಗಳೂರು ಡಿಸ್ಟ್ರಿಕ್ಟು	11	15	0	0
ಮೈಸೂರು ,,	7	8	0	0
ಕೋಲಾರ್ ,,	9	2	0	0
ಕೋಲಾರ್ ಚಿನ್ನದ ಗಣಿಗಳು	1	1	0	0
ತುಂಕೂರು ಡಿಸ್ಟ್ರಿಕ್ಟು	11	6	20	10
ಹಾಸನ ,,	0	0	0	0
ಚಿತ್ರದುರ್ಗ ,,	3	1	0	0
ಕಡೂರ್ ,,	24	8	0	0
ಶಿವಮೊಗ್ಗಾ ,,	11	5	0	0
ಜುಮ್ಲಾ.....	102	34	23	13

ಶಾಲಿವಾಹನ ಶಕ ವರುಷಂಗಳು 1837 ನೇ ಆನಂದ ಸಂವತ್ಸರೇ ದಕ್ಷಿಣಾಯನೆ ವರ್ಷಋತೌ ಭಾದ್ರಪದ ಶುದ್ಧ ಅಮಾವಾಸ್ಯ ಶುಕ್ರವಾರದಿಂದ ಭಾದ್ರಪದ ಶುದ್ಧ ಸಪ್ತಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1914 ನೇ ಆಗಸ್ಟ್.

ತಾ.	ವಾರ.	ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ	ಸಿಂಹ ಮಾಸ ತೇದಿ
21	ಶುಕ್ರ ::	ಅಮಾವಾಸ್ಯ	29-35	ಆಶ್ಲೇಷ	9-6	6
22	ಶನಿ ‡	ಪಾಡ್ಯಮಿ	25-32	ಮಘಾ	7-22	7
23	ಭಾನು §	ಬಿದಿಗೆ	20-47	ಪುಬ್ಬಾ	4-47	8
24	ಸೋಮ *	ತದಿಗೆ	15-26	ಉತ್ತರ	1-36	9
25	ಮಂಗಳ †	ಚೌತಿ	9-38	ಚಿತ್ತ	53-48	10
26	ಬುಧ	ಪಂಚಮಿ	3-30	ಸ್ವಾತಿ	53-50	11
27	ಗುರು ;;	ಸಪ್ತಮಿ	51-15	ವಿಶಾಖ	5-19	12

:: ಸರ್ವತ್ರ ಅಮಾವಾಸ್ಯ, ಮೃತ್ಯುಯೋಗ. ‡ ಪ್ರಥಮಾ ತಿಥಿ, ಚಂದ್ರೋದಯ, ಷವ್ವಾಲ್ ಚಂದ್ 1. § ತಿಥಿದ್ವಯಂ, ಕಲ್ಕಿಜಯಂತಿ, ಮಳೆ ನಕ್ಷತ್ರ—ಮಘೆ 3 ನೇ ಪಾದ. * ಚತುರ್ಥೀ ತಿಥಿ, ಸ್ವರ್ಣಗೌರೀ ವ್ರತ, ಸಿದ್ಧಿವಿನಾಯಕ ವ್ರತ, ಸಾಮಗೋಪಾಕರ್ಮ. † ಋಷಿಪಂಚಮಿ. ;; ಅಮುಕ್ತಾಭರಣ ಸಪ್ತಮಿ, ಮಳೆ ನಕ್ಷತ್ರ—ಮಘೆ 4 ನೇ ಪಾದ.

ಪ್ರೊಫೆಸರ್ ಬ್ರೇಸ್ಲರ್ ಇಲೆಕ್ಟ್ರೋ ಪೆಯಿನಾಡೈನ್

ಮನುಷ್ಯನ ಶರೀರದಲ್ಲಿ ವಿದ್ಯುಚ್ಛಕ್ತಿ ವ್ಯಾಪಿತವಿರುವದೆಂತಲೂ, ವಿದ್ಯುಚ್ಛಕ್ತಿ ಕಡಮೆಯಾದ ಕೂಡಲೇ ನಾನಾ ತರದ ವ್ಯಾಧಿಗಳು ಲಭಿಸುವದೆಂತಲೂ, ಅಂತಹ ವ್ಯಾಧಿಗಳನ್ನು ಶೀಘ್ರ ಗುಣಪಡಿಸಲು ವಿದ್ಯುಚ್ಛಕ್ತಿ ಮಿಶ್ರವಾದ ಔಷಧದ ಉಪಯೋಗದಿಂದಲ್ಲದೆ ಬೇರೆ ಔಷಧಗಳಿಂದ ವ್ಯಾಧಿಗಳನ್ನು ಶೀಘ್ರ ಗುಣಪಡಿಸುವದು ಕಷ್ಟವೆಂತಲೂ ಅಮೇರಿಕಾ ದೇಶದ ವೈದ್ಯಶಾಸ್ತ್ರ ಪಂಡಿತರು ವೈದ್ಯಶಾಸ್ತ್ರ ಪರಿಶೋಧನೆಯಿಂದ ಸಿದ್ಧಿಸಿರುವರು. ಈ ಔಷಧವು ಉಪಯೋಗಿಸಿದ ಕೂಡಲೇ ದೇಹಕ್ಕೆ ಸಾಕಾಗುವಷ್ಟು ವಿದ್ಯುಚ್ಛಕ್ತಿಯನ್ನುಂಟುಮಾಡಿ ವ್ಯಾಧಿಯನ್ನು ಅತಿ ಶೀಘ್ರ ಗುಣಪಡಿಸುತ್ತೆ. ಪ್ರಾಚೀನಕಾಲದ ಔಷಧಗಳಿಗೆಲ್ಲವು ಇದು ಅತ್ಯುತ್ತಮವಾದದ್ದು. ಒಂದಾವರ್ತಿ ಪರೀಕ್ಷಿಸಿ ನೋಡಿದರೆ ಇದರ ಗುಣವು ವ್ಯಕ್ತವಾಗುತ್ತೆ.



ಎಲೆಕ್ಟ್ರೋಪೆಯಿನಾಡೈನ್ ತೈಲದಿಂದ ಗುಣಪಡುವ ವ್ಯಾಧಿಗಳು:—

ತಿಮರುವಾಯುವು, ಕೀಲ್ವಾಯುವು, ಪಾರ್ಶ್ವವಾಯುವು, ಕ್ಷಯ, ಕೆಮ್ಮು, ನೆಗಡಿ, ವಾಯುನೋವು (ಕೈಕಾಲು ಹಿಡಿತ), ಉಳುಕುಹಿಡಿದಿದ್ದರು, ಕಠಿನಶ್ವಾಸ, ನಡುನೋವು (ಸೊಂಟನೋವು), ಪಕ್ಕಶೂಲೆ, ಹಲ್ಲುನೋವು, ತಲೆನೋವು, ಅರೆತಲೆನೋವು, ಉಬ್ಬಸ, ವಿಷಜ್ವರದ ಗಡ್ಡೆಗಳಿಗೂ ಮತ್ತು ಮಕ್ಕಳ ಪಕ್ಕಶೂಲೆ, (ಅಳ್ಳಿ) ಶೈತ್ಯದೋಷಗಳೂ, ವಿಷಹುಳಗಳ ಕಡಿತಗಳಿಗೂ (ಚೇಳು ಮುಂತಾದದ್ದು), ಇದಕ್ಕೆಲ್ಲಾ ಬಹಳ ಶ್ಲಾಘನೀಯವಾದದ್ದು. [12–33]

ಉಪಯೋಗಿಸುವ ಕ್ರಮವು ಹಿಂದುದೇಶದ ಎಲ್ಲಾ ಭಾಷೆಗಳಲ್ಲಿಯೂ ಬುಡ್ಡಿಯ ಸಂಗಡ ಕಳುಹಿಸಲಾದೀತು.

ಬುಡ್ಡಿಯ ಕ್ರಯ ರೂ. 0–8–0. ವಿ. ಪಿ. ಖರ್ಚು 0–4–0. ಏಜಂಟರು ಬೇಕು.

ಮುಖ್ಯ ಏಜಂಟರು:—ಗುರುಬಸವ ಅಂಡ್ ಕಂಪನಿ, ಮದರಾಸ್.

Printed and Published by the Rev. H. Gulliford, Proprietor and Manager, Wesleyan Mission Press, Mysore. 20/8/1914.

REGISTERED
M. 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೮ ಮೈಸೂರು—ಸನ್ ೧೯೧೫ ನೇ ಇಸವಿ ಆಗಸ್ಟ್ ತಾರೀಖು ೨೬ ನೇ ಗುರುವಾರ. ಸಂಚಿಕೆ ೧೩

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯುಳ್ಳ ನಿಬಿಡವಾದ ಕೇಶವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಇಂತಹ ಕೇಶವನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾವುದೆಂದರೆ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುವುದೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ. ಈ ತೈಲವನ್ನು ತಲೆಗೆ ಬಳಕೊಳ್ಳುತ್ತಲೇ, ಮಸ್ತಿಷ್ಕದ ಬೇಗೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ತೊಡೆಯ ತೊಡಗಿದ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು; ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು.

ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡುವದಕ್ಕಿಂತ ಒಂದೇಯೊಂದು ಬಾರಿ ಈ "ಕಾಮಿನಿಯಾ ತೈಲ" ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಒಫ್ ಮೇರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಅತ್ಯುತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಅವುಗಳಲ್ಲಿ ಒಂದನ್ನೇ ನೋಡಿರಿ! ನೇಗಿನಹಾಳಕರ ಬಂಧುಗಳು. ಬಸವನ ಬಾಗೇವಾಡಿ—ತಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲ ಕೇಶವಲ್ಲರಿಗಳನ್ನು ಬೆಳೆಯಿಸುವುದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗುತ್ತದೆ. ಆದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ. ಪಿ. ದ್ವಾರಾ ಕಳುಹುವುದು. ಸೀಸೆಯೊಂದರ ಕ್ರಯ ರೂ. 1-0-0, ಅ. ವೆ. 0-4-0 ಬೇರೆ; ಮೂರರ ಕ್ರಯ ರೂ. 2-10-0, ಅ. ವೆ. 0-7-0 ಬೇರೆ.

ಸೂಚನೆ.—ಅನೇಕ ಪ್ರವೀಣತರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಕನಿಷ್ಠ ವಸ್ತುಗಳ ವಿಕರಿಯಿಂದ ತಮಗೆ ಅತ್ಯಲ್ಪ ನಫೆಯೇ ದೊರಕುತ್ತದೆಂದು, ನೀವು "ಕಾಮಿನಿಯಾ ತೈಲ" ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭ ದೊರಕತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸ ಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಇದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳಿರಿ. ಇಷ್ಟು ಮುತುರ್ಜಿ ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಬೇಕಾಗದೆ ನಿಜವಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಒಟ್ಟೊ ದಿಲ್ ಬಹಾರ್!!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಆಲ್ಕೋಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಸುಗಂಧವು ಹೇಗೂ ಇರಲಿ, ಈ ಒಟ್ಟೊ-ದಿಲ್ ಬಹಾರಿನ ಗಂಧವು ಎಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳಕೊಳ್ಳುವುದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ. [19-32]

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ತೊಲೆಯ (ಮೀಡಿಯಂ) ಸೀಸೆ ರೂ. 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0. ಅಂಚೆಯ ವೆಚ್ಚ ಬೇರೆ ರೂ. 0-4-0. ಒಟ್ಟೊ-ದಿಲ್ ಬಹಾರ್ ಪರಿಮಳದ ಕಾರ್ಡುಗಳು ಡಜನ್ ಒಂದಕ್ಕೆ 0-12-0.

ಮೇಲೆ ಕಂಡ ಎಲ್ಲಾ ಸುಗಂಧಗಳು ಸಿಕ್ಕುವ ಕ್ಷೇತ್ರ:—

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್‌ಜಿದ್, ಬೊಂಬಾಯಿ.

ಏಜೆಂಟ್, ದಿ ಉಲ್ಲನ್ ಮಾರ್ಟ್, ಮಂಗಳೂರು.

ಸುಲಭ! ಚಾತುರ್ಯ! ಮಾಸಪತ್ರಿಕೆ!

ಪ್ರತಿಷ್ಠಿತ ನಾಮಾಂಕಿತ ಮನೋರಂಜಕವಾದ ಮಾಸಪತ್ರಿಕೆ. ಈಗ ಹೊಸ ಬದಲಾವಣೆಯಾಗಿದೆ. ವಾರ್ಷಿಕ ಚಂದಾ ಅಂಚೆ ವೆಚ್ಚ ಸೇರಿ 10 ಆಣೆ. ಸ್ತ್ರೀಯರಿಗೆ ವಿದ್ಯಾರ್ಥಿಗಳಿಗೆ ಮಾತ್ರ 6 ಆಣೆ.

[181-1] ವಿಳಾಸ:—ಮ್ಯಾನೇಜರ್, "ಚಾತುರ್ಯ," ಬೆಂಗಳೂರು ಸಿಟಿ.

ಸಿದ್ಧವಾಗಿದೆ.

1915 ನೆಯ ವರ್ಷದ ಲೋವರ್ ಸೆಕಂಡರಿ

ಕನ್ನಡ ಟೆಕ್ಸ್ಟಿನ ನೋಟ್ಸು.—ಕ್ರಯ 6 ಆಣೆ.

ಡಿಸ್ಕೌಂಟು—10 ಕ್ಕೆ 1; 25 ಕ್ಕೆ 3; 50 ಕ್ಕೆ 8; 100 ಕ್ಕೆ 20.

ಮಕ್ಕಳ ಭೂವಿವರಣೆ.

ಈಗಿನ ಪಾಠಕ್ರಮಕ್ಕೆ ತಕ್ಕಂತೆ ಹೊಸದಾಗಿ ಆಗಿದೆ. ಇದರಲ್ಲಿ ಮೈಸೂರು ದೇಶದ ಬೆಳೆ, ಎತ್ತರ, ನದೀ ಪರ್ವತಾದಿಗಳು ಇವುಗಳನ್ನು ತೋರಿಸುವ ಮೂರು ಭೂಪಟಗಳೂ, ಚಿತ್ರಗಳೂ ಸೇರಿವೆ. ಕ್ರಯ 2 ಆಣೆ. [49-28]

ಇಂಗ್ಲೀಷಿಯ 2 ನೆಯ ಪುಸ್ತಕದ ನೋಟ್ಸು 2½ ಆಣೆ. ಮೆಕ್ಮಿಲನ್ ರವರ 3 ನೇ ಪುಸ್ತಕದ ನೋಟ್ಸು 1½ ಆಣೆ. ಡಿಟೊ 4 ನೇ ಪುಸ್ತಕದ ನೋಟ್ಸು 1¾ ಆಣೆ, ಡಿಟೋ 5 ನೇ ಪುಸ್ತಕದ ನೋಟ್ಸು 4 ಆಣೆ. ನವಬಾಲವ್ಯಾಕರಣ (3 ನೇ ತರಗತಿಗೆ) 1 ಆಣೆ. Notes on "Tanglewood Tales," English Lower Secondary Text for 1915—As. 3. Notes on Fairy Tales—As. 2.

ನಮ್ಮ ವಿಳಾಸ:—ವೈ. ಆರ್. ವೆಂಕಟಸುಬ್ಬಾಚಾರ್ಯ,
ಸುಬೋಧಗ್ರಂಥಾಲಯ, ಮೈಸೂರು.

ಪುಸ್ತಕಗಳು

ಬಹಳ ಕಡಮೆ ಕ್ರಯಕ್ಕೆ ಸಿಕ್ಕುತ್ತವೆ. [169-3]

ಬಿ. ಟಿ. ಬಿ. ಎಸ್. ಡಿಪೋ, ಸೆಂಟ್ ಮಾರ್ಕ್ಸ್ ರೋಡ್, ಬೆಂಗಳೂರು ಎಂಬ ವಿಳಾಸಕ್ಕೆ ಬರೆದು ತರಿಸಿಕೊಳ್ಳಿರಿ.

	ರೂ ಆ. ಪೈ.
ಸತ್ಯವೇದಕ್ಕೆ ಸಂಬಂಧಪಟ್ಟ ಪುಸ್ತಕಗಳು :	
ಆದಿಕಾಂಡ ಸಟೀಕ	1—8—0
ಯೆಶಾಯನ ಪ್ರವಾದಗಳು	0—3—0
ಹಳೇ ಒಡಂಬಡಿಕೆಗೂ ಹೊಸ ಒಡಂಬಡಿಕೆಗೂ ಇರುವ ಚರಿತ್ರ ಸಂಬಂಧ	0—3—0
ಮಾರ್ಕನ ಸುವಾರ್ತೆಯ ವ್ಯಾಖ್ಯಾನವು	0—4—0
ಶ್ರೀ ಪೌಲನು ಬರೆದ ಪತ್ರಿಕೆಗಳು	0—6—0
ಕ್ರೈಸ್ತ ಜೀವನ್ಮುಕ್ತಿ ವಿವೇಕವು	0—3—0
ಶ್ರೀ ಪೇತ್ರನು ಬರೆದ ಮೊದಲನೇ ಪತ್ರಿಕೆಯು	0—3—0
ಆದಿ ಸಭೆಯ ಚರಿತ್ರೆಯೂ ಬೋಧನೆಯೂ	0—8—0
ಯೇಸು ಕ್ರಿಸ್ತನ ಚರಿತ್ರೆಯ ಸಾರಾಂಶಾವಳಿ	0—4—0
ದಾವೀದನ ಚರಿತ್ರೆ	0—4—0
ಶ್ರೀ ಪೌಲನ ಚರಿತ್ರೆ	0—3—0
ದೈವಜ್ಞಾನ ಶಾಸ್ತ್ರವೂ ಭಕ್ತಿವರ್ಧಕ ಪುಸ್ತಕಗಳೂ :	
ಕ್ರೈಸ್ತ ವೇದಾಂತಸಾರ	1—0—0
ಪವಿತ್ರತ್ವ	0—3—0
ಬೆಂಕಿಯಿಂದುರಿಯುವ ನಾಲಿಗೆ	0—4—0
ಆತ್ಮ ಧ್ಯಾನಗಳು ೧-೨ ನೇ ಭಾಗ	0—2—0
,, ೩ ನೇ ಭಾಗ	0—2—0
ಆಗಸ್ಟೀನ್ ಚಿನ್ನಪಂ	0—6—0
ಕ್ರೈಸ್ತ ಸಭಾಚರಿತ್ರೆ ಸಾರವು	0—8—0
ಕಥೆಗಳೂ ಜೀವಚರಿತ್ರೆಗಳೂ :—	
ಸುಂದರರಾಜನ ಪ್ರಮಾಣ	0—4—0
ಕುರುಡಿಯು ಬೆಳಕನ್ನು ಹುಡುಕಿದ್ದು	0—4—0
ಹೇಮಲತ ಪ್ರಭಾಕರ	0—2—0
ಸಾಧು ಚಂದ್ರಲೀಲೆ	0—1—6
ಭಕ್ತಿಗೀತಾವಳಿ (24 ಹಾಡುಗಳು)	0—0—6
ಕಿರಣಮಾಲಿಕೆ ೧ ನೇ ಭಾಗ ಗುರುವನ್ನು ಕುರಿತದ್ದು	0—0—3
,, ೨ ನೇ ,, ಶಾಸ್ತ್ರವನ್ನು ,,	0—0—3
,, ೩ ನೇ ,, ಪಾಪವನ್ನು ,,	0—0—3
,, ೪ ನೇ ,, ಮನುಷ್ಯನನ್ನು ,,	0—0—3
,, ೫ ನೇ ,, ಪಾಪಪರಿಹಾರವನ್ನು ,,	0—0—3

ತಾಮಸ ಮಾಡಬೇಡಿರಿ; ಕೂಡಲೇ ಬೆಂಗಳೂರು ಬಿ. ಟಿ. ಬಿ. ಎಸ್. ಡಿಪೋಗೆ ಬರೆದು ತರಿಸಿಕೊಳ್ಳಿರಿ.

ಹೊಸ ಬಂಗಾಳಿ ನಾವೆಲ್ಸ್—ವಿಷವೃಕ್ಷ 4 ಆ. ಸನ್ಯಾಸಿನಿ 1½ ಆ. ಅನಾಥಪ್ರೇತ 1 ಆ. ಬಿ. ವೆಂಕಟಾಚಾರ್ಯರಿಂದ ವಂಗವಿಜೇತ 1-4-0. ಚಂದ್ರಶೇಖರ 1-1-0. ರಜನಿ 13 ಆ. ಚಿತ್ರವಿಚಿತ್ರಾವಳಿ II 8 ಆಣೆ. ಅಮೃತಪುಳಿನ 11 ಆಣೆ. ದುರ್ಗೇಶನಂದಿನಿ 1-1-0. ಇತ್ಯಾದಿ. ಸುಶೀಲೆ ಹೊಸ ನಾವೆಲ್ 6 ಆಣೆ.

[63-27] ಎಂ. ಸುಬ್ಬರಾವ್, ಬುಕ್ ಸೆಲರ್, ಶಂಕರಪುರ, ಬೆಂಗಳೂರು ಸಿಟಿ.

ಹೊಸ ನಾವೆಲ್‌ಗಳು.

ಬಹು ಸ್ವಲ್ಪ ಪ್ರತಿಗಳೇ ಉಳಿದಿವೆ. ಸರಸವಾದೀ ಹೊಸಗನ್ನಡದ ಕಾದಂಬರಿಗಳನ್ನು ಕರಿಸಿಕೊಳ್ಳಲು ಹಿಂತೆಗೆದು ಪಶ್ಚಾತ್ತಾಪಪಡಬೇಡಿರಿ.

ಅನಂಗಸುಂದರಿ 8 ಆಣೆ. ತಾರಾಸುಂದರಿ 8 ಆಣೆ. ರಾಧಾಮಾಧವ 8 ಆಣೆ. ಸರಳಬಾಲೆ 8 ಆಣೆ. ಕುಮುದಿನಿ 6 ಆಣೆ. ನಿರ್ಭಾಗ್ಯಬಾಲಿಕೆ 6 ಆಣೆ. ಸಂತಾಪಕ 4 ಆಣೆ.

"ನಿರುಪಮಾ" ಹೊಸ ನಾಟಕಗಳಲ್ಲಿ ಮೋಹಿಸಿ ಬಹು ಜನರ ಸ್ತೋತ್ರಕ್ಕೆ ಪಾತ್ರವಾದ ನಾಟಕ. ಕಥಾ ವಿಧಾನವೂ ಮಾತುಗಳೂ ಪದ್ಯಗಳೂ ಬಹು ರಮ್ಯವಾಗಿಯೂ ಸರಸವಾಗಿಯೂ ಇವೆ. ಕ್ರಯ 12 ಆಣೆ.

[266—37] ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

ಕಳವು, ದರೋಡೆ.

ಡಕಾಯಿತಿ, ಅಕ್ರಮ ಸ್ತ್ರೀಸಂಗಮ, ಆಸಾಮಿ ಚೋರಿ, ಮಾನನಷ್ಟ ಮುಂತಾದವುಗಳಿಗೆ ಶಿಕ್ಷೆವಿಧಿಸಿರುವ ದಂಡನೀತಿ ಶಾಸ್ತ್ರವು ಪೂರ್ವದಲ್ಲಿ ಶುಕ್ರಾಚಾರ್ಯರಿಂದ ರಚಿತವಾಗಿ ಈಗಿನ ಬ್ರಿಟಿಷ್ ಚಕ್ರಾಧಿಪತ್ಯದಲ್ಲಿ ಅನುಮೋದಿತ ಇಂಡಿಯಾ ಗವರ್ನರ್ ಜನರಲ್‌ರವರಿಂದ ಮುಂಜೂರಾಗಿ ಕಲ್ಕತ್ತಾ, ಮುಂಬೈ, ಮದ್ರಾಸ್, ಮೈಸೂರು ಜಿಲ್ಲಾಗಳಲ್ಲಿ "ಕನ್ನಡ ಇಂಡಿಯನ್ ಪೆನಲ್ ಕೋಡ್" ಎಂಬ ಅಭಿಧಾನದಿಂದ ಜಾರೀಲಿ ತಂದಿರುವರು. ಈ ಆಕ್ಟಿಗೆ ಅನೇಕ ಜಡ್ಜಿಗಳು ಟಿಪ್ಪಣಿಗಳನ್ನು ಬರೆದಿರುವರು. ಅವುಗಳೂ ಈ ಪುಸ್ತಕದಲ್ಲಿ ಅಡಗಿರುವವು. ಕ್ರಯ ದಪ್ಪ ಕಾಗದದ್ದು 2 ರೂಪಾಯಿ; ಹಸನುಕಾಗದದ್ದು ರೂ. 2-8-0.

[143-9] ವಿಳಾಸ—ಬಿ. ನರಸಿಂಗರಾವ್,
ಎಡಿಟರ್, ಲಾ ಗೆಜೆಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

NOW READY

Full Notes with Summary and Numerous useful questions on Circe's Palace; The Golden Fleece and Fairy Tales (L. S. Text for 1915) by Mr. A. S Rangaswamiengar, B.A., Asst. Master, Maharani's College, Mysore. Price four annas only. Yate's Primer 0-4-0; Yate's Second Reader 0-9-0; King Second Reader 0-6-0; King Third Reader 0-8-0; Macmillan's New No. IV Reader 0-12-0; Hydes Practical English Grammar—First 0-15-0, Second 0-15-0; Longman's School Geography 1-4-0; Marrison's Junior Geography of India 0-12-0.

We supply you any books in English or Canarese.

[23-33] **The General Agency, Mysore.**

ನಂಬಿ ಮೋಸಹೋಗಬೇಡಿ.

ಇತರರು ಶಾಲುಗಳನ್ನು ಒಳ್ಳೇದೆಂದೂ, ಕಮ್ಮಿ ಬೆಲೆಗೆ ಕೊಡುತ್ತೇವೆಂದೂ ಹೇಳುವರು. ಇದನ್ನು ನಂಬಿ ಮೋಸಹೋಗಬೇಡಿ. ನಮ್ಮಲ್ಲಿ ಕಾಶ್ಮೀರಿ ಮತ್ತು ಎಲ್ಲಾ ತರಹದ ವಂಟಿ ಶಾಲುಗಳೂ 5 ರೂ. ನಿಂದ 7, 10, 50, ರೂ. ಗಳವರಿಗೂ ಸಿಕ್ಕುತ್ತವೆ. ಪಸಂದಿಲ್ಲದಿದ್ದರೆ ಹಣ ವಾಪಸು ಮಾಡುತ್ತೇವೆ. ನಮ್ಮ ಕಾರಖಾನೆಗೆ ಲಂಡನ್, ಚಿಕಾಗೋ ಮುಂತಾದ ಅನೇಕ ಪ್ರದರ್ಶನಗಳಲ್ಲಿ ಚಿನ್ನ ಮತ್ತು ಬೆಳ್ಳಿಯ ಮೆಡಲುಗಳು ಮತ್ತು ಸರ್ಟಿಫಿಕೇಟುಗಳು ಬಂದಿವೆ. ಯಾವ ತರಹ ಬಣ್ಣದ್ದು ಎಷ್ಟು ಬೆಲೆಗೆ ಬೇಕಾದರೂ ನಮ್ಮಲ್ಲಿ ಸಿಕ್ಕುತ್ತವೆ. ಇಂಗ್ಲೀಷಿನಲ್ಲಾಗಲಿ, ಹಿಂದುಸ್ಥಾನಿಯಲ್ಲಾಗಲಿ ನಮಗೆ ಬರೆಯಬೇಕು.

ನಮ್ಮ ಅಡ್ರೆಸ್ಸು—ಪೀರ್ ಬ್ರದರ್ಸ್,
ಶಾಲ್ ಮರ್ಚೆಂಟ್ಸ್, ಅಮೃತಸರ, ಪಂಜಾಬು.

PEER BROS., SHAWL MERCHANTS,
[166-4] AMRITSAR, PANJAB.

ಬೇಕಾದವರು ಗಮನಿಸಿ.

ತ್ವರೆಮಾಡಿ! ಕೆಲವೇ ದಿನಗಳು ಮಾತ್ರ!

ಸೋಲಾಪುರದ ಚೆಕ್ಕು, ಶೀರೆ, ಖಣ, ಕಿರಿಗೆ.

ಹಣ ಮುಂಗಡವಾಗಿ ಕಳುಹಿಸತಕ್ಕ ವ್ಯಾಪಾರಗಳಿಗೆ ಮಾತ್ರ ತರಹೆವಾರಿ ಚೆಕ್ಕು, ಶೀರೆ, ಖಣ, ಕಿರಿಗೆ ಇವು ಬಹಳ ಸುಲಭ ಕ್ರಯಕ್ಕೆ ಒದಗಿಸುವ ಏರ್ಪಾಡು ಮಾಡಲ್ಪಟ್ಟಿದೆ. ನಮ್ಮ ಕಾಯಂ ಗಿರಾಕಿಗಳಿಗೆ ಎಲ್ಲರಿಗಿಂತ ಸುಲಭ ಕ್ರಯಕ್ಕೆ ದೊರೆಯುವುದು.

ಹೊಸ ಗಿರಾಕಿಗಳು ತಮಗೆ ಬೇಕಾದದ್ದನ್ನು ನಮಗೆ ಬರೆದು ಹಣ ಮುಂಗಡ ಕಳುಹಿಸಿದರೆ ಅವರಿಗೂ ಕಾಯಂ ಗಿರಾಕಿಗಳ ದರಕ್ಕೆ ಜವಳಿ ದೊರೆಯುವುದು.

ಹಣ ಕಳುಹಿಸದೆ ಬರೆಯತಕ್ಕ ಕಾಗದಗಳಿಗೆ ಬೇಗ ಗಮನಕೊಡಲು ಅನುಕೂಲವಿಲ್ಲ. ಕಾಗದ ಪತ್ರಗಳನ್ನು ಬೆಳಸುವದರಿಂದ ಖರೀದಿಗಳು ಬದಲಾಯಿಸುವುದಿಲ್ಲವೆಂಬ ವಿಷಯ ಜ್ಞಾಪಕದಲ್ಲಿಡಬೇಕು. [28-31]

ಇಂಡಿಯನ್ ಕೊಆಪರೇಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್,

159, ಕಿಲಾರಿ ರೋಡ್ (ಕುಂಬಿಗರ ಪೇಟೆ), ಬೆಂಗಳೂರು ಸಿಟಿ.

ಪ್ರೊಫೆಸರ್ ಗಜ್ಜಾರರವರ

ಗುಣಕಂಡ ಪ್ರಖ್ಯಾತವಾದ ಔಷಧಗಳು.

ವ್ಯರ್ಥವಾದ ಔಷಧಗಳನ್ನು ಉಪಯೋಗಿಸಿ ಪ್ರಾಣಾಪಾಯಕ್ಕೆ ಗುರಿಯಾಗುವುದೇಕೆ? ವಿವೇಕದಿಂದ ತಯಾರ್ಮಾಡಿರುವ ನಮ್ಮ ಔಷಧಗಳನ್ನು ಸೇವನೆ ಮಾಡಬಾರದೇ?

ಟಾನಿಕ್ ಸೊಲ್ಯೂಷನ್.—ಇದರಲ್ಲಿ ಗ್ಲಿಸರಿನೊಫೋಟ್ಸ್ ಎಂಬ ಅಮೂಲ್ಯ ಪದಾರ್ಥಗಳನ್ನು ಹಾಕಿ ತಯಾರ್ಮಾಡಿದೆ. ಇದು ಬೇಗನೆ ಶರೀರಕ್ಕೆ ಸೇರಿ ಹೋಗುತ್ತೆ. ಆರೋಗ್ಯವನ್ನೂ ಚಟುವಟಿಕೆಯನ್ನೂ ಶಕ್ತಿಯನ್ನೂ ವೃದ್ಧಿಮಾಡುವುದು. ನರಗಳ ದುರ್ಬಲವನ್ನೂ ಹೋಗಲಾಡಿಸುವುದರಲ್ಲಿ ಇದು ಬಹಳ ಶ್ರೇಷ್ಠವಾದ ಔಷಧ. ಕ್ರಯ ಶೀಸೆಗೆ 2 ರೂಪಾಯಿ, ಮತ್ತು ರೂ. 1-2-0.

ರಕ್ತಶುದ್ಧಿಗೆ ಮಹೌಷಧ.—ಇದು ರಕ್ತವನ್ನೂ ದೇಹದ ಎಲ್ಲಾ ಭಾಗಗಳನ್ನೂ ಶುದ್ಧಿಮಾಡುತ್ತೆ. ಬಹಳ ಚೆನ್ನಾಗಿ ಗುಣಕಂಡ ಔಷಧ. ಕ್ರಯ ಶೀಸೆಗೆ 1 ರೂಪಾಯಿ.

ಲಿವರ್ ಸೊಲ್ಯೂಷನ್.—ಪಿತ್ತಕೋಶದ ಮೇಲೆ ಇದು ಬಹಳ ಚೆನ್ನಾಗಿ ಕೆಲಸಮಾಡೋಣದರಿಂದ ಮಲಬದ್ಧತೆಯುಳ್ಳವರಿಗೆ ಮಹೋಪಕಾರಿಯಾಗಿದೆ. ವ್ಯಾಪಕವಾಗಿ ಇದನ್ನು ಕೊಡುತ್ತಾರೆ. ಇದು ಮನೆಯಲ್ಲಿ ಇದ್ದೇ ಇರಬೇಕು. ಕ್ರಯ ಶೀಸೆಗೆ ರೂ. 1; ಮತ್ತು ರೂ. 0-10-0.

ಜ್ವರದ ಔಷಧ.—ವಿಷಮಶೀತಜ್ವರ, ನಿಂತುಬರುವಜ್ವರ, ಅವಧಿಯಜ್ವರ, ಎಲ್ಲಾ ತರದ ಜ್ವರಗಳಿಗೂ ಇದು ಸಂಜೀವನವಾಗಿದೆ. ಇದು ಕ್ವಿನೈನ್‌ಗಿಂತ ಬಹಳ ಅಗ್ಗ. ಕ್ರಯ ಶೀಸೆಗೆ 10 ಆಣೆ; 4 ಆಣೆ.

ಹುಳುಕಡ್ಡಿ ಔಷಧ.—ಹುಳುಕಡ್ಡಿಯನ್ನು ಖಂಡಿತವಾಗಿ ಗುಣಮಾಡುತ್ತೆ. ಕ್ರಯ ಸೀಸೆಗೆ 4 ಆಣೆ.

ಹಲ್ಲುಪುಡಿ.—ಈ ಪುಡಿಯಿಂದ ಹಲ್ಲು ಉಜ್ಜಿಕೊಂಡರೆ ಬಾಯಿಗೆ ಸುವಾಸನೆ ಕೊಡುತ್ತೆ. ಹಲ್ಲು ಎಂದೂ ಕೆಡದಂತೆ ಬಹಳ ಚೆನ್ನಾಗಿಟ್ಟು ಕಾಪಾಡುತ್ತೆ. ಕ್ರಯ ಸೀಸೆಗೆ 4 ಆಣೆ; 6 ಆಣೆ; 1 ರೂಪಾಯಿ.

ಇಂಗ್ಲೀಷಿನಲ್ಲೇ ನಮಗೆ ಕಾಗದವನ್ನು ಬರೆಯಬೇಕು.

ಸೋಲ್ ಏಜಂಟರು:— ಎಸ್. ವೈದ್ಯ ಮತ್ತು ಕಂಪನಿ,

[156-7] ಜಾರ್ಜ್ ಟೌನ್, ಮದರಾಸ್.

"ಈ ವಾಯುವಿನಿಂದ ನಾನು ಪಡುತ್ತಿದ್ದ ನೋವನ್ನು, ಈ ಕಠಿಣ ನೋವನ್ನು ನಿಲ್ಲಿಸಿದೆನು, ನಾನು ಆರೋಗ್ಯವುಳ್ಳವನಾಗಿ ಬಲಿಷ್ಠನಾಗಿ ಕೆಲಸಮಾಡಿ ಜೀವದಲ್ಲಿ ಸಂತೋಷಪಡುವೆನೆಂದು ಹೇಳುವಷ್ಟು ಜಿತ ಮನಸ್ಸು ನನಗಿದ್ದರೆ," ಗ್ಲಾಸ್ಗೋ ನಗರದ ಪಾಲಿಸ್ ಬ್ರಿಡ್ಜ್‌ನಲ್ಲಿ ವಾಸಮಾಡುವ ಮಿ॥ ಪಿ. ಟಿಸ್ರೋ ಹೊಲ್ಡವರು ಸ್ವಸ್ಥವಾದ ರೀತಿಯನ್ನು ಕುರಿತು ಹಿಮ.

"ಐದು ವರುಷಗಳ ಕಾಲ ನಾನು ವಾಯುವಿನಿಂದ ಹೇಳಲಾಗದ ಸಂಕಟಪಟ್ಟೆನು. ನನಗೆ ತಿಳಿದ ಔಷಧಗಳನ್ನೆಲ್ಲಾ ಉಪಯೋಗಿಸಿದೆನು. ಉತ್ತಮ ವೈದ್ಯರ ಆಲೋಚನೆಗಾಗಿಯೂ ಔಷಧಗಳಿಗಾಗಿಯೂ 150 ರೂಪಾಯಿಗಳನ್ನು ಖರ್ಚುಮಾಡಿದೆನು. ರಾತ್ರೀ ವೇಳೆಗಳಲ್ಲಿನ ನೋವು ಅಧಿಕವಾಗಿದ್ದದ್ದರಿಂದ ನಿದ್ರೆಯೇ ಬರುತ್ತಿರಲಿಲ್ಲ. ಕೀಲುಗಳಿಗೆ ಫ್ಲಾನೆಲ್ ಬ್ಯಾಂಡೇಜುಗಳನ್ನು ಕಟ್ಟುತ್ತಿದ್ದದ್ದರಿಂದ ಆ ಕಾಲಕ್ಕೆ ಸ್ವಲ್ಪವೇ ಅಲ್ಪವಾಗಿ ಕಾಣುವದು. ಕಡೆಗೆ ಚೇಂಬರ್‌ಲೇನರ ಬಾಮ್ ನೋವಿನ ತೈಲವು ನನ್ನನ್ನು ಸಂಪೂರ್ಣವಾಗಿ ವಾಸಿಮಾಡಿತು. ಐದು ವರುಷಗಳಲ್ಲಿ ಇನ್ನು ಒಂದೂ ನನಗೆ ಮೇಲು ಎನಿಸಲಿಲ್ಲ."

ಔಷಧ ಮಾರುವವರೆಲ್ಲರಲ್ಲಿಯೂ ಸೀಸೆ 1ಕ್ಕೆ 1 ರೂಪಾಯಿಯಂತೆ ಮಾರಲ್ಪಡುತ್ತೆ.

101-17

CHAMBERLAIN'S COUGH REMEDY.

ಚೇಂಬರ್ಲೀನ್‌ರವರು ಕಂಡುಹಿಡಿದ ಕೆಮ್ಮಿನ ಔಷಧವು.

3-35

ಶೀತದ ಕೆಮ್ಮು, ಗಂಟ್ಲು ಗಾರೆನ್ನುವುದು, ಹುಡಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟ್ಲಿನಲ್ಲೂ ಎದೆಯಲ್ಲೂ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಾಣಪ್ರಾಯವಾದದೆ.

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ. ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ. ಅದರ ಮೇಲೆ ನ್ಯುಮೋನಿಯ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು. ತರುವಾಯ ಉಗುಳಿನಲ್ಲಿ ರಕ್ತಬೀಳುವುದು. ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು.

ಚೇಂಬರ್ಲೀನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟ್ಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಖಂಡಿತವಾಗಿ ನಿವಾರಣೆಮಾಡುತ್ತದೆ. ಉಸುರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ. ಅಪಾಯಕರವಾದ ಕೆಮ್ಮಿನ ಶಬ್ದವನ್ನು ನಿಲ್ಲಿಸಿಬಿಡುತ್ತದೆ. ಎದೆ ಒಣಗುವಂಥಾ ಕೆಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ವಾಸಿಮಾಡಬಲ್ಲದು. ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ದೆ ಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ.

ಚೇಂಬರ್ಲೀನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ.

ಈ ಔಷಧವು ವನಸ್ಪತಿಗಳ ತಯಾರು.

ಕೈಯಿಂದ ಮುಟ್ಟದೆ ತಯಾರಾಗಿದೆ.

ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಶೀಸೆಗೆ ೧ ರೂಪಾಯಿ. ದೊಡ್ಡ ಶೀಸೆಗೆ ೨ ರೂಪಾಯಿ.

---

500 ರೂಪಾಯಿಗಳು ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

ಈ ಮುರಬ್ಬಾವು "ಪಂಜಾಬ್ ಸಾಲಾಮಿಸ್ರಿ" ಅಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡಲ್ಪಡುವುದು.

ಕ್ರಯ 2 ರೂಪಾಯಿ.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡವರಿಗೆ ಹೃದಯ ಕೋಶವು ಬಲಹೀನವಾಗಿ ನಾನಾ ವ್ಯಾಧಿಗಳಿಂದ ಮರಣ ಕಾಯಿಲೆಯಿಂದ ದುಃಖಪಡುವರು. ಈ "ಪಂಜಾಬ್ ಸಾಲಾಮಿಸ್ರೀ ಮುರಬ್ಬಾ"ವಿನ ಸೇವನೆಯಿಂದ ಕೈ, ಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ದೇಹದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ತಲೆಯ ನೋವೂ, ಇವುಗಳೆಲ್ಲವೂ ಪಂಜಾಬ್ ಸಾಲಾಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು, ಮೆದುಳಿಗೆ ಬಲವನ್ನುಂಟುಮಾಡುವುದು ಧಾತುವನ್ನು ಕೇಮಿಸುವುದು, ಸೊಂಟದ ನೋವು ಸ್ವಲ್ಪ ಮಾತ್ರವೂ ಇರಲಾರದು. ಈ ಪಂಜಾಬ್ ಸಾಲಾಮಿಸ್ರಿಯ ಮುರಬ್ಬಾಕ್ಕೆ ತಾಂಬ್ರದ ಮತ್ತು ಧಂಗಾರದ ಭಸ್ಮವು ಎಷ್ಟು ಮಾತ್ರವೂ ಸಮಾನವಾಗಲಾರದು. ಹೊಟ್ಟೆಯಲ್ಲಿರುವ ಹುಳುಗಳನ್ನು ನಾಶಪಡಿಸುವುದು. ಶ್ವಾಸ ಕಾಸರೋಗಗಳನ್ನು ನಿರ್ಮೂಲಪಡಿಸುವುದು. ಕಾಬೂಲ್, ಕಾಂದಹಾರ್ ದೇಶಗಳ ಜನರು ಸಾಲಾಮಿಸ್ರಿಯ ಹಣ್ಣನ್ನು ಬಹಳವಾಗಿ ತಿನ್ನುವರು. ಆದ್ದರಿಂದ ಶಕ್ತಿಯಲ್ಲಿ ಬಹಳ ಗಟ್ಟಿಗರು. ಡಬ್ಬಿ 1ಕ್ಕೆ ರೂ. 2-0-0. ಟಪಾಲ್ ಖರ್ಚು ಅಲಾಯಿದ. [133-11]

ಅನುಪಾನಪತ್ರಿಕೆ ಔಷಧದ ಸಂಗಡ. ಕ್ಯಾಟ್ಲಾಗ್ ಅಪೇಕ್ಷಿಸುವವರು 6 ಕಾಸಿನ ಸ್ಟ್ಯಾಂಪು ಕಳಿಸಿ.

ಏಜಂಟರು—ಡಿ. ಸೈಯದ್ ಉಸ್ಮಾನ್ ಅಂಡ್ ಕೋ, ದೊಡ್ಡಪೇಟೆ, ಬೆಂಗಳೂರು ಸಿಟಿ.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು, 6 ಹಾಜಿ ಸಾಹೇಬ್ ಮಹಡಿ, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

MADRAS SNUFF.

ಬಹಳ ಮೇಲಾದ ನಸ್ಯ ಇನ್ನೆಲ್ಲೂ ಸಿಕ್ಕದು.

ನಮ್ಮಲ್ಲಿ ತಯಾರಾಗುವ ನಸ್ಯದ ಪುಡಿಯನ್ನು ಹಿಂದೂಸ್ಥಾನದ ಸಮಸ್ತ ಭಾಗಗಳವರೂ, ಅನ್ಯದೇಶಗಳವರೂ ಹಲವಾರು ವರುಷಗಳಿಂದ ತರಿಸಿಕೊಂಡು ಉಪಯೋಗಿಸುತ್ತಿದ್ದಾರೆ. ನಮ್ಮ ನಸ್ಯವು ಬಹಳ ಪ್ರಖ್ಯಾತಿ ಪಡೆದಿದೆ. ಬಹು ಮೇಲಾದ "ಬಂದರ್" ಸೊಪ್ಪಿನಿಂದ ಸುವಾಸನೆಯುಳ್ಳ ಅಚ್ಚ ತುಪ್ಪ ಹಾಕಿ ವಿಶೇಷ ರುಚಿಕರವಾಗಿಯೂ ಸ್ವಚ್ಛವಾಗಿಯೂ ತಯಾರ್ಮಾಡುತ್ತೇವೆ. ಕಡಿದ ಮಟ್ಟಿಗೂ ನಮ್ಮ ಧಾರಣೆ ಕಡಮೆಯಾಗಿರುವುದು. ನಮ್ಮ ಪದಾರ್ಥವನ್ನು ನಾವೇ ಹೊಗಳಿಕೊಳ್ಳುವದರಿಂದ ಫಲವೇನು? ವಾಚಕರು ಒಂದಾವರ್ತಿ ಪಂಕ್ತಿಗಾಗಿ ತರಿಸಿಕೊಂಡರೆ ಚೆನ್ನಾಗಿ ವೇದ್ಯವಾಗುತ್ತೆ. ಕ್ರಯ ಪಂಥೀರಿಗೆ 3 ರೂಪಾಯಿ; 1 ಸೇರಿಗೆ 10 ಆಣೆ. ಪೋಸ್ಟೇಜ್ ಬೇರೆ. ನಸ್ಯವನ್ನು ಅಂಚೆಯ ಮೂಲಕವೋ, ರೈಲಿನಲ್ಲೋ ಹ್ಯಾಗೆ ಕಳಿಸಬೇಕೆಂದು ಬರೆಯಿರಿ.

ನಮ್ಮ ವಿಳಾಸ—ಜೆ. ನಾರಾಯಣಸಾಮಿ ನಾಯುಡು,

43, ಪಳಯಪ್ಪನ್ ಸ್ಟ್ರೀಟ್, ಮಿಂಟ್ ಬಿಲ್ಡಿಂಗ್ ಪೋಸ್ಟ್,

[168-4] ಮದರಾಸ್, ೫.

ನ್ಯಾಷನಲ್ ಅಷೂರೆನ್ಸ್ ಕಂಪನಿ, ಲಿಮಿಟೆಡ್.

ವಿಜಯನಗರಂ ಸಿಟಿ.

1905 ರಲ್ಲಿ ಸ್ಥಾಪಿಸಲ್ಪಟ್ಟದ್ದು.

1912 ನೇ ಆಕ್ಟು ಪ್ರಕಾರ ಬದಲಾಯಿಸಿದೆ.

ಗವರ್ನ್‌ಮೆಂಟ್ ಸೆಕ್ಯೂರಿಟಿಗಳನ್ನು ಪಡೆದಿದೆ.

ಕಂಪನಿ ಆಸ್ತಿಯನ್ನು ಹಂಚಿಕೊಳ್ಳುವ ಷೇರುದಾರರಿಲ್ಲ.

ವೈದ್ಯರ ಪರೀಕ್ಷಾ ಸರ್ಟಿಫಿಕೇಟು ಅವಶ್ಯವಿಲ್ಲ.

ಬೋನಸ್ ಹಣ ಅಪಾರವಾಗಿ ಪಾವತಿ ಮಾಡಿದೆ.

ಜೀವವಿಮೆ—ತಿಂಗಳ ಚಂದಾ 1 ನೇ ಕ್ಲಾಸ್ ರೂ. 1; 2 ನೇ ಕ್ಲಾಸ್ ರೂ. 0-8-0.

ಮದುವೆ ಫಂಡು—ತಿಂಗಳ ಚಂದಾ ರೂ. 1-0-0

ಇದು ಬಹು ಲಾಭಕರವಾದ ಮತ್ತು ಸುರಕ್ಷಿತವಾದ ಕಂಪನಿ. ವಿಮೆ ಮಾಡತಕ್ಕವರಿಗೂ ಫಂಡು ಪಡೆಯತಕ್ಕವರಿಗೂ ಬಹಳ ಅನುಕೂಲವಾಗಿರುತ್ತದೆ. [138-11]

ಏಜಂಟರು ಬೇಕು. ಧಾರಾಳವಾದ ಕಮಿಷನ್ ಸಿಗುತ್ತೆ. ಕಂಪನಿಯ ಪ್ರಾಸ್ಪೆಕ್ಟಸ್ಸು ಪಟ್ಟಿ ಕೇಳಿದವರಿಗೆ ಕೊಡುತ್ತೆ. ಈ ವಿಳಾಸಕ್ಕೆ ಬರೆದುಕೊಳ್ಳಿ:—

ವಿ. ಬಿ. ಶ್ರೀಕಂಠಯ್ಯನವರು, ಮೈಸೂರು ಮತ್ತು ಕೊಡಗಿನ ಚೀಫ್ ಏಜೆಂಟ್, ಕೋಟೆ, ಬೆಂಗಳೂರು ಸಿಟಿ.

V. B. Srikantiah,
Chief Agent, Mysore & Coorg, Fort, Bangalore City.

We the undersigned inform the policy holders and public that we have appointed Pandit K. Bhaskara Sastri, Editor and Proprietor of "The Sahithya Chandrika," Basavangudi, Bangalore City as our Sole District Agent for Bangalore, Kolar and Shimoga Districts.

Messrs. VENKATACHALAM & SONS,
Chief Agents,
Hindustan Co-operative Insurance Society, Ltd.
166, Dodpet, near Old Taluk Cutcherry,
[243-38] *MYSORE.*

ಓರಿಯಂಟಲ್ ಗವರ್ನ್‌ಮೆಂಟ್ ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು............ರೂ. 4,45,00,000

ಕಂಪನಿಯಿಂದ ಪಾವತಿ ಆಗಿರುವದು ,, 4,00,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ.—ಮಿ॥ ಎಂ. ಎಸ್. ರಾಮಸ್ವಾಮಿ ಬಿ.ಎ., ಚೀಫ್ ಏಜೆಂಟ್ ಬೆಂಗಳೂರು; ಮಿ॥ ಎಂ. ಎಸ್. ರಂಗಸ್ವಾಮಿ ಅಯ್ಯಂಗಾರ್ ವೆಂಕಟಪತಯ್ಯನವರು, ಕಂಪನಿ ಏಜಂಟರು, ಮೈಸೂರು. ಅಥವಾ

194-48. ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ, ಮದರಾಸ್.

ಹಿಂದುಸ್ಥಾನ್ ಕೋಆಪರೇಟಿವ್ ಜೀವವಿಮೆ ಸಂಘ ಲಿ.

ಹಿಂದುಸ್ಥಾನ್ ಕಟ್ಟಡಗಳು—ಕಲ್ಕತ್ತಾ.

ಕಂಪನಿಯ ಮೂಲಧನ (ಒಂದು ಕೋಟಿ ರೂಪಾಯಿ)	1,00,00,000
ಪಾವತಿಯಾದ ಮೊಬಲಗು	10,50,000
ವಸೂಲಾದ ಮೊಬಲಗು	87,00,000

ಈ ಕಂಪೆನಿಯಲ್ಲಿ ಪಾಲಿಸಿದಾರ್‍ರಿಗೆ ಬಹಳ ಕಡಿಮೆಯಾದ ದರಗಳ ವ್ಯವಸ್ಥೆಯನ್ನು ಮಾಡಿರುವುದು. 1912 ನೇ ಇಸ್ವಿಯ ಇಂಡಿಯಾ ಗವರ್ನ್‌ಮೆಂಟಿನ ಜೀವವಿಮೆ ಕಂಪನಿಯ ಆಕ್ಟುಗಳ ಪ್ರಕಾರ ಸರ್ಕಾರದಲ್ಲಿ 2 ಲಕ್ಷ ರೂಪಾಯಿಗಳನ್ನು ಡಿಪಾಜಿಟ್ಟು ಮಾಡಲ್ಪಟ್ಟಿರುತ್ತೆ. ಮತ್ತು ಅನೇಕ ಮಹಾರಾಜರುಗಳು ಮುಂತಾದ ದೊಡ್ಡವರು ಪ್ರೆಸಿಡೆಂಟರಾಗಿರುವದರಿಂದ ಈ ಕಂಪನಿಯ ಅಭಿವೃದ್ಧಿಸ್ಥಿತಿಯನ್ನು ಪ್ರಕಟಿಸಿ ಮಾಡುವುದಕ್ಕೆ ಸಂತೋಷವಾಗಿರುತ್ತದೆ. ಸುಲಭವಾಗಿ ಹಣವನ್ನು ಪಾಲಿಸಿಯವರ ಮನೆಯಲ್ಲೇ ಜಾಗ್ರತೆ ಪಾವತಿ ಏರ್ಪಾಡು ಮಾಡಲ್ಪಡುತ್ತೆ. ಆದ್ದರಿಂದ ಪಾಲಿಸಿದಾರ್‍ರು ಮತ್ತು ಇದಕ್ಕೆ ಸೇರಿದ ಏಜಂಟ್ರುಗಳು ಕೂಡಾ ಅದೃಷ್ಟವಂತರೆಂಬುವದರಲ್ಲಿ ಸಂದೇಹವಿಲ್ಲ.

ಹೆಚ್ಚಿನ ವಿಷಯಗಳಿಗೂ, ಫಾರಂ ಮತ್ತು ಪ್ರಾಸ್‌ಪೆಕ್ಟ್ಸುಗಳಿಗೂ ಕೆಳಗಿನ ವಿಳಾಸಕ್ಕೆ ಜಾಗ್ರತೆಯಾಗಿ ಬರೆಯಿರಿ. [243-38]

ವೆಂಕಟಾಚಲಂ ಅಂಡ್ ಸನ್ಸ್, ಚೀಫ್ ಏಜಂಟ್ರು,

166, ದೊಡ್ಡಪೇಟೆ, ಮೈಸೂರು.

ಶ್ರೀಕರ ಕಸ್ತೂರಿ ಮಾತ್ರೆ

ಬಿ. ಪಿ. ಪಂಡಿತರ

೩೦ ಮಾತ್ರೆಯುಳ್ಳ ಸೀಸೆಗೆ 4 ಆ.; 5 ಸೀಸೆಗಳಿಗೆ 1 ಇನಾಂ.

ಈ ಮಾತ್ರೆಗಳ ಬೆಲೆಯನ್ನು ನೋಡಿ ಇವರ ಗುಣವನ್ನು ಊಹಿಸಲಾಗದು. ಸ್ವದೇಶದ ಕಸ್ತೂರಿಯಿಂದಲೇ ವಿಶೇಷವಾಗಿ ತಯಾರಿಸಲ್ಪಡುತ್ತ ಇರುವ ಶ್ರೀಕರ ಕಸ್ತೂರಿ ಮಾತ್ರೆಗಳು ಸುವಾಸನೆಯಾಗಿರುವುದು ಮಾತ್ರವಲ್ಲದೆ ಊಟದೊಡನೆ ಅಥವಾ ಹಾಗೆಯೇ ಸೇವಿಸಿದರೆ ಎಂತಹ ಬಲವಾದ ಆಹಾರ ವಾದರೂ ಬೇಗನೆ ಜೀರ್ಣವಾಗುವದು. ಮಕ್ಕಳಿಗೆ ಉಂಟಾಗುವ ಅಜೀರ್ಣ-ಭೇದಿ ಕೆಮ್ಮು-ನೆಗಡಿ-ಮಲಬದ್ಧ-ಹೊಟ್ಟೆಯುಬ್ಬರ-ಈ ರೋಗಗಳನ್ನು ಗುಣಪಡಿಸುವುದರಲ್ಲಿ ವೈದ್ಯಸಿದ್ಧಾಂತ ತಕ್ಷಣ ಗುಣಪಡಿಸುವುದು. ಪ್ರಯಾಣಿಕರಿಗೂ ಸೋಂಕು ರೋಗಗಳುಳ್ಳ ಸ್ಥಳದಲ್ಲಿರುವವರಿಗೂ ಮಲೆನಾಡಿನಲ್ಲಿರುವವರಿಗೂ ಇದರಂತೆ ಮತ್ತಾವುದೂ ಆರೋಗ್ಯವನ್ನು ಕೊಟ್ಟು ಕಾಪಾಡಲಾರದು. [220-13]

ವಿಷಮಜ್ವರಗಳು-ನೆಗಡಿ-ಕೆಮ್ಮು-ತಲೆನೋವು-ಅಗ್ನಿಮಾಂದ್ಯ-ಶೀತ... ಹೊಟ್ಟೆನೋವು-ಮಲಬಂಧ-ಅರೋಚಕ-ನರಗಳ ದೌರ್ಬಲ್ಯ—ಈ ರೋಗಗಳನ್ನು ಸ್ತ್ರೀಯರಿಗೂ ಗುಣಪಡಿಸಿ ರಕ್ತವೃದ್ಧಿಯನ್ನುಂಟುಮಾಡುವುದು. ಸಾವಿರಾರು ಜನರು ಪರೀಕ್ಷಿಸಿದ್ದಾರೆ. ಟಪಾಲ್ ಖರ್ಚು 12 ಸೀಸೆ ವರೆಗೆ 4 ಆಣೆ.

ವಿಳಾಸ—ಮ್ಯಾನೇಜರ್, ಸದ್ವೈದ್ಯಶಾಲಾ, ನಂಜನಗೂಡು.

ಶ್ರೇಷ್ಠವಾದ ವಾಚ್! ನೂತನವಾದ ವಾಚ್! ನಾಜೂಕಾದ ವಾಚ್!

ಸ್ವಿಸ್ ಪಾಕೆಟ್ ಲೀವರ್ ವಾಚ್.

ಇದರ ಕ್ರಯ 7 ಬಹುಮಾನಗಳ ಸಮೇತ ರೂ. 3 ಮಾತ್ರ. ಏಳು ವರ್ಷಗಳ ಖಾತ್ರಿಯಾದ ಗ್ಯಾರಂಟಿ.



ಮಹನೀಯರೇ,

ಈ ನೂತನ ನಮೂನೆ ವಾಚ್ ಈಗ ತಾನೇ ಬಂದಿರುತ್ತೆ. ಪ್ರಪಂಚದಲ್ಲೆಲ್ಲಾ ಉಪಯೋಗಿಸಲ್ಪಡುವ ಮತ್ತು ಶ್ರೇಷ್ಠವಾದ ಲೀವರ್ ಕೆಲಸದಿಂದಲೂ, ಬಲಿಷ್ಟವಾದ ಮತ್ತು ನಾಜೂಕಾದ ಯಂತ್ರ ಸಾಮಾನುಗಳಿಂದಲೂ ತಯಾರಾಗಿ ಬಂದಿರುತ್ತೆ. ಈ ವಾಚ್ ಹೊಸವಾಗಿ ನಾವು ಪ್ರತ್ಯೇಕವಾಗಿ ತರಿಸುತ್ತೇವೆ. ಗೌರ್ನಮೆಂಟು ರೈಲ್ವೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದದ್ದು. ಸಂಬಳ ದಾರರಿಗೆ ದೀರ್ಘಕಾಲ ಅನೇಕ ವರ್ಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು. ಬಹು ರಮಣೀಯವಾದ ವಾಚ್. ಬರೀ ಮಾತುಗಳಿಂದಲೇನು? ಪರಂಪರೆ ಬಾಳಿಕೆ ಬರುವ ವಾಚ್ ಇದೇ. ಇದರ 7 ಬಹುಮಾನಗಳ ತಪಸೀಲ್:—(1) ಸುಂದರವಾದ ವಾಚ್ ಸರಪಣಿ, (2) ದಿಕ್ಕುಗಳನ್ನು ತೋರಿಸುವ ಉತ್ತರಮುಖಿ, (3) ವಾಚಿಗೆ ಧೂಳು ಸೇರದಂತೆ ಭದ್ರಪಡಿಸುವ ತೊಗಲಿನ ಚೀಲ, (4) ಕತ್ತಿ, (5) ವಾಚ್ ಸಂಗಡ ಧರಿಸಿಕೊಳ್ಳುವ ರೇಷ್ಮೆ ದಾರ, (6) ವಾಚ್ ಪೆಟ್ಟಿಗೆ (ಬಹು ಸುಂದರವಾದದ್ದು), (6) ಪರಿಮಳವುಳ್ಳ ಸುವಾಸನೆ ಸೀಸೆ, (7) ಕರವಸ್ತ್ರ

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.—

ಟಿ. ಸೀತಾರಾಮ ಮೊದಲಿಯಾರ್, ನಂ 3, ಕಂದಸ್ವಾಮಿ

[180-2] ಮೊದಲಿ ಬೀದಿ, ತಿರುವಲ್ಲಿಕೇಣಿ, ಮದರಾಸು.

Jain's Best Ointment.

ಜೈನರವರ ಉತ್ತಮೋತ್ತಮ ಆಯಿಂಟ್‌ಮೆಂಟು.

ಇದು ವೈದ್ಯಶಾಸ್ತ್ರ ಪ್ರಕಾರ ತಯಾರಾದ ಉತ್ತಮವಾದ ತೈಲವು. ಇದನ್ನು ಹಚ್ಚಿದರೆ ಬಹಳ ದಿನಗಳಿಂದಲೂ ಇರತಕ್ಕ ಗಡೆ, ಕೆಂಪು, ಕಜ್ಜಿ, ತುರಿ, ಹುಳು

ಕಡ್ಡಿ, ಎಲ್ಲಾ ವಿಧ ಕೆರತ, ಎಲ್ಲಾ ತರದ ರೋಗಗಳು, ಹುಣ್ಣುಗಳು ಬಹು ಬೇಗನಾಗಿ ಚರ್ಮದಲ್ಲಿ ಬಿದ್ದ ಹತ್ತಿಯಂತೆ ಧ್ವಂಸವಾಗಿ ವಾಯವಾಗುತ್ತವೆ. ಕತ್ತಿ, ಚಾಕು ಮೊದಲಾದ ಆಯುಧಗಳಿಂದ ಉಂಟಾಗುವ ಗಾಯಗಳಿಗೆ ವೈದ್ಯನಿಗೆ ಬದಲಾಗಿ ಈ ತೈಲವನ್ನೇ ಉಪಯೋಗಿಸಬಹುದು. ಇದನ್ನು ಗೋಕರಾಯಿಗಳ ಹುಣ್ಣುಗಳಿಗೂ, ಕುದುರೆ, ನಾಯಿ ಮೊದಲಾದ ಪ್ರಾಣಿಗಳ ಗಾಯಗಳಿಗೂ ಮುಕ್ತಿಯುಂಟುಮಾಡುವ ಔಷಧ. ಈ ಔಷಧವನ್ನು ಕಂಡುಹಿಡಿದು ತಯಾರು ಮಾಡುವುದಕ್ಕೆ ಬಹಳ ಶ್ರಮವನ್ನೂ, ಕಾಲವನ್ನೂ, ಹಣವನ್ನೂ ಖರ್ಚುಮಾಡಿರುತ್ತೇವೆ. ಈ ಆಯಿಂಟ್‌ಮೆಂಟಿನಿಂದ ಸಾವಿರಾರು ಜನರಿಗೆ ಗುಣವಾಗಿರುತ್ತದೆ. ನಕ್ಕಲ್ ತೈಲಗಳನ್ನು ನೋಡಿ ಮೋಸಹೋಗಬೇಡಿ. ನಮ್ಮ ಗುರುತಿರುವದನ್ನು ನೋಡಿ ಕೊಂಡುಕೊಳ್ಳಿ. ಔಷಧದ ಕೂಡ ಅನುಪಾನ ಪತ್ರಿಕೆ ಉಂಟು. ಕ್ರಯ 1 ಬಾಟ್ಲಿಗೆ ರೂ 1; ಸಣ್ಣ ಬಾಟ್ಲಿಗೆ 10 ಆಣೆ ವಿ. ಪಿ. ಖರ್ಚು ಬೇರೆ. ಗುಲಾಬ್‌ಸುಂದರ ಪ್ರಕಾಶ ಕೂದಲೆಣ್ಣೆ—ಮೆದುಳಿನ ಕೆಲಸದವರಿಗೂ ಇತರರಿಗೂ ಬಹಳ ಗುಣಕಾರಿ. ಕ್ರಯ ಬಾಟ್ಲಿಗೆ ರೂ. 1-8-0. ಇದನ್ನು ಒಂದು ಸಲ ತರಿಸಿ ಪರೀಕ್ಷಿಸಿ. [26-31]

ವಿಳಾಸ—ಜಿ. ಗುಲಾಬ್ ಚಂದ್ ಪೌವಾರ್,

60 ನೈನಪ್ಪನಾಯಕ್ ಬೀದಿ, ಪಾರ್ಕ್ ಟೌನ್, ಮದರಾಸ್.

BRAHMAPPA TAVANAPPANAVAR,

Merchant & Commission Agent.

Agent to Messrs. Currimbhoy Ebrahim & Co's Mills, BOMBAY.

ನಾವು ಮುಂಬೈ ಮೆಸ್ಸರ್ಸ್ ಕರೀಂಬಾಯ್ ಇಬ್ರಾಹಿಂ ಅಂಡ್ ಕಂಪೆನಿಯವರ ಬಾಬತು, ಮೆಸ್ಸರ್ಸ್ ಫಜುಲ್ಭಾಯ್ ಮಿಲ್ಸ್ ಲಿಮಿಟೆಡ್ ಮುಂಬೈ. ದಿ ಕ್ರೆಸೆಂಟ್ ಮಿಲ್ಸ್ ಲಿಮಿಟೆಡ್ ಮುಂಬೈ, ಕರೀಂಬಾಯ್ ಮಿಲ್ಸ್ ಲಿಮಿಟೆಡ್ ಮುಂಬೈ, ದಿ ಇಂಡಿಯನ್ ಬ್ಲೀಚಿಂಗ್, ಡೈಯಿಂಗ್ ಅಂಡ್ ಪ್ರಿಂಟಿಂಗ್ ವರ್ಕ್ಸ್ ಲಿಮಿಟೆಡ್ ಮುಂಬೈ, ದಿ ಇಂಡೋರ್ ಅಂಡ್ ಮಾಲ್ವಾ ಯುನೈಟೆಡ್ ಮಿಲ್ಸ್ ಲಿಮಿಟೆಡ್ ಇಂದೋರ್, ಇವುಗಳಲ್ಲದೆ ಇನ್ನೂ ಅನೇಕ ಮಿಲ್ಲುಗಳ ಬಟ್ಟೆಗಳನ್ನು ವೈನಿಕೂಡಾ ಎಲ್ಲೆಲ್ಲಿಯೂ ವಿಕ್ರಯಮಾಡಲು ಕಮಿಷನ್ ಏಜಂಟರಾಗಿರುತ್ತೇವೆ. ನಮ್ಮ ಮುಖಾಂತರ ಮಾಲು ತರಿಸಿಕೊಳ್ಳತಕ್ಕವರಿಗೆ ಮುಂಬೈಯಲ್ಲಿ ಬಟ್ಟೆಗಳ ಮೇಲೆ ವಿಧಿಸತಕ್ಕ ದಳ್ಳಾಳಿ, ಟೋಪಾದಳ್ಳಾಳಿ, ಮೊಕ್ಕಾಮು, ಗಂಟುಕಟ್ಟುವದು, ಸ್ಟೇಷನ್ನಿಗೆ ಸೇರಿಸುವದು, ಹುಂಡೇಕರಿ ವಗೈರೆ ಯಾವ ವಿಧವಾದ ಖರ್ಚೂ ತಗಲದೆ ಇರುವದರಿಂದ ಮುಂಬೈಯಿಂದ ತರಿಸುವುದಕ್ಕಿಂತಲೂ ಸುಲಭ ದರದಲ್ಲಿ ಸಿಕ್ಕುತ್ತೆ. ಮತ್ತು ಮುಂಬೈಗೆ ಹೋಗಿಬರುವ ದೇಹಶ್ರಮವೂ, ಖರ್ಚೂ ಉಳಿಯುತ್ತೆ. ಹೆಚ್ಚು ಬಟ್ಟೆಗಳನ್ನು ಏಕಕಾಲದಲ್ಲಿ ಕೊಳ್ಳತಕ್ಕವರಿಗೆ ಮಾಲಿನ ಮೇಲೆ ಶೇಕಡ 3 ರೂಪಾಯಿ ಲಾಗಾಯ್ತು 4½ ರೂಪಾಯಿ ವರಿಗೆ ಡಿಸ್ಕೌಂಟು ದೊರೆಯುತ್ತೆ. [97-19]

ನಮ್ಮ ಟ್ರಾವಲಿಂಗ್ ಏಜಂಟರ ವಶ ಬಟ್ಟೆಗಳ ನಮೂನೆಗಳನ್ನು ಕೊಟ್ಟು, ದರ ಒಬ್ಬ ವ್ಯಾಪಾರಗಾರನಿಗೆ ತೋರಿಸಿ ಆರ್ಡರು ತೆಗೆದುಕೊಳ್ಳುವ ಏರ್ಪಾಡು ಮಾಡಿರುತ್ತೆ. ನಮ್ಮ ದಾವಣಗೆರೆ ಮತ್ತು ಬೆಂಗಳೂರು ಆಫೀಸುಗಳಲ್ಲಿ ಮಾಲು ಹಾಜರು ಸಹ ದೊರೆಯುತ್ತೆ.

ಬಟ್ಟೆಗಳನ್ನು ವ್ಯಾಪಾರಮಾಡಲು ಅನುಭವಸ್ಥರಾದ ಏಜಂಟುಗಳೂ ಮತ್ತು ಗುಮಾಸ್ತರುಗಳೂ ಬೇಕಾಗಿದೆ.

ಎಲ್ಲಾ ಕಾಗದಪತ್ರಗಳೂ ದಾವಣಗೆರೆ ಆಫೀಸಿಗೆ ಬರೆಯಲ್ಪಡಬೇಕು.

ಹೆಡ್ ಆಫೀಸು:—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್, ದಾವಣಗೆರೆ. ಬ್ರಾಂಚ್ ಆಫೀಸು:—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್,

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಮಕ್ಕಳ ಆರೋಗ್ಯವನ್ನು

ಕಾಪಾಡುವುದು ಹೆತ್ತವರ ಮೇಲೆ ಬಿದ್ದ ಭಾರವಾಗಿದೆ.

ಸಣ್ಣ ಮಕ್ಕಳು ಹೇಳಿದಂತೆ ಕೇಳದೆ ಸಿಟ್ಟಿಗೆ ಏಳುವಂಥವರಾಗಿದ್ದು ಆಹಾರರುಚಿ ಕಡಮೆಯುಳ್ಳವರಾಗಿದ್ದಾರೆಂದು ಕಂಡ ಕೂಡಲೇ

SCOTT'S EMULSION 6-36

(ಸ್ಕಾಟ್ಸ್ ಇಮಲ್‌ಷನ್)

ಎಂಬೀ ಸೇವನಾ ಔಷಧವನ್ನು ಕೊಡಬೇಕು. ಹಾಲಿನಲ್ಲಿ ಕೆಲವು ತೊಟ್ಟು

Always get the Emulsion with this mark—the Fishman the mark of the "Scott" process!

ಬೆರಸಿಕೊಟ್ಟ ಕೂಡಲೇ ದೊಡ್ಡ ವ್ಯತ್ಯಾಸ ತೋರುವುದು. ಅದು ಸಂತೋಷವೂ ಆ ನಂದವೂ ಹುಟ್ಟುವದಾಗಿ ಆಹಾರದ ರುಚಿ ಹೊಂದಿ ಸುಖ ಚಿಹ್ನೆ ತೋರಿಸುವದು.

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ.

ಎಲ್ಲಾ ಔಷಧ ಮಾರುವವರಲ್ಲೂ ಸಿಕ್ಕುತ್ತದೆ.

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್.

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್.

ಪ್ರವಾಹದ ಕಷ್ಟನಷ್ಟಗಳು.

ಬೆಳಗಾಂವ ಜಿಲ್ಲಾ ಸವದತ್ತಿಯ ವರ್ತಮಾನಪತ್ರಿಕಾರರು ಧಾರವಾಡದ ಚಂದ್ರೋದಯದಲ್ಲಿ ತಾ. 12 ರಲ್ಲಿ ಬರೆಯುವುದೇನೆಂದರೆ—ಇಲ್ಲಿ ತಾ. 5 ಮತ್ತು 6 ನೇ ಮಂಗಳವಾರ ಮತ್ತು ಬುಧವಾರ ಅನುಕ್ರಮವಾಗಿ 5 ಇಂಚು ಮತ್ತು 2 ಇಂಚು ಮಳೆಯಾಯಿತು. ಈ ಊರೊಳಗಿನ ಐದಾರು ನೂರು ಮನೆಗಳು ಬಿದ್ದಿರುತ್ತವೆ. ಇಲ್ಲಿ ಸುಮಾರು 2,000 ಮನೆಗಳು ಇದ್ದು ಗೋಡೆ ಬೀಳದೆ ಅಥವಾ ಧಕ್ಕೆ ತಗಲದೆ ಇದ್ದ ಮನೆಯು ಒಂದೂ ಇಲ್ಲ. ಈ ತಾಲೂಕಿನಲ್ಲಿ ತೆಂಗಾರಗೊಪ್ಪ, ಸವದಿಹಳ್ಳಿ, ಬಡ್ಡಿ, ಕುಸಲಾಪುರ, ಈ ನಾಲ್ಕು ಹಳ್ಳಿಗಳು ಮಲಪ್ರಭಾ ನದಿಯ ತೀರದಲ್ಲಿ ಇದ್ದು ನದಿಯು ತುಂಬಿ ಬಂದು ಊರಲ್ಲಿ ಹೊಕ್ಕದ್ದರಿಂದ ಈ ನಾಲ್ಕು ಹಳ್ಳಿಗಳೂ ಪೂರ್ಣವಾಗಿ ತೇಲಿಹೋದವು. ಮತ್ತು ಧೂಪದಾಳ ಮತ್ತು ಗುರ್ಲಹೊಸೂರ, ಮುನವಳ್ಳಿ, ಮಾಟೊಳ್ಳಿ, ಈ ಹಳ್ಳಿಗಳು ಅರ್ಧ ತೇಲಿಹೋದವು. ಮುನವಳ್ಳಿಯೊಳಗೆ ನದಿಯು ಹೊಕ್ಕದ್ದರಿಂದ ಅಲ್ಲಿ ಸಹ ಅನೇಕ ಮನೆಗಳು ತೇಲಿಹೋದವು. ಪ್ರಾಣಹಾನಿಯು ಮಾತ್ರ ಆಗಲಿಲ್ಲ. ಆದರೆ ಜನರ ಯಾವತ್ತು ಜಂಗಮ ಆಸ್ತಿಗಳು—ಅರಿವೆಅಂಚಡಿ, ಕಾಳುಕಡ್ಡಿ, ನೀರುಹೊಟ್ಟು, ಭಾಂಡಿಕುಂಡಿ, ದಾಗದಾಗೀನೆಗಳು ಜಲದೇವತೆಗೆ ಅರ್ಪಣವಾದವು. ಪೂರಾ ತೇಲಿಹೋದ ಹಳ್ಳಿಗಳಲ್ಲಿಯ ಜನರು ಕೆಲವರು ನೆರೆಹೊರೆಯ ಇತರ ಹಳ್ಳಿಗಳಿಗೆ ಹೋಗಿರುವರಲ್ಲದೆ ಕೆಲವರು ಸವದತ್ತಿಗೆ ಬಂದು ಸೇರಿರುವರು. ಇಲ್ಲಿಯ ದಯಾಳು ಮಾಮಲೇದಾರ್ ಮತ್ತು ಗಣ್ಯಸ್ಥರಾದ ಹೆಂಡೆಯವರು ಈ ಯಾವತ್ತು ಊರುಗಳ ಸ್ಥಿತಿಯನ್ನು ಕಣ್ಣಾರ ನೋಡಿ ತಮ್ಮ ವರಿಷ್ಠರ ಕಡೆಗೆ ರಿಪೋರ್ಟು ಮಾಡುವದಕ್ಕಾಗಿ ಈಗ 2-3 ದಿವಸ ಆಯಾ ಹಳ್ಳಿಗಳಿಗೆ ಹೊರಟು ಹೋಗಿರುತ್ತಾರೆ. ಗುರ್ಲಹೊಸೂರಲ್ಲಿ ಚಿಲೋಸ್ಕರವಾಡೆ, ಬಾಬಾಗರ್ದೆಯವರ ವಾಡೆ ಮತ್ತು ನಾಯಕರ ವಾಡೆ, ಈ ಮೂರು ದೊಡ್ಡ ವಾಡೆಗಳು ಸುಮಾರು 75 ಸಾವಿರ ಅಥವಾ 1 ಲಕ್ಷ ಕಿಮ್ಮತ್ತಿನವು ತೇಲಿಹೋಗಿದ್ದು, ಈ ಮೂರು ಜನರ ಜಂಗಮ ಮಾಲು 10-15 ಸಾವಿರ ಬೆಲೆಯುಳ್ಳದ್ದು ನದಿಯಲ್ಲಿ ತೇಲಿಹೋಯಿತು. ಗುರ್ಲಹೊಸೂರ ಹತ್ತರವಿದ್ದ 4-5 ತಾರಿನ ಕಂಭಗಳು ಕಿತ್ತು ಬಿದ್ದಿದ್ದು ಮತ್ತು ತಾರುಗಳು ಸಹ ಹರಿದಿದ್ದು ಗುರುವಾರದಿಂದ ತಾರು ಬಂದಾಗಿರುತ್ತದೆ. ಮಂಗಳವಾರದಿಂದ ಟಪಾಲು 5 ದಿವಸ ತಡವಾಗಿ ಬಂತು. ಈಗ ಐದು ದಿವಸ ಮಳೆಯು ಹೋಗಿತ್ತು. ಈ ಹೊತ್ತು ಮಧ್ಯಾಹ್ನಕ್ಕೆ ಪುನಃ ಕಸವಿನ ಮಳೆಯಾಯಿತು. ಮಾರ್ಗದ ಮೇಲೆಲ್ಲಾ ನೀರು ಬಹಳ ಹರಿಯಿತು.

ಒಂದು ಹೊಸ ಸ್ಕೂಲಿನ ಪ್ರವೇಶೋತ್ಸವ.

ಮಂಡ್ಯ ತಾಲೂಕು ಹುಳಗೆರೆ

ಮಂಡ್ಯದ ತಾಲೂಕು ಆತಗೂರು ಹೋಬಳಿ ಹುಳಗೆರೆ ಗ್ರಾಮದಲ್ಲಿ ಸರ್ಕಾರದವರು ದಯಪಾಲಿಸಿದ ಸ್ಕೂಲ್ ಸ್ಥಾಪನೆಯ ಸಂತೋಷದಲ್ಲಿ ಈ ಗ್ರಾಮದ ರೈತರೆಲ್ಲರೂ ಸೇರಿ ಆಜೂಬಾಜು ಇರತಕ್ಕ ದೊಡ್ಡಮನುಷ್ಯರಿಗೂ ಸಭಾ ಬರವಣಿಗೆ ಮೂಲಕ ಪತ್ರಿಕೆಯನ್ನು ಕೊಟ್ಟು ಎಲ್ಲರನ್ನೂ ಬರಮಾಡಿಕೊಂಡಿದ್ದರು. ಸ್ಥಳಿಕ ಹೋಬಳಿ ಶೇಕದಾರ್ ಎ. ಮಹಮ್ಮದ್ ಮುಸ್ತಫಾ ಬೇಗ್ ಸಾಹೇಬರವರು ಅಗ್ರಾಸನವನ್ನು ವಹಿಸಿದ್ದರು. ಮುಖ್ಯರಾದ ಶಾನುಭೋಗ ಸುಬ್ರಾಯರು, ಪ. ಬೋರೇಗೌಡರು, ಲಿಂಗೇಗೌಡರು ಮಾಯಪ್ಪನ ಬೋರೇಗೌಡರು, ದೊಡ್ಡಗೌಡರು, ಚನ್ನವೀರಪ್ಪನವರು, ಕೆಂಚೇಗೌಡರು ಮುಂತಾದ ಗ್ರಾಮಸ್ಥರೂ ಅನೇಕ ದೊಡ್ಡಮನುಷ್ಯರೂ ಸಹಾ 150 ಜನಗಳ ವರೆವಿಗೂ ಸೇರಿದ್ದರು. ಮಹಾರಾಜರವರ ಫೋಟೋವನ್ನು ಬಹಳ ವಿಜೃಂಭಣೆಯಿಂದ ಉತ್ಸವಮಾಡಲಾಯಿತು. ಪಾಠಶಾಲೆಗಾಗಿ ಕಟ್ಟಿರತಕ್ಕ ಕಟ್ಟಡ ವಗೈರೆಯನ್ನು ಬಾಳೆಕಂಭಗಳಿಂದಲೂ, ತಳಿರುತೋರಣಗಳಿಂದಲೂ, ಅನೇಕ ತರಹ ಪುಷ್ಪಗಳಿಂದಲೂ, ಕರಡೀಪಾರಿ ಫೋಟೋಗಳಿಂದಲೂ, ಬಾವುಟಗಳಿಂದಲೂ ಅಲಂಕರಿಸಿದ್ದರು. ಆ ದಿವಸ ಮಧ್ಯಾಹ್ನ ಈ ಸ್ಕೂಲ್ ವಿದ್ಯಾರ್ಥಿಗಳನ್ನು ಸೇರಿಸಿ ಕರಡೀಪಾರಿ ಆಟಪಾಟಗಳನ್ನು ಆಡಿಸಿ ಗೆದ್ದವರಿಗೆ ಗ್ರಾಮಸ್ಥರು ಹಾಕಿದ್ದ ಚಂದಾ ಹಣದಿಂದ ಬಹುಮಾನಗಳು ಹಂಚಲ್ಪಟ್ಟವು. ಶ್ರೀಮನ್ ಮಹಾರಾಜರ ರಾಜನಿಷ್ಠಾ ಸ್ತೋತ್ರ ಹಾಡಿದವರ ಫೋಟೋವನ್ನು ಸ್ಕೂಲಿನಲ್ಲಿ ಇಡಿಸಿ ಆದಬೆಣ್ಣಿಂದ ಪೂಜೆ ಮಾಡಿದ್ದಲ್ಲದೆ, ಶ್ರೀಮನ್ ಮಹಾರಾಜರವರ ಮತ್ತು ಶ್ರೀಮದ್ಯುವರಾಜರವರ ಶ್ರೇಯಃಪ್ರಾರ್ಥನೆಯನ್ನು ಮಾಡಿದರು. ವಿದ್ಯಾವಿಷಯದಲ್ಲಿ ಸ್ಕೂಲ್ ಮಾಸ್ಟರು ಮ॥ ಎ. ಲಕ್ಷ್ಮೀನರಸಿಂಹಯ್ಯನವರು ಸ್ವಾರಸ್ಯವಾದ ಉಪನ್ಯಾಸವನ್ನು ಮಾಡಿದರು. ಈ ಗ್ರಾಮದ ರೀಡಿಂಗ್ ರೂಮ್ ಬಹಳ ಚೆನ್ನಾಗಿ ನಡೆಯುತ್ತಾ ಇದೆ. ಸ್ಕೂಲ್ ಅಭಿವೃದ್ಧಿ ವಿಷಯದಲ್ಲಿ ವಿದ್ಯಾವಿಷಯದಲೂ, ಪತ್ರಿಕೆಯನ್ನು ಉಪಯೋಗಿಸುವದರಲೂ ಉಂಟಾಗುವ ಪ್ರಯೋಜನಗಳನ್ನು ವಿವರಿಸಿ ಉಪನ್ಯಾಸಮಾಡಿದರು. ಸಂಗೀತ ನಡೆದು ಸಭಿಕರೆಲ್ಲರಿಗೂ ಆನಂದ ಉಂಟಾಯಿತು. ಸ್ಕೂಲ್ ಬಾಲಕರಿಗೆ ಮಿಠಾಯಿ ಮತ್ತು ತಿಂಡಿ ಸಹಾ ಹಂಚಲ್ಪಟ್ಟಿದ್ದಲ್ಲದೆ ಬಡವರ ಹುಡುಗರ ಪುಸ್ತಕ ವಗೈರೆಗಾಗಿ ತಕ್ಕ ಏರ್ಪಾಡು ಮಾಡಿ ಚಂದಾ ವಸೂಲ್ಮಾಡಲಾಯಿತು. ಅನಂತರ ಪುಷ್ಪ ತಾಂಬೂಲಾದಿಗಳಿಂದ ಸಭೆಯು ಮುಕ್ತಾಯವಾಯಿತು.

ಬಿ. ಎಲ್.

ಪ್ರೊಫೆಸರ್ ಬೇಸ್ಲರ್ ಇಲೆಕ್ಟ್ರೋ ಪೆಯಿನಾಡೈನ್

ಮನುಷ್ಯನ ಶರೀರದಲ್ಲಿ ವಿದ್ಯುಚ್ಛಕ್ತಿ ವ್ಯಾಪಿತವಿರುವದೆಂತಲೂ, ವಿದ್ಯುಚ್ಛಕ್ತಿ ಕಡಮೆಯಾದ ಕೂಡಲೇ ನಾನಾ ತರದ ವ್ಯಾಧಿಗಳು ಬಾಧಿಸುವದೆಂತಲೂ, ಅಂತಹ ವ್ಯಾಧಿಗಳನ್ನು ಶೀಘ್ರ ಗುಣಪಡಿಸಲು ವಿದ್ಯುಚ್ಛಕ್ತಿ ಮಿಶ್ರವಾದ ಔಷಧದ ಉಪಯೋಗದಿಂದಲ್ಲದೆ



ಬೇರೆ ಔಷಧಗಳಿಂದ ವ್ಯಾಧಿಗಳನ್ನು ಶೀಘ್ರ ಗುಣಪಡಿಸುವದು ಕಷ್ಟವೆಂತಲೂ ಅಮೇರಿಕಾ ದೇಶದ ವೈದ್ಯಶಾಸ್ತ್ರ ಪಂಡಿತರು ವೈದ್ಯಶಾಸ್ತ್ರ ಪರಿಶೋಧನೆಯಿಂದ ಸಿದ್ಧಿಸಿರುವರು. ಈ ಔಷಧವು ಉಪಯೋಗಿಸಿದ ಕೂಡಲೇ ದೇಹಕ್ಕೆ ಸಾಕಾಗುವಷ್ಟು ವಿದ್ಯುಚ್ಛಕ್ತಿಯನ್ನುಂಟುಮಾಡಿ ವ್ಯಾಧಿಯನ್ನು ಅತಿ ಶೀಘ್ರ ಗುಣಪಡಿಸುತ್ತೆ. ಪ್ರಾಚೀನಕಾಲದ ಔಷಧಗಳಿಗೆಲ್ಲವೂ ಇದು ಅತ್ಯುತ್ತಮವಾದದ್ದು. ಒಂದಾವರ್ತಿ ಪರೀಕ್ಷಿಸಿ ನೋಡಿದರೆ ಇದರ ಗುಣವು ವ್ಯಕ್ತವಾಗುತ್ತೆ.

ಎಲೆಕ್ಟ್ರೋಪೆಯಿನಾಡೈನ್ ತೈಲದಿಂದ ಗುಣಪಡುವ ವ್ಯಾಧಿಗಳು:—

ತಿಮರುವಾಯುವು, ಕೀಲ್ವಾಯುವು, ಪಾರ್ಶ್ವವಾಯುವು, ಕ್ಷಯ, ಕೆಮ್ಮು, ನೆಗಡಿ, ವಾಯುನೋವು (ಕೈಕಾಲು ಹಿಡಿತ), ಉಳುಕುಹಿಡಿದಿದ್ದರು, ಕಠಿನಶ್ವಾಸ, ನರುನೋವು (ಸೊಂಟನೋವು), ಪಕ್ಕಶೂಲೆ, ಹಲ್ಲು ನೋವು, ತಲೆನೋವು, ಅರತಲೆ ನೋವು, ಉಬ್ಬಸ, ವಿಷಜ್ವರದ ಗಡ್ಡೆಗಳಿಗೂ ಮತ್ತು ಮಕ್ಕಳ ಪಕ್ಕಶೂಲೆ, (ಅಳ್ಳೆ) ಶೈತ್ಯದೋಷಗಳೂ, ವಿಷಜಂತುಗಳ ಕಡಿತಗಳಿಗೂ (ಚೇಳು ಮುಂತಾದದ್ದು), ಇದಕ್ಕೆಲ್ಲಾ ಬಹಳ ಶ್ಲಾಘನೀಯವಾದದ್ದು. [12-34]

ಉಪಯೋಗಿಸುವ ಕ್ರಮವು ಹಿಂದುದೇಶದ ಎಲ್ಲಾ ಭಾಷೆಗಳಲ್ಲಿಯೂ ಬುಡ್ಡಿಯ ಸಂಗಡ ಕಳುಹಿಸಲಾಗುವುದು.

ಬುಡ್ಡಿಯ ಕ್ರಯ ರೂ. 0-8-0. ವಿ. ಪಿ. ಖರ್ಚು 0-4-0. ಏಜಂಟರು ಬೇಕು.

ಮುಖ್ಯ ಏಜಂಟರು:—ಗುರುಬಸವ ಅಂಡ್ ಕಂಪನಿ, ಮದರಾಸ್.

ವೃತ್ತಾಂತ ಪತ್ರಿಕೆ.

:o:

ಸನ್ ೧೯೧೪ ನೇ ಇಸವಿ ಆಗಸ್ಟ್ ತಾ. ೨೭ ನೇ ಗುರುವಾರ.

ಸಂಪದಭಿವೃದ್ಧಿ ಸಮಾಜವು.

ಮೈಸೂರು ಗವರ್ನಮೆಂಟಿನವರು ನಮ್ಮ ಸಂಸ್ಥಾನದ ಬೇರೆ ಬೇರೆ ಡಿಸ್ಟ್ರಿಕ್ಟುಗಳಲ್ಲಿ ಸಂಪದಭಿವೃದ್ಧಿ ಮಾಡುವ ಕಾರ್ಯಗಳಿಗಾಗಿ ಕೆಲವು ಸರ್ಕಾರದ ನೌಕರರನ್ನೂ, ಪ್ರಜೆಗಳ ಪ್ರತಿನಿಧಿಗಳನ್ನೂ ಅಧಿಕಾರ ಕೊಟ್ಟು ನೇಮಕಮಾಡಿದಾರೆ. ಸಂಸ್ಥಾನದ ಸಂಪತ್ತನ್ನು ಅಭಿವೃದ್ಧಿ ಮಾಡತಕ್ಕ ವಿಚಾರವು ಈಗಾಗಲೇ ಇಂಥಾ ಅಧಿಕಾರಿಗಳನ್ನು ನೇಮಿಸುವಷ್ಟಕ್ಕೆ ಬಂದಿಲ್ಲವೆಂದು ನಮಗೆ ತೋರುತ್ತದೆ. ನಾನಾ ಮಾರ್ಗಗಳಲ್ಲಿ ಹೆಚ್ಚು ಹೆಚ್ಚಾಗಿ ಹಣಗಳು ಖರ್ಚಾಗುತ್ತಿರುವವು. ಆದರೆ ಇದುವರೆಗೇನೋ ಅದರಿಂದ ಪ್ರತಿಫಲವಾಗಿರುವುದನ್ನು ನಾವು ನೋಡಲಿಲ್ಲ. ವ್ಯರ್ಥವಾಗಿ ಖರ್ಚಾಗುತ್ತಿರುವ ಹಣಗಳ ಮೊತ್ತಕ್ಕೆ ಈಗ ಸಂಬಳಗಾರರನ್ನು ನೇಮಕಮಾಡಿ ಅವರಿಗೆ ತಲಾ 200 ರೂಪಾಯಿಸಂತೆ ವಿನಿಯೋಗಿಸುವುದೂ ಸೇರಿಕೊಳ್ಳುವುದೇ ಹೊರತು ಬೇರೇನೂ ಕಾಣುವುದಿಲ್ಲ. ಈಗ ನೇಮಿಸಲ್ಪಟ್ಟಿರುವವರಿಗೆ ಕಸಬುಗಳ ಅನುಭವವೇನಾದರೂ ಇದೆಯೇ? ಇಂಥಿಂಥಾ ಕಾರ್ಯಗಳನ್ನು ಈ ಈ ರೀತಿ ಮಾಡಬೇಕೆಂದು ಅವರಿಗೆ ಖಂಡಿತವಾದ ತಿಳುವಳಿಕೆ ಕೊಡಲ್ಪಟ್ಟಿರುವುದೇ? ಮತ್ತು ಸಾಧುವೆಂದು ಕಂಡುಬರುವಂಥಾ ಕಾರ್ಯಗಳನ್ನು ನಡಿಸಲು ಅವರಿಗೆ ಸರ್ಕಾರದಿಂದ ಹಣವನ್ನು ಒದಗಿಸುತ್ತಾರೆಯೇ?

ಸಂಸ್ಥಾನದ ಯಾವಯಾವ ಭಾಗದಲ್ಲಿ ಎಂಥೆಂಥಾ ಕಸಬು ಕೈಗಾರಿಕೆಗಳನ್ನು ಪ್ರಾರಂಭಿಸುವುದಕ್ಕೆ ಸೌಲಭ್ಯವುಂಟೋ ಅದನ್ನೆಲ್ಲಾ ಸಾವಧಾನವಾಗಿ ಪರ್ಯಾಲೋಚಿಸುವುದಕ್ಕೆ ಬಹಳ ಸಮಯಬೇಕಾಗುವುದು. ಹಲವು ಕಸಬುಗಳನ್ನು ಪ್ರಾರಂಭಿಸಬಹುದೆನ್ನುವುದಕ್ಕೆ ಸಂಶಯವಿಲ್ಲ; ಅವುಗಳಿಗೆ ಬೇಕಾಗುವ ಸಲಕರಣಗಳು ಒದಗುತ್ತವೆ. ಆದರೆ ಅವುಗಳನ್ನು ಪ್ರಾರಂಭಿಸಿದರೆ ಪ್ರಾರಂಭದಿಂದಲೂ ಅವು ಲಾಭಕರವಾಗುವವೆಂದು ಹೇಳುವುದಾಗಲಿ, ಆ ರೀತಿ ಮಾಡುವುದಾಗಲಿ ಸಾಧ್ಯವೆಂದು ನಮಗೆ ತೋರುವುದಿಲ್ಲ.

ಈ ನವೀನ ಕಾರ್ಯಗಳನ್ನು ಪ್ರಾರಂಭಮಾಡತಕ್ಕವರು ಯಾರೆಂದು ವಿಚಾರಮಾಡಿ ನೋಡೋಣ. ಸರ್ಕಾರದವರು ಪ್ರಜೆಗಳೇ ಕಸಬುಗಳನ್ನು ಮಾಡಿ, ಅವರೇ ಹಣವನ್ನು ಒದಗಿಸಿ, ಅವರೇ ನಡಿಸಿಕೊಂಡು ಬರಬೇಕೆಂದೂ, ತಾವೂ ಕೆಲವು ಷೇರುಗಳನ್ನು ಕೊಂಡುಕೊಂಡು ಬೇಕಾದ ತಿಳುವಳಿಕೆಯನ್ನೂ ಮಾಹಿತಿಯನ್ನೂ ಮಾಡಿಕೊಡುತ್ತೇವೆಂದೂ ಹೇಳುತ್ತಾರೆ. ಹೀಗೆ ಕಸಬುಗಳನ್ನು ಪ್ರಾರಂಭಿಸಿ ನಡಿಸಿಕೊಂಡು ಬರುವುದಕ್ಕೆ ಪ್ರಜೆಗಳಿಗೆ ತಿಳುವಳಿಕೆಯಾಗಲಿ, ಅನುಭವವಾಗಲಿ ಇಲ್ಲ; ಇಂಥಾದ್ದರಲ್ಲಿ ಹಲವು ಕಸಬುಗಳನ್ನು ಏಕಕಾಲದಲ್ಲಿ ಸೂಚಿಸಿ ಪ್ರಾರಂಭಿಸಬೇಕೆಂದು ಉತ್ತೇಜನ ಕೊಡುವುದು ತರವಲ್ಲ. ಈ ಭಾಗದಲ್ಲಿ ನಮಗೆ ತುಂಬಾ ಸಂಶಯವುಂಟು. ಯಾಕಂದರೆ ಯಾವ ಒಂದು ಕಸಬೂ ತೃಪ್ತಿಕರವಾಗಿ ನಡೆಯುವಂತಾಗುವುದಿಲ್ಲ. ಇದನ್ನು ಬಿಟ್ಟು ಒಳ್ಳೆಯದೆಂದು ಕಂಡುಬರುವ ಒಂದು ಕಸಬನ್ನು ಅಥವಾ ಕೈಗಾರಿಕೆಯನ್ನು ಹಿಡಿದು ಅದರ ಸಾಧಕಬಾಧಕಗಳನ್ನೆಲ್ಲಾ ಸಾವಧಾನವಾಗಿಯೂ ಸ್ಥಿರಮನಸ್ಸಿನಿಂದಲೂ ಚೆನ್ನಾಗಿ ಪರ್ಯಾಲೋಚನೆಯಿಂದ ಚರ್ಚೆಮಾಡಿ, ಆ ಕಸಬನ್ನು ಸಮರ್ಥರೂ ಅನುಭವಶಾಲಿಗಳೂ ಆಗಿರುವವರ ಮೂಲಕವೇ ನಡಿಸಿ, ಶ್ರೇಯಸ್ಸಿಗೆ ಬರುವಂತೆ ಮಾಡಿದ ಪಕ್ಷದಲ್ಲಿ ಇತರ ಕಸಬುಗಳು ಅದರ ಹಿಂದೆಯೇ ಪ್ರಾರಂಭವಾಗುತ್ತವೆ.

ನಮ್ಮ ಅಭಿಪ್ರಾಯದಲ್ಲಿ ರೇಷ್ಮೆ ತಯಾರಿಯನ್ನು ದೃಷ್ಟಾಂತವಾಗಿ ಹೇಳಬಹುದು. ಈ ಕಸಬನ್ನು ಬಲ್ಲ ನಿಪುಣನು ಒಬ್ಬರುತ್ತಾನೆ. ನಮ್ಮ ದೇಶದಲ್ಲಿ ಉತ್ಪತ್ತಿಯಾಗುವ ರೇಷ್ಮೆಯು ಯಾಕೆ ಅಷ್ಟು ಬೀಳಾಗಿರುವುದೋ, ಹೆಚ್ಚು ರೇಷ್ಮೆಯನ್ನು ಯಾತಕ್ಕಾಗಿ ಉತ್ಪತ್ತಿಮಾಡಲಾರರೋ, ಇದನ್ನು ಯಾವ ರೀತಿಯಾಗಿ ಅಭಿವೃದ್ಧಿಮಾಡಿಕೊಳ್ಳಬಹುದೋ, ಈ ಭಾಗವನ್ನೆಲ್ಲಾ ಆತನು ನಮಗೆ ತೋರಿಸಿಕೊಟ್ಟಿದ್ದಾನೆ. ಹಾಗಾದರೆ ನಾವು ಈಗ ಮಾಡತಕ್ಕದ್ದೇನು? ಗವರ್ನಮೆಂಟಿನವರು ಹೆಚ್ಚು ಹೆಚ್ಚಾಗಿ ಹಣವನ್ನು ಕೊಡುತ್ತಾರೆ; ಆದರೆ ಆ ಹಣವನ್ನು ವಿನಿಯೋಗಿಸಿಕೊಂಡು ರೇಷ್ಮೆ ಕಸಬನ್ನು ಉತ್ಕೃಷ್ಟವಾದ ಸ್ಥಿತಿಗೆ ತರುವ ಭಾಗದಲ್ಲಿ ಕಾರ್ಯತಃ ಯಾವ ಏರ್ಪಾಡಾದರೂ ನಡೆದಿರುವುದೇ? ರೇಷ್ಮೆ ಕಸಬಿನಲ್ಲಿ ನಿಪುಣನನ್ನು ಕರಸಿಟ್ಟುಕೊಳ್ಳುವುದು ಸುಲಭ; ಕಮಿಟಿಯವರ ಅಪೇಕ್ಷೆಯ ಪ್ರಕಾರ ಹಣವನ್ನೂ ಸುಲಭವಾಗಿ ಒದಗಿಸಬಹುದು; ಆದರೆ ಇದರಿಂದೆಲ್ಲಾ ಫಲಿತಾಂಶವೇನಾಗಬಹುದು? ರೈತರು ಹೊಸ ಮಾರ್ಗಗಳನ್ನು ಅನುಸರಿಸಿ ಜಾಗರೂಕತೆಯಿಂದ ರೇಷ್ಮೆ ಹುಳಗಳನ್ನು ಸಾಕಿ ಬೆಳೆ ತೆಗೆಯುವಂತೆ ಅವರಿಗೆ ಪ್ರೇರೇಪಣೆಮಾಡಿ ಪ್ರೋತ್ಸಾಹಕೊಡುವರೋ? ಈ ಪ್ರಶ್ನೆಗೆ ಜವಾಬು ಹೇಳುವ ಭಾಗದಲ್ಲಿ ನಮಗೆ ತುಂಬಾ ಅನುಮಾನವುಂಟು. ಮೊದಲು ಜನರ ನಡವಳಿಕೆಯನ್ನು ಬದಲಾಯಿಸಿದ ಹೊರತು ಈ ಪ್ರಯತ್ನಗಳ್ಯಾವವೂ ಸಾರ್ಥಕವಾಗುವುದಿಲ್ಲ. ಸೋಮಾರಿಗಳನ್ನು ಚಟುವಟಿಕೆಯುಳ್ಳವರನ್ನಾಗಿಯೂ, ಅಲಕ್ಷ್ಯವಂತರನ್ನು ಜಾಗರೂಕರನ್ನಾಗಿಯೂ, ಬೇಕಾಬಿಟ್ಟಿ ಕೆಲಸಮಾಡುವವರನ್ನು ಉತ್ಸಾಹಶೀಲರನ್ನಾಗಿಯೂ ಮಾಡದೆಹೋದರೆ ಸರ್ಕಾರದವರು ಮಾಡುತ್ತಿರುವ ಪ್ರಯತ್ನಗಳೆಲ್ಲಾ ನಿಷ್ಪ್ರಯೋಜನವಾಗುವವು. ಇದರಿಂದ ಗವರ್ನಮೆಂಟಿನವರು ಖರ್ಚುಮಾಡುವಂಥಾ ಅಪಾರವಾದ ಹಣಗಳು ಅಸಾರ್ಥಕವಾಗಿ ಪರಿಣಮಿಸುವವೆಂದು ತಿಳಿಸಲು ವಿಷಾದಪಡುತ್ತೇವೆ.

ಚಕ್ರವರ್ತಿಯವರ ಅನುಜ್ಞೆ.

ಇಂಗ್ಲಿಷ್ ಸೈನ್ಯವು ಕಳೆದ ತಾ. 17 ನೇ ಸೋಮವಾರ ಇಂಗ್ಲೆಂಡಿನಿಂದ ಫ್ರಾನ್ಸಿಗೆ ಪ್ರಯಾಣಮಾಡಿದಾಗ್ಗೆ ಚಕ್ರವರ್ತಿ ಸಾರ್ವಭೌಮರವರು ಅವರಿಗೆಲ್ಲಾ ತಿಳಿಯಪಡಿಸಿದ್ದೇನೆಂದರೆ:—

“ನೀವುಗಳು ನಮ್ಮ ಚಕ್ರಾಧಿಪತ್ಯದ ಘನತೆಯನ್ನೂ ಅದರ ಕ್ಷೇಮವನ್ನೂ ಕಾಪಾಡುವುದಕ್ಕಾಗಿ ಮನೆಗಳನ್ನು ಬಿಟ್ಟು ಯುದ್ಧಭೂಮಿಗೆ ಪ್ರಯಾಣಮಾಡುತ್ತೀರಿ. ನಾವು ಬೆಲ್ಜಿಯಂ ದೇಶವನ್ನು ಬೆಂಬಲಕೊಟ್ಟು ಸಂರಕ್ಷಿಸುವುದಾಗಿ ವಾಗ್ದಾನ ಮಾಡಿರುವೆವು. ಪರಾಕ್ರಮಿಗಳಾದ ಶತ್ರುಗಳು ಈಗ ಬೆಲ್ಜಿಯಂ ಒಳಕ್ಕೆ ದಂಡೆತ್ತಿ ಬಂದಿರುವರು; ಇಷ್ಟರಲ್ಲೇ ಅವರು ಫ್ರಾನ್ಸಿಗೂ ಪ್ರವೇಶಮಾಡುವುದರಲ್ಲಿದಾರೆ.

“ನಮ್ಮ ಸೋಜರುಗಳಾದ ನಿಮ್ಮಲ್ಲಿ ನಮಗೆ ಸಂಪೂರ್ಣವಾದ ಭರವಸೆಯುಂಟು. ಕರ್ತವ್ಯವಾದದ್ದನ್ನು ಮಾಡುವುದೇ ನಿಮ್ಮ ಮುಖ್ಯ ಧರ್ಮವು. ನೀವು ನಿಮ್ಮ ಕರ್ತವ್ಯವನ್ನು ಘನತರವಾದ ರೀತಿಯಲ್ಲಿ ಮಾಡುತ್ತೀರೆಂದು ನಾವು ತಿಳಿದಿದೇವೆ. ನಿಮ್ಮ ಪ್ರತಿ ಒಂದು ಚಲನೆಯನ್ನೂ ಕಾರ್ಯವನ್ನೂ ಅತ್ಯಂತ ಕುತೂಹಲದಿಂದ ನೋಡಿ ತಿಳಿಯುತ್ತಾ, ನಿಮ್ಮ ದಿನಗಟ್ಟಲೆಯ ಏಳಿಗೆಯನ್ನು ಆತುರವಾಗಿಯೂ ಕೃತಜ್ಞತೆಯಿಂದಲೂ ಪರಿಗಣಿಸುತ್ತಾ ಬರುವೆವು. ನಿಜವಾಗಿಯೂ ನಿಮ್ಮ ಯೋಗಕ್ಷೇಮಚಿಂತನೆಯೇ ನಮಗೆ ಸರ್ವದಾ ಇದ್ದೀತೆಂದು ಖಚಿತವಾಗಿ ತಿಳಿಯಿರಿ. ದೇವರು ನಿಮ್ಮನ್ನು ಆಶೀರ್ವದಿಸಲೆಂದೂ, ನಿಮ್ಮನ್ನು ಕಾಪಾಡಿ ನಿಮಗೆ ಜಯವನ್ನು ದಯಪಾಲಿಸಿ ಹಿಂತಿರುಗಿ ಕರೆತರಲೆಂದೂ ಬೇಡಿಕೊಳ್ಳುತ್ತೇವೆ.”

ಲಾರ್ಡ್ ಕಿಚ್ನರ್‌ಯವರ ಬುದ್ಧಿವಾತು.

ಇಂಗ್ಲೆಂಡಿನಿಂದ ಯುದ್ಧಕ್ಕಾಗಿ ಹೊರಟ ಪ್ರತಿ ಒಬ್ಬ ಸೈನಿಕನಿಗೂ ಯುದ್ಧದ ಇಲಾಖೆಯ ಮುಖ್ಯಾಧಿಕಾರಿಯಾಗಿರುವ ಲಾರ್ಡ್ ಕಿಚ್ನರ್‌ಯವರು ಮುಂದೆ ಹೇಳುವ ಅರ್ಥಕ್ಕೆ ಬುದ್ಧಿವಾತುಗಳನ್ನು ಬರೆದುಕೊಟ್ಟು, ಅದನ್ನು ಪ್ರತಿ ಒಬ್ಬ ಸೈನಿಕನೂ ತನ್ನ ಸಂಬಳದ ಪುಸ್ತಕದಲ್ಲಿ ಇಟ್ಟುಕೊಂಡಿರಬೇಕೆಂದು ಅಪ್ಪಣೆ ಕೊಡಿಸಿರುತ್ತಾರೆ. ಅದೇನೆಂದರೆ:—

“ನಮ್ಮ ದೊರೆಯ ಸೈನಿಕರಾದ ನಿಮ್ಮನ್ನು ನುಗ್ಗಿಬರುತ್ತಿರುವ ಶತ್ರುಗಳ ಮೇಲೆ ಯುದ್ಧಮಾಡುವುದಕ್ಕೆ ಫ್ರೆಂಚರಿಗೆ ಸಹಾಯಮಾಡುವುದಕ್ಕೋಸ್ಕರ ಈಗ ಹೊರಕ್ಕೆ ಕಳುಹಿಸಿರುತ್ತೇವೆ. ನೀವುಗಳು ಈಗ ಮಾಡಬೇಕಾಗಿರುವ ಕಾರ್ಯಕ್ಕೆ ನಿಮ್ಮ ಪರಾಕ್ರಮವನ್ನೂ, ನಿಮ್ಮ ಬಲವನ್ನೂ, ನಿಮ್ಮ ತಾಳ್ಮೆಯನ್ನೂ ವಿನಿಯೋಗಿಸಬೇಕಾಗಿದೆ. ಬ್ರಿಟಿಷ್ ಸೈನ್ಯಕ್ಕೆ ಬಂದಿರುವ ಕೀರ್ತಿ ಸನ್ಮಾನಗಳು ನಿಮ್ಮಲ್ಲಿ ಪ್ರತಿ ಒಬ್ಬರ ನಡವಳಿಕೆಯಿಂದ ಊರ್ಜಿತವಾಗಬೇಕೆಂಬುದನ್ನು ಮರೆಯಬೇಡಿ. ಸೈನ್ಯದ ಬಿಗಿಯನ್ನು ಕಾಪಾಡಿಕೊಳ್ಳುವುದರಲ್ಲಿ ನೀವು ಉತ್ತಮರೆನಿಸಿಕೊಳ್ಳುವುದೇ ಸಾಲದು; ಈ ಕಡಿದಾಟದಲ್ಲಿ ನೀವು ಯಾರಿಗೆ ಸಹಾಯಮಾಡುವುದಕ್ಕೋಸ್ಕರ ಹೋಗುತ್ತೀರೋ ಅವರಲ್ಲಿ (ಫ್ರೆಂಚರಲ್ಲಿ) ನೀವು ಪ್ರೀತಿ ವಿಶ್ವಾಸಗಳನ್ನು ಕಾಪಾಡಿಕೊಂಡು ಬರಬೇಕು. ನೀವು ಯುದ್ಧಕಾರ್ಯಗಳನ್ನು ನಡಿಸುವುದೆಲ್ಲಾ ಬಹುಶಾ ನಿಮ್ಮ ಸ್ನೇಹಿತರ ದೇಶದಲ್ಲೇ ಆಗಬಹುದು. ಫ್ರೆಂಚರ ಮಧ್ಯದಲ್ಲೂ ಬೆಲ್ಜಿಯರ್ನರ ಮಧ್ಯದಲ್ಲೂ ನೀವು ಇರುವಾಗ್ಗೆ ಬ್ರಿಟಿಷ್ ಸೈನಿಕನ ಯಥಾರ್ಥವಾದ ಶೀಲಸ್ವಭಾವವನ್ನು ಅವರಿಗೆ ಪ್ರಕಾಶಪಡಿಸುವುದಕ್ಕಿಂತಲೂ ನಿಮ್ಮ ಜನ್ಮಭೂಮಿಗೆ ಹೆಚ್ಚಿನ ಉಪಕಾರ ಮಾಡಬೇಕಾದದ್ದಿಲ್ಲ. ನೀವು ಯಾವಾಗಲೂ ಇತರರನ್ನು ಗೌರವದಿಂದ ಕಾಣಬೇಕು; ಸಹನವಂತರಾಗಿಯೂ, ಪ್ರೀತಿ ವಿಶ್ವಾಸವುಳ್ಳವರಾಗಿಯೂ ಇರಬೇಕು. ಮನೆಮಠ ಆಸ್ತಿಪಾಸ್ತಿಗಳನ್ನು ಹಾಳುಮಾಡುವಂಥಾ ಯಾವ ಕೆಲಸವನ್ನೂ ಮಾಡಬೇಡಿ. ಕೊಳ್ಳೆ ಹೊಡೆಯುವುದನ್ನು ಬಹಳ ಲಜ್ಜಾಸ್ಪದವಾದ ಮತ್ತು ಹೀನವಾದ ಕೃತ್ಯವೆಂದು ಭಾವಿಸಿರಿ. ಅಗ್ಗಿ ನಿಮ್ಮನ್ನು ಎಲ್ಲರೂ ಹತ್ತಿರಕ್ಕೆ ಕರೆಯುವರೆಂದೂ, ನಿಮ್ಮ ಮೇಲೆ ಭರವಸೆ ಇಡುತ್ತಾರೆಂದೂ ಖಚಿತವಾಗಿ ತಿಳಿಯಿರಿ. ನಿಮ್ಮ ನಡವಳಿಕೆಯಿಂದ ಆ ಪ್ರೀತಿಗೂ ಭರವಸೆಗೂ ನೀವು ಯೋಗ್ಯರಾಗಿರುತ್ತೀರೆಂಬುವುದನ್ನು ಪ್ರಕಾಶಮಾಡಬೇಕು

“ನೀವು ಆರೋಗ್ಯದಿಂದಲೂ ದೃಢವಾಗಿಯೂ ಇಲ್ಲದಿದ್ದರೆ ನಿಮ್ಮ ಕರ್ತವ್ಯವನ್ನು ನಡಿಸಲಾರಿರಿ. ಆದಕಾರಣ ನೀವು ಯಾವ ಅತ್ಯಾಚಾರಗಳಿಗೂ ಸಿಕ್ಕಿಬೀಳದಂತೆ ಸರ್ವದಾ ಎಚ್ಚರಿಕೆಯಾಗಿ ನೋಡಿಕೊಳ್ಳಿ. ಈ ಹೊಸ ಅನುಭವದಲ್ಲಿ ನಿಮಗೆ ಕುಡಿಯುವುದರಲ್ಲೂ ಹೆಂಗಸರ ಮೇಲೂ ಆಸೆ ಹುಟ್ಟಬಹುದು. ಇವೆರಡು ಆಸೆಗಳನ್ನೂ ನೀವು ಸಂಪೂರ್ಣವಾಗಿ ಅಡಗಿಸಬಿಡಿ. ಹೆಂಗಸರನ್ನು ಕಂಡರೆ ಅವರನ್ನು ಪ್ರೀತಿಸಿ ಸನ್ಮಾನಮಾಡಿ; ಆದರೆ ಅವರಲ್ಲಿ ಅಂತರಂಗವನ್ನು ಬಿಟ್ಟುಬಿಡಬೇಕು.

“ನೀವು ನಿಮ್ಮ ಕರ್ತವ್ಯವನ್ನು ಪರಾಕ್ರಮದಿಂದ ಮಾಡಿ. ನಿಮಗೆ ದೇವರ ಭಯವಿರಲಿ; ದೊರೆಯನ್ನು ಸನ್ಮಾನಿಸಿ.”

ಯುದ್ಧದ ಸಮಾಚಾರಗಳು.

ಇಂಗ್ಲಿಷ್ ಸೈನ್ಯಗಳು ಫ್ರಾನ್ಸಿನಲ್ಲಿ.

ಬೆಲ್ಜಿಯಂನಲ್ಲಿ ಜರ್ಮನಿಯವರ ಜಯ.

ಸರ್ವಿಯದವರಿಂದ ಆಸ್ಟ್ರಿಯದವರ ಸೋಲು.

ದಿನ ಕಳೆದ ಹಾಗೆ ಯುದ್ಧದ ಕಥಾಂತರವನ್ನು ತಿಳಿದುಕೊಳ್ಳುವುದು ಕಷ್ಟವಾಗುತ್ತಿದೆ. ಯೂರೋಪಿನ ಪಶ್ಚಿಮ ಪ್ರಾಂತ್ಯದಲ್ಲಿ 300 ಮೈಲಿಗಳ ಉದ್ದಕ್ಕೆ ಕದನಗಳು ನಡೆಯುತ್ತಿರುವವು; ಅಂದರೆ ಮಡಿಕೆರೆಯಿಂದ ಮದರಾಸಿನ ತನಕ ಉದ್ದಕ್ಕೂ ಸೈನ್ಯಗಳು ಎದುರುಬದರಾಗಿ ನಿಂತು ಯುದ್ಧಮಾಡುತ್ತಿರುವ ಹಾಗಾಯಿತು. ಒಂದು ಪಕ್ಷದಲ್ಲಿ ಜರ್ಮನಿಯವರೂ, ಎದುರು ಪಕ್ಷದಲ್ಲಿ ಫ್ರಾನ್ಸ್, ಗ್ರೇಟ್‌ಬ್ರಿಟನ್, ಬೆಲ್ಜಿಯಂ ರಾಜ್ಯಗಳವರೂ ನಿಂತು ಕಾದಾಡುತ್ತಿದಾರೆ. ಅತ್ತಲಾಗಿ ಯೂರೋಪಿನ ಪೂರ್ವಭಾಗದಲ್ಲಿ 600 ಮೈಲಿಗಳ ಭೂಪ್ರದೇಶದಲ್ಲಿ (ಅಂದರೆ, ಮದರಾಸಿನಿಂದ ಹಿಡಿದು ಬೊಂಬಾಯಿನ ವರೆಗೂ ಅದರಾಚೆಗೂ) ರಷ್ಯಾದವರೂ ಸರ್ವಿಯಾದವರೂ ಒಂದು ಕಡೆಯೂ, ಆಸ್ಟ್ರಿಯದವರೂ ಜರ್ಮನಿಯವರೂ ಇನ್ನೊಂದು ಕಡೆಯೂ ನಿಂತು ಯುದ್ಧಕಾರ್ಯಗಳು ನಡೆಯುತ್ತಲಿವೆ. ಒಂದು ಸ್ಥಳದಲ್ಲಿ ಒಂದು ಪಕ್ಷದವರು ಶತ್ರುದೇಶದಲ್ಲಿ ನುಗ್ಗಿ ಹೋಗುತ್ತಿದಾರೆ; ಇನ್ನೊಂದು ಸ್ಥಳದಲ್ಲಿ ಎದುರು ಪಕ್ಷದವರು ಮುಂದುವರಿಯುತ್ತಿರುವರು. ಕಡಿದಾಟಗಳೇನೋ ಬಹಳವಾಗಿ ನಡೆದವು. ಅನೇಕ ಫಿರಂಗಿಗಳೂ ಸೈನಿಕರೂ ಕೈಸೆರೆಯಾದರು. ಆದಾಗ್ಯೂ ಜಯಾಪಜಯಗಳನ್ನು ವ್ಯವಸ್ಥೆ ಮಾಡುವಂಥಾ ದೊಡ್ಡ ಕದನಗಳೇನೂ ಆಗಲಿಲ್ಲ.

ಫ್ರಾನ್ಸಿನಲ್ಲಿ ಇಂಗ್ಲಿಷ್ ಸೈನ್ಯ.

ಕಳೆದ ವಾರದ ವರ್ತಮಾನಗಳಲ್ಲೆಲ್ಲಾ ಸುಮಾರು 1,50,000 ಇಂಗ್ಲಿಷ್ ಸೈನ್ಯಗಳು ಇಂಗ್ಲೆಂಡಿನಿಂದ ಹೋಗಿ ಫ್ರಾನ್ಸನ್ನು ಸುರಕ್ಷಿತವಾಗಿ ತಲಪಿದ್ದೇ ವಿಶೇಷವಾಗಿರುತ್ತದೆ. ಈ ಇಂಗ್ಲಿಷ್ ಸೈನ್ಯಗಳು ಆಗಸ್ಟ್ ತಾ 17 ನೇ ಸೋಮವಾರ ಬುಲೋಜ್ ಪಟ್ಟಣದಲ್ಲಿ ಹೋಗಿ ಇಳಿದವು ಒಬ್ಬ ಸೈನಿಕನಾದರೂ, ಒಂದು ಕುದುರೆಯಾದರೂ, ಯಾವುದೊಂದು ಯುದ್ಧದ ಸಾಮಗ್ರಿಯಾದರೂ ನಷ್ಟವಾಗದೆ ತಲಪಿದ್ದೇ ವಿಶೇಷ. ಈ ಸೈನ್ಯವನ್ನು ಜೊತೆಮಾಡಿದ್ದು, ಕಳುಹಿಸಿಕೊಟ್ಟದ್ದು ಎಲ್ಲಾ ಬಹಳ ಗೋಪ್ಯವಾಗಿ ನಡೆಯಿತು. ಇಂಗ್ಲೆಂಡಿನ ವರ್ತಮಾನ ಪತ್ರಿಕೆಗಳು ಈ ಸಂಗತಿಯನ್ನು ಲೇಶಮಾತ್ರವೂ ಪ್ರಕಟಮಾಡದೆ ಮೌನವಾಗಿದ್ದವು. ಈ ಸೈನ್ಯವೆಲ್ಲಾ ಇಂಗ್ಲೆಂಡಿನ ಯಾವ ಭಾಗದಿಂದ ಹೊರಟಿತೋ ಅದು ಕೂಡ ಹೇಳಿಲ್ಲ. ಈಗ ಸೈನಿಕರು ಯಾವ ಸ್ಥಳಕ್ಕೆ ಹೋಗಿರುತ್ತಾರೆಯೋ ವರ್ತಮಾನ ಕೊಟ್ಟಿಲ್ಲ. ದೊಡ್ಡ ಯುದ್ಧಗಳು ನಡೆಯುವ ತನಕ ಯಾವ ಸುದ್ದಿಯನ್ನೂ ಹೊರಬಿಡಿಸುವುದಿಲ್ಲವೆಂದು ಕಾಣುತ್ತದೆ. ಈಗ ಹೊರಟಿರುವ ಇಂಗ್ಲಿಷ್ ಸೈನ್ಯಕ್ಕೆಲ್ಲಾ ಸರ್ ಜಾನ್ ಫ್ರೆಂಚ್‌ರವರು ದಳಪತಿಯಾಗಿ ನೇಮಕವಾಗಿದಾರೆ. ಈ ಇಂಗ್ಲಿಷ್ ಸೈನಿಕರಿಗೆಲ್ಲಾ ಜಾರ್ಜ್ ದೊರೆಯವರೂ, ಲಾರ್ಡ್ ಕಿಚ್ನರ್‌ಯವರೂ ವಿವೇಕವನ್ನೂ ತಿಳುವಳಿಕೆಯನ್ನೂ ಹೇಳಿರುವರು. ಇವರದನ್ನು ಇನ್ನೊಂದು ಕಡೆ ಪ್ರಕಟಿಸಿರುವೆವು.

ಇಂಗ್ಲೆಂಡಿನಲ್ಲಿ ಲಾರ್ಡ್ ಕಿಚ್ನರ್ ಯವರು ಎರಡನೆಯ ಸೈನ್ಯವನ್ನು ಜೊತೆಮಾಡುತ್ತಿದಾರೆ. ಇದಕ್ಕೆ ಆಗಲೇ 60,000 ಕ್ಕಿಂತಲೂ ಹೆಚ್ಚು ಮಂದಿ ಸೇರಿಕೊಂಡಿರುವರು. ಈ ಯುದ್ಧವು ಬಹಳ ದೀರ್ಘಕಾಲ ನಡೆಯುವುದೆಂದೂ ಜರ್ಮನಿಯವರಿಗೆ ಯೂರೋಪ್ ಖಂಡದ ಸರ್ವಾಧಿಪತ್ಯವನ್ನು ತಪ್ಪಿಸಬೇಕಾದಲ್ಲಿ ಬ್ರಿಟಿಷ್ ಸಾಮ್ರಾಜ್ಯದ ಸರ್ವಸ್ವವನ್ನೂ ಈ ಯುದ್ಧಕ್ಕೆ ವಿನಿಯೋಗಿಸಬೇಕಾಗುವುದೆಂದೂ ಲಾರ್ಡ್ ಕಿಚ್ನರ್ ಯವರು ಅಭಿಪ್ರಾಯಪಡುತ್ತಾರೆ.

ಜರ್ಮನಿ ಮತ್ತು ಬೆಲ್ಜಿಯಂ.

ಜರ್ಮನಿಯವರು ಬೆಲ್ಜಿಯಂನವರನ್ನು, ಜರ್ಮನಿ ಸೈನ್ಯಗಳು ಬೆಲ್ಜಿಯಂ ಮೂಲಕ ಹೋಗುವುದಕ್ಕೆ ಅವಕಾಶ ಕೊಡಬೇಕೆಂದೂ, ಹಾಗೆ ಅವಕಾಶ ಕೊಟ್ಟಲ್ಲಿ ಇದುವರೆಗೆ ನಡೆದಿರುವ ಕಡಿದಾಟವನ್ನು ಶತ್ರುತ್ವವಾಗಿ ಎಣಿಸುವುದಿಲ್ಲವೆಂದೂ ಮತ್ತೆ ಕೇಳಿದರು. ಈ ರೀತಿಯಾದ ಜರ್ಮನಿಯವರ ಮಾತನ್ನು ಬೆಲ್ಜಿಯಂ ದೊರೆಯವರು ಕೂಡಲೇ ತಿರಸ್ಕಾರಮಾಡಿರುತ್ತಾರೆ.

ಬೆಲ್ಜಿಯಂನಲ್ಲಿ ಇನ್ನೂ ವಿಶೇಷವಾಗಿ ಕದನಗಳಾಗಿರುತ್ತವೆ. ಸ್ವದೇಶವನ್ನು ಕಾಪಾಡಿಕೊಳ್ಳುವುದರಲ್ಲಿ ವಿಶೇಷ ಪರಾಕ್ರಮವನ್ನು ತೋರಿಸುತ್ತಾ ಬೆಲ್ಜಿಯದ ಸ್ವಲ್ಪ ಸೈನ್ಯದ ಮೇಲೆ ಜರ್ಮನಿಯ ಅಪಾರ ಸೈನ್ಯಗಳು ಮುಂದಕ್ಕೆ ಓಡಿಸಿಬಿಟ್ಟವು.

ಬೆಲ್ಜಿಯಂ ಸೈನ್ಯಗಳು ತಮ್ಮ ದೇಶದ ಮೂಲಕ ಜರ್ಮನಿಯವರು ನುಗ್ಗಿ ಹೋಗಲು ಅವಕಾಶವಾಗದಂತೆ ಅವರನ್ನು ಅಡ್ಡಹಾಕಿ ತಡೆದರು. ಈ ಉದ್ದೇಶವು ಸಾರ್ಥಕವಾಯಿತು. ಲಿಯೇಜ್ ಪಟ್ಟಣದ ಬೆಲ್ಜಿಯರ್ನ ಕೋಟೆಗಳ ದೆಸೆಯಿಂದ ಜರ್ಮನಿ ಸೈನ್ಯಕ್ಕೆ ತುಂಬಾ ನಷ್ಟವಾಗಿದೆ. ಆದರೆ ಜರ್ಮನಿ ಸೈನ್ಯ ಬಹಳ ಹೆಚ್ಚಾಗಿದ್ದ ಕಾರಣ ಬೆಲ್ಜಿಯರ್ನರನ್ನು ಹಿಮ್ಮೆಟ್ಟಿಸಿ ಲಿಯೇಜಿನ ಉತ್ತರದಲ್ಲೂ ದಕ್ಷಿಣದಲ್ಲೂ ಮ್ಯೂಸ್ ನದಿಯನ್ನು ದಾಟಿಕೊಂಡು ಬೆಲ್ಜಿಯರ್ನ ರಾಜಧಾನಿಯಾದ ಬ್ರಸ್ಸೆಲ್ಸ್ ನಗರದ ಕಡೆಗೆ ನುಗ್ಗಿಹೋಯಿತು. ಮಧ್ಯದಲ್ಲಿ ಅನೇಕ ಯುದ್ಧಗಳು ನಡೆದು, ಬೆಲ್ಜಿಯರ್ನರು ಸ್ವಲ್ಪ ಸ್ವಲ್ಪವಾಗಿ ಹಿಮ್ಮೆಟ್ಟಿ ಬಲವಾದ ಅಂತ್ವರ್ಪ್ ಎಂಬ ಕೋಟೆಗಳಿಂದ ಕಾಪಾಡಲ್ಪಟ್ಟಿರುವ ನಗರವೊಳಕ್ಕೆ ಸೇರಿಕೊಂಡರು. ಈ ಕದನಗಳಲ್ಲಿ ಬೆಲ್ಜಿಯರ್ನರ ಕಡೆ ಎಷ್ಟು ಮಂದಿ ನಷ್ಟಪಟ್ಟರು ತಿಳಿಯಲಿಲ್ಲ. ಆದರೆ ಅನೇಕರು ಲಯವಾಗಿರಬೇಕೆಂದು ಕಾಣುತ್ತದೆ.

ಬೆಲ್ಜಿಯರ್ನರು ಹಿಮ್ಮೆಟ್ಟಿ ಅಂತ್ವರ್ಪಿಗೆ ಬಂದು ಸೇರಿಕೊಂಡದ್ದರಿಂದ ಬ್ರಸ್ಸೆಲ್ಸ್ ನಗರದ ಮಾರ್ಗವು ಸುಲಭವಾಯಿತು. ಇದು ಬೆಲ್ಜಿಯಂ ರಾಜಧಾನಿಯಾದಾಗ್ಯೂ ಅಲ್ಲಿ ಕೋಟೆ ಕೊತ್ತಲಗಳೇನೂ ಇಲ್ಲ. ಈ ಪಟ್ಟಣವನ್ನು ಹಾಳು ಕೆಡುವುದು ಯೋಗ್ಯವಲ್ಲವೆಂದು ಬೆಲ್ಜಿಯರ್ನರು ಅದನ್ನು ಶತ್ರುಗಳಿಗೆ ಬಿಟ್ಟುಕೊಟ್ಟು ಹಿಮ್ಮೆಟ್ಟಿಹೋದರು. ಹೀಗೆ ಹೋಗುವಾಗ್ಗೆ, ಅಂದರೆ ಕಳೆದ ಮಂಗಳವಾರವೂ ಬುಧವಾರವೂ ಲಿಯೇಜ್ ಮತ್ತು ಬ್ರಸ್ಸೆಲ್ಸ್ ನಗರಗಳ ಮಧ್ಯಮಾರ್ಗದಲ್ಲಿ ಬಹಳ ಕಠಿಣವಾದ ಯುದ್ಧಗಳು ನಡೆದವು. ಬೆಲ್ಜಿಯರ್ನರು ಬಹು ಪರಾಕ್ರಮದಿಂದ ಕಾದಿದರು. ಆದರೆ ಜರ್ಮನಿಯ ಸೈನ್ಯಗಳು ಅಪಾರವಾಗಿ ಬಂದುದ್ದರಿಂದ ಬೆಲ್ಜಿಯರ್ನರು ಅಂತ್ವರ್ಪ್ ನಗರಕ್ಕೆ ಹೋಗಬೇಕಾಯಿತು. ಜರ್ಮನಿಯವರಲ್ಲಿ ಅನೇಕರು ಕೊಲೆಯಾಗಿರಬಹುದು; ಬಹು ಮಂದಿ ಗಾಯಪಟ್ಟಿರಬೇಕು. ಇದರ ವಿವರವೇನೋ ಹೊರಪಟ್ಟಿಲ್ಲ.

ಬೆಲ್ಜಿಯಂ ಗವರ್ನಮೆಂಟಿನವರು ಬ್ರಸ್ಸೆಲ್ಸನ್ನು ಕಾಪಾಡಿಕೊಳ್ಳಬೇಕೆಂದು ಪ್ರಯತ್ನಪಡಲಿಲ್ಲ. ಜರ್ಮನಿಯವರು ಕಡಿದಾಟವೇನೂ ಇಲ್ಲದೆ ತಾ. ನೇ ಗುರುವಾರ ಆ ಪಟ್ಟಣಕ್ಕೆ ಹೋಗಿ ಅದನ್ನು ತಮ್ಮ ಸ್ವಾಧೀನಮಾಡಿಕೊಂಡುಬಿಟ್ಟರು. ಬಳಿಕ ಜರ್ಮನಿಯವರು ಅಲ್ಲಿಂದ ಮುಂದಕ್ಕೆ ಹೊರಟು ಘೆಂಟ್ ಮತ್ತು ಓಸ್ಟೆಂಡ್ ಪಟ್ಟಣಗಳ ತನಕ ಹೋಗಿರುವಂತೆ ಕಾಣುತ್ತದೆ. ಬೆಲ್ಜಿಯಮಿನ ಓಸ್ಟೆಂಡ್ ಎಂಬ ಈ ಎರಡನೇ ತೀರಪಟ್ಟಣಕ್ಕೂ ಇಂಗ್ಲೆಂಡಿನ ತೀರಗಳಿಗೂ ಜಹಜುಗಳು ದಿನವಹಿ ಹೋಗಿ ಬರುವವು. ಈಚೆಗೆ ಬಂದಿರುವ ತಂತೀವರ್ತಮಾನಗಳು ಜರ್ಮನಿಯವರು ಬಹಳ ಸ್ವಲ್ಪ ಮಂದಿ ಮುಂದೆ ಹೋಗಿದ್ದ ಹಾಗೂ, ಇವರನ್ನು ಅಲ್ಲಿಂದ ಹಿಂದಕ್ಕೆ ಓಡಿಸಿಬಿಟ್ಟರೆಂದೂ ಹೇಳುತ್ತವೆ.

ಈಗ ಜರ್ಮನಿಯವರು ಬ್ರಸ್ಸೆಲ್ಸ್ ಪಟ್ಟಣದವರನ್ನು 12,00,00,000 ರೂಪಾಯಿ ದಂಡತರಬೇಕೆಂದೂ, ಲಿಯೇಜ್ ಅಧಿಪತ್ಯದವರನ್ನು 3,85,00,000 ರೂಪಾಯಿ ಕೊಡಬೇಕೆಂದೂ ಕೇಳಿದಾರೆ.

ಇದಲ್ಲದೆ ಜರ್ಮನಿಯವರು ನಾಮೂರ್ ಎಂಬ ಬಲವಾದ ಕೋಟೆಯುಳ್ಳ ಪಟ್ಟಣಕ್ಕೆ ಮುತ್ತಿಗೆ ಹಾಕಿಕೊಂಡಿದಾರೆ. ಈ ಪಟ್ಟಣವು ಮ್ಯೂಸ್ ನದಿಯ ದಡದಲ್ಲಿ ಲಿಯೇಜ್‌ನಿಂದ ದಕ್ಷಿಣ ಪಶ್ಚಿಮಕ್ಕೆ ಇರುವುದು.

ಬೆಲ್ಜಿಯಂ ದಕ್ಷಿಣಭಾಗದಲ್ಲಿ ಫ್ರೆಂಚರು ಜರ್ಮನಿಯವರ ಮೇಲೆ ಯುದ್ಧಕಾರ್ಯಗಳನ್ನು ನಡಿಸುತ್ತಿದಾರೆ. ಡೀನಾಟ್ ಎಂಬಲ್ಲಿ ನಡೆದ ಯುದ್ಧದಲ್ಲಿ ಜರ್ಮನಿಯವರಿಗೆ ಸೋಲಾಗಿ ಹಿಂದಕ್ಕೆ ಓಡಿಹೋದರು. ಬಳಿಕ ನಾಮೂರ್ ಎಂಬದನ್ನು ಆಕ್ರಮಿಸಿಕೊಳ್ಳಬೇಕೆಂದು ಜರ್ಮನಿಯವರು ಮತ್ತೆ ನುಗ್ಗಿ ಬಂದಂತೆ ಕಾಣುತ್ತದೆ. ಬ್ರಸ್ಸೆಲ್ಸ್‌ನಿಂದ ದಕ್ಷಿಣದಿಕ್ಕಿನಲ್ಲೂ ಜರ್ಮನಿಯ ಸೈನ್ಯಗಳನ್ನು ಇಟ್ಟು ಇರೋಣದರಿಂದ ಫ್ರೆಂಚರು ಅವರನ್ನು ಎದುರಿಸಿ ಯುದ್ಧಕಾರ್ಯಗಳನ್ನು ನಡಿಸುತ್ತಿರುವರು.

ಜರ್ಮನಿಯ ಸೈನ್ಯಗಳು ಬಹಳ ಹೆಚ್ಚಾಗಿ ನುಗ್ಗಿಬಂದದ್ದರಿಂದ ಬೆಲ್ಜಿಯರ್ನರು ತಡೆಯಲಾರದೆ ಹಿಮ್ಮೆಟ್ಟಿದ್ದೇನೂ ಆಶ್ಚರ್ಯವಲ್ಲ. ಬೆಲ್ಜಿಯಂ ರಾಜ್ಯ ಬಹಳ ಚಿಕ್ಕದು; ಮೈಸೂರು ಸಂಸ್ಥಾನದಲ್ಲಿ ಸುಮಾರು ಅರ್ಧದಷ್ಟಿರಬಹುದು. ಅದರ ವಿಸ್ತೀರ್ಣವು ನಮ್ಮ ಸೀಮೆಯ ಮೈಸೂರು, ಬೆಂಗಳೂರು, ಕೋಲಾರ್ ಡಿಸ್ಟ್ರಿಕ್ಟುಗಳಷ್ಟಾದೀತು; ಪ್ರಜಾಸಂಖ್ಯೆಯಾದರೋ ಸುಮಾರು 70,00,000. ಇಂಥಾ ಸಣ್ಣ ರಾಜ್ಯವು ಪ್ರತಿಭಟಿಸಿ ನಿಂತು ಜರ್ಮನಿಯವರ ಉದ್ದೇಶವನ್ನು ತಲೆಕೆಳಗು ಮಾಡಿದ್ದು ನೋಡಿದರೆ ನಿಜವಾಗಿಯೂ ಈ ಜಯಪ್ರದವಾಯಿತೆಂದೇ ಹೇಳಬೇಕು. ಇದರಲ್ಲಿ ಬೆಲ್ಜಿಯರ್ನರಿಗೆ ಬಹಳ ನಷ್ಟವಾಗಿರುವುದೇನೋ ನಿಜ. ಫ್ರೆಂಚರೂ ಗ್ರೇಟ್ ಬ್ರಿಟನ್‌ನವರೂ ಮುಂದೆ ಸಮಯ ಒದಗಿದಾಗ ಬೆಲ್ಜಿಯರ್ನರ ಪರಾಕ್ರಮಕ್ಕೆ ತಕ್ಕಂತೆ ಅವರಿಗೆ ಪ್ರತಿಫಲವನ್ನು ಕೊಡಿಸುವರೆಂದು ನಿರೀಕ್ಷಿಸಬಹುದು. ಇಷ್ಟಾದರೂ ಬೆಲ್ಜಿಯರ್ನರು ಅಂತ್ವರ್ಪಿನಿಂದ ಬಂದು ಯುದ್ಧದಲ್ಲಿ ಬೆರೆಯುತ್ತಾರೆ. ಅವರ ಸೈನ್ಯ ಸಣ್ಣದಾಗಿದ್ದರೂ ಅದನ್ನು ನಾಶಮಾಡುವುದು ಸಾಧ್ಯವಲ್ಲ.

ಜರ್ಮನಿಯವರು ಒಂದು ಕಡೆಯೂ, ಬೆಲ್ಜಿಯರ್ನರು ಇನ್ನೊಂದು ಕಡೆಯೂ ನಾನಾ ಕ್ರೂರಕೃತ್ಯಗಳನ್ನು ನಡಿಸಿದರೆಂದು ಸುದ್ದಿ ಹುಟ್ಟಿ ಹರಡಿಕೊಂಡಿದೆ. ಯುದ್ಧಕಾಲದಲ್ಲಿ ಮನುಷ್ಯನ ರೋಷವು ಹೊಟ್ಟಿಕೆಟ್ಟು ವಿಶೇಷ ಉಲ್ಬಣವಾಗಿ ಯಲ್ಲಿರುತ್ತವೆ. ಅಂಥವರು ಹಗೆತನದಿಂದ ಕ್ರೂರಕೃತ್ಯಗಳನ್ನು ನಡಿಸುವುದರಲ್ಲಿ ಹೆಚ್ಚಿಲ್ಲ. ಇಂಥಾ ಕೃತ್ಯಗಳು ಸಕಲರಲ್ಲೂ ಮಹಾ ದುಃಖವನ್ನುಂಟುಮಾಡುವವೆನ್ನುವುದಕ್ಕೆ ಸಂಶಯವಿಲ್ಲ.

ಅಂತರಿಕ್ಷದಲ್ಲಿ ಕಡಿದಾಟ.

ಈ ಯುದ್ಧಗಳಲ್ಲಿ ಉಭಯ ಪಕ್ಷದವರೂ ವಿಮಾನ ಯಂತ್ರಗಳನ್ನು ವಿಶೇಷವಾಗಿ ಉಪಯೋಗಿಸುತ್ತಿದಾರೆ. ಈ ವಿಮಾನಗಳಿಂದ ಎಷ್ಟು ಮಟ್ಟಿಗೆ ಪ್ರ

ಪನಾಗಿದೆಯೋ ಹೇಳಲಾಗದು. ಹಲವು ವಿಮಾನಗಳು ಶತ್ರುಗಳಿಂದ ನಾಶವಾಗಲ್ಪಟ್ಟವೆ; ಅವುಗಳಲ್ಲಿದ್ದ ವಿಮಾನ ಸಂಚಾರಿಗಳು ಹತರಾಗಿರುತ್ತಾರೆ.

ಫ್ರಾನ್ಸ್ ಮತ್ತು ಜರ್ಮನಿ.

ಫ್ರೆಂಚರು ಆಲ್ಸಾಸ್ಸಿನೊಳಕ್ಕೆ ನುಗ್ಗಿಹೋಗಿ ಕೆಲವು ಸ್ಥಳಗಳನ್ನು ಆಕ್ರಮಿಸಿಕೊಂಡರೆಂದು ಕಳೆದ ವಾರ ತಿಳಿಸಿದೆವು. ಅವರು ಈಚೆಗೆ ಅಲ್ಲಿಂದ ಮುಂದಕ್ಕೆ ನುಗ್ಗಿಹೋಗಿ ತಾನ್, ಸೆರ್ನೈ, ಕೋಲ್ಮರ್, ಮುಲ್ಹೌಸೆನ್, ಸ್ಟೀಲರ್ ಎಂಬೀ ಆಲ್ಸಾಸ್ಸಿನೊಳಗಿರುವ ಸ್ಥಳಗಳನ್ನು ಸ್ವಾಧೀನಪಡಿಸಿಕೊಂಡರು. ಮುಲ್ಹೌಸೆನನ್ನು ಮೊದಲೇ ಹಿಡಿದಿದ್ದರೂ ಫ್ರೆಂಚರು ಅದನ್ನು ಬಿಟ್ಟು ಹಿಮ್ಮೆಟ್ಟಿ ಬಂದಿದ್ದರು. ಈಗ ಅದನ್ನು ಮತ್ತೆ ಸ್ವಾಧೀನಪಡಿಸಿಕೊಂಡಿರುವಂತೆ ಕಾಣುವುದು. ಆಸ್ಟ್ರಿಯದವರು ಜರ್ಮನಿಯವರ ಸಹಾಯಕ್ಕೆ ಬರಲಿಲ್ಲವೆಂದು ವ್ಯಕ್ತವಾಗುತ್ತದೆ.

ಫ್ರೆಂಚರು ಜರ್ಮನಿಯವರ 24 ಪಿರಂಗಿಗಳನ್ನೂ ಬಹಳ ಮದ್ದುಗುಂಡನ್ನೂ ಕಿತ್ತುಕೊಂಡು, ಮುಂದರಿಸಿ ಹೋಗುತ್ತಾ, ಶತ್ರುಗಳನ್ನು ಆಲ್ಸಾಸ್ಸಿನಲ್ಲಿ ಉತ್ತರ ಮುಖಕ್ಕೆ ಓಡಿಸಿಕೊಂಡು ಹೋಗುತ್ತಿದಾರೆ.

ಅಲ್ಲಿಂದ ಉತ್ತರಕ್ಕೆ ಲೊರೇನ್ ಆಧಿಪತ್ಯದಲ್ಲಿ ಫ್ರೆಂಚರು ದಂಡೆತ್ತಿ ಹೋಗಿ ಮೆತ್ಸ್, ಸ್ಟ್ರಾಸ್ಬರ್ಗ್ ಎಂಬೀ ದೊಡ್ಡ ದುರ್ಗಗಳ ನಡುವೆ ಇರುವ ಸ್ಥಳ ರಕ್ಷೆಯ ತನಕ ಪ್ರವೇಶ ಮಾಡಿ, ಜರ್ಮನಿಯವರ ಅಗಾಧವಾದ ಸೈನ್ಯವನ್ನು ಸಂಧಿಸಿರುವುದಾಗಿಯೂ, ಅಲ್ಲಿ ಬಹು ಕಠಿಣವಾದ ಕದನಗಳು ಇಷ್ಟರಲ್ಲೇ ನಡೆಯುವವೆಂದೂ ಕಾಣುತ್ತದೆ.

ಇದುವರೆಗೆ ನಡೆದಿರುವ ಕಾರ್ಯಗಳಲ್ಲಿ ಫ್ರೆಂಚರ ಕಡೆ ಎಲ್ಲಾ ತಕ್ಕಮಟ್ಟಿಗೆ ತೃಪ್ತಿಕರವಾಗಿದೆ. ಇನ್ನೂ ದೊಡ್ಡ ಕದನಗಳೇನೂ ನಡೆಯಲಿಲ್ಲ.

ಸರ್ವಿಯ ಮತ್ತು ಆಸ್ಟ್ರಿಯ.

ಡ್ರಿನ್ನ ನದೀತೀರದಲ್ಲಿರುವ ಶಾಬಾತ್ಸ್ ಎಂಬ ರಾಜ್ಯದಲ್ಲಿ ಮೂರು ದಿನ ಕದನಗಳು ನಡೆದವು. ಆಸ್ಟ್ರಿಯದವರು ಆ ನದಿಯನ್ನು ದಾಟಿಹೋಗಿ ಆ ರಾಜ್ಯವನ್ನು ಸ್ವಾಧೀನ ಪಡಿಸಿಕೊಂಡಿದ್ದರು. ಈಚೆಗೆ ಸರ್ವಿಯರ್ದು ಅವರನ್ನು ಅಲ್ಲಿಂದ ಹಿಂದಕ್ಕೆ ಓಡಿಸಿದಾರೆ. ಅತ್ತಲಾಗಿ ಡ್ರೀನ್ ನದೀ ತೀರದಲ್ಲಿರುವ ಲೋತ್ಸ್ನಿತ್ಸಾ ಎಂಬಲ್ಲಿ ನಾಲ್ಕು ದಿನ ಯುದ್ಧವಾಯಿತು. ಇದು ಸರ್ವಿಯದ ಎಲ್ಲೆಕಟ್ಟಿನಲ್ಲಿ ಇರುತ್ತದೆ. ಈ ಯುದ್ಧದಲ್ಲಿ ಆಸ್ಟ್ರಿಯದ ಸೈನಿಕರು 80,000 ಇದ್ದರೂ ಸರ್ವಿಯರ್ದು ಅವರನ್ನು ಸೋಲಿಸಿ ನದಿಯಿಂದಾಚೆಗೆ ಓಡಿಸಿಟ್ಟರು. ಅಲ್ಲಿ ಯುದ್ಧಭಟರ ಕೊಲೆಯು ಬಹು ಭಯಂಕರವಾಯಿತು ಬಹುಮಂದಿ ಆಸ್ಟ್ರಿಯದವರನ್ನು ಸೆರೆ ಹಿಡಿದಿರುತ್ತಾರೆ. ಆಸ್ಟ್ರಿಯದವರು 50-60 ಪಿರಂಗಿಗಳನ್ನೂ, ಅನೇಕ ಕುದುರೆಗಳನ್ನೂ, ಬಹಳ ಮದ್ದುಗುಂಡುಗಳನ್ನೂ ಈ ಯುದ್ಧದಲ್ಲಿ ಕಳೆದುಕೊಂಡು, ಅಲ್ಲಿ ತಮಗೆ ಅಪಜಯವಾಯಿತೆಂದು ಒಪ್ಪಿಕೊಂಡಿದಾರೆ. ಸರ್ವಿಯದವರು ಬಹಳ ಸ್ವಲ್ಪ ಜನರು; ಅವರ ಪರಾಕ್ರಮವು ಅತಿಶಯವಾದದ್ದು. ಅವರನ್ನು ಜಯಿಸುವುದು ಆಸ್ಟ್ರಿಯದವರಿಗೆ ಬಹಳ ಕಷ್ಟವಾದೀತು.

ಮಾಂಟಿನೀಗ್ರೊ ಮತ್ತು ಆಸ್ಟ್ರಿಯ.

ಸರ್ವಿಯಾ ರಾಜ್ಯದ ದಕ್ಷಿಣದಲ್ಲಿ ಮಾಂಟನೀಗ್ರೊ ಎಂಬ ಸಣ್ಣ ಸಂಸ್ಥಾನವಿದೆ; ಇದು ಈಗ ಸರ್ವಿಯರ್ದಿಗೆ ಸಹಾಯಮಾಡುತ್ತಿದೆ. ಫ್ರೆಂಚರ ಬೆಂಬಲವನ್ನು ಪಡೆದು ಮಾಂಟನೀಗ್ರೋದವರು ಆಡ್ರಿಯಾಟಿಕ್ ಸಮುದ್ರ ತೀರದಲ್ಲಿರುವ ಕಟ್ಟಾರೊ ನಗರಕ್ಕೆ ಪಿರಂಗಿಗಳನ್ನು ಎತ್ತಿಕಟ್ಟಿ ಹೊಡೆಯುತ್ತಿರುವರು.

ಫ್ರಾನ್ಸ್ ಮತ್ತು ಆಸ್ಟ್ರಿಯ.

ಫ್ರೆಂಚರಿಗೂ ಆಸ್ಟ್ರಿಯದವರಿಗೂ ವಿಶೇಷವಾಗಿ ಸಮುದ್ರದ ಮೇಲೇ ಯುದ್ಧಗಳು ನಡೆಯುವವು. ಕಳೆದ ವಾರ ಒಂದು ಸಣ್ಣ ಕದನವಾಯಿತು. ಫ್ರೆಂಚರು ಶತ್ರುಗಳ ಒಂದು ಜಹಜನ್ನು ಮುಳುಗಿಸಿದರು. ಅದರಲ್ಲಿದ್ದವರ ಪೈಕಿ 301 ಜನರು ಮುಳುಗಿ ಸತ್ತರೆಂದೂ, 101 ಜನರನ್ನು ಬದುಕಿಸಿದರೆಂದೂ ತಿಳಿಯುತ್ತದೆ. ಈಚೆಗೂ ಕದನಗಳೂ ನಡೆದಿರುವವು. ಫ್ರೆಂಚರು ಆಸ್ಟ್ರಿಯದವರ ಕ್ರೆಸಿಯ ಎಂಬ ಯುದ್ಧದ ಜಹಜನ್ನು ಗುಂಡುಹಾಕಿ ಮುಳುಗಿಸಿಬಿಟ್ಟರು.

ಕಾನ್ಸ್ಟಂಟಿನೋಪಲ್ ಬಳಿ ಜರ್ಮನಿಯವರ ಗೇಬೆನ್, ಬ್ರೆಸ್ಲೌ ಎಂಬ ಜಹಜುಗಳಲ್ಲಿದ್ದ ಯುದ್ಧ ಸಾಮಗ್ರಿಗಳನ್ನೆಲ್ಲಾ ತೆಗೆದು ಬರಿದಾಗಿ ಮಾಡಿದ್ದರಿಂದ ಮೆಡಿಟರೇನಿಯನ್ ಕಡಲಿನಲ್ಲಿ ವ್ಯಾಪಾರದ ಜಹಜುಗಳು ಸಂಚರಿಸುವುದಕ್ಕೆ ಸರಾಗವಾಗಿದೆ. ಟ್ರಿಯೆಸ್ತ ತೀರಪಟ್ಟಣದ ಬಳಿ ಮಾತ್ರ ಆಸ್ಟ್ರಿಯದವರ ಸೈನ್ಯವಿರುತ್ತದೆ. ಆದಾಗ್ಯೂ ಈ ಸೈನ್ಯದಿಂದ ಯಾವ ಕೇಡುಕೂ ಆಗದಂತೆ ಫ್ರೆಂಚರು ಕಾವಲು ಇಟ್ಟು ನೋಡಿಕೊಳ್ಳುತ್ತಿದಾರೆ.

ರಷ್ಯಾ ಮತ್ತು ಜರ್ಮನಿ.

ಜರ್ಮನಿಯ ಪೂರ್ವ ಭಾಗದ ಎಲ್ಲೆಯ ಬಳಿ ಹಲವು ಕದನಗಳು ನಡೆದಿರುತ್ತವೆ. ಜರ್ಮನಿಯವರು ಬೆಲ್ಜಿಯಂ ಒಳಕ್ಕೆ ನುಗ್ಗಿಹೋಗಿರುವಂತೆಯೇ ರಷ್ಯಾದವರು ಜರ್ಮನಿಯೊಳಕ್ಕೆ 30 ಮೈಲಿ ದೂರ ನುಗ್ಗಿ ಬಂದಿದಾರೆ. ಗುಂಬಿನೆನ್, ಗೋಲ್ಡಾಪ್, ಇಂಸ್ಟರ್ಬರ್ಗ್ ಎಂಬೀ ಸ್ಥಳಗಳೂ, ಅನೇಕ ಮದ್ದುಗುಂಡು ಪಿರಂಗಿಗಳೂ ರಷ್ಯಾದವರ ವಶವಾದವು. ಅನೇಕ ಜರ್ಮನಿಯವರನ್ನು ಸೆರೆ ಹಿಡಿದಿದಾರೆ. ಜರ್ಮನಿಯ ದೊಡ್ಡ ಸೈನ್ಯವು ರಷ್ಯಾದವರ ಮೇಲೆ ನುಗ್ಗಿ ಯುದ್ಧಮಾಡಿತೆಂದು ಹೇಳಲಾಗಿದೆ. ಇವೆಲ್ಲಾ ಸಣ್ಣ ಸಣ್ಣ ಕದನಗಳು; ದೊಡ್ಡ ಯುದ್ಧಗಳೇನೂ ಇನ್ನೂ ನಡೆದಿಲ್ಲ.

ರಷ್ಯಾ ಮತ್ತು ಆಸ್ಟ್ರಿಯ.

ರಷ್ಯಾದವರು ಆಸ್ಟ್ರಿಯದೊಳಕ್ಕೂ ಪೂರ್ವ ದಿಕ್ಕಿನಲ್ಲಿ ನುಗ್ಗಿಬಂದಿದಾರೆ. ಕ್ರಾಸ್ನಿ ಎಂಬ ಸ್ಥಳದಲ್ಲಿ ಸಣ್ಣ ಯುದ್ಧವಾಯಿತು. ಅದರಲ್ಲಿ ರಷ್ಯಾದವರು 6 ಮಂದಿ ಜರ್ಮನಿ ಸೈನ್ಯದ ಹುದ್ದೇದಾರರನ್ನೂ, 1,250 ಜನ ಸಿಪಾಯಿಗಳನ್ನೂ ಸೆರೆ ಹಿಡಿದುಕೊಂಡರು.

ಆಸ್ಟ್ರಿಯಕ್ಕೆ ಸೇರಿದ ಪ್ರಾಗ್ ಎಂಬಲ್ಲಿ ಸ್ವಲ್ಪ ಕಷ್ಟ ಸಂಭವಿಸಿರುತ್ತದೆ. ಅಲ್ಲಿನ ಜನರು ಯುದ್ಧಕ್ಕೆ ಹೊರಡುವುದರಲ್ಲಿ ಅಭಿಪ್ರಾಯಪಡದೆಯೋ ಏನೋ ಆಸ್ಟ್ರಿಯದ ಸೈನಿಕರು ಹೋಗಿ ಶ್ಜೆಕ್ಸ್ ಎಂಬ ಜನರನ್ನು ಗುಂಡಿನಿಂದ ಹೊಡೆದು ಕೊಂದುಹಾಕಿರುತ್ತಾರೆ. ಆಸ್ಟ್ರಿಯದವರು ಮುಂದೇನು ಮಾಡುವರೋ ನೋಡಬೇಕು. ಅವರು ಒಂದು ಕಡೆ ಸರ್ವಿಯದವರಿಗೂ ಇನ್ನೊಂದು ಕಡೆ ರಷ್ಯಾದವರಿಗೂ ಯುದ್ಧಕೊಡಬೇಕಾಗಿ ಬಂದಿರೋಣದರಿಂದ ಅವರು ಸದ್ಯದಲ್ಲಿ ಜರ್ಮನಿಯವರಿಗೆ ಸಹಾಯಮಾಡುವುದು ಸಾಧ್ಯವಲ್ಲವೆಂದು ಕಾಣುತ್ತದೆ.

ಜಪಾನ್ ಮತ್ತು ಜರ್ಮನಿ.

ಜಪಾನ್ನವರು ಜರ್ಮನಿಯವರಿಗೆ ಚೀನಾದೇಶದಿಂದ ಹೊರಟುಹೋಗಬೇಕೆಂದೂ, 23 ನೇ ತಾ. ಒಳಗೆ ಜವಾಬು ಕೊಡಬೇಕೆಂದೂ ಬರೆದು ಕೇಳಿದ್ದರೆಂದು ಕಳೆದ ವಾರ ತಿಳಿಸಿದೆವು. ಅದಕ್ಕೆ ಜರ್ಮನಿಯವರು ಜವಾಬೇ ಕೊಡಲಿಲ್ಲ. ಆದಕಾರಣ ಜರ್ಮನಿಯವರ ಮೇಲೆ ಜಪಾನ್ನವರು ಯುದ್ಧಕಾರ್ಯವನ್ನು ಪ್ರಾರಂಭಿಸುತ್ತಾರೆ. ಜಪಾನ್ನವರಿಗೂ ಇಂಗ್ಲಿಷರಿಗೂ ಪರಸ್ಪರ ಸ್ನೇಹವಿರುವುದೇ ಇದಕ್ಕೆ ಕಾರಣ.

ಈಗ ಜಪಾನ್ನವರು ಚೀನಾದಲ್ಲಿರುವ ಜರ್ಮನಿಯವರ ಸ್ವಾಸ್ಥ್ಯದ ಮೇಲೆ ದಂಡುಕಟ್ಟಿ ಹೊರಟು ಅದನ್ನು ಕಿತ್ತುಕೊಳ್ಳುವ ಸನ್ನಾಹಮಾಡುತ್ತಾರೆ. ಈ ಸ್ವಾಸ್ಥ್ಯವನ್ನು ಜರ್ಮನಿಯವರು ಬಹಳ ಬಲವಾದ ಕೋಟೆಗಳನ್ನು ಕಟ್ಟಿ ಭದ್ರಪಡಿಸಿಕೊಂಡಿರುವರು; ಅದರೊಳಗೆ ಸಾವಿರಾರು ಮಂದಿ ಜರ್ಮನಿಯವರೂ ಇದ್ದು ಅನೇಕ ಜಹಜುಗಳನ್ನು ಇಟ್ಟುಕೊಂಡಿದಾರೆ. ಜಪಾನ್ನವರು ಈಗ ದಂಡೆತ್ತಿ ಹೋಗಿ ಆ ಸ್ವಾಸ್ಥ್ಯದ ಸುತ್ತಲೂ ಮುತ್ತಿಗೆ ಹಾಕಿಕೊಂಡು, ಆಹಾರ ಸಾಮಗ್ರಿಗಳನ್ನು ಒಳಕ್ಕೆ ತರಿಸಿಕೊಳ್ಳದಂತೆ ನೋಡಿಕೊಂಡಲ್ಲಿ ಒಳಗಿರುವ ಜರ್ಮನಿಯವರು ಜೀವನಕ್ಕಿಲ್ಲದೆ ಸುಲಭವಾಗಿ ವಶರಾಗುತ್ತಾರೆ. ಆದರೆ ಜಪಾನ್ನವರು ಯುದ್ಧಮಾಡಿಯೇ ಅವರನ್ನು ಸೋಲಿಸಬೇಕೆಂದಿರುವಂತೆ ಕಾಣುವುದು.

ಇತರ ದೇಶಗಳು.

ದಕ್ಷಿಣ ಅಮೇರಿಕಕ್ಕೆ ಸೇರಿದ ಬ್ರೆಜಿಲ್ ಸಂಸ್ಥಾನದಲ್ಲಿ ಗೌನರ್ರಾಗಿದ್ದು ಈಗ ಜರ್ಮನಿಯಲ್ಲಿ ಬಂದಿದ್ದ ಸೇನ್ಹಾರ್ ಕ್ಯಾಂಪಾಸ್ ಎಂಬಾತನನ್ನು ಜರ್ಮನಿಯವರು ಅವಮಾನಪಡಿಸಿ ಹೊಡೆದು ಸ್ವಿಟ್ಸರ್ಲೆಂಡಿಗೆ ಓಡಿಸಿಬಿಟ್ಟರು. ಇದನ್ನು ಕೇಳಿ ಬ್ರೆಜಿಲ್ ಸರ್ಕಾರದವರು ಜರ್ಮನಿಯವರನ್ನು ಕ್ಷಮಾಪಣೆ ಬೇಡುತ್ತೀರೋ ಹೇಗೆ ಎಂದು ಕೇಳಿದಾರೆ.

ಇಟಲಿಗೂ ಆಸ್ಟ್ರಿಯಕ್ಕೂ ಪರಸ್ಪರ ಸಹನಭಾವವಿರುವಂತೆ ತೋರುವುದಿಲ್ಲ. ಆದಕಾರಣ ಇಟಲಿಯವರು ಫ್ರಾನ್ಸ್ ಮತ್ತು ಗ್ರೇಟ್ ಬ್ರಿಟನ್ನವರ ಜೊತೆಗೆ ಸೇರಿಕೊಂಡು ಆಸ್ಟ್ರಿಯದವರ ಮೇಲೆ ಯುದ್ಧಕ್ಕೆ ಹೊರಡುವುದರಲ್ಲಿದಾರೆಂದು ವರ್ತಮಾನವಿದೆ.

ಟರ್ಕಿ ಮತ್ತು ಗ್ರೀಸ್ ರಾಜ್ಯಗಳು ಈ ಯುದ್ಧದಲ್ಲಿ ಯಾವ ಪಕ್ಷವನ್ನೂ ವಹಿಸದೆ ಇರುತ್ತವೆ. ಇವೆರಡೂ ಸೇರಿಕೊಂಡು ತಮತಮಗೆ ಇರುವ ವ್ಯಾಜ್ಯಗಳನ್ನು ಕುರಿತು ಚರ್ಚಿಸಿ ಇತ್ಯರ್ಥಮಾಡಿಕೊಳ್ಳಬೇಕೆಂದು ಪ್ರಯತ್ನಪಡುತ್ತಲಿವೆ.

ಸಮುದ್ರದ ಮೇಲೆ ಯುದ್ಧ.

ಉತ್ತರ ಸಮುದ್ರದಲ್ಲಿ ಇಂಗ್ಲಿಷರಿಗೂ ಜರ್ಮನಿಯವರಿಗೂ ಯುದ್ಧಗಳು ನಡೆಯುತ್ತಿವೆ ಎಂದು ವರ್ತಮಾನವಿದೆ. ಆದರೆ ಖಂಡಿತವಾದ ಸುದ್ದಿಯೇನೂ ಬಂದಿರುವುದಿಲ್ಲ.

ಈ ಯುದ್ಧದಲ್ಲಿ ಬೆರೆಯದೆ ಇರತಕ್ಕವರ ಜಹಜುಗಳ ಸಂಚಾರಕ್ಕೂ ಅಪಾಯವೂ ಅಡಚಣೆಯೂ ಉಂಟಾಗುವಂತೆ ಜರ್ಮನಿಯವರು ಉತ್ತರ ಸಮುದ್ರದ ಜಲಮಾರ್ಗದಲ್ಲೆಲ್ಲಾ ನೀರಿನೊಳಗೆ ಸಿಡಿಮದ್ದಿನ ಗುಂಡುಗಳನ್ನು ಹಾಕಿಬಿಟ್ಟಿದಾರೆ. ಈ ಗುಂಡುಗಳನ್ನು ಡೆನ್ಮಾರ್ಕಿನ ಎರಡು ವ್ಯಾಪಾರದ ಜಹಜುಗಳು ಬಡಿದು ಎರಡೂ ಮುಳುಗಿ ನಷ್ಟವಾದವು. ಸಮುದ್ರದೊಳಗೆಲ್ಲಾ ಈ ರೀತಿ ಗುಂಡುಗಳನ್ನಿಡುವುದು ತರವಲ್ಲ. ಆದಕಾರಣ ಕಡೆಯಲ್ಲಿ ಜರ್ಮನಿಯವರು ಅದಕ್ಕೆ ತಕ್ಕ ಪರಿಹಾರವನ್ನು ಕೊಡಬೇಕಾಗುವುದು.

ಇಂಗ್ಲಿಷರ ಎರಡು ವ್ಯಾಪಾರ ಹಡಗುಗಳನ್ನು ಜರ್ಮನಿಯವರು ಸ್ವಾಧೀನಪಡಿಸಿಕೊಂಡು, ಯಾವ ತೀರಪಟ್ಟಣಕ್ಕೂ ತೆಗೆದುಕೊಂಡು ಹೋಗಲಾರದೆ ಅವರದನ್ನೂ ಸಮುದ್ರದಲ್ಲಿ ಮುಳುಗಿಸಿಬಿಟ್ಟಿದಾರೆ. ಹೀಗೆ ಜರ್ಮನಿಯವರು ಎಷ್ಟು ಇಂಗ್ಲಿಷ್ ಹಡಗುಗಳನ್ನು ಹಿಡಿದಿರಬಹುದೋ ನಮಗೆ ತಿಳಿಯದು. ಅವರು ಹಿಡಿದದ್ದು ಇವೆರಡೇ ಅಲ್ಲವೆಂದೂ, ಇನ್ನೂ ಹೆಚ್ಚಾಗಿರಬೇಕೆಂದೂ ಊಹಿಸುತ್ತೇವೆ. ಅತ್ತಲಾಗಿ ಇಂಗ್ಲಿಷರು ಇದುವರೆಗೆ ಜರ್ಮನಿಯ ಮತ್ತೂ ಆಸ್ಟ್ರಿಯದ 110 ವ್ಯಾಪಾರ ಜಹಜುಗಳನ್ನು ಹಿಡಿದಿಟ್ಟುಕೊಂಡಿದಾರೆ. ಇದಲ್ಲದೆ ಅವರ ಅನೇಕ ಜಹಜುಗಳು ಅಮೇರಿಕ ಮೊದಲಾದ ಪರರಾಜ್ಯಗಳ ತೀರಗಳಲ್ಲಿ ಹೋಗಿ ನಿಂತುಬಿಟ್ಟಿರುವವು.

ಆಫ್ರಿಕದೊಳಗೆ ಗೋಲ್ಡ್ ಕೋಸ್ಟ್ ಎಂಬಲ್ಲಿ ಇಂಗ್ಲಿಷರಿಗೆ ಕೆಲವು ಜರ್ಮನಿ ಸೈನಿಕರು ಸೆರೆ ಸಿಕ್ಕಿದರು; ಎರಡು ರೈಲ್ ಗಾಡಿಗಳೂ ವಶವಾಗಿರುತ್ತವೆ. ಪೂರ್ವ ಆಫ್ರಿಕದಲ್ಲಿ ಒಂದಾನೊಂದು ಬ್ರಿಟಿಷ್ ಸ್ವಾಸ್ಥ್ಯದಲ್ಲಿ ಜರ್ಮನಿಯವರು ಒಂದು ಗ್ರಾಮವನ್ನು ಆಕ್ರಮಿಸಿಕೊಂಡಿದಾರೆಂದು ವರ್ತಮಾನವಿದೆ.

ಕ್ಯಾನಡಾ ಎಂಬ ಇಂಗ್ಲಿಷ್ ಸ್ವಾಸ್ಥ್ಯದವರು 1,00,000 ಸೈನ್ಯವನ್ನು ಒದಗಿಸುವುದಾಗಿ ಮಾತು ಕೊಟ್ಟು, 37,000 ಜನರನ್ನು ಸೇರಿಸಿಕೊಂಡದ್ದಾಯಿತು. ಇದಲ್ಲದೆ ಇಂಗ್ಲಿಷ್ ಗವರ್ನ್ಮೆಂಟಿಗೆ ಯುದ್ಧದ ಖರ್ಚಿಗಾಗಿ ಮುನ್ನೂರು ಕೋಟಿ ರೂಪಾಯಿ ಸಾಲವನ್ನು ಕೊಡಿಸಿ ಕೊಡುವುದಾಗಿ ಪ್ರಯತ್ನಪಟ್ಟಿದೆ. ಮತ್ತು 40,00,000 ಪೌಂಡು ತೂಕದ ಹಾಲಿನ ಗಡ್ಡೆಯನ್ನು ಇಂಗ್ಲಿಷ್ ಜನರಿಗೋಸ್ಕರ ಕಳುಹಿಸುವವರಾಗಿದಾರೆ.

ನಮ್ಮ ಚಕ್ರವರ್ತಿ ಸಾರ್ವಭೌಮರವರ ಚಿಕ್ಕಪ್ಪಂದಿರ ಕುಮಾರರಾದ ಪ್ರಿನ್ಸ್ ಆರ್ಥರ್ ಆಫ್ ಕನ್ನಾಟ್ ರವರೂ, ಮೇರಿ ಮಹಾರಾಜ್ಞೀರವರ ಸಹೋದರರಾದ ಪ್ರಿನ್ಸ್ ಆಫ್ ಟೆಕ್ರವರೂ ಇಂಗ್ಲಿಷ್ ಸೇನೆಯಲ್ಲಿ ಹುದ್ದೇದಾರರಾಗಿ ಸೇರಿಕೊಂಡಿರುತ್ತಾರೆ.

ಗ್ರೇಟ್ ಬ್ರಿಟನ್ನಲ್ಲಿ ಇಂಗ್ಲಿಷರ ಯುದ್ಧದ ರಿಲೀಫ್ ಫಂಡಿಗೆ 2,25,00,000 ರೂಪಾಯಿ ಚಂದಾ ವಸೂಲಾಗಿರುತ್ತದೆ.

ಹಿಂದುಸ್ಥಾನದಲ್ಲಿ.

ಹಿಂದುಸ್ಥಾನದ ಎಲ್ಲಾ ಭಾಗಗಳಲ್ಲೂ ಪ್ರಜೆಗಳು ಸಭೆಗಳನ್ನು ನಡಿಸಿ ರಾಜಭಕ್ತಿಯನ್ನು ಅತಿಶಯವಾಗಿ ಪ್ರಕಾಶಪಡಿಸುತ್ತಲೂ, ತಮ್ಮಿಂದಾಗುವ ಸಹಾಯವನ್ನು ಒದಗಿಸಲು ಸಿದ್ಧರಾಗಿದೇವೆಂದು ಅರಿಕೆ ಮಾಡುತ್ತಲೂ ಇದಾರೆ. ಯುದ್ಧದ ರಿಲೀಫ್ ಫಂಡಿಗೆ ಬಹಳವಾಗಿ ಚಂದಾ ಹಣಗಳು ಬರುತ್ತಿರುವವು.

ದಕ್ಷಿಣ ಆಫ್ರಿಕದ ಮ|| ಗಂಧಿಯವರೂ, ಹಿಂದುಸ್ಥಾನದ ಅನೇಕ ದೇಶೀಯ ಪ್ರಜೆಗಳೂ ತಮ್ಮನ್ನು ಈ ಯುದ್ಧದಲ್ಲಿ ಯಾವ ರೀತಿಯಲ್ಲಾದರೂ ಉಪಯೋಗಿಸಿಕೊಳ್ಳಬೇಕೆಂದು ಬ್ರಿಟಿಷ್ ಗವರ್ನ್ಮೆಂಟಿಗೆ ಅರಿಕೆಮಾಡಿಕೊಂಡಿದಾರೆ.

ಬರೋಡಾ ಮಹಾರಾಜರವರು ಜರ್ಮನಿಗೆ ಸೇರಿದ ಕಾರ್ಲ್ಸ್‌ಬಾಡ್ ಎಂಬಲ್ಲಿಗೆ ಹೋಗಿರುತ್ತಾರೆ; ಅವರು ಅಲ್ಲಿಂದ ವಾಪಸು ಬರುವುದು ಕಷ್ಟವಾಗಬಹುದು. ಗಾಯಕವಾಡಿ ಮಹಾರಾಜರವರು ಫ್ರಾನ್ಸಿಗೆ ಸೇರಿದ ವೀಚಿ ಎಂಬಲ್ಲಿ ಇರುವರು.

ಹಿಂದುಸ್ಥಾನದಿಂದ ಸೈನ್ಯವನ್ನು ಕಳುಹಿಸಿಕೊಡಬೇಕೆಂದು ಸನ್ನಾಹ ನಡೆಯುತ್ತಿರೋಣದರಿಂದ ಇದಕ್ಕಾಗಿಯೇ ಅನೇಕ ಜಹಜುಗಳ ಸಂಚಾರವನ್ನು ಸರ್ಕಾರದವರು ನಿಲ್ಲಿಸಿರಬೇಕೆಂದು ಕಾಣುತ್ತದೆ.

ಒಳದೇಶದ ವೃತ್ತಾಂತಗಳು.

ಈ ವಾರ ನಮ್ಮ ಪತ್ರಿಕೆಯು ಹತ್ತು ಪುಟಗಳುಳ್ಳದ್ದಾಗಿದೆ.

ಯುದ್ಧಭೂಮಿಯ ನಕ್ಷೆಯು (ಮ್ಯಾಪು) ತಯಾರಾಗಲಿಲ್ಲವೆಂದು ವಿಷಾದಿಸುತ್ತೇವೆ. ಅದನ್ನು ಬಹುತರ ಮುಂದಿನ ವಾರ ಕಳುಹಿಸುವೆವು.

ಕಳೆದ ಶನಿವಾರ ಬೆಳಗ್ಗೆ ಶ್ರೀಮನ್ಮಹಾರಾಜರವರು ಬೆಂಗಳೂರಿಂದ ಮೋಟರಿನಲ್ಲಿ ರಾಜಧಾನಿಗೆ ಚಿತ್ತೈಸಿದ್ದು, ಮರುದಿನ ಸಾಯಂಕಾಲ ವಾಪಸು ದಯಮಾಡಿದರು.

ಸರ್ದಾರ್ ಎಂ. ಕಾಂತರಾಜೆ ಅರಸ್, ಸಿ ಎಸ್. ಐ ರವರು ಕಳೆದ ಮಂಗಳವಾರ ಸಾಯಂಕಾಲ ರಾಜಧಾನಿಯ ಚಾಮರಾಜಪೇಟೆಯಲ್ಲಿ ಕೃಷ್ಣರಾಜ ಬಾಲಿಕಾ ಪಾಠಶಾಲೆಯ ಪ್ರಾರಂಭೋತ್ಸವವನ್ನು ನಡಿಸಿದರು.

ಕಳೆದ ವಾರ ಸಂಸ್ಥಾನದ ಕೌನ್ಸಿಲರುಗಳೂ ದಿವಾನರವರೂ ರಾಜಧಾನಿಗೆ ದಯಮಾಡಿ ಎರಡು ದಿನ ಇದ್ದು ಈ ಸುತ್ತುಮುತ್ತಿನ ಸರ್ಕಾರಿ ಕೆಲಸಕಾರ್ಯಗಳನ್ನು ತನಿಖೆಮಾಡಿಕೊಂಡು ಭಾನುವಾರ ವಾಪಸು ಬೆಂಗಳೂರಿಗೆ ಪ್ರಯಾಣಮಾಡಿದರು.

ಯಡತೊರೆ ತಾಲ್ಲೂಕು ಮಿರ್ಲೆ ರೈಸ್ ಮಿಲ್ ಕಂಪನಿಯ ಷೇರುಗಳ ಪೈಕಿ 1,250 ಷೇರುಗಳನ್ನು ಮೈಸೂರು ಸರ್ಕಾರದವರು ತೆಗೆದುಕೊಳ್ಳುವುದಾಗಿ ಅಪ್ಪಣೆ ದಯಪಾಲಿಸಿದಾರೆಂದು ಆ ಕಂಪನಿಯ ಮೈಸೂರು ಏಜಂಟರಾದ ಮ|| ಎಸ್. ರಾಮಶೆಟ್ಟರು ತಿಳಿಸುತ್ತಾರೆ.

ಚನ್ನಗಿರಿ ತಾಲ್ಲೂಕು ಮಲಹಾಳ್ ಗ್ರಾಮದ ಬೆಟ್ಟದಲ್ಲಿ ಒಂದು ಹುಲಿ ಸೇರಿಕೊಂಡು ಆಗಾಗ್ಗೆ ಊರಿನ ದನಗಳನ್ನು ಹಿಡಿದು ತಿಂದು ನಷ್ಟಪಡಿಸುತ್ತಾ ಇದೆ ಎಂದು ತಿಳಿಯುವುದು. ಸರ್ಕಾರದವರು ಶಿಕಾರಿದಾರರನ್ನು ಕಳುಹಿಸಿ ಅದರ ಬಾಧೆಯನ್ನು ತಪ್ಪಿಸುತ್ತಾರೆಂದು ನಿರೀಕ್ಷಿಸಲ್ಪಟ್ಟಿದೆ.

ರಾಜಧಾನಿಯ ಕೋಟೆ ಪೂರ್ವ ದಿಕ್ಕಿನ ಕಂದಕವನ್ನು ಮುಚ್ಚಿ ನೆಲ ಸಮ ಮಾಡುವುದು, ದಿಡ್ಡಿಬಾಗಿಲಿನಿಂದ ಕೋಟೆಯ ಮಳೀ ನೀರಿಗೆ ಕಲ್ಲು ಚರಂಡಿಯನ್ನು ಕಟ್ಟುವುದು, ಅಲ್ಲೇ ಇತರ ಕಾಮಗಾರಿಗಳನ್ನು ನಡಿಸುವುದು, ಇದೆಲ್ಲಾ ಸರಿಯಾಗಿದೆ ಎಂದು ಸೆಂಟ್ರಲ್ ಸ್ಯಾನಿಟರಿ ಬೋರ್ಡಿನವರು ಒಪ್ಪಿ ಪ್ಯಾಸ್ ಮಾಡಿರುತ್ತಾರೆ. ಈ ಕಾಮಗಾರಿಗಳಿಗೆ ಸುಮಾರು 28,000 ರೂಪಾಯಿ ಬೇಕಾಗುವುದೆಂದು ಅಂದಾಜು ಮಾಡಲ್ಪಟ್ಟಿದೆ.

ಹರಿಕಥೆಯನ್ನು ಮಾಡುವುದರಲ್ಲಿ ಯಶಸ್ಸು ಪಡೆದಿರುವ ಧಾರವಾಡದ ವೇ|| ನಾರಾಯಣಶಾಸ್ತ್ರಿಗಳು ರಾಜಧಾನಿಯ ತ್ರಿನೇಶ್ವರದೇವಸ್ಥಾನದಲ್ಲಿ ಏಳು ದಿನ ಹರಿಕಥೆ ಮಾಡಿದರು. ದಿನವೂ ನೂರಾರು ಜನರು ಸೇರುತ್ತಿದ್ದರು. ಕಡೇ ದಿನ ಎಲ್ಲರೂ ಚಂದಾ ಹಾಕಿ ಸುಮಾರು 400 ರೂಪಾಯಿ ನಗದು ದಾಸರಿಗೆ ಬಹುಮಾನ ಮಾಡಿದರು. ಇದಲ್ಲದೆ ಕಳೆದ ವಾರ ಅವರಿಗೆ ಕೆಲವು ಸ್ನೇಹಿತರು ಔತಣವನ್ನು ಮಾಡಿ, ಸಂತೋಷಪಡಿಸಿ ಕಳುಹಿಸಿಕೊಟ್ಟರು.

ಹೊಳೆನರಸೀಪುರದ ಮ|| ಜಿ. ಸತ್ಯವೀರಯ್ಯನವರ ಕುಮಾರ್ತಿ ಸೌ|| ಸಂಜೀವಮ್ಮನು ಕೋಲಾರದಲ್ಲಿರುವ ತನ್ನ ಪತಿಯ ಮನೆಯಲ್ಲಿರುವಾಗ್ಗೆ ಕಳೆದ 4 ನೇ ತಾ. ಮಂಗಳವಾರ ಹ್ಯಾಗೋ ಆಕೆಯ ಸೀರೆಗೆ ಬೆಂಕಿ ಹತ್ತಿಕೊಂಡು ಮೈಯೆಲ್ಲಾ ಸುಟ್ಟುಹೋಗಿ, ಕೂಡಲೇ ಆಸ್ಪತ್ರೆಗೆ ಸಾಗಿಸಿದರೂ ಪ್ರಯೋಜನವಾಗದೆ ಮೂರು ದಿನ ಸಂಕಟಪಟ್ಟು ಶುಕ್ರವಾರ ಸಾಯಂಕಾಲ ಕಾಲವಾದಳೆಂದೂ, ಆಕೆಯ ತಂದೆ ತಾಯಿಗಳೂ ಇತರ ರಕ್ತಸಂಬಂಧಿಗಳೂ ಬಹಳ ದುಃಖಪಡುತ್ತಿದಾರೆಂದೂ ಒಬ್ಬ ಬಾತ್ಮಿದಾರರು ತಿಳಿಸುವರು.

ರಾಜಧಾನಿಯ ಟೌನ್ ಹಾಲ್ ಬಂಗಲೆಯಲ್ಲಿ ನಾಲ್ಕನೇ ಪರಸ್ಪರಸಹಾಯ ಸಂಘಗಳ ಕಾನ್ಫರೆನ್ಸನ್ನು ಶ್ರೀಮದ್ಯುವರಾಜರವರು ಸೆಪ್ಟಂಬರ್ ತಾ. 22 ರಲ್ಲಿ ಪ್ರಾರಂಭಮಾಡುವರು. ಸರ್ದಾರ್ ಎಂ. ಕಾಂತರಾಜೆ ಅರಸ್, ಸಿ.ಎಸ್. ಐ. ರವರು ಅಧ್ಯಕ್ಷರಾಗಿ ಮಹಾಸಭೆಯನ್ನು ನಡಿಸುತ್ತಾರೆ. ಕಾನ್ಫರೆನ್ಸಿಗಾಗಿ ರಾಜಧಾನಿಗೆ ಬರತಕ್ಕ ಮೆಂಬರುಗಳು ಸೆಕ್ರೆಟರಿ ಮ|| ಆರ್. ರಂಗರಾಯರಿಗೆ ಸೆಪ್ಟಂಬರ್ ತಾ. 17 ರೊಳಗೆ ಬರೆದುಕೊಂಡರೆ ಸ್ಥಳವಸತಿ ಮುಂತಾದದ್ದನ್ನು ಅವರು ಕಲ್ಪಿಸಿಕೊಡುವರು.

ಬೆಂಗಳೂರು ಶ್ರೀನಿವಾಸ ಮಂದಿರದ ಸ್ತ್ರೀಸಭೆಯವರು ಕಳೆದ ಶನಿವಾರ ಸಭೆ ನಡಿಸಿದರು. ಮದರಾಸಿನ ಸೌ|| ಸಿಂಗಾರಮ್ಮನವರು ಆಚಾರ್ಯರುಗಳ ಮತಾಭಿಪ್ರಾಯವನ್ನು ಕುರಿತು ಬರೆದಿದ್ದ ಸ್ವಾರಸ್ಯವಾದ ಉಪನ್ಯಾಸವನ್ನು ಓದಿ ಹೇಳಿದರು. ಪರಮಾರ್ಥದ ವಿಷಯದಲ್ಲಿ ಆಚಾರ್ಯರುಗಳ ವಾಕ್ಯಗಳೂ, ಗೀತಾ ಶ್ಲೋಕಗಳೂ ಉದಾಹರಿಸಲ್ಪಟ್ಟವು. ಉಪನ್ಯಾಸವಾದ ಬಳಿಕ ಮ|| ಕೆ. ಕೃಷ್ಣಯ್ಯಂಗಾರ್ರ ಸಣ್ಣ ಮಕ್ಕಳಿಬ್ಬರು ವೀಣೆ, ಹಾರ್ಮೋನಿಯಂಗಳನ್ನು ಬಹಳ ಇಂಪಾಗಿ ನುಡಿಸಿ ಸಭಿಕರನ್ನು ಆನಂದಪಡಿಸಿದರು.

ರಾಜಧಾನಿಯ ಕೃಷ್ಣರಾಜ ಮೊಹಲ್ಲೆಯಲ್ಲಿ ಮನೆಗಳನ್ನು ಒಡೆದು ಹಾಕಿ ರಸ್ತೆ ಚರಂಡಿ ಮುಂತಾದವುಗಳನ್ನು ಕಟ್ಟಿಸುವುದಕ್ಕೆ ಸರ್ಕಾರದವರು ಸದ್ಯದಲ್ಲಿ ಮೂರು ಬ್ಲಾಕುಗಳ ಖರ್ಚಿಗೆ 74,700 ಚಿಲ್ಲರೆ ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ. ಅಲ್ಲಿ ಅನೇಕ ಬಡಬಗ್ಗರು ಮನೆಗಳನ್ನು ಕಳೆದುಕೊಳ್ಳುತ್ತಾರಾದದ್ದರಿಂದ ಅಂಥವರಿಗೆ ಆರೋಗ್ಯಕರವಾದ ಹೊಸ ಮನೆಗಳನ್ನು ಕಟ್ಟಿಸಿ ಬಿಕರಿಮಾಡುವುದಕ್ಕಾಗಿ ಟ್ರಸ್ಟ್ ಬೋರ್ಡಿನವರು ಒಂದು ಕಮಿಟಿಯನ್ನು ಮಾಡಿಕೊಂಡಿದಾರೆ. ಈ ಕಮಿಟಿಯಲ್ಲಿ ಚೇರ್ಮನ್ರವರು, ಹೆಲ್ತ್ ಆಫೀಸರು, ಮ|| ಎಂ. ಸಿ. ರಂಗಯ್ಯಂಗಾರ್ರು, ಮಿ|| ಮಹಮದ್ ಜಾಫರ್ ಸಾಹೇಬರು, ಈ ನಾಲ್ಕು ಮಂದಿಯೂ ಮೆಂಬರಾಗಿ ನಿಂತು ಏರ್ಪಾಡುಗಳು ಮಾಡುವರು.

ರಾಜಧಾನಿಯ ಚಾಮರಾಜಪೇಟೆ ಮಿಷನ್ ಗರಲ್ಸ್ ಸ್ಕೂಲಿಗೆ ಹೋಗಿ ವಾಪಸು ಬರುತ್ತಿದ್ದ ಮೂರು ಮಂದಿ ಬ್ರಾಹ್ಮಣ ಹೆಣ್ಣುಮಕ್ಕಳನ್ನು ಹಿಂದಿನ ಸೋಮವಾರ ಬೆಳಗ್ಗೆ ನಜರ್ಬಾದಿನಲ್ಲಿರುವ ಗೋವಿಂದನೆಂಬುವನು ಪುಸಲಾಯಿಸಿ ಚಟ್ಟಹಳ್ಳಿ ಕ್ಯಾಂಪ್ ಮನೆಗಳ ಆಚೆಗೆ ಕರೆದುಕೊಂಡು ಹೋಗಿ ಹೊಡೆದು ಅವರ ಮೈಮೇಲಿದ್ದ ಒಡವೆಗಳನ್ನು ಕಿತ್ತುಕೊಂಡು ಹೋದನು. ಮ್ಯುನಿಸಿಪಲ್ ಇಂಜನಿಯರ್ ಮ|| ಕಾಶಿಪತಿಶಾಸ್ತ್ರಿಗಳು ಅಕಸ್ಮಾತ್ತಾಗಿ ಆ ಮಕ್ಕಳನ್ನು ಕಂಡು ತಮ್ಮ ಗಾಡಿಯಲ್ಲಿ ಕರೆದುತಂದು ಅವರವರ ಮನೆಗಳಿಗೆ ಬಿಟ್ಟರು. ಚಾಮರಾಜಪೇಟೆಯ ಪೋಲೀಸಿನವರು ಮರುದಿನ ಸಾಯಂಕಾಲದ ತನಕ ಸಾಹಸಪಟ್ಟು, ಗೋವಿಂದನನ್ನು ಪತ್ತೆಮಾಡಿ ಹಿಡಿದು, ಆ ನಗಗಳನ್ನೆಲ್ಲಾ ತೆಗೆದುಕೊಂಡು, ಈಗ ಅವನ ಮೇಲೆ ಮೊಕದ್ದಮೆ ಮಾಡಿದಾರೆ.

ರಾಜಧಾನಿಯಲ್ಲಿ ಮೋಡವಾದುವುದೂ ಬಿರುಗಾಳಿಯೂ ವಿಶೇಷವಾಗಿ, ಪ್ರಜಾ ಆರೋಗ್ಯಸ್ಥಿತಿಯು ತೃಪ್ತಿಕರವಾಗಿಲ್ಲ. ಪ್ಲೇಗ್ ಉಪದ್ರವು ದಿನೇದಿನೇ ಹೆಚ್ಚುತ್ತಲೂ, ಪಟ್ಟಣದ ಎಲ್ಲಾ ಮೊಹಲ್ಲೆಗಳಿಗೂ ಹರಡುತ್ತಲೂ ಬಂದಿದೆ. ಹಿಂದಿನ ವಾರ ಸೀನಿಯರ್ ಸರ್ಜನ್ರವರು ಬಂದು ಅಜಮಾಯಿಷಿ ಮಾಡಿ ಪ್ರಜೆಗಳಿಗೆ ಪ್ಲೇಗ್ ಹರಡದಂತೆ ಇನಾಕ್ಯುಲೇಷನ್ ಮಾಡಿಸಬೇಕೆಂದು ಅಪ್ಪಣೆ ಕೊಟ್ಟರು. ಕೆಲವರು ಇನಾಕ್ಯುಲೇಷನ್ ಮಾಡಿಸಿಕೊಂಡಿದಾರೆ. ಹೊಲಗೇರಿಯವರಿಗೆ ಇನಾಕ್ಯುಲೇಷನ್ ಮಾಡಿಸುವುದಕ್ಕಾಗಿ ಮಹಾಮಾತೃಶ್ರೀಯವರು 300 ರೂಪಾಯಿ ದಯಪಾಲಿಸಿದರು. ಪ್ರಜೆಗಳ ಮುಖಂಡರು ಆಯಾ ಮೊಹಲ್ಲೆಗಳಲ್ಲಿ ಬಡಬಗ್ಗರಿಗೆ ಸಹಾಯಮಾಡಿ ಇನಾಕ್ಯುಲೇಷನ್ ಮಾಡಿಸದೆ ತಾಮಸಮಾಡಿದರೆ ರೋಗವು ಹರಡೀತೆಂಬ ಭೀತಿಯುಂಟಾಗಿದೆ.

ಮೈಸೂರು ಸಿಟಿ ಶ್ರೀ ಪ್ರಸನ್ನ ನಂಜುಂಡೇಶ್ವರಸ್ವಾಮಿ ದೇವಸ್ಥಾನವು ಧರ್ಮದರ್ಶಿ ಮ|| ಅಂಬಳೆ ಅಣ್ಣಯ್ಯಪಂಡಿತರವರ ಅಧ್ಯಕ್ಷತೆಯಿಂದ ಬಹಳ ಅಭಿವೃದ್ಧಿ ಸ್ಥಿತಿಯಲ್ಲಿರುತ್ತೆ. ಇಲ್ಲಿ ಪ್ರತಿ ದಿನವೂ ರಾತ್ರಿವೇಳೆ ನಿವೇದನವಾಗತಕ್ಕ ಎರಡು ಸೇರು ಅಕ್ಕಿ ದಧ್ಯನ್ನವನ್ನು ಪರಸ್ಥಳ ಬ್ರಾಹ್ಮಣರಿಗೆ ಧ|| ಮ|| ಬಿ. ಕೃಷ್ಣಸೆಟ್ಟಿರವರೂ ಪಾರುಪತ್ತೇಗಾರ್ ರಾಮಣ್ಣನವರೂ ಭಕ್ತಿವಿನಯಗಳಿಂದ ವಿನಿಯೋಗ ಮಾಡಿಸುತ್ತಾರೆ. ಈ ದೇವಸ್ಥಾನದಲ್ಲಿ ನಿತ್ಯಕಟ್ಲೆ ಹೆಚ್ಚುಕಟ್ಲೆ ದೀಪಾರಾಧನೆ ವಗೈರೆ ಸೇವೆಗಳನ್ನು ಪಾರುಪತ್ತೇಗಾರ್ರು ಭಕ್ತಿಯಿಂದಲೂ ನಿಷ್ಪಕ್ಷಪಾತದಿಂದಲೂ ನಡಿಸುತ್ತಾ ಇದಾರೆ. ಎಲ್ಲಾ ಛತ್ರ ದೇವಸ್ಥಾನಗಳಲ್ಲೂ ಅಧಿಕಾರಿಗಳು ಇದೇ ರೀತಿ ನಡಿಸಿದರೆ ಭಕ್ತಾದಿಗಳಿಗೂ ಪರಸ್ಥಳದವರಿಗೂ ಬಹಳ ಸೌಕರ್ಯವುಂಟಾಗುತ್ತದೆ ಎಂದು ಒಬ್ಬ ಬಾತ್ಮಿದಾರರು ತಿಳಿಸುತ್ತಾರೆ.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1914 ನೇ ಇಸವಿ ಆಗಸ್ಟ್ 13 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ.

ಲೇಣೆ:—(1) ಷೇರು ಮೊಬಲಗು	ರೂ.	9,93,095
,, (2) ಡಿಪಾಜಿಟ್ಟುಗಳು	,,	20,61,863
,, (3) ಇತರೆ	,,	40,771
(ಆಣೆ, ಕಾಸು ಬಿಟ್ಟಿರುತ್ತೆ.)	ಜುಮ್ಲಾ ರೂ.	30,95,729

ದೇಣೆ:—(1) ಕೈಯಲ್ಲೂ, ಬ್ಯಾಂಕುಗಳಲ್ಲಿರುವ ಹಣ	ರೂ	8,73,254
,, (2) ಖಾತೆ ಮತ್ತು ಇತರ ಸಾಲಗಳು	,,	14,03,178
,, (3) ಡಿಸ್ಕೌಂಟು ಮಾಡಿದ ವಾಯಿದೆ ಹುಂಡಿಗಳು	,,	2,29,925
,, (4) ಇನ್‌ವೆಸ್ಟ್‌ಮೆಂಟುಗಳು	,,	2,50,000
,, (5) ಏಜನ್ಸಿಗಳಲ್ಲಿರುವ ಮೊಬಲಗು	,,	2,21,713
,, (6) ಬ್ಯಾಂಕಿನಲ್ಲಿರುವ ಸಾಮಾನುಗಳು	,,	10,735
,, (7) ಇತರೆ	,,	8,614
(ಆಣೆ, ಕಾಸು ಬಿಟ್ಟಿರುತ್ತೆ.)	ಜುಮ್ಲಾ ರೂ.	30,95,729

ಡಬ್ಲ್ಯು. ಸಿ. ರೋಸ್, ಮ್ಯಾನೇಜರ್.

ಮೈಸೂರು ಗೆಜೆಟ್ ಸಂಗ್ರಹ.

ನಾಗಮಂಗಲ ಮತ್ತು ಚಾಮರಾಜನಗರ ಟವುನ್‌ಗಳ ಮ್ಯುನಿಸಿಪಲ್ ಸರಹದ್ದುಗಳೊಳಗೆ ಸೆಪ್ಟಂಬರ್ ತಾ. 1 ರಿಂದ ಪ್ರಜೆಗಳ ಮಕ್ಕಳಿಗೆ ಬಲಾತ್ಕಾರದಿಂದ ದೇವೀ ಹಿಟುಬು ಹಾಕುವ ಕಾನೂನು ಮೂರು ವರುಷಗಳ ವರೆಗೆ ಜಾರಿಗೆ ತರಲ್ಪಡುತ್ತದೆ.

ಮ|| ಅನಂತ ಶೆಟ್ಟರನ್ನು ದೇವನಹಳ್ಳಿ ಟವುನ್ ಮ್ಯುನಿಸಿಪಲ್ ಕೌನ್ಸಿಲರಾಗಿ ನೇಮಕಮಾಡಿದೆ.

ಸಕಲೇಶಪುರದ ಸಬ್ ಡಿವೀಜನ್ ಆಫೀಸರ್ ಮ|| ಎಂ. ಸದಾಶಿವರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಚನ್ನರಾಯಪಟ್ಟಣದ ಸಬ್ ಡಿವೀಜನ್ ಆಫೀಸರವರು ಅವರ ಕೆಲಸದ ಭಾರವನ್ನು ವಹಿಸತಕ್ಕದ್ದು.

ಅ|| ಸರ್ಜನ್ ಮ|| ಬಿ. ಕೃಷ್ಣಮೂರ್ತಿರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಚಿಕ್ಕಬಳ್ಳಾಪುರದ ಅ|| ಸರ್ಜನ್ ಮಿಸ್ ಎ. ಜಿ. ಆರ್ಚರ್‌ರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಚೀಫ್ ಕೋರ್ಟ್ ಡಿಪ್ಟಿ ರೆಜಿಸ್ಟ್ರಾರ್ ಮ|| ಟಿ. ವೆಂಕೋಬರಾಯರು ಚೀಫ್ ಕೋರ್ಟ್ ರೆಜಿಸ್ಟ್ರಾರಾಗಿ ಬದಲಿ ನೇಮಿಸಲ್ಪಟ್ಟಿದ್ದಾರೆ.

ಚಿತ್ರದುರ್ಗದ ಡಿಸ್ಟ್ರಿಕ್ಟಿಗೆ ಅ|| ಕಮಿಷನರಾಗಿ ವರ್ಗಮಾಡಲ್ಪಟ್ಟಿರುವ ಮ|| ಎಸ್. ಚಕ್ರಪಾಣಿ ಅಯ್ಯಂಗಾರ್ರಿಗೆ 1 ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಟ್ಟಿದೆ; ಇವರು ದರ್ಯಾಪ್ತಿಮಾಡುವ ಮೊಕದ್ದಮೆಗಳಲ್ಲಿ ಸಾಕ್ಷಿಗಳ ಹೇಳಿಕೆಯನ್ನು ಸ್ವಹಸ್ತ ಇಂಗ್ಲಿಷ್‌ನಲ್ಲಿ ಬರೆದುಕೊಳ್ಳತಕ್ಕದ್ದು.

ಮ|| ವಿ. ಕೆ. ರಣತ್ಕಾರ್ ರವರನ್ನು ಎರಡು ವರುಷ ಹಂಗಾಮಿಯಾಗಿ 3 ನೇ ಕ್ಲಾಸ್ ಅ|| ಇನ್‌ಜಿನಿಯರಾಗಿ ನೇಮಿಸಿ ರೈಲ್ವೆ ಕಾಮಗಾರಿ ಇಲಾಖೆಗೆ ವರ್ಗಮಾಡಿದೆ.

ಮುಂದೆ ಹೇಳುವ ಇನ್‌ಜಿನಿಯರುಗಳ ವರ್ಗಾವರ್ಗಿ ಹುಕುಂ ಮಾಡಲಾಗಿದೆ:—ಮ|| ಗಳಾದ ಎಚ್. ಜಿ. ಕೃಷ್ಣಯ್ಯಂಗಾರ್ರು ಚಿತ್ರದುರ್ಗ ಡಿಸ್ಟ್ರಿಕ್ಟಿಗೆ, ಬಿ. ಕೃಷ್ಣಸ್ವಾಮಿ ಅಯ್ಯಂಗಾರ್ರು ಹಾಸನದಿಂದ ಮೈಸೂರು ಡಿಸ್ಟ್ರಿಕ್ಟಿಗೆ; ಗುರುರಾವ್ ಎಸ್. ಸಿರ್ಸಿಯವರು ಕೋಲಾರ ಡಿಸ್ಟ್ರಿಕ್ಟಿಗೆ; ಆರ್. ಕೃಷ್ಣರಾಯರು ತುಮಕೂರಿಂದ ಚಿತ್ರದುರ್ಗ ಡಿವಿಜನ್‌ಗೆ; ಓವರ್‌ಸಿಯರ್ ಎ. ರಾಜಗೋಪಾಲ ಮುದಲಿಯಾರ್ರು ಕೋಲಾರದಿಂದ ಹಾಸನ ಡಿವಿಜನ್‌ಗೆ.

ಚಿತ್ರದುರ್ಗದ ಮಿ|| ಜಿ. ಆರ್. ಪಲ್ಲರವರನ್ನು, ತುಂಕೂರಿನ ಮ|| ಬಿ. ಎಸ್. ರಂಗನಾಯಕಲು ನಾಯುಡುರವರನ್ನೂ ಆಗಸ್ಟ್ ತಾ. 1 ರಿಂದ 3 ನೇ ಕ್ಲಾಸ್ ಹಂಗಾಮಿ ಓವರ್‌ಸಿಯರಾಗಿ ಬಡ್ತಿಮಾಡಿದೆ.

ಮುಂದೆ ಹೇಳುವವರನ್ನು ರೈಲ್ವೆ ಕಾಮಗಾರಿ ಇಲಾಖೆಗೆ ವರ್ಗಮಾಡಲಾಗಿದೆ:—ಟ್ರೈನಿಂಗಿನ ಮ|| ಎಸ್. ಮುತ್ತುಸ್ವಾಮಿ ಅಯ್ಯರವರು, ಶಿವಮೊಗ್ಗದ ಮ|| ಎ. ... ತ್ಯಾಗರಾಜ ಅಯ್ಯರವರು, ಚಿತ್ರದುರ್ಗದ ಮ|| ವ್ಹಿ. ಎಲ್. ಚಂದ್ರಶೇಖರಯ್ಯನವರು.

ಕೋಆಪರೆಟಿವ್ ಸೊಸೈಟಿಗಳ ಜನರಲ್ ಮೀಟಿಂಗು.

ತಿಪ್ಟೂರು.—ಈ ಊರು ಕೋಆಪರೆಟಿವ್ ಸೊಸೈಟಿ ಜನರಲ್ ಮೀಟಿಂಗು ಕಳೆದ ತಾ|| 16 ನೇ ಭಾನುವಾರ 4 ಗಂಟೆಗೆ ವರ್ನಾಕ್ಯುಲರ್ ಮಿಡಲ್ ಗರಲ್ಸ್ ಸ್ಕೂಲಿನಲ್ಲಿ ನಡಿಸಲ್ಪಟ್ಟಿತು. ಈ ಮೀಟಿಂಗಿಗೆ ತುಂಕೂರು ಡೆಪ್ಟಿ ಕಮಿಷನರ್ ಮ|| ಬಿ. ಜಿ. ಕುಮಾರಸ್ವಾಮಿ ನಾಯಕರವರು, ಗುಬ್ಬಿ ಸಬ್ ಡಿವೀಜನ್ ಆಫೀಸರ್ ವಿ. ರಾಮಸ್ವಾಮಯ್ಯನವರು, ಪೋಲೀಸ್ ಸೂ|| ಮಿ|| ಜೇಮ್ಸ್ ಸಾಹೇಬರವರು, ಫಾರೆಸ್ಟ್ ಅ|| ಕನ್‌ಸರ್ವೇಟರ್ ಮ|| ಗೋವಿಂದರಾಯರವರು, ಮಾಜಿ ಡೆಪ್ಟಿ ಕಮಿಷನರ್ ಮ|| ಚೆಂಗಯ್ಯಶೆಟ್ಟರವರು, ಇಂಡಸ್ಟ್ರಿಯಲ್ ಕಮಿಟಿ ಮ|| ಸುಬ್ಬಸ್ವಾಮಯ್ಯನವರು, ಅಡ್ವೊ|| ಮ|| ವೈ. ರಾಮರಾಯರು, ಮಾಜಿ ಅಮಲ್ದಾರ್ ಮ|| ಕೇಶವ್‌ಸಿಂಗ್‌ರವರು, ತಿಪ್ಟೂರು ತಾಲ್ಲೂಕ್ ಅಮಲ್ದಾರ್ ಮ|| ಕೃಷ್ಣರಾಯರೇ ಮುಂತಾದ ಪುರಪ್ರಮುಖರಾದಿಯಾಗಿ ದಯಮಾಡಿಸಿದ್ದಾಗಿತ್ತು. ಸಭೆಯವರ ಕೋರಿಕೆಯಂತೆ ಡೆಪ್ಟಿ ಕಮಿಷನರ್ ಮ|| ಬಿ. ಜಿ. ಕುಮಾರಸ್ವಾಮಿ ನಾಯಕರವರು ಅಗ್ರಾಸನವನ್ನು ವಹಿಸಿದರು. ಸೆಕ್ರಿಟರಿ ಮ|| ತಿಮ್ಮಣ್ಣಯ್ಯನವರು ಸೊಸೈಟಿಯ ವಾರ್ಷಿಕ ರಿಪೋರ್ಟನ್ನು ಓದಿ ಮುಗಿಸಿದ ನಂತರ ಆಡಿಟರುಗಳು ಸೊಸೈಟಿಯ ಆಡಳಿತದ ಮತ್ತು ಅಭಿವೃದ್ಧಿಯ ವಿಷಯವಾಗಿ ಬರೆಯಲ್ಪಟ್ಟ ರಿಪೋರ್ಟನ್ನು ಓದಲಾಯಿತು. ಕಂತಿನ ಮುಸ್ತಿ ಬಡ್ಡಿಯನ್ನು ಅಸಲು ಬಡ್ಡಿಗೆ ಸೇರಿಸಬೇಕೆಂಬ ವಿಷಯ ಬಹಳ ಹೊತ್ತು ಚರ್ಚಿಸಲ್ಪಟ್ಟು ಕೊನೆಗೆ ರಿಜರ್ವ್ ಫಂಡಿಗೆ ಅದನ್ನು ಸೇರಿಸಬೇಕೆಂತ ತೀರ್ಮಾನವಾಯಿತು. ಮೆಂಬರುಗಳು ಅವಶ್ಯಕವಾದ ವಿಷಯಗಳನ್ನು ಚರ್ಚಿಸಲು ಅಧ್ಯಕ್ಷರು ಸದುತ್ತರಗಳನ್ನು ದಯಪಾಲಿಸಿದರು. ಸೊಸೈಟಿಗಳ ಪ್ರಯೋಜನ, ಐಕಮತ್ಯ, ಇವುಗಳ ವಿಷಯವಾಗಿ ಸಭಾಧ್ಯಕ್ಷರು ಅಪ್ಪಣೆಕೊಡಿಸಿದ ಬುದ್ಧಿವಾದವು ತುಂಬಾ ಶ್ಲಾಘನೀಯವಾಗಿತ್ತು. ಸೊಸೈಟಿಯ ಅಭಿವೃದ್ಧಿ ವಿಷಯದಲ್ಲಿ ತುಂಬಾ ಶ್ರದ್ಧೆವಹಿಸಿ ಕೆಲಸ ಮಾಡಿಯೂ ಮತ್ತು ಮಾಡುತ್ತಲೂ ಇರುವ ಸೆಕ್ರೆಟರಿ ಮ|| ತಿಮ್ಮಣ್ಣಯ್ಯನವರಿಗೆ ಬಹುಮಾನವಾಗಿ 4 ಪವನ್‌ಗಳನ್ನು ಅಧ್ಯಕ್ಷರ ಹಸ್ತದಿಂದ ಕೊಡಿಸಲಾಯಿತು. ಸಭಾಧ್ಯಕ್ಷರಿಗೆ ವಂದನೆಗಳನ್ನು ಅರ್ಪಿಸಿ ಸರ್ವರಿಗೂ ಗಂಧ ಪುಷ್ಪ ತಾಂಬೂಲ ವಿನಿಯೋಗವಾದ ನಂತರ ಸಭೆಯು ಬರಖಾಸ್ತು ಮಾಡಲ್ಪಟ್ಟಿತು. ಮತ್ತು ಅದೇ ದಿನ ಸಾಯಂಕಾಲ ಪ್ಯಾಸೆಂಜರಿನಲ್ಲಿ ಡೆಪ್ಟೀ ಕಮಿಷನರಾದಿಯಾಗಿ ಆಫೀಸರುಗಳು ತಮ್ಮೂರಿಗೆ ಪ್ರಯಾಣ ಬೆಳಸಿದರು.

ಪ್ರತ್ಯಕ್ಷದರ್ಶಿ

ಮದ್ದಗಿರಿ.—ಮದ್ದಗಿರಿಯಲ್ಲಿ ಕೋಆಪರೆಟಿವ್ ಸೊಸೈಟಿಯ ಜನರಲ್ ಮೀಟಿಂಗು ಮೊನ್ನೆ ಶನಿವಾರ ಗ|| ಗರಲ್ಸ್ ಸ್ಕೂಲಿನಲ್ಲಿ ನಡೆಯಿತು. ಸುಮಾರು 100 ಮಂದಿ ಮೆಂಬರುಗಳು ಹಾಜರಾಗಿದ್ದರು. ಅಗ್ರಾಸನವನ್ನು ನಮ್ಮ ಅ|| ಕಮಿಷನರ್ ಮ|| ಕೃಷ್ಣಸ್ವಾಮಯ್ಯಂಗಾರ್ರವರು ವಹಿಸಿದ್ದರು. ಸೆಕ್ರಿಟರಿ ಮ|| ಡಿ. ಕೇಶವರಾಯರು ಕಳೆದ ಸಾಲಿನ ಜಮಾಖರ್ಚು ಮುಂತಾದ್ದನ್ನು ಓದಿದರು. ಸೊಸೈಟಿ ವಿಷಯವಾಗಿ ಸೆಕ್ರಿಟರಿಯವರ ರಿಪೋರ್ಟು, ಎಕ್ಸಿಕ್ಯುಟಿವ್ ಮೆಂಬರುಗಳ ಚುನಾವಣೆ, ಮೈಸೂರಿನಲ್ಲಿ ನಡೆಯುವ ಕಾನ್‌ಫರೆನ್ಸಿಗೆ ಮೆಂಬರುಗಳ ಚುನಾವಣೆ, ಸೆಕ್ರಿಟರಿ ಮತ್ತು ಟ್ರೆಜರರ್‌ರವರ ಚುನಾವಣೆ, ಈ ವಿಷಯಗಳಲ್ಲಿ ಚರ್ಚೆ ನಡೆದು ಸೊಸೈಟಿಯು ತುಂಬಾ ಅಭಿವೃದ್ಧಿಸ್ಥಿತಿಗೆ ಬರುತ್ತಿರೋಣದರಿಂದ ಹಿಂದೆ ಇದ್ದಂತೆಯೇ ಸೆಕ್ರಿಟರಿ, ಟ್ರೆಜರರ್, ಎಗ್ಸಿಕ್ಯುಟಿವ್ ಮೆಂಬರುಗಳು ಇರಬಹುದೆಂದು ಮೆಂಬರುಗಳೆಲ್ಲರೂ ಅನುಮೋದಿಸಿದರು. ಜಮಾಖರ್ಚುಗಳ ವಿಷಯದಲ್ಲಿ ವಿಶೇಷ ಶ್ರದ್ಧೆಯಿಂದ ಕಷ್ಟಪಟ್ಟು ಕೆಲಸಮಾಡುತ್ತಿರುವ ಸೆಕ್ರಿಟರಿಯವರಿಗೆ 75 ರೂಪಾಯಿ ಬಹುಮಾನ ಕೊಡಬೇಕೆಂತಲೂ, ಸೊಸೈಟಿ ಫರ್ನಿಚರುಗಳಿಗೆ 25 ರೂಪಾಯಿ, ದೇವಸ್ಥಾನಕ್ಕಾಗಿ 25 ರೂಪಾಯಿ ಕೊಡಬೇಕೆಂತಲೂ, ಕಳೆಕ್ಟರ ಪಲಬನ್ನು 1 ರೂಪಾಯಿ ಜಾಸ್ತಿಮಾಡುವುದಾಗಿಯೂ, ಈಗಿರತಕ್ಕ ಬಡ್ಡಿ ದರಗಳನ್ನು ಕಮ್ಮಿಮಾಡಬೇಕೆಂತಲೂ, 10 ತಿಂಗಳಿನ ಕಂತು ವಾಯಿದೆಯನ್ನು 15 ತಿಂಗಳಿಗೆ ಜಾಸ್ತಿ ಮಾಡಬೇಕೆಂತಲೂ, ಸಾಲಾ ಕೊಡುವದನ್ನು 300 ರೂಪಾಯಿ ವರೆಗೆ ಜಾಸ್ತಿಮಾಡಬೇಕೆಂತಲೂ ತೀರ್ಮಾನವಾಡಲ್ಪಟ್ಟಿತು.— ಅದೇ ದಿನ ಮದ್ದಗಿರಿ ಕೋಆಪರೆಟಿವ್ ಮೋಟರ್ ಕಂಪನಿ ಏರ್ಪಾಡಿನ ವಿಷಯವನ್ನು ಕುರಿತು ನಮ್ಮ ಅ|| ಕಮಿಷನರ್‌ರವರು ಸಭೆಯಲ್ಲಿ ಪ್ರಸ್ತಾಪಮಾಡಿ ಇದಕ್ಕೆ 10,000 ರೂಪಾಯಿ ಮೂಲಧನವಾಗಬೇಕೆಂತಲೂ, 50 ರೂಪಾಯಿನ 200 ಷೇರುಗಳು ಮಾಡಿದೆ ಎಂತಲೂ, ಮೆಂಬರುಗಳಿಗೆಲ್ಲಾ ಅಭಿಪ್ರಾಯಕೊಡಲು ರಾಮಶಾಸ್ತ್ರಿಗಳೂ, ಕೆ. ಸುನಾತತಿಅಯ್ಯಂಗರೂ, ಶಿವರಾಮಯ್ಯನವರೂ, ರಾಮಸ್ವಾಮಯ್ಯರವರೂ, ಇತರ ಮೆಂಬರುಗಳೂ ಅದನ್ನು ಅನುಮೋದಿಸಿ, 86 ಕ್ಕೆ ಮೇಲ್ಪಟ್ಟು ಷೇರುಗಳನ್ನು ಆಗಲೇ ಭರ್ತಿಮಾಡಿದರು. ಇದನ್ನು ಸೆಪ್ಟಂಬರ್ ಮಾಹೆ 15 ನೇ ತಾ. ಒಳಗಾಗಿ ಮದ್ದಗಿರಿ ಕೋಆಪರೆಟಿವ್ ಮೋಟರ್ ಕಂಪನಿ ಎಂಬ ಹೆಸರಿಟ್ಟು ಮದ್ದಗಿರಿಯಿಂದ ತುಮಕೂರಿಗೆ ಮೋಟರ್ ಗಾಡಿಯು ಹೋಗಿಬರುವ ಹಾಗೆ ಏರ್ಪಾಡು ಮಾಡಬೇಕೆಂಬ ಅಭಿಪ್ರಾಯವನ್ನು ಎಲ್ಲರೂ ಅನುಮೋದಿಸಿದರು. ರಾತ್ರಿ 10 ಗಂಟೆಗೆ ಸಭೆಯು ಬರಖಾಸ್ತಾಯಿತು. ಮದ್ದಗಿರಿ ಪುರವಾಸಿಗಳ ಉಪಯೋಗಕ್ಕಾಗಿ ನಮ್ಮ ಅ|| ಕಮಿಷನರ್‌ರವರು ಇಂಥಾ ಒಳ್ಳೇ ಸಲಹೆಯನ್ನು ಕೊಟ್ಟಿದ್ದಲ್ಲದೆ, ಅದನ್ನು ಕ್ಷಿಪ್ರದಲ್ಲಿಯೇ ಜಾರಿಗೆ ತರಲು ವಿಶೇಷವಾಗಿ ಪ್ರಯತ್ನಪಟ್ಟಿರುವುದಕ್ಕೂ ಪ್ರಜೆಗಳು ಅವರನ್ನು ಬಹಳವಾಗಿ ವಂದಿಸುತ್ತಾರೆ.

ಒಬ್ಬ ಮೆಂಬರು

ಸಬ್ಬಿ ತಾ|| ಕಡಬ.—ಈ ಊರಿನ ಈ ಪರಸ್ಪರ ಸಹಾಯಕ ಸಭೆಯು 18-9-13 ರಲ್ಲಿ ರಜಿಸ್ಟ್ರರಾಗಿ ಆರಂಭವಾಯಿತು ನಡೆಯುತ್ತಾ ಬಂತು. ಈ ಸೊಸೈಟಿಯ ವಾರ್ಷಿಕ ಸಭೆಯು ಕಳೆದ ತಾ 8 ರಲ್ಲಿ ಕಡಬದ ಟ್ರಾವಲರ್ಸ್ ಬಂಗಲೆಯಲ್ಲಿ ಸೇರಿತ್ತು. ಈ ಸಭೆಯಲ್ಲಿ ಈ ಸೊಸೈಟಿ ಪ್ರೆಸಿಡೆಂಟರಾಗಿರುವ ಪ್ಲೀಡರ್ ಮ|| ಕೆ. ವೆಂಕಟ್ರಾಮಯ್ಯಂಗಾರ್ರು ಸಭಾಧ್ಯಕ್ಷತೆಯಂ ವಹಿಸಿದ್ದರು. ಈ ಸೊಸೈಟಿಯಲ್ಲಿ 103 ಜನ ಗಂಡಸರೂ, 4 ಜನ ಹೆಂಗಸರೂ ಸೇರಿ 107 ಜನರು ಮೆಂಬರಾಗಿದ್ದಾರೆ. ಈ ಪೈಕಿ 18 ಜನ ಮೆಂಬರುಗಳು ಮಾತ್ರ ಮೀಟಿಂಗಿನಲ್ಲಿ ಹಾಜರಾಗಿದ್ದರು. ಈ ಸೊಸೈಟಿಯ ಸೆಕ್ರೆಟರಿಗಳಾದ ಗ್ರಾಮಭೋಜಿಗಳು ಮ|| ಕೆ. ವೆಂಕಟರಾಮಯ್ಯನವರು ಮೆಂಬರುಗಳ ಸಮಕ್ಷಮ ವಾರ್ಷಿಕ ರಿಪೋರ್ಟನ್ನು ಓದಿಹೇಳಿದರು. ಈ ಸೊಸೈಟಿಯು 5,000 ರೂಪಾಯಿಗೆ ಲಿಮಿಟೆಡ್ ಬ್ಯಾಂಕಾಗಿ ರಜಿಸ್ಟರಾಗಿದೆ. ಕಳೆದ ಜೂನ್ ಆಖೈರು ವರೆಗೆ ಅಂದರೆ ಸುಮಾರು 10 ತಿಂಗಳ ವರೆಗೆ 1,663 ರೂಪಾಯಿ ವಸೂಲಾಗಿದೆ. ಬಾಕಿ ಮೊಬಲಗನ್ನು ಮೆಂಬರುಗಳು ಕೊಡೋವುದರಲ್ಲಿದ್ದಾರೆ. ಮತ್ತು ಫಿಕ್ಸೆಡ್ ಡಿಪಾಜಿಟ್, ಕರೆಂಟ್ ಡಿಪಾಜಿಟ್ ಬರುತ್ತಾ ಇದೆ. ಈ ಸಾಲಿನಲ್ಲಿ 55 ಜನ ಮೆಂಬರುಗಳು ರೂ. 1,840-12-0 ಯನ್ನು ಜಮೀನ್ ಆಬಾದು, ಗೊಬ್ಬರ, ವ್ಯಾಪಾರ, ಮನೆಕಟ್ಟುವುದು, ಮದುವೆಮಾಡುವುದು, ಗೃಹಕೃತ್ಯದ ಕೆಲಸ, ಇವುಗಳಿಗೋಸ್ಕರವಾಗಿ ತೆಗೆದುಕೊಂಡರು. ಹತ್ತು ತಿಂಗಳಿಗೆ ಅಂದರೆ ಜೂನ್ ಆಖೈರು ವರೆಗೆ ರೂ. 145-0-4 ಪೈ ನಫೆ ತೇಲಿರುತ್ತೆ. ಆ ಮೊಬಲಿಗಿನಲ್ಲಿ ಡಿಪಾಜಿಟ್ ದಾರರಿಗೆ ಬಡ್ಡಿ ರೂ. 9-11-9 ಪೈ ಯನ್ನೂ, ಆಳಿನ ಸಂಬಳಕ್ಕೆ ರೂ. 11-15-0 ಯನ್ನೂ ಸಾದಿಲ್‌ವಾರು ವಿಲೆ ಮಾಡಿದೆ. ಸೆಕ್ರೆಟರಿಯವರು ಶ್ರದ್ಧೆವಹಿಸಿ ಕೆಲಸ ಮಾಡಿದ ಕ್ಕೋಸ್ಕರ ಬಹುಮಾನಾರ್ಥವಾಗಿ ಅತ್ಯಲ್ಪವಾದ 18 ರೂಪಾಯಿ ಬೋನಸ್ಸು ಕೊಟ್ಟಿದೆ. ಮುಸ್ತಿಬಡ್ಡಿ ರೂ. 14-4-11 ಪೈ ವಸೂಲಾಗಿದೆ. ಜಾತಾ ರೂ. 88-0-8 ಪೈ ಪೈಕಿ ರೂ. 22-1-2 ಪೈ ತೆಗೆದು ಮುಸ್ತಿಬಡ್ಡಿಯನ್ನು ಇದಕ್ಕೆ ಸೇರಿಸಿ ರಿಜರ್ವ್ ಫಂಡಿಗೆ ದಾಖಲ್ಮಾಡಬೇಕೆಂದು ತೀರ್ಮಾನಿಸಿದೆ. ಬಾಕಿ ಉಳಿದ ರೂ. 66-0-6 ಪೈ ಯನ್ನು ಷೇರುದಾರರಿಗೆ ಶೇಕಡ 6-1-0 ರೂಪಾಯಿನಂತೆ ಬಡ್ಡಿ ಹಂಚಿತುತ್ತಾರೆ. ಈ ಪ್ರಕಾರ ಸೆಕ್ರೆಟರಿಯವರು ಮೆಂಬರುಗಳ ಸಮಕ್ಷಮ ವಾರ್ಷಿಕ ರಿಪೋರ್ಟನ್ನು ಓದಿಹೇಳಿದರು. ಎಕನಾಮಿಕ್ ಕಾನ್‌ಫರೆನ್ಸ್ ಮೆಂಬರಾಗಿರುವ ಮ|| ಕೆ. ರಾಮಾನುಜಯ್ಯಂಗಾರ್ರು ಜನೋಪಕಾರದ ವಿಷಯದಲ್ಲಿ ಏನುಮಾಡಬೇಕೆಂಬುವುದನ್ನು ಕುರಿತು ಈಗಿನ ಕಾಲಕ್ಕನುಗುಣವಾಗಿ ನಿಷ್ಪಕ್ಷಪಾತವಾದ ಉಪನ್ಯಾಸ ಮಾಡಿದರು. ಮ|| ಯಾದಿಕೆ ಗರುಡಾಚಾರ್ರು ಪರಸ್ಪರಸಹಾಯಕ ಸಂಘದಿಂದುಂಟಾಗುವ ಪ್ರಯೋಜನವನ್ನು ಬಹಳ ಸ್ವಾರಸ್ಯವಾಗಿ ಉಪನ್ಯಾಸಮಾಡಿದರು. ಈ ಮಧ್ಯೆ ರಾ|| ಸೀತಾರಾಮಶೆಟ್ರು ಒಂದು ಅರ್ಜಿಯನ್ನು ಮೀಟಿಂಗಿನಲ್ಲಿ ಹಾಜರ್ಪಡಿಸಿದರು. ಇವರು ಈ ಸಂಘದಲ್ಲಿ ಮೆಂಬರಾಗಿದ್ದಾರೆ. ಈ ವಿಷಯದಲ್ಲಿ ಪ್ರೆಸಿಡೆಂಟರು ಮ|| ಕೆ. ರಾಮಾನುಜಯ್ಯಂಗಾರ್, ಯಾದಿಕೆ ಗರುಡಾಚಾರ್, ಮೂರ್ತಿರಾಯರು, ಶೇಷಾಚಾರ್ರು, ಸಬ್ ಓವರ್‌ಸಿಯರ್ ಕೃಷ್ಣಯ್ಯಂಗಾರ್, ಅಹೋಬಲ ನರಸಿಂಹಶಾಸ್ತ್ರಿಗಳು, ಪಟೇಲ್ ಪುಟ್ಟೇಗೌಡರು, ಅಂಗಡಿ ವೆಂಕಟರಾಮಯ್ಯನವರೇ ಮುಂತಾದವರು ತೀರ್ಮಾನವನ್ನು ಹೇಳಿದರು. ಈ ಸೊಸೈಟಿಯನ್ನು ಅಭಿವೃದ್ಧಿಗೆ ತಂದು ಜನೋಪಕಾರವನ್ನು ಮಾಡಬೇಕೆಂದಿರುವ ಮ|| ಕೆ. ವೆಂಕಟರಾಮಯ್ಯಂಗಾರ್ರಿಗೆ ಎಲ್ಲರೂ ತುಂಬಾ ಕೃತಜ್ಞರಾಗಿದ್ದಾರೆ. ನವಸ್ವಾಮಿನ ಶ್ರೀಮನ್ ಮಹಾರಾಜರವರಿಗೂ ಯುವರಾಜರಿಗೂ ಆಯುರಾರೋಗ್ಯದಿಗಳನ್ನು ಬಯಸಿ ಜಯಘೋಷದೊಡನೆ ಸೇರಿದ್ದವರೆಲ್ಲರಿಗೂ ಗಂಧ ಪುಷ್ಪ ತಾಂಬೂಲಾದಿಗಳೊಂದಿಗೆ ಸಭೆಯು ಮುಕ್ತಾಯವಾಯಿತು.

ಒಬ್ಬ ಮೆಂಬರು

ಮಂಡ್ಯ ತಾ|| ಕೊಮ್ಮೇರಹಳ್ಳಿ.—ಈ ಊರು ಪಂಚಮರ ಪರಸ್ಪರ ಸಹಾಯ ಸಂಘದ ಜನರಲ್ ಮೀಟಿಂಗು ಪಂಚಮಾ ಸ್ಕೂಲಿನಲ್ಲಿ ಕಳೆದ ತಾ. 16 ರಲ್ಲಿ ನಡೆಯಿತು. ಇಂಡಸ್ಟ್ರೀಸ್ ಮತ್ತು ಕಾಮರ್ಸ್ ಇಲಾಖಾ ಟೆಕ್ನಿಕಲ್ ಅಸಿಸ್ಟೆಂಟರಾದ ಮ|| ಕೆ. ಸಂಜೀವರಾವ್, ಎಲ್.ಪಿ.ಎಂ. ರವರು ಅಗ್ರಾಸನವನ್ನು ವಹಿಸಿದರು. ಸಮಾಜದ ಎಲ್ಲಾ ಗ್ರಾಮಸ್ಥರೂ (ಮೆಂಬರುಗಳೂ) ಅಲ್ಲದೆ ಅನೇಕ ನೆರೆಹೊರೆ ಗ್ರಾಮಗಳ ಪಂಚಮರ ಯಜಮಾನರುಗಳೂ ಹಾಜರಾಗಿದ್ದರು. ಸೆಕ್ರೆಟರಿ ಮ|| ಎಚ್. ಕೆ. ಪುಟ್ಟಣ್ಣನವರು 1913-14 ನೇ ಸಾಲಿನ ಸೊಸೈಟಿ ಆಡಳಿತಗಳನ್ನೂ ಜಮಾ ಖರ್ಚನ್ನೂ ಓದಿದ ಮೇಲೆ ಕಮಿಟಿ ಮೆಂಬರುಗಳು ನೇಮಿಸಲ್ಪಟ್ಟರು. ಕೋಆಪರೆಟಿವ್ ಧರ್ಮಫಂಡಿನಲ್ಲಿ 10 ರೂಪಾಯನ್ನು ಯೂರೋಪಿನಲ್ಲಿ ಪ್ರಾಪ್ತವಾಗಿರುವ ಯುದ್ಧದಲ್ಲಿ ಗಾಯಪಟ್ಟ ಅಂಗ್ಲೇಯರಿಗೆ ಉಪಕಾರಕ್ಕಾಗಿ ಏರ್ಪಟ್ಟಿರುವ ಧರ್ಮಫಂಡಿಗೆ ನಮ್ಮ ಸರ್ಕಾರದವರ ಮೂಲಕ ಕಳುಹಿಸಿಕೊಡಬೇಕೆಂತಲೂ, ಬೆಂಗಳೂರಲ್ಲಿರುವ ಶ್ರೀರಾಮಕೃಷ್ಣಾಶ್ರಮದಲ್ಲಿ ನಮ್ಮ ಸಾರ್ವಭೌಮ ಸರ್ಕಾರದವರಿಗೆ ಜಯವನ್ನು ಹೊಂದಿ ತನ್ಮೂಲಕ ಅವರ ಕೀರ್ತಿಯು ಮತ್ತಷ್ಟು ಹೆಚ್ಚುವಂತೆ ದೇವರ ಪ್ರಾರ್ಥನೆಯನ್ನು ನಡಿಸಲು 5 ರೂಪಾಯಿ ಖರ್ಚುಮಾಡಬೇಕೆಂತಲೂ ತೀರ್ಮಾನವಾಯಿತು.—ಸೆಕ್ರೆಟರಿಯವರ ರಿಪೋರ್ಟಿನಲ್ಲಿ ಕಂಡ ಮುಖ್ಯ ವಿಷಯಗಳೇನೆಂದರೆ—ಈ ಸಂಘದಲ್ಲಿ 40 ಜನ ಗಂಡಸರೂ 3 ಜನ ಹೆಂಗಸರೂ ಮೆಂಬರಾಗಿದ್ದಾರೆ. ಇವರಲ್ಲಿ ಲೀಡರ್‌ಮನ್‌ರು ಮತ್ತು ಸೆಕ್ರಿಟರಿಯವರು ಹೊರತು ಉಳಿದವರೆಲ್ಲಾ ಪಂಚಮರು. 10 ರೂಪಾಯಿನ 500 ಷೇರುಗಳ ಪೈಕಿ 480 ಷೇರುಗಳನ್ನು ಪಡೆದು, 1,671-14-6 ರೂಪಾಯಿ ಕಂತು ಪಾವತಿಮಾಡಿದ್ದಾರೆ. ಆಚೆಗೆ ಈ ಸಂಘದ ಪ್ರಯೋಜನವು ಹೊರಗಿನವರಿಗೆ ಚೆನ್ನಾಗಿ ಕಂಡುಬಂದು ಬಹಳ ಮಂದಿ ಮೆಂಬರುಗಳಾಗಬೇಕೆಂದು ಅಪೇಕ್ಷಿಸಿದುದರಿಂದ ಷೇರನ್ನು 500 ರಿಂದ 1,000 ಕ್ಕೆ ಹೆಚ್ಚಿಸಲಾಗಿದೆ. ಈ ವರ್ಷ ಬೇಗ್ಗಾಗಿ ಷೇರ್ ಕಂತು ವಸೂಲಾಗಲು ಮತ್ತು ಸಾಲವು ವಾಪಸ್ ಬರಲು ಯಾವತ್ತೂ ಧಾರಣಮಾಸಗಳು ತುಂಬ ಏರಿಹೋಗಿ ಜನಗಳಿಗೆ ಬಹು ತೊಂದರೆ ಪ್ರಾಪ್ತವಾದುದರಿಂದ ವಸೂಲಿ ಕ್ರಮವು ಸ್ವಲ್ಪ ನಿಧಾನವಾಗಿದೆ. ಈ ವರ್ಷ ನೆಯ್ಗೆ ಕಸಬನ್ನು ಅಭಿವೃದ್ಧಿಗೆ ತರುವುದಕ್ಕಾಗಿ ಒಂದು ನೇಯ್ಗೆ ಸ್ಕೂಲು ಏರ್ಪಡಿಸಿ ಎಲ್ಲಾ ಮೆಂಬರುಗಳಿಗೂ ಹಾರುವ ಲಾಳಿ ಯಂತ್ರದಲ್ಲಿ ಕೆಲಸಮಾಡುವುದನ್ನು ಪರಿಚಯಮಾಡಿಸಿ, 63 ಯಂತ್ರಗಳನ್ನು ತರಿಸಿ ಹಂಚಲಾಯಿತು. ಅಲ್ಲದೆ ರೇಷ್ಮೆ ಗಂಧನೆಯ್ಗೆ ಅರಿಯದಿದ್ದ ಮೆಂಬರುಗಳಿಗೆ ಅದರಲ್ಲಿ ಕೆಲಸಮಾಡಲು ಉತ್ತೇಜನ ಕೊಡಲು ಯತ್ನಿಸಲಾಯಿತು. ಈ ರೀತಿ ಹೊಸ ನಮೂನೆ ಯಂತ್ರಗಳಲ್ಲಿ ಗಂಡರು ತರಬೇತುತ್ತಾ ಇದ್ದಲ್ಲದೆ ಹೆಂಗಸರೂ ತಮ್ಮ ಪುರುಷರಿಗೆ ಸಹಾಯಕರಾಗಿರಲು ಕೆಲವರಿಗೆ ಉತ್ತೇಜನವನ್ನು ಕೊಟ್ಟು, ಹಾರುವ ಲಾಳಿ ಯಂತ್ರದಲ್ಲಿ ಕೆಲಸಮಾಡಿ ತೋರಿಸಿದುದಕ್ಕಾಗಿ 20 ರೂಪಾಯಿ ಬಹುಮಾನವೂ ಸರ್ಟಿಫಿಕೇಟೂ ದೊರೆತಿರುತ್ತೆ. ಇದರಿಂದ ದಿವಸಕ್ಕೆ ಒಂದಾಣೆ ಸಂಪಾದಿಸಲೂ ಅರ್ಹತೆಯಿಲ್ಲದ ಹೆಂಗಸರೂ 7-8 ಆಣೆ ಸಂಪಾದಿಸಲು ಅನುಕೂಲವಾಯಿತು. ಜನಗಳು ತಯಾರಿಸಿದ ಸಂಳು ಬೇಗನೆ ಮಾರಾಟವಾಗುವಂತೆಯೂ, ಕಸಬಿಗೆ ಬೇಕಾದ ಸಾಮಾನುಗಳು ಅಗ್ಗವಾಗಿ ದೊರೆಯುವಂತೆಯೂ ಏರ್ಪಡಿಸಲಾಯಿತು. ಸಂಘದ ಜಮಾಖರ್ಚು 30,000 ರೂಪಾಯಿ ವರೆಗೆ ನಡೆದಿದ್ದಾಗ್ಯೂ ಲಾಭ ಮಾತ್ರ ಕಡಮೆಯಾಗಿದ್ದಿತೆಂದು ಗೊತ್ತಾಗಬಹುದು. ಆದರೆ ಕಮಿಟಿ ಮೆಂಬರುಗಳು ಲಾಭವೇ ಮುಖ್ಯವೆಂದೆಣಿಸದೆ ವಿಶೇಷವಾಗಿ ಮೆಂಬರುಗಳ ಅನುಕೂಲತೆ ವಿಷಯದಲ್ಲಿ ದೃಷ್ಟಿಯಿಟ್ಟು ವ್ಯಾಪಾರ ನಡಿಸಿದುದರಿಂದ ಕಡಮೆಗೆ ಕಾರಣವಾಯಿತು. ಸಮಾಜದ ಉದ್ದೇಶವು ಸಂಘಕ್ಕೆ ಸಂಪಾದನೆ ಬರಬೇಕೆಂದಿಲ್ಲ; ಮೆಂಬರುಗಳು ಅಭಿವೃದ್ಧಿಗೆ ಬರಬೇಕೆಂಬುದೇ ಮುಖ್ಯ. ಸೊಸೈಟಿಯು ಎಲ್ಲಾ ಬಾಬಿನಲ್ಲಿಯೂ ಬಹಳ ಮಟ್ಟಿಗೆ ಕಳೆದ ವರ್ಷಕ್ಕಿಂತ ತುಂಬಾ ಅಭಿವೃದ್ಧಿಯನ್ನು ಹೊಂದಿರುತ್ತದೆ.

ಒಬ್ಬ ಮೆಂಬರು.

ಬಾತ್ಮಿದಾರರಿಗೆ ನೋಟೀಸು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜಾಗ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸವನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಜಾಗ ಕೊಡಲಾರೆವು.

ಪ್ರಸುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು. ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆ ವಾರದಲ್ಲೇ ಪ್ರಕಟವಾಗುವದೇಲು ಬರವಸೆ ಕಡಮೆ. ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ.

ಕಳೆದ ಬಾರಿ ಆದ ಸಮ ಸೂರ್ಯಗ್ರಹಣದ ವಿಚಾರದಲ್ಲಿ ರಾಜಧಾನಿಯಲ್ಲಿ ಅನೇಕರು ಗ್ರಹಣವನ್ನು ಆಚರಿಸಿದರೆಂದೂ, ಅದು ಸಾಯಂಕಾಲ ಎಲ್ಲರಿಗೂ ಬಹಳ ಚೆನ್ನಾಗಿ ಕಾಣಿಸಿತೆಂದೂ, ಇಲ್ಲಿ ಶ್ರೀಪರಕಾಲಸ್ವಾಮಿಗಳ ಮಠದಲ್ಲಿ ಆ ದಿನ ರಾತ್ರಿ ... ಬಹಳ ವಿಜೃಂಭಣೆಯಿಂದ ನಡಿಸಿದರೆಂದೂ ಕೆಲವು ಬಾತ್ಮಿಗಳು ನಮ್ಮಲ್ಲಿಗೆ ಬಂದಿರುತ್ತವೆ. ಕೆಲವರು ಗ್ರಹಣವೇ ಇಲ್ಲವೆಂದೂ, ಕೆಲರು, ನಮ್ಮ ದೇಶಕ್ಕೆ ಅದು ಕಾಣುವುದಿಲ್ಲವೆಂದೂ ಹೇಳಿದ್ದರು. ಆದರೆ ಆ ದಿನ ಸಾಯಂಕಾಲ ಆಕಾಶವು ನಿರ್ಮಲವಾಗಿದ್ದು ಸೂರ್ಯಗ್ರಹಣವು ಬಹಳ ಚೆನ್ನಾಗಿ ಕಾಣಿಸಿತು.

ರಾಜಧಾನಿಯ ಶಿವರಾಮಪೇಟೆ ಸಮೀಪದ ಬಾಲಕಿಯರ ... ಒಂದು ಗರಡಿಯವರು ಸತ್ಯಮಯ್ಯನ ಬನಾರಗಳ ವಿಷಯದಲ್ಲಿ ಕೆಲವು ಅತ್ಯಾಚಾರಗಳನ್ನು ನಡಿಸಿದರೆಂದೂ, ಈ ವಿಚಾರವನ್ನು ಪೋಲೀಸ್ ಸೂಪರಿಂಟೆಂಡೆಂಟರಿಗೆ ತಿಳಿಸಿರುತ್ತಾರೆಂದೂ ನಮ್ಮಲ್ಲಿಗೆ ಒಂದು ಬಾತ್ಮಿ ಬಂದಿದೆ. ಪೋಲೀಸ್ ಅಧಿಕಾರಿಯು ಈ ಸಂಗತಿಯನ್ನು ಪರಿಶೀಲಿಸಿ ತನಿಖೆಮಾಡುತ್ತಾರೆಂದು ನಂಬಿ ಬಹುದಾದ ದೊಂಬರಿಂದ ಈ ಬಾತ್ಮಿಯನ್ನು ನಮ್ಮ ಪ್ರಕಟಿಸಿ ಇರುತ್ತೇವೆ.

ಬಿ. ಎಸ್. ಸಕಲೇಶಪುರ, ಎನ್. ಶೀನಪ್ಪ, ತೊಂಡೇಭಾವಿ. ಬಿ. ಎಲ್. ಸಿಂಗ್, ಚಿತ್ರದುರ್ಗ; ಎಚ್., ಮೋಗಿವಲ್ಲಿ; ಕೆ. ಎಸ್. ಕ್ಯಾತಸಂದ್ರ:—ಈ ಬಾತ್ಮಿಗಳನ್ನು ಪ್ರಕಟಿಸಲಾರೆವೆಂದು ವಿಷಾದಿಸುತ್ತೇವೆ.—ಎಡಿ.]

ಕರೆಸ್ಪಾಂಡೆನ್ಸ್.

ವಿಳಾಸ ತಿಳಿಯಬೇಕು.

ಅಯ್ಯಾ,—ಮಂಗಳೂರು ಹೆಂಚಿನ ಮಿಷನ್ ಎಲ್ಲಿ ದೊರೆಯುತ್ತೆಂಬ ವಿಳಾಸ ಬೇಕು. ಚಿಕ್ಕದಾಗಿ ಸ್ವಲ್ಪ ಖರ್ಚಿನಿಂದ ಹೆಂಚನ್ನು ತಯಾರಿಸುವ ಯಂತ್ರವು ದೊರೆಯುವ ವಿಳಾಸವನ್ನು ತಾವಾಗಲಿ, ತಮ್ಮ ವಾಚಕರಾಗಲಿ ತಿಳಿಸಬೇಕಾಗಿ ಕೋರುತ್ತೇನೆ.

ರಾಘವಯ್ಯಂಗಾರ್, ಕಡೂರು ತಾ. ದೇವನೂರು.

[ಮೈಸೂರು ಸರ್ಕಾರದ ಕಸಬುಗಳ ಡೈರೆಕ್ಟರವರಾದ ಮ|| ಎ. ಚಾಟರ್‌ಟನ್, ಸಿ.ಐ.ಇ., ರಿಂಗ್‌ವುಡ್, ಬೆಂಗಳೂರು, ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ತಿಳಿಸುತ್ತಾರೆ. ಹೆಂಚುಗಳು ಬೇಕಾದರೆ ತುಮಕೂರು ವೆಸ್ಲಿಯನ್ ಕಾರ್ಖಾನೆಯಲ್ಲಿ ದೊರಕುವವು.—ಎಡಿ.]

ಒಂದು ಟೋಲ್ ಗೇಟಿನಲ್ಲಿರುವ ಕಷ್ಟ.

ಅಯ್ಯಾ,—ಬೇಲೂರು ಪ್ರಾಂತ್ಯ ಈಗ ಒಂದು ತಿಂಗಳಿಂದ ತುಂಬಾ ಸೋನೆ ಮಳೆ ಹಿಡಿದಿರುತ್ತೆ. ಯಗಚಿ ಹೊಳೆಯಲ್ಲಿ ಪೂರ್ಣ ಪ್ರವಾಹವು ಬರುತ್ತಿದೆ. ಈ ಹೊಳೆಯ ಸೇತುವೆ ಮೇಲೆ ಪ್ರಯಾಣಮಾಡತಕ್ಕ ಗಾಡಿ, ಕುದುರೆ ವಗೈರೆ ಮುವುಗಳಿಂದ ಟೋಲ್ ಗೇಟ್ ತೆರಿಗೆ ವಸೂಲುಮಾಡುವುದಕ್ಕೆ ಕಂಟ್ರಾಕ್ಟನ್ನು ಪಡೆದಿರತಕ್ಕವರು ರಾತ್ರಿಯಲ್ಲಿ ಟೋಲ್ ಗೇಟಿನ ಕದವನ್ನು ಹಾಕಿ ಬೀಗ ಹಾಕಿರುತ್ತಾರೆ. ಗಾಡಿಯವರು ಬಾಗಿಲ ಬಳಿ ಗಾಡಿ ನಿಲ್ಲಿಸಿಕೊಂಡು ಎಷ್ಟು ಸಾರಿ ಕೂಗಿದರೂ ಬಾಗಿಲನ್ನೇ ತೆರೆಯುವುದಿಲ್ಲ. 2-3 ಘಂಟೆ ಹೊತ್ತು ಹೊಳೆಯ ಸಮೀಪ ಘೋರ ಥಳಿಯಲ್ಲಿ ನಡುಗುತ್ತಾ ಇರಬೇಕಾಗಿದೆ. ಇದರಿಂದ ಪ್ರಯಾಣಿಕರಿಗೆ ತುಂಬಾ ತೊಂದರೆಯುಂಟಾಗಿದೆ. ಇನ್ನು ಮುಂದೆಯಾದರೂ ಕಂಟ್ರಾಕ್ಟುದಾರರು ಸರಿಯಾದ ಸಿಬ್ಬಂದಿಯನ್ನು ಏರ್ಪಡಿಸಿ ಪ್ರಯಾಣಿಕರ ತೊಂದರೆಯನ್ನು ತಪ್ಪಿಸುವರಾಗಿ ನಂಬಿದ್ದೇನೆ.

ಬಂಡಿದಾರ.

[ಹೀಗೆ ಕಷ್ಟಕ್ಕೆ ಗುರಿಯಾದ ಜನರು ಅಮಲ್ದಾರರಿಗೆ ತಿಳಿಸಿದರೆ ಅವರು ಅದನ್ನು ಶಸಮಿಯಿಂದ ಕ್ರಮಪಡಿಸುವರು.—ಎಡಿ.]

ಉಪಾಧ್ಯಾಯರಿಗೊಂದು ವಿಜ್ಞಾಪನೆ.

ಅಯ್ಯಾ,—ನಮ್ಮ ತನುಮನಧನಗಳನ್ನು ಕಾಪಾಡಿಕೊಂಡು ಬರುತ್ತಿರುವ ಪ್ರಭುವಿಗೆ ಬಲವಂತದ ಯುದ್ಧಕ್ರೀಡೆಯೊದಗಿರುವುದು ತಮಗೆ ವೇದ್ಯವೇ ಆದೆ. ನಾವು ಅವರಿಗೆ ಇನ್ನಾವ ಸಹಾಯವನ್ನೂ ಮಾಡಲಾರದವರಾದಾಗ್ಯೂ ಒಂದು ಅಪೂರ್ವವಾದ ಹಿತವನ್ನು ಮಾಡಬಲ್ಲೆವು. ದಿನಂಪ್ರತಿಯೂ ಶಾಲೆಯು ಪ್ರಾರಂಭವಾದೊಡನೆಯೇ ಸ್ತೋತ್ರಪಾಠವಾಗುವಾಗ ಅದರೊಂದಿಗೆ ಈ ಕೆಳಗಿನ ಅಥವಾ ಅಂತಹ ವೃತ್ತವೊಂದನ್ನು ಬಾಲಕರಿಂದ ಹೇಳಿಸಿ ಅದರ ಅರ್ಥವನ್ನು ಅವರ ಮನಸ್ಸಿಗೆ ಹಿಡಿಯುವಂತೆ ಮಾಡಿದರೆ ಯಾವ ಪಾಪವನ್ನೂ ಕಾಣದ, ನಿರ್ಮಲವಾದ ಅವರ ಯೋಚನಾ ಶಕ್ತಿಯು ಅದ್ಭುತಶಕ್ತ್ಯಾತ್ಮಕವಾಗಿ ಪ್ರಭುವಿಗೆ ಬಹಳ ಹಿತವನ್ನು ಮಾಡಬಲ್ಲದು. ತಮಗೆ ಮೇಲ್ಪಟ್ಟ ತಮ್ಮ ಇಲಾಖಾಧಿಕಾರಿಗಳ ಅಪ್ಪಣೆಯನ್ನು ಪಡೆದ, ಪಾಠಶಾಲೆಯು ದಿನ ಪ್ರತಿನಿತ್ಯವೂ ಇದಕ್ಕಾಗಿ ಕೆಲ ನಿಮಿಷಗಳನ್ನು (ಯುದ್ಧವು ಅಳಿದು ದೇಶವು ಸಮಾಧಾನಕ್ಕೆ ಬರುವವರೆಗೂ) ವಿನಿಯೋಗಿಸುವುದು ಉತ್ತಮ.

ವೃತ್ತ—ಪಡುವಲರಾಜ್ಯವಾದ ನವನಾಗರಿಕಗೇಡೆಯಾದ ಆಂಗ್ಲನಾ
ಡೊಡೆಯರ ಜರ್ಮನಿ ಪ್ರಭು ರಣಾಂಗಣಕ್ಕೆದೆಳೆದಿರ್ದ ಸಂಕಟಂ ||
ಕಡು ಜಯವುಳ್ಳ ವಿಜಾಂಡ ಯಶಂ ಪಿತಪಿತಾಂದ ಸಂಪದಂ ಗಡಾ
ದೃಢತರಪ್ಪಯುದ್ಧ ಪಿಡೆಗಳಿ ಮುಂಚಂಬಡಲಾಂಗ್ಲರು ಸಂತಸೀಡದೊಳ್ ||

ವೈ. ತಿಮ್ಮಪ್ಪಯ್ಯ, ಅರಕಲಗೂಡು.

ಕೋಲಾರದ ಹೆಡ್ ಮಾಸ್ಟರ ವಿಚಾರ.

ಅಯ್ಯಾ,—ಈ ಹೈಸ್ಕೂಲಿನಲ್ಲಿ ಮ|| ಮಲ್ಹಾರಿರಾಯರ ಕಾಲದಲ್ಲಿ ಸ್ಕೂಲು ಹುಡುಗರಿಗೆ ಬಹಳ ಸುಖವಾಗಿತ್ತು. ಈಗ ಅವರ ಕಷ್ಟಕ್ಕೆ ಎಣೆಯೇ ಇಲ್ಲ. ಮ|| ಮಲ್ಹಾರಿರಾಯರ ಕಾಲದಲ್ಲಿ ಸ್ಕೂಲು ಹುಡುಗರಲ್ಲಿ ಬಹಳವಾಗಿ ಬಡವರಾದ ಗೊತ್ತಾದವರಿಗೆ ಫ್ರೀವಾಹಕಕ್ಕೆದ್ದೂ, ಹೀಗೆ ಫ್ರೀವಾಡಿದ ಹುಡುಗರು ತಾವು ಪಾಸುಮಾಡಲಿಕ್ಕೆ ಆನ್ಯುಯಲ್ ಅಥವಾ ಫಸ್ಟು ಕ್ವಾರ್ಟರು ಪರೀಕ್ಷೆಯಲ್ಲಿ ಫೇಲಾದರೆ ಕಿತ್ತುಹಾಕಿ ಬೇರೆ ಮತ್ತೊಬ್ಬನಿಗೆ ಕೊಡತಕ್ಕದ್ದು, ಹೀಗೆ ಮಾಡುತ್ತಿದ್ದರು. ಅವರು ವಿವೇಕಸಹಿತರೂ, ಆಲೋಚನಾಪರರೂ, ಜನಗಳ ಕಷ್ಟಸುಖವನ್ನು ತಿಳಿದವರೂ ಆಗಿದ್ದುದರಿಂದ ಹಾಗೆ ಮಾಡುತ್ತ ಬಂದರು. ಈಗಲಾದರೋ ಹೆಡ್ ಮಾಸ್ಟರು ಮ|| ಕೃಷ್ಣಸ್ವಾಮಯ್ಯನವರು ಈ ತಿಂಗಳಲ್ಲಿ ಮಾಫಿ ಮಾಡತಕ್ಕದ್ದು, ಮಾರನೆಯ ತಿಂಗಳಲ್ಲೇ ಅದನ್ನು ಕಿತ್ತು ಇನ್ನೊಬ್ಬರಿಗೆ ಕೊಡತಕ್ಕದ್ದು, ಪುನಃ ಅದನ್ನು ಕಿತ್ತು ಇನ್ನೊಬ್ಬನಿಗೆ ಕೊಡೋದು, ಹೀಗೆ ಮಾಡುತ್ತಾರೆ. ಇದು ಪರಮಾನ್ಯಾಯವಲ್ಲವೇ ? ತಾವು ಹಾಕಿದ ಗಿಡವನ್ನು ತಾವೇ ಕಿತ್ತುಹಾಕುವದುಂಟೋ ? ಇನ್ನು ಮುಂದಾದರೂ ಹೆಡ್ ಮಾಸ್ಟರು ಹಾಗೆ ಮಾಡದೆ ತಮ್ಮ ಈ ತರಹದ ಬದಲಾವಣೆಯನ್ನು ಇಲ್ಲಿಗೆ ನಿಲ್ಲಿಸಿ, ತಮ್ಮ ಪೂರ್ವದ ಪದವಿಗೂ ಗೌರವಕ್ಕೂ ಕುಂದು ಬಂದೀತೆಂಬ ಯೋಚನೆಯಿಂದಾದರೂ ಮ|| ಮಲ್ಹಾರಿರಾಯರವರು ಮಾಡುತ್ತಿದ್ದಂತೆಯೇ ತಾವು ನಡೆಯುತ್ತಾ ಅವರಿಗಿಂತಲೂ ಬುದ್ಧಿವಂತರೆಂದು ತಾವು ತಿಳಿದುಕೊಳ್ಳದೆ ಅವರ ಪದವಿಗಾದರೂ ಗೌರವಕೊಡತಕ್ಕದ್ದೆಂದು ನಾನು ವಿನಯದಿಂದ ತಿಳಿಸಿದೇನೆ. ಮಕ್ಕಳ ತಂದೆ.

ತಾಲ್ಲೂಕು ವರ್ತಮಾನಗಳು.

ದಾವಣಗೆರೆ.—ಇಲ್ಲಿ ಮಳೇ ಗಾಳಿಯು ಬಹಳ ಹೆಚ್ಚಾಗಿದೆ. ಹವಾ ಕೆಟ್ಟು ಹೋಗಿರುವುದರಿಂದ ಕೆಲವು ದಿನಗಳಿಂದ ಪ್ಲೇಗ್ ವ್ಯಾಧಿಯು ಇಲ್ಲಿ ವ್ಯಾಪಿಸಿ ಅನೇಕರು ತೀರಿಹೋದರು. ಇಲ್ಲಿನ ಮುನಿಸಿಪಾಲಿಟಿ ಅಧಿಕಾರಿಗಳು ಶ್ರಮಪಟ್ಟು ಜನಗಳಿಗೆ ಬಲವಂತದಿಂದ ಇನಾಕ್ಯುಲೇಷನ್ ಮಾಡಿಸುತ್ತಲಿದ್ದಾರೆ. ಈ ವರೆಗೆ ಅನೇಕರು ಊರುಬಿಟ್ಟರು ; ಇನ್ನೂ ಬಿಡುತ್ತಲಿದ್ದಾರೆ.—ಈ ಊರಿನಲ್ಲಿ ಮನೆಗಳ ಸಮೀಪದಲ್ಲೇ ತಿಪ್ಪೇಗುಂಡಿಗಳನ್ನು ಇಟ್ಟು ಕಸ ಕೊಳೆ ಹಾಕೋಣದರಿಂದಲೂ, ಅನೇಕ ಗಲ್ಲಿಗಳಲ್ಲಿ ನೀರು ನಿಂತು ಕೊಳೆತು ನಾರುತ್ತಿರುವದರಿಂದಲೂ ಪ್ಲೇಗ್, ಕಾಲರಾ ವ್ಯಾಧಿಗಳಿಗೆ ಅವಕಾಶವಾಗಿದೆ. ಸರಕಾರದವರು ಇದಕ್ಕೆ ಬೇಗನೆ ಗಮನ ಕೊಟ್ಟು ಊರನ್ನು ಆರೋಗ್ಯಕರವಾಗಿ ಮಾಡಬೇಕೆಂದು ಕೋರಲ್ಪಟ್ಟಿದೆ.

ದೊಡ್ಡಬಳ್ಳಾಪುರ.—ಒಂದೆರಡು ವಾರಗಳಿಂದ ಮಳೆ ಸಾಧಾರಣವಾಗಿ ಬೀಳುತ್ತಾ ಇರುವದು. ಬಿತ್ತನೆ ಕಾರ್ಯಗಳು ಪೂರೈಸಿ ಜನಗಳಿಗೆ ಆಹ್ಲಾದಕರವಾಗಿದೆ. ಟವುನ್ ಪಾಠಶಾಲಾ ವಿಷಯ ಅಕ್ಷಮ್ಯಕರವಾಗಿರುತ್ತೆ. ಮ್ಯುನಿಸಿಪಲ್ ದೀಪಗಳು ಕಡಮೆ ; ಬೆಳಕು ಇರುವದು ಸ್ಯಾನಿಟರಿ ಇನ್ಸ್ಪೆಕ್ಟರು ಪಟ್ಟಣದಲ್ಲಿ ಪ್ರಜೆಗಳಿಗೆ ಕ್ಷೇಮವಾದೀತು. ಕಳೆದ ಭಾನುವಾರ ರಾಮಾಲೆ ರುದ್ರಪ್ಪನ ಧರ್ಮ ಛತ್ರದಲ್ಲಿ ಸರಕಾರಿ ನೌಕರರೂ, ಮ್ಯುನಿಸಿಪಲ್ ಮೆಂಬರುಗಳೂ, ವರ್ತಕರೂ ಸೇರಿ ಮಿ|| ಸುಬ್ರಹ್ಮಣ್ಯನವರಿಗೆ ಕೋಲಾರಕ್ಕೆ ವರ್ಗವಾದದ್ದಕ್ಕಾಗಿ ಎಟರ್ ಟೇನ್ ಮೆಂಟ್ ಕೊಟ್ಟು ಮ|| ಮಹದೇವಯ್ಯನವರಲ್ಲಿ ತಮಗಿದ್ದ ಭಕ್ತಿವಿಶ್ವಾಸಗಳನ್ನು ತೋರ್ಪಡಿಸಿದರು. ಅಲ್ಲದೆ ಸರಕಾರಿ ನೌಕರರಿಂದಲೂ, ಇತರರಿಂದಲೂ ಪ್ರತ್ಯೇಕಪ್ರತ್ಯೇಕವಾಗಿ ಫೋಟೋಗಳು ತೆಗೆಯಲ್ಪಟ್ಟವು. ಈ ಸಭೆಯಲ್ಲಿ ಕಾಯಸ್ಥನವರ ಸಂಗೀತವು ನಡೆದು ಸಭಿಕರಿಗೆ ಸಂತೋಷಕರವಾಗಿತ್ತು. ಸಭಿಕರಿಗೆ ಗಂಧಪುಷ್ಪಾದಿಗಳು ವಿನಿಯೋಗವಾದನಂತರ ಜಯಘೋಷದಿಂದ ಸಭೆಯು ಮುಕ್ತಾಯವಾಯ್ತು.

ಶ್ರೀರಂಗಪಟ್ಟಣ.—ಯಾವಾಗಲೂ ಮೋಡ ಮುಚ್ಚಿಕೊಂಡೇ ಇರುತ್ತದೆ. ಆಗಾಗ್ಗ ತುಂತುರು ಮಳೆ ಬೀಳುತ್ತಿದೆ. ರೈತರೆಲ್ಲರೂ ರಾಗಿಯನ್ನು ಬಿತ್ತಿದಾರೆ. ಕೆರೆ ಹಿಂಭಾಗದಲ್ಲಿರುವ ತರೀ ಜಮೀನುಗಳಿಂದಲೋ ಏನೋ ವೈದ್ಯಾನುಸಾರ ಕಾಯಿಲೆ—ಈಗ ಇಲ್ಲಿನ ಸಂತೆಯಲ್ಲಿ ಬಹಳ ಮಟ್ಟಿಗೆ ಬದಲಾವಣೆಗಳಾಗಿವೆ. ತಾಲ್ಲೂಕ್ ದಫೇದಾರರು ಎಲ್ಲಾ ಅಂಗಡಿಗಳನ್ನೂ ಲೈನುಗಳಾಗಿ ಇರಿಸಿ ವ್ಯಾಪಾರಿಗಳಿಗೆ ಸ್ವಲ್ಪವೂ ತೊಂದರೆ ಇಲ್ಲದಂತೆ ಮಾಡಿದಾರೆ. ಇವರ ಕ್ಷೇಮೋ ದ್ಯೋಗವೂ ಜನರ ಪ್ರಶಂಸೆಗೆ ಪಾತ್ರವಾಯಿತು. ಶ್ರೀರಂಗಪಟ್ಟಣದ ಗಂಜಾಂನಲ್ಲಿ ಇತ್ತೀಚೆಗೆ ಹೊಸದಾಗಿ ಬಂದಿರುವ ಗವರ್ನಮೆಂಟ್ ಸ್ಕೂಲ್ ಹೆಡ್ ಮಾಸ್ಟರ್ ಮಿ|| ಅಪ್ಪನೋಜಿರಾವ್ರವರ ಪ್ರಯತ್ನದಿಂದ ಒಂದು ರೀಡಿಂಗ್ ರೂಮ್ ಏರ್ಪಾಡಾಗಿ ವರ್ತಕರೆಲ್ಲರೂ ಅದಕ್ಕೆ ಸೇರಿ ಪ್ರೋತ್ಸಾಹ ಪಡಿಸುತ್ತಿರುವದು ಸಂತೋಷಕರವಾಗಿದೆ. ಮೇಲ್ಕಂಡ ಹೆಡ್ ಮಾಸ್ಟರು ಕರ್ತವ್ಯ ನಿಷ್ಠರಾಗಿ ಇವರಿಗೆ ಸಹಾಯಕರಾದ ಉಪಾಧ್ಯಾಯರುಗಳಿಲ್ಲದೆ ಬದಲಿ ಮಾಸ್ಟರುಗಳಿಂದ ಬಹಳ ಶ್ರಮವಾಗಿದೆ. ವಿದ್ಯಾ ಇಲಾಖೆಯವರು ದಯವಿಟ್ಟು ಬದ್ಧನಂತರದ ಮಾಸ್ಟರುಗಳನ್ನು ಬೇಗನೆ ಕಳುಹಿಸಿಕೊಟ್ಟರೆ ಇವರ ಕಾಲದಲ್ಲಿ ಸ್ಕೂಲ್ ಅಭಿವೃದ್ಧಿಗೆ ಬರುವದರಲ್ಲಿ ಸಂದೇಹವಿಲ್ಲ.

ಸಕಲೇಶಪುರ.—ಈ ಊರಿನ ಆಜುಬಾಜು ಗ್ರಾಮಗಳಲ್ಲಿ ಜನಗಳಿಗೆ ಮಲೇರಿಯಾ ಜ್ವರ ವ್ಯಾಪ್ತಿಯಾಗಿ ಜನಗಳು ಸಾಯುತ್ತಿದ್ದಾರೆ. ಈ ಊರಿನ ಅಸಿಸ್ಟೆಂಟ್ ಸರ್ಜನ್ರವರು ತಕ್ಕ ಔಷಧೋಪಚಾರ ಮಾಡಿ, ಮುನಿಸಿಪಾಲಿಟಿಯವರು ಈ ಪ್ರಾಂತ್ಯ ಜನರನ್ನು ಕಾಪಾಡುತ್ತ—ಈ ಊರಿನಲ್ಲಿ ಸರಕಾರದ ಸ್ಕೂಲ್ ಕಟ್ಟಡ ಬಹಳ ಶಿಥಿಲವಾಗಿ ಯಾವ ಹೊತ್ತು ಬಿದ್ದುಹೋಗುವುದೋ ಎಂಬ ಸಂದೇಹವಿದೆ. ಕಟ್ಟಡ ಇಲ್ಲದಂತೆ ನ್ಯಾಯಕ್ಕೆ ವಿರುದ್ಧ ಸರಕಾರದವರು ರೂಪಾಯಿ ಮಂಜೂರುಮಾಡಿದ್ದರೂ, ವಿಳಂಬವಾಗಿ ಕೆಲಸ ನಡೆಯುತ್ತಿಲ್ಲ. ಜನಗಳಿಗೆ ತುಂಬಾ ಕಷ್ಟವಾಗುತ್ತಿದೆ. ಈ ವಿಷಯದಲ್ಲಿ ಯಾರೂ ಗಮನ ಕೊಡದಿದ್ದುದರಿಂದ ಈ ಊರಿನಲ್ಲಿ ಮ|| ವೆಲ್ಲಿಂಗ್ಟನ್ ಎಂಬುವರ ಪ್ರಯತ್ನದಿಂದ ಸರಕಾರದವರು ಶಾಲೆಯ ಕಟ್ಟಡಕ್ಕೆ ಅನುಮತಿ ಕೊಟ್ಟರು. ಈ ಪ್ರಾಂತ್ಯದಿಂದ ನಿಲ್ದಾಣದ ತನಕ ಕಟ್ಟಡ 1 ಕ್ಕೆ 1-2 ಆಣೆ ಒಳಗೆ ಬೀಳುವುದು.

ಮಾಡಿಸಿ ಜನಗಳಿಗೆ ತುಂಬಾ ಸಹಾಯವಮಾಡುತ್ತಾ ಇದಾರೆ.—ಈ ಊರಿನಲ್ಲಿರತಕ್ಕ ಸಕಲೇಶ್ವರ ಸ್ವಾಮಿ ದೇವಸ್ಥಾನವು ಬಹಳ ಪುರಾತನವಾಗಿಯೂ, ಪುರಾಣ ಪ್ರಸಿದ್ಧವಾಗಿಯೂ ಇದೆ. ಮಳೆಗಾಲದಲ್ಲಿ ದೇವಸ್ಥಾನದಲ್ಲಿ ಗರ್ಭಗುಡಿ ಸೋರುತ್ತಾ ಇದೆ. ಸರಕಾರದವರು ಮುಜರಾಯಿ ಮಹಿಸಿ ವಿಶೇಷ ಮುಲ್ಕಾಗಿರುವ ಈ ಪ್ರದೇಶದಲ್ಲಿ ಮೇಲ್ಛಾವಣಿಯನ್ನು ಮಾಡಿಸಿ, ಮಂಗಳೂರು ಹೆಂಚು ಹಾಕಿಸಿ ರಿಪೇರಿಮಾಡಿಸಿದರೆ ಉಪಕಾರವಾದೀತು.—ಕಳೆದ ವಾರದ ಪತ್ರಿಕೆಯಲ್ಲಿ ಕೊಆಪರೇಟಿವ್ ಸೊಸೈಟಿ ವಿಷಯದ ಕೆಳಗೆ ಸಕಲೇಶಪುರ ಎಂಬದಕ್ಕೆ ಪ್ರತಿಯಾಗಿ ಅರಸೀಕೆರೆ ಎಂದು ಊರು ಹೆಸರು ತಪ್ಪು ಬಿದ್ದಿರುವುದನ್ನು ವಾಚಕರು ತಿದ್ದಿಕೊಳ್ಳಬೇಕಾಗಿ ಸೂಚಿಸಿದೆ.

ಹೊಸಕೋಟೆ.—ತಾ. 9 ರಲ್ಲಿ ನಮ್ಮ ದಿವಾನ್ ಸಾಹೇಬರು ಇಲ್ಲಿಗೆ ದಯಮಾಡಿಸಿ ಊರಿನ ಯೋಗಕ್ಷೇಮವನ್ನು ವಿಚಾರಿಸಿದ ತರುವಾಯ ಹೇಳಿಕೊಳ್ಳಬೇಕಾದ ಸಂಗತಿಗಳು ಏನಾದರೂ ಇದ್ದರೆ ಕೇಳಬಹುದು ಎಂಬದಾಗಿ ಅಪ್ಪಣೆ ಕೊಟ್ಟರು. ಆಗ ಮ|| ಶೀನಪ್ಪನವರು ಪ್ರಜೆಗಳ ಪಕ್ಷವನ್ನು ವಹಿಸಿ, ನಲ್ಲಿ ಮುಖಾಂತ್ರ ನೀರು ಒದಗಿಸಿಕೊಡುವುದೂ, ಊರಿನ ಬಡಾವಣೆಗೆ ಸ್ಥಳ ನೇಮಿಸಿ ಕೊಡುವುದೂ, ಮತ್ತು ಊರಾಚೆ ಇರುವ ಸಂತೆಯನ್ನು ಊರೊಳಗೆ ಅಮಲ್ದಾರಿಂದ ಕಟ್ಟಿಸಲ್ಪಟ್ಟ ಸರ್ಕಾರಿ ಮಾರ್ಕೆಟ್ಟಿನ ಹಿಂದೆ ಸೇರುವದಕ್ಕೆ ಅಪ್ಪಣೆ ಕೊಡುವುದೂ ಎಂಬೀ ಮೂರು ವಿಷಯಗಳನ್ನು ಕುರಿತು ಕೇಳಿದರು. ಅದಕ್ಕೆ ದಿವಾನ್ ಸಾಹೇಬರು ಪ್ರತ್ಯುತ್ತರ ಕೊಟ್ಟದ್ದೇನಂದರೆ, ಊರಿಗೆ ನಲ್ಲಿ ನೀರು ಒದಗಿಸಬೇಕಾದರೆ ಇಪ್ಪತ್ತನಾಲ್ಕು ಸಾವಿರ ರೂಪಾಯಿ ಖರ್ಚು ಬೀಳುತ್ತೆ. ಅದರಲ್ಲಿ ಅರ್ಧ ಖರ್ಚು ಹನ್ನೆರಡು ಸಾವಿರ ರೂಪಾಯಿಗಳನ್ನು ಊರಿನವರು ಕೊಡುವುದಾದರೆ ಆ ಕೆಲಸವನ್ನು ಮಾಡಿಸಿಕೊಡುತ್ತೇವೆಂದು ಹೇಳಿದರು. ಅದಕ್ಕೆ ಮ|| ಶೀನಪ್ಪನವರು ಪ್ರಜೆಗಳು ಕೊಡುವದಕ್ಕೆ ಶಕ್ತರಲ್ಲ ; ಇದಲ್ಲದೆ ಇಲ್ಲಿ ಕ್ಷಾಮದಿಂದ ಜನಗಳು ಕಷ್ಟಪಡುತ್ತಾ ಇದಾರೆ. ಈ ಸಲ ಕೆರೆಗಳು ಒಣಗಿಹೋಗಿ ತರೀ ಫಸಲು ಸಹ ನಿಂತುಹೋಯಿತು. ಮತ್ತು ಮಳೆ ಇಲ್ಲದೆ ಖುಷ್ಕಿ ಬೆಳೆ ಆಗುವದು ಸಂದೇಹವಲ್ಲಿದೆ. ಈ ದೆಸೆಯಿಂದ ಸರ್ಕಾರದವರು ಪ್ರಜೆಗಳ ಮೇಲೆ ದಯವಿಟ್ಟು ಅರ್ಧ ಮೊಬಲಗನ್ನು ಸಾಲವಾಗಿ ಕೊಟ್ಟರೆ ನಾವು ಬೇರೆಬೇರೆ ವಿಧವಾಗಿ ತೆರಿಗೆಗಳನ್ನು ಹೆಚ್ಚಿಸಿ ಮ್ಯುನಿಸಿಪಾಲಿಟಿಯಿಂದ ಸಾಲಿಯಾನಾ ಒಂದು ಸಾವಿರ ರೂಪಾಯಿ ಪ್ರಕಾರ ಕೊಟ್ಟು ಆ ಸಾಲವನ್ನು ತೀರಿಸುತ್ತೇವೆಂದು ಹೇಳಿದರು. ಅದಕ್ಕೆ ದಿವಾನ್ ಸಾಹೇಬರು ಒಂದು ವರ್ಷದ ವರಂಗೂ ಆಗುವ ಉತ್ಪತ್ತಿಯನ್ನು ನೋಡಿ ತೃಪ್ತಿಕರವಾಗಿರುವ ಪಕ್ಷದಲ್ಲಿ ಮಾಡಿಸಿಕೊಡುತ್ತೇವೆಂದು ಹೇಳಿದರು. ಬಡಾವಣೆ ಮತ್ತು ಸಂತೆಯ ವಿಷಯವಾಗಿ ಅನುಕೂಲವಿರುವಂತೆ ನೀವು ಮಾಡಿಸಿಕೊಳ್ಳಬಹುದೆಂದು ಅಪ್ಪಣೆ ಕೊಟ್ಟರು. ಅಮಲ್ದಾರ್ ಮ|| ಸೋಮೇಶ್ವರ ಅಯ್ಯನವರಿಂದ ಕಟ್ಟಲ್ಪಟ್ಟ ಮಾರ್ಕೆಟ್ಟು ಮತ್ತು ಮ್ಯುನಿಸಿಪಲ್ ತೋಟದಲ್ಲಿ ಕಟ್ಟಿರುವ ಬ್ಯಾಂಡ್ ಸ್ಟಾಂಡ್ ಮುಂತಾದವುಗಳನ್ನು ದಿವಾನ್ರು ನೋಡಿ ಬಹಳ ಸಂತೋಷಪಟ್ಟರು. ತರುವಾಯ ಹಾರ ತುರಾಯಿಗಳಿಂದ ಅಲಂಕೃತರಾಗಿ ಸೇರಿದ್ದವರಿಗೆ ಪ್ರತಿವಂದನೆಗಳನ್ನು ಮಾಡಿ ಮಾರ್ಕೆಟ್ಟಿನಿಂದ ಹೊರಟು ಊರಿನ ಕೆಲವು ಭಾಗಗಳನ್ನು ನೋಡಿಕೊಂಡು ಸೆಕ್ರಿಟರಿ ಮತ್ತು ಡೆಪ್ಯುಟಿ ಕಮಿಷನರ್ ಕೂಡ ಬೆಂಗಳೂರಿಗೆ ಹೊರಟುಹೋದರು.—ಮ|| ಬಸವರಾಜೇ ಅರಸಿನವರಿಗೆ ಹೊಸಕೋಟೆಯಿಂದ ಮಾಗಡಿಗೆ ವರ್ಗವಾಗಿದೆ. ಊರೊಳಗೆ ಸರ್ಕಾರಿ ಮಾರುತ್ತಾ ಇದ್ದ ಹೆಂಗಸರು ಈಗ ಹೊಸ ಮಾರ್ಕೆಟ್ಟಿನಲ್ಲಿ ಮಾರುತ್ತಾರೆ.

ಇಂಡಿಯಾ ದೇಶದ ವೃತ್ತಾಂತಗಳು.

ಸಿಂಧು ಪ್ರಾಂತ್ಯಕ್ಕೆ ಸೇರಿದ ಸಕ್ಕರ್ ಪಟ್ಟಣದಲ್ಲಿ ಅಲ್ಹಕ್ ಎಂಬ ಪತ್ರಿಕೆಯಲ್ಲಿ ಒಂದು ಕಂಪನಿಯನ್ನು ಮುಚ್ಚಿಸಿಬಿಟ್ಟರೆಂದು ಸುಳ್ಳು ಪ್ರಕಟಿಸಿದ್ದಕ್ಕೆ ಆ ಕಂಪನಿಯ ಮ್ಯಾನೇಜರು ಎಡಿಟರ ಮೇಲೆ ಫಿರ್ಯಾದು ಮಾಡಿದಾರೆ.

ಕಳೆದ ಗುರುವಾರ ಕಾಶೀಗೂ ಪ್ರಯಾಗಕ್ಕೂ ನಡುವೆ ರೈಲ್ವೆ ಅನಾಹುತ ನಡೆದು ಒಬ್ಬ ಎಗ್ಸಿಕ್ಯುಟಿವ್ ಇಂಜಿನಿಯರಿಗೂ, ನಾಲ್ವರು ಕೂಲಿ ಆಳುಗಳಿಗೂ ಪೂರಾ ಜಖಂ ಆಯಿತು. ಒಬ್ಬ ಕೂಲಿ ಆಳು ಆಸ್ಪತ್ರೆಯಲ್ಲಿ ಸತ್ತುಹೋದನು.

ಭೂಪಾಲ್ ಪಟ್ಟಣದಲ್ಲಿ ಒಂದು ರೈಲ್ವೆ ಅನಾಹುತ ನಡೆದು ಅಲ್ಲಿಗೆ ಒಂದು ಮೊಕದ್ದಮೆಯನ್ನು ನಡಿಸುವುದಕ್ಕಾಗಿ ಲಾಹೋರಿನಿಂದ ಹೋಗಿದ್ದ ಮಿ|| ದಾದಾಭಾಯಿ ಪೆಸ್ತೋನ್ಜಿ ಎಂಬ ಬ್ಯಾರಿಸ್ಟರು ಗಾಯಪಟ್ಟು ಸತ್ತುಹೋದರು.

ಇತ್ತಲಾಗಿ ದಕ್ಷಿಣದೇಶದಲ್ಲಿ ಬೊಂಬಾಯಿ ಅಧಿಪತ್ಯಕ್ಕೆ ಸೇರಿದ ಷೋಲಾಪುರದ ಡಿಸ್ಟ್ರಿಕ್ಟಿನೊಳಗೆ ಮಳೆ ಸುರಿದು ಎಲ್ಲಾ ಸುಭಿಕ್ಷವಾಗುತ್ತಿದೆ ಎಂದೂ, ರಿಲೀಫ್ ಕಾಮಗಾರಿಗಳನ್ನು ಇಷ್ಟರೊಳಗೇ ನಿಲ್ಲಿಸಿಬಿಡುತ್ತೇವೆಂದೂ ಕಲೆಕ್ಟರವರು ತಿಳಿಸುತ್ತಾರೆ.

ದರೋಲ್ ಸಂಸ್ಥಾನದ ಲೇಟ್ ಠಾಕೂರ್ ಸಾಹೇಬರವರ ಎರಡನೇ ಕುಮಾರರಾದ ಶ್ರೀ ಕುಮಾರ್ ಸಿಂಗ್‌ಜಿಯವರು ವಾಂತಿಭೇದಿ ಉಪದ್ರ ತಗಲಿ ಕಾಲವಾದರೆಂದೂ, ರಾಮುನಾಡಿನ ರಾಜರವರ ಧರ್ಮಪತ್ನಿಯವರು ತೀರಿಹೋದರೆಂದೂ ಪ್ರಕಟವಾಗಿದೆ.

ಹಿಂದುಸ್ಥಾನದಲ್ಲಿರುವ ಜರ್ಮನಿಯವರೂ ಆಸ್ಟ್ರಿಯದವರೂ ಪಿಸ್ತೂಲು ಮದ್ದು ಗುಂಡು ಮೊದಲಾದ ಯಾವ ಆಯುಧಗಳನ್ನೂ ಸರಕಾರದ ಲೈಸೆನ್ಸ್ ಇಲ್ಲದೆ ಇಟ್ಟುಕೊಳ್ಳಕೂಡದೆಂದು ಇಂಡಿಯಾ ಗವರ್ನ್ಮೆಂಟಿನವರು ಇಸ್ತಿಹಾರು ಕೊಟ್ಟಿರುತ್ತಾರೆ.

ಲಾಯಲ್‌ಪುರದ ಖಾಲ್ಸಾ ಅಕ್ಬಾರ್ ಎಂಬ ವರ್ತಮಾನ ಪತ್ರಿಕೆಯ ಸಂಪಾದಕರು ಪ್ರೆಸ್ ಆಕ್ಟ್ ಪ್ರಕಾರ ಹಣವನ್ನು ಸರ್ಕಾರದಲ್ಲಿ ಠೇವಣಿ ಕಟ್ಟಿ ಪತ್ರಿಕೆ ನಡಿಸುತ್ತಿದ್ದು ಈಚೆಗೆ ಸರ್ಕಾರಕ್ಕೆ ವಿರೋಧವಾದ ಸಂಗತಿಗಳನ್ನು ಪ್ರಕಟಿಸಿದ್ದರಿಂದ ಪಂಜಾಬ್ ಗವರ್ನ್ಮೆಂಟಿನವರು ಆ ಠೇವಣಿ ಹಣವನ್ನು ಸರಕಾರಕ್ಕೆ ಮುಟ್ಟುಗೋಲು ತೆಗೆದುಕೊಂಡಿರುತ್ತಾರೆ.

ಸಿಲೋನ್ (ಲಂಕಾ) ದ್ವೀಪದಲ್ಲಿ ಒಂದು ವ್ಯವಸಾಯ ವಿದ್ಯಾನಿಲಯವನ್ನು ಕಲ್ಪಿಸಬೇಕೆಂದು ತೀರ್ಮಾನವಾಗಿದೆ. ಇದಕ್ಕಾಗಿ ಆರು ಲಕ್ಷ ರೂಪಾಯಿ ಮೌಲ್ಯದ ಕಟ್ಟಡ ಮುಂತಾದವುಗಳನ್ನು ಒದಗಿಸುತ್ತಾರೆ. ಈ ಸ್ಕೀಮಿ ಅರ್ಧ ಹಣವನ್ನು ಸಿಲೋನ್ ಗವರ್ನ್ಮೆಂಟಿನವರು ಒದಗಿಸುವಂತೆಯೂ, ಉಳಿದ ಹಣವನ್ನು ಪ್ರಜೆಗಳಿಂದ ಚಂದಾ ಮೂಲಕ ಕೂಡಿಸುವಂತೆಯೂ ಏರ್ಪಾಟಾಗಿದೆ.

ಲಾಹೋರ್ ಪಟ್ಟಣದಲ್ಲಿರುವ ಸರಕಾರಿ ಮೃಗಾಲಯವನ್ನು ವಿಸ್ತರಿಸಿ ಅಂದವಾಗಿ ಕಟ್ಟುವದಕ್ಕೂ ಹೊಸದಾಗಿ ಮೃಗ ಪಕ್ಷಿ ಪಕ್ಷಿಗಳೇ ಮೊದಲಾದ ಪ್ರಾಣಿಗಳನ್ನು ತರಿಸುವುದಕ್ಕೂ ಪಂಜಾಬ್ ಗವರ್ನ್ಮೆಂಟಿನವರು 75,000 ರೂಪಾಯಿ ಖರ್ಚುಮಾಡುವವರಾಗಿದಾರೆ. ಈ ಸ್ಕೀಮಿ ಸಿಂಹ ಮತ್ತು ಹುಲಿಗಳ ಬೋನುಗಳನ್ನು ವಿಶಾಲವಾಗಿ ಕಟ್ಟುವದಕ್ಕೆ 30,000 ರೂಪಾಯಿ ಖರ್ಚಾಗುವದು.

ಕಲ್ಕತ್ತಾ ಪಟ್ಟಣದಲ್ಲಿ ಕಳೆದ ಜನವರಿ ತಿಂಗಳಲ್ಲಿ ಕ್ರಾಂತಿಕಾರಿಗಳು ಕೊಂದು ಹಾಕಿದ ಇನ್ಸ್ಪೆಕ್ಟರ್ ಎನ್. ಎನ್. ಘೋಷ್‌ರವರ ಹೆಂಡತಿ ಮಕ್ಕಳ ಮೇಲೆ ಬಂಗಾಳಾ ಗವರ್ನ್ಮೆಂಟಿನವರಿಗೆ ಕನಿಕರವುಂಟಾಗಿ ಆತನ ಹೆಂಡತಿಗೆ 150 ರೂಪಾಯಿ ಪೆನ್ಷನ್, ಮಕ್ಕಳಿಗೆ ವೇತನ, ಹೆಣ್ಣುಮಕ್ಕಳಿಗೆ ವರದಕ್ಷಿಣೆ (ಬಳುವಳಿ) ಮುಂತಾದ ಸೌಕರ್ಯಗಳನ್ನು ಒದಗಿಸುವಂತ ಸ್ಯಾಂಕ್ಷನ್ ಮಾಡಿದಾರೆ.

ಪೈಸ್ ಅಕ್ಬಾರ್ ಎಂಬ ಪತ್ರಿಕೆಯ ಎಡಿಟರಾದ ಮೌಲ್ವಿ ಮಹಬೂಬ್ ಆಲಂ ಸಾಹೇಬರ ಕುಮಾರಿ ಫಾತಿಮಾ ಬೇಗಂ ಎಂಬಾಕೆಯು ಈ ಸಲ ಪಂಜಾಬ್ ಸರ್ವ ವಿದ್ಯಾನಿಲಯದ (ಯೂನಿವರ್ಸಿಟಿ) ಪರೀಕ್ಷೆಯಲ್ಲಿ ಮುನ್ಷಿ ಫಜಲ್ ಎಂಬ ಪರೀಕ್ಷೆಯನ್ನು ಕೊಟ್ಟು ತೇರ್ಗಡೆ ಹೊಂದಿರುತ್ತಾಳೆ. ಪಂಜಾಬ್ ಯೂನಿವರ್ಸಿಟಿಯು ಪ್ರಾರಂಭವಾದಾರಭ್ಯ ಮಹಮದೀಯ ಸ್ತ್ರೀಯರೊಬ್ಬರೂ ಈ ಘನತರವಾದ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಲಿಲ್ಲ.

ಸಮುದ್ವಾರಾ ದೊಂಬಿ ಮೊಕದ್ದಮೆಯಲ್ಲಿ ಫೈಜಾಬಾದಿನ ಸೆಷನ್ಸ್ ಜಡ್ಜರು ಅಯೋಧ್ಯೆಯ ಬಾಬು ವಸಂತದಾಸ ಬೈರಾಗಿ ಎಂಬಾತನಿಗೆ ಕಳೆದ ಮೇ ತಾ 3 ರಲ್ಲಿ ನಾಲ್ಕೂವರೆ ವರುಷ ಕಠಿಣ ಸಜಾ ವಿಧಿಸಿದ್ದರು. ಗವರ್ನ್ಮೆಂಟಿನವರು ಆತನ ವಿಷಯದಲ್ಲಿ ಕನಿಕರವನ್ನು ತೋರಿಸಿ ಕ್ಷಮಾಪಣೆಮಾಡಿ ಆತನನ್ನು ಬಂದೀಖಾನೆಯಿಂದ ಬಿಡಿಸಿರುತ್ತಾರೆ. ಆತನು ಇನ್ನೂ 4 ವರುಷ 3 ತಿಂಗಳು ಸಜಾ ಅನುಭವಿಸಬೇಕಾಗಿದ್ದದ್ದು ಮಾಫ್ ಮಾಡಲಾಯಿತು.

ರೀವಾ ಸಂಸ್ಥಾನದ ಮಹಾರಾಣಿ ಸಾಹಿಬಾ ಅವರು ದುಂರಾವನ್ ಸಂಸ್ಥಾನದ ಮಹಾರಾಜಾ ಕೇಶವಪ್ರಸಾದಸಿಂಗ್ ರವರ ಮೇಲೆ ಷಹಾಬಾದ್ ಪಟ್ಟಣದ ಸಬ್ ಜಡ್ಜರ ಕೋರ್ಟಿನಲ್ಲಿ ಆ ಸಂಸ್ಥಾನವು ತಮ್ಮದೆಂದೂ, ಅದರ ಬೆಲೆ 4 ಕೋಟಿ ರೂಪಾಯಿ ತಮಗೆ ಸಲ್ಲಬೇಕೆಂದೂ ದಾವಾ ಮಾಡಿದಾರೆ. ಈ ಮೊಕದ್ದಮೆಯ ದಾವಾ ಅರ್ಜಿ ಅಚ್ಚಿನಲ್ಲಿ 400 ಪುಟಗಳಾಗಿವೆ. ಕಲ್ಕತ್ತಾ ಪಟ್ಟಣದಲ್ಲಿ ಮುಖಂಡರಾದ ಅನೇಕ ವಕೀಲರು ಈ ಮೊಕದ್ದಮೆಯನ್ನು ನಡಿಸಲು ಒಪ್ಪಿಕೊಂಡಿದಾರೆ.

ಬೊಂಬಾಯಿ ಪಟ್ಟಣದಲ್ಲಿ ಗಜಾನಂದ ಕೃಷ್ಣ ದೇಸಾಯಿ ಎಂಬುವನು ವಿನೋದ ಎಂಬ ವಾರ ಪತ್ರಿಕೆಯನ್ನು ದುರ್ಗಾ ಪ್ರಿಂಟಿಂಗ್ ಆಫೀಸಿನಲ್ಲಿ ಅಚ್ಚು ಹಾಕಿಸುತ್ತೇನೆಂದು ಮ್ಯಾಜಿಸ್ಟ್ರೇಟರ ಮುಂದೆ ಡಿಕ್ಲರೇಷನ್ ಕೊಟ್ಟಿದ್ದರೂ ಅಲ್ಲಿ ಬಿಟ್ಟು ಬೇರೊಂದು ಮುದ್ರಾಲಯದಲ್ಲಿ ಅದನ್ನು ಅಚ್ಚು ಹಾಕಿದ್ದನು. ಇದಕ್ಕಾಗಿ ಸರ್ಕಾರದವರು ಆತನ ಮೇಲೆ ಮೊಕದ್ದಮೆ ತಂದು ವಿಚಾರಣೆ ಮಾಡಿದಾಗ ಅದು ನಿಜವೆಂದು ರುಜುವಾತಾದದ್ದರಿಂದ ಮ್ಯಾಜಿಸ್ಟ್ರೇಟರು ಆತನಿಗೆ 100 ರೂಪಾಯಿ ಜುಲ್ಮಾನೆ ವಿಧಿಸಿದರು.

ಗುರುದಾಸಪುರದಲ್ಲಿದ್ದ ಅಮೃತಸರದ ಬ್ಯಾಂಕಿನ ಮ್ಯಾನೇಜರ್ ಪ್ರಭುದಯಾಳನೂ, ಗುಮಾಸ್ತೆ ಕಿಷೋರಿ ಲಾಲನೂ ಬ್ಯಾಂಕಿನ 1,429 ರೂಪಾಯನ್ನು ದುರುಪಯೋಗಪಡಿಸಿದರೆಂದು ಮೊಕದ್ದಮೆ ನಡೆದು ಅ|| ಕಮಿಷನರವರು ಅವರಿಬ್ಬರಿಗೂ ತಲಾ ಎರಡು ವರುಷ ಕಠಿಣ ಸಜವನ್ನೂ, 250 ರೂಪಾಯಿ ಜುಲ್ಮಾನೆಯನ್ನೂ ವಿಧಿಸಿದರು. ಬ್ಯಾಂಕಿನಲ್ಲಿ ದೀವಾಳಿ ನಿಂತುಹೋಗಿದ್ದರೂ ಅವರಿಬ್ಬರೂ ತಮ್ಮ ಬಂಧುಗಳು ಹಾಕಿದ್ದ ಹಣಗಳನ್ನು ಅವರಿಗೆ ವಾಪಸು ಕೊಡಿಸಿದ್ದೇ ಈ ಮೊಕದ್ದಮೆಗೆ ಕಾರಣವಾಯಿತು.

ಯುದ್ಧ ನಿಮಿತ್ತ ಇಂಗ್ಲಿಷ್ ಸೈನಿಕರಿಗೋಸ್ಕರ ಹತ್ತು ಲಕ್ಷ ಪೌಂಡು ತೂಕದಷ್ಟು ಟೀ ಸೊಪ್ಪನ್ನು ಕೂಡಿಸಿ ಇಂಗ್ಲೆಂಡಿಗೆ ಉಚಿತವಾಗಿ ಕಳುಹಿಸಿಕೊಡಬೇಕೆಂದು ಸಿಲೋನ್ (ಲಂಕಾ) ದ್ವೀಪದ ಟೀ ತೋಟಗಾರರು ಪ್ರಯತ್ನಪಟ್ಟಿದಾರೆ. ಕೊಡಗಿನ ಪ್ರಜೆಗಳೂ, ಪ್ಲಾಂಟರುಗಳೂ ಸೇರಿ ಸುಮಾರು 10 ಟನ್ ತೂಕದಷ್ಟು ಕಾಫೀ ಬೀಜವನ್ನು ಉಚಿತವಾಗಿ ಕೊಡಿಸಿ ಕಳುಹಿಸಬೇಕೆಂದೂ, ಮದರಾಸ್ ಅಧಿಕಾರದಲ್ಲಿರುವ ಚುಟ್ಟಾಗಳ ಕಾರ್ಖಾನೆಗಳವರು ಸಿಗರೆಟ್, ಚುಟ್ಟಾಗಳನ್ನು ಕಳುಹಿಸಿಕೊಡಬೇಕೆಂದೂ ಪ್ರಯತ್ನಗಳು ನಡೆಯುತ್ತಿವೆ.

ರತ್ನಮುನಿ ಯೂನನ್ಸ್ ಎಂಬೊಬ್ಬ ಮನುಷ್ಯನು ಉತ್ತರ ದೇಶದಿಂದ ಲಂಕಾ ದ್ವೀಪಕ್ಕೆ ಹೋಗಿ ಅನೂರಾಧಪುರದಲ್ಲಿ ಬೌದ್ಧ ಸನ್ಯಾಸಿಯ ವೇಷ ಹಾಕಿಕೊಂಡು ಒಂದು ಸರಕಾರಿ ನಿವೇಶನದಲ್ಲಿ ತಪಸ್ಸು ಮಾಡುವವನಂತೆ ಕುಳಿತಿದ್ದನು. ಇವನನ್ನು ಸರ್ಕಾರದ ಏಜಂಟು ಒಂದು ಗುಹೆಯೊಳಗಿಂದ ಓಡಿಸಿಬಿಟ್ಟರು. ಈ ಹೊಟ್ಟೇ ಕಿಚ್ಚನ್ನು ತೀರಿಸಿಕೊಳ್ಳುವುದಕ್ಕೆ ಈ ಸನ್ಯಾಸಿಯು ಕತ್ತಿಯನ್ನೆತ್ತಿ ಆ ಏಜಂಟರನ್ನು ಕೊಲ್ಲಬೇಕೆಂದು ಹೊಡೆದಾಗ ದೇವರ ದಯದಿಂದ ಕತ್ತಿಯ ಏಟು ಪಂಕಾ ಹಗ್ಗಕ್ಕೆ ಬಿದ್ದು ಏಜಂಟರು ಗಂಡಾಂತರದಿಂದ ಪಾರಾದರು. ಈ ಅಪರಾಧಕ್ಕಾಗಿ ಕ್ಯಾಂಡಿ ಪಟ್ಟಣದ ಚೀಫ್ ಜಡ್ಜರವರು ಆ ಕಪಟ ಸನ್ಯಾಸಿಗೆ ಹದಿನಾರು ವರುಷಗಳ ಕಠಿಣ ಸಜಾ ವಿಧಿಸಿರುತ್ತಾರೆ.

ಸಂಯುಕ್ತ ಅಧಿಪತ್ಯದ ಕಾಲಸ್ಥಿತಿಯ ರಿಪೋರ್ಟಿನಿಂದ ತಿಳಿದುಬಂದಿರುವ ವಿಷಯಗಳೇನೆಂದರೆ—ಎಟ್ಟಾವ ಡಿಸ್ಟ್ರಿಕ್ಟಿನಲ್ಲಿ ಕ್ಷಾಮ ನಿವಾರಣೆ ಕಾಮಗಾರಿಗಳನ್ನು ನಿಲ್ಲಿಸಿದಾರೆ. ಕ್ಷಾಮ ಪೀಡಿತರ ಸಂಖ್ಯೆ ಸ್ವಲ್ಪ ಕಡಮೆಯಾಗಿದ್ದರೂ ಇನ್ನೂ 1,03,000 ಜನರು ಸರ್ಕಾರದವರ ಪೋಷಣೆಯಲ್ಲಿದಾರೆ. ಕೆಲವು ಡಿಸ್ಟ್ರಿಕ್ಟುಗಳಲ್ಲಿ ಭಾವಿಗಳನ್ನು ತೋಡಿಕೊಳ್ಳುವುದಕ್ಕೂ, ಉಳುಮೆಯ ಎತ್ತುಗಳನ್ನೂ ಬಿತ್ತನೆ ಬೀಜವನ್ನೂ ಕೊಂಡುಕೊಳ್ಳುವುದಕ್ಕೂ ಸರಕಾರದವರು ತಕಾವಿ ಸಾಲಗಳನ್ನು ಬಹು ಧಾರಾಳವಾಗಿ ಹಂಚುತ್ತಿದಾರೆ. ಬಾಂದಾದಲ್ಲಿ ಮಾತ್ರ ಮೇಲುಹಾಸಿಯವರಲ್ಲಿ ಕಷ್ಟ ಇನ್ನೂ ಕಡಮೆಯಾಗಲಿಲ್ಲ. ಧರ್ಮದ ಫಂಡುಗಳಿಂದಲೂ ರೈತ ಪ್ರಜೆಗಳಿಗೆ ಬಟ್ಟೆ, ಬೀಜ, ದನಗಳನ್ನು ಕೊಂಡುಕೊಳ್ಳುವುದಕ್ಕೆ ಹಣವನ್ನು ಹಂಚಿಕೊಡುತ್ತಿದಾರೆ. ಮತ್ತು ಜೀವನ ನಡೆಯುವುದಕ್ಕೆ ಬಡಬಗ್ಗರಿಗೆ ದುಡ್ಡು ಕೊಡಲ್ಪಡುತ್ತಿದೆ.

ಬೊಂಬಾಯಿ ಅಧಿಪತ್ಯಕ್ಕೆ ಸೇರಿದ ಜಾಮ್‌ನಗರದ ಮಹಾರಾಜಾ ರಂಜಿತ್ ಸಿಂಗ್‌ರವರು ಜಾಮ್‌ನಗರದಲ್ಲಿ ಸಭೆ ಅಧ್ಯಕ್ಷರಾಗಿ ನಿಂತು ತಮ್ಮ ಪ್ರಜೆಗಳನ್ನು ಕರಸಿಕೊಂಡು ಯೂರೋಪಿನಲ್ಲಿ ಯುದ್ಧಪ್ರಾಪ್ತವಾಗಿರುವ ಸಂಗತಿಯನ್ನು ವಿವರಿಸಿ, ತಮ್ಮ ಸಂಸ್ಥಾನದ ಸರ್ವಸ್ವವನ್ನೂ ಬ್ರಿಟಿಷ್ ಗವರ್ನ್ಮೆಂಟಿನವರ ಸಹಾಯಾರ್ಥವಾಗಿ ಒಪ್ಪಿಸಿಬಿಡುತ್ತೇವೆಂದೂ, 1,000 ಸೈನ್ಯವನ್ನು ತರಬೇತು ಮಾಡಿ ಸಾರ್ವಭೌಮ ಸರ್ಕಾರದವರ ಕೆಲಸಕ್ಕೆ ಕಳುಹಿಸುವುದಲ್ಲದೆ 200 ಕುದುರೆಗಳನ್ನೂ, 15 ಮೋಟರುಗಳನ್ನೂ, ತಮ್ಮ ಸಂಸ್ಥಾನದಲ್ಲಿ ತಯಾರಾಗಿರುವ ಎರಡು ಸ್ಕ್ವಾಡ್ರನ್ (ಅಂದರೆ ಸುಮಾರು 150) ಇಂಪೀರಿಯಲ್ ಸರ್ವಿಸ್ ಸವಾರರನ್ನೂ ಒದಗಿಸುವುವಾಗಿಯೂ ತಿಳಿಸಿ, ಪ್ರಜೆಗಳೆಲ್ಲಾ ಬ್ರಿಟಿಷ್ ಸಾಮ್ರಾಜ್ಯದ ಕ್ಷೇಮಕರ ರಿಲೀಫ್ ಫಂಡಿಗೆ ಧಾರಾಳವಾಗಿ ದ್ರವ್ಯಸಹಾಯಮಾಡಬೇಕೆಂದು ಕೇಳಿದರು.

ಈಗ ಬೊಂಬಾಯಿನಲ್ಲಿ ಮಹಮದೀಯರ ಹಾಜ್ ಯಾತ್ರಿಕರು ಕೂಡಿಹೋಗಿದಾರೆ. ಯಾವ ಮುಸಾಫರಖಾನೆಯೊಳಗೂ ಅವರೇ ಇರುವರು. ಒಂದು ಸ್ಥಾನದ ಎಲ್ಲಾ ಕಡೆಗಳಿಂದಲೂ ಮುಸ್ಲಿಂ ಮಹೀನಾಗಳಿಗೆ ಯಾತ್ರೆ ಹೋಗತಕ್ಕ

ಮಹಮದೀಯರು ಬೊಂಬಾಯಿನಲ್ಲಿ ಜಹಜನ್ನು ಕಾಯುತ್ತಿದ್ದಾರೆ. ಜಹಜಿನ ಛಾರ್ಜು ತಲೆಗೆ 40-50 ರೂಪಾಯಿ ಇದ್ದದ್ದು ಈಗ 70 ರೂಪಾಯಿ ಆಗಿದೆ. ಈ ಸಲ ಈ ಯಾತ್ರೆಯನ್ನು ಮಹಮದೀಯರು ನಿಲ್ಲಿಸಬೇಕೆಂದು ಬೊಂಬಾಯಿನಲ್ಲಿ ಹೋಗಿ ಸೇರಿರುವವರಿಗೆಲ್ಲಾ ಸರ್ಕಾರದವರು ತಿಳಿಸುತ್ತಿದ್ದಾರೆ. ಈ ಯಾತ್ರಿಕರನ್ನು ಕರೆದುಕೊಂಡು ಹೋಗುವ ಕೋನೀಟ್ ಎಂಬ ಜಹಜು ಬೊಂಬಾಯಿನಿಂದ ಯಾವ ದಿನ ಹೊರಡುವುದೋ ಇನ್ನೂ ಗೊತ್ತಾಗಲಿಲ್ಲ. ಅನೇಕಾನೇಕ ಪ್ರಯಾಣಿಕರು ಆ ಜಹಜಿನಲ್ಲಿ ಟಿಕೆಟ್ಟುಗಳನ್ನು ಕೊಂಡುಕೊಂಡು, ಅದು ಹೊರಡುವುದನ್ನು ಎದುರುನೋಡುತ್ತಿದ್ದಾರೆ.

ಹಿಂದುಸ್ಥಾನದಲ್ಲಿ ಜೈಲ್‌ಖಾನೆಗಳ ಕಾರುಬಾರುಗಳೂ, ಮೇಲ್ವಿಚಾರಣೆಯೂ, ಬಂದೀವಾನರ ಯೋಗಕ್ಷೇಮಾದಿಗಳೂ ತೃಪ್ತಿಕರವಾಗಿರುತ್ತವೆಯೇ ! ಅವುಗಳನ್ನು ಈಗಿನ ಕಾಲಕ್ಕೆ ತಕ್ಕಂತೆ ಬದಲಾವಣೆಮಾಡಿ ಕ್ರಮಪಡಿಸುವುದಕ್ಕಾಗುತ್ತದಿಲ್ಲವೇ ಎಂದು ಮುಂಚಿತವಾಗಿ ಅನೇಕ ಪ್ರಜಾಪ್ರತಿನಿಧಿಗಳು ಇಂಡಿಯಾ ಗವರ್ನ್‌ಮೆಂಟಿನವರನ್ನು ಪ್ರಾರ್ಥಿಸುತ್ತಾ ಬಂದರು. ಈ ವಿಷಯವಾಗಿ ಗವರ್ನ್‌ಮೆಂಟಿನವರು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರಿಗೆ ಬರೆದು ಕೇಳಿದ್ದಕ್ಕೆ ಅದನ್ನೆಲ್ಲಾ ತನಿಖೆ ಮಾಡುವುದಕ್ಕೆ ಒಂದು ಪಂಚಾಯಿತಿ ಕೋರ್ಟನ್ನು ಏರ್ಪಾಡು ಮಾಡಬಹುದೆಂದೂ, ಅವರ ಅಭಿಪ್ರಾಯವನ್ನು ತಿಳಿಸಬೇಕೆಂದೂ ಸ್ಟೇಟ್ ಸೆಕ್ರೆಟರಿಯವರು ಅಪ್ಪಣೆಕೊಡಿಸಿರುತ್ತಾರೆ. ಆದರೆ ಈಗ ಯುದ್ಧ ಪ್ರಮೇಯ ಉಂಟಾಗಿರೋಣದರಿಂದ ಈ ಪಂಚಾಯಿತಿ ಕೋರ್ಟನ್ನು ಏರ್ಪಾಡು ಮಾಡುವುದು ಸಾಧ್ಯವಲ್ಲವೆಂದೂ, ಎಲ್ಲಾ ಪೂರೈಸಿ ಸಮಾಧಾನವಾದಾಗ್ಗೆ ಈ ವಿಚಾರಕ್ಕೆ ಗಮನ ಕೊಡಲಾದೀತೆಂದೂ ವೈಸ್‌ರಾಯರವರು ಪ್ರಕಟಮಾಡಿಸಿರುತ್ತಾರೆ.

ಮೈಸೂರು ದಸರಾ ಪ್ರದರ್ಶನ.

ಮೈಸೂರು ಪ್ರದರ್ಶನಕ್ಕಾಗಿ ತಯಾರಿಸಿರುವ ಬೆಂಗಳೂರು ಸ್ತ್ರೀಯರ ಎಲ್ಲಾ ಪ್ರದರ್ಶನ ವಸ್ತುಗಳನ್ನೂ ಬೆಂಗಳೂರು ಕಬ್ಬನ್ ರೋಡಿನಲ್ಲಿರುವ ಮಿಸೆಸ್ ಛಾಟರ್ಟನ್ ರವರ ಬಂಗಲೆಗೆ ಇದೇ ಆಗಸ್ಟ್ ತಾ. 31 ನೇ ಸೋಮವಾರ ಮಧ್ಯಾಹ್ನ 12 ಗಂಟೆಯೊಳಗಾಗಿ ತಲುಪುವಂತೆ ಕಳುಹಿಸಬೇಕೆಂದು ಈ ಮೂಲಕ ತಿಳಿಸಲ್ಪಟ್ಟಿದೆ.

ENGLISH PAPERS WITH FULL ANSWERS

Price for 1 set, Rs. 1-4-0; 2 sets, Rs. 2-4-0; 3, Rs. 3; 4 sets, Rs. 3-12-0 (in advance). L. S. English Notes—5 As.; Spelling Book—4 As.
Apply sharp to—**M. N. SITARAMA RAO,**
[178-3] **Krishnaraja Mohalla,** *MYSORE.*

THE

GENERAL

Assurance Society Ltd., Ajmer.

(A Popular Life Office.)

Before Insuring or taking agency elsewhere, it would be to your interest to know the rates of premium and terms of agency specially prepared by the Society's Consulting Actuary, Mr. H. E. W. Lutt, F.I.A. (one of the most eminent Actuaries in England).

First Valuation Result:—The total liabilities under all assurances issued up to 31st March 1913, are fully covered by the Society's Life Assurance Fund and Paid up Capital. Write for full particulars, Annual and Valuation Reports to the Manager, Ajmer, or Secretary,

Opposite o Minto Ophthalmic Hospital,
[131-7] Bangalore City

The Mysore Dasara Industrial and Agricultural Exhibition.

NOTICE

Special concession rates from Bangalore are allowed by the Madras & Southern Maharatta Railway to visitors to the Dasara Exhibition at Mysore. Particulars *may be ascertained by inquiry* at the Railway Station, Bangalore.

ಮೈಸೂರು ದಸರಾ ಕೈಗಾರಿಕೆ ಮತ್ತು ವ್ಯವಸಾಯ ಪ್ರದರ್ಶನಕ್ಕಾಗಿಯೂ, ನವರಾತ್ರಿ ಉತ್ಸವಗಳನ್ನು ನೋಡಲೂ ಮೈಸೂರಿಗೆ ಬರತಕ್ಕ ಪ್ರಜೆಗಳಿಗೆ ಸಹಾಯವಾಗುವಂತೆ ಮದರಾಸ್ ಮತ್ತು ದಕ್ಷಿಣ ಮಹಾರಾಷ್ಟ್ರ ರೈಲ್ವೆ ಕಂಪನಿಯವರು ರೈಲ್ ಛಾರ್ಜುಗಳನ್ನು ಬೆಂಗಳೂರಿನಿಂದ ಕಮ್ಮಿ ದರಗಳಿಗೆ ಸ್ಪೆಷಲ್ಲಾಗಿ ಇಳಿಸಿರುತ್ತಾರೆ. ಹೆಚ್ಚು ವಿಷಯಗಳನ್ನು ತಿಳಿಯಲಪೇಕ್ಷಿಸುವವರು ಬೆಂಗಳೂರು ರೈಲ್ವೆ ಸ್ಟೇಷನ್ನಲ್ಲಿ ವಿಚಾರಿಸಿದರೆ ಎಲ್ಲಾ ಗೊತ್ತಾಗುವುದು.

S. G. BINDU RAO.
[187-1] for Secretary.
Dasara Exhibition Committee.

ಸುಗಂಧನಸ್ಯಪುಡಿ ಮತ್ತು ಶ್ರೇಷ್ಠವಾದ ಮದ್ರಾಸು ಸಾದಾ ಪುಡಿ.

ಸನ್ಮಿತ್ರ ವರ್ತಕರೇ ! ಯಾಕೆ ಒಂದಾವರ್ತಿ ಪರೀಕ್ಷಿಸಬಾರದು ? ಸಹಜವಾದ ಘಾಟಿನ ಹೊಗೆಸೊಪ್ಪಿನಿಂದ ಸುಮಾರು 20 ವರುಷಗಳ ಲಾಗಾಯತು ಪುಡಿ ತಯಾರಿಸುವಿಕೆಯಲ್ಲಿ ಬಹಳ ಪರಿಶ್ರಮವನ್ನೂ ಅದ್ವಿತೀಯವಾದ ಪ್ರಸಿದ್ಧಿಯನ್ನೂ ಪಡೆದಿರುವ ನಾವೇ ಖುದ್ದು ತಯಾರಿಸುವ ಮದ್ರಾಸು ಪುಡಿ ವೀಸೆಗೆ ರೂ. 3 ; ಸೇರು 1 ಕ್ಕೆ 12 ಆಣೆ. ವಿ. ಪಿ. ಛಾರ್ಜು ಪ್ರತ್ಯೇಕ.

ಕಣ್ಣುಗಳಿಗೂ ಮೆದುಳಿಗೂ ಯಾವದೊಂದು ಕೆಡಕನ್ನೂ ಉಂಟುಮಾಡದೆ, ಮೂಗು ಕಟ್ಟಿಕೊಳ್ಳದೆ, ತಲೆನೋವು ವಗೈರೆಗಳಿಗೆ ಸ್ಥಳಕೊಡದೆ, ಸರ್ವದಾ ಮನೋಲ್ಲಾಸಪಡಿಸಲಿಕ್ಕೂ, ಲವಲವಿಕೆಯನ್ನು ಹೆಚ್ಚಿಸಲಿಕ್ಕೂ ಪ್ರಖ್ಯಾತಿಯಾದ ಸುಗಂಧ ನಸ್ಯ ಪುಡಿ. ಡಬ್ಬಿ 1 ಕ್ಕೆ ಮೂರೇ ಆಣೆ; ಡಜನ್ 2 ರೂ. ವಿ. ಪಿ. ಛಾರ್ಜು ಪ್ರತ್ಯೇಕ. ಮಾದರಿ ಪುಡಿ ಕೋರುವವರು 1 ಆಣೆ ಸ್ಟಾಂಪು ಕಳುಹಿಸಿದಲ್ಲಿ ಸುಗಂಧ ನಸ್ಯಪುಡಿ ಪ್ಯಾಕೆಟ್ 1 ನ್ನೂ, 9 ಪೈ ಸ್ಟಾಂಪು ಕಳುಹಿಸಿದಲ್ಲಿ ಮದ್ರಾಸು ಸಾದಾ ಪುಡಿ ಪ್ಯಾಕೆಟ್ 1 ನ್ನೂ ಕಳುಹಲಾದೀತು.

ಸ್ಥಳದ ಉಂಡೇ ನಸ್ಯ ಮಾಗಿದ ಹಾಗೆಲ್ಲಾ ಅದನ್ನು ಉಪಯೋಗಿಸುವವರಿಗೆ ಅಚ್ಚುಮೆಚ್ಚಿಕೆಯಾಗಿ 1 ತಿಂಗಳು ಇಟ್ಟಾಗ್ಯೂ ಕೆಡದೆ ಇರುವ ಮಾಲು. ಸೇರು 1 ಕ್ಕೆ 1 ರೂ. ಮುಖವಿಕಾಸಿನಿ ಹೊಗೇಸೊಪ್ಪು ಇದನ್ನು ಉಪಯೋಗಿಸುವದರಿಂದ ಸರ್ವದಾ ಮನೋಹರವಾಗಿಯೂ, ಬಾಯಿನ ಕೆಟ್ಟ ವಾಸನೆ ಹೋಗಲಾಡಿಸಿ ಸುವಾಸನೆ ಉಂಟುಮಾಡತಕ್ಕದ್ದಾಗಿಯೂ, ವಸಡುಗಳಿಗೆ ಬಿಗಿಕೊಟ್ಟು ಹಲ್ಲುಗಳನ್ನು ಮಿಂಚಿಸಪಡಿಸಿ ಯಾವಾಗ್ಯೂ ಹಲ್ಲುನೋವುಂಟಾಗದಂತೆ ಬಹಳ ಗುಣವುಳ್ಳ ಹೊಗೇಸೊಪ್ಪು. ಹೆಚ್ಚು ಹೊಗಳಿಕೆಯಿಂದೇನು ? ಮುಖ್ಯ ಹೊಗೇಸೊಪ್ಪನ್ನು ಉಪಯೋಗಿಸುವವರಿಗೆ ಇದು ಅಚ್ಚುಮೆಚ್ಚಾಗಿರುತ್ತೆ.

ನಮ್ಮ ವಿಳಾಸ :—ಪಿ. ಎಸ್. ರಂಗಣ್ಣನವರು,
[132-1] ಶ್ರೇಷ್ಠವಾದ ನಸ್ಯದ ವ್ಯಾಪಾರಿ, ಕೊಳ್ಳೇಗಾಲ

1915 ನೆ ಲೊ. ಸೆ. ಟೆಕ್ಸ್ಟ ಮತ್ತು ವ್ಯಾಕರಣ ಪ್ರಶ್ನೋತ್ತರ.

ಸಿದ್ಧವಾಗಿ, ಬಿಕರಿಯಲ್ಲಿದೆ. ಕ್ರಯ 4 ಆಣೆ. ಗದ್ಯ ಮತ್ತು ಪದ್ಯಗ್ರಂಥಗಳಲ್ಲೂ, ಶಬ್ದಾದರ್ಶದಲ್ಲೂ ಬರಬಹುದಾದ ಎಲ್ಲಾ ಪ್ರಶ್ನೆಗಳೂ ಸಂಪೂರ್ಣವಾದ ಉತ್ತರಗಳೂ 66 + 2 ಪೇಜುಗಳಾಗಿ ಉತ್ತಮ ಕಾಗದದಲ್ಲಿ ಪ್ರಿಂಟಾಗಿದೆ.

ಕೆ. ಆರ್ ನರಸಿಂಹಯ್ಯ, ಕನ್ನಡ ಪಂಡಿತ, ಹೈಸ್ಕೂಲ್, ಚಿಕ್ಕಬಳ್ಳಾಪುರ.

ವೃತ್ತಾಂತಪತ್ರಿಕೆ ಏಜಂಟರಿಗೆ ಸೂಚನೆ.

ನೀವು ಕೇಳಿದ ಹಾಗೆ ಪತ್ರಿಕೆಗಳನ್ನು ಹೆಚ್ಚಾಗಿ ಕಳುಹಿಸುತ್ತಾ ಬರುವೆವು. ಆದರೆ ಬಿಡಿ ಪತ್ರಿಕೆಗಳ ಮಾರಾಟವನ್ನು ನಿಲ್ಲಿಸಿ, ಮುಂದಿನ 1915 ನೇ ಏಪ್ರಿಲ್ ವರೆಗೆ ಅಡ್ವಾನ್ಸು ಕೊಟ್ಟು ಕ್ರಮವಾಗಿ ಚಂದಾದಾರರಾಗತಕ್ಕವರಿಗೆ ಮಾತ್ರ ಪತ್ರಿಕೆಗಳನ್ನು ತಪ್ಪಿಸದೆ ಕೊಡುತ್ತಾ ಬರಬೇಕೆಂದು ಕೋರುತ್ತೇವೆ.

ಮ್ಯಾನೇಜರ್, " ವೃತ್ತಾಂತ ಪತ್ರಿಕೆ, " ಮೈಸೂರು.

ಈ ಉತ್ತಮ ಗ್ರಂಥಗಳನ್ನು ಓದಿರುವಿರಾ ?

ಕೃಷ್ಣಾಕುಮಾರಿ	ಕನ್ಯಾಬಲಿ
ಬಿ. ರಾಮರಾವ್, ಎಂ.ಎ., ಎಲ್.ಎಲ್.ಬಿ.	ಎಂ. ಎನ್. ಕಾಮತ್
ಕ್ರಯ 10 ಆಣೆ.	ಕ್ರಯ 6 ಆಣೆ.
ನಿರ್ಮಲೆ	" ಜಯ ! ವಾಲ್ಮೀಕಿ "
ಶ್ರೀರಾಮ	ಎನ್. ರಾಜಗೋಪಾಲಕೃಷ್ಣ, " ಸೂಕ್ತಿ " ಸಂಪಾದಕ.
ಕ್ರಯ 12 ಆಣೆ.	ಕ್ರಯ 12 ಆಣೆ.

ನಾನಕನ ಚರಿತ್ರೆ, 4 ಆಣೆ; ತುಣುಕುಮಣಿಗಳು 1½ ಆಣೆ; ವಿವೇಕಮಂಜರಿ ಭಾಗ 3, 6 ಆಣೆ, ಕ್ಯಾಟಲಾಗಿಗೂ " ವಾಣಿ " ಯ ಮಾದರಿಸಂಚಿಕೆಗೂ ಬೆಲೆಯಿಲ್ಲ.

[160-6] ನಮ್ಮ ವಿಳಾಸ—ಹನುಮನ್ ಕಂಪೆನಿ, ಮೈಸೂರು.

ಬಹುಮಾನ 500 ಬಹುಮಾನ

ಅವಲ್ ನಿವಾಡಾಪೆಕ್ಸ್ನಿಯ್ಯು ಸುಂದರವಾದ ಬಟ್ಟಲು ಬಹುಮಾನ.

ಬಹುಮಾನ



500



ರೂ. 2-4-0 ಬೆಲೆಉಳ್ಳ ಪ್ರಖ್ಯಾತಿ ಸಡಗರನಾಗಿರುವ ಇಂಕಿಯನ್ನು ತೆಗೆದುಕೊಂಡು ಬರೆಯುವ 14 ಕ್ಯಾರೆಟ್ ಚಿನ್ನದ ಸ್ಟೀಲ್ ಮುಳ್ಳುಳ್ಳ ಫೌಂಟನ್ ಪೇನಾವನ್ನು ತರಿಸಿಕೊಳ್ಳುವವರಿಗೆ, ಸ್ವಚ್ಛವಾದ ನವಾಡಾ ಬೆಳ್ಳಿಯಿಂದ ತಯಾರಿಸಿದ ಬೆಳ್ಳಿ ಬಟ್ಟಲು ಒಂದನ್ನು ಫೌಂಟನ್ ಪೇನಾ ಸಹಿತ ಉಚಿತವಾಗಿ ಕೊಡಲ್ಪಡುತ್ತೆ. ಒಂದು ದರಬಾಸ್ತಿಗಿಂತ ಜಾಸ್ತಿಯಾಗಿ ಬರೆಯುವವರಿಗೆ ಒಂದಕ್ಕಿಂತ ಹೆಚ್ಚಾಗಿ ಕೊಡುವದಿಲ್ಲ. ಹಣವನ್ನು ಮುಂದಾಗಿ ಮಣಿಯಾರ್ಡರ್ ಮಾಡುವರಿಗೆ ಟಪ್ಪಾಲ್ ಖರ್ಚು ಇಲ್ಲದೆ ಕಳುಹಿಸುತ್ತೇವೆ. ಇವು ಸ್ವಲ್ಪವೇ ಇರುವದರಿಂದ ಜಾಗ್ರತೆ ದರಖಾಸ್ತು ಕಳುಹಿಸಿ.

[185-1] ವಿಳಾಸ—ಗೌಡ್ ಅಂಡ್ ಕಂಪನಿ, ತಿರುವಲ್ಲಿಕೇಣಿ, ಮದರಾಸು.

ಯಾಕೆ ಪರೀಕ್ಷಿಸಬಾರದು ? ಭಂಗಾರದ ಪದಕ ಬಂದಿದೆ.

ಸೆಂಟ್, ಅತ್ತರುಗಳಲ್ಲೆಲ್ಲಾ ಶ್ರೇಷ್ಠವಾದವು.

ಆಟೋ ಮೋಹಿನಿ.

ಇದು ರೆಜಿಸ್ಟರ್ ಆಗಿದೆ. ಈಗಿನ ಕಾಲದಲ್ಲಿ ಇದೇ ನಿಲ್ಲುವ, ಸುವಾಸನೆಯುಳ್ಳ, ಮನೋಹರವಾದ ಮತ್ತು ಸರಿಯಾದ ಪರಿಮಳದ ದ್ರಾವಕ. ಕರವಸ್ತ್ರಕ್ಕೆ ನಾಲ್ಕು ತೊಟ್ಟು ಹಾಕಿಕೊಂಡರೆ ನಾಲ್ಕು ದಿನಗಳ ತನಕ ಘಮಘಮಿಸುವ ಸುವಾಸನೆ ಇರುತ್ತೆ. ಹಾಗೆ ದೀರ್ಘಕಾಲ ನಿಲ್ಲತಕ್ಕದ್ದಲ್ಲವೆಂದು ರುಜುವಾತು ಮಾಡಿಕೊಡುವವರಿಗೆ ನಾವು ಒಂದು ನೂರು ರೂಪಾಯಿ ಬಹುಮತಿ ಕೊಡುತ್ತೇವೆ. ಪರೀಕ್ಷೆ ಮಾಡಿ ನೋಡಿ, ಬಹುಮತಿಯನ್ನು ಸಂಪಾದಿಸಿಕೊಳ್ಳಿ !

ಕ್ರಯ ! ಔನ್ಸ್ ಗಾಜಿನ ಬಿರಡೆಯ ಬಾಟ್ಲಿಗೆ ರೂಪಾಯಿ 2-0-0.

1 ಡ್ರಾಂ ಕೊಳವೆ 12 ಆಣೆ.

ಆಟೊ ಮೋಹಿನಿ ಪರಿಮಳದ ಕಾರ್ಡುಗಳು ಡಜನ್ 1 ಕ್ಕೆ 12 ಆಣೆ

ಎಲ್ಲರಲ್ಲೂ ಬಿಕರಿಗೆ ಇಟ್ಟಿದೆ. ಮದರಾಸ್ ಅಧಿಪತ್ಯಕ್ಕೆಲ್ಲಾ ಏಜಂಟರು—
ನಾ ಭಗವಾನ್‌ದಾಸ್ ಚೂನಿಲಾಲ್ ಕಂಪನಿ,
[251-39] 177, ಚೈನಾಬಜಾರ್ ರೋಡ್, ಮದರಾಸ್.

ಪ್ರಾಕೃತಿಕ್ ಜಿಯಾಗ್ರಫೀ.

1 ನೆಯ ಭಾಗದ 3 ನೇ ಮುದ್ರಣವು ವೆಸ್ಲಿಯನ್ ಮಿಷನ್ ಪ್ರೆಸ್ಸಿನಲ್ಲಿ ಬಹು ಅಂದವಾಗಿ ಮುದ್ರಿಸಲ್ಪಟ್ಟಿರುತ್ತದೆ. ಈ ಮುದ್ರಣದಲ್ಲಿ ಅನೇಕ ತಿದ್ದುಪಾಟುಗಳು ಮಾಡಲ್ಪಟ್ಟಿರುವುವಲ್ಲದೆ, ಹೆಚ್ಚು ವಿಷಯಗಳೂ, 1913 ನೇ ಇಸವಿ ಲೋಅರ್‌ಸೆಕೆಂಡರಿ ಪರೀಕ್ಷೆಯ ಪ್ರಶ್ನೋತ್ತರಗಳೂ ಮತ್ತು ಹೊಸ ನಕ್ಷೆಗಳೂ ಸೇರಿಸಲ್ಪಟ್ಟಿವೆ. ಸೆಪ್ಟಂಬರ್ ಮೊದಲನೇ ತಾರೀಖು ಲಾಗಾಯತು ಮಾರಾಟಕ್ಕೆ ಸಿದ್ಧವಾಗುವುದು. ಇದರ ಬೆಲೆ 5 ಆಣೆ 6 ಪೈ.

2 ನೆಯ ಭಾಗ (2 ನೇ ಮುದ್ರಣ) 0–4–6.

ಹೊಸ ಕನ್ನಡ ಲೇಖನ ಪುಸ್ತಕಗಳು.

(Approved by the Govt. of Mysore.)

ನಂ.	1.	ಮುಖ್ಯ ಗೆರೆಗಳು ಮತ್ತು ಅಕ್ಷರಗಳು	0–1–3
,,	2.	ಸುಲಭ ಪದಗಳು	0–1–3
,,	3.	ಗಾದೆ ಮತ್ತು ನೀತಿ ಪದ್ಯಗಳು ...	0–1–3
,,	4.	ಚರಿತ್ರೆ	0–1–3

ಎಂ. ಪಿ. ಲಿಂಗಪ್ಪಯ್ಯ, ಹೆಡ್ ಮಾಸ್ಟರ್,
[284-1] ಇಟ್ಟಿಗೆಗೂಡು ಎ.ವಿ. ಸ್ಕೂಲ್, ಮೈಸೂರು.

ತಂಜಾವೂರು ಗೆಜ್ಜೆ ಅಡ್ಡಿಗೆ ಕ್ರಯ 7 ಆಣೆ.

ಅಡ್ಡಿಗೆ ಮಾದರಿ ನೋಡಬೇಕಾದರೆ ಬರೆದರೆ ಉಚಿತವಾಗಿ ಕಳುಹಿಸುತ್ತೇವೆ. ಇದು ಎಲೆಕ್ಟ್ರಿಕ್ ಚಿನ್ನದಿಂದ ಗಟ್ಟಿ ಗೆಜ್ಜೆಗಳನ್ನು ತಯಾರಿಸಿ ಸುಂದರವಾಗಿ ಕುಚ್ಚುಗಳಟ್ಟು ರೇಷ್ಮೆ ಮಿಶ್ರವಾದ ಕರಿ ದಾರದಿಂದ ಕಟ್ಟಲ್ಪಟ್ಟಿದೆ. ಸ್ತ್ರೀಯರು ಕೊರಳಲ್ಲಿ ಧರಿಸುವದಕ್ಕೆ ಲಾಯಖಾದದ್ದು. ನಮ್ಮಲ್ಲಿ ಜನಗಳಿಗೆ ನಂಬಿಕೆ ಹುಟ್ಟುವದಕ್ಕಾಗಿ ಮಾದರಿ ನೋಡಬೇಕೆಂದು ಬರೆಯುವವರಿಗೆ ಮಾದರಿ ಕಳುಹಿಸುತ್ತೇವೆ.

[185-1] ನಮ್ಮ ವಿಳಾಸ—ಎಸ್. ಎನ್. ಮೂರ್ತಿ ಅಂಡ್ ಕಂಪೆನಿ, ತಿರುವಲಿಕ್ಕೇಣಿ, ಮದರಾಸು.

ಮಧುರೆ ಜುನ್ನಡಿ ಅಂಚಿನ ಸೀರೆ ಅವ್ವಲ್ ರಖಂ ರೂ. 3–6–0.

ಆಗಸ್ಟ್ ತಿಂಗಳ ಒಳಗಾಗಿ ತರಿಸಿಕೊಳ್ಳುವರಿಗೆ ಒಂದು ಸಿಂಗಪೂರು ದನಿಕೆಯನ್ನು ಪ್ರತಿ ಸೀರೆಗೂ ಇನಾಮಾಗಿ ಕೊಡುತ್ತೇವೆ. [99-12]

ಇದು ಉಡುವುದಕ್ಕೆ ದಪ್ಪನಾಗಿಯೂ, ನೋಟಕ್ಕೆ ನಯವಾಗಿಯೂ, ಬೆಲೆ ಸುಲಭವಾಗಿಯೂ ಇದೆ. ಬಜ್ಜಾ ಹೋಗದು ಸೀರೆಯು ಉದ್ದ 18 ಮೊಳ. ಸುಂದರವಾದ ಸೆರಗು. ಒಂದನ್ನು ತರಿಸಿ ಪರೀಕ್ಷಿಸಿ. ವಿಳಾಸ— ವಿ. ಕೃಷ್ಣಸ್ವಾಮಿ ಮೊದಲಿಯಾರ್, ನಂ. 27, ಬಂದರ್ ಬೀದಿ, ಜ. ಟ., ಮದರಾಸು.

ಸುಂದರವಾದ ಮೈಸೂರು ದೇಶದ, ರೇಷ್ಮೇ ಪಿತ್ ರುಮಾಲುಗಳು.

ಇದು ನಮ್ಮ ಸ್ವಂತ ಆರ್ಡರ್ ಮೇರಿಗೆ ಅನೇಕ ತರಹ ಭಾರೀ ಕ್ರಯದ ರುಮಾಲುಗಳು ಸೀಮೆಯಿಂದ ತಯಾರಿಸಿ ಬಂದಿರುತ್ತೆ. ಈ ರುಮಾಲುಗಳು ಅಚ್ಚ ರೇಷ್ಮೆಯ ಬಟ್ಟೆಯಿಂದಲೂ, ಅಚ್ಚ ಬೆಳ್ಳಿ ಜರಿಗೆಯ ಕೊಟ್ಟಡಿಯಿಂದಲೂ ಸುಂದರವಾಗಿಯೂ ಮಜಬೂತಾಗಿಯೂ ತಯಾರಿಸಲ್ಪಟ್ಟಿರುತ್ತೆ. ಇವು ಜಡ್ಜಿಯರುಗಳಿಗೂ, ಲಾಯರುಗಳಿಗೂ, ಸರ್ಕಾರಿ ಉದ್ಯೋಗಸ್ಥರುಗಳಿಗೂ, ಸ್ಕೂಲು ಮಾಸ್ಟರುಗಳಿಗೂ ಮತ್ತು ಸಕಲರಿಗೂ ಲಾಯಖಾದದ್ದು. ಅವರವರಿಗೆ ಬೇಕಾದ ತರಹೆಯನ್ನು ಮತ್ತು ತಲೆಯ ಸುತ್ತಳತೆಯೊಡನೆ ಬರೆದು ತಿಳಿಸಿದರೆ ತಕ್ಷಣವೇ ಕಳುಹಿಸುತ್ತೇವೆ. ಇದರ ಸಂಗಡ ರುಮಾಲನ್ನು ಇರುಸುವ ಪೆಟ್ಟಿಗೆ ಒಂದನ್ನು ಉಚಿತವಾಗಿ ಕೊಡುತ್ತೇವೆ. ಕ್ರಯ ಮೊದಲ್ ರಖಂ ರೂ. 3-8-0 ; ಎರಡನೇ ರಖಂ ರೂ. 2-12-0; ಮೂರನೇ ರಖಂ ರೂ. 2-1-0;

[185-1] ವಿಳಾಸ.—ನೀಲಕಂಠ ಬ್ರದರ್ಸ್, ತಿರುವಲ್ಲಿಕೇಣಿ, ಮದರಾಸು.

THE PLACE FOR HASSAN CAPS IS

HASSAN.

ನಿಮ್ಮ ತಲೆಯ ಮೇಲಿರುವುದೇನು ?

ಹಾಸನದ ಟೋಪಿ ಅಲ್ಲವೋ ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

2-20

ಒಳ್ಳೇ ಟೋಪಿಗಳು ಯಾವುವು ? ಯಾಕೆ ? ಸಂದೇಹವೇನು ?

ಹಾಸನದ ಟೋಪಿಗಳ ಸಮಾನ ಉಂಟೇ ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಇತರ ಗಡಿಗಳಿಗೆಲ್ಲಾ ಹರಡಿಕೊಂಡವು ? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇರಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ :—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ.

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ. ೮ ಆ ; ೧ ರೂ. ೬ ಆ. ;

ಚುಕ್ಕಿಯುಳ್ಳ ಟೋಪಿಗಳು ರೂ. ೧–೮ ; ರೂ. ೧–೧೨.

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ. ೨.

ದಾರದ ಟೋಪಿಗಳು ೧ ರೂ. ೧೨ ಆ. ; ೧ ರೂ. ೮ ಆ. ; ೧ ರೂ. ೬ ಆ

ಮಖಮಲ್ಲಿನ ಟೋಪಿಗಳು ೧ ರೂ. ೮ ಆ. ; ೧ ರೂ. ೬ ಆ.

"In addition to cap making we are giving special attention to knitting stockings. All our stockings, for adults and children, are hand-made. Prices will be sent on enquiry."

ಮ್ಯಾನೇಜರ್, ಟೋಪಿ ಕಾರ್ಖಾನೆ,
ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ.

Apply :—
MANAGER, CAP WORKS,
GIRLS' INDUSTRIAL SCHOOL, HASSAN.

ತಾಲ್ಲೂಕು ವರ್ತಮಾನಗಳು.

ಚನ್ನರಾಯಪಟ್ಟ ತಾ॥ ಹೊನ್ನೇನಹಳ್ಳಿ —ಈ ಗ್ರಾಮದಲ್ಲಿ ಪುಷ್ಯದ ಮಳೆ ಜೋರಾಗಿ ಹೊಯ್ದುದೆ ರೈತರು ಹೊಲಕ್ಕೆ ಬೀಜಬಿತ್ತಿದಾರೆ. ಈ ಗ್ರಾಮದಲ್ಲಿ ಸುಮಾರು 850 ಪ್ರಜೆಗಳಿದ್ದು ಕುಡಿಯುವುದಕ್ಕೆ ಒಂದು ಸೇದುವ ಭಾವಿಯಿಲ್ಲದೆ ಬಹಳ ಸಂಕಟಪಡುತ್ತಾ ಇದ್ದುದನ್ನು ನೋಡಿ ಊರು ಮಧ್ಯದಲ್ಲಿ ... ಗ್ರಾಮದ ಪಟೇಲರು ... ಮಗ ಚೌಡೇಗೌಡರು, ಚೌಡೇಗೌಡರ ... ರಂಗೇಗೌಡರು, ಹುಚ್ಚೇಗೌಡರ ಮಗ ವೆಂಕಟೇಗೌಡರು, ಈ ಮೂವರೂ ... 300 ರೂಪಾಯಿ ಖರ್ಚುಮಾಡಿ ಸುಮಾರು 8 ಆಳುದ್ದದ ಭಾವಿ ತೆಗಿಸಿ ... ಬಹಳ ಉಪಕಾರವಮಾಡಿರುತ್ತಾರೆ.—ಇದೇ ಊರ ದಿಂಡಗೂರ ಚನ್ನ... ನ ಮನೆಗೆ ಯಾರೋ ದುಷ್ಟರು ಬೀಗವನ್ನು ಮುರಿದು ಒಳಗೆ ಪೆಟ್ಟಿಗೆಯ... ದ ರೂಪಾಯಿಗಳನ್ನೂ, ಚಿನ್ನಬೆಳ್ಳಿ ಸಾಮಾನುಗಳನ್ನೂ ಚೋರವಮಾಡಿದರು. ... ಪುಟ್ಟಣ್ಣಯ್ಯನವರು ಪತ್ತೆ ತರದೂದು ನಡಿಸುತ್ತಿದಾರೆ.

ನಮ್ಮ ಟ್ರಾವಲಿಂಗ್ ಏಜಂಟರ ವಶ ಬಟ್ಟೆಗಳ ನಮೂನೆಗಳನ್ನು ಕೊಟ್ಟು, ದರ ಒಪ್ಪಿ ವ್ಯಾಪಾರಗಾರರಿಗೆ ತೋರಿಸಿ ಆರ್ಡರು ತೆಗೆದುಕೊಳ್ಳುವ ಏರ್ಪಾಡು ಮಾಡಿರುತ್ತೆ. ನಮ್ಮ ದಾವಣಗೆರೆ ಮತ್ತು ಬೆಂಗಳೂರು ಆಫೀಸುಗಳಲ್ಲಿ ಮಾಲು ಹಾಜರು ಸಹ ದೊರೆಯುತ್ತೆ.

ಬಟ್ಟೆಗಳನ್ನು ವ್ಯಾಪಾರಮಾಡಲು ಅನುಭವಸ್ಥರಾದ ಏಜಂಟರುಗಳೂ ಮತ್ತು ಗುಮಾಸ್ತರುಗಳೂ ಬೇಕಾಗಿದೆ.

ಎಲ್ಲಾ ಕಾಗದಪತ್ರಗಳೂ ದಾವಣಗೆರೆ ಆಫೀಸಿಗೆ ಬರೆಯಲ್ಪಡಬೇಕು.

ಹೆಡ್ ಆಫೀಸು :—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್, ದಾವಣಗೆರೆ. ಬ್ರಾಂಚ್ ಆಫೀಸು :—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಗೃಹಕೃತ್ಯದ ನೋಟೀಸು.

ಬೇಲೂರು ತಾಲ್ಲೂಕು ಹಳೇಬೀಡು ಹೋಬಳಿ ಚಿಕ್ಕಮ್ಮನಹಳ್ಳಿ ಮರಿದ್ಯಾವೇಗೌಡನ ಮಗ ಪಟೇಲ್ ಚೆನ್ನೇಗೌಡನು ಇದರಿಂದ ಸಮಸ್ತರಿಗೂ ತಿಳಿಯಪಡಿಸುವುದೇನೆಂದರೆ—ನನ್ನ ಸ್ವಂತ ಅಣ್ಣ ರಂಗೇಗೌಡನಿಗೆ ಏನೋ ಒಂದು ಕೆಟ್ಟ ಸನ್ನಿಯಾಗಿ ಅದರಿಂದ ಬುದ್ಧಿ ಭ್ರಮಣೆಯಾಗಿ ಯಾತರಿಂದಲೂ ವಾಸಿಯಾಗದೆ, ಧರ್ಮಸ್ಥಳಕ್ಕೆ ಕರೆದುಕೊಂಡು ಹೋಗಿ ನೂರಾರು ರೂಪಾಯಿ ಖರ್ಚುಮಾಡಿದರೂ ಬುದ್ಧಿಯು ಸರಿಯಾದ ಸ್ಥಿತಿಗೆ ಬಾರದೆ ವಿಭ್ರಮಸಹಿತ ಉಳಿದುಕೊಂಡಿರುವನು. ಹೀಗಿರುವಲ್ಲಿ ನನಗೆ ವಿರೋಧಿಗಳಾದ ಕೆಲವು ಮಂದಿ ಭಿನ್ನಾಭಿಪ್ರಾಯ ಭಾಗದ ಚಿತಾವಣೆಯಿಂದ ನಮ್ಮ ಅಣ್ಣನಿಗೇನೇನೋ ಬೋಧಿಸಿ, ನನ್ನನ್ನು ಅಗಲಿಸಿ, ನನ್ನ ಅನುಮತಿ ಶಿವಾಯಿ ಬುದ್ಧಿಸ್ವಾಧೀನವಿಲ್ಲದ ನನ್ನ ಅಣ್ಣನಿಗೆ ಪರಭಾರೆ ದತ್ತುಮಾಡಿಸಿ ತನ್ಮೂಲಕ ನನ್ನ ಪಿತರಾರ್ಜಿತವಾದ ಆಸ್ತಿಗಳನ್ನು ಅಪಹರಿಸಬೇಕೆಂಬ ದುರುದ್ದೇಶ ಉಳ್ಳವರಾಗಿರುವರು. ಅವನಿಗೆ ಮಕ್ಕಳಿಲ್ಲದ ಮಾತ್ರಕ್ಕೆ ಎಲ್ಲಾ ಭಾಗದಲ್ಲೂ ಸಹಾಯಕನಾಗಿ ಅವನ ಬಾಯಿಲೆ ವಗೈರೆ ವಾಸಿಮಾಡಿಸಲು ನೂರಾರು ರೂಪಾಯಿ ಕಳೆದ ನನ್ನ ಮಕ್ಕಳ ಪೈಕಿ ಒಬ್ಬನನ್ನು ದತ್ತುಮಾಡಿ ಅವನ ಹೆಸರನ್ನು ಮುಂದೆ ನಡಿಸಲು ನಾನೇ ಬಾಧ್ಯನಾಗಿರುವಾಗ ಮೇಲ್ಕಂಡ ವಿರೋಧಿಗಳು ನನಗೆ ದ್ರೋಹಮಾಡಬೇಕೆಂಬ ದುರುದ್ದೇಶದಿಂದ ಜ್ಞಾನ ಸರಿ ಇಲ್ಲದ ನಮ್ಮಣ್ಣನಿಗೆ ಪರಭಾರೆಯವರ ಮೂಲಕ ಮಾಡಿಸುವ ದತ್ತು ಊರ್ಜಿತವಾಗಲಾರದು. ನಿಜಾಂಶವನ್ನು ಈ ಮೂಲಕವಾಗಿಯಾದರೂ ತಿಳಿದುಕೊಳ್ಳದೆ ದುಡುಕಿ ಯಾರಾದರೂ ದತ್ತು ವಗೈರೆ ಕೊಟ್ಟಲ್ಲಿ ಆ ದತ್ತು ಮಗನಿಗೂ ಈ ಕೆಳಗೆ ನಮೂದಿಸಿರುವ ನಮ್ಮ ಪಿತರಾರ್ಜಿತವಾದ ಸ್ಥಿತಿಗಳಿಗೂ ಯಾವ ಭಾಗದಲ್ಲೂ ಸಮ್ಮಂಧಪಡುವುದಿಲ್ಲ. ಅಲ್ಲದೆ ನಮ್ಮಣ್ಣನಿಗೂ ಸದರಿ ಸ್ವತ್ತುಗಳನ್ನು ನನ್ನ ಅನುಮತಿ ಶಿವಾಯಿ ಪರಭಾರೆ ಮಾಡಲು ಹಕ್ಕಿರುವುದಿಲ್ಲ. ಹಾಗೇನಾದರೂ ನಡೆದರೆ ವಾ ನಡಿಸಿದರೆ ಆ ವಿಷಯದಲ್ಲಿ ನಡಿಸಬೇಕಾಗುವ ಖರ್ಚು ವಗೈರೆಗಳೆಲ್ಲಾ ಅವರೇ ಜವಾಬ್ದಾರರಾಗಬೇಕಾಗುವದೆಂಬಂಶವನ್ನು ಈ ಮೂಲಕ ಸೂಚಿಸಿ ಎಚ್ಚರಿಸಿದೇನೆ. ಆಸ್ತಿಗಳ ವಿವರ :—

ಸದರಿ ಚಿಕ್ಕಮ್ಮನಹಳ್ಳಿ ಗ್ರಾಮದಲ್ಲಿ ಮರಿದ್ಯಾವ ಬಿನ್ ರಂಗೇಗೌಡ ಎಂಬ ನನ್ನ ತಂದೆ ಹೆಸರಿಗೆ ಇದ್ದು ನನ್ನ ಸ್ವಾಧೀನಾನುಭವದಲ್ಲಿರುವ

ಸರ್ವೆ ನಂಬರು	ಎಕರೆ	ಗುಂಟೆ	ಆಕಾರ
13	25	26	22-0-0 ಉಳ್ಳ ಹುಲ್ಲುಗಾವಲು,

ಇವಲ್ಲದೆ ಜೋಡಿದಾರ್ರಲ್ಲಿ ಒಳಸಾಗಿಗೆ ಮಾಡಿರುವ 6-12-0 ಕಂದಾಯದ ಖುಷ್ಕಿ ಒಂದು, ಡಿಟೋ ಹೋಬಳಿ ಸರ್ವಮಾನ್ಯ ಬೇಚಿರಾಕ್ ಹಂಗದಲ್ಲಿರುವ ಸ್ವತ್ತುಗಳು :—

ನಂಬರು	ಎಕರೆ	ಆಕಾರ	ಖುಷ್ಕಿ
390	1-0	0-14-0	,,
368	0-9½	0-8-5	,,
369	0-5	0- 3-6	,,
377	0-11	0-10-0	ತರಿ
378	1-2	0- 7-3	,,
379	2-13	1- 0-4	,,

ಚಿಕ್ಕಮ್ಮನಹಳ್ಳಿ ಡಿಟೋ ಗ್ರಾಮದಲ್ಲಿರುವ ಸ್ವತ್ತುಗಳು :—
ಮನೆ ನಂಬರು 22, ಅಂಕಣ 5 ಉಳ್ಳ ಹುಲ್ಲುಮನೆ,
ಡಿಟೋ 23 ,, 5 ,, ಹೆಂಚಿನಮನೆ.
ಇದಕ್ಕೆ ಸೇರಿದ ಹಿತ್ತಲು ಪೂರ್ವಪಶ್ಚಿಮ 25 ಗಜ. ದಕ್ಷಿಣೋತ್ತರ 6 ಗಜ.

[194-1] ಚಿಕ್ಕಮ್ಮನಹಳ್ಳಿ ಪಟೇಲ್ ಚೆನ್ನೇಗೌಡನ ರುಜು.

ಅಮೃತಾಂಜನ ರಿಜಿಸ್ಟರ್ಡ್

ಇದು ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು. ಇದರ ಉಪಯೋಗದಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗವಾಯು, ಉಳುಕು, ಕೆಮ್ಮು, ಸೊಂಟದನೋವು, ಶೀತ, ಚರ್ಮವ್ಯಾಧಿ, ಹಲ್ಲುನೋವು, ಚೇಳು ಕಡಿತ ವೊದಲಾದ ಎಲ್ಲಾ ತರದ ನೋವುಗಳು ಖಾತ್ರಿಯಾಗಿ ನಿಲ್ಲುವವು. ಬಜಾರಿ ಔಷಧಗಳನ್ನು ಪಡಕೊಳ್ಳಬೇಡಿರಿ. ಈ ನಮ್ಮ ಲೋಕಪ್ರಖ್ಯಾತವಾದ ಅಮೃತಾಂಜನವನ್ನು ನಮ್ಮ ರಿಜಿಸ್ಟ್ರಿಯಾದ ಮತ್ತು ಹಲವು ಭಾಷೆಗಳುಳ್ಳ ಸುಂದರವಾದ ಕರಡಿಗೆಯಲ್ಲಿ ಪ್ಯಾಕ್‌ಮಾಡಿರುತ್ತೇವೆ. ಕರಡಿಗೆ ಇಲ್ಲದ ಬಾಟ್ಲಿಗಳನ್ನು ಪಡಕೊಳ್ಳಬೇಡಿರಿ. ಬಾಟ್ಲಿ ಒಂದರ ಕಿಮ್ಮತು 0-8-0. ಡಜನ್ 1 ಕ್ಕೆ 5-4-0. ವಿ. ಪಿ. ಪ್ರತ್ಯೇಕ. ಗಜಕರ್ಣದ ಮುಲಾಮು 0-6-0. ದಂತಮಂಜನ 0-2-0. ಮೋಹಿನಿ ತೈಲ 0-12-0. ಖಜ್ಜಿ ಮುಲಾಮು 0-3-0. ಜುಲಾಬು ಮಾತ್ರೆ 0-8-0. ಸುಂದರಿ ಮುಲಾಮು 0-8-0. ಕ್ಯಾಟಲಾಗಿಗೆ ಬರಿಯಿರಿ. [52-26]

ವ್ಯಾಪಾರಸ್ಥರಿಗೆ ಬೇಜೋ ಕಮಿಷನ್ ದೊರಕುವದು.

ಅಮೃತಾಂಜನ ಡಿಪ್ಪೋ,

ಫೋರ್ಟ್. ಮುಂಬಯಿ, ಮತ್ತು ೯ ಜಹಂಗೀರ್ ಸ್ಟ್ರೀಟ್, ಮದ್ರಾಸು.

ವೃತ್ತಾಂತಪತ್ರಿಕೆ ಏಜಂಟರಿಗೆ ಸೂಚನೆ.

ನೀವು ಕೇಳಿದ ಹಾಗೆ ಪತ್ರಿಕೆಗಳನ್ನು ಹೆಚ್ಚಾಗಿ ಕಳುಹಿಸುತ್ತಾ ಬಂದಿವೆ. ಆದರೆ ಬಿಡಿ ಪತ್ರಿಕೆಗಳ ಮಾರಾಟವನ್ನು ನಿಲ್ಲಿಸಿ, ಮುಂದಿನ 1915 ನೇ ಆಕ್ಟೋಬರ್ ವರೆಗೆ ಅಡ್ವಾನ್ಸು ಕೊಟ್ಟು ಕ್ರಮವಾಗಿ ಚಂದಾದಾರರಾಗತಕ್ಕವರಿಗೆ ವಾರ ಪತ್ರಿಕೆಗಳನ್ನು ತಪ್ಪಿಸದೆ ಕೊಡುತ್ತಾ ಬರಬೇಕೆಂದು ತಿಳಿಸುತ್ತೇವೆ.

ಮ್ಯಾನೇಜರ್, "ವೃತ್ತಾಂತ ಪತ್ರಿಕೆ," ಮೈಸೂರು.

ವೃತ್ತಾಂತ ಪತ್ರಿಕೆ.

ಸನ್ ೧೯೧೪ ನೇ ಇಸವಿ ಸೆಪ್ಟಂಬರ್ ತಾ. ೩ ನೇ ಗುರುವಾರ

ಮೈಸೂರು ಮಹಾರಾಜರವರು ಯುದ್ಧದ ಖರ್ಚಿಗೆ ಮಾಡಿದ ಉದಾರವಾದ ದ್ರವ್ಯಸಹಾಯ.

ನಮ್ಮ ಶ್ರೀಮನ್ಮಹಾರಾಜರವರು ಮೈಸೂರು ಸಂಸ್ಥಾನದ ಪರವಾಗಿ ಯುದ್ಧದ ಖರ್ಚಿಗೋಸ್ಕರ ಸಾರ್ವಭೌಮ ಸರ್ಕಾರದವರಿಗೆ 50 ಲಕ್ಷ ರೂಪಾಯನ್ನು ಉಚಿತವಾಗಿ ಕಳುಹಿಸಿಕೊಟ್ಟು ಘನವನ್ನೈದಿದ ವೈಸ್‌ರಾಯ್ ಪ್ರಭುಗಳಿಗೆ ವಿಶೇಷವಾದ ದೇಶಾಭಿಮಾನರನ್ನು ಪ್ರಕಾಶಪಡಿಸಿ ಬರೆದಿರುವ ಲೇಖನವನ್ನೂ, ಇಂಥಾ ಉದಾರವಾದ ಸಹಾಯವನ್ನು ಸಂತೋಷದಿಂದ ಅಂಗೀಕರಿಸಿಕೊಂಡು ನಮ್ಮ ಮಹಾರಾಜರವರನ್ನು ವಂದನೆ ಮಾಡಿರುವ ವೈಸ್‌ರಾಯ್ ಪ್ರಭುಗಳ ಪ್ರತ್ಯುತ್ತರವನ್ನೂ ಇನ್ನೊಂದು ಕಡೆ ಪ್ರಕಟಮಾಡಿರುತ್ತೇವೆ.

ನಮ್ಮ ಪ್ರೀತಿಪಾತ್ರರಾದ ಮಹಾರಾಜರವರು ರಾಜ್ಯದ ಕ್ಷೇಮಚಿಂತನೆಯಿಂದ ಮಾಡಿರುವ ಈ ಘನತರವಾದ ಕಾರ್ಯವನ್ನು ಮೈಸೂರು ಸೀಮೆಯ ಸಕಲ ಪ್ರಜೆಗಳೂ ಆನಂದದಿಂದಲೂ ಮನಃಪೂರ್ವಕವಾಗಿಯೂ ಒಪ್ಪಿ ಮೆಚ್ಚಿಕೊಂಡು ಅವರನ್ನು ಕೊಂಡಾಡುತ್ತಾರೆನ್ನುವುದಕ್ಕೆ ಸಂಶಯವಿಲ್ಲ. ಈ ಮಹಾ ಘೋರವಾದ ಯುದ್ಧದಲ್ಲಿ ನಮ್ಮ ಬ್ರಿಟಿಷ್ ರಾಜ್ಯಕ್ಕೆ ಜಯಪ್ರದವುಂಟಾಗಿ ಅದರ ಕೀರ್ತಿಯು ಇನ್ನೂ ಅತಿಶಯವಾಗಿ ಬೆಳೆಯುತ್ತಾ ಬರಲೆಂಬುವುದೇ ನಮ್ಮೆಲ್ಲರ ಕುತೂಹಲವಾಗಿರುವುದು. ಈ ಯುದ್ಧಕ್ಕೆ ಹಿಂದುಸ್ಥಾನವು ಸೈನ್ಯವನ್ನೂ ದ್ರವ್ಯವನ್ನೂ ಒದಗಿಸಿ ಸಹಾಯಮಾಡುತ್ತಿವೆ. ನಮ್ಮ ಮಹಾರಾಜರವರು ಯಥಾರ್ಥವಾಗಿಯೂ ರಾಜಯೋಗ್ಯವಾದ ಔದಾರ್ಯವನ್ನು ತೋರಿಸಿರುವುದರಿಂದ ಹಿಂದುಸ್ಥಾನದ ಸಕಲ ಪ್ರಜೆಗಳ ಕೂಡ ಅವರೂ ಗ್ರೇಟ್ ಬ್ರಿಟನ್ ರಾಜ್ಯಕ್ಕೆ ಜಯಪ್ರದವುಂಟಾಗಲೆಂದು ಕುತೂಹಲಪಟ್ಟು ಎದುರುನೋಡುತ್ತಿರುವುದು ಪ್ರಕಾಶವಾಯಿತು. ನಮ್ಮ ಮಹಾರಾಜರವರು ಇಂಥಾ ದಿವ್ಯವಾದ ಸಹಾಯವನ್ನು ಮಾಡಿ ತಮ್ಮ ಪ್ರಜೆಗಳಿಗೂ, ಹಿಂದುಸ್ಥಾನದ ಸಕಲ ದೇಶೀಯ ಸಾಮಂತ ಅರಸುಗಳಿಗೂ ಒಳ್ಳೇ ಮೇಲ್ಪಂಙ್ತಿಯನ್ನು ಹಾಕಿಕೊಟ್ಟಿರುವುದು ತುಂಬಾ ಸ್ತೋತ್ರಾರ್ಹವಾಗಿದೆ.

ಯುದ್ಧದ ಕಷ್ಟನಿವಾರಣೆಯ ಧರ್ಮಫಂಡು.

ಘನವನ್ನೈದಿದ ನಮ್ಮ ವೈಸ್‌ರಾಯ್ ಲಾರ್ಡ್ ಹಾರ್ಡಿಂಗ್ ಪ್ರಭುಗಳು ಇಂಗ್ಲೀಷರಿಗೂ ಜರ್ಮನಿಯವರಿಗೂ ಯುದ್ಧ ಸಂಭವಿಸಿರೋಣದರಿಂದ ಈ ಅಗಾಧವಾದ ಯುದ್ಧಕ್ಕೆ ಹಿಂದುಸ್ಥಾನವೂ ಸಹಾಯಮಾಡುವದೆಂದು ಸಕಲ ಪ್ರಜೆಗಳಿಗೂ ಕೆಲವು ದಿನಗಳ ಹಿಂದೆ ತಿಳಿಯಪಡಿಸಿದರು. ಗ್ರೇಟ್ ಬ್ರಿಟನ್, ಕ್ಯಾನಡಾ, ಆಸ್ಟ್ರೇಲಿಯ, ನ್ಯೂಜೀಲೆಂಡ್ ಮುಂತಾದ ಕಡೆಗಳಿಂದ ಸೈನ್ಯಗಳನ್ನು ಕೂಡಿಸಿ ಕಳುಹಿಸುತ್ತಿದಾರೆ. ನಮ್ಮ ದೇಶವಾದ ಹಿಂದುಸ್ಥಾನದಿಂದಲೂ ಸೈನ್ಯವು ಯುದ್ಧಭೂಮಿಗೆ ಹೊರಟು ಪ್ರಯಾಣ ಮಾಡುತ್ತಿದೆ.

ಹಿಂದುಸ್ಥಾನದಿಂದ ಹೋಗಿರತಕ್ಕ ಸೈನ್ಯಗಳಲ್ಲಿ ಇಂಗ್ಲಿಷ್ ಮತ್ತು ದೇಶೀಯ ಸೈನ್ಯಗಳೂ, ಸಾಮಂತ ಸಂಸ್ಥಾನಗಳವರು ತರಪೇತುಮಾಡಿಟ್ಟುಕೊಂಡಿರುವ ಇಂಪೀರಿಯಲ್ ಸರ್ವಿಸ್ ಸೈನ್ಯಗಳೂ ಸೇರಿ ಹೋಗಿರುವವು. ಹಿಂದುಸ್ಥಾನದ ದೇಶೀಯ ಸಿಪಾಯಿಗಳು ಹಿಂದೆ ಸ್ವದೇಶರಕ್ಷಣೆಗಾಗಿ ಇಂಗ್ಲಿಷ್ ಸೈನಿಕರ ಜೊತೆಯಲ್ಲಿ ಹ್ಯಾಗೆ ನಿಂತು ಯುದ್ಧಮಾಡಿದರೋ ಹಾಗೆಯೇ ಈಗಲೂ ಅವರ ಕೂಡ ಬೆಂಬಲವಾಗಿ ನಿಂತು ಕಾದಾಡುವರು. ಈ ಹಿಂದುಸ್ಥಾನದ ದೇಶೀಯ ಸೈನಿಕರು ಈ ರೀತಿ ತಮ್ಮ ರಾಜ್ಯವನ್ನು ಕಾಪಾಡಿಕೊಳ್ಳುವುದಕ್ಕೋಸ್ಕರ ಶತ್ರುಗಳ ಮೇಲೆ ನುಗ್ಗಿ ಪರಾಕ್ರಮವಾಗಿ ಯುದ್ಧಮಾಡುತ್ತಾ ಬರುವಾಗ್ಗೆ ಅವರು ನಾನಾ ಗಂಡಾಂತರಗಳಿಗೆ ಗುರಿಯಾಗುವರು; ಆ ಪೈಕಿ ಹಲವರು ಪ್ರಾಣವನ್ನೂ ಒಪ್ಪಿಸಬಹುದು. ಇವರಲ್ಲಿ ಅನೇಕ ಮಂದಿಗೆ ಸಂಸಾರದಲ್ಲಿ ಹೆಂಡಿರುಮಕ್ಕಳುಗಳೂ, ವೃದ್ಧಾಪ್ಯದಲ್ಲಿರುವ ತಂದೆತಾಯಿಗಳೂ, ಇತರ ಬಳಗಗಳೂ ಇರುತ್ತಾರೆನ್ನುವುದಕ್ಕೆ ಸಂಶಯವಿಲ್ಲ. ಈಗ ಇಷ್ಟೊಂದು ಜನಗಳ ಜೀವನಕ್ಕೂ ಆ ಸಿಪಾಯಿಗಳೇ ಆಧಾರಗಳಾಗಿರುತ್ತಾರೆ. ಇವರು ಯುದ್ಧಭೂಮಿಯಲ್ಲಿ ಕಾದಾಡುತ್ತಾ ಪ್ರಾಣವನ್ನೊಪ್ಪಿಸಿಬಿಟ್ಟರೆ ಇವರ ಸಂಸಾರಗಳ ಜೀವನಕ್ಕೆ ಗತಿಯೇನು? ಅವರ ಜೀವನವನ್ನು ಯಾರು ನಡಿಸಬೇಕು? ದಕ್ಷರಾಗಿ ಜೀವನ ನಡಿಸುತ್ತಿದ್ದವರು ದೇಶಸಂರಕ್ಷಣೆಗಾಗಿ ಕಾದಾಡುತ್ತಾ ಪ್ರಾಣಬಿಟ್ಟರೆ ಅವರ ಸಂಸಾರಕ್ಕೆ ಸೇರಿದವರು ದಿಕ್ಕಿಲ್ಲದೆಯೂ ಜೀವನಕ್ಕೆ ಮಾರ್ಗವಿಲ್ಲದೆಯೂ ಅಲೆಯುವಂತಾಗುವುದು ಧರ್ಮವೇ? ಇದು ಎಷ್ಟು ಮಾತ್ರಕ್ಕೂ ಧರ್ಮವಲ್ಲ. ನಾವುಗಳೆಲ್ಲಾ ಸೇರಿ ಅವರಿಗೆ ಅಂಥಾ ಸಂಕಟ ಪ್ರಾಪ್ತವಾಗದಂತೆ ನೋಡಿಕೊಂಡು ಅವರನ್ನು ಸಂರಕ್ಷಣೆಮಾಡಬೇಕಾಗಿರುತ್ತದೆ.

ಇಂಗ್ಲಿಷ್ ಸೈನ್ಯದವರು ಯುದ್ಧದಲ್ಲಿ ಮಡಿದರೆ ಅವರ ಸಂಸಾರಗಳನ್ನು ಕಾಪಾಡುವುದಕ್ಕೋಸ್ಕರ ಇಂಗ್ಲೆಂಡಿನಲ್ಲಿ ಒಂದು ಧರ್ಮದ ಫಂಡು ಏರ್ಪಾಡಾಗಿರುತ್ತದೆ; ಇದಕ್ಕೆ ಪ್ರಿನ್ಸ್ ಆಫ್ ವೇಲ್ಸ್ ಫಂಡ್ ಎಂದು ಹೆಸರು. ಇದುವರೆಗಾಗಲೇ ಇಂಗ್ಲಿಷ್ ಸೈನಿಕರಲ್ಲಿ ಐದು ಸಾವಿರಕ್ಕಿಂತಲೂ ಹೆಚ್ಚಾಗಿಯೇ ಯುದ್ಧಭೂಮಿಯಲ್ಲಿ ಮೃತಪಟ್ಟು ಅಥವಾ ಗಾಯಹೊಂದಿರುವರು. ಇವರ ದೆಸೆಯಿಂದ ಜೀವನಮಾಡುತ್ತಿದ್ದವರನ್ನು ಕಾಪಾಡತಕ್ಕದ್ದೇ ಆ ಫಂಡಿನ ಉದ್ದೇಶವು. ಆ ಫಂಡಿಗೆ ಇಂಗ್ಲೆಂಡಿನಲ್ಲಿ ಈಗಾಗಲೇ ಮೂರು ಕೋಟಿ ರೂಪಾಯಿ ತನಕ ಚಂದಾ ವಸೂಲಾಗಿದೆ. ಹಿಂದುಸ್ಥಾನದಲ್ಲಿರುವ ನಾವೂ ಕೂಡ ಅವರಂತೆ ವರ್ತಿಸಿ, ನಮ್ಮ ದೇಶೀಯ ಪ್ರಜೆಗಳ ಸಂಸಾರಗಳನ್ನು ಕಾಪಾಡುವ ಏರ್ಪಾಡುಮಾಡಿಕೊಳ್ಳಬೇಕಾದದ್ದು ನಮ್ಮ ಕರ್ತವ್ಯ. ಇದಕ್ಕಾಗಿ ವೈಸ್‌ರಾಯ್ ಪ್ರಭುಗಳು ಆಗಲೇ ಒಂದು ಫಂಡನ್ನು ಪ್ರಾರಂಭಿಸಿರುತ್ತಾರೆಂದು ತಿಳಿಸಿದೇವೆ. ಇದುವರೆಗೆ ಈ ಫಂಡಿಗೆ ಲಕ್ಷಾಂತರ ರೂಪಾಯಿ ಚಂದಾ ಕೂಡಿದೆ ಎಂದೂ, ಇನ್ನೂ ಈ ಫಂಡು ದಿನೇದಿನೇ ವೃದ್ಧಿಯಾಗುತ್ತಿದೆ ಎಂದೂ ತಿಳಿಸಲು ಸಂತೋಷವಾಗುವುದು. ನಮ್ಮ ಪರಮ ಭಕ್ತಿಪ್ರೀತಿಗಳಿಗೆ ಪಾತ್ರರಾಗಿರುವ ನಮ್ಮ ಶ್ರೀಮನ್ಮಹಾರಾಜರವರು ನಮಗೆಲ್ಲಾ ಮೇಲ್ಪಂಙ್ತಿ ಹಾಕಿಕೊಟ್ಟು ಮೇಲ್ಕಂಡ ಫಂಡಿಗೆ ಎರಡು ಲಕ್ಷ ರೂಪಾಯನ್ನು ಚಂದಾ ಕಳುಹಿಸಿರುವರು. ಈಗ ಅವರ ಪ್ರಜೆಗಳಾಗಿರುವ ನಾವುಗಳೂ ನಮ್ಮ ಶಕ್ತಿ ಅನುಕೂಲಗಳನ್ನು ನೋಡಿಕೊಂಡು ನಮ್ಮ ಕೈಲಾಗುವ ಮಟ್ಟಿಗೂ ಈ ಫಂಡಿಗೆ ದ್ರವ್ಯಸಹಾಯ ಮಾಡೋಣ.

ಈ ಫಂಡಿನ ಮೈಸೂರು ಕಮಿಟಿಯವರು ಚಂದಾ ವಸೂಲಿಗಾಗಿ ಕೇಳುತ್ತಿರುವ ವಿಜ್ಞಾಪನವನ್ನು ಇನ್ನೊಂದು ಕಡೆ ಪ್ರಕಟಮಾಡಿದೇವೆ. ಬ್ರಿಟಿಷ್ ರೆಸಿಡೆಂಟರಾದ ಸರ್ ಹ್ಯೂ ಡಾಲಿಯವರು ನಮ್ಮ ಮೈಸೂರು ಸೀಮೆಯ ಫಂಡಿನ ಕಮಿಟಿಗೆ ಪ್ರೆಸಿಡೆಂಟರು; ಮಿ|| ವಾರ್‌ಬರ್‌ಟನ್ ರವರೂ, ನಮ್ಮ ಮಹಾರಾಜರವರ ಮಿಲಿಟರಿ ಸೆಕ್ರೆಟರಿ ಮಿ|| ಎಂ. ಎಂ. ಇಸ್ಮಾಯಿಲ್ ರವರೂ ಸೆಕ್ರೆಟರಿಗಳು; ಬೆಂಗಳೂರಿನಲ್ಲಿರುವ ಮದರಾಸ್ ಬ್ಯಾಂಕಿನ ಮಿ|| ಕಾಲಿಯರ್ ರವರು ಟ್ರೆಜರರಾಗಿರುತ್ತಾರೆ. ನಮ್ಮ ಮೈಸೂರು ಸೀಮೆಯ ಸಮಸ್ತ ಪ್ರಜೆಗಳೂ ಈ ಫಂಡಿಗೆ ದ್ರವ್ಯಸಹಾಯಮಾಡಲು ಕುತೂಹಲಪಡುವರೆಂದು ನಂಬುತ್ತೇವೆ. ಶಕ್ತ್ಯನುಸಾರ ರೂಪಾಯನ್ನೋ, ಗತಿಯಿಲ್ಲದವರು ಕೆಲವು ಆಣೆಗಳನ್ನೋ ಚಂದಾ ಕೊಡಬಹುದು.

ಬೆಂಗಳೂರಿನಲ್ಲಿ ಚಂದಾ ವಸೂಲಿಗಾಗಿ ಒಂದು ಕಮಿಟಿಯನ್ನು ಮಾಡಿಕೊಂಡಿದಾರೆ. ಮೊನ್ನೆ ಸೋಮವಾರ ಸಾಯಂಕಾಲ ಮೈಸೂರು ಪಟ್ಟಣದಲ್ಲೂ ಒಂದು ಕಮಿಟಿ ಏರ್ಪಾಡಾಯಿತು. ಈ ಮೀಟಿಂಗಿನಲ್ಲಿ ಕುಳಿತಿದ್ದ ಒಬ್ಬ ಕುಂಭಕೋಣದಾತನು ತನಗೆ ಕನ್ನಡ ತಿಳಿಯದೆಂದೂ, ಈ ಪರೋಪಕಾರವಾದ ಕಾರ್ಯದಲ್ಲಿ ತಾನೂ ಸೇರಲು ಕುತೂಹಲಪಡುತ್ತೇನೆಂದೂ ಹೇಳಿ, 5 ರೂಪಾಯಿ ತೆಗೆದು ಚಂದಾ ಪಾವತಿಮಾಡಿದನು.

ನಮ್ಮ ಸಂಸ್ಥಾನದ ಅನೇಕ ಕಡೆಗಳಲ್ಲಿ ಈ ಫಂಡಿಗೆ ಹಣಗಳನ್ನು ಕೂಡಿಸುವುದಕ್ಕೆ ಸೆಕ್ರೆಟರಿಗಳೂ, ಟ್ರೆಜರರುಗಳೂ ನೇಮಕವಾದಾರು. ಆದಾಗ್ಯೂ ಬಹು ಮಂದಿ ಪ್ರಜೆಗಳು ಚಂದಾ ಕೊಡಬೇಕೆಂದು ಕುತೂಹಲಪಟ್ಟರೂ ಯಾರ ವಶಕ್ಕೆ ಕೊಡಬಹುದೋ ತಿಳಿಯದೆಹೋಗಬಹುದು. ನಾವು ನಮ್ಮ ಆಫೀಸಿನಲ್ಲಿ ಒಂದು ಫಂಡನ್ನು ಪ್ರಾರಂಭಿಸಿರುತ್ತೇವೆ. ಇದಕ್ಕೆ ಇಷ್ಟಪಟ್ಟವರೆಲ್ಲಾ ಚಂದಾ ಕಳುಹಿಸಿದರೆ ಅಂಥಾ ಹಣಗಳನ್ನು ಕೊಟ್ಟವರ ಹೆಸರುಗಳ ಸಮೇತ ಪ್ರತಿ ವಾರವೂ ಈ ಪತ್ರಿಕೆಯಲ್ಲಿ ಪ್ರಕಟಮಾಡಿ, ಅಂಥಾ ಹಣಗಳನ್ನು ಟ್ರೆಜರರಿಗೆ ಪಾವತಿಮಾಡುವೆವು. ಪ್ರಜೆಗಳು ಎಷ್ಟು ಆತುರಪಟ್ಟು ಬೇಗನೆ ಚಂದಾ ಕಳುಹಿಸಿದರೆ ಅಷ್ಟು ಅನುಕೂಲ; ಯಾಕಂದರೆ ಹಣವು ಇಷ್ಟರೊಳಗೇ ಖರ್ಚಿಗೆ ಬೇಕಾಗುತ್ತದೆ. ಈ ಫಂಡಿನ ಉದ್ದೇಶವು ಪುಣ್ಯಕರವಾದದ್ದು, ತುಂಬಾ ಅವಶ್ಯವಾದದ್ದು. ವಾಚಕರು ಈ ಅಂಶವನ್ನು ಮನಸ್ಸಿನಲ್ಲಿಟ್ಟುಕೊಂಡು ಬೇಗಬೇಗನೆ ಚಂದಾ ಕಳುಹಿಸಿಕೊಡುತ್ತಾರೆಂದು ನಂಬಿ ನಿರೀಕ್ಷಿಸುತ್ತೇವೆ.

ಯುದ್ಧದ ಸಮಾಚಾರಗಳು.

ಸಾವಿರಾರು ಸೈನ್ಯಗಳು ಮಡಿದುಹೋದವು.

ರಷ್ಯಾದವರ ಜಯಪ್ರದಗಳು.

ನಮ್ಮ ಯುದ್ಧದ ನಕ್ಷೆ.

ಯೂರೋಪ್ ಖಂಡದಲ್ಲಿ ಈಗ ನಡೆಯುತ್ತಿರುವ ಯುದ್ಧದಲ್ಲಿ ಕದನಗಳು ಎಲ್ಲೆಲ್ಲಿ ನಡೆಯುವೆಂಬುವುದನ್ನು ನಮ್ಮ ವಾಚಕರು ನೋಡಿ ಗ್ರಹಿಸಿಕೊಳ್ಳುವುದಕ್ಕೋಸ್ಕರ ಯುದ್ಧಭೂಮಿಯ ನಕ್ಷೆಯನ್ನು ತಯಾರುಮಾಡಿಸಿ ಈ ವಾರದ ಪತ್ರಿಕೆಯ ಕೂಡ ನಮ್ಮ ಚಂದಾದಾರರಿಗೆಲ್ಲಾ ಉಚಿತವಾಗಿ ಕಳುಹಿಸಿರುತ್ತೇವೆ. ಈ ನಕ್ಷೆಯಲ್ಲಿ ಇಂಗ್ಲೆಂಡ್ ದೇಶದ ಒಂದು ಭಾಗವೂ, ಫ್ರಾನ್ಸ್ ದೇಶದ ಒಂದು ಭಾಗವೂ; ಬೆಲ್ಜಿಯಂ, ಹಾಲೆಂಡ್, ಜರ್ಮನಿ, ಆಸ್ಟ್ರಿಯ, ಸರ್ವಿಯ, ಸ್ವಿಟ್ಜರ್ಲೆಂಡ್ ದೇಶಗಳೂ; ರಷ್ಯ, ಡೆನ್ಮಾರ್ಕ್, ಇಟಲಿ ರಾಜ್ಯಗಳ ಕೆಲವು ಭಾಗಗಳೂ ತೋರಿಸಲ್ಪಟ್ಟಿವೆ. ಬೆಲ್ಜಿಯಂ ರಾಜ್ಯದ ಹೆಸರನ್ನು ಈ ನಕ್ಷೆಯಲ್ಲಿ ಬರೆದು ತೋರಿಸಲು ಸಾಧ್ಯವಾಗಲಿಲ್ಲ. ಆದರೆ ಕದನಗಳು ನಡೆದಿರುವ ಸ್ಥಳಗಳು ಅಂದರೆ ಲೀಜ್, ನಾಮುರ್, ಬ್ರಸ್ಸೆಲ್ಸ್, ಈ ಮೊದಲಾದ ಠಾಣ್ಯಗಳನ್ನು ನಕ್ಷೆಯಲ್ಲಿ ಕಾಣಿಸಿರುತ್ತೇವೆ. ಚಂದಾದಾರರಲ್ಲದವರು 6 ಪೈ ಕೊಟ್ಟು ಪಡೆಯಬಹುದು.

ಕಳೆದ ವಾರ ಯುದ್ಧಭೂಮಿಯ ಎಲ್ಲಾ ಕಡೆಗಳಲ್ಲೂ ಕದನಗಳು ಜೋರಾಗಿ ನಡೆದಿರುತ್ತವೆ. ಅವುಗಳ ವೃತ್ತಾಂತವನ್ನೆಲ್ಲಾ ತಿಳಿಸುವುದೇ ಅಲ್ಲದೆ ಯುದ್ಧಭೂಮಿಯಿಂದ ಬಂದಿರುವ ಕೆಲವು ತಂತೀವರ್ತಮಾನಗಳನ್ನೂ ಪ್ರಕಟಮಾಡುವೆವು.

ಬೆಲ್ಜಿಯಂನಲ್ಲಿ.

ಬೆಲ್ಜಿಯಂ ಸಂಸ್ಥಾನದ ರಾಜಧಾನಿಯಾದ ಬ್ರಸ್ಸೆಲ್ಸ್ ಪಟ್ಟಣವನ್ನು ಬೆಲ್ಜಿಯಂ ರಾಜ್ಯದ ಸೈನ್ಯಗಳು ಕಾಪಾಡಿಕೊಳ್ಳುವುದಕ್ಕೆ ಏರ್ಪಾಡುಮಾಡದಿದ್ದಾಗ್ಗೆ ಜರ್ಮನಿಯವರು ಸುಲಭವಾಗಿ ಹೋಗಿ ಆ ಪಟ್ಟಣವನ್ನು ಸ್ವಾಧೀನಪಡಿಸಿಕೊಂಡಿದಾರೆಂದೂ, ಬೆಲ್ಜಿಯಂ ಸೈನ್ಯದಲ್ಲಿ ಕೆಲವು ಭಾಗ ಆಂಟ್ವರ್ಪ್ ನಗರಕ್ಕೆ ಹಿಮ್ಮೆಟ್ಟಿಹೋದರೆಂದೂ ಕಳೆದ ವಾರ ತಿಳಿಸಿರುತ್ತೇವೆ.

ಬೆಲ್ಜಿಯಮಿನ ಪಶ್ಚಿಮ ಭಾಗದಲ್ಲಿ ಇಂಗ್ಲಿಷ್ ಮತ್ತು ಫ್ರೆಂಚ್ ಸೈನ್ಯಗಳು ಠಾಣ್ಯಹಾಕಿಕೊಂಡಿದ್ದವು. ಆಗಸ್ಟ್ ತಾ 23 ನೇ ಭಾನುವಾರ ವೊದಲು ದೊಡ್ಡ ಯುದ್ಧವು ಪ್ರಾರಂಭವಾಗಿ ಮಾರನೇ ಬುಧವಾರ ರಾತ್ರಿಯ ತನಕ ನಡೆಯಿತು. ಈ ಕಾದಾಟದ ಸಾಲಿನಲ್ಲಿ ಇಂಗ್ಲಿಷ್ ಸೈನ್ಯಗಳು ಎಡಗಡೆ ಕೊನೆಯಲ್ಲಿದ್ದವು. ಆ ಸ್ಥಾನವು ಬಹು ಅಪಾಯಕರವಾದದ್ದಾದರೂ ತುಂಬಾ ಕೀರ್ತಿ ತರುವಂಥಾದ್ದಾಗಿತ್ತು. ಇವರ ಮೇಲೆಯೇ ಜರ್ಮನಿಯವರ ಸೈನ್ಯಗಳು ವಿಶೇಷವಾಗಿ ನುಗ್ಗಿ ಕಾದಾಡಿದವು. ಜರ್ಮನಿಯವರ ಕಡೆ ಬಹು ಉತ್ತಮವಾದವೆಂದು ಎಣಿಸಲ್ಪಟ್ಟಿದ್ದ ಸೈನ್ಯಗಳೇ ಇಂಗ್ಲೀಷರ ಮೇಲೆ ನುಗ್ಗಿದವು. ಕಾದಾಟವು ಬಹು ಘೋರವಾಗಿ ನಡೆಯಿತು. ಇಂಗ್ಲಿಷರೂ ಫ್ರೆಂಚರೂ ಕ್ರಮೇಣ ಹಿಮ್ಮೆಟ್ಟಿ ಕಾಂಬ್ರೆ ಎಂಬಲ್ಲಿಗೆ ಬಂದು ಸೇರಿದರು. ಅಲ್ಲಿಗೂ ಜರ್ಮನಿಯವರು ನುಗ್ಗಿ ಬಂದು ಇಂಗ್ಲಿಷರನ್ನು ನಾಶಪಡಿಸಬೇಕೆಂದು ಅತ್ಯಂತ ತೀಕ್ಷ್ಣವಾಗಿ ಪ್ರಾಣದ ಮೇಲೆ ಆಂಗೀಕರಿಸದೆ ಸಾಹಸಪಟ್ಟು ನುಗ್ಗಿದರು. ಫ್ರೆಂಚರೂ ಬ್ರಿಟಿಷರೂ ಪಿರಂಗಿಗಳನ್ನು ಜರ್ಮನಿಯವರ ಮೇಲೆ ಎತ್ತಿಕಟ್ಟಿ ಗುಂಡುಗಳ ಮಳೆಯನ್ನು ಸುರಿಸಿದ್ದರಿಂದ ಜರ್ಮನ್ ಸೈನಿಕರು ತುಂಡುತುಂಡಾಗಿ ಕತ್ತರಿಸಲ್ಪಟ್ಟರು. ಅಲ್ಲಿ ಸಾವಿರಾರು ಮಂದಿ ಜರ್ಮನಿಯವರು ಮೃತಪಟ್ಟಿರಬೇಕೆನ್ನುವದಕ್ಕೆ ಅನುಮಾನವಿಲ್ಲ.

ಈ ಯುದ್ಧವು ಮೋನ್ಸ್ ಎಂಬ ಸ್ಥಳದಲ್ಲಿ ಪ್ರಾರಂಭವಾಗಿ ಸಾಂಬ್ರೆ ನದಿಯ ದಡದ ಮೇಲಿರುವ ಚಾರ್ಲೆರಾ ಎಂಬ ಠಾಣ್ಯದ ತನಕ ವ್ಯಾಪಿಸಿಕೊಂಡಿರಬೇಕೆಂದು ಕಾಣುತ್ತದೆ. ಜರ್ಮನಿಯವರು ಆ ನದಿಯನ್ನು ಹೇಗಾದರೂ ಮಾಡಿ ದಾಟಬೇಕೆಂದು ಪದೇ ಪದೇ ಪ್ರಯತ್ನಪಟ್ಟರು, ಆದರೂ ಪ್ರತಿ ಒಂದು ಸಲವೂ ಸೋತು ಹಿಮ್ಮೆಟ್ಟಿ ಹೋಗಬೇಕಾಯಿತು. ಅಲ್ಲಿ ಅತ್ಯಂತ ಭಯಂಕರವಾದ ಯುದ್ಧಗಳು ನಡೆದವು. ಪುನಃಪುನಃ ಜರ್ಮನಿಯವರು ನುಗ್ಗಿ ಬಂದರೂ ಲೈನಿನ ಎಡಗಡೆಯಲ್ಲಿದ್ದ ಇಂಗ್ಲಿಷ್ ಸೈನ್ಯಗಳು ಅವರಿಗೆ ಸ್ವಲ್ಪ ಮಾತ್ರವೂ ಜಗ್ಗಲಿಲ್ಲ.

ಜರ್ಮನಿಯವರು ಹ್ಯಾಗಾದರೂ ಬ್ರಿಟಿಷರನ್ನು ಅಲ್ಲಿಂದ ಓಡಿಸಿ, ಬಲವಾದ ಕೋಟೆಗಳಿಂದ ಕಟ್ಟಲ್ಪಟ್ಟಿರುವ ಮೋಬೇಗ್ ನಗರಕ್ಕೆ ಅಲ್ಲಿನ ಕೋಟೆಗಳ ಆಶ್ರಯವನ್ನು ಹುಡುಕಿಕೊಂಡು ಹೋಗುವಂತೆ ಮಾಡಬೇಕೆಂದು ಯತ್ನಪಟ್ಟರು. ಇಂಗ್ಲಿಷರು ಅಂಥಾ ಆಶ್ರಯವನ್ನು ನಿರಾಕರಿಸಿ, ಯುದ್ಧಮಾಡುತ್ತಲೇ ಹಿಮ್ಮೆಟ್ಟಿ ಕಾಂಬ್ರೆಯನ್ನು ಸೇರಿಕೊಂಡರು. ಅಲ್ಲಿ ಇಂಗ್ಲಿಷರ ಆ ಎರಡು ಸೈನ್ಯಗಳೂ, ಜರ್ಮನಿಯವರ ಕಡೆ ಐದು ಸೈನ್ಯಗಳೂ ಕಲೆತು ಕಾದಿದ್ದರಿಂದ ಅತ್ಯಂತ ಘೋರವಾದ ಕೊಲೆಗಳು ಸಂಭವಿಸಿದವು.

ಒಂದು ಗ್ರಾಮದಲ್ಲಿ ಜರ್ಮನಿಯವರು ಒಂದೇ ಗುಂಪಾಗಿ ಇಕ್ಕಟ್ಟಾದ ಬೀದಿಯೊಳಗೆ ನುಗ್ಗಿ ಬಂದರು. ಬ್ರಿಟಿಷರು ಪಿರಂಗಿಗಳ ಸಮೇತ ಅವರ ಮೇಲೆ ಬಿದ್ದರು. ಆ ಸಣ್ಣ ಬೀದಿಯಲ್ಲೇ 800-900 ಜರ್ಮನಿಯವರು ಸತ್ತುಬಿದ್ದರು, ಇಲ್ಲವೆ ಗಾಯಪಟ್ಟರು. ಇಷ್ಟಾಗುವಲ್ಲಿ ಜರ್ಮನಿಯವರೊಳಗೆ ಬಹು ಭೀಕರವಾದ ಗಾಬರಿಯುಂಟಾಯಿತು. ಜರ್ಮನಿಯವರ ಕಡೆ ಎರಡು ರೆಜಿಮೆಂಟಿನ ಸೈನ್ಯಗಳನ್ನು ಒಟ್ಟುಗೂಡಿಸಿ ನೋಡುವಾಗ್ಗೆ ನಷ್ಟವು ಅಪಾರವೆಂದು ಗೊತ್ತಾಯಿತು. 60 ಮಂದಿ ಮಾತ್ರ ಉಳಿದಿದ್ದರಿಂದ ಉಳಿದವರೆಲ್ಲಾ ಮೃತಪಟ್ಟರು ಇಲ್ಲವೇ ಗಾಯಪಟ್ಟರು.

ಇನ್ನೊಂದು ಸ್ಥಳದಲ್ಲಿ ಜರ್ಮನಿಯವರ ಕುದುರೇ ಸೈನ್ಯವು ಇಂಗ್ಲಿಷ್ ಕುದುರೇ ಸೈನ್ಯದ ಮೇಲೆ ನುಗ್ಗಿ ಬಂದು ಯುದ್ಧಮಾಡಿತು. ಇಂಗ್ಲಿಷ್ ಸವಾರರು ಅವರನ್ನು ಸೋಲಿಸಿ ದಿಕ್ಕಾಪಾಲಾಗಿ ಚದರಿಸಿಬಿಟ್ಟರು.

ಈ ಯುದ್ಧಗಳು ನಡೆದ ಸಾಲಿನ ಉದ್ದಕ್ಕೂ ಮೂವತ್ತು ಮೈಲಿಗಳ ಫಾಸಲೆ ವರೆಗೆ ಶತ್ರುಗಳು ಎದುರುಬದುರಾಗಿದ್ದರು. ಒಟ್ಟುಗೂಡಿಸಿ ನೋಡಿದರೆ ಜರ್ಮನಿಯವರು ಆರು ಸಲ ಬ್ರಿಟಿಷರ ಮೇಲೆ ನುಗ್ಗಿ ದಾರಿಬಿಡಿಸಿಕೊಂಡು ಬರಬೇಕೆಂದು ಪ್ರಯತ್ನಪಟ್ಟರು. ಪ್ರತಿ ಸಲವೂ ಇಂಗ್ಲಿಷರು ಅನೇಕರನ್ನು ಹತಮಾಡಿ ಹಿಮ್ಮೆಟ್ಟಿಸಿರುತ್ತಾರೆ. ಈ ಕೊಲೆಗಳು ಮಹಾ ಘೋರವಾಗಿದ್ದವು. ಜರ್ಮನಿಯವರು ಬ್ರಿಟಿಷರ ಸನೀನುಗಳಿಗೆ ಎದುರುನಿಲ್ಲಲಾರದೆ ನಷ್ಟಪಟ್ಟು ಹಿಂತಿರುಗಿದರು. ಈ ಘೋರವಾದ ಕಾದಾಟದ ಮಧ್ಯದಿಂದ ಇಂಗ್ಲಿಷರು ಸ್ವಲ್ಪವೂ ಗಾಬರಿಪಡದೆ ಬಹಳ ತಾಳ್ಮೆಯಿಂದ ಬಿಡಿಸಿಕೊಂಡು ಪಿರಂಗಿಗಳನ್ನು ಕಳೆದುಕೊಳ್ಳದೆ ವಾಪಸು ಬಂದರು. ಜರ್ಮನಿಯವರು ಹೊಸದಿದ ತೀಕ್ಷ್ಣವಾದ ಗುಂಡುಗಳ ಮಳೆಯು ಇಂಗ್ಲಿಷ್ ಸೈನ್ಯದ ಮೇಲೆ ಸುರಿದು ಕೆಲವು ಕುದುರೆಗಳು ಹತವಾದವು. ಜರ್ಮನಿಯವರು ಕುದುರೆ ಸೈನ್ಯದಿಂದ ಒತ್ತಿಸಿಕೊಂಡು ಬಂದರು. ಇದಲ್ಲದೆ ಮೋಟಾರ್ ಗಾಡಿಯ ಪಿರಂಗಿಗಳು, ವಿಮಾನಯಂತ್ರಗಳೇ ಮುಂತಾದವುಗಳ ಸಮೇತ ಅವರು ಒತ್ತರಿಸಿಕೊಂಡು ಬರುತ್ತಿದ್ದಾಗ್ಯೂ ಇಂಗ್ಲಿಷ್ ಸೈನಿಕರು ಲೈನ್ ಬಿಡದೇನು ಗಾಬರಿಯಾಗದೇನೂ ಯುದ್ಧಕೊಡುತ್ತಾ ಕ್ರಮವಾಗಿ ಹಿಮ್ಮೆಟ್ಟಿ ಬಂದರು.

ಈ ಘೋರಯುದ್ಧದಲ್ಲಿ ಇಂಗ್ಲಿಷರ ಕಡೆ ಗಾಯಪಟ್ಟವರೂ ಮೃತಪಟ್ಟವರೂ 5-6 ಸಾವಿರ ಮಂದಿಯಾಗಬಹುದೆಂದು ಹೇಳುತ್ತಾರೆ. ಜರ್ಮನಿಯವರ ನಷ್ಟವು ಅದಕ್ಕಿಂತ ಎಷ್ಟೋ ಹೆಚ್ಚಾಗಿರುತ್ತದೆ. ಗಾಯಪಟ್ಟ ಇಂಗ್ಲಿಷರನ್ನು ಇಂಗ್ಲೆಂಡಿಗೆ ಸಾಗಿಸುವರು. ಇವರಲ್ಲಿ ಅನೇಕರು ಆಗಲೇ ಇಂಗ್ಲೆಂಡಿಗೆ ಬಂದು ತಲುಪಿದರು. ಇವರು ಈ ಭಯಂಕರವಾದ ಕದನದ ವೃತ್ತಾಂತವನ್ನು ವಿವರವಾಗಿ ಹೇಳುತ್ತಿರುವರು. ಬ್ರಿಟಿಷ್ ಸೈನಿಕರ ಧೈರ್ಯಪರಾಕ್ರಮಗಳನ್ನು ಫ್ರೆಂಚರು ಬಹಳವಾಗಿ ಕೊಂಡಾಡುತ್ತಿದಾರೆ. ಈ ಯುದ್ಧದಲ್ಲಿ ಬ್ರಿಟಿಷರು ಎಡಪಾರ್ಶ್ವದ ಲೈನನ್ನು ಅಷ್ಟು ಚೆನ್ನಾಗಿಯೂ ಪರಾಕ್ರಮದಿಂದಲೂ ಕಾಪಾಡಿಕೊಳ್ಳದೆ ಹೋಗಿದ್ದರೆ ಫ್ರೆಂಚರೇ ಮುಂತಾದವರ ಸೈನ್ಯಗಳೆಲ್ಲಾ ಹತವಾಗುತ್ತಿದ್ದವು.

ಕೆಲವು ಕಡೆ ಜರ್ಮನಿಯವರ ಸೈನ್ಯದ ಹೆಣಗಳು ರಾಶಿಯಾಗಿ ಬಿದ್ದಿದ್ದುದರಿಂದ ಸೈನಿಕರು ಹೆಣಗಳ ಮಧ್ಯೆ ನಿಂತ ಹಾಗೇ ಕೊಲೆಯಾಗಿದ್ದರು. ಬಿದ್ದ ಹೆಣಗಳು ನಿಂತ ಹೆಣಗಳಿಗೆ ಆಸರೆಯಾಗಿದ್ದವು.

ಜರ್ಮನಿಯವರ ಇಂಪೀರಿಯಲ್ ಗಾರ್ಡ್ ಎಂಬ ಸವಾರ್ ಸೈನ್ಯದ ದಳಪತಿಯಾಗಿದ್ದ ಪ್ರಿನ್ಸ್ ಲಿಯೋಪಾಲ್ಡ್ ಆಫ್ ಸಾಕ್ಸ್ ಮೈನಿಗೆನ್ ರವರು ಯುದ್ಧದಲ್ಲಿ ಮಡಿದುಹೋದರು; ಮತ್ತು ಜರ್ಮನ್ ಚಕ್ರವರ್ತಿಯ ದಾಯಾದಿಯಾದ ಕೌಂಟ್ ಫ್ರೇಡರಿಕ್ ಎಂಬಾತನು ಸೆರೆ ಹಿಡಿಯಲ್ಪಟ್ಟನು. ಇಂಗ್ಲಿಷರ ಕಡೆಯಲ್ಲಿ ಅರಲ್ ಡಿವಿಕ್ ರವರಿಗೆ ಬಹಳ ಗಾಯವಾಗಿದೆ. ಇವರು ಇಂಗ್ಲಿಷ್ ಸೈನ್ಯದಲ್ಲಿ ಲೆಫ್ಟಿನೆಂಟ್ ಎಂಬ ಹುದ್ದೆಯಲ್ಲಿದ್ದರು.

ಇಂಗ್ಲಿಷರಿಗೂ ಜರ್ಮನಿಯವರಿಗೂ ಒಂದು ಸಣ್ಣ ಕದನವಾದಂತೆ ಒಂದು ತಂತೀವರ್ತಮಾನ ಹೇಳಿದೆ. ಬೆಲ್ಜಿಯಂಗೆ ಸೇರಿದ ಪೊರೆಸ್ ಎಂಬ ಸ್ಥಳದಲ್ಲಿ 5,000 ಜರ್ಮನ್ ಕುದುರೆ ಸೈನ್ಯವು 700 ಇಂಗ್ಲಿಷ್ ಸಿಪಾಯಿಗಳ (ಕಾಲ್ಬಲ) ಮೇಲೆ ನುಗ್ಗಿ ಬಂತು. ಇಂಗ್ಲಿಷ್ ಸಿಪಾಯಿಗಳು ಕೆಲವು ಗಂಟೆಗಳ ಹೊತ್ತು ಜರ್ಮನಿಯವರನ್ನು ಮುಂದರಿಸಿ ಬರದಂತೆ ತಡೆದುಕೊಂಡು ಅವರಲ್ಲಿ ಅನೇಕರನ್ನು ಕೊಂದುಹಾಕಿದರು. ಕಡೆಗೆ ಇಂಗ್ಲಿಷರ ಕಡೆ 300 ಮಂದಿ ಉಳಿಕೊಂಡರು. ಇವರಲ್ಲೂ ಬಹುಮಂದಿಗೆ ಗಾಯಗಳಾಗಿದ್ದರೂ ಲಕ್ಷ್ಯಮಾಡದೆ ಅಲ್ಲಿಂದ ಹಿಮ್ಮೆಟ್ಟಿ ಕಾಂಬ್ರೆ ಎಂಬಲ್ಲಿಗೆ ಬಂದು ಸೇರಿಕೊಂಡರು.

ಒಬ್ಬಾನೊಬ್ಬ ಬ್ರಿಟಿಷ್ ಸೈನಿಕನು ಒಂದು ಕಾಗದದಲ್ಲಿ ಬರೆದಿರುವುದೇನೆಂದರೆ—ಜರ್ಮನಿಯವರು ಬಹಳ ರೋಷಾವೇಷದಿಂದ ಕಾದಿದರು. ಆದರೆ ಅವರ ಗೋಲಿಯ ಗುರಿಯು ತಪ್ಪುತಪ್ಪಾಗಿತ್ತು. ನಮ್ಮದು ಚೆನ್ನಾಗಿತ್ತು. ನಮ್ಮ ಏಟಿಗೆ ಶತ್ರುಗಳು ಸತ್ತು ರಾಶಿಯಾಗಿ ಬಿದ್ದುಕೊಂಡರು. ಅವರು ನಮ್ಮ ಮೇಲೆ ಸಾವಿರಗಟ್ಟಲೆ ನುಗ್ಗಿ ಬಂದರು. ಆ ಯುದ್ಧದಲ್ಲಿ ಕೊಲೆಯು ಅಗಾಧ

ವೃತ್ತಾಂತ ಪತ್ರಿಕೆ, ಸಪ್ಲಿಮೆಂಟ್, ತಾರೀಖು ೩ನೇ ಸೆಪ್ಟಂಬರ್, ೧೯೧೪.



ಯುದ್ಧದ ನಕ್ಷೆ

ಚಂದಾದಾರರಿಗೆ ಮಾತ್ರ ಉಚಿತ;
ಇತರರಿಗೆ ಕ್ರಯ ೬ ಕಾಸು.

ಪ್ರಯೋಜನವೂ ಆಗಿತ್ತು. ಗುಂಡುಗಳ ಹಾರಾಟದಿಂದ ರಾತ್ರಿಯು ಬಹು ಕಠಿಣ ವಾಗಿತ್ತು. ನಮ್ಮವರು ತಾಳ್ಮೆಯಿಂದಲೂ ಖಚಿತವಾಗಿಯೂ ಗುರಿಯಿಟ್ಟು ಗುಂಡು ಹೊಡೆಯುತ್ತಿದ್ದರು ನಮ್ಮ ದಳಪತಿಯು (ಕ್ಯಾಪ್ಟನ್) ಬಹು ಚಟು ವಟಿಕೆಯಾಗಿದ್ದನು. ಗುಂಡಿನೇಟು ತಗಲಿ ಆತನ ಕಾಲು ಗಾಯವಾಗಿತ್ತು. ಆದರೂ ಆತನು ಒಂದೇ ಕಾಲನ್ನು ಮಡಿಚಿಕೊಂಡು, "ಒಳ್ಳೇ ಹುಡುಗರಿರಾ, ಗುರಿಯನ್ನು ಸರಿಯಾಗಿ ಕಟ್ಟಿ ಹೊಡೆಯಿರಿ" ಎಂಬದಾಗಿ ಗಟ್ಟಿಯಾಗಿಯೂ ಹರ್ಷದಿಂದಲೂ ಕೂಗಿ ಹೇಳುತ್ತಿದ್ದನು. ಜರ್ಮನಿಯವರು ಮನುಷ್ಯರೆಂದು ಹೇಳುವದಿಲ್ಲ; ಅವರನ್ನು ಮಬ್ಬುರೇಗಿದ ಹಿಂಡುಜನರೆನ್ನಬೇಕು ಎಂಬದಾಗಿ ಆ ಸಿಪಾಯಿಯು ಬರೆಯುತ್ತಾನೆ.

ಈ ಯುದ್ಧವಾದ ಒಡನೆಯೇ ಬ್ರಿಟಿಷರ ಬಲಗಡೆ ಇದ್ದ ಫ್ರೆಂಚರಿಗೂ ಜರ್ಮನಿಯವರಿಗೂ ಕಾದಾಟವು ಶುರುವಾಯಿತು. ಈ ಕದನದಲ್ಲಿ ಫ್ರೆಂಚರು ಜರ್ಮನರನ್ನು ಸೋಲಿಸಿ ಹಿಮ್ಮೆಟ್ಟಿಸಿದರೆಂದು ಹೇಳುವರು.

ಲಾರ್ಡ್ ಕಿಚ್ನರ್‌ರವರು ಬ್ರಿಟಿಷ್ ಸೈನ್ಯದಲ್ಲಿ ಒಂದು ಫಿರಂಗಿ ಹೋದರೆ ಅದಕ್ಕೆ ಪ್ರತಿಯಾಗಿ ಹೊಸ ಫಿರಂಗಿಯನ್ನು ಆ ಕೂಡಲೆ ಕಳುಹಿಸಲಾಗಿದೆ ಎಂದೂ, ಮೃತಪಟ್ಟ ಅಥವಾ ಗಾಯಪಟ್ಟವನ ಸ್ಥಾನಕ್ಕೆ ಹೊಸ ಸೈನಿಕನನ್ನು ಕಳುಹಿಸಿಯೂ ಹೇಳಿದಾರೆ. ಇದರಿಂದ ಇಂಗ್ಲಿಷ್ ಸೈನ್ಯವು ಫ್ರಾನ್ಸಿನಲ್ಲಿ ಮೊದಲು ಇಳಿದಾಗ ಎಷ್ಟು ಬಲವಾಗಿತ್ತೋ ಈಗಲೂ ಅಷ್ಟೇ ಬಲವಾಗಿರುತ್ತದೆ. ಸೈನ್ಯಾಧಿಪತಿಗೆ ಪ್ರತಿಯಾಗಿ ಹೊಸ ಸೈನ್ಯವನ್ನು ಯುದ್ಧಭೂಮಿಗೆ ಕಳುಹಿಸುತ್ತಾ ಇದ್ದಾರೆ. ಬ್ರಿಟಿಷ್ ಸೈನಿಕರು ಬಹಳ ಹುರುಪುಳ್ಳವರಾಗಿದಾರೆ; ಇನ್ನೊಂದು ಕದನದಲ್ಲಿ ನಿಲ್ಲುವದಕ್ಕೆ ಸಿದ್ಧರಾಗಿರುವರು.

ಈ ಯುದ್ಧದ ಫಲಿತಾಂಶವೇನಾಯಿತೆಂದರೆ, ಜರ್ಮನಿಯವರಿಗೆ ಸ್ವಲ್ಪ ಮುಂದಕ್ಕೆ ನುಗ್ಗಿ ಬರಲು ಅವಕಾಶ ದೊರಕಿತು. ಈಗ ಅವರು ಫ್ರೆಂಚರ ಸೀಮೆಯೊಳಕ್ಕೆ ಬಂದಿದಾರೆ. ಇಷ್ಟರಲ್ಲೇ ಕಠಿಣವಾದ ಯುದ್ಧವಾದೀತೆಂದು ತೋರುತ್ತದೆ. ಎರಡು ಕಡೆಯ ಸೈನ್ಯಗಳೂ ದಣುವೇರಿ ಕಂಗೆಟ್ಟುಹೋಗಿದ್ದರಿಂದ ಸ್ವಲ್ಪ ವಿರಾಮ ಬೇಕಾಗಿರುತ್ತದೆ.

ಯುದ್ಧಭೂಮಿಯ ಉತ್ತರ ಭಾಗವಾದ ಲೋರೇನ್ ಅಧಿಪತ್ಯದಲ್ಲಿ ಫ್ರೆಂಚರಿಗೂ ಜರ್ಮನಿಯವರಿಗೂ ಐದು ದಿನ ಯುದ್ಧವಾಯಿತು. ಒಂದು ದಿನ ಸಂಜೆಯ ಹೊತ್ತು ಫ್ರೆಂಚರು ನಾಲ್ವತ್ತರ ಜರ್ಮನಿಯವರ ಮೇಲೆ ನುಗ್ಗಿ ಹಾರಿ ಅವರಲ್ಲಿ ತುಂಬಾ ನಷ್ಟಪಡಿಸಿದರೆಂದು ಕೇಳಿದೆ. ಒಂದು ಸಣ್ಣ ಸ್ಥಳದಲ್ಲಿ 1,500 ಜರ್ಮನ ಸೈನ್ಯದ ಹೆಣಗಳು ಬಿದ್ದಿದ್ದವು. ಒಂದು ಕಂದಕದಲ್ಲಿ ಫ್ರೆಂಚರ ಆಕಸ್ಮಾತ್ತಾದ ಗುಂಡಿನ ಏಟುಗಳ ದೆಸೆಯಿಂದ ಜರ್ಮನಿಯ ಒಂದು ಭಾಗ ಸೈನ್ಯವೆಲ್ಲ ನಾಶವಾಗಿ ಹೋಯಿತು. ಲೆಕ್ಕಮಾಡಿದ್ದರಲ್ಲಿ ಜರ್ಮನಿಯ ಸೈನಿಕರ ಹೆಣಗಳು 7,000 ಸಿಕ್ಕಿ ಸತ್ತುಬಿದ್ದಿದ್ದವು. ಈ ಕದನದಲ್ಲಿ ಜರ್ಮನರನ್ನು ಹಿಂದಕ್ಕೆ ಓಡಿಸಿರಬೇಕೆಂದು ಕಾಣುತ್ತದೆ. ಈ ಯುದ್ಧದ ವಿವರಗಳು ಇನ್ನೂ ಹೊರಬಿದ್ದಿಲ್ಲ.

ಈ ಯುದ್ಧದಲ್ಲಿ ಬೆಲ್ಜಿಯಂ ಸೈನಿಕರಲ್ಲಿ 10,000 ಸಿಪಾಯಿಗಳು ಮಾತ್ರ ಸತ್ತಿದ್ದಾರೆ, ಉಳಿದವರು ಆಂಟ್ವರ್ಪ್ ಪಟ್ಟಣಕ್ಕೆ ಹೋಗಿ ಸೇರಿಕೊಂಡ ಸುದ್ದಿ ತಿಳಿದು ಬಂದಿದೆ. ಈಗ ಇವರ ಕಾದಾಟಗಳನ್ನೂ ಕಷ್ಟನಷ್ಟಗಳನ್ನೂ ಹೇಳುತ್ತೇವೆ.

ಲೀಜ್ ಪಟ್ಟಣವು ಬಹುದಿನ ಇದುವರೆಗೆ ಜರ್ಮನಿಯವರ ವಶವಾಗಿರಲಿಲ್ಲ. ಯಾಕಂದರೆ ಆ ಪಟ್ಟಣದ ಕೋಟೆಗಳನ್ನು ಕಾಪಾಡುತ್ತಿದ್ದ ಬೆಲ್ಜಿಯನ್ ಸೈನಿಕರ ದಳಪತಿಯಾದ ಜನರಲ್ ಲೀಮನ್ ಎಂಬಾತನನ್ನು ಶತ್ರುಗಳು ಕೈಸೆರೆ ಹಿಡಿದರೆಂತೆ ತಿಳಿದು ಬಂದಿದೆ. ಆತನನ್ನು ಹಿಡಿದುಕೊಂಡು ಹೋಗಿ ಜರ್ಮನ ಸೇನಾಪತಿಯ ಎದುರಿಗೆ ನಿಲ್ಲಿಸಿದಾಗ ಆತನು ಅವನ ಪರಾಕ್ರಮಕ್ಕೆ ಮೆಚ್ಚಿ ಅವನ ಕತ್ತಿಯನ್ನು ಅವನಿಗೆ ವಾಪಸು ಕೊಡಿಸಿದನು. ಈ ಬೆಲ್ಜಿಯನ್ ದಳಪತಿಯು ಈಗ ಕೈಸೆರೆಯಾಗಿರುತ್ತಾನೆ.

ನಾಮೂರ್ ಪಟ್ಟಣವನ್ನು ಜರ್ಮನಿಯವರು ಸ್ವಾಧೀನಪಡಿಸಿಕೊಂಡರೆಂದು ಕೇಳಬರುತ್ತಿದೆ. ಆದರೆ ಕೆಲವು ತಂತಿವರ್ತಮಾನಗಳು ಕೆಲವು ಕೋಟೆಗಳು ಇನ್ನೂ ಜರ್ಮನಿಯವರ ವಶವಾಗಲಿಲ್ಲವೆಂದು ಹೇಳುವವು. ನಾಮೂರ್ ಸಮೀಪದಲ್ಲಿ ಬೆಲ್ಜಿಯನ್ ಸೈನ್ಯವು ಫ್ರೆಂಚ್ ಮತ್ತು ಇಂಗ್ಲಿಷ್ ಸೈನ್ಯಗಳ ಕೂಡ ಸೇರಿಕೊಂಡಿದೆ.

ಆಂಟ್ವರ್ಪಿನಲ್ಲಿರುವ ಬೆಲ್ಜಿಯಂ ಸೈನಿಕರು ಜರ್ಮನಿಯವರ ಮೇಲೆ ನುಗ್ಗಿ ಹೋಗಿ ಅವರನ್ನು ಹಿಂದಕ್ಕೆ ಸ್ವಲ್ಪ ದೂರ ಓಡಿಸಿರುತ್ತಾರೆ. ಜರ್ಮನಿಯವರು ಬೆಲ್ಜಿಯನ್ನರ ಮೇಲೆ ಬಹು ಕ್ರೂರತನವನ್ನು ತೋರಿಸಿ ತಮ್ಮ ಹೊಟ್ಟೆಕಿಚ್ಚನ್ನು ತೀರಿಸಿಕೊಂಡರು. ಈ ವಿಚಾರವಾಗಿ ಬಂದಿರುವ ತಂತಿವರ್ತಮಾನವು ಸ್ಪಷ್ಟವಾಗಿಲ್ಲ. ಲೂವೇನ್‌ನಲ್ಲಿರುವ ಕೆಲವು ಪ್ರಜೆಗಳು ಜರ್ಮನ ಸೈನಿಕರ ಮೇಲೆ ಗುಂಡು ಹೊಡೆದರೆಂದು ಜರ್ಮನಿಯವರು ಹೇಳುತ್ತಾರೆ; ಬೆಲ್ಜಿಯನ್ನರೋ ಜರ್ಮನಿಯವರು ಹಿಮ್ಮೆಟ್ಟಿ ಹೋಗುತ್ತಿರುವಲ್ಲಿ ಲೂವೇನ್‌ನಲ್ಲಿದ್ದ ಜರ್ಮನ ಸೈನಿಕರೇ ತಮ್ಮ ಕಡೆಯವರು ಬರುತ್ತಿದಾರೆಂಬುವುದನ್ನು ಕಾಣದೆ ಅವರ ಮೇಲೆ ಗುಂಡು ಹೊಡೆದರೆಂದು ಹೇಳುವರು. ಅಲ್ಲಿ ಜರ್ಮನಿಯವರು ನಡಿಸಿದ ಕೃತ್ಯಗಳನ್ನು ಬೆಲ್ಜಿಯಂ ಸರಕಾರದ ಫಾರಿನ್ ಸೆಕ್ರೆಟರಿಯವರು ವಿವರಿಸಿ ಹೇಳುವುದೇನೆಂದರೆ—

ನಷ್ಟ ಎದುರುವಾದಿಸಿದಾಗ್ಯೂ ಲಕ್ಷ್ಯಮಾಡದೆ ಜರ್ಮನಿಯವರು ಗಂಡಸರನ್ನು ಕೈಸೆರೆ ಹಿಡಿದುಕೊಂಡರು; ಹೆಂಗಸರನ್ನು ಹಿಡಿದು ರೈಲ್ ಬಂಡಿಗಳಲ್ಲಿ ಕೂಡಿಸಿ ಎಲ್ಲಿಗೋ ಕಳುಹಿಸಿಬಿಟ್ಟರು. ಬಳಿಕ ಆ ಪಟ್ಟಣವನ್ನೆಲ್ಲಾ ಸಂಪೂರ್ಣವಾಗಿ ಸುಟ್ಟುಹಾಕಿದರು. ಬಹಳ ನೇತ್ರಾನಂದಕರವಾದ ದೇವಾಲಯವೂ, ಸರ್ವ ವಿದ್ಯಾನಿಲಯ (ಯುನಿವರ್ಸಿಟಿ) ವೂ, ದಿವ್ಯವಾದ ಸರಸ್ವತಿ ಭಂಡಾರವೂ, ಇತರ ಕಟ್ಟಡಗಳೂ ನಾಶವಾಗಲ್ಪಟ್ಟವು. ಪ್ರಮುಖರಾದ ನಗರವಾಸಿಗಳನ್ನು ಹಿಡಿದು ಗುಂಡಿನಿಂದ ಹೊಡೆದು ಕೊಂದುಹಾಕಿದರು. ಈ ಪ್ರಕಾರ ಪಂಡಿತ ಶಿರೋಮಣಿಗಳಿಂದ ಕೂಡಿದ 45,000 ಪ್ರಜೆ ಇದ್ದ ಆ ಬೆಲ್ಜಿಯಂ ನಗರವು ಈಗ ಬೂದಿಯ ರಾಶಿಯಾಯಿತು.

ದಿಕ್ಕಿಲ್ಲದೆಯೂ ಹೊಟ್ಟೆಗಿಲ್ಲದೆಯೂ ಕಷ್ಟಪಡುವ ಬೆಲ್ಜಿಯನ್ ಪ್ರಜೆಗಳು ಗುಂಪು ಗುಂಪಾಗಿ ಪ್ಯಾರಿಸ್ (ಫ್ರಾನ್ಸಿನ ರಾಜಧಾನಿ) ಪಟ್ಟಣಕ್ಕೆ ಬಂದಿಳಿಯುತ್ತಿದಾರೆ. ಹೆಂಗಸರು ಗಾಬರಿಬಿದ್ದು ಕಂಗೆಟ್ಟುಹೋಗಿ ಸಂಕಟದಲ್ಲಿ ಮುಳುಗಿ ಕೇಳುತ್ತಾ, ಜರ್ಮನಿಯವರ ದಾಂಧಳೆಯಲ್ಲಿ ಸಿಕ್ಕದೆ ತಪ್ಪಿಸಿಕೊಂಡು ಬರುವಾಗ್ಗೆ ಮಕ್ಕಳನ್ನು ಕಳೆದುಕೊಂಡವೇ ಮೊದಲಾದ ದುಃಖಕರವಾದ ಕಥೆಗಳನ್ನು ಹೇಳುತ್ತಾ ಇರುವರು. ಇವರಲ್ಲಿ ಹಲವರು ತಮ್ಮ ಸ್ಥಳದಲ್ಲಿ ತಕ್ಕಮಟ್ಟಿಗೆ ಶ್ರೀಮಂತರಾಗಿದ್ದರು. ಈಗ ಅವರೆಲ್ಲಾ ತಿರುಪೆಗಾರರಂತೆ ಕಾಣುತ್ತಾರೆ. ಫ್ರೆಂಚರು ಪ್ಯಾರಿಸ್ ನಗರದಲ್ಲಿ ಇವರಿಗೋಸ್ಕರ ಒಂದು ವಿಶಾಲವಾದ ಕಟ್ಟಡವನ್ನು ಬಿಟ್ಟುಕೊಟ್ಟು, ಇಷ್ಟರಲ್ಲೇ ಅವರೆಲ್ಲಾ ಕೆಲಸಮಾಡಿ ಜೀವನ ಸಂಪಾದಿಸಿಕೊಳ್ಳುವುದಕ್ಕೆ ಅಲ್ಲಿಂದ ಅವರನ್ನು ಪಶ್ಚಿಮಕಡೆಗೆ ಕಳುಹಿಸುವರು.

ಫ್ರೆಂಚರು ಮುಂದರಿಸಿ ಬಾರದಂತೆ ತಡೆಯುವುದಕ್ಕೆ ಇದೂ ಜರ್ಮನಿಯವರು ಮಾಡುವ ಒಂದು ಉಪಾಯ. ಗ್ರಾಮಸ್ಥರನ್ನು ಗಾಬರಿಪಡಿಸಿ ಓಡಿಸಿಬಿಡುವುದು; ಅವರು ಹೋಗುವಾಗ್ಗೆ ರಸ್ತೆಗಳು ಕಟ್ಟಿಹೋಗುವವು. ಆ ರಸ್ತೆಗಳಲ್ಲಿ ಫ್ರೆಂಚ್ ಸೈನ್ಯಗಳು ಬರಲಾಗದಂತೆ ಅಡಚಣೆಯಾಗುವುದು. ಇದಲ್ಲದೆ ಜರ್ಮನಿಯವರು ಸ್ವಾಧೀನಪಡಿಸಿಕೊಳ್ಳುವ ಸ್ಥಳಗಳಲ್ಲಿ ಅವರು ಅಲ್ಲಿನ ಪ್ರಜೆಗಳನ್ನು ಪ್ರೀತಿಯಿಂದಲೂ ಸಹನೆಯಾಗಿಯೂ ಕಾಣುವರು.

ಜರ್ಮನಿಯವರು ಆಂಟ್ವರ್ಪಿನ ಸುತ್ತುಮುತ್ತಣ ಪ್ರದೇಶಗಳಲ್ಲಿ ದೂರ ಹಾರಿ ನುಗ್ಗಿ ಹೋಗಿಲ್ಲ. ಒಂದು ವಿಮಾನ ಯಂತ್ರದಿಂದ ಬಂದು ಸಿಡಿಮದ್ದಿನ ಗುಂಡು ಆ ಪಟ್ಟಣದೊಳಕ್ಕೆ ಎಸೆಯಲ್ಪಟ್ಟಿತು. ಇದು ಒಡೆದು ಎರಡು ಮನೆಗಳು ಹಾಳಾದವು; ಹನ್ನೆರಡು ಜನರು ಮೃತಪಟ್ಟರು. ಆದರೆ ಆ ವಿಮಾನ ಯಂತ್ರವು ಹಿಡಿಯಲ್ಪಟ್ಟಿತು.

ಈ ಯುದ್ಧದ ದೆಸೆಯಿಂದ ಬೆಲ್ಜಿಯನ್‌ರಿಗೆ ಅಪಾರವಾದ ಕಷ್ಟನಷ್ಟಗಳು ಸಂಭವಿಸಿರುತ್ತವೆ. ಆದರೆ ಅವರು ಬಹು ಪರಾಕ್ರಮದಿಂದ ಜರ್ಮನಿಯವರನ್ನು ಮುಂದರಿಯದಂತೆ ಎದುರುಬಿದ್ದು ಕಾದಾಡಿ ತಡೆದಿರುವರು. ಇದರಿಂದ ಅವರಿಗೆ ಬೆಂಬಲವಾಗಿ ನಿಂತಿರುವ ರಾಜ್ಯಗಳಿಗೆ ಅಂತ್ಯದಲ್ಲಿ ಜಯಪ್ರದವಾಗುವಂತೆ ಮಾಡಿದರು. ಬ್ರಿಟಿಷ್ ಹೌಸ್ ಆಫ್ ಕಾಮನ್ಸ್ ಎಂಬ ಪಾರ್ಲಿಮೆಂಟಿನಲ್ಲಿ ಪ್ರಜಾಪ್ರತಿನಿಧಿಗಳು ತೀರ್ಮಾನಮಾಡಿರುವುದೇನೆಂದರೆ—ಜರ್ಮನಿಯವರು ನಿಷ್ಕಾರಣವಾಗಿ ಬೆಲ್ಜಿಯಂ ರಾಜ್ಯದೊಳಕ್ಕೆ ನುಗ್ಗಿ ಬಂದಾಗ ಬೆಲ್ಜಿಯಂ ಸೈನಿಕರೂ ಪ್ರಜೆಗಳೂ ಬಹು ಪರಾಕ್ರಮದಿಂದ ಅವರನ್ನು ಎದುರಿಸಿ ಅವರಿಗೆ ಮುಂದೆ ಹೋಗದಂತೆ ತಡೆಯನ್ನು ಕಟ್ಟಿದ್ದು ಬಹಳ ಸ್ತೋತ್ರಾರ್ಹವಾಗಿದೆ. ಅವರ ಪರಾಕ್ರಮವನ್ನು ಇಂಗ್ಲಿಷ್ ಪಾರ್ಲಿಮೆಂಟಿನವರು ಕೊಂಡಾಡುವರು. ಅವರಿಗುಂಟಾದ ಕಷ್ಟನಷ್ಟಗಳನ್ನು ನೋಡಿ ತುಂಬಾ ಸಂತಾಪಪಡುತ್ತಿದಾರೆ. ಇನ್ನು ಮುಂದೆ ಬೆಲ್ಜಿಯಂ ರಾಜ್ಯಕ್ಕೆ ಸ್ವಾತಂತ್ರ್ಯವನ್ನು ಕಲ್ಪಿಸಿ ಕಾಪಾಡಿಕೊಂಡು ಬರುವ ಭಾಗದಲ್ಲಿ ಇಂಗ್ಲಿಷ್ ಪಾರ್ಲಿಮೆಂಟಿನವರು ನಿಶ್ಚಯಮಾಡಿಕೊಂಡಿದಾರೆ ಎಂಬೀ ರೀತಿ ತೀರ್ಮಾನಮಾಡಿ, ಈ ಅರ್ಥವನ್ನು ಜಾರ್ಜ್ ದೊರೆಯವರು ಬೆಲ್ಜಿಯಂ ರಾಜರಿಗೆ ತಿಳಿಸಬೇಕೆಂದು ಕೇಳಿಕೊಂಡಿದಾರೆ.

ಈಚೆಗೆ ಬಂದಿರುವ ಒಂದು ವಿಶೇಷ ಸಮಾಚಾರವೇನೆಂದರೆ, ಜರ್ಮನಿಯವರು 150 ರೈಲ್‌ಗಾಡಿಗಳ ತುಂಬಾ ತಮ್ಮ ಸೈನ್ಯಗಳನ್ನು ಭರ್ತಿಮಾಡಿ ಬೆಲ್ಜಿಯಂ ರಾಜ್ಯದೊಳಗಿಂದ ಫ್ರಾನ್ಸಿನಿಂದ ಬಹಳ ದೂರಕ್ಕೆ ಸಾಗಕಳುಹಿಸಿಬಿಟ್ಟರೆಂದೂ, ಬ್ರಸೆಲ್ಸ್ ನಗರದಲ್ಲಿ ವಿಶೇಷ ಜರ್ಮನ ಸೈನ್ಯಗಳು ಇರುವದಿಲ್ಲವೆಂದೂ, ಜರ್ಮನರು ತಮ್ಮ ಸೈನ್ಯವನ್ನು ಆಂಟ್ವರ್ಪಿನಿಂದ ವಾಪಸು ಕರಸಿಕೊಳ್ಳುತ್ತಿದಾರೆಂದೂ ತಿಳಿದು ಬರುತ್ತದೆ. ಬಹುಶಃ ರಷ್ಯಾದವರು ಪ್ರಷ್ಯಾದ ಪೂರ್ವಭಾಗದೊಳಕ್ಕೆ ಬೇಗಬೇಗನೆ ತಮ್ಮ ಸೈನ್ಯಗಳನ್ನು ನುಗ್ಗಿಸಿಕೊಂಡು ಬರುತ್ತಿರಬೇಕೆಂದೂ, ಇದಕ್ಕೋಸ್ಕರ ಜರ್ಮನಿಯವರು ತಮ್ಮ ಸೈನ್ಯಗಳನ್ನು ಫ್ರಾನ್ಸಿನ ಕಡೆಯಿಂದ ಹಿಂದಕ್ಕೆ ತರಿಸಿಕೊಳ್ಳುತ್ತಿರಬೇಕೆಂದೂ ತೋರುವುದು.

ಬ್ರಿಟಿಷರು ತಮ್ಮ ಜಹಜಿನಲ್ಲಿ ಸೈನಿಕರನ್ನು ಸಾಗಿಸಿಕೊಂಡು ಹೋಗಿ ಓಸ್ಟೆಂಡ್ ಎಂಬ ಬೆಲ್ಜಿಯಮಿನ ತೀರಪಟ್ಟಣದಲ್ಲಿ ಇಳಿಸಿ ಆ ಪಟ್ಟಣವನ್ನು ಉಸ್ತುವಾರಿ ಮಾಡಿಸುತ್ತಿದಾರೆ.

ಸಮುದ್ರದ ಮೇಲೆ ಯುದ್ಧ.

ಕಳೆದ ಶುಕ್ರವಾರ ಬ್ರಿಟಿಷ್ ಮತ್ತು ಜರ್ಮನಿ ಕ್ರೂಸರ್‌ಗಳೆಂಬ ಸಣ್ಣ ಯುದ್ಧದ ಹಡಗುಗಳು ಕಲೆತು ಒಂದು ಸಣ್ಣ ಯುದ್ಧವಾಗಿದೆ. ಜರ್ಮನಿಯ ಅನೇಕ ಜಹಜುಗಳು ಹೆಲಿಗೋಲೆಂಡ್ ದ್ವೀಪದ ಸಮೀಪದಲ್ಲೂ ಜರ್ಮನಿಯ ಸಮುದ್ರ ತೀರದಲ್ಲೂ ಇದ್ದವು. ಆ ದಿನ ಬೆಳಕು ಹರಿಯುವಾಗ್ಗೆ ಬ್ರಿಟಿಷರು ಕೆಲವು ಜಹಜುಗಳನ್ನು ಜರ್ಮನಿಯವರ ಸಮುದ್ರ ತೀರಕ್ಕೆ ಗುಟ್ಟಾಗಿ ಸಾಗಿಸಿಕೊಂಡು ಹೋದರು; ಆ ತೀರದಲ್ಲಿ ಜರ್ಮನಿಯವರು ನೀರಿನೊಳಗೆ ಸಿಡಿಮದ್ದಿನ ಗುಂಡುಗಳನ್ನು ಹಾಕಿದ್ದರೂ ಲಕ್ಷ್ಯಮಾಡಲಿಲ್ಲ. ಇಂಗ್ಲಿಷ್ ಹಡಗುಗಳು ಹೀಗೆ ಬರುತ್ತಿರುವುದನ್ನು ಅಂತರಿಕ್ಷದಲ್ಲಿದ್ದ ಒಂದು ವಿಮಾನ ಯಂತ್ರವು ಕಂಡು ಜರ್ಮನಿಯವರಿಗೆ ಸೂಚನೆ ಕೊಟ್ಟಿತು. ಜರ್ಮನಿಯ ಕೆಲವು ಹಡಗುಗಳು ತೀರದಿಂದ ಶಸ್ತ್ರಗಳನ್ನು ಎಸೆಯಲು ಹೊರಟವು. ಇಂಗ್ಲಿಷ್ ಹಡಗುಗಳು ಅವನ್ನು ನಡುಸಮುದ್ರಕ್ಕೆ ಬರಮಾಡಿಕೊಂಡವು. ಯುದ್ಧ ಪ್ರಾರಂಭವಾಗಿ ಸುಮಾರು ಎಂಟು ಗಂಟೆ ತನಕ ನಡೆಯಿತು. ಪ್ರಾರಂಭದಲ್ಲೇ ಇಂಗ್ಲಿಷ್ ಹಡಗಿನಿಂದ ಹೊಡೆಯಲ್ಪಟ್ಟ ಫಿರಂಗಿ ಗುಂಡುಗಳು ಜರ್ಮನಿಯ ಒಂದು ಕ್ರೂಸರ್ ಎಂಬ ಹಡಗನ್ನು ಮುಳುಗಿಸಿಬಿಟ್ಟವು. ಯುದ್ಧದ ಫಲಿತಾಂಶವೇನಾಯಿತೆಂದರೆ, ಜರ್ಮನಿಯವರ ಮೂರು ಕ್ರೂಸರುಗಳೂ ಎರಡು ಡಿಸ್ಟ್ರಾಯರ್ ಎಂಬ ಹಡಗುಗಳೂ ಮುಳುಗಿಸಲ್ಪಟ್ಟವು; ಮತ್ತು ಅವರ ಕೆಲವು ಡಿಸ್ಟ್ರಾಯರುಗಳನ್ನು ಮುರಿದು ಕೆಡಿಸಿಬಿಟ್ಟರು. ಜರ್ಮನಿಯವರಲ್ಲಿ 1,200 ಜನರು ನಷ್ಟವಾದರು. ಬ್ರಿಟಿಷರು 9 ಮಂದಿ ಜರ್ಮನಿ ಹುದ್ದೇದಾರರನ್ನೂ, 81 ಮಂದಿ ಇತರರನ್ನೂ ಒಂದು ಜಹಜಿನಲ್ಲಿ ಇಂಗ್ಲೆಂಡಿಗೆ ಹಿಡಿದು ತಂದಿದಾರೆ; ಇನ್ನೊಂದು ಕಡೆ ಇಂಗ್ಲಿಷರು 200 ಜರ್ಮನರನ್ನು ಹಿಡಿದುಕೊಂಡು ಬಂದಿರುವರು. ಕೈಸೆರೆ ಸಿಕ್ಕಿರುವ ಹುದ್ದೇದಾರರಲ್ಲಿ ಜರ್ಮನಿಯ ನಾವೆಗಳ ಅಧಿಪತಿಯಾದ (ಅಡ್ಮಿರಲ್) ವೊನ್ ತಿರ್ಪಿಟ್ಸ್ ಎಂಬಾತನೂ ಒಬ್ಬನು; ಈತನು ಜರ್ಮನಿಯ ಹಡಗಿನ ಸೈನ್ಯದ ಸೆಕ್ರೆಟರಿಯ ಮಗನೆಂದು ತಿಳಿಯುತ್ತದೆ. ಇಂಗ್ಲಿಷರ ಕಡೆ 29 ಮಂದಿ ಮೃತಪಟ್ಟರು, ಇವರಲ್ಲಿ ಇಬ್ಬರು ಲೆಪ್ಟಿನೆಂಟ್ ಎಂಬ ಹುದ್ದೇದಾರರು; 38 ಮಂದಿಗೆ ಗಾಯಗಳಾಗಿವೆ. ಇಂಗ್ಲಿಷರ ಎರಡು ಹಡಗುಗಳು ಸ್ವಲ್ಪ ಮುರಿದು ಕೆಟ್ಟುಹೋಗಿರುತ್ತವೆ.

ಜರ್ಮನಿಯವರು ಬಾಲ್ಟಿಕ್ ಆಖಾತದಲ್ಲಿ ಇನ್ನೊಂದು ಕ್ರೂಸರ್ ಎಂಬ ಹಡಗನ್ನು ಕಳಕೊಂಡರು. ಮಗ್ಡೆಬರ್ಗ್ ಎಂಬ ಜಹಜು ಆಕಸ್ಮಾತ್ತಾಗಿ ತಳವನ್ನು ಹಿಡಿದು ನಿಂತುಬಿಟ್ಟಿತು. ರಷ್ಯಾದೇಶದ ಎರಡು ಕ್ರೂಸರುಗಳು ಅದರ ಮೇಲೆ ನುಗ್ಗಿ ಫಿರಂಗಿಗಳನ್ನು ಹೊಡೆದದ್ದರಿಂದ ಮಗ್ಡೆಬರ್ಗ್ ಒಡೆದುಹೋಯಿತು. ಅದರಲ್ಲಿದ್ದ 17 ಮಂದಿ ಹತರಾದರೆಂದೂ, 23 ಜನಕ್ಕೆ ಗಾಯವಾಯಿತೆಂದೂ, 85 ಮಂದಿ ಸಿಕ್ಕಿಬಿದ್ದರೆಂದೂ ವರ್ತಮಾನವಿದೆ.

ಇಂಗ್ಲಿಷರ ಹೈಫ್ಲೈಯರ್ ಎಂಬ ಜಹಜು ಜರ್ಮನಿಯ ಕೈಸರ್ ವಿಲ್ಹೆಲ್ಮ್ ಡೆರ್‌ಗ್ರೋಸ್ಸೆ ಎಂಬ ಭಾರೀ ಜಹಜನ್ನು ಸಂಧಿಸಿ ಅದರ ಕೂಡ ಹೋರಾಟ ಕಡೆಗೆ ಮುಳುಗಿಸಿಬಿಟ್ಟಿತು. ಈ ಜರ್ಮನಿಯ ಜಹಜು ದಕ್ಷಿಣ ಆಫ್ರಿಕಕ್ಕೂ ಹಿಂದೂಸಾಗರದಲ್ಲೂ ಹೋಗುವ ಇಂಗ್ಲಿಷ್ ಹಡಗುಗಳನ್ನು ತಡೆದು ತೊಂದರೆ ಪಡಿಸುತ್ತಿತ್ತು. ಈಗ ಈ ಪ್ರದೇಶಗಳಲ್ಲಿ ಅದರ ಹಾವಳಿಯು ತಪ್ಪಿಹೋಯಿತು. ಹೈಫ್ಲೈಯರ್‌ನಲ್ಲಿದ್ದವರಲ್ಲಿ ಒಬ್ಬನು ಮೃತಪಟ್ಟನು; 5 ಮಂದಿಗೆ ಗಾಯಗಳಾದವು.

ಉತ್ತರ ಸಮುದ್ರದಲ್ಲಿ ಜರ್ಮನಿಯವರು ಗುಟ್ಟಾಗಿ ಹಾಕಿದ್ದ ಸಿಡಿಮದ್ದಿನ ಗುಂಡುಗಳು ಬಡಿದು ಡೆನ್ಮಾರ್ಕ್, ನಾರ್ವೆ ರಾಜ್ಯಗಳ ಕೆಲವು ಹಡಗುಗಳು ಮುಳುಗಿ ನಷ್ಟವಾದವು. ಬ್ರಿಟಿಷರು ಈಗ ಈ ಸಿಡಿಮದ್ದುಗಳನ್ನು ಹುಡುಕಿ ನಾಶಮಾಡುತ್ತಿದಾರೆ; ಆದರೆ ಹೀಗೆ ಹುಡುಕುತ್ತಾ ಬರುವಾಗ್ಗೆ ಬ್ರಿಟಿಷರ ಎರಡು ಹಡಗುಗಳು ಮುಳುಗಿಕೊಂಡವು. ಅವುಗಳಲ್ಲಿದ್ದ ಐದು ಮಂದಿ ಸಿಕ್ಕಿ ಇಲ್ಲ; ಎಂಟು ಜನರಿಗೆ ಗಾಯವಾಗಿದೆ.

ಪ್ರಷ್ಯಾ ಪೂರ್ವ ಭಾಗದಲ್ಲಿ ರಷ್ಯಾದವರು.

ರಷ್ಯಾದವರು ಪ್ರಷ್ಯಾದೇಶದ ಪೂರ್ವಭಾಗದೊಳಕ್ಕೆ ನುಗ್ಗಿ ಬಂದು ಎದುರಿಗೆ ಸಿಕ್ಕಿದ ಸ್ಥಳಗಳನ್ನೆಲ್ಲಾ ಆಕ್ರಮಿಸಿಕೊಳ್ಳುತ್ತಾ ಮುಂದರಿಯುತ್ತಿದಾರೆ. ಇದುವರೆಗೆ ಅವರು ಸುಮಾರು ಹನ್ನೆರಡು ಸ್ಥಳಗಳನ್ನು ಸ್ವಾಧೀನಪಡಿಸಿಕೊಂಡರು. ತಿಲ್ಸಿತ್, ಅಲ್ಲೆನ್‌ಸ್ಟೈನ್ ಎಂಬ ಭಾರೀ ನಗರಗಳೂ ರಷ್ಯಾದವರ ಪಾಲಾದವು. ಅವರ ಗುಂಡಿನೇಟನ್ನು ತಡೆಯಲಾರದೆ ಜರ್ಮನಿಯವರು ಹಿಮ್ಮೆಟ್ಟಿಬಂದು ಕೋನಿಗ್ಸ್‌ಬರ್ಗ್ ಎಂಬ ಕೋಟೆಯೊಳಗೆ ಸೇರಿಕೊಂಡಿದಾರೆ. ರಷ್ಯಾದವರು ಸ್ವಲ್ಪಮಾತ್ರವೂ ಹೆದರದೆ ಮುಂದರಿಸಿ ನುಗ್ಗಿ ಹೋಗುತ್ತಿರುವುದರಿಂದ ಜರ್ಮನಿಯವರು ಅವರನ್ನು ತಡೆಯುವುದು ಕಷ್ಟವಾಗಿ ಹಿಮ್ಮೆಟ್ಟಿಬರುತ್ತಿದಾರೆ. ರಷ್ಯಾದವರು ಅನೇಕ ಜನರನ್ನು ಕೈಸೆರೆ ಹಿಡಿದುಕೊಂಡರು; 100 ಫಿರಂಗಿಗಳು ಅವರ ವಶವಾದವು.

ಮುಂದರಿಸಿ ನುಗ್ಗಿಹೋಗುವ ರಷ್ಯಾ ಸೈನಿಕರನ್ನು ಅವರ ಹುದ್ದೇದಾರರು ತಡೆದು ನಿಲ್ಲಿಸುವುದು ಪ್ರಯಾಸವಾದ ಕಾರಣ ಅವರಲ್ಲಿ ಅನೇಕರು ಶತ್ರುಗಳಿಂದ ಕೊಲ್ಲಲ್ಪಟ್ಟರು; ಇಲ್ಲವೇ ಗಾಯಪಟ್ಟರು. ರಷ್ಯಾದವರ ಸವಾರ್ ಸೈನ್ಯವು ಜರಿಯುತ್ತಿದ್ದ ಒಂದು ರೈಲ್ವೆ ಮಾರ್ಗವಾಗಿ ನುಗ್ಗಿಹೋಗುವಾಗ್ಗೆ ಅವರು ಮಹಾ ರೋಷಾವೇಶದಿಂದ ಕೂಡಿದವರಾಗಿದ್ದದ್ದರಿಂದ ಅವರು ತಮ್ಮೆದುರಿಗೆ ಸಿಕ್ಕಿದ ಜರ್ಮನ ಸೈನಿಕರನ್ನು ಕತ್ತಿಯಿಂದ ಎರಡೆರಡು ತುಂಡುಗಳಾಗಿ ಕಡಿದು ಹಾಕಿಬಿಟ್ಟರು.

ಜರ್ಮನಿಯವರು ಒಂದು ಪಟ್ಟಣವನ್ನು ಬಿಟ್ಟು ಹಿಮ್ಮೆಟ್ಟಿ ಬರುವಾಗ್ಗೆ ಆ ಪಟ್ಟಣಕ್ಕೆ ಬೆಂಕಿಹಾಕಿ ಸುಟ್ಟುಬಿಟ್ಟರು. ಇದುವರೆಗೆ ರಷ್ಯಾದವರು ನುಗ್ಗಿ ಬರುತ್ತಿರುವುದಕ್ಕೆ ಅಡಚಣೆಯೇನೂ ಉಂಟಾಗಿರುವುದಿಲ್ಲ. ಆದರೂ ಇಷ್ಟರೊಳಗೆ ಅವರು ಕೆಲವು ಬಲವಾದ ಕೋಟೆಗಳಿಗೆ ಮುತ್ತಿಗೆಹಾಕಬೇಕಾದೀತು. ಇವುಗಳನ್ನು ಸ್ವಾಧೀನಪಡಿಸಿಕೊಳ್ಳುವುದರಲ್ಲಿ ಅವರಿಗೆ ಸ್ವಲ್ಪ ಕಷ್ಟವಾಗಿ, ಮುಂದರಿದು ಹೋಗಲು ಅಡಚಣೆಯಾಗುತ್ತದೆ. ಆದರೂ ಇದುವರೆಗೆ ಅವರು ನಡಿಸಿರುವ ಕಾರ್ಯಗಳು ಸ್ತೋತ್ರಾರ್ಹವಾಗಿರುವವು.

ಸೆರ್ವಿಯ ಮತ್ತು ಆಸ್ಟ್ರಿಯ.

ಸೆರ್ವಿಯದವರು ಆಸ್ಟ್ರಿಯದವರನ್ನು ಬಹು ಭಯಂಕರವಾಗಿ ಸೋಲಿಸಿಬಿಟ್ಟದ್ದರಿಂದ ಆಸ್ಟ್ರಿಯದವರು ಅವರ ಮೇಲೆ ಯುದ್ಧಕಾರ್ಯಗಳನ್ನು ನಿಲ್ಲಿಸಿಬಿಟ್ಟಿರುವಂತೆ ಕಾಣುತ್ತದೆ. ಸೆರ್ವಿಯದವರು ಶತ್ರುಸೈನ್ಯದಲ್ಲಿ 4,500 ಸಿಪಾಯಿಗಳನ್ನು ಕೈಸೆರೆ ಹಿಡಿದುಕೊಂಡರು; ಇದಲ್ಲದೆ ಅವರು 61 ಭಾರೀ ಫಿರಂಗಿಗಳನ್ನೂ, ಅನೇಕ ಬಂದೂಕುಗಳನ್ನೂ, ಅಪಾರವಾದ ಮದ್ದುಗುಂಡನ್ನೂ ಆಸ್ಟ್ರಿಯದವರಿಂದ ಕಿತ್ತುಕೊಂಡಿರುತ್ತಾರೆ. ಆ ಪ್ರದೇಶದಲ್ಲೆಲ್ಲಾ ಒಬ್ಬನಾದರೂ ಆಸ್ಟ್ರಿಯದವನು ಇಲ್ಲದಂತೆ ಓಡಿಸಿಬಿಟ್ಟರು. ಈಚೆಗೆ ಸೆರ್ವಿಯದವರು ಬೋಸ್ನಿಯಾ ಅಧಿಪತ್ಯಕ್ಕೆ ನುಗ್ಗಿಹೋಗಿ ಅಲ್ಲಿರುವ ಕೆಲವು ಪಟ್ಟಣಗಳನ್ನು ಸ್ವಾಧೀನಪಡಿಸಿಕೊಂಡಿದಾರೆ.

ಆಸ್ಟ್ರಿಯಾದವರ ಸಿಪಾಯಿಗಳು ಬಡಸಿಪಾಯಿಗಳಾದ್ದರಿಂದ ಅವರು ಸೋತುಹೋದಂತೆ ಕಾರಣ ಹೇಳುತ್ತಾರೆ. ಅವರ ಫಿರಂಗಿ ಸೈನ್ಯವೂ ಸವಾರರೂ ಬಹಳ ಚೆನ್ನಾಗಿದ್ದರು. ಆದರೆ ಕಾಲ್ಬಲದವರು ಯುದ್ಧಮಾಡುವುದರಲ್ಲಿ ಸಮರ್ಥರಾಗಿರಲಿಲ್ಲ.

ರಷ್ಯಾ ಮತ್ತು ಆಸ್ಟ್ರಿಯಾ.

ರಷ್ಯ, ಆಸ್ಟ್ರಿಯ ಸೈನ್ಯಗಳಿಗೆ ಸಂಧಿಯಾಯಿತು, ಆಸ್ಟ್ರಿಯದವರು ಸೋತು ಹಿಮ್ಮೆಟ್ಟಬೇಕಾಯಿತು. ರಷ್ಯಾದವರು ಕಾರ್ನೋಪಲ್ ಎಂಬ ಸ್ಥಳವನ್ನು ಆಕ್ರಮಿಸಿಕೊಂಡು ನುಗ್ಗಿಹೋಗಿ ಲೆಂಬರ್ಗಿಗೆ 20 ಮೈಲಿ ಹತ್ತರಕ್ಕೆ ಬಂದಿದಾರೆ. ಇವರು ನಡಿಸಿದ ಕದನಗಳ ವೃತ್ತಾಂತವು ಸರಿಯಾಗಿ ಪ್ರಕಟವಾಗಲಿಲ್ಲ. ಒಂದು ಕಡೆ ಅವರು ಆಸ್ಟ್ರಿಯದ ಒಂದು ರೆಜಿಮೆಂಟನ್ನು ನಾಶಮಾಡಿಬಿಟ್ಟರು. ಇನ್ನೊಂದು ಕಡೆ ಹಂಗೆರಿಯ ಒಂದು ಡಿವಿಜನ್ ಸೈನ್ಯವನ್ನು ಸೋಲಿಸಿ, 3,000 ಸೈನ್ಯವನ್ನು ನಷ್ಟಪಡಿಸಿದರು. ಲೆಂಬರ್ಗಿನ ಬಳಿ ರಷ್ಯಾದವರು 4,000 ಆಸ್ಟ್ರಿಯದವರನ್ನು ಕೈಸೆರೆಹಿಡಿದದ್ದಲ್ಲದೆ 13 ಫಿರಂಗಿಗಳನ್ನು ಕಿತ್ತುಕೊಂಡು, ಹಂಗೆರಿಯ ಒಂದು ರೆಜಿಮೆಂಟ್ ಸೈನ್ಯವನ್ನು ಸುತ್ತುಹಾಕಿಕೊಂಡು ಅವರನ್ನೆಲ್ಲಾ ಹಿಡಿದುಕೊಂಡಿರುತ್ತಾರೆ.

ಆಸ್ಟ್ರಿಯದವರು ರಷ್ಯಾ ದೇಶದೊಳಕ್ಕೆ ನುಗ್ಗಿ ಹೋಗಿ ಕೀಲ್ಸೆ ಎಂಬ ಶಹರವನ್ನು ಸ್ವಾಧೀನಪಡಿಸಿಕೊಂಡಿದ್ದ ಹಾಗೂ, ಈಚೆಗೆ ಅಲ್ಲಿಂದ ಹಿಮ್ಮೆಟ್ಟಿ ಬಂದು ಲೆಂಬರ್ಗಿನ ಬಳಿ ಇರುವ ಸೈನ್ಯಕ್ಕೆ ಸಹಾಯ ಮಾಡುತ್ತಿದಾರೆಂದೂ ಕಾಣುವುದು.

ಜಪಾನ್ ಮತ್ತು ಜರ್ಮನಿ.

ಜಪಾನ್‌ನವರು ಚೀನಾಯಲ್ಲಿರುವ ಕಿಯಾಚೌ ಎಂಬ ಜರ್ಮನಿ ತೀರಪಟ್ಟಣಕ್ಕೆ ಮುತ್ತಿಗೆ ಹಾಕಿಕೊಂಡು, ಅದರೊಳಕ್ಕೂ ಹೊರಕ್ಕೂ ಹಡಗುಗಳು ಹೋಗಿ ಬರದಂತೆ ಮಾಡಿಬಿಟ್ಟಿದಾರೆ.

ಜರ್ಮನಿ ಚಕ್ರವರ್ತಿಯವರು ಅಲ್ಲಿರುವ ಜರ್ಮನಿ ಪ್ರಜೆಗಳಿಗೆ ಅವರು ಜಪಾನ್‌ನವರಿಗೆ ಸಗ್ಗದೆ ಕಡೆಯ ತನಕ ಪಟ್ಟಣವನ್ನು ಕಾಪಾಡಿಕೊಳ್ಳಬೇಕೆಂದು ಅಪ್ಪಣೆಯನ್ನು ಕಳುಹಿಸಿದಾರೆ.

ಜಪಾನ್‌ನವರು ಬಹಳ ನಿದಾನವಾಗಿ ತಮ್ಮ ಕಾರ್ಯವನ್ನು ಮಾಡುತ್ತಿರುವರು. ಆ ಬಳಿ ವಿಶೇಷ ಕದನಗಳಾಗುವಂತೆ ಕಾಣುವುದಿಲ್ಲ.

ಆಫ್ರಿಕಾದಲ್ಲಿ.

ಪಶ್ಚಿಮ ಆಫ್ರಿಕಕ್ಕೆ ಸೇರಿದ ತೋಗೋಲೆಂಡಿನಲ್ಲಿ ಕೆಲವು ಕದನಗಳಾದವು. ಈಚೆಗೆ ಜರ್ಮನರ ಆ ಸ್ವಾಸ್ಥ್ಯವು ಬ್ರಿಟಿಷ್ ಮತ್ತು ಫ್ರೆಂಚ್ ಸೈನ್ಯಗಳಿಗೆ ಶರಣಾಗತವಾಯಿತು.

ಆಫ್ರಿಕದಲ್ಲಿ ಬೆಲ್ಜಿಯನ್‌ರಿಗೆ ಸೇರಿದ ಕಾಂಗೋ ಸ್ವಾಸ್ಥ್ಯದ ಮೇಲೆ ಜರ್ಮನಿಯವರು ನುಗ್ಗಿಹೋದರು. ಬ್ರಿಟಿಷರು ಅಲ್ಲಿ ಬೆಲ್ಜಿಯನ್‌ರಿಗೆ ಸಹಾಯ ಮಾಡುತ್ತಿದಾರೆ.

ದಕ್ಷಿಣ ಆಫ್ರಿಕದಲ್ಲಿ ಜರ್ಮನಿಯವರು ನಾಮಕ್ವಾಲೆಂಡ್ ಎಂಬ ಇಂಗ್ಲಿಷ್ ಸ್ವಾಸ್ಥ್ಯದೊಳಕ್ಕೆ ಪ್ರವೇಶಮಾಡಬೇಕೆಂದು ಪ್ರಯತ್ನಪಟ್ಟರು. ಆದರೆ ಅಲ್ಲಿ ನೆಲಸಿರುವ ಕೆಲವು ಬೋಅರ್ ಪ್ರಜೆಗಳು ಜರ್ಮನಿಯವರ ಮೇಲೆ ಗುಂಡು ಹೊಡೆದು ಕೆಲವರನ್ನು ಕೊಂದುಬಿಟ್ಟರು.

ಯುದ್ಧದ ಕೆಲವು ಪರಿಣಾಮಗಳು.

ಫ್ರೆಂಚರ ಗವರ್ನ್‌ಮೆಂಟಿನಲ್ಲಿ ಎಲ್ಲಾ ರಾಜಕೀಯ ಪಂಗಡಗಳ ಪ್ರತಿನಿಧಿಗಳೂ ಸೇರಿಲ್ಲವೆಂದು ಕಂಡುಬಂದದ್ದರಿಂದ ಇದುವರೆಗಿದ್ದ ಗವರ್ನ್‌ಮೆಂಟಿನ ಅಧಿಕಾರಿಗಳು ತಂತಮ್ಮ ಕೆಲಸಗಳಿಗೆ ರಾಜೀನಾಮೆ ಕೊಟ್ಟುಬಿಟ್ಟರು. ಈಗ ಎಲ್ಲಾ ಪಂಗಡಗಳವರೂ ಸೇರಿ ಹೊಸ ಗವರ್ನ್‌ಮೆಂಟನ್ನು ರೂಪಿಸಿಕೊಂಡು, ಜರ್ಮನಿಯವರನ್ನು ಅಣಗಿಸುವುದರಲ್ಲಿ ಎಲ್ಲರೂ ನಿಶ್ಚಯಮಾಡಿಕೊಂಡಿದಾರೆ. ಈ ಬದಲಾವಣೆಗಳು ಗಲಭೆಯಿಲ್ಲದೆ ಸರಾಗವಾಗಿ ನಡೆದವು. ಈಗ ಫ್ರಾನ್ಸ್ ರಾಷ್ಟ್ರವೆಲ್ಲಾ ಶತ್ರುವನ್ನು ಸೋಲಿಸಿ ಓಡಿಸಿಬಿಡುವುದಕ್ಕೆ ಏನು ನಷ್ಟವಾದರೂ ಆಗಲಿ ಎಂಬ ನಿಶ್ಚಯವನ್ನು ಮಾಡಿಕೊಂಡು ಸಿದ್ಧವಾಗಿರುತ್ತದೆ.

ಇಂಗ್ಲೆಂಡಿನಲ್ಲಿ ಲಾರ್ಡ್ ಕಿಚ್ನರ್ ಯವರು ಮೊದಲನೇ ಸೈನ್ಯಕ್ಕೆ 1,00,000 ಸಿಪಾಯಿಗಳನ್ನು ಸೇರಿಸಿಕೊಂಡದ್ದಾಯಿತು. ಎರಡನೇ ಲಕ್ಷ ಸೈನ್ಯವನ್ನು ಕೂಡಿಸುವುದಕ್ಕೆ ಬೇಗಬೇಗನೆ ಪ್ರಯತ್ನಗಳು ನಡೆಯುತ್ತಿವೆ. ಅನೇಕರು ಬಂದು ನಾಮುಂದು ತಾಮುಂದು ಎಂದು ಸೇರುತ್ತಿದಾರೆ. ದೊಡ್ಡಸ್ತಿಕೆಯ ಅನೇಕ ಜನರೂ ಸೈನ್ಯದಲ್ಲಿ ಭಾರಿ ಹುದ್ದೆಗಳು ದೊರಕದೆ ಹೋದರೂ ಚಿಂತೆಸದೆ ಸಾಧಾರಣ ಸಿಪಾಯಿಗಳಂತೆ ಸೇರಿಕೊಳ್ಳುತ್ತಿರುವರು. ಲಾರ್ಡ್ ರಾಬರ್ಟ್ಸ್‌ರವರು ಅವರುಗಳನ್ನು ಕೊಂಡಾಡಿ, ಕ್ರಿಕೆಟ್ ಮತ್ತು ಫುಟ್ ಬಾಲ್ ಎಂಬ ಆಟಗಳಲ್ಲಿ ಸೇರಿ ವಿನೋದಪಡುವುದಕ್ಕೆ ಇದು ಸಮಯವಲ್ಲವೆಂತಲೂ, ಈಗ ಎಲ್ಲರೂ ಸೇರಿ ತಮ್ಮ ಜನ್ಮಭೂಮಿಯನ್ನು ಸಂರಕ್ಷಣೆಮಾಡಿಕೊಳ್ಳುವುದಕ್ಕೆ ಕತ್ತಿಯನ್ನು ಹಿಡಿದು ಯುದ್ಧಕ್ಕೆ ಹೊರಡಬೇಕಾಗಿದೆ ಎಂತಲೂ ಹೇಳಿರುತ್ತಾರೆ.

ಜರ್ಮನಿಯೊಳಗೆ 16 ರಿಂದ 19 ವಯಸ್ಸಿನೊಳಗಿರುವ ಯುವಕರನ್ನೆಲ್ಲಾ ಸೈನ್ಯಕ್ಕೆ ಸೇರಿಸಿಕೊಂಡು ಸಿಪಾಯಿಗಳಾಗಿ ತರಪೇತುಮಾಡಬೇಕೆಂದು ಹುಕುಂ ಕೊಟ್ಟಿರುವಂತೆ ಹೇಳುವರು. ಇಂಥಾ ಸಣ್ಣ ವಯಸ್ಸಿನ ಹುಡುಗರನ್ನು ತರಪೇತು ಮಾಡಿ ಈ ಭಯಂಕರವಾದ ಯುದ್ಧಗಳಿಗೆ ಕಳುಹಿಸುವುದು ಮಹಾ ಕ್ರೂರ ಕೃತ್ಯವೆನ್ನುವುದಕ್ಕೆ ಸಂಶಯವಿಲ್ಲ. ಇದಲ್ಲದೆ ಜರ್ಮನಿಯೊಳಗೆ ಪೆಟ್ರೋಲ್ ಎಂಬ ಎಣ್ಣೆ ಸಿಕ್ಕುವುದು ದುರ್ಲಭವಾಗಿದೆಯಂತೆ. ಇದು ನಿಜವಾದ ಪಕ್ಷದಲ್ಲಿ ಜರ್ಮನಿ ಸೈನ್ಯಗಳು ಮುಂದರಿಸಿ ನುಗ್ಗಿಹೋಗದಂತೆ ತುಂಬಾ ಅಡಚಣೆಯಾಗುವುದು. ಜರ್ಮನಿಯವರ ರಾಜಧಾನಿಯಾದ ಬರ್ಲಿನ್ ಪಟ್ಟಣದಲ್ಲಿ ಅನೇಕ ಪ್ರಜೆಗಳು ಕೆಲಸಕಾರ್ಯಗಳು ತಪ್ಪಿಹೋಗಿ ಅಲೆಯುತ್ತಿದಾರಂತೆ. ಇವರುಗಳೆಲ್ಲಾ ಸರಕಾರದವರ ಈಗಿನ ವರ್ತನೆಯ ವಿಷಯದಲ್ಲಿ ವಿರೋಧಾಭಿಪ್ರಾಯಗಳನ್ನು ಪಡೆದಿರುವರು. ಆದರೆ ಜರ್ಮನಿಯೊಳಗೆ ನಡೆಯುವ ವಿಷಯಗಳು

[ಇಲ್ಲಿಂದ ಮುಂದಕ್ಕೆ 8 ನೇ ಪುಟವನ್ನು ನೋಡಿ.]

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1914 ನೇ ಇಸವಿ ಆಗಸ್ಟ್ 20 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ.

ಜಮೆ:—(1) ಷೇರು ಮೊಬಲಗು	....	ರೂ. 9,93,095
„ (2) ಡಿಪಾಜಿಟ್ಟುಗಳು	....	„ 20,75,333
„ (3) ಇತರೆ	....	„ 11,216
(ಆಣೆ, ಕಾಸು ಬಿಟ್ಟಿರುತ್ತೆ.)	ಜುಮ್ಲಾ	ರೂ. 30,79,644
ಖರ್ಚು:—(1) ಕೈಯಲ್ಲೂ, ಬ್ಯಾಂಕುಗಳಲ್ಲಿರುವ ಹಣ		ರೂ. 8,38,189
„ (2) ಖಾತೆ ಮತ್ತು ಇತರ ಸಾಲಗಳು	......	„ 14,79,517
„ (3) ಡಿಸ್ಕೌಂಟು ಮಾಡಿದ ವಾಯಿದೆ ಹುಂಡಿಗಳು		„ 2,40,425
„ (4) ಇನ್ವೆಸ್ಟ್‌ಮೆಂಟುಗಳು	......	„ 2,60,000
„ (5) ಏಜೆನ್ಸಿಗಳಲ್ಲಿರುವ ಮೊಬಲಗು	......	„ 2,53,380
„ (6) ಬ್ಯಾಂಕಿನಲ್ಲಿರುವ ಸಾಮಾನುಗಳು	......	„ 10,927
„ (7) ಇತರೆ	....	„ 7,306
(ಆಣೆ, ಕಾಸು ಬಿಟ್ಟಿರುತ್ತೆ.)	ಜುಮ್ಲಾ	ರೂ. 30,79,644

ಡಬ್ಲಿಯು. ಸಿ. ರೋಸ್, ಮ್ಯಾನೇಜರ್

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು.

ಕಳೆದ ಶನಿವಾರ ಬೆಳಿಗ್ಗೆ ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲರುಗಳು ಟೌನ್ ಹಾಲ್ ಬಂಗಲೆಯಲ್ಲಿ ಸಭೆ ಸೇರಿ ತಿಂಗಳುಕಟ್ಟಲೆಯ ಮ್ಯುನಿಸಿಪಲ್ ಮೀಟಿಂಗ್ ನಡಿಸಿದರು. ಜುಲೈ ತಿಂಗಳ ಲೆಕ್ಕಗಳನ್ನು ಓದಿಸಿ ರೆಕಾರ್ಡುಮಾಡಿದರು. ಆ ತಿಂಗಳಲ್ಲಿ 12,702 ರೂಪಾಯಿ ಜಮಾ ಆಯಿತು; 13,838 ರೂಪಾಯಿ ಖರ್ಚಾಯಿತು. ಜನನ 196; ಮರಣ—ಪ್ಲೇಗ್ 10, ವಾಂತಿಭೇದಿ 7, ಸಿಡುಬು 2, ಜ್ವರ 33, ಕ್ಷಯ 11, ಇತರ ಕಾರಣಗಳು 144, ಒಟ್ಟು 207.—ಸಂತೇಪೇಟೆ ಅಕ್ಕಿ ಅಂಗಡಿ ದೊಡ್ಡಯ್ಯನವರು ಸುಬ್ಬರಾಯನ ಕೆರೆ ಹಿಂಭಾಗದಲ್ಲಿ ತಮ್ಮ ತೋಟದೊಳಗೆ ಭತ್ತ ಕುಟ್ಟುವ ಕಾರ್ಖಾನೆಯನ್ನು ಇಟ್ಟುಕೊಳ್ಳುವುದಕ್ಕೆ ಅಪ್ಪಣೆ ಆಗಬೇಕೆಂದು ಕೇಳಿದ್ದರು. ಊರಿನಲ್ಲಿ ಪ್ರಜೆಗಳು ವಾಸಮಾಡತಕ್ಕ ಪ್ರದೇಶಗಳಲ್ಲಿ ಇಂಜಿನ್ ಇಟ್ಟು ಕೆಲಸಮಾಡುವ ಕಾರ್ಖಾನೆಗೆ ಅವಕಾಶ ಕೊಡಕೂಡದೆಂದೂ, ದೊಡ್ಡಯ್ಯನವರು ವಿದ್ಯುಚ್ಛಕ್ತಿಯಿಂದ ಭತ್ತ ಕುಟ್ಟುವ ಕಾರ್ಖಾನೆ ಇಡುವುದಾದರೆ ಅಪ್ಪಣೆ ಕೊಡಬಹುದೆಂದೂ ಮೆಂಬರುಗಳು ತೀರ್ಮಾನಮಾಡಿದರು.—ನವಾಬ್ ನಿಸಾರ್ ಯೂಸುಫಲ್ಲಿ ಖಾನ್ ಎಂಬ ಹಕೀಮರು ಬಹಳ ಒಳ್ಳೇ ಔಷಧಮಾಡಿ ರೋಗಿಗಳನ್ನು ವಾಸಿಮಾಡುತ್ತಾ ತುಂಬಾ ಉಪಕಾರಮಾಡುತ್ತಿದ್ದಾರೆಂದೂ, ಇವರಿಗೆ ಮ್ಯುನಿಸಿಪಾಲಿಟಿಯಿಂದ ತಿಂಗಳಿಗೆ 15 ರೂಪಾಯಿನಂತೆ ಗ್ರ್ಯಾಂಟು ಕೊಡಬೇಕೆಂದೂ ಹಿಂದೆಯೇ ಮ್ಯುನಿಸಿಪಲ್ ಕೌನ್ಸಿಲರುಗಳು ತೀರ್ಮಾನಮಾಡಿ ಗವರ್ನ್‌ಮೆಂಟಿಗೆ ತಿಳಿಸಿದ್ದರು. ಆಗ್ಗೆ ಸರ್ಕಾರದವರು ಅದನ್ನು ಸ್ಯಾಂಕ್ಷನ್ ಮಾಡಲಿಲ್ಲ. ಈಚೆಗೆ ಮೆಂಬರುಗಳು ಮತ್ತೆ ಅವರಿಗೆ ಗ್ರ್ಯಾಂಟು ಕೊಡಬೇಕೆಂದು ಎರಡನೇ ಸಲ ತೀರ್ಮಾನಮಾಡಿ ಗವರ್ನ್‌ಮೆಂಟಿಗೆ ಬರೆದಿದ್ದರು. ಸರ್ಕಾರದವರು ಅವರ ತೀರ್ಮಾನವನ್ನು ಮತ್ತೆ ತಿರಸ್ಕಾರಮಾಡಿ ಹುಕುಂ ಕೊಟ್ಟಿದ್ದಾರೆ. ಇದನ್ನು ರೆಕಾರ್ಡುಮಾಡಿಕೊಂಡರು.

ಮ॥ ಅಂಚೆ ಅಣ್ಣಯ್ಯಪಂಡಿತರು ಸುಬ್ಬರಾಯನ ಕೆರೆಯೊಳಗೆ ಜನರ ಸ್ನಾನಾದಿಗಳಿಗೆ ಉಪಯೋಗವಾಗುವಂತೆ ಎರಡು ಕೊಳಗಳನ್ನು ಧರ್ಮಕ್ಕೆ ಕಟ್ಟಿಸಿರುತ್ತಾರಷ್ಟೆ. ಇದಕ್ಕೆ ಕುಕ್ಕರಹಳ್ಳಿ ಕೆರೆ ನೀರು ಬಿಡುವಂತೆ ಏರ್ಪಾಡಾಗಿದೆ. ಈಚೆಗೆ ಮಳೆ ಬಾರದೆ ಆ ಕೆರೆಯ ನೀರು ಕಡಮೆಯಾಗಿ ಕೊಳದಲ್ಲಿ ನೀರಿಗೆ ಅಭಾವವಾಯಿತು. ಕಾವೇರಿ ನೀರನ್ನು ನಲ್ಲಿ ಮೂಲಕ ತರಿಸಿ ಕೊಳಗಳಿಗೆ ಬಿಡಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸಿಕೊಂಡಿದ್ದರು. ಸರ್ಕಾರದವರು ಆ ರೀತಿ ನೀರು ಬಿಡಬಹುದೆಂದೂ, ಅದಕ್ಕೆ ಮೀಟರ್ ಇಟ್ಟು ನೀರಿಗೆ ಅರ್ಧ ತೆರಿಗೆಯನ್ನು ಮ್ಯುನಿಸಿಪಾಲಿಟಿಯಿಂದ ವಸೂಲ್ಮಾಡಬೇಕೆಂದೂ ಅಪ್ಪಣೆ ಕೊಟ್ಟರು. ಮ॥ ಪಂಡಿತರವರು ಈ ಅರ್ಧ ತೆರಿಗೆಯಲ್ಲಿ ತಾವು ಅರ್ಧವನ್ನು ವಹಿಸಿಕೊಂಡು ಪಾವತಿ ಮಾಡುವುದಾಗಿ ಒಪ್ಪಿಕೊಂಡಿದ್ದಾರೆ.—ಬೆಂಗಳೂರಿನಲ್ಲಿ ಜಾರಿಯಲ್ಲಿರುವಂತೆ ಮೈಸೂರಿನಲ್ಲೂ ಅಂಗಡಿಗಳಿಗೆ ಬಾಡಿಗೆ ಪಟ್ಟಿ ನೋಡಿ ಸೇಕಡಾ ಒಂದು ರೂಪಾಯಿ ಪ್ರಕಾರ ನೀರಿನ ತೆರಿಗೆ ಹಾಕಿ ವಸೂಲ್ಮಾಡಬಹುದೆಂದು ಮ್ಯಾನೇಜಿಂಗ್ ಕಮಿಟಿಯವರು ಶಿಫಾರಸು ಮಾಡಿದ್ದರು. ಮೆಂಬರುಗಳು ಈ ವಿಚಾರವನ್ನು ಚರ್ಚೆಮಾಡಿ ಅಂಗಡಿಗಳಿಗೆ ನೀರಿನ ತೆರಿಗೆಯನ್ನು ಹಾಕಬೇಕಾದದ್ದಿಲ್ಲವೆಂದು ತೀರ್ಮಾನಮಾಡಿದರು.—ದೊಡ್ಡಕೆರೆ ಏರಿ ರಸ್ತೆಯನ್ನು ಪೋಲೀಸ್ ಸ್ಟೇಷನ್‌ನಿಂದ ಕೋಡಿ ತನಕ ಹೊಸದಾಗಿ ಜಲ್ಲಿ ಹಾಕಿ ಗಟ್ಟಿ ಮಾಡುವುದಕ್ಕೆ ಒಂದು ಸಾವಿರ ಚಿಲ್ಲರೆ ರೂಪಾಯಿ ಖರ್ಚಾಗುತ್ತದೆಂದೂ, ಇದನ್ನು ಮ್ಯಾನೇಜಿಂಗ್ ಕಮಿಟಿಯವರು ಒಪ್ಪಿದೆ ಇರುತ್ತಾರೆಂದೂ ಪ್ರೆಸಿಡೆಂಟರು ಸೂಚಿಸಿದರು. ಈ ಏರಿ ರಸ್ತೆಯನ್ನು ಮ್ಯುನಿಸಿಪಾಲಿಟಿಯವರ ಅಭಿಪ್ರಾಯವನ್ನು ಕೇಳದೇನೇ ಟ್ರಸ್ಟ್ ಬೋರ್ಡಿನವರು 1,2,3 ಅಡಿ ಪ್ರಮಾಣಕ್ಕೆ ಉಪಕ್ಕೂ ಅಗತಮಾಡಿಸಿ ರಸ್ತೆಯನ್ನು ಕೆಡಿಸಿರೋಣದರಿಂದ ಪುನಃ ಹೊಸದಾಗಿ ರಸ್ತೆಮಾಡಿಸುವ ಖರ್ಚನ್ನು ಮ್ಯುನಿಸಿಪಾಲಿಟಿಯವರು ವಹಿಸುವುದು ನ್ಯಾಯವಲ್ಲವೆಂದೂ, ಟ್ರಸ್ಟ್ ಬೋರ್ಡಿನಿಂದಲೇ ಮಾಡಿಸಬೇಕೆಂದೂ ಮೆಂಬರುಗಳು ಅಭಿಪ್ರಾಯಪಟ್ಟರು. ಈ ವಿಚಾರವು ಸ್ವಲ್ಪ ಹೊತ್ತು ಚರ್ಚೆ ಆಗಿ ಕಡೆಗೆ ಈ ಖರ್ಚನ್ನು ಟ್ರಸ್ಟ್ ಬೋರ್ಡಿಗೂ ಮ್ಯುನಿಸಿಪಾಲಿಟಿಗೂ ಹಂಚಿಹಾಕಬೇಕೆಂದು ತೀರ್ಮಾನವಾಯಿತು.

ಮೈಸೂರು ಮಹಾರಾಜರವರ ಔದಾರ್ಯವು.

50,00,000 ರೂಪಾಯಿ ಕೊಟ್ಟಿರುವುದು.

ನಮ್ಮ ಮಹಾರಾಜರವರು ಇಂಪೀರಿಯಲ್ ಯುದ್ಧದ ರಿಲೀಫ್ ಫಂಡಿಗೆ 2,00,000 ರೂಪಾಯಿಯನ್ನು ಕೊಟ್ಟಿರುತ್ತಾರೆಂದು ಕಳೆದ ವಾರ ತಿಳಿಸಿರುತ್ತೇವಷ್ಟೆ. ಈಚೆಗೆ ಅವರು ಹಿಂದುಸ್ಥಾನದಿಂದ ಸೈನ್ಯವನ್ನು ಕೂಡಿಸಿ ಯುದ್ಧಭೂಮಿಗೆ ಕಳುಹಿಸುವ ಖರ್ಚಿಗಾಗಿ ವೈಸ್‌ರಾಯ್ ಪ್ರಭುಗಳಿಗೆ 50,00,000 ರೂಪಾಯಿ ವಾಗ್ದಾನಮಾಡಿ ಅವರಿಗೆ ಬರೆದಿರುವ ಕಾಗದವೂ, ವೈಸ್‌ರಾಯರವರಿಂದ ಬಂದಿರುವ ಉತ್ತರವೂ ಪ್ರಕಟವಾಗುತ್ತದೆ. ಅವರವರ ಅಭಿಪ್ರಾಯವನ್ನೂ ವಾಚಕರ ತಿಳುವಳಿಕೆಗಾಗಿ ಪ್ರಕಟಿಸಲು ಆನಂದಪಡುತ್ತೇವೆ.

ನಮ್ಮ ಮಹಾರಾಜರವರು ಬರೆದಿರುವುದು

ನಮ್ಮ ಗೌರವವುಳ್ಳ ಸ್ನೇಹಿತರಿಗೆ,—ತಾವು ಹಿಂದುಸ್ಥಾನದ ಇಂಪೀರಿಯಲ್ ರಿಲೀಫ್ ಫಂಡನ್ನು ಪ್ರಾರಂಭಿಸಿ, ಎಲ್ಲರ ಮನಸ್ಸನ್ನೂ ಸೆಳೆಯುವಂಥಾ ರೀತಿಯಲ್ಲಿ ಅದರ ಉದ್ದೇಶಗಳನ್ನು ವಿವರಿಸಿ ಅದಕ್ಕಾಗಿ ಹಣವನ್ನು ಒದಗಿಸಬೇಕೆಂದು ಪ್ರಕಟಮಾಡಿದ್ದೀರಿ. ಈ ತಮ್ಮ ಅಭಿಮತವನ್ನು ನಾವು ಮನಃಪೂರ್ವಕವಾಗಿ ಒಪ್ಪಿರುತ್ತೇವೆಂದು ಆಗಲೇ ತಮಗೆ ತಂತೀವರ್ತಮಾನದ ಮೂಲಕ ತಿಳಿಸಿದೇವೆ. ಈ ಫಂಡಿನ ಏರ್ಪಾಡಿನ ವಿಚಾರವಾಗಿ ನಾವು ಸರ್ ಹ್ಯೂ ಡಾಲಿಯವರ ಕೂಡ ಕಾಗದಪತ್ರಗಳನ್ನು ನಡಿಸುತ್ತಾ ಇರುವೆವು. ಈಗ ಬ್ರಿಟಿಷ್ ಚಕ್ರಾಧಿಪತ್ಯದ ಸಾಮಂತ ಸಂಸ್ಥಾನಗಳೂ, ಸಮಸ್ತ ಪ್ರಜೆಗಳೂ ಚಕ್ರಾಧಿಪತ್ಯವನ್ನು ಸಂರಕ್ಷಿಸಿಕೊಳ್ಳುವುದಕ್ಕಾಗಿ ಒಬ್ಬರಿಗೊಬ್ಬರು ಬೆಂಬಲಕೊಟ್ಟು ನಿಲ್ಲಬೇಕಾಗಿರುವ ಸಮಯವೆಂದು ನಾವು ತಿಳಿದಿರುತ್ತೇವೆ. ನಮೆಲ್ಲರ ಕ್ಷೇಮವನ್ನೂ ಕಾಪಾಡಿಕೊಳ್ಳುವುದಕ್ಕೆ ನಾವು ನಮ್ಮದೆಲ್ಲವನ್ನೂ ಒಪ್ಪಿಸಿಬಿಡುವ ಭಾಗದಲ್ಲಿ ನಾವು ಸಿದ್ಧರಾಗಿರುವೆವೆಂದು ನಾವೂ ನಮ್ಮ ಪ್ರಜೆಗಳೂ ಯಥಾರ್ಥವಾಗಿಯೂ ಮನಃಪೂರ್ವಕವಾಗಿಯೂ ತಮಗೆ ಅರಿಕೆ ಮಾಡುವೆವು. ಸಾರ್ವಭೌಮ ಸರ್ಕಾರದವರು ಕೆಲವು ವರುಷಗಳಿಂದೀಚೆಗೆ ನಮ್ಮ ವಿಷಯದಲ್ಲೂ ನಮ್ಮ ಪ್ರಜೆಗಳ ವಿಷಯದಲ್ಲೂ ಭರವಸೆಯನ್ನಿಟ್ಟು ವಿಶೇಷತರವಾದ ಉಪಕಾರಗಳನ್ನು ಮಾಡಿರೋಣದರಿಂದ ಮೈಸೂರು ಸೀಮೆಯಲ್ಲಿರುವ ನಾವು ತುಂಬಾ ಕೃತಜ್ಞತೆಯುಳ್ಳವರಾಗಿರುತ್ತೇವೆ. ಕಳೆದ ವರುಷ ತಾವು ಮೈಸೂರಿಗೆ ದಯಮಾಡಿದ್ದ ಸಂತೋಷ ಸಮಯವನ್ನಾಗಲಿ, ತಾವು ನಮ್ಮ ವಿಷಯದಲ್ಲಿ ಅತಿಶಯವಾದ ಪ್ರೀತಿ ವಿಶ್ವಾಸಗಳನ್ನು ಕಾರ್ಯತಃ ಪ್ರಕಾಶಪಡಿಸಿ ನಮ್ಮ ಪ್ರಜೆಗಳ ಪುರೋವೃದ್ಧಿಗೆ ಸಾಧಕವಾಗಿರುವಂಥಾ ಕಾರ್ಯಗಳನ್ನು ನಡಿಸುವುದನ್ನಾಗಲಿ ನಾವು ಎಂದಿಗಾದರೂ ಮರೆಯುವಹಾಗಿಲ್ಲ. ಅಂಥಾ ಕಷ್ಟಕಾಲ ಪ್ರಾಪ್ತವಾಗುವಾಗ್ಗೆ ನಾವೂ ನಮ್ಮ ಪ್ರಜೆಗಳೂ ನಿಮ್ಮಿಂದ ಅಪೇಕ್ಷಿಸಲ್ಪಡುವವುಗಳನ್ನೆಲ್ಲಾ ಸಂತೋಷದಿಂದ ಒಪ್ಪಿಸಿಬಿಡುವುದಕ್ಕೆ ಸಿದ್ಧರಾಗಿದೇವೆ. ಈ ಯುದ್ಧದ ಖರ್ಚಿನಲ್ಲಿ ನಮ್ಮ ಪಾಲಿಗೆ ಬರುವ ಭಾಗವನ್ನು ವಹಿಸಿಕೊಳುತ್ತೇವೆನ್ನುವುದರಲ್ಲಿ ಅನುಮಾನವಿಲ್ಲ. ನಮ್ಮ ಸೈನ್ಯ ಸಿದ್ಧವಾಗಿದೆ; ಮತ್ತು ದ್ರವ್ಯ ಸಹಾಯ ಬೇಕಾಗಿರುವ ಪಕ್ಷದಲ್ಲಿ ಹಿಂದುಸ್ಥಾನದ ಪಾಲಿಗೆ ಬೀಳುವ ಯುದ್ಧದ ಖರ್ಚಿಗೋಸ್ಕರ ನಾವು 50,00,000 ರೂಪಾಯನ್ನು ತಮ್ಮ ವಶಕ್ಕೆ ಈ ಮೂಲಕ ಒಪ್ಪಿಸಿರುತ್ತೇನೆ. ನಿಮ್ಮ ವಿಷಯದಲ್ಲಿ ವಿಶೇಷವಾದ ಗೌರವವನ್ನು ಇಟ್ಟುಕೊಂಡಿದೇವೆಂದು ಒತ್ತಿ ಹೇಳುವ ನಿಮ್ಮ ಪ್ರಿಯ ಸ್ನೇಹಿತರಾದ (ಸೈನ್) ಕೃಷ್ಣರಾಜ ಒಡೆಯರ್.

ವೈಸ್‌ರಾಯರವರ ಪ್ರತ್ಯುತ್ತರವು.

ಘನವನ್ನುಳ್ಳ ವೈಸ್‌ರಾಯ್ ಲಾರ್ಡ್ ಹಾರ್ಡಿಂಗ್ ಪ್ರಭುಗಳು ದಯಪಾಲಿಸಿರುವ ಪ್ರತ್ಯುತ್ತರವೇನೆಂದರೆ—

ನಿಮ್ಮ ಕಾಗದ ತಲುಪಿತು. ಅದರಲ್ಲಿ ನೀವು ಬರೆದಿರುವ ರಾಜಭಕ್ತಿಪೂರ್ವಕವಾದ ವಾಕ್ಯಗಳಿಗೆ ಮಾತ್ರವೇ ಅಲ್ಲ; ಅತ್ಯಂತವಾದ ದೇಶವಾತ್ಸಲ್ಯದಿಂದಲೂ ಪರಮ ಧಾರಾಳ ಮನಸ್ಸಿನಿಂದಲೂ ನಿಮ್ಮ ಸೈನ್ಯವನ್ನು ಕಳುಹಿಸಿಕೊಡುತ್ತೇವೆಂತಲೂ ಹಿಂದುಸ್ಥಾನದ ಸೈನ್ಯದ ಖರ್ಚಿಗೋಸ್ಕರ ನೀವು 50 ಲಕ್ಷ ರೂಪಾಯಿ ಕೊಟ್ಟಿರುವುದಕ್ಕಾಗಿಯೂ ತಮ್ಮನ್ನು ಬಹು ವಿಶೇಷವಾದ ಪ್ರೀತಿಯಿಂದ ವಂದಿಸುತ್ತೇವೆ.—ಅವಶ್ಯಬೀಳುವಾಗ್ಗೆ ನಿಮ್ಮ ಸೈನ್ಯವನ್ನು ಕರಸಿಕೊಳ್ಳದೆ ತಪ್ಪುವುದಿಲ್ಲ. ನಿಮ್ಮ ಉದಾರವಾದ ದ್ರವ್ಯಸಹಾಯವನ್ನು ಕೃತಜ್ಞತೆಯಿಂದ ಅಂಗೀಕರಿಸಿರುತ್ತೇವೆ. ಈ ಹಣವನ್ನು ನಮ್ಮ ಸೈನ್ಯದ ಖರ್ಚಿಗೆ ಯಾವ ರೀತಿ ವಿನಿಯೋಗಪಡಿಸಿಕೊಳ್ಳುತ್ತೇವೆಯೋ ಅದನ್ನು ಕಾಗದ ಮುಖಾಂತರ ಮುಂದೆ ತಿಳಿಸುವೆವು. ಸದ್ಯದಲ್ಲಿ ಇಂಥಾ ಸ್ತೋತ್ರಾರ್ಹವಾದ ದೇಶವಾತ್ಸಲ್ಯವನ್ನು ಪ್ರಕಾಶಪಡಿಸಿರುವಂಥಾ ನಿಮ್ಮ ಸ್ನೇಹಿತರಾದ ನಿಮ್ಮ ಕಾರ್ಯವು ನಮ್ಮ ಮನಸ್ಸನ್ನು ಉಕ್ಕಿಬರುವಂತೆ ಸಂತೋಷದಿಂದ ತುಂಬಿಸಿರುತ್ತದೆ. ನಿಮ್ಮ ಪರಮ ಸ್ನೇಹಿತರಾದ

(ಸೈನ್) ಲಾರ್ಡ್ ಹಾರ್ಡಿಂಗ್.

ಅರಸನ ಔತಣ.

ಯೇಸು ಕ್ರಿಸ್ತನು ಶಿಷ್ಯಾನೊಬ್ಬ ದೊಡ್ಡ ಮನುಷ್ಯನ ಮನೆಯಲ್ಲಿ ಅಭ್ಯಾಗತರೊಂದಿಗೆ ಕೂತುಕೊಂಡು ಊಟಮಾಡುತ್ತಿರುವಾಗ ಊಟಕ್ಕೆ ಕೂತವರು ಬೇರೆ ಬೇರೆ ವಿಷಯಗಳನ್ನೆತ್ತಿ ಸಂಭಾಷಣೆಮಾಡಲಾರಂಭಿಸಿದರು. ಸ್ವಲ್ಪ ಹೊತ್ತು ಸರಸಸಲ್ಲಾಪಗಳು ನಡೆದ ನಂತರ ಊಟಕ್ಕೆ ಕೂತವರಲ್ಲಿ ಒಬ್ಬನು—ಪರಲೋಕದಲ್ಲಿ ಪ್ರವೇಶಮಾಡಿ ಅಲ್ಲಿ ದೇವರ ಸನ್ನಿಧಾನದಲ್ಲಿ ಊಟಮಾಡುವವನೇ ಧನ್ಯನೆಂದು ಹೇಳಿದನು. ಆಗ ಯೇಸು ಅವನಿಗೆ ಒಂದು ಕಥೆಯನ್ನು ಹೇಳಿದನು. ಏನೆಂದರೆ—ಒಬ್ಬ ಅರಸನು ದೊಡ್ಡ ಔತಣವನ್ನು ಮಾಡಿಸಿ ಅನೇಕರಿಗೆ ಊಟಕ್ಕೆ ಹೇಳಿಸಿದನು. ಅನಂತರ ಔತಣದ ಸಮಯಕ್ಕೆ ಸರಿಯಾಗಿ ಆಳನ್ನು ಊಟಕ್ಕೆ ಹೇಳಿಸಿಕೊಂಡವರ ಬಳಿಗೆ ಕಳುಹಿ—ಈಗ ಎಲ್ಲಾ ಸಿದ್ಧವಾಗಿದೆ; ಊಟಕ್ಕೆ ಬನ್ನಿರಿ ಎಂದು ಕರೆಸಿದನು. ಆಗ ಅವರೆಲ್ಲರೂ ಕ್ಷಮಿಸಬೇಕೆಂದು ಒಕ್ಕಟ್ಟಾಗಿ ಹೇಳುವದಕ್ಕೆ ತೊಡಗಿದರು. ಮೊದಲನೆಯವನು ಆ ಆಳನ್ನು ನೋಡಿ—ನಾನು ಹೊಲವನ್ನು ಹೊಸದಾಗಿ ಕ್ರಯಕ್ಕೆ ಕೊಂಡುಕೊಂಡಿದ್ದೇನೆ. ಅದನ್ನು ಹೋಗಿ ನೋಡುವದು ನನಗೆ ಅಗತ್ಯವಾಗಿದೆ. ಆದ್ದರಿಂದ ನಾನು ಬರುವವನಾಗುವುದಿಲ್ಲ. ಕ್ಷಮಿಸಬೇಕೆಂದು ಅರಸನಿಗೆ ಹೇಳು ಎಂದು ಹೇಳಿಕಳುಹಿದನು. ಮತ್ತೊಬ್ಬನು ನಾನು ಈ ದಿನ ಐದುಜೋಡಿ ಎತ್ತುಗಳನ್ನು ಕೊಂಡುಕೊಂಡಿದ್ದೇನೆ. ಅವುಗಳನ್ನು ಪರೀಕ್ಷಿಸುವದಕ್ಕೆ ಹೋಗುತ್ತೇನೆ. ನನಗೆ ಕ್ಷಮಿಸಬೇಕೆಂದು ಬೇಡುತ್ತೇನೆಂತ ಅರಸಗೆ ಹೇಳು ಅಂದನು. ಬೇರೊಬ್ಬನು—ನಾನು ಮದುವೆ ಸಂಭ್ರಮದಲ್ಲಿದ್ದೇನೆ. ಬರಲಾರೆನು ಎಂದು ಹೇಳಿದನು. ಹೀಗೆ ಅವರೆಲ್ಲರೂ ಅರಸನ ಔತಣಕ್ಕೆ ಬರುತ್ತೇವೆಂದು ಮೊದಲು ಒಪ್ಪಿಕೊಂಡು ಅನಂತರ ತಕ್ಕ ಸಮಯದಲ್ಲಿ ಅರಸನನ್ನು ಉಲ್ಲಂಘನೆ ಮಾಡಿದರು ಎಂಬುವದೇ. ಅರಸುಗಳು, ಅಧಿಕಾರಿಗಳು, ಶ್ರೀಮಂತರು ತಮ್ಮ ಸರಿಸಮಾನಸ್ಥರನ್ನು ಮಾತ್ರ ತಮ್ಮ ಮನೆಗೆ ಔತಣಕ್ಕೆ ಕರಿಸುವರು. ಆದರೆ ದೇವರು ಯಾರಾದರೂ ತನ್ನ ಔತಣಕ್ಕೆ ಬರಬಹುದೆಂದು ಎಲ್ಲರನ್ನೂ ಕರೆಸುವವನಾಗಿದ್ದಾನೆ. ಎಲ್ಲರೂ ತನ್ನ ಔತಣವನ್ನು ಭೋಜನ ಧನ್ಯರಾಗಬೇಕೆಂದು ದೇವರ ಅಪೇಕ್ಷೆಯುಂಟು. ಆದ್ದರಿಂದ ಆತನು ಪ್ರತಿ ಹಬ್ಬ ಆಹ್ವಾನಿಸುವನು. ಭಾನುವಾರದ ವಿಶೇಷವಾದ ದಿನಗಳಲ್ಲಿ ಪ್ರತಿಯೊಬ್ಬನನ್ನು ತನ್ನ ಔತಣಕ್ಕೆ ಕರೆಯುತ್ತಾನೆ. ನಾವು ಕೇಳುವ ಸಮ್ಮೋಧನೆಯು ದೇವರು ನಮ್ಮನ್ನು ತನ್ನ ಅರಮನೆಯ ಔತಣಕ್ಕೆ ಕರೆಯುವ ಶಬ್ದವಾಗಿದೆ. ನಾವು ಓದುವ ಒಳ್ಳೇ ಪುಸ್ತಕಗಳೂ ಸಜ್ಜನರ ಸಹವಾಸವೂ ದೇವರು ನಮ್ಮನ್ನು ಕರೆಯುವ ಶಬ್ದವಾಗಿದೆ. ಅರಸನಾದ ದೇವರ ಸನ್ನಿಧಾನದಲ್ಲಿ ನಮಗೆ ದೊರಕುವ ಔತಣವು ಯಾವುದು? ನಾವು ಯಾರನ್ನಾದರೂ ಊಟಕ್ಕೆ ಕರಿಸುವದಕ್ಕಿಂತ ಮುಂಚೆ ನಮ್ಮ ಮನೆಗೆ ಆತಿಥ್ಯಕ್ಕೆ ಬರುವವನು ಯಾರು? ಅವರ ಸ್ಥಿತಿ ಏನು? ಅವರಿಗೆ ಯಾವ ಪದಾರ್ಥಗಳಲ್ಲಿ ಅಭಿರುಚಿಯುಂಟು ಎಂದು ಯೋಚಿಸುತ್ತೇವೆ. ದೇವರು ಸಹ ನಮ್ಮನ್ನು ಚನ್ನಾಗಿ ತಿಳುಕೊಂಡು ನಮಗೆ ಬೇಕಾದ ಆಹಾರವನ್ನು ಸಿದ್ಧಮಾಡುವನೇ ಹೊರತು ನಮ್ಮನ್ನು ಅವಮಾನಭಂಗರಾಗಿ ಎಂದಿಗೂ ಮಾಡನು. ಆದ್ದರಿಂದ ಪ್ರಪಂಚದಲ್ಲಿರುವ ನಮ್ಮ ಕೊರತೆಗಳು ಯಾವವೋ ಅವುಗಳಿಗೆ ಪರಿಹಾರವನ್ನು ಆತನು ಸಿದ್ಧಮಾಡಿದ್ದಾನೆ.

ಪ್ರಪಂಚದಲ್ಲಿರುವ ಸಕಲ ಮನುಷ್ಯರಿಗೂ ಒಂದೇ ಒಂದು ದೊಡ್ಡ ಕೊರತೆಯು ಇದೆ. ಅದೇನೆಂದರೆ ಅದ್ವಿತೀಯನಾದ ದೇವರನ್ನು ತಿಳಿದು ಆತನ ಪ್ರೀತಿಗೆ ಪಾತ್ರನಾಗಿ ಆತನ ಸಂಗಡ ಅನ್ಯೋನ್ಯವನ್ನೂ ನಿತ್ಯಾನಂದವನ್ನೂ ಅನುಭವಿಸಬೇಕೆಂಬ ಅಭಿಲಾಷೆಯೇ ಸಕಲರ ಮನಸ್ಸುಗಳನ್ನೂ ಬಾಧಿಸುತ್ತಿರುವದು. ದೇವರು ಪಾಪವನ್ನು ವಿರೋಧಿಸುತ್ತಾನೆ. ಪಾಪಮಾಡುವವರ ಸಂಗಡ ಆತನು ಅನ್ಯೋನ್ಯವಾಗಿರಲಾಗದು. ಪಾಪವು ದೇವದ್ರೋಹ. ಅದು ಪಾಪಿಯನ್ನು ದೇವರಿಂದ ದೂರವಾಗಿ ಅಗಲಿಸಿ ವೈರತ್ವವನ್ನು ಬೆಳಸುವದಾಗಿದೆ. ಆದ್ದರಿಂದ ಮನುಷ್ಯನಿಗೆ ಮೊದಲು ಬೇಕಾದದ್ದು ಪಾಪವಿಮೋಚನೆ, ಪಾಪಪರಿಹಾರ. ಇದಾದ ಹೊರತು ದೇವರ ಸಂಗಡ ಅನ್ಯೋನ್ಯವೂ ಆನಂದವೂ ಮನುಷ್ಯನಿಗೆ ದೊರಕುವದೇ ಇಲ್ಲ. ಪಾಪಿಯನ್ನು ವಿಮೋಚನೆ ಮಾಡಬಲ್ಲವನು ಯಾರು?

ನಾವು ಯಾರಿಗೆ ವಿರೋಧವಾಗಿ ಪಾಪಮಾಡಿದ್ದೇವೆಯೋ ಆತನೇ ನಮಗೆ ಮನ್ನಣೆಯನ್ನು ಕೊಡಬೇಕು. ನಾವೇ ನಮ್ಮ ಪಾಪವಿಮೋಚನೆ ಮಾಡಿಕೊಳ್ಳಲಾರೆವು. ಆದ್ದರಿಂದ ಆತನು ನಮಗೆ ಮೊದಲು ಪಾಪಪರಿಹಾರವೆಂಬ ಔತಣವನ್ನು ಉಚಿತವಾಗಿ ನೀಡುತ್ತಾನೆ. ಅದನ್ನು ಅನುಭವಿಸಿದ ಪಾಪಿಯ ದ್ರೋಹವು ಪರಿಹಾರವಾಯಿತು. ಅವನ ಮನಸು ಆವನನು. ಆವನ ಪಾಪಗಳಿಗಾಗಿ ಬಾಧಿಸುವದಿಲ್ಲ. ಮತ್ತು ದೇವರು ಅವನನ್ನು ಪಾಪಮಾಡದೆ ಬದುಕುವದಕ್ಕೆ ತನ್ನ ಪವಿತ್ರನಾದ ಆತ್ಮನನ್ನು ಆ ಪಾಪಿಯಾಗಿದ್ದವನಲ್ಲಿ ನೆಲಸಿ ವಾಸಮಾಡುವದಕ್ಕೆ ಕಳುಹಿಸುತ್ತಾನೆ. ಅಂದಿನಿಂದ ಅವನು ಪಾಪಭೀತನಾಗಿಯೂ ಪರಿಶುದ್ಧನಾಗಿಯೂ ಬದುಕುವದು ಸಾಧ್ಯವಾಗುತ್ತದೆ. ಮತ್ತು ದೇವರು ಇದು ಸಾಲದೆಂದು ಅವನನ್ನು ತನ್ನ ಅನ್ಯೋನ್ಯಕ್ಕೆ ಸೇರಿಸಿಕೊಂಡು ಅವನಿಗೆ ತನ್ನ ಸನ್ನಿಧಾನದ ಆನಂದವನ್ನು ಅನುಗ್ರಹಮಾಡುವನು.

ಮಿತ್ರರೇ! ದೇವರು ಉಚಿತವಾಗಿ ಸಿದ್ಧಪಡಿಸಿರುವ ಈ ಪರಮೌತಣಕ್ಕೆ ನಿಮಗೆ ಬರುವದಕ್ಕೆ ಮನಸ್ಸಿಲ್ಲವೇ? ಯಾವ ಕಾರಣದಿಂದಲಾದರೂ ಈ ದೇವಪ್ರಸಾದವನ್ನು ತಿರಸ್ಕರಿಸಬೇಡಿರಿ. ಯಾಕೆಂದರೆ ಇಷ್ಟು ದೊಡ್ಡ ರಕ್ಷಣೆಯನ್ನು ನಾವು ಉಲ್ಲಂಘನೆ ಮಾಡಿದರೆ ತಪ್ಪಿಸಿಕೊಳ್ಳುವದಕ್ಕಾದೀತೇ?

ಚಕ್ರಾಧಿಪತ್ಯದ ಇಂಡ್ಯಾದೇಶದಲ್ಲಿನ ಸಹಾಯ ದ್ರವ್ಯ.

1914 ನೇ ಆಗಸ್ಟ್ ತಾರೀಖು 24.

ಶ್ರೀಮದಿಂಡಿಯಾ ಚಕ್ರವರ್ತಿಗಳವರ ಸಂಪೂರ್ಣ ಅನುಮತಿಯನ್ನು ಪಡೆದು ಘನತೆಯನ್ನು ಹೊಂದಿದ ವೈಸ್‌ರಾಯಿಯವರು ಗ್ರೇಟ್ ಬ್ರಿಟನ್ ದೇಶದಲ್ಲಿ ಸ್ಥಾಪಿಸಿರುವ ಪ್ರಿನ್ಸ್-ಆಫ್-ವೇಲ್ಸ್ ಫಂಡಿಗೆ ಅನುಗುಣವಾಗಿ ಈ ದೇಶದಲ್ಲಿ ಇಂಪೀರಿಯಲ್ ಇಂಡಿಯನ್ ರಿಲೀಫ್ ಫಂಡ್ ಎಂಬ ಹೆಸರಿನಿಂದ ಒಂದು ಫಂಡನ್ನು ಸೇರಿಸಲು ಉಪಕ್ರಮಿಸಿರುವ ಸಂಗತಿಯೂ ಮತ್ತು ಈಗ ನಡೆಯುತ್ತಿರುವ ಯುದ್ಧದಿಂದ ಇಂಡಿಯಾ ದೇಶದಲ್ಲಿ ಸಂಭವಿಸಬಹುದಾದ ಸಕಲವಿಧವಾದ ಕಷ್ಟಗಳ ನಿವಾರಣೆಯೇ ಈ ಫಂಡಿನ ಉದ್ದೇಶವೆಂಬ ಅಂಶವೂ ಸಾಮಾನ್ಯವಾಗಿ ಜನರಿಗೆ ತಿಳಿದೇ ಇರುತ್ತದೆ. ಘನತೆಯನ್ನು ಹೊಂದಿದ ವೈಸ್‌ರಾಯಿಯವರು ಈ ಫಂಡನ್ನು ಉಪಕ್ರಮಿಸಿದಾಗ ಇವರಡಿ ಕಂಡಂತೆ ಅಪ್ಪಣೆ ಕೊಡಿಸಿರುತ್ತಾರೆ:—

“ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಬಲಾತ್ಕಾರವಾದ ಯುದ್ಧಪ್ರಸಕ್ತಿಯು ಪ್ರಾಪ್ತವಾಗಿದೆ. ಸಮುದ್ರಗಳಾಚೆ ಇರುವ ಚಕ್ರಾಧಿಪತ್ಯದ ರಕ್ಷಣೆಗಾಗಿ ಇಂಡಿಯಾ ದೇಶದಿಂದ ಒಂದು ಸೈನ್ಯವನ್ನು ಸಿದ್ಧಪಡಿಸಿ ಕಳುಹಿಸುವ ಪ್ರಯತ್ನವು ನಡೆಯುತ್ತಲಿದೆ. ಇದು ಭಾರೀ ಸೈನ್ಯವಾಗುವದಲ್ಲದೆ, ಇದರಲ್ಲಿ ನಮ್ಮ ಇಂಡಿಯಾ ದೇಶದ ಧೈರ್ಯಶಾಲಿಗಳಾದ ರೆಜಿಮೆಂಟುಗಳ ಪೈಕಿ ಅನೇಕ ರೆಜಿಮೆಂಟುಗಳೂ ಮತ್ತು ದೇಶೀಯ ಸಂಸ್ಥಾನಗಳಲ್ಲಿನ ಕೆಲವು ಇಂಪೀರಿಯಲ್ ಸರ್ವಿಸ್ ಸೈನಿಕರೂ ಸೇರುವರು. ಇಂಡಿಯಾ ದೇಶದಿಂದ ಯುದ್ಧಕ್ಕೆ ಹೋಗತಕ್ಕವರ ಕುಟುಂಬಗಳಲ್ಲಿ ಕಷ್ಟವು ಸಂಭವಿಸಬಹುದು; ಮತ್ತು ದುರದೃಷ್ಟವಶಾತ್ ಯುದ್ಧದ ದೆಸೆಯಿಂದ ಸ್ತ್ರೀಯರಿಗೆ ವೈಧವ್ಯವು ಪ್ರಾಪ್ತವಾಗುವದಲ್ಲದೆ ಅನೇಕ ಬಾಲಕರು ಅನಾಥರಾಗಬಹುದು. ಆದುದರಿಂದ ಒಂದು ದೊಡ್ಡ ಸಹಾಯ ದ್ರವ್ಯವನ್ನು ಶೀಘ್ರವಾಗಿ ಒದಗಿಸುವದು ಅವಶ್ಯಕವಾಗಿದೆ ಮತ್ತು ಅದನ್ನು ವಿಳಂಬವಿಲ್ಲದೆ ಜಮಾಯಿಸುವದಕ್ಕೆ ಕ್ರಮಗಳನ್ನು ನಡಿಸತಕ್ಕದ್ದು ಯುಕ್ತವಾಗಿದೆ.”

ಈ ರೀತಿಯಲ್ಲಿ ಅಪ್ಪಣೆ ಕೊಡಿಸಿದ ಅನಂತರ ವೈಸರಾಯಿಯವರು. ಸೆಂಟ್ರಲ್ ಕಮಿಟಿಗೆ ತಾವೇ ಅಧ್ಯಕ್ಷರಾಗಿರುತ್ತೇವೆಂತಲೂ, ಆ ಕಮಿಟಿಯಲ್ಲಿ ಅನೇಕ ಪ್ರಮುಖರಾದ ಸರ್ಕಾರಿ ಅಧಿಕಾರಿಗಳೂ, ಇಂಡಿಯಾದೇಶದ ಮುಖಂಡರಾದ ಭೂಪತಿಗಳ ಪೈಕಿ ಅನೇಕರೂ ಸೇರುವರೆಂತಲೂ ಮತ್ತು ಈ ಸೆಂಟ್ರಲ್ ಕಮಿಟಿಯ ಅಧೀನಕ್ಕೆ ಒಳಪಟ್ಟು ಒಂದು ಕಾರ್ಯನಿರ್ವಾಹಕ ಯಾ ಎಕ್ಸಿಕ್ಯೂಟಿವ್ ಕಮಿಟಿಯನ್ನೂ, ಅಲ್ಲದೆ ಸ್ಥಳೀಯ ಬ್ರಾಂಚ್ ಕಮಿಟಿಗಳನ್ನೂ ಕಲ್ಪಿಸಲಾಗುವುದೆಂತಲೂ ವಿವರಿಸಿ ತಿಳಿಸಿದರು.

ಮೇಲ್ಕಂಡ ವೈಸ್‌ರಾಯಿಯವರ ಉದ್ದೇಶಕ್ಕನುಗುಣವಾಗಿ ಶ್ರೀಮನ್ ಕೊಡಗು ಚೀಫ್ ಕಮಿಷನರ್ ರಾದ ಮೈಸೂರು ಸಂಸ್ಥಾನದ ರೆಸಿಡೆಂಟರವರು ಸೆಂಟ್ರಲ್ ಕಮಿಟಿಗೆ ಮೆಂಬರಾಗಿರುವ ಶ್ರೀಮನ್ ಮಹಾರಾಜರವರ ಪೂರ್ಣ ಅನುಮತಿಯನ್ನು ಪಡೆದು, ಬೆಂಗಳೂರು ಪಟ್ಟಣದಲ್ಲಿರುವ ಮುಖ್ಯರಾದ ಜನಗಳ ಸಹಾಯದೊಡನೆ ಸದರಿ ಫಂಡಿನ ಸಂಬಂಧದಲ್ಲಿ “ಇಂಪೀರಿಯಲ್ ಇಂಡಿಯನ್ ರಿಲೀಫ್ ಫಂಡಿನ ಮೈಸೂರು ಮತ್ತು ಕೊಡಗು ಬ್ರಾಂಚು” ಎಂಬ ಹೆಸರಿನಿಂದ ಒಂದು ಸ್ಥಳೀಯ ಬ್ರಾಂಚನ್ನು ಸ್ಥಾಪಿಸುವದಕ್ಕೆ ಬೇಕಾದ ಏರ್ಪಾಡುಗಳನ್ನು ಮಾಡಿ ಇರುತ್ತಾರೆ. ಈ ಬ್ರಾಂಚು ಕಮಿಟಿಗೆ ಪ್ರಕೃತದಲ್ಲಿ ಇವರಡಿ ಕಂಡ ಮಹನೀಯರು ಮೆಂಬರುಗಳಾಗಿರುತ್ತಾರೆ. ಇದರ ಜೊತೆಗೆ ಇನ್ನೂ ಹೆಚ್ಚು ಜನಗಳನ್ನು ಸೇರಿಸಿಕೊಳ್ಳುವದಕ್ಕೆ ಈ ಕಮಿಟಿಗೆ ಅಧಿಕಾರ ಉಂಟು:—ಪ್ರೆಸಿಡೆಂಟರು—ಲೆಫ್ಟಿನೆಂಟ್ ಕರ್ನಲ್ ಸರ್ ಹ್ಯೂ ಡ್ಯಾಲಿಯವರು; ವೈಸ್ ಪ್ರೆಸಿಡೆಂಟರುಗಳು—ಮೈಸೂರು ಸಂಸ್ಥಾನದ ದಿವಾನರವರು, ಬೆಂಗಳೂರು ಬ್ರಿಗೇಡ್ ಕಮ್ಯಾಂಡಿಂಗ್ ಜನರಲ್ ಆಫೀಸರವರು ಮತ್ತು ಕೊಡಗು ಸೀಮೆಯ ಕಮಿಷನರವರು; ಮೆಂಬರುಗಳು—ಖಾನ್ ಬಹದೂರ್ ಅಬ್ದುಲ್ ರಹಮಾನ್ ರವರು, ರಾವ್ ಬಹದೂರ್ ಅಣ್ಣಾಸಾಮಿ ಮೊದಲಿಯಾರ್, ಸಿ.ಐ.ಇ. ಯವರು, ಮಿ॥ ಪಿ. ಎ. ಬಾರ್ಟನ್ ರವರು, ಮಿ॥ ಎ. ಆರ್. ಬ್ಯಾನರ್ಜಿ, ಐ.ಸಿ.ಎಸ್. ರವರು, ಮಿ॥ ಮಿರ್ ಹಂಜಾ ಹುಸೇನ್ ರವರು, ಎಂ. ಕಾಂತರಾಜ ಅರಸ್, ಸಿ.ಎಸ್.ಐ. ರವರು, ಸರ್ ಲೆಸ್ಲಿ ಮಿಲ್ಲರ್, ನೈಟ್ ರವರು, ಮ॥ ಎಚ್. ವಿ. ನಂಜುಂಡಯ್ಯ, ಸಿ.ಐ.ಇ. ರವರು, ದಿವಾನ್ ಬಹದೂರು ಕೆ. ಪಿ. ಪುಟ್ಟಣ್ಣಚೆಟ್ಟಿಯವರು, ಕರ್ನಲ್ ಎ. ಇ. ಟೇಟ್, ಸಿ.ಎ.ಎಂ.ಸಿ. ರವರು; ಜಾಯಿಂಟ್ ಆನರರಿ ಸೆಕ್ರೆಟರಿಗಳು—ಮಿ॥ ಪಿ. ಬಿ. ವಾರ್ಬರ್ಟನ್ ರವರು, ಮೊದಲನೆ ಅಸಿಸ್ಟೆಂಟ್ ರೆಸಿಡೆಂಟ್ ಮತ್ತು ಕೊಡಗು ಸೆಕ್ರೆಟರಿಯವರು, ಶ್ರೀಮನ್ ಮಹಾರಾಜರವರ ಹುಜೂರು ಸೆಕ್ರೆಟರಿ ಮಿರ್ಜಾ ಮಹಮದ್ ಇಸ್ಮಾಯಿಲ್ ರವರು; ಆನರರಿ ಟ್ರೆಜರರ್—ಬೆಂಗಳೂರಿನಲ್ಲಿರುವ ಮದ್ರಾಸು ಬ್ಯಾಂಕಿನ ಏಜೆಂಟರ್ ಮಿ॥ ಎಚ್. ಎಫ್. ಕಾಲಿಯರ್ ರವರು.

ಕೊಡಗು ಸೀಮೆಯ ಕಮಿಷನರರಿಗೂ, ಮೈಸೂರು ಸಂಸ್ಥಾನದ ಡಿಸ್ಟ್ರಿಕ್ಟುಗಳ ಡೆಪ್ಯುಟಿ ಕಮಿಷನರುಗಳಿಗೂ, ಬೆಂಗಳೂರು ಮತ್ತು ಮೈಸೂರು ಪಟ್ಟಣಗಳ ಮ್ಯುನಿಸಿಪಾಲಿಟಿಗಳ ಪ್ರೆಸಿಡೆಂಟರುಗಳಿಗೂ ಸಹ ಸಬ್ ಕಮಿಟಿಗಳನ್ನು ಏರ್ಪಾಡು ಮಾಡಬೇಕೆಂದು ಕೇಳಿಕೊಂಡಿರುತ್ತದೆ. ಬೆಂಗಳೂರು ಸಿವಿಲ್ ಮತ್ತು ಮಿಲಿಟರಿ ಸ್ಟೇಷನಿಗಾಗಿ ಒಂದು ಸಬ್ ಕಮಿಟಿಯನ್ನು ಈ ವಾರ 22 ನೇ ತಾರೀಖಿನಲ್ಲಿ ಜನಗಳು ಸಭೆಸೇರಿ ಏರ್ಪಾಡು ಮಾಡಿರುತ್ತಾರೆ.

ಘನತೆಯನ್ನು ಹೊಂದಿದ ವೈಸ್‌ರಾಯಿಯವರು ಈ ಕೆಳಗೆ ಕಾಣಿಸಿರುವ ರೀತಿಯಲ್ಲಿ ಅಪ್ಪಣೆ ಕೊಡಿಸಿರುವದಕ್ಕೆ ಅನುಗುಣವಾಗಿ ಮೈಸೂರು ಮತ್ತು ಕೊಡಗಿನ ಪ್ರಜೆಗಳು ಸಂತೋಷದೊಡನೆ ಯಥಾಶಕ್ತಿ ಸಹಾಯ ಮಾಡುವರೆಂದು ಬ್ರಾಂಚು ಕಮಿಟಿಯವರು ದೃಢವಾಗಿ ನಂಬುತ್ತಾರೆ. ವೈಸ್‌ರಾಯಿಯವರು ಅಪ್ಪಣೆ ಕೊಡಿಸಿರುವದೇನೆಂದರೆ:—

“ಯುದ್ಧದ ದೆಸೆಯಿಂದ ಉಂಟಾಗುವ ಸಕಲ ವಿಧವಾದ ಕಷ್ಟಗಳ ಉಪಶಮನಾರ್ಥವಾಗಿ ಎಂದರೆ, ಮುಖ್ಯವಾಗಿ ಚಕ್ರಾಧಿಪತ್ಯದ ರಕ್ಷಣೆಗೋಸ್ಕರವೂ ಮತ್ತು ಅಂಥಾ ಚಕ್ರಾಧಿಪತ್ಯಕ್ಕೆ ಸೇರಿದ ಸಾಮಾನ್ಯ ಯೋಗಕ್ಷೇಮಕ್ಕೋಸ್ಕರವೂ ಪ್ರಾಣವಾಸೆಯನ್ನು ತೊರೆದು ಕಷ್ಟಗಳನ್ನು ಸಹಿಸಿಕೊಂಡು ಯುದ್ಧಮಾಡುವವರಾಗಿರುವಂಥಾ ಜನಗಳ ಕುಟುಂಬದವರಿಗೂ, ಆಶ್ರಿತರಿಗೂ ಯುದ್ಧದ ದೆಸೆಯಿಂದ ತಪ್ಪದೆ ಸಂಭವಿಸಬಹುದಾದ ಕಷ್ಟಗಳ ಮತ್ತು ವೇದನೆಯ ಉಪಶಮನಾರ್ಥವಾಗಿ ಇಂಡಿಯಾ ದೇಶದ ಸಂಸ್ಥಾನಾಧಿಪತಿಗಳೂ, ಭೂಮಾಲೀಕದಾರರೂ, ವರ್ತಕರೂ ಮತ್ತು ...

...ಡಿಯನ್ ಪ್ರಜೆಗಳೂ ಸಹ ತಮ್ಮ ತಮ್ಮ ಶಕ್ತ್ಯನುಸಾರವಾಗಿ ಸಹಾಯ ಮಾಡುವರೆಂಬದಾಗಿ ನಾವು ದೃಢವಾಗಿ ನಂಬಿದೇವೆ. "

ಕೊಡತಕ್ಕ ಚಂದಾ ಹಣವನ್ನು " ಇಂಪೀರಿಯಲ್ ಇಂಡಿಯನ್ ರಿಲೀಫ್ ಫಂಡಿನ ಮೈಸೂರು ಮತ್ತು ಕೊಡಗು ಬ್ರಾಂಚು " ಎಂಬ ಹೆಸರಿನಿಂದ ಇದರಡಿ ಯವರಿಗೆ ಪಾವತಿ ಮಾಡಬಹುದು. ಬೆಂಗಳೂರು ಬ್ರಾಂಚಿನಲ್ಲಿ ನೇದಾ ಮೈಸೂರು ಬ್ಯಾಂಕಿಗೆ, ಬ್ರಾಂಚ್ ಕಮಿಟಿಯ ಜಾಯಿಂಟ್ ಆನರರಿ ಸೆಕ್ರಿಟರಿ ಗಳೆನ್ನಿಸಿ ಇಬ್ಬರಲ್ಲಿ ಯಾರಾದರೂ ಒಬ್ಬರಿಗೆ ಅಥವಾ, ಯಾವದಾದರೂ ಸಬ್ ಕಮಿಟಿಯ ಸೆಕ್ರಿಟರಿಯವರಿಗೆ ವಸೂಲಾದ ಚಂದಾ ಹಣಗಳ ಪಟ್ಟಿಯನ್ನು ಸ್ಥಳೀಯ ವರ್ತಮಾನ ಪತ್ರಿಕೆಗಳಲ್ಲಿ ಆಗಾಗ್ಗೆ ಪ್ರಕಟಿಸಲಾಗುವುದು ; ಮತ್ತು ಆ ವಿಷಯವನ್ನು ವೈಸ್‌ರಾಯಿಯವರ ಮನೆವಾರ್ತೆಯ ಕಂಟ್ರೋಲರವರಿಗಿಯೂ ಮತ್ತು ಈ ಫಂಡಿನ ಸೆಂಟ್ರಲ್ ಕಮಿಟಿಗೆ ಆನರರಿ ಸೆಕ್ರಿಟರಿಯವರಾಗಿಯೂ ಇರುವ ಮೇಜರ್ ಶಾರ್ ಮೆಕ್ಕೆಂಜಿಯವರಿಗೆ ಕ್ರಮವಾಗಿ ತಿಳಿಸಲಾಗುವುದು.

ಈ ಫಂಡಿನ ವಿಷಯದಲ್ಲಿ ಇನ್ನೂ ಹೆಚ್ಚು ವಿವರಗಳನ್ನು ತಿಳಿದುಕೊಳ್ಳಬೇಕಾದರೆ, ಬ್ರಾಂಚ್ ಕಮಿಟಿಯ ಅಥವಾ ಸಬ್ ಕಮಿಟಿಯ ಯಾವ ಮೆಂಬರನ್ನಾದರೂ ಬರೆದುಕೊಂಡರೆ ಅವರು ಬೇಕಾದ ಅಂಶಗಳನ್ನು ತಿಳಿಸುವರು.

ದೊರೆ ಮತ್ತು ಚಕ್ರವರ್ತಿಯವರಾದ ಸಾರ್ವಭೌಮರನ್ನು
ಸರ್ವೇಶ್ವರನು ಸಂರಕ್ಷಿಸಲಿ !

ಬಾತ್ಮಿದಾರರಿಗೆ ನೋಟೀಸ್.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಜೋಕೆದಾರರಾಗುವದಿಲ್ಲ ವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜಾಗಾ ಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸವನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು ; ಇಂಥವುಗಳಿಗೆ ನಾವು ಜಾಗಾ ಕೊಡಲಾರೆವು.

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲುಪುವಂತೆ ಕಳುಹಿಸಬೇಕು. ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಅದೇ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ. ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ.

ಕೆ. ನಾಗಪ್ಪಯ್ಯ, ಕೆರೆಕೊಪ್ಪ :—ನೀವು ಯಾವ ಪತ್ರಿಕೆಯಲ್ಲಿ ಓದಿ ದಾರ್ಥವನ್ನು ತಾವು ಪಡೆದಿರೋ ಆ ಪತ್ರಿಕೆಗೆ ನಿಮ್ಮ ಆಕ್ಷೇಪವನ್ನು ಬರೆಯಿರಿ

ದೇಶಪಾಂಡೆ ಕೆ. ಮಧ್ವರಾವ್ :—ನಿಮ್ಮ ಜವಾಬಿನ ಆಕ್ಷೇಪಣೆಗೆ ತಕ್ಕ ಕಾರಣಗಳೇನೂ ತೋರಿಬಲ್ಲ.

ಶ್ರೀರಾಂಪೇಟೆ ಬಡಜನಗಳು :—ನಿಮ್ಮ ಎರಡು ಬಾತ್ಮಿಗಳಲ್ಲೂ ಬರೆದವರ ಹೆಸರು ವಿಳಾಸಗಳು ಇಲ್ಲ ಇಂಥವುಗಳಿಗೆ ನಾವು ಗಮನಕೊಡಲಾರೆವು. ಕಷ್ಟ ನಷ್ಟಗಳಿಗೆ ಗುರಿಯಾದವರ ಮತ್ತು ಬಾತ್ಮಿದಾರರ ಹೆಸರು ವಿಳಾಸಗಳನ್ನು ಸರಿಯಾಗಿ ತಿಳಿಸಬೇಕು

ಪ್ರಕೃತ್ ವರ್ಷ, ವೀರೇಗೌಡನದೊಡ್ಡಿ ; ಹೊಂಗನೂರು ಬಾತ್ಮಿ ; ಇಂತವಾದಿ ದಾತ್ಮ ; ಯಥಾರ್ಥವಾದಿ, ಆದಗ :—ಈ ಬಾತ್ಮಿಗಳಲ್ಲಿ ವಿಶೇಷ ವರ್ತಮಾನ ಏನೂ ಕಂಡುಬರುವುದಿಲ್ಲ —ಎಡಿ]

ಕರೆಸ್ಪಾಂಡೆನ್ಸ್.

ಪೋಸ್ಟ್ ಆಫೀಸ್ ವಿಚಾರ.

ಅಯಾ, —ತರೀಕೆರೆ ತಾಲ್ಲೂಕು ತಳ್ಳಿನಂದ ನಾಯಕನಹಟ್ಟಿ ಮಾರ್ಗ ವಾಗಿ ಒಂದು ಟಪಾಲು ಇದೆ ಅದು ರಸ್ತೆ ವಳೆ ಓಡಾಡುವದಿಲ್ಲ. ದೇವರಹಳ್ಳಿ ವಳೆ ಓಡಾಡುತ್ತೆ. ನಾಯಕನಹಟ್ಟಿ ಮುಂದ ತಳ್ಳಿಗೆ 11 ಮೈಲಿ ಆಗುತ್ತೆ. ಅಂಚೆಯವನು ಇಬ್ಬರಾದರೆ ಇವರು ದಿನಕ್ಕೆ ಒಂದು ಸಲ ಹೋಗಿ ಬರುತ್ತಾರೆ. ರಸ್ತೆ ಮಧ್ಯ ಒಂದು ಲೆಟರ್ ಬಾಕ್ಸು ಇಟ್ಟರೆ ಸುತ್ತುಮುತ್ತಣ ಅನೇಕ ಗ್ರಾಮಗಳಿಗೆ ಅನುಕೂಲವಾಗುತ್ತದೆ ಆ ಸ್ಥಳದಲ್ಲಿ 14-15 ಮನೆಗಳ ಒಂದು ಗ್ರಾಮವಿದೆ ಅಲ್ಲಿ ಇಟ್ಟರೆ ಅಂಚೆ ವಿಲಾಖೆಗೂ ತುಂಬಾ ಉತ್ಪತ್ತಿ ಆದೀತು ಇಲಾಖೆಯವರು ಈವಿಷಯ ಪ್ರಜೆಗಳಿಗೆ ಅನುಕೂಲಮಾಡಿಕೊಟ್ಟಾರೆಂದು ನಂಬುತ್ತೇವೆ

ತಿಮ್ಮಪ್ಪನಹಳ್ಳಿ. ಬಿ. ರೆಡ್ಡಿ ಶಿವರುದ್ರಪ್ಪ.

ಮಲೆನಾಡಿನ ದನಕರುಗಳು.

ಅಯಾ, —ಮಲೆನಾಡಿನ ರೈತರ ಪಶುಗಳ ದನಕರುಗಳ ತೊಂದರೆಗಳು ವಿಪರೀತವಾಗಿವೆ ಹೆಸರಿಗೆ ಮಳೆ ದೇಶವೇ ಹೊರತು ದನಕರುಗಳಿಗೆ ಹುಲ್ಲು ಮೇವಿನ ತೊಂದರೆ ವಿಪರೀತವಾಗಿವೆ ಇಲ್ಲಿ ದನಗಳ ತ್ರೀಣದೆಸೆಯು ಬಹಳ ಶೋಚನೀಯವಾಗಿದೆ. ಅವುಗಳಿಗೆ ಗುಡ್ಡದ ಮರಗಳ ಸೊಪ್ಪು, ಅಲ್ಪಸ್ವಲ್ಪ ಭತ್ತದ ಹುಲ್ಲು, ಇಷ್ಟೇ ಹೊರತು ಮತ್ತೆ ಯಾವ ಉತ್ತಮವಾದ ಆಹಾರವೂ ಇಲ್ಲ. ಹುಟ್ಟಿಗೆ ಇಲ್ಲಿನ ಕಡ್ಡಿ ಕಸವನ್ನು ತಿಂದು ದನಕರುಗಳಿಗೆ ವಿಪರೀತವಾದ ರೋಗ ಬಹುಬಲಯವಾಗಿ ಹೋಗಿವೆ. ಇನ್ನೂ ಅನೇಕ ಜೀವರಾಶಿಗಳಿಗೆ ಮೇವಿಲ್ಲದೆ ನೂರಾರು ಮೈಲಿ ಘಾಟಿ ಮೇವಿಗೆ ಹೊಡೆಯುವ ಪದ್ಧತಿಯುಂಟು. ಅಲ್ಲಿ ಅನೇಕ ಸಾಯುತ್ತವೆ; ಇನ್ನೂ ಅನೇಕ ಹುಲಿ ಬಾಯಿಗೆ ಸಿಕ್ಕಿ ಹಾಳಾಗುತ್ತವೆ. ಹೀಗಾಗಿ ಮಲೆನಾಡಿನಲ್ಲಿ ದನಕರುಗಳ ಮೇವಿಗೆ ತುಂಬಾ ಕಷ್ಟವಿರುವುದರಿಂದ ಸರ್ಕಾರದವರು ಅಲ್ಲಲ್ಲಿ ದನಗಳು ಮೇಯುವುದಕ್ಕೆ ಹುಲ್ಲುಗಾವಲುಗಳನ್ನು ಏರ್ಪಡಿಸಿದರೆ ಮಹೋಪಕಾರವಾದೀತು. ಮೂಗುಜೀವಿಗಳ ಹಿತಚಿಂತಕ.

ಬಡವಮಾಸ್ತರುಗಳ ಗ್ರೇಡುಗಳು.

ಅಯ್ಯಾ,—ಈಗ ಸರ್ಕಾರದವರು ವಿದ್ಯಾ ಇಲಾಖೆಯ ಎ.ವಿ. ಸ್ಕೂಲ್ ಮಾಸ್ಟರಿಗೆ ಗ್ರೇಡುಗಳನ್ನು ಕಲ್ಪಿಸಿರುವುದು ಸರಿಯಷ್ಟೆ. ಇವುಗಳನ್ನು ಕೊಡುವದರಲ್ಲಿ ಸರಿಯಾದ ನ್ಯಾಯ ಮೇಲ್ಪಟ್ಟ ಆಫೀಸರುಗಳಿಗೆ ಬಂದಂತೆ ತೋರುವುದಿಲ್ಲ. ದೃಷ್ಟಾಂತವಾಗಿ ನರಸೀಪುರದ ಎ ವಿ ಸ್ಕೂಲಿನಲ್ಲಿ ಕಳೆದ 20 ವರ್ಷಗಳಿಂದ ಕೆಲಸಮಾಡುವ 15 ರೂ. ಸಂಬಳದ ಇಂಗ್ಲಿಷ್ ಹೈಯರ್ ನಾರ್ಮಲ್ ಟ್ರೈನಿಂಗ್ ಪ್ಯಾಸಾದ ಒಬ್ಬ ಉಪಾಧ್ಯಾಯರಿಗೆ ಮಾತ್ರ ಅವರಿಗೆ ಇದ್ದ ಸಂಬಳಕ್ಕೆ ಮೇಲಾದ ಗ್ರೇಡು ದೊರೆಯದೆ ವ್ಯಥೆಪಡುವದನ್ನು ನಾನು ಕಣ್ಣಾರ ನೋಡಿದೆನು. ಟ್ರೈನಿಂಗ್ ಆದ ಉಪಾಧ್ಯಾಯರಿಗೂ, ಇತರರಿಗೂ ಯಾವ ವ್ಯತ್ಯಾಸವೂ ಗ್ರೇಡುಗಳ ವಿತರಣೆಯಲ್ಲಿ ಕಾಣುವುದಿಲ್ಲ. 10 ರೂಪಾಯಿನವರಿಗೆ 15-1-20 ರ ಗ್ರೇಡೂ, 12-1-15 ರ ಗ್ರೇಡೂ ದೊರಕಿತು. ಆದರೆ 16 ರೂ. ಸಂಬಳವುಳ್ಳವರಿಗೆ ಮಾತ್ರ 15-1-20 ರ ಗ್ರೇಡು ಸಿಕ್ಕಿದೆ. ಇದು ಯಾವ ನ್ಯಾಯವೋ ತಿಳಿಯದು. ಇಂತಹ ವಿಪರ್ಯಾಸಗಳು ನಮ್ಮ ಮೈಸೂರ್ ಸರ್ಕಾರದಲ್ಲಿ ವಿರಳವಲ್ಲ. ಎಂ. ಎಸ್.

ಸ್ಕೂಲ್ ಬೇಕು.

ಅಯ್ಯಾ,—ತೀರ್ಥಹಳ್ಳಿ ತಾಲ್ಲೂಕು ತೀರ್ಥಮುತ್ತೂರು ಗ್ರಾಮದಲ್ಲಿ ಒಂದು ಸ್ಕೂಲ್ ಆಗಬೇಕೆಂದು ಅನೇಕ ಸಾರಿ ಅರ್ಜಿ ಬರೆದುಕೊಂಡಾಗ್ಯೂ ಸಮುತ್ತರವೇನೂ ಬರಲಿಲ್ಲ. ಡೆಪ್ಯುಟಿ ಕಮಿಷನರ್ ಸಾಹೇಬರವರು ದಯಮಾಡಿದ್ದಾಗ ಗ್ರಾಮಸ್ಥರು ಸ್ಕೂಲ್ ಬಗ್ಗೆ ಪ್ರಾರ್ಥಿಸಿದ ಮೇಲೆ ಅವರು ಇಲ್ಲಿ ಸ್ಕೂಲ್ ಅವಶ್ಯಕವೆಂದೂ, ವಿದ್ಯಾ ಇಲಾಖಾ ಮುಖ್ಯಾಧಿಕಾರಿಗಳಿಗೆ ಸೂಚಿಸಿ ಸ್ಕೂಲ್ ಕೊಡಿಸುತ್ತೇವೆಂದೂ ಅಪ್ಪಣೆ ಮಾಡಿದ್ದರು. ತಾಲ್ಲೂಕು ಅಮಲ್ದಾರ್ರವರು ಸ್ಕೂಲ್ ಕಟ್ಟಡದ ಬಗ್ಗೆ ಮೀಟಿಂಗ್ ನಡಿಸಿ ಅಂದಾಜು ಮಾಡಿದ್ದರಲ್ಲಿ 12,000 ರೂಪಾಯಿ ಬೇಕಾಗಲೂ, ಆ ಬಗ್ಗೆ 600 ರೂಪಾಯನ್ನು ಗ್ರಾಮಸ್ಥರು ಕೊಡಬೇಕೆಂತಲೂ ಇತ್ಯರ್ಥಪಡಿಸಿದ ಮೇರೆಗೆ ಇಲ್ಲಿಯ ಶ್ರೀಮಠದವರು ಸ್ಕೂಲ್ ಕಟ್ಟಡದ ಬಗ್ಗೆ 600 ರೂಪಾಯನ್ನು ತಾಲ್ಲೂಕು ಕಛೇರಿಗೆ ಹಾಜರ್ಮಾಡಿರುವದಾಗಿ ಕೇಳುತ್ತೇನೆ. ಆದರೂ ಈ ವರೆಗೂ ಯಾವ ಸಂಗತಿಯೂ ಗೊತ್ತಾಗಲಿಲ್ಲ. ಪ್ರಜಾಭಿವೃದ್ಧಿಯಲ್ಲೇ ಬದ್ಧಕಂಕಣರಾದ ಮಹಾರಾಜಾ ಸರ್ಕಾರದವರು ನಮ್ಮ ಗ್ರಾಮಕ್ಕೆ ಸ್ಕೂಲ್ ದಯಪಾಲಿಸಿ ಬಾಲಕರನ್ನು ಸುಶಿಕ್ಷಿತರಾಗುವಂತೆ ಮಾಡಿಸುವರೆಂದು ಹಾರೈಸುತ್ತೇನೆ ಸ್ಕೂಲ್ ಕಟ್ಟಡವು ತಯಾರಾಗುವ ತನಕ ಶ್ರೀಮಠದವರ ಒಂದು ಮನೆಯನ್ನು ಸ್ಕೂಲ್ ಮಾಡುವ ಬಗ್ಗೆ ಕೊಡುತ್ತೇವೆಂದು ಮುಖತಃ ಸೂಚಿಸಿರುತ್ತಾರೆ. ಪ್ರಾರ್ಥಕ.

ದನಗಳ ಹುಲ್ಲಿಗೂ ನೀರಿಗೂ ತೊಂದರೆಯಾಗಿದೆಯಂತೆ.

ಅಯ್ಯಾ,—ಗುಬ್ಬಿ ತಾಲ್ಲೂಕು ಹಾಗಲವಾಡಿ ಪಾಳಯಗಾರರು ಹರಳಕಟ್ಟೆ ಎಂಬ ಗ್ರಾಮವನ್ನು ಸರ್ಕಾರದಿಂದ ಸಾಗುವಳಿಗೆ ಹಿಡಿದಿರುತ್ತಾರೆ. ಈ ಗ್ರಾಮಕ್ಕೆ ಒಂದು ಕೆರೆಯೂ, ಸುತ್ತಮುತ್ತ ಕೆಲವು ಗ್ರಾಮಗಳೂ ಇರುತ್ತವೆ ಈ ಗ್ರಾಮಗಳ ಜಾನುವಾರುಗಳ ನೀರಿಗೆ ಈ ಕೆರೆ ಹೊರತು ಬೇರೆ ಮಾರ್ಗವಿಲ್ಲ ಹರಳಕಟ್ಟೆ ಗೋಮಾಳವನ್ನು ಸರ್ಕಾರದವರು ಸಾಲಿಯಾನಾ ಹತ್ತು ಚಿಲ್ಲರೆ ರೂಪಾಯಿಗೆ ಹರಾಜು ಮಾಡುತ್ತಾರೆ. ಹರಾಜಿನಲ್ಲಿ ಸದರಿ ಪಾಳಯಗಾರರು ತಮ್ಮ ಹೆಸರಿಗೆ ನಿಲ್ಲಿಸಿಕೊಂಡು ಸುತ್ತಲ ಗ್ರಾಮದ ರೈತರುಗಳಿಗೂ, ವಲಸೆಯಾಗಿ ಬರುವ ದನಕರುಗಳಿಗೂ ದನಕ್ಕೆ ನಾಲ್ಕಾಣೆಯಂತೆಯೂ, ಎಮ್ಮೆಗೆ ಎಂಟಾಣೆಯಂತೆಯೂ, ಕುರಿಗೆ ಒಂದೂವರೆ ಆಣೆಯಂತೆಯೂ ವಸೂಲ್ಮಾಡಿಕೊಳ್ಳುತ್ತಾರೆ. ಇದಕ್ಕೆ ರಸೀತಿ ಕೇಳಿದರೆ ಕೊಡುವದೇ ಇಲ್ಲ. ಇದು ಹಾಗಿರಲಿ. ಸುತ್ತಲಿರುವ ಗ್ರಾಮದಲ್ಲಿ ರೈತರು ಇವರು ಹಿಡಿದಿರುವ ಗ್ರಾಮದ ಜಮೀನನ್ನು ಸಾಗುವಳಿ ಮಾಡಿದರೆ ಸರಿ ; ಇಲ್ಲವಾದರೆ ಆ ಗ್ರಾಮದ ಗೋಮಾಳದ ಪ್ರದೇಶಕ್ಕೆ ದನ ಕುರಿಗಳು ಹೋಗಿ ಮೇಯ್ದರೆ, ಇಲ್ಲವೇ ಸದರಿ ಗ್ರಾಮದ ಕೆರೆಗೆ ಹೋಗಿ ನೀರು ಕುಡಿಸಿದರೆ ಸರ್ಕಾರಿ ದೊಡ್ಡಿಗೆ ಸೇರಿಸುತ್ತಾರೆ ಹುಲ್ಲುಬನ್ನಿಯನ್ನು ರೈತನು ಕೊಟ್ಟಿದ್ದಾಗ್ಯೂ ಏನೂ ಪ್ರಯೋಜನವಾಗುವದಿಲ್ಲ. ರೈತರು ಓಡಾಡುವುದಕ್ಕೆ ಪಾಳಯಗಾರರು ರಹಿತಿಕೊಟ್ಟಿರುವದಿಲ್ಲ. ಮತ್ತು ಅನೇಕ ದಫ ದೊಡ್ಡೀ ಜುಲ್ಮಾನೆಯನ್ನು ತಾವೇ ವಸೂಲ್ಮಾಡಿಕೊಂಡಿರುತ್ತಾರೆ. ಈ ಪ್ರಾಂತದ ಜನರು ಈ ರೀತಿ ಬಹಳ ದುಃಖ ಕೆತ್ತಿರುತ್ತಾರೆ. ಹರಳಕಟ್ಟೆ ಕೆರೆಯು ಸರ್ಕಾರಿಯಾಗಿದ್ದಾಗ್ಯೂ ಕೆರೆಯು ತಮ್ಮ ಸ್ವಂತದ್ದೆಂದು ಹಳ್ಳಿ ಜನರನ್ನು ಮೋಸ ಮತ್ತು ಭಯಪಡಿಸಿ, ಜಾನುವಾರುಗಳು ನೀರು ಕುಡಿಯದಂತೆ ಆಟಂಕ ಪಡಿಸುವದು ಮಾತ್ರವಲ್ಲದೆ ಈ ಕೆರೆಯ ಮೀನು ವಗೈರೆಯನ್ನು ತಾವೇ ಹಿಡಿಸಿ ಮಾರಿಕೊಳ್ಳುತ್ತಾರೆ ಮತ್ತು ಹಾಗಲವಾಡಿ ಗ್ರಾಮದ ರೈತರಿಗೂ ಅನೇಕರಿಗೆ ತೊಂದರೆಗಳು ಉಂಟೆಂದು ಬಹು ಜನಗಳು ಸಂಕಟಕ್ಕೆ ಗುರಿಯಾಗಿರುತ್ತಾರೆ ಈ ವಿಷಯಗಳನ್ನೆಲ್ಲಾ ಕುರಿತು ಗ್ರಾಮಾಂತ್ರದ ಜನಗಳು ಈ ಪಾಳಯಗಾರರಿಂದ ತಮಗುಂಟಾದ ಸಂಕಟವನ್ನು ಪರಿಹರಮಾಡಿಸಿಕೊಡಬೇಕೆಂದು ಜನರಲ್ ಅಸಿಸ್ಟಂಟ್ ಕಮಿಷನರ್ ಸಾಹೇಬರವರ ಜನಾಬಿಗೂ, ಘನತೆಯುಳ್ಳ ದಿವಾನ್ ಸಾಹೇಬರವರ ಜನಾಬಿಗೂ ಅರ್ಜಿಗಳ ಮುಖಾಂತರ ಅರಿಕೆ ಮಾಡಿಕೊಂಡಿದ್ದಾಗ್ಯೂ ಈ ವರಿಗೂ ಯಾವ ವಿಧವಾದ ಪರಿಹಾರವೂ ಈ ಬಡ ಪ್ರಜೆಗಳಿಗೆ ಇನ್ನೂ ಉಂಟಾಗಿಲ್ಲ. ಚಿಕ್ಕರಾಂಪುರದ ಪಟೇಲ್ ಮರೀಗೌಡ.

[ಬಡರೈತರಿಗೆ ಗ್ರಾಮಾಂತರಗಳಲ್ಲಿ ಉಂಟಾಗಬಹುದಾದ ಕಷ್ಟನಷ್ಟಗಳನ್ನು ಸ್ಥಳಾಧಿಕಾರಿಗಳು ವಿಚಾರಣೆಯಿಂದ ಪರಿಹರಿಸಿಕೊಡುವುದಕ್ಕೆ ಪ್ರಯತ್ನ ಪಡದಿದ್ದರೆ ಸರ್ಕಾರದವರ ಸದುದ್ದೇಶಗಳೂ, ಕಾಯಿದೆಗಳೂ ಸಾರ್ಥಕಹೊಂದುವ ಬಗೆ ಹೇಗೋ ತಿಳಿಯುವುದಿಲ್ಲ.—ಎಡಿ.]

130 ಹುಡುಗರಿಗೆ ಇಬ್ಬರು ಉಪಾಧ್ಯಾಯರು ಸಾಕೇ ?

ಅಯಾ. —ಅರಕಲಗೂಡು ತಾಲ್ಲೂಕು ದೊಡ್ಡಮಗ್ಗೆ ಸ್ಕೂಲನ್ನು ತಾಲ್ಲೂಕು ಪ್ರೋಗ್ರೆಸ್ ಕಮಿಟಿ ಪ್ರೆಸಿಡೆಂಟರಾದ ನಮ್ಮ ಅಮಲ್ದಾರ್ ಮ ಜಿ ಎಚ್ ರಾಮಸ್ವಾಮಯ್ಯಂಗಾರ್ರವರು ತಾ. 10 ರಲ್ಲಿ ಪರಾಂಬರಿಸಿದರು. ಸ್ಕೂಲಿನಲ್ಲಿ 110 ವಿದ್ಯಾರ್ಥಿಗಳು ರಿಜಿಸ್ಟರಿಗೆ ಸೇರಿಯೂ, 20 ಮಂದಿ ವಿದ್ಯಾರ್ಥಿಗಳು ಸ್ಕೂಲಿಗೆ ಸೇರಬೇಕೆಂದು ಎರಡು ತಿಂಗಳಿಂದಲೂ ಉಮೇದುಗಾರರಾಗಿಯೂ ಇಂತು 130 ಬಾಲಕರೂ 36 ಬಾಲಕರು ಕೂಳಿತುಕೊಳ್ಳಬಹುದಾದ ಕಟ್ಟಡದಲ್ಲಿ ಕೂಳಿತುಕೊಳ್ಳಲು ಸ್ಥಳವಿಲ್ಲದೆ ಸ್ಕೂಲ್ ಜಗಲಿ, ಮುಖ್ಯತೋಟ, ಇವುಗಳಲ್ಲಿ ಕೂಳಿತಿರುವುದನ್ನೂ, ಇದರಂತೆ ಬಾಲಕರ ಸಂಖ್ಯೆ ಇರುವ ಸ್ಕೂಲುಗಳಲ್ಲಿ ಕನಿಷ್ಠ ಪಕ್ಷ 5 ಮಂದಿ ಉಪಾಧ್ಯಾಯರು ಇದ್ದರೂ ಇಲ್ಲಿ ಆನಾದಿಯಿಂದಲೂ ಬಂದ ಇಬ್ಬರೇ ಉಪಾಧ್ಯಾಯರು ಈ 130 ಮಂದಿ ವಿದ್ಯಾರ್ಥಿಗಳಿಗೂ ಬೋಧನೆ ಮಾಡಬೇಕಾದುದನ್ನೂ ಇಲಾಖಾಧಿಕಾರಿಗಳ ದೃಷ್ಟಿಗೆ ಬಿದ್ದಿದ್ದಾಗ್ಯೂ, ಉಪಾಧ್ಯಾಯರುಗಳೂ ಹೊಸ ಕಟ್ಟಡವು ಮಂಜೂರಾಗದಕ್ಕಾಗಿ ಸ್ಕೂಲು ಸುಸ್ಥಿತಿಗೆ ಬರಲು ಅಸಾಧ್ಯವಾಗಿರುವುದನ್ನೂ, ಇಬ್ಬರು ಉಪಾಧ್ಯಾಯರಿಗೆ ಸ್ಕೂಲ್ ಮ್ಯಾನೇಜ್ ಮಾಡುವುದರಲ್ಲಿರುವ ತೊಂದರೆಗಳನ್ನೂ ಪರಾಂಬರಿಸಿ, ಬಹಳವಾಗಿ ಖೇದಪಟ್ಟುಕೊಂಡು ತಾವು ಇಲಾಖಾ ಅಧಿಕಾರಿಗಳಿಗೆ ಜಲ್ದಿಗೆ ಮೂವರು ಉಪಾಧ್ಯಾಯರನ್ನಾದರೂ ಕೊಡಿಸಿಕೊಡುವಂತೆಯೂ, ಕೂಡಲೆ ಹೊಸ ಕಟ್ಟಡವು ತಯಾರಾಗುವಂತೆಯೂ, ತಯಾರಾಗುವವರೆಗೂ ಬೇರೆ ಕಡೆ ಸ್ಕೂಲು ನಡೆಯಲು ಬಾಡಿಗೆ ಮಂಜೂರು ಮಾಡಿಸಿಕೊಡುವಂತೆಯೂ ಬರೆಯುವುದಾಗಿ ಅಪ್ಪಣೆಕೊಡಿಸಿದರಲ್ಲದೆ ಇಷ್ಟು ಬಾಲಕರನ್ನು ಇಟ್ಟುಕೊಂಡು ವಿಚಕ್ಷಣೆಯಿಂದ ಸ್ಕೂಲ್ ಮ್ಯಾನೇಜ್ ಮಾಡುತ್ತಿರುವ ಸ್ಕೂಲಿನ ಅಭಿವೃದ್ಧಿಗೆ ಕಾರಣಭೂತರಾದ ಹೆಡ್ ಮಾಸ್ಟರು ಮ॥ ಲಕ್ಷ್ಮೀವೆಂಕಟೇಶಯ್ಯನವರು ಬಾಲಕರಿಂದ ತಯಾರಿಸಿದ ಬಟ್ಟೆನ ಕೆಲಸ, ಚಿತ್ರ, ಕಾಗದ ಹೆಣೆಯುವುದು, ಕಾಗದ ಮಡಿಸುವುದು, ಕಾಗದ ಕತ್ತರಿಸುವುದು, ಕ್ಲೇಮಾಡಲಿಂಗು, ಮ್ಯಾಪು ಡ್ರಾಯಿಂಗು ಮುಂತಾದವುಗಳ ಮಾದರಿಗಳನ್ನು ಪರಾಂಬರಿಸಿ, ಬಾಲಕಿಯರ ಗಾನದಿಂದ ಆಹ್ಲಾದಿತರಾಗಿ ಈ ಗ್ರಾಮದಲ್ಲಿ ಬಾಲಕಿಯರ ಪಾಠಶಾಲೆಯು ಇರಬೇಕಾದುದು ಅವಶ್ಯಕವೆಂದೂ ಇದನ್ನು ಕೊಡುವಂತೆ ಶಿಫಾರಸು ಮಾಡುವುದಲ್ಲದೆ ತಾಲ್ಲೂಕು ಪ್ರೋಗ್ರೆಸ್ ಕಮಿಟಿಯಲ್ಲಿ ಈ ಸ್ಕೂಲಿನ ದುರದೃಷ್ಟವನ್ನು ಕುರಿತು ಚರ್ಚೆಗಿಟ್ಟುಕೊಂಡು ಶಿಕಾರ್ಸು ನಡಿಸುವದಾಗಿಯೂ ಅಪ್ಪಣೆಕೊಡಿಸಿ ಪಯಣಮಾಡಿದರು. ವಿದ್ಯಾಭಿವೃದ್ಧಿಯಲ್ಲಿ ಬದ್ಧಾದರರಾಗಿರುವ ಮೇಲ್ಪಟ್ಟ ವಿದ್ಯಾಧಿಕಾರಿಗಳ ಗಮನವು ಈ ಸ್ಕೂಲಿನ ಕಡೆಗೆ ಬಿದ್ದು ಈ ಸ್ಕೂಲು ಉತ್ತಮಸ್ಥಿತಿಗೆ ಬರುವುದೆಂದು ನಂಬಿ ನಿರೀಕ್ಷಿಸುವೆವು

ಗ್ರಾಮವಾಸಿ.

[ಈಗ ಸಂಸ್ಥಾನದಮೇಲೆ ಇರತಕ್ಕ ಸ್ಕೂಲುಗಳಿಗೇನೇ ವಿಶಾಲವಾದ ಏರ್ಪಾಡು ಇರುವುದಿಲ್ಲವೆನ್ನುವುದಕ್ಕೆ ಇನ್ನೊಂದು ದೃಷ್ಟಾಂತವಾಗಿದೆ.—ಎಡಿ.]

ತಾಲ್ಲೂಕು ವರ್ತಮಾನಗಳು.

ಅರಸೀಕೆರೆ ತಾ॥ ಹಾರನಹಳ್ಳಿ.—ಇಲ್ಲಿ ಆಗಾಗ್ಗೆ ಮಳೆ ಆಗಿ ಪೈರು ಬಹಳ ಚೆನ್ನಾಗಿತ್ತು ; ಆದರೆ ಈಚಿಗೆ ಮಳೆ ಬಾರದೆ ಸ್ವಲ್ಪ ಬಾಡಿವೆ. ಧಾರಣೆನಾಸಿಗಳು ಹೆಚ್ಚುತ್ತಾ ಇವೆ. ಕೆರೆಗೆ ನೀರಿಲ್ಲ.—ಕಳೆದ ತಾ. 25 ನೇ ಮಂಗಳವಾರ ರಾತ್ರಿ ನಮ್ಮ ದಿವಾನ್ ಮ॥ ಎಂ. ವಿಶ್ವೇಶ್ವರಯ್ಯನವರ ಅಳ್ಳಂದಿರು ಮ॥ ವೇ॥ ಪಂಡಿತ ವೆಂಕಟೇಶಶಾಸ್ತ್ರಿಗಳವರ ಮನೆಯಲ್ಲಿ ಪಾಲುಘಾಟ್ ವಿದ್ವಾನ್ ಈಶ್ವರಯ್ಯನವರ ಸಂಗೀತವಾಯಿತು. ಸಭಿಕರು ಕರ್ಣಾನಂದಹೊಂದಿ ಸಂತೋಷಪಟ್ಟರು.

ಹುಣಸೂರು ತಾ॥ ಚಿಕ್ಕಾಡಿಗನಹಳ್ಳಿ.—ಈ ಪ್ರಾಂತ್ಯ ಕಾರ್‌ಗೆ 6 ಆಣೆ ಬೆಳೆ ಆಗಬಹುದು. ಮಳೆ 20 ದಿವಸದಿಂದ ಇಲ್ಲದೆ ಪೈರು ಒಣಗುತ್ತಿದೆ. ರೈತರ ಮತ್ತು ದನಗಳ ಕಷ್ಟ ದಿನೇದಿನೇ ಹೆಚ್ಚುತ್ತಿದೆ ರಾಗಿ 14 ಸೇರು, ಅಕ್ಕಿ 6 ಸೇರು, ಬೇಳೆ 5 ಸೇರು, ಹುರಳಿ 10 ಸೇರು ಮಾರಾಟವಾಗುತ್ತಿದೆ —ಇಲ್ಲಿಗೆ ಸಮೀಪದ ಜಾಬಗೆರೆ ಗ್ರಾಮದಲ್ಲಿ ಲಿಂಗಾಯತರ ದೊಡ್ಡ ಹಟ್ಟಿ ಕೆಂಪಯ್ಯನವರ ಮಗಳು ತಾ. 27 ರಲ್ಲಿ ಕೊಳದಲ್ಲಿ ಬಿದ್ದು ಮೃತಪಟ್ಟಳು. 3 ನೇ ದಿನ ಪೋಲೀಸ್ ಜಮಾದಾರ್ರು ಬಂದು ಶವಕ್ಕೆ ಅಪ್ಪಣೆ ಕೊಟ್ಟರು.—ಗಾವಡಗೆರೆಯಲ್ಲಿ ಯಾರೋ ಹುಲ್ಲಿನ ಮದೆಗೆ ಬೆಂಕಿ ಹಾಕಿದ್ದು ಕಾಲ್ಕಾಲದಲ್ಲಿ ಆರಿಸಲ್ಪಟ್ಟಿತು ; ಹೆಚ್ಚು ನಷ್ಟ ಸಂಭವಿಸಲಿಲ್ಲ.—ನಿಸ್ಪೃಹರಾದ ನಮ್ಮ ಅಮಲ್ದಾರ್ರಿಗೆ ಮೈಸೂರಿಗೆ ವರ್ಗವಾಯಿತಂತ ಕೇಳುತ್ತೇನೆ. ಇವರ ಬದಲಿಗೆ ಬರುವವರೂ ಇವರಂತೆಯೇ ಇದ್ದಾರೆಂತ ನಂಬಿದೆ.

ತ್ಯಾಮಗೊಂಡ್ಲು —ಈ ಪ್ರಾಂತ್ಯ ಮಳೆ ಹಳ್ಳಮಟ್ಟಿಗೂ ಆಗಿ ಪೈರುಗಳೆಲ್ಲಾ ಕಳೆಗೆ ಬಂದಿವೆ. ಕೆರೆ ಕುಂಟೆಗಳಿಗೆ ಸುಮಾರಾಗಿ ನೀರು ಬಂದಿದೆ. ಇನ್ನಾದರೂ ಧಾರಣೆನಾಸಿಗಳು ಇಳಿಯಲಿಲ್ಲ. ಇಲ್ಲಿ ಡಿಂಕೀಫೀವರ್ ಎಂಬ ರೋಗವು ಈಗೀಗ ತಲೆ ಹಾಕಿದೆ.—ಕೆಲವು ದಿನಗಳ ಹಿಂದೆ ಡಾ॥ ಮುತ್ತುಸ್ವಾಮಿದಾಸರವರು ದಯಮಾಡಿ ಮನುಷ್ಯನ ದೇಹದ ವಿಷಯದಲ್ಲಿ ಸ್ವಾರಸ್ಯವಾದ ಉಪನ್ಯಾಸ ಮಾಡಿದರು ಈ ಊರಲ್ಲಿ ಉಪಾಧ್ಯಾಯರ ಸಂಘದ ಕೂಟವು ಗ॥ ಎ. ವಿ. ಸ್ಕೂಲ್ ಹೆ. ಮಾ. ಮ॥ ಕೃಷ್ಣರಾಯರಿಂದಲೂ, ಪಂಡಿತ್ ಕೃಷ್ಣಾಮಾಚಾರ್ಯರಿಂದಲೂ ನಡಿಸಲ್ಪಡುತ್ತಾ ಇದೆ.—ಕಳೆದ ಸೋಮವಾರ ನಡೆದ ಗೌರಿ, ಗಣೇಶ, ರಂಜಾನ್ ಹಬ್ಬಗಳು ಸರ್ಕಾರದವರ ಉಸ್ತುವಾರಿಯಿಂದ ಯಾವ ಆಟಂಕವೂ ಇಲ್ಲದೆ ನೆರವೇರಿದವು —ಮ॥ ಬೂ ಚನ್ನಹಳ್ಳಿ ಪುಟ್ಟೇಗೌಡರವರು ತಮ್ಮ ಊರಲ್ಲೂ, ಕಾರೆಹಳ್ಳಿಯಲ್ಲೂ ಎರಡು ಆಂಜನೇಯ ದೇವಸ್ಥಾನಗಳನ್ನು ಕಟ್ಟಿಸಿ ಒಂದೆರಲ್ಲಿ ಪ್ರತಿಷ್ಠೆ ಮಾಡಿದಾರೆ.

ಚಿತ್ರದುರ್ಗದ ತಾ॥ ತುರುವನೂರು —ಇಲ್ಲಿನ ಗೌರ್ನಮೆಂಟ್ ಬಾಯಿಸ್ ಸ್ಕೂಲ್ ಹೊಸ ಕಟ್ಟಡದ ಪ್ರವೇಶೋತ್ಸವವು ಅತ್ಯಂತ ವಿಜೃಂಭಣೆಯಿಂದ ನಡೆಯಿತು. ಮ॥ ಡೆಪ್ಯುಟಿ ಇನ್‌ಸ್ಪೆಕ್ಟರ್ ಎಂ. ಕೆ. ತಿರುಮಲಾಚಾರ್ರು ಅಗ್ರಾಸನವನ್ನಲಂಕರಿಸಿದರು. ಬಾಲಕ ಬಾಲಕಿಯರಿಂದ ದೇವರ ಸ್ತೋತ್ರವೂ, ನಂತರ ಹೆಡ್ ಮಾಸ್ಟರ್ ಮ॥ ಟಿ. ಭಾಸ್ಕರಪ್ಪನವರಿಂದ ಸ್ಕೂಲ್ ರಿಪೋರ್ಟೂ ಓದಲ್ಪಟ್ಟು ಡೆಪ್ಯುಟಿ ಇನ್‌ಸ್ಪೆಕ್ಟರವರು ಪ್ಯಾಸಾದ 65 ಬಾಲಕರ ಪೈಕಿ 30 ಜನ ಬಾಲಕ ಬಾಲಕಿಯರಿಗೆ ಸ್ವಹಸ್ತ ಪ್ರೈಜು ಪುಸ್ತಕಗಳನ್ನು ದಯಪಾಲಿಸಿ, ಅತಿ ಮನೋಜ್ಞವಾದ ಬಾಲಕರ, ಬಾಲಕಿಯರ, ಮಾಸ್ತರುಗಳ, ಗ್ರಾಮಸ್ಥರ ಆಚರಣೆಗಳನ್ನು ಕುರಿತು ಉಪನ್ಯಾಸವನ್ನು ದಿವ್ಯ ಬೋಧದಾಯಕವಾಗಿ ಅಪ್ಪಣೆಕೊಡಿಸಿದರು. ಈ ಸಂಭಾಷಣೆಯು ಚಿರಸ್ಮರಣೀಯವಾಗಿದೆ. 3,000 ರೂಪಾಯಿನ ಈ ಸೌಂದರ್ಯವಾದ ಕಟ್ಟಡವು ತಳಿರುತೋರಣಗಳಿಂದಲೂ, ಕದಳೀ ಸ್ತಂಭಗಳಿಂದಲೂ ಶೃಂಗರಿಸಲ್ಪಟ್ಟು ಮನೋಹರವಾಗಿತ್ತು. ಉಪನ್ಯಾಸಾನಂತರ ಹಾರ್ಮೋನಿಯಂ, ಪಟೇಲ್ ಮುಂತಾದ್ದರಿಂದ ಸಂಗೀತ ನಡೆಯಿತು ಹಿಂದೂಪುರದವರು ಆಶ್ಚರ್ಯವಾದ ಸಾಹಸಯುಕ್ತವಾದ ಮುಷ್ಟಿನೀಡಿ, ಕೋಲಾಡುವುದು ಮುಂತಾದ ವಿದ್ಯೆಯನ್ನು ತೋರಿಸಿ ಕರ್ಣಾನಂದವನ್ನುಂಟುಮಾಡಿದರು. ಗಂಧ ಪುಷ್ಪ ತಾಂಬೂಲ ಮಿಠಾಯಿ ವಗೈರೆ ಹಂಚಲ್ಪಟ್ಟು ಜಯಘೋಷದೊಡನೆ ಪ್ರಭುಗಳ ಶ್ರೇಯಃಪ್ರಾರ್ಥನೆ ನಡೆದು ಸಭೆ ಬರಖಾಸ್ತಾಯಿತು.

ಹಾಸನ.—ನಮ್ಮ ಘನವಿಸ್ತ್ರಿದ ವೈಸ್‌ರಾಯ್ ಪ್ರಭುಗಳವರು ಯುದ್ಧದ ರಿಲೀಫ್ ಫಂಡನ್ನು ಏರ್ಪಡಿಸಿದಾರಷ್ಟೆ. ಈ ಫಂಡಿನ ಶಾಖೆಯೊಂದನ್ನು ಇಲ್ಲಿಯೂ ಸ್ಥಾಪಿಸುವದಕ್ಕೆ ನಮ್ಮ ಡೆಪ್ಯುಟಿ ಕಮಿಷನರ್ ಮಿ॥ ವೆದರಾಲ್ ಸಾಹೇಬರ ಅಧ್ಯಕ್ಷತೆಯಲ್ಲಿ ತಾ. 27 ನೇ ಗುರುವಾರ ಇಲ್ಲಿನ ಡಿಸ್ಟ್ರಿಕ್ಟ್ ಆಫೀಸಿನಲ್ಲಿ ಸಭೆಯು ಸೇರಿತು. ಅಧಿಕಾರಿಗಳೂ, ಪುರವಾಸಿಗಳೂ ಸೇರಿದ್ದರು ಡೆಪ್ಯುಟಿ ಕಮಿಷನರು ಈ ಫಂಡಿನ ಉದ್ದೇಶಗಳನ್ನು ವಿವರಿಸಿ ತಿಳಿಸಿದ್ದನ್ನು ಅ ಕಮಿಷನರ್ ಮ॥ ಅಪ್ಪಣಯ್ಯಂಗಾರ್ರು ಕನ್ನಡದಲ್ಲಿ ಹೇಳಿದರು ಚಂದಾ ಹಣ ವಸೂಲಿಗಾಗಿ ಒಂದು ಸಂಘವು ಏರ್ಪಾಡಾಯಿತು. ಇದಕ್ಕೆ ಡೆಪ್ಯುಟಿ ಕಮಿಷನರವರೇ ಪ್ರೆಸಿಡೆಂಟರಾಗಿಯೂ, ಮ ಅಪ್ಪಣ್ಣಯ್ಯಂಗಾರ್ರು ಮ ಗೋಪಾಲರಾಜೆಅರಸಿನವರೂ ಸೆಕ್ರಿಟರಿಗಳಾಗಿಯೂ, ಮ॥ ನಾರಾಯಣರಾಯರು ಟ್ರೆಜರರಾಗಿಯೂ ನೇಮಕವಾದರು. ಇಲ್ಲಿಗೆ ದಯಮಾಡಿದ್ದ ಸೆಷನ್ಸ್ ಜಡ್ಜ್ ಮಿ॥ ವಾಸ್ ಪಂಜಾಮುಸೇನ್ ಸಾಹೇಬರವರೂ ಇದೇ ವಿಷಯವಾಗಿ ಬಹು ಸ್ವಾರಸ್ಯವಾದ ಉಪನ್ಯಾಸ ಮಾಡಿ ನಮ್ಮ ಚಕ್ರವರ್ತಿಯವರ ಮಹಿಮೆ ವೈಭವವನ್ನು ಕಾಪಾಡುವ ಕಾರ್ಯದಲ್ಲಿ ನಮ್ಮ ಸರ್ವಸ್ವವನ್ನೂ ಕೊಟ್ಟುಬಿಡುವುದಕ್ಕೆ ಸಿದ್ಧರಾಗಿರಬೇಕು; ನಮ್ಮ ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಜಯವೂ, ಸಮಾಧಾನವೂ, ಕ್ಷೇಮವೂ ಉಂಟಾಗಬೇಕೆಂಬ ಅಭಿಲಾಷೆಯೇ ನಮ್ಮೆಲ್ಲರಲ್ಲಿಯೂ ಇರಬೇಕಾದುದು ಅಗತ್ಯ. ಈ ಸಂದರ್ಭದಲ್ಲಿ ಎಲ್ಲರೂ ಯಾವ ಭೇದವನ್ನೂ ಇಡದೆ ಅನ್ಯೋನ್ಯವಾಗಿ ತಮ್ಮ ಕರ್ತವ್ಯವನ್ನು ನೆರವೇರಿಸಬೇಕು ಎಂಬದಾಗಿ ಹೇಳಿದರು ಚಂದಾ ಪಟ್ಟಿಗೆ ರುಜು ಮಾಡಿದ ಮೇಲೆ ಚಕ್ರವರ್ತಿಯವರ ಶ್ರೇಯಃಪ್ರಾರ್ಥನೆಯೊಡನೆ ಸಭೆಯು ಮುಕ್ತಾಯವಾಯಿತು.—ತಾ 28 ನೇ ಶುಕ್ರವಾರ ಸಾಯಂಕಾಲ ನಮ್ಮ ಡೆಪ್ಯುಟಿ ಕಮಿಷನರ್ ಮಿ ವೆದರಾಲ್ ಸಾಹೇಬರ ಪತ್ನಿಯವರ ಅಧ್ಯಕ್ಷತೆಯಲ್ಲಿ ಸ್ತ್ರೀಯರ ಸಂಘವು ಒಂದು ನಡೆಯಿತು. ಸಿಪಾಯಿಗಳಿಗೆ ಅವಶ್ಯವಾದ ಕಾಲುಚೀಲ, ಮುಸುಕಿನ ಟೋಪಿ, ಕೋಟು, ವೇಸ್ಟ್ ಕೋಟು, ಷರಾಯಿ ಮುಂತಾದ ಹೊದಿಗೆ ಹೊಲಿಗೆ ಉಡಿಗೆತೊಡಿಗೆಗಳನ್ನು ಒದಗಿಸಿಕೊಡುವುದರ ಮೂಲಕ ಸಹಾಯಮಾಡೋಣ ಎಂಬಿತ್ಯಾದಿ ರೀತಿಯಲ್ಲಿ ಸಭೆಯ ಉದ್ದೇಶವನ್ನು ಅವರು ತಿಳಿಸಿದ ಮೇಲೆ ಇನ್ನಿಬ್ಬರು ಸ್ತ್ರೀಯರು ಈ ಉದ್ದೇಶವನ್ನೇ ಪುಷ್ಟೀಕರಿಸಿ ಭಾಷಣಗಳನ್ನು ಓದಿದರು. ಸ್ತ್ರೀಸಮೂಹವೆಲ್ಲರೂ ಒಪ್ಪಿ ಯಥೋಚಿತವಾಗಿ ಹಣದ ಮೂಲಕವೂ, ಉಡಿಗೆ ತೊಡಿಗೆಗಳ ಮೂಲಕವೂ ಸಹಾಯಮಾಡುವುದಾಗಿ ಭರವಸೆ ಕೊಟ್ಟು ರಾಜಭಕ್ತಿಯನ್ನು ಪ್ರಕಾಶಪಡಿಸಿದರು. ಇವುಗಳ ವಸೂಲಾತಿಗಾಗಿ ಯೋಗ್ಯರು ನಿಯಮಿತರಾದರು. ಕಡೆಯಲ್ಲಿ ಚಕ್ರಾಧಿಪತ್ಯದ ಹಿತಕಾಂಕ್ಷೆಯ ಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು.—ಸಂಪದಭಿವೃದ್ಧಿ ಸಮಾಜದ ವ್ಯವಸಾಯಶಾಖೆಯ ಸೆಕ್ರಿಟರಿ ಮ॥ ಸುಬ್ಬರಾಯರೂ, ರೇಷ್ಮೆ ವ್ಯವಸಾಯ ಭವರ್ಧಕರಾಗಿ ಇಟಲೀ ದೇಶದಿಂದ ಬಂದಿರುವ ಮಿ॥ ಮಾರಿಯವರೂ ಬಂದಿದ್ದು ವಿಚಾರಮಾಡಿದರು. ರೇಷ್ಮೆ ವ್ಯವಸಾಯಕ್ಕೋಸ್ಕರ ಇಲ್ಲಿನ ಮ॥ ರಂಗಸ್ವಾಮಿಯವರು ಮೂರು ವರ್ಷಗಳ ವರೆಗೆ ತಮ್ಮದೊಂದು ಹೊಲವನ್ನು ಈ ಸಂಘದವರಿಗೆ ಒಪ್ಪಿಸಿದರು. ಸದ್ಯದಲ್ಲಿಯೇ ಈ ಹೊಲದಲ್ಲಿ ಉಪ್ಪುನೇರಲೇ ಗಿಡಗಳನ್ನು ನಾಟಿ ಹಾಕಿ ಬೆಳಸುವ ಮತ್ತು ರೇಷ್ಮೆ ಹುಳುಗಳನ್ನು ತರಿಸಿ ಸಾಕುವ ಕಾರ್ಯವನ್ನು ಪ್ರಾರಂಭಿಸುವುದಾಗಿ ತೀರ್ಮಾನವಾಗಿದೆ. ಇದಕ್ಕಾಗಿ ಈ ಡಿಸ್ಟ್ರಿಕ್ಟಿಗೆ ಒಬ್ಬ ಇನ್‌ಸ್ಪೆಕ್ಟರನ್ನು ನೇಮಿಸಿದಾರೆ. ಈ ವ್ಯವಸಾಯವು ಇಲ್ಲಿ ಮಾದರಿ ತೋರಿಸುವುದಕ್ಕಾಗಿ ಪ್ರಾರಂಭವಾಗುತ್ತದೆ.—ಈ ಪ್ರಾಂತ್ಯ ಮಳೆ ನಿಂತು ಪೈರುಗಳು ಸೊಂಪಾಗಿ ಕಾಣಿಸುತ್ತವೆ. ಧಾರಣೆ ಮಾತ್ರ ಇಳಿಯಲಿಲ್ಲ ಈ ಊರಿನಲ್ಲಿ ಕಳ್ಳತನ ಹೆಚ್ಚುತ್ತಿದೆ. ಕಳೆದ ತಾ. 23 ನೇ ಶನಿವಾರ ರಾತ್ರಿ ಮ॥ ವೆಂಕಟಾಚಾರ್ಯರ ಮನೆಯಲ್ಲಿ ಪಾತ್ರೆ ಬಟ್ಟೆ ಆಹಾರಸಾಮಗ್ರಿ ಮೊದಲುಗೊಂಡು ಎಲ್ಲವನ್ನೂ ದೋಚಿಕೊಂಡು ಹೋದರು. ಅದೇ ರಾತ್ರಿ ಇನ್ನೂ ಒಂದೆರಡು ಕಡೆ ಕನ್ನಾಕಳವು ನಡೆದಂತೆ ತಿಳಿದುಬಂದಿದೆ. ನೆನ್ನೆ ರಾತ್ರಿ ಇನ್ನೊಂದು ಮನೆಯಲ್ಲಿ ಮೇಲ್ಛಾವಣಿ ಎತ್ತಿ ಒಳಹೊಕ್ಕು ಕೆಲವು ಪದಾರ್ಥಗಳನ್ನು ಅಪಹರಿಸಿದ್ದಾರೆ. ಪೋಲೀಸ್ ಉಸ್ತುವಾರಿ ಬಹಳ ಕಡಮೆ ಎನ್ನುವುದಕ್ಕೆ ಇದೇ ದೃಷ್ಟಾಂತ.

ಯುದ್ಧದ ಸಮಾಚಾರಗಳು.

[5 ನೇ ಪುಟದಿಂದ ಮುಂದೆ ಇಲ್ಲಿ ನೋಡಿ.]

ಹೊರಕ್ಕೆ ಬರುವುದು ಅಪರೂಪ. ಈ ವಿಚಾರದಲ್ಲಿ ಖಚಿತವಾದ ವರ್ತಮಾನಗಳು ತಿಳಿಯುವ ತನಕ ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟವಾಗುವ ಎಲ್ಲಾ ಸಂಗತಿಗಳನ್ನೂ ಯಥಾರ್ಥವಾದವುಗಳೆಂದು ನಂಬಿಕೊಳ್ಳುವುದು ವಿವೇಕವೆನಿಸಲಾರದು.

ಇಟಲಿ ರಾಜ್ಯವು ಈ ಯುದ್ಧದಲ್ಲಿ ಯಾವ ಪಕ್ಷವನ್ನೂ ವಹಿಸದೆ ಪ್ರತ್ಯೇಕವಾಗಿರುತ್ತದೆ. ಇನ್ನು ಮುಂದೆಯೂ ಅದು ಆ ರೀತಿ ಸೇರುವ ಸಂಭವ ಕಾಣುವುದಿಲ್ಲ.

ಇತರ ವಿಷಯಗಳು.

ನ್ಯೂಜೀಲೆಂಡ್ ಎಂಬ ಇಂಗ್ಲಿಷ್ ಸ್ವಾಸ್ಥ್ಯದ ಸರ್ಕಾರದವರು ಅಲ್ಲಿಂದ ಕೆಲವು ಸೈನ್ಯವನ್ನು ಕೂಡಿಸಿ ಪೆಸಿಫಿಕ್ ಸಾಗರದಲ್ಲಿ ಜರ್ಮನಿಯವರಿಗೆ ಸೇರಿದ ಸಾಮೋವಾ ಎಂಬ ದ್ವೀಪಕ್ಕೆ ರವಾನೆಮಾಡಿ ಏಪಿಯಾ ಎಂಬ ದ್ವೀಪವನ್ನು ಗೆದ್ದು ಸ್ವಾಧೀನ ಪಡಿಸಿಕೊಂಡರು.

ಕೈಂಗ್ ವಿಲ್ಹಿಯಂ ಡಿ ಗ್ರೇಟ್ ಎಂಬ ಜರ್ಮನಿ ಜಹಜಿನವರು ನಿಯಾಂಜಾ, ವಾಯಿನಾರಾ ಎಂಬ ಇಂಗ್ಲಿಷರ ಎರಡು ಹಡಗುಗಳನ್ನು ಮುಳುಗಿಸಿದ್ದರು. ಈ ಹಡಗುಗಳಲ್ಲಿದ್ದ ಇಂಗ್ಲಿಷ್ ಪ್ರಜೆಗಳು ಕೆನೇರಿ ದ್ವೀಪಸಮುದಾಯಕ್ಕೆ ಸೇರಿದ ಲಾಸ್ ಪಾಮಾಸ್ ಎಂಬ ದ್ವೀಪಕ್ಕೆ ಹೋಗಿ ಸೇರಿಕೊಂಡಿದಾರೆ.

ಇದುವರೆಗೂ ಜರ್ಮನಿಯವರಿಗೂ ಆಸ್ಟ್ರಿಯದವರಿಗೂ ಸೇರಿದ 226 ಹಡಗುಗಳನ್ನು ಇಂಗ್ಲಿಷರೂ ಫ್ರೆಂಚರೂ ಅನೇಕ ಕಡೆಗಳಲ್ಲಿ ಹಿಡಿದು ಸ್ವಾಧೀನ ಪಡಿಸಿಕೊಂಡಿರುತ್ತಾರೆ.

ಹಿಂದುಸ್ಥಾನದಲ್ಲಿ.

ನಾವುಗಳು ಇರುವ ಹಿಂದುಸ್ಥಾನದಲ್ಲಿ ಯುದ್ಧದ ವಿಷಯದಲ್ಲಿ ಸಮಸ್ತ ಪ್ರಜೆಗಳೂ ಉತ್ಸಾಹವನ್ನೂ ರಾಜಭಕ್ತಿಯನ್ನೂ ಪ್ರಕಾಶಪಡಿಸುತ್ತಿದಾರೆ. ಈ ಯುದ್ಧದಲ್ಲಿ ಹಿಂದುಸ್ಥಾನವು ಸಹಾಯವನ್ನು ಒದಗಿಸುತ್ತಿದೆ. ಆದರೆ ಇದುವರೆಗೆ ಈ ವಿಚಾರವಾಗಿ ಯಾವ ವರ್ತಮಾನಗಳನ್ನೂ ಹೊರಪಡಿಸದಂತೆ ಅಡ್ಡಿಮಾಡಲ್ಪಟ್ಟಿತ್ತು. ಹೌಸ್ ಆಫ್ ಲಾರ್ಡ್ಸ್ ಎಂಬ ಇಂಗ್ಲಿಷ್ ಪಾರ್ಲಿಮೆಂಟಿನಲ್ಲಿ ಲಾರ್ಡ್ ಕ್ರೂಯವರು—ಈ ಯುದ್ಧದಲ್ಲಿ ನಮ್ಮ ಹಿಂದುಸ್ಥಾನದ ಪರಾಕ್ರಮಶಾಲಿಗಳಾದ ದೇಶೀಯ ಸೈನಿಕರನ್ನು ಸೇರಿಸಿಕೊಳ್ಳುವಂತೆ ಇಚ್ಛಾರ್ಥ ಮಾಡಿದೇವೆಂತಲೂ, ಹಿಂದುಸ್ಥಾನದಿಂದ ಬ್ರಿಟಿಷ್ ಮತ್ತು ದೇಶೀಯ ಸೈನ್ಯಗಳು ಪ್ರಯಾಣ ಮಾಡಿಕೊಂಡು ಬರುತ್ತಿವೆಯೆಂದೂ ಹೇಳಿದರು. ಈ ಸೈನ್ಯಗಳನ್ನು ಎಲ್ಲಿ ಇಳಿಸುತ್ತಾರೋ ನಾವು ಕಾಣೆವು; ಮತ್ತು ಅವುಗಳನ್ನು ಕೂಡಿಸಿ ರವಾನೆ ಮಾಡಿದ್ದು ಬೊಂಬಾಯಿಯಿಂದಲೋ, ಕರಾಚಿಯಿಂದಲೋ ಇದೂ ನಮಗೆ ತಿಳಿಯದು. ಇದು ಹ್ಯಾಗಾದರೂ ಇರಲಿ. ಈಗ ನಮ್ಮ ಸಹೋದರರು ಯುದ್ಧಕ್ಕಾಗಿ ಹೋಗಿದಾರೆ. ಅವರಿಗೆ ಪ್ರೋತ್ಸಾಹನಕರವಂತೆ ನಾವುಗಳು ಯುದ್ಧದ ರಿಲೀಫ್ ಫಂಡಿಗೆ ನಮ್ಮ ಕೈಲಾದಷ್ಟು ದ್ರವ್ಯಸಹಾಯಮಾಡಿ, ದೇವರೇ, ಅವರಿಗೆ ಬಲಪರಾಕ್ರಮಗಳನ್ನು ದಯಪಾಲಿಸಿ ಜಯವನ್ನು ಕೊಟ್ಟು ಸುರಕ್ಷಿತವಾಗಿ ಕರೆದುತರಬೇಂದು ಪ್ರಾರ್ಥಿಸುತ್ತಾ ಇರೋಣ.

ಬರೋಡಾ ಸಂಸ್ಥಾನದ ಗಾಯಕವಾಡಿ ಮಹಾರಾಜರವರು ಈಗ ಇಂಗ್ಲೆಂಡಿನಲ್ಲಿದಾರೆ. ಅವರ ಪತ್ನೀರವರು ಜರ್ಮನಿಯಿಂದ ಬಿಡಿಸಿಕೊಂಡು ಸ್ವಿಟ್ಜರ್ಲೆಂಡಿಗೆ ಬಂದಿರುವರು.

ಹಿಂದುಸ್ಥಾನದ ಎಲ್ಲಾ ಭಾಗಗಳಲ್ಲೂ ಅನೇಕ ಸ್ಥಳಗಳಲ್ಲಿ ಪ್ರಜೆಗಳು ಮಹಾಸಭೆಗಳನ್ನು ನಡಿಸಿ, ಈ ಭಯಂಕರವಾದ ಯುದ್ಧದಲ್ಲಿ ಸೇರಿ ಕಡಿವಾಡಬೇಕಾಗಿ ಬಂದಿರುವಂಥಾ ಬ್ರಿಟಿಷ್ ಸಾಮ್ರಾಜ್ಯಕ್ಕೆ ಜಯವೂ, ಕೀರ್ತಿಯೂ, ಶಾಂತಿಯೂ ಉಂಟಾಗಲೆಂದು ಪ್ರಾರ್ಥಿಸುತ್ತಾ ಬಂದಿದಾರೆ.

ಒಳದೇಶದ ವೃತ್ತಾಂತಗಳು.

ಈ ವಾರ ನಮ್ಮ ಪತ್ರಿಕೆಯು ಹತ್ತು ಪುಟಗಳುಳ್ಳದ್ದಾಗಿದೆ.

ಕೃಷ್ಣರಾಜಪೇಟೆಯಲ್ಲಿ ಬಸಪ್ಪ ಎಂಬುವನು ತನ್ನ ಹೆಂಡತಿಯನ್ನು ಕಡಿದು ಹಾಕಿ ಪೊಲೀಸಿಗೆ ಸಿಕ್ಕಿಬಿದ್ದನೆಂದು ತಿಳಿದುಬಂದಿದೆ.

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯವರು ರಸ್ತೆಗಳನ್ನು ದುರಸ್ತುಮಾಡಿ ಗಟ್ಟಿಮಾಡುವುದಕ್ಕೆ 7,५४० ರೂಪಾಯಿಗೆ ಒಂದು ಇಂಜಿನ್ ರೋಲರನ್ನು ಕೊಂಡು ತರಿಸಿದಾರೆ.

ನೆನ್ನೆ ಸಾಯಂಕಾಲ ಶ್ರೀಮನ್ ಮಹಾರಾಜರವರು ರಾಜಧಾನಿಗೆ ದಯಮಾಡಿ, ಸಾಹುಕಾರ್ ಮ॥ ಚನ್ನಮ್ಮನವರು ಧರ್ಮಾರ್ಥವಾಗಿ ಕಟ್ಟಿಸುತ್ತಿರುವ ಕುಂಚಿಟಿಗರ ಸ್ಕೂಲ್ ಕಟ್ಟಡಕ್ಕೆ ಅಸ್ತಿಭಾರವನ್ನು ಹಾಕುವವರಾಗಿದ್ದರು.

ಅರಸೀಕೆರೆಯಿಂದ ಹಾಸನಕ್ಕೆ ಮ॥ ರಾಮಯ್ಯಶೆಟ್ಟಿ ಕಂಪನಿಯವರು ಜನರ ಸಂಚಾರಕ್ಕಾಗಿ ಮೋಟಾರ್ ಬಸ್ಸಿಲನ್ನು ಇಡಿಸಿರುತ್ತಾರೆಂದೂ, ಇದನ್ನು ಹಾಸನದ ಡೆಪ್ಯುಟಿ ಕಮಿಷನರ್ ರವರು ಈ ತಿಂಗಳ ತಾ. 1 ರಲ್ಲಿ ಪ್ರಾರಂಭಿಸಿದರೆಂದೂ ಕೇಳುತ್ತೇವೆ.

ಚೆನ್ನಪಟ್ಟಣದ ತಾಲ್ಲೂಕು ಹಾಗಲಹಳ್ಳಿಯಲ್ಲಿ ಕರಿಯನೆಂಬುವನು ಸಣ್ಣ ವಯಸ್ಸಿನ ತನ್ನ ಹೆಂಡತಿಯ ಕಿವಿಯನ್ನು ಕೊಯಿದುಹಾಕಿದನೆಂದೂ, ಅವಳು ಆಸ್ಪತ್ರೆಯಲ್ಲಿ ಚಿಕಿತ್ಸೆಹೊಂದಿ, ಪೊಲೀಸ್ ತನಿಖೆ ನಡೆಯುತ್ತಾ ಇದೆಯೆಂದೂ ವರ್ತಮಾನವಿದೆ.

ಒಬ್ಬ ಬಾತ್ಮೀದಾರರಿಂದ—ತರೀಕೆರೆ ತಾಲ್ಲೂಕು ಲಕ್ಕವಳ್ಳಿಯಲ್ಲಿ ಕಳೆದ ತಾ. ೨೬ ನೇ ಬುಧವಾರ ಒಂದು ಆಕಳು ಎರಡು ತಲೆ, ಆರು ಕಾಲು, ಎರಡು ಬಾಲ, ಒಂದೇ ಶರೀರವುಳ್ಳ ಒಂದು ಕರುವನ್ನು ಹಾಕಿತ್ತು. ಕರುವೂ ಆಕಳೂ ಎರಡೂ ಸತ್ತುಹೋದವು.

ರಾಜಧಾನಿಯ ಕೋಟೆ ಆವರಣದೊಳಗೆ ಅರಮನೆ ಒಂದು ಮಾತ್ರ ಉಳಿಯುವಂತೆ ಎಲ್ಲಾ ಮನೆಗಳನ್ನೂ ಸರ್ಕಾರದವರು ಕೊಂಡು ಒಡೆದು ಮೈದಾನ ಮಾಡುವರು. ಆ ಮನೆಗಳೆಲ್ಲಾ ಸರ್ಕಾರಕ್ಕೆ ಬೇಕೆಂದು ಕಳೆದ ವಾರದ ಗೆಜೆಟ್ಟಿನಲ್ಲಿ ಘಾಯಿಷ್ ಮಾಡಿರುತ್ತಾರೆ.

ಮೈಸೂರು ತಾಲ್ಲೂಕಿನ ಅಮಲ್ದಾರ್ ಮ॥ ಮಹಮದ್ ಪೀರ್‌ಯವರಿಗೆ ಅ॥ ಕಮಿಷನರ್ ರ ಕೆಲಸಕ್ಕೆ ಬಡ್ತಿ ಆದದ್ದರಿಂದ ತಾಲ್ಲೂಕಿನ ನೌಕರಮಾನೇರು ಸೇರಿ ಕಳೆದ ವಾರ ಅವರಿಗೆ ಔತನಾದಿಗಳನ್ನು ಮಾಡಿ ಅವರಲ್ಲಿ ತಮಗಿರುವ ಭಕ್ತಿ ಪ್ರೀತಿಗಳನ್ನು ಪ್ರಕಾಶಪಡಿಸಿದರು.

ಬೆಂಗಳೂರು ಸಿಟಿ ಪೆಟ್ಟಿಯಕ್ ಲಿಟರರಿ ಸಂಘದವರು ಇದೇ ತಿಂಗಳು ತಾ. ೬ ನೇ ಶನಿವಾರ ಸಾಯಂಕಾಲ ತಮ್ಮ ಸಂಘದ ಮೂರನೇ ವಾರ್ಷಿಕೋತ್ಸವವನ್ನು ನಡಿಸುವರು. ಮೈಸೂರು ಗೌರ್ನಮೆಂಟ್ ಚೀಫ್ ಇಂಜನಿಯರ್ ಮ॥ ಕರ್ಪೂರ್ ಶ್ರೀನಿವಾಸರಾಯರವರು ಅಗ್ರಾಸನವನ್ನು ವಹಿಸುವರು.

ಛಾಯಾಪ್ರತಿಮೆಗಳನ್ನು ತಯಾರುಮಾಡುವುದರಲ್ಲಿ ಹೆಸರುವಾಸಿ ಪಡೆದಿರುವ ಬೊಂಬಾಯಿನ ಪ್ರೊಫೆಸರ್ ಮಾತ್ರೆ ಎಂಬವರು ರಾಜಧಾನಿಗೆ ಕರೆಸಲ್ಪಟ್ಟು ಅರಮನೆಯ ಆತಿಥ್ಯದಲ್ಲಿದ್ದುಕೊಂಡು ನಮ್ಮ ಮಹಾರಾಜರವರ ಛಾಯಾಪ್ರತಿಮೆಯನ್ನು ತಯಾರುಮಾಡುತ್ತಿರುವಂತೆ ಕೇಳುತ್ತೇವೆ.

ಮೈಸೂರು ಗೆಜೆಟ್ ಸಂಗ್ರಹ.

ಅ॥ ಸರ್ಜನ್ ಮ॥ ಎಂ. ಜಗನ್ನಾಥಂಪಿಳ್ಳೆಯವರನ್ನು ವಾಕ್ಸಿನೇಷನ್ ಕೆಲಸಕ್ಕಾಗಿ ಮೈಸೂರು ಸಿಟಿ ಮ್ಯುನಿಸಿಪಾಲಿಟಿಗೆ ಕಳುಹಿಸಿದೆ.

ಮುಂದೆ ಹೇಳುವವರನ್ನು ಮೈಸೂರು ಲೆಜಿಸ್ಲೆಟಿವ್ ಕೌನ್ಸಿಲ್ ಮೆಂಬರುಗಳಾಗಿ ನೇಮಕಮಾಡಿದೆ.—ರೆವಿನ್ಯೂ ಕಮಿಷನರ್ ಮ॥ ಕೆ. ಎಸ್. ದೊರೆಸ್ವಾಮಿ ಅಯ್ಯರವರು, ಗವರ್ನ್‌ಮೆಂಟ್ ಅ॥ ಸೆಕ್ರೆಟರಿ ಮ॥ ಡಿ. ಎಂ. ನರಸಿಂಗರಾಯರು.

ಸೊರಬದ ತಾಲ್ಲೂಕು ಮಾವಳ್ಳಿ ಗ್ರಾಮದ ಕೆರೆಗಳ ಪಂಚಾಯತಿ ಸಂಘಕ್ಕೆ ೪ ರೂಪಾಯಿ ಮೊಹತರ್ಫಾ ಕಂದಾಯ ಕೊಡತಕ್ಕವರನ್ನೂ ಮೆಂಬರಾಗಿ ಚುನಾಯಿಸಬಹುದೆಂದು ರಿಯಾಯಿತಿ ತೋರಿಸಿದೆ.

ಕಂಟ್ರೋಲರ್ ಆಫೀಸಿಗೆ ವರ್ಗವಾಗಿರುವ ಮ॥ ಟಿ. ಲಕ್ಷ್ಮೀನರಸಿಂಹರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮುಂದೆ ಹೇಳುವ ಅ॥ ಕಮಿಷನರುಗಳ ವರ್ಗಾವರ್ಗಿ ಹುಕುಂ ಮಾಡಿದೆ.—ಮ॥ ಟಿ. ತಂಬುಚೆಟ್ಟಿಯವರನ್ನು ಅರಮನೆಗೆ ಮಹಾರಾಜರವರ ಅ॥ ಸೆಕ್ರೆಟರಿಯಾಗಿ; ಮ॥ ಟಿ. ಜಿ. ರಾಮಅಯ್ಯರವರನ್ನು ರೆವಿನ್ಯೂ ಕಮಿಷನರ ಆಫೀಸಿಗೆ; ಮ॥ ನರಸಿಂಗರಾವ್ ಪೂರ್ಣಯ್ಯನವರನ್ನು ತುಂಕೂರು ಖಜಾನೆ ಛಾರ್ಜಿಗೆ; ಮಿ॥ ಮಹಮದ್ ಪೀರ್‌ರವರನ್ನು ಚಿಕ್ಕಮಗಳೂರು ಖಜಾನೆ ಛಾರ್ಜಿಗೆ

ಅಮಲ್ದಾರ್ ಮ॥ ಆರ್. ಎ. ನರಸಿಂಹಯ್ಯಂಗಾರ್ರನ್ನು ಹುಣಸೂರಿನಿಂದ ಮೈಸೂರಿಗೂ, ಮ॥ ಟಿ. ಟಿ. ರಾಮಚಂದ್ರರಾಯರವನ್ನು ಗುಡಿಬಂಡೆಯಿಂದ ಹುಣಸೂರಿಗೂ ವರ್ಗಮಾಡಿದೆ. ಬಾಗೇಪಲ್ಲಿ ಅಮಲ್ದಾರ್ರು ಗುಡಿಬಂಡೆ ಸಬ್ ತಾಲ್ಲೂಕಿನ ಛಾರ್ಜನ್ನೂ ವಹಿಸಿರತಕ್ಕದ್ದು.

ಮ॥ ಎಚ್. ಜಿ. ಲಕ್ಷ್ಮೀನರಸಿಂಹಯ್ಯಂಗಾರ್ರನ್ನೂ, ಮ॥ ಎಸ್. ಕೆ. ಶ್ರೀನಿವಾಸರಾಯರನ್ನೂ 5 ನೇ ಕ್ಲಾಸ್ ಮುನ್ಷಿಫರಾಗಿ ಖಾಯಂ ಮಾಡಿದೆ.

ಮ॥ ಟಿ. ಲಕ್ಷ್ಮೀನರಸಿಂಹರಾಯರನ್ನು ಕಂಟ್ರೋಲರ್ ಆಫೀಸಿಗೂ, ಮ॥ ಎಸ್. ರಾಮಣ್ಣನವರನ್ನು ಗವರ್ನ್‌ಮೆಂಟ್ ಅ॥ ಸೆಕ್ರೆಟರಿಯಾಗಿಯೂ ವರ್ಗಮಾಡಿದೆ. ಪ್ರೊ॥ ಅ॥ ಕಮಿಷನರ್ ಮ॥ ಎಂ. ವೆಂಕಟನಾರಣಪ್ಪನವರನ್ನು ದಿವಾನ್‌ರವರ ಆಫೀಸಿಗೆ ವರ್ಗಮಾಡಿದೆ.

ಸಬ್ ಅ॥ ಇಂಜನಿಯರ್ ಮ॥ ಬಿ. ಕೃಷ್ಣಸ್ವಾಮಿಅಯ್ಯಂಗಾರ್ರನ್ನು ಹಾಸನ್ ಡಿವಿಜನ್‌ನಿಂದ ಬೆಂಗಳೂರು ಡಿಸ್ಟ್ರಿಕ್ಟಿಗೆ ವರ್ಗಮಾಡಿದೆ.

ಮ॥ ಎಂ. ಗೋವಿಂದರಾಯರನ್ನು ಹಂಗಾಮಿಯಾಗಿ ಒಂದು ವರುಷ ೩ ನೇ ಕ್ಲಾಸ್ ಓವರ್ಸಿಯರಾಗಿ ನೇಮಿಸಿ ಶಿವಮೊಗ್ಗ ಡಿವಿಜನ್‌ಗೆ ವರ್ಗಮಾಡಿದೆ; ಇವರು ಸಿಕಾರಿಪುರದ ಸಬ್ ಡಿವಿಜನ್ ಛಾರ್ಜನ್ನು ವಹಿಸತಕ್ಕದ್ದು.

ಬೇಲೂರು ತಾಲ್ಲೂಕ್ ಅಮಲ್ದಾರ್ ಮ॥ ಕೆ. ಲಿಂಗೋಜಿರಾವ್ ಬಾದಾಮಿಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಶಿರಸ್ತೇದಾರ್ ಮ॥ ರಾಘವೇಂದ್ರರಾಯರು ತಾಲ್ಲೂಕ್ ಛಾರ್ಜನ್ನು ವಹಿಸಿರತಕ್ಕದ್ದು.

ಆಲೂರ್ ಸಬ್ ತಾಲ್ಲೂಕಿಗೆ ಡೆಪ್ಯುಟಿ ಅಮಲ್ದಾರರಾಗಿ ವಾಪಸು ಮಾಡಲ್ಪಟ್ಟಿರುವ ಮ॥ ಎಸ್. ಸುಂದರರಾಜಯ್ಯಂಗಾರ್ರಿಗೆ ಚನ್ನರಾಯಪಟ್ಟಣದಲ್ಲಿ ಬಿಡುಗಡೆ ಆಗುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಮ॥ ಎಂ. ಚಕ್ರಪಾಣಿರಾಯರು ಆಲೂರ್ ಡೆಪ್ಯುಟಿ ಅಮಲ್ದಾರರಾಗಿ ಬದಲಿ ನೋಡುತ್ತಾ ಬರತಕ್ಕದ್ದು.

ವಿದ್ಯಾರ್ಥಿಗಳ ತಾಯಿತಂದೆಗಳು ನವೀನ ಪಾಠಕ್ರಮಗಳನ್ನು ಪರಾಮರ್ಶಿಸಲು ಏರ್ಪಡಿಸಿದ್ದ ಸಂತೋಷಕೂಟವು.

ದೊಡ್ಡಬಳ್ಳಾಪುರದ ಟವನಿನ ಪ್ರಜಾಸಂಖ್ಯೆಯು 7-8 ಸಾವಿರ ಮಾತ್ರವೇ ಆಗಿದ್ದರೂ ಇಲ್ಲಿಯ ಸ್ಕೂಲುಗಳಲ್ಲೆಲ್ಲಾ ಸೇರಿ ಸುಮಾರು ಒಂದು ಸಾವಿರ ವಿದ್ಯಾರ್ಥಿಗಳು ವಿದ್ಯೆಯನ್ನು ಕಲಿಯುತ್ತಿರುವುದು ಸಾಮಾನ್ಯವಾಗಿ ಎಲ್ಲರಿಗೂ ತಿಳಿದ ಸಂಗತಿಯೇ ಆಗಿರುತ್ತದೆ. ಈ ಅಂಶವನ್ನು ಪುರಸ್ಕರಿಸಿಯೇ ಬಲಾತ್ಕಾರ ವಿದ್ಯಾಭ್ಯಾಸದ ಕಾನೂನನ್ನು ಈ ಊರಿನಲ್ಲಿಯೂ ಜಾರಿಗೆ ತರತಕ್ಕದ್ದೆಂದು ಸರ್ಕಾರದವರು ಅಪ್ಪಣೆ ದಯಪಾಲಿಸಿರುವುದು. ಈ ರೀತಿ ಇಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವು ವಿಶೇಷ ಪ್ರಾಚುರ್ಯದಲ್ಲಿರುವುದನ್ನು ಕಂಡು ಸುತ್ತುಮುತ್ತಣ ಗ್ರಾಮಾಂತರದವರೂ ಸಹ ಇಲ್ಲಿಯ ಸ್ಕೂಲುಗಳಲ್ಲಿ ನಡೆಯುತ್ತಿರುವ ನವೀನ ಪಾಠಕ್ರಮಗಳನ್ನು ಪರಾಮರ್ಶಿಸುವುದರ ಮೂಲಕ ತಮ್ಮತಮ್ಮ ಗ್ರಾಮಗಳಲ್ಲಿ ವಿದ್ಯೆಯನ್ನು ಹೆಚ್ಚುಹೆಚ್ಚಾಗಿ ಹರಡುತ್ತಾ ಬರುವ ವಿಷಯದಲ್ಲಿ ಪ್ರಯತ್ನಶೀಲರಾಗಲು ಪ್ರೋತ್ಸಾಹವುಂಟಾಗಲೆಂಬ ಮುಖ್ಯೋದ್ದೇಶದೊಡನೆ ಇಲ್ಲಿ ಕಳೆದ ಬುಧವಾರ ಒಂದು ವಿದ್ಯಾಭ್ಯಾಸದ ಪ್ರದರ್ಶನವು ನಡೆಸಲ್ಪಟ್ಟಿತು. ಇದನ್ನು ತೃಪ್ತಿಕರವಾಗಿಯೂ ಸಾಂಗವಾಗಿಯೂ ನೆರವೇರಿಸುವ ವಿಚಾರದಲ್ಲಿ ವಿದ್ಯಾಭ್ಯಾಸದ ಇಲಾಖೆಯ ಮುಖ್ಯಾಧಿಕಾರಿಗಳಿಂದ ಪ್ರೇರಿತರಾಗಿ ಈ ಪ್ರಾಂತ್ಯದ ಉಪಾಧ್ಯಾಯರುಗಳಿಗೆಲ್ಲ ಆದರ್ಶಪ್ರಾಯರಾಗಿಯೂ, ನಿರೀಕ್ಷ ಸರ್ವಿಸ್‌ದಾರರಾಗಿಯೂ ಇರುವ ಇಲ್ಲಿಯ ಎ. ವಿ. ಸ್ಕೂಲ್ ಹೆಡ್ ಮಾಸ್ಟರ್ ಮ॥ ಡಿ. ಕೊಂಗಾಡಿಯಪ್ಪನವರು ಮುಂದಾಳುಗಳಾಗಿದ್ದರು. ಇದೇ ಸ್ಕೂಲಿನ ಅಸಿಸ್ಟೆಂಟ್ ಮಾಸ್ಟರುಗಳೂ, ಇತರ ಎಲ್ಲ ಸ್ಕೂಲುಗಳ ಮಾಸ್ಟರುಗಳೂ ಇವರ ಸಹಾಯಕರಾಗಿದ್ದುದಲ್ಲದೆ, ಈ ಊರಿನ ಅಮಲ್ದಾರರು, ಮುನ್ಸಿಫರು ಮೊದಲಾದ ಸ್ಥಳೀಯಾಧಿಕಾರಿಗಳೂ, ಅಡ್ವೊಕೇಟರು, ಮ್ಯುನಿಸಿಪಲ್ ಕೌನ್ಸಿಲರ್ ಮುಂತಾದ ಪುರಪ್ರಮುಖರೂ ಸೇರಿ ಒಂದು ಕಮಿಟಿಯು ಏರ್ಪಡಿಸಿಕೊಂಡಿದ್ದುದರಿಂದ ಸಕಲ ಕಾರ್ಯಗಳೂ ಬಹಳ ವಿಶದತೆಯಿಂದ ನಡೆಯಲು ಅನುಕೂಲವಾಯಿತು.

ಇಲ್ಲಿನ ಎ.ವಿ. ಸ್ಕೂಲಿನ ಕಟ್ಟಡದಲ್ಲಿ ಏರ್ಪಡಿಸಿದ್ದ ವಿದ್ಯಾಭ್ಯಾಸದ ಪ್ರದರ್ಶನದಲ್ಲಿ ಈ ಊರಲ್ಲಿನ ಎಲ್ಲ ಸ್ಕೂಲುಗಳ ವಿದ್ಯಾರ್ಥಿಗಳ ಮತ್ತು ವಿದ್ಯಾರ್ಥಿನಿಯರ ರಟ್ಟಿನ ಕೆಲಸ, ಬರವಣಿಗೆ, ಚಿತ್ರದ ಕೆಲಸ, ಮರಗೆಲಸ, ಚಿತ್ತದ ಹೆಣಿಗೆ, ನೇಯಿಗೆ ಮುಂತಾದ ಕೈಗಾರಿಕೆಯ ಕೆಲಸ ಇವುಗಳು ಮಾತ್ರವೇ ಅಲ್ಲದೆ ಬೇರೆ ಸ್ಕೂಲುಗಳ ಕೆಲಸಗಳೂ ಪ್ರದರ್ಶಿಸಲ್ಪಟ್ಟಿದ್ದವು. ಬೆಂಗಳೂರು ಟಾಟಾ ಸಿಲ್ಕ್ ಫಾರಂ ಎಂಬ ರೇಷ್ಮೆ ಕಾರ್ಖಾನೆಯ ಮ್ಯಾನೇಜರ್ ಮ॥ ಚಾರ್ಸನ್‌ರವರು ರೇಷ್ಮೆಯ ಗೂಡು, ಬಟ್ಟೆ ಮುಂತಾದವುಗಳನ್ನು, ಮೆಕ್ಯಾನಿಕಲ್ ಇಂಜನಿಯರಿಂಗ್ ಸ್ಕೂಲ್ ಪ್ರಿನ್ಸಿಪಲರಾದ ಮ॥ ಎಸ್. ವಿ. ಶೆಟ್ಟರವರು ತಮ್ಮ ಸ್ಕೂಲಿನಲ್ಲಿ ನಡೆಯುವ ಕಬ್ಬಿಣ ಮತ್ತು ಮರಗೆಲಸದ ಮಾದರಿಗಳನ್ನು, ಮೈಸೂರು ಟ್ರೈನಿಂಗ್ ಕಾಲೇಜ್ ಪ್ರಿನ್ಸಿಪಲರಾದ ಮ॥ ಡಿ. ವೆಂಕಟರಾಮಯ್ಯನವರೂ ಅನೇ ಕಾಲೇಜಿನ ಕಿಂಡರ್‌ಗಾರ್ಟನ್ ಸೆಕ್ಷನ್ ಸೂಪರಿಂಟೆಂಡೆಂಟ್ ಮ॥ ಎಂ. ವೆಂಕಟಸುಬ್ಬಯ್ಯನವರೂ ತಮ್ಮ ವಿದ್ಯಾರ್ಥಿಗಳು ಮಾಡಿದ್ದ ಕಿಂಡರ್‌ಗಾರ್ಟನ್ ಮುಂತಾದ್ದಕ್ಕೆ ಸಂಬಂಧಪಟ್ಟ ಸಾಮಗ್ರಿಗಳನ್ನೂ ಪ್ರದರ್ಶಿಸಿದ್ದರು. ಅಲ್ಲದೆ ಬೆಂಗಳೂರು ಹೈ ಸ್ಕೂಲಿನಲ್ಲಿ ಸೈನ್ಸ್ ಎಂಬ ಶಾಸ್ತ್ರಬೋಧಕರಾದ ಮ॥ ಅನಂತಪದ್ಮನಾಭಯ್ಯನವರೂ, ಮ॥ ನಾರಾಯಣಮೂರ್ತಿಯವರೂ ತಮ್ಮ ಸ್ಕೂಲಿನ ಕೆಲವರು ವಿದ್ಯಾರ್ಥಿಗಳನ್ನು ಕರೆದುಕೊಂಡು ಬಂದು ಶಾಸ್ತ್ರಪಾಠಗಳಲ್ಲಿ ಕೆಲವು ಮುಖ್ಯಾಂಶಗಳನ್ನು ನಿದರ್ಶನಪೂರ್ವಕವಾಗಿ ಬೋಧಿಸುತ್ತಿದ್ದುದು ಅನೇಕರಿಗೆ ಕೌತುಕವನ್ನು ಹುಟ್ಟಿಸುವುದಾಗಿತ್ತು. ಇಷ್ಟೇ ಅಲ್ಲದೆ ಸ್ಲಾಯ್ಡ್ ಸೂಪರಿಂಟೆಂಡರ್ ಮ॥ ಡಿ. ಆದಿನಾರಾಯಣಯ್ಯನವರಿಂದ ಸ್ಲಾಯ್ಡ್ ವಿದ್ಯೆಗೆ ಸಂಬಂಧಪಟ್ಟ ಸಾಮಗ್ರಿಗಳೂ, ವಿದ್ಯಾಭ್ಯಾಸದ ಇಲಾಖೆಯ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರ ಆಫೀಸಿನಿಂದ ವಿಲಾಯಿತಿಯ ಸ್ಕೂಲುಗಳಿಗೆ ಸಂಬಂಧಪಟ್ಟ ವಿದ್ಯಾಭ್ಯಾಸದ ಸಾಮಗ್ರಿಗಳೂ ಬಂದಿದ್ದುವು. ಮತ್ತು ಇದೇ ತಾಲ್ಲೂಕಿಗೆ ಸೇರಿದ ಗ್ರಾಮಾಂತರದ ಸ್ಕೂಲುಗಳವರೂ, ಬೆಂಗಳೂರು ಚಾಮರಾಜಪೇಟೆ ಗರಲ್ಸ್ ಸ್ಕೂಲು, ವಿ[illegible] ಡಲ್ ಇನ್‌ಫೆಂಟ್ ಸ್ಕೂಲು, ಯಲಹಂಕ, ದೇವನಹಳ್ಳಿ, ಗುಡಿಬಂಡೆ, ಗೌರಿಬಿದನೂರು, ಶ್ರೀನಿವಾಸಪುರ, ತ್ಯಾಮಗೊಂಡ್ಲು, ಕೊಲ್ಲೇಸ್‌ಪೇಟೆ, ಬೌರಿಂಗ್‌ಪೇಟೆ, ಮಲ್ಲೇಶ್ವರ, ಆನೇಕಲ್ಲು, ನೆಲಮಂಗಲ, ವಡಿಗೇನಹಳ್ಳಿ, ಹಿಂದೂಪುರದ ತಾಲ್ಲೂಕ್ ಪೂಲಕುಂಟೆ ಈ ಮುಂತಾದ ಸ್ಕೂಲುಗಳವರೂ ಸಾಮಗ್ರಿಗಳನ್ನು ಪ್ರದರ್ಶಿಸಿದ್ದರು. ಮ॥ ಬಿ. ಎಲ್. ಲಕ್ಷ್ಮೀನಾರಾಯಣರ ಬ್ರದರು ಎಲೆಕ್ಟ್ರಿಕ್ ಲೈಟ್, ಎಲೆಕ್ಟ್ರಿಕ್ ಬೆಲ್ ಮುಂತಾದ ವಿದ್ಯುಚ್ಛಕ್ತಿಯ ಸಾಮಗ್ರಿಗಳನ್ನು ಎಲ್ಲರಿಗೂ ಪ್ರದರ್ಶನ ವಿವರಿಸುತ್ತಿದ್ದರು. ಇವುಗಳೆಲ್ಲವೂ ವಿದ್ಯಾವರ್ಧಕಗಳಾಗಿಯೂ, ಹಸ್ತಕೌಶಲ್ಯಪ್ರದರ್ಶಕಗಳಾಗಿಯೂ ಇದ್ದುವಲ್ಲದೆ ಪೂರ್ವಕಾಲದ ಹಳೇ ತರಹೆಯ ವಿದ್ಯಾಭ್ಯಾಸಕ್ಕೂ, ಈಗಿನ ಕಾಲದ ವಿದ್ಯಾಭ್ಯಾಸಕ್ಕೂ ಇರತಕ್ಕ ತಾರತಮ್ಯಗಳನ್ನು ಪ್ರದರ್ಶಿಸಲು ಸಾಧಕಗಳಾಗಿದ್ದುವು.

ಪ್ರಾತಃಕಾಲ ೮ ಘಂಟೆಯ ಟ್ರೈನಿನಲ್ಲಿ ಬೆಂಗಳೂರಿನಿಂದ ವಿದ್ಯಾಭ್ಯಾಸದ ಇಲಾಖೆಯ ಇನ್ಸ್‌ಪೆಕ್ಟರ್ ಜನರಲ್ ರಾವ್ ಬಹದ್ದೂರ್ ಮ॥ ಎಂ. ಶಾಮರಾಯರವರೂ, ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ ಮ॥ ಸಿ. ಕೃಷ್ಣರಾಯರವರು, ಸರ್ಕಲ್ ಇನ್ಸ್‌ಪೆಕ್ಟರ್ ಮ॥ ಬಿ. ದಾಸಪ್ಪನವರೂ, ಡೆಪ್ಯುಟಿ ಇನ್ಸ್‌ಪೆಕ್ಟರ್ ಮ॥ ಎಚ್. ಎ. ವೆಂಕಟರಮಣಯ್ಯನವರೂ, ಅಸಿಸ್ಟೆಂಟ್ ಡೆಪ್ಯುಟಿ ಇನ್ಸ್‌ಪೆಕ್ಟರ್ ಮ॥ ಟಿ. ವಿ. ಕೃಷ್ಣರಾಯರವರೂ, ಆನರರಿ ಬೆಂಚ್ ಮೇಜಿಸ್ಟ್ರೇಟ್ ಮ॥ ಡಿ. ಅದೆಪ್ಪನವರೂ ದಯೆಮಾಡಿಸಿದರು. ಅವರುಗಳನ್ನು ಊರಿನ ಪ್ರಮುಖರೆಲ್ಲರೂ ಸೇರಿ ಉಚಿತ ಮರ್ಯಾದೆಯೊಡನೆ ಇದಿರುಗೊಂಡನಂತರ ಎ.ವಿ. ಸ್ಕೂಲಿನ ಎದುರಿನಲ್ಲಿ ಅಲಂಕರಿಸಿದ್ದ ಚಪ್ಪರದ ಬಳಿ ಗರಲ್ಸ್ ಸ್ಕೂಲಿನ ವಿದ್ಯಾರ್ಥಿನಿಯರೂ ಎ. ವಿ. ಸ್ಕೂಲ್, ಹಿಂದೂಸ್ತಾನಿ ಸ್ಕೂಲುಗಳ ವಿದ್ಯಾರ್ಥಿಗಳೂ ಸಹ ಸೇರಿ ಸ್ವಾಗತಪೂರ್ವಕವಾಗಿ ಬರಮಾಡಿಕೊಂಡರು. ಅವರುಗಳೂ, ಅದುವರೆಗೆ ಅಲ್ಲಿ ವಿಶೇಷವಾಗಿ ನೆರೆದಿದ್ದ ಊರಿನ ಪ್ರಮುಖರೂ ಸ್ಕೂಲಿನೊಳಗೆ ಏರ್ಪಡಿಸಲ್ಪಟ್ಟಿದ್ದ ಪ್ರದರ್ಶನವನ್ನು ಆ ಮೂಲಾಗ್ರವಾಗಿ ಪರಾಮರ್ಶಿಸಿದನಂತರ ವಿದ್ಯಾರ್ಥಿಗಳೂ, ವಿದ್ಯಾರ್ಥಿನಿಯರೂ ಮಾಡಿತೋರಿಸಿದ ಅಭಿನಯ ಗೀತ, ಕಿಂಡರ್‌ಗಾರ್ಟನ್ ಆಟ, ಡ್ರಿಲ್ಲು, ಡಂಬೆಲ್ಸ್ ಸಾಧನೆ, ಗಣಿತ, ವ್ಯವಸಾಯ ಮುಂತಾದ ಪಾಠಗಳ ಬೋಧನಾಕ್ರಮ ಇವುಗಳನ್ನೆಲ್ಲ ಪರಾಮರ್ಶಿಸಿ ಭೋಜನಕ್ಕೆ ತೆರಳಿದರು.

ಮಧ್ಯಾಹ್ನ 1 ಘಂಟೆಯ ಟ್ರೈನಿನಲ್ಲಿ ಬೆಂಗಳೂರಿಂದ ಮಹಾರಾಜಶ್ರೀಯವರುಗಳಾದ ಹೈಸ್ಕೂಲ್ ಹೆಡ್ ಮಾಸ್ಟರ್ ಮ॥ ಪಿ. ಸುಬ್ರಹ್ಮಣ್ಯ ಅಯ್ಯರವರೂ, ಅಡ್ವೊಕೇಟ್ ಮ॥ ಡಿ. ವೆಂಕಟರಾಮಯ್ಯನವರೂ, ಲೆಜಿಸ್ಲೆಟಿವ್ ಕೌನ್ಸಿಲ್ ಮೆಂಬರ್ ಮ॥ ಬಿ. ಕೆ. ಗರುಡಾಚಾರ್ಯರೂ, ಕಮರ್ಷಿಯಲ್ ಅಸೋಸಿಯೇಷನ್ ಸೆಕ್ರೆಟರಿ ಮ॥ ಕೆ. ಎಸ್. ಕೃಷ್ಣಯ್ಯರವರೂ, ಮ॥ ರಾಮಚಂದ್ರರಾವ್ ಸಿಂಧೆಯವರೂ, ದಿವಾನ್ ಸಾಹೇಬರವರ ಕ್ಲಾರ್ಕ್ ಮ॥ ಡಿ. ಸಿ. ಸುಬ್ಬರಾಯಪ್ಪನವರೂ, ದೇವನಹಳ್ಳಿಯಿಂದ ಮೋಟರಿನಲ್ಲಿ ಡೆಪ್ಯುಟಿ ಕಮಿಷನರ್ ಮ॥ ಚಾಂಡಿಸಾಹೇಬರೂ ದಯೆಮಾಡಿಸಿದರು.

ಸಾಯಂಕಾಲ ೫ ಘಂಟೆಯ ವರೆಗೆ ಈ ಊರಿನವರೂ ಪರಸ್ಥಳದವರೂ ಆಬಾಲವೃದ್ಧರಾದಿಯಾಗಿ ಸರ್ವರೂ ಪ್ರದರ್ಶನವನ್ನು ನೋಡಿ ದಣಿದರು. ಅನಂತರ ಸ್ಕೂಲ್ ಬಳಿ ಪ್ರಮುಖರಾದವರ ಛಾಯಾಚಿತ್ರವು ತೆಗೆಯಲ್ಪಟ್ಟಿತು. ಆ ನಂತರ ಸ್ಕೂಲಿನಲ್ಲಿ ಸಭೆಯು ಪ್ರಾರಂಭವಾಯಿತು. ರಾವ್ ಬಹದ್ದೂರ್ ಮ॥ ಎಂ. ಶಾಮರಾಯರವರು ಅಗ್ರಾಸನವನ್ನು ವಹಿಸಿದ್ದರು. ಪ್ರೋಗ್ರಾಮಿನಂತೆ ಸುಮಾರು ಎರಡು ಘಂಟೆಗಳ ಕಾಲ ಕಾರ್ಯಗಳೆಲ್ಲವೂ ಸಾಂಗವಾಗಿ ನಡೆದುವು. ವಿದ್ಯಾರ್ಥಿಗಳ ಮತ್ತು ವಿದ್ಯಾರ್ಥಿನಿಯರ ಕುಶಲಪ್ರಶ್ನೆ, ಸಂಭಾಷಣೆ, ಕಂಠಪಾಠ, ನಾಟಕಾಭಿನಯ ಮುಂತಾದುವುಗಳೆಲ್ಲವೂ ಆನಂದದಾಯಕಗಳಾಗಿದ್ದುವು. ಮೂವರು ಪಂಡಿತ ಮಹನೀಯರುಗಳು ಕನ್ನಡದಲ್ಲಿಯೂ, ಸಂಸ್ಕೃತದಲ್ಲಿಯೂ ಸಭಾಧ್ಯಕ್ಷರವರ ಪರವಾಗಿ ರಚಿಸಿ ಓದಿಹೇಳಿದ ಕವನಗಳು ಶ್ಲಾಘ್ಯತಮಗಳಾಗಿದ್ದುವು. ಇವೆಲ್ಲವೂ ಮುಗಿದ ನಂತರ ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ ಮ॥ ಸಿ. ಕೃಷ್ಣರಾಯರವರು ವಿದ್ಯಾವಿಚಾರದಲ್ಲಿ ಸ್ವಾರಸ್ಯಕರವಾದ ಒಂದು ಉಪನ್ಯಾಸವನ್ನು ಅಪ್ಪಣೆ ಕೊಡಿಸಿದರು. ಇದರಲ್ಲಿ ಅವರು ಪೂರ್ವಕಾಲದ ವಿದ್ಯಾಭ್ಯಾಸಕ್ಕೂ ಈಗಿನ ಕಾಲದ ವಿದ್ಯಾಭ್ಯಾಸಕ್ಕೂ ಇರತಕ್ಕ ತಾರತಮ್ಯಗಳನ್ನೂ ವಿವರಿಸಿದುದಲ್ಲದೆ ನಾಗರಿಕತೆಯ ಉನ್ನತಸ್ಥಾನದಲ್ಲಿರುವ ದೇಶಗಳೊಡನೆ ಹೋಲಿಸಿ ನೋಡುವುದರಿಂದ ನಮ್ಮ ದೇಶದಲ್ಲಿ ವಿದ್ಯಾಭ್ಯಾಸವು ವಿಶೇಷ ಹಿಂದುಳಿದಿದೆ ಎಂಬುವುದು ವಿಶದವಾಗುವುದೆಂತಲೂ, ಸಮಸ್ತರೂ ವಿದ್ಯಾರ್ಜನೆಗಾಗಿ ತಕ್ಕ ಸನ್ನಾಹಗಳನ್ನು ಮಾಡುತ್ತಾ ಬಂದಲ್ಲದೆ ಈ ದೇಶೀಯರು ಅಭಿವೃದ್ಧಿಗೆ ಬರುವುದು ಸಾಧ್ಯವಾಗಲಾರದೆಂತಲೂ ವಿಶದವಾಗಿ ಉಪನ್ಯಾಸಮಾಡಿದರು. ಮ॥ ಅಡ್ವೊಕೇಟ್ ವೆಂಕಟರಾಮಯ್ಯನವರೂ ಸಹ ಮ॥ ಕೃಷ್ಣರಾಯರ ಉಪನ್ಯಾಸವನ್ನೇ ಪುಷ್ಟೀಕರಿಸಿ ಯುಕ್ತಿಯುಕ್ತವಾದ ಭಾಷಣವನ್ನು ಮಾಡಿದರು. ಅನಂತರ ಅಧ್ಯಕ್ಷಸ್ಥಾನವನ್ನಲಂಕರಿಸಿದ್ದ ರಾವ್ ಬಹದ್ದೂರ್ ಮ॥ ಎಂ. ಶಾಮರಾಯರವರು ಪ್ರದರ್ಶನ ಮುಂತಾದುವುಗಳನ್ನೆಲ್ಲ ತೃಪ್ತಿಕರವಾಗಿ ಏರ್ಪಡಿಸಿದುದಕ್ಕಾಗಿ ಹೆಡ್ ಮಾಸ್ಟರ್ ಮ॥ ಡಿ. ಕೊಂಗಾಡಿಯಪ್ಪನವರನ್ನೂ, ಕಮಿಟಿಯ ಮೆಂಬರುಗಳನ್ನೂ ಶ್ಲಾಘಿಸಿ ಸರ್ಕಾರದವರು ಬಲಾತ್ಕಾರ ವಿದ್ಯಾಭ್ಯಾಸದ ಕಾನೂನನ್ನು ಈ ಊರಿನಲ್ಲಿ ಜಾರಿಗೆ ತರಬಹುದೆಂದು ಅಪ್ಪಣೆ ಮಾಡಿದ್ದರೂ ಅದರ ನಿಯಮಗಳನ್ನು ಇಲ್ಲಿ ಜಾರಿಗೆ ತರಬೇಕಾದ ಪ್ರಮೇಯವೇ ಬರದಂತೆ ಸರ್ವರೂ ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಿ ವಿದ್ಯೆಯ ಫಲಗಳನ್ನು ಪಡೆಯುವವರಾಗಬೇಕೆಂತಲೂ, ಸರ್ಕಾರದವರು ಈಗಾಗಲೇ ಬಾಲವಿದ್ಯಾಭ್ಯಾಸಕ್ಕಾಗಿ ३½ ಲಕ್ಷ ರೂಪಾಯಿ ಮಂಜೂರ್ ಮಾಡಿರುವರೆಂತಲೂ, ಇನ್ನೂ ಹೆಚ್ಚಾಗಿ ಬೇಕಾದರೂ ಮಂಜೂರ್ ಮಾಡಲು ಸಿದ್ಧರಾಗುವರೆಂತಲೂ, ಈಗಿನ ಕಾಲದ ವಿದ್ಯಾಭ್ಯಾಸವು ಮಕ್ಕಳಿಗೆ ಆಟದೋಪಾದಿಯಲ್ಲಿ ಕಲಿಸಲ್ಪಡುವುದೆಂತಲೂ ಸರ್ವಜನ ಹೃದಯಂಗಮವಾದ ಭಾಷಣವನ್ನು ಮಾಡಿದರು. ಅನಂತರ ಅಡ್ವೊಕೇಟ್ ಮ॥ ರಾಜಗೋಪಾಲಯ್ಯಂಗಾರ್ರವರೂ, ಮ್ಯುನಿಸಿಪಲ್ ಕೌನ್ಸಿಲರ್ ಮ॥ ಆಲಂಪಲ್ಲಿ ವೆಂಕಟನಾರಣಯ್ಯನವರೂ ಊರಿನ ಜನರ ಪರವಾಗಿ ಸಭಾಧ್ಯಕ್ಷರವರಿಗೆ ವಂದನೆಗಳನ್ನು ಸಮರ್ಪಿಸಿದರು. ಗಂಧಪುಷ್ಪಗಳ ವಿನಿಯೋಗಾನಂತರ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆ, ಮಂಗಳ ಮುಂತಾದುವುಗಳ ಸಮೇತ ಸಭೆಯು ಮುಕ್ತಾಯವಾಯಿತು. ಬೆಂಗಳೂರಿನಿಂದ ದಯೆಮಾಡಿಸಿದ್ದವರೆಲ್ಲರೂ ರಾತ್ರಿಯ ಟ್ರೈನಿನಲ್ಲಿ ಹಿಂದಿರುಗಿದರು.

ಪ್ರದರ್ಶನವನ್ನು ನೋಡಲು ಈ ಊರಿನವರೂ, ಸುತ್ತುಮುತ್ತಣ ಗ್ರಾಮಾಂತರದವರೂ ಇನ್ನೂ ಪ್ರತಿದಿನವೂ ವಿಶೇಷವಾಗಿ ಬರುತ್ತಲೇ ಇರುವರು. ಇದರಿಂದ ಇಲ್ಲಿಯವರೆಲ್ಲರಿಗೂ ವಿದ್ಯೆಯ ವಿಚಾರದಲ್ಲಿ ವಿಶೇಷವಾದ ಆಸಕ್ತಿಯು ಹುಟ್ಟುವಂತಾಗಿರುತ್ತದೆ.

ಡಿ. ಸಿ. ಎಸ್.

ವಿದೇಶ ವೃತ್ತಾಂತಗಳು.

ಜರ್ಮನಿರಾಜ್ಯಕ್ಕೆ ಸೇರಿದ ಪಾಟ್ಸ್‌ಡೆಮ್ ಪಟ್ಟಣದಲ್ಲಿ ಲೇವಾದೇವಿ ವ್ಯವಹಾರದಲ್ಲಿ ತುಂಬಾ ಕಷ್ಟ ಸಂಭವಿಸಿದ್ದರಿಂದ ಪ್ರಜೆಗಳಲ್ಲಿ ತುಂಬಾ ಗಣ್ಯತೆಯನ್ನು ಸಂಪಾದಿಸಿಕೊಂಡಿದ್ದ ಹರ್ ಯೂಜಿನ್ ಬೀಬರ್ ಎಂಬ ವರ್ತಕನೂ, ಅವನ ಹೆಂಡತಿಯೂ, ಹರ್ ಆಗಸ್ಟ್ ಸಾಲ್ ಎಂಬ ವರ್ತಕನೂ ಕಳೆದ ಜೂಲೈ ತಾ. 30 ರಲ್ಲಿ ಆತ್ಮಹತ್ಯವಾಡಿಕೊಂಡರು.

* * *

ಇಂಗ್ಲೆಂಡಿನಲ್ಲಿ ಬೆಡ್‌ಫರ್ಡ್ ಡಿಸ್ಟ್ರಿಕ್ಟಿಗೆ ಸೇರಿದ ಬಾರ್ಟನ್ ಎಂಬ ಗ್ರಾಮದೊಳಗೆ ನಾಲ್ವತ್ತು ವರುಷಗಳಿಂದ ಪುರೋಹಿತನಾಗಿದ್ದ ಮಿ॥ ಜೆ. ಕ್ರೇನ್ ಎಂಬಾತನು ಕಾಲವಾದನು. ಆತನಿಗೆ 88 ವರುಷ ವಯಸ್ಸಾಗಿತ್ತು. ಅಪರಕ್ರಿಯೆಗಳನ್ನು ಮಾಡುವುದಕ್ಕೆ ಅದೇ ಗ್ರಾಮದಲ್ಲಿ ವಾಸವಾಡುತ್ತಿರುವ ಆತನ 210 ಮಂದಿ ರಕ್ತಸಂಬಂಧಿಗಳು ಸೇರಿದ್ದರು.

* * *

ಕಾಹಾಸಿಯೋ ಎಂಬ ಇಟಲಿ ದೇಶದವನು ಈಜುವುದರಲ್ಲಿ ತುಂಬಾ ಪ್ರಖ್ಯಾತಿಗೆ ಬಂದಿದ್ದನು. ಈತನು ಇಂಗ್ಲಿಷ್ ಛಾನಲ್ ಎಂಬ ಕಡಲು ಕಾಲುವೆಯನ್ನು ಈಜಿ ದಾಟಬೇಕೆಂದು ಅನೇಕ ವೇಳೆ ಸಾಹಸಪಟ್ಟಿರುತ್ತಾನೆ. ಆದರೆ 28 ವರುಷ ವಯಸ್ಸಿನ ಈ ಯೌವನಸ್ಥನು ಕಳೆದ ವಾರ ಪ್ಯಾರಿಸ್ ಪಟ್ಟಣದ ಆಸ್ಪತ್ರೆಯಲ್ಲಿ ಕಾಲವಾದನೆಂದು ತಿಳಿಯುತ್ತದೆ.

* * *

ಇಂಗ್ಲಿಷ್ ಗವರ್ನ್‌ಮೆಂಟಿನ ವ್ಯವಸಾಯದ ಇಲಾಖೆಯವರು ಇಂಗ್ಲಾಂಡಿನಲ್ಲಿ ಕ್ಷಯರೋಗ ಹಿಡಿದಂಥಾ ಹಸುಗಳಿದ್ದರೆ ಅಂಥವುಗಳನ್ನು ಸರ್ಕಾರದ ವೈದ್ಯರು ಪರೀಕ್ಷೆಮಾಡಿ, ಅವುಗಳ ಮಾಲೀಕರಿಗೆ ತಕ್ಕ ಕ್ರಯವನ್ನು ಸರ್ಕಾರದಿಂದ ಪಾವತಿ ಮಾಡಿ, ಆ ಹಸುಗಳನ್ನು ಕೊಂದುಹಾಕಬೇಕೆಂದು ವಿಧಾಯಕ ಮಾಡಿದಾರೆ. ಹಿಂದುಸ್ಥಾನದಲ್ಲೂ ಇಂಥಾ ಕಾನೂನು ಮುಂದೆ ಜಾರಿಗೆ ಬರಬಹುದು.

* * *

ವೇಲ್ಸ್ ದೇಶಕ್ಕೆ ಸೇರಿದ ವೇಡಾರ್ಲಿನ್ ಎಂಬ ಸ್ಥಳದಲ್ಲಿ ಮಿಸೆಸ್ ಸ್ಮಿತ್ ಎಂಬಾಕೆಯು ಸರ್ಕಾರದವರು ಸ್ತ್ರೀಯರಿಗೆ ಓಟ್ ಮಾಡುವ ಹಕ್ಕು ಕೊಡದಿದ್ದರೆ 18 ರೂಪಾಯಿ ಕಂದಾಯ ಕೊಡುವುದಿಲ್ಲವೆಂದು ತಿರಸ್ಕರಿಸಿದಳು. ಸರ್ಕಾರದವರು ವಾರಂಟು ತಂದು ಆಕೆಯ ಮನೆಯಲ್ಲಿದ್ದ ಕೆಲವು ವಸ್ತುಗಳನ್ನು ಹರಾಜುಮಾಡಿ ತಮ್ಮ ಕಂದಾಯವನ್ನು ವಸೂಲು ಮಾಡಿಕೊಳ್ಳಬೇಕಾಯಿತು.

* * *

ಜರ್ಮನಿಗೆ ಸೇರಿದ ಡಸೆಲ್‌ಡಾರ್ಫ್ ಪಟ್ಟಣದಲ್ಲಿ ಮರದ ಕಾಲಿನ ಒಬ್ಬ ಫ್ರೆಂಚ್ ಕುಂಟನನ್ನು ಜರ್ಮನಿಯವರು ಫ್ರೆಂಚರ ಕಡೆಯ ಗೂಢಚಾರನೆಂಬ ಅನುಮಾನದ ಮೇಲೆ ಹಿಡಿದು ಪರೀಕ್ಷೆ ಮಾಡಿದಾಗ ಆ ಕುಂಟನ ಮರದ ಕಾಲಿನೊಳಗೆ ಕೆಲವು ಮುಖ್ಯವಾದ ಕಾಗದಪತ್ರಗಳೂ ಹೊಸ ನಮೂನೆಯ ಗೋಲಿಗಳೂ ಸಿಕ್ಕಿದವೆಂದೂ, ಆ ಕುಂಟನು ಕದ್ದು ಬಚ್ಚಿಟ್ಟುಕೊಂಡಿದ್ದನೆಂದೂ ಪ್ರಕಟವಾಗಿದೆ.

* * *

ಅಮೇರಿಕಕ್ಕೆ ಸೇರಿದ ಬೋಸ್ಟನ್ ಪಟ್ಟಣದೊಳಗೆ ಒಂದು ಹೋಟೆಲು ಗಾಡಿಯಲ್ಲಿ ಜವಾನನಾಗಿರುವ ಫ್ರಾಂಕ್ ಬಿ. ವ್ಯಾಟರ್ಸನ್ ಎಂಬುವನಿಗೆ ಯಾವನೋ ಒಬ್ಬ ದೊಡ್ಡ ಮನುಷ್ಯನು 2,10,000 ರೂಪಾಯಿಯನ್ನು ತನ್ನ ಉಯಿಲಿನಿಂದ ಕಳುಹಿಸಿಕೊಟ್ಟನು. ಇದಕ್ಕೆ ಕಾರಣವೇನೆಂದರೆ ಆ ದೊಡ್ಡ ಮನುಷ್ಯನು ಎರಡು ವರುಷಗಳ ಹಿಂದೆ ಆ ಪಟ್ಟಣಕ್ಕೆ ಬಂದಿದ್ದಾಗ್ಗೆ ಈ ಜವಾನನು ಆತನನ್ನು ಕರೆದುಕೊಂಡು ಹೋಗಿ ಪಟ್ಟಣದ ಎಲ್ಲಾ ಭಾಗಗಳನ್ನೂ ತೋರಿಸಿದ್ದನಂತೆ.

* * *

ಇಂಗ್ಲೆಂಡಿನಿಂದ ಅಮೇರಿಕಕ್ಕೆ ವಿಮಾನದಲ್ಲಿ ಕುಳಿತು ಅಟ್ಲಾಂಟಿಕ್ ಸಾಗರವನ್ನು ದಾಟಿಹೋಗುವಂಥಾ ಸವಾರಿಗಾರನಿಗೆ ಒಂದೂವರೆ ಲಕ್ಷ ರೂಪಾಯಿ ಬಹುಮಾನ ಕೊಡುತ್ತೇವೆಂದು ಲಂಡನ್ ಪಟ್ಟಣದಲ್ಲಿ ಪ್ರಕಟವಾಗುವ ಡೆಯಿಲಿ ಮೆಯಿಲ್ ಎಂಬ ಪತ್ರಿಕೆಯ ಸಂಪಾದಕರು ಪ್ರಕಟಮಾಡಿರುತ್ತಾರೆ. ಜೆ. ಸಿ. ಪೋರ್ಟ್ ಎಂಬೊಬ್ಬ ಇಂಗ್ಲಿಷ್ ಸೈನ್ಯದ ಉದ್ಯೋಗಸ್ಥನು ಈ ಪಂದ್ಯಕ್ಕೆ ಸೇರಿ ತಾನು ತಯಾರುಮಾಡಿರುವ ವಿಮಾನ ಯಂತ್ರದಲ್ಲಿ ಆ ಮಹಾಸಾಗರವನ್ನು ದಾಟಬೇಕೆಂದು ಸನ್ನಾಹಗಳನ್ನು ಒದಗಿಸಿಕೊಳ್ಳುತ್ತಿದ್ದಾನೆ.

* * *

ಮಿ॥ ಆಂಡ್ರು ಕಾರ್ನೆಗಿ ಎಂಬ ಕೋಟ್ಯಾಧೀಶ್ವರನು ಅಮೇರಿಕಕ್ಕೆ ಸೇರಿದ ಸಂಯುಕ್ತ ಸಂಸ್ಥಾನಗಳಲ್ಲಿ ಎಲ್ಲಾ ಗ್ರಾಮಾಂತರಗಳಿಗೂ ಒಂದೊಂದು ಪುಸ್ತಕ ಭಂಡಾರವನ್ನು ಕಲ್ಪಿಸಿಕೊಡುವುದಕ್ಕೆ ಸಿದ್ಧನಾಗಿರುತ್ತಾನೆಂದೂ, ಈ ಪರೋಪಕಾರ ಕಾರ್ಯಕ್ಕೋಸ್ಕರ ಆತನು 23,50,00,000 ರೂಪಾಯಿ ಖರ್ಚುಮಾಡುವುದಾಗಿ ತಿಳಿಸಿದಾನೆಂದೂ, ಗ್ರಾಮಾಂತರಗಳ ಮುಖಂಡರು ಅರ್ಜಿ ಬರೆದುಕೊಂಡು ಆತನಿಂದ ದ್ರವ್ಯ ಸಹಾಯವನ್ನು ಪಡೆಯಬಹುದೆಂದೂ ಸಂಯುಕ್ತ ಸಂಸ್ಥಾನಗಳ ವಿದ್ಯಾಭ್ಯಾಸದ ಇಲಾಖೆಯ ಕಮಿಷನರವರು ಪ್ರಕಟಮಾಡಿರುತ್ತಾರೆ. ಮಿ॥ ಕಾರ್ನೆಗಿಯು ತನ್ನ ಆಸ್ತಿಯನ್ನೆಲ್ಲಾ ಪರೋಪಕಾರಕ್ಕೆ ವಿನಿಯೋಗಿಸಿ, ಬಡವನಾಗಿ ಪ್ರಾಣಬಿಡಬೇಕೆಂದು ಸಂಕಲ್ಪಮಾಡಿಕೊಂಡಿರೋಣದರಿಂದ ಆವಶ್ಯವಿರುವವರೆಲ್ಲಾ ಬೇಗಬೇಗನೆ ಆತನಿಗೆ ಬರೆದುಕೊಂಡು ಆತನ ಉದ್ದೇಶವನ್ನು ಸಾರ್ಥಕಪಡಿಸಬೇಕೆಂದು ಆ ಅಧಿಕಾರಿಯು ತಿಳಿಸಿರುವರು.

ಹಿಂದುಸ್ಥಾನ್ ಕೋಆಪರೇಟಿವ್ ಜೀವವಿಮೆ ಸಂಘ ಲಿ.

ಹಿಂದುಸ್ಥಾನ್ ಕಟ್ಟಡಗಳು—ಕಲ್ಕತ್ತಾ.

ಕಂಪನಿಯ ಮೂಲಧನ (ಒಂದು ಕೋಟಿ ರೂಪಾಯಿ)	1,00,00,000
ಖಾವತಿಯಾದ ಮೊಬಲಗು	10,50,000
ವಸೂಲಾದ ಮೊಬಲಗು	87,00,000

ಈ ಕಂಪನಿಯಲ್ಲಿ ಪಾಲ್ಸಿದಾರರಿಗೆ ಬಹಳ ಕಮ್ಮಿಯಾದ ದರಗಳ ಪಟ್ಟಿಯನ್ನು ಮಾಡಿರುವುದು. 1912 ನೇ ಇಸ್ವಿಯ ಇಂಡಿಯಾ ಗವರ್ನ್‌ಮೆಂಟಿನ ಜೀವವಿಮೆ ಕಂಪನಿಯ ಆಕ್ಟಿನ ಪ್ರಕಾರ ಸರ್ಕಾರದಲ್ಲಿ 2 ಲಕ್ಷ ರೂಪಾಯಿಗಳನ್ನು ಡಿಪಾಜಿಟ್ಟು ಮಾಡಲ್ಪಟ್ಟಿರುತ್ತೆ. ಮತ್ತು ಅನೇಕ ಮಹಾರಾಜರುಗಳು ಮುಂತಾದ ದೊಡ್ಡವರು ಪ್ರೆಸಿಡೆಂಟರಾಗಿರುವದರಿಂದ ಈ ಕಂಪನಿಯ ಅಭಿವೃದ್ಧಿಸ್ಥಿತಿಯನ್ನು ಪ್ರಕಟಿಸಿ ಮಾಡುವುದಕ್ಕೆ ಸಂತೋಷವಾಗಿರುತ್ತದೆ.

ಸುಲಭವಾಗಿ ಹಣವನ್ನು ಪಾರ್ಟಿಯವರ ಮನೆಯಲ್ಲೇ ಜಾಗ್ರತೆ ಪಾವತಿಗೆ ಏರ್ಪಾಡು ಮಾಡಲ್ಪಡುತ್ತೆ. ಆದ್ದರಿಂದ ಪಾಲ್ಸಿದಾರರು ಮತ್ತು ಇದಕ್ಕೆ ಸೇರಿದ ಏಜಂಟ್ರುಗಳು ತುಂಬಾ ಅದೃಷ್ಟವಂತರೆಂಬುವದರಲ್ಲಿ ಸಂದೇಹವಿಲ್ಲ.

ಹೆಚ್ಚಿನ ವಿಷಯಗಳಿಗೂ, ಫಾರಂ ಮತ್ತು ಪ್ರಾಸ್‌ಪೆಕ್ಟಸುಗಳಿಗೂ ಕೆಳಗಿನ ವಿಳಾಸಕ್ಕೆ ಜಾಗ್ರತೆಯಾಗಿ ಬರೆಯಿರಿ. [243-39]

ವೆಂಕಟಾಚಲಂ ಅಂಡ್ ಸನ್ಸ್, ಚೀಫ್ ಏಜಂಟ್ರು,
166, ದೊಡ್ಡಪೇಟೆ, ಮೈಸೂರು.

ಆಗಸ್ಟ್ ಮಹೋತ್ಸವದ ಕೈ ಗಡಿಯಾರ.
ಅರ್ಧ ಕ್ರಯ ರೂ. 1-14-0

ಇದೇ ಆಗಸ್ಟ್ ಹಬ್ಬದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದ ಕೈ ಗಡಿಯಾರವನ್ನು ಆಗಸ್ಟ್ ಒಳಗೆ ತರಿಸಿಕೊಳ್ಳುವವರಿಗೆ ರೂಪಾಯಿ 1-14-0 ಆನೆಗೆ ಕೊಡಲ್ಪಡುತ್ತೆ. [99-13]

ವಿಳಾಸ—ವಿ. ಕೃಷ್ಣಸ್ವಾಮಿ ಮೊದಲಿಯಾರ್, ನಂ.27 ಬಂದರ್ ಬೀದಿ, ಜಿ.ಟಿ., ಮದರಾಸು.

ಮಧುರೆ ಜುನ್ನಡಿ ಅಂಚಿನ ಸೀರೆ ಅಪ್ಸಲ್ ರಖಂ ರೂ. 2-6-0.

ಆಗಸ್ಟ್ ತಿಂಗಳ ಒಳಗಾಗಿ ತರಿಸಿಕೊಳ್ಳುವರಿಗೆ ಒಂದು ಸಿಂಗಪೂರು ರವಿಕೆಯನ್ನು ಪ್ರತಿ ಸೀರೆಗೂ ಇನಾಮಾಗಿ ಕೊಡುತ್ತೇವೆ. [99-13]

ಇದು ಉಡುವುದಕ್ಕೆ ದಪ್ಪಾಗಿಯೂ, ನೋಟಕ್ಕೆ ನಯವಾಗಿಯೂ, ಬೆಲೆ ಸುಲಭವಾಗಿಯೂ ಇದೆ. ಬಣ್ಣ ಹೋಗದು ಸೀರೆಯ ಉದ್ದ 16 ಮೊಳ. ಸುಂದರವಾದ ಸೆರಗು. ಒಂದನ್ನು ತರಿಸಿ ಪರೀಕ್ಷಿಸಿ. ವಿಳಾಸ—ವಿ. ಕೃಷ್ಣಸ್ವಾಮಿ ಮೊದಲಿಯಾರ್, ನಂ. 27, ಬಂದರ್ ಬೀದಿ, ಜಿ. ಟಿ., ಮದರಾಸು.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ:— ಬೆನ್ನಿನಲ್ಲಿ ಛಳುಕು; ನಿದ್ರೆಯಿಲ್ಲದೆ ಇರುವುದು; ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಿಳುಪಾಗಿಯೋ ಇಳಿಯುವುದು; ಬಡಿದ ಬಾಯಾರಿಕೆ; ಬಳಲಿಕೆ; ಎದೆ ತಲ್ಲಣಿಸುವುದು; ತಲೆನೋವು; ಗಾಬರಿ; ಕಣ್ಣುಮೊಬ್ಬು; ತಲೆ ತಿರುಗುವಿಕೆ; ಮೈನೋವು; ಕೀಲುನೋವು; ಮರವು; ನಿಶ್ಶಕ್ತಿ; ಇವೇ ಮೊದಲಾದುವು. ಅಲಕ್ಷ್ಯಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್ಸ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [181-52]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ಸ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು.



ರೂ. ೨—೦—೦; ಅಥವಾ ೬ ಬುಡ್ಡಿಗಳಿಗೆ ರೂ. ೧೦—೮—೦. ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು. ಅಥವಾ ಡೋನ್ಸ್, ಪಿ. ಒ. ಬಾಕ್ಸ್ ೩೦, ಬೊಂಬಾಯಿ—ಇವರಲ್ಲಿ ದೊರೆಯುವುವು.

ಬೇಕಾದವರು ಗಮನಿಸಿ.

ತ್ವರೆಮಾಡಿ! ಕೆಲವು ದಿನಗಳು ಮಾತ್ರ!

ಸೋಲಾಪುರದ ಜೆಕ್ಕು, ಶೀರೆ, ಖಣ, ಕರಿಗೆ.

ಹಣ ಮುಂಗಡವಾಗಿ ಕಳುಹಿಸತಕ್ಕ ವ್ಯಾಪಾರಿಗಳಿಗೆ ಮಾತ್ರ ಕರಹವಾಂ ಜೆಕ್ಕು, ಶೀರೆ, ಖಣ, ಕರಿಗೆ ಇವು ಬಹಳ ಸುಲಭ ಖರೀದಿಗೆ ಒದಗಿಸುವ ಏರ್ಪಾಡು ಮಾಡಲ್ಪಟ್ಟಿದೆ. ನಮ್ಮ ಕಾಯಂ ಗಿರಾಕಿಗಳಿಗೆ ಎಲ್ಲರಿಗಿಂತ ಸುಲಭ ಕ್ರಯಕ್ಕೆ ದೊರೆಯುವುದು.

ಹೊಸ ಗಿರಾಕಿಗಳು ತಮಗೆ ಬೇಕಾದಷ್ಟು ನಮಗೆ ಬರೆದು ಹಣ ಮುಂಗಡ ರವಾನಿಸಿದರೆ ಅವರಿಗೂ ಕಾಯಂ ಗಿರಾಕಿಗಳ ದರಕ್ಕೆ ಐವಜು ದೊರೆಯುವುದು.

ಹಣ ಕಳುಹಿಸದೆ ಬರೆಯತಕ್ಕ ಕಾಗದಗಳಿಗೆ ಬೇಗ ಗಮನಕೊಡಲು ಅನುಕೂಲವಿಲ್ಲ. ಕಾಗದ ಪತ್ರಗಳನ್ನು ಬೆಳೆಸುವದರಿಂದ ಖರೀದಿಗಳು ಬದಲಾಯಿಸುವುದಿಲ್ಲವೆಂಬ ವಿಷಯ ಜ್ಞಾಪಕದಲ್ಲಿಡಬೇಕು. [28-32]

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್,
169, ಕಿಲಾರಿ ರೋಡ್ (ಕುಂಬಾರರ ಪೇಟೆ), ಬೆಂಗಳೂರು ಸಿಟಿ.

ಒಂದುವೇಳೆ ನಿಮ್ಮ ಮಗು ರಾತ್ರಿಯಲ್ಲಿ ಶ್ವಾಸನಾಳ ಕಟ್ಟಿಕೊಂಡದ್ದರಿಂದ ಗಂಟಲು ಎದೆಯೂ ಭಾರವಾಗಿ ಎಚ್ಚರವಾಗಬಹುದು. ಆದರಿಂದ ಅದಕ್ಕೆ ಗಂಟಲು ಕಟ್ಟಿಹೋಗಿ ಕೊರಳು ಹಿಸುಕಿದಂತೆ ಆಗಿ ಉಸುರು ಕಷ್ಟವುಂಟಾಗುವದು. ತಡಮಾಡಿ ಹಾನಿ ಹೊಂದಲಾಗದು, ತಕ್ಷಣದ ಬಿಡುಗಡೆ ಹತ್ರವೇ ಇದೆ.

ನ್ಯೂ ಜೆರ್ಸಿಗೆ ಸೇರಿದ ನ್ಯೂಗಾರ್ಕಿನ ಮಿಸ್ಟರ್ ಜಿ. ವಿಲ್ಕಾಕ್ಸ್ ಹೇಳುವದೇನೆಂದರೆ:—"ಕಳೆದ ವರುಷದಲ್ಲಿ, ಎರಡು ವರುಷದ ನನ್ನ ಹೆಣ್ಣುಮಗಳೊಬ್ಬಳು ಶೀತಕ್ಕೆ ಸಿಕ್ಕಿ ಅದು ಬೇಗ ಪಕ್ವ ಶ್ವಾಸನಾಳವನ್ನು ಕಟ್ಟಿತು. ರಾತ್ರಿಯಲ್ಲಿ ಮಗುವು ಶ್ವಾಸಿಸುವದಕ್ಕೆ ಕಷ್ಟಪಡುತ್ತಿರುವದನ್ನು ಕಂಡು ಎದ್ದು ಹೋಗಿನೋಡಲು ಕೊರಳು ಹಿಸುಕಿದಂತಾಗಿತ್ತು. ಮನೆಯಲ್ಲಿ ಚೇಂಬರ್ಸ್ ಓರಿಯೆಂಟಲ್ ಬಾಂ ಸ್ವಲ್ಪ ಇದ್ದದ್ದರಿಂದ ಅದನ್ನು ಲೇಪಿಸ ತೊಡಗಿದನು. ಅದರಿಂದ ಅದ್ಭುತವಾದಂತಾಯಿತು. ಇದಾದ ಕೆಲವು ನಿಮಿಷಗಳಲ್ಲಿಯೇ ಮಗುವು ಧಾರಾಳವಾಗಿ ಶ್ವಾಸಿಸಿ, ಚೆನ್ನಾಗಿ ನಿದ್ದೆಮಾಡಿತು.

ಎಲ್ಲಾ ಔಷಧಿ ಮಾರುವವರಲ್ಲಿಯೂ ಸೀಸೆ 1ಕ್ಕೆ 1 ರೂಪಾಯಿಯಂತೆ ಮಾರಲ್ಪಡುತ್ತೆ. 101-18

ಪ್ರೊಫೆಸರ್ ಬ್ರೇಸ್ಲರ್ ಇಲೆಕ್ಟ್ರೊ ಪೆಯಿನಾಡೈನ್

ಮನುಷ್ಯನ ಶರೀರದಲ್ಲಿ ವಿದ್ಯುಚ್ಛಕ್ತಿ ವ್ಯಾಪಿತವಿರುವದೆಂತಲೂ, ವಿದ್ಯುಚ್ಛಕ್ತಿ ಕಡಮೆಯಾದ ಕೂಡಲೇ ನಾನಾ ತರದ ವ್ಯಾಧಿಗಳು ಲಭಿಸುವದೆಂತಲೂ, ಅಂತಹ ವ್ಯಾಧಿಗಳನ್ನು ಶೀಘ್ರ ಗುಣಪಡಿಸಲು ವಿದ್ಯುಚ್ಛಕ್ತಿ ಮಿಶ್ರವಾದ ಔಷಧದ ಉಪಯೋಗದಿಂದಲ್ಲದೆ



ಬೇರೆ ಔಷಧಗಳಿಂದ ವ್ಯಾಧಿಗಳನ್ನು ಶೀಘ್ರ ಗುಣಪಡಿಸುವದು ಕಷ್ಟವೆಂತಲೂ ಅಮೇರಿಕಾ ದೇಶದ ವೈದ್ಯಶಾಸ್ತ್ರ ಪಂಡಿತರು ವೈದ್ಯಶಾಸ್ತ್ರ ಪರಿಶೋಧನೆಯಿಂದ ಸಿದ್ಧಿಸಿರುವರು. ಈ ಔಷಧವು ಉಪಯೋಗಿಸಿದ ಕೂಡಲೇ ದೇಹಕ್ಕೆ ಸಾಕಾಗುವಷ್ಟು ವಿದ್ಯುಚ್ಛಕ್ತಿಯನ್ನುಂಟುಮಾಡಿ ವ್ಯಾಧಿಯನ್ನು ಅತಿ ಶೀಘ್ರ ಗುಣಪಡಿಸುತ್ತೆ. ಪ್ರಾಚೀನಕಾಲದ ಔಷಧಗಳಿಗೆಲ್ಲವು ಇದು ಅತ್ಯುತ್ತಮವಾದದ್ದು. ಒಂದಾವರ್ತಿ ಪರೀಕ್ಷಿಸಿ ನೋಡಿದರೆ ಇದರ ಗುಣವು ವ್ಯಕ್ತವಾಗುತ್ತೆ.

ಎಲೆಕ್ಟ್ರೊ ಪೆಯಿನಾಡೈನ್ ತೈಲದಿಂದ ಗುಣಪಡುವ ವ್ಯಾಧಿಗಳು:—

ತಿಮರುವಾಯುವು, ಕೀಲ್ವಾಯುವು, ಪಾರ್ಶ್ವವಾಯುವು, ಕ್ಷಯ, ಕೆಮ್ಮು, ನೆಗಡಿ, ವಾಯುನೋವು (ಕೈಕಾಲು ಹಿಡಿತ), ಉಳುಕು ಹಿಡಿದಿದ್ದರು, ಕಠಿನಶ್ವಾಸ, ನಡುನೋವು (ಸೊಂಟನೋವು), ಪಕ್ಕಶೂಲೆ, ಹಲ್ಲುನೋವು, ತಲೆನೋವು, ಅರೆತಲೆನೋವು, ಉಬ್ಬಸ, ವಿಷಜ್ವರದ ಗಡ್ಡೆಗಳಿಗೂ ಮತ್ತು ಮಕ್ಕಳ ಪಕ್ಕಶೂಲೆ, (ಅಳ್ಳೆ) ಶೈತ್ಯದೋಷಗಳೂ, ವಿಷಹುಳಗಳ ಕಡಿತಗಳಿಗೂ (ಚೇಳು ಮುಂತಾದದ್ದು), ಇದಕ್ಕೆಲ್ಲಾ ಬಹಳ ಶ್ಲಾಘನೀಯವಾದದ್ದು. [12-36]

ಉಪಯೋಗಿಸುವ ಕ್ರಮವು ಹಿಂದುದೇಶದ ಎಲ್ಲಾ ಭಾಷೆಗಳಲ್ಲಿಯೂ ಬುಡ್ಡಿಯ ಸಂಗಡ ಕಳುಹಿಸಲಾದೀತು.

ಬುಡ್ಡಿಯ ಕ್ರಯ ರೂ. 0-8-0. ವಿ. ಪಿ. ಖರ್ಚು 0-4-0. ಏಜಂಟರು ಬೇಕು.

ಮುಖ್ಯ ಏಜಂಟರು:—ಗುರುಬಸವ ಅಂಡ್ ಕಂಪನಿ, ಮದರಾಸ್.

ಕುಂತಲಾನಂದ ತೈಲವು.

192-50

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಿರುದಿನ ಬಿಲ್ಲೆಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ. ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು.

ಈ ತೈಲವು ಕೂದಲನ್ನು ಚನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುತ್ತದೆ. ಸಿದ್ಧ ಪ್ರಾಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದಾಗಿದೆ. ಬೆಲೆ ಬಾಟ್ಲಿಗೆ 1 ರೂಪಾಯಿ 3 ಬಾಟಲಿಗೆ 2 ರೂಪಾಯಿ 10 ಆಣೆ. ಅಂಚೆ ಕಾಸಲು ಬೇರೆ. ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ.

ನಮ್ಮ ವಿಳಾಸ:—ಬಿ. ಎಮ್. ನಾಥ ಮತ್ತು ಕಂಪೆನಿ,
ವೇಪೇರಿ, ಮದರಾಸ್

ಶ್ರೀ ಕರಕಸ್ತೂರಿಮಾತ್ರೆ

ಬಿ. ವಿ. ಪಂಡಿತರ

250 ಮಾತ್ರೆಯುಳ್ಳ ಸೀಸೆಗೆ 4 ಆ.; 5 ಸೀಸೆಗಳಿಗೆ 1 ಇನಾಂ.

ಈ ಮಾತ್ರೆಗಳ ಬೆಲೆಯನ್ನು ನೋಡಿ ಇವರ ಗುಣವನ್ನು ಊಹಿಸಲಾಗದು. ಟಿಬೆಟ್ ದೇಶದ ಕಸ್ತೂರಿಯಿಂದಲೇ ಶಾಸ್ತ್ರೋಕ್ತವಾಗಿ ತಯಾರು ಮಾಡಲ್ಪಡುತ್ತಿರುವ ಈ ಶ್ರೀಕರ ಕಸ್ತೂರಿ ಮಾತ್ರೆಗಳು ಸುವಾಸನೆಯಾಗಿರುವುದು ಮಾತ್ರವಲ್ಲದೆ ತಾಂಬೂಲದೊಡನೆ ಅಥವಾ ಹಾಗೆಯೇ ಸೇವಿಸಿದರೆ ಎಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸುವುದು ಮಕ್ಕಳಿಗೆ ಉಂಟಾಗುವ ಅಜೀರ್ಣಭೇದಿ-ಜ್ವರ-ಕೆಮ್ಮು-ನೆಗಡಿ-ಉಳವು-ಹೊಟ್ಟೆಯುಬ್ಬರ-ಈ ರೋಗಗಳನ್ನು ಸವಿಾಪದಲ್ಲಿಯೇ ವೈದ್ಯನಿದ್ದಂತೆ ತಕ್ಷಣ ಗುಣಪಡಿಸುವುದು. ಪ್ರಯಾಣಿಕರಿಗೂ ಸೊಂಕು ರೋಗಸ್ಥಳದಲ್ಲಿರುವವರಿಗೂ ಮಲೆನಾಡಿನಲ್ಲಿರುವವರಿಗೂ ಇದರಂತೆ ಮತ್ತಾವುದೂ ಆರೋಗ್ಯವನ್ನು ಕೊಟ್ಟು ಕಾಪಾಡಲಾರದು. [220-44]

ವಿಷಮಜ್ವರಗಳು-ನೆಗಡಿ-ಕೆಮ್ಮು-ತಲೆನೋವು-ಅಗ್ನಿಮಾಂದ್ಯ-ಶೀತವಾಯು-ಕಲ್ಲುನೋವು-ಮಲಬಂಧ-ಅರೋಚಕ-ನರಗಳ ದೌರ್ಬಲ್ಯ—ಈ ರೋಗಗಳನ್ನು ಪ್ರತಿಯೊಬ್ಬರಿಗೂ ಗುಣಪಡಿಸಿ ರಕ್ತವೃದ್ಧಿಯನ್ನುಂಟುಮಾಡುವುದು. ಸಾವಿರಾರು ಜನರು ಪರೀಕ್ಷಿಸಿದ್ದಾರೆ. ಟಪಾಲ್ ಖರ್ಚು 12 ಸೀಸೆ ವರೆಗೆ 4 ಆಣೆ.

ವಿಳಾಸ—ಮ್ಯಾನೇಜರ್, ಸದ್ವೈದ್ಯಶಾಲಾ, ನಂಜನಗೂಡು.

ಮೇಲಾದ ಜರ್ಪಾ ರೇಷ್ಮೆ ಪಂಚೆಗಳು.

ಒಳ್ಳೇ ಸಮಯ! ಸಾವಿರಗಟ್ಲೆ ಖರ್ಚಾಗುತ್ತಿದೆ!! ನಂತರ ದೊರೆಯಲಾರದು!!!

ಅನೇಕ ಪಂಚೆಗಳು ದಿನವೂ ಖರ್ಚಾಗುತ್ತಾ ಇರುವುದರಿಂದ ಪ್ರಕೃತ ಬೆಲೆಯು ತಗ್ಗಿಸಿರುತ್ತೇವೆ. ವಾಚಕರೇ! ಶೃಂಗಾರವನ್ನೂ ನಾಗರಿಕತೆಯನ್ನೂ

ಹೊಂದಿರುವ ಮೇಲಾದ ಅಸಲ್ ರೇಷ್ಮೆ ಪಂಚೆಗಳು ಹಬ್ಬಗಳ ಕಾಲದಲ್ಲಿ ಹೊದಿಯಲು ಅನೇಕ ಪಂಚೆಗಳನ್ನು ತರಿಸಿಕೊಂಡಿರುವದ್ದರಿಂದ ಮುಕ್ಕಾಲು ಪಾಲು ಸರಕು ಖರ್ಚಾಗಿಹೋಗಿರುತ್ತೆ. ಈಗ ಸ್ವಲ್ಪವೇ ಉಳಿದಿರುತ್ತೆ. ಈ ಪಂಚೆಗಳು ಸ್ತ್ರೀ ಪುರುಷರು ಬಾಲಕರು ಧರಿಸಿಕೊಳ್ಳಬಹುದು. ಅಪೂರ್ವವಾದ ಪಂಚೆಗಳು. ಇದರಲ್ಲಿ ಕೆಂಪು, ಹಸರು, ಎಲೆಹಸರು, ರೋಜಾ, ಮೇಘವರ್ಣ, ಇತ್ಯಾದಿ ರಂಗುಗಳುಂಟು. ಬಹಳ ಉತ್ಕೃಷ್ಟವಾದ ಪಂಚೆಗಳು. ಈ ಖರೀದಿಗೆ ನಮ್ಮಲ್ಲಿ ಅಲ್ಲದೆ ಮತ್ತೆ ಯಾರಲ್ಲಿಯೂ ದೊರೆಯಲಾರದು.

5½ ಮೊಳ ಉದ್ದ, 3½ ಮೊಳ ಅಗಲ ಇರುವ ಪಂಚೆ ಒಂದಕ್ಕೆ ರೂ. 3. ಪಂಚೆ 1 ಕ್ಕೆ ಟಪಾಲು ಖರ್ಚು 4 ಆಣೆ. ಎರಡು ಪಂಚೆಗಳನ್ನು ಒಂದೇ ಸಲ ತರಿಸಿಕೊಂಡರೆ ಟಪಾಲು ಖರ್ಚು ಇನಾಂ.

ನಮ್ಮ ವಿಳಾಸ—ಎಚ್. ಎಂ ಸ್ವಾಮಿ ಅಂಡು ಕಂಪೆನಿ,
[109-17] ನಂ. 44, ನಂಬುಳಯ್ಯರ್ ಬೀದಿ, ಮದರಾಸು.

Jain's Swadeshi Balm.

ಜೈನ್‌ರವರ ಸ್ವದೇಶೀ ಬಾಮ್ ರಿಜಿಸ್ಟರಾದ ಟ್ರೇಡ್ ಮಾರ್ಕು.

ಈ ಬಾಮ್ ವಾತ, ಸಂಧಿವಾತ, ಕುತ್ತಿಗೆ ನೋವು, ಅರೆತಲೆನೋವು, ನಡುನೋವು, ಶೀತ, ಕಳತ, ಬೆನ್ನುನೋವು, ಊದು, ಕೆಮ್ಮು, ಎದೆನೋವು, ಹೊಟ್ಟೆನೋವು, ಚಳುಕು, ಚೇಳುಕಡಿತ, ಕೈ



ಕಾಲು ದೇಹ ಕೀಲುಗಳ ನೋವು, ಉಳುಕು, ಸುಟ್ಟಗಾಯ ಮೊದಲಾದವುಗಳನ್ನು ನಿರ್ಮೂಲವಾಗಿ ಹೋಗಲಾಡಿಸುತ್ತದೆ. ಪಡ್ಡೆಗಳಿಗೂ, ಮುದುಕರ ಕೆಲಸಗಾರರಿಗೂ ಸಾಮಾನ್ಯವಾಗಿ ಎಲ್ಲಾ ಕೆಲಸದವರಿಗೂ ಈ ಸ್ವದೇಶೀ ಬಾಮ್ ಬಹಳ ಪ್ರಯೋಜನಕರವಾದದ್ದು. ಕೊಬ್ಬಾಗಲಿ, ಬೇರೆ ಯಾವ ಕೆಟ್ಟ ಪದಾರ್ಥವಾಗಲಿ ಮಿಶ್ರಮಾಡಿಲ್ಲ. ಯೂರೋಪ್, ಇಂಡಿಯಾ, ಅಮೆರಿಕಾ ವೈದ್ಯಗ್ರಂಥಗಳನ್ನು ನೋಡಿ ತಯಾರುಮಾಡಿದೇವೆ. ಹಿಂದುಗಳೆಲ್ಲಾ ಇದನ್ನು ಉಪಯೋಗಿಸಬಹುದು. ಇದು ಯಕ್ಷಿಣಿಯಂಥಾ ಮದು. ಲಕ್ಷಾಂತರ ಜನರನ್ನೆಲ್ಲಾ ವಾಸಿಮಾಡಿದೆ. ಪ್ರತಿ ಒಬ್ಬರೂ, ಪ್ರತಿ ಮನೆಯವರೂ ಇದನ್ನು ಇಟ್ಟೇ ಇರಬೇಕು ಇದು ಚಿನ್ನದಂಥಾ ಔಷಧ. ಎಲ್ಲಾ ವೈದ್ಯಶಾಲೆಗಳಲ್ಲೂ ಬಿಕರಿಯಾಗುತ್ತಿದೆ. ಸೂರ್ಯಕಿರಣಗಳ ರಿಜಿಸ್ಟರ್ ಮಾರ್ಕ್ ಇರುವುದನ್ನು ನೋಡಿ ಕೊಂಡುಕೊಳ್ಳಿ. ನಕ್ಲ್ ಔಷಧವನ್ನು ಕೊಂಡು ಮೋಸಹೋಗಬೇಡಿ. ಉಪಯೋಗದ ಕ್ರಮ ಬಾಟ್ಲಿ ಸಂಗಡಲೇ ಇಟ್ಟಿದೆ. 1 ಬಾಟ್ಲಿಗೆ 12 ಆಣೆ; 3 ಕ್ಕೆ ರೂ. 1-14-0. ವಿ ಪಿ ಬೇರೆ. ನಮ್ಮ ಎಲ್ಲಾ ಔಷಧಿಗಳ ಕ್ಯಾಟ್ಲಾಗನ್ನೂ ಬರೆದು ತರಿಸಿಕೊಳ್ಳಿ. [25-32]

ವಿಳಾಸ—ಟಿ, ಗುಲಾಬ್ ಚಂದ್ ಪೌಬಾರ್,
60 ಸೈನಪ್ಪನಾಯಕ್ ಬೀದಿ, ಪಾರ್ಕ್ ಟೌನ್, ಮದರಾಸ್.

ನ್ಯಾಷನಲ್ ಅಷ್ಯೂರೆನ್ಸ್ ಕಂಪನಿ, ಲಿಮಿಟೆಡ್,

ವಿಜಯನಗರಂ ಸಿಟಿ.

1905 ರಲ್ಲಿ ಸ್ಥಾಪಿಸಲ್ಪಟ್ಟದ್ದು.

1912 ನೇ ಆಕ್ಟು ಪ್ರಕಾರ ಬದಲಾಯಿಸಿದೆ.

ಗವರ್ನಮೆಂಟ್ ಸೆಕ್ಯೂರಿಟಿಗಳನ್ನು ಪಡೆದಿದೆ.

ಕಂಪನಿ ಆಸ್ತಿಯನ್ನು ಹಂಚಿಕೊಳ್ಳುವ ಷೇರುದಾರರಿಲ್ಲ.

ವೈದ್ಯರ ಪರೀಕ್ಷಾ ಸರ್ಟಿಫಿಕೇಟು ಅವಶ್ಯವಿಲ್ಲ.

ಬೋನಸ್ ಹಣ ಅಪಾರವಾಗಿ ಪಾವತಿ ಮಾಡಿದೆ.

ಜೀವವಿಮೆ—ತಿಂಗಳ ಚಂದಾ 1 ನೇ ಕ್ಲಾಸ್ ರೂ. 1; 2 ನೇ ಕ್ಲಾಸ್ ರೂ. 0-8-0.
ಮದುವೆ ಫಂಡು—ತಿಂಗಳ ಚಂದಾ ರೂ. 1-0-0.

ಇದು ಬಹು ಲಾಭಕರವಾದ ಮತ್ತು ಸುರಕ್ಷಿತವಾದ ಕಂಪನಿ. ವಿಮೆ ಮಾಡತಕ್ಕವರಿಗೂ ಫಂಡು ಪಡೆಯತಕ್ಕವರಿಗೂ ತುಂಬಾ ಅನುಕೂಲವಾಗಿರುತ್ತದೆ. [138-12]

ಏಜಂಟರು ಬೇಕು. ಧಾರಾಳವಾದ ಕಮೀಷನ್ ಸಿಗುತ್ತೆ. ಕಂಪನಿಯ ಪ್ರಾಸ್ಪೆಕ್ಟಸ್ಸು ಪಟ್ಟಿ ಕೇಳಿದವರಿಗೆ ಕೊಡುತ್ತೆ. ಈ ವಿಳಾಸಕ್ಕೆ ಬರೆದುಕೊಳ್ಳಿ:—

ವಿ. ಬಿ. ಶ್ರೀಕಂಠಯ್ಯನವರು, ಮೈಸೂರು ಮತ್ತು ಕೊಡಗಿನ ಚೀಫ್ ಏಜೆಂಟ್, ಕೋಟೆ, ಬೆಂಗಳೂರು ಸಿಟಿ.

V. B. Srikantiah,
Chief Agent, Mysore & Coorg, Fort, Bangalore City.

ಓರಿಯಂಟಲ್ ಗವ॥ ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು..............ರೂ. 4,45,00,000

ಕಂಪನಿಯಿಂದ ಪಾವತಿ ಆಗಿರುವದು ,, 4,00,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದವನ್ನು ಕಳುಹಿಸುತ್ತಾರೆ.—ಮಿ॥ ಎಂ. ಎಸ್. ಶೆಟ್ಟಿ, ಚೀಫ್ ಏಜೆಂಟ್, ಬೆಂಗಳೂರು; ಮ॥ ಎಂ. ಎಸ್. ನಂಜಪ್ಪನವರು ಅಥವಾ ಮ॥ ವೆಂಕಟಪತಯ್ಯನವರು, ಕಂಪನಿ ಏಜಂಟರು, ಮೈಸೂರು; ಅಥವಾ

[194-49] ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ, ಮದರಾಸ್

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

14—8—1914 ರಿಂದ 21—8—1914 ರ ವರೆಗೆ

ಸ್ಥಳ		ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಕಾಲರಾ ತಗಲಿದ್ದು.	ಕಾಲರಾ ಸತ್ತದ್ದು
ಬೆಂಗಳೂರು	ಪಟ್ಟಣ	2	0	0	0
ಮೈಸೂರು	,,	45	29	0	0
ಬೆಂಗಳೂರು ಡಿಸ್ಟ್ರಿಕ್ಟು		13	8	0	0
ಮೈಸೂರು	,,	25	12	0	0
ಕೋಲಾರ್	,,	18	15	12	4
ಕೋಲಾರ್ ಚಿನ್ನದ ಗಣಿಗಳು		0	1	7	4
ತುಂಕೂರು ಡಿಸ್ಟ್ರಿಕ್ಟು		16	5	15	8
ಹಾಸನ	,,	0	0	0	0
ಚಿತ್ರದುರ್ಗ	,,	23	15	0	0
ಕಡೂರ್	,,	54	26	10	9
ಶಿವಮೊಗ್ಗ	,,	9	9	0	0
	ಜುಮ್ಲಾ	205	120	44	25

ಶಾಲಿವಾಹನ ಶಕ ವರುಷಂಗಳು 1837 ನೇ ಆನಂದ ಸಂವತ್ಸರೇ ದಕ್ಷಿಣಾಯನೆ ವರ್ಷಋತೌ ಭಾದ್ರಪದ ಶುದ್ಧ ಪೌರ್ಣಮಿ ಶುಕ್ರವಾರದಿಂದ ಭಾದ್ರಪದ ಬಹುಳ ಷಷ್ಟಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1914 ನೇ ಸೆಪ್ಟಂಬರ್.

ತಾ.	ವಾರ.		ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ	ಸಿಂಹ ಮಾಸ ತೇದಿ
4	ಶುಕ್ರ	::	ಪೌರ್ಣಮಿ	30-0	ಶತಭಿಷ	38-40	20
5	ಶನಿ	‡	ಪಾಡ್ಯಮಿ	3-224	ಪೂಭಾ	42-49	21
6	ಭಾನು	§	ಬಿದಿಗೆ	35-58	ಉತ್ತಭಾ	48-3	22
7	ಸೋಮ	*	ತದಿಗೆ	40-27	ರೇವತಿ	4-4	23
8	ಮಂಗಳ	†	ಚೌತಿ	45-32	ಅಶ್ವಿನಿ	60-0	24
9	ಬುಧ	;;	ಪಂಚಮಿ	50-47	ಅಶ್ವಿನಿ	0-4	25
10	ಗುರು	,,	ಷಷ್ಟಿ	55-48	ಭರಣಿ	7-3	26

:: ಉಮಾಮಹೇಶ್ವರ ವ್ರತ. ‡ ವ್ಯತೀ, ಅಪರಪಕ್ಷಾರಂಭ. § ಪ್ರೇತದ್ವಿತೀಯಾ, ಮಳೆ ನಕ್ಷತ್ರ—ಪುನರ್ವಸು 3 ನೇ ಪಾದ. * ಬೃಹದ್ಗೌರೀ ವ್ರತ, ಅಮೃತಸಿದ್ಧಿಯೋಗ. † ಸಂಕಟಹರ ಚತುರ್ಥಿ, ದೇವಮುಖಾಲಯ. ;; ಮಹಾಭರಣಿ, ಮೃತ್ಯುಯೋಗ, ಮಳೆ ನಕ್ಷತ್ರ—ಪುನರ್ವಸು 4 ನೇ ಪಾದ. ,, ದಗ್ಧಯೋಗ, ಶ್ರೀಪ್ರಸನ್ನ ಕೃಷ್ಣಸ್ವಾಮಿ ರಥ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಹೊಡೆತ (ಭಾರ), ಮೈ ನಡುಕ, ಶೀತವಾತ



ತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—220 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ: 6 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪೀ ವರೆಗೆ ಪೋಸ್ಟೇಜು 4 ಆಣೆ. [179-52]

೨. ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈವಿಾರಿತೆಂದು ತೋರಿದಾಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರಿಸದೆ ಮೂತ್ರವು ಕಟ್ಟಿದ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿ! ಒಂದೇ ಒಂದು ಬುಡ್ಡಿಯು ನಿಮ್ಮಲ್ಲಿರಲಿ! ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುವುದು. ಬೆಲೆ ರೂ. 1; ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

500 ರೂಪಾಯಿಗಳು ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

ಈ ಮುರಬ್ಬಾವು "ಪಂಜಾಬ್ ಸಾಲಾಮಿಸ್ರಿ" ಅಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡಲ್ಪಡುವುದು.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡವರಿಗೆ ಹೃದಯ ಕೋಶವು ಬಲಹೀನವಾಗಿ ನಾನಾ ವ್ಯಾಧಿಗಳಿಂದ ಮರಣ ಪರಿಯಂತರವೂ ದುಃಖಪಡುವರು. ಈ "ಪಂಜಾಬ್ ಸಾಲಾಮಿಸ್ರೀ ಮುರಬ್ಬಾ" ವಿನ ಸೇವನೆಯಿಂದ ಕೈ, ಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ತಲೆಯ ನೋವೂ, ಇವುಗಳೆಲ್ಲವೂ ಪಂಜಾಬ್ ಸಾಲಾಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು, ಮಿದುಳಿಗೆ ಬಲವನ್ನುಂಟುಮಾಡುವುದು, ಧಾತುವನ್ನು ಕೇಯಿರಿಸುವುದು, ಸೊಂಟದ ನೋವು ಸ್ವಲ್ಪ ಮಾತ್ರವೂ ಇರಲಾರದು. ಈ ಪಂಜಾಬ್ ಸಾಲಾಮಿಸ್ರಿಯು ಮುರಬ್ಬಾಕ್ಕೆ ತಾಂಬ್ರದ ಮತ್ತು ಬಂಗಾರದ ಭಸ್ಮವು ಎಷ್ಟು ಮಾತ್ರವೂ ಸಮಾನವಾಗಲಾರದು. ಹೊಟ್ಟೆಯಲ್ಲಿರುವ ಜ್ವರದ ಗಡ್ಡೆಯನ್ನು ನಾಶಪಡಿಸುವುದು. ಶ್ವಾಸ ಕಾಸರೋಗಗಳನ್ನು ನಿರ್ಮೂಲಪಡಿಸುವುದು. ಕಾಬೂಲ್, ಕಾಂದಹಾರ್ ದೇಶಗಳ ಜನರು ಸಾಲಾಮಿಸ್ರಿಯ ಹಣ್ಣನ್ನು ಬಹಳವಾಗಿ ತಿನ್ನುವರು. ಆದ್ದರಿಂದ ಶಕ್ತಿಯಲ್ಲಿ ಬಹಳ ಗಟ್ಟಿಗರು. ಡಬ್ಬಾ 1 ಕ್ಕೆ ರೂ. 2-0-0. ಟಪಾಲ್ ಖರ್ಚು ಅಲಾಯದ. [133-12]

ಅನುಪಾನಪತ್ರಿಕೆ ಔಷಧದ ಸಂಗಡ. ಕ್ಯಾಟ್ಲಾಗ್ ಅಪೇಕ್ಷಿಸುವವರು 6 ಕಾಸಿನ ಸ್ಟಾಂಪು ಕಳಿಸಿ.

ಏಜಂಟರು—ಡಿ. ಸೈಯದ್ ಉಸ್ಮಾನ್ ಅಂಡ್ ಕೊ,
ದೊಡ್ಡಪೇಟೆ, ಬೆಂಗಳೂರು ಸಿಟಿ.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
6 ಹಾಜಿ ಸಾಹೇಬ್ ಮಹಡಿ, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

Printed and Published by the Rev. H. Gulliford, Proprietor and Manager, Wesleyan Mission Press, Mysore. 3/9/1914.

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೮ ಮೈಸೂರು—ಸರ್ ೧೯೧೫ ನೇ ಇಸವಿ ಸೆಪ್ಟೆಂಬರ್ ತಾರೀಖು ೧೦ ನೇ ಗುರುವಾರ. ಸಂಚಿಕೆ ೧೫

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯುಳ್ಳ ನಿಬಿಡವಾದ ಕೇಶವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು ? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾದರೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುವುದೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಆವಶ್ಯಕ ಸಹಕಾರಿಯಾಗಿರುತ್ತದೆ. ಈ ತೈಲವನ್ನು ತೊಡೆದುಕೊಳ್ಳುತ್ತಲೇ, ಮಸ್ತಿಷ್ಕದ ಬೇಗೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ತೊಡೆಯ ತೊಡಗಿದ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು; ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು.

ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡುವ ಪ್ರಸಂಗ ಒದಗಬೇಕಾದ ಬಾರಿ ಈ " ಕಾಮಿನಿಯಾ ತೈಲ " ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯು ದೆಹಲಿಯ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ ಸರ್ಟಿಫಿಕೇಟ್ ಆಫ್ ಮೆರಿಟ್ ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಶ್ರೇಷ್ಠ ಉತ್ತಮೋತ್ತಮವಾದ ಮಾನಪತ್ರಗಳೂ ದೊರೆತಿವೆ.

ಅಷ್ಟರಲ್ಲಿ ಒಂದನ್ನೇ ನೋಡಿರಿ! ನೇಗಿನಪಾಳೆಯ ಬಂದುಗಳು ಬಸವನಪ್ಪ ಬೇಗನವರು—ಕಾಮಿನಿಯಾ ತೈಲವು ... ತಲೆಯ ಕೂದಲುಗಳನ್ನು ಬೆಳೆಸುವುದಕ್ಕೆ ಸರ್ವೋತ್ತಮವಾದ ಪದಾರ್ಥವೆಂದು ಸಾಧನಗಳುತ್ತವೆ. ಆದ್ದರಿಂದ ಇದನ್ನೊಂದು ಸೀಸೆಯನ್ನು ಕೊಂಡರೇ ವಿ. ಪಿ ದ್ವಾರಾ ಕಳಿಸುವೆವು. ಸೀಸೆಯೊಂದರ ಕ್ರಯ ರೂ. 1-0-0, ಅ. ವೆ. 0-4-0 ಬೇರೆ. ಮೂರು ಸೀಸೆಗಳ ಕ್ರಯ ರೂ. 2-10-0, ಅ. ವೆ. 0-7-0 ಬೇರೆ.

ಸೂಚನೆ.—ಅನೇಕ ನುಗ್ಗಿಗಾರರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಸಿದ್ಧವಸ್ತುಗಳ ಬಿಕರಿಯಿಂದ ತಮಗೆ ಅತ್ಯಲ್ಪ ಸಫಲತೆ ದೊರೆಯುತ್ತದೆಂದು, "ಈ ಕಾಮಿನಿಯಾ ತೈಲ " ವನ್ನು ಕೇಳಿದರೆ, " ಇದು ಅದಕ್ಕಿಂತ ಉತ್ತಮವೂ ಸ್ವಸ್ತವೂ ಇದೆ " ಎಂದು ಅದರಿಂದ ಬಹಳ ಲಾಭ ದೊರೆಯತಕ್ಕ ಕೀಳುತರದ ಬೇರೆ ವಸ್ತುವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸ ಹೋಗದಂತೆ " ಕಾಮಿನಿಯಾ ಓಯಿಲ್ " ತಾನೇ ಬೇಕೆಂದು ಹಟಹಿಡಿದು ಕೇಳಿರಿ; ಇದಲ್ಲಿ ಸಿಕ್ಕದಿದ್ದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದ ತರಿಸಿಕೊಳ್ಳಿ. ಬೇರೆ ಯಾವುದನ್ನೂ ಸ್ವೀಕರಿಸಬೇಡಿ; ಇದರಿಂದ ನಿಮಗೆ ಬೇಕಾದ ಪಟ್ಟಿಯೂ ಬಿಲ್ಲುಗಳೂ ಸಿಕ್ಕುವುವು. ಇದಲ್ಲದೆ ಯಾವ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಒಟ್ಟೋ ದಿಲ್ ಬಹಾರ್ !!

ಈ ಸುಗಂಧಿತ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಅತ್ಯುತ್ತಮ. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯು (ಆಲ್ಕೋಹೋಲ್) ಸಂಪರ್ಕವಿಲ್ಲ. ಇದೇ ಒಂದು ಹನಿ ನಿಮ್ಮ ಕೈವಸ್ತ್ರದಲ್ಲಿ ಅಥವಾ ಅಂಗಿಯಲ್ಲಿ ಹಾಕಿದರೆ ಆ ದ್ರವದ ಉತ್ತಮ ಪರಿಮಳಗಳನ್ನು ಬೀಸುತ್ತದೆ. ನಿಮ್ಮ ಸುತ್ತಲು ಸ್ವರ್ಗೀಯವಾದೊಂದು ಸ್ವಾದಿಷ್ಟ ಆವರಣವಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೀಗಿಲ್ಲ. ಈ ಒಟ್ಟೋ-ದಿಲ್ ಬಹಾರಿನ ಗಂಧವು ಬಲ್ಲವರಿಗೆ ನನ್ನ ವಿನಂತಿ, ಮನಸ್ಸನ್ನು ತನ್ನ ವಶ್ಯದಿಂದ ಸೆಳೆಯುವುದು ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ. [19-34]

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಮೀಡಿಯಂ (ನಡುವಿನ) ಸೀಸೆ ರೂ. 0-12-0. ಅರ್ಧ ಡಜನ್ ದೊಡ್ಡ ಸೀಸೆಯ ಬೆಲೆ ರೂ. 2-0-0. ಅಂಚೆಯ ವೆಚ್ಚ ಬೇರೆ ರೂ. 0-4-0. ಒಟ್ಟೋ-ದಿಲ್ ಬಹಾರ್ ಪರಿಮಳದ ಕಾರ್ಡುಗಳ ಸೆಟ್ ಒಂದಕ್ಕೆ 0-12-0.

ಮೇಲೆ ಕಂಡ ಎಲ್ಲಾ ಸುಗಂಧಗಳು ಸಿಕ್ಕುವ ಸ್ಥಳ:—

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್‌ಜಿದ್, ಬೊಂಬಾಯಿ.

ಏಜೆಂಟ್, ದಿ ಉಲ್ಫ್ ಮಾರ್ಟ್, ಮಂಗಳೂರು.

ವಿಕಟಪ್ರತಾಪವೆಂಬ ಮಾಸಪತ್ರಿಕೆ.

ಎಂತಹ ಚಿಂತೆಯಲ್ಲಿರುವವರಿಗೂ ನಗುಬರುವಂತೆ ಹಾಸ್ಯರಸದಿಂದ ಕೂಡಿದ ಸಚಿತ್ರವೂ, ವಿಚಿತ್ರವೂ ಆದ ವಿಷಯಗಳು ಇದರಲ್ಲಿ ಮುದ್ರಿಸಲ್ಪಡುವವು. ಚಂದಾ ವಿ. ಪಿ ಮೂಲಕ ಮುಂಗಡ ಒಂದೇ ರೂಪಾಯಿ.

[195-1] ನಮ್ಮ ವಿಳಾಸ :—ವಿ ಪಿ. ಆಫೀಸ್, ಕುಪ್ಪಂ ಪೋಸ್ಟ್.

ಯುದ್ಧವಾರ್ತೆಯು.

ಯೂರೋಪಿನಲ್ಲಿ ನಡೆಯುತ್ತಿರುವ ಯುದ್ಧವಾರ್ತೆಯನ್ನು ಪ್ರತಿ ನಿತ್ಯವೂ ಕನ್ನಡಿಗರ ಉಪಯೋಗಕ್ಕಾಗಿ ಪ್ರಕಟಿಸುತ್ತಿರುವೆವು. ಕ್ರಯ 3 ಪೈ; ತಿಂಗಳಿಗೆ 8 ಆಣೆ ; ಅಂಚೆಯಲ್ಲಿ ತರಿಸುವವರಿಗೆ ತಿಂಗಳಿಗೆ ಒಂದು ರೂಪಾಯಿ. ಮೈಸೂರು ಸಂಸ್ಥಾನದ ಎಲ್ಲಾ ಭಾಗದಲ್ಲಿಯೂ ಏಜಂಟರುಗಳು ಬೇಕಾಗಿದೆ. ಹೆಚ್ಚಾಗಿ ಕಮಿಷನ್ ಸಿಗುವುದು.

ಮುಖ್ಯ ಏಜಂಟರು—

[23-35] ಅಕ್ಕೂರು ರಾಮಚಂದ್ರರಾವ್, ಮೈಸೂರು.

ಸೂರ್ಯೋದಯ ಪುಸ್ತಕಭಂಡಾರ.

ಹೊಸ ನಾವೆಲ್‌ಗಳು :—ನೀಲಾಂಬರಿ, ನಾಚಿಕೆ, ಗುರುತು ಕಂಡ ಕಳ್ಳ, ಮಾಯಾವಿನಿಯ ಅತ್ಯಾಚಾರ, ಮಾಯಾವಿನಿಯ ಪರಿಣಾಮ ಮುಂತಾದ ಪತ್ತೇದಾರಿ ನಾವೆಲ್‌ಗಳು. ಪುಸ್ತಕ ಒಂದಕ್ಕೆ ಆಣೆ 2 ಮಾತ್ರ.

ಇದಲ್ಲದೆ ಈ ಡಿಪೋದಲ್ಲಿ ಕನ್ನಡ, ತೆಲುಗು, ಸಂಸ್ಕೃತ, ಇಂಗ್ಲೀಷ್ ಗ್ರಂಥಗಳೂ, ನಾವೆಲ್‌ಗಳೂ, ಕಥೆಗಳೂ, ಪುರಾಣಗಳೂ, ವೈದ್ಯ ಜ್ಯೋತಿಷ ಪುಸ್ತಕಗಳೂ ದೊರೆಯುತ್ತವೆ. ಬೇಕಾದವರು ಬರೆದು ಮುಫತ್ತಾಗಿ ದೊರೆಯುವ ಕ್ಯಾಟಲಾಗನ್ನು ತರಿಸಿಕೊಳ್ಳಬಹುದು.

[143-10] ವಿಳಾಸ :— ಪಿ. ನರಸಿಂಗರಾವ್,

ಎಡಿಟರ್, ಲಾ ಗೆಜೆಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಈ ಉತ್ತಮ ಗ್ರಂಥಗಳನ್ನು ಓದಿರುವಿರಾ?

ನಾಟಕನ ಚರಿತ್ರೆ 4 ಅ; ಕೃಷ್ಣಾಕುಮಾರಿ 10 ಅ; ವಿವೇಕಮಂಜರಿ ಭಾಗ 1!! 6 ಅ; ಮರುನ್ನಂದನ ಶತಕಂ 4 ಅ; ಶುಕುಕುಮಾರಿ 1½ ಅ; ಸುಮಾಳಿ 12 ಅ; ಸೂಕ್ತಿಕಾರಾವಳಿ 4 ಅ; ರಂಗನ ಮದುವೆ 1½ ಅ; ಜಾಗಿಲು ಭದ್ರ 4 ಅ; ನವನಾಗರಿಕೆ 1 ಅ; ಗೃಹಿಣೀಯರ ಗಂಗೆ 3 ಅ. ಸೊಗಸಾದ ಹೊಸ ಬಂಗಾಳಿ ನಾವಲ್ :—ಕನಕ ಬಳೆ 6 ಅ; ಜಯ ! ವಾಲ್ಮೀಕಿ 12 ಅ; ತಾರಾ 3 ಅ; ಅದೃಷ್ಟ 1½ ಅ; ಅಪಾಯ ರಾಜ 2 ಅ; ವಿಷವಿನಾಶ 4 ಅ; ವನ್ಯಾಸಿ 1½ ಅ; ಚಿತ್ರಶೃಂಗ 1 ಅ; ಸಿಂಹಳ ದ್ವೀಪಸ್ಥಳ 4 ಅ; ರಮಾನಂದ 6 ಅ; ಸುಶೀಲೆ 6 ಅ; ಸ್ನೇಹ 8 ಅ; ಸಾಧ್ವಿ 2½ ಅ; ಉಪಯುಕ್ತ ವಸ್ತು 1 ಆಣೆ. ಇತ್ಯಾದಿ. - ಮಧುರವಾಣಿ " ಸಚಿತ್ರ ಮಾಸಪತ್ರಿಕೆಯ ವಾರ್ಷಿಕ ಚಂದಾದಾರರಿಗೆ ಕ್ಯಾಟಲಾಗನ್ನು ಬರೆಯಿರಿ.

[161-8] ನಮ್ಮ ವಿಳಾಸ—ಹನುಮಾನ್ ಕಂಪೆನಿ, ಮೈಸೂರು.

ಹೊಸನಾವೆಲ್‌ಗಳು.

ಬಹು ಸ್ವಲ್ಪ ಪ್ರತಿಗಳೇ ಉಳಿದಿವೆ. ಸರಸವಾದೀ ಹೊಸಗನ್ನಡದ ಕಾದಂಬರಿಗಳನ್ನು ತರಿಸಿಕೊಳ್ಳುವ ಒಂದುಗೆಡದ ವಸ್ತ್ರಾಕ್ಷ್ಯಾ ಸುಪದರವಿದೆ

ಅನಂಗಸೇನೆ 8 ಆಣೆ. ತಾರಾಸುಂದರಿ 8 ಆಣೆ. ರಾಧಾರಾಣಿ 8 ಆಣೆ. ಸರಳಾಬಾಲೆ 8 ಆಣೆ. ಕುಮುದಿನಿ 6 ಆಣೆ. ಸಭಾಗಣ್ಯಚಾರಿಣಿ 6 ಆಣೆ. ಸಂತಾಪಕ 4 ಆಣೆ.

" ನಿರುಪಮಾ " ಹೊಸ ನಾಟಕಗಳಲ್ಲಿ ಮೇಲಾಗಿಸಿ ಬಹು ಜನರ ಸ್ತೋತ್ರಕ್ಕೆ ಪಾತ್ರವಾದ ನಾಟಕ. ಕಥಾ ವಿಧಾನವೂ ಮಾತುಗಳೂ ಪದ್ಯಗಳೂ ಬಹು ಚಮತ್ಕಾರವಾಗಿಯೂ ಸರಸವಾಗಿಯೂ ಇವೆ. ಕ್ರಯ 12 ಆಣೆ.

[206-30] ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

ಸಿದ್ಧವಾಗಿದೆ.

1915 ನೆಯ ವರ್ಷದ ಲೋವರ್ ಸೆಕೆಂಡರಿ

ಕನ್ನಡ ಟೆಕ್ಸ್ಟಿನ ನೋಟ್ಸು.—ಕ್ರಯ 6 ಆಣೆ.

ಡಿಸ್ಕೌಂಟು—10 ಕ್ಕೆ 1; 25 ಕ್ಕೆ 3; 50 ಕ್ಕೆ 8; 100 ಕ್ಕೆ 20.

ಮಕ್ಕಳ ಭೂವಿವರಣೆ.

ಈಗಿನ ಪಾಠಕ್ರಮಕ್ಕೆ ತಕ್ಕಂತೆ ಹೊಸದಾಗಿ ಬರೆದಿದೆ. ಇದರಲ್ಲಿ ಮೈಸೂರು ದೇಶದ ಬೇರೆ ಬೇರೆ ಎಲ್ಲೆ, ನದಿ ಪರ್ವತಾದಿಗಳು ಇವುಗಳನ್ನು ತೋರಿಸುವ ಮೂರು ಭೂಪಟಗಳೂ, ಚಿತ್ರಗಳೂ ಸೇರಿವೆ. ಕ್ರಯ 3 ಆಣೆ. [49-30]

ಇಂಗ್ಲೀಷು 3 ನೆಯ ಪುಸ್ತಕದ ನೋಟ್ಸು 2½ ಆಣೆ. ಮೆಕ್ಕಿಲ್ಲನ್ ರವರ 3 ನೇ ಪುಸ್ತಕದ ನೋಟ್ಸು 1½ ಆಣೆ. ಡಿಟೊ 4 ನೇ ಪುಸ್ತಕದ ನೋಟ್ಸು 1½ ಆಣೆ. ಡಿಟೊ 5 ನೇ ಪುಸ್ತಕದ ನೋಟ್ಸು 4 ಆಣೆ. ನವಾಬ್ಯಾಕರಣ (2 ನೇ ಕರಣ) 1 ಆಣೆ. Notes on " Tanglewood Tales," English Lower Secondary Text for 1915—As. 3. Notes on Fairy Tales—As. 2.

ನಮ್ಮ ವಿಳಾಸ:—ಎಮ್. ಆರ್. ವೆಂಕಟಸುಬ್ಬಾಚಾರ್ಯ,

ಸುಬೋಧಗ್ರಂಥಾಲಯ, ಮೈಸೂರು.

ENGLISH PAPERS WITH FULL ANSWERS

Price for 1 set, Rs. 1-4-0; 2 sets, Rs. 2-4-0; 3, Rs. 3; 4 sets, Rs. 3-12-0 (in advance). L. S. English Notes—5 As.; Spelling Book—4 As.

Apply sharp to—**M. N. SITARAMA RAO,**

[178-5] **Krishnaraja Mohalla,** *MYSORE.*

ಸುಲಭ ! ಚಾತುರ್ಯ ! ಮಾಸಪತ್ರಿಕೆ !

ಪಂಡಿತ ಪಾಮರರ ಮನೋರಂಜಕವಾದ ಮಾಸಪತ್ರಿಕೆ. ಈಗ ಹೊಸ ಬದಲಾವಣೆಯಾಗಿದೆ. ವಾರ್ಷಿಕ ಚಂದಾ ಅಂಚೆ ವೆಚ್ಚ ಸೇರಿ 10 ಆಣೆ. ಸ್ತ್ರೀಯರಿಗೆ ವಿದ್ಯಾರ್ಥಿಗಳಿಗೆ ಮಾತ್ರ 6 ಆಣೆ.

[183-3] ವಿಳಾಸ:—ಮ್ಯಾನೇಜರ್, " ಚಾತುರ್ಯ," ಬೆಂಗಳೂರು ಸಿಟಿ.

1915 ನೆ ಲೊ. ಸೆ. ಟೆಕ್ಸ್ಟು ಮತ್ತು ವ್ಯಾಕರಣ ಪ್ರಶ್ನೋತ್ತರ.

ಸಿದ್ಧವಾಗಿ, ಬಿಕರಿಯಲ್ಲಿದೆ. ಕ್ರಯ 4 ಆಣೆ. ಗದ್ಯ ಮತ್ತು ಪದ್ಯಗ್ರಂಥಗಳಲ್ಲಿ, ಚೆನ್ನಾದರದಲ್ಲಿ ಬರಬಹುದಾದ ಎಲ್ಲಾ ಪ್ರಶ್ನೆಗಳೂ ಸಂಪೂರ್ಣವಾದ ಉತ್ತರಗಳೂ 66+2 ಪೇಜುಗಳಿಗೆ ಉತ್ತಮ ಕಾಗದದಲ್ಲಿ ಪ್ರಿಂಟಾಗಿದೆ. (3) ಕೆ ಆರ್ ನರಸಿಂಹಯ್ಯ, ಕನ್ನಡ ಪಂಡಿತ, ಹೈಸ್ಕೂಲ್, ಚಿಕ್ಕಬಳ್ಳಾಪುರ.

ಹೊಸ ಬಂಗಾಳಿ ನಾವಿಲ್ಸ್.—ವಿಷವಿನಾಶ 4 ಅ. ಸನ್ಯಾಸಿ 1½ ಅ. ಅನಾಥಪತ್ರಿಕೆ 1 ಅ. ಬಿ ವೆಂಕಟಾಚಾರ್ಯರಿಂದ ವಂಗವಿಜೇತ 1-4-0. ಚಂದ್ರಶೇಖರ 1-1-0. ರಜನಿ 13 ಅ. ಚಿತ್ರವಿಚಿತ್ರಾವಳಿ II 8 ಆಣೆ. ಅಮೃತಪುಳಿನ 11 ಆಣೆ. ದುರ್ಗೇಶನಂದಿನಿ 1-4-0. ಇತ್ಯಾದಿ. ಸುಶೀಲೆ ಹೊಸ ನಾವೆಲ್ 6 ಆಣೆ.

[53-29] ಎಂ. ಸುಬ್ಬರಾವ್, ಬುಕ್ ಸೆಲರ್, ಶಂಕರಪುರ, ಬೆಂಗಳೂರು ಸಿಟಿ.

THE

GENERAL

Assurance Society Ltd., Ajmer.

(A Popular Life Office.)

Before Insuring or taking agency elsewhere, it would be to your interest to know the rates of premium and terms of agency specially prepared by the Society's Consulting Actuary, Mr. H. E. W. Lutt, F.I.A. (one of the most eminent Actuaries in England).

First Valuation Result:—The total liabilities under all assurances issued up to 31st March 1912 are fully covered by the Society's Life Assurance Fund and Paid up Capital. Write for full particulars, Annual and Valuation Reports to the Manager, Ajmer, or Secretary,

Opposite to Minto Ophthalmic Hospital,

151-9 Bangalore City

BRAHMAPPA TAVANAPPANAVAR,

Merchant & Commission Agent.

Agent to Messrs. Currimbhoy Ebrahim & Cos Mills, BOMBAY.

ನಾವು ಮುಂಬೈ ಮೆಸ್ಸರ್ಸ್ ಕರೀಂಬಾಯ್ ಇಬ್ರಾಹಿಂ ಅಂಡ್ ಕಂಪೆನಿಯವರ ಬಾಬತು, ಮೆಸ್ಸರ್ಸ್ ಫಜುಲ್ಭಾಯಿ ಮಿಲ್ ಲಿಮಿಟೆಡ್ ಮುಂಬೈ, ದಿ ಕ್ರೆಸೆಂಟ್ ಮಿಲ್ಸ್ ಲಿಮಿಟೆಡ್ ಮುಂಬೈ, ಕರೀಂಬಾಯ್ ಮಿಲ್ ಲಿಮಿಟೆಡ್ ಮುಂಬೈ, ದಿ ಇಂಡಿಯನ್ ಬ್ಲೀಚಿಂಗ್, ಡೈಯಿಂಗ್ ಅಂಡ್ ಪ್ರಿಂಟಿಂಗ್ ವರ್ಕ್ಸ್ ಲಿಮಿಟೆಡ್ ಮುಂಬೈ, ದಿ ಇಂದೋರ್ ಅಂಡ್ ಮಾಳ್ವಾ ಯುನೈಟೆಡ್ ಮಿಲ್ ಲಿಮಿಟೆಡ್ ಇಂದೋರ್, ಇವುಗಳಲ್ಲದೆ ಇನ್ನೂ ಅನೇಕ ಮಿಲ್ಲುಗಳ ಬಟ್ಟೆಗಳನ್ನು ಮೈಸೂರು ಸೀಮೆಯಲ್ಲೆಲ್ಲಾ ವಿಕ್ರಯಮಾಡಲು ಕಮಿಷನ್ ಏಜಂಟರಾಗಿರುತ್ತೇವೆ. ನಮ್ಮ ಮುಖಾಂತರ ಮಾಲು ತರಿಸಿಕೊಳ್ಳತಕ್ಕವರಿಗೆ ಮುಂಬೈಯಲ್ಲಿ ಬಟ್ಟೆಗಳ ಮೇಲೆ ವಿಧಿಸತಕ್ಕ ದಳ್ಳಾಳಿ, ಟೋಪಿವಳ್ಳಾಳಿ, ಹಮಾಲಿ ಮುಂತಾದವು, ಸ್ಟೇಷನ್ನಿಗೆ ಸೇರಿಸುವುದು, ಮುಂತಾದ ವಗೈರೆ ಯಾವ ವಿಧವಾದ ಖರ್ಚೂ ತಗಲದೆ ಇರುವದರಿಂದ ಮುಂಬೈಯಿಂದ ತರಿಸುವ ದಕ್ಕಿಂತಲೂ ಸುಲಭ ದರದಲ್ಲಿ ಸಿಕ್ಕುತ್ತೆ. ಮತ್ತು ಮುಂಬೈಗೆ ಹೋಗಿಬರುವ ವೆಚ್ಚವೂ, ಖರ್ಚೂ ಉಳಿಯುತ್ತೆ. ಹೆಚ್ಚು ಬಟ್ಟೆಗಳನ್ನು ಏಕಕಾಲದಲ್ಲಿ ಕೊಳ್ಳತಕ್ಕವರಿಗೆ ಮಾಲಿನ ಮೇಲೆ ಶೇಕಡ 3 ರೂಪಾಯಿ ಅಥವಾ 4½ ರೂಪಾಯಿ ವರೆಗೆ ಡಿಸ್ಕೌಂಟು ದೊರೆಯುತ್ತೆ. [97-21]

ನಮ್ಮ ಬ್ರಾಂಚಿನಲ್ಲಿ ಏಜಂಟರ ಬಳಿ ಬಟ್ಟೆಗಳ ಸಮೂನೆಗಳನ್ನು ಕೊಟ್ಟು, ದರ ಪಟ್ಟಿ ವ್ಯಾಪಾರಗಾರರಿಗೆ ತೋರಿಸಿ ಆರ್ಡರು ತೆಗೆದುಕೊಳ್ಳುವ ಏರ್ಪಾಡು ಮಾಡಿರುತ್ತೆ. ನಮ್ಮ ದಾವಣಗೆರೆ ಮತ್ತು ಬೆಂಗಳೂರು ಆಫೀಸುಗಳಲ್ಲಿ ಮಾಲು ಹಾಜರು ಸಹ ದೊರೆಯುತ್ತೆ.

ಬಟ್ಟೆಗಳನ್ನು ವ್ಯಾಪಾರಮಾಡಲು ಅನುಭವಸ್ಥರಾದ ಏಜಂಟುಗಳೂ ಮತ್ತು ಗುಮಾಸ್ತರುಗಳೂ ಬೇಕಾಗಿದೆ.

ಎಲ್ಲಾ ಕಾಗದಪತ್ರಗಳೂ ದಾವಣಗೆರೆ ಆಫೀಸಿಗೆ ಬರೆಯಲ್ಪಡಬೇಕು.

ಹೆಡ್ ಆಫೀಸು :—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್, ದಾವಣಗೆರೆ. ಬ್ರಾಂಚ್ ಆಫೀಸು :—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಕುಂತಲಕುಸುಮ ತೈಲವು.

192-51

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಿರುದಿನ ಬಿಲ್ಲೆಗಳನ್ನು ಎಂಟು ಸರ್ಟಿಫಿಕೇಟುಗಳನ್ನು ಪಡೆದಿದೆ. ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು. ಈ ತೈಲವು ಕೂದಲನ್ನು ಚನ್ನಾಗಿಯೂ ತ್ವರಿತವಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುತ್ತದೆ. ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಬಹಳ ಶೀತಲವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದ್ದಾಗಿದೆ. ಬೆಲೆ ಬಾಟ್ಲಿಗೆ 1 ರೂಪಾಯಿ 3 ಬಾಟಲಿಗೆ 2 ರೂಪಾಯಿ 10 ಆಣೆ. ಅಂಚೆ ಹಾಸಲು ಬೇರೆ. ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ.

ನಮ್ಮ ವಿಳಾಸ:—ಬಿ. ಎಮ್. ನಾಥ ಮತ್ತು ಕಂಪೆನಿ,
ವೇಪೇರಿ, ಮದರಾಸ್.

CHAMBERLAIN'S PAIN BALM.

ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು.

3-37



ಚಿನ್ನೆಲುಬಿನ ನೋವು, ಪಕ್ಕಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ತಲೆನೋವು, ಜಜ್ಜಾದ ಕಡೆಯ ನೋವು, ವಾಯುನೋವು—ಇವುಗಳೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ.

ವಾಯುನೋವೆಂದರೇನು ?

ಕೀಲುಗಳಲ್ಲೂ ಮಣಿಕಟ್ಟುಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಕಳೆಯುವ ಬಾಧೆ, ಖಂಡಗಳಲ್ಲಿ ಇಳಿಯುವುದು, ವಿಶ್ರಾಂತಿ ಕೊಡದೆ ಇರುವುದು, ನಿದ್ದೆ ಹತ್ತದೆ ಇರುವುದು—ಇವೇ. ಇವೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು.

ಆಗ ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ.

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಕಾವು ಮೂಳೆಯೊಳಕ್ಕೆ ವ್ಯಾಪಿಸುತ್ತದೆ ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ. ಮನಸ್ಸಿಗೆ ಉಲ್ಲಾಸವಾಗುತ್ತದೆ. ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಮುಟ್ಟಿದ್ದೇನೂ ಅಲ್ಲ.

ಇದು ಎಲ್ಲೆಲ್ಲೂ ವಿಕರಿಯಾಗುವುದು. ಸಣ್ಣ ಸೀಸೆಗೆ ೧ ರೂಪಾಯಿ. ದೊಡ್ಡ ಸೀಸೆಗೆ ೨ ರೂಪಾಯಿ.

Jain's Best Ointment.

ಜೈನ್ ರವರ ಉತ್ತಮೋತ್ತಮ ಆಯಿಂಟ್‌ಮೆಂಟು.

ಇದು ವೈದ್ಯಶಾಸ್ತ್ರ ಪ್ರಕಾರ ತಯಾರಾದ ಉತ್ತಮವಾದ ತೈಲವು. ಇದನ್ನು ಹಚ್ಚಿದರೆ ಬಹಳ ದಿನಗಳಿಂದಲೂ ಇರತಕ್ಕ ಸಿಡೆ, ಕೆಂಪು, ಕಜ್ಜಿ, ತುರಿ, ಹುಳುಕಡ್ಡಿ, ನಡುವಿನ ಕೆರತ, ಎಲ್ಲಾ ತರದ ರತಗಳು, ಹುಣ್ಣುಗಳು ಬಹು ವೇಗವಾಗಿ ಬಿಂತಿಯಲ್ಲಿ ಬಿದ್ದ ಹತ್ತಿಯಂತೆ ಧ್ವಂಸವಾಗಿ ವಾಸಿಯಾಗುತ್ತವೆ ಕತ್ತಿ, ಚಾಕು ಮೊದಲಾದ ಆಯುಧಗಳಿಂದ

ಉಂಟಾಗುವ ಗಾಯಗಳಿಗೆ ಪ್ಲಾಸ್ತ್ರಿಗೆ ಬದಲಾಗಿ ಈ ತೈಲವನ್ನೇ ಉಪಯೋಗಿಸಬಹುದು. ಇದನ್ನು ಗೋಕರೆಯಿಗಳ ಹುಣ್ಣುಗಳಿಗೂ, ಕುದುರೆ, ನಾಯಿ ಮೊದಲಾದ ಪ್ರಾಣಿಗಳ ಗಾಯಗಳಿಗೂ ಉಪಯೋಗಿಸಬಹುದು. ಈ ಔಷಧವನ್ನು ಕಂಡುಹಿಡಿದು ತಯಾರುಮಾಡುವುದಕ್ಕೆ ಬಹಳ ಶ್ರಮವನ್ನೂ, ಕಾಲವನ್ನೂ, ಹಣವನ್ನೂ ಖರ್ಚುಮಾಡಿರುತ್ತೇವೆ. ಈ ಆಯಿಂಟ್‌ಮೆಂಟಿನಿಂದ ಸಾವಿರಾರು ಜನರಿಗೆ ಗುಣವಾಗಿರುತ್ತದೆ. ನಕ್ಕಲ್ ತೈಲಗಳನ್ನು ನೋಡಿ ಮೋಸಹೋಗಬೇಡಿ. ನಮ್ಮ ಗುರುತಿರುವದನ್ನು ನೋಡಿ ಕೊಂಡುಕೊಳ್ಳಿ. ಔಷಧದ ಕೂಡ ಅನುಪಾನ ಪತ್ರಿಕೆ ಉಂಟು. ಕ್ರಯ 1 ಬಾಟ್ಲಿಗೆ ರೂ 1; ಸಣ್ಣ ಬಾಟ್ಲಿಗೆ 10 ಆಣೆ. ವಿ. ಪಿ. ಛಾರ್ಜು ಬೇರೆ. ಗುಲಾಬ್‌ಸುಂದರಿ ಪ್ರಕಾರ ಕೂದಲಿನ್ನೆ—ಮೆದುಳಿನ ಕೆಲಸದವರಿಗೂ ಇತರರಿಗೂ ಬಹಳ ಗುಣಕಾರಿ. ಕ್ರಯ ಬಾಟ್ಲಿಗೆ ರೂ. 1-8-0. ಇದನ್ನು ಒಂದು ಸಲ ತರಿಸಿ ಪರೀಕ್ಷಿಸಿ. [25-33]

ವಿಳಾಸ—ಜೆ. ಗುಲಾಬ್ ಚಂದ್ ಪವಾರ್,
60 ನೈನಪ್ಪನಾಯಕ್ ಬೀದಿ, ಪಾರ್ಕ್ ಟೌನ್, ಮದರಾಸ್.

ಗಂಟಲಿನ ಹುಣ್ಣು ಹಾನಿಕರವಾದದ್ದು.

ಸಾಧಾರಣವಾದ ಗಂಟಲುನೋವು ಲಿಟ್ಲ್ಸ್ ಓರಿಯೆಂಟಲ್ ಬಾಂ ಎಂಬುದನ್ನು ಒಂದು ಆವರ್ತಿ ಎರಡಾವರ್ತಿ ಉಪಯೋಗಿಸುವದರಿಂದ ಸುಲಭವಾಗಿ ವಾಸಿಯಾಗುತ್ತೆ. ಹಾಗಿಲ್ಲದೆ ನಿರ್ಲಕ್ಷ್ಯಮಾಡುವದಾದರೆ, ಅನೇಕ ವೇಳೆ ಎದೆ ನೆಗಡೆಯೂ ಕೆಮ್ಮೂ ಇತರ ದಾರುಣಕರವಾದ ದೊಡ್ಡರೋಗಗಳು ಪ್ರಾಪ್ತವಾಗುವವು. ಇಷ್ಟು ಸ್ವಲ್ಪ ಖರ್ಚಿಗೆ ಇಷ್ಟು ಸುಲಭವಾಗಿಯೂ ಖಂಡಿತವಾಗಿಯೂ ಚಿಕಿತ್ಸೆ ದೊರಕುವದರಿಂದ ಅಸಡ್ಡೆ ಕಳಕೊಳ್ಳಬೇಡಿ.

ಸಾಧಾರಣ ಗಂಟಲು ನೋವಿಗಾಗಲೀ ಅಥವಾ ಹಾನಿಕರವಾದ ಕೆಮ್ಮಿಗಾಗಲೀ ಲಿಟ್ಲ್ಸ್ ಓರಿಯೆಂಟಲ್ ಬಾಮಿನಷ್ಟು ಖಂಡಿತವಾಗಿಯೂ ವೇಗವಾಗಿಯೂ ವಾಸಿಮಾಡುವಂಥಾದ್ದು ಮತ್ತೊಂದಿಲ್ಲ.

ಉರ್ಸೆಸ್ಟರ್‌ಷೈರಿಗೆ ಸೇರಿರುವ ಇವೆಷಾಂ ಪಟ್ಟಣದ ಮಿ॥ ಎಫ್. ಡ್ರಿಸ್‌ಡೇಲ್‌ಯವರು ಬರೆಯುವದೇನೆಂದರೆ:—ನನಗೆ ಕಠಿಣ ಎದೆನೆಗಡೆಯಾಗಿ ಅದರಿಂದ ಕೆಮ್ಮಿಗೆ ಕಾರಣವಾಯಿತು. ಇದರಿಂದ ಯಾವಾಗಲೂ ಗಂಟಲಿನಲ್ಲಿ ಕಡತವೂ ಕಟ್ಟಿಕೊಳ್ಳುವ ಒಣ ಕೆಮ್ಮೂ ಆಗಿ ರಾತ್ರಿಯಲ್ಲಿ ನಿದ್ರೆ ಇರಲಿಲ್ಲ— ಹೇಳಿದ ಅನೇಕ ಔಷಧಿಗಳನ್ನು ಉಪಯೋಗಿಸಿ ಗುಣ ಕಂಡುಕೊಳ್ಳಲಿಲ್ಲ. ಕಡೆಗೆ ಲಿಟ್ಲ್ಸ್ ಓರಿಯೆಂಟಲ್ ಬಾಂ ಎಂಬುದರಿಂದ ಗುಣವಾಯಿತು.

ಎಲ್ಲಾ ಔಷಧ ಮಾರುವವರಲ್ಲಿಯೂ ಸೀಸೆ 1ಕ್ಕೆ 1 ರೂ. ಪ್ರಕಾರ ಮಾರಲ್ಪಡುತ್ತೆ.

101-19

Mellin's Food

ಮೆಲಿನ್ಸ್ ಆಹಾರವು

ಕೈ ಸೋಕದ ಮಾಡಿದ

ಶಿಶುಗಳಿಗೂ ರೋಗಿಷ್ಠರಿಗೂ

ಮೆಲಿನ್ಸ್ ಆಹಾರದ ಚಿತ್ರಪಟ್ಟಗಳು [4-36]

ಬೆಳೆಯುವ ಮಕ್ಕಳಿಗೆ ಎದೆಹಾಲು ತಪ್ಪುವ ಕಾಲದಲ್ಲಿ ಇದು ಶ್ರೇಷ್ಠವಾದ ಆಹಾರ; ಮತ್ತು ದೊಡ್ಡವರಿಗೆ ದೇಹ ಪುಷ್ಟಿಯನ್ನೂ ಬಲವನ್ನೂ ಕೊಡತಕ್ಕದ್ದು.

Messrs. OAKES & Company, Mount Road, Madras.

ವಿಳಾಸ–ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್

500 ರೂಪಾಯಿಗಳು ಬಹುಮಾನ.
ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

ಈ ಮುರಬ್ಬಾವು “ಪಂಜಾಬ್ ಸಾಲಾಮಿಸ್ರಿ” ಅಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡಲ್ಪಡುವುದು.

ಕ್ರಯ ೨ ರೂಪಾಯಿ.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡವರಿಗೆ ಹೃದಯ ಕೋಶವು ಬಲಹೀನವಾಗಿ ನಾನಾ ವ್ಯಾಧಿಗಳಿಂದ ಮರಣ ಪರ್ಯಂತರವೂ ದುಃಖಪಡುವರು. ಈ “ಪಂಜಾಬ್ ಸಾಲಾಮಿಸ್ರಿ ಮುರಬ್ಬಾ” ವಿನ ಸೇವನೆಯಿಂದ ಕೈ, ಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ದೇಹದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ತಲೆಯ ನೋವೂ, ಇವುಗಳೆಲ್ಲವೂ ಪಂಜಾಬ್ ಸಾಲಾಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು, ಮೆದುಳಿಗೆ ಬಲವನ್ನುಂಟುಮಾಡುವುದು ಧಾತುವನ್ನು ಶೀಘ್ರವಿಸುವುದು. ಸೊಂಟದ ನೋವು ಸ್ವಲ್ಪ ಮಾತ್ರವೂ ಇರಲಾರದು. ಈ ಪಂಜಾಬ್ ಸಾಲಾಮಿಸ್ರಿಯ ಮುರಬ್ಬಾಕ್ಕೆ ತಾಂಬ್ರದ ಮತ್ತು ಭಂಗಾರದ ಭಸ್ಮವು ಎಷ್ಟು ಮಾತ್ರವೂ ಸಮಾನವಾಗಲಾರದು. ಹೊಟ್ಟೆಯಲ್ಲಿರುವ ಜ್ವರಗಡ್ಡೆಯನ್ನು ನಾಶಪಡಿಸುವುದು. ಶ್ವಾಸ ಕಾಸರೋಗಗಳನ್ನು ನಿರ್ಮೂಲಪಡಿಸುವುದು. ಕಾಬೂಲ್, ಕಾಂದಹಾರ್ ದೇಶಗಳ ಜನರು ಸಾಲಾಮಿಸ್ರಿಯ ಹಣ್ಣನ್ನು ಬಹಳವಾಗಿ ತಿನ್ನುವರು. ಆದ್ದರಿಂದ ಶಕ್ತಿಯಲ್ಲಿ ಬಹಳ ಗಟ್ಟಿಗರು. ಡಬ್ಬಾ 1 ಕ್ಕೆ ರೂ. 2-0-0. ಟಪಾಲ್ ಖರ್ಚು ಅಲಾಯದ. [133-13]

ಅನುಪಾನಪತ್ರಿಕೆ ಔಷಧದ ಸಂಗಡ. ಕ್ಯಾಟಲಾಗ್ ಅಪೇಕ್ಷಿಸುವವರು ೧ ಕಾಸಿನ ಸ್ಟಾಂಪು ಕಳಿಸಿ.

ಏಜಂಟರು—ಡಿ. ಸೈಯದ್ ಇಸ್ಮಾಯಿಲ್ ಅಂಡ್ ಕೊ,
ದೊಡ್ಡಪೇಟೆ, ಬೆಂಗಳೂರು ಸಿಟಿ.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
೬ ಹಾಜಿ ಸಾಹೇಬ್ ಮಹಡಿ, ಅವೆನ್ಯೂ ರೋಡ್, ಬೆಂಗಳೂರು ಸಿಟಿ

ಸಾಳ್ವೆದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಜೋಮು (ಭಾರ), ಮೈ ನಡುಕ, ಶೀತದ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ಸನ್ನಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕಟ್ಟಕಡೆಗೆ ಖಂಡಿತವಾಗಿ ಗುಣಪಡಿಸುತ್ತದೆ. ಹಾಲಿನೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಟ್ಟು ಜ್ವರ, ಕೈಸೆಳ್ತಗಳನ್ನು ಗುಣಪಡಿಸುತ್ತದೆ. ಇವನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ. —24 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ; 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪಿ ವರೆಗೆ ಪೋಸ್ಟೇಜು 4 ಆಣೆ [109-1]

೨. ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈವಾರಿಕೆಂದು ತಿಂದಿದ್ದಿಗಲೂ ಆಶ್ಚರ್ಯಕರವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರಿಸಿ ಮೂತ್ರವು ಕಟ್ಟಿದೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿ। ಒಂದೇ ಒಂದು ಬುಡ್ಡಿ ಮನೆಯಲ್ಲಿರಲಿ। ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುವುದು. ಬೆಲೆ ... ; ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.



ಅಗಸ್ಟ್ ಮಹೋತ್ಸವದ ಕೈ ಗಡಿಯಾರ.

ಅರ್ಧ ಕ್ರಯ ರೂ. 1-14-0

ಇದೇ ಆಗಸ್ಟ್ ಹಬ್ಬದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದ ಕೈಗಡಿಯಾರವನ್ನು ಆಗಸ್ಟ್ ಒಳಗೆ ತರಿಸಿಕೊಳ್ಳುವವರಿಗೆ ರೂಪಾಯಿ 1-14-0 ಅಣೆಗೆ ಕೊಡಲ್ಪಡುತ್ತೆ. [99-14]

ವಿಳಾಸ—ವಿ. ಕೃಷ್ಣಸ್ವಾಮಿ ಮೊದಲಿಯಾರ್, ನಂ.27 ಬಂದರ್ ಬೀದಿ, ಜಿ.ಟಿ., ಮದರಾಸು.

ಮಧುರೆ ಜುನ್ನಡಿ ಅಂಚಿನ ಸೀರೆ ಅವ್ವಲ್ ರಖಂ ರೂ. 2-8-0.

ಸೆಪ್ಟಂಬರ್ ತಿಂಗಳ ಒಳಗಾಗಿ ತರಿಸಿಕೊಳ್ಳುವರಿಗೆ ಒಂದು ಸಿಂಗಪೂರು ರವಿಕೆಯನ್ನು ಪ್ರತಿ ಸೀರೆಗೂ ಇನಾಮಾಗಿ ಕೊಡುತ್ತೇವೆ.

ಇದು ಉಡುವುದಕ್ಕೆ ದಢೂತಿಯಾಗಿಯೂ ನೋಟಕ್ಕೆ ನಯವಾಗಿಯೂ, ಬೆಲೆ ಸುಲಭವಾಗಿಯೂ ಇದೆ. ಬಣ್ಣ ಹೋಗದು. ಸೀರೆಯು ಉದ್ದ 18 ಮೊಳ. ... ನೆರಿಗೆ ಒಂದನ್ನು ತರಿಸಿ ಪರೀಕ್ಷಿಸಿ. ವಿಳಾಸ—ವಿ. ಕೃಷ್ಣಸ್ವಾಮಿ ಮೊದಲಿಯಾರ್, ನಂ 27, ಬಂದರ್ ಬೀದಿ, ಜಿ ಟಿ, ಮದರಾಸು.

[99-14]

ಕಣ್ಣು ಇಲ್ಲದಿದ್ದರೆ ಏನಿಯೂ ಇಲ್ಲ.



ಭಾರೀ ಕ್ರಯದ ಕನ್ನಡಕಗಳು. ಕ್ರಯ ರೂ. 3-0-0. ಸ್ಫಟಿಕದ ಕನ್ನಡಕವನ್ನು ಉಪಯೋಗಿಸಿ ನಿಮ್ಮ ದೃಷ್ಟಿಯನ್ನು ಕಾಪಾಡಿಕೊಳ್ಳಿರಿ. ಅಲ್ಪ ಕ್ರಯದ ಕನ್ನಡಕಗಳು ದೃಷ್ಟಿಯನ್ನು ಕೆಡಿಸುವುದಲ್ಲದೆ ಕಾಲಕ್ರಮೇಣ ವ್ಯಾಧಿಯನ್ನುಂಟು ಮಾಡುತ್ತವೆ. ಆದಕಾರಣ ಅವುಗಳನ್ನು ಉಪಯೋಗಿಸಬೇಡಿರಿ. ನಮ್ಮಲ್ಲಿ ಸ್ಫಟಿಕದ ಕನ್ನಡಕಗಳು ಕ್ರಯಕ್ಕೆ ದೊರೆಯುತ್ತವೆ. ಬೇಕಾದವರು ಬರೆದರೆ ಎಲ್ಲಾ ತರಹದ ಮತ್ತು ಎಲ್ಲಾ ನಂಬರಿನ ಕನ್ನಡಕಗಳಿರುವ ಭಾರೀ ಕ್ರಯದ ಪಟ್ಟಿಗೆಯನ್ನು ಉಚಿತವಾಗಿ ಕಳುಹಿಸುತ್ತೇವೆ. ಬಾಕೀ ವಿಷಯವೆಲ್ಲಾ ನಿಮ್ಮ ಪತ್ರ ಬಂದ ಮೇಲೆ ಬರೆದು ತಿಳಿಸುತ್ತೇವೆ.

[196-1] ವಿಳಾಸ—ಸೋಲಕರ್ ಬ್ರದರ್ಸ್, ತಿರುವಲಿಕ್ಕೇಣಿ, ಮದರಾಸು.

ದಸರಾ ಬಹುಮತಿ ಗಡಿಯಾರ.

15 ಸಾಮಾನು ಬಹುಮತಿ ಸಹಿತ ರೂಪಾಯಿ 3 14 0.



ಇದರಲ್ಲಿ ನಮೂದಿಸಿರುವ 7 ರೂ. ಬೆಲೆ ಉಳ್ಳ ಗಡಿಯಾರವನ್ನು ದಸರಾ ಒಳಗೆ ತರಿಸಿಕೊಳ್ಳುವವರಿಗೆ 3-14-0 ಗೆ 15 ಬಹುಮಾನಗಳು ಉಚಿತವಾಗಿ ಕೊಡುತ್ತೇವೆ 1 ಉತ್ತರಮುಖಿ, 2 ಪೇನಾಕತ್ತಿ, 3 ಉಲ್ಲಬ್ಲಾಕ್ ರಾಯಿಫೌಂಟ್ನ, 4 ಹಣದ ಚೀಲ, 5 ಗಡಿಯಾರದ ಸರಪಣಿ, 6 ಎಲೆಕ್ಟ್ರಿಕ್ ಭಂಗಾರದ ಶಾಮಂತಿಗೆ ಹೂವು, 7 ಇಮಿಟೇಷನ್ ಡೈಮಂಡ್ ಕಾಲರ್‌ಗುಂಡಿ, 8 ಜರ್ಮನ್ ಬೆಳ್ಳಿ ಕುಂಕುಮಭರಣಿ, 9 ಡಿಟೋ ಸಾದಿನ ಡಬ್ಬಿ, 10 ಡಿಟೋ ಕಣ್ಣುಕಪ್ಪಿನ ಭರಣಿ, 11 ಡಿಟೋ ನಶ್ಯದ ಡಬ್ಬಿ, 12 ಇಮಿಟೇಷನ್ ಡೈಮಂಡ್ ಮೂಗುಬಟ್ಟು, 13 ಇಮಿಟೇಷನ್ ತಂಜಾವೂರು ಗೆಜ್ಜೆ ಅಡ್ಡಿಗೆ, 14 ಎಲೆಕ್ಟ್ರೋ ಸಿಲ್ ಉಂಗರ, 15 ಕತ್ತಿ. ಈ ಕೆಳಗಿನ ಸಾಮಾನುಗಳು ಸಹ ನಮ್ಮಲ್ಲಿ ದೊರೆಯುತ್ತೆ. ಮಧುರೆ ಚನ್ನಡಿ ಸೀರೆ 1 ಕ್ಕೆ 2-3-0; ಡಿಟೋ ಕೆಂಪು 3 ರೂ. ತಂಜಾವೂರು ಗೆಜ್ಜೆ ಅಡ್ಡಿಕೆ 6 ಆಣೆ.

ವಿಳಾಸ:—ಕೆ. ರಾಧಾ ಕೃಷ್ಣ, 2-18 ಕಾರ್ ಸ್ಟ್ರೀಟ್,

[197-1] ತಿರುವಲ್ಲಿಕ್ಕೇಣಿ, ಮದ್ರಾಸು.

ನಂಬಿ ಮೋಸಹೋಗಬೇಡಿ.

ಇತರರು ಶಾಲುಗಳನ್ನು ಬಿಕ್ಕೀದೆಂದೂ, ಕಮ್ಮಿ ಬೆಲೆಗೆ ಕೊಡುತ್ತೇವೆಂದೂ ಹೇಳುವರು. ಇದನ್ನು ನಂಬಿ ಮೋಸ ಹೋಗಬೇಡಿ. ನಮ್ಮಲ್ಲಿ ಕಾಶ್ಮೀರಿ ಮತ್ತು ಎಲ್ಲಾ ತರಹದ ಉಂಟೆ ಶಾಲುಗಳೂ 5 ರೂ. ನಿಂದ 7, 10, 50, ರೂ. ಗಳವರಿಗೂ ಸಿಕ್ಕುತ್ತವೆ. ಖಾಯಿಷಿಲ್ಲದಿದ್ದರೆ ಹಣ ವಾಪಸು ಮಾಡುತ್ತೇವೆ. ನಮ್ಮ ಕಾರಖಾನೆಗೆ ಲಂಡನ್, ಚಿಕಾಗೋ ಮುಂತಾದ ಅನೇಕ ಪ್ರದರ್ಶನಗಳಲ್ಲಿ ಚಿನ್ನ ಮತ್ತು ಬೆಳ್ಳಿಯ ಮೆಡಲುಗಳು ಮತ್ತು ಸರ್ಟಿಫಿಕೇಟುಗಳು ಬಂದಿವೆ. ಯಾವ ತರಹ ಬಣ್ಣದ್ದು ಎಷ್ಟು ಬೆಲೆದಿಗೆ ಬೇಕಾದರೂ ನಮ್ಮಲ್ಲಿ ಸಿಕ್ಕುತ್ತವೆ. ಇಂಗ್ಲೀಷಿನಲ್ಲಾಗಲಿ, ಹಿಂದುಸ್ಥಾನಿಯಲ್ಲಾಗಲಿ ನಮಗೆ ಬರೆಯಬೇಕು.

ನಮ್ಮ ವಿಳಾಸ—ಪೀರ್ ಬ್ರದರ್ಸ್,

ಶಾಲ್ ಮರ್ಚೆಂಟ್ಸ್, ಅಮೃತಸರ, ಪಂಜಾಬು.

PEER BROS., SHAWL MERCHANTS,

[166-5] *AMRITSAR, PANJAB.*

ಬೇಕಾದವರು ಗಮನಿಸಿ.

ತ್ವರೆಮಾಡಿ: ಕೆಲವು ದಿನಗಳು ಮಾತ್ರ!

ಸೋಲಾಪುರದ ಚೌಕ್ಕ, ತೀರೆ, ಖಣ, ಕಿರಿಗೆ.

ಈ ಮುಂಗಡವಾಗಿ ಕಳುಹಿಸತಕ್ಕ ವ್ಯಾಪಾರಿಗಳಿಗೆ ಮಾತ್ರ ಕರಚೆವಾರಿ ಚೌಕ್ಕ, ಸೀರೆ ಖಣ ಕಿರಿಗೆ ಇವು ಬಹಳ ಸುಲಭ ಖರೀದಿಗೆ ಒದಗಿಸುವ ಏರ್ಪಾಡು ಮಾಡಲ್ಪಟ್ಟಿದೆ. ನಮ್ಮ ಕಾಯಂ ಗಿರಾಕಿಗಳಿಗೆ ಎಲ್ಲರಿಗಿಂತ ಸುಲಭ ಕ್ರಯಕ್ಕೆ ದೊರೆಯುವುದು.

ಹೊಸ ಗಿರಾಕಿಗಳು ತಮಗೆ ಬೇಕಾದಷ್ಟು ನನಗೆ ಬರೆದು ಹಣ ಮುಂಗಡ ರವಾನಿಸಿದರೆ ಅವರಿಗೂ ಕಾಯಂ ಗಿರಾಕಿಗಳ ದರಕ್ಕೆ ಜವಳಿ ದೊರೆಯುವುದು.

ಹಣ ಕಳುಹಿಸದೆ ಬರೆಯತಕ್ಕ ಕಾಗದಗಳಿಗೆ ಬೇಗ ಗಮನಕೊಡಲು ಅನುಕೂಲವಿಲ್ಲ. ಕಾಗದ ಪತ್ರಗಳನ್ನು ಬೆಳಸುವದರಿಂದ ಖರೀದಿಗಳು ಬದಲಾಯಿಸುವುದಿಲ್ಲವೆಂಬ ವಿಷಯ ಜ್ಞಾಪಕದಲ್ಲಿಡಬೇಕು. [28-33]

ಇಂಡಿಯನ್ ಕೋಆಪರೆಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್,

159, ಕಿಲಾರಿ ರೋಡ್ (ಕುಂಬಗರ ಪೇಟೆ), ಬೆಂಗಳೂರು ಸಿಟಿ.

ಶ್ರೀಕರಕಸ್ತೂರಿಮಾತ್ರೆ

ಬಿ. ವಿ. ಪಂಡಿತರ

250 ಮಾತ್ರೆಯುಳ್ಳ ಸೀಸೆಗೆ 4 ಆ.; 5 ಸೀಸೆಗಳಿಗೆ 1 ಇನಾಂ.

ಈ ಮಾತ್ರೆಗಳ ಚಿಟಿಯನ್ನು ನೋಡಿ ಇವರ ಗುಣವನ್ನು ಊಹಿಸಲಾಗದು. ಬಿಟಿಷ್ ದೇಶದ ಕಸ್ತೂರಿಯಿಂದಲೇ ವಿಶೇಷವಾಗಿ ತಯಾರ್ಮಾಡಲ್ಪಡುತ್ತಿರುವ ಈ ಶ್ರೀಕರ ಕಸ್ತೂರಿ ಮಾತ್ರೆಗಳು ಸುವಾಸನೆಯಾಗಿರುವುದು ಮಾತ್ರವಲ್ಲದೆ ತಾಂಬೂಲದೊಡನೆ ಅಥವಾ ಹಾಗೆಯೇ ಸೇವಿಸಿದರೆ ಎಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸುವುದು. ಮತ್ತಲ್ಲದೆ ಉಂಟಾಗುವ ಅಜೀರ್ಣಭೇದಿ-ವಾಂತಿ-ಕೆಮ್ಮು-ನೆಗಡಿ-ಭುಜ-ಹೊಟ್ಟೆ ಉಬ್ಬರ-ಈ ರೋಗಗಳನ್ನು ಸರ್ವದಲ್ಲಿಯೂ ವೃದ್ಧರನ್ನೂ ಕೂಡ ಗುಣಪಡಿಸುವುದು. ಪ್ರಯಾಣಿಕರಿಗೂ ನೆಂಟರು ... ಇದಲ್ಲದೆ ಮತ್ತು ಆರೋಗ್ಯವನ್ನು ಕೊಟ್ಟು ಕಾಪಾಡಬಹುದು. [220-45]

ವಿಷಮಜ್ವರಗಳು-ನೆಗಡಿ-ಕೆಮ್ಮು-ತಲೆನೋವು-ಅಗ್ನಿಮಾಂದ್ಯ-ಶೀತವಾಯು-ಹಲ್ಲುನೋವು-ಬಲಬ್ರ...-ಅರೋಚಕ-ನರಗಳ ದೌರ್ಬಲ್ಯ—ಈ ರೋಗಗಳನ್ನು ಪ್ರತಿಯೊಬ್ಬರೂ ಗುಣಪಡಿಸಿ ರಕ್ತವೃದ್ಧಿಯನ್ನುಂಟುಮಾಡುವುದು. ಸಾವಿರಾರು ಜನರು ಪರೀಕ್ಷಿಸಿದ್ದಾರೆ. ಟಪಾಲ್ ಖರ್ಚು 12 ಸೀಸೆ ವರೆಗೆ 4 ಆಣೆ.

ವಿಳಾಸ—ಮ್ಯಾನೇಜರ್, ಸದ್ವೈದ್ಯಶಾಲಾ, ನಂಜನಗೂಡು.

ಪ್ರಸಿದ್ಧವಾದ ಜ್ವರದ ಗುಳಿಗೆಗಳು.

ಎಲ್ಲಾ ವಿಧವಾದ ಜ್ವರಕ್ಕೂ ಮುಖ್ಯೌಷಧ ಒಮ್ಮೆ ತರಿಸಿ ನೋಡಿದರೆ ಗುಣ ಗೊತ್ತಾಗುತ್ತೆ. ಪ್ರತಿ ಕುಟುಂಬದಲ್ಲಿಯೂ ತರಿಸಿಟ್ಟುಕೊಳ್ಳುವದು ಅಗತ್ಯ. ಕ್ರಯ 40 ಮಾತ್ರೆಗಳುಳ್ಳ ಸೀಸೆ 1 ರ ಕ್ರಯ ರೂ 1 3 ಸೀಸೆಗಳಿಗೆ ರೂ 2-12-0. 6 ಸೀಸೆಗಳಿಗೆ ರೂ 5. 12 ಸೀಸೆಗಳಿಗೆ ರೂ 9 ವ್ಯಾಪಾರಿಗಳಿಗೆ ಧಾರಾಳವಾದ ಕಮಿಷನ್ ಕೊಡಲಾಗುವದು. ಘನವನ್ನು ಹೊಂದಿದ ಮೈಸೂರು ಸರ್ಕಾರದ ಅಸಿಸ್ಟೆಂಟ್ ಮ್ಯಾಜಿಸ್ಟ್ರೇಟ್ ಮಾ ಗ ಎಂ. ಕೆ ವೆಂಕಟರಾವ್, ಎಂ ಎ. ಇವರು ಬರೆಯುವದು:—ಜ್ವರಾರಿ ಕಂಪನಿಯವರ ಜ್ವರದ ಗುಳಿಗೆಗಳು ಮಲೆನಾಡಿನ ಜ್ವರಕ್ಕೆ ಮುಖ್ಯೌಷಧವೆಂದು ನಾನು ಶಿಫಾರಸು ಮಾಡುತ್ತೇನೆ.

ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

[192-1] ವಿಳಾಸ—ಜ್ವರಾರಿ ಕಂಪನಿ, ತೀರ್ಥಹಳ್ಳಿ.

S U. N. & Co.,

BENARES CITY, U. P.

ಸೊಗಸಾದ ಸರಕುಗಳು!!

ದೊಡ್ಡ ಕಂಪೆನಿ!

ಈ ನಮ್ಮ ಕಂಪನಿಯಲ್ಲಿ ನೆಯಿದು ತಯಾರಿಸುವ ಉತ್ತಮವಾದ ಬನಾರಸ್ ರೇಷ್ಮೆ ಜರೀ ಸೀರೆಗಳು, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ್ಟ, ಮುಗುಟ, ಜಗನ್ನಾಥ ಜಾಗಟೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಕ್ಯಾಟಲಾಗ್ 1 ನ್ನು ಮತ್ತು 2 ವಿಶ್ವೇಶ್ವರ ಪಟಗಳನ್ನು ಇನಾಮಾಗಿ ಕಳುಹಿಸಲಾದೀತು. [69-26]

ಎಸ್. ಯು. ಎನ್. ಮತ್ತು ಕಂಪೆನಿ, ಕಾಶಿ.

ಪಾಕೆಟ್ ಲೀವರ್ ವಾಚ್.

ಇದರ ಕ್ರಯ 6 ಬಹುಮಾನ ಸಮೇತ ರೂ. 2-13-0 ಮಾತ್ರ.

ಇದು ಮಕ್ಕಳ ಆಟದ ಬೊಂಬೆಯಂತೆ ಕೆಲವು ದಿವಸಗಳು ಆಟವಾಡಿ ನಂತರ ಕೆಟ್ಟುಹೋಗುವಂಥಾ ಅಲ್ಪ ಗಡಿಯಾರವಲ್ಲ. ಶ್ರೇಷ್ಠವಾದ ಮತ್ತು ಬಹು ಪ್ರಸಿದ್ಧವಾದ ಲೀವರು ಕೆಲಸದಿಂದ ತಯಾರಾದದ್ದು. ಗಂಭೀರವಾದ ಘಂಟೆ ಮತ್ತು ಮಿನಿಟ್‌ಗಳು



ಮುಳ್ಳುಗಳುಳ್ಳದ್ದು. ಬಹು ಬಲಿಷ್ಠವಾದ ಮತ್ತು ನಾಜೂಕಾದ ಯಂತ್ರಸಾಮಾನುಗಳಿಂದ ತಯಾರಾಗಿರುತ್ತೆ. ಅನೇಕ ವರುಷಗಳ ಪರಿಯಂತರ ಬಾಳಿಕೆ ಬರುವಂಥಾದ್ದು. ಆದಕಾರಣ ಆರ್ಡರುಗಳು ಬಂದು ಸುರಿಯುತ್ತಿವೆ. ಬಹುಮಾನಗಳ ತಪಸೀಲು:—1 ವಾಚ್ ಸರಪಣಿ, 2 ಉತ್ತರ ಮುಖಿ, 3 ಪರಿಮಳ ಅತ್ತರ್, 4 ಕರವಸ್ತ್ರ, 5 ಸೋಕಾದ ಉಂಗರ, 6 ಸಟ್ಟು.

ವಿಳಾಸ—ಎ. ಆರ್. ವೆಂಕಟರಮಣ ಅಂಡ್ ಕಂಪೆನಿ,

[143-9] ನಂ. 7, ಕೋಟ್ ವೆಂಕಟಾಚಲಯ್ಯರ್ ಬೀದಿ, ಮದರಾಸು.

ಪಟೇಲ್ ಶ್ಯಾನುಭೋಗರೂ ಗ್ರಾಮಾಭಿವೃದ್ಧಿಯೂ.

ಗ್ರಾಮಗಳಲ್ಲಿ ಯೋಗ್ಯರಾದ ಪಟೇಲ್ ಶ್ಯಾನುಭೋಗರು ಮತ್ತು ಕಾರ್ಯದಕ್ಷರಾದ ಮುಖಂಡ ಮನುಷ್ಯರಿಗೆ ತುಂಬಾ ಮರ್ಯಾದೆ ಇರುತ್ತದೆ. ಆದರೆ ಅಂಥವುಗಳನ್ನು ಉಳಿಸಿಕೊಳ್ಳುವುದಕ್ಕೆ ಈಗ ನಮ್ಮ ದಯಾಳು ಸರ್ಕಾರದವರು ಏರ್ಪಡಿಸಿರುವ ಗ್ರಾಮಾಭಿವೃದ್ಧಿ ಸಂಘವು ಒಳ್ಳೆಯ ಸಮಯವಾಗಿದೆ.

ನಮ್ಮ ಸರ್ಕಾರದವು ವಿದ್ಯಾಹೀನತೆ ಎಲ್ಲರ ಮೌಢ್ಯವನ್ನು ತೊಲಗಿಸಿ ಮುಂದೆ ಪ್ರಜೆಗಳಾಗುವ ಈ ದೇಶದ ರೈತರ ಮಕ್ಕಳನ್ನು ಏಳಿಗೆಗೆ ತರುವುದಕ್ಕಾಗಿ ನಾವು ಎಂದೂ ಕೇಳಿಯೂ ನೋಡಿಯೂ ಇಲ್ಲದ ಅನೇಕ ಹೊಸ ಹೊಸ ಕ್ರಮಗಳನ್ನು ಜಾರೀಗೆ ತರುತ್ತಿರುವ ಸಂಗತಿ ಎಲ್ಲರಿಗೂ ತಿಳಿದ ವಿಷಯವಾಗಿದೆ. ಸ್ವಲ್ಪ ದಿವಸಗಳ ಹಿಂದೆ ವಿದ್ಯೆಯು ಬಡಜನಗಳಿಗೆ ಲಭಿಸುವುದು ತುಂಬಾ ಕಷ್ಟಕರವಾಗಿತ್ತು. ಹೇಗಂದರೆ ಎಲ್ಲೋ ಒಂದೊಂದು ಹಳ್ಳಿಯಲ್ಲಿ ಸ್ಕೂಲುಗಳು ಇದ್ದವು. ಆಯಾ ಗ್ರಾಮದ ರೈತರ ಮಕ್ಕಳು ಮಾತ್ರ ಅಲ್ಪ ಸ್ವಲ್ಪ ವಿದ್ಯೆಯನ್ನು ಕಲಿಯುತ್ತಿದ್ದರು. ಇತರ ಗ್ರಾಮಗಳ ಪುಣ್ಯವಂತ ರೈತರು ಸಾಕಾದಷ್ಟು ಸಲಕರಣೆಗಳನ್ನು ತಮ್ಮ ಮಕ್ಕಳಿಗೆ ಒದಗಿಸಿಕೊಟ್ಟು ದೊಡ್ಡ ಸ್ಥಳಗಳಿಗೆ ಕಳುಹಿಸಿ ಅಲ್ಲಿ ವಿದ್ಯೆಯನ್ನು ಕಲಿಸುತ್ತಿದ್ದರು. ಅಂತೂ ವಿದ್ಯೆಯು ಪುಣ್ಯವಂತರಿಗೆ, ಮೇಲುಜಾತಿಯವರಿಗೆ ಮಾತ್ರ ಲಭ್ಯವಾಗುತ್ತಿತ್ತು. ಇತರರಿಗೆ ಯತ್ನವಿಲ್ಲದೆಯೂ ಸ್ಕೂಲಿದ್ದ ಕಡೆಗಳಲ್ಲೂ ಕೆಲವು ದೊಡ್ಡ ಮನುಷ್ಯರ ಹಾವಳಿಯಿಂದ ಕೀಳ್ಜಾತಿಯವರಿಗೆ ಅಕ್ಷರಗಂಧವೇ ಗೊತ್ತಾಗದಂತಿತ್ತು. (ಸಂದರ್ಭಾನುಸಾರ ಈಗಲೂ ಎಲ್ಲೋ ಅಲ್ಪಸ್ವಲ್ಪವಿದೆ.) ಈಗಲಾದರೋ ನಾನಾ ಜನಾಂಗವೂ ವಿದ್ಯಾಲಕ್ಷ್ಮಿಯನ್ನು ಸರಳವಾಗಿ ಕೈಹಿಡಿದುಕೊಂಡು ಹೋಗುತ್ತಿದ್ದಾರೆ. ಇದಕ್ಕಾಗಿ ನಮ್ಮ ಶ್ರೀಮನ್ ಮಹಾರಾಜಾ ಸಾಹೇಬ್ ಬಹದ್ದೂರ್‌ರವರ ದಿವ್ಯ ಪಾದಾರವಿಂದಗಳಿಗೂ, ಅವರಾಜ್ಞೆಯ ಪಾಲಕರಿಗೂ ಎರಡು ಕೈಜೋಡಿಸಿ ಮಣಿಯುತ್ತಿದ್ದು ಈ ಮಹಾನುಭಾವರಾದ ಸತ್ಪ್ರಭುಗಳ ಪ್ರೋತ್ಸಾಹವನ್ನು ಎಲ್ಲಾ ಸ್ಕೂಲುಗಳಲ್ಲೂ ಮಾಡುತ್ತಾ ಅವರುಗಳಿಗೆ ಚಿರಾಯುಷ್ಯವನ್ನು ಬಯಸುವವರಾಗಿದ್ದೇವೆ.

ನಾವು ಕಣ್ಣುಬಿಟ್ಟು ನೋಡಿದರೆ ವಿಶೇಷ ಪದಾರ್ಥಗಳೂ ಕಾಣುತ್ತವೆ. ಕೆಂಪಾದ ಕಾಣುವ ಪ್ರತಿಯೊಂದು ವಸ್ತುವಿನ ವ್ಯತ್ಯಾಸಗಳನ್ನು ಅರಿಯುವುದು ಅಷ್ಟು ಸುಲಭವಲ್ಲ. ಅದಕೋಸ್ಕರ ಕೆಳಗಿನ ಮಟ್ಟದ ವಿದ್ಯೆಯು ಬಾರದೇ ಇರೋಭಾಗದಲ್ಲಿ ಪರೀಕ್ಷೆಯ ಪ್ರಯೋಜನವೂ ಆಗುವುದಿಲ್ಲ. ವಿದ್ಯೆ ಬಂದರೂ ಯೋಚನೆಮಾಡದೆ, ಕಾಲ ದೇಶ ವರ್ತಮಾನಗಳ ಸ್ಥಿತಿಗತಿಗಳನ್ನು ವಿಚಾರ ಮಾಡದೆ ಇದ್ದರೆ ಗಿಣಿ ಓದಿದಂತೆ ಅದು ಸಹ ಸಾರ್ಥಕವಾಗದೆ ಹೋಗುತ್ತದೆ. ನಮ್ಮ ಸತ್ಪ್ರಭುಗಳ ಕಾಲದಲ್ಲಿ ಅದರಲ್ಲೂ ರಣಪ್ರಾಯರಾದ ದಿವಾನ್ ಸಾಹೇಬರವರು ನಮ್ಮ ಸುಕೃತ ಫಲದಿಂದ ದೊರಕಿರುವ ಈ ಸುಸಮಯದಲ್ಲಿ ನಾವು ನಮ್ಮ ದೃಷ್ಟಿಗಳನ್ನು ಚೆನ್ನಾಗಿ ಬಿಟ್ಟು, ಕೆಲಕೆಲವು ಕಾರ್ಯಭಾಗಗಳನ್ನು ನಡಿಸಿ ಸರ್ಕಾರದ ಉದ್ದೇಶವನ್ನು ನಮ್ಮ ಪ್ರಯೋಜನವನ್ನು ಮಾಡಿಕೊಂಡು, ಸ್ವಲ್ಪ ಮಟ್ಟಿಗೆ ನಾಗರಿಕತ್ವದಿಂದ ಬಾಳಿ ಕೀರ್ತಿವಂತರಾಗಬೇಕು. ಹುಟ್ಟಿದ ಮೇಲೆ ಸಾಯುವುದು ನಿಜ; ಆದರೆ ಬಾಳಿಕೆಯು ನೆಟ್ಟಗಿರಬೇಕು. ಎಲ್ಲರೂ ಹೀಗಿದ್ದರೇ ಆದರೆ ಭೂಭಾರಕರಿಗೆ ಇಷ್ಟೊಂದು ವ್ಯಥೆ ಆಗುತ್ತಿರಲಿಲ್ಲ. ಆದುದರಿಂದ ಗ್ರಾಮದ ಮುಖಂಡರು ತಮ್ಮನ್ನು ತಾವು ತಿದ್ದಿಕೊಂಡು ಎಲ್ಲರನ್ನು ತಿದ್ದಿ ನಡಿಸಬೇಕು.

ಇದಕ್ಕಾಗಿ ಪ್ರತಿ ಗ್ರಾಮದ ಪಟೇಲ್ ಶ್ಯಾನುಭೋಗರು ಈಗಿನ ವಿದ್ಯಾಭ್ಯಾಸಕ್ಕೂ, ಗ್ರಾಮಾಭಿವೃದ್ಧಿ ಸಂಘಗಳಿಗೂ, ಗ್ರಾಮಸ್ಥರಿಗೂ, ಮೆಂಬರುಗಳಿಗೂ ವಿಶೇಷ ಪ್ರೋತ್ಸಾಹಕೊಟ್ಟುಕೊಂಡು ದೇಶಾಭ್ಯುದಯಕ್ಕೆ ತನು ಮನ ಧನಗಳನ್ನು ಸಹಾ ಒಪ್ಪಿಸುವಂತಿರಬೇಕು. "ದೇಶವೆಲ್ಲಾ ಕ್ಷೇಮವಾಗಿರಲಿ ಎನ್ನುವವನು ತಾನೂ ಕ್ಷೇಮವಾಗಿರುವನು" ಎನ್ನುವ ಹಾಗೆ ಪ್ರತಿಯೊಬ್ಬರ ನೆಮ್ಮದಿಗೆ ಪರಸ್ಪರ ಸಹಾಯ ಸಂಘಗಳಿಂದಲಾಗಲಿ, ತಮ್ಮಲ್ಲಿಯೋ ಆಗಲಿ ಅನುಕೂಲಗಳನ್ನು ಉಂಟುಮಾಡಿ ಕೊಡಬೇಕು. ತಿಳುವಳಿಕೆ ಇಲ್ಲದ ಒರಟು ಜನರಿರುತ್ತಾರೆ. ಅವರಿಗೆ ಮಾತಾಡುವುದಕ್ಕೆ ಸಹಾ ಬಾರದು. ಅಂಥವರನ್ನು ಯುಕ್ತಿಯಿಂದ ತಿದ್ದಿ ನಡಿಸಿಕೊಳ್ಳಬೇಕು. ಉಪಸಂಘಗಳನ್ನು ಏರ್ಪಡಿಸಿಕೊಂಡು, ವರ್ತಮಾನ ಪತ್ರಿಕೆಗಳ ಸಾರಾಂಶವನ್ನು ತಿಳಿಸುತ್ತಿರಬೇಕಲ್ಲದೆ ವಾರಕ್ಕೊಂದಾವರ್ತಿ ಗ್ರಾಮಾಭಿವೃದ್ಧಿ ಕಾರ್ಯಗಳನ್ನು ತಪ್ಪದೆ ಮಾಡುತ್ತಿದ್ದು ಜತೆಗೆ ಸರ್ಕಾರದವರ ಸಹಾಯವನ್ನು ಅಪೇಕ್ಷಿಸಬೇಕು. ನಮ್ಮ ಕಾರ್ಯವು ಸರಿಯಾಗಿ ನೆರವೇರುತ್ತಿದ್ದರೆ ಸರ್ಕಾರದವರೇ ಕೈಪ್ರದಲ್ಲಿ ಉತ್ಸಾಹದಿಂದ ಸಹಾಯಮಾಡುವರು. ತನಗೂಡಿದರೆ ಹಳ್ಳವೆಂಬಂತೆ ಗ್ರಾಮದವರು ಒಂದಾಗಿ ಕೆಲಸಮಾಡಿದರೆ, ಒಂದೆರಡು ವಾರಗಳಲ್ಲಿ ಒಂದು ಭಾವಿಯನ್ನು ತೋಡಬಹುದು; ಮತ್ತೆ ಒಂದೆರಡು ವಾರಗಳಲ್ಲಿ ಎಲ್ಲರ ಧಾಂಡಿಗಳನ್ನು ಸೇರಿಸಿ ಕಲ್ಲು ಜಮಾಯಿಸಬಹುದು; ಆಗ್ಗೆ ಬೇಕಾದರೆ ಸರ್ಕಾರದ ಸಹಾಯವನ್ನು ಅಪೇಕ್ಷಿಸಿದರೆ ಒಂದಕ್ಕೆ ಒಂದೂ ಕಾಲರಷ್ಟು ದುಡ್ಡು ದೊರೆಯುವುದು; ಆಗ ಒಂದು ಕುಡಿಯುವ ನೀರಿನ ಯೋಗ್ಯವಾದ ಭಾವಿಯಾಯಿತು. ಇದು ನಮಗೆ ಎಷ್ಟು ಹೊಟ್ಟಿನ ಉಪಯೋಗ ಮತ್ತು ಕೀರ್ತಿಕರ! ಇದರಂತೆ ಬಚ್ಚಲು, ಹಾಳುತಿಪ್ಪೆಗಳ ದುರಸ್ತು, ಹಳ್ಳಗಳ ಸಂದುಗೊಂದುಗಳ ಪಾಚೀ ... ನಿರ್ಮಲ ಕ್ರಮಗಳನ್ನೆಲ್ಲಾ ಅವರವರೇ ಮಾಡಿಕೊಂಡರೆ ಉತ್ತಮ ಕೆಲಸಗಳಿಗೆ ಸರ್ಕಾರದವರು ಸಹಾಯಮಾಡುವರು. ಈ ರೀತಿ ಏಕಮತ್ಯದಿಂದ ಒಂದೆರಡು ವರ್ಷಗಳು ನಡೆದರೆ ಆ ಊರಿನ ನೈರ್ಮಲ್ಯವೂ, ಗ್ರಾಮಮುಖಂಡರ ಕೀರ್ತಿಯೂ ಪ್ರಜ್ವಲಿಸುತ್ತವೆ. ದೇಶವೆಲ್ಲಾ ಹೀಗೆ ನಡಿಸಿದರೆ ನಮ್ಮನ್ನಾಳುವ ಸ್ವಾಮಿಯವರ ಉದ್ದೇಶವು ನೆರವೇರುವುದು.

ಈಗ ಹಳ್ಳಿಗಳಲ್ಲಿ ಕಂದಾಯದ ವಸೂಲಿಗೆ ಸರಿಯಾದ ಚಾವಡಿಗಳಿಲ್ಲ; ಇದ್ದರೂ ಕಿಟಕಿ, ಕದ, ಬಾಗಿಲು ಸರಿಯಾಗಿಲ್ಲ. ಇದಕ್ಕೆ ಒಂದು ಅನುಕೂಲವಾದ ಸ್ಥಳದಲ್ಲಿ ಗ್ರಾಮಸ್ಥರ ಸಹಾಯದಿಂದ ಒಂದು ಚಾವಡಿಯನ್ನು ಕಟ್ಟಿಸಿಕೊಂಡು ಅವಕ್ಕೆ ಅವಶ್ಯಕರ ಸೇರಿದ್ದರೆ ಎರಡು ಕೊಠಡಿಮಾಡಿ ಕಸ್ತೂರಿಶಾಲೆಗಳನ್ನು ನಿರ್ಣಯಿಸಿಕೊಂಡು ಆ ಕೊಠಡಿಯಲ್ಲಿ ಒಂದು ಬಂದೋಬಸ್ತಾದ ಪೆಟ್ಟಿಗೆ, ಒಂದು ಚಿಕ್ಕ ಹಣದ ಪೆಟ್ಟಿಗೆ, ಸಾಕ್ಷ್ಯಗಳಿಗಾಗಿ ಒಂದು ಚೀಲ, ತಮ್ಮ ದರ್ಜೆಗೆ ಸರಿಯಾಗಿ ಕೊಡುವುದಕ್ಕೆ ಮಣೆಯೋ, ಅನುಕೂಲವಾದರೆ ಬೆಂಚೋ, ಅವರವರ ಯೋಗ್ಯತಾನುಸಾರವಾದ ಆಸನಗಳನ್ನು ಮಾಡಿಕೊಂಡು, ಒಂದು ದಿನವೂ ತಪ್ಪದೆ ಒಂದೊಂದು ಗಂಟೆ (ವಸೂಲಿ ಕಾಲದಲ್ಲಿ ಮಾತ್ರವಲ್ಲ) ಕೆಲಸ ಮಾಡುತ್ತಾ, ಇದೊಂದು ಸರ್ಕಾರಿ ಗುಮಾಸ್ತೆ ಕಚೇರಿ ಎಂಬ ಭಾವನೆಯಿಂದ ಕೆಲಸಮಾಡುತ್ತಾ, ಎಲ್ಲಾ ಕಾಗದಪತ್ರಗಳೂ ಬಂದೋಬಸ್ತಿಗಾಗಿ ಸರಿಯಾದ ಕದ, ಬಾಗಿಲು, ಬೀಗಗಳಿಂದ ಭದ್ರಪಡಿಸಿ ರಾತ್ರಿ ತಪ್ಪದೆ ಪೋಲೀಸ್ ಕಾವಲು ಕಾಯುವ ಪದ್ಧತಿಯನ್ನು ಇಟ್ಟುಕೊಂಡಿರಬೇಕು. ರಿಜಿಸ್ಟರುಗಳು ಸರಿಯಾಗಿರಬೇಕು. ಈ ರೀತಿಯಾದ ದರ್ಶನವಾದ ಮತ್ತು ನ್ಯಾಯವಾದ ನೌಕರಿ ಮಾಡಿದರೆ ಗೌರವ ಉಂಟಾಗಿ ಅವನಿಗೆ ಒಳ್ಳೆ ಹೆಸರು ಬರುತ್ತದೆ. ಇಂಥಾ ಪಟೇಲನೇ ಉತ್ತಮ ಪಟೇಲನು. ಆತನು ಪಟೇಲರ ಮ್ಯಾನ್ಯುಯಲ್ಲನ್ನು ಓದಿರಬೇಕು. ಎಲ್ಲಾ ವೃತ್ತಪತ್ರಿಕೆಗಳೂ ಆತನಲ್ಲಿರಬೇಕು; ಇಲ್ಲವೇ ಒಂದು ವಾಚನಶಾಲೆ ಇದ್ದರೆ ಅಲ್ಲಿರಬೇಕು.

ಎಲ್ಲಾ ಕೋಮಿನವರ ಗಂಡು ಹೆಣ್ಣು ಮಕ್ಕಳೂ ಸ್ಕೂಲಿಗೆ ತಪ್ಪದೆ ಹೋಗುತ್ತಿರುವ ಹಾಗೆ ನೋಡಿಕೊಳ್ಳುತ್ತಿರಬೇಕು. ಯಾರಾದರೂ ಅನಾಥ ಮಕ್ಕಳಿದ್ದರೆ ಅಂಥವರ ಅನ್ನ, ವಸ್ತ್ರ, ಬುಕ್ಕುಗಳಿಗೆ ಸಹಾಯಮಾಡಬೇಕು. ರಾತ್ರಿ ಪಾಠಶಾಲೆ ಏರ್ಪಡಿಸಿ ದೊಡ್ಡವರಿಗೆ ಸಹಾ ಓದು ಬರಹ ಲೆಕ್ಕ ಇವುಗಳನ್ನು ಹೇಳಿಸಿಕೊಡಬೇಕು. ಹೀಗೆಲ್ಲಾ ಮಾಡುತ್ತಿದ್ದರೆ ದೇಶಕ್ಕೆ ಕ್ಷೇಮವಾಗುತ್ತದೆ. ನಾವು ಮುಂದೆ ಬಂದು ಮಾತಾಡಲು ನಿಶ್ಚಯಿಸುತ್ತೇವೆ.

ವೃತ್ತಾಂತಪತ್ರಿಕೆ ಏಜಂಟರಿಗೆ ಸೂಚನೆ.

ವೃತ್ತಾಂತ ಪತ್ರಿಕೆಯ 1914-15 ನೇ ವರುಷದ ಒಂದನೇ ಕ್ವಾರ್ಟರು ಕಳೆದ ಆಗಸ್ಟ್ ತಿಂಗಳಿಗೆ ಪೂರೈಸಿದೆ. ಏಜಂಟರುಗಳು ಆ ಕ್ವಾರ್ಟರಿನ ಲೆಕ್ಕವನ್ನು ತೈಯಾರುಮಾಡಿ, "ಬಿ" ಫಾರಂಗಳಿಗೆ ಎತ್ತಿ ಬರೆದು, ತಮ್ಮ ತಮ್ಮ ಸೂಪರಿಂಟೆಂಡೆಂಟರಿಗೆ ಒಂದು ಪ್ರತಿಯನ್ನೂ, ನಮಗೆ ಒಂದು ಪ್ರತಿಯನ್ನೂ ಈ ವಾರದಲ್ಲೇ ಜಾಗ್ರತೆಯಿಂದ ಕಳುಹಿಸಿಕೊಡಬೇಕಾಗಿ ಕೃತಪಡಿಸಿದೆ.

ನೀವು ಕೇಳಿದ ಹಾಗೆ ಪತ್ರಿಕೆಗಳನ್ನು ಹೆಚ್ಚಾಗಿ ಕಳುಹಿಸುತ್ತಾ ಬರುವೆವು. ಆದರೆ ಬಿಡಿ ಪತ್ರಿಕೆಗಳ ಮಾರಾಟವನ್ನು ನಿಲ್ಲಿಸಿ. ಮುಂದಿನ 1915 ನೇ ಏಪ್ರಿಲ್ ವರೆಗೆ ಅಡ್ವಾನ್ಸು ಕೊಟ್ಟು ಕ್ರಮವಾಗಿ ಚಂದಾದಾರರಾಗತಕ್ಕವರಿಗೆ ಮಾತ್ರ ಪತ್ರಿಕೆಗಳನ್ನು ತಪ್ಪಿಸದೆ ಕೊಡುತ್ತಾ ಬರಬೇಕೆಂದು ಕೋರುತ್ತೇವೆ.

"ಮ್ಯಾನೇಜರ್, "ವೃತ್ತಾಂತ ಪತ್ರಿಕೆ," ಮೈಸೂರು.

ವೃತ್ತಾಂತ ಪತ್ರಿಕೆ.

—:o:—

ಸನ್ ೧೯೧೪ ನೇ ಇಸವಿ ಸೆಪ್ಟೆಂಬರ್ ತಾ. ೧೦ ನೇ ಗುರುವಾರ.

ರಾಜಧಾನಿಯ ಪುರೋಭಿವೃದ್ಧಿಯು.

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನ ಇಂಜನಿಯರಾದ ಮಿ|| ಎಚ್. ಎಫ್. ಮಾರ್ಕರ್, ಎಲ್.ಸಿ.ಇ. ರವರು ಬೆಂಗಳೂರಿನಲ್ಲಿ ನಡೆದ ಇಂಜನಿಯರುಗಳ ಮೀಟಿಂಗಿನಲ್ಲಿ ಮೈಸೂರು ಪಟ್ಟಣದ ಅಭಿವೃದ್ಧಿ ಮತ್ತು ರಚನೆ ಎಂಬ ವಿಷಯವನ್ನು ಕುರಿತು ಒಂದು ಉಪನ್ಯಾಸವನ್ನು ಬರೆದು ಓದಿದರು. ಅದರ ಒಂದು ಪ್ರತಿಯು ನಮಗೆ ತಲುಪಿದೆ. ಇದರಲ್ಲಿ ವಿವರಿಸಲ್ಪಟ್ಟಿರುವ ವಿಷಯಗಳೆಲ್ಲಾ ರಾಜಧಾನಿಯನ್ನು ನೋಡಬಲ್ಲವರಿಗೆ ಉತ್ಸಾಹಪ್ರದವಾಗಿರುವವು; ಮತ್ತು ಅವರು ಪುರಾಭಿವೃದ್ಧಿಗಾಗಿ ಸೂಚಿಸಿರುವ ಅನೇಕ ಸಲಹೆಗಳು ಬಹಳ ಚೆನ್ನಾಗಿರುತ್ತವೆ.

ಪಟ್ಟಣದೊಳಗೆ ದೊಡ್ಡ ದೊಡ್ಡ ರಸ್ತೆಗಳಲ್ಲಿ ಇರತಕ್ಕ ವಿಲಕ್ಷಣವಾದ ಮನೆಗಳನ್ನು ಕೆಡವಿಬಿಟ್ಟು, ಚೆನ್ನಾಗಿಯೂ ಅಲಂಕಾರವಾಗಿಯೂ ಇರತಕ್ಕ ಕಟ್ಟಡಗಳನ್ನು ಕಟ್ಟಿಸಿದರೆ ರಾಜಧಾನಿಯು ನೇತ್ರಾನಂದಕರವಾಗುವುದೆಂದು ಮಿ|| ಮಾರ್ಕರವರು ಹೇಳುತ್ತಾರೆ. ಈ ಕಾರ್ಯವು ರಾಜಧಾನಿಯ ರಚನೆಯನ್ನು ಬಹು ಅಂದವಾಗಿ ಮಾಡೀತೆನ್ನುವುದಕ್ಕೆ ಸಂಶಯವಿಲ್ಲ. ಇದಕ್ಕೆಲ್ಲಾ ಮಿ|| ಮಾರ್ಕರವರು ಇಪ್ಪತ್ತು ಲಕ್ಷ ರೂಪಾಯಿ ಬೇಕಾಗಬಹುದೆಂದು ಹೇಳುತ್ತಾರೆ. ಈಗಲೇ ಮೈಸೂರು ಗವರ್ನ್‌ಮೆಂಟಿನವರು ರಾಜಧಾನಿಯ ಬಜ್ಜಾರು ರೋಡ್ಡನ್ನು ಸಾಗಿಸುವುದಕ್ಕೂ, ಆರೋಗ್ಯಭಾಗ್ಯವನ್ನು ವೃದ್ಧಿಮಾಡುವುದಕ್ಕೂ, ಇತರ ಅಭಿವೃದ್ಧಿ ಕಾರ್ಯಗಳಿಗೂ ಪ್ರತಿ ವರುಷವೂ ಲಕ್ಷಾಂತರ ರೂಪಾಯನ್ನು ಖರ್ಚುಮಾಡುತ್ತಾ ಬಂದಿದ್ದಾರೆ. ಈ ಹಣವನ್ನು ಆವಶ್ಯಕವಾದ ಕಾರ್ಯಗಳಿಗೆ ವಿನಿಯೋಗಿಸದೆ ಇರೋಣದರಿಂದ ಆ ಪೈಕಿ ಕೆಲವು ಭಾಗ ವ್ಯರ್ಥ ಖರ್ಚೆಂದು ಹೇಳುವೆವು. ಕಾರಂಜಿಕೆರೆಯ ಏರಿಯನ್ನೂ, ದೊಡ್ಡಕೆರೆ ಏರಿಯನ್ನೂ ಅಂದವಾಗಿ ಮಾಡುತ್ತೇವೆಂದು ಹೇಳಿ ನಾನಾ ವ್ಯರ್ಥವಾದ ಕಾಮಗಾರಿಗಳಿಗೆ ಹಣವನ್ನು ವಿನಿಯೋಗಿಸಿ ಭಾರಿಭಾರಿಯಾದ ಅನೇಕ ಗಿಡಮರಗಳನ್ನು ಕಡಿಸಿ ಕೆಡವಿಬಿಟ್ಟಿರುವುದನ್ನು ನೋಡಿದರೆ ಬಹಳ ದುಃಖವಾಗುತ್ತದೆ. ಮರಗಳನ್ನು ಕಡಿದು ಉರುಳಿಸುವುದೇನೋ ಸುಲಭ; ತಲಾಂತರಗಳಾದರೂ ಅಂಥಾ ದೊಡ್ಡ ಮರಗಳನ್ನು ಸಾಕಿ ಬೆಳಸುವುದು ಅಸಾಧ್ಯ. ಇರತಕ್ಕವುಗಳಲ್ಲಿ ರಮಣೀಯವಾಗಿರುವಂಥವುಗಳನ್ನೆಲ್ಲಾ ಕಾಪಾಡಿಕೊಂಡು, ರಸ್ತೆಯು ನೇರವಾಗಿಲ್ಲದೆ ಹೋದರೂ ಬಿಟ್ಟುಕೊಂಡುಬರುವುದು ಎಷ್ಟೋ ಅಪೇಕ್ಷಣೀಯವಾಗಿದೆ.

ಮಿ|| ಮಾರ್ಕರವರು ಪಟ್ಟಣದ ಒಳಪ್ರದೇಶಗಳಲ್ಲಿ ಆರೋಗ್ಯಕರವಾದ ಏರ್ಪಾಡುಗಳನ್ನು ಮಾಡಬೇಕೆಂದೂ, ಪ್ರಜೆಗಳು ವಾಸಮಾಡುವಂಥಾ ಮನೆಗಳ ರೊಚ್ಚು ಕೊಳಕು ಪಾಯಿಖಾನೆ ಮುಂತಾದವುಗಳು ಬೇಗ ಬೇಗನೆ ತೃಪ್ತಿಕರವಾಗಿ ಸಾಗಿಹೋಗುವಂಥಾ ಏರ್ಪಾಡುಗಳು ನಡೆಯ ಬೇಕಾಗಿವೆ ಎಂದು ಹೇಳುತ್ತಾರೆ. ಇಂಥಾ ಆವಶ್ಯವೂ ಪ್ರಾಮುಖ್ಯವೂ ಆದ ಲೋಪವನ್ನು ಮಿ|| ಮಾರ್ಕರವರು ಸೂಚಿಸಿರುವುದನ್ನು ನೋಡಿ ಸಂತೋಷಪಡುತ್ತೇವೆ. ಈ ಕಾರ್ಯವು ಪ್ರಧಾನವಾದದ್ದೆನ್ನುವುದಕ್ಕೆ ಸಂಶಯವಿಲ್ಲ. ಅಲಂಕಾರ ಅಂದಚಂದಗಳಲ್ಲಿ ಹೇಗೋ ಹಾಗೆಯೇ ಆರೋಗ್ಯವಿಚಾರದಲ್ಲೂ ಆಹ್ಲಾದಕರವಾಗಿಲ್ಲದೆಹೋದರೆ ರಾಜಧಾನಿಯೆಂಬದರ ಲಕ್ಷಣಗಳೆಲ್ಲಾ ಈ ನಗರಕ್ಕೆ ಸಲ್ಲದೆ ಹೋಗುವವು. ಆಗಾಗ್ಗೆ ನೀರುಹಾಯಿಸಿ ಚರಂಡಿ, ಬಚ್ಚಲು, ಕಕ್ಕಸು ಮುಂತಾದವುಗಳನ್ನು ತೊಳೆಯುವ ಪದ್ಧತಿಯನ್ನು ನಮ್ಮ ಪಟ್ಟಣದಲ್ಲಿ ರೂಢಿಸಲಾರೆವು; ಯಾಕಂದರೆ ಅದಕ್ಕೆಲ್ಲಾ ಬಹಳ ನೀರು ಬೇಕಾಗುತ್ತದೆ. ಅಷ್ಟು ನೀರು ಈಗಿರುವ ಏರ್ಪಾಡಿನಿಂದ ಒದಗುವುದಿಲ್ಲ. ಪಟ್ಟಣದಲ್ಲೆಲ್ಲಾ ಮನೆಗಳ ಪಾಯಿಖಾನೆಯನ್ನು ಪ್ರತಿನಿತ್ಯವೂ ತೆಗೆದು ಸಾಗಿಸುವುದು ಈಗ ಸಾಧ್ಯವಿಲ್ಲ; ಇದಕ್ಕೆ ಅವಶ್ಯವಾದ ಅನುಕೂಲಗಳಾಗಲಿ ಜನಗಳಾಗಲಿ ಇಲ್ಲವೆಂದು ನಮಗೆ ತೋರುತ್ತದೆ. ಅದಕಾರಣ ಪ್ರಜೆಗಳು ವಾಸಮಾಡುವಂಥಾ ಮನೆಗಳ ಒಳ ಆರೋಗ್ಯವನ್ನು ಕಾಪಾಡಿ ವೃದ್ಧಿಮಾಡುವುದು ಬಹಳ ಪ್ರಯಾಸವಾದ ವಿಷಯ. ಈ ಭಾಗವನ್ನು ಇದುವರೆಗೆ ಯಾರೂ ತೃಪ್ತಿಕರವಾಗಿ ವ್ಯವಸ್ಥೆ ಮಾಡಿರುವುದಿಲ್ಲ. ಬೀದಿಯಲ್ಲಿರುವ ಏರ್ಪಾಡುಗಳನ್ನು ಅಲ್ಲಗಳೆಯುವುದೂ, ಖಂಡಿಸಿ ಜರೆಯುವುದೂ ಸುಲಭ; ಅದಕ್ಕಿಂತ ಉತ್ತಮವಾದ ಏರ್ಪಾಡುಗಳನ್ನು ಸೂಚಿಸಿ ರೂಢಿಸುವುದು ಬಹಳ ಪ್ರಯಾಸ.

ಮಿ|| ಮಾರ್ಕರವರು ಸೂಚಿಸಿರುವ ಭಾಗಗಳನ್ನೆಲ್ಲಾ ನಡಿಸುವುದಾದರೆ ಪಟ್ಟಣವು ತುಂಬಾ ಅಭಿವೃದ್ಧಿಗೆ ಬಂದೀತು. ಆದರೆ ಪ್ರಜೆಗಳು ಆರೋಗ್ಯ ವಿಚಾರದಲ್ಲೂ ಸ್ಯಾನಿಟೇಷನ್ ವಿಷಯದಲ್ಲೂ ತಿಳುವಳಿಕೆ ತಂದುಕೊಂಡು ವರ್ತಿಸದೆ ಹೋದ ಪಕ್ಷದಲ್ಲಿ ರಾಜಧಾನಿಯು ಚೊಕ್ಕಟವಾಗಿಯೂ ಆರೋಗ್ಯ ಜನಕವಾಗಿಯೂ ಇರಲಾರದು; ಹಾಗೆ ಮಾಡಿಡುವುದು ಯಾರಿಂದಲೂ ಸಾಧ್ಯವೂ ಅಲ್ಲ. ಈ ಭಾಗದಲ್ಲಿ ಪಟ್ಟಣದ ಅಧಿಕಾರಿಗಳನ್ನೂ ನಿಂದಿಸದೆ ಇರುವುದಕ್ಕಾಗುವುದಿಲ್ಲ. ಅಲ್ಲಲ್ಲಿ ಸೊಗಸಾದ ಪಬ್ಲಿಕ್ ಕಕ್ಕಸುಗಳನ್ನು ಕಟ್ಟಿದಾರೆ; ಇವನ್ನು ಯಾರೂ ಉಪಯೋಗಿಸದಂತೆ ಬಾಗಿಲು ಮುತ್ತಿಬಿಟ್ಟಿರುವರು. ಯಾಕಂದರೆ ಜನರು ಉಪಯೋಗಿಸಿದ ಪಕ್ಷದಲ್ಲಿ ಅವನ್ನು ತೊಳೆದು ಚೊಕ್ಕಟವಾಗಿಡಲು ನೀರೇ ಇಲ್ಲ. ಸರ್ವಸಮರ್ಪಕವಾದ ಏರ್ಪಾಡುಗಳನ್ನು ಎಂದಿಗೆ ಯೋಚಿಸಿ ಮಾಡುವರೋ ನಮಗೆ ತಿಳಿಯದು. ಇಂಥಾ ಲೋಪದೋಷಗಳು ಮೈಸೂರು, ಬೆಂಗಳೂರು ನಗರಗಳಲ್ಲಿ ಹೇರಳವಾಗಿ ಕಾಣುತ್ತವೆ. ಪಟ್ಟಣವನ್ನು ಅಂದಚಂದವಾಗಿ ಮಾಡುವುದು ಕಷ್ಟವಲ್ಲ; ಆರೋಗ್ಯ ಜನಕವಾದಂಥಾ ಪಟ್ಟಣವನ್ನು ರೂಪಿಸುವುದೇ ಮಹಾ ಪ್ರಯಾಸ. ನಿವಾಸಿಗಳಲ್ಲಿರುವ ದುರಭ್ಯಾಸಗಳನ್ನು ನೋಡುವಲ್ಲಿ ಈ ವಿಚಾರಕ್ಕೆ ಸರ್ಕಾರದವರು ತಕ್ಕಮಟ್ಟಿಗೆ ಚಿಂತೆಪಟ್ಟು ಸಾಹಸಪಡುತ್ತಿರುವಂತೆ ಕಾಣುವುದಿಲ್ಲ. ಪೋಲೀಸಿನಲ್ಲಿರುವ ಪ್ರತಿ ಒಬ್ಬನೂ, ಮ್ಯುನಿಸಿಪಾಲಿಟಿಯಲ್ಲಿರುವ ಪ್ರತಿ ಒಬ್ಬ ನೌಕರನೂ ಪ್ರಜೆಗಳಿಗೆ ಆರೋಗ್ಯಸೂತ್ರಗಳನ್ನು ಹೇಳಿಕೊಡುವ ಶಿಕ್ಷಕನಾಗಿರಬೇಕು. ಆದರೆ ಇವರುಗಳ ಕಣ್ಣೆದುರಿಗೇ ಜನರು ಹೇಸಿಕೆಯಾದ ಕೃತ್ಯಗಳನ್ನು ನಿರ್ಭಯವಾಗಿ ಮಾಡುತ್ತಾರೆ. ಇವರನ್ನು ದಂಡಿಸುವವರೇ ಇಲ್ಲ. ಪ್ರಜೆಗಳಿಗೆ ತಮ್ಮ ದೇಹಗಳನ್ನೂ, ಮನೆಗಳನ್ನೂ ನಿರ್ಮಲವಾಗಿಟ್ಟುಕೊಳ್ಳುವಿಕೆ [illegible] ಹೊರತು, ಮತ್ತು ಅವರನ್ನು ಆ ರೀತಿ ವರ್ತಿಸುವಂತೆ ಮಾಡಿದ ಹೊರತು ಎಷ್ಟು ಹಣ ಖರ್ಚುಮಾಡಿ ಎಂಥೆಂಥಾ ಅಲಂಕಾರಗಳನ್ನು ಮಾಡಿಟ್ಟಾಗ್ಯೂ ಪ್ರಜೆಗಳ ಆರೋಗ್ಯಭಾಗ್ಯವು ಏಳಿಗೆಯಾಗುವುದಿಲ್ಲ.

ದೇವರನ್ನು ಆಶ್ರಯಿಸುವುದು.

ಈ ಯುದ್ಧಕಾಲದಲ್ಲಿ ದೇವಭಕ್ತರು ದೇವರಿಗೆ ಮೊರೆಯಿಟ್ಟು—ದೇವರೇ, ಈ ಯುದ್ಧವನ್ನು ಶೀಘ್ರವಾಗಿ ನಿಲ್ಲಿಸಿ, ಯುದ್ಧಮಾಡುವುದಕ್ಕೆ ಅಪೇಕ್ಷಿಸುವವರನ್ನು ಚದರಿಸಿಬಿಡಬೇಕೆಂದು ಪ್ರಾರ್ಥಿಸಬೇಕು. ಕೆಳಗೆ ಯಹೂದ್ಯರಲ್ಲಿ ಒಬ್ಬ ಭಕ್ತನ ಪ್ರಾರ್ಥನೆಯನ್ನು ಭಾಷಿಸಿರುತ್ತೇವೆ. ಆತನು ಕಷ್ಟಕಾಲದಲ್ಲಿ ದೇವರನ್ನು ಆಶ್ರಯಿಸಿಕೊಂಡು ಸಮಾಧಾನವನ್ನು ಸಂಪಾದಿಸಿಕೊಂಡನು.

ದೇವರು ನಮಗೆ ಆಶ್ರಯದುರ್ಗವಾಗಿದ್ದಾನೆ;
ಆತನು ಇಕ್ಕಟ್ಟಿನಲ್ಲಿ ನಮಗೆ ವಿಶೇಷ ಸಹಾಯಕನು.
ಆದದರಿಂದ ಭೂಮಿಯು ನಾಶವಾದರೂ ಬೆಟ್ಟಗಳು ಸಮುದ್ರದಲ್ಲಿ ಮುಣುಗಿಹೋದರೂ ಭಯವಿಲ್ಲ.
ಸಮುದ್ರವು ಘೋಷಿಸುತ್ತಾ ನೊರೆಯನ್ನು ಕಾರಿದರೇನು?
ಅದರ ಅಲ್ಲಕಲ್ಲೋಲಗಳಿಂದ ಪರ್ವತಗಳು ಚಲಿಸಿದರೇನು?
ಒಂದು ನದಿ ಅದೆ; ಅದರ ಕಾಲುವೆಗಳು
ಪರಾತ್ಪರನ ಪರಿಶುದ್ಧನಿವಾಸಸ್ಥಾನವಾಗಿರುವ ದೇವನಗರವನ್ನು ಸಂತೋಷಪಡಿಸುತ್ತವೆ.
ದೇವರು ಇದರಲ್ಲಿದ್ದಾನೆ; ಇದಕ್ಕೆ ಚಲನವೇ ಇಲ್ಲ.
ಉದಯಕಾಲದಲ್ಲಿಯೇ ದೇವರು ಇದರ ಸಹಾಯಕ್ಕೆ ಬರುವನು.
ಜನಾಂಗಗಳು ಕಳವಳಗೊಂಡವು; ರಾಜ್ಯಗಳು ತತ್ತರಿಸಿದವು.
ಆತನು ಗರ್ಜಿಸಲು ಭೂಲೋಕವೆಲ್ಲಾ ಕರಗಿಹೋಯಿತು.
ಸೈನ್ಯಾಧೀಶ್ವರನಾದ ಯೆಹೋವನು ನಮ್ಮ ಸಂಗಡ ಇದ್ದಾನೆ.
ಯಾಕೋಬವಂಶದವರ ದೇವರು-ನಮಗೆ ಆಶ್ರಯದುರ್ಗವಾಗಿದ್ದಾನೆ.
ಬನ್ನಿರಿ, ಯೆಹೋವನ ಕಾರ್ಯವನ್ನು ನೋಡಿರಿ.
ಆತನು ಭೂಲೋಕದಲ್ಲಿ ಎಂಥಾ ಪ್ರಳಯವನ್ನು ನಡಿಸಿದ್ದಾನೆ.
ಲೋಕದ ಎಲ್ಲಾ ಭಾಗದಲ್ಲೂ ಯುದ್ಧವನ್ನು ನಿಲ್ಲಿಸಿಬಿಟ್ಟಿದ್ದಾನೆ;
ಬಿಲ್ಲುಗಳನ್ನೂ ಭಲ್ಲೆಯಗಳನ್ನೂ ಮುರಿದುಹಾಕಿದ್ದಾನೆ; ರಥಗಳನ್ನು ದಹಿಸಿಬಿಟ್ಟಿದ್ದಾನೆ.
ಬಿಡಿರಿ, ನಾನೇ ದೇವರು,
ಲೋಕದ ಸಮಸ್ತ ಜನಗಳಿಗೂ ಸರ್ವಾಧಿಪತಿಯು ನಾನೇ ಎಂದು ತಿಳಿದುಕೊಳ್ಳಿರಿ.
ಸೈನ್ಯಾಧೀಶ್ವರನಾದ ಯೆಹೋವನು ನಮ್ಮ ಸಂಗಡ ಇದ್ದಾನೆ.
ಯಾಕೋಬವಂಶದವರ ದೇವರು ನಮಗೆ ಆಶ್ರಯದುರ್ಗವಾಗಿದ್ದಾನೆ.

ಯುದ್ಧದ ಸಮಾಚಾರಗಳು.

ಜರ್ಮನಿಯವರು ಪಾರಿಸ್ ಬಳಿಗೆ ಬಂದಿದಾರೆ.

ರಷ್ಯಾದವರ ದೊಡ್ಡ ಜಯಪ್ರದ.

ಈ ವಾರ ಯುದ್ಧಭೂಮಿಯಿಂದ ಬಂದಿರುವ ವರ್ತಮಾನಗಳು ಬಹಳ ಸ್ವಲ್ಪವಾಗಿಯೂ, ಸ್ಪಷ್ಟವಾಗಿಲ್ಲದೆಯೂ ಇರೋಣದರಿಂದ ಫ್ರಾನ್ಸಿನೊಳಗೆ ನಡೆದಿರುವ ವಿದ್ಯಮಾನಗಳು ಇಷ್ಟೇ ಸರಿ ಎಂದು ತಿಳಿದು ಹೇಳುವುದು ಬಹಳ ಪ್ರಯಾಸವಾಗಿದೆ. ವಾಚಕರು ನಾವು ಕಳುಹಿಸಿರುವ ಯುದ್ಧಭೂಮಿಯ ನಕ್ಷೆಯನ್ನು ಮುಂದಿಟ್ಟುಕೊಂಡು ನಾವು ಬರೆಯುವ ಯುದ್ಧವಾರ್ತೆಗಳನ್ನು ಓದಿ ಮಂದಟ್ಟುಮಾಡಿಕೊಳ್ಳಬೇಕು. ವಿಷಯಗಳು ನಡೆದಿರುವ ಹಲವು ಸ್ಥಳಗಳ ಹೆಸರುಗಳನ್ನು ನಮ್ಮ ನಕ್ಷೆಯಲ್ಲಿ ನೋಡಬಹುದು.

ಫ್ರಾನ್ಸಿನಲ್ಲಿ.

ಕಳೆದ ವಾರ ಮತ್ತೆ 300 ಮೈಲಿಯ ವಿಸ್ತಾರವುಳ್ಳ ಲೈನಿನಲ್ಲಿ ಶತ್ರುಗಳು ಎದುರುಬಿದ್ದು ಕಠಿಣವಾಗಿ ಯುದ್ಧ ಮಾಡಿದರು. ಇದರ ಫಲಿತಾಂಶವು ನಮಗೆ ತಿಳಿದು ಬಂದಿರುವಂತೆ ಫ್ರೆಂಚರೂ ಬ್ರಿಟಿಷರೂ ಕೆಲವೆಡೆಗಳಲ್ಲಿ ಹಿಮ್ಮೆಟ್ಟಿ ಬಂದರು; ಇನ್ನು ಕೆಲವು ಸ್ಥಳಗಳಲ್ಲಿ ಶತ್ರುಗಳನ್ನು ಓಡಿಸಿ ಮುಂದರಿಸಿ ಹೋಗಿರುತ್ತಾರೆ. ನಿಶ್ಚಿತವಾದ ಜಯಾಪಜಯಗಳು ಆಗಲಿಲ್ಲ.

ಯುದ್ಧವು ಐದು ದಿನ ವಿಶ್ರಾಂತಿ ಇಲ್ಲದೆ ಜರುಗಿತು. ಜರ್ಮನಿಯವರು ಬ್ರಿಟಿಷ್ ಸೈನ್ಯವಿರುವ ಭಾಗವನ್ನೇ ಹುಡುಕಿ ಅವರ ಮೇಲೆ ನುಗ್ಗಿದರು. ಬ್ರಿಟಿಷರು ತಮ್ಮ ಸನ್ನಾಹಗಳನ್ನು ಮುಂದಕ್ಕೆ ಹಿಡಿದು ಸಾಲುಕಟ್ಟಿ ನಿಂತರು. ಜರ್ಮನಿಯವರು ಕೆಲವು ಗಂಟೆಗಳ ತನಕ ಪದೇಪದೇ ಸನ್ನಾಹಗಳ ಮೇಲೆ ರೋಷಾವೇಶದಿಂದ ನುಗ್ಗಿ ಲೈನನ್ನು ಒಡೆದು ಚದರಿಸಬೇಕೆಂದು ತುಂಬಾ ಪ್ರಯತ್ನಪಟ್ಟರು. ಆದರೆ ಬ್ರಿಟಿಷರ ಲೈನನ್ನು ಅವರು ಒಡೆಯಲಾರದೆ ಸೋತರು. ಕಡೆಗೆ ಬ್ರಿಟಿಷರು ಆ ಸ್ಥಳವನ್ನು ಬಿಟ್ಟು ಕೆಲವು ದೂರ ಹಿಂದಕ್ಕೆ ಬಂದರು.

ಲೈನಿನ ಮಧ್ಯಭಾಗದಲ್ಲಿದ್ದ ಫ್ರೆಂಚರು ಜರ್ಮನಿ ಯುವರಾಜರ ಸೈನ್ಯಕ್ಕೆ ಅವಕಾಶಕೊಡದೆ ಅವರನ್ನು ಹಿಮ್ಮೆಟ್ಟಿಸಿದ್ದಲ್ಲದೆ ಬಲಗಡೆಯಲ್ಲಿ ಸ್ವಲ್ಪ ದೂರ ಮುಂದರಿಸಿ ನುಗ್ಗಿಹೋಗಿದಾರೆ.

ಈ ಲೈನಿನ ಉದ್ದಕ್ಕೂ ಅನೇಕ ಸಣ್ಣ ಸಣ್ಣ ಕದನಗಳು ನಡೆದವು. ಒಂದು ಕಡೆ ಬ್ರಿಟಿಷ್ ಕುದುರೆ ಸೈನಿಕರು ಜರ್ಮನಿ ಕುದುರೆ ಸೈನ್ಯದ ಮೇಲೆ ನುಗ್ಗಿ ಕಡಿದಾಡಿ ಅವರನ್ನು ಓಡಿಸಿದ್ದಲ್ಲದೆ ಅವರ ಹತ್ತು ಫಿರಂಗಿಗಳನ್ನು ಕಿತ್ತುಕೊಂಡು ಬಂದರು.

ಚಾಳಿವಿಲ್ [ಇದು ನಮ್ಮ ನಕ್ಷೆಯಲ್ಲಿ ಸೆಡಾನ್ ಬಳಿ ಇದೆ] ಎಂಬಲ್ಲಿ ಮೇಸ್ ನದಿಯ 22 ಸೇತುವೆಗಳನ್ನು ಫ್ರೆಂಚರು ಒಡೆದು ಕಡೆಯ ಮೂರು ಸೇತುವೆಗಳನ್ನು ಮಾತ್ರ ಬಿಟ್ಟಿದ್ದರು. ಈ ಸೇತುವೆಗಳ ಕೆಳಗೆ ಸಮಯಬಂದಾಗ ಅವನ್ನೂ ಒಡೆದುಬಿಡುವುದಕ್ಕೆ ಸಿಡಿಮದ್ದಿನ ಗುಂಡುಗಳನ್ನು ಇಟ್ಟಿದ್ದರು. ಜರ್ಮನಿಯವರು ಈ ಸೇತುವೆಗಳನ್ನು ಹಿಡಿದು ದಾಟಿಕೊಂಡು ಬರಬೇಕೆಂದು ಅಸಂಖ್ಯಾತವಾಗಿ ನುಗ್ಗಿಬಂದರು. ಅದನ್ನು ಕಂಡ ಒಡನೆಯೇ ಫ್ರೆಂಚರು ಆ ಮೂರು ಸೇತುವೆಗಳನ್ನೂ ಮದ್ದಿನಿಂದ ಹಾರಿಸಿಬಿಟ್ಟು, ಅದುವರೆಗೆ ಸೇತುವೆ ದಾಟಿ ಬಂದಿದ್ದ ಜರ್ಮನರ ಮೇಲೆ ನುಗ್ಗಿ ಅನೇಕರನ್ನು ಕೊಲೆಮಾಡಿದರು. ಗೀಜ್ [ನಮ್ಮ ನಕ್ಷೆ ನೋಡಿ] ಎಂಬ ಸ್ಥಳದಲ್ಲಿ ಫ್ರೆಂಚರು ಜರ್ಮನಿಯ ಮೂರು ಡಿವಿಜನ್ ಸೈನ್ಯಗಳನ್ನು ಎದುರಿಸಿ ಅವರನ್ನೆಲ್ಲಾ ಚದರಿಸಿರುತ್ತಾರೆ.

ಕೆಲವು ಬ್ರಿಟಿಷ್ ಸೈನಿಕರಿಗೆ ಬಹಳ ಕಷ್ಟವಾದ ಕೆಲಸ ಬಿತ್ತು. ಒಂದು ರಿಜಿಮೆಂಟು ಐದು ದಿನಗಳಲ್ಲಿ 240 ಮೈಲಿ ದೂರ ಯುದ್ಧಮಾಡುತ್ತಲೇ ಮುಂದರಿಸಿ ನುಗ್ಗಿಹೋಗಿರುತ್ತದೆ. ಉದ್ದಕ್ಕೂ ಇವರು ಸಂಧಿಸಿದ ಜರ್ಮನಿ ಸೈನ್ಯಗಳು ಅಪಾರವಾಗಿದ್ದವು. ನಾಲ್ಕೈದು ದಿವಸಗಳಿಂದ ಬ್ರಿಟಿಷ್ ಸೈನ್ಯವು ಯುದ್ಧಮಾಡಲಿಲ್ಲ.

ಈಗ ಜರ್ಮನಿಯವರು ಪಾರಿಸ್ ನಗರದ ಸಮೀಪಕ್ಕೆ ಬಂದಿರಬೇಕು. ಫ್ರೆಂಚರು ಅವರಿಗೆ ಸಗ್ಗದೆ ಕಡೆಯ ತನಕ ಕಾದಾಡುವುದಾಗಿ ನಿಶ್ಚಯಮಾಡಿಕೊಂಡಿದಾರೆ. ಈ ಉದ್ದೇಶದಿಂದ ಅವರು ತಮ್ಮ ಗವರ್ನ್‌ಮೆಂಟನ್ನೂ, ಆಧಾರವಾದ ಖಜಾನೆಯನ್ನೂ ಪಾರಿಸ್ ನಗರದಿಂದ ಪಶ್ಚಿಮ ದಡದಲ್ಲಿರುವ ಬೋರ್ದೋ ಎಂಬ ತೀರಪಟ್ಟಣಕ್ಕೆ ಸಾಗಿಸಿಬಿಟ್ಟರು. ಮತ್ತು ಪಾರಿಸ್‌ನಲ್ಲಿರುವ ಪ್ರಜೆಗಳಿಗೆ ಸ್ಥಳಾಂತರಗಳಲ್ಲಿರುವ ಅವರವರ ಬಂಧುಗಳ ಬಳಿಗೆ ಕೆಲವು ಕಾಲ ಹೋಗಿರಬೇಕೆಂದು ಸಾರಿಸಿರುತ್ತಾರೆ. ಇದನ್ನು ಕೇಳಿ ಅನೇಕ ಪ್ರಜೆಗಳು ತಮ್ಮ ಮನೆಮಠಗಳನ್ನು ತ್ಯಜಿಸಿ ಇತರ ಕಡೆಗಳಿಗೆ ತಂಡತಂಡವಾಗಿ ಹೊರಟುಹೋದರು. ಇದರಿಂದ ಪಟ್ಟಣದೊಳಗೆ ಉಳಿದಿರುವವರಿಗೆ ಆಹಾರಾದಿಗಳನ್ನು ಒದಗಿಸಿ ಕಾಪಾಡುವುದು ಸುಲಭವಾಯಿತು. ಪಾರಿಸ್ ನಗರವನ್ನು ಬಹಳ ಬಲವಾದ ಕೋಟೆಗಳನ್ನು ಕಟ್ಟಿ ಶತ್ರುಗಳು ಭೇದಿಸದಂತೆ ಮಾಡಿಕೊಂಡಿದಾರೆ. ಈ ಕೋಟೆಗಳ ದೆಸೆಯಿಂದ ಶತ್ರುಗಳು ಪಟ್ಟಣಕ್ಕೆ ಹದಿನಾರು ಮೈಲಿಯ ಆಚೆ ಇರಬೇಕಲ್ಲದೆ ಇನ್ನೂ ಸಮೀಪಕ್ಕೆ ಬರುವುದು ಸಾಧ್ಯವಿಲ್ಲ. ಕೋಟೆಗಳಿಂದ ಶತ್ರುಗಳ ಮೇಲೆ ಎತ್ತಿಕಟ್ಟಿ ಹೊಡೆಯುವಂಥಾ ಫಿರಂಗಿಗಳಿಗೆ ಅಡಚಣೆಯೇನೂ ಉಂಟಾಗಬಾರದೆಂದು ಆ ಸುತ್ತುಮುತ್ತಿನಲ್ಲಿರುವ ಎತ್ತರವಾದ ಮನೆಮಠ ಮುಂತಾದ ಕಟ್ಟಡಗಳನ್ನು ಒಡೆದುಹಾಕಿ ಪಾಳುಕೆಡವಿದಾರೆ.

ಜರ್ಮನಿಯ ಕೆಲವು ವಿಮಾನಯಂತ್ರಗಳು ಪಾರಿಸ್ಸಿನ ಮೇಲ್ಭಾಗದಲ್ಲಿ ಹಾರಿಬಂದು ಆ ಯಂತ್ರಗಳಿಂದ ಪಟ್ಟಣದೊಳಕ್ಕೆ ಸಿಡಿಮದ್ದಿನ ಗುಂಡುಗಳನ್ನು ಇಳಿಯಬಿಟ್ಟವು. ಇವುಗಳಿಂದ ವಿಶೇಷ ನಷ್ಟವೇನೂ ಆಗಲಿಲ್ಲ. ಫ್ರೆಂಚರ ಕೆಲವು ವಿಮಾನಯಂತ್ರಗಳು ಅಂತರಿಕ್ಷಕ್ಕೆ ಹೋಗಿ ಶತ್ರುಗಳ ವಿಮಾನಗಳನ್ನು ತಡೆದು, ಅಂತರಿಕ್ಷದಲ್ಲೇ ಯುದ್ಧಮಾಡಿದವು.

ಫ್ರಾನ್ಸಿನ ಉತ್ತರ ಭಾಗದಲ್ಲಿ ಫ್ರೆಂಚರು ಕೆಲವು ಊರುಗಳಿಂದ ತಮ್ಮ ಸೈನ್ಯಗಳನ್ನು ವಾಪಸ್ ಕರಸಿಕೊಂಡಿದಾರೆ. ಫ್ರೆಂಚರು ಬುಲೋನ್, ಲೀಲ್ ಎಂಬೀ ನಗರಗಳಲ್ಲಿ [ಇವು ನಕ್ಷೆಯಲ್ಲಿವೆ] ಆ ರೀತಿ ಮಾಡಿದಾರೆ. ಜರ್ಮನಿಯವರು ಈ ನಗರಗಳನ್ನು ಆಕ್ರಮಿಸಿಕೊಂಡು, ಲೀಲ್ ಪುರನಿವಾಸಿಗಳು 12,00,00,000 ರೂಪಾಯಿ ಪ್ರತಿಫಲ ಕೊಡಬೇಕೆಂದು ಕೇಳಿರುವರು. ಇದಲ್ಲದೆ ಅವರು ಮಬೇಜ್ ಎಂಬ ಪಟ್ಟಣದ ಕೋಟೆಗೆ ಫಿರಂಗಿಗಳನ್ನು ಎತ್ತಿಕಟ್ಟಿ ಹೊಡೆಯುತ್ತಿದಾರೆ.

ಬ್ರಿಟಿಷ್ ಸೈನ್ಯದಲ್ಲಿ ಎಷ್ಟು ಮಂದಿ ನಷ್ಟಪಟ್ಟರೋ ಅದನ್ನು ಪ್ರಕಟಮಾಡಿದಾರೆ. ಮೊದಲನೇ ಯುದ್ಧದೊಳಗೆ ಹುದ್ದೇದಾರರಲ್ಲಿ 36 ಮಂದಿ ಕೊಲ್ಲಲ್ಪಟ್ಟರು, 57 ಮಂದಿಗೆ ಗಾಯಗಳಾಗಿವೆ, 95 ಮಂದಿ ಸಿಕ್ಕಿ ಇಲ್ಲ; ಸೈನಿಕರಲ್ಲಿ ಕೊಲೆಯಾದವರು 127, ಗಾಯಪಟ್ಟವರು 629, ಸಿಕ್ಕದೆ ಇರುವವರು 4,183. ಎರಡನೆಯ ಯುದ್ಧದೊಳಗೆ ಹುದ್ದೇದಾರರಲ್ಲಿ 18 ಮಂದಿ ಹತರಾದರು, 78 ಜನರಿಗೆ ಗಾಯವಾಗಿವೆ, 86 ಮಂದಿ ಸಿಕ್ಕಿ ಇಲ್ಲ; ಸೈನಿಕರಲ್ಲಿ 53 ಜನರು ಕೊಲ್ಲಲ್ಪಟ್ಟರು, 312 ಜನರು ಗಾಯಪಟ್ಟರು, 4,672 ಜನ ಸಿಕ್ಕಿ ಇಲ್ಲ. ಇವರೆಲ್ಲಾ ಒಟ್ಟು 10,345 ಮಂದಿಯಾಗುವರು ಮತ್ತು ಇತರ ಕದನಗಳಲ್ಲೂ ನಷ್ಟಪಟ್ಟವರನ್ನು ಕೂಡಿಸಿದರೆ ಬ್ರಿಟಿಷರ ಕಡೆ ನಷ್ಟವಾಗಿರುವುದು 15,000. ಈಚೆಗೆ ಇವರಿಗೆ ಬದಲಾಗಿ ಬ್ರಿಟಿಷ್ ಯುದ್ಧದ ಆಫೀಸಿನಿಂದ 19,000 ಸೈನ್ಯಗಳನ್ನು ಯುದ್ಧಭೂಮಿಗೆ ಕಳುಹಿಸಿಕೊಟ್ಟಿದಾರೆ. ಸಿಕ್ಕಿ ಇಲ್ಲವೆಂಬವರು ಏನಾದರೋ ತಿಳಿದು ಹೇಳುವುದು ಕಷ್ಟ. ಕೆಲವರು ಕೊಲೆಯಾಗಿಯೂ, ಕೆಲವರು ಗಾಯಪಟ್ಟೂ, ಅನೇಕರು ಶತ್ರುಗಳಿಗೆ ಕೈಸೆರೆ ಸಿಕ್ಕಿಯೂ ಇರಬೇಕು. ಈ ಪೈಕಿ ಅನೇಕ ಮಂದಿ ವಾಪಸು ತಮ್ಮ ತಮ್ಮ ರೆಜಿಮೆಂಟಿಗೆ ಬಂದು ಸೇರಿಕೊಳ್ಳುವರು. ಗಾಯಪಟ್ಟಿರುವವರಲ್ಲಿ ನಮ್ಮ ಘನವನ್ನೈದಿದ ವೈಸ್‌ರಾಯ್ ಲಾರ್ಡ್ ಹಾರ್ಡಿಂಗ್‌ರವರ ಕುಮಾರರೂ ಒಬ್ಬರಾಗಿದಾರೆ. ಅವರಿಗೆ ಇಂಥಾ ಆಪತ್ತು ಸಂಭವಿಸಿತೆಂದು ನಾವುಗಳೆಲ್ಲಾ ಬಹಳವಾಗಿ ಮರುಗುವೆವು. ಈ ಕುಮಾರರು ಬೇಗನೆ ಆರೋಗ್ಯಹೊಂದಲೆಂದು ಪ್ರಾರ್ಥಿಸುತ್ತೇವೆ. ಒಂದು ತಂತೀ ವರ್ತಮಾನವು ಅವರಿಗೆ ಬಹು ಕಠಿಣವಾದ ಗಾಯವಾಗಿದೆ ಎಂದೂ, ಆದರೂ ಗಾಯವು ವಾಸಿಯಾಗುತ್ತಿದೆ ಎಂದೂ ಹೇಳುವುದು. ಗಾಯಪಟ್ಟವರಲ್ಲಿ ಸುಮಾರು 800 ಸೈನಿಕರನ್ನು ಕರೆದುತಂದು ಲಂಡನ್ ಪಟ್ಟಣದಲ್ಲಿ ಚಿಕಿತ್ಸೆ ಉಪಚಾರಾದಿಗಳನ್ನು ಮಾಡಿಸುತ್ತಿದಾರೆ. ಗುಂಡಿನೇಟು ತಗಲಿದವರು ಬಹಳ ಕೊಂಚ ಮಂದಿ. ಉಳಿದವರೆಲ್ಲಾ ನಿಲುಗಡೆ ಇಲ್ಲದೆ ವಿಶೇಷ ಕಾಲು ನಡಿಗೆ ಹೋದದ್ದರಿಂದ ಕಾಲುಗಳು ಬಾತುಕೊಂಡು ಬಾಧೆಯಾಗಿರುತ್ತದೆ.

ಯುದ್ಧಭೂಮಿಯಲ್ಲಿ ಇಂಗ್ಲಿಷ್ ಮತ್ತು ಜರ್ಮನಿ ಡಾಕ್ಟರುಗಳು ಅನ್ಯೋನ್ಯವಾಗಿ ಗಾಯಪಟ್ಟವರಿಗೆ ಚಿಕಿತ್ಸೆಗಳನ್ನು ಮಾಡುತ್ತಾ, ಔಷಧಾದಿಗಳನ್ನು ಪರಸ್ಪರ ಕೊಟ್ಟು ತರಿಸಿಕೊಳ್ಳುತ್ತಿದಾರೆಂದು ತಿಳಿಸಲು ಸಂತೋಷವಾಗುತ್ತದೆ.

ಫ್ರಾನ್ಸಿನ ಪೂರ್ವಭಾಗದಲ್ಲಿ ಬಹು ಕಠಿಣವಾದ ಕದನಗಳಾಗಬಹುದೆಂದು ಕಾಣುತ್ತದೆ. ಆ ಪ್ರದೇಶದಲ್ಲಿ 7,50,000 ಜರ್ಮನಿ ಸೈನ್ಯಗಳು ಸೇರಿರುವವು. ಜರ್ಮನಿಯವರು ಮೆಕ್ಲೆಂಬರ್ಗ್ ಎಂಬ ಪ್ರಾಂತ್ಯದಿಂದ ಬಂದ ಸೈನ್ಯದಲ್ಲಿ ಮಾತ್ರ 20,000 ಮಂದಿ ಯುದ್ಧದಲ್ಲಿ ನಷ್ಟಪಟ್ಟರು ಎಂದು ಒಪ್ಪಿಕೊಂಡಿದಾರೆ. ಒಂದು ತಂತೀ ವರ್ತಮಾನದಿಂದ 62,000 ಜರ್ಮನಿಯವರು ಫ್ರಾನ್ಸಿನಲ್ಲಿಯೇ ಮೃತಪಟ್ಟರೆಂದು ತಿಳಿಯುತ್ತದೆ.

ಬೆಲ್ಜಿಯಂನಲ್ಲಿ.

ಜರ್ಮನಿಯವರು ಬೆಲ್ಜಿಯಂ ರಾಜಧಾನಿಯಾದ ಬ್ರಸೆಲ್ಸ್ ನಗರವನ್ನು ಸ್ವಾಧೀನಪಡಿಸಿಕೊಂಡಿದಾರಷ್ಟೆ. ಅವರು ಅಲ್ಲಿನ ಪ್ರಜೆಗಳನ್ನು ಹಿಂಸಿಸಿ ಅವರಿಂದ ಆಹಾರಪದಾರ್ಥಗಳನ್ನು ಒದಗಿಸಿಕೊಳ್ಳುತ್ತಿದಾರೆ. ಆದರೆ ಪಟ್ಟಣದೊಳಗೆ ಪದಾರ್ಥಗಳು ಸಿಕ್ಕುತ್ತದು ಬಹಳ ಪ್ರಯಾಸವಾಗಿರೋಣದರಿಂದ ಕ್ಷಾಮವೇ ಪ್ರಾಪ್ತವಾದಂತಾಗಿದೆ.

ಜರ್ಮನಿಯವರು ಅಂತ್ವಾರ್ಪಿಗೂ ಓಸ್ಟೆಂಡ್ ಎಂಬ ತೀರಪಟ್ಟಣಕ್ಕೂ ಹೋಗಿಬರುವ ರೈಲ್ ರಸ್ತೆಯನ್ನು ಕಡಿದು ಹಾಳುಮಾಡಬೇಕೆಂದು ಪ್ರಯತ್ನ

ತ್ತಾರು. [ಇವೆರಡು ಸ್ಥಳಗಳನ್ನೂ ನಮ್ಮ ನಕ್ಷೆಯಲ್ಲಿ ಕಾಣಿಸಿದೆ.] ಆ ಪ್ರಾಂತ್ಯ ದ ಭೂಮಿಯು ಸಮುದ್ರಕ್ಕಿಂತ ಬಹಳ ತಗ್ಗಿನಲ್ಲಿರುವುದಾದಕಾರಣ ಬೆಲ್ಜಿಯನ್ನರು ಸಮುದ್ರಕ್ಕೆ ಹಾಕಿದ್ದ ಅಡ್ಡಗಟ್ಟೆಯನ್ನು ಕತ್ತರಿಸಿ ಬಿಟ್ಟರು. ಸಮುದ್ರದ ನೀರು ಆ ಪ್ರದೇಶಕ್ಕೆಲ್ಲಾ ನುಗ್ಗಿ ಪ್ರಳಯವಾಗಿದೆ. ಜರ್ಮನಿಯವರು ಆ ನೀರಿನ ಮಧ್ಯೆ ಸಿಕ್ಕಿಕೊಂಡಿರುವ ತಮ್ಮ ಫಿರಂಗಿಗಳನ್ನು ಹೊರಕ್ಕೆ ಸಾಗಿಸಬೇಕೆಂದು ಬಹಳ ಸಾಹಸಪಟ್ಟರು ; ಇದು ಸಾಧ್ಯವಾಗದೆ ಹೋಯಿತು. ಇದಲ್ಲದೆ ಆಂಟ್ವರ್ಪ್ ಕೋಟೆಯಿಂದ ಬೆಲ್ಜಿಯನ್ನರು ಹೊಡೆದ ಫಿರಂಗಿ ಗುಂಡುಗಳು ಬಿದ್ದು ಹೊರಗಿದ್ದ ಬಹುಜನ ಜರ್ಮನಿಯವರು ಮೃತಪಟ್ಟರು. ರಾಜಧಾನಿಯಾದ ಬ್ರಸೆಲ್ಸ್ ನಗರದ ಬಳಿ ನಡೆದ ಕದನದಲ್ಲಿ ಜರ್ಮನಿಯವರಲ್ಲಿ 3,000 ಮಂದಿ ನಷ್ಟವಾದರು. ಬೆಲ್ಜಿಯಂ ದೇಶದೊಳಕ್ಕೆ ನುಗ್ಗಿ ಬಂದಿರುವ ಜರ್ಮನ ಸೈನಿಕರು ಕ್ರಮವಾದ ಸೈನಿಕರಲ್ಲ. ಇವರು ಮೊದಲು ಸೈನ್ಯದಲ್ಲಿದ್ದು ಈಚೆಗೆ ಇತರ ಕೆಲಸಕಾರ್ಯಗಳಲ್ಲಿ ಇದ್ದವರು. ಇದರಿಂದ ಜರ್ಮನಿಯವರು ತಮ್ಮ ಪ್ರಜೆಗಳನ್ನೆಲ್ಲಾ ಸೈನಿಕರಾಗಿ ಉಪಯೋಗಿಸಿಕೊಂಡಿದ್ದಾರೆಂದು ಗೊತ್ತಾಗುತ್ತದೆ.

ಜರ್ಮನ ಕಡೆಯ ವಿಮಾನ ಯಂತ್ರಗಳು ಆಂಟ್ವರ್ಪ್ ನಗರದ ಮೇಲೆ ಸಂಚಾರಮಾಡಿಕೊಂಡು ಹೋಗಿ ಕೆಲವು ಸಿಡಿಮದ್ದಿನ ಗುಂಡುಗಳನ್ನು ಪಟ್ಟಣದೊಳಕ್ಕೆ ಇಳೀ ಬಿಟ್ಟವು. ಇದರಿಂದ ವಿಶೇಷ ನಷ್ಟವೇನೂ ಆಗಲಿಲ್ಲ. ಆದರೂ ಆ ಗುಂಡುಗಳೊಳಗಿದ್ದ ಚರೆಗಳು ತಗಲಿದರೆ ಬಹು ಭಯಂಕರವಾದ ಗಾಯವನ್ನುಂಟುಮಾಡುವವು.

ಜರ್ಮನಿಯವರು 1,000 ಬೆಲ್ಜಿಯನ್ ಪ್ರಜೆಗಳನ್ನು ಹಿಡಿದು ತಮ್ಮ ದೇಶದಲ್ಲಿ ಕಠಿಣ ಕೆಲಸಗಳನ್ನು ಮಾಡುವುದಕ್ಕಾಗಿ ರವಾನೆ ಮಾಡಿದರು. ಇದರಿಂದಲೂ ಜರ್ಮನಿಯು ತನ್ನ ಪ್ರಜೆಗಳನ್ನೆಲ್ಲಾ ಯುದ್ಧಕ್ಕಾಗಿ ವಿನಿಯೋಗಿಸಿಕೊಂಡಿದೆ ಎಂದೂ, ಸೋಲದಿರುವುದಕ್ಕೆ ಏನು ಬೇಕಾದರೂ ಮಾಡಲು ಸಿದ್ಧವಾಗಿದೆ ಎಂದೂ ಗೊತ್ತಾಗುವುದು

ಬೆಲ್ಜಿಯಂ ರಾಜ್ಯದ ಮಹಾರಾಣೀರವರು ಇಂಗ್ಲಾಂಡಿಗೆ ಬಂದು ಲಾರ್ಡ್ ಕರ್ಜನ್‌ರವರ ಬಂಗಲೆಯಲ್ಲಿರುತ್ತಾರೆ

ರಷ್ಯಾ ಮತ್ತು ಆಸ್ಟ್ರಿಯಾ.

ಆಸ್ಟ್ರಿಯದವರು ರಷ್ಯಾದೊಳಕ್ಕೆ ಲೂಬ್ಲಿನ್ ಕಡೆ ನುಗ್ಗಿ ಹೋಗಿರುವಂತೆ ಕಾಣುತ್ತದೆ. ಲೂಬ್ಲಿನ್ ಮತ್ತು ಲೆಂಬರ್ಗ್ [ಇವೆರಡು ಸ್ಥಳಗಳೂ ನಮ್ಮ ನಕ್ಷೆಯಲ್ಲಿವೆ] ಇವೆರಡರ ನಡುವೆಯೂ, ಲೆಂಬರ್ಗಿನ ಪೂರ್ವಕ್ಕೂ ಏಳು ದಿನ ಯುದ್ಧವಾಯಿತು. ಇದರಲ್ಲಿ ರಷ್ಯಾದವರು ಆಸ್ಟ್ರಿಯದವರನ್ನು ಸಂಪೂರ್ಣವಾಗಿ ಸೋಲಿಸಿಬಿಟ್ಟರು. ಆಸ್ಟ್ರಿಯಾದವರ ಕಡೆ 4 ಅಥವಾ 6 ಲಕ್ಷ ಸೈನ್ಯವಿತ್ತೆಂದೂ, ಈ ಸೈನ್ಯವೆಲ್ಲಾ ನಾಶವಾಡಲ್ಪಟ್ಟಿತೆಂದೂ ತಿಳಿಯುವುದು. ಸೆಪ್ಟಂಬರ್ ತಾ 4 ನೇ ಶುಕ್ರವಾರ ರಷ್ಯಾದವರು ಲೆಂಬರ್ಗನ್ನು ಸ್ವಾಧೀನಪಡಿಸಿಕೊಂಡರು. ಆಸ್ಟ್ರಿಯಾ ಸೈನ್ಯದಲ್ಲಿ ಕೊಲೆಯಾದವರೂ ಗಾಯಪಟ್ಟವರೂ 20,000 ಮಂದಿ ಎಂದೂ, 70,000 ಸೈನ್ಯವನ್ನು ರಷ್ಯಾದವರು ಕೈಸೆರೆ ಹಿಡಿದುಕೊಂಡರೆಂದೂ ಹೇಳಲಾಗಿದೆ ಒಂದು ಕಡೆ 4,700 ಆಸ್ಟ್ರಿಯಾ ಸೈನ್ಯದ ಜನಗಳನ್ನು ಮುಚ್ಚು ಮಾಡಿದರು ಅವರ 160 ಫಿರಂಗಿಗಳೂ, ಅಪಾರವಾದ ಯುದ್ಧಸಾಮಗ್ರಿಗಳೂ ರಷ್ಯಾದವರ ವಶವಾದವು ರಷ್ಯಾದವರು ನುಗ್ಗಿ ಸೈನ್ಯಸಾಲುಗಳನ್ನು ಒಡೆದು ಹಾಕಿದ ಮೇಲೆ ಆಸ್ಟ್ರಿಯಾ ಸೈನ್ಯವೆಲ್ಲಾ ಗಾಬರಿಬಿದ್ದು ಚೆಲ್ಲಾಪಿಲ್ಲಿಯಾಗಿ ಚದರಿಹೋಯಿತು.

ಆಸ್ಟ್ರಿಯಾ ಸೈನ್ಯವು ಮೊದಲು ಸರ್ವಿಯದವರ ಕೂಡ ಕಡಿದಾಡಿ ಬಹಳ ನಿಷ್ಪಟ್ಟು ಹಟ್ಟಾಗಿತ್ತು ; ಈಗ ಉಳಿದವರನ್ನು ರಷ್ಯಾದವರು ಹತಮಾಡಿ ಅವರ ಅಹಂಕಾರವನ್ನು ಮುರಿದುಬಿಟ್ಟರು. ಆಸ್ಟ್ರಿಯಾದವರಲ್ಲಿ ಕೆಲವು ಸೈನಿಕರಿಗೆ ಕದನಕ್ಕೆ ಹೋಗುವುದು ಇಷ್ಟವಿಲ್ಲವೆಂದು ಕಾಣುತ್ತದೆ. ಯಾಕೆಂದರೆ ಆಸ್ಟ್ರಿಯಾ ರಾಜಧಾನಿಯಾದ ವಿಯೆನ್ನಾ ಪಟ್ಟಣದೊಳಗೆ ತ್ಸರ್ ಎಂಬ ಎರಡು ರೆಜಿಮೆಂಟ್ ಸೈನಿಕರು ಹುಕ್ತೇದಾರರ ಮಾತು ಕೇಳದೆ ಪ್ರತಿಭಟಿಸಿದ್ದರಿಂದ ಅವರಲ್ಲಿ ಮುಖ್ಯರಾದವರನ್ನು ಅಧಿಕಾರಿಗಳು ಹಿಡಿಸಿ ಗುಂಡಿನಿಂದ ಹೊಡಿಸಿ ಕೊಲ್ಲಿಸಿಬಿಟ್ಟರು. ಆಸ್ಟ್ರಿಯಾ ಸೈನ್ಯವು ಕ್ಷಯಿಸಿ ಶಟ್ಟಾಗಿರುವ ಪಕ್ಷದಲ್ಲಿ ರಷ್ಯಾದವರು ಉತ್ತರ ಆಸ್ಟ್ರಿಯಾದೊಳಗೆ ನುಗ್ಗಿ ಹೋಗಿ ಅಲ್ಲಿಂದ ಮುಂದೆ ಜರ್ಮನಿಯನ್ನು ಪ್ರವೇಶಿಸುವುದು ಬಹಳ ಸುಲಭವಾಗುತ್ತದೆ.

ರಷ್ಯಾ ಮತ್ತು ಜರ್ಮನಿ.

ಸಬ್‌ಮೇರಿನ್ ಎಂಬ ಹಡಗು ಜರ್ಮನಿಯವರ ಒಂದು ವಿಮಾನಯಂತ್ರವನ್ನು ಸ್ವಾಧೀನಪಡಿಸಿಕೊಂಡಿದೆ. ಆ ವಿಮಾನವು ಯಾವಾಗಲೋ ಸಮುದ್ರದ ಮೇಲೆ ಬಿದ್ದು 20 ಗಂಟೆ ಹೊತ್ತಿನಿಂದ ತೇಲಿಕೊಂಡು ಹೋಗುತ್ತಿತ್ತು. ಬ್ರಿಟಿಷರು ಆ ವಿಮಾನವನ್ನು ಮುಳುಗಿಸಿಬಿಟ್ಟು, ಅದರಲ್ಲಿದ್ದ ಇಬ್ಬರನ್ನು ಹಾರಿಚ್ [ನಮ್ಮ ನಕ್ಷೆ ನೋಡಿ] ಎಂಬ ಇಂಗ್ಲೆಂಡಿನ ಪೂರ್ವತೀರ ಪಟ್ಟಣಕ್ಕೆ ಹಿಡಿದುಕೊಂಡು ಬಂದಿದ್ದಾರೆ.

ಜಪಾನ್ ಮತ್ತು ಜರ್ಮನಿ.

ಜಪಾನ್‌ನರು ಚೀಣೆಯಲ್ಲಿ ಜರ್ಮನಿಯವರ ಸ್ವಾಸ್ಥ್ಯದ ಹೊರಬಾಕ್ಸೇಕ್ಕೆ 2,000 ಸೈನ್ಯಗಳನ್ನು ಜಹಜುಗಳ ಮೇಲೆ ತಂದು ಇಳಿಸಿರುತ್ತಾರೆ. ಬಹುಶಃ ಇದುವರೆಗೆ ಯುದ್ಧವೇನೂ ನಡೆದಿರುವಂತೆ ಕಾಣುವುದಿಲ್ಲ. ಅಲ್ಲಿರುವ ಏಳು ಸಣ್ಣ ದ್ವೀಪಗಳನ್ನು ಜಪಾನ್‌ನವರು ಸ್ವಾಧೀನಪಡಿಸಿಕೊಂಡಿದಾರೆ.

ಇಂಗ್ಲೆಂಡು.

ಗ್ರೇಟ್ ಬ್ರಿಟನ್‌ನಲ್ಲಿ ಸೈನ್ಯವನ್ನು ಹೆಚ್ಚಿಸಬೇಕೆಂದು ಸಂಕಲ್ಪ ಮಾಡಿಕೊಂಡು ಅದಕ್ಕಾಗಿ ಜನರನ್ನು ಸೇರಿಸಿಕೊಳ್ಳುತ್ತಿದಾರೆ. ಇದುವರೆಗೆ 3,00,000 ಜನರು ಸೇನೆಗೆ ಸೇರಿಕೊಂಡು ತರಬೇತಾಗುತ್ತಿರುವರು. ಇವರು ಯುದ್ಧಭೂಮಿಗೆ ಹೋಗಿ ಶತ್ರುಗಳ ಮೇಲೆ ಕಡಿದಾಡುವಂತಾಗುವುದಕ್ಕೆ ಒಂದೆರಡು ತಿಂಗಳು ತರಪೇತಾಗಬೇಕು ಬ್ರಿಟಿಷರು 36 ವಿಮಾನಯಂತ್ರಗಳನ್ನು ಇಂಗ್ಲಿಷ್ ಕಡಲನ್ನು ದಾಟಿಸಿ ಯುದ್ಧಕಾರ್ಯಗಳಲ್ಲಿ ಸಹಾಯಮಾಡುವಂತೆ ಕಳುಹಿಸಿಕೊಟ್ಟರು.

ಪ್ರಿನ್ಸ್ ಆಫ್ ವೇಲ್ಸ್ ರವರು ಪ್ರಾರಂಭಮಾಡಿರುವ ಯುದ್ಧದ ರಿಲೀಫ್ ಫಂಡಿಗೆ ಇದುವರೆಗೆ ಚಂದಾ ವಸೂಲಾಗಿರುವುದು ಮೂರು ಕೋಟಿ ರೂಪಾಯಿ.

ಗ್ರೇಟ್ ಬ್ರಿಟನ್ ರಾಜ್ಯಭಾರದ ಪ್ರಧಾನ ಮಂತ್ರಿಯಾದ ಮಿ|| ಆಸ್ಕಿತ್ ರವರು ಕಳೆದ ಶುಕ್ರವಾರ ಲಂಡನ್ ಪಟ್ಟಣದ ಗಿಲ್ಡ್‌ಹಾಲ್ ಎಂಬ ಸಭಾಮಂದಿರದಲ್ಲಿ ಸಾವಿರಾರು ಇಂಗ್ಲಿಷ್ ಪ್ರಜೆಗಳ ಮಧ್ಯೆ ನಿಂತು ವಿಶೇಷವೂ ಅಪೂರ್ವವೂ ಆದ ಭಾಷಣವನ್ನು ಮಾಡಿದರು. ಅದರ ಮುಖ್ಯಾಶಯವೇನೆಂದರೆ—ಬ್ರಿಟನ್ ರಾಜ್ಯವು ಈ ಯುದ್ಧವನ್ನು ಕೊನೆಯ ತನಕ ನಡಿಸಿಯೇ ಬಿಡುವುದಾಗಿ ಸಂಕಲ್ಪಮಾಡಿಕೊಂಡಿದೆ. ಹಿಂದುಸ್ಥಾನವು ಬಹಳ ಬೇಗನೆ ಚಕ್ರಾಧಿಪತ್ಯಕ್ಕೆ ಸಹಾಯ ಮಾಡಿ ಬೆಂಬಲ ಕೊಡುತ್ತಿರುವುದು. ಪ್ರತಿ ಸಂಗಡದವರೂ, ಎಲ್ಲಾ ಮತಸ್ಥರೂ, ಬ್ರಿಟಿಷರೂ, ದೇಶೀಯರೂ, ಸಾಮಂತ ಅರಸುಗಳೂ, ಸಾಮಾನ್ಯ ಪ್ರಜೆಗಳೂ, ಹಿಂದುಗಳೂ, ಮಹಮದಿಯರೂ ಈ ಕಷ್ಟಕಾಲದಲ್ಲಿ ಸಾರ್ವಭೌಮ ಸರ್ಕಾರದವರಿಗೆ ಸಹಾಯ ಮಾಡಬೇಕೆಂಬ ಕುತೂಹಲದಿಂದ ಮೇಲಾಡುತ್ತಿದಾರೆ. ಹಿಂದುಸ್ಥಾನದ ಸೈನದ ಸೈಕಿ ಉತ್ತಮೋತ್ತಮವಾದ ಎರಡು ಡಿವಿಜನ್ ಸೈನ್ಯಗಳು ಅಲ್ಲಿಂದ ಹೊರಟು ಯುದ್ಧಭೂಮಿಗೆ ಬರುತ್ತಿರುವವು ಅವರ ಈ ಸಹಾಯವನ್ನು ನೋಡಿ ನಾವುಗಳೆಲ್ಲಾ ಅವರನ್ನು ಪ್ರೀತಿಸಿ ಕೊಂಡಾಡುವೆವು. ನಮ್ಮ ಬ್ರಿಟಿಷ್ ಸಾಮ್ರಾಜ್ಯದಲ್ಲಿ ನಾವು ದೇಶ ಜಾತಿ ಕುಲಗಳ ತಾರತಮ್ಯವನ್ನು ಇಟ್ಟುಕೊಂಡಿಲ್ಲ. ಸಕಲ ಜನಾಂಗಗಳಿಗೆ ಸೇರಿದ ನಮ್ಮ ಸಮಸ್ತ ಪ್ರಜೆಗಳನ್ನೂ ಏಕರೀತಿಯಾಗಿ ಕಾಣುತ್ತಾ ಪರಿಪಾಲಿಸಿಕೊಂಡು ಬಂದಿರುತ್ತೇವೆ ಅವರಾಗಿಯೇ ಉತ್ಸಾಹಪಟ್ಟು ಈಗ ನಮಗೆ ಸಹಾಯ ಮಾಡಲು ಬಂದಿರುವುದರಿಂದ ಅವರನ್ನು ನಮ್ಮ ಬ್ರಿಟಿಷ್ ಸೈನಿಕರ ಅಕ್ಕಪಕ್ಕಗಳಲ್ಲಿ ನಿಲ್ಲಿಸಿಕೊಂಡು ಶತ್ರುಗಳ ಮೇಲೆ ಯುದ್ಧಮಾಡಲು ಕಳುಹಿಸುವೆವು. ಇದಲ್ಲದೆ ನಮ್ಮ ಬ್ರಿಟಿಷ್ ಚಕ್ರಾಧಿಪತ್ಯದ ಇತರ ಸ್ವಾಸ್ಥ್ಯಗಳಿಂದಲೂ ಸೈನ್ಯ ಮುಂತಾದ ಸಹಾಯ ಹೇರಳವಾಗಿ ದೊರಕಿದೆ. ಇದರಿಂದ ನಮ್ಮ ಚಕ್ರಾಧಿಪತ್ಯದ ಸಾರ್ವತ್ರಿಕವಾದ ಮನಸ್ಸು ಒಂದೇ ಆಗಿದೆ ಎಂದೂ, ಪ್ರಪಂಚವೆಲ್ಲಾ ಆಯುಧಪಾಣಿಯಾಗಿ ಬಂದು ನಿಂತಾಗ್ಯೂ ನಮ್ಮ ಚಕ್ರಾಧಿಪತ್ಯದಲ್ಲಿ ಹಬ್ಬಿಕೊಂಡಿರುವ ಅನುರಾಗದ ಬಳ್ಳಿಯನ್ನು ನಾಶಪಡಿಸುವುದಕ್ಕಾಗಲಿ ಕಡಿದುಹಾಕುವುದಕ್ಕಾಗಲಿ ಎಂದಿಗೂ ಸಾಧ್ಯವಾಗುವುದಿಲ್ಲವೆಂಬ ಅಂಶವು ಈಗ ಚೆನ್ನಾಗಿ ದೃಢಪಟ್ಟಿದೆ ಎಂದೂ ಅಪ್ಪಣೆಕೊಡಿಸಿರುತ್ತಾರೆ.

ಸಾರ್ವಭೌಮ ಸರ್ಕಾರದ ಹಿಂದುಸ್ಥಾನ್ ಯುದ್ಧದ ಫಂಡು.

ಮೈಸೂರು ಶಾಖೆ.

ಮೇಲ್ಕಂಡ ರಿಲೀಫ್ ಫಂಡಿಗೆ ಹಣವನ್ನು ಜೊತೆಮಾಡುವುದಕ್ಕೆ “ವೃತ್ತಾಂತ

ಊಹಾಶಕ್ತಿಯಿಂದಲೆ ಸ್ವಂತವಾಗಿ ತಯಾರ್ಮಾಡಿರುತ್ತಾರೆ. ಇದರ ಹಾಡುಗಾರಿಕೆಯನ್ನು ಕೇಳಲು ಬಹಳ ಇಂಪಾಗಿರುತ್ತೆ.

* * *

ರಾಜಧಾನಿಯಲ್ಲಿ ಪ್ಲೇಗ್ ಉಪದ್ರವು ಹೆಚ್ಚಿ ಹರಡದಂತೆ ಮಾಡುವುದಕ್ಕಾಗಿ ಸರ್ಕಾರದವರು ಮ|| ಎಂ. ಜಗನ್ನಾಥಯ್ಯನವರನ್ನು ಮ್ಯುನಿಸಿಪಾಲಿಟಿಗೆ ಕಳುಹಿಸಿದಾರೆ. ಇವರು ದಿನವೂ ಮಧ್ಯಾಹ್ನದ ಮೇಲೆ ಟೌನ್ ಹಾಲಿನಲ್ಲಿ ಇನಾಕ್ಯುಲೇಷನ್ ಮಾಡುವರು. ಇದುವರೆಗಾಗಲೇ ನೂರಾರು ಮಂದಿ ಹಾಕಿಸಿಕೊಂಡಿದಾರೆ. ಕೆಲವರು ಒಂದು ಕಡೆ ಸೇರಿ ಪ್ಲೇಗ್ ಚಿಚುಬು ಹಾಕಿಸಿಕೊಳ್ಳುವುದಾಗಿ ತಿಳಿಸಿದರೆ ಡಾಕ್ಟರು ಅಂಥಾ ಸ್ಥಳಗಳಿಗೂ ಹೋಗುತ್ತಾರೆ.

* * *

ಶ್ರೀಮನ್ ಮಹಾರಾಜರವರು ದಯಮಾಡಿ ಮ|| ಸಾಹುಕಾರ್ ಬಸವಯ್ಯನವರು ಕಟ್ಟಿಸುವ ಸ್ಕೂಲಿಗೆ ಅಸ್ತಿಭಾರವನ್ನು ಹಾಕಿದಾಗ್ಗೆ ಮ|| ಅಂಬಳೆ ಅಣ್ಣಯ್ಯ ಪಂಡಿತರು ಕೆನ್ನೇಗೌಡನ ಕೊಪ್ಪಲಿನ ಪಟೇಲ್ ರಂಗೇಗೌಡನನ್ನು ಮಹಾರಾಜರವರಿಗೆ ಭೇಟಿಮಾಡಿಸಿ, ಆತನು ಕೊಪ್ಪಲಲ್ಲಿ ಸ್ವಂತ ಹಣವನ್ನು ಖರ್ಚುಮಾಡಿ ಒಂದು ದೊಡ್ಡ ಸ್ಕೂಲನ್ನು ಕಟ್ಟಿಸಿಕೊಡುವುದಕ್ಕೆ ಒಪ್ಪಿರುತ್ತಾನೆಂದು ಅರಿಕೆಮಾಡಿದಾಗ ಮಹಾರಾಜರು ಲಾಲಿಸಿ ಬಹಳ ಸಂತೋಷವೆಂದು ಅಪ್ಪಣೆಕೊಡಿಸಿದರು.

* * *

ಮೊನ್ನೆ ಮಂಗಳವಾರ ನಮ್ಮ ಬ್ರಿಟಿಷ್ ರೆಸಿಡೆಂಟರು ತಮ್ಮ ಕುಮಾರ್ತೆಯನ್ನು ಬೆಂಗಳೂರಿನಲ್ಲಿ ಸೈನ್ಯದ ಹುದ್ದೇದಾರರಾಗಿರುವ ಮಿ|| ಟಾಮ್ಲಿನ್‌ಸನ್‌ರವರಿಗೆ ಕೊಟ್ಟು ವಿವಾಹಮಾಡಿದರು. ವಿವಾಹಕಾಲದಲ್ಲಿ ಬಹುಮಂದಿ ಯೂರೋಪಿಯನ್ ಮತ್ತು ದೇಶೀಯ ದೊಡ್ಡ ಮನುಷ್ಯರೂ ಅಧಿಕಾರಿಗಳೂ ಹೋಗಿದ್ದು ದಂಪತಿಗಳಿಗೆ ಶ್ರೇಯಸ್ಸನ್ನು ಬಯಸಿ ನಾನಾ ಶ್ರೇಷ್ಠವಸ್ತುಗಳನ್ನು ಉಡುಗೊರೆಯಾಗಿ ಕೊಟ್ಟರು. ನೂತನ ದಂಪತಿಗಳು ರಾಜಧಾನಿಯಲ್ಲಿ 8-10 ದಿನಗಳ ತನಕ ಗವರ್ನ್‌ಮೆಂಟ್ ಹೌಸ್ ಎಂಬ ಬಂಗಲೆಯಲ್ಲಿ ಇರುವುದಕ್ಕೆ ಏರ್ಪಾಡಾಗಿದೆ.

* * *

ಬೆಂಗಳೂರು ಶ್ರೀನಿವಾಸ ಮಂದಿರದ ಸ್ತ್ರೀಶಾಖೆಯ ವಿಂಟಿಂಗಿನಲ್ಲಿ ಕಳೆದ ಶನಿವಾರ ಶ್ರೀಮತಿ ಮಹಲಕ್ಷ್ಮಮ್ಮನವರು ಸದ್ಗುಣ ಮತ್ತು ಸದ್ಭಕ್ತಿಬೋಧನೆಯ ವಿಷಯವಾಗಿ ತುಂಬಾ ಸ್ವಾರಸ್ಯವಾದ ಉಪನ್ಯಾಸವನ್ನು ಓದಿದರು. ಬಳಿಕ ಸೆಕ್ರಿಟರಿಯವರು ತಾ. 12 ನೇ ಶನಿವಾರ ಮಹಿಳೆಯರ ದೊಡ್ಡ ಸಭೆ ಜರುಗುವುದೆಂದೂ, ಬ್ರಿಟಿಷ್ ರೆಸಿಡೆಂಟರವರ ಪತ್ನೀರವರು ಸಭೆಯ ಅಗ್ರಾಸನವನ್ನು ವಹಿಸುತ್ತಾರೆಂದೂ, ಈಗಿನ ಯುದ್ಧಪ್ರಕರಣಕ್ಕಾಗಿ ದೇಶೀಯ ಸ್ತ್ರೀಯರು ಯಾವ ರೀತಿಯಲ್ಲಿ ತಮ್ಮ ರಾಜಭಕ್ತಿ ಪ್ರೀತಿ ಅನುತಾಪಗಳನ್ನು ಪ್ರಕಾಶಪಡಿಸುವರೋ ಅದನ್ನು ಗೊತ್ತುಮಾಡಲಾಗುವುದೆಂದೂ ಹೇಳಿದರು.

* * *

ಈ ಸಲ ರಾಜಧಾನಿಯ ಸಂಸ್ಕೃತ ಪಾಠಶಾಲೆಯಲ್ಲಿ ವಿದ್ವತ್ ಪರೀಕ್ಷೆಗಳೆಲ್ಲಾ ಪೂರೈಸಿದ ಬಳಿ ಅರಮನೆ ಕಂಟ್ರೋಲರವರ ಪ್ರೋತ್ಸಾಹದಿಂದ ಅದೇ ಪಾಠಶಾಲೆಯಲ್ಲಿ ಕೆಲವರು ವಿದ್ವಾಂಸರು ಉಪನ್ಯಾಸಗಳನ್ನು ಮಾಡಿದರು. ಇದು ಮೊನ್ನೆಗೆ ಪೂರೈಸಿತು. ವೇ|| ಗಳಾದ ಮಂಡಿಕಲ್ ರಾಮಶಾಸ್ತ್ರಿಗಳು ಕರ್ಮಯೋಗವನ್ನೂ, ಸುಬ್ರಹ್ಮಣ್ಯಶಾಸ್ತ್ರಿಗಳು ಜ್ಞಾನಯೋಗವನ್ನೂ, ಲಕ್ಷ್ಮೀಪುರಂ ಶ್ರೀನಿವಾಸಾಚಾರ್ರು ಶಾಸ್ತ್ರತತ್ವವನ್ನೂ, ಹೊಳವನಹಳ್ಳಿ ಶೇಷಾಚಾರ್ರು ಭಕ್ತಿಯೋಗವನ್ನೂ ಕುರಿತು ಬಹಳ ಸ್ವಾರಸ್ಯವಾಗಿಯೂ ಸರಳವಾಗಿಯೂ ಉಪನ್ಯಾಸಗಳನ್ನು ಮಾಡಿದರು. ಮ|| ಅಂಬಳೆ ಅಣ್ಣಯ್ಯಪಂಡಿತರು ಆ ಉಪನ್ಯಾಸಕರನ್ನು ಕುರಿತು ಅವುಗಳನ್ನು ಸರಿಯಾಗಿ ಬರೆದುಕೊಟ್ಟರೆ ತಮ್ಮ ಸ್ವಂತ ಖರ್ಚಿನಿಂದ ಅಚ್ಚು ಹಾಕಿಸಿ ಪ್ರಚಾರಮಾಡುತ್ತೇವೆಂದು ಹೇಳಿದ್ದರ ಮೇಲೆ ಅವರೆಲ್ಲಾ ಬರೆದು ಕೊಡಲು ಒಪ್ಪಿಕೊಂಡಿದಾರೆ.

* * *

ಸಂಸ್ಥಾನದಾದ್ಯಂತ ಅಂಗಡಿಗಳಲ್ಲೂ ಸಂತೆಗಳಲ್ಲೂ ವರ್ತಕರು ಉಪಯೋಗಿಸುವ ಅಳತೆ ಮತ್ತು ತೂಕದ ಸಾಧನಗಳು ಸರ್ಕಾರದ ನಿರಮಿನ ಪ್ರಕಾರ ಇವೆಯೋ ಇಲ್ಲವೋ ಎಂಬುವುದನ್ನು ಆಗಿಂದಾಗ್ಗೆ ಪರೀಕ್ಷೆ ಮಾಡುವ ಅಧಿಕಾರ



ವೃತ್ತಾಂತಪತ್ರಿಕೆ ಏಜಂಟರಿಗೆ ಸೂಚನೆ.

ವೃತ್ತಾಂತ ಪತ್ರಿಕೆಯ 1914-15 ನೇ ವರುಷದ ಒಂದನೇ ಕ್ವಾರ್ಟರು ಕಳೆದ ಆಗಸ್ಟ್ ತಿಂಗಳಿಗೆ ಪೂರೈಸಿದೆ. ಏಜಂಟರುಗಳು ಆ ಕ್ವಾರ್ಟರಿನ ಲೆಕ್ಕಗಳನ್ನು ಪೈಸಲುಮಾಡಿ, "ಬಿ" ಫಾರಂಗಳಿಗೆ ಎತ್ತಿ ಬರೆದು, ತಮ್ಮ ತಮ್ಮ ಸಬ ಏಜಂಟರಿಗೆ ಒಂದು ಪ್ರತಿಯನ್ನೂ, ನಮಗೆ ಒಂದು ಪ್ರತಿಯನ್ನೂ ಈ ವಾರದಲ್ಲೇ ಜಾಗ್ರತೆಯಿಂದ ಕಳುಹಿಸಿಕೊಡಬೇಕಾಗಿ ಕೃತಪಡಿಸಿದೆ.

ನೀವು ಕೇಳಿದ ಹಾಗೆ ಪತ್ರಿಕೆಗಳನ್ನು ಹೆಚ್ಚಾಗಿ ಕಳುಹಿಸುತ್ತಾ ಬರುವೆವು. ಆದರೆ ಬಿಡಿ ಪತ್ರಿಕೆಗಳ ಮಾರಾಟವನ್ನು ನಿಲ್ಲಿಸಿ, ಮುಂದಿನ 1915 ನೇ ಏಪ್ರಿಲ್ ವರೆಗೆ ಅಡ್ವಾನ್ಸು ಕೊಟ್ಟು ಕ್ರಮವಾಗಿ ಚಂದಾದಾರರಾಗತಕ್ಕವರಿಗೆ ಮಾತ್ರ ಪತ್ರಿಕೆಗಳನ್ನು ತಪ್ಪಿಸದೆ ಕೊಡುತ್ತಾ ಬರಬೇಕೆಂದು ಕೋರುತ್ತೇವೆ.

ಮ್ಯಾನೇಜರ್, "ವೃತ್ತಾಂತ ಪತ್ರಿಕೆ," ಮೈಸೂರು.

ವೃತ್ತಾಂತ ಪತ್ರಿಕೆ.

—:o:—

ಸನ್ ೧೯೧೪ ನೇ ಇಸವಿ ಸೆಪ್ಟಂಬರ್ ತಾ. ೧೦ ನೇ ಗುರುವಾರ

ರಾಜಧಾನಿಯ ಪುರೋಭಿವೃದ್ಧಿಯು.

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನ ಇಂಜನಿಯರಾದ ಮಿ|| ಎಚ್. ಎಫ್. ಮಾರ್ಕರ್, ಎಲ್. ಸಿ. ಇ. ರವರು ಬೆಂಗಳೂರಿನಲ್ಲಿ ನಡೆದ ಇಂಜನಿಯರುಗಳ ಮೀಟಿಂಗಿನಲ್ಲಿ ಮೈಸೂರು ಪಟ್ಟಣದ ಅಭಿವೃದ್ಧಿ ಮತ್ತು ರಚನೆ ಎಂಬ ವಿಷಯವನ್ನು ಕುರಿತು ಒಂದು ಉಪನ್ಯಾಸವನ್ನು ಬರೆದು ಓದಿದರು. ಅದರ ಒಂದು ಪ್ರತಿಯು ನಮಗೆ ತಲುಪಿದೆ. ಇದರಲ್ಲಿ ವಿವರಿಸಲ್ಪಟ್ಟಿರುವ ವಿಷಯಗಳೆಲ್ಲಾ ರಾಜಧಾನಿಯನ್ನು ನೋಡಬಲ್ಲವರಿಗೆ ಉತ್ಸಾಹಪ್ರದವಾಗಿರುವವು; ಮತ್ತು ಅವರು ಪುರಾಭಿವೃದ್ಧಿಗಾಗಿ ಸೂಚಿಸಿರುವ ಅನೇಕ ಸಲಹೆಗಳು ಬಹಳ ಚೆನ್ನಾಗಿರುತ್ತವೆ.

ಪಟ್ಟಣದೊಳಗೆ ದೊಡ್ಡ ದೊಡ್ಡ ರಸ್ತೆಗಳಲ್ಲ ಇರತಕ್ಕ ಸಲಕ್ಷಣವಾದ ಮನೆಗಳನ್ನು ಕೆಡವಿಬಿಟ್ಟು, ಚೆನ್ನಾಗಿಯೂ ಅಲಂಕಾರವಾಗಿಯೂ ಇರತಕ್ಕ ಕಟ್ಟಡಗಳನ್ನು ಕಟ್ಟಿಸಿದರೆ ರಾಜಧಾನಿಯು ನೇತ್ರಾನಂದಕರವಾಗುವುದೆಂದು ಮಿ|| ಮಾರ್ಕರವರು ಹೇಳುತ್ತಾರೆ. ಈ ಕಾರ್ಯವು ರಾಜಧಾನಿಯ ರಚನೆಯನ್ನು ಬಹು ಅಂದವಾಗಿ ಮಾಡೀತೆನ್ನುವುದಕ್ಕೆ ಸಂಶಯವಿಲ್ಲ. ಇದಕ್ಕೆಲ್ಲಾ ಮಿ|| ಮಾರ್ಕರವರು ಇಪ್ಪತ್ತು ಲಕ್ಷ ರೂಪಾಯಿ ಬೇಕಾಗಬಹುದೆಂದು ಹೇಳುತ್ತಾರೆ. ಈಗಲೇ ಮೈಸೂರು ಗವರ್ನಮೆಂಟಿನವರು ರಾಜಧಾನಿಯ ಏಳ್ಗೆ ಬೊಕ್ಕಸನ್ನು ಸಾಗಿಸುವುದಕ್ಕೂ, ಆರೋಗ್ಯಭಾಗ್ಯವನ್ನು ವೃದ್ಧಿಮಾಡುವುದಕ್ಕೂ, ಇತರ ಅಭಿವೃದ್ಧಿ ಕಾರ್ಯಗಳಿಗೂ ಪ್ರತಿ ವರುಷವೂ ಲಕ್ಷಾಂತರ ರೂಪಾಯನ್ನು ಖರ್ಚುಮಾಡುತ್ತಾ ಬಂದಿದಾರೆ. ಈ ಹಣವನ್ನು ಅವಶ್ಯವಾದ ಕಾರ್ಯಗಳಿಗೆ ವಿನಿಯೋಗಿಸದೆ ಇರೋಣದರಿಂದ ಆ ಪೈಕಿ ಕೆಲವು ಭಾಗ ವ್ಯರ್ಥ ಖರ್ಚೆಂದು ಹೇಳುವೆವು. ಕಾರಂಜಿಕೆರೆಯ ಏರಿಯನ್ನೂ, ದೊಡ್ಡಕೆರೆ ಏರಿಯನ್ನೂ ಅಂದವಾಗಿ ಮಾಡುತ್ತೇವೆಂದು ಹೇಳಿ ನಾನಾ ವ್ಯರ್ಥವಾದ ಕಾಮಗಾರಿಗಳಿಗೆ ಹಣವನ್ನು ವಿನಿಯೋಗಿಸಿ ಭಾರಿಭಾರಿಯಾದ ಅನೇಕ ಗಿಡಮರಗಳನ್ನು ಕಡಿಸಿ ಕೆಡವಿಬಿಟ್ಟಿರುವುದನ್ನು ನೋಡಿದರೆ ಬಹಳ ದುಃಖವಾಗುತ್ತದೆ.

ತಲಾಂತ
ವುದು ಅ
ಗಳನ್ನೆಲ್ಲಾ
ರೂ ಬಿಟ
ಮಿ
ಗ್ಯಕರವಾ
ವಾಸಮಾ
ಮುಂತಾ
ವಂಥಾ
ತ್ತಾರೆ.
ಮಿ|| ಮ
ಪಡುತ್ತೇ
ಯವಿಲ್ಲ.
ಯೇ ಅ
ರಾಜಧಾ
ಹೋಗು
ಕಕ್ಕ ಸು
ನಮ್ಮ ಪ
ಬಹಳ ಸಿ
ನಿಂದ ಒ
ನೆಯನ್ನು
ಇದಕ್ಕೆ
ವೆಂದು
ಮಾಡು
ಮಾಡು
ಇದುವ
ಜಾಬಿಯ
ಸಿ. ಜಿ೦೦
ದುಗಳನ್ನ
ವಿ
ಸುವುದಾ
ರೆ ಪ್ರಜೆ
ದಲ್ಲೂ

ರಾಜಧಾನಿಯು ಚೊಕ್ಕಟವಾಗಿಯೂ ಆರೋಗ್ಯ ಜನಕವಾಗಿಯೂ ಇರಲಾರದು; ಹಾಗೆ ಮಾಡುವುದು ಯಾರಿಂದಲೂ ಸಾಧ್ಯವೂ ಅಲ್ಲ. ಈ ಭಾಗದಲ್ಲಿ ಪಟ್ಟಣದ ಅಧಿಕಾರಿಗಳನ್ನೂ ನಿಂದಿಸದೆ ಇರುವುದಕ್ಕಾಗುವುದಿಲ್ಲ. ಅಲ್ಲಲ್ಲಿ ಸೊಗಸಾದ ಪಬ್ಲಿಕ್ ಕಕ್ಕಸುಗಳನ್ನು ಕಟ್ಟಿದಾರೆ; ಇವನ್ನು ಯಾರೂ ಉಪಯೋಗಿಸದಂತೆ ಬಾಗಿಲು ಮುಚ್ಚಿಬಿಟ್ಟಿರುವರು. ಯಾಕಂದರೆ ಜನರು ಉಪಯೋಗಿಸಿದ ಪಕ್ಷದಲ್ಲಿ ಅವನ್ನು ತೊಳೆದು ಚೊಕ್ಕಟವಾಗಿಡಲು ನೀರೇ ಇಲ್ಲ. ಸರ್ವಸಮರ್ಪಕವಾದ ಏರ್ಪಾಡುಗಳನ್ನು ಎಂದಿಗೆ ಯೋಚಿಸಿ ಮಾಡುವರೋ ನಮಗೆ ತಿಳಿಯದು. ಇಂಥಾ ಲೋಪದೋಷಗಳು ಮೈಸೂರು, ಬೆಂಗಳೂರು ನಗರಗಳಲ್ಲಿ ಹೇರಳವಾಗಿ ಕಾಣುತ್ತವೆ. ಪಟ್ಟಣವನ್ನು ಅಂದಚಂದವಾಗಿ ಮಾಡುವುದು ಕಷ್ಟವಲ್ಲ; ಆರೋಗ್ಯ ಜನಕವಾದಂಥಾ ಪಟ್ಟಣವನ್ನು ರೂಪಿಸುವುದೇ ಮಹಾ ಪ್ರಯಾಸ. ನಿವಾಸಿಗಳಲ್ಲಿರುವ ದುರಭ್ಯಾಸಗಳನ್ನು ನೋಡುವಲ್ಲಿ ಈ ವಿಚಾರಕ್ಕೆ ಸರ್ಕಾರದವರು ತಕ್ಕಮಟ್ಟಿಗೆ ಚಿಂತೆಪಟ್ಟು ಸಾಹಸಪಡುತ್ತಿರುವಂತೆ ಕಾಣುವುದಿಲ್ಲ. ಪೋಲೀಸಿನಲ್ಲಿರುವ ಪ್ರತಿ ಒಬ್ಬನೂ, ಮ್ಯುನಿಸಿಪಾಲಿಟಿಯಲ್ಲಿರುವ ಪ್ರತಿ ಒಬ್ಬ ನೌಕರನೂ ಪ್ರಜೆಗಳಿಗೆ ಆರೋಗ್ಯಸೂತ್ರಗಳನ್ನು ಹೇಳಿಕೊಡುವ ಶಿಕ್ಷಕನಾಗಿರಬೇಕು. ಆದರೆ ಇವರುಗಳ ಕಣ್ಣೆದುರಿಗೇ ಜನರು ಹೇಸಿಕೆಯಾದ ಕೃತ್ಯಗಳನ್ನು ನಿರ್ಭಯವಾಗಿ ಮಾಡುತ್ತಾರೆ. ಇವರನ್ನು ದಂಡಿಸುವವರೇ ಇಲ್ಲ. ಪ್ರಜೆಗಳಿಗೆ ತಮ್ಮ ದೇಹಗಳನ್ನೂ, ಮನೆಗಳನ್ನೂ ನಿರ್ಮಲವಾಗಿಟ್ಟುಕೊಳ್ಳುವಂತೆ ಕಲಿಸಿದ ಹೊರತು, ಮತ್ತು ಅವರನ್ನು ಆ ರೀತಿ ವರ್ತಿಸುವಂತೆ ಮಾಡಿದ ಹೊರತು *ಎಷ್ಟು ಹಣ ಖರ್ಚುಮಾಡಿ ಎಂಥೆಂಥಾ ಅಲಂಕಾರಗಳನ್ನು ಮಾಡಿಟ್ಟಾಗ್ಯೂ ಪ್ರಜೆಗಳ ಆರೋಗ್ಯಭಾಗ್ಯವು ಏಳಿಗೆಯಾಗುವುದಿಲ್ಲ.*

ದೇವರನ್ನು ಆಶ್ರಯಿಸುವುದು.

ಈ ಯುದ್ಧಕಾಲದಲ್ಲಿ ದೇವಭಕ್ತರು ದೇವರಿಗೆ ಮೊರೆಯಿಟ್ಟು —ದೇವರೇ, ಈ ಯುದ್ಧವನ್ನು ಶೀಘ್ರವಾಗಿ ನಿಲ್ಲಿಸಿ, ಯುದ್ಧಮಾಡುವುದಕ್ಕೆ ಅಪೇಕ್ಷಿಸುವವರನ್ನು ಚದರಿಸಿಬಿಡಬೇಕೆಂದು ಪ್ರಾರ್ಥಿಸಬೇಕು. ಕೆಳಗೆ ಯೆಹೂದ್ಯರಲ್ಲಿ ಒಬ್ಬ ಭಕ್ತನ ಪ್ರಾರ್ಥನೆಯನ್ನು ಭಾಷಿಸಿರುತ್ತೇವೆ. ಆತನು ಕಷ್ಟಕಾಲದಲ್ಲಿ ದೇವರನ್ನು ಆಶ್ರಯಿಸಿಕೊಂಡು ಸಮಾಧಾನವನ್ನು ಸಂಪಾದಿಸಿಕೊಂಡನು.

ದೇವರು ನಮಗೆ ಆಶ್ರಯದುರ್ಗವಾಗಿದ್ದಾನೆ;
ಆತನು ಇಕ್ಕಟ್ಟಿನಲ್ಲಿ ನಮಗೆ ವಿಶೇಷ ಸಹಾಯಕನು.
ಆದದರಿಂದ ಭೂಮಿಯು ಮಾರ್ಪಟ್ಟರೂ ಬೆಟ್ಟಗಳು ಸಮುದ್ರದಲ್ಲಿ ಮುಣುಗಿಹೋದರೂ ಭಯವಿಲ್ಲ.
ಸಮುದ್ರವು ಘೋಷಿಸುತ್ತಾ ನೊರೆಯನ್ನು ಕಾರಿದರೇನು?
ಅದರ ಅಲ್ಲಕಲ್ಲೋಲಗಳಿಂದ ಪರ್ವತಗಳು ಚಲಿಸಿದರೇನು?
ಒಂದು ನದಿ ಅದೆ; ಅದರ ಕಾಲುವೆಗಳು
ಪರಾತ್ಪರನ ಪರಿಶುದ್ಧ ನಿವಾಸಸ್ಥಾನವಾಗಿ[illegible]ದೇವನಗರವನ್ನು ಸಂತೋಷಪಡಿಸುತ್ತವೆ.
ದೇವರು ಇದರಲ್ಲಿದ್ದಾನೆ; ಇದಕ್ಕೆ ಚಲನವೇ ಇಲ್ಲ
ಉದಯಕಾಲದಲ್ಲಿಯೇ ದೇವರು ಇದರ ಸಹಾಯಕ್ಕೆ ಬರುವನು.
ಜನಾಂಗಗಳು ಕಳವಳಗೊಂಡವು; ರಾಜ್ಯಗಳು ತತ್ತರಿಸಿದವು.
ಆತನು ಗರ್ಜಿಸಲು ಭೂಲೋಕವೆಲ್ಲಾ ಕರಗಿಹೋಯಿತು.
ಸೇನಾಧೀಶನಾದ ಯೆಹೋವನು ನಮ್ಮ ಸಂಗಡ ಇದ್ದಾನೆ.

ಲೈನಿನ ಮಧ್ಯಭಾಗದಲ್ಲಿದ್ದ ಫ್ರೆಂಚರು ಜರ್ಮನಿ ಯುವರಾಜರ ಸೈನ್ಯಕ್ಕೆ ಅವಕಾಶಕೊಡದೆ ಅವರನ್ನು ಹಿಮ್ಮೆಟ್ಟಿಸಿದ್ದಲ್ಲದೆ ಬಲಗಡೆಯಲ್ಲಿ ಸ್ವಲ್ಪ ದೂರ ಮುಂದರಿಸಿ ನುಗ್ಗಿ ಹೋಗಿದಾರೆ.

ಈ ಲೈನಿನ ಉದ್ದಕ್ಕೂ ಅನೇಕ ಸಣ್ಣ ಸಣ್ಣ ಕದನಗಳು ನಡೆದವು. ಒಂದು ಕಡೆ ಬ್ರಿಟಿಷ್ ಕುದುರೆ ಸೈನಿಕರು ಜರ್ಮನಿ ಕುದುರೆ ಸೈನ್ಯದ ಮೇಲೆ ನುಗ್ಗಿ ಕಡಿದಾಡಿ ಅವರನ್ನು ಓಡಿಸಿದ್ದಲ್ಲದೆ ಅವರ ಹತ್ತು ಫಿರಂಗಿಗಳನ್ನು ಕಿತ್ತುಕೊಂಡು ಬಂದರು.

ಚಾಲಿವಿಲ್ [ಇದು ನಮ್ಮ ನಕ್ಷೆಯಲ್ಲಿ ಸೆಡಾನ್ ಬಳಿ ಇದೆ] ಎಂಬಲ್ಲಿ ಮೇಸ್ ನದಿಯ ೭೪ ಸೇತುವೆಗಳನ್ನು ಫ್ರೆಂಚರು ಒಡೆದು ಕೆಡವಿ ಮೂರು ಸೇತುವೆಗಳನ್ನು ಮಾತ್ರ ಬಿಟ್ಟಿದ್ದರು. ಈ ಸೇತುವೆಗಳ ಕೆಳಗೆ ಸಮಯಬಂದಾಗ ಅವನ್ನು ಒಡೆದುಬಿಡುವುದಕ್ಕೆ ಸಿಡಿಮದ್ದಿನ ಗುಂಡುಗಳನ್ನು ಇಟ್ಟಿದ್ದರು. ಜರ್ಮನಿಯವರು ಈ ಸೇತುವೆಗಳನ್ನು ಹಿಡಿದು ದಾಟಿಕೊಂಡು ಬರಬೇಕೆಂದು ಅಸಂಖ್ಯಾತವಾಗಿ ನುಗ್ಗಿ ಬಂದರು. ಅದನ್ನು ಕಂಡ ಒಡನೆಯೇ ಫ್ರೆಂಚರು ಆ ಮೂರು ಸೇತುವೆಗಳನ್ನೂ ಮದ್ದಿನಿಂದ ಹಾರಿಸಿಬಿಟ್ಟು, ಅದುವರೆಗೆ ಸೇತುವೆ ದಾಟಿ ಬಂದಿದ್ದ ಜರ್ಮನರ ಮೇಲೆ ನುಗ್ಗಿ ಅನೇಕರನ್ನು ಕೊಲೆಮಾಡಿದರು. ಗೀಚ್ [ನಮ್ಮ ನಕ್ಷೆ ನೋಡಿ] ಎಂಬ ಸ್ಥಳದಲ್ಲಿ ಫ್ರೆಂಚರು ಜರ್ಮನಿಯ ಮೂರು ಡಿವಿಜನ್ ಸೈನ್ಯಗಳನ್ನು ಎದುರಿಸಿ ಅವರನ್ನೆಲ್ಲಾ ಚದರಿಸಿರುತ್ತಾರೆ.

ಕೆಲವು ಬ್ರಿಟಿಷ್ ಸೈನಿಕರಿಗೆ ಬಹಳ ಕಷ್ಟವಾದ ಕೆಲಸ ಬಿತ್ತು. ಒಂದು ರಿಜಮೆಂಟು ಐದು ದಿನಗಳಲ್ಲಿ 240 ಮೈಲಿ ದೂರ ಯುದ್ಧಮಾಡುತ್ತಲೇ ಮುಂದರಿಸಿ ನುಗ್ಗಿಹೋಗಿರುತ್ತದೆ. ಉದ್ದಕ್ಕೂ ಇವರು ಸಂಧಿಸಿದ ಜರ್ಮನಿ ಸೈನ್ಯಗಳು ಅಪಾರವಾಗಿದ್ದವು. ನಾಲ್ಕೈದು ದಿವಸಗಳಿಂದ ಬ್ರಿಟಿಷ್ ಸೈನ್ಯವು ಯುದ್ಧಮಾಡಲಿಲ್ಲ.

ಈಗ ಜರ್ಮನಿಯವರು ಪಾರಿಸ್ ನಗರದ ಸಮೀಪಕ್ಕೆ ಬಂದಿರಬೇಕು. ಫ್ರೆಂಚರು ಅವರಿಗೆ ಸಗ್ಗದೆ ಕಡೆಯ ತನಕ ಕಾದಾಡುವುದಾಗಿ ನಿಶ್ಚಯಮಾಡಿಕೊಂಡಿದಾರೆ. ಈ ಉದ್ದೇಶದಿಂದ ಅವರು ತಮ್ಮ ಗವರ್ನಮೆಂಟನ್ನೂ, ಅಪಾರವಾದ ಖಜಾನೆಯನ್ನೂ ಪಾರಿಸ್ ನಗರದಿಂದ ಪಶ್ಚಿಮ ದಡದಲ್ಲಿರುವ ಬೋರ್ಡೋ ಎಂಬ ತೀರಪಟ್ಟಣಕ್ಕೆ ಸಾಗಿಸಿಬಿಟ್ಟರು. *ಮತ್ತು ಪಾರಿಸ್‌ನಲ್ಲಿರುವ ಪ್ರಜೆಗಳಿಗೆ* ಸ್ಥಳಾಂತರಗಳಲ್ಲಿರುವ ಅವರವರ ಬಂಧುಗಳ ಬಳಿಗೆ ಕೆಲವು ಕಾಲ ಹೋಗಿರಬೇಕೆಂದು ಸಾರಿಸಿರುತ್ತಾರೆ. ಇದನ್ನು ಕೇಳಿ ಅನೇಕ ಪ್ರಜೆಗಳು ತಮ್ಮ ಮನೆಮಠಗಳನ್ನು ತ್ಯಜಿಸಿ ಇತರ ಕಡೆಗಳಿಗೆ ತಂಡತಂಡವಾಗಿ ಹೊರಟುಹೋದರು. ಇದರಿಂದ ಪಟ್ಟಣದೊಳಗೆ ಉಳಿದಿರುವವರಿಗೆ ಆಹಾರಾದಿಗಳನ್ನು ಒದಗಿಸಿ ಕಾಪಾಡುವುದು ಸುಲಭವಾಯಿತು. ಪಾರಿಸ್ ನಗರವನ್ನು ಬಹಳ ಬಲವಾದ ಕೋಟೆಗಳನ್ನು ಕಟ್ಟಿ ಶತ್ರುಗಳು ಭೇದಿಸದಂತೆ ಮಾಡಿಕೊಂಡಿದಾರೆ. ಈ ಕೋಟೆಗಳ ದೆಸೆಯಿಂದ ಶತ್ರುಗಳು ಪಟ್ಟಣಕ್ಕೆ ಹದಿನಾರು ಮೈಲಿಯ ಆಚೆ ಇರಬೇಕಲ್ಲದೆ ಇನ್ನೂ ಸಮೀಪಕ್ಕೆ ಬರುವುದು ಸಾಧ್ಯವಿಲ್ಲ. ಕೋಟೆಗಳಿಂದ ಶತ್ರುಗಳ ಮೇಲೆ ಎತ್ತಿಕಟ್ಟಿ ಹೊಡೆಯುವಂಥಾ ಫಿರಂಗಿಗಳಿಗೆ ಅಡಚಣೆಯೇನೂ ಉಂಟಾಗಬಾರದೆಂದು ಆ ಸುತ್ತುಮುತ್ತಿನಲ್ಲಿರುವ ಎತ್ತರವಾದ ಮನೆಮಠ ಮುಂತಾದ ಕಟ್ಟಡಗಳನ್ನು ಒಡೆದುಹಾಕಿ ಪಾಳುಕೆಡವಿದಾರೆ.

ಜರ್ಮನಿಯ ಕೆಲವು ವಿಮಾನಯಂತ್ರಗಳು ಪಾರಿಸ್ಸಿನ ಮೇಲ್ಭಾಗದಲ್ಲಿ ಹಾರಿಬಂದು ಆ ಯಂತ್ರಗಳಿಂದ ಪಟ್ಟಣದೊಳಕ್ಕೆ ಸಿಡಿಮದ್ದಿನ ಗುಂಡುಗಳನ್ನು ಇಳಿಯಬಿಟ್ಟವು. ಇವುಗಳಿಂದ ವಿಶೇಷ ನಷ್ಟವೇನೂ ಆಗಲಿಲ್ಲ. ಫ್ರೆಂಚರ ಕೆಲವು ವಿಮಾನಯಂತ್ರಗಳು ಅಂತರಿಕ್ಷಕ್ಕೆ ಹೋಗಿ ಶತ್ರುಗಳ ವಿಮಾನಗಳನ್ನು ತಡೆದು, ಅಂತರಿಕ್ಷದಲ್ಲೇ ಯುದ್ಧಮಾಡಿದವು.

ಫ್ರಾನ್ಸಿನ ಉತ್ತರ ಭಾಗದಲ್ಲಿ ಫ್ರೆಂಚರು ಕೆಲವು ಊರುಗಳಿಂದ ತಮ್ಮ ಸೈನ್ಯಗಳನ್ನು ವಾಪಸ್ ಕರಸಿಕೊಂಡಿದಾರೆ. ಫ್ರೆಂಚರು ಟುಲೋಜ್, ಲೀಲ್ ಎಂಬೀ ನಗರಗಳಲ್ಲಿ [ಇವು ನಕ್ಷೆಯಲ್ಲಿವೆ] ಆ ರೀತಿ ಮಾಡಿದಾರೆ. ಜರ್ಮನಿಯವರು ಈ ನಗರಗಳನ್ನು ಆಕ್ರಮಿಸಿಕೊಂಡು, ಲೀಲ್ ಪುರನಿವಾಸಿಗಳು 12,00,00,000 ರೂಪಾಯಿ ಪ್ರತಿಫಲ ಕೊಡಬೇಕೆಂದು ಕೇಳಿರುವರು. ಇದಲ್ಲದೆ ಅವರು ಮಬೇಜ್ ಎಂಬ ಪಟ್ಟಣದ ಕೋಟೆಗೆ ಫಿರಂಗಿಗಳನ್ನು ಎತ್ತಿಕಟ್ಟಿ ಹೊಡೆಯುತ್ತಿದಾರೆ.

ಬ್ರಿಟಿಷ್ ಸೈನ್ಯದಲ್ಲಿ ಎಷ್ಟು ಮಂದಿ ನಷ್ಟಪಟ್ಟರೋ ಅದನ್ನು ಪ್ರಕಟಿ

ಪ್ಪರು. [ಇವೆರಡು ಸ್ಥಳಗಳನ್ನೂ ನಮ್ಮ ನಕ್ಷೆಯಲ್ಲಿ ಕಾಣಿಸಿದೆ.] ಆ ಪ್ರಾಂತ್ಯದ ಭೂಮಿಯು ಸಮುದ್ರಕ್ಕಿಂತ ಬಹಳ ತಗ್ಗಿನಲ್ಲಿರುವುದಾದಕಾರಣ ಬೆಲ್ಜಿಯನ್ನರು ಸಮುದ್ರಕ್ಕೆ ಹಾಕಿದ್ದ ಅಡ್ಡಗಟ್ಟೆಯನ್ನು ಕತ್ತರಿಸಿ ಬಿಟ್ಟರು. ಸಮುದ್ರದ ನೀರು ಆ ಪ್ರದೇಶಕ್ಕೆಲ್ಲಾ ನುಗ್ಗಿ ಪ್ರಳಯವಾಗಿದೆ. ಜರ್ಮನಿಯವರು ಆ ನೀರಿನ ಮಧ್ಯೆ ಸಿಕ್ಕಿಕೊಂಡಿರುವ ತಮ್ಮ ಫಿರಂಗಿಗಳನ್ನು ಹೊರಕ್ಕೆ ಸಾಗಿಸಬೇಕೆಂದು ಬಹಳ ಸಾಹಸಪಟ್ಟರು; ಇದು ಸಾಧ್ಯವಾಗದೆ ಹೋಯಿತು. ಇದಲ್ಲದೆ ಆಂಟ್ವರ್ಪ್ ಕೋಟೆಯಿಂದ ಬೆಲ್ಜಿಯನ್ನರು ಹೊಡೆದ ಫಿರಂಗಿ ಗುಂಡುಗಳು ತಪ್ಪದೆ ಹೊರಗಿದ್ದ ಬಹುಜನ ಜರ್ಮನಿಯವರು ನ್ಯಾಶಪಟ್ಟರು. ರಾಜಧಾನಿಯಾದ ಬ್ರಸೆಲ್ಸ್ ನಗರದ ಬಳಿ ನಡೆದ ಕದನದಲ್ಲಿ ಜರ್ಮನಿಯವರಲ್ಲಿ 9,000 ಮಂದಿ ನಷ್ಟವಾದರು ಬೆಲ್ಜಿಯಂ ದೇಶದೊಳಕ್ಕೆ ನುಗ್ಗಿ ಬಂದಿರುವ ಜರ್ಮನಿ ಸೈನಿಕರು ಕ್ರಮವಾದ ಸೈನಿಕರಲ್ಲ. ಇವರು ಮೊದಲು ಸೈನ್ಯದಲ್ಲಿದ್ದು ಈಚೆಗೆ ಇತರ ಕೆಲಸಕಾರ್ಯಗಳಲ್ಲಿ ಇದ್ದವರು ಇದರಿಂದ ಜರ್ಮನಿಯವರು ತಮ್ಮ ಪ್ರಜೆಗಳನ್ನೆಲ್ಲಾ ಸೈನಿಕರಾಗಿ ಉಪಯೋಗಿಸಿಕೊಂಡಿದಾರೆಂದು ಗೊತ್ತಾಗುತ್ತದೆ.

ಜರ್ಮನಿ ಕಡೆಯ ವಿಮಾನ ಯಂತ್ರಗಳು ಆಂಟ್ವರ್ಪ್ ನಗರದ ಮೇಲೆ ಸಂಚಾರಮಾಡಿಕೊಂಡು ಹೋಗಿ ಕೆಲವು ಸಿಡಿಮದ್ದಿನ ಗುಂಡುಗಳನ್ನು ಪಟ್ಟಣದೊಳಕ್ಕೆ ಇಳೀ ಬಿಟ್ಟವು. ಇದರಿಂದ ವಿಶೇಷ ನಷ್ಟವೇನೂ ಆಗಲಿಲ್ಲ. ಆದರೂ ಆ ಗುಂಡುಗಳೊಳಗಿದ್ದ ಚರೆಗಳು ತಗಲಿದರೆ ಬಹು ಭಯಂಕರವಾದ ಗಾಯವನ್ನುಂಟುಮಾಡುವವು.

ಜರ್ಮನಿಯವರು 1,000 ಬೆಲ್ಜಿಯನ್ ಪ್ರಜೆಗಳನ್ನು ಹಿಡಿದು ತಮ್ಮ ದೇಶದಲ್ಲಿ ಕಣದ ಕೆಲಸಗಳನ್ನು ಮಾಡುವುದಕ್ಕಾಗಿ ರವಾನೆ ಮಾಡಿದರು. ಇದರಿಂದಲೂ ಜರ್ಮನಿಯು ತನ್ನ ಪ್ರಜೆಗಳನೆಲ್ಲಾ ಯುದ್ಧಕ್ಕಾಗಿ ವಿನಿಯೋಗಿಸಿಕೊಂಡಿದೆ ಎಂದೂ, ಸೋಲದಿರುವುದಕ್ಕೆ ಏನು ಬೇಕಾದರೂ ಮಾಡಲು ಸಿದ್ಧವಾಗಿದೆ ಎಂದೂ ಗೊತ್ತಾಗುವುದು

ಬೆಲ್ಜಿಯಂ ರಾಜ್ಯದ ಮಹಾರಾಣೀರವರು ಇಂಗ್ಲಾಂಡಿಗೆ ಬಂದು ಲಾರ್ಡ್ ಕರ್ಜನ್‌ರವರ ಬಂಗಲೆಯಲ್ಲಿರುತ್ತಾರೆ

ರಷ್ಯಾ ಮತ್ತು ಆಸ್ಟ್ರಿಯಾ.

ಆಸ್ಟ್ರಿಯದವರು ರಷ್ಯಾದೊಳಕ್ಕೆ ಲೂಬ್ಲಿನ್ ಕಡೆ ನುಗ್ಗಿ ಹೋಗಿರುವಂತೆ ಕಾಣುತ್ತದೆ. ಲೂಬ್ಲಿನ್ ಮತ್ತು ಲೆಮ್ಬರ್ಗ್ [ಇವೆರಡು ಸ್ಥಳಗಳೂ ನಮ್ಮ ನಕ್ಷೆಯಲ್ಲಿವೆ] ಇವೆರಡರ ನಡುವೆಯೂ, ಲೆಮ್ಬರ್ಗಿನ ಪೂರ್ವಕ್ಕೂ ಏಳು ದಿನ ಯುದ್ಧವಾಯಿತು. ಇದರಲ್ಲಿ ರಷ್ಯಾದವರು ಆಸ್ಟ್ರಿಯಾದವರನ್ನು ಸಂಪೂರ್ಣವಾಗಿ ಸೋಲಿಸಿಬಿಟ್ಟರು. ಆಸ್ಟ್ರಿಯಾದವರ ಕಡೆ 4 ಅಥವಾ 5 ಲಕ್ಷ ಸೈನ್ಯವಿತ್ತೆಂದೂ, ಈ ಸೈನ್ಯವೆಲ್ಲಾ ನಾಶವಾಡಲ್ಪಟ್ಟಿತೆಂದೂ ತಿಳಿಯುವುದು. ಸೆಪ್ಟಂಬರ್ ತಾ 4 ನೇ ಶುಕ್ರವಾರ ರಷ್ಯಾದವರು ಲೆಮ್ಬರ್ಗನ್ನು ಸ್ವಾಧೀನಪಡಿಸಿಕೊಂಡರು ಆಸ್ಟ್ರಿಯಾ ಸೈನ್ಯದಲ್ಲಿ ಕೊಲೆಯಾದವರೂ ಗಾಯಪಟ್ಟವರೂ 20,000 ಮಂದಿ ಎಂದೂ, 70,000 ಸೈನ್ಯವನ್ನು ರಷ್ಯಾದವರು ಸೆರೆ ಹಿಡಿದುಕೊಂಡರೆಂದೂ ಹೇಳಲಾಗಿದೆ ಒಂದು ಕಡೆ 4,700 ಆಸ್ಟ್ರಿಯಾ ಸೈನ್ಯದ ಹೆಣಗಳನ್ನು ಮುಣ್ಣು ಮಾಡಿದರು ಅವರ 150 ಫಿರಂಗಿಗಳೂ, ಅಪಾರವಾದ ಯುದ್ಧ ಸಾಮಗ್ರಿಗಳೂ ರಷ್ಯಾದವರ ವಶವಾದವು ರಷ್ಯಾದವರು ನುಗ್ಗಿ ಸೈನ್ಯಸಾಲುಗಳನ್ನು ಒಡೆದು ಹಾಕಿದ ಮೇಲೆ ಆಸ್ಟ್ರಿಯಾ ಸೈನ್ಯವೆಲ್ಲಾ ಗಾಬರಿಬಿದ್ದು ಚೆಲ್ಲಾಬಿಲ್ಲಿಯಾಗಿ ಚದರಿಹೋಯಿತು.

ಆಸ್ಟ್ರಿಯಾ ಸೈನ್ಯವು ಮೊದಲು ಸರ್ವಿಯದವರ ಕೂಡ ಕಾದಾಡಿ ಬಹಳ ನಷ್ಟಪಟ್ಟು ತಪ್ಪಾಗಿತ್ತು; ಈಗ ಉಳಿದವರನ್ನು ರಷ್ಯಾದವರು ಹತಮಾಡಿ ಅವರ ಅಹಂಕಾರವನ್ನು ಮುರಿದುಬಿಟ್ಟರು. ಆಸ್ಟ್ರಿಯಾದವರಲ್ಲಿ ಕೆಲವು ಸೈನಿಕರಿಗೆ ಕದನಕ್ಕೆ ಹೋಗುವುದು ಇಷ್ಟವಿಲ್ಲವೆಂದು ಕಾಣುತ್ತವೆ. ಯಾಕೆಂದರೆ ಆಸ್ಟ್ರಿಯಾ ರಾಜಧಾನಿಯಾದ ವಿಯೆನ್ನಾ ಪಟ್ಟಣದೊಳಗೆ ಶ್ಲೆಕ್ ಎಂಬ ಎರಡು ರೆಜಿಮೆಂಟ್ ಸೈನಿಕರು ಹುದ್ದೆದಾರರ ಮಾತು ಕೇಳದೆ ಪ್ರತಿಭಟಿಸಿದ್ದರಿಂದ ಅವರಲ್ಲಿ ಮುಖ್ಯರಾದವರನ್ನು ಅಧಿಕಾರಿಗಳು ಹಿಡಿಸಿ ಗುಂಡಿನಿಂದ ಹೊಡಿಸಿ ಕೊಲ್ಲಿಸಿಬಿಟ್ಟರು. ಆಸ್ಟ್ರಿಯಾ ಸೈನ್ಯವು ಕ್ಷಯಿಸಿ ಹಟ್ಟಿಹೋಗಿರುವ ಪಕ್ಷದಲ್ಲಿ ರಷ್ಯಾದವರು ಉತ್ತರ ಆಸ್ಟ್ರಿಯಾದೊಳಗೆ ನುಗ್ಗಿಹೋಗಿ ಅಲ್ಲಿಂದ ಮುಂದೆ ಜರ್ಮನಿಯನ್ನು ಪ್ರವೇಶಿಸುವುದು ಬಹಳ ಸುಲಭವಾಗುತ್ತದೆ.

ರಷ್ಯಾ ಮತ್ತು ಜರ್ಮನಿ.

ರಷ್ಯಾದವರು ಪ್ರಷ್ಯದ ಪೂರ್ವದೇಶದೊಳಕ್ಕೆ ಬೇಗನೆ ನುಗ್ಗಿ ಬರುವುದು ಸಾಧ್ಯವಾಗಲಿಲ್ಲ ಜರ್ಮನಿಯವರು ತೊರನ್ ಮತ್ತು ಪೋಸೆನ್ [ನಮ್ಮ ನಕ್ಷೆಯಲ್ಲಿವೆ] ಎಂಬೀ ಸ್ಥಳಗಳಿಂದ ತಮ್ಮ ಸೈನ್ಯಗಳನ್ನೂ ಫಿರಂಗಿಗಳನ್ನೂ ಎಲ್ಲೆಕಟ್ಟಿಗೆ ಕಳುಹಿಸಿ, ಸೋಲ್ಡ್ [ನಮ್ಮ ನಕ್ಷೆಯಲ್ಲಿದೆ] ಎಂಬ ಸ್ಥಳದಲ್ಲಿ ರಷ್ಯಾದವರನ್ನು ಎದುರಿಸಿ ಅಲ್ಲಿಂದ ಹಿಮ್ಮೆಟ್ಟಿಸಿರುತ್ತಾರೆ. ಇದರಿಂದ ರಷ್ಯಾದವರು ನುಗ್ಗಿ ಬಾರದಂತೆ ಕೆಲವು ಕಾಲದ ವರೆಗೆ ಅಡ್ಡಿಯಾಯಿತು ಆದರೂ ಇಷ್ಟರಲ್ಲೇ ಹೊಸ ಸೈನ್ಯಗಳನ್ನು ರಷ್ಯಾದವರು ಅಲ್ಲಿಗೆ ಕಳುಹಿಸುವರೆಂದು ನಿರೀಕ್ಷಿಸಬಹುದು. ಈ ಕದನದಲ್ಲಿ ಜನರಲ್ ಸಾಂಸನೋಫ್ ಎಂಬ ಒಬ್ಬ ರಷ್ಯಾ ಸೈನ್ಯಾಧಿಪತಿಯು ಕೊಲೆಯಾದನು ಈ ಕದನದ ವಿವರ ಇನ್ನೂ ತಿಳಿದು ಬರಲಿಲ್ಲ.

ರಷ್ಯಾದವರು ತಮ್ಮ ರಾಜಧಾನಿಯ ಹೆಸರನ್ನು ಪೀಟರ್ಸ್‌ಬರ್ಗ್ ಎಂಬದನ್ನು ಬಿಟ್ಟು ಪೀಟರ್ಸ್‌ಗ್ರಾಡ್ ಎಂದು ಬದಲಾಯಿಸಿಕೊಂಡಿದಾರೆ ಬರ್ಗ್ ಎಂಬುವುದು ಜರ್ಮನಿಯ ಮಾತು, ಗ್ರಾಡ್ ಎಂಬುವುದು ರಷ್ಯಾ ಹೆಸರು. ಈ ಕಾರಣಕ್ಕಾಗಿಯೇ ರಷ್ಯಾದವರು ತಮ್ಮ ರಾಜಧಾನಿಗೆ ರಷ್ಯಾ ಅಂಕಿತವನ್ನು ಇಟ್ಟುಕೊಂಡರೆಂದು ಕಾಣುತ್ತದೆ

ಸರ್ವಿಯಾ ಮತ್ತು ಆಸ್ಟ್ರಿಯಾ.

ಈ ಭಾಗದ ಯುದ್ಧಭೂಮಿಯಿಂದ ಬಂದಿರುವ ವರ್ತಮಾನ ಬಹಳ ಸ್ವಲ್ಪ. ಮಾಂಟಿನೀಗ್ರೋವಿಗೆ ಪಶ್ಚಿಮದಲ್ಲಿರುವ ಕಾಟ್ಟಾರೊ ಪಟ್ಟಣದ ಹತ್ತಿರ ಸ್ವಲ್ಪ ಮಟ್ಟಿಗೆ ಕದನವಾಗಿ, ಆಸ್ಟ್ರಿಯದವರು ಒಂದು ಕೋಟೆಯನ್ನು ಸ್ವಾಧೀನಪಡಿಸಿಕೊಳ್ಳಬೇಕೆಂದು ಸಾಹಸಪಟ್ಟರು ಇದು ಸಾಧ್ಯವಾಗಲಿಲ್ಲ. ಈ ಕಡಿದಾಟದಲ್ಲಿ ಆಸ್ಟ್ರಿಯಾದವರ ಕಡೆ 160 ಜನ ಕೊಲೆಯಾದರು, 500 ಮಂದಿಗೆ ಗಾಯಗಳಾದವು.

ಮಾಂಟೆನೀಗ್ರೋ ಮತ್ತು ಆಸ್ಟ್ರಿಯಾ.

ಮಾಂಟಿನೀಗ್ರೋದವರು ಬೋಸ್ನಿಯಾ ಸೀಮೆಯೊಳಕ್ಕೆ ನುಗ್ಗಿಹೋಗಿ ಆಸ್ಟ್ರಿಯಾದವರ ಮೇಲೆ ಯುದ್ಧಮಾಡಿ ಅವರನ್ನು ಸೋಲಿಸಿ ಎರಡು ಪಟ್ಟಣಗಳನ್ನು ಆಕ್ರಮಿಸಿಕೊಂಡಿದಾರೆ.

ಸಮುದ್ರದ ಮೇಲೆ.

ಒಂದು ತಂತೀ ವರ್ತಮಾನವು ಉತ್ತರ ಕಡಲಿನಲ್ಲಿ ಹಡಗುಗಳ ಯುದ್ಧವಾಗಿರುವಂತೆ ಸೂಚಿಸುತ್ತವೆ; ಆದರೆ ಆ ವರ್ತಮಾನದ ಅಭಿಪ್ರಾಯ ಸರಿಯಾಗಿ ಗೊತ್ತಾಗುವುದಿಲ್ಲ.

ಉತ್ತರ ಕಡಲಿನಲ್ಲಿ ಹಾಕಿರುವ ಮೈನ್ ಎಂಬ ಸಿಡಿಮದ್ದಿನ ಗುಂಡುಗಳು ಒಡೆದು ಬ್ರಿಟಿಷರ ನಾಲ್ಕು ಹಡಗುಗಳು ಮುಳುಗಿಹೋದವು. ಈ ಪೈಕಿ ಒಂದು ಫಿರಂಗಿಗಳ ಸಣ್ಣ ಹಡಗು, ಇನ್ನೊಂದು ವ್ಯಾಪಾರದ ದೊಡ್ಡ ಹಡಗು. ಅವುಗಳಲ್ಲಿದ್ದ ಇಬ್ಬರು ನಾವಿಕರು ಗಾಯಪಟ್ಟಿದಾರೆ, ಆರು ಮಂದಿ ಸಿಕ್ಕಿ ಇಲ್ಲ. ಇನ್ನೊಂದು ಹಡಗಿನಲ್ಲಿದ್ದವರ ಪೈಕಿ ಬಹು ಮಂದಿ ಬಹುಶಾ ಸಮುದ್ರದ ಪಾಲಾದರು.

ಉತ್ತರ ಕಡಲಿನಲ್ಲಿ ಮೀನು ಹಿಡಿಯುವುದಕ್ಕಾಗಿ ಹೋಗಿದ್ದ ಬ್ರಿಟಿಷರ ಹದಿನೈದು ದೋಣಿಗಳನ್ನು ಜರ್ಮನಿಯ ಎರಡು ಹಡಗುಗಳು ಮುಳುಗಿಸಿಬಿಟ್ಟವು. ಅವುಗಳಲ್ಲಿದ್ದ ಬ್ರಿಟಿಷ್ ಜನರನ್ನು ಯುದ್ಧದಲ್ಲಿ ಸಿಕ್ಕಿದವರೆಂದು ಜರ್ಮನಿಗೆ ಹಿಡಿದುಕೊಂಡು ಹೋಗಿದಾರೆ.

ಸಬ್‌ಮೇರೀನ್ ಎಂಬ ಹಡಗು ಜರ್ಮನಿಯವರ ಒಂದು ವಿಮಾನಯಂತ್ರವನ್ನು ಸ್ವಾಧೀನಪಡಿಸಿಕೊಂಡಿದೆ. ಆ ವಿಮಾನವು ಯಾವಾಗಲೋ ಸಮುದ್ರದ ಮೇಲೆ ಬಿದ್ದು 20 ಗಂಟೆ ಹೊತ್ತಿನಿಂದ ತೇಲಿಕೊಂಡು ಹೋಗುತ್ತಿತ್ತು. ಬ್ರಿಟಿಷರು ಆ ವಿಮಾನವನ್ನು ಮುಳುಗಿಸಿಬಿಟ್ಟು, ಅದರಲ್ಲಿದ್ದ ಇಬ್ಬರನ್ನು ಹಾರಿಚ್ [ನಮ್ಮ ನಕ್ಷೆ ನೋಡಿ] ಎಂಬ ಇಂಗ್ಲೆಂಡಿನ ಪೂರ್ವತೀರ ಪಟ್ಟಣಕ್ಕೆ ಹಿಡಿದುಕೊಂಡು ಬಂದಿದಾರೆ.

ಜಪಾನ್ ಮತ್ತು ಜರ್ಮನಿ.

ಜಪಾನ್‌ನರು ಚೀನೆಯಲ್ಲಿ ಜರ್ಮನಿಯವರ ಸ್ವಾಸ್ಥ್ಯದ ಹೊರಪಾರ್ಶ್ವಕ್ಕೆ 2,900 ಸೈನ್ಯಗಳನ್ನು ಹಡಗುಗಳ ಮೇಲೆ ತಂದು ಇಳಿಸಿರುತ್ತಾರೆ. ಬಹುಶಾ ಇದುವರೆಗೆ ಯುದ್ಧವೇನೂ ನಡೆದಿರುವಂತೆ ಕಾಣುವುದಿಲ್ಲ. ಅಲ್ಲಿರುವ ಏಳು ಸಣ್ಣ ದ್ವೀಪಗಳನ್ನು ಜಪಾನ್‌ನವರು ಸ್ವಾಧೀನಪಡಿಸಿಕೊಂಡಿದಾರೆ.

ಇಂಗ್ಲೆಂಡು.

ಗ್ರೇಟ್ ಬ್ರಿಟನ್‌ನಲ್ಲಿ ಸೈನ್ಯವನ್ನು ಹೆಚ್ಚಿಸಬೇಕೆಂದು ಸಂಕಲ್ಪ ಮಾಡಿಕೊಂಡು ಅದಕ್ಕಾಗಿ ಜನರನ್ನು ಸೇರಿಸಿಕೊಳ್ಳುತ್ತಿದಾರೆ. ಇದುವರೆಗೆ 3,00,000 ಜನರು ಸೇನೆಗೆ ಸೇರಿಕೊಂಡು ತರಪೇತಾಗುತ್ತಿರುವರು. ಇವರು ಯುದ್ಧಭೂಮಿಗೆ ಹೋಗಿ ಶತ್ರುಗಳ ಮೇಲೆ ಕಾದಾಡುವಂತಾಗುವುದಕ್ಕೆ ಒಂದೆರಡು ತಿಂಗಳು ತರಪೇತಾಗಬೇಕು ಬ್ರಿಟಿಷರು 30 ವಿಮಾನಯಂತ್ರಗಳನ್ನು ಇಂಗ್ಲಿಷ್ ಕಡಲನ್ನು ದಾಟಿಸಿ ಯುದ್ಧಕಾರ್ಯಗಳಲ್ಲಿ ಸಹಾಯಮಾಡುವಂತೆ ಕಳುಹಿಸಿಕೊಟ್ಟರು.

ಪ್ರಿನ್ಸ್ ಆಫ್ ವೇಲ್ಸ್ ರವರು ಪ್ರಾರಂಭಮಾಡಿರುವ ಯುದ್ಧದ ರಿಲೀಫ್ ಫಂಡಿಗೆ ಇದುವರೆಗೆ ಚಂದಾ ವಸೂಲಾಗಿರುವುದು ಮೂರು ಕೋಟಿ ರೂಪಾಯಿ.

ಗ್ರೇಟ್ ಬ್ರಿಟನ್ ರಾಜ್ಯಭಾರದ ಪ್ರಧಾನ ಮಂತ್ರಿಯಾದ ಮಿ|| ಆಸ್ಕಿತ್ ರವರು ಕಳೆದ ಶುಕ್ರವಾರ ಲಂಡನ್ ಪಟ್ಟಣದ ಗಿಲ್ಡ್‌ಹಾಲ್ ಎಂಬ ಸಭಾಮಂದಿರದಲ್ಲಿ ಸಾವಿರಾರು ಇಂಗ್ಲಿಷ್ ಪ್ರಜೆಗಳ ಮಧ್ಯೆ ನಿಂತು ವಿಶೇಷವೂ ಅಪೂರ್ವವೂ ಆದ ಭಾಷಣವನ್ನು ಮಾಡಿದರು. ಅದರ ಮುಖ್ಯಾಶಯವೇನೆಂದರೆ—ಬ್ರಿಟನ್ ರಾಜ್ಯವು ಈ ಯುದ್ಧವನ್ನು ಕೊನೆಯ ತನಕ ನಡಿಸಿಯೇ ಬಿಡುವುದಾಗಿ ಸಂಕಲ್ಪಮಾಡಿಕೊಂಡಿದೆ. ಹಿಂದುಸ್ಥಾನವು ಬಹಳ ಬೇಗನೆ ಚಕ್ರಾಧಿಪತ್ಯಕ್ಕೆ ಸಹಾಯ ಮಾಡಿ ಬೆಂಬಲ ಕೊಡುತ್ತಿರುವುದು. ಪ್ರತಿ ಪಂಗಡದವರೂ, ಎಲ್ಲಾ ಮತಸ್ಥರೂ, ಬ್ರಿಟಿಷರೂ, ದೇಶೀಯರೂ, ಸಾಮಂತ ಅರಸುಗಳೂ, ಸಾಮಾನ್ಯ ಪ್ರಜೆಗಳೂ, ಹಿಂದೂಗಳೂ, ಮಹಮದಿಯರೂ ಈ ಕಷ್ಟಕಾಲದಲ್ಲಿ ಸಾರ್ವಭೌಮ ಸರ್ಕಾರದವರಿಗೆ ಸಹಾಯ ಮಾಡಬೇಕೆಂಬ ಕುತೂಹಲದಿಂದ ಮೇಲಾಡುತ್ತಿದಾರೆ. ಹಿಂದುಸ್ಥಾನದ ಸೈನದ ಪೈಕಿ ಉತ್ತಮೋತ್ತಮವಾದ ಎರಡು ಡಿವಿಜನ್ ಸೈನ್ಯಗಳು ಅಲ್ಲಿಂದ ಹೊರಟು ಯುದ್ಧಭೂಮಿಗೆ ಬರುತ್ತಿರುವವು ಅವರ ಈ ಸಹಾಯವನ್ನು ನೋಡಿ ನಾವುಗಳೆಲ್ಲಾ ಅವರನ್ನು ಪ್ರೀತಿಸಿ ಕೊಂಡಾಡುವೆವು. ನಮ್ಮ ಬ್ರಿಟಿಷ್ ಸಾಮ್ರಾಜ್ಯದಲ್ಲಿ ನಾವು ದೇಶ ಜಾತಿ ಕುಲಗಳ ತಾರತಮ್ಯವನ್ನು ಇಟ್ಟುಕೊಂಡಿಲ್ಲ. ಸಕಲ ಜನಾಂಗಗಳಿಗೆ ಸೇರಿದ ನಮ್ಮ ಸಮಸ್ತ ಪ್ರಜೆಗಳನ್ನೂ ಏಕರೀತಿಯಾಗಿ ಕಾಣುತ್ತಾ ಪರಿಪಾಲಿಸಿಕೊಂಡು ಬಂದಿರುತ್ತೇವೆ ಅವರಾಗಿಯೇ ಉತ್ಸಾಹಪಟ್ಟು ಈಗ ನಮಗೆ ಸಹಾಯ ಮಾಡಲು ಬಂದಿರುವುದರಿಂದ ಅವರನ್ನು ನಮ್ಮ ಬ್ರಿಟಿಷ್ ಸೈನಿಕರ ಅಕ್ಕಪಕ್ಕಗಳಲ್ಲಿ ನಿಲ್ಲಿಸಿಕೊಂಡು ಶತ್ರುಗಳ ಮೇಲೆ ಯುದ್ಧಮಾಡಲು ಕಳುಹಿಸುವೆವು. ಇದಲ್ಲದೆ ನಮ್ಮ ಬ್ರಿಟಿಷ್ ಚಕ್ರಾಧಿಪತ್ಯದ ಇತರ ಸ್ವಾಸ್ಥ್ಯಗಳಿಂದಲೂ ಸೈನ್ಯ ಮುಂತಾದ ಸಹಾಯ ಹೇರಳವಾಗಿ ದೊರಕಿದೆ. ಇದರಿಂದ ನಮ್ಮ ಚಕ್ರಾಧಿಪತ್ಯದ ಸಾರ್ವತ್ರಿಕವಾದ ಮನಸ್ಸೂ ಒಂದೇ ಆಗಿದೆ ಎಂದೂ, ಪ್ರಪಂಚವೆಲ್ಲಾ ಆಯುಧಪಾಣಿಯಾಗಿ ಬಂದು ನಿಂತಾಗ್ಯೂ ನಮ್ಮ ಚಕ್ರಾಧಿಪತ್ಯದಲ್ಲಿ ಹಬ್ಬಿಕೊಂಡಿರುವ ಅನುರಾಗದ ಬಳ್ಳಿಯನ್ನು ನಾಶಪಡಿಸುವುದಕ್ಕಾಗಲಿ ಕಡಿದುಹಾಕುವುದಕ್ಕಾಗಲಿ ಎಂದಿಗೂ ಸಾಧ್ಯವಾಗುವುದಿಲ್ಲವೆಂಬ ಅಂಶವು ಈಗ ಚೆನ್ನಾಗಿ ದೃಢಪಟ್ಟಿದೆ ಎಂದೂ ಅಪ್ಪಣೆಕೊಡಿಸಿರುತ್ತಾರೆ.

ಸಾರ್ವಭೌಮ ಸರ್ಕಾರದ ಹಿಂದುಸ್ಥಾನ್ ಯುದ್ಧದ ಫಂಡು.

ಮೈಸೂರು ಶಾಖೆ.

ಮೇಲ್ಕಂಡ ರಿಲೀಫ್ ಫಂಡಿಗೆ ಹಣವನ್ನು ಜೊತೆಮಾಡುವುದಕ್ಕೆ "ವೃತ್ತಾಂತ ಪತ್ರಿಕೆ" ಆಫೀಸಿನಲ್ಲಿ ಒಂದು ಫಂಡು ಪ್ರಾರಂಭಿಸಬೇಕೆಂದು ಕಳೆದ ವಾರ ಸೂಚನೆ ಕೊಟ್ಟೆವು. ನಮ್ಮ ದೇಶೀಯರಾದ ಸೈನಿಕರು ಇಂಗ್ಲಿಷ್ ಸಿಪಾಯಿಗಳೊಡನೆ ನಿಂತು ಶತ್ರುಗಳ ಮೇಲೆ ಕಾದಾಡುವುದಕ್ಕಾಗಿ ಯುದ್ಧಭೂಮಿಗೆ ಹೋಗಿದಾರೆ. ಅಂಥವರ ಹೆಂಡಿರು ಮಕ್ಕಳನ್ನೂ ಅವರ ಸಂಸಾರಗಳಿಗೆ ಸೇರಿದ ಇತರ ಸಂಬಂಧಿಗಳನ್ನೂ ಸಂರಕ್ಷಣೆ ಮಾಡುವುದು ನಮ್ಮ ಕರ್ತವ್ಯವಾಗಿದೆ. ನಮ್ಮ ಸೈನಿಕರಲ್ಲಿ ಕೆಲವರು ಗಾಯಪಟ್ಟು ಮತ್ತೆ ದುಡಿಯಲಾರದಂಥಾ ಕಷ್ಟದೆಸೆಯಲ್ಲಿ ಬರಬಹುದು. ಅವರನ್ನೂ ನಾವು ಪೋಷಣೆ ಮಾಡಬೇಕಾಗುತ್ತದೆ. ಈ ಪುಣ್ಯಕರವಾದ ಕಾರ್ಯಕ್ಕೆ ಎಷ್ಟು ಹಣ ಬೇಕಾದೀತೆಂದು ಹೇಳಲಾಗದು. ಆದರೆ ನಮ್ಮ ಪ್ರಜೆಗಳಲ್ಲಿ ಪ್ರತಿ ಒಬ್ಬರೂ ಅಲ್ಪಸ್ವಲ್ಪವಾದರೂ ಈ ಫಂಡಿಗೆ ಚಂದಾ ಕೊಡಬೇಕೆಂದು ಸೂಚಿಸುತ್ತೇವೆ. ಹೆಚ್ಚು ಹಣ ಬೇಕಾದ ಪಕ್ಷದಲ್ಲಿ ಮುಂದೆ ಆ ವಿಚಾರವನ್ನು ಅರಿಕೆಮಾಡುವೆವು. ಇದುವರೆಗೆ ನಮಗೆ ತಲುಪಿರುವ ಚಂದಾ ಎಷ್ಟೆಂದರೆ—

"ವೃತ್ತಾಂತ ಪತ್ರಿಕೆ"	ರೂ.	100
ರೆವ್|| ಎಚ್. ಗಲ್ಲಿಫೋರ್ಡ್, ಮೈಸೂರು	,,	25
ಮ|| ಆರ್. ನಾರಾಯಣಸ್ವಾಮಿ, "ಪತ್ರಿಕೆ" ಆಫೀಸ್	,,	2
ಮ|| ಬಿ ಸಿದ್ಧಲಿಂಗಪ್ಪ, ,, ,,	,,	1
ಜಿ ಕರುಣಮ್ಮ, ಲಂ. ವಿ ಸ್ಕೂಲ್, ದೊಮ್ಮಸಂದ್ರ	,,	1
ಜುಮ್ಲಾ	ರೂ.	129

ಒಳದೇಶದ ವೃತ್ತಾಂತಗಳು.

ಈ ವಾರ ನಮ್ಮ ಪತ್ರಿಕೆಯು ಹತ್ತು ಪುಟಗಳುಳ್ಳದ್ದಾಗಿದೆ.

ಈ ಪತ್ರಿಕೆಯ ಕೂಡ ರಾಜಧಾನಿಯ ಮ|| ಎನ್. ಭಗವಂತರಾವ್ ಮತ್ತು ಆರ್. ಸುಬ್ಬರಾವ್ ಕಂಪನಿಯ ನೋಟೀಸುಗಳನ್ನು ಕಳುಹಿಸಿರುತ್ತೇವೆ.

ಕಳೆದ ಸೋಮವಾರ ಶ್ರೀಮನ್ ಮಹಾರಾಜರವರು ಬೆಂಗಳೂರಿಗೆ ದಯಮಾಡಿದರು. ಅವರು ನೆನ್ನೆ ಅಲ್ಲಿಂದ ವಾಪಸು ಚಿತ್ತೈಸುವರಾಗಿದ್ದರೆಂದು ಕೇಳಿದೆವು.

ತೀರ್ಥಹಳ್ಳಿ ತಾಲ್ಲೂಕಿಗೆ ಸೇರಿದ ಒಂದು ಊರಿನಲ್ಲಿ ಗೌಡರ ಜಾತಿಯವನು ಮಲಗಿ ನಿದ್ದೆ ಮಾಡುತ್ತಿದ್ದಾಗ ಯಾರೋ ಅವನನ್ನು ಕೊಂದು ಶವವನ್ನು ಎಳೆದುಕೊಂಡು ಹೋಗಿ ನದಿಗೆ ಹಾಕಿದರೆಂದೂ, ಸರ್ಕಾರದವರು ಈಗ ನಡೆದಿರುವ ಮರಣದ ನಿಜಸ್ಥಿತಿಯನ್ನು ಪತ್ತೆ ಮಾಡಬೇಕೆಂದೂ ಎರಡು ಬಾತ್ಮಿಗಳು ನಮ್ಮಲ್ಲಿಗೆ ಬಂದಿರುತ್ತವೆ.

ಒಬ್ಬ ಬಾತ್ಮಿದಾರರಿಂದ.—ಚಿಕ್ಕಬಳ್ಳಾಪುರ ತಾಲ್ಲೂಕು ಗುಂಡ್ಲಹಳ್ಳಿ ಗ್ರಾಮದಲ್ಲಿರುವ ಪಾಂಚಾಳದ ಸುಬ್ಬಯ್ಯನವರೂ, ಇವರ ತಮ್ಮ ಪಿಳ್ಳಪತಿಯಪ್ಪನವರೂ ಸೇರಿ ಹಾರ್ಮೋನಿಯಂ ಎನ್ನುವ ವಾದ್ಯದ ಪೆಟ್ಟಿಗೆಯನ್ನು ತಮ್ಮ ಬುದ್ಧಿ ಊಹಾಶಕ್ತಿಯಿಂದಲೇ ಸ್ವಂತವಾಗಿ ತಯಾರುಮಾಡಿರುತ್ತಾರೆ. ಇದರ ಹಾಡುಗಾರಿಕೆಯನ್ನು ಕೇಳಲು ಬಹಳ ಇಂಪಾಗಿರುತ್ತೆ.

ರಾಜಧಾನಿಯಲ್ಲಿ ಪ್ಲೇಗ್ ಉಪದ್ರವು ಹೆಚ್ಚು ಹರಡದಂತೆ ಮಾಡುವುದಕ್ಕಾಗಿ ಸರ್ಕಾರದವರು ಮ|| ಎಂ. ಜಗನ್ನಾಥಯ್ಯನವರನ್ನು ಮ್ಯುನಿಸಿಪಾಲಿಟಿಗೆ ಕಳುಹಿಸಿದಾರೆ. ಇವರು ದಿನವಹಿ ಮಧ್ಯಾಹ್ನದ ಮೇಲೆ ಟೌನ್ ಹಾಲಿನಲ್ಲಿ ಇನಾಕ್ಯುಲೇಷನ್ ಮಾಡುವರು. ಇದುವರೆಗಾಗಲೇ ನೂರಾರು ಮಂದಿ ಹಾಕಿಸಿಕೊಂಡಿದಾರೆ. ಕೆಲವರು ಒಂದು ಕಡೆ ಸೇರಿ ಪ್ಲೇಗ್ ಶಿಡುಬು ಹಾಕಿಸಿಕೊಳ್ಳುವುದಾಗಿ ತಿಳಿಸಿದರೆ ಡಾಕ್ಟರು ಅಂಥಾ ಸ್ಥಳಗಳಿಗೂ ಬರುತ್ತಾರೆ.

ಶ್ರೀಮನ್ ಮಹಾರಾಜರವರು ದಯಮಾಡಿ ಮ|| ಸಾಹುಕಾರ್ ಬಸವಯ್ಯನವರು ಕಟ್ಟಿಸುವ ಸ್ಕೂಲಿಗೆ ಅಸ್ತಿಭಾರವನ್ನು ಹಾಕಿದಾಗ್ಗೆ ಮ|| ಅಂಬಳೆ ಅಣ್ಣಯ್ಯ ಪಂಡಿತರು ಕನ್ನೇಗೌಡನ ಕೊಪ್ಪಲಿನ ಪಟೇಲ್ ರಂಗೇಗೌಡನನ್ನು ಮಹಾರಾಜರವರಿಗೆ ಭೇಟಿಮಾಡಿಸಿ, ಆತನು ಕೊಪ್ಪಲಲ್ಲಿ ಸ್ವಂತ ಹಣವನ್ನು ಖರ್ಚುಮಾಡಿ ಒಂದು ದೊಡ್ಡ ಸ್ಕೂಲನ್ನು ಕಟ್ಟಿಸಿಕೊಡುವುದಕ್ಕೆ ಒಪ್ಪಿರುತ್ತಾನೆಂದು ಅರಿಕೆಮಾಡಿದಾಗ ಮಹಾರಾಜರು ಲಾಲಿಸಿ ಬಹಳ ಸಂತೋಷವೆಂದು ಅಪ್ಪಣೆಕೊಡಿಸಿದರು.

ಮೊನ್ನೆ ಮಂಗಳವಾರ ನಮ್ಮ ಬ್ರಿಟಿಷ್ ರೆಸಿಡೆಂಟರು ತಮ್ಮ ಕುಮಾರ್ತೆಯನ್ನು ಬೆಂಗಳೂರಿನಲ್ಲಿ ಸೈನ್ಯದ ಹುದ್ದೆದಾರರಾಗಿರುವ ಮಿ|| ಟಾಮ್ಲಿನ್‌ಸನ್‌ರವರಿಗೆ ಕೊಟ್ಟು ವಿವಾಹಮಾಡಿದರು. ವಿವಾಹಕಾಲದಲ್ಲಿ ಬಹುಮಂದಿ ಯೂರೋಪಿಯನ್ ಮತ್ತು ದೇಶೀಯ ದೊಡ್ಡ ಮನುಷ್ಯರೂ ಅಧಿಕಾರಿಗಳೂ ಹೋಗಿದ್ದು ದಂಪತಿಗಳಿಗೆ ಶ್ರೇಯಸ್ಸನ್ನು ಬಯಸಿ ನಾನಾ ಶ್ರೇಷ್ಠವಸ್ತುಗಳನ್ನು ಉಡಿಗೊರೆಯಾಗಿ ಕೊಟ್ಟರು. ನೂತನ ದಂಪತಿಗಳು ರಾಜಧಾನಿಯಲ್ಲಿ 8-10 ದಿನಗಳ ತನಕ ಗವರ್ನ್‌ಮೆಂಟ್ ಹೌಸ್ ಎಂಬ ಬಂಗಲೆಯಲ್ಲಿ ಇರುವುದಕ್ಕೆ ಏರ್ಪಾಟಾಗಿದೆ.

ಬೆಂಗಳೂರು ಶ್ರೀನಿವಾಸ ಮಂದಿರದ ಸ್ತ್ರೀಸಮಾಜದ ಮಿಟಿಂಗಿನಲ್ಲಿ ಕಳೆದ ಶನಿವಾರ ಶ್ರೀಮತಿ ಮಹಲಕ್ಷ್ಮಮ್ಮನವರು ಸದ್ಗುಣ ಮತ್ತು ಸದ್ಭಕ್ತಿಬೋಧನೆಯ ವಿಷಯವಾಗಿ ತುಂಬಾ ಸ್ವಾರಸ್ಯವಾದ ಉಪನ್ಯಾಸವನ್ನು ಓದಿದರು. ಬಳಿಕ ಸೆಕ್ರೆಟರಿಯವರು ತಾ. 19 ನೇ ಶನಿವಾರ ಮಹಿಳೆಯರ ದೊಡ್ಡ ಸಭೆ ಜರುಗುವುದೆಂದೂ, ಬ್ರಿಟಿಷ್ ರೆಸಿಡೆಂಟರವರ ಪತ್ನೀರವರು ಸಭೆಯ ಅಗ್ರಾಸನವನ್ನು ವಹಿಸುತ್ತಾರೆಂದೂ, ಈಗಿನ ಯುದ್ಧಪ್ರಕರಣಕ್ಕಾಗಿ ದೇಶೀಯ ಸ್ತ್ರೀಯರು ಯಾವ ರೀತಿಯಲ್ಲಿ ತಮ್ಮ ರಾಜಭಕ್ತಿ ಪ್ರೀತಿ ಅನುತಾಪಗಳನ್ನು ಪ್ರಕಾಶಪಡಿಸುವರೋ ಅದನ್ನು ಗೊತ್ತುಮಾಡಲಾಗುವುದೆಂದೂ ಹೇಳಿದರು.

ಈ ಸಲ ರಾಜಧಾನಿಯ ಸಂಸ್ಕೃತ ಪಾಠಶಾಲೆಯಲ್ಲಿ ವಿದ್ವತ್ ಪರೀಕ್ಷೆಗಳೆಲ್ಲಾ ಪೂರೈಸಿದ ಬಳಿ ಅರಮನೆ ಕಂಟ್ರೋಲರವರ ಪ್ರೋತ್ಸಾಹದಿಂದ ಅದೇ ಪಾಠಶಾಲೆಯಲ್ಲಿ ಕೆಲವರು ವಿದ್ವಾಂಸರು ಉಪನ್ಯಾಸಗಳನ್ನು ಮಾಡಿದರು. ಇದು ಮೊನ್ನೆಗೆ ಪೂರೈಸಿತು. ವೇ|| ಗಳಾದ ಮಂಡಿಕಲ್ ರಾಮಶಾಸ್ತ್ರಿಗಳು ಕರ್ಮಯೋಗವನ್ನೂ, ಸುಬ್ರಹ್ಮಣ್ಯಶಾಸ್ತ್ರಿಗಳು ಜ್ಞಾನಯೋಗವನ್ನೂ, ಲಕ್ಷ್ಮೀಪುರಂ ಶ್ರೀನಿವಾಸಾಚಾರ್ರು ಶಾಸ್ತ್ರತತ್ವವನ್ನೂ, ಹೊಳವನಹಳ್ಳಿ ಶೇಷಾಚಾರ್ರು ಭಕ್ತಿಯೋಗವನ್ನೂ ಕುರಿತು ಬಹಳ ಸ್ವಾರಸ್ಯವಾಗಿಯೂ ಸರಳವಾಗಿಯೂ ಉಪನ್ಯಾಸಗಳನ್ನು ಮಾಡಿದರು. ಮ|| ಅಂಬಳೆ ಅಣ್ಣಯ್ಯಪಂಡಿತರು ಆ ಉಪನ್ಯಾಸಕರನ್ನು ಕುರಿತು ಅವುಗಳನ್ನು ಸರಿಯಾಗಿ ಬರೆದುಕೊಟ್ಟರೆ ತಮ್ಮ ಸ್ವಂತ ಖರ್ಚಿನಿಂದ ಅಚ್ಚು ಹಾಕಿಸಿ ಪ್ರಚಾರಮಾಡುತ್ತೇವೆಂದು ಹೇಳಿದ್ದರ ಮೇಲೆ ಅವರೆಲ್ಲಾ ಬರೆದು ಕೊಡಲು ಒಪ್ಪಿಕೊಂಡಿದಾರೆ.

ಸಂಸ್ಥಾನದ ಆಮಲೆ ಅಂಗಡಿಗಳಲ್ಲೂ ಸಂತೆಗಳಲ್ಲೂ ವರ್ತಕರು ಉಪಯೋಗಿಸುವ ಅಳತೆ ಮತ್ತು ತೂಕದ ಸಾಧನಗಳು ಸರ್ಕಾರದ ನಿರಖಿನ ಪ್ರಕಾರ ಇವೆಯೋ ಇಲ್ಲವೋ ಎಂಬುವುದನ್ನು ಆಗಿಂದಾಗ್ಗೆ ಪರೀಕ್ಷೆ ಮಾಡುವ ಅಧಿಕಾರವನ್ನು ಸರ್ಕಾರದವರು ಮುಂದೆ ಹೇಳುವ ಅಧಿಕಾರಿಗಳಿಗೆ ವಹಿಸಿದೆ ಎಂದು ಹುಕುಂ ಕೊಟ್ಟಿದಾರೆ.—ಅಮಲ್ದಾರ್ರು, ಡೆಪ್ಯುಟಿ ಅಮಲ್ದಾರ್ರು, ಬೆಂಗಳೂರು ಡಿ|| ಎಕ್ಸೈಸ್ ಆಫೀಸರು, ಬೆಂಗಳೂರು ಡಿ|| ಪೋಲೀಸ್ ಸೂಪರಿಂಟೆಂಡು, ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟರು, ಪೋಲೀಸ್ ಇನ್‌ಸ್ಪೆಕ್ಟರು, ಈ ಅಧಿಕಾರಿಗಳು ಸರ್ಕಾರದ ಉದ್ದೇಶವನ್ನು ಸಾರ್ಥಕಪಡಿಸುವುದರ ಮೂಲಕ ಪ್ರಜೆಗಳಿಗೆ ಉಪಕಾರವಾಗಿರುವರೆಂದು ನಿರೀಕ್ಷಿಸುತ್ತೇವೆ. ಈ ಸಂದರ್ಭದಲ್ಲಿ ಸರ್ಕಾರದವರು ಚಲಾವಣೆಗೆ ತಂದಿರುವ ಸೇರುಗಳಲ್ಲಿ ಪರಸ್ಪರ ವ್ಯತ್ಯಾಸವಿದೆ ಎಂದು ರಾಜಧಾನಿಯ ವರ್ತಕರು ಹೇಳುತ್ತಾರೆ ಇದನ್ನು ಸರ್ಕಾರದವರು ಸರಿಪಡಿಸಬೇಕಾಗಿದೆ.

ಅನುಕೂಲಸ್ಥಿತಿಯಲ್ಲಿರುವ ಒಬ್ಬ ಸ್ಮಾರ್ತ ಬ್ರಾಹ್ಮಣರ ಸಂಸಾರದಲ್ಲಿ ಅವರೂ, ಅವರ ಪತ್ನಿಯೂ, ಅಡಿಗೆಯವನೂ, ಹೆಣ್ಣು ಆಳು ಇಷ್ಟು ಜನರು ಮಾತ್ರ ಇರುತ್ತಾರೆ. ಅವರು ಮನೆಯಲ್ಲಿಲ್ಲದಾಗ ಅವರ ಪತ್ನಿಯ ಜೊತೆಯಲ್ಲಿ ಸ್ನೇಹಿತರಾಗಿ ಒಳ್ಳೇ ನಡತೆಯಿಂದ ಇದ್ದುಕೊಂಡಿರಲು, ಜೀವನಕ್ಕೆ ಕಷ್ಟಪಡುತ್ತಿರುವ ಬ್ರಾಹ್ಮಣ ಹೆಂಗಸು ಯಾರಿಗಾದರೂ ಇಷ್ಟವಿದ್ದಲ್ಲಿ ಮೇಲ್ಕಂಡ ಸಂಸಾರದಲ್ಲಿ ಆಕೆಯು ಆಕೆಗೆ ಇಷ್ಟವಿದ್ದಷ್ಟು ಕಾಲ, ಅನುಕೂಲವಾದ ಅನ್ನವಸ್ತ್ರಗಳಿಗೆ ಯಾವ ಕೊರತೆಯೂ ಇಲ್ಲದೆ ಸುಖದಿಂದಿರಬಹುದು. ಇಷ್ಟವುಳ್ಳ ಸ್ತ್ರೀಯರು ಅವರ ವಿಳಾಸಗಳನ್ನು ಈ ಪತ್ರಿಕೆಯ ಮ್ಯಾನೇಜರಿಗೆ ತಿಳಿಸಿದರೆ ಎಲ್ಲಾ ವಿವರಗಳನ್ನೂ ತಿಳಿಸಲಾಗುತ್ತೆ. ಓದುಬರಹ ಬಾರದ ಇಂಥಾ ಯಾರಾದರೂ ಹೆಂಗಸರನ್ನು ಬಲ್ಲವರು ಈ ಸಂಗತಿಯನ್ನು ತಿಳಿಸಿ ಒಪ್ಪಿದವರ ವಿಚಾರವನ್ನು ಈ ಪತ್ರಿಕೆಯ ಮ್ಯಾನೇಜರಿಗೆ ತಿಳಿಸಿದರೆ ಆ ಹೆಂಗಸರಿಗೆ ಅವರು ಬಹಳ ಉಪಕಾರವಾದಂತಾಗುತ್ತದೆ ಎಂದು ಒಬ್ಬ ಬಾತ್ಮಿದಾರರು ಬರೆಯುತ್ತಾರೆ.

ತಾಲ್ಲೋಕು ವರ್ತಮಾನ.

ಆನೇಕಲ್ಲ ತಾ|| ಹುಲಿಕಲ್ಲು ಗ್ರಾಮ.—ಈ ಗ್ರಾಮದಲ್ಲಿ ಮ್ಯುನಿಸಿಪಲ್ ಕಂದಾಯವನ್ನು ವಸೂಲ್ ಮಾಡುತ್ತಾದಕ್ಕೆ ಸುಮಾರಾಗಿ ಸುಮಾರು ಏಳೆಂಟು ವರ್ಷಗಳಾಯಿತು. ಆದಾಗ್ಯೂ ಮಳೆಗಾಲವು ಪ್ರಾಪ್ತವಾದರೆ ಈ ಗ್ರಾಮದ ಬೀದಿಗಳಲ್ಲಿ ಸಂಚಾರಮಾಡುವುದು ಬಹಳ ಕಷ್ಟವಾಗಿದೆ. ಈ ಗ್ರಾಮಕ್ಕೆ ಮ್ಯುನಿಸಿಪಲ್ ಮೆಂಬರುಗಳು ಆರು ಜನಗಳೂ. ಶೇನ್‌ಬೋಗ, ಪಟೇಲ್, ಪೋಲೀಸ್ ಪಟೇಲ್ ಇಬ್ಬರೂ ಇದಾರೆ. ಇದು ಬಹಳ ದೊಡ್ಡ ಗ್ರಾಮ ಇಲ್ಲಿನ ಪ್ರಜಾ ಸಂಖ್ಯೆ ಸುಮಾರು 3,000 ಮ್ಯುನಿಸಿಪಲ್ ಕಂದಾಯವು ವರ್ಷಕ್ಕೆ 3,000 ರೂಪಾಯಿ ವಸೂಲ್ ಆಗುತ್ತೆ. ಇಬ್ಬರು ಜಾಡಮಾಲಿಗಳಿಗೆ ತಿಂಗಳಿಗೆ 5 ರೂಪಾಯಿನ ಮೇರೆ ಸಂಬಳ ಕೊಡುತ್ತಾ, ಬಾಕೀ ಹಣಕ್ಕೆ ಗ್ರಾಮದ ಪಾಕೀಜು ವಗೈರೆ ವಿಷಯದಲ್ಲಿ ಯಾವ ವಿಧವಾದ ಖರ್ಚನ್ನೂ ಮಾಡುವುದಿಲ್ಲ. ಅಮಲ್ದಾರ್ರವರು ತಿಂಗಳಿಗೆ ಒಂದಾವರ್ತಿ ಬಂದರೂ, ಗಮನಕ್ಕೆ ತೆಗೆದುಕೊಳ್ಳುವದಿಲ್ಲ. ಗ್ರಾಮಸ್ಥರು ಮೆಂಬರುಗಳಿಗೂ, ಅಮಲ್ದಾರ್ರವರಿಗೂ ಎಷ್ಟು ಹೇಳಿದಾಗ್ಯೂ ನಿಷ್ಫಲವಾಗಿದೆ. ಆದ್ದರಿಂದ ತಾಲ್ಲೂಕು ಅಮಲ್ದಾರರು ಈ ವಿಷಯಕ್ಕೆ ಗಮನಕೊಟ್ಟು ಜನಗಳ ಪ್ರೀತಿಗೆ ಪಾತ್ರರಾಗುತ್ತಾರೆಂದು ನಂಬಿದೇವೆ. ಬಾಕೀ ಉಳಿಯುವ ಮ್ಯುನಿಸಿಪಲ್ ಹಣದಿಂದ ನಮ್ಮ ಗ್ರಾಮವು ಶುಚಿಯಾಗುವಂತೆ ಮಾಡಬೇಕು.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1914 ನೇ ಇಸವಿ ಆಗಸ್ಟ್ 31 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ.

ರೇಣ:—(1)	ಷೇರು ಮೊಬಲಗು	ರೂ. 9,93,195
,, (2)	ಡಿಪಾಜಿಟ್ಟುಗಳು	,, 20,36,160
,, (3)	ಇತರೆ	,, 13,347
(ಆಣೆ, ಕಾಸು ಬಿಟ್ಟಿರುತ್ತೆ.)	ಜುಮ್ಲಾ	ರೂ. 30,42,502

ಜೇಷ:—(1)	ಕೈಯಲ್ಲೂ, ಬ್ಯಾಂಕುಗಳಲ್ಲಿರುವ ಹಣ	ರೂ 7,12,599
,, (2)	ಖಾತೆ ಮತ್ತು ಇತರ ಸಾಲಗಳು	,, 16,61,806
,, (3)	ಡಿಸ್ಕೌಂಟು ಮಾಡಿದ ವಾಯಿದೆ ಹುಂಡಿಗಳು	,, 2,53,025
,, (4)	ಇನ್‌ವೆಸ್ಟ್‌ಮೆಂಟುಗಳು	,, 2,50,000
,, (5)	ಏಜನ್ಸಿಗಳಲ್ಲಿರುವ ಮೊಬಲಗು	,, 2,41,598
,, (6)	ಬ್ಯಾಂಕಿನಲ್ಲಿರುವ ಸಾಮಾನುಗಳು	,, 10,379
,, (7)	ಇತರೆ	,, 8,986
(ಆಣೆ, ಕಾಸು ಬಿಟ್ಟಿರುತ್ತೆ.)	ಜುಮ್ಲಾ	ರೂ. 30,42,592

ಡಬ್ಲಿಯು. ಸಿ. ರೋಸ್, ಮ್ಯಾನೇಜರ್.

ಮೈಸೂರು ಸರ್ಕಾರಿ ಹುಕುಮುಗಳು.

ಮೈಸೂರು ಮಿಲಿಟರಿ ಸೈನ್ಯಗಳು.—ಸರ್ಕಾರದವರು ಈ ಇಲಾಖೆಯ 1912-13 ನೇ ಸಾಲಿನ ರಿಪೋರ್ಟನ್ನು ಪ್ರಕಟಿಸಿದಾರೆ. ನಮ್ಮ ಸಂಸ್ಥಾನದಲ್ಲಿ ಒಟ್ಟು 2,804 ಮಂದಿ ಸೈನಿಕರೂ ಉದ್ಯೋಗಸ್ಥರೂ ಇರುತ್ತಾರೆ. ಇವರ ಸಲುವು ಮುಂತಾದದ್ದಕ್ಕಾಗಿ ಸರ್ಕಾರದವರು 10,06,103 ರೂಪಾಯಿ ಖರ್ಚುಮಾಡಿದರು. ಈ ಪೈಕಿ 606 ಸೈನ್ಯ ಇಂಪೀರಿಯಲ್ ಸರ್ವೀಸಿಗೆ ಸೇರಿದೆ. ಈ ಸೈನ್ಯವನ್ನು ಈಗ ಪ್ರಾಪ್ತವಾಗಿರುವ ಯುದ್ಧಕ್ಕೋಸ್ಕರ ನಮ್ಮ ಮಹಾರಾಜರವರು ಇಂಡಿಯಾ ಗವರ್ನ್‌ಮೆಂಟಿನವರ ಉಪಯೋಗಕ್ಕಾಗಿ ವಹಿಸಿರುತ್ತಾರೆ. ಇದನ್ನು ಇಂಡಿಯಾ ಗವರ್ನ್‌ಮೆಂಟಿನವರು ಅಂಗೀಕರಿಸಿರುತ್ತಾರೆಯೋ ಇಲ್ಲವೋ, ಹಾಗೆ ಉಪಯೋಗಿಸಿಕೊಳ್ಳುವ ಅಗತ್ಯವಿದೆಯೋ ಇಲ್ಲವೋ ತಿಳಿಯಲಿಲ್ಲ. ಹ್ಯಾಗೂ ಅವಶ್ಯವಿದ್ದಾಗ ಅವರು ಉಪಯೋಗಪಡಿಸಿಕೊಳ್ಳುವುದಕ್ಕೆ ನಮ್ಮ ಸಂಸ್ಥಾನವು ಸೈನ್ಯವನ್ನು ಸಿದ್ಧಮಾಡಿಟ್ಟುಕೊಂಡಿರುವುದು ಕುಂಬಾ ಸಂತೋಷಪ್ರದವಾಗಿದೆ. ಈ ಸೈನ್ಯವು ಯುದ್ಧಕಾರ್ಯಕ್ಕೆ ಸಂಬಂಧಪಟ್ಟ ನಾನಾ ಭಾಗಗಳಲ್ಲಿ ಬಹಳ ಚೆನ್ನಾಗಿ ತರಪೇತಾಗಿರುವುದು.

ಸರ್ಕಾರಿ ಲೈಫ್ ಇನ್ಶುರೆನ್ಸ್ ಫಂಡು.—ಮೈಸೂರು ಸರ್ಕಾರದವರು ತಮ್ಮ ಸರ್ವೀಸಿನಲ್ಲಿರುವವರಿಗೂ, ತಾವು ಒಪ್ಪಿ ಸೇರಿಸಿಕೊಳ್ಳುವ ಇತರ ಪ್ರಜೆಗಳಿಗೂ ಈ ಜೀವವಿಮೆ ಕಂಪನಿಯನ್ನು ಕಳೆದ 1892-93 ನೇ ಸಾಲಿನಲ್ಲಿ ಪ್ರಾರಂಭಿಸಿ ಆ ಲಾಗಾಯಿತು ಅದನ್ನು ನಡಿಸಿಕೊಂಡು ಬರುತ್ತಿದಾರೆ. ಈ ಕಂಪನಿಯ 1912-13 ನೇ ಸಾಲಿನ ಜಮಾ ಖರ್ಚಿನ ರಿಪೋರ್ಟು ಈಗ ಪ್ರಕಟವಾಗಿದೆ. ಈಗ ಈ ಫಂಡಿಗೆ 16,217 ಜನರು ಸೇರಿಕೊಂಡು ತಿಂಗಳಿಗೆ 26,034 ರೂಪಾಯಿ ಚಂದಾ ಕಟ್ಟುತ್ತಿದಾರೆ. ಇವರು ವಿಮೆ ಮಾಡಿರುವ ಹಣ 74,99,837 ರೂಪಾಯಿ.—ಈ ಸಾಲಿನಲ್ಲಿ 93 ಮಂದಿ ಕಾಲವಾದರು. ಅವರಿಗೆ 62,053 ರೂಪಾಯಿ ಫಂಡಿನಿಂದ ಪಾವತಿ ಆಗಬೇಕಾಯಿತು. ಇದಲ್ಲದೆ 55 ಮಂದಿ ಪೆನ್ಷನ್ ಮೇಲೆ ನಿವೃತ್ತರಾದದ್ದರಿಂದ ಅವರಿಗೆ 81,243 ರೂಪಾಯಿ ಸಲ್ಲಬೇಕಾಗಿದೆ. ಈ ಫಂಡಿಗೆ ಸೇರಿ ಚಂದಾ ಕೊಡತಕ್ಕವರಿಗೆ ಕುಂಬಾ ಪ್ರಯೋಜನವುಂಟು; ಆದರೆ ಅನೇಕರು ಚಂದಾ ದರಗಳು ಬಹಳ ಹೆಚ್ಚೆಂದು ಆಕ್ಷೇಪಣೆ ಮಾಡುತ್ತಾರೆ.

ರಸ್ತೆಗಳಲ್ಲಿ ಗಾಡಿಗಳ ಸಂಚಾರ.—ಸಂಸ್ಥಾನದ ರಸ್ತೆಗಳಲ್ಲಿ ಗಾಡಿಗಳೂ ಸಾರೋಟುಗಳೂ, ಮೋಟರ್ ಗಾಡಿಗಳೇ ಮುಂತಾದವೂ ಯಾವಾಗಲೂ ಎಡಪಾರ್ಶ್ವದ ಅಂಚಿನಲ್ಲೇ ತಿರುಗಾಡಬೇಕೆಂದು ಸರ್ಕಾರದವರು ವಿಧಾಯಕಮಾಡಿ, ಈ ವಿಧಿಯನ್ನು ಮೊದಲು ಎಲ್ಲಾ ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕು ಹೆಡ್‌ಕ್ವಾರ್ಟರುಗಳಿಗೂ, ಕೋಲಾರ್ ಚಿನ್ನದ ಗಣಿಗಳಿಗೂ ಜಾರಿಗೆ ತಂದರು. ಈಚೆಗೆ ಗಾಡಿ ಮುಂತಾದವುಗಳ ಆಮದುರಪ್ತು ಸರಾಗವಾಗಿಯೂ, ಅಪಾಯವಾಗದಂತೆಯೂ ನಡೆಯುವುದಕ್ಕೋಸ್ಕರ ಸರ್ಕಾರದವರು ಈ ವಿಧಿಯನ್ನು ಸಂಸ್ಥಾನಾಮುಳ ಸಮಸ್ತ ರಸ್ತೆಗಳಿಗೂ ಜಾರಿಗೆ ತಂದಿರುತ್ತಾರೆ. ಎಲ್ಲಾ ತರದ ಗಾಡಿಗಳೂ ರಸ್ತೆಗಳಲ್ಲಿ ಎಡಭಾಗದಲ್ಲೇ ಹೋಗಬೇಕೆಂದು ಕಾನೂನ್ ಮಾಡಲಾಗಿದೆ. ಸರ್ಕಾರಿ ಅಧಿಕಾರಿಗಳೂ, ಪ್ರಜೆಗಳೂ ಈ ಹುಕುಮನ್ನು ರೂಢಿಗೆ ತಂದುಕೊಳ್ಳುತ್ತಾರೆಂದು ಹಾರೈಸಲ್ಪಟ್ಟಿದೆ. ಸರ್ಕಾರದವರ ಈ ಉದ್ದೇಶವು ನೆರವೇರುವುದಕ್ಕೆ ರೆವಿನ್ಯೂ ಅಧಿಕಾರಿಗಳು ಈ ಕಾನೂನಿನ ಉದ್ದೇಶವನ್ನು ಸಂಸ್ಥಾನದ ಎಲ್ಲಾ ಗ್ರಾಮ ಊರುಗಳಲ್ಲೂ ಡಂಗೂರ ಹಾಕಿಸಿ ಪ್ರಜೆಗಳಿಗೆ ತಿಳಿಸಬೇಕೆಂದೂ, ಅದರಂತೆ ಪ್ರಜೆಗಳು ರೂಢಿಗೆ ತರುವುದನ್ನು ನೋಡಿಕೊಳ್ಳಬೇಕೆಂದೂ ಅಪ್ಪಣೆಕೊಟ್ಟಿದಾರೆ. ಇದಲ್ಲದೆ ವಿದ್ಯಾಭ್ಯಾಸದ ಇಲಾಖೆಯವರು ಹೈಸ್ಕೂಲುಗಳಲ್ಲೂ, ಪ್ರೈಮರಿ ಪಾಠಶಾಲೆಗಳಲ್ಲೂ ಈ ರೂಲನ್ನು ಓದಿಸಿ ತಿಳಿಸಬೇಕಾಗಿದೆ. ಪೊಲೀಸಿನವರು ಈ ವಿಧಿಯ ಪ್ರಕಾರ ಜನರು ನಡೆಯುವ ಭಾಗದಲ್ಲಿ ಅವರಿಗೆ ತಿಳುವಳಿಕೆಕೊಟ್ಟು ನೋಡಿಕೊಳ್ಳಬೇಕು. ಮತ್ತು ಎರಡು ವರುಷಗಳ ತನಕ ರೆವಿನ್ಯೂ ಮತ್ತು ವಿದ್ಯಾ ಇಲಾಖೆಗಳವರು ಈ ರೂಲನ್ನು ಮೂರು ತಿಂಗಳಿಗೊಂದಾವರ್ತಿ ಮೇಲ್ಕಂಡಂತೆ ಪ್ರಜೆಗಳಿಗೆ ಸಾರಿಸಿ ತಿಳಿಸುತ್ತಾ ಬರಬೇಕೆಂದೂ ವಿಧಾಯಕವಾಗಿದೆ.

ಗ್ರೇಟ್ ಬ್ರಿಟನ್ ಮತ್ತು ಜರ್ಮನಿ.

ಯುದ್ಧಕ್ಕೆ ಮುಂಚೆ ನಡೆದ ವಿಶೇಷ ಸಂಗತಿಗಳು

ಗ್ರೇಟ್ ಬ್ರಿಟನ್ ರಾಜ್ಯಕ್ಕೂ ಜರ್ಮನಿಗೂ ಸ್ನೇಹಭಾವವು ಒಡೆದುಹೋಗುವುದಕ್ಕಿಂತ ಮುಂಚೆ ಆ ಎರಡು ರಾಜ್ಯಗಳ ರಾಯಭಾರಿಗಳಿಗೂ ಜರುಗಿದ ವಾಗ್ವಾದಗಳೇ ಮುಂತಾದ ಸಂಗತಿಗಳು ಬಹಳ ಆಶ್ಚರ್ಯಕರವಾಗಿರುತ್ತವೆ. ಗ್ರೇಟ್ ಬ್ರಿಟನ್ ರಾಜ್ಯದ ಫಾರಿನ್ ಸೆಕ್ರೆಟರಿ ಮಿ|| ಸರ್ ಎಡ್ವರ್ಡ್ ಗ್ರೇಯವರು ಅದರ ವೃತ್ತಾಂತವನ್ನು ಪ್ರಕಟ ಮಾಡಿಸಿರುತ್ತಾರೆ. ಈ ಅಪೂರ್ವವಾದ ವಿಚಾರವನ್ನು ಸಂಕ್ಷೇಪೀಕರಿಸಿ ತಿಳಿಸುವೆವು.

ಗ್ರೇಟ್ ಬ್ರಿಟನ್ ರಾಜ್ಯದ ರಾಯಭಾರಿಯು ಜರ್ಮನಿ ರಾಜಧಾನಿಯಾದ ಬರ್ಲಿನ್ ಪಟ್ಟಣದಲ್ಲಿದ್ದು, ಈತನು ಆಗಸ್ಟ್ ತಾ. 4 ರಲ್ಲಿ ಜರ್ಮನಿಯ ಫಾರಿನ್ ಸೆಕ್ರೆಟರಿಯಾದ ಹರ್ ವಾನ್ ಜಾಗ್ ಎಂಬಾತನನ್ನು ಕುರಿತು—ಜರ್ಮನಿಯು ತನ್ನ ಕರಾರನ್ನು ಮೀರಿ ತನ್ನ ಸೈನ್ಯವನ್ನು ಬೆಲ್ಜಿಯಂ ರಾಜ್ಯದೊಳಕ್ಕೆ ಕಳುಹಿಸುತ್ತದೆಯೋ ಎಂದು ಪ್ರಶ್ನೆಮಾಡಿದನು. ಅದಕ್ಕಾತನು ಕೊಡಲೇ—ಹೌದು, ಜರ್ಮನಿಯವರು ಆಗಲೇ ತಮ್ಮ ಸೈನ್ಯವನ್ನು ಆ ದೇಶದೊಳಕ್ಕೆ ಎಲ್ಲೇ ದಾಟಿಸಿ ಕಳುಹಿ ಬಿಟ್ಟಿದಾರೆ. ಜರ್ಮನಿಯವರು ಫ್ರಾನ್ಸಿಗೆ ಹೋಗುವುದಕ್ಕೆ ಅದೇ ಸುಲಭವಾದ ಮಾರ್ಗ. ಆದಷ್ಟು ಬೇಗನೆ ಫ್ರಾನ್ಸಿಗೆ ಹೋಗಿ ಫ್ರೆಂಚರ ಮೇಲೆ ಜಯಪ್ರದ ಹೊಂದಬೇಕೆಂಬುವುದೇ ಮುಖ್ಯ ಉದ್ದೇಶ. ಈ ಮಾರ್ಗವನ್ನು ಬಿಟ್ಟರೆ ದಕ್ಷಿಣಭಾಗದಲ್ಲಿ ಫ್ರೆಂಚರ ಸ[illegible]ನ್ನು ಏದುರು ನುಗ್ಗಿ ಹೋಗುವುದು ಕಾಲ ವಿಳಂಬವಾಗುತ್ತದೆ. ಈಗ [illegible] ತಮ್ಮ ಸೈನ್ಯವನ್ನು ಹಿಂದಕ್ಕೆ ಕರಸಿಕೊಳ್ಳುವುದು ಸಾಧ್ಯವಲ್ಲ ಎಂದು ಹೇಳಿದನು.

ಆಗ ಇಂಗ್ಲಿಷ್ ರಾಯಭಾರಿಯು ಇಂಗ್ಲಿಷ್ ಗವರ್ನ್‌ಮೆಂಟಿನ ಕಡೇ ಮಾತನ್ನು ತಿಳಿಸಿದನು. ಕೊಡಲೇ ಹರ್ ವಾನ್ ಜಾಗೌ ಜರ್ಮನಿಯವರ ಉದ್ದೇಶವೆಲ್ಲಾ ಹಾಳಾಯಿತಲ್ಲಾ ಎಂಬರ್ಥಕ್ಕೆ ತನ್ನಲ್ಲಿ ತಾನೇ ಮರುಗಿದನು. ಇಂಗ್ಲೆಂಡಿನ ಸ್ನೇಹವನ್ನು ಕಾಪಾಡಿಕೊಂಡು, ಅದರ ಮೂಲಕ ಫ್ರೆಂಚರ ಸ್ನೇಹವನ್ನು ಸಂಪಾದಿಸಿಕೊಳ್ಳಬೇಕೆಂಬುವುದೇ ಜರ್ಮನಿಯವರ ಉದ್ದೇಶವಾಗಿತ್ತಂತೆ. ಆ ಮೇಲೆ ಆ ಸೆಕ್ರೆಟರಿಯು ಅಂಥಾ ಸಂದರ್ಭದಲ್ಲಿ ಇಂಗ್ಲೆಂಡಿನವರು ಮಾತುಕೊಟ್ಟು ಒಪ್ಪಿಕೊಂಡಿರುವ ಪ್ರಕಾರ ನಡೆವದ್ದೇ ಸರಿ ಎಂದೂ, ಅವರು ಇನ್ನಾವ ರೀತಿ ವರ್ತಿಸುವುದೂ ಸಹಜವಲ್ಲವೆಂದೂ ಹೇಳಿಬಿಟ್ಟನು.

ಅಲ್ಲಿಂದ ಇಂಗ್ಲಿಷ್ ರಾಯಭಾರಿಯು ಜರ್ಮನಿಯ ಛಾನ್ಸಲರ ಭಕ್ತಿಯನ್ನು ಹೋಗಿ ಕಂಡನು. ಈ ಛಕ್ತಿಯು ಅಷ್ಟು ಹೊತ್ತಿಗಾಗಲೇ ಕಳವಳಪಡುತ್ತಿದ್ದು ಇಂಗ್ಲಿಷ್ ರಾಯಭಾರಿಯನ್ನು ನೋಡಿ ಆತನ ಕೂಡ ದೀರ್ಘಸಂಭಾಷಣೆಗೆ ಪ್ರಾರಂಭಿಸಿ,—ಬೆಲ್ಜಿಯಮಿನ ತಟಸ್ಥಭಾವವನ್ನು ಕಾಪಾಡಬೇಕು ಎಂಬ ಮಾತು ಇರುವ ಆ ಒಂದು ಚೂರು ಕಾಗದದ ನಿಮಿತ್ತ ಗ್ರೇಟ್ ಬ್ರಿಟನ್ ರಾಜ್ಯವು ತನ್ನ ದಾಯಾದಿಗಳ ಗುಂಪಿಗೆ ಸೇರಿದ ಜರ್ಮನಿಯ ಮೇಲೆ ಯುದ್ಧಕ್ಕೆ ಹೊರಟಿದೆಯಲ್ಲಾ ಎಂತಲೂ, ಇಂಗ್ಲೆಂಡಿಗೂ ಜರ್ಮನಿಗೂ ಇದ್ದ ಸ್ನೇಹವು ಒಟ್ಟುಗಳಿಂದ ಕಟ್ಟಿದ ಮನೆಯೋ ನಾದಿಯಲ್ಲಿ ಉರುಳಿ ಬಿದ್ದುಹೋಯಿತಲ್ಲಾ ಎಂತಲೂ ಹೇಳಿ, ಈ ಯುದ್ಧದ ಭಯಂಕರವಾದ ಅನರ್ಥಗಳಿಗೆಲ್ಲಾ ಗ್ರೇಟ್ ಬ್ರಿಟನ್ ರಾಜ್ಯವೇ ಕಾರಣವಾಗುತ್ತದೆಂದು ದೂರಿದನು. ಅದಕ್ಕೆ ಇಂಗ್ಲಿಷ್ ರಾಯಭಾರಿಯು—ಗ್ರೇಟ್ ಬ್ರಿಟನ್ ರಾಜ್ಯವು ತನ್ನ ಭಾಷೆಯನ್ನೂ ಗೌರವವನ್ನೂ ಕಾಪಾಡಿಕೊಳ್ಳುವುದಕ್ಕೆ ಯುದ್ಧಕ್ಕೆ ಹೊರಟು ಬೆಲ್ಜಿಯಮಿನ ತಾಟಸ್ಥ್ಯವನ್ನು ಸಂರಕ್ಷಣೆಮಾಡಬೇಕಾಗಿದೆ ಎಂದೂ, ಇದರಿಂದ ಸಂಭವಿಸಬಹುದಾದ ಅನರ್ಥಗಳನ್ನು ನೋಡಿ ಗ್ರೇಟ್ ಬ್ರಿಟನ್ ರಾಜ್ಯವು ಹಿಂಜರಿಯುವುದಿಲ್ಲವೆಂದೂ ಹೇಳಿ, ಹೆಚ್ಚು ಮಾತನಾಡದೆ ಮೌನವನ್ನು ವಹಿಸಿದನು. ಆ ಛಕ್ತಿಗೆ ಇಂಗ್ಲಿಷರು ಯುದ್ಧಕ್ಕೆ ಹೊರಟರಲ್ಲಾ ಎಂಬ ಚಿಂತೆಯು ವಿಶೇಷವಾಗಿ, ಸಂಭಾಷಣೆ ನಡಿಸಲು ಮನಸ್ಸಾಗಲಿಲ್ಲ. ಅದು ಅಲ್ಲಿಗೆ ಮುಕ್ತಾಯವಾಯಿತು.

ಬಳಿಕ 5 ನೇ ತಾರೀಖಿನ ಬೆಳಗ್ಗೆ ಇಂಗ್ಲಿಷ್ ರಾಯಭಾರಿ ಇದ್ದ ಬಂಗಲೆಗೆ ಜರ್ಮನಿಯವರು ಮುತ್ತಿಗೆ ಹಾಕಿಕೊಂಡರು. ಇದನ್ನು ಕೇಳಿ ಹರ್ ವಾನ್ ಜಾಗೌ—ಈ ಸೈನ್ಯವು ಬರ್ಲಿನ್ ನಗರದ ಕೀರ್ತಿಗೆ ಶಾಶ್ವತವಾದ ಕಳಂಕವನ್ನುಂಟುಮಾಡಿದೆ ಎಂದು ಹೇಳಿದನು.

ಜರ್ಮನಿ ಚಕ್ರವರ್ತಿಯವರು ತಮ್ಮ ಅಂಗರಕ್ಷಕರಲ್ಲಿ ಒಬ್ಬನನ್ನು ಬ್ರಿಟಿಷ್ ರಾಯಭಾರಿಯ ಬಳಿಗೆ ಕಳುಹಿಸಿ ಅವರ ಬಂಗಲೆಗೆ ಮುತ್ತಿಗೆ ಹಾಕಿದ ವಿಷಯದಲ್ಲಿ ತಮ್ಮ ವ್ಯಸನವನ್ನು ತಿಳಿಸಿದರು. ಅದರ ಮೇಲೆ ಚಕ್ರವರ್ತಿಯವರು ಹೇಳಿ ಕಳುಹಿಸಿದ್ದೇನೆಂದರೆ—ಹಿಂದೆ ವಾಟರ್‌ಲೂ ಯುದ್ಧ ನಡೆದಾಗ್ಗೆ ಇಂಗ್ಲಿಷರ ಕೂಡ ಕಲೆತು ಜರ್ಮನಿಯು ಶತ್ರುವಿನ ಮೇಲೆ ಯುದ್ಧಮಾಡಿದೆ; ಅಂಥಾ ಸ್ನೇಹಿತರ ಮೇಲೆ ಇಂಗ್ಲಿಷರು ಯುದ್ಧಕ್ಕೆ ಹೊರಟಿರುವುದರಿಂದ ಜರ್ಮನಿಯವರಲ್ಲಿ ಇಂಗ್ಲಿಷರ ಮೇಲೆ ದುರಭಿಪ್ರಾಯಗಳು ಉಂಟಾಗಿ ಈ ರೀತಿ ರಾಯಭಾರಿಯ ಬಂಗಲೆಗೆ ಮುತ್ತಿಗೆಹಾಕಿದರು ಎಂಬುದೇ. ಜರ್ಮನಿ ಚಕ್ರವರ್ತಿಯು ಆ ರಾಯಭಾರಿಗೆ ಇನ್ನೂ ಹೇಳಿಕಳುಹಿಸಿದ್ದೇನೆಂದರೆ—ನನಗೆ ನಿಮ್ಮ ಇಂಗ್ಲಿಷ್ ದೊರೆಯು ಹಿಂದೆ ಕೊಟ್ಟಿರುವ “ಫೀಲ್ಡ್ ಮಾರ್ಷಲ್,” “ಅಡ್ಮಿರಲ್” ಎಂಬೀ ಬಿರುದುಗಳನ್ನು ಬಹಳ ಗೌರವದಿಂದ ವಹಿಸಿಕೊಂಡಿರುತ್ತೇನಾದರೂ, ಈಗ ನಾನು ಅವುಗಳನ್ನು ನಿರಾಕರಿಸಬೇಕಾಗಿ ಬಂದಿದೆ ಎಂಬ ಅಂಶವನ್ನು ಜಾರ್ಜ್ ದೊರೆಯವರಿಗೆ ಅರಿಕೆಮಾಡಿ ಎಂದು ವಿನಯದಿಂದ ಹೇಳಿಕಳುಹಿಸಿದರು.

ಕ್ಷಯರೋಗವೂ, ಅದರ ಪರಿಹಾರವೂ.

ಡಾಕ್ಟರ್ ಲ್ಯಾಂಕ್ಯಾಸ್ಟರವರ ಉಪನ್ಯಾಸ.

ಕಳೆದ ಶನಿವಾರ ಸಾಯಂಕಾಲ ರಾಜಧಾನಿಯ ವೆಸ್ಲಿಯನ್ ಮಿಷನ್ ಸಭಾ ಮಂದಿರದಲ್ಲಿ “ವೃತ್ತಾಂತ ಪತ್ರಿಕೆಯ” ಸಂಪಾದಕರಾದ ರೆವ್|| ಎಚ್. ಗಲ್ಲಿಫೋರ್ಡ್ ಸಾಹೇಬರವರ ಅಧ್ಯಕ್ಷತೆಯಲ್ಲಿ ಡಾಕ್ಟರ್ ಎ. ಲ್ಯಾಂಕ್ಯಾಸ್ಟರ್ ಯವರು ಕ್ಷಯರೋಗದ ಉತ್ಪತ್ತಿಯನ್ನೂ, ಅದರ ನಿವಾರಣೆಯ ಉಪಾಯಗಳನ್ನೂ ಕುರಿತು ಸಕಲಪ್ರಜೆಗಳೂ ಅತ್ಯಂತ ಸುಲಭವಾಗಿ ತಿಳಿದುಕೊಳ್ಳುವಂತೆ ಉಪನ್ಯಾಸಮಾಡಿದರು. ಇವರು 23 ವರುಷಗಳಿಂದ ಪಂಜಾಬ್ ಮತ್ತು ವಾಯುವ್ಯಸರಹದ್ದು ಪ್ರಾಂತ್ಯದಲ್ಲಿ ಸರ್ಕಾರಿ ವೈದ್ಯರಾಗಿ ಕುಂಬಾ ಪ್ರಖ್ಯಾತಿಗೆ ಬಂದಿದಾರೆ. ಹಿಂದುಸ್ಥಾನದಲ್ಲಿ ಕ್ಷಯರೋಗವು ಹೆಚ್ಚುತ್ತಾ ಬಂದಿರುವುದನ್ನು ಇಂಡಿಯಾ ಗವರ್ನ್‌ಮೆಂಟಿನವರು ನೋಡಿ ಅದಕ್ಕೆ ತಕ್ಕ ಪ್ರತೀಕಾರ ಮಾಡಬೇಕೆಂದು ಡಾಕ್ಟರುಗಳ ಸಭೆಯನ್ನು ನಡಿಸಿ ಅವರ ಅಭಿಮತವನ್ನು ಕೇಳಿದರು. ಬಲಾತ್ಕಾರದ ಕಾನೂನು ಜಾರಿಗೆ ತಂದಲ್ಲದೆ ಈ ಜಾಡ್ಯವು ಅಡಗುವುದಿಲ್ಲವೆಂದು ಕೆಲವು ಡಾಕ್ಟರುಗಳು ಅಭಿಪ್ರಾಯಪಟ್ಟರು. ಆದರೆ ಡಾ|| ಲ್ಯಾಂಕ್ಯಾಸ್ಟರವರು ಹಿಂದುಸ್ಥಾನದಲ್ಲಿ ಪ್ರಜೆಗಳು ವಿದ್ಯೆ ಇಲ್ಲದೆ ಮೌಢ್ಯ ಆಚಾರಪದ್ಧತಿಗಳನ್ನು ಇಟ್ಟುಕೊಂಡಿರೋಣದರಿಂದ ಬಲಾತ್ಕಾರದಿಂದ ಅವರಿಗೆ ವಿವೇಕ ಕಲಿಸುವುದು ತರವಲ್ಲವೆಂದೂ, ಯೋಗ್ಯರೂ ಪ್ರಜಾಹಿತಚಿಂತಕರೂ ಆಗಿರುವಂಥಾ ವೈದ್ಯರನ್ನು ದೇಶದ ಮೇಲೆ ಕಳುಹಿಸಿಕೊಟ್ಟು, ಪ್ರಜೆಗಳಿಗೆ ಉಪನ್ಯಾಸಗಳ ಮೂಲಕ ಈ ಜಾಡ್ಯದ ಉತ್ಪತ್ತಿ ಮತ್ತು ಅದರ ಪರಿಹಾರಗಳನ್ನು ತಿಳಿಸುತ್ತಾ ಬರಬೇಕೆಂದೂ ಗವರ್ನ್‌ಮೆಂಟಿಗೆ ಅರಿಕೆಮಾಡಿದರು. ಅದರಂತೆ ಸರ್ಕಾರದವರು ದೇಶದ ಮೇಲೆಲ್ಲಾ ಸುತ್ತಿ ಪ್ರಜೆಗಳಿಗೆ ಉಪನ್ಯಾಸಮಾಡಿ ವಿವೇಕವನ್ನು ಕಲಿಸುವುದಕ್ಕಾಗಿ ಈ ರೋಗದ ವಿಷಯದಲ್ಲಿ ತುಂಬಾ ಅನುಭವವುಳ್ಳ ಡಾಕ್ಟರ್ ಲ್ಯಾಂಕ್ಯಾಸ್ಟರವರನ್ನೇ ನೇಮಕ ಮಾಡಿರುತ್ತಾರೆ. ಇವರು ಆ ಹುಕುಮಿನಂತೆ ಇದುವರೆಗೆ ಈ ರಾಷ್ಟ್ರದಲ್ಲಿ ಸಂಚರಿಸುತ್ತಾ ಸ್ಥಳಾಧಿಕಾರಿಗಳ ಸಹಾಯದಿಂದ ಸಭೆಗಳನ್ನು ನಡಿಸಿ ಉಪನ್ಯಾಸ ಮಾಡುತ್ತಾ ಬಂದಿದಾರೆ. ಕಳೆದ ಶನಿವಾರ ಸಾಯಂಕಾಲ ಅವರು ಮೈಸೂರು ಪಟ್ಟಣದ ಪ್ರಜೆಗಳನ್ನು ಕುರಿತು ಉಪನ್ಯಾಸಪೂರ್ವಕವಾಗಿ ಹೇಳಿದ ಮುಖ್ಯ ವಿಷಯಗಳೇನೆಂದರೆ—

ಕ್ಷಯರೋಗವು ಪ್ಲೇಗ್, ವಾಂತಿಭೇದಿ, ವಿಷಮಜ್ವರಗಳೇ ಮೊದಲಾದಿಯಲ್ಲಿ ಸಣ್ಣ ಕ್ರಿಮಿಗಳ ದೆಸೆಯಿಂದ ಹುಟ್ಟಿ ಹಬ್ಬುತ್ತವೆ. ಈ ಕ್ರಿಮಿಗಳು ಕ್ಷಯರೋಗಿಯ ದೇಹದೊಳಗೆ ವ್ಯಾಪಿಸಿ, ಉಗುಳಿನ ಮೂಲಕ ಹೊರಕ್ಕೆ ಬರುತ್ತವೆ. ನೊಣಗಳು ಈ ಉಗುಳಿನ ಮೇಲೆ ಕುಳಿತು ಅಲ್ಲಿಂದ ಆಹಾರಪದಾರ್ಥಗಳ ಮೇಲೆ ಕೂಡುವುದರಿಂದಲೂ, ಉಗುಳಿನಲ್ಲಿರುವ ಕ್ರಿಮಿಗಳ ದೆಸೆಯಿಂದಲೂ ಆರೋಗ್ಯವಾಗಿರುವವರ ದೇಹದೊಳಕ್ಕೆ ಶ್ವಾಸಕೋಶ ಮತ್ತು ಆಹಾರವಸ್ತುಗಳ ಮೂಲಕ ಪ್ರವೇಶಿಸಿ ಕ್ಷಯರೋಗವನ್ನುಂಟುಮಾಡುತ್ತದೆ. ಹೊಗೆಸೊಪ್ಪು ಚುಟ್ಟಾ ಸೇದುವವರೂ, ಅಡಿಕೆಲೆ ಹಾಕಿಕೊಳ್ಳುವವರೂ ಆ ಪದ್ಧತಿಯನ್ನು ಬಿಟ್ಟುಬಿಡುವುದೇ ಕ್ಷೇಮ. ಇದು ಸಾಧ್ಯವಲ್ಲದಿದ್ದರೆ ಅವರು ಮನೆಗಳೊಳಗೆ ಸಿಕ್ಕಿದ ಕಡೆಗೆಲ್ಲಾ ಉಗಿಯುವುದನ್ನು ನಿಲ್ಲಿಸಬೇಕು. ಬೀದಿಗೆ ಬಂದು ಚರಂಡಿಗಳಲ್ಲಿ ಉಗಿದರೆ ಬಿಸಲು ಬೆಳಕು ಗಾಳಿಗಳ ದೆಸೆಯಿಂದ ಆ ವಿಷಕ್ರಿಮಿಗಳು ಸತ್ತುಹೋಗುತ್ತವೆ. ಮನೆಯೊಳಗೆ ಪಿಂಗಾಣಿಯನ್ನಿಟ್ಟುಕೊಂಡು ಅದರಲ್ಲಿ ಉಗಿದು ಪ್ರತಿದಿನವೂ ಅದನ್ನು ಚೆನ್ನಾಗಿ ತೊಳೆಯಬೇಕು. ಈ ಕ್ರಿಮಿಯು ಕತ್ತಲಾದ, ಶೈತ್ಯವಿರುವ, ಕೊಳಕೂ ಧೂಳೂ ಇರುವ ಕೋಣೆಗಳಲ್ಲಿ ಬಹುಬೇಗ ವೃದ್ಧಿಹೊಂದುತ್ತವೆ. ಮನೆಯ ಎಲ್ಲಾ ಭಾಗಗಳಿಗೂ ಬೆಳಕು ಗಾಳಿ ಬೀಸುವಂತೆ ಬಾಗಿಲು, ಕಿಟಕಿಗಳನ್ನು ತೆರೆದಿಟ್ಟಿರಬೇಕು. ಬಾಗಿಲುಗಳನ್ನೆಲ್ಲಾ ಮುಚ್ಚಿ ಒಂದೇ ಕಿಟಕಿ ತೆರೆದು ಮಲಗಿಕೊಂಡರೆ ಗಾಳಿ ಸಂಚಾರವು ಧಾರಾಳವಾಗಿ ನಡೆಯುವುದಿಲ್ಲ. ಮುಖದ ಮೇಲೂ ಮುಸುಕು ಹಾಕಿಕೊಂಡು ಮಲಗಿ ನಿದ್ದೆ ಮಾಡುವುದು ಬಹಳ ಅನಾರೋಗ್ಯ. ವಿಶೇಷಕಾಲ ಬಯಲಿನಲ್ಲಿ ಅಂದರೆ ಹೊರಗಡೆ ಇರುವುದನ್ನು ಅಭ್ಯಾಸ ಮಾಡಬೇಕು. ದಿನಾ ಕಸರತ್ತು ಮಾಡಿ ದೇಹವನ್ನು ಪುಷ್ಟಿಮಾಡಿಕೊಳ್ಳಬೇಕು. ಆರೋಗ್ಯಕರವಾದ ಮತ್ತು ಚೆನ್ನಾಗಿ ಬೆಂದ ಪದಾರ್ಥಗಳನ್ನು ಊಟಮಾಡಬೇಕು. ಬಾಯನ್ನು ದಿನವೂ ಚೊಕ್ಕಟವಾಗಿ ತೊಳೆದುಕೊಳ್ಳಬೇಕು.

ಗಂಡಸರೇನೋ ಹ್ಯಾಗೂ ಈ ದೇಶದಲ್ಲಿ ತಕ್ಕಮಟ್ಟಿಗೆ ಹೊರಗೆ ಸಂಚಾರ ಮಾಡಿ ಬಿಸಲು ಗಾಳಿ ಬೆಳಕಿನಲ್ಲಿರುತ್ತಾರೆ. ಆದರೆ ಹೆಂಗಸರಿಗೆ ಇದಕ್ಕೆ ಅವಕಾಶವಿಲ್ಲ. ಅವರು ಮನೆಗಳನ್ನು ಬಿಟ್ಟು ಹೊರಗೆ ಹೋಗುವುದು ಅಪರೂಪ. ಮನೆಗಳೊಳಗೆ ಒಳ್ಳೇ ಗಾಳಿ ಬಿಸಿಲು ಬೆಳಕು ಇರುವುದು ಕಷ್ಟ. ಹೆಂಗಸರು ಆರೋಗ್ಯವಾಗಿಯೂ, ಗಟ್ಟಿಮುಟ್ಟಾಗಿಯೂ ಇರಬೇಕಾದರೆ ಅವರು ಹೆರುವ ಮಕ್ಕಳು ಹ್ಯಾಗೆ ಇದ್ದಾರೋ ಹೇಳಬೇಕಾಗಿಲ್ಲ. ಚಿಕ್ಕ ವಯಸ್ಸಿನಲ್ಲಿ ಮದುವೆಮಾಡುವ ಪದ್ಧತಿಯನ್ನು ಬಿಡಬೇಕು. ಹೆರಿಗೆಯಾಗುವ ಕೋಣೆಯಲ್ಲಿ ಧಾರಾಳವಾದ ಬೆಳಕೂ, ಹೊಸ ಗಾಳಿಯೂ ಸಂಚರಿಸುವಂತೆ ಮಾಡಬೇಕು. ಜನರು ಕತ್ತಲ ಕೋಣೆಗಳಲ್ಲಿ ಹೆರಿಗೆ ಮನೆ ಮಾಡಿ, ಅದರಲ್ಲೇ ಬೆಂಕಿಯನ್ನು ಉರಿಸಿ ಗಾಳಿಯನ್ನು ಹಾಳುಮಾಡುತ್ತಾರೆ. ಇದು ಅತ್ಯಂತ ದುಷ್ಟವಾದ ಪದ್ಧತಿ. ಇದರಿಂದ ಬಾಣಂತಿಗೂ, ಶಿಶುವಿಗೂ ಕ್ಷಯ ಹಿಡಿಯುವುದು. ಈ ದೇಶದಲ್ಲಿ ಕ್ಷಯಕ್ಕೆ ಸನಾತನಕಾರಣವೂ ಆದ ಈ ಪದ್ಧತಿಯನ್ನು ಪ್ರಜೆಗಳು ಎಷ್ಟು ಬೇಗನೆ ಬಿಟ್ಟರೆ ಅಷ್ಟು ಕ್ಷೇಮ. ಹೆಂಗಸರಿಗೆ ಗಾಳಿ ಬೆಳಕು ಬಿಸಲಿನ ಅವಕಾಶ ಚೆನ್ನಾಗಿ ದೊರಕುವಂತೆ ಮನೆಗಳಲ್ಲಿ ವಿಶೇಷವಾಗಿ ಕಿಟಕಿಗಳನ್ನಿಡಬೇಕು. ಪರ್ದಾಮರ್ಯಾದೆಯಲ್ಲಿರುವ ಹೆಂಗಸರಿಗೂ ಹೊರಗೆ ಸಂಚರಿಸುವುದಕ್ಕೆ ಅವಕಾಶವಿದೆ. ಮಧ್ಯಸ್ಥರಾದ ಮನೆತನದ ಸ್ತ್ರೀಯರಿಗೆ ಇದು ಸಾಧ್ಯವಿಲ್ಲ. ಇದಕ್ಕೆ ಅನುಕೂಲಗಳನ್ನು ಮನೆಗಳೊಳಗೇ ಕಲ್ಪಿಸಿಕೊಡಬೇಕು. ಮನೆಗಳನ್ನು ಹೊಸ್ತಿಲಿಯಿಂದ ಸಾರಿಸುವ ಪದ್ಧತಿಯು ಬಹಳ ಕೇಡಾದದ್ದು. ಇದನ್ನು ಸಕಲರೂ ಖಂಡಿತವಾಗಿ ಬಿಡಬೇಕು.

ವಿವಾಹಿತರೂ, ವಿವಾಹವಾಗುವವರೂ, [illegible] ರೋಗಿಗಳಲ್ಲಿ [illegible] ಗಳ್ಳರಾದವರೂ ಮೇಲ್ಕಂಡ ನಿಯಮಗಳನ್ನು ನಿಷ್ಠೆಯಿಂದ ಗಮನಿಸಬೇಕು. ತಮ್ಮ ಶಕ್ತಿಯಿರುವ ಮಟ್ಟಿಗೂ ತಮ್ಮ ನೆರೆಹೊರೆಯವರೂ, ಇತರರೂ ವಿವೇಕವನ್ನು ಹೇಳಿ ಸಹಾಯವಾಗಿ ಜನರು ಆ [illegible] ನಡೆದುಕೊಳ್ಳುವಂತೆ [illegible] ಪಡಿಸಬೇಕು. ಇಲ್ಲವಾದರೆ ಈ ಭಯಂಕರವಾದ ರೋಗವು ಪ್ರಜೆಗಳಲ್ಲಿ ಹಬ್ಬಿಕೊಂಡು ಸಕಲ ವಿಧವಾದ ಏಳಿಗೆಯನ್ನೂ ನಾಶಮಾಡುತ್ತದೆ.

ಮನೆಯಲ್ಲಿ ಕ್ಷಯ ಹಿಡಿದ ರೋಗಿ ಇದ್ದರೆ ರೋಗಿಯ ಉಗುಳನ್ನೂ ಶ್ಲೇಷ್ಮವನ್ನೂ ನೆಲದ ಮೇಲೆ ಬೀಳದಂತೆ ಬಹಳ ಜಾಗರೂಕತೆಯಿಂದ ನೋಡಿಕೊಳ್ಳಬೇಕು. ರೋಗಿಯ ಮುಂದೆ ಒಂದು ಪಾತ್ರೆಯನ್ನಿಟ್ಟು ಅದರಲ್ಲೇ ಉಗುಳಿಸಿ ಅದನ್ನು ಹೊರಕ್ಕೆ ಸಾಗಿಸಿ ಚೆನ್ನಾಗಿ ಶುದ್ಧಿಮಾಡಬೇಕು. ಈ ಸುಲಭ ವಿಷಯವನ್ನು ಅಲಕ್ಷ್ಯಮಾಡಿದರೆ ರೋಗವು ಮನೆಯಲ್ಲಿರುವ ಇತರರಿಗೂ ವ್ಯಾಪಿಸುವುದು ಖಂಡಿತ. ಒಂದೇ ಮನೆಯಲ್ಲಿ 6-7 ಜನರು ಈ ರೋಗದಲ್ಲಿ ಸತ್ತಿರುವುದು ಅಪರೂಪವಲ್ಲ.

ಈ ರೀತಿಯಾಗಿ ಡಾಕ್ಟರವರು ಉಪನ್ಯಾಸಮಾಡಿದ ಬಳಿಕ ಅಧ್ಯಕ್ಷರು ಸಭಿಕರ ಸಮ್ಮತಿಯನ್ನೂ ಅವರ ಸಂತೋಷವನ್ನೂ ಡಾಕ್ಟರಿಗೆ ತಿಳಿಸಿ, ಸಭೆಯ ಪರವಾಗಿ ಅವರನ್ನು ವಂದಿಸಿ ಕೂಟವನ್ನು ಮುಕ್ತಾಯಮಾಡಿದರು.

ಡಾಕ್ಟರ್ ಲ್ಯಾಂಕ್ಯಾಸ್ಟರವರು ನಮ್ಮ ಮಹಾರಾಜರವರ ಭೇಟಿ ತೆಗೆದುಕೊಳ್ಳುವುದಾಗಿಯೂ, ಮೈಸೂರು ಸಂಸ್ಥಾನದಲ್ಲಿ ಕ್ಷಯರೋಗ ನಿವಾರಣೆಗೋಸ್ಕರ ಕೆಲವು ಏರ್ಪಾಡುಗಳನ್ನು ಸೂಚಿಸುವುದಾಗಿಯೂ, ಆ ರೀತಿ ನಡಿಸುವ ವಿಷಯದಲ್ಲಿ ಶ್ರೀಮನ್ ಮಹಾರಾಜರವರು ಕುತೂಹಲವನ್ನು ಪ್ರಕಾಶಪಡಿಸಿದರೆಂಬದಾಗಿಯೂ ಆ ದಿನ ಸಭೆಯಲ್ಲಿ ಹೇಳಿದರು.

ಮೈಸೂರು ಕುಂಚಿಟಿಗರ ಎ. ವಿ. ಸ್ಕೂಲು.

ಶ್ರೀಮನ್ ಮಹಾರಾಜರವರು ಅಸ್ತಿಭಾರಶಿಲೆಯನ್ನು ಹಾಕಿದ್ದು.

ಕಳೆದ ಬುಧವಾರ ಸಾಯಂಕಾಲ ಶ್ರೀಮನ್ ಮಹಾರಾಜರವರು ರಾಜಧಾನಿಯಲ್ಲಿ ಕುಂಚಿಟಿಗರ ಎ. ವಿ. ಸ್ಕೂಲ್ ಕಟ್ಟಡಕ್ಕೆ ಅಸ್ತಿಭಾರವನ್ನು ಹಾಕಿದರು. ಮೈಸೂರು ಪಟ್ಟಣದ ವರ್ತಕಮಂಡಲಿಯಲ್ಲಿ ಪ್ರಮುಖರಾಗಿಯೂ, ಮ್ಯುನಿಸಿಪಲ್ ಕೌನ್ಸಿಲರಾಗಿಯೂ ಇರುವ ಮ|| ಸಾಹುಕಾರ್ ಬಸಪ್ಪಯ್ಯನವರು ಉದಾರವಾದ ಮನಸ್ಸಿನಿಂದ ಸುಮಾರು 30,000 ರೂಪಾಯಿ ಮುಟ್ಟಿಸಿ ಕುಂಚಿಟಿಗರ ವಿದ್ಯಾಭಿವೃದ್ಧಿಗಾಗಿ ಕೋಟೆಯ ಪಶ್ಚಿಮ ಪಾರ್ಶ್ವದಲ್ಲಿ ಶಾಶ್ವತವಾದ ಸ್ಕೂಲನ್ನು ಕಟ್ಟಿಸುತ್ತಿದಾರೆ. ಅದರ ಅಸ್ತಿಭಾರ ಶಿಲೆಯನ್ನು ಸ್ಥಾಪಿಸುವುದಕ್ಕಾಗಿ ಆ ದಿನ ಬಹು ಸಂತೋಷವೂ ನೇತ್ರಾನಂದಕರವೂ ಆದ ಏರ್ಪಾಡನ್ನು ಕಟ್ಟಡದ ಬಳಿ ಮಾಡಿದ್ದರು. ರಾಜಧಾನಿಯಲ್ಲಿರುವ ಎಲ್ಲಾ ಕೋಮುಗಳ ಮತ್ತು ಕಸಬುಗಳ ದೊಡ್ಡಮನುಷ್ಯರು ದರ್ಬಾರ್ ದಿರಸಿನಲ್ಲಿ ಹಾಜರಾಗಿದ್ದರು. ಮಂಗಳವಾದ್ಯನಾಗುತ್ತಿರುವಲ್ಲಿ ಶ್ರೀಮನ್ ಮಹಾರಾಜರವರು ಸರದಾರ್ ಗೋಪಾಲರಾಜೇ ಅರಸಿನವರ ಕೂಡ ಸಾರೋಟಿನಲ್ಲಿ ಬಿತ್ತೈಸಿ, ಸಿಂಹಾಸನವನ್ನಲಂಕರಿಸಿದರು.

ಮ|| ಬಸಪ್ಪಯ್ಯನವರ ವಿಜ್ಞಾಪನೆ

ಕೊಡಲೇ ಸಾಹುಕಾರ್ ಬಸಪ್ಪಯ್ಯನವರು ಶ್ರೀಮನ್ ಮಹಾರಾಜರನ್ನು ಕುರಿತು ಅರಿಕೆಮಾಡಿಕೊಂಡದ್ದೇನೆಂದರೆ—

ಮಹಾಸ್ವಾಮಿ, ನಮ್ಮ ಕುಂಚಿಟಿಗರು ಕೇವಲ ಅಕ್ಷರಶೂನ್ಯರಾದ ವ್ಯಾಪಾರಿಗಳಾಗಿ ಇರುವದರಿಂದ ನಮ್ಮ ಜಾತಿಯ ಬಾಲಕರಿಗೆ ಕೊಂಚ ವಿದ್ಯಾಭ್ಯಾಸ ಮಾಡಿಸಿ ಅವರೊಡನೆ ಕೈಗಾರಿಕೆ ಮತ್ತು ವ್ಯಾಪಾರವು ಸೇರಿದರೆ ಅನುಕೂಲವೆಂದು ತಿಳಿದು ನಮ್ಮ ಜಾತಿಯ ಹುಡುಗರಿಗೂ ಮತ್ತು ಇತರ ಎಲ್ಲಾ ಮತಸ್ಥರ ಹುಡುಗರಿಗೂ ಸಹ ಫೀಜು ಇಲ್ಲದೇನೇ ಮುಫತ್ತಾಗಿ ವಿದ್ಯಾದಾನ ಮಾಡಿಸಬೇಕೆಂಬ ಉದ್ದೇಶದಿಂದ 1908 ನೇ ಇಸವಿಯಲ್ಲಿ ಒಂದು ಸ್ಕೂಲನ್ನು ಪ್ರಾರಂಭಿಸಿ ಆ ಲಾಗಾಯ್ತು 1910 ನೇ ಇಸವಿ ಜೂನ್ ಮಾಹೆ ವರೆವಿಗೆ ಎಲ್ಲಾ ಮತಸ್ಥರ ಹುಡುಗರಿಗೂ ಮುಫತ್ತಾಗಿಯೇ ವಿದ್ಯಾಭ್ಯಾಸವಾಗುತ್ತಿತ್ತು. ಆದರೆ 1910 ನೇ ಇಸವಿಯಲ್ಲಿ ಲೇಟ್ ಇನ್ಸ್‌ಪೆಕ್ಟರ್ ಜನರಲ್ ಮಿ|| ವಿಯರ್ ಸಾಹೇಬರವರು ಸ್ಕೂಲ್ ಇನ್ಸ್‌ಪೆಕ್ಷನ್ ಮಾಡಿ ಎಲ್ಲರಿಗೂ ಮುಫತ್ತಾಗಿ ಪಾಠಹೇಳುವುದರಿಂದ ಇತರ ಎಲ್ಲಾ ಸ್ಕೂಲುಗಳೂ ಹೀನಸ್ಥಿತಿಗೆ ಬರಲು ಕಾರಣವಾಗುವುದಾಗಿಯೂ, ಫೀಜುಗಳನ್ನು ವಸೂಲ್ಮಾಡಬೇಕೆಂದಾಗಿಯೂ ಅಪ್ಪಣೆ ಕೊಡಿಸಿದ್ದರ ಮೇಲೆ ನಮ್ಮ ಕುಂಚಿಟಿಗರ ಹುಡುಗರಿಗೂ ಮತ್ತು ಕೇವಲ ಬಡವರಾಗಿರತಕ್ಕ ಇತರ ಎಲ್ಲಾ ಮತಸ್ಥರ ಹುಡುಗರಿಗೂ ಸಹ ಫೀಜು ಮಾಫಿಮಾಡಿ ಇದುವರೆವಿಗೂ ಸ್ಕೂಲನ್ನು ನಡಿಸಿಕೊಂಡು ಬರುತ್ತಾ ಇದೆ. ಈಗ ಈ ಪಾಠಶಾಲೆಯಲ್ಲಿ 9 ತರಗತಿಗಳಿವೆ. ಕುಂಚಿಟಿಗರು 30, ಬ್ರಾಹ್ಮಣರು 92, ಮಹಮ್ಮದಿಯರು 3, ಕ್ಷತ್ರಿಯರು 1, ವೈಶ್ಯರು 6, ಲಿಂಗಾಯತರು 17, ಜೈನರು 2, ಒಕ್ಕಲಿಗರು 10, ಇತರರು 34, ಒಟ್ಟು 185 ಮಂದಿ ವಿದ್ಯಾರ್ಥಿಗಳು ಓದುತ್ತಿದಾರೆ. ಈ ಪಾಠಶಾಲೆಯಲ್ಲಿ ಇಂಗ್ಲಿಷ್ ಕನ್ನಡ ಸಂಸ್ಕೃತ ಪಾಠಗಳು ನಡೆಯುತ್ತಾ ಇವೆ. ಅಲ್ಲದೆ ಈ ವರುಷದಲ್ಲಿ ಹೊಸದಾಗಿ ಕಿಂಡರ್‌ಗಾರ್ಟನ್ ಸಿಸ್ಟಂ ಪ್ರಕಾರ ಡ್ರಾಯಿಂಗ್, ಕಾರ್ಡುಬೋರ್ಡು ವರ್ಕು, ಪೇಪರ್ ಫೋಲ್ಡಿಂಗ್ ವಗೈರೆ ಕಲಿಸುತ್ತಾ ಇದೆ. ಈ ಪಾಠಶಾಲೆಯಿಂದ 1911 ನೇ ಇಸವಿ ಲಾಗಾಯ್ತು ಇಂಗ್ಲಿಷ್ ಲೋಯರ್ ಸೆಕೆಂಡರಿ ಪರೀಕ್ಷೆಗೆ ಬಾಲಕರನ್ನು ಕಳುಹಿಸುತ್ತಾ ಇದೆ. ಆ ವರುಷದಲ್ಲಿ ಎಂಟು ಮಂದಿ ವಿದ್ಯಾರ್ಥಿಗಳು ಪರೀಕ್ಷೆಗೆ ಹೋಗಿ ಎಲ್ಲರೂ ತೇರ್ಗಡೆಯನ್ನು ಹೊಂದಿದರು. ಈಚೆಗೆ ಮೂರು ವರುಷಗಳಿಂದ 26 ಹುಡುಗರು ಪರೀಕ್ಷೆಗೆ ಹೋಗಿ ಇದ್ದು ಆ ಪೈಕಿ 16 ಹುಡುಗರು ತೇರ್ಗಡೆಯನ್ನು ಹೊಂದಿದರು. ಈ ಪೈಕಿ ನಮ್ಮ ಕುಂಚಿಟಿಗರಲ್ಲಿ ಪರೀಕ್ಷೆಗೆ ಹೋಗಿದ್ದ 3 ಮಂದಿ ವಿದ್ಯಾರ್ಥಿಗಳೂ ತೇರ್ಗಡೆಯನ್ನು ಹೊಂದಿರುತ್ತಾರೆ. ಇವರುಗಳಲ್ಲದೆ ಮಂಡ್ಯದ ತಾಲ್ಲೂಕ್ ಹಳ್ಳಿಯಿಂದ ಚಿಕ್ಕನಿಂಗೇಗೌಡ ಎಂಬ ವಿದ್ಯಾರ್ಥಿಯು 1910 ನೇ ಇಸವಿಯಲ್ಲಿ ಈ ಪಾಠಶಾಲೆಗೆ ಸೇರಿ ಇಂಗ್ಲಿಷ್ ಓದಲು ಪ್ರಾರಂಭಿಸಿ ಎರಡೇ ವರುಷಗಳಲ್ಲಿ ಅಂದರೆ 1912 ನೇ ಇಸವಿಯಲ್ಲಿ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದಿರುತ್ತಾನೆ. ಈ ಪಾಠಶಾಲೆಯಿಂದ ತೇರ್ಗಡೆ

ದಾಗಿ ಹೋಗಿರತಕ್ಕ ವಿದ್ಯಾರ್ಥಿಗಳು ಈಗ ಹೈ ಸ್ಕೂಲ್‌ಗಳಲ್ಲೂ ಮತ್ತು ಕಾಲೇಜ್ ಇಂಟರ್‌ಮೀಡಿಯೆಟ್ ತರಗತಿಗಳಲ್ಲೂ ಓದುತ್ತಿದ್ದಾರೆ.—ಸ್ಥಳಸಂಕೋಚವಿರುವ ಸ್ಕೂಲಿಗೆ ಸೇರಲು ಬರತಕ್ಕ ಹುಡುಗರನ್ನು ಸೇರಿಸಿಕೊಳ್ಳಲು ಅವಕಾಶವಿಲ್ಲದ ಕಾರಣ ಒಂದು ವಿಸ್ತಾರವಾದ ಕಟ್ಟಡವನ್ನು ಕಟ್ಟಬೇಕೆಂದು ಯೋಚಿಸಿ ಮಹಾಸ್ವಾಮಿಯವರಲ್ಲಿ ಪ್ರಾರ್ಥಿಸಿಕೊಂಡದ್ದಕ್ಕೆ ಮಹಾಸ್ವಾಮಿಯವರು ಅನುಗ್ರಹಿಸಿ ಮಧ್ಯಸ್ಥಾನವಾದ ಈ ಸ್ಥಳವನ್ನು ದಯಪಾಲಿಸೋಣವಾಯಿತು. ಎಕ್ಸಿಕ್ಯೂಟಿವ್ ಇಂಜಿನಿಯರ್ ಸಾಹೇಬರವರು ಅನುಗ್ರಹಿಸಿ ತಯಾರುಮಾಡಿಸಿ ಕೊಟ್ಟ ಪ್ಲಾನನ್ನು ಮಹಾಸ್ವಾಮಿಯವರು ಪರಾಂಬರಿಸಿ ಒಪ್ಪಿ ಕೊಟ್ಟು ಇರುವ ಪ್ಲಾನ್ ಪ್ರಕಾರ ಮೂವತ್ತು ಸಾವಿರ ರೂಪಾಯಿಗಳಲ್ಲಿ ಈ ಕಟ್ಟಡವನ್ನು ಕಟ್ಟಿಸುತ್ತಾ ಇದೇವೆ.—ಸಾಧಾರಣ ಮನಸ್ಸಿನಿಂದ ನನ್ನ ಪ್ರಾರ್ಥನೆಯನ್ನು ಮಹಾಸ್ವಾಮಿಯವರು ಅಂಗೀಕರಿಸಿ ಈ ಕಟ್ಟಡಕ್ಕೆ ಶಿಲಾನ್ಯಾಸದ ಪ್ರತಿಷ್ಠೆಯನ್ನು ತಮ್ಮ ಹಸ್ತದಿಂದ ಮಾಡುವುದಕ್ಕೆ ಅನುಗ್ರಹಿಸಿ ಈ ದಿನ ದಯಮಾಡಿಸಿರುವುದರಿಂದ ನನ್ನ ಜನ್ಮವು ಸಾರ್ಥಕವಾಯಿತೆಂದು ಮನಃಪೂರ್ವಕವಾಗಿ ಅತ್ಯಂತ ಭಕ್ತಿಯಿಂದ ಅರಿಕೆಮಾಡಿಕೊಳ್ಳುತ್ತೇನೆ. ಈ ಕಟ್ಟಡದ ಪ್ರಾರಂಭೋತ್ಸವಕ್ಕೆ ಮಹಾಸ್ವಾಮಿಯವರ ಪಾದಸ್ಪರ್ಶವಾಗಿ ಇರುವುದರಿಂದ ಈ ಕಟ್ಟಡವು ಶಾಶ್ವತವಾಗಿ ಅನೇಕ ಜನ ವಿದ್ಯಾರ್ಥಿಗಳಿಗೆ ಉಪಕಾರವಾಗುತ್ತೆಂತ ನಾನು ದೃಢವಾಗಿ ನಂಬಿಕೊಂಡು ಇದ್ದೇನೆ. ಈ ಕಟ್ಟಡವು ಕಟ್ಟಿ ಪೂರೈಸಿದ ನಂತರ ಈ ಪಾಠಶಾಲೆಯು ಪಾರೋದ್ಧಾರವಾಗಿ ನಡೆಯುವಂತೆ ತಕ್ಕಷ್ಟು ಫಂಡು ಸಹ ಇಟ್ಟು ನಡಿಸಬೇಕೆಂದು ಆಲೋಚಿಸಿ ಇರುತ್ತೇನೆ. ನಾನು ಈಶ್ವರಪ್ರೀತ್ಯರ್ಥವಾಗಿ ಮೇಲ್ಕಂಡ ಕಾರ್ಯಗಳನ್ನು ಮಾಡುತ್ತಾ ಇರುವುದರಿಂದ ಇದು ಪಾರೋದ್ಧಾರವಾಗಿ ನಡೆಯುವಂತೆ ಮಹಾಸ್ವಾಮಿಯವರು ಅನುಗ್ರಹಿಸಬೇಕೆಂದು ವಿನಯಪೂರ್ವಕವಾಗಿ ಪ್ರಾರ್ಥಿಸುತ್ತೇನೆ, ಮಹಾಸ್ವಾಮಿ.

ಶ್ರೀಮನ್ಮಹಾರಾಜರವರು ಅಪ್ಪಣೆ ಕೊಡಿಸಿದ್ದು.

ಅನಂತರ ಶ್ರೀಮನ್ಮಹಾರಾಜರವರು ಸಭಿಕರನ್ನು ಕುರಿತು ಅಪ್ಪಣೆ ಕೊಡಿಸಿದ ಪ್ರತ್ಯುತ್ತರವೇನೆಂದರೆ:—

ಸಭ್ಯರೇ! ಈ ಪಾಠಶಾಲೆಯ ಚರಿತ್ರೆಯು ಬಹಳ ಸ್ವಾರಸ್ಯವಾಗಿದೆ. ಇದು ಸ್ವಾರ್ಥತ್ಯಾಗಿಗಳಾದ ಕೆಲವು ಜನರ ಧರ್ಮಬುದ್ಧಿಯ ಪ್ರಯೋಜನಕ್ಕೆ ಸ್ವಲ್ಪವಾಗಿ ಆರಂಭಿಸಿ, ಕಳೆದ ಆರು ವರ್ಷಗಳಲ್ಲಿ ಬೆಳೆದು ಅಭಿವೃದ್ಧಿಯನ್ನು ಹೊಂದಿ, ಈಗ ಈ ನಗರದ ಎಲ್ಲಾ ಸಮುದಾಯದ ವಿದ್ಯಾರ್ಥಿಗಳಿಗೂ ಪ್ರಯೋಜನಕರವಾದ ಪ್ರಮುಖ ವಿದ್ಯಾಲಯವಾಗಿ ಪರಿಣಮಿಸಿದೆ. ಸರ್ಕಾರದ ಅಧಿಕಾರಿಗಳಲ್ಲದ ನಗರವಾಸಿಗಳು ಒಂದು ಪಾಠಶಾಲೆಯನ್ನು ಸ್ಥಾಪಿಸುವುದಕ್ಕೆ ಮಾತ್ರವಲ್ಲದೆ ಅದಕ್ಕೆ ಬೇಕಾದ ಕಟ್ಟಡವನ್ನು ಕಟ್ಟಿಸಿಕೊಡುವುದಕ್ಕೂ, ಅದು ಪಾರೋದ್ಧಾರವಾಗಿ ನಡೆಯಲು ತಕ್ಕ ಭಿತ್ತಿಯನ್ನು ಕಲ್ಪಿಸುವುದಕ್ಕೂ ಮುಂದಾಗಿ ಬರುವುದನ್ನು ನೋಡುವುದು ಸ್ವಲ್ಪಮಟ್ಟಿಗೆ ಅಪೂರ್ವವೆಂದೇ ಹೇಳಬಹುದು. ಮಿ. ಬನುಮಯ್ಯನವರಂಥಾ ಜನೋಪಕಾರಿಗಳು ವಿದ್ಯೆಯನ್ನು ಅಭಿವೃದ್ಧಿಪಡಿಸುವ ಮಹಾ ಕಾರ್ಯದಲ್ಲಿ ನನ್ನ ಸರ್ಕಾರಕ್ಕೆ ಸಹಕಾರಿಗಳಾಗಿ ಮಾಡುವ ಉದಾರಪ್ರಯತ್ನಗಳನ್ನು ನಾವು ವಿಶೇಷವಾಗಿ ಅಭಿನಂದಿಸುತ್ತೇವೆ. ಈ ದಿವಸದ ಸಮಾರಂಭದಲ್ಲಿ ಅಗ್ರಾಸನವನ್ನು ವಹಿಸುವುದು ನಮಗೆ ಬಹಳ ಸಂತೋಷಕರವಾಗಿದೆ. ಮಿ. ಬನುಮಯ್ಯನವರ ಉತ್ಕೃಷ್ಟವಾದ ನಿದರ್ಶನವನ್ನು ಇತರರೂ ಅನುಸರಿಸುವರೆಂದು ನಂಬಿದ್ದೇವೆ. ನಾವು ಈ ಅಸ್ತಿಭಾರದ ಶಿಲಾಪ್ರತಿಷ್ಠೆಯನ್ನು ಮಾಡುವ ಈ ಸಮಯದಲ್ಲಿ ಈ ಪಾಠಶಾಲೆಯು ಪ್ರಯೋಜನಕಾರಿಯಾಗಿ ಚಿರಕಾಲ ನೆಲಸಿ, ಸ್ಥಾಪಕರ ಹೆಸರನ್ನು ಅನೇಕ ಸಂತತಿಗಳವರೆಗೂ ಶಾಶ್ವತಗೊಳಿಸಲಿ ಎಂದು ಕೋರುತ್ತೇವೆ.

ಎಂಬೀ ರೀತಿ ಅಪ್ಪಣೆ ಕೊಡಿಸಿ, ಮ್ಯುನಿಸಿಪಲ್ ಪ್ರೆಸಿಡೆಂಟರವರ ಮತ್ತು ಮ|| ಬನುಮಯ್ಯನವರ ಪ್ರಾರ್ಥನೆಯ ಪ್ರಕಾರ ಕಟ್ಟಡದ ಬಳಿಗೆ ಚಿತ್ತೈಸಿ ಸ್ವಹಸ್ತ ಬೆಳ್ಳಿಯ ಕರಣೆಯಿಂದ ಗಾರೆಯನ್ನು ತೆಗೆದು ಹಾಸಿ ಅದರ ಮೇಲೆ ಅಸ್ತಿಭಾರದ ಶಿಲಾಫಲಕವನ್ನು ಇಳಿಸಿ ಗಟ್ಟಿಮಾಡಿದರು. ಅದರ ಮೇಲೆ ಭಂಗಾರದ ಅಕ್ಷರದಲ್ಲಿ ಶ್ರೀಮನ್ಮಹಾರಾಜಾ ಸರ್ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್, ಜಿ. ಸಿ. ಎಸ್. ಐ. ರವರು 1914 ನೇ ಸೆಪ್ಟೆಂಬರ್ ತಾ. 3 ನೇ ಬುಧವಾರ ಈ ಶಿಲೆಯನ್ನು ಪ್ರತಿಷ್ಠೆಮಾಡಿರುತ್ತಾರೆ ಎಂಬುದಾಗಿ ಕೆತ್ತಿ ಇದೆ. ಆಗ ಸಮಯದಲ್ಲಿ ಶ್ರೀಮನ್ಮಹಾರಾಜರವರ ಫೋಟೋಗಳು ತೆಗೆಯಲ್ಪಟ್ಟವು.

ಶ್ರೀಮನ್ಮಹಾರಾಜರವರು ಪಡುವಣದ ಸೀಟದಲ್ಲಂಕರಿಸಿದ ಮೇಲೆ ಮ|| ಬನುಮಯ್ಯನವರು ಹಾರ ತುರಾಯಿ ಪಾನ್‌ಸುಪಾರಿ ಮುಂತಾದವುಗಳನ್ನು ಅರ್ಪಿಸಿದರು. ಶ್ರೀಮನ್ಮಹಾರಾಜರವರು ಬೀಳ್ಕೊಂಡು ಜಯಧ್ವನಿಯೂ ವಾದ್ಯಘೋಷಗಳೂ ಆಗುತ್ತಿರುವಲ್ಲಿ ಸಾರೋಟಿನಲ್ಲಿ ಕುಳಿತು ದಯಮಾಡಿದರು. ಬಳಿಕ ಸಭಿಕರಿಗೆಲ್ಲಾ ಪಾನ ತಾಂಬೂಲಾದಿಗಳು ನಡೆದು ಈ ಸಂತೋಷಕೂಟವು ಸಾರ್ಥಕವಾಗಿಯೂ ತೃಪ್ತಿಕರವಾಗಿಯೂ ಮುಕ್ತಾಯಹೊಂದಿತು.

ಬಾತ್ಮೀದಾರರಿಗೆ ನೋಟೀಸ್.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಜೋಕೆಗಾರರಾಗುವದಿಲ್ಲ ವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜಾಗಾ ಕೊಡಲಾರೆವು. ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸವನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಜಾಗಾ ಕೊಡಲಾರೆವು.

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು. ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕೊಡೆವು. ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ.

ತೀರ್ಥಹಳ್ಳಿ ತಾಲ್ಲೂಕು ಆರಗದಲ್ಲಿ ಸ್ಥಾಪಿಸಲ್ಪಟ್ಟಿರುವ ಪರಸ್ಪರ ಸಹಾಯ ಸಂಘವು ಸರಿಯಾಗಿ ನಡೆಯುತ್ತಾ ಇಲ್ಲವೆಂದೂ, ಅಮಲ್ದಾರ್ರವರು ಸ್ಥಾಪಿಸಬೇಕೆಂದು ಚಂದಾ ಮುಂತಾದದ್ದು ಕೊಡಿಸಿರುವ ರೀಡಿಂಗ್ ರೂಮ್ ಇನ್ನೂ ಜಾರಿಗೆ ಬರಲಿಲ್ಲವೆಂದೂ ಒಬ್ಬ ಬಾತ್ಮೀದಾರರು ಬರೆಯುತ್ತಾರೆ. ಈ ಕಾರ್ಯಗಳನ್ನು ಪ್ರಜೆಗಳೇ ಮುಂದರಿಸಿ ಮಾಡಿಕೊಳ್ಳಬೇಕು. ಅಧಿಕಾರಿಗಳು ಪ್ರೋತ್ಸಾಹಪಡಿಸಿ ಪ್ರಾರಂಭಮಾಡಿದರೂ ಜನರು ನಡಿಸಿಕೊಡದೆ ಅಭಿವೃದ್ಧಿಗೆ ಬಾರದಿರುವುದು ವಿಷಾದಕರವಾಗಿದೆ.

ನ್ಯಾಯವಿರುದ್ಧಕರ ವೈರಿ, ಆರಗ. ಸ್ಥಳಾಧಿಕಾರಿಗಳು ವಿಚಾರಮಾಡದೇ ಇದ್ದರೆ ಹೋದರೆ ಕಷ್ಟನಷ್ಟಗಳಿಗೆ ಗುರಿಯಾದವರು ಡೆಪ್ಯುಟಿ ಕಮೀಷನರಿಗೂ, ದಿವಾನರವರಿಗೂ ಅರ್ಜಿ ಬರೆದುಕೊಳ್ಳಬಹುದು. ಇತ್ಯರ್ಥವಾಗದೆ ಇರುವ ಮೊಕದ್ದಮೆ ವಿಷಯದಲ್ಲಿ ಪಕ್ಷಪಾತವಾದ ಬಾತ್ಮಿಯನ್ನು ಪ್ರಕಟಿಸಬಾರದು.

ಈ ವಾರ ನಮಗೆ ತಲಪಿರುವ ಹಲವು ಬಾತ್ಮಿಗಳನ್ನು ಪ್ರಕಟಿಸಲು ಸ್ಥಳ ದೊರಕಲಿಲ್ಲವೆಂದು ಸೂಚಿಸಿ, ಲೇಖಕರ ಕ್ಷಮೆಯನ್ನು ಬೇಡುತ್ತೇವೆ.—ಎಡಿ.

ಕರೆಸ್ಪಾಂಡೆನ್ಸ್.

ಎ. ವಿ. ಸ್ಕೂಲುಗಳು.

ಅಯ್ಯಾ,—ಮೈಸೂರು ಸಂಸ್ಥಾನದೊಳಗೆ ಇರುವ ಎಲ್ಲಾ ಎ. ವಿ. ಸ್ಕೂಲು ಮಾಸ್ಟರುಗಳಿಗೆ ರಿವೈಜ್ಡ್ ಸ್ಕೇಲು ಮೇರೆಗೆ ಸಂಬಳಗಳನ್ನು ಜಾಸ್ತಿ ಮಾಡಿರುವದಕ್ಕಾಗಿ ನಾವು ಅಂದರೆ ಪ್ರಜೆಗಳೆಲ್ಲಾ ನಮ್ಮ ಶ್ರೀಮನ್ಮಹಾರಾಜರಿಗೂ ಮತ್ತು ಘನವನ್ನು ಹೊಂದಿದ ದಿವಾನ್ ಸಾಹೇಬರಿಗೂ ತುಂಬಾ ಕೃತಜ್ಞರಾಗಿರುತ್ತೇವೆ. ಆದರೆ ಸ್ಕೂಲು ಮಾಸ್ಟರುಗಳು ತಮಗೆ ಸರ್ಕಾರದವರು ತೋರಿಸಿರುವ ರಿಯಾಯ್ತಿಯನ್ನು ತಮ್ಮ ಕೆಲಸದಲ್ಲಿ ತುಂಬಾ ಮುತವರ್ಜಿ ತೋರಿಸುವದರಿಂದ ಕಾಪಾಡಿಕೊಂಡಲ್ಲಿ ಪ್ರಜೆಗಳಿಗೆ ತುಂಬಾ ಅನುಕೂಲವಾಗುತ್ತೆ. ಒಬ್ಬ ಪ್ರಜೆ.

ಇಂಡಸ್ಟ್ರಿಯಲ್ ಸ್ಕೂಲುಗಳು.

ಅಯ್ಯಾ,—ಮೈಸೂರು ಸಂಸ್ಥಾನದೊಳಗೆ ಪೈಕಿ ಹೊಳೆ ನರಸಿಪುರ, ಮೇಲುಕೋಟೆ, ದೊಡ್ಡಬಳ್ಳಾಪುರ, ದಾವಣಗೆರೆ ಮೊದಲಾದ ಹಲವೆಡೆಗಳಲ್ಲಿ ಸರ್ಕಾರದವರು ಇಂಡಸ್ಟ್ರಿಯಲ್ ಸ್ಕೂಲುಗಳನ್ನು ಇಟ್ಟು ಜನರಿಗೆ ಕಸಬುಗಳನ್ನು ಕಲಿಸುತ್ತಾ ಇರುವುದು ಸರಿಯಷ್ಟೆ. ಈ ಸ್ಕೂಲುಗಳ ಹೆಡ್ ಮಾಸ್ಟರುಗಳಿಗೆ ವರ್ಗವೆಂಬ ಮಾತೇ ಗೊತ್ತಿದಂತೆ ತೋರುವುದಿಲ್ಲ. ಈ ಸ್ಕೂಲುಗಳಲ್ಲಿ ಲೆಕ್ಕಾಚಾರಗಳು ಸರಿಯಾಗಿ ಆಡಿಟ್ ಆಗುತ್ತೆಯೋ ಇಲ್ಲವೋ ಗೊತ್ತಿಲ್ಲ. ಯಾವ ಸರ್ಕಾರದ ನೌಕರರನ್ನೂ ಚಿರಕಾಲ ಒಂದೇ ಕಡೆ ಇಡುವುದರಿಂದ ಸ್ಥಳ ಅಭಿಮಾನವೇ ಮೊದಲಾದ ಅನೇಕ ನ್ಯೂನತೆಗಳಿಗೆ ಕಾರಣವಾಗುತ್ತೆ. ಇವರುಗಳು ತುಂಬಾ ಪ್ರಬಲರಾಗಿರುವದರಿಂದ ಇವರು ಹೇಳುವ ಮಾತಿಗೆ ಮೇಲಿನವರು ರುಜು ಹಾಕುತ್ತಾ ಇರುವಂತೆ ತೋರುತ್ತೆ. ಸರ್ಕಾರದವರು ದಯವಿಟ್ಟು ಇವರುಗಳನ್ನು ವರ್ಗಾಯಿಸಿದಲ್ಲಿ ಈ ಸ್ಕೂಲುಗಳು ಇನ್ನೂ ಅಭಿವೃದ್ಧಿಗೆ ಬರುವದರಲ್ಲಿ ಸಂಶಯವಿಲ್ಲ.

ಹಿತಚಿಂತಕ.

ಉಪಾಧ್ಯಾಯರುಗಳಿಗೆ ವಿಜ್ಞಾಪನೆ.

ಅಯ್ಯಾ,—ಉಪಾಧ್ಯಾಯರಿಗೆ ಇದುವರೆಗೆ ಬರುತ್ತಿದ್ದ ಸಂಬಳವು ಜೀವನಕ್ಕೆ ಸಾಲದೆಂತ ತಿಳಿದು ಪ್ರೈವೇಟು ಟೀಚಿಂಗು ಇಟ್ಟುಕೊಳ್ಳುವುದರ ಮೂಲಕ ಸ್ಕೂಲಿನಲ್ಲಿ ನಡಿಸತಕ್ಕ ಕೆಲಸದಲ್ಲಿ ಮುತುವರ್ಜಿ ಕಡಿಮೆ ಮಾಡಿ ದ್ರವ್ಯಸಹಾಯವಿಲ್ಲದ ಬಡ ವಿದ್ಯಾರ್ಥಿಗಳಿಗೆ ತೊಂದರೆ ಉಂಟುಮಾಡುತ್ತಿದ್ದವಲ್ಲದೆ ಸಂದರ್ಭಾನುಸಾರ ಅನುಕೂಲಸ್ಥರಿಗೂ, ಟೀಚಿಂಗಿನಲ್ಲಿರುವ ವಿದ್ಯಾರ್ಥಿಗಳಿಗೂ ಸಹಾಯ ಮಾಡುತ್ತಿದ್ದರು. ಈಗ ಅವರ ತೊಂದರೆಯನ್ನು ನಮ್ಮನ್ನಾಳುವ ದಯಾಳುವಾದ ಮಹಾರಾಜಾ ಸರ್ಕಾರದವರು ಗಮನಕ್ಕೆ ತಂದುಕೊಂಡು ಸಂಬಳ ಜಾಸ್ತಿಮಾಡಿಕೊಟ್ಟಿದ್ದಾಗಿ ಬಹಳ ಸಂತೋಷಯುಕ್ತರಾಗಿರುತ್ತೇವೆ. ಆದ್ದರಿಂದ ಅವರು ಇನ್ನು ಮುಂದೆ ಪ್ರೈವೇಟು ಟೀಚಿಂಗಿನಲ್ಲಿ ಸಂಪಾದಿಸಬಹುದಾದ ವಿಚಾರಕ್ಕೆ ಹೆಚ್ಚಾಗಿ ಗಮನಕೊಡದೆ ಸ್ಕೂಲಿನಲ್ಲಿ ನಡಿಸತಕ್ಕ ಕೆಲಸದಲ್ಲಿ ಹೆಚ್ಚು ಮುತುವರ್ಜಿಮಾಡಿದರೆ ಬಡವಿದ್ಯಾರ್ಥಿಗಳಿಗೆ ಉಪಕಾರವಾಗುತ್ತದೆ. ಈ ವಿಚಾರದಲ್ಲಿ ಎಲ್ಲಾ ಕಡೆಗಳಲ್ಲೂ ತೊಂದರೆ ಇರುತ್ತಾಗಿ ಮುಂದೆ ಇಂಥಾ ಸಂದರ್ಭವನ್ನು ಕುರಿತು ಇಲಾಖಾ ಮುಖ್ಯಸ್ಥರಿಗೆ ತಿಳಿಸತಕ್ಕ ಭಾಗ ಯೋಚಿಸಲ್ಪಡುತ್ತೆ.

ಬಾತ್ಮೀದಾರ್.

ಕನ್ಯಾ ವಿಕ್ರಯ.

ಅಯ್ಯಾ,—ತೀರ್ಥಹಳ್ಳಿ ತಾಲ್ಲೂಕಿಗೆ ಸೇರಿದ ಒಂದು ಗ್ರಾಮದಲ್ಲಿ ವೀರಶೈವಬ್ರಾಹ್ಮಣ ಜಾತಿಯ ಒಬ್ಬಾತನು ತನ್ನ ಮನೆಯಲ್ಲಿದ್ದ ಎರಡು ಕನ್ಯೆಗಳನ್ನು ಈ ಹಿಂದೆ ಒಂದೊಂದು ಕನ್ಯೆಗೆ 1,500 ರೂಪಾಯಿ ಪ್ರಕಾರ ತೆರ ಅಂದರೆ ಕ್ರಯ ತೆಗೆದುಕೊಂಡು ಲಗ್ನಮಾಡಿಕೊಟ್ಟಿರುತ್ತಾನೆ. ಸದರಿಯವನಂತೆ ಇನ್ನೊಬ್ಬ ತನ್ನ ತಂಗಿಯನ್ನು 2,000 ರೂಪಾಯಿ ಕ್ರಯ ತೆಗೆದುಕೊಂಡು ಲಗ್ನಮಾಡಿಕೊಟ್ಟಿರುತ್ತಾನೆ. ಇದನ್ನು ನೋಡಿ ಸದರಿ ತಾಲ್ಲೋಕಿನಲ್ಲಿ ಇನ್ನೊಬ್ಬನು ತನ್ನ ಮಗಳನ್ನು [illegible] ರೂಪಾಯಿ ಕ್ರಯ ತೆಗೆದುಕೊಂಡು ಲಗ್ನಮಾಡಿಕೊಟ್ಟಿರುತ್ತಾನೆ. ಇದನ್ನು ನೋಡಿ ಕನ್ಯೆಗಳಿರತಕ್ಕವರು ಇದಕ್ಕಿಂತ ಹೆಚ್ಚು ಕ್ರಯ ಹೇಳುತ್ತಾ ಇದ್ದಾರೆ. ಒಬ್ಬನ ಮನೆಯಲ್ಲಿ ಮದುವೆಗೆ ಬಂದ ಕನ್ಯೆಗಳು ನಾಲ್ಕು ಇವೆ. ಇವರನ್ನು ಖಾಯಸ್ ಮಾಡತಕ್ಕವರು ಕನ್ಯೆ 1 ಕ್ಕೆ 3,000 ರೂಪಾಯಿ ಕೊಡಲು ಚೈತನ್ಯವುಳ್ಳವರು ಬಂದರೆ ದೊರೆದೀತು; ಕಮ್ಮಿ ಕಿಮ್ಮತ್ತಿನವರು ಬಂದಲ್ಲಿ ನಮ್ಮ ಮನೆ ಕನ್ಯೆಯು ದೊರೆಯಲಾರದು ಎಂದು ಹೇಳುವುದರಿಂದ ಪ್ರಾಪ್ತವಯಸ್ಸಿಗೆ ಬಂದು 8-10 ವರ್ಷ ಆದಾಗ್ಯೂ ಲಗ್ನವಿಲ್ಲದೆ ನಿಲ್ಲಲು ಕಾರಣವಾಗಿದೆ. ಇನ್ನು ಮುಂದೆ ಈ ಜಾತಿಯಲ್ಲಿ ಹೆಣ್ಣಿನ ಖರೀದಿ ಎಲ್ಲಿಗೆ ನಿಲ್ಲುತ್ತೆ ಎಂಬುವುದನ್ನು ಪರಮೇಶ್ವರನೇ ಬಲ್ಲ! ಈ ರೀತಿ ಕನ್ಯೆಗಳಿಗೆ ಖರೀದಿ ತೆಗೆದುಕೊಂಡು ವಿವಾಹ ಮಾಡಿಕೊಡುವುದು ಯಾವ ಶಾಸ್ತ್ರಸಮ್ಮತವೋ ನಮಗೆ ಕಂಡು ಬರುವುದಿಲ್ಲ. ಹೀಗೆ ಇವರು ಶಾಸ್ತ್ರಧರ್ಮಕ್ಕೆ ವಿರೋಧವಾಗಿ ವರ್ಷ ವರ್ಷ ಕನ್ಯೆಗಳಿಗೆ ಬೆಲೆ ಹೆಚ್ಚಿಸುವುದರಿಂದ ತೀರ್ಥಹಳ್ಳಿ, ನಗರ, ಸಾಗರ, ಹೊಸನಗರ, ಈ ತಾಲ್ಲೋಕುಗಳಲ್ಲಿ ವೀರಶೈವಬ್ರಾಹ್ಮಣ ಮಂಡಲಿಯಲ್ಲಿ ಬಡಬಗ್ಗರಿಗೆ ಲಗ್ನವಿಲ್ಲದೆ ಅನೇಕ ಮನೆಗಳು ಹಾಳಾಗುತ್ತಾ ಬಂದಿವೆ. ಇದು ಲೋಕಪ್ರಸಿದ್ಧವಾಗತಕ್ಕ ಅಂಶವಾದ್ದರಿಂದ ಅರಿಕೆ ಮಾಡಿಕೊಂಡಿದ್ದೇನೆ. ಇದನ್ನು ಹಿಂದಿನಂತೆ ಪತ್ರಿಕೆಯಲ್ಲಿ ಫಾಯಿಷ್ ಮಾಡಬೇಕಾಗಿ ಪ್ರಾರ್ಥಿಸುತ್ತೇನೆ.

ಒಬ್ಬ ಪ್ರಜೆ.

ತಾಲ್ಲೂಕು ವರ್ತಮಾನಗಳು.

ಸಕಲೇಶಪುರ.—ಈ ಊರಿನ ಮುನಿಸಿಪಲ್ ಲಾಂದ್ರಗಳಲ್ಲಿ ರಾತ್ರಿ ವೇಳೆ ದೀಪ ಹಚ್ಚಿಸುವ ವಿಷಯದಲ್ಲಿ ಉಂಟಾಗಿದ್ದ ತೊಂದರೆಗಳನ್ನು ಕುರಿತು ಕಳೆದ ಮುನಿಸಿಪಲ್ ಮೀಟಿಂಗಿನಲ್ಲಿ ಅರ್ಜಿಮೂಲಕ ತಿಳಿಸಿದ್ದರ ಮೇಲೆ ಲೋಪಗಳು ಸರಿಪಡಿಸಲ್ಪಟ್ಟಾಗ್ಯೂ ಬ್ರಾಹ್ಮಣರ ಶ್ರೇಣಿಯಲ್ಲಿ ಸುಮಾರು ಎರಡು ತಿಂಗಳಿಂದ ದೀಪ ಹಚ್ಚಿಸುತ್ತಿಲ್ಲ.—ಈ ಊರಿನಲ್ಲಿ ಪರೇಲ್ ಎಂಬ ಜೂಜಾಟವು ದಿನೇ ದಿನೇ ಅಭಿವೃದ್ಧಿಯಾಗುತ್ತಿದೆ. ಅನೇಕ ಪರಸ್ಥಳೀಕರೂ ಪ್ರತಿ ವಾರವೂ ಬಂದು ಜೂಜಾಡುವರು. ಪೋಲೀಸ್ ಇಲಾಖೆಯವರು ಇಂಥಾ ಜೂಜುಗಾರರನ್ನು ಪತ್ತೆಮಾಡಿ ಬಂದೋಬಸ್ತು ಮಾಡಿಸುವುದರ ಮೂಲಕ ಇತರ ಜನಗಳು ಇಂಥಾ ಕೆಲಸಕ್ಕೆ ಪ್ರವೃತ್ತರಾಗದ ರೀತಿ ಉಪಕಾರ ಮಾಡುವರೆಂತ ನಂಬಿರುತ್ತೆ.—ಸ್ಕೂಲಿಗೆ ಹೋಗತಕ್ಕ ಚಿಕ್ಕ ವಿದ್ಯಾರ್ಥಿಗಳೂ ಮತ್ತು ಇತರ ಸಣ್ಣ ಹುಡುಗರೂ ಸಿಗರೆಟ್ ವಗೈರೆ ಹೊಗೆ ಬತ್ತಿ ಸೇದುತ್ತಿರುವ ಅಭ್ಯಾಸ ಉಳ್ಳವರನ್ನೂ ಸಹ ಬಂದೋಬಸ್ತು ಮಾಡಿಸಿಯಾರು ಎಂದು ಅಪೇಕ್ಷಿಸಲ್ಪಟ್ಟಿರುತ್ತೆ.

ಅರಕಲಗೂಡು.—ಈ ಊರಿನಲ್ಲಿ ಇನ್ನೂ ಸೋನೆಮಳೆ ಬರುತ್ತಲೇ ಇದೆ. ಆದರೂ ಬೆಳೆಗಳಿಗೆ ಸ್ವಲ್ಪ ಮಾತ್ರ ಅನುಕೂಲವಾಗಿದೆ. ಸೀಮೆಯಲ್ಲಿ ನಡೆಯುವ ಯುದ್ಧದ ನೆಪದಿಂದ ಇಲ್ಲಿಯ ಚಿಲ್ಲರೆ ಅಂಗಡಿಕಾರರು ಧಾರಣೆವಾಸಿಗಳನ್ನು ಜಾಸ್ತಿಮಾಡುತ್ತಲಿದ್ದಾರೆ. ಇದರಿಂದ ಜನಗಳಿಗೆ ತುಂಬಾ ತೊಂದರೆಯಾಗಿದೆ.—ಈ ಊರಿಗೆ ಯಾವ ಊರಿನಿಂದಲೋ ಒಬ್ಬ ಮುಸಲ್ಮಾನ ಮೌಲ್ವಿ ಸಾಹೇಬರು ಬಂದು ಇದ್ದಾರೆ. ವಿಚಾರಮಾಡುವುದರಲ್ಲಿ ಇವರು ಸ್ವಾಮಿ ವಿವೇಕಾನಂದರ ಶಿಷ್ಯರೆಂದು ತಿಳಿಯುತ್ತದೆ. ಇವರು ಕೆಲವು ಉಪನ್ಯಾಸಗಳನ್ನು ಮಾಡಿದರು. ಬಹಳ ಜನಗಳು ಕೂಡಿ ಅವರಿಗೆ ಮರ್ಯಾದೆಯನ್ನು ಮಾಡಿದರು. ಈ ಊರಿನಲ್ಲಿ ಮುಹರಮಿನಲ್ಲಿ ಎರಡು ಸಂಗಡವಾಗಿತ್ತು. ಮೌಲ್ವಿಸಾಹೇಬರು ಅವರಲ್ಲಿ ಒಬ್ಬರೊಬ್ಬರಿಗೆ ಅನ್ಯೋನ್ಯವಾಗುವಂತೆ ಮಾಡಿ ಅವರವರ ಜನಗಳನ್ನು ಸಮಾಧಾನಪಡಿಸಿ ಒಂದೇ ಸಂಗಡದವರನ್ನಾಗಿ ಮಾಡಿದರು. ಇನ್ನೂ ಕೆಲವು ಮತದವರಲ್ಲಿ ಇರುವ ಕಲಹಗಳನ್ನು ತಪ್ಪಿಸಿ ಅನ್ಯೋನ್ಯವಾಗಿರುವಂತೆ ಮಾಡಲು ಬಹಳ ಶರದ್ಧೆ ಮಾಡುತ್ತಲಿದ್ದಾರೆ. ಆದರೆ ಈ ಮೌಲ್ವಿಸಾಹೇಬರು ಯಾತಕ್ಕೆ ಬಂದಿದ್ದಾರೆ? ಯಾವ ಊರಿನವರು ಎಂಬ ಸಂಗತಿ ತಿಳಿಯಲಿಲ್ಲ. ಇವರಿಗೆ ನಮ್ಮ ಮಹಾರಾಜರವರು ಪ್ರತಿ ಒಂದು ಗ್ರಾಮಕ್ಕೆ ಹೋಗಿ ಅಲ್ಲಿ ಜನಗಳ ಸ್ಥಿತಿಗತಿಗಳನ್ನು ವಿಚಾರಿಸಿ ಅವರಲ್ಲಿರುವ ಕಲಹಗಳನ್ನು ತಪ್ಪಿಸಿ ಒಂದು ಸಂಗಡದವರನ್ನಾಗಿ ಮಾಡಲು ಕಳುಹಿಸಿದ್ದಾರೆಂದು ಜನಗಳು ಹೇಳುತ್ತಲಿದ್ದಾರೆ. ಆದರೆ ನಿಜಸ್ಥಿತಿ ತಿಳಿಯುವುದಿಲ್ಲ. ಇವರಿಗೆ ಸರ್ಕಾರಿ ನೌಕರರು ಬಹಳವಾಗಿ ಕುಮ್ಮಕ್ಕಾಗಿದ್ದಾರೆ. ಇದನ್ನು ನೋಡುವಲ್ಲಿ ಇವರು ಸರ್ಕಾರದಿಂದ ಅಪ್ಪಣೆ ಪಡೆದು ಬಂದಿರುವಂತೆ ಕಾಣುತ್ತದೆ.

ತೀರ್ಥಹಳ್ಳಿ ತಾ|| ಮುಳಬಾಗಿಲು.—ಎ. ವಿ. ಸ್ಕೂಲಿನಲ್ಲಿ ತಾಲ್ಲೂಕು ಅಮಲ್ದಾರ್ ಮ|| ಎಸ್. ಧರ್ಮರಾಯರು ದಯಮಾಡಿ ಬಾಲಕರನ್ನು ಪರೀಕ್ಷಿಸಿ ವಿದ್ಯಾಭಿವೃದ್ಧಿಯನ್ನು ನೋಡಿ ತುಂಬಾ ಸಂತೋಷಪಟ್ಟು ಬಾಲಕರಿಗೆ ಬಹುಮಾನಪುಸ್ತಕವನ್ನು ಸ್ವಹಸ್ತ ಹಂಚಿ, ಸಂಕರ ಗ್ರಾಮಸ್ಥರು, ಬಾಲಕರು ಸಹ ಅವಗಾಹನ ಮಾಡಿಕೊಳ್ಳುವಂತೆ ವಿದ್ಯೆ ಮತ್ತು ಆರೋಗ್ಯಸಂಪತ್ತಿನ ಮಹತ್ತನ್ನು ವಿವರಿಸಿ ಉಪನ್ಯಾಸಮಾಡಿದ್ದಲ್ಲದೆ ಸ್ಕೂಲ್ ಮಾಸ್ಟರುಗಳಿಗೂ ವಿದ್ಯಾಭ್ಯಾಸದ ಬೋಧನಾ ವಿಷಯದಲ್ಲಿ ತುಂಬಾ ಪ್ರೋತ್ಸಾಹಿಸಿ, ಸದರಿ ಸ್ಕೂಲಿನಲ್ಲೇ ಗ್ರಾಮಸ್ಥರ ಅಭ್ಯುದಯಕ್ಕಾಗಿ ಒಂದು ರೀಡಿಂಗ್ ರೂಮ್ ಸ್ಥಾಪಿಸಬೇಕೆಂದು ಗ್ರಾಮಸ್ಥರನ್ನು ಪ್ರಶ್ನಿಸಿದರು. ಗ್ರಾಮಸ್ಥರು ಮತ್ತು ಶ್ರೀ ಮುಳಬಾಗಿಲು ಶ್ರೀ ಸಂಸ್ಥಾನದವರು ಸಹ ತುಂಬಾ ಸಂತೋಷಪಟ್ಟು ಅವರವರ ಯೋಗ್ಯತಾನುಸಾರ ಚಂದಾ ಮೊಬಲಗನ್ನು ಕೊಡಲು ಒಪ್ಪಿ ಆ ದಿನವೇ ಸದರೀ ಸ್ಥಳದಲ್ಲಿ ರೀಡಿಂಗ್ ರೂಮ್ ಸ್ಥಾಪಿಸಲ್ಪಟ್ಟಿತು. ವಿದ್ಯಾ ಇಲಾಖಾದವರು ಸದರಿ ಸ್ಕೂಲಿಗೆ ಅಪ್ಪರ್ ಸೆಕೆಂಡರಿ ಟ್ರೈಯಿನಿಂಗ್ ಆದ ಒಬ್ಬ ಉಪಾಧ್ಯಾಯರನ್ನು ದಯಪಾಲಿಸಿ ಈ ಸ್ಕೂಲನ್ನು ವೃದ್ಧಿಮಾಡಬೇಕೆಂದು ಪ್ರಾರ್ಥನೆ.

ಹರಿಹರ.—ಮಳೆಗೋಸ್ಕರ ಹಾರೈಸಿಕೊಂಡಿದ್ದವು. ಈಗ ನಿರಂತರವೃಷ್ಟಿಯಿಂದ ಪೈರುಗಳು ಮೇಲಕ್ಕೇಳದಂತಾಗಿವೆ. ಮೋಡ ಕವಿದೇ ಇರುತ್ತೆ. ಹವಾ ಬಹಳ ಬದಲಾಯಿಸಿದೆ. ಶೀತ ಹೆಚ್ಚು. ನದೀ ಪ್ರವಾಹ ಕಡಮೆಯಾಗಿಲ್ಲ. ಪ್ಲೇಗು ಸ್ಥಳದಿಂದ ಜನಗಳು ಇಲ್ಲಿಗೆ ಬಂದು ತುಂಬುತ್ತಿದ್ದರೂ ಇಲ್ಲಿ ಗಲಾಟೆ ಪ್ರಾರಂಭವಾಗಲಿಲ್ಲ.—ಇಲ್ಲಿ ಡೆಪ್ಟಿ ಅಮಲ್ದಾರ್ರಾಗಿದ್ದ ಮ|| ಅನಂತರಾಮಯ್ಯಂಗಾರ್ರಿಗೆ ಕುಂಸಿ ಸಬ್ ತಾಲ್ಲೂಕಿಗೆ ವರ್ಗವಾದ ಪ್ರಯುಕ್ತ ಮೊನ್ನೆ ಇಲ್ಲಿನ ದೊಡ್ಡಮನುಷ್ಯರಲ್ಲಿ ಕೆಲವರು ಸೇರಿ ಪಾರ್ಟಿ ಸಮಾರಂಭ ಮಾಡಿಸಿದರು. ಶ್ರೀದೇವರ ಸನ್ನಿಧಿಯಲ್ಲೇ ಎಲ್ಲರೂ ಸೇರಿದ್ದರು. ಅಲ್ಲಿ ಸೇರಿದ್ದ ಜನಗಳ ಅನುಮತಿ ಪ್ರಕಾರ ಮ|| ಶ್ರೀನಿವಾಸದೀಕ್ಷಿತರು ಇಂಗ್ಲೀಷಿನಲ್ಲಿ ಉಪನ್ಯಾಸಮಾಡಿದರು. ಅದರ ಸ್ವಾರಸ್ಯವು ಕಡಮೆಯಾಗದಂತೆ ದಾವಣಗೇರಿ ಅಮಲ್ದಾರ್ರು ಮ|| ವೇದಾಂತ ಅಯ್ಯಂಗಾರ್ರವರು ಕನ್ನಡದಲ್ಲಿ ಹೇಳಿದರು. ಮ|| ಅನಂತರಾಮಯ್ಯಂಗಾರ್ರವರು ತಮಗೆ ಈ ಸ್ಥಳವು ಹವಾ ಮುಂತಾದ ಎಲ್ಲಾ ಭಾಗಗಳಲ್ಲಿ ಬಹಳ ಅನುಕೂಲವಾಗಿದ್ದದ್ದರಿಂದ ಈ ಸ್ಥಳವನ್ನು ಬಿಟ್ಟುಹೋಗಲು ತಮಗಾಗುವ ವ್ಯಾಕುಲವನ್ನು ವ್ಯಕ್ತಪಡಿಸಿದರು. ವಿಶ್ರಾಂತಿಸುಖವನ್ನು ಅನುಭವಿಸಬೇಕೆಂದಿರುವವರಿಗೆ ಹೀಗಾಗುವದು ಆಶ್ಚರ್ಯವಲ್ಲ.—ಇಲ್ಲಿ ನಲ್ಲಿ ಜಾರಿಗೆ ಬಂದ ಲಾಗಾಯಿತು ನೀರಿಗೆ ಬಹಳ ತೊಂದರೆಯಾಗಿದೆ. ಜನಗಳನೇಕರು ಹಿಂದಿನ ಭಾವಿಗಳನ್ನು ಉಪಯೋಗಿಸುತ್ತಿದ್ದಾರೆ. ಈ ಡಿಪಾರ್ಟ್‌ಮೆಂಟು ಈಗ ಮ್ಯುನಿಸಿಪಾಲಿಟಿಯವರ ಕೈಗೆ ಬಂದಂತಾಗಿದೆ. ನೀರಿನ ಟ್ಯಾಂಕುಗಳ ಸುತ್ತುಮುತ್ತು ಪ್ರದೇಶವನ್ನೂ, ಮೇಲುಭಾಗದ ಮುಚ್ಚಿಗೆಯನ್ನೂ ಸರಿಯಾಗಿ ನೋಡುತ್ತಿದ್ದರೆ ಒಳ್ಳೆಯದು. ನೀರು ತೀರ್ಥಪ್ರಾಯವಾಗಿ ಬಂದರೂ ಶುದ್ಧವಾಗಿರುತ್ತೆ. ಟ್ಯಾಂಕುಗಳನ್ನು ಆಗಾಗ್ಗೆ ತೊಳೆಯುವದು ಉತ್ತಮವೆಂದು ಮಕ್ಕಳಿಗೂ ಸಹ ಗೊತ್ತಾಗಿದೆ.—ಇಲ್ಲಿ ಬ್ರಾಹ್ಮಣ ಯುವಕರನೇಕರು ಸಂಸಾರದ ಹೊರೆ ಹೊತ್ತಿದ್ದರೂ ವ್ಯರ್ಥ ಕಾಲಕ್ಷೇಪ ಮಾಡಲಿಕ್ಕೆ ಅನುಕೂಲವಿರುವ ಆಟಗಳಲ್ಲಿ ಆಸಕ್ತರಾಗಿರುವದು ಅಸಮಾಧಾನಕರವಾಗಿದೆ. ಮುಂದೆ ಅಭಿವೃದ್ಧಿಗೆ ಬರತಕ್ಕ ಚಿಕ್ಕ ಮಕ್ಕಳು ಇದೇ ಮಾರ್ಗವನ್ನನುಸರಿಸದ ಉಪಾಯವನ್ನು ಯಾರು ಹುಡುಕಬೇಕೋ ಗೊತ್ತಾಗದೆ ಇದೆ.—ಈಗ 4 ವರ್ಷಗಳ ಕೆಳಗೆ ಇಲ್ಲಿಗೆ ಮಂಗಳೂರು ಕಡೆ ಬ್ರಾಹ್ಮಣನೊಬ್ಬನು ತಿಂಡಿ ಹೋಟ್ಲು ಪ್ರಾರಂಭಿಸಿದನು. ಆದರೆ ಅವನು ಸ್ವಲ್ಪ ಕಾಲದಲ್ಲೇ ತನ್ನ ಪಾತ್ರೆ ಮುಂತಾದ್ದು ಮಾರಿಕೊಂಡು ಹೇಳದೆ ಹೊರಟು ಹೋದನು. ಈಗ ಇಲ್ಲಿ 3 ಹೋಟ್ಲುಗಳಿವೆ. ಇವೆಲ್ಲಕ್ಕೂ ಚೆನ್ನಾಗಿ ವ್ಯಾಪಾರ ನಡೆಯುತ್ತಾ ಇದೆ. ಆಬಾಲವೃದ್ಧರಿಗೂ ಜಿಹ್ವಾ ಚಾಪಲ್ಯ ಉಂಟಾಗಿದೆ. ಏನು ಕಾಲಮಹಿಮೆಯೋ! ದಾವಣಗೇರಿಯ ವ್ಯಾಪಾರದಲ್ಲಿ ಮುಂದರಿಯುವಂತೆ ಈ ಊರು ಇಂಥಾದ್ದರಲ್ಲಿ ಪ್ರಬಲಿಸುತ್ತಿದೆ. ಸಿಗರೆಟ್ಟುಗಳ ಖರ್ಚು ಜಾಸ್ತಿಯಾಗುತ್ತಿದೆ. ಸೋಡಾವಾಟರು ತಯಾರಿಸಿದಲ್ಲಿ ಬಹಳ ಲಾಭ ಬರಬಹುದು.

ಮಧುಗಿರಿ.—ಮಧುಗಿರಿ ಕೋಆಪರೇಟಿವ್ ಸೊಸೈಟಿಯಿಂದ ಮೈಸೂರಿನಲ್ಲಿ ಈ ಸಾರಿ ದಸರಾ ಮಹೋತ್ಸವದಲ್ಲಿ ನಡೆಯಲಿಕ್ಕಿರುವ 4 ನೇ ಕಾನ್ಫರೆನ್ಸಿಗೆ ಪ್ರತಿನಿಧಿಗಳಾಗಿ ಮ|| ಎಸ್. ಶ್ರೀನಿವಾಸಮೂರ್ತಿಯವರನ್ನೂ, ಮ|| ಮದ್ದಿರಿ ಸಂಜೀವಶೆಟ್ಟರನ್ನೂ ಚುನಾಯಿಸಿರುತ್ತಾರೆ. ಪ್ರೇಕ್ಷಕರಾಗಿ ಮ|| ಗಳಾದ ರಂಗರಾಮಯ್ಯಂಗಾರ್, ಅಪ್ಪಯ್ಯಶಾಸ್ತ್ರಿ, ರಾಘವೇಂದ್ರರಾವ್, ರಾಮಶೆಟ್ಟಿ, ಹನುಮಂತಶೆಟ್ಟಿ, ಚಿಕ್ಕಪ್ಪರಾವ್ ಇವರು ಹೋಗುವರು.—ಕಳೆದ 3 ವರುಷಗಳಿಂದ ಇಲ್ಲಿ ಅಮಲ್ದಾರರಾಗಿದ್ದ ಮ|| ಆರ್. ಎ. ನರಸಿಂಹಯ್ಯಂಗಾರ್ರು ವರ್ಗವಾಗಿ ಮೈಸೂರಿಗೆ ತೆರಳುವರು. ಇವರ ಸ್ಥಾನಕ್ಕೆ ಗುಡಿಬಂಡೆಯಿಂದ ಮ|| ರಾಮಚಂದ್ರರಾಯರು ಅಮಲ್ದಾರರಾಗಿ ಬರುವರು. ನಮ್ಮ ಅಮಲ್ದಾರ್ ಮ|| ನರಸಿಂಹಯ್ಯಂಗಾರ್ಯರು ಸರ್ಕಾರದ ಕೆಲಸದಲ್ಲಿ ಚಟುವಟಿಕೆಯುಳ್ಳವರಾಗಿಯೂ, ಸಮರ್ಥರಾಗಿಯೂ, ಮಿತವಾದಿಗಳಾಗಿಯೂ, ಧೈರ್ಯಶಾಲಿಗಳಾಗಿಯೂ, ಶಿಷ್ಟರಿಗೆ ಸ್ನೇಹಿತರೂ, ದುಷ್ಟರಿಗೆ ನ್ಯಾಯಾಧೀಶರೂ, ಒಟ್ಟಾಗಿ ಗುಣಾಢ್ಯರಾಗಿದ್ದರು. ಇವರ ಕಾಲದಲ್ಲಿ ಇಲ್ಲಿ ಒಂದು ಪ್ರಜೋಪಕಾರಾರ್ಥವಾದ ಕೋಆಪರೇಟಿವ್ ಸೊಸೈಟಿ ಸ್ಥಾಪನೆಯಾಯಿತು. ಅದು ವೃದ್ಧಿಗೊಳ್ಳುತ್ತಿರುವುದು. ಇವರು ಜನರಿಗೆಲ್ಲಾ ಸಹಾಯಕರಾಗಿದ್ದರು. ಇವರ ಕಾಲದಲ್ಲಿ ಮಧುಗಿರಿ ಎಷ್ಟೋ ಒಳ್ಳೇ ಸ್ಥಿತಿಗೆ ಬಂದಿದೆ. ಇವರನ್ನು ಸರ್ಕಾರದವರು ಇಷ್ಟು ಶೀಘ್ರದಲ್ಲಿ ವರ್ಗ ಮಾಡಿದರೆಂದು ಯುರೋಪಿಯನ್ ಮತ್ತು ದೇಶೀಯ ದೊಡ್ಡ ಮನುಷ್ಯರು ಮಾತ್ರವಲ್ಲದೆ ಸಾಮಾನ್ಯ ಪ್ರಜೆಗಳೆಲ್ಲರೂ ಸಂತಾಪಪಡುವರು. ಮುಂದೆ ಬರುವ ಅಮಲ್ದಾರರೂ ಜನರ ಪ್ರೀತಿ, ಗೌರವಗಳನ್ನು ಸಂಪಾದಿಸಿಕೊಂಡು ಅನೇಕ ಪ್ರಜೋಪಕಾರ ಕಾರ್ಯಗಳನ್ನು ಮಾಡುವರೆಂದು ನಿರೀಕ್ಷಿಸಲ್ಪಟ್ಟಿದೆ.—ವರ್ಗಪಟ್ಟ ಅಮಲ್ದಾರರಿಗೆ ಕಚೇರಿ ನೌಕರರು ಸತ್ಕಾರಮಾಡಿದರು. ಅಮಲ್ದಾರರನ್ನು ಬಾಜಾದೊಡನೆ ಅವರ ಮನೆಯಿಂದ ಸುಲ್ತಾರಿ ಗ್ರಾಸ್ ಫಾರಂ ಇಲಾಖೆ ಆಫೀಸ್ ಕಟ್ಟಡಕ್ಕೆ ಕರೆದುಕೊಂಡು ಬಂದರು. ಅಧಿಕಾರಿಗಳಿಗೆ ಗ್ರಾಸ್ ಫಾರಂ ಆಫೀಸಿನಲ್ಲೂ, ಇತರರಿಗೆ ಎ. ವಿ. ಸ್ಕೂಲಿನಲ್ಲೂ ಫಲಾಹಾರಕ್ಕೆ ಏರ್ಪಾಡು ಮಾಡಿದ್ದರು. ನಂತರ ಬಾಜಾದೊಡನೆ ಸರ್ವರೂ ಕಚೇರಿ ಮಹಡಿಯ ಮೇಲಕ್ಕೆ ಸೇರಿದರು. ಶಿರಸ್ತೇದಾರ್ ಮ|| ವೆಂಕಟನಾರಣಪ್ಪನವರು ತಾಲ್ಲೂಕ್ ನೌಕರರ ಪರವಾಗಿ ಸುಬೇದಾರರನ್ನು ವಂದಿಸಿ ಅವರ ಗುಣಕಥನವನ್ನು ಮಾಡಿದರು. ಅನಂತರ ಮ|| ಟಿ. ಕೃಷ್ಣಮ್ಮನವರೂ, ವೇ|| ಅಪ್ಪಯ್ಯಶಾಸ್ತ್ರಿಗಳೂ ಸುಬೇದಾರರ ಗುಣಾತಿಶಯಗಳ ವಿಚಾರವಾಗಿ ಹೇಳಿದರು. ಶಿರಸ್ತೇದಾರರು ಸುಬೇದಾರರಿಗೆ ಹೂವಿನ ಹಾರವನ್ನು ಹಾಕಿ ತುರಾಯಿ ಕೊಟ್ಟರು. ಸಭಿಕರಿಗೆಲ್ಲಾ ಹೂವು, ಗಂಧ, ತಾಂಬೂಲವಾದನಂತರ ಸುಬೇದಾರರು ಸಮಯೋಚಿತವಾದ ಮಾತುಗಳಿಂದ ಉತ್ತರ ಹೇಳಿ ಸಭಿಕರನ್ನು ವಂದಿಸಿದರು. ತಾವು ಉದ್ದೇಶಿಸಿದ್ದ ವಾಟರ್ ವರ್ಕ್ಸ್ ಮತ್ತು ಟೌನ್ ಹಾಲ್ ಕಟ್ಟುಮಟ್ಟಗಳನ್ನು ಕೈಗೊಳ್ಳಲು ಅವಕಾಶವಿಲ್ಲದೆ ಹೋದದ್ದಕ್ಕಾಗಿ ತುಂಬಾ ಪಶ್ಚಾತ್ತಾಪಪಟ್ಟರು. ಸಭೆಯು ಶ್ರೀಮನ್ಮಹಾರಾಜರ ಮತ್ತು ಚಕ್ರವರ್ತಿ ಸಾರ್ವಭೌಮರ ಶ್ರೇಯಸ್ಸಿನ ಪ್ರಾರ್ಥನೆಯಲ್ಲಿ ಮುಗಿಯಿತು. ವಾದ್ಯಘೋಷದೊಡನೆ ಸುಬೇದಾರರನ್ನು ಮನೆಗೆ ಬಿಟ್ಟರು. ಇದೆಲ್ಲಾ ನಮ್ಮ ಶಿರಸ್ತೇದಾರರ ಮುತುವರ್ಜಿಯಿಂದ ನಡೆಯಿತು. ಇದಕ್ಕಾಗಿ ಅವರನ್ನು ಎಷ್ಟು ಶ್ಲಾಘಿಸಿದರೂ ಸ್ವಲ್ಪವೇ ಆಗಿರುತ್ತೆ.

ಮೈಸೂರು ಗೆಜೆಟ್ ಸಂಗ್ರಹ.

ಪವಿಾಕ್ದಾರ್ ಮ|| ರಂಗಸ್ವಾಮಿ ಅಯ್ಯಂಗಾರ್ರನ್ನು ಹೆಗ್ಗಡದೇವನ ಕೋಟೆ ಮ್ಯುನಿಸಿಪಲ್ ಬೋರ್ಡ್ ಮೆಂಬರಾಗಿ ನೇಮಿಸಿದೆ.

ಮ|| ಗಳಾದ ಜಿ. ರಾಮಣ್ಣ, ಅಕಾ೯ಟಾಂ ಫಣಿಯಪ್ಪ, ಕಂಟ್ರಾಕ್ಟರ್ ಕಿಪ್ಪೆಗೌಡ, ಇವರನ್ನು ಹೊಸದುರ್ಗದ ಮ್ಯುನಿಸಿಪಲ್ ಬೋರ್ಡ್ ಮೆಂಬರುಗಳಾಗಿ ನೇಮಿಸಿದೆ.

ಮ|| ಸಿ. ಗೋಪಾಲಚಾರ್ರನ್ನು ಅ|| ಕಮಿಷನರ್ ಆಗಿ ಬದಲಿ ನೇಮಿಸಿರೋದರಿಂದ ಮ|| ಜಿ. ಶಾಂತವೀರಪ್ಪನವರು ರಜದಿಂದ ವಾಪಸು ಬಂದು ಚೆಂಕಾಮಣಿ ತಾಲ್ಲೂಕಿನ ಅಮಲ್ದಾರಿಯನ್ನು ವಹಿಸತಕ್ಕದ್ದು.

ಮುಂದೆ ಹೇಳುವ ಬದಲಾವಣೆ ಹುಕುಂ ಮಾಡಿದೆ:—(1) ಹಾಸನದ ಟ್ರೆಜರಿ ಅ|| ಕಮಿಷನರ್ ಮ|| ಆರ್. ನಾನಾಸಾಮಿರಾಯರನ್ನು ಸ್ಪೆಷಲ್ ರೆವಿನ್ಯೂ ಆಫೀಸರಾಗಿ ಚಿಕ್ಕಮಗಳೂರಿಗೆ ವರ್ಗಮಾಡಿದೆ; ಇವರು ಹಾಸನ ಮತ್ತು ಕಡೂರು ಡಿಸ್ಟ್ರಿಕ್ಟುಗಳ ಮಲೆನಾಡು ಅಭಿವೃದ್ಧಿ ಕಾರ್ಯಗಳನ್ನು ನೋಡಿಕೊಳ್ಳತಕ್ಕದ್ದು. (೨) ಚೆಂಕಾಮಣಿಯ ಅಮಲ್ದಾರ್ ಮ|| ಸಿ. ಗೋಪಾಲಾಚಾರ್ರನ್ನು 5 ನೇ ಕ್ಲಾಸ್ ಅ|| ಕಮಿಷನರಾಗಿ ನೇಮಿಸಿ, ಹಾಸನದ ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜಿಗೆ ವರ್ಗಮಾಡಿದೆ.

ಮ|| ಇ. ಎಸ್. ಕೃಷ್ಣಸ್ವಾಮಿ ಅಯ್ಯರವರನ್ನು ಜನವರಿ ತಾ. 1 ರಿಂದ 1 ನೇ ಕ್ಲಾಸ್ ಸರ್ಜನ್ ಆಗಿ ಬಡ್ತಿ ಮಾಡಿದೆ

ಅ|| ಸರ್ಜನ್ ಮ|| ಟಿ. ಎಸ್. ಸಿದ್ದಪ್ಪನವರನ್ನು ಜುಲೈ ತಾ. 4 ರಿಂದ 2 ನೇ ಕ್ಲಾಸಿಗೆ ಬಡ್ತಿ ಮಾಡಿದೆ.

ಸಂಸ್ಥಾನದಲ್ಲಿ ವ್ಯವಸಾಯ, ಸಂಪತ್ತು, ಕಸಬುಗಳನ್ನು ಅಭಿವೃದ್ಧಿಮಾಡುವುದಕ್ಕಾಗಿ ಮುಂದೆ ಹೇಳುವವರನ್ನು ಡಿಸ್ಟ್ರಿಕ್ಟ್ ಸೂಪರಿಂಟೆಂಡೆಂಟರುಗಳನ್ನಾಗಿ ನೇಮಕಮಾಡಿದೆ:—ಬೆಂಗಳೂರು ಅಡ್ವೊಕೇಟ್ ಮ|| ಆರ್. ಅನಂತಸುಬ್ರಹ್ಮಣ್ಯಯವರು ಬೆಂಗಳೂರು ಡಿಸ್ಟ್ರಿಕ್ಟಿಗೆ, ಚಿಕ್ಕಬಳ್ಳಾಪುರದ ಅಮಲ್ದಾರ್ ಮ|| ಶ್ರೀ ನರಸಿಂಹಶಾಸ್ತ್ರಿಯವರು ಮೈಸೂರಿಗೆ, ಬೌರಿಂಗ್‌ಪೇಟೆ ಅಮಲ್ದಾರ್ ಮ|| ಎಫ್. ಎಸ್. ರಾಘವಾಚಾರ್ಯ ಕೋಲಾರಕ್ಕೆ, ತುಮಕೂರು ಅಮಲ್ದಾರ್ ಮ|| ಎಂ. ಎಸ್. ರಾಮಚಂದ್ರರಾಯರು ತುಮಕೂರಿಗೆ, ಕೊಪ್ಪದ ಅಮಲ್ದಾರ್ ಮ|| ಟಿ. ಅಬ್ದುಲ್‌ಜಬ್ಬಾರ್ ಸಾಹೇಬರು ಹಾಸನಕ್ಕೆ, ನೊಳಕಾಲ್ಕೂರು ಅಮಲ್ದಾರ್ ಮ|| ಎಚ್. ಸುಬ್ಬರಾಯರು ಚಿತ್ರದುರ್ಗಕ್ಕೆ.

ಆಲೂರ್ ಸಬ್ ತಾಲ್ಲೂಕು ಡೆಪ್ಯುಟಿ ಅಮಲ್ದಾರ್ ಮ|| ಎಸ್. ಸುಂದರರಾಜಯ್ಯಂಗಾರ್ರಿಗೆ ಕೊಟ್ಟಿರುವ 15 ದಿನಗಳ ಪ್ರಿವಿಲೇಜ್ ರಜವನ್ನು ಇನ್ನೂ 15 ದಿನ ಜಾಸ್ತಿ ಮಾಡಿದೆ. ಈತನ ಬದಲಿ ಏರ್ಪಾಡು ಜಾರಿಯಲ್ಲಿರತಕ್ಕದ್ದು

ಪ್ರೆಸಿಡೆನ್ಸಿ ಸಂಘ, ಮೈಸೂರು.

ನಮ್ಮ ಮೈಸೂರಿನ ವಿದ್ಯಾರ್ಥಿ ಮಂಡಲಿಯು ಈಗ ನಾಲ್ಕಾರು ವರ್ಷಗಳಿಂದ ಬಹಳ ಬದಲಾವಣೆಯನ್ನು ಹೊಂದುತ್ತಾ ಇದೆ ಮದ್ರಾಸು ಪ್ರೆಸಿಡೆನ್ಸಿ ಸ್ಕೂಲ್ ಫೈನಲ್ (ಸ್ಕೂಲ್ ಫೈನಲ್) ಪರೀಕ್ಷೆಯು ಏರ್ಪಟ್ಟ ಬಳಿಕ ಮೈಸೂರಲ್ಲದೆ ಹೊರಗಿನ ದೇಶಗಳಿಂದ ಅನೇಕ ವಿದ್ಯಾರ್ಥಿಗಳು ತಮ್ಮ ದೇಶಗಳಲ್ಲಿ ಕಾಲೇಜು (ಕಾಲೇಜ್) ಗಳಿಗೆ ಸೇರಿ ನ್ಯಾಯವಿದ್ಯಾಭ್ಯಾಸ ಮಾಡಲು ಪ್ರಾಯಶಃ ಸಾಕಾದಷ್ಟು ಸೌಲಭ್ಯಗಳಿಲ್ಲದೆ ನಮ್ಮ ಮೈಸೂರು ದೇಶಕ್ಕೆ ಬಂದು ಇಲ್ಲಿನ ಕಾಲೇಜುಗಳಲ್ಲಿ ಸೇರಿ ವ್ಯಾಸಂಗಮಾಡುತ್ತಲಿದಾರೆ

ಈ ರೀತಿಯಲ್ಲಿ ಬಂದ ಹೊರಗಿನ ವಿದ್ಯಾರ್ಥಿಗಳು ಈಗ್ಗೆ ನಾಲ್ಕು ವರ್ಷಗಳ ಕೆಳಗೆ ಅವರು ಮೈಸೂರು ಪಟ್ಟಣಕ್ಕೆ ಹೊಸದಾಗಿ ಬಂದಾಗ ಕೊಂಚ ಜನಗಳಾಗಿದ್ದು ತಮ್ಮಲ್ಲಿಯೇ ಸ್ವದೇಶಾಭಿಮಾನಕ್ಕೋಸ್ಕರಲೋ ಅಥವಾ ತಮ್ಮಲ್ಲಿ ಒಗ್ಗಟ್ಟನ್ನು ಹೆಚ್ಚಿಸಬೇಕೆಂಬ ಉದ್ದೇಶದಿಂದಲೋ "ಪ್ರೆಸಿಡೆನ್ಸಿ ಯೂನಿಯನ್" ಎಂಬ ಸಂಘವನ್ನು ಏರ್ಪಾಡು ಮಾಡಿಕೊಂಡು ಸಂಘದ ಉದ್ದೇಶಗಳನ್ನು ದಿನ ಕ್ರಮೇಣ ಹೆಚ್ಚಿಸುತ್ತಾ ಬಂದಿರುತ್ತಾರೆ.

ಸದರಿ ಸಂಘದ ವಾರ್ಷಿಕ ಮಹೋತ್ಸವವು ಕಳೆದ 6 ನೇ ತಾರೀಖು ಭಾನುವಾರ ಸಾಯಂಕಾಲ ಮಹಾರಾಜರವರ ಕಾಲೇಜಿನಲ್ಲಿ ಬಹಳ ವಿಜೃಂಭಣೆಯಿಂದ ನಡೆಯಿತು. ಈ ಮಹೋತ್ಸವಕ್ಕೆ ಮೈಸೂರಿನ ಅನೇಕ ದೊಡ್ಡ ಮನುಷ್ಯರೂ, ಬಹುಮಂದಿ ವಿದ್ಯಾರ್ಥಿಗಳೂ ಬಂದು ಸೇರಿದ್ದರು. ಮಹೋತ್ಸವ ಕಾಲದ ಕಾರ್ಯಗಳು ಒಂದೊಂದಾಗಿ ನಡೆಯಿತು. ಮೊದಲು ಸಂಘದ ಸೆಕ್ರೆಟರಿ ವಿ. ವೇದವ್ಯಾಸಾಚಾರ್ಯ ಸಂಘದ ವಾರ್ಷಿಕ ರಿಪೋರ್ಟನ್ನು ಸಭೆಗಳಲ್ಲಿ ಕೇಳುವಂತೆ ಚೆನ್ನಾಗಿ ಓದಿದರು. ಅವರು ಓದಿದ ಸಂಗತಿಗಳನ್ನು ಸಂಘವು ನಿಜವಾಗಿಯೂ ಮಾಡಿದ್ದರೆ ಅವುಗಳೆಲ್ಲಾ ಶ್ಲಾಘನೀಯವಾದವುಗಳೇ ಹೌದು. ಸಂಘದ, ವಾರಕ್ಕೊಂದಾವರ್ತಿ ನಡೆಯುವ ಸಮ್ಮೇಳನಗಳಲ್ಲಿ ಅನೇಕ ವಿಷಯಗಳು ಚರ್ಚಿಸಲ್ಪಟ್ಟವೆಂದೂ, ಅವುಗಳಲ್ಲಿ "ವರದಕ್ಷಿಣೆ ಮತ್ತು ಅದರ ನೂನ್ಯತೆ" ಎಂಬುದು ಒಂದೆಂಬುದಾಗಿಯೂ, ಸಂಘದ ಉದ್ದೇಶವು ಕೇವಲ ಮಾತಿನಲ್ಲಿಯೇ ಪರಿಣಮಿಸುವುದಿಲ್ಲವೆಂದೂ, ಮಾತಿನಲ್ಲಿ ಕಾರ್ಯದಲ್ಲಿ ಸಂಘದವರು ತಮ್ಮ ಉದ್ದೇಶವನ್ನು ತೋರ್ಪಡಿಸುತ್ತಾರೆಂದೂ, ಕಡಮೆಸಾರವಾದ ವಿಕ್ಟೋರಿಯ ಆಸ್ಪತ್ರೆಯ ಫಂಡಿಗೆ ತಮ್ಮ ಸಂಘದಿಂದ ಹತ್ತು ರೂಪಾಯಿ ಕಳುಹಿಸುತ್ತಾರೆಂದೂ, ಇವೇ ಮುಂತಾದ ಸಂಗತಿಗಳು ಸಭಿಕರಿಗೆ ತಿಳಿಸಲ್ಪಟ್ಟವು. ಅನಂತರ "ಇಟಿಕ್ಸಿ ಸಿಟಿ" ಎಂಬ ವಿಷಯವನ್ನು ಕುರಿತು ಎಸ್. ಎಚ್. ಅಪ್ಪರಲ್ ಎಂಬುವರು ಆಡಿದ ತಮಾಷೆಯ ಮಾತು ಸಭಿಕರಿಗೆ ಬಹಳ ಉಲ್ಲಾಸವನ್ನುಂಟುಮಾಡಿತು. ಇದಾದ ಮೇಲೆ "ಚಿತ್ರಗಳೀಯ" ಎಂಬ ತೆಲುಗು ನಾಟಕದಲ್ಲಿ ಕೆಲವು ಭಾಗ ಮಾತ್ರ ಅಭಿನಯಿಸಲ್ಪಟ್ಟಿತು. ನಾಟಕವು ಬಹಳ ಚೆನ್ನಾಗಿತ್ತೆಂದು ಹೇಳುವುದಕ್ಕಾಗದಿದ್ದರೂ ವಿದ್ಯಾರ್ಥಿಗಳಿಂದ ಅಷ್ಟು ಮಟ್ಟಿಗೆ ಆಡಿದ್ದು ಬಹಳ ಗಣನೀಯವಾಗಿದೆ. ನಾಟಕದ ಮಧ್ಯೆ ವೆಂಕಟರಾಯಲ್ ಎಂಬುವರು ಕೆಲವು ತಮಿಳು ಹಾಡುಗಳನ್ನು ಹೇಳಿದರು ಇವರ ಹಾಡುಗಾರಿಕೆಯು ಸಭಾಸದರಲ್ಲಿ ಅನೇಕರಿಗೆ ಹರ್ಷವನ್ನುಂಟುಮಾಡಿರಬಹುದು.

ನಾಟಕವು ಪೂರೈಸಿದ ಮೇಲೆ ಮ|| ರಾಮಲಿಂಗರೆಡ್ಡಿ, ಎಂ.ಎ. ರವರು ಅಗ್ರಾಸನವನ್ನು ವಹಿಸಿ ಕೆಲವು ಮಾತನಾಡಿದರು ಇವರ ಮಾತು ಬಹಳ ಇಂಪಾಗಿಯೂ, ಆ ಸಮಯ ಸಂದರ್ಭಗಳಿಗೆ ತಕ್ಕುದಾಗಿಯೂ ಇತ್ತೆಂದು ಹೇಳಬಹುದು. ಅದರ ಇಲ್ಲಿ ಮೊದಲು ಸಂಘವು ಮೈಸೂರಿನವರಲ್ಲದ ಇತರ ವಿದ್ಯಾರ್ಥಿಗಳಿಗೆ ಬಹಳ ಅನುಕೂಲವಾಗಿದೆ ಎಂದೂ, ಮೈಸೂರಿನಲ್ಲಿ ವ್ಯಾಸಂಗಮಾಡುತ್ತಲಿರುವ ಹೊರಗಿನ ವಿದ್ಯಾರ್ಥಿಗಳು ಈ ಸಂಘಕ್ಕೆ ಸೇರಬಹುದೆಂದೂ, ಇವರು ಆಟಪಾಟಗಳಿಗೆ ಬಹಳ ಗಮನವನ್ನು ವಿನಿಯೋಗಿಸುವುದರಿಂದ ಸಂಘವು ಈ ರೀತಿಯಲ್ಲಿ ಇವರ ಸಹಾಯದಿಂದ ಪ್ರಾರಬ್ಧ ಹೊಂದುವುದಕ್ಕೆ ಸಂದೇಹವಿಲ್ಲವೆಂದೂ ಹೇಳಿದರು. ಆದರೆ ಇವರು ಈ ಸಂಘವು ಮೈಸೂರಿನಲ್ಲಿ ವಿದ್ಯಾರ್ಥಿ ಸಂಘದ ಲ್ಲೆಲ್ಲಾ ಮೇಲಾದುದೆಂದೂ, ಇಂಥಾ ಸಂಘ ಒಂದಿದರೂ ತಾವು ಮೈಸೂರಿನಲ್ಲಿ ನೋಡಿಲ್ಲವೆಂದೂ, ಈ ಸಂಘದವರು ಕೇವಲ ಮಾತಿನಲ್ಲಿಯೇ ಅಲ್ಲದೆ ಕಾರ್ಯದಲ್ಲಿಯೂ ತಮ್ಮ ಉದ್ದೇಶವನ್ನು ತೋರಿಸುತ್ತಾರೆಂದೂ, ಅವರು ದಕ್ಷಿಣ ಆಫ್ರಿಕದ ಫಂಡಿನ ವಿಚಾರದಲ್ಲಿ ತೋರಿಸಿದ ಕನಿಕರವೇ ಈ ಮಾತನ್ನು ದೃಷ್ಟಾಂತಪಡಿಸುವುದೆಂದು ಹೇಳಿದರು. ಇವರು ಆಡಿದ ಮಾತು ಮೈಸೂರಿನಲ್ಲಿ ಹುಟ್ಟಿ ಬೆಳೆದ ಮೈಸೂರು ದೇಶದ ವಿದ್ಯಾರ್ಥಿಗಳಲ್ಲಿ ಅನೇಕರಿಗೆ ಅಷ್ಟು ಚೆನ್ನಾಗಿ ಕಾಣಲಿಲ್ಲ. ಮೈಸೂರಿನಲ್ಲಿ ಬಹಳವಾದ ಪ್ರಚಾರಗೊಂಡಿರುವ ವಿದ್ಯಾರ್ಥಿ ಸಂಘಗಳಾದ "ಆರ್ಯಬಾಲ ಸಮಾಜ," "ಯಂಗ್‌ಮೆನ್ಸ್ ಲಿಟರರಿ ಯೂನಿಯನ್" ಇವೇ ಮುಂತಾದ ಸಂಘಗಳನ್ನೂ, ಅವು ಮಾಡಿರುವ ಮತ್ತು ಮಾಡುತ್ತಲಿರುವ ವಿಶೇಷ ಕಾರ್ಯಗಳನ್ನೂ ಮ|| ರೆಡ್ಡಿಯವರು ಮರೆತರೋ ಅಥವಾ ತಿಳಿಯದೆ ಹೋದರೋ ಗೊತ್ತಾಗಲಿಲ್ಲ. ಇಂಥಾ ಸಂಘಗಳೊಂದಿಗೆ ಮೇಲೆ ಹೇಳಿದ ಪ್ರೆಸಿಡೆನ್ಸಿ ಸಂಘವು ಹೋಲಿಕೆಗೆ ಕೂಡ ಬರಲಾರದೆಂದು ಹೇಳಬಹುದು ಮ|| ರೆಡ್ಡಿಯವರು ನಾಟಕದ ಮಧ್ಯೆ ಹಾಡಲ್ಪಟ್ಟ ತಮಿಳು ಹಾಡು ತಾವು ನಿರೀಕ್ಷಿಸಿದುದಲ್ಲವೆಂದೂ, ಪ್ರೆಸಿಡೆನ್ಸಿ ಸಂಘವೆಂದರೆ ಅಚ್ಚ ತೆಲುಗು ಸಂಘವೆಂದೂ ಹೇಳಿದ ಮಾತು, ತಮಿಳು ಮತ್ತು ಮಲಯಾಳ ಮಾತನಾಡುವ ಮದ್ರಾಸು ಮುಂತಾದ ಪ್ರಾಂತ್ಯಗಳಿಂದ ಬಂದಿರುವ ಅನೇಕ ವಿದ್ಯಾರ್ಥಿಗಳಿಗೆ ಅಸಮಾಧಾನವನ್ನುಂಟುಮಾಡಿದುದಲ್ಲದೆ ಪ್ರೆಸಿಡೆನ್ಸಿ ಸಂಘವೆಂಬ ಹೆಸರನ್ನೇ ತಲೆಕೆಳಗುಮಾಡಿದಂತಾಯ್ತು. ಮ|| ರೆಡ್ಡಿಯವರು ಹೇಳಿದ ಪ್ರಕಾರ ಸದರಿ ಸಂಘವು ಅಚ್ಚ ತೆಲುಗು ಸಂಘವಾದ ಪಕ್ಷದಲ್ಲಿ ಅದರ ಈಗಿನ ಹೆಸರನ್ನು ಕಿತ್ತು ತೆಲುಗು ಸಂಘ ಅಥವಾ ತೆಲುಗು ಮಾತನಾಡುವವರನೇಕರು ಸೀಡೆಡ್ ಡಿಸ್ಟ್ರಿಕ್ಟುಗಳಿಗೆ ಸೇರಿದವರಾಗಿರುವದರಿಂದ ಸೀಡೆಡ್ ಡಿಸ್ಟ್ರಿಕ್ಟ್ ಸಂಘವೆಂಬ ಹೆಸರು ಇಡುವುದು ಉತ್ತಮವೆಂದು ತೋರುತ್ತದೆ. ಈ ಸಂಘಕ್ಕೆ ಮೆಂಬರಾಗಲು ಅರ್ಹರಲ್ಲದ ಮೈಸೂರು ವಿದ್ಯಾರ್ಥಿಗಳು ಕೇವಲ ಅದೃಷ್ಟಹೀನರೆಂದು ಅಪ್ಪಣೆ ಕೊಡಿಸಿದ ಮ|| ರೆಡ್ಡಿಯವರು ಮೈಸೂರು ವಿದ್ಯಾರ್ಥಿಗಳ ಉದಾರ ಸಹಾಯದಿಂದಲೇ ಪ್ರೆಸಿಡೆನ್ಸಿ ಸಂಘವು ಅಷ್ಟು ಮುಂದಕ್ಕೆ ಬಂದಿರುತ್ತೆಂಬ ವಿಚಾರವನ್ನು ಮರೆತರೆಂದು ತೋರುತ್ತದೆ. ತೆಲುಗೂ ಒಂದು ಮುಖ್ಯ ಭಾಷೆ ಎಂದೂ, ಮೈಸೂರು ದೇಶದಲ್ಲೂ ಗಣ್ಯರಾದ ಅನೇಕ ದೊಡ್ಡ ಮನುಷ್ಯರೂ ಅಧಿಕಾರಿಗಳೂ ತೆಲುಗು ಜನಗಳೆಂದೂ, ಆದ್ದರಿಂದ ತೆಲುಗು ಭಾಷೆಗೆ ಪ್ರಾಶಸ್ತ್ಯ ಕೊಡಬೇಕೆಂದೂ ಅವರು ಹೇಳಿದರು.

ಮುಖ್ಯವಾಗಿ ಮ|| ರೆಡ್ಡಿಯವರು ಹೇಳಿದ ಕೆಲವು ವಿಚಾರಗಳು, ಸಂಘಕ್ಕೆ ಹೆಚ್ಚು ಉತ್ತೇಜನ ಕೊಡಬೇಕೆಂತಲೂ, ಅಲ್ಪಸ್ಥರಾದ ಸಂಘದ ಮೆಂಬರುಗಳಿಗೆ ಹೆಚ್ಚು ಮಮತೆಯನ್ನು ತೋರಿಸಬೇಕೆಂತಲೂ ಹೇಳಿದರು. ಇದು ತುಂಬಾ ಶ್ಲಾಘನೀಯವಾಗಿದೆ. ವಿದ್ವಾಂಸರು ಇಂಥಾ ಸಂಘಗಳಲ್ಲಿ ಅಗ್ರಾಸನವನ್ನು ವಹಿಸಿದಾಗ ಸಂಘಗಳ ಮುಖ್ಯ ಉದ್ದೇಶಗಳಾದ ಎಲ್ಲಾ ಜನಗಳಲ್ಲಿ ಐಕಮತ್ಯವನ್ನುಂಟುಮಾಡುವ ಸಾರ್ವಜನಿಕ ವಿಚಾರಗಳನ್ನು ಹೇಳುವುದರಿಂದ ಜನಗಳಿಗೆ ಹೆಚ್ಚು ತಿಳುವಳಿಕೆಯನ್ನುಂಟುಮಾಡುವವು. ಆದ್ದರಿಂದ ಯಾವ ಜನಾಂಗವೇ ಆಗಲಿ ಯಾವ ದೇಶವೇ ಆಗಲಿ ಎಲ್ಲರಿಗೆ ಬರಬೇಕಾದರೆ ಸರ್ವರನ್ನೂ ಏಕರೀತಿಯಾಗಿ ನೋಡುವ ಗುಣವು ಪ್ರತಿ ಒಬ್ಬರಲ್ಲಿ ಇರಬೇಕಲ್ಲದೆ ಈಗ ವಿದ್ಯಾರ್ಥಿಯಾಗಿದ್ದು ಮುಂದೆ ಪೌರನಾಗಿಯೂ ಜನಾಂಗದ ಏಳಿಗೆಗೆ ಸಹಾಯಕನೂ ಆಗುವ ಪ್ರತಿ ಒಬ್ಬ ವಿದ್ಯಾರ್ಥಿಯಲ್ಲೂ ಇರಬೇಕಾದ ಮುಖ್ಯ ಗುಣಗಳಲ್ಲಿ ಒಂದಾಗಿರಬೇಕು

ವಿದ್ಯಾರ್ಥಿಗಳ ಹಿತಚಿಂತಕ

ಸ್ಟೂಡೆಂಟ್ಸ್ ಹಾಲ್, ಮೈಸೂರು.

ಮ|| ಎಚ್. ಆರ್. ವೆಂಕಟಸುಬ್ಬಾಚಾರ್ಯರ ಎಲ್ಲಾ ಪುಸ್ತಕಗಳೂ, ಗೌರ್ನ್‌ಮೆಂಟ್ ಪುಸ್ತಕಗಳೂ, ಮ|| ಆಳ್ವಾರಯ್ಯಂಗಾರ್ರವರ ಗಣಿತಗಳೂ, ಮೊದಲಾದ ಸ್ಕೂಲಿಗೆ ಬೇಕಾದ ಪುಸ್ತಕಗಳೆಲ್ಲಾ ನಮ್ಮಲ್ಲಿ ದೊರೆಯುವವು.

[203-1] ವಿಳಾಸ:—ಸ್ಟೂಡೆಂಟ್ಸ್ ಹಾಲ್, ಮೈಸೂರು.

ಒಳ್ಳೇ ಸಮಯ] 2 ಕ್ಕೆ 1 ಉಚಿತ [ಈ ನವರಾತ್ರದವರೆಗೆ

ನಮ್ಮಲ್ಲಿ ದೊರೆಯುವ 8 ಆಣೆ, 4 ಆಣೆ ಬೆಲೆಯುಳ್ಳ ದೊಡ್ಡ ಸೈಜಿನ ಅಥವಾ ಚಿಕ್ಕ ಸೈಜಿನ ಸಚಿತ್ರ ಭಗವದ್ಗೀತೆಯ 2 ಪ್ರತಿಗಳನ್ನು ಒಟ್ಟಿಗೆ ತರಿಸಿಕೊಳ್ಳುವರಿಗೆ 1 ಹೆಚ್ಚಾಗಿ ಕಳುಹಿಸಲ್ಪಡುವುದು.

[204-1] ವಿಳಾಸ:—ಭಕ್ತಿವಿಜಯ ಆಫೀಸ್, ಮೈಸೂರು.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲ್.
ನೋಟೀಸು.

ಇದರಿಂದ ಸಿಟಿ ಮುನಿಸಿಪಾಲಿಟಿಯಲ್ಲಿರುವ ಧರ್ಮಛತ್ರ, ಮಠ, ಮುಸಾಫರ್‌ಖಾನೆ, ಮಸೀದಿ, ಇವುಗಳ ಅಧಿಕಾರಿಗೆ ತಿಳಿಯಪಡಿಸುವದೇನೆಂದರೆ—ಸಿಟಿ ಮುನಿಸಿಪಾಲಿಟಿಯ ಇತರ ಸ್ಥಳಗಳಲ್ಲಿ ಪ್ಲೇಗ್ ಜಾಡ್ಯ ಪ್ರಾಪ್ತವಾದ ಮನೆಗಳಿಂದ ಬರತಕ್ಕ ಜನಗಳಿಗೆ ಛತ್ರ, ಮಠ, ಮುಸಾಫರ್‌ಖಾನೆ, ದೇವಸ್ಥಾನ ವಗೈರೆಗಳಲ್ಲಿ ಟೆಂಪೊರರಿ ಆಗುವದಕ್ಕೆ ಅಥವಾ ವಾಸಕ್ಕೆ ಜಾಗಾ ಕೊಟ್ಟಲ್ಲಿ ಸದರಿ ಜಾಡ್ಯವು ವ್ಯಾಪಿಸಲು ಸಂಭವವುಂಟಾಗುತ್ತಾಗಿ ಅಂಥಾ ಜನರಿಗೆ ಮೇಲ್ಕಂಡ ಸ್ಥಳಗಳಲ್ಲಿ ವಾಸಕ್ಕಾಗಿ ಅವಕಾಶ ಕೊಡಕೂಡದು. ಇದಕ್ಕೆ ವಿರೋಧವಾಗಿ ನಡೆದಲ್ಲಿ ಮುನಿಸಿಪಲ್ ರೆಗ್ಯುಲೇಷನ್ 144 ನೇ ಸೆಕ್ಷನ್‌ನಲ್ಲಿ ನಿರ್ಧರಿಸಲ್ಪಟ್ಟಿರುವ ಶಿಕ್ಷೆಗೆ ಒಳಪಡಬೇಕಾಗುತ್ತೆ, ತಿಳಿಯುವದು. [202-1]

ತಾ. 4-9-1914, ಕೆ. ಪಿ. ಪುಟ್ಟಣ್ಣಚೆಟ್ಟಿ,
ಬೆಂಗಳೂರು ಸಿಟಿ. ಪ್ರೆಸಿಡೆಂಟ್, ಮ್ಯುನಿಸಿಪಲ್ ಕೌನ್ಸಿಲ್

ಓರಿಯಂಟಲ್ ಗ॥ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪೆನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪೆನಿಯ ಫಂಡು............ರೂ. 4,45,00,000

ಕಂಪೆನಿಯಿಂದ ಪಾವತಿ ಆಗಿರುವದು ,, 4,00,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪೆನಿಗೆ ಸೇರಬೇಕೆನ್ನುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ.—ಮ|| ಎಂ. ಎಸ್. ರೆಡ್ಡಿ, ಚೀಫ್ ಏಜೆಂಟ್, ಬೆಂಗಳೂರು; ಮ|| ಎಂ. ಎಸ್. ನಂಜಪ್ಪನವರು ಅಥವಾ ಮ|| ವೆಂಕಟಪತಯ್ಯನವರು, ಕಂಪನಿ ಏಜಂಟರು, ಮೈಸೂರು; ಅಥವಾ

[194-50] ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ, ಮದರಾಸ್,

ಟೋಪಿಗಳು: ಟೋಪಿಗಳು.

ಉತ್ತಮವಾದ ಟೋಪಿಗಳು ಹಾಸನದಲ್ಲಿ ದೊರೆಯುತ್ತವೆ.

ವಿವಿಧ ತರಹ ಉಣ್ಣೆ ಧಾರದಿಂದ ತಯಾರಿಸಲ್ಪಡುವ ಸಾಮಾನುಗಳ ಮಾದರಿಗಳಿಗೂ, ದರಗಳಿಗೂ ಮ್ಯಾನೇಜರವರಿಗೆ ಬರೆದು ತಿಳಿದುಕೊಳ್ಳಬಹುದು

Men's socks, vests and various knitted articles.

ಮ್ಯಾನೇಜರ್, ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ

Apply:—MANAGER, WOOL WORKS,
[201-1] GIRLS' INDUSTRIAL SCHOOL, HASSAN.

ಗೃಹಕೃತ್ಯದ ನೋಟೀಸು.

ತೀರ್ಥಹಳ್ಳಿ ತಾಲ್ಲೋಕು ಕಸಬಾ ಹೋಬಳಿ ಲಕ್ಕುಂದದ ಗ್ರಾಮದ ಕೈಸ್ಥಳಿಯಲ್ಲಿರುವ ಹಳೆಪೈಕರ ಸಿದ್ದನಾಯಕನ ಮಗ ಪರಮನಾಯಕನು ಸಮಸ್ತರಿಗೂ ತಿಳಿಯಪಡಿಸುವದೇನೆಂದರೆ—ನನ್ನ ಹಿರೀಮಗ ಸುಮಾರು 26 ವರುಷ ವಯಸ್ಸಿನ ಅಪ್ಪು ಎಂಬವನು ಈಗ 1½ ವರುಷದಿಂದ ಬುದ್ಧಿ ಸ್ವಾಧೀನವಿಲ್ಲದೆ ಮನೆ ಬಿಟ್ಟು ಪೋಲಿಯಾಗಿ ತಿರುಗಾಡುತ್ತಾ ನನ್ನ ಹೆಸರಿನ ಮೇಲೆ ಕಂಡಕಂಡವರಲ್ಲಿ ಸಾಲ ಮಾಡುತ್ತಾ ಇದ್ದಾನೆ. ಆದ್ದರಿಂದ ಇನ್ನು ಮುಂದೆ ಸದರಿ ಅಪ್ಪು ಮಾಡತಕ್ಕ ಸಾಲಗಳಿಗೆ ನಾನೇ ಆಗಲಿ. ನನ್ನ ಬಾಬ್ತು ಚರ ಸ್ಥಿರ ಆಸ್ತಿಗಳೇ ಆಗಲಿ ಹೊಣೆಯಾಗುವದಿಲ್ಲವೆಂದು ಈ ಮೂಲಕ ಪ್ರಸಿದ್ಧಪಡಿಸಿ ಎಚ್ಚರಿಸಿರುತ್ತೇನೆ

[200-1] ಪರಮನಾಯಕನ ರುಜು.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲ್.
ಇಸ್ತಿಹಾರ್.

ದೊಡ್ಡ ತಿರುಪತಿಯಲ್ಲಿ ಕಾಲರಾ ಜಾಡ್ಯವು ವ್ಯಾಪಿಸಿ ಇರುತ್ತಯಾಗಿ ಸದರಿ ಸ್ಥಳಕ್ಕೆ ಹೋಗತಕ್ಕ ಯಾತ್ರಾರ್ಥಿಗಳಿಗೆ ರೋಗವು ತಗಲುವ ಅಪಾಯವುಂಟೆಂದು ಜನಗಳಿಗೆ ಇದರಿಂದ ಎಚ್ಚರಿಸಿರುತ್ತೆ

ಕಾಲರಾ ಜಾಡ್ಯವು ವ್ಯಾಪಿಸಿರುತ್ತೆಂದು ತಿಳಿಯಬರುವ ಸ್ಥಳಗಳಿಂದ ಬೆಂಗಳೂರು ಪಟ್ಟಣಕ್ಕೆ ಬಂದು ಇಳಿಯುವ ಜನರು ತಾವು ಇಲ್ಲಿ ಬಂದು ತಲಪಿದ ಸಂಗತಿಯನ್ನು ಹೆಲ್ತ್ ಆಫೀಸರವರಿಗೆ ತಿಳಿಸತಕ್ಕದ್ದು. ಮತ್ತು ಮ್ಯುನಿಸಿಪಲ್ ರೆಗ್ಯುಲೇಷನ್ 145 (1) ನೇ ಪ್ರಕರಣಕ್ಕನುಗುಣವಾಗಿ ಅಂಥಾ ಜನರು ಅವರ ಉಡಿಗೆ ತೊಡಿಗೆಗಳನ್ನು (ಡಿಸಿನ್‌ಫೆಕ್ಟ್) ಶುದ್ಧಿ ಮಾಡುವದಕ್ಕಾಗಿಯೂ ಅಥವಾ ಅಂಥಾ ಜನರನ್ನು ಅವರು ಬಂದ 7 ದಿನಗಳ ಪರ್ಯಂತರ ಅಜಮಾಯಿಷಿಯಲ್ಲಿ ಇಡಲ್ಪಡುವದಕ್ಕಾಗಿ ನ್ಯಾಯವಾಗಿ ಕೊಡಲ್ಪಡುವ ಅಪ್ಪಣೆಯನ್ನು ನಡೆಯಲು ಬದ್ಧರಾಗಿರತಕ್ಕದ್ದು.

ಕಾಲರಾ ರೋಗದಿಂದ ಪೀಡಿತನಾಗಿ ಬೆಂಗಳೂರು ಸಿಟಿ ಲಿಮಿಟ್ಸ್‌ನಲ್ಲಿ ಬಂದು ಇಳಿಯುವ ಪ್ರತಿ ಮನುಷ್ಯನೂ ತಾನು ಇಲ್ಲಿಗೆ ಬಂದು ತಲಪಿದದನ್ನು ಹೆಲ್ತ್ ಆಫೀಸರಿಗೆ ತಿಳಿಯಪಡಿಸಿ, ಸಾಂಕ್ರಾಮಿಕ ರೋಗಗಳ ಆಸ್ಪತ್ರೆಯಲ್ಲಿ ಚಿಕಿತ್ಸೆ ಮಾಡಲ್ಪಡಲು ಅನುಕೂಲಪಡಿಸಿರುವ ಸ್ಥಳದಲ್ಲಿರಬೇಕೇ ವಿನಹ ಸಿಟಿ ಮುನಿಸಿಪಾಲಿಟಿ ಬೇರೆ ಯಾವ ಸ್ಥಳದಲ್ಲಿಯೂ ವಾಸಮಾಡಕೂಡದು.

ತಾ. 7-9-1914, ಆರ್. ಸುಬ್ಬರಾವ್,
ಬೆಂಗಳೂರು ಸಿಟಿ. [205-1] ಹೆಲ್ತ್ ಆಫೀಸರ್.

ಮೇಲಾದ ಜರಿಗೆ ರೇಷ್ಮೆ ಪಂಚೆಗಳು.

ಒಳ್ಳೇ ಸಮಯ; ಸಾವಿರಗಟ್ಟಲೆ ಖರ್ಚಾಗುತ್ತಿದೆ!! ನಂತರ ದೊರೆಯಲಾರದು!

ಅನೇಕ ಪಂಚೆಗಳು ದಿನವೂ ಖರ್ಚಾಗುತ್ತಾ ಇರುವುದರಿಂದ ಪ್ರಕೃತ ಬೆಲೆಯು ತಗ್ಗಿಸಿರುತ್ತೇವೆ. ವಾಚಕರೇ! ಶೃಂಗಾರವನ್ನೂ ನಾಗರಿಕತೆಯನ್ನೂ ಹೊಂದಿರುವ ಮೇಲಾದ ಅಸಲ್ ರೇಷ್ಮೆ ಪಂಚೆಗಳು ಹಬ್ಬಗಳ ಕಾಲದಲ್ಲಿ ಹೊದಿಯಲು ಅನೇಕ ಪಂಚೆಗಳನ್ನು ತರಿಸಿಕೊಂಡಿರುವದರಿಂದ ಮುಕ್ಕಾಲು ಪಾಲು ಸರಕು ಖರ್ಚಾಗಿಹೋಗಿರುತ್ತೆ. ಈಗ ಸ್ವಲ್ಪವೇ ಉಳಿದಿರುತ್ತೆ. ಈ ಪಂಚೆಗಳು ಸ್ತ್ರೀ ಪುರುಷರು ಬಾಲಕರು ಧರಿಸಿಕೊಳ್ಳಬಹುದು ಅಪೂರ್ವವಾದ ಪಂಚೆಗಳು. ಇದಲ್ಲದೆ ಕೆಂಪು, ಹಸರು, ಎಲೆಹಸರು, ರೋಜಾ, ನೀಲಿ ವರ್ಣ, ಇತ್ಯಾದಿ ರಂಗುಗಳುಂಟು. ಬಹಳ ಉತ್ಕೃಷ್ಟವಾದ ಪಂಚೆಗಳು. ಈ ಜರಿಗೆ ನಮ್ಮಲ್ಲಿ ಅಲ್ಲದೆ ಮತ್ತೆ ಯಾಲ್ಲಿಯೂ ದೊರೆಯಲಾರದು



5½ ಮೊಳ ಉದ್ದ, 2½ ಮೊಳ ಅಗಲ ಇರುವ ಪಂಚೆ ಒಂದಕ್ಕೆ ರೂ. 2. ಪಂಚೆ 1 ಕ್ಕೆ ಟಪಾಲು ಖರ್ಚು 4 ಆಣೆ. ಎರಡು ಪಂಚೆಗಳನ್ನು ಒಂದೇ ಸಲ ತರಿಸಿಕೊಂಡರೆ ಟಪಾಲು ಖರ್ಚು ಇನಾಂ.

ನಮ್ಮ ವಿಳಾಸ—ಎಚ್. ಎಂ. ಸ್ವಾಮಿ ಅಂಡು ಕಂಪೆನಿ,

[109-18] ನಂ. 44, ನಂಬುಲಯ್ಯರ್ ಬೀದಿ, ಮದರಾಸು.

ಅರೇಬಿಯನ್ ನೈಟ್ಸ್
ಅಥವಾ
ಯವನ ಯಾಮಿನೀ ವಿನೋದ ಕಥೆಗಳು
(ಕನ್ನಡದಲ್ಲಿ)

ಲೋಕಪ್ರಸಿದ್ಧವಾದ ಈ ಪುಸ್ತಕದ ಮೊದಲನೇ ಮುದ್ರಣವು ಶೀಘ್ರದಲ್ಲಿಯೇ ಮುಗಿದುಹೋದುದರಿಂದ ಎರಡನೇ ಮುದ್ರಣವನ್ನು ತಯಾರಿಸಿರುತ್ತೇವೆ. ಇದರ ಪ್ರಿಂಟಿಂಗ್ ಮತ್ತು ಬೈಂಡ್ ಮುಂತಾದ ಕೆಲಸಗಳು ವೆಸ್ಲಿಯನ್ ಮಿಷನ್ ಪ್ರೆಸ್ಸಿನಲ್ಲಿ ಬಹು ಶ್ಲಾಘ್ಯತರವಾಗಿ ಮಾಡಲ್ಪಟ್ಟಿರುವವು. ಈ ಎರಡನೇ ಮುದ್ರಣವನ್ನು ಘನ ಪಂಡಿತರು ಅನುಕೂಲಾಗ್ರವಾಗಿ ಪರೀಕ್ಷಿಸಿ ತಿದ್ದಿ ಪರಿಷ್ಕರಿಸಿರುತ್ತಾರೆ. ಇದರಲ್ಲಿನ ಕಥೆಗಳು ಬಹು ಮನೋರಂಜಕವಾಗಿಯೂ ಭಾಷೆಯು ಅತಿ ಲಲಿತವಾಗಿಯೂ ಇರುತ್ತವೆ. ಪುಸ್ತಕವು ನಾನೂರು ಪುಟಗಳಿಗಿಂತ ಹೆಚ್ಚಾಗಿರುತ್ತದೆ. ಇದರ ಕ್ರಯ ಎರಡೇ ರೂಪಾಯಿ. ವಿ. ಪಿ. ಪಿ. ಮೂಲಕ ತರಿಸಿಕೊಂಡರೆ ರೂ. 2-4-0. ಜಾಗ್ರತೆ ನೋಡಿ.

[206-1] ವಿಳಾಸ:—ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಚನ್ನಪಟ್ಟಣ ತಾಲ್ಲೂಕು ಮಳೂರು ಅನ್ಯೋನ್ಯಸಹಾಯ ಸಂಘ.

ಈ ಸಂಘದ ನಾಲ್ಕನೇ ವಾರ್ಷಿಕದ ಜನರಲ್ ಮೀಟಿಂಗು ಶ್ರೀ ಅಪ್ರಮೇಯಸ್ವಾಮಿ ಮಂದಿರದಲ್ಲಿ ಸೇರಿತ್ತು. ಜನಗಳ ಪುರೋಭಿವೃದ್ಧಿಯಲ್ಲಿ ಆಸಕ್ತಿ ಪಡೆದಿರುವ ನಮ್ಮ ಅಮಲ್ದಾರ್ರವರು ಅಗ್ರಾಸನವನ್ನು ಅಲಂಕರಿಸಿದರು. ಆನರರಿ ಸೆಕ್ರೆಟರಿಯವರು ಮ॥ ಆರ್. ಎಸ್. ನರಸಿಂಹಯ್ಯಂಗಾರ್ರವರು ಗತಸಾಲಿನ ಡೈರೆಕ್ಟರ ರಿಪೋರ್ಟನ್ನು ಓದಿದರು. ಅದರ ಸಾರಾಂಶವೇನೆಂದರೆ—

ಕಳೆದ ಸಾಲಿಗಿಂತಲೂ ಈ ಸಾಲಿನಲ್ಲಿ ಈ ಸಭೆಯ ಮೆಂಬರುಗಳ ಸಂಖ್ಯೆಯು ನೂರಕ್ಕಿಂತಲೂ ಹೆಚ್ಚಾದ್ದರಿಂದ ಷೇರುಗಳ ಸಂಖ್ಯೆಯೂ ಹೆಚ್ಚುತ್ತ ಬಂದಿರುವ ಸಂಗತಿ ತೃಪ್ತಿಕರವಾಗಿಯೇ ಎನಿಸಲ್ ಆಗುತ್ತಿದೆ. ಸಂಘಕ್ಕೆ ಸಂಬಂಧಪಟ್ಟ ಮತ್ತು ಸಂಬಂಧಪಡದ ಜನಗಳಿಂದಲೂ, ವಿಶೇಷತಃ ಸ್ತ್ರೀಯರಿಂದಲೂ ಆರೇಳು ಸಹಸ್ರ ರೂಪಾಯಿಗಿಂತ ಹೆಚ್ಚಾಗಿ ಈ ಸಾಲಿನಲ್ಲಿ ಡಿಪಾಜಿಟ್ ಇಡಲ್ಪಟ್ಟದ್ದರಿಂದ ಲೇವಾದೇವಿಗೆ ಅನುಕೂಲ್ಯವು ದೊರೆತದ್ದಲ್ಲದೆ ಅದ್ಯಾಪಿ ಸಂಪೂರ್ಣವಾದ ನಾಗರಿಕತೆಯನ್ನೈದದಿರುವ ನಮ್ಮ ದೇಶದ ಗ್ರಾಮವಾಸಿಗಳಲ್ಲಿ ಬಹುಕಾಲದಿಂದಲೂ ಅಂಕುರಿಸಲ್ಪಟ್ಟಿರುವ ಪರಸ್ಪರಸಹಾಯ ವಿಷಯದಲ್ಲಿ ಅಪೇಕ್ಷಿತವಾಗಿರುವ ಅಪನಂಬಿಕೆ ಮೊದಲಾದ ಕೊರತೆಗಳು ಅದೃಶ್ಯವಾಗುತ್ತಲಿವೆ. ತತ್ರಾಪಿ ಸ್ತ್ರೀಯರಿಗೆ ಉಂಟಾಗಿರುವ ನಂಬಿಕೆಯು ಸಂತೋಷಕರವು. ಸಂಘದ ತೃಪ್ತಿಕರವಾದ ಯೋಗ್ಯತೆಯಿಂದ ಆಕರ್ಷಿಸಲ್ಪಟ್ಟ ಡಿಪಾಜಿಟ್ಟಿನ ಮತ್ತು ಷೇರಿನ ಅಭಿವೃದ್ಧಿಯನ್ನು ಪ್ರೀತಿಯಿಂದಾಲೈಸಿ ರಿಜಿಸ್ಟ್ರಾರ್ ಸಾಹೇಬರವರು ಸೆಂಟ್ರಲ್ ಬ್ಯಾಂಕಿನಿಂದ ಮೂರು ಸಾವಿರ ರೂಪಾಯಿ ಸಾಲ ಕೊಡಿಸುವದಾಗಿ ವಾಗ್ದಾನ ಮಾಡಿದಾಗ ಸಂಘದ ಲೇವಾದೇವಿ ವಿಷಯವೂ ಅತಿ ತೃಪ್ತಿಕರವಾಗಿದೆ. ರಿಜಿಸ್ಟ್ರಾರ್ ಸಾಹೇಬರವರು ಕಳೆದ ಜೂನ್ ಮಾಹೆಯಲ್ಲಿ ಇಲ್ಲಿಗೆ ದಯಮಾಡಿಸಿದ್ದಾಗ್ಗೆ ಅಪ್ಪಣೆ ಕೊಟ್ಟಂತೆ ಸಣ್ಣ ಮಕ್ಕಳಿಂದ ಡಿಪಾಜಿಟ್ ಅಂಗೀಕರಿಸಲ್ಪಟ್ಟು ಅತ್ಯಲ್ಪಕಾಲದಿಂದ 29 ದಿವಸಗಳಲ್ಲಿ ಈ ಬಾಬಿಗೆ ಐವತ್ತು ರೂಪಾಯಿ ಸೇರಿದ್ದನ್ನು ನೋಡಿ ನಾವೆಲ್ಲಾ ಸಂತೋಷಪಡಬೇಕು. ಸಂಘದ ಸ್ಥಿತಿಯು ದಿನೇದಿನೇ ಅಭಿವೃದ್ಧಿಯನ್ನೈದುತ್ತಲಿದೆ. ಇದಕ್ಕೆ ತಮ್ಮಗಳ ಅಭಿಮಾನವೂ ಶ್ರದ್ಧೆಯೂ ಅವಿಚ್ಛಿನ್ನವಾಗಿದ್ದಲ್ಲಿ ಬಡಜನಗಳ ಕಷ್ಟವು ಕ್ರಮೇಣ ಅದೃಶ್ಯವಾಗಿ ಗ್ರಾಮವಾಸಿಗಳ ಕ್ಷೇಮಾದಾಯಾದಿಗಳಿಗೆ ಕಾರಣವಾಗುವದರಲ್ಲಿ ಸಂದೇಹವಿಲ್ಲ. ವ್ಯವಸಾಯ, ವ್ಯಾಪಾರ, ಕೈಗಾರಿಕೆ ಮೊದಲಾದ ವೃತ್ತಿಗಳಿಂದ ಜೀವಿಸುತ್ತಲಿರುವ ನಮ್ಮ ದೇಶೀಯರಿಗೆ ಅನ್ಯೋನ್ಯಸಹಾಯಸಂಘವೆಂಬ ಸಾಧನಗಳು ಇಲ್ಲದಿದ್ದರೆ ಎಷ್ಟು ಕಷ್ಟವಾಗಿತ್ತೆಂದು ಈಗ ನಮ್ಮ ಅನುಭವಕ್ಕೆ ಬರುತ್ತಲಿದೆ. ದೇಶೋನ್ನತಿಗಾಗಲಿ, ಪರೋಪಕಾರ ಮತ್ತು ಸುಲಭ ಜೀವನಕ್ಕಾಗಲಿ ನಮ್ಮ ಘನವನ್ನೈದಿದ ಶ್ರೀಮನ್ಮಹಾರಾಜಾ ಸಾಹೇಬ್ ಬಹದ್ದೂರವರಿಂದಲೂ, ಶ್ರೀಮನ್ಮಹಾರಾಜರಿಂದಲೂ ದೀನರಕ್ಷಣಾರ್ಥವಾಗಿ ಬಹು ಶ್ರಮದಿಂದ ಈ ದೇಶದಲ್ಲೆಲ್ಲಾ ಹರಡುತ್ತಿರುವ ಈ ವಿಧವಾದ ಸಂಘಗಳು ಅವರುಗಳಿಗೆ ಪ್ರಜೆಗಳಲ್ಲಿರುವ ವಾತ್ಸಲ್ಯಕ್ಕೆ ದೃಷ್ಟಾಂತವಾಗಿರುವವು. ಪರಸ್ಪರ ಪ್ರೀತಿಯೂ, ಸತ್ಯದಯವೂ, ಸಹಿಷ್ಣುತೆಯೂ, ಸಹಾಯವೂ ಇಲ್ಲದ ನಮ್ಮ ಜನಾಂಗಕ್ಕೆ ಎಂದಿಗೂ ಯಾವ ಕಾರ್ಯವೂ ಕೈಗೂಡಲಾರದು. ಒಂದು ಸಂಘವು ಬಹು ಜನಗಳಿಗೆ ಅಪೇಕ್ಷಿತವಾದ ಕಾಲಗಳಲ್ಲಿ ಉಚಿತವಾದಷ್ಟು ಸಹಾಯಮಾಡುವುದು ಸಾಧ್ಯ; ಆದರೆ ಎಷ್ಟೇ ಧನಿಕನಾದ ಯಾರೊಬ್ಬನಿಂದಲೂ ಒಂದು ಸಂಘಕ್ಕಾಗಲಿ ಅಥವಾ ಜನಾಂಗಕ್ಕಾಗಲಿ ಬೇಕಾದಷ್ಟು ಸಹಾಯಮಾಡುವುದು ಸಾಧ್ಯವಲ್ಲವೆಂದು ಸಕಲರಿಗೂ ವಿದಿತವಾಗಿಯೇ ಇರುತ್ತೆ. ಪ್ರಜೆಗಳ ಕಷ್ಟಪರಿಹಾರಾರ್ಥವಾಗಿ ಸದುಪಾಯಗಳನ್ನು ವಿವಿಧ ಪ್ರಯತ್ನಗಳಿಂದ ಹುಡುಕಿ ರಕ್ಷಿಸುತ್ತಲಿರುವ ಪ್ರಜಾವತ್ಸಲರಾದ ನಮ್ಮ ಶ್ರೀಮನ್ಮಹಾರಾಜರವರಿಗೂ ಈ ಸಂಘಗಳ ಪೋಷಕರಾದ ಯುವರಾಜರವರಿಗೂ, ರಿಜಿಸ್ಟ್ರಾರ್ ಸಾಹೇಬರವರಿಗೂ, ಈ ಸಭೆಯ ಅಗ್ರಾಸನಾಧಿಪತಿಗಳಾದ ನಮ್ಮ ಅಮಲ್ದಾರ್ರವರಿಗೂ, ಸಂಘದ ಪ್ರೆಸಿಡೆಂಟರಿಗೂ, ಸಭಿಕರಿಗೂ ಡೈರೆಕ್ಟರುಗಳ ವಂದನೆಗಳನ್ನು ಅರ್ಪಿಸುತ್ತೇನೆ.

ಈ ಪ್ರಕಾರ ಸೆಕ್ರೆಟರಿಗಳ ರಿಪೋರ್ಟು ಓದಲ್ಪಟ್ಟ ನಂತರ ಅಗ್ರಾಸನಾಧಿಪತಿಗಳು ಸಭಿಕರನ್ನುದ್ದೇಶಿಸಿ ಪರಸ್ಪರಸಹಾಯಸಂಘವೆಂಬುವದು ದೇಶಕ್ಕೆ ಹೊಸದಾದರೂ ಬಹು ಕಾಲಗಳಿಂದ ವಿದೇಶದಲ್ಲಿ ಜಾರಿಗೆ ಬಂದಿದ್ದು, ದೇಶೋನ್ನತಿಗೆ ಪ್ರಬಲವಾದ ಕಾರಣವಾಗಿರುವದೆಂದೂ, ಮುಖ್ಯವಾಗಿ ಇದರ ಅಭಿವೃದ್ಧಿಗೆ ಪರಸ್ಪರ ನಂಬಿಕೆಯು ಅವಶ್ಯವೆಂತಲೂ, ಪ್ರಕೃತ ಅವಿದ್ಯಾವಂತರು ಮತ್ತು ನಾಗರಿಕರಲ್ಲದಿರುವ ಗ್ರಾಮವಾಸಿಗಳ ಸಮಾಜದಲ್ಲಿರುವ ನಮ್ಮಗಳಿಗೆ ಈ ಸಭೆಯು ರಿಪೋರ್ಟಿನಿಂದ ಅಪನಂಬಿಕೆಯೆಂಬ ಶತ್ರುವೆಯು ಪರಿಹಾರವಾಗುತ್ತಲಿರುವದನ್ನು ನೋಡಿ ತಮಗೂ ಸರ್ಕಾರಕ್ಕೂ ವಿಶೇಷ ಸಂತೋಷವನ್ನುಂಟುಮಾಡಿದೆ ಎಂದು ಬಹು ಮೃದೂಕ್ತಿಗಳಿಂದ ಉಪನ್ಯಾಸಮಾಡಿದರು. ಅವರಿಂದ ಅಲ್ಲಿ ಸೇರಿದ್ದ ಸಭಿಕರ ಮನಸ್ಸು ಬಹು ಸುಲಭವಾಗಿ ಆಕರ್ಷಿಸಲ್ಪಟ್ಟು ಅವರಿಂದ ಸಂಘದಲ್ಲಿ ಬಾಕಿ ಉಳಿದಿದ್ದ 600 ಷೇರುಗಳ ಪೈಕಿ 450 ಷೇರುಗಳು ಕ್ಷಣಕಾಲದಲ್ಲಿ ಅಂಗೀಕರಿಸಲ್ಪಟ್ಟವು.

ಅನಂತರ ಸಭಿಕರೆಲ್ಲಾ ಹರ್ಷಪಟ್ಟು ಅಗ್ರಾಸನಾಧಿಪತಿಗಳೇ ಮೊದಲಾದವರನ್ನು ಪುಷ್ಪಮಾಲಿಕೆಗಳಿಂದಲಂಕರಿಸಿ ಜಯವಾಕ್ಯಗಳಿಂದ ದೇವಾಲಯದಲ್ಲಿ ಪ್ರತಿಷ್ಠೆಯನ್ನುಂಟುಮಾಡಿ ಶ್ರೀ ಅಪ್ರಮೇಯಸ್ವಾಮಿಗೆ ದೀಪಾರಾಧನೋತ್ಸವವನ್ನು ಮಾಡಿಸಿ ತಾವೂನೂ ಪುಷ್ಪತಾಂಬೂಲಚರ್ಕರಾದಿ ವಿಯೋಗಗಳಿಂದ ತೃಪ್ತರಾಗಿ ಸಭೆಯನ್ನು ಪೂರೈಸಿದರು.

ಒಬ್ಬ ಮೆಂಬರು

ಮಧುರೆ ಜನ್ನಡಿ ಅಂಚಿನ ಸೀರೆ ಅವ್ವಲ್ ರಕಂ ರೂ. 2-2-0. ಕಪ್ಪು ಬಣ್ಣದ 1 ರವಿಕೆ ಇನಾಂ ಸಹಿತ.

ಇದು 18 ಮೊಳ ಧಾರಾಳವಾಗಿದೆ. ಉಡಲು ಲಾಯಖಾದದ್ದು. ಬಣ್ಣ ಹೋಗದು ಸುಂದರವಾದ ಸೆರಗು. ಜಾಗ್ರತೆ ತರಿಸುವವರಿಗೆ ಮಾತ್ರ. ಈ ಕ್ರಯಕ್ಕೆ ದೊರೆಯುತ್ತೆ. [196-1]

ವಿಳಾಸ—ರಾಮರಾವ್, ಎಸ್. ಎಂ. ಕೋಯಿಲ್ ಬೀದಿ, ತಿರುವಲ್ಲಿಕ್ಕೇಣಿ, ಮದರಾಸ್.

ತಂಜಾವೂರು ಗೆಜ್ಜೆ ಅಡ್ಡಿಗೆ ಕ್ರಯ 7 ಆಣೆ.

ಇದು ಎಲೆಕ್ಟ್ರಿಕ್ ಚಿನ್ನದಿಂದಲೂ ಮತ್ತು ಗಟ್ಟಿ ಗೆಜ್ಜೆಗಳಿಂದಲೂ ತಯಾರಿಸಿ ಸುಂದರವಾಗಿ ತುಕುಡಿಗಳನ್ನಿಟ್ಟು ರೇಷ್ಮೆ ಮಿಶ್ರವಾದ ಧಾರದಿಂದ ಕಟ್ಟುತ್ತೆ.



ಇದು ಸ್ತ್ರೀಯರು ಕೊರಳಲ್ಲಿ ಧರಿಸಿಕೊಳ್ಳುವದಕ್ಕೆ ಲಾಯಖಾದದ್ದು. ದರಖಾಸ್ತುದಾರರಿಗೆ ನಂಬಿಕೆ ಹುಟ್ಟುವದಕ್ಕಾಗಿ ಅವರು ಕೋರುವಷ್ಟು ಅಡ್ಡಿಗೆಗಳನ್ನು ವಿ. ಪಿ. ಭಾಂಗಿ ಮೂಲಕ ಕಳುಹಿಸುವದಲ್ಲದೆ ಅಡ್ಡಿಗೆಯ ಮಾದರಿಯನ್ನು ಸಹ ನೋಡುವದಕ್ಕಾಗಿ ಮಾದರಿ ಅಡ್ಡಿಗೆಯ ಗುಂಡುಗಳನ್ನು ಅಲಾಯಿದ ಉಚಿತವಾಗಿ ಕಳುಹಿಸುತ್ತೇವೆ. ಅದನ್ನು ನೋಡಿ ಮನಸ್ಸಿಗೆ ತೃಪ್ತಿಕರವಾಗಿದ್ದಲ್ಲಿ ಹಣವನ್ನು ಕೊಟ್ಟು ವಿ. ಪಿ. ಭಾಂಗಿಯನ್ನು ಪಡೆಯಿರಿ; ಇಲ್ಲವೇ, ಸದರಿ ಭಾಂಗಿಯನ್ನು ವಾಪಸು ಕಳುಹಿಸಿ.

ನಮ್ಮ ವಿಳಾಸ:—ಎಸ್. ಎಸ್. ಮೂರ್ತಿ ಕಂಪೆನಿ, ತಿರುವಲಿಕ್ಕೇಣಿ, ಮದರಾಸು.

[196-1]

ಸ್ವಸ್ಥವಾಗುವದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ:—ಬೆನ್ನಿನಲ್ಲಿ ಛಳುಕು, ಸದ್ದೆಯಿಲ್ಲದೆ ಇರುವುದು; ಮೂತ್ರವು ಸ್ವಲ್ಪವಾಗಿಯೋ ವಿಪರೀತವಾಗಿಯೋ ಬಿಳುಪಾಗಿಯೋ ಇಳಿಯುವುದು; ಬಿಡದೆ ಬಾಯಾರಿಕೆ; ಬಳಲಿಕೆ; ಎದೆ ತಲ್ಲಣಿಸುವುದು; ತಲೆನೋವು; ಗಾಬರಿ; ಕಣ್ಣುಮೊಬ್ಬು; ತಲೆ ತಿರುಗುವಿಕೆ; ಮೈನೋವು; ಕೀಲುನೋವು; ಮರವು; ನಿಸ್ರಾಣ; ಇವೇ ಮೊದಲಾದುವು. ಅಲಕ್ಷ್ಯಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [198-1]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ಸ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು.



ರೂ. ೩—೦—೦; ಅಥವಾ ೬ ಬುಡ್ಡಿಗಳಿಗೆ ರೂ. ೧೨—೮—೦. ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು. ಅಥವಾ ಡೋನ್ಸ್, ೦ ೬ ಬಾಕ್ಸ್ ೩೦, ಬೊಂಬಾಯಿ—ಇವರಲ್ಲಿ ದೊರೆಯುವುವು.

ಮಲೇರಿಯಾ

ಮತ್ತು ಹವಾ ದೆಸೆಯಿಂದುಂಟಾಗುವ ಎಲ್ಲಾ ತರದ ಜ್ವರವೂ

ಈಸಾನೊಫೆಲ್

ಯ ಸೇವನೆಯಿಂದ ಬೇಗನೆ ನಿವಾರಣೆಯಾಗುತ್ತೆ.

ಕ್ವಿನೈನ್ ಜ್ವರವನ್ನು ಅಣಗಿಸುವುದು; ಆದರೆ ನಮ್ಮ ಈ ಸಾನೊಫೆಲೆಯು 15 ದಿನದಲ್ಲಿ ವಾಸಿಮಾಡುತ್ತದೆ. ಹಗಲು ರಾತ್ರಿ ಒಂದೊಂದು ಮಾತ್ರೆ ತೆಗೆದುಕೊಳ್ಳುತ್ತಾ ಬಂದರೆ ಜ್ವರ ಬಾರದಂತೆ ಸಂರಕ್ಷಣೆ ಮಾಡಬಲ್ಲುದು.

ಜ್ವರವು ಸಂಪೂರ್ಣವಾಗಿ ವಾಸಿಯಾಗುವುದಕ್ಕೆ ಎರಡು ಬಾಟ್ಲಿ ಔಷಧ ಹದಿನೈದು ದಿವಕ್ಕೆ ಸಾಕು.

ಬಾಟ್ಲಿಗೆ ಕ್ರಯ 2 ರೂಪಾಯಿ.

ಬಿಕರಿಯಾಗುವ ಸ್ಥಳಗಳು.

1. ಫಾಸ್ಟರ್ ಕಂಪನಿ, ಕೆಮಿಸ್ಟ್ಸ್, ಬೆಂಗಳೂರು;
2. ಬಿ. ಜೆ. ಗೋರಿಯೋ ಕಂಪನಿ, ವಾಲೆಸ್ ಬೀದಿ,

[172-6] ಬೊಂಬಾಯಿ;

ಇದಲ್ಲದೆ

ಎಲ್ಲಾ ಔಷಧ ಮಾರಾಟದ ಷಾಪಿನಲ್ಲೂ ಸಿಕ್ಕುವುದು.

ಸುಖಕರ, ಆನಂದ, ಬಹಳ ಅವಶ್ಯ.

ಈಗ ತಾನೇ ಕಂಡುಹಿಡಿದಿದೆ.

ಜಪಾನ್ ರಾಜ್ಯದಲ್ಲಿ ನೂರಾರು ವರುಷಗಳಿಂದ ಉಪಯೋಗದಲ್ಲಿದೆ.

ಸೆಂತಾನ

ಬೆಳ್ಳಿಯ ವರಳು ಸುತ್ತಿದ ಮುತ್ತುಗಳು.

(1) ಮನಸ್ಸಿಗೆ ಹರ್ಷವನ್ನೂ ಉಲ್ಲಾಸವನ್ನೂ ಕೊಟ್ಟು ಜೀರ್ಣಶಕ್ತಿಯನ್ನುಂಟುಮಾಡುವುದು.

(2) ಹಾಡುವವರಿಗೆ ವರಪ್ರಸಾದವಾದದ್ದು.

(3) ಬಾಯಿ ದುರ್ಗಂಧ, ಗಂಟ್ಲು ಗಾರೆನ್ನುವುದು, ಉಬ್ಬಸ, ಸಮುದ್ರಯಾನದ ಜುಗುಪ್ಸೆ, ಈ ಮೊದಲಾದವನ್ನು ಹುಟ್ಟದಂತೆ ಅಡ್ಡಿಮಾಡುತ್ತದೆ.

(4) ತಾಂಬೂಲದೊಡನೆ ಸೇವಿಸುವುದಕ್ಕೆ ಅತ್ಯಂತ ಹಿತಕರವಾಗಿದೆ. [73-26]

ಒಂದು ಸಲ ಪರೀಕ್ಷೆಮಾಡಿದಲ್ಲಿ ಯಾವಾಗಲೂ ಒಂದು ಪೊಟ್ಲ ಇದ್ದೇ ತೀರಬೇಕೆಂದು ನೀವೇ ನಿಶ್ಚಯಿಸುವಿರಿ.

ಮುತ್ತಿನಂತಿರುವ	45	ಮಾತ್ರೆ ಉಳ್ಳ	ಪೊಟ್ಲಕ್ಕೆ		ಕ್ರಯ	2	ಆಣೆ.
,,	95	,,	,,	,,	,,	4	,,
,,	200	,,	,,	,,	,,	7	,,
,,	200	,,	ಸುಂದರವಾದ ಟಿನ್ ಡಬ್ಬಾ			9	,,
,,	80	,,	,,	,,	,,	4	,,
,,	100	,,	ಬಾಟ್ಲಿಯಲ್ಲಿ			4½	,,

ಈ ಕ್ರಯದಷ್ಟು ಸ್ಟಾಂಪನ್ನೂ, ಅಂಚೆ ವೆಚ್ಚಕ್ಕೆ ಜಾಸ್ತಿ ಒಂದಾಣೆಯನ್ನೂ ಸೇರಿಸಿ ಕಳುಹಿಸಬೇಕು. ಕಾಗದಪತ್ರವನ್ನೂ ವಿಳಾಸಗಳನ್ನೂ ನಮಗೆ ಇಂಗ್ಲೀಷಿನಲ್ಲೇ ಬರೆಯತಕ್ಕದ್ದು.

ನಮ್ಮ ವಿಳಾಸ—ಸೆಂತಾನ ಡಿಪೋ,
ಮಾರ್ಸೂರ್ ಬಿಲ್ಡಿಂಗ್, ಪ್ರಿನ್ಸೆಸ್ ಸ್ಟ್ರೀಟ್,
ಬೊಂಬಾಯಿ 2;
ಅಥವಾ, ಬಿ. ಸಿ. ಷಾ ಕಂಪೆನಿ,
509 ಮಿಂಟ್ ಬೀದಿ, ಮದರಾಸ್.

ಅದ್ಭುತವಾದ ಬಲಕಾರಿ ಮತ್ತು ಬಾಯಿನಾತಹರ.

ಸೋಲ್ ಏಜಂಟರು:—

[1 6-9

ಜಿಂತಾನ

ಜೀರ್ಣಶಕ್ತಿ ಹುಟ್ಟಿಸುವುದರಲ್ಲಿ ಇದಕ್ಕೆ ಸಮಾನವಾದದ್ದು ಇನ್ನೊಂದಿಲ್ಲ; ಅನ್ನಕೋಶವು ಎಷ್ಟೇ ದುರ್ಬಲವಾಗಿದ್ದರೂ ಅದರ ಕಾರ್ಯಗಳನ್ನು ಸೇರುಪೇರು ಮಾಡುವದಿಲ್ಲ. ಇದರ ಸೇವನೆಯಿಂದ ಎಲ್ಲಾ ರೋಗಗಳನ್ನೂ ಅಂಟದಂತೆ ತಡೆಯಬಲ್ಲದು. ಈ ಭಾಗದಲ್ಲಿ ಇದರ ಗುಣವು ಬಹು ಫಲಕಾರಿಯಾಗಿದೆ. ಇದಲ್ಲದೆ ಇದನ್ನು ಸೇವಿಸುವವರ ಬಾಯಿಯಲ್ಲಿ ಎಲ್ಲಾ ತರದ ದುರ್ನಾತವೂ ಹೋಗಿ ಸುಗಂಧವು ಹುಟ್ಟಿ ಹರ್ಷಕರವಾಗಿದ್ದೀತು.

ಗಂಟಲಿನ ಸರಗಳು ಇದರ ಸೇವನೆಯಿಂದ ಬಹಳ ಬಲಗೊಳ್ಳುವವು. ಇದರ ಗುಣವನ್ನು ನೋಡಿ ಉಪನ್ಯಾಸಕರೂ, ನಾಟಕಧಾರಿಗಳೂ, ಸಂಗೀತಗಾರರೂ, ಬೋಧಕರೂ, ವಾಚಾಳಕ ಪ್ರಿಯರೂ ಈ ಮಾತ್ರೆಗಳನ್ನು ಬಹಳವಾಗಿ ಮೋಹಿಸಿ ಪ್ರೀತಿಯಿಂದ ಉಪಯೋಗಿಸುತ್ತಿದ್ದಾರೆ.

ಈ ಮಾತ್ರೆಗಳನ್ನು ಜಪಾನ್‌ನಲ್ಲಿರುವ ಒಸಾಕಾ ಪಟ್ಟಣದ ಮೋರಿಶಿತಾ ಕಂಪನಿಯವರು ತಯಾರುಮಾಡುತ್ತಾರೆ.

ಈ ಮಾತ್ರೆಗಳ	30 ಮಾತ್ರೆಗಳುಳ್ಳ ಪೊಟ್ಲಕ್ಕೆ 1¼ ಆಣೆ.	65 ಮಾತ್ರೆ ಪೊಟ್ಲಕ್ಕೆ 3 ಆಣೆ.
ಕ್ರಯ	195 ,, ಡಬ್ಬಾ ಸಮೇತ 8 ಆಣೆ.	455 ,, ಕನ್ನಡಿ ಡಬ್ಬಾಕ್ಕೆ 1 ರೂಪಾಯಿ.

ಎಲ್ಲಾ ಅಂಗಡಿಗಳಲ್ಲಿಯೂ ಬಿಕರಿಯಾಗುವುದು.

ಎಸ್. ವೈದ್ಯ ಮತ್ತು ಕಂಪನಿ,
ಪಾರ್ಕ್‌ಟೌನ್, ಮದ್ರಾಸ್.

ಹಿಂದುಸ್ಥಾನ್ ಕೋಆಪರೆಟಿವ್ ಜೀವವಿಮೆ ಸಂಘ ಲಿ.

ಹಿಂದುಸ್ಥಾನ್ ಕಟ್ಟಡಗಳು—ಕಲ್ಕತ್ತಾ.

ಕಂಪೆನಿಯ ಮೂಲಧನ (ಒಂದು ಕೋಟಿ ರೂಪಾಯಿ) 1,00,00,000
ಪಾವತಿಯಾದ ಮೊಬಲಗು 10,60,000
ವಸೂಲಾದ ಮೊಬಲಗು 87,00,000

ಈ ಕಂಪೆನಿಯಲ್ಲಿ ಪಾಲ್ಗಾರರಿಗೆ ಬಹಳ ಕಮ್ಮಿಯಾದ ದರಗಳ ಪಟ್ಟಿಯನ್ನು ಮಾಡಿರುವರು. 1912 ನೇ ಇಸ್ವಿಯ ಇಂಡಿಯಾ ಗವರ್ನ್‌ಮೆಂಟಿನ ಜೀವವಿಮೆ ಕಂಪನಿಯ ಆಕ್ಟಿನ ಪ್ರಕಾರ ಸರ್ಕಾರದಲ್ಲಿ 2 ಲಕ್ಷ ರೂಪಾಯಿಗಳನ್ನು ಡಿಪಾಜಟ್ಟು ಮಾಡಲ್ಪಟ್ಟಿರುತ್ತೆ. ಮತ್ತು ಅನೇಕ ಮಹಾರಾಜರುಗಳು ಮುಂತಾದ ದೊಡ್ಡವರು ಪ್ರೆಸಿಡೆಂಟರಾಗಿರುವುದರಿಂದ ಈ ಕಂಪನಿಯ ಅಭಿವೃದ್ಧಿಸ್ಥಿತಿಯನ್ನು ಪ್ರಕಟಿಸಿ ಮಾಡುವುದಕ್ಕೆ ಸಂಕೋಚವಾಗಿರುತ್ತದೆ ಸುಲಭವಾಗಿ ಹಣವನ್ನು ಪಾರ್ಟಿಯವರ ಮನೆಯಲ್ಲೇ ಜಾಗ್ರತೆ ಪಾವತಿಗೆ ಏರ್ಪಾಡು ಮಾಡಲ್ಪಡುತ್ತೆ. ಅದ್ದರಿಂದ ಪಾಲ್ಗಾರರು ಮತ್ತು ಇದಕ್ಕೆ ಸೇರಿದ ಏಜಂಟ್ಸುಗಳು ತುಂಬಾ ಅದೃಷ್ಟವಂತರೆಂಬುವದರಲ್ಲಿ ಸಂದೇಹವಿಲ್ಲ.

ಹೆಚ್ಚಿನ ವಿಷಯಗಳಿಗೂ, ಫಾರಂ ಮತ್ತು ಪ್ರಾಸ್‌ಪೆಕ್ಟಸುಗಳಿಗೂ ಕೆಳಗಿನ ವಿಳಾಸಕ್ಕೆ ಜಾಗ್ರತೆಯಾಗಿ ಬರೆಯಿರಿ. [243-40]

ವೆಂಕಟಾಚಲಂ ಅಂಡ್ ಸನ್ಸ್, ಚೀಫ್ ಏಜಂಟ್ಸ್,
166, ದೊಡ್ಡ ಪೇಟೆ, ಮೈಸೂರು.

ನ್ಯಾಷನಲ್ ಅಶೂರೆನ್ಸ್ ಕಂಪನಿ, ಲಿಮಿಟೆಡ್.

ವಿಜಯನಗರಂ ಸಿಟಿ.

1906 ರಲ್ಲಿ ಸ್ಥಾಪಿಸಲ್ಪಟ್ಟದ್ದು.

1912 ನೇ ಆಕ್ಟು ಪ್ರಕಾರ ಬದಲಾಯಿಸಿದೆ.

ಗವರ್ನಮೆಂಟ್ ಸೆಕ್ಯೂರಿಟಿಗಳನ್ನು ಪಡೆದಿದೆ.

ಕಂಪನಿ ಆಸ್ತಿಯನ್ನು ಹಂಚಿಕೊಳ್ಳುವ ಪಾಲುದಾರರಿಲ್ಲ.

ವೈದ್ಯರ ಪರೀಕ್ಷಾ ಸರ್ಟಿಫಿಕೇಟು ಅವಶ್ಯವಿಲ್ಲ.

ಬೋನಸ್ ಹಣ ಅಪಾರವಾಗಿ ಪಾವತಿ ಮಾಡಿದೆ.

ಜೀವವಿಮೆ—ತಿಂಗಳ ಚಂದಾ 1 ನೇ ಕ್ಲಾಸ್ ರೂ. 1; 2 ನೇ ಕ್ಲಾಸ್ ರೂ. 0-8-0.
ಮದುವೆ ಫಂಡು—ತಿಂಗಳ ಚಂದಾ ರೂ. 1-0-0.

ಇದು ಬಹು ಲಾಭಕರವಾದ ಮತ್ತು ಸುರಕ್ಷಿತವಾದ ಕಂಪನಿ. ವಿಮೆ ಮಾಡತಕ್ಕವರಿಗೂ ಫಂಡು ಪಡೆಯತಕ್ಕವರಿಗೂ ತುಂಬಾ ಅನುಕೂಲವಾಗಿರುತ್ತದೆ. [138-13]

ಏಜಂಟರು ಬೇಕು. ಧಾರಾಳವಾದ ಕಮೀಷನ್ ಸಿಗುತ್ತೆ. ಕಂಪನಿಯ ಪ್ರಾಸ್ಪೆಕ್ಟಸ್ಸು ಬಿಟ್ಟಿ ಕೇಳಿದವರಿಗೆ ಕೊಡುತ್ತೆ. ಈ ವಿಳಾಸಕ್ಕೆ ಬರೆದುಕೊಳ್ಳಿ:—

ವಿ. ಬಿ. ಶ್ರೀಕಂಠಯ್ಯನವರು, ಮೈಸೂರು ಮತ್ತು ಕೊಡಗಿನ ಚೀಫ್ ಏಜೆಂಟ್, ಕೋಟೆ, ಬೆಂಗಳೂರು ಸಿಟಿ.

V. B. Srikantiah,
Chief Agent, Mysore & Coorg, Fort, Bangalore City.

WANTED

Active an influencial District Agent for Hassan, and Local Agents throughout Mysore Province and Coorg on liberal terms of commission and monthly office allowance. None but those who can guarantee good business need apply to

Messers. VENKATACHALAM & SONS,
Chief Agents,
Hindustan Co-operative Insurance Society, Ltd.,
166, Dodpet, near Old Taluk Cutcherry,
[243-40] *MYSORE.*

ಪ್ರೊಫೆಸರ್ ಗಜ್ಜಾರರವರ

ಗುಣಕಂಡ ಪ್ರಖ್ಯಾತವಾದ ಔಷಧಗಳು.

ವ್ಯರ್ಥವಾದ ಔಷಧಗಳನ್ನು ಉಪಯೋಗಿಸಿ ವ್ಯಾಧಾಪಾಯಕ್ಕೆ ಗುರಿಯಾಗುವುದೇಕೆ? ವಿವೇಕದಿಂದ ತಯಾರಾಗಿರುವ ನಮ್ಮ ಔಷಧಗಳನ್ನು ಸೇವನೆ ಮಾಡಬಾರದೇ?

ಟಾನಿಕ್ ಸೋಲ್ಯೂಷನ್.—ಇದರಲ್ಲಿ ಗ್ಲಿಸರಿನೋಫೋಟ್ಸ್ ಎಂಬ ಅಮೂಲ್ಯ ಪದಾರ್ಥಗಳನ್ನು ಹಾಕಿ ತಯಾರಿಸಿದೆ. ಇದು ಬೇಗನೆ ಶರೀರಕ್ಕೆ ಸೇರಿ ಹೋಗುತ್ತೆ. ಆರೋಗ್ಯವನ್ನೂ ಚಟುವಟಿಕೆಯನ್ನೂ ರಕ್ಷಿಸುವನ್ನು ವೃದ್ಧಿಮಾಡುವದು. ನರಗಳ ದುರ್ಬಲತ್ವವನ್ನು ಹೋಗಲಾಡಿಸುವುದರಲ್ಲಿ ಇದು ಬಹಳ ಶ್ರೇಷ್ಠವಾದ ಔಷಧ. ಕ್ರಯ ಶೀಸೆಗೆ 2 ರೂಪಾಯಿ, ಮತ್ತು ರೂ. 1-2-0.

ರಕ್ತಶುದ್ಧಿಗೆ ಮಹೌಷಧ.—ಇದು ರಕ್ತವನ್ನೂ ದೇಹದ ಎಲ್ಲಾ ಭಾಗಗಳನ್ನೂ ಶುದ್ಧಿಮಾಡುತ್ತೆ. ಬಹಳ ಚೆನ್ನಾಗಿ ಗುಣಕಂಡ ಔಷಧ. ಕ್ರಯ ಶೀಸೆಗೆ 1 ರೂಪಾಯಿ.

ಲಿವರ್ ಸೊಲ್ಯೂಷನ್.—ಪಿತ್ತಕೋಶದ ಮೇಲೆ ಇದು ಬಹಳ ಚೆನ್ನಾಗಿ ಕೆಲಸಮಾಡೋಣದರಿಂದ ಮಲಬದ್ಧತೆಯುಳ್ಳವರಿಗೆ ಮಹೋಪಕಾರಿಯಾಗಿದೆ. ಡಾಕ್ಟರುಗಳೂ ಇದನ್ನು ಕೊಡುತ್ತಾರೆ. ಇದು ಮನೆಯಲ್ಲಿ ಇದ್ದೇ ತೀರಬೇಕು. ಕ್ರಯ ಶೀಸೆಗೆ ರೂ 1; ಮತ್ತು ರೂ. 0-10-0.

ಜ್ವರದ ಔಷಧ.—ವಿಷಮಶೀತಜ್ವರ, ಸಂತುಬಿರುಜ್ವರ, ಅನಧಿಯಜ್ವರ, ಎಲ್ಲಾ ತರದ ಜ್ವರಗಳಿಗೂ ಇದು ಸಂಜೀವನವಾಗಿದೆ. ಇದು ಕ್ವಿನೈನ್‌ಗಿಂತ ಬಹಳ ಅಗ್ಗ. ಕ್ರಯ ಶೀಸೆಗೆ 10 ಆಣೆ; 4 ಆಣೆ.

ಹುಳುಕಡ್ಡಿ ಔಷಧ.—ಹುಳುಕಡ್ಡಿಯನ್ನು ಖಂಡಿತವಾಗಿ ಗುಣಮಾಡುತ್ತೆ. ಕ್ರಯ ಸೀಸೆಗೆ 4 ಆಣೆ.

ಹಲ್ಲುಪುಡಿ.—ಈ ಪುಡಿಯಿಂದ ಹಲ್ಲು ಉಜ್ಜಿಕೊಂಡರೆ ಬಾಯಿಗೆ ಸುವಾಸನೆ ಕೊಡುತ್ತೆ, ಹಲ್ಲು ಸವೆದು ಕೆಡದಂತೆ ಬಹಳ ಚೆನ್ನಾಗಿಟ್ಟು ಕಾಪಾಡುತ್ತೆ. ಕ್ರಯ ಸೀಸೆಗೆ 4 ಆಣೆ; 6 ಆಣೆ; 1 ರೂಪಾಯಿ.

ಇಂಗ್ಲೀಷಿನಲ್ಲೇ ನಮಗೆ ಕಾಗದವನ್ನು ಬರೆಯಬೇಕು.

ಸೋಲ್ ಏಜಂಟರು:—ಎಸ್. ವೈದ್ಯ ಮತ್ತು ಕಂಪನಿ,
[156-9] ಪಾರ್ಕ್ ಟೌನ್, ಮದರಾಸ್.

MADRAS SNUFF.

ಬಹಳ ಮೇಲಾದ ನಸ್ಯ ಇನ್ನೆಲ್ಲೂ ಸಿಕ್ಕದು.

ನಮ್ಮಲ್ಲಿ ತಯಾರಾಗುವ ನಸ್ಯದ ಪುಡಿಯನ್ನು ಹಿಂದುಸ್ಥಾನದ ಸಮಸ್ತ ಭಾಗಗಳವರೂ, ಅನ್ಯದೇಶಗಳವರೂ ಹಲ್ಕಾರು ವರುಷಗಳಿಂದ ತರಿಸಿಕೊಂಡು ಉಪಯೋಗಿಸುತ್ತಾರೆ. ನಮ್ಮ ನಸ್ಯವು ಬಹಳ ಪ್ರಖ್ಯಾತಿ ಪಡೆದಿದೆ. ಬಹು ಮೇಲಾದ "ಬಂದರ್" ಸೊಪ್ಪಿನಿಂದ ಸುವಾಸನೆಯಾದ ಅಚ್ಚ ಶುದ್ಧ ಹಾಕಿ ವಿಶೇಷ ರುಚಿಕರವಾಗಿಯೂ ಸ್ವಚ್ಛವಾಗಿಯೂ ತಯಾರಾಗುತ್ತೇವೆ. ಕೊಡಿದ ಮಟ್ಟಿಗೂ ನಮ್ಮ ಧಾರಣೆ ಕಡಿಮೆಯಾಗಿರುವುದು. ನಮ್ಮ ಪದಾರ್ಥವನ್ನು ನಾವೇ ಹೊಗಳಿಕೊಳ್ಳುವದರಿಂದ ಫಲವೇನು? ಪಾವತಿಸಿ ಒಂದಾವರ್ತಿ ಪರೀಕ್ಷೆಗಾಗಿ ತರಿಸಿಕೊಂಡರೆ ಚೆನ್ನಾಗಿ ತಿಳಿದುಬರುತ್ತೆ. ಕ್ರಯ ಪೌಂಡಿಗೆ 3 ರೂಪಾಯಿ; 1 ಸೇರಿಗೆ 10 ಆಣೆ. ಪೋಸ್ಟೇಜ್ ಬೇರೆ. ನಸ್ಯವನ್ನು ಅಂಚೆಯ ಮೂಲಕವೋ, ರೈಲಿನಲ್ಲೋ ಪ್ಯಾಕ್ ಕಳಿಸಬೇಕೆಂದು ಬರೆಯಿರಿ.

ನಮ್ಮ ವಿಳಾಸ—ಬಿ. ನಾರಾಯಣಸಾಮಿ ನಾಯುಡು,
43, ಪಳಯಪ್ಪನ್ ಸ್ಟ್ರೀಟು, ಮಿಂಟ್ ಬಿಲ್ಡಿಂಗ್ ಪೋಸ್ಟ್,
[168-6] ಮದರಾಸ್, ೩.

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು"

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು. ವಾಯು, ಕೀಲು, ಅರತಲೆ, ತಲೆನೋವುಗಳು; ಯಾವ ಕಾರಣದಿಂದ ಹುಟ್ಟಿದ ಬಾಧೆಗಳಲ್ಲಿ, ಉಬ್ಬಸ, ಹಲ್ಲುನೋವು, ಗಂಟ್ಲು ಗಾರೆನ್ನುವುದು, ಕೆಮ್ಮುಗಳು, ಶೀತಗಳು, ಕ್ಷಯರೋಗ, ಜಪ್ಪು, ಉರಿಯು, ಧಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ. ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗಿ ಕ್ಲೆಮಂಟರ ವ್ಯಾಚಿಕ್ ಬಾಂ ಒಂದು ಬಾಟ್ಲಿ ಕೊಡಿ ಎಂದು ಕೇಳು. ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೋ. ಈ ಯಕ್ಷಿಣಿಯೋಪಾದಿ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ. ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ಕೃಷ್ಟೋತ್ತಮವಾದ ಪರಿಹಾರ. ಲಕ್ಷಾಂತರ ಜನರು ಗುಣಹೊಂದಿದಾರೆ; ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ [122-15]

"ಕ್ಲೆಮಂಟರ ವ್ಯಾಚಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡ. ಅದರ ಕ್ರಯ ಬಾಟ್ಲಿಗೆ 12 ಆಣೆ; ಅಂಚೆ ವೆಚ್ಚ 3 ಆಣೆ ಅಥವಾ ಹನ್ನು ಬಾಟ್ಲಿ ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ. ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ. ವಿಳಾಸಗಳು:—(1) ಎಸ್. ಪೀಟರ್ಸ್, 37 ಅಮರಿಪಿಳ್ಳೆ ಬೀದಿ, ಪುಸಿವಾಕಂ, ವೇಪೇರಿ, ಮದರಾಸ್; (2) ಕೆ. ಎಸ್. ಕೆನ್ನಯ್ಯಶೆಟ್ಟರು, ಜನರಲ್ ಮರ್ಚಂಟ್, ತುಮಕೂರು.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

21-8-1914 ರಿಂದ 28-8-1914 ರ ವರೆಗೆ

ಸ್ಥಳ		ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಕಾಲರಾ ತಗಲಿದ್ದು.	ಕಾಲರಾ ಸತ್ತದು.
ಬೆಂಗಳೂರು	ಪಟ್ಟಣ	1	1	0	0
ಮೈಸೂರು	,,	28	26	0	0
ಬೆಂಗಳೂರು ಡಿಸ್ಟ್ರಿಕ್ಟು		5	4	0	0
ಮೈಸೂರು	,,	16	10	0	0
ಕೋಲಾರ್	,,	13	12	2	3
ಕೋಲಾರ್ ಚಿನ್ನದ ಗಣಿಗಳು		0	0	3	1
ತುಮಕೂರು ಡಿಸ್ಟ್ರಿಕ್ಟು		5	9	2	2
ಹಾಸನ	,,	0	0	0	0
ಚಿತ್ರದುರ್ಗ	,,	45	28	0	0
ಕಡೂರ್	,,	38	25	0	0
ಶಿವಮೊಗ್ಗ	,,	4	5	2	1
	ಜುಮ್ಲಾ	150	120	9	7

ಶಾಲಿವಾಹನ ಶಕ ವರುಷಂಗಳು 1837 ನೇ ಆನಂದ ಸಂವತ್ಸರೇ ದಕ್ಷಿಣಾಯನೆ ವರ್ಷಋತೌ ಭಾದ್ರಪದ ಬಹುಳ ಸಪ್ತಮಿ ಶುಕ್ರವಾರದಿಂದ ಭಾದ್ರಪದ ಬಹುಳ ದ್ವಾದಶಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1914 ನೇ ಸೆಪ್ಟಂಬರ್

ತಾ	ವಾರ		ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸಿಂಹ ಕನ್ಯಾ ಕೇಂದ್ರ
11	ಶುಕ್ರ		ಸಪ್ತಮಿ	60-0	ಕೃತ್ತಿಕೆ	13-23	27
12	ಶನಿ	‡	ಅಷ್ಟಮಿ	60-0	ರೋಹಿಣಿ	18-46	28
13	ಭಾನು	§	ಅಷ್ಟಮಿ	3-0	ಮೃಗಶಿರ	23-10	29
14	ಸೋಮ	*	ನವಮಿ	5-3	ಆರಿದ್ರಾ	26-27	30
15	ಮಂಗಳ		ದಶಮಿ	5-50	ಪುನರ್ವಸು	28-22	31
16	ಬುಧ	;;	ಏಕಾದಶಿ	5-19	ಪುಷ್ಯ	29-6	1
17	ಗುರು	†	ದ್ವಾದಶಿ	3-17	ಆಶ್ಲೇಷ	28-39	2

‡ ಸರ್ವತ್ರ ಶ್ರೀಕೃಷ್ಣ ಜಯಂತಿ, ಅಮೃತಸಿದ್ಧಿ ಯೋಗ. § ಅವಿಧವಾನವಮಿ, ಶಿಕ್ಯೋತ್ಸವ, ಮಳೆ ನಕ್ಷತ್ರ—ಉತ್ತರಾ 1 ನೇ ಪಾದ. * ಹರಿಹರವ್ರತ, ಶ್ರೀಮಂತ ರಾಜೇ ಅರಸಿನವರ ವರ್ಧಂತಿ. ;; ಸರ್ವತ್ರ ಏಕಾದಶಿ, ಷಡಶೀತಿ ಪುಣ್ಯಕಾಲ, ಮಳೆ ನಕ್ಷತ್ರ—ಉತ್ತರಾ 2 ನೇ ಪಾದ. † ಪ್ರದೋಷ.

ಅಮೃತಾಂಜನ ರಿಜಿಸ್ಟರ್ಡ್

ಇದು ಗ್ರಂಥಮೂಲಿಕೆಗಳಿಂದ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು. ಇದರ ಉಪಯೋಗದಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗವಾಯು, ಉಳುಕು, ಕೆಮ್ಮು, ಸೊಂಟನೋವು, ಶೀತ, ಚರ್ಮವ್ಯಾಧಿ, ಹಲ್ಲುನೋವು, ಚೇಳು ಕಡಿತ ಮೊದಲಾದ ಎಲ್ಲಾ ತರದ ನೋವುಗಳು ಕ್ಷಿಪ್ರವಾಗಿ ನಿಲ್ಲುವವು. ಆಕಾರಿ ಔಷಧಗಳನ್ನು ಪಡೆಕೊಳ್ಳಬೇಡಿರಿ. ಈ ನಮ್ಮ ಲೋಕಪ್ರಖ್ಯಾತವಾದ ಅಮೃತಾಂಜನವನ್ನು ನಮ್ಮ ರಿಜಿಸ್ಟ್ರರು ಮತ್ತು ಹಲವು ಭಾಷೆಗಳುಳ್ಳ ಸುಂದರವಾದ ಕರಡಿಗೆಯಲ್ಲಿ ಪ್ಯಾಕ್ ಮಾಡಿರುತ್ತೇವೆ. ಕರಡಿಗೆ ಇಲ್ಲದ ಬಾಟ್ಲಿಗಳನ್ನು ಪಡಕೊಳ್ಳಬೇಡಿರಿ. ಬಾಟ್ಲಿ ಒಂದರ ಕಿಮ್ಮತು 0-8-0. ಡಜನ್ 1 ಕ್ಕೆ 5-4-0. ವಿ. ಪಿ. ಪ್ರತ್ಯೇಕ. ಗಜಕರ್ಣದ ಮುಲಾಮು 0-6-0. ದಂತಮಂಜನ 0-2-0. ತೋಟಿಸಿ ಶೈಲ 0-12-0. ಖಜ್ಜಿ ಮುಲಾಮು 0-3-0. ಜುಲಾಬು ಮಾತ್ರೆ 0-8-0. ಸುಂದರ ಮುಲಾಮು 0-8-0. ಕ್ಯಾಟಲಾಗಿಗೆ ಬರೆಯಿರಿ. [53-27]

ವ್ಯಾಪಾರಸ್ಥರಿಗೆ ಬೇಲೋ ಕಮೀಷನ್ ದೊರಕುವದು.

ಅಮೃತಾಂಜನ ಡಿಪೋ,

ಫೋರ್ಟ್, ಮುಂಬಯಿ, ಮತ್ತು ೯ ಜಹಂಗೀರ್ ಸ್ಟ್ರೀಟ್, ಮದರಾಸು.

ಪ್ರೊಫೆಸರ್ ಬೇಸ್ಲರ್ ಇಲೆಕ್ಟ್ರೊ ಪೇಯಿನಾಡೈನ್

ಮನುಷ್ಯನ ಶರೀರದಲ್ಲಿ ವಿದ್ಯುಚ್ಛಕ್ತಿ ವ್ಯಾಪಿಸಿರುವದೆಂತಲೂ, ವಿದ್ಯುಚ್ಛಕ್ತಿ ಕಡಮೆಯಾದ ಕೂಡಲೇ ನಾನಾ ತರದ ವ್ಯಾಧಿಗಳು ಲಭಿಸುವದೆಂತಲೂ, ಅಂತಹ ವ್ಯಾಧಿಗಳನ್ನು ಶೀಘ್ರ ಗುಣಪಡಿಸಲು ವಿದ್ಯುಚ್ಛಕ್ತಿ ಮಿಶ್ರವಾದ ಔಷಧದ ಉಪಯೋಗದಿಂದಲ್ಲದೆ



ಬೇರೆ ಔಷಧಗಳಿಂದ ವ್ಯಾಧಿಗಳನ್ನು ಶೀಘ್ರ ಗುಣಪಡಿಸುವದು ಕಷ್ಟವೆಂತಲೂ ಅಮೇರಿಕಾ ದೇಶದ ವೈದ್ಯಶಾಸ್ತ್ರ ಪಂಡಿತರು ವೈದ್ಯಶಾಸ್ತ್ರ ಪರಿಶೋಧನೆಯಿಂದ ಸಿದ್ಧಿಸಿರುವರು. ಈ ಔಷಧವು ಉಪಯೋಗಿಸಿದ ಕೂಡಲೇ ದೇಹಕ್ಕೆ ಸಾಕಾಗುವಷ್ಟು ವಿದ್ಯುಚ್ಛಕ್ತಿಯನ್ನುಂಟುಮಾಡಿ ವ್ಯಾಧಿಯನ್ನು ಅತಿ ಶೀಘ್ರ ಗುಣಪಡಿಸುತ್ತೆ. ಪ್ರಾಚೀನಕಾಲದ ಔಷಧಗಳಿಗಿಲ್ಲವು ಇದು ಆಶ್ಚರ್ಯಕರವಾದದ್ದು. ಒಂದಾವರ್ತಿ ಪರೀಕ್ಷಿಸಿ ನೋಡಿದರೆ ಇದರ ಗುಣವು ವ್ಯಕ್ತವಾಗುತ್ತೆ.

ಎಲೆಕ್ಟ್ರೊಪೇಯಿನಾಡೈನ್ ತೈಲದಿಂದ ಗುಣವಡುವ ವ್ಯಾಧಿಗಳು:—

ತಿಮಿರುವಾಯುವು, ಕೀಲ್ವಾಯುವು, ಪಾರ್ಶ್ವವಾಯುವು, ಕ್ಷಯ, ಕೆಮ್ಮು, ನೆಗಡಿ, ವಾಯುನೋವು (ಕೈಕಾಲು ಹಿಡಿತ), ಉಳುಕುಹಿಡಿದಿದ್ದರು, ಕಶಿನಶ್ವಾಸ, ನಡುನೋವು (ಸೊಂಟನೋವು), ಪಕ್ಕಶೂಲೆ, ಹಲ್ಲುನೋವು, ತಲೆನೋವು, ಅರತಲೆನೋವು, ಉಬ್ಬಸ, ವಿಷಜ್ವರದ ಗಡ್ಡೆಗಳಿಗೂ ಮತ್ತು ಮಕ್ಕಳ ಪಕ್ಕಶೂಲೆ, (ಅಳ್ಳೆ) ಶೈತ್ಯದೋಷಗಳೂ, ವಿಷಹುಳಗಳ ಕಡಿತಗಳಿಗೂ (ಚೇಳು ಮುಂತಾದದ್ದು), ಇದಕ್ಕೆಲ್ಲಾ ಬಹಳ ಶ್ಲಾಘನೀಯವಾದದ್ದು. [12-36]

ಉಪಯೋಗಿಸುವ ಕ್ರಮವು ಹಿಂದುದೇಶದ ಎಲ್ಲಾ ಭಾಷೆಗಳಲ್ಲಿಯೂ ಬುಡ್ಡಿಯ ಸಂಗಡ ಕಳುಹಿಸಲಾಗುವದು.

ಬುಡ್ಡಿಯ ಕ್ರಯ ರೂ. 0-8-0. ವಿ. ಪಿ. ಖರ್ಚು 0-4-0. ಏಜಂಟರು ಬೇಕು.

ಮುಖ್ಯ ಏಜಂಟರು:—ಗುರುಬಸವ ಅಂಡ್ ಕಂಪನಿ, ಮದರಾಸ್.

Printed and Published by the Rev. H. Gulliford, Proprietor and Manager, Wesleyan Mission Press, Mysore. 10/9/1914.

REGISTERED M. 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೮ ಮೈಸೂರು—ಸರ್ ೧೯೧೪ ನೇ ಇಸವಿ ಸೆಪ್ಟೆಂಬರ್ ತಾರೀಖು ೧೭ ನೇ ಗುರುವಾರ. ಸಂಚಿಕೆ ೧೬

ENGLISH PAPERS WITH FULL ANSWERS

Price for 1 set, Rs. 1-4-0; 2 sets, Rs. 2-4-0; 3, Rs. 3; 4 sets, Rs. 3-12-0 (in advance). L. S. English Notes—5 As.; Spelling Book—4 As.

Apply sharp to **M. N. SITARAMA RAO,**
[178-6] *Krishnaraja Mohalla, MYSORE.*

ಸುಲಭ! ಚಾತುರ್ಯ! ಮಾಸಪತ್ರಿಕೆ!

ಪಂಡಿತ ಪಾಮರರ ಮನೋರಂಜಕವಾದ ಮಾಸಪತ್ರಿಕೆ. ಈಗ ಹೊಸ ಬಿಡುಗಡೆಯಾಗಿದೆ. ವಾರ್ಷಿಕ ಚಂದಾ ಅಂಚೆ ವೆಚ್ಚ ಸಹ 10 ಆಣೆ. ಸ್ತ್ರೀಯರಿಗೆ ವಿದ್ಯಾರ್ಥಿಗಳಿಗೆ ಮಾತ್ರ 8 ಆಣೆ.

[183-4] ವಿಳಾಸ—ಮ್ಯಾನೇಜರ್, "ಚಾತುರ್ಯ," ಬೆಂಗಳೂರು ಸಿಟಿ.

1915 ನೆ ಲೊ. ಸೆ. ಟೆಕ್ಸ್ಟ ಮತ್ತು ವ್ಯಾಕರಣ ಪ್ರಶ್ನೋತ್ತರ.

ಸಿದ್ಧವಾಗಿ, ಬಿಕರಿಯಲ್ಲಿದೆ. ಕ್ರಯ 4 ಆಣೆ. ಗದ್ಯ, ಮತ್ತು ಪದ್ಯಗ್ರಂಥಗಳಲ್ಲಿ, ಪರೀಕ್ಷೆಯಲ್ಲೂ ಬರಬಹುದಾದ ಎಲ್ಲಾ ಪ್ರಶ್ನೆಗಳೂ ಸಂಪೂರ್ಣವಾದ ಉತ್ತರಗಳೂ 66 + 2 ಪೇಜುಗಳಾಗಿ ಉತ್ತಮ ಕಾಗದದಲ್ಲಿ ಪ್ರಿಂಟಾಗಿದೆ. (ಎ) ಕೆ ಆರ್ ನರಸಿಂಹಯ್ಯ, ಕನ್ನಡ ಪಂಡಿತ, ಹೈಸ್ಕೂಲ್, ಚಿಕ್ಕಬಳ್ಳಾಪುರ.

ಹೊಸ ಬಂಗಾಳಿ ನಾವಿಲ್—ವಿಷವಿವಾಹ 4 ಆ. ಸನ್ಯಾಸಿನಿ 1½ ಆ. ಅನಾಥಪ್ರೇತ 1 ಆ. ಬಿ ವೆಂಕಟಾಚಾರ್ಯರಿಂದ ವಂಗವಿಜೇತ 1-4-0. ಚಂದ್ರಶೇಖರ 1-4-0. ರಜನಿ 13 ಆ. ಚಿತ್ರವಿಚಿತ್ರಾವಳಿ 1½ 8 ಆಣೆ. ಅಮೃತಪುಳಿನ 11 ಆಣೆ. ದುರ್ಗೇಶನಂದಿನಿ 1-4-0. ಇತ್ಯಾದಿ. ಸುಶೀಲೆ ಹೊಸ ನಾವಿಲ್ 6 ಆಣೆ.

[63-30] ಎಂ. ಸುಬ್ಬರಾವ್, ಬುಕ್ ಸೆಲರ್, ಶಂಕರಪುರ, ಬೆಂಗಳೂರು ಸಿಟಿ.

ವಿಕಟಪ್ರತಾಪವೆಂಬ ಮಾಸಪತ್ರಿಕೆ.

ಎಂತಹ ಚಿಂತೆಯಲ್ಲಿರುವವರಿಗೂ ನಗುಬರುವಂತೆ ಹಾಸ್ಯರಸದಿಂದ ಕೂಡಿದ ಸಚಿತ್ರವೂ, ವಿಚಿತ್ರವೂ ಆದ ವಿಷಯಗಳು ಇದರಲ್ಲಿ ಮುದ್ರಿಸಲ್ಪಡುವವು. ಚಂದಾ ವಿ. ಪಿ. ಮೂಲಕ ಮುಂಗಡ ಒಂದೇ ರೂಪಾಯಿ.

[195-2] ನಮ್ಮ ವಿಳಾಸ:—ವಿ. ಪಿ. ಆಫೀಸ್, ಕುಸ್ತುಂ ಫೋಸ್ಟ್.

ಸಿದ್ಧವಾಗಿದೆ.

1915 ನೆಯ ವರ್ಷದ ಲೋವರ್ ಸೆಕೆಂಡರಿ
ಕನ್ನಡ ಟೆಕ್ಸ್ಟಿನ ನೋಟ್ಸು. —ಕ್ರಯ 6 ಆಣೆ.
ಡಿಸ್ಕೌಂಟು—10 ಕ್ಕೆ 1; 25 ಕ್ಕೆ 3; 50 ಕ್ಕೆ 8; 100 ಕ್ಕೆ 20.

ಮೈಸೂರು ಭೂವಿವರಣೆ.

ಈಗಿನ ಪಠನಕ್ರಮಕ್ಕೆ ತಕ್ಕಂತೆ ಹೊಸದಾಗಿ ಆಗಿದೆ. ಇದರಲ್ಲಿ ಮೈಸೂರು ದೇಶದ ಬೆಳೆ, ಎತ್ತರ, ನದೀ ಪರ್ವತಾದಿಗಳು ಸ್ಪಷ್ಟವಾಗಿ ತೋರ್ಪಡಿಸುವ ಮೂರು ಭೂಪಟಗಳೂ, ಚಿತ್ರಗಳೂ ಸಹ. ಕ್ರಯ 3 ಆಣೆ. [49-31]

ಇಂಗ್ಲೀಷು 2 ನೆಯ ಪುಸ್ತಕದ ನೋಟ್ಸು 2½ ಆಣೆ. ಮೆಕ್ಮಿಲನ್ ರವರ 3 ನೇ ಪುಸ್ತಕದ ನೋಟ್ಸು 1½ ಆಣೆ. ಡಿಟೊ 4 ನೇ ಪುಸ್ತಕದ ನೋಟ್ಸು 1¾ ಆಣೆ. ಡಿಟೋ 5 ನೇ ಪುಸ್ತಕದ ನೋಟ್ಸು 4 ಆಣೆ. ನವಬಾಲವ್ಯಾಕರಣ (2 ನೇ ಕರಣಿ) 1 ಆಣೆ. Notes on "Tanglewood Tales," English Lower Secondary Text for 1915—As. 3. Notes on Fairy Tales—As. 2.

ನಮ್ಮ ವಿಳಾಸ:—ಎಮ್. ಆರ್. ವೆಂಕಟಸುಬ್ಬಾಚಾರ್ಯ,
ಸುಬೋಧಗ್ರಂಥಾಲಯ, ಮೈಸೂರು.

ಸೂರ್ಯೋದಯ ಪುಸ್ತಕಭಂಡಾರ.

ಹೊಸ ನಾವೆಲ್‌ಗಳು:—ನೀಲಾಂಬರಿ, ನರಬಲಿ, ಗುರುತು ಕಂಡ ಕಳ್ಳ, ಮಾಯಾವಿನಿಯ ಅತ್ಯಾಚಾರ, ಮಾಯಾವಿನಿಯ ಪರಿಣಾಮ ಮುಂತಾದ ಪತ್ತೇದಾರಿ ನಾವೆಲ್‌ಗಳು. ಪುಸ್ತಕ ಒಂದಕ್ಕೆ ಆಣೆ 2 ಮಾತ್ರ. ಶಕ್ತಿ 12 ಆಣೆ. ಮಾಧವಿ ಕಂಕಣ 1-8-0. ಇದಲ್ಲದೆ ಈ ಡಿಪೋದಲ್ಲಿ ಕನ್ನಡ, ತೆಲುಗು, ಸಂಸ್ಕೃತ, ಇಂಗ್ಲಿಷ್ ಗ್ರಂಥಗಳೂ, ನಾವೆಲ್‌ಗಳೂ, ಕಥೆಗಳೂ, ಪುರಾಣಗಳೂ, ವೈದ್ಯ ಜ್ಯೋತಿಷ ಪುಸ್ತಕಗಳೂ ದೊರೆಯುತ್ತವೆ. ಬೇಕಾದವರು ಬರೆದು ಮುಫತ್ತಾಗಿ ದೊರೆಯುವ ಕ್ಯಾಟಲಾಗನ್ನು ತರಿಸಿಕೊಳ್ಳಬಹುದು.

[143-11] ವಿಳಾಸ:—ಬಿ. ನರಸಿಂಗರಾವ್,
ಎಡಿಟರ್, ಆ ಗಜೆಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಈ ಉತ್ತಮ ಗ್ರಂಥಗಳನ್ನು ಓದಿರುವಿರಾ?

ನಾನಕನ ಚರಿತ್ರೆ 4 ಆ; ಕೃಷ್ಣಾಕುಮಾರಿ 10 ಆ; ವಿವೇಕಮಂಜರಿ ಭಾಗ III 6 ಆ; ಮರುಸ್ಕಂದನ ಶತಕಂ 4 ಆ; ತುಂಟುಕುಮಿಣಿಗಳು 1½ ಆ; ಸಮರ್ಪಣೆ 12 ಆ; ಸೂಕ್ತಿತಾರಾವಳಿ 4 ಆ; ರಂಗನ ಮದುವೆ 1½ ಆ; ಬಾಗಿಲು ಭದ್ರ 4 ಆ; ನವನಾರಂಕತೆ 1 ಆ; ಗೃಹಿಣಿಯಾದ ಗಂಗೆ 3 ಆ. ಸೊಗಸಾದ ಹೊಸ ಬಂಗಾಳಿ ನಾವಲ್ಸ್:—ಕಪಾಲಕುಂಡಲ 6 ಆ; ಜಯ; ವಾಲ್ಮೀಕಿ 12 ಆ; ತಾರಾ 3 ಆ; ಅಪ್ಸರ ಮೃಗ 1½ ಆ; ಅಡವಿಯ ರಾಜ 2 ಆ; ವಿಷವಿವಾಹ 4 ಆ; ಸನ್ಯಾಸಿನಿ 1½ ಆ; ಅನಾಥಪ್ರೇತ 1 ಆ; ವಿಲಕ್ಷಣ ವೃತ್ತಘಟನೆ 4 ಆ; ರಮಾಮಾಧವ 6 ಆ; ಸುಶೀಲೆ 6 ಆ; ನಭಾ 8 ಆ; ನಾಟಕಿ 2½ ಆ; ಉಚಿತಾಯ ಶಾಸ್ತ್ರ 1 ಆಣೆ. ಇತ್ಯಾದಿ. "ಮಧುರವಾಣಿ" ಸಚಿತ್ರ ಮಾಸಪತ್ರಿಕೆಯ ಮಾದರಿ ಸಂಚಿಕೆಗೂ ಕ್ಯಾಟಲಾಗಿಗೂ ಬೆಲೆಯಿಲ್ಲ.

[160-9] ನಮ್ಮ ವಿಳಾಸ—ಹನುಮಾನ್ ಕಂಪೆನಿ, ಮೈಸೂರು.

ಷೇಕ್ಸ್‌ಪಿಯರ್

ಮಹಾ ಕವಿಯ ನಾಟಕದ ಕಥೆಗಳು.

ಸಿಂಬೆಲೀನ್, ಒಥೆಲೋ, ಮರ್ಚೆಂಟ್ ಆಫ್ ವೆನ್ನಿಸ್, ಕಿಂಗ್‌ಲಿಯರ್ ಮುಂತಾದ ಕೆಲವು ನಾಟಕಗಳನ್ನು ಕಥಾ ರೂಪವಾಗಿ ಬರೆಯಲ್ಪಟ್ಟು ನಮ್ಮ ದೇಶದ ಹೆಸರನ್ನಿಟ್ಟು ಪ್ರಕಟಿಸಿರುತ್ತೆ. ಪ್ರತಿ ಒಂದಕ್ಕೂ ಪ್ರತ್ಯೇಕವಾಗಿ ಅವು ಯಾವವೆಂದರೆ—ಕಲಾವತಿ, ಪದ್ಮಿನಿ, ವಸುಮತಿ, ಚಿತ್ರಕಲಾವತಿ, ವಿಲಕ್ಷಣ ಶಿಕ್ಷಣ, ಭಾನುಮತಿ, ವೈದರ್ಭೀ ವಿಲಾಸ, ರಾಜುಮತಿ, ಚಾತುರ್ಯವತಿ.

"ಮರುಳಾಟದ ಮದುವೆ" ಎಂಬ ನಕಲಿಯು ಈಗತಾನೇ ಬಿಕರಿಗೆ ಸಿದ್ಧವಾಗಿದೆ. ಪ್ರತಿಯೊಬ್ಬರೂ ಓದಬೇಕಾದುದು. ಕ್ರಯ 6 ಆಣೆ.

[266-10] ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

THE

GENERAL

Assurance Society Ltd., Ajmer.

(A Popular Life Office.)

Before Insuring or taking agency elsewhere, it would be to your interest to know the rates of premium and terms of agency specially prepared by the Society. Consulting Actuary, Mr. H. E. W. Lutt, F.I.A. (one of the most eminent Actuaries in England).

First Valuation Result:—The total liabilities under all assurances issued up to 31st March 1913, are fully covered by the Society's Life Assurance Fund and Paid up Capital. Write for full particulars, Annual and Valuation Reports to the Manager, Ajmer, or Secretary,

Opposite to Minto Ophthalmic Hospital.
[131-10] Bangalore City

ಸ್ಟೂಡೆಂಟ್ಸ್ ಹಾಲ್, ಮೈಸೂರು.

ಮ॥ ಎಲ್. ಆರ್. ವೆಂಕಟಸುಬ್ಬಾಚಾರ್ಯರ ಎಲ್ಲಾ ಪುಸ್ತಕಗಳೂ, ಗೌರ್ನ್ಮೆಂಟ್ ಪುಸ್ತಕಗಳೂ, ಮ॥ ಅಳ್ಳಾಳಯ್ಯಂಗಾರ್ರವರ ಗಣಿತಗಳೂ, ಮೊದಲಾದ ಸ್ಕೂಲಿಗೆ ಬೇಕಾದ ಪುಸ್ತಕಗಳೆಲ್ಲಾ ನಮ್ಮಲ್ಲಿ ದೊರೆಯುವವು.

[203-2] ವಿಳಾಸ—ಸ್ಟೂಡೆಂಟ್ಸ್ ಹಾಲ್, ಮೈಸೂರು.

ಒಳ್ಳೇ ಸಮಯ] 2 ಕ್ಕೆ 1 ಉಚಿತ [ಈ ನವರಾತ್ರಿವರೆಗೆ

ನಮ್ಮಲ್ಲಿ ದೊರೆಯುವ 8 ಆಣೆ, 4 ಆಣೆ ಬೆಲೆಯುಳ್ಳ ದೊಡ್ಡ ಸೈಜಿನ ಅಥವಾ ಚಿಕ್ಕ ಸೈಜಿನ ಸಚಿತ್ರ ಭಗವದ್ಗೀತೆಯ 2 ಪ್ರತಿಗಳನ್ನು ಒಟ್ಟಿಗೆ ತರಿಸಿಕೊಳ್ಳುವರಿಗೆ 1 ಜೆಟ್ಟಾಗಿ ಕಳುಹಿಸಲ್ಪಡುವುದು.

[204-2] ವಿಳಾಸ:—ಭಕ್ತಿವಿಜಯ ಆಫೀಸ್, ಮೈಸೂರು.

ಯುದ್ಧವಾರ್ತೆಯು.

ಯೂರೋಪಿನಲ್ಲಿ ನಡೆಯುತ್ತಿರುವ ಯುದ್ಧವಾರ್ತೆಯನ್ನು ಪ್ರತಿ ನಿತ್ಯವೂ ಕನ್ನಡಿಗರ ಉಪಯೋಗಕ್ಕಾಗಿ ಪ್ರಕಟಿಸುತ್ತಿರುವೆವು. ಕ್ರಯ 3 ಪೈ; ತಿಂಗಳಿಗೆ 8 ಆಣೆ; ಅಂಚೆಯಲ್ಲಿ ತರಿಸುವವರಿಗೆ ತಿಂಗಳಿಗೆ ಒಂದು ರೂಪಾಯಿ. ಮೈಸೂರು ಸಂಸ್ಥಾನದ ಎಲ್ಲಾ ಭಾಗದಲ್ಲಿಯೂ ಏಜಂಟರುಗಳು ಬೇಕಾಗಿದೆ. ಜಟ್ಟಾಗಿ ಕಮಿಷನ್ ಸಿಗುವುದು.

ಮುಖ್ಯ ಏಜಂಟರು—

[23-36] ಲಕ್ಕೂರು ರಾಮಚಂದ್ರರಾವ್, ಮೈಸೂರು.

ಟೋಪಿಗಳು: ಟೋಪಿಗಳು.

ಉತ್ತಮವಾದ ಟೋಪಿಗಳು ಹಾಸನದಲ್ಲಿ ದೊರೆಯುತ್ತವೆ.

ವಿವಿಧ ತರಹ ಉಣ್ಣೆ ದಾರದಿಂದ ತಯಾರಿಸಲ್ಪಡುವ ಸಾಮಾನುಗಳಿಗೂ, ಮಾದರಿಗಳಿಗೂ, ದರಗಳಿಗೂ ಮ್ಯಾನೇಜರವರಿಗೆ ಬರೆದು ತಿಳಿದುಕೊಳ್ಳಬಹುದು.

Men's socks, vests and various knitted articles.

ಮ್ಯಾನೇಜರ್, ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ.

Apply:—MANAGER, WOOL WORKS,
[201-2] GIRLS' INDUSTRIAL SCHOOL, HASSAN

ಓರಿಯಂಟಲ್ ಗೌ. ಸೆಕ್ಯೂರಿಟಿ ಲೈಫ್ ಅಸೂರನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು.............ರೂ. 4,45,00,000

ಕಂಪನಿಯಿಂದ ಪಾವತಿ ಆಗಿರುವದು „ 4,00,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದವನ್ನು ಕಳುಹಿಸುತ್ತಾರೆ.—ಮಿ. ಎಂ. ಎಸ್. ರೆಡ್ಡಿ ರೊ, ಚೀಫ್ ಏಜೆಂಟ್, ಬೆಂಗಳೂರು; ಮಿ. ಎಂ. ಎಸ್. ನಂಜಪ್ಪನವರು ಅಥವಾ ಮ॥ ವೆಂಕಟಪತಯ್ಯನವರು, ಕಂಪನಿ ಏಜಂಟರು, ಮೈಸೂರು; ಅಥವಾ

[194-51] ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ, ಮದರಾಸ್

ನಂಬಿ ಮೋಸಹೋಗಬೇಡಿ.

ಇತರರು ಶಾಲುಗಳನ್ನು ಒಳ್ಳೇದೆಂದೂ, ಕಮ್ಮಿ ಬೆಲೆಗೆ ಕೊಡುತ್ತೇವೆಂದೂ ಹೇಳುವರು. ಇದನ್ನು ನಂಬಿ ಮೋಸಹೋಗಬೇಡಿ. ನಮ್ಮಲ್ಲಿ ಕಾಶ್ಮೀರಿ ಮತ್ತು ಎಲ್ಲಾ ತರಹದ ಉಣ್ಣೆ ಶಾಲುಗಳೂ 5 ರೂ. ನಿಂದ 7, 10, 50, ರೂ. ಗಳವರಿಗೂ ಸಿಕ್ಕುತ್ತವೆ. ಖಾಯಿಷಿಲ್ಲದಿದ್ದರೆ ಹಣ ವಾಪಸು ಮಾಡುತ್ತೇವೆ. ನಮ್ಮ ಕಾರಖಾನೆಗೆ ಲಂಡನ್, ಚಿಕಾಗೋ ಮುಂತಾದ ಅನೇಕ ಪ್ರದರ್ಶನಗಳಲ್ಲಿ ಚಿನ್ನ ಮತ್ತು ಬೆಳ್ಳಿಯ ಮೆಡಲುಗಳು ಮತ್ತು ಸರ್ಟಿಫಿಕೇಟುಗಳು ಬಂದಿವೆ. ಯಾವ ತರಹ ಬೇಕಾದ್ದು ಎಷ್ಟು ಬೆಲೆಗೆ ಬೇಕಾದರೂ ನಮ್ಮಲ್ಲಿ ಸಿಕ್ಕುತ್ತವೆ. ಇಂಗ್ಲೀಷಿನಲ್ಲಾಗಲಿ, ಹಿಂದುಸ್ಥಾನಿಯಲ್ಲಾಗಲಿ ನಮಗೆ ಬರೆಯಬೇಕು.

ನಮ್ಮ ಅಡ್ರೆಸ್ಸು—ಪೀರ್ ಬ್ರದರ್ಸ್,
ಶಾಲ್ ಮರ್ಚೆಂಟ್ಸ್, ಅಮೃತಸರ, ಪಂಜಾಬು.

PEER BROS., SHAWL MERCHANTS,
[166-6] *AMRITSAR, PANJAB.*

ಅರೇಬಿಯನ್ ನೈಟ್ಸ್

ಎಂಬ

ಯವನ ಯಾಮಿನೀ ವಿನೋದ ಕಥೆಗಳು

(ಕನ್ನಡದಲ್ಲಿ)

ಲೋಕಪ್ರಸಿದ್ಧವಾದ ಈ ಪುಸ್ತಕದ ಮೊದಲನೇ ಮುದ್ರಣವು ಶೀಘ್ರದಲ್ಲಿಯೇ ಮುಗಿದುಹೋದುದರಿಂದ ಎರಡನೇ ಮುದ್ರಣವನ್ನು ತಯಾರಿಸಿರುತ್ತೇವೆ. ಇದರ ಪ್ರಿಂಟಿಂಗ್ ಮತ್ತು ಬೈಂಡ್ ಮುಂತಾದ ಕೆಲಸಗಳು ವೆಸ್ಲಿಯನ್ ಮಿಷನ್ ಪ್ರೆಸ್ಸಿನಲ್ಲಿ ಬಹು ಶ್ಲಾಘ್ಯತರವಾಗಿ ಮಾಡಲ್ಪಟ್ಟಿರುವವು. ಈ ಎರಡನೇ ಮುದ್ರಣವನ್ನು ಘನ ಪಂಡಿತರು ಆಮೂಲಾಗ್ರವಾಗಿ ಪರಿಶೀಲನೆಮಾಡಿ ತಿದ್ದಿ ಸವಡಿಸಿರುತ್ತಾರೆ. ಇದರಲ್ಲಿನ ಕಥೆಗಳು ಬಹು ಮನೋರಂಜಕವಾಗಿಯೂ ಭಾಷೆಯು ಅತಿ ಲಲಿತವಾಗಿಯೂ ಇರುತ್ತವೆ. ಪುಸ್ತಕವು ನಾನೂರು ಪುಟಗಳಿಗಿಂತ ಹೆಚ್ಚಾಗಿರುತ್ತದೆ. ಇದರ ಕ್ರಯ ಎರಡೇ ರೂಪಾಯಿ. ವಿ. ಪಿ. ಪಿ. ಮೂಲಕ ತರಿಸಿಕೊಂಡರೆ ರೂ. 2-4-0. ಜಾಗ್ರತೆ ನೋಡಿ.

[206-2] ವಿಳಾಸ:—ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

WANTED

Active an influencial District Agent for Hassan, and Local Agents throughout Mysore Province and Coorg on liberal terms of commission and monthly office allowance. None but those who can guarantee good business need apply to

Messers. VENKATACHALAM & SONS,
Chief Agents,
Hindustan Co-operative Insurance Society, Ltd.,
166, Dodpet, near Old Taluk Cutcherry,
[243-41] *MYSORE.*

ಹಿಂದುಸ್ಥಾನ್ ಕೋಆಪರೇಟಿವ್ ಜೀವವಿಮೆ ಸಂಘ ಲಿ.

ಹಿಂದುಸ್ಥಾನ್ ಕಟ್ಟಡಗಳು—ಕಲ್ಕತ್ತಾ.

ಕಂಪನಿಯ ಮೂಲಧನ (ಒಂದು ಕೋಟಿ ರೂಪಾಯಿ)	1,00,00,000
ಪಾವತಿಯಾದ ಮೊಬಲಗು	10,50,000
ವಸೂಲಾದ ಮೊಬಲಗು	67,00,000

ಈ ಕಂಪೆನಿಯಲ್ಲಿ ಪಾಲಿಸಿದಾರರಿಗೆ ಬಹಳ ಕಮ್ಮಿಯಾದ ದರಗಳ ಪಟ್ಟಿಯನ್ನು ಮಾಡಿರುವುದು. 1912 ನೇ ಇಸ್ವಿಯ ಇಂಡಿಯಾ ಗವರ್ನ್‌ಮೆಂಟಿನ ಜೀವವಿಮೆ ಕಂಪನಿಯ ಆಕ್ಟ್‌ಗಳ ಪ್ರಕಾರ ಸರ್ಕಾರದಲ್ಲಿ 2 ಲಕ್ಷ ರೂಪಾಯಿಗಳನ್ನು ಡಿಪಾಜಟ್ಟು ಮಾಡಲ್ಪಟ್ಟಿರುತ್ತೆ. ಮತ್ತು ಅನೇಕ ಮಹಾರಾಜರುಗಳು ಮುಂತಾದ ದೊಡ್ಡವರು ಪ್ರೆಸಿಡೆಂಟರಾಗಿರುವದರಿಂದ ಈ ಕಂಪನಿಯ ಅಭಿವೃದ್ಧಿಸ್ಥಿತಿಯನ್ನು ಪ್ರಕಟನೆ ಮಾಡುವುದಕ್ಕೆ ಸಂತೋಷವಾಗಿರುತ್ತದೆ.

ಮೂಲಧನವಾಗಿ ಹಣವನ್ನು ಪಾರ್ಟಿಯವರ ಮನೆಯಲ್ಲೇ ಜಾಗ್ರತೆ ಪಾವತಿಗೆ ಏರ್ಪಾಡು ಮಾಡಲ್ಪಡುತ್ತೆ. ಆದ್ದರಿಂದ ಪಾಲಿಸಿದಾರರು ಮತ್ತು ಇದಕ್ಕೆ ಸೇರಿದ ಏಜಂಟರುಗಳು ತುಂಬಾ ಅದೃಷ್ಟವಂತರೆಂಬುವದರಲ್ಲಿ ಸಂದೇಹವಿಲ್ಲ.

ಪಟ್ಟಿನ ವಿಷಯಗಳಿಗೂ, ಫಾರಂ ಮತ್ತು ಪ್ರಾಸ್‌ಪೆಕ್ಟಸುಗಳಿಗೂ ಕೆಳಗಿನ ವಿಳಾಸಕ್ಕೆ ಜಾಗ್ರತೆಯಾಗಿ ಬರೆಯಿರಿ. [243-41]

ವೆಂಕಟಾಚಲಂ ಅಂಡ್ ಸನ್ಸ್, ಚೀಫ್ ಏಜಂಟ್ಸ್,
166, ದೊಡ್ಡಪೇಟೆ, ಮೈಸೂರು

ಪಾಕಿಟ್ ಲೀವರ್ ವಾಚ್.

ಇದರ ಕ್ರಯ 6 ಬಹುಮಾನ ಸಮೇತ ರೂ. 2–13–0 ಮಾತ್ರ.

ಇದು ಮಕ್ಕಳ ಆಟದ ಬೊಂಬೆಯಂತೆ ಕೆಲವು ದಿವಸಗಳು ಆಟವಾಡಿ ನಂತರ ಕೆಟ್ಟುಹೋಗುವಂಥಾ ಅಲ್ಪ ಗಡಿಯಾರವಲ್ಲ. ಶ್ರೇಷ್ಠವಾದ ಮತ್ತು ಬಹು ಪ್ರಸಿದ್ಧವಾದ ಲೀವರು



ಕೆಲಸದಿಂದ ತಯಾರಾದದ್ದು. ಗಂಭೀರವಾದ ಘಂಟೆ ಮತ್ತು ಮಿನಿಟ್‌ಗಳ ಮುಳ್ಳುಗಳುಳ್ಳದ್ದು. ಬಹು ಬಲಿಷ್ಠವಾದ ಮತ್ತು ನಾಜೂಕಾದ ಯಂತ್ರಸಾಮಾನುಗಳಿಂದ ತಯಾರಾಗಿರುತ್ತೆ. ಅನೇಕ ವರುಷಗಳ ಪರಿಯಂತರ ಬಾಳಿಕೆ ಬರುವಂಥಾದ್ದು. ಆದಕಾರಣ ಆರ್ಡರುಗಳು ಬಂದು ಸುರಿಯುತ್ತಿವೆ. ಬಹುಮಾನಗಳ ತಪಸೀಲು :—1 ವಾಚ್ ಸರಪಣಿ, 2 ಉತ್ತರ ಮುಖಿ, 3 ಪರಿಮಳ ಅತ್ತರ್, 4 ಕರವಸ್ತ್ರ, 5 ಸೋಕಾದ ಉಂಗರ, 6 ಪಿಟ್ಟು.

ವಿಳಾಸ—ಪಿ. ಆರ್. ವೆಂಕಟರಮಣ ಅಂಡ್ ಕಂಪೆನಿ,
[145-10] ನಂ. 7, ಕೋಪ್ ವೆಂಕಟಾಚಲಯ್ಯರ್ ಬೀದಿ, ಮದರಾಸು.

BRAHMAPPA TAVANAPPANAVAR,
Merchant & Commission Agent.
Agent to Messrs. Currimbhoy Ebrahim & Co's Mills, BOMBAY.

ನಾವು ಮುಂಬೈ ಮೆಸ್ಸರ್ಸ್ ಕರೀಂಬಾಯ್ ಇಬ್ರಾಹಿಂ ಅಂಡ್ ಕಂಪೆನಿಯವರ ಬಾಬತು, ಮೆಸ್ಸರ್ಸ್ ಫಜುಲ್ಭಾಯ ಮಿಲ್ಸ್ ಲಿಮಿಟೆಡ್ ಮುಂಬೈ; ದಿ ಕ್ರೆಸೆಂಟ್ ಮಿಲ್ಸ್ ಲಿಮಿಟೆಡ್ ಮುಂಬೈ, ಕರೀಂಬಾಯ್ ಮಿಲ್ಸ್ ಲಿಮಿಟೆಡ್ ಮುಂಬೈ, ದಿ ಇಂಡಿಯನ್ ಬ್ಲೀಚಿಂಗ್, ಡೈಯಿಂಗ್ ಅಂಡ್ ಪ್ರಿಂಟಿಂಗ್ ವರ್ಕ್ಸ್ ಲಿಮಿಟೆಡ್ ಮುಂಬೈ, ದಿ ಇಂಡೋರ್ ಅಂಡ್ ಮಾಲ್ವಾ ಯುನೈಟೆಡ್ ಮಿಲ್ಸ್ ಲಿಮಿಟೆಡ್ ಇಂದೋರ್, ಇವುಗಳಲ್ಲದೆ ಇನ್ನೂ ಅನೇಕ ಮಿಲ್ಲುಗಳ ಬಟ್ಟೆಗಳನ್ನು ಮೈಸೂರು ಸೀಮೆಯಲ್ಲೆಲ್ಲಾ ವಿಕ್ರಯಮಾಡಲು ಕಮಿಷನ್ ಏಜಂಟರಾಗಿರುತ್ತೇವೆ. ನಮ್ಮ ಮುಖಾಂತರ ಮಾಲು ತರಿಸಿಕೊಳ್ಳತಕ್ಕವರಿಗೆ ಮುಂಬೈಯಲ್ಲಿ ಬಟ್ಟೆಗಳ ಮೇಲೆ ವಿಧಿಸತಕ್ಕ ದಳ್ಳಾಳಿ, ಚೋಟಾದಳ್ಳಾಳಿ, ಮೊಕ್ಕಾದಮ್ಮು, ಗಂಟುಕಟ್ಟುವದು, ಸ್ಟೇಷನ್ನಿಗೆ ಸೇರಿಸುವದು, ಹುಂಡೇಕರಿ ವಗೈರೆ ಯಾವ ವಿಧವಾದ ಖರ್ಚು ತಗಲದೆ ಇರುವದರಿಂದ ಮುಂಬೈಯಿಂದ ತರಿಸುವದಕ್ಕಿಂತಲೂ ಸುಲಭ ದರದಲ್ಲಿ ಸಿಕ್ಕುತ್ತೆ. ಮತ್ತು ಮುಂಬೈಗೆ ಹೋಗಿಬರುವ ದೇಹಶ್ರಮವೂ, ಖರ್ಚೂ ಉಳಿಯುತ್ತೆ. ಹೆಚ್ಚು ಬಟ್ಟೆಗಳನ್ನು ಏಕಕಾಲದಲ್ಲಿ ಕೊಳ್ಳತಕ್ಕವರಿಗೆ ಮಾಲಿನ ಮೇಲೆ ಶೇಕಡ 3 ರೂಪಾಯಿ ಲಾಗಾಯ್ತು 4½ ರೂಪಾಯಿ ವರೆಗೆ ಡಿಸ್ಕೌಂಟು ದೊರೆಯುತ್ತೆ. [97-23]

ನಮ್ಮ ಟ್ರಾವಲಿಂಗ್ ಏಜಂಟರ ವಶ ಬಟ್ಟೆಗಳ ನಮೂನೆಗಳನ್ನು ಕೊಟ್ಟು, ದರ ಒಟ್ಟು ವ್ಯಾಪಾರಗಾರರಿಗೆ ತೋರಿಸಿ ಆರ್ಡರು ತೆಗೆದುಕೊಳ್ಳುವ ಏರ್ಪಾಡು ಮಾಡಿರುತ್ತೆ. ನಮ್ಮ ದಾವಣಗೆರೆ ಮತ್ತು ಬೆಂಗಳೂರು ಆಫೀಸುಗಳಲ್ಲಿ ಮಾಲು ಹಾಜರು ಸಹ ದೊರೆಯುತ್ತೆ.

ಬಟ್ಟೆಗಳನ್ನು ವ್ಯಾಪಾರಮಾಡಲು ಅನುಭವಸ್ಥರಾದ ಏಜಂಟರುಗಳೂ ಮತ್ತು ಗುಮಾಸ್ತರುಗಳೂ ಬೇಕಾಗಿವೆ.

ಎಲ್ಲಾ ಕಾಗದಪತ್ರಗಳೂ ದಾವಣಗೆರೆ ಆಫೀಸಿಗೆ ಬರೆಯಲ್ಪಡಬೇಕು.

ಹೆಡ್ ಆಫೀಸು :—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್, ದಾವಣಗೆರೆ. ಬ್ರಾಂಚ್ ಆಫೀಸು :—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್,
ಚಿಕ್ಕಪೇಟೆ, ಬೆಂಗಳೂರು ಸಿಟಿ.

CHAMBERLAIN'S COUGH REMEDY.

ಚೇಂಬರ್ಲೇನ್‌ಯವರು ಕಂಡುಹಿಡಿದ ಕೆಮ್ಮಿನ ಔಷಧವು.

3-38

ಶೀತದ ಕೆಮ್ಮು, ಗಂಟ್ಲು ಗಾರೆನ್ನುವುದು, ಹುಡಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟ್ಲಿನಲ್ಲೂ ಎದೆಯಲ್ಲು ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಾಣಪ್ರಾಯವಾದೆ.

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ. ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ. ಅದರ ಮೇಲೆ ನ್ಯೂಮೋನಿಯ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು. ತರುವಾಯ ಉಗುಳಿನಲ್ಲಿ ರಕ್ತಬೀಳುವುದು. ಹಾಗೆಯೇ ಕ್ಷಯರೋಗ ಆಸ್ಪದವಾಗುವುದು.

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟ್ಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಖಚಿತವಾಗಿ ನಿವಾರಣೆಮಾಡುತ್ತದೆ. ಉಸುರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ. ಅಪಾಯಕರವಾದ ಕೆಮ್ಮಿನ ಶಬ್ದವನ್ನು ನಿಲ್ಲಿಸಿಬಿಡುತ್ತದೆ. ಎದೆ ಒಣಗುವಂಥಾ ಕೆಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ವಾಸಿಮಾಡಬಲ್ಲದು. ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ದೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ.

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ.

ಈ ಔಷಧವು ವನಸ್ಪತಿಗಳ ತಯಾರಿ.

ಕೈಯಿಂದ ಮುಟ್ಟದೆ ತಯಾರಾಗಿದೆ.

ಎಲ್ಲೆಲ್ಲೂ ವಿಕರಿಯಾಗುವುದು. ಸಣ್ಣ ಶೀಸೆಗೆ ೧ ರೂಪಾಯಿ. ದೊಡ್ಡ ಶೀಸೆಗೆ ೨ ರೂಪಾಯಿ.

ಪ್ರೊಫೆಸರ್ ಬೇಸ್ಲರ್ ಇಲೆಕ್ಟ್ರೊ ಪೆಯಿನಾಡ್ಯನ್

ಮನುಷ್ಯನ ಶರೀರದಲ್ಲಿ ವಿದ್ಯುಚ್ಛಕ್ತಿ ವ್ಯಾಪಿತವಿರುವದೆಂತಲೂ, ವಿದ್ಯುಚ್ಛಕ್ತಿ ಕಡಮೆಯಾದ ಕೂಡಲೇ ನಾನಾ ತರದ ವ್ಯಾಧಿಗಳು ಲಭಿಸುವದೆಂತಲೂ, ಅಂತಹ ವ್ಯಾಧಿಗಳನ್ನು ಶೀಘ್ರ ಗುಣಪಡಿಸಲು ವಿದ್ಯುಚ್ಛಕ್ತಿ ಮಿಶ್ರವಾದ ಔಷಧದ ಉಪಯೋಗದಿಂದಲ್ಲದೆ



ಬೇರೆ ಔಷಧಗಳಿಂದ ವ್ಯಾಧಿಗಳನ್ನು ಶೀಘ್ರ ಗುಣಪಡಿಸುವದು ಕಷ್ಟವೆಂತಲೂ ಅಮೇರಿಕಾ ದೇಶದ ವೈದ್ಯಶಾಸ್ತ್ರ ಪಂಡಿತರು ವೈದ್ಯಶಾಸ್ತ್ರ ಪರಿಶೋಧನೆಯಿಂದ ಸಿದ್ಧಿಸಿರುವರು. ಈ ಔಷಧವು ಉಪಯೋಗಿಸಿದ ಕೂಡಲೇ ದೇಹಕ್ಕೆ ಸಾಕಾಗುವಷ್ಟು ವಿದ್ಯುಚ್ಛಕ್ತಿಯನ್ನುಂಟುಮಾಡಿ ವ್ಯಾಧಿಯನ್ನು ಅತಿ ಶೀಘ್ರ ಗುಣಪಡಿಸುತ್ತೆ. ಪ್ರಾಚೀನಕಾಲದ ಔಷಧಗಳಿಗೆಲ್ಲವು ಇದು ಅತ್ಯುತ್ತಮವಾದದ್ದು. ಒಂದಾವರ್ತಿ ಪರೀಕ್ಷಿಸಿ ನೋಡಿದರೆ ಇದರ ಗುಣವು ವ್ಯಕ್ತವಾಗುತ್ತೆ.

ಎಲೆಕ್ಟ್ರೊಪೆಯಿನಾಡ್ಯನ್ ತೈಲದಿಂದ ಗುಣಪಡುವ ವ್ಯಾಧಿಗಳು:—

ತಿಮರುವಾಯುವು, ಕೀಲ್ವಾಯುವು, ಪಾರ್ಶ್ವವಾಯುವು, ಕ್ಷಯ, ಕೆಮ್ಮು, ನೆಗಡಿ, ವಾಯುನೋವು (ಕೈಕಾಲು ಹಿಡಿತ), ಉಳುಕುಹಿಡಿದದ್ದರು, ಕಠಿಸಶ್ವಾಸ, ನಡುನೋವು (ಸೊಂಟನೋವು), ಪಕ್ಕಶೂಲೆ, ಹಲ್ಲುನೋವು, ತಲೆನೋವು, ಅರೆತಲೆನೋವು, ಉಬ್ಬಸ, ವಿಷಜ್ವರದ ಗಡ್ಡೆಗಳಿಗೂ ಮತ್ತು ಮಕ್ಕಳ ಪಕ್ಕಶೂಲೆ, (ಅಳ್ಳೆ) ಶೈತ್ಯದೋಷಗಳೂ, ವಿಷಹುಳಗಳ ಕಡಿತಗಳಿಗೂ (ಚೇಳು ಮುಂತಾದದ್ದು), ಇದಕ್ಕೆಲ್ಲಾ ಬಹಳ ಶ್ಲಾಘನೀಯವಾದದ್ದು. [12–37]

ಉಪಯೋಗಿಸುವ ಕ್ರಮವು ಹಿಂದುದೇಶದ ಎಲ್ಲಾ ಭಾಷೆಗಳಲ್ಲಿಯೂ ಬುಡ್ಡಿಯ ಸಂಗಡ ಕಳುಹಿಸಲಾಗುತ್ತದೆ.

ಬುಡ್ಡಿಯ ಕ್ರಯ ರೂ. 0–8–0. ವಿ. ಪಿ. ಖರ್ಚು 0–4–0. ಏಜಂಟರು ಬೇಕು.

ಮುಖ್ಯ ಏಜಂಟರು :—ಗುರುಬಸವ ಅಂಡ್ ಕಂಪನಿ, ಮದರಾಸ್.

S U. N. & Co.,
BENARES CITY, U. P.

ಸೊಗಸಾದ ಸರಕುಗಳು !!
ದೊಡ್ಡ ಕಂಪೆನಿ !

ಈ ನಮ್ಮ ಕಂಪನಿಯಲ್ಲಿ ನೆಯಿದು ತಯಾರಿಸುವ ಉತ್ತಮವಾದ ಬನಾರಸ್ ರೇಷ್ಮೆ ಜರೀ ಸೀರೆಗಳು, ಕಫ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ್ಟಿ, ಮಗುಟ, ಜಗನ್ನಾಥ ಚಾಗಟೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಕ್ಯಾಟಲಾಗ್ 1 ನ್ನು ಮತ್ತು 2 ವಿಶ್ವೇಶ್ವರ ಪಟಗಳನ್ನು ಇನಾಮಾಗಿ ಕಳುಹಿಸಲಾಗುತ್ತದೆ. [69-27]

ಎಸ್. ಯು. ಎನ್. ಮತ್ತು ಕಂಪೆನಿ, ಕಾಶಿ.

MADRAS SNUFF.

ಬಹಳ ಮೇಲಾದ ನಸ್ಯ ಇನ್ನೆಲ್ಲೂ ಸಿಕ್ಕದು.

ನಮ್ಮಲ್ಲಿ ತಯಾರಾಗುವ ನಸ್ಯದ ಪುಡಿಯನ್ನು ಹಿಂದುಸ್ಥಾನದ ಸಮಸ್ತ ಭಾಗಗಳವರೂ, ಅನ್ಯದೇಶಗಳವರೂ ಹತ್ತಾರು ವರುಷಗಳಿಂದ ತರಿಸಿಕೊಂಡು ಉಪಯೋಗಿಸುತ್ತಿದ್ದಾರೆ. ನಮ್ಮ ನಸ್ಯವು ಬಹಳ ಪ್ರಖ್ಯಾತಿ ಪಡೆದಿದೆ. ಬಹು ಮೇಲಾದ "ಬಂದರ್" ಸೊಪ್ಪಿನಿಂದ ಸುವಾಸನೆಯಾದ ಅಚ್ಚ ತುಪ್ಪ ಹಾಕಿ ವಿಶೇಷ ರುಚಿಕರವಾಗಿಯೂ ಸ್ವಚ್ಛವಾಗಿಯೂ ತಯಾರುಮಾಡುತ್ತೇವೆ. ಕೊಡಿದ ಮಟ್ಟಿಗೂ ನಮ್ಮ ಧಾರಣೆ ಕಡಮೆಯಾಗಿರುವುದು. ನಮ್ಮ ಪದಾರ್ಥವನ್ನು ನಾವೇ ಹೊಗಳಿಕೊಳ್ಳುವದರಿಂದ ಫಲವೇನು ? ವಾಚಕರು ಒಂದಾವರ್ತಿ ಪರೀಕ್ಷೆಗಾಗಿ ತರಿಸಿಕೊಂಡರೆ ಚೆನ್ನಾಗಿ ವೇದ್ಯವಾಗುತ್ತೆ. ಕ್ರಯ ಪಂಥೇರಿಗೆ 3 ರೂಪಾಯಿ; 1 ಸೇರಿಗೆ 10 ಆಣೆ. ಪೋಸ್ಟೇಜ್ ಬೇರೆ. ನಸ್ಯವನ್ನು ಅಂಚೆಯ ಮೂಲಕವೋ, ರೈಲಿನಲ್ಲೋ ಯಾಕೆ ಕಳಿಸಬೇಕೆಂದು ಬರೆಯಿರಿ.

ನಮ್ಮ ವಿಳಾಸ—ಜಿ. ನಾರಾಯಣಸಾಮಿ ನಾಯುಡು,
43, ಪಳಯಪ್ಪನ್ ಸ್ಟ್ರೀಟ್, ಮಿಂಟ್ ಬಿಲ್ಡಿಂಗ್ ಪೋಸ್ಟ್,
[168–7] ಮದರಾಸ್, ಇ.

ಕುಂತಳಾನಂದ ತೈಲವು.

192-52

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಿರುದಿನ ಬೆಳ್ಳಿಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ. ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ

ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು. ಈ ತೈಲವು ಕೂದಲನ್ನು ಚೆನ್ನಾಗಿಯೂ ಶೀಘ್ರವಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಗೊಳಿಸುತ್ತದೆ. ಸದ್ರಾಥಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದಾಗಿದೆ. ಬೆಲೆ ಬಾಟ್ಲಿಗೆ 1 ರೂಪಾಯಿ. 3 ಬಾಟಲಿಗೆ 2 ರೂಪಾಯಿ 10 ಆಣೆ. ಅಂಚೆ ಹಾಸಲು ಬೇರೆ. ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ.

ನಮ್ಮ ವಿಳಾಸ:—ಬಿ. ಎಮ್. ನಾಥ ಮತ್ತು ಕಂಪೆನಿ,
ವೇಪೇರಿ, ಮದರಾಸ್.

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು."

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು. ವಾಯು, ಕೀಲು, ಅರಶಲೆ, ತಲೆನೋವುಗಳು; ಯಾವ ಕಾರಣದಿಂದ ಹುಟ್ಟುವ ಬಾಧೆಯಾಗಲಿ, ಉಬ್ಬಸ, ಹಲ್ಲುನೋವು, ಗಂಟ್ಲು ಗಾರೆನ್ನುವುದು, ಕೆಮ್ಮುಗಳು, ಶೀತನೆಗಡಿ, ಶ್ವಾಸರೋಗ, ಜಜ್ಜು, ಉಳುಕು, ಧಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ. ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು. ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲು ಕೊಡಿ ಎಂದು ಕೇಳು. ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೋ. ಈ ಯುಕ್ತಿಪ್ರಯೋಜಕವಾಗಿ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ. ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ. ಲಕ್ಷಾಂತರ ಜನರು ಗುಣಹೊಂದಿದ್ದಾರೆ; ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ. [122-16]

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡಿ. ಅದರ ಕ್ರಯ ಬಾಟ್ಲಿಗೆ 12 ಆಣೆ; ಅಂಚೆ ವೆಚ್ಚ 4 ಆಣೆ. 3 ಅಥವಾ ಹೆಚ್ಚು ಬಾಟ್ಲು ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ. ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ. ವಿಳಾಸಗಳು:—(1) ಎಸ್. ಪೀಟರ್ಸ್, 37 ವಡಮಲೆಪಿಳ್ಳೆ ಬೀದಿ, ಪುರಸವಾಕಂ, ವೇಪೇರಿ, ಮದರಾಸ್; (2) ಜಿ. ಎನ್. ಕನ್ನಯ್ಯಶೆಟ್ಟರು, ಜನರಲ್ ಮರ್ಚೆಂಟ್, ತುಮಕೂರು.

ಮಧುರೆ ಜುನ್ನರಿ ಅಂಚಿನ ಸೀರೆ ಅವ್ವಲ್ ರಖಂ ರೂ. 2-6-0. ಸೆಪ್ಟಂಬರ್ ತಿಂಗಳ ಒಳಗಾಗಿ ತರಿಸಿಕೊಳ್ಳುವರಿಗೆ ಒಂದು ಸಿಂಗಪೂರು ರವಿಕೆ ಯನ್ನು ಪ್ರತಿ ಸೀರೆಗೂ ಇನಾಮಾಗಿ ಕೊಡುತ್ತೇವೆ.

ಇದು ಉಡುವುದಕ್ಕೆ ವಿಶೇಷತೆಯಾಗಿಯೂ ನೋಟಕ್ಕೆ ನಯವಾಗಿಯೂ, ಬೆಲೆ ಸುಲಭವಾಗಿಯೂ ಇವೆ. ಬಣ್ಣ ಹೋಗದು ಸೀರೆಯ ಉದ್ದ 18 ಮೊಳ. ಸುಂದರವಾದ ಸೆರಗು. ಒಂದನ್ನು ತರಿಸಿ ಪರೀಕ್ಷಿಸಿ. ವಿಳಾಸ—ವಿ. ಕೃಷ್ಣಸ್ವಾಮಿ ಮೊದಲಿಯಾರ್, ನಂ 27, ಬಂದರ್ ಬೀದಿ, ಜಿ. ಟಿ., ಮದರಾಸು.

[99-16]



ಆಗಸ್ಟ್ ಮಹೋತ್ಸವದ ಕೈ ಗಡಿಯಾರ.
ಅರ್ಧ ಕ್ರಯ ರೂ. 1-14-0

ಇದೇ ಆಗಸ್ಟ್ ಹಬ್ಬದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದ ಕೈ ಗಡಿಯಾರವನ್ನು ಆಗಸ್ಟ್ ಒಳಗೆ ತರಿಸಿಕೊಳ್ಳುವರಿಗೆ ರೂಪಾಯಿ 1-14-0 ಅಣೆಗೆ ಕೊಡಲ್ಪಡುತ್ತೆ. [99-16]

ವಿಳಾಸ—ವಿ. ಕೃಷ್ಣಸ್ವಾಮಿ ಮೊದಲಿಯಾರ್, ನಂ.27 ಬಂದರ್ ಬೀದಿ, ಜಿ.ಟಿ., ಮದರಾಸು.

ದೀಪಾವಳಿ ಹಬ್ಬದ ಬಹುಮಾನ.

ಪುದುಚೇರಿ ಕಾಲು ರುಳಿ (ಕಾಲು ತೋಡಾ).

ಕ್ರಯ ದೊಡ್ಡವರಿಗೆ ರೂ. 1-14-0; ಚಿಕ್ಕವರಿಗೆ ರೂ. 1-10-0; ಹುಡುಗಿಯರಿಗೆ ರೂ. 1-6-0; ಮಕ್ಕಳಿಗೆ ರೂ. 1-4-0.

ಇದು ನವಾಡಾ ಬೆಳ್ಳಿಯ ತಗಡಿನಿಂದ ತಯಾರಿಸಲ್ಪಟ್ಟಿರುತ್ತೆ. ಇದರ ರಂಗು ಕೆಡದು. ಸಕಲರಿಗೂ ಲಾಯಕ್ಕಾದದ್ದು. ದೀಪಾವಳೀ ಹಬ್ಬದ ಒಳಗಾಗಿ ತರಿಸಿಕೊಳ್ಳುವವರಿಗೆ ಈ ಕೆಳಗಣ ಸಾಮಾನುಗಳನ್ನು ಉಚಿತವಾಗಿ ಕೊಡಲ್ಪಡುತ್ತೆ.

ಬಹುಮತಿ ವಿವರ—ನವಾಡಾ ಬೆಳ್ಳಿಯ ಕುಂಕುಮ ಭರಣಿ ಕ್ರಯ 8 ಆಣೆ; ಡಿಟೋ ಊದಿನ ಚಿಪ್ಪು ಕ್ರಯ 4 ಆಣೆ; ಡಿಟೋ ಕಣ್ಣುಕಪ್ಪಿನ ಭರಣಿ 2 ಆಣೆ; ಡಿಟೋ ಹಾಲಿನ ವಳಲೆ ಕ್ರಯ 8 ಆಣೆ; ತಳಕ ಸ್ಫಟಿಕದ ಮೂಗುಬಟ್ಟು ಕ್ರಯ 6 ಆಣೆ. ಈ ಐದು ಸಾಮಾನುಗಳು ಇನಾಮಾಗಿ ಕೊಡಲ್ಪಡುತ್ತೆ.

[208-1] ವಿಳಾಸ—ಸ್ಯಾಂಕರ್ ಬ್ರದರ್ಸ್, ತಿರುವಲ್ಲಿಕೇಣಿ, ಮದರಾಸು.

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶದಾಮವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು ? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಾಪ ಉಪಕರಣವಾದರೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ.

ಈ ತೈಲವನ್ನು ತೊಡೆದುಕೊಳ್ಳುತ್ತಲೇ, ಮಸ್ತಿಷ್ಕದ ಬೇಗೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ, ಕೂದಲುಗಳು ಇದನ್ನು ತೊಡೆಯ ತೊಡಗಿದ ಬಳಿಕ ಎಂದಿಗೂ ಜಗುಳಿ ಬಿದ್ದು ಹೋಗಲಾರವು; ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು.

ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡುವುದಕ್ಕಿಂತ ಒಂದೇಯೊಂದು ಬಾರಿ ಈ "ಕಾಮಿನಿಯಾ ತೈಲ" ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಒಫ್ ಮೇರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಪ್ರಶಸ್ತರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಅವುಗಳಲ್ಲಿ ಒಂದನ್ನೇ ನೋಡಿರಿ! ನೇಗಿನಹಾಳಕರ ಬಂಧುಗಳು. ಬಸವನಕಿಲ್ಲಿ, ಬೆಳಗಾಂವ—ತಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವುದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ. ಆದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ. ಪಿ. ದ್ವಾರಾ ಕಳಿಸುವುದು. ಸೀಸೆಯೊಂದರ ಕ್ರಯ ರೂ. 1-0-0, ಅ. ವೆ. 0-4-0 ಬೇರೆ; 3 ಸೀಸೆಗಳ ಕ್ರಯ ರೂ. 2-10-0, ಅ. ವೆ. 0-7-0 ಬೇರೆ.

ಸೂಚನೆ.—ಅನೇಕ ದುರ್ವಿನೀತರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಬಿಕರಿಯಿಂದ ತಮಗೆ ಅತ್ಯಲ್ಪ ನಫೆಯೇ ದೊರಕುತ್ತದೆಂದು, ನೀವು "ಕಾಮಿನಿಯಾ ತೈಲ" ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭ ದೊರಕತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಅದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳುವಷ್ಟು ಮಹರುಬಾನ್ ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಿಬೀಳದೆ ಸರಿಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಒಟ್ಟೊ-ದಿಲ್ ಬಹಾರ್ !!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಆಲ್ಕೋಹೋಲ್) ಸಂಪರ್ಕವಿಲ್ಲವು. ನೀವು ಒಂದು ಸಲ ನಿಮ್ಮ ಕೈಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ನೈಸರ್ಗಿಕವಾದೊಂದು ವಸಂತವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ. ಈ ಒಟ್ಟೊ-ದಿಲ್ ಬಹಾರಿನ ಗಂಧವು ಆವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳಕೊಳ್ಳುವುದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ. [19-35]

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಡ್ರಾಮಿನ (ಮೀಡಿಯಂ) ಸೀಸೆ ರೂ. 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0. ಅಂಚೆಯ ವೆಚ್ಚ ಬೇರೆ ರೂ. 0-4-0. ಒಟ್ಟೊ-ದಿಲ್ ಬಹಾರ್ ಪರಿಮಳದ ಕಾರ್ಡುಗಳು ಡಜನ್ ಒಂದಕ್ಕೆ 0-12-0.

ಮೇರೆ ತಂದ ಎಲ್ಲಾ ಸುಗಂಧಗಳು ಸಿಕ್ಕುವ ಪತ್ತೆ:—

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪೆನಿ,

ಜುಮ್ಮಾಮಸ್‌ಜಿದ್, ಬೊಂಬಾಯಿ.

ಏಜೆಂಟ್, ದಿ ಜುಲ್ಸ್ ಮಾರ್ಟ್, ಮಂಗಳೂರು.

ಪ್ರೊಫೆಸರ್ ಗಜ್ಜಾರರವರ

ಗುಣಕಂಡ ಪ್ರಖ್ಯಾತವಾದ ಔಷಧಗಳು.

ವ್ಯರ್ಥವಾದ ಔಷಧಗಳನ್ನು ಉಪಯೋಗಿಸಿ ಅಪ್ರಿಯಾಪಾಯಕ್ಕೆ ಗುರಿಯಾಗುವುದೇಕೆ ? ವಿವೇಕದಿಂದ ತಯಾರ್ಮಾಡಿರುವ ನಮ್ಮ ಔಷಧಗಳನ್ನು ಸೇವನೆ ಮಾಡಬಾರದೇ ?

ಟಾನಿಕ್ ಸೋಲ್ಯೂಷನ್.—ಇದರಲ್ಲಿ ಗ್ಲಿಸರಿನೊಫೇಟ್ಸ್ ಎಂಬ ಅಮೂಲ್ಯ ಪದಾರ್ಥಗಳನ್ನು ಹಾಕಿ ತಯಾರ್ಮಾಡಿದೆ. ಇದು ಬೇಗನೆ ಶರೀರಕ್ಕೆ ಸೇರಿ ಹೋಗುತ್ತೆ. ಆರೋಗ್ಯವನ್ನೂ ಚಟುವಟಿಕೆಯನ್ನೂ ಶಕ್ತಿಯನ್ನೂ ವೃದ್ಧಿಮಾಡುವುದು. ನರಗಳ ದುರ್ಬಲವನ್ನೂ ಹೋಗಲಾಡಿಸುವುದರಲ್ಲಿ ಇದು ಬಹಳ ಶ್ರೇಷ್ಠವಾದ ಔಷಧ. ಕ್ರಯ ಶೀಸೆಗೆ 2 ರೂಪಾಯಿ, ಮತ್ತು ರೂ. 1-2-0.

ರಕ್ತಶುದ್ಧಿಗೆ ಮಹೌಷಧ.—ಇದು ರಕ್ತವನ್ನೂ ದೇಹದ ಎಲ್ಲಾ ಭಾಗಗಳನ್ನೂ ಶುದ್ಧಿಮಾಡುತ್ತೆ. ಬಹಳ ಚೆನ್ನಾಗಿ ಗುಣಕಂಡ ಔಷಧ. ಕ್ರಯ ಶೀಸೆಗೆ 1 ರೂಪಾಯಿ.

ಲಿವರ್ ಸೊಲ್ಯೂಷನ್.—ಪಿತ್ತಕೋಶದ ಮೇಲೆ ಇದು ಬಹಳ ಚೆನ್ನಾಗಿ ಕೆಲಸಮಾಡೋಣದರಿಂದ ಮಲಬದ್ಧತೆಯುಳ್ಳವರಿಗೆ ಮಹೋಪಕಾರಿಯಾಗಿದೆ. ಜ್ವರಕ್ಕೂ ಇದನ್ನು ಕೊಡುತ್ತಾರೆ. ಇದು ಮನೆಯಲ್ಲಿ ಇದ್ದೇ ತೀರಬೇಕು. ಕ್ರಯ ಶೀಸೆಗೆ ರೂ. 1; ಮತ್ತು ರೂ. 0-10-0.

ಜ್ವರದ ಔಷಧ.—ವಿಷಮಶೀತಜ್ವರ, ಸಿಂತುಬರುವಜ್ವರ, ಅವಧಿಯಜ್ವರ, ಎಲ್ಲಾ ತರದ ಜ್ವರಗಳಿಗೂ ಇದು ಸಂಜೀವನವಾಗಿದೆ. ಇದು ಕ್ವೈನೈನ್‌ಗಿಂತ ಬಹಳ ಅಗ್ಗ. ಕ್ರಯ ಶೀಸೆಗೆ 10 ಆಣೆ ; 4 ಆಣೆ.

ಹುಳುಕಡ್ಡಿ ಔಷಧ.—ಹುಳುಕಡ್ಡಿಯನ್ನು ಖಂಡಿತವಾಗಿ ಗುಣಮಾಡುತ್ತೆ. ಕ್ರಯ ಶೀಸೆಗೆ 4 ಆಣೆ.

ಹಲ್ಲುಪುಡಿ.—ಈ ಪುಡಿಯಿಂದ ಹಲ್ಲು ಉಜ್ಜಿಕೊಂಡರೆ ಬಾಯಿಗೆ ಸುವಾಸನೆ ಕೊಡುತ್ತೆ. ಹಲ್ಲು ಸವೆದು ಕೆಡದಂತೆ ಬಹಳ ಚೆನ್ನಾಗಿಟ್ಟು ಕಾಪಾಡುತ್ತೆ. ಕ್ರಯ ಸೀಸೆಗೆ 4 ಆಣೆ ; 6 ಆಣೆ ; 1 ರೂಪಾಯಿ.

ಇಂಗ್ಲೀಷಿನಲ್ಲೇ ನಮಗೆ ಕಾಗದವನ್ನು ಬರೆಯಬೇಕು.

ಸೋಲ್ ಏಜಂಟರು :—ಎಸ್. ವೈದ್ಯ ಮತ್ತು ಕಂಪನಿ,

[156-10] ಪಾರ್ಕ್ ಟೌನ್, ಮದರಾಸ್.

ಮಲೇರಿಯಾ

ಮತ್ತು ಹವಾ ದೆಸೆಯಿಂದುಂಟಾಗುವ ಎಲ್ಲಾ ತರದ ಜ್ವರವೂ

ಈಸಾನೊಫೆಲೆ

ಯ ಸೇವನೆಯಿಂದ ಬೇಗನೆ ನಿವಾರಣೆಯಾಗುತ್ತೆ.

ಕ್ವೈನೈನ್ ಜ್ವರವನ್ನು ಅಣಗಿಸುವುದು ; ಆದರೆ ನಮ್ಮ ಈ ಸಾನೊಫೆಲೆಯು 15 ದಿನದಲ್ಲಿ ವಾಸಿಮಾಡುತ್ತದೆ. ಹಗಲು ರಾತ್ರಿ ಒಂದೊಂದು ಮಾತ್ರೆ ತೆಗೆದುಕೊಳ್ಳುತ್ತಾ ಬಂದರೆ ಜ್ವರ ಬಾರದಂತೆ ಸಂರಕ್ಷಣೆ ಮಾಡಬಲ್ಲದು.

ಜ್ವರವು ಸಂಪೂರ್ಣವಾಗಿ ವಾಸಿಯಾಗುವುದಕ್ಕೆ ಎರಡು ಬಾಟ್ಲಿ ಔಷಧ ಹದಿನೈದು ದಿನಕ್ಕೆ ಸಾಕು.

ಬಾಟ್ಲಿಗೆ ಕ್ರಯ 2 ರೂಪಾಯಿ.

ಬಿಕರಿಯಾಗುವ ಸ್ಥಳಗಳು.

1. ಫಾಸ್ಟರ್ ಕಂಪನಿ, ಕೆಮಿಸ್ಟ್ಸ್, ಬೆಂಗಳೂರು ;
2. ಬಿ. ಜಿ. ಗೋರಿಯೋ ಕಂಪನಿ, ವಾಲೆಸ್ ಬೀದಿ, ಬೊಂಬಾಯಿ ;

[172-6]

ಇದಲ್ಲದೆ

ಎಲ್ಲಾ ಔಷಧ ಮಾರಾಟದ ಷಾಪಿನಲ್ಲೂ ಸಿಕ್ಕುವುದು.

ಸ್ತ್ರೀಯರಿಗೆ ಬಹಳ ಅವಶ್ಯಕವಾದದ್ದು.

ನೂತನವಾಗಿದೆ. ಬೇಗ ನೋಡಿ. ಆಶ್ಚರ್ಯವಾಗಿದೆ.

ಮಹಂಕಾಳಿ ಭಸ್ಮ ಅಥವಾ ಆಶ್ಚರ್ಯವಾದ ರೋಮಹಾರಿ.

ನಮ್ಮ ಹಿಂದೂ ಸ್ತ್ರೀಯರು ಯೋಗ್ಯವಾದ ರೋಮನಾಶಕ ವಸ್ತುವನ್ನು ತಿಳಿಯದೆ ಬಹಳ ಹಣ ಖರ್ಚುಮಾಡುವರು; ನಾನಾ ಕಷ್ಟನಷ್ಟಗಳಿಗೆ ಗುರಿಯಾಗುತ್ತಾರೆ. ಅಂಥವರಿಗೆ ಈಗ ಒಳ್ಳೇ ಸಮಯ ಒದಗಿದೆ. ನಮ್ಮ ನಂಬಿಕೆಯಾದ ಭಸ್ಮವನ್ನು ಅನೇಕರು ಉಪಯೋಗಿಸಿ ಪ್ರಯೋಜನ ಹೊಂದಿದಾರೆ. ಒಂದಾವರ್ತಿ ಉಪಯೋಗಿಸಿದರೆ ಅದರ ಗುಣ ವೇದ್ಯವಾಗುತ್ತೆ

ಇದು ಹಚ್ಚಿದಾಗ ಉರಿಯಾಗುವುದಿಲ್ಲ ; ಚರ್ಮದ ಮೇಲೆ ಕಲೆ ನಿಲ್ಲುವುದೇ ಇಲ್ಲ. ಸ್ವಲ್ಪ ಭಸ್ಮವನ್ನು ಗಟ್ಟಿಯಾಗಿ ನೀರಿನಲ್ಲಿ ಕಲಿಸಿ ಬೇಕಾದ ಸ್ಥಳದಲ್ಲಿ ಹಚ್ಚಿ ಸ್ವಲ್ಪ ಹೊತ್ತಾದ ಮೇಲೆ ನೀರಿನಲ್ಲಿ ತೊಳೆದರೆ ಕೂದಲು ಚೊಕ್ಕಟವಾಗಿ ಹೋಗಿ ನಿಮಗೆ ಹರ್ಷವೂ ಆಶ್ಚರ್ಯವೂ ಉಂಟಾಗುತ್ತೆ. ಕತ್ತಿಗಿಂತ ಇದು ತುಂಬಾ ಅನುಕೂಲ. ಇದರ ಕ್ರಯ 1 ಬಾಟ್ಲಿಗೆ 8 ಆಣೆ. ತಂಜಾವೂರು ಅಡ್ಡಿಕೆ 5 ಆಣೆ. ಹಾರ್ಮೋನಿಯಂ ಬೋಧಿನಿ 6 ಆಣೆ ಇಲೆಕ್ಟ್ರಿ ಚಿನ್ನದ ಒಡ್ಯಾಣ ಗೆಜ್ಜೆ ಸಹ (ಚಿಕ್ಕವರಿಗೂ ದೊಡ್ಡವರಿಗೂ) ರೂ. 4-8-0. ಅಂಚೆ ಖರ್ಚು ಬೇರೆ.

[151-3] ವಿಳಾಸ—ಎಸ್. ನರಸಿಂಹನಾಯುಡು, ಟ್ರಿಪ್ಲಿಕೇನ್, ಮದರಾಸ್.

ದಸರಾ ಬಹುಮಾನ ! ನವರಾತ್ರಿ ಬಹುಮಾನ !

ದೊಡ್ಡವರೂ ಹುಡುಗರೂ ಅಲಂಕಾರ ಪೂರ್ವಕವಾಗಿ ಧರಿಸಬಹುದಾದ ಜಪಾನ್ ರೇಷ್ಮೆ ಜಾಲಿರ್ ಚೌಕವು.



2 ಮೊಳವಿರುವ ಚೌಕ ಒಂದಕ್ಕೆ ರೂ. 1-6-0. 1½ ಮೊಳವಿರುವ ಚೌಕ ಒಂದಕ್ಕೆ 15 ಆಣೆ. ಒಂದೇ ಸಲ ಎರಡು ಚೌಕಗಳನ್ನು ತರಿಸಿಕೊಳ್ಳುವವರಿಗೆ ಸ್ತ್ರೀಯರು ಕಂಠದಲ್ಲಿ ಧರಿಸಬಹುದಾದ ಗೆಜ್ಜೆ ಅಡ್ಡಿಗೆಯನ್ನು ಇನಾಮು ಕಳುಹಿಸಿಕೊಡುತ್ತೇವೆ. ಒಂದರಿಂದ ಎರಡರವರಿಗೂ ಪೋಸ್ಟೇಜು 3 ಆ. ಇದುವರೆಗೆ ಎಲ್ಲರೂ ಪಕ್ರಯಿಸಿದ ರೇಷ್ಮೆ ಪಂಚೆಗಳು ಇಷ್ಟು ಮೇಲಾದವುಗಳಲ್ಲ. ಈ ಚಿತ್ರದಲ್ಲಿ ಕಾಣುವಂತೆ ಚಿತ್ರವಿಚಿತ್ರವಾದ ಹೂಗಳಿಂದ ತಯಾರಿಸಿದ ಈ ನೂತನವಾದ ಮೇಲಾದ ಚೌಕಗಳು ಈಗತಾನೇ ನಾವು ತರಿಸಿರುತ್ತೇವೆ. ಪಂಚವರ್ಣಗಳಲ್ಲಿ ಬಳ್ಳಿಗಳೂ, ಹೂಗಳೂ, ಎಲೆಗಳೂ ಹಾಕಿ ಉತ್ತಮವಾದ ರೇಷ್ಮೆ ಅಂಚಿಟ್ಟು ತಯಾರಿಸಿ ನವರಾತ್ರಿ ಮಹೋತ್ಸವಕ್ಕಾಗಿ ತರಿಸಿರುತ್ತೇವೆ. ಸಾವಿರಾರು ವಿಕ್ರಯವಾಗುತ್ತಿವೆ. ಜಾಗ್ರತೆ ತರಿಸಿಕೊಳ್ಳಿ.

ಅಡ್ರೆಸ್—ಜಪಾನ್ ಸಿಲ್ಕ್ ವೇರ್‌ಹೌಸ್, 1-6 ವೆಂಕಟೇಶ ಮೇಸ್ತ್ರಿ ಬೀದಿ, ಸಾಹುಕಾರಪೇಟೆ, ಮದರಾಸು.

[109-19]

ತಾಲ್ಲೂಕು ವರ್ತಮಾನಗಳು.

ಹುಣಸೂರು ತಾ|| ಚಿಕ್ಕಾಡಿಗನಹಳ್ಳಿ.—ಈ ಗ್ರಾಮದವರು ಗ್ರಾಂಟ್ ಸ್ಕೂಲಿಗೆ ಅಪ್ಲಿಕೇಷನ್ ಹಾಕಿಯೂ ಸರ್ಕಾರದವರ ಅಪೇಕ್ಷೆಯಂತೆ ಕೆಲವು ಮೊಬಲಗು ಠೇವಣಿ ಇಟ್ಟರು. 5-6 ತಿಂಗಳು ಕಳೆದುಹೋಯಿತು. 3-4 ತಿಂಗಳಲ್ಲಿ ಸ್ಕೂಲಿಗೆ ಅಪೇಕ್ಷಿಸಿದ ಮುಳ್ಳೂರು ಗ್ರಾಮಕ್ಕೆ ಸ್ಕೂಲ್ ಮಾಸ್ಟರು ಬಂದು ಕೆಲಸಮಾಡುತ್ತಿದಾರೆ. ನಮ್ಮ ಸರ್ಕಲ್ ಇನ್‌ಸ್ಪೆಕ್ಟರು ಕೂಡ್ಲೆ ಇದಕ್ಕೆ ಗಮನ ಕೊಡುತ್ತಾರಾಗಿ ನಂಬಿದೇನೆ —ಇಲ್ಲಿಗೆ ಸಮೀಪದ ಜಾಟಗೆರೆಯಲ್ಲಿ ಕೆಲವು ದಿವಸದಿಂದ ಇಲಿ ಹೆಗ್ಗಣ ಸಾಯುತ್ತಾ ಇದ್ದು ಕೆಲವರಿಗೆ ಪ್ಲೇಗ್ ತಗಲಿ 6-7 ಮಂದಿ ಮೃತಪಟ್ಟರು. ಎಲ್ಲರೂ ಊರುಬಿಟ್ಟು ಗುಡಿಸಲಿಗೆ ಹೋಗಿರುತ್ತಾರೆ.—ಸ್ಪೆಷಲ್ ಶಿರಸ್ತೇದಾರರ ಆಫೀಸು ಉಂಡವಾಡಿಯಿಂದ ಇಲ್ಲಿಗೆ ವರ್ಗಾಯಿಸಲು ಹುಕ್ಕುಂ ಆಗಿರುವದಾಗಿ ಕೇಳುತ್ತೇನೆ.

ತಿಪ್ಪೂರು.—ಈಗ ಸೀಮೆಯಲ್ಲಿ ಒದಗಿರುವ ಯುದ್ಧ ವಿಚಾರದಲ್ಲಿ ನಮ್ಮ ಬ್ರಿಟಿಷ್ ಸಾರ್ವಭೌಮರವರಿಗೆ ಸರ್ವ ವಿಧದಲ್ಲೂ ಜಯಪ್ರದವಾಗುವಂತೆ ತಿಪ್ಪೂರು ಮುಸಲ್ಮಾನರೆಲ್ಲಾ ಸೇರಿ ಅಮೋಘವಾದ ರಂಜಾನ್ ಹಬ್ಬದ ದಿವಸ ದೇವರ ಸನ್ನಿಧಿಯಲ್ಲಿ ಏಕ ಚಿತ್ತದಿಂದ ಪ್ರಾರ್ಥಿಸಿದ ವಿಷಯವನ್ನು ಕುರಿತು ಸಿಂಲಾ ಮೊಕ್ಕಾಮಿನಲ್ಲಿರುವ ನಮ್ಮ ವೈಸ್ರಾಯ್ ಪ್ರಭುಗಳವರ ಸನ್ನಿಧಿಗೆ ತಿಪ್ಪೂರು ಮುಸಲ್ಮಾನ್ ಪ್ರಜೆಗಳ ಮುಖಂಡರಾದ ಸಾಹುಕಾರ್ ಮತ್ತು ಮ್ಯುನಿಸಿಪಲ್ ಮೆಂಬರ್ ಮ|| ಮಹಮ್ಮದ್ ದಸ್ತಗೀರ್ ಸಾಹೇಬರಿಂದ ತಂತಿ ವರ್ತಮಾನ ಕಳುಹಿಸಲಾಗಿತ್ತು. ಆದಕ್ಕೆ ವೈಸ್ರಾಯ್ ಪ್ರಭುಗಳವರು ತಿಪ್ಪೂರು ಮುಸಲ್ಮಾನ್ ಪ್ರಜೆಗಳ ರಾಜಭಕ್ತಿ ಮತ್ತು ವಿಶ್ವಾಸಕ್ಕಾಗಿ ಸಂತೋಷಿಸಿ ಸರ್ವರಿಗೂ ತಮ್ಮ ವಂದನೆಯನ್ನು ತಿಳುಹಿಸಬೇಕಾಗಿ ಸದರಿ ಸಾಹುಕಾರರಿಗೆ ತಂತಿಮೂಲಕ ಮರುತ್ತರವನ್ನು ದಯಪಾಲಿಸಿರುತ್ತಾರೆ.

ವೃತ್ತಾಂತಪತ್ರಿಕೆ ಏಜಂಟರಿಗೆ ಸೂಚನೆ.

ವೃತ್ತಾಂತ ಪತ್ರಿಕೆಯ 1914-15 ನೇ ವರುಷದ ಒಂದನೇ ಕ್ವಾರ್ಟರು ಕಳೆದ ಆಗಸ್ಟ್ ತಿಂಗಳಿಗೆ ಪೂರೈಸಿದೆ. ಏಜಂಟರುಗಳು ಆ ಕ್ವಾರ್ಟರಿನ ಲೆಕ್ಕಗಳನ್ನು ಖೈದುಮಾಡಿ, « ಬಿ » ಫಾರಂಗಳಿಗೆ ಎತ್ತಿ ಬರೆದು, ತಮ್ಮ ತಮ್ಮ ಸೂಪರಿಂಟೆಂಡೆಂಟರಿಗೆ ಒಂದು ಪ್ರತಿಯನ್ನೂ, ನಮಗೆ ಒಂದು ಪ್ರತಿಯನ್ನೂ ಈ ವಾರದಲ್ಲೇ ಜಾಗ್ರತೆಯಿಂದ ಕಳುಹಿಸಿಕೊಡಬೇಕಾಗಿ ಕೃತಪಡಿಸಿದೆ.

ನೀವು ಕೇಳಿದ ಹಾಗೆ ಪತ್ರಿಕೆಗಳನ್ನು ಹೆಚ್ಚಾಗಿ ಕಳುಹಿಸುತ್ತಾ ಬರುವೆವು. ಆದರೆ ಬಿಡಿ ಪತ್ರಿಕೆಗಳನ್ನು ಮಾರಲೇ ಕೂಡದು. ಮುಂದಿನ 1915 ನೇ ಏಪ್ರಿಲ್ ವರೆಗೆ ಅಡ್ವಾನ್ಸು ಕೊಟ್ಟು ಕ್ರಮವಾಗಿ ಚಂದಾದಾರರಾಗತಕ್ಕವರಿಗೆ ಮಾತ್ರ ಪತ್ರಿಕೆಗಳನ್ನು ತಪ್ಪಿಸದೆ ಕೊಡುತ್ತಾ ಬರಬೇಕೆಂದು ಕೋರುತ್ತೇನೆ.

ಮ್ಯಾನೇಜರ್, « ವೃತ್ತಾಂತ ಪತ್ರಿಕೆ, » ಮೈಸೂರು.

ವೃತ್ತಾಂತ ಪತ್ರಿಕೆ.

ಕ್ರಿ॥ ೧೯೧೪ ನೇ ಇಸವಿ ಸೆಪ್ಟಂಬರ್ ತಾ. ೧೭ನೇ ಗುರುವಾರ.

ಯುದ್ಧವು.

ಈಗ ಯೂರೋಪ್ ಖಂಡದಲ್ಲಿ ನಡೆಯುತ್ತಿರುವ ಯುದ್ಧದ ವಿಷಯದಲ್ಲಿ ನಮ್ಮ ದೇಶದ ಪ್ರಜೆಗಳೊಳಗೆ ನಾನಾ ಬಗೆಯ ಸುಳ್ಳು ಊಹೆಗಳೂ, ತರತರದ ವರ್ತಮಾನಗಳೂ ಹರಡಿಕೊಂಡಿರುವವು. ಯುದ್ಧಕ್ಕೋಸ್ಕರ ಮಾಡತಕ್ಕ ಸನ್ನಾಹಗಳಾಗಲಿ, ಯುದ್ಧಕಾರ್ಯಕ್ರಮಗಳಾಗಲಿ ಗೋಪ್ಯವಾಗಿ ಜರುಗದೆ ಹೋದರೆ ವಿಷಯಗಳು ನಮ್ಮ ಶತ್ರುಗಳಿಗೆ ತಿಳಿದು ನಮ್ಮ ಉದ್ದೇಶವೂ ಕಾರ್ಯಗಳೂ ನಿರರ್ಥಕವಾಗುತ್ತವೆ. ಯಥಾರ್ಥವಾದ ಸಮಾಚಾರಗಳು ಹಲವು ವೇಳೆ ಹೊರಪಡುವುದಿಲ್ಲ. ಪ್ರತಿ ಒಬ್ಬನೂ ವರ್ತಮಾನಗಳನ್ನು ತನಗೆ ತೋರಿಬರುವಂತೆ ಕ್ರೋಢೀಕರಿಸಿ ತನ್ನ ಇಷ್ಟಮಿತ್ರರಿಗೆ ಹೇಳುವನು; ಅವರು ತಾವು ಕೇಳಿದ್ದೇ ನಿಜವೆಂದು ನಂಬಿ ಅದನ್ನು ಇತರರಿಗೆ ತಿಳಿಸುತ್ತಾರೆ. ಎಲ್ಲಾ ಕಡೆಗಳಲ್ಲೂ ಹೀಗಾಗುವುದುಂಟು; ಆದರೆ ವಿದ್ಯೆಯಿಲ್ಲದ ಅನಾಗರಿಕರಲ್ಲಿ ಅನೇಕ ವೇಳೆ ಇವರಿಂದ ಅನಾವಶ್ಯಕವಾದ ಕಳವಳವೂ, ಹೆದರಿಕೆಯೂ, ಗಾಬರಿಯೂ ಉಂಟಾಗುವವು. ನಮ್ಮ ಹಿಂದುಸ್ಥಾನದಲ್ಲಿ ಅನೇಕಾನೇಕ ಪ್ರಜೆಗಳು ಯುದ್ಧವನ್ನು ಕಂಡರಿಯರು; ಅದು ನಡೆಯುವ ರೀತಿಯೂ ಅವರಿಗೆ ತಿಳಿಯದು. ಆದಕಾರಣ ನಾನಾ ಸುಳ್ಳು ಕಥೆಗಳು ಹರಡಿಕೊಳ್ಳುವುದೂ, ಅವುಗಳನ್ನೆಲ್ಲಾ ಜನರು ನಿಜವೆಂದು ನಂಬಿಕೊಳ್ಳುವುದೂ ಬಹಳ ವಾಡಿಕೆಯಾಗಿದೆ.

ಈ ಯುದ್ಧದಲ್ಲಿ ಶತ್ರುಗಳು ಹಿಂದುಸ್ಥಾನಕ್ಕೆ ಒಂದು ಮುತ್ತಿಗೆ ಹಾಕುವಹಾಗಿಲ್ಲ; ಈ ಭಾಗದಲ್ಲಿ ನಮ್ಮ ದೇಶವು ಸುರಕ್ಷಿತವಾಗಿದೆ. ಜರ್ಮನಿಯವರಾಗಲಿ ಇತರ ಯಾವ ಜನಾಂಗದವರೇ ಆಗಲಿ ನಮ್ಮ ದೇಶದ ಮೇಲೆ ದಂಡೆತ್ತಿ ಬರುತ್ತಾರೆಂದು ಪ್ರಜೆಗಳು ಸ್ವಲ್ಪ ಮಾತ್ರವೂ ಶಂಕೆಪಡಬೇಕಾದದ್ದಿಲ್ಲ. ನಾವು ಸುರಕ್ಷಿತರಾಗಿರೋಣದರಿಂದಲೇ ನಮ್ಮ ದೇಶದಿಂದ 70,000 ಸೈನ್ಯವನ್ನು ಯುದ್ಧಭೂಮಿಗೆ ಕಳುಹಿಸಿಕೊಟ್ಟಿದ್ದೇವೆ. ಒಂದುವೇಳೆ ಬ್ರಿಟಿಷ್ ಯುದ್ಧದ ಹಡಗುಗಳ ಪಹರೆಯನ್ನು ತಪ್ಪಿಸಿಕೊಂಡು ಜರ್ಮನಿಯವರ ಒಂದು ಜಹಜು ನಮ್ಮ ದೇಶಕ್ಕೆ ಬಂದರೂ ಅದರಿಂದ ಸಮುದ್ರತೀರದಲ್ಲಿ ಒಂದೆರಡು ಗುಂಡುಗಳು ಬೀಳಬಹುದು. ಆದರೆ ಹಿಂದುಸ್ಥಾನದ ಸುತ್ತಲೂ ಒಂದು ಸಾವಿರ ಮೈಲಿ ತನಕ ಜರ್ಮನಿಯವರ ಯುದ್ಧದ ಹಡಗು ಯಾವುದೂ ಇಂದಿರುವುದಿಲ್ಲ; ಇನ್ನು ಮುಂದೆ ಬರತಕ್ಕ ಸಂಭವವೂ ಇಲ್ಲ. ನಮ್ಮ ಜಹಜುಗಳು ಈಗ ಯಾವುದೊಂದು ಅಡಚಣೆಯೂ ಅಪಾಯವೂ ಇಲ್ಲದೆ ಗ್ರೇಟ್ ಬ್ರಿಟನ್ನಿಗೆ ಹೋಗಿ ಬರುತ್ತಲಿವೆ.

ಶತ್ರುಗಳಾದ ಜರ್ಮನಿಯವರ ವಿಮಾನ ಯಂತ್ರಗಳು ಅಂತರಿಕ್ಷದಲ್ಲಿ ಹಾರಿಕೊಂಡು ಹಿಂದುಸ್ಥಾನದ ಮೇಲೆ ಸಂಚಾರ ಮಾಡುತ್ತಿರುವವೆಂದೂ, ಅವು ಸಿಡಿಮದ್ದಿನ ಗುಂಡುಗಳನ್ನು ಆಕಾಶದಿಂದ ಇಳಿಸಿ ಬಿಡುವವೆಂದೂ ಜನಗಳು ನಾನಾ ಬಗೆಯಾಗಿ ಕಥೆಗಳನ್ನು ಹುಟ್ಟಿಸಿ ಹರಡುತ್ತಲೂ, ಈ ವಿಷಯವನ್ನು ಕುರಿತು ಚರ್ಚೆ ಮಾಡುತ್ತಲೂ ಬಂದಿದಾರೆ. ಈ ಭಾಗವು ಅಸಾಧ್ಯವಾದದ್ದೆಂದು ಜನರು ತಿಳಿದುಕೊಳ್ಳಬೇಕು. ಜರ್ಮನಿಯಿಂದ ಹಿಂದುಸ್ಥಾನಕ್ಕೆ ಬರುವ ತನಕ ಅಂತರಿಕ್ಷದಲ್ಲೇ ಸಂಚರಿಸತಕ್ಕ ವಿಮಾನ ಯಂತ್ರವನ್ನು ಇದುವರೆಗೆ ಪ್ರಪಂಚದಲ್ಲಿ ಯಾರೂ ರಚಿಸಿರುವುದಿಲ್ಲ. ಇದಲ್ಲದೆ ಅಷ್ಟು ದೂರ ಬರುವುದಕ್ಕೆ ವಿಮಾನಯಂತ್ರಕ್ಕೆ ಪೆಟ್ರೋಲ್ ಎಂಬ ದ್ರಾವಕವು ದಾರಿಯಲ್ಲೆಲ್ಲೂ ದೊರಕುವುದಿಲ್ಲ. ಹಿಂದುಸ್ಥಾನದಲ್ಲೇ ಇಂಡಿಯಾ ಗವರ್ನಮೆಂಟಿನವರು ಕೆಲವು ವಿಮಾನಯಂತ್ರಗಳನ್ನು ಇಟ್ಟುಕೊಂಡಿದಾರೆ. ಇವುಗಳ ಪೈಕಿ ಯಾವುದಾದರೂ ನಮ್ಮ ದೇಶದ ಮೇಲೆ ಸಂಚರಿಸುತ್ತಾ ಬಂದ ಪಕ್ಷದಲ್ಲಿ ಅದರಿಂದ ನಮಗೆ ಯಾವುದೊಂದು ಅಪಾಯವೂ ಸಂಭವಿಸುವುದಿಲ್ಲ. ಆದಕಾರಣ ನಮ್ಮ ದೇಶದಲ್ಲಿ ಯಾರಾದರೂ ವಿಮಾನಯಂತ್ರವನ್ನು ನೋಡಿದ ಪಕ್ಷದಲ್ಲಿ ಸಂತೋಷಪಡಬೇಕಲ್ಲದೆ ಅನುಮಾನ ಅಥವಾ ಗಾಬರಿ ಪಡಬೇಕಾದದ್ದಿಲ್ಲ. ಅದರಲ್ಲಿರುವವರು ನಮ್ಮ ಕ್ಷೇಮಚಿಂತಕರು; ಅವರು ನಮ್ಮ ಸಂರಕ್ಷಣೆಗಾಗಿ ಸಂಚರಿಸುತ್ತಾರಲ್ಲದೆ ಅವರಿಂದ ನಮಗೆ ಯಾವ ಕೇಡೂ ಸಂಭವಿಸುವುದಿಲ್ಲ.

ಜರ್ಮನಿ ರಾಜ್ಯವು ಸಾಮಾನ್ಯ ರಾಜ್ಯವಲ್ಲ; ಅದು ಬಹಳ ಪೌರುಷ ಬಲ ಪರಾಕ್ರಮಗಳನ್ನುಳ್ಳ ರಾಜ್ಯ. ಅದು ಇಂಗ್ಲೆಂಡಿಗಿಂತಲೂ ಹೆಚ್ಚುಹೆಚ್ಚಾಗಿ ಸೈನ್ಯಗಳನ್ನು ಕೂಡಿಸಿ ಕಳುಹಿಸಬಲ್ಲುದು. ಯಾಕೆಂದರೆ ಜರ್ಮನಿಯಲ್ಲಿ ಗಂಡಸರೆಲ್ಲಾ ಕೆಲವು ವರುಷಗಳ ತನಕ ಸೈನ್ಯಕ್ಕೆ ಸೇರಿಕೊಂಡು ತರಪೇತಾಗಲೇಬೇಕೆಂಬ ಬಲಾತ್ಕಾರವಾದ ವಿಧಿಯುಂಟು. ಇಂಗ್ಲೆಂಡಿನಲ್ಲಿ ಹಾಗಿಲ್ಲ; ಇಷ್ಟಪಟ್ಟು ಬರತಕ್ಕ ಪ್ರಜೆಗಳನ್ನು ಮಾತ್ರ ಸೈನ್ಯಕ್ಕೆ ಸೇರಿಸಿಕೊಂಡು ತರಪೇತು ಮಾಡುತ್ತಾರೆ. ಈಗಲಾದರೋ ಯುದ್ಧ ಪ್ರಾಪ್ತವಾಗಿರುವ ಸುದ್ದಿಯನ್ನು ಕೇಳಿ ಇಂಗ್ಲೆಂಡಿನಲ್ಲಿ ಪ್ರಜೆಗಳು ತಮ್ಮ ಉದ್ಯೋಗಾದಿಗಳನ್ನು ತೊರೆದು ರಾಜ್ಯಸಂರಕ್ಷಣೆಗೋಸ್ಕರ ತಾವಾಗಿಯೇ ಸಾವಿರಗಟ್ಟಲೆ ಬಂದು ಸೈನ್ಯಕ್ಕೆ ಸೇರುತ್ತಿರುವರು. ಈಗಾಗಲೇ 50 ಲಕ್ಷ ಜನರು ಹೀಗೆ ಬಂದು ಸೇರಿಕೊಂಡರು. ಈಗ ಇರತಕ್ಕ ಸೈನಿಕರೊಡನೆ 150 ಲಕ್ಷ ಸೈನ್ಯವಾಗಿದೆ. ಜರ್ಮನಿಯವರು ಇಂಗ್ಲೆಂಡಿನ ಮೇಲೆ ನುಗ್ಗಿ ಬಂದರೆ ಅವರನ್ನು ಸೋಲಿಸಿ ಓಡಿಸಿಬಿಡುವುದಕ್ಕೆ ಈ ಸೈನ್ಯವೇ ಸಾಕಾಗಿದೆ. ಆದರೆ ಜರ್ಮನಿಯವರು ತಮ್ಮ ಸೈನ್ಯವನ್ನು ಸಮುದ್ರವನ್ನು ದಾಟಿಸಿ ಕರೆತರಲಾರರು. ಸಮುದ್ರದಲ್ಲಿ ನಮ್ಮ ಯುದ್ಧದ ಜಹಜುಗಳು ಬಲವಾಗಿರುತ್ತವೆ. ನಮ್ಮ ಜಹಜುಗಳು ಪ್ರಪಂಚದ ಸಮುದ್ರಗಳ ಮೇಲೆ ಸಂಚಾರಮಾಡಿ ಜರ್ಮನಿಯವರ ಜಹಜುಗಳನ್ನೂ ಹಡಗುಗಳನ್ನೂ ನಾಶಪಡಿಸಿಬಿಟ್ಟಿರುವವು. ಶತ್ರುಗಳ ಜಹಜುಗಳು ನಮ್ಮ ಜಹಜುಗಳ ಕೈವಶವಾಗಿವೆ; ಇಲ್ಲವೇ ಅವು ತಪ್ಪಿಸಿಕೊಂಡುಹೋಗಿ ಪರರಾಜ್ಯಗಳ ರೇವುಗಳಲ್ಲಿ ನಿಂತುಬಿಟ್ಟಿವೆ. ಹಡಗುಗಳಿಲ್ಲದೆಹೋದರೆ ಜರ್ಮನಿಯು ತನ್ನ ಸೈನ್ಯಗಳನ್ನು ಇತರ ದೇಶಗಳಿಗೆ ಕಳುಹಿಸಲಾರದು. ಜರ್ಮನಿಗೆ ಹೊಸ ಹಡಗುಗಳೂ ಇಲ್ಲ. ಜರ್ಮನಿಯ ಸೈನಿಕರೆಲ್ಲಾ ಈಗ ಯೂರೋಪ್ ಖಂಡದಲ್ಲೇ ನಾಲ್ಕಾರು ಕಡೆಗಳಲ್ಲಿ ಶತ್ರುಗಳನ್ನು ಎದುರಿಸಿ ಬಹಳ ಘೋರವಾಗಿ ಯುದ್ಧಮಾಡುತ್ತಿರುವರು.

ಹಿಂದುಸ್ಥಾನದಲ್ಲಿರುವ ಯಾವನೊಬ್ಬ ಪ್ರಜೆಯೂ ಗಾಬರಿಪಡಲು ಸ್ವಲ್ಪವೂ ಕಾರಣವಿಲ್ಲ. ಪ್ರತಿ ಒಬ್ಬರೂ ತಮ್ಮ ನಿತ್ಯದ ಕೆಲಸಕಾರ್ಯಗಳನ್ನು ಸಂತೋಷದಿಂದ ನಡಿಸಿಕೊಳ್ಳುತ್ತಾ ಬರಬೇಕು. ಸದ್ಯದಲ್ಲಿ ಯುದ್ಧಕ್ಕೆ ಹೋಗಿರುವ ಇಂಗ್ಲಿಷ್ ಸಿಪಾಯಿಗಳಿಗೆ ಜಯಪ್ರದವುಂಟಾಗಲೆಂದು ಪ್ರಾರ್ಥನೆಮಾಡುತ್ತಾ, ನಮ್ಮ ಸಿಪಾಯಿಗಳ ಸಂಸಾರಗಳನ್ನು ಸಂರಕ್ಷಣೆಮಾಡುವ ಫಂಡಿಗೆ ನಮ್ಮ ಕೈಲಾಗುವ ಮಟ್ಟಿಗೂ ದ್ರವ್ಯಸಹಾಯ ಮಾಡುತ್ತಾ, ಈ ಘೋರ ಯುದ್ಧವು ಮುಗಿದು ನೆಮ್ಮದಿಯೂ ಸಮಾಧಾನವೂ ಉಂಟಾಗುವ ಕಾಲವನ್ನು ದೃಢಮನಸ್ಸಿನಿಂದಲೂ ಸಂತೋಷವಾಗಿಯೂ ಎದುರುನೋಡುತ್ತಾ ಬರುವುದೇ ನಮ್ಮ ಕರ್ತವ್ಯವಾಗಿದೆ. ಆ ಕಾಲವು ಬೇಗ ಬರುವಂತಾಗಲೆಂದು ಹಾರೈಸುತ್ತೇವೆ.

ದೇವಭಕ್ತನು ಯುದ್ಧಮಾಡಬೇಕೇ?

ಯುದ್ಧವು ಮಹಾ ಭಯಂಕರವಾದುದು. ಮನುಷ್ಯರು ಆಯುಧಪಾಣಿಗಳಾಗಿ ಫಿರಂಗಿಗಳನ್ನೂ ಪಿಸ್ತೋಲುಗಳನ್ನೂ ಸಿಡಿಮದ್ದಿನ ಗುಂಡುಗಳನ್ನೂ ತೆಗೆದುಕೊಂಡು ಒಬ್ಬರನ್ನೊಬ್ಬರು ಸಂಹರಿಸುವುದಕ್ಕೆ ತಮ್ಮ ಕೈಲಾಗುವ ಸರ್ವಪ್ರಯತ್ನಗಳನ್ನೂ ಮಾಡುವುದು ಎಷ್ಟು ಭೀಕರವಾದುದು. ಸಾವಿರಾರು ಮಂದಿ ಯುದ್ಧಭಟರು ಅಕಾಲಮರಣವನ್ನು ಹೊಂದಿ ತಾವು ನಡಿಸುವ ಧರ್ಮಾಧರ್ಮಗಳಿಗೆ ಲೆಕ್ಕ ಒಪ್ಪಿಸುವುದಕ್ಕಾಗಿ ದೇವರ ಮುಂದೆ ನಿಲ್ಲಬೇಕಾಗಿದೆ. ಸಾವಿರಾರು ಮಂದಿ ಸ್ತ್ರೀಯರೂ ಮಕ್ಕಳೂ ತಾವು ಕಳೆದುಕೊಂಡ ತಮ್ಮ ಗಂಡಂದಿರನ್ನೂ ತಂದೆಗಳನ್ನೂ ನೆನಪಿಗೆ ತಂದುಕೊಂಡು ದುಃಖಸಾಗರದಲ್ಲಿ ಮುಳುಗಿ ಹೋಗಬೇಕಾಗಿದೆ. ಯುದ್ಧ ನಡೆಯುವ ಪ್ರದೇಶವೆಲ್ಲಾ ಹಾಳಾಗಿರುತ್ತದೆ. ಜನಗಳು ತಮ್ಮ ಮನೆಮಠಗಳನ್ನೆಲ್ಲಾ ಬಿಟ್ಟು ಪ್ರಾಣಭೀತಿಯಿಂದ ಓಡಿಹೋಗಬೇಕಾಗಿದೆ. ಇದರಿಂದುಂಟಾಗುವ ಕಷ್ಟನಷ್ಟಗಳು ಅಪಾರವಾಗಿರುತ್ತವೆ. ದೇವರನ್ನು ಪ್ರೀತಿಸಿ, ಆತನ ಸೇವೆಯನ್ನು ಮಾಡುವಂಥ ಭಕ್ತನು ಇಷ್ಟು ಭೀಕರವೂ ನಾಶಕರವೂ ಆಗಿರುವ ಯುದ್ಧದಲ್ಲಿ ಭಾಗಿಯಾಗಬಹುದೇ?

ಈ ಪ್ರಶ್ನೆಗೆ ನಾವು ಉತ್ತರ ಕೊಡಬೇಕಾದರೆ, ಯುದ್ಧದ ಉದ್ದೇಶವೇನು? ಒಂದು ಜನಾಂಗವು ಯಾವ ಗುಣಗಳನ್ನಿಟ್ಟುಕೊಂಡು ಯುದ್ಧಕ್ಕೆ ಕೈಹಾಕುತ್ತದೆ? ಎಂಬೀ ಪ್ರಶ್ನೆಗಳನ್ನು ಕೇಳಬೇಕಾಗುತ್ತದೆ. ಏಕೆಂದರೆ ಕೆಲವು ಯುದ್ಧಗಳಲ್ಲಿ ಭಾಗಿಯಾಗುವುದು ತುಂಬಾ ಕೆಟ್ಟದಾಗಿಯೂ ಬೇರೆ ಕೆಲವು ಯುದ್ಧಗಳಲ್ಲಿ ಭಾಗಿಯಾಗುವುದು ತುಂಬಾ ಗೌರವವಾಗಿಯೂ ದೇವಭಕ್ತರು ಮಾಡತಕ್ಕದ್ದಾಗಿಯೂ ಇರುತ್ತದೆ.

ಜನಾಂಗಗಳಲ್ಲಿ ಪರಸ್ಪರ ದ್ವೇಷವು ಹುಟ್ಟಿ ಸಾಧು, ದಾನ, ಭೇದಗಳೆಂಬ ಉಪಾಯಗಳಿಂದ ಅದನ್ನು ಬಗೆಹರಿಸಿಕೊಳ್ಳುವುದು ಅಸಾಧ್ಯವಾದಲ್ಲಿ ದಂಡೋಪಾಯವನ್ನು ಕೈಕೊಳ್ಳುವರು. ಇದಕ್ಕೆ ಸಾಧಾರಣವಾಗಿ ಯುದ್ಧವೆಂದು ಹೇಳುವುದುಂಟು. ಯುದ್ಧವೆಂದರೆ ಎದುರಾಳಿಯವನನ್ನು ಬಲವಂತದಿಂದ ತನಗೆ ವಿಧೇಯನನ್ನಾಗ ಮಾಡಿಕೊಳ್ಳುವುದಕ್ಕೆ ಶಕ್ತಿಯನ್ನು ಪ್ರಯೋಗಿಸುವುದು. ಶಕ್ತಿಯು ಲೋಕದ ಎಲ್ಲಾ ಕಡೆಗಳಲ್ಲಿಯೂ ಇರುತ್ತದೆ. ಮನುಷ್ಯನು ತನ್ನ ಕೆಲಸ, ಆಟ ಇವೇ ಮುಂತಾದ ಕಾರ್ಯಗಳಲ್ಲಿ ಉಪಯೋಗಿಸುವುದಕ್ಕಾಗಿ ಸರ್ವಶಕ್ತನಾದ ದೇವರು ಅವನಿಗೆ ಶಕ್ತಿಯನ್ನು ದಯಪಾಲಿಸಿರುತ್ತಾನೆ. ಒಳ್ಳೆಯ ಉದ್ದೇಶಕ್ಕಾಗಿ ಅದನ್ನು ಉಪಯೋಗಿಸಿದರೆ, ಅದನ್ನು ಉಪಯೋಗಿಸುವುದು ನ್ಯಾಯವಾಗಿಯೇ ಇರುವುದು. ಕೆಟ್ಟ ಉದ್ದೇಶಕ್ಕಾಗಿ ಅದನ್ನು ಉಪಯೋಗಿಸಿದರೆ, ಹಾಗೆ ಉಪಯೋಗಿಸುವುದು ಕೆಟ್ಟದಾಗಿಯೇ ಇರುವುದು. ಇದಕ್ಕೆ ದೃಷ್ಟಾಂತವನ್ನು ಹೇಳಬಹುದು.

ಒಂದು ಕುಟುಂಬದಲ್ಲಿ ತಂದೆ, ತಾಯಿ, ಮಕ್ಕಳು ಇದ್ದಾರೆ. ಮಕ್ಕಳು ವಿಧೇಯರಾಗಿಯೂ, ಸತ್ಯಸಂಧರಾಗಿಯೂ, ದಯಾಳುಗಳಾಗಿಯೂ ಬೆಳೆಯುವಂತೆ ಮಾಡುವುದು ಆತ್ಯಾವಶ್ಯಕ. ತಂದೆತಾಯಿಗಳು ತಮ್ಮ ಬೋಧನೆಯಿಂದಲೂ ಸಾಧನೆಯಿಂದಲೂ ತಮ್ಮ ಮಕ್ಕಳನ್ನು ಹೀಗೆ ಶಿಕ್ಷಿತರನ್ನಾಗ ಮಾಡುವುದಕ್ಕೆ ಪ್ರಯತ್ನಪಡುತ್ತಾರೆ. ಹೀಗಿದ್ದರೂ ಮಕ್ಕಳು ಕೆಲವು ಸಮಯಗಳಲ್ಲಿ ಅವಿಧೇಯರಾಗುವುದುಂಟು. ಅಂಥ ಸಮಯಗಳಲ್ಲಿ ತಂದೆತಾಯಿಗಳು ತಮ್ಮ ಮಕ್ಕಳನ್ನು ಬಲವಂತದಿಂದ ವಿಧೇಯರನ್ನಾಗ ಮಾಡುವುದಕ್ಕಾಗಿ ತಮ್ಮ ಶಕ್ತಿಯನ್ನು ಪ್ರಯೋಗಿಸಬೇಕಾಗುವುದು. ಹೆತ್ತ ಮಕ್ಕಳನ್ನು ದಂಡಿಸುವುದರಿಂದ ಪ್ರೀತಿಯುಳ್ಳ ತಂದೆತಾಯಿಗಳಿಗೆ ಎಷ್ಟೋ ಮನೋವ್ಯಥೆಯಾಗುತ್ತದೆ. ಆದರೂ ಮಕ್ಕಳು ವಿಧೇಯರಾಗಿಯೂ ಗುಣಸಂಪನ್ನರಾಗಿಯೂ ಬೆಳೆಯಬೇಕಾದರೆ ಶಿಕ್ಷೆಯು ಅವಶ್ಯಕವು. ದೇವಭಕ್ತರಾದ ತಂದೆತಾಯಿಗಳು ತಮ್ಮ ಶಕ್ತಿಯನ್ನು ತಮ್ಮ ಮಕ್ಕಳ ಮೇಲೆ ಕೆಲವು ಸಮಯಗಳಲ್ಲಿ ಪ್ರಯೋಗಿಸಲೇ ಬೇಕಾಗುವುದು. ಅವರು ಹಾಗೆ ಮಾಡುವುದು ನ್ಯಾಯವಾಗಿಯೇ ಇರುವುದು. ತಾವು ವಿವೇಕದಿಂದ ತಮ್ಮ ಶಕ್ತಿಯನ್ನು ಪ್ರಯೋಗಿಸುವಂತೆ ತಮಗೆ ಸಹಾಯಮಾಡಬೇಕೆಂದು ಅವರು ದೇವರಿಗೆ ಯಾವಾಗಲೂ ಪ್ರಾರ್ಥನೆಮಾಡುತ್ತಾ ಬರುವರು.

ಇದೇ ರೀತಿಯಲ್ಲಿ ಒಂದು ಪಾಠಶಾಲೆಯ ಉಪಾಧ್ಯಾಯನು ಒಂದು ಶಿಕ್ಷಾಕ್ರಮವನ್ನೇರ್ಪಡಿಸಿ ತನ್ನ ವಶಕ್ಕೆ ಒಪ್ಪಿಸಲ್ಪಟ್ಟಿರುವ ವಿದ್ಯಾರ್ಥಿಗಳು ವಿಧೇಯರಾಗಿಯೂ ಸತ್ಯಸಂಧರಾಗಿಯೂ ಬೆಳೆಯುವಂತೆ ಬೋಧಿಸುತ್ತಾ ಬರಬೇಕು. ಉಪಾಧ್ಯಾಯನು ದೇವಭಕ್ತನಾಗಿದ್ದರೆ, ತನ್ನ ವಿದ್ಯಾರ್ಥಿಗಳನ್ನು ಪ್ರೀತಿಯಿಂದಲೇ ಸನ್ಮಾರ್ಗಕ್ಕೆ ತರುವುದಕ್ಕೆ ತನ್ನ ಕೈಲಾಗುವ ಮಟ್ಟಿಗೆ ಪ್ರಯತ್ನಪಡುವನು. ಆದರೆ ಕೆಲವು ಸಂದರ್ಭಗಳಲ್ಲಿ ಹುಡುಗರು ಪ್ರೀತಿ, ದಯೆ ಇವುಗಳಿಗೆ ಮಣಿಯುವುದಿಲ್ಲ. ಅಂಥವರನ್ನು ಉಪಾಧ್ಯಾಯನು ಶಿಕ್ಷಿಸಲೇ ಬೇಕಾಗುವುದು. ಇದಕ್ಕೆ ಅವನು ತನ್ನ ಶಕ್ತಿಯನ್ನು ಪ್ರಯೋಗಿಸಬೇಕು. ದೇವಭಕ್ತನಾದ ಉಪಾಧ್ಯಾಯನಿಗೆ ಹೀಗೆ ಮಾಡುವುದು ಕೇವಲ ಅನಿಷ್ಟವಾಗಿರುವುದು. ಆದರೆ ಅವನು ಪಾಠಶಾಲೆಯ ಮತ್ತು ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗಾಗಿ ಅವರನ್ನು ವಿಧೇಯರನ್ನಾಗ ಮಾಡಲೇ ಬೇಕಾಗುವುದು. ಹೀಗೆ ಮಾಡಬೇಕಾದರೆ ಕೆಲವು ಸಮಯಗಳಲ್ಲಿ ತನ್ನ ಶಕ್ತಿಯನ್ನು ಪ್ರಯೋಗಮಾಡುವುದೇ ಹೊರತು ಬೇರೆ ಮಾರ್ಗವು ಇರುವುದಿಲ್ಲ. ತನ್ನ ಶಕ್ತಿಯನ್ನು ವಿವೇಕದಿಂದ ಪ್ರಯೋಗಿಸುವಂತೆ ತನಗೆ ಸಹಾಯಮಾಡಬೇಕೆಂದು ಅವನು ಯಾವಾಗಲೂ ದೇವರಿಗೆ ಪ್ರಾರ್ಥನೆಮಾಡುತ್ತಿರುವನು.

ಒಂದು ದೇಶದಲ್ಲಿ ಸರಕಾರದವರು ತಮ್ಮ ಪ್ರಜೆಗಳನ್ನೂ ಅವರ ಆಸ್ತಿಪಾಸ್ತಿಗಳನ್ನೂ ಸಂರಕ್ಷಿಸಬೇಕಾಗಿರುತ್ತದೆ. ದೇಶದ ಕಟ್ಟಳೆ ಕಾನೂನುಗಳನ್ನು ಅತಿಕ್ರಮಿಸಿ ನಡೆಯುವವರು ಎಲ್ಲಾ ದೇಶಗಳಲ್ಲಿಯೂ ಇದ್ದೇ ಇರುತ್ತಾರೆ. ಇವರು ಕಳ್ಳತನ, ದರೋಡೆ ಮುಂತಾದ ಅನೇಕ ದುಷ್ಕಾರ್ಯಗಳಲ್ಲಿ ಪ್ರವರ್ತಿಸುವರು. ಇವುಗಳನ್ನು ನಿಲ್ಲಿಸಬೇಕಾದರೆ ಸರಕಾರದವರು ತಮ್ಮ ಶಕ್ತಿಯನ್ನು ಪ್ರಯೋಗಿಸಬೇಕು. ಸರಕಾರದವರು ದಯಾಳುಗಳಾಗಿರಬಹುದು. ಆದರೂ ಅವರು ತಮ್ಮ ಪ್ರಜೆಗಳನ್ನು ಸಂರಕ್ಷಿಸಿ ನೀತಿಯನ್ನು ನೆಲೆಗೊಳಿಸಬೇಕಾಗಿರುತ್ತೆ. ಆದಕಾರಣ ಕೆಟ್ಟದನ್ನು ಬಿಟ್ಟು ಒಳ್ಳೆಯದನ್ನು ಮಾಡುವುದಕ್ಕೆ ಜನರನ್ನು ಬಲವಂತಪಡಿಸುವುದಕ್ಕಾಗಿ ಪೋಲೀಸಿನವರು, ನ್ಯಾಯಾಧಿಪತಿಗಳು, ಬಂದೀಖಾನೆಗಳು, ಪಹರೆಯವರು, ಇವೇ ಮುಂತಾದ ಸಾಧನಗಳನ್ನು ಪ್ರಯೋಗಿಸುತ್ತಿರುವರು. ಜನಗಳ ನೆಮ್ಮದಿಯನ್ನು ಕಾಪಾಡುವ ಭಾಗದಲ್ಲಿ ದೇವಭಕ್ತರು ಸರಕಾರದವರಿಗೆ ಸಹಕಾರಿಗಳಾಗಿರತಕ್ಕದ್ದು. ಈ ದೇವಭಕ್ತರು ಪೋಲೀಸಿನವರಾಗಿಯೂ ಬಂದೀಖಾನೆಯ ಪಹರೆಯವರಾಗಿಯೂ ನ್ಯಾಯಾಧಿಪತಿಗಳಾಗಿಯೂ ಇರಬಹುದು. ಇವರು ಎಷ್ಟು ದೇವಭಕ್ತರಾಗಿಯೂ ಉತ್ತಮರಾಗಿಯೂ ಇರುತ್ತಾರೋ ಅಷ್ಟು ಹೆಚ್ಚಾಗಿ ಅವರು ತಮ್ಮ ಶಕ್ತಿಯನ್ನು ನ್ಯಾಯವಾಗಿಯೂ ಪ್ರಜಾಕ್ಷೇಮಕ್ಕಾಗಿಯೂ ಉಪಯೋಗಿಸುವರೆಂದು ನಂಬುವುದಕ್ಕೆ ಅವಕಾಶವಿರುವುದು. ನಮ್ಮ ಸರಕಾರದವರೂ ನ್ಯಾಯಾಧಿಪತಿಗಳೂ ಪೋಲೀಸಿನವರೂ ಪಹರೆಯವರೂ ತಮ್ಮ ತಮ್ಮ ಶಕ್ತಿಯನ್ನು ಜನಗಳ ಕ್ಷೇಮಕ್ಕಾಗಿ ಪ್ರಯೋಗಿಸುವಂತೆ ನಾವೆಲ್ಲರೂ ಪ್ರಾರ್ಥನೆ ಮಾಡಬೇಕಾಗಿದೆ.

ಒಂದು ಜನಾಂಗವು ಮತ್ತೊಂದು ಜನಾಂಗವನ್ನು ನೆಮ್ಮದಿಯಾಗಿರುವುದಕ್ಕೆ ಬಿಡದೆ, ಅದರ ದೇಶದಲ್ಲಿ ಒಂದು ಭಾಗವನ್ನು ಕಿತ್ತುಕೊಳ್ಳಬೇಕೆಂಬ ಪ್ರಯತ್ನದಿಂದ ತೊಂದರೆಯನ್ನೂ ಜಗಳವನ್ನೂ ಮಾಡುತ್ತಾ ಇದ್ದರೆ, ಅಂಥ ಜನಾಂಗದ ಹಾವಳಿಯನ್ನು ಇತರ ಜನಾಂಗಗಳು ತಡೆದು ನಿಲ್ಲಿಸುವುದು ಆವಶ್ಯಕವಾಗಿರುತ್ತದೆ. ಒಂದು ಜನಾಂಗವು ನೀತಿಯನ್ನೂ ನ್ಯಾಯವನ್ನೂ ಸತ್ಯತೆಯನ್ನೂ ಅತಿಕ್ರಮಿಸಿ ನಡೆಯುತ್ತಾ ಬಂದರೆ, ಸಮಾಧಾನವಾಗಿ ಜೀವಿಸುವಂತೆ ಅದನ್ನು ಬಲಾತ್ಕರಿಸುವುದಕ್ಕಾಗಿ ಇತರ ಜನಾಂಗಗಳು ತಮ್ಮ ಶಕ್ತಿಯನ್ನು ಅದರ ಮೇಲೆ ಪ್ರಯೋಗಿಸಬೇಕಾಗುವುದು. ಇಂಥ ಶಕ್ತಿಯ ಪ್ರಯೋಗಕ್ಕೆ ಯುದ್ಧವೆಂಬ ಹೆಸರು. ದೇವಭಕ್ತನು ನೀತಿಯನ್ನೂ ನ್ಯಾಯವನ್ನೂ ಸಮಾಧಾನವನ್ನೂ ಕಾಪಾಡುವುದಕ್ಕೆ ಸಹಕಾರಿಯಾಗಿರಬೇಕು. ಇವುಗಳನ್ನು ಕಾಪಾಡುವುದಕ್ಕೆ ಶಕ್ತಿಯನ್ನು ಪ್ರಯೋಗಿಸುವುದೇ ಹೊರತು ಬೇರೆ ಉಪಾಯವು ಇಲ್ಲದ ಪಕ್ಷದಲ್ಲಿ ದೇವಭಕ್ತನು ತನ್ನ ಶಕ್ತಿಯನ್ನು ಪ್ರಯೋಗಿಸಲೇ ಬೇಕಾಗುವುದು. ಈ ಶಕ್ತಿಗೆ ಯುದ್ಧವೆಂಬ ಹೆಸರಿದ್ದರೆ, ದೇವಭಕ್ತನು ಯುದ್ಧಮಾಡಲೇ ಬೇಕು. ಮತ್ತು ತಾನು ಚೆನ್ನಾಗಿ ಯುದ್ಧಮಾಡಿ ನೀತಿಗೂ ಸತ್ಯಕ್ಕೂ ಜಯವನ್ನುಂಟುಮಾಡುವಂತೆ ತನ್ನ ಕೈಯನ್ನು ಬಲಪಡಿಸಬೇಕೆಂದು ಅವನು ದೇವರಿಗೆ ಪ್ರಾರ್ಥನೆಮಾಡಬೇಕು. ದೇವರ ಆಶೀರ್ವಾದಗಳನ್ನು ಮಾನವರಿಗೆ ದೊರಕಿಸಿಕೊಡುವುದಕ್ಕೆ ಯಾವ ಯುದ್ಧವು ನಡೆಯುತ್ತಿರುವುದೋ ಅಂಥ ಯುದ್ಧದಲ್ಲಿ ದೇವಭಕ್ತನು ಭಾಗಿಯಾಗಬಹುದು. ಮತ್ತು ಅವನು ನಿರ್ಮಲ ಚಿತ್ತದಿಂದಲೂ ದೇವರು ತನಗೆ ಜಯವನ್ನು ಕೊಡುತ್ತಾನೆಂಬ ದೃಢನಂಬಿಕೆಯಿಂದಲೂ ಯುದ್ಧಮಾಡ ಶಕ್ತನಾಗಿರುತ್ತಾನೆ. ಇಂಥವನು ಒಂದು ವೇಳೆ ಯುದ್ಧದಲ್ಲಿ ಮಡಿದು ಹೋಗಬಹುದು. ಆದರೆ ಸೋಮಾರಿಯಾಗಿ ಪಾಪ ದುಷ್ಟತ್ವವು ಹೆಚ್ಚುತ್ತಿರುವುದನ್ನು ನೋಡುವುದಕ್ಕಿಂತ ನೀತಿಯ ಪಕ್ಷವನ್ನು ಹಿಡಿದು ಯುದ್ಧಮಾಡಿ ಸಾಯುವುದೇ ಉತ್ತಮ.

ಯುದ್ಧದ ಸಮಾಚಾರಗಳು.

ದೊಡ್ಡ ವಿಜಯಗಳು.

ಜರ್ಮನಿಯವರ ಸೋಲು.

ರಷ್ಯಾದವರ ದೊಡ್ಡ ಜಯಪ್ರದ.

ಯುದ್ಧ ವಿಚಾರವಾಗಿ ಬಂದ ತಂತೀ ವರ್ತಮಾನಗಳು ಸ್ಪಷ್ಟವಾಗಿಯೂ, ತೃಪ್ತಿಕರವಾಗಿಯೂ ಇಲ್ಲವೆಂದು ಕಳೆದ ವಾರ ತಿಳಿಸಿದೆವು. ಈ ವಾರ ಬಂದಿರುವ ಸಮಾಚಾರಗಳು ಚೆನ್ನಾಗಿ ಅರ್ಥವಾಗುತ್ತವೆ. ಫ್ರಾನ್ಸಿನ ಪಶ್ಚಿಮ ಭಾಗದಲ್ಲಿ ನಡೆದ ಭಯಂಕರವಾದ ಕಡಿದಾಟದಲ್ಲೂ, ಪೂರ್ವ ದಿಕ್ಕಿನಲ್ಲಿ ಆಸ್ಟ್ರಿಯಾ ಮತ್ತು ರಷ್ಯಾಗಳಲ್ಲಿ ನಡೆದ ಘೋರವಾದ ಕದನಗಳಲ್ಲೂ ಫಲಿತಾಂಶಗಳು ಅತ್ಯಂತ ಹರ್ಷವನ್ನುಂಟುಮಾಡುತ್ತವೆ. ಭಾರೀ ಯುದ್ಧಗಳು ನಡೆದು ಜಯಪ್ರದವಾಗಿದೆ; ಆದರೂ ಅಂತ್ಯವು ಇನ್ನೂ ಕಾಣಲೊಲ್ಲದು.

ಫ್ರಾನ್ಸಿನಲ್ಲಿ.

ಫ್ರಾನ್ಸಿನಲ್ಲಿ ನಡೆದಿರುವ ವಿದ್ಯಮಾನಗಳನ್ನು ಪರಿಷ್ಕಾರವಾಗಿ ತಿಳಿದುಕೊಳ್ಳುವುದಕ್ಕೆ, ಹಿಂದೆ ನಡೆದ ಕದನಗಳನ್ನು ಸಂಕ್ಷೇಪವಾಗಿ ವಿವರಿಸಬೇಕಾಗಿದೆ. ಆಗಸ್ಟ್ 23 ರಲ್ಲಿ ಜರ್ಮನಿಯವರು ಬ್ರಿಟಿಷರ ಮೇಲೆ ನುಗ್ಗಿ ಕಡಿದಾಡಿದರು. ವಾಚಕರು ನಾವು ಕಳುಹಿಸಿರುವ ಯುದ್ಧಭೂಮಿಯ ನಕ್ಷೆಯನ್ನು ಹಿಡಿದು ನೋಡುತ್ತಾ, ನಮ್ಮ ವಿವರಣೆಯನ್ನು ಗ್ರಹಿಸಿಕೊಳ್ಳುತ್ತಾ ಬಂದರೆ ನಡೆದಿರುವ ಸಂಗತಿಗಳು ಗೊತ್ತಾಗುವವು. ಬ್ರಿಟಿಷ್ ಸೈನ್ಯವು ಬೆಲ್ಜಿಯಂನಲ್ಲಿ ಲೀಲ್ ಪಟ್ಟಣದಿಂದ ಸ್ವಲ್ಪ ಪೂರ್ವಕ್ಕೆ ತಾಣ್ಯಹಾಕಿಕೊಂಡಿತ್ತು. ಫ್ರೆಂಚ್ ಸೈನಿಕರು ಅವರ ಬಲಗಡೆಯಲ್ಲಿ ದೀನಜ್ ಬಳಿ ಇದ್ದರು. ಶತ್ರುಗಳಾದ ಜರ್ಮನಿ ಸೈನಿಕರು ಅಸಂಖ್ಯಾತರಾಗಿ ಪರಾಕ್ರಮದಿಂದ ನುಗ್ಗಿ ಬಂದರು. ಆಗ ಬ್ರಿಟಿಷರೂ ಫ್ರೆಂಚರೂ ಅಲ್ಲಿ ಯುದ್ಧ ಕೊಡುವುದು ತಕ್ಕದ್ದಲ್ಲವೆಂದು ತೀರ್ಮಾನಿಸಿ ಅಲ್ಲಿಂದ ಹಿಮ್ಮೆಟ್ಟಿ ಮೊದಲು ಕೆಂಬ್ರೆ ಎಂಬಲ್ಲಿಗೆ ಬಂದರು. ಆಗಸ್ಟ್ 23 ರಿಂದ ಸೆಪ್ಟೆಂಬರ್ ತಾ. 1 ರ ವರೆಗೆ ಕದನಗಳು ನಡೆಯುತ್ತಾ ಬಂದವು. ಬ್ರಿಟಿಷರೂ ಫ್ರೆಂಚರೂ ಆ ಸ್ಥಳವನ್ನು ಬಿಡಬೇಕಾಯಿತು; ಇವರು ಅಲ್ಲಿಂದ ಹಿಮ್ಮೆಟ್ಟಿಕೊಂಡು ನೋಯಾ, ಲಾಯಾನ್, ಸ್ವಾಸೋನ್, ರೀಂ, ಪಾರಿಸ್, ಈ ಸ್ಥಳಗಳ ತನಕ ಕ್ರಮವಾಗಿ ಬಂದು ಸೇರಿಕೊಂಡರು. ಇವರನ್ನು ಶತ್ರುಗಳು ಅಟ್ಟಿಕೊಂಡೇ ಅಷ್ಟು ದೂರವೂ ಬಂದರು. ಈ ಯುದ್ಧದಲ್ಲಿ ಎರಡು ಕಡೆಗಳಲ್ಲೂ ಅನೇಕ ಸೈನ್ಯಗಳು ನಷ್ಟವಾಗಿರುತ್ತವೆ. ಬಳಿಕ ಸ್ವಲ್ಪ ವಿಶ್ರಾಂತಿ ಬೇಕಾಯಿತು.

ಸೆಪ್ಟೆಂಬರ್ 5 ಮತ್ತು 6 ರಲ್ಲಿ ಜರ್ಮನಿಯವರು ಶತ್ರುಗಳ ಸೈನ್ಯದ ಪಶ್ಚಿಮ ಭಾಗದಲ್ಲೇ ಇರದೆ ಪಾರಿಸ್ಸಿನ ಪೂರ್ವಕ್ಕೆ ಬಂದರು; ಅಂದರೆ ಪಾರಿಸ್ಸಿನ ದಕ್ಷಿಣ ಭಾಗದಲ್ಲಿ ಸ್ವಲ್ಪ ದೂರಕ್ಕೆ ಬಂದರು. ಈ ವಿರಾಮ ಕಾಲದಲ್ಲಿ ಬ್ರಿಟಿಷ್ ಮತ್ತು ಫ್ರೆಂಚ್ ಸೈನ್ಯಗಳು ಪಾರಿಸ್‌ನಿಂದ ಪೂರ್ವಕ್ಕೆ ಎಪೇರ್ನೆಗೂ, ಅಲ್ಲಿಂದ ವೇರ್ಡೂನ್‌ಗೂ, ದಕ್ಷಿಣ ಪೂರ್ವದಲ್ಲಿ ನಾನ್ಸಿಗೂ ಅಂದರೆ 160 ಮೈಲಿಯ ಉದ್ದಕ್ಕೂ ಹರಡಿ ಸಾಲುಕಟ್ಟಿ ನಿಂತುಕೊಂಡವು. ಈ ಲೈನಿನಲ್ಲಿ ಭಯಂಕರವಾದ ದೊಡ್ಡ ಯುದ್ಧ ನಡೆಯಿತು. ಜಯಾಪಜಯಗಳು ಈ ಯುದ್ಧದಿಂದ ಇತ್ಯರ್ಥವಾಗುವುದೆಂದು ಎರಡು ಕಡೆಯವರಿಗೂ ತಿಳಿದಿತ್ತು.

ಫ್ರೆಂಚ್ ಸೈನ್ಯಾಧಿಪತಿಯಾದ ಜನರಲ್ ಜಾಫ್ರೆನು 6 ನೇ ತಾ. ನಲ್ಲಿ ಯುದ್ಧ ಪ್ರಾರಂಭವಾಗುವುದಕ್ಕೆ ಮೊದಲೇ ಹುಕುಂ ಕೊಟ್ಟು ಬ್ರಿಟಿಷ್ ಮತ್ತು ಫ್ರೆಂಚ್ ಸೈನಿಕರಿಗೆ ತಿಳಿಸಿದ್ದೇನೆಂದರೆ—ನಮ್ಮ ದೇಶದ ಯೋಗ್ಯತೆಯು ಈ ಯುದ್ಧದಲ್ಲಿ ಇತ್ಯರ್ಥವಾಗುವುದು. ಇದು ಹಿಂದೆ ನೋಡತಕ್ಕ ಸಮಯವಲ್ಲ. ಮೇಲೆ ನುಗ್ಗಿ ಶತ್ರುಗಳನ್ನು ಮುತ್ತಿಕೊಂಡು ಸೋಲಿಸಿ ಹಿಂದಕ್ಕೆ ಓಡಿಸುವುದಕ್ಕೆ ಎಲ್ಲರೂ ನಿಮ್ಮ ಪೌರುಷವನ್ನೂ ಸಾಹಸವನ್ನೂ ಪ್ರಯೋಗಮಾಡಬೇಕು. ಮುಂದರಿಸಿ ನುಗ್ಗಿ ಹೋಗಲಾರದಂಥಾ ಸೈನ್ಯದವರು ತಮ್ಮ ಸ್ಥಾನವನ್ನು ಬಿಟ್ಟುಕೊಡದೆ ಬಹು ಪರಾಕ್ರಮದಿಂದ ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಲ್ಲರೂ ತಮ್ಮ ಪ್ರಾಣವನ್ನು ಅಲ್ಲೇ ಒಪ್ಪಿಸಿದರೂ ಒಳ್ಳೇದು. ಹ್ಯಾಗೂ ಶತ್ರುಗಳಿಗೆ ಸ್ವಲ್ಪ ಮಾತ್ರವೂ ಸಗ್ಗಬಾರದು ಎಂಬದಾಗಿ ಹೇಳಿದರು.

ಜರ್ಮನಿ ಸೈನ್ಯದ ಸೇನಾಪತಿಯು ತಾ. 7 ರಲ್ಲಿ ಜರ್ಮನಿ ಸೈನಿಕರನ್ನು ಕುರಿತು ತಿಳಿಸಿದ್ದೇನೆಂದರೆ—ನಮ್ಮ ಇಷ್ಟಾರ್ಥವು ನೆರವೇರಿದೆ. ಫ್ರೆಂಚರು ಈಗ ನಿಂತು ಯುದ್ಧಕೊಡಲೇ ಬೇಕಾಯಿತು. ನಾಳೆಯ ದಿನ ಸೈನ್ಯವೆಲ್ಲಾ ಪಾರಿಸ್‌ನಿಂದ ವೇರ್ಡೂನ್ ವರೆಗೆ ಯುದ್ಧದಲ್ಲಿ ಸೇರಿ ಕಾದಾಡುವುದು. ಜರ್ಮನಿಯ ಕ್ಷೇಮವನ್ನೂ ಅದರ ಕೀರ್ತಿಯನ್ನೂ ಕಾಪಾಡಿಕೊಳ್ಳುವುದಕ್ಕೋಸ್ಕರ ಇದುವರೆಗೆ ಹಿಂದೆ ಕಠಿಣವಾಗಿಯೂ ಪರಾಕ್ರಮದಿಂದಲೂ ಯುದ್ಧಮಾಡಿದ್ದು ಹಾಗಿರಲಿ, ಈಗ ಪ್ರತಿ ಒಬ್ಬ ಸಿಪಾಯಿಯೂ ತನ್ನ ಕರ್ತವ್ಯವನ್ನು ಸ್ವಲ್ಪವೂ ಹಿಂಜರಿಯದೆ ಮಾಡುವನೆಂದು ನಿರೀಕ್ಷಿಸುತ್ತೇನೆ. ಪ್ರತಿ ಒಬ್ಬನೂ ಕಡೇ ಉಸಿರು ನಿಂತುಹೋಗುವ ತನಕ ಯುದ್ಧಮಾಡಬೇಕು. ನಾಳೆ ನಡೆಯುವ ಯುದ್ಧದಿಂದ ಎಲ್ಲಾ ಇತ್ಯರ್ಥವಾಗುವುದು ಎಂದು ಹೇಳಿದನು.

ಬ್ರಿಟಿಷರೂ ಫ್ರೆಂಚರೂ ಪಾರಿಸ್ ಬಳಿ ತಾ. 7 ರಲ್ಲಿ ಯುದ್ಧವನ್ನು ಪ್ರಾರಂಭಿಸಿದರು. ಎರಡು ದಿನ ಆ ಸಮೀಪದಲ್ಲೇ ಅತ್ಯಂತ ಘೋರವಾದ ಕಾದಾಟಗಳು ನಡೆದವು. ಕಡೆಗೆ ಜರ್ಮನಿಯವರು ಅಲ್ಲಿಂದ ಹಿಮ್ಮೆಟ್ಟಿ ಹೋಗಲೇ ಬೇಕಾಯಿತು. ಅತ್ತಲಾಗಿ ಅದೇ ಸಾಲಿನಲ್ಲಿ ಇತರ ಕಡೆಗಳಲ್ಲೂ ಭಯಂಕರವಾದ ಯುದ್ಧಗಳು ಜರುಗುತ್ತಿದ್ದವು. ಒಂದು ಸ್ಥಳದಲ್ಲಿ ಜರ್ಮನಿಯವರೂ, ಇನ್ನೊಂದು ಕಡೆ ಫ್ರೆಂಚರೂ ಗೆದ್ದು ಮುಂದರಿಸುವಂತೆ ಕಂಡುಬಂತು. ಪಾರಿಸ್ ಬಳಿ ಜರ್ಮನಿಯವರು ಸೋತು ಹಿಮ್ಮೆಟ್ಟುವುದನ್ನು ನೋಡಿದ ಕೂಡಲೇ ಆ ಲೈನಿನ ಉದ್ದಕ್ಕೂ ಇದ್ದ ಇತರ ಜರ್ಮನಿ ಸೈನ್ಯಗಳು ದಿಗಿಲುಬಿದ್ದವು. ಬಳಿಕ ಜರ್ಮನಿ ಸೈನ್ಯವೆಲ್ಲಾ ಪಾರಿಸ್ ಬಳಿಯಿಂದ ನಾನ್ಸಿಯ ವರೆಗೆ ಹಿಮ್ಮೆಟ್ಟಿ ಹೋಗಬೇಕಾಯಿತು.

ಜರ್ಮನಿಯವರ ಬಲಗಡೆ ಅಂದರೆ ಅವರ ಲೈನಿನವರು ಪಾರಿಸ್ ಕಡೆ ಇದ್ದ ಜರ್ಮನಿ ಸೈನ್ಯದ ಮೇಲೆ ಫ್ರೆಂಚ್ ಮತ್ತು ಬ್ರಿಟಿಷ್ ಸೈನ್ಯಗಳು ಬಹಳ ಪರಾಕ್ರಮದಿಂದ ನುಗ್ಗಿ ಕಾದಾಡಿದ್ದರಿಂದ ಜರ್ಮನಿಯವರು ತಮ್ಮ ಫಿರಂಗಿಗಳನ್ನೂ ಮದ್ದುಗುಂಡನ್ನೂ ಬಿಟ್ಟು ಬೇಗನೆ ಅಲ್ಲಿಂದ ಹಿಮ್ಮೆಟ್ಟಿ ಹೋದರು. ಅವರ ಅನೇಕ ಸೈನ್ಯಗಳು ಕೈಸೆರೆಯಾದವು. ಹೀಗೆ ಹಿಮ್ಮೆಟ್ಟಿ ಹೋದ ಜರ್ಮನಿಯವರನ್ನು ಬ್ರಿಟಿಷ್ ಮತ್ತು ಫ್ರೆಂಚ್ ಸೈನ್ಯಗಳು ಅಟ್ಟಿಸಿಕೊಂಡು 7 ನೇ ತಾ. ನಿಂದ ಇದು ಬರೆಯುವ ವರೆಗೂ ಬೆನ್ನುಹತ್ತಿ ಹೋಗುತ್ತಲೇ ಇವೆ. ಜರ್ಮನಿಯವರು ಸ್ವಾಸೋಜ್ ಮತ್ತು ರೀಂ ಎಂಬ ಸ್ಥಳಗಳಿಂದ ಆಚೆಗೆ ಓಡಿಹೋಗಿರುತ್ತಾರೆ. ಬ್ರಿಟಿಷ್ ಮತ್ತು ಫ್ರೆಂಚ್ ಸೈನಿಕರು ಅವರನ್ನು ಅಟ್ಟಿಸಿಕೊಂಡು ಹೋಗುತ್ತಿರುವುದನ್ನು ಬಿಟ್ಟಿಲ್ಲ. ಜರ್ಮನಿಯವರು ಪಾರಿಸ್‌ಗೆ 10 ಮೈಲಿ ಹತ್ತಿರಕ್ಕೆ ಬಂದಿದ್ದವರು ಈಗ ಸೋತು ಎಂಭತ್ತು ಮೈಲಿ ದೂರಕ್ಕೆ ಹೊರಟುಹೋದರು. ಬೆಲ್ಜಿಯಂನ ಜರ್ಮನಿಯವರ ಹೊಸ ಸೈನ್ಯಗಳು ಬಂದು ಮೊದಲಿದ್ದವರಿಗೆ ಸಹಾಯಮಾಡಿದವು. ಆದರೆ ಬ್ರಿಟಿಷ್ ಮತ್ತು ಫ್ರೆಂಚ್ ಸೈನಿಕರ ಪರಾಕ್ರಮಕ್ಕೆ ಎದುರುನಿಂತು ಯುದ್ಧಕೊಡಲಾರದೆ ಜರ್ಮನಿ ಸೈನ್ಯವೆಲ್ಲಾ ಹಿಮ್ಮೆಟ್ಟಿ ಹೋಗುತ್ತಿವೆ.

ಜರ್ಮನಿಯವರಲ್ಲಿ ಎಷ್ಟು ಮಂದಿ ಸೈನಿಕರು ಕೈಸೆರೆ ಹಿಡಿಯಲ್ಪಟ್ಟರೋ, ಫಿರಂಗಿ ಯುದ್ಧಸಾಮಗ್ರಿ ಮುಂತಾದವುಗಳನ್ನು ಅವರು ಎಷ್ಟೆಷ್ಟು ಕಳೆದುಕೊಂಡರೋ ಇನ್ನೂ ಗೊತ್ತಾಗಲಿಲ್ಲ. ಬಹಳ ವೇಗವಾಗಿ ಅವರನ್ನು ಓಡಿಸಿಕೊಂಡುಹೋಗುತ್ತಿದ್ದಾರೆ. 50-60 ರಂತೆ ಜರ್ಮನಿಯ ಸೈನಿಕರು ಗುಂಪು ಗುಂಪುಗಳಾಗಿ ಬಂದು ಕೈಸೆರೆ ಹಿಡಿಯಲ್ಪಟ್ಟಿದ್ದಾರೆ. ತಾ. 10 ಮತ್ತು 11 ರಲ್ಲಿ 6,000 ಮಂದಿ ಕೈಸೆರೆಯಾದರು; 15 ಫಿರಂಗಿಗಳು ಸಿಕ್ಕಿಹೋದವು. ಫ್ರೆಂಚರ ಒಂದು ಸೈನ್ಯವು 160 ಫಿರಂಗಿಗಳನ್ನು ಕಿತ್ತುಕೊಂಡು ಬಂದಿದೆ. ಜರ್ಮನಿಯವರ ಕಡೆ ಬಹಳ ಸೈನ್ಯ ನಷ್ಟವಾಯಿತು. ಪಾರಿಸ್ ಬಳಿ ಜರ್ಮನಿಯವರ 500 ಹೆಣಗಳು ಬಿದ್ದಿದ್ದವು. ಇನ್ನೊಂದು ಕಡೆ ಬ್ರಿಟಿಷ್ ಸೈನಿಕರು ಜರ್ಮನಿಯವರ 200 ಹೆಣಗಳನ್ನು ಹಳ್ಳಗಳಲ್ಲಿ ಮಣ್ಣುಮಾಡಿದರು. ಫ್ರಾನ್ಸಿನೊಳಗೆ ಜರ್ಮನಿಯವರು 2 ಅಥವಾ 3 ಲಕ್ಷ ಸೈನಿಕರನ್ನು ಕಳೆದುಕೊಂಡಿರಬೇಕೆಂದು ಕಾಣುತ್ತದೆ.

ಬ್ರಿಟಿಷ್ ಮತ್ತು ಫ್ರೆಂಚರ ಸೈನಿಕರು ಬಹು ಪರಾಕ್ರಮದಿಂದ ಜರ್ಮನಿಯವರನ್ನು ಒಂದು ಕಡೆ ನಿಲ್ಲುವುದಕ್ಕೆ ಅವಕಾಶ ಕೊಡದೆ ಬೆನ್ನುಹತ್ತಿ ಓಡಿಸಿಕೊಂಡು ಹೋಗುತ್ತಾ ಬಂದ ಪಕ್ಷದಲ್ಲಿ ಅವರ ಸೋಲು ಸಂಪೂರ್ಣವಾಗುವುದು. ಈ ಭಾಗದಲ್ಲಿ ಖಚಿತವಾದ ವರ್ತಮಾನ ತಿಳಿಯಬೇಕಾದರೆ ಇನ್ನೂ ಕೆಲವು ಕಾಲ ಹಿಡಿಯುವುದು.

ಪಾರಿಸ್ ನಗರವು ಶತ್ರುವನ್ನು ಸಂಧಿಸುವುದಕ್ಕೆ ಎಲ್ಲಾ ಸಿದ್ಧಪಡಿಸಿಕೊಂಡಿತ್ತು. ಆದರೆ ಜರ್ಮನಿಯವರು ಅಷ್ಟು ಹತ್ತಿರಕ್ಕೆ ಬಂದಿದ್ದಾಗ್ಯೂ, ಆ ಪಟ್ಟಣವನ್ನು ಬಳಸಿ ಮುತ್ತಿಗೆ ಹಾಕಲಾರದೆ ಹೋದರು. ಕಾಪಾಡಿಕೊಳ್ಳುವುದು ಸುಲಭವಾಗಲೆಂದು 17,00,000 ಪ್ರಜೆಗಳು ಪಾರಿಸ್ ನಗರವನ್ನು ಬಿಟ್ಟು ಇತರ ಕಡೆಗಳಿಗೆ ಹೊರಟುಹೋಗಿದ್ದಾರೆ. ಈಗ ಅವರೆಲ್ಲಾ ನಿರ್ಭಯವಾಗಿ ವಾಪಸು ಬರುವಂತಾಯಿತು. ಮತ್ತೆ ಜರ್ಮನಿಯವರು ಆ ನಗರದ ಬಳಿಗೆ ಬರುವುದು ಸಾಧ್ಯವೆಂದು ಕಾಣುವುದಿಲ್ಲ.

ಪಾರಿಸ್ ಸಮೀಪದಲ್ಲಿ ನಡೆದ ಯುದ್ಧದಲ್ಲಿ ಜರ್ಮನಿಯವರ ಬಲಪಾರ್ಶ್ವದ ಸೈನ್ಯಗಳು ಸೋತುಹೋದವೆಂದು ಅವರೇ ಒಪ್ಪಿಕೊಂಡಿದ್ದಾರೆ. ಈಗ ಅವರು ಬಂದ ಮಾರ್ಗದಲ್ಲೇ ಹಿಮ್ಮೆಟ್ಟಿ ಹೋಗುತ್ತಿರುವರು. ಒಂದು ವೇಳೆ ಅವರು ಬೆಲ್ಜಿಯಂ ದೇಶದೊಳಕ್ಕೆ ಹಿಂತಿರುಗಿ ಹೋದರೂ ಹೋಗಬಹುದು.

ಜರ್ಮನಿಯವರು ಪೂರ್ವ ಪ್ರಷ್ಯಾದಲ್ಲಿ ರಷ್ಯಾದವರಿಗೆ ಯುದ್ಧಕೊಡುವುದಕ್ಕೋಸ್ಕರ ಫ್ರಾನ್ಸಿನಲ್ಲಿದ್ದ ತಮ್ಮ ಸೈನ್ಯಗಳಲ್ಲಿ ಕೆಲವನ್ನು ಕರಸಿ ಅಲ್ಲಿಗೆ ಕಳುಹಿಸಿರುವಂತೆ ಕಾಣುತ್ತದೆ.

ಬೆಲ್ಜಿಯಮ್‌ನಲ್ಲಿ.

ಆಂಟ್ವರ್ಪ್ ಪಟ್ಟಣದೊಳಗೂ ಹೊರಪಾರ್ಶ್ವದಲ್ಲೂ ಇರುವ ಬೆಲ್ಜಿಯಂ ಸೈನ್ಯಗಳು ಮತ್ತೆ ಯುದ್ಧಕಾರ್ಯಗಳನ್ನು ಪ್ರಾರಂಭ ಮಾಡಿವೆ. ಜರ್ಮನಿಯವರು ಅಲ್ಲಿದ್ದ ತಮ್ಮ ಸೈನ್ಯದಲ್ಲಿ ಬಹು ಭಾಗವನ್ನು ವಾಪಸು ಕರಸಿಕೊಂಡರು. ಬೆಲ್ಜಿಯನ್ನರು ಪಟ್ಟಣದೊಳಗಿಂದ ಹೊರಕ್ಕೆ ಬಂದು ಜರ್ಮನಿಯವರನ್ನು ಬ್ರಸೆಲ್ಸ್ ಪಟ್ಟಣಕ್ಕೆ ಪಶ್ಚಿಮದಲ್ಲಿ ಸಂಧಿಸಿ ಅವರ ಮೇಲೆ ನುಗ್ಗಿದರು. ಒಂದು ಕದನದಲ್ಲಿ ಜರ್ಮನಿಯವರು 6,000 ಸೈನಿಕರನ್ನೂ ಹಲವು ಫಿರಂಗಿಗಳನ್ನೂ ಕಳೆದುಕೊಂಡರೆಂದೂ, ಆ ಪೈಕಿ ಕೊಲೆಯಾದವರೇ 3,000 ಸೈನಿಕರೆಂದೂ, ಹಲವು ಸಾವಿರ ಸೈನಿಕರು ಕೈಸೆರೆ ಹಿಡಿಯಲ್ಪಟ್ಟರೆಂದೂ ವರ್ತಮಾನವಿದೆ. ಬೆಲ್ಜಿಯನ್ನರು ಬ್ರಸೆಲ್ಸ್‌ಗೂ ಲೀಜ್‌ಗೂ ನಡುವೆ ಇರುವ ಎರ್ಷಾಟ್ ಎಂಬ ಸ್ಥಳವನ್ನು ಮತ್ತೆ ಜರ್ಮನಿಯವರಿಂದ ಕಿತ್ತು ಸ್ವಾಧೀನಪಡಿಸಿಕೊಂಡರು. ಇಷ್ಟೇ ಅಲ್ಲದೆ ಅವರು ಫ್ರಾನ್ಸಿನ ಎಲ್ಲೆಕಟ್ಟಿನ ಬಳಿ ಜರ್ಮನಿಯವರ ಮೇಲೆ ಮುತ್ತಿಗೆ ಹಾಕಿಕೊಳ್ಳುವುದಕ್ಕೆ ನುಗ್ಗಿ ಹೋಗಿರೋದರಿಂದ ಜರ್ಮನಿಯವರು ಹಿಮ್ಮೆಟ್ಟಿ ಹೋಗುವ ಸಮಯದಲ್ಲಿ ಅನೇಕರನ್ನು ಬೆಲ್ಜಿಯನ್ನರು ಕೈಸೆರೆ ಹಿಡಿಯುವುದಕ್ಕೆ ಅನುಕೂಲವಾಯಿತು.

ಜರ್ಮನಿಯವರಿಗೆ ನಾಮುರ್ ಕೋಟೆಯು ಹೇಗೆ ಸಿಕ್ಕಿತೋ ಈಗ ಅದರ ವಿವರ ತಿಳಿಯುವುದು. ಬೆಲ್ಜಿಯನ್ನರು ಫ್ರೆಂಚರು ತಮ್ಮ ಸಹಾಯಕ್ಕೆ ಬರುತ್ತಾರೆಂದು ನಿರೀಕ್ಷಿಸಿಕೊಂಡು, ತಮ್ಮ ಮೇಲೆ ಭಾರೀ ಸೈನ್ಯವನ್ನು ತಂದು ಮುತ್ತಿಗೆ ಹಾಕಿಕೊಂಡಿದ್ದ ಜರ್ಮನಿಯವರನ್ನು ಸಂಧಿಸುವುದಕ್ಕೂ ಅವರ ಮೇಲೆ ಯುದ್ಧ ಮಾಡುವುದಕ್ಕೂ ಸಿದ್ಧಪಡಿಸಿಕೊಳ್ಳದೆ ಹೋದರು. ಜರ್ಮನಿಯವರಾದರೋ ಭಾರೀ ಫಿರಂಗಿಗಳನ್ನು ಎತ್ತಿಕಟ್ಟಿ ಕೋಟೆಗೆ ಹೊಡೆಯುತ್ತಿದ್ದರು. ಕೋಟೆಯೊಳಗೆ 26,000 ಬೆಲ್ಜಿಯನ್ನರು ಇದ್ದಾಗ್ಯೂ ಶತ್ರುಗಳ ಗುಂಡೇಟುಗಳಿಂದ ಅನೇಕರು ಬಹಳ ಬೇಗನೆ ಕೊಲೆಯಾದರು, ಬಹು ಜನರಿಗೆ ಗಾಯವಾಯಿತು; 12,000 ಬೆಲ್ಜಿಯನ್ನರು ಮಾತ್ರ ತಪ್ಪಿಸಿಕೊಂಡು ಬಂದರು.

ಬೆಲ್ಜಿಯನ್ನರು ಬಹಳ ಪರಾಕ್ರಮದಿಂದಲೂ ಜತಮನಸ್ಸಿನಿಂದಲೂ ಕದನಗಳನ್ನು ನಡಿಸಿರುತ್ತಾರೆ; ಬಹುಶಾ ಶೀಘ್ರದಲ್ಲೇ ಜರ್ಮನಿ ಸೈನ್ಯಗಳನ್ನೆಲ್ಲಾ ಬೆಲ್ಜಿಯಂ ದೇಶದೊಳಗಿಂದ ಹೊರಡಿಸಿಬಿಡುತ್ತಾರೆಂದು ಹೇಳಬಹುದು. ಇದಕ್ಕಾಗಿ ಇನ್ನು ಕೆಲವು ಕಠಿಣವಾದ ಕದನಗಳು ನಡೆಯುವವು; ಯಾಕೆಂದರೆ ಜರ್ಮನಿಯವರು ಸುಮ್ಮನೆ ವಾಪಸು ಹೋಗತಕ್ಕವರಲ್ಲ. ಅವರು ಬಹಳ ಪೌರುಷವಂತರು; ಇನ್ನೂ ಅವರ ಕಡೆ ಅಸಂಖ್ಯಾತವಾದಷ್ಟು ಸೈನ್ಯಗಳಿವೆ. ಇವರು ಬಹಳ ಪರಾಕ್ರಮದಿಂದ ಯುದ್ಧಮಾಡಿಯಾರೆನ್ನುವುದಕ್ಕೆ ಸಂಶಯವಿಲ್ಲ.

ರಷ್ಯಾ ಮತ್ತು ಆಸ್ಟ್ರಿಯಾ.

ಕಳೆದ ವಾರ ರಷ್ಯಾದವರು ಆಸ್ಟ್ರಿಯಾದವರ ಮೇಲೆ ದೊಡ್ಡ ಯುದ್ಧಗಳನ್ನು ನಡಿಸಿ ಸಂಪೂರ್ಣವಾಗಿ ಸೋಲಿಸಿಬಿಟ್ಟರೆಂದೂ, ಅವರ ಸೈನಿಕರನ್ನೂ ಫಿರಂಗಿ ಮದ್ದುಗುಂಡುಗಳನ್ನೂ ಸ್ವಾಧೀನಪಡಿಸಿಕೊಂಡರೆಂದೂ ತಿಳಿಸಿರುತ್ತೇವೆ. ಯುದ್ಧವು ಅಲ್ಲಿಗೆ ನಿಲ್ಲದೆ ಹದಿನೇಳು ದಿನಗಳ ತನಕ ನಡೆಯುತ್ತಲೇ ಬಂತು. ಇಲ್ಲಿ ಆಸ್ಟ್ರಿಯದವರಿಗೆ ಜರ್ಮನಿಯವರೂ ಹೋಗಿ ಸೇರಿ ಸಹಾಯಮಾಡಿದರು. ಇವೆರಡೂ ಸೇರಿ 10,00,000 ಸೈನ್ಯವೂ, 2,500 ಫಿರಂಗಿಗಳೂ ಆದವು. ಇಷ್ಟೊಂದು ಸೈನ್ಯವನ್ನೂ ರಷ್ಯಾದವರು ಎದುರಿಸಿ ಯುದ್ಧಮಾಡಬೇಕಾಯಿತು. ಈ ಯುದ್ಧಭೂಮಿಯು ರಷ್ಯಾದಲ್ಲಿರುವ ಲೂಬ್ಲಿನ್‌ಗೂ ಆಸ್ಟ್ರಿಯಾದಲ್ಲಿರುವ ಲೆಂಬರ್ಗ್‌ಗೂ ಮಧ್ಯಪ್ರದೇಶದಲ್ಲಿದೆ [ನಮ್ಮ ಯುದ್ಧಭೂಮಿಯ ನಕ್ಷೆಯನ್ನು ನೋಡಿ]. ಮೊದಲೇ ತಿಳಿಸಿರುವಂತೆ ಆಸ್ಟ್ರಿಯಾದವರ ಸೈನ್ಯದಲ್ಲಿ ಬಲಭಾಗವನ್ನು ಕಳೆದ ವಾರ ರಷ್ಯಾದವರು ಸಂಧಿಸಿ ಯುದ್ಧಮಾಡಿ ಸೋಲಿಸಿದರು. ಈ ವಾರ ಆ ಸೈನ್ಯದಲ್ಲಿ ಎಡಭಾಗವನ್ನು [ಲೂಬ್ಲೀನ್ ದಕ್ಷಿಣಕ್ಕೆ] ರಷ್ಯಾದವರು ಸೋಲಿಸಿಬಿಟ್ಟಿದ್ದಾರೆ. ಈಗ ಆಸ್ಟ್ರಿಯಾದವರು ಅಲ್ಲಿಂದ ಹಿಮ್ಮೆಟ್ಟಿ ಬರುತ್ತಾ ದಾರಿಯ ಉದ್ದ... ನ್ನು ಸಾಮಾನುಗಳನ್ನೂ ಯುದ್ಧದ ಸರಕುಗಳನ್ನೂ ಬಿಟ್ಟು ಬರುತ್ತಾರೆ. ರಷ್ಯಾದವರು ಆಸ್ಟ್ರಿಯಾದವರನ್ನು ಈಗ ಸಾನ್ ನದಿ ದಾಟಿಸಿ ಆಚೆಗೆ ಓಡಿಸಿಬಿಟ್ಟು ಅನೇಕಾನೇಕರನ್ನು ಕೈಸೆರೆ ಹಿಡಿದುಕೊಂಡರು.

ಆಸ್ಟ್ರಿಯದ ಮೊದಲನೇ ಸೈನ್ಯದಲ್ಲಿ 300 ಹುದ್ದೇದಾರರೂ, 28,000 ಸೈನಿಕರೂ, 400 ಫಿರಂಗಿಗಳೂ ನಷ್ಟವಾದವು. ಎರಡನೇ ಸೈನ್ಯದಲ್ಲಿ ನಷ್ಟಪಟ್ಟವರು 500 ಮಂದಿ ಹುದ್ದೇದಾರರು, 70,000 ಸಿಪಾಯಿಗಳು. ಇವೆರಡೂ ಒಟ್ಟುಗೂಡಿಸಿದರೆ ಆಸ್ಟ್ರಿಯಾದವರು ತಮ್ಮ ಸೈನ್ಯದಲ್ಲಿ 1,00,000 ಮಂದಿಯನ್ನು ಕಳೆದುಕೊಂಡರು. ಇವರಲ್ಲಿ ಅನೇಕರು ರಷ್ಯಾದವರ ಕೈಸೆರೆಯಾಗಿದ್ದಾರೆ. ಈ ಪ್ರದೇಶದಲ್ಲಿ ಕಠಿಣವಾದ ಕಾದಾಟಗಳು ನಡೆಯುವವು. ರಷ್ಯಾದವರು ಈ ಯುದ್ಧದಲ್ಲಿ ಗೆದ್ದ ಬಳಿಕ ಆಸ್ಟ್ರಿಯಾದೊಳಗೆ ನುಗ್ಗಿ ಜರ್ಮನಿಯನ್ನು ಪ್ರವೇಶಿಸುವವರಾಗಿದ್ದಾರೆ.

ಯುದ್ಧವು ಅಲ್ಲಿಗೇ ನಿಂತುಹೋಗದೆ ಆ ಲೈನಿನ ಮಧ್ಯಭಾಗದಲ್ಲಿ ಕಾದಾಟಗಳು ನಡೆಯುತ್ತಲೇ ಇವೆ. ಆಸ್ಟ್ರಿಯಾದವರಿಗೆ ಇನ್ನೂ ಸಂಪೂರ್ಣವಾದ ಸೋಲೇನೂ ಆಗಲಿಲ್ಲ. ರಷ್ಯಾದವರು ಆಸ್ಟ್ರಿಯಾದವರನ್ನು ಲೆಂಬರ್ಗ್ ಆಚೆಯಿಂದ ಗ್ರೊಡೆಕ್ ತನಕ ಹಿಮ್ಮೆಟ್ಟಿ ಹೋಗುವಂತೆ ಅಟ್ಟುತ್ತಿದ್ದಾರೆ. ಅಲ್ಲಿಗೆ ಜರ್ಮನಿಯವರು ಹೋಗಿ ಆಸ್ಟ್ರಿಯಾದವರಿಗೆ ಬೆಂಬಲ ಕೊಟ್ಟು ನಿಂತರು.

ಇಲ್ಲಿ ನಡೆದ ಕದನಗಳ ಪೈಕಿ ಕೆಲವು ಬಹು ತೀಕ್ಷ್ಣವಾಗಿಯೂ ಕ್ರೂರವಾಗಿಯೂ ಇದ್ದವು. ಆಸ್ಟ್ರಿಯಾ ಸೈನ್ಯದೊಳಗಿರುವ ಹಂಗೇರಿಯವರು ತುಂಬಾ ಪರಾಕ್ರಮಶಾಲಿಗಳು; ಆದರೂ ಇವರು ರಷ್ಯಾದವರ ಕಾಸ್ಸಿಕ್ ಎಂಬ ಯುದ್ಧಭಟರ ಎದುರಿಗೆ ನಿಲ್ಲಲಾರದೆಹೋದರು. ಒಂದು ಕದನದಲ್ಲಿ ಮೂರು ಕಾಸ್ಸಿಕ್ ರೆಜಿಮೆಂಟಿನ ಸೈನಿಕರು ಒಂಭತ್ತು ಹಂಗೆರಿ ರೆಜಿಮೆಂಟ್ ಸೈನ್ಯದ ಮೇಲೆ ನುಗ್ಗಿ ಕಾದಾಡಿ ಅವರನ್ನು ಸೋಲಿಸಿಬಿಟ್ಟರು. ಹಂಗೇರಿಯ ಎರಡು ರೆಜಿಮೆಂಟುಗಳು ಸಂಪೂರ್ಣವಾಗಿ ತೊಡೆದುಹೋದವು; ಅಂದರೆ 2,000 ಸೈನಿಕರಲ್ಲಿ 30 ಮಂದಿ ಮಾತ್ರ ಉಳುಕೊಂಡಿದ್ದಾರೆ.

ರಷ್ಯಾದವರು ಹಲವು ಪಟ್ಟಣಗಳನ್ನು ಸ್ವಾಧೀನಪಡಿಸಿಕೊಂಡಿರುತ್ತಾರೆ. ಅವರು ಇದುವರೆಗೆ ಆಸ್ಟ್ರಿಯದ ಮೇಲೆ ನಡಿಸಿರುವ ಯುದ್ಧಕಾರ್ಯಗಳು ತುಂಬಾ ತೃಪ್ತಿಕರವಾಗಿ ಇವೆ.

ರಷ್ಯಾ ಮತ್ತು ಜರ್ಮನಿ.

ರಷ್ಯಾ ಸೈನಿಕರು ಪೂರ್ವ ಪ್ರಷ್ಯಾದೊಳಕ್ಕೆ ಬಹಳ ದೂರ ನುಗ್ಗಿಬಂದು ಈಗ ಕೋನಿಗ್ಸ್‌ಬರ್ಗ್ ನಗರವನ್ನು ಮುತ್ತಿಗೆ ಹಾಕಿಕೊಂಡಿದ್ದಾರೆ. ಅವರು ಅಲ್ಲೆನ್‌ಸ್ಟೀನ್ [ನಕ್ಷೆಯನ್ನು ನೋಡಿ] ನನ್ನು ಆಗಲೇ ಗೆದ್ದುಕೊಂಡಿದ್ದರು. ಈ ರೀತಿ ರಷ್ಯಾದವರು ಜರ್ಮನಿಯೊಳಕ್ಕೆ ನುಗ್ಗಿ ಬರುವುದನ್ನು ತಡೆಯುವುದಕ್ಕೋಸ್ಕರ ಜರ್ಮನಿಯವರು ಫ್ರಾನ್ಸಿನ ಕಡೆ ಕಳುಹಿಸಿರುವ ತಮ್ಮ ಸೈನ್ಯಗಳನ್ನು ಅಲ್ಲಿಂದ ವಾಪಸು ಕರಸಿಕೊಂಡು ರಷ್ಯಾದವರ ಮೇಲೆ ಕಳುಹಿಸಿದ್ದಾರೆಂದು ಕಾಣುತ್ತದೆ. ಈ ಪ್ರಕಾರ ಜರ್ಮನಿಯವರ ಸೈನ್ಯವು ಬಲಪಟ್ಟಿದೆ; ಅಂದರೆ ಅವರಲ್ಲಿ ಈಗ 2,00,000 ಸೈನ್ಯವು ಸೇರಿ ರಷ್ಯಾದವರನ್ನು ಎದುರಿಸುತ್ತಿರುವುದು. ಇದರ ದೆಸೆಯಿಂದ ರಷ್ಯಾದವರು ತಮ್ಮ ಠಾಣ್ಯಗಳನ್ನು ಬಿಟ್ಟು ಸ್ವಲ್ಪ ದೂರ ಹಿಮ್ಮೆಟ್ಟಿ ಹೋಗಬೇಕಾಯಿತು. ಇದರ ವಿವರಗಳು ಇನ್ನೂ ತಿಳಿದು ಬಂದಿಲ್ಲ. ಇಷ್ಟರಲ್ಲೇ ರಷ್ಯಾದವರು ಅಲ್ಲಿಗೆ ಹೊಸ ಸೈನ್ಯವನ್ನು ಕಳುಹಿಸಿ, ಮುಂದರಿಸಿಕೊಂಡು ನುಗ್ಗಿಹೋಗುತ್ತಾರೆಂದು ಊಹಿಸಬಹುದಾಗಿದೆ.

ರಷ್ಯಾದವರು ಜರ್ಮನಿಯವರ ಒಂದು ಭಾರೀ ವಿಮಾನ ಯಂತ್ರವನ್ನು ಕಿತ್ತು ಸ್ವಾಧೀನಪಡಿಸಿಕೊಂಡರು; ಅದರಲ್ಲಿದ್ದ 30 ಮಂದಿ ಜರ್ಮನಿಯವರು ಕೈಸೆರೆಯಾಗಿದ್ದಾರೆ. ಪ್ರತಿ ಒಂದು ಯುದ್ಧದಲ್ಲೂ ಈ ವಿಮಾನ ಯಂತ್ರಗಳನ್ನು ಉಪಯೋಗಿಸಿ ಶತ್ರುಗಳ ಸೈನ್ಯ ಮುಂತಾದವುಗಳ ಠಾಣ್ಯ ರಚನೆ ಮೊದಲಾದ ಸಂಗತಿಗಳನ್ನು ತಿಳಿದುಕೊಳ್ಳುವರು.

ಜಪಾನ್ ಮತ್ತು ಜರ್ಮನಿ.

ಜಪಾನ್‌ನವರು ತ್ಸಿಂಗ್‌ಟಾ ಎಂಬಲ್ಲಿ ಜರ್ಮನಿಯವರ ಮೇಲೆ ಮುತ್ತಿಗೆ ಹಾಕಿಕೊಂಡಿದ್ದಾರೆ. ಆ ಪ್ರಾಂತ್ಯ ಈಚೆಗೆ ಅಪಾರವಾದ ಮಳೆ ಸುರಿದು ಪ್ರವಾಹಗಳು ವಿಶೇಷವಾಗಿ ಬಂದಿರೋದರಿಂದ ಯುದ್ಧ ಕಾರ್ಯಗಳು ಅಷ್ಟೇನೂ ಚೆನ್ನಾಗಿ ನಡೆಯಲಿಲ್ಲ. ಮತ್ತು ಅಲ್ಲಿ ನಡೆದಿರುವ ವಿದ್ಯಮಾನಗಳು ಸರಿಯಾಗಿ ಹೊರಪಟ್ಟಿಲ್ಲ.

ಸರ್ವಿಯಾದವರು.

ಸರ್ವಿಯಾದವರು ಈಗ ಆಸ್ಟ್ರಿಯಾದವರ ಮೇಲೆ ದಂಡು ಕಟ್ಟಿ ಹೊರಟಿದ್ದಾರೆ. ಇವರಿಗೂ ಆಸ್ಟ್ರಿಯಾದವರಿಗೂ ಕಠಿಣವಾದ ಯುದ್ಧವಾಯಿತು. ಸರ್ವಿಯಾದವರು ಸೆಂಲಿನ್ ಎಂಬದನ್ನು ಸ್ವಾಧೀನಪಡಿಸಿಕೊಂಡರು. [ಇದು ಬೆಲ್‌ಗ್ರೇಡಿನ ಎದುರಿಗಿದೆ.] ಅವರು ಇನ್ನೂ ಒಂದೆರಡು ಕಡೆಗಳಲ್ಲಿ ಆಸ್ಟ್ರಿಯದವರ ಮೇಲೆ ಕಾದಾಡಿ ಅವರನ್ನು ಸೋಲಿಸಿರುತ್ತಾರೆ.

ಮಾಂಟಿನಿಗ್ರೋದವರು ಬೋಸ್ನಿಯಾದಲ್ಲಿರುವ ಫೋಕ ಎಂಬ ಸ್ಥಳವನ್ನು ಸ್ವಾಧೀನಮಾಡಿಕೊಂಡಿದ್ದಾರೆ.

ಪೂರ್ವ ಆಫ್ರಿಕಾದಲ್ಲಿ.

ಜರ್ಮನಿಯವರಿಗೆ ಸೇರಿದ ಪೂರ್ವ ಆಫ್ರಿಕಾದೊಳಗೆ ಜರ್ಮನಿಯವರಿಗೂ ಬ್ರಿಟಿಷರಿಗೂ ಕದನಗಳು ನಡೆದಿರುತ್ತವೆ. ಈ ಕದನದಲ್ಲಿ 400 ಸೈನಿಕರು ಇದ್ದರು. ಬ್ರಿಟಿಷರ ಕಡೆ 29 ನೇ ಪಂಜಾಬಿ ಸಿಪಾಯಿಗಳು ನಿಂತು ಬಹಳ ಚೆನ್ನಾಗಿ ಕಾದಾಡಿದರು. ಇವರಲ್ಲಿ ಕೆಲವರು ನಷ್ಟವಾಗಿರುತ್ತಾರೆ. ಜರ್ಮನಿಯವರನ್ನು ಹಿಮ್ಮೆಟ್ಟಿಸಿ ಓಡಿಸಿಬಿಟ್ಟರು. ಜರ್ಮನಿಯ 7 ಮಂದಿ ಹುದ್ದೇದಾರರು ಕೊಲೆಯಾದರು; ಇಬ್ಬರು ಕೈಸೆರೆ ಸಿಕ್ಕಿದ್ದಾರೆ. ಸೈನಿಕರಲ್ಲಿ ಅನೇಕ ಮಂದಿ ನಷ್ಟಪಟ್ಟರು. ಬ್ರಿಟಿಷರ ಕಡೆ ಹುದ್ದೇದಾರರಲ್ಲಿ 4 ಮಂದಿ ಕೊಲೆಯಾದರು, 7 ಮಂದಿ ಗಾಯಪಟ್ಟಿದ್ದಾರೆ.

ಪಶ್ಚಿಮ ಆಫ್ರಿಕಕ್ಕೆ ಸೇರಿದ ಕಮೆರೂನ್ಸ್ ಎಂಬಲ್ಲಿ ಒಂದು ಕದನವಾಯಿತು. ಇದರಲ್ಲಿ ಬ್ರಿಟಿಷ್ ಹುದ್ದೇದಾರರಿಬ್ಬರು ಮೃತಪಟ್ಟರು. ಈ ಕದನದ ವಿವರವೇನೂ ಇನ್ನೂ ಪ್ರಕಟವಾಗಿಲ್ಲ.

ಪೆಸಿಫಿಕ್ ಸಾಗರದಲ್ಲಿ.

ಪೆಸಿಫಿಕ್ ಸಾಗರದಲ್ಲಿ ಜರ್ಮನಿಯವರಿಗೆ ಸೇರಿದ ನೊಯಿಪೊಮ್ಮೆರ್ನ್ ದ್ವೀಪದಲ್ಲಿರುವ ಹರ್ಬರ್ಟ್‌ಶೋಹೆ ಎಂಬ ರೇವಿನ ಮೇಲೆ ಆಸ್ಟ್ರೇಲಿಯದವರು [ಬ್ರಿಟಿಷ್ ಸಾಮ್ರಾಜ್ಯ] ದಂಡನ್ನು ಕಳುಹಿಸಿಕೊಟ್ಟರು. ಈ ದ್ವೀಪವು ಆಸ್ಟ್ರೇಲಿಯಕ್ಕೆ ಈಶಾನ್ಯ ದಿಕ್ಕಿನಲ್ಲಿದೆ. ಈ ದಂಡು ಆ ದ್ವೀಪದೊಳಕ್ಕೆ ಪ್ರವೇಶಿಸಿದಾಗ ಅಡಚಣೆಯೇನೂ ಆಗಲಿಲ್ಲ. ಆದರೆ ದ್ವೀಪದೊಳಕ್ಕೆ ಹೋದ ಮೇಲೆ ಒಂದು ಕಾಡಿನಲ್ಲಿ 18 ಗಂಟೆ ಹೊತ್ತು ಕದನವಾಯಿತು. ತಂತಿಗಳಿಲ್ಲದೆ ವರ್ತಮಾನಗಳನ್ನು ಕೊಟ್ಟು ತರಿಸುವ ಸ್ಟೇಷನನ್ನು ಸ್ವಾಧೀನಪಡಿಸಿಕೊಂಡದ್ದಲ್ಲದೆ ಅಲ್ಲಿದ್ದ ಕೆಲವು ಜರ್ಮನಿ ಸೈನಿಕರನ್ನು ಕೈಸೆರೆ ಹಿಡಿದಿರುತ್ತಾರೆ. ಜರ್ಮನಿಯ ಒಬ್ಬ ಸೇನಾಪತಿಯೂ, 37 ಮಂದಿ ಸೈನಿಕರೂ ಕೈಸೆರೆಯಾದರು. ಆಸ್ಟ್ರೇಲಿಯದವರಲ್ಲಿ ಸುಮಾರು 20–30 ಮಂದಿ ನಷ್ಟಪಟ್ಟಿರಬಹುದು.

ಸಮುದ್ರದ ಮೇಲೆ.

ನೀರಿನ ಮೇಲೆ ವಿಶೇಷ ಕಾರ್ಯಗಳೇನೂ ನಡೆದಿರುವುದಿಲ್ಲ. ಅಟ್ಲಾಂಟಿಕ್ ಸಾಗರದಲ್ಲಿ ಸಿಕ್ಕಿದ ಜರ್ಮನಿಯ ಒಂದು ಭಾರೀ ಜಹಜನ್ನು ಅದರೊಳಗಿದ್ದ 400 ಜನರ ಸಮೇತ ಬ್ರಿಟಿಷರು ಸ್ವಾಧೀನಪಡಿಸಿಕೊಂಡರು. ಆ ಜಹಜನ್ನು ಅಲ್ಲಿಂದ ಜಮೇಕಾ ದ್ವೀಪಕ್ಕೆ ಸಾಗಿಸಿಕೊಂಡು ಹೋಗಿದ್ದಾರೆ [ಇದು ಪಶ್ಚಿಮ ಇಂಡೀಸ್ ದ್ವೀಪಗಳ ಸಮುದಾಯಕ್ಕೆ ಸೇರಿದ್ದು.] ಇದಲ್ಲದೆ ಬ್ರಿಟಿಷರು ಜರ್ಮನಿಯವರ ಇನ್ನೊಂದು ದೊಡ್ಡ ಹಡಗನ್ನು ಸ್ವಾಧೀನಪಡಿಸಿಕೊಂಡಿದ್ದಾರೆ. ಅದರಲ್ಲಿ 6,000 ಟನ್‌ಗಳ ಕಲ್ಲಿದ್ದಲು ಸಿಕ್ಕಿದೆ.

ಸ್ಕಾಟ್‌ಲೆಂಡಿನ ಉತ್ತರ ಸಮುದ್ರ ತೀರದಿಂದಾಚೆ ಸ್ವಲ್ಪ ದೂರದಲ್ಲಿ ಒಂದು ಬ್ರಿಟಿಷ್ ವರ್ತಕ ಹಡಗು ಬಂಡೆಗೆ ಬಡಿದು ಒಡೆದುಹೋಯಿತು. ಆದರೆ ಅದರಲ್ಲಿದ್ದವರನ್ನೆಲ್ಲಾ ಬದುಕಿಸಿ ಕರೆದುತಂದಿದ್ದಾರೆ.

ಉತ್ತರ ಕಡಲನ್ನೆಲ್ಲಾ ಬ್ರಿಟಿಷ್ ಜಹಜುಗಳು ಸಂಚರಿಸಿ ಶೋಧನೆಮಾಡಿದವು. ಜರ್ಮನಿಯವರ ಜಹಜುಗಳೊಂದೂ ಕಣ್ಣಿಗೆ ಕಾಣಲಿಲ್ಲ. ಜರ್ಮನಿಯ ಜಹಜುಗಳು ಬ್ಯಾಲ್ಟಿಕ್ ಕಡಲಿನಲ್ಲಿ ಸೇರಿಕೊಂಡು ಏನೋ ಕಾರ್ಯಭಾಗವಮಾಡುತ್ತಿವೆ ಎಂದು ಹೇಳುತ್ತಾರೆ.

ಇತರ ವಿಷಯಗಳು.

ನಮ್ಮ ಚಕ್ರವರ್ತಿಯವರ ಎರಡನೆಯ ಕುಮಾರರಾದ ಪ್ರಿನ್ಸ್ ಆಲ್ಬರ್ಟ್‌ರವರು ಕಾಯಿಲೆ ಸಂಭವಿಸಿ ಹಡಗಿನಿಂದ ಬಂದು ಬಿಟ್ಟರು. ಅವರನ್ನು ಸ್ಕಾಟ್‌ಲೆಂಡಿಗೆ ಸೇರಿದ ಅಬರ್‌ಡೀನ್ ನಗರಕ್ಕೆ ಕರೆದುಕೊಂಡು ಹೋಗಿ ಚಿಕಿತ್ಸೆಮಾಡುತ್ತಿದ್ದಾರೆ. ಅಲ್ಲಿ ಅವರ ಹೊಟ್ಟೆಯೊಳಗೆ ಬೆಳೆದಿದ್ದ ಒಂದು ಹುಣ್ಣಿಗೆ ಶಸ್ತ್ರಹಾಕಿ ತೆಗೆದರು. ಅವರು ಈಗ ಚೇತರಿಸಿಕೊಳ್ಳುತ್ತಿದ್ದಾರೆ.

ನಮ್ಮ ಚಕ್ರವರ್ತಿಯವರೂ ಮಹಾರಾಜ್ಞೀರವರೂ ಪ್ರತಿ ನಿತ್ಯವೂ ಆಸ್ಪತ್ರೆಗಳಿಗೆ ಹೋಗಿ, ಗಾಯಪಟ್ಟು ಚಿಕಿತ್ಸೆಹೊಂದುತ್ತಿರುವ ಸೈನಿಕರ ಯೋಗಕ್ಷೇಮವನ್ನು ವಿಚಾರಿಸಿಕೊಂಡು ಬರುತ್ತಿದ್ದಾರೆ.

ಇದುವರೆಗೆ ಬ್ರಿಟಿಷ್ ಸೈನಿಕರಲ್ಲಿ ನಷ್ಟವಾದವರು 18,729 ಮಂದಿ; ಈ ಪೈಕಿ 16,687 ಮಂದಿ ಸಿಕ್ಕ ಇಲ್ಲ.

ಹಿಂದುಸ್ಥಾನವು ಬ್ರಿಟಿಷರಿಗೆ ಸಹಾಯಮಾಡುವ ವಿಷಯದಲ್ಲಿ ನಡಿಸುವ ಕಾರ್ಯಗಳನ್ನೆಲ್ಲಾ ಬ್ರಿಟಿಷ್ ಪಾರ್ಲಿಮೆಂಟ್ ಮೆಂಬರುಗಳು ಕೇಳಿ ಬಹಳ ಆನಂದವನ್ನೂ ಉತ್ಸಾಹವನ್ನೂ ಪಡುತ್ತಿದ್ದಾರೆ. ಇದರಿಂದ ಗ್ರೇಟ್ ಬ್ರಿಟನ್ನಿನವರು ನಮ್ಮ ದೇಶದ ವಿಷಯದಲ್ಲಿ ಇನ್ನೂ ವಿಶೇಷವಾದ ಪ್ರೀತಿಯನ್ನೂ ಉತ್ಸಾಹವನ್ನೂ ತೋರಿಸುವಂತಾದೀತೆಂದು ನಿರೀಕ್ಷಿಸುತ್ತೇವೆ. ಈ ಪತ್ರಿಕೆಯ ಇನ್ನೊಂದು ಭಾಗದಲ್ಲಿ ನಮ್ಮ ಚಕ್ರವರ್ತಿ ಸಾರ್ವಭೌಮರವರ ಆಜ್ಞೆಯನ್ನೂ, ನಮ್ಮ ವೈಸ್‌ರಾಯ್ ಲಾರ್ಡ್ ಹಾರ್ಡಿಂಗ್‌ರವರ ಲೇಖನವನ್ನೂ ಕನ್ನಡೀಕರಿಸಿ ಪ್ರಕಟಮಾಡಿರುತ್ತೇವೆ.

ಸಾರ್ವಭೌಮ ಸರ್ಕಾರದ ಹಿಂದುಸ್ಥಾನ್ ಯುದ್ಧದ ಫಂಡು.

"ವೃತ್ತಾಂತ ಪತ್ರಿಕೆ" ಆಫೀಸ್ ಚಂದಾ ಪಟ್ಟಿ.

ಹಿಂದುಸ್ಥಾನದಿಂದ 70,000 ಸೈನ್ಯಗಳು ಯುದ್ಧ ಭೂಮಿಗೆ ಹೋಗಿರುತ್ತವೆ. ಅದರಲ್ಲಿ ಬಹುಶಾ ಅರ್ಧಕ್ಕಿಂತಲೂ ಹೆಚ್ಚಾಗಿ ದೇಶೀಯ ಸೈನಿಕರು. ಅವರಲ್ಲಿ ಕಾಯಿಲೆ ಬೀಳುವವರನ್ನೂ, ಗಾಯಪಟ್ಟವರನ್ನೂ, ಅವರ ಸಂಸಾರಕ್ಕೆ ಸೇರಿದವರನ್ನೂ ಜೀವನ ನಡಿಸಿ ಕಾಪಾಡುವುದರಿಂದ ನಮಗೆ ತುಂಬಾ ಪುಣ್ಯವುಂಟು; ಇದಕ್ಕಾಗಿ ನಮ್ಮ ಕೈಲಾಗುವ ಮಟ್ಟಿಗೂ ಸಹಾಯ ಮಾಡಬೇಕು.

ಮೊದಲು ಚಂದಾ ಬಂದಿರುವುದು	ರೂಪಾಯಿ	129
ಟಿ. ಎನ್. ವಿರಾಟ್ ನಿಜಾಮುದ್ದೀನ್ ಅಲಿಖಾನ್, ಮೈಸೂರು	,,	5
ಬಿ. ಎಂ. ಖಂಡೋಜಿರಾವ್, ಅಂದ್ರೂಸನ್ ಪೇಟೆ	,,	2
ಪ್ರೇಮಾಚಾರ್ರು, ಮೈಸೂರು	,,	2
ಕರುಣಾಕ್ಷಿ ,,	,,	2
ಗುಬ್ಬಿ ಅಪ್ಪನವರು	,,	1
ಚಿತ್ರಯಾಸ	,,	1
ಮನೋರಮ	,,	1
	ಜುಮ್ಲಾ ರೂ.	143

ದಸರಾ ಮಹೋತ್ಸವದ ದರ್ಬಾರ್ ಪ್ರೋಗ್ರಾಂ.

1914 ನೇ ಸೆಪ್ಟಂಬರ್ ಮತ್ತು ಅಕ್ಟೋಬರ್ (ಆನಂದನಾಮ ಸಂವತ್ಸರದ ಆಶ್ವಯುಜ ಶುದ್ಧ).

1914 ನೇ ಸೆಪ್ಟಂಬರ್ 20 ನೇ ಭಾನುವಾರ—ಪ್ರಾತಃಕಾಲ 9 ಘಂಟೆಗೆ ತುಲಾಲಗ್ನದಲ್ಲಿ ಸಿಂಹಾಸನಾರೋಹಣ, ನಜರ್ ಸಾಯಂಕಾಲ 6 ಘಂಟೆಗೆ ದರ್ಬಾರ್, ನಜರ್.

ತಾ. 21 ನೇ ಸೋಮವಾರದಿಂದ 27 ನೇ ಭಾನುವಾರದ ವರೆಗೆ—7 ದಿನವೂ ದಿನವಹಿ ಪ್ರಾತಃಕಾಲ 8 ಘಂಟೆಗೆ ಆನೆ ಕುದುರೆ ಕರೆ ಬಳಿಗೆ ಬಿಜಮಾಡುವದು, ಸಾಯಂಕಾಲ 6 ಘಂಟೆಗೆ ದರ್ಬಾರ್.

ತಾ. 28 ನೇ ಸೋಮವಾರ—ಪ್ರಾತಃಕಾಲ 7 ಘಂಟೆಗೆ ತುಲಾಲಗ್ನದಲ್ಲಿ ಆನೆ ಕುದುರೆ ಮತ್ತು ಆಯುಧ ಕೆರೆ ಬಳಿಗೆ ಬಿಜಮಾಡುವುದು, ಅನಂತರ ಆಯುಧ ಗಜಾಶ್ವಾದಿಗಳ ಪೂಜೆ, ಸಾಯಂಕಾಲ 6½ ಘಂಟೆಗೆ ಇಂಗ್ಲೀಷ್ ದರ್ಬಾರ್.

ತಾ. 29 ನೇ ಮಂಗಳವಾರ—ಪ್ರಾತಃಕಾಲ 9½ ಘಂಟೆಗೆ ಬುಧಕಾಲ ಹೋರೆಯಲ್ಲಿ ಆಯುಧ ಗಜಾಶ್ವ ಬನ್ನೀ ಮಂಟಪಕ್ಕೆ ಬಿಜಮಾಡುವುದು, ಅನಂತರ ಆಟ್ಟೀ ಕಾಳಗ. ಸಾಯಂಕಾಲ 4 ಘಂಟೆಗೆ ಜಂಬೂಸವಾರಿ, ಅನಂತರ ದರ್ಬಾರ್. ದಿವಾನ್‌ರಿಂದಲೂ, ಖಾಸಾ ಅಳಿಯಂದಿರುಗಳಿಂದಲೂ ಮತ್ತು ರಿಟೈರ್ಡ್ ದಿವಾನರವರಿಂದಲೂ ಮಾತ್ರ ನಜರ್.

ತಾ. 30 ನೇ ಬುಧವಾರ—ಸಾಯಂಕಾಲ 7½ ಘಂಟೆಗೆ ಅಂಬಾವಿಲಾಸದಲ್ಲಿ ದರ್ಬಾರ್. ಆಕ್ಟಿವ್ ಮತ್ತು ರಿಟೈರ್ಡ್ ಕೌನ್ಸಿಲರುಗಳು, ಇತರ ಸರದಾರರುಗಳು, ಸಿವಿಲ್ ಆಫೀಸರುಗಳು ಮತ್ತು ಇತರರಿಂದಲೂ ನಜರ್.

ಅಕ್ಟೋಬರ್ ತಾ. 1 ನೇ ಗುರುವಾರ—ಸಾಯಂಕಾಲ 7½ ಘಂಟೆಗೆ ಅಂಬಾವಿಲಾಸದಲ್ಲಿ ದರ್ಬಾರ್. ಮಿಲಿಟೆರಿಯವರಿಂದಲೂ, ಪ್ರಜಾಪ್ರತಿನಿಧಿಗಳು ಮತ್ತು ಪೋಲೀಸ್ ಆಫೀಸರುಗಳಿಂದಲೂ ನಜರ್.

ಇಂಗ್ಲಿಷ್ ಚಕ್ರಾಧಿಪತ್ಯವೂ ಯುದ್ಧವೂ.

ನಮ್ಮ ಚಕ್ರವರ್ತಿ ಸಾರ್ವಭೌಮರವರ ಅನುಜ್ಞೆಯು.

ಸ್ವತಂತ್ರಾಧಿಕಾರವನ್ನು ಪಡೆದಿರುವ ಸ್ವಾಸ್ಥ್ಯಗಳಿಗೆ.

ಗ್ರೇಟ್ ಬ್ರಿಟನ್ ರಾಜ್ಯದ ದೊರೆಯವರೂ ಹಿಂದುಸ್ಥಾನದ ಚಕ್ರವರ್ತಿಯವರೂ ಆದ ಜಾರ್ಜ್ ಸಾರ್ವಭೌಮರವರು ತಮ್ಮ ಚಕ್ರಾಧಿಪತ್ಯದ ಮುಖ್ಯಕ್ಕೆ ಸೇರಿರುವ ಸ್ವಾಸ್ಥ್ಯಗಳಿಗೆ ದಯಪಾಲಿಸಿರುವ ಅನುಜ್ಞಾ ಪತ್ರಿಕೆಯು ಕಳೆದ ತಾ. 9 ನೇ ಬುಧವಾರ ಸಾಯಂಕಾಲ ಲಂಡನ್ ಪಟ್ಟಣದಲ್ಲಿ ಪ್ರಕಟವಾಗಿರುತ್ತದೆ. ಈ ಪತ್ರಿಕೆಯ ಸಾರಾಂಶವನ್ನು ನಮ್ಮ ವಾಚಕರ ತಿಳುವಳಿಕೆಗಾಗಿ ಇಲ್ಲಿ ಪ್ರಕಟಿಸಿರುತ್ತೇವೆ.

ಪ್ರಪಂಚದಲ್ಲಿರುವ ಮಾನವ ಕೋಟಿಗಳ ನೆಮ್ಮದಿಯನ್ನೂ, ನಾಗರಿಕದ ಏಳಿಗೆಯನ್ನೂ ನಾಶಪಡಿಸಬೇಕೆಂಬ ಉದ್ದೇಶದಿಂದ ಹೊರಟಿರುವಂಥಾ ನಮ್ಮ ಶತ್ರುಗಳಾದ ಜರ್ಮನಿಯವರ ದುರಭಿಮಾನವನ್ನು ನೋಡಿ ನಮ್ಮ ಚಕ್ರಾಧಿಪತ್ಯದ ಸಮಸ್ತ ಪ್ರಜೆಗಳೂ ಆಗ್ರಹಪಟ್ಟು ಒಂದೇ ಮನಸ್ಸಿನಿಂದ ಅದನ್ನು ಅಡಗಿಸಿಬಿಡಬೇಕೆಂದು ನಿಶ್ಚಯಿಸಿಕೊಂಡಿದಾರೆ. ನಾವು ಈ ಘೋರವಾದ ಕಾದಾಟವನ್ನು ಹುಡುಕಿಕೊಂಡು ಹೋದವರಲ್ಲ. ನಾವು ಸರ್ವಕಾಲಗಳಲ್ಲೂ ಪರಸ್ಪರ ಪ್ರೀತಿ ಸಮಾಧಾನಗಳಿರಬೇಕೆಂತಲೇ ಹೋರಾಡುತ್ತಾ ಬಂದಿರುವೆವು. ಈ ಹೋರಾಟವು ಮೊದಲು ನಮ್ಮ ರಾಜ್ಯಕ್ಕೆ ಸಂಬಂಧಪಟ್ಟಿರಲಿಲ್ಲ; ಹೋರಾಡುತ್ತಿದ್ದವರಿಗೆ ಸಮಾಧಾನವನ್ನು ಹೇಳಿ ಒಪ್ಪಿಸಬೇಕೆಂದು ನಮ್ಮ ಮಂತ್ರಿಗಳು ಬಹಳವಾಗಿ ಸಾಹಸಪಟ್ಟರು. ನಾವು ಕೊಟ್ಟಿರುವ ಭಾಷೆಯಂತೆ ನಡೆದುಕೊಳ್ಳದೆ, ಜರ್ಮನಿಯವರು ಬೆಲ್ಜಿಯಂ ದೇಶದೊಳಕ್ಕೆ ದಂಡೆತ್ತಿ ಬಂದದ್ದನ್ನೂ, ಅವರು ಫ್ರೆಂಚ್ ಜನಾಂಗವನ್ನೇ ತೊಡೆದುಬಿಡುವುದನ್ನೂ ನೋಡುತ್ತಾ ಸುಮ್ಮನಿದ್ದ ಪಕ್ಷದಲ್ಲಿ ನಮ್ಮ ಗೌರವಕ್ಕೂ ಕೀರ್ತಿಗೂ ಹಾನಿಯುಂಟಾಗುತ್ತಿತ್ತು; ಮತ್ತು ನಮ್ಮ ಚಕ್ರಾಧಿಪತ್ಯದ ಸ್ವಾತಂತ್ರ್ಯಗಳೂ, ಮಾನವ ಕೋಟಿಗಳ ಹಕ್ಕು ಬಾಧ್ಯತೆಗಳೂ ಶ್ರೇಯಸ್ಸೂ ಎಲ್ಲಾ ಹಾಳಾಗುವುದಕ್ಕೆ ಕಾರಣವಾಗುತ್ತಿತ್ತು.

ನಮ್ಮ ನಿಶ್ಚಯವನ್ನು ಸಕಲ ವಿಭಾಗಗಳವರೂ ಸಂತೋಷದಿಂದ ಅನುಮೋದಿಸಿ, ಉತ್ಸಾಹದಿಂದಲೂ ಒಮ್ಮನಸ್ಸಿನಿಂದಲೂ ನಮಗೆ ಬೆಂಬಲಕೊಡುತ್ತಿರುವುದು ನಮಗೆ ಮಹದಾನಂದವನ್ನುಂಟುಮಾಡಿದೆ. ಕೊಟ್ಟ ಭಾಷೆಯನ್ನು ತಪ್ಪಿ ನಡೆಯುವುದು ಗ್ರೇಟ್ ಬ್ರಿಟನ್‌ಗೂ ಈ ಚಕ್ರಾಧಿಪತ್ಯಕ್ಕೂ ಬಂದಿಲ್ಲ; ಅದನ್ನು ರಕ್ಷಿಸಿ ಕಾಪಾಡಿಕೊಂಡು ಬರುವುದೇ ನಮಗೆ ಹಿರಿಯರಿಂದ ಬಂದಂಥಾ ಆಚರಣೆಯಾಗಿದೆ. ಇಂಥಾ ಭಾಷೆಯಂತೆ ನಡೆಯಬೇಕೆಂಬ ಉದ್ದೇಶವೇ ನಮ್ಮನ್ನು ಈ ಯುದ್ಧಕ್ಕೆ ಹೊರಡಿಸಿತು. ಸಮುದ್ರದ ಆಚೆ ಇರುವಂಥಾ ನಮ್ಮ ಸ್ವಾಸ್ಥ್ಯಗಳು ಬಹು ಸಂತೋಷದಿಂದ ನಮಗೆ ಸೈನ್ಯಗಳನ್ನೂ ಸಾಮಗ್ರಿ ಮುಂತಾದವುಗಳನ್ನೂ ಕೂಡಿಸಿ ಕಳುಹಿಸಿಕೊಡುವುದರಲ್ಲಿ ಅಪರಿಮಿತವಾದ ಉತ್ಸಾಹವನ್ನು ಪ್ರಕಾಶಪಡಿಸಿರುತ್ತವೆ. ಇದು ಆ ನಮ್ಮ ಸ್ವಾಸ್ಥ್ಯಗಳಿಗೆ ನಮಲ್ಲಿರುವಂಥಾ ಭಕ್ತಿ ಪ್ರೀತಿಗಳನ್ನು ಬಹು ಪರಿಷ್ಕಾರವಾಗಿ ಹೊರಪಡಿಸುವುದು. ನಾವು ಉದ್ಯುಕ್ತಪಟ್ಟಿರುವ ಈ ಧರ್ಮವಾದ ಯುದ್ಧ ಕಾರ್ಯದಲ್ಲಿ ನಮ್ಮ ಸ್ವಾಸ್ಥ್ಯಗಳು ನಮಗೆ ಈಗ ತುಂಬಾ ಅವಶ್ಯವಾದಂಥಾ ಸಹಾಯಾದಿಗಳನ್ನು ಮಾಡುತ್ತಿರುವುದು ನಮಗೆ ಎಷ್ಟೋ ಆನಂದವನ್ನೂ ಅಹಂಕಾರವನ್ನೂ ಉಂಟುಮಾಡಿದೆ.

ಕ್ಯಾನಡಾ, ಆಸ್ಟ್ರೇಲಿಯಾ, ನ್ಯೂಜೀಲೆಂಡ್ ಮುಂತಾದ ನಮ್ಮ ಸ್ವಾಸ್ಥ್ಯಗಳು ತಮ್ಮ ಯುದ್ಧದ ನಾವೆಗಳನ್ನೂ ಸೈನ್ಯವನ್ನೂ ನಮಗೆ ಒಪ್ಪಿಸಿ, ಹೊಸ ಸೈನ್ಯಗಳನ್ನು ಕೂಡಿಸಿ ಕಳುಹಿಸಿಕೊಡಬೇಕೆಂದು ಪ್ರಯತ್ನಪಡುತ್ತಲಿವೆ. ದಕ್ಷಿಣ ಆಫ್ರಿಕದವರು ತಮ್ಮ ಎಲ್ಲೆಕಟ್ಟುಗಳ ಸಂರಕ್ಷಣೆಗೋಸ್ಕರ ಪ್ರತ್ಯೇಕವಾದ ಏರ್ಪಾಡುಗಳನ್ನು ಮಾಡಿಟ್ಟುಕೊಂಡು, ಅಲ್ಲಿದ್ದ ನಮ್ಮ ಸೈನ್ಯಗಳನ್ನು ನಮ್ಮ ಸಹಾಯಕ್ಕಾಗಿ ಕಳುಹಿಸಿರುತ್ತಾರೆ. ನ್ಯೂಫೌಂಡ್‌ಲೆಂಡ್ ಸ್ವಾಸ್ಥ್ಯದವರು ತಮ್ಮ ನಾವೆಯ ಸೈನ್ಯವನ್ನು ಎರಡರಷ್ಟು ಹೆಚ್ಚಿಸಿ, ಸೈನ್ಯವನ್ನು ನಮಗೋಸ್ಕರ ಯುದ್ಧ ಭೂಮಿಗೆ ಕಳುಹಿಸಿದಾರೆ. ಕ್ಯಾನಡಾ ಸ್ವಾಸ್ಥ್ಯದವರು ಅಪಾರವಾದ ಆಹಾರವಸ್ತುಗಳನ್ನು ಕೂಡಿಸಿ ಕಳುಹಿಸಿಕೊಟ್ಟಿರುವರು. ಹೀಗೆ ನಮ್ಮ ಎಲ್ಲಾ ಸ್ವಾಸ್ಥ್ಯಗಳಿಂದಲೂ ನಮಗೆ ಅಪಾರವಾದ ಸಹಾಯವು ಒದಗುತ್ತಿದೆ.

ಹಿಂದುಸ್ಥಾನದ ಸಾಮಂತರಾಜರುಗಳಿಗೂ ಸಮಸ್ತ ಪ್ರಜೆಗಳಿಗೂ ಸಾರ್ವಭೌಮರವರ ಅಪ್ಪಣೆ.

ನಮ್ಮ ಹಿಂದುಸ್ಥಾನದ ಸಾಮಂತರಾಜರುಗಳಿಗೂ ಪ್ರಜಾಕೋಟಿಗಳಿಗೂ ಚಕ್ರವರ್ತಿಯವರು ದಯಪಾಲಿಸಿರುವ ಅನುಜ್ಞಾ ಪತ್ರಿಕೆಯ ಸಾರಾಂಶವು—

ನಮ್ಮ ಚಕ್ರಾಧಿಪತ್ಯವನ್ನು ಕಾಪಾಡುವ ಭಾಗದಲ್ಲಿ ಸಕಲ ಪ್ರಜೆಗಳೂ ಏಕವಾಕ್ಯತೆಯಿಂದ ಮುಂದಾಳುಗಳಾಗಿ ಬಂದಿದಾರೆ. ನಮ್ಮ ಹಿಂದುಸ್ಥಾನದ ಸಮಸ್ತ ಪ್ರಜೆಗಳೂ ಸಾಮಂತರಾಜರುಗಳೂ ನಮ್ಮ ಆಳ್ವಿಕೆಯಲ್ಲಿ ಅಪೂರ್ವವಾದ ರಾಜಭಕ್ತಿಯನ್ನೂ ಪ್ರೀತಿಯನ್ನೂ ಪ್ರಕಾಶಪಡಿಸಿರುವುದಲ್ಲದೆ ತಮ್ಮ ಪ್ರಾಣಗಳನ್ನೂ ತಮ್ಮ ಸರ್ವಸ್ವಗಳನ್ನೂ ರಾಜ್ಯದ ಕ್ಷೇಮಕ್ಕೋಸ್ಕರ ಒಪ್ಪಿಸಿರುತ್ತಾರೆ. ಅವರುಗಳೆಲ್ಲಾ ಯುದ್ಧಭೂಮಿಗೆ ಹೋಗಲು ಕುತೂಹಲಪಟ್ಟು ತಮ್ಮನ್ನು ಕಳುಹಿಸಿಕೊಡಬೇಕೆಂದು ಪ್ರಾರ್ಥಿಸುತ್ತಾ ಬಂದಿರುವುದನ್ನು ನೋಡಿದರೆ, ನಮ್ಮಲ್ಲಿ ಅವರಿಗಿರುವ ಭಕ್ತಿ ಅನುರಾಗಗಳು ಅಮೂಲ್ಯವಾದವುಗಳೆಂದು ಸಿದ್ಧಾಂತಪಟ್ಟಿದೆ. ನಾವು ಕಳೆದ 1912 ನೇ ಫೆಬ್ರವರಿಯಲ್ಲಿ ಹಿಂದುಸ್ಥಾನಕ್ಕೆ ಕಿರೀಟಧಾರಣೆಯ ಮಹೋತ್ಸವಕ್ಕಾಗಿ ದಯಮಾಡಿದ್ದ ವೇಳೆ ಹಿಂದುಸ್ಥಾನದ ನಮ್ಮ ಸಕಲ ಪ್ರಜೆಗಳೂ ನಮ್ಮ ವಿಷಯದಲ್ಲಿ ಪ್ರಕಾಶಪಡಿಸಿದಂಥಾ ಉತ್ಸಾಹಪೂರ್ವಕವಾದ ಭಕ್ತಿ ಪ್ರೀತಿಗಳನ್ನು ಎಷ್ಟೋ ಆನಂದದಿಂದ ಜ್ಞಾಪಿಸಿಕೊಳ್ಳುತ್ತೇವೆ. ಮತ್ತು ಅದರ ಪರೀಕ್ಷೆಯ ಸಮಯ ಈಗ ಪ್ರಾಪ್ತವಾಗಿರುವಲ್ಲಿ ಸಕಲ ಪ್ರಜೆಗಳೂ ಸಾಮಂತರಾಜರುಗಳೂ ಆ ಉತ್ಸಾಹವನ್ನೂ ಭಕ್ತಿಪ್ರೀತಿಗಳನ್ನೂ ಅತ್ಯಂತ ಮೇಲ್ಮೆಯಾಗಿ ಕಾರ್ಯತಃ ಪ್ರಕಾಶಪಡಿಸಿರುವುದನ್ನು ನೋಡಿದರೆ ಗ್ರೇಟ್ ಬ್ರಿಟನ್‌ಗೂ ಹಿಂದುಸ್ಥಾನಕ್ಕೂ ಇರುವ ಸಂಬಂಧಕ್ಕೂ ಪ್ರೀತಿ ಅನುರಾಗಗಳಿಗೂ ಎಂದೆಂದಿಗೂ ಚ್ಯುತಿಯೇ ಇಲ್ಲವೆಂಬುದು ಪರಿಷ್ಕಾರವಾಗುತ್ತದೆ ಎಂಬುವುದೇ.

ಹಿಂದುಸ್ಥಾನದ ಪ್ರತ್ಯುಪಕಾರವು.

ನಮ್ಮ ವೈಸ್‌ರಾಯರು ಪಾರ್ಲಿಮೆಂಟಿಗೆ ತಿಳಿಸಿರುವುದು.

ನಮ್ಮ ವೈಸ್‌ರಾಯ್ ಲಾರ್ಡ್ ಹಾರ್ಡಿಂಗ್ ರವರು ಯುದ್ಧಕ್ಕಾಗಿ ಹಿಂದುಸ್ಥಾನವು ಗ್ರೇಟ್ ಬ್ರಿಟನ್ ರಾಜ್ಯಕ್ಕೆ ಮಾಡುವ ಸಹಾಯಸಂಪತ್ತುಗಳನ್ನು ವಿವರಿಸಿ ಪಾರ್ಲಿಮೆಂಟಿಗೆ ಒಂದು ಲೇಖನವನ್ನು ಬರೆದಿರುತ್ತಾರೆ. ಪಾರ್ಲಿಮೆಂಟಿನಲ್ಲಿ ಹಿಂದುಸ್ಥಾನದ ಸೆಕ್ರೆಟರಿಯವರು ಈ ಲೇಖನವನ್ನು ಓದಿದ್ದನ್ನು ಕೇಳಿ ಪಾರ್ಲಿಮೆಂಟ್ ಮೆಂಬರುಗಳೆಲ್ಲಾ ಬಹಳ ಉತ್ಸಾಹಪಟ್ಟುಕೊಂಡರು. ಆ ಲೇಖನದಲ್ಲಿ ನಮ್ಮ ವೈಸ್‌ರಾಯರವರು ಬರೆದಿರುವ ಮುಖ್ಯಾಂಶಗಳೇನೆಂದರೆ,—

ಹಿಂದುಸ್ಥಾನದಲ್ಲಿ ಒಟ್ಟು 700 ದೇಶೀಯ ಸಂಸ್ಥಾನಗಳಿರುತ್ತವೆ. ಈ ಸಂಸ್ಥಾನಗಳ ರಾಜರುಗಳೆಲ್ಲರೂ ಈ ಯುದ್ಧದಲ್ಲಿ ತಾವು ಗ್ರೇಟ್ ಬ್ರಿಟನ್ ರಾಜ್ಯಕ್ಕೆ ಸಹಾಯಕರಾಗಿ ನಿಂತು ಶತ್ರುವಿನ ಮೇಲೆ ಕಾದಾಡಲು ಸಿದ್ಧರಾಗಿದೇವೆಂದೂ, ತಮ್ಮ ಸಂಸ್ಥಾನಗಳ ಸರ್ವಸ್ವವನ್ನೂ ಸಾರ್ವಭೌಮರವರ ಉಪಯೋಗಕ್ಕಾಗಿ ಒಪ್ಪಿಸಿರುತ್ತೇವೆಂದೂ ಏಕವಾಕ್ಯತೆಯಿಂದಲೂ ಉತ್ಸಾಹಪೂರ್ವಕವಾಗಿಯೂ ಹೇಳಿರುತ್ತಾರೆ. ಯುದ್ಧ ಭೂಮಿಗೆ ಹೋಗಬೇಕೆಂದು ಕುತೂಹಲಪಟ್ಟಿರುವ ರಾಜರುಗಳ ಪೈಕಿ ಜೋಧಪುರ, ಬಿಕ್ಕಾನೀರ್, ಕಿಶನ್‌ಘರ್, ರೂಟ್ಲಾಮ್, ಸೇಚಿನ್, ಪಾಟಿಯಾಲ, ಈ ಸಂಸ್ಥಾನಗಳ ರಾಜರನ್ನೂ, ಜೋಧಪುರದ ರೀಜಂಟರಾದ ಸರ್ ಪ್ರತಾಪಸಿಂಗ್‌ರವರನ್ನೂ, ಭೂಪಾಲ್ ಸಂಸ್ಥಾನದ ಯುವರಾಜರನ್ನೂ, ಕೂಚ್ ಬೀಹಾರ್ ಮಹಾರಾಜರವರ ಸಹೋದರರನ್ನೂ, ದೊಡ್ಡ ವಂಶೀಕರಾದ ಕೆಲವು ಕುಮಾರರುಗಳನ್ನೂ ವೈಸ್‌ರಾಯರವರು ಯುದ್ಧ ಭೂಮಿಗೆ ಹೋಗುವಂತೆ ಚುನಾವಣೆ ಮಾಡಿಕೊಂಡರು. ಸರ್ ಪ್ರತಾಪಸಿಂಗ್ ರವರಿಗೆ 70 ವರುಷವಾಗಿದ್ದರೂ ಅವರು ಯುದ್ಧ ಭೂಮಿಗೆ ಹೋಗಲೇ ಬೇಕೆಂದು ಬಹಳವಾಗಿ ಕೇಳಿಕೊಂಡಿದಾರೆ. ಇವರ ರಕ್ತ ಸಂಬಂಧಿಯಾಗಿಯೂ 16 ವಯಸ್ಸಾಗಿಯೂ ಇರುವ ಜೋಧಪುರದ ಮಹಾರಾಜರು ಕೂಡ ಅವರ ಸಂಗಡ ಹೋಗುತ್ತಾರೆ. ಇವರನ್ನೆಲ್ಲಾ ಹಿಂದುಸ್ಥಾನದ ಸರ್ವ ಸೇನಾಪತಿಯ ಸಮ್ಮತಿ ಪಡೆದು ಸೈನ್ಯದ ಕೂಡ ಕಳುಹಿಸಿಕೊಟ್ಟರು. ಗ್ವಾಲಿಯರ್, ಜಯ್ಪೋರಾ, ಧೋಲ್‌ಪುರ, ಪಾಲನ್‌ಪುರ (ಯುವರಾಜರು), ಈ ರಾಜರುಗಳನ್ನು ಅಂಗೀಕರಿಸುವುದಿಲ್ಲವೆಂದು ಹೇಳಿದ್ದರಿಂದ ಅವರು ಬಹಳ ವ್ಯಸನಾಕ್ರಾಂತರಾಗಿದಾರೆ.

ದೊಡ್ಡವಾಗಿರುವ 27 ದೇಶೀಯ ಸಂಸ್ಥಾನಗಳಲ್ಲಿ ರಾಜರುಗಳು ಸಾರ್ವಭೌಮ ಸರ್ಕಾರದ ಉಪಯೋಗಕ್ಕಾಗಿ ಇಂಪೀರಿಯಲ್ ಸರ್ವಿಸ್ ಸೈನ್ಯಗಳನ್ನು ತರಪೇತು ಮಾಡಿ ಇಟ್ಟುಕೊಂಡಿದಾರೆ. ಯುದ್ಧ ಪ್ರಾರಂಭವಾದ ಕೂಡಲೇ ಅವರುಗಳೆಲ್ಲಾ ಆ ಸೈನ್ಯಗಳನ್ನು ಯುದ್ಧಭೂಮಿಗೆ ಕಳುಹಿಸಲು ಸಿದ್ಧರಾಗಿದೇವೆಂದು ತಿಳಿಸಿದರು. ವೈಸ್‌ರಾಯರವರು ಆ ಪೈಕಿ ಹನ್ನೆರಡು ಸಂಸ್ಥಾನಗಳ ಸೈನ್ಯಗಳನ್ನು ಅಂಗೀಕರಿಸಿಕೊಂಡರು. ಈ ಸೈನ್ಯಗಳಲ್ಲಿ ವಿಶೇಷಭಾಗ ಜಹಜುಪತ್ತಿ ಪ್ರಯಾಣ ಮಾಡಿದೆ. ಬಿಕ್ಕಾನೀರ್ ಸಂಸ್ಥಾನದ ಒಂಟೆಗಳ ಸೈನ್ಯವನ್ನೂ ಕರಸಿಕೊಂಡರು.

ಕೆಲವು ದೇಶೀಯ ರಾಜರುಗಳು ಜಹಜಿನಲ್ಲಿ ಆಸ್ಪತ್ರೆಯನ್ನು ಮಾಡಿ ಬೇಕಾದ ಸಲಕರಣಗಳನ್ನೆಲ್ಲಾ ಸ್ವಂತ ಖರ್ಚಿನಿಂದ ಒದಗಿಸಿ ಸಿದ್ಧಪಡಿಸಿ ಅದಕ್ಕೆ "ರಾಜಭಕ್ತಿ" ಎಂಬ ಹೆಸರಿಟ್ಟು ಒಪ್ಪಿಸುವುದಕ್ಕೆ ಸಿದ್ಧರಾಗಿದಾರೆ. ಈ ರಾಜರುಗಳ ದಯಾಳುತನವೂ ರಾಜಭಕ್ತಿಯೂ ಕೊಂಡಾಡತಕ್ಕದ್ದಾಗಿವೆ.

ಮೈಸೂರು ಸಂಸ್ಥಾನದ ಶ್ರೀಮನ್ ಮಹಾರಾಜರವರು ಹಿಂದುಸ್ಥಾನದಿಂದ ಸೈನ್ಯವನ್ನು ಕೂಡಿಸಿ ಕಳುಹಿಸುವ ಖರ್ಚಿಗೋಸ್ಕರ 50 ಲಕ್ಷ ರೂಪಾಯನ್ನು ಇಂಡಿಯಾ ಗವರ್ನ್‌ಮೆಂಟಿನವರ ವಶಕ್ಕೆ ಕೊಟ್ಟಿದಾರೆ.

ಗ್ವಾಲಿಯರ್ ಮಹಾರಾಜರವರು ಆಸ್ಪತ್ರೆ ಹಡಗನ್ನು ಸಿದ್ಧಪಡಿಸಿ ಕೊಡುವುದಕ್ಕೆ ಹಣವನ್ನು ಒದಗಿಸುವುದಲ್ಲದೆ ಬಹಳ ಹಣವನ್ನು ಕೊಡುವುದಾಗಿಯೂ, 1,000 ಕುದುರೆಗಳನ್ನು ಒಪ್ಪಿಸುವುದಾಗಿಯೂ ಮಾತು ಕೊಟ್ಟಿದಾರೆ. ಪಂಜಾಬಿಗೆ ಸೇರಿದ ಲೋಹಾರುವಿನಲ್ಲೂ, ಬೆಲೂಚಿಸ್ಥಾನಕ್ಕೆ ಸೇರಿದ ಕೀಲತ್ತಿನಲ್ಲೂ ರಾಜರೂ ಸರದಾರರೂ ಒಂಟೆಗಳನ್ನೂ ಮಾವುತರನ್ನೂ ಒದಗಿಸಿ ಅವುಗಳ ಖರ್ಚನ್ನೆಲ್ಲಾ ತಾವೇ ವಹಿಸುವುದಾಗಿ ಒಪ್ಪಿರುತ್ತಾರೆ. ಅನೇಕ ರಾಜರುಗಳು ಹೊಸ ಸೈನ್ಯವನ್ನು ಕೂಡಿಸಿ ಕೇಳಿದಾಗ ಒಪ್ಪಿಸುತ್ತೇವೆಂದು ಹೇಳಿರುತ್ತಾರಲ್ಲದೆ ಯುದ್ಧದ ರಿಲೀಫ್ ಫಂಡಿಗೆ ಎಲ್ಲಾ ಸಂಸ್ಥಾನಗಳವರೂ ಚಂದಾಪಣಗಳನ್ನು ಕೊಟ್ಟಿದಾರೆ. ರೀವಾ ಸಂಸ್ಥಾನದ ಮಹಾರಾಜರವರು ತಮ್ಮ ಸೈನ್ಯಗಳನ್ನೂ ಖಜಾನೆಯನ್ನೂ ತಮ್ಮ ಸ್ವಂತ ಆಭರಣಾದಿ ದ್ರವ್ಯಗಳನ್ನೂ ಚಕ್ರವರ್ತಿಯವರಿಗೆ ವಹಿಸಿಬಿಡಲು ಸಿದ್ಧರಾಗಿದೇವೆಂದು ತಿಳಿಸಿದಾರೆ. ಕೆಲವು ರಾಜರುಗಳು ಅಂದರೆ ಕಾಶ್ಮೀರ, ಬಂಡಿ, ಓರ್ಚಾ, ಗ್ವಾಲಿಯರ್, ಇಂಡೋರ್ ರಾಜರುಗಳು ಹಿಂದುಸ್ಥಾನದ ರಿಲೀಫ್ ಫಂಡಿಗೆ ಮಾತ್ರವೇ ಅಲ್ಲ, ಸೀಮೆಯಲ್ಲಿ ಪ್ರಿನ್ಸ್ ಆಫ್ ವೇಲ್ಸ್‌ರವರು ಪ್ರಾರಂಭಿಸಿರುವ ರಿಲೀಫ್ ಫಂಡಿಗೂ ಬಹಳ ಹಣಗಳನ್ನು ಚಂದಾ ಕೊಟ್ಟಿರುತ್ತಾರೆ. ಕಾಶ್ಮೀರದ ಮಹಾರಾಜರು ಹಿಂದುಸ್ಥಾನದ ರಿಲೀಫ್ ಫಂಡಿಗೆ ಚಂದಾ ಕಳುಹಿಸಿದ್ದರಲ್ಲದೆ ಶ್ರೀನಗರದ ತಮ್ಮ ಪ್ರಜೆಗಳಲ್ಲಿ ಸುಮಾರು 2,000 ಜನರು ಸೇರಿದ ಮಹಾಸಭೆಯಲ್ಲಿ ಅಗ್ರಾಸನವನ್ನು ವಹಿಸಿ ಬಹು ಉತ್ಸಾಹಪೂರ್ವಕವಾದ ಭಾಷಣವನ್ನು ಮಾಡಿ ಪ್ರಜೆಗಳಿಂದ ಚಂದಾಹಣಗಳನ್ನು ಕೊಡಿಸುತ್ತಿದಾರೆ. ಇಂಡೋರ್ ಮಹಾರಾಜರವರು ತಮ್ಮ ಸಂಸ್ಥಾನದಲ್ಲಿ ಯೋಗ್ಯವೆಂದು ಚುನಾಯಿಸಲ್ಪಡುವ ಸಮಸ್ತ ಕುದುರೆಗಳನ್ನೂ ಒಪ್ಪಿಸುತ್ತೇವೆಂದು ತಿಳಿಸಿದಾರೆ. ಇದಲ್ಲದೆ ಹೈದರಾಬಾದು, ಜಾಮ್‌ನಗರ, ಬೊಂಬಾಯಿ ಆಧಿಪತ್ಯದ ಕೆಲವು ಸಂಸ್ಥಾನಗಳು, ಈ ಸೀಮೆಗಳ ರಾಜರುಗಳೆಲ್ಲಾ ಕುದುರೆಗಳನ್ನು ಒದಗಿಸುವುದಾಗಿ ಮಾತು ಕೊಟ್ಟಿದಾರೆ.

ಬೊಂಬಾಯಿ ಆಧಿಪತ್ಯಕ್ಕೆ ಸೇರಿದ ಪ್ರತಿ ಒಂದು ದೇಶೀಯ ಸಂಸ್ಥಾನದ ರಾಜರೂ ತಮ್ಮ ಸಂಸ್ಥಾನದ ಸರ್ವಸ್ವವನ್ನೂ ಒಪ್ಪಿಸುವುದಕ್ಕೆ ಸಿದ್ಧವಾಗಿದೇವೆಂದು ಹೇಳಿರುತ್ತಾರಲ್ಲದೆ ರಿಲೀಫ್ ಫಂಡಿಗೆ ದ್ರವ್ಯಸಹಾಯಮಾಡಿದಾರೆ. ಚಿತ್ರಾಲಿನ ಮೆಹತಾರ್ ಯವರೂ, ಖೈಬರ್ ಏಜನ್ಸಿಯಲ್ಲಿರುವ ಬೇರೆ ಬೇರೆ ವಂಶೀಕರೂ ಬೇಕಾಗುವ ಸಹಾಯವನ್ನು ಒದಗಿಸುವುದಾಗಿ ಬರೆದಿದಾರೆ. ಈ ಪ್ರಕಾರ ಬ್ರಿಟಿಷ್ ಗವರ್ನ್‌ಮೆಂಟಿಗೆ ಸಹಾಯಮಾಡಲು ಹಿಂದುಸ್ಥಾನದ ಮೂಲೆ ಕಾಕುನಗಳಲ್ಲಿರುವ ದೇಶೀಯ ರಾಜರುಗಳೂ ಕೂಡ ಬದ್ಧಕಂಕಣರಾಗಿ ಉತ್ಸಾಹವನ್ನು ತೋರ್ಪಡಿಸಿರುತ್ತಾರೆ.

ಹಿಂದುಸ್ಥಾನದ ಎಲ್ಲೆಕಟ್ಟಿನ ಹೊರಗಡೆ ಇರುವ ನೇಪಾಳ ಸಂಸ್ಥಾನದಿಂದಲೂ ಸಹಾಯಸಂಪತ್ತುಗಳು ಒದಗುತ್ತವೆ. ಆ ಸರ್ಕಾರದವರು ತಮ್ಮ ಯುದ್ಧದ ಸೈನ್ಯಗಳನ್ನೆಲ್ಲಾ ಬ್ರಿಟಿಷ್ ಗವರ್ನ್‌ಮೆಂಟಿನವರಿಗೆ ವಹಿಸಿರುವುದಲ್ಲದೆ, ಅಲ್ಲಿನ ಮಂತ್ರಿಯವರು ಸೈನ್ಯಗಳ ಖರ್ಚಿಗಾಗಿಯೂ ಮದ್ದು ಗುಂಡುಗಳನ್ನು ಸಿದ್ಧಪಡಿಸಿಕೊಳ್ಳುವುದಕ್ಕೂ ಮೂರು ಲಕ್ಷ ರೂಪಾಯಿ ಕೊಟ್ಟರು. ಇವರು ಎರಡು ರಿಲೀಫ್ ಫಂಡುಗಳಿಗೂ ಬಹಳ ಹಣ ಚಂದಾ ಕಳುಹಿಸುತ್ತಾರೆ; ಮತ್ತು ಗೂರ್ಖಾ ಸೈನ್ಯವನ್ನು ಯುದ್ಧಭೂಮಿಗೆ ಕಳುಹಿಸುವುದಾದರೆ ಫಿರಂಗಿಗಳನ್ನು ಕೊಂಡುಕೊಳ್ಳುವುದಕ್ಕೆ 30,000 ರೂಪಾಯಿ ಕೊಡುತ್ತೇವೆಂದು ತಿಳಿಸಿದಾರೆ.

ಅತ್ತಲಾಗಿ ಟಿಬೆಟ್ ರಾಜ್ಯದ ಪ್ರಧಾನಗುರುಗಳಾದ ದಲಾಯಿ ಲಾಮಾರವರು ತಮ್ಮ ಟಿಬೆಟ್ ಸೈನಿಕರಲ್ಲಿ 1,000 ಸೈನ್ಯವನ್ನು ಬ್ರಿಟಿಷ್ ಗವರ್ನ್‌ಮೆಂಟಿನವರ ಉಪಯೋಗಕ್ಕೆ ಕಳುಹಿಸಿಕೊಡುವುದಾಗಿಯೂ, ತಮ್ಮ ದೇಶದಲ್ಲಿರುವ ಲಾಮಾ ಎಂಬ ಲಕ್ಷಾಂತರ ಗುರುಗಳು ಇಂಗ್ಲಿಷರಿಗೆ ಜಯವಾಗಲೆಂದೂ, ಯುದ್ಧದಲ್ಲಿ ಮಡಿಯುವವರ ಪ್ರಾಣಗಳಿಗೆ ನೆಮ್ಮದಿಯುಂಟಾಗಲೆಂದೂ ಪ್ರಾರ್ಥಿಸುತ್ತಾ ಬರುವುದಾಗಿಯೂ ತಿಳಿಸಿದಾರೆ.

ಹಿಂದುಸ್ಥಾನದಲ್ಲಿರುವ ಸಕಲ ಪ್ರಜೆಗಳೂ, ಎಲ್ಲಾ ಕೋಮುಗಳೂ, ಎಲ್ಲಾ ಸಂಘಗಳೂ ರಾಜಭಕ್ತಿಯನ್ನು ಪ್ರಕಾಶಪಡಿಸಿ ಕೂಟಗಳನ್ನೂ ಸಭೆಗಳನ್ನೂ ನಡಿಸಿ ವೈಸ್‌ರಾಯರವರಿಗೆ ಅರಿಕೆ ಮಾಡಿಕೊಂಡಿರುತ್ತಾರೆ. ಮದರಾಸಿನ ಜಮೀನ್‌ದಾರರು ಸೇರಿ 500 ಕುದುರೆಗಳನ್ನು ಒದಗಿಸುತ್ತೇವೆಂದು ಹೇಳಿದಾರೆ. ವೈದ್ಯರು ಸಭೆಗಳನ್ನು ನಡಿಸಿ, ಯುದ್ಧಭೂಮಿಯಲ್ಲಿ ತಮ್ಮನ್ನು ಕಳುಹಿಸಿದರೆ ಗಾಯಪಟ್ಟವರಿಗೆ ಚಿಕಿತ್ಸೆ ಮಾಡುವುದಕ್ಕೆ ಸಿದ್ಧರಾಗಿದೇವೆಂದು ಅರಿಕೆ ಮಾಡಿಕೊಂಡಿದಾರೆ. ಅನೇಕರು ಗವರ್ನ್‌ಮೆಂಟಿನವರಿಗೆ ಬೆಂಬಲವಾಗಿ ನಿಂತು ಧಾರಣೆಯನ್ನು ಕಡಮೆ ಮಾಡುವುದಕ್ಕೂ, ಪ್ರಜೆಗಳಲ್ಲಿ ನೆಮ್ಮದಿಯನ್ನೂ ಧೈರ್ಯವನ್ನೂ ಉಂಟುಮಾಡುವುದಕ್ಕೂ ಸಾಹಸಪಡುತ್ತಿದಾರೆ.

ಇದಲ್ಲದೆ ಸೀಮೆಯಲ್ಲಿರುವ ಹಿಂದುಸ್ಥಾನದ ಬೇರೆಬೇರೆ ಪಂಗಡಗಳ ವಿದ್ಯಾರ್ಥಿಗಳೂ, ದೇಶೀಯ ರಾಜರುಗಳೂ ಬ್ರಿಟಿಷ್ ಗವರ್ನ್‌ಮೆಂಟಿನವರಿಗೆ ತಮ್ಮಿಂದ ಆಗುವ ಸಹಾಯವನ್ನೆಲ್ಲಾ ಒದಗಿಸುವುದಾಗಿ ಒಪ್ಪಿ ಕೇಳಿಕೊಂಡಿರುವರು

ಇಂಥಾ ಅಪೂರ್ವವಾದ ರಾಜಭಕ್ತಿ ಪ್ರೀತಿಗಳ ಪ್ರದರ್ಶನವನ್ನೂ ಉತ್ಸಾಹವನ್ನೂ ಪಾರ್ಲಿಮೆಂಟಿನವರು ಕೇಳಿ ಆನಂದಪಟ್ಟು ಹಿಂದುಸ್ಥಾನದವರನ್ನು ತುಂಬಾ ಕೊಂಡಾಡಿದಾರೆ.

ಸಂತೋಷಕೂಟಗಳು.

ಹೊಸಕೋಟೆ.—ತಾ. 7 ನೇ ಸೋಮವಾರ ಸಾಯಂಕಾಲ ವರ್ಗಪಟ್ಟ ಇಲ್ಲಿನ ಹೆಡ್ ಮಾಸ್ಟರ್ ಮ|| ರಾಮಕೃಷ್ಣಯ್ಯನವರನ್ನೂ, ಅ|| ಮಾಸ್ಟರ್ ಮ|| ಗುಂಡಪ್ಪನವರನ್ನೂ ಸತ್ಕರಿಸುವ ಬಗ್ಗೆ ವಿದ್ಯಾರ್ಥಿಗಳೂ, ಇತರ ಮಾಸ್ಟರುಗಳೂ ಸೇರಿ ತೋರಣಾದಿಗಳಿಂದ ಅಲಂಕರಿಸಲ್ಪಟ್ಟಿದ್ದ ಏ. ವಿ. ಸ್ಕೂಲಿನಲ್ಲಿ ಬರಮಾಡಿಸಿದರು, ಕಛೇರಿ ಉದ್ಯೋಗಸ್ಥರೇ ಮೊದಲಾದವರು ಸಭೆಯನ್ನಲಂಕರಿಸಿದ್ದರು. ನಮ್ಮ ಡಾಕ್ಟರು ಮ|| ಶಿಂಗಾರುವೇಲು ಮೊದಲಿಯಾರರು ಅಗ್ರಾಸನವನ್ನು ವಹಿಸಿದರು. ಗರಲ್ಸ್ ಸ್ಕೂಲಿನ ಮ|| ಗೋಪಾಲಯ್ಯನವರು ಹಾರ್ಮೋನಿಯಂ ನುಡಿಸಿ ಆನಂದವನ್ನುಂಟುಮಾಡಿದರು. ಇಬ್ಬರು ವಿದ್ಯಾರ್ಥಿಗಳೂ, ಅ|| ಮಾಸ್ಟರುಗಳೂ ಸೇರಿ ವರ್ಗಪಟ್ಟ ಮಾಸ್ಟರುಗಳ ಗುಣಕಥನವನ್ನು ಬಹು ಸ್ವಾರಸ್ಯವಾಗಿ ನಡಿಸಿದರು. ಅಗ್ರಾಸನರ ಪರವಾಗಿ ಸಬ್ ರಿಜಿಸ್ಟ್ರಾರ್ ಮ|| ಮಿರ್ ಖಾಸಿಂ ಅಲಿಯವರು ಕಾಲೋಚಿತವಾದ ಮಾತುಗಳನ್ನಾಡಿದರು. ವರ್ಗಪಟ್ಟ ಹೆಡ್ ಮಾಸ್ಟರು ಸಂಸರ್ಗಪ್ರೀತಿಯನ್ನುಳ್ಳ ಮಂಡಲಿಯವರನ್ನು ಬಿಟ್ಟು ಅಗಲಲು ತಮಗುಂಟಾಗುವ ಸಂತಾಪವನ್ನು ವಿವರಿಸಿದ ತರುವಾಯ ವಾದ್ಯವು ಪ್ರಾರಂಭವಾದಾಗ ಅಗ್ರಾಸನರವರಿಗೂ ವರ್ಗಪಟ್ಟ ಮಾಸ್ಟರುಗಳಿಗೂ ಹಾರಾತುರಾಯಿಗಳನ್ನು ಒಪ್ಪಿಸಿದ್ದಲ್ಲದೆ ಸಭಿಕರನ್ನೆಲ್ಲಾ ಪುಷ್ಪತಾಂಬೂಲಾದಿಗಳಿಂದ ತೃಪ್ತಿಪಡಿಸಿ ಕೂಟವನ್ನು ಮುಕ್ತಾಯಮಾಡಿದರು. ಮರುದಿನ ವರ್ಗಪಟ್ಟ ಮಾಸ್ಟರುಗಳಿಗೆ ಗರಲ್ಸ್ ಸ್ಕೂಲಿನಲ್ಲೂ ಒಂದು ಕೂಟವು ನಡೆಯಿತು. ಆರ್. ಮ|| ಸಭಾಪತಯ್ಯರವರು ಅಗ್ರಾಸನವನ್ನು ವಹಿಸಿದರು. ಬಾಲಕಿಯರಿಂದ ಮ|| ಗೋಪಾಲಯ್ಯನವರು ಹಾರ್ಮೋನಿಯಂ ಸಹಾಯದಿಂದ ಇಂಪಾದ ಗಾನವನ್ನು ಹೇಳಿಸಿದರು. ತರುವಾಯ ಹೆಡ್ ಮಾಸ್ಟರ್ ಮ|| ವೆಂಕಟಸುಬ್ಬಯ್ಯನವರು ವರ್ಗಪಟ್ಟ ಸ್ಕೂಲ್ ಮಾಸ್ಟರುಗಳ ಗುಣಕಥನವನ್ನು ಶ್ಲೋಕರೂಪವಾಗಿಯೂ, ವಚನರೂಪವಾಗಿಯೂ ಮಾಡಿದರು. ಗಂಧಪುಷ್ಪ ಫಲ, ತಾಂಬೂಲಾದಿಗಳು ಹಂಚಲ್ಪಟ್ಟು ಕೂಟವು ಮುಕ್ತಾಯವಾಯಿತು.

ತುರುವೇಕೆರೆ.—ಇಲ್ಲಿಂದ ತಿಪಟೂರಿಗೂ ಚನ್ನರಾಯಪಟ್ಟಣಕ್ಕೂ ವರ್ಗಪಟ್ಟ ಎ. ವಿ. ಸ್ಕೂಲ್ ಹೆಡ್ ಮಾಸ್ಟರ್ ಮ|| ಎಚ್. ವಾಸುದೇವರಾಯರನ್ನೂ, ಡಾ|| ಜಿ. ಚಿನ್ನಯ್ಯನವರನ್ನೂ ಸನ್ಮಾನಪೂರ್ವಕ ಕಳುಹಿಕೊಡುವುದಕ್ಕಾಗಿ ಎ.ವಿ. ಸ್ಕೂಲ್ ಕಟ್ಟಡದಲ್ಲಿ ಎರಡು ದಿನ ಸಂತೋಷಕೂಟಗಳು ನಡೆದವು. ಈ ಸಭೆಗಳಲ್ಲಿ ಗ್ರಾಮದ ಪ್ರಮುಖರುಗಳೂ, ಸಾಹುಕಾರರೂ, ವರ್ತಕರೂ, ಎಲ್ಲಾ ಸರ್ಕಾರಿ ನೌಕರರೂ ವಿದ್ಯಾರ್ಥಿಗಳೂ, ಸೇರಿದ್ದರಲ್ಲದೆ ಡೆಪ್ಯುಟಿ ಅಮಲ್ದಾರ್ ಮ|| ಎಸ್. ಸೀತಾರಾಮಯ್ಯನವರು ಅಗ್ರಾಸನವನ್ನು ವಹಿಸಿದ್ದರು. ಮ|| ವಾಸುದೇವರಾಯರು ಸರ್ಕಾರಿ ಕೆಲಸದಲ್ಲಿ ಪ್ರವೇಶ ಮಾಡಿದ್ದು ಇದೇ ಪ್ರಥಮವಾದಾಗ್ಯೂ, ಕೇವಲ ತಮ್ಮ ವಿದ್ಯಾಬಲದಿಂದ ಅಸದೃಶವಾದ ಆಳ್ವಿಕೆ ಸಾಮರ್ಥ್ಯದಿಂದ ಸ್ಕೂಲ್ ಕೆಲಸದಲ್ಲಿ ತೋರಿಸಿದ ಶ್ರದ್ಧೆಯು ವಿಶೇಷವಾಗಿದೆ. ಇಲ್ಲಿ ಒಂದು ಟೀಚರ್ಸ್ ಅಸೋಸಿಯೇಷನ್ ಮತ್ತು ಬಾಯ್ಸ್ ಯೂನಿಯನ್ ಸಹ ಸ್ಥಾಪಿಸಲ್ಪಟ್ಟು ಕ್ರಮವಾಗಿ ನಡೆಯುತ್ತಿವೆ. ಇವರು ಅ|| ಮಾಸ್ಟರುಗಳ, ವಿದ್ಯಾರ್ಥಿಗಳ ಮತ್ತೂ ಪುರಜನರ ಪ್ರೀತಿವಿಶ್ವಾಸಗಳಿಗೆ ಪಾತ್ರರಾಗಿದ್ದರು. ಡಾ|| ಜಿ. ಚಿನ್ನಯ್ಯನವರು ಇಲ್ಲಿಗೆ ಬಂದು 5-6 ವರ್ಷಗಳಾದಾಗ್ಯೂ ಇವರಿಗೂ ಪ್ರಜೆಗಳಿಗೂ ಇದ್ದ ಪರಸ್ಪರ ಪ್ರೀತಿಯಿಂದ ಸ್ವಲ್ಪಕಾಲ ಮಾತ್ರ ಇವರೊಂದಿಗಿದ್ದಂತೆ ಅಭಿಪ್ರಾಯಪಡುತ್ತಿರುವರು. ಇವರು ನಿರಾಲಸ್ಯದಿಂದ ಅಹೋರಾತ್ರಿಗಳಲ್ಲಿ ಪ್ರತಿಯೊಬ್ಬ ರೋಗಿಯನ್ನೂ ಸಹನೆಯಿಂದ ಪರೀಕ್ಷಿಸಿ ಉತ್ತಮವಾದ ಚಿಕಿತ್ಸೆ ಮಾಡುತ್ತಿದ್ದರಲ್ಲದೆ ಎಷ್ಟೋ ಸಂದರ್ಭಗಳಲ್ಲಿ ಈ ಆಸ್ಪತ್ರೆಗಿಂತಲೂ ಮೇಲ್ಪಟ್ಟವುಗಳಿಗೆ ಹೋಗಿ ಚಿಕಿತ್ಸೆ ಹೊಂದತಕ್ಕ ರೋಗಿಗಳನ್ನು ಕೂಡ ಇಲ್ಲಿಯೇ ತೃಪ್ತಿಕರವಾಗಿ ಇಲಾಜು ಮಾಡಿರುವರು. ಈ ಉಭಯತ್ರರಿಂದ ವಿದ್ಯೆ, ಆರೋಗ್ಯಾದಿಗಳಲ್ಲಿ ತಮಗುಂಟಾಗಿರುವ ಅಸಾಧಾರಣವಾದ ಪ್ರಯೋಜನಗಳನ್ನು ಕುರಿತು ಮೊದಲನೇ ದಿನದ ಸಭೆಯಲ್ಲಿ ಗ್ರಾಮಸ್ಥರ ಪರವಾಗಿ ಮ|| ವಿ. ನಾರಣಪ್ಪನವರೂ, ವಿದ್ಯಾರ್ಥಿಗಳ ಮತ್ತು ಉಪಾಧ್ಯಾಯರುಗಳ ಪರವಾಗಿ ಮ|| ರಾಮಚಂದ್ರರಾಯರೂ, ಟೀಚರ್ಸ್ ಅಸೋಸಿಯೇಷನ್ ಪರವಾಗಿ ಮ|| ಎಚ್. ಗುಂಡಪ್ಪನವರೂ ಕೃತಜ್ಞತೆಗಳನ್ನು ತೋರ್ಪಡಿಸಿದರು. 2 ನೇ ದಿನದ ಸಭೆಯಲ್ಲಿ ಕೋಆಪರೆಟಿವ್ ಸೊಸೈಟಿ ಸೆಕ್ರೆಟರಿ ಮ|| ಟಿ. ಜಿ. ನಾಗಪ್ಪರವರು ಗ್ರಾಮಸ್ಥರ ಪರವಾಗಿ ಡಾಕ್ಟರವರ ಗುಣಕಥನ ಪೂರ್ವಕ ತಮ್ಮ ಕೃತಜ್ಞತೆಯನ್ನು ಪ್ರಕಾಶಗೊಳಿಸಿದರು. ಈ ಗ್ರಾಮದ ಪ್ರಮುಖ ದೊಡ್ಡ ಮನುಷ್ಯರು ಇಂಥಾ ಸಂದರ್ಭಗಳಲ್ಲಿ ಪದೇ ಪದೇ ನಡಿಸತಕ್ಕ ಸನ್ಮಾನದ ವಿಷಯದಲ್ಲೂ, ಡಾಕ್ಟರವರ ವಿಷಯದಲ್ಲೂ ಮ|| ಎಚ್. ಗುಂಡಪ್ಪನವರು ತಮ್ಮ ವಂದನೆಗಳನ್ನು ಸಮರ್ಪಿಸಿದರು. ಅಗ್ರಾಸನಾಧಿಪತಿಗಳು ವಿದ್ಯೆ, ಆರೋಗ್ಯಾದಿ ವಿಚಾರಗಳಲ್ಲಿ ಆಯಾ ದಿನ ಅಪ್ಪಣೆ ಕೊಡಿಸಿದ ಭಾಷಣವು ಜನರಿಗೆ ಸುಶ್ರಾವ್ಯವಾಗಿಯೂ, ತಿಳುವಳಿಕೆಯನ್ನು ಹೆಚ್ಚಿಸತಕ್ಕವುಗಳಾಗಿಯೂ ಇದ್ದಿತು. ಮನೋಹರವಾದ ಯಕ್ಷಿಣಿಯೂ, ಗ್ರಾಮಾಫೋನೂ ಮತ್ತೂ ಇಂಪಾದ ಗಾಯನವೂ ನಡೆದು ಗಂಧ, ಪುಷ್ಪ, ತಾಂಬೂಲಾದಿಗಳಿಂದ ಸಭಿಕರನ್ನು ತೃಪ್ತಿಗೊಳಿಸಿ ಅಗ್ರಾಸನಾಧಿಪತಿಗಳಿಗೆ ವಂದನಾಪೂರ್ವಕ ಮಂಗಳ ವಾದ್ಯದೊಡನೆ ಸಭೆಗಳನ್ನು ಮುಕ್ತಾಯ ಮಾಡಿದರು.

ತ್ಯಾಮಗೊಂಡ್ಲು.—ಈ ಊರಿನಿಂದ ಶಿಕಾರಿಪುರಕ್ಕೆ ವರ್ಗಪಟ್ಟ ಹೆಡ್ ಮಾಸ್ಟರ್ ಮ|| ಡಿ. ಕೃಷ್ಣರಾಯರಿಗೂ, ಬೆಂಗಳೂರಿಗೆ ವರ್ಗಪಟ್ಟ ಸಂಸ್ಕೃತ ಪಂಡಿತರು ವೇ|| ಡಿ. ಕೃಷ್ಣಮಾಚಾರ್ಯರಿಗೂ ಪ್ರಜೆಗಳು ಸೇರಿ ಕಳೆದ ಸೋಮವಾರ ರಾತ್ರಿ ಇಲ್ಲಿನ ಎ. ವಿ. ಸ್ಕೂಲ್ ಕಟ್ಟಡದಲ್ಲಿ ಒಂದು ಎಂಟರ್

ಬೇರೆ ಮೇಲು ಕಟ್ಟಿದ್ದರು. ಸಭಾಮಂದಿರವು ಮನೋಹರವಾಗಿ ಅಲಂಕರಿಸಲ್ಪಟ್ಟಿತ್ತು. ಈ ಪ್ರಾಂತ್ಯದ ಪ್ರಮುಖ ಪ್ರಜೆಗಳೂ, ಮುಖ್ಯಾಧಿಕಾರಿಗಳೂ ಈ ಸಂತೋಷ ಕೂಟದಲ್ಲಿ ಸೇರಿದ್ದರು. ಪ್ರಾರಂಭದಲ್ಲಿ ಹಾರ್ಮೋನಿಯಂ ವಾದ್ಯವೂ, ಇಂಪಾದ ಸಂಗೀತವೂ ಸಭಿಕರಿಗೆ ಆನಂದವನ್ನುಂಟುಮಾಡಿದವು. ಬಳಿಕ ಎ. ವಿ. ಸ್ಕೂಲಿನ ದೇವರಪ್ಪನವರು ವರ್ಗವಿಟ್ಟಿರುವವರುಗಳಿಂದ ಇಲ್ಲಿನ ಜನರಿಗೆ ವಿದ್ಯಾಭ್ಯಾಸದ ವಿಷಯದಲ್ಲಿ ಉಂಟಾಗಿರತಕ್ಕ ಉಪಕಾರಗಳನ್ನು ಕುರಿತು ಬಹು ಸ್ವಾರಸ್ಯವಾಗಿ ಉಪನ್ಯಾಸಮಾಡಿದರು. ಬಳಿಕ ಶ್ರೀ. ಶ್ರೀಪಾದರಾಯರು ಸಂಸ್ಕೃತ ವಿದ್ಯೆಯೇ ಎಲ್ಲಕ್ಕೂ ಮೂಲಾಧಾರವಾದುದೆಂದೂ, ನಮ್ಮ ಗ್ರಂಥಗಳೆಲ್ಲವೂ ಅದೇ ಭಾಷೆಯಲ್ಲಿರುವವೆಂದೂ, ನಿರರ್ಗಳವಾದ ವಾಚಾಲತೆ ಇಲ್ಲದಿರುವ ಪಕ್ಷದಲ್ಲಿ ಯಾವ ವಿದ್ಯೆಯನ್ನೇ ಆಗಲಿ ಎಷ್ಟು ಮಟ್ಟಿಗೆ ಕಲಿತಿದ್ದರೂ ಪ್ರಾಶಸ್ತ್ಯ ಬರಲಾರದೆಂದೂ, ಇಂತಹ ಮಾತೃಭಾಷೆಯಾದ ಸಂಸ್ಕೃತದಲ್ಲಿ ಪಾಂಡಿತ್ಯವೂ ಅಸದೃಶವಾದ ವಾಚಾಲತೆಯೂ ಈ ಆಚಾರ್ಯರಲ್ಲಿ ಸಮ್ಮಿಲಿತವಾಗಿರುವವೆಂದೂ, ಮಹೋಪಕಾರಿಗಳೂ ವಿದ್ಯಾಪಕ್ಷಪಾತಿಗಳೂ ಪ್ರಜಾಹಿತೈಷಿಗಳೂ ಆದ ಇವರು ಪಟ್ಟಣಕ್ಕೆ ಪ್ರಯಾಣಮಾಡುವುದು ಇಲ್ಲಿನವರ ದೌರ್ಭಾಗ್ಯವೆಂದೂ ಉಪನ್ಯಾಸಮಾಡಿದರು. ವೇ|| ನರಸಿಂಹ ಸೋಮಯಾಜಿಗಳು ಅವರುಗಳಿಂದ ಉಂಟಾಗುತ್ತಿದ್ದ ಸೌಕರ್ಯಗಳನ್ನು ಕುರಿತು ಲಲಿತವಾಗಿ ವಿವರಿಸಿದರು. ಆ ಮೇಲೆ ಈ ಆಚಾರ್ಯರಲ್ಲಿ 26 ವರ್ಷಗಳಿಂದ ವಿದ್ಯೆ ಕಲಿತು ಇವರಿಂದಲೇ ಪುರೋಭಿವೃದ್ಧಿಗೆ ಬಂದ ಇವರ ವಿದ್ಯಾರ್ಥಿಗಳ ಪರವಾಗಿ ಡಾಬಸ್‌ಪೇಟೆ ಎ. ವಿ. ಸ್ಕೂಲಿನ ನರಹರಿಶಾಸ್ತ್ರಿಗಳು ಸಕಲಜನ ಮನೋರಂಜಕವಾದ ಒಂದು ಉಪನ್ಯಾಸವನ್ನು ಮಾಡಿದರು. ಈ ಆಚಾರ್ಯರಲ್ಲಿರುವ ಮೈತ್ರಿ, ಪ್ರಜಾವಾತ್ಸಲ್ಯ, ಅನುರಾಗ, ಕಾರ್ಯದಕ್ಷತೆ, ವಾಗ್ವೈಖರಿ, ಸದುಪಾಧ್ಯಾಯ ಲಕ್ಷಣ ಮುಂತಾದ ಸದ್ಗುಣಗಳು ತಕ್ಕ ನಿದರ್ಶನಗಳೊಡನೆ ಈ ಉಪನ್ಯಾಸದಲ್ಲಿ ಪ್ರತಿಪಾದಿಸಲ್ಪಟ್ಟವು. ಇವರು ವಿದ್ಯಾರ್ಥಿಗಳನ್ನು ಒಲಿಸಿಕೊಂಡು ತಮ್ಮ ವಿದ್ಯಾಭ್ಯಾಸದ ಕೆಲಸಕ್ಕೆ ಅನುಕೂಲರನ್ನಾಗಿ ಮಾಡಿಕೊಳ್ಳತಕ್ಕ ಸಾಮರ್ಥ್ಯವೂ, ಸಹಜವಾದ ಅನುರಾಗವೂ, ನಿಷ್ಪಕ್ಷಪಾತವಾದ ಬೋಧನೆಯೂ, ವಿದ್ಯಾರ್ಥಿಗಳಲ್ಲಿ ಪುತ್ರನಿರ್ವಿಶೇಷವಾದ ಪ್ರೇಮವೂ ಉಪಾಧ್ಯಾಯರಲ್ಲಿ ಇದ್ದ ಹೊರತು ವಿದ್ಯಾರ್ಥಿಗಳಿಗೂ ಉಪಾಧ್ಯಾಯರಿಗೂ ತಾದಾತ್ಮ್ಯ ಉಂಟಾಗಲಾರದು. ಈ ಗುಣಗಳೆಲ್ಲವೂ ಈ ಆಚಾರ್ಯರಲ್ಲಿ ರೂಢಮೂಲವಾಗಿದ್ದುದರಿಂದಲೇ ಇವರಲ್ಲಿ ಅನೇಕರು ವಿದ್ಯಾಭ್ಯಾಸಮಾಡಿ ಮಹತ್ಪ್ರಯೋಜನವನ್ನು ಪಡೆದಿರುವರು. ಇವರಲ್ಲಿ ವಿದ್ಯಾಭ್ಯಾಸ ಮಾಡಿದ ಅನೇಕರು ದೊಡ್ಡ ದೊಡ್ಡ ಸ್ಕೂಲುಗಳ ಹೆಡ್ ಮಾಸ್ಟರಾಗಿಯೂ, ಇನ್ನು ಕೆಲವರು ಇತರ ಇಲಾಖೆಗಳಲ್ಲಿ ಜವಾಬ್ದಾರಿಕೆಯುಳ್ಳ ನೌಕರರಾಗಿಯೂ ಇರುವುದೇ ಇದಕ್ಕೆ ನಿದರ್ಶನವಾಗಿದೆ. ಅವರಲ್ಲಿ ವಿದ್ಯಾಭ್ಯಾಸ ಮಾಡಿದ ವಿದ್ಯಾರ್ಥಿಗಳ ಇಷ್ಟೊಂದು ಶ್ರೇಯೋಭಿವೃದ್ಧಿಗೂ ಮೂಲಕಾರಣರೂ, ಬದ್ಧಾದರರೂ ಆದ ಈ ಉಪಾಧ್ಯಾಯರನ್ನಗಲಿರುವುದು ಅತ್ಯಂತ ಖೇದಕರವಾಗಿರುವುದು ಎಂಬೀ ವಿಷಯಗಳನ್ನು ಹೇಳಿ, ಅವರು ಕಲ್ಯಾಣ ನಗರಕ್ಕೇ ದಯಮಾಡಿಸುವವರಾಗಿರುವುದರಿಂದ ಇವರಿಗೂ ಇವರ ಕುಟುಂಬದವರಿಗೂ ಕಲ್ಯಾಣಪರಂಪರೆಗಳನ್ನೇ ಉಂಟುಮಾಡಲೆಂದು ಪರಮೇಶ್ವರನನ್ನು ಪ್ರಾರ್ಥಿಸುವುದರ ಮೂಲಕ ತಮ್ಮ ಉಪನ್ಯಾಸವನ್ನು ಪೂರ್ತಿಮಾಡಿದರು. ಮ|| ಡಿ. ಕೃಷ್ಣಮೂರ್ತ್ಯಾಚಾರ್ಯರು ಈ ಉಪನ್ಯಾಸಗಳಿಗೆ ಪ್ರತಿಯಾಗಿ—ತಾವುಗಳೆಲ್ಲರೂ ಇಷ್ಟು ಮಟ್ಟಿಗೆ ನನ್ನನ್ನು ಗೌರವಿಸಿ ನನಗೆ ಸನ್ಮಾನಮಾಡಲು ತಕ್ಕಷ್ಟು ಕಾರಣವಿದೆಯೆಂದು ನಾನೆಂದಿಗೂ ಹೇಳಲಾರೆನು. ಇಷ್ಟಕ್ಕೆಲ್ಲ ನನಗೆ ಅರ್ಹತೆ ಸಾಲದು. ಈ ಮರ್ಯಾದೆಯೆಲ್ಲವೂ ಸರ್ವಶಕ್ತನಾದ ಭಗವಂತನಿಗೆ ಸಹಜವಾಗಿ ಸಲ್ಲತಕ್ಕದು. ತಾವೆಲ್ಲರೂ ಇಂತಹ ವಿಸ್ತಾರವಾದ ಸಭೆಯಲ್ಲಿ ನನಗೆ ಇಷ್ಟು ಮಟ್ಟಿಗೆ ಸನ್ಮಾನಮಾಡಿದುದಕ್ಕಾಗಿ ತುಂಬ ಕೃತಜ್ಞನಾಗಿರುವೆನು ಎಂದು ಉತ್ತರವನ್ನು ಹೇಳಿ ಶ್ರೀಮನ್ ಮಹಾರಾಜರವರ ಮತ್ತು ಶ್ರೀಮದಿಂಡಿಯಾ ಚಕ್ರವರ್ತಿಯವರ ಶ್ರೇಯಸ್ಸನ್ನು ಬಯಸುವುದರ ಮೂಲಕ ತಮ್ಮ ಭಾಷಣವನ್ನು ಪೂರ್ತಿಮಾಡಿದರು. ತರುವಾಯ ಸಭಿಕರ ಪರವಾಗಿ ತಿಮ್ಮಣ್ಣಶಾಸ್ತ್ರಿಗಳು ಹೆಡ್ ಮಾಸ್ಟರಿಗೂ ವೇ|| ಆಚಾರ್ಯರಿಗೂ ಹಾರಗಳನ್ನು ಹಾಕಿ ಕುಂಕುಮಗಳನ್ನರ್ಪಿಸಿದರು. ವೇ|| ಆಚಾರ್ಯರ ಸದುಪದೇಶದಂತೆ ಸಭಿಕರೆಲ್ಲರೂ ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಮಂಗಳವುಂಟಾಗಲೆಂದು ಜಯಘೋಷವೆಸಗಿ ತಮ್ಮ ರಾಜಭಕ್ತಿಯನ್ನು ಪ್ರದರ್ಶಿಸಿ ಕೂಟವನ್ನು ಮುಕ್ತಾಯಗೊಳಿಸಿದರು.

ಬಾತ್ಮೀದಾರರಿಗೆ ನೋಟೀಸ್.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಕರೆಸ್ಪಾಂಡೆನ್ಸ್.

ಸ್ಕೂಲ್ ಬೇಕು.

ಅಯ್ಯಾ,—ತಮ್ಮ ಪತ್ರಿಕೆಯಲ್ಲಿ ತೀರ್ಥಹಳ್ಳಿ ತಾಲ್ಲೂಕು ತೀರ್ಥಮುತ್ತೂರಲ್ಲಿ ಒಂದು ಸ್ಕೂಲ್ ಬೇಕೆಂದು ಓರ್ವ ಪ್ರಾರ್ಥಕರು ಬರೆದಿರುವದು ಸರಿಯಷ್ಟೆ. ಗೌರ್ನಮೆಂಟಿನವರು ಪೂರ್ವದಲ್ಲಿ ದಯಪಾಲಿಸಿದ್ದ ಸ್ಕೂಲ್ ಮಾಸ್ಟರ ಅನಾದರಣೆಯಿಂದ ವಜಾ ಆಗಿ ನಾಲ್ಕೈದು ಸಂವತ್ಸರಗಳಾಯಿತು. ಹೊಸತು ಸ್ಕೂಲ್ ಆಗಬೇಕೆಂದು ಅನೇಕ ಸಾರಿ ಗೌರ್ನಮೆಂಟಿಗೆ ಮನವೇ ಮಾಡಿಕೊಂಡಿರುವುದು ನಿಜ. ಅವರೆ ಡೆಪ್ಯುಟಿ ಕಮಿಷನರ್ ಸಾಹೇಬರು ದಯಮಾಡಿದ ಕಾಲದಲ್ಲಿ ಸ್ಕೂಲ್ ಬೇಕೆಂದು ಗ್ರಾಮಸ್ಥರು ಪ್ರಾರ್ಥಿಸಿದುದೂ ನಿಜ. ಅಮಲ್ದಾರರು ಇಲ್ಲಿಗೆ ದಯಮಾಡಿದ ಕಾಲದಲ್ಲಿ ಸ್ಕೂಲ್ ಬಗ್ಗೆ ಮೀಟಿಂಗ್ ಮಾಡಿ ಸ್ಕೂಲ್ ಕಟ್ಟಡದ ಬಗ್ಗೆ ಸುಮಾರು 1,200 ರೂಪಾಯಿ ಅಂದಾಜು ಮಾಡಿದರೇ ವಿನಹ ಹನ್ನೆರಡು ಸಾವಿರ ಬೇಕೆಂದು ಅಂದಾಜು ಮಾಡಿಲ್ಲ. ಹಾಗೂ 600 ರೂಪಾಯಿ ತಾಲ್ಲೂಕ್ ಬೋರ್ಡಿಗೆ ಶ್ರೀಮಠದವರು ಜಮಾ ಮಾಡಿರುತ್ತಾರೆ. ಬಾಕಿ 600 ರೂಪಾಯಿಗೆ ಗೌರ್ನಮೆಂಟಿನಿಂದ ಸಾಂಕ್ಷನ್ ಆಗಬೇಕೆಂದು ಅಮಲ್ದಾರರು ಶಿಫಾರಸು ಮಾಡಿರಬಹುದೆಂದು ಕಾಣುತ್ತೆ. ಆದರೆ ಇನ್ನು ಆವ ಸಂಗತಿಯೂ ಗೊತ್ತಾಗಲಿಲ್ಲ. ವಿದ್ಯಾ ಇಲಾಖಾ ಅಧಿಕಾರಿಗಳು ಗ್ರಾಮಕ್ಕೊಂದು ಸ್ಕೂಲ್ ದಯಪಾಲಿಸುವರೆಂದು ಗ್ರಾಮಸ್ಥರು ಹಾರೈಸಿಕೊಂಡಿರುತ್ತಾರೆ.

ಸ್ಕೂಲ್ ಅಭಿಮಾನಿ.

ಕಣ್ಣೆರಡೂ ಸಮಾನವಲ್ಲವೇ?

ಅಯ್ಯಾ,—ಈಗ ನಮ್ಮ ದಯಾಳುಗಳಾದ ಸರ್ಕಾರದವರು ಸರಿಯಾದ ಯೋಗ್ಯತೆಯುಳ್ಳ ಸ್ಕೂಲ್ಮಾಸ್ಟರುಗಳು ಸಮರ್ಪಕವಾಗಿ ಕೆಲಸಮಾಡಲು ಅವರುಗಳಿಗೆ ಸರಿಯಾದ ಸಂಬಳಗಳನ್ನು ಕೊಡಬೇಕೆಂದು ಯೋಚಿಸಿ ಎ. ವಿ. ಸ್ಕೂಲ್ಮಾಸ್ಟರುಗಳಿಗೆ ಗ್ರೇಡುಗಳನ್ನು ಕೊಟ್ಟಿರುವುದು ಸರಿಯಷ್ಟೆ. ಆದರೆ ಈ ಉದ್ದೇಶವು ವಿ. ಇ. ಸ್ಕೂಲುಗಳ ವಿಷಯದಲ್ಲಿ ಸರ್ಕಾರದವರಿಗೆ ಹುಟ್ಟಿದಂತೆ ಕಾಣಲಿಲ್ಲ. ಎ. ವಿ. ಸ್ಕೂಲುಗಳಲ್ಲಿ ಈಗ ಗ್ರೇಡುಗಳನ್ನು ಪಡೆದಿರುವಂಥವರು ಎಂದರೆ ಸರ್ವಿಸ್, ಯೋಗ್ಯತೆ, ಕೆಲಸ ಮೊದಲಾದುವುಗಳಲ್ಲಿ ಸಮನಾದವರು ಅಥವಾ ಅವರಿಗಿಂತಲೂ ಹೆಚ್ಚಿನವರು ವಿ. ಇ. ಸ್ಕೂಲುಗಳಲ್ಲಿ ಎಷ್ಟು ಜನರಿಲ್ಲ? ಕೆಲಸದಲ್ಲಿ ಅವರಿಗೂ ಇವರಿಗೂ ಏನು ವ್ಯತ್ಯಾಸ? ವಿದ್ಯಾ ಇಲಾಖೆಗೆ ಉಪಾಧ್ಯಾಯಮಂಡಲಿಯೆಲ್ಲಾ ಮಕ್ಕಳಲ್ಲವೇ? ತಾಯಿತಂದೆಗಳು ತಮ್ಮ ಮಕ್ಕಳಿಬ್ಬರಲ್ಲಿ ಒಬ್ಬನಿಗೆ ಹೊಟ್ಟೆಗೆ ಹಾಕಿ ಇನ್ನೊಬ್ಬನಿಗೆ ಹಾಕದಿದ್ದರೆ ಅದು ನ್ಯಾಯವೇ? ಮನುಷ್ಯನಿಗೆ ಕಣ್ಣುಗಳೆರಡೂ ಸಮಾನವಲ್ಲವೆ? ಎರಡು ಕಣ್ಣುಗಳಿಗೂ ಯಾತನೆಗಳೊದಗಿದಾಗ ಒಂದು ಕಣ್ಣಿಗೆ ಮಾತ್ರ ಔಷಧೋಪಚಾರ ಮಾಡಿದರೆ ಸಾಕೇ? ಔಷಧೋಪಚಾರವಿಲ್ಲದ ಕಣ್ಣು ಯಾತನೆಯನ್ನನುಭವಿಸಿ ನಾಶವಾದರೆ ಒಟ್ಟು ದೇಹಕ್ಕೇ ನಷ್ಟವಲ್ಲವೇ? ಈ ಅಂಶಗಳನ್ನೆಲ್ಲ ದಯಾಳುಗಳೆಂದು ಕೀರ್ತಿಪಡೆದಿರುವ ನಮ್ಮ ಸರ್ಕಾರದವರು ಇದುವರೆಗೇ ಯೋಚಿಸಿದಾರೆಂದು ನನಗೆ ತೋರಿದ್ದರೂ ಬಡ ವಿ. ಇ. ಸ್ಕೂಲ್ಮಾಸ್ಟರುಗಳು ಗೋಳಾಡಿ ಕಣ್ಣು ಕಳೆದುಕೊಳ್ಳುವುದರೊಳಗೆ ಸಾವಕಾಶಮಾಡದೆ ಅವರುಗಳು ಸಮರ್ಪಕವಾಗಿ ಕೆಲಸಮಾಡಿ ವಿದ್ಯಾಭ್ಯಾಸಕ್ಕೆ ಅಸ್ತಿಭಾರ ಹಾಕಿಕೊಡುವ ಅವರನ್ನು ಅಸ್ತಿಭಾರದಲ್ಲಿ ವ್ಯತ್ಯಾಸಪಡಿಸದಂತೆ ಮಾಡಬೇಕೆಂದು ಪ್ರಾರ್ಥನೆ.

ವೆಂಕಟಗಿರಿಯಪ್ಪ, ಶ್ಯಾನುಭೋಗ್.

ಜರ್ಮನಿಯವರ ವಿಮಾನಯಂತ್ರವೋ! ಅಥವಾ ಗ್ರಹವೋ?

ಅಯ್ಯಾ,—ಅನೇಕ ಜನರು ಈಗ ಯೂರೋಪ್ ಖಂಡದಲ್ಲಿ ಜರುಗುತ್ತಿರುವ ಯುದ್ಧದ ದೆಸೆಯಿಂದ ನಿಷ್ಕಾರಣವಾಗಿ ನಾನಾ ವಿಧವಾದ ಭಯಭ್ರಾಂತಿಗಳಿಗೆ ಒಳಗಾಗಿದಾರೆ. ಹೇಗೆಂದರೆ ಕಳೆದ ವಾರ ಜರ್ಮನರ ವಿಮಾನವು ಬೆಂಗಳೂರು, ಕೋಲಾರ, ಮಂಡ್ಯ, ಮುಂತಾದ ಪ್ರಾಂತ್ಯಗಳಲ್ಲಿ ರಾತ್ರಿವೇಳೆ ಅಂತರಿಕ್ಷದಲ್ಲಿ ಸಂಚರಿಸುತ್ತಿದ್ದುದನ್ನು ಕಣ್ಣಾರ ಕಂಡೆವೆಂದು ಕೆಲವರು ಗಾಳಿವರ್ತಮಾನವನ್ನು ಹಬ್ಬಿಸಿದಾರೆ. ಇದಕ್ಕೆ ಸರಿಯಾಗಿ ಇದೇ ತಿಂಗಳು 13 ನೇ ತಾ. ಭಾನುವಾರ ರಾತ್ರಿ 8 ಘಂಟೆ ಸಮಯದಲ್ಲಿ ರಾಜಧಾನಿಯ ಕೆಲವು ಜನರು ಪಶ್ಚಿಮ ಭಾಗದಲ್ಲಿ ಆಕಾಶದಲ್ಲಿ ಕಾಣಿಸಿದ-ಒಂದು ದೊಡ್ಡ ಬೆಳಕನ್ನು ನೋಡಿ ಅದೇ ವಿಮಾನ ಯಂತ್ರವೆಂತಲೂ, ಹಿಂದೆ ಬೆಂಗಳೂರು, ಕೋಲಾರ, ಮಂಡ್ಯ, ಮುಂತಾದ ಕಡೆ ಸಂಚರಿಸಿದ ವಿಮಾನವು ಇದೇ ಎಂತಲೂ ಮನಸ್ಸಿಗೆ ತೋರಿದ ಹಾಗೆ ಮಾತನಾಡುತ್ತಾ ಭಯಪಡುತ್ತಿದ್ದರು. ಆ ದಿನ ರಾತ್ರಿ ಆಕಾಶದಲ್ಲಿ ಒಂದು ದೊಡ್ಡ ಬೆಳಕು ಪ್ರಕಾಶಿಸುತ್ತಾ ಇದ್ದದ್ದೇನೋ ನಿಜ. ಆದರೆ ಅದು ವಿಮಾನವಲ್ಲ; ಅದು ಶುಕ್ರಗ್ರಹ. ಈ ಗ್ರಹವು ಎಲ್ಲಾ ಗ್ರಹಗಳಿಗಿಂತಲೂ ಹೆಚ್ಚು ಪ್ರಕಾಶಪೂರ್ಣವಾಗಿರುತ್ತದೆ. ಭೂಮಿಯು ಪಶ್ಚಿಮದಿಂದ ಪೂರ್ವಕ್ಕೆ ತಿರುಗುತ್ತಾ ಇರುವುದರಿಂದ ಈ ಗ್ರಹವು ಪೂರ್ವದಿಂದ ಪಶ್ಚಿಮಕ್ಕೆ ಸಂಚಾರ ಮಾಡುವಂತೆ ಕಾಣಿಸುತ್ತದೆ. ಮತ್ತು ಆಕಾಶವಿಮಾನವು ಒಂದು ವೇಳೆ ಈ ಕಡೆ ಸಂಚರಿಸಿದ್ದೇ ಆದರೆ ಅದರ ಭಯಂಕರವಾದ ಶಬ್ದವು ನಮಗೆ ಕೇಳಿಸಬೇಕು. ಆದಕಾರಣ ಅಂತರಿಕ್ಷದಲ್ಲಿ ರಾತ್ರಿವೇಳೆ ಕಾಣಿಸುವ ಬೆಳಕು ಜರ್ಮನಿಯವರ ವಿಮಾನವಲ್ಲವೆಂದೂ, ಅದು ಶುಕ್ರಗ್ರಹನೆಂದೂ ತಿಳಿಯಬೇಕು. ಜನರು ಗಾಳಿವರ್ತಮಾನಗಳಿಗೆ ಕಿವಿಗೊಟ್ಟು ಭ್ರಾಂತಿಪಡಬಾರದು.

ಮೈಸೂರು. ನಿಮ್ಮ ಪತ್ರಿಕಾ ವಾಚಕ.

[ವಿದ್ಯೆ, ವಿವೇಕ, ಪರಿಚಯ ಇಲ್ಲದ ಅನೇಕ ಜನರು ಈ ವಿಚಾರದಲ್ಲಿ ಬಗೆಬಗೆಯಾಗಿ ಮಾತನಾಡುವುದನ್ನು ಕೇಳಿರುತ್ತೇವಾದದ್ದರಿಂದ ಈ ಬಾತ್ಮಿಯನ್ನು ಪ್ರಕಟಮಾಡಲು ಸಂತೋಷಿಸುವೆವು.—ಎಡಿ.]

ಜಮೀನು ದರಖಾಸ್ತು.

ಅಯ್ಯಾ,—ಒಬ್ಬ ಬಡವನು ಜಮೀನಿಗೆ ದರಖಾಸ್ತು ಮಾಡಿದರೆ ಅವನು ಅನೇಕ ಕಷ್ಟನಷ್ಟಗಳಲ್ಲಿ ಬಿದ್ದು ಏಳಬೇಕೆಂಬುವುದು ಸಕಲರಿಗೂ ತಿಳಿದಿರುತ್ತದೆ. ಇಷ್ಟು ಕಷ್ಟಪಟ್ಟು ಕೂಡ ಕಡೇಲಿ ಜಮೀನು ಹರಾಜಿಗೆ ಬರುವುದೂ, ಹರಾಜಿನಲ್ಲಿ ಬಡವಾಲ್ದಾರ ಪಡೆದುಕೊಳ್ಳುವುದೂ ಬಹಳವಾಗಿ ರೂಢಿಯಲ್ಲಿರುತ್ತೆ. ಈ ತೋರಿಗೆ ಬಹು ಜನ ನಷ್ಟಪಟ್ಟಿರಬೇಕು. ಜಾಸ್ತಿ ಸವಾಲ್‌ಮಾಡಿ ಜಮೀನುಗಳನ್ನು ತೆಗೆಯುವವರು ಪ್ರಾಯಶಃ ಭಾರೀ ಖಾತೇದಾರರೂ ಗ್ರಾಮಾಧಿಕಾರಿಗಳೂ ಆಗಿರುತ್ತಾರೆ. ಇವರು ತಮ್ಮ ಶಕ್ತಿಗೆ ಮೀರಿ ಕಂದಾಯ ತೆರಬೇಕಾಗಿಬರುವುದರಿಂದ ಕಂದಾಯದ ಬಾಕಿಗೆ ಜಮೀನುಗಳನ್ನು ಅನೇಕ ವೇಳೆ ಹರಾಜಿಗೆ ಗುರಿಪಡಿಸುತ್ತಾರೆ. ಇದರಿಂದ ಇವರಿಗೂ ಸರಕಾರಕ್ಕೂ ಬಡದರಖಾಸ್ತುದಾರನಿಗೂ ವೃಥಾ ತೊಂದರೆಗೆ ಕಾರಣವಾಗಿದೆ.

ದರಖಾಸ್ತುದಾರರ ಮುಚುನರ್ಜ ಕಮ್ಮಿಯಾದ್ದರಿಂದ ದರಖಾಸ್ತುಗಳು ಬೇಗ ಫೈಸಲಾಗಲಿಲ್ಲವೆಂದು ರೆವಿನ್ಯೂ ಅಧಿಕಾರಿಗಳು ಬರೆಯುವುದಾಗಿ ತಮ್ಮ ಪತ್ರಿಕೆಯಲ್ಲಿ ಓದಿದ್ದೆ. ದರಖಾಸ್ತು ಕೊಡುವುದರ ಫಲಿತಾಂಶ ಬಡಿಷ್ಟರಿಗೆ ಜಮೀನು ಆಗಿಹೋಗುವಾಗ ಬಡದರಖಾಸ್ತುದಾರನ ಮುಚುವರ್ಜ ಎಲ್ಲಿ ಗಣನೆಗೆ ಬಂದೀತು?

"ಚೈತನ್ಯವುಳ್ಳವರು ಜಮೀನುಗಳನ್ನು ದರಖಾಸ್ತು ಕೊಟ್ಟು ಪಡೆಯುತ್ತಾರೆ. ಬಡವರಿಗೆ ಸಿಕ್ಕುವುದೇ ಇಲ್ಲ. ಇಂಥವರಿಗೆ ಕಂದಾಯ ಕಟ್ಟಿ 5 ಎಕರೆ ಖುಷ್ಕಿ ಯಾ ಕಾಫೀಜಮೀನನ್ನಾಗಲೀ, 3 ಎಕರೆ ತರೀ ಜಮೀನನ್ನಾಗಲೀ ಮುಫತ್ತು ಕೊಡಿಸಬೇಕು" ಎಂದು 1911 ನೇ ಇಸವಿ ಪ್ರಜಾಪ್ರತಿನಿಧಿ ಸಭೆಯಲ್ಲಿ ಒಬ್ಬ ಮೆಂಬರು ಅರಿಕೆಮಾಡಲು; "ಜಮೀನನ್ನು ಹರಾಜು ಮೂಲಕ ವಿಕ್ರಯಮಾಡಬೇಕೆಂಬ ವಿಧಿಯೇನೂ ಇಟ್ಟಿಲ್ಲ. ಡೆಪ್ಯೂಟಿ ಕಮಿಷನರಿಗೆ ಇದರ ಎಖ್ತಿಯಾರೀ ವಹಿಸಿದೆ. ಅವರು ಬಡಬಗ್ಗರಿಗೆ ಜಮೀನನ್ನು ಮುನಾಸಬು ಮುಫತ್ತು ಕೊಡಬಹುದು. ಅವರಿಗೆ ಅರ್ಜಿ ಬರೆದುಕೊಳ್ಳಿ" ಎಂದು ದಿವಾನ್ ಸಾಹೇಬರವರು ಜವಾಬು ದಯಪಾಲಿಸಿರುವಂತೆ ತಮ್ಮ 19-10-11 ನೇ ವೃತ್ತಾಂತ ಪತ್ರಿಕೆಯಲ್ಲಿ ನಮೂದಿರುತ್ತೆ. ಇದನ್ನು ರೆವಿನ್ಯೂ ಅಧಿಕಾರಿಗಳು ಎಷ್ಟು ಮಟ್ಟಿಗೆ ಜಾರಿಯಲ್ಲಿಟ್ಟುಕೊಂಡಿರುವರೋ ಸಂಶಯವಾಗಿದೆ. ಮಾಲಿಕೀ ಇಲ್ಲದಿದ್ದರೆ ಕೊಡುತ್ತಾರೆಂದು ಅನ್ನುತ್ತಾರೆ. ಆ ರೀತಿ ಕೊಡುವುದೂ ಬಹು ವಿರಳ. ಹರಾಜು ಹಾಕುವುದೇ ಬಹು ವಿಶೇಷ. ಆದ್ದರಿಂದ "ಡೆಪ್ಯೂಟಿ ಕಮಿಷನರು ಬಡವರಿಗೆ ಮುಫತ್ತು ಜಮೀನು ಕೊಡಬಹುದು" ಎಂಬ ರೂಲ್ಸು ತಮ್ಮ ಪತ್ರಿಕೆ ವಿನಹ ಮತ್ಯಾವುದಾದರೂ ರೆವಿನ್ಯೂ ರೂಲ್ಸು, ಬುಕ್ಕು, ಗೆಜೆಟ್ ಮೊದಲಾದವುಗಳಲ್ಲಿ ನಮೂದಿದೆಯೇ? ಹಾಗಿಲ್ಲವಾದರೆ ತಮ್ಮ 19-10-11 ನೇ ಪತ್ರಿಕೆಯನ್ನೇ ದೊಡ್ಡ ಆಧಾರವಾಗಿ ಎಣಿಸಬಹುದೇ? ಈ ವಿಷಯದಲ್ಲಿ ದಯವಿಟ್ಟು ತಾವಾಗಲಿ, ತಮ್ಮ ಪತ್ರಿಕಾ ವಾಚಕರಾಗಲಿ ತೃಪ್ತಿಕರವಾದ ಸಮಾಧಾನವನ್ನು ಕೊಡುವಿರೆಂದು ಅರಿಕೆ ಮಾಡಿಕೊಂಡಿರುವ

ಒಬ್ಬ ಬಡ ದರಖಾಸ್ತುದಾರ.

[ಸಭೆಯಲ್ಲಿ ದಿವಾನ್‌ರವರು ಅಪ್ಪಣೆ ಕೊಡಿಸಿದ ಜವಾಬನ್ನು ನಾವು ಆಗ ಪತ್ರಿಕೆಯಲ್ಲಿ ಪ್ರಕಟಿಸಿದೆವು. ಅದು ಜಾರಿಯಲ್ಲಿರುವ ಅಂಶ ನಮಗೆ ತಿಳಿಯದು. ಸರ್ಕಾರದ ಅಧಿಕಾರಿಗಳಿಗೂ, ಪ್ರಜೆಗಳಿಗೂ ಆ ಜವಾಬಿನ ಫಲಿತಾಂಶವು ಅನುಭವಕ್ಕೆ ಬಂದಿರಬೇಕು.—ಎಡಿ]

ಕುಣಿಗಲ್‌ಪೇಟೆಯಲ್ಲಿ ವಿದ್ಯಮಾನಗಳು.

ಅಯ್ಯಾ,—ಈ ಊರು ಯಾವ ವಿಷಯದಲ್ಲಿಯೂ ನಮ್ಮ ಸರ್ಕಾರದವರ ದೃಷ್ಟಿಗೆ ಬಿದ್ದಂತೆ ಕಾಣುವುದಿಲ್ಲ. ಅವರಲ್ಲಿಯೂ ವಿದ್ಯಾಭ್ಯಾಸದ ಇಲಾಖೆಯ ಅಧಿಕಾರಿಗಳ ಗಮನವೇ ಇಲ್ಲವೆಂದು ಹೇಳಬಹುದು. ಕನ್ನಡ ಸ್ಕೂಲು ಸರಕಾರಿ. ಇಂಗ್ಲೀಷು ಸ್ಕೂಲು ಮುನಿಸಿಪಲ್‌ದು. ಪ್ರಾತಃಕಾಲ 7 ರಿಂದ 11 ರ ವರೆಗೆ ಕನ್ನಡ ಸ್ಕೂಲೂ, ಮಧ್ಯಾಹ್ನ 1 ರಿಂದ 5 ರ ವರೆಗೆ ಇಂಗ್ಲೀಷು ಸ್ಕೂಲೂ ಮಾಡುತ್ತಾರೆ. ಈ ಪದ್ಧತಿಯಿಂದ ವಿದ್ಯಾರ್ಥಿಗಳಿಗೆ ಆಗುತ್ತಲಿರುವ ಅಪಾರವಾದ ಕಷ್ಟವನ್ನು ಕೇಳಿ ಪರಿಹರಿಸುವವರೇ ಇಲ್ಲವಾಗಿದೆ. ಇಂಗ್ಲೀಷು ಸ್ಕೂಲಿನಲ್ಲಿ ಸುಮಾರು 60 ವಿದ್ಯಾರ್ಥಿಗಳಿರಬಹುದು. ಇನ್ನೂರು ವಿದ್ಯಾರ್ಥಿಗಳಿರುವ ಕನ್ನಡ ಸ್ಕೂಲಿನಲ್ಲಿ ಇಂಗ್ಲೀಷು ಕಲಿಯುವವರು ಸುಮಾರು 30-32 ಜನರಿರಬಹುದೆಂದರೆ ಎಂಥಾ ನಾಚಿಕೆಗೇಡು! ಈಗ ಮುಖ್ಯವಾಗಿರಬೇಕಾದುದು ಇಂಗ್ಲೀಷು ವಿದ್ಯಾಭ್ಯಾಸ; ಅಂದರೆ, ಮಾತೃಭಾಷೆಯನ್ನು ವಿಸರ್ಜಿಸಬೇಕೆಂದು ನನ್ನ ತಾತ್ಪರ್ಯವಲ್ಲ. ಇಲ್ಲಿನ ಸ್ಥಿತಿಯನ್ನು ನೋಡಿದರೆ ಹಿತಕರವಾಗಿಲ್ಲ. ಕನ್ನಡ ಸ್ಕೂಲಿನ ಉಪಾಧ್ಯಾಯರುಗಳು ತೃಪ್ತಿಕರವಾಗಿಲ್ಲ. ಎಲ್ಲವೂ ನಟನೆಯಾಗಿದೆ. ಕಣ್ಣಾಮುಚ್ಚಾಲೆ ಆಟವೆಂದರೂ ಎನ್ನಬಹುದು. ಹೆಡ್ ಮಾಸ್ಟರು ತಮ್ಮ 5 ನೇ ತರಗತಿಯ ವಿದ್ಯಾರ್ಥಿಗಳನ್ನು ಇಂಗ್ಲೀಷು ಸ್ಕೂಲಿಗೆ ಹೋಗಕೂಡದೆಂದು ನಿರ್ಬಂಧಪಡಿಸುವುದನ್ನು ಅನೇಕರು ಕಂಡೂ ಕೇಳಿಯೂ ಇರುತ್ತಾರೆ. ಹೀಗಿರುವಾಗ ಇಂಗ್ಲೀಷು ಕಲಿಯುವ ವಿದ್ಯಾರ್ಥಿಗಳಿಗೆ ಪ್ರೋತ್ಸಾಹವನ್ನು ಕೊಡುವುದುಂಟೇ? ಇವರಿಗೆ ಇಂಗ್ಲೀಷು ಬಾರದ ಕಾರಣ ಲೋಕವೇ ಆ ಭಾಷೆಯನ್ನು ಕಲಿಯಕೂಡದೆಂಬುವುದು ಇವರಿಷ್ಟವೋ ಹೇಗೋ ಕಾಣೆ. ಹುಡುಗರಿಂದ ರೂಪಾಯಿಗಟ್ಟಲೆ ವಸೂಲ್ಮಾಡಿ ಮಾಡುವ ಗಣೇಶನ ಮಂಗಳಾರತಿ, ಮೆರವಣಿಗೆ ಉತ್ಸವ, ಹುಳಿಯನ್ನ, ದಧ್ಯನ್ನ, ಚರುವು, ಪ್ರತಿ ಶುಕ್ರವಾರ ನಡೆಯುವ ಸರಸ್ವತಿ ಪೂಜೆ, ಇವುಗಳೇ ಇಲ್ಲಿಯ ವಿದ್ಯಾಭ್ಯಾಸವಾಗಿದೆ. ವಿದ್ಯಾರ್ಥಿಗಳ ತಾಯಿತಂದೆಗಳು ಇಷ್ಟಕ್ಕೇ ತೃಪ್ತಿಪಟ್ಟುಕೊಂಡು ಇರುವುದನ್ನು ನೋಡಿದರೆ ಇವರು ಎಂಥಾ ವಿದ್ಯಾವಂತರೆಂದು ವಾಚಕರೇ ಊಹಿಸಬಹುದಾಗಿದೆ. ಎಲ್ಲಿ ನೋಡಿದರೂ ಇಂಗ್ಲೀಷು ಕಲಿಯುವ ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚಾಗಿರುವಾಗ ಕನ್ನಡ ಬಂದರೆ ಸಾಕೆಂದು ಹೇಳುವವರು ಈ ಕ್ಲೋಸುಪೇಟೆಯವರೇ ಹೊರತು ಮತ್ಯಾರೂ ಇಲ್ಲ. ಇಂಗ್ಲೀಷು ಸ್ಕೂಲಿನಲ್ಲಿ ಇಬ್ಬರೇ ಉಪಾಧ್ಯಾಯರಿರುತ್ತಾರೆ. ಇವರಿಬ್ಬರೇ 6 ತರಗತಿಗಳನ್ನು ನೋಡಿಕೊಳ್ಳುವುದೆಂದರೆ ಸಾಮಾನ್ಯವಾದುದಲ್ಲ. ಇನ್ನೊಬ್ಬ ಉಪಾಧ್ಯಾಯರು ಬೇಕೆಂದು ಇಂಗ್ಲೀಷು ಹೆಡ್ ಮಾಸ್ಟರು ಯಾಕೆ ಕೇಳಲಿಲ್ಲವೋ ತಿಳಿಯದು. ಅಂತೂ ಇಂತೂ ವಿದ್ಯಾರ್ಥಿಗಳಿಗೆ ಇದುವರೆಗೆ ಆಗಿರುವ ಮತ್ತು ಈಗಲೂ ಆಗುತ್ತಲಿರುವ ಅಗಾಧವಾದ ನಷ್ಟವನ್ನು ಯಾರೂ ಗ್ರಹಿಸದಂತೆ ಕಾಣುವುದಿಲ್ಲ. ವಿದ್ಯಾಭಿವೃದ್ಧಿಯ ಕೊರತೆಗಳು ಇಲ್ಲಿ ಇನ್ನೂ ಹೇರಳವಾಗಿವೆ.

ಈಚೆಗೆ ಕೆಲವರು ಸೇರಿ ಇಲ್ಲಿ ಒಂದು ರೀಡಿಂಗ್ ರೂಮನ್ನು ಮಾಡಿಕೊಂಡಿರುತ್ತಾರೆ. ಇದು ಬಡವರ ಪ್ರಯತ್ನವೆಂದು ಕಾಣಿಸುತ್ತದೆ. ತಾಲ್ಲೂಕು ಕಛೇರಿ, ಸಬ್ ಡಿವಿಜನ್, ಪೋಲೀಸ್ ಆಫೀಸು, ಫಾರೆಸ್ಟ್ ರೇಂಜ್ ಆಫೀಸು, ಎಕ್ಸೈಜು ಆಫೀಸು, ಇಷ್ಟನ್ನೂ ಉಳ್ಳ ಈ ಊರಿನಲ್ಲಿ ರೀಡಿಂಗ್ ರೂಮು ಒಂದು ಇಲ್ಲವೆಂದರೆ ಆಫೀಸರುಗಳ ಸಹಾಯವೂ, ದರ್ಪವೂ, ಅಧಿಕಾರವೂ ಹೇಗೆ ಇದೆಯೆಂಬುದು ಗೋಚರವಾಗುತ್ತದೆ.—ಇಲ್ಲಿನ ಫಾರೆಸ್ಟ್ ರೇಂಜ್ ಆಫೀಸ್ ಗುಮಾಸ್ತೆಯು ಬೆಂಗಳೂರಿನಲ್ಲಿದ್ದಾಗ ಸರ್ಕಾರಿ ಮೊಬಲಗು 390 ರೂಪಾಯಿ ದಸ್ತುಮಾಡಿದನೆಂದು ಆತನ ಮೇಲೆ ವಾರಂಟು ಹುಟ್ಟಿದೆ. ಅವನು ಮಾತ್ರ ಫರಾರಿಯಾಗಿದಾನೆ.—ವೈಶ್ಯರಿಗೂ ದೇಶದ ಪೇಟೆಯವರಿಗೂ ದೇವಸ್ಥಾನದ ವಿಷಯದಲ್ಲಿದ್ದ ವ್ಯಾಜ್ಯವು ವೈಶ್ಯರ ಕಡೆಗೆ ಅನುಕೂಲವಾಗಿ, ಅಂದರೆ ಅವರು ದೇವಸ್ಥಾನವನ್ನು ಪೂರ್ವದಿಕ್ಕಿಗೆ ಬಾಗಿಲಿಟ್ಟು ಕಟ್ಟಿಕೊಳ್ಳಬಹುದೆಂದು ತೀರ್ಮಾನವಾದಂತೆ ಕೇಳುತ್ತೇನೆ. ಇದು ಬಹಳ ಸಂತೋಷಕರವಾದ ವಿಚಾರ.

ನಿಷ್ಪಕ್ಷಪಾತಿ.

ತಾಲ್ಲೂಕು ವರ್ತಮಾನಗಳು.

<u>ಆನೇಕಲ್ಲು.</u>—ಕೆಲವು ದಿನಗಳಿಂದೀಚೆಗೆ ಮಳೆಯಾಗಿ ಖುಷ್ಕಿ ಪೈರುಗಳು ಚೆನ್ನಾಗಿವೆ. ಆದರೆ ತರಿ ಪೈರಿಗೆ ಅನುಕೂಲವಾಗುವಂತೆ ಕೆರೆಗಳಿಗೆ ನೀರು ಬಂದಿಲ್ಲ.—ಈ ಊರಿನ ಸಬ್ ಅ|| ಸರ್ಜನ್‌ರವರು ಇಲ್ಲಿಗೆ ಬಂದು ಇನ್ನೂ ಮೂರು ವರುಷಗಳಾಗಲಿಲ್ಲ; ಇವರನ್ನು ಈಗಾಗಲೇ ವರ್ಗಾಯಿಸಿರುವಂತೆ ಕೇಳುತ್ತೇವೆ. ಇವರು ಬಹಳ ದಯಾಳುಗಳು; ರೋಗಿಗಳಿಗೆ ಚಿಕಿತ್ಸೆ ಮಾಡುವದರಲ್ಲಿ ಬಹಳ ಆಸಕ್ತಿಯುಳ್ಳವರು. ಇವರನ್ನು ಇಷ್ಟು ಬೇಗ ವರ್ಗಾಯಿಸುವುದನ್ನು ಕೇಳಿ ನಮ್ಮಗಳಿಗೆಲ್ಲಾ ತುಂಬಾ ವಿಷಾದಕರವಾಗಿರುತ್ತೆ.

<u>ಚೆನ್ನರಾಯಪಟ್ಟಣ.</u>—ಇಲ್ಲಿ ಮಳೆ ಇಲ್ಲದೆ ಪೈರು ಪಚ್ಚೆಗಳು ಒಣಗುತ್ತಾ ಇವೆ. ಹುಲ್ಲು ವಗೈರೆ ಇಲ್ಲದೆ ಗೋಕಾಯಿಗಳಿಗೆ ತುಂಬಾ ಕಷ್ಟವಾಗಿದೆ. ಸಂತೆಯಲ್ಲಿ ದಿನಸಿ ಧಾರಣೆ ಪ್ರಿಯವಾಗುತ್ತಿದೆ. ಕಲರಾ ಗಲಾಟೆ ಸ್ವಲ್ಪ ಮಟ್ಟಿಗೆ ಹಳಿದೋಗಿ ಹಾಗೆಯೇ ಶಮನವಾಯಿತು.—ಇಲ್ಲಿಂದ ತುರುವೆಕೆರೆಗೆ ವರ್ಗವಾದ ಡಾಕ್ಟರ್ ಮಹಮದ್ ಮೂಸಾ ಸಾಹೇಬರವರಿಗೆ ದೊಡ್ಡ ಮನುಷ್ಯರು ಸೇರಿ ಟೀಪಾರ್ಟಿ ಮಾಡಿಸಿ ಸಂತೋಷಪಡಿಸಿದರು. ಇವರು ಜನಗಳಲ್ಲಿ ತುಂಬಾ ಪ್ರೀತಿ ಗೌರವಗಳನ್ನು ಸಂಪಾದಿಸಿಕೊಂಡಿದ್ದರು. ಇವರು ಹೊರಡುವ ಮುನ್ನಿನ ದಿವಸ ಜನಗಳು ತಮ್ಮ ಮನೆಗೆ ಕರೆದುಕೊಂಡು ಹೋಗಿ ತಾಂಬೂಲಾದಿಗಳನ್ನು ಕೊಟ್ಟು ಬಹಳ ಮರ್ಯಾದೆಯಿಂದ ಕಳುಹಿಸಿದರು. ಈಗ ಬಂದಿರುವ ಡಾಕ್ಟರವರೂ ಅವರಂತೆ ಜನಗಳ ವಿಶ್ವಾಸಕ್ಕೆ ಪಾತ್ರರಾಗುತ್ತಾರೆಂತ ನಂಬುತ್ತೇನೆ.

<u>ಮಧುಗಿರಿ.</u>—ಮಳೆ ಇಲ್ಲದೆ ಧಾರಣೆಗಳು ಹೆಚ್ಚುತ್ತಿವೆ. ದೇಶಾಂತರದಲ್ಲಿ ಯುದ್ಧ ಜರುಗುತ್ತಿರುವುದರಿಂದ ವರ್ತಕರು ಅದನ್ನು ಕಾರಣಮಾಡಿಕೊಂಡು ಪದಾರ್ಥಗಳನ್ನು ಬಡವರಿಗೆ ದೊರೆಯದಂತೆ ಮಾಡುತ್ತಿರುವುದು ಪ್ರಜೆಗಳಿಗೆ ಬಹು ಸಂಕಟವಾಗಿದೆ.—ಈಚೆಗೆ ಇಲ್ಲಿನ ಬಹು ಜನ ಉಪಾಧ್ಯಾಯರಿಗೆ ಸಂಬಳ ಹೆಚ್ಚಿತೆಂದು ಕೇಳಿ ಗ್ರಾಮಸ್ಥರು ಸಂತೋಷಪಡುತ್ತಿರುವರು. ಉಪಾಧ್ಯಾಯರಾದರೋ ಸಂಬಳ ಹೆಚ್ಚಿತೆಂದು ಬರವಣಿಗೆಯ ಮೂಲಕ ಮಾತ್ರ ಆನಂದಿಸುತ್ತಿರುವರು. ಖಜಾನೆಯವರೇನೋ ಕೊಡುವದಿಲ್ಲ. ಈ ಸ್ಕೂಲಿನಲ್ಲಿ ಎರಡು ಕೆಲಸಗಳು ಖಾಲಿ ಇವೆ. ಇವುಗಳಿಗೆ ಯಾರನ್ನು ಹುಡುಕುತ್ತಿದಾರೋ ತಿಳಿಯದು. ಇದುವರೆಗೆ ಬಂದಿರುವಂತಹವರೇ ಬರುವರೋ ಏನೋ.—ಸಬ್ ರೆಜಿಸ್ಟ್ರಾರವರ ಆಫೀಸಿನ ಕಾರುಬಾರುಗಳು ಸಮರ್ಪಕವಾಗಿಲ್ಲವೆಂದು ಬಹು ಜನರು ಆಡಿಕೊಳ್ಳುವುದು ಶೋಚನೀಯವಾಗಿದೆ. ತಾಲ್ಲೋಕಿನ ಪ್ರಜೆಗಳಿಗೆ ಇದರಿಂದ ತೊಂದರೆಯಾಗುತ್ತಿದೆ ಎಂಬುದನ್ನು ಈ ಆಫೀಸಿನಲ್ಲಿನ ನೌಕರರು ಅರಿಯರೇ? ಈ ಆಫೀಸಿಗೆ ಅಧ್ಯಕ್ಷರಾಗಿರುವವರು ನಿಸ್ಪೃಹರಾಗಿಯೂ, ಇವರ ಖಾತೇದಾರರು ಇವರಿಗೆ ಸಹಕಾರಿಗಳಾಗಿಯೂ ಇರುವರೆಂದು ನಂಬುತ್ತೇವೆ.—ರೀಡಿಂಗ್ ರೂಮ್‌ನಲ್ಲಿ ಈಚೆಗೆ ಕೆಲಸಗಳು ಚಟುವಟಿಕೆಯಾಗಿ ನಡೆಯುವವು. ವಿದ್ಯಾವಂತರಾಗಿಯೂ, ಚೈತನ್ಯವಂತರಾಗಿಯೂ ಇರುವ ಆಫೀಸರುಗಳೇ 20-30 ರೂಪಾಯಿವರೆಗೆ ಚಂದಾ ನಿಲ್ಲಿಸಿಕೊಂಡಿರುವುದು ನಾಚಿಕೆಯಾಗಿದೆ.

<u>ಚೆನ್ನಪಟ್ಟಣ.</u>—ಸುಮಾರು ತಿಂಗಳಿಂದಲೂ ಮಳೆ ತಕ್ಕಮಟ್ಟಿಗೆ ಬಡಿಸಿ, ರಾಗಿ ಪೈರು ಹುಲುಸಾಗಿರುತ್ತದೆ; ಆದರೆ ಕೆರೆ ಕಟ್ಟೆಗಳಿಗೆ ಮಾತ್ರ ಈ ವರವಿಗೂ ನೀರು ಬಂದಿಲ್ಲ. ಧಾರಣೆವಾಸಿಗಳೇನೋ ಯಥಾಸ್ಥಿತಿಯಲ್ಲಿವೆ; ರಾಗಿ 11 ಸೇರು ಅಕ್ಕಿ 6 ಸೇರು ಮಾರುತ್ತಿದೆ.—ಪೋಲೀಸ್ ಇನ್ಸ್‌ಪೆಕ್ಟರ್ ಮ|| ಮಂಗೇಶರಾಯರಿಗೆ ವರ್ಗವಾಗಿ ಹೊಸಬರು ಬಂದಿದಾರೆ. ಮ|| ಮಂಗೇಶರಾಯರ ಕಾಲದಲ್ಲಿ ವ್ಯಾಪಾರು ಅಂಗಡಿಗಳವರು ಮಾತ್ರ ಸರ್ಕಾರಿ ಹೊಸ ಅಳತೆ ಸೇರು ಬಟ್ಟುಗಳನ್ನು ತರಿಸಿಕೊಂಡಿರುತ್ತಾರೆ. ಮಿಕ್ಕವರೆಲ್ಲಾ ಹಳೇ ಸಾಧನೆಗಳನ್ನೇ ಉಪಯೋಗಿಸುತ್ತಿರುವರು. ಹೊಸ ಇನ್ಸ್‌ಪೆಕ್ಟರ ಕಾಲದಲ್ಲಾದರೂ ಎಲ್ಲಾ ಅಂಗಡಿಗಳವರೂ ಹೊಸ ಸಾಧನಗಳನ್ನು ತರಿಸಿ ಉಪಯೋಗಿಸುವರೇನೋ ನೋಡಬೇಕು. ಸಂಸ್ಥಾನದ ಅನೇಕ ತಾಲ್ಲೂಕುಗಳಲ್ಲಿ ಪೋಲೀಸ್ ನೌಕರರಿಗೆ ಕೊಡಲ್ಪಡುತ್ತಿರುವ ಮಂಗಾ ಭತ್ಯವು ಈ ತಾಲ್ಲೂಕಿನಲ್ಲಿ ಸಲ್ಲುವುದಿಲ್ಲ. ಧಾರಣೆವಾಸಿಗಳೇನೋ ಕ್ಷಾಮಕಾಲವನ್ನೇ ಸೂಚಿಸುತ್ತಿವೆ.—ಹೈ ಸ್ಕೂಲಿನಲ್ಲಿ ಅ|| ಮಾಸ್ಟರಾಗಿದ್ದು ಇಂಡಸ್ಟ್ರಿಯಲ್ ಸ್ಕೂಲ್ ಸೂಪರಿಂಟೆಂಡೆಂಟರಾಗಿದ್ದ ರಾಯರ ವಂಗಡದ ಮಿ|| ಬಾಬಾ ಉಸ್ಮಾನ್ ಮಿಯಾ ಸಾಹೇಬರು ತಾ. 10 ನೇ ಗುರುವಾರ ರಾತ್ರಿ ಅಕಸ್ಮಾತ್ ಕಾಲವಾದರು. ಇವರು ತುಂಬಾ ನಿಧಾನಿಗಳೂ, ಜನಗಳಲ್ಲಿ ಪ್ರೀತಿ ವಿಶ್ವಾಸಪಡೆದವರೂ ಆಗಿದ್ದರು. ಇವರ ಮರಣವು ಇಲ್ಲಿನ ಜನಗಳಿಗೆ ತುಂಬಾ ವ್ಯಸನವನ್ನುಂಟುಮಾಡಿದೆ.—ಇಲ್ಲಿ 4 ತಿಂಗಳಿಂದ ಉಪಾಧ್ಯಾಯರ ಸಂಘವು ಸ್ಥಾಪಿತವಾಗಿದೆ. ಈ ತಾಲ್ಲೂಕಿನ ಹೋಬಳಿ ಸ್ಕೂಲ್ ಮಾಸ್ಟರುಗಳೆಲ್ಲಾ ತಿಂಗಳಿಗೊಂದಾವರ್ತಿ ಕೂಡಿ ಬಂದು ಪ್ರಯೋಜನವನ್ನು ಹೊಂದುತ್ತಾರೆ. ಇದು ಶಾಶ್ವತವಾಗಿ ನಡೆದು ಅಭಿವೃದ್ಧಿ ಹೊಂದಲೆಂದು ಹಾರೈಸುತ್ತೇನೆ.

ಚಿತ್ರದುರ್ಗ.—ಈಗ 10-12 ದಿವಸದಿಂದ ಮಳೆ ಬರತಕ್ಕದ್ದು ನಿಂತಿತು. ಬರತಕ್ಕ ಚಿಹ್ನೆಯೂ ಕಾಣುವದಿಲ್ಲ. ವಿಶೇಷವಾಗಿ ಶೀತ ಘಾಳಿ ಬೀಸುತ್ತಾ ಇದೆ, ನೀರಿಗೆ ಕ್ಷಾಮ, ಆಹಾರಪದಾರ್ಥಗಳ ಬೆಲೆ ಜಾಸ್ತಿ. ಇವುಗಳ ಕಷ್ಟ ಹೇಳತಕ್ಕದ್ದಾಗಿಯೇ ಇಲ್ಲ. ಊರಲ್ಲಿ ಶೀತಸಂಬಂಧವಾದ ಕಾಯಿಲೆ ಜಾಸ್ತಿಯಾಗಿ ಸುತ್ತುಮುತ್ತ ಪ್ಲೇಗೂ ವ್ಯಾಪಿಸಿದೆ.—ಯುದ್ಧದ ರಿಲೀಫ್ ಫಂಡಿಗೆ ಹಣ ವಸೂಲ್ಮಾಡಲಿಕ್ಕೆ ಡಿಸ್ಟ್ರಿಕ್ಟ್ ಅಧಿಕಾರಿಗಳು ಮೀಟಿಂಗುಗಳನ್ನು ಮಾಡಿಕೊಳ್ಳುತ್ತಿದ್ದಾರೆ.—ಪ್ರಜಾಳಿಗೆ ಹಿತರೂ, ನಿಜಪಕ್ಷಕ್ಕೆ ವಿಧೇಯರೂ ಆಗಿದ್ದ ಅ|| ಕಮಿಷನರ್ ಮ|| ಆರ್. ನಾನಾಸಾಮಿರಾಯರು ಬೇರೆ ಸ್ಥಳಕ್ಕೆ ವರ್ಗವಾಗಿ ಹೋದದ್ದಕ್ಕಾಗಿ ಇಲ್ಲಿನ ಪ್ರಜೆಗಳು ವ್ಯಸನಪಡುತ್ತಿದ್ದಾರೆ.

ಫ್ರೆಂಚ್‌ರಾಕ್ಸ್.—7-8 ದಿನಗಳಿಂದ ಮಳೆ ಇಲ್ಲದೆ ಪೈರುಗಳೆಲ್ಲಾ ಬಾಡುತ್ತಿವೆ. ದಿನಸಿ ಧಾರಣೆ ಹೆಚ್ಚುತ್ತಲೇ ಇದೆ. ಇದರ ವಿಷಯದಲ್ಲಿ ಸರ್ಕಾರದವರು ಕ್ರಮನಡಿಸುವುದು ಒಳ್ಳೇದು. ಬಡವರ ಕಷ್ಟ ಹೇಳತೀರದು.—ಇಲ್ಲಿನ ಮಂಡಿ ಸಾಹುಕಾರ್ ಮಿ|| ಮಧಾರ್ ಸಾಹೇಬರು ಒಳ್ಳೇ ಕಟ್ಟಡವನ್ನು ಕಟ್ಟಿಸಿ ಅದರಲ್ಲಿ ಛತ್ತದ ಮಿಷನ್ ಇಡಿಸಿ ಸುಮಾರು 2 ತಿಂಗಳಿಂದಲೂ ಕೆಲಸ ನಡಿಸುತ್ತಿದ್ದಾರೆ. ಮಿ|| ಇಸ್ಮಾಯಿಲ್‌ಖಾನ್ ಸಾಹೇಬರು ಇದರ ಮೇಲುಸ್ತುವಾರಿ ನೋಡಿಕೊಳ್ಳುತ್ತಿರುವರು.—ಶನಿವಾರ ರಾತ್ರಿ ಇಲ್ಲಿ 7 ಮೈಲಿ ದೂರದಲ್ಲಿರುವ ಗಂಜಾಂನಲ್ಲಿ ಮೈಸೂರು ಹಳೇಅಗ್ರಹಾರದ ಶಿವಕಥಾ ಪಂಡಿತರು ಶಿವಯ್ಯಶಾಸ್ತ್ರಿಗಳಿಂದ ಗಂಜಾಂ ವರ್ತಕ ಮಂಡಲಿಯವರು ಶಿವಕಥೆ ಮಾಡಿಸಿದರು. ಈ ಕಥೆಗೆ ಮೈಸೂರು, ಹಿರೋಡೆ, ವಗೈರ ಗ್ರಾಮಾಂತರಗಳಿಂದಲೂ ಅನೇಕ ಜನಗಳು ಬಂದಿದ್ದರು.

ಸಿರಾ ತಾಲ್ಲೂಕು ಬುಕ್ಕಾಪಟ್ಟಣ.—ಈ ಪ್ರಾಂತ್ಯ 20 ದಿವಸಗಳಿಂದ ಸುತರಾಂ ಮಳೆ ಇಲ್ಲದೆ ಜನಗಳೆಲ್ಲಾ ಬಹು ಘಾಬರಿಯಾಗಿರುತ್ತಾರೆ. ಧಾರಣೆವಾಸಿಗಳು ಬಹಳ ಜಡಾವಾಗಿರುತ್ತವೆ. ಈ ವರ್ಷವೆಲ್ಲಾ ಸಕಾಲಕ್ಕೆ ಮಳೆ ಬಾರಲೇ ಇಲ್ಲ. ಆದರೂ ಬಿತ್ತಿದ್ದ ಪೈರು ಸುಮಾರಾಗಿ ಚೆನ್ನಾಗಿರುತ್ತೆ. ಆಗಲೇ ಅಲ್ಲಲ್ಲಿ ಚಿಕ್ಕ ದೊಡ್ಡ ಕಳ್ಳತನಗಳು ತೋಟಗಳಲ್ಲಿ ನಡೆಯುತ್ತಾ ಇರುತ್ತವೆ. ಇಂಥಾ ಕಳ್ಳತನಗಳೆಲ್ಲಾ ಹಿಂದಿಗಿಲ್ಲದೆ ಮಾಡುತ್ತಾರೆಂದು ತಿಳಿಯುತ್ತೆ.—ಬುಕ್ಕಾಪಟ್ಟಣಕ್ಕೆ 3 ಮೈಲಿಯಲ್ಲಿ ಕಲ್ಯಾಣ ಗಿಡವೆಂಬ ಪ್ರಸಿದ್ಧ ಕಾಡಿದೆ. ಈ ಕಾಡಿನಲ್ಲಿ ಕುಳಿಯವರಿಗೂ ಸೀರ್ಯಕಕ್ಕೆ ತಿರುಗಾಡುವ ರಸ್ತೆ ಇರುತ್ತೆ. ಈ ಕಲ್ಯಾಣ ಗಿಡದಲ್ಲಿ ಇಂಥಾ ದುಷ್ಕಾಲದಲ್ಲಿ ಡಕಾಯಿತಿಗಳು ನಡೆಯುವದು ರೂಢಿಯಾಗಿರುತ್ತೆ. ಇಂಥಾ ವಿಷಯದಲ್ಲಿ ಇದುವರಿಗೂ ಯಾರಿಗೂ ಯಾವ ಅಪಾಯ ಉಂಟಾಗದಂತೆ ಬುಕ್ಕಾಪಟ್ಟಣದ ಪೋಲೀಸ್ ದಫೇದಾರ್ ಮ|| ಲಕ್ಷ್ಮಣರಾಯರು ಬಹು ದರ್ಪದಿಂದಲೂ, ಶ್ರದ್ಧೆಯಿಂದಲೂ ನೋಡಿಕೊಂಡ ಕಾರಣ ಪ್ರಜೆಗಳಿಗೆ ಯಾವ ತೊಂದರೆಯೂ ಆಗದಂತೆ ಇತ್ತು. ಮತ್ತು ಈ ಹೋಬಳಿಯಲ್ಲಿ ಇವರು ಬಂದನಂತರ ಕಳುವಾದರೂ ದರೋಡೆಯಾದರೂ ಅನ್ಯಾಯ ಕೆಲಸಗಳಾದರೂ ನಡೆಯದಂತೆ ತುಂಬಾ ಮುತುವರ್ಜಿ ವಹಿಸಿ ನೋಡಿಕೊಂಡಿರುತ್ತಾರೆ. ಇವರು ಬಂದ ಆರು ತಿಂಗಳಿಗೇನೆ ತಿರಿಗಿ ತುಬ್ಬೂರಿಗೆ ವರ್ಗವೆಂದು ಈ ಪ್ರಾಂತ್ಯದ ಜನಗಳು ಕೇಳಿ ಈ ದುರ್ಭಿಕ್ಷಕಾಲ ಕಳಿಯುವ ವರಿಗಾದರೂ ಸರ್ಕಾರದವರು ಈ ದಫೇದಾರರನ್ನು ಇಲ್ಲಿ ಇಟ್ಟಿದ್ದರೆ ಪ್ರಜೆಗಳಿಗೆ ಕೇವಲ ಧನಮಾನಗಳ ಸಂರಕ್ಷಣೆ ಆಗುತ್ತೆಂದು ತಿಳಿದು, ನಮ್ಮ ಡೆಪ್ಯುಟಿ ಕಮಿಷನರ್‌ರವರ ಸನ್ನಿಧಿಗೆ ವಿಜ್ಞಾಪನಾ ಪತ್ರ ಬರೆದುಕೊಂಡಿರುತ್ತಾರೆ. ಅವರು ಈ ಪ್ರಜೆಗಳ ಅಪೇಕ್ಷೆಯನ್ನು ನೆರವೇರಿಸಿ ಕಾಪಾಡಬೇಕೆಂದು ಪ್ರಾರ್ಥನೆ ಮಾಡುತ್ತೇವೆ.

ಹೊಸಕೋಟೆ.—ಶ್ರೀಮದಿಂಡಿಯಾ ಚಕ್ರವರ್ತಿ ಸಾರ್ವಭೌಮರವರಿಗೆ ಈಗ ಪ್ರಾಪ್ತವಾಗಿರುವ ಯುದ್ಧದ ದೆಸೆಯಿಂದ ನಮ್ಮ ಶ್ರೀಮನ್ ಮೈಸೂರ್ ಮಹಾರಾಜರವರ ಆಜ್ಞಾನುಸಾರವಾಗಿ ಆಗಸ್ಟ್ ತಾ. 31 ರಲ್ಲಿ ಹೊಸಕೋಟೆ ಟವನ್‌ನಲ್ಲಿ ನಮ್ಮ ಅಮಲ್ದಾರ್ ಮ|| ಸೋಮೇಶ್ವರಯ್ಯರವರ ಪ್ರೋತ್ಸಾಹದಿಂದ ಮೀಟಿಂಗ್ ನಡಿಸಿ ಯುದ್ಧದ ಫಂಡಿಗಾಗಿ ಸುಮಾರು 25 ರೂಪಾಯಿ ಜಮಾಯಿಸಿದಂತೆ ತಿಳಿಯಬರುತ್ತೆ. ಇದೇ ಉದ್ದೇಶದಿಂದ ಸೆಪ್ಟೆಂಬರ್ ತಾ. 6 ರಲ್ಲಿ ಬಹು ಜನಗಳು ಸೇರಿ ಮೀಟಿಂಗ್ ನಡೆಯುವಂತೆ ನೋಟೀಸು ವಗೈರೆ ಪ್ರಸಿದ್ಧಪಡಿಸುವ ಏರ್ಪಾಡುಗಳನ್ನು ನಮ್ಮ ಅಮಲ್ದಾರರು ಮಾಡಿರುತ್ತಾರೆ. ಆ ದಿನ ತಕ್ಕಮಟ್ಟಿಗೆ ಹೊಸಕೋಟೆಯ ಪ್ರಜೆಗಳು ಯೋಗ್ಯತಾನುಸಾರವಾಗಿ ಉದಾರಮನಸ್ಸಿನಿಂದ ಚಂದಾ ಕೊಟ್ಟು ನಮ್ಮ ಮಹಾರಾಜರವರಿಗೆ ಯಶಸ್ಸು ಬರುವಂತೆ ಮಾಡುವರೆಂದು ನಂಬುತ್ತೇವೆ.—ಈ ವರಿಗೂ ಇಲ್ಲಿ ಒಳ್ಳೇ ಮಳೆ ಇಲ್ಲ. ಅಲ್ಪ ಸ್ವಲ್ಪವಾಗಿ ಬರುತ್ತಾ ಇದ್ದರೂ ಪೈರುಗಳಿಗೆ ಅನುಕೂಲವಾಗಬಹುದು. ಅದಕ್ಕೂ ಮಳೆ ಅನುಕೂಲವಾಗಲಿಲ್ಲ. ಕೆರೆ ಕುಂಟೆಗಳು ಒಣಗಿ ಹೋದವು. ಭಾವಿಗಳು ಸಹ ಒಣಗುತ್ತಾ ಬಂದವು. ದಿನಸಿ ಧಾರಣೆ ಹೆಚ್ಚಿದೆ. ಬಡವರಿಗೂ ಕೂಲಿನಾಲಿ ಮಾಡುವ ಜನಗಳಿಗೂ ಹೇಳಕೂಡದ ಕಷ್ಟ ಸಂಭವಿಸಿದೆ.—ಇಲ್ಲಿನ ಎ. ವಿ. ಸ್ಕೂಲ್ ಹೆಡ್ ಮಾಸ್ಟರು ವರ್ಗಪಟ್ಟರೆಂಬ ಕೇಳಿ ಎಲ್ಲರೂ ವ್ಯಸನಪಡುತ್ತಾರೆ. ಆಗಸ್ಟ್ 16 ನೇ ತಾ. ಡೆಪ್ಟಿ ಇನ್ ಜನರಲ್ ಮ|| ಕೃಷ್ಣರಾಯರು ಉಪಾಧ್ಯಾಯರ ಮೀಟಿಂಗಿಗೆ ಬಂದಿದ್ದ ಕಾಲದಲ್ಲಿ ಹೆಡ್ ಮಾಸ್ಟರು ಮಾಡಿದ ಏರ್ಪಾಡುಗಳ ವಿಷಯದಲ್ಲಿ ಬಹಳ ಸಂತೋಷಪಟ್ಟರು. ಮತ್ತು ಅವರಿಗೆ ಸಂಬಳ ಬಡ್ತಿ ಆಗಿ ನಾರ್ಮಲ್ ಸ್ಕೂಲ್ ಅ. ಮಾಸ್ಟರಾಗಿ ಕೋಲಾರಕ್ಕೆ ವರ್ಗವಾಗಿದೆ.

ಅರಸಿಕೆರೆ.—ಈಚೆಗೆ ಒಂದೆರಡು ವಾರಗಳಿಂದ ಮಳೆ ಬಾರದೆ ಪೈರೆಲ್ಲಾ ಒಣಗಿ ಹೋಗುವಂತಿದೆ. ಬಿಸಿಲು ಚೆನ್ನಾಗಿ ಕಾಯುತ್ತಿದೆ. ನೀರಿನ ಕಷ್ಟ ಬಹಳ. ಧಾರಣೆವಾಸಿಗಳು ದಿನೇ ದಿನೇ ಏರುತ್ತಿವೆ. ಕಳೆದ ಭಾನುವಾರ ಬೆಳಗ್ಗೆ ಅ|| ಕಮಿಷನರ್‌ರಾದ ಮ|| ಅಪ್ಪಾಜಿಯ್ಯಂಗಾರ್ರವರು ಹಾಸನದಿಂದ ಬಂದು ಮಧ್ಯಾಹ್ನ 2 ಘಂಟೆಗೆ ನಮ್ಮ ಅಮಲ್ದಾರರೊಡನೆ ಟವನ್ ಗಸ್ತುಮಾಡಿ ವರ್ತಕರನ್ನು ಕರಸಿ ಅವರ ಕೂಡ ಧಾರಣೆಗಳನ್ನು ನಿರಖು ಮಾಡಿಸಿ, ತರುವಾಯ ಎ. ವಿ. ಸ್ಕೂಲಿನಲ್ಲಿ ಕೋಆಪರೇಟಿವ್ ಸಂಘದ ಜನರಲ್ ಮೀಟಿಂಗಿನಲ್ಲಿ ಅಗ್ರಾಸನವನ್ನು ವಹಿಸಿದರು. ಸಂಘದ ಪ್ರಮುಖರೂ, ಕಾರ್ಯದರ್ಶಿಗಳೂ, ವರ್ತಕರೂ, ಮೆಂಬರುಗಳೂ ಹಾಜರಾಗಿದ್ದರು. ಸಂಘದ ರಿಪೋರ್ಟು ಓದಿದ ಮೇಲೆ ಆದಾಯ ಬಡ್ತಿ ಮುಂತಾದವುಗಳನ್ನು ನೋಡಿ ಅಗ್ರಾಸನರು ಸಂತೋಷಿಸಿ ಯುದ್ಧದ ರಿಲೀಫ್ ಫಂಡನ್ನು ಕುರಿತು ಮಾತನಾಡಿದಾಗ ಸಂಘದ ಮೆಂಬರುಗಳೆಲ್ಲಾ ಬಹಳ ಕನಿಕರಪಟ್ಟು ತಮ್ಮ ರಾಜಭಕ್ತಿಯನ್ನು ಪ್ರಕಾಶಪಡಿಸುವದಕ್ಕೆ ತಮಗೆ ಬಂದ ಬಡ್ತಿಯಲ್ಲಿ ಸಂಘದ ಪರವಾಗಿ 80 ರೂಪಾಯಿ ಚಂದಾ ಕೊಟ್ಟು ಮೀಟಿಂಗನ್ನು ಪ್ರಾರ್ಥನೆಯಿಂದ ಬರಖಾಸ್ತುಮಾಡಿದರು. ಕಳೆದ ಮಂಗಳವಾರ ಸಾಯಂಕಾಲ ತಾಲ್ಲೂಕ್ ಕಚೇರಿಯಲ್ಲಿ ನಮ್ಮ ಅಮಲ್ದಾರ್ರವರು ಸರ್ಕಾರದ ಉದ್ಯೋಗಸ್ಥರನ್ನೂ, ಸಾಹುಕಾರರನ್ನೂ, ವರ್ತಕ ಮಂಡಲಿಯವರನ್ನೂ, ಮುಖ್ಯಸ್ಥರನ್ನೂ ಕರಸಿ ದೊಡ್ಡ ಮೀಟಿಂಗ್ ಮಾಡಿ ಬಹು ಸ್ವಾರಸ್ಯವಾದ ಉಪನ್ಯಾಸವನ್ನು ನಡಿಸಿದರು. ಈ ಮೀಟಿಂಗಿನಲ್ಲಿ ಹಾಜರಿದ್ದ ಪ್ರಜೆಗಳು ಇಂಡಿಯನ್ ರಿಲೀಫ್ ಫಂಡಿಗೆ 583 ರೂಪಾಯಿ ಚಂದಾ ಪಟ್ಟಿಯನ್ನು ಹಾಕಿ ತಮ್ಮ ರಾಜಭಕ್ತಿಯನ್ನು ಪ್ರಕಾಶಪಡಿಸಿ, ಸಾರ್ವಭೌಮ ಸರ್ಕಾರಕ್ಕೆ ದೇವರು ಬೇಗನೆ ಜಯವನ್ನು ಉಂಟುಮಾಡಲಿ ಎಂದು ಪ್ರಾರ್ಥಿಸಿ ಮೀಟಿಂಗನ್ನು ಮುಕ್ತಾಯಮಾಡಿದರು. [ಚಂದಾ ಕೊಟ್ಟವರ ಹೆಸರು ನಮಗೆ ತಲುಪಿದೆ. ಸ್ಥಳ ಸಂಕೋಚದಿಂದ ಅದನ್ನು ಪ್ರಕಟಿಸಲು ಆಗಲಿಲ್ಲವೆಂದು ವಿಷಾದಿಸುತ್ತೇವೆ.—ಎಡಿ.]

ಮೊಳಕಾಲ್ಮುರು.—ಈ ಪ್ರಾಂತ್ಯ ತಕ್ಕಮಟ್ಟಿಗೆ ಮಳೆ ಬಂದು, ಬಿತ್ತಿರುವ ಪೈರುಗಳು ಚೆನ್ನಾಗಿರುತ್ತವೆ. ಈ ಟವುನಿನ ನೀರಿನ ತೊಂದರೆಯು ಸ್ವಲ್ಪಮಟ್ಟಿಗೆ ಕಮ್ಮಿ ಆಗಿರುತ್ತೆ.—ಈ ತಾಲ್ಲೂಕಿನ ಅಮಲ್ದಾರ್ ಮ|| ಎನ್. ಸುಬ್ಬರಾವ್, ಬಿ. ಎ. ಯವರಿಗೆ ಎರಡು ನೂರು ರೂಪಾಯಿಗಳ ಸಂಬಳ ಕೊಟ್ಟು ಚಿತ್ರದುರ್ಗದ ಡಿಸ್ಟ್ರಿಕ್ಟಿನ ಸಂಪದಭಿವೃದ್ಧಿಯ ಸೂಪರೆಂಟರಾಗಿ ಸರ್ಕಾರದವರು ನೇಮಿಸಿರುತ್ತಾರೆ. ಇವರು ಮೇಲ್ಕಂಡ ಕೆಲಸಕ್ಕೆ ಲಾಯಖ್ ಆದವರಾಗಿಯೂ, ಯಾವಾಗಲೂ ಇಂಥಾ ಕೆಲಸಗಳಲ್ಲಿ ಮುತುವರ್ಜಿಯುಳ್ಳವರಾಗಿಯೂ ಇರುವದರಿಂದ ನಮ್ಮ ಡಿಸ್ಟ್ರಿಕ್ಟಿನ ರೈತರುಗಳಿಗೆ ಬಹಳ ಮಟ್ಟಿನ ಅನುಕೂಲ ದೊರಕೀತೆಂಬುದರಲ್ಲಿ ಸಂದೇಹವೇ ಇಲ್ಲ. ಇವರು ತಾಲ್ಲೂಕಿಗೆ ದಯಮಾಡಿಸಿದ 2 ವರುಷಗಳಿಂದ ನಡಿಸಿರುವ ಕಾರ್ಯಗಳು ಸ್ತೋತ್ರಾರ್ಹವಾಗಿಯೂ, ಶಾಶ್ವತವಾಗಿಯೂ ಇರುತ್ತವೆ. ಈ ಟವುನಿನ ಮುಂಭಾಗದಲ್ಲಿ ಅನೇಕ ವರುಷಗಳಿಂದ ವಿಶೇಷವಾಗಿ ಬೆಳೆದು ಇದ್ದ ಪಾಪಾಸುಕಳ್ಳಿಯನ್ನು ಕತರಾಯಿಸುವಂತೆ ಜನಗಳಿಗೆ ಪ್ರೋತ್ಸಾಹಕೊಟ್ಟದ್ದರ ಮೇಲೆ ಜನಗಳು ಅದನ್ನು ಕತರಾಯಿಸಿದರು. ಸದರಿ ಸ್ಥಳವು ರಮಣೀಯವಾಗಿಯೂ, ವಿಶಾಲವಾಗಿಯೂ ಇರುತ್ತೆ. ಇಲ್ಲಿ ಒಂದು ಟವುನ್ ಹಾಲ್ ಕಟ್ಟಲು ಜನಗಳಿಗೆ ಪ್ರೋತ್ಸಾಹಮಾಡಿ ಇದಕ್ಕೆ ಟವುನಿನ ಮತ್ತು ತಾಲ್ಲೂಕಿನ ದೊಡ್ಡ ಮನುಷ್ಯರುಗಳ ಒಂದು ಕಮಿಟಿ ಏರ್ಪಾಟು ಮಾಡಿಸಿದರು. ಈ ಕಟ್ಟಡಕ್ಕೆ ಮೇಲ್ಕಂಡ ಕಮಿಟಿಯವರು 7,000 ರೂಪಾಯಿ ಚಂದಾ ಮಾಡಿ 6,000 ರೂಪಾಯಿ ವಸೂಲಿ ಮಾಡಿರುತ್ತಾರೆ. ಹಾಲಿ ಕಟ್ಟಡವು ಅರ್ಧಭಾಗ ಪೂರೈಸಿರುತ್ತೆ. ಈ ಕಟ್ಟಡಕ್ಕೆ ನಮ್ಮ ಮಹಾರಾಜರವರ ಅಂಕಿತವನ್ನು ಇಡಲು ಅಪ್ಪಣೆ ದಯಪಾಲಿಸಿದ್ದಾರೆ. ಈಗ ಅಮಲ್ದಾರ್ರು ಇಲ್ಲಿಗೆ ದಯಮಾಡಿದ ನಂತರ ಈ ಟವನ್ ಮ್ಯುನಿಸಿಪಾಲಿಟಿಯು ಅಭಿವೃದ್ಧಿ ಹೊಂದಿತು. ಇವರು ಬಡವನನ್ನೂ ಭಾಗ್ಯವಂತನನ್ನೂ ಒಂದೇ ಸಮನಾಗಿ ಕಾಣುತ್ತಿದ್ದರು. ರೈತರ ಅಹವಾಲನ್ನು ಚೆನ್ನಾಗಿ ಆಲಿಸಿ ಅವರಿಗೆ ತಕ್ಕ ಸಹಾಯವನ್ನು ಮಾಡುತ್ತಾ ಇದ್ದರು. ಇಂಥಾವರು ನಮ್ಮ ತಾಲ್ಲೂಕನ್ನು ಬಿಟ್ಟು ಹೋಗುವರೆಂದು ಪ್ರಜೆಗಳು ಬಹಳವಾಗಿ ವ್ಯಸನಪಡುತ್ತಾರೆ. ಆದರೆ ಇವರು ಇದೇ ಡಿಸ್ಟ್ರಿಕ್ಟಿನಲ್ಲಿ ಸಂಪದಭಿವೃದ್ಧಿ ಕಾರ್ಯಗಳ ಸೂಪರೆಂಟರಾಗಿರುವದರಿಂದ ಎಲ್ಲಾ ತಾಲ್ಲೂಕುಗಳಿಗಿಂತಲೂ ವ್ಯವಸಾಯದಲ್ಲೂ, ವಿದ್ಯೆಯಲ್ಲೂ, ಕೈಗಾರಿಕೆಯಲ್ಲೂ ಕೇವಲ ಹಿಂದಾಗಿರುವ ಈ ತಾಲ್ಲೂಕನ್ನು ಅಭಿವೃದ್ಧಿಗೆ ತರುವರೆಂಬ ಭರವಸೆಯಿಂದ ಪ್ರಜೆಗಳು ನಂಬುತ್ತಾರೆ.

ಬೇಲೂರು.—ಈ ಊರಿನಲ್ಲಿ ಒಂದು ಪರಸ್ಪರಸಹಾಯ ಸಂಘವು ಸುಮಾರು 6-7 ವರುಷಗಳ ಕೆಳಗೆ ರೆಜಿಸ್ಟ್ರಾರ್ರ ಮೂಲಕ ಷೇರು ಒಂದಕ್ಕೆ 5 ರೂಪಾಯಿ ಮೇರೆ 2,000 ರೂಪಾಯಿ ಮೂಲಧನದ ಮೇಲೆ ಸ್ಥಾಪಿಸಲ್ಪಟ್ಟು ಕಳೆದ 1912 ರ ವರಿವಿಗೂ ನಪಕ್ಕೆ ಸಂಘವೆಂದು ಕರೆಯಲ್ಪಡುತ್ತಿತ್ತು. ಪ್ರಜೆಗಳಿಗೆ ಇದರ ಉದ್ದೇಶವು ಗೊತ್ತಿರಲಿಲ್ಲ. ಕೇವಲ ಸ್ವಲ್ಪ ಮಂದಿ ಅದರಲ್ಲೂ ಅನುಕೂಲಸ್ಥರೂ, ಸರ್ಕಾರಿ ನೌಕರರೂ ಮೆಂಬರಾಗಿ ಸೇರಿದ್ದರು. ಈಚೆಗೆ ಪ್ರಸ್ತುತ ರೆಜಿಸ್ಟ್ರಾರ್ರವರು ದಯಮಾಡಿ ಪ್ರಜಾ ಮುಖಂಡರನ್ನೆಲ್ಲಾ ಇಲ್ಲಿನ ಟವನ್ ಹಾಲಿಗೆ ಬರಮಾಡಿಕೊಂಡು ಸೊಸೈಟಿಯ ಪ್ರಯೋಜನವನ್ನು ಕುರಿತು ಬಹಳವಾಗಿ ಪ್ರೋತ್ಸಾಹಿಸಿ ಷೇರು 1 ಕ್ಕೆ 25 ರೂಪಾಯಿ ಮೇರೆ 10,000 ಷೇರಿನ ಸೊಸೈಟಿ ಮಾಡಿದರು. ಸೆಕ್ರೆಟರಿ [illegible]ರ ಪ್ರೋತ್ಸಾಹದ ಮೇಲೆ ಬಹು [illegible] ರೈತರು ಮಾತ್ರವಲ್ಲದೆ ಕೇವಲ ಅನಾಗರಿಕರಾದ ಹೊಲೆಯರೂ ಸೊಸೈಟಿಯಲ್ಲಿ ಮೆಂ[illegible]ವರು. ಇವರ ಬ್ರಾಂಚಾಗಿ ಈ ತಾಲ್ಲೂಕಿನ ಬಹು ಕಡೆ ಸೊಸೈಟಿಗಳು ಏರ್ಪಾಡಾಗಿವೆ. ಈ ಸಾರಿ ನಡೆದ ಜನರಲ್ ಮೀಟಿಂಗಿನಲ್ಲಿ ಈ ವರುಷ 15,000 ರೂಪಾಯಿ ಲೇವಾದೇವಿ ನಡೆದು ಪ್ರಜೆಗಳು ಬಹಳ ಪ್ರಯೋಜನಹೊಂದಿರುವರೆಂದೂ, ಷೇರುದಾರರಿಗೆ ಅನುಕೂಲವಾದ ನಫೆ ಬಂದಿರುವುದೆಂದೂ, ಹೆಂಗಸರೂ ಸಹಾ ಡಿಪಾಜಿಟ್ಟು ಇಟ್ಟಿರುವರೆಂದೂ ಕೇಳಿ ಸಂತೋಷವಾಗುವುದು.—ಕಷ್ಟಾರ್ಜಿತವನ್ನು ಕೋರ್ಟು ಕಛೇರಿಗೆ ತೆತ್ತು ಪಾಪರಾಗುತ್ತಿರುವ ಈ ಮಲ್ನಾಡು ರೈತಾಬಿ ಮುಖಂಡರು, ಪಟೇಲರು ವಗೈರೆರನ್ನು ಟವನ್ ಹಾಲಿಗೆ ಬರಮಾಡಿಕೊಂಡು ಅವರಿಗೆ ಈ ಮಲ್ನಾಡಿನಲ್ಲಿ ಬೆಳೆಯಬಹುದಾದ ತರಕಾರಿ, ದವಸ ಧಾನ್ಯಗಳನ್ನೂ, ಅವುಗಳನ್ನು ಬೆಳೆಯಲು ಅನುಕೂಲವಾದ ಗೊಬ್ಬರ, ಸಾಧನ ವಗೈರೆಗಳನ್ನೂ ವಿವರಿಸಿ ಹೇಳಿದ್ದು ಫಲಕಾರಿಯಾಗಲಿಲ್ಲವೆಂದು ನಮ್ಮ ಅಮಲ್ದಾರ್ ಮ|| ಕೆ. ಲಿಂಗೋಜಿಸಿಂಗ್ ಬಾದಾಮಿಯವರು ಈ ಊರು ಕಛೇರಿ ಮುಂದಿನ ಭಾಟಾ ಮಾರ್ಗದಲ್ಲಿ ಈ ತಾಲ್ಲೂಕಿನ ರೈತರು ಸಂಚರಿಸುವುದರಿಂದ ಅವರ ದೃಷ್ಟಿಗೆ ಬೀಳುವಂತೆ ಇಲ್ಲಿ ಟವನ್ ಹಾಲ್ ಪಕ್ಕದ ಮೈದಾನದಲ್ಲಿ ಸುಲಭವಾದ ಅನುಕೂಲವಾದ ವ್ಯವಸಾಯೋಪಕರಣಗಳಿಂದ ತಾವೇ ಸ್ವತಃ ನಿಂತು ವ್ಯವಸಾಯ ಮಾಡಿಸಿ ಕೋಸು, ಕ್ಯಾಬೇಜು, ಸೊಪ್ಪುಗಳು, ವಿಧವಿಧವಾದ ತರಕಾರಿಗಳು ಬೆಳೆಯುತ್ತಿರುವರು. ನಮ್ಮ ಮಲ್ನಾಡು ರೈತರು ಈ ವ್ಯವಸಾಯ ಕ್ರಮವನ್ನೂ, ವ್ಯವಸಾಯೋಪಕರಣಗಳನ್ನೂ, ಆಯಾ ಕಾಲದಲ್ಲಿ ಬೆಳೆಯಬಹುದಾದ ಧಾನ್ಯ ವಗೈರೆಯನ್ನೂ ತಿಳಿದುಕೊಂಡು ಪ್ರಯೋಜನಹೊಂದುವರೆಂದು ಕೋರಲ್ಪಟ್ಟಿದೆ.—ಈ ಊರಿನಲ್ಲಿ ಪರೇಲ ಆಟದ ಹಾವಳಿ ಬಹಳ ಜೋರಾಗಿದೆ. ನಿತ್ಯವೂ ಶರಾಬು ಅಂಗಡಿಯಲ್ಲಿ ಪೋಕರಿಗಳು ಸೇರಿಕೊಂಡು ಕೆಲವು ಮರ್ಯಾದಸ್ಥರಾದ ರೈತರನ್ನು ಮೋಸಪಡಿಸಿ ಅವರ ದುಡ್ಡು ಕಸುಕೊಳ್ಳುವುದು ತಂಟೆಮಾಡಿದರೆ ಹೊಡೆದು ಓಡಿಸುವುದು ವಗೈರೆ ನಿತ್ಯವೂ ಮಾಡುತ್ತಿದ್ದಾರೆ. ಹಗಲೂ ರಾತ್ರಿ ಪೋಸ್ಟಾಫೀಸಿಗೆ ಸಂಚರಿಸುವ ಮಾಸ್ಟರ ಮೇಲೆ ಈ ಕುಡುಕರು ಅತ್ಯಾಚಾರ ಮಾಡಿ ಅವಮಾನಪಡಿಸುತ್ತಾರೆ. ಇದನ್ನು ನಮ್ಮ ಪೋಲೀಸ್ ಇನ್‌ಸ್ಪೆಕ್ಟರು ಗಮನಕ್ಕೆ ತಂದುಕೊಂಡು ಇದನ್ನು ಅಡಗಿಸುತ್ತಾರೆಂದು ಹಾರೈಸುತ್ತೇವೆ.—ಸೀಮೆಯಿಂದ ಹಡಗು ಬರುವುದಿಲ್ಲವೆಂಬ ನೆಪ ಇಟ್ಟುಕೊಂಡು ವರ್ತಕರು ಆಹಾರ ಪದಾರ್ಥಗಳ, ಬಟ್ಟೆಬರೆಗಳ ಧಾರಣೆಯನ್ನು ಹೆಚ್ಚಿಸಿದ್ದಾರೆ. ಅಳತೆ ತೂಕಗಳು ಶುದ್ಧ ಮೋಸ. ಸಂತೇ ದಿನ ಮೋಸ ಹೊಂದಿದ ರೈತನ ಸಂಕಟ ಹೇಳತೀರದು. ಅಕ್ಕಿ ರೂಪಾಯಿಗೆ 6 ಸೇರು, ರಾಗಿ 12 ಸೇರು. ಕೆರೆ ಕುಂಟೆಗಳು ತುಂಬಿಲ್ಲ.—ಮ್ಯುನಿಸಿಪಲ್ ಮೀಟಿಂಗಿನಲ್ಲಿ ಟವನಿನ ಸ್ಯಾನಿಟೇಷನ್ ವಿಷಯದಲ್ಲಿ ಯಾವ ಹೊಸ ಏರ್ಪಾಡೂ ಚರ್ಚೆಯಾಗಿ ಕ್ರಮವಡುವಂತೆ ತೋರಲಿಲ್ಲ. ಈ ಊರು ಮ್ಯುನಿಸಿಪಲ್ ವಿಚಾರಣೆಯು ಚೆನ್ನಾಗಿಲ್ಲ. ಕೋಟೆಯವರ ಪಾನಕ್ಕೆ ಆಧಾರವಾದ ವಿಷ್ಣುಸಮುದ್ರಕ್ಕೆ ಮಳೆ ಬಂದಾಗ ಕೋಟೆ ಬಚ್ಚಲ ನೀರೆಲ್ಲಾ ಸೇರಿತು. ಇಂತಹ ನೀರನ್ನು ಪಾನಮಾಡುವವರ ಕ್ಷೇಮ ವಿಚಾರವು ಹೇಗಿರುವುದೋ ಹೇಳಬೇಕಾಗಿಲ್ಲ. ಮ್ಯುನಿಸಿಪಲ್ ಜಾಡಮಾಲಿಗಳ ಸಂಬಳವು ಕ್ರಮವಾಗಿ ಬಟವಡೆಯಾಗುವ ವಿಷಯದಲ್ಲಿ ನಮ್ಮ ಅಮಲ್ದಾರ್ರು ಬಟವಾಡೆ ಕಾಲದಲ್ಲಿ ಸರಿಯಾದ ನಿಗಾ ಇಡಿಸಬೇಕಾಗಿದೆ.

ಒಳದೇಶದ ವೃತ್ತಾಂತಗಳು.

ಈ ವಾರ ನಮ್ಮ ಪತ್ರಿಕೆಯು ಹತ್ತು ಪುಟಗಳುಳ್ಳದ್ದಾಗಿದೆ.

ರಾಜಧಾನಿಯಲ್ಲಿ ದಸರಾ ಕೈಗಾರಿಕೆ ಮತ್ತು ವ್ಯವಸಾಯ ವಸ್ತುಪ್ರದರ್ಶನವು ತಾ. 21 ನೇ ಸೋಮವಾರ ಪ್ರಾರಂಭವಾಗುವುದು.

ರಾಜಧಾನಿಯ ಟೌನ್ ಹಾಲ್ ಮಂದಿರದಲ್ಲಿ ತಾ. 22 ನೇ ಮಂಗಳವಾರ ಪರಸ್ಪರ ಸಹಾಯಸಂಘಗಳ ನಾಲ್ಕನೇ ಮಹಾ ಸಭೆಯು ಪ್ರಾರಂಭವಾಗುತ್ತದೆ.

ಈ ದಿನ ಶ್ರೀಮನ್ ಮಹಾರಾಜರವರು ನೀಲಗಿರಿಯಿಂದಲೂ, ದಿವಾನ್ ಮ|| ವಿಶ್ವೇಶ್ವರಯ್ಯನವರು ಬೆಂಗಳೂರಿನಿಂದಲೂ ರಾಜಧಾನಿಗೆ ದಯಮಾಡುವವರಾಗಿದ್ದಾರೆ.

ಬೊಂಬಾಯಿ ಪಟ್ಟಣದ ಫಾಕೊರ್‌ದ್ವಾರ್‌ನಲ್ಲಿರುವ ವೇ|| ತಮ್ಮಣ್ಣಾಚಾರ್ಯರು ಈಗಿನ ಯುದ್ಧದಲ್ಲಿ ಬ್ರಿಟಿಷರಿಗೆ ಜಯಪ್ರದವಾಗಲೆಂದು ನವಗ್ರಹ ಜಪ, ಶಾಂತಿ, ರಾಜಸಿದ್ಧಿ ಎಂಬವುಗಳನ್ನು ಮಾಡುತ್ತಿದ್ದಾರೆಂದು ಅಲ್ಲಿನ ಒಬ್ಬ ಬಾತ್ಮಿದಾರರು ಬರೆದಿದ್ದಾರೆ.

ಬೆಂಗಳೂರು-ಚಿಕ್ಕಬಳ್ಳಾಪುರದ ಲೈಟ್ ರೈಲ್ವೆಯ ಸ್ಕೀಮಿ ಯಲಹಂಕ-ದೇವನಹಳ್ಳಿ ಭಾಗದಲ್ಲಿ ದೊಡ್ಡ ಜಾಲದಿಂದ ದೇವನಹಳ್ಳಿ ತನಕ ಆಮದು ರೈಲನ್ನು ಸೆಪ್ಟೆಂಬರ್ 15 ರಿಂದ ಪ್ರಾರಂಭಮಾಡಿರುತ್ತೇವೆಂದು ಸೂಪರಿಂಟೆಂಡೆಂಟ್ ಮ|| ಬಿ. ವೆಂಕೋಬರಾಯರು ತಿಳಿಸುತ್ತಾರೆ.

ಬೆಂಗಳೂರು ಸೆಂಟ್ರಲ್ ಕೋಆಪರೇಟಿವ್ ಬ್ಯಾಂಕಿನ ರಿಪೋರ್ಟು ಮತ್ತು ಬ್ಯಾಲೆನ್ಸ್ ಷೀಟು ನಮಗೆ ತಲುಪಿವೆ. ಈ ಬ್ಯಾಂಕು ಅಭಿವೃದ್ಧಿಸ್ಥಿತಿಯಲ್ಲಿದೆ ಎಂದು ಗೊತ್ತಾಗುತ್ತದೆ, ಷೇರುದಾರರಿಗೆ ಶೇಕಡ 8 ರಂತೆ ಬಡ್ಡಿ ಪಾವತಿ ಮಾಡಿ, 3,424 ರೂಪಾಯಿ ರಿಜರ್ವ್ ಫಂಡಿಗೆ ತೆಗೆದಿಟ್ಟಿದ್ದಾರೆ. ಪ್ರಜೆಗಳಿಗೆ ಈ ಬ್ಯಾಂಕಿನಲ್ಲಿ ತುಂಬಾ ನಂಬಿಕೆಯುಂಟಾಗುತ್ತಿರುವಂತೆ ಕಾಣುತ್ತದೆ ಹ್ಯಾಗೆಂದರೆ ಈ ಬ್ಯಾಂಕಿನ ಡಿಪಾಜಿಟ್ ಹಣವೇ 2,38,805 ರೂಪಾಯಿ ಆಗಿದೆ.

ಒಬ್ಬ ಬಾತ್ಮಿದಾರರಿಂದ—ಮೈಸೂರು ತಾಲ್ಲೂಕು ಪೋಲೀಸ್ ಇನ್‌ಸ್ಪೆಕ್ಟರ್ ಮಿ|| ಸೈಯದ್ ಅಮೀರಾ ಅಹಮದ್ ರವರಿಗೆ ಹೊಳಲಕೆರೆಗೆ ವರ್ಗವಾದ್ದರಿಂದ ಅವರ ನೌಕರಮಾನೇರು ತಮಗೆ ಅವರಲ್ಲಿದ್ದ ಭಕ್ತಿ ಪ್ರೀತಿ ಕೃತಜ್ಞತೆಗಳನ್ನು ತೋರಿಸತಕ್ಕ ಬಗ್ಗೆ ಹಿಂದಿನ ಶನಿವಾರ ರಾಜಧಾನಿಯ ಮ|| ಹೊಟ್ಟೆಪ್ಪನವರ ಬಂಗ್ಲೆಯಲ್ಲಿ ಒಂದು ಸಂತೋಷ ಕೂಟವನ್ನು ನಡಿಸಿದರು. ತಾಲ್ಲೂಕು ಆಫೀಸರುಗಳೂ, ನೌಕರರೂ ನೂರಾರು ಮಂದಿ ಸೇರಿದ್ದು ಮ|| ವೈ. ಬ್ರಂಹರಾಯಪ್ಪ ಬಿ.ಎ. ಯವರು ಸಭೆಯ ಪರವಾಗಿ ಇನ್‌ಸ್ಪೆಕ್ಟರವರ ಗುಣಕಥನ ಮಾಡಿ ಅವರ ಅಗಲುವಿಕೆಯಿಂದ ಉಂಟಾಗಿರತಕ್ಕ ವಿಷಾದವನ್ನು ತೋರ್ಪಡಿಸಿದರು.

ಮೈಸೂರು ಗೆಜೆಟ್ ಸಂಗ್ರಹ.

ಸೀನಿಯರ್ ಸರ್ಜನ್‌ರವರ ಪರ್ಸನಲ್ ಅಸಿಸ್ಟೆಂಟರಾದ ಡಾ|| ಎಸ್. ವಿ. ರಾಮಸ್ವಾಮಿ ಅಯ್ಯಂಗಾರ್ರನ್ನು ಬೆಂಗಳೂರು ಹುಟ್ಟೂರ ಆಸ್ಪತ್ರೆ ವಿಚಾರಣೆನೋಡಿಕೊಳ್ಳುವ ಮೆಂಬರಾಗಿ ನೇಮಿಸಿದೆ.

ಜಹಗೀರ್‌ದಾರ್ ಮತ್ತು ವರ್ತಕ ಮಿ|| ಯಾಕೂಬ್ ಸಾಬರನ್ನು ಹೆಗ್ಗಡದೇವನಕೋಟೆ ಮ್ಯುನಿಸಿಪಲ್ ಬೋರ್ಡ್ ಮೆಂಬರಾಗಿ ನೇಮಿಸಿದೆ.

ಮೇಲ್ಕೋಟೆ ಟೌನ್ ಮ್ಯುನಿಸಿಪಲ್ ಕೌನ್ಸಿಲ್‌ನಲ್ಲಿ ಈಗಿರುವ ಮೆಂಬರುಗಳೇ 1915 ನೇ ಫೆಬ್ರವರಿ ತನಕ ಇರತಕ್ಕದ್ದು.

ಜವಳಿ ವರ್ತಕ ಮ|| ಚನ್ನಪ್ಪಶೆಟ್ಟರನ್ನು ಮಾಗಡಿ ಟವನ್ ಮ್ಯುನಿಸಿಪಲ್ ಬೋರ್ಡ್ ಮೆಂಬರಾಗಿ ನೇಮಿಸಿದೆ.

ಮ|| ಹೆಬ್ಬಾಗೆ ಚಿಕ್ಕರಾಮಣ್ಣಾಚಾರ್ರನ್ನು ಮುಳಬಾಗಲ ಮ್ಯುನಿಸಿಪಲ್ ಬೋರ್ಡ್ ಮೆಂಬರಾಗಿ ನೇಮಿಸಿದೆ.

ಕಡೂರು ತಾಲ್ಲೂಕ್ ಬೋರ್ಡಿನವರು ಬೀರೂರು ಮ|| ಎನ್. ಎಂ. ಶಿವಲಿಂಗಪ್ಪನವರನ್ನು ಕಡೂರು ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರಾಗಿ ಚುನಾವಣೆ ಮಾಡಿದ್ದಾರೆ.

ಹೊಸದುರ್ಗ ತಾಲ್ಲೂಕ್ ಅಮಲ್ದಾರ್ ಮ|| ಕೆ. ಶ್ರೀನಿವಾಸರಾಯರಿಗೆ ಕೊಟ್ಟಿರುವ ಒಂದು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೊಂದು ತಿಂಗಳು ಜಾಸ್ತಿಮಾಡಿದೆ.

ಮುಂದೆ ಹೇಳುವವರನ್ನು ಅಮಲ್ದಾರರಾಗಿ ಖಾಯಂ ಮಾಡಿದೆ:—ಮಿ|| ಮಹಮದ್ ಅಬ್ದುಲ್ಲಾ ಷರೀಫ್‌ರವರು 2 ನೇ ಕ್ಲಾಸ್, ಮ|| ಪಿ. ಸುಬ್ಬರಾಯರು 3 ನೇ ಕ್ಲಾಸ್, ಮಿ. ಇ. ಎಚ್. ಫಾವ್ಸನ್‌ರವರೂ ಮ|| ಬಿ. ಲಿಂಗಯ್ಯನವರೂ 4 ನೇ ಕ್ಲಾಸ್.

ಮುಂದೆ ಹೇಳುವವರನ್ನು ಅಮಲ್ದಾರರಾಗಿ ನೇಮಿಸಿದೆ—ಮ|| ಗಳಾದ ಎಸ್. ಸುಂದರರಾಜಯ್ಯಂಗಾರ್ರು, ಬಿ. ಎಂ. ವೆಂಕಟೇಶಯ್ಯನವರು, ಟಿ. ಕೆ. ಲಕ್ಷ್ಮಣ ಅಯ್ಯರವರು, ಬಿ. ಮಲ್ಲಿಕಾರ್ಜುನಯ್ಯನವರು, ಸಿ. ರಾಮಚಂದ್ರರಾಯರು, ಕೆ. ಸಿದ್ಧರಾಮಪ್ಪನವರು; ಮ|| ಜಿ. ನಾರಾಯಣಯ್ಯನವರನ್ನೂ, ಮ|| ಕೆ. ಕೆಸ್ನಯ್ಯಶಾಸ್ತ್ರಿಯವರನ್ನೂ ಡೆಪ್ಟಿ ಅಮಲ್ದಾರರಾಗಿ ನೇಮಿಸಿದೆ.

ಮುಂದೆ ಹೇಳುವ ಅಮಲ್ದಾರ್ರುಗಳ ವರ್ಗಾವರ್ಗಿ ಹುಕುಂ ಮಾಡಿದೆ—ಮ|| ಗಳಾದ ಜಿ. ಮುರುಡಪ್ಪನವರು ಮೊಳಕಾಲ್ಮುರಿಗೆ, ಕೆ. ಕೆ. ವೆಂಕಟಸ್ವಾಮಿ ಅಯ್ಯರವರು ಸೊರಬಕ್ಕೆ, ಕೆ. ಕೇಶವಾಚಾರ್ರು ಚಾಮರಾಜನಗರಕ್ಕೆ, ಎಸ್. ಸುಂದರರಾಜಯ್ಯಂಗಾರ್ರು ಹೊನ್ನಾಳಿಗೆ, ಜಿ. ನಾರಾಯಣಯ್ಯನವರು ಆಲೂರಿಗೆ, ಬಿ. ಕೃಷ್ಣಯಿಂಗರು ತರೀಕೆರೆಗೆ, ಸಿ. ಲಕ್ಷ್ಮಣರಾಯರು ಕಡೂರಿಗೆ, ಎಂ. ರಂಗನಾಥರಾಯರು ಚಿಕ್ಕಮಗಳೂರಿಗೆ, ಬಿ. ಮಲ್ಲಿಕಾರ್ಜುನಯ್ಯನವರು ಹೆಗ್ಗಡದೇವನಕೋಟೆಗೆ, ಎಂ. ಎನ್. ಶ್ರೀನಿವಾಸಯ್ಯಂಗಾರ್ರು ಹೊಸಕೋಟೆಗೆ, ಟಿ. ಕೆ. ಸೋಮೇಶ್ವರಯ್ಯರವರು ಕೋಲಾರಕ್ಕೆ, ಅಬ್ದುಲ್ ಹಕ್‌ರವರು ಕೊಪ್ಪಕ್ಕೆ, ಜಿ. ಬಾಲ್‌ರವರು ಬೌರಿಂಗ್‌ಪೇಟೆಗೆ, ಸಿ. ರಾಮಚಂದ್ರರಾಯರು ಜಗಲೂರಿಗೆ, ಟಿ. ಹನುಮಂತರಾಯರು ಚಿಕ್ಕಬಳ್ಳಾಪುರಕ್ಕೆ, ಕೆ. ಸಿದ್ಧರಾಮಪ್ಪನವರು ಸದ್ಯದಲ್ಲಿ ಚಿಕ್ಕಬಳ್ಳಾಪುರಕ್ಕೆ, ಎಸ್. ಶ್ರೀನಿವಾಸಯ್ಯಂಗಾರ್ರು ತುಮಕೂರಿಗೆ, ಟಿ. ಕೆ. ಲಕ್ಷ್ಮಣ ಅಯ್ಯರವರು ದೇವನಹಳ್ಳಿಗೆ, ಕೆ. ಕೆಸ್ನಯ್ಯಶಾಸ್ತ್ರಿಗಳು ಗುಡಿಬಂಡೆಗೆ.

ಮ|| ಎಂ. ಆರ್. ಕೃಷ್ಣಮೂರ್ತಿಯವರನ್ನು 80 ರೂಪಾಯಿ ತಲಬಿನ ಮೇಲೆ ಹಂಗಾಮಿಯಾಗಿ 2 ನೇ ಕ್ಲಾಸ್ ಓವರ್ಸಿಯರಾಗಿ ನೇಮಿಸಿ, ರೈಲ್ವೆ ಕಾಮಗಾರಿ ಇಲಾಖೆಗೆ ವರ್ಗಮಾಡಿದೆ.

ಮ|| ವಿ. ಕೇಶವರಾಯರನ್ನು 150 ರೂಪಾಯಿ ತಲಬಿನ ಮೇಲೆ ಒಂದು ವರುಷ ಹಂಗಾಮಿಯಾಗಿ 3 ನೇ ಕ್ಲಾಸ್ ಸೂಪರವೈಜರಾಗಿ ನೇಮಿಸಿ, ಶಿವಮೊಗ್ಗಾ ಡಿಸ್ಟ್ರಿಕ್ಟಿಗೆ ವರ್ಗಮಾಡಿದೆ.

WANTED

An EDITOR, an ASSISTANT EDITOR and a SUB-EDITOR for a non-political monthly Journal published separately in English and Kannada by the Mysore Economic Conference.

The applicants for the first place should have had journalistic experience and for the other two places good knowledge of Kannada essential. Pay according to qualifications, but will not exceed Rs. 300/-, 100/-, and 75/- for the three places, respectively. Appointment will be temporary for a period of three years and terminable within that period at three months' notice on either side. Applications with copies of testimonials, stating salary expected, should reach the undersigned on or before the 15th October, 1914.

For further information please refer to the *Mysore Gazette* of 17th September, 1914, or subsequent date, or apply to

SECRETARY,

13th Sept, 1914. *Mysore Economic Conference,*

BANGALORE.

[209-1]

ತಾಲ್ಲೋಕು ವರ್ತಮಾನ.

ಶಿವಮೊಗ್ಗ.—ಈ ಪ್ರಾಂತ್ಯ ಯಥೇಷ್ಟವಾದ ಮಳೆಯಿಂದ ಫಸಲು ನಷ್ಟ ... ಮಳೆ ಬೀಳುತ್ತಿಲ್ಲದು.—ಕಳೆದ 22 ನೇ ತಾ. ಶನಿವಾರ ... ತಿಮ್ಮಪ್ಪನ ಹೊಸ್ಮನೆಲ್ಲಿರುವ ಆಜ ಅಛಟ್ಟರ ಮನೆಗೆ ಕನ್ನಾ ... ಒಡವೆಗಳನ್ನು ಕಳ್ಳರು ಅಪಹರಿಸಿದ್ದಾರೆ. ಪತ್ತೆ ತಲೆದೂರು ನಡೆಯು ... ತಾ. 2 ನೇ ಸೋಮವಾರ ... ನೌಕರನಾದ ಶೀಗೆ ... ಸಂಬುವನು ನದಿಗೆ ಸ್ನಾನಕ್ಕೆ ಹೋಗಿ ... ಹಾಗೇ ಮುಳುಗಿ ... ಮನೆಯವರೂ ... ಶವವು ಸಿಕ್ಕ ... ಬಂಧುವರ್ಗದವರಿಗೆ ... ತಾ. 26 ನೇ ಸಾಯಂಕಾಲ ಅಪ್ಪಾಜಪ್ಪ ... ಕಾರ್ಖಾನೆಯಲ್ಲಿ ಕೆಲಸಮಾಡುತ್ತಿದ್ದ ತಂದೆ ಮಕ್ಕಳಿಬ್ಬರು ಒಡ್ಡರಹಟ್ಟಿ ... ಹತ್ತಿ ಹೊಡೆದು ಬರುತ್ತಿರುವಾಗ ಮಗನು ಕಾಲುತಪ್ಪಿ ಬರುವಲ್ಲಿ ಹೊಂದು ... ಸುತ್ತಿಕೊಂಡು ಬವಲಾಗಿಹೋದನು. ತಂದೆಯು ಕಂಡು ಕೊಡ್ಡ ... ಹೋಗಲು ... ಬಂದ ತಂದೆಯನ್ನು ಮಗನು ಅಪ್ಪಿಕೊಂಡ ... ಅಪ್ಪ ಮಕ್ಕಳಿಬ್ಬರೂ ... ತಂದೆಗೆ ಒಬ್ಬ ... 2-3 ಚಿಕ್ಕ ಮಕ್ಕಳೂ ಇದ್ದಾರೆ. ಮಗನಿಗೆ ಹೆಂಡತಿ ಮಾತ್ರ ...—ಶಿವಮೊಗ್ಗ ... ರಸ್ತೆ ... ವಗೈರೆ ... ಕ್ರಮಪಡಿಸದ ... ತುಂಬಾ ... 7 ವರುಷದ ... 12 ವರುಷದ ... ಹೆಸರು ಮತ್ತು ತಂದೆ ಹೆಸರು ಜಾತಿ ವಗೈರೆಯನ್ನು ಸರ್ಕಾರ ... ಬಲಾತ್ಕಾರದ ವಿಷ್ಯ ... ಬಂದೀ ... —... ದೇವಸ್ಥಾನದಲ್ಲಿ ... ಬಹಳ ... ಬಹಳ ... —... ನೇ ಸೋಮವಾರ ... ಹಾಲಿನಲ್ಲಿ ದೆಪ್ಯುಟಿ ... ರೆವ್|| ಎ. ... ಸ್ಕೂಲ್ ವಿದ್ಯಾರ್ಥಿನಿಯರಿಗೆ ಬಹು ... ಕೊಟ್ಟರು. ... ದೆಪ್ಯುಟಿ ... ಅಗ್ರಾಸನವನ್ನು ... ಬಹಳ ಸಂತೋಷದೊಡನೆ ... ವಿದ್ಯಾ... ... ಕುರಿತು ಉಪನ್ಯಾಸ ... ಅನಂತರ ... ಪುಷ್ಪ ... ಮಹಾರಾಜರವರ ಮತ್ತು ಚಕ್ರವರ್ತಿಯವರ ... ಪ್ರಾರ್ಥನೆಯೊಡನೆ ... ಮುಕ್ತಾಯವಾಯಿತು.

ಮಧುರೆ ... ರೂ. 2-2-0.

... 1 ... ಸಹಿತ.



ಇದು 18 ... ಧಾರಾ ... ಲಾಭ ... ಹೋಗ ... ಸುಂದರವಾದ ಸರಗಳು. ... [208-1]

...—ರಾಮರಾವ್, ... ಕೋಮಟ್ ... ತಿರುವಲ್ಲಿಕ್ಕೇಣಿ, ಮದರಾಸ್.

ತಂಜಾವೂರು ಗೆಜ್ಜೆ ಅಡ್ಡಿಗೆ ಕ್ರಯ 7 ಆಣೆ.

ಇದು ಎಲೆಕ್ಟ್ರಿಕ್ ಚಿನ್ನದಿಂದಲೂ ಮತ್ತು ಗಟ್ಟಿ ಗಜ್ಜುಗಳಿಂದಲೂ ತಯಾರಿಸಿ ಸುಂದರವಾಗಿ ತುರ್ಕಿವುಗಳನ್ನಿಟ್ಟು ರೇಷ್ಮೆ ಮಿಶ್ರವಾದ ಧಾರದಿಂದ ಕಟ್ಟಿರುತ್ತೆ.



ಇದು ಸ್ತ್ರೀಯರು ಕೊರಳಲ್ಲಿ ಧರಿಸಿಕೊಳ್ಳುವದಕ್ಕೆ ಲಾಯಖಾದದ್ದು. ಖರೀದಿದಾರರಿಗೆ ನಂಬಿಕೆ ಹುಟ್ಟುವದಕ್ಕಾಗಿ ಅವರು ಕೋರುವಷ್ಟು ಅಡ್ಡಿಗೆಗಳನ್ನು ವಿ. ಪಿ. ಛಾಂಗಿ ಮೂಲಕ ಕಳುಹಿಸುವದಲ್ಲದೆ ಅಡ್ಡಿಗೆಯ ಮಾದರಿಯನ್ನು ಪಡೆ ನೋಡುವದಕ್ಕಾಗಿ ಮಾದರಿ ಅಡ್ಡಿಗೆಯ ಗುಂಡುಗಳನ್ನು ಅಂಚೆಯಲ್ಲಿ ಉಚಿತವಾಗಿ ಕಳುಹಿಸುತ್ತೇವೆ. ಅದನ್ನು ನೋಡಿ ಮನಸ್ಸಿಗೆ ತೃಪ್ತಿಕರವಾಗಿದ್ದಲ್ಲಿ ಹಣವನ್ನು ಕೊಟ್ಟು ವಿ. ಪಿ. ಛಾಂಗಿಯನ್ನು ಪಡೆಯಿರಿ; ಇಲ್ಲವೇ, ಪದರಿ ಛಾಂಗಿಯನ್ನು ವಾಪಸು ಕಳುಹಿಸಿ.

ನಮ್ಮ ವಿಳಾಸ :—ಎಸ್. ಎಚ್. ಮೂರ್ತಿ ಕಂಪೆನಿ,

[208-1] ತಿರುವಲ್ಲಿಕ್ಕೇಣಿ, ಮದರಾಸು.

ನಿನಗೆ ಮೈ ಸ್ವಸ್ಥವಿಲ್ಲವೋ ?

ನನಗೆ ಮೈ ಸ್ವಸ್ಥವಿಲ್ಲವೆಂದು ಕೋರಿದಾಗ—ಎಂದರೆ, ನಿನಗೆ ಯಾವ ನೋವೇ ಉಂಟಾಗಿರಲಿ—" ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತಿದೆಯೇ ?" ಎಂದು ನಿನ್ನನ್ನು ನೀನೇ ಕೇಳಿಕೋ; ಹಾಗೆ ಆಗದಿದ್ದರೆ ಡೋನ್ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ. ಮಾರನೇ ದಿನ ಬೆಳಿಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನಿನಗೆ ಮೈ ಸ್ವಸ್ಥವಾಗುವುದು.



(೧೨ ಆಣೆ ಬುಡ್ಡಿ ಪರಿಮಾಣ)

ಮಲಬಂಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ಕಡೆಯಲ್ಪಟ್ಟು ವಿಷವಾಗಿ ಪರಿಣಮಿಸುವುದು. ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲಕಾರಣವಾಗಿರುವುದು. ಮಲಬಂಧದಿಂದ ರೋಗಗಳೇಕೆ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು. ಆ ರೋಗಗಳಾವುವೆಂದರೆ :—ಪಿತ್ತಕೋಶ ರೋಗ; ಪಿತ್ತ; ಪಿತ್ತಜ್ವರ; ಅಜೀರ್ಣ; ಅಗ್ನಿಮಾಂದ್ಯ; ಗಾಬರಿ; ಅಶಕ್ತಿ; ಎದೆಯು ಕಲ್ಲಿಸುವುದು; ತಲೆತಿರುಗುವುದು; ತಲೆನೋವು; ಹೊಟ್ಟೆಯುಬ್ಬರ; ಮೂಳೆಗಿನ ಹೊಟ್ಟೆನೋವು; ಹೆಂಗಸರ ವ್ಯಾಧಿಗಳು; ಇವೇ ಮೊದಲಾದವು. ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು.

ಡೋನ್ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು. ಗಂಡುಸರಿಗಾಗಲಿ ಹೆಂಗುಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ ಕಶ್ಮಲವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ಶುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇಗ ರೋಗವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು. [198-2]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ. ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು. ಔಷಧಗಳನ್ನು ಮಾರುವವರ ಬಳಿಯೆಲ್ಲಾ ದೊರೆಯುವುದು; ಅಥವಾ ಡೋನ್, ಪಿ. ಒ. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು.

ಊತದ ಮೊಣಕಾಲು.

ದಿನದ ಪಯಣದಲ್ಲಿ ನಿನ್ನ ಕಂಡುಕೊಳ್ಳುವ ನೋವಿನಂತೆಯೇ ಇದೂ ನೋವಾಗಿಯೂ ಅನಾನುಕೂಲವಾಗಿಯೂ ಇರುತ್ತದೆ. ಮತ್ತು ಅದು ಹಾನಿಕಾರಕವಾದದ್ದು. ಊತದ ಮೊಣಕಾಲು ಸದಾ ಕಾಟದಾಯಕವಾಗುತ್ತದೆ.

ಫಿಲಡೆಲ್ಫಿಯದ, ಎ. ಸಿ. ಲೇರ್ಡ್ ಎಂಬುವರು ಬರೆಯುವುದು :—" ಎರಡು ವರುಷಗಳಕಾಲ ಮೊಣಕಾಲಿನ ದೊಡ್ಡ ಊತದ ಬೇನೆಯಿಂದ ಮರಣಕ್ಕೆ ಗುರಿಯಾಗಿದ್ದೆನು. ವೈದ್ಯರೂ, ತೈಲಗಳೂ ಗುಣಪಡಿಸಲಿಲ್ಲ. ನಮ್ಮ ನಗರದ ನಾಲ್ವರು ವೈದ್ಯರಿಂದ ಚಿಕಿತ್ಸೆಹೊಂದಿ, ಗುಣಕಾಣದೆ, ಲಿಟಿಲ್ಸ್ ಓರಿಯಂಟಲ್ ಬಾಂ ಎಂಬುದನ್ನು ಉಪಯೋಗಿಸಿ, ಶೀಘ್ರದಲ್ಲಿ ಪೂರ್ಣ ಗುಣಹೊಂದಿದೆನು."

ಲಿಟಿಲ್ಸ್ ಓರಿಯಂಟಲ್ ಬಾಂ ಎಂಬುದನ್ನು ಲೇಪಿಸುವದರಿಂದ ಉಳುಕುಗಳೂ, ಗಾಯಗಳೂ, ಸಂಧಿವಾತವೂ, ವಾಯು ನೋವುಗಳೂ ನಿಸ್ಸಂದೇಹವಾಗಿ ಬೇಗ ವಾಸಿಯಾಗುತ್ತವೆ.

ಇಂಡಿಯದ ಊರುಗಳಲ್ಲಿರುವ ಎಲ್ಲಾ ಔಷಧಗಾರರಲ್ಲಿಯೂ ಸೀಸೆ 1ಕ್ಕೆ 1 ರೂಪಾಯಿನಂತೆ ಮಾರಲ್ಪಡುತ್ತೆ. 101-30

ಸುಖಕರ, ಆನಂದ, ಬಹಳ ಅವಶ್ಯ.

ಈಗ ತಾನೇ ಕಂಡುಹಿಡಿದಿದೆ.

ಜಪಾನ್ ರಾಜ್ಯದಲ್ಲಿ ನೂರಾರು ವರುಷಗಳಿಂದ ಉಪಯೋಗದಲ್ಲಿದೆ.

ಸೆಶಿಂತಾನ

ಬಾಯಿಯ ವಾಸನೆ ಸುಗಂಧದ ಮುತ್ತುಗಳು.

(1) ಮನಸ್ಸಿಗೆ ಹರ್ಷವನ್ನೂ ಉಲ್ಲಾಸವನ್ನೂ ಕೊಟ್ಟು ಜೀರ್ಣಶಕ್ತಿಯನ್ನುಂಟುಮಾಡುವುದು.

(2) ಹಾಡುವವರಿಗೆ ವರಪ್ರಸಾದವಾದದ್ದು.

(3) ಬಾಯಿ ದುರ್ಗಂಧ, ಗಂಟಲು ಗಾರೆನ್ನುವುದು, ಉಬ್ಬಸ, ಸಮುದ್ರಯಾನದ ಜುಗುಪ್ಸೆ, ಈ ಮೊದಲಾದವನ್ನು ಹುಟ್ಟದಂತೆ ಅಡ್ಡಿ ಮಾಡುತ್ತದೆ.

(4) ತಾಂಬೂಲದೊಡನೆ ಸೇವಿಸುವುದಕ್ಕೆ ಅತ್ಯಂತ ಹಿತಕರವಾಗಿದೆ. [72-27]

ಒಂದು ಸಲ ಪರೀಕ್ಷೆಮಾಡಿದಲ್ಲಿ ಯಾವಾಗಲೂ ಒಂದು ಪೊಟ್ಲ ಇದ್ದೇ ತೀರಬೇಕೆಂದು ನೀವೇ ನಿಶ್ಚಯಿಸುವಿರಿ.

ಮುತ್ತಿನಂತಿರುವ 46 ಮಾತ್ರೆ ಉಳ್ಳ ಪೊಟ್ಲಕ್ಕೆ ಕ್ರಯ					2	ಆಣೆ.
,,	95	,,	,,	,, ,,	4	,,
,,	200	,,	,,	,, ,,	7	,,
,,	200	,, ಸುಂದರವಾದ ಟಿನ್ ಡಬ್ಬಾ			9	,,
,,	60	,,	,,	,,	4	,,
,,	100	,, ಬಾಟ್ಲಿಯಲ್ಲಿ			4½	,,

ಈ ಕ್ರಯದಷ್ಟು ಸ್ಟಾಂಪನ್ನೂ, ಅಂಚೆ ವೆಚ್ಚಕ್ಕೆ ಜಾಸ್ತಿ ಒಂದಾಣೆಯನ್ನೂ ಸೇರಿಸಿ ಕಳುಹಿಸಬೇಕು. ಕಾಗದಪತ್ರವನ್ನೂ ವಿಳಾಸಗಳನ್ನೂ ನಮಗೆ ಇಂಗ್ಲೀಷಿನಲ್ಲೇ ಬರೆಯತಕ್ಕದ್ದು.

ನಮ್ಮ ವಿಳಾಸ—ಸೆಶಿಂತಾನ ಡಿಪೋ,
ಮೋಸೂರ್ ಬಿಲ್ಡಿಂಗ್, ಪ್ರಿನ್ಸೆಸ್ ಸ್ಟ್ರೀಟ್,
ಬೊಂಬಾಯಿ 2;
ಅಥವಾ, ಬಿ. ಸಿ. ಷಾ ಕಂಪೆನಿ,
509 ಮಿಂಟ್ ಬೀದಿ, ಮದರಾಸ್.



ಅಮೃತಾಂಜನ ರಿಜಿಸ್ಟರ್ಡ್

ಇದು ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು. ಇದರ ಉಪಯೋಗದಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗವಾಯು, ಉಳುಕು, ಕೆಮ್ಮು, ಸೊಂಟದನೋವು, ಶೀತ, ಚರ್ಮ ವ್ಯಾಧಿ, ಹಲ್ಲುನೋವು, ಚೇಳು ಕಡಿತ ಮೊದಲಾದ ಎಲ್ಲಾ ತರದ ನೋವುಗಳು ಖಾತ್ರಿಯಾಗಿ ನಿಲ್ಲುವವು. ನಕಲಿ ಔಷಧಗಳನ್ನು ಪಡೆಕೊಳ್ಳಬೇಡಿರಿ. ಈ ನಮ್ಮ ಜೋಕ್ರಪ್ರಖ್ಯಾತವಾದ ಅಮೃತಾಂಜನವನ್ನು ನಮ್ಮ ರಿಜಿಸ್ಟರ್ಡ್ ಮಾದ ಮತ್ತು ಹಲವು ಭಾಷೆಗಳುಳ್ಳ ಸುಂದರವಾದ ಕರಡಿಗೆಯಲ್ಲಿ ... ವಿರುತ್ತೇವೆ. ಕರಡಿಗೆ ಇಲ್ಲದ ಬಾಟ್ಲಿಗಳನ್ನು ಪಡೆಕೊಳ್ಳಬೇಡಿರಿ. ಬಾಟ್ಲಿ ಒಂದರ ಕಿಮ್ಮತ್ತು 0-8-0. ಡಜನ್ 1ಕ್ಕೆ 5-1-0 ವಿ. ಪಿ. ಪ್ರತ್ಯೇಕ. ಗಜಕರ್ಣದ ಮುಲಾಮು 0-6-0. ದಂತಮಂಜನ 0-2-0. ಕೋಟೆ ತೈಲ 0-12-0. ಖಿಜ್ಜ ಮುಲಾಮು 0-3-0. ಮಲಬದ್ಧ ಮಾತ್ರೆ 0-4-0. ಸುಂದರಿ ಮುಲಾಮು 0-8-0. ಕ್ಯಾಟಲಾಗಿಗೆ ಬರೆಯಿರಿ. [52-28]

ವ್ಯಾಪಾರಸ್ಥರಿಗೆ ಬಹಳ ಕಮಿಷನ್ ದೊರಕುವದು.

ಅಮೃತಾಂಜನ್ ಡಿಪೋ,

ಫೋರ್ಟ್, ಮುಂಬಯಿ, ಮತ್ತು ೯ ಜಹಂಗೀರ್ ಸ್ಟ್ರೀಟ್, ಮದ್ರಾಸು.

Mellin's Food

ಮೆಲಿನ್ಸ್ ಆಹಾರವು

ಕೈಸೋಕದ ತಯಾರ್ಮಾಡಿರುವದು.

[4-37]

ಮೆರ್ಲಿನರವರ ಲಾಕ್ಟೋ ಎಂಬಾಹಾರ.

ಇದರಲ್ಲಿ ಮೆಲಿನ್ಸ್ ಆಹಾರವೂ ಹಾಲೂ ಮಿಶ್ರವಾಗಿದೆ. ಕೆಲವು ಪ್ರಮಾಣಗಳಲ್ಲಿ ತಯಾರಿಸಿಕೊಳ್ಳಬಹುದು. ಶಿಶುಗಳಿಗೂ ದೊಡ್ಡವರಿಗೂ ಸಂಪೂರ್ಣ ಆಹಾರ.

ಬೆಳಗಿನ ಊಟಕ್ಕೆ ಮೆಲಿನ್ಸ್ ಲಾಕ್ಟೋ ಉಪಯೋಗಿಸಿದರೆ ಶರೀರಪುಷ್ಟಿಯನ್ನೂ ಬಲವನ್ನೂ ಕೊಡುತ್ತದೆ.

Messrs. OAKES & Company, Mount Road, Madras.

ವಿಳಾಸ—ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲ್.

ನೋಟೀಸು.

ಇದರಿಂದ ಸಿಟಿ ಮುನಿಸಿಪಾಲಿಟಿಯಲ್ಲಿರುವ ಧರ್ಮಛತ್ರ, ಮಠ, ಮುಸಾಫರ್ ಖಾನೆ, ಮಸೀದಿ, ಇವುಗಳ ಅಧ್ಯಕ್ಷರಿಗೆ ತಿಳಿಯಪಡಿಸುವದೇನೆಂದರೆ:—ಸಿಟಿ ಮುನಿಸಿಪಾಲಿಟಿಯಲ್ಲಿ ಯಾ ಇತರ ಸ್ಥಳಗಳಲ್ಲಿ ಇಲಿಗಳು ಸತ್ತು ಪ್ಲೇಗ್ ಜಾಡ್ಯ ಪ್ರಾಪ್ತವಾದ ಮನೆಗಳಿಂದ ಬರತಕ್ಕ ಜನಗಳಿಗೆ ಛತ್ರ, ಮಠ, ಮುಸಾಫರ್‌ಖಾನೆ, ದೇವಸ್ಥಾನ ವಗೈರೆಗಳಲ್ಲಿ ಬೆಂಕಿಯಾಗುವದಕ್ಕೆ ಅಥವಾ ವಾಸಕ್ಕೆ ಜಾಗಾ ಕೊಟ್ಟಲ್ಲಿ ಸದರಿ ಜಾಡ್ಯವು ವ್ಯಾಪಿಸಲು ಸಂಭವವುಂಟಾಗುತ್ತಾಗಿ ಅಂಥಾ ಜನರಿಗೆ ಮೇಲ್ಕಂಡ ಸ್ಥಳಗಳಲ್ಲಿ ವಾಸಕ್ಕಾಗಿ ಅವಕಾಶ ಕೊಡಕೂಡದು. ಇದಕ್ಕೆ ವಿರೋಧವಾಗಿ ನಡೆದಲ್ಲಿ ಮ್ಯುನಿಸಿಪಲ್ ರೆಗ್ಯುಲೇಷನ್ 144 ನೇ ಸೆಕ್ಷನ್‌ನಲ್ಲಿ ವಿಧಾಯಕವಾಗಿರುವ ಶಿಕ್ಷೆಗೆ ಒಳಪಡಬೇಕಾಗುತ್ತೆ. ತಿಳಿಯುವದು. [202-2]

ತಾ. 4-9-1914, ಕೆ. ಪಿ. ಪುಟ್ಟಣ್ಣಚೆಟ್ಟಿ,

ಬೆಂಗಳೂರು ಸಿಟಿ. ಆ. ಪ್ರೆಸಿಡೆಂಟ್, ಮ್ಯುನಿಸಿಪಲ್ ಕೌನ್ಸಿಲ್.

ಬೇಕಾದವರು ಗಮನಿಸಿ.

ತ್ವರೆಮಾಡಿ! ಕೆಲವು ದಿನಗಳು ಮಾತ್ರ!

ಸೋಲಾಪುರದ ಚೆಕ್ಕು, ಸೀರೆ, ಖಣ, ಕಿರಿಗೆ.

ಹಣ ಮುಂಗಡವಾಗಿ ಕಳುಹಿಸತಕ್ಕ ವ್ಯಾಪಾರಿಗಳಿಗೆ ಮಾತ್ರ ತರಹವಾರಿ ಚೆಕ್ಕು, ಸೀರೆ, ಖಣ, ಕಿರಿಗೆ ಇವು ಬಹಳ ಸುಲಭ ಖರೀದಿಗೆ ಒದಗಿಸುವ ಏರ್ಪಾಡು ಮಾಡಲ್ಪಟ್ಟಿದೆ. ನಮ್ಮ ಕಾಯಂ ಗಿರಾಕಿಗಳಿಗೆ ಎಲ್ಲರಿಗಿಂತ ಸುಲಭ ಕ್ರಯಕ್ಕೆ ದೊರೆಯುವದು.

ಹೊಸ ಗಿರಾಕಿಗಳು ತಮಗೆ ಬೇಕಾದಷ್ಟು ಪಟ್ಟಿಗೆ ಬರೆದು ಹಣ ಮುಂಗಡ ರವಾನಿಸಿದರೆ ಅವರಿಗೂ ಕಾಯಂ ಗಿರಾಕಿಗಳ ದರಕ್ಕೆ ಪದಾರ್ಥ ದೊರೆಯುವುದು.

ಹಣ ಕಳುಹಿಸದೆ ಬರೆಯತಕ್ಕ ಕಾಗದಗಳಿಗೆ ಬೇಗ ಗಮನಕೊಡಲು ಅನುಕೂಲವಿಲ್ಲ. ಕಾಗದ ಪತ್ರಗಳನ್ನು ಬೆಳಸುವದರಿಂದ ಖರೀದಿಗಾರು ಬದಲಾಯಿಸುವುದಿಲ್ಲವೆಂಬ ವಿಷಯ ಜ್ಞಾಪಕದಲ್ಲಿಡಬೇಕು. [28-34]

ಇಂಡಿಯನ್ ಕೋಆಪರೆಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್,
159, ಕಿಲಾರಿ ರೋಡ್ (ಕುಂಚಿಗರ ಪೇಟೆ), ಬೆಂಗಳೂರು ಸಿಟಿ.

ಕಣ್ಣು ಇಲ್ಲದಿದ್ದರೆ ಕಲಿಯುಗವೇ ಇಲ್ಲ.



ಭಾರೀ ಕ್ರಯದ ಕನ್ನಡಕಗಳು. ಕ್ರಯ ರೂ. 2-8-0. ಸ್ಫಟಿಕದ ಕನ್ನಡಕವನ್ನು ಉಪಯೋಗಿಸಿ ನಿಮ್ಮ ದೃಷ್ಟಿಯನ್ನು ಕಾಪಾಡಿಕೊಳ್ಳಿರಿ. ಅಲ್ಪ ಕ್ರಯದ ಕನ್ನಡಕಗಳು ದೃಷ್ಟಿಯನ್ನು ಹೋಗಲಾಡಿಸಿ ಕಾಲಕ್ರಮೇಣ ವ್ಯಾಧಿಯನ್ನುಂಟುಮಾಡುತ್ತವೆ. ಆದಕಾರಣ ಅವುಗಳನ್ನು ಉಪಯೋಗಿಸಬೇಡಿರಿ. ನಮ್ಮಲ್ಲಿ ಸ್ಫಟಿಕದ ಕನ್ನಡಕಗಳು ಕ್ರಯಕ್ಕೆ ದೊರೆಯುತ್ತವೆ. ಬೇಕಾದವರು ಬರೆದರೆ ಎಲ್ಲಾ ತರಹದ ಮತ್ತು ಎಲ್ಲಾ ನಂಬರಿನ ಕನ್ನಡಕಗಳಿರುವ ಭಾರೀ ಕ್ರಯದ ಪಟ್ಟಿಗೆ ಒಂದನ್ನು ಉಚಿತವಾಗಿ ಕಳುಹಿಸುತ್ತೇವೆ. ಬಾಕೀ ವಿಷಯವೆಲ್ಲಾ ನಿಮ್ಮ ದರಖಾಸ್ತು ಬಂದ ಮೇಲೆ ಬರೆದು ತಿಳಿಸುತ್ತೇವೆ.

[208-1] ವಿಳಾಸ—ನೀಲಕರ್ ಬ್ರದರ್ಸ್, ತಿರುವಲಕ್ಕೇಣಿ, ಮದರಾಸು.

Jain's Swadeshi Balm.

ಜೈನ್‌ರವರ ಸ್ವದೇಶೀ ಬಾಮ್ ರೆಜಿಸ್ಟರಾದ ಟ್ರೇಡ್ ಮಾರ್ಕು.

ಈ ಬಾಮ್ ವಾತ, ಸಂಧಿವಾತ, ಕುತ್ತಿಗೆ ನೋವು, ಅರೆತಲೆನೋವು, ನಡುನೋವು, ಶೀತ, ನೆಗಡಿ, ಬೆನ್ನುನೋವು, ಊಮ್ಮ, ಕೆಮ್ಮು, ಎದೆನೋವು, ಹೊಟ್ಟೆನೋವು, ಚಳುಕು, ಚೇಳುಕಡಿತ, ಕೈಕಾಲು ದೇಹ ಕೀಲುಗಳ ನೋವು, ಉಳುಕು, ಸುಟ್ಟಗಾಯ ಮೊದಲಾದವುಗಳನ್ನು ನಿರ್ಮೂಲವಾಗಿ ಹೋಗಲಾಡಿಸುತ್ತದೆ. ಚಿಣ್ಣಗಳಿಗೂ, ಮುದುಕರ ಕೆಲಸಗಾರರಿಗೂ ಸಾಮಾನ್ಯವಾಗಿ ಎಲ್ಲಾ ಕೆಲಸದವರಿಗೂ ಈ ಸ್ವದೇಶೀ ಬಾಮ್ ಬಹಳ ಪ್ರಯೋಜನಕರವಾದದ್ದು. ಕೊಬ್ಬಾಗಲಿ, ಬೇರೆ ಯಾವ ಕೆಟ್ಟ ಪದಾರ್ಥವಾಗಲಿ ಮಿಶ್ರಮಾಡಿಲ್ಲ. ಯೂರೋಪ್, ಇಂಡಿಯಾ, ಅಮೆರಿಕಾ ವೈದ್ಯಗ್ರಂಥಗಳನ್ನು ನೋಡಿ ತಯಾರ್ಮಾಡಿದೇವೆ. ಹಿಂದುಗಳೆಲ್ಲಾ ಇದನ್ನು ಉಪಯೋಗಿಸಬಹುದು. ಇದು ಯಕ್ಷಿಣಿಯಂಥಾ ಮದ್ದು. ಲಕ್ಷಾಂತರ ಜನರನ್ನೆಲ್ಲಾ ಹಾಸಿನಾಡಿದೆ. ಪ್ರತಿ ಒಬ್ಬರೂ, ಪ್ರತಿ ಮನೆಯವರೂ ಇದನ್ನು ಇಟ್ಟೇ ಇರಬೇಕು. ಇದು ಚಿನ್ನದಂಥಾ ಔಷಧ. ಎಲ್ಲಾ ವೈದ್ಯಶಾಲೆಗಳಲ್ಲೂ ಬಿಕರಿಯಾಗುತ್ತಿದೆ. ಸೂರ್ಯಕಿರಣಗಳ ರೆಜಿಸ್ಟರ್ ಮಾರ್ಕ್ ಇರುವುದನ್ನು ನೋಡಿ ಕೊಂಡುಕೊಳ್ಳಿ. ನಕ್ಕಲ್ ಔಷಧವನ್ನು ಕೊಂಡು ಮೋಸಹೋಗಬೇಡಿ. ಉಪಯೋಗದ ಕ್ರಮ ಬಾಟ್ಲಿ ಸಂಗಡಲೇ ಇಟ್ಟಿದೆ. 1 ಬಾಟ್ಲಿಗೆ 12 ಆಣೆ; 3 ಕ್ಕೆ ರೂ. 1-14-0. ವಿ. ಪಿ. ಬೇರೆ. ನಮ್ಮ ಎಲ್ಲಾ ಔಷಧಿಗಳ ಕ್ಯಾಟ್ಲಾಗನ್ನೂ ಬರೆದು ತರಿಸಿಕೊಳ್ಳಿ. [25-34]

ವಿಳಾಸ—ಜೆ. ಗುಲಾಬ್ ಚಂದ್ ಪೌವಾರ್,
60 ನೈನಪ್ಪನಾಯಕ್ ಬೀದಿ, ಪಾರ್ಕ್ ಟೌನ್, ಮದರಾಸ್.

ಶ್ರೀಕರ ಕಸ್ತೂರಿ ಮಾತ್ರೆ

ಬಿ. ವಿ. ಪಂಡಿತರ

250 ಮಾತ್ರೆಯುಳ್ಳ ಸೀಸೆಗೆ 4 ಆ.; 5 ಸೀಸೆಗಳಿಗೆ 1 ಇನಾಂ.

ಈ ಮಾತ್ರೆಗಳ ಬೆಲೆಯನ್ನು ನೋಡಿ ಇವರ ಗುಣವನ್ನು ಊಹಿಸಲಾಗದು. ಟಿಬೆಟ್ ದೇಶದ ಕಸ್ತೂರಿಯಿಂದಲೇ ಶಾಸ್ತ್ರೋಕ್ತವಾಗಿ ತಯಾರ್ಮಾಡಲ್ಪಡುತ್ತಿರುವ ಈ ಶ್ರೀಕರ ಕಸ್ತೂರಿ ಮಾತ್ರೆಗಳು ಸುವಾಸನೆಯಾಗಿರುವುದು ಮಾತ್ರವಲ್ಲದೆ ತಾಂಬೂಲದೊಡನೆ ಅಥವಾ ಹಾಗೆಯೇ ಸೇವಿಸಿದರೆ ಎಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸುವುದು. ಮಕ್ಕಳಿಗೆ ಉಂಟಾಗುವ ಅಜೀರ್ಣಭೇದಿ-ಜ್ವರ-ಕೆಮ್ಮು-ನೆಗಡಿ-ಎಳವು-ಹೊಟ್ಟೆಯುಬ್ಬರ-ಈ ರೋಗಗಳನ್ನು ಸವಿಾಪದಲ್ಲಿಯೇ ವೈದ್ಯನಿದ್ದಂತೆ ತಕ್ಷಣ ಗುಣಪಡಿಸುವುದು. ಪ್ರಯಾಣಿಕರಿಗೂ ಸೆಣಂಕು ರೋಗಸ್ಥಳದಲ್ಲಿರುವವರಿಗೂ ಮಳೆನಾಡಿನಲ್ಲಿರುವವರಿಗೂ ಇದರಂತೆ ಬುಹ್ಯಾವುದೂ ಆರೋಗ್ಯವನ್ನು ಕೊಟ್ಟು ಕಾಪಾಡಲಾರದು. [220-16]

ವಿಷಮಜ್ವರಗಳು-ನೆಗಡಿ-ಕೆಮ್ಮು-ತಲೆನೋವು-ಅಗ್ನಿಮಾಂದ್ಯ-ಶೀತವಾಯು-ಹಲ್ಲುನೋವು-ಮಲಬಂಧ-ಅರೋಚಕ-ನರಗಳ ದೌರ್ಬಲ್ಯ—ಈ ರೋಗಗಳನ್ನು ಪ್ರತಿಯೊಬ್ಬರಿಗೂ ಗುಣಪಡಿಸಿ ಶಕ್ತಿವೃದ್ಧಿಯನ್ನುಂಟುಮಾಡುವುದು. ಸಾವಿರಾರು ಜನರು ಪರೀಕ್ಷಿಸಿದ್ದಾರೆ. ಟಪಾಲ್ ಖರ್ಚು 12 ಸೀಸೆ ವರೆಗೆ 4 ಆಣೆ.

ವಿಳಾಸ—ಮ್ಯಾನೇಜರ್, ಸದ್ವೈದ್ಯಶಾಲಾ, ನಂಜನಗೂಡು.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲ್.

ಇಸ್ತಿಹಾರ್.

ದೊಡ್ಡ ತಿರುಪತಿಯಲ್ಲಿ ಕಾಲರಾ ಜಾಡ್ಯವು ವ್ಯಾಪಿಸಿ ಇರುತ್ತೆಯಾಗಿ ಸದರಿ ಸ್ಥಳಕ್ಕೆ ಹೋಗತಕ್ಕ ಯಾತ್ರಾರ್ಥಿಗಳಿಗೆ ರೋಗವು ತಗಲುವ ಅಪಾಯವುಂಟೆಂದು ಜನಗಳಿಗೆ ಇದರಿಂದ ಎಚ್ಚರಿಸಿರುತ್ತೆ.

ಕಾಲರಾ ಜಾಡ್ಯವು ವ್ಯಾಪಿಸಿರುತ್ತೆಂದು ತಿಳಿಯಬರುವ ಸ್ಥಳಗಳಿಂದ ಬೆಂಗಳೂರು ಪಟ್ಟಣಕ್ಕೆ ಬಂದು ಇಳಿಯುವ ಜನರು ತಾವು ಇಲ್ಲಿ ಬಂದು ತಲುಪಿದ ಸಂಗತಿಯನ್ನು ಕೂಡಲೆ ಹೆಲ್ತ್ ಆಫೀಸರವರಿಗೆ ತಿಳಿಸತಕ್ಕದ್ದು. ಮತ್ತು ಮ್ಯುನಿಸಿಪಲ್ ರೆಗ್ಯುಲೇಷನ್ 145 (1) ನೇ ಪ್ರಕರಣಕ್ಕನುಗುಣವಾಗಿ ಅಂಥಾ ಜನರು ಅವರ ಉಡಿಗೆ ತೊಡಿಗೆಗಳನ್ನು (ಡಿಸಿನ್ಫೆಕ್ಟ್) ಶುದ್ಧಿಮಾಡುವದಕ್ಕಾಗಲಿ, ಅಥವಾ ಅಂಥಾ ಜನರನ್ನು ಅವರು ಬಂದ 7 ದಿನಗಳ ಪರಿಯಂತರ ಅಜಮಾಯಿಷಿಯಲ್ಲಿ ಇಡಲ್ಪಡುವದಕ್ಕಾಗಲಿ ನ್ಯಾಯವಾಗಿ ಕೊಡಲ್ಪಡುವ ಅಪ್ಪಣೆಯಂತೆ ನಡೆಯಲು ಬದ್ಧರಾಗಿರತಕ್ಕದ್ದು.

ಕಾಲರಾ ರೋಗದಿಂದ ಪೀಡಿತನಾಗಿ ಬೆಂಗಳೂರು ಸಿಟಿ ರೈಲ್ವೆ ಸ್ಟೇಷನ್ನಿನಲ್ಲಿ ಬಂದು ಇಳಿಯುವ ಪ್ರತಿ ಮನುಷ್ಯನೂ ತಾನು ಇಲ್ಲಿಗೆ ಬಂದು ತಲುಪಿರುವದನ್ನು ಹೆಲ್ತ್ ಆಫೀಸರಿಗೆ ತಿಳಿಯಪಡಿಸಿ, ಸಾಂಕ್ರಾಮಿಕ ರೋಗಗಳ ಆಸ್ಪತ್ರೆಯಲ್ಲಿ ಚಿಕಿತ್ಸೆ ಮಾಡಲ್ಪಡಲು ಅನುಕೂಲಪಡಿಸಿರುವ ಸ್ಥಳದಲ್ಲಿರಬೇಕೇ ವಿನಹ ಸಿಟಿ ಮುನಿಸಿಪಾಲಿಟಿಯಲ್ಲಿ ಬೇರೆ ಯಾವ ಸ್ಥಳದಲ್ಲಿಯೂ ವಾಸಮಾಡಕೂಡದು.

ತಾ. 7-9-1914, ಆರ್. ಸುಬ್ಬರಾವ್,

ಬೆಂಗಳೂರು ಸಿಟಿ. [205-2] ಹೆಲ್ತ್ ಆಫೀಸರ್.

ಷಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಹೊಡೆತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂಥಾ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ಸಟ್ಟೆಜ್ವರ, ಕೈಶಕ್ಯಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—220 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ; 6 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪೀ ವರೆಗೆ ಪೋಸ್ಟೇಜು 4 ಆಣೆ. [199-2]

೨. ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕ್ಷಿಪ್ರಕಾಲದಲ್ಲಿ ನೋಡುವರಿಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರಿಸದೆ ಮೂತ್ರವು ಕಟ್ಟಿದೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿ! ಒಂದೇ ಒಂದು ಬುಡ್ಡಿಯು ಇಟ್ಟುಕೊಳ್ಳಿರಲಿ! ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುವುದು. ಬೆಲೆ ರೂ. 1; ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

28—8—1914 ರಿಂದ 4—9—1914 ರ ವರೆಗೆ

ಸ್ಥಳ		ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಕಾಲರಾ ತಗಲಿದ್ದು.	ಕಾಲರಾ ಸತ್ತದ್ದು.
ಬೆಂಗಳೂರು	ಪಟ್ಟಣ	5	5	0	0
ಮೈಸೂರು	,,	36	26	0	0
ಬೆಂಗಳೂರು ಡಿಸ್ಟ್ರಿಕ್ಟು		8	6	0	0
ಮೈಸೂರು	,,	16	10	0	0
ಕೋಲಾರ್	,,	10	5	0	0
ಕೋಲಾರ್ ಚಿನ್ನದ ಗಣಿಗಳು		15	6	0	0
ತುಂಕೂರು ಡಿಸ್ಟ್ರಿಕ್ಟು		22	10	0	0
ಹಾಸನ	,,	0	0	3	2
ಚಿತ್ರದುರ್ಗ	,,	30	15	0	0
ಕಡೂರ್	,,	20	12	0	0
ಶಿವಮೊಗ್ಗಾ	,,	5	2	4	3
	ಜುಮ್ಲಾ	166	96	7	5

ಶಾಲಿವಾಹನ ಶಕ ವರುಷಂಗಳು 1837 ನೇ ಆನಂದ ಸಂವತ್ಸರೇ ದಕ್ಷಿಣಾಯನೇ ವರ್ಷಋತೌ ಭಾದ್ರಪದ ಬಹುಳ ತ್ರಯೋದಶಿ ಶುಕ್ರವಾರದಿಂದ ಆಶ್ವೀಜ ಶುದ್ಧ ಪಂಚಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ.

1914 ನೇ ಸೆಪ್ಟಂಬರ್.

ತಾ.	ವಾರ.		ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ	ಕನ್ಯಾ ಮಾಸ ತೇದಿ
18	ಶುಕ್ರ	::	ತ್ರಯೋದಶಿ	0-19	ಉಭಯ	56-10	2
19	ಶನಿ	‡	ಅಮಾವಾಸ್ಯೆ	52-40	ಪುಬ್ಬ	24-14	4
20	ಭಾನು	§	ಪಾಡ್ಯಮಿ	47-18	ಉತ್ತರಾ	21-32	5
21	ಸೋಮ	*	ಬಿದಿಗೆ	41-26	ಹಸ್ತ	17-49	6
22	ಮಂಗಳ		ತದಿಗೆ	35-19	ಚಿತ್ತ	13-45	7
23	ಬುಧ	;;	ಚೌತಿ	29-13	ಸ್ವಾತಿ	9-33	8
24	ಗುರು	†	ಪಂಚಮಿ	23-14	ವಿಶಾಖ	5-25	9

:: ಮಾಸಶಿವರಾತ್ರಿ, ಮಾಸಶಿವರಾತ್ರಿ. ‡ ಸರ್ವತ್ರ ಮಹಾಲಯ ಅಮಾವಾಸ್ಯಾ. § ನವರಾತ್ರಾರಂಭ, ಜಯಲಕ್ಷ್ಮೀ ವ್ರತ, ಮಳೆ ನಕ್ಷತ್ರ—ಉತ್ತರಾ 3 ನೇ ಪಾದ. * ಚಂದ್ರೋದಯ, ಜಲ್ವಾಜ್ ಚಂದ್ 1, ಶ್ರೀಕಂಠರಾಜೇ ಅರಸಿನವರ ವರ್ಧಂತಿ. ;; ಚತುರ್ಥೀ ತಿಥಿ, ಮಳೆ ನಕ್ಷತ್ರ—ಉತ್ತರಾ 4 ನೇ ಪಾದ. † ತಿಥಿದ್ವಯಂ, ಉಪಾಂಗಲಲಿತಾ ವ್ರತ.

ಅದ್ಭುತವಾದ ಬಲಕಾರಿ ಮತ್ತು ಬಾಯಿನಾತಹರ. ಜಿನ್‌ತಾನ್

ಜೀರ್ಣಶಕ್ತಿ ಹುಟ್ಟಿಸುವುದರಲ್ಲಿ ಇದಕ್ಕೆ ಸಮಾನವಾದದ್ದು ಇನ್ನೊಂದಿಲ್ಲ; ಅನ್ನಕೋಶವು ಎಷ್ಟೇ ದುರ್ಬಲವಾಗಿದ್ದರೂ ಅದರ ಕಾರ್ಯಗಳನ್ನು ಹೇರುಪೇರು ಮಾಡುವದಿಲ್ಲ. ಇದರ ಸೇವನೆಯಿಂದ ಎಲ್ಲಾ ರೋಗಗಳನ್ನೂ ಅಂಟದಂತೆ ತಡೆಯಬಲ್ಲದು. ಈ ಭಾಗದಲ್ಲಿ ಇದರ ಗುಣವು ಬಹು ಫಲಕಾರಿಯಾಗಿದೆ. ಇದಲ್ಲದೆ ಇದನ್ನು ಸೇವಿಸುವವರ ಬಾಯಿಯಲ್ಲಿ ಎಲ್ಲಾ ತರದ ದುರ್ನಾತವೂ ಹೋಗಿ ಸುಗಂಧವು ಹುಟ್ಟಿ ಹರ್ಷಕರವಾಗಿದ್ದೀತು.

ಗಂಟಲಿನ ನರಗಳು ಇದರ ಸೇವನೆಯಿಂದ ಬಹು ಬಲಗೊಳ್ಳುವವು. ಇದರ ಗುಣವನ್ನು ನೋಡಿ ಉಪನ್ಯಾಸಕರೂ, ನಾಟಕಧಾರಿಗಳೂ, ಸಂಗೀತಗಾರರೂ, ಬೋಧಕರೂ, ಪಾಠಶಾಲೆಗಳ ಪ್ರಿಯರೂ ಈ ಮಾತ್ರೆಗಳನ್ನು ಬಹಳವಾಗಿ ಮೋಹಿಸಿ ಪ್ರೀತಿಯಿಂದ ಉಪಯೋಗಿಸುತ್ತಿದ್ದಾರೆ.

ಈ ಮಾತ್ರೆಗಳನ್ನು ಜಪಾನ್‌ನಲ್ಲಿರುವ ಒಸಾಕಾ ಪಟ್ಟಣದ ಮೋರಿಶಿತಾ ಕಂಪನಿಯವರು ತಯಾರ್ಮಾಡುತ್ತಾರೆ.

ಈ ಮಾತ್ರೆಗಳ	30 ಮಾತ್ರೆಗಳುಳ್ಳ ಪೊಟ್ಲಕ್ಕೆ 1½ ಆಣೆ.	65 ಮಾತ್ರೆ ಪೊಟ್ಲಕ್ಕೆ 3 ಆಣೆ.
ಕ್ರಯ	195 ,, ಡಬ್ಬಾ ಸಮೇತ 8 ಆಣೆ.	455 ,, ಕನ್ನಡಿ ಡಬ್ಬಾಕ್ಕೆ 1 ರೂಪಾಯಿ.

ಎಲ್ಲಾ ಅಂಗಡಿಗಳಲ್ಲಿಯೂ ಬಿಕರಿಯಾಗುವ್ವದು.

ಸೋಲ್ ಏಜಂಟರು:— ಎಸ್. ವೈದ್ಯ ಮತ್ತು ಕಂಪನಿ,
ಪಾರ್ಕ್‌ಟೌನ್, ಮದ್ರಾಸ್.

[156-10]

Printed and Published by the Rev. H. Gulliford, Proprietor and Manager, Wesleyan Mission Press, Mysore. 17/9/1914.

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೮ | ಮೈಸೂರು—ಸರ್ ೧೯೧೪ ನೇ ಇಸವಿ ಸೆಪ್ಟೆಂಬರ್ ತಾರೀಖು ೨೪ ನೇ ಗುರುವಾರ. | ಸಂಚಿಕೆ ೧೨.

ಸ್ತ್ರೀಯರ ಪೋಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿವರ್ಣದಿಂದ ನಿಬಿಡವಾದ ಕೇಶವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಇಂತಹ ಕೇಶವನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಾಪ ಉಪಕರಣವಾದರೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಆಗತ್ಯದ ಸಹಕಾರಿಯಾಗಿರುತ್ತದೆ. ಈ ತೈಲವನ್ನು ಕೊಡೆದುಕೊಳ್ಳುತ್ತಲೇ, ಮಸ್ತಿಷ್ಕದ ಬೇಗೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ತೊಡೆಯ ತೊಡಗಿದ ಬಳಿಕ ಎಂದಿಗೂ ಜಗುಳಿ ಬಿದ್ದು ಹೋಗಲಾರವು; ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು.



ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡುವುದಕ್ಕಿಂತ ಒಂದೇಒಂದು ಬಾರಿ ಈ "ಕಾಮಿನಿಯಾ ತೈಲ" ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಆಫ್ ಮೇರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಪ್ರಕಾರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಅವುಗಳಲ್ಲಿ ಒಂದನ್ನೇ ನೋಡಿರಿ! ನೇಗಿನಹಾಳಕರ ಬಂಧುಗಳು. ಬಸವನಕಲ್ಲ, ಬೆಳಗಾಂವ—ತಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲ ತಲೆಕೂದಲುಗಳನ್ನು ಬೆಳೆಯಿಸುವುದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ. ಆದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ. ಪಿ. ದ್ವಾರಾ ಕಳುಹಿಸುವುದು. ಸೀಸೆಯೊಂದರ ಕ್ರಯ ರೂ. 1-0-0, ಅ. ವೆ. 0-4-0 ಬೇರೆ; 3 ಸೀಸೆಗಳ ಕ್ರಯ ರೂ. 2-10-0, ಅ. ವೆ. 0-7-0 ಬೇರೆ.

ಸೂಚನೆ.—ಅನೇಕ ದುರ್ವಿನೀತರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ವಿಕರಿಯಿಂದ ತಮಗೆ ಅತ್ಯಲ್ಪ ನಫೆಯೇ ದೊರಕುತ್ತದೆಂದು. ನೀವು "ಕಾಮಿನಿಯಾ ತೈಲ" ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭ ದೊರಕತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸ ಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಇದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳುವಷ್ಟು ಮೆಹರುಬಾನ್ ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಿಬೀಳದೆ ಶುದ್ಧವಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಒಟ್ಟೋ ದಿಲ್ ಬಹಾರ್!!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಆಲ್ಕೋಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈವಸ್ತ್ರದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಉಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ. ಈ ಒಟ್ಟೋ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವುದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ. [19-36]

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ದ್ರಾಮಿನ (ಮೀಡಿಯಂ) ಸೀಸೆ ರೂ. 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0. ಅಂಚೆಯ ವೆಚ್ಚ ಬೇರೆ ರೂ. 0-4-0. ಒಟ್ಟೋ-ದಿಲ್ ಬಹಾರ್ ಪರಿಮಳದ ಕಾರ್ಡುಗಳು ಡಜನ್ ಒಂದಕ್ಕೆ 0-12-0.

ಮೇಲೆ ಕಂಡ ಎಲ್ಲಾ ಸುಗಂಧಗಳು ಸಿಕ್ಕುವ ಪತ್ತೆ:—

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್‌ಜಿದ್, ಬೊಂಬಾಯಿ.

ಏಜೆಂಟ್, ದಿ ಉಲನ್ ವರ್ಕ್ಸ್, ಮಂಗಳೂರು.

ENGLISH PAPERS WITH FULL ANSWERS

Price for 1 set, Rs. 1-4-0; 2 sets, Rs. 2-4-0; 3, Rs. 3; 4 sets, Rs. 3-12-0 (in advance). **L. S. English Notes**—5 As.; **Spelling Book**—4 As.

Apply sharp to—**M. N. SITARAMA RAO,**

[178-7] **Krishnaraja Mohalla,** *MYSORE.*

ಸ್ಟೂಡೆಂಟ್ಸ್ ಹಾಲ್, ಮೈಸೂರು.

ಮ|| ಎಸ್. ಆರ್. ವೆಂಕಟಸುಬ್ಬಾಚಾರ್ಯರ ಎಲ್ಲಾ ಪುಸ್ತಕಗಳೂ, ಗೌರ್ನಮೆಂಟ್ ಪುಸ್ತಕಗಳೂ, ಮ|| ಅಳ್ವಾರಯ್ಯಂಗಾರ್ರವರ ಗಣಿತಗಳೂ, ಮೊದಲಾದ ಸ್ಕೂಲಿಗೆ ಬೇಕಾದ ಪುಸ್ತಕಗಳೆಲ್ಲಾ ನಮ್ಮಲ್ಲಿ ದೊರೆಯುವವು.

[203-3] ವಿಳಾಸ—ಸ್ಟೂಡೆಂಟ್ಸ್ ಹಾಲ್, ಮೈಸೂರು.

ಯುದ್ಧವಾರ್ತೆಯು.

ಯೂರೋಪಿನಲ್ಲಿ ನಡೆಯುತ್ತಿರುವ ಯುದ್ಧವಾರ್ತೆಯನ್ನು ಪ್ರತಿ ನಿತ್ಯವೂ ಕನ್ನಡಿಗರ ಉಪಯೋಗಕ್ಕಾಗಿ ಪ್ರಕಟಿಸುತ್ತಿರುವೆವು. ಕ್ರಯ 3 ಪೈ; ತಿಂಗಳಿಗೆ 8 ಆಣೆ; ಅಂಚೆಯಲ್ಲಿ ತರಿಸುವವರಿಗೆ ತಿಂಗಳಿಗೆ ಒಂದು ರೂಪಾಯಿ. ಮೈಸೂರು ಸಂಸ್ಥಾನದ ಎಲ್ಲಾ ಭಾಗದಲ್ಲಿಯೂ ಏಜಂಟರುಗಳು ಬೇಕಾಗಿದೆ. ಹೆಚ್ಚಾಗಿ ಕಮೀಷನ್ ಸಿಗುವುದು.

ಮುಖ್ಯ ಏಜಂಟರು—

[23-37] ಲಕ್ಕೂರು ರಾಮಚಂದ್ರರಾವ್, ಮೈಸೂರು.

ಷೇಕ್ಸ್‌ಪಿಯರ್

ಮಹಾ ಕವಿಯ ನಾಟಕದ ಕಥೆಗಳು.

ಸಿಂಬೆಲ್ಲೈನ್, ಒಥೆಲೋ, ಮರ್ಚೆಂಟ್ ಆಫ್ ವೆನ್ನಿಸ್, ಕಿಂಗ್‌ಲಿಯರ್ ಮುಂತಾದ ಕೆಲವು ನಾಟಕಗಳನ್ನು ಕಥಾ ರೂಪವಾಗಿ ಬರೆಯಲ್ಪಟ್ಟು ನಮ್ಮ ದೇಶದ ಹೆಸರನ್ನಿಟ್ಟು ಪ್ರಕಟಿಸಿರುತ್ತೆ. ಪ್ರತಿ ಒಂದಕ್ಕೂ ಎರಡೆರಡಾಣೆ. ಅವು ಯಾವವೆಂದರೆ—ಕಳಾವತಿ, ಪದ್ಮಿನಿ, ಪಣುಮತಿ, ಚಿತ್ರಕಳಾವತಿ, ವಿಲಕ್ಷಣ ಶಿಕ್ಷಣ, ಭಾನುಮತಿ, ವೈದರ್ಭೀ ವಿಲಾಸ, ಚಾರುಮತಿ, ಚಾತುರ್ಯವತಿ.

"ಮರುಳಾಟದ ಮದುವೆ" ಎಂಬ ನಕಲಿಯು ಈಗತಾನೇ ಬೆಳಕಿಗೆ ಸಿದ್ಧವಾಗಿದೆ. ಪ್ರತಿಯೊಬ್ಬರೂ ಓದಬೇಕಾದುದು. ಕ್ರಯ 6 ಆಣೆ.

[266-41] ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

ಅರೇಬಿಯನ್ ನೈಟ್ಸ್

ಎಂಬ

ಯವನ ಯಾಮಿನೀ ವಿನೋದ ಕಥೆಗಳು.

(ಕನ್ನಡದಲ್ಲಿ)

ಲೋಕಪ್ರಸಿದ್ಧವಾದ ಈ ಪುಸ್ತಕದ ಮೊದಲನೇ ಮುದ್ರಣವು ಶೀಘ್ರದಲ್ಲಿಯೇ ಮುಗಿದುಹೋದುದರಿಂದ ಎರಡನೇ ಮುದ್ರಣವನ್ನು ತಯಾರಿಸಿರುತ್ತೇವೆ. ಇದರ ಪ್ರಿಂಟಿಂಗ್ ಮತ್ತು ಬೈಂಡ್ ಮುಂತಾದ ಕೆಲಸಗಳು ವೆಸ್ಲಿಯನ್ ಮಿಷನ್ ಪ್ರೆಸ್ಸಿನಲ್ಲಿ ಬಹು ಶ್ಲಾಘ್ಯತರವಾಗಿ ಮಾಡಲ್ಪಟ್ಟಿರುವವು. ಈ ಎರಡನೇ ಮುದ್ರಣವನ್ನು ಘನ ಪಂಡಿತರು ಆಮೂಲಾಗ್ರವಾಗಿ ಪರಿಶೀಲನೆಮಾಡಿ ತಿದ್ದಿ ಸರಿಪಡಿಸಿರುತ್ತಾರೆ. ಇದರಲ್ಲಿನ ಕಥೆಗಳು ಬಹು ಮನೋರಂಜಕವಾಗಿಯೂ ಭಾಷೆಯು ಅತಿ ಲಲಿತವಾಗಿಯೂ ಇರುತ್ತವೆ. ಪುಸ್ತಕವು ನಾನೂರು ಪುಟಗಳಿಗಿಂತ ಹೆಚ್ಚಾಗಿರುತ್ತದೆ. ಇದರ ಕ್ರಯ ಎರಡೇ ರೂಪಾಯಿ. ವಿ.ಪಿ.ಪಿ. ಮೂಲಕ ತರಿಸಿಕೊಂಡರೆ ರೂ. 2-4-0. ಜಾಗ್ರತೆ ನೋಡಿ. [212-1]

ವಿಳಾಸ—ಮ್ಯಾನೇಜರ್, ಸಿ.ಎಲ್.ಎಸ್. ಬುಕ್ ಡಿಪೋ, ಮೈಸೂರು.

ಸಿದ್ಧವಾಗಿದೆ.

1915 ನೆಯ ವರ್ಷದ ಲೋವರ್ ಸೆಕಂಡರಿ

ಕನ್ನಡ ಟೆಕ್ಸ್ಟಿನ ನೋಟ್ಸು.—ಕ್ರಯ 6 ಆಣೆ.

ಡಿಸ್ಕೌಂಟು—10 ಕ್ಕೆ 1; 25 ಕ್ಕೆ 3; 50 ಕ್ಕೆ 8; 100 ಕ್ಕೆ 20.

ಮಕ್ಕಳ ಭೂವಿವರಣೆ.

ಈಗಿನ ಪಾಠಕ್ರಮಕ್ಕೆ ತಕ್ಕಂತೆ ಹೊಸದಾಗಿ ಆಗಿದೆ. ಇದರಲ್ಲಿ ಮೈಸೂರು ದೇಶದ ಬೆಳೆ, ಎತ್ತರ, ನದೀ ಪರ್ವತಾದಿಗಳು ಇವುಗಳನ್ನು ತೋರಿಸುವ ಮೂರು ಭೂಪಟಗಳೂ, ಚಿತ್ರಗಳೂ ಸೇರಿವೆ. ಕ್ರಯ 2 ಆಣೆ. [43-32]

ಇಚಾಪಿಯ 2 ನೆಯ ಪುಸ್ತಕದ ನೋಟ್ಸು 2½ ಆಣೆ. ಮೆಕ್ಮಿಲನ್ ರವರ 3 ನೇ ಪುಸ್ತಕದ ನೋಟ್ಸು 1½ ಆಣೆ. ಡಿಟೊ 4 ನೇ ಪುಸ್ತಕದ ನೋಟ್ಸು 1½ ಆಣೆ. ಡಿಟೋ 5 ನೇ ಪುಸ್ತಕದ ನೋಟ್ಸು 4 ಆಣೆ. ನವಬಾಲವ್ಯಾಕರಣ (2 ನೇ ತರಗತಿಗೆ) 1 ಆಣೆ. Notes on "Tanglewood Tales," English Lower Secondary Text for 1915—As. 3. Notes on Fairy Tales—As. 2.

ನಮ್ಮ ವಿಳಾಸ:—ಯಸ್. ಆರ್. ವೆಂಕಟಸುಬ್ಬಾಚಾರ್ಯ,

ಸುಬೋಧಗ್ರಂಥಾಲಯ, ಮೈಸೂರು.

ಹೊಸ ಬಂಗಾಳಿ ನಾವಿಲ್ಸ್.—ವಿಷವಿವಾಹ 4 ಆ. ಸನ್ಯಾಸಿನಿ 1½ ಆ. ಅನಾಥಪ್ರೇತ 1 ಆ. ಬಿ. ವೆಂಕಟಾಚಾರ್ಯರಿಂದ ವಂಗವಿಜೇತ 1-4-0. ಚಂದ್ರಶೇಖರ 1-1-0. ರಜನಿ 13 ಆ. ಚಿತ್ರವಿಚಿತ್ರಾವಳಿ 11 8 ಆಣೆ. ಅಮೃತಪುಳಿನ 11 ಆಣೆ. ದುರ್ಗೇಶನಂದಿನಿ 1-4-0. ಇತ್ಯಾದಿ. ಸುಶೀಲೆ ಹೊಸ ನಾವಿಲ್ 6 ಆಣೆ.

[63-31] ಎಂ. ಸುಬ್ಬರಾವ್, ಬುಕ್ ಸೆಲರ್, ಶಂಕರಪುರ, ಬೆಂಗಳೂರು ಸಿಟಿ.

WANTED

Active an influencial District Agent for Hassan, and Local Agents throughout Mysore Province and Coorg on liberal terms of commission and monthly office allowance. None but those who can guarantee good business need apply to

Messers. VENKATACHALAM & SONS,

Chief Agents,

Hindustan Co-operative Insurance Society, Ltd.,

166, Dodpet, near Old Taluk Cutcherry,

[243-42] *MYSORE.*

ಸೂರ್ಯೋದಯ ಪುಸ್ತಕಭಂಡಾರ.

ಹೊಸ ನಾವೆಲ್‌ಗಳು:—ನೀಲಾಂಬರಿ, ಸರಳಿ, ಗುರುತು ಕಂಡ ಕಳ್ಳ, ಮಾಯಾವಿನಿಯ ಅತ್ಯಾಚಾರ, ಮಾಯಾವಿನಿಯ ಪರಿಣಾಮ ಮುಂತಾದ ಪತ್ತೇದಾರಿ ನಾವೆಲ್‌ಗಳು. ಪುಸ್ತಕ ಒಂದಕ್ಕೆ ಆಣೆ 3 ಮಾತ್ರ. ಶಕ್ತಿ 12 ಆಣೆ. ಮಾಧವ ಕಂಕಣ 1-8-0. ಇವಲ್ಲದೆ ಈ ಡಿಪೋದಲ್ಲಿ ಕನ್ನಡ, ತೆಲುಗು, ಸಂಸ್ಕೃತ, ಇಂಗ್ಲಿಷ್ ಗ್ರಂಥಗಳೂ, ನಾವೆಲ್‌ಗಳೂ, ಕಥೆಗಳೂ, ಪುರಾಣಗಳೂ, ವೈದ್ಯ ಜ್ಯೋತಿಷ ಪುಸ್ತಕಗಳೂ ದೊರೆಯುತ್ತವೆ. ಬೇಕಾದವರು ಬರೆದು ಮುಫತ್ತಾಗಿ ದೊರೆಯುವ ಕ್ಯಾಟಲಾಗನ್ನು ತರಿಸಿಕೊಳ್ಳಬಹುದು.

[143-12] ವಿಳಾಸ:—ಬಿ. ನರಸಿಂಗರಾವ್,

ಎಡಿಟರ್, ಲಾ ಗೆಜೆಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಈ ಉತ್ತಮ ಗ್ರಂಥಗಳನ್ನು ಓದಿರುವಿರಾ?

ನಾನಕನ ಚರಿತ್ರೆ 4 ಆ; ಕೃಷ್ಣಾಕುಮಾರಿ 10 ಆ; ವಿವೇಕಮಂಜರಿ ಭಾಗ III 6 ಆ; ಮರುನ್ನಂದನ ಶತಕಂ 4 ಆ; ಕುಚೇಲೋಪಾಖ್ಯಾನ 1½ ಆ; ನಿರ್ಮಲೆ 12 ಆ; ಸೂಕ್ತಿ ತಾರಾವಳಿ 4 ಆ; ರಂಗನ ಮದುವೆ 1½ ಆ; ಬಾಗಿಲು ಭದ್ರ 4 ಆ; ನವನಾಗರಿಕತೆ 1 ಆ; ಗೃಹಿಣಿಯಾದ ಗಂಗೆ 3 ಆ. ಸೊಗಸಾದ ಹೊಸ ಬಂಗಾಳಿ ನಾವಲ್ಸ್:—ಕನ್ಯಾಬಲಿ 6 ಆ; ಜಯ! ವಾಲ್ಮೀಕಿ 12 ಆ; ತಾರಾ 3 ಆ; ಅಶ್ವತ್ಥಮೃಗ 1½ ಆ; ಅಡವಿಯ ರಾಜ 2 ಆ; ವಿಷವಿವಾಹ 4 ಆ; ಸನ್ಯಾಸಿನಿ 1½ ಆ; ಅನಾಥಪ್ರೇತ 1 ಆ; ವಿಲಕ್ಷಣ ದೈವಘಟನೆ 4 ಆ; ರಮಾಮಾಧವ 6 ಆ; ಸುಶೀಲೆ 6 ಆ; ನಭಾ 8 ಆ; ಸಾಹಸಿಕೆ 2½ ಆ; ಉಲಾಯುರಾಸ್ತ್ರ 1 ಆಣೆ. ಇತ್ಯಾದಿ. "ಮಧುರವಾಣಿ" ಸಚಿತ್ರ ಮಾಸಪತ್ರಿಕೆಯ ಮಾದರಿ ಸಂಚಿಕೆಗೂ ಕ್ಯಾಟಲಾಗಿಗೂ ಬೆಲೆಯಿಲ್ಲ.

[160-10] ನಮ್ಮ ವಿಳಾಸ—ಹನುಮಾನ್ ಕಂಪೆನಿ, ಮೈಸೂರು.

THE

GENERAL

Assurance Society Ltd., Ajmer.

(A Popular Life Office.)

Before Insuring or taking agency elsewhere, it would be to your interest to know the rates of premium and terms of agency specially prepared by the Society's Consulting Actuary, Mr. H. E. W. Lutt, F.I.A. *(one of the most eminent Actuaries in England).*

First Valuation Result:—The total liabilities under all assurances issued up to 31st March 1913, are fully covered by the Society's Life Assurance Fund and Paid up Capital. Write for full particulars, Annual and Valuation Reports to the Manager, Ajmer, or Secretary,

Opposite to Minto Ophthalmic Hospital,

[131-11] Bangalore City

MADRAS SNUFF.

ಬಹಳ ಮೇಲಾದ ನಶ್ಯ ಇನ್ನೆಲ್ಲೂ ಸಿಕ್ಕದು.

ನಮ್ಮಲ್ಲಿ ತಯಾರಾಗುವ ನಶ್ಯದ ಪುಡಿಯನ್ನು ಹಿಂದುಸ್ಥಾನದ ಸಮಸ್ತ ಭಾಗಗಳವರೂ, ಅನ್ಯದೇಶಗಳವರೂ ಹತ್ತಾರು ವರುಷಗಳಿಂದ ತರಿಸಿಕೊಂಡು ಉಪಯೋಗಿಸುತ್ತಿದ್ದಾರೆ. ನಮ್ಮ ನಶ್ಯವು ಬಹಳ ಪ್ರಖ್ಯಾತಿ ಪಡೆದಿದೆ. ಬಹು ಮೇಲಾದ "ಬಂದರ್" ಸೊಪ್ಪಿನಿಂದ ಸುವಾಸನೆಯಾದ ಅಚ್ಚ ಶುದ್ಧ ವಾಸನೆ ವಿಶೇಷ ರುಚಿಕರವಾಗಿಯೂ ಸ್ವಚ್ಛವಾಗಿಯೂ ತಯಾರಿಸುತ್ತೇವೆ. ಕೂಡದ ಮಟ್ಟಿಗೂ ನಮ್ಮ ಧಾರಣೆ ಕನಿಷ್ಠವಾಗಿರುವುದು. ನಮ್ಮ ಪದಾರ್ಥವನ್ನು ನಾವೇ ಹೊಗಳಿಕೊಳ್ಳುವದರಿಂದ ಫಲವೇನು? ವಾಚಕರು ಒಂದಾವರ್ತಿ ಪರೀಕ್ಷೆಗಾಗಿ ತರಿಸಿಕೊಂಡರೆ ಚೆನ್ನಾಗಿ ವೇದ್ಯವಾಗುತ್ತೆ. ಕ್ರಯ ಪಂಭೇರಿಗೆ 3 ರೂಪಾಯಿ; 1 ಸೇರಿಗೆ 10 ಆಣೆ. ಪೋಸ್ಟೇಜ್ ಬೇರೆ. ನಶ್ಯವನ್ನು ಅಂಚೆಯ ಮೂಲಕವೋ, ರೈಲಿನಲ್ಲೋ ಬ್ಯಾಗೆ ಕಳಿಸಬೇಕೆಂದು ಬರೆಯಿರಿ.

ನಮ್ಮ ವಿಳಾಸ—ಜೆ. ನಾರಾಯಣಸಾಮಿ ನಾಯುಡು,

43, ಪಳಯಪ್ಪನ್ ಸ್ಟ್ರೀಟ್, ಮಿಂಟ್ ಬಿಲ್ಡಿಂಗ್ ಪೋಸ್ಟ್,

[168-8] ಮದರಾಸ್, ಇ.

ಯಾಕೆ ಪರೀಕ್ಷಿಸಬಾರದು ? ಭಂಗಾರದ ಪದಕ ಬಂದಿದೆ.

ಸೆಂಟ್, ಅತ್ತರುಗಳಲ್ಲೆಲ್ಲಾ ಶ್ರೇಷ್ಠವಾದವು.

ಆಟೋ ಮೋಹಿನಿ.

ಇದು ರೆಜಿಸ್ಟರ್ ಆಗಿದೆ. ಈಗಿನ ಕಾಲದಲ್ಲಿ ಇದೇ ನಿಲ್ಲುವ, ಸುವಾಸನೆಯುಳ್ಳ, ಮನೋಹರವಾದ ಮತ್ತು ಸರಿಯಾದ ಪರಿಮಳದ ದ್ರಾವಕ. ಕವಸ್ತ್ರಕ್ಕೆ ನಾಲ್ಕು ತೊಟ್ಟು ಹಾಕಿಕೊಂಡರೆ ನಾಲ್ಕುದಿನಗಳ ತನಕ ಘಮಘಮಿಸುವ ಸುವಾಸನೆ ಇರುತ್ತೆ. ಹಾಗೆ ದೀರ್ಘಕಾಲ ನಿಲ್ಲತಕ್ಕದ್ದಲ್ಲವೆಂದು ರುಜುವಾತು ಮಾಡಿಕೊಡುವವರಿಗೆ ನಾವು ಒಂದು ನೂರು ರೂಪಾಯಿ ಬಹುಮಾನ ಕೊಡುತ್ತೇವೆ. ಪರೀಕ್ಷೆ ಮಾಡಿ ನೋಡಿ, ಬಹುಮತಿಯನ್ನು ಸಂಪಾದಿಸಿಕೊಳ್ಳಿ ! ಕ್ರಯ ½ ಔನ್ಸ್ ಗಾಜಿನ ಬಿರಡೆಯ ಬಾಟ್ಲಿಗೆ ರೂಪಾಯಿ 2-0-0.

1 ಡ್ರಾಂ ಕೊಳವೆ 12 ಆಣೆ.

ಆಟೋ ಮೋಹಿನಿ ಪರಿಮಳದ ಕಾರ್ಡುಗಳು ಡಜನ್ 1 ಕ್ಕೆ 12 ಆಣೆ.

ಎಲ್ಲರಲ್ಲೂ ಬಿಕರಿಗೆ ಇಟ್ಟಿದೆ. ಮದರಾಸ್ ಅಧಿಪತ್ಯಕ್ಕೆಲ್ಲಾ ಏಜೆಂಟರು— ನಾ ಭಗವಾನ್ ದಾಸ್ ಚೂನಿಲಾಲ್ ಕಂಪನಿ,

[251-41] 177, ಚೈನಾಬಜಾರ್ ರೋಡ್, ಮದರಾಸ್.

ಶ್ರೀಕರಕಸ್ತೂರಿಮಾತ್ರೆ

ಬಿ. ವಿ. ಪಂಡಿತರ

250 ಮಾತ್ರೆಯುಳ್ಳ ಸೀಸೆಗೆ 4 ಆ.; 5 ಸೀಸೆಗಳಿಗೆ 1 ಇನಾಂ.

ಈ ಮಾತ್ರೆಗಳ ಬೆಲೆಯನ್ನು ನೋಡಿ ಇವರ ಗುಣವನ್ನು ಊಹಿಸಲಾಗದು. ಟಿಬೆಟ್ ದೇಶದ ಕಸ್ತೂರಿಯಿಂದಲೇ ಶಾಸ್ತ್ರೋಕ್ತವಾಗಿ ತಯಾರ್ಮಾಡಲ್ಪಡುತ್ತಿರುವ ಈ ಶ್ರೀಕರ ಕಸ್ತೂರಿ ಮಾತ್ರೆಗಳು ಸುವಾಸನೆಯಾಗಿರುವುದು ಮಾತ್ರವಲ್ಲದೆ ತಾಂಬೂಲದೊಡನೆ ಅಥವಾ ಹಾಗೆಯೇ ಸೇವಿಸಿದರೆ ಎಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸುವುದು ಮಕ್ಕಳಿಗೆ ಉಂಟಾಗುವ ಅಜೀರ್ಣಭೇದಿ-ಜ್ವರ-ಕೆಮ್ಮು-ನೆಗಡಿ-ಸೆಳವು-ಹೊಟ್ಟೆಯುಬ್ಬರ-ಈ ರೋಗಗಳನ್ನು ಸಮಾಪದಲ್ಲಿಯೇ ವೈದ್ಯನಿದ್ದಂತೆ ತಕ್ಷಣ ಗುಣಪಡಿಸುವುದು. ಪ್ರಯಾಣಿಕರಿಗೂ ನೆಂಟರು ರೋಗಸ್ಥಳದಲ್ಲಿರುವವರಿಗೂ ಮಲೆನಾಡಿನಲ್ಲಿರುವವರಿಗೂ ಇದರಂತೆ ಮತ್ತಾವುದೂ ಆರೋಗ್ಯವನ್ನು ಕೊಟ್ಟು ಕಾಪಾಡಲಾರದು. [220-47]

ವಿಷಮಜ್ವರಗಳು-ನೆಗಡಿ-ಕೆಮ್ಮು-ತಲೆನೋವು-ಅಗ್ನಿಮಾಂದ್ಯ-ಶೀತವಾಯು-ಹಲ್ಲುನೋವು-ಮಲಬಂಧ-ಅರೋಚಕ-ನರಗಳ ದೌರ್ಬಲ್ಯ—ಈ ರೋಗಗಳನ್ನು ಪ್ರತಿಯೊಬ್ಬರಿಗೂ ಗುಣಪಡಿಸಿ ರಕ್ತವೃದ್ಧಿಯನ್ನುಂಟುಮಾಡುವುದು. ಸಾವಿರಾರು ಜನರು ಪರೀಕ್ಷಿಸಿದ್ದಾರೆ. ಟಪಾಲ್ ಖರ್ಚು 12 ಸೀಸೆ ವರೆಗೆ 4 ಆಣೆ.

ವಿಳಾಸ—ಮ್ಯಾನೇಜರ್, ಸದ್ವೈದ್ಯಶಾಲಾ, ನಂಜನಗೂಡು.

ರೊಂಡಿನೋವನ್ನು “ಸ್ನೇಹಿತರಿಂದ ಹಿಂಸೆಪಡುವದಕ್ಕೆ” ಸಮಾನವಾಗಿ ಒಬ್ಬ ಪ್ರಖ್ಯಾತ ಚಿತ್ರಕಾರನು ವಿವರಿಸಿ ಬರೆದಿದ್ದಾನೆ. ಲಿಟಲ್ಸ್ ಓರಿಯಂಟಲ್ ಬಾಂ ಎಂಬದು ಹುವಾತವನ್ನು ಅದ್ಭುತರೀತಿಯಲ್ಲಿ ವಾಸಿಮಾಡುತ್ತೆ.

ಲಕ್ಷಾಂತರ ಜನಗಳ ಪೈಕಿ ಕೆಲವರು ನಂಬಿಕೆಯಿಂದಲೂ, ಕೆಲವರು ಬರವಸದಿಂದಲೂ, ಕೆಲವರು ಅವಿಶ್ವಾಸದಿಂದಲೂ ಉಪಯೋಗಿಸಿದ್ದಾರೆ. ಅವರೆ ನೋವಿನ ಬಿಡುಗಡೆಯಾದಾಗ, ನಿಸ್ಸಂತೆಯೇ ಎಲ್ಲರೂ, “ರೊಂಡಿನೋವಿಗೆ ಇದೊಂದೇ ಕೈಕಂಡ ಔಷಧವೆಂದು” ಹೇಳುವರು.

ಬಾತ್ ನಗರದ ಟ್ರಾಜೆಟ್ ಬೀದಿಯಲ್ಲಿರುವ ಮಿ॥ ಡಬ್ಲ್ಯೂ. ನೌಲ್ಸ್ ಬರೆಯುವುದು:—“5 ವರುಷಗಳ ಹಿಂದೆ ನಾನು ರೊಂಡಿನೋವಿನಿಂದ ಹೋಲ್ ಬಿದ್ದಿದ್ದೆ. ನನ್ನ ಬಲ ತೊಡೆಯಿಂದ ಅಂಗಾಲಿನವರಿಗೆ ವಾಯುವಿನ ಯಾತನೆಯಿಂದ ರಾತ್ರೀ ಹಗಲು ಕಷ್ಟಪಟ್ಟೆನು. ರಾತ್ರಿಯಲ್ಲಿ ನೋವಿನ ಬೇನೆಯಿಂದ ಎಚ್ಚರವಾಗಿ, ನಿದ್ರೆಯೇ ಬರುತ್ತಿರಲಿಲ್ಲ. “ಲಿಟ್ಲ್ಸ್ ಓರಿಯಂಟಲ್ ಬಾಂ ಎಂಬದನ್ನು ಒಂದು ಸೀಸೆ ಉಪಯೋಗಿಸಿ ಪೂರ್ಣ ಸೌಖ್ಯ ಹೊಂದಿದೆನು.”

ಸೀಸೆ 1ಕ್ಕೆ 1 ರೂಪಾಯಿನಂತೆ ಎಲ್ಲಾ ಔಷಧಗಾರರಿಂದಲೂ ದೊರಕುತ್ತೆ.

101-21

CHAMBERLAIN'S COLIC, CHOLERA AND DIARRHOEA REMEDY.

ಛೇಂಬರ್ಲೀನ್ ಯವರು ಹೊಟ್ಟೆಶೂಲೆ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.



3-39

ಕೆಳ ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಕೀಲುಗಳ ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತವೆ. ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿಲ್ಲ.

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ಶೂಲೆ ನೋವನ್ನೂ ನಿಲ್ಲಿಸಿಬಿಡುತ್ತದೆ. ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ.

ಇದು ಎಲ್ಲಿಲ್ಲೂ ಬಿಕರಿಯಾಗುವುದು. ಸಣ್ಣ ಶೀಸೆಗೆ ೧ ರೂಪಾಯಿ. ದೊಡ್ಡ ಶೀಸೆಗೆ ೨ ರೂಪಾಯಿ.

ಅಮೃತಾಂಜನ ರಿಜಿಸ್ಟರ್ಡ್

ಇದು ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು. ಇದರ ಉಪಯೋಗದಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗವಾಯು, ಉಳುಕು, ಕೆಮ್ಮು, ಸೊಂಟದನೋವು, ಶೀತ, ಚರ್ಮ ವ್ಯಾಧಿ, ಹಲ್ಲುನೋವು, ಚೇಳು ಕಡಿತ ಮೊದಲಾದ ಎಲ್ಲಾ ತರದ ನೋವುಗಳು ಖಾತ್ರಿಯಾಗಿ ನಿಲ್ಲುವವು. ಠಕಾರಿ ಔಷಧಗಳನ್ನು ಪಡಕೊಳ್ಳಬೇಡಿರಿ. ಈ ನಮ್ಮ ಲೋಕಪ್ರಖ್ಯಾತವಾದ ಅಮೃತಾಂಜನವನ್ನು ನಮ್ಮ ರಿಜಿಸ್ಟ್ರಿಯಾದ ಮತ್ತು ಹಲವು ಭಾಷೆಗಳುಳ್ಳ ಸುಂದರವಾದ ಕರಡಿಗೆಯಲ್ಲಿ ಪ್ಯಾಕ್ ಮಾಡಿರುತ್ತೇವೆ. ಕರಡಿಗೆ ಇಲ್ಲದ ಬಾಟ್ಲಿಗಳನ್ನು ಪಡಕೊಳ್ಳಬೇಡಿರಿ. ಬಾಟ್ಲಿ ಒಂದರ ಕಿಮ್ಮತ್ತು 0-8-0. ಡಜನ್ 1ಕ್ಕೆ 5-4-0. ವಿ. ಪಿ. ಪ್ರತ್ಯೇಕ. ಗಜಕರ್ಣದ ಮುಲಾಮು 0-6-0. ದಂತಮಂಜನ 0-2-0. ಮೋಹಿನಿ ತೈಲ 0-12-0. ಖಜ್ಜಿ ಮುಲಾಮು 0-3-0. ಜುಲಾಬು ಮಾತ್ರೆ 0-8-0. ಸುಂದರಿ ಮುಲಾಮು 0-8-0 ಕ್ಯಾಟಲಾಗಿಗೆ ಬರೆಯಿರಿ. [62-29]

ವ್ಯಾಪಾರಸ್ಥರಿಗೆ ಚಿಲ್ಲರೆ ಕಮಿಷನ್ ದೊರಕುವದು.

ಅಮೃತಾಂಜನ ಡಿಪೋ,

ಫೋರ್ಟ್. ಮುಂಬಯಿ, ಮತ್ತು ೯ ಜಹಂಗೀರ್ ಸ್ಟ್ರೀಟ್, ಮದ್ರಾಸು.

ಸನ್ 1915 ನೇ ಇಸವಿಯ

ಶ್ರೀ ಸೀತಾರಾಘವ ಪಾಕೆಟ್ ಡೈರಿ ಪಾಕೆಟ್ ಡೈರಿಗಳು



ಮೊದಮೊದಲೇ ಬರೆದು ತರಿಸಿಕೊಳ್ಳಿ. ನಂ. 1. ಸಣ್ಣ ಸೈಜು ಸಾದಾ ಡೈರಿಗೆ 4 ಆಣೆ; ನಂ. 2. ಸಣ್ಣ ಸೈಜು ಪೆನ್ಸಲ್ ಇಟ್ಟು ಮುಚ್ಚಳ ಹಾಕಿರುವ ಫ್ಲಾಪ್ ಡೈರಿಗೆ 6 ಆಣೆ; ನಂ. 3. ದೊಡ್ಡ ಸೈಜು ಸಾದಾ ಡೈರಿಗೆ 6 ಆಣೆ; ದೊಡ್ಡ ಸೈಜು ಪೆನ್ಸಲ್ ಇಟ್ಟು ಮುಚ್ಚಳ ಹಾಕಿರುವ ಫ್ಲಾಪ್ ಡೈರಿಗೆ 8 ಆಣೆ. ಟಪಾಲು ಖರ್ಚು ಬೇರೆ. ಒಂದೇ ಸಲ 10 ಡೈರಿ ತರಿಸಿಕೊಂಡವರಿಗೆ ಒಂದು ಡೈರಿ ಇನಾಮು; 25 ರೂಪಾಯಿಗಿಂತ ಹೆಚ್ಚು ಡೈರಿ ತರಿಸಿಕೊಳ್ಳುವವರಿಗೆ ರೂಪಾಯಿಗೆ 2½ ಆಣೆಯಂತೆ ಡಿಸ್ಕೌಂಟು ದೊರೆಯುತ್ತದೆ. ವಿವರಣೆ—(1) ಈ ವರೆಗೆ ತಾವು ನೋಡಿರುವ ಡೈರಿಗಳೆಲ್ಲಕ್ಕಿಂತಲೂ ಅಂದವಾಗಿರುವಂತೆ ಹಸನಾದ ಕಾಗದದಲ್ಲಿ ಪ್ರತಿ ಪೇಜಿಗೂ ರೂಲು ಹಾಕಿಸಿ ನೂಗಸಾದ ಕ್ಯಾಲಿಕೋ (ಬಟ್ಟೆಯ) ಬೈಂಡು ಮಾಡಿಸಿದೆ. (2) ದೇಹಸೌಖ್ಯ ವಿಚಾರದಲ್ಲಿ ಪ್ರತಿಯೊಬ್ಬರೂ ತಿಳಿಯಬೇಕಾದ ಸಾಧಕ ಬಾಧಕಗಳನ್ನು ತಕ್ಕಮಟ್ಟಿಗೆ ವಿವರಿಸಿದೆ. ಪಂಚಾಂಗ, ಕ್ಯಾಲೆಂಡರ್, ರಾಹುಕಾಲ ಗುಳಿಕಕಾಲಗಳು, ಸಂವತ್ಸರಫಲಗಳು, ಗ್ರಹಣ, ಜಾತಕರ್ಮ ಮೊದಲುಗೊಂಡು ನೋಡತಕ್ಕವರಿಗೆ ಬೇಕಾದ ಲಗ್ನಾದಿಗಳು, ಇವೇ ಮುಂತಾದ ವಿಷಯಗಳು ಸುಲಭವಾಗಿ ತಿಳಿಯುವಂತೆ ಬರೆದಿದೆ. (3) ಕೋರ್ಟು ಫೀಜ್ ಆಕ್ಟು, ಪೋಸ್ಟಾಫೀಸಿನ ಸಂಗತಿ, ಸ್ಟಾಂಪ್ ಆಕ್ಟು, ಇವುಗಳಲ್ಲಿ ಮುಖ್ಯವಾಗಿ ಬೇಕಾಗುವ ಮತ್ತಾವ ಡೈರಿಯಲ್ಲೂ ಹೇಳದಿರುವಷ್ಟು ಹೊಸ ವಿಷಯಗಳನ್ನೂ ಸೇರಿಸಿದೆ (4) ಮದರಾಸ್ ಮತ್ತು ಸದರನ್ ಮರಾಠಾ ರೈಲ್ವೆಗಳ ಛಾರ್ಜು, ರೈಲು ಹೊರಡುವ ಕಾಲ, ಅಳತೆ, ತೂಕ, ಗೌರ್ನಮೆಂಟ್ ರಜಾ ದಿನಗಳು, ಹಿಂದೂ ಸಂವತ್ಸರಗಳಿಗೆ ಸರಿಯಾದ ಇಂಗ್ಲೀಷು ಸಂವತ್ಸರಗಳು, ಶೇಕಡಾ ಹಣದಬಡ್ಡಿ, ತಲಬುಜಂತ್ರಿಪಟ್ಟಿ ಸಹಾ ಇರುತ್ತವೆ. ದೋಬಿ ಲೆಕ್ಕ, ಹಾಲಿನ ಲೆಕ್ಕ, ಮುಖ್ಯವಾದ ವಿಷಯ, ಒಟ್ಟು ಜಮಾಖರ್ಚು, ಇವುಗಳಿಗೆ ಜಾಗವನ್ನು ಬಿಟ್ಟಿರುತ್ತದೆ. ಈ ಹೊಸ ಪ್ರಯತ್ನಕ್ಕೆ ದೇಶಾಭಿಮಾನಿಗಳ ಪ್ರೋತ್ಸಾಹ ಅತ್ಯವಶ್ಯಕ. [199-3]

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಅದ್ಭುತವಾದ ಬಲಕಾರಿ ಮತ್ತು ಬಾಯಿನಾತಹರ.

ಜಿನತಾನ

ಜೀರ್ಣಶಕ್ತಿ ಹುಟ್ಟಿಸುವುದರಲ್ಲಿ ಇದಕ್ಕೆ ಸಮಾನವಾದದ್ದು ಇನ್ನೊಂದಿಲ್ಲ; ಅನ್ನಕೋಶವು ಎಷ್ಟೇ ದುರ್ಬಲವಾಗಿದ್ದರೂ ಅದರ ಕಾರ್ಯಗಳನ್ನು ಹೇರುಪೇರು ಮಾಡುವದಿಲ್ಲ. ಇದರ ಸೇವನೆಯಿಂದ ಎಲ್ಲಾ ರೋಗಗಳನ್ನೂ ಅಂಟದಂತೆ ತಡೆಯಬಲ್ಲದು. ಈ ಭಾಗದಲ್ಲಿ ಇದರ ಗುಣವು ಬಹು ಫಲಕಾರಿಯಾಗಿದೆ. ಇದಲ್ಲದೆ ಇದನ್ನು ಸೇವಿಸುವವರ ಬಾಯಿಯಲ್ಲಿ ಎಲ್ಲಾ ತರದ ದುರ್ನಾತವೂ ಹೋಗಿ ಸುಗಂಧವು ಹುಟ್ಟಿ ಹರ್ಷಕರವಾಗಿದ್ದೀತು.

ಗಂಟಲಿನ ನರಗಳು ಇದರ ಸೇವನೆಯಿಂದ ಬಹಳ ಬಲಗೊಳ್ಳುವವು. ಇದರ ಗುಣವನ್ನು ನೋಡಿ ಉಪನ್ಯಾಸಕರೂ, ನಾಟಕಧಾರಿಗಳೂ, ಸಂಗೀತಗಾರರೂ, ಬೋಧಕರೂ, ವಾಚಾಳಕ ಪ್ರಿಯರೂ ಈ ಮಾತ್ರೆಗಳನ್ನು ಬಹಳವಾಗಿ ಮೋಹಿಸಿ ಪ್ರೀತಿಯಿಂದ ಉಪಯೋಗಿಸುತ್ತಿದಾರೆ.

ಈ ಮಾತ್ರೆಗಳನ್ನು ಜಪಾನಿನಲ್ಲಿರುವ ಒಸಾಕಾ ಪಟ್ಟಣದ ಮೋರಿಷಿತಾ ಕಂಪನಿಯವರು ತಯಾರ್ಮಾಡುತ್ತಾರೆ.

ಈ ಮಾತ್ರೆಗಳ	30 ಮಾತ್ರೆಗಳುಳ್ಳ ಪೊಟ್ಟಣಕ್ಕೆ 1½ ಆಣೆ.	65 ಮಾತ್ರೆ ಪೊಟ್ಟಣಕ್ಕೆ 3 ಆಣೆ.
ಕ್ರಯ	195 ,, ಡಬ್ಬಾ ಸಮೇತ 8 ಆಣೆ.	455 ,, ಕನ್ನಡಿ ಡಬ್ಬಾಕ್ಕೆ 1 ರೂಪಾಯಿ.

ಎಲ್ಲಾ ಅಂಗಡಿಗಳಲ್ಲಿಯೂ ಬಿಕರಿಯಾಗುವುದು.

ಸೋಲ್ ಏಜಂಟರು:— ಎಸ್. ವೈದ್ಯ ಮತ್ತು ಕಂಪನಿ,

[156-11] ಪಾರ್ಕ್‌ಟೌನ್, ಮದ್ರಾಸ್.

WANTED

An EDITOR, an ASSISTANT EDITOR and a SUB-EDITOR for a non-political monthly Journal published separately in English and Kannada by the Mysore Economic Conference.

The applicants for the first place should have had journalistic experience and for the other two places good knowledge of Kannada essential. Pay according to qualifications, but will not exceed Rs. 300/-, 100/-, and 75/- for the three places, respectively. Appointment will be temporary for a period of three years and terminable within that period at three months' notice on either side. Applications with copies of testimonials, stating salary expected, should reach the undersigned on or before the 15th October, 1914.

For further information please refer to the *Mysore Gazette* of 17th September, 1914, or subsequent date, or apply to

SECRETARY,
13th Sept. 1914 *Mysore Economic Conference.*
BANGALORE.
[200-2]

ಪ್ರೊಫೆಸರ್ ಗಜ್ಜರರವರ

ಗುಣಕಂಡ ಪ್ರಖ್ಯಾತವಾದ ಔಷಧಗಳು.

ಶ್ರೇಷ್ಠವಾದ ಔಷಧಗಳನ್ನು ಉಪಯೋಗಿಸಿ ಪ್ರಾಣಾಪಾಯಕ್ಕೆ ಗುರಿಯಾ ಗುವರೇಕೆ? ವಿವೇಕದಿಂದ ತಯಾರಾಗಿರುವ ನಮ್ಮ ಔಷಧಗಳನ್ನು ಸೇವನೆ ಮಾಡಬಾರದೇ?

ಬ್ರಾಹ್ಮಿ ಕೋಲಾಸ್ಪರ್ — ಇದರಲ್ಲಿ ಗ್ಲಿಸರಿನೊಫೋಸ್ಫೇಟ್ಸ್ ಎಂಬ ಅಮೂಲ್ಯ ಪದಾರ್ಥಗಳನ್ನು ಹಾಕಿ ತಯಾರಾಗಿದೆ. ಇದು ಬೇಗನೆ ಶರೀರಕ್ಕೆ ಸೇರುತ್ತದೆ. ಆರೋಗ್ಯವನ್ನೂ ಚಟುವಟಿಕೆಯನ್ನೂ ಶಕ್ತಿಯನ್ನೂ ವೃದ್ಧಿಮಾಡುವುದು. ನರಗಳ ದುರ್ಬಲತೆಯನ್ನು ಹೋಗಲಾಡಿಸುವುದರಲ್ಲಿ ಇದು ಬಹಳ ಶ್ರೇಷ್ಠವಾದ ಔಷಧ. ಕ್ರಯ ಸೀಸೆಗೆ 3 ರೂಪಾಯಿ, ಮತ್ತು ರೂ. 1-2-0.

ರಕ್ತಶುದ್ಧಿಗೆ ಮಹೌಷಧ — ಇದು ರಕ್ತವನ್ನೂ ದೇಹದ ಎಲ್ಲಾ ಭಾಗಗಳನ್ನು ಶುದ್ಧಿಮಾಡುತ್ತೆ. ಬಹಳ ಚೆನ್ನಾಗಿ ಗುಣಕಂಡ ಔಷಧ. ಕ್ರಯ ಸೀಸೆಗೆ 1 ರೂಪಾಯಿ.

ಲಿವರ್ ಕೋಲಾಸ್ಪರ್ — ಪಿತ್ತಕೋಶದ ಮೇಲೆ ಇದು ಬಹಳ ಚೆನ್ನಾಗಿ ಕೆಲಸಮಾಡೋಣದರಿಂದ ಮಲಬದ್ಧತೆಯುಳ್ಳವರಿಗೆ ಮಹೋಪಕಾರಿಯಾಗಿದೆ. ಡಾಕ್ಟರ್ರು ಇದನ್ನು ಕೊಡುತ್ತಾರೆ. ಇದು ಮನೆಯಲ್ಲಿ ಇರಲೇ ಬೇಕು. ಕ್ರಯ ಸೀಸೆಗೆ ರೂ. 1; ಮತ್ತು ರೂ. 0-10-0.

ಜ್ವರದ ಔಷಧ — ವಿಷಮಶೀತಜ್ವರ, ನಿಂತುಬರುವಜ್ವರ, ಅವಧಿಯಜ್ವರ, ಎಲ್ಲಾ ತರದ ಜ್ವರಗಳಿಗೂ ಇದು ಸಂಜೀವನವಾಗಿದೆ. ಇದು ಕ್ವಿನೈನ್ ಗಿಂತ ಬಹಳ ಅಗ್ಗ. ಕ್ರಯ ಸೀಸೆಗೆ 10 ಆಣೆ; 4 ಆಣೆ.

ಹುಳುಕಡ್ಡಿ ಔಷಧ — ಹುಳುಕಡ್ಡಿಯನ್ನು ನಿಶ್ಚಿತವಾಗಿ ಗುಣಮಾಡುತ್ತೆ. ಕ್ರಯ ಸೀಸೆಗೆ 4 ಆಣೆ.

ಹಲ್ಲುಪುಡಿ — ಈ ಪುಡಿಯಿಂದ ಹಲ್ಲು ಉಜ್ಜಿಕೊಂಡರೆ ಬಾಯಿಗೆ ಸುವಾಸನೆ ಕೊಡುತ್ತೆ. ಹಲ್ಲು ಸವೆದು ಕೆಡದಂತೆ ಬಹಳ ಚೆನ್ನಾಗಿಟ್ಟು ಕಾಪಾಡುತ್ತೆ. ಕ್ರಯ ಸೀಸೆಗೆ 4 ಆಣೆ; 6 ಆಣೆ; 1 ರೂಪಾಯಿ.

ಇಂಗ್ಲೀಷಿನಲ್ಲೇ ನಮಗೆ ಕಾಗದವನ್ನು ಬರೆಯಬೇಕು.

ಸೋಲ್ ಏಜಂಟರು :—ಎಸ್. ವೈದ್ಯ ಮತ್ತು ಕಂಪನಿ,
[156-11] ಪಾರ್ಕ್ ಟೌನ್, ಮದರಾಸ್.

ಬೇಕಾದವರು ಗಮನಿಸಿ.

ತ್ವರೆಮಾಡಿ! ಕೆಲವು ದಿನಗಳು ಮಾತ್ರ!

ಸೋಲಾಪುರದ ಚಿಕ್ಕು, ಸೀರೆ, ಖಣ, ಕಿರಿಗೆ.

ಹಣ ಮುಂಗಡವಾಗಿ ಕಳುಹಿಸತಕ್ಕ ವ್ಯಾಪಾರಿಗಳಿಗೆ ಮಾತ್ರ ತರಹೆವಾರಿ ಚಿಕ್ಕು, ಸೀರೆ, ಖಣ, ಕಿರಿಗೆ ಇವು ಬಹಳ ಸುಲಭ ಖರೀದಿಗೆ ಒದಗಿಸುವ ಏರ್ಪಾಡು ಮಾಡಲ್ಪಟ್ಟಿದೆ. ನಮ್ಮ ಖಾಯಂ ಗಿರಾಕಿಗಳಿಗೆ ಎಲ್ಲರಿಗಿಂತ ಸುಲಭ ಕ್ರಯಕ್ಕೆ ದೊರೆಯುವುದು.

ಹೊಸ ಗಿರಾಕಿಗಳು ತಮಗೆ ಬೇಕಾದಷ್ಟು ಸರಕಿಗೆ ಬರೆದು ಹಣ ಮುಂಗಡ ರವಾನಿಸಿದರೆ ಅವರಿಗೂ ಖಾಯಂ ಗಿರಾಕಿಗಳ ದರಕ್ಕೆ ಜಪ್ತೀ ದೊರೆಯುವುದು.

ಹಣ ಕಳುಹಿಸದೆ ಬರೆಯತಕ್ಕ ಕಾಗದಗಳಿಗೆ ಬೇಗ ಗಮನಕೊಡಲು ಅನುಕೂಲವಿಲ್ಲ. ಕಾಗದ ಪತ್ರಗಳನ್ನು ಬೆಳಸುವದರಿಂದ ಖರೀದಿಗಳು ಬದಲಾಯಿಸುವದಿಲ್ಲವೆಂಬ ವಿಷಯ ಜ್ಞಾಪಕದಲ್ಲಿಡಬೇಕು. [28-35]

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್,
159, ಕಿಲಾರಿ ರೋಡ್ (ಕುಂಚಿಗರ ಪೇಟೆ), ಬೆಂಗಳೂರು ಸಿಟಿ.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲ್.

ನೋಟೀಸು.

ಇದರಿಂದ ಸಿಟಿ ಮುಚಕೂರಿನಲ್ಲಿರುವ ಧರ್ಮಛತ್ರ, ಮಠ, ಮುಸಾಫರ್ ಖಾನೆ, ಮಸೀದಿ, ಇವುಗಳ ಅಧ್ಯಕ್ಷರಿಗೆ ತಿಳಿಯಪಡಿಸುವದೇನೆಂದರೆ ಸಿಟಿ ಮುಚಕೂರಿನಲ್ಲಿ ಯಾ ಇತರ ಸ್ಥಳಗಳಲ್ಲಿ ಇಲಿಗಳು ಸತ್ತು ಪ್ಲೇಗ್ ಜಾಡ್ಯ ಪ್ರಾಪ್ತವಾದ ಮನೆಗಳಿಂದ ಬರತಕ್ಕ ಜನಗಳಿಗೆ ಛತ್ರ, ಮಠ, ಮುಸಾಫರ್ ಖಾನೆ, ದೇವಸ್ಥಾನ ವಗೈರೆಗಳಲ್ಲಿ ಟಿಂಪಿಯಾಗುವದಕ್ಕೆ ಅಥವಾ ವಾಸಕ್ಕೆ ಜಾಗಾ ಕೊಟ್ಟಲ್ಲಿ ಸದರಿ ಜಾಡ್ಯವು ವ್ಯಾಪಿಸಲು ಸಂಭವವುಂಟಾಗುತ್ತಾಗಿ ಅಂಥಾ ಜನರಿಗೆ ಮೇಲ್ಕಂಡ ಸ್ಥಳಗಳಲ್ಲಿ ವಾಸಕ್ಕಾಗಿ ಅವಕಾಶ ಕೊಡತಕ್ಕದ್ದು. ಇದಕ್ಕೆ ವಿರೋಧವಾಗಿ ನಡೆದಲ್ಲಿ ಮ್ಯುನಿಸಿಪಲ್ ರೆಗ್ಯುಲೇಷನ್ 144 ನೇ ಸೆಕ್ಷನ್ ನಲ್ಲಿ ವಿಧಿಯುಕವಾಗಿರುವ ಶಿಕ್ಷೆಗೆ ಒಳಪಡಬೇಕಾಗುತ್ತೆ. ತಿಳಿಯುವದು. [202-3]

ತಾ. 4-9-1914, ಕೆ ಪಿ ಪುಟ್ಟಣ್ಣಚೆಟ್ಟಿ,
ಬೆಂಗಳೂರು ಸಿಟಿ. ಪ್ರಸಿಡೆಂಟ್, ಮ್ಯುನಿಸಿಪಲ್ ಕೌನ್ಸಿಲ್.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲ್.

ಇಸ್ತಿಹಾರ್.

ದೊಡ್ಡ ತಿರುಪತಿಯಲ್ಲಿ ಕಾಲರಾ ಜಾಡ್ಯವು ವ್ಯಾಪಿಸಿ ಇರುತ್ತೆಯಾಗಿ ಸದರಿ ಸ್ಥಳಕ್ಕೆ ಹೋಗತಕ್ಕ ಯಾತ್ರಾರ್ಥಿಗಳಿಗೆ ರೋಗವು ತಗಲುವ ಅಪಾಯವುಂಟೆಂದು ಜನಗಳಿಗೆ ಇದರಿಂದ ಎಚ್ಚರಿಸಿರುತ್ತೆ.

ಕಾಲರಾ ಜಾಡ್ಯವು ವ್ಯಾಪಿಸಿರುತ್ತೆಂದು ತಿಳಿಯಬರುವ ಸ್ಥಳಗಳಿಂದ ಬೆಂಗಳೂರು ಪಟ್ಟಣಕ್ಕೆ ಬಂದು ಇಳಿಯುವ ಜನರು ತಾವು ಇಲ್ಲಿ ಬಂದು ತಲುಪಿದ ಸಂಗತಿಯನ್ನು ಕೂಡಲೆ ಹೆಲ್ತ್ ಆಫೀಸರವರಿಗೆ ತಿಳಿಸತಕ್ಕದ್ದು. ಮತ್ತು ಮ್ಯುನಿಸಿಪಲ್ ರೆಗ್ಯುಲೇಷನ್ 145 (1) ನೇ ಪ್ರಕರಣಕ್ಕನುಗುಣವಾಗಿ ಅಂಥಾ ಜನರು ಅವರ ಉಡಿಗೆ ತೊಡಿಗೆಗಳನ್ನು (ಡಿಸಿನ್ಫೆಕ್ಟ್) ಶುದ್ಧಿಮಾಡುವದಕ್ಕಾಗಲಿ, ಅಥವಾ ಅಂಥಾ ಜನರನ್ನು ಅವರು ಬಂದ 7 ದಿನಗಳ ಪರಿಯಂತರ ಆಜಮಾಯಿಸಿಯಲ್ಲಿ ಇಡಲ್ಪಡುವದಕ್ಕಾಗಲಿ ನ್ಯಾಯವಾಗಿ ಕೊಡಲ್ಪಡುವ ಅಪ್ಪಣೆಯಂತೆ ನಡೆಯಲು ಬದ್ಧರಾಗಿರತಕ್ಕದ್ದು.

ಕಾಲರಾ ರೋಗದಿಂದ ಪೀಡಿತನಾಗಿ ಬೆಂಗಳೂರು ಸಿಟಿ ರೈಲ್ವೆ ಸ್ಟೇಷನ್ನಲ್ಲಿ ಬಂದು ಇಳಿಯುವ ಪ್ರತಿ ಮನುಷ್ಯನೂ ತಾನು ಇಲ್ಲಿಗೆ ಬಂದು ತಲುಪಿದ್ದನ್ನು ಹೆಲ್ತ್ ಆಫೀಸರಿಗೆ ತಿಳಿಯಪಡಿಸಿ, ಸಾಂಕ್ರಾಮಿಕ ರೋಗಗಳ ಆಸ್ಪತ್ರೆಯಲ್ಲಿ ಚಿಕಿತ್ಸೆ ಮಾಡಲ್ಪಡಲು ಅನುಕೂಲಪಡಿಸುವ ಸ್ಥಳದಲ್ಲಿರಬೇಕೇ ವಿನಃ ಸಿಟಿ ಮುಚಕೂರಿನಲ್ಲಿ ಬೇರೆ ಯಾವ ಸ್ಥಳದಲ್ಲಿಯೂ ವಾಸಮಾಡಕೂಡದು.

ತಾ. 7-9-1914, ಆರ್. ಸುಬ್ಬರಾವ್,
ಬೆಂಗಳೂರು ಸಿಟಿ. [203-3] ಹೆಲ್ತ್ ಆಫೀಸರ್



ಸೆಪ್ಟಂಬರ್ ಮಹೋತ್ಸವದಕ್ಕೈಗಡಿಯಾರ

ಅರ್ಧ ಕ್ರಯ ರೂ. 1-14-0

ಇದೇ ಸೆಪ್ಟಂಬರ್ ಹಬ್ಬದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದ ಕೈಗಡಿಯಾರವನ್ನು ಸೆಪ್ಟಂಬರ್ ಒಳಗೆ ತರಿಸಿಕೊಳ್ಳುವವರಿಗೆ ರೂಪಾಯಿ 1-14-0 ಆಣೆಗೆ ಕೊಡಲ್ಪಡುತ್ತೆ. [99-16]

ವಿಳಾಸ—ವಿ. ಕೃಷ್ಣಸ್ವಾಮಿ ಮೊದಲಿಯಾರ್, ನಂ.27 ಬಂದರ್ ಬೀದಿ, ಜಿ.ಟಿ., ಮದರಾಸು.

ಮಧುರೆ ಜುನ್ನಡಿ ಅಂಚಿನ ಸೀರೆ ಅಪ್ಪಲ್ ರಬಿಂ ರೂ. 2-8-0.
ಸೆಪ್ಟಂಬರ್ ತಿಂಗಳ ಒಳಗಾಗಿ ತರಿಸಿಕೊಳ್ಳುವರಿಗೆ ಒಂದು ಸಿಂಗಪೂರು ರವಿಕೆಯನ್ನು ಪ್ರತಿ ಸೀರೆಗೂ ಇನಾಮಾಗಿ ಕೊಡುತ್ತೇವೆ.

ಇದು ಉಡುವುದಕ್ಕೆ ದಢೂತಿಯಾಗಿಯೂ ನೋಟಕ್ಕೆ ನಯವಾಗಿಯೂ, ಬೆಲೆ ಸುಲಭವಾಗಿಯೂ ಇದೆ. ಬಣ್ಣ ಹೋಗದು ಸೀರೆಯ ಉದ್ದ 18 ಮೊಳ. ಸುಂದರವಾದ ಸೆರಗು. ಒಂದನ್ನು ತರಿಸಿ ಪರೀಕ್ಷಿಸಿ. ವಿಳಾಸ— ವಿ. ಕೃಷ್ಣಸ್ವಾಮಿ ಮೊದಲಿಯಾರ್, ನಂ 27, ಬಂದರ್ ಬೀದಿ, ಜಿ ಟಿ, ಮದರಾಸು.
[99-16]

ದಿ ಪೀಪಲ್ಸ್ ಬ್ಯಾಂಕ್ ಲಿಮಿಟೆಡ್, ತೀರ್ಥಹಳ್ಳಿ.

ನೋಟೀಸು.

ಇದರಿಂದ ಈ ಬ್ಯಾಂಕಿನ ಮೆಂಬರುಗಳಿಗೆ ಮತ್ತು ಇತರ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ :—

ಇದೇ ಸನ್ 1914 ನೇ ಇಸವಿ ಸೆಪ್ಟಂಬರ್ ಮಾಹೆಯ ತಾರೀಖು 30 ಕ್ಕೆ ಆಗುವ ಈ ಬ್ಯಾಂಕಿನ ಎರಡನೆಯ ವರ್ಷದ ಸಾಲ್ ರ್ಝಾಡೆಯ ಲೆಕ್ಕಗಳು ತಯಾರಾಗಬೇಕಾಗಿರುವುದರಿಂದ ಇದೇ ತಾ. 1-10-1914 ರ ಲಾಗಾಯತು 20-10-14 (ಉಭಯ ದಿನಗಳೂ ಸೇರಿ) ರ ವರಿವಿಗೆ ಈ ಬ್ಯಾಂಕಿನ ಮೆಂಬರುಗಳ ರಿಜಿಸ್ಟರನ್ನು ಮೆಂಬರುಗಳಾಗಲೀ ಇತರರಾಗಲೀ ನೋಡುವುದಕ್ಕೆ ಅವಕಾಶ ಕೊಡಲ್ಪಡುವುದಿಲ್ಲ; ಮತ್ತು ಈ ಕಾಲದಲ್ಲಿ ಷೇರುಗಳ ವಿಕ್ರಯ (Share transfer) ಗಳು ಅಂಗೀಕರಿಸಲ್ಪಡುವುದೂ ಇಲ್ಲ. [210-1]

ಬೋರ್ಡಿನವರ ಅಪ್ಪಣೆಯ ಪ್ರಕಾರ

ತಾ. 14-9-1914, ಎಮ್. ಎಸ್. ಬಸಪ್ಪ,
ತೀರ್ಥಹಳ್ಳಿ ಮ್ಯಾನೇಜಿಂಗ್ ಡಿರೆಕ್ಟರ್

ನಂಬಿ ಮೋಸಹೋಗಬೇಡಿ.

ಇತರರು ಶಾಲುಗಳನ್ನು ಬಹಳ ಕಮ್ಮಿ ದರಕ್ಕೆ ಕೊಡುತ್ತೇವೆಂದೂ ಹೇಳುವರು. ಇದನ್ನು ನಂಬಿ ಮೋಸಹೋಗಬೇಡಿ. ನಮ್ಮಲ್ಲಿ ಕಾಶ್ಮೀರಿ ಮತ್ತು ಎಲ್ಲಾ ತರಹದ ಪಂಚೆ ಶಾಲುಗಳೂ 5 ರೂ. ನಿಂದ 7, 10, 50, ರೂ. ಗಳವರಿಗೂ ಸಿಕ್ಕುತ್ತವೆ. ಖಾಯಿಷಿಲ್ಲದಿದ್ದರೆ ಹಣ ವಾಪಸು ಮಾಡುತ್ತೇವೆ. ನಮ್ಮ ಕಾರಖಾನೆಗೆ ಲಂಡನ್, ಚಿಕಾಗೋ ಮುಂತಾದ ಅನೇಕ ಪ್ರದರ್ಶನಗಳಲ್ಲಿ ಚಿನ್ನ ಮತ್ತು ಬೆಳ್ಳಿಯ ಮೆಡಲುಗಳು ಮತ್ತು ಸರ್ಟಿಫಿಕೇಟುಗಳು ಬಂದಿವೆ. ಯಾವ ತರಹ ಬಣ್ಣದ್ದು ಎಷ್ಟು ಬೆಲೆಗೆ ಬೇಕಾದರೂ ನಮ್ಮಲ್ಲಿ ಸಿಕ್ಕುತ್ತವೆ. ಇಂಗ್ಲೀಷಿನಲ್ಲಾಗಲಿ, ಹಿಂದುಸ್ಥಾನಿಯಲ್ಲಾಗಲಿ ನಮಗೆ ಬರೆಯಬೇಕು.

ನಮ್ಮ ಅಡ್ರೆಸ್ಸು—ಪೀರ್ ಬ್ರದರ್ಸ್,
ಶಾಲ್ ಮರ್ಚೆಂಟ್ಸ್, ಅಮೃತಸರ, ಪಂಜಾಬು.

PEER BROS., SHAWL MERCHANTS,
[166-7] *AMRITSAR, PANJAB.*

ಲೋಕಪ್ರಸಿದ್ಧವಾದ

ಪಂಜಾಬ್ ಸಾಲಾಮಿಸ್ರಿ ಮುರಬ್ಬಾ

[214-1]

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರು ಮಾಡಿರುವ "ಪಂಜಾಬ್ ಸಾಲಾಮಿಸ್ರೀ ಮುರಬ್ಬಾವನ್ನು" ಸೇವಿಸಿರಿ! ಸೇವಿಸಿರಿ!! ಈ ಸಾಲಾಮಿಸ್ರೀ ಎಂಬುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲ್ ಕಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿನ ಜನರು ಸಾಲಾಮಿಸ್ರೀಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನರಾಗಲಾರರು. ಅನೇಕರು ಗುರುಳುಗಡ್ಡೆ, ಶಾವುಗಡ್ಡೆ ಇವುಗಳನ್ನು ಸಕ್ಕರೆಮಾಡಿಟ್ಟು ಕೊಂಡು ಸಾಲಾಮಿಸ್ರೀ ಎಂದು ಮೋಸಪಡಿಸುವರು. ನಮ್ಮ ಮುರಬ್ಬಾವನ್ನು ಪರೀಕ್ಷಿಸಿ ನೋಡಿದಲ್ಲಿ ಇದು ಪಂಜಾಬ ಸಾಲಾಮಿಸ್ರಿಯೋ ಅಥವಾ ಬೇರೆ ತರಹದ್ದೋ ಎಂಬುದು ತಿಳಿದುಬರುತ್ತೆ.

ಪಂಜಾಬ ಸಾಲಾಮಿಸ್ರೀ ಮುರಬ್ಬಾವು—ನಿದ್ರೆಯಲ್ಲಿಯೂ ಮೂತ್ರದಲ್ಲಿಯೂ ಹೋಗುವ ಧಾತುವನ್ನು ನಿಲ್ಲಿಸುವುದು.
ಪಂಜಾಬ ಸಾಲಾಮಿಸ್ರೀ ಮುರಬ್ಬಾವು—ಮೂತ್ರದಲ್ಲಿ ಉರಿಯುವುದನ್ನು ನಿಲ್ಲಿಸುವುದು.
ಪಂಜಾಬ ಸಾಲಾಮಿಸ್ರೀ ಮುರಬ್ಬಾವು—ರಕ್ತವನ್ನು ವೃದ್ಧಿಪಡಿಸಿ ನರಗಳಿಗೆ ಬಲವನ್ನು ಕೊಡುವುದು.
ಪಂಜಾಬ ಸಾಲಾಮಿಸ್ರೀ ಮುರಬ್ಬಾವು—ಕೈ, ಕಾಲು, ಸೊಂಟದ ನೋವುಗಳನ್ನು ಹೋಗಲಾಡಿಸುವುದು.
ಪಂಜಾಬ ಸಾಲಾಮಿಸ್ರೀ ಮುರಬ್ಬಾವು—ಹಸಿವನ್ನು ರಕ್ತವನ್ನು ಹೆಚ್ಚಿಸಿ ಧಾತುವನ್ನು ಗಟ್ಟಿಮಾಡುವುದು.
ಪಂಜಾಬ ಸಾಲಾಮಿಸ್ರೀ ಮುರಬ್ಬಾವು—ಮುಖವರ್ಚಸ್ಸನ್ನು ಕಾಲಕಾಲಕ್ಕೆ ವೃದ್ಧಿಸುವುದು.
ಪಂಜಾಬ ಸಾಲಾಮಿಸ್ರೀ ಮುರಬ್ಬಾವು—ಉತ್ಸಾಹವು, ಬುದ್ಧಿಕುಶಲತೆಯು, ಶರೀರಕಾಂತಿಯು ಕೊಡುವುದು.
ಪಂಜಾಬ ಸಾಲಾಮಿಸ್ರೀ ಮುರಬ್ಬಾವು—ತಾಂಬೂಲ ಮತ್ತು ಶೃಂಗಾರಕ್ಕಿಂತಲೂ ಉತ್ತಮವಾದದ್ದು.

ಈ ಮುರಬ್ಬಾದೊಂದಿಗೆ ಬಲಬರುವಂಥ ಪದಾರ್ಥಗಳನ್ನು ಸೇರಿಸಿ ಪ್ರತಿಯೊಬ್ಬರೂ ಸೇವಿಸುವ ಹಾಗೆ ಕೈಯಿಂದ ಮುಟ್ಟದೆ ತಯಾರು ಮಾಡಲ್ಪಟ್ಟಿರುವುದು. ಒಂದು ಡಬ್ಬಿ ಮುರಬ್ಬಾವನ್ನು 15 ದಿನಗಳು ಉಪಯೋಗಿಸುವುದರಿಂದ ಪೂರಾ ಗುಣ ಕಂಡುಬರುತ್ತೆ. 2-3 ಡಬ್ಬಿಗಳನ್ನು ಉಪಯೋಗಿಸುವದರಿಂದ ಜನ್ಮಾಂತ್ಯದ ವರೆಗೂ ಗುಣಕೊಡುತ್ತೆ.

ಈ ಮುರಬ್ಬಾವು "ಪಂಜಾಬ ಸಾಲಾಮಿಸ್ರಿ" ಅಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡುವೆವು

ಹಾಗೆ ವ್ಯಕ್ತಪಡಿಸಿಯೂ ಬಹುಮಾನದ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. 15 ತೊಲೆ ಮುರಬ್ಬಾವಿನ ಡಬ್ಬಿ 1 ಕ್ಕೆ ರೂಪಾಯಿ 2-0-0. ಟಪ್ಪಾಲು ಖರ್ಚು 1 ಡಬ್ಬಿಯಿಂದ 3 ಡಬ್ಬಿಗಳ ವರೆಗೆ 6 ಆಣೆ. ಅನುಪಾನ ಪತ್ರಿಕೆ ಔಷಧದ ಸಂಗಡ ಇರುತ್ತೆ.

ಏಜಂಟರು—ಡಿ. ಸೈಯದ್ ಉಸ್ಮಾನ್ ಅಂಡ್ ಕೊ,
ದೊಡ್ಡಪೇಟೆ, ಬೆಂಗಳೂರು ಸಿಟಿ.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ನತ್ಮಲ್ ಕಂಪೆನಿ ಡೈರಿಗಳು.



1915 ನೇ ಇಸವಿ ಕನ್ನಡ ಮಾಡಲ್ ಪಾಕೆಟ್ ಡೈರಿಗಳು.
ತಯಾರಾಗಿ ಬಿಕರಿಗೆ ಸಿದ್ಧವಾಗಿವೆ. ಈಗಲೇ ಬರೆದು ತರಿಸಿಕೊಳ್ಳಿರಿ.

1 ನೇ ನಂ. ಚಿಕ್ಕದು ಸಾದಾ		4 ಆಣೆ.
2 ನೇ ,,	,, ಬಟನ್ ಹಾಕಿದ್ದು	6 ,,
3 ನೇ ,, ದೊಡ್ಡದು ಸಾದಾ		6 ,,
4 ನೇ ,,	,, ಬಟನ್ ಹಾಕಿದ್ದು	8 ,,

ಒಂದೇ ಸಮೂನೆಯಲ್ಲಿ 12 ಡೈರಿಗಳನ್ನು ತರಿಸಿಕೊಳ್ಳುವವರಿಗೆ 1 ಡೈರಿ ಜಾಸ್ತಿ, ಅಥವಾ ಇನ್ನೂ ಹೆಚ್ಚಾಗಿ ತರಿಸಿಕೊಳ್ಳುವವರಿಗೆ ರೂ. ಗೆ 2 ಆಣೆಯಂತೆ ಡಿಸ್ಕೌಂಟು ದೊರೆಯುತ್ತೆ.

ವಿಳಾಸ—ಎಸ್. ಡಿ. ನತ್ಮಲ್ ಕಂಪೆನಿ,
[215-1] ದೊಡ್ಡಪೇಟೆ, ಮೈಸೂರು.

ವೃತ್ತಾಂತ ಪತ್ರಿಕೆ.

ಸನ್ ೧೯೧೪ ನೇ ಇಸವಿ ಸೆಪ್ಟಂಬರ್ ತಾ. ೨೪ ನೇ ಗುರುವಾರ.

ಮೈಸೂರು ಸೀಮೆಯ ಅನ್ಯೋನ್ಯ ಸಂಘಗಳು.

ಮೈಸೂರು ಸಂಸ್ಥಾನದಲ್ಲಿರುವ ಪರಸ್ಪರಸಹಾಯ ಸಂಘಗಳ ವಾರ್ಷಿಕ ಕೂಟವು ಅಂದರೆ ನಾಲ್ಕನೇ ಮಹಾಸಭೆಯು ರಾಜಧಾನಿಯಲ್ಲಿ ಮ|| ಎಂ. ಕಾಂತರಾಜೆ ಅರ್ಸ್, ಸಿ.ಎಸ್.ಐ. ರವರ ಅಧ್ಯಕ್ಷತೆಯಲ್ಲಿ ನಡೆಯುತ್ತಿದೆ. ಶ್ರೀಮದ್ಯುವರಾಜರವರು ದಯಮಾಡಿ ಈ ಮಹಾಸಭೆಯನ್ನು ಕಳೆದ ಮಂಗಳವಾರ ಮಧ್ಯಾಹ್ನ ಉಪನ್ಯಾಸಪೂರ್ವಕವಾಗಿ ಪ್ರಾರಂಭಮಾಡಿದರು. ಅವರು ಸಭಾಸದರಿಗೆ ಅಪ್ಪಣೆಕೊಡಿಸಿರುವ ಅಭಿಪ್ರಾಯಗಳು ಕೇವಲ ಕಾರ್ಯಕಾರಿಗಳಾಗಿರುತ್ತವೆ. ಈ ಸೊಸೈಟಿಗಳು ರೈತ ಪ್ರಜೆಗಳನ್ನು ಸಾಲಸೋಲಗಳಿಂದ ಬಿಡುಗಡೆಮಾಡಬೇಕೆಂದೂ, ತಮ್ಮ ಮೂಲಧನಗಳನ್ನು ಪ್ರಾಮುಖ್ಯವಾಗಿ ವ್ಯವಸಾಯಾಭಿವೃದ್ಧಿಗೂ, ಬಳಿಕ ಅಲ್ಪಸ್ವಲ್ಪವನ್ನು ಸಣ್ಣಪುಟ್ಟ ಕೈಗಾರಿಕೆಗಳಿಗೂ ವಿನಿಯೋಗಮಾಡಬೇಕೆಂದೂ, ಕೆಲಕೆಲವು ಸಂಘಗಳು ಒಟ್ಟುಗೂಡಿ ಅನ್ಯೋನ್ಯಸಹಾಯವನ್ನು ವೃದ್ಧಿಮಾಡಿಕೊಳ್ಳಬೇಕೆಂದೂ ಅಪ್ಪಣೆಕೊಡಿಸಿದರು. ದೊಡ್ಡ ದೊಡ್ಡ ಕಸಬುದಾರಿ ಕಾರ್ಖಾನೆಗಳನ್ನು ಪ್ರಾರಂಭಿಸಿ ನಡಿಸುವುದು ಈ ಸೊಸೈಟಿಗಳ ಕಾರ್ಯವಲ್ಲ. ಅಂಥವುಗಳನ್ನು ದೊಡ್ಡ ಜಾಯಿಂಟ್ ಸ್ಟಾಕ್ ಕಂಪನಿಗಳು *ಲಾಭ ಸಂಪಾದನೆಮಾಡಬೇಕೆಂಬ ಉದ್ದೇಶದಿಂದಲೇ* ನಡಿಸಬೇಕು. ಕೋಆಪರೆಟಿವ್ ಸೊಸೈಟಿಗಳಾದರೋ ಪ್ರಜೆಗಳಿಗೆ ಸಹಾಯಮಾಡಿ ಅವರ ಆದಾಯವನ್ನೂ ಸ್ಥಿತಿಗತಿಯನ್ನೂ ವೃದ್ಧಿಗೆ ತರಬೇಕಾಗಿರುವುದು. ಈ ರೀತಿಯಾಗಿ ಅಪ್ಪಣೆಕೊಡಿಸಿರುವ ನಮ್ಮ ಯುವರಾಜರವರ ಬುದ್ಧಿಮಾತುಗಳನ್ನು ಅನ್ಯೋನ್ಯಸಹಾಯಕರೆಲ್ಲಾ ಒಪ್ಪಿ ಚೆನ್ನಾಗಿ ಗ್ರಹಿಸುತ್ತಾರೆಂದು ನಂಬಿದೇವೆ.

ಮ|| ಕಾಂತರಾಜೆ ಅರಸಿನವರು ಮಹಾಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದಕ್ಕಾಗಿ ಸಭಿಕರೆಲ್ಲಾ ತಮ್ಮ ಒಪ್ಪಿಕೆಯನ್ನೂ ಸಂತೋಷವನ್ನೂ ಪ್ರಕಾಶಪಡಿಸಿದರು. ಅವರು ತಮ್ಮ ಉಪನ್ಯಾಸದಲ್ಲಿ ಪ್ರಾಮುಖ್ಯವಾದ ಹಲವು ವಿಚಾರಗಳನ್ನು ಕುರಿತು ಪ್ರಸ್ತಾಪಮಾಡಿದರು. ವ್ಯವಸಾಯಗಾರನು ಸಾಲದಲ್ಲಿ ಬಿದ್ದಿರುವುದರಿಂದ ದೇಶವು ಅಭಿವೃದ್ಧಿಗೆ ಬರಲು ದೊಡ್ಡ ಅಡಚಣೆಯಾಗಿದೆ. ಬೆಳೆಯನ್ನು ವೃದ್ಧಿಮಾಡುವ ಕಾರ್ಯಗಳಿಗೆ ಸಾಲಗಳನ್ನು ಒದಗಿಸಬೇಕೆಂದೂ, ವಾಯಿದೆಗೆ ಸರಿಯಾಗಿ ಸಾಲ ತೀರಿಸುವ ಹಾಗೆ ಪ್ರತಿ ಒಬ್ಬ ಮೆಂಬರಿಗೂ ತನ್ನಲ್ಲೇ ನಿರ್ಬಂಧವುಂಟಾಗುವಂತೆ ಮಾಡಬೇಕೆಂದೂ ಒತ್ತಿ ಹೇಳಿದರು. ಸಾಲವು ಜಾಗ್ರತೆಯಿಂದಲೂ ಸುಲಭವಾಗಿಯೂ ದೊರಕುವಂತೆ ಮಾಡಿಟ್ಟ ಪಕ್ಷದಲ್ಲಿ ಅದರಿಂದ ಪ್ರಯೋಜನವಾಗುವುದು ತಪ್ಪಿ ಅಡಚಣೆಯಾದೀತು. ಆಹಾರ ಮೊದಲಾದ ಸಾಮಗ್ರಿಗಳನ್ನು ಪರಸ್ಪರಸಹಾಯ ಸಂಘಗಳು ಇಟ್ಟು ಮೆಂಬರುಗಳಿಗೆ ವಿಕರಿ ಮಾಡುವುದನ್ನು ಪ್ರಚಾರಕ್ಕೆ ತರಬೇಕೆಂದೂ, ಇದಕ್ಕಿಂತಲೂ ವ್ಯವಸಾಯವನ್ನು ವೃದ್ಧಿಮಾಡುವುದು ಬಹಳ ಅವಶ್ಯವೆಂದೂ ಹೇಳಿದರು. ಸಣ್ಣ ಸಣ್ಣ ಕೈಗಾರಿಕೆಗಳನ್ನು ಪ್ರೋತ್ಸಾಹಕೊಟ್ಟು ವೃದ್ಧಿಪಡಿಸಬೇಕು; ಮನೆಗಳನ್ನು ಕಟ್ಟುವುದಕ್ಕೆ ಸಹಾಯ ಮಾಡುವಂಥಾ ಸಂಘಗಳೂ ಆಗಬೇಕು. ಮೆಂಬರುಗಳೇ ಮುಂದಾಳುಗಳಾಗಿ ನಿಂತು ಆಯಾ ಸಂಘದ ಕಾರ್ಯಗಳನ್ನು ಸಮರ್ಪಕವಾಗಿ ನೋಡಿಕೊಂಡು ನಡಿಸುತ್ತಾ ಬರುವುದೇ ಬಹಳ ಅಪೇಕ್ಷಣೀಯವಾದ್ದೆಂದು ಅವರು ಹೇಳಿದ್ದು ನ್ಯಾಯವೂ ಸಹಜವೂ ಆಗಿದೆ. ಸರ್ಕಾರದವರು ಆಗಿಂದಾಗ್ಗೆ ವಿವೇಕವನ್ನು ಹೇಳಿಕೊಡುತ್ತಿದ್ದರೆ ಸಾಕು. ಮೆಂಬರುಗಳು ಹೆಚ್ಚಾದ ಬಡ್ಡಿಯನ್ನು ಸಂಪಾದನೆ ಮಾಡುವುದರ ಮೇಲೆ ದೃಷ್ಟಿಯಿಡದೆ ಸೋಮಾರಿತನವನ್ನೂ ಅವಜ್ಞತೆಯನ್ನೂ ತ್ಯಜಿಸುತ್ತಾ ಬಂದಲ್ಲಿ ಈ ಸಂಘಗಳಿಂದ ವಿಶೇಷ ಫಲವಾದೀತೆಂದು ಮ|| ಕಾಂತರಾಜೆಅರಸಿನವರು ತಿಳಿಯಪಡಿಸಿದರು.

ಮೆಂಬರುಗಳು ಈ ಸಂಘಗಳಿಗೆ ಸಂಬಂಧಪಟ್ಟ ನಾನಾ ವಿಷಯಗಳನ್ನು ಕುರಿತು ಉಪನ್ಯಾಸಮಾಡಿದರು. ಅವುಗಳನ್ನೆಲ್ಲಾ ಸೂಚಿಸುವುದಕ್ಕೆ ಈಗ ಅವಕಾಶ ಸಾಲದು. ಈ ಅನ್ಯೋನ್ಯಸಹಾಯವೆಂಬುವುದು ನಮ್ಮ ಸೀಮೆಯಲ್ಲಿ ವಿಶೇಷ ಪ್ರಚಾರಕ್ಕೆ ಬರುತ್ತಿದೆ; ಇದಕ್ಕೆ ವಿವೇಕಿಗಳೂ ಬುದ್ಧಿಶಾಲಿಗಳೂ ಆಗಿರುವ ರೆಜಿಸ್ಟ್ರಾರ್ ಮ|| ಎಂ. ಎ. ನಾರಾಯಣ ಅಯ್ಯಂಗಾರ್ರವರು ತುಂಬಾ ಬೆಂಬಲವನ್ನು ಕೊಡುತ್ತಿದಾರೆ. ಮೈಸೂರು ಸಂಸ್ಥಾನದಲ್ಲಿ ಒಟ್ಟು 530 ಸಂಘಗಳಿವೆ; ಮೆಂಬರುಗಳು 40,479 ಮಂದಿ ಇದಾರೆ; ಅವುಗಳ ಮೂಲಧನ 21⅓ ಲಕ್ಷ ರೂಪಾಯಿ ಆಗಿದೆ. ಆಯಾ ಸೊಸೈಟಿಗಳ ವಿವರಗಳೊಂದೂ ನಮಗೆ ತಿಳಿಯದು. ಅದಾಗ್ಯೂ ಈ ರೀತಿಯಾದ ಕಾರ್ಯಗಳೇ ನಮ್ಮ ಜನರನ್ನು ಅಭಿವೃದ್ಧಿಗೆ ತರತಕ್ಕವುಗಳೆಂದು ನಾವು ನಂಬಿಕೊಂಡಿದೇವೆ. ಸ್ವಸಹಾಯದ ಮುಂದೆ ಇನ್ನೊಂದು ಸಹಾಯವಿಲ್ಲ. ಸರ್ಕಾರದವರು ಮೇಲ್ವಿಚಾರಣೆ ನೋಡಿಕೊಳ್ಳುವುದಕ್ಕೆ ಇಟ್ಟಿರುವ ಸಿಬ್ಬಂದಿಯ ಖರ್ಚಲ್ಲದೆ ಈ ಸೊಸೈಟಿಗಳಿಗೆ ಹೆಚ್ಚು ಹಣವೇನೂ ಒದಗಿಸಿಲ್ಲವೆಂದು ತಿಳಿದು ಸಂತೋಷಪಡುತ್ತೇವೆ. ಇನ್ನೂ ಕೆಲವು ಕಾಲ ಈ ಸಂಘಗಳಲ್ಲಿ ಕ್ರಮಪ್ರಕಾರ ಕೆಲಸಗಳು ನಡೆಯುತ್ತಾ ಬರುವುದನ್ನೇ ಅಧಿಕಾರಿಗಳು ಬಹು ಜಾಗರೂಕತೆಯಿಂದ ನೋಡಿಕೊಳ್ಳಬೇಕು. ಯಾಕೆಂದರೆ ಅನೇಕರಲ್ಲಿ ನಿಬಂಧನೆಗಳು ನಮ್ಮ ಆಚರಣೆಗಲ್ಲ; ಇತರರು ಅನುಸರಿಸುವುದಕ್ಕೋಸ್ಕರ ಎಂಬ ಭಾವನೆಯುಂಟು. ಇಂಥಾ ಸಂಘಗಳು ಸರಿಯಾಗಿ ನಡೆಯುವುದಕ್ಕೂ ಅಭಿವೃದ್ಧಿ ಹೊಂದುವುದಕ್ಕೂ ನಿಬಂಧನೆಗಳ ಪ್ರಕಾರ ಪ್ರತಿ ಒಬ್ಬರೂ ನಡೆಯಬೇಕಾದದ್ದೇ ಮೂಲಕಾರಣವಾಗಿದೆ. ರೆಜಿಸ್ಟ್ರಾರ್ರವರು ಈ ವರುಷಾಂತ್ಯದಲ್ಲಿ ಬರೆಯುವ ರಿಪೋರ್ಟಿನಲ್ಲಿ ಪ್ರಜೆಗಳು ಸಾಲಗಾರರಾಗಿರುವುದು ಕಡಮೆಯಾಗಿದೆಯೆಂದೂ, ಸಣ್ಣ ಸಣ್ಣ ಕೈಗಾರಿಕೆಗಳು ವೃದ್ಧಿಹೊಂದುತ್ತಿವೆಯೆಂದೂ, ಪ್ರಜಾಸಾಮಾನ್ಯದಲ್ಲಿ ಅನ್ಯೋನ್ಯಸಹಾಯವು ಹರಡಿಕೊಂಡು ಆಚರಣೆಗೆ ಬರುತ್ತಿದೆಯೆಂದೂ ಓದಲು ಕುತೂಹಲಪಟ್ಟು ನಿರೀಕ್ಷಿಸುವೆವು.

ಸಿಪಾಯಿಯ ಧರ್ಮ.

ಸಿಪಾಯಿಯಂದರೇನು ? ಇಂಗ್ಲಿಷಿನಲ್ಲಿ ಸಿಪಾಯಿಗೆ ಸೋಲ್ಜರ್ ಎನ್ನುತ್ತಾರೆ. ಮೊದಲ್ಮೊದಲು ಈ ಮಾತಿಗೆ ರುಸುಮು ತೆಗೆದುಕೊಂಡು ಅದನ್ನು ಕೊಟ್ಟವನ ಪಕ್ಷದಲ್ಲಿ ನಿಂತು ಅವನ ಶತ್ರುಗಳ ಮೇಲೆ ಯುದ್ಧಮಾಡುವವನು ಎಂಬ ಅಭಿಪ್ರಾಯವಿದ್ದಿತು ಮತ್ತು ಸಂದರ್ಭಾನುಸಾರವಾಗಿ ಯಾರು ಹೆಚ್ಚಾಗಿ ರುಸುಂ ಕೊಡುವನೋ ಅವನ ಪಕ್ಷವನ್ನು ಸಿಪಾಯಿ ತನ್ನ ಇಷ್ಟ ಬಂದಂತೆ ವಹಿಸುವನು. ಮತ್ತೆ ಇನ್ನಾವನಾದರೂ ಜಯಾಪೇಕ್ಷೆಯಿಂದ ಮೊದಲನೆಯವನಿಗಿಂತ ಹೆಚ್ಚು ರುಸುಮನ್ನು ಕೊಡುತ್ತೇನೆಂದು ಆಸೆ ಹುಟ್ಟಿಸಿದರೆ ಮೊದಲು ತಾನು ಯಾರ ಬಳಿಯಲ್ಲಿದ್ದನೋ ಅವನ ಪಕ್ಷವನ್ನು ತಿರಸ್ಕರಿಸಿ ಹೆಚ್ಚು ಹಣವನ್ನು ಕೊಡುವವನ ಪಕ್ಷವನ್ನು ಸೇರುವನು. ಹೀಗೆ ಪಕ್ಷ ಪರಪಕ್ಷಗಳನ್ನು ಬದಲಾಯಿಸುವದರಲ್ಲಿ ಅವನು ಅಂದರೆ ಸಿಪಾಯಿಯು—ನನ್ನನ್ನು ಸಹಾಯಕ್ಕೆ ಕರೆಯುವವರಲ್ಲಿ ಯಾರ ಪಕ್ಷವು ಸತ್ಯವಾಗಿಯೂ ನ್ಯಾಯವಾಗಿಯೂ ಇದೆ. ನಾನು ಯಾವನ ಪಕ್ಷವನ್ನು ವಹಿಸುವದು ಧರ್ಮವಾಗಿದೆಯೆಂದು ಯೋಚನೆಮಾಡುತ್ತಿರಲಿಲ್ಲ. ತನ್ನ ಬಾಹುಬಲವನ್ನು ಅಪೇಕ್ಷಿಸಿ ಅದನ್ನು ಹೊಂದುವದಕ್ಕೆ ಯಾರು ಹೆಚ್ಚು ಸಂಬಳವನ್ನು ಕೊಡುವನೋ ಅವನ ಪಕ್ಷವು ನ್ಯಾಯವಾಗಿರಲಿ, ಅನ್ಯಾಯವಾಗಿರಲಿ, ಧರ್ಮವಾಗಿರಲಿ, ಅಧರ್ಮವಾಗಿರಲಿ ಅದನ್ನು ಕುರಿತು ಲಕ್ಷ್ಯಮಾಡುವ ಅಗತ್ಯವಿಲ್ಲ. ಯಾರು ಹೆಚ್ಚು ಸಂಬಳವನ್ನು ಕೊಡುವನೋ ಅವನಿಗೇನೇ ತನ್ನ ಬಾಹುಬಲವನ್ನು ಶತ್ರುವನ್ನು ಜಯಿಸುವ ಯುಕ್ತಿಚಮತ್ಕಾರಗಳನ್ನು ಮಾರುತ್ತಲಿದ್ದನು. ಈ ಪದ್ಧತಿಯು ಹೀನವಾದದ್ದು ; ಅನೇಕ ಸಂದರ್ಭಗಳಲ್ಲಿ ಅನ್ಯಾಯವಾದದ್ದು ಆಗಿ ಸಂಭವಿಸುತ್ತಿದ್ದಿತು. ಆದರೆ ಅನೇಕ ವಿಚಾರ್ಯ ಬುದ್ಧಿಯುಳ್ಳವರು ಕ್ರಮೇಣ ಅಂಗಸಾಧನೆ, ಬಾಹುಬಲ, ಯುದ್ಧದಲ್ಲಿ ಸಾಹಸ ಪರಾಕ್ರಮಗಳನ್ನು ಮೆಚ್ಚಿ ಅವುಗಳನ್ನು ಅಭ್ಯಾಸಿಸುವವರಾದರು ಮತ್ತು ಇಂತಹ ಪುಣ್ಯಪುರುಷರು ತಮ್ಮ ಬಾಹುಬಲ, ಸಾಹಸ, ಪರಾಕ್ರಮಗಳನ್ನು ದ್ರವ್ಯಕ್ಕೆ ಮಾರಿಕೊಳ್ಳುವದು ನೀಚವೃತ್ತಿಯೆಂದು ತಿಳಿದು—ಯಾರ ಪಕ್ಷವನ್ನು ವಹಿಸುವದು ನ್ಯಾಯವೆಂದು ವಿಚಾರಮಾಡತಕ್ಕದರು. ಮತ್ತು ಅವರು ವಿಚಾರಿಸಿ ವಿಚಾರಿಸಿ—ನಮ್ಮ ಬಲಪರಾಕ್ರಮಗಳನ್ನು ಅಶಕ್ತರನ್ನೂ ಸ್ತ್ರೀಯರನ್ನೂ ಮಕ್ಕಳನ್ನೂ ದುಷ್ಟರ ಹಾವಳಿಯಿಂದ ರಕ್ಷಿಸಿ ಕಾಪಾಡುವದಕ್ಕೆ ಪ್ರಯೋಗಿಸುವದು ನ್ಯಾಯವೇ ಹೊರತು ಲೋಭಕ್ಕೆ ಮಾರುವದು ಧರ್ಮವಲ್ಲವೆಂದು ನಿಶ್ಚಯಿಸಿಕೊಂಡು ಅದೇ ಭಾವನೆಯನ್ನು ಹಿಡಿದು ದುರ್ಬಲರನ್ನೂ, ಅನ್ಯಾಯವಾಗಿ ದುಷ್ಟರ ಹಿಂಸೆಗೊಳಗಾಗಿರುವವರನ್ನೂ ತಮ್ಮ ಆಶ್ರಯಕ್ಕೆ ತೆಗೆದುಕೊಂಡು ಅವರಿಂದ ಯಾವ ವಿಧವಾದ ಪ್ರತ್ಯುಪಕಾರವನ್ನೂ ಅಪೇಕ್ಷಿಸದೆ ಪ್ರತಿ ಉಪಕಾರ ಮಾಡಲಾರದವರಿಗೋಸ್ಕರ ಘೋರಕಷ್ಟವನ್ನೂ ಮರಣವನ್ನೂ ಹೊಂದುವದಕ್ಕೆ ಸಿದ್ಧರಾದರು. ಇದರಿಂದ ಯುದ್ಧವೀರರಿಗೆ ಸನ್ಮಾನವೂ ಕೀರ್ತಿಯೂ ಲಭ್ಯವಾದವು. ಈಗಲೂ ಇದೇ ಭಾವನೆಯಿಂದ ಅರಸುಗಳೂ ಅಧಿಪತಿಗಳೂ ಪರಾಕ್ರಮವುಳ್ಳ ರಾಜಪುತ್ರರೂ ದಿವ್ಯ ಪ್ರೇರಣೆಯನ್ನು ಪಡೆದು ಬಲಾತ್ಕಾರಿಗಳಾದ ದುಷ್ಟರ ಹಿಂಸೆಯನ್ನು ಸಹಿಸುತ್ತಿರುವವರನ್ನು ಎದುರಿಸಿ ಈ ಪುಣ್ಯಕಾರ್ಯಕ್ಕಾಗಿಯೇ ಪ್ರಾಣಗಳನ್ನು ಬಿಡುವರು. ಗ್ರೇಟ್ ಬ್ರಿಟನ್ ರಾಜ್ಯದ ಸೈನ್ಯವನ್ನು ಫ್ರಾನ್ಸ್ ದೇಶದವರ ಬೆಂಬಲಕ್ಕೆ ಕಳುಹಿಸಿದಾಗ ಅವರಿಗೆ ಹೇಳಿದ ಬುದ್ಧಿವಾದವನ್ನು ವಾಚಕರು ಇಷ್ಟು ಬೇಗ ಮರೆತಿರಲಾರರು.

ಇಂತಹ ಪರಾಕ್ರಮವಂತರಲ್ಲಿ ಸರ್ ಫಿಲಿಪ್ ಸಿಡ್ನಿ ಎಂಬ ಸೇನಾಪತಿಯು ಶ್ರೇಷ್ಠನಾಗಿದ್ದನು ಇವನು ಈಗ್ಗೆ ಸುಮಾರು ಮುನ್ನೂರು ವರುಷಗಳಿಗೆ ಪೂರ್ವದಲ್ಲಿ ಹೊಲ್ಯಾಂಡ್ ಎಂಬ ಚಿಕ್ಕ ದೇಶದವರಿಗೆ ಸಹಾಯಮಾಡಲಿಕ್ಕಾಗಿ ಕಳುಹಿಸಲ್ಪಟ್ಟಿದ್ದನು. ಈತನು ಧೀರನು, ಗುಣಸಂಪನ್ನನು. ಆಗ ಸುಮಾರು ಮೂವತ್ತು ವರುಷ ಪ್ರಾಯದವನಾಗಿ ಮಾತ್ರವಿದ್ದು ಮಹಾರಾಜ್ಞಿಯವರ ಆಸ್ಥಾನದಲ್ಲಿಯೂ ಪ್ರಜಾ ಕೋಟಿಯಲ್ಲಿಯೂ ಸಕಲರ ಸನ್ಮಾನಕ್ಕೆ ಪಾತ್ರನಾಗಿದ್ದನು. ಇವನು ರಣರಂಗಕ್ಕೆ ಹೊರಡುವದಕ್ಕೆ ಸಮಯ ಒದಗಿರಲಾಗಿ ತನ್ನ ದೇಹ ಸಂರಕ್ಷಣೆಗೆ ಅಗತ್ಯವಾದ ಉಡುಪುಗಳನ್ನೂ ಆಯುಧಗಳನ್ನೂ ಧರಿಸಿ ಹೋಗುತ್ತಿದ್ದನು. ಆ ಸಮಯದಲ್ಲಿ ತನ್ನ ಜೊತೆಯಲ್ಲೇ ಯುದ್ಧಕ್ಕೆ ಬರುತ್ತಿದ್ದ ಇನ್ನೊಬ್ಬ ವೀರನು ಅಂಗರಕ್ಷಣೆಗೆ ಬೇಕಾದ ಉಡುಪುಗಳೂ ಆಯುಧಗಳೂ ಇಲ್ಲದೆ ಹೊರಟಿರುವುದನ್ನು ನೋಡಿ ಅವನಿಗೆ ತನ್ನ ಅಂಗರಕ್ಷಣೆಯ ಉಡುಪುಗಳಲ್ಲಿ ಕೆಲವನ್ನು ಬಿಚ್ಚಿಕೊಟ್ಟನು. ಹೀಗೆ ಯುದ್ಧಕ್ಕೆ ಹೋಗಿ ಕಾದಾಡುತ್ತಿರುವ ಸಮಯದಲ್ಲಿ ಯಾವ ಅಂಗರಕ್ಷಣೆಯ ಉಡುಪನ್ನು ಬಿಚ್ಚಿ ತನ್ನ ಮಿತ್ರನಿಗೆ ಕೊಟ್ಟಿದ್ದನೋ ಆ ತೊಡೆಗೆ ಗುಂಡಿನ ಪೆಟ್ಟು ಬಡಿದು ಛಿದ್ರಛಿದ್ರಗಳಾಯಿತು.

ಇಂಥ ಕಷ್ಟದಲ್ಲಿದ್ದವನನ್ನು ರಣಾಂಗಣದಿಂದ ಸಾಗಿಸಿಕೊಂಡು ಹೋಗುವಾಗ ರಕ್ತವು ಧಾರಾಳವಾಗಿ ಸುರಿದು ಹೋಗಿ ಅವನಿಗೆ ಸಹಿಸಲಸಾಧ್ಯವಾದ ದಾಹವಾದದ್ದೂ ಆಗ ಕಷ್ಟದಿಂದ ದೊರೆತ ಸ್ವಲ್ಪ ನೀರನ್ನು ತಾನು ಕುಡಿಯದೆ ತನ್ನ ಹಾಗೆ ದಾಹಪಡುತ್ತಿದ್ದ ಸಿಪಾಯಿಗೆ ಕೊಟ್ಟಿದ್ದೂ ವಾಚಕರಿಗೆ ತಿಳಿಯುವದು. ಈತನು ಸಾಯುವ ಸಮಯದಲ್ಲಿ ದೇವರ ಮುಂದೆ ದೀನ ಹೃದಯದಿಂದ ತನ್ನನ್ನು ಕನಿಕರಿಸಿ ಸ್ವೀಕರಿಸಬೇಕೆಂದು ಬೇಡಿ ಸಕಲರನ್ನೂ ವಂದಿಸಿದನು. ಮತ್ತು ಕಡೆಗೆ ಪ್ರಿಯರೇ, ನಿಮ್ಮ ಚಿತ್ತವನ್ನು ದೇವರ ಚಿತ್ತಕ್ಕೂ ಆಜ್ಞೆಗಳಿಗೂ ಅಧೀನಪಡಿಸಿರಿ. ಆತನನ್ನೇ ಪ್ರೀತಿಸಿ ಸಕಲ ಯೋಚನೆ, ಮಾತು ಕ್ರಿಯೆಗಳಲ್ಲಿ ಆತನನ್ನೇ ಸನ್ಮಾನಿಸಿರಿ. ಆತನೇ ನಮ್ಮನ್ನು ಸೃಷ್ಟಿಸಿದ ಒಡೆಯನು ಎಂದು ಬುದ್ಧಿಹೇಳಿದನು. ಇವನು ಸಿಪಾಯಿಗಳಿಗೆ ತಕ್ಕ ಮೇಲ್ಪಂಕ್ತಿಯಲ್ಲವೇ ?

ಯುದ್ಧದ ಸಮಾಚಾರಗಳು.

ಜರ್ಮನಿಯವರು ಹಿಮ್ಮೆಟ್ಟಿ ಹೋಗುವುದು.

ಆಸ್ಟ್ರಿಯದವರು ಹಿಮ್ಮೆಟ್ಟಿ ಹೋಗುವುದು.

ಜರ್ಮನಿಯವರು ಕರಾರನ್ನು ಅಪೇಕ್ಷಿಸುವುದು.

ಅಮೇರಿಕದಲ್ಲಿರುವ ಜರ್ಮನಿ ಕಡೆಯ ರಾಯಭಾರಿಯು ಯೂರೋಪಿನಲ್ಲಿರುವ ಜರ್ಮನಿ ರಾಜ್ಯವನ್ನು ಪಾಲು ಮಾಡದಿರುವ ಪಕ್ಷದಲ್ಲಿ ಜರ್ಮನಿಯವನು ಈ ಯುದ್ಧವು ಯಾರಿಗೂ ಜಯವಾಗಲಿಲ್ಲವೆಂದು ಹೇಳಿ ಕರಾರು ಮಾಡಿಕೊಳ್ಳುವುದಕ್ಕೆ ಸಿದ್ಧವಾಗಿದಾನೆಂದು ತಿಳಿಸಿರುತ್ತಾನೆ

ಸುಮಾರಾಗಿ ಎಲ್ಲಾ ಕಡೆಗಳಲ್ಲೂ ಕಳೆದ ವಾರ ಯುದ್ಧಗಳು ನಡೆದಿರುತ್ತವೆ. ಖಂಡಿತವಾದ ಮುಖ್ಯ ವಿಷಯಗಳನ್ನು ಇಲ್ಲಿ ವಿವರಿಸುತ್ತೇವೆ.

ಫ್ರಾನ್ಸಿನಲ್ಲಿ.

ಬ್ರಿಟಿಷರೂ ಫ್ರೆಂಚರೂ ಸೇರಿ ಜರ್ಮನಿ ಸೈನ್ಯಗಳನ್ನು ಪಾರಿಸ್ ನಗರದ ಬಳಿಯಿಂದ ಎಂಭತ್ತು ಮೈಲಿ ಆಚೆಗೆ ಹಿಮ್ಮೆಟ್ಟಿ ಹೋಗುವಂತೆ ಮಾಡಿದರೆಂದು ಕಳೆದ ವಾರ ತಿಳಿಸಿರುತ್ತೇವೆ. ಹೀಗೆ ಹಿಮ್ಮೆಟ್ಟಿಹೋಗುವಲ್ಲಿ ನಡೆದ ಕದನದ ವಿವರವು ಈ ವಾರ ತನ್ನಮಟ್ಟಿಗೆ ಬಂದಿರುವುದು. ದಾರಿಯಲ್ಲಿ ಸಿಕ್ಕಿದ ಅನೇಕ ನದಿಗಳನ್ನು ದಾಟಿಹೋಗಬೇಕಾಯಿತು. ಈ ಪೈಕಿ ಕೆಲವು ಕಡೆ ಬಹು ಘೋರವಾದ ಕಡಿದಾಟಗಳು ನಡೆದಿರುತ್ತವೆ. ಈ ಕದನಗಳಲ್ಲಿ ಎಷ್ಟು ಮಂದಿ ಮಡಿದರೋ, ಎಷ್ಟು ಮಂದಿಗೆ ಗಾಯಗಳಾದವೋ ಹೇಳುವುದು ಸಾಧ್ಯವಲ್ಲ. ಆರು ದಿನಗಳ ತನಕ ಫ್ರೆಂಚರೂ ಬ್ರಿಟಿಷರೂ ಶತ್ರುಗಳನ್ನು ಹಿಮ್ಮೆಟ್ಟಿಸಿಕೊಂಡು ಹೋದರು. ವರ್ತಮಾನಕಾರರು—ರಸ್ತೆಗಳ ಉದ್ದಕ್ಕೂ ಗುಂಡಿನೇಟುಗಳು ತಗಲಿ ಗಿಡಗಳ ರೆಂಬೆಗಳು ಕಡಿದು ಅಪಾರವಾಗಿ ಬಿದ್ದಿದ್ದವು, ಒಡೆಯದ ಅನೇಕ ಗುಂಡುಗಳು ರಾಶಿ ರಾಶಿಯಾಗಿ ಕಾಣಿಸುತ್ತಿದ್ದವು, ಒಡೆದುಹೋದ ಬಂಡಿಗಳೂ ಸಾಮಾನ್ ಗಾಡಿಗಳೂ ಹೊದಿಯುವ ಕಂಬಳಿ ಮುಂತಾದವುಗಳೂ ಚೆಲ್ಲಾಬಿಲ್ಲಿ ಹರಡಿದ್ದವು ಎಂಬದಾಗಿ ತಿಳಿಸುತ್ತಾರೆ ಶತ್ರುಗಳು ಹಿಮ್ಮೆಟ್ಟಿ ಹೋಗುವ ಆತುರದಲ್ಲಿ ತಮ್ಮ ಸಾಮಾನುಗಳನ್ನು ಈ ರೀತಿ ಬಿಟ್ಟುಹೋಗಿದಾರೆಂದು ಗೊತ್ತಾಗಿದೆ. ಅಲ್ಲಲ್ಲಿ ಸೈನ್ಯಗಳು ಆತ್ಮರಕ್ಷಣೆಗಾಗಿ ಅನುಕೂಲಿಸುವಂತೆ ಮಣ್ಣು ಅಗೆದು ಎತ್ತಿ ರಾಶಿಯಾಗಿ ಸುರಿದು ಇದ್ದದ್ದೂ, ಅವುಗಳ ಹಿಂಭಾಗದಲ್ಲಿ ಹೆಣಗಳು ಬಿದ್ದಿದ್ದದ್ದೂ ಸಿಕ್ಕಿರುತ್ತವೆ. ಇನ್ನು ಕೆಲವು ಕಡೆ ಹೆಣಗಳನ್ನು ಭೂಮಿ ಅಗೆದು ಗುಣಿಗಳನ್ನು ಮಾಡಿ ಅರೆವಾಸಿಯಾಗಿ ಸಮಾಧಿ ಮಾಡಿದ್ದದ್ದೂ ಕಂಡುಬಂದಿದೆ. ಅನೇಕಾನೇಕ ಶತ್ರುಸೈನಿಕರು ಕೈಸೆರೆಯಾದರು. ಸರಿಯಾಗಿ ಲೆಕ್ಕಮಾಡುವ ತನಕ ಸಂಖ್ಯೆಗಳ್ಯಾವೂ ಪ್ರಕಟವಾಗುವುದಿಲ್ಲ.

ಜರ್ಮನಿಯವರು ಹಿಮ್ಮೆಟ್ಟಿಹೋಗುವಲ್ಲಿ ಕೆಲವು ಗ್ರಾಮಗಳಲ್ಲಿ ಅನೇಕ ದಾಂಧಲೆಗಳನ್ನು ನಡಿಸಿದರು. ಸತ್ಯಸಂಧರಾದ ಸೈನಿಕರಂತೆ ವರ್ತಿಸದೆ ಅವರು ದರೋಡೆ ಕೋರರಂತೆ ಕ್ರೂರಕೃತ್ಯಗಳನ್ನು ನಡಿಸಿಹೋದರು. ಮನೆಗಳನ್ನು ಕೊಳ್ಳೆಹೊಡೆದರು ; ಸಾಮಾನು, ಆಸ್ತಿ ಮುಂತಾದವುಗಳನ್ನು ನಾಶಪಡಿಸಿದರು ; ನಿರಪರಾಧಿಗಳಾದ ಅನೇಕ ಸಭ್ಯ ಪ್ರಜೆಗಳನ್ನು ಗುಂಡಿನಿಂದ ಹೊಡೆದು ಕೊಂದುಬಿಟ್ಟರು. ಜರ್ಮನಿಯ ಸೈನಿಕರು ಇಷ್ಟು ಮಟ್ಟಿನ ಕ್ರೂರಾತ್ಮಗಳು ಎಂದು ನಂಬುವುದು ಪ್ರಯಾಸವಾಗಿದೆ; ಆದರೆ ಅವರು ನಡಿಸಿರುವ ಕೃತ್ಯಗಳು ಪರಿಷ್ಕಾರವಾಗಿರೋಣದರಿಂದ ನಂಬದೆ ಇರುವುದು ಸಾಧ್ಯವಲ್ಲ ಸೆಂಲಿ ಎಂಬ ಪಟ್ಟಣದಲ್ಲಿ ಮೇಯರ್ ಎಂಬ ಪುರಾಧ್ಯಕ್ಷನನ್ನೂ ಇಬ್ಬರು ಕೌನ್ಸಿಲರುಗಳನ್ನೂ ಗುಂಡಿನಿಂದ ಹೊಡೆದು ಕೊಂದುಹಾಕಿದರು ; ಆ ಪಟ್ಟಣವನ್ನು ಕೊಳ್ಳೆಹೊಡೆದು ಸುಟ್ಟುಬಿಟ್ಟರು. ಕ್ರೀಲ್ ಎಂಬ ಪಟ್ಟಣಕ್ಕೂ ಇದೇ ಪಾಡು ಸಂಭವಿಸಿತು. ಶತ್ರುಗಳು ರೀಮ್ ನಗರವನ್ನು ಆಕ್ರಮಿಸಿಕೊಂಡ ಮೇಲೆ ಅವರು ಪ್ರಜೆಗಳಲ್ಲಿ ಮುಖಂಡರಾಗಿದ್ದ ಎಂಭತ್ತು ಮಂದಿ ದೊಡ್ಡಮನುಷ್ಯರನ್ನು ಹಿಡಿದು ತರಿಸಿ, ಪಟ್ಟಣದಲ್ಲೇನಾದರೂ ಗಲಭೆಯುಂಟಾದ ಪಕ್ಷದಲ್ಲಿ ಅವರನ್ನೆಲ್ಲಾ ಶೂಲಕ್ಕೆ ಹಾಕುತ್ತೇವೆಂದು ಗಾಬರಿಯಲ್ಲಿಟ್ಟರು. ಇದಕ್ಕೆ ಪ್ರತಿಯಾಗಿ ಜರ್ಮನಿಯವರು ಕೈಸೆರೆ ಹಿಡಿದುಕೊಂಡು ಹೋಗಿರುವ ಬ್ರಿಟಿಷ್ ಸೈನಿಕರನ್ನು ಯಾವ ಕಷ್ಟನಷ್ಟಗಳಿಗೂ ಗುರಿಪಡಿಸದೆ ಪ್ರೀತಿಯಿಂದ ನೋಡಿಕೊಳ್ಳುತ್ತಿದಾರೆ ಇದುವರೆಗೆ ನಡೆದಿರುವ ಕದನಗಳಲ್ಲಿ ಫ್ರೆಂಚರೂ, ಇಂಗ್ಲಿಷರೂ, ಜರ್ಮನಿಯವರೂ, ರಷ್ಯಾದವರೂ ಕೈಸೆರೆ ಹಿಡಿದು ಇಟ್ಟುಕೊಂಡಿರುವ ಸೈನಿಕರ ಹೆಸರುಗಳ ಪಟ್ಟಿಗಳನ್ನು ತಯಾರುಮಾಡಿಸಿ ಅವರವರಿಗೆ ಕಳುಹಿಸಿಕೊಡುವಂತೆ ಒಪ್ಪಂದವಾಗಿರುತ್ತದೆ. ಇದರಿಂದ ಆಯಾ ರಾಜ್ಯಗಳ ಸೈನಿಕರಲ್ಲಿ ಯಾರ್ಯಾರು ಬದುಕಿರುವರೋ ಯಾರ್ಯಾರು ಮೃತಪಟ್ಟರೋ ತಿಳಿಯಲು ಅನುಕೂಲವಾಗುತ್ತದೆ.

ಫ್ರಾನ್ಸಿನಲ್ಲಿ ಪೂರ್ವದಿಂದ ಪಶ್ಚಿಮದ ತನಕ ಇದ್ದ ಜರ್ಮನಿ ಸೈನ್ಯಗಳು ಪ್ರತಿ ಒಂದು ಕಡೆಯಿಂದಲೂ ಹಿಂದಕ್ಕೆ ಓಡಿಸಲ್ಪಟ್ಟವೆಂದು ಗೊತ್ತಾಗುತ್ತದೆ. ಅಲ್ಲಿಂದ ಬಂದಿರುವ ತಂತೀ ವರ್ತಮಾನಗಳು ಗಲಿಬಿಲಿಯಾಗಿರುವವು. ಆದರೆ ದೊಡ್ಡ ಯುದ್ಧಗಳು ನಡೆದವು. ಸ್ಯಾನ್ಸೋಡ್ ಎಂಬ ಸ್ಥಳದಲ್ಲಿ ಬ್ರಿಟಿಷರಿಗೂ ಜರ್ಮನಿಯವರಿಗೂ ಘೋರಯುದ್ಧವಾಯಿತು. ಜರ್ಮನಿಯವರು ಸೋತು ಹಿಮ್ಮೆಟ್ಟಿಹೋಗಿದಾರೆ. ಜರ್ಮನಿಯ ಯುವರಾಜರವರು ತಂದಿದ್ದ ಸೈನ್ಯವನ್ನೂ ಫ್ರೆಂಚರು ಸೋಲಿಸಿ ಹಿಮ್ಮೆಟ್ಟಿಸಿದರು ಒಂದು ಕಡೆ ಫ್ರೆಂಚರು ತಮ್ಮ ಫಿರಂಗಿಗಳನ್ನೆಲ್ಲಾ ಕಳಕೊಂಡರು. ಪೂರ್ವ ಭಾಗದಲ್ಲಿ ಮೆಟ್ಸ್ ಮತ್ತು ನಾನ್ಸಿ ಎಂಬಲ್ಲಿ ದೊಡ್ಡ ಕದನವಾಯಿತು. ಈ ಕದನದಲ್ಲಿ ಜರ್ಮನಿಯವರ ಕಡೆ 30,000 ಸೈನ್ಯ ನಷ್ಟವಾಯಿತೆಂದು ಹೇಳಲಾಗಿದೆ. ಫ್ರೀಜ್ ಎಂಬೊಬ್ಬ ಜರ್ಮನಿ ಸೈನ್ಯಾಧಿಪತಿಯು ಕೈಸೆರೆ ಸಿಕ್ಕಿದನು. ಈತನು ಆತ್ಮಹತ್ಯ ಮಾಡಿಕೊಳ್ಳಬೇಕೆಂದು ಪ್ರಯತ್ನಪಟ್ಟನು.

ಸದ್ಯದಲ್ಲಿ ಫ್ರೆಂಚರು ಅಮಿಯಚ್ ಎಂಬ ಸ್ಥಳವನ್ನು ಆಕ್ರಮಿಸಿಕೊಂಡಿದಾರೆ. ಜರ್ಮನಿಯವರ ಸೈನ್ಯಕ್ಕೆ ಜರ್ಮನಿಯಿಂದ ಹೊಸ ಸೈನ್ಯವು ಬಂದು ಸೇರಿಕೊಂಡಿದೆ. ಈ ಸೈನ್ಯವೆಲ್ಲಾ ಅಮಿಯಚ್ ಪೂರ್ವ ಭಾಗದಿಂದ ಲಾಯಚ್ ದಕ್ಷಿಣಕ್ಕೂ ರೀಂ ಉತ್ತರಕ್ಕೂ ವೇರ್ಡೂನ್ ಉತ್ತರಕ್ಕೂ ಹರಡಿಕೊಂಡಿದೆ. [ನಮ್ಮ ಯುದ್ಧಭೂಮಿಯ ನಕ್ಷೆಯನ್ನು ನೋಡಿ.] ಈ ಸಾಲಿನ ಉದ್ದಕ್ಕೂ ಕೆಲವು ದಿನಗಳಿಂದಲೂ ಯುದ್ಧಗಳು ನಡೆಯುತ್ತಾ ಬಂದಿವೆ. ಈ ಮಧ್ಯೆ ಬಹಳ ಮಳೆಗಳು ಸುರಿದು ಯುದ್ಧಕಾರ್ಯಗಳು ನಡೆಯಲು ತುಂಬಾ ಕಷ್ಟವಾಗಿರುವುದು. ಜರ್ಮನಿಯವರು ರೀಂ ಬಳಿ ಶತ್ರುಗಳನ್ನು ಜೈಸಿ ಮುಂದಕ್ಕೆ ನುಗ್ಗಿ ಬರಬೇಕೆಂದು ಪ್ರಯತ್ನಪಟ್ಟರು. ಆದರೆ ಇದಕ್ಕೆ ಅವರಿಗೆ ಸ್ವಲ್ಪವೂ ಅವಕಾಶ ಕೊಡಲಿಲ್ಲ. ಸೆಪ್ಟಂಬರ್ ತಾ. 15 ನೇ ರಾತ್ರಿ ಜರ್ಮನಿಯವರು ಹತ್ತು ಸಲ ಬಹು ರೋಷದಿಂದ ನುಗ್ಗಿ ಬಂದರು. ಆದರೆ ಹತ್ತು ಸಲವೂ ಅವರನ್ನು ಸೋಲಿಸಿ ಹಿಮ್ಮೆಟ್ಟಿಸಿರುತ್ತಾರೆ. ತಾ. 17 ರಲ್ಲಿ ಜರ್ಮನಿಯವರು ಅಲ್ಲಿಂದ ಕೆಲವು ಮೈಲಿ ದೂರ ಹಿಮ್ಮೆಟ್ಟಿಹೋದರು. ಅವರ ಸೈನಿಕರಲ್ಲಿ 600 ಮಂದಿ ಕೈಸೆರೆಯಾದದ್ದಲ್ಲದೆ ಅವರ ಫಿರಂಗಿಗಳು ಕೆಲವು ಸಿಕ್ಕಿರುತ್ತವೆ. ಬ್ರಿಟಿಷ್ ಸೈನ್ಯಕ್ಕೆ ಹೊಸ ಸೈನ್ಯಗಳು ಹೋಗಿ ಸೇರಿಕೊಂಡವು. ಈಗ ಫ್ರಾನ್ಸಿನಲ್ಲಿ ಬ್ರಿಟಿಷರ ಆರು ಡಿವಿಜನ್ ಸೈನ್ಯವೂ, ಎರಡು ಡಿವಿಜನ್ ಸವಾರ್ ಸೈನ್ಯಗಳೂ ಇರುತ್ತವೆ. ಈ ಸೈನಿಕರು ಬಹು ಉತ್ಸಾಹಶಾಲಿಗಳಾಗಿ ತುಂಬಾ ಪರಾಕ್ರಮದಿಂದ ಯುದ್ಧ ಮಾಡುತ್ತಿದಾರೆ.

ಈಚೆಗೆ ಬಂದಿರುವ ಸುದ್ದಿ ಏನೆಂದರೆ, ಫ್ರೆಂಚರು, ತಮ್ಮ ಎಡಪಾರ್ಶ್ವದಲ್ಲಿದ್ದ ಶತ್ರು ಸೈನ್ಯಗಳನ್ನು ಕ್ರಮೇಣ ಹಿಮ್ಮೆಟ್ಟಿಸಿಕೊಂಡು ಹೋಗುತ್ತಿದಾರೆ. ಮಧ್ಯ ಪ್ರದೇಶದಲ್ಲಿ 1,000 ಜರ್ಮನಿ ಸೈನಿಕರನ್ನು ಕೈಸೆರೆ ಹಿಡಿದುಕೊಂಡರು. ಬಲಪಾರ್ಶ್ವದಲ್ಲಿದ್ದ ಶತ್ರು ಸೈನ್ಯಗಳೂ ಕ್ರಮೇಣ ಹಿಮ್ಮೆಟ್ಟಿ ಹೋಗುತ್ತಿರುವವು.

ಬ್ರಿಟಿಷ್ ವಿಮಾನ ಯಂತ್ರಕಾರರು ಜರ್ಮನಿಯ ವಿಮಾನ ಯಂತ್ರಕಾರರನ್ನು ಸಂಧಿಸಿ ಅಂತರಿಕ್ಷದಲ್ಲಿ ಯುದ್ಧಮಾಡಿದ್ದರಲ್ಲಿ ತುಂಬಾ ಗಟ್ಟಿತನವನ್ನು ತೋರಿಸಿರುತ್ತಾರೆ. ಬ್ರಿಟಿಷ್ ವಿಮಾನಕಾರರು ಅಂತರಿಕ್ಷದಲ್ಲಿ ಸಂಚರಿಸಿ ಶತ್ರುಗಳ ಸ್ಥಾನ ಸ್ಥಿತಿಗತಿಗಳನ್ನು ತಿಳಿದುಬಂದು ಬ್ರಿಟಿಷ್ ಸೈನ್ಯಾಧಿಪತಿಗಳಿಗೆ ವರ್ತಮಾನ ಕೊಟ್ಟಿದ್ದರಿಂದ ಯುದ್ಧಕಾರ್ಯಗಳಿಗೆ ತುಂಬಾ ಸಹಾಯವಾಗಿದೆ. ಜರ್ಮನಿ ಕಡೆಯ ವಿಮಾನ ಯಂತ್ರಗಳಿಗೆ ಪೆಟ್ರೋಲ್ ಎಂಬ ದ್ರಾವಕ ಒದಗದೆ ಅವು ಆಕಾಶದಲ್ಲಿ ವಿಶೇಷವಾಗಿ ಸಂಚರಿಸುತ್ತಾ ಇಲ್ಲ.

ಸದ್ಯದಲ್ಲಿ ಕದನಗಳು ಇನ್ನೂ ಕೊನೆಗಾಣದೆ ಹೋಗಿದ್ದರೂ ಫ್ರಾನ್ಸಿನೊಳಗೆ ಬ್ರಿಟಿಷ್ ಮತ್ತು ಫ್ರೆಂಚ್ ಸೈನ್ಯಗಳ ಕಾರುಬಾರುಗಳು ತೃಪ್ತಿಕರವಾಗಿರುತ್ತವೆ.

ಬೆಲ್ಜಿಯಂನಲ್ಲಿ.

ಬೆಲ್ಜಿಯಂ ಸೈನಿಕರು ಆಂಟ್ವರ್ಪ್ ಕೋಟೆಯೊಳಗಿಂದ ಹೊರಕ್ಕೆ ಬಂದು ಜರ್ಮನಿಯವರ ಮೇಲೆ ಬಿದ್ದು ಕಡಿದಾಡುತ್ತಲೂ ತುಂಬಾ ನಷ್ಟಪಡಿಸುತ್ತಲೂ ಬಂದು, ಮತ್ತೆ ಹಿಂತಿರುಗಿ ಕೋಟೆಯೊಳಕ್ಕೆ ಸೇರಿಕೊಂಡರು ಜರ್ಮನಿಯವರು ತ್ರಿಮೋಂಡ್ ಎಂಬ ಇನ್ನೊಂದು ಬೆಲ್ಜಿಯಂ ನಗರವನ್ನು ಪಾಳುಕೆಡವಿದರು. ಜರ್ಮನಿಯವರು ಕ್ರೂರಕೃತ್ಯಗಳಿಂದ ಬೆಲ್ಜಿಯಮ್ ಪ್ರಜೆಗಳನ್ನು ನಾನಾಬಗೆಯ ಕಷ್ಟನಷ್ಟಗಳಿಗೆ ಗುರಿಪಡಿಸುತ್ತಿರುವುದನ್ನು ನೋಡಿ ನಾಗರಿಕರೆಲ್ಲಾ ಅಸಹ್ಯವನ್ನೂ ಆಗ್ರಹವನ್ನೂ ಪ್ರಕಾಶಮಾಡುತ್ತಿದಾರೆ


ಯುದ್ಧದ ನಕ್ಷೆ
ಚಂದಾದಾರರಿಗೆ ಮಾತ್ರ ಉಚಿತ;
ಇತರರಿಗೆ ಕ್ರಯ ೬ ಕಾಸು.
ಉತ್ತರ ಕಡಲು
ಬಾಲ್ಟಿಕ್ ಕಡಲು
ಇಂಗ್ಲಿಷ್ ಕಡಲು
ಮೆಡಿಟರೇನ್ಯನ್ ಕಡಲು
ಲಂಡನ್
ಪಾರಿಸ್
ಬ್ರಸೆಲ್ಸ್
ಬರ್ಲಿನ್
ವಾರ್ಸಾ
ವಿಯೆನ್ನ
ಬುಡಪೆಸ್ಟ್
ಬೆಲ್ಗ್ರೇಡ್
ಬೇರ್ನ್
ಸ್ವಿಟ್ಜರ್ಲೆಂಡ್
ರಷ್ಯ
ರುಮೇನಿಯ

ಫ್ರೆಂಚರ ಕೆಲವು ಸವಾರ್ ಸೈನಿಕರು ಅಂದರೆ ಸುಮಾರು 1,000 ಮಂದಿ ಬೆಲ್ಜಿಯಮಿನ ಪಶ್ಚಿಮ ಭಾಗದಲ್ಲಿ 3,000 ಜರ್ಮನಿ ಸವಾರರ ಮೇಲೆ ನುಗ್ಗಿ ಕಾದಾಡಿ ಸೋಲಿಸಿ 120 ಮಂದಿಯನ್ನು ಕೈಸೆರೆ ಹಿಡಿದುಕೊಂಡು ಬಂದರು; ಅಲ್ಲದೆ ಶತ್ರುಗಳ ಕೆಲವು ಫಿರಂಗಿಗಳನ್ನೂ ಕಿತ್ತು ತಂದರು. ಫ್ರೆಂಚರ ಕಡೆ 30 ಮಂದಿ ಮಾತ್ರ ನಷ್ಟಪಟ್ಟರು.

ಜರ್ಮನಿಯವರು ಬೆಲ್ಜಿಯಂ ಪ್ರಜೆಗಳಿಂದ ಒಟ್ಟು 43,50,00,000 ರೂಪಾಯಿ ದಂಡವನ್ನು ತೆರಬೇಕೆಂದು ಕೇಳಿರುವಂತೆ ಗೊತ್ತಾಗಿದೆ.

ಆಸ್ಟ್ರಿಯಾ ಮತ್ತು ರಷ್ಯಾ.

ರಷ್ಯಾದವರು ಆಸ್ಟ್ರಿಯಾದವರನ್ನು ಅಟ್ಟಿಸಿಕೊಂಡೇ ನುಗ್ಗಿಬರುತ್ತಿದ್ದಾರೆ. ಜರ್ಮನಿಯವರು ಹೋಗಿ ಆಸ್ಟ್ರಿಯಾದವರಿಗೆ ಸಹಾಯಮಾಡಿದಾಗ್ಯೂ ಅವರು ಹಿಮ್ಮೆಟ್ಟಿ ಹೋಗುವುದನ್ನು ತಡೆಯಲಾರದೆ ಹೋದರು. ಜರ್ಮನಿಯವರು ಆಸ್ಟ್ರಿಯದವರ ಮೇಲೆ ಆಕ್ಷೇಪಣೆ ಮಾಡಿ ಅವರು ತಮ್ಮ ಸಹಾಯವನ್ನು ಪಡೆಯಬೇಕೆಂದು ಅಪೇಕ್ಷಿಸಿದರೆಂದೂ, ಬಳಿಕ ಅವರು ತಮ್ಮನ್ನು ಅಸಡ್ಡೆಮಾಡಿಬಿಟ್ಟರೆಂದೂ ಹೇಳುತ್ತಾರೆ. ಆಸ್ಟ್ರಿಯದವರ ಕಡೆ ಗಾಯಪಟ್ಟವರೂ ಹತರಾದವರೂ ಒಟ್ಟು 2,50,000 ಮಂದಿ ಎಂದೂ, 1,00,000 ಸೈನಿಕರು ಕೈಸೆರೆಯಾದರೆಂದೂ, 400 ಫಿರಂಗಿಗಳನ್ನು ಕಳೆದುಕೊಂಡರೆಂದೂ; ಜರ್ಮನಿಯವರಲ್ಲಿ 5,000 ಸೈನಿಕರು ಕೈಸೆರೆ ಹಿಡಿಯಲ್ಪಟ್ಟರೆಂದೂ ಹೇಳಲಾಗಿದೆ.

ರಷ್ಯಾದವರು ಪಾಸೆನ್ [ನಮ್ಮ ನಕ್ಷೆ ನೋಡಿ] ಇನ ಕಡೆ ನುಗ್ಗಿಹೋಗುತ್ತಿರುವರು; ಇವರು ಆಸ್ಟ್ರಿಯಾದವರನ್ನೂ ಜರ್ಮನಿಯವರನ್ನೂ ಹಿಂದು ಹಿಂದಕ್ಕೆ ಅಟ್ಟುತ್ತಿದ್ದಾರೆ. ಅವರು ಬೇನೋರ್ವಿಚ್ ಎಂಬದನ್ನು ಕದನವಿಲ್ಲದೇನೇ ಸ್ವಾಧೀನಪಡಿಸಿಕೊಂಡರು. ಅದು ರೂಮೇನಿಯದ [ನಮ್ಮ ನಕ್ಷೆ ನೋಡಿ] ಎಲ್ಲೆಕಟ್ಟಿನ ಬಳಿ ಇದೆ.

ಆಸ್ಟ್ರಿಯಾದವರು ಓಡಿಹೋಗುತ್ತಿದ್ದಾಗ ರಷ್ಯಾದವರು ಜರ್ಮನ್ 30 ಫಿರಂಗಿಗಳನ್ನೂ, ಅಪಾರವಾದ ಯುದ್ಧಸಾಮಗ್ರಿಗಳನ್ನೂ ಕಿತ್ತುಕೊಂಡದ್ದಲ್ಲದೆ 5,000 ಸೈನಿಕರನ್ನು ಕೈಸೆರೆ ಹಿಡಿದಿರುತ್ತಾರೆ. ಆಸ್ಟ್ರಿಯಾದವರು ಇನ್ನೊಂದು ಸಲ ಹೊಸ ಸೈನ್ಯವನ್ನು ಕೂಡಿಸಿ ತರಬಹುದು; ಆದರೆ ಈ ಸೈನ್ಯವು ರಷ್ಯಾದವರು ನುಗ್ಗಿ ಬರುತ್ತಿರುವುದನ್ನು ಅಡ್ಡಿಮಾಡೀತೆನ್ನುವುದು ಅನುಮಾನವಾಗಿದೆ.

ರಷ್ಯಾ ಮತ್ತು ಜರ್ಮನಿ.

ಪೂರ್ವಪ್ರಷ್ಯಾದಲ್ಲಿ ರಷ್ಯಾದವರು ಹಿಮ್ಮೆಟ್ಟಿಹೋಗುತ್ತಲೇ ಜರ್ಮನಿ ಸೈನಿಕರ ಮೇಲೆ ಯುದ್ಧಮಾಡುತ್ತಿದೆ. ಅವರು ಎಲ್ಲಿನ ತನಕ ಹಿಮ್ಮೆಟ್ಟಿಹೋಗಿದಾರೆಯೋ ತಿಳಿಯಲಿಲ್ಲ. ಬಹಳ ಯುದ್ಧವಾಯಿತೆಂದೂ, ಈಗ ರಷ್ಯಾದವರು ಜರ್ಮನಿಯವರಿಗೆ ನಿಂತು ಯುದ್ಧಕೊಡುವಂಥಾ ಸ್ಥಾನವನ್ನು ಸಂಪಾದಿಕೊಂಡಿದಾರೆಂದೂ ತಂತೀ ವರ್ತಮಾನಗಳು ತಿಳಿಸುವವು.

ಸರ್ವಿಯಾ ಮತ್ತು ಆಸ್ಟ್ರಿಯಾ.

ಸರ್ವಿಯ ಮತ್ತು ಮಾಂಟಿನೀಗ್ರೊ ಸೈನ್ಯಗಳು ಬೋಸ್ನಿಯಾದೊಳಕ್ಕೆ ನುಗ್ಗಿ ಹೋಗುತ್ತಾ, ಹಲವು ಸ್ಥಳಗಳನ್ನು ಆಕ್ರಮಿಸಿಕೊಂಡಿವೆ ಎಂದು ಗೊತ್ತಾಗಿದೆ. ಈ ಸೈನಿಕರು ಬೋಸ್ನಿಯಾ ರಾಜಧಾನಿಯಾದ ಸೆರಜಿವೊ [ನಮ್ಮ ನಕ್ಷೆ ನೋಡಿ] ಪಟ್ಟಣವನ್ನು ಕಳೆದ ಭಾನುವಾರ ತಲಪುವವರಾಗಿದ್ದರು. ಅಲ್ಲಿನ ಪ್ರಜೆಗಳು ಈ ಸೈನಿಕರ ಆಗಮನವನ್ನು ಬಹು ಸಂತೋಷದಿಂದ ಎದುರುನೋಡುತ್ತಾರೆಂದು ಹೇಳಲಾಗಿದೆ.

ಸರ್ವಿಯಾದವರು ಸಾಬಕ್ ಹತ್ತಿರದಲ್ಲಿ ದೊಡ್ಡ ಕದನಮಾಡಿ 30,000 ಆಸ್ಟ್ರಿಯಾದವರನ್ನು ಸೋಲಿಸಿರುತ್ತಾರೆ. ಸರ್ವಿಯದವರಲ್ಲಿ 1,50,000 ಸೈನ್ಯವಿದೆ. ಈಗ ಈ ಸೈನ್ಯವು ಬುಡಪೆಸ್ತ್ [ನಮ್ಮ ನಕ್ಷೆಯನ್ನು ನೋಡಿ] ಎಂಬ ಪಟ್ಟಣದ ಕಡೆ ನುಗ್ಗಿ ಹೋಗುತ್ತಿದೆ.

ಜಪಾನ್ ಮತ್ತು ಜರ್ಮನಿ.

ಜಪಾನ್‌ನವರು ಚೀನಾದಲ್ಲಿ ತಮ್ಮ ಸೈನ್ಯವನ್ನು ತಂದಿಳಿಸಿದರು. ಈ ಸೈನ್ಯವು ಜರ್ಮನಿಯವರ ಸ್ವಾಸ್ಥ್ಯದಲ್ಲಿ ನುಗ್ಗಿಹೋಗುತ್ತಿದೆ. ಕ್ಸಿಮೊ ಎಂಬ ಪಟ್ಟಣವೂ, ಕಿಯವ್‌ಚಾ ಎಂಬ ರೈಲ್ವೆ ಸ್ಟೇಷನೂ ಜಪಾನ್ ಸೈನ್ಯದ ವಶವಾದವು. ಈ ಸೈನಿಕರು ಜರ್ಮನಿಯವರ ಒಂದು ಬಲವಾದ ಸ್ಥಳಕ್ಕೆ ಮುತ್ತಿಗೆ ಹಾಕಿದರು. ಜರ್ಮನಿಯವರು ಅನೇಕ ಸಾಮಗ್ರಿಗಳನ್ನು ಬಿಟ್ಟು ಆ ಸ್ಥಳದಿಂದ ಹೊರಟುಹೋಗಿರುತ್ತಾರೆ.

ಜಪಾನ್‌ನವರು ಜರ್ಮನಿಯವರ ಸ್ವಾಸ್ಥ್ಯದ ಮೇಲೆ ನುಗ್ಗಿಹೋಗುವುದಕ್ಕೆ ಮುಂಚೆ ಅವರು ತಮ್ಮ ಸೈನ್ಯವನ್ನು ಚೀನಾ ದೇಶದಲ್ಲಿ ಇಳಿಸಿರಬಹುದು. ಇದನ್ನು ನೋಡಿ ಅಲ್ಲಿರುವ ಜರ್ಮನೀ ರಾಯಭಾರಿಯು ಚೀನೆಯವರಿಗೆ ಈ ಯುದ್ಧ ಮುಕ್ತಾಯವಾದ ಮೇಲೆ ಚೀನೆಯವರು ಜರ್ಮನಿಗೆ ತಕ್ಕ ಪರಿಹಾರವನ್ನು ಕೊಡಬೇಕಾಗುತ್ತದೆ ಎಂದು ಈಗಲೇ ಎಚ್ಚರಿಕೆ ಹೇಳಿರುತ್ತಾನೆ. ಈ ಹೆದರಿಕೆಯು ಬರೀ ಪಟಾಟೋಪದ ಮಾತಲ್ಲದೆ ಇನ್ನೇನೂ ಅಲ್ಲವೆಂದು ಹೇಳಬಹುದಾಗಿದೆ.

ಆಫ್ರಿಕಾದಲ್ಲಿ.

ದಕ್ಷಿಣ ಆಫ್ರಿಕಾದಲ್ಲಿ ಬ್ರಿಟಿಷ್ ಮತ್ತು ಜರ್ಮನಿ ಸ್ವಾಸ್ಥ್ಯಗಳ ಮಧ್ಯೆ ಆರೆಂಜ್ ಎಂಬ ನದಿ ಹರಿಯುವುದು. ಒಂದು ಸಣ್ಣ ಬ್ರಿಟಿಷ್ ಸೈನ್ಯವು ಈ ನದಿಯನ್ನು ದಾಟಿಹೋಗಿ ಒಂದು ಪ್ರಾಮುಖ್ಯವಾದ ಸ್ಥಾನವನ್ನು ಆಕ್ರಮಿಸಿಕೊಂಡಿರುತ್ತದೆ. ಜರ್ಮನಿಯವರು 250 ಸೈನ್ಯವನ್ನು 3 ಫಿರಂಗಿಗಳ ಸಮೇತ ಬ್ರಿಟಿಷ್ ಸ್ವಾಸ್ಥ್ಯದೊಳಕ್ಕೆ ಕಳುಹಿಸಿದರು. ಇವರು ಹೋಗಿ ಒಂದು ಪೋಲೀಸ್ ಸ್ಟೇಷನ್‌ಗೆ ಮುತ್ತಿಗೆ ಹಾಕಿದರು. ಆ ಸ್ಟೇಷನ್‌ನಲ್ಲಿದ್ದ 5 ಮಂದಿ ಕಾವಲುಗಾರರು ಬಹು ಪರಾಕ್ರಮದಿಂದ ಕಾದಾಡಿದ್ದರಲ್ಲಿ ಒಬ್ಬನು ಹತನಾದನು, ಇನ್ನೊಬ್ಬನಿಗೆ ಗಾಯವಾಯಿತು; ತೋಟಾಗಳೆಲ್ಲಾ ಮುಗಿದುಹೋದದ್ದರಿಂದ ಉಳಿದ 3 ಮಂದಿ ಕೈಸೆರೆಯಾದರು. ಆ ಸ್ಟೇಷನು ಜರ್ಮನಿಯವರ ಸ್ವಾಧೀನವಾಯಿತು.

ದಕ್ಷಿಣ ಆಫ್ರಿಕಾದಲ್ಲಿ ಯುದ್ಧಭೂಮಿಯನ್ನು ಕುರಿತು ಪ್ರಯಾಣಮಾಡುತ್ತಿದ್ದ ಬೋಅರ್ ದಳಪತಿಯಾದ ಜನರಲ್ ಡಿಲಾರಿಯು ಅಚಾತುರ್ಯದಿಂದ ಕೊಲ್ಲಲ್ಪಟ್ಟನು. ಪೋಲೀಸಿನವರು ದರೋಡೆ ಕಳ್ಳರನ್ನು ಹಿಡಿಯಬೇಕೆಂದು ಹೊಂಚುಹಾಕಿಕೊಂಡಿದ್ದರು. ಅವರ ಎದುರಿನಲ್ಲಿ ಜನರಲ್ ಡಿಲಾರಿಯು ಮೋಟರಿನಲ್ಲಿ ಹಾದುಹೋಗುತ್ತಿದ್ದಾಗ ಅವರು ಗಾಡಿಯನ್ನು ನಿಲ್ಲಿಸುವಂತೆ ಆಜ್ಞೆಮಾಡಿದರು. ಜನರಲ್ ಡಿಲಾರಿಯು ಗಾಡಿಯನ್ನು ನಿಲ್ಲಿಸದೆ ಹೋದನು. ಕೂಡಲೇ ಪೋಲೀಸಿನವರು ಗುಂಡು ಹೊಡೆದು ಆ ದಳಪತಿಯನ್ನು ಕೊಂದುಬಿಟ್ಟರು. ಆ ಬಳಿಕ ಅವರು ಮಾಡಿದ ಅಚಾತುರ್ಯ ಕೃತ್ಯವು ಗೊತ್ತಾಯಿತು.

ಪೂರ್ವ ಆಫ್ರಿಕಾದಲ್ಲಿ ಬ್ರಿಟಿಷರು ಜರ್ಮನಿಯವರ ಸ್ವಾಸ್ಥ್ಯದೊಳಕ್ಕೆ ನುಗ್ಗಿ ಕೆಲವು ದೂರ ಹೋಗಿದಾರೆ. ಅವರಿಗೆ ಶತ್ರುಗಳು ಕಣ್ಣಿಗೆ ಬೀಳಲೇ ಇಲ್ಲ. ನಯೂಜಿಲಂಡ್ ಎಂಬಲ್ಲಿ 29ನೇ ಪಂಜಾಬಿ ರೆಜಿಮೆಂಟಿನಲ್ಲಿದ್ದ ಜಮದಾರ್ ಷೇರ್ ಬಜ್ ಎಂಬಾತನು ಕೊಲೆಯಾದನೆಂದು ಒಂದು ವರ್ತಮಾನವು ತಿಳಿಸುತ್ತವೆ.

ಸಮುದ್ರದ ಮೇಲೆ.

ಬ್ರಿಟಿಷರ ಸಬ್‌ಮೆರೀನ್ ಎಂಬ ಹಡಗು ಶತ್ರುಗಳಿಗೆ ಕಾಣದಂತೆ ಜರ್ಮನಿಯ ಸಮುದ್ರ ತೀರದ ಬಳಿಗೆ ಹೋಗಿ ಎರಡು ಟಾರ್ಪಿಡೋ ಎಂಬ ನೀರಿನೊಳಗೆ ಓಡುವ ದೋಣಿಗಳನ್ನು ಹೇಲ ಎಂಬ ಜರ್ಮನಿ ಯುದ್ಧದ ಹಡಗಿನ ತಳಕ್ಕೆ ಬಿಟ್ಟಿತು. ಹೇಲ ಎಂಬ ಜಹಜು ಮುಳುಗಿಹೋಯಿತು; ಆದರೆ ಅದರೊಳಗಿದ್ದವರಲ್ಲಿ ಅನೇಕರು ಬದುಕಿಕೊಂಡರು.

ದಕ್ಷಿಣ ಅಮೇರಿಕದ ಸಮುದ್ರತೀರದಿಂದ ಸ್ವಲ್ಪ ದೂರದಲ್ಲಿ ಬ್ರಿಟಿಷ್ ವರ್ತಕರ ಒಂದು ಜಹಜು ಜರ್ಮನಿ ವರ್ತಕರ ಜಹಜನ್ನು ಸಂಧಿಸಿ ಸುಮಾರು ಒಂದೂ ಮುಕ್ಕಾಲು ಗಂಟೆಯ ಹೊತ್ತು ಕದನಮಾಡಿ ಕಡೆಗೆ ಅದನ್ನು ಮುಳುಗಿಸಿಬಿಟ್ಟಿತು. ಅದರೊಳಗಿದ್ದವರನ್ನು ಬದುಕಿಸಿದರು.

ಯುಮ್‌ಡೆನ್ ಎಂಬ ಒಂದು ಜರ್ಮನಿ ಜಹಜು ಬಂಗಾಳಕೊಲ್ಲಿಗೆ ಬಂದು ಕೆಲವು ದಿನಗಳಿಂದ ಬಹಳ ನಷ್ಟವನ್ನುಂಟುಮಾಡಿರುತ್ತದೆ. ಬ್ರಿಟಿಷರ ಆರೇಳು ವ್ಯಾಪಾರದ ಹಡಗುಗಳನ್ನು ಅದು ಹಿಡಿದು ಮುಳುಗಿಸಿಬಿಟ್ಟಿತು. ಅವುಗಳೊಳಗಿದ್ದ ಜನರನ್ನು ಹೊರಕ್ಕೆ ಇನ್ನೊಂದು ಜಹಜಿಗೆ ಸಾಗಿಸಿ ಪ್ರೀತಿಯಿಂದ ಬದುಕಿಸಿದರು. ಬಳಿಕ ಅವುಗಳಿಗೆ ಗುಂಡುಹೊಡೆದು ಮುಳುಗಿಸಿಬಿಟ್ಟರು. ಅವರೆಲ್ಲಾ ಈಗ ಸುರಕ್ಷಿತವಾಗಿ ಕಲ್ಕತ್ತೆಗೆ ಬಂದಿರುತ್ತಾರೆ. ಇನ್ನು ಕೆಲವರನ್ನು ಒಂದು ಸ್ವೀಡನ್ ಹಡಗಿನಲ್ಲಿ ಕೂರಿಸಿ ರಂಗೂನ್ ಪಟ್ಟಣಕ್ಕೆ ರವಾನೆ ಮಾಡಿದರು. ಈ ಯುಮ್‌ಡೆನ್ ಎಂಬ ಶತ್ರುಗಳ ಜಹಜು ಬ್ರಿಟಿಷ್ ಜಹಜುಗಳಿಗೆ ಸಿಕ್ಕದೆ ಹೇಗೆ ತಪ್ಪಿಸಿಕೊಂಡು ಬಂದಿದೆಯೋ ಹೇಳುವುದು ಕಷ್ಟ. ಅದನ್ನು ಬೇಗನೆ ಹಿಡಿದು ಅದರ ಹಾವಳಿಯನ್ನು ನಿಲ್ಲಿಸುತ್ತಾರೆಂದು ನಿರೀಕ್ಷಿಸುವೆವು.

ಪೂರ್ವ ಆಫ್ರಿಕದಲ್ಲಿ ರಿಪೇರಿ ಆಗುತ್ತಿದ್ದ ಪೆಗಸಸ್ ಎಂಬ ಒಂದು ಇಂಗ್ಲಿಷ್ ಯುದ್ಧದ ಹಡಗನ್ನು ಒಂದು ಜರ್ಮನಿಯ ಯುದ್ಧದ ಹಡಗು ನಾಶಮಾಡಿತು.

ಬ್ರಿಟಿಷರ ಸಬ್‌ಮೆರೀನ್ ಎಂಬ ಒಂದು ಹಡಗು ಆಸ್ಟ್ರೇಲಿಯದ ಹತ್ತಿರ ಮುಳುಗಿಹೋಯಿತು; ಅದರಲ್ಲಿದ್ದ 35 ಜನರು ನೀರಿನ ಪಾಲಾದರು. ಆಕಸ್ಮಿಕವಾಗಿ ಅದಕ್ಕೆ ಏನೋ ಕೆಡುಕು ಸಂಭವಿಸಿ ಮುಳುಗಿಹೋಗಿರಬೇಕೆಂದು ಕಾಣುತ್ತದೆ.

ಕೆಲವು ದಿನಗಳ ಹಿಂದೆ ಜರ್ಮನಿಯ ಕೆಲವು ಟಾರ್ಪಿಡೋ ಮತ್ತು ಸಬ್‌ಮೆರೀನ್ ಎಂಬ ಹಡಗುಗಳು ಕೆಟ್ಟುಹೋಗಿ ಕೀಲ್ ಎಂಬ ತೀರಪಟ್ಟಣಕ್ಕೆ ವಾಪಸು ಬಂದವೆಂದು ಹೇಳಿದ್ದರು. ಇದಕ್ಕೆ ಕಾರಣವನ್ನು ತಿಳಿಸಿರಲಿಲ್ಲ; ಈಗ ಹೊರಪಟ್ಟಿದೆ. ಈ ಹಡಗುಗಳು ಪರಸ್ಪರ ಶತ್ರುಗಳ ಹಡಗನ್ನು ಸಂಧಿಸಿದಂತೆ ಭ್ರಾಂತಿಹೊಂದಿ ತಮ್ಮ ತಮ್ಮಲ್ಲೇ ಕದನಗಳನ್ನು ನಡಿಸಿ ಒಂದರ ಮೇಲೊಂದು ಫಿರಂಗಿಗಳನ್ನು ಹಾಕಿ ಕಾದಾಡಿದವು. ಇದರಲ್ಲಿ ಹಲವು ಹಡಗುಗಳಿಗೆ ಸ್ವಲ್ಪ ನಷ್ಟವಾಯಿತು.

ಬ್ರಿಟಿಷರ ಒಂದು ಹಡಗು ಇಂಗ್ಲೆಂಡಿನ ದಕ್ಷಿಣಭಾಗದ ಸಮುದ್ರತೀರದಲ್ಲಿ ಸುಂಟರಗಾಳಿಗೆ ಸಿಕ್ಕಿ ಮುಳುಗಿಹೋಯಿತು. ಅದರಲ್ಲಿದ್ದ 21 ಮಂದಿ ಸಮುದ್ರದ ಪಾಲಾದರು. ಅದು ಪೂರ್ವಕಾಲದ ಹಳೇ ಹಡಗೆಂದು ತಿಳಿಯುತ್ತದೆ.

ಸಮುದ್ರಮಾರ್ಗವು ಈಚೆಗೆ ಸುರಕ್ಷಿತವಾದದ್ದರಿಂದ ಡೆನ್ಮಾರ್ಕಿನ ಹಡಗುಗಳು ಆಹಾರಪದಾರ್ಥಗಳನ್ನು ಇಂಗ್ಲೆಂಡಿಗೆ ತರುತ್ತಲಿವೆ. ಬಹುಶಃ ಉತ್ತರಕಡಲಿನಲ್ಲಿ ಇನ್ನೂ ಮೈನ್ ಎಂಬ ಸಿಡಿಮದ್ದಿನ ಗುಂಡುಗಳು ಅಲ್ಲಲ್ಲಿ ಇರಬಹುದೆಂದು ತೋರುತ್ತದೆ.

ಗ್ರೇಟ್ ಬ್ರಿಟನ್‌ನಲ್ಲಿ ವರ್ತಮಾನಗಳು.

ನಮ್ಮ ಜಾರ್ಜ್ ದೊರೆಯವರು ದಯಮಾಡಿ ಇಂಗ್ಲೀಷ್ ಆಸ್ಪತ್ರೆಗಳೊಳಗೆ ಚಿಕಿತ್ಸೆಹೊಂದುತ್ತಿರುವ ಗಾಯಪಟ್ಟ ಜರ್ಮನೀ ಸೈನಿಕರ ಯೋಗಕ್ಷೇಮಗಳನ್ನು ವಿಚಾರಿಸಿಕೊಂಡು ಬಂದರು. ಇಂಗ್ಲಿಷ್ ಆಸ್ಪತ್ರೆಗಳೊಳಗಿರುವ ಗಾಯಪಟ್ಟ ಇಂಗ್ಲಿಷ್ ಸೈನಿಕರಿಗೆ ಯಾವ ರೀತಿ ಚಿಕಿತ್ಸೆ ಶೈತ್ಯೋಪಚಾರಗಳು ನಡೆಯುವವೋ ಗಾಯಪಟ್ಟ ಜರ್ಮನೀ ಸೈನಿಕರಿಗೂ ಆ ಆಸ್ಪತ್ರೆಗಳಲ್ಲಿ ಅದೇ ರೀತಿ ಚಿಕಿತ್ಸೆ ಶೈತ್ಯೋಪಚಾರಗಳನ್ನು ಮಾಡುತ್ತಿದಾರೆ. ಇಂಗ್ಲಿಷರು ಈ ರೀತಿಯಾಗಿ ಶತ್ರುಸೈನಿಕರನ್ನು ಕೂಡ ನಿಷ್ಪಕ್ಷವಾಗಿಯೂ ಅನಿಕರದಿಂದಲೂ ಆರೈಕೆ ಮಾಡುತ್ತಿರುವುದನ್ನು ನೋಡಿ ಜರ್ಮನಿಯವರು ತುಂಬಾ ಸಂತೋಷಪಡುವರು. ಒಂದೇ ದಿನ ಬ್ರಿಟಿಷರು 1,600 ಮಂದೀ ಜರ್ಮನಿ ಸಿಪಾಯಿಗಳನ್ನು ಇಂಗ್ಲೆಂಡಿಗೆ ಹಿಡಿದುತಂದಿದಾರೆ.

ಯುವರಾಜರಾದ ಪ್ರಿನ್ಸ್ ಆಫ್ ವೇಲ್ಸ್‌ರವರು ಯುದ್ಧಭೂಮಿಗೆ ಹೋಗಬೇಕೆಂದು ತುಂಬಾ ಉತ್ಸಾಹವುಳ್ಳವರಾಗಿ ಲಾರ್ಡ್ ಕಿಚ್ನರ್ ಯವರ ಅಪ್ಪಣೆಯನ್ನು ಕೇಳಿದರು. ಲಾರ್ಡ್ ಕಿಚ್ನರ್ ಯವರು ಅವರು ಇನ್ನೂ ಸೈನ್ಯದಲ್ಲಿ ಸರಿಯಾಗಿ ತರಪೇತಾಗಿಲ್ಲ, ತರಪೇತಾಗುವುದಕ್ಕೆ ಮುಂಚೆ ಯುದ್ಧಕ್ಕೆ ಹೋಗುವುದು ತರವಲ್ಲವೆಂಬದಾಗಿ ಹೇಳಿ ನಿಲ್ಲಿಸಿಬಿಟ್ಟರು.

ಗ್ರೇಟ್ ಬ್ರಿಟನ್‌ನಲ್ಲಿ ಪ್ರಜೆಗಳು ಹೇರಳವಾಗಿ ಬೇಗಬೇಗನೆ ಸೈನ್ಯಕ್ಕೆ ಸೇರಬೇಕೆಂದು ಆತುರಪಟ್ಟು ಬರುತ್ತಿರುವುದನ್ನು ನೋಡಿ ಲಾರ್ಡ್ ಕಿಚ್ನರ್ ಯವರು ಹೊಸದಾಗಿ ಇನ್ನೂ ನಾಲ್ಕು ಸೈನ್ಯಗಳನ್ನು ಕೂಡಿಸುತ್ತಿದಾರೆ. ಸಮಸ್ತ ತರಗತಿಗಳ ಪ್ರಜೆಗಳೂ ವಿಶೇಷ ಉತ್ಸಾಹಪಡುತ್ತಾ, ಈ ಯುದ್ಧದಲ್ಲಿ ಸಂಪೂರ್ಣವಾದ ಜಯಪ್ರದವನ್ನು ಹೊಂದಲೇ ಬೇಕೆಂದು ನಿಶ್ಚಯಮಾಡಿಕೊಂಡಿದಾರೆ. ಹಿಂದುಸ್ಥಾನದ ವೈಸ್‌ರಾಯರಾಗಿದ್ದ ಲಾರ್ಡ್ ಕರ್ಜನ್ ರವರು ಎದುರು ಪಕ್ಷಿಗೆ ಸೇರಿದ ಶಿಲ್ಪಿಗಾರನಾದ ಒಬ್ಬ ಪಾರ್ಲಿಮೆಂಟ್ ಮೆಂಬರನ್ನು ಅಪ್ಪಿಕೊಂಡರೆಂದು ತಿಳಿಯುತ್ತದೆ. ಇದರಿಂದ ಗ್ರೇಟ್ ಬ್ರಿಟನ್‌ನಲ್ಲಿ ಇತರಕ್ಕೆ ಎಲ್ಲಾ ಪಂಗಡಗಳವರೂ ಈ ಯುದ್ಧದ ವಿಷಯದಲ್ಲಿ ಜಯಪ್ರದ ಹೊಂದಬೇಕೆಂಬ ಒಂದೇ ಸಂಕಲ್ಪವುಳ್ಳವರಾಗಿದಾರೆನ್ನುವುದು ಸ್ಪಷ್ಟವಾಗುತ್ತದೆ.

ಹಿಂದುಸ್ಥಾನದಿಂದ ಯುದ್ಧಭೂಮಿಗೆ ಕಳುಹಿಸಿರುವ ಸೈನ್ಯದ ಸಮಸ್ತ ಖರ್ಚನ್ನೂ ಹಿಂದುಸ್ಥಾನದ ಪ್ರಜೆಗಳೇ ವಹಿಸಿಕೊಳ್ಳುತ್ತಾರೆಂಬ ಸುದ್ದಿಯನ್ನು ಕೇಳಿ ಬ್ರಿಟಿಷ್ ಪಾರ್ಲಿಮೆಂಟಿನವರು ಮೆಚ್ಚಿಕೊಂಡು ಅದಕ್ಕಾಗಿ ತಮ್ಮ ಕೃತಜ್ಞತೆಯನ್ನು ಪ್ರಕಾಶಪಡಿಸಿದಾರೆ. ಇಂಗ್ಲೆಂಡಿನಲ್ಲಿರುವ ಹಿಂದುಸ್ಥಾನದ ಪ್ರಜೆಗಳು ಸೇರಿ ಗಾಯಪಟ್ಟ ಸೈನಿಕರಿಗೆ ಚಿಕಿತ್ಸೆ ಶೈತ್ಯೋಪಚಾರಗಳನ್ನು ಮಾಡುತ್ತೇವೆಂದು ಒಪ್ಪಿಕೊಂಡಿದಾರೆ. ಹಿಂದುಸ್ಥಾನದಿಂದ ಹೋಗುವ ಸೈನ್ಯದ ಜೊತೆಗೆ ಅವರನ್ನು ಯುದ್ಧಭೂಮಿಗೆ ಕಳುಹಿಸಿಕೊಡುವಂತೆ ಸರ್ಕಾರದವರು ಒಪ್ಪಿಕೊಂಡರು. ಇದು ಇಂಗ್ಲೆಂಡಿನಲ್ಲಿರುವ ಹಿಂದುಸ್ಥಾನದವರಿಗೆಲ್ಲಾ ಪರಮ ಸಂತೋಷವನ್ನುಂಟುಮಾಡಿದೆ.

ಈಗ ಇಂಗ್ಲೆಂಡಿಗೂ ಫ್ರಾನ್ಸಿಗೂ ದಿನವಹಿ ಜಹಜುಗಳು ಹೋಗಿಬರುತ್ತಲಿವೆ. ಜರ್ಮನಿಯೊಳಗೆ ಬಗೆಬಗೆಯ ಸುಳ್ಳು ಕಥೆಗಳನ್ನು ಕಲ್ಪಿಸಿ, ಪ್ರಪಂಚದ ಎಲ್ಲಾ ಕಡೆಗಳಿಗೂ ಹರಡುತ್ತಿದಾರೆಂದು ವರ್ತಮಾನವಿದೆ.

ಹಿಂದುಸ್ಥಾನದಲ್ಲಿ.

ಹಿಂದುಸ್ಥಾನದಲ್ಲಿ ಪ್ರಜೆಗಳು ಸೈನಿಕರಿಗೂ ಗಾಯಪಟ್ಟವರಿಗೂ ಸಹಾಯಮಾಡುವುದಕ್ಕೆ ತುಂಬಾ ಉತ್ಸಾಹದಿಂದ ಪ್ರಯತ್ನಪಡುತ್ತಿದಾರೆ. ಮದರಾಸಿನಿಂದ ಒಂದು ಹಡಗನ್ನು ಆಸ್ಪತ್ರೆಯೋಪಾದಿಯಲ್ಲಿ ಎಲ್ಲಾ ಸಾಮಗ್ರಿಗಳನ್ನೂ ಇಟ್ಟು ಅಣಿಮಾಡಿ ಕಳುಹಿಸುವರು. ಮದರಾಸಿನಲ್ಲಿ ಗಣ್ಯತೆಯನ್ನು ಪಡೆದಿರುವ ಡಾಕ್ಟರ್ ನಾಯರ್ ಎಂಬ ದೊಡ್ಡ ಮನುಷ್ಯರು ಈ ಹಡಗಿನಲ್ಲಿ ವೈದ್ಯಮಾಡುವುದಕ್ಕೆ ಹೋಗುತ್ತೇನೆಂದು ಕೇಳಿಕೊಂಡದ್ದನ್ನು ಸರ್ಕಾರದವರು ಒಪ್ಪಿಕೊಂಡಿದಾರೆ. ಹಿಂದುಸ್ಥಾನದ ಎಲ್ಲಾ ಕಡೆಗಳಲ್ಲೂ ಸ್ತ್ರೀಯರು ಸೈನಿಕರಿಗೆ ಅವಶ್ಯವಾಗುವಂಥಾ ಬಟ್ಟೆಬರೆಗಳನ್ನು ಒದಗಿಸಿಕೊಡುವುದರಲ್ಲಿ ಉತ್ಸಾಹಪಡುತ್ತಿರುವರು.

ಕೆಲವು ಸ್ಥಳಗಳಲ್ಲಿ ಮಾತ್ರ ಆಹಾರ ಪದಾರ್ಥಗಳ ಧಾರಣೆ ಪ್ರಿಯವಾಗಿದೆ; ಇತರ ಕಡೆಗಳಲ್ಲೆಲ್ಲಾ ಧಾರಣೆಯನ್ನು ಇಳಿಸಿ ಬಿಟ್ಟಿದಾರೆ. ಚಿಂತೆಯಾಗಲಿ, ಗಾಬರಿಯಾಗಲಿ ನಮ್ಮ ದೇಶದಲ್ಲೆಲ್ಲೂ ಇಲ್ಲ; ಪ್ರಜೆಗಳು ತಮ್ಮ ತಮ್ಮ ನಿತ್ಯಗಟ್ಟಲೆಯ ಕೆಲಸಗಳನ್ನು ಮಾಡಿಕೊಂಡು ಬರುತ್ತಿದಾರೆ. ಆಮದು ರಫ್ತು ನಿಂತುಹೋಗಿರೋಣದರಿಂದ ಕೆಲವು ಕಡೆ ಪ್ರಜೆಗಳು ಕಷ್ಟಪಡುತ್ತಿರುವರು. ಆದರೆ ಈಗೀಗ ವ್ಯಾಪಾರವು ತಲೆಯೆತ್ತುತ್ತಿರುವುದು. ಇಂಥಾ ಸಮಯದಲ್ಲಿ ನಮ್ಮ ದೇಶದೊಳಗೆ ಬೇರೆಬೇರೆ ಕಸಬುಗಳು ಹುಟ್ಟಿ ಅಭಿವೃದ್ಧಿಗೆ ಬಂದರೆ ಎಷ್ಟೋ ಮೇಲಾದೀತು.

ಇಂಡಿಯಾ ದೇಶದ ವೃತ್ತಾಂತಗಳು.

ಹಿಂದುಸ್ಥಾನದಲ್ಲಿ ಸದ್ಯ ಪ್ಲೇಗ್ ಉಪದ್ರವ ಹಾವಳಿ ಸ್ವಲ್ಪ ತಡೆಯಾಗಿರುವಂತೆ ಕಾಣುತ್ತದೆ. ಕಳೆದ ತಾ. 5 ಕ್ಕೆ ಆಖೈರಾದ ವಾರದಲ್ಲಿ ಹಿಂದುಸ್ಥಾನದಲ್ಲೆಲ್ಲಾ ಈ ಉಪದ್ರವದಿಂದ ಒಟ್ಟು 632 ಮರಣಗಳಾದವು. ಬೇರೆ ಬೇರೆ ಅಧಿಪತ್ಯಗಳಲ್ಲಿ ಈ ಸಂಖ್ಯೆಯ ವಿವರ ಹ್ಯಾಗಂದರೆ—ಬೊಂಬಾಯಿ 306, ಮದರಾಸ್ 23, ಬಂಗಾಳ 1, ಬೇಹಾರ್ 7, ಸಂಯುಕ್ತ ಅಧಿಪತ್ಯಗಳು 26, ಪಂಜಾಬ್ 30, ಬರ್ಮಾ 60, ಮಧ್ಯ ಪ್ರಾಂತ್ಯಗಳು 8, ಮೈಸೂರು ಸೀಮೆ 98, ಹೈದರಾಬಾದ್ 68, ಮಧ್ಯ ಇಂಡಿಯ 134, ವಾಯುವ್ಯ ಸರಹದ್ದು ಪ್ರಾಂತ್ಯ 2.

•••

ಕಳೆದ ವಾರ ಬೊಂಬಾಯಿ ಪಟ್ಟಣದಲ್ಲೂ ಆ ಸುತ್ತುಮುತ್ತಲಲ್ಲೂ ಬಹು ವಿಶೇಷವಾಗಿ ಮಳೆ ಸುರಿದು ನಾನಾ ಬಗೆಯ ಕಷ್ಟನಷ್ಟಗಳಿಗೆ ಕಾರಣವಾಗಿದೆ. ಸಮುದ್ರತೀರದಲ್ಲಿ ನಿಂತಿದ್ದ ನಾಲ್ಕು ಹಡಗುಗಳು ಅಕಸ್ಮಾತ್ತಾಗಿ ಬೀಸಿದ ಸುಂಟರ ಗಾಳಿಗೆ ಸಿಕ್ಕಿ ಮುಳುಗಿಹೋದವು. ಆದರೆ ಅವುಗಳಲ್ಲಿದ್ದ ಜನರನ್ನು ಬದುಕಿಸಿದರು. ಐದು ದಿನಗಳ ತನಕ ತಡೆಬಡೆಯಿಲ್ಲದೆ 19 ಅಂಗುಲ ಮಳೆ ಸುರಿಯಿತು. ಎಲ್ಲಿ ನೋಡಿದರೂ ನಡುವಿನುದ್ದ ನೀರು ಹರಿಯುತ್ತಿದೆ. ಸಾಲ್‌ಸೆಟ್ ಡಿಸ್ಟ್ರಿಕ್ಟಿನಲ್ಲಿ ಜಮೀನುಗಳಲ್ಲಿ ಬೆಳೆಯಾಗಿದ್ದ ಫಸಲೆಲ್ಲಾ ನಾಶವಾಯಿತು. ರೈಲ್ ಗಾಡಿಗಳ ವೇಗವು ಕಡಮೆ ಮಾಡಲ್ಪಟ್ಟಿದೆ.

•••

ಲಾಹೋರಿನಲ್ಲಿರುವ ಪಂಜಾಬ್ ಕೋಆಪರೇಟಿವ್ ಬ್ಯಾಂಕಿನ ಡಿಪಾಜಿಟ್‌ದಾರರು 8-10 ತಿಂಗಳಿಂದ ತಮ್ಮ ಡಿಪಾಜಿಟ್ಟಿನ ಹಣದಲ್ಲಿ ಸುಮಾರು 46 ಲಕ್ಷ ರೂಪಾಯಿತನಕ ವಸೂಲ್ಮಾಡಿಕೊಂಡದ್ದರಿಂದಲೂ, ಇನ್ನೂ ಡಿಪಾಜಿಟ್‌ದಾರರು ತಮ್ಮ ಹಣಗಳನ್ನು ವಾಪಸುಕೊಡುವಂತೆ ಕೇಳುತ್ತಲೇ ಬಂದಿರುವುದರಿಂದಲೂ ಆ ಬ್ಯಾಂಕು ದಿವಾಳಿಯಾಯಿತು. ಲೇವಾದೇವಿಯನ್ನು ನಿಲ್ಲಿಸಿಬಿಟ್ಟರು. ಆದರೆ ಮ್ಯಾನೇಜಿಂಗ್ ಡೈರೆಕ್ಟರವರು ಡಿಪಾಜಿಟ್‌ದಾರರಿಗಾಗಲಿ, ಷೇರುದಾರರಿಗಾಗಲಿ ಸ್ವಲ್ಪವೂ ನಷ್ಟವಾಗದಂತೆ ಪೂರಾ ಹಣಗಳನ್ನೇ ಬಾಪತಿಮಾಡುತ್ತೇವೆಂದು ವಾಗ್ದಾನಮಾಡಿ ಒಂದು ನೋಟೀಸನ್ನು ಪ್ರಕಟಿಸಿದಾರೆ.

•••

ದಿವಾನ್ ಬಹದೂರ್ ಅಂಬಾಲಾಲ್ ಸಖೇರ್‌ಲಾಲ್ ದೇಸಾಯಿಯವರು ಕಳೆದ ಶನಿವಾರ ಅಹಮ್ಮದಾಬಾದಿನಲ್ಲಿ 71 ನೇ ವಯಸ್ಸಿನಲ್ಲಿ ಕಾಲವಾದರು. ಗುಜರಾತಿಯವರಲ್ಲಿ ಬಿ. ಎ. ಪರೀಕ್ಷೆ ಕೊಟ್ಟವರು ಇವರೇ ಮೊದಲನೆಯವರು. ಇವರು ದೇಶವತ್ಸಲರೆನಿಸಿಕೊಂಡು ಹಿಂದುಸ್ಥಾನದ ರಾಜಕೀಯ ವಿಷಯಗಳನ್ನು ಈಗಿನ ಕಾಲಕ್ಕೆ ತಕ್ಕಂತೆ ಪ್ರಜಾಹಿತಕರವಾಗಿ ಮಾಡಿಕೊಡಬೇಕೆಂದು ಗವರ್ನ್‌ಮೆಂಟಿನವರನ್ನು ಪ್ರಾರ್ಥಿಸುತ್ತಿದ್ದರು. ಇವರು ಮೊದಲು ಬರೋಡಾ ಸಂಸ್ಥಾನದಲ್ಲಿ ಚೀಫ್ ಜಡ್ಜರಾಗಿ ಕೆಲವು ಕಾಲ ನೌಕರಿಮಾಡಿ ಪೆನ್ಷನ್ ಮೇಲೆ ನಿವೃತ್ತಿಹೊಂದಿ, ತಮ್ಮ ಜನರಲ್ಲೂ ಹಿಂದುಸ್ಥಾನದ ವಿದ್ಯಾವಂತರಲ್ಲೂ ಪ್ರೀತಿಗೌರವಗಳನ್ನು ಸಂಪಾದಿಸಿಕೊಂಡಿದ್ದರು.

•••

ಸಾತಾರೆಯ ಡಿಸ್ಟ್ರಿಕ್ಟ್ ಜಡ್ಜರ ಕೋರ್ಟಿನಲ್ಲಿ ಮೈನರುಗಳ ಆಸ್ತಿಯನ್ನು ಆ ಕೋರ್ಟಿನ ತರಫು ವಹಿಸಿಕೊಂಡು, ಆ ಕೋರ್ಟಿನ ನೌಕರಮಾನೇಜರುಗಳಿಂದ ರಕ್ಷಿಸುತ್ತಿದ್ದರು. ಈ ನೌಕರರ ಪೈಕಿ ಅಲೆಕ್ಸಾಂಡರ್ ಲೂಯಿಸ್ ಎಂಬ ನಾಜರನೂ, ನಾಲ್ವರು ಗುಮಾಸ್ತರೂ ಒಳಸಂಚುಮಾಡಿ ಮೈನರುಗಳ ಆಸ್ತಿಯಲ್ಲಿ ಬಹಳ ಹಣಗಳನ್ನು ತಿಂದುಹಾಕಿದರು. ಇದು ರುಜುವಾತಾದಕಾರಣ ಸಾತಾರೆಯ ಸೆಷನ್ಸ್ ಜಡ್ಜರು ಆ ನಾಜರಿಗೆ ಮೂರು ವರುಷವೂ, ಉಳಿದ ನಾಲ್ವರಿಗೂ ತಲಾ ಒಂದೊಂದು ವರುಷವೂ ಕಠಿಣಸಜಾವನ್ನೂ, ತಲಾ 1,000-500 ರೂಪಾಯಿನಂತೆ ಜುಲ್ಮಾನೆಯನ್ನೂ ವಿಧಿಸಿರುತ್ತಾರೆ. ಇದಲ್ಲದೆ ಇನ್ನೊಂದು ಇಂಥಾ ಮೊಕದ್ದಮೆಯು ಅವರ ಮೇಲೆ ಬಂದು ಈಗ ವಿಚಾರಣೆ ನಡೆಯುತ್ತಿದೆ.

•••

ಮೀರಟ್ ಪಟ್ಟಣದಲ್ಲಿರುವ ಅಪ್ಪರ್ ಇಂಡಿಯಾ ಬ್ಯಾಂಕಿನಿಂದ ಹೋದ ವರುಷ ಜೂನ್ ತಾ. 20 ರಲ್ಲಿ ಕಾನ್‌ಪುರದ ಸಿಂಲಾ ಬ್ಯಾಂಕಿಗೆ 50,000 ರೂಪಾಯಿ ಕರೆನ್ಸಿ ನೋಟುಗಳನ್ನು ಭಾಂಗಿ ಮಾಡಿ ಕಳುಹಿಸಿದರು. ಅದೆಲ್ಲಾ ಹ್ಯಾಗೋ ಕಳುವಾಗಿ ಆ ಭಾಂಗಿಯಲ್ಲಿ ಸಮತೂಕದ ಬರೀ ಕಾಗದಗಳಿದ್ದವು. ಆ ಲಾಗಾಯಿತು ಪೋಲೀಸಿನವರು ಅದರ ಪತ್ತೆ ತರದೂದು ನಡಿಸುತ್ತಾ ಬಂದರು. ಕಳೆದ ವಾರ ದೆಹಲಿ ನಗರದಲ್ಲಿ ಸೋಡಾವಾಟರ್ ತಯಾರ್ಮಾಡುವ ಕರೀಮುದ್ದೀನ್ ಇಲಾಹಿ ಭಕ್ಷ್ ಎಂಬವನ ಬಳಿ ಆ ನೋಟುಗಳ ಪೈಕಿ ಅನೇಕ ಸಿಕ್ಕಿ ವಿಚಾರಣೆ ಮಾಡಿದಾಗ ಅಪ್ಪರ್ ಇಂಡಿಯಾ ಬ್ಯಾಂಕಿನ ನೌಕರನಾದ ವಲಿ ಮಹಮದ್ ಎಂಬುವನು ಆ ನೋಟುಗಳನ್ನು ತಂದು ಕೊಟ್ಟು ಹಣ ಪಡೆದನೆಂದು ತಿಳಿಯಿತು. ಈಗ ಅವರಿಬ್ಬರನ್ನೂ ಹಿಡಿದು ತನಿಖೆ ಮಾಡುತ್ತಿದಾರೆ. ಆ ನೋಟುಗಳ ಭಾಂಗಿಯನ್ನು ಅಂಚೆಗೆ ಹಾಕುವಂತೆ ಬ್ಯಾಂಕಿನವರು ವಲಿ ಭಕ್ಷ್ ಎಂಬ ನೌಕರನ ವಶಕ್ಕೆ ಕೊಟ್ಟಾಗ ಅವನು ಅದನ್ನು ಹೊಡೆದುಬಿಟ್ಟಂತೆ ಗೊತ್ತಾಗಿದೆ.

•••

ಬೊಂಬಾಯಿನಲ್ಲಿ ಕಳೆದ ವರುಷ ದಿವಾಳಿಯಾದ ಇಂಡಿಯನ್ ಸ್ಪೀಸಿ ಬ್ಯಾಂಕ್ ಎಂಬ ದೊಡ್ಡ ಬ್ಯಾಂಕಿನ ಲಿಕ್ವಿಡೇಟರುಗಳು ಬ್ಯಾಂಕಿನ ಲೆಕ್ಕದ ಪುಸ್ತಕಗಳನ್ನೆಲ್ಲಾ ತನಿಖೆಮಾಡಿ ನೋಡಿ ಈಗ ಡೈರೆಕ್ಟರುಗಳ ಮೇಲೆ 1,66,64,000 ರೂಪಾಯಿಗೆ ಒಂದು ಮೊಕದ್ದಮೆಯನ್ನೂ, 23,33,077 ರೂಪಾಯಿಗೆ ಇನ್ನೊಂದು ಮೊಕದ್ದಮೆಯನ್ನೂ ತಂದಿದಾರೆ. ಬ್ಯಾಂಕಿನ ಡೈರೆಕ್ಟರುಗಳಾಗಿದ್ದು ಈಗ ಈ ಮೊಕದ್ದಮೆಗಳಲ್ಲಿ ಪ್ರತಿವಾದಿಗಳಾಗಿರುವವರ್ಯಾರೆಂದರೆ—ಸರ್ ವಿಟ್ಠಲದಾಸ್ ಥ್ಯಾಕರ್ಸೇ, ಸರ್ ಜಗಮೋಹನದಾಸ್ ವರ್‌ಜೀವನ್‌ದಾಸ್, ಸರ್ ಜಾಮ್‌ಸೆಟ್‌ಜಿ ಜೀಜೀಭಾಯಿ, ಮೌರ್ವಿ ಸಂಸ್ಥಾನದ ಠಾಕೂರ್ ರಾಜರು, ಮಿ|| ಲಾಲುಭಾಯಿ ಧರಮ್‌ಚಂದ್ ಝವೇರಿ, ಮಿ|| ಪುರುಷೋತ್ತಮ್, ಮಿ|| ವಿಶ್ರಮ್ ಮಾವ್‌ಜಿ, ಮಿ|| ಚರಣದಾಸ್ ಚತುರ್ಭುಜದಾಸ್, ಮಿ|| ಲಕಂಸೀನಾಪೂವರ ಮತ್ತು ಮಿ|| ಚುನೀಲಾಲ್ ನಾರಾಯಣರವರ ವಾರಸ್‌ದಾರರು. ಈ ಡೈರೆಕ್ಟರುಗಳು ಬ್ಯಾಂಕಿನ ಕೆಲಸ ನಡಿಸುವುದರಲ್ಲಿ ಅಲಕ್ಷ್ಯದಿಂದ ವರ್ತಿಸಿದ್ದರಿಂದ ಮೊದಲನೇ ದಾವಾ ಹಣ ಅವರಿಂದ ಬ್ಯಾಂಕಿಗೆ ಬರಬೇಕೆಂದೂ, ಬ್ಯಾಂಕು ನಡೆಯುತ್ತಿದ್ದಾಗ್ಯೆ ಅವರು ಷೇರುದಾರರಿಗೆ ಬಡ್ಡಿ ಹಂಚಿದ ಮೊಬಲಗು ಅವರಿಂದ ಬ್ಯಾಂಕಿಗೆ ಸಲ್ಲಬೇಕಾಗಿರೋಣದರಿಂದ ಆ ಬಡ್ಡಿಯೆಲ್ಲಾ ಒಟ್ಟು ಎರಡನೇ ದಾವಾ ಹಣವೆಂದೂ ಮೊಕದ್ದಮೆ ಬಂದಿದೆ.

ಇಂಪೀರಿಯಲ್ ಇಂಡಿಯಾ ರಿಲೀಫ್ ಫಂಡು.

"ವೃತ್ತಾಂತ ಪತ್ರಿಕೆ" ಆಫೀಸ್‌ಚಂದಾ ಪಟ್ಟಿ.

ಹಿಂದೆ ವಸೂಲಾಗಿರುವ ಚಂದಾ	ರೂ.	143-0-0
ಮ|| ಸಿ. ಚೌಡಯ್ಯ, ವೀರರಾಜಪೇಟೆ	,,	1-0-0
ಮಿ|| ಅಹಮದ್ ಬ್ಯಾರಿ, ಶಿವಪೇಟೆ, ಕೊಪ್ಪ	,,	1-0-0
ಮ|| ವೈ. ಅಬ್ಬೈಯ, ಸಿಕಾರಿಪುರ, ಇವರ ಮೂಲಕ—ಸ್ಕೂಲ್ ಮಕ್ಕಳೇ ಸೇರಿ ಕೊಡಿಸಿದ್ದು 13 ಆ.; ಕೊಟ್ಟೂರು ಬಸಪ್ಪನವರೂ, ಬಿ. ಸಾ. ರುದ್ರಪ್ಪನವರೂ, ತಲಾ 3 ಆ.; ಆರ್ಥರ್ ಜಯರಾಜು ರೂ. 1; ಹುಸೇನ್ ಬಿ 4 ಆ, ಒಟ್ಟು	,,	3-1-0
	ಜುಮ್ಲಾ ರೂ.	148-1-0

ಹುಲಿಯ ಷಿಕಾರಿ.—ಅದು ಸಿಕ್ಕಲಿಲ್ಲ.

ಅರಕಲಗೂಡು ತಾಲ್ಲೂಕು ಹುಲಿಕಲ್ಲು ಗ್ರಾಮ.

ತಾ. 12 ನೇ ಶನಿವಾರ ಇದೇ ಹುಲೀಕಲ್ಲು ಗ್ರಾಮದ ಕೆರೆಯ ಪೂರ್ವಭಾಗದಲ್ಲಿರುವ ಹುಲಗಣ್ಣ ಕರೀನಾಯಕನ ಹೊಲದ ಬಳಿಯಲ್ಲಿರುವ ದೊಡ್ಡ ಚವರಂಗದ ಗುತ್ತಿಗೆ ಒಂದು ಹುಲಿ ಬಂದು ಸೇರಿ ಇತ್ತು. ಆ ಹುಲಿಯನ್ನು ಆ ಹೊಲದ ಕರೀನಾಯಕನು ಕಂಡು ಊರಿನೊಳಕ್ಕೆ ಬಂದು 13 ನೇ ತಾ. ಆದಿತ್ಯವಾರ ಪ್ರಾತಃಕಾಲ ಗ್ರಾಮಸ್ಥರಿಗೆ ತಿಳಿಸಿದನು. ಆ ಕ್ಷಣದಲ್ಲಿಯೇ ಹುಲೀಕಲ್ಲು ಪಟೇಲ್ ಚಿಟ್ಟೀಗೌಡನೂ, ಪುಟ್ಟಸ್ವಾಮಿಗೌಡನೂ, ಚವಡಣ್ಣನಾಯಕನೂ, ಮಮ್ಲೂಕಾಮಯ್ಯಂಗಾರ‍್ರ ಮಕ್ಕಳೂ ರಾಯಪ್ಪನವರೂ, ಜೋಯಿಸರ್ ರಂಗಾಚಾರ‍್ರು, ಶಾನುಭೋಗರೂ, ಇನ್ನು ಅನೇಕರು ಅಂದರೆ ಸುಮಾರು 150 ಜನಗಳು ಸೇರಿ ಇದ್ದರು. ಇಲ್ಲಿಗೆ ಕೆಲವರು ಆಯುಧಪಾಣಿಗಳಾಗಿ ಹೋದರು. ಆಗ ಹುಲಿಯು ಗುತ್ತಿಯಲ್ಲಿ ಮಲಗಿ ಇತ್ತು. ಚೇಷ್ಟೆಗೆ ಹುಡುಗರು ಕಲ್ಲು ಹೊಡೆದರು. ಹುಲಿಯು ಆಗ ಎದ್ದು ಬಂದು ಒಂಟಿಯಾಗಿ ನಿಂತಿದ್ದ ಕೊರೀರ ಚಲುವನನ್ನು ಹೆಗಲಿನಮೇಲಕ್ಕೆ ಹಾರಿ ಸುಮಾರು ಒಂದು ಅಂಗುಲ ಉದ್ದ ಎರಡು ಅಂಗುಲ ಅಗಲ ಸ್ಥಳವನ್ನು ಬಗೆದು ಕೆಳಕ್ಕೆ ಕೆಡವಿತು. ಆ ಸಮಯದಲ್ಲಿ ದೂರದಲ್ಲಿ ಇದ್ದ ಪುಟ್ಟಸ್ವಾಮಿಗೌಡನು ಓಡಿಬಂದು ಈಟಿಯಿಂದ ಹುಲಿಯನ್ನು ತಿವಿದು ನೂಕಿಬಿಟ್ಟದ್ದಲ್ಲದೆ ಚಲುವನನ್ನು ಮೇಲಕ್ಕೆ ಎತ್ತಿದನು. ಹುಲಿ ಅದೇ ಗುತ್ತಿಗೆ ಹೋಗಿ ಸೇರಿಕೊಂಡಿತು. 2 ನೇ ದಫಾ ಹಳೆಮನೆ ಶ್ರೀನಿವಾಸಯ್ಯಂಗಾರ‍್ರ ಕೋವಿಯನ್ನು ಹೆಗ್ಗಡಹಳ್ಳಿಯಿಂದ ಬಂದಿದ್ದ ಲಚ್ಚಮಾಚಾರಿ ಮಗ ರಂಗಪ್ಪನು ಹಿಡಿದು ಗುಂಡಿನಿಂದ ಹೊಡೆದನು. ಹುಲಿಗೆ ಏಟು ತಗಲಿ ಗುತ್ತಿಯಿಂದ ಈಚೆಗೆ ಕೂಗಿಕೊಂಡು ಬಂದು ಬಿದ್ದಿತು. ಆಗ ಎಲ್ಲರೂ ಅದು ಸತ್ತು ಇದೆ ಎಂದು ತೀರ‍್ಮಾನ ಮಾಡಿಕೊಂಡರು. ಅದು ಪುನಃ ಅರ್ಧ ಗಂಟೆ ಆದನಂತರ ಎದ್ದು ಕೂಗಿತು. ಆಗ ಆ ಆಚಾರಿಯು ಮದ್ದು ಕೊಡಿ ಎಂದು ಕೇಳಿದನು. ಅದಕ್ಕೆ ಯಾಕೆ ಮದ್ದು ಎಂದು ಹೇಳಿದರು. ಆಗ ಹುಲಿಯು ಓಡಿಬಂದು ಕೊರೀರ ಕರೀನಿಂಗನಾಯಕನನ್ನು ಹಿಡಿದು ಅವನ ತೋಳನ್ನೂ ತೊಡೆಯನ್ನೂ ಪರಚಿ ಓಡಿಹೋಯಿತು. ಆಗ ಸಣ್ಣ ಚೈದನಾಯಕನು ಈಟಿಯಿಂದ ತಿವಿದು ಅದನ್ನು ಓಡಿಸಿದ್ದಲ್ಲದೆ ಎರಡು ಗುಂಡು ಹಾಕಿ ಹೋದನು. ಅದು ಓಡಿಹೋಗಿ ಬೇರೆ ಗುತ್ತಿಯನ್ನು ಸೇರಿತು. ಆಗ ಗುತ್ತಿಯ ಹತ್ತಿರ ಇದ್ದ ಮರದಮೇಲೆ ಸುಮಾರು 6 ಜನ ಕುಳಿತಿದ್ದರು. ಹುಲಿಯು ಅವರಲ್ಲಿ ಬೀಡರಯಲ್ಲಿ ಜವರನ ಮೇಲೆ ಹಾರಿ ಅವನ ತೋಳನ್ನು ಹಿಡಿದು ಎಳೆಯಿತು. ಚರ್ಮ ಸುಲಿದು ಅವನ ಕೈಯಲ್ಲಿ ರಕ್ತ ಬಂದಿತು. ಇನ್ನು ಎರಡು ಜನ ಅದರ ಕೂಗಿಗೆ ಹೆದರಿ ಮರದ ಮೇಲಿನಿಂದ ಕೆಳಕ್ಕೆ ಬಿದ್ದು ಓಡಿದರು. ಅಲ್ಲಿಗೆ ಸಾಯಂಕಾಲವಾಯಿತು. ಹುಲಿಯು ಕಣ್ಣಿಗೆ ಕಾಣಲಿಲ್ಲ. ಅದರ ಪತ್ತೆಯಲ್ಲೇ ಇರುತ್ತಾರೆ. ಈ ಹುಲೀಕಲ್ಲು ಗ್ರಾಮದಲ್ಲಿ ಎಲ್ಲಿನೋಡಿದರೂ ಈ ಕರೀನಾಯಕನ ಹೊಲದ ಹತ್ತಿರ ಇರುವುದಕ್ಕಿಂತ ಹೆಚ್ಚಾದ ಉದವೆ ಎಂದರೆ ಚವರಂಗದ ಗುತ್ತಿ ಬಹಳವಾಗಿ ಇವೆ. ಇದನ್ನು ಕಡಿಯುವಂತೆ ಆಯಾ ಜಮೀನುದಾರರಿಗೆ ತಿಳಿಸಬೇಕಾಗಿ ಸರ್ಕಾರದವರನ್ನು ಬೇಡುತ್ತೇನೆ. ಕರೀನಾಯಕನು ತನ್ನ ಹೊಲದ ಗುತ್ತಿಯನ್ನು ಕೀಳುತ್ತಾ ಇದಾನೆ. ಎಲ್ಲಂಗೂ ಅದೇ ರೀತಿ ಮಾಡುವಂತೆ ಆರ್ಡರು ಆಗಬೇಕು.

ಬಾತ್ಮೀದಾರ್.

ಸಂತೋಷಕೂಟಗಳು.

ಗುಬ್ಬಿ.—ಗುಬ್ಬಿ ವೆಸ್ಲಿಯನ್ ಮಿಷನ್ ಬಾಲಿಕಾ ಪಾಠಶಾಲೆಯ ವಾರ್ಷಿಕ ಸಭೆಯು ನೆನ್ನೆ ಮಂಗಳವಾರ ವೆಸ್ಲಿಯನ್ ಬಾಲಕ ಪಾಠಶಾಲೆಯಲ್ಲಿ ನಡೆಯಿತು. ಅಮಲ್ದಾರ್ ಮ|| ಸ್ವಾಮಿನಾಥ ಶಾಸ್ತ್ರಿ ಬಿ.ಎ ಯವರು ಅಗ್ರಾಸನವನ್ನು ವಹಿಸಿದ್ದರು. ರೆವ್. ಟಾಮ್‌ಲಿನ್‌ಸನ್ ದೊರೆಯವರೂ, ಪರ್‌ಕಿನ್ ದೊರೆಯವರೂ, ಪೇಟೆಯ ದೊಡ್ಡ ಮನುಷ್ಯರು ಮತ್ತು ಅಧಿಕಾರಸ್ಥರೂ ಸೇರಿದ್ದರು. ಆ ಕಾಲದಲ್ಲಿ ಬಾಲಕಿಯರಿಂದ ಮಾಡಿಸಲ್ಪಟ್ಟ ಸಂಗೀತ, ಸಂಭಾಷಣೆಗಳು ಬಹಳ ಮನೋಹರವಾಗಿದ್ದುವು. ಮುಖ್ಯೋಪಾಧ್ಯಾಯರು ಓದಿದ ರಿಪೋರ್ಟಿನ ಮುಖ್ಯವಿಷಯಗಳೇನೆಂದರೆ,—ಬಾಲಕಿಯರ ಸಂಖ್ಯೆ 300 ವರೆಗೂ ಹೆಚ್ಚಿದೆ. ಹೊಸದಾಗಿ ಕೆಲವರನ್ನು ಉಪಾಧ್ಯಾಯಿನಿಯರಾಗಿ ನೇಮಿಸಿದೆ. ಸಂಗೀತ ಮತ್ತು ಹೊಲಿಗೆ ಕೆಲಸಗಳಿಗೆ ಹೆಚ್ಚು ಪ್ರೋತ್ಸಾಹ ಕಲ್ಪಿಸಿದೆ. ಹೊಲಿಗೆ ಕೆಲಸದಲ್ಲಿ ಒಬ್ಬ ಬಾಲಕಿಗೆ ಮೈಸೂರು ಪ್ರದರ್ಶನಶಾಲೆಯಲ್ಲಿ ಬಹುಮಾನ ಬಂದಿರುತ್ತದೆ. ಐದನೇ ತರಗತಿಯನ್ನು ಹೊಸದಾಗಿ ಏರ್ಪಡಿಸಿ ಒಬ್ಬ ವಿದ್ಯಾರ್ಥಿನಿಯನ್ನು ಆ ಪರೀಕ್ಷೆಗೆ ಕಳುಹಿಸಲಾಗುತ್ತದೆ. ಗ್ರಾಮಸ್ಥರ ಪರವಾಗಿ ಮ|| ಯಜಮಾನ್ ರೇವಣ್ಣನವರು ಸ್ಕೂಲು ಇಷ್ಟು ಅಭಿವೃದ್ಧಿಗೆ ಬಂದಿರುವುದು ಲೇಡಿ ಸೂಪರಿಂಟೆಂಡ್‌ರವರ ಹೆಚ್ಚು ಪ್ರೇಮದ ಫಲವೆಂದು ಹೇಳಿ ತಮ್ಮ ಸಂತೋಷವನ್ನು ತಿಳಿಸಿದರು. ಮರುದಿನ ಸ್ತ್ರೀಯರ ಸಭೆಯೊಂದು ಸೇರಿತ್ತು. ಹೆಣ್ಣುಮಕ್ಕಳಿಗೆಲ್ಲಾ ಬಹುಮಾನಗಳು ಹಂಚಲ್ಪಟ್ಟವು.—ತಾ. 18 ನೇ ಶನಿವಾರ ಸಾಯಂಕಾಲ 5 ಘಂಟೆಯಲ್ಲಿ ಪೇಟೆ ಚೌಕದಲ್ಲಿ ರೆವ್. ಇ. ಡಬಲ್ಯು. ಥಾಮ್‌ಸನ್, ಎಂ.ಎ ಯವರ ಪತ್ನಿಯವರ ಜ್ಞಾಪಕಾರ್ಥವಾಗಿ ಒಂದು ದೊಡ್ಡ ಗಡಿಯಾರವು ಸ್ಥಾಪಿತವಾಯಿತು.

ಜಿ. ವಿ.

ಚಿಕ್ಕಮಗಳೂರು.—ತಾ 16 ನೇ ಬುಧವಾರ ಸಾಯಂಕಾಲ ಇಲ್ಲಿಂದ ಕೋಲಾರಕ್ಕೆ ವರ್ಗವಾದ ಡಾಕ್ಟರ್ ಡೇವಿಡ್ ಸಾಹೇಬರನ್ನು ಕೆಲವು ಜನ ಮುಖ್ಯಸ್ಥರು ಸೇರಿ ಅವರ ಬಂಗಲೆಯಿಂದ ತೋರಣ ಮುಂತಾದುವುಗಳಿಂದ ಅಲಂಕರಿಸಲ್ಪಟ್ಟದ್ದ ಟವನ್ ಹಾಲಿಗೆ ಬ್ಯಾಂಡ್ ವಾದ್ಯದೊಡನೆ ಕರೆದುಕೊಂಡು ಬಂದರು. ಸಭೆಯು ಅಧಿಕಾರಿಗಳಿಂದಲೂ, ಸ್ಥಳೀಯ ದೊಡ್ಡ ಮನುಷ್ಯರಿಂದಲೂ, ಯೂರೋಪಿಯನ್ ಪ್ಲಾಂಟರುಗಳಿಂದಲೂ ಅಲಂಕರಿಸಲ್ಪಟ್ಟಿತ್ತು. ಫಲಾಹಾರ ಮುಂತಾದುವು ಜರುಗಿದ ನಂತರ ಸಂಗೀತವು ನಡೆಯಿತು. ಕೊನೆಗೆ ಡಾಕ್ಟರವರ ಗುಣಕಥನವು ಇಂಗ್ಲಿಷ್, ಕನ್ನಡ, ಹಿಂದುಸ್ತಾನಿ ಭಾಷೆಗಳಲ್ಲಿ ನಡೆಯಿತು. ಅಗ್ರಾಸನವನ್ನು ವಹಿಸಿದ್ದ ಕಾಫಿ ಪ್ಲಾಂಟರ್ ಮ|| ಶ್ರೀನಿವಾಸರಾಯರು ಹೇಳಿದ ವಿಷಯವೇನೆಂದರೆ —ಡಾಕ್ಟರವರು ಇಲ್ಲಿದ್ದ ನಾಲ್ಕು ವರುಷಗಳಲ್ಲಿ ಬಡವರು ದೊಡ್ಡವರು ಎಂಬ ತಾರತಮ್ಯವಿಡದೆ ಸಕಲರನ್ನು ಒಂದೇ ವಿಧವಾಗಿ ನೋಡುತ್ತಾ ಜನಗಳ ಅನುರಾಗಕ್ಕೆ ಪಾತ್ರರಾಗಿದ್ದರೆಂಬುವುದೇ. ಬಳಿಕ ವರ್ಗವಟ್ಟವರಿಗೂ ಸಭಿಕರಿಗೂ ಹಾರಾತುರಾಯಿಗಳನ್ನು ಒಪ್ಪಿಸಿದ್ದಲ್ಲದೆ ತಾಂಬೂಲಾದಿಗಳಿಂದ ತೃಪ್ತಿಪಡಿಸಿ ಸಭೆಯನ್ನು ಮುಕ್ತಾಯಮಾಡಿ, ಅವರ ಬಂಗಲೆಯ ವರೆಗೂ ವಾದ್ಯದೊಡನೆ ಬಹಳ ವೈಭವದಿಂದ ಕಳುಹಿಸಿಕೊಟ್ಟರು.—ಮಾರನೇ ದಿವಸ ಇಲ್ಲಿಂದ ತರೀಕೆರೆಗೆ ವರ್ಗವಟ್ಟ ಅಮಲ್ದಾರರನ್ನು ತಾಲ್ಲೋಕು ನೌಕರರು ಸೇರಿ ಟವನ್ ಹಾಲಿಗೆ ವಾದ್ಯವು ಘೋಷರೆಯುತ್ತಿರುವಲ್ಲಿ ಕರೆದುಕೊಂಡು ಬಂದು ಸನ್ಮಾನಮಾಡಿ ತಮ್ಮಲ್ಲಿರುವ ಪ್ರೀತಿಯನ್ನು ಪ್ರಕಾಶಮಾಡಿದರು. ಮಾರನೇ ದಿವಸ ಈ ಟವನ್ ಮುಖ್ಯಸ್ಥರು ಸೇರಿ ಅದೇ ರೀತಿಯಾಗಿ ಅಮಲ್ದಾರರನ್ನು ಬರಮಾಡಿಕೊಂಡು ಫಲಾಹಾರಾದಿಗಳಿಂದ ತೃಪ್ತಿಪಡಿಸಿ ಅವರನ್ನು ಅಗಲಲು ತಮಗುಂಟಾಗಿರುವ ಸಂತಾಪವನ್ನು ವಿವರಿಸಿ ಪುಷ್ಪ ತಾಂಬೂಲಾದಿಗಳನ್ನು ಹಂಚಿ ವಾದ್ಯದೊಡನೆ ಅವರ ಬಂಗಲೆಗೆ ಕಳುಹಿಸಿಕೊಟ್ಟರು.

ಆರ್. ಎಸ್.

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು.

ಮೈಸೂರು ಪಟ್ಟಣದ ಮ್ಯುನಿಸಿಪಲ್ ಕೌನ್‌ಸಲರುಗಳು ಕಳೆದ ಸೋಮವಾರ ಬೆಳಿಗ್ಗೆ ಟೌನ್ ಹಾಲ್ ಬಂಗಲೆಯಲ್ಲಿ ಸಭೆ ಸೇರಿ ತಿಂಗಳು ಕಟ್ಲೆಯ ಮ್ಯುನಿಸಿಪಲ್ ಮೀಟಿಂಗನ್ನು ನಡಿಸಿದರು. ಜಮಾ ಖರ್ಚು ಮುಂತಾದ ಲೆಕ್ಕಗಳು ಓದಿ ಪ್ಯಾಸ್ ಮಾಡಲ್ಪಟ್ಟವು. ಕಳೆದ ಆಗಸ್ಟ್ ತಿಂಗಳಲ್ಲಿ ಮ್ಯುನಿಸಿಪಾಲಿಟಿಗೆ 14,740 ರೂಪಾಯಿ ಹುಟ್ಟುವಳಿಯೂ, 13,831 ರೂಪಾಯಿ ಖರ್ಚೂ ಆಯಿತು. ಜನನ 158 ; ಮರಣ—ಪ್ಲೇಗ್ 91, ವಾಂತಿಭೇದಿ 3, ಸಿಡುಬು 3, ಜ್ವರ 37, ಕ್ಷಯ 16, ಇತರ ಕಾರಣಗಳು 105, ಒಟ್ಟು 316 ಮರಣಗಳಾದವು.

ಮ್ಯುನಿಸಿಪಾಲಿಟಿಯವರು ಪ್ರೈಮರಿ ಪಾಠಶಾಲೆಗಳನ್ನು ನಡಿಸುತ್ತಿದಾರಷ್ಟೆ. ಈ ಪೈಕಿ ಒಂದರಲ್ಲಿ ಲೋಅರ್ ಸೆಕಂಡರಿ ತರಗತಿ ಇಡಬೇಕೆಂದು ಸೂಚಿಸಲ್ಪಟ್ಟಾಗ ಅದಕ್ಕೆ ಸಹಾಯಮಾಡುವುದಾಗಿ ವಿದ್ಯಾ ಇಲಾಖೆಯವರು ಒಪ್ಪಿಕೊಂಡಂತೆ ಗೊತ್ತಾಯಿತು. ಅಂಥಾ ಸ್ಕೂಲುಗಳಲ್ಲಿ ಲೋಅರ್‌ಸೆಕಂಡರಿ ತರಗತಿಯನ್ನು ಇಡಲೇ ಕೂಡದೆಂದು ಮೆಂಬರುಗಳು ಇತ್ಯರ್ಥ ಮಾಡಿ, ಕೆಲವು ಪಳ್ಳಿ ಮಠಗಳಿಗೆ ಸಲ್ಲುತ್ತಿರುವ ಗ್ರಾಂಟನ್ನು ವಜಾ ಮಾಡಿ, ಮ್ಯುನಿಸಿಪಲ್ ಗರಲ್ಸ್ ಸ್ಕೂಲಿನಲ್ಲಿ ಹೊಸ ಉಪಾಧ್ಯಾಯಿನಿಯರನ್ನು ನೇಮಿಸುವುದಕ್ಕೂ, ಕೆಲವು ಉಪಾಧ್ಯಾಯರಿಗೆ ಬಡ್ತಿ ಕೊಡುವುದಕ್ಕೂ ವಿನಿಯೋಗಿಸಬೇಕೆಂದು ತೀರ‍್ಮಾನಮಾಡಿದರು. ಕಟ್ಟಡಗಳನ್ನು ಹೊಸದಾಗಿ ಕಟ್ಟಿಕೊಳ್ಳುವುದಕ್ಕೂ ದುರಸ್ತು ಮಾಡಿಕೊಳ್ಳುವುದಕ್ಕೂ ಪ್ರಜೆಗಳು ಲೈಸೆನ್ಸು ಕೊಡಬೇಕೆಂದು ಅರ್ಜಿ ಹಾಕಿಕೊಳ್ಳುತ್ತಾರೆ. ಈ ಅರ್ಜಿಗಳು ಬೇಗನೆ ಇತ್ಯರ್ಥವಾಗುತ್ತಾ ಇಲ್ಲವೆಂದು ಮೆಂಬರುಗಳಿಗೆ ತಿಳಿಯಿತು. ಮೊದಲು ವೈಸ್ ಪ್ರೆಸಿಡೆಂಟರು ಆಯಾ ಮೊಹಲ್ಲೆಯ ಮ್ಯುನಿಸಿಪಲ್ ಮೆಂಬರ ಕೂಡ ಹೋಗಿ ಸ್ಥಳ ಅಜಮಾಯಿಷಿಯಿಂದ ಲೈಸೆನ್ಸ್ ಅರ್ಜಿಯನ್ನು ಕೂಡಲೇ ವ್ಯವಸ್ಥೆ ಮಾಡುತ್ತಿದ್ದರು. ಈಚೆಗೆ ಈ ಪದ್ಧತಿ ತಪ್ಪಿ ಹೋಯಿತು. ಮೆಂಬರುಗಳು ಹಲವು ವೇಳೆ ಈ ಭಾಗವನ್ನು ಸೂಚಿಸಿದ್ದಾಗ್ಯೂ ಆ ರೀತಿ ಆಚರಣೆಗೆ ಬಂದಿಲ್ಲವೆಂದೂ, ಇನ್ನು ಮುಂದಾದರೂ ಅದನ್ನು ಜಾರಿಗೆ ತಂದರೆ ಪ್ರಜೆಗಳಿಗೆ ಅನುಕೂಲವಾದೀತೆಂದೂ ಮ|| ರಂಗಯ್ಯಂಗಾರ‍್ರು ಸೂಚಿಸಿದ್ದನ್ನು ಮೆಂಬರುಗಳೆಲ್ಲಾ ಅನುಮೋದಿಸಿದರು. ಪ್ರೆಸಿಡೆಂಟರೂ, ವೈಸ್ ಪ್ರೆಸಿಡೆಂಟರೂ, ಹೆಲ್ತ್ ಆಫೀಸರೂ ವಾರಕ್ಕೆ 3-4 ದಿನ ಕ್ರಮವಾಗಿ ಆ ರೀತಿ ಮೊಹಲ್ಲಾವಾರು ತನಿಖೆ ವಿಚಾರಣೆ ಮಾಡುತ್ತಾ ಬರುವುದಾಗಿ ಒಪ್ಪಿಕೊಂಡಿದಾರೆ.

ಕಸಬುದಾರಿಯ ದೊಡ್ಡ ಕಾರ್ಖಾನೆಗಳಿಗೆ ಸ್ಥಳ ಮುಂತಾದ್ದು ಒದಗಿಸುವ ವಿಷಯದಲ್ಲಿ ಖಂಡಿತವಾದ ಸಲಹೆಗಳನ್ನು ಬರೆದು ಕಳುಹಿಸಬೇಕೆಂದು ಗವರನ್‌ಮೆಂಟ್ ಸೆಕ್ರಿಟರಿಯವರು ಬರೆದು ಕೇಳಿದ್ದರು. ಇದಕ್ಕಾಗಿ ಒಂದು ಕಮಿಟಿಯು ಏರ್ಪಾಡು ಮಾಡಲಾಯಿತು.—ವರುಷದ ಲೆಕ್ಕಗಳನ್ನು ತಯಾರ್ಮಾಡುವುದಕ್ಕೆ ಹೆಲ್ತ್ ಆಫೀಸರವರು 15 ರೂಪಾಯಿ ಸಂಬಳದ ಒಬ್ಬ ಗುಮಾಸ್ತೆಯನ್ನು ಎರಡು ತಿಂಗಳ ತನಕ ನೇಮಕಮಾಡಿಕೊಳ್ಳಬಹುದೆಂದು ಮೆಂಬರುಗಳು ಒಪ್ಪಿಕೊಂಡರು.—ಟೋಲ್ ಗೇಟು ಮತ್ತು ಉಕ್ಕಡಗಳಲ್ಲಿ ಕತ್ತೆಗಳ ಮೇಲೆ ಹೊತ್ತುತರುವ ಪದಾರ್ಥಗಳಿಗೆ ಟೋಲ್ ಸುಂಕವನ್ನು ವಸೂಲಾಡುವುದಕ್ಕೆ ಅಪ್ಪಣೆ ಕೊಡಬೇಕೆಂದು ಕಂಟ್ರಾಕ್ಟರು ಕೇಳಿದ್ದರು. ಹರಾಜು ಇಸ್ತಿಹಾರಿನಲ್ಲಿ ಈ ಬಾಬು ಸೇರಿಸಿರಲಿಲ್ಲವಾದದ್ದರಿಂದ ಕತ್ತೆಗಳ ಹೊರೆಗೆ ಸುಂಕವೇನೂ ವಸೂಲಾ ದಕೂಡದೆಂದೂ ಈ ವಿಚಾರವನ್ನು ಮುಂದಿನ ವರುಷ ಟೋಲ್ ಗೇಟುಗಳ ಹರಾಜು ಕಾಲದಲ್ಲಿ ಯೋಚಿಸಬೇಕೆಂದೂ ಮೆಂಬರುಗಳು ಇತ್ಯರ್ಥ ಮಾಡಿದರು.

ಅಕ್ಕಿ ಅಂಗಡಿ ದೊಡ್ಡಯ್ಯನವರಿಗೆ ಸುಬ್ಬರಾಯನ ಕೆರೆ ಬಳಿ ಅವರ ಮನೆ ಆವರಣಕ್ಕೆ ಸೇರಿದ ಖಾಲಿ ನಿವೇಶನದಲ್ಲಿ ಭತ್ತ ಕುಟ್ಟುವ ಯಂತ್ರವನ್ನು ಇಟ್ಟು ಕೆಲಸ ಮಾಡಿಸುವುದಕ್ಕೆ ಲೈಸೆನ್ಸ್ ಕೊಡುವ ವಿಷಯದಲ್ಲಿ 12 ಮಂದಿ ಮೆಂಬರುಗಳು ಮೊದಲು ಆಗಿದ್ದ ತೀರ‍್ಮಾನವನ್ನು ಪುನರಾಲೋಚನೆ ಮಾಡಬೇಕೆಂದು ಅಪೇಕ್ಷೆ ಪಟ್ಟರು. ಇಂಥಾ ಕಾರ್ಖಾನೆಯನ್ನು ಪ್ರಜೆಗಳು ವಾಸಮಾಡುವ ಮನೆಗಳ ನಡುವೆ ಇಡುವುದರಿಂದ ಯಾವ ವಿಧವಾದ ಅಪಾಯವೂ ಅನಾರೋಗ್ಯವೂ ಉಂಟಾಗುವುದಿಲ್ಲವೇ ಎಂಬದನ್ನು ತಿಳಿದವರಿಂದ ಕೇಳಿ ಗೊತ್ತುಮಾಡಬೇಕೆಂದು ತೀರ‍್ಮಾನವಾಯಿತು. ಈಗ ಪ್ಲೆಸ್ಟಿ ಸ್ಟೇಷನ್ ಬಳಿ ಇರುವ ಭತ್ತದ ಕಾರ್ಖಾನೆಯನ್ನು ಹೆಲ್ತ್ ಆಫೀಸರೂ, ಡೆಪ್ಯುಟಿ ಸ್ಯಾನಿಟರಿ ಕಮಿಷನರೂ, ಮ|| ಅಂಬಳೆ ಅಣ್ಣಯ್ಯಪಂಡಿತರೂ ಹೋಗಿ ನೋಡಿಬಂದು ತಮ್ಮ ಅಭಿಪ್ರಾಯವನ್ನು ತಿಳಿಸಿದ ಮೇಲೆ ದೊಡ್ಡಯ್ಯನವರಿಗೆ ಲೈಸೆನ್ಸ್ ಕೊಡುವ ವಿಚಾರ ಇತ್ಯರ್ಥವಾಗತಕ್ಕದ್ದೆಂದು ಗೊತ್ತುಮಾಡಿದಾರೆ.—ಸರ್ದಾರ್ ಎಂ ಗೋಪಾಲ ಕೃಷ್ಣ ಅರಸಿನವರಿಗೆ ಅವರ ದೇವಸ್ಥಾನದ ಪಕ್ಕದಲ್ಲಿರುವ ಸ್ವಲ್ಪ ಖಾಲಿ ನಿವೇಶನವನ್ನು 100 ರೂಪಾಯಿಗೆ ಕೊಡಬಹುದೆಂದು ಒಪ್ಪಲಾಯಿತು.—ಓವರ್‌ಸಿಯರ್ ಮ|| ಇ ರಾಮಸ್ವಾಮಿ ಅಯ್ಯರವರನ್ನು 150 + 20 ರೂಪಾಯಿ ಸಂಬಳದ ಮೇಲೆ ಮ್ಯುನಿಸಿಪಲ್ ಇಂಜಿನಿಯರಾಗಿ ನೇಮಿಸಿದೆ ಎಂದು ಸರ್ಕಾರದವರು ಹುಕುಂ ಕೊಟ್ಟಿದಾರೆ.—ಮದರಾಸಿನಲ್ಲಿ ಡಿಸೆಂಬರ್ ತಿಂಗಳಲ್ಲಿ ನಡೆಯುವ ಸ್ಯಾನಿಟರಿ ಎಗ್ಸಿಭಿಷನ್‌ಗೂ, ಉಪನ್ಯಾಸಗಳಿಗೂ ಮ್ಯುನಿಸಿಪಲ್ ಪ್ರೆಸಿಡೆಂಟರೂ, ಇಂಜಿನಿಯರೂ, ಮ|| ಎಂ ಸಿ ರಂಗಯ್ಯಂಗಾರ‍್ರೂ ಮೆಂಬರುಗಳಾಗಿ ಹೋಗಿ ಬರತಕ್ಕದ್ದೆಂದು ಗೊತ್ತಾಯಿತು.—ಕಸಾಬ್ ಖಾನೆಯಲ್ಲಿ ಇದುವರೆಗೆ ಪ್ರಾಣಿಗಳನ್ನು ಬೆಳಗಿನ ಹೊತ್ತು ಕಡಿದು ಕೂಡಲೇ ಮಾಂಸವನ್ನು ಬಜಾರಿಗೆ ಸಾಗಿಸುತ್ತಿದ್ದರು. ಹೆಲ್ತ್ ಆಫೀಸರವರು ಈ ಪದ್ಧತಿಯು ಅನಾರೋಗ್ಯಕರವಾದದ್ದೆಂದು ಅದನ್ನು ತಪ್ಪಿಸಿ, ಪೂರನೇ ಝಾಮದಲ್ಲಿ ಕತ್ತರಿಸಿ ಮರುದಿನ ಬೆಳಗಿನ ತನಕ ಮಾಂಸವನ್ನು ಕಸಾಬ್ ಖಾನೆಯೊಳಗೇ ಸಿಕ್ಕುಹಾಕಿದ್ದು ಮಾರಾಟಕ್ಕೆ ತೆಗೆದುಕೊಂಡು ಹೋಗಬೇಕೆಂದು ಕಟ್ಟು ಮಾಡಿದರು. ಇದು ಕಸಾಬರಿಗೆ ಒಪ್ಪಿಗೆಯಾಗದೆ ಒಂದೆರಡು ದಿನ ಮಾಂಸ ಮಾರುವುದನ್ನೇ ಬಿಟ್ಟುಬಿಟ್ಟರು. ಈಗೀಗ ಅವರು ಮಾರ್ಗಕ್ಕೆ ಬರುತ್ತಿದಾರೆ. ಹೀಗೆ ಕಡಿದ ಮಾಂಸವನ್ನು ಯಾರೂ ಕಳುವುಮಾಡದಂತೆ ಕಸಾಬ್‌ಖಾನೆಗೆ ಒಬ್ಬ ಜವಾನನ್ನು ಹಂಗಾಮಿಯಾಗಿ ನೇಮಿಸಬೇಕೆಂದು ಮೆಂಬರುಗಳು ಒಪ್ಪಿಕೊಂಡರು.

ಯುದ್ಧದ ಕಾರಣಗಳು.

[ನಮ್ಮ ಮೈಸೂರು ಸಂಸ್ಥಾನದಿಂದ ಸರ್ಕಾರಿ ವೇತನವನ್ನು ಪಡೆದುಹೋಗಿ ಇಂಗ್ಲೆಂಡಿನಲ್ಲಿ ವಿದ್ಯಾಭ್ಯಾಸಮಾಡುತ್ತಿರುವ ಮ|| ಎಸ್. ಗರಳಪುರಿ ಶಾಸ್ತ್ರಿಯವರು ಬರೆದಿರುವ ಈ ಎರಡನೆಯ ಲೇಖನವನ್ನು ಬಹಳ ಸಂತೋಷದಿಂದ ಪ್ರಕಟಿಸುವೆವು.—ಎಡಿ]

ನಮ್ಮ ದೇಶದ ಯಾವ ಹೋಬಳೀ ಸ್ಕೂಲಿಗೆ ಹೋದರೂ ಕೂಡ ಒಂದು ಯೂರೋಪ್ ಖಂಡದ ಭೂಪಟವು ಸಿಕ್ಕದೇ ಇರಲಾರದು. ಈಗ ಯೂರೋಪ್ ಖಂಡದಲ್ಲಿ ಸಂಭವಿಸಿರುವ ಮಹತ್ತಾದ ಯುದ್ಧದ ವಿದ್ಯಮಾನಗಳನ್ನು ಸರಿಯಾಗಿ ತಿಳಿಯಬೇಕಾಗಿದ್ದಲ್ಲಿ ಎಲ್ಲರೂ ಯೂರೋಪ್ ಖಂಡದ ನಕ್ಷೆಯನ್ನು ಚೆನ್ನಾಗಿ ಬಲ್ಲವರಾಗಿರಬೇಕು.

ಹಿಂದೆ 1870 ನೇ ಇಸವಿಯಲ್ಲಿ ಜರ್ಮನೀ ಮತ್ತು ಫ್ರಾನ್ಸ್ ದೇಶದವರಿಗೆ ಘೋರವಾದ ಯುದ್ಧ ನಡೆದು ಜರ್ಮನೀ ದೇಶದವರು ಜಯಶೀಲರಾದರು. ಆಗಿನಿಂದಲೂ ತಮ್ಮ ಧೈರ್ಯ, ಸಾಹಸ, ಮುಂತಾದ ಗುಣಗಳಲ್ಲಿ ಪ್ರಪಂಚದಲ್ಲಿ ತಮ್ಮ ಸಮಾನರು ಯಾರೂ ಇಲ್ಲವೆಂದು ನಂಬಿಕೆಯಿಂದ ದಿನೇ ದಿನೇ ತಮ್ಮ ಸೈನ್ಯವನ್ನು ಅಭಿವೃದ್ಧಿಗೆ ತರುತ್ತಾ ಹೊಸದಾದ ಹಡಗುಗಳನ್ನು ಕಟ್ಟುತ್ತಾ ದ್ವೀಪಾಂತರದ ವ್ಯಾಪಾರಗಳನ್ನು ಹೆಚ್ಚಿಸುತ್ತಾ, ಮತ್ತು ಶಾಸ್ತ್ರ ಜ್ಞಾನದಲ್ಲಿ ಅದ್ವಿತೀಯ ಪಾಂಡಿತ್ಯವನ್ನು ಸಂಪಾದಿಸುತ್ತಾ, ಯೂರೋಪ್ ಖಂಡವನ್ನೆಲ್ಲಾ ಅತ್ಯಂತವಾದ ಬೆದರಿಕೆಯಲ್ಲಿ ಇಡುವುದಕ್ಕೆ ಪ್ರಾರಂಭಿಸಿದರು ಮತ್ತು ದಿನಕ್ರಮೇಣ ಜರ್ಮನಿಯವರಿಗೆ ಇಂಗ್ಲೆಂಡಿನ ಮೇಲೆ ಕಣ್ಣು ಇದೆಯೆಂಬ ವಿಚಾರವನ್ನೂ ಹೊರಪಡಿಸುತ್ತಾ ಬಂದರು. ಬೂದಿಮುಚ್ಚಿದ ಕೆಂಡದಂತೆ ಇಂಗ್ಲಿಷ್ ಜನರ ಮೇಲಣ ಮಾತ್ಸರ್ಯದಿಂದ ಒಳಗೇ ಕುದಿಯುತ್ತಿದ್ದರು.

ಯೂರೋಪ್‌ಖಂಡದ ವಿದ್ಯಮಾನದಲ್ಲಿ ಯಾವ ರಾಜ್ಯದವರು ಸೈನ್ಯವನ್ನು ಹೆಚ್ಚಿಸಿದರೂ ಅದಕ್ಕೆ ಪ್ರತಿಯಾಗಿ ಬಾಕಿ ರಾಜ್ಯದವರೂ ಸೈನ್ಯವನ್ನು ವೃದ್ಧಿಗೊಳಿಸದಿದ್ದರೆ ಒಂದೇ ರಾಜ್ಯ ಬಹಳ ಪ್ರಬಲವಾಗಿ ಬಾಕಿಯವರನ್ನೆಲ್ಲಾ ಜಯಿಸಿಬಿಟ್ಟೀತೆಂಬ ಶಂಕೆಯಿಂದ ಜರ್ಮನಿಯವರಂತೆ ಎಲ್ಲರೂ ಸೈನ್ಯವನ್ನು ಹೆಚ್ಚುಮಾಡುತ್ತಾ ಬಂದರು, ಮತ್ತು ದೊಡ್ಡ ದೊಡ್ಡದಾದ ಯುದ್ಧದ ಜಹಜುಗಳನ್ನೂ ಕಟ್ಟುತ್ತಾ ಬಂದರು. ಈ ರೀತಿಯಲ್ಲಿ ಇಂಗ್ಲೆಂಡ್, ಫ್ರಾನ್ಸ್, ಜರ್ಮನೀ, ಆಸ್ಟ್ರಿಯಾ ಹಂಗೇರಿ, ಇಟಲಿ, ರಷಿಯಾ ಮುಂತಾಗಿ ಎಲ್ಲರೂ ಒಬ್ಬರ ಮೇಲೊಬ್ಬರು ಪೈಪೋಟಿಯಿಂದ ಸೈನ್ಯವನ್ನೂ ಮತ್ತು ನಾವೆಯನ್ನೂ ವಿಪರೀತವಾಗಿ ಮೇಲಾಟಕ್ಕೋಸ್ಕರ ಹೆಚ್ಚಿಸಿದರು. ಈ ಪ್ರಕಾರ ಸೈನ್ಯವನ್ನು ಹೆಚ್ಚಿಸುವ ಚೇಷ್ಟೆ ಜರ್ಮನೀಯಲ್ಲಿ ಪ್ರಾರಂಭವಾಯಿತು.

ಇಷ್ಟರಲ್ಲೇ ಜರ್ಮನೀ, ಆಸ್ಟ್ರಿಯಾ ಹಂಗೇರಿ ಮತ್ತು ಇಟಲೀ ದೇಶದವರು ಒಗ್ಗಟ್ಟಾಗಿ ಒಂದು ಕರಾರು ಮಾಡಿಕೊಂಡರು. ಅದಕ್ಕೆ ಪ್ರತಿಯಾಗಿ ಇಂಗ್ಲೆಂಡ್, ಫ್ರಾನ್ಸ್ ಮತ್ತು ರಷಿಯಾ ಕೈಜೋಡಿಸಿ ಮತ್ತೊಂದು ಕರಾರು ಮಾಡಿಕೊಂಡರು. ಒಳಗೇ ಕತ್ತಿ ಮಸೆಯುತ್ತಾ, ಮೇಲೆ ಮೇಲೆ ಮಾತ್ರ ಒಬ್ಬರನ್ನೊಬ್ಬರು ಗಂಡನೆ ಹುಸಿನಗೆ ತೋರಿಸುತ್ತಾ, ಎಲ್ಲರೂ ಸಮಯ ಕಾಯುತ್ತಿದ್ದರು. ಇವರಲ್ಲಿ ಎಲ್ಲರಿಗಿಂತಲೂ ಜರ್ಮನಿಯವರು ಕಾಲು ಕೆರೆದುಕೊಂಡು ಆತುರರಾಗಿ ಸಿದ್ಧರಾಗಿದ್ದರು. ಯಾವದಾದರೂ ಒಂದು ನೆಪ ಸಿಕ್ಕಿದರೂ ಕೂಡ ಜಗಳಕ್ಕೆ ಸಿದ್ಧರಾಗಿದ್ದರು.

ಇಂಥಾ ನೆಪವು ಕಳೆದ ಜೂಲೈ ತಿಂಗಳಲ್ಲಿ ಇವರಿಗೆ ದೊರಕಿತು. ಸರ್ವಿಯಾ ಎಂಬ ಸಣ್ಣ ರಾಜ್ಯದಲ್ಲಿ ಕೆಲವು ಅತ್ಯಾತ್ಮ ಜನರು ಆಸ್ಟ್ರಿಯಾ ದೇಶದ ಯುವರಾಜನನ್ನು ಮತ್ತು ಯುವರಾಣಿಯನ್ನೂ ಖೂನಿ ಮಾಡಿಬಿಟ್ಟರು. ಈ ಖೂನಿತನದ ಸಂದರ್ಭದಲ್ಲಿ ಆಸ್ಟ್ರಿಯಾ ದೇಶದವರು ಸರ್ವಿಯಾ ರಾಜ್ಯದವರಿಗೆ ಬಹಳ ಅಪಮಾನಕರವಾದ ಕೆಲವು ನಿಬಂಧನೆಗಳನ್ನು ವಿಧಿಸಿ ಆ ಪ್ರಕಾರ ನಡೆಯದೇ ಇದ್ದರೆ ಯುದ್ಧ ಮಾಡುತ್ತೇವೆಂದು ಕಾಗದ ಪತ್ರಗಳನ್ನು ನಡಿಸಿದರು. ಸರ್ವಿಯಾ ದೇಶದವರು ರಷ್ಯಾ ದೇಶದವರಲ್ಲಿ ಮರೆಹೊಕ್ಕು ಆಸ್ಟ್ರಿಯಾ ದೇಶದವರು ವಿಧಿಸಿದ ಮಾನಹೀನಕರವಾದ ನಿಬಂಧನೆಗಳಲ್ಲಿ ಕೆಲವನ್ನು ಒಪ್ಪಲಾರೆವೆಂದು ತಿಳಿಸಿದರು. ಕೂಡಲೇ ಆಸ್ಟ್ರಿಯಾದವರು ಸರ್ವಿಯಾ ದೇಶದ ಮೇಲೆ ಯುದ್ಧವನ್ನು ಪ್ರಾರಂಭಿಸಿದರು.

ಹೀಗೆ ಯುದ್ಧವನ್ನು ಪ್ರಾರಂಭಿಸುವುದಕ್ಕೆ ಜರ್ಮನಿಯವರು ಆಸ್ಟ್ರಿಯಾದವರನ್ನು ಉಪದೇಶಿಸಿದರೆಂದೂ ಮತ್ತು ಜರ್ಮನಿಯವರೂ ಕೂಡ ಯುದ್ಧದಲ್ಲಿ ಸಹಾಯ ಮಾಡುತ್ತೇವೆಂಬ ಭರವಸೆ ಮೊದಲೇ ಕೊಟ್ಟಿದ್ದರೆಂದೂ ಈಚೆಗೆ ತಿಳಿಯಬಂದಿದೆ. ಇಂಗ್ಲೆಂಡಿನಲ್ಲಿ ರಾಜ್ಯತಂತ್ರ ನಿಪುಣರಾದ ಸರ್ ಎಡ್ವರ್ಡ್ ಗ್ರೇ ಯವರು ಈ ಘೋರವಾದ ಯುದ್ಧವನ್ನು ಹ್ಯಾಗಾದರೂ ನಿಲ್ಲಿಸಬೇಕೆಂದು ಬಹಳ ಸಾಹಸಪಟ್ಟರು. ಆದಾಗ್ಯೂ ಇವರ ವಿಶಿಷ್ಟತರವಾದ ಉಪದೇಶವನ್ನು ಜರ್ಮನಿಯವರೂ ಮತ್ತು ಆಸ್ಟ್ರಿಯಾದವರೂ ಒಪ್ಪಲಿಲ್ಲ.

ಸರ್ವಿಯಾದವರಿಗೆ ಕೊಟ್ಟ ಭಾಷೆಯನ್ನು ಸಾರ್ಥಕಗೊಳಿಸುವದಕ್ಕೋಸ್ಕರ ರಷಿಯಾದವರು ಯುದ್ಧಕ್ಕೆ ನಿಂತರು. ಕೂಡಲೇ ಆಸ್ಟ್ರಿಯಾ ದೇಶದೊಡನೆ ಮಾಡಿಕೊಂಡಿದ್ದ ಕರಾರಿನಂತೆ ಜರ್ಮನೀಯವರು ಯುದ್ಧಕ್ಕೆ ಪ್ರಾರಂಭಿಸಿದರು. ಅನಂತರ ರಷಿಯಾ ಪರವಾಗಿ ಫ್ರಾನ್ಸ್ ದೇಶದವರು ಜರ್ಮನಿಯವರ ಮೇಲೆ ಸೈನ್ಯವನ್ನು ಸಜ್ಜುಗೊಳಿಸತೊಡಗಿದರು.

ಇಷ್ಟರಲ್ಲೇ ಬೆಲ್‌ಜಿಯಂ, ಹಾಲೆಂಡ್, ಡೆನ್‌ಮಾರ್ಕ್, ಇಟಲೀ ಮುಂತಾದ ಕೆಲವು ದೇಶದವರುಗಳು—ನಮ್ಮ ಜಗಳ ನಮಗೆ ಬೇಡ. ನಾವು ತಟಸ್ಥರಾಗಿರುತ್ತೇವೆ. ಒಬ್ಬರ ಗೋಜೂ ನಮಗೆ ಬೇಡವೆಂದು ಪ್ರಕಟನೆಮಾಡಿದರು. ಹೀಗೆ ಯಾವ ದೇಶವು ತಟಸ್ಥವಾಗಿರುವುದಕ್ಕೆ ಸಿದ್ಧವಾಗಿದೆಯೋ ಅಂಥಾ ರಾಜ್ಯದೊಳಕ್ಕೆ ಕೆಲವು ರಾಜನಿಬಂಧನೆಗಳ ಮೇಲೆ ಯುದ್ಧಮಾಡುವ ಯಾವ ಸೈನ್ಯವೂ ಹೋಗಕೂಡದು. ಈ ಕಟ್ಟನ್ನು ಎಲ್ಲಾ ರಾಜ್ಯದವರೂ ಮರ್ಯಾದೆಗೆ ಅನುಸಾರವಾಗಿ ನಡೆಯಬೇಕು. ಆದರೆ ಜರ್ಮನೀಯವರು ಮಾತ್ರ ಉತ್ತರದಿಕ್ಕಿನಿಂದ ಫ್ರಾನ್ಸ್ ದೇಶವನ್ನು ಹಿಡಿಯಬೇಕೆಂಬ ಉದ್ದೇಶದಿಂದ ಫ್ರಾನ್ಸ್‌ಗೆ ಉತ್ತರಮೇರೆಯಾಗಿರುವ ತಟಸ್ಥವಾಗಿರುವ ಬೆಲ್‌ಜಿಯಂ ದೇಶಕ್ಕೆ ಏಕಾಏಕಿ ತಮ್ಮ ಸೈನ್ಯವನ್ನು ನುಗ್ಗಿಸಲಾರಂಭಿಸಿದರು.

ಬೆಲ್‌ಜಿಯಂ ದೇಶದವರ ತಂಟೆಗೆ ಒಬ್ಬರೂ ಹೋಗಕೂಡದೆಂದು ಹಿಂದೆ ಒಂದು ಕರಾರು ನಡೆದಿದೆ. ಈ ಕರಾರಿಗೆ ಇಂಗ್ಲೆಂಡ್, ಜರ್ಮನೀ ಮುಂತಾದ ದೇಶದವರೆಲ್ಲಾ ಒಪ್ಪಿ ರುಜು ಮತ್ತು ಮುದ್ರೆಯನ್ನು ಹಾಕಿರುತ್ತಾರೆ. ಆದ್ದರಿಂದ ಬೆಲ್‌ಜಿಯಂ ದೇಶದಿಂದ ನೀವು ದೂರ ಇರಬೇಕು. ಅವರ ದೇಶಕ್ಕೆ ತೊಂದರೆ ಕೊಡಕೂಡದು. ಹಾಗೆ ಒಂದು ಬರುತ್ತೇವೆಂದು ಹಟಹಿಡಿದರೆ ನಿಮ್ಮ ಮೇಲೆ ನಾವು ಯುದ್ಧಮಾಡುತ್ತೇವೆಂದು ಇಂಗ್ಲೀಷಿನವರು ಜರ್ಮನೀಯವರಿಗೆ ಪತ್ರ ಕಳುಹಿಸಿದರು. ಇದಕ್ಕೆ ಜರ್ಮನೀಯವರು ಸಮಂಜಸವಾದ ಉತ್ತರವನ್ನು ಕೊಡಲಿಲ್ಲ. ಆದ್ದರಿಂದ ಜರ್ಮನೀಯವರ ಮೇಲೆ ಇಂಗ್ಲೀಷಿನವರು ಯುದ್ಧ ಪ್ರಾರಂಭಿಸಿದರು.

ಸರ್ವಿಯಾ, ರಷ್ಯಾ, ಫ್ರಾನ್ಸ್, ಇಂಗ್ಲೆಂಡ್, ಇವು ಒಂದು ಕಡೆ; ಇವುಗಳ ಎದುರು ಪಕ್ಷ ಜರ್ಮನೀ, ಆಸ್ಟ್ರಿಯಾ—ಹೀಗೆ ಎರಡು ಪಂಗಡವಾಗಿ ಘೋರವಾದ ಕದನ ಪ್ರಾರಂಭವಾಗಿದೆ. ಏಸಿಯಾ ಖಂಡದಲ್ಲಿಯೂ ಕೂಡ ಇಂಗ್ಲೀಷ್ ಜನರೊಡನೆ ಮಾಡಿಸಿಕೊಂಡಿರುವ ಕರಾರಿನ ಮೇಲೆ ಜಪಾನ್ ದೇಶದವರು ಜರ್ಮನೀಯವರ ಮೇಲೆ ಯುದ್ಧವನ್ನು ಪ್ರಾರಂಭಿಸಿದಾರೆ.

ಯುದ್ಧಕ್ಕೆ ಪ್ರಾರಂಭಿಸಿರುವ ದೇಶಗಳಲ್ಲೆಲ್ಲಾ ಲಕ್ಷಾಂತರ ಪ್ರಜೆಗಳ ಪ್ರಾಣನಾಶವೂ ಮತ್ತು ಸಾವಿರಾರು ಕೋಟಿ ರೂಪಾಯಿಗಳ ಖರ್ಚೂ ಆಗುತ್ತವೆ. ಆಗಲೇ ಕೆಲವು ಘೋರವಾದ ಕದನಗಳು ನಡೆದಿವೆ. ಸಾವಿರಾರು ಮಂದಿ ಆಗಲೇ ವೀರಸ್ವರ್ಗವನ್ನು ಹೊಂದಿದರು. ಇದು ಇನ್ನೂ ಯುದ್ಧದ ಪ್ರಾರಂಭ. ಭೂಮಿ ಕಾಣ್ ನೋಡಿಕೊಂಡು ಸತ್ಯಮಾರ್ಗಗಳಲ್ಲಿ ಪ್ರವರ್ತಿಸುತ್ತಿರುವಂಥಾ ನಮ್ಮ ದೇಶದ ಜನಗಳಿಗೆಲ್ಲಾ ಯುದ್ಧವೆಂದರೇನೋ ತಿಳಿಯುವುದೇ ಇಲ್ಲ. ಶತ್ರುಬಾಧೆಯನ್ನು ತಪ್ಪಿಸಿ ದೇಶವನ್ನೆಲ್ಲಾ ಒಂದು ನೆರಿಗೆ ತಂದುಬಿಟ್ಟು ನಮ್ಮನ್ನು ಆಳುತ್ತಿರುವ ಇಂಗ್ಲಿಷರಿಗೆ ಈಗ ಕಷ್ಟಕಾಲ ಪ್ರಾರಂಭವಾಗಿದೆ. ಇಂಡಿಯಾ ದೇಶದ ರಾಜರುಗಳೆಲ್ಲಾ ಉದಾರ ಮನಸ್ಸಿನಿಂದ ತಮ್ಮ ದೇಶಗಳಲ್ಲಿ ದೊರಕುವ ಸಹಾಯ ಸಂಪತ್ತಿಗಳನ್ನೆಲ್ಲಾ ಒದಗಿಸಿಕೊಡುತ್ತೇವೆಂದು ಬಹಳ ಶ್ಲಾಘ್ಯವಾದ ವಾಗ್ದಾನಗಳನ್ನು ಕೊಟ್ಟಿದಾರೆಂದು ಇಲ್ಲಿ ಪತ್ರಿಕೆಗಳಿಂದ ತಿಳಿಯಬರುತ್ತೆ. ಯುದ್ಧದಲ್ಲಿ ಮೃತರಾದವರ ಹೆಂಡತಿ ಮಕ್ಕಳುಗಳು ಅನಾಥರಾಗುತ್ತಾರೆ. ಇಂಥಾವರುಗಳಿಗೆ ಸಹಾಯ ಮಾಡಲು ಇಲ್ಲಿ ಅನೇಕ ಧರ್ಮಕಾರ್ಯಗಳು ಪ್ರಾರಂಭವಾಗಿವೆ. ಯುಕ್ತಿಂಚಿತ್ ಯಾರ ಯಾರ ಕೈಲಿ ಎಷ್ಟೆಷ್ಟು ಅನುಕೂಲವೋ ಅಷ್ಟಷ್ಟು ಸಹಾಯಮಾಡಿ ಎಲ್ಲರೂ ಪುಣ್ಯವನ್ನೂ ಕೀರ್ತಿಯನ್ನೂ ಸಂಪಾದಿಸಬಹುದು. ಇಂಡಿಯಾದ ಎಲ್ಲಾ ಭಾಗಗಳಲ್ಲಿಯೂ ಧರ್ಮದ ಫಂಡುಗಳು ಪ್ರಾರಂಭವಾಗಿದೆಯೆಂದು ತಿಳಿಯಬರುತ್ತೆ. ಕಾಲಾಣೆ ಕೊಡತಕ್ಕವನೂ ಲಕ್ಷಾಂತರ ರೂಪಾಯಿ ಕೊಡತಕ್ಕವನೂ ಎಲ್ಲರೂ ಒಟ್ಟುಕೂಡಿ ಯಥಾಶಕ್ತಿ ಸಹಾಯಮಾಡಬೇಕಾದ ಕಾಲ ಬಂದಿದೆ.

ಯುದ್ಧದ ಕಾರಣಗಳನ್ನು ಮೇಲೆ ವಿವರಿಸಿದೆ. ಯುದ್ಧದ ಮುಖ್ಯ ವಿಷಯಗಳನ್ನು ಸಮಯೋಚಿತವಾಗಿ ಕಳುಹಿಸುತ್ತೇನೆ.

ಲಂಡನ್, 27-8-14. ಎಸ್. ಜಿ. ಶಾಸ್ತ್ರಿ.

ಬಾತ್ಮೀದಾರರಿಗೆ ನೋಟೀಸ್.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಬೇಲೂರು ತಾ|| ನಾರಣಾಪುರ, ಹಗ್ಗಡದೇವನಕೋಟೆ ತಾ|| ಸರಗೂರು ತೂಗಟಗೆರೆ, ಕಡೂರು :—ಈ ಸ್ಥಳಗಳಲ್ಲಿ ಸ್ಥಾಪನೆಯಾಗಿ ನಡೆಯುತ್ತಿರುವ

...ಪರಸ್ಪರ ಸಹಾಯ ಸಂಘಗಳ ವಾರ್ಷಿಕ ಜನರಲ್ ಮೀಟಿಂಗುಗಳ ವಿವರಣೆ ಮತ್ತು ...ಆದಾಯವ್ಯಯಗಳ ರಿಪೋರ್ಟುಗಳು ನಮಗೆ ತಲಪಿರುತ್ತವೆ. ಸ್ಥಳಸಂಕೋಚ ...ದಿಂದ ಅವನ್ನು ಪ್ರಕಟಿಸಲು ಅನುಕೂಲಿಸಲಿಲ್ಲವೆಂದು ವಿಷಾದಿಸುತ್ತೇವೆ.

...ಚಾಮರಾಜನಗರದ ತಾಲ್ಲೂಕಿಗೆ ಸೇರಿದ ಒಂದು ಗ್ರಾಮದಲ್ಲಿ ತಂದೆತಾಯಿ ...ಗಳು ಸೇರಿ ತಮ್ಮ ಮಗನಿಗೆ ಅಲ್ಪ ವಿಷಯಕ್ಕಾಗಿ ಬರೆಗಳನ್ನು ಹಾಕಿದರೆಂದು ...ಮುಂತಾಗಿ ನಮ್ಮಲ್ಲಿಗೆ ಒಂದು ಬಾತ್ಮಿ ಬಂದಿದೆ. ಈ ವಿಷಯವನ್ನು ಬಾತ್ಮಿದಾ...ರರು ಮೊದಲು ಸ್ಥಳದ ಪೋಲೀಸ್ ಇನ್‌ಸ್ಪೆಕ್ಟರಿಗೆ ಬರೆದು ತಿಳಿಸಿದರೆ ಅವರು ...ತಕ್ಕ ಕ್ರಮ ಜರುಗಿಸುತ್ತಾರೆ.

ಮಲ್ಲೂರಿ ಲಕ್ಷ್ಮಣರಾವಜಿ, ಹರಿಹರ.—ಉಪನ್ಯಾಸಕ್ಕೆ ಸ್ಥಳದೊರಗಲಿಲ್ಲ.

ಕೃಷ್ಣಮೂರ್ತಿರಾವ್, ಅನಂತಶಯನ.—ಈ ಬಾತ್ಮಿಯನ್ನು ಪ್ರಕಟಿಸುವು...ದರಿಂದ ಪ್ರಯೋಜನವೇನೂ ಕಾಣುವುದಿಲ್ಲ. —ಎಡಿ.]

ಕರೆಸ್‌ಪಾಂಡೆನ್ಸ್.

ಮೋಟರ್ ಟಪಾಲ್ ಆಗಬೇಕು.

ಅಯ್ಯಾ,—ವೀರರಾಜೇಂದ್ರಪ್ಯಾಟೆಯಿಂದ ಮೈಸೂರಿಗೂ, ಮೈಸೂರಿಂದ ವೀರರಾಜೇಂದ್ರಪ್ಯಾಟೆಗೂ ತಿರುಗತಕ್ಕ ಪ್ರಯಾಣಿಕರಿಗೆ ರೈಲು ಮಾರ್ಗವಾಗಲಿ, ಮೋಟರ್ ಸರ್ವಿಸ್ ಆಗಲಿ ಇಲ್ಲದೆ ಬಹು ತೊಂದರೆಯಾಗಿದೆ. ಆದ್ದರಿಂದ ಯಾರಾದರೂ ಕಂಪನಿಯವರು ಇಲ್ಲಿಂದ ಮೈಸೂರಿಗೆ ಮೋಟರ್ ಸರ್ವಿಸ್ ಇಟ್ಟು ನಡಿಸಿದಲ್ಲಿ ತುಂಬಾ ಲಾಭ ಬರುವದಲ್ಲದೆ, ಜನರಿಗೂ ಸಹ ಉಪಕಾರವಾಗುತ್ತೆ.

ವೀರಾಜಪೇಟೆ. ಬಾತ್ಮಿದಾರ್.

[*ಈಗ ಮೈಸೂರಿಗೂ ಹುಣಸೂರಿಗೂ ಬಂದು ಹೋಗುವ ಮೋಟರ್ ಸರ್ವೀಸ್ನ್ನೇ ಆಮದು ರಸ್ತೆ ಚೆನ್ನಾಗಿದ್ದಲ್ಲಿ ವೀರರಾಜಪೇಟೆಗೂ ಇಟ್ಟು ನಡಿಸಬಹುದೆಂದು ನಮಗೆ ತೋರುತ್ತದೆ.—ಎಡಿ*]

ವಿ.ಇ. ಸ್ಕೂಲ್ ಮಾಸ್ಟರ ಗ್ರೇಡುಗಳು.

ಅಯ್ಯಾ,—ತಮ್ಮ 3-9-14 ನೇ ಗುರುವಾರದ ಕರೆಸ್‌ಪಾಂಡೆನ್ಸ್‌ನಲ್ಲಿ ತೋರಲು ಬಡಮಾಸ್ಟರುಗಳ ಗ್ರೇಡುಗಳು ಎಂತ ಸೂಚಿಸಿ ತರುವಾಯ ಈಗ ಸರ್ಕಾರದವರು ವಿದ್ಯಾ ಇಲಾಖೆಯ ಎ.ವಿ. ಸ್ಕೂಲ್ಮಾಸ್ಟರಿಗೆ ಗ್ರೇಡುಗಳು ಕಲ್ಪಿಸಿರುವದು ಸರಿಯಷ್ಟೆ. ಎಂದೂ ನಂತರ ಟ್ರೈನಿಂಗ್ ಆದ ಉಪಾಧ್ಯಾಯರಿಗೂ ಇತರರಿಗೂ ಯಾವ ವ್ಯತ್ಯಾಸವೂ ಗ್ರೇಡುಗಳ ವಿತರಣೆಯಲ್ಲಿ ಕಾಣುವದಿಲ್ಲವೆಂದೂ, 10 ರೂಪಾಯಿನವರಿಗೆ *15-1-20* ರ ಗ್ರೇಡೂ, *12-1-15* ರ ಗ್ರೇಡೂ ದೊರಕಿತು ಎಂದೂ ಉದಹರಿಸೋಣವಾಗಿರುತ್ತೆ. ಈ ಗ್ರೇಡು ಎ.ವಿ. ಸ್ಕೂಲಿನಲ್ಲಿರತಕ್ಕ 10 ರೂಪಾಯಿ ಸಂಬಳವುಳ್ಳ ಬಡಮಾಸ್ಟರ್‌ಗಳಿಗೋ, ಅಥವಾ 10 ರೂಪಾಯಿ ಸಂಬಳ ಉಳ್ಳ ಇತರ ವಿ.ಇ. ಸ್ಕೂಲ್ಮಾಸ್ಟರುಗಳಿಗೇನಾದರೂ ಬರುವ ಸಂಭವ ಉಂಟೇ ಎಂಬ ಅಂಶವನ್ನು ಸಂಪೂರ್ಣ ದಯವಿಟ್ಟು ತಿಳಿಸಬೇಕಾಗಿ ಕೋರುವ

ಬಡಮಾಸ್ಟರ್.

ಒಂದು ವಿಜ್ಞಾಪನೆ.

ಅಯ್ಯಾ,—ಘನವನ್ನು ಹೊಂದಿದ ನಮ್ಮ ಮಹಾರಾಜಾ ಸರ್ಕಾರದವರು ಎ. ವಿ. ಸ್ಕೂಲ್ ಮಾಸ್ಟರುಗಳ ರಿವೈಜಾದ ಬಡತಿ ಮತ್ತು ಗ್ರೇಡುಗಳನ್ನು ಮುಂಜೂರು ಮಾಡಿ ಜಾರಿಗೆ ಕೊಟ್ಟಿರುವುದು ಸರಿಯಷ್ಟೆ. ಇದು ಸ್ಟೇಟ್ ಫಂಡಿನ ಎ. ವಿ. ಸ್ಕೂಲುಗಳಿಗೆ ಮಾತ್ರವಾಗಿರುವುದು. ತರಗತಿಗಳು, ಸ್ಕೂಲ್ ಫೀ, ರಜ, ಪರೀಕ್ಷೆಗಳಲ್ಲಿ, ತಾಲಾಪ್ಪೆಕಾರಿಗಳು ಮುಂತಾದ ಉಳಿದ ಎಲ್ಲಾ ಭಾಗಗಳಲ್ಲಿಯೂ ಸ್ಟೇಟ್ ಫಂಡಿನ ಎ. ವಿ. ಸ್ಕೂಲುಗಳಿಗೂ, ಲೋಕಲ್ ಫಂಡಿನ ಎ. ವಿ. ಸ್ಕೂಲುಗಳಿಗೂ ಯಾವ ವ್ಯತ್ಯಾಸವೂ ಇಲ್ಲ. ಹೀಗಿರುವಲ್ಲಿ ಈಗ ರಿವೈಜಾದ ಸ್ಕೀಮಿನಲ್ಲಿ ಲೋಕಲ್ ಫಂಡಿನ ಎ. ವಿ. ಸ್ಕೂಲುಗಳನ್ನು ಏಕೆ ಸೇರಿಸಿಕೊಳ್ಳಲಿಲ್ಲವೋ ತಿಳಿಯದು. ಇಂಥ ಎ. ವಿ. ಸ್ಕೂಲುಗಳು ಸುಮಾರು ಹತ್ತೆಂಟು ಮಾತ್ರವೇ ಇರಬಹುದು. ನಮ್ಮ ಸರಕಾರದವರು ಈ ಲೋಕಲ್ ಫಂಡು ಎ. ವಿ. ಸ್ಕೂಲುಗಳಿಗೂ ಬಡತಿ ಮತ್ತು ಗ್ರೇಡುಗಳನ್ನು ದಯಪಾಲಿಸಬೇಕಲ್ಲದೆ ವಿ. ಇ. ಸ್ಕೂಲಿನಲ್ಲಿರುವ ಸಮರ್ಥರಾದ ಉಪಾಧ್ಯಾಯರುಗಳಿಗೂ ಉಚಿತವಾದ ರೀತಿಯಲ್ಲಿ ಪ್ರೋತ್ಸಾಹ ಕೊಡಬೇಕಾಗಿ ಈ ಮೂಲಕ ಪ್ರಾರ್ಥಿಸಿಕೊಳ್ಳುತ್ತೇನೆ.

ಒಬ್ಬ ಉಪಾಧ್ಯಾಯ.

ಕೊಪ್ಪಕ್ಕೆ ಎ. ವಿ. ಸ್ಕೂಲ್ ಬೇಕು.

ಅಯ್ಯಾ,—ಕೊಪ್ಪವು ತಾಲ್ಲೂಕು ಹೆಡ್‌ಕ್ವಾರ್ಟರ್ಸ್ ಸ್ಥಳ. ಇದುವರೆಗೂ ಸರ್ಕಾರದವರು ಸ್ಕೂಲಿಗೆ ಕಟ್ಟಡವನ್ನು ಕಟ್ಟಿಸಿಕೊಡಲಿಲ್ಲ. ಹಾಲಿ ಕಟ್ಟಡವು ತಲೆ ಮೇಲೆ ಬೀಳುವುದಕ್ಕೆ ಕಾದುಕೊಂಡಿದೆ. ನಾಲ್ಕೈದು ವರ್ಷಗಳಿಂದಲೂ ಇಲಾಖಾ ಆಫೀಸರವರ ಚಿತ್ತಕ್ಕೆ ಬಂದಾಗ್ಯೂ, ಒಬ್ಬರ ದಯವೂ ಇದರ ಮೇಲೆ ಬೀಳಬೇಕಿಲ್ಲ. ಈಚೆಗೆ ಹುಡುಗರ ಸಂಖ್ಯೆ ಜಾಸ್ತಿಯಾಗಿ ಸ್ಕೂಲು ಅಭಿವೃದ್ಧಿಹೊಂದುತ್ತಿದೆ ಎಂದೂ, ಪ್ರತಿವರ್ಷವೂ ಪ್ಯಾಸ್‌ಮಾಡಿದ ಬಾಲಕರು ಮುಂದೆ ವ್ಯಾಸಂಗಕ್ಕೆ ಅನುಕೂಲವಿಲ್ಲದೆ ನಿರುದ್ಯೋಗಿಗಳಾಗಿ ಕೆಟ್ಟುಹೋಗುತ್ತಿದಾರೆಂದೂ, ಪರಸ್ಥಳಕ್ಕೆ ಕಳುಹಿಸಲು ದ್ರವ್ಯಾನುಕೂಲವಿಲ್ಲದ್ದರಿಂದ ಕೊಂಚಮಟ್ಟಿಗಾದರೂ ಇಂಗ್ಲಿಷ್ ಕಲಿತುಕೊಳ್ಳಲು ಒಂದು ಎ. ವಿ. ಸ್ಕೂಲನ್ನು ಇಲ್ಲಿ ಇಡಿಸಿಕೊಡಬೇಕೆಂದೂ ಅನೇಕಾನೇಕ ಅರ್ಜಿಗಳು ಬರೆದುಕೊಂಡೂ, ಇಲಾಖಾ ಆಫೀಸರ ಮೊಖ್ತಾ ಅರ್ಜಿಕೊಟ್ಟು ಹೇಳಿಕೊಂಡೂ ವ್ಯರ್ಥವಾಗಿ, ಈಚೆಗೆ ಇನ್‌ಸ್ಪೆಕ್ಟರ್ ಜನರಲ್‌ರವರಿಗೆ ವಿಸ್ತಾರವಾದ ಅರ್ಜಿ ಬರೆದುಕೊಂಡು ಇಂದಿನವರೆಗೆ ಇದುವರೆಗೆ ಕಾದಿದ್ದಾಗ್ಯೂ ಯಾವ ಉತ್ತರವೂ ದೊರೆಯಲಿಲ್ಲ. ಸುಮಾರು 70-80 ಹುಡುಗರಿರುವ ಮತ್ತು ತಾಲ್ಲೂಕು ಆದ ಈ ಕೊಪ್ಪಕ್ಕೆ ತಕ್ಕ ಲವಾಜಮೆಗಳೊಂದಿಗೆ ಸರ್ಕಾರದವರು ಜಾಗ್ರತೆ ಒಂದು ಎ. ವಿ. ಸ್ಕೂಲನ್ನು ಮಂಜೂರು ಮಾಡಿಸಿ ಈ ತಾಲ್ಲೂಕಿನಲ್ಲಿ ಸ್ವಲ್ಪವಾದರೂ ಇಂಗ್ಲಿಷ್ ಚಾಲ್ತಿಗೆ ಬರುವಂತೆ ಮಾಡಿಸಿಕೊಟ್ಟಾರೆಂದು ನಿರೀಕ್ಷಿಸುತ್ತೇವೆ. ಒಬ್ಬ ಜಮೀನ್ದಾರ.

ಕನ್ಯಾವಿಕ್ರಯಕ್ಕೆ ಕಾರಣಗಳಂತೆ.

ಅಯ್ಯಾ,—ತಾವು ಕಳೆದ ತಾ. 10 ನೇ ಸೆಪ್ಟಂಬರ್, 14 ರಲ್ಲು ಹೆಣ್ಣುಗಳನ್ನು ಮಾರುವ ವಿಷಯದಲ್ಲಿ ಸೂಚಿಸಿರುವ ಸಂಗತಿಯನ್ನು ಓದಿದೆನು. ಅಪ್ಪು ಕ್ರಯಕ್ಕೆ ಹೆಣ್ಣು ಮಕ್ಕಳನ್ನು ಮಾರುವುದಕ್ಕೆ ಐದು ಮುಖ್ಯ ಕಾರಣಗಳುಂಟು. ಅವು ಯಾವುವೆಂದರೆ—(1) ಕನ್ಯೆಯರು ಕಡಮೆಯಾಗಿರುವುದು, (2) ವಿಧವೆಯರು ಪುನರ್ವಿವಾಹ ಆಗದೆ ಇರುವುದು, (3) ಚಿಕ್ಕಂದಿನಲ್ಲಿ ಮದುವೆಯಾಗುವುದು, (4) ಒಬ್ಬೊಬ್ಬನು ಮೂರು ನಾಲ್ಕು ಕನ್ಯೆಯರನ್ನು ಮದುವೆಯಾಗುವುದು, (5) ಹಣಗಾರರು ಜಾಸ್ತಿಯಾಗಿರುವುದು. ಬಡವರು ಅಷ್ಟು ಬೆಲೆಯನ್ನು ಕೊಡಲು ತ್ರಾಣವಿಲ್ಲದೆ ಅನೇಕರು ಬ್ರಹ್ಮಚಾರಿಗಳಾಗಿ ಸತ್ತರು. ಅನೇಕರು ಕೇಳಿದಷ್ಟು ಹಣವನ್ನು ತೆರುವುದಕ್ಕೆ ತ್ರಾಣವಿಲ್ಲದೆ ಸಾಲ ಸೋಲ ಮಾಡಿ ಗಿರೀಬರಾದರು. ಈಗಲೂ ನಲವತ್ತು ಐವತ್ತು ವರ್ಷಗಳವರೆಗೆ ಅನೇಕ ಜನರು ಲಗ್ನವಿಲ್ಲದೆ ಇದಾರೆ. ಇದಕ್ಕೆ ಕಾರಣ ಅವರಲ್ಲಿ ಹೆಣ್ಣನ್ನು ಕೊಳ್ಳುವುದಕ್ಕೆ ಸಾಕಾದಷ್ಟು ಹಣವಿಲ್ಲದೆ ಇರುವುದೇ. ಆದುದರಿಂದ ದಯಾಳುಗಳಾದ ಸರ್ಕಾರದವರು ತೆರವನ್ನು ಸಂಪೂರ್ಣವಾಗಿ ನಿಲ್ಲಿಸಿಬಿಡುವಂತೆ, ಇಲ್ಲವೇ ಆ ತೆರವನ್ನು 100-150 ರೂಪಾಯಿಗಳಿಗೆ ಜಾಸ್ತಿ ತೆಗೆದುಕೊಳ್ಳದಂತೆಯೂ ಮತ್ತು ಪುನರ್ವಿವಾಹ ಮಾಡಿಕೊಳ್ಳುವಂತೆಯೂ ಕಾನೂನನ್ನು ಮಾಡಿ ಖಂಡಿತವಾಗಿ ಜಾರಿಗೆ ತಂದರೆ ಬಡವರೆಲ್ಲಾ ಉದ್ಧಾರವಾಗಬಹುದು.

ಇಷ್ಟೇ ಅಲ್ಲದೆ ಇನ್ನೂ ಅನೇಕರು ವಿದ್ಯಾಹೀನತೆಯಿಂದಲೂ, ಮದ್ಯಪಾನದಿಂದಲೂ ಕ್ಷೀಣದೆಸೆಗೆ ಬಂದು, ಮನಸ್ಸಿನ ಗಲಿಬಿಲಿಯಿಂದಲೂ ಆ ಪಾನದ ಆವೇಶಕ್ಕೆ ಗುರಿಯಾಗಿ ಬಹಳ ತುಚ್ಛವಾದಂಥಾ ಕೆಲಸವನ್ನು ಮಾಡುತ್ತಿದಾರೆ. ಇದನ್ನು ನಿವಾರಿಸಲು ಪ್ರಯತ್ನಿಸುತ್ತಿರುವ ಯೆಬ್ನೀಸರ್ ಮದ್ಯವಿಸರ್ಜನೆಯ ಸಂಘದವರಿಗೆ ಭಗವಂತನು ಪ್ರೋತ್ಸಾಹವನ್ನೂ, ಹೆಚ್ಚಾದ ಸಹಾಯವನ್ನೂ ದಯಪಾಲಿಸಲೆಂದು ಕೋರುವ ಆ ಸಂಘದ ಒಬ್ಬ ಮೆಂಬರು.

ಕಳಸದ ಆಸ್ಪತ್ರೆ ವಿಚಾರ.

ಅಯ್ಯಾ,—ಕಳಸದಲ್ಲಿ ಇರತಕ್ಕ ಲೋಕಲ್ ಫಂಡ್ ಆಸ್ಪತ್ರೆಯಲ್ಲಿದ್ದ ಮ॥ ಡಿ. ಜಯರಾವ್, ಸಬ್ ಅ॥ ಸರ್ಜನ್‌ರವರು ವರ್ಗವಾದ್ದರ ಮೇಲೆ ರಜಾದ ಮೇಲೆ ಇದ್ದು ಪ್ಲಾಂಟರ್ಸುಗಳವರಿಗೆ ಮತ್ತು ಅವರುಗಳ ಕೂಲಿ ಆಳುಗಳಿಗೆ ಮತ್ತು ಯಾರಾದರೂ ಸ್ನೇಹಿತರಿಗೆ ಮಾತ್ರ ಸ್ವಂತವಾಗಿ ಔಷಧಗಳನ್ನು ತರಿಸಿಟ್ಟುಕೊಂಡು ಕೊಡಲಿಕ್ಕೆ ಪ್ರಾರಂಭಿಸಿದ ಮೇಲೆ ಧಾರವಾಡ ಜಿಲ್ಲೆಯ ಪ್ರಾಂತ್ಯದ ಒಬ್ಬರು ಕನಡಾ ಮಾತು ಅರಿಯದ ಮ॥ ಕಾಮತ್ ಎಂಬ ಡಾಕ್ಟರು ಬಂದು ಜನರು ಆಸ್ಪತ್ರೆ ಎಂದರೆ ಅವರು ದವಾ ಖಾನೇಕು ಜಾವ್ ಎಂಬುವದು, ಸಾಯಿಲೆಯ ವಿದ್ಯಮಾನವಂತು ಹೇಳಿದರೆ ಗೊತ್ತೇ ಆಗಲಿಕ್ಕಿಲ್ಲ. ಮತ್ತು ಹೇಳುತ್ತಾ ಹಾಕಿಕೊಂಡರೆ ಬೆಂಗಳೂರಿಗೆ ಜಾವ್ ಎನ್ನುತ್ತಾ ಬಡರೈತರು ರೋಗಪೀಡಿತರಾಗಿ ವ್ಯಸನಪಟ್ಟದ್ದು ಮತ್ತು ಸದರಿ ವಿಷಯವನ್ನು ಕುರಿತು ಕಡೂರು ಡೆಪ್ಯುಟಿ ಕಮಿಷನರ್ ಸಾಹೇಬರವರಿಗೆ ಮತ್ತು ಸೀನಿಯರ್ ಸರ್ಜನ್ ಸಾಹೇಬರವರಿಗೆ ಕೂಡಾ ಬಹು ಜನರು ಅಹವಾಲ್ ಅರ್ಜಿ ಬರಕೊಂಡು ಸಾಕಾಯಿತು. ಅಷ್ಟರಲ್ಲಿ ಸರಕಾರದವರು ಬಡರೈತರುಗಳ ಮೇಲೆ ದಯವಿಟ್ಟು ಹಾಲಿ ಕಳಸಕ್ಕೆ ಮೆ॥ ಅಬ್ದುಲ್ ಖಾದರ್ ಸವರ್ ಎಂಬ ಡಾಕ್ಟರನ್ನು ಹಾಲಿ ರಜಾದ ಮೇಲೆ ಹೋದ ಮ॥ ಕಾಮತ್‌ರ ಬದಲಿಗಾಗಿ ರವಾನಿಸಿಕೊಟ್ಟು, ಸದರಿಯವರು ಬಡರೈತರಾದ ನಮ್ಮಗಳಿಗೆ ಉತ್ಕೃಷ್ಟವಾದ ಔಷಧಗಳನ್ನು ಕೊಡುತ್ತಾ ಮಲನಾಡು ಜ್ವರ, ಛಳಿ ಮುಂತಾದ್ದು ಜನರಿಗೆ ಬೇಗಬೇಗನೆ ಗುಣಕಂಡುಬಂದದ್ದರಿಂದ ಸ್ಕೂಲಿನ ಬಾಲಕರುಗಳಿಗೆ ಅವರುಗಳ ಅಜಮಾಯಿಷಿಯಿಂದ ಅವರಿಗೆ ಇರತಕ್ಕ ಜ್ವರ, ಬಿಜ್ಜೆ ಮುಂತಾದ್ದೆಲ್ಲಾ ಔಷಧ ಕೊಟ್ಟು ನಿವಾರಣೆ ಮಾಡಿದ ಬಗ್ಗೆ ಇವರನ್ನು ಎಷ್ಟು ಕೊಂಡಾಡಿದರೂ ಸಾಲದಾಗಿದೆ. ಆದ್ದರಿಂದ ಘನಹೊಂದಿದ ಸರ್ಕಾರದವರು ಹಾಲಿ ಇರತಕ್ಕ ಮೆ॥ ಅಬ್ದುಲ್ ಖಾದರ್ ಸವಾರ್ ಸಾಹೇಬರನ್ನೇ ಈ ಸ್ಥಳಕ್ಕೆ ಖಾಯಂ ಆಗಿ ನಿಲ್ಲಿಸಿ ಬಡರೈತರನ್ನು ಉದ್ಧಾರಮಾಡುತ್ತಾರಾಗಿ ಸದಾ ಬೇಡುತ್ತಾ ಇವೇವೆ. ಸದರಿ ವಿಷಯಗಳನ್ನು ಕುರಿತು ಸೀನಿಯರ್ ಸರ್ಜನ್ ಸಾಹೇಬರವರಿಗೆ ಮತ್ತು ಡೆಪ್ಯುಟಿ ಕಮಿಷನರ್ ಸಾಹೇಬರವರಿಗೆ ಕೂಡ ರೈತರುಗಳು ಅಹವಾಲ್ ಅರ್ಜಿ ಬರೆದುಕೊಂಡ ಬಗ್ಗೆ ದಯಾಳುಗಳಾದ ಸರಕಾರದವರ ಹುಕುಂ ಯಾವತ್ತು ನೋಡುತ್ತೇವೋ ಎಂಬ ನಿರೀಕ್ಷಣೆಯಲ್ಲಿ ಇದೇವೆ.

ರೈತರುಗಳ ಹಿತಚಿಂತಕ.

ಇದು ನಿಜವೇ ?

ಅಯ್ಯಾ,—1911 ನೇ ಇಸವಿ ಜನವರಿ ತಾ. 4 ರಲ್ಲು ನಮ್ಮ ಶ್ರೀಮನ್ ಮಹಾರಾಜರವರು ಕೆರೆ ಪಂಚಾಯತಿ ಬಿಲ್‌ಗೆ ದಸ್ಕತ್ತು ಮಾಡಿರುವುದಾಗಿಯೂ, 1911 ನೇ ಇಸವಿ ಫೆಬ್ರವರಿ ತಾ. 6 ರಿಂದ ಎಲ್ಲಾ ಕಡೆಗೂ ಜಾರಿಯಲ್ಲಿ ಬರತಕ್ಕದೆಂತಲೂ 1911 ನೇ ಇಸವಿ ಜನವರಿ ತಾ. 26 ರ "ವೃತ್ತಾಂತ ಪತ್ರಿಕೆ" ಯಲ್ಲಿನ ಪ್ರಕಟನದಿಂದ ವ್ಯಕ್ತಗೊಳ್ಳಲ್ಪಡುತ್ತೆ. ಇದು ನಿಜವಾದ ಪಕ್ಷದಲ್ಲಿ 4 ವರ್ಷವಾದರೂ ಜಾರಿಗೆ ಬಾರದೆ ಇರುತ್ತಿರಲಿಲ್ಲವಲ್ಲಾ! ಚಿತ್ರದುರ್ಗದ ಡಿಸ್ಟ್ರಿಕ್ಟಿನಲ್ಲಿ ಕೆಲವು ಗ್ರಾಮದ ರೈತರು ಏಕೀಭವಿಸಿ ಡೆಪ್ಯುಟಿ ಕಮಿಷನರ್ ಸಾಹೇಬರಿಗೂ, ರೆವಿನ್ಯು ಕಮಿಷನರ್ ಸಾಹೇಬರವರಿಗೂ 4-6 ಅರ್ಜಿಗಳ ಮೂಲಕ ವ್ಯಕ್ತಪಡಿಸಿಕೊಂಡಿರುವುದಾಗಿ ವರ್ತಮಾನ ಕೇಳುತ್ತೇವೆ. ಮುಂದೆ ಕೂಡ ಮೈಸೂರು ಸಂಸ್ಥಾನದ ದಿವಾನ್ ಸಾಹೇಬರವರ ಸನ್ನಿಧಾನಕ್ಕೆ ವಿಜ್ಞಾಪನೆ ಮಾಡಿಕೊಂಡು, ಟ್ಯಾಂಕ್ ಪಂಚಾಯತಿಯನ್ನು ಮುಂಜೂರು ಮಾಡಿಸಿಕೊಂಡು ಸುಖವಾದ ಅನುಕೂಲವನ್ನು ಹೊಂದಬಹುದಲ್ಲವೇ? ಘನವಾದ ಮಂತ್ರಿವರ್ಯರು ತಲಾವುಗಳ ನಡವಳಿಕೆ ವಿಷಯದಲ್ಲಿ ಹೆಚ್ಚಾದ ಅನುಭವ ಕಂಡುಬಂದುದರಿಂದಲೇ ಸ್ಪೆಷಲ್ ಆಗಿ ಒಂದು ಡಿವಿಜನ್ ಏರ್ಪಾಟು ಮಾಡಿರುವುದಾಗಿಯೂ, ಈ ಏರ್ಪಾಟು ಮಾಡಿ ಸ್ವಲ್ಪ ದಿವಸವೇ ಆಗಿದೆ ಎಂಬದಾಗಿಯೂ ತಿಳಿಯಬರುತ್ತೆ. ಮತ್ತು ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ಕೆಲವು ಗ್ರಾಮದ ಕೆರೆಗಳಿಗೆ ಟ್ಯಾಂಕ್ ಪಂಚಾಯತಿಯನ್ನು ಮುಂಜೂರು ಮಾಡಿರುವುದಾಗಿ ತಿಳಿಯುತ್ತದೆ. ಇದು ನಿಜವಾಗಿದ್ದಲ್ಲಿ ಎಲ್ಲಾ ಡಿಸ್ಟ್ರಿಕ್ಟಿಗೂ ಜಾರಿಯಲ್ಲಿ ತಂದುಕೊಡುವಂತೆ ಆರ್ಡರು ಆಗಿರಬಹುದು. ಇದುವರೆಗೂ ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಯಾವ ಕೆರೆಗೂ ಜಾರಿಯಲ್ಲಿ ಬಂದಿರುವುದಾಗಿ ವರ್ತಮಾನವೇ ತಿಳಿಯದು. ಘನವಾದ ದಿವಾನ್ ಸಾಹೇಬರವರು ವಿಮರ್ಶಿತ್ತಕ್ಕೆ ತಂದುಕೊಂಡು ಎಲ್ಲಾ ಡಿಸ್ಟ್ರಿಕ್ಟುಗಳ ಮೇಜರ್ ಟ್ಯಾಂಕುಗಳಿಗೂ ಪಂಚಾಯತಿಯನ್ನು ಏರ್ಪಡಿಸಿಕೊಟ್ಟು ರೈತಾಬಿಯನ್ನು ಅಭಿವೃದ್ಧಿಗೆ ತರುತ್ತಾರೆಂದು ನಂಬಿರುತ್ತೇವೆ. ಪ್ರಜಾ ಹಿತೈಷಿ.

[ಕೆರೆಗಳ ಪಂಚಾಯತಿ ಕಾನೂನು ವ್ಯಾಸಾಗಿರುವುದು ನಿಜ. ಯಾವ ಕೆರೆಗಾದರೂ ಪಂಚಾಯತಿ ಮಾಡಿಕೊಡಬೇಕೆಂದು ರೈತರು ಅಪೇಕ್ಷಿಸಿ ಅರ್ಜಿ ಬರೆದುಕೊಂಡರೆ ಅಧಿಕಾರಿಗಳು ಆ ರೀತಿ ಏರ್ಪಾಡು ಮಾಡಿಕೊಡಬೇಕು. ಸರ್ಕಾರದವರು ಎಲ್ಲಾ ಕಡೆಗೂ ಜಾರಿಯಲ್ಲಿ ತಂದಿಲ್ಲ. ಆಯಾ ಸ್ಥಳದಲ್ಲಿರುವ ಮುಖಂಡ ಪ್ರಜೆಗಳು ಈ ಭಾಗದಲ್ಲಿ ಮುತುವರ್ಜಿ ವಹಿಸಬೇಕಾಗಿದೆ.—ಎಡಿ.]

ವಿದ್ಯಾಭ್ಯಾಸದ ಇಲಾಖೆ ಶಾಲೋಪಾಧ್ಯಾಯರು.

ಅಯ್ಯಾ,—ನಮ್ಮ ಮೈಸೂರು ಸಂಸ್ಥಾನವು ಭರತಖಂಡದ ಇತರ ಸಂಸ್ಥಾನಗಳಿಗೆಲ್ಲಾ ಮೇಲ್ಪಙ್ಕ್ತಿಯಾಗಿರುವಂತೆ ಎಲ್ಲಾ ವಿಷಯಗಳಲ್ಲಿಯೂ ವಿತರಣೆಯಿಂದ ವೃದ್ಧಿಯಾಗುತ್ತಿದೆ. ಅವರಲ್ಲಿ ಪ್ರಜಾಪ್ರತಿನಿಧಿ ಸಭೆಯೂ ಒಂದು. ಪ್ರಜೆಗಳ ಕಷ್ಟಸುಖಗಳನ್ನು ಸಾಕ್ಷಾತ್ತಾಗಿ ಸರ್ಕಾರಕ್ಕೆ ಅರಿಕೆಮಾಡಲು ಸಂಸ್ಥಾನದ ಪ್ರಜೆಗಳಿಂದ ಚುನಾಯಿಸಲ್ಪಟ್ಟವರೇ ಈ ಸಭೆಯವರು. ಹೋದ ವರುಷ ಈ ಸಭೆಯಲ್ಲಿ ಚರ್ಚಿಸಲ್ಪಟ್ಟ ಸಂಗತಿಗಳಲ್ಲಿ ಸ್ಕೂಲ್ಮಾಸ್ಟರ ಸಂಬಳ 15 ರೂಪಾಯಿಗೆ ಕಡಮೆ ಇಲ್ಲದಂತೆ ಮಾಡಬೇಕೆಂಬುವುದು ಒಂದು. ಈ ಪ್ರಾರ್ಥನೆಗೆ ಮಂತ್ರಿವರ್ಯರು ಸ್ಕೂಲ್ಮಾಸ್ಟರುಗಳ ಸಂಬಳದ ಪಟ್ಟಿಯನ್ನು ಪುನರ್ವಿಮರ್ಶೆ ಮಾಡುತ್ತಿರುವುದಾಗಿಯೂ, ಕ್ಷಿಪ್ರದಲ್ಲಿಯೇ ಪ್ರಾರ್ಥನೆಯಂತೆ ಜಾರಿಗೆ ತರುತ್ತೇವೆಂಬದಾಗಿಯೂ ಅಪ್ಪಣೆಕೊಡಿಸಿದರು. ಸಂವತ್ಸರವು ಸಮಾಪ್ತಿಯಾಯಿತು. ಈ ವರೆಗೂ ಈ ಬಡಪಾಯಿಗಳ ಗೋಳಾಟ ನಿಲ್ಲಲಿಲ್ಲ. ಈಚೆಗೆ ಈ ಇಲಾಖೆಗೆ ಹೆಚ್ಚಾಗಿಯೇ ಹಣವನ್ನು ಹಂಚಲಾಗಿದೆ. ಇದು ವಿತರಣೆಯಿಂದ ಖರ್ಚಾಗಬೇಕು. ಅದರಲ್ಲಿ ಪ್ರೈಮರಿ ಉಪಾಧ್ಯಾಯರುಗಳ ವೇತನವನ್ನು ಈ ಕಾಲಕ್ಕೆ ತಕ್ಕಂತೆ ಕ್ರಮಪಡಿಸಬೇಕಾದದ್ದು ಅತ್ಯವಶ್ಯಕ. ಇದನ್ನು ಮಾಡದೆ, ವಿಚಾರಣೆ ಮಾಡತಕ್ಕ ಅಧಿಕಾರಿಗಳ ಸಿಬ್ಬಂದಿಯನ್ನು ಎಷ್ಟು ಹೆಚ್ಚಿಸಿದರೂ ಫಲಿತಾಂಶ ಮಾತ್ರ ಹೆಚ್ಚುವುದಿಲ್ಲ. ಹೊಟ್ಟೆಗಿಲ್ಲದೆ ಕಷ್ಟಪಡಿಸಿದರೆ ಎಷ್ಟರ ಮಟ್ಟಿಗೆ ಸಾರ್ಥಕವಾದೀತು? ರಕ್ತ ಮಾಂಸವನ್ನೆಲ್ಲಾ ಈ ಇಲಾಖೆಗಾಗಿ ವಿನಿಯೋಗಿಸಿ, ಸಂಸ್ಥಾನದ ಇತರ ಇಲಾಖೆಗಳ ನೌಕರರಿಗಿಂತಲೂ ಮುಂದಾಗಿಯೇ ಅಕಾಲಮರಣಕ್ಕೆ ಗುರಿಯಾಗಿ, ಪೆನ್‌ಷನ್ ಪಡೆಯತಕ್ಕವರ ಸಂಖ್ಯೆಯಲ್ಲೂ ಇತರ ಇಲಾಖಾ ಸಂಖ್ಯೆಗಿಂತಲೂ ಕೀಳಾಗಿ, ಪೆನ್‌ಷನ್ ಮೊಬಲಗಿನಲ್ಲಿಯೂ ಸರ್ಕಾರಕ್ಕೆ ಆದಾಯಮಾಡುತ್ತಿದಾರೆ. ಇದಕ್ಕೆಲ್ಲಾ ಕಷ್ಟಕ್ಕೆ ತಕ್ಕ ಆಹಾರವಿಲ್ಲದೆ ನರಳುವುದೇ ಕಾರಣ. ಆರೋಗ್ಯಶಾಸ್ತ್ರವು ಬಾಯಿಮಾತಿನ ಆಡಂಬರದಲ್ಲಿ ಪರಿಣಮಿಸಿತೇ ಹೊರತು ಆಚರಣೆಗೆ ಅವಕಾಶವಿಲ್ಲ. ಇವರು ಯಾವಾಗಲೂ ಕೆಲಸಮಾಡುವ ಗ್ರಾಮಶಾಲೆಗಳೂ, ವಾಸಕ್ಕಾಗಿರುವ ಮನೆಗಳೂ ಅನಾರೋಗ್ಯಕ್ಕೆ ಅನುಕೂಲವಾಗಿಯೇ ಇವೆ. ಹಿಂದಿನ ಧಾರಣೆಗಿಂತಲೂ ಈಗ 4-5 ರಷ್ಟು ಹೆಚ್ಚು ನಾನಾ ಅವಸ್ಥೆಗಳಿಗೆ ಗುರಿಯಾಗುತ್ತಿದ್ದಾಗ್ಯೂ ಇವರ ಸಂಕಟ ನೀಗುವ ಕಾಲ ಬರಲಿಲ್ಲ. ಈ ಕೊರತೆಗಳನ್ನು ಈ ಪತ್ರಿಕೆಯಲ್ಲದೆ ಇತರ ದೇಶೀಯ ಪತ್ರಿಕೆಗಳೂ ಪ್ರಕಟಿಸಿವೆ. ಇತರ ಇಲಾಖೆಯವರಿಗೆ ಇರುವಂತಹ ಯಾವದೊಂದು ಅನುಕೂಲತೆಯೂ ಈ ಉಪಾಧ್ಯಾಯರ ಪದವಿಗೆ ಇಲ್ಲ. ಇವರೇ ಇತರರನ್ನು ಅನುವರ್ತಿಸುವಾಗ ಇವರನ್ನು ಯಾರು ತಾನೇ ಅನುವರ್ತಿಸುವರು. ಪ್ರೈವೇಟಾಗಿ ಮನೆಗಳಲ್ಲಿ ಪಾಠಹೇಳುವುದು, ಅಂಗಡಿಗಳಲ್ಲಿ ಲೆಕ್ಕ ಬರೆಯುವುದೇ ಇತ್ಯಾದಿ ಉಪಾಯಗಳಿಂದ ಅಲ್ಪ ಸ್ವಲ್ಪ ಹೆಚ್ಚಿನ ಸಂಪಾದನೆಗೂ ಅವಕಾಶವುಳ್ಳ ಎ. ವಿ. ಸ್ಕೂಲ್ಮಾಸ್ಟರುಗಳಿಗೆ ಗ್ರೇಡುಗಳನ್ನು ಕಲ್ಪಿಸಿ ಪ್ರಮೋಷನ್‌ಗಳನ್ನು ಕೊಟ್ಟಿರುವರು. ಸರ್ವಿಸಿನಲ್ಲಿಯೂ, ಯೋಗ್ಯತೆಯಲ್ಲಿಯೂ, ಪ್ರಾಮಾಣಿಕತೆಯಿಂದ ಕಷ್ಟಪಟ್ಟು ಕೆಲಸಮಾಡುವುದರಲ್ಲಿಯೂ ವಿ. ಇ. ಸ್ಕೂಲ್ಮಾಸ್ಟರುಗಳು ಎ. ವಿ. ಸ್ಕೂಲಿನ ಅ॥ ಮಾಸ್ಟರುಗಳಿಗಿಂತಲೂ ಎಷ್ಟು ಜನ ಹಿಂದಾಗಿರಬಹುದು? ಗ್ರಾಮಾಂತರಗಳಲ್ಲಿ ವಿದ್ಯಾರ್ಥಿಗಳಿಗೆ ಒಬ್ಬ ಮಾಸ್ಟರು 4-5 ತರಗತಿಗಳನ್ನಿಟ್ಟುಕೊಂಡು, ದಿನಕ್ಕೆ 7 ಗಂಟೆ ಕಾಲ ಕೆಲಸ ಮಾಡುವನು. ಪರೀಕ್ಷೆಯಲ್ಲಿ ವಿದ್ಯಾರ್ಥಿಗಳ ಗೈರುಹಾಜರಿಯೂ, ಹಳ್ಳಿಗಳ ಸ್ಥಿತಿಯೂ ನವೀನ ಇನ್‌ಸ್ಪೆಕ್ಟರುಗಳಿಗೆ ತೋರುವುದಿಲ್ಲ. ಪ್ರಿವಿಲೆಜ್ ರಜಾ ಬೇಕಾದರೂ ಮಾಸ್ಟರು ಸ್ವಂತ ಖರ್ಚಿನಿಂದ ಬದಲಿಯನ್ನು ನೇಮಿಸಬೇಕು. ಇದು ಯಾವ ಧರ್ಮ? ಎರಡು ವರುಷಗಳಿಂದಲೂ ಸಾದಿಲ್ವಾರು ಸಾಮಾನೇ ಸಪ್ಲೈ ಇಲ್ಲ; ಸಪ್ಲೈ ಆಗುವ ಸಾಮಾನೋ ಕೇವಲ ನಿಕೃಷ್ಟವಾದುದು. ಇದಕ್ಕಾಗಿ ಮಂಜೂರಾಗಿರುವ ಮೊಬಲಗನ್ನೇ ಮಾಸ್ಟರುಗಳಿಗೆ ಕೊಡಬಾರದೇ? ಈಗ ಇತರ ಸ್ಕೂಲುಗಳಿಗೆ ಕೊಡುತ್ತಿಲ್ಲವೇ? ಗ್ರಾಮಶಾಲೆಗಳಲ್ಲಿ ಒಬ್ಬನು 4-5 ತರಗತಿಗಳನ್ನಿಟ್ಟುಕೊಂಡಿದ್ದರೂ ಈಗಿನ ನಿಯಮದಂತೆ ಎಲ್ಲಾ ಭಾಗಗಳನ್ನೂ ಬೋಧಿಸಬೇಕು. ಹಳ್ಳೀ ಶಾಲೆಯ ತಿರುಕೋಳಗಳನ್ನು ಚೆನ್ನಾಗಿ ಅರಿಯಬೇಕಾದವರು "ನಿರಾಲಸ್ಯ ಬೋಧಕ" ಎಂಬ ಬುಕ್ಕನ್ನು ಓದಲಿ. ಹಳ್ಳೀ ಶಾಲೆಗಳಲ್ಲಿ ಓದಿದವರು ಎಷ್ಟು ಜನರು ಅಭಿವೃದ್ಧಿಗೆ ಬಂದಿಲ್ಲ? ಪ್ರೌಢವಿದ್ಯಾಭ್ಯಾಸಕ್ಕೂ ಪ್ರೈಮರಿ ವಿದ್ಯಾಭ್ಯಾಸವೇ ಆದಿಯಲ್ಲವೇ? ಈ ವರುಷವೂ ಪ್ರಜಾಪ್ರತಿನಿಧಿ ಸಭೆಯ ಪುಣ್ಯಾತ್ಮರು ಈ ಬಡಪಾಯಿಗಳ ದುಃಖವನ್ನು ಅರಿಕೆಮಾಡಿ ಘನಹೊಂದಿದ ದಯಾಪೂರ್ಣಚಿತ್ತರಾದ ಸರ್ಕಾರದವರು ಕಷ್ಟಪಟ್ಟು ಕೆಲಸಮಾಡುವ ಸರ್ವಸಾಧಾರಣರಿಗಾದರೂ 16 ರೂಪಾಯಿಗೆ ಕಡಮೆ ಇಲ್ಲದಂತೆ ಮಾಡಿ ಕಾಪಾಡುವಂತೆ ಮಾಡುವರೆಂದು ನಂಬಿ ಪ್ರಾರ್ಥಿಸುವ ವಿದ್ಯಾಭಿಮಾನಿ.

ತಾಲ್ಲೂಕು ವರ್ತಮಾನಗಳು.

ದೊಡ್ಡಬಳ್ಳಾಪುರ.—ಈ ಪ್ರಾಂತ್ಯ ಪೈರುಗಳು ಚೆನ್ನಾಗಿವೆ. ಕಳೆದ 20 ದಿನಗಳಿಂದ ಮಳೆ ಇಲ್ಲದೆ ಪೈರು ಬಾಡುತ್ತಿದ್ದವು. ಈಗ ಸ್ವಲ್ಪ ಮಳೆ ಬಂದು ಪೈರುಗಳು ಚೇತರಿಸಿಕೊಳ್ಳುತ್ತಿವೆ. ಕೆರೆಗಳು ಬತ್ತಿಹೋಗುತ್ತಿವೆ.—ಇಲ್ಲಿನ ಎ. ವಿ. ಸ್ಕೂಲಿಗೆ ಇಬ್ಬರು ಇಂಗ್ಲಿಷ್ ಮಾಸ್ಟರುಗಳು ಸಂಬಳ ಬಡ್ತಿ ಹೊಂದಿ ಬಂದಿರುತ್ತಾರೆ.—ಡಾಕ್ಟರ್ ಮಧ್ವಾಚಾರ್ರಿಗೆ ಬದಲಿ ಎಡೆಹಳ್ಳಿಯಿಂದ ಬೇರೊಬ್ಬರು ಬರುತ್ತಾರೆ.—ಧಾರಣೆವಾಸಿಗಳು ಬಹಳ ಭಿಡಾವಾಗಿವೆ. ತುಪ್ಪ ಸೇರು 9 ಆಣೆ. ರಾಗಿ 11 ಸೇರು ಮಾರುತ್ತೆ. ರಾತ್ರಿ ಕಾಲದಲ್ಲಿ ಭಿಕ್ಷಗಾರರ ಕಾಟ ಹೇಳತೀರದು.—ಚಕ್ರಾಧಿಪತ್ಯದ ಯುದ್ಧದ ರಿಲೀಫ್ ಫಂಡಿಗೆ ಸರ್ಕಾರದ ಆಫೀಸರುಗಳೂ, ಊರಿನ ಮುಖಂಡರೂ, ಮ್ಯುನಿಸಿಪಲ್ ಕೌನ್ಸಿಲರುಗಳೂ ಮಾತ್ರವಲ್ಲದೆ ಸರ್ವಸಾಮಾನ್ಯವಾಗಿ ಪ್ರತಿ ಒಬ್ಬರೂ ಸಹಾಯಮಾಡುತ್ತಿದಾರೆ.—ಹೊಳೆನರಸಿಪುರದಿಂದ ವರ್ಗವಾಗಿ ಬಂದಿರುವ ಮುನ್‌ಸಿಫ್ ಮ॥ ಎನ್. ಕೆ. ಶ್ರೀನಿವಾಸರಾಯರು ಆಗಲೇ ಪ್ರಜಾರಂಜಕರಾಗುತ್ತಿರುವದು ಸಂತೋಷವಾಗಿದೆ.

ತೀರ್ಥಹಳ್ಳಿ, ತಾ॥ ಆರಗ.—ನಮ್ಮ ಊರಿನಲ್ಲಿ ಕನ್ನಡಾ ಜಿಲ್ಲೆಯವರು ಮತ್ತು ಈ ಊರಿನವರು ಸೇರಿ ಓಲ್ವು ಆಡಿ ನೂರು ಇನ್ನೂರು ರೂಪಾಯಿ ಕಳೆದುಕೊಂಡು ಸಾಲದೆ ಮನೆಯಲ್ಲಿರುವ ತಮ್ಮ ಹೆಂಡತಿಗೆ ಮಾವನವರಿಂದ ಕೊಟ್ಟ ಒಡವೆಗಳನ್ನು ಕಸದುಕೊಂಡುಹೋಗಿ ಕಳೆದು ಹೆಣ್ಣುಮಕ್ಕಳಿಗೆ ಬಹಳ ದುಃಖವನ್ನುಂಟುಮಾಡುತ್ತಾರೆ. ಇದಕ್ಕೆ ಮ್ಯಾನೇಜರು ಇಟ್ಟಿರುವಾರೆ. ಮತ್ತು ಸರ್ಕಾರದವರಿಗೆ ಕೇಸುಗಳನ್ನು ಕೊಟ್ಟರೆ ಅವರಿಂದ ನ್ಯಾಯ ಅನ್ಯಾಯಗಳನ್ನು ತಿಳಿಯದೆ ದುಡ್ಡು ತಿನ್ನುವುದರಲ್ಲಿಯೇ ಮನಸ್ಸು ಉಳ್ಳವರಾಗಿರುತ್ತಾರೆ. ಮತ್ತು ಈ ಆಟಗಳನ್ನು ಸಣ್ಣ ಹುಡುಗರು ನೋಡಿ ಮುಂದೆ ಅವರನ್ನು ಹಾಳುಮಾಡುವ ಕೆಲಸವಾಗಿ ಕಾಣುತ್ತದೆ. ಈ ಆಟಕ್ಕೆ ಹಣ ಕೊಟ್ಟವರಿಗೆ ದಿನಕ್ಕೆ ರೂಪಾಯಿ 1 ಕ್ಕೆ ಮೂರು ಪೈ ಮೇರಿಗೆ ಬಡ್ಡಿ ತೆರುತ್ತಾರೆ.—ಅಗ್ರಹಾರದಲ್ಲಿ ಸೊಸೈಟಿಯಲ್ಲಿ ಬ್ರಾಹ್ಮಣರು ಇಚ್ಛಾನುಸಾರ ಕೆಲಸಮಾಡುತ್ತಾ ಇತರರನ್ನು ಲಕ್ಷ್ಯವಿಡದೆ ಇರುವುದರಿಂದ ಇತರ ಮೆಂಬರುಗಳಿಗೆ ಬಹಳ ತೊಂದರೆ ಇರುತ್ತೆ. ಈ ವಿಷಯಗಳನ್ನು ಸರ್ಕಾರದವರು ಗಮನಿಸುವ ಹಾಗೆ ಆಗಬೇಕು.

ಹಾಸನ.—ಕಳೆದ ವಾರ ಎರಡು ದಿನ ಬಹು ಒಳ್ಳೇ ಮಳೆ ಈ ಪ್ರಾಂತ್ಯಕ್ಕೆಲ್ಲಾ ಆಗಿದೆ. ಗಿಡ್ಡರಾಗೀ ಪೈರು ಕೊಯಲಾಗುತ್ತಿದೆ.—ಇಲ್ಲಿನ ಮ್ಯುನಿಸಿಪಾಲಿಟಿಗೆ ಎರಡು ತಿಂಗಳಿಂದೀಚೆಗೆ ಮೂರು ಮಂದಿ ವೈಸ್ ಪ್ರೆಸಿಡೆಂಟರುಗಳಾದರು. ಈಗ ಮ॥ ರಾಜಗೋಪಾಲಾಚಾರ್ರು ಟ್ರೆಜರಿ ಮತ್ತು ವೈಸ್ ಪ್ರೆಸಿಡೆಂಟ್ ಕೆಲಸಗಳನ್ನು ವಹಿಸಿಕೊಂಡಿದಾರೆ. ಮೊದಲು ಈ ಛಾರ್ಜಿನಲ್ಲಿದ್ದ ಮ॥ ಗೋಪಾಲರಾಜೆ ಅರಸಿನವರೂ ಇಲ್ಲಿಯೇ ಇದಾರೆ. ಇವರು ನಡಿಸುವ ಕಾರ್ಯವೇನೋ ಪ್ರಕಟವಾಗಿಲ್ಲ. ಮ॥ ನಾನಾಸಾಮಿರಾಯರು ಮಲೆನಾಡು ಅಭಿವೃದ್ಧಿ ಕಾರ್ಯಕ್ಕೆ ನೇಮಕವಾಗಿದಾರೆ. ಅಧಿಕಾರಿಗಳ ಬದಲಾವಣೆಯು ಇಷ್ಟು ಬೇಗನೆ ನಡೆದರೆ ಮ್ಯುನಿಸಿಪಲ್ ಕೆಲಸಗಳು ಹೇಗೆತಾನೇ ಸಮರ್ಪಕವಾಗಿ ನಡೆಯಬಹುದು?—ಇಲ್ಲಿನ ದೇವಗೆರೆ ಎಂಬ ಚಿಕ್ಕ ಕಲ್ಯಾಣಿಯ ಕೊಳಕುನೀರನ್ನು ಎತ್ತಿ ಹಾಕಿ ಶುಚಿಮಾಡುವ ಕೆಲಸ 1½ ತಿಂಗಳ ಕೆಳಗೆ ಪ್ರಾರಂಭವಾದರೂ ಇನ್ನೂ ಅರೆವಾಸಿಯೂ ಮುಗಿಯಲಿಲ್ಲ. ಆಸ್ಪತ್ರೆ ಎದುರಿನ ಕೊಳಕುನೀರಿನ ಹೊಂಡವು ಇನ್ನೂ ಅಧಿಕಾರಿಗಳ ಗಮನಕ್ಕೇ ಬಂದಂತಿಲ್ಲ. ಇವಲ್ಲದೆ ಅಲ್ಲಲ್ಲಿರುವ ಹಾಳು ಭೂಮಿಗಳನ್ನು ಉದ್ಯಾನಗಳನ್ನಾಗಿ ಮಾಡಿಸಿದರೆ ರಮ್ಯವಾಗಿಯೂ ಆರೋಗ್ಯಕರವಾಗಿಯೂ ಆದೀತು.

ಚಿಕ್ಕನಾಯಕನಹಳ್ಳಿ.—ಮೋಡಮಾಡುತ್ತಾ ಆಗಾಗ್ಗೆ ಸೋನೆ ಮಳೆ ಹೊಯ್ಯುತ್ತಾ ಇದೆ. ಪೈರೆಲ್ಲಾ ಚೆನ್ನಾಗಿದೆ. ಕೆರೆಗೆ ಮಾತ್ರ ನೀರಿಲ್ಲ. ಧಾರಣೆವಾಸಿ ಅಕ್ಕಿ 6-6½ ಸೇರು, ರಾಗಿ 12 ಸೇರು, ತುಪ್ಪ 2 ಸೇರು ಆಗಿದೆ. ಇಂಥಾ ದುರ್ಭಿಕ್ಷಕಾಲದಲ್ಲಿಯೂ ಸಂತೆಯಲ್ಲಿ ಕಮ್ಮಿ ಸೇರುಗಳಲ್ಲಿ ಅಳತೆ ಮಾಡತಕ್ಕವರ ವಿಚಾರದಲ್ಲಿ ಸರ್ಕಾರದವರು ಕೊಂಚ ನಿಗಾ ತೆಗೆದುಕೊಳ್ಳುವದು ಒಳ್ಳೇದು.—ಊರೊಳಗೆ ಬೈಸಿಕಲ್ ಮತ್ತು ಕುದುರೆ ಸವಾರಿ ಮಾಡತಕ್ಕವರ ವಿಚಾರದಲ್ಲಿ ನಮ್ಮ ಅಮಲ್ದಾರ್ರು ಗಮನಕೊಟ್ಟಲ್ಲಿ ಆಬಾಲವೃದ್ಧರ ಪ್ರಾಣದಾನ ಮಾಡಿದಹಾಗೆ ಆಗುತ್ತೆ.—ಇಲ್ಲಿನ ಥಿಯಸಾಫಿಕಲ್ ಸೊಸೈಟಿಯು ದಿನೇ ದಿನೆ ಅಭಿವೃದ್ಧಿಹೊಂದುತ್ತಲಿದೆ. ಕಟ್ಟಡದ ವಿಚಾರದಲ್ಲಿ ಮೆಂಬರುಗಳು ಶ್ರದ್ಧೆವಹಿಸಿದಲ್ಲದೆ ಜಾಗ್ರತೆ ತಯಾರಾಗುವದಿಲ್ಲ.—ಪೋಸ್ಟ್ ಮಾಸ್ಟರು ಬಂದಾರಭ್ಯ ಸಕಾಲಕ್ಕೆ ಕಾಗದಗಳು ತಲಪುತ್ತವೆ. ಆದರೆ ದೇವಾಂಗದವರ ಬೀದಿಗೆ ಒಂದು ಲೆಟರ್ ಬಾಕ್ಸ್ ಅವಶ್ಯಕ. ಊರೊಳಗೆ ಕತ್ತೆಗಳ ಅವಾಂತ್ರ ಬಹಳ. ಕೊಳೆತ ಹಣ್ಣುಹಂಪಲು ಮಾರುವವರ ವಿಚಾರದಲ್ಲಿ ಮ್ಯುನಿಸಿಪಾಲಿಟಿಯವರು ಗಮನಕೊಡುವದು ಒಳ್ಳೇದು.—ರೀಡಿಂಗ್ ರೂಮನ್ನು ಪ್ರಾರಂಭಮಾಡಿದಾಗ ಮೆಂಬರುಗಳಿಗೆ ಇದ್ದ ಕುತೂಹಲವು ಕಾಲಕ್ರಮೇಣ ಕಮ್ಮಿ ಆಗಿರುವ ಹಾಗೆ ತೋರುತ್ತದೆ.—ಕೆರೆ ಕಾವಲುಗಾರರಾದ ಪೋಲೀಸ್ ಜವಾನರು ಹೆಂಗಸರನ್ನು ತುಚ್ಛವಾಗಿ ಮಾತನಾಡುತ್ತಿರುವಂತೆ ವದಂತಿ ಇದೆ. ನಮ್ಮ ಇನ್‌ಸ್ಪೆಕ್ಟರವರು ಗಮನಕೊಟ್ಟರೆ ಕ್ಷೇಮವಾದೀತು.

ಮಧುಗಿರಿ.—ಚಂದ್ರಗ್ರಹಣವಾದ ಈಚೆಗೆ ಒಂದೆರಡು ದಿನ ಮಳೆಯಾಗಿ ಬೆಳೆಗಳಿಗೆ ಮಾತ್ರ ಕೊಂಚ ಅನುಕೂಲವಾಯ್ತು. ಕೆರೆಗೆ ನೀರು ಬರತಕ್ಕ ಮಳೆ ಆಗಲಿಲ್ಲ. ಊರಲ್ಲಿರತಕ್ಕ ಉಪ್ಪುನೀರಿನ ಭಾವಿಗಳೆಲ್ಲಾ ಬತ್ತಿ ಹೋಗಿ ಜನಗಳಿಗೆ ಮುಖ್ಯವಾಗಿ ಬ್ರಾಹ್ಮಣ ಶ್ರೇಣಿಯಲ್ಲಿರುವವರಿಗೆ ನೀರಿನ ತೊಂದರೆ ಬಹಳವಾಗಿರುತ್ತೆ. ಊರಿನ ಶಾಕೀಜಾ ತೃಪ್ತಿಕರವಾಗಿದ್ದರೂ ದಂಡಿನೂರು ಬಾಗಲ ಪ್ರಾಂತ್ಯ ವಾಸವಾಗಿರುವ ಜನಗಳ ಗಲ್ಲಿಗಳಲ್ಲಿ ಹೇಸಿಕೆ ಇದ್ದೇ ಇರುತ್ತದೆ. ರಾತ್ರಿಯಲ್ಲಂತೂ ಆ ಕಡೆ ಇಟ್ಟಿರುವ ದೀಪಗಳಲ್ಲಿ ಪ್ರಕಾಶವೇ ಇಲ್ಲ. ಅಧಿಕಾರಿಗಳು ಸ್ವಲ್ಪ ಗಮನಕ್ಕೆ ತಂದುಕೊಳ್ಳಬೇಕಾಗಿದೆ.

ಬೆಂಗಳೂರು ಲಿಂಗರಾಜಪುರ.—ಇಲ್ಲಿ ರಸ್ತೆಗಳ ಅನಾನುಕೂಲವು ಹೇಳತೀರದು. ಮಳೆಗಾಲದಲ್ಲಿ ಬಹಳ ಗಲೀಜಾಗಿರುತ್ತದೆ. ಜನಗಳು ತಿರುಗಾಡುವ ಹಳ್ಳ ಆಗುವುದಿಲ್ಲ. ಮತ್ತು ಮನೆಗಳಲ್ಲಿನ ಬಚ್ಚಲು ನೀರನ್ನು ನಡುರಸ್ತೆಯೊಳಕ್ಕೆ ಬಿಡುತ್ತಾರೆ. ಊರಿನಿಂದ ಹೊಸೂರು ರಸ್ತೆಯ ಎದುರಿಗೂ ಇರುವ ರಸ್ತೆಯು ಬಹಳ ಗಲೀಜಾಗಿದೆ. ರಸ್ತೆಗಳ ಎರಡು ಪಕ್ಕದಲ್ಲಿಯೂ ದಂಡಿನ ಗೊಬ್ಬರ ಪಾಯಿಖಾನೆ ಮುಂತಾದವುಗಳನ್ನು ತಂದು ಸುರಿಯುತ್ತಾರೆ. ಅದು ನಡುರಸ್ತೆಯ ಎದುರಿಗೂ ಸುರಿದು ಬರುತ್ತದೆ. ಮಳೆಗಾಲದಲ್ಲಿ ಅದರ ಅವಸ್ಥೆ ಹೇಳತೀರದು. ನೀರು ಸೇದುವ ಭಾವಿಯ ಮೇಲಿರುವ ಮರವು ಬಿದ್ದುಹೋಗುವ ಹಾಗಿದೆ. ಅದು ಬಿದ್ದರೆ ಬಹಳ ಅಪಾಯವಾಗುತ್ತದೆ. ಆದ್ದರಿಂದ ಸರ್ಕಾರದವರು ಇದಕ್ಕೆ ನಿಗಾ ಕೊಡುವರೆಂದು ನಂಬಿದ್ದೇನೆ.

ದೇವನಹಳ್ಳಿ.—ಈ ಊರಿನಲ್ಲಿ 16-20 ದಿನಗಳ ಮುಂಚೆ 4-5 ದಿನಗಳ ಮಟ್ಟಿಗೆ ಜಡಿ ಮಳೆ ಹೊಯ್ದು ಹೊಲಗಳಲ್ಲಿ ಪೈರಿಗೆ ಹದವಾಯಿತೇ ವಿನಹ ಕೆರೆ ಕುಂಟೆ ಭಾವಿಗಳಿಗೆ ನೀರು ಬಗಲಿಲ್ಲ. ಈಚೆಗೆ ಮಳೆಯೇ ಇಲ್ಲ. ಧಾರಣೆ ವಾಸಿಗಳು ದಿನೇದಿನೇ ಪ್ರಿಯವಾಗುತ್ತಾ ಇದೆ. ಅಲ್ಪ ಸ್ವಲ್ಪ ಸಂಬಳ ಬರತಕ್ಕ ಸಣ್ಣ ನೌಕರರು ಜೀವಿಸುವುದು ಕಷ್ಟವಾಗಿರುತ್ತೆ.—ಕೋಆಪರೇಟಿವ್ ಸೊಸೈಟಿ ಎಂಬುವ ಬ್ಯಾಂಕು ವರ್ತಕರಿಗೂ, ಸಾಹುಕಾರರಿಗೂ ಅನುಕೂಲವಾದುದೇ ವಿನಹ ಬಡವರಿಗೆ ಆಶ್ರಯವಿಲ್ಲ. ಇವರಿಗೆ ಜಾಮೀನ್ ಯಾರೂ ಬರುವದಿಲ್ಲ. ಜಮೀನ್ ಆಧಾರ, ಭೋಗ್ಯ ವಗೈರೆ ಮಾಡಬೇಕಾದರೆ ಆಸ್ತಿ ಇಲ್ಲ.—ದೊಡ್ಡಬಳ್ಳಾಪುರದಲ್ಲಿ ಸಾಹುಕಾರರು ಸೇರಿ ಈ ಕ್ಷಾಮಕಾಲದಲ್ಲಿ ಬಡವರ ಜೀವನಾರ್ಥವಾಗಿ ಚಂದಾ ಹಾಕಿ ದವಸವನ್ನು ತರಿಸಿ 7 ಸೇರು ಅಕ್ಕಿ, 12 ಸೇರು ರಾಗಿ ಮಾರುತ್ತಿರುವಂತೆ ಇಲ್ಲೂ ಕೆಲವು ಮುಖಂಡರು ಏರ್ಪಾಡು ಮಾಡಿದರೆ ಇಹಕ್ಕೂ ಪರಕ್ಕೂ ಸಾಧಕವಾಗುತ್ತೆ.—ಜಾನ್ವಾರುಗಳಿಗೆ ಮೇವೂ, ನೀರೂ ಇಲ್ಲದೆ ಅನೇಕ ಕಾಲುಬಾಯಿ ರೋಗದಿಂದ ಸಾಯುತ್ತಲಿವೆ.—20-25 ವರ್ಷಗಳಿಂದಲೂ ನಿರೀಕ್ಷಿಸುತ್ತಾ ಇದ್ದ ರೈಲ್ ಕಾಮಗಾರಿಯು ಈಗ ಪೂರೈಸುತ್ತಾ ಬಂದಿದೆ. ಇದೇ ತಿಂಗಳ 16 ನೇ ತಾ. ರೈಲ್ವೆ ಇಲಾಖೆಯ ನೌಕರರೂ ಈ ಗ್ರಾಮದ ಅನೇಕ ದೊಡ್ಡ ಮನುಷ್ಯರೂ ಸೇರಿ ಸಾಮಾನ್ ಭಂಡಿ ಸಾಮಾನ್ ಸಹಿತ ಬಿಡುತ್ತಾ ಇದಾರೆ. ಆದರೆ ಸ್ಟೇಷನ್‌ಗೆ ಸಾಮಾನು ಬರಲಿಕ್ಕೆ ರಸ್ತೆ ಏರ್ಪಾಡು ಆಗದೆ ತೊಂದರೆಯಾಗಿದೆ. ಮತ್ತು ಅಲ್ಲಿಗೆ ಮ್ಯುನಿಸಿಪಾಲಿಟಿಯವರು ಊರಿನಿಂದ ರಸ್ತೆ ಮಾಡುವ ವಿಷಯದಲ್ಲಿ ಸರೋವರದ ಬೀದಿ ದಕ್ಷಿಣ ಮೂಲೆಯಲ್ಲಿ ರಸ್ತೆ ಹಾಕಬೇಕೆಂದು ಯೋಚಿಸುತ್ತಿದಾರೆ. ಇದು ಮೂಲೆ ದೇವಸ್ಥಾನಕ್ಕೆ ಸೇರಿದ ತೋಟ. ರಸ್ತೆ ಮಾಡಲು ಖರ್ಚು ಜಾಸ್ತಿ ಬೀಳುತ್ತೆ; ಮತ್ತು ಜನಗಳಿಗೆ ಅನನುಕೂಲವೂ ಆಗಿರುತ್ತೆ. ಉತ್ತರ ಭಾಗದಲ್ಲಿ ಕ್ರಾಸ್ ರೋಡ್ ಮಾಡಿದರೆ ಭಂಡಿಗಳು ಹೋಗಿ ಬರುವದಕ್ಕೂ, ಜನಗಳು ತಿರುಗಾಡುವದಕ್ಕೂ ಅನುಕೂಲವಾದೀತು. ಆದಷ್ಟು ಬೇಗನೆ ಈ ರೋಡು ತಯಾರಾಗುವುದೆಂದು ನಂಬುತ್ತೇವೆ.—ಅಮಲ್ದಾರ್ ಮ|| ಎಸ್. ಶ್ರೀನಿವಾಸಯ್ಯಂಗಾರ್ರನ್ನೂ, ಪೋಲೀಸ್ ಇನ್‌ಸ್ಪೆಕ್ಟರ್ ಮ|| ಮರಿಯಪ್ಪನವರನ್ನೂ ಏಕಕಾಲದಲ್ಲಿ ವರ್ಗಾಯಿಸಿರುವದು ನಮಗೆಲ್ಲಾ ತುಂಬಾ ವ್ಯಸನವಾಗಿದೆ. ಇನ್‌ಸ್ಪೆಕ್ಟರವರು ಬಂದ 9 ತಿಂಗಳಲ್ಲೇ ಅನೇಕ ಒಳ್ಳೇ ಏರ್ಪಾಟುಗಳನ್ನು ಮಾಡಿದರು. ಇವರು ಬಂದ ಮೇಲೆ ಲಂಚ ರುಷುವತ್ತು ಅಡಗಿ ಹೋಗಿತ್ತು. ಚಟುವಟಿಕೆ, ಶಕ್ತಿ, ಸ್ವಾಮಿಕಾರ್ಯದಲ್ಲಿ ನಿಷ್ಠೆಗಳನ್ನು ತೋರಿಸುತ್ತಾ ಬಂದರು. ಇವರಿಗೆ ಬದಲಾಗಿ ಬರತಕ್ಕವರೂ ಇನ್ನೂ ಉತ್ಕೃಷ್ಟವಾದ ಏರ್ಪಾಟುಗಳನ್ನು ಮಾಡಿ ಕೀರ್ತಿ ಹೊಂದುವರೆಂದು ನಿರೀಕ್ಷಿಸುತ್ತೇವೆ.

ಚಾಮರಾಜನಗರ.—ಇಲ್ಲಿ ಮಳೆ ಸುತರಾಂ ಇಲ್ಲ. ಮೊದಲುಬೆಳೆಗಳೆಲ್ಲಾ ನಿರ್ನಾಮವಾದವು. ಎರಡನೇ ಸಾರಿ ಅಲ್ಪ ಸ್ವಲ್ಪ ಮಳೆ ಬರಲಾಗಿ, ಬತ್ತಿದ್ದ ಹೊಲಗಳನ್ನೆಲ್ಲಾ ತಿರಿಗಿ ಉತ್ತು ರಾಗಿ ಮುಂತಾದ್ದನ್ನು ತಿರಿಗಿ ಬಿತ್ತಿದರು. ಮಳೆಯೇ ಇಲ್ಲ. ಪದಾರ್ಥಗಳೆಲ್ಲಾ ತುಂಬಾ ಪ್ರಿಯವಾಗಿವೆ. ಬಡಬಗ್ಗರು ಜೀವಿಸುವದು ತುಂಬಾ ಪ್ರಯಾಸ. ಸರ್ಕಾರದವರು ಧಾರಣೆಯನ್ನು ಕ್ರಮಪಡಿಸ್ಯಾರೆಂದರೆ ಅದೂ ಇಲ್ಲ.—ಅನೇಕರು ಯುದ್ಧದ ಸಂಗತಿಗಳನ್ನು ಸುಳ್ಳುಸುಳ್ಳಾಗಿ ಅಲ್ಲಲ್ಲಿ ಹರಡುತ್ತಿರುವದರಿಂದ ಜನರು ತುಂಬಾ ಭೀತಿಯುಳ್ಳವರಾಗಿ ದವಸಧಾನ್ಯಗಳನ್ನು ಸಹ ಮುಚ್ಚಿಡುತ್ತಾರೆ. ಕರೆನ್ಸಿ ನೋಟುಗಳು ಸ್ವಲ್ಪ ಹರಿದಿದ್ದರೆ, ಸ್ವಲ್ಪ ಹಳೇವಾಗಿದ್ದರೆ ವರ್ತಕರು ಒಲ್ಲೆವೆಂದು ಹೇಳುತ್ತಾರೆ. ಮಳೆ ಇಲ್ಲದ್ದರ ದೆಸೆಯಿಂದ ಎಲ್ಲಾ ಭಾವಿಗಳಲ್ಲಿಯೂ ಜಲ ಬತ್ತಿಹೋಗಿ ನೀರಿಗೆ ತುಂಬಾ ಕ್ಷಾಮವಾಗಿದೆ. ಚನ್ನೀಪುರದ ಕಟ್ಟೆಯಲ್ಲಿ ಸ್ವಲ್ಪ ಮಟ್ಟಿಗೆ ನೀರಿದೆ. ಅಲ್ಲಿ ಅನೇಕರು ಬಟ್ಟೆಬರೆಗಳನ್ನು ಒಗೆದುಕೊಳ್ಳಬಹುದೇ ಹೊರತು ಪಾನಮಾಡುವ ಹಾಗಿಲ್ಲ. ವಸ್ತ್ರಗಳನ್ನು ಒಗೆಯಲೂ ಅದನ್ನು ಬಿಟ್ಟರೆ ಬೇರೆ ಗತಿ ಇಲ್ಲ. ಇದರಲ್ಲಿ ದನಗಳು ನೀರು ಕುಡಿಯಲಿಕ್ಕೆ ಏನೂ ಅಡ್ಡಿ ಇಲ್ಲ, ಕುಡಿಯಲಿ. ಆದರೆ ದನಗಳನ್ನು ಆ ಸ್ವಲ್ಪ ನೀರಿನಲ್ಲಿ ತೊಳೆಯುವದರಿಂದ ನೀರೆಲ್ಲಾ ಕೆಟ್ಟು ಬಟ್ಟೆಗಳಾದರೂ ಒಗೆಯಲಿಕ್ಕೆ ತುಂಬಾ ಅನನುಕೂಲವಾಗುವ ಪ್ರಯುಕ್ತ ಸರ್ಕಾರದವರು ದನಗಳನ್ನು ತೊಳೆಯದ ಹಾಗೆ ಅಲ್ಲಿ ಒಂದು ಬೋರ್ಡು ಹಾಕಿಸಿದರೆ ತುಂಬಾ ಕ್ಷೇಮವಾಗುತ್ತೆ. ನಮ್ಮ ಅಮಲ್ದಾರ್ರಿಗೆ ಇಂಥಾ ಕಾರ್ಯಗಳ್ಯಾವೂ ಬೇಕಿಲ್ಲದೆ ಇತ್ತು. ಇವರಿಗೆ ಸೊರಬಕ್ಕೆ ವರ್ಗವಾಯಿತು. ಇವರಿಗೆ ಬದಲಾಗಿ ಬಂದಿರುವ ಮ|| ಕೆ. ಕೇಶವಚಾರ್ಯರಾದರೂ ಈ ಕಾರ್ಯಗಳನ್ನೂ, ಇನ್ನೂ ಅನೇಕ ಅವಶ್ಯವೂ ನ್ಯಾಯವೂ ಆದ ಕಾರ್ಯಗಳನ್ನೂ ವಿಮರ್ಶೆಮಾಡಿ ಪ್ರಜೆಗಳ ಪ್ರೀತಿಪಾತ್ರರಾಗಿ ಕೀರ್ತಿಪಡೆಯುವರೆಂಬ ನಿರೀಕ್ಷೆಯಲ್ಲಿದೇವೆ.—17 ನೆ ತಾ ಗಂಡುವೇಷ ಹಾಕಿಕೊಂಡಿದ್ದ ಒಬ್ಬ ಬ್ರಾಹ್ಮಣ ಹೆಂಗಸನ್ನು ಪೋಲೀಸ್ ಆಫೀಸಿಗೆ ತಂದಿದ್ದರು. ಇದರ ವಿವರವೇನಂದರೆ ಈ ಹೆಂಗಸಿನ ತೌರುಮನೆ ಚಾಮರಾಜನಗರಕ್ಕೆ ಸೇರಿದ ಮಂಗಲ. ಇದು 5 ಮೈಲಿ ದೂರದಲ್ಲಿದೆ. ಗಂಡನ ಮನೆ 2 ಮೈಲಿ ದೂರದಲ್ಲಿರುವ ಹರವನಹಳ್ಳಿ. ಈಕೆ ಸುಮಾರು 19-20 ಪ್ರಾಯದವಳು. ಒಂದು ಮಗು ಇದೆಯಂತೆ. ಈಕೆಯನ್ನು ಅಪ್ಪ ಮುಂತಾದವರು ಹುಡುಕುತ್ತಿದ್ದರು. ಮೊನ್ನೆ ದಿನ ಪರಾಯಿ ಹಾಕಿಕೊಂಡು ಬನಿಯನ್ ತೊಟ್ಟುಕೊಂಡು ಕೆಂಪುಶಾಲ್ ಹೊದ್ದುಕೊಂಡು ಗಂಡಸಿನ ಹಾಗೆ ರಸ್ತೆಯಲ್ಲಿ ಹೋಗುವದನ್ನು ಕಂಡು ಪೋಲೀಸಿನವರು ತಂದಿದ್ದರು. ಒಂದು ದಿನ ಇಲ್ಲಿದ್ದ ಮೇಲೆ ತೌರುಮನೆಯವರು ಕರೆದುಕೊಂಡು ಹೋದರು.—ಈ ಊರು ಮ್ಯುನಿಸಿಪಾಲಿಟಿ ಕ್ರಮವಾಗಿಲ್ಲ. ಚರಂಡಿಗಳಲ್ಲಿ ರೊಚ್ಚು ಕೊಳೆತು ನಾರುತ್ತಾ ಇವೆ. ಕೊಳದ ಬೀದಿ ಪರಿವಾರದ ಕೇರಿಯಲ್ಲಂತೂ ಮೂಗಿಡುವದಕ್ಕಾಗದು. ಮ್ಯುನಿಸಿಪಾಲಿಟಿಯವರನ್ನು ವಿಚಾರಿಸುವವರೇ ಇಲ್ಲ. ಈ ಊರಲ್ಲಿ ಸರ್ಕಾರಿ ಕಕ್ಕಸುಗಳಾಗಲಿ ಗುಡಿಸುವವರಾಗಲಿ ಇಲ್ಲದೆ ಕೆಲವರ ಮನೆಗಳಲ್ಲಿ ಪಾಯಿಖಾನೆಗಳು ನಾರುತ್ತಾ ಇವೆ. ಕಡ್ಲೆಕಾಯಿನ ಎಣ್ಣೆ ವಿಶೇಷವಾಗಿ ಇಲ್ಲಿ ಮಾಡುತ್ತಾರೆ. ಅದರಿಂದಲೇ ಚಕ್ಕುಲಿ, ವಡೆ, ಪಕೋಡ ಮುಂತಾದವುಗಳನ್ನು ಮಾಡಿ ಮಾರುತ್ತಾ ಇರುವದರಿಂದ ಅದನ್ನು ತಿಂದು ಅನೇಕರು ನರಳುತ್ತಾರೆ. ಕೇಂದ್ರ ಅಂಗಡಿಗಳ ಬಳಿ ತುಂಬಾ ಗಲೀಜು. ಅಲ್ಲಿಯೂ ದೋಸೆ ಕಡುಬು ಮುಂತಾದ ಬೇರೆ ಪದಾರ್ಥ ಮಾರುತ್ತಾರೆ ಅದರ ತುಂಬಾ ನೊಣಗಳು ತುಂಬಿರುತ್ತವೆ. ಇದನ್ನು ವಿಚಾರಿಸುವವರೇ ಇಲ್ಲ.—ಮಾಂಸದ ಅಂಗಡಿಗಳು 2-3 ಇವೆ. ಈಗ ಸೇರು 1ಕ್ಕೆ 8 ಆಣೆ ಆಗಿದೆ. ಆದಾಗ್ಯೂ ಬಾಜಾರಿ, ಬಡಕಲೂ ಕೊಯ್ಯುತ್ತಾರೆ. ಅವರನ್ನು ಕೇಳುವವರೇ ಇಲ್ಲ. ಊರಲ್ಲಿರುವ ಅಮಲ್ದಾರರೇ ಇದನ್ನೆಲ್ಲಾ ನಿಗಾ ಇಟ್ಟು ಪ್ರಜೆಗಳ ಸೌಕರ್ಯವನ್ನು ಕೋರುವರೆಂದು ನಿರೀಕ್ಷಿಸಲ್ಪಟ್ಟಿದೆ.

ಒಳದೇಶದ ವೃತ್ತಾಂತಗಳು.

ಈ ವಾರ ನಮ್ಮ ಪತ್ರಿಕೆಯು ಹತ್ತು ಪುಟಗಳುಳ್ಳದ್ದಾಗಿದೆ.

ನಾಳೇ ಸಾಯಂಕಾಲ ರಾಜಧಾನಿಯ ದಸರಾ ಪ್ರದರ್ಶನಶಾಲೆಯ ಪ್ರಾರಂಭೋತ್ಸವ ನಡೆಯುವುದಾಗಿದೆ. ಶ್ರೀಮನ್ ಯುವರಾಜರವರು ಅಗ್ರಾಸನವನ್ನು ವಹಿಸುವರು.

ಬೆಂಗಳೂರು ದಂಡಿನ ಬಳಿ ನೀಲಸಂದ್ರದ ಒಂದು ದೇವಸ್ಥಾನದಲ್ಲಿ ಆರೋಗ್ಯಸಾಮಿ ಎಂಬುವನು ಕೆಲವು ಸಾಮಾನುಗಳನ್ನು ಕಳುವು ಮಾಡಿದ್ದಕ್ಕೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಅವನಿಗೆ 21 ದಿನಗಳ ಕಠಿಣಸಜಾ ವಿಧಿಸಿದರು.

ರಾಜಧಾನಿಯಲ್ಲಿ ಈಚೆಗೆ ಸಣ್ಣವಯಸ್ಸಿನ ಹುಡುಗರು ಕರಚೇವಾರಿ ಕಳುವು ಮಾಡುವುದಕ್ಕೆ ಪ್ರಾರಂಭವಾಗಿದೆ. ಸಿಟಿ ಮ್ಯಾಜಿಸ್ಟ್ರೇಟರು ಅಂಥಾ ಹುಡುಗರಿಗೆ ಛಡಿ ಸಜವನ್ನು ವಿಧಿಸಿದರು. ತಂದೆತಾಯಿಗಳು ಮಕ್ಕಳನ್ನು ಹತೋಟಿಯಲ್ಲಿಟ್ಟುಕೊಂಡು ದುರ್ಮಾರ್ಗರ ಸಹವಾಸಕ್ಕೆ ಬಿಡದೆ ಬುದ್ಧಿ ವಿವೇಕಗಳನ್ನು ಕಲಿಸಬೇಕಾಗಿದೆ.

ಬೆಂಗಳೂರು ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫೀಸರಾದ ಮ|| ಮುತ್ತುಸಾಮಿದಾಸ್ ರವರು ಬರೆಯುವದೇನಂದರೆ—ಬೆಂಗಳೂರು ಡಿಸ್ಟ್ರಿಕ್ಟಿನ ಅನೇಕ ಕಡೆಗಳಿಂದ ಅನೇಕ ಭಕ್ತರು ತಿರುಪತಿಗೆ ಯಾತ್ರೆಗಾಗಿ ಪ್ರಯಾಣ ಮಾಡುತ್ತಿರುವಂತೆ ತಿಳಿಯಬಂದಿದೆ. ಪ್ರಕೃತದಲ್ಲಿ ಮೇಲ್ಕಂಡ ಸ್ಥಳದಲ್ಲಿ ಕಾಲರಾ ಉಪದ್ರವು ವ್ಯಾಪಿಸುತ್ತಿರುವುದರಿಂದ ಹಾಗೆ ಹೋಗೋಣದರಿಂದ ಉಂಟಾಗಬಹುದಾದ ಅಪಾಯವನ್ನು ಈ ಮೂಲಕ ಸರ್ವರಿಗೂ ಎಚ್ಚರಿಕೆ ಕೊಟ್ಟಿರುವುದು.

ಒಬ್ಬ ಬಾತ್ಮಿದಾರರಿಂದ.—ಕಾವೇರಿ ರೆಜರ್ವಾಯರ್ ನಲ್ಲಿರುವ ಕೆಲವು ಅಧಿಕಾರಿಗಳೇ ಮುಂತಾದವರು ಸೇರಿ ಕಳೆದ ಭಾನುವಾರ ಒಂದು ರಾಮಮಂದಿರವನ್ನು ಪ್ರಾರಂಭಮಾಡಿ, ಬಹು ಮನೋಹರವಾದ ಉಪನ್ಯಾಸಗಳನ್ನು ನಡಿಸಿದರು. ಸಮಾರಾಧನೆಯೂ ಬೆಳೆಯಿತು. ಸುಮಾರು ಎರಡು ತಿಂಗಳಿಂದ ಹರಿಕಥೆ ಮಾಡುತ್ತಿರುವ ವೇ|| ಕೇಶವದಾಸರಿಗೆ ಚೀಫ್ ಇಂಜನಿಯರ್ ಮ|| ಕರ್ಪೂರ ಶ್ರೀನಿವಾಸರಾಯರ ಅಧ್ಯಕ್ಷತೆಯಲ್ಲಿ ಒಂದು ಭಂಗಾರದ ಮೆಡಲನ್ನು ಕೊಡಿಸಿರುತ್ತಾರೆ.

ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ನೌಕರರಾಗಿರುವ ವೆಂಕಟಸಾಮಿನಾಯ್ಡು ಎಂಬಾತನು ಆ ಆಸ್ಪತ್ರೆಯ ಬಾಗಿಲ ಬಳಿ ಗೋಡೆ ಸಮೀಪದಲ್ಲಿ ಒಂದು ಕಾಗದ ಪೊಟ್ಟಣವನ್ನು ಕಂಡು ಕೈಗೆ ತೆಗೆದುಕೊಂಡು ಬಿಚ್ಚುವುದಕ್ಕೆ ಪ್ರಯತ್ನಪಟ್ಟಾಗ ಅದು ಸಿಡಿಮದ್ದಿನ ಗುಂಡಿನಂತೆ ಫಟ್ಟನೆ ಹಾರಿ ಒಡೆದು ಆತನ ಕೈಗಳಿಗೂ ಮುಖಕ್ಕೂ ಏಟು ಬಿದ್ದು ಸುಟ್ಟಗಾಯಗಳಾದವು. ಆಸ್ಪತ್ರೆಯಲ್ಲಿ ಇಲಾಜು ಮಾಡುತ್ತಿದಾರೆ. ಪೋಲೀಸಿನವರು ಆ ಕಾಗದ ಪೊಟ್ಟಣದ ಪೂರ್ವೋತ್ತರವನ್ನು ಕುರಿತು ವಿಚಾರಣೆಮಾಡುತ್ತಿರುವರು.

ಒಬ್ಬ ಬಾತ್ಮಿದಾರರು ಬರೆಯುವುದೇನೆಂದರೆ—ಬೆಂಗಳೂರಲ್ಲಿರುವ ಸೆಂಟ್ರಲ್ ಮಹಮ್ಮಡನ್ ಅಸೋಸಿಯೇಷನ್ ಸೆಕ್ರಟರಿ ಮತ್ತು ಆನರರಿ ಮ್ಯಾಜಿಸ್ಟ್ರೇಟ್ ಮೆ|| ಮಹಮ್ಮದ್ ಅಬ್ಬಾಸ್ ಖಾನ್ ರವರು ಜುಲುಂ ನಡಿಸಿದರೆಂದು ಮೊಕದ್ದಮೆ ಬಂದು ದೊಡ್ಡಬಳ್ಳಾಪುರದ ಸಬ್ ಡಿವಿಜನ್ ಕೋರ್ಟಿನಲ್ಲಿ ಅವರಿಗೆ 20 ರೂಪಾಯಿ ಜುಲ್ಮಾನೆ ಆಗಿತ್ತಷ್ಟೆ. ಕಳೆದ 15 ನೇ ತಾ. ಮಂಗಳವಾರ ಚೀಫ್ ಕೋರ್ಟಿನಲ್ಲಿ ಅಪೀಲ್ ವಿಚಾರಣೆ ನಡೆದು ಮ|| ಟಿ. ಪರಮಶಿವ ಅಯ್ಯರವರು ಕೆಳಕೋರ್ಟಿನ ಫೈಸಲನ್ನು ರದ್ದುಮಾಡಿ, ಜುಲ್ಮಾನೆ ವಾಪಸ್ ಮಾಡಬೇಕೆಂದು ತೀರ್ಮಾನ ಹೇಳಿದರು.

ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರ ಆಫೀಸಿನಲ್ಲಿ ಮರಾಮತ್ ಗುಮಾಸ್ತೆ ಬಿ. ನರಸಿಂಗರಾಯನೂ, ಓವರ್‌ಸಿಯರ್ ನಾಗರತ್ನ ಮೊದಲಿಯಾರಿಯೂ ಸೇರಿ ಸರ್ಕಾರದ ಸುಮಾರು 908 ರೂಪಾಯನ್ನು ತಿಂದುಹಾಕಿದರೆಂಬ ಮೊಕದ್ದಮೆಯು ಕಳೆದ ಸೋಮವಾರ ಇತ್ಯರ್ಥವಾಯಿತು. ಅ|| ಸೆಷನ್ಸ್ ಜಡ್ಜ್ ಮ|| ಎನ್. ಟಿ. ಗೋಪಾಲಯ್ಯಂಗಾರ್ರವರು ಆ ಇಬ್ಬರ ಮೇಲೂ ಅಪರಾಧ ಋಜುವಾತಾಯಿತೆಂದು ತೀರ್ಮಾನಮಾಡಿ, ಅವರಿಬ್ಬರಿಗೂ ತಲಾ ನಾಲ್ಕು ವರುಷ ಕಠಿಣ ಸಜವನ್ನೂ 500 ರೂಪಾಯಿ ಜುಲ್ಮಾನೆಯನ್ನೂ ವಿಧಿಸಿರುತ್ತಾರೆ.

ಅನೇಕ ಬಡಬಗ್ಗರು ನವರಾತ್ರಿ ಉತ್ಸವದ ನಿಮಿತ್ತ ರಾಜಧಾನಿಗೆ ಬಂದು ಇಲ್ಲಿ ಭೋಜನಕ್ಕೆ ತುಂಬಾ ಕಷ್ಟಪಡುವುದನ್ನು ತಿಳಿದು ನಮ್ಮ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರವರಾದ ಡಾಕ್ಟರ್ ಟಿ. ವಿ. ಆರುಮುಗಂ ಮೊದಲಿಯಾರ್, ರಾಯ ಬಹದ್ದೂರ್ ಯವರು ಕನಿಕರ ಪಟ್ಟು ರಾಜಧಾನಿಯಲ್ಲಿ ಸುಮಾರು ಒಂದು ವಾರದ ತನಕ ಅಂಥಾ ಸ್ಥಳ ಪರಸ್ಥಳದ ಬಡ ಪ್ರಜೆಗಳಿಗೆ ಅನ್ನೋದಕಗಳನ್ನು ನಡಿಸುವುದಕ್ಕೆ ಇಲ್ಲಿನ ಸಾಹುಕಾರ್ ಮ|| ಎಂ. ನರಸಿಂಹಸ್ವಾಮಿಗಳ ಮೂಲಕ ಏರ್ಪಾಡು ಮಾಡಿಸಿರುತ್ತಾರೆಂದು ಕೇಳಿ ಸಂತೋಷಪಡುವೆವು. ಈ ಬಡವರ ಸಮಾರಾಧನೆಗಳು ಹಳೇ ಅಗ್ರಹಾರದ ಬಸವನ ಗುಡಿ ಬಳಿ ನಡೆಯುವುದು.

ಬೆಂಗಳೂರು ದಂಡಿಗೆ ಸೇರಿದ ನೀಲಸಂದ್ರ ಗ್ರಾಮದಲ್ಲಿ ದೇವಸಹಾಯಂ ಎಂಬುವನು ರಾಮಯ್ಯನೆಂಬುವನ ಮನೆಯಲ್ಲಿ ಕೆಲವು ಸಾಮಾನುಗಳನ್ನು ಕಳುವು ಮಾಡಿ, ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ವಿಚಾರಣೆ ಮಾಡಿದಾಗ ಕಳುವು ಮಾಡಿದ್ದುಂಟೆಂದು ಒಪ್ಪಿಕೊಂಡನು. ಇವನಿಗೆ ಹಿಂದೆ ಹತ್ತೊಂಭತ್ತು ಸಲ ಸಜಾ ಶಿಕ್ಷೆಯಾಗಿತ್ತೆಂದು ಪೋಲೀಸಿನವರು ತಿಳಿಸಿದರು. ಮ್ಯಾಜಿಸ್ಟ್ರೇಟರು ಅವನಿಗೆ ಐದು ವರುಷ ಕಠಿಣಸಜಾ ವಿಧಿಸಿದ್ದಲ್ಲದೆ, ಬಂದೀಖಾನೆಯಿಂದ ಬಿಡುಗಡೆಯಾದ ಮೇಲೆ ಐದು ವರುಷ ಅವನು ಪೋಲೀಸಿನವರ ನಿಗಾದಲ್ಲಿರಬೇಕೆಂದು ಹುಕುಂ ಮಾಡಿದರು. ಈಚೆಗೆ ಇವನು ಹುಬ್ಬಳ್ಳಿ ಪ್ರಾಂತ್ಯದಲ್ಲಿ ಕಳುವುಮಾಡಿ ಸಿಕ್ಕಿಬಿದ್ದು ಪೋಲೀಸಿನವರ ಬಂಧನದಿಂದ ತಪ್ಪಿಸಿಕೊಂಡು ಬಂದಿದ್ದನು. ಈಗ ಈ ಮೊಕದ್ದಮೆ ಮುಗಿದಮೇಲೆ ಹುಬ್ಬಳ್ಳಿ ಪೋಲೀಸಿನವರು ಅವನನ್ನು ಅಲ್ಲಿಗೆ ಕರೆದುಕೊಂಡು ಹೋಗಿದಾರೆ.

ಕಳೆದ ಭಾನುವಾರ ರಾಜಧಾನಿಯಲ್ಲಿ ನವರಾತ್ರಿ ಉತ್ಸವಗಳು ಪ್ರಾರಂಭವಾಗಿ ನಡೆಯುತ್ತಲಿವೆ. ಆ ದಿನ ಬೆಳಿಗ್ಗೆ ಸುಮಾರು 9 ಗಂಟೆಗೆ ಶ್ರೀಮನ್ ಮಹಾರಾಜರವರು ದಿವ್ಯಾಲಂಕಾರ ಭೂಷಿತರಾಗಿ ದರ್ಬಾರಿಗೆ ಚಿತ್ತೈಸಿ ಶಾಸ್ತ್ರೋಕ್ತವಾದ ಪೂಜೆ ಮುಂತಾದವುಗಳನ್ನು ನಡಿಸಿ ಒಂದು ಕಡೆ ತೋಪುಗಳೂ ಇನ್ನೊಂದು ಕಡೆ ವಾದ್ಯಘೋಷಗಳೂ ಆಗುತ್ತಿರುವಲ್ಲಿ ಸಿಂಹಾಸನದಲ್ಲಿ ಕುಳಿತುಕೊಂಡರು. ದಿವಾನ್‌ರೇ ಮೊದಲಾದ ಅಧಿಕಾರಿಗಳೂ, ರಾಜಬಂಧುಗಳೂ, ದೊಡ್ಡ ಮನುಷ್ಯರೂ ದರ್ಬಾರಿನಲ್ಲಿ ಹಾಜರಾಗಿದ್ದು ಮುಜರೆ ಮಾಡಿ ನಜರುಗಳನ್ನೊಪ್ಪಿಸಿದರು. ವೈದಿಕಮಂಡಲಿಯವರು ಆಶೀರ್ವಾದಮಾಡಿ ಫಲಮಂತ್ರಾಕ್ಷತೆಗಳನ್ನು ಒಪ್ಪಿಸಿದರು. ಪಟ್ಟದಾನೆಕುದುರೆಗಳು ಕೆರೆ ಬಳಿಗೆ ಮೆರವಣಿಗೆ ಹೋಗಿ ಬಂದವು. ಸೈನಿಕರ ಕವಾತು ನಡೆದು ಕುಶಾಲ್ ಸುರುಟುಗಳು ಆದ ಮೇಲೆ ಶ್ರೀಮನ್ ಮಹಾರಾಜರವರ ಶ್ರೇಯಸ್ಸನ್ನು ಬಯಸಿ ಜಯಧ್ವನಿ ಮಾಡಿದರು. ದಿನವೂ ಸಾಯಂಕಾಲದ ಹೊತ್ತು ಮಹಾರಾಜರವರು ಸಿಂಹಾಸನದ ಮೇಲೆ ಚಿತ್ತೈಸಿ ದರ್ಬಾರ್ ನಡಿಸುವರು. ಕುಸ್ತಿಗಳೂ, ಜಟ್ಟಿಕಾಳಗಗಳೂ, ಪಟ್ಟಾವರಿಸೆಗಳೂ, ಸೈನಿಕರ ಕಸರತ್ತುಗಳೂ, ಬಾಣಬಿರುಸುಗಳೂ ಪದ್ಧತಿಯಂತೆ ನಡೆಯುತ್ತಲಿವೆ.

ಒಬ್ಬ ಬಾತ್ಮಿದಾರರಿಂದ.—ಚನ್ನಪಟ್ಟಣ ತಾಲ್ಲೋಕು ಮಳೂರು ಹೋಬಳಿ ಬೇವೂರು ಗ್ರಾಮದಲ್ಲಿ ಕಳೆದ 20 ನೇ ತಾ. ಭಾನುವಾರ ಅಂಗಡಿ ರಾಮಕ್ಕನು ಬೆಳಗಿನಿಂದ ಸಾಯಂಕಾಲದ ವರೆಗೂ ಅಂಗಡಿಯಲ್ಲಿ ವ್ಯಾಪಾರಮಾಡುತ್ತಾ ಇದ್ದಳು. ಇವಳ ಅಂಗಡಿಯು ನಮ್ಮ ಗ್ರಾಮದ ಮಧ್ಯಸ್ಥದಲ್ಲಿರುತ್ತದೆ. ಇವಳು ಸಾಯಂಕಾಲ 6½ ಗಂಟೆ ಸಮಯದಲ್ಲಿ ದೇವಸ್ಥಾನಕ್ಕೆ ಕರ್ಪೂರ ಕೊಡಲು ಒಂದು ಟಿನ್ ಖಾಲಿ ಡಬ್ಬದಲ್ಲಿದ್ದ ಕಾಗದವನ್ನು ತೆಗೆಯಲು ಡಬ್ಬಕ್ಕೆ ಕೈಹಾಕಿದಳು. ಡಬ್ಬದಲ್ಲಿ ವಾಸವಾಗಿದ್ದ ಒಂದು ಘಟಸರ್ಪವು ತನ್ನನ್ನು ಹಿಡಿದುಕೊಳ್ಳಲು ಬಂದಳೆಂದು ಕಚ್ಚಿತು. ಆಕೆ ಕಚ್ಚಿದ ತಕ್ಷಣ ಕೈ ಈಚೆಗೆ ತೆಗೆಯಲು, ಏನೋ ಕಡಿದಿರಬಹುದೆಂದು ತಿಳಿದುಕೊಂಡು ಸುಮ್ಮನೆ ಕುಳಿತಿದ್ದಳು. ಸ್ವಲ್ಪ ಹೊತ್ತಿನ ಮೇಲೆ ಖಾಲೀಕಾಗದವನ್ನು ತೆಗೆದುಕೊಳ್ಳಲು ಪುನಹ ಕೈಹಾಕಿದಳು ಸರ್ಪವು ಪುನಹ ಅವಳ ಬಲದ ಹೆಬ್ಬೆಟ್ಟಿನ ಮೇಲೆ ಕಚ್ಚಿತು. ಆಕೆ ಮತ್ತೆ ಜಾಗ್ರತೆ ತೆಗೆದುಕೊಂಡು, ಚೇಳು ಕಡಿದಿರಬಹುದೆಂದು ಊಹಿಸಿ, ಕಡಿದ ಸ್ಥಳಕ್ಕೆ ಸುಣ್ಣವನ್ನಿಟ್ಟು ಸ್ವಲ್ಪಹೊತ್ತು ಕುಳಿತಿದ್ದಳು. ಉರಿಯು ಜಾಸ್ತಿಯಾದದ್ದರಿಂದ ಬೀದಿಯಲ್ಲಿ ಹೋಗುತ್ತಿದ್ದವರನ್ನು ಕರೆದು ಮೇಲ್ಕಂಡ ಸಂಗತಿ ತಿಳಿಸಿದಳು. ಅವರು ಆ ಡಬ್ಬವನ್ನು ಈಚೆಗೆ ತಂದು ದೀಪವನ್ನಿಟ್ಟು ನೋಡುವಲ್ಲಿ ಒಳಗೆ ಘಟಸರ್ಪವು ಮಲಗಿದ್ದಿತು. ಜನಗಳು ಗುಂಪುಸೇರಿ ಆ ಹಾವನ್ನು ಹೊಡೆದುಹಾಕಿದರು. ಕೂಡಲೇ ಅದರ ಚಿಕಿತ್ಸೆಗಾಗಿ ನಮ್ಮ ಊರಿಗೆ ಒಂದು ಮೈಲಿದೂರದಲ್ಲಿರುವ ಕೆಲಗೆರೆ ಮ|| ಪಾಪಣ್ಣನವರನ್ನು ಕರೆದುಕೊಂಡುಬರಲು, ಅವರು ಮಂತ್ರಹಾಕಿದರು ಇದರಿಂದ ಅವಳಿಗೆ ಪ್ರಾಣಭಯವೇನೂ ಇಲ್ಲ. ಇಂಥಾ ಹಳ್ಳಿಗಳಲ್ಲಿಯೂ ಇಂಥಾ ಮಂತ್ರಗಾರರು ಇರುವುದು ಬಡಜನರಿಗೆ ತುಂಬಾ ಪ್ರಯೋಜನವಾಗಿದೆ [ಈ ಸರ್ಪವು ವಿಷವುಳ್ಳ ಸರ್ಪವಲ್ಲವೆಂದು ತೋರುತ್ತದೆ —ಎಡಿ]

ಮೈಸೂರು ಗೆಜೆಟ್ ಸಂಗ್ರಹ.

ಮಳವಳ್ಳಿಯ ಸಬ್ ರೆಜಿಸ್ಟ್ರಾರ್ ಮ|| ಎಸ್. ಎ. ಸುಬ್ರಹ್ಮಣ್ಯ ಅಯ್ಯರವರನ್ನು ಮಳವಳ್ಳಿ ತಾಲ್ಲೂಕ್ ಬೋರ್ಡಿನ ವೈಸ್ ಪ್ರೆಸಿಡೆಂಟರಾಗಿ ಮೆಂಬರುಗಳು ಚುನಾವಣೆ ಮಾಡಿದಾರೆ.

ಚಿಕ್ಕಮಗಳೂರು ತಾಲ್ಲೂಕ್ ಮಾಗ್ಡಿ ಗ್ರಾಮದ ಕೆರೆಗಳ ಪಂಚಾಯತಿಗೆ ಮ|| ಗಳಾದ ದೊಡ್ಡೇಗೌಡರು, ದಾಸಪ್ಪನವರು, ತಿಮ್ಮಪ್ಪನವರು, ಪಟೇಲ್ ನಿರ್ವಾಣಗೌಡರು, ಶಾನುಭೋಗ್ ರಾಮರಾಯರು ಮೆಂಬರುಗಳಾಗಿ ನೇಮಿಸಲ್ಪಟ್ಟಿದಾರೆ.

ದೊಡ್ಡಬಳ್ಳಾಪುರದ ತಾಲ್ಲೂಕ್ ಮಧುರೆ ಅಮಾನೀಕೆರೆ ಪಂಚಾಯತಿಗೆ ಮುಂದೆ ಹೇಳುವವರನ್ನು ಮೆಂಬರುಗಳಾಗಿ ನೇಮಿಸಿದೆ.—ಮ|| ಗಳಾದ ಬ್ಯಾಟಗೌಡರು (ಪ್ರೆಸಿಡೆಂಟ್), ಶ್ಯಾನುಭೋಗ್ ಸೂರಪ್ಪನವರು, ವೀರೆಗೌಡರು, ಅಪ್ಪಾಜಿಗೌಡರು, ಹಲಿಗಪ್ಪನವರು, ರಾಜಪ್ಪನವರು, ಗೋವಿಂದಸಿಂಗರು.

ಅ|| ಸರ್ಜನ್ ಮಿಸ್ ಎ. ಜಿ. ಆಲ್ಲೆನ್ ರವರಿಗೆ ಕೊಟ್ಟಿರುವ ಒಂದು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೂ 27 ದಿನ ಜಾಸ್ತಿ ಮಾಡಿದೆ.

ಮುಂದೆ ಹೇಳುವ ಅಮಲ್ದಾರರುಗಳ ವರ್ಗಾವರ್ಗಿ ಹುಕುಂ ಮಾಡಿದೆ.— ಮ|| ಜಿ. ಬಾಲರವರು ಜಗಲೂರಿಂದ ಚಿಕ್ಕಬಳ್ಳಾಪುರಕ್ಕೆ, ಮ|| ಟಿ. ಹನುಮಂತರಾಯರು ಕುಣಿಗಲಿನಿಂದ ಬೌರಿಂಗ್‌ಪೇಟೆಗೆ, ಮ|| ಕೆ. ಸಿದ್ದರಾಮಪ್ಪನವರು ಬೌರಿಂಗ್‌ಪೇಟೆ ಅಮಲ್ದಾರರಾಗಿ ಬದಲಿ ನೋಡತಕ್ಕದ್ದು.

ಪ್ರೊ|| ಅ|| ಕಮಿಷನರುಗಳಾದ ಮ|| ಎಂ. ವೆಂಕಟೇಶಯ್ಯಂಗಾರ್ರನ್ನು ಬೆಂಗಳೂರು ಡಿಸ್ಟ್ರಿಕ್ಟಿನಿಂದ ರೆವಿನ್ಯೂ ಜನರಲ್ ಸೆಕ್ರೆಟರಿಯಟ್ಟಿಗೂ, ಮ|| ಜಿ. ಪುಟ್ಟಪ್ಪನವರನ್ನು ಸೆಕ್ರೆಟೇರಿಯಟ್ಟಿನಿಂದ ಬೆಂಗಳೂರು ಡಿಸ್ಟ್ರಿಕ್ಟಿಗೂ ವರ್ಗ ಮಾಡಿದೆ.

ಮ|| ಸಿ. ಕೆ. ಗೋಪಿನಾಥನವರನ್ನು 150 ರೂಪಾಯಿ ಸಂಬಳದ ಮೇಲೆ 3 ನೇ ಕ್ಲಾಸ್ ಸೂಪರ್‌ವೈಜರಾಗಿ ಒಂದು ವರುಷಕ್ಕೆ ನೇಮಕ ಮಾಡಿಕೊಂಡು ಕಾವೇರಿ ರೆಜರ್ವಾಯರ್ ಡಿವಿಜನ್‌ಗೆ ವರ್ಗ ಮಾಡಿದೆ.

ವೃತ್ತಾಂತಪತ್ರಿಕೆ ಏಜಂಟರಿಗೆ ಸೂಚನೆ.

ವೃತ್ತಾಂತ ಪತ್ರಿಕೆಯ 1914-15 ನೇ ವರುಷದ ಒಂದನೇ ಕ್ವಾರ್ಟರು ಕಳೆದ ಆಗಸ್ಟ್ ತಿಂಗಳಿಗೆ ಪೂರೈಸಿದೆ. ಏಜಂಟರುಗಳು ಆ ಕ್ವಾರ್ಟರಿನ ಲೆಕ್ಕಗಳನ್ನು ಮುಗಿದುಮಾಡಿ, "ಬಿ" ಫಾರಂಗಳಿಗೆ ಎತ್ತಿ ಬರೆದು, ತಮ್ಮ ತಮ್ಮ ಸೂಪರಿಂಟೆಂಡೆಂಟರಿಗೆ ಒಂದು ಪ್ರತಿಯನ್ನೂ, ನಮಗೆ ಒಂದು ಪ್ರತಿಯನ್ನೂ ಈ ವಾರದಲ್ಲೇ ಜಾಗ್ರತೆಯಿಂದ ಕಳುಹಿಸಿಕೊಡಬೇಕಾಗಿ ಕೃತಪಡಿಸಿದೆ.

ನೀವು ಕೇಳಿದ ಹಾಗೆ ಪತ್ರಿಕೆಗಳನ್ನು ಜೆಟ್ಟಾಗಿ ಕಳುಹಿಸುತ್ತಾ ಬರುವೆವು. ಆದರೆ ಬಿಡಿ ಪತ್ರಿಕೆಗಳನ್ನು ಮಾರಲೇ ಕೂಡದು. ಮುಂದಿನ 1915 ನೇ ಅಕ್ಟೋಬರ್ ವರೆಗೆ ಅಡ್ವಾನ್ಸು ಕೊಟ್ಟು ಕ್ರಮವಾಗಿ ಚಂದಾದಾರರಾಗತಕ್ಕವರಿಗೆ ಮಾತ್ರ ಪತ್ರಿಕೆಗಳನ್ನು ತಪ್ಪಿಸದೆ ಕೊಡುತ್ತಾ ಬರಬೇಕೆಂದು ಕೋರುತ್ತೇವೆ.

ಮ್ಯಾನೇಜರ್, "ವೃತ್ತಾಂತ ಪತ್ರಿಕೆ," ಮೈಸೂರು.

ಗೃಹಕೃತ್ಯದ ನೋಟೀಸು.

ತೀರ್ಥಹಳ್ಳಿ ತಾಲ್ಲೋಕು ಆರಗದಲ್ಲಿ ಗತಿಸಿದ ಅಂಗಡಿ ಶೇಷನಾಯ್ಕರ ಎರಡನೇ ಕುಮಾರ ಗೋವಿಂದಣ್ಣನು ಇದರಿಂದ ಸಕಲರಿಗೂ ತಿಳಿಯಪಡಿಸುವದೇನಂದರೆ—ನನ್ನ ತಂದೆಯು ಸಂಪಾದಿಸಿದ ಸ್ಥಿರ ಚರ ಸ್ವತ್ತುಗಳನ್ನು ನನ್ನ ಖಾಸಾ ಅಣ್ಣನಾದ ಶೀನಪ್ಪನು ದುಂದುಖರ್ಚು, ಸಾಲಾ ವಗೈರೆ ನಾನಾ ರೀತಿಯಾಗಿ ಹಾಳುಮಾಡುತ್ತಿದಾನೆ. ನನ್ನ ಅನುಮತಿಯಿಲ್ಲದೆ ಪಿತ್ರಾರ್ಜಿತ ಸೊತ್ತುಗಳನ್ನು ಕ್ರಯ ವಿಕ್ರಯಗಳಿಂದ ಪರಭಾರೆ ಮಾಡುತ್ತಿರುವದಾಗಿಯೂ ತಿಳಿದುಬಂದಿರುವದರಿಂದ ಇನ್ನು ಮುಂದೆ ಯಾರು ಸಾಲ ಕೊಟ್ಟಾಗ್ಯೂ ಶೀನಪ್ಪನೇ ಸಾಲ ತೀರಿಸತಕ್ಕವನೇ ಹೊರತು ನನಗೂ ಅದಕ್ಕೂ ಯಾವ ಸಂಬಂಧವಿಲ್ಲ. ಈ ತಾರೀಖಿನಿಂದ ನಾನು ಪಿತ್ರಾರ್ಜಿತ ಸೊತ್ತುಗಳನ್ನೆಲ್ಲಾ ನನ್ನ ಅಣ್ಣ ಶೀನಪ್ಪನವಶಕ್ಕೆ ವಹಿಸಿ ಗೃಹಕೃತ್ಯದ ಸಕಲ ಹಕ್ಕು ಬಾಧ್ಯತೆಯನ್ನೂ ತೊರೆದು ಸ್ವಯಾರ್ಜಿತದಿಂದ ಜೀವಿಸುತ್ತಾ ಇದೇನೆ. ಇನ್ನು ಮುಂದೆ ನನ್ನ ತಂದೆಯ ಸಾಲಕ್ಕೂ ಮೂಲಕ್ಕೂ ಅಣ್ಣನಾದ ಶೀನಪ್ಪನು ಬಾಧ್ಯನೇ ಹೊರತು ನನಗೆ ಇದರ ಸಂಬಂಧವಿಲ್ಲವೆಂದು ಈ ನೋಟೀಸ್ ಮೂಲಕ ತಿಳಿಸಿದೇನೆ.

[211-1] ರಜು, ಮಾಳವಿಷ್ಣುಭಕ್ತ ಗೋವಿಂದಣ್ಣ.

ವ್ಯಾಪಾರ ಮತ್ತು ವ್ಯವಸಾಯ.

[ನಮ್ಮ ಮೈಸೂರು ಸಂಸ್ಥಾನದಿಂದ ಸರ್ಕಾರಿ ವೇತನವನ್ನು ಪಡೆದುಹೋಗಿ ಇಂಗ್ಲೆಂಡಿನಲ್ಲಿ ವಿದ್ಯಾಭ್ಯಾಸಮಾಡುತ್ತಿರುವ ಮ. ಎಸ್. ಗರಳಪುರಿ ಶಾಸ್ತ್ರಿಯವರು ಬರೆದಿರುವ ಈ ಎರಡನೆಯ ಲೇಖನವನ್ನು ಬಹಳ ಸಂತೋಷದಿಂದ ಪ್ರಕಟಿಸುವೆವು.—ಎಡಿ.]

ನಮ್ಮ ದೇಶದ ಜನರಿಗೆ ವ್ಯಾಪಾರ ಮಾಡಲು ಬರುತ್ತದೆಯೇ? ನಮ್ಮವರುಗಳು ವ್ಯಾಪಾರದ ಗುಟ್ಟುಗಳನ್ನೆಲ್ಲಾ ತಿಳಿದುಕೊಂಡಿದ್ದಾರೆಯೇ? ಹೋದ ವರ್ಷ ನಾನು ಮೈಸೂರಲ್ಲಿದ್ದಾಗ್ಗೆ ಒಬ್ಬ ವರ್ತಕನನ್ನು ಕೇಳಿದ್ದಕ್ಕೆ "ಅದರ ಗುಟ್ಟೇನು ಸ್ವಾಮಿ, ನಮ್ಮ ಚಿಕ್ಕ ಹುಡುಗರಿಗೆ ಕೂಡ ಗೊತ್ತಿದೆ. ಮುಕ್ಕಾಲು ಆಣೆ ಕೊಟ್ಟು ಒಂದು ಡಜನ್ ದೀಪದ ಕಡ್ಡಿ ಪೆಟ್ಟಿಗೆ ಕೊಂಡು ತಂದು ಒಂದು ಆಣೆಗೆ ಮಾರುತ್ತಾನೆ. ಕಾಲಾಣೆ ಲಾಭ. ಅದೇ ಗುಟ್ಟು. ಯಾರು ಬೇಕಾದರೂ ಮಾಡಬಹುದು" ಎಂದು ಹೇಳಿದನು. ಹೌದು, ಗುಟ್ಟೇನೂ ಪ್ರಥಮತಃ ಇದಕ್ಕಿಂತ ಅತಿಶಯ ಕಾಣಬರುವುದಿಲ್ಲ. ಆದರೆ ಇದರ ಜೊತೆಯಲ್ಲಿ ಇನ್ನೂ ಅನೇಕ ಗುಟ್ಟುಗಳಿವೆ. ಇದನ್ನೆಲ್ಲಾ ಪಾಶ್ಚಿಮಾತ್ಯರು ತಿಳಿದು ದಿನೇ ದಿನೇ ತಮ್ಮ ವ್ಯಾಪಾರಗಳನ್ನು ಅಭಿವೃದ್ಧಿಪಡಿಸಿಕೊಂಡು ದೇಶದಿಂದ ದೇಶಕ್ಕೆ ಧೈರ್ಯವಾಗಿ ಹೋಗಿ ತಮ್ಮ ಸಾಮಾನು ಸರಕುಗಳನ್ನು ಲಾಭದಿಂದ ಮಾರಿ ತಮಗೆ ಬೇಕಾದ ವಸ್ತುಗಳನ್ನು ಸುಲಭ ಬೆಲೆಯಲ್ಲಿ ಕೊಂಡು ತಮ್ಮ ದೇಶದಲ್ಲಿ ಅವುಗಳನ್ನು ಲಾಭಕ್ಕೆ ಮಾರಿ ಹಣವನ್ನು ಅಪಾರವಾಗಿ ಸಂಪಾದಿಸಿದರು; ಮತ್ತು ಈಗಲೂ ಸಂಪಾದಿಸುತ್ತಲೇ ಇದ್ದಾರೆ. ಇಂಗ್ಲೀಷು ಜನರು ಪ್ರಾರಂಭದಲ್ಲಿ ಹಿಂದುಸ್ಥಾನಕ್ಕೆ ವ್ಯಾಪಾರಿಗಳಾಗಿ ತಾನೇ ಬಂದರು!

ನಮ್ಮ ದೇಶದವರಿಗೆ ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ, ಅಮೇರಿಕಾ ಮುಂತಾದ ದೇಶಸ್ಥರಂತೆ ವ್ಯಾಪಾರದಲ್ಲಿ ಚಟುವಟಿಕೆ ಇದೆಯೇ? ಪಾರ್ಸೀ ಜನರ ಮಟ್ಟಿಗಾದರೂ ವ್ಯಾಪಾರ ವಿಷಯದಲ್ಲಿ ಇರುವ ಚುರುಕುಬುದ್ಧಿ ನಮ್ಮ ದೇಶದವರಿಗೆ ಬಂದಿದೆಯೇ? ಸುಮ್ಮನೆ ಒಂದು ಸಣ್ಣ ಅಂಗಡಿಯನ್ನು ಇಟ್ಟುಕೊಂಡು ದುಬಾರಿ ವಸ್ತುಗಳನ್ನು ಸ್ವಲ್ಪ ಸ್ವಲ್ಪವಾಗಿ ಇಟ್ಟುಕೊಂಡು ಜೀವನ ಸಂಪಾದಿಸಿಕೊಳ್ಳುವುದು ಅಷ್ಟೇನೂ ಕಷ್ಟವಲ್ಲ. ಸೀಮೆಯವರು ಪ್ರವರ್ತಿಸುವ ರೀತಿ ಕಾರ್ಖಾನೆಗಳನ್ನು ಇಟ್ಟು ಪದಾರ್ಥಗಳನ್ನು ತಯಾರು ಮಾಡಿ ಸರಿಯಾದ ಸಂತೆಯಲ್ಲಿ ಮಾರಿ ಲಾಭವನ್ನು ಸಂಪಾದಿಸುವಷ್ಟು ಸಾಮರ್ಥ್ಯ ನಮ್ಮ ದೇಶದ ಜನರಿಗೆ ಇನ್ನೂ ಬಂದಿರುವ ಹಾಗೆ ಕಾಣುವುದಿಲ್ಲ. ಇದಕ್ಕೆಲ್ಲಾ ಕಾರಣಗಳು ಅನೇಕ ಉಂಟು. ಪಾಶ್ಚಿಮಾತ್ಯ ಜನಗಳೊಡನೆ ಹೋಲಿಸಿ ನೋಡಿದಲ್ಲಿ ನಮ್ಮವರು ಸೋಮಾರಿಗಳು, ಒಬ್ಬರೊಬ್ಬರು ವೃಥಾ ಅಪನಂಬಿಕೆಯುಳ್ಳವರು, ವಿದ್ಯಾವಂತರಲ್ಲ. ಬಾಕೀ ದೇಶದ ನಾಗರಿಕ ಜನರಂತೆ ದೇಶವನ್ನು ಅಭಿವೃದ್ಧಿಗೆ ತರಲು ತಾವೂ ಕೂಡ ಉಚ್ಛ್ರಾಯಸ್ಥಿತಿಗೆ ಬರಬೇಕೆಂಬ ಹುಮ್ಮಸ್ಸೂ, ಆಸೆಯೂ ಇಲ್ಲ. ಇದಲ್ಲದೆ ವೈಗಾರಿಕೆಗಳು ನಮ್ಮ ದೇಶದಲ್ಲಿ ಅಷ್ಟೂ ಇಲ್ಲದ ಕೃಷಿಯಲ್ಲೂ ಮುಖ್ಯ ಕಾರಣ ಒಂದುಂಟು. ಪಾಶ್ಚಿಮಾತ್ಯರಿಗಿಂತ ನಮ್ಮವರು ಬಹಳ ಬಡವರು. ನಮ್ಮವರಿಗೆ ಸದ್ಯ ಕೃಷಿಯೇ ಮುಖ್ಯವಾದ ಜೀವನೋಪಾಯ. ಕೃಷಿಯಲ್ಲಿಯೂ ಕೂಡ ಸಾವಿರ ವರ್ಷಗಳ ಹಿಂದೆ ನಮ್ಮ ಪೂರ್ವಿಕರು ಯಾವ ರೀತಿ ವ್ಯವಸಾಯ ಮಾಡುತ್ತಿದ್ದರೋ ಈಗಲೂ ಅದೇ ರೀತಿಯಲ್ಲಿಯೇ ಭೂಮ್ಯವಸಾಯವನ್ನು ನಡಿಸುತ್ತಲಿದ್ದೇವೆ. ನಾವಂತೂ ಮುಂದಕ್ಕೆ ಬರಲಿಲ್ಲ. ಮುಂದಕ್ಕೆ ಬರುವವರು ನಮಗೆ ತೋರಿಸಿಕೊಟ್ಟಿರುವ ಹೊಸ ಸಾಧನಗಳನ್ನು ಬಾಧಕವಿಲ್ಲದೆ ನಮ್ಮ ದೇಶದಲ್ಲಿ ಎಷ್ಟು ಮಟ್ಟಿಗೆ ಉಪಯೋಗಿಸಬಹುದೋ ಅಷ್ಟರ ಮಟ್ಟಿಗೆ ಕೂಡ ನಾವು ಉಪಯೋಗಿಸುತ್ತಾ ಇಲ್ಲ. ಮೈಸೂರು ದೇಶದಲ್ಲಿ ವ್ಯವಸಾಯದಲ್ಲಿ ರೈತರಿಗೆ ಸಹಾಯ ಮಾಡಲು ಬದ್ಧಕಂಕಣರಾಗಿರುವ ಶಾಸ್ತ್ರಜ್ಞರನ್ನು ಸರ್ಕಾರದವರು ಉದಾರದಿಂದ ಏರ್ಪಡಿಸಿಕೊಟ್ಟಿರುತ್ತಾರೆ. ತಮ್ಮ ಶಕ್ತಿ ಮೀರಿ ಈ ಪ್ರಾಜ್ಞರುಗಳು ಕೆಲಸ ಮಾಡುತ್ತಿರುವಂತೆ ತೋರಿ ಬರುತ್ತಾ ಇದೆ. ಆದಾಗ್ಯೂ ರೈತರು ಇವರಲ್ಲಿ ನೂರಕ್ಕೆ ಐದು ಮಂದಿಗಿಂತ ಹೆಚ್ಚಾಗಿ ಈ ವ್ಯವಸಾಯದ ಇಲಾಖೆಯು ಸ್ಥಿತಿಯೇ ಗೊತ್ತಿಲ್ಲ. ಮಾರಿ ಕನ್ನಂಬಾಡಿ ಕಾಲುವೆಗಳ ಕೆಳಗೆ ಸಾವಿರಾರು ಎಕರೆ ಭೂಮಿ ಅತ್ಯುತ್ತಮವಾದ ಕಬ್ಬಿನ ವ್ಯವಸಾಯಕ್ಕೆ ಅನುಕೂಲವಾಗಿದೆ. ನಮ್ಮ ದೇಶದವರು ಕಬ್ಬಿನ ವ್ಯವಸಾಯಕ್ಕೆ ಹೆಚ್ಚು ಗಮನಕೊಡಬೇಕು. ಮತ್ತು ಶುಭ್ರವಾದ ಅಸ್ಸಲ್ ಸಕ್ಕರೆ ತಯಾರು ಮಾಡುವುದನ್ನು ಕಲಿತು ಬೆಲ್ಲದ ಬದಲು ಸಕ್ಕರೆಯನ್ನು ತಯಾರು ಮಾಡಬೇಕು.

ಇವೆಲ್ಲಾ ಸರಿಯೆ. ನಮ್ಮ ದೇಶದಲ್ಲಿ ಅನೇಕ ಕಡೆಗಳಲ್ಲಿ ಬಾಳೆ ತೋಟಗಳಿವೆ. ಬಾಳೆ ಎಲೆಯನ್ನು ಉಪಯೋಗಿಸುತ್ತೇವೆ. ಬಾಳೇಕಾಯನ್ನೂ ಬಾಳೆಹಣ್ಣನ್ನೂ ಉಪಯೋಗಿಸುತ್ತೇವೆ. ಅನೇಕ ಕಡೆಗಳಲ್ಲಿ ದಿಂಡನ್ನೂ ಆಹಾರವಾಗಿ ಉಪಯೋಗಿಸುತ್ತೇವೆ. ಬಾಳೇ ನಾರು ಅತ್ಯಂತ ಪ್ರಯೋಜನಕರವಾದದ್ದೆಂದು ಅನೇಕರಿಗೆ ತಿಳಿದೇ ಇದೆ.

ಈಚೀಚೆಗೆ ಯೂರೋಪ್ ಖಂಡದಲ್ಲಿ, ಅದರಲ್ಲೂ ಅತಿಶಯವಾಗಿ ಇಂಗ್ಲೆಂಡಿನಲ್ಲಿ ಬಾಳೇ ಹಣ್ಣನ್ನು ವಿಶೇಷವಾಗಿ ಉಪಯೋಗಿಸುತ್ತಿದ್ದಾರೆ. ಇದನ್ನು "ಬನಾನಾ" ಎಂದು ಕರೆಯುತ್ತಾರೆ. ನಮ್ಮ ಹಣ್ಣುಗಳಿಗಿಂತ ಇವು ತುಂಬಾ ನೀಳವಾಗಿಯೂ ಮತ್ತು ದೃಢವಾಗಿಯೂ ಇರುತ್ತವೆ. ಹಾಸನದ ಡಿಸ್ಟ್ರಿಕ್ಟಿನಲ್ಲಿ ಈ ತರಹಾ ಹಣ್ಣುಗಳನ್ನು ಕೆಲವು ಕಡೆಗಳಲ್ಲಿ ಬೆಳೆಯುತ್ತಾರೆಂದು ಕಾಣಬರುತ್ತೆ. "ಮರಬಾಳೆ" (?) ಎಂದು ಆ ಪ್ರಾಂತ್ಯ ಕರೆಯುತ್ತಾರೆ.

ಐವತ್ತು ವರ್ಷಗಳ ಹಿಂದೆ ಇಂಗ್ಲೆಂಡಿಗೆ ಜಮೇಕಾ ದ್ವೀಪದಿಂದ 728 ಪೌಂಡು [ಪೌಂಡು ಒಂದಕ್ಕೆ 15 ರೂಪಾಯಿ] ಖರೀದಿಯುಳ್ಳಷ್ಟು ಬಾಳೇ ಹಣ್ಣುಗಳು ಬಂದವು. ಈಗಲಾದರೋ ಇಂಗ್ಲೆಂಡಿಗೆ ಮಾತ್ರ 15,00,000 ಪೌಂಡುಗಳಷ್ಟು ಹಣ್ಣುಗಳು ತರಿಸಲ್ಪಡುತ್ತಲಿವೆ.

ಇಲ್ಲಿ ಬಾಳೆಹಣ್ಣಿನ ಖರೀದಿ ಆಣೆಗೆ ಒಂದು; ಬಹಳ ಅಗ್ಗವಾದರೆ ಎರಡು ಆಣೆಗೆ ಮೂರು. ಇದು ನಮ್ಮ ದೇಶದವರಿಗೆ ಆಶ್ಚರ್ಯವಾಗಿ ಕಾಣಬಹುದು. ಈ ಹಣ್ಣುಗಳು ಬಹಳ ದೊಡ್ಡವೆಂಬುವುದನ್ನು ಮನಸ್ಸಿನಲ್ಲಿ ಗಮನಿಸಬೇಕು.

ಬಾಳೆಗಿಡಕ್ಕೆ ಅತ್ಯಧಿಕವಾದ ವ್ಯವಸಾಯವು ಅವಶ್ಯಕವಿಲ್ಲವೆಂದು ಗೊತ್ತೇ ಇದೆ. ಸರಿಯಾದ ಭೂಮಿಯಲ್ಲಿ ಗಿಡಗಳನ್ನು ಸಾಲಾಗಿ ಇಪ್ಪತ್ತೈದು ಅಡಿಗೆ ಒಂದು ಬಾಳೆಮೊಳಕೆ ಹಾಕಬೇಕು. ಸಾಲಿನಿಂದ ಸಾಲಿಗೆ ಹದಿನೆಂಟು ಅಡಿ ಸ್ಥಳ ಬಿಟ್ಟಿರಬೇಕು. "ಕಂದು"ಗಳು ಒಡೆಯುತ್ತಾ ಬಂದರೆ ಒಂದು ಅಥವಾ ಎರಡಕ್ಕಿಂತಲೂ ಹೆಚ್ಚಾಗಿ ತಾಯಿಗಿಡದ ಹತ್ತಿರ ಬಿಡಕೂಡದು. ಕಡಿದ ಮಟ್ಟಿಗೂ ಗೊಬ್ಬರವನ್ನು ಹಾಕಬೇಕು. ಮೂರು ಅಥವಾ ನಾಲ್ಕು ವರ್ಷಗಳಿಗಿಂತಲೂ ಹೆಚ್ಚಾಗಿ ಒಂದೇ ಗುಳಿಯಲ್ಲಿ ಗಿಡವನ್ನು ಬೆಳಸಕೂಡದು. ಸುಮಾರು 160 ಗಿಡಗಳಿಗಿಂತಲೂ ಹೆಚ್ಚಾಗಿ ಒಂದು ಎಕರೆಗೆ ಹಾಕಬಾರದು.

ಮೇಲೆ ಹೇಳಿದ ರೀತಿ ಸರಿಯಾದ ವ್ಯವಸಾಯ ಮಾಡಿದರೆ ಅತ್ಯುತ್ತಮವಾದ ಫಲ ಸಿಕ್ಕುತ್ತದೆ. ಮತ್ತು ಪ್ರತಿ ಒಂದು ಬಾಳೇ ಗಿಡವೂ ನಾಲ್ಕು ಪೌನು ತೂಕದಷ್ಟು ಸೊಗಸಾದ ನಾರನ್ನು ಕೊಡುತ್ತದೆ. ಬಾಳೇ ದಿಂಡಿನ ರಸದಿಂದ ಅತ್ಯುತ್ತಮವಾದ ಕಾಯಿ ತಯಾರು ಮಾಡುತ್ತಾರೆ.

"ಬನಾನಾ" ಎಂಬುವ ತರಹಾ ಬಾಳೆಯನ್ನು ಸುಮಾರು ನೂರು ಎಕರೆ ಜಾಗದಲ್ಲಿ ಹಾಕಿಸಿ ಸರಿಯಾಗಿ ವ್ಯವಸಾಯ ಮಾಡಿಸಿ ಹಣ್ಣನ್ನು ಸೀಮೆಗೆ ಕಳುಹಿಸಿ ಅಪಾರವಾದ ಲಾಭವನ್ನು ಸಂಪಾದಿಸುವ ಧೀರನು ನಮ್ಮ ದೇಶದಲ್ಲಿ ಇದ್ದಾನೆಯೇ? ವ್ಯವಸಾಯವೇನೂ ಕಷ್ಟವಲ್ಲ, ಅತ್ಯಂತ ಸುಲಭ, ಮತ್ತು ವ್ಯವಸಾಯಕ್ಕೆ ಖರ್ಚೂ ಕಡಮೆ. ನಮ್ಮ ದೇಶದ ವ್ಯವಸಾಯದ ಅಭಿವೃದ್ಧಿಯಲ್ಲಿ ಬದ್ಧಕಂಕಣರಾಗಿರುವವರೆಲ್ಲರೂ ಗಮನಿಸಬೇಕಾಗಿದೆ.

ತಾ. 20-8-14. ಎಸ್. ಜಿ. ಶಾಸ್ತ್ರಿ, ಲಂಡನ್.

ಟೋಪಿಗಳು: ಟೋಪಿಗಳು.

ಉತ್ತಮವಾದ ಟೋಪಿಗಳು ಹಾಸನದಲ್ಲಿ ದೊರೆಯುತ್ತವೆ.

ವಿವಿಧ ತರಹ ಉಣ್ಣೆ ಧಾರದಿಂದ ತಯಾರಿಸಲ್ಪಡುವ ಸಾಮಾನುಗಳಿಗೂ, ಮಾದರಿಗಳಿಗೂ, ದರಗಳಿಗೂ ಮ್ಯಾನೇಜರವರಿಗೆ ಬರೆದು ತಿಳಿದುಕೊಳ್ಳಬಹುದು.

Men's socks, vests and various knitted articles.

ಮ್ಯಾನೇಜರ್, ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ.

Apply:—MANAGER, WOOL WORKS,

[201-3] GIRLS' INDUSTRIAL SCHOOL, HASSAN.

ಓರಿಯಂಟಲ್ ಗೌ॥ ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು............ರೂ. 4,45,00,000

ಕಂಪನಿಯಿಂದ ಪಾವತಿ ಆಗಿರುವದು ,, 4,00,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ.—ಮಿ॥ ಎಂ. ಎಸ್ ರಿಚಿ, ಚೀಫ್ ಏಜೆಂಟ್, ಬೆಂಗಳೂರು; ಮ॥ ಎಂ. ಎಸ್. ನಂಜಪ್ಪನವರು ಅಥವಾ ಮ॥ ವೆಂಕಟಪತಯ್ಯನವರು, ಕಂಪನಿ ಏಜಂಟರು, ಮೈಸೂರು; ಅಥವಾ

[194-52] ಆಕ್ಟಿಂಗ್ ಬ್ರಾಂಚ್ ಸೆಕ್ರಿಟರಿ, ಮದರಾಸ್

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುತ್ತದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದ ಹೋದರೆ ನ್ಯಾಯತಃ ಶರೀರಕ್ಕೇ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ:— ಬೆನ್ನಿನಲ್ಲಿ ಛಳುಕು; ನಿದ್ರೆಯಿಲ್ಲದೆ ಇರುವುದು; ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಿಳುಪಾಗಿಯೋ ಇಳಿಯುವುದು; ಬಿಡದೆ ಬಾಯಾರಿಕೆ; ಬಳಲಿಕೆ; ಎದೆ ತಲ್ಲಣಿಸುವುದು; ತಲೆನೋವು; ಗಾಬರಿ; ಕಣ್ಣುಮೊಬ್ಬು; ತಲೆ ತಿರುಗುವಿಕೆ; ಮೈನೋವು; ಕೀಲುನೋವು; ಮರವು; ನಿತ್ರಾಣ; ಇವೇ ಮೊದಲಾದುವು. ಅಲಕ್ಷ್ಯಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [198-3]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ಸ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು.



ರೂ. ೨—೨—೦; ಅಥವಾ ೬ ಬುಡ್ಡಿಗಳಿಗೆ ರೂ. ೧೦—೮—೦. ಔಷಧಿಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು. ಅಥವಾ ಡೋನ್ಸ್, ಪಿ. ಒ. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು.

S U. N. & Co.,

BENARES CITY, U. P.

ಸೊಗಸಾದ ಸರಕುಗಳು !!

ದೊಡ್ಡ ಕಂಪೆನಿ !

ಈ ನಮ್ಮ ಕಂಪನಿಯಲ್ಲಿ ನೆಯ್ದು ತಯಾರಿಸುವ ಉತ್ತಮವಾದ ಬನಾರಸ್ ರೇಷ್ಮೆ ಜರೀ ಶೀರೆಗಳು, ಕಣ, ಪೇಟಾ, ಕಾಶ್ಮೀರ್ ಶಾಲು, ದುಪಟ್ಟಿ, ಮಗುಟ, ಜಗನ್ನಾಥ ಜಾಗಟೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಕ್ಯಾಟಲಾಗ್ 1 ನ್ನು ಮತ್ತು 2 ಏಕ್ಸೇಶ್ವರ ಪಠಗಳನ್ನು ಇನಾಮಾಗಿ ಕಳುಹಿಸಲಾದೀತು. [69-28]

ಎಸ್. ಯು. ಎನ್. ಮತ್ತು ಕಂಪೆನಿ, ಕಾಶಿ.

ಕುಂತಳಾನಂದ ತೈಲವು.

213-1

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಿರುದಿನ ಬೆಳ್ಳಿಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ. ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು. ಈ ತೈಲವು ಕೂದಲನ್ನು ದಟ್ಟವಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುತ್ತದೆ. ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದಾಗಿದೆ. ಬೆಲೆ ಬಾಟ್ಲಿಗೆ 1 ರೂಪಾಯಿ. 3 ಬಾಟಲಿಗೆ 3 ರೂಪಾಯಿ 10 ಆಣೆ. ಅಂಚೆ ಹಾಸಲು ಬೇರೆ. ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ.

ನಮ್ಮ ವಿಳಾಸ:—ಪಿ. ಎಸ್. ನಾಥ ಮತ್ತು ಕಂಪೆನಿ,

ವೇಪೇರಿ, ಮದರಾಸ್.

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು"

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು. ವಾಯು, ಕೀಲು, ಅರತಲೆ, ತಲೆನೋವುಗಳು; ಯಾವ ಕಾರಣದಿಂದ ಹುಟ್ಟುವ ಬಾಧೆ ನವಗಳು, ಉಬ್ಬಸ, ಹಲ್ಲುನೋವು, ಗಂಟಲು ಗಾರೆನ್ನುವುದು, ಕೆಮ್ಮುಗಳು, ಶೀತನೆಗಡಿ, ಶ್ವಾಸರೋಗ, ಜಜ್ಜು, ಉಳುಕು, ಛಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ. ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು. ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಪಾಟ್ಲಿ ಕೊಡಿ ಎಂದು ಕೇಳು. ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೋ. ಈ ಯುಕ್ತಿಯಿಂದ ನೋವಾಡಿ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ. ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ. ಲಕ್ಷಾಂತರ ಜನರು ಗುಣಹೊಂದಿದ್ದಾರೆ; ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ. [122-17]

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡಿ. ಇದರ ಕ್ರಯ ಬಾಟ್ಲಿಗೆ 12 ಆಣೆ; ಅಂಚೆ ವೆಚ್ಚ 4 ಆಣೆ. 3 ಅಥವಾ ಹೆಚ್ಚು ಬಾಟ್ಲಿ ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ. ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ. ವಿಳಾಸಗಳು:—(1) ಎಸ್. ಪೀಟರ್ಸ್, 37 ವಡಮಲೆಪಿಳ್ಳೆ ಬೀದಿ, ಪುರಸವಾಕಂ, ವೇಪೇರಿ, ಮದರಾಸ್; (2) ಜಿ ಎಸ್. ಕೆನ್ನಯ್ಯಶೆಟ್ಟರು, ಜನರಲ್ ಮರ್ಚಂಟ್, ತುಮಕೂರು.

ಪ್ರೊಫೆಸರ್ ಬ್ರೇಸ್ಲರ್ ಇಲೆಕ್ಟ್ರೊ ಪೆಯಿನಾಡ್ಯೆನ್

ಮನುಷ್ಯನ ಶರೀರದಲ್ಲಿ ವಿದ್ಯುಚ್ಛಕ್ತಿ ವ್ಯಾಪಿಸಿರುವದೆಂತಲೂ, ವಿದ್ಯುಚ್ಛಕ್ತಿ ಕಡಮೆಯಾದ ಕೂಡಲೇ ನಾನಾ ತರದ ವ್ಯಾಧಿಗಳು ಉಭವಿಸುವದೆಂತಲೂ, ಅಂತಹ ವ್ಯಾಧಿಗಳನ್ನು ಶೀಘ್ರ ಗುಣಪಡಿಸಲು ವಿದ್ಯುಚ್ಛಕ್ತಿ ಮಿಶ್ರವಾದ ಔಷಧದ ಉಪಯೋಗದಿಂದಲ್ಲದೆ ಬೇರೆ ಔಷಧಗಳಿಂದ ವ್ಯಾಧಿಗಳನ್ನು ಶೀಘ್ರ ಗುಣಪಡಿಸುವದು ಕಷ್ಟವೆಂತಲೂ ಅಮೇರಿಕಾ ದೇಶದ ವೈದ್ಯಶಾಸ್ತ್ರ ಪಂಡಿತರು ವೈದ್ಯಶಾಸ್ತ್ರ ಪರಿಶೋಧನೆಯಿಂದ ಸಿದ್ಧಿಸಿರುವರು. ಈ ಔಷಧವು ಉಪಯೋಗಿಸಿದ ಕೂಡಲೇ ದೇಹಕ್ಕೆ ಸಾಕಾಗುವಷ್ಟು ವಿದ್ಯುಚ್ಛಕ್ತಿಯನ್ನುಂಟುಮಾಡಿ ವ್ಯಾಧಿಯನ್ನು ಅತಿ ಶೀಘ್ರ ಗುಣಪಡಿಸುತ್ತೆ. ಪ್ರಾಚೀನಕಾಲದ ಔಷಧಗಳಿಗೆಲ್ಲವು ಇದು ಅತ್ಯುತ್ತಮವಾದದ್ದು. ಒಂದಾವರ್ತಿ ಪರೀಕ್ಷಿಸಿ ನೋಡಿದರೆ ಇದರ ಗುಣವು ವ್ಯಕ್ತವಾಗುತ್ತೆ.



ಎಲೆಕ್ಟ್ರೊಪೆಯಿನಾಡ್ಯೆನ್ ತೈಲದಿಂದ ಗುಣಪಡುವ ವ್ಯಾಧಿಗಳು:—

ತಿಮರುವಾಯುವು, ಕೀಲ್ವಾಯುವು, ಪಾರ್ಶ್ವವಾಯುವು, ಕ್ಷಯ, ಕೆಮ್ಮು, ನೆಗಡಿ, ವಾಯುನೋವು (ಕೈಕಾಲು ಹಿಡಿತ), ಉಳುಕುಹಿಡಿದಿದ್ದರು, ಕಠಿನಶ್ವಾಸ, ನಡುನೋವು (ಸೊಂಟನೋವು), ಪಕ್ಕಶೂಲೆ, ಹಲ್ಲುನೋವು, ತಲೆನೋವು, ಅರೆತಲೆನೋವು, ಉಬ್ಬಸ, ವಿಷಜ್ವರದ ಗಡ್ಡೆಗಳಿಗೂ ಮತ್ತು ಮಕ್ಕಳ ಪಕ್ಕಶೂಲೆ, (ಅಳ್ಳೆ) ಶೈತ್ಯದೋಷಗಳೂ, ವಿಷಜುಳಗಳ ಕಡಿತಗಳಿಗೂ (ಚೇಳು ಮುಂತಾದದ್ದು), ಇದಕ್ಕೆಲ್ಲಾ ಬಹಳ ಶ್ಲಾಘನೀಯವಾದದ್ದು. [12-38]

ಉಪಯೋಗಿಸುವ ಕ್ರಮವು ಹಿಂದುದೇಶದ ಎಲ್ಲಾ ಭಾಷೆಗಳಲ್ಲಿಯೂ ಬುಡ್ಡಿಯ ಸಂಗಡ ಕಳುಹಿಸಲಾದೀತು.

ಬುಡ್ಡಿಯ ಕ್ರಯ ರೂ. 0-8-0. ವಿ. ಪಿ. ಖರ್ಚು 0-4-0. ಏಜಂಟರು ಬೇಕು.

ಮುಖ್ಯ ಏಜಂಟರು:—ಗುರುಬಸವ ಅಂಡ್ ಕಂಪನಿ, ಮದರಾಸ್.

ಹಿಂದುಸ್ಥಾನ್ ಕೋಆಪರೆಟಿವ್ ಜೀವವಿಮೆ ಸಂಘ ಲಿ.

ಹಿಂದುಸ್ಥಾನ್ ಕಟ್ಟಡಗಳು—ಕಲ್ಕತ್ತಾ.

ಕಂಪನಿಯ ಮೂಲಧನ (ಒಂದು ಕೋಟಿ ರೂಪಾಯಿ)	1,00,00,000
ಪಾವತಿಯಾದ ಮೊಬಲಗು	10,50,000
ವಸೂಲಾದ ಮೊಬಲಗು	87,00,000

ಈ ಕಂಪೆನಿಯಲ್ಲಿ ಪಾಲ್ಸಿದಾರ್ರಿಗೆ ಬಹಳ ಕಮ್ಮಿಯಾದ ದರಗಳ ಪಟ್ಟಿಯನ್ನು ಮಾಡಿರುವುದು. 1912 ನೇ ಇಸ್ವಿಯ ಇಂಡಿಯಾ ಗವರ್ನ್‌ಮೆಂಟಿನ ಜೀವವಿಮೆ ಕಂಪೆನಿಯ ಆಕ್ಟ್ಸಿನ ಪ್ರಕಾರ ಸರ್ಕಾರದಲ್ಲಿ 2 ಲಕ್ಷ ರೂಪಾಯಿಗಳನ್ನು ಡಿಪಾಜಿಟ್ಟು ಮಾಡಲ್ಪಟ್ಟಿರುತ್ತೆ. ಮತ್ತು ಅನೇಕ ಮಹಾರಾಜರುಗಳು ಮುಂತಾದ ದೊಡ್ಡವರು ಪ್ರೆಸಿಡೆಂಟರಾಗಿರುವದರಿಂದ ಈ ಕಂಪೆನಿಯ ಅಭಿವೃದ್ಧಿಸ್ಥಿತಿಯನ್ನು ಪ್ರಕಟನೆ ಮಾಡುವುದಕ್ಕೆ ಸಂತೋಷವಾಗಿರುತ್ತದೆ.

ಸುಲಭವಾಗಿ ಹಣವನ್ನು ಪಾರ್ಟಿಯವರ ಮನೆಯಲ್ಲೇ ಜಾಗ್ರತೆ ಪಾವತಿಗೆ ಏರ್ಪಾಡು ಮಾಡಲ್ಪಡುತ್ತೆ. ಆದ್ದರಿಂದ ಪಾಲ್ಸಿದಾರ್ರು ಮತ್ತು ಇದಕ್ಕೆ ಸೇರಿದ ಏಜಂಟ್ರುಗಳು ತುಂಬಾ ಅದೃಷ್ಟವಂತರೆಂಬುವದರಲ್ಲಿ ಸಂದೇಹವಿಲ್ಲ.

ಹೆಚ್ಚಿನ ವಿಷಯಗಳಿಗೂ, ಫಾರಂ ಮತ್ತು ಪ್ರಾಸ್‌ಪೆಕ್ಟುಸುಗಳಿಗೂ ಕೆಳಗಿನ ವಿಳಾಸಕ್ಕೆ ಜಾಗ್ರತೆಯಾಗಿ ಬರೆಯಿರಿ. [243-42]

ವೆಂಕಟಾಚಲಂ ಅಂಡ್ ಸನ್ಸ್, ಚೀಫ್ ಏಜಂಟ್ರು,
166, ದೊಡ್ಡಪೇಟೆ, ಮೈಸೂರು

ಸುಖಕರ, ಆನಂದ, ಬಹಳ ಅವಶ್ಯ.

ಈಗ ತಾನೇ ಕಂಡುಹಿಡಿದಿದೆ.

ಜಪಾನ್ ರಾಜ್ಯದಲ್ಲಿ ನೂರಾರು ವರುಷಗಳಿಂದ ಉಪಯೋಗದಲ್ಲಿದೆ.

ಸೆಂತಾನ

ಬೆಳ್ಳಿಯ ವರಕು ಸುತ್ತಿದ ಮುತ್ತುಗಳು.

(1) ಮನಸ್ಸಿಗೆ ಹರ್ಷವನ್ನೂ ಉಲ್ಲಾಸವನ್ನೂ ಕೊಟ್ಟು ಜೀರ್ಣಶಕ್ತಿಯನ್ನುಂಟುಮಾಡುವುದು.

(2) ಹಾಡುವವರಿಗೆ ವರಪ್ರಸಾದವಾದದ್ದು.

(3) ಬಾಯಿ ದುರ್ಗಂಧ, ಗಂಟ್ಲು ಗಾರೆನ್ನುವುದು, ಉಬ್ಬಸ, ಸಮುದ್ರಯಾನದ ಜುಗುಪ್ಸೆ, ಈ ಮೊದಲಾದವನ್ನು ಹುಟ್ಟದಂತೆ ಅಡ್ಡಿಮಾಡುತ್ತದೆ.

(4) ತಾಂಬೂಲದೊಡನೆ ಸೇವಿಸುವುದಕ್ಕೆ ಅತ್ಯಂತ ಹಿತಕರವಾಗಿದೆ. [73-28]

ಒಂದು ಸಲ ಪರೀಕ್ಷೆಮಾಡಿದಲ್ಲಿ ಯಾವಾಗಲೂ ಒಂದು ಪೊಟ್ಣ ಇದ್ದೇ ತೀರಬೇಕೆಂದು ನೀವೇ ನಿಶ್ಚಯಿಸುವಿರಿ.

ಮುತ್ತಿನಂತಿರುವ	45	ಮಾತ್ರೆ ಉಳ್ಳ	ಪೊಟ್ಣಕ್ಕೆ	ಕ್ರಯ	2	ಆಣೆ.
,,	95	,,	,,	,,	,,	4	,,
,,	200	,,	,,	,,	,,	7	,,
,,	200	,,	ಸುಂದರವಾದ ಟೀ ಡಬ್ಬಾ			9	,,
,,	80	,,	,,	,,	,,	4	,,
,,	100	,,	ಬಾಟ್ಲಿಯಲ್ಲಿ			4½	,,

ಈ ಕ್ರಯದಷ್ಟು ಸ್ಟಾಂಪನ್ನೂ, ಅಂಚೆ ವೆಚ್ಚಕ್ಕೆ ಜಾಸ್ತಿ ಒಂದಾಣೆಯನ್ನೂ ಸೇರಿಸಿ ಕಳುಹಿಸಬೇಕು. ಕಾಗದಪತ್ರವನ್ನೂ ವಿಳಾಸಗಳನ್ನೂ ನಮಗೆ ಇಂಗ್ಲೀಷಿನಲ್ಲೇ ಬರೆಯತಕ್ಕದ್ದು.

ನಮ್ಮ ವಿಳಾಸ—ಸೆಂತಾನ ಡಿಪೋ,
ಮಾರ್ಸೂರ್ ಬಿಲ್ಡಿಂಗ್, ಪ್ರಿನ್ಸೆಸ್ ಸ್ಟ್ರೀಟ್,
ಬೊಂಬಾಯಿ 2;
ಅಥವಾ, ಬಿ. ಸಿ. ಷಾ ಕಂಪೆನಿ,
509 ಮಿಂಟ್ ಬೀದಿ, ಮದರಾಸ್.

ಪಾಕೆಟ್ ಲೀವರ್ ವಾಚ್.

ಇದರ ಕ್ರಯ 6 ಬಹುಮಾನ ಸಮೇತ ರೂ. 2-13-0 ಮಾತ್ರ.

ಇದು ಮಕ್ಕಳ ಆಟದ ಬೊಂಬೆಯಂತೆ ಕೆಲವು ದಿವಸಗಳು ಆಟವಾಡಿ ನಂತರ ಕೆಟ್ಟುಹೋಗುವಂಥಾ ಅಲ್ಪ ಗಡಿಯಾರವಲ್ಲ. ಶ್ರೇಷ್ಠವಾದ ಮತ್ತು ಬಹು ಪ್ರಸಿದ್ಧವಾದ ಲೀವರು ಕೆಲಸದಿಂದ ತಯಾರಾದದ್ದು. ಗಂಭೀರವಾದ ಘಂಟೆ ಮತ್ತು ಮಿನಿಟ್‌ಗಳ ಮುಳ್ಳುಗಳುಳ್ಳದ್ದು. ಬಹು ಬಲಿಷ್ಠವಾದ ಮತ್ತು

ನಾಜೂಕಾದ ಯಂತ್ರಸಾಮಾನುಗಳಿಂದ ತಯಾರಾಗಿರುತ್ತೆ. ಅನೇಕ ವರುಷಗಳ ಪರಿಯಂತರ ಬಾಳಿಕೆ ಬರುವಂಥಾದ್ದು. ಅನೇಕಾನೇಕ ಆರ್ಡರುಗಳು ಬಂದು ಸುರಿಯುತ್ತಿವೆ. ಬಹುಮಾನಗಳ ತಪಸೀಲು:—1 ವಾಚ್ ಸರಪಣಿ, 2 ಉತ್ತರ ಮುಖಿ, 3 ಪರಿಮಳ ಅತ್ತರ್, 4 ಕರವಸ್ತ್ರ, 5 ಸೋಕಾದ ಉಂಗರ, 6 ಪಿಟ್ಟು.

ವಿಳಾಸ—ಪಿ. ಆರ್. ವೆಂಕಟರಮಣ ಅಂಡ್ ಕಂಪೆನಿ,
[145-11] ನಂ. 7, ಕೋಟ್ ವೆಂಕಟಾಚಲಯ್ಯರ್ ಬೀದಿ, ಮದರಾಸು.

ಮಲೇರಿಯಾ

ಮತ್ತು ಹವಾ ದೆಸೆಯಿಂದುಂಟಾಗುವ ಎಲ್ಲಾ ತರದ ಜ್ವರವೂ

ಈಸಾನೊಫೆಲ

ಯ ಸೇವನೆಯಿಂದ ಬೇಗನೆ ನಿವಾರಣೆಯಾಗುತ್ತೆ.

ಕ್ವಿನೈನ್ ಜ್ವರವನ್ನು ಅಣಗಿಸುವುದು; ಆದರೆ ನಮ್ಮ ಈ ಸಾನೊಫೆಲೆಯು 15 ದಿನದಲ್ಲಿ ವಾಸಿಮಾಡುತ್ತದೆ. ಹಗಲು ರಾತ್ರಿ ಒಂದೊಂದು ಮಾತ್ರೆ ತೆಗೆದುಕೊಳ್ಳುತ್ತಾ ಬಂದರೆ ಜ್ವರ ಬಾರದಂತೆ ಸಂರಕ್ಷಣೆ ಮಾಡಬಲ್ಲದು.

ಜ್ವರವು ಸಂಪೂರ್ಣವಾಗಿ ವಾಸಿಯಾಗುವುದಕ್ಕೆ ಎರಡು ಬಾಟ್ಲಿ ಔಷಧ ಹದಿನೈದು ದಿನಕ್ಕೆ ಸಾಕು.

ಬಾಟ್ಲಿಗೆ ಕ್ರಯ 2 ರೂಪಾಯಿ.

ಬಿಕರಿಯಾಗುವ ಸ್ಥಳಗಳು.

1. ಫಾಸ್ಟರ್ ಕಂಪನಿ, ಕೆಮಿಸ್ಟ್ಸ್, ಬೆಂಗಳೂರು;
2. ಬಿ. ಜಿ. ಗೋರಿಯೋ ಕಂಪನಿ, ವಾಲೆಸ್ ಬೀದಿ,

[172-7] ಬೊಂಬಾಯಿ;

ಇದಲ್ಲದೆ

ಎಲ್ಲಾ ಔಷಧ ಮಾರಾಟದ ಷಾಪಿನಲ್ಲೂ ಸಿಕ್ಕುವುದು.

BRAHMAPPA TAVANAPPANAVAR,

Merchant & Commission Agent.

Agent to Messrs. Currimbhoy Ebrahim & Co's Mills, BOMBAY.

ನಾವು ಮುಂಬೈ ಮೆಸ್ಸರ್ಸ್ ಕರೀಂಬಾಯ್ ಇಬ್ರಾಹಿಂ ಅಂಡ್ ಕಂಪೆನಿಯವರ ಬಾಬತು, ಮೆಸ್ಸರ್ಸ್ ಫಜುಲ್ಭಾಯ ಮಿಲ್ಸ್ ಲಿಮಿಟೆಡ್ ಮುಂಬೈ, ದಿ ಕ್ರೆಸೆಂಟ್ ಮಿಲ್ಸ್ ಲಿಮಿಟೆಡ್ ಮುಂಬೈ, ಕರೀಂಬಾಯ್ ಮಿಲ್ಸ್ ಲಿಮಿಟೆಡ್ ಮುಂಬೈ, ದಿ ಇಂಡಿಯನ್ ಬ್ಲೀಚಿಂಗ್, ಡೈಯಿಂಗ್ ಅಂಡ್ ಪ್ರಿಟಿಂಗ್ ವರ್ಕ್ಸ್ ಲಿಮಿಟೆಡ್ ಮುಂಬೈ, ದಿ ಇಂಡೋರ್ ಅಂಡ್ ಮಾಳ್ವಾ ಯುನೈಟೆಡ್ ಮಿಲ್ಸ್ ಲಿಮಿಟೆಡ್ ಇಂಡೋರ್, ಇವುಗಳಲ್ಲದೆ ಇನ್ನೂ ಅನೇಕ ಮಿಲ್ಲುಗಳ ಬಟ್ಟೆಗಳನ್ನು ಮೈಸೂರು ಸೀಮೆಯಲ್ಲೆಲ್ಲಾ ವಿಕ್ರಯಮಾಡಲು ಕಮಿಷನ್ ಏಜಂಟರಾಗಿರುತ್ತೇವೆ. ನಮ್ಮ ಮುಖಾಂತರ ಮಾಲು ತರಿಸಿಕೊಳ್ಳತಕ್ಕವರಿಗೆ ಮುಂಬೈಯಲ್ಲಿ ಬಟ್ಟೆಗಳ ಮೇಲೆ ವಿಧಿಸತಕ್ಕ ದಳ್ಳಾಳಿ, ಚೋಟಾದಳ್ಳಾಳಿ, ಮೋಕ್ಯಾದುಮ್ಮ, ಗಂಟುಕಟ್ಟುವದು, ಸ್ಟೇಷನ್ನಿಗೆ ಹೇರಿಸುವದು, ಹುಂಡೇಕರಿ ವಗೈರೆ ಯಾವ ವಿಧವಾದ ಖರ್ಚು ತಗಲದೆ ಇರುವದರಿಂದ ಮುಂಬೈಯಿಂದ ತರಿಸುವದಕ್ಕಿಂತಲೂ ಸುಲಭ ದರದಲ್ಲಿ ಸಿಕ್ಕುತ್ತೆ. ಮತ್ತು ಮುಂಬೈಗೆ ಹೋಗಿಬರುವ ದೇಹಶ್ರಮವೂ, ಖರ್ಚೂ ಉಳಿಯುತ್ತೆ. ಹೆಚ್ಚು ಬಟ್ಟೆಗಳನ್ನು ಏಕಕಾಲದಲ್ಲಿ ಕೊಳ್ಳತಕ್ಕವರಿಗೆ ಮಾಲಿನ ಮೇಲೆ ಶೇಕಡ 3 ರೂಪಾಯಿ ಲಾಗಾಯ್ತು 4½ ರೂಪಾಯಿ ವರಿಗೆ ಡಿಸ್ಕೌಂಟು ದೊರೆಯುತ್ತೆ. [97-23]

ನಮ್ಮ ಟ್ರಾವಲಿಂಗ್ ಏಜಂಟರ ವಶ ಬಟ್ಟೆಗಳ ನಮೂನೆಗಳನ್ನು ಕೊಟ್ಟು, ದರ ಒಬ್ಬ ವ್ಯಾಪಾರಗಾರನಿಗೆ ತೋರಿಸಿ ಆರ್ಡರು ತೆಗೆದುಕೊಳ್ಳುವ ಏರ್ಪಾಡು ಮಾಡಿರುತ್ತೆ. ನಮ್ಮ ದಾವಣಗೆರೆ ಮತ್ತು ಬೆಂಗಳೂರು ಆಫೀಸುಗಳಲ್ಲಿ ಮಾಲು ಹಾಜರು ಸಹ ದೊರೆಯುತ್ತೆ.

ಬಟ್ಟೆಗಳನ್ನು ವ್ಯಾಪಾರಮಾಡಲು ಅನುಭವಸ್ಥರಾದ ಏಜಂಟರುಗಳೂ ಮತ್ತು ಗುಮಾಸ್ತರುಗಳೂ ಬೇಕಾಗಿದೆ.

ಎಲ್ಲಾ ಕಾಗದಪತ್ರಗಳೂ ದಾವಣಗೆರೆ ಆಫೀಸಿಗೆ ಬರೆಯಲ್ಪಡಬೇಕು.

ಹೆಡ್ ಆಫೀಸು:—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್, ದಾವಣಗೆರೆ. ಬ್ರಾಂಚ್ ಆಫೀಸು:—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

4—9—1914 ರಿಂದ 11—9—1914 ರ ವರೆಗೆ

ಸ್ಥಳ		ಪ್ಲೇಗ್ ಹಿಡಿದದ್ದು.	ಪ್ಲೇಗ್ ಸತ್ತದ್ದು.	ಕಾಲರಾ ಹಿಡಿದದ್ದು.	ಕಾಲರಾ ಸತ್ತದ್ದು
ಬೆಂಗಳೂರು	ಪಟ್ಟಣ	2	3	0	0
ಮೈಸೂರು	,,	47	30	0	0
ಬೆಂಗಳೂರು ಡಿಸ್ಟ್ರಿಕ್ಟು		27	14	0	0
ಮೈಸೂರು	,,	42	27	0	0
ಕೋಲಾರ್	,,	31	27	26	17
ಕೋಲಾರ್ ಚಿನ್ನದ ಗಣಿಗಳು		2	4	0	0
ತುಂಕೂರು ಡಿಸ್ಟ್ರಿಕ್ಟು		17	17	0	0
ಹಾಸನ	,,	2	0	0	0
ಚಿತ್ರದುರ್ಗ	,,	75	40	0	0
ಕಡೂರ್	,,	41	16	0	0
ಶಿವಮೊಗ್ಗ	,,	12	5	9	5
	ಜುಮ್ಲಾ ..	298	183	35	22

ಶಾಲಿವಾಹನ ಶಕೆ ವರುಷಂಗಳು 1837 ನೇ ಆನಂದ ಸಂವತ್ಸರೇ ದಕ್ಷಿಣಾಯನೇ ಶರದೃತೌ ಆಶ್ವೀಜ ಶುದ್ಧ ಷಷ್ಠಿ ಶುಕ್ರವಾರದಿಂದ ಆಶ್ವೀಜ ಶುದ್ಧ ದ್ವಾದಶಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ.

1914 ನೇ ಸೆಪ್ಟಂಬರ್ ಮತ್ತು ಅಕ್ಟೋಬರ್.

ತಾ.	ವಾರ.	ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ	ಕನ್ಯಾಮಾಸ ತೇದಿ
25	ಶುಕ್ರ ::	ಷಷ್ಠಿ	17-40	ಅನುರಾಧ	1-34	10
26	ಶನಿ ‡	ಸಪ್ತಮಿ	12-33	ಮೂಲ	55-10	11
27	ಭಾನು §	ಅಷ್ಟಮಿ	8-14	ಪೂಷಾ	53-12	12
28	ಸೋಮ *	ನವಮಿ	4-49	ಉತ್ತಾಷಾ	52-17	13
29	ಮಂಗಳ †	ದಶಮಿ	2-23	ಶ್ರವಣ	52-33	14
30	ಬುಧ ;;	ಏಕಾದಶಿ	1-9	ಧನಿಷ್ಟ	3-52	15
1	ಗುರು ,,	ದ್ವಾದಶಿ	1-7	ಶತಭಿಷ	56-39	16

:: ಸಪ್ತಮೀತಿಥಿ. ‡ ಕಾಳರಾತ್ರಿ, ಮಹಿಷಾಸುರ ಸಂಹಾರ, ಗಜಗೌರೀವ್ರತ, ಸರಸ್ವತೀ ಪೂಜಾ, ಮಳೆ ನಕ್ಷತ್ರ—ಹಸ್ತ 1 ನೇ ಪಾದ. § ದುರ್ಗಾಷ್ಟಮಿ ತಿರುಪತಿ ವೆಂಕಟಾಚಲಸ್ವಾಮಿ ರಥ. * ಮಹಾನವಮಿ, ಆಯುಧಗಜಾಶ್ವಪೂಜಾ, ಅಮಲುದೇವತಾ ಪೂಜಾ, ಹಯಗ್ರೀವಜಯಂತಿ, ವ್ಯತೀಪಾತ. † ವಿಜಯ ದಶಮಿ, ಶಮೀಪೂಜಾ, ವೆಂಕಟೇಶಜಯಂತಿ. ;; ಸರ್ವತ್ರ ಏಕಾದಶಿ, ಮಳೆ ನಕ್ಷತ್ರ—ಹಸ್ತ 2 ನೇ ಪಾದ. ,, ಪ್ರದೋಷ, ಗೋದ್ವಾದಶಿ.

MELLIN'S FOOD

ಮೆಲಿನ್ಸ್ ಆಹಾರವು

[4-38]

ಕೈಸೋಕದ ಮಾಡಿದೆ. ಮೆಲಿನ್ಸ್ ಆಹಾರದಲ್ಲಿ ಶಿಸುಗಳು ಪುಷ್ಟಿಯಾಗಿ ಬೆಳೆಯುವವು.

ಮೆಲಿನ್ಸ್ ಆಹಾರವನ್ನು ಕ್ರಮಪ್ರಕಾರ ತಯಾರ್ಮಾಡಿ ಸೇವಿಸಿದರೆ ಹುಟ್ಟಿದ ಶಿಶುಗಳು ಮೊದಲುಗೊಂಡು ಮುದಿಪ್ರಾಯದವರ ತನಕ ಎಲ್ಲರಿಗೂ ಸಂಪೂರ್ಣವಾದ ದೇಹಪುಷ್ಟಿಯನ್ನೂ ವಿಶೇಷವಾದ ಬಲವನ್ನೂ ಕೊಡುತ್ತದೆ.

ಮೆಲಿನ್ಸ್ ಆಹಾರದ ಮಾದ್ರಿ ಬೇಕೆಂದು ಕೇಳಿದರೆ ಕೆಳಗಿನ ವಿಳಾಸದಾರರು ಕಳುಹಿಸುತ್ತಾರೆ:—

Messrs. OAKES & Company, Mount Road, Madras.

ವಿಳಾಸ—ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

Printed and Published by the Rev. H. GULLIFORD, Proprietor and Manager, Wesleyan Mission Press, Mysore. 24/9/1914.

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೮ ಮೈಸೂರು—ಸರ್ ೧೯೧೪ ನೇ ಇಸವಿ ಅಕ್ಟೋಬರ್ ತಾರೀಖು ೧ ನೇ ಗುರುವಾರ. ಸಂಚಿಕೆ ೧೮

ENGLISH PAPERS WITH FULL ANSWERS

Price for 1 set, Rs. 1-4-0; 2 sets, Rs. 2-4-0; 3, Rs. 3; 4 sets, Rs. 3-12-0 (in advance). L. S. English Notes—5 As.; Spelling Book—4 As.

Apply sharp to — M. N. SITARAMA RAO,
[178-8] Krishnaraja Mohalla, MYSORE.

ಸ್ಟೂಡೆಂಟ್ಸ್ ಹಾಲ್, ಮೈಸೂರು.

ಮ|| ಎಸ್. ಆರ್. ವೆಂಕಟಸುಬ್ಬಾಚಾರ್ಯರ ಎಲ್ಲಾ ಪುಸ್ತಕಗಳೂ, ಗೌರ್ನ್ಮೆಂಟ್ ಪುಸ್ತಕಗಳೂ, ಮ. ಅಳ್ವಾರಯ್ಯಂಗಾರ್ರವರ ಗಣಿತಗಳೂ, ಮೊದಲಾದ ಸ್ಕೂಲಿಗೆ ಬೇಕಾದ ಪುಸ್ತಕಗಳೆಲ್ಲಾ ನಮ್ಮಲ್ಲಿ ದೊರೆಯುವವು.

[203-4] ವಿಳಾಸ—ಸ್ಟೂಡೆಂಟ್ಸ್ ಹಾಲ್, ಮೈಸೂರು.

ಯುದ್ಧವಾರ್ತೆಯು.

ಯೂರೋಪಿನಲ್ಲಿ ನಡೆಯುತ್ತಿರುವ ಯುದ್ಧವಾರ್ತೆಯನ್ನು ಪ್ರತಿ ನಿತ್ಯವೂ ಕನ್ನಡಿಗರ ಉಪಯೋಗಕ್ಕಾಗಿ ಪ್ರಕಟಿಸುತ್ತಿರುವೆವು. ಕ್ರಯ 3 ಪೈ; ತಿಂಗಳಿಗೆ 8 ಆಣೆ; ಅಂಚೆಯಲ್ಲಿ ತರಿಸುವವರಿಗೆ ತಿಂಗಳಿಗೆ ಒಂದು ರೂಪಾಯಿ. ಮೈಸೂರು ಸಂಸ್ಥಾನದ ಎಲ್ಲ ಭಾಗದಲ್ಲಿಯೂ ಏಜಂಟರುಗಳು ಬೇಕಾಗಿದೆ. ಹೆಚ್ಚಾಗಿ ಕಮಿಷನ್ ಸಿಗುವುದು.

ಮುದ್ರಿಸಿ ಪ್ರಕಟಿಸುವವರು—

[23-38] ಟಿ. ಕಸ್ತೂರಿ ರಾಮಚಂದ್ರರಾವ್, ಮೈಸೂರು.

ಷೇಕ್ಸ್‌ಪಿಯರ್

ಮಹಾ ಕವಿಯ ನಾಟಕದ ಕಥೆಗಳು.

ಸಿಂಬೆಲೈನ್, ಒಥೆಲೋ, ಮರ್ಚೆಂಟ್ ಆಫ್ ವೆನ್ನಿಸ್, ಕಿಂಗ್‌ಲಿಯರ್ ಮುಂತಾದ ಕೆಲವು ನಾಟಕಗಳನ್ನು ಕಥಾ ರೂಪವಾಗಿ ಬರೆಯಲ್ಪಟ್ಟು ನಮ್ಮ ದೇಶದ ಹೆಸರನ್ನಿಟ್ಟು ಪ್ರಕಟಿಸಿರುತ್ತೆ. ಪ್ರತಿ ಒಂದಕ್ಕೂ ಎರಡೆರಡಾಣೆ. ಅವು ಯಾವವೆಂದರೆ—ಕಳಾವತಿ, ಪದ್ಮಿನಿ, ವಸುಮತಿ, ಚಿತ್ರಕಳಾವತಿ, ವಿಲಕ್ಷಣ ಶಿಕ್ಷೆ, ಭಾನುಮತಿ, ವೈದರ್ಭೀ ವಿಲಾಸ, ಚಾರುಮತಿ, ಚಂದ್ರಮುಖಿ, ಚಾತುರ್ಯವತಿ.

"ಮರುಳಾಟದ ಮದುವೆ" ಎಂಬ ನಕಲಿಯು ಈಗತಾನೇ ಬೆಳಕಿಗೆ ಸಿದ್ಧವಾಗಿದೆ. ಪ್ರತಿಯೊಬ್ಬರೂ ಓದಬೇಕಾದುದು. ಕ್ರಯ 6 ಆಣೆ.

[266-42] ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

ಅರೇಬಿಯನ್ ನೈಟ್ಸ್

ಎಂಬ

ಯವನ ಯಾಮಿನೀ ವಿನೋದ ಕಥೆಗಳು.

(ಕನ್ನಡದಲ್ಲಿ)

ಲೋಕಪ್ರಸಿದ್ಧವಾದ ಈ ಪುಸ್ತಕದ ಮೊದಲನೇ ಮುದ್ರಣವು ಶೀಘ್ರದಲ್ಲಿಯೇ ಮುಗಿದುಹೋದುದರಿಂದ ಎರಡನೇ ಮುದ್ರಣವನ್ನು ತಯಾರಿಸಿರುತ್ತೇವೆ. ಇದರ ಪ್ರಿಂಟಿಂಗ್ ಮತ್ತು ಬೈಂಡ್ ಮುಂತಾದ ಕೆಲಸಗಳು ವೆಸ್ಲಿಯನ್ ಮಿಷನ್ ಪ್ರೆಸ್ಸಿನಲ್ಲಿ ಬಹು ಶ್ಲಾಘ್ಯತರವಾಗಿ ಮಾಡಲ್ಪಟ್ಟಿರುವವು. ಈ ಎರಡನೇ ಮುದ್ರಣವನ್ನು ಘನ ಪಂಡಿತರು ಆಮೂಲಾಗ್ರವಾಗಿ ಪರಿಶೀಲನೆಮಾಡಿ ತಿದ್ದಿ ಸರಿಪಡಿಸಿರುತ್ತಾರೆ. ಇದರಲ್ಲಿನ ಕಥೆಗಳು ಬಹು ಮನೋರಂಜಕವಾಗಿಯೂ ಭಾಷೆಯು ಅತಿ ಲಲಿತವಾಗಿಯೂ ಇರುತ್ತವೆ. ಪುಸ್ತಕವು ನಾನೂರು ಪುಟಗಳಿಗಿಂತ ಹೆಚ್ಚಾಗಿರುತ್ತದೆ. ಇದರ ಕ್ರಯ ಎರಡೇ ರೂಪಾಯಿ. ವಿ.ಪಿ.ಪಿ. ಮೂಲಕ ತರಿಸಿಕೊಂಡರೆ ರೂ. 2-4-0. ಜಾಗ್ರತೆ ನೋಡಿ. [212-2]

ವಿಳಾಸ—ಮ್ಯಾನೇಜರ್, ಸಿ.ಎಲ್.ಎಸ್. ಬುಕ್ ಡಿಪೋ, ಮೈಸೂರು.

ಸಿದ್ಧವಾಗಿದೆ.

1915 ನೆಯ ವರ್ಷದ ಲೋವರ್ ಸೆಕಂಡರಿ

ಕನ್ನಡ ಟೆಕ್ಸ್ಟಿನ ನೋಟ್ಸು.—ಕ್ರಯ 6 ಆಣೆ.

ಡಿಸ್ಕೌಂಟು—10 ಕ್ಕೆ 1; 25 ಕ್ಕೆ 3; 50 ಕ್ಕೆ 8; 100 ಕ್ಕೆ 20.

ಮಕ್ಕಳ ಭೂವಿವರಣೆ.

ಈಗಿನ ಪಾಠಕ್ರಮಕ್ಕೆ ತಕ್ಕಂತೆ ಹೊಸದಾಗಿ ಆಗಿದೆ. ಇದರಲ್ಲಿ ಮೈಸೂರು ದೇಶದ ಬೆಳೆ, ಎತ್ತರ, ನದೀ ಪರ್ವತಾದಿಗಳು ಇವುಗಳನ್ನು ತೋರಿಸುವ ಮೂರು ಕೋಷ್ಟಕಗಳೂ, ಚಿತ್ರಗಳೂ ಸೇರಿವೆ. ಕ್ರಯ 2 ಆಣೆ. [49-33]

ಇಲಾಖೆಯ 2 ನೆಯ ಪುಸ್ತಕದ ನೋಟ್ಸು 2½ ಆಣೆ. ಮೆಕ್ಮಿಲನ್ ರವರ 3 ನೇ ಪುಸ್ತಕದ ನೋಟ್ಸು 1½ ಆಣೆ. ಡಿಟೊ 4 ನೇ ಪುಸ್ತಕದ ನೋಟ್ಸು 1¾ ಆಣೆ. ಡಿಟೋ 6 ನೇ ಪುಸ್ತಕದ ನೋಟ್ಸು 4 ಆಣೆ. ನವಬಾಲವ್ಯಾಕರಣ (2 ನೇ ತರಗತಿ) 1 ಆಣೆ. Notes on "Tanglewood Tales," English Lower Secondary Text for 1915—As. 3. Notes on Fairy Tales—As. 2.

ನಮ್ಮ ವಿಳಾಸ:—ಯನ್. ಆರ್. ವೆಂಕಟಸುಬ್ಬಾಚಾರ್ಯ,
ಸುಬೋಧಗ್ರಂಥಾಲಯ, ಮೈಸೂರು.

ಹೊಸ ಬಂಗಾಳಿ ನಾವಿಲ್ಸ್—ವಿಷವಿವಾಹ 4 ಆ. ಸನ್ಯಾಸಿ 1½ ಆ. ಅನಾಥಪ್ರೇತ 1 ಆ. ಬಿ. ವೆಂಕಟಾಚಾರ್ಯರಿಂದ ವಂಗವಿಜೇತ 1-4-0. ಚಂದ್ರಶೇಖರ 1-1-0. ರಜನಿ 13 ಆ. ಚಿತ್ರವಿಚಿತ್ರಾವಳಿ 1| 8 ಆಣೆ. ಅಮೃತಪುಳಿನ 11 ಆಣೆ. ದುರ್ಗೇಶನಂದಿನಿ 1-4-0. ಇತ್ಯಾದಿ. ಸುಶೀಲೆ ಹೊಸ ನಾವಿಲ್ 6 ಆಣೆ.

[53-32] ಎಂ. ಸುಬ್ಬರಾವ್, ಬುಕ್ ಸೆಲರ್, ಶಂಕರಪುರ, ಬೆಂಗಳೂರು ಸಿಟಿ.

ಸೂರ್ಯೋದಯ ಪುಸ್ತಕಭಂಡಾರ.

ಹೊಸ ನಾವೆಲ್‌ಗಳು:—ನೀಲಾಂಬರಿ, ನರಬಲಿ, ಗುರುತು ಕಂಡ ಕಳ್ಳ, ಮಾಯಾವಿನಿಯ ಅತ್ಯಾಚಾರ, ಮಾಯಾವಿನಿಯ ಪರಿಣಾಮ ಮುಂತಾದ ಪತ್ತೇದಾರಿ ನಾವೆಲ್‌ಗಳು. ಪುಸ್ತಕ ಒಂದಕ್ಕೆ ಆಣೆ 2 ಮಾತ್ರ. ಶಕ್ತಿ 12 ಆಣೆ. ಮಾಘವ ಕಂಕಣ 1-8-0. ಇವಲ್ಲದೆ ಈ ಡಿಪೋದಲ್ಲಿ ಕನ್ನಡ, ತೆಲುಗು, ಸಂಸ್ಕೃತ, ಇಂಗ್ಲಿಷ್ ಗ್ರಂಥಗಳೂ, ನಾವೆಲ್‌ಗಳೂ, ಕಥೆಗಳೂ, ಪುರಾಣಗಳೂ, ವೈದ್ಯ ಜ್ಯೋತಿಷ ಪುಸ್ತಕಗಳೂ ದೊರೆಯುತ್ತವೆ. ಬೇಕಾದವರು ಬರೆದು ಮುಫತ್ತಾಗಿ ದೊರೆಯುವ ಕ್ಯಾಟಲಾಗನ್ನು ತರಿಸಿಕೊಳ್ಳಬಹುದು.

[143-13] ವಿಳಾಸ:—ಜಿ. ನರಸಿಂಗರಾವ್,
ಎಡಿಟರ್, ಲಾ ಗೆಜೆಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಈ ಉತ್ತಮ ಗ್ರಂಥಗಳನ್ನು ಓದಿರುವಿರಾ?

ನಾನಕನ ಚರಿತ್ರೆ 4 ಆ; ಕೃಷ್ಣಾಕುಮಾರಿ 10 ಆ; ವಿವೇಕಮಂಜರಿ ಭಾಗ III 6 ಆ; ಮುಕುಂದನ ಶತಕಂ 4 ಆ; ತುಳುಕುಮಿಣುಕು 1½ ಆ; ನಿಮ್ಮಾಲಿ 12 ಆ; ಸೂಕ್ತಿರತ್ನಾವಳಿ 4 ಆ; ರಂಗನ ಮದುವೆ 1½ ಆ; ಬಾಗಿಲು ಭದ್ರ 4 ಆ; ನವನಾಗರಿಕತೆ 1 ಆ; ಗೃಹಿಣಿಯಾದ ಗಂಗೆ 3 ಆ. ಸೊಗಸಾದ ಹೊಸ ಬಂಗಾಳಿ ನಾವಲ್ಸ್:—ಕಪಾಲಕುಂಡಲೆ 6 ಆ; ಜಯ! ವಾಲ್ಮೀಕಿ 12 ಆ; ತಾರಾ 3 ಆ; ಅದೃಷ್ಟಮೃಗ 1½ ಆ; ಅಡವಿಯ ರಾಜ 2 ಆ; ವಿಷವಿವಾಹ 4 ಆ; ಸನ್ಯಾಸಿನಿ 1½ ಆ; ಅನಾಥಪ್ರೇತ 1 ಆ; ವಿಲಕ್ಷಣ ದೈವಘಟನೆ 4 ಆ; ರಮಾಮಾಧವ 6 ಆ; ಸುಶೀಲೆ 6 ಆ; ನಾರಾ 8 ಆ; ಸಾಹಸಿಕೆ 2½ ಆ; ಉಲೂಪಿಯ ನಾಸ್ತಿ 1 ಆಣೆ ಇತ್ಯಾದಿ. "ಮಧುರವಾಣಿ" ಸಚಿತ್ರ ಮಾಸಪತ್ರಿಕೆಯ ಮಾದರಿ ಸಂಚಿಕೆಗೂ ಕ್ಯಾಟಲಾಗಿಗೂ ಬೆಲೆಯಿಲ್ಲ.

[160-11] ನಮ್ಮ ವಿಳಾಸ—ಹನುಮಾನ್ ಕಂಪೆನಿ, ಮೈಸೂರು.

THE

GENERAL

Assurance Society Ltd., Ajmer.

(A Popular Life Office.)

Before Insuring or taking agency elsewhere, it would be to your interest to know the rates of premium and terms of agency specially prepared by the Society's Consulting Actuary, Mr H. L. W. Lutt, F.I.A. (one of the most eminent Actuaries in England).

First Valuation Result:—The total liabilities under all assurances issued up to 31st March 1913, are fully covered by the Society's Life Assurance Fund and Paid up Capital. Write for full particulars, Annual and Valuation Reports to the Manager, Ajmer, or Secretary,

Opposite to Minto Ophthalmic Hospital,
[131-12] Bangalore City

ನತ್ಮಲ್ ಕಂಪೆನಿ ಡೈರಿಗಳು.



1915 ನೇ ಇಸವಿ ಕನ್ನಡ ಮಾಡಲ್ ಪಾಕೆಟ್ ಡೈರಿಗಳು.

ತಯಾರಾಗಿ ಬೆಳಕಿಗೆ ಸಿದ್ಧವಾಗಿದೆ. ಈಗಲೇ ಬರೆದು ತರಿಸಿಕೊಳ್ಳಿರಿ.

1 ನೇ ನಂ.	ಚಿಕ್ಕದು ಸಾದಾ	4 ಆಣೆ.
2 ನೇ ,,	,, ಬಟನ್ ಹಾಕಿದ್ದು	6 ,,
3 ನೇ ,,	ದೊಡ್ಡದು ಸಾದಾ	6 ,,
4 ನೇ ,,	,, ಬಟನ್ ಹಾಕಿದ್ದು	8 ,,

ಒಂದೇ ನಮೂನೆಯಲ್ಲಿ 12 ಡೈರಿಗಳನ್ನು ತರಿಸಿಕೊಳ್ಳುವವರಿಗೆ 1 ಡೈರಿ ಜಾಸ್ತಿ; ಅಥವಾ ಇನ್ನೂ ಹೆಚ್ಚಾಗಿ ತರಿಸಿಕೊಳ್ಳುವವರಿಗೆ ರೂ. ಗೆ 2 ಆಣೆಯಂತೆ ಡಿಸ್ಕೌಂಟು ದೊರೆಯುತ್ತೆ.

ವಿಳಾಸ—ಎಸ್. ಡಿ. ನತ್ಮಲ್ ಕಂಪೆನಿ,
[215-2] ದೊಡ್ಡಪೇಟೆ, ಮೈಸೂರು.

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶದಾಮವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಿರುವ ಉಪಕರಣವಾದರೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ. ಈ ತೈಲವನ್ನು ತೊಡೆದುಕೊಳ್ಳುತ್ತಲೇ, ಮಸ್ತಿಷ್ಕದ ಬೇಗೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ತೊಡೆಯ ತೊಡಗಿದ ಬಳಿಕ ಎಂದಿಗೂ ಉದುರಿ ಬಿದ್ದುಹೋಗಲಾರವು; ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮನೋಹರವೂ ಆಗಿರುವುದು.

ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡುವುದಕ್ಕಿಂತ ಒಂದೇಒಂದು ಬಾರಿ ಈ "ಕಾಮಿನಿಯಾ ತೈಲ"ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಒಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರೆತಿವೆ.

ಅವುಗಳಲ್ಲಿ ಒಂದನ್ನೇ ನೋಡಿರಿ! ನೇಗಿನಹಾಳಕರ ಬಂಧುಗಳು. ಬಸವನಗಲ್ಲಿ, ಬೆಳಗಾಂವ—ತಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳಯಿಸುವುದಕ್ಕೆ ಸರ್ವೋತ್ಕೃಷ್ಟವಾದದೆಂದು ಸಾಧನವಾಗಿರುತ್ತದೆ. ಆದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ. ಪಿ. ದ್ವಾರಾ ರವಾನಿಸುವುದು. ಸೀಸೆಯೊಂದರ ಕ್ರಯ ರೂ. 1-0-0, ಅ. ವೆ. 0-4-0 ಬೇರೆ; 3 ಸೀಸೆಗಳ ಕ್ರಯ ರೂ. 2-10-0, ಅ. ವೆ. 0-7-0 ಬೇರೆ.

ಸೂಚನೆ.—ಅನೇಕ ದುರ್ವಿನೀತರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಬಿಕರಿಯಿಂದ ತಮಗೆ ಅತ್ಯಲ್ಪ ನಫೆಯೇ ದೊರಕುತ್ತದೆಂದು, ನೀವು "ಕಾಮಿನಿಯಾ ತೈಲ"ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭ ದೊರಕತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಇದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳುವಷ್ಟು ಮೆಹರುಬಾನ್ ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಿಬೀಳದೆ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಒಟ್ಟೋ ದಿಲ್ ಬಹಾರ್!!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಆಲ್ಕೋಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈವಸ್ತ್ರದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ಸ್ವರ್ಗೀಯವಾದದೆಂದು ಪುಷ್ಪವಾಟಿಕೆಯು ಆರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ. ಈ ಒಟ್ಟೋ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವುದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ. [19-37]

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಡ್ರ್ಯಾಮಿನ (ಮೀಡಿಯಂ) ಸೀಸೆ ಒಂದಕ್ಕೆ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0. ಅಂಚೆಯ ವೆಚ್ಚ ಬೇರೆ ರೂ. 0-4-0. ಒಟ್ಟೋ-ದಿಲ್ ಬಹಾರ್ ಪರಿಮಳದ ಕಾರ್ಡುಗಳು ಡಜನ್ ಒಂದಕ್ಕೆ 0-12-0.

ಮೇಲೆ ಕಂಡ ಎಲ್ಲಾ ಸುಗಂಧಗಳು ಸಿಕ್ಕುವ ಪತ್ತೆ:—

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್ಜಿದ್, ಬೊಂಬಾಯಿ.

ಏಜೆಂಟ್, ದಿ ಉಲನ್ ಮಾರ್ಟ್, ಮಂಗಳೂರು.

ದಸರಾ ಬಹುಮಾನ ! ನವರಾತ್ರಿ ಬಹುಮಾನ !

ದೊಡ್ಡವರೂ ಹುಡುಗರೂ ಅಲಂಕಾರ ಪೂರ್ವಕವಾಗಿ ಧರಿಸಬಹುದಾದ ಜಪಾನ್ ರೇಷ್ಮೆ ಜಾಲಿರ್ ಟೌಕವು.



2 ಮೊಳವಿರುವ ಟೌಳ ಒಂದಕ್ಕೆ ರೂ. 1-6-0. 1½ ಮೊಳವಿರುವ ಟೌಳ ಒಂದಕ್ಕೆ 15 ಆಣೆ. ಒಂದೇ ಸಲ ಎರಡು ಟೌಳಗಳನ್ನು ತರಿಸಿಕೊಳ್ಳುವವರಿಗೆ ಸ್ತ್ರೀಯರು ಕೊರಳದಲ್ಲಿ ಧರಿಸಬಹುದಾದ ಗೆಜ್ಜೆ ಅಡ್ಡಿಗೆಯನ್ನು ಇನಾಮು ಕಳುಹಿಸಿಕೊಡುತ್ತೇವೆ. ಒಂದರಿಂದ ಎರಡರವರಿಗೂ ಪೋಸ್ಟೇಜು 3 ಆ. ಇದುವರೆಗೆ ಎಲ್ಲರೂ ವಿಕ್ರಯಿಸಿದ ರೇಷ್ಮೆ ಪಂಚೆಗಳು ಇಷ್ಟು ಮೇಲಾದವುಗಳಲ್ಲ. ಈ ಚಿತ್ರದಲ್ಲಿ ಕಾಣುವಂತೆ ಚಿತ್ರವಿಚಿತ್ರವಾದ ಹೂಗಳಿಂದ ತಯಾರಿಸಿದ ಈ ನೂತನವಾದ ಮೇಲಾದ ಟೌಳಗಳು ಈಗತಾನೇ ನಾವು ತರಿಸಿರುತ್ತೇವೆ. ಪಂಚವರ್ಣಗಳಲ್ಲಿ ಬಳ್ಳಿಗಳೂ, ಹೂಗಳೂ, ಎಲೆಗಳೂ ಹಾಕಿ ಉತ್ತಮವಾದ ರೇಷ್ಮೆ ಅಂಚಿಟ್ಟು ತಯಾರಿಸಿ ನವರಾತ್ರಿ ಮಹೋತ್ಸವಕ್ಕಾಗಿ ತರಿಸಿರುತ್ತೇವೆ. ಸಾವಿರಾರು ವಿಕ್ರಯವಾಗುತ್ತಿವೆ. ಜಾಗ್ರತೆ ತರಿಸಿಕೊಳ್ಳಿ.

ಅಡ್ರೆಸ್—ಜಪಾನ್ ಸಿಲ್ಕ್ ವೇರ್‌ಹೌಸ್, 1-6 ವೆಂಕಟೇಶ ಮೇಸ್ತ್ರಿ ಬೀದಿ,

[109-20] ಸಾಹುಕಾರಪೇಟೆ, ಮದರಾಸು.

CHAMBERLAIN'S PAIN BALM.

ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು.



3-40

ಬೆನ್ನೆಲುಬಿನ ನೋವು, ಪಕ್ಕಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ತಲೆನೋವು, ಜಜ್ಜಾದ ಕಡೆಯ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ.

ವಾಯುನೋವೆಂದರೇನು ?

ಕೀಲುಗಳಲ್ಲೂ ಮಣಕಟ್ಟುಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಸೆಳೆಯುವ ಬಾಧೆ, ಖಂಡಗಳಲ್ಲಿ ಇರಿಯುವುದು, ವಿಶ್ರಾಂತಿ ಕೊಡದೆ ಇರುವುದು, ನಿದ್ದೆ ಹತ್ತದೆ ಇರುವುದು—ಇವೇ. ಇವೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು.

ಆಗ ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ.

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಕಾವು ಮೂಲೆಮೂಲೆಗೆಲ್ಲ ವ್ಯಾಪಿಸುತ್ತದೆ. ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ. ಮನಸ್ಸಿಗೆ ಉಲ್ಲಾಸವಾಗುತ್ತದೆ. ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಮುಟ್ಟಿದ್ದೇನೂ ಅಲ್ಲ.

ಇದು ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಸೀಸೆಗೆ ೧ ರೂಪಾಯಿ. ದೊಡ್ಡ ಸೀಸೆಗೆ ೨ ರೂಪಾಯಿ.

BRAHMAPPA TAVANAPPANAVAR,

Merchant & Commission Agent.

Agent to Messrs. Currimbhoy Ebrahim & Co's Mills, BOMBAY.

ಸಾತ ಮುಂಬೈ ಮೆಸ್ಸರ್ಸ್ ಕರೀಂಬಾಯ್ ಇಬ್ರಾಹಿಂ ಅಂಡ್ ಕಂಪೆನಿಯವರ ಬಾಬತು, ಮೆಸ್ಸರ್ಸ್ ಫಜುಲ್ಭಾಯ ಮಿಲ್ಸ್ ಲಿಮಿಟೆಡ್ ಮುಂಬೈ; ದಿ ಕ್ರೆಸೆಂಟ್ ಮಿಲ್ಸ್ ಲಿಮಿಟೆಡ್ ಮುಂಬೈ, ಕರೀಂಬಾಯ್ ಮಿಲ್ಸ್ ಲಿಮಿಟೆಡ್ ಮುಂಬೈ, ದಿ ಇಂಡಿಯನ್ ಬ್ಲೀಚಿಂಗ್, ಡೈಯಿಂಗ್ ಅಂಡ್ ಪ್ರಿಂಟಿಂಗ್ ವರ್ಕ್ಸ್ ಲಿಮಿಟೆಡ್ ಮುಂಬೈ, ದಿ ಇಂದೋರ್ ಅಂಡ್ ಮಾಲ್ವಾ ಯುನೈಟೆಡ್ ಮಿಲ್ಸ್ ಲಿಮಿಟೆಡ್ ಇಂದೋರ್, ಇವುಗಳಲ್ಲದೆ ಇನ್ನೂ ಅನೇಕ ಮಿಲ್ಲುಗಳ ಬಟ್ಟೆಗಳನ್ನು ಮೈಸೂರು ಸೀಮೆಯಲ್ಲೆಲ್ಲಾ ವಿಕ್ರಯಮಾಡಲು ಕಮಿಷನ್ ಏಜಂಟರಾಗಿರುತ್ತೇವೆ. ನಮ್ಮ ಮುಖಾಂತರ ಮಾಲು ತರಿಸಿಕೊಳ್ಳತಕ್ಕವರಿಗೆ ಮುಂಬೈಯಲ್ಲಿ ಬಟ್ಟೆಗಳ ಮೇಲೆ ವಿಧಿಸತಕ್ಕ ದಲ್ಲಾಳಿ, ಜೋಟಾದಲ್ಲಾಳಿ, ಮೊಕ್ತಾದುಮ್ಮ, ಗಂಟುಕಟ್ಟುವದು, ಸ್ಟೇಷನ್ನಿಗೆ ಹೇರಿಸುವದು, ಹುಂಡೇಕರಿ ವಗೈರೆ ಯಾವ ವಿಧವಾದ ಖರ್ಚೂ ತಗಲದೆ ಇರುವದರಿಂದ ಮುಂಬೈಯಿಂದ ತರಿಸುವದಕ್ಕಿಂತಲೂ ಸುಲಭ ದರದಲ್ಲಿ ಸಿಕ್ಕುತ್ತೆ. ಮತ್ತು ಮುಂಬೈಗೆ ಹೋಗಿಬರುವ ದೇಹಶ್ರಮವೂ, ಖರ್ಚೂ ಉಳಿಯುತ್ತೆ. ಹೆಚ್ಚು ಬಟ್ಟೆಗಳನ್ನು ಏಕಕಾಲದಲ್ಲಿ ಕೊಳ್ಳತಕ್ಕವರಿಗೆ ಮಾಲಿನ ಮೇಲೆ ಸೇಕಡ 3 ರೂಪಾಯಿ ಲಾಗಾಯ್ತು 4½ ರೂಪಾಯಿ ವರೆಗೆ ಡಿಸ್ಕೌಂಟು ದೊರೆಯುತ್ತೆ. [97-24]

ನಮ್ಮ ಟ್ರಾವಲಿಂಗ್ ಏಜಂಟರ ವಶ ಬಟ್ಟೆಗಳ ನಮೂನೆಗಳನ್ನು ಕೊಟ್ಟು, ದರ ಒಬ್ಬ ವ್ಯಾಪಾರಗಾರನಿಗೆ ತೋರಿಸಿ ಆರ್ಡರು ತೆಗೆದುಕೊಳ್ಳುವ ಏರ್ಪಾಡು ಮಾಡಿರುತ್ತೆ. ನಮ್ಮ ದಾವಣಗೆರೆ ಮತ್ತು ಬೆಂಗಳೂರು ಆಫೀಸುಗಳಲ್ಲಿ ಮಾಲು ಹಾಜರು ಸಹ ದೊರೆಯುತ್ತೆ.

ಬಟ್ಟೆಗಳನ್ನು ವ್ಯಾಪಾರಮಾಡಲು ಅನುಭವಸ್ಥರಾದ ಏಜಂಟರುಗಳೂ ಮತ್ತು ಗುಮಾಸ್ತರುಗಳೂ ಬೇಕಾಗಿದೆ.

ಎಲ್ಲಾ ಕಾಗದಪತ್ರಗಳೂ ದಾವಣಗೆರೆ ಆಫೀಸಿಗೆ ಬರೆಯಲ್ಪಡಬೇಕು.

ಹೆಡ್ ಆಫೀಸು :—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್, ದಾವಣಗೆರೆ. ಬ್ರಾಂಚ್ ಆಫೀಸು :—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸಂಪೂರ್ಣಾರೋಗ್ಯವು, ಸಂತೋಷಬಾಳ್ವೆಯು, ಶಾಶ್ವತವಾದ ಸಂಪತ್ತು, ಇವುಗಳನ್ನು ಪಡೆಯುವುದಕ್ಕೋಸ್ಕರ ಇನ್ನೂ ಕತ್ತಲೆಯಲ್ಲಿ ಸೇಬಾಡುವಿರೋ ?

ಹಾಗಾದರೆ ನಮ್ಮ

ಪಂಜಾ ಸಾಲಾಮಿಸ್ರಿ ಮುರಬ್ಬ

ವನ್ನು ಸೇವಿಸಿ ಜೀವವಿಮೆಯನ್ನು ಮಾಡಿಕೊಳ್ಳಿರಿ.

ಆಬಾಲವೃದ್ಧರಿಗೂ ಸ್ತ್ರೀಪುರುಷರಿಗೂ ಉಪಯೋಗಪಡುವ ಮತ್ತು ಪುಷ್ಟಿಯನ್ನು ಕೊಡುವ ಔಷಧಿಯು ಇದೇ. ಈ ಪಂಜಾ ಸಾಲಾಮಿಸ್ರಿ ಮುರಬ್ಬವು ಮೂತ್ರಕೋಶ ಸಂಬಂಧವಾದ ಎಲ್ಲಾ ತರಹೆಯ ರೋಗಗಳನ್ನೂ ನಿವರ್ತಿಮಾಡುತ್ತದೆ. ಪಂಜಾ ಸಾಲಾಮಿಸ್ರಿಯೊಂದಿಗೆ ಅಪೂರ್ವವಾದ ಮತ್ತು ಉತ್ತಮವಾದ ವನಸ್ಪತಿಗಳನ್ನು ಸೇರಿಸಿ ಮುರಬ್ಬವನ್ನು ತಯಾರುಮಾಡಲ್ಪಟ್ಟಿದೆ. ಒಂದು ಸಲ ಉಪಯೋಗಿಸಿದರೆ ಎಂದಿಗೂ ಮರೆಯಲಾರಿರಿ ರಸರಹಿತವಾದ ಖಾತ್ರಿಯಾದ ದೇಹಪುಷ್ಟಿಯನ್ನು ಕೊಡತಕ್ಕ ಔಷಧಿಯೇ ಇದು.

ಪಂಜಾ ಸಾಲಾಮಿಸ್ರೀ ಮುರಬ್ಬಾವು—ನಿದ್ರೆಯಲ್ಲಿಯೂ ಮೂತ್ರದಲ್ಲಿಯೂ ಹೋಗುವ ಧಾತುವನ್ನು ನಿಲ್ಲಿಸುವುದು

ಪಂಜಾ ಸಾಲಾಮಿಸ್ರೀ ಮುರಬ್ಬಾವು—ಮೂತ್ರದಲ್ಲಿ ಉರಿಯುವುದನ್ನು ನಿಲ್ಲಿಸುವುದು

ಪಂಜಾ ಸಾಲಾಮಿಸ್ರೀ ಮುರಬ್ಬಾವು—ರಕ್ತವನ್ನು ವೃದ್ಧಿಪಡಿಸಿ ಮೆದುಳಿಗೆ ಬಲವನ್ನು ಕೊಡುವುದು

ಪಂಜಾ ಸಾಲಾಮಿಸ್ರೀ ಮುರಬ್ಬಾವು—ಕೈ, ಕಾಲು, ಸೊಂಟದ ನೋವುಗಳನ್ನು ಹೋಗಲಾಡಿಸುವುದು.

ಪಂಜಾ ಸಾಲಾಮಿಸ್ರೀ ಮುರಬ್ಬಾವು—ಹಸಿವನ್ನು ರಕ್ತವನ್ನು ಹೆಚ್ಚಿಸಿ ಧಾತುವನ್ನು ಗಟ್ಟಿಗೊಳಿಸುವುದು

ಪಂಜಾ ಸಾಲಾಮಿಸ್ರೀ ಮುರಬ್ಬಾವು—ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವುದು.

ಪಂಜಾ ಸಾಲಾಮಿಸ್ರೀ ಮುರಬ್ಬಾವು—ಉತ್ಸಾಹವು, ಬುದ್ಧಿಕುಶಲತೆಯು, ಶರೀರಕಾಂತಿಯು ಕೊಡುವುದು.

ಪಂಜಾ ಸಾಲಾಮಿಸ್ರೀ ಮುರಬ್ಬಾವು—ತಾಂಬ್ರ ಮತ್ತು ಭಂಗಾರಭಸ್ಮಕ್ಕಿಂತಲೂ ಉತ್ತಮವಾದದ್ದು

ಈ ಮುರಬ್ಬಾದೊಂದಿಗೆ ಬಲಬರುವಂಥ ಪದಾರ್ಥಗಳನ್ನು ಸೇರಿಸಿ ಪ್ರತಿಯೊಬ್ಬರೂ ಸೇವಿಸುವ ಹಾಗೆ ಕೈಯಿಂದ ಮುಟ್ಟದೆ ತಯಾರು ಮಾಡಲ್ಪಟ್ಟಿರುವುದು.

ಒಂದು ಡಬ್ಬಿ ಮುರಬ್ಬಾವನ್ನು 15 ದಿನಗಳು ಉಪಯೋಗಿಸುವುದರಿಂದ ಪೂರಾ ಗುಣ ಕೊಡುತ್ತದೆ. 2-3 ಡಬ್ಬಿಗಳನ್ನು ಉಪಯೋಗಿಸುವದರಿಂದ ಜನ್ಮಾಂತ್ಯದ ವರೆಗೂ ಗುಣಕೊಡುತ್ತೆ. ಈ ಸಾಲಾಮಿಸ್ರೀ ಎಂಬುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲ್ ಕಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿನ ಜನರು ಸಾಲಾಮಿಸ್ರೀಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು. ಅನೇಕರು ಉರುಳುಗಡ್ಡೆ, ಶಾಂಬುಗಡ್ಡೆ ಇವುಗಳನ್ನು ಸಕ್ಕರೆಯಲ್ಲಿಟ್ಟು ತೋರಿಸಿ ಸಾಲಾಮಿಸ್ರೀ ಎಂದು ಮೋಸಪಡಿಸುವರು. ನಮ್ಮ ಮುರಬ್ಬಾವನ್ನು ಪರೀಕ್ಷಿಸಿ ನೋಡಿದಲ್ಲಿ ಇದು ಪಂಜಾ ಸಾಲಾಮಿಸ್ರಿಯೋ ಅಥವಾ ಬೇರೆ ತರಹಾದ್ದೋ ಎಂಬುದು ತಿಳಿಯಬರುತ್ತೆ. [214-2]

ಈ ಮುರಬ್ಬಾವು "ಪಂಜಾ ಸಾಲಾಮಿಸ್ರಿ" ಅಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡುವೆವು

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾವು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನಮ್ಮಿಂದ ಪಡೆಯಬಹುದು. 15 ತೊಲೆ ಮುರಬ್ಬಾವಿನ ಡಬ್ಬಿ 1 ಕ್ಕೆ ರೂಪಾಯಿ 2-0-0. ಟಪ್ಪಾಲು ಖರ್ಚು 1 ಡಬ್ಬಿಯಿಂದ 3 ಡಬ್ಬಿಗಳ ವರೆಗೆ 6 ಆಣೆ. ಅನುಪಾನ ಪತ್ರಿಕೆ ಔಷಧದ ಸಂಗಡ ಇರುತ್ತೆ.

ಏಜಂಟರು—ಡಿ. ಸೈಯದ್ ಇಸ್ಹಾಕ್ ಅಂಡ್ ಕೊ, ದೊಡ್ಡಪೇಟೆ, ಬೆಂಗಳೂರು ಸಿಟಿ.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು, ಅವೆನ್ಯೂ ರೋಡ್, ಬೆಂಗಳೂರು ಸಿಟಿ

ಶ್ರೇಷ್ಠವಾದ ವಾಚ್ ! ನೂತನವಾದ ವಾಚ್ ! ನಾಜೂಕಾದ ವಾಚ್ !

ಸ್ಟ್ರಾಂಗ್ ಪಾಕೆಟ್ ಲೀವರ್ ವಾಚ್.

ಇದರ ಕ್ರಯ 7 ಬಹುಮಾನಗಳ ಸಮೇತ ರೂ. 3-8-0 ಮಾತ್ರ.

ಏಳು ವರ್ಷಗಳ ಖಾತ್ರಿಯಾದ ಗ್ಯಾರಂಟಿ.



ಘನವಂತರೇ,

ಈ ನೂತನ ನಮೂನೆ ವಾಚ್ ಈಗ ತಾನೇ ಬಂದಿರುತ್ತೆ. ಪ್ರಪಂಚದಲ್ಲೆಲ್ಲಾ ಹೆಸರುವಾಸಿಯಾದ ಮತ್ತು ಶ್ರೇಷ್ಠವಾದ ಲೀವರ್ ಕೆಲಸದಿಂದಲೂ, ಬಲಿಷ್ಠವಾದ ಮತ್ತು ನಾಜೂಕಾದ ಯಂತ್ರ ಸಾಮಾನುಗಳಿಂದಲೂ ತಯಾರಾಗಿ ಬಂದಿರುತ್ತೆ. ಈಗ ತಾನೆ ಹೊಸದಾಗಿ ನಾವು ಪ್ರತ್ಯೇಕವಾಗಿ ತರಿಸಿರುತ್ತೇವೆ. ಗೌರ್ನಮೆಂಟು ಟೈಂಗೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದದ್ದು. ನಂಬಿಕೆಯಾಗಿ ದೀರ್ಘಕಾಲ ಅನೇಕ ವರ್ಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು. ಬಹು ರಮಣೀಯವಾದ ವಾಚ್. ಬರೀ ಮಾತುಗಳಿಂದಲೇನು ? ಪರಂಪರೆ ಬಾಳಿಕೆ ಬರುವ ವಾಚ್ ಇದೇ. ಇದರ 7 ಬಹುಮಾನಗಳ ತಪಸೀಲ್ :—(1) ಸುಂದರವಾದ ವಾಚ್ ಸರಪಣಿ, (2) ದಿಕ್ಕುಗಳನ್ನು ತೋರಿಸುವ ಉತ್ತರಮುಖಿ, (3) ವಾಚ್‌ಗೆ ಧೂಳು ಸೇರದಂತೆ ಭದ್ರಪಡಿಸುವ ತೊಗಲಿನ ಚೀಲ, (4) ಕುತ್ತಿಗೆಗೆ ವಾಚ್ ಸಂಗಡ ಧರಿಸಿಕೊಳ್ಳುವ ರೇಷ್ಮೆ ಧಾರ, (5) ವಾಚ್ ಪೆಟ್ಟಿಗೆ (ಬಹು ಸುಂದರವಾದದ್ದು), (6) ಪರಿಮಳವುಳ್ಳ ಸುವಾಸನೆ ಸೀಸೆ, (7) ಕರವಸ್ತ್ರ.

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.—

ಟಿ. ಸೀತಾರಾಮ ಮೊದಲಿಯಾರ್, ನಂ 3, ಕಂದಪ್ಪ ಮೊದಲಿ ವೀಧಿ, ತಿರುವಲ್ಲಿಕೇಣಿ, ಮದರಾಸು.

[180-1]

WANTED

Active an influencial District Agent for Hassan, and Local Agents throughout Mysore Province and Coorg on liberal terms of commission and monthly office allowance. None but those who can guarantee good business need apply to

Messers. VENKATACHALAM & SONS.

Chief Agents,

Hindustan Co-operative Insurance Society, Ltd.,

166, Dodpet, near Old Taluk Cutcherry,

[243-43] *MYSORE.*

ಹಿಂದುಸ್ಥಾನ್ ಕೋಆಪರೇಟಿವ್ ಜೀವವಿಮೆ ಸಂಘ ಲಿ.

ಹಿಂದುಸ್ಥಾನ್ ಕಟ್ಟಡಗಳು—ಕಲ್ಕತ್ತಾ.

ಕಂಪೆನಿಯ ಮೂಲಧನ (ಒಂದು ಕೋಟಿ ರೂಪಾಯಿ)	1,00,00,000
ಪಾವತಿಯಾದ ಮೊಬಲಗು	10,50,000
ವಸೂಲಾದ ಮೊಬಲಗು	87,00,000

ಈ ಕಂಪೆನಿಯಲ್ಲಿ ಪಾಲಿಸಿದಾರ್ರಿಗೆ ಬಹಳ ಕಮ್ಮಿಯಾದ ದರಗಳ ಪಟ್ಟಿಯನ್ನು ಮಾಡಿರುವುದು. 1912 ನೇ ಇಸ್ವಿಯ ಇಂಡಿಯಾ ಗವರ್ನ್‌ಮೆಂಟಿನ ಜೀವವಿಮೆ ಕಂಪನಿಯ ಆಕ್ಟುಗಳ ಪ್ರಕಾರ ಸರ್ಕಾರದಲ್ಲಿ 2 ಲಕ್ಷ ರೂಪಾಯಿಗಳನ್ನು ಡಿಪಾಜಿಟ್ಟು ಮಾಡಲ್ಪಟ್ಟಿರುತ್ತೆ. ಮತ್ತು ಅನೇಕ ಮಹಾರಾಜರುಗಳು ಮುಂತಾದ ದೊಡ್ಡವರು ಪ್ರೆಸಿಡೆಂಟರಾಗಿರುವದರಿಂದ ಈ ಕಂಪನಿಯ ಅಭಿವೃದ್ಧಿಸ್ಥಿತಿಯನ್ನು ಪ್ರಕಟನೆ ಮಾಡುವುದಕ್ಕೆ ಸಂತೋಷವಾಗಿರುತ್ತದೆ.

ಸುಲಭವಾಗಿ ಹಣವನ್ನು ಪಾರ್ಟಿಯವರ ಮನೆಯಲ್ಲೇ ಜಾಗ್ರತೆ ಪಾವತಿಗೆ ಏರ್ಪಾಡು ಮಾಡಲ್ಪಡುತ್ತೆ. ಆದ್ದರಿಂದ ಪಾಲಿಸಿದಾರ್ರು ಮತ್ತು ಇದಕ್ಕೆ ಸೇರಿದ ಏಜಂಟ್ರುಗಳು ತುಂಬಾ ಅದೃಷ್ಟವಂತರೆಂಬುವದರಲ್ಲಿ ಸಂದೇಹವಿಲ್ಲ.

ಹೆಚ್ಚಿನ ವಿಷಯಗಳಿಗೂ, ಫಾರಂ ಮತ್ತು ಪ್ರಾಸ್‌ಪೆಕ್ಟುಸುಗಳಿಗೂ ಕೆಳಗಿನ ವಿಳಾಸಕ್ಕೆ ಜಾಗ್ರತೆಯಾಗಿ ಬರೆಯಿರಿ. [243-43]

ವೆಂಕಟಾಚಲಂ ಅಂಡ್ ಸನ್ಸ್, ಚೀಫ್ ಏಜಂಟ್ರು, 166, ದೊಡ್ಡಪೇಟೆ, ಮೈಸೂರು.

ಪ್ರೊಫೆಸರ್ ಗಜ್ಜರರವರ

ಗುಣಕಂಡ ಪ್ರಖ್ಯಾತವಾದ ಔಷಧಗಳು.

ವ್ಯರ್ಥವಾದ ಔಷಧಗಳನ್ನು ಉಪಯೋಗಿಸಿ ಪ್ರಾಣಾಪಾಯಕ್ಕೆ ಗುರಿಯಾಗುವುದೇಕೆ ? ವಿವೇಕದಿಂದ ತಯಾರಾಗಿರುವ ನಮ್ಮ ಔಷಧಗಳನ್ನು ಸೇವನೆ ಮಾಡಬಾರದೇ ?

ಟಾನಿಕ್ ಸೊಲ್ಯೂಷನ್ .—ಇದರಲ್ಲಿ ಗ್ಲಿಸರಿನೊಫೇಟ್ಸ್ ಎಂಬ ಅಮೂಲ್ಯ ಪದಾರ್ಥಗಳನ್ನು ಹಾಕಿ ತಯಾರ್ಮಾಡಿದೆ. ಇದು ಬೇಗನೆ ಶರೀರಕ್ಕೆ ಸೇರಿಹೋಗುತ್ತೆ. ಆರೋಗ್ಯವನ್ನೂ ಚಟುವಟಿಕೆಯನ್ನೂ ಶಕ್ತಿಯನ್ನೂ ವೃದ್ಧಿಮಾಡುವುದು. ನರಗಳ ದುರ್ಬಲವನ್ನೂ ಹೋಗಲಾಡಿಸುವುದರಲ್ಲಿ ಇದು ಬಹಳ ಶ್ರೇಷ್ಠವಾದ ಔಷಧ. ಕ್ರಯ ಸೀಸೆಗೆ 2 ರೂಪಾಯಿ, ಮತ್ತು ರೂ. 1-2-0.

ರಕ್ತಶುದ್ಧಿಗೆ ಮಹೌಷಧ.—ಇದು ರಕ್ತವನ್ನೂ ದೇಹದ ಎಲ್ಲಾ ಭಾಗಗಳನ್ನೂ ಶುದ್ಧಿಮಾಡುತ್ತೆ. ಬಹಳ ಚೆನ್ನಾಗಿ ಗುಣಕಂಡ ಔಷಧ. ಕ್ರಯ ಸೀಸೆಗೆ 1 ರೂಪಾಯಿ.

ಲಿವರ್ ಸೊಲ್ಯೂಷನ್.—ಪಿತ್ತಕೋಶದ ಮೇಲೆ ಇದು ಬಹಳ ಚೆನ್ನಾಗಿ ಕೆಲಸಮಾಡೋಣದರಿಂದ ಮಲಬದ್ಧತೆಯುಳ್ಳವರಿಗೆ ಮಹೋಪಕಾರಿಯಾಗಿದೆ. ಜ್ವರಕ್ಕೂ ಇದನ್ನು ಕೊಡುತ್ತಾರೆ. ಇದು ಮನೆಯಲ್ಲಿ ಇದ್ದೇ ತೀರಬೇಕು. ಕ್ರಯ ಸೀಸೆಗೆ ರೂ. 1; ಮತ್ತು ರೂ. 0-10-0.

ಜ್ವರದ ಔಷಧ.—ವಿಷಮಶೀತಜ್ವರ, ನಿಂತುಬರುವಜ್ವರ, ಅವಧಿಯಜ್ವರ, ಎಲ್ಲಾ ತರದ ಜ್ವರಗಳಿಗೂ ಇದು ಸಂಜೀವನವಾಗಿದೆ. ಇದು ಕ್ವಿನೈನ್‌ಗಿಂತ ಬಹಳ ಅಗ್ಗ. ಕ್ರಯ ಸೀಸೆಗೆ 10 ಆಣೆ ; 4 ಆಣೆ.

ಹುಳುಕಡ್ಡಿ ಔಷಧ —ಹುಳುಕಡ್ಡಿಯನ್ನು ಖಂಡಿತವಾಗಿ ಗುಣಮಾಡುತ್ತೆ. ಕ್ರಯ ಸೀಸೆಗೆ 4 ಆಣೆ.

ಹಲ್ಲುಪುಡಿ.—ಈ ಪುಡಿಯಿಂದ ಹಲ್ಲು ಉಜ್ಜಿಕೊಂಡರೆ ಬಾಯಿಗೆ ಸುವಾಸನೆ ಕೊಡುತ್ತೆ. ಹಲ್ಲು ಸವೆದು ಕೆಡದಂತೆ ಬಹಳ ಚೆನ್ನಾಗಿಟ್ಟು ಕಾಪಾಡುತ್ತೆ. ಕ್ರಯ ಸೀಸೆಗೆ 4 ಆಣೆ ; 6 ಆಣೆ ; 1 ರೂಪಾಯಿ.

ಇಂಗ್ಲೀಷಿನಲ್ಲೇ ನಮಗೆ ಕಾಗದವನ್ನು ಬರೆಯಬೇಕು.

ಸೋಲ್ ಏಜಂಟರು :—ಎಸ್. ವೈದ್ಯ ಮತ್ತು ಕಂಪನಿ, ಪಾರ್ಕ್ ಟೌನ್, ಮದರಾಸ್.

[156-12]

ಬೇಕಾದವರು ಗಮನಿಸಿ.

ಕೆಲವು ದಿನಗಳು ಮಾತ್ರ।

ಶೃಣುಡಿ।

ಸೋಲಾಪುರದ ಚೆಕ್ಕು, ಶೀರೆ, ಖಣ, ಕಿರಿಗೆ.

ಹಣ ಮುಂಗಡವಾಗಿ ಕಳುಹಿಸತಕ್ಕ ವ್ಯಾಪಾರಿಗಳಿಗೆ ಮಾತ್ರ ಚರಸೆವಾಂಚೆಕ್ಕು, ಶೀರೆ, ಖಣ, ಕಿರಿಗೆ ಇವು ಬಹಳ ಸುಲಭ ಖರೀದಿಗೆ ಒದಗಿಸುವ ಏರ್ಪಾಡು ಮಾಡಲ್ಪಟ್ಟಿದೆ. ನಮ್ಮ ಕಾಯಂ ಗಿರಾಕಿಗಳಿಗೆ ಎಲ್ಲರಿಗಿಂತ ಸುಲಭ ಕ್ರಯಕ್ಕೆ ದೊರೆಯುವುದು.

ಹೊಸ ಗಿರಾಕಿಗಳು ತಮಗೆ ಬೇಕಾದಷ್ಟು ನನಗೆ ಬರೆದು ಹಣ ಮುಂಗಡ ಕಳುಹಿಸಿದರೆ ಅವರಿಗೂ ಕಾಯಂ ಗಿರಾಕಿಗಳ ದರಕ್ಕೆ ಸಪ್ಲೈ ದೊರೆಯುವುದು.

ಹಣ ಕಳುಹಿಸದೆ ಬರೆಯತಕ್ಕ ಕಾಗದಗಳಿಗೆ ಬೇಗ ಗಮನಕೊಡಲು ಅನುಕೂಲವಿಲ್ಲ. ಕಾಗದ ಪತ್ರಗಳನ್ನು ಬೆಳಸುವದರಿಂದ ಖರೀದಿಗಳು ಬದಲಾಯಿಸುವುದಿಲ್ಲವೆಂಬ ವಿಷಯ ಜ್ಞಾಪಕದಲ್ಲಿಡಬೇಕು. [28-36]

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್,
169, ಕಿಲಾರಿ ರೋಡ್ (ಕುಂಚಿಗರ ಪೇಟೆ), ಬೆಂಗಳೂರು ಸಿಟಿ.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಸ್ವಾಭಾವಿಕ ಶರೀರಕ್ಕೇ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ:— ಬೆನ್ನಿನಲ್ಲಿ ಛಳುಕು; ನಿದ್ದೆಯಿಲ್ಲದೆ ಇರುವುದು; ಮೂತ್ರವು ಸ್ವಲ್ಪವಾಗಿಯೋ ವಿಪರೀತವಾಗಿಯೋ ಬಿಳುಪಾಗಿಯೋ ಇಳಿಯುವುದು; ಬಿಡದೆ ಬಾಯಾರಿಕೆ; ಬಳಲಿಕೆ; ಎದೆ ತಲ್ಲಣಿಸುವುದು; ತಲೆನೋವು; ಗಾಬರಿ; ಕಣ್ಣುಮೊಬ್ಬು; ತಲೆ ತಿರುಗುವಿಕೆ; ಮೈನೋವು; ಕೀಲುನೋವು; ಮನವು; ನಿತ್ರಾಣ; ಇವೇ ಮೊದಲಾದುವು. ಅಲಕ್ಷ್ಯಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ, ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [188-4]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ಸ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು.



ರೂ. ೨—೦—೦; ಅಥವಾ ೬ ಬುಡ್ಡಿಗಳಿಗೆ ರೂ. ೧೦—೮—೦. ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು. ಅಥವಾ ಡೋನ್ಸ್, ಪಿ. ಓ. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು.

ಸುಖಕರ, ಆನಂದ, ಬಹಳ ಅವಶ್ಯ.

ಈಗ ತಾನೇ ಕಂಡುಹಿಡಿದಿದೆ.

ಜರ್ಮನ್ ರಾಜ್ಯದಲ್ಲಿ ನೂರಾರು ವರುಷಗಳಿಂದ ಉಪಯೋಗದಲ್ಲಿದೆ.

ಸೆಂಶ್ರಾನ

ಬೆಳ್ಳಿಯ ವರಕು ಸುತ್ತಿದ ಮುತ್ತುಗಳು.

(1) ಮನಸ್ಸಿಗೆ ಹರ್ಷವನ್ನೂ ಉಲ್ಲಾಸವನ್ನೂ ಕೊಟ್ಟು ಜೀರ್ಣಶಕ್ತಿಯನ್ನುಂಟುಮಾಡುವುದು.

(2) ಹಾಡುವವರಿಗೆ ವರಪ್ರಸಾದವಾದದ್ದು.

(3) ಬಾಯಿ ದುರ್ಗಂಧ, ಗಂಟಲು ಗಾರೆನ್ನುವುದು, ಉಬ್ಬಸ, ಸಮುದ್ರಯಾನದ ಜುಗುಪ್ಸೆ, ಈ ಮೊದಲಾದವನ್ನು ಮಟ್ಟದಂತೆ ಅಡ್ಡಿಮಾಡುತ್ತದೆ.

(4) ತಾಂಬೂಲದೊಡನೆ ಸೇವಿಸುವುದಕ್ಕೆ ಅತ್ಯಂತ ಹಿತಕರವಾಗಿದೆ. [73-29]

ಒಂದು ಸಲ ಪರೀಕ್ಷೆಮಾಡಿದಲ್ಲಿ ಯಾವಾಗಲೂ ಒಂದು ಪೊಟ್ಟಣ ಇದ್ದೇ ತೀರಬೇಕೆಂದು ನೀವೇ ನಿಶ್ಚಯಿಸುವಿರಿ.

ಮುತ್ತಿನಂತಿರುವ	45	ಮಾತ್ರೆ	ಉಳ್ಳ	ಪೊಟ್ಟಣಕ್ಕೆ	ಕ್ರಯ	2	ಆಣೆ.
,,	95	,,	,,	,,	,,	4	,,
,,	200	,,	,,	,,	,,	7	,,
,,	300	,,	ಸುಂದರವಾದ ಟಿನ್ ಡಬ್ಬಾ			9	,,
,,	80	,,	,,	,,	,,	4	,,
,,	100	,,	ಬಾಟ್ಲಿಯಲ್ಲಿ			4½	,,

ಈ ಕ್ರಯದಷ್ಟು ಸ್ಟಾಂಪನ್ನೂ, ಅಂಚೆ ವೆಚ್ಚಕ್ಕೆ ಜಾಸ್ತಿ ಒಂದಾಣೆಯನ್ನೂ ಸೇರಿಸಿ ಕಳುಹಿಸಬೇಕು. ಕಾಗದಪತ್ರವನ್ನೂ ವಿಳಾಸಗಳನ್ನೂ ನಮಗೆ ಇಂಗ್ಲೀಷಿನಲ್ಲೇ ಬರೆಯತಕ್ಕದ್ದು.

ನಮ್ಮ ವಿಳಾಸ—ಸೆಂಶ್ರಾನ ಡಿಪೋ,
ಮೋನೂರ್ ಬಿಲ್ಡಿಂಗ್, ಪ್ರಿನ್ಸೆಸ್ ಸ್ಟ್ರೀಟ್,
ಬೊಂಬಾಯಿ 2;
ಅಥವಾ, ಬಿ. ಸಿ. ಷಾ ಕಂಪೆನಿ,
509 ಮಿಂಟ್ ಬೀದಿ, ಮದರಾಸ್.

ಯಡತೊರೆ ತಾ॥ ಮಿರ್ಲೆ ರೈಸ್ ಮಿಲ್ ಕಂಪೆನಿಯ

ಷೇರುಗಳ ಪೈಕಿ ಸ್ವಲ್ಪ ಷೇರುಗಳು ಮಾತ್ರ ಉಳಿದಿರುತ್ತವೆ. ಅಪೇಕ್ಷೆಯುಳ್ಳವರು ಸಾವಕಾಶಮಾಡದೆ ತೆಗೆದುಕೊಳ್ಳಬೇಕು. ನಂತರ ದೊರೆಯಲಾರದು. ಈ ಕಂಪೆನಿಯ ಷೇರುದಾರರಿಗೆ ಮಾತ್ರ ಅಕ್ಕಿಯನ್ನು ನ್ಯಾಯವಾದ ಧಾರಣೆಯಿಂದ ಸಪ್ಲೈ ಮಾಡಲ್ಪಡುತ್ತದೆ. ವಿಳಾಸ—ಎಸ್. ರಾಮಶೆಟ್ಟಿ, ಏಜೆಂಟ್,

[218-1] ಸಿವಿಲ್ ಆಸ್ಪತ್ರೆ ರೋಡ್, ಮೈಸೂರು.

ವನಸ್ಪತಿ ಬಲಕಾರಿಣಿ.

ಸಾರ್ಸಪರಿಲಾ, ಸುಗಂಧಪಾಲ ಮುಂತಾದ ಅನೇಕ ವನಮೂಲಿಕೆಗಳಿಂದ ತಯಾರಾದದ್ದು. ಬೆಳಿಗ್ಗೆ ಸಾಯಂಕಾಲ ಉಪಹಾರದ ಕಾಲದಲ್ಲಿ ಅಥವಾ ಇಲ್ಲದೇ ಇದ್ದರೂ ಕಾಫಿಯಂತೆ ನೀರಿನಲ್ಲಿ ಚೆನ್ನಾಗಿ ಮರಳಿಸಿ ಹಾಲು ಸಕ್ಕರೆ ಸೇರಿಸಿ ಸೇವನೆ ಮಾಡುವುದು. ಈ ಸೇವನೆಯಿಂದ ಆಬಾಲವೃದ್ಧರ ಮತ್ತು ಗರ್ಭಿಣೀ ಸ್ತ್ರೀಯರ, ಬಾಣಂತಿಯರ ಅಬಲತ್ವ, ಮಂದಾಗ್ನಿ, ರಕ್ತದೋಷ, ತಿನಸು, ನಿತ್ರಾಣ, ವಾಯು ಶೂಲೆಗಳು, ವಾತ ಪಿತ್ಥ ಶ್ಲೇಷ್ಮಾದಿಗಳ ವಿಕಾರಗಳು, ಮಕ್ಕಳ ಕೃಶತ್ವವು, ಯೌವನಸ್ಥರ ನಿಶ್ಶಕ್ತತೆಯು, ಉಷ್ಣಸಂಬಂಧ ರೋಗಗಳು, ಬಹುಮೂತ್ರರೋಗಗಳಿಗೂ, ಬುದ್ಧಿ ಉಪಯೋಗಿಸತಕ್ಕ ಜಡ್ಜಿಗಳು, ಲಾಯರುಗಳು, ವಿದ್ಯಾರ್ಥಿಗಳಿಗೂ ಸಹ ಉತ್ಕೃಷ್ಟವಾದದ್ದು. ನಿದ್ರೆ ಬಾರದವರಿಗೂ, ನಿದ್ರೆ ಕೆಟ್ಟದವರಿಗೂ ಬಹಳ ಅನುಕೂಲ. ಕ್ರಯ 24 ತೋಲಾ ಪುಡಿಯುಳ್ಳ ಪೊಟ್ಟಣಕ್ಕೆ 1 ರೂಪಾಯಿ. ವಿ. ಪಿ. ಛಾರ್ಜು ಬೇರೆ. ಎಲ್ಲಾ ಕಡೆಗಳಲ್ಲೂ ಏಜಂಟರು ಬೇಕು.

ಮತ್ತು ಲೇಹ್ಯಗಳು, ತೈಲಗಳು, ಔಷಧಗಳು ಬೇಕಾದವರು ದೇಹಧರ್ಮವನ್ನು ತಿಳಿಸಿ ತರಿಸಿಕೊಳ್ಳುವುದಾದರೆ ಪ್ರತ್ಯುತ್ತರಕ್ಕೆ ಟೇಬಲ್ ಆಗಲಿ, ರಿಪ್ಲೈ ಕಾರ್ಡು ಆಗಲಿ ಬರೆಯತಕ್ಕದ್ದು.

[216-1] ವಿಳಾಸ—ನ. ಪಿ. ಲಕ್ಷ್ಮಣಪಂಡಿತರು,
ಪಂಡಿತ ವೆಂಕಟರಮಣಪ್ಪನವರ ವೈದ್ಯಶಾಲಾ, ಬುರಜನಹಟ್ಟಿ, ಚಿತ್ರದುರ್ಗ.

ಸುಂದರವಾದ ಮಧುರೆ ಜುನ್ನಡಿ ಅಂಚಿನ ಸೀರೆ ಅವ್ವಲ್ ರಖಂ ರೂ. 2-3-0; ಮಧ್ಯಂ ರಖಂ ರೂ. 1-14-0.



ನಮ್ಮ ಕಂಪನಿ ಹೊಸದಾಗಿ ಇರುವದರಿಂದ ಪ್ರಖ್ಯಾತಿಪಡಿಸಲಿಕ್ಕಾಗಿ ನಾವೇ ಈ ಸೀರೆ ಸ್ವಂತ ತಯಾರುಮಾಡಿಸಿ ಇರುತ್ತೇವೆ. ಇತರರ ಮಾತು ನಂಬದಂತೆ ನಮ್ಮ ಸರಕು ಪರೀಕ್ಷೆಮಾಡಿ ನೋಡಿರಿ. ಇದು ಉಡುವುದಕ್ಕೆ ದಡೂತಿಯಾಗಿಯೂ ನೋಟಕ್ಕೆ ನಯವಾಗಿಯೂ ಬೆಲೆ ಸುಲಭವಾಗಿಯೂ ಇದೆ. ಬಣ್ಣ ಹೋಗದು. ಸೀರೆಯ ಉದ್ದ 18 ಮೊಳ. ಸುಂದರವಾದ ಸೆರಗು.

ದಸರಾಮಹೋತ್ಸವದ ಕೈಗಡಿಯಾರ ಅರ್ಧಕ್ರಯ ರೂ. 1-13-0.



ಈ ಬರುವ ದಸರಾ ಮಹೋತ್ಸವಕ್ಕಾಗಿ ಉಪಯೋಗಪಡಿಸುವ ಈ ಹೆಚ್ಚು ಕ್ರಯವುಳ್ಳ ಕೈಗಡಿಯಾರವನ್ನು ಈ ಕೆಳಗೆ ನಮೂದುಮಾಡಿದ ಅಲ್ಪಕ್ರಯಕ್ಕೆ ನಮ್ಮ ಕಂಪನಿ ಪ್ರಖ್ಯಾತಿಹೊಂದುವದಕ್ಕಾಗಿ ವಿಕ್ರಯ ಮಾಡಲ್ಪಡುತ್ತೆ. ಈ ಸಮಯ ಬಹು ಶ್ಲಾಘ್ಯಕರವಾದದ್ದು.

ತಂಜಾವೂರು ಗಿಲ್ಟ್ ಅಡ್ಡಿಗೆ ಕ್ರಯ 6 ಆಣೆ.

ತಂಜಾವೂರು ಕೆಲಸಗಾರರಿಂದ ತಯಾರಿಸಲ್ಪಟ್ಟ ಘಟ್ಟಿ ಗಿಲ್ಟಿಗಳನ್ನು ಒಳ್ಳೇ ಭಂಗಾರದ ಮುಲಾಮು ಎಲೆಕ್ಟ್ರಿಕ್ ಶಕ್ತಿಯಿಂದ ಹಾಕಿ ನೋಡುವವರಿಗೆ ಬಹು ರಮಣೀಯಕರವಾದ ಅಡ್ಡಿಕೆಯನ್ನು ಸ್ವಲ್ಪ ಕ್ರಯಕ್ಕೆ ಕಂಪನಿ ಅಭಿವೃದ್ಧಿ ಉದ್ದೇಶವಾಗಿ ವಿಕ್ರಯಿಸಲ್ಪಡುತ್ತದೆ. ಸ್ತ್ರೀಯರೂ ಹುಡುಗಿಯರೂ ಧರಿಸಿಕೊಳ್ಳುವದಕ್ಕೆ ಲಾಯಖಾದದ್ದು.

ವಿಳಾಸ—ಕೌಶರ್ ಕೃಷ್ಣರಾವ್, 2-18, ಕಾರ್ ಸ್ಟ್ರೀಟ್,

[210-1] ಟ್ರಿಪ್ಲಿಕೇನ್, ಮದರಾಸ್.

ಗೃಹಕೃತ್ಯದ ನೋಟೀಸು.

ಮೈಸೂರ್ ಡಿಸ್ಟ್ರಿಕ್ಟು ಯಡತೊರೆ ತಾಲ್ಲೂಕು ಮಿರ್ಲೆ ಹೋಬಳಿ ಕಸಬಾ ಗ್ರಾಮದಲ್ಲಿ ಇರುವ ದೇವಾಂಗದ ತಿಮ್ಮಸೆಟ್ಟಿ ಮಗ ಸುಬ್ಬಸೆಟ್ಟಿಯು ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂಬರೆ—ನನ್ನ ಜನಕತಂದೆ ತಿಮ್ಮಸೆಟ್ರು ಬಾಲ್ಯದಿಂದಲೂ ಸಿದ್ಧಪತ್ರ ಹೊಗೆ ಸೆಗೆಯುವ ಅಭ್ಯಾಸವುಂಟು. ಇದರ ಮೇಲೆ 80-85 ವರುಷ ವಯಸ್ಸಾಗಿದೆ. ಈ ಎರಡು ಕಾರಣಗಳಿಂದ ಬುದ್ಧಿಸ್ಥಿಮಿತವಿಲ್ಲದೆ ಒಂದೊಂದು ಸಮಯದಲ್ಲಿ ಹತ್ತು ರೂಪಾಯಿನ ಪದಾರ್ಥವನ್ನು ಒಂದು ರೂಪಾಯಿಗಾದರೂ ಕೊಟ್ಟುಬಿಡುತ್ತಾರೆ. ಒಂದೊಂದು ಸಮಯದಲ್ಲಿ ಗದ್ದೆ ಮಾರುತ್ತೇನೆಂತಲೂ, ಒಂದು ಸಮಯದಲ್ಲಿ ಮನೇ ಮಾರುತ್ತೇನೆಂತಲೂ ಹೇಳುತ್ತಾರೆ. ಆದ್ದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ, ಮೇಲ್ಕಂಡ ನನ್ನ ತಂದೆ ತಿಮ್ಮಸೆಟ್ರಿಗೆ ಚರ ಸ್ಥಿರ ಸ್ವತ್ತುಗಳ ಮೇಲೇ ಆಗಲಿ, ಕೈಸಾಲವಾಗಲಿ ನನಗೆ ತಿಳಿಸದೆ ನನ್ನ ಅನುಮತಿ ಇಲ್ಲದೆ ಯಾರಾದರೂ ಸಾಲ ವಗೈರೆ ಕೊಟ್ಟರೆ ಆ ನಷ್ಟಕ್ಕೆ ನಾನು ಬದ್ಧನಾಗುವದಿಲ್ಲ; ಅಂಥವರು ನನ್ನ ನಷ್ಟಕ್ಕೆಲ್ಲಾ ಗುರಿಯಾಗಬೇಕಾಗುವುದೆಂದು ಈ ಮೂಲಕ ಎಚ್ಚರಿಸಿರುತ್ತೇನೆ.

[217-1] ಸುಬ್ಬಸೆಟ್ಟಿ ರುಜು.

ನಂಬಿ ಮೋಸಹೋಗಬೇಡಿ.

ಇತರರು ಷಾಲುಗಳನ್ನು ಒಳ್ಳೇದೆಂದೂ, ಕಮ್ಮಿ ಖರೀದಿಗೆ ಕೊಡುತ್ತೇವೆಂದೂ ಹೇಳುವರು. ಇದನ್ನು ನಂಬಿ ಮೋಸಹೋಗಬೇಡಿ. ನಮ್ಮಲ್ಲಿ ಕಾಷ್ಮೀರಿ ಮತ್ತು ಎಲ್ಲಾ ತರಹದ ವಂಟಿ ಷಾಲುಗಳೂ 5 ರೂ. ನಿಂದ 7, 10, 50, ರೂ. ಗಳವರಿಗೂ ಸಿಕ್ಕುತ್ತವೆ. ಪಸಂದಿಲ್ಲದಿದ್ದರೆ ಹಣ ವಾಪಸು ಮಾಡುತ್ತೇವೆ. ನಮ್ಮ ಕಾರಖಾನೆಗೆ ಲಂಡನ್, ಚಿಕಾಗೋ ಮುಂತಾದ ಅನೇಕ ಪ್ರದರ್ಶನಗಳಲ್ಲಿ ಚಿನ್ನ ಮತ್ತು ಬೆಳ್ಳಿಯ ಮೆಡಲುಗಳು ಮತ್ತು ಸರ್ಟಿಫಿಕೇಟುಗಳು ಬಂದಿವೆ. ಯಾವ ತರಹ ಬಣ್ಣದ್ದು ಎಷ್ಟು ಖರೀದಿಗೆ ಬೇಕಾದರೂ ನಮ್ಮಲ್ಲಿ ಸಿಕ್ಕುತ್ತವೆ. ಇಂಗ್ಲೀಷಿನಲ್ಲಾಗಲಿ, ಹಿಂದುಸ್ಥಾನಿಯಲ್ಲಾಗಲಿ ನಮಗೆ ಬರೆಯಬೇಕು.

ನಮ್ಮ ಅಡ್ರೆಸ್ಸು—ಪೀರ್ ಬ್ರದರ್ಸ್,
ಷಾಲ್ ಮರ್ಚೆಂಟ್ಸ್, ಅಮೃತಸರ, ಪಂಜಾಬು.

PEER BROS., SHAWL MERCHANTS,
[166-8] *AMRITSAR, PANJAB.*

WANTED

An EDITOR, an ASSISTANT EDITOR and a SUB-EDITOR for a non-political monthly Journal published separately in English and Kannada by the Mysore Economic Conference.

The applicants for the first place should have had journalistic experience and for the other two places good knowledge of Kannada essential. Pay according to qualifications, but will not exceed Rs. 300/-, 100/-, and 75/- for the three places, *respectively*. *Appointment will be temporary for a period of three years and terminable* within that period at three months' notice on either side. Applications with copies of testimonials, stating salary expected, should reach the undersigned on or before the 15th October, 1914.

For further information please refer to the *Mysore Gazette* of 17th September, 1914, or subsequent date, or apply to

SECRETARY.

13th Sept, 1914. *Mysore Economic Conference,*
[209-3] BANGALORE.

ಪ್ರೊಫೆಸರ್ ಬ್ರೇಸ್ಟರ್ ಇಲೆಕ್ಟ್ರೊ ಪೆಯಿನಾಡೈನ್

ಮನುಷ್ಯನ ಶರೀರದಲ್ಲಿ ವಿದ್ಯುಚ್ಛಕ್ತಿ ವ್ಯಾಪಿತವಿರುವದೆಂತಲೂ, ವಿದ್ಯುಚ್ಛಕ್ತಿ ಕಡಮೆಯಾದ ಕೂಡಲೇ ನಾನಾ ತರದ ವ್ಯಾಧಿಗಳು ಲಭಿಸುವದೆಂತಲೂ, ಅಂತಹ ವ್ಯಾಧಿಗಳನ್ನು ಶೀಘ್ರ ಗುಣಪಡಿಸಲು ವಿದ್ಯುಚ್ಛಕ್ತಿ ಮಿಶ್ರವಾದ ಔಷಧದ ಉಪಯೋಗದಿಂದಲ್ಲದೆ



ಬೇರೆ ಔಷಧಗಳಿಂದ ವ್ಯಾಧಿಗಳನ್ನು ಶೀಘ್ರ ಗುಣಪಡಿಸುವದು ಕಷ್ಟವೆಂತಲೂ ಅಮೇರಿಕಾ ದೇಶದ ವೈದ್ಯಶಾಸ್ತ್ರ ಪಂಡಿತರು ವೈದ್ಯಶಾಸ್ತ್ರ ಪರಿಶೋಧನೆಯಿಂದ ಸಿದ್ಧಿಸಿರುವರು. ಈ ಔಷಧವು ಉಪಯೋಗಿಸಿದ ಕೂಡಲೇ ದೇಹಕ್ಕೆ ಸಾಕಾಗುವಷ್ಟು ವಿದ್ಯುಚ್ಛಕ್ತಿಯನ್ನುಂಟುಮಾಡಿ ವ್ಯಾಧಿಯನ್ನು ಅತಿ ಶೀಘ್ರ ಗುಣಪಡಿಸುತ್ತೆ. ಪ್ರಾಚೀನಕಾಲದ ಔಷಧಗಳಿಗೆಲ್ಲವು ಇದು ಅತ್ಯುತ್ತಮವಾದದ್ದು. ಒಂದಾವರ್ತಿ ಪರೀಕ್ಷಿಸಿ ನೋಡಿದರೆ ಇದರ ಗುಣವು ವ್ಯಕ್ತವಾಗುತ್ತೆ.

ಎಲೆಕ್ಟ್ರೊಪೆಯಿನಾಡೈನ್ ತೈಲದಿಂದ ಗುಣಪಡುವ ವ್ಯಾಧಿಗಳು:—

ತಿಮರುವಾಯುವು, ಕೀಲ್ವಾಯುವು, ಪಾರ್ಶ್ವವಾಯುವು, ಕ್ಷಯ, ಕೆಮ್ಮು, ನೆಗಡಿ, ವಾಯುನೋವು (ಕೈಕಾಲು ಹಿಡಿತ), ಉಳುಕುಹಿಡಿದಿದ್ದರು, ಕಠಿನಶ್ವಾಸ, ನಡುನೋವು (ಸೊಂಟನೋವು), ಪಕ್ಕಶೂಲೆ, ಹಲ್ಲುನೋವು, ತಲೆನೋವು, ಅರೆತಲೆನೋವು, ಉಬ್ಬಸ, ವಿಷಜ್ವರದ ಗಡ್ಡೆಗಳಿಗೂ ಮತ್ತು ಮಕ್ಕಳ ಪಕ್ಕಶೂಲೆ, (ಅಳ್ಳೆ) ಶೈತ್ಯದೋಷಗಳೂ, ವಿಷಹುಳಗಳ ಕಡಿತಗಳಿಗೂ (ಚೇಳು ಮುಂತಾದದ್ದು), ಇದಕ್ಕೆಲ್ಲಾ ಬಹಳ ಶ್ಲಾಘನೀಯವಾದದ್ದು. [12-39]

ಉಪಯೋಗಿಸುವ ಕ್ರಮವು ಹಿಂದುದೇಶದ ಎಲ್ಲಾ ಭಾಷೆಗಳಲ್ಲಿಯೂ ಬುಡ್ಡಿಯ ಸಂಗಡ ಕಳುಹಿಸಲಾದೀತು.

ಬುಡ್ಡಿಯ ಕ್ರಯ ರೂ. 0-8-0. ವಿ. ಪಿ. ಖರ್ಚು 0-4-0. ಏಜಂಟರು ಬೇಕು.

ಮುಖ್ಯ ಏಜಂಟರು:—ಗುರುಬಸವ ಅಂಡ್ ಕಂಪನಿ, ಮದರಾಸ್.

ಗೊಬ್ಬರ ಹರಾಜು

ಇದೇ ಅಕ್ಟೋಬರ್ ತಾ. 4 ನೇ ಭಾನುವಾರ ಹತ್ತು ಘಂಟೆಗೆ ಫ್ರೆಂಚ್ ರಾಕ್ಸ್ ಛತ್ರದ ಮಿಷನ್ ಬಳಿ ಬೂದಿಗೊಬ್ಬರ (ಅಂದಾಜು 100 ಗಾಡಿ) ಹರಾಜು ಆಗುತ್ತದೆ. ಇಷ್ಟವುಳ್ಳವರು ಛಡಕವಾಲ್ ಮಾಡಿ ಪಡೆದ ಎಂಟು ದಿನಗಳೊಳಗಾಗಿ ತೆಗೆದುಕೊಳ್ಳುವುದು [220-1]

ಪಿ. ಸಿದ್ದಯ್ಯ, ಪಿ. ಮದಾರ್‌ಸಾಹಿಬ್ ಅಂಡ್ ಕಂಪನಿ, ಫ್ರೆಂಚ್‌ರಾಕ್ಸ್.

ವೃತ್ತಾಂತಪತ್ರಿಕೆ ಏಜಂಟರಿಗೆ ಸೂಚನೆ.

ವೃತ್ತಾಂತ ಪತ್ರಿಕೆಯ 1914-15 ನೇ ವರುಷದ ಒಂದನೇ ಕ್ವಾರ್ಟರು ಕಳೆದ ಆಗಸ್ಟ್ ತಿಂಗಳಿಗೆ ಪೂರೈಸಿದೆ. ಏಜಂಟರುಗಳು ಆ ಕ್ವಾರ್ಟರಿನ ಲೆಕ್ಕಗಳನ್ನು ಖೈದುಮಾಡಿ, "ಬಿ" ಫಾರಂಗಳಿಗೆ ಎತ್ತಿ ಬರೆದು, ತಮ್ಮ ತಮ್ಮ ಸೂಪರ್‌ಟೆಂಡೆಂಟರಿಗೆ ಒಂದು ಪ್ರತಿಯನ್ನೂ, ನಮಗೆ ಒಂದು ಪ್ರತಿಯನ್ನೂ ಈ ವಾರದಲ್ಲೇ ಜಾಗ್ರತೆಯಿಂದ ಕಳುಹಿಸಿಕೊಡಬೇಕಾಗಿ ಕೃತಪಡಿಸಿದೆ.

ನೀವು ಕೇಳಿದ ಹಾಗೆ ಪತ್ರಿಕೆಗಳನ್ನು ಹೆಚ್ಚಾಗಿ ಕಳುಹಿಸುತ್ತಾ ಬರುವೆವು. ಆದರೆ ಬಿಡಿ ಪತ್ರಿಕೆಗಳನ್ನು ಮಾರಲೇ ಕೂಡದು. ಮುಂದಿನ 1915 ನೇ ಏಪ್ರಿಲ್ ವರೆಗೆ ಅಡ್ವಾನ್ಸು ಕೊಟ್ಟು ಕ್ರಮವಾಗಿ ಚಂದಾದಾರರಾಗತಕ್ಕವರಿಗೆ ಮಾತ್ರ ಪತ್ರಿಕೆಗಳನ್ನು ತಪ್ಪಿಸದೆ ಕೊಡುತ್ತಾ ಬರಬೇಕೆಂದು ಕೋರುತ್ತೇವೆ.

ಮ್ಯಾನೇಜರ್, "ವೃತ್ತಾಂತ ಪತ್ರಿಕೆ," ಮೈಸೂರು.

ವೃತ್ತಾಂತ ಪತ್ರಿಕೆ.

---:o:---

ಸನ್ ೧೯೧೪ ನೇ ಇಸವಿ ಅಕ್ಟೋಬರ್ ತಾ. ೧ ನೇ ಗುರುವಾರ.

ಮೈಸೂರು ಪಟ್ಟಣದಲ್ಲಿ ನವರಾತ್ರಿ ಉತ್ಸವಗಳು.

ರಾಜಧಾನಿಯಲ್ಲಿ ನವರಾತ್ರಿ ಉತ್ಸವಕಾಲದಲ್ಲಿ ಜನಸಂದಣಿಯೂ, ಕೆಲಸಕಾರ್ಯಗಳ ಗಲಾಟೆಯೂ ಹೆಚ್ಚಾಗಿರುತ್ತದೆ. ಬಗೆಬಗೆಯ ಕೂಟಗಳು ನಡೆಯುವವು. ಇದಕ್ಕೋಸ್ಕರ ಬೇರೆ ಬೇರೆ ಇಲಾಖೆಗಳ ಮುಖ್ಯ ಅಧಿಕಾರಿಗಳೂ, ಡಿಸ್ಟ್ರಿಕ್ಟುಗಳ ಅಧಿಕಾರಿಗಳೂ ಅಲ್ಲದೆ ಸಂಸ್ಥಾನದ ಪ್ರಜಾ ಮುಖಂಡರೂ ಬಹಳ ಮಂದಿ ರಾಜಧಾನಿಗೆ ಬಂದು ಸೇರುವರು. ದಸರಾ ಉತ್ಸವಗಳನ್ನೂ ದರ್ಬಾರುಗಳನ್ನೂ ನೋಡುವುದಕ್ಕೆ ಅನೇಕ ಹೊಸ ಜನರು ಆಸೆಪಟ್ಟು ಮೈಸೂರಿಗೆ ಬರುತ್ತಾರೆ. ಪ್ರಜಾ ಪ್ರತಿನಿಧಿ ಸಭೆಯೂ, ಪರಸ್ಪರ ಸಹಾಯಕರ ಮಹಾ ಸಭೆಯೂ ಜರುಗುವುದರಿಂದ ಸಂಸ್ಥಾನದ ಪ್ರತಿ ಹೋಬಳಿ ಮತ್ತು ತಾಲ್ಲೂಕಿನಿಂದಲೂ ಅನೇಕ ಗಣ್ಯಪ್ರಜೆಗಳು ರಾಜಧಾನಿಗೆ ಬಂದೇ ತೀರಬೇಕು. ಪ್ರದರ್ಶನಶಾಲೆಯೂ ರಾಜಧಾನಿಯಲ್ಲಿ ಜನರ ನೋಟಕ್ಕೆ ಅತಿಶಯವಾದದ್ದಾಗಿದೆ. ಇದಲ್ಲದೆ ಸಣ್ಣ ವಯಸ್ಸಿನ ವಿದ್ಯಾರ್ಥಿಗಳಿಗೂ ನಾನಾಬಗೆಯ ವಿನೋದಗಳೂ, ವಿನೋದಗಳೂ ನಡೆಯುವವು. ಆದಕಾರಣ ಸಭೆ ಮೊದಲಾದ ಕೂಟಗಳ ಕೆಲಸಕಾರ್ಯಗಳನ್ನು ನಡಿಸುವುದಕ್ಕೂ ಉತ್ಸವ ಮುಂತಾದವುಗಳ ತಮಾಷೆಯನ್ನು ನೋಡುವುದಕ್ಕೂ, ದಸರಾ ಕಾಲದಲ್ಲಿ ಹೊರಗಿನಿಂದ ಅನೇಕ ಜನರು ರಾಜಧಾನಿಗೆ ಬಂದು ಸೇರುತ್ತಾರೆ.

ಮೇಲ್ಕಂಡ ಸಮಸ್ತ ವಿಷಯಗಳನ್ನೂ ವಿವರಿಸಿ ಒಂದೇ ಸಲ ಪ್ರಸ್ತಾಪಮಾಡುವುದು ಸಾಧ್ಯವಲ್ಲ. ಆದರೆ ಪ್ರತಿ ಒಂದರಲ್ಲೂ ಪ್ರಯೋಜನವಿದೆ. ಬರತಕ್ಕ ಜನಗಳು ಹೆಚ್ಚು ಸಂಗತಿಗಳನ್ನು ತಿಳಿದುಕೊಳ್ಳುವುದಕ್ಕೂ, ಹೊಸ ಅಭಿಪ್ರಾಯಗಳನ್ನು ಸಂಗ್ರಹಿಸುವುದಕ್ಕೂ ತುಂಬಾ ಅವಕಾಶವಿದೆ.

ಉತ್ಸವಗಳೆಲ್ಲಾ ಎಂದಿನಂತೆ ಪದ್ಧತಿಯ ಪ್ರಕಾರ ನಡೆಯುತ್ತಲಿವೆ. ಪ್ರತಿ ದಿನವೂ ಸಾಯಂಕಾಲದ ಹೊತ್ತು ಅರಮನೆಯ ಮೇಲ್ಭಾಗದಲ್ಲೂ, ಮುಂಭಾಗದ ಮಧ್ಯರಂಗದಲ್ಲೂ ಅತ್ಯಂತ ನೇತ್ರಾನಂದಕರವಾಗಿ ಹಚ್ಚಲ್ಪಡುವ ದೀಪಗಳ ವೈಭವವನ್ನೂ, ಸಿಂಹಾಸನದ ಮೇಲೆ ಕುಳಿತು ದರ್ಬಾರ್ ನಡಿಸುವ ಶ್ರೀಮನ್ ಮಹಾರಾಜರವರನ್ನೂ, ದರ್ಬಾರಿಗೆ ಹೋಗಿರುವ ದೊಡ್ಡ ಮನುಷ್ಯರನ್ನೂ ನೋಡಿ ಆನಂದ ಪಡುವುದಕ್ಕಾಗಿ ಸಾವಿರಾರು ಪ್ರಜೆಗಳು ತಂಡತಂಡವಾಗಿ ಹೋಗಿ ಮೈದಾನದಲ್ಲೆಲ್ಲಾ ಗಿಜಗುಟ್ಟುವಂತೆ ನಿಲ್ಲುವರು.

ಈ ವರುಷವೂ ಎಂದಿನಂತೆ ಪ್ರದರ್ಶನ ಶಾಲೆಯು ನೋಟಕರ ಕಣ್ಮನಗಳನ್ನು ಸೆಳೆಯುವುದು. ಯಂತ್ರಗಳು ಈ ವರುಷದಷ್ಟು ಹಿಂದೆ ಯಾವಾಗಲೂ ಪ್ರದರ್ಶನಕ್ಕೆ ಬಂದಿಲ್ಲ. ಕಬ್ಬನ್ನು ಅರೆಯಾಡುವುದೂ, ರಸವನ್ನು ಕುದಿಸಿ ಬೆಲ್ಲವನ್ನು ತಯಾರುಮಾಡುವುದೂ ದೂರಸ್ಥಳದಿಂದ ಬಂದು ನೋಡುವ ಜಮೀನ್‌ದಾರರಿಗೆ ವಿಶೇಷ ಉತ್ಸಾಹವನ್ನು ಉಂಟುಮಾಡುತ್ತವೆ. ಕಬ್ಬನ್ನು ಅರೆಗೆ ಕೊಟ್ಟ ಉತ್ತರ ಕ್ಷಣದಲ್ಲೇ ಹಾಲೆಲ್ಲಾ ಹಿಂಡಿಬರುವುದು ಪರಮಾಶ್ಚರ್ಯಕರವಾಗಿದೆ. ಮತ್ತು ಈ ವಿಧಾನವೆಲ್ಲಾ ಮೊದಲಿನಿಂದ ಕಡೆಯ ತನಕ ಶುಚಿರುಚಿಯಾಗಿಯೂ ಸ್ವಲ್ಪವೂ ಪೋಲಾಗದಂತೆಯೂ ಯಂತ್ರದಲ್ಲಿ ನಡಿಸಲ್ಪಡುವುದು. ನಮ್ಮ ಸೀಮೆಯಲ್ಲಿ ಈಗ ನಾವು ಯಂತ್ರಗಳನ್ನು ವಿಶೇಷವಾಗಿ ಉಪಯೋಗಿಸುತ್ತಾ ಇಲ್ಲ. ಅವುಗಳಿಂದ ಪ್ರಯೋಜನವುಂಟೆಂಬುವುದನ್ನು ಸಾಕ್ಷಾತ್ತಾಗಿ ದೃಷ್ಟಾಂತ ಮಾಡಿ ತೋರಿಸುವಾಗ್ಗೆ ಜಮೀನ್‌ದಾರರು ಅನುಮಾನಿಸದೆ ಅಂಥವುಗಳನ್ನು ಕೊಂಡುತರಿಸಿ ಉಪಯೋಗಿಸುತ್ತಾ ಬರಬೇಕು. ಭಾವಿಗಳಲ್ಲಿ ನೀರು ಸಿಕ್ಕುವಂಥಾ ಪ್ರದೇಶಗಳ ರೈತರು ಬಂದು ಪಂಪುಗಳನ್ನು ಹಾಕಿ ನೀರು ಎತ್ತುವ ವ್ಯವಸಾಯ ಯಂತ್ರಗಳನ್ನು ಕಣ್ಣಾರ ನೋಡಿ ಹೋಗಬೇಕು. ಯಂತ್ರಗಳನ್ನಿಟ್ಟು ಕೆಲಸಮಾಡುವುದಕ್ಕೆ ಪ್ರಾರಂಭದಲ್ಲಿ ಹೆಚ್ಚು ಹಣ ಬೇಕಾಗುವುದೆಂದು ಕಾಣಬಹುದು. ಆದರೆ ವ್ಯವಸಾಯವನ್ನು ಸರಿಯಾದ ಕ್ರಮದಿಂದ ನಡಿಸುತ್ತಾ ಬಂದ ಪಕ್ಷದಲ್ಲಿ ಮೊದಲು ಖರ್ಚುಮಾಡಿದ ಹಣವೆಲ್ಲಾ ಬೇಗನೆ ಉತ್ಪತ್ತಿಯಾದೀತು. ಈ ಯಂತ್ರಗಳನ್ನು ನಡಿಸುವುದಕ್ಕೆ ಸಮರ್ಥರಾಗಿರುವ ಕಾರೇಗಾರರು ಈಗ ಸಿಕ್ಕುವುದು ಪ್ರಯಾಸವಾಗಿದೆ. ತಿಳುವಳಿಕೆಯೇನೂ ಇಲ್ಲದ ಈಗಿನ ಕೂಲಿ ಆಳುಗಳಿಗಿಂತ ಈ ಕಾರೇಗಾರರಿಗೆ ಹೆಚ್ಚಾಗಿ ಸಂಬಳವನ್ನು ಕೊಡಬೇಕಾಗುವುದು. ಆದರೆ ಈ ಕಾರೇಗಾರರು ತೃಪ್ತಿಕರವಾಗಿಯೂ ಚಟುವಟಿಕೆಯಿಂದಲೂ ತಮ್ಮ ಕೆಲಸವನ್ನು ಮಾಡುವುದಾದರೆ ವ್ಯವಸಾಯವು ತೃಪ್ತಿಕರವಾಗಿ ನಡೆದ ಪಕ್ಷದಲ್ಲಿ ಅವರಿಂದ ಜಮೀನ್‌ದಾರರಿಗೆ ತುಂಬಾ ಲಾಭವಾದೀತು.

ಜಮೀನ್‌ದಾರರೂ ರೈತರೂ ಈ ಪ್ರದರ್ಶನಶಾಲೆಗೆ ಬಂದು, ಯಂತ್ರಗಳು ಮಾಡುವ ಕೆಲಸವನ್ನು ಕಣ್ಣಾರ ನೋಡಿ ಅವುಗಳ ಕ್ರಯ, ನಡಿಸುವ ಖರ್ಚು ಮುಂತಾದ ಸಂಗತಿಗಳನ್ನು ಕೇಳಿ ತಿಳಿದುಕೊಳ್ಳಬೇಕೆಂದೂ, ತಮ್ಮ ಜಮೀನುಗಳಿಗೆ ಅವುಗಳನ್ನು ಕೊಂಡು ತರಿಸಿಟ್ಟು ವ್ಯವಸಾಯ ಮಾಡುವುದಕ್ಕೆ ಸಾಹಸ ಪ್ರಯತ್ನಗಳನ್ನು ನಡಿಸಬೇಕೆಂದೂ ಒತ್ತಿ ಹೇಳುತ್ತೇವೆ. ಈಗ ಸಕ್ಕರೆ ಬಹಳ ಖರ್ಚಾಗುವುದು; ಹೊರಗಿನಿಂದ ಬರುವುದು ಪ್ರಯಾಸವಾದಕಾರಣ ಅದರ ಧಾರಣೆ ತುಂಬಾ ಹೆಚ್ಚಿರುತ್ತದೆ. ಇಂಥಾ ಅನುಕೂಲವಾದ ಸಮಯವನ್ನು ನಮ್ಮ ಜಮೀನ್‌ದಾರರು ಕಳೆದುಕೊಳ್ಳದೆ ಸಕ್ಕರೆ ತಯಾರುಮಾಡುವ ಏರ್ಪಾಡುಗಳನ್ನು ಮಾಡಿ, ನಮ್ಮ ಸಂಸ್ಥಾನಕ್ಕೂ ಮದರಾಸು ಇಲಾಖೆಗೂ ಸಕ್ಕರೆಯನ್ನು ಒದಗಿಸುವವರಾಗಲೆಂದು ಹಾರೈಸುತ್ತೇವೆ.

ಪ್ರತಿ ವರುಷವೂ ಪ್ರದರ್ಶನವನ್ನು ನಡಿಸುವುದಕ್ಕೆ ನಮ್ಮ ಗವರ್ನಮೆಂಟಿಗೆ ಬಹಳ ಹಣ ಖರ್ಚಾಗುತ್ತಿದೆ; ಇದರಲ್ಲಿ ಕೆಲವು ಭಾಗವೆಲ್ಲಾ ಸಾರ್ಥಕವಾದ ಖರ್ಚೆಂದು ನಮಗೆ ಕಾಣುವುದು. ಪ್ರದರ್ಶನದ ವಸ್ತುಗಳಿಗೆ ಬಹುಮಾನಗಳನ್ನು ಈಗಿನಷ್ಟು ಅಪಾರವಾಗಿ ಹಂಚುವುದು ಅವಶ್ಯವೇ ಎಂದು ಸಂಶಯಪಡುತ್ತೇವೆ. ಬಹುಮಾನಗಳೂ ಮೆಡಲುಗಳೂ ವಸ್ತುಗಳ ಯೋಗ್ಯತೆಯನ್ನೂ ವಿಶೇಷತೆಯನ್ನೂ ಸೂಚಿಸುವುದೇನೋ ನಿಜ; ಆದರೆ ಈ ಬಹುಮಾನಗಳ ಮತ್ತು ಮೆಡಲುಗಳ ಸಂಖ್ಯೆಯನ್ನು ಇನ್ನೂ ಕಡಮೆ ಮಾಡಿದ ಪಕ್ಷದಲ್ಲಿ ಅವುಗಳ ಶ್ರೇಷ್ಠತೆಯು ತುಂಬಾ ಅಮೂಲ್ಯವಾಗಿ ಎಣಿಸಲ್ಪಡುವುದೆಂದು ನಮಗೆ ತೋರುತ್ತದೆ.

ನಮ್ಮ ಪರಮತಂದೆ.

ಈಗ ಭೂಮಂಡಲವೆಲ್ಲಾ ಯುದ್ಧದ ಗಲಾಟೆಯಿಂದ ನಿಬಿಡವಾಗಿರುತ್ತದೆ. ಎಲ್ಲಿ ನೋಡಿದರೂ ಕತ್ತಿ, ಕಡಿದಾಟ, ಫಿರಂಗಿ, ಬಾಂಬು ಎಂಬ ಶಬ್ದಗಳು ಕೇಳಿ ಬರುತ್ತವೆ. ಎತ್ತ ಕಡೆ ಹೋದರೂ ಸಮಾಧಾನವೂ ಶಾಂತಿಯೂ ನೆಮ್ಮದಿಯೂ ಕಾಣಬರುವದಿಲ್ಲ. ಎಲ್ಲರ ಮನಸ್ಸುಗಳಲ್ಲಿ ಭೀತಿಯೂ ಸಂದೇಹವೂ ಕಳವಳವೂ ಆವರಿಸಿಕೊಂಡಿರುತ್ತವೆ ಇಂಥಾ ವಿಪತ್ತಿನ ಕಾಲದಲ್ಲಿ ನಮಗೆ ಗತಿ ಯಾರು ? ಅರಸುಗಳೂ ಚಕ್ರವರ್ತಿಗಳೂ ಪ್ರಭುಗಳೂ ಒಬ್ಬರ ಮೇಲೊಬ್ಬರು ಬಿದ್ದು ನಾನು ದೊಡ್ಡವನು ತಾನು ದೊಡ್ಡವನು ಎಂದು ಬಾಹುಬಲದಿಂದಲೂ ಸೈನ್ಯದ ಬಲದಿಂದಲೂ ನಿಷ್ಕರ್ಷಿಸುವದಕ್ಕೆ ಪ್ರಯತ್ನಪಡುತ್ತಿರುವಲ್ಲಿ ಸಾಧಾರಣವಾದ ಪ್ರಜೆಗಳ ಪಾಡೇನು ? ಅಬಲೆಯರಾದ ಸ್ತ್ರೀಯರನ್ನೂ ಬಾಲಕಬಾಲಕಿಯರನ್ನೂ ಯುದ್ಧವನ್ನೇ ಎಂದೂ ನೋಡದೇ ಅದನ್ನು ಮನದಲ್ಲಿ ಭಾವಿಸುತ್ತಲೆ ಕಂಪಾಯಮಾನರಾಗುವ ಅಶಾಂತರ ಸಾಧು ಸಜ್ಜನರ ಪಾಡೇನು ? ನೀತಿಯೂ ಸತ್ಯವೂ ಕರುಣೆಯೂ ಮುಳುಗಿಹೋಗುವ ಕಾಲ ಪ್ರಾಪ್ತಿಸಿತಲ್ಲಾ ಎಂದು ಮರುಗುವ ಸಮಯದಲ್ಲಿ ನಮಗೆ ಅಭಯವಚನಗಳನ್ನು ಹೇಳಿ ಆಶ್ರಯವನ್ನು ಕೊಟ್ಟು ಪರಾಮರಿಸುವವರು ಯಾರು ?

ಇಂತಹ ಗಲಿಬಿಲಿಯಲ್ಲಿ ನಮಗೆ ತಿಳಿದಿರುವ ಒಂದು ಭದ್ರಾಶ್ರಯವನ್ನು ಪ್ರಜಾಕೋಟಿಯ ನೆಮ್ಮದಿಗಾಗಿ ಸೂಚಿಸದೆ ಇರಲಾರೆವು. ಭೂಮಿಯು ಮಾರ್ಪಟ್ಟರೂ ಬೆಟ್ಟಗಳು ಸಮುದ್ರದ ಮಧ್ಯದಲ್ಲಿ ಕದಲಿದರೂ ನಾವು ಭಯಪಡೆವು. ನೀರುಗಳು ಘೋಷಿಸಿ ಉಕ್ಕುತ್ತವೆ. ಅದರ ಉಬ್ಬಿನಿಂದ ಬೆಟ್ಟಗಳು ಕದಲುತ್ತವೆ. ಜನಾಂಗಗಳು ಘೋಷಿಸುತ್ತವೆ. ರಾಜ್ಯಗಳು ಕದಲುತ್ತವೆ. ಇಷ್ಟೆಲ್ಲಾ ಸಂಭವಿಸಿದರೂ ನಾವು ಭಯಪಡೆವು. ಯಾಕಂದರೆ ದೇವರು ನಮಗೆ ಆಶ್ರಯವೂ ಬಲವೂ ಆಗಿದ್ದಾನೆ. ಇಕ್ಕಟ್ಟುಗಳಲ್ಲಿ ವಿಶೇಷವಾಗಿ ಸಹಾಯಕನಾಗಿ ಕಾಣಿಸಿಕೊಳ್ಳುತ್ತಾನೆ. ಯುದ್ಧಗಳನ್ನು ಭೂಮಿಯ ಅಂತ್ಯದ ಪರ್ಯಂತರ ನಿಲ್ಲಿಸಿಬಿಟ್ಟು ಬಿಲ್ಲನ್ನು ಮುರಿದು ಭರ್ಜಿಯನ್ನು ಕಡಿದು ರಥಗಳನ್ನು ಬೆಂಕಿಯಿಂದ ಸುಡುತ್ತಾನೆ. ಸೈನ್ಯಗಳ ದೇವರು ನಮ್ಮ ಸಂಗಡಲಿದ್ದಾನೆ. ಆತನೇ ನಮ್ಮ ದುರ್ಗವು.

ಒಬ್ಬನು ಪ್ರಪಂಚವನ್ನೆಲ್ಲಾ ತಬ್ಬಿಕೆಳಗೆ ಮಾಡಿ ಅದರಲ್ಲಿ ತನ್ನ ಬಲವನ್ನು ಸ್ಥಾಪಿಸಿ ಸಕಲರ ಮೇಲೆ ತಾನೇ ಉನ್ನತಮೂರ್ತಿಯಾಗಿ ಆಳಬೇಕೆಂದು ಗರ್ವಪಡುತ್ತಾನೆ. ದೇವರು ಲೋಕವನ್ನು ಸಕಲ ಜನಾಂಗಗಳನ್ನೂ ತನ್ನ ಮಹಿಮೆಗೋಸ್ಕರ ನಿರ್ಮಿಸಿ ಕಾಪಾಡುತ್ತಲಿದ್ದಾನೆ. ಆತನು ಸಕಲರ ತಂದೆಯಾಗಿದ್ದಾನೆ. ಆತನು ನಿರ್ಮಾಣಕನಾಗಿಯೂ ಪಾಲಕನಾಗಿಯೂ ಇರುವ ಹಕ್ಕಿನಿಂದ ಭೂಮಂಡಲಕ್ಕೆ ಅರಸನಾಗಿದ್ದಾನೆ. ಆದರೆ ಪ್ರೀತಿಯುಳ್ಳ ತಂದೆಯಾಗಿದ್ದಾನೆ. ಆತನು ಈ ಲೋಕದಲ್ಲಿ ಸ್ಥಾಪಿಸಿ ನಡಿಸುತ್ತಲಿರುವ ಕ್ರಮಗಳಿಂದ ನಾವು ಈ ಲೋಕವನ್ನು ಆತನ ರಾಜ್ಯವೆನ್ನುತ್ತೇವೆ. ಆತನಾದರೋ ಇದನ್ನು ತನ್ನ ಕುಟುಂಬವೆಂದು ಭಾವಿಸುತ್ತಾನೆ "ಭಾರಕರ್ತನು ನೀನು; ಬಹು ಸಂಸಾರಿ" ಯೆಂದು ಒಬ್ಬ ಕವಿಯು ಆತನಿಗೆ ಹೆಸರಿಟ್ಟು ಕರೆದಿರುವದು ನಮ್ಮ ಮನಸ್ಸಿಗೆ ಚೆನ್ನಾಗಿ ಒಪ್ಪುತ್ತದೆ. ಈ ರಾಜ್ಯದಲ್ಲಿ ಕಟ್ಟಳೆ, ಕಾನೂನು, ದಂಡನೆಗಳು ನಮ್ಮನ್ನು ನಡಸಿ ಹದ್ದುಬಸ್ತಿನಲ್ಲಿಡುವವುಗಳಲ್ಲ. ಕೇವಲ ಮಮತಾಭಾವವೇ ನಮ್ಮನ್ನು ಐಕಮತ್ಯದಿಂದೊಡಗೂಡಿಸಿ ಅನ್ಯೋನ್ಯದಲ್ಲಿ ಬಂಧಿಸಿ ಕಾಯುತ್ತವೆ. ಕ್ರಿಸ್ತನು ದೇವರನ್ನು ತಂದೆಯೆಂದು ನಮಗೆ ಪ್ರಕಟಿಸಿದನು. ಅದಕ್ಕೆ ಮುಂಚೆ ಇದ್ದ ದೇವರ ಸೇವಕರು ಆತನನ್ನು ಸ್ಪಷ್ಟವಾಗಿ ತಿಳಿಯಲಿಲ್ಲ. ಆಗ ದೇವರ ವಿಷಯವಾಗಿ ನಮಗೆ ಬಂದ ಬೆಳಕು ಮಬ್ಬಾಗಿದ್ದಿತು. ಯಾಕಂದರೆ ಅವರೆಲ್ಲರೂ ದೇವರ ಸೇವಕರು. ಸೇವಕನು ಯಜಮಾನನನ್ನು ಸಂಪೂರ್ಣವಾಗಿ ತಿಳುಕೊಳ್ಳಲಾರನು. ಆದರೆ ಯೇಸು ಕ್ರಿಸ್ತನು ದೇವರ ನಿತ್ಯ ಕುಮಾರನು. ದೇವರನ್ನು ಯಾರೂ ಎಂದೂ ನೋಡಲಿಲ್ಲ. ಆದರೆ ತಂದೆಯ ಎದೆಯಲ್ಲಿದ್ದ ಆತನ ಒಬ್ಬನೇ ಕುಮಾರನಾದ ಯೇಸು ಕ್ರಿಸ್ತನು ಆತನನ್ನು ತಿಳಿದು ಆತನನ್ನು ಸಕಲರಿಗೆ ಪ್ರಕಟಿಸಿದ್ದಾನೆ. ದೇವರು ನಮ್ಮ ತಂದೆಯೆಂದು ಈ ಕಾಲದಲ್ಲಿ ನಾವು ಆತನನ್ನು ಸ್ಮರಿಸುವದು ಯುಕ್ತವಾಗಿದೆ. ಹೀಗೆ ಆತನನ್ನು ನಾವು ಸ್ಮರಿಸುವದರಿಂದ ಮಾತ್ರ ಇವನು ಆಸ್ಟ್ರಿಯಾದವನು, ಅವನು ಸರ್ವಿಯಾದವನು, ಇವನು ಜರ್ಮನಿಯವನು, ಅವನು ಇಂಗ್ಲಿಷಿನವನು, ಅಥವಾ ಫ್ರೆಂಚನು ಎಂಬ ಪಕ್ಷಭೇದವು ನಿರ್ನಾಮವಾಗುವದು. ನಾವು ಭ್ರಾತೃವಾತ್ಸಲ್ಯವನ್ನು ಬಿಟ್ಟು ಸ್ವಾಭಾವಿಕವಾಗಿ ಪಾಪಕ್ಕೆ ಸಿಕ್ಕಿದ್ದರೂ ಆತನು ಕೃಪೆಯಿಂದ ನಮ್ಮನ್ನು ಮನ್ನಿಸಿ ಮಕ್ಕಳೆಂತ ತನ್ನ ಕಡೆಗೆ ತಿರುಗುವವರಿಗೆ ನಡಿಸಿಕೊಡುವನು. ಮತ್ತು ನಾವು ಭಯಪಡಬೇಕಾದ ಅಗತ್ಯವಿಲ್ಲ. ಆತನ ಕೈಯಲ್ಲಿ ಸಕಲವೂ ಇದೆ. ಆತನು ಯಾವದನ್ನು ಹೇಗೆ ಬೇಕಾದರೂ ತಿರುಗಿಸಬಲ್ಲನು. ನಾವು ಆತನನ್ನು ಪೂರ್ಣ ಭರವಸದಿಂದ ನಂಬಿದರೆ ಆತನು ನಮ್ಮೊಬ್ಬೊಬ್ಬರನ್ನು ವ್ಯಕ್ತಿ ವ್ಯಕ್ತಿಗಳಾಗಿ ತಿಳಿದು ನಮ್ಮನ್ನು ಪರಾಮರಿಸುತ್ತಾನೆ. ಕ್ರಿಸ್ತನು ಹೇಳಿರುವದನ್ನು ಜ್ಞಾಪಕಮಾಡಿಕೊಳ್ಳಿರಿ. ಅದೇನಂದರೆ, "ದುಡ್ಡಿಗೆ ಎರಡು ಗುಬ್ಬಿ ಪಕ್ಷಿಗಳನ್ನು ಮಾರುತ್ತಾರಲ್ಲ. ಆದಾಗ್ಯೂ ನಿಮ್ಮ ತಂದೆಯ ಚಿತ್ತವಿಲ್ಲದೆ ಅದು ಸಹ ನೆಲಕ್ಕೆ ಬೀಳುವದಿಲ್ಲ. ಅವುಗಳಲ್ಲಿ ಒಂದಾದರೂ ದೇವರಿಗೆ ಮರೆತುಹೋಗಿರುವದಿಲ್ಲ. ನೀವು ನೂರಾರು ಗುಬ್ಬೀ ಪಕ್ಷಿಗಳಿಗಿಂತ ಎಷ್ಟೋ ಹೆಚ್ಚಿನವರು. ಆದ್ದರಿಂದ ಅಂಜಬೇಡಿರಿ. ನಿಮ್ಮ ತಲೇ ಕೂದಲುಗಳೆಲ್ಲಾ ಎಣಿಸಲ್ಪಟ್ಟಿವೆ" ಎಂಬುದೇ.

ಯುದ್ಧದ ಸಮಾಚಾರಗಳು.

ಫ್ರಾನ್ಸಿನಲ್ಲಿ ಘೋರವಾದ ಯುದ್ಧ.

ಅಗಾಧವಾದ ಯುದ್ಧಭೂಮಿಯಲ್ಲಿ ಅನೇಕ ಕಡೆ ಕದನಗಳು ನಡೆದಿರುವವು. ಆದರೆ ಯಾವ ಪಕ್ಷಿಯವರಿಗೂ ಜಯವಾಯಿತೆಂದು ಹೇಳುವ ಹಾಗಿಲ್ಲ.

ಫ್ರಾನ್ಸಿನಲ್ಲಿ.

ಜರ್ಮನಿಯವರು ಸ್ವೊಸೊಜ್ ಮತ್ತು ರೀಂಗಳ ಆಚೆಗೆ ಹಿಮ್ಮೆಟ್ಟಿಹೋಗಿದ್ದಾರೆ. ಅವರು ಆ ಬಳಿಯಲ್ಲಿ ಕಂದಕಗಳನ್ನು ತೋಡಿ ಮಣ್ಣಿನ ಕೋಟೆಗಳನ್ನು ರಚಿಸಿ, ಕೋಟೆ ಗೋಡೆಗಳನ್ನು ಉರುಳಿಸುವಂಥಾ ಭಾರಿ ಫಿರಂಗಿಗಳನ್ನು ತಂದು ಗುಂಡು ಹೊಡೆಯುತ್ತಿದಾರೆ. ಆದಕಾರಣ ಈಗ ಜರ್ಮನಿಯವರು ಸುತ್ತಲೂ ಕೋಟೆ ಕಟ್ಟಿರುವಂಥಾ ಸ್ಥಳದಲ್ಲಿ ಸೇರಿಕೊಂಡಿರುವುದರಿಂದ ಈಗ ನಡೆಯುತ್ತಿರುವ ಯುದ್ಧವು ಮೈದಾನ್ ಪ್ರದೇಶದಯುದ್ಧವಲ್ಲ; ಬ್ರಿಟಿಷರೂ ಫ್ರೆಂಚರೂ ಕೋಟೆಗೆ ಮುತ್ತಿಗೆಹಾಕಿಕೊಂಡು ಯುದ್ಧಮಾಡುವಂತಾಗಿದೆ ಸೆಪ್ಟೆಂಬರ್ ತಾ. 14 ರ ಲಾಗಾಯಿತು ಪಶ್ಚಿಮಕ್ಕಿರುವ ಅಮಿಯಜ್‌ನಿಂದ ಪೂರ್ವದಲ್ಲಿರುವ ನಾನ್ಸಿ ತನಕ ಉದ್ದಕ್ಕೂ ಕದನಗಳು ನಡೆಯುತ್ತಲೇ ಬಂದಿರುವವು; ಈ ಯುದ್ಧವು ಇನ್ನೂ ಕೊನೆಗಾಣಲಿಲ್ಲ ಇದುವರೆಗೆ ನಡೆದಿರುವ ಯುದ್ಧಕಾರ್ಯಗಳನ್ನು ನೋಡಿದಲ್ಲಿ ಫ್ರೆಂಚರೂ ಬ್ರಿಟಿಷರೂ ಮುಂದಕ್ಕೆ ಹೋಗಿರುವಂತೆ ಗೊತ್ತಾಗುವುದು. ಇಷ್ಟರೊಳಗೇ ಅವರು ಶತ್ರುಗಳಾದ ಜರ್ಮನಿಯವರನ್ನು ಅಲ್ಲಿಂದ ಹಿಮ್ಮೆಟ್ಟಿಸುತ್ತಾರೆಂದು ನಿರೀಕ್ಷಿಸಬಹುದಾಗಿದೆ. ಈ ಯುದ್ಧವು ದಿನಚರಿ ಹೇಗೆ ನಡೆಯುತ್ತಾ ಬಂದಿದೆಯೋ ಅದನ್ನು ಸಂಗ್ರಹವಾಗಿ ಇಲ್ಲಿ ತಿಳಿಸುವೆವು.

ಸೆಪ್ಟೆಂಬರ್ ತಾ. 14 ರಲ್ಲಿ ಜರ್ಮನಿಯವರು ಅನೇಕ ಸಲ ಬ್ರಿಟಿಷ್ ಮತ್ತು ಫ್ರೆಂಚರ ಮೇಲೆ ನುಗ್ಗಿ ಬಂದರು ಆದರೆ ಅವರನ್ನು ಪ್ರತಿ ಸಲವೂ ಹಿಂದಕ್ಕೆ ಓಡಿಸಿರುತ್ತಾರೆ ಬ್ರಿಟಿಷ್ ಮತ್ತು ಫ್ರೆಂಚರ ರಾಣುವ ಸಗ್ಗಲಿಲ್ಲ ಬಹಳ ಮಳೆ ಸುರಿಯಿತು.

ಸೆಪ್ಟೆಂಬರ್ ತಾ 15 ರಲ್ಲಿ ಜರ್ಮನಿಯವರು ಅಪಾರವಾಗಿ ಫಿರಂಗಿ ಗುಂಡುಗಳನ್ನು ಸುರಿಸಿದರು; ಅವರು ಆರು ಸಲ ಮೇಲೆಬಿದ್ದು ನುಗ್ಗಿಬಂದು ಯುದ್ಧಮಾಡಿದರು. ಆದರೆ ಫ್ರೆಂಚರೂ ಬ್ರಿಟಿಷರೂ ಅವರಿಗೆ ಸ್ವಲ್ಪವೂ ಸ್ಥಳಕೊಡದೆ ಅವರನ್ನೆಲ್ಲಾ ಹಿಂದಕ್ಕೆ ಓಡಿಸಿಬಿಟ್ಟರು ಮಳೆ ಸುರಿಯುತ್ತಲೇ ಇತ್ತು

ಸೆಪ್ಟೆಂಬರ್ ತಾ 16 ರಲ್ಲಿ ಜರ್ಮನಿಯವರು ಮೇಲೆ ಬಿದ್ದು ನುಗ್ಗಿ ಬಂದದ್ದು ಅಷ್ಟೇನೂ ಘೋರತರವಾಗಿರಲಿಲ್ಲ. 40 ಮಂದಿ ಜರ್ಮನಿಯವರು ಕೈಸೆರೆ ಹಿಡಿಯಲ್ಪಟ್ಟರು

ಸೆಪ್ಟೆಂಬರ್ ತಾ. 17 ರಲ್ಲಿ ಜರ್ಮನಿಯವರು ಮತ್ತೆ ನುಗ್ಗಿ ಬಂದರು. ಈ ಕಡಿದಾಟದಲ್ಲಿ ಅವರ ಕಡೆ ಬಹಳ ನಷ್ಟವಾಗಿದೆ. ಜರ್ಮನಿಯವರಲ್ಲಿ ಅನೇಕರು ಮುಂದುಮುಂದಕ್ಕೆ ನುಗ್ಗಿ ಬಂದು ಸನ್ನೆ ಮಾಡಿ, ನಾವು ಕೈಸೆರೆಯಾಗಲು ಇಷ್ಟಪಡುತ್ತೇವೆ ಎಂದು ಸೂಚಿಸಿದರು ಆದರೆ ಅವರು ಬಹಳ ಸಮೀಪಕ್ಕೆ ಬಂದ ಕೂಡಲೇ ಬ್ರಿಟಿಷ್ ಸೈನಿಕರ ಮೇಲೆ ಗುಂಡುಗಳನ್ನು ಹೊಡೆಯಲಾರಂಭಿಸಿದರು. ಕೂಡಲೇ ಬ್ರಿಟಿಷರು ಅವರ ಮೇಲೆ ನುಗ್ಗಿ, ಫಿರಂಗಿಗಳನ್ನು ಎತ್ತಿಕಟ್ಟಿ ಹೊಡೆದು ಶತ್ರುಗಳನ್ನು ಸ್ವಲ್ಪ ಹೆಚ್ಚು ಕಡಮೆ ಸಂಪೂರ್ಣವಾಗಿ ನಾಶಮಾಡಿಬಿಟ್ಟರು.

ತಾ 18 ರಲ್ಲಿ ಜರ್ಮನಿಯವರು ಪುನಃ ನುಗ್ಗಿ ಬಂದರು; ಆದರೆ ಅವರಿಗೆ ಅವಕಾಶವೇನೂ ಸಿಕ್ಕದೆ ಹಿಂದಕ್ಕೆ ಓಡಿಸಲ್ಪಟ್ಟರು ಜರ್ಮನಿಯವರ ಒಂದು ವಿಮಾನ ಯಂತ್ರವನ್ನು ನಾಶ ಮಾಡಿದರು

ತಾ. 19 ರಲ್ಲಿ ಫಿರಂಗಿಗಳ ಆರ್ಭಟವು ವಿಶೇಷವಾಗಿತ್ತು. ಜರ್ಮನಿಯವರ ಒಂದು ವಿಮಾನ ಯಂತ್ರವನ್ನು ಕಿತ್ತು ಸ್ವಾಧೀನ ಪಡಿಸಿಕೊಂಡರು. ಬ್ರಿಟಿಷ್ ವಿಮಾನ ಯಂತ್ರಗಳಿಂದ ಸಿಡಿಮದ್ದಿನ ಗುಂಡುಗಳು ಜರ್ಮನಿಯವರ ಮೇಲೆ ಎಸೆಯಲ್ಪಟ್ಟವು. ಜರ್ಮನಿಯವರ ಅನೇಕ ಸಾಮಗ್ರಿಗಳು ನಾಶಮಾಡಲ್ಪಟ್ಟವು.

ಸೆಪ್ಟೆಂಬರ್ ತಾ 20 ನೇ ಭಾನುವಾರದ ದಿನ ಸಾಯಂಕಾಲದ ತನಕ ಯುದ್ಧಭೂಮಿಯು ಶಾಂತವಾಗಿತ್ತು. ಸಾಯಂಕಾಲವಾಗುತ್ತಲೇ ಜರ್ಮನಿಯವರು ನುಗ್ಗಿ ಬಂದರು. ಬ್ರಿಟಿಷರೂ ಫ್ರೆಂಚರೂ ಅವರ ಕಡೆ ಬಹಳ ನಷ್ಟವನ್ನುಂಟುಮಾಡಿ ಅವರನ್ನೆಲ್ಲಾ ಹಿಂದಕ್ಕೆ ಓಡಿಸಿದರು. ಇವರ ಕಡೆಯಲ್ಲೂ ಕೆಲವು ನಷ್ಟವಾಗಿದೆ. ಜರ್ಮನಿಯವರ ಸಾಮಾನ್ ಭರ್ತಿಯಾಗಿದ್ದ 20 ಮೋಟರ್ ವಾಗನ್ ಬಂಡಿಗಳನ್ನು ಸ್ವಾಧೀನ ಪಡಿಸಿಕೊಂಡದ್ದಲ್ಲದೆ ಅನೇಕರನ್ನು ಕೈಸೆರೆ ಹಿಡಿದುಕೊಂಡುಬಂದರು.

ಅಲ್ಲಿಂದೀಚೆಗೆ ಯುದ್ಧಗಳು ವಿರಾಮವಿಲ್ಲದೆ ನಡೆಯುತ್ತಲೇ ಇವೆ. ಆದರೆ ತಾ. 26 ಮತ್ತು 27 ರಲ್ಲಿ ಜರ್ಮನಿಯವರು ಬಹು ಘೋರವಾಗಿ ರೋಷಾವೇಶದಿಂದ ನುಗ್ಗಿ ಬಂದು ಕಡಿದಾಡಿದರು. ಬ್ರಿಟಿಷ್ ಮತ್ತು ಫ್ರೆಂಚ್ ಸೈನಿಕರ

...ಗಳನ್ನು ಒಡೆದು ನುಗ್ಗಬೇಕೆಂದು ತುಂಬಾ ಸಾಹಸ ಪರಾಕ್ರಮಗಳನ್ನು ಪ್ರಯೋಗಿಸಿದರೂ ಅದೊಂದೂ ಸಾರ್ಥಕವಾಗದೆ ಹೋಯಿತು.

ಇದನ್ನೆಲ್ಲಾ ನೋಡುವಲ್ಲಿ ಯುದ್ಧ ನಡೆಯುವುದು ಒಂದು ನೇರವಾದ ಸಾಲಿನಲ್ಲಿ ಅಲ್ಲವೆಂದು ಗೊತ್ತಾಗುತ್ತದೆ. ಸೈನ್ಯಗಳು ಒಂದು ಕೋಣದ ಆಕೃತಿಯಲ್ಲಿ ನಿಂತಿರುವವು. ಈ ಕೋಣದ ಮೂಲೆಯು ನ್ಯೋಸೋಜ್‌ಗೆ ಸ್ವಲ್ಪ ಪಶ್ಚಿಮದಲ್ಲಿರುವುದು. ಬ್ರಿಟಿಷರೂ ಫ್ರೆಂಚರೂ ಹೊಸ ಸೈನ್ಯಗಳನ್ನು ಯುದ್ಧಭೂಮಿಗೆ ಕಳುಹಿಸಿಕೊಟ್ಟಿದಾರೆ. ಜರ್ಮನಿಯವರೂ ಹೊಸ ಸೈನ್ಯವನ್ನು ತಂದು ನಿಂತರು. ಅಲ್ಲಿ ನಡೆಯುತ್ತಿರುವ ಕದನಗಳು ಬಹು ಕಠಿಣವಾಗಿಯೂ ಕಪ್ರಿರವಾಗಿಯೂ ಇದ್ದು ಎರಡು ಕಡೆಗಳಲ್ಲೂ ವಿಶೇಷ ನಷ್ಟಗಳು ಸಂಭವಿಸಿರುತ್ತವೆ. ಆ ನಷ್ಟವೆಷ್ಟು ಎಂಬುದನ್ನು ಇನ್ನೂ ತಿಳಿದು ಹೇಳಲಾಗದು.

ಜರ್ಮನಿಯವರು ವಿಮಾನ ಯಂತ್ರಗಳಿಂದ ಪಾರಿಸ್ ನಗರದೊಳಕ್ಕೆ ಸಿಡಿಮದ್ದಿನ ಗುಂಡುಗಳನ್ನು ಹಾಕಿದರು. ಆದರೆ ಈಗೀಗ ಪ್ರಜೆಗಳು ಹೊರಗಿನಿಂದ ನಗರದೊಳಕ್ಕೆ ಹೋಗಿ ಸೇರುತ್ತಿದಾರೆ. ಇಂಗ್ಲಿಷರು ವಿಮಾನ ಯಂತ್ರಗಳಲ್ಲಿ ಆಕಾಶಮಾರ್ಗವಾಗಿ ಜರ್ಮನಿಯೊಳಕ್ಕೆ ಹೋಗಿ ಡಸ್ಸೆಲ್‌ಡಾರ್ಫ್ ನಗರದಲ್ಲಿರುವ ವಿಮಾನ ಯಂತ್ರಗಳ ಲಾಯಕ್ಕೆ ಸಿಡಿಮದ್ದಿನ ಗುಂಡುಗಳನ್ನು ಹಾಕಿದರು. ಅಲ್ಲಿಂದ ಅವರು ಕೊಲೋನ್ ನಗರದ ಮೇಲಕ್ಕೆ ಹೋದರು. ಮಂಜು ಮುಸುಕಿದ್ದುದರಿಂದ ಸಭ್ಯ ಪ್ರಜೆಗಳನ್ನು ಕೊಲ್ಲುವುದಕ್ಕೆ ಇಷ್ಟಪಡದೆ ಸಿಡಿಮದ್ದಿನ ಗುಂಡುಗಳನ್ನು ಹಾಕಲಿಲ್ಲ.

ಬೆಲ್ಜಿಯಂನಲ್ಲಿ.

ಬೆಲ್ಜಿಯಮ್‌ನೊಳಗೆ ವಿಶೇಷ ಕದನಗಳೇನೂ ನಡೆಯಲಿಲ್ಲ. ಜರ್ಮನಿಯವರು ಭಾರೀ ಪಿರಂಗಿಗಳನ್ನು ಸಾಗಿಸಿಕೊಂಡು ಬಂದು ಆಂಟ್ವರ್ಪ್ ನಗರಕ್ಕೆ ಮುತ್ತಿಗೆ ಹಾಕಿಕೊಂಡಿದಾರೆ. ಬೆಲ್ಜಿಯನ್ ಸೈನಿಕರು ಹಲವು ವೇಳೆ ಕೋಟೆಯೊಳಗಿಂದ ಹೊರಕ್ಕೆ ಬಂದು ಜರ್ಮನಿಯವರ ಸ್ವಾಧೀನವಾಗಿದ್ದ ಕೆಲವು ಸ್ಥಳಗಳನ್ನು ತಿರುಗಿ ಸ್ವಾಧೀನ ಪಡಿಸಿಕೊಂಡದ್ದಲ್ಲದೆ ಜರ್ಮನ್ ಸೈನಿಕರಲ್ಲಿ ಅನೇಕರನ್ನು ಸೆರೆ ಹಿಡಿದುಕೊಂಡರು.

ಜರ್ಮನಿಯವರ ವಿಮಾನ ಯಂತ್ರಗಳು ಓಸ್ಟೆಂಡ್ ಎಂಬ ತೀರ ಪಟ್ಟಣದೊಳಕ್ಕೆ ಸಿಡಿಮದ್ದಿನ ಗುಂಡುಗಳನ್ನು ಹಾಕಿದವು; ಆದರೆ ಇದರಿಂದ ಅಷ್ಟೇನೂ ವಿಶೇಷ ನಷ್ಟವಾಗಲಿಲ್ಲ. ಜರ್ಮನಿಯವರು ಈಗ ಬ್ರಸೆಲ್ಸ್ ರಾಜಧಾನಿಯನ್ನು ಕೋಟೆ ಕಟ್ಟಿ ಭದ್ರಪಡಿಸುತ್ತಿದಾರೆ. ಇದನ್ನು ನೋಡಿದರೆ ಅವರು ಬೇಗನೆ ಫ್ರಾನ್ಸಿನೊಳಗಿಂದ ಹಿಮ್ಮೆಟ್ಟಿ ಓಡಬೇಕಾಗುವುದೆಂದು ಊಹಿಸಿರುವಂತೆ ಕಾಣುತ್ತದೆ.

ಆಸ್ಟ್ರಿಯಾದಲ್ಲಿ.

ರಷ್ಯಾದವರು ಆಸ್ಟ್ರಿಯಾದೊಳಕ್ಕೆ ನುಗ್ಗಿ ಹೋಗುತ್ತಲೇ ಇದಾರೆ. ಅವರಿಗೂ ಆಸ್ಟ್ರಿಯಾದವರಿಗೂ ಕಠಿಣವಾದ ಯುದ್ಧಗಳು ನಡೆಯುತ್ತಿರುವವು. ಐದು ದಿನ ಮಹಾ ಘೋರವಾಗಿ ಕದನಗಳು ನಡೆದ ಮೇಲೆ ರಷ್ಯಾದವರು ಜಾರೋಸ್ಲಾ ಎಂಬ ಸ್ಥಳವನ್ನು ಗೆದ್ದು ಸ್ವಾಧೀನ ಪಡಿಸಿಕೊಂಡರು. ಐದನೇ ದಿನ ರಷ್ಯಾದವರು ಕಂದಕಗಳನ್ನು ತೋಡಿಕೊಂಡು ನಿಂತಿದ್ದ ಆಸ್ಟ್ರಿಯಾದವರ ಮೇಲೆ ನುಗ್ಗಿ ಹೋಗಿ ಸನೀನುಗಳ ಯುದ್ಧವನ್ನು ಮಾಡಿ ಓಡಿಸಿ ಬಿಟ್ಟರು. ಕಂದಕಗಳ ತುಂಬಾ ಮೃತಪಟ್ಟವರ ಹೆಣಗಳೂ, ಗಾಯಪಟ್ಟವರೂ ಬಿದ್ದಿದ್ದರು. ಇವರಲ್ಲಿ ಕೆಲವರು ಬಿದ್ದು ಹಲವು ದಿನಗಳಾಗಿತ್ತು. ಆಸ್ಟ್ರಿಯಾದವರ ಕಡೆ ಗಾಯಪಟ್ಟ ಸೈನಿಕರಲ್ಲಿ ವಾಂತಿ ಭೇದಿ ರೋಗ ಹುಟ್ಟಿದೆ. ರಷ್ಯಾದವರು ಆಸ್ಟ್ರಿಯಾದೊಳಗೆ ಕ್ರಾಕೋ ಎಂಬ ನಗರವನ್ನು ಕುರಿತು ನುಗ್ಗಿ ಹೋಗುತ್ತಿರುವರು. ಅಲ್ಲಿಗೆ ರಷ್ಯಾದವರನ್ನು ಎದುರಿಸುವುದಕ್ಕೋಸ್ಕರ ಜರ್ಮನಿಯವರು ತಮ್ಮ ಸೈನ್ಯವನ್ನು ಕಳುಹಿಸಿದಾರೆಂದು ವರ್ತಮಾನವಿದೆ.

ರಷ್ಯಾ ಮತ್ತು ಜರ್ಮನಿ.

ರಷ್ಯಾದವರು ಹಿಮ್ಮೆಟ್ಟಿ ಹೋಗುತ್ತಿರುವ ಹಾಗೆ ಕಾಣುತ್ತದೆ. ಅವರು ಈಗ ಕೋನಿಗ್ಸ್‌ಬರ್ಗ್ ನಗರವನ್ನು ಸುತ್ತುಹಾಕಿಕೊಂಡಿದಾರೆ. ಇದುವರೆಗೆ ಆ ಪ್ರಾಂತ್ಯದಲ್ಲಿ ವಿಶೇಷ ಕಾರ್ಯಗಳೇನೂ ನಡೆಯಲಿಲ್ಲ. ಪಲಿಯಂ ಚಕ್ರವರ್ತಿಯವರು ಪಶ್ಚಿಮ ಪ್ರಷ್ಯಾಕ್ಕೆ ಹೋಗಿರುವಂತೆ ತಿಳಿಯಬಂದು ಅಲ್ಲಿ ಒಂದು ದೊಡ್ಡ ಯುದ್ಧವು ಜಾಗ್ರತೆಯಲ್ಲೇ ನಡೆಯುವುದು.

ಸರ್ವಿಯಾ ಮತ್ತು ಆಸ್ಟ್ರಿಯಾ.

ಸರ್ವಿಯಾದವರು ಆಸ್ಟ್ರಿಯಾದವರ ಮೇಲೆ ಕದನಗಳನ್ನು ನಡಿಸಿ ಅವರನ್ನು ಸೋಲಿಸಿದರೆಂದು ವರ್ತಮಾನ ಬಂದಿದೆ. ಆದರೆ ಆಸ್ಟ್ರಿಯಾದವರು ಬೆಲ್‌ಗ್ರೇಡ್ ನಗರಕ್ಕೆ ಪಿರಂಗಿಗಳನ್ನು ಎತ್ತಿ ಕಟ್ಟಿ ಹೊಡೆಯುತ್ತಿರುವುದಾಗಿಯೂ ವರ್ತಮಾನ ಬಂದಿದೆ. ತಾಜಾ ವರ್ತಮಾನಗಳನ್ನು ವಿವರವಾಗಿ ಹೇಳುವುದು ಪ್ರಯಾಸ. ಹಾಂಟಿನೀಗ್ರೊದವರು ಸೆರಜೆವೊ ನಗರದ ಸಮೀಪಕ್ಕೆ ಬಂದಿದಾರೆ. ಅವರು ಆ ಪಟ್ಟಣವನ್ನು ಆಕ್ರಮಿಸಿಕೊಳ್ಳುವವರಾಗಿ ಕಾಣುವರು. ಇದಲ್ಲದೆ ಅವರು ಮತ್ತೆ ಕಟ್ಟಾರೋ ಪಟ್ಟಣಕ್ಕೆ ಗುಂಡು ಹೊಡೆಯುತ್ತಿದಾರೆ. ಫ್ರೆಂಚ್ ಮತ್ತು ಬ್ರಿಟಿಷ್ ಹಡಗುಗಳು ಏಡ್ರಿಯಾಟಿಕ್ ಕಡಲಿನಲ್ಲಿರುವ ಎರಡು ದ್ವೀಪಗಳನ್ನು ಸ್ವಾಧೀನ ಪಡಿಸಿಕೊಂಡು ಫ್ರೆಂಚ್ ಮತ್ತು ಬ್ರಿಟಿಷ್ ಬಾವುಟಗಳನ್ನು ಎತ್ತಿ ಕಟ್ಟಿದವು. ಸಮುದ್ರದೊಳಗೆ ಇಡಲ್ಪಟ್ಟ ಮೈನ್ ಎಂಬ ಸಿಡಿಮದ್ದಿನ ಗುಂಡುಗಳ ದೆಸೆಯಿಂದ ಆಸ್ಟ್ರಿಯಾದವರ ಎರಡು ಟಾರ್ಪಿಡೋ ಹಡಗುಗಳೂ, ಇನ್ನೊಂದು ಹಡಗೂ ನಾಶಹೊಂದಿದವು.

ಜಪಾನ್ ಮತ್ತು ಜರ್ಮನಿ.

ಚೀನಾ ರಾಜ್ಯದಲ್ಲಿ ಜಪಾನ್ ನವರು ಜರ್ಮನಿಯವರ ಮೇಲೆ ಮುತ್ತಿಗೆ ಹಾಕಿಕೊಂಡಿದಾರಷ್ಟೆ. ಅಲ್ಲಿರುವ ಕೆಲವು ಇಂಗ್ಲಿಷ್ ಸೈನ್ಯಗಳು ಜಪಾನ್ ನವರ ಬೆಂಬಲಕ್ಕೆ ಹೋಗಿರುವುದಾಗಿ ತಿಳಿಯುವುದು. ಜಪಾನ್ ನವರ ಒಂದು ಟಾರ್ಪಿಡೋ ಹಡಗು ನಾಶವಾಯಿತು. ಅವರಿಗೂ ಜರ್ಮನಿಯವರಿಗೂ ಯುದ್ಧಗಳಾಗಿವೆ; ಆದರೆ ಅದರ ವಿವರವೇನೂ ಗೊತ್ತಾಗಲಿಲ್ಲ. ಇದುವರೆಗೆ ಜಪಾನ್ ನವರ ಕಡೆ 3 ಮಂದಿ ಕೊಲ್ಲಲ್ಪಟ್ಟರು, 12 ಮಂದಿಗೆ ಗಾಯಗಳಾಗಿವೆ.

ಆಫ್ರಿಕಾದಲ್ಲಿ.

ಪೂರ್ವ ಆಫ್ರಿಕಾದಲ್ಲಿ ಕೆಲವು ಕದನಗಳು ನಡೆದಿರುತ್ತವೆ. ಒಂದು ಕಡೆ ಜರ್ಮನಿಯವರು ನುಗ್ಗಿ ಹೋಗಿ ಕಡಿವಾಡಿದ್ದರಲ್ಲಿ ಸೋತು ಹಿಮ್ಮೆಟ್ಟಬೇಕಾಯಿತು. ಅಲ್ಲಿ ಅವರ ಕಡೆ 8 ಮಂದಿ ಮೃತಪಟ್ಟರು. ಇನ್ನೊಂದು ಸ್ಥಳದಲ್ಲಿ ಜರ್ಮನಿಯವರು ಯುದ್ಧ ಮಾಡದೆಯೇ ಶರಣಾಗತರಾದರು. ಜರ್ಮನಿಯ ರೆಸಿಡೆಂಟನ್ನು ಬ್ರಿಟಿಷ್ ಸೀಮೆಗೆ ಕರೆದು ತಂದರು. ಮತ್ತೊಂದು ಕಡೆ ಜರ್ಮನಿಯವರು ನುಗ್ಗಿ ಬಂದು ಕದನಮಾಡಿದರು. ಆದರೆ ಅವರನ್ನೆಲ್ಲಾ ಸೋಲಿಸಿ ಹಿಮ್ಮೆಟ್ಟಿಸಿರುತ್ತಾರೆ. ಬ್ರಿಟಿಷ್ ಸೈನಿಕರಲ್ಲಿ ಇಬ್ಬರು ಕೊಲೆಯಾದರು, 7 ಮಂದಿ ಗಾಯಪಟ್ಟರು, ಇಬ್ಬರು ಸಿಕ್ಕ ಇಲ್ಲ.

ದಕ್ಷಿಣ ಆಫ್ರಿಕಾದಲ್ಲಿ ಮಂತ್ರಿ ಶ್ರೇಷ್ಠರಾದ ಜನರಲ್ ಬೋಥಾರವರು ಬ್ರಿಟಿಷ್ ಸೈನ್ಯವನ್ನು ತೆಗೆದುಕೊಂಡು ಹೋಗಿ ಜರ್ಮನಿಯವರಿಗೆ ಸೇರಿದ ಸ್ವಾಸ್ಥ್ಯಗಳ ಮೇಲೆ ಯುದ್ಧಕಾರ್ಯಗಳನ್ನು ನಡಿಸುವವರಾಗಿದಾರೆ. ಬ್ರಿಟಿಷರು ಆಗಲೇ ಒಂದು ತೀರಪಟ್ಟಣವನ್ನು ಸ್ವಾಧೀನ ಮಾಡಿಕೊಂಡರು; ಜರ್ಮನಿಯವರು ಎದುರುಬಿದ್ದು ಕಾದಾಡದೆಹೋದರು.

ಪಶ್ಚಿಮ ಆಫ್ರಿಕಾದಲ್ಲಿ ಜರ್ಮನಿಯರಿಗೆ ಸೇರಿದ ಕೊಂಗೋದಲ್ಲಿ ಒಂದು ಸ್ಥಳವನ್ನು ಫ್ರೆಂಚರು ಆಕ್ರಮಿಸಿಕೊಂಡಿದಾರೆ. ಜರ್ಮನಿಯವರ ಕಾಮರೂನ್ ಸ್ವಾಸ್ಥ್ಯಗಳಲ್ಲಿ ಇಂಗ್ಲಿಷರು, ಫ್ರೆಂಚರು ಅನೇಕ ಪಟ್ಟಣಗಳನ್ನು ಹಿಡಿದು ಆಕ್ರಮಿಸಿಕೊಂಡಿರುವರು.

ಆ ಪ್ರಾಂತ್ಯಗಳಲ್ಲಿರುವ ಜರ್ಮನಿಯವರ ಸ್ವಾಸ್ಥ್ಯಗಳಲ್ಲಿ ಜರ್ಮನಿ ಸೈನ್ಯಗಳು ವಿಶೇಷವಾಗಿಲ್ಲದಿರೋಣದರಿಂದ ಆ ಸ್ವಾಸ್ಥ್ಯಗಳನ್ನೆಲ್ಲಾ ಜರ್ಮನಿಯವರ ಸ್ವಾಧೀನ ತಪ್ಪಿಸಿ ಆಕ್ರಮಿಸಿಕೊಳ್ಳಬೇಕೆಂಬುವುದೇ ಬ್ರಿಟಿಷರ ಮತ್ತು ಫ್ರೆಂಚರ ಉದ್ದೇಶವೆಂದು ಕಾಣುತ್ತದೆ.

ಪೆಸಿಫಿಕ್ ಸಾಗರದಲ್ಲಿ.

ಆಸ್ಟ್ರೇಲಿಯಾದವರಿಗೂ ಜರ್ಮನಿಯವರಿಗೂ ಪೆಸಿಫಿಕ್‌ಸಾಗರದಲ್ಲಿ ಯುದ್ಧವಾಯಿತೆಂದು ಹೋದ ವಾರವೋ ಆಚೇ ವಾರವೋ ತಿಳಿಸಿದೆವಷ್ಟೆ. ಆಸ್ಟ್ರೇಲಿಯಾದವರು ಜರ್ಮನಿಗೆ ಸೇರಿದ ನ್ಯೂಗಿನಿ ಎಂಬ ಸ್ವಾಸ್ಥ್ಯವನ್ನು ಈಗ ಆಕ್ರಮಿಸಿಕೊಂಡಿರುತ್ತಾರೆ. ನ್ಯೂಗಿನಿ ಎಂಬ ದ್ವೀಪದಲ್ಲಿ ನಮ್ಮ ಮೈಸೂರು ಸೀಮೆಯ ನಾಲ್ಕರಷ್ಟು ವಿಸ್ತಾರವಾದ ಭಾಗವು ಜರ್ಮನಿಗೆ ಸೇರಿತ್ತು. ಅದು ಈಗ ಆಸ್ಟ್ರೇಲಿಯಾದವರ ಸ್ವಾಧೀನವಾಯಿತು. ಹಿಂದೆ ನಡೆದ ಯುದ್ಧದಲ್ಲಿ ಜರ್ಮನಿಯವರೆಲ್ಲಾ ಕೊಲೆಯಾದರು, ಇಲ್ಲವೇ ಸೆರೆಯಾದರು. ಪೆಸಿಫಿಕ್ ಸಾಗರದಲ್ಲಿ ತಂತಿಗಳಿಲ್ಲದೆ ಸಮಾಚಾರಕೊಟ್ಟು ತರಿಸುವಂಥಾ ಜರ್ಮನಿಯವರ ಠಾಣ್ಯಗಳೆಲ್ಲಾ ಈಗ ಆಸ್ಟ್ರೇಲಿಯಾದವರ ಪಾಲಾಯಿತು.

ಗ್ರೇಟ್ ಬ್ರಿಟನ್‌ನಲ್ಲಿ.

ಕಳೆದ ವಾರ ಅಬೂಕರ್, ಕ್ರೆಸಿ, ಹೋಗ್ ಎಂಬೀ ಮೂರು ಬ್ರಿಟಿಷ್ ಜಹಜುಗಳು ಹಾಳಾದವು. ಆ ಪೈಕಿ ಒಂದಕ್ಕೆ ಜರ್ಮನಿಯವರ ಸಬ್‌ಮರೀನ್ ಎಂಬ ಹಡಗು ಟಾರ್ಪಿಡೋ ಎಂಬ ಯಂತ್ರದಿಂದ ಬಡಿದು ನಷ್ಟಮಾಡಿತು. ಇನ್ನೆರಡು ಅದರ ಸಹಾಯಕ್ಕೆ ಹೋದಾಗ ಇವಕ್ಕೂ ಟಾರ್ಪಿಡೋಗಳು ಬಡಿದು ಹಾಳಾದವು. ಈ ಮೂರು ಬ್ರಿಟಿಷ್ ಜಹಜುಗಳಿಂದಲೂ 60 ಮಂದಿ ಹುದ್ದೇದಾರರೂ, 1,400 ಸಿಪಾಯಿಗಳೂ ಮೃತಪಟ್ಟರು; 770 ಜನರು ಬದುಕಿಬಂದರು. ಡಚ್ಚರ ಹಡಗುಗಳು ಅನೇಕರನ್ನು ಬದುಕಿಸಿ ಹಾಲೆಂಡಿಗೆ ಕರೆದುಕೊಂಡುಹೋಗಿವೆ. ಆ ಪೈಕಿ ಒಬ್ಬ ಬ್ರಿಟಿಷ್ ನಾವಿಕನು ಮೃತಪಟ್ಟಾಗ ಡಚ್ಚರ ನಾವಿಕರೆಲ್ಲಾ ಸೇರಿ ತುಂಬಾ ಮರ್ಯಾದೆಯಾಗಿ ಆತನ ಶವವನ್ನು ಸಂಸ್ಕಾರಮಾಡಿದರು. ಅಲ್ಲಿ ಇಳಿದಂಥಾ ಬ್ರಿಟಿಷ್ ಸೈನಿಕರೆಲ್ಲಾ ಇಂಗ್ಲೆಂಡಿಗೆ ವಾಪಸು ಬರುವುದರಲ್ಲಿದಾರೆ.

ಅಟ್ಲಾಂಟಿಕ್ ಸಾಗರದಲ್ಲಿ ಜರ್ಮನಿಯವರ ಇನ್ನೊಂದು ಯುದ್ಧದ ಜಹಜು ಹಿಡಿಯಲ್ಪಟ್ಟಿತು. ಅದಕ್ಕೆ ಕಲ್ಲಿದ್ದಲು ಒದಗಿಸುವುದಕ್ಕಾಗಿ ಇನ್ನೆರಡು ಹಡಗುಗಳು ಅದರಜೊತೆಯಲ್ಲೇ ಹೋಗುತ್ತಿದ್ದವು.

ನಾರ್ವೆಯಿಂದ ಉತ್ತರ ಕಡಲಿನಲ್ಲಿ ಬರುತ್ತಿದ್ದ ಎರಡು ಅಂಬಿಗರ ಹಡಗುಗಳೂ ಒಂದು ಜಹಜೂ ಜರ್ಮನಿಯವರು ಇಟ್ಟಿದ್ದ ಸಿಡಿಮದ್ದಿನ ಗುಂಡುಗಳಿಗೆ ಬಡಿದು ನಾಶವಾದವು.

ಬ್ರಿಟನ್‌ನಲ್ಲಿ 5,00,000 ಜನರು ಒಂದು ಸೈನಿಕರಾಗಿ ಸೇರಿಕೊಂಡಿದಾರೆ. ಈ ಯುದ್ಧವು ಬಹಳ ಕಾಲ ನಡೆದಾಗ್ಯೂ ಗ್ರೇಟ್ ಬ್ರಿಟನ್‌ನಿಂದಲೇ ಇನ್ನೂ ಅನೇಕರು ಯುದ್ಧಭಟರಾಗಿ ಹೊರಡಲು ಸಿದ್ಧರಾಗಿದಾರೆ.

ಹಿಂದುಸ್ಥಾನದಲ್ಲಿ.

ಯುದ್ಧದ ಕಾರ್ಯಗಳು ನೇರವಾಗಿ ಹಿಂದುಸ್ಥಾನಕ್ಕೂ ವ್ಯಾಪಿಸಿಕೊಳ್ಳುತ್ತವೆಂದು ನಾವು ತಿಳಿದಿರಲಿಲ್ಲ. ಆದರೆ ಜರ್ಮನಿಯವರ ಎಮ್‌ಡನ್ ಎಂಬ ಒಂದು ಯುದ್ಧದ ಜಹಜು ಬಂಗಾಳಾ ಕೊಲ್ಲಿಯಲ್ಲಿ ವರ್ತಕರ ಏಳು ಹಡಗುಗಳನ್ನು ಸಾಮಾನು ಸಮೇತ ಮುಳುಗಿಸಿದ್ದಲ್ಲದೆ, ಸೆಪ್ಟಂಬರ್ ತಾ 22 ನೇ ಮಂಗಳವಾರ ರಾತ್ರಿ, ಸುಮಾರು 9½ ಗಂಟೆ ಹೊತ್ತಿನಲ್ಲಿ ಮದರಾಸ್ ಪಟ್ಟಣದ ಸಮುದ್ರ ತೀರಕ್ಕೆ ಬಂದು ಸುಮಾರು 30 ಗುಂಡುಗಳನ್ನು ಪಟ್ಟಣದೊಳಕ್ಕೆ ಹೊಡೆಯಿತು. ಮದರಾಸ್ ಪಟ್ಟಣದ ಬತೇರಿಯಲ್ಲಿದ್ದ ಪಿರಂಗಿಗಳು ಜವಾಬಾಗಿ ಮೂರು ಸಲ ಗುಂಡುಗಳನ್ನು ಆ ಜಹಜಿಗೆ ಹೊಡೆದರೂ ಒಂದೂ ಅದಕ್ಕೆ ತಗಲಿಲ್ಲ. ಕೂಡಲೇ ಆ ಶತ್ರು ಜಹಜು ಎಲ್ಲಿಗೋ ಹೊರಟು ಹೋಯಿತು. ಕಾಲುಗಂಟೆ ಹೊತ್ತಿನಲ್ಲೇ ಅದರ ಹಾವಳಿ ನಿಂತಿತು.

ಶತ್ರು ಜಹಜಿನಿಂದ ಮೊದಲನೇ ಗುಂಡು ಸಮುದ್ರತೀರದಲ್ಲಿ ಮನೆ ಕಟ್ಟಿಕೊಂಡಿರುವ ಬರ್ಮಾ ಎಣ್ಣೆ ಕಂಪನಿಯ ಮಿ॥ ಎಲ್ಲಿಸ್ ಎಂಬಾತನ ಮಲಗುವ ಕೊಟಡಿಗೆ ಬಡಿಯಿತು. ಆಗ ಆತನು ಕೊಟಡಿಯೊಳಗಿದ್ದನು. ಆತನ ಹೆಂಡತಿ ಮಕ್ಕಳೂ ಮನೆಯಲ್ಲೇ ಇದ್ದರು. ಆದರೂ ಯಾರಿಗೂ ಅಪಾಯವೇನೂ ಆಗಲಿಲ್ಲ. ಇನ್ನು ಕೆಲವು ಗುಂಡುಗಳು ರೇವಿನ ದಕ್ಷಿಣಭಾಗದಲ್ಲಿರುವ ಭಾರಿ ಎಣ್ಣೆ ಕಾಡಿಕುವ ಸ್ಥಳಗಳಿಗೆ ಬಡಿದು ಎಣ್ಣೆಯೆಲ್ಲಾ ಮಹಾ ಪ್ರಕಾಶವಾಗಿ ಹತ್ತಿಕೊಂಡು ಆ ರಾತ್ರಿಯೆಲ್ಲಾ ಉರಿದದ್ದಲ್ಲದೆ ಮರುದಿನವೂ ಸ್ವಲ್ಪ ಹೊತ್ತು ಉರಿಯುತ್ತಿತ್ತು.

ರೇವಿನಲ್ಲಿ ನಿಂತಿದ್ದ ಒಂದು ಜಹಜಿಗೆ ಒಂದು ಪಿರಂಗಿ ಗುಂಡು ಬಿದ್ದಿತು. ಸು. ಫ್ಲೆಚರ್ ಎಂಬ ಇನ್ನೂ ಚಿಕ್ಕ ವಯಸ್ಸಿನ ನಾವಿಕನು ಮೃತಪಟ್ಟನು; ಇನ್ನು ಕೆಲವರಿಗೆ ಗಾಯಗಳಾಗಿ ಆಸ್ಪತ್ರೆಗೆ ಸಾಗಿಸಲ್ಪಟ್ಟರು. ಕೆಲವು ಗುಂಡುಗಳು ಬಡಿದು ರೇವಿನ ಕಟ್ಟಡವನ್ನು ಅಲ್ಪಸ್ವಲ್ಪ ಹಾಳುಮಾಡಿತು. ಮತ್ತು ಅಲ್ಲೇ ಒಬ್ಬ ಪೋಲೀಸಿನವನಿಗೂ ಬಡಿದು ಅವನನ್ನು ಕೊಂದುಹಾಕಿತು. ಅವನ ಶವವನ್ನು ಸಮುದ್ರದಿಂದ ಹೊರಕ್ಕೆ ತಂದರು. ಇನ್ನೊಂದು ಗುಂಡು ಎಣ್ಣೆ ಕಂಪನಿಯ ಒಬ್ಬ ಆಳನ್ನು ಸಾಯಿಸಿತು. ಒಟ್ಟು ಮೂರು ಮಂದಿ ಮೃತಪಟ್ಟರೆಂದೂ, 9-10 ಜನರು ಗಾಯಪಟ್ಟರೆಂದೂ, ಒಬ್ಬಿಬ್ಬರಿಗೆ ಘೋರ ಗಾಯಗಳಾಗಿವೆಯೆಂದೂ ತಿಳಿಸಲಾಗಿದೆ. ಹಡಗು ನಿಲ್ಲುವ ರೇವಿನ ಕಟ್ಟಡಗಳಿಗೂ, ಸಮುದ್ರತೀರಕ್ಕೆ ಎದುರಾಗಿರುವ ಕೆಲವು ಕಟ್ಟಡಗಳಿಗೂ ಗುಂಡುಗಳು ಬಡಿದು ಕೆಲಕೆಲವು ಭಾಗ ಒಡೆದುಹೋಗಿವೆ. ವಿಶೇಷ ನಷ್ಟವಾಗಿರುವುದು ಎಣ್ಣೆ ಕಂಪನಿಯವರಿಗೆ ಸುಮಾರು 3½ ಲಕ್ಷ ರೂಪಾಯಿನ ಎಣ್ಣೆ ಉರಿದುಹೋಯಿತಾದರೂ ವಿಮೇ ಕಂಪನಿಯಿಂದ ಆ ಹಣ ಬರಬಹುದು. ಇತರ ಕಡೆ ಆಗಿರುವ ನಷ್ಟವೆಲ್ಲಾ ಕೆಲವು ಸಾವಿರ ರೂಪಾಯಿ ಆಗಬಹುದು.

ಶತ್ರುವಿನ ಹಡಗಿನಿಂದ ಈ ರೀತಿ ಗುಂಡುಗಳು ಬಂದು ಬಿದ್ದದ್ದು ಜನಗಳ ಮನಸ್ಸನ್ನು ನಾನಾ ಬಗೆಯಾಗಿ ಕಳವಳಪಡಿಸಿರುತ್ತದೆ. ಅನೇಕ ಪ್ರಜೆಗಳು ಹೆದರದೆ ಗುಂಪುಗುಂಪಾಗಿ ಸಮುದ್ರತೀರಕ್ಕೆ ಬಂದು ನಿಂತರು. ಈ ಗುಂಡುಗಳಿಂದ ಅನಾಹುತವೇನೂ ಆಗಲಾರದೆಂದು ಅವರಿಗೆ ನಿಶ್ಚಯ ಕಂಡಿತು. ಇನ್ನು ಕೆಲವರು ಗಾಬರಿಯಾಗಿ ಪಟ್ಟಣದೊಳಕ್ಕೆ ಹೋಗಿ ಸೇರಿಕೊಂಡರು. ದುಷ್ಟಸ್ವಭಾವವುಳ್ಳ ಕೆಲವರು ಆ ಜಹಜು ಮತ್ತೆ ಬರುತ್ತದೆಂದು ಸುದ್ದಿ ಹುಟ್ಟಿಸಿ ಗಾಬರಿಪಡಿಸಿರುತ್ತಾರೆ. ನೂರಾರು ಪ್ರಜೆಗಳು ಮದರಾಸನ್ನು ಬಿಟ್ಟು ಬೆಂಗಳೂರು ಮುಂತಾದ ಕಡೆಗಳಿಗೆ ಬಂದುಬಿಟ್ಟಿದಾರೆ. ಆದರೆ ಹೀಗೆ ಗಾಬರಿ ಬೀಳುವುದಕ್ಕೆ ಸ್ವಲ್ಪವೂ ಕಾರಣವಿರುವುದಿಲ್ಲ. ಮದರಾಸ್ ಗವರ್ನರವರು ನೀಲಗಿರಿಯಿಂದ ಮದರಾಸಿಗೆ ಬಂದು ಕೆಲವು ದಿನ ಇದ್ದರು. ಅವರು ಎಮ್‌ಡನ್ ಎಂಬ ಶತ್ರು ಜಹಜನ್ನು ಹಿಡಿಯುವುದಕ್ಕಾಗಿ ಮೂರು ಬ್ರಿಟಿಷ್ ಜಹಜುಗಳು ಹೊರಟು ಹುಡುಕುತ್ತಿವೆ ಎಂದು ತಿಳಿಸಿರುತ್ತಾರೆ. ಅದು ಈ ಜಹಜುಗಳಿಗೆ ಸಿಕ್ಕದೆ ತಪ್ಪಿಸಿಕೊಂಡು ಹೋಗಲಾರದೆಂದು ನಿರೀಕ್ಷಿಸುವೆವು. ಆದರೂ ಆ ಜಹಜು ಮೂವತ್ತು ಗುಂಡುಗಳನ್ನು ಹೊಡೆದಾಗ್ಯೂ ವಿಶೇಷ ನಷ್ಟವೇನೂ ಮಾಡಲಾರದೆ ಹೋದದ್ದೇ ಆಶ್ಚರ್ಯವಾಗಿದೆ.

ಬೊಂಬಾಯಿ ಗವರ್ನರವರ ಕುಮಾರನು ಸೈನ್ಯದಲ್ಲಿ ಹುದ್ದೇದಾರನಾಗಿ ಯುದ್ಧಭೂಮಿಗೆ ಹೋಗಿರುವಲ್ಲಿ ಆತನ ಕಾಲಿಗೆ ಗುಂಡಿನೇಟು ಬಿದ್ದು ಗಾಯವಾಯಿತು. ಕೆಲವು ದಿನಗಳ ತನಕ ಈತನು ಸಿಕ್ಕಿರಲಿಲ್ಲ.

ಹಿಂದುಸ್ಥಾನದ ಸೈನಿಕರಲ್ಲಿ ಗಾಯಪಟ್ಟ ಸಿಪಾಯಿಗಳು ಯುದ್ಧಭೂಮಿಯಿಂದ ನೊವೆಂಬರ್ ತಿಂಗಳಲ್ಲಿ ಬೊಂಬಾಯಿಗೆ ಬರಬಹುದೆಂದು ನಿರೀಕ್ಷಿಸಲ್ಪಟ್ಟಿದೆ. ಬೊಂಬಾಯಿನಲ್ಲಿ ಈಗ ಕಟ್ಟುತ್ತಿರುವ ಮ್ಯೂಜಿಯಂ (ತಮಾಷಿ ಬಂಗಲೆ) ಎಂಬ ಕಟ್ಟಡದಲ್ಲಿ ಆ ಗಾಯಪಟ್ಟವರನ್ನೆಲ್ಲಾ ಇಟ್ಟು ಚಿಕಿತ್ಸೆ ಶೈತ್ಯೋಪಚಾರಗಳನ್ನು ನಡಿಸಬೇಕೆಂದು ಏರ್ಪಾಡುಗಳು ನಡೆಯುತ್ತಲಿವೆ.

ಹೈದರಾಬಾದ್ ಸಂಸ್ಥಾನದ ನೈಜಾಮರವರು ಈ ಯುದ್ಧದ ನಿಮಿತ್ತವಾಗಿ ಸಾರ್ವಭೌಮ ಸರ್ಕಾರದವರಿಗೆ 60,00,000 ರೂಪಾಯನ್ನು ಕೊಟ್ಟಿರುತ್ತಾರೆ. ಹೈದರಾಬಾದಿನಿಂದ ಎರಡು ರೆಜಮೆಂಟ್ ಸೈನ್ಯಗಳು ಯುದ್ಧಭೂಮಿಗೆ ಹೋಗಿರುವವು. ಈ ರೆಜಮೆಂಟುಗಳಿಗೆ ಯುದ್ಧಭೂಮಿಯಲ್ಲಿರುವಾಗ್ಗೆ ಎಷ್ಟು ಹಣ ಖರ್ಚಾದರೂ ಅದನ್ನೆಲ್ಲಾ ನೈಜಾಮರವರೇ ವಹಿಸಿಕೊಂಡು ಕೊಡುವುದಾಗಿ ಅವರು ವೈಸ್‌ರಾಯರವರಿಗೆ ಅರಿಕೆಮಾಡಿದಾರೆ. ಇಂಥಾ ದ್ರವ್ಯ ಮತ್ತು ಸೈನ್ಯಗಳ ಸಹಾಯವು ನೈಜಾಮರವರ ಪದವಿಗೂ ಸನ್ಮಾನಕ್ಕೂ ತಕ್ಕವುಗಳಾಗಿವೆ.

ಹಿಂದುಸ್ಥಾನದ ಎಲ್ಲಾ ಪ್ರದೇಶಗಳಲ್ಲೂ ಜನರು ಯುದ್ಧದ ಫಂಡಿಗೆ ದ್ರವ್ಯವನ್ನು ಬಹು ಧಾರಾಳವಾಗಿ ಕೊಡುತ್ತಾ ಬಂದಿರುವುದು ಮಾತ್ರವೇ ಅಲ್ಲ; ಅವರವರ ಮತಕ್ರಮಗಳನ್ನು ಅನುಸರಿಸಿ ಬ್ರಿಟಿಷ್ ಪ್ರಭುತ್ವಕ್ಕೆ ಜಯಪ್ರದವಾಗಬೇಕೆಂದು ಪೂಜೆ, ಹೋಮ, ಪ್ರಾರ್ಥನೆ ಮೊದಲಾದವುಗಳನ್ನು ಮಾಡುತ್ತಿರುವರು. ಇದರ ಫಲವು ನಮಗೆ ಕಾಣುವುದು ಸ್ವಲ್ಪ ಸಾವಕಾಶವಾದೀತಾದಾಗ್ಯೂ ಸರ್ವಶಕ್ತನಾದ ದೇವರು ನಮ್ಮ ಪ್ರಾರ್ಥನೆಯನ್ನು ನೆರವೇರಿಸಿಕೊಡುತ್ತಾನೆಂದು ದೃಢವಾಗಿ ನಂಬುತ್ತೇವೆ.

ಇಂಪೀರಿಯಲ್ ಇಂಡಿಯಾ ರಿಲೀಫ್ ಫಂಡು.

"ವೃತ್ತಾಂತ ಪತ್ರಿಕೆ" ಆಫೀಸ್ ಚಂದಾ ಪಟ್ಟಿ.

ಹಿಂದೆ ವಸೂಲಾಗಿರುವ ಚಂದಾ ...	ರೂ	148-1-0
ಎಸ್ತರಮ್ಮ, ಮೈಸೂರು ಅರಮನೆ ನರ್ಸ್	,,	1-0-0
ಸುಮಿತ್ರಮ್ಮ ಲಾಮೆಕ್, ಮೈಸೂರು ...	,,	1-0-0
	ಜುಮ್ಲಾ ರೂಪಾಯಿ	150-1-0

ಮೈಸೂರು ಗೆಜೆಟ್ ಸಂಗ್ರಹ.

ದಸರಾ ಹಬ್ಬದ ನಿಮಿತ್ತ ಮುಂದಿನ ವಾರದ ಮೈಸೂರು ಸರ್ಕಾರಿ ಗೆಜೆಟ್ಟು ಪ್ರಕಟವಾಗುವುದಿಲ್ಲ.

ದೊಡ್ಡಬಳ್ಳಾಪುರದ ಸಬ್ ಡಿವಿಜನ್ ಅ॥ ಕಮೀಷನರ್ ಮ॥ ಸಿ. ಎಸ್. ಕುಪ್ಪುಸ್ವಾಮಿ ಅಯ್ಯಂಗಾರ್ರಿಗೆ ಸೆಪ್ಟಂಬರ್ ತಾ. 24 ರಿಂದ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಅವರು ನವರಾತ್ರಿ ಹಬ್ಬದ ರಜವನ್ನೂ ಉಪಯೋಗಿಸಿಕೊಳ್ಳಬಹುದು.

ರಜದ ಮೇಲಿರುವ ಸೀನಿಯರ್ ಅ॥ ಕಮೀಷನರ್ ಮ॥ ಸಿ. ವೆಂಕಟರಾಯರು ರಜದಿಂದ ಕೂಡಲೇ ವಾಪಸು ಬಂದು ದೊಡ್ಡಬಳ್ಳಾಪುರದ ಸಬ್ ಡಿವಿಜನ್ ಛಾರ್ಜನ್ನು ವಹಿಸತಕ್ಕದ್ದು. ಇವರಿಗೆ 1 ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರವನ್ನು ವಹಿಸಿದೆ.

ಕೌನ್ಸಿಲ್ ಮೊದಲನೇ ಮೆಂಬರಾದ ಮ॥ ರಾಜಮಂತ್ರ ಪ್ರವೀಣ ಎಚ್. ವಿ. ನಂಜುಂಡಯ್ಯನವರಿಗೆ ದಸರಾ ರಜದೊಂದಿಗೆ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಸಕಲೇಶಪುರದ ಸಬ್ ಡಿವಿಜನ್ ಆಕ್ಟಿಂಗ್ ಅ॥ ಕಮೀಷನರ್ ಮ॥ ಎಂ. ಸದಾಶಿವರಾಯರಿಗೆ ಕೊಟ್ಟಿರುವ ಹದಿನೈದು ದಿನಗಳ ಪ್ರಿವಿಲೆಜ್ ರಜವನ್ನು ಇನ್ನೂ ಹತ್ತು ದಿನ ಜಾಸ್ತಿ ಮಾಡಿದೆ. ಈಗಿನ ಬದಲಿ ಏರ್ಪಾಡೇ ಜಾರಿಯಲ್ಲಿರತಕ್ಕದ್ದು.

ಶೃಂಗೇರಿಯ ಡೆಪ್ಯುಟಿ ಅಮಲ್ದಾರ್ ಮ॥ ಕೆ. ಕನ್ನಯ್ಯಶಾಸ್ತ್ರಿಯವರಿಗೆ ಕೊಟ್ಟಿರುವ ಎರಡು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೊಂದು ತಿಂಗಳು ಜಾಸ್ತಿ ಮಾಡಿದೆ.

ಒಂದು ಸಂತೋಷ ಕೂಟವು.

ಜಗಲೂರು ತಾಲ್ಲೋಕು ಬೀಳ್ಕೊಡು.

ನಮ್ಮ ತಾಲ್ಲೂಕಿಗೆ ಮಿ॥ ಜೆ. ಬಾಲ್ ಸಾಹೇಬರವರು ಅಮಲ್ದಾರರಾಗಿ ಬಂದು ಸುಮಾರು ಎರಡು ವರ್ಷವಾಯ್ತು. ಇವರ ಕಾಲದಲ್ಲಿ ಸರ್ಕಾರದ ಕೆಲಸಗಳೆಲ್ಲಾ ಬಹು ವಿಚಕ್ಷಣತೆಯಿಂದ ನಡೆದು ಈ ತಾಲ್ಲೂಕಿನ ಪ್ರಜೆಗಳಿಗೆಲ್ಲಾ ಬಹಳ ಅನುರಾಗ ಪ್ರಿಯರಾಗಿದ್ದರು. ಅವರು ಕೆಲವು ದಿನಗಳ ಕೆಳಗೆ ಇದೇ ಬಿಳಿಚೋಡು ಗ್ರಾಮಕ್ಕೆ ದಯಮಾಡಿಸಿದ ಕಾಲದಲ್ಲಿ ಗ್ರಾಮಸ್ಥರ ಅಪೇಕ್ಷೆಯಂತೆ ಪೇಟೆ ಬಸವೇಶ್ವರ ದೇವಸ್ಥಾನದ ಜೀರ್ಣೋದ್ಧಾರಕ್ಕಾಗಿ ನಾಮದಾರ ರೂಪಾಯಿನವರಿಗೂ ತಾನೇ ಸ್ವತಃ ಪ್ರತಿಯೊಬ್ಬ ಪ್ರಜಾಪ್ರಮುಖರನ್ನೂ ಬಾಧಿಸಿಕೊಂಡು ಚಂದಾ ಪಟ್ಟಿಯನ್ನು ಏರ್ಪಡಿಸಿದ್ದರು. ಇನ್ನು ಕೆಲವು ಕಾಲ ಇವರು ಇಲ್ಲಿಯೇ ಇದ್ದರೆ ಮೇಲ್ಕಂಡ ಕೆಲಸವು ಸರಾಗವಾಗಿ ನೆರವೇರುತ್ತಿತ್ತು. ಇವರಿಗೆ ಕ್ಷಿಪ್ರದಲ್ಲಿಯೇ ಬೇರೆ ಕಡೆಗೆ ವರ್ಗವಾದುದಕ್ಕಾಗಿ ತುಂಬಾ ವಿಷಾದಿಸುತ್ತೇವೆ. ಇವರು ತೆರಳುವ ಕಾಲದಲ್ಲಿ ಬಿಳಿಚೋಡು ಗ್ರಾಮಕ್ಕೆ ದಯಮಾಡಿಸಿದ್ದರು. ಗ್ರಾಮಸ್ಥರೆಲ್ಲರೂ ಸಭೆ ಸೇರಿ ಮ॥ ತೆಪ್ಪ ಸಣ್ಣ ರುದ್ರಪ್ಪನವರು ಇವರ ಗುಣಕಥನ ವಿಷಯದಲ್ಲಿ ಸರಸವಾಗಿ ಒಂದು ಭಾಷಣವನ್ನು ಮಾಡಿದುದಲ್ಲದೆ ತಾವೇ ಸ್ವಂತವಾಗಿ ರಚಿಸಿದ್ದ ಕೆಲವು ಶ್ಲೋಕಗಳನ್ನು ಓದಿ ಹೇಳಿದನು. ಅನಂತರ ಗಂಧ ಪುಷ್ಪ ತಾಂಬೂಲಗಳಿಂದ ಸಭೆಯು ವಿಸರ್ಜಿಸಲ್ಪಟ್ಟು, ಗೌರವದಿಂದ ಮಿ॥ ಬಾಲ್‌ಸಾಹೇಬರವರನ್ನು ಕೆಲವು ದೂರ ಕಳುಹಿಸಿಕೊಟ್ಟರು. ಕೇವಲ ಇಂಗ್ಲಿಷ್ ಪ್ರಭುಗಳಾದರೂ ಇವರು ಮತ ಪಕ್ಷಪಾತವಿಲ್ಲದೆ ಈ ರೀತಿಯಾಗಿ ಪ್ರಜಾಪ್ರೀತಿಯನ್ನೂ ದೇವತಾಭಿಮಾನವನ್ನೂ ಪಡೆದು ಪ್ರಜಾ ಸಾಮಾನ್ಯದ ಅನುರಾಗಕ್ಕೂ ಸರ್ಕಾರದವರ ಮೆಚ್ಚಿಗೆಗೂ ಪಾತ್ರರಾಗಿದಾರೆ. ಇವರನ್ನು ಕಳೆದುಕೊಂಡುದಕ್ಕಾಗಿ ಈ ತಾಲ್ಲೋಕಿನ ಪ್ರಜೆಗಳೆಲ್ಲರೂ ತುಂಬಾ ವ್ಯಸನಪಡುತ್ತಾರೆ. ಕ್ಷಿಪ್ರದಲ್ಲಿಯೇ ಇವರು ಇನ್ನೂ ಉನ್ನತಪದವಿಗೆ ಹತ್ತಲೆಂದು ಕೋರುವ

ಓರ್ವ ಸತ್ಯವಾದಿ.

ಚಿನ್ನದ ಗಣಿಗಳೂ, ರೈಲ್ವೆ ಪ್ರಯಾಣವೂ.

ಮೊದಲು ಕೋಲಾರದ ಸವಿಾಪ ಭಂಗಾರ ತೆಗೆಯುವ ನಿಮಿತ್ತವಾಗಿ ಮಾಡಿರುವ ಕಾರಖಾನೆಗಳನ್ನು ನೋಡಲು ಇಳಿದೆನು. ಭಂಗಾರ ತೆಗೆಯುವದಕ್ಕಾಗಿ ಎಳೆಂಟು ಕಂಪೆನಿಗಳು ಏರ್ಪಾಡಾಗಿವೆ. ಅವುಗಳಲ್ಲಿ ನೈಟ್ ರೀಫ್ಸ್, ಛಾಂಪಿಯನ್ ರೀಫ್ಸ್, ಉರಿಗ, ಕೊರೊಮ್ಯಾಂಡಲ್ ಮತ್ತು ಮಾರಿಕುಪ್ಪ ಎಂಬಿವೇ ಮುಖ್ಯವಾದವುಗಳು. ಭಂಗಾರ ಸಿಕ್ಕುವ ಕಲ್ಲನ್ನು ಭೂಮಿಯ ಕೆಳಭಾಗದಿಂದ 1,600 ಅಡಿಗಳ ಕೆಳಗಿನಿಂದ ಅಗೆದು ತರುವದು, ಅದನ್ನು ಹಿಟ್ಟಿನಂತೆ ಕುಟ್ಟಿ ಪುಡಿ ಮಾಡುವದು, ಆ ಪುಡಿಯನ್ನು ಪಾದರಸದಲ್ಲಿ ಹಾಕುವದು, ಪಾದರಸವು ಭಂಗಾರವನ್ನು ಹೀರಿ ನೀರನ್ನೂ ಕಲ್ಲುಪುಡಿಯನ್ನೂ ಮುಂದಕ್ಕೆ ಬಿಡುವದು, ಇವೇ ಮುಖ್ಯವಾದ ಕೆಲಸಗಳು. ಪಾದರಸದಲ್ಲಿ ಮಿಶ್ರವಾದ ಭಂಗಾರವನ್ನು ಕಾಯಿಸಿದಾಗ ಪಾದರಸವು ಆವಿಯ ರೂಪವಾಗಿ ಹೋಗಿ ತಣ್ಣೀರಲ್ಲಿ ಬೀಳುವದರಿಂದ ತಿರಿಗಿ ದ್ರವರೂಪವನ್ನು ಹೊಂದಿ ಕೆಲಸಕ್ಕೆ ಒದಗುವದು. ಭಂಗಾರವು ಕೆಳಗೆ ನಿಲ್ಲುವದು. ಗಣಿಗಳಲ್ಲಿ ನೀರಿಗೆ ತಾತ್ಸಾರವಾದದರಿಂದ ಮೈಸೂರು ಸರಕಾರದವರು ದೂರದಿಂದ ನೀರು ತಂದು ಸರಬರಾಯಿ ಮಾಡುತ್ತಿರುವರು. ಹೆಚ್ಚು ತೆರಿಗೆ ಕೊಡಬೇಕೆಂದು ಒಂದು ಸಲ ಉಪಯೋಗಿಸಿದ ನೀರನ್ನೇ ಒಂದು ದೊಡ್ಡ ತೊಟ್ಟಿಗೆ ಬಿಟ್ಟುಕೊಂಡು ಅದನ್ನೇ ಮರಳಿ ಬಳಸುವರು. ಇಲ್ಲಿ ನಾನಾ ವಿಧದ ಜೀವನೋಪಾಯಗಳು ದೊರೆಯುವವು. ಎರಡು ಕಾಲೂ ಕಣ್ಣುಗಳೂ ಉಳ್ಳ ಮನುಷ್ಯಮಾತ್ರನು ಅಲ್ಲಿಗೆ ಹೋದರೆ ತಿಂಗಳಿಗೆ 20 ರೂಪಾಯಿಗಳಿಗೆ ಕಡಿಮ್ಮೆಯಿಲ್ಲದೆ ಸಂಪಾದಿಸಿಕೊಳ್ಳಬಹುದು. ಕೂಲಿಯ ಕೆಲಸದವರು ಇರಲಿಕ್ಕೆ ಮನೆಗಳು ಕಟ್ಟುವದು, ಮೆಶೀನುಗಳು ಸಂಸ್ಥಾಪಿಸಲು ಹೊಸ ಹೊಸ ಕಟ್ಟಡಗಳನ್ನು ಸಿದ್ಧಪಡಿಸುವದು, ಕಂಪೆನಿಗಳಿಗೆ ಬೇಕಾಗುವ ಸಾಮಾನುಗಳನ್ನು ಸಾಗಿಸಿಕೊಡುವದು. ಕೂಲಿಯವರ ಕಾಂಡಾಗಳಲ್ಲಿ ಕಕ್ಕಲ ಸಿಪಾಯಿಗಿರಿ ಮಾಡುವದು, ಇವೇ ಮುಖ್ಯ ಕೆಲಸಗಳು. ದೇಶ ದೇಶದ ಜನರು ನೆರೆದಿರುವರು. ಇವರಿಗೆ ಕೈ ತುಂಬ ಕೂಲಿ ಸಿಕ್ಕುವದರಿಂದಲೂ, ಪ್ರಯೋಜಕ ಕೆಲಸ ಮಾಡತಕ್ಕವರು ಓದು ಬರಹ ಬಲ್ಲವರಲ್ಲವಾದದರಿಂದಲೂ ಸಿಕ್ಕ ಹಣವನ್ನು ದುಂದು ಮಾಡಿಬಿಡುವರು. ವಾರಕ್ಕೆ ದಾರಿಗಳಾಗಿ ಸಂತೆಯಲ್ಲಿ ನಾನಾ ತರದ ಬಟ್ಟೆಗಳು ಮತ್ತು ಇತರ ಭೋಗ್ಯ ವಸ್ತುಗಳು ವಿಕ್ರಯಕ್ಕೆ ಬಂದು ಬಿಚಾರ್ಗುವವು. ಯಾವದಾದರೊಂದು ನಾಟಕ ಕಂಪೆನಿಯು ಇದ್ದೇ ಇರುವದು. ಬೆಂಗಳೂರಿನಿಂದ ಇಲ್ಲಿಗೆ ಗಂಟೆಗೊಂದು ಬಾರಿ ಯೆಂಬಂತೆ ಟ್ರೇನು ಓಡಿಯಾಡುತ್ತಲೇ ಇರುವದು. ಸುತ್ತುಮುತ್ತಲೂ ಬಹಳ ದೂರದ ವರೆಗೂ ಬೇಸಾಯದ ಕೆಲಸವೇ ನಡೆಯದೆ, ತರಕಾರಿ ಹಾಲು ಮೊಸರು ಮೊದಲಾಗಿ ಸಕಲ ಜೀನಸುಗಳೂ ದೂರದಿಂದ ಬರಬೇಕಾಗಿಯೂ, ಕೈಗಾರಿಕೆ ಕೆಲಸ ಮಾಡುವವರಿಗೆಲ್ಲಾ ಸರಬರಾಯಿ ಆಗಬೇಕಾಗಿರುವದರಿಂದಲೂ ಧಾರಣೆ ಬಹಳ ಹೆಚ್ಚಿದೆ. ಆದಕಾರಣ ಅಲ್ಲಿ ಕೆಲಸ ಮಾಡತಕ್ಕವರಿಗೆ ಇತರ ಸ್ಥಳಗಳಲ್ಲಿರುವವರಿಗಿಂತ ಹೆಚ್ಚು ಸಂಬಳ ಭತ್ತೆಯ ರೂಪವಾಗಿ ಸಲ್ಲುತ್ತದೆ. ಅಲ್ಲಿ ಮಾಡಿರತಕ್ಕ ಏರ್ಪಾಡುಗಳೆಲ್ಲಾ ನೋಡಿದರೆ ಭಂಗಾರವು ಶಾಶ್ವತವಾಗಿ ಸಿಕ್ಕುತ್ತ ಹೋಗುವಂತೆ ತೋರುತ್ತದೆ. ಭಂಗಾರವನ್ನು ತೆಗೆದುಕೊಂಡು ಬಿಸಾಡಿರುವ ಕಲ್ಲುಪುಡಿಯು ಬೆಟ್ಟಗಳಂತೆ ರಾಶಿ ರಾಶಿಯಾಗಿ ಬಿದ್ದಿರುತ್ತವೆ. ಪೂರ್ವದಲ್ಲಿ ಇಂಥಾ ಕೆಲಸಗಳು ನಡೆದದ್ದರಿಂದಲೇ ಬೆಟ್ಟಗಳು ಹುಟ್ಟಿದ ಹಾಗೆ ಎಣಿಸಬಹುದು. ಈ ಮಣ್ಣಿನಿಂದ ಕನ್ನಡಿ ತಯಾರಾಗುವದಂತೆ. ಇದಕ್ಕಾಗಿ ಕಂಪೆನಿಯೊಂದು ಶೀಘ್ರದಲ್ಲಿಯೇ ಏರ್ಪಾಡಾಗಿ ಕೆಲಸ ಆರಂಭವಾಗುತ್ತದೆ.

ರೈಲಿನಲ್ಲಿ ಸಂಚಾರ ಮಾಡುವ ಶ್ರಮ ಹೇಳಿ ತೀರದು. ಎಷ್ಟು ಸಲ ರೈಲು ಗಾಡಿ ಬಿಟ್ಟಾಗ್ಯೂ ಅಷ್ಟಕಷ್ಟೇ ಜನಗಳು ಇದ್ದೇ ಇರುತ್ತಾರೆ. ಪ್ರಯಾಣ ಮಾಡತಕ್ಕವರಿಗೆ ನಾನಾವಿಧ ಕಾರಣಗಳುಂಟಾಗಿದೆ. ಸುಲಭವಾದ ಪಯಣದಿಂದ ಹೋಗಿ ಬರಬಹುದೆಂದು ಹೆಚ್ಚು ಕೊಟ್ಟು ತರುವಾಯ ದೂರ ದೇಶದಲ್ಲಿ ಮಾಡತೊಡಗಿರುವರು. ವ್ಯಾಪಾರದ ಸಲುವಾಗಿಯೂ ತಿರುಗುವರು. ರೈಲ್ವೆ ಸ್ಟೇಷನುಗಳಲ್ಲಿ ಹಣ್ಣುಹಂಪಲು ಭಕ್ಷ್ಯಾದಿಗಳು ಮಾರುತ್ತವಷ್ಟೆ. ಇವುಗಳ ಧಾರಣೆ ಪೇಟೆ ಧಾರಣೆಗಿಂತಲೂ ದ್ವಿಗುಣ ತ್ರಿಗುಣವಾಗಿರಲು ಕಾರಣವೇನು? ರೈಲಿನಲ್ಲಿ ಸಂಚಾರ ಮಾಡುವವರಿಗೆ ಆತುರಪಡಿಸಿ ಹೇಳಿದ ಬೆಲೆಗೆ ಕೊಳ್ಳುತ್ತಾರೆ. ದುಡ್ಡು ಸೆಳೆಯುವದಕ್ಕೆ ಇದೇ ಸಮಯವೆಂದು ಹೆಚ್ಚು ಲಾಭವಿಡುತ್ತಾರೆಯೇ? ಎಂದು ವಿಚಾರಿಸಿದ್ದರಲ್ಲಿ, ಸ್ಟೇಷನ್ ಸರಹದ್ದಿನೊಳಗೆ ಮಾರಾಟಮಾಡುವ ಹಕ್ಕು ಕಂಪನಿಯವರು ಏಲಂ ಹಾಕುವರೆಂತಲೂ, ಹೆಚ್ಚು ಕಂದಾಯ ಸಲ್ಲಿಸತಕ್ಕವನಿಗೆ ಆ ಹಕ್ಕು ಸಿಕ್ಕುತ್ತದೆ ಎಂದು ವಿದಿತವಾಯಿತು. ಇತರ ಅಂಗಡಿಯವರಂತೆ ಸಾಲಕ್ಕೆ ಸಾಮಾನು ಕೊಟ್ಟು ಅವರ ಮನೆಗೆ ಅಲೆದಾಡಿ ಕೋರ್ಟು ಕಛೇರಿ ಹತ್ತುವ ಗೋಜಿಲ್ಲದೆ ದುಡ್ಡು ತೆಗೆದುಕೊಂಡು ಗಾಡಿಯಲ್ಲಿ ಕುಳಿತುಕೊಳ್ಳಲು ಚೀಟು ಕೊಡಿ ಎಂದರೆ ಸ್ಥಳವಿಲ್ಲ, ಬೇರೆ ರೈಲಿನಲ್ಲಿ ಹೋಗು ಎಂದು ಹೇಳಿ ದುಡ್ಡು ವಾಪಸು ಕೊಡುವಂಥಾ ಸುಲಭ ವ್ಯಾಪಾರವುಳ್ಳ ರೈಲ್ವೆ ಕಂಪನಿಯವರು ತಮ್ಮ ಲಾಭಕ್ಕೆ ಆಧಾರ ಭೂತರಾದ ಪ್ರಯಾಣಿಕರಿಗೆ ಪ್ರತಿಯೊಂದು ಬಾಬಿನಲ್ಲಿಯೂ ಸಲಕರಣೆಗಳುಂಟುಮಾಡದೆ ಬಗೆಬಗೆಯಾಗಿ ಅವರಿಂದ ದುಡ್ಡು ಸುಲಿದುಕೊಳ್ಳುವದು ಧರ್ಮವೇ? ಅನೇಕ ಸ್ಟೇಷನುಗಳಲ್ಲಿ ಸ್ಟೇಷನ್ ಮಾಸ್ಟರ ಕೋಣೆಯೊಂದಲ್ಲದೆ ಬೇರೆ ಕೋಣೆಯೇ ಇಲ್ಲದೆ ಪ್ರಯಾಣಿಕರೆಲ್ಲಾ ಬಿಸಿಲು ಮಳೆ ಗಾಳಿಯು ಹೊಡತಕ್ಕೆ ಸಿಕ್ಕಿ ವರಾಂಡದಲ್ಲಿ ಕುಳಿತು ಕಾಲ ಕಳೆಯಬೇಕು. ಸಾಧಾರಣ ಸ್ಟೇಷನುಗಳಲ್ಲಿ ಹೀಗಿರುವದು. ಒಂದು ವೇಳೆ ಒಪ್ಪಿಕೊಂಡಾಗ್ಯೂ, ಜಂಕ್ಷನ್ ರೈಲುಗಳು ಸೇರುವ ಸ್ಥಳದಲ್ಲಿ ಈ ಅವಸ್ಥೆಯು ಬಹಳ ಶೋಚನೀಯವಾಗಿರುತ್ತದೆ. ಒಂದು ರೈಲಿನಿಂದ ಮತ್ತೊಂದು ರೈಲಿಗೆ ಹೋಗತಕ್ಕವರಿಗೆ ತಕ್ಷಣ ಗಾಡಿಯು ಹೊರಡದಿದ್ದರೆ, ಹೊರಡುವ ಸಮಯ ರಾತ್ರಿಯಾದರೆ ಮರೆಯಾದ ಸ್ಥಳವಿಲ್ಲದಿದ್ದರೆ ಹ್ಯಾಗೆ? ಬೇರೊಂದು ಕೆಲಸವಿಲ್ಲದೆ ರೈಲು ಹೊರಡುವದನ್ನೇ ನಿರೀಕ್ಷಿಸಿಕೊಂಡು ಕೂಡುವವರಿಗೆ ಸ್ಥಳ ಸೌಕರ್ಯವಿಲ್ಲದಿದ್ದರೆ ತುಂಬಾ ತೊಂದರೆಯು ಕಾಣುತ್ತದೆಯಾದ್ದರಿಂದ ರೈಲ್ವೆ ಕಂಪನಿಯವರು ಈ ಕಡೆಗೆ ಗಮನ ಕೊಡಬೇಕು. ಸ್ಟೇಷನಿನಲ್ಲಿ ಫಲಾಹಾರದ ಸಾಮಾನುಗಳು ಮಾರುವಂತೆ ತಾವಾಗಿ ಅನುಕೂಲಗಳು ಒದಗಿಸಬೇಕು; ಅಥವಾ ಮಾರುವವರಿಗೆ ಸರಿಯಾದ ಆಶ್ರಯವಾದರೂ ಕೊಡಬೇಕು. ಅವರಿಗೆ ಮಾರುವ ಹಕ್ಕು ಬೆಲೆಗೆ ಕೊಡುವದು ಬಹಳ ಸ್ವಾರ್ಥಪರವಾದದ್ದು. ರೈಲ್ವೆ ಕಂಪನಿಯವರು ಈ ಲಾಭದ ಮೇಲಿನ ದೃಷ್ಟಿಯನ್ನು ಬಿಟ್ಟು ಕೀರ್ತಿಪಡೆಯಬೇಕೆಂದು ಪ್ರಾರ್ಥನೆ.

ಎಂ. ಆರ್. ಎ

ಎಳನೇ ದಸರಾ ಕೈಗಾರಿಕೆಗಳ ಮತ್ತು ವ್ಯವಸಾಯೋಪಕರಣಗಳ ಪ್ರದರ್ಶನೋತ್ಸವವು.

ಶ್ರೀಮತ್ ಯುವರಾಜರವರು ಪ್ರಾರಂಭಮಾಡಿದ್ದು.

ಕಳೆದ ಶುಕ್ರವಾರ ಸಾಯಂಕಾಲ ರಾಜಧಾನಿಯ ಪಶ್ಚಿಮಾಭಿವೃದ್ಧಿಯಲ್ಲಿ ಶ್ರೀಮತ್ ಯುವರಾಜರವರು ಪ್ರದರ್ಶನಶಾಲೆಯನ್ನು ಪ್ರಾರಂಭಮಾಡಿದರು. ಪ್ರದರ್ಶನಶಾಲೆಯ ಮುಂಭಾಗದಲ್ಲಿ ಒಂದು ದಿವ್ಯವಾದ ಮರದ ಮಂಟಪವು ನೇತ್ರಾನಂದಕರವಾಗಿಯೂ ಮರಗೆಲಸದ ಕೌಶಲ್ಯವುಳ್ಳದ್ದಾಗಿಯೂ ನಿರ್ಮಿಸಲ್ಪಟ್ಟಿದೆ. ಈ ಮಂಟಪದೊಳಗೂ, ಮುಂಭಾಗದಲ್ಲೂ ಎಲ್ಲಾ ಕೋಮು ಮತ್ತು ಕಸಬುಗಳ ದೊಡ್ಡಮನುಷ್ಯರೂ ಅಧಿಕಾರಿಗಳೂ ಸರ್ದಾರರೂ ಅರಸುಮಕ್ಕಳೂ ಹಾಜರಾಗಿದ್ದರು. ಪ್ರದರ್ಶನದ ಕಮಿಟಿ ಪ್ರೆಸಿಡೆಂಟರಾದ ಮ|| ಎಂ. ಕಾಂತರಾಜೆ ಅರಸ್, ಸಿ. ಎಸ್. ಐ. ರವರು ಪ್ರದರ್ಶನದ ವೃತ್ತಾಂತವನ್ನು ವಿವರಿಸಿ ಒಂದು ಅಡ್ರೆಸ್ಸನ್ನು ಓದಿ ಒಪ್ಪಿಸಿ ಶ್ರೀಮದ್ಯುವರಾಜರವರನ್ನು ಪ್ರದರ್ಶನದ ಆರಂಭೋತ್ಸವವನ್ನು ನೆರವೇರಿಸಬೇಕೆಂದು ಕೇಳಿಕೊಂಡರು. ಅವರು ತಿಳಿಸಿದ ಮುಖ್ಯಾಂಶಗಳೇನೆಂದರೆ—

ಕಳೆದ ಏಳು ವರುಷಗಳಿಂದ ಪ್ರತಿ ವರುಷವೂ ದಸರಾ ಮಹೋತ್ಸವಗಳ ಕೂಡ ಪ್ರದರ್ಶನವನ್ನು ನಡಿಸುವುದು ವಾಡಿಕೆಯಾಗಿದೆ. ಈ ವರುಷ ಇದರ ಜವಾಬ್ದಾರಿಯನ್ನು ಗವರ್ನ್‌ಮೆಂಟಿನವರು ಸಂಪದಭ್ಯುದಯ ಸಮಾಜಕ್ಕೆ ವಹಿಸಿರುತ್ತಾರೆ. ಸಂಸ್ಥಾನಾಮಳೆ ಇರುವ ವ್ಯವಸಾಯಗಾರರಿಗೂ ಕೈಗಾರಿಕೆಯವರಿಗೂ ಈ ಪ್ರದರ್ಶನದಿಂದ ವಿಶೇಷವಾದ ಪ್ರಯೋಜನವುಂಟಾಗುವಂತೆ ಮಾಡಬೇಕೆಂಬುವುದೇ ಸರ್ಕಾರದವರ ಉದ್ದೇಶವಾಗಿದೆ. ವ್ಯವಸಾಯದ ಮತ್ತು ವಿದ್ಯಾಭ್ಯಾಸದ ಶಾಖೆಗಳಿಂದಲೂ ಈ ಕಮಿಟಿಗೆ ಕೆಲವು ಮೆಂಬರುಗಳನ್ನು ಚುನಾಯಿಸಿ ನೇಮಕ ಮಾಡಿದಾರೆ.—ಪ್ರದರ್ಶನದ ಕಮಿಟಿಯವರಿಗೆ ದೊರಕಿದ್ದ ಸ್ವಲ್ಪ ಕಾಲದಲ್ಲಿ ಅವರು ಕಸಬುಗಳನ್ನು ಅಭಿವೃದ್ಧಿಗೆ ತರತಕ್ಕ ಮಾರ್ಗಗಳನ್ನು ಸೂಚನೆ ಮಾಡುವಂಥಾ ಏರ್ಪಾಡು ಮಾಡಿದಾರೆ. ಇದರಿಂದ ಹಿಂದುಸ್ಥಾನದ ಎಲ್ಲಾ ಪ್ರಾಂತ್ಯಗಳಲ್ಲೂ ಕಸಬುಗಳು ಎಷ್ಟು ಮಟ್ಟಿಗೆ ಅಭಿವೃದ್ಧಿ ಹೊಂದಿವೆ ಎಂಬುವುದನ್ನು ಕಣ್ಣಾರ ನೋಡಿ ಗ್ರಹಿಸಿಕೊಳ್ಳಬಹುದು. ಜಮೀನುಗಳಲ್ಲಿ ಹೆಚ್ಚಾದ ಬೆಳೆಯನ್ನು ಮಾಡುವುದಕ್ಕೂ, ಧಾನ್ಯಾದಿಗಳನ್ನು ಲಾಭಕರವಾಗಿ ವಿನಿಯೋಗಿಸುವುದಕ್ಕೂ ತಕ್ಕ ಸಾಧನಗಳನ್ನು ಈ ಪ್ರದರ್ಶನ ಶಾಲೆಯಲ್ಲಿ ತೋರಿಸಲಾಗಿದೆ. ಸಂಸ್ಥಾನಾಮಳೆ ವ್ಯವಸಾಯ ಕೈಗಾರಿಕೆಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಕಾಡುಗಳಲ್ಲಿ ಅಪಾರವಾಗಿ ದೊರಕುವ ಸೌದೆಯನ್ನು ಬಹಳ ಅಗ್ಗವಾಗಿ ಸುಟ್ಟು ಇದ್ದಲು ಮಾಡಿ ಇದರಿಂದ ಯಂತ್ರ ಸಾಧನಗಳು ನಡೆಯುವಂತೆ ಮಾಡಿಕೊಳ್ಳಬಹುದಾಗಿದೆ. ಈ ರೀತಿ ಇದ್ದಲು ತಯಾರ್ಮಾಡುವ ಸುಲಭವಾದ ಯಂತ್ರವನ್ನು ತರಿಸಿಟ್ಟು ತೋರಿಸಿರುತ್ತೆ. ಇದಲ್ಲದೆ ಸುಲಭ ತರದ ನಾನಾ ಬಗೆಯ ಯಂತ್ರಗಳು ಕೂಡ ಪ್ರದರ್ಶನ ಮಾಡಲಾಗಿದೆ. ಆ ಯಂತ್ರಗಳನ್ನು ಇಟ್ಟು ತೋರಿಸಲು ಬಹಳ ದ್ರವ್ಯವನ್ನೂ ಶ್ರಮವನ್ನೂ ವಿನಿಯೋಗಿಸಿರುವರು.—ಇದಲ್ಲದೆ ಕಮಿಟಿಯವರು ಹಿಂದುಸ್ಥಾನದ ಇತರ ಭಾಗಗಳಲ್ಲಿ ತಯಾರಾಗುವ ವಸ್ತುಗಳನ್ನು ನಮ್ಮ ಸೀಮೆಯವರು ನೋಡಿ ಕಲಿತುಕೊಳ್ಳುವುದಕ್ಕಾಗಿ ಕಲ್ಕತ್ತೆಯಲ್ಲೂ ಬೊಂಬಾಯಿಯಲ್ಲೂ ಏಜಂಟರನ್ನು ನೇಮಿಸಿ ಅವರ ಮೂಲಕ ತರಿಸಿ ಪ್ರದರ್ಶನ ಮಾಡಿದಾರೆ. ಕಸೂತಿ ಮತ್ತು ಚಿತ್ರ ಕೆಲಸಗಳು, ಜಮಖಾನೆಗಳು, ಬಟ್ಟೆಗಳು, ಸಾಮಾನುಗಳು—ಇವೆಲ್ಲಾ ಚೆನ್ನಾಗಿ ನೋಡತಕ್ಕವುಗಳಾಗಿವೆ. ಮದರಾಸಿನ ಪಿ. ಆರ್. ಕಂಪನಿಯವರೂ, ಬೆಂಗಳೂರು ಬಾರ್ಟನ್ ಕಂಪನಿಯವರೂ ಬೆಳ್ಳಿಯ ಸರಕನ್ನು ಪ್ರದರ್ಶನ ಮಾಡಿದಾರೆ. ಫಾರೆಸ್ಟ್ ಉತ್ಪನ್ನಗಳೂ, ವಿದ್ಯಾಭ್ಯಾಸದ ಪ್ರದರ್ಶನ ವಸ್ತುಗಳೂ ಚೆನ್ನಾಗಿ ಇಡಲ್ಪಟ್ಟಿವೆ. ರೇಷ್ಮೆ ತಯಾರ್ಮಾಡುವ ಮಾದರಿ ಮನೆಯೂ, ನೆಯ್ಗೆ ಕಸಬು ನಡೆಯುವ ಕೊಟಡಿಯೂ ಏರ್ಪಾಡಾಗಿರುವವು.

ಯುವರಾಜರವರ ಭಾಷಣವು.

ಬಳಿಕ ಶ್ರೀಮತ್ ಯುವರಾಜರವರು ಪ್ರದರ್ಶನ ಶಾಲೆಯನ್ನು ತೆರೆಯುವಾಗ್ಗೆ ಅಪ್ಪಣೆ ಕೊಡಿಸಿದ ಮುಖ್ಯ ಸಂಗತಿಗಳೇನೆಂದರೆ—

ಕೆಲವು ಕಾಲದಿಂದ ಪ್ರತಿ ವರುಷವೂ ಈ ಪ್ರದರ್ಶನಶಾಲೆಯ ಪ್ರಾರಂಭೋತ್ಸವವನ್ನು ನೆರವೇರಿಸುವ ಕಾರ್ಯವು ನಮ್ಮ ಪಾಲಿಗೆ ಬಂದಿರುವುದಕ್ಕಾಗಿ ನಮಗೆ ಸಂತೋಷವಾಗಿರುತ್ತದೆ. ಈ ವರುಷದ ಪ್ರದರ್ಶನವು ವಿಶೇಷತರವಾದ ಕಾರಣ ಈ ಕಾರ್ಯವು ನಮ್ಮ ಸಂತೋಷವನ್ನು ಹೆಚ್ಚಿಸಿರುವುದು. ಈ ಪ್ರದರ್ಶನದ ಕಾರ್ಯನಿರ್ವಾಹವನ್ನು ಬೇರೆ ಇಲಾಖೆಗೆ ವಹಿಸಲಾಗಿದೆ. ಈ ಬದಲಾವಣೆಯು ದೆಸೆಯಿಂದ ಪ್ರದರ್ಶನದ ಕಾರ್ಯಗಳು ಇನ್ನೂ ಚೆನ್ನಾಗಬಹುದೆಂಬ ನಿರೀಕ್ಷೆಯುಂಟು. ಹೀಗೆ ಹೇಳಿದ್ದರಿಂದ ಹಿಂದಿನ ಪ್ರದರ್ಶನಗಳು ಸಂತೋಷವನ್ನೂ ಬುದ್ಧಿ ಕುಶಲತೆಯನ್ನೂ ಉಂಟುಮಾಡತಕ್ಕವುಗಳಾಗಿರಲಿಲ್ಲವೆಂದು ಊಹಿಸಬಾರದು. ಹಿಂದಿನ ಪ್ರದರ್ಶನಗಳೂ ಎಷ್ಟೋ ಚೆನ್ನಾಗಿ ನಡೆದಿರುತ್ತವೆ. ಆದರೂ ಕಸಬು, ವ್ಯವಸಾಯ, ವಿದ್ಯಾಭ್ಯಾಸಗಳನ್ನು ಅಭಿವೃದ್ಧಿಪಡಿಸುವುದಕ್ಕಾಗಿ ನಿಂತಿರುವ ಇಲಾಖೆಯವರು ಈ ರೂಪದಲ್ಲಿ ತಮ್ಮ ಅಭಿವೃದ್ಧಿ ಕಾರ್ಯಗಳನ್ನು ಪ್ರಕಾಶಪಡಿಸುವುದು ಸಹಜವಾಗಿ ಕಾಣುತ್ತದೆ. ಈ ಸಂಘದವರು ವರುಷೇ ವರುಷ ಆ ಮೂರು ಬಾಬುಗಳಲ್ಲಿ ಸಂಸ್ಥಾನದ ಪ್ರಜೆಗಳಿಗೆ ಒಳ್ಳೆಯ ಮಾದ್ರಿಗಳನ್ನೂ ಕ್ರಮಗಳನ್ನೂ ತೋರಿಸಿಕೊಡುತ್ತಾ ಬರುವುದಕ್ಕೆ ಸಹಾಯವಾದೀತು. ಗವರ್ನ್‌ಮೆಂಟಿನವರು ಈಗ ಮಾಡಿರುವ ಈ ಬದಲಾವಣೆಯು ದೆಸೆಯಿಂದ ಅವರ ಇಷ್ಟಾರ್ಥವು ನೆರವೇರುವುದೆಂದು ನಿರೀಕ್ಷಿಸುತ್ತೇವೆ.—ಈ ವರುಷದ ಪ್ರದರ್ಶನಶಾಲೆಯಲ್ಲಿ ಉಪಯುಕ್ತವೂ ಸಂತೋಷಕರವೂ ಆದ ಅನೇಕ ವಸ್ತುಗಳನ್ನು ನೋಡಬಹುದೆಂದು ಸೂಚಿಸಲ್ಪಟ್ಟಿದೆ. ಈ ಪೈಕಿ ನಮ್ಮ ಸೀಮೆಯಲ್ಲಿ ಅಪಾರವಾಗಿ ದೊರಕುವ ಸೌದೆಯನ್ನು ಇದ್ದಲುಮಾಡುವಂಥಾ ಟಿಂಬ್ಯೂರ್‌ಸಾಲ್ ಯಂತ್ರವೂ ಅದು ಮಾಡುವ ಕೆಲಸವೂ ಒಂದಾಗಿದೆ. ಇದರಿಂದ ಸಣ್ಣ ಕೈಗಾರಿಕೆಗಳಿಗೂ ವ್ಯವಸಾಯಕ್ಕೂ ಸಹಾಯವಾಗುವುದೆಂದು ನಂಬುತ್ತೇವೆ. ಇದಲ್ಲದೆ ನಮ್ಮ ರೈತರಿಗೆ ಬಹಳ ಪ್ರಯೋಜನಕರವಾಗಿರುವ ನೀರು ಎತ್ತುವ ಅನೇಕ ಯಂತ್ರಗಳೂ ಪ್ರದರ್ಶನಮಾಡಲ್ಪಟ್ಟಿವೆ.—ಕೈಗಾರಿಕೆ ಪದಾರ್ಥಗಳನ್ನು ಪ್ರದರ್ಶನಮಾಡಿರುವುದಕ್ಕೆ ಕೊರತೆಯಿಲ್ಲ. ಹಿಂದುಸ್ಥಾನದ ಬೇರೆ ಬೇರೆ ವಿಭಾಗಗಳಲ್ಲಿ ಜನರು ತಯಾರ್ಮಾಡುವ ಕೈಗಾರಿಕೆ ವಸ್ತುಗಳನ್ನು ಸಾಹಸಪಟ್ಟು ತರಿಸಿ ಪ್ರದರ್ಶನಮಾಡಿರುತ್ತೆ; ಇವುಗಳನ್ನು ನಮ್ಮ ಪ್ರಜೆಗಳು ಹೋಲಿಸಿ ನೋಡಿ ಅದರಂತೆ ವಸ್ತುಗಳನ್ನು ತಯಾರ್ಮಾಡುವುದನ್ನು ಕಲಿತುಕೊಳ್ಳಬಹುದು. ಶಾಸ್ತ್ರರೀತಿಯಾಗಿ ರೇಷ್ಮೆ ತಯಾರ್ಮಾಡುವುದನ್ನೂ, ನೂತನ ವಿಧಾನದಲ್ಲಿ ನೆಯ್ಗೆಮಾಡುವುದನ್ನೂ ತೋರಿಸಲಾಗಿದೆ. ಚಿನ್ನ ಬೆಳ್ಳಿಯ ಕೆಲಸಗಾರರಲ್ಲಿ ಸ್ಪರ್ಧೆ ಉಂಟಾಗುವುದಕ್ಕಾಗಿ ಬಹು ಶ್ರೇಷ್ಠವಾದ ಒಡವೆಗಳನ್ನು ಪ್ರದರ್ಶನಮಾಡಲಾಗಿದೆ. ನಮ್ಮ ಬಡಗಿಗಳು, ದೇವಾಂಗದವರು, ಕುಂಬಾರರು, ಮುಖ್ಯವಾಗಿ ಬುದ್ಧಿಶಾಲಿಗಳಾದ ಸಮಸ್ತ ಕಸಬುದಾರರೂ ಈ ಪ್ರದರ್ಶನವನ್ನು ನೋಡಿದಲ್ಲಿ ಪ್ರತಿ ಒಬ್ಬರೂ ಯಾವುದಾದರೊಂದು ಉಪಯುಕ್ತವಾದ ವಿಷಯವನ್ನು ಸಂಗ್ರಹಮಾಡಿಕೊಳ್ಳದೆ ಹೋಗಲಾರರೆಂದು ಹೇಳಬಲ್ಲೆವು.—ಇನ್ನು ನಮ್ಮ ಸಮ್ಮತಿ ಕುತೂಹಲವನ್ನು ಸಾವಕಾಶಕ್ಕೆ ಬಿಡದೆ ಈ ಪ್ರದರ್ಶನವನ್ನು ಪ್ರಾರಂಭಮಾಡಿರುವೆವು.

ಈ ರೀತಿಯಾಗಿ ಭಾಷಣಮಾಡಿದ ಮೇಲೆ ಮ|| ಕಾಂತರಾಜೆ ಅರಸಿನವರು ಯುವರಾಜರವರಿಗೆ ಹಾರಾ ತುರಾಯಿಗಳನ್ನು ಒಪ್ಪಿಸಿದರು. ಅವರು ಅವನ್ನು ಸ್ವೀಕರಿಸಿ ಸಭಿಕರೊಡನೆ ಪ್ರದರ್ಶನಶಾಲೆಯೊಳಕ್ಕೆ ದಯಮಾಡಿ ಪ್ರತಿ ಒಂದು ಕೊಟಡಿಯಲ್ಲೂ ಇರುವ ಪ್ರದರ್ಶನ ವಸ್ತುಗಳನ್ನು ಬಹು ಉತ್ಸಾಹದಿಂದ ನೋಡಿ, ಅವುಗಳ ಪೂರ್ವೋತ್ತರವನ್ನು ಕಮಿಟಿ ಪ್ರೆಸಿಡೆಂಟರಿಂದಲೂ ಸೆಕ್ರೆಟರಿಯವರೇ ಮುಂತಾದವರಿಂದಲೂ ತಿಳಿದು ಸಂತೋಷಪಟ್ಟರು. ಅವರು ಎಲವನ್ನೂ ನೋಡಿಕೊಂಡು ಹೋಗುವುದಕ್ಕೆ ಸುಮಾರು ಎರಡು ಗಂಟೆ ಹೊತ್ತು ಹಿಡಿಯಿತು.

ಈ ತಿಂಗಳು 9 ನೇ ತಾ. ಶುಕ್ರವಾರದ ತನಕ ಪ್ರದರ್ಶನಶಾಲೆಯು ತೆರೆಯಲ್ಪಟ್ಟಿರುತ್ತದೆ. ತಾ. 6 ನೇ ಸೋಮವಾರ ದೇಶೀಯ ಸ್ತ್ರೀಯರನ್ನು ಪ್ರದರ್ಶನದೊಳಕ್ಕೆ ಬಿಡತಕ್ಕದ್ದೆಂದೂ, ಈ ದಿನ ಪ್ರಜಾಪ್ರತಿನಿಧಿಗಳು ಪ್ರದರ್ಶನವನ್ನು ಹೋಗಿ ನೋಡತಕ್ಕದ್ದೆಂದೂ ನಿಷ್ಕರ್ಷೆಯಾಗಿದೆ. ಬಹುಮಾನಗಳ ಹಂಚಿಕೆ ಯಾವಾಗಲೋ ಇನ್ನೂ ನಿರ್ಣಯವಾಗಲಿಲ್ಲ.

ಬಾತ್ಮಿದಾರರಿಗೆ ನೋಟೀಸ್.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಮೈಸೂರು ಟಿ ಬಾಕಪ್ಪ.—ನಿಮ್ಮ ಬಾತ್ಮಿಯನ್ನು ಪ್ರಕಟಿಸೋಣದರಿಂದ ಪ್ರಯೋಜನವೇನೂ ಕಾಣುವುದಿಲ್ಲ.

ಪ್ರತ್ಯಕ್ಷದರ್ಶಿ, ಕೋಲೀನ್‌ಪೇಟೆ.—ನಿಮ್ಮ ಆಕ್ಷೇಪಣೆಯನ್ನು ಜನರಲ್ ಇನ್‌ಸ್ಪೆಕ್ಟರಿಗೆ ತಿಳಿಸಿದರೆ ಅವರು ತನಿಖೆಯಿಂದ ಕ್ರಮಪಡಿಸುವರು.

ಖಂಡಿತವಾದಿ, ನೊಣಬ ತಾ|| ಚಂದ್ರಗುತ್ತಿ.—ಆ ಮುಖಂಡರಿಂದ ಪ್ರಜೆಗಳಿಗೆ ಅಷ್ಟು ಕಷ್ಟನಷ್ಟಗಳಾಗುತ್ತಿದ್ದರೆ ಆ ಸಂಗತಿಗಳನ್ನು ಸರ್ಕಾರದವರಿಗೆ ದೃಷ್ಟಾಂತ ಸಹಿತ ತಿಳಿಸಬಹುದು.

ಬಾಲಸಿಂಗ್, ತುಮಕೂರು.—ಅಲ್ಪ ಕ್ರಯದ ಸಾಮಾನು ತರಿಸಿ ನಷ್ಟಪಟ್ಟೆವೆಂದು ಆಕ್ಷೇಪಣೆಮಾಡಿದರೆ ಅದಕ್ಕೆ ನಾವು ಜವಾಬ್ದಾರರಾಗಲಾರೆವು. ಬೆಲೆಗೆ ತಕ್ಕ ಪದಾರ್ಥ ದೊರಕುವುದೆಂದು ನಾವು ಹೇಳಬೇಕಾದದ್ದಿಲ್ಲ.

ಕೃತಜ್ಞ, ಬಡಚೌಡನಹಳ್ಳಿ.—ಯುದ್ಧ ಸಮಾಚಾರಗಳ ವಿಷಯದಲ್ಲಿ ಆ ರೀತಿ ಆರೋಪಣೆಯುಳ್ಳ ಭಾಷೆಗಳನ್ನಾಡುವುದು ಸಭ್ಯ ಪ್ರಜೆಗಳ ಧರ್ಮವಲ್ಲ. ಇಂಗ್ಲಿಷ್ ಪ್ರಜೆಗಳು ಕೂಡ ಸರ್ಕಾರದವರು ಪ್ರಕಟಮಾಡುವ ಸುದ್ದಿಗಳನ್ನು ಓದಿ ತೃಪ್ತರಾಗಿದಾರೆ. ಸರ್ಕಾರದವರು ತಿಳಿಸುವ ವರ್ತಮಾನಗಳೇ ಬ್ರಿಟಿಷ್ ಸಾಮ್ರಾಜ್ಯದಲ್ಲೆಲ್ಲಾ ಪ್ರಕಟವಾಗುತ್ತಿರುವವು. ನಾವೂ ಅವುಗಳನ್ನೇ ಕ್ರೋಢೀಕರಿಸಿ ವಾಚಕರಿಗೆ ಸಮಂಜಸವಾಗಿ ಅರ್ಥವಾಗುವಂತೆ ತಿಳಿಸುತ್ತೇವೆ.—ಎಡಿ.]

ಕರೆಸ್‌ಪಾಂಡೆನ್ಸ್.

ಮೈಸೂರು ಸಿಟಿಯ ಸಳ್ಳೀ ಮಠಗಳ ಗ್ರಾಂಟು.

ಅಯ್ಯಾ,—ಕಳೆದ ವಾರ ತಮ್ಮ ಪತ್ರಿಕೆಯ ಮೈಸೂರು ಸಿಟಿ ಮ್ಯುನಿಸಿಪಲ್ ಮಿಾಟಿಂಗಿನಲ್ಲಿ ಮೈಸೂರಲ್ಲಿರುವ ಕೆಲವು ಪಳ್ಳೀ ಮಠಗಳಿಗೆ ಕೊಡತಕ್ಕ ಗ್ರಾಂಟನ್ನು ವಜಾ ಮಾಡಿ ಗರಲ್ಸ್ ಸ್ಕೂಲು ಉಪಾಧ್ಯಾಯಿನಿಯರುಗಳಿಗೆ ಕೊಡುವಂತೆಯೂ ಮತ್ತು ಉಪಾಧ್ಯಾಯರಿಗೆ ಬಡತಿ ಮಾಡುವಂತೆಯೂ ತೀರ್ಮಾನವಾಯಿತೆಂದು ಪ್ರಕಟಿಸಿರುವುದನ್ನು ನೋಡಿ ಬಹಳ ವ್ಯಾಕುಲ ಪಡುತ್ತೇನೆ. ಗ್ರಾಂಟ್ ಆರಂಭವಾದ ಲಾಗಾಯ್ತು ಅಂದರೆ 1898 ನೇ ಇಸವಿಯಿಂದ ಇದುವರೆವಿಗೂ ಬಡ ಮಾಸ್ತರುಗಳ ವಿಚಾರವನ್ನೇ ಮನಸ್ಸಿಗೇ ತಂದುಕೊಳ್ಳದೆ, ಇವರುಗಳ ತಾಪತ್ರಯ ಜಾಸ್ತಿಯಾಗಿ ಇಲಾಖಾ ಪ್ರೆಸಿಡೆಂಟರಿಗೂ ಮತ್ತು ಮ್ಯುನಿಸಿಪಲ್ ಇಲಾಖೆಗೂ ಅರ್ಜಿ ಗುಜರಾಯಿಸಿಕೊಂಡದ್ದಕ್ಕೆ ಗೌರ್ನಮೆಂಟಿಗೆ ಸಿಫಾರಸು ಮಾಡಲ್ಪಟ್ಟಿದೆ ಎಂದೂ, ಹುಕುಂ ಬಂದ ಕೂಡಲೆ ಅವಶ್ಯವಾದ ಏರ್ಪಾಡು ಮಾಡಲ್ಪಡುವುದಾಗಿಯೂ ಇಂದಾರಸು ಅಪ್ಪಣೆ ಆಯಿತು. ಮ್ಯುನಿಸಿಪಾಲಿಟಿಯವರು ಕೊಡತಕ್ಕ ಗ್ರಾಂಟಿನಿಂದಲೇ ಸ್ಕೂಲ್ ಸ್ಥಳಕ್ಕೆ ಬಾಡಿಗೆ ಮತ್ತು ವಾಸಮಾಡತಕ್ಕ ಮನೆಯ ಬಾಡಿಗೆಯೂ ಅಲ್ಲದೆ ಜೀವಿಷ್ಯವೂ ಆಗಬೇಕು. ಹೀಗಿರುವಲ್ಲಿ ಈ ಬಡ ಮಾಸ್ತರುಗಳ ಗ್ರಾಂಟನ್ನೇ ವಜಾ ಮಾಡಿ ಗರಲ್ಸ್ ಸ್ಕೂಲಿಗೆ ಕೊಡಬೇಕೇ? ಹಾಗೆ ವಜಾ ಮಾಡಿಬಿಟ್ಟರೆ ಮುಂದೆ ಇವರುಗಳ ಗತಿ ಯೇನು? ಎಂಬೀ ವಿಚಾರಗಳನ್ನು ಕಮಿಟಿ ಪ್ರೆಸಿಡೆಂಟರೂ, ಮ್ಯುನಿಸಿಪಲ್ ಇಲಾಖೆಯವರೂ ಮತ್ತು ಕಮಿಟಿ ಮೆಂಬರುಗಳೂ ಪರ್ಯಾಲೋಚಿಸಿ, ಇವರುಗಳ ಜೀವನಕ್ಕೆ ಕುಂದುಕ ಬಾರದಂತೆ ಕಾಪಾಡುವರೆಂದು ಪ್ರಾರ್ಥನೆ.

ತಾ. 26-9-14. ಬಡಮಾಸ್ತರುಗಳ ಹಿತಚಿಂತಕ.

ಲಕ್ಕುವಳ್ಳಿ ವಿಚಾರಗಳು.

ಅಯ್ಯಾ,—ತರಿಕೆರೆ ತಾಲ್ಲೂಕು ಲಕ್ಕುವಳ್ಳಿ ಎಂಬ ಗ್ರಾಮದಲ್ಲಿ ಒಂದು ಮುಸಾಫರ್‌ಖಾನೆ ಇಲ್ಲದೆ ಬಂದ ಪರಸ್ಥಳ ಜನಗಳು ಉಳಿಯಲು ಬಹಳ ತೊಂದರೆಯಾಗಿ ಸಾಲು ಮರಗಳ ಕೆಳಗೆ ಉಳುಕೊಂಡು ಬಹಳ ತೊಂದರೆ ಪಟ್ಟುಕೊಂಡು ಹೋಗುತ್ತಾ ಇದಾರೆ. ಈ ಗ್ರಾಮದಲ್ಲಿ ಮುಸಾಫರ್ ಜನಗಳು ಉಳಿಯಲು ತೊಂದರೆಯಾಗಿವೆ ಎಂದು ತಿಳಿದು ಲಕ್ಕುವಳ್ಳಿ ಕಂಟ್ರಾಕ್ಟ್‌ದಾರ್ ಮ|| ಕೃಷ್ಣಸ್ವಾಮಿಪಿಳ್ಳೆ ಎಂಬುವರು ಇಲ್ಲಿದ್ದ ಹಳೇ ಪೋಲೀಸ್ ಸ್ಟೇಷನ್ನನ್ನು ಸರ್ಕಾರದಿಂದ ಕ್ರಯಕ್ಕೆ ಪಡೆದುಕೊಂಡು ಧರ್ಮಕ್ಕೋಸ್ಕರ ಬಿಡುವಂತೆ ಹೇಳಿ ಕಾಲವಾದರು. ನಂತರ ಅವರ ಪತ್ನಿಯವರು ಅವರ ಇಷ್ಟದಂತೆಯೇ ಬಂದ ಮುಸಾಫರ್ ಜನಗಳಿಗೆ ಉಳಿಯಲು ಧರ್ಮಕ್ಕೋಸ್ಕರ ಬಿಡುವಂತೆ ಸರ್ಕಾರಕ್ಕೆ ವಹಿಸಿ ಈಗ 6-8 ವರ್ಷ ಕಾಲವಾದಾಗ್ಯೂ ಅದನ್ನು ರಿಪೇರಿ ವಗೈರೆ ಯಾವದೂ ಮಾಡದೆ ಹಾಗೆಯೇ ಬಿಟ್ಟಿರುತ್ತಾರಲ್ಲದೆ, ಅದರಲ್ಲಿ ಕೆಲವು ಜನಗಳು ಸ್ವಂತ ಮನೆ ಮಾಡಿಕೊಂಡು ವಾಸವಾಗಿರುತ್ತಾರೆ. ಈಗಲಾದರೂ ದಯಾಳುಗಳಾದ ಸರ್ಕಾರದವರು ಇದರ ಮೇಲೆ ನಿಗಾ ಕೊಟ್ಟು ಬಂದ ಮುಸಾಫರ್ ಜನಗಳಿಗೆ ಉಳಿಯಲು ಅನುಕೂಲ ಮಾಡಿಕೊಟ್ಟಾರೆಂದು ಹಾರೈಸುತ್ತೇನೆ.

ಲಕ್ಕುವಳ್ಳಿ ರೇಂಜಿನಲ್ಲಿ ವರ್ಷೇ ವರ್ಷವೂ ನಾಟಾ ಕಳುವು ಕೇಸುಗಳು ಸಿಕ್ಕುತ್ತಲೇ ಇದೆ. ಅದರ ವಿಲೇವಾರಿ ಸರ್ಕಾರದವರು ಏನು ಮಾಡುತ್ತಾರೋ ತಿಳಿಯುವದೇ ಇಲ್ಲ. ಅಲ್ಲದೆ ಈಗ 2-3 ದಿನಗಳ ಲಾಗಾಯ್ತು ಇದೇ ಲಕ್ಕುವಳ್ಳಿ ಹೋಬಳಿಗೆ ಸೇರಿದ ಕರಕೂಚಿ ಎಂಬ ಗ್ರಾಮದಲ್ಲಿ ನಾಟಾಗಳನ್ನು ಕಳುವಿನಿಂದ ತಂದಿರುತ್ತಾರೆಂದು ರೇಂಜರೂ, ಫಾರೆಸ್ಟರೂ ಆನೇ ಸಮೇತ ಹೋಗಿ ತಲಾಷ್ ಮಾಡುತ್ತಾ ಇದಾರೆ. ಇದರ ವಿಲೇವಾರಿ ಮುಂದೆ ಏನಾಗುತ್ತವೋ ನೋಡಬೇಕು.

ನಮ್ಮ ವಾಚಕ.

ಪೋಸ್ಟಿನವರ ಅಕ್ರಮಗಳು.

ಅಯ್ಯಾ,—ನೀವು ಕಳುಹಿಸುವ ಪೇಪರುಗಳು ನಮಗೆ ಸರಿಯಾಗಿ ಕಾಲಕಾಲಕ್ಕೆ ತಲಪುವುದಿಲ್ಲ. ನಮಗೆ ಕಾಗದ ತಂದು ಕೊಡುವವನನ್ನು ಕೇಳಿದರೆ ಅವರೇ ಸರಿಯಾಗಿ ಕಳುಹಿಸುವುದಿಲ್ಲವೆಂದು ಹೇಳುತ್ತಾನೆ. ಮತ್ತು ಹತ್ತು ಹನ್ನೆರಡು ದಿನಗಳಿಗೊಂದು ಪೇಪರನ್ನೂ, ಒಂದಾವರ್ತಿ ಎರಡು ಪೇಪರುಗಳನ್ನೂ ತಂದುಕೊಡುವುದಲ್ಲದೆ, ನಮಗೆ ಬರತಕ್ಕ ಪೇಪರುಗಳ ಪೈಕಿ ಒಂದು ಪತ್ರಿಕೆಯೇ ಬಂದಿರುವುದಿಲ್ಲ. ಮತ್ತು ನೀವು ಕಳುಹಿಸುವ ಪತ್ರಿಕೆಯನ್ನು ಒಡೆದು ಓದಿಕೊಂಡು ಇಟ್ಟುಕೊಂಡು ತಂದು ಕೊಡುತ್ತಾನೆ. ಆದ್ದರಿಂದ ನೀವು ಇನ್ನು ಮೇಲೆ ದಯವಿಟ್ಟು ಮುಂದಿನ ವಾರ ಕಳುಹಿಸುವ ಪೇಪರಿನೊಡನೆ ನಮಗೆ ಪೇಪರು ಯಾವ ವಾರ ತಲಪಬೇಕೆಂಬುದನ್ನು ಗುರ್ತಿಸಿ ಕಳುಹಿಸಿಕೊಡಿ. ಮತ್ತು ಸೆಪ್ಟಂಬರ್ ಹತ್ತನೆಯ ತಾರೀಖಿನ ಪೇಪರನ್ನು ಅದೇ ಮಾಹೆ ಇಪ್ಪತ್ತರಲ್ಲಿ ತಲುಪಿಸಿದಾರೆ. ಆದ್ದರಿಂದ ನಮಗೆ ಕಾಲಕಾಲಕ್ಕೆ ಸರಿಯಾಗಿ ತಲಪುವಂತೆ ಮಾಡಿಕೊಡಬೇಕು.

21-9-1914.

ಯಡತೊರೆ ತಾಲ್ಲೂಕ್ ಮಿರ್ಲೆ ಹೋಬಳಿ ಹನುಮನ ಹಳ್ಳಿಯಲ್ಲಿರುವ ಚನುವಿರಾಚಾರ್ರ್ಯ ಉರುಫ್ ಶಾಮಣ್ಣಾಚಾರ್ರ್ಯ.

[ಈ ರೀತಿ ಆಗಾಗ್ಗೆ ಚಂದಾದಾರರು ಆಕ್ಷೇಪಣೆ ಮಾಡಿ ಕಾಗದ ಬರೆಯುವರು. ಗ್ರಾಮಾಂತರಗಳಲ್ಲಿರುವ ನಮ್ಮ ಚಂದಾದಾರರಿಗೆ ಪೋಸ್ಟ್ ಜವಾನರೇ ಮುಂತಾದವರು ಅನನುಕೂಲ ಪಡಿಸುತ್ತಾರೆಂದು ತಿಳಿಸಲು ವಿಷಾದಪಡುತ್ತೇವೆ. ಮೇಲ್ಪಟ್ಟ ಅಧಿಕಾರಿಗಳು ಇಂಥಾ ಅಕ್ರಮಗಳನ್ನು ದರ್ಪವಿಟ್ಟು ಅಡಗಿಸದಿದ್ದರೆ ನಮ್ಮ ಪತ್ರಿಕೆಯ ಪ್ರಚಾರಕ್ಕೂ ಹೆಸರಿಗೂ ಕುಂದಕವಾಗುತ್ತದೆ. ನಾವು ಪ್ರತಿ ಗುರುವಾರವೂ ಬೆಳಗಿನ ಮೆಯಿಲಿಗೆ ಸರಿಯಾಗಿ ನಮ್ಮ ಚಂದಾದಾರರಿಗೂ ಏಜಂಟರಿಗೂ ಪತ್ರಿಕೆಗಳನ್ನು ರವಾನೆ ಮಾಡುತ್ತಿದೇವೆ. ವಿಳಾಸದಾರರಿಗೆ ಸಕಾಲದಲ್ಲಿ ಸಾದರ ಮಾಡುವ ಜವಾಬ್ದಾರಿಯು ಪೋಸ್ಟಿನವರಿಗೆ ಸೇರಿದ್ದು. ಪತ್ರಿಕೆಗಳು ಒಡೆದಾಗಲಿ, ಕಾಲ ವಿಳಂಬ ಆಗಲಿ ತಲುಪಿದರೆ ಅಂಥಾ ಚಂದಾದಾರರು ಅಂಥಾ ಪತ್ರಿಕೆಯ ಕವರನ್ನು ಇಟ್ಟು ಪೋಸ್ಟ್ ಆಫೀಸುಗಳ ಸೂಪರಿಂಟೆಂಟರಿಗೆ ಕಾಗದ ಬರೆದರೆ ಅವರು ತನಿಖೆಯಿಂದ ಕ್ರಮಪಡಿಸುತ್ತಾರೆ.—ಎಡಿ.]

ಕೋಲೀನ್‌ಪೇಟೆ ಬಾತ್ಮಿಗೆ ಸಮಾಧಾನ.

ಅಯ್ಯಾ,—ಹಿಂದಿನ ವಾರದ ಪತ್ರಿಕೆಯಲ್ಲಿ ಯಾರೋ ಬುದ್ಧಿವಂತರು ವಿದ್ಯೆ ಹೀನಸ್ಥಿತಿಗೆ ಬಂದಿದೆ ಎಂದು ಪ್ರಚುರಪಡಿಸಿದ್ದರು. ಈ ಊರಿನ ವಿದ್ಯಾಭ್ಯಾಸವು ಹೀನಸ್ಥಿತಿಗೆ ಬಂದಿದೆಯೋ ಉತ್ತಮಸ್ಥಿತಿಗೆ ಬಂದಿದೆಯೋ ಈ ಮೆಡ್ಮಾಸ್ತರು ಬರುವುದಕ್ಕಿಂತ ಮೊದಲಿನಿಂದಿರುವ ಜನರನ್ನು ವಿಚಾರಿಸಿದ್ದಲ್ಲಿ ಚೆನ್ನಾಗಿ

...ತ್ತಿದ್ದರು. ಕನ್ನಡಾ ಸ್ಕೂಲಿನಲ್ಲಿ 200 ಓದುತ್ತಿದ್ದರು. ಇಂಗ್ಲಿಷ್ ಸ್ಕೂಲಿಗೆ 18 ಮಂದಿ ಮಾತ್ರ ಬರುತ್ತಾರೆಂದು ಬರೆದಿತ್ತು. ಇದು ನಿಜವಾದ ಸಂಗತಿಯೇ ಹೌದು. 3, 4, 5 ನೇ ತರಗತಿಗಳ ಹುಡುಗರು ಹೋಗಲು ಅನುಕೂಲವೇ ... ಮೇಲ್ಕಂಡ ತರಗತಿಗಳಿಗೆ ಉಭಯ ಕಾಲವೂ ಸ್ಕೂಲಿರುವುದರಿಂದ ಅವರು ಹೋಗಲು ಅನುಕೂಲವಿಲ್ಲ. ಮೇಲೆ ಹೇಳಿದ ಮೂರು ತರಗತಿಗಳಲ್ಲಿ ಸುಮಾರು ... ಮಂದಿ ಓದುತ್ತಿರಬಹುದು. ಇವರಲ್ಲಿ 32 ಮಂದಿ ಇಂಗ್ಲೀಷ್ ಸ್ಕೂಲಿಗೆ ಹೋಗುವವರು. ...100 ಮಂದಿಗೆ 80 ಮಂದಿ ಇಂಗ್ಲೀಷ್ ಕಲಿಯುವವರಾದ... ಉಪಾಧ್ಯಾಯರು ಇಂಗ್ಲೀಷ್ ಕಲಿಯಕೂಡದೆಂದು ಉಪದೇಶಿಸಿದ್ದಲ್ಲಿ ... ಮಂದಿಗೆ 32 ಮಂದಿ ಇಂಗ್ಲೀಷ್ ಸ್ಕೂಲಿಗೆ ಹೋಗುತ್ತಿದ್ದರೇ? ಇದು ಹಾ... ಸರಸ್ವತಿ ಪೂಜೆಗೆ 3 ಕಾಸು ಕೊಟ್ಟವರು ಪತ್ರಿಕೆಗಳಲ್ಲೆಲ್ಲಾ ತಿಳಿಸಿದರೆ ... ಎಷ್ಟರ ಮಟ್ಟಿಗೆ ಉಪಾಧ್ಯಾಯರು ಹೇಳಿದಂತೆ ತಮ್ಮ ಮಕ್ಕಳನ್ನು ತರ... ಮಾಡುವರು? ಮತ್ತು 5 ನೇ ತರಗತಿಯಲ್ಲಿ ಸುಮಾರು 20 ಮಂದಿ ಓದುತ್ತಿರಬಹುದು. ಇವರಲ್ಲಿ 16 ಮಂದಿ ಇಂಗ್ಲಿಷ್ ಸ್ಕೂಲಿನಲ್ಲಿ ಓದುತ್ತಾರೆ. ...ಗಿರುವಾಗ ಉಪಾಧ್ಯಾಯರು ಇಂಗ್ಲಿಷ್ ಓದಕೂಡದೆಂದು ಹೇಳುವ ... ಎಷ್ಟರ ಮಟ್ಟಿಗೆ ನಿಜವಾದೀತು? ಇಲ್ಲಿನ ಹೆಡ್ಮಾಸ್ಟರು ವಿದ್ಯಾರ್ಥಿಗಳಿಗೆ ದೇವರಲ್ಲಿ ಭಕ್ತಿಯುಂಟಾಗಲೆಂದು ವರ್ಷಕ್ಕೆ ಎರಡಾವರ್ತಿ ನಡಿಸುವ ಸರಸ್ವತಿ ಮತ್ತು ಗಣೇಶನ ಮಂಗಳಾರತಿಗಳಿಗೆ ಯಾರೋ ಉಪಾಧ್ಯಾಯರು ... ಸ್ವಂತ ಉಪಯೋಗಕ್ಕೆ ನಡೆಸುತ್ತಾರೆಂದು ಬರೆದಿರುತ್ತಾರೆ ಮತ್ತು ಹು...ದಿಂದ ರೂಪಾಯಿ ಗಟ್ಟಿ ವಸೂಲ್ಮಾಡಿದರೆಂದು ಬರೆದಿರುತ್ತಾರೆ. ಇದು ಎಷ್ಟ ಮಟ್ಟಿಗೆ ನಿಜವೆನ್ನುವುದನ್ನು ಕೊಟ್ಟವರನ್ನು ಕೇಳಬೇಕು. ಹೀಗೆ ಇಲ್ಲದ ...ಗಳನ್ನು ಪತ್ರಿಕೆಗಳಲ್ಲಿ ಪ್ರಚುರಪಡಿಸುವದರಿಂದ ಹುಡುಗರಿಗೆ ಉಪಾಧ್ಯಾಯರಲ್ಲಿಯೂ ಮತ್ತು ದೇವರಲ್ಲಿಯೂ ಭಕ್ತಿ ತಪ್ಪಿ ಕೊನೆಗೆ ಅವರು ಉಪಾಧ್ಯಾಯರಲ್ಲಿ ನಡಕೊಳ್ಳುವಂತೆ ತಮ್ಮ ತಂದೆತಾಯಿಗಳಲ್ಲಿ ನಡೆದುಕೊಳ್ಳಲು ...ನ ವಿಧವಾದ ಆಶಂಕವಿರುವುದಿಲ್ಲ. ಪತ್ರಿಕೆಗಳಲ್ಲಿ ಪ್ರಚುರ ಪಡಿಸುವವರು ವಿದ್ಯಾರ್ಥಿಗಳಿಗೆ ತೊಂದರೆ ಪಡಿಸಬೇಕೆಂಬುದೇ ಹೊರತು ಮತ್ತೆ ಯಾವ ಅಭಿಪ್ರಾಯದಿಂದಲೂ ಬರೆಯುತ್ತಾ ಇಲ್ಲ. ದುರ್ಗುಣವುಳ್ಳವನು ಎಲ್ಲರಲ್ಲಿಯೂ ದುರ್ಗುಣವನ್ನು ಹುಡುಕುವನು ಎನ್ನುವುದಕ್ಕೆ ಸರಿಯಾಗಿ ಎಲ್ಲರೂ ಕನ್ನಡ ಸ್ಕೂಲಿನ ವಿಚಾರವಾಗಿ ಆಕ್ಷೇಪಣೆ ಬರೆಯುವರೇ ಹೊರ್ತು ಇದುವರೆಗೆ ಅದರ ಅಭಿವೃದ್ಧಿ ಮತ್ತು ವಿದ್ಯಾಭ್ಯಾಸದ ವಿಚಾರವಾಗಿಯೂ ಯಾರು ತಾನೆ ಬರೆಯುತ್ತಾರೆ?

ಚೆಂಡಾಡಾಳ್.

[ಹೀಗೆ ಸರಸ್ವತಿ ಮತ್ತು ಗಣೇಶನ ಪೂಜೆಗೆ ವಿದ್ಯಾರ್ಥಿಗಳಿಂದ ದುಡ್ಡು ತರಿಸಿಕೊಳ್ಳುವದಕ್ಕೆ ವಿದ್ಯಾ ಇಲಾಖೆಯ ಅಧಿಕಾರಿಗಳು ಅಪ್ಪಣೆ ಕೊಟ್ಟಿರುವರೋ?—ಎಡಿ.]

ಇದೇನು?

ಅಯ್ಯಾ,—ಮೈಸೂರಿನಲ್ಲಿರುವ ಲ್ಯಾಕ್ ಸ್ಟೋಕ್ ಬಜಾರು ಸಾಧಾರಣ ಸ್ಥಳವಲ್ಲ. ಮೊನ್ನೆ 9 ನೆಯ ತಾ. ರಾತ್ರಿ, 10 ನೆಯ ತಾ. ಮಧ್ಯಾಹ್ನಗಳಲ್ಲಿ ಅಲ್ಲಿ ಕಳ್ಳತನ. ಅಲ್ಲೇ ಒಂದು ಕೊಟಡಿಯಲ್ಲಿ ಸುಮಾರು 5-6 ವರ್ಷಗಳಿಂದ ವಾಸಮಾಡಿಕೊಂಡಿರುವ ಮ. ಶೆಟ್ಟಿ ರಾಘವೇಂದ್ರಾಚಾರ್ಯರವರ ಕೊಟಡಿಗೆ 9 ನೆಯ ತಾ. ರಾತ್ರಿ ಮೈಸೂರು ಬೆಳ್ಳಿಕಟ್ಟೆಗೆ ವಿನಾಸಲ್‌ನಲ್ಲಿ ವಾಸಮಾಡುವ ಪೊಲೀಸ್ ಸಾರ್ಜಂಟು ನರಸಿಂಹಯ್ಯನೆಂಬುವನ ಮಗ ನರಸಿಂಹನೆಂಬ ಹದಿಮೂರು ವರ್ಷ ವಯಸ್ಸಿನ ಹುಡುಗನು ಬೀಗ ಮುರಿದು ಒಳಗೆ ನುಗ್ಗಿ ಸುಮಾರು 100 ರೂಪಾಯಿ ಬಾಳುವ ಭಾರಿ ಸಾಮಾನುಗಳನ್ನು ಮನೆಗೆ ಸಾಗಿಸಿ ಭದ್ರಪಡಿಸಿದನು. ಅದೇ ಹುಡುಗನು ಮಾರುದಿನ ಅನ್ನದಾನಿ ಎಂಬ ಮತ್ತೊಬ್ಬ ಹುಡುಗನ ಸಹಾಯದಿಂದ ಅದೇ ಕೊಟಡಿಯ ಬೀಗವನ್ನು ಮಧ್ಯಾಹ್ನ 11-40 ರಿಂದ 12-30 ರೊಳಗಾಗಿಯೇ ಮುರಿದು ಅಲ್ಲಿದ್ದ ಒಂದು ದೊಡ್ಡ ಟ್ರಂಕನ್ನೂ ಒಂದು ಪಟವನ್ನೂ ಸಾಗಿಸಿದನು. ಕಳುವುಮಾಡುವುದರಲ್ಲಿ ಚೆನ್ನಾಗಿ ತರಬೇತಾಗದ ಹುಡುಗನ ಸಹವಾಸ ಕೆಟ್ಟದ್ದು, ಅದರಿಂದ ಮಧ್ಯಾಹ್ನವೇ ಸಿಕ್ಕಿಬಿದ್ದರು. ಪೊಲೀಸರ ಶ್ರಮ ಮಾಡಿದ್ದೂ ಆಯ್ತು. ಪೊಲೀಸರು ಸಾಮಾನುಗಳನ್ನು ಹುಡುಕಲು ಕಷ್ಟಪಡಬೇಕಾಗಲೇ ಇಲ್ಲ. ಪೊಲೀಸ್ ನೌಕರಿಯಲ್ಲಿರುವವರಿಗೆ ನರರ ಪ್ರವೃತ್ತಿ ಮನಸ್ಸಿಗೆ ಸಮನವಲ್ಲವೆ. ಪೊ. ಸಾ. ನರಸಿಂಹಯ್ಯನು ಮಗನು ತಂದು ಮನೆಯಲ್ಲಿಟ್ಟಿದ್ದ ಪದಾರ್ಥಗಳನ್ನೆಲ್ಲ ಸದ್ದು ಮಾಡದೆ ಹೊರಗೆ ತಂದಿಟ್ಟನು. ಪೊಲೀಸರ ಪಾಡೂ ಆಯ್ತು. ಕೇಸ್ ಎಂಟ್ರಿ ಹೋಯ್ತು. ಪೊ. ಸಾ. ಮಗನಿಗೆ ಏಟು, ಅನ್ನದಾನಿ ಎಂಬ ಹುಡುಗನಿಗೆ ಎರಡು ಏಟುಗಳೂ ಬಿದ್ದುದು ಕೇಸವು ಮುಗಿಯಿತು.

ಹದಿಮೂರು ವರ್ಷದ ಆ ಹುಡುಗನು—ಯಾವನೋ ಒಬ್ಬ ಬ್ರಾಹ್ಮಣನು ಬೀಗ ಒಡೆದು ಸಾಮಾನುಗಳನ್ನು ನನಗೆ ಹೊರಿಸಿಕೊಟ್ಟನು. ಎರಡನೆಯ ಸಾರಿಯೂ ಅದೇ ಬ್ರಾಹ್ಮಣನು ಬಂದು, ಹಾಕಿದ್ದ ಬಲವಾದ ಬೀಗವನ್ನು ಒಡೆದುಕೊಟ್ಟನು. ನಾನು ಟ್ರಂಕನ್ನು ಒಬ್ಬ ಕೂಲಿಯವನ ಕೈಲಿ ಮನೆಗೆ ಹೊರಿಸಿಕೊಂಡು ಹೋಗಿ ನನ್ನ ಅಮ್ಮನ ಕೈಲಿ ಎರಡು ದುಡ್ಡು ಕೂಲಿ ಕೊಡಿಸಿ ಭದ್ರಪಡಿಸಿದೆನು. ಕಳುವಿನ ಮಾಲೆಂದು ಕಾಣೆ ಎಂದು ಹೇಳುತ್ತಾನೆ. ಪಕ್ಕಾ ಹಗಲು ಮಧ್ಯಾಹ್ನದಲ್ಲಿ ಯಾವನೋ ಮನುಷ್ಯನಾದ ಪರೋಪಕಾರಿಯು ಬಂದು ಬೀಗವನ್ನು ಒಡೆದು ಸಾಮಾನನ್ನು ಹೊರಿಸಿಕೊಟ್ಟು ತೆಗೆದುಕೊಂಡು ಹೋಗೆಂದು ಹೇಳಿಬಿಟ್ಟನಲ್ಲ, ಅವನು ಬ್ರಾಹ್ಮಣನಂತೆ! ತೆಗೆದುಕೊಂಡುಹೋಗುವದರಲ್ಲಿ ಸಹಾಯಮಾಡಿದ ಕಟ್ಟಾ ಕಳ್ಳ ಹುಡುಗನಿಗೆ ಎರಡೇಟಿನ ಶಿಕ್ಷೆ. ಕದ್ದುಕೊಂಡು ಬಂದ ಸಾಮಾನುಗಳನ್ನು ಮನೆಯಲ್ಲಿ ಭದ್ರವಾಗಿಟ್ಟುಕೊಂಡ ತಾಯಿ ತಂದೆಗಳಿಗೆ ಅಭಿನಂದನವೋ? ನಿಷ್ಪಕ್ಷಪಾತ ಅವರಿಗೆ ಈ ಸಂಗತಿ ತಿಳಿಯದೋ? ಎರಡು ಸಾರಿ ಬೀಗ ಮುರಿದು ಸಾಮಾನುಗಳನ್ನು ದಾನಮಾಡಿ ಹೊರಟುಹೋದ ಬ್ರಾಹ್ಮಣನಿಗೆ ಭಾಗ್ಯೋದಯವೋ? ಮುನ್ಸಿ ಪ್ರಜೆಗಳ ಕಾವಲಿಗೆ ಇರುವ ಪೊಲೀಸರೇ ಈ ರೀತಿ ಪ್ರೋತ್ಸಾಹ ಕೊಡುವುದಾದರೆ ಬದುಕುವುದೆಂತು? ಯಾವಾಗಲೂ ಮೊದಲನೆಯ ಶಿಕ್ಷೆಯು ಬಲವಾಗಿದ್ದರೆ ಎರಡನೆಯ ಅಕೃತ್ಯಕ್ಕೆ ಅವಕಾಶ ಇರುತ್ತದು. ನರಸಿಂಹನೆಂಬ ಹುಡುಗನೇ ನಿಜವಾಗಿಯೂ ಬೀಗ ಮುರಿದು ಸಾಮಾನನ್ನು ಹೊತ್ತಿದ್ದರೆ, ನಿಜವಾಗಿಯೂ ಅವನ ತಂದೆಯು ಅವನ್ನು ಹೊರಗೆ ತಂದು ಕೊಟ್ಟಿದ್ದರೆ, ಈಗಣ ಶಿಕ್ಷೆಯು ಮುಂದೆ ಇಂತಹ ಅನೇಕ ಅಕೃತ್ಯಗಳನ್ನು ನಡಿಸಲು ಪ್ರೋತ್ಸಾಹಕೊಟ್ಟಂತೆಯೇ ಸರಿ. ಪೊ. ಸಾ. ನನ್ನು ತಕ್ಕ ರೀತಿಯಲ್ಲಿ ವಿಚಾರಿಸದೆಹೋದದ್ದು ಪ್ರೋತ್ಸಾಹಗಳನ್ನು ಕೊಟ್ಟಂತೆಯೇ ಸರಿ. ಅವನು ಈ ಕೃತ್ಯಕ್ಕೆ ಸಹಾಯಕನಾಗಿರಬಾರದೇಕೆ? ಅನುಮಾನದ ಪ್ರಶ್ನೆಯುದಿಸದೋ ಅಲ್ಲವೋ? ವಿಚಾರವನ್ನೇಕೆ ಮಾಡಲಿಲ್ಲ? ಈಗಲಾದರೂ ಪೊಲೀಸ್ ಅಧಿಕಾರಿಗಳು ಪುನರ್ವಿಮರ್ಶೆ ಮಾಡಿ ದುಷ್ಟರಿಗೆ ತಕ್ಕ ಶಿಕ್ಷೆ ಮಾಡಿದಲ್ಲಿ ಪ್ರಜಾ ನೆಮ್ಮದಿಗೆ ಭಂಗ ತಪ್ಪದು. ಅನಾಯಕತ್ವದಲ್ಲಿರುವ ಲ್ಯಾಕ್ ಸ್ಟೋಕ್ ಬಜಾರಿನಲ್ಲಿ ಇನ್ನು ಮುಂದೆ ಕಳ್ಳತನಗಳು ನಡೆಯದಂತೆ ಏರ್ಪಡಿಸುವರೆಂದು ನಂಬುವ

ಧರ್ಮಾಭಿಮಾನಿ.

ಉಪಾಧ್ಯಾಯರ ಮೇಲಣ ಆಕ್ಷೇಪಣೆಗೆ ಜವಾಬು.

ಅಯ್ಯಾ,—ತಾ. 10 ನೇ ಗುರುವಾರದ ವೃತ್ತಾಂತ ಪತ್ರಿಕೆಯಲ್ಲಿ ಒಬ್ಬ ವರ್ತಮಾನದಾರರು ಎ. ವಿ. ಸ್ಕೂಲು ಉಪಾಧ್ಯಾಯರುಗಳಿಗೆ ಸರ್ಕಾರದವರು ಸಂಬಳವನ್ನು ಜಾಸ್ತಿ ಕೊಟ್ಟದ್ದಕ್ಕಾಗಿ ಸಂತೋಷವನ್ನು ಹೇಳಿ, ಪ್ರೈವೇಟ್ ಟೀಚಿಂಗು ವಿಚಾರದಲ್ಲಿ ಅಂದರೆ ಅವರ ಜೀವನದ ವಿಚಾರದಲ್ಲಿ ಕೊಂಚ ಅನಾದರವನ್ನು ತೋರಿಸುವದರ ಮೂಲಕ ಎ. ವಿ. ಸ್ಕೂಲು ಉಪಾಧ್ಯಾಯರುಗಳಿಗೆ ತಮ್ಮ ವಿಜ್ಞಾಪನೆಯನ್ನು ಹೇಳಿರುವರು. ಆದರೆ ಆ ವರ್ತಮಾನದಾರರು ಕೊಂಚ ಸಹನೆಯಿಂದ ವಿಚಾರಿಸಿ ತಕ್ಕ ಅನುಭವವನ್ನು ತಿಳಿದು ಬರೆದಂತೆ ತೋರಲಿಲ್ಲ. ಈಗ ನಮ್ಮ ದಯಾಳು ಸರ್ಕಾರದವರು ಎ. ವಿ. ಸ್ಕೂಲು ಉಪಾಧ್ಯಾಯರುಗಳಿಗೆ ಸಂಬಳ ಹೆಚ್ಚಿಸಿದ್ದಕ್ಕಾಗಿ ಸರ್ವರೂ ಬಹಳವಾಗಿ ಕೃತಜ್ಞರಾಗಿರುತ್ತಾರೆ. ಆದರೆ ಲೋವರ್ ಗ್ರೇಡಿನವರಿಗೆ ಅಲ್ಪ ಪ್ರಯೋಜನವಾಗಿರುತ್ತದೆ. ಅದರೊಳಗೂ ಸುಮಾರು 170 ಜನಗಳ ವರಿಗೂ ಮೊದಲಿನ ಹತ್ತು ರೂಪಾಯಿಗಳೇ ಇರುತ್ತವೆಂದು ಹೇಳುತ್ತಾರೆ. ತಾಲ್ಲೂಕು ಎ. ವಿ. ಸ್ಕೂಲುಗಳಲ್ಲಿರತಕ್ಕ ಉಪಾಧ್ಯಾಯರ ಕೊನೇ ದರ್ಜೆಯು 15 ರೂಪಾಯಿಗೆ ಕಡಮೆ ಇಲ್ಲದಂತೆ ಇದ್ದಿದ್ದರೆ ಈಗಿನ ಕಾಲಕ್ಕೆ ಉತ್ತಮವಾಗಿರುತ್ತಿತ್ತೆಂದು ಅನೇಕರು ಭಾವಿಸುತ್ತಾರೆ.

ಈಗಿನ ಕಾಲಸ್ಥಿತಿಯನ್ನು ನೋಡಿದರೆ ಕಳೆದ ವರ್ಷದ ಧಾರಣೆ ಈ ವರ್ಷ ಇರುವುದಿಲ್ಲ; ಪ್ರತಿ ವರ್ಷವೂ ಹೆಚ್ಚುತ್ತಲೇ ಇವೆ. ಪದಾರ್ಥಗಳ ಧಾರಣೆಗಳು ಮೂರರಷ್ಟು, ಕೆಲವು ನಾಲ್ಕರಷ್ಟು ಹೆಚ್ಚಿವೆ. ಈ ಕಾಲಕ್ಕೆ ಒಂದು ಚಿಕ್ಕ ಸಂಸಾರಕ್ಕೆ ಕನಿಷ್ಠ 30 ರೂಪಾಯಿಯಾದರೂ ಬೇಕು. ಈ ಇಲಾಖೆಯ 10-12 ರೂಪಾಯಿ ಸಂಬಳಗಾರರು ಹೆಂಡತಿ, ಮಕ್ಕಳನ್ನು ಕಾಪಾಡುವದು ಹೇಗೆ? ದೇಶಕಾಲಕ್ಕೆ ತಕ್ಕಂಥಾ ಆಹಾರವನ್ನು ಹೊಂದಬೇಕು ಮನೆ ಬಾಡಿಗೆ ಇದರಲ್ಲೇ ಆಗಬೇಕು. ಕೆಲಸವೇನೋ ಗೌರವವಾದದ್ದು. ತಕ್ಕ ಉಡುಪುಗಳನ್ನೇ ಹಾಕಿಕೊಳ್ಳಬೇಕು; ಇಲ್ಲದಿದ್ದರೆ ಈ ಕಾಲದಲ್ಲಿ ಬಹು ವ್ಯಂಗವಾಗಿ ಎಲ್ಲರ ಹೇಳಿಕೆಗೆ ಗುರಿಯಾಗುವರು. ಇಷ್ಟೆಲ್ಲಾ ಸಂಬಳದಲ್ಲಿ ಒದಗಿಸಿಕೊಳ್ಳುವದು ಸಾಧ್ಯವೇ? ಬರತಕ್ಕ ಸಂಬಳವು ಸಂಸಾರಕ್ಕೆ ಸಾಕಾಗದೆ ತಾಪತ್ರಯಗಳಿಗೆ ಒಳಗಾಗುವರು. ಇವರ ಕೆಲಸವು ಸ್ಥಿರಚಿತ್ತದಿಂದ ನಡೆಯುವದೆಂದು ನಂಬಲಾಗುವದಿಲ್ಲ. ಉಪಾಧ್ಯಾಯರುಗಳು ಯಾವ ವಿಧವಾದ ಲಂಚ ರುಸುವತ್ತನ್ನೂ ತೆಗೆದುಕೊಳ್ಳುವವರಲ್ಲ. ಯಾವಾಗಲೂ ನಿರ್ದೋಷಿಗಳಾಗಿದ್ದು, ಪ್ರಪಂಚಕ್ಕೆ ಉಪಕಾರ ಮಾಡುವದರಲ್ಲಿ ನಿರತರಾಗಿರುವರು. ಇವರಿಗೆ ಜೀವನಕ್ಕಾಗುವಷ್ಟು ಸಂಪಾದನೆಯಾದರೂ ಇಲ್ಲದಿದ್ದರೆ ಕೆಲಸ ಹೇಗೆ ಮಾಡಿಯಾರು? ಈಗಿನ ಕಾಲದಲ್ಲಿ ತಂದೆತಾಯಿಗಳು ವಿದ್ಯಾವಂತರಾಗಿರುವದರಿಂದ ಅವರೇ ತಮ್ಮ ಮಕ್ಕಳಿಗೆ ಪಾಠಗಳನ್ನು ಮನೆಯಲ್ಲಿ ಹೇಳಿಕೊಡುವರು; ಅಥವಾ ಒಬ್ಬಿಬ್ಬರು ಕೇವಲ ಧಡ್ಡ ಹುಡುಗರಿದ್ದರೆ ಅವರಿಗೆ ಮಾತ್ರ ಆವಶ್ಯಕ. ಅವರನ್ನು ಹಾಗೇ ಬಿಡಬೇಕೇ?—ಅವರು ತಯಾರಾಗುವದು ಹೇಗೆ? ಸ್ಕೂಲು ಕೆಲಸಗಳಾದ ನಂತರ ವಿರಾಮ ಕಾಲದಲ್ಲಿ ಇನ್ನೂ ನಿಧಾನವಾಗಿ ತಿಳಿಸಿ ಆ ಹುಡುಗನನ್ನು ಇತರ ಬಾಲಕರೊಂದಿಗೆ ಕೂಡುವಂತೆ ಮಾಡಿಕೊಡುವರು. ಈಗಿನ ಉಪಾಧ್ಯಾಯರು ಕೇವಲ ವಿದ್ಯಾವಂತರೂ ಸತ್ಯಸಂಧರೂ ಆಗಿರುವರು; ತಮ್ಮ ಕರ್ತವ್ಯ ಕರ್ಮಗಳನ್ನು ಮಾಡುವದರಲ್ಲಿ ಕೇವಲ ಶ್ರದ್ಧಾಭಕ್ತಿಯುಳ್ಳವರಾಗಿರುವರೆಂದು ಭಾವಿಸಬೇಕಾಗಿದೆ. ಉಪಾಧ್ಯಾಯರುಗಳು ಶ್ರದ್ಧಾಭಕ್ತಿಯಿಂದ ಕೆಲಸಮಾಡುತ್ತಾ ಇರುವದರಿಂದ ಈ ದೇಶದಲ್ಲಿ ಅನೇಕ ಬಾಲಕರು ವಿದ್ಯಾವಂತರಾಗುತ್ತಲೂ, ವರ್ಷ 2-3 ಸಾವಿರ ಗಟ್ಟಲೆ ಪರೀಕ್ಷೆಯಲ್ಲಿ ಪ್ಯಾಸಾಗುತ್ತಲೂ ಇರುವರು. ಪ್ರತಿಯೊಂದು ಹಳ್ಳಿಯಲ್ಲಿಯೂ ಉಪಾಧ್ಯಾಯರುಗಳು ಎಷ್ಟೇ ಕಷ್ಟವಾದರೂ ಸಹಿಸಿಕೊಂಡು ಜನಗಳನ್ನು ತಿದ್ದುವ ಕೆಲಸದಲ್ಲಿ ಬದ್ಧಕಂಕಣರಾಗಿದ್ದಾರೆ. ಬೋಧಕರು ಆರೋಗ್ಯವುಳ್ಳವರೂ, ಶಾಂತಚಿತ್ತರೂ ಆಗಿದ್ದರೆ ಬುದ್ಧಿವಂತಿಕೆಯಿಂದ ಕೆಲಸ ಮಾಡಿ ಜನಗಳ ಏಳಿಗೆಯನ್ನು ಕಾಪಾಡುವರು. ಅದಕ್ಕಾಗಿ ಅವರಿಗೆ ತಕ್ಕ ಆಹಾರ ಪದಾರ್ಥ ಮೊದಲಾದ ಸೌಕರ್ಯಗಳು ಆವಶ್ಯಕ. ಬಾಲಕರು ಚೆನ್ನಾಗಿ ತಯಾರಾದರೆ ದೇಶಾಭಿವೃದ್ಧಿಯಾಗುವದು. ದೇಶ ಕ್ಷೇಮಕ್ಕೆ ಉಪಾಧ್ಯಾಯರೇ ಕಾರಣರು. ಇಂಥಾ ಜವಾಬ್ದಾರಿ ಕಾರ್ಯವನ್ನು ವಹಿಸಿರುವವರಿಗೆ ಕೊರತೆಗಳಿಲ್ಲದಂತೆ ನೋಡಿಕೊಳ್ಳುವವರ್ಯಾರು? ಜನಗಳಲ್ಲವೇ? ಸಂಬಳ ಸಾಲದೆ ಸ್ಕೂಲಿನ ಕೆಲಸವನ್ನು ಲೋಪವಿಲ್ಲದೆ ಮಾಡಿ ವಿರಾಮ ಕಾಲದಲ್ಲಿ 1-2 ರೂಪಾಯಿ ಸಂಪಾದಿಸಿ ಹೊಟ್ಟೆ ಹೊರೆದರೆ ಯಾರಿಗೂ ಕುಂದಕವಿಲ್ಲ. ಇದಕ್ಕಾಗಿ ಅವರನ್ನು ಟೈಲಿಗೆ ಇಡಬಾರದು.

ಉಪಾಧ್ಯಾಯ ಕೆಲಸಕ್ಕೆ ಕೊಂಚ ಗೌರವವನ್ನು ಕೊಡಬೇಕು. ಕೇವಲ ಕೂಲಿ ಕಾರರಿಗಿಂತಲೂ ಕೀಳೆಯಾಗಿ ಎಣಿಸಬಾರದು. ಪೂರ್ವ ಕಾಲದಲ್ಲಿ ಬೋಧಕರನ್ನು ಜನಗಳು ಬಹಳ ಗೌರವಿಸುತ್ತಿದ್ದರು. ಅವರ ಕೆಲಸವೇನೋ? ಬಹು ಕಷ್ಟಕರವಾದದ್ದು. ಬಾಲಕರ ಮನಸ್ಸನ್ನು ತಿದ್ದಿ ಲೋಕದ ವ್ಯವಹಾರಕ್ಕೆ ತಕ್ಕವರನ್ನಾಗಿ ಮಾಡಬೇಕು. ಮಕ್ಕಳನ್ನು ಸನ್ಮಾರ್ಗಕ್ಕೆ ತರಬೇಕು. ಆ ಕಾಲದಲ್ಲಿ ದೇಹಾರೋಗ್ಯವನ್ನು ನೋಡಿಕೊಳ್ಳಬೇಕು. ಇಷ್ಟು ಗೌರವದಲ್ಲಿಯೂ ದಾರಿ ತೋರಿಸಿಕೊಡುವ ಈ ಬೋಧಕರ ವಿಚಾರದಲ್ಲಿ ಮಹನೀಯರುಗಳು ಸಹಾಯ ಮಾಡಬೇಕೇ ಹೊರ್ತು ವಿಚಾರವಿಲ್ಲದೆ ಬರೆಯುವದರಿಂದ ಉಪಾಧ್ಯಾಯರ ಶಾಂತತೆಗೆ ಕೊರತೆ ತಂದುಕೊಡುವದು ಸರ್ವರೂ ಕ್ಷಮಿಸುವಂತಹದಾಗಲೆಂದು ಕೋರಿದೆ.

ಹಿತಚಿಂತಕ.

ತಾಲ್ಲೂಕು ವರ್ತಮಾನಗಳು.

ದೊಡ್ಡಬಳ್ಳಾಪುರ ತಾ|| ಗಂಜಿಗುಂಟೆ.—ಈ ಗ್ರಾಮದಲ್ಲಿ ಹಿಂದಿನ ಶನಿವಾರ ರಾತ್ರಿ ಗ್ರಾಮಾಭಿವೃದ್ಧಿ ಸಮಾಜದವರು ದೇವಸ್ಥಾನದಲ್ಲಿ ಸಭೆ ಸೇರಿ ಯೂರೋಪ್ ಖಂಡದಲ್ಲಿ ನಮ್ಮ ಚಕ್ರವರ್ತಿ ಸಾರ್ವಭೌಮರವರಿಗೂ ಜರ್ಮನಿಯವರಿಗೂ ಯುದ್ಧ ನಡೆಯುತ್ತಿರುವ ವಿಚಾರದಲ್ಲಿ ನಮ್ಮ ಚಕ್ರವರ್ತಿ ಸಾರ್ವಭೌಮರವರಿಗೆ ಜಯಪ್ರಾಪ್ತಿಯಾಗಿ ರಾಜ ಪದವಿಯು ಶಾಶ್ವತವಾಗಿ ನಡೆಯುವಂತೆ ದೇವರನ್ನು ಪ್ರಾರ್ಥನೆ ಮಾಡಿದರು.—ಗ್ರಾಮದ ಪಶ್ಚಿಮ ಭಾಗದಲ್ಲಿರುವ ವೆಂಕಟೇಶಾಚಾರ್ಯರ ಅಂಗಡಿ ಮನೆಯಲ್ಲಿ ರೀಡಿಂಗ್ ರೂಮನ್ನು ಪ್ರಾರಂಭ ಮಾಡಿ ಇದರ ಮೇಲ್ವಿಚಾರಣೆಗೆ ಬಿ. ಕೆ. ಎಂ. ಜಗನ್ನಾಥಮೊದಲಿಯಾರ್ರನ್ನು ಪ್ರೆಸಿಡೆಂಟರನ್ನಾಗಿಯೂ, ಬಿ. ಎಸ್. ವೆಂಕಟಪ್ಪಯ್ಯನವರನ್ನು ಸೆಕ್ರೆಟರಿಯವರನ್ನಾಗಿಯೂ ನೇಮಕಮಾಡಿದ್ದಾರೆ. ಈ ಗ್ರಾಮದ ಬಳಿ ತನಕ ಮಳೆಯು ಸರಿಯಾಗಿ ನಡೆಯದೆ ಬೆಳೆಗಳೆಲ್ಲಾ ಒಣಗುತ್ತಾ ಇವೆ.

ಶಿವಮೊಗ್ಗಾ.—ಇಲ್ಲಿ ಸುಮಾರು 8 ದಿವಸದಿಂದ ಮಳೆ ಇಲ್ಲ. ಹವಾ ಆರೋಗ್ಯವಾಗಿ, ಬರ್ಚಿ ರಸ್ತೆಗಳೆಲ್ಲಾ ತಿರುಗಾಡಲು ಅನುಕೂಲವಾಗಿವೆ.—ತಾ. 15 ರಲ್ಲಿ ಕುಂಸಿ ತಾ. ಕಚೇರಿ ಕಂಟ್ರಾಕ್ಟರು ಬಿ. ಎ. ಮಿಸರ್ ಎಂಬುವರನ್ನು ರಾತ್ರಿ ಹಾವು ಕಚ್ಚಿತು. ಎಷ್ಟು ಹುಡುಕಿದರೂ ಅದು ಸಿಕ್ಕಲಿಲ್ಲ. ಅವರನ್ನು ಕೂಡಲೆ ಆಸ್ಪತ್ರೆಗೆ ಸಾಗಿಸಿದರು. ಚಿಕಿತ್ಸೆಯಿಂದ ಈಗ ಅವರು ಸುಖವಾಗಿ ಮಾರನೇ ದಿವಸ ಕುಂಸಿಗೆ ಹೋದರು.—ರಂಗಾರೆಯವರ ಕೇರಿಯಲ್ಲಿರುವ ಸುಮಾರು 10 ವರುಷದ ಒಂದು ಹುಡುಗಿಯು ಹೊಳೆಯಲ್ಲಿ ಪಾತ್ರೆ ಬೆಳಗುತ್ತಿರುವಾಗ್ಗೆ ಕಾಲು ಜಾರಿ ಹೊಳೆಯಲ್ಲಿ ತೇಲಿಹೋಗುತ್ತಿದ್ದದ್ದನ್ನು ಅಂಬಿಗನು ಕಂಡು ಬಹು ಜಾಗ್ರತೆಯಾಗಿ ಆ ಹುಡುಗಿಯನ್ನು ಉಕ್ಕಡದಲ್ಲಿ ಎತ್ತಿಹಾಕಿಕೊಂಡು ಬಂದನು. ಅನಂತರ ಆ ಹುಡುಗಿಯನ್ನು ತಬ್ಬಿ ಜಂಕಿ ಸೆಕೆಯನ್ನು ಮಾಡಿದನಂತರ ಸ್ವಲ್ಪ ಹೊತ್ತಿನ ಮೇಲೆ ಚೇತರಿಸಿಕೊಂಡು ಈಗ ಸುಖವಾಗಿರುತ್ತಾಳೆ.—ಈ ಊರಿನಲ್ಲಿ ಸುಮಾರು ಮೂರು ವಾರಗಳ ಕೆಳಗೆ ಮೈಸೂರು ಬ್ಯಾಂಕಿನ ಒಂದು ಶಾಖೆಯು ಪ್ರಾರಂಭವಾಗಿ ಲೇವಾದೇವಿ ನಡೆಯುತ್ತಿದೆ.

ಗುಬ್ಬಿ ತಾ|| ಕಡಬ.—ಇಲ್ಲಿ 3 ತಿಂಗಳ ಹಿಂದೆ ಬಿತ್ತನೇ ಕಾಲಕ್ಕೆ ತಕ್ಕ ಮಟ್ಟಿಗೆ ಮಳೆಯಾದ್ದರಿಂದ ರೈತರು ಬೀಜಾ ಬಿತ್ತಿ ಬಿಟ್ಟರು. ಅಂದಿನಿಂದಲೂ ಸರಿಯಾಗಿ ಮಳೆ ನಡಿಸದಿದ್ದರಿಂದ ಬೆಳೆದ ಪೈರುಗಳು ಒಣಗಿಹೋಗಿತ್ತು. ಮೊನ್ನೆ ದಿವಸ ಸರಿಯಾದ ಮಳೆ ಸುರಿಸಿದ್ದರ ಮೇಲೆ ಪೈರುಗಳು ಬಹಳ ಚೆನ್ನಾಗಿರುತ್ತೆ. ಧಾರಣೆಗಳು ದಿನೇ ದಿನೇ ಜಾಸ್ತಿಯಾಗುತ್ತಿವೆ. ಬಡವರ ಸಂಕಟ ಹೇಳತೀರದು. ಇಲ್ಲಿಗೆ ಕುಣಿಗಲ್ ತಾ|| ಅಮೃತೂರು ಎ. ವಿ. ಗರಲ್ಸ್ ಸ್ಕೂಲ್ ಸಂಗೀತದ ಮಾಸ್ಟರಾದ ವೇ|| ಸುಬ್ಬಾಚಾರ್ಯರು ಬಂದು ತಾ. 25 ನೇ ಶುಕ್ರವಾರ ರಾತ್ರಿ ಶಾಸ್ತ್ರೀ ಗರುಡಾಚಾರ್ಯರ ಮನೆಯಲ್ಲಿ ಹಾರ್ಮೋನಿಯಂ ಬಾರಿಸಿದರು. ಗ್ರಾಮದ ದೊಡ್ಡ ಮನುಷ್ಯರು ಸಭೆಯನ್ನು ಅಲಂಕರಿಸಿದ್ದರು. ಸಂಗೀತಗಾರರಾದ ಕೆಂಪಾಚಾರ್ರು ಇವರ ಸಹಾಯಕ್ಕೆ ಒದಗಿದ್ದರು. ಮೇಲ್ಕಂಡ ಸುಬ್ಬಾಚಾರ್ಯರವರು ಕನ್ನಡ, ತಮಿಳು, ಹಿಂದುಸ್ಥಾನಿ, ಫಾರಸಿ, ಈ ಭಾಷೆಗಳಲ್ಲಿ ಸರ್ವರಿಗೂ ಶ್ರೋತ್ರಾನಂದವಾಗುವಂತೆ ಹಾರ್ಮೋನಿಯಂ ಬಾರಿಸಿದರು. ನಂತರ ನಾಗಸ್ವರ ಬಾರಿಸಿ ಮಂಗಳ ಹೇಳಿ ಸಭೆ ಬರಖಾಸ್ತಾಯಿತು.

ಮುದ್ದಗಿರಿ ತಾ|| ಬಡಗೌಡನಹಳ್ಳಿ.—ಈ ಪ್ರಾಂತ್ಯ ಈ ವರ್ಷ ಹದ ಮಳೆಯೇ ಇಲ್ಲ. ರಾಗಿ ಹೊಲಗಳು ಕೆಲವು ಬೀಳು ಬಿದ್ದಿರುತ್ತವೆ. ಕೆಲವು ಬಿತ್ತಿದಾಗ ತಲೆ ಎತ್ತಿದ ಪೈರು ಹಾಗೇ ಒಣಗಿಹೋಯಿತು. ಇನ್ನೂ ಕೆಲವು ಕೊರಗುತ್ತಾ ಇವೆ. ಕಪಿಲೆ ನೀರಿನ ಸಹಾಯವಿರುವ ಕೆಲವು ಜಮೀನು ಚೆನ್ನಾಗಿವೆ. ಭಾರಿ ಭಾರಿ ಎತ್ತುಗಳು ಮಲಗಿಕೊಂಡವು. ಈ ಸಾರಿ ದನ ಕರುಗಳಿಗೆ ಮೇವಿಲ್ಲದೆ ಎಲ್ಲರೂ ದೊಡ್ಡ ಕಷ್ಟಕ್ಕೆ ಗುರಿಯಾದರು. ಒಂದು ಹೊರೆಯನ್ನು ತಿನ್ನುತ್ತಿದ್ದ ರಾಸು ಈಗ ಮೂರು ಹೊರೆಯನ್ನಾದರೂ ತಿನ್ನುತ್ತದೆ. ಧಾರಣೆ ಮುಂತಾದುವುಗಳಲ್ಲಿ ಪೇಟೆಯವರಿಗೇ ವಾಸಿ; ಹಳ್ಳಿ ಗಾಡುಗಳಲ್ಲಿ ಭಾವಿಯನ್ನೇನೋ ಹೆಚ್ಚಾಗಿ ತೋಡಿಯಬಹುದು ಕುಡಿಯುವ ನೀರಿಗಂತೂ ಕಷ್ಟವಾಯಿತು. ದವಸ ವನ್ನಿಟ್ಟಿರುವವರು ಹಗೇವು ಬಾಯಿಗೆ ದೊಡ್ಡ ಕಲ್ಲು ಹಾಕಿದರು. ಕೊಂಡು ತಿನ್ನುವವರು ಬಾಯಿಬಿಟ್ಟು ಕೊಂಡರು. ಜನರು ಸೂರ್ಯ ಗ್ರಹಣ, ಚಂದ್ರ ಗ್ರಹಣ, ಅನೇಕ ಪೌರ್ಣಮಿ, ಅಮಾವಾಸ್ಯೆಗಳನ್ನು ನೋಡಿ ನೋಡಿ ಸಾಕಾದರು. ಆಕಾಶವನ್ನೇ ನೋಡುತ್ತಾ, ಕತ್ತು ನೋವು ಹಿಡುಕೊಂಡು—"ಮತೇ ಪಿಲ್ಲಗಾ, ಉತ್ತರ ವಾನ ಪೋತೇ ಎತ್ತರಾ ಗಂಪಾ!" ಎಂದು ಮಾತಾಡಿಕೊಳ್ಳುತ್ತಿದ್ದಾರೆ. ಭಿಕ್ಷುಕರು ಕೊಂಚ ತಂಗಡಿ ಸೊಪ್ಪು ಕೈಯಲ್ಲಿ ಹಿಡುಕೊಂಡು ಪ್ರತಿ ಮನೆಯ ಬಳಿಗೂ ಹೋಗಿ "ಮಳೆರಾಯ ಮರೆತ್ರೀ" ಎಂದು ಸದಹಾಡಿ ಸಾಕಾದರು.—ಈ ಊರಲ್ಲಿ ಆಗಾಗ್ಗೆ ಮನೆಗಳಿಗೂ, ಹುಲ್ಲು ಬಣವೆಗಳಿಗೂ ಬೆಂಕಿ ಹಚ್ಚುವುದು ಕೆಲವರಲ್ಲಿ ರೂಢಿಯಾಗಿ ದೊಡ್ಡ ಕ್ಷಾಮವೇ ಬಂದೊದಗಿದಂತಾಗಿದೆ.—ನಮ್ಮ ದಿವಾನ್ ಸಾಹೇಬರವರು ಮುದ್ದಗಿರಿಯಿಂದ ಹೊರಟು ಗೋರಿಬಿದನೂರು ಮಾರ್ಗವಾಗಿ ಪ್ರಯಾಣ ಮಾಡುತ್ತಿರುವಾಗ ನಟ್ರಹಳ್ಳಿ ಮುಂತಾದ ಕೆಲವು ಗ್ರಾಮಗಳ ಪ್ರಜೆಗಳು ರಸ್ತೆಯ ಬಳಿ ಕಾದಿದ್ದು ಹೂವಿನಹಾರ ಮುಂತಾದ್ದು ಕೊಟ್ಟು ವಂದಿಸಿದರು. ಮತ್ತು ಕೆಲವರು ಬಿನ್ನೈಸಿಕೊಂಡ ಕೆಲವು ಸಂಗತಿಗಳು ಬಹಳ ಅಸಹ್ಯವಾಗಿದ್ದವು. ದಿವಾನ್ರಾದರೋ ಸಹನಗುಣದಿಂದ ಹಸನ್ಮುಖಿಗಳಾಗಿ ಎಲ್ಲವನ್ನೂ ಲಾಲಿಸುತ್ತಾ ತೆರಳಿದರು.

ಹೊಸಕೋಟೆ.—ಇಲ್ಲಿನ ಅಮಲ್ದಾರ್ ಮ|| ಸೋಮೇಶ್ವರಯ್ಯರವರು ಕೋಲಾರಕ್ಕೆ ವರ್ಗವಾದ ಕಾರಣ ತಾ. 19 ನೇ ಶನಿವಾರ ಸಾಯಂಕಾಲ ಕಛೇರಿ ಉದ್ಯೋಗಸ್ಥರೂ ಇತರರೂ ಸೇರಿ ಅಲಂಕರಿಸಲ್ಪಟ್ಟ ರೀಡಿಂಗ್ ರೂಮ್ನಲ್ಲಿ ಅವರನ್ನು ಬರಮಾಡಿಕೊಂಡರು. ಆಗ ಅಲ್ಲಿಂದ ಅವರನ್ನು ಬ್ಯಾಂಡ್ ವಾದ್ಯಗಳಿಂದ ಪೂರ್ಣಯ್ಯನವರ ಛತ್ರಕ್ಕೆ ಕರೆದುಕೊಂಡುಹೋಗಿ ಅಲ್ಲಿ ಸಿದ್ಧಮಾಡಲ್ಪಟ್ಟ ಕಾಫಿ ಫಲಹಾರಗಳಿಂದ ಎಲ್ಲರೂ ತೃಪ್ತರಾದ ತರುವಾಯ ಪುನಃ ಅವರನ್ನು ಅದೇ ವಾದ್ಯಗಳಿಂದ ರೀಡಿಂಗ್ ರೂಮಿಗೆ ಕರೆದುಕೊಂಡುಬಂದು ಶ್ರೇಷ್ಠವಾದ ಆಸನದ ಮೇಲೆ ಕೂಡಿಸಿದರು. ಕಸಬಾ ಶೇಕ್ದಾರ್ ಮ|| ಶ್ರೀನಿವಾಸಯ್ಯನವರು ಸಭಿಕರ ಪಕ್ಷವಾಗಿ ಭಾಷಣ ಮಾಡಿದ್ದು ಏನೆಂದರೆ—ತಾವು ಈ ಊರಿಗೆ ಬಂದ ಎರಡು ವರ್ಷಗಳಿಂದ ಎಲ್ಲರ ಸಂಗಡ ಐಕಮತ್ಯವುಳ್ಳವರಾಗಿಯೂ, ಸ್ನೇಹಪರರಾಗಿಯೂ ಇದ್ದದ್ದು ಮಾತ್ರವಲ್ಲದೆ, ತಮ್ಮ ಕೈಕೆಳಗಿನವರನ್ನು ವಿಶೇಷ ಪ್ರೀತಿ ವಿಶ್ವಾಸಗಳಿಂದ ನೋಡುತ್ತಾ ತಮ್ಮ ಪದವಿಯನ್ನು ಮರೆತು ಎಲ್ಲರ ಸಂಗಡ ಬಳಕೆಯಾಗಿಯೂ, ಸಲಿಗೆಯಾಗಿಯೂ ಇದ್ದದ್ದಕ್ಕಾಗಿ ನಾವೆಲ್ಲರೂ ಬಹಳ ಸಂತೋಷ ಪಡುತ್ತೇವೆ. ಇಲ್ಲಿ ತಮ್ಮ ಹೆಸರು ಶಾಶ್ವತವಾಗಿರುವಂತೆ ಒಂದು ಕೋಆಪರೇಟಿವ್ ಸೊಸೈಟಿಯನ್ನು ಸ್ಥಾಪಿಸಿದ್ದಲ್ಲದೆ, ಎಲ್ಲರ ಉಪಯೋಗಕ್ಕೆ ಚಿಕ್ಕಕೆರೆಯ ಬಳಿಯಲ್ಲಿ ಒಂದು ಭಾವಿಯೂ, ಕಛೇರಿ ಮುಂದುಗಡೆ ಸೊಗಸಾಗಿ ಕಾಣುವ ಮ್ಯುನಿಸಿಪಲ್ ತೋಟದ ಬೌಳಿಗೋಡೆ, ವಾದ್ಯವಾಗುವದಕ್ಕೆ ಬ್ಯಾಂಡ್ ಸ್ಟಾಂಡು, ಪಕಾಳಿ ಮಾರುವವರಿಗೆ ಅನುಕೂಲವಾಗುವ ಹಾಗೆ ಒಂದು ಮಾರ್ಕೆಟ್ಟು, ಇವೇ ಮೊದಲಾದವುಗಳು ಮಾಡಿಸಿರುತ್ತೀರಿ. ಬಳಿಕ ಅಮಲ್ದಾರರಿಗೆ ಹಾರ ತುರಾಯಿಗಳನ್ನು ಒಪ್ಪಿಸಿ, ಸಭಿಕರಿಗೆಲ್ಲಾ ಗಂಧ ಪುಷ್ಪ ತಾಂಬೂಲಾದಿಗಳಿಂದ ಸಂತೋಷಪಡಿಸಿ ಕೂಟವನ್ನು ಮುಕ್ತಾಯ ಮಾಡಿ ವಾದ್ಯಗಳೊಡನೆ ಎಲ್ಲರೂ ಅವರನ್ನು ಮನೆಗೆ ಬಿಟ್ಟು ಬಂದರು.—ಇಲ್ಲಿ ಬಹಳ ಕಾಲ ಮಳೆ ಇಲ್ಲದೆ ಪೈರುಗಳೆಲ್ಲಾ ಒಣಗುತ್ತಾ ಬಂದಿತ್ತು. ಒಳ್ಳೇ ಸಮಯಕ್ಕೆ 18-19 ನೇ ತಾ. ಒಂದು ಹದ ಮಳೆ ಬಂದದ್ದರಿಂದ ಬಹಳ ಅನುಕೂಲವಾಯಿತು.—ಇಲ್ಲಿ ಎರಡು ತಿಂಗಳುಗಳಿಂದ ಪ್ಲೇಗ್ ಮಂದವಾಗಿ ಈಗ 15 ದಿವಸಗಳಿಂದ ಹೆಚ್ಚಾಯಿತು. ಸುಮಾರು 32 ಜನಗಳು ಪ್ಲೇಗ್ ತಗಲಿ ಸತ್ತುಹೋದರು. ನಮ್ಮ ಡಾಕ್ಟರು ಮುತುವರ್ಜಿಯಿಂದ ಸುಮಾರು 360 ಜನಗಳಿಗೆ ಇನಾಕ್ಯುಲೇಷನ್ ಮಾಡಿದರು.

ಮುದ್ದಗಿರಿ.—ಕಳೆದ ವಾರ ಒಂದೆರಡು ದಿನ ಮಳೆ ಆಗಿ ಬಾಡಿಹೋಗಿದ್ದ ಕುಸ್ಕಿ ಫಸಲಿಗೆ ಸ್ವಲ್ಪ ಅನುಕೂಲವಾಯಿತು. ಭಾವಿಗಳೆಲ್ಲವೂ ಬತ್ತಿಹೋಗಿರುವುದರಿಂದ ಜನಗಳಿಗೆ ನೀರಿನ ತೊಂದರೆ ಬಹಳವಾಗಿದೆ. ಕೋಟೆ ಭಾವಿಯಲ್ಲಿ ನೀರಿಗೆ ದಿನವೆಲ್ಲಾ ಕಾದರೂ ಒಂದು ತಂಬಿಗೆ ನೀರು ಸಿಕ್ಕುವುದೇ ಪ್ರಯಾಸ. ಅಧಿಕಾರಿಗಳು ಜನರ ಈ ಶ್ರಮವನ್ನು ಚಿತ್ತಕ್ಕೆ ತಂದುಕೊಂಡು ನೀರಿನ ಅನುಕೂಲಕ್ಕೆ ತಕ್ಕ ಏರ್ಪಾಡು ಮಾಡುವರೆಂದು ನಿರೀಕ್ಷಿಸುತ್ತೇವೆ.—ಈ ಊರಿನ ಶೆಟ್ಟಿ ವರ್ತಕರೇ ಅಧಿಕವಾಗಿ ಯುದ್ಧದ ನೆವವನ್ನಿಟ್ಟುಕೊಂಡು ಬಡವರಿಂದ ಹಣವನ್ನು ಸುಲಿಗೆ ಮಾಡಲು ಇದೂ ಒಂದು ಕಾಲವೆಂದು ಯಾವ ಪದಾರ್ಥವನ್ನು ಕೇಳಿದರೂ ಒಂದಕ್ಕೆರಡು ಬೆಲೆ ಹೇಳುತ್ತಾರೆ. ಸರ್ಕಾರದವರು ಇಂಥವರಿಗೆ ತಕ್ಕ ವಿವೇಕವನ್ನು ಹೇಳಿಕೊಟ್ಟು ಬಡಬಗ್ಗರಿಗೆ ಪದಾರ್ಥಗಳು ನ್ಯಾಯವಾದ ಬೆಲೆಗೆ ದೊರಕುವಂತೆ ಮಾಡಿಕೊಟ್ಟರೆ ತುಂಬಾ ಉಪಕಾರವಾಗುತ್ತೆ.—ಈ ಸಂಸ್ಥಾನದ ದಿವಾನ್ ಸಾಹೇಬರು ತಾ. 17 ರಲ್ಲಿ ಮುದ್ದಗಿರಿಗೆ ದಯಮಾಡಿಸಿದರು. ಊರು ಮುಂದೆ ಹಾಕಿದ್ದ ಚಪ್ಪರದ ಬಳಿ ಡೆಪ್ಯುಟಿ ಕಮಿಷನರ್ ರವರು, ಅಸಿಸ್ಟೆಂಟ್ ಕಮಿಷನರ್ ರವರು, ಅಮಲ್ದಾರರು, ಮುನ್ಸೀಫರು, ಡಾಕ್ಟರು, ಪ್ಲೀಡರುಗಳು, ಶೆಟ್ಟಿ ವರ್ತಕರೂ ಅವರನ್ನು ವಾದ್ಯ ಘೋಷದಿಂದ ಎದುರುಗೊಂಡು ಹಾರ ತುರಾಯಿ ಒಪ್ಪಿಸಿದ್ದರು. ದಿವಾನ್ ಸಾಹೇಬರ ಸವಾರಿಯು ಮಿಡಲ್ ಗರಲ್ಸ್ ಸ್ಕೂಲಿಗೆ ಚಿತ್ತೈಸಿ ಹೆಡ್ ಮಾಸ್ಟರ ಮೂಲಕ ಸ್ಕೂಲ್ ವಿಚಾರವನ್ನೆಲ್ಲಾ ತಿಳಿದು, ಹಾಜರಿದ್ದ 70 ಮಂದಿ ಬಾಲಿಕೆಯರ ಸಂಖ್ಯೆಯನ್ನು ನೋಡುತ್ತಿರುವಲ್ಲಿ ಮೇಲು ವರ್ಗದವರು ಹಾರ್ಮೋನಿಯಂ ವಾದ್ಯದೊಂದಿಗೆ ಹೇಳುತ್ತಿದ್ದ ಹಾಡನ್ನು ಕೇಳಿ ಅಲಂಕರಿಸಲ್ಪಟ್ಟಿದ್ದ ಸ್ಕೂಲ್ ಕಟ್ಟಡವನ್ನು ನೋಡಿ ಸಂತೋಷಪಟ್ಟು ಮಕ್ಕಳ ತಿಂಡಿಗಾಗಿ 3 ರೂಪಾಯಿ ಕೊಟ್ಟು, ಗೌ|| ಗರಲ್ಸ್ ಸ್ಕೂಲಿಗೆ ದಯಮಾಡಿಸಿ ಅಲ್ಲಿನ ಬಾಲಕಿಯರಿಗೆ ತಿಂಡಿ ಹಂಚಲು ಮೂರು ರೂಪಾಯಿಗಳನ್ನು ಕೊಟ್ಟು, ಅಲ್ಲಿಂದ ಆಸ್ಪತ್ರೆ, ಎ. ವಿ. ಸ್ಕೂಲ್, ತಾಲ್ಲೂಕು ಕಚೇರಿ, ಮುನ್ಸೀಫ್ ಕೋರ್ಟು, ಇವುಗಳನ್ನೆಲ್ಲಾ ಪರಾಂಬರಿಸಿ ಟ್ರಾವೆಲರ್ಸ್ ಬಂಗ್ಲೆಗೆ ದಯಮಾಡಿಸಿ ಅಲ್ಲಿ ಈ ತಾಲ್ಲೂಕಿನ ಕಾಲಸ್ಥಿತಿಯನ್ನೂ, ರೈಗಾರಿಕೆಯನ್ನೂ, ಜೋಳನಹಳ್ಳಿ, ಬಿಜವಾರ, ಸಿದ್ದಾಪುರ ಈ ತಲಾವುಗಳ ಕಾಮಗಾರಿ ವಿಚಾರದಲ್ಲಿ ರೈತರುಗಳ ಸಲಹೆಗಳನ್ನು ಕೇಳಿ ಕಾಲಸ್ಥಿತಿ ವಿಷಯದಲ್ಲಿ ಪಶ್ಚಾತ್ತಾಪ ಪಟ್ಟು ಊರಿನ ಮಧ್ಯ ಚೌಕದಲ್ಲಿ ಒಂದು ಧರ್ಮಾರ್ಥವಾದ ರೀಡಿಂಗ್ ರೂಮ್ ಸ್ಥಾಪನೆ ಮಾಡಿ ಜನಗಳಲ್ಲಿ ನಾಗರಿಕ ವಿದ್ಯಾಭಿವೃದ್ಧಿಯನ್ನು ಹರಡಲು ಪ್ರಯತ್ನ ಮಾಡುವಂತೆ ತಿಳಿಸಿ, 1 ಘಂಟೆ ಭೋಜನಕ್ಕೆ ತೆರಳಿದರು. ನಂತರ ರೈತರುಗಳ ಅಹವಾಲನ್ನು ಬಹು ಪ್ರೀತಿಯಿಂದ ಲಾಲಿಸಿ ಅವರವರ ಕೊರತೆಗಳನ್ನು ಆದಷ್ಟು ಮಟ್ಟಿಗೆ ಬೇಗನೆ ಪರಿಹರಮಾಡಿಕೊಡಬೇಕೆಂದು ಡೆಪ್ಯುಟಿ ಕಮಿಷನರ್ ಸಾಹೇಬರಿಗೆ ಅಪ್ಪಣೆಯನ್ನಿತ್ತು ದಿವಾನ್ರವರು ಗೋರಿಬಿದನೂರು ಮಾರ್ಗವಾಗಿ ಬೆಂಗಳೂರಿಗೆ ದಯಮಾಡಿಸಿದರು.

ಅರಸೀಕೆರೆ.—ಎರಡು ವಾರಗಳ ಕೆಳಗೆ ಮಳೆ ಇಲ್ಲದೆ ಭಾವಿಗಳಲ್ಲಿ ನೀರು ಸಿಕ್ಕುವದು ಪ್ರಯಾಸವಾಗಿತ್ತು. ಈಚೆಗೆ ನಮ್ಮ ಅಮಲ್ದಾರ್ರು ಊರು ಮಧ್ಯೆ ಇರುವ ಸೀನೀರಿನ ಹುಳ್ಳಿ ಭಾವಿಯನ್ನು ಬುರುಡೆ ತೆಗೆದು ನೀರು ಬರುವ ಹಾಗೆ ಮಾಡಬೇಕೆಂದು ಉದ್ದೇಶಪಟ್ಟು ಇದಕ್ಕೆ ಮ॥ ಗಳಾದ ಅಬ್ದುಲ್ ರಜಾಕ್ ಸಾಹೇಬರು, ಕರಿಯಪ್ಪನವರು ಮತ್ತು ಪಟೇಲ್ ಅನುಂಗಿರಿ ಗೌಡರು, ಮು ಖಂಡರನ್ನಾಗಿ ನೇಮಿಸಿ ಎಲ್ಲರಲ್ಲಿಯೂ ಚಂದಾ ವಸೂಲ್ ಮಾಡಿ ಒಂದು ವಾರ ದಿಂದ ಈ ಕಷ್ಟಕಾಲದಲ್ಲಿ ಪ್ರಜೆಗಳ ಉಪಕಾರಾರ್ಥವಾಗಿ ಪ್ರಯಾಸಪಡುತ್ತಿ ದಾರೆ. ನಮ್ಮ ಅಮಲ್ದಾರ್ರು ಇಲ್ಲಿಗೆ ಬಂದು ಸ್ವಲ್ಪ ಕಾಲವಾದಾಗ್ಯೂ ಪ್ರಜೆಗಳ ಪ್ರೀತಿಯನ್ನು ಸಂಪಾದಿಸಿಕೊಂಡಿರುವರು.—ಕಳೆದ ಗುರುವಾರ ಅ॥ ಕಮಿಷನರ್ ಮ॥ ಅಪ್ಪಣ್ಣಯ್ಯಂಗಾರ್‍ರವರು ಹಾಸನದಿಂದ ದಯಮಾಡಿ ಒಂದು ಕ್ರಿಮಿನಲ್ ವಿಚಾರಣೆ ನಡಿಸಿ ಜಡ್ಜ್ ಮೆಂಟ್ ಗಳು ಮಾಡಿ ಆ ಸಾಯಂಕಾಲವೇ ವಾಪಸು ಹಾಸ ನಕ್ಕೆ ದಯಮಾಡಿಸಿದರು.—ಇಲ್ಲಿನ ಪೋಸ್ಟಾಫೀಸಿನಲ್ಲಿ ಮಣಿಯಾರ್ಡರ್, ರೆಜಿ ಸ್ಟರ್, ಟೆಲಿಗ್ರಾಂ ಮುಂತಾದ ಕೆಲಸಗಳು ಬಹಳ ಹೆಚ್ಚಿವೆ. ಇದಕ್ಕೆ ಇಬ್ಬರನ್ನು ಮಾತ್ರ ನೇಮಿಸಿದಾರೆ ಎಲ್ಲಾ ಕೆಲಸಗಳೂ ಸಮಯಕ್ಕೆ ಸರಿಯಾಗಿ ನಡಿಸುವದು ಪ್ರಯಾಸ. ಇನ್ನೊಬ್ಬರನ್ನು ಮೇಲ್ಪಟ್ಟವರು ಕಳುಹಿಸಿಕೊಟ್ಟರೆ ಕೆಲಸಕಾರ್ಯ ಗಳು ಸರಾಗವಾಗಿ ನಡೆಯುವದಕ್ಕೇನೂ ಸಂದೇಹವಿಲ್ಲ.

ದೇವನಹಳ್ಳಿ.— ನಮ್ಮ ಪೋಲೀಸ್ ಇನ್ಸ್‌ಪೆಕ್ಟರ್ ಮ॥ ಮರಿಯಣ್ಣನವ ರಿಗೆ ವರ್ಗವಾದದ್ದರಿಂದ ಕಳೆದ 20 ನೇ ತಾ. ಭಾನುವಾರ ಸಾಯಂಕಾಲ ಇಲ್ಲಿನ ತಾಲೂಕ್ ಕಚೇರಿ ಆಫೀಸರುಗಳೂ, ಊರಿನ ದೊಡ್ಡ ಮನುಷ್ಯರೂ ಕಚೇರಿ ಎದುರು ಅಮಲ್ದಾರ್ರ ಮನೇ ಮುಂದೆ ಮೈದಾನಿನಲ್ಲಿ ಸೇರಿ ಸಂತೋಷಕೂಟವನ್ನು ನಡಿಸಿದರು. ಬಾಜಾ ಬಜಂತ್ರಿ ಸಮೇತ ದೊಡ್ಡ ಮನುಷ್ಯರೂ, ಪೋಲೀಸ್ ಆಫೀ ಸರುಗಳೂ ಇನ್ಸ್‌ಪೆಕ್ಟರ್ ರವರನ್ನು ಮರ್ಯಾದೆಯೊಡನೆ ಕರೆತಂದರು. ಎಲ್ಲಾ ಜನರೂ ಪಕೇ ಧರಿಸಿ ಫಲಹಾರಾದಿಗಳನ್ನು ಸ್ವೀಕರಿಸಿದ ನಂತರ ಮನೆಯೊಳಗೆ ಪ್ರವೇಶಿಸಿ ಕೂತುಕೊಂಡ ಬಳಿಕ ನಮ್ಮ ಸಬ್ ರಿಜಿಸ್ಟ್ರಾರ್‍ರವರು ಅಗ್ರಾಸನ ವನ್ನು ವಹಿಸಿದರು. ಕೆಲವು ದೊಡ್ಡ ಮನುಷ್ಯರು ಇನ್ಸ್‌ಪೆಕ್ಟರವರು ಈ ತಾಲೂ ಕಿಗೆ ದಯಮಾಡಿ 9 ತಿಂಗಳು ಆದರೂ ಅವರು ಸರಕಾರದ ಕೆಲಸದಲ್ಲಿ ಬಹು ಚಟು ವಟಿಕೆಯುಳ್ಳವರಾಗಿಯೂ, ಸಮರ್ಥರಾಗಿಯೂ, ನಿಷ್ಪಕ್ಷಪಾತಿಗಳಾಗಿಯೂ ಇದ್ದರು ಎಂದು ಮುಂತಾಗಿ ಹೇಳಿದರು. ಅನಂತರ ಇನ್ಸ್‌ಪೆಕ್ಟರವರು ಕೆಲವು ಸಂತಾಪದ ಮಾತುಗಳನ್ನು ಹೇಳಿ ತಮ್ಮ ಕೃತಜ್ಞತೆಯನ್ನು ತೋರ್ಪಡಿಸಿದರು ಹೂವು ಗಂಧ ತಾಂಬೂಲ ಹಂಚಲಾಯಿತು. ಬಳಿಕ ಪೋಲೀಸ್ ಇಲಾಖೆಯವರು ತಮ್ಮ ಸ್ಟೇಷನ್ ಗೆ ಅವರನ್ನು ಬರಮಾಡಿಕೊಂಡು ತಮ್ಮ ಕೃತಜ್ಞತೆಯನ್ನು ತೋರಿಸಿ ಪಾರ್ಸುಪಾರಿ ಹಂಚಿ ಮರ್ಯಾದೆಯೊಡನೆ ಅವರ ಮನೆಗೆ ಕರಕೊಂಡು ಹೋಗಿ ಬಿಟ್ಟರು —ಇಲ್ಲಿ ಕೆಲವು ದಿನಗಳ ಹಿಂದೆ ಒಳ್ಳೇ ಮಳೆ ಆಯಿತು ಜನ ರೆಲ್ಲಾ ಹರ್ಷಿತರಾಗಿದಾರೆ.

ಹೊನ್ನಾಳಿ ತಾ॥ ಸವಳಂಗ —ಸವಳಂಗದಲ್ಲಿ ಮಳೆ ಇಲ್ಲದೆ ಪೈರುಗಳು ಒಣಗುತ್ತಿ ಇವೆ. ಈಗ ಒಂದು ಹದ ಮಳೆ ಬೇಕಾಗಿ ರೈತರು ಆಕಾಶವನ್ನೇ ನೋಡುತ್ತಾರೆ —ತಾ 26 ರಲ್ಲಿ ಶಿವಮೊಗ್ಗಾ ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರ್ ಮೆ॥ ಶರ್ಮ ಸಾಹೇಬರವರು ದಯಮಾಡಿ ಸ್ಕೂಲ್ ವಿದ್ಯಾರ್ಥಿಗಳ ಆರೋಗ್ಯ ಭಾಗ ವಿಚಾರಿಸಿ ಕಾಹಿಲೆ ಹುಡಗರಿಗೆ ಔಷಧಿಕೊಡುವದಾಗಿಯೂ, ಜ್ವರ ಗಡ್ಡೆ ಇರುವವರು ಶಿವಮೊಗ್ಗೆಗೆ ಬರಬೇಕಾಗಿಯೂ ಅಪ್ಪಣೆ ದಯಪಾಲಿಸಿದರು. ಮತ್ತು ಸರಸ್ವತಿ ಪೂಜೆಗಾಗಿ ವಿದ್ಯಾರ್ಥಿಗಳಿಗೆ ಅವರು ದ್ರವ್ಯಸಹಾಯ ಮಾಡಿದರು. ಪಟೇ ಲರು, ವರ್ತಕ ಮುರಿಗಪ್ಪನವರೇ ಮುಂತಾದವರು ಅವರನ್ನು ಕಂಡು ವಾರ ಕ್ಕೊಂದಾವರ್ತಿ ಸಮೀಪ ಇರುವ ನ್ಯಾಮತಿ ಡಾಕ್ಟರವರು ಬಂದು ಹೋಗುವಂತೆ ಮಾಡಿಸಬೇಕಾಗಿ ವಿಜ್ಞಾಪಿಸಿಕೊಂಡರು, —ಈ ಸವಳಂಗವು 4 ರೋಡು ಸೇರುವ ಸ್ಥಳವಾದ್ದರಿಂದ ಪರದೇಶದ ಜನಗಳು ನಿಲ್ಲುವದಕ್ಕೆ ಅನುಕೂಲವಾಗುವಂತೆ ಫಾರೆಸ್ಟ್ ಇಲಾಖೆಯವರು ಇಲ್ಲಿ ಒಂದು ನಾಟಾ ಡಿಪೋವನ್ನು ಇಟ್ಟು ಇದರ ಚಾರಿ ಬಗ್ಗೆ ಸವಳಂಗದ ಪೋಸ್ಟ್ ಮಾಸ್ಟರು ಮ॥ ಕೆ. ಕೃಷ್ಣರಾಯರನ್ನು ನೇಮಿ ಸಿದಾರೆ ಇವರು ಮುತುವರ್ಜಿಯಿಂದ ದಿನೇದಿನೇ ನಾಟಾವನ್ನು ಬಿಕರಿಮಾಡುತ್ತಾ ಇರುವದರಿಂದ ಆಸ್‌ಪಾಸ್ ಜನಗಳು ಮತ್ತು ಸರಕಾರದವರು ತುಂಬಾ ಅನು ಕೂಲ ಮಾಡಿಸಿಕೊಟ್ಟಂತೆ ಆಯಿತು —ಈ ಊರಿಗೆ ಶಿಕಾರಿಪುರದ ಸಬ್ ಡಿವಿ ಜನ್ ಆಫೀಸರವರು ದಯಮಾಡಿ ಚಟ್ನಹಳ್ಳಿಯಲ್ಲಿ ಕಟ್ಟುತ್ತಿರುವ ಸ್ಕೂಲನ್ನು ಅಜಮಾಯಿಸಿ ಮಾಡಿ ಜಾಗ್ರತೆ ಮುಗಿಸಿ ಸ್ಕೂಲ್ ಮಾಡಲು ಅನುಕೂಲಪಡಿಸ ಬೇಕಾಗಿ ಕಂಟ್ರಾಕ್ಟರಿಗೆ ತಿಳಿಸಿದರು.—ಹೊನ್ನಾಳಿ ತಾಲ್ಲೋಕಿಗೆ ಹೊಸದಾಗಿ ವರ್ಗವಿಟ್ಟ ಅಮಲ್ದಾರ್ ಮ॥ ಸುಂದರರಾಜಯ್ಯಂಗಾರ್‍ರು ನ್ಯಾಮತಿ ಮುಂತಾದ ಪ್ರಾಂತ್ಯ ಸರಕೀಟು ದಯಮಾಡಿ ಗ್ರಾಮಗಳನ್ನು ನೋಡುತ್ತಾ ಇದಾರೆ ಇವರು ಮುತುವರ್ಜಿಯಿಂದ ಜನಗಳ ಅಹವಾಲನ್ನು ಕೇಳುತ್ತಾರೆಂತ ಪ್ರಜೆಗಳು ಹೇಳು ತ್ತಾರೆ. ಸದ್ಯ ಸವಳಂಗ ಪ್ರಾಂತ್ಯ ಸರಕೀಟು ದಯಮಾಡಿಸುವ ವರ್ತಮಾನವಿದೆ.

ಹೆಗ್ಗಡದೇವನಕೋಟೆ.—ಇಲ್ಲಿ 20-22 ದಿವಸಗಳಿಂದ ಹದವಾದ ಒಂದು ಮಳೆ ಕೂಡ ಇಲ್ಲದ ಸೆಕೆ ವಿಪರೀತವಾಗಿ ಪೈರೆಲ್ಲಾ ಒಣಗುತ್ತಲಿವೆ ಮೊದಲು ಬೆಳೆಗಳೆಲ್ಲಾ ಕೆಲವು ಭಾಗಗಳು ವಿನಹ ನಿರ್ನಾಮವಾದವು ಚಿಲವಾರು ದಿನಗ ಳಿಗೆ ಮಳೆಯೇ ಇಲ್ಲ. ಆಹಾರ ಸಾಮಗ್ರಿಗಳಾದರೆ ಕ್ಷಾಮಕಾಲವನ್ನು ಸೂಚಿ ಸುತ್ತಿವೆ ನಮ್ಮ ವರ್ತಕರಿಗೆ ಯುದ್ಧದ ನೆಪ ಒಂದು ಸಹಾಯವಾಗಿದೆ. ದಿನ ವಹಿ ಉಪಯೋಗಿಸತಕ್ಕ ಸಾಮಾನುಗಳೂ ಒಂದಕ್ಕೆ ಎರಡರಷ್ಟು ಏರಿವೆ ಧಾರ ಣೆ ಕ್ರಮಪಡಿಸುವದು ನಮ್ಮ ಸರ್ಕಾರದವರಿಗೆ ಬೇಕಿಲ್ಲವೆಂತ ತೋರುತ್ತೆ.— ಸುಮಾರು 4-5 ವರ್ಷಗಳಿಂದ ಅಮಲ್ದಾರ್‍ರಾಗಿದ್ದು ಕಾರ್ಯದಕ್ಷರೂ, ಪ್ರಜಾ ನುರಾಗಿಗಳೂ ಆದ ಮ॥ ಎಂ. ಎನ್. ಶ್ರೀನಿವಾಸಯ್ಯಂಗಾರ್‍ರವರಿಗೆ ಹೊಸಕೋ ಟೆಗೆ ವರ್ಗವಾದ್ದರಿಂದ ಇಲ್ಲಿನ ತಾಲ್ಲೂಕು ನೌಕರರು, ಪುರಪ್ರಮುಖರು, ವರ್ತ ಕರೂ ಸೇರಿ ತಾ. 18 ನೇ ಶುಕ್ರವಾರ ಒಂದು ಎಂಟರ್‌ಟೇನ್‌ಮೆಂಟನ್ನು ಕೊಟ್ಟು ತಮ್ಮ ಪ್ರೀತಿ ವಿಶ್ವಾಸಗಳನ್ನು ಪ್ರಕಾಶ ಪಡಿಸಿದರು. ಆ ದಿನ ಒಂದು ದಿವ್ಯವಾದ ಔತಣ ಜರುಗಿತು ; ಸಾಯಂಕಾಲ ಎ. ವಿ ಸ್ಕೂಲಿನಲ್ಲಿ ಸ್ಥಳೀಯ ಆಫೀಸರುಗಳಿಂದಲೂ, ಬೇರೆ ದೊಡ್ಡ ಮನುಷ್ಯರಿಂದಲೂ, ಮ್ಯುನಿಸಿಪಲ್ ಮೆಂ ಬರುಗಳಿಂದಲೂ, ವರ್ತಕರಿಂದಲೂ ಕೂಡಿದ ಉತ್ಸಾಹಗರ್ಭಿತವಾದ ಒಂದು ಕೂಟವು ಸೇರಿತು. ಮೆ॥ ಶ್ರೀನಿವಾಸಯ್ಯಂಗಾರ್‍ರನ್ನು ಬ್ಯಾಂಡು ವಾದ್ಯಗಳ ಸಮೇತ ಕರೆದು ತಂದರು. ಅವರ ಗುಣಕಥನ ಪೂರ್ವಕವಾದ ಅಡ್ರೆಸ್ಸುಗಳು ಇಂಗ್ಲೀಷಿನಲ್ಲಿಯೂ ಕನ್ನಡದಲ್ಲಿಯೂ ಓದಲ್ಪಟ್ಟವು ಮ॥ ಪಡುಕೋಟೆ ಸುಬ್ಬ ರಾಯರು ಮಧುರವಾದ ಕೆಲವು ಮಾತುಗಳಲ್ಲಿ ಅಮಲ್ದಾರ್‍ರವರ ಗುಣಾತಿಶಯ ವನ್ನು ಕೊಂಡಾಡಿದ್ದಲ್ಲದೆ, ಗ್ರಾಮಾಭಿವೃದ್ಧಿ ಕಾರ್ಯದಲ್ಲಿ ರೈತರ ಸಲುವಾಗಿ ಅವರು ಮಾಡಿದ ಕಾರ್ಯಗಳನ್ನು ವಿವರಿಸಿದರು. ಹಾರಾ ತುರಾಯಿಗಳು ಅಮ ಲ್ದಾರ್‍ರಿಗೂ, ಅತ್ತರು ಪಾನ್‌ಸುಪಾರಿ ಸಭಿಕರಿಗೂ ಹಂಚಲ್ಪಟ್ಟವು ಕಂಟ್ರಾಕ್ಟ ದಾರ್ ಮ॥ ಮಗ್ಗೆ ಸುಬ್ರಯರವರು ಗ್ರಾಮೊಫೋನ್ ಮೂಲಕ ಸಭಿಕರನ್ನು ಕರ್ಣಾನಂದ ಪಡಿಸಿದರು. ಅತಿ ಸಂಭ್ರಮದೊಡನೆ ಸಭೆಯು ಬರಖಾಸ್ತಾಯಿತು. ಬ್ಯಾಂಡು ವಾದ್ಯ ಸಮೇತ ಎಲ್ಲರೂ ಅಮಲ್ದಾರ್‍ರವರನ್ನು ಅವರ ಗೃಹಕ್ಕೆ ಕಳುಹಿ ಸಿದರು. ಭಾನುವಾರ ಊರಿನವರೆಲ್ಲಾ ತಮ್ಮ ತಮ್ಮ ಗೃಹಗಳಿಗೆ ಮ॥ ಶ್ರೀನಿವಾಸ ಯ್ಯಂಗಾರ್‍ರವರನ್ನು ಕರೆದು ಕೊಂಡು ಹೋಗಿ ಮರ್ಯಾದೆ ಮಾಡಿದರು. ಸೋ ಮವಾರ ಬೆಳಿಗ್ಗೆ ಅವರು ಮುಂದಕ್ಕೆ ಪ್ರಯಾಣ ಮಾಡಿದರು. ಈ ಸಂತೋಷ ಕೂಟವನ್ನು ನಿಪುಣತೆಯಿಂದ ನಡಿಸಿ ಸಮಾಪ್ತಿ ಮಾಡಿದುದಕ್ಕಾಗಿ ಕಸಬಾ ಶೇಕ ದಾರ್ ಮ॥ ಸಿ. ಕೃಷ್ಣಯ್ಯನವರಿಗೆ ಎಲ್ಲರೂ ಕೃತಜ್ಞರಾಗಿರುತ್ತಾರೆ ಈಗ ಬಂದಿರುವ ಅಮಲ್ದಾರ್ ಮ॥ ಬಿ. ಮಲ್ಲಿಕಾರ್ಜುನಯ್ಯನವರೂ ಪ್ರಜಾನುರಾಗಿ ಗಳಾಗಿರುವರೆಂದು ನಂಬುತ್ತೇನೆ —ಇಲ್ಲಿ ಪ್ಲೇಗು ಆಗಲೇ ತಲೆದೋರುವಂತಿದೆ.

ಇಲಿಗಳು ಸಾಯುತ್ತಲಿವೆ. ಜನರೆಲ್ಲರೂ ಊರನ್ನು ಬಿಟ್ಟು ಷೆಡ್ಡು ಹಾಕುವವ ರಾಗಿದಾರೆ. ಒಂದು ವರ್ಷಕ್ಕೆ ಎರಡಾವೃತ್ತಿ ಊರು ಬಿಡಬೇಕಾದುದರಿಂದ ಬಡವರು ಷೆಡ್ಡು ಸಾಮಾನು ಕೊಳ್ಳುವುದಕ್ಕೆ ದುಡ್ಡಿಲ್ಲದೆ ನಾನಾ ತರದ ಕಷ್ಟಗ ಳನ್ನು ಅನುಭವಿಸಬೇಕಾಗಿದೆ ಆದ್ದರಿಂದ ನಮ್ಮ ಅಮಲ್ದಾರ್‍ರವರು ಗಳು, ಬೊಂ ಬು, ತಡಿ. ಇವುಗಳನ್ನು ತರಿಸಿ ಮುಫತ್ತಾಗಿ ಹಂಚಿ ಕೀರ್ತಿ ಪಡೆಯುತ್ತಾರೆಂದು ನಂಬಿ ನಿರೀಕ್ಷಿಸುತ್ತೇನೆ. ಈ ವರ್ಷ ತಾಲ್ಲೂಕಿನ ಎಲ್ಲಾ ಕಡೆಯಲ್ಲಿ ಈ ಜಾಡ್ಯ ವು ಪ್ರಬಲವಾಗಿ ಜನಗಳಿಗೆ ಬಹಳ ಹಾವಳಿಯನ್ನುಂಟುಮಾಡುತ್ತಿದೆ. ಡಿ॥ ಹೆಲ್ತ್ ಆಫೀಸರು ಬಂದಿದ್ದರು. ಆದರೆ ಜನಗಳಿಗೆ ಏನು ಹೇಳಿದರೋ ಗೊತ್ತಿಲ್ಲ. ಗ್ರಾಮ ಶಾಕೀಜಾ ವಿಷಯದಲ್ಲಿ ಸ್ಥಳಾಧಿಕಾರಿಗಳೂ, ಮ್ಯುನಿಸಿಪಲ್ ಮೆಂಬರುಗಳೂ ತೋರಿಸಿರುವ ಅಶ್ರದ್ಧೆಯೇ ಮುಖ್ಯಕಾರಣವೆಂದು ಹೇಳಬಹುದು ನಮ್ಮ ಹೊಸ ಪೋಲೀಸ್ ಇನ್ಸ್‌ಪೆಕ್ಟರ್ ಮ॥ ಕೆ ಕೃಷ್ಣರಾಯರು ಬಂದ ಲಾಗಾಯಿತು ರಾತ್ರಿ ಬೀಟು ಹೆಸರಿಗೆ ಮಾತ್ರ ಇದ್ದು ಈಗ ಸರಿಯಾಗಿ ನಡೆಯುತ್ತಿದೆ. ಇಲ್ಲಿ ಸುಮಾರು 2 ವರುಷಗಳಿಂದ ಇದ್ದ ಡಾಕ್ಟರು ಕೆನ್ನಪ್ಪ ಮೊದಲಿಯಾರ್‍ರಿಗೆ ದೊಡ್ಡಬಳ್ಳಾಪು ರಕ್ಕೆ ವರ್ಗವಾಗಿ ಇವರಿಗೆ ಬದಲಾಗಿ ಮ॥ ಪಾಲ್ ಪೀಟರವರು ಬಂದಿದಾರೆ.

ಒಳದೇಶದ ವೃತ್ತಾಂತಗಳು.

ಈ ವಾರ ನಮ್ಮ ಪತ್ರಿಕೆಯು ಹತ್ತು ಪುಟಗಳುಳ್ಳದ್ದಾಗಿದೆ.

* * *

ಬೆಂಗಳೂರು ಸಿಟಿಯಲ್ಲಿರುವ ಅಚ್ಚಿನ ಕಾರ್ಖಾನೆಗಳ ಮುಖಂಡರು ಸಭೆ ಸೇರಿ ಒಂದು ಸಂಘವನ್ನು ಏರ್ಪಾಡುಮಾಡಿಕೊಂಡಿದಾರೆ.

* * *

ಈ ವರುಷದ ದಸರಾ ಪ್ರದರ್ಶನಕ್ಕೆ ಸಂಬಂಧಪಟ್ಟ ಜಿಮ್ನಾಸ್ಟಿಕ್ ಆಟಗಳು ತಾ. 9 ನೇ ಶುಕ್ರವಾರ ಪ್ರದರ್ಶನದ ಮೈದಾನಿನಲ್ಲಿ ನಡೆಯುವುದಾಗಿ ನಿಷ್ಕರ್ಷೆ ಯಾಗಿದೆ.

* * *

ಕಳೆದ ಗುರುವಾರ ಮಧ್ಯಾಹ್ನ ಮೂಡಿಗೆರೆ ತಾಲ್ಲೂಕ್ ಕಚೇರಿಯಲ್ಲಿ ಯುದ್ಧದ ರಿಲೀಫ್ ಫಂಡಿಗೆ ಚಂದಾ ಕೂಡಿಸುವುದಕ್ಕಾಗಿ ಒಂದು ಮೀಟಿಂಗ್ ನಡೆದು ಕಮಿಟಿ ಏರ್ಪಾಟಾಗಿದೆ.

* * *

ಬೆಂಗಳೂರು ತಾಲ್ಲೂಕು ಗೊಟ್ಟಿಗೆರೆ ಗ್ರಾಮದಲ್ಲಿ ಚಿರತೆಯಿಂದ ಗಾಯ ಪಟ್ಟು ಚಿಕಿತ್ಸೆಗಾಗಿ ಬೆಂಗಳೂರಿಗೆ ಬಂದಿದ್ದ ರಾಮಯ್ಯನೆಂಬಾತನು ವಾಣಿಯಾ ಗದೆ ಆಸ್ಪತ್ರೆಯಲ್ಲಿ ಕಾಲವಾದನು.

* * *

ನಮ್ಮ ಯುವರಾಜರವರ ಸ್ನೇಹಿತರಾದ ಬೊಂಬಾಯಿ ಸಾಹುಕಾರ್ ಮ॥ ನಗಿನ್‌ದಾಸ್ ಶೇಟರವರು ಪರಿವಾರ ಸಮೇತ ರಾಜಧಾನಿಗೆ ಬಂದು ನವರಾತ್ರಿ ಉತ್ಸವಗಳಲ್ಲಿ ಭಾಗಿಗಳಾಗಿದಾರೆ.

* * *

ಮಧ್ಯ ಹಿಂದುಸ್ಥಾನಕ್ಕೆ ಸೇರಿದ ಪನ್ನಾ ಸಂಸ್ಥಾನದ ಮಹಾರಾಜರವರು ಒಂದು ತಿಂಗಳಿಂದ ಬೆಂಗಳೂರಿನಲ್ಲಿ ಬ್ರಿಟಿಷ್ ರೆಸಿಡೆಂಟರ ಆತಿಥ್ಯದಲ್ಲಿದ್ದು ಕಳೆದ ವಾರ ವಾಪಸು ದಯಮಾಡಿದರು.

* * *

ತಿಪ್ಟೂರಿನಲ್ಲಿ ಮ॥ ಗ್ರಂಧಿಗೆ ಪುಂಡಯ್ಯನವರ ಪತ್ನಿಯು ಕಳೆದ ವಾರ ಕಾಲವಾದರೆಂತಲೂ, ಈಕೆ ತುಂಬಾ ಪರೋಪಕಾರಿಯಾಗಿದ್ದದ್ದಲ್ಲದೆ ಮಕ್ಕಳ ರೋಗಕ್ಕೆ ಚೆನ್ನಾಗಿ ಚಿಕಿತ್ಸೆ ಮಾಡುವುದರಲ್ಲಿ ಹೆಸರು ಪಡೆದಿದ್ದರೆಂದೂ ತಿಳಿದು ಬಂದಿದೆ.

* * *

ಬೆಂಗಳೂರು ಸಿಟಿಯಲ್ಲಿ ಅಂಗಡಿಗಳಲ್ಲೂ ಮಾರ್ಕೆಟ್ಟಿನೊಳಗೂ ಬಿಕರಿ ಮಾಡಲ್ಪಡುವ ಆಹಾರ ಪದಾರ್ಥಗಳು, ತರಕಾರಿ, ಹಣ್ಣು ಹಂಪಲುಗಳನ್ನು ಆಗಿಂದಾಗ್ಗೆ ಅಜಮಾಯಿಷಿ ಮಾಡುವುದಕ್ಕೋಸ್ಕರ ಮ್ಯುನಿಸಿಪಾಲಿಟಿಯವರು ಪ್ರತ್ಯೇಕವಾದ ಒಬ್ಬ ಇನ್ಸ್‌ಪೆಕ್ಟರನ್ನು ನೇಮಕ ಮಾಡಿರುತ್ತಾರೆ.

* * *

ಕೋಲೀಸ್‌ಪೇಟೆ ತಾಲ್ಲೂಕು ಮಾಯಗಾನಹಳ್ಳಿಯಲ್ಲಿ ಗಂಧದ ತುಂಡು ಗಳನ್ನು ಕಳುವುಮಾಡಿದ್ದಕ್ಕಾಗಿ ಅಬ್ದುಲ್, ನಾಸಿ ಎಂಬಿಬ್ಬರಿಗೂ ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರು ತಲಾ 20 ರೂಪಾಯಿ ಜುಲ್ಮಾನೆ, ತಪ್ಪಿದರೆ ಒಂದು ವಾರ ಸಾದಾ ಸಜಾ ಅನುಭವಿಸಬೇಕೆಂಬ ಶಿಕ್ಷೆಯನ್ನು ವಿಧಿಸಿದರು.

* * *

ಸಾಗರದ ತಾಲ್ಲೂಕು ಆನಂದಪುರದಲ್ಲಿ ಅಮಲ್ದಾರ್ ಮ॥ ಬಿ ಟಿ ಸೀತಾರಾಮಯ್ಯನವರ ಪ್ರೋತ್ಸಾಹದಿಂದ ಕಳೆದ ವಾರ ಒಂದು ಪರಸ್ಪರಸಹಾಯ ಸಂಘವೂ, ಒಂದು ರೀಡಿಂಗ್ ರೂಮೂ ಪ್ರಾರಂಭವಾಗಿರುತ್ತವೆ. ಇವೆರಡನ್ನೂ ಸ್ಥಳೀಯ ಪ್ರಜಾಮುಖಂಡರು ಅಭಿವೃದ್ಧಿಗೆ ತಂದಾರೆಂದು ಹಾರೈಸಲ್ಪಟ್ಟಿದೆ.

* * *

ಮಳವಳ್ಳಿ ತಾಲ್ಲೂಕು ಬೆಳಕವಾಡಿಯ ಪರಸ್ಪರಸಹಾಯ ಸಂಘದ ಜನರಲ್ ಮೀಟಿಂಗು ನಡೆದು ಷೇರುದಾರರಿಗೆ ಶೇಕಡಾ 7½ ಯಂತೆ ಬಡ್ಡಿ ಹಂಚಬೇಕೆಂದು ನಿಶ್ಚಯವಾಯಿತು. ಆಗ ಮ॥ ಸುಬ್ಬಸಾಮಿ ಅಯ್ಯರವರು ಹತ್ತಿ ತುಪ್ಪದ ಕಾರ್ಖಾನೆ ವಿಚಾರವನ್ನು ಸಭಿಕರಿಗೆ ವಿವರಿಸಿದರೆಂದೂ, ಅನೇಕರು ಷೇರುಗಳನ್ನು ಪಡೆದುಕೊಂಡರೆಂದೂ ತಿಳಿದು ಬಂದಿದೆ.

* * *

ಬೆಂಗಳೂರು ಸಿಟಿ ಬಸವನಗುಡಿ ಬಡಾವಣೆಯಲ್ಲಿ ಮ॥ ಸಿ ವಿ. ಗೋವಿಂದ ರಾಯರು ಒಂದು ಕರೋಹಟ್ಟಿಯನ್ನು ಪ್ರಾರಂಭಿಸಿ ಪ್ರಜೆಗಳಿಗೆ ಒಳ್ಳೇ ಹಾಲು ಮುಂತಾದದ್ದು ಒದಗಿಸಬೇಕೆಂದು ಪ್ರಯತ್ನಪಟ್ಟಿದಾರೆ. ಇದಕ್ಕೆ ಬೇಕಾಗುವ ನಿವೇಶನಕ್ಕೆ ಸಾಲಿಯಾನಾ 6 ರೂಪಾಯಿ ಮಾತ್ರ ಮ್ಯುನಿಸಿಪಲ್ ತೆರಿಗೆ ಹಾಕ ಬೇಕೆಂದು ಮ್ಯುನಿಸಿಪಾಲಿಟಿಯವರು ಒಪ್ಪಿಕೊಂಡಿದಾರೆ.

* * *

ಯುದ್ಧದ ರಿಲೀಫ್ ಫಂಡಿಗಾಗಿ ಚಿಕ್ಕಬಳ್ಳಾಪುರದಲ್ಲಿ ರೂ. 275-1-11 ಪೈ; ಚನ್ನಪಟ್ಟಣದಲ್ಲಿ ರೂ. 285 ; ಗುಬ್ಬಿಯಲಿ ರೂ 100 ; ಮಾಗಡಿಯಲ್ಲಿ ರೂ. 18-4-0, ಈ ಪ್ರಕಾರ ಚಂದಾ ವಸೂಲಾಗಿದೆ. ಈ ಚಂದಾ ಪಟ್ಟಿಗಳು ನಮಗೆ ತಲಪಿರುವವು. ಸ್ಥಳಸಂಕೋಚದಿಂದ ಚಂದಾ ಕೊಟ್ಟ ದೊಡ್ಡ ಮನುಷ್ಯರ ಹೆಸರುಗಳನ್ನೆಲ್ಲಾ ಪ್ರಕಟಿಸಲು ಸಾಧ್ಯವಾಗಲಿಲ್ಲವೆಂದು ವಿಷಾದಿಸುತ್ತೇವೆ.

* * *

ಯುದ್ಧಭೂಮಿಯಲ್ಲಿ ಗಾಯಪಟ್ಟ ಸಿಪಾಯಿಗಳಿಗೆ ಉಪಯೋಗಿಸುವಂಥಾ ಬಟ್ಟೆಬರೆಗಳನ್ನು ಕೂಡಿಸಿ ಕಳುಹಿಸುವುದಕ್ಕಾಗಿ ಹಾಸನದ ಡೆಪ್ಯುಟಿ ಕಮಿಷನರ್ ರವರ ಪತ್ನೀರಾದ ಮಿಸೆಸ್ ವೆದರಾಲ್ ರವರು ಸ್ತ್ರೀಯರ ಕೂಟವನ್ನು ನಡಿಸಿ, ಸ್ತ್ರೀಯರಿಂದ 1,500 ರೂಪಾಯಿ ತನಕ ಚಂದಾ ಕೂಡಿಸಿದರು ಹಾಸಿಗೆ, ಹೊದ್ದಿಕೆ, ಮುಸ್ಸುಲಹಾಸಿಕೆ, ಕಾಲುಚೀಲ, ಚೌಕ, ನಡುಕಟ್ಟು, ಜುಬ್ಬ, ಜೋಡು, ಟೋಪಿ, ಈ ಮೊದಲಾದವುಗಳಲ್ಲಿ ಕೆಲವನ್ನು ಅಲ್ಲೇ ತಯಾರ್ಮಾಡಿಸಿ ಕೆಲವನ್ನು ಕೊಂಡು ತರಿಸಿ, ಅವನ್ನೆಲ್ಲಾ ಒಂದು ದಿನ ಪ್ರದರ್ಶನಮಾಡಿ ಪೆಟ್ಟಿಗೆ ಗಳಿಗೆ ಭರ್ತಿಮಾಡಿಸಿ ಕಳುಹಿಸುವ ಏರ್ಪಾಡು ಮಾಡಿದಾರೆ.

* * *

ರಾಜಧಾನಿಯ ಕುದುರೆ ಜೂಜಿನಬೋರೆ ಮೈದಾನಿನಲ್ಲಿ ನೆನ್ನೆ ಬೆಳಿಗ್ಗೆ ಮ ಧ್ಯಾಹ್ನ ಜೀವರಾಶಿಗಳ ಪ್ರದರ್ಶನ ನಡೆಯಿತು ಈ ದಿನ ಸಾಯಂಕಾಲ ಬಹು ಮಾನಕ್ಕೆ ಅರ್ಹವಾದ ಪ್ರಾಣಿಗಳನ್ನು ಪ್ರದರ್ಶನಮಾಡಿದ ಮೇಲೆ ಶ್ರೀಯುವ ಮಹಾ ರಾಜರವರು ಬಹುಮಾನಗಳನ್ನು ದಯಪಾಲಿಸುತ್ತಾರೆ. ಸರ್ದಾರ್ ಕಾಂತರಾಜ ಅರಸಿನವರು ಫಲಾಹಾರಾದಿಗಳನ್ನು ದೊಡ್ಡಮನುಷ್ಯರಿಗೆಲ್ಲಾ ಕೊಡಿಸುವರು.

* * *

ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಇಂಗ್ಲಿಷ್ ಪಂಡಿತರಾದ ಮ॥ ಎಸ್. ಕೃಷ್ಣಸಾಮಯ್ಯಂಗಾರ್‍ರಿಗೆ ಮದರಾಸ್ ಯೂನಿವರ್ಸಿಟಿಯವರು ಚರಿತ್ರೆ ಬೋಧ ಕರ ಕೆಲಸವನ್ನು ಕೊಟ್ಟು 5 ವರುಷದ ಮಟ್ಟಿಗೆ ನೇಮಕ ಮಾಡಿಕೊಂಡಿದಾರೆ. ಈ ಹೊಸ ಕೆಲಸದಲ್ಲಿ ಅವರಿಗೆ ತಿಂಗಳಿಗೆ 600 ರೂಪಾಯಿ ಸಂಬಳ ಸಲ್ಲತಕ್ಕ ದ್ದೆಂದೂ, ಪ್ರತಿ ವರುಷವೂ 50 ರೂಪಾಯಿಯಂತೆ ಬಡತಿ ಕೊಡಲ್ಪಡುವುದೆಂದೂ ನಿಷ್ಕರ್ಷೆಯಾಗಿದೆ.

* * *

ಕಳೆದ ಗುರುವಾರ ಸಾಯಂಕಾಲ ಶ್ರೀಮದ್ಯುವರಾಜರವರು ಕೋಆಪರ ಟಿವ್ ಮಹಾ ಸಭೆಯ ಮೆಂಬರುಗಳನ್ನೂ, ರಾಜಧಾನಿಯ ಎಲ್ಲಾ ಕೋಮುಗಳ ದೊಡ್ಡ ಮನುಷ್ಯರನ್ನೂ, ಅಧಿಕಾರಿಗಳನ್ನೂ ಖಾಸಾ ಬಂಗಲೆಯ ಮೈಗಾಲಯಕ್ಕೆ ಕರಸಿಕೊಂಡು ಅವರಿಗೆಲ್ಲಾ ನಾನಾ ವಿನೋದಗಳನ್ನೂ ಫಲಾಹಾರಗಳನ್ನೂ ಏರ್ಪಾ ಡುಮಾಡಿದ್ದರು. ಸುಮಾರು 700 ಮಂದಿ ದೊಡ್ಡ ಮನುಷ್ಯರು ಈ ಸಂತೋಷ ಕೂಟದಲ್ಲಿ ಸೇರಿ ಆನಂದಪಟ್ಟರು.

* * *

ಒಬ್ಬ ಬಾತ್ಮಿದಾರರಿಂದ.—ಕಳೆದ ಭಾನುವಾರ ರಾತ್ರಿ ರಾಜಧಾನಿಯ ಶ್ರೀರಾಮಪೇಟೆ ದುರ್ಗಯ್ಯನಕೊಳದ ನಲ್ಲಿಯ ಹತ್ತಿರ ಒಬ್ಬ ಹೆಂಗಸು ಮಗು ವಿಗೆ ನೀರು ಕುಡಿಸುತ್ತಿದ್ದಾಗ ಸೀತಾರಾಮನೆಂಬುವನು ಅವಳನ್ನು ಹೊಡೆದದ್ದ ಲ್ಲದೆ ಅವಳು ಗಾಬರಿಯಿಂದ ಮ॥ ದಳ್ಳಾಳಿ ವೆಂಕಟರಾಮಯ್ಯನವರ ಮನೆಯೊ ಳಕ್ಕೆ ಹೋಗಿ ಸೇರಿಕೊಂಡಾಗ್ಯೂ ಅವನು ಅವಳ ಹಿಂದೆಯೇ ನುಗ್ಗಿ ಹೋದನು ಮ॥ ವೆಂಕಟರಾಮಯ್ಯನವರು ಅವನನ್ನು ಹಿಡಿದು ಪೋಲೀಸಿಗೆ ಒಪ್ಪಿಸಿದಾರೆ.

* * *

ಬೆಂಗಳೂರಿನಿಂದ ನೆಲಮಂಗಲ, ಕೋಲೂರು ಮಾರ್ಗವಾಗಿ ಕುಣಿಗಲಿಗೆ ಹಬೆಯ ಸಹಾಯದಿಂದ ಹೋಗಿ ಬರುವ ಟ್ರಾಮ್‌ವೇ ಎಂಬ ಗಾಡಿ ರಸ್ತೆಯನ್ನು ಹಾಕುವುದಕ್ಕೆ ಬೆಂಗಳೂರಿನಲ್ಲಿ ಒಂದು ಕಂಪನಿ ಏರ್ಪಾಟಾಗಿದೆ. ಸರ್ಕಾರದ ವರು ಈ ಕಂಪನಿಯವರಿಗೆ ರಸ್ತೆ ಸರ್ವೇಮಾಡಲು ಅಧಿಕಾರ ವಹಿಸಿರುವುದಲ್ಲದೆ ಆ ರಸ್ತೆಗಾಗಿ ಬೇಕಾಗುವ ಜಮೀನುಗಳು ಸರ್ಕಾರಿ ಕೆಲಸಕ್ಕೆ ಕೊಂಡುಕೊಳ್ಳ ಲ್ಪಡುವವೆಂದು ಪ್ರಕಟಿಸಿರುತ್ತಾರೆ.

* * *

ನಮ್ಮ ಸರ್ಕಾರದವರು ತುಮಕೂರು ಡಿಸ್ಟ್ರಿಕ್ಟಿಗೆ ಸೇರಿದ ಮುಂದೆ ಹೇ ಳುವ 18 ಸ್ಥಳಗಳಲ್ಲಿ ಬರುವ ಜನವರಿ ಲಾಗಾಯಿತು ಗ್ರಾಮ ಪಂಚಾಯತಿ ಕೋರ್ಟುಗಳನ್ನು ಪ್ರಾರಂಭಿಸುವುದಾಗಿ ತಿಳಿದು ಬಂದಿದೆ ಆ ಗ್ರಾಮಗಳು ಯಾವವೆಂದರೆ—ಹುಲಿಯೂರುದುರ್ಗ?, ಮೆಳೆಕೋಟೆ, ಬೆಳ್ಳಾವಿ, ಬಿಜವರ, ಮಿಡಿಗೇಶಿ, ಕಡಗತ್ತೂರು, ದೊಡ್ಡಮಾಳೂರು, ಮ್ಯಾದನಹಳ್ಳಿ, ಚಿಕ್ಕದಲವತ್ತ, ಮಾಗೋಡು, ಕುಂಟೆಗೌಡನಹಳ್ಳಿ, ಬುಕ್ಕಪಟ್ಟಣ, ತಾವರೆಗೆರೆ, ಬಾಗೂರು, ಕಣತೂರು, ಹುಲಿ ಕಲ್ಲು, ಕೊರನಗೆರೆ, ಹೊಳವನಹಳ್ಳಿ.

* * *

ಕಳೆದ ಗುರುವಾರ ರಾತ್ರಿ ರಾಜಧಾನಿಯಲ್ಲಿ ಮ್ಯುನಿಸಿಪಲ್ ಕೌನ್ಸಿಲರಾದ ಸಾಹುಕಾರ್ ಮ॥ ಎಂ. ನರಸಿಂಹಸ್ವಾಮಿಯವರ ಮಾತೃಶ್ರೀಯವರು ವೃದ್ಧಾ ಪ್ಯದ ದೆಸೆಯಿಂದ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ. ಈಕೆ ತುಂಬಾ ದೇವಭಕ್ತರಾಗಿ ಅನೇಕ ಬಡಬಗ್ಗರಿಗೆ ನಾನಾ ರೀತಿಯಲ್ಲಿ ಸಹಾಯಮಾಡುತ್ತಾ ಸತ್ಕಾರ್ಯನಿರತರಾಗಿದ್ದರು. ಇಂಥವರ ಆಶ್ರಯ ತಪ್ಪಿಹೋದದ್ದಕ್ಕಾಗಿ ಹಲವ ರು ಸಂಕಟಪಡುತ್ತಾರೆ. ಮರುದಿನ ಬೆಳಿಗ್ಗೆ ಶವಸಂಸ್ಕಾರವೇ ಮುಂತಾದ ಕ್ರಿಯೆ ಗಳು ಜರುಗಿದವು.

* * *

ಅರಕಲಗೂಡು ತಾಲ್ಲೂಕು ರಾಮನಾಥಪುರದ ಹೋಬಳಿ ಅಸಂದೂರು ಗ್ರಾಮದ ಹತ್ತಿರ ಇರುವ ನಾಲ್ಕಾಳುದ್ದದ ಒಂದು ಭಾರೀ ಹುಣಿಸೇಮರಕ್ಕೆ ಸಂ ಗರಕೆಟ್ಟಿ ಹಳ್ಳಿಯ ಹನುಮಂತನೆಂಬುವನು ಕಾಡುಬೆಕ್ಕನ್ನು ಹಿಡಿಯಬೇಕೆಂದು ಹತ್ತಿದ್ದು ಇಳಿಯುವಲ್ಲಿ ಆ ಮರದ ಒಂದು ದೊಡ್ಡ ಪೊಟ್ರೆಯೊಳಕ್ಕೆ ಬಿದ್ದು ಬರಲಿಕ್ಕಾಗದೆ ಅದರೊಳಗೇ ಒಂದು ರಾತ್ರಿಯನ್ನೂ ಒಂದು ಮಧ್ಯಾಹ್ನವನ್ನೂ ಕಳೆದನು. ಬಳಿಕ ಯಾರೋ ಅವನ ಸಂಕಟವನ್ನು ಕೇಳಿ ಆ ಪೊಟ್ರೆಯಿಂದ ಹೊರಕ್ಕೆ ತೆಗೆದು ಕರೆದುತಂದರೆಂದು ಒಬ್ಬ ಬಾತ್ಮಿದಾರರು ತಿಳಿಸುತ್ತಾರೆ.

* * *

ಕಳೆದ ಭಾನುವಾರ ಮಧ್ಯಾಹ್ನ ಬ್ರಿಟಿಷ್ ರೆಸಿಡೆಂಟರವರು ಬೆಂಗಳೂರಿನಿಂದ ಮೋಟರಿನಲ್ಲಿ ರಾಜಧಾನಿಗೆ ನವರಾತ್ರಿ ಉತ್ಸವದ ನಿಮಿತ್ತ ದಯಮಾಡಿದರು. ಯೂರೋಪಿಯನ್ ಅತಿಥಿಗಳು ಈ ಸಲ ಬಹಳ ಸ್ವಲ್ಪವಾಗಿ ಬಂದಿದಾರೆ. ಸೋ ಮವಾರ ಸಾಯಂಕಾಲ ಅರಮನೆಯಲ್ಲಿ ಯೂರೋಪಿಯನ್ ದರ್ಬಾರು ನಡೆ ಯಿತು. ಪದ್ಧತಿಯ ಪ್ರಕಾರ ಆ ದಿನ ಉತ್ಸವಗಳೆಲ್ಲಾ ಕ್ರಮವಾಗಿಯೂ ಸಂ ತೋಷಪ್ರದವಾಗಿಯೂ ಬೆಳೆದವು. ಬ್ರಿಟಿಷ್ ರೆಸಿಡೆಂಟರವರು ಅರಮನೆಗೆ ದಯ ಮಾಡಿದಾಗಲೂ, ವಾಪಸು ಚಿತ್ತೈಸಿದಾಗಲೂ ತೋಪು ಸಲಾಮ್ ಮುಂತಾದ ಮರ್ಯಾದೆಗಳು ನಡಿಸಲ್ಪಟ್ಟವು ಬಾಣ ಬಿರುಸುಗಳು ಅಷ್ಟೇನೂ ಹೆಚ್ಚಾಗಿ ಆಗ ಲಿಲ್ಲ ದೀಪೋತ್ಸವದ ವೈಭವವು ಅತ್ಯಂತ ನೇತ್ರಾನಂದಕರವಾಗಿತ್ತು. ಮರು ದಿನ ಅಂದರೆ ಮಂಗಳವಾರ ಬೆಳಿಗ್ಗೆ ವಿಜಯದಶಮಿ ನಿಮಿತ್ತ ಪಟ್ಟದಾನೆ ಕುದುರೆ ಗಳು ಮೆರವಣಿಗೆಯಲ್ಲಿ ಸಕಲ ಮರ್ಯಾದೆಗಳೊಡನೆ ಅರಮನೆಯಿಂದ ದೊಡ್ಡಪೇ ಟೆಯ ಮಾರ್ಗವಾಗಿ ಬನ್ನೀ ಮಂಟಪಕ್ಕೆ ಕಳುಹಿಸಲ್ಪಟ್ಟವು. ಆ ದಿನ ಸಾಯಂ ಕಾಲ ಶ್ರೀಮನ್ ಮಹಾರಾಜರವರು ಶ್ರೀಮದ್ಯುವರಾಜರವರೊಡನೆ ಆನೆಯ ಮೇಲೆ ಭಂಗಾರದ ಅಂಬಾರಿಯಲ್ಲಿ ಕುಳಿತು ವಿಜಯ ಯಾತ್ರೆಯ ನಿಮಿತ್ತವಾದ ಉತ್ಸವ ದಲ್ಲಿ ಚಿತ್ತೈಸಿ ಬನ್ನಿ ಪೂಜೆ ಮುಂತಾದ್ದನ್ನು ಬೆಳಸಿ ಸೈನ್ಯದ ಕವಾತನ್ನು ಪರಾಂ ಬರಿಸಿಕೊಂಡು ರಾತ್ರಿ 9½ ಗಂಟೆಗೆ ಅರಮನೆಗೆ ಬಿಜಮಾಡಿಸಿದರು. ಪದ್ಧತಿಯ ಪ್ರಕಾರ ಈ ಉತ್ಸವವು ಅತ್ಯಂತ ನೇತ್ರಾನಂದಕರವಾಗಿ ಬೆಳೆಯಿತು. ಈ ವರುಷ ನೋಟಕರ ಜನಸಂದಣಿಯು ಅಷ್ಟು ವಿಶೇಷವಾಗಿರಲಿಲ್ಲವೆಂದು ಕಂಡುಬಂತು.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

ಸೆಪ್ಟಂಬರ್ 17 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ.

(1) ಷೇರು ಮೊಬಲಗು	ರೂ. 9,93,266
(2) ಡಿಪಾಜಿಟ್ಟುಗಳು	,, 20,20,197
(3) ಇತರೆ	,, 17,766
(ಆಡಿಟ್, ಮಾಡಲ್ಪಟ್ಟಿರುತ್ತೆ.) ಜುಮ್ಲಾ	ರೂ. 30,31,217

(1) ಕೈಯಲ್ಲಿ, ಬ್ಯಾಂಕುಗಳಲ್ಲಿರುವ ಹಣ	ರೂ. 6,02,814
(2) ಬಾಕಿ ಮತ್ತು ಇತರ ಸಾಲಗಳು	,, 17,76,064
(3) ಡಿಸ್ಕಾಂಟು ಮಾಡಿದ ವಾಯಿದೆ ಹುಂಡಿಗಳು	,, 2,36,609
(4) ಇನ್ವೆಸ್ಟ್ಮೆಂಟುಗಳು	,, 2,50,000
(5) ಏಜೆನ್ಸಿಗಳಲ್ಲಿರುವ ಮೊಬಲಗು	,, 85,585
(6) ಬ್ಯಾಂಕಿನಲ್ಲಿರುವ ಸಾಮಾನುಗಳು	,, 11,688
(7) ಇತರೆ	,, 9,657
(ಆಡಿಟ್, ಮಾಡಲ್ಪಟ್ಟಿರುತ್ತೆ.) ಜುಮ್ಲಾ	ರೂ. 30,31,217

ಡಬ್ಲಿಯು. ಸಿ. ರೋಸ್, ಮ್ಯಾನೇಜರ್.

ಸೆಪ್ಟಂಬರ್ ಮಹೋತ್ಸವದ ಕೈ ಗಡಿಯಾರ

ಅರ್ಧ ಕ್ರಯ ರೂ. 1-14-0

ಇದೇ ಸೆಪ್ಟಂಬರ್ ಹಬ್ಬದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದ ಕೈ ಗಡಿಯಾರವನ್ನು ಸೆಪ್ಟಂಬರ್ ಒಳಗೆ ತರಿಸಿಕೊಳ್ಳುವವರಿಗೆ ರೂಪಾಯಿ 1-14-0 ಆಣೆಗೆ ಕೊಡಲ್ಪಡುತ್ತೆ. [99-17]

ವಿಳಾಸ—ಪಿ. ಕೃಷ್ಣಸ್ವಾಮಿ ಮೊದಲಿಯಾರ್, ನಂ.27 ಬಂದರ್ ಬೀದಿ, ಜಿ.ಟಿ., ಮದರಾಸು.

ಮಧುರೆ ಜುನ್ನಡಿ ಅಂಚಿನ ಸೀರೆ ಅಸ್ಸಲ್ ರಕಂ ರೂ. 2-6-0. ಸ್ಟೀಲರ್ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಒಂದು ಸಿಂಗಪೂರು ರವಿಕೆಯನ್ನು ಪ್ರತಿ ಸೀರೆಗೂ ಇನಾಮಾಗಿ ಕೊಡುತ್ತೇವೆ.

ಇದು ಉಡುವುದಕ್ಕೆ ದಕ್ಷತೆಯಾಗಿಯೂ ನೋಟಕ್ಕೆ ನಯವಾಗಿಯೂ, ಬೆಲೆ ಸುಲಭವಾಗಿಯೂ ಇವೆ. ಬಣ್ಣ ಹೋಗದು. ಸೀರೆಯ ಉದ್ದ 18 ಮೊಳ. ಸುಂದರವಾದ ಸೆರಗು. ಒಂದನ್ನು ತರಿಸಿ ಪರೀಕ್ಷಿಸಿ. ವಿಳಾಸ—ಪಿ. ಕೃಷ್ಣಸ್ವಾಮಿ ಮೊದಲಿಯಾರ್, ನಂ. 27, ಬಂದರ್ ಬೀದಿ, ಜಿ. ಟಿ., ಮದರಾಸು. [99-17]

ಒಂದು ಬುದ್ಧಿಮಾತು.

ನಿಮ್ಮ ಸಹ ವಾಯುವಿನಿಂದ ಕಷ್ಟಪಟ್ಟು ಹಾಸಿಗೆಯ ಮೇಲೆಯೇ ಇದ್ದು, ವಾಸಿಯೋಗದಿಂದ ಪೀಡಿತರಾಗಿ ಔಷಧಗಳಿಂದಲೂ ಆಸ್ಪತ್ರೆಗಳ ಸೇವನೆಗಳಿಂದಲೂ ಗುಣ ಹೊಂದದೆ ಇದ್ದರೆ, ಲಿಟಲ್ಸ್ ಓರಿಯಂಟಲ್ ಬಾಂ ಎಂಬುದನ್ನು ಉಪಯೋಗಿಸುವದರಿಂದ ನಿಜವಾಗಿ ಗುಣ ಹೊಂದುವಿರಿ.

ಕೆರ್ರಿ ಪಟ್ಟಣದ ರಪ್ಬೋರ್ ಕಂಪನಿಯಲ್ಲಿ 16 ವರುಷದಿಂದ ಹಾಸಿಗೆಯ ಮೇಲೆ ಬಿದ್ದಿದ್ದ ಒಬ್ಬ ಅಂಗಡಿಯವನಿಗೆ ವಾಸಿಯಾಯಿತು. ಯೋರ್ಕ್ ನಗರದ ಷಿಪ್ಲೆಯಲ್ಲಿ 20 ವರುಷಗಳಿಂದ ಕಷ್ಟಪಡುತ್ತಿದ್ದವನು ವಾಸಿಯಾದನು. ಬ್ರಿಕ್ಟನ್ ಪಟ್ಟಣದಲ್ಲಿ 40 ವರುಷಗಳಿಂದ ಕಷ್ಟಪಟ್ಟವನೊಬ್ಬನು ಸ್ವಸ್ಥಹೊಂದಿದನು. ಚೆಸ್ಟರ್ ನಗರದಲ್ಲಿ 80 ವಯಸ್ಸಿನ ಎ. ಬಕತ್ ಎಂಬಾತನು ಹೇಳುವದು:—

"ವಾಯುವಿನಿಂದ ಅಂಗಹೀನನಾಗಿ ಭಯಂಕರವಾದ ಸ್ಥಿತಿಯಲ್ಲಿದ್ದೆ. ಎಲ್ಲಾ ವಿಧವಾದ ಔಷಧಗಳನ್ನೂ ವೈದ್ಯರನ್ನೂ ಪರೀಕ್ಷಿಸಿ, ಉತ್ತಮ ಆಸ್ಪತ್ರೆಗೂ ಹೋದೆನು. ಆದರೆ ಅವುಗಳಿಂದ ಏನೂ ಮೇಲಾಗಲಿಲ್ಲ. ಲಿಟಲ್ಸ್ ಓರಿಯಂಟಲ್ ಬಾಂ ಎಂಬುದರಲ್ಲಿ 2 ಸೀಸೆಗಳನ್ನು ಉಪಯೋಗಿಸಿದ್ದರಿಂದ ಪೂರ್ಣ ಸ್ವಸ್ಥವಾಯಿತು. ವಾಯುನೋವಿಗೆ ಕೈಕಂಡ ಔಷಧಿಯಾದ ಲಿಟಲ್ಸ್ ಓರಿಯಂಟಲ್ ಬಾಂ ಎಂಬುದನ್ನು ಉಪಯೋಗಿಸಿರಿ."

ಸೀಸೆ 1ಕ್ಕೆ 1 ರೂ. ಮೇರೆಗೆ ಎಲ್ಲಾ ಔಷಧಗಾರರಲ್ಲಿಯೂ ಸಿಗುತ್ತೆ. 101-32

ಪಾಕೆಟ್ ಲೀವರ್ ವಾಚ್.

ಇದರ ಕ್ರಯ 6 ಬಹುಮಾನ ಸಮೇತ ರೂ. 2-13-0 ಮಾತ್ರ.



ಇದು ಮಕ್ಕಳ ಆಟದ ಬೊಂಬೆಯಂತೆ ಕೆಲವು ದಿವಸಗಳು ಆಟವಾಡಿ ನಂತರ ಕೆಟ್ಟುಹೋಗುವಂಥಾ ಅಲ್ಪ ಗಡಿಯಾರವಲ್ಲ. ಶ್ರೇಷ್ಠವಾದ ಮತ್ತು ಬಹು ಪ್ರಸಿದ್ಧವಾದ ಲೀವರು ಕೆಲಸದಿಂದ ತಯಾರಾದದ್ದು, ಗಂಭೀರವಾದ ಘಂಟೆ ಮತ್ತು ಮಿನಿಟ್‌ಗಳು ಮುಳ್ಳುಗಳುಳ್ಳದ್ದು. ಬಹು ಬಲಿಷ್ಠವಾದ ಮತ್ತು ನಾಜೂಕಾದ ಯಂತ್ರಸಾಮಾನುಗಳಿಂದ ತಯಾರಾಗಿರುತ್ತೆ. ಅನೇಕ ವರುಷಗಳ ಪರಿಯಂತರ ಬಾಳಿಕೇ ಬರುವಂಥಾದ್ದು. ಆದಕಾರಣ ಆರ್ಡರುಗಳು ಬಂದು ಸುರಿಯುತ್ತಿವೆ. ಬಹುಮಾನಗಳ ತಪಸೀಲು:—1 ವಾಚ್ ಸರಪಣಿ, 2 ಉತ್ತರ ಮುಖಿ, 3 ಪರಿಮಳ ಅತ್ತರ್, 4 ಕರವಸ್ತ್ರ, 5 ಷೋಕಾದ ಉಂಗರ, 6 ನಟ್ಟು.

ವಿಳಾಸ—ಪಿ. ಆರ್. ವೆಂಕಟರಮಣ ಅಂಡ್ ಕಂಪೆನಿ,

[145-12] ನಂ. 7, ಕೋಟ್ ವೆಂಕಟಾಚಲಯ್ಯರ್ ಬೀದಿ, ಮದರಾಸು.

ಮಕ್ಕಳಿರುವ ಮನೆಗಳಲ್ಲಿಯೂ ಪ್ರಯಾಣಕಾಲದಲ್ಲಿಯೂ ಛಳಿ ಮಳೆಗಾಲಗಳಲ್ಲಿಯೂ ಮಲೆನಾಡಿನಲ್ಲಿಯೂ ಸೋಂಕುರೋಗ ಸ್ಥಳಗಳಲ್ಲಿಯೂ ಆರೋಗ್ಯವನ್ನು ಕಾಪಾಡುವುದರಲ್ಲಿ ಶ್ರೇಷ್ಠತಮವಾದ

ಶ್ರೀಕರಕಸ್ತೂರಿಮಾತ್ರೆ

ಟಿಬೆಟ್ ದೇಶದ ಕಸ್ತೂರಿ—ಅನೇಕ ಪುಟಗಳಿಂದ ತಯಾರಿಸಿದ ಲೋಹ ಭಸ್ಮ— ಚಿನ್ನದ ರೇಕು ಮೊದಲಾದವುಗಳಿಂದ ಹಿರಿಯರ ಕಾಲದಿಂದಲೂ ತಯಾರಿಸಲ್ಪಡುತ್ತಿರುವ ಈ ಶ್ರೀಕರ ಕಸ್ತೂರಿಮಾತ್ರೆಗಳು ತಾಂಬೂಲವನ್ನು ರಂಜಿಸಿ ಎಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸಿ ಬಹಳ ಹೊತ್ತಿನವರೆಗೆ ಬಾಯಿ ಘಮಘಮಿಸುವಂತೆ ಮಾಡುವವು. ಶೀತವಾಯು-ಕೆಮ್ಮು-ನೆಗಡಿ-ದಿನಜ್ವರ-ಮೂರನೆ ಜ್ವರ-ನಾಲ್ಕನೆ ಜ್ವರ-ಮಲೇರಿಯಾಜ್ವರ-ತಲೆನೋವು-ಮೈಕೈನೋವು ಮತ್ತು ಭಾರ-ಅರೋಚಕ-ಹಲ್ಲುನೋವು-ಹೊಟ್ಟೆನೋವು-ಮಲಬಂಧ-ಅಜೀರ್ಣಭೇದಿ-ಮಕ್ಕಳಿಗೆ ಸಾಮಾನ್ಯವಾಗಿ ಬರುವ ಹಕ್ಕೆಗಳ ಕೆಳತ-ಹೊಟ್ಟೆಯುಬ್ಬರ-ಮಂದಜ್ವರ-ಭೇದಿ ಮುಂತಾದವುಗಳನ್ನು ನಂಬಿಕೆಯಾಗಿ ಗುಣಪಡಿಸುತ್ತವೆ. ಒಂದು ವೇಳೆ ಈ ಮಾತ್ರೆಗಳನ್ನು ಪರೀಕ್ಷಿಸಿದರೆ ಯಾವಾಗಲೂ ಇದನ್ನೆ ತರಿಸುವರೆಂದು ನಾವು ಧೈರ್ಯವಾಗಿ ಹೇಳಬಲ್ಲೆವು. 250 ಮಾತ್ರೆ 4 ಆಣೆ. ಐದಕ್ಕೆ ಒಂದು ಇನಾಮು. ವಿ. ಪಿ. ಛಾರ್ಜಿ ಪ್ರತ್ಯೇಕ. [220-48]

ಬಿ. ವಿ. ಪಂಡಿತ್, ಸದ್ವೈದ್ಯಶಾಲಾ, ನಂಜನಗೂಡು.

ಕುಂತಳಾನಂದ ತೈಲವು.

213-2

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಿರುದಿನ ಪದಕಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ. ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಾಗಿ ಶ್ಲಾಘಿಸುವರು. ಈ ತೈಲವು ಕೂದಲನ್ನು ದಟ್ಟವಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಗೊಳಿಸುತ್ತದೆ. ಸಿಪ್ರಾರ್ಥಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದಾಗಿದೆ. ಬೆಲೆ ಬಾಟ್ಲಿಗೆ 1 ರೂಪಾಯಿ. 3 ಬಾಟಲಿಗೆ 2 ರೂಪಾಯಿ 10 ಆಣೆ. ಅಂಚೆ ಹಾಸಲು ಬೇರೆ. ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ.

ನಮ್ಮ ವಿಳಾಸ:—ಬಿ. ಎಮ್. ನಾಥ ಮತ್ತು ಕಂಪೆನಿ,

ವೇಪೇರಿ, ಮದರಾಸ್.

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು."

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು. ವಾಯು, ಕೀಲು, ಅರತಲೆ, ತಲೆನೋವುಗಳು; ಯಾವ ಕಾರಣದಿಂದ ಹುಟ್ಟುವ ಬಾಧೆಯಾಗಲಿ, ಉಬ್ಬಸ, ಹಲ್ಲುನೋವು, ಗಂಟ್ಲು ಗಾರೆನ್ನುವುದು, ಕೆಮ್ಮುಗಳು, ಶೀತನೆಗಡಿ, ಶ್ವಾಸರೋಗ, ದಬ್ಬು, ಉಳುಕು, ಛಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ. ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು. ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲು ಕೊಡಿ ಎಂದು ಕೇಳು. ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೋ. ಈ ಯುಕ್ತಿಯೋಪಾದಿ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ. ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ. ಲಕ್ಷಾಂತರ ಜನರು ಗುಣಹೊಂದಿದಾರೆ; ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ. [122-18]

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡಿ. ಇದರ ಕ್ರಯ ಬಾಟ್ಲಿಗೆ 12 ಆಣೆ; ಅಂಚೆ ವೆಚ್ಚ 4 ಆಣೆ. 3 ಅಥವಾ ಹೆಚ್ಚು ಬಾಟ್ಲು ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ. ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕಾಂಟು ಸಿಗುತ್ತೆ. ವಿಳಾಸಗಳು:—(1) ಎಸ್. ಪೀಟರ್ಸ್, 37 ವಡಮಲೆಪಿಳ್ಳೆ ಬೀದಿ, ಪುರಸವಾಕಂ, ವೇಪೇರಿ, ಮದರಾಸ್; (2) ಕೆ. ಎಸ್. ಕನ್ನಯ್ಯಶೆಟ್ಟರು, ಜನರಲ್ ಮರ್ಚೆಂಟ್, ತುಮಕೂರು.

ಅಮೃತಾಂಜನ ರಿಜಿಸ್ಟರ್ಡ್

ಇದು ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು. ಇದರ ಉಪಯೋಗದಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗವಾಯು, ಉಳುಕು, ಕೆಮ್ಮು, ಸೊಂಟದನೋವು, ಶೀತ, ಚರ್ಮ ವ್ಯಾಧಿ, ಹಲ್ಲುನೋವು, ಚೇಳು ಕಡಿತ ಮೊದಲಾದ ಎಲ್ಲಾ ತರದ ನೋವುಗಳು ಖಾತ್ರಿಯಾಗಿ ನಿಲ್ಲುವವು. ನಕಾರಿ ಔಷಧಗಳನ್ನು ಪಡೆಕೊಳ್ಳಬೇಡಿರಿ. ಈ ನಮ್ಮ ಲೋಕಪ್ರಖ್ಯಾತವಾದ ಅಮೃತಾಂಜನವನ್ನು ನಮ್ಮ ರಿಜಿಸ್ಟ್ರಿಯಾದ ಮುದ್ರೆ ಹಲವು ಭಾಷೆಗಳುಳ್ಳ ಸುಂದರವಾದ ಕರಡಿಗೆಯಲ್ಲಿ ಪ್ಯಾಕ್‌ಮಾಡಿರುತ್ತೇವೆ. ಕರಡಿಗೆ ಇಲ್ಲದ ಬಾಟ್ಲುಗಳನ್ನು ಪಡೆಕೊಳ್ಳಬೇಡಿರಿ. ಬಾಟ್ಲು ಒಂದರ ಕಿಮ್ಮತ್ತು 0-8-0. ಡಜನ್ 1 ಕ್ಕೆ 5-4-0. ವಿ. ಪಿ. ಪ್ರತ್ಯೇಕ. ಗಜಕರ್ಣದ ಮುಲಾಮು 0-6-0. ದಂತಮಂಜನ 0-2-0. ಮೋಹಿನಿ ತೈಲ 0-12-0. ಹಜ್ಜ ಮುಲಾಮು 0-3-0. ಜುಲಾಬು ಮಾತ್ರೆ 0-8-0. ಸುಂದರಿ ಮುಲಾಮು 0-8-0. ಕ್ಯಾಟಲಾಗಿಗೆ ಬರೆಯಿರಿ. [62-30]

ವ್ಯಾಪಾರಸ್ಥರಿಗೆ ಬೆಟೋ ಕಮಿಷನ್ ದೊರಕುವದು.

ಅಮೃತಾಂಜನ ಡಿಪೋ,

ಫೋರ್ಟ್. ಮುಂಬಯಿ, ಮತ್ತು ೯ ಜಹಂಗೀರ್ ಸ್ಟ್ರೀಟ್, ಮದ್ರಾಸು.

ಅದ್ಭುತವಾದ ಬಲಕಾರಿ ಮತ್ತು ಬಾಯಿನಾತಹರ.

ಜಿನತಾನ

ಜೀರ್ಣಶಕ್ತಿ ಹುಟ್ಟಿಸುವುದರಲ್ಲಿ ಇದಕ್ಕೆ ಸಮಾನವಾದದ್ದು ಇನ್ನೊಂದಿಲ್ಲ; ಅನ್ನಕೋಶವು ಎಷ್ಟೇ ದುರ್ಬಲವಾಗಿದ್ದರೂ ಅದರ ಕಾರ್ಯಗಳನ್ನು ಹೇರುಪೇರು ಮಾಡುವದಿಲ್ಲ. ಇದರ ಸೇವನೆಯಿಂದ ಎಲ್ಲಾ ರೋಗಗಳನ್ನೂ ಅಂಟದಂತೆ ತಡೆಯಬಲ್ಲದು. ಈ ಭಾಗದಲ್ಲಿ ಇದರ ಗುಣವು ಬಹು ಫಲಕಾರಿಯಾಗಿದೆ. ಇದಲ್ಲದೆ ಇದನ್ನು ಸೇವಿಸುವವರ ಬಾಯಿಯಲ್ಲಿ ಎಲ್ಲಾ ತರದ ದುರ್ನಾತವೂ ಹೋಗಿ ಸುಗಂಧವು ಹುಟ್ಟಿ ಹರ್ಷಕರವಾಗಿದ್ದೀತು.

ಗಂಟಲಿನ ನರಗಳು ಇದರ ಸೇವನೆಯಿಂದ ಬಹಳ ಬಲಗೊಳ್ಳುವವು. ಇದರ ಗುಣವನ್ನು ನೋಡಿ ಉಪನ್ಯಾಸಕರೂ, ನಾಟಕಧಾರಿಗಳೂ, ಸಂಗೀತಗಾರರೂ, ಬೋಧಕರೂ, ವಾಚಾಳಕ ಪ್ರಿಯರೂ ಈ ಮಾತ್ರೆಗಳನ್ನು ಬಹಳವಾಗಿ ಮೋಹಿಸಿ ಪ್ರೀತಿಯಿಂದ ಉಪಯೋಗಿಸುತ್ತಿದಾರೆ.

ಈ ಮಾತ್ರೆಗಳನ್ನು ಜಪಾನ್‌ನಲ್ಲಿರುವ ಒಸಾಕಾ ಪಟ್ಟಣದ ಮೋರಿಷಿತಾ ಕಂಪನಿಯವರು ತಯಾರ್ಮಾಡುತ್ತಾರೆ.

ಈ ಮಾತ್ರೆಗಳ	30 ಮಾತ್ರೆಗಳುಳ್ಳ ಪೊಟ್ಟಣಕ್ಕೆ 1½ ಆಣೆ. 65 ಮಾತ್ರೆ ಪೊಟ್ಟಣಕ್ಕೆ 3 ಆಣೆ.
ಕ್ರಯ	195 ,, ಡಬ್ಬಾ ಸಮೇತ 8 ಆಣೆ. 455 ,, ಕನ್ನಡಿ ಡಬ್ಬಾಕ್ಕೆ 1 ರೂಪಾಯಿ.

ಎಲ್ಲಾ ಅಂಗಡಿಗಳಲ್ಲಿಯೂ ವಿಕರಿಯಾಗುವುದು.

ಸೋಲ್ ಏಜಂಟರು:—

ಎಸ್. ವೈದ್ಯ ಮತ್ತು ಕಂಪನಿ,

ಪಾರ್ಕ್‌ಟೌನ್, ಮದ್ರಾಸ್.

[156-12]

ಮಲೇರಿಯಾ

ಮತ್ತು ಹವಾ ದೆಸೆಯಿಂದುಂಟಾಗುವ ಎಲ್ಲಾ ತರದ ಜ್ವರವೂ

ಈಸಾನೊಫೆಲ್

ಯ ಸೇವನೆಯಿಂದ ಬೇಗನೆ ನಿವಾರಣೆಯಾಗುತ್ತೆ.

ಕ್ವಿನೈನ್ ಜ್ವರವನ್ನು ಅಣಗಿಸುವುದು ; ಆದರೆ ನಮ್ಮ ಈ ಸಾನೊಫೆಲೆಯು ೧೬ ದಿನದಲ್ಲಿ ವಾಸಿಮಾಡುತ್ತದೆ. ಹಗಲು ರಾತ್ರಿ ಒಂದೊಂದು ಮಾತ್ರೆ ತೆಗೆದುಕೊಳ್ಳುತ್ತಾ ಬಂದರೆ ಜ್ವರ ಬಾರದಂತೆ ಸಂರಕ್ಷಣೆ ಮಾಡಬಲ್ಲದು.

ಜ್ವರವು ಸಂಪೂರ್ಣವಾಗಿ ವಾಸಿಯಾಗುವುದಕ್ಕೆ ಎರಡು ಬಾಟ್ಲಿ ಔಷಧ ಹದಿನೈದು ದಿನಕ್ಕೆ ಸಾಕು.

ಬಾಟ್ಲಿಗೆ ಕ್ರಯ 2 ರೂಪಾಯಿ.

ಬಿಕರಿಯಾಗುವ ಸ್ಥಳಗಳು.

1. ಫಾಸ್ಟರ್ ಕಂಪನಿ, ಕೆಮಿಸ್ಟ್ಸ್, ಬೆಂಗಳೂರು ;
2. ಬಿ. ಜಿ. ಗೋರಿಯೋ ಕಂಪನಿ, ವಾಲೆಸ್ ಬೀದಿ,

[172–8] ಬೊಂಬಾಯಿ ;

ಇದಲ್ಲದೆ

ಎಲ್ಲಾ ಔಷಧ ಮಾರಾಟದ ಷಾಪಿನಲ್ಲೂ ಸಿಕ್ಕುವುದು.

ಟೋಪಿಗಳು: ಟೋಪಿಗಳು.

ಉತ್ತಮವಾದ ಟೋಪಿಗಳು ಹಾಸನದಲ್ಲಿ ದೊರೆಯುತ್ತವೆ.

ವಿವಿಧ ತರದ ಉಣ್ಣೆ ಧಾತದಿಂದ ತಯಾರಿಸಲ್ಪಡುವ ಸಾಮಾನುಗಳಿಗೂ, ಮಾದರಿಗಳಿಗೂ, ದರಗಳಿಗೂ ಮ್ಯಾನೇಜರವರಿಗೆ ಬರೆದು ತಿಳಿದುಕೊಳ್ಳಬಹುದು.

Men's socks, vests and various knitted articles.

ಮ್ಯಾನೇಜರ್, ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ.

Apply :—MANAGER, WOOL WORKS,

[201-4] GIRLS' INDUSTRIAL SCHOOL, HASSAN.

ಓರಿಯಂಟಲ್ ಗಾ॥ ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು............ರೂ. 4,45,00,000

ಕಂಪನಿಯಿಂದ ಪಾವತಿ ಆಗಿರುವದು ,, 4,00,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ.—ಮಿ॥ ಎಂ. ಎಸ್. ರೆಡ್ಡಿ, ಚೀಫ್ ಏಜೆಂಟ್, ಬೆಂಗಳೂರು; ಮ॥ ಎಂ. ಎಸ್. ನಂಜಪ್ಪನವರು ಅಥವಾ ಮ॥ ವೆಂಕಟಪತಯ್ಯನವರು, ಕಂಪನಿ ಏಜಂಟರು, ಮೈಸೂರು; ಅಥವಾ

[194-63] ಆರ್ಕ್ಬಿಂಗ್ ಬ್ರ್ಯಾಂಚ್ ಸೆಕ್ರೆಟರಿ, ಮದರಾಸ್

MADRAS SNUFF.

ಬಹಳ ಮೇಲಾದ ನಸ್ಯ ಇನ್ನೆಲ್ಲೂ ಸಿಕ್ಕದು.

ನಮ್ಮಲ್ಲಿ ತಯಾರಾಗುವ ನಸ್ಯದ ಪುಡಿಯನ್ನು ಹಿಂದುಸ್ಥಾನದ ಸಮಸ್ತ ಭಾಗಗಳವರೂ, ಅನ್ಯದೇಶಗಳವರೂ ಹತ್ತಾರು ವರುಷಗಳಿಂದ ತರಿಸಿಕೊಂಡು ಉಪಯೋಗಿಸುತ್ತಿದ್ದಾರೆ. ನಮ್ಮ ನಸ್ಯವು ಬಹಳ ಪ್ರಖ್ಯಾತಿ ಪಡೆದಿದೆ. ಬಹು ಮೇಲಾದ "ಬಂದರ್" ಸೊಪ್ಪಿನಿಂದ ಸುವಾಸನೆಯಾದ ಅಟ್ಟೋ ತುಪ್ಪ ಹಾಕಿ ವಿಶೇಷ ರುಚಿಕರವಾಗಿಯೂ ಸ್ವಚ್ಛವಾಗಿಯೂ ತಯಾರುಮಾಡುತ್ತೇವೆ. ಕೊಡಿಡೆ ಮಟ್ಟಿಗೂ ನಮ್ಮ ಧಾರಣೆ ಕಡಮೆಯಾಗಿರುವುದು. ನಮ್ಮ ಪದಾರ್ಥವನ್ನು ನಾವೇ ಹೊಗಳಿಕೊಳ್ಳುವದರಿಂದ ಫಲವೇನು ? ವಾಚಕರು ಒಂದಾವರ್ತಿ ಪರೀಕ್ಷೆಗಾಗಿ ತರಿಸಿಕೊಂಡರೆ ಚೆನ್ನಾಗಿ ವೇದ್ಯವಾಗುತ್ತೆ. ಕ್ರಯ ಪಂಭೇರಿಗೆ 3 ರೂಪಾಯಿ; 1 ಸೇರಿಗೆ 10 ಆಣೆ. ಪೋಸ್ಟೇಜ್ ಬೇರೆ ನಸ್ಯವನ್ನು ಅಂಚೆಯ ಮೂಲಕವೋ, ರೈಲಿನಲ್ಲೋ ಯಾಗೆ ಕಳುಹಬೇಕೆಂದು ಬರಿಯಿರಿ.

ನಮ್ಮ ವಿಳಾಸ—ಜೆ. ನಾರಾಯಣಸಾಮಿ ನಾಯುಡು,
43, ಪಳಯಪ್ಪನ್ ಸ್ಟ್ರೀಟ್, ಮಿಂಟ್ ಬಿಲ್ಡಿಂಗ್ ಪೋಸ್ಟ್,
[168–9] ಮದರಾಸ್, ೩.

S U. N. & Co.,

BENARES CITY, U. P.

ಸೊಗಸಾದ ಸರಕುಗಳು !! ದೊಡ್ಡ ಕಂಪೆನಿ !

ಈ ನಮ್ಮ ಕಂಪನಿಯಲ್ಲಿ ಸಯದು ಕಳುಹಿಸುವ ಉತ್ತಮವಾದ ಬನಾರಸ್ ರೇಷ್ಮೆ ಸೀರೆಗಳು, ಕಣ, ಪೇಟಾ, ಕಾಶ್ಮೀರ್ ಶಾಲು ದುಪ್ಪಟ್ಟಿ, ಮಗುಟ, ಜಗನ್ನಾಥ ಜಾಗಟೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಕ್ಯಾಟಲಾಗ್ 1 ಕ್ಕು ಮತ್ತು 3 ಏಶ್ವೇಶ್ವರ ಚಿತ್ರಗಳನ್ನು ಇನಾಮಾಗಿ ಕಳುಹಿಸಲಾದೀತು. [69-20]

ಎಸ್. ಯು. ಎನ್. ಮತ್ತು ಕಂಪನಿ, ಕಾ.

ಯಾಕೆ ಪರೀಕ್ಷಿಸಬಾರದು ? ಭಂಗಾರದ ಪದಕ ಪಡೆದಿದೆ. ಸೆಂಟ್, ಅತ್ತರುಗಳಲ್ಲೆಲ್ಲಾ ಶ್ರೇಷ್ಠವಾದವು. ಆಟೋ ಮೋಹಿನಿ.

ಇದು ರೆಜಿಸ್ಟರ್ ಆಗಿದೆ. ಈಗಿನ ಕಾಲದಲ್ಲಿ ಇದೇ ಸಲ್ಲುವ, ಸುವಾಸನೆಯುಳ್ಳ, ಮನೋಹರವಾದ ಮತ್ತು ಸರಿಯಾದ ಪರಿಮಳದ ದ್ರಾವಕ. ಕವಸ್ತ್ರಕ್ಕೆ



ನಾಲ್ಕು ತೊಟ್ಟು ಹಾಕಿಕೊಂಡರೆ ಪಲ್ಕುದಿನಗಳ ತನಕ ಘಮಘಮಿಸುವ ಸುವಾಸನೆ ಇರುತ್ತೆ. ಹಾಗೆ ದೀರ್ಘಕಾಲ ನಿಲ್ಲತಕ್ಕದ್ದಲ್ಲವೆಂದು ರುಜುವಾತು ಮಾಡಿಕೊಡುವವರಿಗೆ ನಾವು ಒಂದು ನೂರು ರೂಪಾಯಿ ಬಹುಮಾನ ಕೊಡುತ್ತೇವೆ. ಪರೀಕ್ಷೆ ಮಾಡಿ ನೋಡಿ, ಬಹುಮತಿಯನ್ನು ಸಂಪಾದಿಸಿಕೊಳ್ಳಿ ! ಕ್ರಯ ½ ಔನ್ಸ್ ಗಾಜಿನ ಬಿರಡೆಯ ಬಾಟ್ಲಿಗೆ ರೂಪಾಯಿ 2-0-0.

1 ಡ್ರಾಂ ಕೊರತೆ 12 ಆಣೆ.

ಆಟೋ ಮೋಹಿನಿ ಪರಿಮಳದ ಕಾಡ್ಡುಗಳು ದರ್ಜನ್ 1 ಕ್ಕೆ 12 ಆಣೆ.

ಎಲ್ಲರಲ್ಲಿ ಬಿಕರಿಗೆ ಇಟ್ಟಿದೆ. ಮದರಾಸ್ ಅಧಿಪತ್ಯಕ್ಕೆಲ್ಲಾ ಏಜೆಂಟರು—

ಪಾ ಭಗವಾನ್ ದಾಸ್ ಚೂನಿಲಾಲ್ ಕಂಪನಿ,

[251-12] 177, ಬೈನಾಬಜಾರ್ ರೋಡ್, ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

11—9—1914 ರಿಂದ 18—9—1914 ರ ವರೆಗೆ

ಸ್ಥಳ	ಪ್ಲೇಗ್		ಕಾಲರಾ	
	ತಗಲಿದ್ದು.	ಸತ್ತದ್ದು.	ತಗಲಿದ್ದು.	ಸತ್ತದ್ದು.
ಬೆಂಗಳೂರು ಪಟ್ಟಣ	5	1	0	0
ಮೈಸೂರು ,,	40	26	0	0
ಬೆಂಗಳೂರು ಡಿಸ್ಟ್ರಿಕ್ಟ್	57	31	0	0
ಮೈಸೂರು ,,	51	33	0	0
ಕೋಲಾರ್ ,,	22	25	23	16
ಕೋಲಾರ್ ಚಿನ್ನದ ಗಣಿಗಳು	6	4	0	0
ತುಂಕೂರು ಡಿಸ್ಟ್ರಿಕ್ಟ್	12	7	0	0
ಹಾಸನ ,,	7	3	0	0
ಚಿತ್ರದುರ್ಗ ,,	65	46	0	0
ಕಡೂರ್ ,,	41	21	0	0
ಶಿವಮೊಗ್ಗ ,,	13	5	4	1
ಜುಮ್ಲಾ	325	202	27	17

Mellin's Food

ಮೆಲಿನ್ಸ್ ಆಹಾರವು

ಕೈಸೋಕದೆ ಮಾಡಿದೆ

ಶಿಶುಗಳಿಗೂ ರೋಗಿಷ್ಠರಿಗೂ

ಮೆಲಿನ್ಸ್ ಆಹಾರವು ಕ್ರಮಪ್ರಕಾರ ತಯಾರುಮಾಡಿ ಸೇವಿಸಿದರೆ ಹುಟ್ಟಿದ ಶಿಶುಗಳು ಮೊದಲುಗೊಂಡು ಮುದಿಪ್ರಾಯದವರ ತನಕ ಎಲ್ಲರಿಗೂ ಸಂಪೂರ್ಣವಾದ ದೇಹಪುಷ್ಟಿಯನ್ನೂ ವಿಶೇಷವಾದ ಬಲವನ್ನೂ ಕೊಡುತ್ತದೆ. [4–39]

ಮೆಲಿನ್ಸ್ ಆಹಾರವೆಂಬ ಬೇರೆ ಬೇರೆ ತಿಂಡಿ ಪದಾರ್ಥಗಳನ್ನು ಹಿಂದುಸ್ಥಾನ, ಬರ್ಮಾ ಮತ್ತು ಸಿಲೋನ್ ದ್ವೀಪಗಳಲ್ಲಿ ಎಲ್ಲಾ ವ್ಯಾಪಾರಗಾರರೂ ಬಿಕರಿಮಾಡುತ್ತಾರೆ. **Messrs. OAKES & Company, Mount Road, Madras.**

ವಿಳಾಸ—ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

ಶಾಲಿವಾಹನ ಶಕ ವರುಷಂಗಳು 1837 ನೇ ಆನಂದ ಸಂವತ್ಸರೇ ದಕ್ಷಿಣಾಯನೆ ಶರದೃತೌ ಆಶ್ವೀಜ ಶುದ್ಧ ತ್ರಯೋದಶಿ ಶುಕ್ರವಾರದಿಂದ ಆಶ್ವೀಜ ಬಹುಳ ಚೌತಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1914 ನೇ ಅಕ್ಟೋಬರ್.

ತಾ	ವಾರ.	ತಿಥಿ.	ಘಳಿಗೆ	ನಕ್ಷತ್ರ	ಘಳಿಗೆ	ಕನ್ಯಾಮಾಸ ತೇದಿ
2	ಶುಕ್ರ ‡	ತ್ರಯೋದಶಿ	2-25	ಪೂಭಾ	60-0	17
3	ಶನಿ ::	ಚತುರ್ದಶಿ	4-58	ಪೂಭಾ	0-59	18
4	ಭಾನು §	ಪೌರ್ಣಮಿ	8-36	ಉತ್ತರಾಭಾ	3-53	19
5	ಸೋಮ *	ಪಾಡ್ಯಮಿ	13-7	ರೇವತಿ	11-53	20
6	ಮಂಗಳ †	ಬದಿಗೆ	18-12	ಅಶ್ವಿನಿ	18-15	21
7	ಬುಧ ;;	ತದಿಗೆ	23-29	ಭರಣಿ	24-50	22
8	ಗುರು	ಚೌತಿ	28-27	ಕೃತ್ತಿಕೆ	31-6	23

‡ ಪ್ರದೋಷ. :: ಮಳೆ ನಕ್ಷತ್ರ—ಹಸ್ತ 3 ನೇ ಪಾದ. § ಚಂದ್ರೋದಯ ಗೌರಿವ್ರತ, ದಾನಫಲವ್ರತ. * ದ್ವಿತೀಯಾ ತಿಥಿ. † ಶೂನ್ಯತಿಥಿ, ಅಮೃತಸಿದ್ಧಿಯೋಗ. ;; ತೃತೀಯಾ ತಿಥಿ, ಶ್ರೀಚಾಮುಂಡೇಶ್ವರೀ ರಥ, ಮಳೆ ನಕ್ಷತ್ರ—ಹಸ್ತ 4 ನೇ ಪಾದ.

ಸನ್ 1915 ನೇ ಇಸವಿಯ

ಶ್ರೀ ಸೀತಾರಾಘವ ಪಾಕೆಟ್ ಡೈರಿ ಪಾಕೆಟ್ಟರ್ ಡೈರಿಗಳು

ಮೊದಮೊದಲೇ ಬರೆದು ತರಿಸಿಕೊಳ್ಳಿ. ನಂ. 1. ಸಣ್ಣ ಸೈಜು ಸಾದಾ ಡೈರಿಗೆ 4 ಆಣೆ; ನಂ. 2. ಸಣ್ಣ ಸೈಜು ಪೆನ್ಸಲ್ ಇಟ್ಟು ಮುಚ್ಚಳ ಹಾಕಿರುವ ಫ್ಲಾಪ್ ಡೈರಿಗೆ 6 ಆಣೆ; ನಂ. 3. ದೊಡ್ಡ ಸೈಜು ಸಾದಾ ಡೈರಿಗೆ 6 ಆಣೆ; ದೊಡ್ಡ ಸೈಜು ಪೆನ್ಸಲ್ ಇಟ್ಟು ಮುಚ್ಚಳ ಹಾಕಿರುವ ಫ್ಲಾಪ್ ಡೈರಿಗೆ 8 ಆಣೆ. ಟಪಾಲು ಖರ್ಚು ಬೇರೆ. ಒಂದೇ ಸಲ 10 ಡೈರಿ ತರಿಸಿಕೊಂಡವರಿಗೆ ಒಂದು ಡೈರಿ ಇನಾಮು; 25 ರೂಪಾಯಿಗಿಂತ ಹೆಚ್ಚು ಡೈರಿ ತರಿಸಿಕೊಳ್ಳುವವರಿಗೆ ರೂಪಾಯಿಗೆ 2½ ಆಣೆಯಂತೆ ಡಿಸ್ಕೌಂಟು ದೊರೆಯುತ್ತದೆ. ವಿವರಣೆ—(1) ಈ ವರೆಗೆ ನಾವು ನೋಡಿರುವ ಡೈರಿಗಳೆಲ್ಲಕ್ಕಿಂತಲೂ ಅಂದವಾಗಿರುವಂತೆ ಹಸನಾದ ಕಾಗದದಲ್ಲಿ ಪ್ರತಿ ಪೇಜಿಗೂ ರೂಲು ಹಾಕಿಸಿ ಸೊಗಸಾದ ಕ್ಯಾಲಿಕೋ (ಬಟ್ಟೆಯ) ಬೈಂಡು ಮಾಡಿಸಿದೆ. (2) ದೇಹಸೌಖ್ಯ ವಿಚಾರದಲ್ಲಿ ಪ್ರತಿಯೊಬ್ಬರೂ ತಿಳಿಯಬೇಕಾದ ಸಾಧಕ ಬಾಧಕಗಳನ್ನು ತಕ್ಕಮಟ್ಟಿಗೆ ವಿವರಿಸಿದೆ. ಪಂಚಾಂಗ, ಕ್ಯಾಲೆಂಡರ್, ರಾಹುಕಾಲ ಗುಳಿಕಕಾಲಗಳು, ಸಂವತ್ಸರಫಲಗಳು, ಗ್ರಹಣ, ಜಾತಕವರ್ಗ ಮೊದಲುಗೊಂಡು ಷೋಡಶಕರ್ಮಕ್ಕೆ ಬೇಕಾದ ಲಗ್ನಾದಿಗಳು, ಇವೇ ಮುಂತಾದ ವಿಷಯಗಳು ಸುಲಭವಾಗಿ ತಿಳಿಯುವಂತೆ ಬರೆದಿದೆ. (3) ಕೋರ್ಟು ಫೀಜ್ ಆಕ್ಟು, ಪೋಸ್ಟಾಫೀಸಿನ ಸಂಗತಿ, ಸ್ಟಾಂಪ್ ಆಕ್ಟು, ಇವುಗಳಲ್ಲಿ ಮುಖ್ಯವಾಗಿ ಬೇಕಾಗುವ ಮತ್ತಾವ ಡೈರಿಯಲ್ಲೂ ಹೇಳದಿರುವಷ್ಟು ಹೊಸ ವಿಷಯಗಳನ್ನೂ ಸೇರಿಸಿದೆ. (4) ಮದರಾಸ್ ಮತ್ತು ಸದರ್ನ್ ಮರಾಟಾ ರೈಲ್ವೆಗಳ ಛಾರ್ಜು, ರೈಲು ಹೊರಡುವ ಕಾಲ, ಅಳತೆ, ತೂಕ, ಗೌರ್ನ್‌ಮೆಂಟ್ ರಜಾ ದಿನಗಳು, ಹಿಂದೂ ಸಂವತ್ಸರಗಳಿಗೆ ಸರಿಯಾದ ಇಂಗ್ಲೀಷು ಸಂವತ್ಸರಗಳು, ಕೇಕಡಾ ಬಡ್ಡಿಪಟ್ಟಿ, ತಲಬುಜಂತ್ರಿಪಟ್ಟಿ ಸಹಾ ಇರುತ್ತದೆ. ದೋಬಿ ಲೆಕ್ಕ, ಹಾಲಿನ ಲೆಕ್ಕ, ಮುಖ್ಯವಾದ ವಿಷಯ, ಒಟ್ಟು ಜಮಾಖರ್ಚು, ಇವುಗಳಿಗೆ ಜಾಗವನ್ನು ಬಿಟ್ಟಿರುತ್ತದೆ. ಈ ಹೊಸ ಪ್ರಯತ್ನಕ್ಕೆ ದೇಶಾಭಿಮಾನಿಗಳ ಪ್ರೋತ್ಸಾಹ ಅತ್ಯವಶ್ಯಕ. [109-4]

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ :—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

Printed and Published by the Rev. H. GULLIFORD, Proprietor and Manager, Wesleyan Mission Press, Mysore. 1/10/1914.

REGISTERED
M. 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೮ ಮೈಸೂರು—ಸನ್ ೧೯೧೪ ನೇ ಇಸವಿ ಅಕ್ಟೋಬರ್ ತಾರೀಖು ೮ ನೇ ಗುರುವಾರ. ಸಂಚಿಕೆ ೧೯

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ಪ್ರಕಾಶಿಸುವ ಕೇಶದಾಮವನ್ನು ಯಾವ ನಾರಿಯು ತಾನೇ ವಾಂಛಿಸಲಿಕ್ಕಿಲ್ಲ ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾವದೆಂದರೆ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಕೊಡುತ್ತದೆ. ಶ್ರಮವೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ. ಈ ತೈಲವನ್ನು ತೊಡೆದುಕೊಳ್ಳುತ್ತಲೇ, ಮಸ್ತಿಷ್ಕದ ಬೇಗೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ತೊಡೆಯ ತೊಡಗಿದ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು; ಅವರ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವದು.

ಕೀಳುತರದ ಎಣ್ಣೆಗಳನ್ನು ಕೊಂಡು ಕೊಂಡು ಉಪಯೋಗಿಸಿ ನಿಮ್ಮ ಹಣವನ್ನು ಹಳೆಯನ್ನೂ ಹಾಳುಮಾಡುವ ದಕ್ಕಿಂತ ಒಂದೇಯೊಂದು ಬಾರಿ ಈ "ಕಾಮಿನಿಯಾ ತೈಲ"ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯು ಕ್ರೀಸೆಂಟ್ ಕೆಯು ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಒಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಅವುಗಳಲ್ಲಿ ಒಂದನ್ನೇ ನೋಡಿರಿ! ನೇಗಿನಹಾಳಕರ ಬಂಧುಗಳು ಬಸವನಗಲ್ಲಿ, ಬೆಳಗಾಂವ—ತಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವುದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ. ಆದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ. ಪಿ. ಪ್ಯಾಕಾ ರವಾನಿಸುವುದು. ಸೀಸೆಯೊಂದರ ಕ್ರಯ ರೂ. 1-0-0, ಅ. ವೆ. 0-4-0 ಬೇರೆ; 3 ಸೀಸೆಗಳ ಕ್ರಯ ರೂ. 2-10-0, ಅ. ವೆ. 0-7-0 ಬೇರೆ.

ಸೂಚನೆ —ಅನೇಕ ಮರ್ಯಾದಸ್ಥರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಬಿಕರಿಯಿಂದ ತಮಗೆ ಅತ್ಯಲ್ಪ ಸಫೆಯೇ ದೊರಕುತ್ತದೆಂದು, ನೀವು "ಕಾಮಿನಿಯಾ ತೈಲ"ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭ ದೊರಕತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅ೦ಥಾ ಸಂದರ್ಭದಲ್ಲಿ ಮೋಸ ಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಇದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಂಡು ನಷ್ಟ ಮೊಹರುಬಾನ್ ಮಾಡಿದರೆ ನೀವು ಮೋಸಗಾರರ ಬಲೆಯಲ್ಲಿ ಸಿಲುಕಬೇಕಾದ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಒಟ್ಟೋ ದಿಲ್ ಬಹಾರ್!!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಆಕರ್ಷಕವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಆಲ್ಕೋಹೋಲ್) ಸಂಪರ್ಕವಿಲ್ಲವು ಒಂದೇ ಒಂದು ಸಲ ನಿಮ್ಮ ಕೈಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ. ಈ ಒಟ್ಟೋ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವುದು ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ. [19-38]

ಸಣ್ಣ ಸೀಸೆಯ ಬೆಲೆ ರೂ. 0-8-0, ಒಂದು ಡ್ರಾಮಿನ (ವಾಡಿಯಂ) ಸೀಸೆ 1ಕ್ಕೆ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0. ಅಂಚೆಯ ವೆಚ್ಚ ಬೇರೆ ರೂ. 0-4-0. ಒಟ್ಟೋ-ದಿಲ್ ಬಹಾರ್ ಪರಿಮಳದ ಕಾರ್ಡುಗಳು ಡಜನ್ ಒಂದಕ್ಕೆ 0-12-0.

ಮೇಲೆ ಕಂಡ ಎಲ್ಲಾ ಸುಗಂಧಗಳು ಸಿಕ್ಕುವ ಪತ್ತೆ:—

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್‌ಜಿದ್, ಬೊಂಬಾಯಿ.

ಏಜೆಂಟ್, ದಿ ಉಲ್ಲಾ ವಾರ್ಟ್, ಮಂಗಳೂರು.

ENGLISH PAPERS WITH FULL ANSWERS

Price for 1 set, Rs. 1-4-0; 2 sets, Rs. 2-4-0; 3, Rs. 3; 4 sets, Rs. 3-12-0 (in advance). L. S. English Notes 5 As., Spelling Book 4 As.

Apply sharp to M. N. SITARAMA RAO,
[178-9] Krishnaraja Mohalla, *MYSORE.*

ಹೊಸ ಬಂಗಾಳಿ ನಾವೆಲ್ —ವಿಷವಿವಾಹ 4 ಆ. ಸನ್ಯಾಸಿನಿ 1½ ಆ. ಅನಾಥಪ್ರೇತ 1 ಆ. ಬಿ. ವೆಂಕಟಾಚಾರ್ಯರಿಂದ ನೆಂಗದಿಜೇತ 1-1-0. ಚಂದ್ರಶೇಖರ 1-1-0. ರಜನಿ 13 ಆ. ಚಿತ್ರವಿಚಿತ್ರವಾದ 1½ 8 ಆಣೆ. ಅಮೃತಪುಳಿನ 11 ಆಣೆ. ದುರ್ಗೇಶನಂದಿನಿ 1-1-0, ಇತ್ಯಾದಿ ಸುಶೀಲೆ ಹೊಸ ನಾವೆಲ್ 6 ಆಣೆ.

[53-33] ಎಂ. ಸುಬ್ಬರಾವ್, ಬುಕ್ ಸೆಲ್ಲರ್, ಶಂಕರಪುರ, ಬೆಂಗಳೂರು ಸಿಟಿ.

ಯುದ್ಧವಾರ್ತೆಯು.

ಯೂರೋಪಿನಲ್ಲಿ ನಡೆಯುತ್ತಿರುವ ಯುದ್ಧವಾರ್ತೆಯನ್ನು ಪ್ರತಿ ನಿತ್ಯವೂ ಕನ್ನಡಿಗರ ಉಪಯೋಗಕ್ಕಾಗಿ ಪ್ರಕಟಿಸುತ್ತಿರುವೆವು. ಕ್ರಯ 3 ಪೈ; ತಿಂಗಳಿಗೆ 8 ಆಣೆ; ಅಂಚೆಯಲ್ಲಿ ತರಿಸುವವರಿಗೆ ತಿಂಗಳಿಗೆ ಒಂದು ರೂಪಾಯಿ. ಮೈಸೂರು ಸಂಸ್ಥಾನದ ಎಲ್ಲಾ ಭಾಗದಲ್ಲಿಯೂ ಏಜಂಟರುಗಳು ಬೇಕಾಗಿವೆ. ಹೆಚ್ಚಾಗಿ ಕಮಿಷನ್ ಸಿಗುವುದು

ನಮ್ಮ ವಿಳಾಸ:—

[23 ...] ... ರಾಮಚಂದ್ರರಾವ್, ಮೈಸೂರು.

ಷೇಕ್ಸ್‌ಪಿಯರ್

ಮಹಾ ಕವಿಯ ನಾಟಕದ ಕಥೆಗಳು.

ಸಿಂಬೆಲೈನ್, ಒಥೆಲೋ, ಮರ್ಚೆಂಟ್ ಆಫ್ ವೆನ್ನಿಸ್, ಕಿಂಗ್‌ಲಿಯರ್ ಮುಂತಾದ ಹನ್ನೆರಡು ನಾಟಕಗಳನ್ನು ಕಥಾ ರೂಪವಾಗಿ ಬರೆಯಲ್ಪಟ್ಟು ನಮ್ಮ ದೇಶದ ಹೆಸರನ್ನಿಟ್ಟು ಪ್ರಕಟಿಸಿರುತ್ತೆ. ಪ್ರತಿ ಒಂದಕ್ಕೂ ಎರಡೆರಡಾಗಿ ಅವು ... ಶಕುಂತಲಾ, ರಚ್ಚಿ ... ವಸುಮತಿ, ಚಿತ್ರಕೇಳವತಿ, ವಿಲಕ್ಷಣ ಶಿಕ್ಷಣ, ಭಾನುಮತಿ, ಪ್ರಮೀಳಾ ವಿಲಾಸ, ಚಾರುಮತಿ, ಚಾತುರ್ಯವತಿ

"ಮರುಳಾಟದ ಮದುವೆ" ಎಂಬ ನಕಲಿಯು ಈಗತಾನೇ ಬಿಕರಿಗೆ ಸಿದ್ಧವಾಗಿದೆ. ಪ್ರತಿಯೊಬ್ಬರೂ ಓದಬೇಕಾದುದು. ಕ್ರಯ 6 ಆಣೆ.

[266 13] ವಿಳಾಸ ಇಂದ್ರಿಕಾ ಬುಕ್ ಸ್ಟಾಲ್, ಮೈಸೂರು.

ಅರೇಬಿಯನ್ ನೈಟ್ಸ್

ಎಂಬ

ಯವನ ಯಾಮಿನೀ ವಿನೋದ ಕಥೆಗಳು.

(ಕನ್ನಡದಲ್ಲಿ)

ಬಿಸೀಕರ್ಪೂರದಂತೆ ಈ ಪುಸ್ತಕದ ಮೊದಲನೇ ಮುದ್ರಣವು ಕೆಲವು ದಿವಸದಲ್ಲಿಯೇ ಮುಗಿದುಹೋದುದರಿಂದ ಎರಡನೇ ಮುದ್ರಣವನ್ನು ತಯಾರಿಸಿರುತ್ತೇವೆ. ಇದರ ಪ್ರಿಂಟಿಂಗ್ ಮತ್ತು ಬೈಂಡ್ ಮುಂತಾದ ಕೆಲಸಗಳು ವೆಸ್ಲಿಯನ್ ಮಿಷನ್ ಪ್ರೆಸ್ಸಿನಲ್ಲಿ ಬಹು ಶ್ಲಾಘ್ಯತರವಾಗಿ ಮಾಡಲ್ಪಟ್ಟಿರುವವು. ಈ ಎರಡನೇ ಮುದ್ರಣವನ್ನು ಘನ ಪಂಡಿತರು ಆಮೂಲಾಗ್ರವಾಗಿ ಪರಿಶೀಲನೆಮಾಡಿ ತಿದ್ದಿ ಸರಿಪಡಿಸಿರುತ್ತಾರೆ. ಇದರಲ್ಲಿನ ಕಥೆಗಳು ಬಹು ಮನೋರಂಜಕವಾಗಿಯೂ ಭಾಷೆಯು ಅತಿ ಲಲಿತವಾಗಿಯೂ ಇರುತ್ತವೆ. ಪುಸ್ತಕವು ನಾನೂರು ಪುಟಗಳಿಗಿಂತ ಹೆಚ್ಚಾಗಿರುತ್ತದೆ. ಇದರ ಕ್ರಯ ಎರಡೇ ರೂಪಾಯಿ. ವಿ.ಪಿ.ಪಿ ಮೂಲಕ ತರಿಸಿಕೊಂಡರೆ ರೂ. 2-4-0. ಜಾಗ್ರತೆ ನೋಡಿ. [212-3]

ವಿಳಾಸ —ಮ್ಯಾನೇಜರ್, ಸಿ.ಎಲ್.ಎಸ್. ಬುಕ್ ಡಿಪೋ, ಮೈಸೂರು.

ಸಿದ್ಧವಾಗಿದೆ.

1915 ನೆಯ ವರ್ಷದ ಲೋವರ್ ಸೆಕಂಡರಿ

ಕನ್ನಡ ಟೆಕ್ಸ್ಟಿನ ನೋಟ್ಸು.—ಕ್ರಯ 6 ಆಣೆ.

ಡಿಸ್ಕೌಂಟು—10 ಕ್ಕೆ 1; 25 ಕ್ಕೆ 3; 50 ಕ್ಕೆ 8; 100 ಕ್ಕೆ 20.

ಮಕ್ಕಳ ಭೂವಿವರಣೆ.

ಈಗಿನ ಪಾಠಕ್ರಮಕ್ಕೆ ತಕ್ಕಂತೆ ಹೊಸದಾಗಿ ಆಗಿದೆ. ಇದರಲ್ಲಿ ಮೈಸೂರು ದೇಶದ ಬೆಳೆ, ಎತ್ತರ, ನದೀ ಪರ್ವತಾದಿಗಳು ಇವುಗಳನ್ನು ತೋರಿಸುವ ಮೂರು ಭೂಪಟಗಳೂ, ಚಿತ್ರಗಳೂ ಸೇರಿವೆ. ಕ್ರಯ 2 ಆಣೆ. [49-34]

ಇಲಾಖೆಯ 2 ನೆಯ ಪುಸ್ತಕದ ನೋಟ್ಸು 2½ ಆಣೆ, ಮೆಕ್ಮಿಲನ್ ರವರ 3 ನೇ ಪುಸ್ತಕದ ನೋಟ್ಸು 1½ ಆಣೆ, ಡಿಟೊ 4 ನೇ ಪುಸ್ತಕದ ನೋಟ್ಸು 1½ ಆಣೆ, ಡಿಟೋ 6 ನೇ ಪುಸ್ತಕದ ನೋಟ್ಸು 4 ಆಣೆ. ನವಬಾಲವ್ಯಾಕರಣ (3 ನೇ ತರಗತಿಗೆ) 1 ಆಣೆ, Notes on "Tanglewood Tales," English Lower Secondary Text for 1915—As. 3. Notes on Fairy Tales—As. 2.

ನಮ್ಮ ವಿಳಾಸ:—ಯನ್. ಆರ್. ವೆಂಕಟಸುಬ್ಬಾಚಾರ್ಯ,
ಸುಬೋಧಗ್ರಂಥಾಲಯ, ಮೈಸೂರು.

ಸೂರ್ಯೋದಯ ಪುಸ್ತಕಭಂಡಾರ.

ಹೊಸ ನಾವೆಲ್‌ಗಳು:—ನೀಲಾಂಬರಿ, ಸರಳೆ, ಗುರುತು ಕಂಡ ಕಳ್ಳ, ಮಾಯಾವಿನಿಯ ಅತ್ಯಾಚಾರ, ಮಾಯಾವಿನಿಯ ಪರಿಣಾಮ ಮುಂತಾದ ಪತ್ತೆದಾರಿ ನಾವೆಲ್‌ಗಳು. ಪುಸ್ತಕ ಒಂದಕ್ಕೆ ಆಣೆ 3 ಮಾತ್ರ. ರಕ್ತ 12 ಆಣೆ. ಮಾಧವಿ ಕಂಕಣ 1-8-0. ಇದಲ್ಲದೆ ಈ ಡಿಪೋದಲ್ಲಿ ಕನ್ನಡ, ತೆಲುಗು, ಸಂಸ್ಕೃತ, ಇಂಗ್ಲಿಷ್ ಗ್ರಂಥಗಳೂ, ನಾವೆಲ್‌ಗಳೂ ಕಥೆಗಳೂ, ಪುರಾಣಗಳೂ, ವೈದ್ಯ ಜ್ಯೋತಿಷ ಪುಸ್ತಕಗಳೂ ದೊರೆಯುತ್ತವೆ. ಬೇಕಾದವರು ಬರೆದು ಮುಫತ್ತಾಗಿ ದೊರೆಯುವ ಕ್ಯಾಟಲಾಗನ್ನು ತರಿಸಿಕೊಳ್ಳಬಹುದು.

[143-14] ವಿಳಾಸ:—ಪಿ. ನರಸಿಂಗರಾವ್,
ಎಡಿಟರ್, ಲಾ ಗೆಜೆಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಈ ಉತ್ತಮ ಗ್ರಂಥಗಳನ್ನು ಓದಿರುವಿರಾ?

ನಾಸಕನ ಚರಿತ್ರೆ 4 ಆ; ಕ್ಷಮಾಶೀಲವತಿ 10 ಆ, ವಿವೇಕಮಂಜರಿ ಭಾಗ III 6 ಆ; ಮರುಸ್ಕಂದನ ಶತಕಂ 4 ಆ; ತುಮಕೂರುಮುಜುಕು 1½ ಆ; ಸರ್ಮಳೆ 12 ಆ; ಸೂಕ್ತಿರತ್ನಾವಳಿ 4 ಆ; ರಂಗನ ಮದುವೆ 1½ ಆ; ಬಾಗಿಲು ಭದ್ರ 4 ಆ; ನವನಾಗರಿಕತೆ 1 ಆ; ಗೃಹಲಕ್ಷ್ಮಿ ಗಂಗೆ 3 ಆ. ಸೊಗಸಾದ ಹೊಸ ಬಂಗಾಳಿ ನಾವೆಲ್:—ಕಪಾಲಕುಂಡಲೆ 6 ಆ; ಜಯ! ವಾಲ್ಮೀಕಿ 12 ಆ; ಕಾಲಾ 3 ಆ; ಅಶ್ವತ್ಥಮ್ಮನ 1½ ಆ; ಅಡಿಸುಬು ರಾಜ 2 ಆ; ವಿಷವಿವಾಹ 4 ಆ; ಸನ್ಯಾಸಿನಿ 1½ ಆ; ಅನಾಥಪ್ರೇತ 1 ಆ; ವಿಲಕ್ಷಣ ದೈವಘಟನೆ 4 ಆ; ರಮಾಮಾಧವ 6 ಆ; ಸುಶೀಲೆ 6 ಆ; ವಿಭಾ 8 ಆ; ಸಾಹಸಿಕೆ 2½ ಆ; ಉಲಾಯಿ ಶಿಸ್ತು 1 ಆಣೆ. ಇತ್ಯಾದಿ. "ಮಧುರವಾಣಿ" ಸಚಿತ್ರ ಮಾಸಪತ್ರಿಕೆಯ ಮಾದರಿ ಸಂಚಿಕೆಗೂ ಕ್ಯಾಟಲಾಗಿಗೂ ಬರೆಯಿರಿ.

[160-12] ನಮ್ಮ ವಿಳಾಸ—ಹನುಮಾನ್ ಕಂಪನಿ, ಮೈಸೂರು.

THE

GENERAL

Assurance Society Ltd., Ajmer.

(A Popular Life Office.)

Before Insuring or taking agency elsewhere, it would be to your interest to know the rates of premium and terms of agency specially prepared by the Society's Consulting Actuary, Mr H. E. W. Lott, F.I.A. (one of the most eminent Actuaries in England).

First Valuation Result. - The total liabilities under all assurances issued up to 31st March 1913, are fully covered by the Society's Life Assurance Fund and Paid up Capital. Write for full particulars, Annual and Valuation Reports to the Manager, Ajmer, or Secretary.

Opposite to Minto Ophthalmic Hospital.
[131-15] Bangalore City

BRAHMAPPA TAVANAPPANAVAR,

Merchant & Commission Agent.

Agent to Messrs. Currimbhoy Ebrahim & Co's Mills.
BOMBAY

ನಾವು ಮುಂಬೈ ಮೆಸರ್ಸ್ ಕರೀಂಭಾಯ್ ಇಬ್ರಾಹಿಂ ಅಂಡ್ ಕಂಪನಿಯವರ ಬಾಬತು, ಪರ್ಲ್ ಮಿಲ್ಸ್ ಲಿಮಿಟೆಡ್ ಮುಂಬೈ, ದಿ ಕ್ರೆಸೆಂಟ್ ಮಿಲ್ಸ್ ಲಿಮಿಟೆಡ್ ಮುಂಬೈ, ಇಬ್ರಾಹಿಂಬಾಯ್ ಮಿಲ್ಸ್ ಲಿಮಿಟೆಡ್ ಮುಂಬೈ, ದಿ ಇಂಡಿಯನ್ ಬ್ಲೀಚಿಂಗ್, ಡೈಯಿಂಗ್ ಅಂಡ್ ಪ್ರಿಂಟಿಂಗ್ ವರ್ಕ್ಸ್ ಲಿಮಿಟೆಡ್ ಮುಂಬೈ, ದಿ ಇಂದೋರ್ ಅಂಡ್ ಮಾಳ್ವಾ ಯುನೈಟೆಡ್ ಮಿಲ್ಸ್ ಲಿಮಿಟೆಡ್ ಇಂದೋರ್, ಇವುಗಳಲ್ಲದೆ ಇನ್ನೂ ಅನೇಕ ಮಿಲ್ಲುಗಳ ಬಟ್ಟೆಗಳನ್ನು ಮೈಸೂರು ಸೀಮೆಯಲ್ಲೆಲ್ಲಾ ವಿಕ್ರಯಮಾಡಲು ಕಮಿಷನ್ ಏಜಂಟರಾಗಿರುತ್ತೇವೆ. ನಮ್ಮ ಮುಖಾಂತರ ಮಾಲು ತರಿಸಿಕೊಳ್ಳತಕ್ಕವರಿಗೆ ಮುಂಬೈಯಲ್ಲಿ ಬಟ್ಟೆಗಳ ಮೇಲೆ ವಿಧಿಸತಕ್ಕ ದಳ್ಳಾಳಿ, ಚೋಟಾದಳ್ಳಾಳಿ, ಮೊಕ್ಕಾಮು, ಗಂಟುಕಟ್ಟುವಮ, ಸ್ಟೇಷನ್ನಿಗೆ ಸೇರಿಸುವದು, ಹುಂಡೇಕರಿ ವಗೈರೆ ಯಾವ ವಿಧವಾದ ಖರ್ಚು ತಗಲದೆ ಇರುವದರಿಂದ ಮುಂಬೈಯಿಂದ ತರಿಸುವದಕ್ಕಿಂತಲೂ ಸುಲಭ ದರದಲ್ಲಿ ಸಿಕ್ಕುತ್ತೆ. ಮತ್ತು ಮುಂಬೈಗೆ ಹೋಗಿಬರುವ ದೇಹಶ್ರಮವೂ, ಖರ್ಚೂ ಉಳಿಯುತ್ತೆ. ಹೆಚ್ಚು ಬಟ್ಟೆಗಳನ್ನು ಏಕಕಾಲದಲ್ಲಿ ಕೊಳ್ಳತಕ್ಕವರಿಗೆ ಮಾಲಿನ ಮೇಲೆ ಶೇಕಡ 3 ರೂಪಾಯಿ ಲಾಗಾಯ್ತು 4½ ರೂಪಾಯಿ ವರಿಗೆ ಡಿಸ್ಕೌಂಟು ದೊರೆಯುತ್ತೆ. [97-25]

ನಮ್ಮ ಟ್ರಾವಲಿಂಗ್ ಏಜಂಟರು ಪಟ ಬಟ್ಟೆಗಳ ನಮೂನೆಗಳನ್ನು ಕೊಟ್ಟು, ದರ ಪಟ್ಟಿ ವ್ಯಾಪಾರಗಾರರಿಗೆ ತೋರಿಸಿ ಆರ್ಡರು ತೆಗೆದುಕೊಳ್ಳುವ ಏರ್ಪಾಡು ಮಾಡಿರುತ್ತೆ. ನಮ್ಮ ದಾವಣಗೆರೆ ಮತ್ತು ಬೆಂಗಳೂರು ಆಫೀಸುಗಳಲ್ಲಿ ಮಾಲು ಹಾಜರು ಸಹ ದೊರೆಯುತ್ತೆ.

ಬಟ್ಟೆಗಳನ್ನು ವ್ಯಾಪಾರಮಾಡಲು ಅನುಭವಸ್ಥರಾದ ಏಜಂಟರುಗಳೂ ಮತ್ತು ಗುಮಾಸ್ತರುಗಳೂ ಬೇಕಾಗಿದೆ.

ಎಲ್ಲಾ ಕಾಗದಪತ್ರಗಳೂ ದಾವಣಗೆರೆ ಆಫೀಸಿಗೆ ಬರೆಯಲ್ಪಡಬೇಕು.

ಹೆಡ್ ಆಫೀಸು:—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್, ದಾವಣಗೆರೆ. ಬ್ರಾಂಚ್ ಆಫೀಸು:—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಟೋಪಿಗಳು: ಟೋಪಿಗಳು.

ಉತ್ತಮವಾದ ಟೋಪಿಗಳು ಹಾಸನದಲ್ಲಿ ದೊರೆಯುತ್ತವೆ.

ವಿವಿಧ ತರಹ ಉಣ್ಣೆ ದಾರದಿಂದ ತಯಾರಿಸಲ್ಪಡುವ ಸಾಮಾನುಗಳನ್ನು, ವರ್ತಕರಿಗೂ, ದರಗಳೂ ಮ್ಯಾನೇಜರವರಿಗೆ ಬರೆದು ತಿಳಿದುಕೊಳ್ಳಬಹುದು.

Men's socks, vests and various knitted articles.

ಮ್ಯಾನೇಜರ್, ಗರ್ಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ.

Apply:—MANAGER, WOOL WORKS,
[201-5] GIRLS' INDUSTRIAL SCHOOL, HASSAN.

WANTED

Active an influencial District Agent for Hassan, and Local Agents throughout Mysore Province and Coorg on liberal terms of commission and monthly office allowance. None but those who can guarantee good business need apply to

Messers. VENKATACHALAM & SONS,
Chief Agents,
Hindustan Co-operative Insurance Society, Ltd.,
166, Dodpet, near Old Taluk Cutcherry,
[243-44] *MYSORE.*

ಓರಿಯಂಟಲ್ ಗ॥ ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು............. ರೂ. 4,45,00,000

ಕಂಪನಿಯಿಂದ ಪಾವತಿ ಆಗಿರುವದು ,, 4,00,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಬೇಕೆನ್ನುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ.—ಮಿ॥ ಎಂ. ಎಸ್. ರೆಡ್ಡಿ, ಚೀಫ್ ಏಜೆಂಟ್, ಬೆಂಗಳೂರು; ಮ॥ ಎಂ. ಎಸ್. ಸಂಪನ್ನನವರು ಅಥವಾ ಮ॥ ವೆಂಕಟಪತಯ್ಯನವರು, ಕಂಪನಿ ಏಜಂಟರು, ಮೈಸೂರು; ಅಥವಾ
[221-1] ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ, ಮದರಾಸ್

ಹಿಂದುಸ್ಥಾನ್ ಕೋ-ಆಪರೇಟಿವ್ ಜೀವವಿಮೆ ಸಂಘ ಲಿ. ಹಿಂದುಸ್ಥಾನ್ ಕಟ್ಟಡಗಳು—ಕಲ್ಕತ್ತಾ.

ಕಂಪನಿಯ ಮೂಲಧನ (ಒಂದು ಕೋಟಿ ರೂಪಾಯಿ)	1,00,00,000
ಪಾವತಿಯಾದ ಮೊಬಲಗು	10,50,000
ವಸೂಲಾದ ಮೊಬಲಗು	87,00,000

ಈ ಕಂಪೆನಿಯಲ್ಲಿ ಪಾಲಿಸಿದಾರ್ರಿಗೆ ಬಹಳ ಕಮ್ಮಿಯಾದ ದರಗಳ ಪಟ್ಟಿಯನ್ನು ಮಾಡಿರುವುದು. 1912 ನೇ ಇಸ್ವಿಯ ಇಂಡಿಯಾ ಗವರ್ನ್‌ಮೆಂಟಿನ ಜೀವವಿಮೆ ಕಂಪನಿಯ ಆಕ್ಟಿನ ಪ್ರಕಾರ ಸರ್ಕಾರದಲ್ಲಿ 2 ಲಕ್ಷ ರೂಪಾಯಿಗಳನ್ನು ಡಿಪಾಜಿಟ್ಟು ಮಾಡಲ್ಪಟ್ಟಿರುತ್ತೆ. ಮತ್ತು ಅನೇಕ ಮಹಾರಾಜರುಗಳು ಮುಂತಾದ ದೊಡ್ಡವರು ಪ್ರೆಸಿಡೆಂಟರಾಗಿರುವದರಿಂದ ಈ ಕಂಪನಿಯ ಅಭಿವೃದ್ಧಿ ಸ್ಥಿತಿಯನ್ನು ಪ್ರಕಟಿಸಿ ಮಾಡುವದಕ್ಕೆ ಸಂತೋಷವಾಗಿರುತ್ತದೆ.

ಸುಲಭವಾಗಿ ಹಣವನ್ನು ಕಟ್ಟಿದವರ ಮನೆಯಲ್ಲೇ ಜಾಗ್ರತೆ ಪಾವತಿಗೆ ಏರ್ಪಾಡು ಮಾಡಲ್ಪಡುತ್ತೆ. ಆದ್ದರಿಂದ ಪಾಲಿಸಿದಾರ್ರು ಮತ್ತು ಇದಕ್ಕೆ ಸೇರಿದ ಏಜಂಟ್ರುಗಳು ತುಂಬಾ ಅದೃಷ್ಟವಂತರೆಂಬುವದರಲ್ಲಿ ಸಂದೇಹವಿಲ್ಲ.

ಹೆಚ್ಚಿನ ವಿಷಯಗಳಿಗೂ, ಫಾರಂ ಮತ್ತು ಪ್ರಾಸ್‌ಪೆಕ್ಟಸುಗಳಿಗೂ ಕೆಳಗಿನ ವಿಳಾಸಕ್ಕೆ ಜಾಗ್ರತೆಯಾಗಿ ಬರೆಯಿರಿ. [243-44]

ವೆಂಕಟಾಚಲಂ ಅಂಡ್ ಸನ್ಸ್, ಚೀಫ್ ಏಜಂಟ್ರು,
166, ದೊಡ್ಡಪೇಟೆ, ಮೈಸೂರು

ಪ್ರೊಫೆಸರ್ ಗಜ್ಜರರವರ ಗುಣಕಂಡ ಪ್ರಖ್ಯಾತವಾದ ಔಷಧಗಳು.

ವ್ಯರ್ಥವಾದ ಔಷಧಗಳನ್ನು ಉಪಯೋಗಿಸಿ ಪ್ರಾಣಾಪಾಯಕ್ಕೆ ಗುರಿಯಾಗುವಿರೇಕೆ? ವಿವೇಕದಿಂದ ತಯಾರಾಗಿರುವ ನಮ್ಮ ಔಷಧಗಳನ್ನು ಸೇವನೆ ಮಾಡಬಾರದೇ?

ಟಾನಿಕ್ ಸೋಲ್ಯೂಷನ್.—ಇದರಲ್ಲಿ ಗ್ಲಿಸರಿನೊಫೆಟ್ಸ್ ಎಂಬ ಅಮೂಲ್ಯ ಪದಾರ್ಥಗಳನ್ನು ಹಾಕಿ ತಯಾರಾಗಿದೆ. ಇದು ಬೇಗನೆ ಶರೀರಕ್ಕೆ ಸೇರಿ ಹೋಗುತ್ತೆ. ಆರೋಗ್ಯವನ್ನೂ ಚಟುವಟಿಕೆಯನ್ನೂ ಶಕ್ತಿಯನ್ನೂ ವೃದ್ಧಿಮಾಡುವುದು. ನರಗಳ ದುರ್ಬಲವನ್ನು ಹೋಗಲಾಡಿಸುವುದರಲ್ಲಿ ಇದು ಬಹಳ ಶ್ರೇಷ್ಠವಾದ ಔಷಧ. ಕ್ರಯ ಶೀಸೆಗೆ 2 ರೂಪಾಯಿ, ಮತ್ತು ರೂ. 1-3-0.

ರಕ್ತಶುದ್ಧಿಗೆ ಮಹೌಷಧ.—ಇದು ರಕ್ತವನ್ನೂ ದೇಹದ ಎಲ್ಲಾ ಭಾಗಗಳನ್ನೂ ಶುದ್ಧಿಮಾಡುತ್ತೆ. ಬಹಳ ಚೆನ್ನಾಗಿ ಗುಣಕಂಡ ಔಷಧ. ಕ್ರಯ ಶೀಸೆಗೆ 1 ರೂಪಾಯಿ.

ಲಿವರ್ ಸೊಲ್ಯೂಷನ್.—ಪಿತ್ತಕೋಶದ ಮೇಲೆ ಇದು ಬಹಳ ಚೆನ್ನಾಗಿ ಕೆಲಸಮಾಡುವದರಿಂದ ಮಲಬದ್ಧಕೋಷ್ಠವುಳ್ಳವರಿಗೆ ಮಹೋಪಕಾರಿಯಾಗಿದೆ. ದ್ರಾಕ್ಷಕ್ಕೂ ಇದನ್ನು ಕೊಡುತ್ತಾರೆ. ಇದು ಮನೆಯಲ್ಲಿ ಇದ್ದೇ ತೀರಬೇಕು. ಕ್ರಯ ಶೀಸೆಗೆ ರೂ. 1; ಮತ್ತು ರೂ. 0-10-0.

ಜ್ವರದ ಔಷಧ.—ವಿಷಮಶೀತಜ್ವರ, ನಿಂತುಬರುವಜ್ವರ, ಅವಧಿಯಜ್ವರ, ಎಲ್ಲಾ ತರದ ಜ್ವರಗಳಿಗೂ ಇದು ಸಂಜೀವನವಾಗಿದೆ. ಇದು ಕ್ವಿನೈನ್‌ಗಿಂತ ಬಹಳ ಅಗ್ಗ. ಕ್ರಯ ಶೀಸೆಗೆ 10 ಆಣೆ; 4 ಆಣೆ.

ಹುಳುಕಡ್ಡಿ ಔಷಧ.—ಹುಳುಕಡ್ಡಿಯನ್ನು ಖಂಡಿತವಾಗಿ ಗುಣಮಾಡುತ್ತೆ. ಕ್ರಯ ಶೀಸೆಗೆ 4 ಆಣೆ.

ಹಲ್ಲುಪುಡಿ.—ಈ ಪುಡಿಯಿಂದ ಹಲ್ಲು ಉಜ್ಜಿಕೊಂಡರೆ ಬಾಯಿಗೆ ಸುವಾಸನೆ ಕೊಡುತ್ತೆ. ಹಲ್ಲು ಸಹ ಮುತ್ತಿನಂತೆ ಬಹಳ ಚೆನ್ನಾಗಿಟ್ಟು ಕಾಪಾಡುತ್ತೆ. ಕ್ರಯ ಸೀಸೆಗೆ 4 ಆಣೆ; 6 ಆಣೆ; 1 ರೂಪಾಯಿ.

ಇಂಗ್ಲೀಷಿನಲ್ಲೇ ನಮಗೆ ಕಾಗದವನ್ನು ಬರೆಯಬೇಕು.

ಸೋಲ್ ಏಜಂಟರು:—ಎಸ್. ವೈದ್ಯ ಮತ್ತು ಕಂಪನಿ,
[156-13] ಪಾರ್ಕ್ ಟೌನ್, ಮದರಾಸ್.

CHAMBERLAIN'S COUGH REMEDY.

ಚೇಂಬರ್ಲೀನ್‌ಯವರು ಕಂಡುಹಿಡಿದ ಕೆಮ್ಮಿನ ಔಷಧವು.



3-41

ಶೀತದ ಕೆಮ್ಮು, ಗಂಟ್ಲು ಗಾರೆನ್ನುವುದು, ಹುಡಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟ್ಲಿನಲ್ಲೂ ಎದೆಯಲ್ಲೂ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಾಣಪ್ರಾಯವಾದೆ.

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ. ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ. ಅದರ ಮೇಲೆ ನ್ಯೂಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು. ತರುವಾಯ ಉಗುಳಿನಲ್ಲಿ ರಕ್ತಬೀಳುವುದು. ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು.

ಚೇಂಬರ್ಲೀನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟ್ಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಖಂಡಿತವಾಗಿ ನಿವಾರಣೆಮಾಡುತ್ತದೆ. ಉಸುರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ. ಅಪಾಯಕರವಾದ ಕೆಮ್ಮಿನ ಶಬ್ದವನ್ನು ನಿಲ್ಲಿಸಿಬಿಡುತ್ತದೆ. ಎದೆ ಒಣಗುವಂಥಾ ಕೆಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ನಾಶಮಾಡಬಲ್ಲದು. ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ದೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ.

ಚೇಂಬರ್ಲೀನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ.

ಈ ಔಷಧವು ವನಸ್ಪತಿಗಳ ತಯಾರಿ.

ಕೈಯಿಂದ ಮುಟ್ಟದೆ ತಯಾರಾಗಿದೆ.

ಎಲ್ಲೆಲ್ಲೂ ವಿಕರಿಯಾಗುವುದು. ಸಣ್ಣ ಶೀಸೆಗೆ ೧ ರೂಪಾಯಿ. ದೊಡ್ಡ ಶೀಸೆಗೆ ೨ ರೂಪಾಯಿ.

ಅಮೃತಾಂಜನ ರಿಜಿಸ್ಟರ್ಡ್

ಇದು ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು. ಇದರ ಉಪಯೋಗದಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗವಾಯು, ಉಳುಕು, ಕೆಮ್ಮು, ಸೊಂಟದನೋವು, ಶೀತ, ಚರ್ಮ ವ್ಯಾಧಿ, ಹಲ್ಲುನೋವು, ಚೇಳು ಕಡಿತ ಮೊದಲಾದ ಎಲ್ಲಾ ತರದ ನೋವುಗಳು ಖಾತ್ರಿಯಾಗಿ ನಿಲ್ಲುವವು. ನಕಲಿ ಔಷಧಗಳನ್ನು ಪಡೆಕೊಳ್ಳಬೇಡಿರಿ. ಈ ನಮ್ಮ ಲೋಕಪ್ರಖ್ಯಾತವಾದ ಅಮೃತಾಂಜನವನ್ನು ನಮ್ಮ ರಿಜಿಸ್ಟ್ರಿಯಾದ ಮತ್ತು ಹಲವು ಭಾಷೆಗಳುಳ್ಳ ಸುಂದರವಾದ ಕರಡಿಗೆಯಲ್ಲಿ ಪ್ಯಾಕ್‌ಮಾಡಿರುತ್ತೇವೆ. ಕರಡಿಗೆ ಇಲ್ಲದ ಬಾಟ್ಲಿಗಳನ್ನು ಪಡೆಕೊಳ್ಳಬೇಡಿರಿ. ಬಾಟ್ಲಿ ಒಂದರ ಕಿಮ್ಮತು 0-8-0. ಡಜನ್ 1 ಕ್ಕೆ 5-4-0. ವಿ. ಪಿ. ಪ್ರತ್ಯೇಕ. ಗಜಕರ್ಣದ ಮುಲಾಮು 0-6-0. ದಂತಮಂಜನ 0-2-0. ವೋಹಿನಿ ತೈಲ 0-12-0. ಬಿಜ್ಜ ಮುಲಾಮು 0-3-0. ಜುಲಾಬು ಮಾತ್ರೆ 0-8-0. ಸುಂದರಿ ಮುಲಾಮು 0-8-0. ಕ್ಯಾಟಲಾಗಿಗೆ ಬರೆಯಿರಿ. [52-31]

ವ್ಯಾಪಾರಸ್ಥರಿಗೆ ಬೆಲೋ ಕಮಿಷನ್ ದೊರಕುವದು.

ಅಮೃತಾಂಜನ್ ಡಿಪೋ,

ಫೋರ್ಟ್, ಮುಂಬಯಿ, ಮತ್ತು ೯ ಜಹಂಗೀರ್ ಸ್ಟ್ರೀಟ್, ಮದ್ರಾಸು

ಸನ್ 1915 ನೇ ಇಸವಿಯ

ಶ್ರೀ ಸೀತಾರಾಘವ ಪಾಕೆಟ್ ಡೈರಿ ಪಾಕೆಟ್ ಡೈರಿಗಳು

ಮೊದಮೊದಲೇ ಬರೆದು ತರಿಸಿಕೊಳ್ಳಿ. ನಂ. 1. ಸಣ್ಣ ಸೈಜು ಸಾದಾ ಡೈರಿಗೆ 4 ಆಣೆ; ನಂ. 2. ಸಣ್ಣ ಸೈಜು ಪೆನ್ಸಲ್ ಇಟ್ಟು ಮುಚ್ಚಳ ಹಾಕಿರುವ ಫ್ಲಾಪ್ ಡೈರಿಗೆ 6 ಆಣೆ; ನಂ. 3. ದೊಡ್ಡ ಸೈಜು ಸಾದಾ ಡೈರಿಗೆ 6 ಆಣೆ; ದೊಡ್ಡ ಸೈಜು ಪೆನ್ಸಲ್ ಇಟ್ಟು ಮುಚ್ಚಳ ಹಾಕಿರುವ ಫ್ಲಾಪ್ ಡೈರಿಗೆ 8 ಆಣೆ ಟಪಾಲು ಖರ್ಚು ಬೇರೆ. ಒಂದೇ ಸಲ 10 ಡೈರಿ ತರಿಸಿಕೊಂಡವರಿಗೆ ಒಂದು ಡೈರಿ ಇನಾಮು; 25 ರೂಪಾಯಿಗಿಂತ ಹೆಚ್ಚು ಡೈರಿ ತರಿಸಿಕೊಳ್ಳುವವರಿಗೆ ರೂಪಾಯಿಗೆ 3 ಆಣೆಯಂತೆ ಡಿಸ್ಕೌಂಟು ದೊರೆಯುತ್ತದೆ. ವಿವರಣೆ—(1) ಈ ವರೆಗೆ ತಾವು ನೋಡಿರುವ ಡೈರಿಗಳೆಲ್ಲಕ್ಕಿಂತಲೂ ಅಂದವಾಗಿರುವಂತೆ ಹೊಸದಾಗಿ ಕಾಗದದಲ್ಲಿ ಪ್ರತಿ ಪೇಜಿಗೂ ರೂಲು ಹಾಕಿಸಿ ಸೊಗಸಾದ ಕ್ಯಾಲಿಕೋ (ಬಟ್ಟೆಯ) ಬೈಂಡು ಮಾಡಿಸಿದೆ. (2) ದೇಹಸೌಖ್ಯ ವಿಚಾರದಲ್ಲಿ ಪ್ರತಿಯೊಬ್ಬರೂ ತಿಳಿಯಬೇಕಾದ ಸಾಧಾರಣ ಬಾಧಕಗಳನ್ನು ತಕ್ಕಮಟ್ಟಿಗೆ ವಿವರಿಸಿದೆ. ಪಂಚಾಂಗ, ಕ್ಯಾಲೆಂಡರ್, ರಾಹುಕಾಲ ಗುಳಿಕಕಾಲಗಳು, ಸಂವತ್ಸರಫಲಗಳು, ಗ್ರಹಣ, ಜಾತಕವರ್ಗ ಮೊದಲುಗೊಂಡ ಜ್ಯೋತಿಷಕವರ್ಗಕ್ಕೆ ಬೇಕಾದ ಉಗ್ರಾದಿಗಳು, ಇವೇ ಮುಂತಾದ ವಿಷಯಗಳು ಸುಲಭವಾಗಿ ತಿಳಿಯುವಂತೆ ಬರೆದಿದೆ. (3) ಕೋರ್ಟು ಫೀಜ್ ಆಕ್ಟು, ಪೋಸ್ಟಾಫೀಸಿನ ಸಂಗತಿ, ಸ್ಟಾಂಪ್ ಆಕ್ಟು, ಇವುಗಳಲ್ಲಿ ಮುಖ್ಯವಾಗಿ ಬೇಕಾಗುವ ಮತ್ತಾವ ಡೈರಿಯಲ್ಲೂ ಹೇಳದಿರುವಷ್ಟು ಹೊಸ ವಿಷಯಗಳನ್ನೂ ಸೇರಿಸಿದೆ. (4) ಮದರಾಸ್ ಮತ್ತು ಸದರ್ನ್ ಮರಾಟಾ ರೈಲ್ವೆಗಳ ಛಾರ್ಜು, ರೈಲು ಹೊರಡುವ ಕಾಲ, ಅಳತೆ, ತೂಕ, ಗವರ್ನ್‌ಮೆಂಟ್ ರಜಾ ದಿನಗಳು, ಹಿಂದೂ ಸಂವತ್ಸರಗಳ ಸರಿಯಾದ ಇಂಗ್ಲೀಷು ಸಂವತ್ಸರಗಳು, ಲೆಕ್ಕದ ಹಣಪಟ್ಟಿ, ತಲಬುಪಂಕ್ತಿ ಪಟ್ಟಿ ಸಹಾ ಇರುತ್ತದೆ. ಧೋಬಿ ಲೆಕ್ಕ, ಹಾಲಿನ ಲೆಕ್ಕ, ಮುಖ್ಯವಾದ ವಿಷಯ. ಖಾಲಿ ಜಮಾಖರ್ಚು, ಇವುಗಳಿಗೆ ಜಾಗವನ್ನು ಬಿಟ್ಟಿರುತ್ತದೆ. ಈ ಹೊಸ ಪ್ರಯತ್ನಕ್ಕೆ ದೇಶಾಭಿಮಾನಿಗಳ ಪ್ರೋತ್ಸಾಹ ಅತ್ಯವಶ್ಯಕ. [109-5]

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

ಅದ್ಭುತವಾದ ಬಲಕಾರಿ ಮತ್ತು ಬಾಯಿನಾತಹರ. ಜಿನತಾನ

ಜೀರ್ಣಶಕ್ತಿ ಹುಟ್ಟಿಸುವುದರಲ್ಲಿ ಇದಕ್ಕೆ ಸಮಾನವಾದದ್ದು ಇನ್ನೊಂದಿಲ್ಲ; ಅನ್ನಕೋಶವು ಎಷ್ಟೇ ದುರ್ಬಲವಾಗಿದ್ದರೂ ಅದರ ಕಾರ್ಯಗಳನ್ನು ಹೇರುಪೇರು ಮಾಡುವದಿಲ್ಲ. ಇದರ ಸೇವನೆಯಿಂದ ಎಲ್ಲಾ ರೋಗಗಳನ್ನೂ ಅಂಟದಂತೆ ತಡೆಯಬಲ್ಲದು. ಈ ಭಾಗದಲ್ಲಿ ಇದರ ಗುಣವು ಬಹು ಫಲಕಾರಿಯಾಗಿದೆ. ಇದಲ್ಲದೆ ಇದನ್ನು ಸೇವಿಸುವವರ ಬಾಯಿಯಲ್ಲಿ ಎಲ್ಲಾ ತರದ ದುರ್ನಾತವೂ ಹೋಗಿ ಸುಗಂಧವು ಹುಟ್ಟಿ ಪಸಾರವಾಗಿದ್ದೀತು.

ಗಂಟಲಿನ ನರಗಳು ಇದರ ಸೇವನೆಯಿಂದ ಬಹಳ ಬಲಗೊಳ್ಳುವವು. ಇದರ ಗುಣವನ್ನು ನೋಡಿ ಉಪನ್ಯಾಸಕರೂ, ನಾಟಕಧಾರಿಗಳೂ, ಸಂಗೀತಗಾರರೂ, ಬೋಧಕರೂ ವಾಚಾಳಕ ಪ್ರಿಯರೂ ಈ ಮಾತ್ರೆಗಳನ್ನು ಬಹಳವಾಗಿ ಪೋಷಿಸಿ ಪ್ರೀತಿಯಿಂದ ಉಪಯೋಗಿಸುತ್ತಿದ್ದಾರೆ.

ಈ ಮಾತ್ರೆಗಳನ್ನು ಜಪಾನ್‌ನಲ್ಲಿರುವ ಒಸಾಕಾ ಪಟ್ಟಣದ ಮೋರಿಷಿತಾ ಕಂಪನಿಯವರು ತಯಾರ್ಮಾಡುತ್ತಾರೆ.

ಈ ಮಾತ್ರೆಗಳ ಕ್ರಮ	30 ಮಾತ್ರೆಗಳುಳ್ಳ ಪೊಟ್ಟಣಕ್ಕೆ 1½ ಆಣೆ	65 ಮಾತ್ರೆ ಪೊಟ್ಟಣಕ್ಕೆ 3 ಆಣೆ.
	195 ,, ಡಬ್ಬಾ ಸಮೇತ 8 ಆಣೆ	455 ,, ಕನ್ನಡಿ ಡಬ್ಬಾಕ್ಕೆ 1 ರೂಪಾಯಿ

ಎಲ್ಲಾ ಅಂಗಡಿಗಳಲ್ಲಿಯೂ ವಿಕರಿಯಾಗುವುದು.

ಸೋಲ್ ಏಜಂಟರು:— ಎಸ್. ವೈದ್ಯ ಮತ್ತು ಕಂಪನಿ,
[156-13] ಪಾರ್ಕ್‌ಟೌನ್, ಮದ್ರಾಸ್

ಮೈಸೂರಿನಲ್ಲಿ ಸೇರಿದ ಪ್ರಜಾಪ್ರತಿನಿಧಿಗಳ ಸಭೆಯಲ್ಲಿ ಮೈಸೂರು ಸಂಸ್ಥಾನದ ದಿವಾನರವರು ಮಾಡಿದ ಉಪನ್ಯಾಸ.

30ನೆಯ ಸೆಪ್ಟಂಬರ್, 1914.

ಮಹಾಶಯರೇ,—ಶ್ರೀಮನ್ ಮಹಾರಾಜ ರಾಜಶಾಸಾಹೇಬ್ಬಹಾದುರವರ ಆಜ್ಞಾನುಸಾರವಾಗಿ ವಸರಾ ಪ್ರಜಾಪ್ರತಿನಿಧಿಗಳ ಈ ಮೂವತ್ತೊಂದನೆಯ ಸಭೆಗೆ ತಮ್ಮುಗಳನ್ನು ಆದರಪೂರ್ವಕವಾಗಿ ಬರಮಾಡಿಕೊಂಡು, ಕಳೆದ ಸರ್ಕಾರೀ ವರ್ಷದಲ್ಲಿ ನಡೆದ ಸಂಸ್ಥಾನದ ಆಡಳಿತಗಳ ವಿಷಯವನ್ನೂ, ಶ್ರೀಮನ್ಮಹಾರಾಜರ ಪ್ರಜೆಗಳ ಪುರೋವೃದ್ಧಿಗಾಗಿ ಈಗ ಕೈಗೊಂಡಿರುವ ಮತ್ತು ಮುಂದೆ ಕೈಗೊಳ್ಳಬೇಕೆಂದಿರುವ ಏರ್ಪಾಡುಗಳನ್ನೂ ತಮಗಳಿಗೆ ತಿಳಿಯಪಡಿಸುವುದಕ್ಕಾಗಿ ನಾವು ಉದ್ಯುಕ್ತರಾಗಿದ್ದೇವೆ.

ಯುದ್ಧ.

ಪ್ರಕೃತದಲ್ಲಿ ಎಲ್ಲರ ಮನಸ್ಸಿನಲ್ಲಿಯೂ ಇತರ ಭಾವನೆಗಳನ್ನು ಮರೆಯಿಸಿ ತಾನು ಮುಖ್ಯವೆನಿಸಿಕೊಂಡಿರುವದು, ಯೂರೋಪ್ ಖಂಡವನ್ನು ಅತ್ಯಂತವಾಗಿ ಆಲೋಲಕಲ್ಲೋಲವನ್ನು ಮಾಡುತ್ತಿರುವ ಪ್ರಬಲ ಯುದ್ಧವಾಗಿದೆ. ಸಂಚಾರ ಸಮಾಚಾರ ಸಾಧನಗಳು ಹೆಚ್ಚಿರುವದರಿಂದ, ಈ ಯುದ್ಧದ ಪರಿಣಾಮವು ಪ್ರಪಂಚದ ನಾನಾ ಭಾಗಗಳಲ್ಲಿ ವಾಸಮಾಡುವ ಸಕಲ ಜನರ ಅನುಭವಕ್ಕೂ ಬಂದಿರುತ್ತದೆ. ಬ್ರಿಟಿಷ್ ಚಕ್ರಾಧಿಪತ್ಯದ ಒಂದು ಭಾಗವಾಗಿರುವದರಿಂದ ಇಂಡಿಯಾ ದೇಶವು ಯುದ್ಧದಲ್ಲಿ ವಿಶೇಷ ಸಂಬಂಧವನ್ನು ಪಡೆದಿರುತ್ತದೆ. ಇಂಥ ಯುದ್ಧಕಾಲದಲ್ಲಿಯೂ ಕೂಡ ವಿಶೇಷ ಕಳವಳಕ್ಕೂ ಚಿತ್ತೋದ್ವೇಗಕ್ಕೂ ಒಳಗಾಗದೆ ಯಥಾಪ್ರಕಾರವಾಗಿ ನಾವು ನಮ್ಮ ವಾಡಿಕೆಯಾದ ಕೆಲಸಗಳನ್ನು ನಡೆಸಿಕೊಂಡು ಬರುತ್ತಿರುವುದಕ್ಕೆ ಬ್ರಿಟಿಷ್ ಚಕ್ರಾಧಿಪತ್ಯದ ಪ್ರಬಲವಾದ ನಾವಿಕಬಲವೂ, ಬ್ರಿಟಿಷ್‌ನವರ ರಾಜ್ಯಭಾರಕ್ರಮದ ಕಟ್ಟುನಿಟ್ಟುಗಳ ವಿಚಕ್ಷಣೆಯೂ, ಕಾರಣಗಳಾಗಿರುತ್ತವೆ. ಈ ಯುದ್ಧವು ಬ್ರಿಟಿಷ್ ಇಂಡಿಯಾ ದೇಶದಲ್ಲಿನ ಸಾರ್ವಭೌಮರ ಪ್ರಜೆಗಳನ್ನು ಸ್ವಾಮಿಭೃತ್ಯಭಾವದಲ್ಲಿ ಮೊದಲಿಗಿಂತ ಕೇವಲ ಸಮೀಪವರ್ತಿಗಳನ್ನಾಗಿ ಮಾಡಿ ಇದೆ ಮತ್ತು ರಾಜರುಗಳಿಗೂ ಪ್ರಜೆಗಳಿಗೂ, ಸಾಮ್ರಾಜ್ಯಕ್ಕೂ ಸಾಮಂತ ರಾಜ್ಯಗಳಿಗೂ, ಮನೋಭಾವದ ಸಮ್ಮೇಳನವೂ, ಕ್ಷೇಮಾರ್ಥದ ಏಕರೂಪತೆಯೂ ಈಗಿರುವಷ್ಟು ಹಿಂದೆ ಯಾವ ಕಾಲದಲ್ಲಿಯೂ ಇದ್ದಂತೆ ಕಂಡುಬರಲಿಲ್ಲ.

ಒಂದು ಸಾಮಂತರಾಜ್ಯದವರಾದ ನಾವೂ ನಮ್ಮ ಕರ್ತವ್ಯವನ್ನು ನೆರವೇರಿಸಲು ಪ್ರಯತ್ನಪಟ್ಟಿದ್ದೇವೆ. ಶ್ರೀಮನ್ ಮಹಾರಾಜರವರು ತಮ್ಮ ಸೈನ್ಯಗಳನ್ನೂ, ತಮ್ಮ ಸಂಸ್ಥಾನದ ಸರ್ವಸ್ವವನ್ನೂ, ಸ್ವಲ್ಪವೂ ಹಿಂದೆಗೆಯದೆ ಸಾರ್ವಭೌಮ ಸರ್ಕಾರದವರ ಅಧೀನಕ್ಕೆ ಬಿಟ್ಟಿರುತ್ತಾರೆ. ಶ್ರೀಮನ್ ಮಹಾರಾಜರವರು ಈಗ ಯೂರೋಪ್ ಖಂಡದಲ್ಲಿ ಚಕ್ರಾಧಿಪತ್ಯದ ಪರವಾಗಿ ಯುದ್ಧಮಾಡುತ್ತಿರುವ ಇಂಡಿಯಾ ದೇಶದ ಸೈನ್ಯದ ಖರ್ಚಿಗಾಗಿ ಐವತ್ತು ಲಕ್ಷ ರೂಪಾಯಿ ಮೊಬಲಗನ್ನು ಕೊಟ್ಟಿರುತ್ತಾರೆ.

ಶ್ರೀಮನ್ ಮಹಾರಾಜರವರು 1914ನೆಯ ಆಗಸ್ಟ್ ಮಾಹೆಯಲ್ಲಿ ಘನತೆಯುಳ್ಳ ವೈಸರಾಯಿಯವರಿಗೆ ಬರೆದು ಕಳುಹಿಸಿದ ಟೆಲಿಗ್ರಾಮಿನಲ್ಲಿ ಈ ವಿಚಾರವನ್ನು ಕೆಳಗೆ ಕಂಡ ರೀತಿಯಲ್ಲಿ ತಿಳಿಸಿರುತ್ತಾರೆ.—

"ಸಾಮಂತರಾಜ್ಯಗಳೂ ಬ್ರಿಟಿಷ್ ಚಕ್ರಾಧಿಪತ್ಯದ ಪ್ರಜೆಗಳೂ ಸಹ ಚಕ್ರಾಧಿಪತ್ಯದ ರಕ್ಷಣೆಗಾಗಿ ಪರಸ್ಪರ ಸಹಾಯಕರಾಗಿ ನಿಲ್ಲಲು ಇದೇ ಸಕಾಲವಾಗಿರುತ್ತದೆ. ನಮ್ಮ ದೇಶದ ಪ್ರಜೆಗಳು ಸೇವಾನಿರತರಾಗಿಯೂ, ರಾಜಭಕ್ತಿಯುಕ್ತರಾಗಿಯೂ ಇರುತ್ತಾರೆಂತಲೂ, ನಮ್ಮಗಳ ಕ್ಷೇಮಲಾಭಗಳನ್ನು ಕಾಪಾಡುವುದಕ್ಕೆ ಸರ್ವಸ್ವವನ್ನೂ ವಿನಿಯೋಗಿಸಲು ಸಿದ್ಧರಾಗಿರುತ್ತೇವೆಂತಲೂ, ನಾನು ಘನತೆಯುಳ್ಳ ತಮಗೆ ಮನಃಪೂರ್ವಕವಾಗಿಯೂ ದೃಢವಾಗಿಯೂ ತಿಳಿಸಬಯಸುತ್ತೇನೆ."

ಘನತೆಯುಳ್ಳ ವೈಸರಾಯಿಯವರು ಮಹಾರಾಜರ ಟೆಲಿಗ್ರಾಮಿಗೆ ಪ್ರತ್ಯುತ್ತರವಾಗಿ ತಂತಿ ಮೂಲಕ ಕೊಟ್ಟ ಉತ್ತರದ ಕಡೇ ಭಾಗದಲ್ಲಿ ಅಪ್ಪಣೆ ಕೊಡಿಸಿರುವುದೇನೆಂದರೆ :—

"ಇಂಥಾ ಸಮಯದಲ್ಲಿ, ನನ್ನ ಮಿತ್ರರಾದ ತಾವು ಸರ್ವಾತ್ಮನಾ ಸ್ವಾಮಿನಿಷ್ಠೆಯನ್ನೂ ದೇಶಾಭಿಮಾನವನ್ನೂ ತೋರಿಸುತ್ತೀರೆಂಬ ಭಾವನೆಯು ನನ್ನ ಹೃದಯವನ್ನು ಸಂತೋಷಭರಿತವನ್ನಾಗಿ ಮಾಡಿರುತ್ತದೆಂಬ ಸಂಗತಿಯನ್ನು ಮಾತ್ರ ಪ್ರಕೃತದಲ್ಲಿ ನಾನು ತಿಳಿಯಪಡಿಸುತ್ತೇನೆ."

ಶ್ರೀಮನ್ ಮಹಾರಾಜರವರು ಮಾಡಿರುವ ಈ ಕಾರ್ಯವನ್ನು ಈ ಸಂಸ್ಥಾನದಲ್ಲಿರತಕ್ಕವರೆಲ್ಲರೂ ನಿಕಟವಾಕ್ಯವಾಗಿ [illegible]ನುಸರಿಸುತ್ತಾರೆಂದು ಈ ಸಭೆಯ ಮುಂದೆ ತಿಳಿಸತಕ್ಕದ್ದು ಪರಿ[illegible]ತ್ತದೆ.

ಕಾಲಸ್ಥಿತಿ.

ಯುದ್ಧ ಸಿಂಹಾಸನ-ಕರದಲ್ಲಿ ನಾವು ವಿಚಾರಮಾಡಬೇಕಾಗಿರುವದು ಕಾಲಸ್ಥಿತಿಗೆ ಸಂಬಂಧಪಟ್ಟದ್ದಾಗಿರುತ್ತದೆ. ಹೋದ ವರ್ಷದಲ್ಲಿ ಮಳೆಯೇ ಕಡಮೆ. ಎಲ್ಲಾ ಕಡೆಗಳಲ್ಲಿಯೂ ಸಮನಾಗಿ ಬೀಳಲೂ ಇಲ್ಲ. ತಡವಾಗಿ ಪ್ರಾರಂಭವಾಗಿ ಬೇಗನೆ ನಿಂತು ಹೋಯಿತು.

ಇದರಿಂದ ರಾಗಿ ಬೆಳೆಯ ವಿಸ್ತೀರ್ಣವು ಕಡಮೆಯಾಗಿ, ಹುರುಳಿ ಬೆಳೆಯ ವಿಸ್ತೀರ್ಣವು ಹೆಚ್ಚಿತು. ಈ ಎರಡರ ಪೈಕಿ ಯಾವ ಬೆಳೆಯೂ ಚೆನ್ನಾಗಿ ಆಗಲಿಲ್ಲ. ಕೆರೆಗಳಿಗೆ ಯಾವಾಗಲೂ ಬರುವಂತೆ ನೀರು ಬರಲಿಲ್ಲ. ಮೈದಾನ ಪ್ರಾಂತ್ಯದಲ್ಲಿ ಬತ್ತದ ಬೆಳೆಗೆ ಬಾಧಕವುಂಟಾಯಿತು. ಆದರೆ ವಿಶೇಷವಾಗಿ ಬತ್ತದ ಬೆಳೆ ಆಗುವ ಮಲೆನಾಡು ಮತ್ತು ಮೈಸೂರು ಡಿಸ್ಟ್ರಿಕ್ಟಿನ ಮುಖ್ಯ ಪ್ರದೇಶಗಳಲ್ಲಿ ಬತ್ತದ ಬೆಳೆ ಅತೃಪ್ತಿಕರವಾಗಿರಲಿಲ್ಲ. ಮೇವಿಲ್ಲದೆ ಅನೇಕ ದನಗಳು ನಷ್ಟವಾದವು, ಇಲ್ಲವೇ ಕಂಗೆಟ್ಟವು.

ಈ ವರ್ಷದಲ್ಲಿಯೂ ಮಳೆಯು ಸರಿಯಾಗಿ ಉಪಕ್ರಮಿಸಲಿಲ್ಲ. ಮಾಮೂಲಾಗಿ ಬರುವ ಮುಂಗಾರುಮಳೆಯು ವಿಶೇಷವಾಗಿಯೂ ಬರಲಿಲ್ಲ, ಎಲ್ಲಾ ಕಡೆಯೂ ಬೀಳಲೂ ಇಲ್ಲ. ಆಗಸ್ಟ್ ತಿಂಗಳಲ್ಲಿ ಅನುಕೂಲವಾಗಿ ಮಳೆಯಾದುದರಿಂದ, ಕಾಲಸ್ಥಿತಿಯು ಸ್ವಲ್ಪ ಮಟ್ಟಿಗೆ ಉತ್ತಮವಾಯಿತು. ಆದರೆ ಅನೇಕ ಪ್ರದೇಶಗಳಲ್ಲಿ ಪೈರು ಇನ್ನೂ ಎಳೆಯದಾಗಿರುವುದರಿಂದ, ಮುಂದೆ ಕೆಲವು ವಾರಗಳಲ್ಲಿ ಬೀಳಬಹುದಾದ ಮಳೆಯನ್ನು ನೋಡಿಕೊಂಡು ಸುಗ್ಗಿ ಕಾಲದಲ್ಲಿ ಕಟಾವಿಗೆ ಬರತಕ್ಕ ಫಸಲಿನ ಸ್ಥಿತಿಯನ್ನು ನಿರ್ಧರಿಸಬೇಕಾಗಿರುತ್ತದೆ.

ಧಾರಣೆವಾಸಿಗಳು

ಜಾಗ್ರತೆಯಾಗಿ ಸರಕುಗಳು ಸಾಗಲು ಅವಕಾಶವಿರುವುದರಿಂದಲೂ, ದೇಶಾಂತರಗಳ ಸ್ಥಿತಿಗಳು ಬದಲಾಯಿಸುತ್ತಿರುವುದರಿಂದಲೂ, ಕೆಲವು ವರ್ಷಗಳಿಂದೀಚೆಗೆ ಧಾರಣೆಗಳು ಏರುತ್ತಲಿವೆ. ಕಳೆದ ಎರಡು ಮಳೆಗಾಲಗಳಲ್ಲಿಯೂ ಮಳೆ ಕಡಮೆಯಾದ ಕಾರಣ ಈ ಧಾರಣೆಗಳು ಕ್ಷಾಮಕಾಲದ ದರಗಳ ಮಟ್ಟಿಗೂ ಏರಿರುತ್ತವೆ. ಇದರಿಂದ ಬಡವರಾದ ಸರ್ಕಾರಿ ನೌಕರರಿಗೂ, ಕಸಬುದಾರರಿಗೂ, ಕೂಲಿಜನಗಳಿಗೂ ತುಂಬಾ ಕಷ್ಟವುಂಟಾಗಿರುತ್ತದೆ. ಫಸಲಿಗೆ ಒಳ್ಳೇ ಖರೀದಿ ದೊರೆಯುತ್ತಿರುವದರಿಂದ ರೈತರಿಗೆ ಕಂದಾಯ ಕಟ್ಟುವುದು ಸಾಮಾನ್ಯವಾಗಿ ಕಷ್ಟ ಕಾಣದಿದ್ದರೂ, ಬೆಳೆ ಸ್ವಲ್ಪಹೆಚ್ಚಾಗಿ ಕೆಟ್ಟಕಡೆಗಳಲ್ಲಿ ಮಾತ್ರ ಮಾರುವುದಕ್ಕೆ ವಿಶೇಷ ಉಳಿಯಲಿಲ್ಲ.

ಕಷ್ಟನಿವಾರಣೋಪಾಯಗಳು.

ಈಗಿನ ಸ್ಥಿತಿಯ ನಿವಾರಣೆಗೆ ತಮಗೆ ಸಾಧ್ಯವಾದ ಎಲ್ಲಾ ಏರ್ಪಾಡುಗಳನ್ನು ಸರ್ಕಾರದವರು ಮಾಡಿರುತ್ತಾರೆ. ಕೆರೆಯ ಅಂಗಳಗಳನ್ನು ಸಾಗುವಳಿಗೆ ಕೊಡುವಂತೆ ಹುಕುಂ ಮಾಡಲಾಗಿರುತ್ತದೆ. ಕುಡಿಯುವ ನೀರಿನ ಬಾವಿಗಳನ್ನು ತೆಗೆಯಿಸುವುದಕ್ಕಾಗಿ ಹಣವನ್ನು ಮಂಜೂರ್ಮಾಡಲಾಗಿದೆ. ದನಗಳ ಮೇವಿಗಾಗಿ ಸಂಸ್ಥಾನದ ಜಂಗಲುಗಳನ್ನು ಬಿಟ್ಟುಕೊಡಲಾಗಿದೆ. ಮೇವನ್ನು ಸಂಗ್ರಹಿಸಿ ಸರಬರಾಯಿ ಮಾಡುವುದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡಲಾಗಿರುತ್ತದೆ. ಮುಂಗಡವಾಗಿ ರೈತರುಗಳಿಗೆ ಕೊಡುವುದಕ್ಕಾಗಿ ರೆವಿನ್ಯೂ ಅಧಿಕಾರಿಗಳು ಕೇಳಿದಷ್ಟು ಭಾರೀ ಹಣವನ್ನು ಮಂಜೂರ್ಮಾಡಿದೆ.

ಈ ಸಂಬಂಧದಲ್ಲಿ ಗ್ರಾಮಾಂತರಗಳಲ್ಲಿ ಜರುಗಿಸಲು ಏರ್ಪಡಿಸಿರುವ ಕಾಮಗಾರಿಗಳು ಸಾಕೇ ಸಾಲವೇ ? ಇವುಗಳು ಸರಿಯಾಗಿ ಹಂಚಿಕೆಯಾಗಿರುತ್ತವೆಯೋ ಇಲ್ಲವೇ ? ಎಂಬುದನ್ನು ನಿಷ್ಕರ್ಷೆಯಿಸಲು, ಇವುಗಳ ಪಟ್ಟಿಯನ್ನು ಪುನರ್ವಿಮರ್ಶೆಗೆ ಗುರಿಪಡಿಸಿದೆ. ಅನೇಕ ಗ್ರಾಮಗಳಲ್ಲಿ ಕಾಮಗಾರಿಗಳು ಕೈಗೊಳ್ಳಲು ಸಿದ್ಧವಾಗಿರುವುದರಿಂದಲೂ, ಪಬ್ಲಿಕ್ ವರ್ಕ್ಸ್ ಮತ್ತು ರೈಲ್ವೆ ಇಲಾಖೆಗಳಲ್ಲಿ ಕೆಲವು ಭಾರಿಭಾರಿ ಕಾಮಗಾರಿಗಳು ಸಹಿತ ಅನೇಕ ಕೆಲಸಗಳು ಸಂಸ್ಥಾನದಲ್ಲಿ ಅಲ್ಲಲ್ಲಿ ನಡೆಯುತ್ತಿರುವುದರಿಂದಲೂ, ಕೆಲಸಕ್ಕೆ ಸೇರಲಪೇಕ್ಷಿಸುವ ಜನರಿಗೆ ಕೆಲಸವನ್ನು ಒದಗಿಸಲು ನಮಗೆ ಎಂದಿಗಿಂತಲೂ ಈಗ ವಿಶೇಷವಾಗಿ ಹೆಚ್ಚು ಅವಕಾಶ ಉಂಟಾಗಿರುತ್ತದೆ.

ಎಗ್ಜಿಕ್ಯುಟಿವ್ ಕೌನ್ಸಿಲ್ ಮತ್ತು ಶ್ರೀಮದ್ಯುವರಾಜರು ಎಕ್ಸ್‌ಟ್ರಾರ್ಡಿನರಿ ಮೆಂಬರ್ ಪದವಿಗೆ ಬಂದದ್ದು.

ಶ್ರೀಮದ್ಯುವರಾಜರವರನ್ನು ಒಬ್ಬ ಎಕ್ಸ್‌ಟ್ರಾರ್ಡಿನರಿ ಮೆಂಬರನ್ನಾಗಿ ನಿಯಮಿಸಿದ್ದರಿಂದ, ಎಗ್ಜಿಕ್ಯುಟಿವ್ ಕೌನ್ಸಿಲಿನ ಮೆಂಬರುಗಳ ಸಂಖ್ಯೆಯನ್ನು ಎರಡರಿಂದ ಮೂರಕ್ಕೆ ಹೆಚ್ಚಿಸಲಾಯಿತು. ತಮಗೆ ತಿಳಿದಂತೆ ಶ್ರೀಮದ್ಯುವರಾಜರವರು ಕೆಲವು ಕಾಲ ಮಿಲಿಟರಿ ಸೆಕ್ರೆಟರಿಗಳಾಗಿ ಕೆಲಸ ಮಾಡಿದರು. ಆದರೆ, ಅವರ ಶಕ್ತಿಪ್ರಸರಣೆಗೆ ಆ ಅಧಿಕಾರದಲ್ಲಿ ಅವಕಾಶವು ಸಾಲದುದಾಯಿತು. ಆದಕಾರಣ ಶ್ರೀಮನ್ ಮಹಾರಾಜರವರು, ಶ್ರೀಮದ್ಯುವರಾಜರು ಯೂರೋಪ್ ದೇಶದಲ್ಲಿ ಸಂಚಾರಮಾಡಿಕೊಂಡು ಹಿಂದಕ್ಕೆ ದಯಮಾಡಿಸಿದ ಬಳಿಕ, ಅವರನ್ನು ಕೌನ್ಸಿಲಿಗೆ ಒಬ್ಬ ಎಕ್ಸ್‌ಟ್ರಾರ್ಡಿನರಿ ಮೆಂಬರನ್ನಾಗಿ ನೇಮಿಸಬೇಕೆಂದು ನಿಶ್ಚಯಿಸಿದರು. ಶ್ರೀಮದ್ಯುವರಾಜರವರು ಈಗ ಆ ಉನ್ನತ ಪದವಿಯನ್ನು ಸುಮಾರು ಎಂಟು ತಿಂಗಳುಗಳಿಂದ ವಹಿಸಿರುತ್ತಾರೆ. ಅವರು ಮಾಡುವ ಕಾರ್ಯದ ಶ್ಲಾಘನೆಯನ್ನು ನಾವು ಮಾಡತಕ್ಕದ್ದಲ್ಲವಾದರೂ, ಸಹೋದ್ಯೋಗಿಯಾದುದರಿಂದ ಅವರ ಸಮಾಚೀನವಾದ ವಿವೇಚನಾ ಶಕ್ತಿಯನ್ನೂ, ತಮ್ಮ ಬಳಿಗೆ ಪರ್ಯಾಲೋಚನೆಗೆ ಬರುವ ವಿಷಯಗಳನ್ನು ವಿಮರ್ಶೆ ಮಾಡುವುದರಲ್ಲಿ ತೋರ್ಪಡಿಸುತ್ತಿರುವ ಬುದ್ಧಿವಿಶಾಲತೆಯನ್ನೂ ಅಭಿಪ್ರಾಯ ನವೀನತೆಯನ್ನೂ ನೋಡಿ ನಮಗುಂಟಾಗಿರುವ ಆಶ್ಚರ್ಯವನ್ನು ತಿಳಿಯಪಡಿಸದೆ ಬಿಡಲಾರೆವು.

ಅಬ್ಕಾರಿ.

1912—13 ನೆಯ ವರ್ಷದಲ್ಲಿ ಅಬ್ಕಾರಿ ಹುಟ್ಟುವಳಿಯಾದಷ್ಟು ಹಿಂದೆ ಯಾವ ಸಂವತ್ಸರದಲ್ಲಿಯೂ ಆಗಿರಲಿಲ್ಲವೆಂದು ಹೋದ ವರ್ಷ ತಿಳಿಸಲಾಯಿತು. ಆದರೆ 1913—14 ನೆಯ ವರ್ಷದ ಉತ್ಪತ್ತಿಯು ಇನ್ನೂ ಜಾಸ್ತಿಯಾಗಿದೆ. ಈ ಉತ್ಪತ್ತಿಯು 55,28,281 ರೂಪಾಯಿಗಳು ; ಎಂದರೆ, ಹಿಂದಿನ ವರ್ಷದ ಹುಟ್ಟುವಳಿಗಿಂತ 4,33,971 ರೂಪಾಯಿಗಳಷ್ಟು ಜಾಸ್ತಿಯಾಗಿವೆ. ಇದರಲ್ಲಿ ಸುಮಾರು ಅರ್ಧಪಾಲು ದುಕಾನ್ ಗುತ್ತಿಗೆ ಬಾಬಿನಿಂದಲೂ, ಉಳಿದ ಮೊಬಲಗು ಮದ್ಯವು ಹೆಚ್ಚಾಗಿ ಬಿಕರಿಯಾದುದರಿಂದಲೂ ಉತ್ಪತ್ತಿಯಾಯಿತು. ಈ ಹೆಚ್ಚು ಹುಟ್ಟುವಳಿಯು ಅನ್ಯದೇಶದ ಮದ್ಯದ ವಿನಾ ಡ್ಯೂಟಿಗೆ ಗುರಿಯಾದ ಎಲ್ಲಾ ಬಾಬುಗಳಿಂದಲೂ ಆಯಿತು. ಸುಲಭ ಕ್ರಯಕ್ಕೆ ದೊರೆಯುವ ಹಲವು ಬಗೆಯಾದ ಅನ್ಯದೇಶದ ಮದ್ಯಗಳ ಪಾನವು ಕ್ರಮೇಣ ಕಡಿಮೆಯಾಗಿ ಬೆಂಗಳೂರು ಸೆಂಟ್ರಲ್ ಡಿಸ್ಟಿಲರಿಯಲ್ಲಿ ತಯಾರಾಗುವ ಮದ್ಯಗಳ ಉಪಯೋಗವೇ ಹೆಚ್ಚಾಗುತ್ತಿದೆ.

ಫಾರೆಸ್ಟು.

ಪ್ರಸಕ್ತ ಸಂವತ್ಸರದ ಫಾರೆಸ್ಟು ಬಾಬಿನಲ್ಲಿ ಆದಷ್ಟು ಉತ್ಪತ್ತಿಯು ಹಿಂದೆ ಯಾವಾಗಲೂ ಆಗಿರಲಿಲ್ಲ. ಈ ಬಾಬಿನ ಉತ್ಪತ್ತಿಯು 32,71,330 ರೂಪಾಯಿಗಳಷ್ಟು ಆಯಿತು. ಇದರ ಪೈಕಿ ಸುಮಾರು ಮೂರರಲ್ಲಿ ಎರಡು ಪಾಲು 2,168 ಟನ್‌ಗಳಷ್ಟು ಗಂಧದ ಮರದ ಬಿಕರಿಯಿಂದ ಬಂದಿತು. ಜಂಗಲ್ ರಕ್ಷಣೆಗಾಗಿಯೂ ಇಲಾಖೆಯ ಸಿಬ್ಬಂದಿಗಾಗಿಯೂ 7,45,476 ರೂಪಾಯಿ ಖರ್ಚಾಯಿತು.

ಫಾರೆಸ್ಟುಗಳಲ್ಲಿ ಸಂಸ್ಥಾನದ ಉತ್ಪತ್ತಿಗೆ ಆಕರವಾದ ಪದಾರ್ಥಗಳು ಎಷ್ಟರ ಮಟ್ಟಿಗೆ ಸಿಕ್ಕುತ್ತವೆ ಎಂಬುದನ್ನು ತಿಳಿಯುವುದಕ್ಕಾಗಿಯೂ, ಅವುಗಳನ್ನು ಕೈಗಾರಿಕೆ ಕೆಲಸಗಳಿಗೆ ಉಪಯೋಗಿಸುವುದು ಸಾಧ್ಯವೇ ಎಂಬ ಅಂಶವನ್ನು ಪರಿಶೀಲನೆ ಮಾಡುವುದಕ್ಕಾಗಿಯೂ ಇಬ್ಬರು ಫಾರೆಸ್ಟು ಆಫೀಸರುಗಳನ್ನು ಸ್ಪೆಷಲ್ ಡ್ಯೂಟಿಯ ಮೇಲೆ ನೇಮಿಸಿರುತ್ತದೆ. ಸದರಿ ಆಫೀಸರುಗಳು ಪ್ರಸಕ್ತ ಸಂವತ್ಸರವು ಮುಗಿಯುವುದರೊಳಗೆ ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿನ ಘಾಟೀ ಫಾರೆಸ್ಟುಗಳನ್ನು, ಕಡೂರು ಡಿಸ್ಟ್ರಿಕ್ಟಿನಲ್ಲಿ ತುಂಗಾನದಿಯ ಮೇಲ್ಭಾಗದ ಬಳಿ ಇರುವ ಫಾರೆಸ್ಟುಗಳನ್ನೂ, ಸಾಗರ ಕಣಿವೆಯಲ್ಲಿರುವ ಫಾರೆಸ್ಟುಗಳನ್ನೂ ಸಂಪೂರ್ಣವಾಗಿ ಪರಿಶೋಧಿಸಿದರು. ಇದಲ್ಲದೆ ಇವರಿಬ್ಬರ ಪೈಕಿ ಒಬ್ಬ ಆಫೀಸರು ಸಂಸ್ಥಾನದಲ್ಲಿ ಸೀಸದಕಡ್ಡಿ, ಬೆಂಕಿಕಡ್ಡಿ, ಇವುಗಳನ್ನು ತಯಾರು ಮಾಡುವುದಕ್ಕೆ ಸಾಧ್ಯವೇ ಎಂಬ ಅಂಶವನ್ನು ವಿಮರ್ಶೆ ಮಾಡಲು ಸರ್ಕಾರದವರು ನೇಮಿಸಿದ ಕಲಾಭಿಜ್ಞರಿಗೆ ಸಹಕಾರಿಗಳಾಗಿದ್ದರು. ಈ ಆಫೀಸರುಗಳು ತಮ್ಮ ತಪ್ಸೀಲ್‌ವಾರ್ ರಿಪೋರ್ಟುಗಳನ್ನು ಕಳುಹಿಸಿರುತ್ತಾರೆ. ಅವು ಈಗ ಸರ್ಕಾರದವರ ಪರ್ಯಾಲೋಚನೆಯಲ್ಲಿರುತ್ತವೆ.

ಸ್ಟಾಂಪು.

ಪ್ರಸಕ್ತ ವರ್ಷದಲ್ಲಿ ಘನತೆಯನ್ನು ಹೊಂದಿದ ಶ್ರೀಮನ್ ಮಹಾರಾಜರವರ ಭಾವಚಿತ್ರವುಳ್ಳ ಸ್ಟಾಂಪುಗಳನ್ನು ಉಪಯೋಗಕ್ಕೆ ತಂದದ್ದೇ ಸ್ಟಾಂಪು ಇಲಾಖೆಗೆ ಸಂಬಂಧಪಟ್ಟ ಸಂತೋಷಕರವಾದ ಒಂದು ಹೊಸ ಏರ್ಪಾಡಾಗಿರುತ್ತದೆ.

ಪೋಲೀಸ್ ಇಲಾಖೆ.

ಹೋದ ವರ್ಷದ ಉಪನ್ಯಾಸದಲ್ಲಿ ತಿಳಿಸಿದ್ದ ಮೇರೆಗೆ, ಪೋಲೀಸು ಇಲಾಖೆಯ ಸಿಬ್ಬಂದಿಯನ್ನೂ ಬತ್ತಿ ಸಂಬಳವನ್ನೂ ಅಭಿವೃದ್ಧಿಪಡಿಸತಕ್ಕ ಸಲಹೆಗಳನ್ನು ಜಾರಿಗೆ ತಂದಿರುತ್ತದೆ. ಈ ಪೋಲೀಸು ಬಲದ ಕಾಯಂ ಸಿಬ್ಬಂದಿಯಲ್ಲಿ 862 ಮಂದಿ ಆಫೀಸರುಗಳೂ, 5,161 ಮಂದಿ ನೌಕರರೂ ಇದ್ದರು. ಕೋಲಾರದ ಗೋಲ್ಡ್ ಫೀಲ್ಡ್ಸ್ ರೈಲ್ವೇ ಮೇಲಣ ಅಧಿಕಾರವನ್ನು ಹಂಗಾಮಿಯಾಗಿ ಸಂಸ್ಥಾನಕ್ಕೆ ತೆಗೆದುಕೊಂಡು, ಅವಶ್ಯಕವಾದ ಪೋಲೀಸ್ ಸಿಬ್ಬಂದಿಯನ್ನು ಒಂದು ವರ್ಷದವರೆಗೆ ನೇಮಿಸಲಾಗಿದೆ.

ಮಿಲಿಟರಿ ಇಲಾಖೆ.

ಬಾರ್ ಸಿಪಾಯಿಗಳ ಸಂಬಳವನ್ನೂ, ಮುಂದೆ ಅವರು ಬಡ್ತಿಗೆ ಬರುವ ಸಂಬಳವನ್ನೂ ಅಭಿವೃದ್ಧಿಗೆ ತರಬೇಕೆಂಬ ಆಲೋಚನೆ ಇರುತ್ತದೆಂದು ಕಳೆದ ವರ್ಷದ ಉಪನ್ಯಾಸದಲ್ಲಿ ತಿಳಿಸಲಾಯಿತು. ವರ್ಷಕ್ಕೆ 26,000 ರೂಪಾಯಿಗಳ ಜಾಸ್ತಿ ಖರ್ಚು ತಗಲುವ ಒಂದು ಏರ್ಪಾಡನ್ನು ಈಚೆಗೆ ಮಂಜೂರ್ಮಾಡಲಾಯಿತು. ಅದನ್ನು ಈಗ ಜಾರಿಗೆ ತರುತ್ತಿದೆ.

ವೈದ್ಯ ಮತ್ತು ಜನಾರೋಗ್ಯದ ಇಲಾಖೆಗಳು.

ಈ ಸಂಸ್ಥಾನದಲ್ಲಿ ಪೇಟೆ ಹಾಕುವುದಕ್ಕೆ ಉಪಯೋಗಿಸುವ ಹಾಲಿನಲ್ಲಿ ದೋಷಗಳಿದ್ದವೆಂದು ಬಂದ ಕೆಲವು ಫಿರ್ಯಾದುಗಳನ್ನು ಚೆನ್ನಾಗಿ ವಿಚಾರ ಮಾಡುವದಕ್ಕಾಗಿ ಒಂದು ಕಮಿಟಿಯನ್ನು 1913 ನೆಯ ಜುಲೈ ತಿಂಗಳಲ್ಲಿ ನೇಮಿಸಲಾಯಿತೆಂದು ಹೋದ ವರ್ಷದ ಉಪನ್ಯಾಸದಲ್ಲಿ ತಿಳಿಸಿದೆ. ಕಮಿಟಿಯವರು ಈ ವಿಷಯವನ್ನು ಬಹಳ ಜಾಗರೂಕತೆಯಿಂದ ವಿಚಾರಮಾಡಿದ ಮೇಲೆ, ಮೈಸೂರು ಸೀಮೆಯ ಹಾಲಿನಲ್ಲಿ ಕೆಡಕು ಉಂಟಾಗತಕ್ಕ ದೋಷಗಳೇನೂ ಇಲ್ಲವೆಂತಲೂ, ಶಕ್ತಿಯ ವಿಷಯದಲ್ಲಿ ಇಂಡಿಯಾ ದೇಶದ ಇತರ ಪ್ರದೇಶಗಳಲ್ಲಿ ತಯಾರಾದ ಹಾಲಿಗೆ ನಮ್ಮ ಹಾಲು ನಿಕೃಷ್ಟವಾದದ್ದಲ್ಲವೆಂತಲೂ ನಿರ್ಣಯಿಸಿದರು. ಆದರೆ ಸದರಿ ಹಾಲಿನಲ್ಲಿ ಬೇರೆ ಸಜೀವ ಸೂಕ್ಷ್ಮವಸ್ತುಗಳು ಇರುತ್ತವೆಯಾಗಿ, ಅವುಗಳಿಂದ ಯಾವ ಕೆಡಕೂ ಇಲ್ಲದಿದ್ದರೂ, ಅವುಗಳನ್ನೂ ಕೂಡ ತೆಗೆದು ಹಾಕತಕ್ಕದ್ದು ಅವಶ್ಯಕವಾಗಿರುವದೆಂದು ಕಮಿಟಿಯವರು ಅಭಿಪ್ರಾಯಪಟ್ಟು, ಆ ವಿಷಯದಲ್ಲಿ ಕೆಲವು ಸಲಹೆಗಳನ್ನೂ ಕೊಟ್ಟಿರುತ್ತಾರೆ. ಈ ಸಲಹೆಗಳನ್ನು ಸರ್ಕಾರದವರು ಒಪ್ಪಿ ಇರುತ್ತಾರೆ.

ರಾಬರ್ಟ್‌ಸನ್ ಪೇಟೆಯಲ್ಲಿ ಹೆರಿಗೆಯ ಆಸ್ಪತ್ರೆಯನ್ನು ಜಾಗ್ರತೆಯಲ್ಲಿ ಜನರ ಉಪಯೋಗಕ್ಕೆ ತರಲಾಗುವುದು. ಈ ಆಸ್ಪತ್ರೆಯ ಸಿಬ್ಬಂದಿಯವರಿಗೆ ವಾಸದ ಮನೆಗಳನ್ನು ಇನ್ನೂ ಕಟ್ಟಿಸಿರುವದಿಲ್ಲ. ಆದರೆ ಸದ್ಯಕ್ಕೆ ಇವರುಗಳಿಗೆ ಹಂಗಾಮಿಯಾಗಿ ವಾಸದ ಮನೆಗಳನ್ನು ಕೊಡಿಸಿ ಆಸ್ಪತ್ರೆಯ ಕೆಲಸವನ್ನು ನಡೆಸಲಾಗುವುದು.

ವಿದ್ಯಾಭಿವೃದ್ಧಿ ಮತ್ತು ಭಾಗ್ಯಾಭಿವೃದ್ಧಿ.

ಸಂಪದಭ್ಯುದಯ ಸಮಾಜ.

ಕಳೆದ ಸರ್ಕಾರೀ ಸಾಲಿನಲ್ಲಿ, ಸಂಪದಭ್ಯುದಯ ಸಮಾಜದ ಬೇರೆಬೇರೆ ಕಮಿಟಿಗಳನ್ನು, ಸದರಿ ಕಮಿಟಿಗಳಿಗೆ ಸಂಬಂಧಪಟ್ಟ ಇಲಾಖೆಗಳನ್ನೂ ಬಲಪಡಿಸಲಾಯಿತು. ಕಾನ್‌ಫರೆನ್ಸಿನ ಕೆಲಸವನ್ನು ಕ್ರಮಪಡಿಸುವದಕ್ಕೂ, ಅದನ್ನು ಕಾರ್ಯತಃ ನೆರವೇರಿಸಲಾಗುವಂತೆ ಮಾಡುವದಕ್ಕೂ ವಿಶೇಷವಾದ ಪ್ರಯತ್ನಗಳನ್ನು ನಡಿಸಲಾಯಿತು. ವರ್ಷದ ಆರಂಭದಲ್ಲಿ ಕಾನ್‌ಫರೆನ್ಸಿನ ಮತ್ತು ಅದಕ್ಕೆ ಸೇರಿದ ಕಮಿಟಿಗಳ ಏರ್ಪಾಟುಗಳಲ್ಲಿ ಸ್ವಲ್ಪ ಬದಲಾವಣೆಯನ್ನು ಮಾಡಿ ಅವುಗಳ ಕಾರ್ಯಗಳನ್ನು ಸ್ಪಷ್ಟವಾಗಿ ಗೊತ್ತುಮಾಡಲಾಯಿತು. ಕಳೆದ ಅಕ್ಟೋಬರಿನಲ್ಲಿ ನಾವು ತಿಳಿಯಪಡಿಸಿದಂತೆ, ಈ ಸಭೆಯಿಂದ 6 ಜನ ಮೆಂಬರುಗಳನ್ನೂ, ಡಿಸ್ಟ್ರಿಕ್ಟ್ ಎಲಿಕ್ಟೋರೇಟುಗಳಿಂದ (ಚುನಾವಣೆಯ ಸ್ಥಳಗಳಿಂದ) 8 ಜನ ಮೆಂಬರುಗಳನ್ನೂ, ಚುನಾಯಿಸತಕ್ಕ ಬಗ್ಗೆ 16 ಸ್ಥಾನಗಳಿಗೆ ಅವಕಾಶ ಕೊಡಲಾಯಿತು. ಈ ರೀತಿ ಚುನಾಯಿಸಲ್ಪಟ್ಟ ಪ್ರತಿನಿಧಿಗಳು ಕಳೆದ ಜೂನ್ ಮಾಹೆಯಲ್ಲಿ ನಡೆದ ಕಾನ್‌ಫರೆನ್ಸಿನ ವಿವಿಟಂಗಿನ ಕೆಲಸದಲ್ಲಿ ಭಾಗಿಗಳಾಗಿದ್ದರು. ಎಜ್ಯುಕೇಷನ್ ಕಮಿಟಿಯ ಉದ್ಯೋಗ ಪ್ರಯುಕ್ತ ಸೆಕ್ರೆಟರಿಯವರಾಗಿಯೂ ಇದ್ದ ವಿದ್ಯಾಭ್ಯಾಸದ ಇಲಾಖೆಯ ಡೆಪ್ಯುಟಿ ಇನ್‌ಸ್ಪೆಕ್ಟರ್ ಜನರಲ್‌ರವರು ಮಾಡಬೇಕಾದ ಕೆಲಸಗಳು ವಿಶೇಷವಾಗಿದ್ದುದರಿಂದ, ಎಜ್ಯುಕೇಷನ್ ಕಮಿಟಿಯ ಕೆಲಸವನ್ನು ನೋಡಿಕೊಳ್ಳುವುದಕ್ಕಾಗಿ ಪೂರಾಕಾಲ ಕೆಲಸಮಾಡತಕ್ಕ ಒಬ್ಬ ಆಫೀಸರನ್ನು ನೇಮಿಸಲಾಯಿತು. ಮೂರು ಸೆಂಟ್ರಲ್ ಕಮಿಟಿಗಳಿಗೆ ಸಂಬಂಧಪಟ್ಟ ಕೆಲಸವನ್ನು ಒಟ್ಟುಗೂಡಿಸಿ ಪರಿಶೀಲನೆ ಮಾಡತಕ್ಕದ್ದೇ ಮುಖ್ಯ ಕರ್ತವ್ಯವಾಗಿರುವ ಸ್ಟ್ಯಾಂಡಿಂಗ್ ಕಮಿಟಿಯು, ಅನೇಕ ಮುಖ್ಯಮುಖ್ಯವಾದ ಸಂಗತಿಗಳನ್ನು ವಿಚಾರಮಾಡತಕ್ಕ ಬಗ್ಗೆ, ಪ್ರಸಕ್ತ ವರ್ಷದಲ್ಲಿ ಎರಡು ಸಲ ಸೇರಿಯಿತ್ತು. ಮೂರು ಸೆಂಟ್ರಲ್ ಕಮಿಟಿಗಳಿಗೂ ಅನುರೂಪವಾದ ಸಬ್ ಕಮಿಟಿಗಳನ್ನು ಏರ್ಪಡಿಸುವುದರ ಮೂಲಕ, ಡಿಸ್ಟ್ರಿಕ್ಟ್ ಕಮಿಟಿಗಳ ಕೆಲಸವನ್ನು ಮತ್ತಷ್ಟು ತೃಪ್ತಿಕರವಾಗಿ ನಡೆಯುವಂತೆ ಮಾಡಲಾಯಿತು.

ವಿದ್ಯಾಭ್ಯಾಸದ ಇಲಾಖೆ.

ಸರ್ಕಾರೀ ಸ್ಕೂಲುಗಳ ಸಂಖ್ಯೆಯು 2,725 ರಿಂದ 3,001ರ ವರೆಗೆ ಎಂದರೆ 276 ಹೆಚ್ಚಿ, ಅವುಗಳಲ್ಲಿ ಓದುವವರ ಸಂಖ್ಯೆಯು 1,31,539ರಿಂದ 1,58,334ರ ವರೆಗೆ ಎಂದರೆ 26,795 ಹೆಚ್ಚಿತು. ಇದೇ ರೀತಿಯಲ್ಲಿ ಕೂಲಿಮಠಗಳ ಸಂಖ್ಯೆಯು 1,843ರಿಂದ 2,133ರ ವರೆಗೂ, ಅವುಗಳಲ್ಲಿ ಓದುತ್ತಿರುವವರ ಸಂಖ್ಯೆಯು 24,901 ರಿಂದ 29,396ರ ವರೆಗೂ, ಹೆಚ್ಚಾಯಿತು. ಸ್ಕೂಲುಗಳ ಸಂಖ್ಯೆಯೂ, ಅವುಗಳಲ್ಲಿ ಓದುವವರ ಸಂಖ್ಯೆಯೂ ಹೆಚ್ಚುವುದಕ್ಕೆ, ಬಾಲಕರಿಗೂ ಬಾಲೆಯರಿಗೂ ಅನೇಕ ಪ್ರೈಮರಿ ಸ್ಕೂಲುಗಳನ್ನು ಹೊಸದಾಗಿ ಕಲ್ಪಿಸಿದ್ದೇ ಮುಖ್ಯಕಾರಣವಾಗಿದೆ. ಕೈಗಾರಿಕೆಯ ಸ್ಕೂಲುಗಳೂ ಇತರ ಕಲಾಶಾಲೆಗಳೂ 28ರಿಂದ 35ರ ವರೆಗೆ ಹೆಚ್ಚಿರುತ್ತವೆ. ಸರ್ಕಾರೀ ಸ್ಕೂಲುಗಳ ಮತ್ತು ಕೂಲಿಮಠಗಳ ಒಟ್ಟು ಸಂಖ್ಯೆಯು ಹೋದವರ್ಷ 4,568 ಇದ್ದದ್ದು ಈ ವರ್ಷ 5,134 ಕ್ಕೂ, ಅವುಗಳಲ್ಲಿ ಓದುತ್ತಿರುವವರ ಸಂಖ್ಯೆ ಹೋದ ವರ್ಷ 1,56,440 ಇದ್ದದ್ದು ಈ ವರ್ಷ 1,87,730ಕ್ಕೂ ಹೆಚ್ಚಿರುತ್ತವೆ. ಈ ರೀತಿಯಾಗಿ ಹೆಚ್ಚಿದ ಎರಡುವಿಧವಾದ ಸ್ಕೂಲುಗಳ ಒಟ್ಟು ಸಂಖ್ಯೆ 566 ಆಗಿಯೂ, ಅವುಗಳಲ್ಲಿ ಓದುವವರ ಸಂಖ್ಯೆ 31,290 ಆಗಿಯೂ ಇತ್ತು. ಒಟ್ಟು ವ್ಯಾಸಂಗಮಾಡುತ್ತಿರುವವರಲ್ಲಿ 1,54,319 ಮಂದಿ ಬಾಲಕರಾಗಿಯೂ, 33,411 ಮಂದಿ ಬಾಲೆಯರಾಗಿಯೂ ಇದ್ದರು. 1912—13ರಲ್ಲಿ ಒಟ್ಟು 1,29,009ಮಂದಿ ಬಾಲಕರೂ, 27,431 ಮಂದಿ ಬಾಲೆಯರೂ ವ್ಯಾಸಂಗಮಾಡುತ್ತಿದ್ದರು. ಸ್ಕೂಲಿಗೆ ಹೋಗುವುದಕ್ಕೆ ಅರ್ಹವಾದ ವಯಸ್ಸುಳ್ಳ ಗಂಡಸರ ಪೈಕಿ, ಸ್ಕೂಲಿನಲ್ಲಿ ವ್ಯಾಸಂಗಮಾಡುತ್ತಿರುವವರ ಸಂಖ್ಯೆಯು ಶೇಕಡ 29.8ರಿಂದ 35ಕ್ಕೂ, ಅದೇ ರೀತಿಯಲ್ಲಿ ಒಟ್ಟು ಹೆಂಗಸರ ಪೈಕಿ ವ್ಯಾಸಂಗಮಾಡುತ್ತಿರುವ ಬಾಲೆಯರ ಸಂಖ್ಯೆಯು ಶೇಕಡ 6.4ರಿಂದ 7.7ಕ್ಕೂ ಹೆಚ್ಚಿರುತ್ತದೆ. ವ್ಯಾಸಂಗಾರ್ಹವಾದ ವಯಸ್ಸುಳ್ಳ ಒಟ್ಟು ಸ್ತ್ರೀಪುರುಷರ ಸಂಖ್ಯೆಯ ಪೈಕಿ ಒಟ್ಟು ವ್ಯಾಸಂಗಮಾಡುತ್ತಿರುವ ಬಾಲಿಕಾ ಬಾಲಕರ ಸಂಖ್ಯೆಯು ಕಳೆದ ವರ್ಷ ಶೇಕಡ 18.0 ಇದ್ದದ್ದು ಈ ವರ್ಷ ಶೇಕಡ 21.4ಕ್ಕೆ ಹೆಚ್ಚಿದಂತಾಗಿದೆ.

ಪ್ರೌಢವಿದ್ಯಾಭ್ಯಾಸದ ವಿಷಯದಲ್ಲಿಯೂ ಇತರ ಅಭಿವೃದ್ಧಿ ಕಾರ್ಯಗಳು ಜರುಗಿಸಲ್ಪಟ್ಟವು. ಆದರೆ ಈ ಇಲಾಖೆಯ ಯಾವತ್ತು ಶಕ್ತಿಯನ್ನೂ ಮುಖ್ಯವಾಗಿ ಪ್ರಾಥಮಿಕ ವಿದ್ಯಾಭಿವೃದ್ಧಿಗಾಗಿ ವಿನಿಯೋಗಿಸಲಾಯಿತು. ಗ್ರಾಮಪಾಠಶಾಲೆಗಳನ್ನು ಹೆಚ್ಚಿಸುವುದಕ್ಕಾಗಿ ಪ್ರತ್ಯೇಕವಾಗಿ ಒಂದುಲಕ್ಷ ರೂಪಾಯಿ ಗ್ರಾಂಟನ್ನೂ, ಸ್ಕೂಲ್ ಕಟ್ಟಡಗಳನ್ನು ಕಟ್ಟಿಸತಕ್ಕ ಬಗ್ಗೆ ಅರ್ಧಲಕ್ಷ ರೂಪಾಯಿ ಗ್ರಾಂಟನ್ನೂ ಕೊಡಲಾಯಿತು. ಗ್ರಾಂಟ್‌ಇನ್‌ಏಯ್ಡ್ ನಿಬಂಧನೆಗಳ ಮೇರೆ 1,000 ಸ್ಕೂಲುಗಳನ್ನು ಏರ್ಪಡಿಸಲು ಮಂಜೂರ್ ಮಾಡಲಾಯಿತು. ಯಾವ ಉಪಾಧ್ಯಾಯನಿಗೇ ಆಗಲಿ ಮಾಹೆಯಾನ 10 ರೂಪಾಯಿಗೆ ಕಮ್ಮಿ ಇಲ್ಲದಷ್ಟು ಸಂಬಳ ದೊರೆಯುವಂತೆ ಮಾಡಲು, ಸರ್ಕಾರದಿಂದ ಕೊಡುವ ಗ್ರಾಂಟಿನ ಜೊತೆಗೆ ಗ್ರಾಮಸ್ಥರು ದ್ರವ್ಯರೂಪವಾಗಿಯಾಗಲೀ ಧಾನ್ಯರೂಪವಾಗಿಯಾಗಲೀ ಸಹಾಯ ಮಾಡಬೇಕಾದದ್ದೇ ಇವರ ಮೂಲತತ್ವವು.

ನಿರ್ಬಂಧ ವಿದ್ಯಾಭ್ಯಾಸದ ಒಂದು ಏರ್ಪಾಟನ್ನು ಮಂಜೂರ್ಮಾಡಿರುವದಲ್ಲದೆ, ಇದನ್ನು ಸದ್ಯದಲ್ಲಿ ಚುನಾಯಿಸಲ್ಪಟ್ಟಿರುವ 15 ಮುಖ್ಯ ಸ್ಥಳಗಳಲ್ಲಿ ಅಜಮಾಯಿಸಿ ಮಾಡಲಾಗುವುದು. ಇದಕ್ಕಾಗಿ ನಿಯಮಗಳನ್ನು ತಯಾರ್ಮಾಡಿ, ಹಣವನ್ನು ಒದಗಿಸಿ ಇದೆ, ಮತ್ತು ಮೊದಲು ಮಾಡಬೇಕಾದ ಸಂವಿಧಾನಗಳೆಲ್ಲಾ ಮುಗಿದಿರುತ್ತವೆ.

ಪ್ರಾಥಮಿಕ ವಿದ್ಯಾಭ್ಯಾಸವನ್ನೂ, ಸಾಮಾನ್ಯ ವಿದ್ಯಾಭ್ಯಾಸವನ್ನೂ ಹೆಚ್ಚಿಸಿದ್ದರಿಂದ, ಸಂಸ್ಥಾನದಲ್ಲಿ ಇದುವರೆಗೆ ದೊರೆಯುತ್ತಿದ್ದುದಕ್ಕಿಂತಲೂ ಶಿಕ್ಷಿತರಾದ ಹೆಚ್ಚು ಜನ ಉಪಾಧ್ಯಾಯರನ್ನೂ, ಇನ್ನೂ ಉತ್ತಮವಾದ ಶಿಕ್ಷಣಕ್ರಮವನ್ನೂ ಒದಗಿಸತಕ್ಕದ್ದು ಆವಶ್ಯಕವಾಗಿರುತ್ತದೆ. ಇದನ್ನು ಒದಗಿಸಬೇಕೆಂಬ ಉದ್ದೇಶದಿಂದ ಟ್ರೇನಿಂಗ್ ಸ್ಕೂಲ್‌ಗಳನ್ನು ಇನ್ನೂ ಚೆನ್ನಾಗಿ ಸರಿಪಡಿಸುವುದಕ್ಕೂ, ಅವುಗಳ ಸಂಖ್ಯೆಯನ್ನು ಹೆಚ್ಚಿಸುವುದಕ್ಕೂ ಒಂದು ಏರ್ಪಾಡು ಅಂಗೀಕೃತವಾಗಿದೆ. ಆ ಏರ್ಪಾಡಿನ ಸಾರಾಂಶವೇನೆಂದರೆ—ಗ್ರ್ಯಾಜುಯೇಟುಗಳಾದ ಉಪಾಧ್ಯಾಯರಿಗಾಗಿ ಒಂದು ಟ್ರೇನಿಂಗ್ ತರಗತಿಯನ್ನಿಟ್ಟು ಮೈಸೂರು ನಾರ್ಮಲ್ ಸ್ಕೂಲನ್ನು ಒಂದು ಟ್ರೇನಿಂಗ್ ಕಾಲೇಜನ್ನಾಗಿ ಮಾಡುವುದು ; ಶಿವಮೊಗ್ಗೆಯಲ್ಲಿಯೂ, ಕೋಲಾರದಲ್ಲಿಯೂ ಇರುವ ಟ್ರೇನಿಂಗ್ ಸ್ಕೂಲುಗಳನ್ನು ಇನ್ನೂ ಚೆನ್ನಾಗಿ ಸರಿಪಡಿಸುವುದು ; ಮತ್ತು ಶೀಘ್ರದಲ್ಲಿಯೇ ತುಮಕೂರಲ್ಲಿ ಒಂದು ಟ್ರೇನಿಂಗ್

ಇಡುವುದು. ಈಗ ಸಾಲಿಯಾನ 254 ಜನ ಉಪಾಧ್ಯಾಯರಿಗೆ ಶಿಕ್ಷಣವನ್ನು ಕೊಡುತ್ತಿರುವುದಕ್ಕೆ ಬದಲಾಗಿ, ಮುಂದೆ 440 ಜನ ಉಪಾಧ್ಯಾಯರಿಗೆ ಶಿಕ್ಷಣವನ್ನು ಕೊಡುವುದೇ ಈ ಬದಲಾವಣೆಗಳ ಫಲಿತಾಂಶವಾಗುವುದು.

ಸ್ತ್ರೀವಿದ್ಯಾಭ್ಯಾಸವೂ ಕೂಡ ಅಭಿವೃದ್ಧಿಯಾಗುತ್ತಿದೆ. ಕಳೆದ ಸಾಲಿನಲ್ಲಿ ಇದ್ದ ಗರ್ಲ್ಸ್ ಸ್ಕೂಲುಗಳ ಸಂಖ್ಯೆಯು 380 ರಿಂದ ಪ್ರಕೃತ ವರ್ಷದಲ್ಲಿ 397 ರ ವರೆಗೆ ಹೆಚ್ಚಿರುತ್ತದೆ. ಮೈಸೂರಲ್ಲಿರುವ ಮಹಾರಾಣೀ ಕಾಲೇಜನ್ನೂ, ಡಿಸ್ಟ್ರಿಕ್ಟ್ ಕಸಬೆಗಳಲ್ಲಿರುವ ಗರ್ಲ್ಸ್ ಸ್ಕೂಲುಗಳನ್ನೂ, ಅವುಗಳ ಪ್ರಯೋಜನವನ್ನೂ ಹೆಚ್ಚಿಸಬೇಕೆಂಬ ಉದ್ದೇಶದಿಂದ, ಪುನಃ ಪರಿಷ್ಕರಿಸಲು ಹುಕುಂ ಕೊಡಲಾಗಿದೆ. ಸದರಿ ಕಾಲೇಜಿಗೆ ಸೇರಿದಂತೆ ಒಂದು ಹಾಸ್ಟೆಲನ್ನು ಏರ್ಪಡಿಸಲಾಗುವುದು. ಮತ್ತು ಮುಂದೆ ಸರ್ಕಾರದ ಆಡಳಿತಕ್ಕೆ ತೆಗೆದುಕೊಳ್ಳುವ ಮೈಸೂರು ವಿಡೋಸ್ ಹೋಮನ್ನು ಅದಕ್ಕೆ ಸೇರಿಸಲಾಗುತ್ತದೆ. ಬೆಂಗಳೂರಲ್ಲಿರುವ ಗೌರ್ನಮೆಂಟ್ ಗರ್ಲ್ಸ್ ಸ್ಕೂಲಿನಲ್ಲಿಯೂ, ತುಮಕೂರು ಯಂಪ್ರೆಸ್ ಗರ್ಲ್ಸ್ ಸ್ಕೂಲಿನಲ್ಲಿಯೂ ಕನ್ನಡ ಅಪ್ಪರ್ ಸೆಕೆಂಡರಿ ತರಗತಿಗಳನ್ನಿಟ್ಟು ಸದರಿ ಸ್ಕೂಲುಗಳನ್ನು ಹೈಸ್ಕೂಲ್ ಅಂತಸ್ತಿಗೆ ತರಲಾಗುವುದು. ಈ ಸ್ಕೂಲುಗಳಲ್ಲಿಯೂ, ಬೆಂಗಳೂರು ಆರ್ಯಬಾಲಿಕಾ ಪಾಠಶಾಲೆಯಲ್ಲಿಯೂ, ಚಾಮರಾಜಪೇಟೆ ಗರ್ಲ್ಸ್ ಸ್ಕೂಲಿನಲ್ಲಿಯೂ ಇಂಗ್ಲೀಷ್ ಲೋವರ್ ಸೆಕೆಂಡರಿ ಕ್ಲಾಸುಗಳನ್ನು ಇಡಲಾಗುವುದು. ಬೆಂಗಳೂರು ಮಲ್ಲೇಶ್ವರದ ಗರ್ಲ್ಸ್ ಸ್ಕೂಲಿನಲ್ಲಿಯೂ, ಕೋಲಾರ, ಚಿಕ್ಕಮಗಳೂರು, ಚಿತ್ರದುರ್ಗ, ಶಿವಮೊಗ್ಗ, ಹಾಸನ, ಇವುಗಳಲ್ಲಿನ ಗರ್ಲ್ಸ್ ಸ್ಕೂಲುಗಳಲ್ಲಿಯೂ ಇಂಗ್ಲೀಷ್ ಭಾಷೆಯನ್ನು ಕಲಿಸುವುದಕ್ಕೆ ಏರ್ಪಾಡು ಮಾಡಲಾಗುವುದು. ಈ ಹೊಸ ಬದಲಾವಣೆಗಳಿಂದ ಭಾಷೆಗೆ ಸಂಬಂಧಪಟ್ಟ ವಿದ್ಯೆಯೊಂದಿಗೆ ಕೈಗಾರಿಕೆಗೂ ಗೃಹಕೃತ್ಯಕ್ಕೂ ಸಂಬಂಧಪಟ್ಟ ವಿದ್ಯೆಗಳಿಗೂ ಅವಕಾಶವುಂಟಾಗುವುದು. ಹಿಂದೂಸ್ಥಾನಿ ಗರ್ಲ್ಸ್ ಸ್ಕೂಲುಗಳಿಗೆ ಒಬ್ಬರು ಇನ್ಸ್‌ಪೆಕ್ಟ್ರೆಸ್ಸನ್ನು ಪರ್ಮನೆಂಟಾಗಿ ನೇಮಿಸಿಯಿದೆ.

ವ್ಯವಸಾಯದ ಇಲಾಖೆ.

ಈ ಸಂಸ್ಥಾನದ ಮುಖ್ಯ ಕಸಬಾದ ವ್ಯವಸಾಯವನ್ನು ಉತ್ತಮ ಸ್ಥಿತಿಗೆ ತರುವ ವಿಷಯದಲ್ಲಿ ವ್ಯವಸಾಯದ ಇಲಾಖೆಯವರು ಸಾರ್ಥಕವಾದ ಕೆಲಸವನ್ನು ಮಾಡಬೇಕಾದರೆ, ಆ ಇಲಾಖೆಗೆ ಹೆಚ್ಚು ಸಿಬ್ಬಂದಿಯನ್ನು ಕೊಡುವ ಆವಶ್ಯಕತೆಯು ಕೆಲವು ಕಾಲದಿಂದ ಕಂಡುಬಂದಿತ್ತು. ಈ ಉದ್ದೇಶದಿಂದಲೇ ಈ ವರ್ಷದಲ್ಲಿ ಈ ಇಲಾಖೆಯನ್ನು ಪರಿಷ್ಕರಿಸಲಾಗಿದೆ. ಇದರ ಫಲಿತಾಂಶವು ಗೋಚರಕ್ಕೆ ಬರುತ್ತಲಿದೆ. ಈ ಹೊಸ ಏರ್ಪಾಡುಗಳನ್ನು ಪ್ರಕೃತ ವರ್ಷ ಮುಗಿಯುವುದಕ್ಕೆ ಹಿಂದೆ 4 ತಿಂಗಳಲ್ಲಿಯೇ ಜಾರಿಗೆ ತರಲು ಅವಕಾಶವಾಯಿತು. ಆದರೂ ಅಷ್ಟು ಸ್ವಲ್ಪ ಕಾಲದೊಳಗೆ ವಿಶೇಷ ಹೊಸ ಕೆಲಸಗಳನ್ನು ಎಂದರೆ ಮುಖ್ಯವಾಗಿ ನಿದರ್ಶನಪೂರ್ವಕವಾಗಿ ತೋರಿಸುವ ವ್ಯವಸಾಯದ ಕೆಲಸಗಳನ್ನು ಪ್ರಾರಂಭಿಸುವುದಕ್ಕೆ ಸಾಧ್ಯವಾಯಿತು. ಯುಕ್ತವಿಲ್ಲದೆ ಇದ್ದದ್ದರಿಂದ ಈ ನಿದರ್ಶನದ ಕೆಲಸಗಳನ್ನು ಇದುವರೆಗೆ ಕೆಲವು ಸ್ಥಳಗಳಲ್ಲಿ ಮಾತ್ರ ನಡಿಸುತ್ತಿತ್ತು. ಆ ಕೆಲಸವನ್ನು ಈಗ ಈ ಸಂಸ್ಥಾನದ ಪ್ರತಿ ಡಿಸ್ಟ್ರಿಕ್ಟಿನಲ್ಲಿಯೂ ನಡಿಸುತ್ತಲಿದೆ.

ಹೋದವರ್ಷದ ಉಪನ್ಯಾಸದಲ್ಲಿ ವ್ಯವಸಾಯ ವಿಷಯಕವಾದ ಕೆಲಸಗಳನ್ನು ಕಾರ್ಯತಃ ನಡಿಸುವುದಕ್ಕಾಗಿ ತಿಳುವಳಿಕೆಯನ್ನು ಕೊಡುವುದಕ್ಕೆ ಬೆಂಗಳೂರಲ್ಲಿ ಒಂದು ವ್ಯವಸಾಯದ ಸ್ಕೂಲನ್ನು ಸ್ಥಾಪಿಸಲಾಗಿದೆ ಎಂಬದಾಗಿ ತಿಳಿಸಿರುತ್ತದೆ. ಈ ಸ್ಕೂಲು ಪ್ರಾರಂಭವಾಗಿ ಒಂದು ವರ್ಷವಾಗಿದೆ. ಅದರಲ್ಲಿ 16 ಮಂದಿ ಹೊಸ ವಿದ್ಯಾರ್ಥಿಗಳೂ ಮತ್ತು 14 ಮಂದಿ 2ನೇ ವರ್ಷದ ವ್ಯಾಸಂಗವನ್ನು ಮಾಡುವವರೂ ಇದ್ದಾರೆ. ರೈತರ ಮತ್ತು ಜಮೀನ್ ಹಿಡುವಳಿದಾರರ ಪ್ರಯೋಜನಕ್ಕೋಸ್ಕರ ಜಮೀನು ಸಾಗುವಳಿ ಕೆಲಸಗಳನ್ನು ಒಂದು ವಾರದ ವರೆಗೆ ಬೋಧಿಸುವುದಕ್ಕೆ ಏರ್ಪಾಟು ಮಾಡಲ್ಪಟ್ಟಿತು. ಈ ಬೋಧೆಯನ್ನು ಕೇಳುವದಕ್ಕಾಗಿ ಸುಮಾರು ನೂರುಮಂದಿ ಜನರು ಬಂದು ಇದ್ದರು. ಈ ಬಾಲ್ತೀ ವರ್ಷದಲ್ಲಿ ಇದೇ ರೀತಿಯಲ್ಲಿ ಸಣ್ಣಸಣ್ಣ ಉಪನ್ಯಾಸಗಳನ್ನು ಕ್ರಮವಾಗಿ ನಡಿಸಬೇಕೆಂಬ ಉದ್ದೇಶವಿದೆ. ಅವುಗಳನ್ನು ಕೇಳುವದಕ್ಕೋಸ್ಕರ ಬರುವ ಜನರು ಇಳಿದುಕೊಳ್ಳುವದಕ್ಕೆ ಕಟ್ಟಡಗಳನ್ನು ಕಟ್ಟಿಸುತ್ತಲಿದೆ.

ಕೈಗಾರಿಕೆ ಮತ್ತು ವ್ಯಾಪಾರದ ಇಲಾಖೆ.

ಕೈಗಾರಿಕೆಯು ಕೆಲಸಗಳಿಗಾಗಿ ತಕಾವಿ ಸಾಲ ಕೊಡುವದನ್ನು ಕ್ರಮಪಡಿಸುವದಕ್ಕೆ ಸಂಬಂಧಪಟ್ಟ ಸೂಚನೆಗಳನ್ನು, ಹೋದ ವರ್ಷದ ಉಪನ್ಯಾಸದಲ್ಲಿ ಸೂಚಿಸಿರುವಂತೆ ಏರ್ಪಡಿಸಿ, ತಕಾವಿ ಸಾಲಗಳಿಗೆ ಬದಲಾಗಿ ಬಾಡಿಗೆಕ್ರಯದ ಮೇರೆ ಯಂತ್ರಗಳನ್ನು ಬಿಕರಿ ಮಾಡುವದಕ್ಕೆ ಅವಕಾಶ ಕೊಟ್ಟಿರುತ್ತದೆ. ಈ ವರ್ಷದಲ್ಲಿ ಸುಮಾರು ಒಂದು ಲಕ್ಷ ರೂಪಾಯಿಗಳವರೆಗೆ ತಕಾವಿ ಸಾಲಗಳನ್ನೂ, ಇತರ ವಿಧವಾದ ಸಾಲಗಳನ್ನೂ ಕೊಟ್ಟಿರುತ್ತದೆ.

ಸಾಲಾಖೈರಿಗೆ 1,41,000 ರೂಪಾಯಿ ಖರ್ಚಿನಲ್ಲಿ 26 ಯಂತ್ರಗಳ ಸ್ಥಾಪನೆಯು ಮುಗಿದಿತ್ತು ; ಇನ್ನೂ 13 ಯಂತ್ರಗಳ ಸ್ಥಾಪನೆಯು ನಡೆಯಬೇಕಾಗಿತ್ತು.

ಹರಿಹರದಲ್ಲಿಯೂ, ಹಂಪಾಪುರದಲ್ಲಿಯೂ ಸ್ಥಾಪಿಸಿದ ನೀರೆತ್ತುವ ಯಂತ್ರಗಳು ಚೆನ್ನಾಗಿ ಕೆಲಸ ಮಾಡುತ್ತಿರುವದರಿಂದ, ಶೀಘ್ರದಲ್ಲಿಯೇ ತುಂಗಭದ್ರಾ ತೀರದಲ್ಲಿಯೂ, ಅದು ಎರಡು ದೊಡ್ಡ ನದಿಗಳ ತೀರದಲ್ಲಿಯೂ ನೀರಾವರಿಗಾಗಿ ಅನೇಕ ಪಂಪಿನ ಯಂತ್ರಗಳನ್ನು ಸ್ಥಾಪಿಸುವ ನಿರೀಕ್ಷಣೆ ಇದೆ.

ಮೈಸೂರಿನಲ್ಲಿ ಸಕ್ಕರೆ ತಯಾರಿ, ಎಣ್ಣೆ ಯಂತ್ರಗಳ ಮತ್ತು ಹೀರುವ ಗ್ಯಾಸ್ ಯಂತ್ರಸಾಮಗ್ರಿಗಳ ಉಪಯೋಗ, ಸಿಲ್ಕ್ ನೇಯುವ ವ್ಯವಸಾಯ, ಇವೇ ಮೊದಲಾದ ವಿಷಯಗಳಿಗೆ ಸಂಬಂಧಪಟ್ಟ ವಿಚಾರವನ್ನು ಆಯಾ ಇಲಾಖೆಯವರು ಮಾಡಿ, ಆ ಮೂಲಕ ತಿಳಿಯಬಂದ ಸಂಗತಿಗಳನ್ನು ಹೋದ ವರ್ಷ ಅನೇಕ ಬೋಧನೆಗಳ ಮೂಲಕ ಪ್ರಚಾರ ಮಾಡಿದರು. ರೈಲ್ ಮೂಲಕ ನಡೆಯುವ ವ್ಯಾಪಾರದ ಲೆಕ್ಕಪತ್ರಗಳು ಇದುವರೆಗೆ ಬಂದಿರುವವುಗಳು ಕೇವಲ ತೃಪ್ತಿಕರವಾಗಿಲ್ಲದಿರುವುದರಿಂದ, ರೈಲ್ವೇ ಮೂಲಕ ಈ ದೇಶದಿಂದ ಹೊರಕ್ಕೂ, ಹೊರಗಡೆಯಿಂದ ಇಲ್ಲಿಗೂ ಸಾಗುವ ವಸ್ತುಗಳ ಲೆಕ್ಕಗಳನ್ನು ತಪ್ಪಿಲ್ಲದಾಗಿ ಮೂರು ತಿಂಗಳಿಗೊಂದು ಸಾರಿ ಕಳುಹಿಸಿಕೊಡಬೇಕೆಂದು, ಮದ್ರಾಸು ದಕ್ಷಿಣ ಮಹಾರಾಷ್ಟ್ರ ಕಂಪನಿಯವರೊಡನೆ ಏರ್ಪಾಡು ಮಾಡಿ ಇದೆ.

ಮರಮ್ಮತ್ ಇಲಾಖೆ.

ಕನ್ನಂಬಾಡಿ ಬಳಿ ಕಾವೇರೀ ನದಿಗೆ ಅಡ್ಡವಾಗಿ ಕಟ್ಟಿಸುತ್ತಿರುವ ಜಲಾಶಯದ ಕಾಮಗಾರಿಯು ತೃಪ್ತಿಕರವಾಗಿ ಅಭಿವೃದ್ಧಿಯಾಗುತ್ತಲಿದೆ. ನದೀ ಪಾತ್ರದಲ್ಲಿಯೂ ತೀರಗಳಲ್ಲಿಯೂ ಆಗಬೇಕಾಗಿದ್ದ ಕಷ್ಟಕರವಾದ ಕಾಮಗಾರಿಯು ಪ್ರಕೃತ ವರ್ಷದಲ್ಲಿ ಪೂರೈಸಿತು. ಕಲ್ಲಿನ ಕಟ್ಟಡವು ದಕ್ಷಿಣ ತೀರದಲ್ಲಿ ನದೀ ಪಾತ್ರದ ಮೇಲೆ 44 ಅಡಿ ಎತ್ತರದ ವರೆಗೂ, ಉತ್ತರ ತೀರದಲ್ಲಿ 36 ಅಡಿ ಎತ್ತರದ ವರೆಗೂ ಎದ್ದಿರುತ್ತದೆ. ಅಣೆಕಟ್ಟೆಯ ಮಧ್ಯಭಾಗದಲ್ಲಿ ಸಂದು ಬಿಟ್ಟಿರುವ ಸ್ಥಳದಲ್ಲಿ ಈಗ 8 ಅಡಿ ಮಟ್ಟದ ವರೆಗೆ ನೀರು ಜಮಾಯಿಸಿದೆ. ಜಲಾಶಯದ ಬಳಿಯಲ್ಲಿಯೇ ಒಂದು ಪವರ್ ಸ್ಟೇಷನನ್ನು ಕಲ್ಪಿಸಿ, ಅದರಿಂದ ಬೆಳಗೊಳದ ಪಂಪಿಂಗ್ ಸ್ಟೇಷನಿಗೂ, ಮೈಸೂರಿಗೂ, ಆ ನೆರೆಹೊರೆಯಲ್ಲಿರುವ ಇತರ ಪ್ರದೇಶಗಳಿಗೂ ವಿದ್ಯುಚ್ಛಕ್ತಿಯನ್ನು ಒದಗಿಸುವದಕ್ಕೋಸ್ಕರ, ಅಣೆಕಟ್ಟೆಯಲ್ಲಿ ಬುಗುರಿಯಂತೆ ಸುತ್ತುತ್ತಿರುವ ತೂಬು (ಟರ್ಬೈನ್) ಗಳನ್ನು ಕಟ್ಟಿಸುವ ಏರ್ಪಾಡುಗಳನ್ನು ಮಾಡುತ್ತಲಿದೆ.

ನೀರು ಮುಳುಗಡೆಗೆ ಬಂದ ಜಮೀನುಗಳ ಮಾಲೀಕರಿಗೆ ಅವರ ಜಮೀನುಗಳಿಗೆ ಬದಲಿಯಾಗಿ ಇತರ ಜಮೀನುಗಳನ್ನು ಒದಗಿಸಿಕೊಡುವದಕ್ಕೋಸ್ಕರ, ಸರ್ಕಾರದವರು ಆವಶ್ಯಕವಾದ ಇತರ ಏರ್ಪಾಟುಗಳನ್ನು ಮಾಡಿರುವದರ ಜೊತೆಗೆ, ನಾಲ್ಕು ನಾಲೆಗಳನ್ನು ಕಟ್ಟಿಸುವದಕ್ಕೆ ಮಂಜೂರಾತಿಯನ್ನು ಕೊಟ್ಟಿರುತ್ತಾರೆ. ಈ ಪೈಕಿ ಎರಡರ ಕೆಲಸವು ಈಗಾಗಲೇ ಉಪಕ್ರಮವಾಗಿದೆ, ಉಳಿದ ಎರಡು ನಾಲೆಗಳನ್ನು ಈ ವರ್ಷದಲ್ಲಿ ಉಪಕ್ರಮಿಸಲಾಗುವುದು. ಜಲಾಶಯದ ಕೆಳಗೆ ಸಾಮಾನ್ಯವಾಗಿ ಹೆಚ್ಚು ಪ್ರದೇಶವನ್ನು ನೀರಾವರಿಗೆ ತರುವದಕ್ಕಾಗಿಯೂ, ಹೆಚ್ಚು ಧಾರಣೆ ಬಾಳುವ ಕಬ್ಬು, ಅರಿಶಿನ, ಹಿಪ್ಪಲಿ ಬೇರಳೆ, ಮುಂತಾದ ಫಸಲುಗಳನ್ನು ಬೆಳೆಯುವದಕ್ಕೆ ಸೌಲಭ್ಯಗಳನ್ನು ಕಲ್ಪಿಸುವದಕ್ಕಾಗಿಯೂ ಮಾಡಬೇಕಾದ ವಿಧಾನವನ್ನು ಸಿದ್ಧಪಡಿಸಲಾಗಿದೆ.

ರೈಲ್ವೆ ಇಲಾಖೆ.

ಬೇರೆ ಬೇರೆ ತರಹೆ ಗೇಜುಗಳುಳ್ಳ 259 ಮೈಲಿ ಫಾಸಲೆ ರೈಲ್ವೆಗಳನ್ನು ಹಾಕತಕ್ಕ ಬಗ್ಗೆ 110 ಲಕ್ಷ ರೂಪಾಯಿ ತಗಲುವ ಅಂದಾಜುಗಳನ್ನು ಮಂಜೂರಾದ ಪಟ್ಟಿಗೆ ದಾಖಲ್ ಮಾಡಲಾಯಿತು. 30.60 ಮೈಲಿ ರಸ್ತೆಗಾಗಿ 12.72 ಲಕ್ಷ ರೂಪಾಯಿ ಖರ್ಚು ಬೀಳುವ ಅಂದಾಜುಳ್ಳ ಬೆಂಗಳೂರು—ಹೊಸೂರು ರೈಲಿಗಾಗಿ ಒಂದು ಏರ್ಪಾಡು ಇನ್ನೂ ರೈಲ್ವೇ ಬೋರ್ಡಿನವರ ಇತ್ಯರ್ಥದಲ್ಲಿರುತ್ತದೆ. 94 ಲಕ್ಷ ರೂಪಾಯಿ ಖರ್ಚಿನ ಅಂದಾಜಿನ ಮೇಲೆ ಬೇರೆ 146 ಮೈಲಿ ಫಾಸಲೆಯ ರಸ್ತೆಗಳನ್ನು ಹಾಕುವದಕ್ಕಾಗಿ ಕಾಮಗಾರಿ ಏರ್ಪಾಟುಗಳು ಸಿದ್ಧವಾಗಿವೆ. ಇವುಗಳಿಗಾಗಿ ಹಣವನ್ನು ಹೇಗೆ ಒದಗಿಸಬೇಕು ? ಇವುಗಳಿಗೆ ಯಾವ ರೀತಿ ಕಾಮಗಾರಿ ಮಾಡಿಸಿ ಅವುಗಳನ್ನು ಆಡಳಿತದಲ್ಲಿಟ್ಟುಕೊಳ್ಳಬೇಕು ? ಎಂಬ ವಿಷಯಗಳು ಪರ್ಯಾಲೋಚನೆಯಲ್ಲಿರುತ್ತವೆ. ಶಿವಮೊಗ್ಗ ಡಿಸ್ಟ್ರಿಕ್ಟಿನ ರೈಲ್ವೆ ಶಾಖೆಗಳಿಗಾಗಿಯೂ, ಘಟ್ಟ ಮತ್ತು ಕಾಫಿತೋಟದ ಪ್ರಾಂತ್ಯಗಳಿಗಾಗಿಯೂ ಅಳತೆಯ ಕೆಲಸಗಳನ್ನು ಕೈಗೊಳ್ಳಲು ತಕ್ಕ ತಯಾರನ್ನು ಮಾಡುತ್ತಲಿದೆ.

ನಮ್ಮ ದೇಶದ ರೈಲ್ವೆ ಮಾರ್ಗಗಳನ್ನು, ಸುತ್ತಲೂ ಇರುವ ಬ್ರಿಟಿಷ್ ಇಂಡಿಯಾದೇಶದ ಭಾಗಗಳಲ್ಲಿನ ಮುಖ್ಯ ಮುಖ್ಯವಾದ ಸ್ಥಳಗಳಿಗೆ ಸೇರಿಸುವುದಕ್ಕಾಗಿ, ಇನ್ನೂ ಮೂರು ರೈಲ್ವೇ ರಸ್ತೆಗಳ ವಿಷಯವಾಗಿ ಮಾತುಕಥೆಗಳನ್ನು ನಡಿಸುತ್ತಲಿವೆ. ಈ ಮೂರು ರಸ್ತೆಗಳು ಯಾವುವೆಂದರೆ—ನಂಜನಗೂಡಿನಿಂದ ಈರೋಡಿಗೆ ಒಂದು, ಹಾಸನದಿಂದ ಮಂಗಳೂರಿಗೆ ಒಂದು, ಮೈಸೂರಿಂದ ಕೊಡಗುದೇಶದ ಸರಹದ್ದಿಗೆ ಕಾವೇರೀ ನದಿಯು ಎಡದವದ ಮಾರ್ಗವಾಗಿ ತತ್ಕಾಲಕ್ಕೆ ತೀರದಾಚೆಂದ್ರಪೇಟೆಯ ವರೆಗೆ ಮತ್ತೊಂದು. ಈ ರಸ್ತೆಗಳನ್ನು ಜಾಗ್ರತೆಯಾಗಿ ಹಾಕಿಸುವುದು ಅವಶ್ಯವೆಂದು, ಅದರಲ್ಲಿಯೂ ಮೊದಲನೆಯದನ್ನು ಹಾಕಿಸುವುದು ಅತ್ಯವಶ್ಯವೆಂದು, ಶ್ರೀಮನ್ಮಹಾರಾಜರವರ ಸರ್ಕಾರದವರು ಎಣಿಸಿರುತ್ತಾರೆ.

ಮೈಸೂರಿಂದ ಅರಸೀಕೆರೆಗೆ ರೈಲು ಹಾಕುವ ಕೆಲಸವನ್ನು 1913ನೆಯ ನವೆಂಬರ್ ಮಾಹೆಯಲ್ಲಿ ಪ್ರಾರಂಭಿಸಲಾಯಿತು. ಸದರಿ ಕಾಮಗಾರಿಯು ಈಗ ತುಂಬಾ ಮುತವರ್ಜಿಯಿಂದ ಜರಗುತ್ತಲಿದೆ. ತರೀಕೆರೆ-ಬುಡೆಹಳ್ಳಿ ಟ್ರಾಂವೇಯ ಪೈಕಿ ತರೀಕೆರೆ-ಲಕ್ಕವಳ್ಳಿ ಭಾಗವನ್ನು ಆಮದು ರಸ್ತೆಗಾಗಿ ಪ್ರಾರಂಭಿಸಲಾಗಿರುತ್ತದೆ. ಆದರೆ ಲಕ್ಕವಳ್ಳಿಗೆ ಆಚೆ ಮುಂದೆ ಕಾಮಗಾರಿಯನ್ನು ನಡಿಸುವುದಕ್ಕೆ ಆ ಪ್ರದೇಶದಲ್ಲಿ ಪ್ಲೇಗ್ ವ್ಯಾಧಿ ಹರಡಿಕೊಂಡಿದ್ದ ಕಾರಣದ ದೆಸೆಯಿಂದ ಸುಸ್ತಿಯಾಗಿರುತ್ತದೆ. ಬೆಂಗಳೂರಿಗೂ ಯಲಹಂಕಕ್ಕೂ ಮಧ್ಯದಲ್ಲಿ ಹಾಕಬೇಕಾದ ಬೆಂಗಳೂರು-ಚಿಕ್ಕಬಳ್ಳಾಪುರದ ನ್ಯಾರೋ ರೈಲ್ವೆ ಕಾಮಗಾರೀ ಕೆಲಸವನ್ನು ಮದರಾಸ್ ಮತ್ತು ಸದರ್ನ್ ಮರಾಠಾ ರೈಲ್ವೆ ಕಂಪನಿಯ ಮೂಲಕ ನಡಿಸಬೇಕಾಗಿರುತ್ತದೆ. ಅದಕ್ಕಾಗಿ ಬೇಕಾದ ಅಂದಾಜುಗಳು ತಯಾರಾಗುತ್ತಲಿವೆ. ಯಲಹಂಕ-ದೇವನಹಳ್ಳಿ ಭಾಗದ ಮಾರ್ಗವನ್ನು ಈಚೆಗೆ ಸಾಮಾನುಗಳ ಆಮದು ರಸ್ತೆಗಾಗಿ ಬಿಡಲು ಪ್ರಾರಂಭಿಸಲಾಯಿತು. ಉಳಿದ ಕಾಮಗಾರಿಯು 1914 ನೆಯ ಡಿಸೆಂಬರ್ ಮಾಹೆ ಆಖೈರೊಳಗಾಗಿ ಪೂರಯಿಸಬಹುದು. ಕೋಲಾರ-ಚಿಕ್ಕಬಳ್ಳಾಪುರ ರೈಲ್ವೆ ಕಾಮಗಾರಿಗಾಗಿ ಈಚೆಗೆ ಇಂಡಿಯಾ ಸರ್ಕಾರದವರಿಂದ ಮಂಜೂರಾತಿಯು ಬಂತು. ಸದರಿ ಮಾರ್ಗದ ಕಾಮಗಾರಿಯನ್ನು ಪ್ರಾರಂಭಿಸುವುದಕ್ಕೆ ತಕ್ಕ ಏರ್ಪಾಟುಗಳನ್ನು ಮಾಡುತ್ತಲಿದೆ. ಚಿಕ್ಕ ಜಾಜೂರು-ಚಿತ್ರದುರ್ಗದ ರೈಲ್ವೆ ಕಾಮಗಾರಿ ಕ್ರಮವನ್ನೂ ಇಂಡಿಯಾ ಸರ್ಕಾರದವರು ಮಂಜೂರು ಮಾಡಿರುತ್ತಾರೆ. ಈ ಕಾಮಗಾರಿಗೂ ಮತ್ತು ಕಡೂರು-ಚಿಕ್ಕಮಗಳೂರು, ಚಿಕ್ಕಮಗಳೂರು-ಹಾಸನ ರೈಲ್ವೆಗಳ ಕಾಮಗಾರಿಗಳಿಗೂ ಹಣವನ್ನು ಒದಗಿಸುವ ವಿಚಾರವು ಪರ್ಯಾಲೋಚನೆಯಲ್ಲಿರುತ್ತದೆ.

ಕಾವೇರೀ ಜಲಾಶಯವನ್ನು ಕಟ್ಟಿಸುವುದು.

ಕಾವೇರೀ ನದಿಯೊಳಗೆ ಹರಿಯುವ ಹೆಚ್ಚು ನೀರನ್ನು ಮೈಸೂರು ಸಂಸ್ಥಾನದಲ್ಲಿ ಉಪಯೋಗಿಸಿಕೊಳ್ಳತಕ್ಕ ವಿಷಯವಾಗಿ, ಈ ಸಂಸ್ಥಾನಕ್ಕೂ ಪಕ್ಕದಲ್ಲಿರುವ ಮದರಾಸಾಧಿಪತ್ಯಕ್ಕೂ ಕಳೆದ 3—4 ವರ್ಷಗಳಿಂದ ದೀರ್ಘವಾದ ವಾದ ನಡೆದ ಬಳಿಕ, ಹೋದವರ್ಷ ಇಂಡಿಯಾ ಸರ್ಕಾರದವರು, ಈ ವಿಷಯವನ್ನು ಸಮರ್ಥರಾದ ಮೆಂಬರುಗಳುಳ್ಳ ಒಂದು ಆರ್ಬಿಟ್ರೇಷನ್ ಕಮಿಟಿಗೆ ವಿಚಾರಣೆಗಾಗಿ ಕಳುಹಿಸತಕ್ಕದ್ದೆಂದು ನಿರ್ಣಯಿಸಿದರು. ಸದರಿ ಕಮಿಟಿಯವರು ಈ ವಿಷಯವನ್ನು ಸುಮಾರು ಹತ್ತು ತಿಂಗಳವರೆಗೂ ಕ್ರಮವಾಗಿ ವಿಚಾರಣೆಮಾಡಿ, ಕಳೆದ ಮೇ ತಿಂಗಳಲ್ಲಿ ತಮ್ಮ ತೀರ್ಮಾನವನ್ನು ಇಂಡಿಯಾ ಸರ್ಕಾರದವರಿಗೆ ಕಳುಹಿಸಿಕೊಟ್ಟರು. ಘನತೆಯನ್ನೈದಿದ ಶ್ರೀಮನ್ಮಹಾರಾಜರವರ ಸರ್ಕಾರದವರೂ, ಈ ಸಂಸ್ಥಾನದಲ್ಲಿರುವ ಕಾವೇರೀ ತೀರದ ನೀರಾವರೀ ಪ್ರದೇಶವನ್ನು ಅಭಿವೃದ್ಧಿಗೆ ತರುವದರಲ್ಲಿ ಆಸಕ್ತರಾದ ಅನೇಕ ಜನರೂ ಸಹ, ತಮ್ಮ ಹಕ್ಕು ಬಾಧ್ಯತೆಗಳು ನ್ಯಾಯಸಮ್ಮತವಾಗಿವೆಯೆಂದು ನಂಬಿರುವದಲ್ಲದೆ, ಈ ಮುಖ್ಯವಾದ ವಿಷಯದಲ್ಲಿ ಇಂಡಿಯಾ ಸರ್ಕಾರದವರ ತೀರ್ಮಾನವನ್ನು ಆತ್ಯಾಸಕ್ತಿಯಿಂದ ನಿರೀಕ್ಷಿಸುತ್ತಿದ್ದಾರೆ.

ಸಹಜವಾಗಿ ಸಮುದ್ರಕ್ಕೆ ಬಿದ್ದು ವ್ಯರ್ಥವಾಗುತ್ತಿರುವ ಕಾವೇರೀ ನದಿಯ ಹೆಚ್ಚು ನೀರನ್ನು ತಡೆದು ನಿಲ್ಲಿಸುವುದೇ ಕನ್ನಂಬಾಡಿ ಜಲಾಶಯದ ಏರ್ಪಾಡಿನ ಮುಖ್ಯೋದ್ದೇಶವಾಗಿರುತ್ತದೆ. ಈಗಿರತಕ್ಕ ನಾಲೆಗಳಲ್ಲಿ ಸರ್ವದಾ ನೀರು ಹರಿಯುವದು ಸಂದೇಹಾಸ್ಪದವಾಗಿದೆ. ಜಲಾಶಯದಿಂದ ನೀರನ್ನು ಸರ್ವಕಾಲಗಳಲ್ಲಿಯೂ ಖಂಡಿತವಾಗಿ ಒದಗಿಸುವುದಾದರೆ, ಆ ಪ್ರದೇಶದಲ್ಲಿ ಇದುವರೆಗೆ ಬೆಳೆಯಾಗದೆ ಇದ್ದ ಉತ್ತಮವಾದ ಧಾನ್ಯಪೈರುಗಳನ್ನು ಬೆಳೆಯಿಸುವುದಕ್ಕೆ ಅನುಕೂಲಪಡಿಸಿದಂತೆ ಆಗುವುದು. ಜಲಾಶಯದಲ್ಲಿ ನಿಲ್ಲಿಸಿಕೊಳ್ಳುವ ನೀರಿನಿಂದ ಹಾಲಿ ಇರತಕ್ಕ ಮತ್ತು ಹೊಸತಾಗಿ ತೆಗೆಯುವ ನಾಲೆಗಳ ಕೆಳಗೆ ಸುಮಾರು 10,000 ಎಕರೆ ಜಮೀನಿನಲ್ಲಿ ಕಬ್ಬಿನ ಬೆಳೆ ಇಡಲು ಏರ್ಪಾಡುಗಳನ್ನು ಮಾಡುತ್ತಲಿದೆ.

ಈ ಜಲಾಶಯದಿಂದ ನೀರು ಮುಳುಗಡೆಗೆ ಸಿಕ್ಕಿದ ಗ್ರಾಮಗಳ ನಿವಾಸಿಗಳಿಗೆ ಬೇರೆ ಸ್ಥಳಗಳಲ್ಲಿ ವಸತಿಗಳನ್ನು ಕಲ್ಪಿಸಿಕೊಡುವ ವಿಚಾರದಲ್ಲಿ ನಮ್ಮ ಆಫೀಸರುಗಳು ಅನುಕೂಲವಾದ ವ್ಯವಸ್ಥೆಯನ್ನು ಮಾಡುತ್ತಿದ್ದಾರೆ.

ಸಣ್ಣ ಕೆರೆಗಳು ಮತ್ತು ಮರಮ್ಮತ್ ಸಿಬ್ಬಂದಿ.

ಈ ವರ್ಷದಲ್ಲಿ ಸಣ್ಣ ಕೆರೆಗಳ ವಿಷಯಕ್ಕೆ ಹೆಚ್ಚಾಗಿ ಗಮನಕೊಟ್ಟಿರಲಾಗಿದೆ. ಡಿಸ್ಟ್ರಿಕ್ಟುಗಳಿಗೆ ಬೇಕಾದ ಮರಮ್ಮತ್ತು ಸಿಬ್ಬಂದಿಯನ್ನು ಸರ್ಕಾರದವರು ಹೆಚ್ಚಿಸಿ ಇದಕ್ಕಾಗಿ 42,313 ರೂಪಾಯಿಗಳನ್ನು ಕೊಟ್ಟಿರುತ್ತಾರೆ. ಸಣ್ಣ ಕೆರೆಗಳ ದುರಸ್ತಿಗೆ ಕೊಟ್ಟಿರುವ ಗ್ರಾಂಟು ಮೊಬಲಗು ಈಗ 2,00,000 ರೂಪಾಯಿಗೆ ಬಂದಿರುತ್ತದೆ. ಬೇಕಾದರೆ ಈ ಗ್ರಾಂಟನ್ನು ಇನ್ನೂ ಜಾಸ್ತಿ ಮಾಡುವುದಕ್ಕೆ ಸರ್ಕಾರದವರು ಸಿದ್ಧರಾಗಿರುತ್ತಾರೆ.

ಒಂದು ಕೆರೆಯಿಂದ ಪ್ರಯೋಜನವನ್ನು ಪಡೆಯುತ್ತಿರುವ ಗ್ರಾಮದ ಯಾ ಗ್ರಾಮಗಳ ಜನಗಳಿಗೆ ಗ್ರಾಂಟ್ ಮೊಬಲಗನ್ನು ಕೊಡುವದರಿಂದ, ಅಥವಾ ಕಂದಾಯವನ್ನು ರಿಮಿಷನ್ ಮಾಡುವ ಅಥವಾ ಇತರ ವಿಧವಾದ ರಿಯಾಯಿತಿ ತೋರಿಸುವದರಿಂದ, ಅವರೇ ಆ ಕೆರೆಯನ್ನು ಸ್ವಪ್ರಯತ್ನದಿಂದ ಆಹಾರಿಗೆ ತರುವಂತೆ ಅಥವಾ ದುರಸ್ತು ಮಾಡಿಕೊಳ್ಳುವಂತೆ ಪ್ರೋತ್ಸಾಹಿಸತಕ್ಕ ಬಗ್ಗೆ ಒಂದು ಏರ್ಪಾಡು ಪರ್ಯಾಲೋಚನೆಯಲ್ಲಿರುತ್ತದೆ. ಮುಂದೆ ಅನೇಕ ವರ್ಷಗಳ ವರೆಗೆ ಜನಗಳು ಸರ್ಕಾರದವರೊಡನೆ ಸೇರಿ ಕೆಲಸಗಳನ್ನು ಜರುಗಿಸಿ ವಿಶೇಷ ಪ್ರಯೋಜನವನ್ನು ಪಡೆಯಬಹುದಾದ ಏರ್ಪಾಡುಗಳ ಪೈಕಿ ಇದೂ ಒಂದಾಗಿರುತ್ತದೆ.

ಮಲೆನಾಡು ಅಭಿವೃದ್ಧಿಯ ಏರ್ಪಾಡು.

ಶಿವಮೊಗ್ಗ, ಕಡೂರು, ಹಾಸನ—ಈ ಮೂರು ಡಿಸ್ಟ್ರಿಕ್ಟುಗಳಲ್ಲಿನ ಮಲೆನಾಡು ಪ್ರದೇಶಗಳಿಗೆ ಜನಗಳು ಪುನಃ ಬಂದು ನೆಲಸುವಂತೆ ಮಾಡುವದಕ್ಕೂ, ಅಲ್ಲಿನ ಆರೋಗ್ಯವನ್ನೂ ಆರ್ಥೋತ್ಪತ್ತಿಯನ್ನೂ ಹೆಚ್ಚಿಸುವದಕ್ಕೂ, ತಕ್ಕ ಪ್ರಯತ್ನಗಳನ್ನು ಮುತವರ್ಜಿಯಿಂದ ನಡಿಸಬೇಕೆಂದು ಶ್ರೀಮನ್ಮಹಾರಾಜರವರ ಸರ್ಕಾರದವರು ಉದ್ದೇಶಿಸಿರುತ್ತಾರೆಂಬದಾಗಿ ಹೋದ ವರ್ಷ ತಿಳಿಸಿರುತ್ತದೆ. ಇದಕ್ಕಾಗಿ ತಯಾರಾದ ಕಾರ್ಯಕ್ರಮವನ್ನು ಕಳೆದ ಫೆಬ್ರವರಿಯಲ್ಲಿ ಜಾರಿಗೆ ತರಲಾಯಿತು. ಈ ಕಾರ್ಯದಲ್ಲಿ ಭಾಗಿಗಳಾಗಿರಲು ಡಿಸ್ಟ್ರಿಕ್ಟುಗಳಲ್ಲಿ ಪ್ರಮುಖರಾಗಿರುವವರಿಗೆ ಅವಕಾಶವನ್ನು ಕೊಡುವುದಕ್ಕಾಗಿ, ಸರ್ಕಾರಿ ನೌಕರರ ಜೊತೆಗೆ ಇತರ ಜನಗಳನ್ನೂ ಸೇರಿಸಿ, ಪ್ರತಿ ಒಂದು ಡಿಸ್ಟ್ರಿಕ್ಟಿಗೂ ಒಂದೊಂದು ಸ್ಥಳೀಯ ಕಮಿಟಿಯನ್ನೂ, ಅವುಗಳು ನಡಿಸುವ ಕಾರ್ಯಗಳನ್ನು ತನಿಖೆಯಿಂದ ವಿಚಾರಿಸತಕ್ಕ ಬಗ್ಗೆ ಒಂದು ಸೆಂಟ್ರಲ್ ಕಮಿಟಿಯನ್ನೂ ಏರ್ಪಾಡು ಮಾಡಿ, ಇವುಗಳಿಗೆ ಬೇಕಾದ ದ್ರವ್ಯವನ್ನೂ ತಕ್ಕಷ್ಟು ಸಿಬ್ಬಂದಿಯನ್ನೂ ಕೊಟ್ಟಿದೆ. ಪ್ರಕೃತ ಸಂವತ್ಸರದಲ್ಲಿ ಸದರಿ ಕ್ರಮವು ಜಾರಿಯಲ್ಲಿದ್ದ ಕೆಲವು ತಿಂಗಳೊಳಗೆ ಈ ಕೆಳಗೆ ನಡಿಸಿದ ಅಭಿವೃದ್ಧಿ ಕಾರ್ಯಗಳ ಪೈಕಿ, ಸ್ವೇಚ್ಛೆಯಾಗಿ ಬೆಳೆದ ಗಿಡಗಂಟೆಗಳನ್ನು ತೆಗೆದುಹಾಕಿದ್ದನ್ನೂ, ಕುಡಿಯುವ ನೀರಿನ ಸರಬರಾಯಿಯನ್ನು ಅನುಕೂಲಪಡಿಸಿದ್ದನ್ನೂ, ಅನಾರೋಗ್ಯಕರವಾದ ಗ್ರಾಮಗಳನ್ನು ಬೇರೆ ಕಡೆ ಕಟ್ಟಿಸಿದ್ದನ್ನೂ, ಕ್ವೈನಾ ಉಪಯೋಗವನ್ನು ಜನಗಳ ಬಳಕೆಗೆ ತಂದದ್ದನ್ನೂ, ದೇಸಿ ಹಾಕಿಸಿಕೊಳ್ಳುವದರಿಂದುಂಟಾಗುವ ಪ್ರಯೋಜನವನ್ನು ಪ್ರಚುರಗೊಳಿಸಿದ್ದನ್ನೂ, ದೇಹವನ್ನೂ ಮನೆಗಳನ್ನೂ ಶುಚಿಯಾಗಿ ಇಟ್ಟುಕೊಳ್ಳುವದಕ್ಕೆ ಸಂಬಂಧಪಟ್ಟ ಆರೋಗ್ಯ ಸೂತ್ರಗಳನ್ನು ಜನರ ತಿಳುವಳಿಕೆಗೆ ತಂದದ್ದನ್ನೂ ತಿಳಿಸಬಹುದಾಗಿದೆ. ಮಲೇರಿಯಾ ಉಪದ್ರವವನ್ನು ಹರಡುವದಕ್ಕೆ ಯಾವ ವಿಧವಾದ ಸೊಳ್ಳೆ ಕಾರಣವಾಗಿದೆ ಎಂಬುದನ್ನು ಕಂಡು ಹಿಡಿಯುವದಕ್ಕಾಗಿ ಮಲೇರಿಯಾ ಸರ್ವೆಯನ್ನೂ, ಶೋಧನಾಲಯದಲ್ಲಿ ಪರೀಕ್ಷೆಗಳನ್ನೂ ಮಾಡಲುಪಕ್ರಮಿಸಿದೆ. ಇಂಥಾ ಸರ್ವೆಯನ್ನೂ ಪರಿಶೋಧನೆಯನ್ನೂ ಮಾಡತಕ್ಕ ವಿಧಾನವನ್ನು ತಿಳಿಸುವದಕ್ಕೂ, ಜನನ ಮರಣಗಳ ಲೆಕ್ಕವನ್ನಿಡುವ ರೀತಿಯನ್ನು ಕ್ರಮಪಡಿಸಲು ಸಲಹೆಗಳನ್ನು ಕೊಡುವದಕ್ಕೂ, ಮೆಡಿಕಲ್ ಇಲಾಖೆಯ ಅನುಭವಶಾಲಿಯಾದ ಒಬ್ಬ ಆಫೀಸರನ್ನು ಸ್ವಲ್ಪಕಾಲದ ಮಟ್ಟಿಗೆ ನೇಮಿಸಲಾಯಿತು. ದೇಸೀ ಹಾಕುವವರ, ಸೂಲಗಿತ್ತಿಯರ, ಕಾಂಪೌಂಡರುಗಳ ಸಂಖ್ಯೆಯನ್ನು ಹೆಚ್ಚಿಸುವದಕ್ಕೆ ತಕ್ಕ ಏರ್ಪಾಡುಗಳು ನಡೆಯುತ್ತಲಿವೆ. ಜಾಯಮಾನಾಗಿ ಒಂದೇ ಸ್ಥಳದಲ್ಲಿರುವ ಮತ್ತು ಊರಿಂದೂರಿಗೆ ಸಂಚರಿಸುತ್ತಾ ಔಷಧ ಕೊಡುವ ಹೆಚ್ಚು ಡಿಸ್ಪೆನ್ಸರಿಗಳನ್ನೂ, ಆವಶ್ಯಕವಾದ ಹೆರಿಗೆಯ ಆಸ್ಪತ್ರೆಗಳನ್ನೂ ಒದಗಿಸುವ ವಿಷಯವನ್ನು ಸರ್ಕಾರದವರು ಆಸಕ್ತಿಪೂರ್ವಕ ಆಲೋಚಿಸುತ್ತಿದ್ದಾರೆ.

ಮಲೆನಾಡಿಗೆ ಜನರು ಹೊಸದಾಗಿ ಬಂದು ನೆಲಸುವಂತೆ ಮಾಡುವದಕ್ಕೆ ಬೇಕಾದ ಪ್ರಯತ್ನಗಳನ್ನೂ ಮಾಡುತ್ತಲಿದೆ. ಮಲೆನಾಡಿನ ಅಭಿವೃದ್ಧಿ ವಿಷಯವು ಸ್ವಲ್ಪಮಟ್ಟಿಗೆ ಅರ್ಥೋತ್ಪತ್ತಿಯ ಸ್ವಭಾವವುಳ್ಳದ್ದೆಂದು ಸರ್ಕಾರದವರು ತಿಳಿದು, ವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸುವದಕ್ಕೂ, ಮುಖ್ಯವಾಗಿ ಫಾರೆಸ್ಟ್ ಉತ್ಪನ್ನಗಳಿಗೆ ಸಂಬಂಧಪಟ್ಟ ಸ್ಥಳೀಯ ಕೈಗಾರಿಕೆಗಳನ್ನು ವೃದ್ಧಿಗೆ ತರುವುದರ ಮೂಲಕ ಕಸಬುಗಳನ್ನು ಹೆಚ್ಚಿಸುವುದಕ್ಕೂ, ಆ ಪ್ರದೇಶದಲ್ಲಿ ರಸ್ತೆಗಳನ್ನು ಹೆಚ್ಚಿಸುವದಕ್ಕೂ, ಪರಸ್ಪರ ಸಹಾಯ ಕಾರ್ಯಗಳನ್ನು ವೃದ್ಧಿಗೊಳಿಸುವುದಕ್ಕೂ ಮಾಡಬೇಕಾದ ಏರ್ಪಾಡುಗಳನ್ನು ಸರ್ಕಾರದವರು ಮಂಜೂರಾಗಿರುತ್ತಾರೆ.

ಇನ್ನೂ ಅನೇಕ ಚಿಲ್ಲರೆ ಕೆಲಸಗಳನ್ನು ಪರಿಷ್ಕಾರಕ್ಕೆ ತರಬೇಕಾಗಿದೆ. ಜನಗಳು ತಮಗಿರುವ ಜವಾಬ್ದಾರಿಯನ್ನು ಚೆನ್ನಾಗಿ ಮುಂದಿಟ್ಟು ಮಾಡಿಕೊಳ್ಳುವ ವರೆಗೂ, ಈ ಭಾಗದ ಅಭಿವೃದ್ಧಿಯ ಕೆಲಸವು, ಈ ಕೆಲಸಗಳ ಭಾರವನ್ನು ವಹಿಸಿರುವ ಸರ್ಕಾರೀ ಆಫೀಸರುಗಳು ಸದರಿ ಕೆಲಸದ ವಿಷಯದಲ್ಲಿ ತೋರಿಸುವಂಥ ಆಸಕ್ತಿಗೂ ಮುತವರ್ಜಿಗೂ ಅನುಗುಣವಾಗಿರುವದು.

ಗ್ರಾಮಾಭಿವೃದ್ಧಿಯ ಏರ್ಪಾಟು.

ಕಳೆದ ವರ್ಷದ ಉಪನ್ಯಾಸದಲ್ಲಿ ಸೂಚಿತವಾದ ಈ ಏರ್ಪಾಟನ್ನು ಪ್ರಕೃತ ವರ್ಷದ ಕೊನೆಯ ಭಾಗದಲ್ಲಿ ಕೈಗೊಳ್ಳಲಾಯಿತು. ಈ ಭಾಗದಲ್ಲಿ ಕಾರ್ಯ ಜರುಗುತ್ತಿದ್ದ ಕೆಲವು ತಿಂಗಳುಗಳಲ್ಲಿ ನಡೆದ ಕೆಲಸವು ತೃಪ್ತಿಕರವಾಗಿರುತ್ತದೆ. ಈ ಭಾಗದಲ್ಲಿ ಈವರೆಗಿನ ಫಲಿತಾಂಶವನ್ನು ಈಚಿನ ರಿಪೋರ್ಟುಗಳಿಂದ ತಿಳಿಯಬರುವ ಈ ಕೆಳಗೆ ಕಂಡ ಲೆಕ್ಕಗಳಿಂದ ತಿಳಿಯಬಹುದಾಗಿದೆ :—

ಸಂಸ್ಥಾನದಲ್ಲಿರುವ ಒಟ್ಟು 16,740 ಗ್ರಾಮಗಳ ಪೈಕಿ, ಕಮಿಟಿಗಳು ಏರ್ಪಾಡಾಗಿರುವ ಗ್ರಾಮಗಳು	15,923
ಹೊಸದಾಗಿ ಏರ್ಪಡಿಸಿದ ಗ್ರಾಮ ಕಮಿಟಿಗಳು	7,418
ಗ್ರಾಮ ಸಾಮಾನ್ಯದ ಪ್ರಯೋಜನಕ್ಕಾಗಿ ಜನಗಳು ವಾರಕ್ಕೆ ಅರ್ಧ ದಿವಸ ಕೆಲಸ ಮಾಡಲು ಒಪ್ಪಿಕೊಂಡಿರುವ ಗ್ರಾಮಗಳು	6,126
ಪುಸ್ತಕಾಲಯಗಳನ್ನಿಟ್ಟುಕೊಂಡಿರುವ ಯಾ ವರ್ತಮಾನಪತ್ರಿಕೆಗಳನ್ನು ತರಿಸುವ (ನಮ್ಮ ಡಿಸ್ಟ್ರಿಕ್ಟುಗಳಲ್ಲಿನ) ಗ್ರಾಮಗಳು	55

ಹೋದ ವರ್ಷದ ಕಾಲಸ್ಥಿತಿಯು ಸರಿಯಾಗಿರಲಿಲ್ಲವೆಂಬುದನ್ನೂ, ಇದುವರೆಗೂ ಈ ವರ್ಷದ ಕಾಲಸ್ಥಿತಿಯು ಸಮರ್ಪಕವಾಗಿರುವುದಿಲ್ಲವೆಂಬುದನ್ನೂ ಯೋಚಿಸಿದರೆ, ಜನರು ಈ ಏರ್ಪಾಡಿಗೆ ಕೊಟ್ಟಿರುವ ಅವಲಂಬನೆ ತುಂಬಾ ಸಂತೋಷಕರವಾಗಿರುತ್ತದೆ.

ಮಂಜೂರಾಗಿರುವ ಈ ಏರ್ಪಾಟಿನಂತೆ, ಗ್ರಾಮಾಭಿವೃದ್ಧಿ ಕಮಿಟಿಗಳವರು ಕೈಗೊಳ್ಳುವ ಕಾರ್ಯಗಳಿಗೆ ತಗಲುವ ಒಟ್ಟು ಖರ್ಚಿನ ಪೈಕಿ ಮೂರರಲ್ಲೊಂದು ಭಾಗವನ್ನು ಸರ್ಕಾರದಿಂದ ಕೊಡುವಂತೆ ಗೊತ್ತುಮಾಡಲಾಗಿತ್ತು ; ಆದರೆ ಪ್ರಾರಂಭದಲ್ಲಿ ಈ ಏರ್ಪಾಡನ್ನು ನಿರ್ವಹಿಸಲು ಕಷ್ಟಗಳಿರುತ್ತವೆಯೆಂದು ಯೋಚಿಸಿ, ಸರ್ಕಾರದವರು ಪ್ರಕೃತವರ್ಷಕ್ಕೂ ಬಾಲ್ತಿಸಾಲಿಗೂ ಕೊಡಬೇಕಾದ ಸಹಾಯ ದ್ರವ್ಯವನ್ನು ಅರ್ಧದ ವರೆಗೆ ಹೆಚ್ಚಿಸಿದರು.

ಮೇಲೆ ನಮೂದಾದ ಕಾಲದಲ್ಲಿ ಗ್ರಾಮಾಭಿವೃದ್ಧಿ ಕಮಿಟಿಗಳವರು 1,25,000 ರೂಪಾಯಿ ಖರ್ಚು ಬೀಳುವ ಶಾಶ್ವತವಾದ ಪ್ರಯೋಜನವುಳ್ಳ ಕಾರ್ಯಗಳನ್ನು ಕೈಕೊಂಡರು. ಈ ಪೈಕಿ 59,000 ರೂಪಾಯಿಯನ್ನು ಸರ್ಕಾರದವರು ಸಹಾಯ ಮಾಡಿದರು ; ಬಾಕಿ 66,000 ರೂಪಾಯಿಗಳನ್ನು ಸಂಬಂಧಪಟ್ಟ ಗ್ರಾಮಸ್ಥರು ಹಣದ ಮೂಲಕವಾಗಿ, ಯಾ ಕೆಲಸ ಮಾಡುವುದರ ಮೂಲಕವಾಗಿ, ಸಹಾಯಮಾಡಿದರು.

ಈ ಗ್ರಾಮಾಭಿವೃದ್ಧಿಯ ಏರ್ಪಾಟು ಈಗಾಗಲೇ ಜನಗಳ ವಿಶ್ವಾಸಕ್ಕೆ ಪಾತ್ರವಾಗಿರುತ್ತದೆಂಬುದಕ್ಕೆ ಚಿಹ್ನೆಗಳು ಕಾಣಬರುತ್ತಲಿವೆ ಯೆಂಬದಾಗಿ ರೆವಿನ್ಯೂ ಕಮಿಷನರವರು ತಿಳಿಸುತ್ತಾರೆ. ಈ ಏರ್ಪಾಡು ಇಷ್ಟು ಬೇಗ ಜಾರಿಗೆ ಬರುವದಕ್ಕೆ ನಮ್ಮ ಡಿಸ್ಟ್ರಿಕ್ಟ್ ರೆವಿನ್ಯೂ ಆಫೀಸರುಗಳ ಉತ್ಸಾಹವೂ ಆದರವೂ ಕಾರಣಗಳಾಗಿವೆ. ಇದನ್ನು ಸರಿಯಾಗಿ ಜರುಗಿಸಿದಲ್ಲಿ, ಜನಗಳಲ್ಲಿ ತಿಳುವಳಿಕೆ ಹೆಚ್ಚುವುದಕ್ಕೂ, ಗ್ರಾಮಗಳ ಭಾಗ್ಯೋನ್ನತಿಯನ್ನೂ ಅನುಕೂಲತೆಗಳನ್ನೂ ವೃದ್ಧಿಪಡಿಸುವುದಕ್ಕಾಗಿ ಎಲ್ಲರೂ ಒಗ್ಗಟ್ಟಾಗಿ ಕೆಲಸಮಾಡುವಂತೆ ಪ್ರೋತ್ಸಾಹಿಸುವುದಕ್ಕೂ, ಈ ಬಗೆಯ ಕೆಲಸಗಳು ಸಾಧಕಗಳಾಗಲೇ ಬೇಕಾಗಿರುತ್ತದೆ. ನಮ್ಮ ದೇಶವು ಸ್ವಭಾವವಾಗಿ ಗಿರಿ ನದೀ ವನಗಳಿಂದಲಂಕೃತವಾಗಿ ವಿಶೇಷವಾಗಿ ಶೋಭಿಸುತ್ತಾ, ಸ್ವಭಾವತಃ ಎಲ್ಲಾ ಸೌಕರ್ಯಗಳಿಗೂ ಆಕಾರವಾಗಿರುವುದರಿಂದ, ಜನಗಳು ಪ್ರಯತ್ನಗಳನ್ನು ಮಾತ್ರ ಮಾಡಿದರೆ, ಅನೇಕ ಹಳ್ಳಿಗಳಲ್ಲಿ, ಸರಿಯಾದ ಸ್ಥಿತಿಯಿಲ್ಲದವೆ ಹೇಸಿಗೆಗೆ ಗುರಿ ಮಾಡಿದ ಪಾಳು ಜಾಗಗಳಿಂದ ಸಂಗಡಿಸಲ್ಪಟ್ಟ ಹುಲ್ಲು ಮನೆಗಳ ಗುಂಪುಗಳಿಗೆ ಬದಲಾಗಿ, ಕ್ರಮವಾಗಿ ಕಟ್ಟಿದ ಶುಚಿಯಾದ ಮತ್ತು

…ಶಕ್ತಿಯುಳ್ಳ ಮಾನುಷ ಸಾಮರ್ಥ್ಯಗಳು ಅನೇಕ ಗ್ರಾಮಗಳಲ್ಲಿ …ವಾಗಬಹುದು.

ಸಂಪದಭ್ಯುದಯ ಸಮಾಜ.

ತಮಗೆಲ್ಲ ತಿಳಿದಿರುವಂತೆ, ವಿದ್ಯಾಭ್ಯಾಸವನ್ನು ಹೆಚ್ಚಿಸಿ, ಜನಿಸ್ಥಿತ್ಯ ವ್ಯ…ವಸ್ಥೆ, ಕೈಗಾರಿಕೆಗಳನ್ನು, ವ್ಯಾಪಾರವನ್ನೂ ವೃದ್ಧಿಗೊಳಿಸುವುದೇ ಈ …ದ ಉದ್ದೇಶವಾಗಿದೆ; ಹಿಂದೆ ಈ ವಿಚಾರವಾಗಿ ಜನರು ಕಾರ್ಯಾಸಕ್ತಿ ತೋರಿಸಿ ಪ್ರಯೋಜನಾಂಶವನ್ನು ಹೊಂದಿರುವದು ಬಹಳ ಸ್ವಲ್ಪವಾಗಿ …ರುವುದರಿಂದ, ಜನಗಳು ತಮ್ಮ ಸ್ವಂತ ಅರ್ಥೋತ್ಪತ್ತಿ ಸಾಧನಗಳನ್ನು ವೃದ್ಧಿಗೆ ತರಬೇಕಾದರೆ, ಅವರುಗಳು ಯಾವ ಯಾವ ಪ್ರಯತ್ನಗಳನ್ನು ಮಾಡಬೇಕು ಎಂಬುದರಲ್ಲಿ ಸರ್ಕಾರದವರೂ, ಮುಖಂಡರಾದ ಜನರೂ ಸಹ, ತಕ್ಕ ಸಹಾಯವನ್ನು ಮಾಡಬೇಕಾದದ್ದು ಅವರುಗಳ ಮುಖ್ಯಕರ್ತವ್ಯವಾಗಿರುತ್ತದೆ. …ಈ ಪ್ರಾಂತ್ಯಗಳನ್ನು ಮುಟ್ಟಿ, ದೇಶದ ಭಾಗ್ಯೋನ್ನತಿಯಲ್ಲಿ ಅವರೂ ಭಾಗಿಗಳಾಗುವಂತೆ ಮಾಡುವುದಕ್ಕೂ ಸಹ, ಸರ್ಕಾರದವರು ಸದ್ಯದಲ್ಲಿ ಸುಮಾರು ೩½ ಲಕ್ಷ ರೂಪಾಯಿಗಳನ್ನು ಎಂದರೆ ನಮ್ಮ ಸಂಸ್ಥಾನದ ಮುಟ್ಟಿನ … ಶೇಕಡ 1 ಕ್ಕೆ ಕಮ್ಮಿಯಾದಷ್ಟು ಮೊಬಲಗನ್ನು ಶ್ರೀಮನ್ ಮಹಾರಾಜರವರ ಸರ್ಕಾರದವರು ಖರ್ಚು ಮಾಡುತ್ತಿದ್ದಾರೆ. ಅವಶ್ಯಕವಾದರೆ, ೫ ವರ್ಷ ಕಾಲದವರೆಗೆ ಸಾಲಿಯಾನ ೫ ಲಕ್ಷ ರೂಪಾಯಿ ವರೆಗೂ ಖರ್ಚು … ಸರ್ಕಾರದವರು ಸಿದ್ಧರಾಗಿರುತ್ತಾರೆ.

ಈ ಸಮಾಜದ ಕೆಲಸವು ಮುಖ್ಯವಾಗಿ ಮೂರು ಸೆಂಟ್ರಲ್ ಕಮಿಟಿಗಳಿಂದಲೂ, ಡಿಸ್ಟ್ರಿಕ್ಟ್ ಕಮಿಟಿಗಳಿಂದಲೂ ನಡಿಸಲ್ಪಡುತ್ತಿದೆ. ಈ ಕಮಿಟಿಗಳವರು …ಉತ್ಪತ್ತಿಗೆ ಸಂಬಂಧಪಟ್ಟ ಅನೇಕ ವಿಷಯಗಳನ್ನು ವಿಚಾರಮಾಡುತ್ತಿದ್ದಾರೆ. …ವಿಷಯಕವಾದ ಪ್ರಜಾಭಿವೃದ್ಧಿ ಕಾರ್ಯಗಳು ನಾನಾಸ್ಥಿತಿಯಲ್ಲಿವೆ. …ನಡಿಸಲಾಗುವ ಸಮಾಚಾರಗಳನ್ನು ಮಾಡುವದಕ್ಕೂ, ಆರಂಭದಲ್ಲಿ …ಉಪಯುಕ್ತವಾದ ಸಂಗತಿಗಳನ್ನು ಸಂಗ್ರಹಿಸುವ ಪ್ರಯತ್ನಗಳು …ವಾಗಿ ನಡೆದಿವೆ. ಕಮಿಟಿಯವರಿಂದ ಮಾಡಲ್ಪಟ್ಟ ಕೆಲವು ಸಲಹೆಗಳು ಸರ್ಕಾರದವರಿಂದ ಮಂಜೂರಾಗಿವೆ; ಇನ್ನೂ ಅನೇಕ ಸಲಹೆಗಳು ಸರ್ಕಾರದವರ ಪರ್ಯಾಲೋಚನೆಯಲ್ಲಿವೆ.

ಜನಗಳು ತೋರಿಸಿರುವ … ಉದಾರವಾದ ಉತ್ಸಾಹದ ಮಧ್ಯದಲ್ಲಿ, ಅಭಿವೃದ್ಧಿಯಲ್ಲಿರುವ ಕೆಲವು ಏರ್ಪಾಟುಗಳ ವಿಚಾರದಲ್ಲಿ ಆಕ್ಷೇಪಣೆಗಳು ಬಾರದೆ ಇಲ್ಲ. ಈ ಸಮಾಜದ ಪ್ರಯೋಜನಕ್ಕಾಗಿ ಸರ್ಕಾರದವರು, ತಾವು ಮಾಡಬೇಕಾದ ಸರ್ವೋತ್ಕೃಷ್ಟವಾದ ಪ್ರಯತ್ನಗಳೆಂಥವೆಂದು ತಿಳಿದುಕೊಂಡಿರುವುದನ್ನು, ಪ್ರತಿ … ವಿಷಯದಲ್ಲಿಯೂ ಚೆನ್ನಾಗಿ ಪರಿಶ್ರಮವುಳ್ಳವರ ಸಲಹೆಗೆ ನ್ಯಾಯ … ಕರವಾಗಿರುವ ಕೆಲಸಗಳನ್ನು ಅವಲಂಬಿಸುತ್ತಿದ್ದಾರೆ. ಈ ಏರ್ಪಾಟಿನ … ಯಾವುದೇ ವಿಷಯದಲ್ಲಾಗಲಿ ಈ ಸಭೆಯ ಮೆಂಬರುಗಳಲ್ಲಿ ಕೆಲವು … ಮೆಂಬರುಗಳು ಸೇರಿ ತಮಗೆ ಇರತಕ್ಕ ಕಷ್ಟಗಳನ್ನು ತಮ್ಮ ಆಕ್ಷೇಪಣೆಗಳನ್ನೂ ಕ್ರಮವಾಗಿ ಸಮರ್ಥಿಸಿ ತಮಗೆ ಬೇಕಾದ ಸಮಾಚಾರವನ್ನು … ಕೇಳುವದು …, ಶೀಘ್ರದಲ್ಲಿಯೇ ಅವರ ಕೋರಿಕೆಯನ್ನು ನೆರವೇರಿಸಲು ಸರ್ವಪ್ರಯತ್ನವೂ ಮಾಡಲಾಗುವುದು. … ರುವ ಏರ್ಪಾಡುಗಳ ವಿಷಯದಲ್ಲಿ ಈ ರೀತಿಯಾಗಿ ಕೇಸ ನಡಿಸಬಹುದೆಂಬ … ಸಲಹೆಗಳನ್ನು … ಸರ್ಕಾರದವರು ಅವುಗಳನ್ನು ಶೀಘ್ರದಲ್ಲಿ ಚೆನ್ನಾಗಿ ಪರ್ಯಾಲೋಚಿಸುವರು.

ಜನಗಳ ಕಾರ್ಯದಕ್ಷತೆ.

ಹೋದ ವರ್ಷದ ಉಪನ್ಯಾಸದಲ್ಲಿ ಜನಗಳ ಕಾರ್ಯದಕ್ಷತೆಯ ವಿಷಯವನ್ನು ಕುರಿತು ಒಂದು ಪ್ರಕರಣದಲ್ಲಿ ಸೂಚಿಸಲಾಯಿತು. ಈ ದೇಶದ ಅರ್ಥೋತ್ಪತ್ತಿ ಸಾಧನಗಳನ್ನು ಹೆಚ್ಚಿಸುವುದಕ್ಕಾಗಿಯೂ, ಸರ್ಕಾರದ ಆಡಳಿತದ ಕ್ರಮವನ್ನು ಉತ್ತಮಸ್ಥಿತಿಗೆ ತರುವುದಕ್ಕಾಗಿಯೂ, ಸರ್ಕಾರದವರು ಯಾವ ಯಾವ ಕಾರ್ಯಗಳನ್ನು ಇದುವರೆಗೆ ನಡೆಸಿದ್ದಾರೆ, ಅಥವಾ ಈಗ ನಡಿಸುತ್ತಿದ್ದಾರೆ ಎಂಬ ಸಂಗತಿಯನ್ನು ತಾವು … ತಿಳಿಯುತ್ತೀರಿ. ವಿದ್ಯಾಭ್ಯಾಸಕ್ಕಾಗಿ ಹಣವನ್ನು ವಿಶೇಷವಾಗಿ ವಿನಿಯೋಗ ಮಾಡುವದರ ಮೂಲಕವಾಗಿಯೂ, ಇತರ ವಿಧವಾಗಿ ಎಂದರೆ ಕಸುಬುಗಳನ್ನು … ಸಂಬಂಧಪಟ್ಟ ಕಾರ್ಯಗಳನ್ನು ಪ್ರೋತ್ಸಾಹಿಸುವದರ ಮೂಲಕವಾಗಿಯೂ, ಪ್ರಜೆಗಳ ಪುರೋಭಿವೃದ್ಧಿಯ ವಿಷಯದಲ್ಲಿ ಸರ್ಕಾರದವರು ತಮ್ಮ ಕೈಲಾದಷ್ಟೆಲ್ಲ ಮಾಡುತ್ತಿದ್ದಾರೆ.

ಜನಗಳು ತಮ್ಮ ಏಳಿಗೆಗೋಸ್ಕರವಾಗಿ ತಾವಾಗಿಯೇ ಏನೇನು ಮಾಡ… ಶ್ರದ್ಧೆಯಿಂದ … ವೃದ್ಧಿಗಾಗಿಯೂ ದೇಶಾಭಿವೃದ್ಧಿಗಾಗಿಯೂ ಹೆಚ್ಚು ಮುತವರ್ಜಿಯನ್ನು … ಜನರು ಎಷ್ಟರ ಮಟ್ಟಿಗೆ ಉಪಯುಕ್ತರಾಗಿರುತ್ತಾರೆ … ಈ ಸಂದರ್ಭದಲ್ಲಿ ಕೇಳಬಹುದು. ಈ ಪ್ರಶ್ನೆಗಳು ಮುಂದಿನ ವರ್ಷಗಳಲ್ಲಿ … ಕೇಳತಕ್ಕ ಪ್ರಶ್ನೆಗಳಾಗಿರುತ್ತವೆ. ಅವಕ್ಕೆ ನಾವು ಕೊಡಬೇಕಾದ ಉತ್ತರವು ಸಮಾಧಾನಕರವಾಗಿಯೂ ಹೆಚ್ಚು … ಕೊಡತಕ್ಕದ್ದಾಗಿಯೂ ಇರುವಂತೆ ನಾವು ನೋಡಿಕೊಳ್ಳಬೇಕಾಗಿರುತ್ತದೆ.

ನಮ್ಮ ಜನಗಳು … ಶಕ್ತಿಯನ್ನು ಅಭ್ಯಾಸ ಮಾಡಬೇಕು. ಪರದೇಶಗಳಲ್ಲಿ ಮಾನವ ವ್ಯಕ್ತಿಗಳು … ವಿಷಯದಲ್ಲಿ ರಾಷ್ಟ್ರವು ಎಷ್ಟರ ಮಟ್ಟಿಗೆ … ಇರುತ್ತದೆ ಎಂಬುದನ್ನು ಅವರು ಚೆನ್ನಾಗಿ ತಿಳಿದುಕೊಂಡು …, ಆ … ತಿಳಿಯಬಹುದಾದ … ಆಚರಣೆಗೆ ತರಬೇಕು.

ಜನಗಳ ಆಚಾರಗಳಲ್ಲಿ ಬದಲಾವಣೆಗಳು ಗೋಚರವಾಗದೆಯೇ ನಡೆಯುತ್ತಲಿವೆ. … ಅನೇಕ … ಹಿಂದಿನ … ಆಚರಣೆಗಳು ಕೈಬಿಡಲಾಗುತ್ತಲಿವೆ. ನಮ್ಮ ದೇಶದ ಸಂಬಂಧವಾದದ್ದಾಗಿಯೂ, ಪರದೇಶಗಳ ಸಂಬಂಧವಾದವಾಗಿಯೂ ಇರುವ ವಿಶೇಷ ಪ್ರಯೋಜನಕರವಾದ ಮಾರ್ಗಗಳನ್ನೂ ಆಚರಣೆಗಳನ್ನೂ ಗೊತ್ತುಮಾಡಿಕೊಂಡು, ಜನಗಳು ಪ್ರತಿ ದಿನವೂ ನಡೆಯುವ ವ್ಯವಹಾರಗಳಲ್ಲಿ ಅವುಗಳನ್ನು ಸೂತ್ರವನ್ನಾಗಿ ಅಂಗೀಕರಿಸುವಂತೆ ಆಗುವವರೆಗೂ, ಜನಗಳಲ್ಲಿ ಅವುಗಳನ್ನು ಬಳಕೆಗೆ ತರುವದೇ ಈಗಿನ ಕಾಲದಲ್ಲಿ ನಮ್ಮ ಕರ್ತವ್ಯವಾಗಿರುತ್ತದೆ.

ಎಮ್. ವಿಶ್ವೇಶ್ವರಯ್ಯ,
ಮೈಸೂರು ಸಂಸ್ಥಾನದ ದಿವಾನ್‌ರವರು.

ಮೈಸೂರು ಪ್ರಜಾಪ್ರತಿನಿಧಿ ಸಭೆಯು.

ಮೊದಲನೇ ದಿವಸದ ಕಾರ್ಯಗಳು.

ಕಳೆದ ತಾ. 30 ನೇ ಬುಧವಾರ ಮಧ್ಯಾಹ್ನ 12 ಗಂಟೆಗೆ ರಾಜಧಾನಿಯ ಪಬ್ಲಿಕ್ ಆಫೀಸಿನ ಮೇಲುಪ್ಪರಿಗೆಯ ದರ್ಬಾರ್ ಹಾಲಿನಲ್ಲಿ ಪ್ರಜಾಪ್ರತಿನಿಧಿ ಸಭೆಯು ಪ್ರಾರಂಭವಾಯಿತು. ಪೀಠದ ಮೇಲ್ಗಡೆ ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರು, ಎರಡನೇ ಕೌನ್ಸಿಲರ್ ಮಿ॥ ಎಂ. ಕಾಂತರಾಜೆ ಅರಸಿನವರು, ಚೀಫ್ ಜಡ್ಜ್ ಸರ್ ಎಲ್. ಮಿಲ್ಲರ್ ರವರು, ಚೀಫ್ ಕೋರ್ಟಿನ ಇತರ ಜಡ್ಜಿಗಳು, ಗವರ್ನ್‌ಮೆಂಟ್ ಇಲಾಖೆಗಳ ಮುಖ್ಯಾಧಿಕಾರಿಗಳು, ಚೀಫ್ ಸೆಕ್ರೆಟರಿಯವರು, ಡೆಪ್ಯುಟಿ ಕಮೀಷನರುಗಳು ಮುಂತಾದವರೆಲ್ಲಾ ಕುಳಿತಿದ್ದರು. ಕೆಳಗಡೆ ಬಲಪಾರ್ಶ್ವದಲ್ಲಿ ಸರ್ಕಾರದ ಸೆಕ್ರೆಟರಿಗಳೂ, ಎಡಪಾರ್ಶ್ವದಲ್ಲಿ ವರ್ತಮಾನಪತ್ರಿಕೆಗಳ ಪ್ರತಿನಿಧಿಗಳೂ, ಎದುರುಪಾರ್ಶ್ವದಲ್ಲಿ ಸುಮಾರು 176 ಮಂದಿ ಪ್ರಜಾಪ್ರತಿನಿಧಿಗಳೂ, ಸ್ಥಳೀಯ ದೊಡ್ಡಮನುಷ್ಯರೂ ಕುಳಿತಿದ್ದರು. ಬ್ರಿಟಿಷ್ ರೆಸಿಡೆಂಟ್ ಸರ್ ಹ್ಯೂ ಡೇಲಿಯವರು ಪತ್ನಿ ಸಮೇತ ಯೂರೋಪಿಯನ್ ಅತಿಥಿಗಳ ಕೂಡ ಬಂದವರಾದರು. ಸಭೆಯವರೆಲ್ಲಾ ಎದ್ದು ನಿಂತಿರುವಲ್ಲಿ ದಿವಾನ್‌ರವರು ಅವರನ್ನು ಕರೆದುಕೊಂಡು ವ…ದ ಪೀಠದಲ್ಲಿ ಕೂರಿಸಿದರು. 12 ಗಂಟೆ ಹೊಡೆಯುತ್ತಿರುವಲ್ಲಿ ದಿವಾನ್‌ರವರು ರೆಸಿಡೆಂಟರವರ ಅಪ್ಪಣೆ ಪಡೆದು ಪ್ರಜಾಪ್ರತಿನಿಧಿಗಳಿಗೆ ತಮ್ಮ ಅಡ್ರೆಸ್ಸನ್ನು ಇಂಗ್ಲಿಷಿನಲ್ಲಿ ಓದಿ ಹೇಳಿದರು. [ಇದರ ಮುಖ್ಯವಾದ ಭಾಗಗಳ ಸ್ವಲ್ಪ ಇತ್ತ ಇನ್ನೊಂದು ಕಡೆ ಪ್ರಕಟಿಸುತ್ತೇವೆ.—ಎಡಿ.] ತರುವಾಯ ಚಿನ್ನದಗಣಿ ಮೈನಿಂಗ್ ಬೋರ್ಡಿನ ಪ್ರತಿನಿಧಿಯಾದ ಮಿ॥ ಸಿ. ಎಚ್. ರಿಚರ್ಡ್ಸ್ ರವರೂ, ದಕ್ಷಿಣ ಮೈಸೂರು ಪ್ಲಾಂಟರುಗಳ ಸಂಘದ ಪ್ರತಿನಿಧಿಯಾದ ಮಿ॥ ಜೆ. ಜಿ. ಎಚ್. ಕ್ರಾಫರ್ಡ್‌ರವರೂ, ಸೆಂಟ್ರಲ್ ಮಹಮ್ಮದೀಯ ಅಸೋಸಿಯೇಷನ್ ಪರವಾಗಿ ಮಿ॥ ಮಹಮದ್ ಅಬ್ಬಾಸ್ ಖಾನ್ ರವರೂ, ಒಕ್ಕಲಿಗರ ಸಂಘದ ಪರವಾಗಿ ಮಿ॥ ಪುಟ್ಟೇಗೌಡರವರೂ, ನಂಜನಗೂಡು ಮ್ಯುನಿಸಿಪಲ್ ಕೌನ್ಸಿಲ್ … ವೈಸ್ ಪ್ರೆಸಿಡೆಂಟ್ ಮಿ॥ ಕೆ. ವೆಂಕಟರಾಮಯ್ಯನವರೂ, ಕಡೂರು ಡಿಸ್ಟ್ರಿಕ್ಟ್ ಬೋರ್ಡಿನ ಪರವಾಗಿ ಮಿ॥ ಎಚ್. ಕೃಷ್ಣರಾಯರೂ, ಪ್ರತಿನಿಧಿಗಳ ಸಭೆಯ ಪರವಾಗಿ ಮಿ॥ ಎಚ್. ಕೃಷ್ಣಶಾಸ್ತ್ರಿಗಳೂ ಮಿ॥ ಎಂ. ವೆಂಕಟಕೃಷ್ಣಯ್ಯನವರೂ ಅಡ್ರೆಸ್ಸುಗಳನ್ನು ಓದಿ ದಿವಾನ್‌ರವರಿಗೆ ಒಪ್ಪಿಸಿದರು. ಈ ಅಡ್ರೆಸ್ಸುಗಳಿಗೆಲ್ಲಾ ದಿವಾನ್‌ರವರು ಪ್ರತ್ಯುತ್ತರವನ್ನು ದಯಪಾಲಿಸಿದರು. ಅವರು ಹೇಳಿದ್ದೇನೆಂದರೆ—

ಪ್ರಜಾಪ್ರತಿನಿಧಿಗಳು ಒಪ್ಪಿಸಿದ ಅಭಿನಂದನ ಪತ್ರಿಕೆಗಳಿಗೆ ದಿವಾನ್‌ರವರು ಅಪ್ಪಣೆ ಕೊಡಿಸಿದ ಉತ್ತರ.

ಮಹಾಶಯರೇ,—ಈಗತಾನೇ ತಾವುಗಳು ಒಪ್ಪಿಸಿದ ಪ್ರತ್ಯೇಕಪ್ರತ್ಯೇಕವಾದ ಅಭಿನಂದನಪತ್ರಿಕೆಗಳನ್ನು ಶ್ರೀಮನ್ ಮಹಾರಾಜರವರ ಸರ್ಕಾರದಪರವಾಗಿ ಸ್ವೀಕರಿಸುವುದು ನಮ್ಮ ಸಂತೋಷಕರವಾದ ಕಾರ್ಯವಾಗಿದೆ. ಅವುಗಳಲ್ಲಿ ಕೆಲವು ಕಳೆದ ಇಪ್ಪತ್ತುನಾಲ್ಕು ಘಂಟೆಗಳೊಳಗಿನ ಕಾಲದಲ್ಲಿ ನಮ್ಮ ಕೈಸೇರಿದವಾದುದರಿಂದ, ಎಲ್ಲವುಗಳಿಗೂ ಸಮುದಾಯವಾಗಿ ಪ್ರತ್ಯುತ್ತರವನ್ನು ಕೊಡುವದಕ್ಕಿಂತಲೂ ವಿಸ್ತರಿಯಾಗಿ ನೀವು ನಿರೀಕ್ಷಿಸಲಾರಿರೆಂದು ನಾವು ನಿಂಡಿತವಾಗಿ ತಿಳಿದಿರುತ್ತೇವೆ.—ಈ ಸಂವತ್ಸರದಲ್ಲಿ ಅನೇಕ ಮುಖ್ಯಕಾರ್ಯಗಳು ಜರುಗಿರುತ್ತವೆ ಎಂದು ಒಂದಾನೊಂದು ಅಭಿನಂದನ ಪತ್ರಿಕೆಯಲ್ಲಿ ತಾವುಗಳು ತಿಳಿಸಿರುತ್ತೀರಿ. ಇದು ನಿಶ್ಚಯವೇ ಆಗಿರುವುದು; ಆದರೆ ಇವುಗಳಲ್ಲಿ ಅನೇಕವನ್ನು ಈಗತಾನೇ ಕೊಟ್ಟ ಉಪನ್ಯಾಸದಲ್ಲಿ ಸೂಚಿಸಿರುವದರಿಂದ, ಅವುಗಳನ್ನು ಕುರಿತು ಪುನಃ ಪ್ರಸ್ತಾಪಿಸುವುದು ಪುನರುಕ್ತಿಯಾಗುವುದೆಂದು ನೀವೂ ಭಾವಿಸಬಹುದಾಗಿದೆ.—ಯುದ್ಧ ವಿಷಯವನ್ನು ಕುರಿತು ಆಗಲೇ ಪ್ರಸ್ತಾಪಿಸಿರುತ್ತೇವೆ. ಯುದ್ಧಕ್ಕಾಗಿ ಕೊಟ್ಟ ದ್ರವ್ಯಸಹಾಯ ವಿಷಯವನ್ನು ಕೇಳಿ ಸಂಸ್ಥಾನದಲ್ಲಿರುವ ಮುಖ್ಯವಾದ ಪ್ರತಿನಿಧಿಸಭೆಗಳವರೆಲ್ಲರೂ ವಿಶೇಷ ಉದಾರವಾದ ದಕ್ಷತೆಯನ್ನು ತೋರಿಸಿರುತ್ತಾರೆಂಬುದನ್ನು ಕೇಳಿ ನಮ್ಮ ಶ್ರೀಮನ್ ಮಹಾರಾಜ ರಾಜಾಸಾಹೇಬ್ಬಹಾದುರವರು ಅತ್ಯಂತವಾಗಿ ಸಂತೋಷಿಸುವರೆಂದು ನಾವು ನಿಸ್ಸಂದೇಹವಾಗಿ ತಿಳಿದಿರುತ್ತೇವೆ. ನಮ್ಮ ಕೈಲಾದ ಈ ಸ್ವಲ್ಪ ಸಹಾಯವನ್ನು ಮಾಡಿದ ಬಳಿಕ, ಜನಗಳಿಗೆ ಕ್ಷೇಮವೂ, ಜನಾಂಗಗಳ ಧರ್ಮಗಳಿಗೂ ಶಾಂತಿಗೂ ರಕ್ಷಣೆಯೂ ಯಥಾರ್ಥವಾಗಿ ಉಂಟಾಗಬೇಕೆಂಬ ಹಾರೈಕೆಯಿಂದ, ಯುದ್ಧವು ಶೀಘ್ರದಲ್ಲಿ ಕೊನೆಗಂಡು ಜಯಪ್ರದವಾಗಲಿ ಎಂದು ಪ್ರಾರ್ಥಿಸುತ್ತೇವೆ.

ನೀವು ಅನೇಕ ವಿಷಯಗಳನ್ನು ಪ್ರಸ್ತಾಪಕ್ಕೆ ತಂದು, ಸರ್ಕಾರದವರು ಮಾಡಿರುವ ಹಲವು ಬಗೆಯ ಏರ್ಪಾಡುಗಳನ್ನು ಸೂಚಿಸುವಾಗ, ಅನೇಕವನ್ನು ಅಂಗೀಕಾರಮಾಡಿ ಇನ್ನು ಕೆಲವುಗಳ ವಿಷಯದಲ್ಲಿ ನಿಮಗೆ ಸಂಶಯವಿರುವದನ್ನು ತಿಳಿಯಪಡಿಸುತ್ತೀರಿ. ಕಾಲಸ್ಥಿತಿಯಲ್ಲಿ ಸಾಮಾನ್ಯವಾದ ಬದಲಾವಣೆಗಳುಂಟಾದರೆ ಸರ್ವಸಾಧಾರಣವಾದ ಪ್ರಜಾಭ್ಯುದಯಕ್ಕೆ ಸಾಧ್ಯವಾದ ಮಟ್ಟಿಗೂ ಯಾವ ಕೊರತೆಯೂ ಬಾರದಿರುವದಕ್ಕೋಸ್ಕರ, ಎಲ್ಲಾ ವಂಗಡಗಳವರಿಗೂ ಆಗಬೇಕಾದ ಸರ್ವೋತ್ತಮ ಪ್ರಯೋಜನಗಳನ್ನು ನಿಷ್ಪಕ್ಷಪಾತದಿಂದ ವೃದ್ಧಿಗೊಳಿಸುವದೂ, ಪ್ರತಿ ವಂಗಡದ ಜನಗಳು ಮಾಡುವ ಕಾರ್ಯದ ಉತ್ಕೃಷ್ಟತೆಯನ್ನೂ ಅವರ ಸಂಪಾದನ ಶಕ್ತಿಯನ್ನೂ ಹೆಚ್ಚಿಸುವದೂ ಶ್ರೀಮನ್ ಮಹಾರಾಜರವರ ಸರ್ಕಾರದವರಿಗೆ ಯಾವಾಗಲೂ ಇರುವ ಉದ್ದೇಶವಾಗಿರುತ್ತದೆ.—ನ್ಯಾಯವಿಧಾಯಕ ಸಭೆಯನ್ನು ಅಭಿವೃದ್ಧಿಪಡಿಸುವುದಕ್ಕೆ ಈಗ ಸರಿಯಾದ ಕಾಲವೆಂದು ಭಾವಿಸಿ, ಹೋದ ವರ್ಷ ಶ್ರೀಮನ್ ಮಹಾರಾಜರವರು ನಮಗೆ ಕೆಲವು ಹಕ್ಕುಗಳನ್ನು ದಯಪಾಲಿಸಿದರು. ಈ ಪ್ರಜಾಪ್ರತಿನಿಧಿ ಸಭೆಯ ಉಪಯೋಗವನ್ನು ಹೆಚ್ಚಿಸತಕ್ಕದ್ದಕ್ಕೆ ಬೇಕಾದ ಇನ್ನೂ ಹೆಚ್ಚು ಬದಲಾವಣೆಗಳು ಸರಿಯಾದ ಕಾಲದಲ್ಲಿ ಮಾಡಲ್ಪಡುವವು ಎಂಬ ವಿಷಯದಲ್ಲಿ ನಮಗೆ ಯಾವ ಸಂಶಯವೂ ಇಲ್ಲ. ಈ ವಿಷಯದಲ್ಲಿ ನೀವು ಮಾಡಿರುವ ವಿಜ್ಞಾಪನೆಗಳನ್ನೆಲ್ಲಾ ಶ್ರೀಮನ್ ಮಹಾರಾಜರವರ ಘನವಾದ ಪರ್ಯಾಲೋಚನೆಗೆ ಸಂತೋಷದಿಂದ ಒಪ್ಪಿಸಲಾಗುವದು.—ಕಾವೇರೀ ಜಲಾಶಯದ ಏರ್ಪಾಟಿನ ವಿಷಯದಲ್ಲಿ ಹಿಂದಿನ ಮೂರು ವರ್ಷಗಳಿಂದ ನಮಗಿದ್ದ ಅನ್ಯಮನಸ್ಕತೆಯು ಈಗ ನಿವೃತ್ತಿಯಾಗುವ ಸಂಭವವನ್ನು ಕಂಡು ಸಂತೋಷಿಸಬೇಕಾಗಿರುತ್ತದೆ. ಈ ಸಂದರ್ಭದಲ್ಲಿ ವಿಚಾರಣೆಯು ನಡೆಯುತ್ತಿರುವಾಗಲೇ ಬಾಹಿರವಾಗಿಯೂ ವಿಜ್ಞಾಪನೆ ಮಾಡುವವರ ದೆಸೆಯಿಂದ ಸರ್ಕಾರವನ್ನು ತೊಂದರೆಗೆ ಗುರಿಪಡಿಸುವದನ್ನು ಬಿಟ್ಟು, ಪ್ರಜೆಗಳು ತೋರಿಸಿರುವ ತಾಳ್ಮೆಯನ್ನೂ ವಿವೇಕವನ್ನೂ ಕೊಂಡಾಡತಕ್ಕದ್ದಾಗಿದೆ.—ರೈಲ್ವೆಯನ್ನು ಹಾಕುವ ವಿಷಯದಲ್ಲಿ ಸರ್ಕಾರದವರಿಗೆ ಇರುವ ಅಭಿಪ್ರಾಯವನ್ನೂ, ಅವರು ಈಗ ನಿಗಾ ಕೊಡುತ್ತಿರುವ ಹೊಸ ರೈಲ್ವೆ ಲೈನುಗಳಿಗೆ ಸಂಬಂಧಪಟ್ಟ ವಿಷಯಗಳನ್ನೂ ಕುರಿತು ಕೆಲವು ಮಟ್ಟಿಗೆ ಆಗಲೇ ತಿಳಿಸಿರುತ್ತೇವೆ. ಶಿರೋಡಿಗೆ ಸೀದಾ ಹೋಗುವ ರೈಲ್ವೆಯ ಲೈನು, ಹಾಸನ-ಮಂಗಳೂರು ರೈಲ್ವೆ, ಅಥವಾ ಎರಡನೆಯದಕ್ಕೆ ಬದಲಾಗಿ ಮೈಸೂರನ್ನು ಪಶ್ಚಿಮ ಸಮುದ್ರತೀರಕ್ಕೆ ಸೇರಿಸುವ ಇನ್ನಾವುದಾದರೂ ರೈಲ್ವೆಯ ಲೈನು. ಈ ಎರಡು ರೈಲ್ವೆಗಳು ಪ್ರಕೃತದಲ್ಲಿ ನಮಗೆ ಬೇಕಾಗಿರುವ ಮುಖ್ಯ ಲೈನುಗಳಾಗಿವೆ. ನಮ್ಮ ಸೀಮೆಯ ವ್ಯಾಪಾರವೆಲ್ಲಾ ಮುಖ್ಯವಾಗಿ ಪಶ್ಚಿಮ ಸಮುದ್ರತೀರಕ್ಕೇ ಸಂಬಂಧಪಟ್ಟಿರುವಾಗ, ಪೂರ್ವ ಸಮುದ್ರತೀರದೊಡನೆ ಮಾತ್ರ ನೇರಾ ರೈಲ್ವೇ ಸಂಬಂಧವನ್ನು ಪಡೆದಿರುವುದು ಅಸಂಗತವಾಗಿದೆ. ಈ ವಿಷಯಗಳನ್ನು ಕುರಿತು ಇಂಡಿಯಾ ಸರ್ಕಾರದವರೊಡನೆ … ಪತ್ರಗಳು ನಡೆಯುತ್ತಾ ಇವೆ.

ಮ್ಯುನಿಸಿಪಾಲಿಟಿಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಕುರಿತು ಚರ್ಚಿಸುವದಕ್ಕಾಗಿ ಆಗಿಂದಾಗ ಒಂದು ಮ್ಯುನಿಸಿಪಲ್ ಕಾನ್ಫರೆನ್ಸನ್ನು ಸೇರಿಸಬೇಕೆಂದು ನಂಜನಗೂಡು ಮ್ಯುನಿಸಿಪಾಲಿಟಿಯ ಪ್ರತಿನಿಧಿಗಳು ಸೂಚಿಸಿದ ಸಲಹೆಯು ಬಹು ವಿವೇಕದಿಂದ ಮಾಡಿದ್ದೆಂದು ತೋರುತ್ತದೆ; ತತ್ರಾಪಿ ನಾವು ಪ್ರಕೃತದಲ್ಲಿ ಟವನುಗಳನ್ನು ಉತ್ತಮ ಸ್ಥಿತಿಗೆ ತರುವುದಕ್ಕಾಗಿ ನಾನಾ ಪ್ರಕಾರವಾದ ಪ್ರಯತ್ನಗಳನ್ನು ನಡಿಸುತ್ತಿರುವುದರಿಂದ, ಈ ಸಲಹೆಯು ಬಹು ಯುಕ್ತವಾದದ್ದಾಗಿ ಕಾಣುತ್ತದೆ. ಈ ವಿಷಯದಲ್ಲಿ ಕಾರ್ಯಗಳನ್ನು ಉಪಕ್ರಮಿಸಬೇಕಾದರೆ ಸಂಸ್ಥಾನದ ನಾನಾ ಮ್ಯುನಿಸಿಪಲ್ ಕೌನ್ಸಿಲುಗಳ ಮೆಂಬರುಗಳಲ್ಲಿ ದಸೋಪಕಾರ(?) ಬುದ್ಧಿ ಇರಬೇಕಾದದ್ದು ಆವಶ್ಯಕವಾಗಿರುತ್ತದೆ.—ಕೋಲಾರದ ಚಿನ್ನದಗಣಿಗೆ ಒದಗುತ್ತಿದ್ದ ವಿದ್ಯುಚ್ಛಕ್ತಿಯ ಸರಬರಾಯಿಯು ಸ್ವಾಭಾವಿಕ ಕಾರಣಗಳ ದೆಸೆಯಿಂದ ಬೇಸಗೆ ತಿಂಗಳುಗಳಲ್ಲಿ ಕಡಮೆಯಾದದ್ದಕ್ಕೋಸ್ಕರ ಸರ್ಕಾರದವರು ವಿಷಾದಿಸುತ್ತಾರೆ; ಆದರೆ ಅನಾನುಕೂಲ್ಯವನ್ನೂ ನಷ್ಟವನ್ನೂ ಸಾಧ್ಯವಾದಷ್ಟು ಮಟ್ಟಿಗೆ ಕಮ್ಮಿ ಮಾಡುವದಕ್ಕಾಗಿ ಶ್ರೀಮನ್ ಮಹಾರಾಜರವರ ಸರ್ಕಾರದವರು ತಮ್ಮ ಕೈಲಾದ ಸಾಹಸಗಳನ್ನೆಲ್ಲಾ ಮಾಡಿರುತ್ತಾರೆಂಬ ಅಂಶವನ್ನು ಮೈನಿಂಗ್ ಬೋರ್ಡಿನವರೇ ಇತರರಿಗಿಂತ ಮೊದಲು ಒಪ್ಪಿಕೊಳ್ಳುವರೆಂದು ನಾವು ನಂಬಿರುತ್ತೇವೆ. ಕೋಲಾರದ ಚಿನ್ನದಗಣಿ ರೈಲ್ವೆ ಮೇಲಿನ ಪೊಲೀಸ್ ಡ್ಯೂಟಿಯನ್ನು ಏರ್ಪಾಡಿಸಿರುವದು ಮೈನಿಂಗ್ ಬೋರ್ಡಿನವರಿಗೆ ಬಹಳ ಸಮ್ಮತವಾಗಿರುತ್ತದೆಂದು ತಿಳಿದು ಸರ್ಕಾರದವರು ಸಂತೋಷಪಡುತ್ತಾರೆ; ಮತ್ತು ಗಣಿ ಪ್ರದೇಶದಲ್ಲಿ ಜರಿಗೆಯ ಆಸ್ಪತ್ರೆಯನ್ನು ಸಾವಕಾಶ ಮಾಡದೆ ಜಾಗ್ರತೆಯಲ್ಲಿಯೇ ಸ್ಥಾಪಿಸಲಾಗುವದೆಂದು ಎಣಿಸಿರುತ್ತಾರೆ.—ರಸ್ತೆಗಳ ವಿಷಯದಲ್ಲಿ ಹೋದ ವರ್ಷದಲ್ಲಿಯೂ ಈ ವರ್ಷದಲ್ಲಿಯೂ ಸಹ ಮಳೆ ಹೆಚ್ಚಾದುದರಿಂದ ಮರಾಮತ್ ಇಲಾಖೆಯವರಿಗೆ ಅಡಚಣೆಯಾಗಿರುತ್ತದೆ; ಆದರೆ ಅದರ ಪ್ರಾಮುಖ್ಯತೆಗೆ ತಕ್ಕಂತೆ ಪ್ರತಿ ಒಂದು ರಸ್ತೆಯನ್ನೂ ಚೆನ್ನಾಗಿ ಇಟ್ಟುಕೊಂಡಿರತಕ್ಕ ವಿಷಯದಲ್ಲಿ ಪ್ರಯತ್ನಗಳನ್ನು ಮಾಡುತ್ತಲಿದೆ. ದಕ್ಷಿಣ ಮೈಸೂರು ಪ್ಲಾಂಟರುಗಳ ಸಂಘದ ಪ್ರತಿನಿಧಿಯವರು ಕೇಳಿಕೊಂಡಂತೆ ಪೆಸ್ಟ್ ಆಕ್ಟನ್ನು (ಕ್ರಿಮಿಕೀಟಗಳ ಬಾಧೆಗೆ ಕಾನೂನು) ಜಾರಿಗೆ ತರಬೇಕೆಂಬ ವಿಷಯವು ಪರಿಶೀಲನೆಯಲ್ಲಿರುತ್ತದೆ. ಮಹಮ್ಮದೀಯ ವಂಗಡದವರು ಅವರುಗಳ ವಿದ್ಯಾಭ್ಯಾಸ ವಿಷಯದಲ್ಲಿ ಮಾಡಿಕೊಂಡಿರುವ ಅರಿಕೆಗಳನ್ನು ಆಸಕ್ತಿಯಿಂದ ಅವಗಾಹನೆಗೆ ತೆಗೆದುಕೊಳ್ಳಲಾಗುವುದು.

ಕಡೂರು ಡಿಸ್ಟ್ರಿಕ್ಟಿನ ಪ್ರತಿನಿಧಿಗಳು ಒಪ್ಪಿಸಿದ ಅಭಿನಂದನ ಪತ್ರಿಕೆಯಲ್ಲಿ ಸೂಚಿಸಿರುವ ಮಲೆನಾಡು ಅಭಿವೃದ್ಧಿಯ ಏರ್ಪಾಟಿನ ವಿಚಾರವನ್ನು, ಇಟಲೀ ದೇಶದ ಶಾಮ್ಯವಿಚಾರವನ್ನೂ ಸಹ ಶಾಸ್ತ್ರಾನುಸಾರ ಪರೀಕ್ಷೆ ಮಾಡಬೇಕೆಂಬ ಅಂಶವನ್ನು ಲಕ್ಷ್ಯದಲ್ಲಿಡದೆ ಬಿಟ್ಟಿಲ್ಲವೆಂದು ತಮಗೆ ತಿಳಿಸಬೇಕಾಗಿದೆ. ನಾವು ಹಿಂದೆ ಒಂದಾವೃತ್ತಿ ಸ್ಯಾನಿಟರಿ ಆಫೀಸರಾಗಿ ಇದ್ದುದರಿಂದಲೂ, ಮಲೇರಿಯಾ ರೋಗವನ್ನು ಹೋಗಲಾಡಿಸುವದಕ್ಕಾಗಿ ಇಟಲೀ ದೇಶದಲ್ಲಿ ಮಾಡಿರುವ ಪ್ರಯತ್ನಗಳನ್ನು ಪರೀಕ್ಷಿಸಿ ನೋಡಿಕೊಂಡು ಬರಬೇಕೆಂಬ ಉದ್ದೇಶದಿಂದಲೇ ನಾವು ಸ್ವತಃ ಸದರಿ ದೇಶದೊಳಗೆ ಸಂಚಾರ ಮಾಡಿರುವದರಿಂದಲೂ, ಆ ದೇಶದಲ್ಲುಂಟಾದ ನಮ್ಮ ಅನುಭವವನ್ನು ವ್ಯರ್ಥಗೊಳಿಸುವದಿಲ್ಲವೆಂದೂ ತಾವುಗಳು ದೃಢವಾಗಿ ನಂಬಬಹುದು.—ಕಡೆಯಲ್ಲಿ ಓದಿದ ಪ್ರಜಾಪ್ರತಿನಿಧಿ ಸಭೆಯ ಮೆಂಬರುಗಳ ಅಭಿನಂದನ ಪತ್ರಿಕೆಯಲ್ಲಿ ನಮ್ಮ ಸಂಸ್ಥಾನದಲ್ಲಿ ಆಗಬೇಕಾಗಿರುವ ದೊಡ್ಡದೊಡ್ಡ ಕಾರ್ಯಗಳ ಮತ್ತು ಅಭಿವೃದ್ಧಿಯ ಏರ್ಪಾಟುಗಳ ವಿಷಯವನ್ನು ತಿಳಿಸಿರುವಿರಿ. ಸದರಿ ಪತ್ರಿಕೆಯಲ್ಲಿ ಮಾಡಿಕೊಂಡಿರುವ ಅರಿಕೆಗಳನ್ನು ಸರ್ಕಾರದವರು ಸಾಮಾನ್ಯವಾಗಿ ಒಪ್ಪಿಕೊಳ್ಳುತ್ತಾರೆಂದು … ಹೇಳಬಹುದಾಗಿದೆ.

ಶ್ರೀಮನ್ ಮಹಾರಾಜರವರ ವಿಷಯದಲ್ಲಿಯೂ, ಮಹಾರಾಜರವರ ಸಿಂಹಾಸನಾಧಿಪತ್ಯ ವಿಷಯದಲ್ಲಿಯೂ ಅಭಿನಂದನ ಪತ್ರಿಕೆಗಳಲ್ಲಿ ನೀವುಗಳು ಸೂಚಿಸಿರುವ ದೃಢವಾದ ರಾಜಭಕ್ತಿ ವಿಶ್ವಾಸಗಳನ್ನು ಕುರಿತು ಶ್ರೀಮನ್ ಮಹಾರಾಜರವರ ಸನ್ನಿಧಾನಕ್ಕೆ ಅರಿಕೆಮಾಡುವುದು ನಮಗೆ ತುಂಬ ಸಂತೋಷಕರವಾದ ಕರ್ತವ್ಯವಾಗಿರುತ್ತದೆ. ನಿಮಗಾಗಬೇಕಾದ ಪ್ರಯೋಜನಗಳೂ, ನಿಮ್ಮ ಪುರೋಭಿವೃದ್ಧಿಯೂ, ನಿಮ್ಮ ಅಭ್ಯುದಯವೂ ಎಷ್ಟರ ಮಟ್ಟಿಗೆ ನಿರಂತರವಾಗಿ ಶ್ರೀಮನ್ ಮಹಾರಾಜರವರ ದಿವ್ಯ ಚಿತ್ತದಲ್ಲಿ ನೆಲೆಗೊಂಡಿವೆ ಎಂಬ ಸಂಗತಿಯು ಅವರೊಡನೆ ಪ್ರತಿ ದಿವಸವೂ ರಾಜಕಾರ್ಯಗಳನ್ನು ನಡಿಸುವದರಲ್ಲಿ ಸಹಾಯಕರಾಗಿರುವ ನಮಗಳಿಗೆ ಮಂದಟ್ಟಾಗಿರುವುದು. ಶ್ರೀಮದ್ಯುವರಾಜರವರು ಸರ್ಕಾರಿ ಕೆಲಸಗಳಲ್ಲಿ ವಿಶೇಷ ಪ್ರಜ್ಞಾಶಾಲಿಗಳಾಗಿ ತೋರ್ಪಡಿಸುತ್ತಿರುವ ಆಸಕ್ತಿಯನ್ನೂ, ಈ ಸಂಸ್ಥಾನದ ಪ್ರಜೆಗಳ ಯೋಗಕ್ಷೇಮ ವಿಚಾರದಲ್ಲಿ ಅನೇಕ ವಿಧವಾಗಿ ಕಾರ್ಯತಃ ಪ್ರಸರಿಸುತ್ತಿರುವ ಕೃಪಾದೃಷ್ಟಿಯನ್ನೂ ಕುರಿತು ನೀವು ಪ್ರಸ್ತಾಪಿಸಿರುವದನ್ನು ಕೇಳಿ ನಮಗೆ ಬಹಳ ಸಂತೋಷವಾಗಿರುತ್ತದೆ.—ಈಗ ಈ ವರ್ಷದ ರಾಜ್ಯಾಡಳಿತವನ್ನು ಕುರಿತು ಶ್ಲಾಘಾಪೂರ್ವಕವಾಗಿ ನೀವುಗಳು ಹೇಳಿರುವ ವಾಕ್ಯಗಳಿಗಾಗಿ ನಮ್ಮ ಸಹೋದ್ಯೋಗಿಗಳ ಪರವಾಗಿಯೂ, ನಮ್ಮ ಪರವಾಗಿಯೂ ತಮಗೆ ಯಥಾರ್ಥವಾದ ವಂದನೆಗಳನ್ನು ತಿಳಿಸಬೇಕಾಗಿದೆ. ಮಹನೀಯರೇ, ನಮ್ಮ ವಿಷಯದಲ್ಲಿ ತಾವು ಹೇಳಿರುವ ಅನೇಕ ಶ್ಲಾಘಾ ವಚನಗಳಿಗಾಗಿಯೂ ತಮ್ಮನ್ನು ವಂದಿಸುತ್ತೇವೆ ಎಂಬುದು.

ಬಳಿಕ ದಿವಾನ್‌ರವರು ಬ್ರಿಟಿಷ್ ರೆಸಿಡೆಂಟರಿಗೂ ಅವರ ಪತ್ನೀಯವರಿಗೂ ದಿವ್ಯವಾದ ಹುರಾಯಿಗಳನ್ನು(?) ಕೊಟ್ಟು ಕಳುಹಿಸಿದರು. ಯೂರೋಪಿಯನ್ ಅತಿಥಿಗಳೂ ಅವರ ಕೂಡ ಹೊರಟು ಹೋದರು. ದಿವಾನ್‌ರವರು ಕುಳಿತುಕೊಂಡ ಮೇಲೆ ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿ ಮಿ॥ ಡಿ. ಎಂ. ನರಸಿಂಗರಾಯರು ದಿವಾನ್‌ರವರ ಅಡ್ರೆಸ್ಸಿನ ಕನ್ನಡ ಭಾಷಾಂತರವನ್ನು ಓದಿ ಹೇಳಿದರು. ಅಲ್ಲಿಗೆ ಮೊದಲನೇ ದಿನದ ಕಾರ್ಯಗಳು ಮುಕ್ತಾಯವಾದವು.

ತಾಲ್ಲೂಕು ವರ್ತಮಾನಗಳು.

ಕಾವೇರಿ ರಿಜರ್ವಾಯರ್.—ಈ ಕಳೆದ ತಾ. 28 ನೇ ಭಾನುವಾರ ಮೆಕ್ಯಾನಿಕಲ್ ಬ್ರಾಂಚಿನ ವರ್ಕ್‌ಷಾಪಿನಲ್ಲಿ ಪ್ರತಿ ವರುಷವೂ ನಡೆಯುವಂತೆ ಆಯುಧಪೂಜೆಯನ್ನು ಮೆಕ್ಯಾನಿಕಲ್ ಇಂಜನಿಯರ್ ಮಿ॥ ಬಿ. ಸಿ. ಕೇಟಕರ್‌ರವರ ಪ್ರೋತ್ಸಾಹದ ಮೇಲೆ ಅಲ್ಲಿಯ ಸಮಸ್ತ ನೌಕರರೂ ಸೇರಿ ಬಹಳ ವಿಜೃಂಭಣೆಯಿಂದ ನಡಿಸಿದರು. ಆ ದಿವಸ ವರ್ಕ್‌ಷಾಪನ್ನು ಬಾವುಟ ತೋರಣಾದಿಗಳಿಂದ ಬಹು ನೇತ್ರಾನಂದಕರವಾಗಿ ಅಲಂಕರಿಸಿದ್ದರು. ಇಲ್ಲಿಯ ನಾರ್ತ್ ಬ್ಯಾಂಕ್ ಮತ್ತು ಸೌತ್ ಬ್ಯಾಂಕಿಗೆ ಸಂಬಂಧಪಟ್ಟ ಅಧಿಕಾರಿಗಳೂ, ನೌಕರರುಗಳೂ, ಇತರೇಯವರೂ ಸಭೆಯನ್ನಲಂಕರಿಸಿದ ನಂತರ ಪೂಜೆ ಮುಂತಾದವು ನೆರವೇರಿದವು. ಇಲ್ಲಿಯ ಜಮಾದಾರ್ ಮಿ॥ ರಾಮರಾಯರವರೂ, ಮಿ॥ ಆಪಣ್ಣಯ್ಯನವರೂ ಅತಿ ಚಮತ್ಕಾರವಾಗಿ ಜಿಮ್ನಾಸ್ಟಿಕ್ ಎಂಬ ಅಂಗಸಾಧನೆಯನ್ನು ನೋಟಕರಿಗೆ ಸಂತೋಷವನ್ನುಂಟುಮಾಡುವಂತೆ ಮಾಡಿ ತೋರಿಸಿದರು. ತರುವಾಯ ಸಭಿಕರಿಗೆಲ್ಲಾ ಫಲಪುಷ್ಪ ತಾಂಬೂಲಗಳು ಹಂಚಲ್ಪಟ್ಟವು. ಮಿ॥ ಮುರಗೇಶಪಿಳ್ಳೆಯವರು ಫೋಟೋ ತೆಗೆದನಂತರ ಪೊಲೀಸ್ ಇನ್ಸ್‌ಪೆಕ್ಟರವರ ಪ್ರೋತ್ಸಾಹದ ಮೇಲೆ ಒಂದು ಜೋಡಿ ಕುಸ್ತಿಯೂ ಆಗಿ ಸಭೆ ಭಂಗವಾಯಿತು. ಇದರಂತೆಯೇ ನಾರ್ತ್ ಬ್ಯಾಂಕಿನ ಇಂಜನಿಯರ್ ಮಿ॥ ಪಿ. ಗಣೇಶಯ್ಯನವರ ಪ್ರೋತ್ಸಾಹದ ಮೇಲೆ ಅಲ್ಲಿಯ ಸಮಸ್ತರೂ ಸೇರಿ ಮರುದಿನ ನಡಿಸಿದರು.—ತಾ. 24 ನೇ ಗುರುವಾರ ಸಬ್ … ಸಹಾ … ಪೂರೈಸುವದಕ್ಕೆ ಪೂರ್ತಿ ಮಾಡಿ, ಅದರ ಪ್ರಾರಂಭೋತ್ಸವವನ್ನು ಬಹಳ ವಿಜೃಂಭಣೆಯಿಂದ ನಡಿಸಿದರು.

ದೊಡ್ಡಬಳ್ಳಾಪುರ.—ಮಳೆ ಆಗಿರುತ್ತೆ, ಇನ್ನೂ ಆಗ ಬೇಕಾಗಿದೆ. ಮ್ಯುನಿಸಿಪಲ್ ಲಾಂದ್ರಗಳು ಉರಿಯುವುದಿಲ್ಲ. ಅನೇಕ ಒಡೆದುಹೋಗಿರುತ್ತೆ. ತಿರುಗಾಡುವ ಜನರಿಗೆ ಬಹಳ ತೊಂದರೆಯುಂಟು. ಮೇಲ್ಪಟ್ಟ ಆಫೀಸರಾದವರೂ ಗಮನಕ್ಕೆ ತೆಗೆದುಕೊಂಡರೆ ಪ್ರಜೆಗಳಿಗೆ ಅನುಕೂಲವಾದೀತು.—ಮೊನ್ನೆ ವಿಜಯದಶಮಿ ದಿನ ಮಾಮೂಲಿನಂತೆ ಪೊಲೀಸ್ ಡಿಪಾರ್ಟ್‌ಮೆಂಟಿನವರು ತಮ್ಮ ಸ್ಟೇಷನ್ನಲ್ಲಿ ಆಯುಧಪೂಜೆ ನಡಿಸಿದರು. ಅಮಲ್‌ದಾರರವರು, ಶಿರಸ್ತೇದಾರರು, ಮ್ಯುನಿಸಿಪಲ್ ಮೆಂಬರುಗಳು, ಇತರ ದೊಡ್ಡ ಮನುಷ್ಯರು; ಎಲ್ಲಾ ನೌಕರರೂ ಸೇರಿದ್ದರು. ಆಯುಧಪೂಜೆ ನೆರವೇರಿಸಿದ ನಂತರ ಆ ಸ್ಥಳದಲ್ಲಿ ಪುರೋಹಿತ ವೇ॥ ಸುಬ್ಬಾಜೋಯಿಸರು ನಿಂತುಕೊಂಡು ಈಗ ನಡೆಯುತ್ತಿರುವ ಯುದ್ಧದಲ್ಲಿ ಘನವನ್ನು ಹೊಂದಿದ ನಮ್ಮ ಇಂಡಿಯಾ ಚಕ್ರವರ್ತಿಗಳಿಗೆ ಜಯವಾಗಬೇಕೆಂದೆಂದೂ, ಮಿತ್ರರವರ ಕಾರ್ಯಗಳಿಗೆ ಜಯವಾಗಬೇಕೆಂದೆಂದೂ, ಇವರುಗಳನ್ನೂ ಇವರ ಚತುರಂಗಬಲವನ್ನೂ ನಮ್ಮ ಶ್ರೀಮನ್ ಮಹಾರಾಜರವರನ್ನೂ ಕಾಪಾಡಬೇಕೆಂದೆಂದೂ, ಈ ಬಗ್ಗೆ ನವಗ್ರಹ ಚಕ್ರ ಇಟ್ಟು ಹಿಂದೂ ಶಾಸ್ತ್ರರೀತ್ಯಾ ಪೂಜಾವಿಧಾನ ನಡಿಸುವವರಾಗಿಯೂ, ಈ ಬಗ್ಗೆ ದೇವರನ್ನು ಸರ್ವರೂ ಬೇಡಬೇಕೆಂದೂ ಹೇಳಿದರು. ಸರ್ವರೂ ಜಯಧ್ವನಿ ಮಾಡಿದರು. ನಂತರ ಪಾನ್‌ಸುಪಾರಿ ಹಂಚಲ್ಪಟ್ಟು ಸಭೆ ಬರಖಾಸ್ತಾಯಿತು. ಈ ಗ್ರಾಮದಲ್ಲಿ ಸರ್ವರೂ ಸೇರಿ ಈ ರೀತಿ ನಡಿಸಿ ತಮ್ಮ ರಾಜಭಕ್ತಿಯನ್ನು ಪ್ರಕಾಶಪಡಿಸಿರುವದು ತುಂಬ ಸ್ತೋತ್ರಾರ್ಹವಾಗಿರುತ್ತೆ.—ಆಕಾಶದಲ್ಲಿ ನಕ್ಷತ್ರ ಬೀಳಲಿ, ಪ್ರಕಾಶವಾಗಿರಲಿ, ಈ ಊರಿನಲ್ಲಿ ಕೆಲವರು "ವಿಮಾನಬಂತು, ವಿಮಾನಬಂತು" ಎಂದು ಘಾಬರಿಪಡುತ್ತಾರೆ. ಈ ಬಗ್ಗೆ ಪ್ರಜೆಗಳಿಗೆ ವಿವೇಕಹುಟ್ಟುವಂತೆ ಸರ್ಕಾರದವರು ಏರ್ಪಾಡು ಮಾಡಬೇಕು.

ವೃತ್ತಾಂತ ಪತ್ರಿಕೆ.

ಸನ್ ೧೯೧೪ ನೇ ಇಸವಿ ಅಕ್ಟೋಬರ್ ತಾ. ೮ ನೇ ಗುರುವಾರ.

ದಿವಾನರವರ ಅಡ್ರೆಸ್ಸು.

ನಮ್ಮ ಮೈಸೂರು ಗವರ್ನಮೆಂಟಿನವರು ನಾನಾ ವಿಚಾರಗಳಿಗೆ ಗಮನ ಕೊಟ್ಟು ಕಾರ್ಯ ನಡಿಸಬೇಕಾಗಿರೋಣದರಿಂದ ಈ ಸಲ ದಿವಾನರವರು ತಮ್ಮ ಅಡ್ರೆಸ್ಸಿನಲ್ಲಿ ಆ ಪೈಕಿ ಬಹು ಭಾಗವನ್ನು ಸೂಚಿಸಿ ಕೆಲಕೆಲವು ಮಟ್ಟಿಗೆ ಮಾತ್ರವೇ ಪ್ರಸ್ತಾಪ ಮಾಡಬೇಕಾಯಿತು. ಮ|| ವಿಶ್ವೇಶ್ವರಯ್ಯನವರು ತಮ್ಮ ಭಾಷಣದಲ್ಲೂ ನಿರೀಕ್ಷೆಯಲ್ಲೂ ಘನತರವಾದ ಸಾಮರ್ಥ್ಯವನ್ನೂ ಅಪರಿಮಿತವಾದ ಉತ್ಸಾಹವನ್ನೂ ಪಡೆದಿರುವುದನ್ನು ನೋಡಿ ನಾವು ತುಂಬಾ ಆನಂದಪಡುತ್ತೇವೆ. ಆಳ್ವಿಕೆಯ ಭಾರವನ್ನು ಹೊತ್ತಿರುವ ಪುರುಷರಲ್ಲಿ ಅಂಥಾ ಲಕ್ಷಣಗಳು ಇದ್ದೇ ತೀರಬೇಕು. ಅವರು ತಮ್ಮಲ್ಲಿರುವ ಕಾರ್ಯೋತ್ಸಾಹವನ್ನು ತಮ್ಮ ಕೂಡ ಉದ್ಯೋಗ ನಡಿಸುವಂಥಾವರ ಪೈಕಿ ಕೆಲವರಲ್ಲೂ ಹುಟ್ಟುವಂತೆ ಮಾಡಿರುತ್ತಾರೆ; ಇದಲ್ಲದೆ ಈ ಸಂಸ್ಥಾನದ ಪ್ರಜೆಗಳಲ್ಲಿ ಕೆಲಕೆಲವರು ಅವರ ಉದ್ದೇಶಗಳನ್ನೂ ಅವರ ಕಾರ್ಯಕ್ರಮಗಳನ್ನೂ ಅನುಮೋದಿಸಿ ಒಪ್ಪಿಕೊಳ್ಳುತ್ತಿರುವರು. ಆದರೆ ನಮ್ಮ ಸಂಸ್ಥಾನದ ಎಲ್ಲಾ ಭಾಗಗಳನ್ನೂ ಯಥಾರ್ಥವಾಗಿ ತಿಳಿದು ಬಲ್ಲವರಾಗಿಯೂ, ಅದರ ಪುರೋವೃದ್ಧಿಗಾಗಿ ಸಾಹಸ ಪಡಲು ಸಿದ್ಧರಾಗಿಯೂ ಇರತಕ್ಕವರು ಬಹಳ ಕೊಂಚ ಮಂದಿ ಎಂಬುವುದನ್ನು ನಮ್ಮ ದಿವಾನರವರು ಚೆನ್ನಾಗಿ ಬಲ್ಲರು. ವ್ಯವಸಾಯವೇ ನಮ್ಮ ಸೀಮೆಯ ಮುಖ್ಯ ಬೆಂಬಲ; ದಿವಾನರವರು ರೈತರ ಸ್ಥಿತಿಯನ್ನು ನೋಡಿ ಹೇಳುವುದೇನೆಂದರೆ—"ನಮ್ಮ ರೈತಾಪಿ ಜನರಿಗೆ ತಿಳುವಳಿಕೆ ಸಾಲದು. ಉದ್ಯಮಶೀಲರಾದ ಇತರ ದೇಶೀಯರಲ್ಲಿರುವಂತೆ ನಮ್ಮ ದೇಶದವರಲ್ಲಿ ಪ್ರಜಾ ಸಾಮಾನ್ಯವಾದ ಕೆಲಸವನ್ನೇ ಆಗಲಿ, ಸ್ವಕೀಯವಾದ ಕೆಲಸವನ್ನೇ ಆಗಲಿ ಅನ್ಯಪ್ರೇರಣೆಯಿಲ್ಲದೆ ತಾವೇ ಉಪಕ್ರಮಿಸಿ ಪರಸ್ಪರ ಸಹಾಯದಿಂದ ಒಗ್ಗಟ್ಟಾಗಿ ಬಂದು ಕ್ರಮವನ್ನನುಸರಿಸಿ ನಡೆದುಕೊಳ್ಳುವ ಶಕ್ತಿಯು ಸ್ವಲ್ಪವೂ ಇರುವುದಿಲ್ಲ." ಇದು ಸ್ವಲ್ಪ ಕಠಿಣವಾದ ಮಾತು; ಇಂಥಾ ಮಾತು ಸಹಜವಾದದ್ದಲ್ಲವೆಂದು ದೃಷ್ಟಾಂತಪಡಿಸುವ ತನಕ ನಮ್ಮ ದೇಶವು ಅಭಿವೃದ್ಧಿಗೆ ಬಂದೀತೆಂಬ ನಿರೀಕ್ಷೆಯಿಲ್ಲ. ಆದರೆ ನಾವು ಮೊದಲಿನಿಂದಲೂ ಮೈಸೂರು ಸೀಮೆಯಲ್ಲಿ ವಿಶೇಷವಾದ ಬದಲಾವಣೆಯಾಗಬೇಕಾಗಿರುವುದು ಕಾರ್ಯ ಕ್ರಮಗಳ ರೀತಿಯಲ್ಲಿ ಅಲ್ಲವೆಂದೂ, ಪ್ರಜೆಗಳ ನಡೆನುಡಿಗಳ ನೀತಿಯಲ್ಲಿ ಬದಲಾವಣೆಯಾಗಬೇಕಾಗಿದೆಯೆಂದೂ ಹೇಳುತ್ತಾ ಬಂದಿದ್ದೇವೆ. ಮೈಸೂರಿನ ಪ್ರಜೆಯಾದವನು ಸೋಮಾರಿತನವನ್ನು ಬಿಟ್ಟು ಉತ್ಸಾಹವನ್ನೂ ಚಟುವಟಿಕೆಯನ್ನೂ ಪಡೆಯುವ ತನಕಲೂ, ಅವನು ಸ್ವಪ್ರಯೋಜನವನ್ನು ಹುಡುಕುವುದರಲ್ಲೇ ಉದ್ಯುಕ್ತನಾಗಿ ಅದರಲ್ಲೇ ತೃಪ್ತನಾಗುವುದನ್ನು ತ್ಯಜಿಸಿ ಸತ್ಯಸಂಧನೂ ಯಥಾರ್ಥವಾದಿಯೂ ಆಗುವ ತನಕಲೂ, ಮತ್ತು ಅವನು ತನ್ನದೆಂದು ಕಂಡುಬಂದ ಕೂಡಲೇ ಸಿರಾಶೆಯಿಂದ ಸುಮ್ಮನಾಗುವುದಕ್ಕೆ ಪ್ರತಿಯಾಗಿ ಎದುರುಬಿದ್ದು ಕಷ್ಟವನ್ನೆಲ್ಲಾ ಜಯಿಸುತ್ತೇನೆಂದು ನಿಲ್ಲುವ ತನಕಲೂ ಯಾವ ಅಭಿವೃದ್ಧಿಯ ನವೀನ ಏರ್ಪಾಟುಗಳಿಂದಲೂ ಪ್ರಯೋಜನವಾಗಲಾರದೆಂದು ನಂಬಿಕೆಯಿಂದ ಹೇಳುತ್ತೇವೆ.

ಹಾಗಾದರೆ ಈ ವಿಧವಾದ ಕಷ್ಟ ದೆಸೆಯನ್ನು ಪರಿಹಾರ ಮಾಡತಕ್ಕ ಉಪಾಯವೇನು ಎಂದು ನಮ್ಮನ್ನು ಪ್ರಶ್ನೆ ಮಾಡಬಹುದು. ಇದಕ್ಕೆ ನಾವು ಹೇಳುವುದೇನೆಂದರೆ ಮುಂದೆ ಅಭಿವೃದ್ಧಿಗೆ ಬರುವಂಥಾ ಮಕ್ಕಳಿಗೆ ಅವರ ಸಹಜವಾದ ಧರ್ಮಗಳು ಇಂಥಿಂಥವುಗಳೆಂದು ನಡತೆಯಿಂದಲೂ ನುಡಿಗಳಿಂದಲೂ ತೋರಿಸಿ ಕಲಿಸಿಕೊಡತಕ್ಕಂಥಾ ಗಂಡಸರನ್ನೂ ಹೆಂಗಸರನ್ನೂ ಸುಶಿಕ್ಷಣದಿಂದ ತರಪೇತು ಮಾಡಲು ಪ್ರಾರಂಭಿಸಬೇಕು. ಈ ಭಾಗದಲ್ಲಿ ನಮ್ಮ ಸರ್ಕಾರದವರು ಅಲ್ಪಸ್ವಲ್ಪ ಪ್ರಯತ್ನಪಡುತ್ತಿದ್ದಾರೆಂದು ನಾವು ಬಲ್ಲೆವು; ಆದರೆ ಜನರು ಇಂಥಾ ಕೆಲಸಕ್ಕೆ ಸಮ್ಮತಿಪಟ್ಟು ಹೆಚ್ಚು ಹೆಚ್ಚಾಗಿ ಬರಲು ಆಸೆ ಹುಟ್ಟುವಂತೆ ತೃಪ್ತಿಕರವಾದ ಸಂಬಳಗಳನ್ನು ನಿಗದಿ ಮಾಡಿರುವುದಿಲ್ಲ; ಮತ್ತೂ ಅಂಥಾ ಶಿಕ್ಷಣಕ್ಕೆ ಅವಶ್ಯವಾದ ಏರ್ಪಾಡುಗಳನ್ನೂ ಮಾಡಿಲ್ಲ. ಸಂಸ್ಥಾನಾದಿ ಈಗ ಇರುವಂಥಾ ಪಾಠಶಾಲೆಗಳಿಗೆ ಅವಶ್ಯವಾದ ಸಲಕರಣೆಗಳನ್ನೆಲ್ಲಾ ಒದಗಿಸಿ ಕೊಟ್ಟು ಶಿಕ್ಷಣ ಕ್ರಮಗಳು ತೃಪ್ತಿಕರವಾಗಿಯೂ ಕಟ್ಟುನಿಟ್ಟಾಗಿಯೂ ನಡೆಯುವಂತೆ ಮಾಡುವುದಕ್ಕೆ ಗವರ್ನಮೆಂಟಿನವರು ವಿಶೇಷವಾದ ಗಮನವನ್ನು ಕೊಟ್ಟು ಒಂದೆರಡು ಲಕ್ಷ ರೂಪಾಯಿ ಖರ್ಚು ಮಾಡಿದ ಪಕ್ಷದಲ್ಲಿ ಅದರ ಫಲ ಪ್ರಯೋಜನಾದಿಗಳು ಬೇಗನೆ ಕಂಡು ಬರಲು ಅನುಮಾನವಿಲ್ಲ. ಉದ್ದೇಶಪಟ್ಟ ಶಿಕ್ಷಣವೆಲ್ಲಾ ಕ್ರಮವಾಗಿಯೂ ಸಾರ್ಥಕವಾಗಿಯೂ ನಡೆಯುವುದಕ್ಕೆ ಬೇಕಾಗುವ ಸಲಕರಣೆಗಳನ್ನೆಲ್ಲಾ ಪಡೆದಿರುವಂಥಾ ಪಾಠಶಾಲೆಯು ಈಗ ನಮ್ಮ ಸೀಮೆಯಲ್ಲಿ ಒಂದಾದರೂ ಇದೆಯೆಂದು ಹೇಳುವುದು ಕಷ್ಟ. ಇದನ್ನು ಸರಿಪಡಿಸಿದ ಹೊರತು ಅಭಿವೃದ್ಧಿಯು ಸುಲಭಸಾಧ್ಯವಾಗಲಾರದು.

ಪ್ರಜೆಗಳನ್ನು ನೀತಿವಂತರನ್ನಾಗಿ ಮಾಡುವುದು ಗವರ್ನಮೆಂಟಿನವರಿಗೆ ಸಾಧ್ಯವೇ ಎಂದು ಸಂಶಯಪಡಬಹುದು. ಇದು ಅವರಿಂದ ಸಾಧ್ಯವಲ್ಲವೆಂದು ನಾವೂ ಒಪ್ಪಿಕೊಳ್ಳುತ್ತೇವೆ. ಇದು ಜನರಲ್ಲಿರುವ ಮತಭಕ್ತಿಯಿಂದ ಉಂಟಾಗತಕ್ಕ ಫಲವಾಗಿದೆ. ದಿವಾನರವರ ಅಡ್ರೆಸ್ಸಿನಲ್ಲಿ ಪ್ರಜೆಗಳ ಅಭಿವೃದ್ಧಿಗೆ ಕಾರಣಭೂತವಾದ ಈ ಮತ ಭಕ್ತಿಯ ವಿಚಾರವಾದ ಯಾವುದೊಂದು ಪ್ರಸ್ತಾಪವೂ ಕಂಡುಬರುವುದಿಲ್ಲ. ಗ್ರೇಟ್ ಬ್ರಿಟನ್ ಸೀಮೆಯಲ್ಲಿ ಕಸಬುಗಳು ಅಭಿವೃದ್ಧಿಯಾಗುವುದಕ್ಕೆ ಕಾರಣವೇನು? ಪ್ರಖ್ಯಾತರಾದ ವೆಸ್ಲಿ ಮತ್ತು ವೈಟ್‌ಫೀಲ್ಡ್ ಎಂಬ ಮಹಾಪುರುಷರ ಲಕ್ಷಣಗಳನ್ನನುಸರಿಸಿ ಅಲ್ಲಿನ ಪ್ರಜೆಗಳು ಮೊದಲು ನೀತಿವಂತರಾಗಿಯೂ, ಸದ್ಭಕ್ತರಾಗಿಯೂ ಆದರು. ಆ ಬಳಿಕ ಅವರ ನಡೆನುಡಿಗಳಲ್ಲೂ ಶೀಲಸ್ವಭಾವಗಳಲ್ಲೂ ಜೀವನದ ಬಾಳುವೆಯಲ್ಲೂ ಬಹು ಮೇಲಾದ ಬದಲಾವಣೆಯುಂಟಾಯಿತು. ಅಲ್ಲಿನ ಕೂಲಿಕಾರರಲ್ಲೂ ಕಸಬುದಾರರಲ್ಲೂ ಇಂಥಾ ಮಾರ್ಪಾಟು ಆಗದೆ ಹೋಗಿದ್ದರೆ ಕಸಬುಗಳಲ್ಲಿ ಅವರ ಈಗಿನ ಉಚ್ಚ್ರಾಯಸ್ಥಿತಿಯು ಲಭ್ಯವಾಗುತ್ತಿರಲಿಲ್ಲ. ಮೈಸೂರು ಸಂಸ್ಥಾನದಲ್ಲಿಯೂ ಅದೇ ರೀತಿ ಕಸಬುಗಳೂ ವ್ಯವಸಾಯವೂ ಅಭಿವೃದ್ಧಿಗೆ ಬರಬೇಕಾದರೆ ಇಲ್ಲಿನ ಪ್ರಜೆಗಳ ನಡೆನುಡಿ ಆಚಾರ ವ್ಯವಹಾರ ಜೀವನದ ಬಾಳುವೆಗಳಲ್ಲಿ ಅಂಥಾ ಬದಲಾವಣೆಯು ಆಗಲೇ ಬೇಕು. ಇಂಥಾ ಪ್ರಧಾನವೂ ಶ್ರೇಯಸ್ಕರವೂ ಆದ ಕಾರ್ಯವನ್ನು ಇಲ್ಲಿನ ದೇವಸ್ಥಾನಗಳ ಪೂಜಾರಿಗಳೂ, ಪುರೋಹಿತರೂ, ವೈದಿಕರೂ ವಹಿಸಿಕೊಂಡು ನಡಿಸಲು ಸಿದ್ಧರಾಗಿದ್ದಾರೆಯೇ? ಸಂಪದಭಿವೃದ್ಧಿಗೆ ಸಂಬಂಧಪಡುವ ಸಕಲ ಏರ್ಪಾಡುಗಳಲ್ಲೂ ಕಾರುಬಾರುಗಳಲ್ಲೂ ವೈದಿಕರ ಹೆಸರೇ ಕಾಣಲಿಲ್ಲ. ಈಗ ಅವಶ್ಯವಾಗಿರುವ ಸದ್ಗುಣ ಸಾಧನಗಳು ದೇವಸ್ಥಾನಗಳಲ್ಲೂ ಮಠಗಳಲ್ಲೂ ವೈದಿಕ ಮಂಡಲಿಯಲ್ಲೂ ದೊರಕಲಾರದೆ ಇದ್ದ ಪಕ್ಷದಲ್ಲಿ ಅಂಥಾ ಸಾಧನಗಳನ್ನು ಇನ್ನೊಂದು ಕಡೆಯಿಂದಲಾದರೂ ಅರಸಿತಂದು ಒದಗಿಸಿಕೊಳ್ಳಬೇಕಾಗುವುದು. ಯಾಕೆಂದರೆ ಸತ್ಯಸಂಧತೆಗೂ, ನಿಷ್ಪಕ್ಷಪಾತವಾದ ಧರ್ಮಪ್ರಚಾರಕ್ಕೂ, ಸಚ್ಚರಿತ್ರೆಗೂ, ಯಥಾರ್ಥತೆಗೂ ಪ್ರಜೆಗಳಲ್ಲಿ ವಿಶೇಷವಾದ ಗೌರವವು ಉಂಟಾಗದಿದ್ದರೆ ಉಚಿತವಾದ ಯಾವುದೊಂದು ಅಭಿವೃದ್ಧಿಯೂ ಸಾಧ್ಯವಲ್ಲವೆಂದು ನಮಗೆ ತೋರಿ ಇದೆ.

ಈಗ ನಮ್ಮ ಸಂಸ್ಥಾನದಲ್ಲಿ ಅನೇಕ ಸಂತೋಷಪ್ರದವಾದ ಕಾರ್ಯಗಳು ನಡೆದಿರುವುದನ್ನು ನೋಡಿ ಹರ್ಷಪಡುತ್ತೇವೆ. ರೈಲ್ ಮಾರ್ಗಗಳ ಬದಲಾವಣೆಯೂ, ವಿದ್ಯುಚ್ಛಕ್ತಿಯ ಉತ್ಪತ್ತಿಯನ್ನು ಹೆಚ್ಚು ಮಾಡುವುದೂ, ಪ್ರಜೆಗಳಲ್ಲಿ ಆತ್ಮಾವಲಂಬನೆಯಿಂದ ಕಾರ್ಯಗಳನ್ನು ನಡಿಸಿಕೊಳ್ಳುತ್ತಾ ಬರಬೇಕೆಂಬ ಕುತೂಹಲವುಂಟಾಗಿರುವುದೂ ಶ್ರೇಯಸ್ಕರಗಳಾಗಿರುತ್ತವೆ. ಭಾರಿ ಭಾರಿ ಕಾರುಖಾನೆಗಳನ್ನೂ ಅಭಿವೃದ್ಧಿಯ ಏರ್ಪಾಡುಗಳನ್ನೂ ನಡಿಸುವುದಕ್ಕೆ ಅನುಕೂಲವಾಗಿ ಸಂಸ್ಥಾನದ ರಾಜಾದಾಯವು ಬಹುಮಟ್ಟಿಗೆ ಹೆಚ್ಚಿರುವುದನ್ನು ನೋಡಿ ಆನಂದಪಡುತ್ತೇವೆ. ಅಭಿವೃದ್ಧಿ, ಅಭಿವೃದ್ಧಿ ಎಂಬ ಪದವು ಎಲ್ಲಾ ದಿಕ್ಕುಗಳಿಂದಲೂ ಕೇಳಿ ಬರುತ್ತಿದೆ; ಇದು ಅತ್ಯಂತ ಉಲ್ಲಾಸಕರವಾಗಿದೆ. ಈಗ ಈ ಸೀಮೆಯ ಗ್ರಾಮಾಂತರ ಪ್ರಜೆಗಳನ್ನೂ ಅವರ ಸ್ಥಿತಿಗತಿ ಜೀವನಾದಿಗಳನ್ನೂ ಒಳ್ಳೇ ಸ್ಥಿತಿಗೆ ತರಬೇಕೆಂಬ ಕುತೂಹಲವು ಪ್ರಕಾಶವಾಗಿರುವುದನ್ನು ನೋಡಿ ಆನಂದಪಡುತ್ತೇವೆ. ಸರ್ಕಾರದವರು ಅನೇಕ ವಿಚಾರಗಳನ್ನು ಕುರಿತು ಪರ್ಯಾಲೋಚನೆ ಮಾಡುತ್ತಿದ್ದಾರೆ. ಅವುಗಳನ್ನೆಲ್ಲಾ ಏಕಕಾಲದಲ್ಲಿ ರೂಢಿಸಬೇಕೆಂದು ಪ್ರಯತ್ನಪಡುವುದಕ್ಕಿಂತಲೂ ಆ ಪೈಕಿ ಅವಶ್ಯವಾದವುಗಳನ್ನು ಮೊದಲು ಪ್ರಾರಂಭಮಾಡಿ ಸಾರ್ಥಕಪಡಿಸಬೇಕೆಂದೂ, ಉಳಿದವುಗಳನ್ನು ಕಾಲಕ್ರಮದಲ್ಲಿ ನೆರವೇರಿಸಬಹುದೆಂದೂ ನಮಗೆ ತೋರುತ್ತದೆ.

ದೇವರು ನಮ್ಮ ತಂದೆಯಾಗಿದ್ದರೆ ನಮಗೆ ಕಷ್ಟಗಳು ಬರುವದೇತಕ್ಕೆ?

ದೇವರು ಇದ್ದಾನೋ? ಎಂತ ಯಾರನ್ನು ಕೇಳಿದರೂ ಆತನು ಇದ್ದಾನೆಂದು ಸ್ವಾಭಾವಿಕ ಎಲ್ಲರೂ ಒಪ್ಪುವರು. ಆದರೆ ಆತನು ನಮ್ಮನ್ನು ಪ್ರೀತಿ ಮಾಡಿ ಕಾಪಾಡುತ್ತಾ ಬರುವ ತಂದೆಯಾಗಿದ್ದಾನೆಂದು ನಂಬುವದಿಲ್ಲವೇ? ಎಂದು ಕೇಳಿದರೆ ಅದನ್ನು ಒಪ್ಪುವದಕ್ಕೆ ಅನುಮಾನಸ್ಪದವಾಗಿದೆ ಎಂದು ಹೇಳುವರು. ಯಾಕೆಂದರೆ ದೇವರು ನಮ್ಮ ತಂದೆಯಾಗಿದ್ದರೆ ಈ ಲೋಕದಲ್ಲಿರುವ ನಾವು ಆತನ ಮಕ್ಕಳಾಗಿದ್ದೇವಷ್ಟೆ. ಮಕ್ಕಳಿಗೆ ರೋಗ ಕಷ್ಟ ನೋವು ವಿಪತ್ತು ವ್ಯಾಧಿಗಳು ಯುದ್ಧಗಳು ಪ್ರಾಪ್ತಿಸಿದರೆ ತಂದೆಯು ದೂರದಲ್ಲಿ ನಿಂತುಕೊಂಡು ಮಕ್ಕಳು ನರಳುತ್ತಿರುವದನ್ನು ನೋಡುತ್ತಾ ಸುಮ್ಮನಿರುವನೇ? ಮನುಷ್ಯಮಾತ್ರದವರಾದ ನಾವು ನಮ್ಮ ಮಕ್ಕಳಿಗೆ ವ್ಯಾಧಿವಿಪತ್ತು ಬಂದುದನ್ನು ನೋಡಿ ಕೂಡಲೆ ಅದಕ್ಕೆ ತಕ್ಕ ಪರಿಹಾರವನ್ನು ಹುಡುಕುತ್ತೇವೆ. ದೇವರು ನಮ್ಮ ತಂದೆಯಾಗಿದ್ದರೆ ಆತನು ನಮ್ಮ ಕಷ್ಟದುಃಖಗಳಲ್ಲಿ ಭಾಗಿಯಾಗಿ ತಕ್ಕ ನಿವಾರಣೆ ಒದಗಿಸದೇ ಇರುವದೇತಕ್ಕೆ? ಎಂದು ಕೇಳುವರು. ಅಥವಾ ನಾವು ನಮ್ಮ ಮಕ್ಕಳಿಗೆ ಬೇಕಾದ ಸಹಾಯ ಸಾಹಿತ್ಯಗಳನ್ನು ಒದಗಿಸುವದಕ್ಕೆ ಮನಸ್ಸಾಗಿದ್ದರೂ ಬೇಕಾದ ಜ್ಞಾನವಿಲ್ಲದಿರುವದರಿಂದ ಮಕ್ಕಳಿಗೆ ಯಾವ ವಿಧವಾದ ಸಹಾಯವು ಬೇಕೋ? ಅಂಥಾ ಸಹಾಯವು ಎಲ್ಲಿ ದೊರೆಯುವದೋ ತಿಳಿಯಲಾರದವರಾಗಿದ್ದೇವೆ. ದೇವರು ಸರ್ವಜ್ಞನು. ಆತನಿಗೆ ತಿಳಿಯದೆ ಇರುವದು ಯಾವದೂ ಇಲ್ಲ. ಮತ್ತು ತಕ್ಕ ಪರಿಹಾರವು ಇಂಥಾದ್ದು; ಅದು ದೊರಕುವುದು ಹೀಗೆ ಹೀಗೆ ಎಂದು ನಮಗೆ ತಿಳಿದರೂ ಅಶಕ್ತಿಯು ದೆಸೆಯಿಂದ ನಾವು ನಮ್ಮ ಪ್ರಿಯ ಮಕ್ಕಳಿಗೆ ಒಂದೊಂದು ವೇಳೆ ಸಹಾಯಮಾಡಲಾರದವರಾಗಿರುತ್ತೇವೆ. ದೇವರಾದರೋ ಆತನು ಸರ್ವಶಕ್ತನಲ್ಲವೇ? ಆತನು ನಮ್ಮನ್ನು ಮಕ್ಕಳೆಂದು ಭಾವಿಸುವ ತಂದೆಯಾಗಿಯೂ ಸಕಲವನ್ನು ತಿಳಿದು ತನಗೆ ಇಷ್ಟಬಂದುದನ್ನೆಲ್ಲಾ ಮಾಡುವದಕ್ಕೆ ಶಕ್ತನಾಗಿದ್ದರೂ ನಮ್ಮ ಕಷ್ಟಗಳಲ್ಲಿ ಸಹಾಯ ಮಾಡದೆ ಇರುವದನ್ನು ನೋಡಿದರೆ ಆತನು ತಂದೆಯಾಗಿದ್ದಾನೋ? ಇಲ್ಲವೋ? ಸಂದೇಹಪಡಬೇಕಾಗಿದೆ ಎಂದು ಹೇಳುವರು. ಈ ಆಕ್ಷೇಪಣೆಯನ್ನು ಸ್ವಲ್ಪ ದೂರ ವಿಚಾರಿಸಿ ನೋಡೋಣ.

ಒಂದು ಕುಟುಂಬದಲ್ಲಿ ತಂದೆಯು ಮಕ್ಕಳನ್ನು ಪ್ರೀತಿಸಿ ಕಾಪಾಡುತ್ತಾ ಇದ್ದಾನೆಂದು ಊಹಿಸೋಣ. ಅವರ ಪರಾಮರಿಕೆಗೋಸ್ಕರವೇ ಅವನು ಚಿಂತಿಸಿ ಕೆಲವು ಕ್ರಮಗಳನ್ನು ಏರ್ಪಡಿಸುತ್ತಾನೆ. ಎನಂದರೆ ಮನೆಯಲ್ಲಿ ಅಡಿಗೆಮಾಡುವದಕ್ಕೂ ಸ್ನಾನಕ್ಕೂ ಕುಡಿಯುವದಕ್ಕೂ ನೀರು ಬೇಕಾಗಿದೆ. ಅದ್ದರಿಂದ ಅವನು ಒಂದು ಸ್ಥಳವನ್ನು ಏರ್ಪಡಿಸಿ ಅಲ್ಲಿ ಕೆಲವು ಪಾತ್ರೆಗಳನ್ನಿಟ್ಟು ಅವುಗಳಲ್ಲಿ ನೀರು ಹಾಕಿ ಬೇಕಾದ ಹಾಗೆ ಪ್ರಯೋಗಿಸಿರಿ. ಆದರೆ ಅಡಿಗೆ, ಸ್ನಾನ, ಪಾನಗಳಿಗೆ ನೀರನ್ನು ಪ್ರಯೋಗಿಸಬೇಕೇ ಹೊರತು ಮನೆಯಲ್ಲಿಯೂ ಅಂಗಳ ಹಿತ್ತಲಿನಲ್ಲಿಯೂ ಚೆಲ್ಲಕೂಡದು. ಶ್ಯಾವದಿಂದ ನೆಗಡಿ, ಜ್ವರ ಮುಂತಾದ ಉಪದ್ರಗಳು ಬರುವವು ಎಂದು ಕಟ್ಟುಮಾಡುತ್ತಾನೆ. ಆದರೆ ಮಕ್ಕಳು ತಂದೆಯು ಮಾತನ್ನು ಲಕ್ಷ್ಯಮಾಡದೆ ಚಿಕ್ಕ ಚಿಕ್ಕ ಚಂಬುಗಳನ್ನು ಪಾತ್ರೆಗಳನ್ನೂ ತೆಗೆದುಕೊಂಡು ಆಟವಾಡಿ ನೀರನ್ನು ಮನೆ ಹಿತ್ತಲು ಅಂಗಳದಲ್ಲಿ ಚೆಲ್ಲುತ್ತಾರೆ. ಹೀಗೆ ಅನೇಕ ದಿನಗಳು ಮಾಡುವದರಿಂದ ಶೈತ್ಯಹುಟ್ಟಿ ಮಕ್ಕಳಿಗೆ ನೆಗಡಿ, ಕೆಮ್ಮು ಜ್ವರೋಪದ್ರಗಳು ಪ್ರಾಪ್ತಿಸುತ್ತವೆ. ಒಂದು ವೇಳೆ ತಂದೆಯು ಕುಟುಂಬದ ರಕ್ಷಣೆಗೆ ಔಷಧೋಪಾಯಕ್ಕಾಗಿ ಪ್ರಯೋಗವಾಗುವ ಧೃತಿಗಳನ್ನು ತಂದಿದ್ದಾನೆ. ಮತ್ತು ಮನೆಯಲ್ಲಿ ಕೆಲವು ಆಯುಧಗಳು ಇರಬೇಕು. ತಂದೆಯು ಕೆಲವು ಆಯುಧಗಳನ್ನು ಮನೆಯಲ್ಲಿಟ್ಟು ನನ್ನ ಅಪ್ಪಣೆಯಿಲ್ಲದೆ ಈ ಔಷಧಿಗಳನ್ನೂ ಆಯುಧಗಳನ್ನೂ ಯಾರೂ ಮುಟ್ಟಬೇಡಿರಿ ಎಂದು ಆಜ್ಞಾಪಿಸಿದ್ದಾನೆ. ಆದರೆ ಹುಡುಗರು ತಂದೆಯ ಆಜ್ಞೆಯನ್ನು ಉಲ್ಲಂಘನೆಮಾಡಿ ಆ ಆಯುಧಗಳನ್ನು ಬಳಸಿ ಕೈಕಾಲುಗಳನ್ನು ಕಡುಕೊಂಡು ಗಾಯಮಾಡಿಕೊಳ್ಳುತ್ತಾರೆ. ಹೀಗೆ ಮಾಡುವದನ್ನು ನೋಡಿದರೆ ತಂದೆಗೆ ಎಷ್ಟೋ ದುಃಖವಾಗುತ್ತದೆ. ಆದರೆ ಆತನು ಏನು ಮಾಡ್ಯಾನು? ಮನೆಗೆ ಬೇಕಾದ ನೀರು, ಬೆಂಕಿ, ಔಷಧಿ ಆಯುಧಗಳನ್ನು ಮನೆಯಲ್ಲಿಡದ ಬಿಸಾಡುವದಕ್ಕಾಗುವದಿಲ್ಲ. ಮಕ್ಕಳು ಅವುಗಳನ್ನು ಮುಟ್ಟಬೇಡಿರಿ ಎಂದು ಹೇಳಿದರೆ ಕೇಳದೆ ಅನಾವಶ್ಯಕವಾಗಿ ಕಷ್ಟನಷ್ಟ ನೋವುಗಳಿಗೆ ಗುರಿಯಾಗುತ್ತಾರೆ. ಕುಟುಂಬರಕ್ಷಣೆಗೆ ಅತ್ಯಾವಶ್ಯಕಗಳೆಂದು ಮನೆಗೆ ತಂದ ಒಳ್ಳೇ ಪದಾರ್ಥಗಳೇ ದುರುಪಯೋಗದಿಂದ ಕುಟುಂಬದ ಕಷ್ಟನಷ್ಟ ಬಾಧೆಗಳಿಗೆ ಕಾರಣವಾದವಷ್ಟೆ. ಕುಟುಂಬದ ಯಜಮಾನನಾದ ತಂದೆಗೆ ಇದರಿಂದ ಬಹಳ ದುಃಖವಾದರೂ ಉಪಾಯವಿಲ್ಲದವನಾಗಿದ್ದಾನೆ. ಇತ್ತಕಡೆ ಕುಟುಂಬಕ್ಕೆ ಆಗತ್ಯವಾದ ನೀರು, ಬೆಂಕಿ, ಔಷಧ ಆಯುಧಗಳನ್ನು ಬಿಟ್ಟರೂ ಕುಟುಂಬಕ್ಕೆ ಕಷ್ಟ ಬರುತ್ತದೆ; ಇಟ್ಟರೂ ದುಃಖಪ್ರಾಪ್ತಿಸುತ್ತದಲ್ಲಾ?

ದೇವರು ಈ ಪ್ರಪಂಚವನ್ನು ಮಾತ್ರವಲ್ಲ, ಈ ವಿಶ್ವವನ್ನೆಲ್ಲಾ ಸರಾಮರಿಸುವದಕ್ಕೆ ಸಾಕಾಗುವಷ್ಟು ವರಗಳನ್ನು ಕೊಟ್ಟು ನಮ್ಮನ್ನು ಕಾಪಾಡುತ್ತಾನೆ. ಆದರೆ ಆತನ ವರಗಳೆಲ್ಲಾ ಕ್ರಮಕ್ಕೆ ಒಳಪಟ್ಟು ನಮಗೆ ಲಭ್ಯವಾಗುತ್ತವೆ. ನಾವು ಆ ಕ್ರಮಗಳಿಗೆ ಒಳಪಟ್ಟು ವಿಧೇಯರಾಗಿ ನಡೆಯುವದರಿಂದ ನಮಗೆ ಅನಂತವಾದ ಮೇಲುಗಳು ಲಭ್ಯವಾಗಬೇಕೆಂದೇ ಆ ಕ್ರಮಗಳನ್ನು ದೇವರು ಸ್ಥಾಪಿಸಿದ್ದಾನೇ ಹೊರತು ನಮ್ಮನ್ನು ಬಂಧಿಸುವದಕ್ಕಲ್ಲ. ಆದರೆ ನಾವು ಅವುಗಳನ್ನು ವಿಚಾರಿಸಿದರೆ ಯಾವ ಕ್ರಮಗಳು ನಮ್ಮ ಸುಖಕ್ಕೆ ಕಾರಣವಾಗಿದ್ದವೋ ಅವೇ ನಮ್ಮ ಕಷ್ಟನಷ್ಟಗಳಿಗೆ ಹೇತುವಾಗುವವು. ಮನುಷ್ಯನು ಒಬ್ಬನು ಮನಶ್ಶುದ್ಧಿ ಕ್ರಿಯಾಶುದ್ಧಿಯುಳ್ಳವನಾಗಿದ್ದರೆ ಅವನ ಮನಸ್ಸಿಗೆ ಲಘುವೂ ಆರೋಗ್ಯವೂ ಸಂತೋಷಾಧಿಕ್ಯವೂ ನೆಲೆಗೊಂಡಿರುತ್ತವೆ. ಅವನು ಮನಸ್ಸನ್ನು ಕಳಂಕವಾಡಿಕೊಂಡು ವಿಷಯಲಂಪಟನಾಗಿದ್ದರೆ ಅವನನ್ನು ಮನೋಭೀತಿಯೂ ಮನೋವ್ಯಥೆಯೂ ದೇಹದ ರೋಗಗಳೂ ಕಾಡುತ್ತವೆ. ಪ್ರಜೆಗಳು ಸೋದರ ಭಾವವನ್ನು ಮರೆತು ಭೇದ ಬುದ್ಧಿಯಿಂದ ಮದೋನ್ಮತ್ತರಾಗಿ ಗರ್ವಗೊಂಡು ನೀತಿ, ಪ್ರೀತಿ, ದಯೆ ಕ್ಷಮೆಗಳನ್ನು ತಿರಸ್ಕರಿಸಿದರೆ ಲೋಕವು ಯುದ್ಧದಿಂದ ಅಲ್ಲೋಲಕಲ್ಲೋಲವಾಗಿ ರಕ್ತಪ್ರವಾಹಗಳು ಹರಿದು ಪ್ರಿಯರನ್ನು ಕಳಕೊಂಡು, ದೇಶಭ್ರಷ್ಟರಾಗಿ ದಾರಿದ್ರ್ಯವಸ್ಥೆಗೆ ಹತ್ತಿರವಾಗುತ್ತಾರೆ.

ಯುದ್ಧದ ಸಮಾಚಾರಗಳು.

ಹಿಂದುಸ್ಥಾನದ ಸೈನ್ಯಗಳು ಫ್ರಾನ್ಸಿನಲ್ಲಿ ಜಹಜು ಇಳಿದವು.

ಘೋರವಾದ ಕದನಗಳು.

ಇನ್ನೊಂದು ವಾರ ಕಳೆಯಿತು; ಆದರೂ ಪ್ರಕಟಿಸುವದಕ್ಕೆ ಖಚಿತವಾದ ಸುದ್ದಿಗಳೇನೂ ತಿಳಿದು ಬರಲಿಲ್ಲ. ಎಲ್ಲಾ ಭಾಗಗಳಲ್ಲೂ ಕದನಗಳು ನಡೆದಿರುತ್ತವೆ ಸಾವಿರಾರು ಸಿಪಾಯಿಗಳು ಕೊಲ್ಲಲ್ಪಟ್ಟರು. ಮತ್ತು ಗಾಯಪಟ್ಟರು ಇದುವರೆಗೆ ನಡೆದಿರುವ ಯುದ್ಧಗಳಲ್ಲಿ ಬ್ರಿಟಿಷರಿಗೂ ಫ್ರೆಂಚರಿಗೂ ಅನುಕೂಲವಾಗಿದೆ ಎಂದು ಮಾತ್ರ ಹೇಳಬಹುದಲ್ಲದೆ ಕದನಗಳ ಫಲಿತಾಂಶಗಳು ಇನ್ನೂ ಕೊನೆಗಾಣಲಿಲ್ಲ. ವಾಚಕರು ನಮ್ಮಲ್ಲಿ ಇನ್ನೂ ದೊರೆಯುವ ಯುದ್ಧಭೂಮಿಯ ನಕ್ಷೆಯನ್ನು ತಮ್ಮ ಎದುರಿಗೆ ಇಟ್ಟುಕೊಂಡು ಈ ಯುದ್ಧದ ಸುದ್ದಿಯನ್ನು ಓದಿದರೆ ಚೆನ್ನಾಗಿ ಅರ್ಥವಾಗುವುದು.

ಫ್ರಾನ್ಸಿನಲ್ಲಿ.

ಹಿಂದುಸ್ಥಾನದ ಸೈನ್ಯಗಳು ಹೋಗಿ ಫ್ರಾನ್ಸಿನಲ್ಲಿ ಇಳಿದದ್ದೇ ಈ ವಾರದ ದೊಡ್ಡ ಸಮಾಚಾರ. ಅವು ಯಾವ ಸ್ಥಳದಲ್ಲಿ ಜಹಜಿನಿಂದ ಇಳಿದವೋ ಆ ತಿಳಿ ವರ್ತಮಾನಗಳು ಹೇಳುವುದಿಲ್ಲ; ಆದರೆ ಆ ಸೈನಿಕರು ಫ್ರಾನ್ಸಿನ ದಕ್ಷಿಣ ಸಮುದ್ರ ತೀರದಲ್ಲಿರುವ ಮಾರ್ಸೇಲ್ಸ್ ಪಟ್ಟಣದಲ್ಲಿ ಇಳಿದಿರಬೇಕು. ಇವರೆಲ್ಲಾ ಇಳಿದು ಸಾಲುಕಟ್ಟಿ ಪಟ್ಟಣದ ರಾಜಬೀದಿಗಳನ್ನು ಹಾಯ್ದು ಹೋಗುತ್ತಿದ್ದಾಗ ಅಲ್ಲಿನ ಪ್ರಜೆಗಳು ನೋಡಿ ಆನಂದಪಟ್ಟು ನಾನಾಪ್ರಕಾರವಾದ ಜಯಧ್ವನಿಗಳನ್ನು ಮಾಡಿದರು. ಸಿಖ್ಖರು, ಗೂರ್ಖರು, ಪಂಜಾಬಿಗಳು, ಬೆಲೂಚಿಗಳು, ಇವರ ಮಧ್ಯೆ ಮಧ್ಯೆ ಅವರ ಹುದ್ದೇದಾರರಾಗಿರುವ ದೇಶೀಯ ರಾಜರುಗಳೂ ಆ ಸೈನ್ಯದಲ್ಲಿದ್ದರು. ಪ್ರಜೆಗಳು ಇವರ ಮೇಲೆ ಹೂವನ್ನು ಹಾಕಿ, ಸಣ್ಣ ಸಣ್ಣ ಫ್ರೆಂಚ್ ಬಾವುಟಗಳನ್ನು ಕೋವಿಗಳಿಗೆ ಸಿಕ್ಕಿಸಿಕೊಳ್ಳುವುದಕ್ಕೋಸ್ಕರ ಕೊಟ್ಟರು. ಇಷ್ಟು ಆನಂದದಿಂದ ಎದುರುಗೊಂಡದ್ದನ್ನು ನೋಡಿ ಹಿಂದುಸ್ಥಾನದ ಸೈನಿಕರು ಪರಮ ಸಂತೋಷಭರಿತರಾದರು. ಈಗಲಾದರೋ ಅವರು ಶತ್ರುವಿನ ಫಿರಂಗಿ ಮತ್ತು ಗೋಲಿಗಳಿಗೆ ಎದುರುಬಿದ್ದು ಹೋರಾಡಬೇಕಾಗಿದೆ. ಇವರನ್ನು ಯುದ್ಧಭೂಮಿಯಲ್ಲಿ ಯಾವ ಕಡೆಗೆ ಕಳುಹಿಸಿದ್ದಾರೆಯೋ ತಿಳಿಯಲಿಲ್ಲ.

ವಿಸ್ತಾರವಾದ ಪ್ರದೇಶದಲ್ಲಿ ನಡೆಯುತ್ತಾ ಬಂದಿರುವ ಘೋರವಾದ ಕದನವು ಇನ್ನೂ ಮುಕ್ತಾಯವಾಗದೆ ನಡೆಯುತ್ತಲೇ ಇದೇ. ಈ ಯುದ್ಧಭೂಮಿಯು ಕಂಪ್ರೆ ಮತ್ತು ಲಾಯಿಜ್ ಪಶ್ಚಿಮಕ್ಕೆ ದಕ್ಷಿಣದಿಂದ ನ್ಯಾನೋಜ್ ಪಶ್ಚಿಮದ ತನಕ ಹರಡಿಕೊಂಡಿದೆ; ಅಲ್ಲಿಂದ ಪೂರ್ವಕ್ಕೂ ರೀಂ ಮತ್ತು ವೇರ್ಡನ್ ಉತ್ತರಕ್ಕೂ ಹಾದಿ ನಾನ್ಸಿಗೆ ಪೂರ್ವಕ್ಕೆ ದಕ್ಷಿಣದವರೆಗೂ ವ್ಯಾಪಿಸಿಕೊಂಡಿದೆ. ನೂರಾರು ಮೈಲು ವಿಸ್ತಾರದಲ್ಲಿ ಕದನಗಳು ನಡೆಯುತ್ತಲೇ ಬಂದಿವೆ. ಜರ್ಮನಿಯವರು ಪದೇ ಪದೇ ಬ್ರಿಟಿಷ್ ಮತ್ತು ಫ್ರೆಂಚ್ ಸೈನ್ಯಗಳ ಮೇಲೆ ನುಗ್ಗಿಬಂದು ಅವರನ್ನು ಹಿಂದಕ್ಕೆ ಓಡಿಸಬೇಕೆಂದು ಸಾಹಸಪಟ್ಟಾಗ್ಯೂ ಸಾಧ್ಯವಾಗದೆ ಹಿಮ್ಮೆಟ್ಟಿ ಹೋಗಬೇಕಾಯಿತು. ಎರಡು ಕಡೆಗಳಲ್ಲೂ ಬಹಳ ನಷ್ಟ ಸಂಭವಿಸಿರುತ್ತದೆ. ಅನೇಕ ಜರ್ಮನಿಯವರು ಕೈಸೆರೆಯಾದರು.

ಜರ್ಮನಿಯವರು ತಮ್ಮ ಸೈನಿಕರಲ್ಲಿ ಕೊಲೆಯಾದವರ, ಗಾಯಪಟ್ಟವರ ಮತ್ತು ಕೈಸೆರೆಯಾದವರ ಹೆಸರುಗಳ ಪಟ್ಟಿಗಳನ್ನು ಪ್ರಕಟಿಸಿದ್ದಾರೆ. ಇದೆಲ್ಲಾ ಒಟ್ಟು 65,000 ವೆಂದು ತಿಳಿಯುತ್ತದೆ. ಜರ್ಮನಿಯವರ ಕಡೆ ಬೆಲ್ಜಿಯಮ್ ನಲ್ಲಿ ಫ್ರಾನ್ಸಿನಲ್ಲೂ 4,00,000 ಸೈನ್ಯ ನಷ್ಟವಾಗಿದೆ ಎಂದು ಅನೇಕರು ಊಹಿಸುತ್ತಾರೆ. ಒಬ್ಬಾನೊಬ್ಬ ಬರವಣಿಗೆಗಾರನು ಅವರ ಕಡೆಯಲ್ಲಿ ದಿನ ಒಂದಕ್ಕೆ 8,000 ಜನದಂತೆ ನಷ್ಟವಾಗುತ್ತಿದೆ ಎಂದೂ, ಹೊಸ ಸೈನ್ಯ ಕಟ್ಟಿಕೊಳ್ಳುವುದಕ್ಕೆ ಜರ್ಮನಿಯವರಲ್ಲಿ ಜನಗಳು ಇಲ್ಲವೆಂದೂ, ಇತ್ತಲಾಗಿ ಬ್ರಿಟಿಷರೂ ಫ್ರೆಂಚರೂ ಸರ್ವದಾ ಹೊಸ ಸೈನ್ಯಗಳನ್ನು ಯುದ್ಧಭೂಮಿಗೆ ತಂದು ನಿಲ್ಲಿಸುತ್ತಿದ್ದಾರೆಂದೂ ಹೇಳುತ್ತಾನೆ.

ಫ್ರಾನ್ಸಿನ ಉತ್ತರ ಭಾಗದಲ್ಲಿ ಯುದ್ಧವು ಮುಂದು ವರಿಯುತ್ತಿದೆ. ಬ್ರಿಟಿಷರು ತಮ್ಮ ಯುದ್ಧದ ಜಹಜುಗಳಿಂದ ಭಾರಿಭಾರಿಯಾದ ಫಿರಂಗಿಗಳನ್ನು

... ಸಮುದ್ರತೀರಕ್ಕೆ ಇಳಿಸಿ ತಂದಿದಾರೆ. ಇವುಗಳಲ್ಲಿ ಹಾಕಿ ಹೊಡೆಯುವ ಗುಂಡುಗಳು ಒಂದು ಟನ್ ನಷ್ಟು ಭಾರವಾಗಿಯೂ, ಸುಮಾರು ಹತ್ತು ಮೈಲಿ ದೂರಕ್ಕೆ ಹೋಗಿ ಬೀಳುವಷ್ಟು ರಭಸವುಳ್ಳದ್ದಾಗಿಯೂ ಇವೆ. ಈ ಫಿರಂಗಿಗಳು ಆಗಲೇ ವಿಶೇಷ ನಷ್ಟವನ್ನು ಉಂಟು ಮಾಡಿರುತ್ತವೆ.

ಜರ್ಮನಿ ಚಕ್ರವರ್ತಿ ವಿಲ್ಲಿಯಂ ಯವರು ಕೊಟ್ಟ ಹುಕುಮಿನ ಒಂದು ನಕಲು ಸಿಕ್ಕಿದೆಯಂತೆ. ಮಹಾ ಕುಹಕಿಗಳಾದ ಇಂಗ್ಲಿಷ್‌ರನ್ನು ಕೊಡೆದುಬಿಡ ಬೇಕೆಂತಲೂ, ಜನರಲ್ ಫ್ರೆಂಚ್ ಯವರ ಕೈಕೆಳಗಿರುವ ತುಚ್ಛವಾದ ಸಣ್ಣ ಸೈನ್ಯವನ್ನು ಹತಮಾಡಿಬಿಡಬೇಕೆಂತಲೂ ಜರ್ಮನಿ ಚಕ್ರವರ್ತಿಯವರು ತಮ್ಮ ಸೈನಿಕರಿಗೆ ಆಜ್ಞೆ ಮಾಡಿದರೆಂದು ಆ ನಕಲಿನಿಂದ ತಿಳಿಯುತ್ತದೆ. ಈ ಹುಕುಮಿನಂತೆ ಕಾರ್ಯವನ್ನು ನೆರವೇರಿಸಬೇಕೆಂದು ಜರ್ಮನಿ ಸೈನಿಕರು ತುಂಬಾ ಸಾಹಸ ಪರಾಕ್ರಮಗಳನ್ನು ಪ್ರಯೋಗಮಾಡಿದರು. ಆದರೆ ಅವರ ಇಷ್ಟಾರ್ಥವು ಕೈಗೂಡದೆ ಹೋಯಿತು. ಇಂಥಾ ಅಸಾಧ್ಯವಾದ ಪ್ರಯತ್ನಮಾಡಿ ಅವರಲ್ಲಿ ಅನೇಕಾನೇಕರು ಲಯವಾಗಿಹೋದರು.

ಪ್ರಪಂಚದ ಇತರ ದಿಗ್ದೇಶಗಳಲ್ಲಿ ಇನ್ನೂ ೩,೦೦,೦೦೦ ಜರ್ಮನಿ ಪ್ರಜೆಗಳು ಚದುರಿ ಇರುತ್ತಾರೆ. ಇವರೆಲ್ಲಾ ಯುದ್ಧ ಭೂಮಿಗೆ ಹೋಗಿ ಕಾದಾಡುವುದಕ್ಕೆ ಸಿದ್ಧರಾಗಿದೆ.

ಬೆಲ್ಜಿಯಂನಲ್ಲಿ.

ಜರ್ಮನಿಯವರು ಆಂಟ್ವರ್ಪ್ ನಗರದ ಮುತ್ತಿಗೆಯನ್ನು ಪ್ರಾರಂಭಿಸಿ, ಆ ಪಟ್ಟಣದ ಸುತ್ತಲೂ ಇರುವ ಕೆಲವು ಕೋಟೆಗಳನ್ನು ಕೆಡುವ ಬೇಕೆಂದು ಸಾಹಸ ಪಡುತ್ತಿದಾರೆ. ಅವರು ಅನೇಕ ಫಿರಂಗಿಗಳನ್ನು ಎತ್ತಿಕಟ್ಟಿ ಹೊಡೆದಿದ್ದಾಗ್ಯೂ ಅದರಿಂದ ವಿಶೇಷ ನಷ್ಟವೇನೂ ಸಂಭವಿಸಲಿಲ್ಲ. ಬೆಲ್ಜಿಯನ್ನರು ಹಲವು ವೇಳೆ ಕೋಟೆಯೊಳಗಿಂದ ಹೊರಕ್ಕೆ ಬಂದು ಜರ್ಮನಿ ಸೈನ್ಯಗಳ ಮೇಲೆ ನುಗ್ಗಿ ಅನೇಕರನ್ನು ಕೊಂದೂ ಗಾಯಪಡಿಸಿಯೂ ಇರುತ್ತಾರೆ.

ಬೆಲ್ಜಿಯಮ್ ನೊಳಗಿರುವ ಜರ್ಮನಿ ಸೈನಿಕರಲ್ಲಿ ವಿಷಮಜ್ವರ ಕಾಣಿಸಿಕೊಂಡಿರುವುದಾಗಿ ವರ್ತಮಾನ ಬಂದಿದೆ.

ಜರ್ಮನಿ ಮತ್ತು ರಷ್ಯಾ.

ಪೂರ್ವ ಪ್ರಷ್ಯಾ ಮತ್ತು ರಷ್ಯಾ ಎಲ್ಲೆಕಟ್ಟಿನ ಪ್ರದೇಶದಲ್ಲಿ ಬಹು ಕಠಿಣವಾದ ಯುದ್ಧಗಳು ನಡೆಯುತ್ತವೆ. ರಷ್ಯಾದವರು ಪೂರ್ವ ಪ್ರಷ್ಯಾದೊಳಕ್ಕೆ ನುಗ್ಗಿ ಸ್ವಲ್ಪದೂರ ಹೋಗಿದ್ದರು. ಆಗಸ್ಟ್ ನಲ್ಲಿ ಹೊಸದಾಗಿ ಹೆಚ್ಚಾದ ಜರ್ಮನ್ ಸೈನ್ಯಗಳು ಅಲ್ಲಿಗೆ ಹೋಗಿ ರಷ್ಯಾದವರನ್ನು ಅಲ್ಲಿಂದ ಹಿಂದಕ್ಕೆ ಓಡಿಸಿಬಿಟ್ಟವು. ರಷ್ಯಾದವರು ಗ್ರಾಡ್ನೊ [ನಮ್ಮ ನಕ್ಷೆ ನೋಡಿ] ಪಟ್ಟಣದಲ್ಲಿ ಸೈನ್ಯಗಳನ್ನು ನಿಲ್ಲಿಸಿಕೊಂಡು ಜರ್ಮನಿಯವರ ಮೇಲೆ ಅನೇಕ ದಿನಗಳ ತನಕ ಬಹು ಭಯಂಕರವಾಗಿ ಯುದ್ಧಮಾಡಿ ಕಡೆಗೆ ಜರ್ಮನಿಯವರನ್ನು ಹಿಂದಕ್ಕೆ ಓಡಿಸಿದರು. ಅಲ್ಲಿ ಸುಮಾರು ೧೦೦ ಮೈಲಿಗಳ ಉದ್ದಕ್ಕೂ ಈ ಘೋರ ಯುದ್ಧವು ನಡೆಯಿತೆಂದು ತಿಳಿಯುತ್ತದೆ. ಈ ಯುದ್ಧದಲ್ಲಿ ಜರ್ಮನಿಯವರಲ್ಲಿ ೭೦,೦೦೦ ಸಿಪಾಯಿಗಳು ನಷ್ಟಪಟ್ಟರುತ್ತಾರೆಂದು ವರ್ತಮಾನ ಬಂದಿದೆ. ಈಗ ರಷ್ಯಾದವರು ಮತ್ತೆ ಪೂರ್ವ ಪ್ರಷ್ಯಾದೊಳಕ್ಕೆ ನುಗ್ಗಿಬಂದು ಜರ್ಮನಿಯವರನ್ನು ಹಿಂದಕ್ಕೆ ಓಡಿಸುತ್ತಿದಾರೆ.

ರಷ್ಯಾ ಮತ್ತು ಆಸ್ಟ್ರಿಯಾ.

ರಷ್ಯಾದವರು ಇನ್ನೂ ಕ್ರಾಕೋವಿನ ಕಡೆಗೆ ನುಗ್ಗಿ ಹೋಗುತ್ತಿದಾರೆ. ದಾರಿಯಲ್ಲಿ ಸಿಕ್ಕಿದ ಎರಡು ಕೋಟೆಗಳನ್ನು ಸ್ವಾಧೀನಪಡಿಸಿಕೊಂಡದ್ದಲ್ಲದೆ ಇನ್ನೊಂದು ಬಲವಾದ ಕೋಟೆಗೆ ಈಗ ಮುತ್ತಿಗೆ ಹಾಕಿದಾರೆ. ಆಸ್ಟ್ರಿಯಾದವರು ಓಡಿಹೋಗುತ್ತಲೇ ಇರುವರು. ರಷ್ಯಾದವರು ಅವರ ಕೆಲವು ಫಿರಂಗಿಗಳನ್ನೂ ೧೦೦ ವಾಗನ್ ಧಾನ್ಯಗಳನ್ನೂ ಕಿತ್ತು ಸ್ವಾಧೀನ ಪಡಿಸಿಕೊಂಡರು. ಕ್ರಾಕೋವಿನಲ್ಲಿ ದೊಡ್ಡ ಕದನ ನಡೆಯುವುದಾಗಿದೆ. ಆ ಸ್ಥಳದಲ್ಲಿ ೩,೦೦,೦೦೦ ಜರ್ಮನಿಯವರೂ ಆಸ್ಟ್ರಿಯಾದವರೂ ಸೇರಿ ರಷ್ಯಾದವರ ಆಗಮನವನ್ನು ಎದುರು ನೋಡುತ್ತಿರುವಂತೆ ಹೇಳಲಾಗಿದೆ.

ಹಂಗೆರಿಯೊಳಕ್ಕೆ ಹೋಗುವ ಮಾರ್ಗವು ಸರಿಯಾಗಿ ... ರಾಜಧಾನಿಯಾದ ವಿಯನ್ನ ನಗರದ ಪ್ರಜೆಗಳು ರಷ್ಯಾದವರು ಬರುತ್ತಾರೆಂದು ಗಾಬರಿಪಟ್ಟು ಓಡಿ ಹೋಗುತ್ತಿದಾರೆ. ಮಾತ್ರವೇ ಅಲ್ಲದೆ ಬೇರೆ ಪ್ರಾರಂಭವಾಗಿ ರೋಗದಿಂದ ಅವರ ಗಾಬರಿಯು ಇನ್ನೂ ಹೆಚ್ಚಾಗಿರುವುದು.

ಜಪಾನ್ ಮತ್ತು ಜರ್ಮನಿ.

ಜಪಾನ್‌ನವರು ಚೀನಾದಲ್ಲಿ ಜರ್ಮನಿಯವರ ಮೇಲೆ ಯುದ್ಧಕಾರ್ಯಗಳನ್ನು ನಡೆಸುತ್ತಿದಾರೆ. ಒಂದು ಕದನದಲ್ಲಿ ಜಪಾನ್‌ನವರ ಕಡೆ ೧೫೦ ಮಂದಿ ನಷ್ಟವಾದರು. ಜರ್ಮನಿಯವರಲ್ಲಿ ೫೦ ಮಂದಿಯನ್ನು ೪ ಮೆಷೀನ್ ಫಿರಂಗಿಗಳ ಸಮೇತ ಕೈಸೆರೆ ಹಿಡಿದುಕೊಂಡರು. ಜರ್ಮನಿಯವರಿಗೆ ಎಷ್ಟು ಮಂದಿ ನಷ್ಟವಾದರೋ ತಿಳಿಯಲಿಲ್ಲ. ಸಮುದ್ರದ ಮೇಲೂ ಯುದ್ಧವಾಯಿತು. ಜಪಾನಿನವರ ಒಂದು ಹಡಗು ಜರ್ಮನಿಯವರು ಸಮುದ್ರದೊಳಗೆ ಹಾಕಿದ್ದ ಮೈನ್ ಎಂಬ ಸಿಡಿಮದ್ದಿನ ಗುಂಡುಗಳನ್ನು ... ನಾಶವಾಯಿತು. ಜಪಾನಿನವರ ಕಡೆ ೨೩ ಮಂದಿ ನಷ್ಟಪಟ್ಟರು. ಜರ್ಮನಿಯವರ ಒಂದು ಟಾರ್ಪೆಡೋ ಎಂಬ ಹಡಗನ್ನು ಜಪಾನ್‌ನವರು ಮುಳುಗಿಸಿರುತ್ತಾರೆ.

ಸರ್ವಿಯಾ ಮತ್ತು ಆಸ್ಟ್ರಿಯಾ.

ಸರ್ವಿಯಾದಿಂದ ವಿಶೇಷ ವರ್ತಮಾನವೇನೂ ಬರಲಿಲ್ಲ. ಆದರೆ ಸರ್ವಿಯದವರು ಮತ್ತೆ ಸೆಮ್ಲಿನ್ ಪಟ್ಟಣವನ್ನು ಸ್ವಾಧೀನ ಪಡಿಸಿಕೊಂಡರೆಂದು ತಿಳಿಯುವುದು.

ಆಫ್ರಿಕಾದಲ್ಲಿ.

ಪಶ್ಚಿಮ ಆಫ್ರಿಕಕ್ಕೆ ಸೇರಿದ ಕಮರೂನ್ಸ್‌ನಲ್ಲಿ ಬ್ರಿಟಿಷರು ಜರ್ಮನಿಯವರ ಒಂಭತ್ತು ವ್ಯಾಪಾರದ ಹಡಗುಗಳನ್ನೂ, ಒಂದು ಸಣ್ಣ ಫಿರಂಗೀ ಹಡಗನ್ನೂ ಸ್ವಾಧೀನಪಡಿಸಿಕೊಂಡರು. ಬ್ರಿಟಿಷರೂ ಫ್ರೆಂಚರೂ ಸೇರಿ ಆ ಪ್ರದೇಶದಲ್ಲಿ ಕೆಲವು ಭಾಗವನ್ನು ಜರ್ಮನಿಯವರಿಂದ ಕಿತ್ತು ಸ್ವಾಧೀನ ಪಡಿಸಿಕೊಂಡಿದಾರೆ.

ದಕ್ಷಿಣ ಪಶ್ಚಿಮ ಜರ್ಮನ್ ಆಫ್ರಿಕಾದಲ್ಲಿ ಬೋಯರ್‌ಗಳೂ ಜರ್ಮನಿಯವರಿಗೂ ಕೆಲವು ಕದನಗಳು ನಡೆದವು. ಎರಡು ಕಡೆಗಳಲ್ಲೂ ಕೆಲಕೆಲವರು ನಷ್ಟವಾದರು.

ಪೂರ್ವ ಆಫ್ರಿಕಾದಲ್ಲಿ ಸೆಪ್ಟಂಬರ್ ಪ್ರಾರಂಭದಲ್ಲಿ ನಡೆದ ಕದನಗಳ ವಿವರವು ಈಗ ಪ್ರಕಟವಾಗಿದೆ. ಈ ಯುದ್ಧದಲ್ಲಿ ೨೯ ನೇ ಪಂಜಾಬಿ ರೆಜಿಮೆಂಟಿನ ಒಬ್ಬ ಸುಬೇದಾರನೂ ಒಬ್ಬ ಸಿಪಾಯಿಯೂ ಕೊಲೆಯಾದರು; ಒಬ್ಬ ಕ್ಯಾಪ್ಟನ್ ಎಂಬ ಉದ್ಯೋಗಸ್ಥನೂ, ೫ ಮಂದಿ ಸಿಪಾಯಿಗಳೂ ಗಾಯಪಟ್ಟರು. ಬ್ರಿಟಿಷ್ ಉದ್ಯೋಗಸ್ಥರಲ್ಲೂ ಒಬ್ಬನು ಕೊಲೆಯಾದನು.

ಸಮುದ್ರದ ಮೇಲೆ.

ಎಮ್‌ಡೆನ್ ಎಂಬ ಜರ್ಮನಿಯವರ ಯುದ್ಧದ ಹಡಗನ್ನು ಇನ್ನೂ ಹಿಡಿದಿಲ್ಲ. ಈಚೆಗೆ ಅದು ಪಶ್ಚಿಮ ಹಿಂದುಸ್ಥಾನದ ಕಡೆ ಕಾಣಿಸಿಕೊಂಡು ಐದು ವ್ಯಾಪಾರದ ಹಡಗುಗಳನ್ನು ಹಿಡಿದು ಆ ಪೈಕಿ ನಾಲ್ಕನ್ನು ಮುಳುಗಿಸಿ ಬಿಟ್ಟಿತು. ಅವುಗಳಲ್ಲಿದ್ದ ಜನರನ್ನೆಲ್ಲಾ ಐದನೇ ಹಡಗಿಗೆ ಹತ್ತಿಸಿ, ಸಿಲೋನ್ ದ್ವೀಪದ ರಾಜಧಾನಿಯಾದ ಕೊಲಂಬೊ ನಗರಕ್ಕೆ ಸಾಗಹಾಕಿಸುತ್ತದೆ.

ಈಗ ಕೊಲಂಬೊ, ಮದರಾಸ್, ಕಲ್ಕತ್ತಾ, ರಂಗೂನ್, ಈ ತೀರಪಟ್ಟಣಗಳಿಂದ ಹಡಗುಗಳು ಸಂಚರಿಸುತ್ತಿರುವವು. ಬಂಗಾಳಾ ಸಮುದ್ರ ಕೊಲ್ಲಿಯು ಈಗ ಸುರಕ್ಷಿತವಾಗಿದೆ. ಅಲ್ಲಿ ಶತ್ರುವಿನ ಯುದ್ಧದ ಹಡಗು ಯಾವುದೂ ಇರುವುದಿಲ್ಲ.

ಈ ಯುದ್ಧವು ಪ್ರಾರಂಭವಾದಾರಭ್ಯ ಇದುವರೆಗೆ ಬ್ರಿಟಿಷರು ಜರ್ಮನಿಯವರ 387 ಹಡಗುಗಳನ್ನು ಸ್ವಾಧೀನಪಡಿಸಿಕೊಂಡಿದಾರೆ. ಜರ್ಮನಿಯವರು 98 ಬ್ರಿಟಿಷ್ ಹಡಗುಗಳನ್ನು ಸ್ವಾಧೀನಪಡಿಸಿಕೊಂಡರು; ಈ ಪೈಕಿ 74 ಹಡಗುಗಳು ಯುದ್ಧಾರಂಭವಾಗುವಾಗುವುದಕ್ಕಿಂತ ಮುಂಚೆ ಜರ್ಮನಿಯ ತೀರಪಟ್ಟಣಗಳಲ್ಲಿದ್ದವು. ಇದಲ್ಲದೆ ಜರ್ಮನಿಯವರು ಮಹಾಸಾಗರದಲ್ಲಿ ಸಂಚರಿಸುತ್ತಿದ್ದ 12 ಬ್ರಿಟಿಷ್ ಜಹಜುಗಳನ್ನು ಸ್ವಾಧೀನಪಡಿಸಿಕೊಂಡರು. ಬ್ರಿಟಿಷರ 8 ಹಡಗುಗಳು ಮೈನ್ ಎಂಬ ಸಿಡಿಮದ್ದಿನ ಗುಂಡುಗಳಿಗೆ ಬಡಿದು ನಾಶವಾಗಿರುತವೆ.

ಜರ್ಮನಿಯವರು ಪೆಸಿಫಿಕ್ ಸಾಗರದಲ್ಲಿ ಫ್ರೆಂಚರ ಒಂದು ಫಿರಂಗೀ ಹಡಗನ್ನು ಮುಳುಗಿಸಿದರು; ಇದು ಸಣ್ಣದು. ಅದರಲ್ಲಿದ್ದ ಫಿರಂಗಿಗಳನ್ನು ಹೊರಕ್ಕೆ ಸಾಗಿಸಿದ್ದರು; ಜನರ್ಯಾರೂ ಅದರಲ್ಲಿರಲಿಲ್ಲ. ಅಲ್ಲೇನೂ ಯುದ್ಧವಾಗಲಿಲ್ಲ. ದಕ್ಷಿಣ ಅಮೇರಿಕಕ್ಕೆ ಪಶ್ಚಿಮಪಾರ್ಶ್ವದಲ್ಲಿ ಜರ್ಮನಿಯ ಒಂದು ಯುದ್ಧದ ಹಡಗು ಬ್ರಿಟಿಷರ ಒಂದು ಜಹಜನ್ನು ಮುಳುಗಿಸಿದೆ. ಬಹುಶಃ ಇನ್ನೂ ಸಂಚರಿಸುತ್ತಿರುವ ಜರ್ಮನಿ ಜಹಜುಗಳು ಇನ್ನೂ ನಾಲ್ಕೈದು ಇರಬಹುದೆಂದು ಕಾಣುವುದು.

ಆಸ್ಟ್ರಿಯಾದವರು ಆಡ್ರಿಯಾಟಿಕ್ ಕಡಲಿನಲ್ಲಿ ಇಟ್ಟಿದ್ದ ಮೈನ್ ಎಂಬ ಸಿಡಿಮದ್ದಿನ ಗುಂಡಿಗೆ ಬಡಿದು ಇಟಲಿಯ ಕೆಲವು ಸಣ್ಣ ಹಡಗುಗಳು ನಾಶವಾದವು. ಈ ವಿಷಯವನ್ನು ಇಟಲಿಯವರು ಅವರಿಗೆ ತಿಳಿಸಿದಾಗ ಆಸ್ಟ್ರಿಯಾದವರು ಇಟಲಿಯವರ ಇಷ್ಟಪ್ರಕಾರ ಮೈನ್ ಎಂಬ ಸಿಡಿಮದ್ದಿನ ಗುಂಡುಗಳನ್ನೆಲ್ಲಾ ಸಮುದ್ರದಿಂದ ತೆಗೆದುಬಿಡುತ್ತೇವೆಂದು ಒಪ್ಪಿಕೊಂಡಿದಾರೆ.

ಹಿಂದುಸ್ಥಾನದಲ್ಲಿ.

ಹಿಂದುಸ್ಥಾನದಲ್ಲಿ ಅನೇಕ ಜನರು ನಾನಾ ಬಗೆಯ ಸುಳ್ಳುಸುದ್ದಿಗಳನ್ನು ಹುಟ್ಟಿಸಿ ಹರಡುತ್ತಾರೆ. ವಿಮಾನಯಂತ್ರಗಳನ್ನು ಅನೇಕ ಕಡೆಗಳಲ್ಲಿ ನೋಡಿದರಂತೆ. ಯುದ್ಧ ವಿಷಯವಾದ ಎಲ್ಲಾ ವರ್ತಮಾನಗಳನ್ನೂ ಪ್ರಕಟಿಸುವುದಿಲ್ಲವಂತೆ. ಬ್ರಿಟಿಷರ ಕಡೆ ಈಗ ಹೇಳಿರುವುದಕ್ಕಿಂತಲೂ ಹೆಚ್ಚಾಗಿ ನಷ್ಟವಾಗಿದೆಯಂತೆ. ದೊಡ್ಡ ಮನುಷ್ಯರಾದ ಅನೇಕರು ಸತ್ತುಹೋದರಂತೆ. ಇದರಲ್ಲಿ ಯಾವುದೊಂದೂ ನಿಜವಲ್ಲ. ದೊಡ್ಡ ಮನುಷ್ಯರಾದರೂ ಸತ್ತುಹೋಗಿದ್ದರೆ ಆ ಸುದ್ದಿಯು ಪ್ರಕಟವಾಗದೆ ಹೋಗುವುದಿಲ್ಲ. ಬ್ರಿಟಿಷರ ಕಡೆಯ ವರ್ತಮಾನಗಳೆಲ್ಲಾ ಆಗಲೇ ಪ್ರಕಟವಾಗಿರುತ್ತವೆ. ಪ್ರಾರಂಭದಲ್ಲಿ ಅವರನ್ನೂ ಫ್ರೆಂಚರನ್ನೂ ಜರ್ಮನಿಯವರು ನುಗ್ಗಿಬಂದು ಹಿಂದಕ್ಕೆ ಓಡಿಸಿದ್ದರು. ಈಗಲಾದರೋ ಅವರು ಜರ್ಮನಿಯವರನ್ನು ಹಿಂದಕ್ಕೆ ಓಡಿಸುತ್ತಾರೆ. ಇಷ್ಟರಲ್ಲೇ ಅವರು ಜರ್ಮನಿಯವರನ್ನು ಇನ್ನೂ ಹಿಂದಕ್ಕೆ ಓಡಿಸುವ ಸಂಭವ ಕಾಣುತ್ತಿದೆ. ನಾವು ಮೊದಲೇ ಹೇಳಿರುವ ಪ್ರಕಾರ ಜರ್ಮನಿಯಿಂದ ವಿಮಾನಯಂತ್ರಗಳು ಇಲ್ಲಿಗೆ ಬರುವುದು ಖಂಡಿತವಾಗಿಯೂ ಸಾಧ್ಯವಲ್ಲ. ಆ ಯಂತ್ರಗಳು ಅಷ್ಟು ಸಮೀಪದಲ್ಲಿರುವ ಇಂಗ್ಲೆಂಡಿಗೇನೇ ಇನ್ನೂ ಹೋಗಿಲ್ಲ. ಬಹುಶಃ ಜರ್ಮನಿಗೆ ವಿಮಾನಗಳು ಇಂಗ್ಲೆಂಡಿಗೆ ಹೋದರೂ ಹೋಗಬಹುದು. ಆದರೆ ಐದು ಆರು ಸಾವಿರ ಮೈಲಿ ದೂರ ಅಂತರಿಕ್ಷದಲ್ಲಿ ಹೋಗುವಂಥಾ ವಿಮಾನಯಂತ್ರವನ್ನು ಇನ್ನೂ ಯಾರೂ ಇದುವರೆಗೆ ಮಾಡಿಲ್ಲ. ನಮ್ಮ ಸೀಮೆಯಲ್ಲಿ ಒಂದು ವೇಳೆ ವಿಮಾನಯಂತ್ರಗಳೇನಾದರೂ ಕಣ್ಣಿಗೆ ಬಿದ್ದ ಪಕ್ಷದಲ್ಲಿ ಅವು ಹಿಂದುಸ್ಥಾನಕ್ಕೆ ಸೇರಿದವುಗಳೆಂದೂ, ಅವುಗಳಿಂದ ಯಾವ ವಿಧವಾದ ಬಾಧೆಯೂ ಉಂಟಾಗುವುದಿಲ್ಲವೆಂದೂ ಹೇಳುತ್ತೇವೆ.

ರಾಜಧಾನಿಯಲ್ಲಿ ನಡೆದ ಪ್ರಾಣಿಗಳ ಪ್ರದರ್ಶನ.

ಶ್ರೀಮನ್ ಮಹಾರಾಜರವರು ಬಹುಮಾನಗಳನ್ನು ದಯಪಾಲಿಸಿದರು.

ಕಳೆದ ಬುಧವಾರ ಮತ್ತು ಗುರುವಾರ ಜೂಜಿನ ಬೋರೆಯಲ್ಲಿ ಪೋಲೋ ಕುದುರೆಗಳು, ಬಂಡಿ ಎಳೆಯುವ ಮತ್ತು ಸವಾರಿ ಮಾಡುವ ಕುದುರೆಗಳು, ಚೆನ್ನಾಗಿ ಸಾಕಲ್ಪಟ್ಟ ಎತ್ತುಗಳು, ಕರೆಯುವ ಹಸುಗಳು, ಪಂಜರದ ಪಕ್ಷಿಗಳು, ನಾಯಿಗಳು, ಬೆಕ್ಕುಗಳು ಮತ್ತು ಎಮ್ಮೆಗಳು—ಇವುಗಳ ಪ್ರದರ್ಶನವು ನಡೆಯಿತು. ನೂರಾರು ಜನರು ಈ ಪ್ರಾಣಿಗಳನ್ನು ನೋಡಿ ಸಂತೋಷಪಟ್ಟರು. ಪೋಲೋ ಕುದುರೆಗಳ ಪೈಕಿ ಜಮಾದಾರ್ ರಾಮರಾಯರೂ, ಜಿಜೆಂಟ್‌ದಾರ್ ಸೈಯದ್ ಲತೀಫ್, ರಸಾಲ್‌ದಾರ್ ಷೇಕ್ ಮುಸ್ತಫಾರವರ ಕುದುರೆಗಳಿಗೆ ಬಹುಮಾನ ದೊರಕಿತು. ಅತ್ಯುತ್ತಮ ಮಿಲಿಟರಿ ಕುದುರೆಗಳಿಗಾಗಿ ಕರ್ನಲ್ ದೇಸರಾಜೆ ಅರಸಿನವರಿಗೂ, ಜಮಾದಾರ್ ಶಿವರಾಮಸಿಂಗರಿಗೂ ಬಹುಮಾನಗಳು ಕೊಡಲ್ಪಟ್ಟವು. ಪೋಸಿಗಳಲ್ಲಿ ಉತ್ತಮವಾದವುಗಳನ್ನು ಪ್ರದರ್ಶನಮಾಡಿದ್ದಕ್ಕಾಗಿ ಹೌಲಿಂಗ್, ಜಮಾದಾರ್ ರಾಮರಾವ್, ರಸಾಲ್ದಾರ್ ಷೇಕ್ ಮುಸ್ತಫ, ವರ್ಧಮಾನಯ್ಯನವರು, ಸುಂದರಂ ಐಯ್ಯರ್, ಇವರಿಗೆ ಬಹುಮಾನಗಳು ದೊರಕಿದವು. ಬೆಕ್ಕುಗಳನ್ನು ಚೆನ್ನಾಗಿ ಸಾಕಿದ್ದಕ್ಕಾಗಿ ಎಚ್. ಎಲ್. ದೇವರಾಜೆ ಅರಸಿನವರಿಗೂ, ಮಿಸೆಸ್ ಹ. ಬಟ್ಲರ್ ರವರಿಗೂ ಬಹುಮಾನಗಳು ಕೊಡಲ್ಪಟ್ಟವು. ಇಂಗ್ಲಿಷ್ ಜಾತಿನ ಪೈಕಿ ಒಳ್ಳೇ ನಾಯಿಗಳಿಗಾಗಿ ಬೌಲಿಂಗ್, ಎ. ಸಿ. ಲಿಂಗರಾಜೆ ಅರಸಿನವರು ಮತ್ತು ಮಿಸೆಸ್ ಕ್ಲೆಂಟನ್ ಅಂಡ್ರೂಸ್ ರವರಿಗೆ ಬಹುಮಾನಗಳು ದೊರಕಿದವು. ನಾಡುಜಾತಿನ ನಾಯಿಗಳ ಪೈಕಿ ಉತ್ತಮವಾದವುಗಳನ್ನು ಪ್ರದರ್ಶನ ಮಾಡಿದ್ದಕ್ಕಾಗಿ ಕನ್ನಯ್ಯ, ... ಮಂಚ, ಕೃಷ್ಣರಾಜಸಾಗರದ ನರಸ, ಚಿಕ್ಕಮಂಚ ಮತ್ತು ಬಿಕ್ಕಮಾದ, ಇವರುಗಳಿಗೆ ಬಹುಮಾನಗಳನ್ನು ಕೊಟ್ಟರು. ಇತರ ನಾಯಿಗಳ ಪ್ರದರ್ಶಕರ ಪೈಕಿ ಮಿಸ್ ಎ. ಇ. ಮೂರ್, ಮಿಸ್ ಥಿಯೊಬಾಲ್ಡ್, ಮಿಸ್ ಬಿರ್ಕ್ ರವರಿಗೆ ಇನಾಮುಗಳು ದೊರೆತವು. ಹಾರುವ ಪಂದ್ಯದಲ್ಲಿ ಶ್ರೀಮನ್ ಮಹಾರಾಜರವರ ಬಾಡಿ ಗಾರ್ಡ್ ಕುದುರೆಗಳಿಗೂ, ಜಮೇದಾರ್ ರಾಮರಾಯರ ಕುದುರೆಗೂ ಬಹುಮಾನ ದೊರಕಿತು. ಆಫೀಸರುಗಳ ಪೈಕಿ ಗೋಪಾಲರಾಯರು, ಜಮಾದಾರ್ ಹನುಮಂತರಾಯರು ಮತ್ತು ಸುಬ್ಬರಾವ್ ಚೆನ್ನಯ್ಯವರು ಉತ್ತಮವಾದ ಕುದುರೆಗಳನ್ನು ಪ್ರದರ್ಶನ ಮಾಡಿದ್ದಕ್ಕಾಗಿ ಬಹುಮಾನವನ್ನು ಹೊಂದಿದರು. ಒಂಟಿ ಕುದುರೆ ಗಾಡಿಗಳ ಪ್ರದರ್ಶನದಲ್ಲಿ ಶ್ರೀಮನ್ ಮಹಾರಾಜರವರ ಬಾಡಿ ಗಾರ್ಡಿನವರಿಗೂ, ಕ್ಯಾಂಬಲ್ ಸಾಹೇಬರಿಗೂ, ಎ. ಸಿ. ಲಿಂಗರಾಜೆ ಅರಸಿನವರಿಗೂ ಮತ್ತು ಡಾಕ್ಟರ್ ಉಸ್ಮಾನ್ ರವರಿಗೂ ಬಹುಮಾನಗಳನ್ನು ಕೊಟ್ಟರು. ಕುದುರೆಗಳನ್ನು ಓಡಿಸುವ ಪಂದ್ಯದಲ್ಲಿ ಎ. ಸಿ. ಲಿಂಗರಾಜೆ ಅರಸಿನವರಿಗೂ, ಕ್ಯಾಂಬಲ್ ಸಾಹೇಬರಿಗೂ ಬಹುಮಾನ ದೊರಕಿತು. ಪಂಜರದ ಪಕ್ಷಿಗಳಲ್ಲಿ ಉತ್ತಮವಾದವುಗಳನ್ನು ಪ್ರದರ್ಶನ ಮಾಡಿದ್ದಕ್ಕಾಗಿ ಲೇಟ್ ಎಚ್. ಲಿಂಗರಾಜೇ ಅರಸಿನವರ ಕುಮಾರರಿಗೂ, ಪಿ. ಶ್ರೀನಿವಾಸರಾಯರಿಗೂ, ಎಚ್. ಎಲ್. ದೇವರಾಜೆ ಅರಸಿನವರಿಗೂ ಇನಾಮುಗಳು ದೊರೆತವು. ತಮ್ಮ ಯಜಮಾನರನ್ನು ಚೆನ್ನಾಗಿ ಹಿಂಬಾಲಿಸುವ ಪ್ರಾಣಿಗಳಿಗಾಗಿ ಪಾಷಾ, ರಘುನಾಥ್ ರಾವ್, ಶ್ರೀನಿವಾಸರಾವ್, ವೆಂಕಟಸ್ವಾಮಿ ಎಂಬವರಿಗೆ ಬಹುಮಾನಗಳನ್ನು ಕೊಟ್ಟರು. ಕರೆಯುವ ಹಸುಗಳನ್ನು ಚೆನ್ನಾಗಿ ಸಾಕಿದವರೆಂಬುದಾಗಿ ಕೊಪ್ಪಲು ಬಸವಯ್ಯ, ಅಬ್ದುಲ್ ಖಾದರ್, ವನರಯ್ಯ, ಉಪ್ಪಿ ರಾಯ, ಹೊಂಬೇಗೌಡ, ಕಾಳಯ್ಯ, ಇವರುಗಳಿಗೆ ಬಹುಮಾನ ದೊರಕಿತು. ಕರೆಯುವ ಎಮ್ಮೆಗಳ ಪೈಕಿ ಉತ್ತಮವಾದವುಗಳ ಮಾಲೀಕರಾದ ಸಿದ್ದ, ತಮ್ಮಯ್ಯ, ನಂಜಯ್ಯ, ರಾಮಯ್ಯ, ಇವರುಗಳಿಗೆ ಬಹುಮಾನಗಳನ್ನು ಕೊಟ್ಟರು. ಮಹಮದಲ್ಲಿ, ಗೌಸ್ ಸಾಹೇಬ್, ಗುಲಾಂ ದಸ್ತಗೀರ್, ಮಹಮದ್ ಕಾಸಿಂ ಎಂಬವರು ತಮ್ಮ ಜಟಕಾ ಗಾಡಿಯ ಕುದುರೆಗಳನ್ನು ಚೆನ್ನಾಗಿ ಸಾಕಿದ್ದಕ್ಕಾಗಿ ಬಹುಮಾನ ಹೊಂದಿದರು. ಬಾಡಿಗೆ ಗಾಡಿಯ ಒಂಟಿ ಎತ್ತನ್ನು ಚೆನ್ನಾಗಿ ಸಾಕಿದ್ದಕ್ಕೆ ಪುಟ್ಟಯ್ಯ, ಸಾಬು, ಪಾಪಯ್ಯ ಮತ್ತು ಸಣ್ಣ ಕೃಷ್ಣಯ್ಯನವರಿಗೆ ಬಹುಮಾನಗಳು ದೊರಕಿದವು. ಅಗಸರ ಪೈಕಿ ರಾಮ, ತಮ್ಮಯ್ಯ, ದಾಸ ಮತ್ತು ಈರನಗೆರೆ ರಾಮ ಎಂಬವರು ತಮ್ಮ ಕತ್ತೆಗಳನ್ನು ಚೆನ್ನಾಗಿ ಕಾಪಾಡಿದ್ದರಿಂದ ಅವರಿಗೆ ಬಹುಮಾನ ಸಿಕ್ಕಿತು. ಜೋಡೆತ್ತಿನ ಗಾಡಿಯವರ ಪೈಕಿ ಮರಿನಿಂಗೇಗೌಡ, ಸಿದ್ದೇಗೌಡ ಮತ್ತು ತಿಬ್ಬೆಗೌಡ ಇವರ ಎತ್ತುಗಳು ಚೆನ್ನಾಗಿ ಸಾಕಲ್ಪಟ್ಟಿದ್ದದ್ದರಿಂದ ಅವರಿಗೆ ಇನಾಮು ಕೊಡಲ್ಪಟ್ಟಿತು. ತಮ್ಮ ಕುದುರೆಗಳನ್ನು ಉತ್ತಮವಾದ ರೀತಿಯಲ್ಲಿ ಸಾಕಿದ್ದಕ್ಕೆ ಸೀಕದಾರರ ಪೈಕಿ ಕೃಷ್ಣಮೂರ್ತಿ ನಾಯಡು, ಅಬ್ದುಲ್ ಮಜೀದ್, ಸೈಯದ್ ಕರೀಂ ಎಂಬವರಿಗೂ; ಪಟೇಲರು ಮತ್ತು ಟ್ಯಾಂಕ್ ಇನ್‌ಸ್ಪೆಕ್ಟರುಗಳ ಪೈಕಿ ಪಟೇಲ್ ಮಲ್ಲಯ್ಯ, ಮಾದಪ್ಪ, ರಾಮಸ್ವಾಮಯ್ಯ, ಕೃಷ್ಣರಾವ್, ಇವರುಗಳಿಗೂ ಬಹುಮಾನಗಳು ದೊರಕಿದವು. ಮಾರಥಾನ್ ರೇಸ್ ಎಂಬ ಆರು ಮೈಲಿ ಓಡುವ ಪಂದ್ಯದಲ್ಲಿ ಮುಂದೆ ಹೇಳುವ ಹತ್ತು ಜನರಿಗೂ ಬಹುಮಾನಗಳು ಕೊಡಲ್ಪಟ್ಟವು. ಈ ಪೈಕಿ ಮೊದಲನೆಯವನಾದ ವಾಜಮಂಗಲದ ಅಂಕನೆಂಬವನು ಆರು ಮೈಲಿಯನ್ನು ಮೂವತ್ತೈದು ನಿಮಿಷಗಳಲ್ಲಿ ಓಡಿದನು. ಉಳಿದ ಒಂಭತ್ತು ಮಂದಿಯ ಹೆಸರುಗಳು ಯಾವವೆಂದರೆ—ರಮ್ಮನಹಳ್ಳಿ ಚೆನ್ನ, ಕ್ಯಾತಬಾಯನಹಳ್ಳಿ ಚಿಕ್ಕಮಾದ, ರಮ್ಮನಹಳ್ಳಿ ವೆಂಕಟ, ಬೋರ, ಮಾಲ, ವಾಜಮಂಗಲದ ಚಿಕ್ಕ, ಮಾದ, ದೊಡ್ಡಂಕ, ದೊಡ್ಡಮಾದ. ಕಳೆದ ಭಾನುವಾರ ಸಾಯಂಕಾಲ ಶ್ರೀಮನ್ ಮಹಾರಾಜರವರು ಈ ಪಂದ್ಯಗಳ ಬಹುಮಾನಗಳನ್ನು ಸ್ವಹಸ್ತ ದಯಪಾಲಿಸಿದರು. ಆ ಕಾಲದಲ್ಲಿ ಅನೇಕ ಸರ್ಕಾರೀ ಉದ್ಯೋಗಸ್ಥರೂ ಇತರ ದೊಡ್ಡ ಮನುಷ್ಯರೂ ಹಾಜರಾಗಿದ್ದರು. ಕಡೆಯಲ್ಲಿ ಎಲ್ಲರೂ ಜಯಧ್ವನಿಮಾಡಿ ಶ್ರೀಮನ್ ಮಹಾರಾಜರವರ ಶ್ರೇಯಸ್ಸನ್ನು ಬಯಸಿದರು.

ಒಳದೇಶದ ವೃತ್ತಾಂತಗಳು.

ಈ ವಾರ ನಮ್ಮ ಪತ್ರಿಕೆಯು ಹನ್ನೆರಡು ಪುಟಗಳುಳ್ಳದ್ದಾಗಿದೆ.

* * *

ನೆನ್ನೆ ರಾಜಧಾನಿಯ ಚಾಮುಂಡಿಬೆಟ್ಟದ ಜಾತ್ರೆ ನಡೆಯಿತು. ಶ್ರೀಮನ್ ಮಹಾರಾಜರವರೂ ರಾಜವರ್ಗದವರೂ ದಯಮಾಡಿ ರಥೋತ್ಸವವನ್ನು ನೆರವೇರಿಸಿದರು. ಸಾವಿರಾರು ಪ್ರಜೆಗಳು ಹೋಗಿ ಸೇರಿದ್ದರು.

* * *

ಕಳೆದ ಸೋಮವಾರ ಸಾಯಂಕಾಲ ರಾಜಧಾನಿಯ ಪ್ರಜಾಪ್ರತಿನಿಧಿ ಮಂದಿರದಲ್ಲಿ ಮೆಂಬರು ಅಟ್ ಹೋಂ ಎಂಬ ಸಂತೋಷಕೂಟವನ್ನು ನಡಿಸಿದರು. ಸರ್ಕಾರದ ಮುಖ್ಯ ಮುಖ್ಯ ಅಧಿಕಾರಿಗಳೂ, ಮೆಂಬರುಗಳೂ ಕಲೆತು ಸಂಗೀತ ಫಲಾಹಾರಾದಿಗಳಿಂದ ಸಂತೋಷಪಟ್ಟರು.

* * *

ಮೈಸೂರು ಸಂಪದಭ್ಯುದಯ ಸಮಾಜಕ್ಕೆ ಕಳೆದ ಶನಿವಾರ ಪ್ರತಿನಿಧಿಸಭೆಯಲ್ಲಿ ಒಬ್ಬ ಮೆಂಬರ ಚುನಾವಣೆ ನಡೆಯಿತು. ಸರ್ಕಾರದವರು ಬೆಂಗಳೂರು ಲಿಂಗಾಯತ ವಿದ್ಯಾವರ್ಧಕ ಫಂಡಿನ ಮೆಂಬರಾದ ಅಡ್ವೊಕೇಟ್ ಮ|| ಎಂ. ಬಸವಯ್ಯನವರ ಚುನಾವಣೆಯನ್ನು ಒಪ್ಪಿರುವಂತೆ ಅಪ್ಪಣೆಕೊಟ್ಟಿದಾರೆ.

* * *

ರಾಜಧಾನಿಯ ಮ್ಯುನಿಸಿಪಲ್ ಕೌನ್ಸೆಲರ್ ಮತ್ತು ಸಾಹುಕಾರ್ ಮ|| ಎಂ. ನರಸಿಂಹಸ್ವಾಮಿಯವರು ತಮ್ಮ ಮಾತೃಶ್ರೀಯವರ ಉತ್ತರಕ್ರಿಯಾದಿಗಳನ್ನು ಕಳೆದ ವಾರ ಉದಾರವಾಗಿ ನೆರವೇರಿಸಿ ದಾನಧರ್ಮ ಸಮಾರಾಧನೆ ಮುಂತಾದವುಗಳನ್ನು ಮಾಡಿಸಿದ್ದಲ್ಲದೆ ದೇವಸ್ಥಾನಗಳಲ್ಲಿ ಅಭಿಷೇಕಾದಿಗಳನ್ನು ನಡಿಸಿದರು.

* * *

ಈ ಸಲ ನವರಾತ್ರಿಗೆ ಸಂಬಂಧಪಟ್ಟ ಕಡೇ ದಿನದ ದರ್ಬಾರಿನಲ್ಲಿ ಶ್ರೀಮನ್ ಮಹಾರಾಜರವರು ಸಾಹುಕಾರ್ ಮ|| ಎಂ. ಎಲ್. ವರ್ಧಮಾನಯ್ಯನವರಿಗೂ, ಮ್ಯುನಿಸಿಪಲ್ ಕೌನ್ಸೆಲರ್ ಮತ್ತು ವರ್ತಕ ಮ|| ಬಸವಯ್ಯನವರಿಗೂ ಪಾಕಾಹಾರ ಹಾಕಿಸಿ ತಮ್ಮ ಮೆಚ್ಚಿಕೆಯನ್ನು ಪ್ರಕಾಶಪಡಿಸಿದರು. ಈ ದೊಡ್ಡ ಮನುಷ್ಯರು ರಾಜಧಾನಿಯಲ್ಲಿ ಬಹು ಮೇಲಾದ ಪರಹಿತಕಾರ್ಯಗಳನ್ನು ನಡಿಸುತ್ತಾ ಪ್ರಜಾಪ್ರೀತಿ ಸನ್ಮಾನಗಳನ್ನು ಪಡೆದಿರೋಣದರಿಂದ ಇವರಿಗೆ ದರ್ಬಾರಿನಲ್ಲಿ ಈ ಒಳ್ಳೆಯ ಸನ್ಮಾನ ದೊರೆತದ್ದು ಅನೇಕರಲ್ಲಿ ಸಂತೋಷವನ್ನುಂಟುಮಾಡಿದೆ.

* * *

ತುಂಕೂರು ಡೆಪ್ಯುಟಿ ಕಮಿಷನರ್ ಮ|| ಬಿ. ಜಿ. ಕುಮಾರಸ್ವಾಮಿ ನಾಯುಡುರವರು ಕಳೆದ ಶುಕ್ರವಾರ ಬೆಳಿಗ್ಗೆ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ರಾಜಯಕ್ಷ್ಮ ಎದ್ದು ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ನಮ್ಮ ಸೀಮೆಯ ಪಾಳ್ಯಗಾರ್ ವಂಶೀಯರಾಗಿ ಸರ್ಕಾರೀ ನೌಕರಿಯಲ್ಲಿ ಚಿಕ್ಕ ಕೆಲಸಗಳಿಂದ ಡೆಪ್ಯುಟಿ ಕಮಿಷನರ್ ಹುದ್ದೆಯ ತನಕ ಹತ್ತಿ ಬಹು ಪ್ರಜಾಪ್ರೀತಿ ಗೌರವಗಳನ್ನು ಸಂಪಾದಿಸಿಕೊಂಡಿದ್ದರು. ಆ ದಿನ ದಿವಾನ್‌ರವರು ಪ್ರಜಾಪ್ರತಿನಿಧಿ ಸಭೆ ಪ್ರಾರಂಭವಾಗುವುದಕ್ಕೆ ಮುಂಚೆ ಈ ದುಃಖಕರವಾದ ಸುದ್ದಿಯನ್ನು ಮೆಂಬರುಗಳಿಗೆ ತಿಳಿಸಿ ಮೆಂಬರುಗಳ ಪ್ರಾರ್ಥನೆಯಂತೆ ಸುಮಾರು ಹತ್ತು ನಿಮಿಷದ ವರೆಗೆ ಸಭೆಯ ಕಾರ್ಯಗಳನ್ನು ನಿಲ್ಲಿಸಿದ್ದರು. ಮೆಂಬರುಗಳೆಲ್ಲಾ ಈ ಸುದ್ದಿಯನ್ನು ಕೇಳಿ ತುಂಬಾ ಮರುಗಿದರು.

* * *

ಕಳೆದ ಭಾನುವಾರ ರಾಜಧಾನಿಯ ಸರ್ ಶೇಷಾದ್ರಿ ಅಯ್ಯರ್ ಬಂಗಲೆಯಲ್ಲಿ ಪ್ರಜಾಪ್ರತಿನಿಧಿಗಳಿಗೆ ಸರ್ಕಾರಿ ಔತಣವು ನಡೆಯಿತು. ಎಲ್ಲಾ ಕೋಮುಗಳವರಿಗೂ ಪ್ರತ್ಯೇಕ ಪ್ರತ್ಯೇಕವಾಗಿ ಭೋಜನದ ಏರ್ಪಾಡು ಮಾಡಿದ್ದರು. ಭೋಜನಾನಂತರ ಹರಿಕಥೆ ಸಂಗೀತ ಹಾಡುಗಾರಿಕೆಗಳು ಜರುಗಿದವು. ಪ್ರತಿನಿಧಿಗಳ ಪರವಾಗಿ ಮ|| ಅಂಬಳೆ ಅಣ್ಣಯ್ಯಪಂಡಿತರವರು ದಿವಾನ್‌ರೇ ಮುಂತಾದವರನ್ನು ವಂದಿಸಿ, ಭೋಜನದ ವಿಶಿಷ್ಟತೆಯನ್ನೂ ಪ್ರತಿನಿಧಿ ಸಭೆಯ ಪ್ರೋತ್ಸಾಹವನ್ನು ಕುರಿತು ಭಾಷಣಮಾಡಿದರು. ಆ ದಿನದ ಏರ್ಪಾಡುಗಳನ್ನೆಲ್ಲಾ ಸೆಕ್ರೆಟರಿ ಮ|| ಡಿ. ಎಂ. ನರಸಿಂಗರಾಯರೇ ಮುತುವರ್ಜಿ ವಹಿಸಿ ತುಂಬಾ ವಿಶದತೆಯಾಗಿ ನಡಿಸಿದರು. ಆ ದಿನ ಸಾಯಂಕಾಲ ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ಯೂರೋಪಿಯನ್ ಪ್ರಜೆಗಳಿಗೂ ಔತಣವಾಯಿತು.

* * *

ರಾಜಧಾನಿಯಲ್ಲಿ ಶ್ರೀಮಂತವರ್ಧಮಾನಯ್ಯನವರು ತಮ್ಮ ತಂದೆಯವರ ಹೆಸರನ್ನು ಶಾಶ್ವತಪಡಿಸುವುದಕ್ಕಾಗಿ ನಡಿಸುತ್ತಿರುವ ಜೈನ್ ಬೋರ್ಡಿಂಗ್ ಹೋಮ್ ವಿದ್ಯಾರ್ಥಿಗಳಿಗೆ ಮೊನ್ನೆ ಮಂಗಳವಾರ ಸಾಯಂಕಾಲ ಬಹುಮಾನಗಳನ್ನು ಕೊಡುವುದಕ್ಕಾಗಿ ಒಂದು ಸಂತೋಷಕೂಟವು ನಡೆಯಿತು. ಸಂಸ್ಥಾನದ ಕಂಟ್ರೋಲರ್ ಮ|| ಜೆ. ಎಸ್. ಚಕ್ರವರ್ತಿಯವರು ಅಗ್ರಾಸನವನ್ನು ವಹಿಸಿದ್ದರು. ಹಲವು ಮಂದಿ ಅಧಿಕಾರಿಗಳೂ ಪ್ರಜಾಪ್ರತಿನಿಧಿಗಳೂ ಯೂರೋಪಿಯನ್ನರೂ ಸಭೆಯಲ್ಲಿ ಹಾಜರಾಗಿದ್ದರು. ವಿದ್ಯಾರ್ಥಿಗಳು ನಾನಾ ಬಗೆಯ ಸಂತೋಷಕಾರ್ಯಗಳನ್ನು ನಡಿಸಿದ ಬಳಿಕ ಸೂಪರಿಂಟೆಂಡರಾದ ಮ|| ಶ್ರೀನಿವಾಸರಾಯರು ಹೋಮಿನ ರಿಪೋರ್ಟನ್ನು ಓದಿ, ಅದು ಮ|| ವರ್ಧಮಾನಯ್ಯನವರ ಔದಾರ್ಯದಿಂದ ದಿನಕ್ಕೆದಿನಾ ಅಭಿವೃದ್ಧಿ ಹೊಂದುತ್ತಿರುವುದನ್ನು ಬಹು ಕೃತಜ್ಞತಾಪೂರ್ವಕವಾಗಿ ತಿಳಿಸಿದರು. ಮ|| ಚಕ್ರವರ್ತಿಯವರು ಬಹುಮಾನಗಳನ್ನು ಹಂಚಿ ಸಂಸ್ಕೃತವಿದ್ಯೆ, ವೈದಿಕವಿದ್ಯಾಭ್ಯಾಸಗಳಲ್ಲಿ ಕಂಡುಬರುವ ದೋಷಗಳು, ಅದರ ಪರಿಹಾರ ಮಾರ್ಗಗಳು, ಈ ಮುಂತಾದ ವಿಚಾರಗಳನ್ನು ಕುರಿತು ಬಹು ಸ್ವಾರಸ್ಯವಾದ ಭಾಷಣವನ್ನು ಮಾಡಿ, ಮ|| ವರ್ಧಮಾನಯ್ಯನವರ ಈ ಧರ್ಮಕಾರ್ಯವನ್ನು ಕೊಂಡಾಡಿ, ವಿದ್ಯಾರ್ಥಿಗಳಿಗೆ ಈ ಹೋಮಿನ ಮೂಲಕರ್ತರ ಗುಣ ನಡೆ ನುಡಿಗಳನ್ನು ಸಾಕ್ಷಾತ್ತಾಗಿ ನೋಡಿ ಕಲಿತುಕೊಳ್ಳುವುದಕ್ಕಿಂತಲೂ ವಿಶೇಷವಾದದ್ದು ಬೇರೊಂದೂ ಇಲ್ಲವೆಂದು ಮುಂತಾಗಿ ಹಿತೋಕ್ತಿಗಳನ್ನು ಹೇಳಿ ಸಭೆಯನ್ನು ಮುಕ್ತಾಯಮಾಡಿದರು.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1914 ನೇ ಇಸವಿ ಸೆಪ್ಟಂಬರ್ 31 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ.

ಜಮೆ:—(1)	ಷೇರು ಮೊಬಲಗು	ರೂ. 9,93,255
,, (2)	ಡಿಪಾಜಿಟ್ಟುಗಳು	,, 20,10,887
,, (3)	ಇತರೆ	,, 19,353
	(ಆಣೆ, ಕಾಸು ಬಿಟ್ಟಿರುತ್ತೆ.) ಜುಮ್ಲಾ	ರೂ. 30,23,485

ಖರ್ಚು:—(1)	ಕೈಯಲ್ಲೂ, ಬ್ಯಾಂಕುಗಳಲ್ಲಿರುವ ಹಣ	ರೂ. 5,62,248
,, (2)	ಖಾತೆ ಮತ್ತು ಇತರ ಸಾಲಗಳು	,, 18,37,003
,, (3)	ಡಿಸ್ಕೌಂಟು ಮಾಡಿದ ವಾಯಿದೆ ಹುಂಡಿಗಳು	,, 2,96,609
,, (4)	ಇನ್‌ವೆಸ್ಟ್‌ಮೆಂಟುಗಳು	,, 2,60,000
,, (5)	ಏಜನ್ಸಿಗಳಲ್ಲಿರುವ ಮೊಬಲಗು	,, 55,533
,, (6)	ಬ್ಯಾಂಕಿನಲ್ಲಿರುವ ಸಾಮಾನುಗಳು	,, 11,638
,, (7)	ಇತರೆ	,, 10,454
	(ಆಣೆ, ಕಾಸು ಬಿಟ್ಟಿರುತ್ತೆ.) ಜುಮ್ಲಾ	ರೂ. 30,23,485

ಡಬ್ಲಿಯು. ಸಿ. ರೋಸ್, ಮ್ಯಾನೇಜರ್

ಮೈಸೂರ ಗೆಜೆಟ್ ಸಂಗ್ರಹ.

ವಿಶೇಷಪತ್ರಿಕೆ.

ಈ ಕೆಳಗೆ ಕಂಡ ದೊಡ್ಡ ಮನುಷ್ಯರುಗಳು ದೇಶದ ಏಳಿಗೆಗೆ ಸಹಾಯಕವಾದ ಅಥವಾ ಜನೋಪಕಾರಕವಾದ-ಕಾರ್ಯಗಳನ್ನು ಮಾಡಿರುವ ವಿಷಯದಲ್ಲಿ ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹದ್ದೂರ್ರವರು ತಮ್ಮ ಮೆಚ್ಚಿಗೆಯನ್ನು ಈ ದಿವಸ ನವರಾತ್ರಿ ಮಹೋತ್ಸವ-ಪ್ರಯುಕ್ತವಾದ ದರ್ಬಾರಿನಲ್ಲಿ ತಿಳಿಯಪಡಿಸತಕ್ಕದ್ದೆಂದು ಅಪ್ಪಣೆ ದಯಪಾಲಿಸಿರುವದನ್ನು ಈ ಮೂಲಕ ಪ್ರಕಟಿಸಿರುತ್ತದೆ:—

(1) ಮ|| ರಾ|| ಚಿನ್ನಗನಹಳ್ಳಿ ಹನುಮಪ್ಪನವರು, ಬೌರಿಂಗ್‌ಪೇಟೆ ತಾಲ್ಲೂಕು.—ಕೋಲಾರದ ಡಿಸ್ಟ್ರಿಕ್ಟ್ ಬೋರ್ಡಿನವರಿಗೆ ಎರಡು ಲಕ್ಷ ರೂಪಾಯಿಗಳನ್ನು ಸಾಲ ಕೊಡುವುದರ ಮೂಲಕ ಬೌರಿಂಗ್‌ಪೇಟೆ-ಕೋಲಾರದ ರೈಲ್ವೇ ಕೆಲಸವನ್ನು ಜಾಗ್ರತೆಯಾಗಿ ಪ್ರಾರಂಭಿಸುವದಕ್ಕೆ ಅನುಕೂಲತೆಯನ್ನು ಉಂಟುಮಾಡಿದ್ದು.

(2) ಮ|| ರಾ|| ಪತ್ರೆ ವೀರಪ್ಪನವರು, ಬೀರೂರು.—ಚಿಕ್ಕಮಗಳೂರು ಟೌನ್‌ಹಾಲಿಗಾಗಿ ಧನಸಹಾಯ ಮಾಡಿದ್ದು; ಬೀರೂರಿನಲ್ಲಿ ಒಂದು ವಿದ್ಯಾಶಾಲೆಯನ್ನು ಕಟ್ಟಿಸಿದ್ದು; ಮತ್ತು ಬೀರೂರಿನಲ್ಲಿ ಒಂದು ಛತ್ರವನ್ನು ಕಟ್ಟಿಸುತ್ತಿರುವುದು.

(3) ಮ|| ರಾ|| ಅರಳೇ ಸಂಗಪ್ಪನವರು, ಮಂಡ್ಯ.—ಮಂಡ್ಯದಲ್ಲಿ ಒಂದು ಧರ್ಮಸತ್ರವನ್ನು ಕಟ್ಟಿಸಿದ್ದು.

(4) ಮ|| ರಾ|| ಕರಿಮನೆ ಚಂಪ್ರಪ್ಪನವರು, ತುಂಕೂರು.—ತುಂಕೂರು ಕೈಗಾರಿಕೆ ವಿದ್ಯಾಶಾಲೆಗಾಗಿ ಕಟ್ಟಡವನ್ನು ಕೊಟ್ಟಿದ್ದು; ಮತ್ತು ಧನಸಹಾಯ ಮಾಡಿದ್ದು.

ಹುಕುಂ ಬಮೋಜಬ್,
ಡಿ. ಎಂ. ನರಸಿಂಗರಾಯರು,
ಮೈಸೂರು ಸರಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ
ಅಫಿಷಿಯೇಟಿಂಗ್ ಸೆಕ್ರೆಟರಿ.

[ಶ್ರೀಮನ್ಮಹಾರಾಜರವರು ಮೇಲ್ಕಂಡ ದೊಡ್ಡಮನುಷ್ಯರ ಪೈಕಿ ಮೊದಲನೇ ಮೂವರು ಮಂದಿ ಕಳೆದ ಗುರುವಾರ ರಾತ್ರಿ ನವರಾತ್ರಿ ದರ್ಬಾರಿನಲ್ಲಿ ಹಾಜರಿದ್ದುದರಿಂದ ಅವರಿಗೆ ಸರ್ಟಿಫಿಕೇಟುಗಳ ಸಮೇತ 1 ನೇ ತರಗತಿಯ ಖಿಲ್ಲತ್ತನ್ನೂ ಖಾಸಾ ಹಾರವನ್ನೂ ಸ್ವಹಸ್ತ ದಯಪಾಲಿಸಿದರು.—ಎಡಿ.]

ಹೊಸ ಹೆಂಚಿನ ಕಾರ್ಖಾನೆಯ ಸ್ಥಾಪನೆ.

ಚಿಕ್ಕಬಳ್ಳಾಪುರದ ತಾಲ್ಲೂಕ್ ನಂದಿಸುಲ್ತಾನ್‌ಪೇಟೆ.

ಕಳೆದ ತಾ|| 25ನೇ ಶುಕ್ರವಾರ ಮಧ್ಯಾಹ್ನ 3 ಘಂಟೆಗೆ ಈ ಕಾರ್ಖಾನೆಯ ಪ್ರಾರಂಭೋತ್ಸವ ನಡೆಸುವುದಕ್ಕಾಗಿ ಚಿಕ್ಕಬಳ್ಳಾಪುರದ ಸಬ್ ಡಿವಿಜನ್ ಆಫೀಸರವರಿಂದ ಮ|| ಎಂ. ಬಿ. ಕೃಷ್ಣಸ್ವಾಮಿರಾಯರವರು, ಮ|| ಮುನ್ಸಿಫ್ ಸತ್ಯಾಜಿರಾಯರು, ಅಮಲ್ದಾರ್ ಮ|| ಶ್ರೀನರಸಿಂಹಶಾಸ್ತ್ರಿಗಳವರು, ಹಾಲಿ ಅಮಲ್ದಾರ್ ಮ|| ಬಿ ಬಾಲಯ್ಯವರು, ಮ|| ಸಬ್ ಡಿವಿಜನ್ ಇಂಜನೀಯರ್ ವಿ. ನರಸಿಂಹಶಾಸ್ತ್ರಿಗಳವರು, ಮ|| ಸಿಲ್ಕು ಸೂಪರಿಂಟೆಂಡೆಂಟ್ ಗೋಪಾಲಕೃಷ್ಣಯ್ಯಂಗಾರ್ರವರು, ಪ್ಲೀಡರ್ ಮತ್ತು ಮುನ್ಸಿಪಲ್ ವೈಸ್ ಪ್ರೆಸಿಡೆಂಟ್ ರಾದ ಮ|| ಸಿ. ನಾರಾಯಣಸ್ವಾಮಿ ಶೆಟ್ಟಿಯವರು, ಮುನ್ಸಿಪಲ್ ಮೆಂಬರ್ ಮ|| ಸಾಹುಕಾರ್ ಹಾರೋಬಂಡೆ ರುದ್ರಪ್ಪನವರು, ಮ|| ಸಾಹುಕಾರ್ ಕುಕ್ಕಲ ದೊಡ್ಡನರಸಿಂಹಯ್ಯನವರು, ಮ|| ಕಂಟ್ರಾಕ್ಟರ್ ಇಸೂಫ್‌ಖಾನ್ ಸಾಹೇಬರು, ಮ|| ಪ್ಲೀಡರ್ ಹೆಚ್. ಸುಬ್ರಾಯರವರು, ಮ|| ಪ್ಲೀಡರ್ ಸುಬ್ರಹ್ಮಣ್ಯಯ್ಯನವರು, ಮ|| ಪಂಡಿತ ತತ್ವವಾದಿ ನರಸಿಂಹರಾಯರು, ನಂದಿ ಸ್ಕೂಲ್ ಹೆಡ್ಮಾಸ್ಟರ್ ಮ|| ಕೆ. ಸುಬ್ಬಯ್ಯನವರು ಮತ್ತು ನಂದಿ ಸುಲ್ತಾನ್‌ಪೇಟೆ ಗ್ರಾಮಸ್ಥರು ಮೊದಲಾದವರೆಲ್ಲಾ ದಯಮಾಡಿಸಿದ್ದರು. ಆ ದಿನದ ಸಭೆಗೆ ಸಬ್ ಡಿವಿಜನ್ ಸಾಹೇಬರವರಾದ ಮ|| ಎಂ. ಜಿ. ಕೃಷ್ಣಸ್ವಾಮಿರಾಯರವರು ಸಭಿಕರ ಕೋರಿಕೆಯಂತೆ ಅಗ್ರಾಸನವನ್ನು ಅಲಂಕರಿಸಿದ್ದರು.

ಮ|| ಅಮಲ್ದಾರ್ ಶ್ರೀನರಸಿಂಹಶಾಸ್ತ್ರಿಗಳವರು ಈ ಹೆಂಚಿನ ಕಾರ್ಖಾನೆ ವಿಷಯವನ್ನು ಕುರಿತು ಒಂದು ಭಾಷಣವನ್ನು ಮಾಡಿದರು. ತರುವಾಯ ಮ|| ತತ್ವವಾದಿ ಚಿಕ್ಕಸುಬ್ಬಣ್ಣಾಚಾರ್ಯರು ಒಂದು ಯುಕ್ತಿಯುಕ್ತವಾದ ಉಪನ್ಯಾಸವನ್ನು ಮಾಡಿದರು. ಅನಂತರ ಸಬ್ ಡಿವಿಜನ್ ಸಾಹೇಬರವರು ಈ ಹೆಂಚು ತಯಾರುಮಾಡುವ ಯಂತ್ರದ ವಿಚಾರವನ್ನೂ, ಹೆಂಚಿನ ಪ್ರಯೋಜನವನ್ನೂ, ಇದರ ಲಾಭನಷ್ಟಗಳನ್ನೂ, ಏಕಮತ್ಯದಿಂದ ಮಾಡಬಹುದಾದ ಕೆಲಸಗಳ ವಿಚಾರವನ್ನೂ ಕುರಿತು ಎಲ್ಲರಿಗೂ ತಿಳಿದುಬರುವಹಾಗೆ ಮೃದುಮಧುರವಾಗಿ ಉಪನ್ಯಾಸ ಮಾಡಿದರು. ತರುವಾಯ ಅವರ ಹಸ್ತಸ್ಪರ್ಶದಿಂದ ಯಂತ್ರದಲ್ಲಿ ಕೆಲಸವು ಪ್ರಾರಂಭಿಸಲ್ಪಟ್ಟಿತು. ಕೂಡಲೇ ಕೆಲವು ಹೆಂಚುಗಳನ್ನು ತಯಾರು ಮಾಡಿ ಸಭಿಕರೆಲ್ಲರಿಗೂ ತೋರಿಸಲ್ಪಟ್ಟಿತು. ಅನಂತರ ಈ ಟೈಲ್ ಫ್ಯಾಕ್ಟರಿ ಮ್ಯಾನೇಜರವರಾದ ಮ|| ಸಾಹುಕಾರ್ ಮಾಕಂ ಸುಬ್ರಾಯಶೆಟ್ಟಿಯವರು ಒಂದು ಸ್ವಾರಸ್ಯವಾದ ಉಪನ್ಯಾಸವನ್ನು ಮಾಡಿದರು. ಮ|| ಎಂ. ಸೊಣ್ಣಪ್ಪನವರ ಗ್ರಾಮೋಫೋನ್ ಸಂಗೀತವು ನಡೆಯುತ್ತಿರಲು ಸಭಿಕರೆಲ್ಲರಿಗೂ ಗಂಧಪುಷ್ಪ ತಾಂಬೂಲಾದಿಗಳು ಕೊಡಲ್ಪಟ್ಟವು. ತರುವಾಯ ಸಭಿಕರೆಲ್ಲರೂ ಫಲಾಹಾರ ಮಾಡಿದ ನಂತರ ಮ|| ಪರಂಸ್ತು ಶ್ರೀನಿವಾಸಯ್ಯನವರಿಂದ ಗ್ರೂಪ್ ಫೋಟೋ ತೆಗೆಯಲ್ಪಟ್ಟಿತು. ಸಭಾಕಾರ್ಯಗಳು ಸಂತೋಷಪೂರ್ವಕವಾಗಿ ಸಮಾಪ್ತಿಗೊಳಿಸಲ್ಪಟ್ಟವು. ಮ|| ಮಾಕಂ ಸುಬ್ರಾಯಶೆಟ್ಟಿಯವರು ಹೇಳಿದ ಮುಖ್ಯ ಸಂಗತಿಗಳೇನೆಂದರೆ—

ಈ ನಮ್ಮ ಭರತಖಂಡವು ಅತ್ಯಂತ ಫಲವತ್ತಾದ ಪ್ರದೇಶವಾಗಿಯೂ, ಕೈಗಾರಿಕೆ ಕೆಲಸಗಳಿಗೆ ಬಹಳ ಅನುಕೂಲವುಳ್ಳದಾಗಿಯೂ ಇರುತ್ತೆ. ಇಂಥಾ ದೇಶವು ಪೂರ್ವದಲ್ಲಿ ಅನೇಕ ಪ್ರಬಲರಾದ ರಾಜರುಗಳಿಂದ ಆಳಲ್ಪಡುತ್ತಿತ್ತು. ಆದಾಗ್ಯೂ ಆ ಕಾಲದಲ್ಲಿ ಕೈಗಾರಿಕೆ ಕೆಲಸಗಳು ನವೀನ ಪದ್ಧತಿಗಳಿಲ್ಲದೆ, ದೇಶವು ಅಷ್ಟು ಉತ್ತಮಸ್ಥಿತಿಗೆ ಬಂದಿರಲಿಲ್ಲ. ಇಂಥಾದ್ದರಲ್ಲಿ ನಮ್ಮ ಬ್ರಿಟಿಷ್ ಸಾಮ್ರಾಜ್ಯದ ಪತಾಕೆಯಿಂದಲೂ, ಅವರ ನಾಗರಿಕತೆಯಾದ ಬುದ್ಧಿಯಿಂದಲೂ, ನಮ್ಮ ಸಾಮ್ರಾಜ್ಯಲಕ್ಷ್ಮಿಯು ಅವರಿಂದ ಶೋಭಾಯಮಾನವಾಗಿ ತನ್ಮೂಲಕ ನಮ್ಮಗಳಿಗೆಲ್ಲಾ ಸುಖ ಸಂತೋಷಾಭಿವೃದ್ಧಿಗಳನ್ನು ಉಂಟುಮಾಡಿರುತ್ತೆ. ಇದರಿಂದ ನಮ್ಮ ದೇಶವು ಇಷ್ಟು ನವನಾಗರಿಕಕ್ಕೆ ಬರಲು ಕಾರಣವಾಗಿರುತ್ತೆ. ಹೀಗಿರುವಲ್ಲಿ ನಮ್ಮ ಇಂಡಿಯಾ ದೇಶದಲ್ಲೆಲ್ಲಾ ಕೀರ್ತಿ ಯಶಸ್ಸನ್ನು ಹೊಂದಿರುವ ಈ ನಮ್ಮ ಮೈಸೂರು ದೇಶದಲ್ಲಿ ಧರ್ಮ ಪ್ರಭುಗಳಾದ ಶ್ರೀಮನ್ಮಹಾರಾಜಾ ಸರ್ಕಾರದವರು ಪ್ರಜೆಗಳ ಏಳಿಗೆಯನ್ನು ಬಯಸಿ ಏರ್ಪಡಿಸುತ್ತಿರುವ ಕೈಗಾರಿಕೆ, ವಿದ್ಯಾಭಿವೃದ್ಧಿ, ವ್ಯವಸಾಯಾಭಿವೃದ್ಧಿ, ವಾಣಿಜ್ಯಾಭಿವೃದ್ಧಿ, ಈ ವಿಷಯಗಳನ್ನು ಕುರಿತು ಮಾಡಿರುವ ಪ್ರೋತ್ಸಾಹವೇ ಮೊದಲಾದ ಸಹಾಯಗಳು ನಮ್ಮ ಶ್ರೀಮನ್ಮಹಾರಾಜಾ ಕೃಷ್ಣರಾಜ ಒಡೆಯರ್ ಬಹದ್ದೂರ್, ಜಿ. ಸಿ. ಎಸ್. ಐ. ರವರಿಂದಲೂ, ಇದಕ್ಕೆಲ್ಲಾ ಕಾರಣ ಕರ್ತರಾದ ನಮ್ಮ ಸಚಿವ ಶಿರೋಮಣಿಗಳಾದ ಮ|| ಎಂ. ವಿಶ್ವೇಶ್ವರಯ್ಯನವರಿಂದಲೂ ನಮ್ಮ ದೇಶವು ನವನಾಗರಿಕಕ್ಕೆ ಬರುತ್ತಾ ಇರುವ ಸಂಗತಿ ಸರ್ವಜನ ವ್ಯಕ್ತವಾಗಿರುತ್ತೆ. ಇಂಥಾದ್ದರಲ್ಲಿ ನಮ್ಮ ಸಬ್ ಡಿವಿಜನ್ ಸಾಹೇಬರವರಾದ ಮ|| ಎಂ. ಜಿ. ಕೃಷ್ಣಸ್ವಾಮಿರಾಯರವರೇ ಮೊದಲಾದ ಮಹನೀಯರುಗಳಾದ ತಾವುಗಳೆಲ್ಲರೂ ದಯಮಾಡಿಸಿ ಈ ದಿನ ಈ ನಮ್ಮ ಗ್ರಾಮದಲ್ಲಿ ತಮ್ಮಗಳ ಸಹಾಯದಿಂದ ಏರ್ಪಡಿಸಿರುವ ಟೈಲ್ ಫ್ಯಾಕ್ಟರಿಯನ್ನು ಸ್ಥಾಪಿಸಿದ್ದಕ್ಕಾಗಿ ನಾವುಗಳು ತಮ್ಮಗಳಿಗೆ ಕೃತಜ್ಞತಾ ಪೂರ್ವಕವಾಗಿ ವಂದಿಸುತ್ತೇವೆ. ನಮ್ಮ ಅಮಲ್ದಾರ್ ಮ|| ಶ್ರೀನರಸಿಂಹಶಾಸ್ತ್ರಿಗಳವರು ಮೊದಲು ನಮಗೆ ಟೈಲ್ ಫ್ಯಾಕ್ಟರಿ ಏರ್ಪಡಿಸಬೇಕೆಂದು ಪ್ರೋತ್ಸಾಹಿಸಿ ಗ್ಯಾಂಟ್ ಫ್ರೀ ತರಿಸಿಕೊಟ್ಟದ್ದಲ್ಲದೆ ನಮ್ಮ ಸಬ್ ಡಿವಿಜನ್ ಸಾಹೇಬರವರು ಬಹಳ ಪ್ರೋತ್ಸಾಹಪಡಿಸಿ ಹೆಂಚನ್ನು ಮಾಡಿಸಿ ಮೈಸೂರಿಗೆ ಕಳುಹಿಸಿ ಅಲ್ಲಿ ಚೆನ್ನಾಗಿಯೂ, ಬಾಳಿಕೆಯಾಗಿಯೂ ಇರುತ್ತೆಂತ ಸರ್ಟಿಫಿಕೇಟು ಆದನಂತರ ನಮ್ಮ ಅಮಲ್ದಾರ್ ಮ|| ಶ್ರೀನರಸಿಂಹಶಾಸ್ತ್ರಿಗಳವರಿಂದ ಇದಕ್ಕೆ ಷೇರುಗಳನ್ನು ಜನರಿಂದ ಏರ್ಪಡಿಸಿ ಪಿರ್ಮ್ ತೆರೆಸಲ್ಪಟ್ಟಿತು. ಮುಂದೆ ರೈಲು ಬರುವ ಸಂದರ್ಭವಿರುವದರಿಂದಲೂ, ಈಗ ಈ ಯಂತ್ರವು ಸ್ಥಾಪಿಸಲ್ಪಟ್ಟದ್ದರಿಂದಲೂ, ಈ ಗ್ರಾಮದ ಬಡಪ್ರಜೆಗಳಿಗೆ ಜೀವನೋಪಾಯಕ್ಕೆ ಮಾರ್ಗ ಉಂಟುಮಾಡಿಸುತ್ತಾರೆ. ಆದುದರಿಂದ ಪಿರ್ಮ್ ಷೇರುದಾರರೂ ಈ ಗ್ರಾಮದ ಪ್ರಜೆಗಳೂ ಸದಾ ಕೃತಜ್ಞರಾಗಿ ಇರುತ್ತೇವೆ. ಸಮಸ್ತರೂ ನಮ್ಮಗಳ ಮೇಲೆ ವಿಶ್ವಾಸವಿಟ್ಟು ಈ ಫ್ಯಾಕ್ಟರಿ ಅಭಿವೃದ್ಧಿ ಹೊಂದುವ ಹಾಗೆ ತಕ್ಕ ಪ್ರೋತ್ಸಾಹಗಳನ್ನು ಕೊಟ್ಟು ನಮ್ಮ ಫ್ಯಾಕ್ಟರಿಯಲ್ಲಿ ತಯಾರಾಗುವ ಹೆಂಚನ್ನೇ ಉಪಯೋಗಿಸುವ ಹಾಗೆ ಮಾಡಬೇಕೆಂದು ಪ್ರಾರ್ಥಿಸುತ್ತೇವೆ ಎಂಬುವದೇ.

ಒಬ್ಬ ಖಾತ್ರಿದಾರ್.

ಖಾತ್ರಿದಾರರಿಗೆ ನೋಟೀಸ್.

ಖಾತ್ರಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಕರೆಸ್ಪಾಂಡೆನ್ಸ್.

ಆಶ್ಚರ್ಯಕರವಾದ ಹೆರಿಗೆ.

ಅಯ್ಯಾ,—ಕೊಪ್ಪ ತಾಲ್ಲೂಕು ಹೊಸೂರು ಗ್ರಾಮದ ಮಜರೆ ಹೊನಗಾರಲ್ಲು ಕಳೆದ ತಿಂಗಳು ತಾ. 19 ನೇ ಶನಿವಾರ ಮಧ್ಯಾಹ್ನ ತಳೀ ಪೈಕದ ತಿಮ್ಮ ಎಂಬುವನ ಹೆಂಡತಿ ಲಿಂಗಿ ಎಂಬುವಳು ಏಕಕಾಲದಲ್ಲೇ ಮೂರು ಗಂಡು ಶಿಶುಗಳನ್ನು ಪ್ರಸವಿಸಿ, ಇನ್ನೂ ಉದರದಲ್ಲಿದ್ದ ಸುಮಾರು ಎರಡು ಶಿಶುಗಳನ್ನು ಪ್ರಸವಿಸುವಷ್ಟರಲ್ಲೇ ನಂಜು ಜಾಸ್ತಿಯಾಗಿ ಮೃತಪಟ್ಟಿರುತ್ತಾಳೆಂದೂ, ಶಿಶುಗಳು ಚೆನ್ನಾಗಿ ಬೆಳೆದಿರುತ್ತವೆ ಎಂದೂ, ಹುಟ್ಟಿದ ಕೂಡಲೇ ಬಲಗೈ ಹೆಬ್ಬೆಟ್ಟನ್ನು ಚೀಪಿದವೆಂತಲೂ, ಚಟುವಟಿಕೆಯಾಗಿ ಆಡಿಕೊಂಡವು ಎಂತಲೂ ಈಗತಾನೇ ತಿಮ್ಮನು ಬಂದು ನನ್ನಲ್ಲಿ ತಿಳಿಸಿದನು. ಇದು ನಿಜವಾದದ್ದೆಂದು ಖಂಡಿತ ತಿಳಿದುಬಂದಿರುತ್ತೆ. ಈ ನಮ್ಮ ಕಾಲದಲ್ಲಿ ಏನೇನು ಆಶ್ಚರ್ಯಗಳನ್ನು ನೋಡುತ್ತೇವೆಯೋ ನಿರೀಕ್ಷಿಸಬೇಕಾಗಿದೆ.

ಎಸ್. ಸುಬ್ಬರಾವ್, ಹಾಲುಮನುಷ್ಯರು.

ಸ್ಕೂಲುಗಳಲ್ಲಿ ಯಾವ ಚರಿತ್ರೆ ಉಪಯೋಗಿಸಬೇಕು?

ಅಯ್ಯಾ,—ಇಲಾಖಾ ತಾ 13-4-1914 ಉಳ್ಳ ಸರ್ಕಲರಿನಲ್ಲಿ 1914-15 ನೇ ಸಾಲಿಗೆ "ಇ. ಮಾರ್ಸ್‌ಡನ್ ಇವರ ಚರಿತ್ರೆ." ಉಪಯೋಗಿಸಬೇಕೆಂದಿರುತ್ತೆ; ತಾ. 11-5-1914 ಉಳ್ಳ ಸರ್ಕಲರಿನಲ್ಲಿ "ಹಿಂದೂ ಚರಿತ್ರಸಂಗ್ರಹ"ಕ್ಕೆ ಬದಲಾಗಿ ಟೆಕ್ಸ್ಟ್ ಬುಕ್ಕಾಗಿ 4-5 ನೇ ತರಗತಿಗಳಿಗೆ "ಇ. ಮಾರ್ಸ್‌ಡನ್ ಚರಿತ್ರೆ"ಯನ್ನೇ ಉಪಯೋಗಿಸಬೇಕೆಂದಿರುತ್ತೆ. ಈಗ ಕೆಲವು ಸ್ಕೂಲುಗಳಲ್ಲಿ ಚರಿತ್ರಸಂಗ್ರಹವನ್ನೂ, ಕೆಲವು ಸ್ಕೂಲುಗಳಲ್ಲಿ "ಮಾರ್ಸ್‌ಡನ್ ಚರಿತ್ರೆ"ಯನ್ನೂ ಪಾಠಮಾಡುತ್ತಿದ್ದಾರೆ. ಪುನಃ ಜೂನ್ ತಿಂಗಳಲ್ಲಿ ತಲುಪಿದ ಸರ್ಕಲರಿನಲ್ಲಿ 2, 3, 4 ಮತ್ತು 5 ನೇ ತರಗತಿಗಳಿಗೆಲ್ಲಾ "ಹಿಂದೂ ಚರಿತ್ರಸಾರ" ಪಾಠಮಾಡಬೇಕೆಂದಿರುತ್ತೆ. 2, 3, 4 ಮತ್ತು 5 ನೇ ತರಗತಿಗಳಿಗೆಲ್ಲಾ "ಹಿಂದೂ ಚರಿತ್ರಸಾರ" ಮಾಡಬೇಕೇ? ಅಥವಾ, ಪೂರ್ವದಂತೆ 2 ನೇ ತರಗತಿಗೆ ಚರಿತ್ರಸಾರ (ಮೈಸೂರು), 3 ನೇ ತರಗತಿಗೆ "ಹಿಂದೂ ಚರಿತ್ರ ಸುಲಭಸಾರ," 4-5 ನೇ ತರಗತಿಗೆ ಮಾರ್ಸ್‌ಡನ್ ಯಾ ಚರಿತ್ರಸಾರ ಮಾಡಬೇಕೇ? ಯಾವದು ಮಾಡಬೇಕು? ತಮ್ಮ ಪತ್ರಿಕಾ ಮುಖೇನ ಇತ್ಯರ್ಥಪಡಿಸಿಕೊಡಬೇಕಾಗಿ ಕೇಳಿಕೊಳ್ಳುವ

ವಿದ್ಯಾಭಿಮಾನಿ.

ತಾಲ್ಲೂಕು ವರ್ತಮಾನ.

ದಾವಣಗೆರೆ ತಾ|| ಕೊಡಗನೂರು.—ಮೊನ್ನೆ ವಿಜಯದಶಮಿ ದಿನ ಇಲ್ಲಿನ ಪ್ರಜೆಗಳು ನಿಂ ಪಯೋರಿಮಾಟಾಚಾರ್ಯರೊಪ್ಪಳ, ಸಿ. ನಾರಾಯಣಸ್ವಾಮಿ ಅಯ್ಯಂಗಾರ್, ಸ್ಟೇಷನ್ ಮಾಸ್ಟರ ಈ ಉಭಯತ್ರರ ಆಮಂತ್ರಣಕ್ಕೆ ಮಾನಕೊಟ್ಟು ತಮ್ಮ ಮಿತ್ರಮಂಡಲಿಯಿಂದ ಸಭೆಯನ್ನು ಅಲಂಕರಿಸಿದರು. ಬೀಳಿಗಿ ರಾಮಶೆಟ್ಟಿಯವರು ಸಭೆ ಸೇರಿದ್ದ ಸಂಗತಿಯನ್ನು ಎಲ್ಲರಿಗೂ ವಿಜ್ಞಾಪಿಸಿ, ಪಯೋರಿಮಾಟಾಚಾರ್ಯರಿಗೆ ಉಪನ್ಯಾಸ ಮಾಡುವದಕ್ಕೆ ಹೇಳಿದರು. ಅವರು ವಿಜಯದಶಮಿ ಮುಹೂರ್ತವು ನಮ್ಮ ಜಾರ್ಜ್ ಪ್ರಭುಗಳಿಗೆ ವಿಜಯ ಕೊಡಲೆಂದು ದೇವರನ್ನು ಪ್ರಾರ್ಥಿಸಿ, ಶ್ರೀಮನ್ಮಹಾರಾಜರನ್ನು ಶ್ರೀನಾರ ಬೃಹಸ್ಪತಿಗೆ ಹೋಲಿಸಿ ಉಪನ್ಯಾಸ ಮಾಡತೊಡಗಿದರು. ಸ್ವಲ್ಪದರಲ್ಲಿಯೇ ಈಗ ನಡೆಯುವ ಯುದ್ಧದ ವಿವರವನ್ನು ಎಲ್ಲರಿಗೂ ತಿಳಿಯಹೇಳಿ ವಾರ್ ಫಂಡಿಗೆ ಸರ್ವರೂ ಸಹಾಯಮಾಡಬೇಕೆಂದು ಬೇಡಿಕೊಂಡರು. ಕೂಡಲೇ ಸ್ಥಳದಲ್ಲಿಯೇ 50 ರೂಪಾಯಿ ಸುಮಾರು ವಸೂಲ್‌ಮಾಡುವ ಏರ್ಪಾಡುಮಾಡಿದರು. ಅನಂತರ ಎಲ್ಲಾ ಕೊಡಗನೂರ ನಿವಾಸಿಗಳೂ ಶ್ರೀಮನ್ಮಹಾರಾಜರಿಗೂ ಮತ್ತು ಜಾರ್ಜ್ ಪ್ರಭುಗಳಿಗೂ ಶ್ರೇಯೋಭಿವೃದ್ಧಿಯನ್ನು ಅಪೇಕ್ಷಿಸಿ ಸಭೆ ಬರಖಾಸ್ತಾದವು.

ಸ್ಫಟಿಕದ ಉಪನೇತ್ರ.

ಬಹಳ ಮೇಲಾದ ಉಪನೇತ್ರ ಕ್ರಯ ೩-೦-೦



ಸ್ಫಟಿಕದ ಉಪನೇತ್ರವನ್ನು ಉಪಯೋಗಿಸಿ ನಮ್ಮ ದೃಷ್ಟಿಯನ್ನು ಕಾಪಾಡಿಕೊಳ್ಳಿ. ನಮ್ಮಲ್ಲಿ ಸ್ಫಟಿಕದ ಉಪನೇತ್ರಗಳು ಕ್ರಮಕ್ಕೆ ದೊರೆಯುತ್ತವೆ. ಬೇಕಾದವರು ಬರೆದರೆ ಎಲ್ಲಾ ತರಹದ ಮತ್ತು ಎಲ್ಲಾ ನಮೂನಿನ ಉಪನೇತ್ರಗಳು ಕಳುಹಿಸುತ್ತೇವೆ. ಅವರವರ ವಯಸ್ಸು ತಿಳಿಸಬೇಕು; ಅತ್ಯದ್ಭುತ ಪರೀಕ್ಷೆ ಮಾಡಿ ಕಳುಹಿಸುತ್ತೇವೆ.

ವಿಳಾಸ—ದಯಾನಿಧಿ, ರಾಜಾಪಿಳ್ಳಾಸ,
ಪಿಳ್ಳಪಾಕಂ, ಮದ್ರಾಸು.

[222-1]

ಪ್ರಸಿದ್ಧ ಪತ್ರಿಕೆ.

ವೃತ್ತಾಂತ ಪತ್ರಿಕೆಯ ಏಜಂಟರಿಗೂ, ಸ್ಕೂಲ್ ಮಾಸ್ಟರ್‌ಗಳಿಗೂ ಮತ್ತೂ ವೃತ್ತಾಂತ ಪತ್ರಿಕೆ ಚಂದಾದಾರರಿಗೂ ಸದಾ ಸೂಚನೆ.

1915 ನೇ ಇಸವಿಯ ಕ್ಯಾಲೆಂಡರ್ ಬಿಕರಿಗೆ ಸಿದ್ಧವಾಗಿದೆ

ಕ್ರಯ 1 ಕ್ಕೆ 6 ಪೈ. 50 ಕ್ಕೆ 11 ಆಣೆ, 100 ಕ್ಕೆ 1 ರೂ. 5 ಆಣೆ, ಪ್ಯಾಕಿಂಗ್ ಪೋಸ್ಟೇಜು ಪ್ರತ್ಯೇಕ.

50 ಪ್ರತಿಗಳಿಗಿಂತಲೂ ಕಡಿಮೆಯಾಗಿ ಪೋಸ್ಟ್ ಮೂಲಕ ಖಂಡಿತವಾಗಿಯೂ ರವಾನಿಸಲಾಗುವುದಿಲ್ಲ. ಈ ಕ್ಯಾಲೆಂಡರಿನಲ್ಲಿ ತಾರೀಖು, ತಿಂಗಳು, ವಾರ, ತಿಥಿ, ನಕ್ಷತ್ರ, ಆಯಾಯ ದಿವಸದ ಹಬ್ಬವೇ ಮೊದಲಾದ ಮುಖ್ಯ ವಿಷಯಗಳು ಗೌರ್ನಮೆಂಟ್ ರಜಾ ದಿವಸಗಳೂ, ಇವೇ ಮೊದಲಾದ ಮುಖ್ಯ ವಿಷಯಗಳನ್ನೂ ನುಣುಪಾದ (ಗ್ಲೇಜ್) ಕಾಗದದಲ್ಲಿ ಮೈಸೂರ್ ಶ್ರೀಮನ್ಮಹಾರಾಜರವರ ಮತ್ತೂ ಯುವರಾಜರವರ ಭಾವಚಿತ್ರಗಳನ್ನೂ, ಮೈಸೂರ್ ಸಂಸ್ಥಾನದಲ್ಲಿ ಈಗಿನ ಅರಮನೆಯ ನವರಾತ್ರಿ ಮಹೋತ್ಸವದ ದರ್ಬಾರ್ ಸಹಿತ ಇರುವ ನಕ್ಷೆಯನ್ನೂ ಸಹಾ ಅಂದವಾಗಿ ಪ್ರಿಂಟುಮಾಡಿಸಿ ಮೇಲ್ಕಂಡ ದರದಂತೆ ಬಹು ಸುಲಭ ಬೆಲೆಗೆ ಕೊಡುತ್ತಲಿದ್ದೇವೆ. ಬೇಕಾದವರು ಜಾಗ್ರತೆ ಆರ್ಡರ್ ಕೊಟ್ಟು ತರಿಸಿಕೊಳ್ಳುವದು ಉತ್ತಮ. ನಿದಾನಮಾಡಿ ಹೋದ ವರುಷದಂತೆ ಕ್ಯಾಲೆಂಡರ್‌ಗಳು ಸಿಕ್ಕದೇ ಪೇಚಾಡುವುದಕ್ಕಿಂತಲೂ ಈ ದಿವಸವೇ ಆರ್ಡರ್ ಕೊಟ್ಟು ತರಿಸಿಕೊಳ್ಳುವುದು ಉತ್ತಮ. ಹೋದ ವರುಷ ಕ್ಯಾಲೆಂಡರ್‌ಗಳು ಮುಗಿದ ನಂತರ ಬಂದ ಅನೇಕ ಆರ್ಡರ್‌ಗಳನ್ನು ಕ್ಯಾನ್ಸಲ್ ಮಾಡಿಬಿಟ್ಟೆವು. ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ.

[221-1]

ನಮ್ಮ ವಿಳಾಸ—ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕೃಷ್ಣರಾಜ ಮೊಹಲ್ಲಾ, ಮೈಸೂರು.

ದಸರಾ ಮಹೋತ್ಸವದ ಕೈಗಡಿಯಾರ ಅರ್ಧಕ್ರಯ ರೂ. 1–13–0.

ಈ ಬರುವ ದಸರಾ ಮಹೋತ್ಸವಕ್ಕಾಗಿ ಉಪಯೋಗವಾಗಿರುವ ಈ ಹೆಚ್ಚು ಕ್ರಯವುಳ್ಳ ಕೈಗಡಿಯಾರವನ್ನು ಈ ಕೆಳಗೆ ನಮೂದು ಮಾಡಿದ ಅಲ್ಪಕ್ರಯಕ್ಕೆ ನಮ್ಮ ಕಂಪನಿ ಪ್ರಖ್ಯಾತಿಹೊಂದುವದಕ್ಕಾಗಿ ವಿಕ್ರಯ ಮಾಡಲ್ಪಡುತ್ತ. ಈ ಸಮಯ ಬಹು ಶ್ಲಾಘ್ಯಕರವಾದದ್ದು.

ವಿಳಾಸ:—ರಾಧಾಕೃಷ್ಣ, 2–18 ನೆ ನಂಬರು, ಕಾರುಸ್ಟ್ರೀಟು,
[222-1] ತಿರುವಲ್ಲಿಕ್ಕೇಣಿ, ಮದ್ರಾಸು.

ಎಲೆಕ್ಟ್ರೋ ಗಿಲ್ಟು ಚಿನ್ನದ ಆಭರಣಗಳು.

ಕೋಣಾಪೂವು 1-0-0 ರಾಮಂತಿಗೆ ಹೂವು 1-0-0 ಪಚ್ಚೆ ಕಲ್ಲಿ ನಜಡವಿಲ್ಲೆ ದೊಡ್ಡದು 2-0-0, ಚಿಕ್ಕದು 1-12-0.

ಜಡೆಕುಚ್ಚು 2-0-0 ಕೆಲಸಗಾರರ ಕೈಯಲ್ಲಿ

ಭಂಗಾರದ ಕೆಲಸದಲ್ಲಿ ಪ್ರಸಿದ್ಧರಾದ ತಂಜಾವೂರಿನ ತಯಾರಿಸಲ್ಪಟ್ಟಿರುವ ಎಲೆಕ್ಟ್ರೋ ಯಾ ಹಿತ್ತಾಳೆ ಯಿಂದ ಎಲೆಕ್ಟ್ರಿಕ್ ಶಕ್ತಿಯಿಂದ ಭಂಗಾರದ ಗಿಲ್ಟು ಹಾಕಿದ ಈ ಮೋಲ್ಯಂದ ಆಭರಣಗಳು ನಮ್ಮಲ್ಲಿ ತಯಾರಿಸುತ್ತೇವೆ. ಇವನ್ನು ಪರೀಕ್ಷಿಸಿ ನೋಡಿರಿ.

ವಿಳಾಸ. ತಿ. ಗಿರಿರಾಜ, ನಂ. 1, ಭುಜಂಗ ರಾವ್ ... ಸ್ಟ್ರೀಟು, ಮದರಾಸು.

ಸ್ತ್ರೀಯರಿಗೆ ಬಹಳ ಅವಶ್ಯಕವಾದದ್ದು.

ನೂತನವಾಗಿದೆ. ಬೇಗ ನೋಡಿ. ಆಶ್ಚರ್ಯವಾಗಿದೆ.

ನುಹಂಕಾಳೀ ಭಸ್ಮ ಅಥವಾ ಆಶ್ಚರ್ಯವಾದ ರೋಮಹಾರಿ.

ನಮ್ಮ ಹಿಂದೂ ಸ್ತ್ರೀಯರು ಹೀನಗಳಾದ ರೋಮನಾಶಕ ವಸ್ತುವನ್ನು ತೀಯಿವ ಬಹಳ ಹಣ ಖರ್ಚುಮಾಡುವರು; ನಾನಾ ಕಷ್ಟನಷ್ಟಗಳಿಗೆ ಗುರಿಯಾಗುತ್ತಾರೆ. ಅಂಥವರಿಗೆ ಈಗ ಒಳ್ಳೇ ಸಮಯ ಒದಗಿದೆ. ನಮ್ಮ ನಂಬಿಕೆಯಾದ ಭಸ್ಮವನ್ನು ಅನೇಕರು ಉಪಯೋಗಿಸಿ ಪ್ರಯೋಜನ ಹೊಂದಿದಾರೆ. ಒಂದಾವರ್ತಿ ಉಪಯೋಗಿಸಿದರೆ ಇದರ ಗುಣ ವೇದ್ಯವಾಗುತ್ತೆ.

ಇದು ಹಚ್ಚಿದಾಗ ಉರಿಯಾಗುವದಿಲ್ಲ; ಚರ್ಮದ ಮೇಲೆ ಕಲೆ ನಿಲ್ಲುವುದೇ ಇಲ್ಲ. ಸ್ವಲ್ಪ ಭಸ್ಮವನ್ನು ಗಟ್ಟಿಯಾಗಿ ನೀರಿನಲ್ಲಿ ಕಲಸಿ ಬೇಕಾದ ಸ್ಥಳದಲ್ಲಿ ಹಚ್ಚಿ ಸ್ವಲ್ಪ ಹೊತ್ತಾದ ಮೇಲೆ ... ತೊಳೆದರೆ ಕೂದಲು ಚೊಕ್ಕಟವಾಗಿ ಹೋಗಿ ನುಣುಗೆ ... ಉಂಟಾಗುತ್ತೆ. ಆದ್ದರಿಂದ ಇದು ತುಂಬಾ ಅನುಕೂಲ ... ಬಾಟ್ಲಿಗೆ ... ಅಂಚೆ ಅಧಿಕ ಆಣೆ ... ಬೆಲೆ 6 ಆಣೆ ... ಚಿಕ್ಕದ ಬಾಟ್ಲಿಗೆ ... (ಚಿಕ್ಕವುಗಳ ...) ರೂ 1 ... ಅಂಚೆ ಖರ್ಚು ಬೇರೆ.

[223-1] ವಿಳಾಸ ... ಎಲ್. ನರಸಿಂಹಸ್ವಾಮಯ್ಯ, ಟ್ರಿಪ್ಲಿಕೇನ್, ಮದರಾಸ್

ನಿನಗೆ ಮೈ ಸ್ವಸ್ಥವಿಲ್ಲವೋ?

ನಿನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ, ನಿನಗೆ ಯಾವ ನೋವೇ ಉಂಟಾಗಿರಲಿ—"ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತಿದೆಯೋ?" ಎಂದು ನಿನ್ನನ್ನು ನೀನೇ ಕೇಳಿಕೋ; ಹಾಗೆ ಆಗದಿದ್ದರೆ ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ನುಂಗಿಕೋ. ಮಾರನೇ ದಿನ ಬೆಳಿಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನಿನಗೆ ಮೈ ಸ್ವಸ್ಥವಾಗುವುದು.

(೧೨ ಆಣೆ ಬುಡ್ಡಿ ಪರಿಮಾಣ)

ಮಲಬಂಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ ಕೆಡುವುದು. ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲಕಾರಣವಾಗಿರುವುದು. ಮಲಬಂಧದಿಂದ ರೋಗಗಳೇಕೆ ಉಂಟಾಗುವುವೆಂಬುವನ್ನು ಇದರಿಂದ ತಿಳಿಯಬಹುದು. ಆ ರೋಗಗಳಾವುವೆಂದರೆ:—ಪಿತ್ತಕೋಶ ರೋಗ; ಪಿತ್ತ; ಪಿತ್ತಜ್ವರ; ಅಜೀರ್ಣ; ಅಗ್ನಿಮಾಂದ್ಯ; ಗಾಬರಿ; ಅಶಕ್ತಿ; ಎದೆಯು ತಲ್ಲಣಿಸುವುದು; ತಲೆತಿರುಗುವುದು; ತಲೆನೋವು; ಹೊಟ್ಟೆಯುಬ್ಬರ; ಸೂಳೆಕೇಗಿನ ಹೊಟ್ಟೆನೋವು; ಹೆಂಗಸರ ವ್ಯಾಧಿಗಳು: ಇವೇ ಮೊದಲಾದವು. ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು.

ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದವು. ಗಂಡಸರಿಗಾಗಲಿ ಹೆಂಗಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನು ಕೆಟ್ಟಗಾದ ವಾಯುವನ್ನು ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ಶುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇಗ ರೋಗವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು. [198-5]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ. ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ರಷ್ಟು ಹೆಚ್ಚು ಮಾತ್ರೆಗಳಿರುವುವು. ಔಷಧಗಳನ್ನು ಮಾರುವವರ ಬಳಿಯೆಲ್ಲಾ ದೊರೆಯುವುವು; ಅಥವಾ ಡೋನ್, ಪಿ. ಓ. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು.

WANTED

An EDITOR, an ASSISTANT EDITOR and a SUB-EDITOR for a non-political monthly Journal published separately in English and Kannada by the Mysore Economic Conference.

The applicants for the first place should have had journalistic experience and for the other two places good knowledge of Kannada essential. Pay according to qualifications, but will not exceed Rs. 300/-, 100/-, and 75/- for the three places, respectively. Appointment will be temporary for a period of three years and terminable within that period at three months' notice on either side. Applications with copies of testimonials, stating salary expected, should reach the undersigned on or before the 15th October, 1914.

For further information please refer to the *Mysore Gazette* of 17th September, 1914, or subsequent date, or apply to

SECRETARY,
13th Sept, 1914. *Mysore Economic Conference,*
[209-4] BANGALORE.

ಪಾಕೆಟ್ ಲೀವರ್ ವಾಚ್.

ಇದರ ಕ್ರಯ 6 ಬಹುಮಾನ ಸಮೇತ ರೂ. 2–13–0 ಮಾತ್ರ.

ಇದು ಮಕ್ಕಳ ಆಟದ ಬೊಂಬೆಯಂತೆ ಕೆಲವು ದಿವಸಗಳು ಆಟವಾಡಿ ನಂತರ ಕೆಟ್ಟುಹೋಗುವಂಥಾ ಅಲ್ಪ ಗಡಿಯಾರವಲ್ಲ. ಶ್ರೇಷ್ಠವಾದ ಮತ್ತು ಬಹು ಪ್ರಸಿದ್ಧವಾದ ಲೀವರು ಕೆಲಸದಿಂದ ತಯಾರಾದದ್ದು. ಗಂಭೀರವಾದ ಘಂಟೆ ಮತ್ತು ಮಿನಿಟ್‌ಗಳು ಮುಳ್ಳುಗಳುಳ್ಳದ್ದು. ಬಹು ಬಲಿಷ್ಠವಾದ ಮತ್ತು



ನಾಜೂಕಾದ ಯಂತ್ರಸಾಮಾನುಗಳಿಂದ ತಯಾರಾಗಿರುತ್ತೆ. ಅನೇಕ ವರುಷಗಳ ಪರಿಯಂತರ ಬಾಳಿಕೆ ಬರುವಂಥಾದ್ದು. ಆದಕಾರಣ ಆರ್ಡರುಗಳು ಬಂದು ಸುರಿಯುತ್ತಿವೆ. ಬಹುಮಾನಗಳ ತಪಸೀಲು:—1 ವಾಚ್ ಸರಪಣಿ, 2 ಉತ್ತರ ಮುಖಿ, 3 ಪರಿಮಳ ಅತ್ತರ್, 4 ಕರವಸ್ತ್ರ, 5 ನೋಟಾದ ಉಂಗುರ, 6 ನಟ್ಟು.

ವಿಳಾಸ—ವಿ. ಆರ್. ವೆಂಕಟರಮಣ ಅಂಡ್ ಕಂಪೆನಿ,
[141-13] ನಂ 7, ಕೋಸ್ ವೆಂಕಟಾಚಲಯ್ಯರ್ ಬೀದಿ, ಮದರಾಸು.

ನಂಬಿ ಮೋಸಹೋಗಬೇಡಿ.

ಇತರರು ಶಾಲುಗಳನ್ನು ಒಳ್ಳೇದೆಂದೂ, ಕಮ್ಮಿ ಕಿಮ್ಮತ್ತಿಗೆ ಕೊಡುತ್ತೇವೆಂದೂ ಹೇಳುವರು. ಇದನ್ನು ನಂಬಿ ಮೋಸಹೋಗಬೇಡಿ. ನಮ್ಮಲ್ಲಿ ಕಾಶ್ಮೀರಿ ಮತ್ತು ಎಲ್ಲಾ ತರಹದ ಉಣ್ಣೆ ಶಾಲುಗಳೂ 5 ರೂ. ನಿಂದ 7, 10, 50, ರೂ. ಗಳವರೆಗೂ ಸಿಕ್ಕುತ್ತವೆ. ಬಾಯಿಸಿಲ್ಲದಿದ್ದರೆ ಹಣ ವಾಪಸು ಮಾಡುತ್ತೇವೆ. ನಮ್ಮ ಕಾರಖಾನೆಗೆ ಲಂಡನ್, ಚಿಕಾಗೋ ಮುಂತಾದ ಅನೇಕ ಪ್ರದರ್ಶನಗಳಲ್ಲಿ ಚಿನ್ನ ಮತ್ತು ಬೆಳ್ಳಿಯ ಮೆಡಲುಗಳು ಮತ್ತು ಸರ್ಟಿಫಿಕೇಟುಗಳು ಬಂದಿವೆ. ಯಾವ ತರಹ ಬೇಕಾದ್ದು ಎಷ್ಟು ಕಿಮ್ಮತ್ತಿಗೆ ಬೇಕಾದರೂ ನಮ್ಮಲ್ಲಿ ಸಿಕ್ಕುತ್ತವೆ. ಇಂಗ್ಲೀಷಿನಲ್ಲಾಗಲಿ, ಹಿಂದುಸ್ಥಾನಿಯಲ್ಲಾಗಲಿ ನಮಗೆ ಬರೆಯಬೇಕು.

ನಮ್ಮ ಅಡ್ರೆಸ್ಸು—ಪೀರ್ ಬ್ರದರ್ಸ್,
ಶಾಲ್ ಮರ್ಚೆಂಟ್ಸ್, ಅಮೃತಸರ, ಪಂಜಾಬು.

PEER BROS., SHAWL MERCHANTS,
[166-8] *AMRITSAR, PANJAB.*

ನತ್ಮಲ್ ಕಂಪನಿ ಡೈರಿಗಳು.









1915 ನೇ ಇಸವಿ ಕನ್ನಡ ಮಾಡಲ್ ಪಾಕೆಟ್ ಡೈರಿಗಳು.

ತಯಾರಾಗಿ ಬಿಕರಿಗೆ ಸಿದ್ಧವಾಗಿದೆ. ಈಗಲೇ ಬರೆದು ತರಿಸಿಕೊಳ್ಳಿರಿ.

1 ನೇ ನಂ.	ಚಿಕ್ಕದು ಸಾದಾ	4 ಆಣೆ.
2 ನೇ ,,	,, ಬಟನ್ ಹಾಕಿದ್ದು ...	6 ,,
3 ನೇ ,,	ದೊಡ್ಡದು ಸಾದಾ ...	6 ,,
4 ನೇ ,,	,, ಬಟನ್ ಹಾಕಿದ್ದು	8 ,,

ಒಂದೇ ನಮೂನೆಯಲ್ಲಿ 12 ಡೈರಿಗಳನ್ನು ತರಿಸಿಕೊಳ್ಳುವವರಿಗೆ 1 ಡೈರಿ ಜಾಸ್ತಿ; ಅಥವಾ ಇನ್ನೂ ಹೆಚ್ಚಾಗಿ ತರಿಸಿಕೊಳ್ಳುವವರಿಗೆ ರೂ. ಗೆ 2 ಆಣೆಯಂತೆ ಡಿಸ್ಕೌಂಟು ದೊರೆಯುತ್ತೆ.

ವಿಳಾಸ—ಎಸ್. ಡಿ. ನತ್ಮಲ್ ಕಂಪೆನಿ,
[215-3] ದೊಡ್ಡಪೇಟೆ, ಮೈಸೂರು.

ಕುಂತಳಾನಂದ ತೈಲವು.

213-3

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಂಗಾರದ ಬಿಲ್ಲೆಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ. ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು. ಈ ತೈಲವು ಕೂದಲನ್ನು ಚೆನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುತ್ತದೆ. ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ.

ಬಹಳ ಶೀತಲವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದ್ದಾಗಿದೆ. ಬೆಲೆ ಬಾಟ್ಲಿಗೆ 1 ರೂಪಾಯಿ. 3 ಬಾಟಲಿಗೆ 2 ರೂಪಾಯಿ 10 ಆಣೆ. ಅಂಚೆ ಹಾಸಲು ಬೇರೆ. ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ.

ನಮ್ಮ ವಿಳಾಸ:—ಬಿ. ಎಮ್. ನಾಥ ಮತ್ತು ಕಂಪೆನಿ,
ವೇಪೇರಿ, ಮದರಾಸ್.

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು."

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು. ವಾಯು, ಕೀಲು, ಅರತಲೆ, ತಲೆನೋವುಗಳು; ಯಾವ ಕಾರಣದಿಂದ ಹುಟ್ಟುವ ಬಾಧೆಗಳಾಗಲಿ, ಉಬ್ಬಸ, ಹಲ್ಲುನೋವು, ಗಂಟು ಗಾರೆಸ್ಸುವುದು, ಕೆಮ್ಮುಗಳು, ಶೀತನೆಗಡಿ, ಶ್ವಾಸರೋಗ, ಜಜ್ಜು, ಉಳುಕು, ಛಳುಕು, ಚೇಳು ಕಡಿದ ಬಾಧೆ, ಇವೇ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ. ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು. ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲಿ ಕೊಡಿ ಎಂದು ಕೇಳು. ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೋ. ಈ ಯುಕ್ತಿಯಿಂದ ನೋವು ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ. ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ. ಲಕ್ಷಾಂತರ ಜನರು ಗುಣಹೊಂದಿದಾರೆ; ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ. [122-19]

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡಿ. ಅದರ ಕ್ರಯ ಬಾಟ್ಲಿಗೆ 12 ಆಣೆ; ಅಂಚೆ ವೆಚ್ಚ 4 ಆಣೆ. 3 ಅಥವಾ ಹೆಚ್ಚು ಬಾಟ್ಲಿ ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ. ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ. ವಿಳಾಸಗಳು:—(1) ಎಸ್. ಪೀಟರ್ಸ್, 37 ನಡಮುಟಿಪಿಳ್ಳೆ ಬೀದಿ, ಪುರಸವಾಕಂ, ವೇಪೇರಿ, ಮದರಾಸ್; (2) ಡಿ. ಎಸ್. ಕನ್ನಯ್ಯಶೆಟ್ಟಿರು, ಜನರಲ್ ಮರ್ಚೆಂಟ್, ತುಮಕೂರು.

ಮಕ್ಕಳಿರುವ ಮನೆಗಳಲ್ಲಿಯೂ ಪ್ರಯಾಣಕಾಲದಲ್ಲಿಯೂ ಛಳಿ ಮಳೆಗಾಲಗಳಲ್ಲಿಯೂ ಮಲೆನಾಡಿನಲ್ಲಿಯೂ ಸೋಂಕುರೋಗ ಸ್ಥಳಗಳಲ್ಲಿಯೂ ಆರೋಗ್ಯವನ್ನು ಕಾಪಾಡುವುದರಲ್ಲಿ ಶ್ರೇಷ್ಠತಮವಾದ

ಶ್ರೀಕರಕಸ್ತೂರಿಮಾತ್ರೆ

ಟಿಬೆಟ್ ದೇಶದ ಕಸ್ತೂರಿ—ಅನೇಕ ಪುಟಗಳಿಂದ ತಯಾರಿಸಿದ ಲೋಹಭಸ್ಮ—ಚಿನ್ನದ ರೇಖು ಮೊದಲಾದವುಗಳಿಂದ ಹಿರಿಯರ ಕಾಲದಿಂದಲೂ ತಯಾರಿಸಲ್ಪಡುತ್ತಿರುವ ಈ ಶ್ರೀಕರ ಕಸ್ತೂರಿಮಾತ್ರೆಗಳು ತಾಂಬೂಲವನ್ನು ರಂಜಿಸಿ ಎಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸಿ ಬಹಳ ಹೊತ್ತಿನವರೆಗೆ ಬಾಯಿ ಘಮಘಮಿಸುವಂತೆ ಮಾಡುವುವು. ಶೀತವಾಯು-ಕೆಮ್ಮು-ನೆಗಡಿ-ದಿನಜ್ವರ-ಮೂರನೇ ಜ್ವರ-ನಾಲ್ಕನೇ ಜ್ವರ-ಮಲೇರಿಯಾಜ್ವರ-ತಲೆನೋವು-ಮೈಕೈನೋವು ಮತ್ತು ಭಾರ-ಅರೋಚಕ-ಹಲ್ಲುನೋವು-ಹೊಟ್ಟೆನೋವು-ಮಲಬಂಧ-ಅಜೀರ್ಣಭೇದಿ-ಮಕ್ಕಳಿಗೆ ಸಾಧಾರಣವಾಗಿ ಬರುವ ಪಕ್ಕೆಗಳ ಸೆಳತ-ಹೊಟ್ಟೆಯುಬ್ಬರ-ಮಂದಜ್ವರ-ಭೇದಿ ಮುಂತಾದುವುಗಳನ್ನು ನಂಬಿಕೆಯಾಗಿ ಗುಣಪಡಿಸುತ್ತವೆ. ಒಂದು ವೇಳೆ ಈ ಮಾತ್ರೆಗಳನ್ನು ಪರೀಕ್ಷಿಸಿದರೆ ಯಾವಾಗಲೂ ಇವನ್ನೆ ತರಿಸುವರೆಂದು ನಾವು ಧೈರ್ಯವಾಗಿ ಹೇಳಬಲ್ಲೆವು. 250 ಮಾತ್ರೆ 4 ಆಣೆ. ಇದಕ್ಕೆ ಒಂದು ಇನಾಮು ವಿ. ಪಿ. ಛಾರ್ಜು ಪ್ರತ್ಯೇಕ. [220-49]

ಬಿ. ವಿ. ಪಂಡಿತ್, ಸದ್ವೈದ್ಯಶಾಲಾ, ನಂಜನಗೂಡು.

ಯಾಕೆ ಪರೀಕ್ಷಿಸಬಾರದು? ಭಂಗಾರದ ಪದಕ ಬಂದಿದೆ.

ಸೆಂಟ್, ಅತ್ತರುಗಳಲ್ಲೆಲ್ಲಾ ಶ್ರೇಷ್ಠವಾದವು.

ಆಟೋ ಮೋಹಿನಿ.

ಇದು ರಿಜಿಸ್ಟರ್ ಆಗಿದೆ. ಈಗಿನ ಕಾಲದಲ್ಲಿ ಇದೇ ನಿಲ್ಲುವ, ಸುವಾಸನೆಯುಳ್ಳ, ಮನೋಹರವಾದ ಮತ್ತು ಸರಿಯಾದ ಪರಿಮಳದ ದ್ರಾವಕ. ಕರವಸ್ತ್ರಕ್ಕೆ ನಾಲ್ಕು ತೊಟ್ಟು ಹಾಕಿಕೊಂಡರೆ ನಾಲ್ಕು ದಿನಗಳ ತನಕ ಘಮಘಮಿಸುವ ಸುವಾಸನೆ ಇರುತ್ತೆ. ಹಾಗೆ ದೀರ್ಘಕಾಲ ನಿಲ್ಲತಕ್ಕದ್ದಲ್ಲವೆಂದು ರುಜುವಾತು ಪಡಿಸಿಕೊಡುವವರಿಗೆ ನಾವು ಒಂದು ನೂರು ರೂಪಾಯಿ ಬಹುಮಾನ ಕೊಡುತ್ತೇವೆ. ಪರೀಕ್ಷೆಮಾಡಿ ನೋಡಿ, ಬಹುಮಾನವನ್ನು ಸಂಪಾದಿಸಿಕೊಳ್ಳಿ! ಕ್ರಯ! ಔನ್ಸ್ ಗಾಜಿನ ಬಿರಡೆಯ ಬಾಟ್ಲಿಗೆ ರೂಪಾಯಿ 2-0-0.

1 ಡ್ರಾಂ ಕೊಳವೆ 12 ಆಣೆ.

ಆಟೋ ಮೋಹಿನಿ ಪರಿಮಳದ ಸಾಬೂನ್‌ಗಳು ಡಜನ್ 1 ಕ್ಕೆ 12 ಆಣೆ.

ಎಲ್ಲರಲ್ಲೂ ಬಿಕರಿಗೆ ಇಟ್ಟಿದೆ. ಮದರಾಸ್ ಅಧಿಪತ್ಯಕ್ಕೆಲ್ಲಾ ಏಜೆಂಟರು—
ಶಾ ಭಗವಾನ್‌ದಾಸ್ ಚೂನಿಲಾಲ್ ಕಂಪನಿ,
[251-13] 177, ಚೈನಾಬಜಾರ್ ರೋಡ್, ಮದರಾಸ್.

ಮೈಸೂರು ಪ್ರಜಾಪ್ರತಿನಿಧಿ ಸಭೆಯು.

ಸಂಸ್ಥಾನಾಮುಳೆ ವ್ಯವಹರಿಸುವ ವಿಚಾರಗಳು.

ಪ್ರತಿನಿಧಿಗಳ ಪ್ರಾರ್ಥನೆಯೂ, ದಿವಾನರವರ ಪ್ರತ್ಯುತ್ತರವೂ.

ಪ್ರಾರ್ಥನೆ.—ಮೈಸೂರು ನ್ಯಾಯವಿಧಾಯಕ ಸಭೆಗೆ ಪ್ರತಿ ಒಂದು ಡಿಸ್ಟ್ರಿಕ್ಟಿನಿಂದಲೂ ಒಬ್ಬೊಬ್ಬ ಮೆಂಬರನ್ನು ಆಯಾ ಡಿಸ್ಟ್ರಿಕ್ಟಿನವರೇ ಚುನಾಯಿಸಿ ಕಳುಹಿಸುವಂತೆಯೂ, ನ್ಯಾಯವಿಧಾಯಕ ಸಭೆಯಲ್ಲಿ ಮೆಂಬರುಗಳು ಒಂದು ಪ್ರಶ್ನೆಗೆ ಸಂಬಂಧಪಟ್ಟಂತೆಯೇ ಇನ್ನು ಕೆಲವು ಪ್ರಶ್ನೆಗಳನ್ನು ಕೇಳುವಂತೆಯೂ, ನ್ಯಾಯವಿಧಾಯಕ ಸಭೆಯ ಮೆಂಬರುಗಳ ಪೈಕಿ ಕೆಲವರನ್ನು ಸಂಸ್ಥಾನದ ಆದಾಯವ್ಯಯಗಳ ವಿಮರ್ಶೆಗಾಗಿ ಕಮಿಟಿಮಾಡುವಂತೆಯೂ, ಸಂಸ್ಥಾನಾಮುಳೆ ಸರ್ಕಾರಿ ಕೆಲಸಕಾರ್ಯಗಳು ತೃಪ್ತಿಕರವಾಗಿ ನಡೆಯುವ ಭಾಗದಲ್ಲಿ ಮೆಂಬರುಗಳು ರೆಜಲ್ಯೂಷನ್‌ಗಳನ್ನು ಸೂಚಿಸಿ ಚರ್ಚೆಮಾಡುವಂತೆಯೂ ರಿಯಾಯಿತಿಗಳನ್ನು ದಯಪಾಲಿಸಬೇಕು. ಹಿಂದುಸ್ಥಾನದ ಎಲ್ಲಾ ನ್ಯಾಯವಿಧಾಯಕ ಕೌನ್ಸಿಲ್ ಮೆಂಬರುಗಳಿಗೂ ಇಂಡಿಯಾ ಗವರ್ನ್‌ಮೆಂಟಿನವರು ಈ ರಿಯಾಯಿತಿಗಳನ್ನೆಲ್ಲಾ ಕೊಟ್ಟಿರುತ್ತಾರೆ. ನಮ್ಮ ಸಂಸ್ಥಾನದಲ್ಲೂ ಇದುವರೆಗೆ ಈ ಕೌನ್ಸಿಲ್ಲಿನ ಮೆಂಬರುಗಳು ತುಂಬಾ ತೃಪ್ತಿಕರವಾಗಿ ಕಾರ್ಯಗಳನ್ನು ಮಾಡಿ ಚರ್ಚೆಗಳನ್ನು ನಡಿಸಿರುವಂತೆ ನಮ್ಮ ಗವರ್ನ್‌ಮೆಂಟಿನವರು ಮೆಚ್ಚಿಕೊಂಡಿರುವುದರಿಂದ ಈ ಹೊಸ ರಿಯಾಯಿತಿಗಳು ದೊರೆತರೆ ದೇಶಾಭ್ಯುದಯದಕ್ಕೂ ಪ್ರಜಾ ಸಮ್ಮತವಾದ ಆಳ್ವಿಕೆಗೂ ಅನುಕೂಲಿಸುತ್ತದೆ.

ದಿವಾನರವರ ಉತ್ತರ.—ಈ ಪೈಕಿ ಕೆಲವು ರಿಯಾಯಿತಿಗಳನ್ನು ನ್ಯಾಯವಿಧಾಯಕ ಸಭೆಗೆ ವಹಿಸಬೇಕೆಂದು ಸರ್ಕಾರದವರು ಆಲೋಚನೆಯಲ್ಲಿಟ್ಟುಕೊಂಡಿದಾರೆ. ಕಾಲಕ್ರಮದಲ್ಲಿ ಈ ರಿಯಾಯಿತಿಗಳು ದೊರಕುವವು.

ಪ್ರಾ.—ನಮ್ಮ ದೇಶದಲ್ಲಿ ಅನೇಕ ಜಮೀನ್‌ದಾರರಿಂದ ಕೂಲಿ ಆಳುಗಳು ಅಡ್ವಾನ್ಸು ಹಣವನ್ನೂ ಕೆಲಸದ ಮುಟ್ಟುಗಳನ್ನೂ ತಗೆದುಕೊಂಡು ಎಲ್ಲಿಯಾದರೂ ದಾಟಿಹೋಗುತ್ತಾರೆ. ಇಂಥವರನ್ನು ವಾರಂಟಿನಿಂದ ಹಿಡಿದು ತರಲು ಮಾರ್ಗವಿಲ್ಲದೆ ಅನೇಕ ಜಮೀನ್‌ದಾರರೂ ಪ್ಲಾಂಟರುಗಳೂ ನಷ್ಟಪಡುವರು. ಬ್ರೀಚ್ ಆಫ್ ಕಂಟ್ರಾಕ್ಟ್ ಆಕ್ಟನ್ನು ತಿದ್ದಿದರೆ ಈ ಕಷ್ಟ ತಪ್ಪುವುದು. ಇಲ್ಲವಾದರೆ ಮದರಾಸ್ ಲೇಬರ್ ಆಕ್ಟ್ ಎಂಬದನ್ನು ನಮ್ಮ ಸೀಮೆಯಲ್ಲೂ ಜಾರಿಗೆ ತರಬಹುದು. [ಇದು ಆಗಬಹುದೆಂದು ಸಭೆಯಲ್ಲಿದ್ದ ದೇಶೀಯ ಪ್ಲಾಂಟರುಗಳೆಲ್ಲಾ ಒಪ್ಪಿಕೊಂಡರು.]

ಉ.—ಈ ಲೇಬರ್ ಆಕ್ಟನ್ನು ಜಾರಿಗೆ ತರುವ ವಿಷಯದಲ್ಲಿ ಗವರ್ನ್‌ಮೆಂಟಿನವರು ಮದರಾಸ್ ಸರ್ಕಾರದವರೊಡನೆ ಕಾಗದಪತ್ರಗಳನ್ನು ನಡಿಸಿ, ಅದಷ್ಟೇ ನಮ್ಮ ಸೀಮೆಗೂ ಜಾರಿಗೆ ತರುವ ಯೋಚನೆ ಮಾಡುತ್ತೇವೆ.

ಪ್ರಾ.—ಮೈಸೂರಿನಲ್ಲಿರುವ ವರ್ತಮಾನ ಪತ್ರಿಕೆಗಳ ಹೊಸ ಕಾನೂನನ್ನು ತಗೆದುಹಾಕಬೇಕು. ಇದು ಸಾಧ್ಯವಲ್ಲದಿದ್ದರೆ ಪತ್ರಿಕೆ ನಡಿಸಬೇಕೆಂಬುವರು ಲೈಸೆನ್ಸು ಪಡೆಯಬೇಕೆಂಬ ನಿರ್ಬಂಧವನ್ನೂ, ಅಂಥವರ ಮೇಲೆ ಸರ್ಕಾರದವರಿಗೆ ಅನುಮಾನವೇನಾದರೂ ಕಂಡುಬಂದರೆ ಅವರನ್ನು ದರ್ಯಾಫ್ತು ಮಾಡದೇನೇ ಗಡೀಪಾರು ಮಾಡಲಾದೀತೆಂಬ ನಿರ್ಬಂಧವನ್ನೂ ವಜಾ ಮಾಡಬೇಕು. ಅಪರಾಧ ಮಾಡಿದವರಿಗೆ ಕೋರ್ಟುಗಳೂ ಶಿಕ್ಷಾಪ್ರಕರಣಗಳೂ ಇದ್ದೇ ಇವೆ. ಈ ಹೊಸ ಕಾನೂನು ಜಾರಿಗೆ ಬಂದಾರಭ್ಯ ನಮ್ಮ ದೇಶದಲ್ಲಿ ಹಲವು ಯೋಗ್ಯವಾದ ವರ್ತಮಾನ ಪತ್ರಿಕೆಗಳು ನಿಂತುಹೋದವು. ಈಗ ಪ್ರಕಟವಾಗುವ ಪತ್ರಿಕೆಗಳಿಂದ ಸಂಸ್ಥಾನದ ಎಲ್ಲಾ ಪ್ರಾಂತ್ಯಗಳಲ್ಲೂ ನಡೆಯುವ ಸಮಾಚಾರಗಳಾಗಲಿ, ಸ್ಥಳ ನೌಕರರ ನಡವಳಿಕೆಗಳಾಗಲಿ ಪ್ರಜೆಗಳಿಗೂ ಸರ್ಕಾರದವರಿಗೂ ತಿಳಿಯುವುದಕ್ಕೆ ಮಾರ್ಗವೇ ಇಲ್ಲ. ಈಗ ನಿರ್ಬಂಧವಿರೋಡದರಿಂದ ಬಾತ್ಮೀದಾರರು ಸ್ಥಳ ವಿದ್ಯಮಾನಗಳನ್ನು ಧೈರ್ಯವಾಗಿ ಬರೆದು ಕಳುಹಿಸುವುದಕ್ಕೆ ಹೆದರುತ್ತಾರೆ. ಯೂರೋಪಿಯನ್ನರಿಂದ ನಡಿಸಲ್ಪಡುತ್ತಿರುವ ಪತ್ರಿಕೆಗಳಲ್ಲಿ ಏನು ಪ್ರಕಟವಾದರೂ ಅವರ ಮೇಲೆ ಆಕ್ಷೇಪಣೆ ಇಲ್ಲ. ಈಗ ಮೂಗರ್ಜಿಗಳ ಸಂಖ್ಯೆ ಹೆಚ್ಚಿರುವುದೇ ಈ ನಿರ್ಬಂಧದ ಫಲವಾಗಿದೆ. ಈ ಕಾನೂನ್ ವಜಾ ಮಾಡಿ, ತಾಲ್ಲೂಕುಗಳಲ್ಲೂ ಡಿಸ್ಟ್ರಿಕ್ಟುಗಳಲ್ಲೂ ಅಧಿಕಾರಿಗಳು ಬಾತ್ಮೀದಾರರಿಗೆ ಸರಿಯಾದ ವರ್ತಮಾನಗಳನ್ನು ಒದಗಿಸುವಂತೆ ಅವಕಾಶವನ್ನು ಕಲ್ಪಿಸಿಕೊಟ್ಟರೆ ಸರ್ಕಾರದ ಎಫಿಷೆನ್ಸಿ ಆಡಿಟ್ ಇಲಾಖೆಯ ಕೆಲಸಕ್ಕೂ, ಅಧಿಕಾರಿಗಳಿಗೂ, ಸಾಮಾನ್ಯ ಪ್ರಜೆಗಳಿಗೂ ತುಂಬಾ ಅನುಕೂಲವಾದೀತು. ನಮ್ಮ ಸಂಸ್ಥಾನವನ್ನು ಸರ್ಕಾರದವರು ಆಸ್ಟ್ರೇಲಿಯಾ, ಕ್ಯಾನಡಾ ಮೊದಲಾದ ರಾಜ್ಯಗಳಿಗೆ ಹೋಲಿಸುವುದೂ, ಅಲ್ಲಿನಂತೆ ನಮ್ಮ ದೇಶದ ವಿದ್ಯಮಾನಗಳಿರಬೇಕೆಂದು ಸಾರುವುದೂ ಈಚೆಗೆ ಹೆಚ್ಚಾಗಿದೆ. ಸರಿಯಾದ ವರ್ತಮಾನ ಪತ್ರಿಕೆಗಳು ಈ ನಿರ್ಬಂಧವಿದ್ದರೆ ಹುಟ್ಟಿ ಹಾರುವುದು ಅಸಾಧ್ಯ; ಮತ್ತು ಪತ್ರಿಕೆಗಳು ಹೆಚ್ಚಾಗಿ ಪ್ರಚಾರಕ್ಕೆ ಬರದಿದ್ದರೆ ಅವನ್ನು ನಡಿಸುವವರಿಗೆ ನಷ್ಟವುಂಟಾಗಿ ನಿಂತುಹೋಗುವವು.

ಉ.—ವರ್ತಮಾನಪತ್ರಿಕೆಗಳು ನಮ್ಮ ಸಂಸ್ಥಾನದಲ್ಲಿ ವಿಶೇಷವಾಗಿ ಹರಡಬೇಕೆಂದು ಸರ್ಕಾರದವರಿಗೆ ಕುತೂಹಲವಿದೆ; ಈ ಭಾಗವನ್ನು ಯೋಚಿಸುತ್ತಿದೇವೆ.

ಪ್ರಾ.—ಬಾಲ್ಯ ವಿವಾಹ ನಿರ್ಬಂಧದ ಕಾನೂನಿನಲ್ಲಿ ಹೆಣ್ಣುಮಕ್ಕಳಿಗೆ 10 ವರುಷವೂ, ಗಂಡುಮಕ್ಕಳಿಗೆ 16 ವರುಷವೂ ತುಂಬುವುದಕ್ಕಿಂತ ಮುಂಚೆ ವಿವಾಹಮಾಡಕೂಡದೆಂದು ಬದಲಾವಣೆ ಮಾಡಬೇಕು. ಈಗಿರುವ 8 ವರುಷ, 14 ವರುಷ ಎಂಬ ವಯಸ್ಸು ಸಾಲದು.

ಉ.—ಇದು ಪ್ರಜೆಗಳು ತಮ್ಮ ತಮ್ಮಲ್ಲೇ ವ್ಯವಸ್ಥೆಮಾಡಿಕೊಳ್ಳುವ ವಿಚಾರ; ಸರ್ಕಾರದವರು ಪ್ರಜೆಗಳೆಲ್ಲಾ ಅಭಿಪ್ರಾಯಕೊಟ್ಟಿಲ್ಲದೆ ಇಂಥಾ ವಿಚಾರಕ್ಕೆ ತಲೆಹಾಕಬಾರದು. ಆದರೂ ಈ ಸಭೆಯಲ್ಲಿ ಎಷ್ಟು ಮಂದಿ ಕಾನೂನ್ ಬದಲಾವಣೆಯನ್ನು ಅಪೇಕ್ಷಿಸುವರೋ, ಎಷ್ಟು ಮಂದಿ ಅದಕ್ಕೆ ವಿರೋಧಿಗಳಾಗಿದಾರೆಯೋ ನೋಡೋಣ. ನಿಮ್ಮ ಸಮ್ಮತಿಗಳನ್ನು ತಿಳಿಸಿ. [ಮೆಂಬರುಗಳ ಪೈಕಿ 70 ಮಂದಿ ಕಾನೂನ್ ಮೇಲ್ಕಂಡಂತೆ ಬದಲಾವಣೆಯಾಗಬೇಕೆಂದೂ; 63 ಮಂದಿ ಕೂಡದು, ಈಗಿರುವುದೇ ಸಾಕೆಂದೂ ಕೈಯೆತ್ತಿ ತಿಳಿಸಿದರು.] ಅದರ ಮೇಲೆ ದಿವಾನರವರು—ಎರಡು ಪಕ್ಷವೂ ಒಂದೇ ಸಮನಾಗಿದೆ; ಸಭೆಯ ಅಭಿಪ್ರಾಯವನ್ನು ತಿಳಿಯಬೇಕೆಂದು ಸಮ್ಮತಿ ಕೇಳಿದೆನಲ್ಲದೆ ಮತ್ತೆ ಬೇರೆ ಅಲ್ಲ; ನನ್ನ ಸುತ್ತುಮುತ್ತಲೂ ಕುಳಿತಿರುವ ಅಧಿಕಾರಿಗಳೆಲ್ಲಾ (ಸುಮಾರು 26 ಮಂದಿ) ಬದಲಾವಣೆಯಾಗಬೇಕೆಂದು ಒಪ್ಪತಕ್ಕವರಾಗಿದಾರೆ ಎಂದು ಹೇಳಿದರು.

ಪ್ರಾ.—ಬಾಡಿಗೆ ಗಾಡಿಗಳ ರಚನೆ ಸಂಚಾರ ಮುಂತಾದವುಗಳನ್ನು ಕ್ರಮಪಡಿಸಿ ಸರ್ಕಾರದವರು ಒಂದು ಕಾನೂನ್ ಪ್ಯಾಸ್‌ಮಾಡಿ, ಬೆಂಗಳೂರು ಮೈಸೂರು ಷಹರುಗಳಲ್ಲಿ ಜಾರಿಗೆ ತಂದಿದಾರೆ. ಅದನ್ನು ಸಂಸ್ಥಾನಾಮುಳೆ ವ್ಯವಹರಿಸುವಂತೆ ಅಪ್ಪಣೆಕೊಡಬೇಕು. ಮೂಗುಜೀವಿಗಳ ಕಷ್ಟವೂ, ಅವುಗಳನ್ನು ನಡಿಸುವವರ ನಿಷ್ಕರುಣೆಯೂ ವಿವರಿಸಲಾಗದು.

ಉ.—ಆವಶ್ಯವಿರುವ ಕಡೆ ಆಯಾ ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕ್ ಬೋರ್ಡಿನವರು ಅದು ಜಾರಿಗೆ ಬರಬೇಕೆಂದು ತೀರ್ಮಾನಮಾಡಿ ಸರ್ಕಾರಕ್ಕೆ ಬರೆದರೆ ಸ್ಯಾಂಕ್ಷನ್ ಮಾಡಬಹುದು. ಸರ್ಕಾರದವರೇ ಸ್ವತಂತ್ರಿಸಿ ಜಾರಿಗೆ ತರತಕ್ಕ ಭಾಗವನ್ನು ಯೋಚನೆಮಾಡುವರು.

ಪ್ರಾ.—ಮೈಸೂರು ಸರ್ಕಾರದವರು ಈಗ ಹೊಸದಾಗಿ ಚಲಾವಣೆಗೆ ತಂದಿರುವ ಕೋರ್ಟ್ ಫೀ ಮತ್ತು ಛಾಪಾ ಸ್ಟಾಂಪುಗಳಲ್ಲಿ ನಮ್ಮ ಮಹಾರಾಜರವರ ಮುಖಭಾವವು ಅಷ್ಟೇನೂ ಚೆನ್ನಾಗಿಲ್ಲ. ಇದನ್ನು ಸರಿಯಾಗಿರುವಂತೆ ಮಾಡಿಸಬೇಕು. ಮತ್ತು ಕೋರ್ಟುಗಳಲ್ಲಿ ಈ ಸ್ಟಾಂಪುಗಳ ಮುಖಭಾವವನ್ನೇ ಕತ್ತರಿಸುವುದು ನಮ್ಮ ಹಿಂದುಗಳ ಅಭಿಪ್ರಾಯಕ್ಕೆ ತುಂಬಾ ಅಗೌರವವಾಗಿಯೂ, ಅಸಮರ್ಪಕವಾಗಿಯೂ ಇದೆ.

ಉ.—ತಳೆಯ ಮೇಲ್ಭಾಗದಲ್ಲಿಯೇ ಕೆಳಗಡೆಯೋ ಕತ್ತರಿಸಿ ತೆಗೆಯುವಂತೆ ಹುಕುಂ ಕೊಡಬಹುದು; ಯೋಚಿಸುತ್ತೇವೆ.

ಪ್ರಾ.—100 ರೂಪಾಯಿ ಒಳಗಿನ ಲೇವಾದೇವಿಯನ್ನು ರಿಜಿಷ್ಟರ್ ಮಾಡುವ ನಿರ್ಬಂಧವೇನೂ ಇಲ್ಲ. ಇದರಿಂದ ನಾನಾ ಅಕ್ರಮಗಳು ನಡೆದು ಅನೇಕ ಮೂಢರು ಕಷ್ಟನಷ್ಟಗಳಿಗೆ ಗುರಿಯಾಗುತ್ತಿದಾರೆ. ಲೇವಾದೇವಿಗಳೆಲ್ಲಾ ವಿನಾಯಿತಿ ಇಲ್ಲದೆ ರಿಜಿಷ್ಟರ್ ಆಗಲೇ ಬೇಕೆಂದು ಕಾನೂನನ್ನು ಬದಲಾವಣೆ ಮಾಡಿದರೆ ಕ್ಷೇಮವಾದೀತು.

ಉ.—ಇದು ಆಗಲಾರದು.

ಪ್ರಾ.—ಸರ್ಕಾರಿ ನೌಕರರಲ್ಲಿ ಲಂಚ ರುಷುವತ್ತುಗಳನ್ನು ತಗೆದುಕೊಳ್ಳುವುದು ಅಡಗುವಂತೆ ಏರ್ಪಾಡಾಗಬೇಕು. ಲಂಚ ತೆಗೆದುಕೊಂಡವನಿಗೂ ಕೊಟ್ಟವನಿಗೂ ಶಿಕ್ಷೆ ವಿಧಿಸಲ್ಪಟ್ಟಿದೆ. ಈಗಿನ ಕಾನೂನಿನಿಂದ ಲಂಚ ಕೊಟ್ಟವನು ಸಿಕ್ಕಿಕೊಳ್ಳುತ್ತಾನಲ್ಲದೆ ತೆಗೆದುಕೊಂಡವನು ಸಿಕ್ಕುವುದು ಅಸಾಧ್ಯವೆಂದೇ ಹೇಳಬೇಕು. ಲಂಚ ಕೊಟ್ಟೆನೆಂದು ಹೇಳುವವನನ್ನು ಪ್ರಾಸಿಕ್ಯೂಟ್ ಮಾಡುವುದಿಲ್ಲವೆಂದು ಕಾನೂನ್ ಬದಲಾಯಿಸಬೇಕು. ಅವನು ಕೊಡುವ ರುಜುವಾತು ಅಸಮರ್ಪಕವಾದ ಪಕ್ಷದಲ್ಲಿ ಅವನಿಗೆ ಶಿಕ್ಷೆ ಮಾಡಬಹುದು. ಇದು ಮಾಡದಿದ್ದರೆ ಸಂಸ್ಥಾನದಲ್ಲಿ ಲಂಚ ತಗೆದುಕೊಳ್ಳುವುದು ಅಡಗುವುದಿಲ್ಲ; ಅದು ದಿನೇ ದಿನೇ ಹೆಚ್ಚುವುದು. ನಮ್ಮ ಸೀಮೆಯಲ್ಲಿರುವಷ್ಟು ಲಂಚಕೋರತನವು ಬ್ರಿಟಿಷ್ ಅಧಿಪತ್ಯಗಳಲ್ಲಿ ಇಲ್ಲ. [ಇದಕ್ಕೆ ಚೀಫ್ ಇಂಜನಿಯರವರು — ನನಗೆ ಹಿಂದುಸ್ಥಾನದ ಇತರ ಕಡೆಗಳ ಅನುಭವವುಂಟು. ನಮ್ಮ ಸೀಮೆಯಲ್ಲಿ ಅಲ್ಲಿನಷ್ಟು ಲಂಚ ರುಷುವತ್ತುಗಳ ಹಿಂಸೆ ಇಲ್ಲ ಎಂದು ಹೇಳಿದರು. ಆಗ ಇಬ್ಬರು ಮೂವರು ಮೆಂಬರುಗಳು ನಮ್ಮ ದೇಶದಲ್ಲೇ ಅದಕ್ಕಿಂತಲೂ ಎಷ್ಟೋ ಹೆಚ್ಚಾಗಿದೆ ಎಂದೂ, ಇದನ್ನು ಬೇಗನೆ ಅಡಗಿಸುವ ಏರ್ಪಾಡು ಮಾಡಬೇಕೆಂದೂ ಹೇಳಿದರು.]

ಉ.—ನೀವು ಹೇಳುವಂಥಾ ಕಾನೂನು ಬ್ರಿಟಿಷ್ ಇಂಡಿಯಾದ ಯಾವ ಅಧಿಪತ್ಯದಲ್ಲೂ ಇಲ್ಲ. ನಮ್ಮ ದೇಶದಲ್ಲಿ ಮಾಡುವುದು ಸಾಧ್ಯವಲ್ಲ.

ಪ್ರಾ.—ಕಾಫಿ ಬೀಜವನ್ನು ಹುರಿದು ಪುಡಿಮಾಡಿ ಟಿನ್‌ಗಳಿಗೆ ಭರ್ತಿಮಾಡಿ ಮಾರುವ ಅಂಗಡಿಗಳು ನಮ್ಮ ದೇಶದಲ್ಲಿ 8-10 ಹುಟ್ಟಿ ಇವೆ. ಈ ಪೈಕಿ ಚಿಕ್ಕಮಗಳೂರಿನಲ್ಲಿ 6, ಬೆಂಗಳೂರಿನಲ್ಲಿ 2, ಹಾಸನದಲ್ಲಿ ಒಂದು ಇರುತ್ತವೆ. ಟಿನ್‌ಗಳಲ್ಲಿ ಭರ್ತಿಯಾದ ಈ ಕಾಫಿಪುಡಿಯನ್ನು ಬಹಳ ಅಗ್ಗವಾಗಿ ಮಾರುತ್ತಾರೆ. ಇದಕ್ಕೋಸ್ಕರ ಕಾಫಿಬೀಜದ ಜೊತೆಗೆ ಇತರ ಪದಾರ್ಥಗಳನ್ನು ಹುರಿದು ಪುಡಿಮಾಡಿ ಸೇರಿಸಬಹುದು. ಆ ಇತರ ಪದಾರ್ಥಗಳು ಎಷ್ಟೆಷ್ಟು ಸೇರಿಸಲ್ಪಟ್ಟಿವೆ ಎಂಬುದನ್ನು ತಿಳಿಸುವುದಕ್ಕೆ ಡಬ್ಬಾಗಳ ಮೇಲೆ ಸರಿಯಾದ ಚೀಟಿಗಳನ್ನು ಹಚ್ಚಿ ವಿಕ್ರಯಮಾಡುವಂತಾಗಬೇಕು. ಇಲ್ಲವಾದರೆ ಅನೇಕರು ಅಗ್ಗವಾಗಿದೆ ಎಂದು ಬೆರಕೆಪದಾರ್ಥಗಳನ್ನು ಕೊಂಡು ಮೋಸಹೋಗುವರು. ಇತರ ಕಡೆಗಳಲ್ಲಿ ಇದಕ್ಕೆ ಒಂದು ನಿರ್ಬಂಧವಿದೆ.

ಉ.—ಒಳ್ಳೆಯದು, ಯೋಚಿಸಿ ಮಾಡುತ್ತೇವೆ.

ಪ್ರಾ.—ದನಗಳ ಚರ್ಮವನ್ನು ಕೊಂಡು ಸಾಗಿಸತಕ್ಕವರು ಈಚೆಗೆ ಹೆಚ್ಚಿದ್ದರಿಂದ ದನಗಳನ್ನು ಕದ್ದು ಚರ್ಮ ಸುಲಿಯುವುದು ನಮ್ಮ ಸೀಮೆಯಲ್ಲಿ ತುಂಬಾ ಪ್ರಬಲವಾಗಿದೆ. ಚರ್ಮದ ವರ್ತಕರಿಗಾಗಿ ಒಂದು ಕಾನೂನ್ ಮಾಡದಿದ್ದರೆ ಈ ಕಳುವು ನಿಲ್ಲುವುದಿಲ್ಲ. ಕಳುವನ್ನು ಹಿಡಿದುಕೊಟ್ಟವನಿಗೆ ಜುಲ್ಮಾನೆ ಹಣದಲ್ಲಿ ಸ್ವಲ್ಪ ಇನಾಮು ಕೊಡಿಸಬೇಕು; ಆಗಾಗ್ಗೆ ಚರ್ಮದ ಅಂಗಡಿಗಳು ಝಡ್ತಿ ಆಗಬೇಕು; ಹೊರಕ್ಕೆ ಹೋಗುವ ಚರ್ಮಕ್ಕೆ ಸುಂಕಹಾಕಬೇಕು. [ಈ ವಿಚಾರವನ್ನು ಮೆಂಬರುಗಳೆಲ್ಲಾ ಒಪ್ಪಿಕೊಂಡರು.]

ಉ.—ಈಗ ಇದನ್ನು ಕ್ರಮಪಡಿಸುವುದಕ್ಕೆ ಒಂದು ಮಸೂದೆ ತಯಾರಾಗಿ ನ್ಯಾಯವಿಧಾಯಕ ಸಭೆಗೆ ಚರ್ಚೆಗೆ ಬರುವುದರಲ್ಲಿದೆ. ಪ್ಯಾಸ್ ಮಾಡಿ ಜಾರಿಗೆ ಬರುವ ಏರ್ಪಾಡು ಮಾಡುತ್ತೇವೆ.

ಪ್ರಾ.—ಗಾಡಿಯವರು ಕೋಣ, ಮೂಟೆಗಳನ್ನು ಬಹಳ ಹೆಚ್ಚಾಗಿ ಹೇರಿ ಎತ್ತುಗಳನ್ನು ಕಷ್ಟಪಡಿಸುತ್ತಾರೆ. ಗಾಡಿ ಮುರಿಯುವುದೂ, ಎತ್ತುಗಳು ಎಳೆಯಲಾರದೆ ಬಿದ್ದುಕೊಳ್ಳುವುದೂ ಅಪರೂಪವಲ್ಲ. ಗಾಡಿ ಬೋಜಾವನ್ನು ನಿಷ್ಕರ್ಷೆ ಮಾಡಿ, ಅದಕ್ಕಿಂತ ಹೆಚ್ಚು ಹೊರಿಸಿದವರನ್ನು ಹಿಡಿದು ಶಿಕ್ಷಿಸುವಂತೆ ಕಾನೂನ್ ಆಗಬೇಕು.

ಉ.—ಕಾನೂನ್ ಮಾಡಿ ಜನರನ್ನು ನಿರ್ಬಂಧಪಡಿಸುವುದರ ಮೂಲಕ ನೀತಿವಂತರನ್ನಾಗಿ ಮಾಡಬೇಕೆನ್ನುವಿರೋ? ಮೂಗು ಪ್ರಾಣಿಗಳ ವಿಷಯದಲ್ಲಿ ಜನರಿಗೆ ಸ್ವಭಾವಜನ್ಯವಾದ ಪ್ರೀತಿಯೂ, ಕರುಣೆಯೂ ಇರಬೇಕು. ಪೋಲೀಸ್ ಕಾನೂನಿನಲ್ಲಿ ಇವನ್ನು ತಡೆಯುವುದಕ್ಕೆ ಒಂದು ಸೆಕ್ಷನ್ ಇದ್ದೇ ಇದೆ. ಆ ರೀತಿ ಉಸ್ತುವಾರಿ ನೋಡಿಕೊಳ್ಳಬೇಕೆಂದು ಪೋಲೀಸ್ ಇಲಾಖೆಗೆ ಹುಕುಂ ಕೊಡುವೆವು.

ಪ್ರಾ.—ಭಿಕ್ಷಬೇಡುವವರ ಕಾಟವನ್ನು ಕಾನೂನ್ ಮಾಡಿ ನಿರ್ಬಂಧದಿಂದ ತಪ್ಪಿಸಬೇಕು. ಅಂಗಹೀನರು ಮುದುಕರೇ ಮೊದಲಾದ ಅಶಕ್ತರನ್ನು ಸಂರಕ್ಷಣೆ ಮಾಡುವುದಕ್ಕೆ ಅನಾಥಾಲಯಗಳನ್ನು ಕಲ್ಪಿಸಬೇಕು.

ಉ.—ಮ॥ ಆರ್. ಟಿ. ಮಹದೇವರಾಯರು ಇದಕ್ಕೆ ಒಂದು ಮಸೂದೆಯನ್ನು ಮಾಡಿ ಕಳುಹಿಸಿದಾರೆ. ಕಾನೂನು ಆಗಬೇಕೋ ಬೇಡವೋ ಮೆಂಬರುಗಳು ತಮ್ಮ ಅಭಿಮತವನ್ನು ತಿಳಿಸಬೇಕು. [ಸಭೆಯಲ್ಲಿದ್ದ ಮುಕ್ಕಾಲು ಪಾಲಿಗಿಂತಲೂ ಹೆಚ್ಚು ಮೆಂಬರುಗಳು ಕೈಯೆತ್ತಿ ಕಾನೂನ್ ಮಾಡಬೇಕೆಂದು ತಿಳಿಸಿದರು; ಹೀಗೆ ಬಹುಮತಿಯು ಗೊತ್ತಾದಾಗ ದಿವಾನರವರು ಆ ಮಸೂದೆಯನ್ನು ನ್ಯಾಯವಿಧಾಯಕ ಕೌನ್ಸಿಲ್‌ನಲ್ಲಿ ಚರ್ಚೆಗೆ ಇಡುತ್ತೇವೆಂದು ಅಪ್ಪಣೆಕೊಟ್ಟರು.] [ಸಶೇಷ.]

ತಾಲ್ಲೂಕು ವರ್ತಮಾನಗಳು.

ದೇವನಹಳ್ಳಿ ತಾ॥ ಗಂಗವಾರ.—ಮಳೆಗೋಸ್ಕರ ಹಾರೈಸಿಕೊಂಡಿದ್ದೆವು. ಈಗ ಮಳೆ ವಿಪರೀತವಾಗಿ ಸುರಿದು, ಚಿಕ್ಕ ಚಿಕ್ಕ ಕೆರೆಗಳೆಲ್ಲಾ ತುಂಬಿ ಭರ್ತಿಯಾಗಿವೆ. ಪೈರುಗಳೆಲ್ಲಾ ಕೂಡಿದಮಟ್ಟಿಗೂ ಚೆನ್ನಾಗಿವೆ. ಇಷ್ಟಾದಾಗ್ಯೂ ಧಾನ್ಯ ಜೀನಸಿಗಳೆಲ್ಲಾ ಬಹಳ ಧಡಾವಾಗಿದೆ. ರಾಗಿ 11 ಸೇರು, ಅಕ್ಕಿ 6½ ಸೇರು ಮಾರುತ್ತಿದೆ. ಬಡವರ ಗೋಳಾಟ ಹೇಳತೀರದು. ಇಲ್ಲಿನ ಗೌರ್ನಮೆಂಟ್ ವಿ. ಇ. ಸ್ಕೂಲ್‌ಮಾಸ್ಟರ್ ವಿ. ಗೋಪಾಲಕೃಷ್ಣಪ್ಪನವರು ಬಹಳ ಶ್ರದ್ಧೆ ವಹಿಸಿ ಸ್ಕೂಲ್ ಕೆಲಸವನ್ನು ಮಾಡುತ್ತಿದಾರೆ. ಈಗ ಸ್ಕೂಲಿನ ಬಾಲಕರ ಸಂಖ್ಯೆ 50ರ ವರೆಗೆ ಹೆಚ್ಚಿದೆ. ಈ ಸ್ಕೂಲಿನಲ್ಲಿ ಹಿಂದಿನ ಮಂಗಳವಾರ ಶಾರದಾಪೂಜೆಯೂ, ನಮ್ಮ ಚಕ್ರವರ್ತಿ ಸಾರ್ವಭೌಮರವರ ಮತ್ತು ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನೆಗಳೂ ಬಾಲಕರಿಂದ ನಡಿಸಲ್ಪಟ್ಟವು. ಸ್ಕೂಲ್ ಮಾಸ್ಟರವರಿಂದ ವಿದ್ಯಾವಿಷಯವಾಗಿ ಉಪನ್ಯಾಸಮಾಡಲ್ಪಟ್ಟಿತು. ಮತ್ತು ಕಾಲದ ವಿಷಯವಾಗಿಯೂ, ದ್ರವ್ಯದ ವಿಷಯವಾಗಿಯೂ ಉಪನ್ಯಾಸಗಳು ನಡಿಸಲ್ಪಟ್ಟವು.

ಯಡೇಹಳ್ಳಿ.—ಪ್ರತಿ ದಿನ ಮೋಡುಮಾಡುತ್ತಾ ಆಗಾಗ್ಗೆ ಒಳ್ಳೇ ಹದ ಮಳೆಯೂ ಬರುತ್ತಾ ಇದೆ. ಕೆಲವು ಗ್ರಾಮಗಳಲ್ಲಿ ಹಾಕಲ ಭತ್ತ ಕಟಾವಾಗುತ್ತಾ ಇದೆ. ದಬ್ಬನಸಾಲೆ ಭತ್ತವು ಎಲ್ಲಾ ಕಡೆಗಳಲ್ಲಿಯೂ ತೆನೆ ಹೊರಡುತ್ತಾ ಇದೆ. ಈ ವರ್ಷದ ಪೈರು ಸಾಧಾರಣವಾಗಿ ಇದುವರೆಗೆ ಒಳ್ಳೇ ಸ್ಥಿತಿಯಲ್ಲಿಯೇ ಬರಬಹುದಾಗಿ ಕಾಣುತ್ತೆ. ಈಗಲಾದರೋ ಪೇಟೆ ಧಾರಣೆಯು ಬಹಳ ಚಡಾವಾಗಿ ಅಕ್ಕಿ ರೂಪಾಯಿಗೆ 7-8 ಸೇರು, ರಾಗಿ 10 ಸೇರು, ಬೇಳೆ 4 ಸೇರು ಈ ಮೇರೆಗೆ ಎಲ್ಲವೂ ಬಹಳ ತುಟ್ಟಿಯಾಗಿರುತ್ತೆ. ಬಡಬಗ್ಗರ ಜೀವನ ನಡೆಯುವದು ಕಷ್ಟವಾಗಿರುತ್ತೆ. ಸಾಲದ್ದಕ್ಕೆ ಸಂತೆಯಲ್ಲಿ ಕಮ್ಮಿ ಸೇರು, ತೂಕದ ಬಟ್ಟು ಇಟ್ಟುಕೊಂಡು ವ್ಯಾಪಾರ ಮಾಡುತ್ತಾರೆ. ನಮ್ಮ ಅಮಲ್ದಾರರವರು ಆಗಾಗ್ಗೆ ಸಂತೆಗೆ ದಯಮಾಡಿಸಿ ಇವುಗಳನ್ನೆಲ್ಲಾ ಅಜಮಾಯಿಷಿಮಾಡಿ ವರ್ತಕರಿಗೆ ಹೆಚ್ಚಿಗೆ ನಫೆ ಇಟ್ಟುಕೊಳ್ಳದೆ ವ್ಯಾಪಾರ ಮಾಡಬೇಕಾಗಿ ತಿಳುವಳಿಕೆ ಕೊಡುತ್ತಾ ಇದಾರೆ. ಇದರಿಂದ ಜನಗಳಿಗೆ ಸ್ವಲ್ಪಮಟ್ಟಿಗೆ ಅನುಕೂಲವಾಗುತ್ತಾ ಇದೆ.—ನಮ್ಮ ಎ. ವಿ. ಸ್ಕೂಲಿಗೆ ವರ್ಗಮಾಡಲ್ಪಟ್ಟು ಬಂದಿರುವ ನಾಗೇಶಶಾಸ್ತ್ರಿಗಳವರು ಈ ನವರಾತ್ರಿ ಮಹೋತ್ಸವಕಾಲದಲ್ಲಿ ಸ್ಕೂಲಿನಲ್ಲಿ ಶಾರದಾಮ್ಮನವರನ್ನು ಇಟ್ಟು ಅದರೊಂದಿಗೆ ಸಾಧಾರಣವಾಗಿ ಮುಗ್ಗಭವನ್ನು ಪ್ರದರ್ಶಿಸಿ, ತಾ 27, 28, 29, ಈ ಮೂರು ದಿವಸಗಳಲ್ಲಿಯೂ ಸ್ಕೂಲ್ ವಿದ್ಯಾರ್ಥಿಗಳನ್ನೂ, ಊರಿನ ಜನರುಗಳನ್ನೂ ಬರಮಾಡಿಕೊಂಡು ವಿದ್ಯಾರ್ಥಿಗಳಿಗೆ ಅವರು ನಡೆಯಬೇಕಾದ ರೀತಿ ಮುಂತಾದ ನಡತೆ ವಿಚಾರವನ್ನು ಚೆನ್ನಾಗಿ ತಿಳಿಯಪಡಿಸಿದರು. ತಾ 29 ನೇ ದಶಮಿ ಮಧ್ಯಾಹ್ನವೂ ಅದೇ ರೀತಿ ನಡಿಸಿ ಭಕ್ತಿ ಮೊದಲಾದ ವಿಚಾರವನ್ನು ಉಪನ್ಯಾಸಮಾಡಿದರು. ನಂತರ ಹಾರ್ಮೋನಿಯಂ, ಗ್ರಾಮೋಫೋನ್‌ಗಳಿಂದ ಸಂಗೀತವು ನಡಿಸಲ್ಪಟ್ಟಿತು. ಆ ಮೇಲೆ ಮಂಗಳಾರತಿಯೂ ಮಂಗಳವೂ ನಡಿಸಲ್ಪಟ್ಟು ಸಭಿಕರಿಗೆ ಗಂಧ ಪುಷ್ಪ ತಾಂಬೂಲಾದಿಗಳು ಹಂಚಲ್ಪಟ್ಟವು.

ದೇವನಹಳ್ಳಿ.—ಸುಮಾರು 10-12 ದಿವಸಗಳ ಕೆಳಗೆ ಇಲ್ಲಿ 3-4 ಒಳ್ಳೇ ಮಳೆ ಬಿತ್ತು. ಅಲ್ಲಿಂದೀಚೆಗೆ ಬರೇ ಮೋಡ, ಮಿಂಚು, ಗುಡುಗು ಮಾತ್ರವಿದೆಯೇ ಹೊರತು ಹನಿ ಬೀಳದೆ ಬಿಸಿಲು ಹೊಡೆತದಿಂದ ಪೈರುಗಳೆಲ್ಲಾ ಬಾಡಿ, ಜನಗಳ ಹಾಹಾಕಾರ ವಿಪರೀತವಾಗಿದೆ.—ಮಳೆಯಿಂದ ಬೆಂಗಳೂರು ಚಿಕ್ಕಬಳ್ಳಾಪುರದ ಲೈಟ್ ರೈಲ್ವೆ ರಸ್ತೆಯು ಸೀಳ್ಹೋಗಿ ಮಾನಾರಿನಿಂದ ಬರುತ್ತಿದ್ದ ಗೂಡ್ಸ್ ಗಾಡಿ ಯಲಹಂಕದಿಂದ ಈಗ 8-10 ದಿವಸಗಳಿಂದಲೂ ಬರುತ್ತಾ ಇಲ್ಲ.—ಇಲ್ಲಿನ ಅಮಲ್‌ದಾರ್ರಿಗೂ, ಪೋಲೀಸ್ ಇನ್‌ಸ್ಪೆಕ್ಟರಿಗೂ ಬೇರೆ ಸ್ಥಳಕ್ಕೆ ವರ್ಗವಾಗಿ ಹೊರಟುಹೋದರು. ಹೊಸ ಅಧಿಕಾರಿಗಳು ಇನ್ನೂ ಬಂದಿಲ್ಲ.—ದೀಪಾವಳಿ ಹಬ್ಬದ ಪಟಾಕಿ ಅವಾಂತ್ರವು ಈಗಾಗಲೇ ಪ್ರಾರಂಭವಾಗಿ ಪರೀಸ್ ಎಂಬ ಮದ್ದಿನ ಉಂಡೆಗಳನ್ನು ಕಟ್ಟುತ್ತಿದ್ದ 3 ಜನ ಹುಡುಗರಲ್ಲಿ ಮದ್ದು ಹತ್ತಿಕೊಂಡು ಒಬ್ಬನ ಮುಖ ಸುಟ್ಟಿರುತ್ತೆಂತಲೂ, ಇನ್ನೊಬ್ಬನ ಪಂಚೆ ಸುಟ್ಟಿತೆಂತಲೂ, ಮತ್ತೊಬ್ಬನಿಗೆ ಸ್ವಲ್ಪಮಟ್ಟಿಗೂ ಜ್ವಾಲೆಯು ಸೋಕಿತೆಂತಲೂ ಪುಕಾರಾಗಿದೆ. ಅಪಾಯಕರವಾದ ಇಂಥಾ ಪದಾರ್ಥಗಳನ್ನು ವಿಕ್ರಯಮಾಡುವ ಅಥವಾ ತಯಾರುಮಾಡತಕ್ಕವರು ಕ್ರಮವಾಗಿ ಲೈಸೆನ್ಸ್ ಪಡೆಯಬೇಕೆಂಬ ನಿರ್ಬಂಧವನ್ನು ಸರ್ಕಾರದವರು ಇಡುವದಾದಲ್ಲಿ ಹೆಚ್ಚು ಅನಾಹುತಕ್ಕೆ ಅವಕಾಶ ಉಂಟಾಗದು. ಇಷ್ಟರಮಟ್ಟಿಗೆ ಪೋಲಿಸ್ ಆಫೀಸರು ಮಾಡುವದು ಸಾಧ್ಯವಿಲ್ಲವೆ?—ಇಲ್ಲಿನ ಎ. ವಿ. ಸ್ಕೂಲಿನಲ್ಲಿ ಬಾಲಕರ ಸಂಖ್ಯೆ ಜಾಸ್ತಿಯಾಗಿ ಹಾಲಿ ಸ್ಕೂಲ್ ಕಟ್ಟಡ ಕೇವಲ ಸಂಕೋಚವಾಗಿದೆ. ಈ ಕಟ್ಟಡವು ಬಹಳ ಪುರಾತನ ಕಾಲದ ಮುಸಾಫರ್ ಬಂಗಲೆಯಾಗಿದ್ದು ಅನೇಕ ಕಡೆ ಬಿರುಕುಗಳು ಬಿಟ್ಟು ಕೇವಲ ಸಡಿಲವಾಗಿ ಮಳೆಗಾಲದಲ್ಲಿ ಅಪಾಯಕರವಾದ ಸ್ಥಿತಿಯಲ್ಲಿರುತ್ತೆಂಬ ವಿಚಾರ ಅನೇಕ ಅಧಿಕಾರಿಗಳ ಅವಗಾಹನೆಗೆ ಬಂದು ಇರುತ್ತೆ. ಇದು ಊರು ಮಧ್ಯೆ ಇದ್ದು, ಹುಡುಗರಿಗೆ ಆಟವಾಡತಕ್ಕ ಮೈದಾನ್ ಸುತರಾಂ ಇರುವದಿಲ್ಲ. ವಿದ್ಯಾಭ್ಯಾಸದ ಇಲಾಖಾ ಮೇಜಿಸ್ಟ್ರೇಟರು ಇದಕ್ಕಾಗಿ ಹೊಸ ಕಟ್ಟಡ ಕಟ್ಟಿಸಿಕೊಡಲು ಅಪ್ಪಣೆ ಕೊಡಿಸಿದ ಮಾಗ್ದಾನವನ್ನು ಕ್ಷಿಪ್ರದಲ್ಲಿ ನೆರವೇರಿಸುವದಾದರೆ ಬಾಲಕರ ಹಿಗ್ಗುಮುಗ್ಗಿಯು ತಪ್ಪೀತೆಂದು ಕಾಣುತ್ತೆ. ಅಲ್ಲದೆ ಸ್ಕೂಲು ಊರಿನೊಳಗಿರುವದಕ್ಕಿಂತಲೂ ಊರಾಚೆ ಇದ್ದಲ್ಲಿ ಹುಡುಗರಿಗೆ ಹವಾ ಬದಲಾವಣೆಯಿಂದ ಹೆಚ್ಚು ಚಟುವಟಿಕೆ ಉಂಟಾಗಬಹುದು.

ಚಿತ್ರದುರ್ಗದ ತಾ॥ ಅಶೋಕಪಾಳು.—ಕಳೆದ 25 ನೇ ತಾ. ಶುಕ್ರವಾರ ಸಾಯಂಕಾಲ ನಮ್ಮ ಅಮಲ್ದಾರ್ರವರು ಈ ಗ್ರಾಮಕ್ಕೆ ದಯಮಾಡಿಸಿದ್ದಾಗ ವಿ. ಇ. ಸ್ಕೂಲಿನಲ್ಲಿ ಸೇರಿದ್ದ ಸಭೆಯಲ್ಲಿ ಅಗ್ರಾಸನವನ್ನು ವಹಿಸಿದ್ದರು. ಸ್ಕೂಲಿನ ಒಳಗೂ ಹೊರಗೂ ಜನಗಳು ನೆರೆದಿದ್ದರು. ಮ॥ ಕೇಬಾ ಶೇಕದಾರ್ರು, ಶ್ಯಾ॥ ವಾಸುದೇವರಾಯರು, ಸ್ಕೂಲ್ ಮಾಸ್ಟರ್ ಕೆ. ಕರಿಬಸಯ್ಯನವರು, ಪಟೇಲ್ ರುದ್ರಪ್ಪನವರು, ಪಟೇಲ್ ಕಾಡಪ್ಪ, ಶಿವಪ್ಪ, ಜೋಗಪ್ಪ, ಪಟ್ಟಿ ವೀರಪ್ಪ, ಷಣ್ಮುಖಯ್ಯ, ಅಕಾರ್‌ಮಾರಿ ಹಲಗಪ್ಪ, ಪಟೇಲ್ ಮಾಳಯ್ಯ ಮುಂತಾದ ಪ್ರಮುಖರು ಸಭೆಯನ್ನಲಂಕರಿಸಿದ್ದರು. ಈ ಗ್ರಾಮವು ತಾಲ್ಲೂಕಿಗೆ ಕೊನೇ ಗಡಿಯಾಗಿಯೂ, ಗುಡ್ಡ ಪ್ರದೇಶದಲ್ಲಿ ಮಧ್ಯರಾಷ್ಟ್ರವಾಗಿಯೂ ಇರುವುದರಿಂದ ಇಲ್ಲಿನ ಪ್ರಜಾಸಂಖ್ಯೆಗೆ ಅನುಕೂಲವಾಗುವಂತೆ ಒಂದು ಸಂತೆಯನ್ನು ಏರ್ಪಡಿಸಬೇಕೆಂದು ಗ್ರಾಮಸ್ಥರು ಅಮಲ್ದಾರ್ರನ್ನು ಪ್ರಾರ್ಥಿಸಿಕೊಂಡ ಪ್ರಕಾರ ಗವರ್ನ್‌ಮೆಂಟಿಗೆ ಶಿಫಾರಸು ಮಾಡಿ ಅಲ್ಲಿಂದ ಮಂಜೂರಾಗಿ ಬಂದು ಎರಡು ತಿಂಗಳ ಲಾಗಾಯಿತು ಸಂತೆ ನಡೆಯುತ್ತಾ ಇದೆ. ಈ ಪ್ರಾಂತ್ಯದ ಜನಗಳಿಗೆಲ್ಲಾ ಬಹಳ ಅನುಕೂಲವಾಗಿ ಇದೆ. ಇದಕ್ಕಾಗಿ ಗ್ರಾಮಾಭಿವೃದ್ಧಿ ಸಮಾಜದವರು ಕೃತಜ್ಞರಾಗಿರುತ್ತೇವೆ. ತರುವಾಯ ಸಭಾಧ್ಯಕ್ಷರು ಇಂಪೀರಿಯಲ್ ಇಂಡಿಯನ್ ವಾರ್ ರಿಲೀಫ್ ಫಂಡಿಗೆ ತನುಮನಧನಗಳೊಂದಿಗೆ ಸಹಾಯ ಮಾಡುವ ಉತ್ಸಾಹದಿಂದ ಕೂಡಿ ಧನಸಹಾಯ ಮಾಡುವುದಕ್ಕೂ, ರಾಜಭಕ್ತಿಯನ್ನು ತೋರಿಸುವುದಕ್ಕೂ ಸಹ ಗ್ರಾಮಸ್ಥರು, ಬಾಲಕರು ಸಹ ಅವಗಾಹನ ಮಾಡಿಕೊಳ್ಳುವಂತೆ ಉಪನ್ಯಾಸ ಮಾಡಿದರು. ಅದರ ಸಾರಾಂಶವೇನೆಂದರೆ—ನಮ್ಮ ಇಂಡ್ಯಾ ಚಕ್ರವರ್ತಿಗಳವರಿಗೆ ಅಪ್ರಾರ್ಥಿತವಾಗಿ ಒದಗಿರುವ ಮಹಾ ಯುದ್ಧ ಸಂದರ್ಭವನ್ನೂ, ನಮ್ಮ ಮಹಾರಾಜರವರು ಇಂಡಿಯಾ ಗವರ್ನ್‌ಮೆಂಟಿನವರ ಉಪಯೋಗಕ್ಕಾಗಿ ದೇಶೀಯರಾದ ಸೈನಿಕರನ್ನು ಶತ್ರುಗಳ ಮೇಲೆ ಕಾದಾಡುವುದಕ್ಕೆ ಯುದ್ಧ ಭೂಮಿಗೆ ಕಳುಹಿಸುವಂತೆ ಒಪ್ಪಿದರೆಂತಲೂ, ಅಂಥವರ ಕುಟುಂಬವನ್ನು ಸಂರಕ್ಷಣೆ ಮಾಡುವುದು ನಮ್ಮ ಕರ್ತವ್ಯವಾಗಿದೆ ಎಂತಲೂ, ಈ ಪುಣ್ಯಕರವಾದ ಕಾರ್ಯಕ್ಕೆ ಅನಂವರ ಶಕ್ತ್ಯಾನುಸಾರ ಸಹಾಯ ಮಾಡಬೇಕೆಂದೂ ಸೂಚಿಸಿದರು. ಆ ಕೂಡಲೇ ಗ್ರಾಮಸ್ಥರೆಲ್ಲರೂ 40 ರೂಪಾಯಿ ವಸೂಲ್ಮಾಡಿ ಆ ರಿಲೀಫ್ ಫಂಡಿಗೋಸ್ಕರ ಅಮಲ್ದಾರ್ರವರ ವಶಕ್ಕೆ ಒಪ್ಪಿಸಿದರು. ನಮ್ಮ ಸರ್ಕಾರಕ್ಕೆ ತಾವು ರಾಜಭಕ್ತಿ ಪುರಸ್ಸರವಾದ ನಮ್ಮ ವಿಜ್ಞಾಪನೆಗಳನ್ನು ಸಮರ್ಪಿಸಬೇಕೆಂದು ಗ್ರಾಮಾಭಿವೃದ್ಧಿ ಸಮಾಜದವರು ಪ್ರಾರ್ಥಿಸಿಕೊಂಡರು. ಈ ಪ್ರಕಾರ ಒಳ್ಳೇ ವಿಜೃಂಭಣೆಯಿಂದ ನಡೆದ ಸಭೆಯು ಶ್ರೀಮನ್ ಮಹಾರಾಜರವರ ಮತ್ತು ಚಕ್ರವರ್ತಿ ಸಾರ್ವಭೌಮರವರ ಶ್ರೇಯಃಪ್ರಾರ್ಥನೆಯಿಂದ ಮುಗಿದಾಯಿತು. ಇದೆಲ್ಲಾ ನಮ್ಮ ಅಮಲ್ದಾರ್ರವರ ಪ್ರೋತ್ಸಾಹದಿಂದ ನಡೆಯಿತು.

ಇಂಪೀರಿಯಲ್ ಇಂಡಿಯಾ ರಿಲೀಫ್ ಫಂಡು.

"ವೃತ್ತಾಂತ ಪತ್ರಿಕೆ" ಆಫೀಸ್ ಚಂದಾ ಪಟ್ಟಿ.

ಹಿಂದೆ ವಸೂಲಾಗಿರುವ ಚಂದಾ	ರೂ	150-1-0
ಟಿ. ಬಿ. ಎನ್. ಮೂರ್ತಿರಾವ್, ಬೇಗೂರು	,,	2-0-0
ಚಾಮರಾಜನಗರದ ಬಿ. ಎಬ್ರಹಂ ಮೂಲಕ— ವೆಂಕಟ್ರಮಣಜಟ್ಟಿಪ್ಪ, ಸುಬ್ಬಶೆಟ್ಟಿ, ತಲಾ ರೂ. 2; ವರದರಾಜುಲುನಾಯುಡು, ಗುರುನಂಜಶೆಟ್ಟಿ, ಎಸ್. ವೆಂಕಟರಾವ್, ಎಸ್. ಚೌಡಶೆಟ್ಟಿ, ಬಿ. ವೆಂಕಟ್ರಮಣಶೆಟ್ಟಿ, ಈಶ್ವರರಾವ್, ಬಾಲಕೃಷ್ಣಾಚಟ್ಟಪ್ಪ, ತಲಾ ರೂ. 1; ಎಚ್. ಟಿ. ನಾಗಪ್ಪ, ಜುಲುಗಾದ್ರಿವೆಂಕಟಸಾಮಿಜಟ್ಟಿಪ್ಪ, ಜೀವಂಧರಯ್ಯ, ಸುಬ್ಬಪ್ಪ, ಉಲುಗಾದ್ರಯ್ಯ, ಚೆನ್ನಬಸವಶೆಟ್ಟಿ ತಲಾ 4 ಆ.; ಜುಮ್ಲಾ	,,	12-8-0
ಜುಮ್ಲಾ ರೂಪಾಯಿ		164-9-0

ಮಲೇರಿಯಾ

ಮತ್ತು ಜಡಿ ಚಳಿಯಿಂದುಂಟಾಗುವ ಎಲ್ಲಾ ತರದ ಜ್ವರವೂ

ಈನಾನೂಫೆಲ್

ಯ ಸೇವನೆಯಿಂದ ಬೇಗನೆ ನಿವಾರಣೆಯಾಗುತ್ತೆ.

ಕ್ವೈನೈನ್ ಜ್ವರವನ್ನು ಅಡಗಿಸುವುದು : ಆದರೆ ನಮ್ಮ ಈನಾನೂಫೆಲೆಯು ... ದಿನದಲ್ಲಿ ವಾಸಿಮಾಡುತ್ತದೆ. ಹಗಲು ರಾತ್ರಿ ಒಂದೊಂದು ಮಾತ್ರೆ ತೆಗೆದುಕೊಳ್ಳುತ್ತಾ ಬಂದರೆ ಜ್ವರ ಬಾರದಂತೆ ಸಂರಕ್ಷಣೆ ಮಾಡಬಲ್ಲದು.

ಜ್ವರವು ಸಂಪೂರ್ಣವಾಗಿ ವಾಸಿಯಾಗುವುದಕ್ಕೆ ಎರಡು ಬಾಟ್ಲು ಔಷಧ ಸಾಧ್ಯವಾದ ದಿನಕ್ಕೆ ಸಾಕು.

ಬಾಟ್ಲಿಗೆ ಕ್ರಯ 2 ರೂಪಾಯಿ.

...ರೆಯವಾಗುವ ಸ್ಥಳಗಳು.

1. ಫಾಸ್ಟರ್ ಕಂಪನಿ, ಕೆಮಿಸ್ಟ್ಸ್, ಬೆಂಗಳೂರು ;

2. ಟಿ. ... ..., ... ಬೀದಿ,

[17-   ... ;

...ದಲ್ಲದೆ

...ಲ್ಲಾ ಔಷಧ ... ... ಅಂಗಡಿಗಳಲ್ಲೂ ಸಿಕ್ಕುವುದು.

ಆ ಕೆಮ್ಮಿನ ಹಿಂದೆ ಮರಣವು ಬಿತುಕೊಂಡಿದೆ.

ಉತ್ತಮ ಔಷಧಗಳಿಂದಲೂ ಚಿಕಿತ್ಸೆಯಿಂದಲೂ ವಾಸಿಯಾಗದೆ ನಿಮ್ಮ ಪ್ರಾಣವನ್ನು ಹಿಡಿಸುತ್ತಿರುವ ಕೆಮ್ಮು ನಿಮಗಿದೆಯೋ ? ಹಾಗಿದ್ದರೆ ಒಂದು ವೇಳೆ ನಿರೀಕ್ಷೆ ಇಲ್ಲದವರಾಗಿದ್ದೀರಿ. ಅಂಥವರಿಗೆಲ್ಲಾ ಲಿಟಿಲ್ಸ್ ಓರಿಯಂಟಲ್ ಬಾಂ ಎಂಬದನ್ನು ಉಪಯೋಗಿಸಬೇಕೆಂದು ...ಳುತ್ತೇವೆ.

...ನ ... ಸ್ಥಳದ ಮಿ. ಎ. ...ಲ್ ಎಂಬವರು ಹೇಳುವದು :— "2 ವರುಷಗಳ ಕಾಲ ನನಗೆ ಸದಾ ಬಾಧಿಸುವ ಒಣಕೆಮ್ಮೂ ಅದರೊಂದಿಗೆ ಶ್ವಾಸನಾಳಿಗೆಯಲ್ಲಿ ಕಟ್ಟುವಿಕೆಯೂ ಉಂಟಾಗಿ ರಾತ್ರಿಯೆಲ್ಲಾ ಎಷ್ಟೋ ಇರುತ್ತಿದ್ದಿಲ್ಲದೆ, ಮನೆಯವರೆಲ್ಲರಿಗೂ ತೊಂದರೆಯನ್ನುಂಟು ಮಾಡುತ್ತಿತ್ತು. ಕೆಮ್ಮಿನ ಔಷಧಗಳನೇಕ ಉಪಯೋಗಿಸಲು, ತಕ್ಕಾದ ಪ್ರಯೋಜನವೇ ದೊರೆಯದೆ ಬೇರೆ ಪ್ರಯೋಜನವಾಗಲಿಲ್ಲ. ಕಡೆಗೆ ಲಿಟಿಲ್ಸ್ ಓರಿಯಂಟಲ್ ಬಾಂ ಎಂಬದನ್ನು ಉಪಯೋಗಿಸಲು ಮನಸ್ಸು ಮಾಡಿದೆನು. ಅರ್ಧ ಸೀಸೆ ಉಪಯೋಗಿಸುವಷ್ಟರಲ್ಲಿಯೇ, ಮೊದಲನೇ ಇಡೀ ರಾತ್ರಿಯ ನಿದ್ರೆಯಾಯಿತು, ಹಾಗೆಯೇ ಪೂರ್ಣ ವಾಸಿಯಾಯಿತು."

ಸೀಸೆ 1ಕ್ಕೆ 1 ರೂ. ಮೇರಿಗ ಎಲ್ಲಾ ಔಷಧಗಾರರಲ್ಲಿಯೂ ಸಿಗುತ್ತೆ.

101-23

ಶ್ರೇಷ್ಠವಾದ ವಾಚ್ ! ನೂತನವಾದ ವಾಚ್ ! ನಾಜೂಕವಾದ ವಾಚ್ !

ಸ್ಪ್ರಿಂಗ್ ಪಾಕೆಟ್ ಲೀವರ್ ವಾಚ್.

ಇದರ ಕ್ರಯ 7 ಬಹುಮಾನಗಳ ಸಮೇತ ರೂ. 3-8-0 ಮಾತ್ರ.

ಏಳು ವರ್ಷಗಳ ಖಾತ್ರಿಯಾದ ಗ್ಯಾರಂಟಿ.



ಘನವಂತರೇ,

ಈ ನೂತನ ನಮೂನೆ ವಾಚ್ ಈಗ ತಾನೇ ಬಂದಿರುತ್ತೆ. ಪ್ರಪಂಚದಲ್ಲೆಲ್ಲಾ ಹೆಸರುವಾಸಿಯಾದ ಮತ್ತು ಶ್ರೇಷ್ಠವಾದ ಲೀವರ್ ಕೆಲಸದಿಂದಲೂ, ಬಲಿಷ್ಠವಾದ ಮತ್ತು ನಾಜೂಕವಾದ ಯಂತ್ರ ಸಾಮಾನುಗಳಿಂದಲೂ ತಯಾರಾಗಿ ಬಂದಿರುತ್ತೆ. ಈಗ ತಾನೆ ಹೊಸದಾಗಿ ನಾವು ಪ್ರತ್ಯೇಕವಾಗಿ ತರಿಸುತ್ತೇವೆ. ಗೌರ್ನಮೆಂಟು ಟೈಂಗೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದದ್ದು ನಂಬಿಕೆಯಾಗಿ ದೀರ್ಘಕಾಲ ಅನೇಕ ವರ್ಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು. ಬಹು ರಮಣೀಯವಾದ ವಾಚ್ ಬಹು ಮಾತುಗಳಿಂದಲೇನು ? ಪರಂಪರೆ ಬಾಳಿಕೆ ಬರುವ ವಾಚ್ ಇದೇ. ಇದರ 7 ಬಹುಮಾನಗಳ ತಪಸೀಲ್ :—(1) ಸುಂದರವಾದ ವಾಚ್ ಸರಪಣಿ, (2) ಚಿತ್ರಗಳನ್ನು ತೋರಿಸುವ ಉತ್ತಮಯಂತ್ರ, (3) ವಾಚ್‌ಗೆ ಧೂಳು ಸೇರದಂತೆ ಭದ್ರಪಡಿಸುವ ತೊಗಲಿನ ಚೀಲ, (4) ರಾತ್ರಿಗೆ ವಾಚ್ ಸಂಗಡ ಧರಿಸಿಕೊಳ್ಳುವ ಬೇಷ್ಟು ಧಾರ, (5) ವಾಚ್ ಪೆಟ್ಟಿಗೆ (ಬಹು ಸುಂದರವಾದದ್ದು), (6) ಪರಿಮಳವುಳ್ಳ ಸುವಾಸನೆ ಸೀಸೆ, (7) ಕರವಸ್ತ್ರ.

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.—

ಟಿ. ಸೀತಾರಾಮ ಮೊದಲಿಯಾರ್, ನಂ 3, ಕಂದಪ್ಪ

[180-5]   ಮೊದಲಿ ಬೀದಿ, ತಿರುವಲ್ಲಿಕೇಣಿ, ಮದರಾಸು.

S U. N. & Co.,

BENARES CITY, U. P.

ಸೊಗಸಾದ ಸರಕುಗಳು !!
ದೊಡ್ಡ ಕಂಪೆನಿ !

ಈ ನಮ್ಮ ಕಂಪನಿಯಲ್ಲಿ ನೆಯುದು ತಯಾರಿಸುವ ಉತ್ತಮವಾದ ಬನಾರಸ್ ರೇಷ್ಮೆ ಜರೀ ಸೀರೆಗಳು, ಕಟಾ, ಪೇಟಾ, ಕಾಶ್ಮೀರ್ ಶಾಲು, ದುಪಟ್ಟಿ, ಮಗುಟ, ಜಗನ್ನಾಥ ಜಾಗಟೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಕ್ಯಾಟಲಾಗ್ 1 ನ್ನು ಮತ್ತು 2 ವಿಶ್ವೇಶ್ವರ ಪಟಗಳನ್ನು ಇನಾಮಾಗಿ ಕಳುಹಿಸಲಾದೀತು. [69-30]

ಎಸ್. ಯು. ಎನ್. ಮತ್ತು ಕಂಪೆನಿ, ಕಾಶಿ.

MADRAS SNUFF.

ಬಹಳ ಮೇಲಾದ ನಸ್ಯ ಇನ್ನೆಲ್ಲೂ ಸಿಕ್ಕದು.

ನಮ್ಮಲ್ಲಿ ತಯಾರಾಗುವ ನಸ್ಯದ ಪುಡಿಯನ್ನು ಹಿಂದುಸ್ಥಾನದ ಸಮಸ್ತ ಭಾಗಗಳವರೂ, ಅನ್ಯದೇಶಗಳವರೂ ಹತ್ತಾರು ವರುಷಗಳಿಂದ ತರಿಸಿಕೊಂಡು ಉಪಯೋಗಿಸುತ್ತಿದ್ದಾರೆ. ನಮ್ಮ ನಸ್ಯವು ಬಹಳ ಪ್ರಖ್ಯಾತಿ ಪಡೆದಿದೆ. ಬಹು ಮೇಲಾದ "ಬಂದರ್" ಸೊಪ್ಪಿನಿಂದ ಸುವಾಸನೆಯಾದ ಅಚ್ಚ ತುಪ್ಪ ಹಾಕಿ ವಿಶೇಷ ರುಚಿಕರವಾಗಿಯೂ ಸ್ವಚ್ಛವಾಗಿಯೂ ತಯಾರಿಸುತ್ತೇವೆ. ಕಡಿದ ಮಟ್ಟಿಗೂ ನಮ್ಮ ಧಾರಣೆ ಕಡಮೆಯಾಗಿರುವುದು. ನಮ್ಮ ಪದಾರ್ಥವನ್ನು ನಾವೇ ಹೊಗಳಿಕೊಳ್ಳುವದರಿಂದ ಫಲವೇನು ? ವಾಚಕರು ಒಂದಾವರ್ತಿ ಪರೀಕ್ಷೆಗಾಗಿ ತರಿಸಿಕೊಂಡರೆ ಚೆನ್ನಾಗಿ ವೇದ್ಯವಾಗುತ್ತೆ. ಕ್ರಯ ಪೌಂಡಿಗೆ 3 ರೂಪಾಯಿ; 1 ಸೇರಿಗೆ 10 ಆಣೆ. ಪೋಸ್ಟೇಜ್ ಬೇರೆ ನಸ್ಯವನ್ನು ಅಂಚೆಯ ಮೂಲಕವೋ, ರೈಲಿನಲ್ಲಿಯೋ ಹ್ಯಾಗೆ ಕಳಿಸಬೇಕೆಂದು ಬರೆಯಿರಿ.

ನಮ್ಮ ವಿಳಾಸ—ಜಿ. ನಾರಾಯಣಸಾಮಿ ನಾಯುಡು,

43, ಪಳಯಪ್ಪರ್ ಸ್ಟ್ರೀಟ್, ಮಿಂಟ್ ಪಬ್ಲಿಂಗ್ ಪೋಸ್ಟ್,

[168-10]   ಮದರಾಸ್, ಇ.

Mellin's Food

ಮೆಲ್ಲಿನ್ಸ್ ಆಹಾರವು

ಕೈಸೋಕದೆ ಮಾಡಿದೆ

ಶಿಶುಗಳಿಗೂ ರೋಗಿಷ್ಟರಿಗೂ

ಮೆಲ್ಲಿನ್ಸ್ ಆಹಾರದ ಬಸ್ಕತ್ತುಗಳು   [4-10]

ಬೆಳೆಯುವ ಮಕ್ಕಳಿಗೆ ಎದೆಹಾಲು ತಪ್ಪುವ ಕಾಲದಲ್ಲಿ ಅತಿ ಶ್ರೇಷ್ಠವಾದ ಆಹಾರ; ಮತ್ತು ದೊಡ್ಡವರಿಗೆ ದೇಹ ಪುಷ್ಟಿಯನ್ನೂ ಬಲವನ್ನೂ ಕೊಡತಕ್ಕದ್ದು.

Messrs. OAKES & Company, Mount Road, Madras.

ಏಜಂಟ್ ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

ಪ್ರೊಫೆಸರ್ ಪ್ರೇಸರ್
ಇಲೆಕ್ಟ್ರೊ ಪೆಯಿನಾಡೈನ್

ಮನುಷ್ಯನ ಶರೀರದಲ್ಲಿ ವಿದ್ಯುಚ್ಛಕ್ತಿ ವ್ಯಾಪಿಸಿರುವದೆಂತಲೂ, ವಿದ್ಯುಚ್ಛಕ್ತಿ ಕಡಮೆಯಾದ ಕೂಡಲೇ ನಾನಾ ತರದ ವ್ಯಾಧಿಗಳು ಜನಿಸುವದೆಂತಲೂ, ಅಂತಹ ವ್ಯಾಧಿಗಳನ್ನು ಶೀಘ್ರ ಗುಣಪಡಿಸಲು ವಿದ್ಯುಚ್ಛಕ್ತಿ ಮಿಶ್ರವಾದ ಔಷಧದ ಉಪಯೋಗದಿಂದಲ್ಲದೆ ಬೇರೆ ಔಷಧಗಳಿಂದ ವ್ಯಾಧಿಗಳನ್ನು ಶೀಘ್ರ ಗುಣಪಡಿಸುವದು ಕಷ್ಟವೆಂತಲೂ ಅಮೇರಿಕಾ ದೇಶದ ವೈದ್ಯಶಾಸ್ತ್ರ ಪಂಡಿತರು ವೈದ್ಯಶಾಸ್ತ್ರ ಪರಿಶೋಧನೆಯಿಂದ ಸಿದ್ಧಿಸಿರುವರು. ಈ ಔಷಧವು ಉಪಯೋಗಿಸಿದ ಕೂಡಲೇ ದೇಹಕ್ಕೆ ಸಾಕಾಗುವಷ್ಟು ವಿದ್ಯುಚ್ಛಕ್ತಿಯನ್ನುಂಟುಮಾಡಿ ವ್ಯಾಧಿಯನ್ನು ಅತಿ ಶೀಘ್ರ ಗುಣಪಡಿಸುತ್ತೆ. ಪ್ರಾಚೀನಕಾಲದ ಔಷಧಗಳಿಗೆಲ್ಲವು ಇದು ಅತ್ಯುತ್ತಮವಾದದ್ದು. ಒಂದಾವರ್ತಿ ಪರೀಕ್ಷಿಸಿ ನೋಡಿದರೆ ಇದರ ಗುಣವು ವ್ಯಕ್ತವಾಗುತ್ತೆ.



ಎಲೆಕ್ಟ್ರೋ ಪೆಯಿನಾಡೈನ್ ತೈಲದಿಂದ ಗುಣಪಡುವ ವ್ಯಾಧಿಗಳು:—

ತಿಮರುವಾಯುವು, ಕೀಲ್ವಾಯುವು, ಪಾರ್ಶ್ವವಾಯುವು, ಕ್ಷಯ, ಕೆಮ್ಮು ಸಿಗಟ, ವಾಯುನೋವು (ಕೈಕಾಲು ಹಿಡಿತ), ಉಳುಕು ಹಿಡಿದಿದ್ದರು, ಕಫಿಸಶ್ವಾಸ, ನಡುನೋವು (ಸೊಂಟನೋವು), ಪಕ್ಕಶೂಲೆ, ಹಲ್ಲುನೋವು, ತಲೆನೋವು, ಅರೆತಲೆನೋವು, ಉಬ್ಬಸ, ವಿಷಜ್ವರದ ಗಡ್ಡೆಗಳಿಗೂ ಮತ್ತು ಮಕ್ಕಳ ಪಕ್ಕಶೂಲೆ, (ಆಳ್ಳೆ) ಕೈತ್ಯದೋಷಗಳೂ, ವಿಷಪುಳಗಳ ಕಡಿತಗಳಿಗೂ (ಚೇಳು ಮುಂತಾದದ್ದು), ಇದಕ್ಕೆಲ್ಲಾ ಬಹಳ ಶ್ಲಾಘನೀಯವಾದದ್ದು   [12-10]

ಉಪಯೋಗಿಸುವ ಕ್ರಮವು ಹಿಂದುದೇಶದ ಎಲ್ಲಾ ಭಾಷೆಗಳಲ್ಲಿಯೂ ಬುಡ್ಡಿಯ ಸಂಗಡ ಕಳುಹಿಸಲಾದೀತು.

ಬುಡ್ಡಿಯ ಕ್ರಯ ರೂ. 0-8-0. ವಿ. ಪಿ. ಖರ್ಚು 0-4-0. ಏಜಂಟರು ಬೇಕು.

ಮುಖ್ಯ ವಿಳಾಸ : -ಗುರುಬಸವ ಅಂಡ್ ಕಂಪನಿ, ಮದರಾಸ್.

ಬೇಕಾದವರು ಗಮನಿಸಿ.

ತ್ವರೆಮಾಡಿ! ಕೆಲವು ದಿನಗಳು ಮಾತ್ರ!

ಸೋಲಾಪುರದ ಚೆಕ್ಕು, ಶೀರೆ, ಖಣ, ಕಿರಿಗೆ.

ಹಣ ಮುಂಗಡವಾಗಿ ಕಳುಹಿಸತಕ್ಕ ವ್ಯಾಪಾರಿಗಳಿಗೆ ಮಾತ್ರ ತಲಸೆವಾರಿ ಚೆಕ್ಕು, ಶೀರೆ, ಖಣ, ಕಿರಿಗೆ ಇವು ಬಹಳ ಸುಲಭ ಖರೀದಿಗೆ ಒದಗಿಸುವ ಏರ್ಪಾಡು ಮಾಡಲ್ಪಟ್ಟಿದೆ. ನಮ್ಮ ಕಾಯಂ ಗಿರಾಕಿಗಳಿಗೆ ಎಲ್ಲರಿಗಿಂತ ಸುಲಭ ಕ್ರಯಕ್ಕೆ ದೊರೆಯುವುದು.

ಹೊಸ ಗಿರಾಕಿಗಳು ತಮಗೆ ಬೇಕಾದಷ್ಟು ಸನಗಿಗೆ ಬರೆದು ಹಣ ಮುಂಗಡ ರವಾನಿಸಿದರೆ ಅವರಿಗೂ ಕಾಯಂ ಗಿರಾಕಿಗಳ ದರಕ್ಕೆ ಜವಳಿ ದೊರೆಯುವುದು.

ಹಣ ಕಳುಹಿಸದೆ ಬರೆಯತಕ್ಕ ಕಾಗದಗಳಿಗೆ ಬೇಗ ಗಮನಕೊಡಲು ಅನುಕೂಲವಿಲ್ಲ. ಕಾಗದ ಪತ್ರಗಳನ್ನು ಬೆಳಸುವದರಿಂದ ಖರೀದಿಗಳು ಬದಲಾಯಿಸುವುದಿಲ್ಲವೆಂಬ ವಿಷಯ ಜ್ಞಾಪಕದಲ್ಲಿಡಬೇಕು. [28-37]

ಇಂಡಿಯನ್ ಕೋಅಪರೆಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್,
169, ಕಿಲಾರಿ ರೋಡ್ (ಕುಂಚಿಗರ ಪೇಟೆ), ಬೆಂಗಳೂರು ಸಿಟಿ.

ಗೃಹಕೃತ್ಯದ ನೋಟೀಸು.

ಮೈಸೂರ್ ಡಿಸ್ಟ್ರಿಕ್ಟು ಯಡತೊರೆ ತಾಲ್ಲೂಕು ಮಿರ್ಲೆ ಹೋಬಳಿ ಕಸಬಾ ಗ್ರಾಮದಲ್ಲಿ ಇರುವ ಗೇವಾಂಗದ ತಿಮ್ಮಸೆಟ್ರ ಮಗ ಸುಬ್ಬಸೆಟ್ಟಿಯು ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ— ನನ್ನ ಜನಕತಂದೆ ತಿಮ್ಮಸೆಟ್ರು ಬಾಲ್ಯದಿಂದಲೂ ಸಿದ್ಧಪತ್ರೆ ಹೊಗೆ ತೆಗೆಯುವ ಅಭ್ಯಾಸವುಂಟು. ಇವರ ಮೇಲೆ 80-85 ವರುಷ ವಯಸ್ಸಾಗಿದೆ. ಈ ಎರಡು ಕಾರಣಗಳಿಂದ ಬುದ್ಧಿಸ್ಥಿಮಿತವಿಲ್ಲದೆ ಒಂದೊಂದು ಸಮಯದಲ್ಲಿ ಹತ್ತು ರೂಪಾಯಿನ ಪದಾರ್ಥವನ್ನು ಒಂದು ರೂಪಾಯಿಗಾದರೂ ಕೊಟ್ಟುಬಿಡುತ್ತಾರೆ. ಒಂದೊಂದು ಸಮಯದಲ್ಲಿ ಗದ್ದೆ ಮಾರುತ್ತೇನೆಂತಲೂ, ಒಂದು ಸಮಯದಲ್ಲಿ ಮನೇ ಮಾರುತ್ತೇನೆಂತಲೂ ಹೇಳುತ್ತಾರೆ. ಆದ್ದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ, ಮೇಲ್ಕಂಡ ನನ್ನ ತಂದೆ ತಿಮ್ಮಸೆಟ್ರಿಗೆ ಚರ ಸ್ಥಿರ ಸ್ವತ್ತುಗಳ ಮೇಲೇ ಆಗಲಿ, ಕೈಸಾಲವಾಗಲಿ ನನಗೆ ತಿಳಿಸದೆ ನನ್ನ ಅನುಮತಿ ಇಲ್ಲದೆ ಯಾರಾದರೂ ಸಾಲ ವಗ್ಯೆರೆ ಕೊಟ್ಟರೆ ಆ ನಷ್ಟಕ್ಕೆ ನಾನು ಬದ್ಧನಾಗುವದಿಲ್ಲ; ಅಂಥವರು ನನ್ನ ನಷ್ಟಕ್ಕೆಲ್ಲಾ ಗುರಿಯಾಗಬೇಕಾಗುವುದೆಂದು ಈ ಮೂಲಕ ಎಚ್ಚರಿಸಿರುತ್ತೇನೆ.

[217-2] ಸುಬ್ಬಸೆಟ್ಟಿ ರುಜು

ವನಸ್ಪತಿ ಬಲಕಾರಿಣಿ.

ಸಾರ್ಸಪರಿಲಾ, ಸುಗಂಧಸಾಲ ಮುಂತಾದ ಅನೇಕ ವನಮೂಲಿಕೆಗಳಿಂದ ತಯಾರಾದದ್ದು. ಬೆಳಗ್ಗೆ ಸಾಯಂಕಾಲ ಉಪಹಾರದ ಕಾಲದಲ್ಲಿ, ಅಥವಾ ಇಲ್ಲದೇ ಇದ್ದರೂ ಕಾಫಿಯಂತೆ ನೀರಿನಲ್ಲಿ ಚೆನ್ನಾಗಿ ಮರಳಿಸಿ ಹಾಲು ಸಕ್ಕರೆ ಸೇರಿಸಿ ಸೇವನೆ ಮಾಡುವುದು. ಈ ಸೇವನೆಯಿಂದ ಆಬಾಲವೃದ್ಧರ ಮತ್ತು ಗರ್ಭಿಣೀ ಸ್ತ್ರೀಯರ, ಬಾಣಂತಿಯರ ಅಬಲತ್ವ, ಮಂದಾಗ್ನಿ, ರಕ್ತದೋಷ, ತಿನಸು, ನಿತ್ರಾಣ, ವಾಯು ಶೂಲೆಗಳು, ವಾತ ಪಿತ್ತ ಶ್ಲೇಷ್ಮಾದಿಗಳ ವಿಕಾರಗಳು, ಮಕ್ಕಳ ಕೃಶತ್ವವು, ಯೌವನಸ್ಥರ ನಿಶ್ಶಕ್ತತೆಯು, ಉಷ್ಣಸಂಬಂಧ ರೋಗಗಳು, ಬಹುಮೂತ್ರರೋಗಗಳಿಗೂ, ಬುದ್ಧಿ ಉಪಯೋಗಿಸತಕ್ಕ ಪಂಡಿತರು, ಲಾಯರುಗಳು, ವಿದ್ಯಾರ್ಥಿಗಳಿಗೂ ಸಹ ಉತ್ಕೃಷ್ಟವಾದದ್ದು. ನಿದ್ರೆ ಬಾರದವರಿಗೂ, ಮಲ ಕಟ್ಟಿದವರಿಗೂ ಬಹಳ ಅನುಕೂಲ. ಕ್ರಯ 24 ತೋಲಾ ಪುಡಿಯುಳ್ಳ ಪೊಟ್ಟಣಕ್ಕೆ 1 ರೂಪಾಯಿ. ವಿ. ಪಿ. ಛಾರ್ಜು ಬೇರೆ. ಎಲ್ಲಾ ಕಡೆಗಳಲ್ಲೂ ಏಜಂಟರು ಬೇಕು.

ಮತ್ತು ಲೇಹಗಳು, ತೈಲಗಳು, ಔಷಧಗಳು ಬೇಕಾದವರು ದೇಹಧರ್ಮವನ್ನು ತಿಳಿಸಿ ತರಿಸಿಕೊಳ್ಳುವುದಾದರೆ ಪ್ರತ್ಯುತ್ತರಕ್ಕೆ ಲೇಬಲ್ ಆಗಲಿ, ರಿಪ್ಲೈ ಕಾರ್ಡು ಆಗಲಿ ಬರೆಯತಕ್ಕದ್ದು.

[216-2] ವಿಳಾಸ— ಪಿ. ಪಿ. ಲಕ್ಷ್ಮೀಶಪಂಡಿತರು,
ಪಂಡಿತ ವೆಂಕಟರಮಣಪ್ಪನವರ ವೈದ್ಯಶಾಲಾ, ಬುರುಜನಹಟ್ಟಿ, ಚಿತ್ರದುರ್ಗ.



ಸೆಪ್ಟಂಬರ್ ಮಹೋತ್ಸವದ ಕೈ ಗಡಿಯಾರ

ಅರ್ಧ ಕ್ರಯ ರೂ. 1-14-0

ಇದೇ ಸೆಪ್ಟಂಬರ್ ಹಬ್ಬದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದ ಕೈ ಗಡಿಯಾರವನ್ನು ಸೆಪ್ಟಂಬರ್ ಒಳಗೆ ತರಿಸಿಕೊಳ್ಳುವವರಿಗೆ ರೂಪಾಯಿ 1-14-0 ಅಷ್ಟಕ್ಕೆ ಕೊಡಲ್ಪಡುತ್ತೆ. [99-18]

ವಿಳಾಸ— ವಿ. ಕೃಷ್ಣಸ್ವಾಮಿ ಮೊದಲಿಯಾರ್, ನಂ.27 ಬಂದರ್ ಬೀದಿ, ಜಿ.ಟಿ., ಮದರಾಸು.

ಮಧುರೆ ಜುನ್ನಡಿ ಅಂಚಿನ ಸೀರೆ ಅವ್ವಲ್ ರಕಂ ರೂ. 2-6-0.

ಸೆಪ್ಟಂಬರ್ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಒಂದು ಸಿಂಗಪೂರು ರವಿಕೆಯನ್ನು ಪ್ರತಿ ಸೀರೆಗೂ ಇನಾಮಾಗಿ ಕೊಡುತ್ತೇವೆ.

ಇದು ಉಡುವುದಕ್ಕೆ ದಢೂತಿಯಾಗಿಯೂ ನೋಟಕ್ಕೆ ನಯವಾಗಿಯೂ, ಬೆಲೆ ಸುಲಭವಾಗಿಯೂ ಇದೆ. ಬಣ್ಣ ಹೋಗದು. ಸೀರೆಯು ಉದ್ದ 18 ಮೊಳ. ಸುಂದರವಾದ ಸೆರಗು. ಒಂದನ್ನು ತರಿಸಿ ಪರೀಕ್ಷಿಸಿ. ವಿಳಾಸ— ವಿ. ಕೃಷ್ಣಸ್ವಾಮಿ ಮೊದಲಿಯಾರ್, ನಂ. 27, ಬಂದರ್ ಬೀದಿ, ಜಿ. ಟಿ., ಮದರಾಸು.

[99-18]

ದಸರಾ ಬಹುಮಾನ! ನವರಾತ್ರಿ ಬಹುಮಾನ!

ದೊಡ್ಡವರೂ ಹುಡುಗರೂ ಅಲಂಕಾರ ಪೂರ್ವಕವಾಗಿ ಧರಿಸಬಹುದಾದ ಜರಿಗೆ ರೇಷ್ಮೆ ಶಾಲಿನ್ ಚೌಕವು.



2 ಮೊಳವಿರುವ ಚೌಕ ಒಂದಕ್ಕೆ ರೂ 1-8-0 1½ ಮೊಳವಿರುವ ಚೌಕ ಒಂದಕ್ಕೆ 15 ಆಣೆ. ಒಂದೇ ಸಲ ಎರಡು ಚೌಕಗಳನ್ನು ತರಿಸಿಕೊಳ್ಳುವವರಿಗೆ ಸ್ತ್ರೀಯರು ಕಂಠದಲ್ಲಿ ಧರಿಸಬಹುದಾದ ಗೆಜ್ಜೆ ಅಟ್ಟಿಗೆಯನ್ನು ಇನಾಮು ಕಳುಹಿಸಿಕೊಡುತ್ತೇವೆ. ಒಂದರಿಂದ ಎರಡರವರಿಗೂ ಪೋಸ್ಟೇಜು 3 ಆ. ಇದುವರೆಗೆ ಎಲ್ಲರೂ ವಿಕ್ರಯಿಸಿದ ರೇಷ್ಮೆ ಪಂಚೆಗಳು ಇಷ್ಟು ಮೇಲಾದವುಗಳಲ್ಲ. ಈ ಚಿತ್ರದಲ್ಲಿ ಕಾಣುವಂತೆ ಚಿತ್ರವಿಚಿತ್ರವಾದ ಹೂಗಳಿಂದ ತಯಾರಿಸಿದ ಈ ನೂತನವಾದ ಮೇಲಾದ ಚೌಕಗಳು ಈಗತಾನೇ ನಾವು ತರಿಸಿರುತ್ತೇವೆ. ಪಂಚವರ್ಣಗಳಲ್ಲಿ ಬಳ್ಳಿಗಳೂ, ಹೂಗಳೂ, ಎಲೆಗಳೂ ಹಾಕಿ ಉತ್ತಮವಾದ ರೇಷ್ಮೆ ಅಂಚಿಟ್ಟು ತಯಾರಿಸಿ ನವರಾತ್ರಿ ಮಹೋತ್ಸವಕ್ಕಾಗಿ ತರಿಸಿರುತ್ತೇವೆ. ಸಾವಿರಾರು ವಿಕ್ರಯವಾಗುತ್ತಿವೆ. ಜಾಗ್ರತೆ ತರಿಸಿಕೊಳ್ಳಿ.

ಅಡ್ರೆಸ್— ಜನರಲ್ ಸಿಲ್ಕು ವೇರ್‌ಹೌಸ್, 1.6 ವೆಂಕಟೇಶ ಮೇಸ್ತ್ರಿ ಬೀದಿ, ಸಾಹುಕಾರಪೇಟೆ, ಮದರಾಸು

[100-21]

ವೃತ್ತಾಂತಪತ್ರಿಕೆ ಏಜಂಟರಿಗೆ ಸೂಚನೆ.

ವೃತ್ತಾಂತ ಪತ್ರಿಕೆಯ 1914-15 ನೇ ವರುಷದ ಒಂದನೇ ಕ್ವಾರ್ಟರು ಕಳೆದ ಆಗಸ್ಟ್ ತಿಂಗಳಿಗೆ ಪೂರೈಸಿದೆ. ಏಜಂಟರುಗಳು ಆ ಕ್ವಾರ್ಟರಿನ ಲೆಕ್ಕಗಳನ್ನು ಮುಗಿಸಿ, "ಬಿ" ಫಾರಂಗಳಿಗೆ ಎತ್ತಿ ಬರೆದು, ತಮ್ಮ ತಮ್ಮ ಸೂಪರಿಂಟೆಂಡೆಂಟರಿಗೆ ಒಂದು ಪ್ರತಿಯನ್ನೂ, ನಮಗೆ ಒಂದು ಪ್ರತಿಯನ್ನೂ ಈ ವಾರದಲ್ಲೇ ಜಾಗ್ರತೆಯಿಂದ ಕಳುಹಿಸಿಕೊಡಬೇಕಾಗಿ ಕೃಪೆಪಡಿಸಿದೆ.

ನೀವು ಕೇಳಿದ ಹಾಗೆ ಪತ್ರಿಕೆಗಳನ್ನು ಹೆಚ್ಚಾಗಿ ಕಳುಹಿಸುತ್ತಾ ಬರುವೆವು. ಆದರೆ ಬಿಡಿ ಪತ್ರಿಕೆಗಳನ್ನು ಮಾರಬೇಕೂಡದು. ಮುಂದಿನ 1915 ನೇ ಆಷಾಢ ವರೆಗೆ ಅಡ್ವಾನ್ಸು ಕೊಟ್ಟು ಕ್ರಮವಾಗಿ ಚಂದಾದಾರರಾಗತಕ್ಕವರಿಗೆ ಮಾತ್ರ ಪತ್ರಿಕೆಗಳನ್ನು ತಪ್ಪಿಸದೆ ಕೊಡುತ್ತಾ ಬರಬೇಕೆಂದು ಕೋರುತ್ತೇವೆ.

ಮ್ಯಾನೇಜರ್, "ವೃತ್ತಾಂತ ಪತ್ರಿಕೆ," ಮೈಸೂರು.

ಸುಖಕರ, ಆನಂದ, ಬಹಳ ಅವಶ್ಯ.

ಈಗ ತಾನೇ ಕಂಡುಹಿಡಿದಿದೆ.

ಜಪಾನ್ ರಾಜ್ಯದಲ್ಲಿ ನೂರಾರು ವರುಷಗಳಿಂದ ಉಪಯೋಗದಲ್ಲಿದೆ.

ಸೆಂಶಾನ್ ಬೆಳ್ಳಿಯ ವರಕು ಸುತ್ತಿದ ಮುತ್ತುಗಳು.

(1) ಮನಸ್ಸಿಗೆ ಹರ್ಷವನ್ನೂ ಉಲ್ಲಾಸವನ್ನೂ ಕೊಟ್ಟು ಜೀರ್ಣಶಕ್ತಿಯನ್ನುಂಟುಮಾಡುವುದು.

(2) ಹಾಡುವವರಿಗೆ ವರಪ್ರಸಾದವಾದದ್ದು.

(3) ಬಾಯಿ ದುರ್ಗಂಧ, ಗಂಟಲು ಗಾರೆಸ್ಸುವುದು, ಉಬ್ಬಸ, ಸಮುದ್ರಯಾನದ ಜುಗುಪ್ಸೆ, ಈ ನೋಗಬಾಧವನ್ನು ಸುಟ್ಟದಂತೆ ಆಸ್ತಿ ಮಾಡುತ್ತದೆ.

(4) ತಾಂಬೂಲದೊಡನೆ ಸೇವಿಸುವುದಕ್ಕೆ ಅತ್ಯಂತ ಹಿತಕರವಾಗಿದೆ. [73-30]

ಒಂದು ಸಲ ಪರೀಕ್ಷೆ ಮಾಡಿದಲ್ಲಿ ಯಾವಾಗಲೂ ಒಂದು ಪೊಟ್ಟಣ ಇದ್ದೀತೆಂದು ಬಯಸುವಿರಿ.

ಮುತ್ತಿನಂತಿರುವ	45	ಮಾತ್ರೆ ಇರುವ ಪೊಟ್ಟಣಕ್ಕೆ ಕ್ರಯ	2 ಆಣೆ.
,,	95	,, ,, ,, ,,	4 ,,
,,	200	,, ,, ,, ,,	7 ,,
,,	200	,, ಸುಂದರವಾದ ಟಿನ್ ಡಬ್ಬಾ	9 ,,
,,	80	,, ,, ,, ,,	1 ,,
,,	100	,, ಬಾಟ್ಲಿಯಲ್ಲಿ	1½ ,,

ಈ ಕ್ರಯದಷ್ಟು ಸ್ಟಾಂಪನ್ನೂ, ಅಂಚೆ ಸೆಟ್ಟಕ್ಕೆ ಚಾರ್ಜು ಒಂದಾಣೆಯನ್ನೂ ಸೇರಿಸಿ ಕಳುಹಿಸಬೇಕು. ಕಾಗದಪತ್ರವನ್ನೂ ವಿಳಾಸಗಳನ್ನೂ ನಮಗೆ ಇಂಗ್ಲೀಷಿನಲ್ಲೇ ಬರೆಯತಕ್ಕದ್ದು.

ನಮ್ಮ ವಿಳಾಸ— ಸೆಂಶಾನ ಡಿಪೋ,
ಮೋರ್ಸನೂರ್ ಬಿಲ್ಡಿಂಗ್, ಪ್ರಿನ್ಸೆಸ್ ಸ್ಟ್ರೀಟ್,
ಬೊಂಬಾಯಿ 2;
ಅಥವಾ, ಬಿ. ಸಿ. ಷಾ ಕಂಪನಿ,
509 ಮಿಂಟ್ ಬೀದಿ, ಮದರಾಸ್.

ಶಾಲಿವಾಹನ ಶಕ ವರುಷಂಗಳು 1837 ನೇ ಆನಂದ ಸಂವತ್ಸರದ ದಕ್ಷಿಣಾಯನ ಶರದೃತು ಆಶ್ವೀಜ ಬಹುಳ ಪಂಚಮಿ ಶುಕ್ರವಾರದಿಂದ ಆಶ್ವೀಜ ಬಹುಳ ಏಕಾದಶಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1914 ನೇ ಅಕ್ಟೋಬರ್.

ತಾ.	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಕನ್ಯಾ ಮಾಸ ತೇದಿ
9	ಶುಕ್ರ ‡	ಪಂಚಮಿ	32-48	ರೋಹಿಣಿ	36-19	24
10	ಶನಿ *	ಷಷ್ಠಿ	36-16	ಮೃಗಶಿರ	41-30	25
11	ಭಾನು	ಸಪ್ತಮಿ	38-26	ಆರಿದ್ರಾ	45-5	26
12	ಸೋಮ	ಅಷ್ಟಮಿ	39-18	ಪುನರ್ವಸು	47-21	27
13	ಮಂಗಳ †	ನವಮಿ	38-57	ಪುಷ್ಯ	48-22	28
14	ಬುಧ	ದಶಮಿ	37-11	ಆಶ್ಲೇಷ	48-10	29
15	ಗುರು §	ಏಕಾದಶಿ	34-27	ಮಘಾ	46-55	30

‡ ದಶರಥಗೌರೀ ವ್ರತ.
* ಮಳೆ ನಕ್ಷತ್ರ—ಚಿತ್ತ 1 ನೇ ಪಾದ.
† ಮಳೆ ನಕ್ಷತ್ರ—ಚಿತ್ತ 2 ನೇ ಪಾದ.
§ ವೈಪ್ರ.

ಸಂಪೂರ್ಣಾರೋಗ್ಯವು, ಸಂತೋಷಭಾಗ್ಯವು, ಶಾಶ್ವತವಾದ ಸಂಪತ್ತು, ಪುತ್ರರನ್ನು ಪಡೆಯುವುದಕ್ಕೋಸ್ಕರ ಇನ್ನೂ ಕತ್ತಲೆಯಲ್ಲಿ ಸೋತಿರುವಿರೋ?

ಹಾಗಾದರೆ ನಮ್ಮ

ಪಂಜಾ ಸಾಲಾಮಿಸ್ರಿ ಮುರಬ್ಬ

ವನ್ನು ಸೇವಿಸಿ ಜೀವವಿಮೆಯನ್ನು ಮಾಡಿಕೊಳ್ಳಿರಿ.

ಆಬಾಲವೃದ್ಧರಿಗೂ ಸ್ತ್ರೀಪುರುಷರಿಗೂ ಉಪಯೋಗವಾದ ಮತ್ತು ಪುಷ್ಟಿಯನ್ನು ಕೊಡುವ ಔಷಧವು ಇದೇ. ಈ ಪಂಜಾ ಸಾಲಾಮಿಸ್ರಿ ಮುರಬ್ಬವು ಮೂತ್ರಕೋಶ ಸಂಬಂಧವಾದ ಎಲ್ಲಾ ತರದ ರೋಗಗಳನ್ನೂ ನಿವರ್ತಿಸುತ್ತದೆ. ಪಂಜಾ ಸಾಲಾಮಿಸ್ರಿಯ ಜೊತೆಗೆ ಅಪೂರ್ವವಾದ ಮತ್ತು ಉತ್ತಮವಾದ ವನಸ್ಪತಿಗಳನ್ನು ಸೇರಿಸಿ ಮುರಬ್ಬವನ್ನು ತಯಾರಿಸಲ್ಪಟ್ಟಿದೆ. ಒಂದು ಸಲ ಉಪಯೋಗಿಸಿದರೆ ಎಂದಿಗೂ ಮರೆಯಲಾರಿರಿ. ರಸರಹಿತವಾದ ಮಾತ್ರೆಯಾದ ದೇಹಪುಷ್ಟಿಯನ್ನು ಕೊಡತಕ್ಕ ಔಷಧಿಯೇ ಇದು.

ಪಂಜಾ ಸಾಲಾಮಿಸ್ರೀ ಮುರಬ್ಬಾವು— ನಿದ್ರೆಯಲ್ಲಿಯೂ ಮೂತ್ರದಲ್ಲಿಯೂ ಹೋಗುವ ಧಾತುವನ್ನು ನಿಲ್ಲಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು— ಮೂತ್ರದಲ್ಲಿ ಉರಿಯುವುದನ್ನು ನಿಲ್ಲಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು— ರಕ್ತವನ್ನು ವೃದ್ಧಿಪಡಿಸಿ ಮೆದುಳಿಗೆ ಬಲವನ್ನು ಕೊಡುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು— ಕೈ, ಕಾಲು, ಸೊಂಟದ ನೋವುಗಳನ್ನು ಹೋಗಲಾಡಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು— ಹಸಿವನ್ನು ರಕ್ತವನ್ನು ಹೆಚ್ಚಿಸಿ ಧಾತುವನ್ನು ಶೇಖರಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು— ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು— ಉತ್ಸಾಹವು, ಬುದ್ಧಿಕುಶಲತೆಯು, ರೂಪಕಾಂತಿಯು ಕೊಡುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು— ತಾಂಬ್ರ ಮತ್ತು ಭಂಗಾಂಭಸ್ಮಕ್ಕಿಂತಲೂ ಉತ್ತಮವಾದದ್ದು.

ಈ ಮುರಬ್ಬಾದೊಂದಿಗೆ ಬಲಬರುವಂಥ ಪದಾರ್ಥಗಳನ್ನು ಸೇರಿಸಿ ಪ್ರತಿಯೊಬ್ಬರೂ ಸೇವಿಸುವ ಹಾಗೆ ಕೈಯಿಂದ ಮುಟ್ಟದೆ ತಯಾರು ಮಾಡಲ್ಪಟ್ಟಿರುವುದು.

ಒಂದು ಡಬ್ಬಿ ಮುರಬ್ಬಾವನ್ನು 15 ದಿನಗಳು ಉಪಯೋಗಿಸುವುದರಿಂದ ಪೂರಾ ಗುಣ ಕೊಡುತ್ತದೆ. 2-3 ಡಬ್ಬಿಗಳನ್ನು ಉಪಯೋಗಿಸುವದರಿಂದ ಜನ್ಮಾಂತ್ಯದ ವರೆಗೂ ಗುಣಕೊಡುತ್ತೆ. ಈ ಸಾಲಾಮಿಸ್ರೀ ಎಂಬುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲ್ ಕಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿನ ಜನರು ಸಾಲಾಮಿಸ್ರೀಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು. ಅನೇಕರು ಉರುಳುಗಡ್ಡೆ, ಶಾವುಗಡ್ಡೆ ಇವುಗಳನ್ನು ಪಕ್ವಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಮೋಸಪಡಿಸುವರು. ನಮ್ಮ ಮುರಬ್ಬಾವನ್ನು ಪರೀಕ್ಷಿಸಿ ನೋಡಿದಲ್ಲಿ ಇದು ಪಂಜಾ ಸಾಲಾಮಿಸ್ರಿಯೋ ಅಥವಾ ಬೇರೆ ತರಹದ್ದೋ ಎಂಬುದು ತಿಳಿದುಬರುತ್ತೆ. [214-3]

ಈ ಮುರಬ್ಬಾವು "ಪಂಜಾ ಸಾಲಾಮಿಸ್ರಿ" ಅಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡುವೆವು

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. 16 ತೊಲೆ ಮುರಬ್ಬಾವಿನ ಡಬ್ಬಿ 1 ಕ್ಕೆ ರೂಪಾಯಿ 2-0-0. ಟಪ್ಪಾಲು ಖರ್ಚು 1 ಡಬ್ಬಿಯಿಂದ 3 ಡಬ್ಬಿಗಳ ವರೆಗೆ 6 ಆಣೆ. ಅನುಪಾನ ಪತ್ರಿಕೆ ಔಷಧದ ಸಂಗಡ ಇರುತ್ತೆ.

ಏಜಂಟರು— ಡಿ. ಸೈಯದ್ ಉಸ್ಮಾನ್ ಅಂಡ್ ಕೊ,
ದೊಡ್ಡ ಪೇಟೆ, ಬೆಂಗಳೂರು ಸಿಟಿ.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
ಅವೆನ್ಯೂ ರೋಡ್, ಬೆಂಗಳೂರು ಸಿಟಿ.

Printed and Published by the Rev. H. Gulliford, Proprietor and Manager, Wesleyan Mission Press, Mysore. 8/10/1914.

REGISTERED
M. 30

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೮ ಮೈಸೂರು—ಸನ್ ೧೯೧೪ ನೇ ಇಸವಿ ಅಕ್ಟೋಬರ್ ತಾರೀಖು ೧೫ ನೇ ಗುರುವಾರ. ಸಂಚಿಕೆ ೨೦

ಹೊಸ ಪುಸ್ತಕಗಳು.—ವಿಷವಿವಾಹ 4 ಆ., ಸನ್ಯಾಸಿನಿ 1½ ಆ., ಸುಶೀಲೆ ...ಆ., ಬಿ. ವೆಂಕಟಾಚಾರ್ಯರಿಂದ-ದುರ್ಗೇಶನಂದಿನಿ 1¼ ರೂ., ಅಮೃತಫಲಿನ ...ಆ., ಚಿತ್ರವಿಚಿತ್ರಾವಳಿ 1½ 8 ಆ. ವಗೈರೆ ಎಲ್ಲಾ ಕಾದಂಬರಿಗಳು; ಮತ್ತು ...ವಿಜಯ 3 ರೂ., ರಾಜಭಕ್ತಿ 6 ಆ., ವಿವೇಕ ಚೂಡಾಮಣಿ 10 ಆ., ಇತ್ಯಾದಿ.
[13-34] ಎಂ. ಸುಬ್ಬರಾವ್, ಬುಕ್ ಸೆಲರ್, ಶಂಕರಪುರ, ಬೆಂಗಳೂರು ಸಿಟಿ.

ಈ ಉತ್ತಮ ಗ್ರಂಥಗಳನ್ನು ಓದಿರುವಿರಾ ?

...ನ ಚರಿತ್ರೆ 4 ಆ; ಕೃಷ್ಣಾಕುಮಾರಿ 10 ಆ; ವಿವೇಕಮಂಜರಿ ಭಾಗ III 6 ಆ; ಮನುಷ್ಯಂದನ ಶತಕಂ 4 ಆ; ತುಣುಕುಮಿಣುಕು 1½ ಆ; ...ರೆ 12 ಆ; ಸೂಕ್ತಿತಾರಾವಳಿ 4 ಆ; ರಂಗನಾಥದುಮದಿ 1½ ಆ; ಬಾಗಿಲು ... 4 ಆ; ನವನುಗಂತತೆ 1 ಆ; ಗೃಹಿಣೀಯಾದ ಗಂಗೆ 3 ಆ. ಸೊಗಸಾದ ಹೊಸ ಬಂಗಾಳೀ ನಾವಲ್:—ಕನ್ಯಾಬಲಿ 6 ಆ; ಜಯ ! ವಾಲ್ಮೀಕಿ 12 ಆ; ... 3 ಆ; ಅಕ್ಷತ್ಯವ್ಯಗ 1½ ಆ; ಆಡವಿಯ ರಾಜ 2 ಆ; ವಿಷವಿವಾಹ 4 ಆ; ಸನ್ಯಾಸಿನಿ 1½ ಆ; ಅನಾಥಪ್ರೇತ 1 ಆ; ವಿಲಕ್ಷಣ ದೈವಘಟನೆ 4 ಆ; ರಮಾ ... 6 ಆ; ಸುಶೀಲೆ 6 ಆ; ಸಭಾ 8 ಆ; ಸಾಹಸಿಕೆ 2½ ಆ; ಉಲೂಯ ... 1 ಆಣೆ. ಇತ್ಯಾದಿ. "ಮಧುರವಾಣಿ" ಸಚಿತ್ರ ಮಾಸಪತ್ರಿಕೆಯ ಮಾದರಿ ...ಗೂ ಕ್ಯಾಟಲಾಗಿಗೂ ಬರೆಯಿರಿ.
[10-13] ನಮ್ಮ ವಿಳಾಸ—ಹನುಮಾನ್ ಕಂಪೆನಿ, ಮೈಸೂರು.

ಷೇಕ್ಸ್‌ಪಿಯರ್

ಮಹಾ ಕವಿಯ ನಾಟಕದ ಕಥೆಗಳು.

ಸಿಂಬ್ಲೈನ್, ಒಥೆಲೋ, ಮರ್ಚೆಂಟ್ ಆಫ್ ವೆನ್ನಿಸ್, ಕಿಂಗ್‌ಲಿಯರ್ ಮುಂತಾದ ಕೆಲವು ನಾಟಕಗಳನ್ನು ಕಥಾ ರೂಪವಾಗಿ ಬರೆಯಲ್ಪಟ್ಟು ನಮ್ಮ ...ದ ಹೆಸರಿನ್ನಿಟ್ಟು ಪ್ರಕಟಿಸಿರುತ್ತೆ. ಪ್ರತಿ ಒಂದಕ್ಕೂ ಎರಡಾಣೆ. ಅವು ಯಾವೆಂದರೆ—ಕಲಾವತಿ, ಪದ್ಮಿನಿ, ವಸುಮತಿ, ಚಿತ್ರಕಲಾವತಿ, ವಿಲಕ್ಷಣ ...ತ, ಭಾನುಮತಿ, ವೈವಿಧ್ಯ ವಿಲಾಸ, ಚಾರುಮತಿ, ಚಾತುರ್ಯವತಿ.

"ಮರುಳಾಟದ ..." ಎಂಬ ನಾಟಕವು ಈಗತಾನೆ ಬಿಕರಿಗೆ ಸಿದ್ಧವಾಗಿದೆ. ಪ್ರತಿಯೊಬ್ಬರೂ ಓದಬೇಕಾದುದು ಕ್ರಯ 6 ಆಣೆ
[366-14] ವಿಳಾಸ ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

ಅರೇಬಿಯನ್ ನೈಟ್ಸ್

ಎಂಬ

ಯವನ ಯಾಮಿನೀ ವಿನೋದ ಕಥೆಗಳು.

(ಕನ್ನಡದಲ್ಲಿ)

ಲೋಕಪ್ರಸಿದ್ಧವಾದ ಈ ಪುಸ್ತಕದ ಮೊದಲನೇ ಮುದ್ರಣವು ಶೀಘ್ರದಲ್ಲಿಯೇ ಮುಗಿದುಹೋದುದರಿಂದ ಎರಡನೇ ಮುದ್ರಣವನ್ನು ಪ್ರಕಾಶಿಸಿರುತ್ತೇವೆ. ಇದರ ಪ್ರಿಂಟಿಂಗ್ ಮತ್ತು ಬೈಂಡ್ ಮುಂತಾದ ಕೆಲಸಗಳು ವೆಸ್ಲಿಯನ್ ಮಿಷನ್ ಪ್ರೆಸ್ಸಿನಲ್ಲಿ ಬಹು ಶ್ಲಾಘ್ಯತರವಾಗಿ ಮಾಡಲ್ಪಟ್ಟಿರುವವು. ಈ ಎರಡನೇ ಮುದ್ರಣ ವನ್ನು ಘನ ಪಂಡಿತರು ಆಮೂಲಾಗ್ರವಾಗಿ ಪರಿಶೀಲಿಸಿನೋಡಿ ತಿದ್ದಿ ಸರಿಪಡಿಸಿರುತ್ತಾರೆ. ಇದರಲ್ಲಿನ ಕಥೆಗಳು ಬಹು ಮನೋರಂಜಕವಾಗಿಯೂ ಭಾಷೆಯು ಅತಿ ಲಲಿತವಾಗಿಯೂ ಇರುತ್ತವೆ. ಪುಸ್ತಕವು ನಾನೂರು ಪುಟಗಳಿಗಿಂತ ಹೆಚ್ಚಾಗಿರುತ್ತದೆ. ಇದರ ಕ್ರಯ ಎರಡೇ ರೂಪಾಯಿ. ವಿ.ಪಿ.ಪಿ. ಮೂಲಕ ತರಿಸಿಕೊಂಡರೆ ರೂ. 2-4-0. ಜಾಗ್ರತೆ ನೋಡಿ. [312-4]

ವಿಳಾಸ—ಮ್ಯಾನೇಜರ್, ಸಿ.ಎಲ್.ಎಸ್. ಬುಕ್ ಡಿಪೋ, ಮೈಸೂರು.

ಯುದ್ಧವಾರ್ತೆಯು.

ಯೂರೋಪಿನಲ್ಲಿ ನಡೆಯುತ್ತಿರುವ ಯುದ್ಧವಾರ್ತೆಯನ್ನು ಪ್ರತಿ ನಿತ್ಯವೂ ಕನ್ನಡಿಗರ ಉಪಯೋಗಕ್ಕಾಗಿ ಪ್ರಕಟಿಸುತ್ತಿರುವೆವು. ಕ್ರಯ 3 ಪೈ; ತಿಂಗಳಿಗೆ 8 ಆಣೆ ; ಅಂಚೆಯಲ್ಲಿ ತರಿಸುವವರಿಗೆ ತಿಂಗಳಿಗೆ ಒಂದು ರೂಪಾಯಿ. ಮೈಸೂರು ಸಂಸ್ಥಾನದ ಎಲ್ಲಾ ಭಾಗದಲ್ಲಿಯೂ ಏಜಂಟರುಗಳು ಬೇಕಾಗಿದೆ. ಹೆಚ್ಚಾಗಿ ಕಮಿಷನ್ ಸಿಗುವುದು.

ಮುಖ್ಯ ಏಜಂಟರು—

[23-40] ಛಕ್ಕೂರು ರಾಮಚಂದ್ರರಾವ್, ಮೈಸೂರು.

ಸೂರ್ಯೋದಯ ಪುಸ್ತಕಭಂಡಾರ.

ಹೊಸ ನಾವೆಲ್‌ಗಳು :—ನೀಲಾಂಬರಿ, ನರಬಲಿ, ಗುರುತು ಕಂಡ ಕಳ್ಳ, ಮಾಯಾವಿನಿಯ ಅತ್ಯಾಚಾರ, ಮಾಯಾವಿನಿಯ ಪರಿಣಾಮ ಮುಂತಾದ ಪತ್ತೇದಾರಿ ನಾವೆಲ್‌ಗಳು. ಪುಸ್ತಕ ಒಂದಕ್ಕೆ ಆಣೆ 2 ಮಾತ್ರ. ಪಕ್ಕಿ 12 ಆಣೆ. ಮಾಧವಿ ಕಂಕಣ 1-8-0. ಇವಲ್ಲದೆ ಈ ಡಿಪೋದಲ್ಲಿ ಕನ್ನಡ, ತೆನುಗು, ಸಂಸ್ಕೃತ, ಇಂಗ್ಲಿಷ್ ಗ್ರಂಥಗಳೂ, ನಾವೆಲ್‌ಗಳೂ, ಕಥೆಗಳೂ, ಪುರಾಣಗಳೂ, ವೈದ್ಯ ಜ್ಯೋತಿಷ ಪುಸ್ತಕಗಳೂ ದೊರೆಯುತ್ತವೆ. ಬೇಕಾದವರು ಬರೆದು ಮುಫತ್ತಾಗಿ ದೊರೆಯುವ ಕ್ಯಾಟಲಾಗನ್ನು ತರಿಸಿಕೊಳ್ಳಬಹುದು.

[143-15] ವಿಳಾಸ :—ಪಿ. ನರಸಿಂಗರಾವ್, ಎಡಿಟರ್, ಲಾ ಗೆಜೆಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

ನತ್ಮಲ್ ಕಂಪನಿ ಡೈರಿಗಳು.



1916 ನೇ ಇಸವಿ ಕನ್ನಡ ಮಾಡಲ್ ಪಾಕೆಟ್ ಡೈರಿಗಳು.

ತಯಾರಾಗಿ ಬಿಕರಿಗೆ ಸಿದ್ಧವಾಗಿದೆ. ಈಗಲೇ ಬರೆದು ತರಿಸಿಕೊಳ್ಳಿರಿ.

1 ನೇ	ನಂ.	ಚಿಕ್ಕದು ಸಾದಾ	4 ಆಣೆ.
2 ನೇ	,,	,, ಒಟಿಕ ಹಾಕಿದ್ದು	6 ,,
3 ನೇ	,,	ದೊಡ್ಡದು ಸಾದಾ	6 ,,
4 ನೇ	,,	,, ಒಟಿಕ ಹಾಕಿದ್ದು	8 ,,

ಒಂದೇ ಸಮಯದಲ್ಲಿ 12 ಡೈರಿಗಳನ್ನು ತರಿಸಿಕೊಳ್ಳುವವರಿಗೆ 1 ಡೈರಿ ಜಾಸ್ತಿ; ಅಥವಾ ಇನ್ನೂ ಹೆಚ್ಚಾಗಿ ತರಿಸಿಕೊಳ್ಳುವವರಿಗೆ ರೂ. ಗೆ 2 ಆಣೆಯಂತೆ ಡಿಸ್ಕೌಂಟು ದೊರೆಯುತ್ತೆ.

ವಿಳಾಸ ಎಸ್. ಡಿ. ನತ್ಮಲ್ ಕಂಪೆನಿ,
[215-1] ದೊಡ್ಡಪೇಟೆ, ಮೈಸೂರು.

THE
GENERAL
Assurance Society Ltd., Ajmer.
(A Popular Life Office.)

Before Insuring or taking agency elsewhere, it would be to your interest to know the rates of premium and terms of agency specially prepared by the Society's Consulting Actuary, Mr. H. E. W. Lutt, F.I.A. (one of the most *eminent Actuaries in England*).

First Valuation Result:—The total liabilities under all *assurances issued up to 31st March 1913,* are fully covered by the Society's Life Assurance Fund and Paid up Capital. Write for full particulars, Annual and Valuation Reports to the Manager, Ajmer, or Secretary,

Opposite to Minto Ophthalmic Hospital,
[131-14] Bangalore City

ಸಿದ್ಧವಾಗಿದೆ.

1915 ನೆಯ ವರ್ಷದ ಲೋವರ್ ಸೆಕಂಡರಿ
ಕನ್ನಡ ಟೆಕ್ಸ್ಟಿನ ನೋಟ್ಸು.—ಕ್ರಯ 6 ಆಣೆ.
ಡಿಸ್ಕೌಂಟು—10 ಕ್ಕೆ 1; 25 ಕ್ಕೆ 3; 50 ಕ್ಕೆ 8; 100 ಕ್ಕೆ 20.

ಮಕ್ಕಳ ಭೂವಿವರಣೆ.

ಈಗಿನ ಪಾಠಕ್ರಮಕ್ಕೆ ತಕ್ಕಂತೆ ಹೊಸದಾಗಿ ಆಗಿದೆ. ಇದರಲ್ಲಿ ಮೈಸೂರು ದೇಶದ ಬೆಳೆ, ಎತ್ತರ, ನದೀ ಪರ್ವತಾದಿಗಳು ಇವುಗಳನ್ನು ತೋರಿಸುವ ಮೂರು ಭೂಪಟಗಳೂ, ಚಿತ್ರಗಳೂ ಸೇರಿವೆ. ಕ್ರಯ 2 ಆಣೆ. [49-35]

ಇಲಾಖೆಯ 2 ನೆಯ ಪುಸ್ತಕದ ನೋಟ್ಸು 2½ ಆಣೆ. ಮೆಕ್ಮಿಲನ್ ರವರ 3 ನೇ ಪುಸ್ತಕದ ನೋಟ್ಸು 1½ ಆಣೆ. ರಿಡೂ 4 ನೇ ಪುಸ್ತಕದ ನೋಟ್ಸು 1½ ಆಣೆ. ರಿಟೋ 5 ನೇ ಪುಸ್ತಕದ ನೋಟ್ಸು 4 ಆಣೆ. ನವಬಾಲಬೋಧಿನಿ (2 ನೇ ತರಗತಿಗೆ) 1 ಆಣೆ. Notes on "Tanglewood Tales," English Lower Secondary Text for 1915—As. 3. Notes on Fairy Tales—As. 2.

ನಮ್ಮ ವಿಳಾಸ:—ಯತ್. ಆರ್. ವೆಂಕಟಸುಬ್ಬಾಚಾರ್ಯ,
ಸುಬೋಧಗ್ರಂಥಾಲಯ, ಮೈಸೂರು.

ಶ್ರೇಷ್ಠವಾದ ವಾಚ್ ! ಚಾತುರ್ಯದ ವಾಚ್ ! ನಾಜೂಕಾದ ವಾಚ್ !

ಸ್ಪ್ರಿಂಗ್ ಪಾಕೆಟ್ ಲೀವರ್ ವಾಚ್.

ಇದರ ಕ್ರಯ 7 ಬಹುಮಾನಗಳ ಸಮೇತ ರೂ. 3-8-0 ಮಾತ್ರ.

ಏಳು ವರ್ಷಗಳ ಖಾತ್ರಿಯಾದ ಗ್ಯಾರಂಟಿ.



ಘನವಂತರೇ,

ಈ ನೂತನ ಸಮೂನೆ ವಾಚ್ ಈಗ ತಾನೇ ಬಂದಿರುತ್ತೆ. ಪ್ರಪಂಚದಲ್ಲೆಲ್ಲಾ ಹೆಸರುವಾಸಿಯಾದ ಮತ್ತು ಶ್ರೇಷ್ಠವಾದ ಲೀವರ್ ಕೆಲಸದಿಂದಲೂ, ಬಲಿಷ್ಟವಾದ ಮತ್ತು ನಾಜೂಕಾದ ಯಂತ್ರ ಸಾಧನಗಳಿಂದಲೂ ತಯಾರಾಗಿ ಬಂದಿರುತ್ತೆ. ಈಗ ತಾನೆ ಹೊಸದಾಗಿ ನಾವು ಪ್ರತ್ಯೇಕವಾಗಿ ತರಿಸಿರುತ್ತೇವೆ. ಗೌರ್ನಮೆಂಟು ಟೈಂಗೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದದ್ದು. ಸಂಚಿಕೆಯಾಗಿ ದೀರ್ಘಕಾಲ ಅನೇಕ ವರ್ಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು. ಬಹು ರಮಣೀಯವಾದ ವಾಚ್. ಬರೀ ಮಾತುಗಳಿಂದೇನು ? ಪರಂಪರೆ ಬಾಳಿಕೆ ಬರುವ ವಾಚ್ ಇದೇ. ಇದರ 7 ಬಹುಮಾನಗಳ ತಪಸೀಲ್:—(1) ಸುಂದರವಾದ ವಾಚ್ ಸರಪಣಿ, (2) ದಿಕ್ಕುಗಳನ್ನು ತೋರಿಸುವ ಉತ್ತರಮುಖಿ, (3) ವಾಚ್‌ಗೆ ಧೂಳು ಸೇರದಂತೆ ಭದ್ರಪಡಿಸುವ ತೊಗಲಿನ ಚೀಲ, (4) ಕುತ್ತಿಗೆಗೆ ವಾಚ್ ಸಂಗಡ ಧರಿಸಿಕೊಳ್ಳುವ ರೇಷ್ಮೆ ಧಾರ, (5) ವಾಚ್ ಪೆಟ್ಟಿಗೆ (ಬಹು ಸುಂದರವಾದದ್ದು), (6) ಪರಿಮಳವುಳ್ಳ ಸುವಾಸನೆ ಸೀಸೆ, (7) ಕರವಸ್ತ್ರ.

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.—

ಟಿ. ಸೀತಾರಾಮ ಮೊದಲಿಯಾರ್, ನಂ 3, ಕಂದಪ್ಪ
[180-6] ಮೊದಲಿ ವೀದಿ, ತಿರುವಲ್ಲಕೇಣಿ, ಮದರಾಸು.

1915 ನೆಯ ಪಾಕೆಟ್ ಡೈರಿ

ಶ್ರೀ ಸೀತಾರಾಘವ ಪಾಕೆಟ್ ಡೈರಿಗಳು

[199-6]



ಬಿಕರಿಗೆ ಸಿದ್ಧವಾಗಿವೆ.

ಶಾಯಿ ಇಳಿಯದ ಉತ್ತಮವಾದ ಕಾಗದ! ಸ್ವಚ್ಛವಾದ ಮುದ್ರಣ!

ಅನೇಕವಾದ ಹೊಸ ಸಂಗತಿಗಳಿವೆ.

1 ನಂ. ಸಣ್ಣ ಸೈಜು ಸಾದಾ 0-4-0. 2 ನಂ. ಪೆನ್ಸಲ್ ಮುಚ್ಚಳವುಳ್ಳದ್ದು 0-6-0.
3 ನಂ. ದೊಡ್ಡ ಸೈಜು ಸಾದಾ 0-6-0. 4. ನಂ. ಪೆನ್ಸಲ್ ಮುಚ್ಚಳವುಳ್ಳದ್ದು 0-8-0.

ಒಂದೇ ವಿಳಾಸಕ್ಕೆ 10 ಡೈರಿಗಳನ್ನು ಒಟ್ಟಿಗೆ ತರಿಸಿಕೊಂಡರೆ 1 ಇನಾಂ.
ಹೆಚ್ಚಾಗಿ ತರಿಸುವವರಿಗೆ ರೂಪಾಯಿಗೆ 0-2-0 ಕಮಿಷನ್.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ :—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಕುಂತಳಾನಂದ ತೈಲವು.

213-4

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಚಿನ್ನದ ಪದಕ ಮತ್ತು ಎಂಟು ಸರ್ಟಿಫಿಕೇಟುಗಳನ್ನು ಪಡೆದಿದೆ. ಮುಖ್ಯವಾದ ಎಲ್ಲಾ ವರ್ತ

ಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು. ಈ ತೈಲವು ಕೂದಲನ್ನು ಚೆನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಗೊಳಿಸುತ್ತದೆ ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದ್ದಾಗಿದೆ. ಬೆಲೆ ಬಾಟ್ಲಿಗೆ 1 ರೂಪಾಯಿ. 3 ಬಾಟಲಿಗೆ 2 ರೂಪಾಯಿ 10 ಆಣೆ. ಅಂಚೆ ಹಾಸಲು ಬೇರೆ. ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ.

ನಮ್ಮ ವಿಳಾಸ:—ಬಿ. ಎಮ್. ನಾಥ ಮತ್ತು ಕಂಪೆನಿ.
ವೇಪೇರಿ, ಮದರಾಸ್.

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೀನ್ ಯವರು ಹೊಟ್ಟೆಶೂಲೆ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.



3-42

ಕೆಳ ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಕೀಲುಗಳ ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ. ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೀ ಇನ್ಯಾವ ಔಷಧವೂ ಮಾಡಿರುವುದಿಲ್ಲ.

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ. ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಸ್ವಲ್ಪವೂ ಮುಟ್ಟಿದ್ದಿಲ್ಲ.

ಇದು ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಶೀಸೆಗೆ ೧ ರೂಪಾಯಿ. ದೊಡ್ಡ ಶೀಸೆಗೆ ೨ ರೂಪಾಯಿ.

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು."

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು. ವಾಯು, ಕೀಲು, ಅರತಲೆ, ತಲೆನೋವುಗಳು; ಯಾವ ಕಾರಣದಿಂದ ಹುಟ್ಟಿನ ಬಾಧೆಯಾಗಲಿ, ಉಬ್ಬಸ, ಹಲ್ಲುನೋವು, ಗಂಟ್ಲು ಗೂರೆನ್ನುವುದು, ಕೆಮ್ಮುಗಳು ಶೀತನೆಗಡಿ, ಶ್ವಾಸರೋಗ, ಬಚ್ಚು, ಉಳುಕು, ಥಳುಕು, ಚೇಳು ಕಡಿದ ಬಾಧೆ ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ. ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು. ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲಿ ಕೊಡಿ ಎಂದು ಕೇಳು. ಅವನು ಸ್ವಂತವಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೋ. ಈ ಯುಕ್ತಿಯಿಂದ ನೀನು ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ. ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ. ಲಕ್ಷಾಂತರ ಜನರು ಗುಣಹೊಂದಿದಾರೆ; ನಿನಗೂ ಖಂಡಿತವಾಗಿ ವಾಸಿಯಾಗುತ್ತದೆ [122-20]

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡ. ಅದರ ಕ್ರಯ ಬಾಟ್ಲಿಗೆ 12 ಆಣೆ; ಅಂಚೆ ವೆಚ್ಚ 4 ಆಣೆ. 3 ಅಥವಾ ಹೆಚ್ಚು ಬಾಟ್ಲಿ ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ. ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ. ವಿಳಾಸಗಳು—(1) ಎಸ್. ಪೀಟರ್ಸ್, 37 ಎಡಮುಟೆಟ್ಟಿ ಬೀದಿ, ತ್ರಿಪ್ಲಿಕೇನ್, ವೇಪೇರಿ, ಮದರಾಸ್. (2) ಟಿ. ಎಸ್. ಕನ್ನಯ್ಯಶೆಟ್ಟಿ ಮತ್ತು ಕಂಪೆನಿ, ಬಸವಲ್ ಮಾರ್ಕೆಟ್ ಸಮೀಪದಲ್ಲಿ.

ಮಕ್ಕಳಿರುವ ಮನೆಗಳಲ್ಲಿಯೂ ಪ್ರಯಾಣಕಾಲದಲ್ಲಿಯೂ ಛಳಿ ಮಳೆಗಾಲಗಳಲ್ಲಿಯೂ ಮಲೆನಾಡಿನಲ್ಲಿಯೂ ಸೋಂಕುರೋಗ ಸ್ಥಳಗಳಲ್ಲಿಯೂ ಆರೋಗ್ಯವನ್ನು ಕಾಪಾಡುವುದರಲ್ಲಿ ಶ್ರೇಷ್ಠತಮವಾದ

ಶ್ರೀಕರಕಸ್ತೂರಿಮಾತ್ರೆ

ಟಿಬೆಟ್ ದೇಶದ ಕಸ್ತೂರಿ—ಅನೇಕ ಪುಟಗಳಿಂದ ತಯಾರಿಸಿದ ಲೋಹಭಸ್ಮ—ಚಿನ್ನದ ರೇಕು ಮೊದಲಾದವುಗಳಿಂದ ಹಿರಿಯರ ಕಾಲದಿಂದಲೂ ತಯಾರಿಸಲ್ಪಡುತ್ತಿರುವ ಈ ಶ್ರೀಕರ ಕಸ್ತೂರಿಮಾತ್ರೆಗಳು ತಾಂಬೂಲವನ್ನು ರಂಜಿಸಿ ಎಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸಿ ಬಹಳ ಹೊತ್ತಿನವರೆಗೆ ಬಾಯಿ ಘಮಘಮಿಸುವಂತೆ ಮಾಡುವುವು ಶೀತವಾಯು-ಕೆಮ್ಮು-ನೆಗಡಿ ದಿನಜ್ವರ-ಮೂರನೆ ಜ್ವರ-ನಾಲ್ಕನೆ ಜ್ವರ-ಮಂಡೆಯುಬ್ಬರ-ತಲೆನೋವು-ಮೈಕೈನೋವು ಮತ್ತು ಭೀತ-ಅತಿಸಾರ ಹಲ್ಲುನೋವು-ಹೊಟ್ಟೆನೋವು-ಮಲಬಂಧ-ಅಜೀರ್ಣ ಭೇದಿ-ಮಕ್ಕಳಿಗೆ ಸಾಮಾನ್ಯವಾಗಿ ಬರುವ ಕೆಮ್ಮುಗಳ ಕೆಮ್ಮು-ಹೊಟ್ಟೆಯುಬ್ಬರ-ಮಂದಜ್ವರ-ಭೇದಿ ಮುಂತಾದುವುಗಳನ್ನು ನಂಬಿಕೆಯಾಗಿ ಗುಣಪಡಿಸುತ್ತವೆ. ಒಂದುವೇಳೆ ಈ ಮಾತ್ರೆಗಳನ್ನು ಪರೀಕ್ಷಿಸಿದರೆ ಯಾವಾಗಲೂ ಇವನ್ನೆ ತರಿಸುವರೆಂದು ನಾವು ಧೈರ್ಯವಾಗಿ ಹೇಳಬಲ್ಲೆವು. 250 ಮಾತ್ರೆ 4 ಆಣೆ. ಐದಕ್ಕೆ ಒಂದು ಇನಾಮು ವಿ ಪಿ ಛಾರ್ಜು ಪ್ರತ್ಯೇಕ. [220-50]

ಬಿ. ವಿ. ಪಂಡಿತ್, ಸದ್ವೈದ್ಯಶಾಲಾ, ನಂಜನಗೂಡು.

ಯಾಕೆ ಪರೀಕ್ಷಿಸಬಾರದು? ಭಂಗಾರದ ಪದಕ ಬಂದಿದೆ.

ಸೆಂಟ್, ಅತ್ತರುಗಳಲ್ಲೆಲ್ಲಾ ಶ್ರೇಷ್ಠವಾದವು.

ಆಟೋ ಮೋಹಿನಿ.

ಇದು ರೆಜಿಸ್ಟರ್ ಆಗಿದೆ. ಈಗಿನ ಕಾಲದಲ್ಲಿ ಇದೇ ನಿಲ್ಲುವ, ಸುವಾಸನೆಯುಳ್ಳ, ಮನೋಹರವಾದ ಮತ್ತು ಸರಿಯಾದ ಪರಿಮಳದ ದ್ರವ್ಯವು. ಕರವಸ್ತ್ರಕ್ಕೆ

ನಾಲ್ಕು ತೊಟ್ಟು ಹಾಕಿಕೊಂಡರೆ ನಾಲ್ಕುದಿನಗಳ ತನಕ ಘಮಘಮಿಸುವ ಸುವಾಸನೆ ಇರುತ್ತೆ. ಹಾಗೆ ದೀರ್ಘಕಾಲ ನಿಲ್ಲತಕ್ಕದ್ದಲ್ಲವೆಂದು ರುಜುವಾತು ಮಾಡಿಕೊಡುವವರಿಗೆ ನಾವು ಒಂದು ನೂರು ರೂಪಾಯಿ ಬಹುಮಾನ ಕೊಡುತ್ತೇವೆ. ಪರೀಕ್ಷೆಮಾಡಿ ನೋಡಿ, ಬಹುಮಾನವನ್ನು ಸಂಪಾದಿಸಿಕೊಳ್ಳಿ! ಕ್ರಯ ½ ಔನ್ಸ್ ಗಾಜಿನ ಬುರುಡೆಯ ಬಾಟ್ಲಿಗೆ ರೂಪಾಯಿ 2-0-0.

1 ಡ್ರಾಂ ಕೊಳವೆ 12 ಆಣೆ.

ಆಟೋ ಮೋಹಿನಿ ಪರಿಮಳದ ಕಾರ್ಡುಗಳು ಡಜನ್ 1 ಕ್ಕೆ 12 ಆಣೆ.

ಎಲ್ಲರಲ್ಲೂ ಬಿಕರಿಗೆ ಇಟ್ಟಿದೆ. ಮದರಾಸ್ ಅಧಿಪತ್ಯಕ್ಕೆಲ್ಲಾ ಏಜೆಂಟರು—
ನಾ ಭಗವಾನ್‌ದಾಸ್ ಚೊನಿಲಾಲ್ ಕಂಪನಿ,

[251-44] 177, ಚೈನಾಬಜಾರ್ ರೋಡ್, ಮದರಾಸ್.

ಪ್ರೊಫೆಸರ್ ಬ್ರೇಸ್ಲರ್ ಇಲೆಕ್ಟ್ರೋ ಪೆಯಿನಾಡ್ಯೆನ್

ಮನುಷ್ಯನ ಶರೀರದಲ್ಲಿ ವಿದ್ಯುಚ್ಛಕ್ತಿ ವ್ಯಾಪಿತವಿರುವದೆಂತಲೂ, ವಿದ್ಯುಚ್ಛಕ್ತಿ ಕಡಮೆಯಾದ ಕೂಡಲೇ ನಾನಾ ತರದ ವ್ಯಾಧಿಗಳು ಲಭಿಸುವವೆಂತಲೂ, ಅಂತಹ ವ್ಯಾಧಿಗಳನ್ನು ಶೀಘ್ರ ಗುಣಪಡಿಸಲು ವಿದ್ಯುಚ್ಛಕ್ತಿ ಮಿಶ್ರವಾದ ಔಷಧದ ಉಪಯೋಗದಿಂದಲ್ಲದೆ



ಬೇರೆ ಔಷಧಗಳಿಂದ ವ್ಯಾಧಿಗಳನ್ನು ಶೀಘ್ರ ಗುಣಪಡಿಸುವದು ಕಷ್ಟವೆಂತಲೂ ಅಮೇರಿಕಾ ದೇಶದ ವೈದ್ಯಶಾಸ್ತ್ರ ಪಂಡಿತರು ವೈದ್ಯಶಾಸ್ತ್ರ ಪರಿಶೋಧನೆಯಿಂದ ಸಿದ್ಧಿಸಿರುವರು. ಈ ಔಷಧವು ಉಪಯೋಗಿಸಿದ ಕೂಡಲೇ ದೇಹಕ್ಕೆ ಸಾಕಾಗುವಷ್ಟು ವಿದ್ಯುಚ್ಛಕ್ತಿಯನ್ನುಂಟುಮಾಡಿ ವ್ಯಾಧಿಯನ್ನು ಅತಿ ಶೀಘ್ರ ಗುಣಪಡಿಸುತ್ತೆ. ಪ್ರಾಚೀನಕಾಲದ ಔಷಧಗಳಿಗೆಲ್ಲವ ಇದು ಅತ್ಯುತ್ತಮವಾದದ್ದು. ಒಂದಾವರ್ತಿ ಪರೀಕ್ಷಿಸಿ ನೋಡಿದರೆ ಇದರ ಗುಣವು ವ್ಯಕ್ತವಾಗುತ್ತೆ.

ಎಲೆಕ್ಟ್ರೋಪೆಯಿನಾಡ್ಯೆನ್ ತೈಲದಿಂದ ಗುಣಪಡುವ ವ್ಯಾಧಿಗಳು:—

ತಿಮರುವಾಯುವು, ಕೀಲ್ವಾಯುವು, ಪಾರ್ಶ್ವವಾಯುವು, ಕ್ಷಯ, ಕೆಮ್ಮು ನೆಗಡಿ, ವಾಯುನೋವು (ಕೈಕಾಲು ಹಿಡಿತ), ಉಳುಕುಹಿಡಿದಿದ್ದರು, ಕಠಿನಶ್ವಾಸ, ನಡುನೋವು (ಸೊಂಟನೋವು), ಪಕ್ಕಶೂಲೆ, ಹಲ್ಲುನೋವು, ತಲೆನೋವು, ಅರೆತಲೆನೋವು, ಉಬ್ಬಸ, ವಿಷಜ್ವರದ ಗಡ್ಡೆಗಳಿಗೂ ಮತ್ತು ಮಕ್ಕಳ ಪಕ್ಕಶೂಲೆ, (ಅಳ್ಳೆ) ಶೈತ್ಯದೋಷಗಳು, ಪಶುಗಳ ಕಡಿತಗಳಿಗೂ (ಚೇಳು ಮುಂತಾದದ್ದು). ಇದಕ್ಕೆಲ್ಲಾ ಬಹಳ ಶ್ಲಾಘನೀಯವಾದದ್ದು [12-41]

ಉಪಯೋಗಿಸುವ ಕ್ರಮವು ಹಿಂದುದೇಶದ ಎಲ್ಲಾ ಭಾಷೆಗಳಲ್ಲಿಯೂ ಬುಡ್ಡಿಯ ಸಂಗಡ ಕಳುಹಿಸಲಾಗುತ್ತ
ಬುಡ್ಡಿಯ ಕ್ರಯ ರೂ. 0-8-0. ವಿ. ಪಿ. ಖರ್ಚು 0-4-0. ಏಜಂಟರು ಬೇಕು
ಮುಖ್ಯ ಏಜಂಟರು:—ಗುರುಬಸವ ಅಂಡ್ ಕಂಪನಿ, ಮದರಾಸ್

ವನಸ್ಪತಿ ಬಲಕಾರಿಣಿ.

ಸಾರ್ಸಪರಿಲ್ಲಾ, ಸುಗಂಧಪಾಲ ಮುಂತಾದ ಅನೇಕ ವನಮೂಲಿಕೆಗಳಿಂದ ತಯಾರಾದದ್ದು. ಬೆಳಿಗ್ಗೆ ಸಾಯಂಕಾಲ ಉಪಹಾರದ ಕಾಲದಲ್ಲಿ ಅಥವಾ ಇಲ್ಲದೇ ಇದ್ದರೂ ಕಾಫಿಯಂತೆ ನೀರಿನಲ್ಲಿ ಚೆನ್ನಾಗಿ ಮರಳಿಸಿ ಹಾಲು ಸಕ್ಕರೆ ಸೇರಿಸಿ ಸೇವನೆ ಮಾಡುವದು. ಈ ಸೇವನೆಯಿಂದ ಆಬಾಲವೃದ್ಧರ ಮತ್ತು ಗರ್ಭಿಣೀ ಸ್ತ್ರೀಯರ, ಬಾಣಂತಿಯರ ಅಬಲತ್ವ, ಮಂದಾಗ್ನಿ, ರಕ್ತದೋಷ, ತಿನವು, ನಿಸ್ತ್ರಾಣ, ವಾಯುಶೂಲೆಗಳು, ವಾತ ಪಿತ್ಥ ಶ್ಲೇಷ್ಮಾದಿಗಳ ವಿಕಾರಗಳು, ಮಕ್ಕಳ ಕೃಶತ್ವವು, ಯೌವನಸ್ಥರ ಸಶಕ್ತತೆಯು, ಉಷ್ಣಸಂಬಂಧ ರೋಗಗಳು, ಬಹುಮೂತ್ರರೋಗಗಳಿಗೂ, ಬುದ್ಧಿ ಉಪಯೋಗಿಸತಕ್ಕ ಪಂಡಿತರು, ಲಾಯರುಗಳು, ವಿದ್ಯಾರ್ಥಿಗಳಿಗೂ ಸಹ ಉತ್ಕೃಷ್ಟವಾದದ್ದು. ನಿದ್ರೆ ಬಾರದವರಿಗೂ, ನಿದ್ರೆ ಕೆಟ್ಟವರಿಗೂ ಬಹು ಅನುಕೂಲ. ಕ್ರಯ 24 ತೋಲಾ ಪುಡಿಯುಳ್ಳ ಪೊಟ್ಟಣಕ್ಕೆ 1 ರೂಪಾಯಿ. ವಿ. ಪಿ. ಛಾರ್ಜು ಬೇರೆ. ಎಲ್ಲಾ ಕಡೆಗಳಲ್ಲೂ ಏಜಂಟರು ಬೇಕು.

ಮತ್ತು ಲೇಹಗಳು, ತೈಲಗಳು, ಔಷಧಗಳು ಬೇಕಾದವರು ದೇಹಧರ್ಮವನ್ನು ತಿಳಿಸಿ ತರಿಸಿಕೊಳ್ಳುವುದಾದರೆ ಪ್ರತ್ಯುತ್ತರಕ್ಕೆ ಲೇಬಲ್ ಆಗಲಿ, ರಿಪ್ಲೈ ಕಾರ್ಡು ಆಗಲಿ ಬರೆಯತಕ್ಕದ್ದು.

[216-3] ವಿಳಾಸ—ವಿ. ಪಿ. ಲಕ್ಷ್ಮಣಪಂಡಿತರು,
ಪಂಡಿತ ವೆಂಕಟರಮಣಪ್ಪನವರ ವೈದ್ಯಶಾಲಾ, ಬುರುಜನಹಟ್ಟಿ, ಚಿತ್ರದುರ್ಗ.

ಬೇಕಾದವರು ಗಮನಿಸಿ.

ತ್ವರೆಮಾಡಿ! ಕೆಲವು ದಿನಗಳು ಮಾತ್ರ!

ಸೋಲಾಪುರದ ಚೆಕ್ಕು, ಶೀರೆ, ಖಣ, ಕಿರಿಗೆ.

ಹಣ ಮುಂಗಡವಾಗಿ ಕಳುಹಿಸತಕ್ಕ ವ್ಯಾಪಾರಿಗಳಿಗೆ ಮಾತ್ರ ತರಹೆವಾರಿ ಚೆಕ್ಕು, ಶೀರೆ ಖಣ. ಕಿರಿಗೆ ಇವು ಬಹಳ ಸುಲಭ ಖರೀದಿಗೆ ಒದಗಿಸುವ ಏರ್ಪಾಟು ಮಾಡಲ್ಪಟ್ಟಿದೆ. ನಮ್ಮ ಕಾಯಂ ಗಿರಾಕಿಗಳಿಗೆ ಎಲ್ಲರಿಗಿಂತ ಸುಲಭ ಕ್ರಯಕ್ಕೆ ದೊರೆಯುವುದು.

ಹೊಸ ಗಿರಾಕಿಗಳು ತಮಗೆ ಬೇಕಾದಷ್ಟು ಸನಗಿಗೆ ಬರೆದು ಹಣ ಮುಂಗಡ ರವಾನಿಸಿದರೆ ಅವರಿಗೂ ಕಾಯಂ ಗಿರಾಕಿಗಳ ದರಕ್ಕೆ ಜವಳಿ ದೊರೆಯುವುದು.

ಹಣ ಕಳುಹಿಸದೆ ಬರೆಯತಕ್ಕ ಕಾಗದಗಳಿಗೆ ಬೇಗ ಗಮನಕೊಡಲು ಅನುಕೂಲವಿಲ್ಲ. ಕಾಗದ ಪತ್ರಗಳನ್ನು ಬೆಳಸುವದರಿಂದ ಖರೀದಿಗಳು ಬದಲಾಯಿಸುವುದಿಲ್ಲವೆಂಬ ವಿಷಯ ಜ್ಞಾಪಕದಲ್ಲಿಡಬೇಕು. [28-38]

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್,
159, ಕಿಲಾರಿ ರೋಡ್ (ಕುಂಚಿಗರ ಪೇಟೆ), ಬೆಂಗಳೂರು ಸಿಟಿ.

S U. N. & Co.,

BENARES CITY, U. P.

ಸೊಗಸಾದ ಸರಕುಗಳು!!
ದೊಡ್ಡ ಕಂಪೆನಿ!

ಈ ನಮ್ಮ ಕಂಪನಿಯಲ್ಲಿ ನೆಯಿದು ತಯಾರಿಸುವ ಉತ್ತಮವಾದ ಬನಾರಸ್ ರೇಷ್ಮೆ ಜರೀ ಶೀರೆಗಳು, ಕಣ, ಪೇಟಾ, ಕಾಶ್ಮೀರ್ ಶಾಲು, ದುಪಟ್ಟಿ, ಮಗುಟ, ಜಗನ್ನಾಥ ಬಾಗಟೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಕ್ಯಾಟಲಾಗ್ 1 ನ್ನು ಮತ್ತು 2 ವಿಶ್ವೇಶ್ವರ ಪಟಗಳನ್ನು ಇನಾಮಾಗಿ ಕಳುಹಿಸಲಾಗುತ್ತ. [69-31]

ಎಸ್. ಯು. ಎನ್. ಮತ್ತು ಕಂಪೆನಿ, ಕಾಶಿ.

MADRAS SNUFF.

ಬಹಳ ಮೇಲಾದ ನಸ್ಯ ಇನ್ನೆಲ್ಲೂ ಸಿಕ್ಕದು.

ನಮ್ಮಲ್ಲಿ ತಯಾರಾಗುವ ನಸ್ಯದ ಪುಡಿಯನ್ನು ಹಿಂದುಸ್ಥಾನದ ಸಮಸ್ತ ಭಾಗಗಳವರೂ, ಅನ್ಯದೇಶಗಳವರೂ ಹತ್ತಾರು ವರುಷಗಳಿಂದ ತರಿಸಿಕೊಂಡು ಉಪಯೋಗಿಸುತ್ತಿದಾರೆ. ನಮ್ಮ ನಸ್ಯವು ಬಹಳ ಪ್ರಖ್ಯಾತಿ ಪಡೆದಿದೆ. ಬಹು ಮೇಲಾದ "ಬಂದರ್" ಸೊಪ್ಪಿನಿಂದ ಸುವಾಸನೆಯಾದ ಅತ್ತರು ತುಪ್ಪ ಹಾಕಿ ವಿಶೇಷ ರುಚಿಕರವಾಗಿಯೂ ಸ್ವಚ್ಛವಾಗಿಯೂ ತಯಾರುಮಾಡುತ್ತೇವೆ. ಕೂಡಿದ ಮಟ್ಟಿಗೂ ನಮ್ಮ ಧಾರಣೆ ಕಡಮೆಯಾಗಿರುವುದು. ನಮ್ಮ ಪದಾರ್ಥವನ್ನು ನಾವೇ ಹೊಗಳಿಕೊಳ್ಳುವದರಿಂದ ಫಲವೇನು? ವಾಚಕರು ಒಂದಾವರ್ತಿ ಪರೀಕ್ಷೆಗಾಗಿ ತರಿಸಿಕೊಂಡರೆ ಚೆನ್ನಾಗಿ ವೇದ್ಯವಾಗುತ್ತೆ. ಕ್ರಯ ಪಂಭೇರಿಗೆ 3 ರೂಪಾಯಿ; 1 ಸೇರಿಗೆ 10 ಆಣೆ. ಪೋಸ್ಟೇಜ್ ಬೇರೆ. ನಸ್ಯವನ್ನು ಅಂಚೆಯ ಮೂಲಕವೋ, ರೈಲಿನಲ್ಲೋ ಹ್ಯಾಗೆ ಕಳಿಸಬೇಕೆಂದು ಬರೆಯಿರಿ.

ನಮ್ಮ ವಿಳಾಸ—ಜಿ. ನಾರಾಯಣಸ್ವಾಮಿ ನಾಯುಡು,
43, ಪಳಯಪ್ಪನ್ ಸ್ಟ್ರೀಟ್, ಮಿಂಟ್ ಬಿಲ್ಡಿಂಗ್ ಪೋಸ್ಟ್,
[168-11] ಮದರಾಸ್, ಇ.

ಓರಿಯಂಟಲ್ ಗ॥ ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು............ರೂ. 4,46,00,000

ಕಂಪನಿಯಿಂದ ಪಾವತಿ ಆಗಿರುವದು ,, 4,00,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಫಾರಂ ಮುಂತಾದವನ್ನು ಕಳುಹಿಸುತ್ತಾರೆ.—ಮಿ॥ ಎಂ. ಎಸ್. ರೆಡಿ, ಚೀಫ್ ಏಜೆಂಟ್, ಬೆಂಗಳೂರು; ಮ॥ ಎಂ. ಎಸ್. ಸಂಜಪ್ಪನವರು, ಮ॥ ವೆಂಕಟಸುಬ್ಬಯ್ಯನವರು, ಕಂಪನಿ ಏಜಂಟರು, ಮೈಸೂರು; ಅಥವಾ

[231-3] ಆಕ್ಟಿಂಗ್ ಬ್ರಾಂಚ್ ಸೆಕ್ರಿಟರಿ, ಮದರಾಸ್

ಸುಖಕರ, ಆನಂದ, ಬಹಳ ಅವಶ್ಯ.

ಈಗ ತಾನೇ ಕಂಡುಹಿಡಿದಿದೆ.

ಜರ್ಮನ್ ರಾಜ್ಯದಲ್ಲಿ ನೂರಾರು ವರುಷಗಳಿಂದ ಉಪಯೋಗದಲ್ಲಿದೆ.

ಸೆಲಿಂತಾನ

ಬೆಳ್ಳಿಯ ವರಕು ಸುತ್ತಿದ ಮುತ್ತುಗಳು.

(1) ಮನಸ್ಸಿಗೆ ಹರ್ಷವನ್ನೂ ಉಲ್ಲಾಸವನ್ನೂ ಕೊಟ್ಟು ಜೀರ್ಣಶಕ್ತಿಯನ್ನುಂಟುಮಾಡುವುದು.

(2) ಹಾಡುವವರಿಗೆ ವರಪ್ರಸಾದವಾದದ್ದು.

(3) ಬಾಯಿ ದುರ್ಗಂಧ, ಗಂಟಲು ಗಾರೆನ್ನುವುದು, ಉಬ್ಬಸ, ಸಮುದ್ರಯಾನದ ಜುಗುಪ್ಸೆ, ಈ ಮೊದಲಾದವನ್ನು ಹುಟ್ಟದಂತೆ ಅಡ್ಡಿಮಾಡುತ್ತದೆ.

(4) ತಾಂಬೂಲದೊಡನೆ ಸೇವಿಸುವುದಕ್ಕೆ ಅತ್ಯಂತ ಹಿತಕರವಾಗಿದೆ. [73-31]

ಒಂದು ಸಲ ಪರೀಕ್ಷೆ ಮಾಡಿದಲ್ಲಿ ಯಾವಾಗಲೂ ಒಂದು ಪೆಟ್ಟಿ ಇದ್ದೇ ತೀರಬೇಕೆಂದು ನೀವೇ ನಿಶ್ಚಯಿಸುವಿರಿ.

ಮುತ್ತಿನಂತಿರುವ	45	ಮಾತ್ರೆ	ಉಳ್ಳ	ಪೊಟ್ಟಣಕ್ಕೆ	ಕ್ರಯ	2	ಆಣೆ.
,,	85	,,	,,	,,	,,	4	,,
,,	200	,,	,,	,,	,,	7	,,
,,	200	,,	ಸುಂದರವಾದ	ಟಿನ್	ಡಬ್ಬಾ	9	,,
,,	80	,,		,,	,,	4	,,
,,	100	,,	ಬಾಟ್ಲಿಯಲ್ಲಿ			4½	,,

ಈ ಕ್ರಯದಲ್ಲಿ ಸ್ಟಾಂಪನ್ನೂ, ಅಂಚೆ ವೆಚ್ಚಕ್ಕೆ ಜಾಸ್ತಿ ಬಂದಾಣೆಯನ್ನೂ ಸೇರಿಸಿ ಕಳುಹಿಸಬೇಕು. ಕಾಗದಪತ್ರವನ್ನೂ ವಿಳಾಸಗಳನ್ನೂ ನಮಗೆ ಇಂಗ್ಲೀಷಿನಲ್ಲೇ ಬರೆಯತಕ್ಕದ್ದು.

ನಮ್ಮ ವಿಳಾಸ—ಸೆಲಿಂತ್ರಾನ ಡಿಪೋ,
ಮಾರ್ಸೂರ್ ಬಿಲ್ಡಿಂಗ್, ಪ್ರಿನ್ಸೆಸ್ ಸ್ಟ್ರೀಟ್,
ಬೊಂಬಾಯಿ 2;
ಅಥವಾ, ಪಿ. ಸಿ. ಷಾ ಕಂಪನಿ,
509 ಮಿಂಟ್ ಬೀದಿ, ಮದರಾಸ್.

ಹೊಸ ಏರ್ಪಾಡು.

ಉಚಿತ ! ಉಚಿತ !! ಉಚಿತ !!!

ಈ ಕೆಳಗೆ ಕಂಡ ಆಭರಣಗಳನ್ನು ಪಡೆಯಲು ಇಷ್ಟವುಳ್ಳವರು ಬರೆದರೆ ಎಲ್ಲಾ ಆಭರಣಗಳ ಪಟ್ಟಿಗೆ 1 ನ್ನು ಉಚಿತವಾಗಿ ಕಳುಹಿಸುತ್ತೇವೆ. ಆಭರಣಗಳ ಹೆಸರು—ಹರಡುಅಡ್ಡಿಗೆ, ಚಂದ್ರಹಾರ, ಗಡಿಯಾರದ ಗೊಲಸು, ರೋಜಾಹೂವು, ಶ್ಯಾಮಂತಿಗೆಹೂವು, ಕಾಸುಮಾಲೆ, ಮೈರುವಣಿ, ಸಣ್ಣ ಗಡಿಯಾರದ ಸರಪಣಿ, ಜೋಮಾಲೆಗುಂಡು, ಸ್ಫಟಿಕದ ಪಂಚರಂಗಿನ ಜಪಮಾಲೆ, ಸೂರತ್ ಸಾಚಾ ಮುತ್ತಿನ ಕಂಠಿ. ಈ ಆಭರಣಗಳನ್ನು ಉಚಿತವಾಗಿ ಕಳುಹಿಸುತ್ತೇವೆ.

ನಮ್ಮ ವಿಳಾಸ—ನೀಲಕರ್ ಬ್ರದರ್ಸ್,
[225-1] ತಿರುವಲ್ಲಿಕ್ಕೇಣಿ, ಮದರಾಸು.

BHARAT PROVIDENT AND BANKING Co., Ltd.

FULLY PAID UP CAPITAL 5,00,000
(FIVE LAKHS)

Most Reliable and Cheapest Life and Marriage Office in India.

Monthly Premium Re. 1 in Marriage Branch, and Re. 1 in Life Branch.

BENEFITS IN LIFE BRANCH.—Rs. 110 if death occurs after six months with a very good bonus; or maximum benefits of Rs. 500 will be paid whenever death occurs after 15 years less the advance of Rs. 200 paid while alive.

BENEFITS IN MARRIAGE BRANCH.—Guarantees to advance double the amount paid on the marriage day.

LOANS.—Loans to Policy holders on proper securities to the extent of Rs. 200 on a low interest is a speciality.

WANTED.—Active and energetic Sole, General, District and Taluk Agents throughout the Madras Presidency and Native States of S. India on liberal terms of Commissions and also monthly office allowance.

For further particulars and prospectus apply to

Messrs. YENKATACHALAM & SONS,
Chief Agents for South India,
[243-45] **166, DODPATTA, MYSORE.**

ದಸರಾ ಬಹುಮಾನ ! ನವರಾತ್ರಿ ಬಹುಮಾನ !

ದೊಡ್ಡವರೂ ಹುಡುಗರೂ ಅಲಂಕಾರ ಪೂರ್ವಕವಾಗಿ ಧರಿಸಬಹುದಾದ ಜರಾಕ್ ರೇಷ್ಮೆ ಜಾಲರ್ ಚೌಕವು.



2 ಮೊಳವಿರುವ ಚೌಕ ಒಂದಕ್ಕೆ ರೂ 1-6-0. 1½ ಮೊಳವಿರುವ ಚೌಕ ಒಂದಕ್ಕೆ 15 ಆಣೆ. ಒಂದೇ ಸಲ ಎರಡು ಚೌಕಗಳನ್ನು ತರಿಸಿಕೊಳ್ಳುವವರಿಗೆ ಸ್ತ್ರೀಯರು ಕಂಠದಲ್ಲಿ ಧರಿಸಬಹುದಾದ ಗೆಜ್ಜೆ ಅಡ್ಡಿಗೆಯನ್ನು ಇನಾಮು ಕಳುಹಿಸಿಕೊಡುತ್ತೇವೆ. ಒಂದರಿಂದ ಎರಡರವರೆಗೂ ಪೋಸ್ಟೇಜು 3 ಆ. ಇದುವರೆಗೆ ಎಲ್ಲರೂ ವಿಕ್ರಯಿಸಿದ ರೇಷ್ಮೆ ಪಂಚೆಗಳು ಅಷ್ಟು ನೀಲಾದವುಗಳಲ್ಲ. ಈ ಚಿತ್ರದಲ್ಲಿ ಕಾಣುವಂತೆ ಚಿತ್ರವಿಚಿತ್ರವಾದ ಹೂಗಳಿಂದ ತಯಾರಿಸಿದ ಈ ನೂತನವಾದ ನೀಲಾದ ಚೌಕಗಳು ಈಗತಾನೇ ನಾವು ತರಿಸುತ್ತೇವೆ ಪಂಚವರ್ಣಗಳಲ್ಲಿ ಬಳ್ಳಿಗಳೂ, ಹೂಗಳೂ, ಎಲೆಗಳೂ ಹಾಕಿ ಉತ್ತಮವಾದ ರೇಷ್ಮೆ ಅಂಚಿಟ್ಟು ತಯಾರಿಸಿ ನವರಾತ್ರಿ ಮಹೋತ್ಸವಕ್ಕಾಗಿ ತರಿಸಿರುತ್ತೇವೆ. ಸಾವಿರಾರು ವಿಕ್ರಯವಾಗುತ್ತಿವೆ. ಜಾಗ್ರತೆ ತರಿಸಿಕೊಳ್ಳಿ.

ಅಡ್ರೆಸ್—ಜರಾಕ್ ಸಿಲ್ಕ್ ವೇರ್‌ಹೌಸ್, 1-6 ವೆಂಕಟೇಶ ಮೇಸ್ತ್ರಿ ಬೀದಿ,
[199-22] ಜಾರ್ಜ್‌ಟೌನ್‌ಪೇಟೆ, ಮದರಾಸು.

ಸುಂದರವಾದ ಮಧುರೆ ಜುನ್ನಡಿ ಅಂಚಿನ ಸೀರೆ ಅಪ್ಪರ್ ರಹಿಂ ರೂ. 2-2-0; ದುಮ್ಯಾಂ ರಹಿಂ ರೂ. 1-13-0.

ಇದು ಉಡುವುದಕ್ಕೆ ಧಡೂತಿಯಾಗಿಯೂ ನೋಟಕ್ಕೆ ನಯವಾಗಿಯೂ ಬೆಲೆ ಸುಲಭವಾಗಿಯೂ ಇದೆ. ಬಣ್ಣ ಹೋಗದು. ಸೀರೆಯ ಉದ್ದ 18 ಮೊಳ. ಸುಂದರವಾದ ಸೆರಗು.

ತಂಜಾವೂರು ಗೆಜ್ಜೆ ಅಡ್ಡಿಗೆ
ಕ್ರಯ 6 ಆಣೆ.

ಜನಗಳಿಗೆ ನಂಬಿಕೆ ಹುಟ್ಟುವದಕ್ಕಾಗಿ ಮಾದರಿ ಅಡ್ಡಿಗೆಯನ್ನು ನೋಡುವವರಿಗೆ ಮಾದರಿಯನ್ನು ಉಚಿತವಾಗಿ ಕಳುಹಿಸುತ್ತೇವೆ. ನಮ್ಮ ವಿಳಾಸ ಎಸ್. ಎನ್. ಮೂರ್ತಿ ಕಂಪೆನಿ,
[225-1] ತಿರುವಲ್ಲಿಕ್ಕೇಣಿ, ಮದರಾಸು.

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಳಿಮೆಯಿಂದ ನಿಬಿಡವಾದ ಕೇಶದಾಮವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು ? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಾಪ ಉಪಕರಣವಾದರೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತಿದೆಯೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ. ಈ ತೈಲವನ್ನು ತಲೆಗೆ ಹಚ್ಚಿಕೊಳ್ಳುತ್ತಲೇ, ಮಸ್ತಿಷ್ಕದ ಬೇಗೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ತೊಡೆಯ ತೊಡಗಿದ ಬಳಿಕ ಎಂದಿಗೂ ಜಗುಳಿ ಬಿದ್ದು ಹೋಗಲಾರವು; ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು.

ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡುವುದಕ್ಕಿಂತ ಒಂದೇಯೊಂದು ಬಾರಿ ಈ “ಕಾಮಿನಿಯಾ ತೈಲ” ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ “ಸರ್ಟಿಫಿಕೇಟ್ ಆಫ್ ಮೆರಿಟ್” ಅಥವಾ ಯೋಗ್ಯತಾಪತ್ರವೂ, ಶತಶ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಅವುಗಳಲ್ಲಿ ಒಂದನ್ನೇ ನೋಡಿರಿ! ನೇಗಿನಹಾಳಕರ ಬಂಧುಗಳು ಬಸವನಗಲ್ಲಿ, ಬೆಳಗಾಂವ—ತಾವು ಕೆಲ ತಿಂಗಳ ಹಿಂದೆ ಕಳುಹಿಸಿದ “ಕಾಮಿನಿಯಾ” ತೈಲವು ಕೂದಲುಗಳನ್ನು ಬೆಳೆಯಿಸುವುದಕ್ಕೆ ಸರ್ವೋತ್ಕೃಷ್ಟವಾದದೊಂದು ಸಾಧನವಾಗಿರುತ್ತದೆ. ಆದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ. ಪಿ. ದ್ವಾರಾ ರವಾನಿಸುವುದು. ಸೀಸೆಯೊಂದರ ಕ್ರಯ ರೂ. 1-0-0, ಅ. ವೆ. 0-4-0 ಬೇರೆ; 3 ಸೀಸೆಗಳ ಕ್ರಯ ರೂ. 2-10-0, ಅ. ವೆ. 0-7-0 ಬೇರೆ.

ಸೂಚನೆ.—ಅನೇಕ ದುರ್ನೀತರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಬಿಕರಿಯಿಂದ ತಮಗೆ ಅತ್ಯಲ್ಪ ನಫೆಯೇ ದೊರಕುತ್ತದೆಂದು, ನೀವು “ಕಾಮಿನಿಯಾ ತೈಲ” ವನ್ನು ಕೇಳಿದರೆ, “ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ” ಎಂದು ಅವರಿಗೆ ಬಹಳ ಲಾಭ ದೊರಕತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸ ಹೋಗದಂತೆ “ಕಾಮಿನಿಯಾ ಓಯಿಲ್” ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಇದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳಿ. ನಮ್ಮ ಮೆಹರಬಾನ್ ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಿಬೀಳದೆ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಒಟ್ಟೊ ದಿಲ್ ಬಹಾರ್ !!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾಗುವ ಇದರಲ್ಲಿ ಮದಿರೆಯು (ಆಲ್ಕೋಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ನೈಸರ್ಗಿಕವಾದದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೀಗೂ ಇರಲಿ, ಈ ಒಟ್ಟೊ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆದುಕೊಳ್ಳುವುದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ. [19-39]

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ದ್ರಾಮಿನ (ಮೀಡಿಯಂ) ಸೀಸೆ 1ಕ್ಕೆ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0. ಅಂಚೆಯ ವೆಚ್ಚ ಬೇರೆ ರೂ. 0-4-0. ಒಟ್ಟೊ-ದಿಲ್ ಬಹಾರ್ ಪರಿಮಳದ ಕಾಡಿಗಳು ಡಜನ್ ಒಂದಕ್ಕೆ 0-12-0.

ಮೇಲೆ ಕಂಡ ಎಲ್ಲಾ ಸುಗಂಧಗಳು ಸಿಕ್ಕುವ ಪತ್ತೆ:—

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,
ಜುಮ್ಮಾಮಸ್‌ಜಿದ್, ಬೊಂಬಾಯಿ.
ಏಜೆಂಟ್, ವಿ ಕುಲ್ಕರ್ಣಿ ಮಾರ್ಟ್, ಮಂಗಳೂರು.

Mellin's Food

ಮೆಲಿನ್ಸ್ ಆಹಾರವು

ಕ್ರೈಸೋಕಡೆ ತಯಾರು ಮಾಡಿರುವದು.

[4-41]

ಮೆಲಿನ್ಸರವರ ಲಾಕ್ಟೋ ಎಂಬಾಹಾರ.

ಇದರಲ್ಲಿ ಮೆಲಿನ್ಸ್ ಆಹಾರವು ಹಾಲೂ ಮಿಶ್ರವಾಗಿದೆ. ಕೆಲವು ನಿಮಿಷಗಳಲ್ಲಿ ತಯಾರು ಮಾಡಿಕೋಬಹುದು. ಶಿಶುಗಳಿಗೂ ದೊಡ್ಡವರಿಗೂ ಸಂಪೂರ್ಣ ಆಹಾರ.

ಬೆಳಗಿನ ಊಟಕ್ಕೆ ಮೆಲಿನ್ಸ್ ಲಾಕ್ಟೋ ಉಪಯೋಗಿಸಿದರೆ ಶರೀರಪುಷ್ಟಿಯನ್ನೂ ಬಲವಿಕೆಯನ್ನೂ ಕೊಡುತ್ತದೆ.

Messrs. OAKES & Company, Mount Road, Madras.

ವಿಳಾಸ—ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

BRAHMAPPA TAVANAPPANAVAR,
Merchant & Commission Agent.
Agent to Messrs. Currimbhoy Ebrahim & Co's Mills, BOMBAY

ನಾವು ಮುಂಬೈ ಮೆಸ್ಸರ್ಸ್ ಕರೀಂಬಾಯ್ ಇಬ್ರಾಹಿಂ ಅಂಡ್ ಕಂಪನಿಯವರ ಬಾಬತು, ಮೆಸ್ಸರ್ಸ್ ಫಜುಲ್ಭಾಯ ಮಿಲ್ಸ್ ಲಿಮಿಟೆಡ್ ಮುಂಬೈ. ದಿ ಕ್ರೆಸೆಂಟ್ ಮಿಲ್ಸ್ ಲಿಮಿಟೆಡ್ ಮುಂಬೈ, ಕರೀಂಬಾಯ್ ಮಿಲ್ಸ್ ಲಿಮಿಟೆಡ್ ಮುಂಬೈ, ದಿ ಇಂಡಿಯನ್ ಬ್ಲೀಚಿಂಗ್, ಡೈಯಿಂಗ್ ಅಂಡ್ ಪ್ರಿಂಟಿಂಗ್ ವರ್ಕ್ಸ್ ಲಿಮಿಟೆಡ್ ಮುಂಬೈ, ದಿ ಇಂದೋರ್ ಅಂಡ್ ಮಾಳ್ವಾ ಯುನೈಟೆಡ್ ಮಿಲ್ಸ್ ಲಿಮಿಟೆಡ್ ಇಂದೋರ್, ಇವುಗಳಲ್ಲದೆ ಇನ್ನೂ ಅನೇಕ ಮಿಲ್ಲುಗಳ ಬಟ್ಟೆಗಳನ್ನು ಮೈಸೂರು ಸೀಮೆಯಲ್ಲೆಲ್ಲಾ ವಿಕ್ರಯಮಾಡಲು ಕಮಿಷನ್ ಏಜಂಟರಾಗಿರುತ್ತೇವೆ. ನಮ್ಮ ಮುಖಾಂತರ ಮಾಲು ತರಿಸಿಕೊಳ್ಳತಕ್ಕವರಿಗೆ ಮುಂಬೈಯಲ್ಲಿ ಬಟ್ಟೆಗಳ ಮೇಲೆ ವಿಧಿಸತಕ್ಕ ದಲ್ಲಾಳಿ, ಬೋಟುದಲ್ಲಾಳಿ, ಮೊಕ್ಕಾಡಮ್ಮು, ಗಂಟುಕಟ್ಟುವದು, ಸ್ಟೇಷನ್ನಿಗೆ ಸೇರಿಸುವದು, ಹುಂಡೇಕರಿ ವಗೈರೆಯುವ ವಿಧವಾದ ಖರ್ಚು ತಗಲದೆ ಇರುವದರಿಂದ ಮುಂಬೈಯಿಂದ ತರಿಸುವದಕ್ಕಿಂತಲೂ ಸುಲಭ ದರದಲ್ಲಿ ಸಿಕ್ಕುತ್ತೆ. ಮತ್ತು ಮುಂಬೈಗೆ ಹೋಗಿಬರುವ ದೇಹಶ್ರಮವೂ, ಖರ್ಚು ಉಳಿಯುತ್ತೆ. ಮತ್ತು ಬಟ್ಟೆಗಳನ್ನು ಏಕಕಾಲದಲ್ಲಿ ಕೊಳ್ಳತಕ್ಕವರಿಗೆ ಮಾಲಿನ ಮೇಲೆ ಶೇಕಡ 3 ರೂಪಾಯಿ ಲಾಗಾಯ್ತು 4½ ರೂಪಾಯಿ ವರೆಗೆ ಡಿಸ್ಕೌಂಟು ದೊರೆಯುತ್ತೆ. [97-26]

ನಮ್ಮ ಟ್ರಾವಲಿಂಗ್ ಏಜಂಟರ ವಶ ಬಟ್ಟೆಗಳ ನಮೂನೆಗಳನ್ನು ಕೊಟ್ಟು, ದರ ಒಟ್ಟು ವ್ಯಾಪಾರಗಾರನಿಗೆ ತೋರಿಸಿ ಆರ್ಡರು ತೆಗೆದುಕೊಳ್ಳುವ ಏರ್ಪಾಡು ಮಾಡಿರುತ್ತೆ. ನಮ್ಮ ದಾವಣಗೆರೆ ಮತ್ತು ಬೆಂಗಳೂರು ಆಫೀಸುಗಳಲ್ಲಿ ಮಾಲು ತಯಾರು ಸಹ ದೊರೆಯುತ್ತೆ.

ಬಟ್ಟೆಗಳನ್ನು ವ್ಯಾಪಾರಮಾಡಲು ಅನುಭವಸ್ಥರಾದ ಏಜಂಟರುಗಳೂ ಮತ್ತು ಗುಮಾಸ್ತರುಗಳೂ ಬೇಕಾಗಿದೆ.

ಎಲ್ಲಾ ಕಾಗದಪತ್ರಗಳೂ ದಾವಣಗೆರೆ ಆಫೀಸಿಗೆ ಬರೆಯಲ್ಪಡಬೇಕು.

ಹೆಡ್ ಆಫೀಸು:—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್, ದಾವಣಗೆರೆ. ಬ್ರಾಂಚ್ ಆಫೀಸು:—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

ವೃತ್ತಾಂತ ಪತ್ರಿಕೆ.

—:o:—

ಸನ್ ೧೯೧೪ ನೇ ಇಸವಿ ಅಕ್ಟೋಬರ್ ತಾ. ೧೫ ನೇ ಗುರುವಾರ.

ಗ್ರಾಮಗಳ ಅಭಿವೃದ್ಧಿಯು.

ಈ ಸಲ ದಸರಾ ಹಬ್ಬ ಕಾಲದಲ್ಲಿ ರಾಜಧಾನಿಯ ಪಬ್ಲಿಕ್ ಆಫೀಸ್ ಕಟ್ಟಡದೊಳಗೆ ದಿವಾನ್ ಬಹದೂರ್ ಮ|| ಕೆ. ಪಿ. ಪುಟ್ಟಣ್ಣಶೆಟ್ಟರವರ ಅಧ್ಯಕ್ಷತೆಯಲ್ಲಿ ಒಂದು ಸಭೆ ನಡೆಯಿತು. ಗ್ರಾಮಾಂತರಗಳ ಸ್ಥಿತಿಗತಿಯನ್ನು ಚೆನ್ನಾಗಿ ಮಾಡಿ ಅಭಿವೃದ್ಧಿಗೆ ತರಬೇಕೆಂಬ ವಿಷಯದಲ್ಲಿ ಮ|| ಶೆಟ್ಟರವರು ಸಭಿಕರಿಗೆ ಉತ್ಸಾಹವನ್ನು ಉಂಟುಮಾಡಬೇಕೆಂದು ಪ್ರಯತ್ನಪಟ್ಟರು. ಕೆಲಕೆಲವು ಗ್ರಾಮಗಳು ಒಟ್ಟುಗೂಡಿ ಪಂಚಾಯತಿಮಾಡಿಕೊಳ್ಳಬೇಕೆಂದು ಅವರು ಒತ್ತಿಹೇಳಿದರು. ಗ್ರಾಮಗಳಲ್ಲಿ ಪಾರ್ಟಿಗಳು ಇರುವುದೇ ಇದಕ್ಕೆ ದೊಡ್ಡ ಅಡಚಣೆಯಾಗಿದೆ. ಈ ಪಾರ್ಟಿಗಳ ದೆಸೆಯಿಂದ ಗ್ರಾಮಸ್ಥರು ನೆಮ್ಮದಿಯಾಗಿಲ್ಲ; ಒಬ್ಬರಿಗೊಬ್ಬರು ಜೊತೆಯಾಗಿ ನಿಂತು ಸಾರ್ವಜನಿಕವಾದ ವಿಚಾರಗಳನ್ನು ಅಭಿವೃದ್ಧಿಗೆ ತರುವುದಕ್ಕೆ ಪ್ರತಿಯಾಗಿ ಪಕ್ಷಗಳು ಪರಸ್ಪರ ವಿರೋಧದಿಂದ ವ್ಯಾಜ್ಯಗಳಾಡುತ್ತಿದಾರೆ. ಗ್ರಾಮಗಳು ಅಭಿವೃದ್ಧಿ ಹೊಂದಬೇಕಾದರೆ ಈ ದುಷ್ಟವಾದ ಪಾರ್ಟಿಗಳೂ, ಅದಕ್ಕೆ ಸಂಬಂಧಪಟ್ಟ ವೈಷಮ್ಯಗಳೂ ತೊಲೆದು ಹೋಗಬೇಕು.

ನಮ್ಮ ಸೀಮೆಯಲ್ಲಿ ಯಾವ ಗ್ರಾಮಕ್ಕೆ ಹೋಗಿ ನೋಡಿದರೂ ಮುಂದೆ ಹೇಳುವ ವಿದ್ಯಮಾನಗಳು ಇದ್ದೇ ಇರುತ್ತವೆ. ಮನೆಗಳನ್ನು ಯಾವುದೊಂದು ಕ್ರಮವೂ ಇಲ್ಲದೆ ಕಟ್ಟಿಕೊಂಡಿದಾರೆ. ಬೀದಿಗಳು ಬಹಳ ಕಿರಿದು: ಮಳೆ ನೀರು ಆ ಬೀದಿಗಳಲ್ಲೇ ಹರಿದುಹೋಗಬೇಕು. ಚರಂಡಿಗಳ ನೆಲೆಯೇ ಕಾಣುವುದಿಲ್ಲ. ಮನೆಮಠಗಳನ್ನೂ ಕೇರಿ ಬೀದಿಗಳನ್ನೂ ಚೊಕ್ಕಟವಾಗಿಯೂ ರಮ್ಯವಾಗಿಯೂ ಇಡುವ ಭಾಗದಲ್ಲಿ ಯಾವುದೊಂದು ಪ್ರಯತ್ನವನ್ನೂ ಮಾಡುವುದಿಲ್ಲ. ನಮ್ಮ ಗ್ರಾಮಾಂತರ ಪ್ರಜೆಗಳು ಅನೇಕ ವಿಷಯಗಳನ್ನು ತಿಳಿದುಕೊಳ್ಳಬೇಕಾಗಿದೆ. ಆದರೂ ಎಲ್ಲವನ್ನೂ ಏಕಕಾಲದಲ್ಲಿ ಮಾಡಿಸಿಬಿಡುತ್ತೇನೆಂದು ಹೇಳುವುದೂ, ಪ್ರಯತ್ನಪಡುವುದೂ ನಿಷ್ಪ್ರಯೋಜನ. ಮೊದಲು ನಮ್ಮ ಗ್ರಾಮಗಳನ್ನು ಆರೋಗ್ಯಕರವಾಗಿ ಮಾಡಬೇಕು. ಇದಕ್ಕೆ ಕೊಳಕನ್ನು ನಿರ್ಮೂಲಮಾಡಿ ಚೊಕ್ಕಟ ಶುಭ್ರವಾಗಿರಬೇಕೆಂಬುವುದನ್ನು ಗ್ರಾಮಸ್ಥರಿಗೆ ಕಲಿಸಿ ಆಚರಣೆಯಲ್ಲಿ ತರಬೇಕಾದದ್ದು ಮೊದಲನೇ ಕೆಲಸವಾಗಿದೆ.

ಪ್ರತಿ ಒಂದು ಗ್ರಾಮಕ್ಕೂ ನಿರ್ಮಲವಾದ ನೀರು ಒದಗುವಂತೆ ಏರ್ಪಾಡಾಗಬೇಕು. ಸಕಲ ವಿಧವಾದ ಕೊಚ್ಚೆ ರೊಚ್ಚುಗಳೂ ಕೊಳಕು ನೀರೂ ಗ್ರಾಮದೊಳಗೆ ನಿಲ್ಲದೆ ಹೊರಗೆ ಸಾಗಿಹೋಗುವಂತೆ ಸರಿಯಾದ ಚರಂಡಿಗಳನ್ನು ಕಲ್ಪಿಸಿಕೊಡಬೇಕು. ಇದನ್ನು ಒದಗಿಸುವುದೇನೂ ಸುಲಭವಲ್ಲ. ಯಾಕೆಂದರೆ ಗ್ರಾಮಸ್ಥರು ತಮ್ಮ ಮನೆಗಳಲ್ಲೇ ಕೊಟ್ಟಿಗೆಗಳನ್ನು ಮಾಡಿಕೊಂಡು ಗೋಕಾಯಿಗಳನ್ನು ಕಟ್ಟಿಕೊಳ್ಳುತ್ತಾರೆ. ಇದನ್ನು ಮೊದಲು ತಪ್ಪಿಸಬೇಕು. ಇಲ್ಲವಾದರೆ ಮನೆಗಳನ್ನಾಗಲಿ ಬೀದಿಗಳನ್ನಾಗಲಿ ಚೊಕ್ಕಟವಾಗಿ ಇಡುವುದು ಸಾಧ್ಯವಲ್ಲ. ಗ್ರಾಮಸ್ಥರೆಲ್ಲಾ ಒಮ್ಮನಸ್ಸಿನಿಂದ ಊರ ಹೊರಗೆ ಕೊಟ್ಟಿಗೆಗಳನ್ನು ಕಟ್ಟಿ ಅವುಗಳಲ್ಲಿ ತಮ್ಮ ದನಗಳನ್ನು ಕಟ್ಟಿ ಸಾಕಬೇಕು. ಈ ಕೊಟ್ಟಿಗೆಗಳ ರೊಚ್ಚೆಲ್ಲಾ ನೇರವಾಗಿ ಜಮೀನುಗಳಿಗೆ ಹೋಗಿ ಬೀಳುವಂತೆ ಮಾಡಿಕೊಳ್ಳಬೇಕು. ಗ್ರಾಮಸ್ಥರೆಲ್ಲಾ ಒಟ್ಟುಗೂಡಿ ಈ ಏರ್ಪಾಡನ್ನು ಮಾಡಿಕೊಂಡ ಪಕ್ಷದಲ್ಲಿ ಬೀದಿಗಳಲ್ಲಿ ದನಗಳ ಸಂಚಾರ ತಪ್ಪಿ ಕೊಳಕಿಲ್ಲದೆ ನಿರ್ಮಲವಾಗಿರುತ್ತವೆ.

ಇದರ ಜೊತೆಗೆ ಮನೆಗಳು ಅಂದವಾಗಿಯೂ ಶುಚಿಯಾಗಿಯೂ ಕಾಣುವಂತೆ ಹೊರ ಪಾರ್ಶ್ವದಲ್ಲಿ ಸುಣ್ಣವನ್ನೋ ಬಣ್ಣವನ್ನೋ ಹಾಕುವಂತೆಯೂ, ಮನೆಗಳ ಎದುರಿನಲ್ಲೂ ಅಕ್ಕಪಕ್ಕಗಳಲ್ಲೂ ಹೂವಿನ ಮತ್ತು ತರಕಾರಿಯ ಗಿಡಗಳನ್ನು ಬೆಳೆಯುವಂತೆಯೂ ಮಾಡಿಸಿದರೆ ನೋಡುವುದಕ್ಕೆ ಎಷ್ಟೋ ಸಂತೋಷವಾದೀತು. ಹೂವಿನ ಮತ್ತು ತರಕಾರಿಯ ಗಿಡಗಳನ್ನು ಬೆಳೆಯುವುದಕ್ಕೆ ವಿಶೇಷ ಶ್ರಮಪಡಬೇಕಾದ ಅಗತ್ಯವೇನೂ ಕಾಣುವುದಿಲ್ಲ. ಮನೆಯಲ್ಲಿರುವ ಮಕ್ಕಳಿಗೆ ಅದರಲ್ಲಿ ಉತ್ಸಾಹವನ್ನು ಹುಟ್ಟಿಸಿದರೆ ಅವರೇ ಸಂತೋಷದಿಂದ ಮಾಡುವರು. ಇದರಿಂದ ಗ್ರಾಮಗಳು ನೋಡುವುದಕ್ಕೆ ಎಷ್ಟೋ ರಮ್ಯವಾಗುತ್ತವೆ. ಅವುಗಳ ಕೇರಿಗಳನ್ನು ಹಾದು ಹೋಗುವುದರಲ್ಲಿ ಸಂತೋಷವಾಗುವುದು. ಈಗಲಾದರೋ ಬೀದಿಗಳನ್ನು ನೋಡುವುದಕ್ಕೂ, ಅವುಗಳ ದುರ್ವಾಸನೆಯೂ ಸಹಿಸಲಿಕ್ಕಾಗುವುದಿಲ್ಲ. ಹೋದ ಕೆಲಸವನ್ನು ಬೇಗನೆ ತೀರಿಸಿಕೊಂಡು ಹೊರಕ್ಕೆ ಬಂದರೆ ಸಾಕಲ್ಲಾ ಎನ್ನುವ ಸ್ಥಿತಿಯಲ್ಲಿದೆ.

ಗ್ರಾಮದ ಗೌಡನೂ ಸ್ಕೂಲ್ ಮಾಸ್ತರೂ ಸೇರಿಕೊಂಡು ಗ್ರಾಮವನ್ನು ಚೊಕ್ಕಟವಾಗಿ ಇಡಬೇಕೆಂದು ಜನಗಳಿಗೆ ತಿಳಿಯಹೇಳಿ ಅದಕ್ಕಾಗಿ ಸಾಹಸಪಡಬೇಕು. ಅಡಿಗೆಗೂ ಕುಡಿಯುವುದಕ್ಕೂ ನಿರ್ಮಲವಾದ ನೀರು ಇರಬೇಕು; ಅದರ ಮೇಲೆ ಗ್ರಾಮಸ್ಥರು ತಮ್ಮ ದೇಹಗಳನ್ನೂ ಬಟ್ಟೆಗಳನ್ನೂ ಚೊಕ್ಕಟವಾಗಿ ಇಟ್ಟುಕೊಳ್ಳುವುದನ್ನು ಕಲಿತುಕೊಳ್ಳಬೇಕು. ಇದಾದ ಬಳಿಕ ಜನರು ತಮ್ಮ ಮನೆಗಳ ಒಳಗೂ ಹೊರಗೂ ಎಲ್ಲಾ ಚೊಕ್ಕಟವಾಗಿರುವಂತೆ ಮಾಡಿಕೊಳ್ಳಬೇಕು. ಆ ಮೇಲೆ ಗ್ರಾಮದ ಬೀದಿಗಳೂ ಕೇರಿಗಳೂ ತಿರುಗಾಡುವುದಕ್ಕೆ ಹರ್ಷವಾಗುವಂತೆ ನಿರ್ಮಲವಾಗಿ ಇಟ್ಟುಕೊಳ್ಳಬೇಕು.

ತಾವೂ ತಮ್ಮ ಸುತ್ತುಮುತ್ತಲೂ ಶುಚಿಯಾಗಿರಬೇಕೆಂಬ ಕುತೂಹಲವು ಗ್ರಾಮಸ್ಥರಲ್ಲಿ ಹುಟ್ಟಿದ ಮೇಲೆ ಅವರ ದೃಷ್ಟಿಯು ರಮ್ಯವಾಗಿಯೂ ಆಹ್ಲಾದಕರವಾಗಿಯೂ ಇರತಕ್ಕ ಪದಾರ್ಥಗಳ ಮೇಲೆ ಬೀಳುವುದು. ಆಗ್ಗೆ ಅವರು ಹೂವಿನ ಗಿಡಗಳಿಂದಲೂ, ತರಕಾರಿ ಹಣ್ಣುಹಂಪಲ ಗಿಡಗಳಿಂದಲೂ ತಮ್ಮ ಗ್ರಾಮವು ಶೋಭಿಸುವಂತೆ ತಾವಾಗಿಯೇ ಮಾಡಿಕೊಳ್ಳುವರು. ಯಾಕೆಂದರೆ ಅವುಗಳಿಂದ ಅವರಿಗೆ ಹಣ್ಣುಹಂಪಲೂ, ಘಮಘಮಿಸುವ ಹೂವುಗಳೂ ಹೊರತೆ ಸಂತೋಷವನ್ನುಂಟುಮಾಡುತ್ತವೆ. ಆದರೆ ಗ್ರಾಮಸ್ಥರು ತಮ್ಮ ಮನೆಗಳಲ್ಲೇ ದನಗಳನ್ನು ಕಟ್ಟಿಕೊಂಡು ಅವುಗಳ ಕೂಡ ವಾಸಮಾಡುವ ಕೆಟ್ಟ ಪದ್ಧತಿಯನ್ನು ಬಿಟ್ಟುಬಿಡುವ ತನಕ ಇದೊಂದೂ ಆಗಲಾರದು. ಗ್ರಾಮದ ಹೊರಪಾರ್ಶ್ವದಲ್ಲಿ ಜಮೀನಿನ ಹತ್ತಿರ ದನಗಳ ಕೊಟ್ಟಿಗೆಗಳನ್ನು ಕಟ್ಟಿಕೊಳ್ಳಬೇಕು. ಅವುಗಳನ್ನು ಅಂದವಾಗಿಯೂ ಚೊಕ್ಕಟವಾಗಿರುವಂತೆಯೂ ಕಟ್ಟಬೇಕಾಗಿದೆ. ಹೀಗೆ ಮಾಡಿದ ಪಕ್ಷದಲ್ಲಿ ದನಗಳು ಇನ್ನೂ ಗಟ್ಟಿಮುಟ್ಟಾಗಿ ಬೆಳೆದು, ಹೆಚ್ಚಾಗಿ ದುಡಿಯಬಲ್ಲವು.

ಗ್ರಾಮಗಳು ಅಭಿವೃದ್ಧಿಗೆ ಬರುವುದಕ್ಕೆ ಮೊದಲು ಜನಗಳಿಗೆ ಕಲಿಸಬೇಕಾಗಿರುವ ಮುಖ್ಯ ವಿಷಯವೇನೆಂದರೆ: ಶರೀರವನ್ನು ಶುಚಿಯಾಗಿಟ್ಟುಕೊಳ್ಳುವುದು, ಒಳ್ಳೇ ಅಭ್ಯಾಸಗಳನ್ನು ಮಾಡುವುದು. ಮನೆಗಳನ್ನೂ ಬೀದಿಗಳನ್ನೂ ಶುಚಿಯಾಗಿಟ್ಟುಕೊಳ್ಳುವುದು. ಹೀಗೆ ಚೊಕ್ಕಟ ಶುಭ್ರವಾಗಿರುವುದನ್ನು ಮೊದಲು ಕಲಿಸಿ ಅಭ್ಯಾಸಮಾಡಿಸಿದರೆ ಇತರ ಎಲ್ಲಾ ಸೌಭಾಗ್ಯಗಳೂ ಕಾಲಕ್ರಮೇಣ ಲಭ್ಯವಾಗುವುದರಲ್ಲಿ ಅನುಮಾನವಿಲ್ಲ.

ದೇವರು ನಮ್ಮ ಕಷ್ಟನಷ್ಟಗಳಿಗೆ ಕಾರಣನೋ?

ನಮಗೆ ಪ್ರಾಪ್ತಿಸುವ ಕಷ್ಟನಷ್ಟ, ಉಪದ್ರಗಳಲ್ಲಿ ಮುಕ್ಕಾಲುಮೂರು ವೀಸ ಪಾಲು ನಮ್ಮ ಸುಖಕ್ಕೆಂದು ನಿಯಮಿತವಾದ ಆಜ್ಞೆಗಳನ್ನು ಭಂಗಪಡಿಸುವ ಪರಿಂದಲೇ ಪ್ರಾಯಶಃ ನಮಗೆ ಪ್ರಾಪ್ತಿಸುತ್ತವೆ. ಪೂರ್ವದಲ್ಲಿ ಈ ದೇಶದ ಕೆಲಕೆಲವು ಭಾಗಗಳನ್ನು ಆಕ್ರಮಿಸಿಕೊಂಡು ಆಳುತ್ತಿದ್ದ ಪಾಳಯಗಾರರಲ್ಲಿ ಕೆಲವರು ಪ್ರಜಾನೆಮ್ಮದಿಯನ್ನೂ ಸಮಾಧಾನವನ್ನೂ ಸುಖವನ್ನೂ ಬಯಸುವವರಾಗಿರಲಿಲ್ಲ. ಆದ್ದರಿಂದ ಪ್ರಜಾಕ್ಷೇಮವನ್ನು ಅವರು ಚಿಂತಿಸಲಿಲ್ಲ; ಪ್ರಜಾಕ್ಷೇಮಕ್ಕೆ ಅವಶ್ಯಕವಾದ ಆಜ್ಞೆಗಳನ್ನು ಏರ್ಪಡಿಸಲೂ ಇಲ್ಲ. ಅವರು—ಪ್ರಜೆಗಳು ಎಲ್ಲಾದರೂ ನಾಶವಾಗಲಿ; ಅವರಿಗೆ ಏನಾದರೂ ಸಂಭವಿಸಲಿ; ಅವರ ಚಿಂತೆ ನಮಗೇನೂ ಇಲ್ಲ. ಆದರೆ ಅವರಿಂದ ನಮಗೆ ಎಷ್ಟು ಆದಾಯ ಬಂದೀತು? ಯಾವ ಜನಗಳನ್ನು ಸುಲಿದುಕೊಂಡು ಯಾವ ಪಟ್ಟಣಗಳನ್ನು ಕೊಳ್ಳೆಹೊಡೆದರೆ ನಮ್ಮ ಭಂಡಾರ ಬೊಕ್ಕಸಗಳು ಭರ್ತಿಯಾಗುವವು? ನಮ್ಮ ಕೀರ್ತಿಯು ಹೇಗೆ ಹಬ್ಬುವದು? ನಮ್ಮ ಪ್ರತಾಪವನ್ನು ಇತರ ಪಾಳೆಯಗಾರರು ಒಪ್ಪಿ ವಿಧೇಯರಾಗುವಂತೆ ಏನು ಮಾಡಿದರಾದೀತು? ಎಂಬಿವೇ ಮೊದಲಾದ ಚಿಂತೆಗಳು ಅವರ ಮನಸ್ಸನ್ನು ಬಾಧಿಸುತ್ತಲಿದ್ದವು. ಆದರೆ ಈ ಕಾಲದ ಅರಸುಗಳು ಪ್ರಜಾನೆಮ್ಮದಿ, ಅವರ ಅಭಿವೃದ್ಧಿ, ವಿದ್ಯೆ, ಕ್ಷೇಮಗಳು ಹೆಚ್ಚುವಂತೆ ಭಂಡಾರದಲ್ಲಿರುವ ದ್ರವ್ಯವನ್ನು ವ್ಯಯಮಾಡಬೇಕೆಂದು ನಿಶ್ಚಯಿಸಿ ದೊಡ್ಡ ದೊಡ್ಡ ಪಟ್ಟಣಗಳಿಗೆ ಸ್ವಚ್ಛವಾದ ನೀರನ್ನು ಒದಗಿಸಿರುವರು. ಜನಗಳೂ ಗಾಡಿಗಳೂ ತಿರುಗುವದಕ್ಕೆ ರಸ್ತೆಗಳನ್ನೂ ಸಾಲುತೋಪುಗಳನ್ನೂ ಹಾಕಿಸಿರುವರು. ಮುನಿಸಿಪಾಲಿಟಿಯನ್ನು ಏರ್ಪಡಿಸಿ ಊರನ್ನು ಪಾಕೀಜು ಮಾಡಿಸಿ ರಾತ್ರೆಯಲ್ಲಿ ಬೀದಿ ಬೀದಿಗೂ ದೀಪಗಳನ್ನು ಹಚ್ಚಿಸುವರು. ಈ ಏರ್ಪಾಡುಗಳೆಲ್ಲಾ ಸರಿಯಾಗಿ ನಡೆಯುವದಕ್ಕೆ ತಕ್ಕ ಕ್ರಮಕಟ್ಟಳೆ ಕಾನೂನುಗಳನ್ನು ಏರ್ಪಡಿಸಿರುವರು. ಈ ಕ್ರಮಗಳನ್ನು ತಪ್ಪದೆ ಕೈಕೊಳ್ಳುವದು ಪ್ರಜೆಗಳ ಸೌಕರ್ಯಕ್ಕೂ ಸರಕಾರವು ಬಿಗಿಯಾಗಿ ನಿಂತು ದರ್ಪದಿಂದ ಸಕಲ ಪ್ರಜೆಗಳನ್ನು ಧರ್ಮವಾಗಿ ಆಳುವದಕ್ಕೂ ಅಗತ್ಯವಾಗಿದೆ. ಈ ಕ್ರಮಗಳನ್ನು ಭಂಗಪಡಿಸಿದವನನ್ನು ಅರಸನು ದಂಡಿಸುವದು ಅಗತ್ಯವಾಗಿದೆ. ಇಲ್ಲದಿದ್ದರೆ ಆತನ ಅಧಿಕಾರವನ್ನು ಯಾರೂ ಲಕ್ಷಿಸುವದಿಲ್ಲ. ಮತ್ತು ಕ್ರಮವು ಭಂಗವಾಗುವದರಿಂದ ರಾಜ್ಯವೇ ಅನಾಯಕವಾಗಿ ಪ್ರಜಾನಷ್ಟವು ಕ್ಷಿಪ್ರದಲ್ಲಿಯೇ ಸಂಭವಿಸುವದು.

ಮತ್ತು ಎಲ್ಲಾ ಆಜ್ಞೆಗಳು ಪ್ರಜೆಗಳ ಹಿತಕ್ಕಾಗಿರುವುದಲ್ಲದೆ ಆ ಆಜ್ಞೆಗಳು ಅರಸನ ಸ್ವಭಾವ ಗುಣಗಳನ್ನೂ ಆತನ ಮನೋಭಿಪ್ರಾಯವನ್ನೂ ಪ್ರಕಟಿಸುವವು. ಪ್ರಜೆಗಳು ಸತ್ಯಸಂಧರಾಗಿಯೂ ನೀತಿಸಂಪನ್ನರಾಗಿಯೂ ಇರಬೇಕೆಂದು ಆಜ್ಞೆಯನ್ನು ವಿಧಿಸುವ ಅರಸನು ಅಂತರಂಗದಲ್ಲಿ ತಾನೇ ನೀತಿವಂತನಾಗಿಯೂ ಸತ್ಯವನ್ನು ಪ್ರೀತಿಮಾಡುವವನಾಗಿಯೂ ಇದ್ದಾನೆ. ಇಂತಹ ಅರಸನ ಆಜ್ಞೆಗಳನ್ನು ಮೀರಿ ನಡೆವವನು ಪ್ರಜಾ ಕ್ಷೇಮಕ್ಕೂ ಸ್ವಹಿತಕ್ಕೂ ಪರಮಾವಶ್ಯಕವಾದ ಆಜ್ಞೆಗಳನ್ನು ಮೀರಿದ ದೋಷಕ್ಕೆ ಪಾತ್ರನಾಗುವದು ಮಾತ್ರವೇ ಅಲ್ಲ; ಅರಸನ ಸ್ವಭಾವ, ಆತನ ಅಂತರ್ಯಗುಣ, ಮನೋಭಿಪ್ರಾಯಗಳನ್ನು ಅಂದರೆ ಒಂದೇ ಮಾತಿನಲ್ಲಿ ಆ ಅರಸನನ್ನೇ ವಿರೋಧಿಸಿದ ಅಪರಾಧಕ್ಕೆ ಗುರಿಯಾದನು. ಇಂಥವನನ್ನು ಅರಸನು ದಂಡಿಸಬೇಕು ಇಲ್ಲದಿದ್ದರೆ ಅಪರಾಧಿಯು ಕೆಡುವದಲ್ಲದೆ ಪ್ರಜಾಕ್ಷೋಭೆಯೂ ಉಂಟಾಗುವದು; ಮತ್ತು ಅರಸನೇ ಸಹಜವಾದ ತನ್ನ ಸ್ವರೂಪವನ್ನು ತ್ಯಜಿಸಿ ಬಿಟ್ಟಂತಾಗುವದು.

ಈವರೆಗೂ ಅರಸನನ್ನೂ ಪ್ರಜೆಗಳನ್ನೂ ಕುರಿತು ಹೇಳಿದ್ದು ದೇವರಿಗೂ ಆತನ ಆಜ್ಞೆಗಳಿಗೂ ನಮಗೂ ಇರುವ ಸಂಬಂಧವನ್ನು ಸೂಚಿಸುವ ಸಾಮ್ಯವಾಗಿದೆ. ದೇವರ ಸ್ವಭಾವವೂ ಚಿತ್ತವೂ ಗುಣವೂ ಪರಿಶುದ್ಧವಾದದ್ದು, ಸತ್ಯವಾದದ್ದು, ನೀತಿಯುಕ್ತವಾದದ್ದು. ಈ ಗುಣಗಳನ್ನು ಪ್ರತ್ಯೇಕಿಸಿ ನಾವು ದೇವರನ್ನೂ ಆತನ ಇರುವಿಕೆಯನ್ನೂ ಕುರಿತು ಭಾವಿಸುವದಕ್ಕಾಗುವದಿಲ್ಲ. ಈ ಗುಣಗಳಿಲ್ಲದಲ್ಲಿ ದೇವರೇ ಇಲ್ಲವೆಂತಲೂ ಹೇಳಬಹುದು. ಸೂರ್ಯನಿಗೆ ಪ್ರಭೆಯು ಆವರಣವಾಗಿ ಆತನ ಸ್ವಭಾವವನ್ನು ತೋರಿಸುವದಾಗಿದೆ. ಹಾಗೆಯೇ ಸತ್ಯ, ನೀತಿ, ಪರಿಶುದ್ಧತ್ವಗಳು ದೇವರ ಸಹಜವಾದ ಸ್ವಭಾವವಾಗಿಯೂ ಆತನಿಂದ ಹುಟ್ಟಿ ಹೊರಟಿರುವ ಕಿರಣಗಳಾಗಿಯೂ ಆತನ ಆವರಣವಾಗಿಯೂ ಇವೆ. ಸೂರ್ಯನಿಲ್ಲದೆ ಪ್ರಭೆ ಇಲ್ಲ, ನಿಜ; ಹಾಗೆಯೇ ಪ್ರಭೆ ಇಲ್ಲದ ಸೂರ್ಯನು ಇಲ್ಲವಷ್ಟೆ.

ಸೂರ್ಯನ ಪ್ರಭೆಗೆ ಸಿಕ್ಕಿರುವ ಸಕಲವೂ ಅದರ ಕಾಂತಿಯಿಂದಲೂ ಉಷ್ಣದಿಂದಲೂ ಜೀವವನ್ನೂ ಬಣ್ಣವನ್ನೂ ಹೊಂದಿ ಅದರ ಪ್ರಭೆಯ ಆಶ್ರಯದಿಂದಲೇ ಬದುಕುತ್ತಿರುವದು. ದೇವರ ಅಧಿಕಾರದೊಳಗಿದ್ದು ಆತನ ಆಶ್ರಯದಿಂದ ಬದುಕುವ ಎಲ್ಲರೂ ದೇವರ ಸ್ವಭಾವಕ್ಕೆ ಸರಿಬೀಳುವಂಥಾದ್ದನ್ನು ಆತನ ಚಿತ್ತಕ್ಕೂ ಗುಣಕ್ಕೂ ಒಪ್ಪುವಂಥಾದ್ದನ್ನು ಬಯಸುವವರಾಗಿಯೂ ನೆರವೇರಿಸುವವರಾಗಿಯೂ ಇರಬೇಕು. ಎಲ್ಲಾ ಪ್ರಾಣಿಗಳಿಗೆ ಸೂರ್ಯನಲ್ಲಿದ್ದು ಜೀವವನ್ನು ಪಡೆದಿರುವದು ಹೇಗೆ ಸ್ವಭಾವಿಕವೋ ಹಾಗೆಯೇ ದೇವರ ಲೋಕದಲ್ಲಿದ್ದು ಆತನ ಆಶೀರ್ವಾದಗಳನ್ನು ಪಡೆದು ಆತನಲ್ಲಿ ಸುಖಿಗಳಾಗಿರುವದಕ್ಕೆ ಬಯಸುವವರೆಲ್ಲರೂ ಆತನ ಆಜ್ಞೆಗಳಂತೆ ವರ್ತಿಸುವದು ಅಗತ್ಯ. ಈ ವಿಷಯದಲ್ಲಿ ಉಭಯತ್ರರಿಗೆ ಅಂದರೆ ದೇವರಿಗೂ ಮನುಷ್ಯನಿಗೂ ಪರಸ್ಪರ ವಿರೋಧ ಸಂಭವಿಸಿದ ಕೂಡಲೆ ಆ ಮನುಷ್ಯನು ಇಲ್ಲದಂತಾಗಬೇಕು. ಅವನು ದೇವರ ಸ್ವಭಾವಕ್ಕೆ ಅನುಗುಣವಾದ ಆತನ ಆವರಣದಲ್ಲಿ ಇರುವದಕ್ಕಾಗುವದಿಲ್ಲ. ಒಂದು ಗಿಡವ ಕಾಂತಿ ರೂಪ ಬಣ್ಣ ಜೀವಗಳು ಸೂರ್ಯನಿಂದ ಬರುತ್ತಿರಲಾಗಿ ಆ ಗಿಡವು ಸೂರ್ಯನ ರಶ್ಮಿಗಳನ್ನೂ ತನ್ನ ಎಲೆಗಳನ್ನೂ ದೇಹವನ್ನೂ ಒಡ್ಡಿ ಆ ರಶ್ಮಿಗಳನ್ನು ಗ್ರಹಿಸಿಕೊಳ್ಳುತ್ತಿರಬೇಕಲ್ಲವೇ? ಹೀಗೆ ಗ್ರಹಿಸುವದು ನಿಂತಕೂಡಲೆ ಸೂರ್ಯನ ಸಂಬಂಧದಿಂದ ಅದಕ್ಕೆ ಬರುವ ಪ್ರಯೋಜನಗಳೆಲ್ಲಾ ತಟಸ್ಥವಾಗುವವು. ದೇವರಲ್ಲಿ ಸದಾ ಇದ್ದು ಆತನಿಂದ ನಿರಂತರವೂ ಹುಟ್ಟಿ ಬರುತ್ತಿರುವ ಸತ್ಯ, ನೀತಿ, ಪವಿತ್ರತ್ವಗಳಿಗೆ ಒಗ್ಗದೆ ಅವುಗಳಿಗೆ ವಿರೋಧಿಸಿ ಎದುರು ಬೀಳುವವನನ್ನು ದೇವರು ದಂಡಿಸಿ ಅವನನ್ನು ಪುನಹ ತನ್ನ ಹಾದಿಗೆ ತರಬೇಕು ಇಲ್ಲದಿದ್ದರೆ ಅವನು ದೇವರ ಆವರಣದಲ್ಲಿರುವದಕ್ಕಾಗುವದಿಲ್ಲ. ದೇವರ ಮೆಚ್ಚಿಕೆಯನ್ನೂ ಮನಸ್ಸಾಕ್ಷಿಯ ಒಪ್ಪಿಗೆಯನ್ನೂ ಹೊಂದಿ ಬದುಕುವವನಿಗೆ ಮಾತ್ರ ಆತನ ಜೀವವೂ ಸ್ವತಂತ್ರವೂ ಆನಂದವೂ ದೊರಕುತ್ತವೆ.

ಯುದ್ಧದ ಸಮಾಚಾರಗಳು.

ಅಂತ್ವಾರ್ಪ್ ಜರ್ಮನಿಯರ ವಶವಾಯಿತು.

ದೀರ್ಘವಾದ ಯುದ್ಧಗಳು.

ಇತ್ಯರ್ಥಪಟ್ಟಂಥಾ ಕದನಗಳ ಫಲಿತಾಂಶವು ಈ ವಾರವೂ ತಿಳಿದುಬರಲಿಲ್ಲ. ಅಂತ್ವಾರ್ಪ್ ಪಟ್ಟಣವು ಜರ್ಮನಿಯವರ ವಶವಾಯಿತೆಂದು ಎಲ್ಲರಿಗೂ ವಿಷಾದವುಂಟಾಗಿದ್ದರೂ ಒಟ್ಟು ಕೂಡಿಸಿ ನೋಡುವಲ್ಲಿ ಯುದ್ಧ ಕಾರ್ಯಗಳು ಬ್ರಿಟಿಷ್ ಮತ್ತು ಫ್ರೆಂಚ್ ಸೈನಿಕರಿಗೆ ತಕ್ಕಮಟ್ಟಿಗೆ ಅನುಕೂಲವಾಗಿರುವವೆಂದು ಹೇಳಬಹುದು. ವಾಚಕರು ನಮ್ಮ ಯುದ್ಧ ನಕ್ಷೆಯನ್ನು ಇಟ್ಟುಕೊಂಡು ರಣರಂಗದ ವೃತ್ತಾಂತವನ್ನು ಓದಿಕೊಳ್ಳುವರೆಂದು ನಿರೀಕ್ಷಿಸುತ್ತೇವೆ.

ಫ್ರಾನ್ಸಿನಲ್ಲಿ.

ಈಗ ಯುದ್ಧವು ಬೆಲ್ಜಿಯಮ್ ಎಲ್ಲೆಯಲ್ಲಿರುವ ಲೀಲ್ ಪಟ್ಟಣದಿಂದ ಹಿಡಿದು ದಕ್ಷಿಣಕ್ಕೆ ಅಮಿಯಂಜ್‌ವರೆಗೂ, ರಾಯಂಜ್ ಪಶ್ಚಿಮಕ್ಕೂ, ಅಲ್ಲಿಂದ ಪೂರ್ವಕ್ಕೆ ತಿರುಗಿ ಸ್ವಾಸೊಜ್ ವಿಳು ರೀಂ ಉತ್ತರಕ್ಕೂ, ಅಲ್ಲಿಂದ ನಾನ್ಸಿಗೆ ದಕ್ಷಿಣದವರೆಗೂ ಹರಡಿಕೊಂಡು ನಡೆಯುತ್ತಲೇ ಇವೆ. ಅದರಲ್ಲೂ ಲೀಲ್‌ಗೂ ಸ್ವಾಸೊಜ್‌ಗೂ ನಡುವೆ ಯುದ್ಧವು ಅತ್ಯಂತ ಕಠಿಣವಾಗಿ ನಡೆದಿರುತ್ತದೆ ಬ್ರಿಟಿಷರೂ ಫ್ರೆಂಚರೂ ತಮ್ಮ ಠಾಣ್ಯಗಳನ್ನು ಬಹು ಪರಾಕ್ರಮದಿಂದ ಕಾಪಾಡಿಕೊಂಡಿರುವದಲ್ಲದೆ ಕೆಲವು ಕಡೆಗಳಲ್ಲಿ ಅವರು ಮುಂದಕ್ಕೂ ನುಗ್ಗಿ ಹೋಗಿರುವರು. ಜರ್ಮನಿಯವರೇ ತಮಗೆ ಮುಂದರಿಸಿ ನುಗ್ಗಿಹೋಗಲು ಸಾಧ್ಯವಾಗಲಿಲ್ಲವೆಂದು ಒಪ್ಪಿಕೊಂಡಿದಾರೆ. ಕಳೆದ ಕೆಲವು ದಿನಗಳಲ್ಲಿ 1,600 ಜರ್ಮನ ಸೈನಿಕರು ಕೈಸೆರೆ ಸಿಕ್ಕಿರುವರು.

ಈಗ ಯುದ್ಧ ನಡೆಯುತ್ತಿರುವ ಲೈನಿನ ಕೆಲವು ಭಾಗಗಳಲ್ಲಿ ಕದನಗಳೇನೂ ಸಂಭವಿಸದೆ ಇರೋಣದರಿಂದ ಕೆಲವು ಮಂದಿ ಬ್ರಿಟಿಷ್ ಸೈನಿಕರು ಫುಟ್‌ಬಾಲ್ ಎಂಬ ಚೆಂಡಾಟವನ್ನು ಆಡುವಂತಾಗಿದೆ.

ಜರ್ಮನಿಯವರು ತಂದಿರುವ ದೊಡ್ಡ ಫಿರಂಗಿಗಳು ವಿಶೇಷ ನಷ್ಟವನ್ನುಂಟುಮಾಡಶಕ್ಯವುಗಳಾಗಿವೆ. ಒಂದು ಕಡೆ ನಿಂತಿದ್ದ ನಾಲ್ವತ್ತು ಕುದುರೆಗಳು ಒಂದು ಗುಂಡು ಬಿದ್ದು ನಾಶಹೊಂದಿದವು. ಆದರೆ ಈ ಗುಂಡುಗಳ ಗುರಿಯು ಅನೇಕ ವೇಳೆ ನೇರವಾಗಿರುವುದಿಲ್ಲ. ಯುದ್ಧಭೂಮಿಗೆ ಹೊಸ ಸೈನ್ಯಗಳು ಹೆಚ್ಚಾಗಿ ಕಳುಹಲ್ಪಟ್ಟಲ್ಲದೆ ಈ ಕದನವು ಕೊನೆಗಾಣುವಂತೆ ತೋರುವುದಿಲ್ಲ.

ಬೆಲ್ಜಿಯಂನಲ್ಲಿ.

ಜರ್ಮನಿಯವರು ಅಂತ್ವಾರ್ಪ್ ಪಟ್ಟಣಕ್ಕೆ ಫಿರಂಗಿಗಳನ್ನು ಹೊಡೆದದ್ದೂ, ಆ ಪಟ್ಟಣವನ್ನು ಗೆದ್ದು ಸ್ವಾಧೀನಪಡಿಸಿಕೊಂಡದ್ದೂ ಮುಖ್ಯವಾದ ವಿಷಯ. ಜರ್ಮನಿಯವರು ಆ ಪಟ್ಟಣದ ಸಮೀಪಕ್ಕೆ ಹೋಗಿ ಎರಡು ತಿಂಗಳಾಗಿರಬಹುದು. ದೊಡ್ಡ ದೊಡ್ಡ ಫಿರಂಗಿಗಳನ್ನು ತಂದಿದ್ದರು. ಈ ಫಿರಂಗಿಗಳಿಂದ ಹೊಡೆಯುವ ಗುಂಡುಗಳು ಒಂಭತ್ತು ಮೈಲಿ ದೂರ ಹೋಗಿ ಬೀಳಬಲ್ಲವು. ಅನೇಕ ದಿನಗಳಿಂದಲೂ ಅವರು ಫಿರಂಗಿಗಳನ್ನು ಎತ್ತಿಕಟ್ಟಿ ಕೋಟೆ ಗೋಡೆಗಳಿಗೂ ಪಟ್ಟಣದೊಳಕ್ಕೂ ಗುಂಡುಗಳನ್ನು ಹೊಡೆಯುತ್ತಿದ್ದರು. ಬೆಲ್ಜಿಯರ್ಧು ಜರ್ಮನಿಯವರನ್ನು ಸೋಲಿಸಿ ಓಡಿಸಬೇಕೆಂದು ಅನೇಕ ಸಲ ಬಹು ಪರಾಕ್ರಮವನ್ನು ತೋರಿಸಿ ಅವರ ಮೇಲೆ ಕದನಗಳನ್ನು ನಡಿಸಿದಾಗ್ಯೂ ಕಡೆಗೆ ಅವರ ಸಾಹಸವು ವ್ಯರ್ಥವಾಯಿತು.

ಆ ನಗರದೊಳಗೆ ಹಲವು ಕಡೆಗಳಲ್ಲಿ ಬೆಂಕಿ ಹತ್ತಿಕೊಂಡು ಉರಿಯ ಜ್ವಾಲೆಗಳು ಹೊರಡುತ್ತಿರುವವು. ಪ್ರಜೆಗಳು ಪಟ್ಟಣವನ್ನು ತ್ಯಜಿಸಿ ಎಲ್ಲೆಕಟ್ಟನ್ನು ದಾಟಿಕೊಂಡು ಹಾಲೆಂಡ್ ರಾಜ್ಯಕ್ಕೂ, ಓಸ್ಟೆಂಡ್ ಎಂಬ ಸಮುದ್ರತೀರ ನಗರಕ್ಕೂ ಹೋಗಿ ಸೇರಿಕೊಂಡಿದಾರೆ. ಹೀಗೆ ಹೊರಟುಹೋದ ಪ್ರಜೆಗಳು ಸುಮಾರು ಐದು ಲಕ್ಷ ಮಂದಿ ಎಂದು ಹೇಳಲಾಗಿದೆ. ಬೆಲ್ಜಿಯಮ್ ಗವರ್ನ್‌ಮೆಂಟನ್ನು ಅಂತ್ವಾರ್ಪ್ ನಗರದಿಂದ ಓಸ್ಟೆಂಡ್ ಪಟ್ಟಣಕ್ಕೆ ಸಾಗಿಸಿಬಿಟ್ಟರು. ಅಲ್ಲಿತನಕ ಬೆಲ್ಜಿಯರ್

ಸೈನ್ಯಗಳು ಆಂಟ್ವಾರ್ಪ್ ನಗರವನ್ನು ಬಿಟ್ಟು ಹೋದವು. ಸುಮಾರು 8,000 ಬ್ರಿಟಿಷ್ ಸೈನ್ಯಗಳು ಬೆಲ್ಜಿಯಮ್‌ಗೆ ಸಹಾಯಮಾಡುತ್ತಿದ್ದವು. ಇವರೂ ಬೆಲ್ಜಿಯಮ್ ದೊರೆಯವರೂ ಬೆಲ್ಜಿಯಮ್ ಸೈನ್ಯಗಳೊಡನೆ ಒಟ್ಟಿಂಗೆ ಹೋಗಿರುತ್ತಾರೆ. ಇವರು ಹೋಗುವುದಕ್ಕಿಂತ ಮುಂಚೆ ಆಂಟ್ವಾರ್ಪ್‌ನಲ್ಲಿದ್ದ ಪೆಟ್ರೋಲ್ ಎಣ್ಣೆಯ ಉಗ್ರಾಣಗಳೂ ಯುದ್ಧದ ಸರಕುಗಳೂ ಜರ್ಮನಿಯವರಿಗೆ ಸಿಕ್ಕದಂತೆ ಎಲ್ಲವನ್ನೂ ನಾಶಮಾಡಿಬಿಟ್ಟರು. ಸುಮಾರು 2,000 ಬ್ರಿಟಿಷ್ ಸೈನಿಕರು ಹಾಲೆಂಡ್ ರಾಜ್ಯಕ್ಕೆ ಹೋಗಬೇಕಾಯಿತು, ಇವರು ಮತ್ತೆ ಯುದ್ಧಭಟರಾಗಿ ಆಯುಧಗಳನ್ನು ಹಿಡಿದು ನಿಲ್ಲುವುದಿಲ್ಲ.

ಬೆಲ್ಜಿಯಮ್ ಸೈನ್ಯಗಳು ತಮ್ಮ ಸಣ್ಣ ರಾಜ್ಯವನ್ನು ಕಾಪಾಡಿಕೊಳ್ಳುವುದಕ್ಕೋಸ್ಕರ ಅತ್ಯಂತ ಪರಾಕ್ರಮದಿಂದ ಕಾದಿದರು. ಈಗ ಅವರ ಸಾಹಸವೆಲ್ಲಾ ವ್ಯರ್ಥವಾಯಿತು. ಆ ರಾಜ್ಯದ ಬಹಳ ಭಾಗವೆಲ್ಲಾ ಈಗ ಜರ್ಮನಿಯವರ ವಶವಾಗಿದೆ. ಆದರೂ ಜರ್ಮನಿಯವರಿಗೆ ಅವರ ಉದ್ದೇಶವನ್ನು ನೆರವೇರಿಸಿಕೊಳ್ಳದಂತೆ ಪ್ರತಿಭಟಿಸಿ ನಿಂತು ಅವರಿಗೆ ಬಹಳ ಕಠಿಣವಾದ ಅಡಚಣೆಯನ್ನುಂಟುಮಾಡಿ ಇದುವರೆಗೆ ಅವರನ್ನು ತಡೆದದ್ದು ತುಂಬಾ ಸ್ತೋತ್ರಾರ್ಹವಾಗಿದೆ; ಈ ಭಾಗವು ಬೆಲ್ಜಿಯಮ್‌ಗೆ ವಿಶೇಷ ತೃಪ್ತಿಯನ್ನೂ ಸಂತೋಷವನ್ನೂ ಉಂಟುಮಾಡಿದೆ ಎನ್ನುವುದಕ್ಕೆ ಸಂಶಯವಿಲ್ಲ. ಈಗ ಆಂಟ್ವಾರ್ಪ್ ನಗರವು ಜರ್ಮನಿಯವರ ಸ್ವಾಧೀನವಾಯಿತಾದಾಗ್ಯೂ ಯುದ್ಧವಿಚಾರದಲ್ಲಿ ಯಾವ ಪಕ್ಷದವರಿಗೂ ವಿಶೇಷವಾದ ಅನುಕೂಲವೇನೂ ಉಂಟಾಗಿಲ್ಲ.

ಬೆಲ್ಜಿಯಮ್ ಸೈನಿಕರಲ್ಲಿ ಅನೇಕರು ನಷ್ಟಹೊಂದಿದರು. ಅನೇಕಾನೇಕ ಪ್ರಜೆಗಳು ತಮ್ಮ ತಮ್ಮ ಮನೆಮಠಾದಿಗಳನ್ನು ತ್ಯಜಿಸಿ ಹೊರಟುಹೋಗಬೇಕಾಯಿತು. ಸಾವಿರಾರು ಪ್ರಜೆಗಳು ಹೋಗಿ ಇಂಗ್ಲೆಂಡಿನಲ್ಲೂ ಹಾಲೆಂಡ್ ರಾಜ್ಯದಲ್ಲೂ ನಿಂತುಬಿಟ್ಟಿದ್ದಾರೆ. ಅವರನ್ನು ಅಲ್ಲಲ್ಲಿ ಇತರರು ಸಂರಕ್ಷಿಸುತ್ತಿರುವರು. ಬೆಲ್ಜಿಯಮ್ ದೇಶದಲ್ಲಿ ಈಗ ಜರ್ಮನಿಯವರ ವಶದಲ್ಲಿರುವಂಥಾ ಭಾಗಗಳಲ್ಲೆಲ್ಲಾ ಕ್ಷಾಮಪ್ರಾಪ್ತವಾಗಿದೆ.

ಇಂಥಾ ಪರಾಕ್ರಮಶಾಲಿಗಳಾದ ಬೆಲ್ಜಿಯಮ್‌ಗೆ ಸಹಾಯಮಾಡಬೇಕೆಂದು ಪ್ರಪಂಚದ ಎಲ್ಲಾ ದೇಶಗಳಲ್ಲೂ ಚಂದಾ ಹಣಗಳು ಕೂಡಿಸಲ್ಪಡುತ್ತಿವೆ. ಅವರೆಲ್ಲಾ ತಮ್ಮ ತಮ್ಮ ಊರು ಕೇರಿಗಳಿಗೆ ವಾಪಸು ಬರುವುದಕ್ಕೆ ಇನ್ನೂ ಕೆಲವು ತಿಂಗಳು ಹಿಡಿಯಬಹುದು; ಅವರು ಹಾಗೆ ವಾಪಸು ಬಂದಾರೆನ್ನುವುದಕ್ಕೆ ಅನುಮಾನವಿಲ್ಲ.

ಪೂರ್ವ ಪ್ರಷ್ಯಾದಲ್ಲಿ.

ರಷ್ಯಾದವರು ಜರ್ಮನಿಯವರನ್ನು ಸೋಲಿಸಿ ಹಿಂದಕ್ಕೆ ಓಡಿಸಿದರೆಂದು ಕಳೆದ ವಾರ ಹೇಳಿದೆವಷ್ಟೆ. ಈ ಕದನದ ವೃತ್ತಾಂತವು ಈಗ ತಿಳಿದು ಬಂದಿದೆ. ಯುದ್ಧವು ಅತ್ಯಂತ ಘೋರವಾಗಿ ನಡೆಯಿತೆಂದೂ, ಜರ್ಮನಿಯವರ ಕಡೆ ಮೊದಲು ಹೇಳಿದ್ದಕ್ಕಿಂತ ಎಷ್ಟೋ ಹೆಚ್ಚು ಸೈನ್ಯಗಳು ನಷ್ಟವಾದವೆಂದೂ ಗೊತ್ತಾಗಿದೆ. ಮಳೆ ಸುರಿದ ಕಾರಣ ರಸ್ತೆಗಳೆಲ್ಲಾ ಬಹಳ ಕೆಸರಾದವು. ಜರ್ಮನಿಯವರು ಭಾರಿಯಾದ ತಮ್ಮ ಫಿರಂಗಿಗಳನ್ನು ಎಳಸಿಕೊಂಡು ಬರಲಾರದೆ ಹೋದರು. ಫಿರಂಗಿಗಳನ್ನು ಎಳೆಯುವ ಕುದುರೆಗಳೆಲ್ಲಾ ಕೊಲ್ಲಲ್ಪಟ್ಟವು. ರಷ್ಯಾದವರು ಮುಂದುಮುಂದಕ್ಕೆ ನುಗ್ಗಿಬಂದು ಮತ್ತೆ ಪ್ರಷ್ಯಾ ದೇಶವನ್ನು ಪ್ರವೇಶಮಾಡಿದಾರೆ. ಈ ಮೊದ್ದು ಯುದ್ಧವಾದ ಈಚೆಗೆ ರಷ್ಯಾದವರು 10,000 ಜರ್ಮನಿ ಸೈನಿಕರನ್ನು 40 ಫಿರಂಗಿಗಳ ಸಮೇತ ಕೈಸೆರೆ ಹಿಡಿದುಕೊಂಡು ಹೋದರು.

ಜರ್ಮನಿಯವರು ಪೋಲೆಂಡಿನಲ್ಲಿ ರಷ್ಯಾದವರಿಗೆ ಸೇರಿದ ವಿಭಾಗದಲ್ಲಿ ಕೆಲವು ರಷ್ಯಾ ಸೈನಿಕರನ್ನು ಫಿರಂಗಿಗಳ ಸಹಿತ ಕೈಸೆರೆ ಹಿಡಿದಿರುವುದಾಗಿ ಹೇಳುವರು.

ಆಸ್ಟ್ರಿಯಾದಲ್ಲಿ.

ಆಸ್ಟ್ರಿಯಾದಿಂದ ಬಹಳ ವರ್ತಮಾನಗಳೇನೂ ಬಂದಿಲ್ಲ. ಎರಡು ಕಡೆಗಳ ಸೈನ್ಯಗಳೂ ಎದುರು ಬದರಾಗುವುದಕ್ಕೋಸ್ಕರ ನುಗ್ಗಿ ಹೋಗುತ್ತಿರುವವು. ಕ್ರಾಕೋವಿಗೆ ಹೋಗುವ ಮಾರ್ಗದಲ್ಲಿ ಸಿಕ್ಕುವ ಪ್ರೆಮಿಸ್ಲ ಎಂಬ ಕೋಟೆ ಯುಳ್ಳ ನಗರಕ್ಕೆ ರಷ್ಯಾದವರು ಫಿರಂಗಿಗಳನ್ನು ಎತ್ತಿಕಟ್ಟಿ ಗುಂಡು ಹೊಡೆಯುತ್ತಿದ್ದಾರೆ. ಆಸ್ಟ್ರಿಯಾದವರು ಈ ಪಟ್ಟಣಕ್ಕೆ ಸಹಾಯಮಾಡುವುದಕ್ಕಾಗಿ ಸಿಪಾಯಿಗಳನ್ನು ಕಳುಹಿಸಿದಾರೆಂದು ವರ್ತಮಾನವಿದೆ.

ಪ್ರಾರಂಭದಲ್ಲಿ ನಡೆದ ಕದನಗಳೊಳಗೆ ಆಸ್ಟ್ರಿಯಾದವರು ತಮಗೆ ಜಯವಾಯಿತೆಂದೂ, ರಷ್ಯಾದವರು ತಮಗೆ ಜಯವಾಯಿತೆಂದೂ ಹೇಳಿಕೊಳ್ಳುತ್ತಾರೆ. 30,00,000 ಜರ್ಮನಿ ಮತ್ತು ಆಸ್ಟ್ರಿಯಾ ಸೈನಿಕರು ಅಲ್ಲಿ ಠಾಣ್ಯಹಾಕಿಕೊಂಡು ರಷ್ಯಾದವರನ್ನು ಎದುರು ನೋಡುತ್ತಿದ್ದಾರೆಂದು ಪ್ರಕಟವಾಗಿದೆ. ಈ ಯುದ್ಧವು ನಡೆವ ಪಕ್ಷದಲ್ಲಿ ಮಹಾ ಘೋರವಾಗುತ್ತದೆ.

ಅಲ್ಲಿಂದ ದಕ್ಷಿಣಭಾಗದಲ್ಲಿ ರಷ್ಯಾದವರು ರೈಲ್ ಗಾಡಿಗಳನ್ನು ತಡೆದು ಅನೇಕ ಜನರನ್ನು ಕೈಸೆರೆ ಹಿಡಿದಿರುತ್ತಾರೆ. ಇದಲ್ಲದೆ ಅವರು ಹಂಗೆರಿ ರಾಜ್ಯದ ರಾಜಧಾನಿಯಾದ ಬುಡಪೆಸ್ಟ್ ನಗರವನ್ನು ಕುರಿತು ನುಗ್ಗಿ ಬರುತ್ತಿದ್ದಾರೆಂದೂ, ಈಗ ಅವರು ಅಲ್ಲಿಗೆ 150 ಮೈಲಿ ದೂರದಲ್ಲಿದ್ದಾರೆಂದೂ ಹೇಳಲಾಗಿದೆ.

ಸರ್ವಿಯಾದಲ್ಲಿ.

ಸರ್ವಿಯನ್ ಸೈನಿಕರು ಬೋಸ್ನಿಯಾ ದೇಶದ ಪರ್ವತಗಳನ್ನು ದಾಟಿಕೊಂಡು ಹೋಗಬೇಕಾಗಿರೋಣದರಿಂದ ಅವರಿಗೆ ಬಹಳ ಕಷ್ಟವಾಗಿದೆ. ಈಗ ಅವರು ರಾಜಧಾನಿಯಾದ ಸೆರಜೆವೋ ನಗರವನ್ನು ಬಂದು ಸೇರಿದರು. ಆ ಪಟ್ಟಣವನ್ನು ಗೆದ್ದುಕೊಳ್ಳಬೇಕೆಂದು ಸಾಹಸಪಡುತ್ತಿದ್ದಾರೆ.

ಸೆರಜೆವೋ ನಗರದ ಬಳಿ ಮಾಂಟನೀಗ್ರೋದವರು ಆಸ್ಟ್ರಿಯಾದವರ ಮೇಲೆ ಯುದ್ಧಮಾಡಿ, ಸೋಲಿಸಿ ಹಿಂದಕ್ಕೆ ಓಡಿಸಿರುತ್ತಾರೆ. ಆಸ್ಟ್ರಿಯಾದವರಲ್ಲಿ ಅನೇಕರು ಕೊಲೆಯಾದರು; ಬಹು ಮಂದಿ ಗಾಯಪಟ್ಟಿದಾರೆ.

ಜಪಾನ್‌ನಲ್ಲಿ.

ಜಪಾನ್‌ನವರು ಚೀಣಾದಲ್ಲಿ ಜರ್ಮನಿಯವರನ್ನು ಸಮೀಪಿಸಿ ಬರುತ್ತಿದಾರೆ. ರಾತ್ರಿ ಹೊತ್ತಿನಲ್ಲಿ ಸುಮಾರು 350 ಮಂದಿ ಜರ್ಮನಿ ಸೈನಿಕರು ಜಪಾನ್‌ನವರ ಮೇಲೆ ನುಗ್ಗಿಹೋಗಿ ಕದನಮಾಡಿದರು. ಆದರೆ ಜಪಾನ್‌ನವರು ಅವರನ್ನೆಲ್ಲಾ ಸೋಲಿಸಿ 47 ಮಂದಿಯನ್ನು ಕೊಂದು ಹಾಕಿ ಅಲ್ಲಿಂದ ಹಿಂದಕ್ಕೆ ಓಡಿಸಿಬಿಟ್ಟರು. ಜಪಾನ್‌ನವರ ಕಡೆ 6 ಮಂದಿ ಕೊಲೆಯಾದರು; 8 ಮಂದಿ ಗಾಯಪಟ್ಟರು. ಇದಲ್ಲದೆ ಜಪಾನ್‌ನವರು ಜರ್ಮನಿಯವರ ಒಂದು ಯುದ್ಧದ ಹಡಗನ್ನೂ ಫಿರಂಗಿಗಳ ಎರಡು ದೋಣಿಗಳನ್ನೂ ಮುಳುಗಿಸಿರುತ್ತಾರೆ.

ಜಪಾನ್‌ನವರು ತಮ್ಮ ಜಹಜುಗಳನ್ನು ಪೆಸಿಫಿಕ್ ಸಾಗರದ ಮೇಲೆ ಕಳುಹಿ, ಜರ್ಮನಿಯವರ ಮಾರ್ಷಾಲ್ ದ್ವೀಪಸಮುದಾಯವನ್ನು ಸ್ವಾಧೀನಪಡಿಸಿಕೊಂಡರು. ಜರ್ಮನಿಯವರು ಅಲ್ಲಿ ಎದುರುಬಿದ್ದು ಯುದ್ಧವೇ ಮಾಡಲಿಲ್ಲ. ಈ ದ್ವೀಪಸಮುದಾಯದಲ್ಲಿ 33 ಸಣ್ಣ ದ್ವೀಪಗಳಿವೆ. ಕಳೆದ 1886 ನೇ ಇಸವಿಯಿಂದ ಅವು ಜರ್ಮನಿಯವರ ಸ್ವಾಧೀನದಲ್ಲಿದ್ದವು. ಇದಲ್ಲದೆ ಜಪಾನ್‌ನವರು ಕೆರೋಲಿನ್ ದ್ವೀಪಗಳ ಪೈಕಿ ಒಂದನ್ನು ಸ್ವಾಧೀನಪಡಿಸಿಕೊಂಡಿದಾರೆ. ಜರ್ಮನಿಯವರು ಸ್ಪೈಯಿನ್ ರಾಜ್ಯದಿಂದ ಕಳೆದ 1899 ನೇ ಇಸವಿಯಲ್ಲಿ ಈ ದ್ವೀಪಗಳನ್ನು ಕ್ರಯಕೊಟ್ಟು ಕೊಂಡುಕೊಂಡಿದಾರೆ.

ಆಫ್ರಿಕಾದಲ್ಲಿ.

ಬ್ರಿಟಿಷರು ಜರ್ಮನಿಗೆ ಸೇರಿದ ದಕ್ಷಿಣ-ಪಶ್ಚಿಮ ಆಫ್ರಿಕಾದೊಳಕ್ಕೆ ನುಗ್ಗಿ ಹೋಗಿದಾರೆ. ಈ ಪೈಕಿ ಒಂದು ಸಣ್ಣ ಸೈನ್ಯವು ರಾತ್ರಿಯನ್ನು ಕಳೆಯುವುದಕ್ಕಾಗಿ ಒಂದು ಕಣಿವೆಯಲ್ಲಿ ಠಾಣ್ಯಹಾಕಿಕೊಂಡಿದ್ದಿತು. ಸುಮಾರು 2,000 ಜರ್ಮನಿ ಸೈನಿಕರು 10 ಫಿರಂಗಿಗಳ ಸಮೇತ ಹೋಗಿ ಆ ಸಣ್ಣ ಬ್ರಿಟಿಷ್ ಸೈನ್ಯವನ್ನು ಸುತ್ತಿಕೊಂಡರು. ಬ್ರಿಟಿಷರು ತಮ್ಮಲ್ಲಿದ್ದ ಮದ್ದು ಗುಂಡು ಮುಗಿಯುವತನಕ ಯುದ್ಧಮಾಡಿ ಕಡೆಯಲ್ಲಿ ಜರ್ಮನಿಯವರಿಗೆ ಶರಣಾಗತರಾದರು.

ಪೂರ್ವ ಆಫ್ರಿಕಾದಲ್ಲಿ ಸ್ವಲ್ಪ ಕದನ ನಡೆಯಿತು. ಜರ್ಮನಿಯವರು ಮೇಲೆಬಿದ್ದು ನುಗ್ಗಿಬಂದು ಹಿಂದಕ್ಕೆ ಓಡಿಸಲ್ಪಟ್ಟರು. ಬ್ರಿಟಿಷರ ಕಡೆ ಹಿಂದುಸ್ಥಾನದ ಒಬ್ಬ ಹುದ್ದೇದಾರನೂ, ನಾಲ್ವರು ಸಿಪಾಯಿಗಳೂ ಗಾಯಪಟ್ಟರು.

ಬ್ರಿಟನ್‌ನಲ್ಲಿ.

ಬ್ರಿಟಿಷರ ಒಂದು ಸಬ್‌ಮೆರೀನ್ ಎಂಬ ಹಡಗು ಸಮುದ್ರದೊಳಗೇ ನುಗ್ಗಿಹೋಗಿ ಜರ್ಮನಿಯ ಸಮುದ್ರತೀರದಲ್ಲಿ ಎಂದರೆ ಎಮ್ಸ್ ನದೀ ಮುಖದ ಬಳಿ ಜರ್ಮನಿಯವರ ಒಂದು ಟಾರ್ಪೀಡೋ ಬೋಟ್ ಎಂಬ ಯುದ್ಧದ ಹಡಗನ್ನು ಒಡೆದು ಹಾಳುಮಾಡಿತು. ಬಳಿಕ ಆ ಸಬ್‌ಮೆರೀನ್ ಯಾರಿಗೂ ಕಾಣಿಸಿಕೊಳ್ಳದೆ ವಾಪಸು ಹಾರಿಚ್ ಎಂಬ ಇಂಗ್ಲಿಷ್ ತೀರಪಟ್ಟಣಕ್ಕೆ ಸುರಕ್ಷಿತವಾಗಿ ಬಂದು ಸೇರಿತು.

ಪ್ರಿನ್ಸ್ ಆಫ್ ವೇಲ್ಸ್‌ರವರು ಪ್ರಾರಂಭಮಾಡಿರುವ ಯುದ್ಧದ ರಿಲೀಫ್ ಫಂಡಿಗೆ 4,50,00,000 ರೂಪಾಯಿ ಚಂದಾ ಕೊಡಿದೆ. ಇನ್ನೂ ವಸೂಲಾಗುತ್ತಿರುವುದು.

ಬ್ರಿಟಿಷ್ ಪ್ರಜೆಗಳು ತಮ್ಮ ತಮ್ಮ ಕೆಸಬುಗಳನ್ನು ಬಿಟ್ಟು ಸೈನ್ಯಕ್ಕೆ ಬೇಗ ಬೇಗನೆ ಬಂದು ಸೇರುತ್ತಿದಾರೆ. ಆಗಲೇ 7,00,000 ಜನರು ಸೈನ್ಯಕ್ಕೆ ಸೇರಿಕೊಂಡರು. ಇಷ್ಟರಲ್ಲೇ ಈ ಪ್ರಕಾರ 10,00,000 ಸೈನ್ಯವು ಜೊತೆಯಾದೀತೆಂದು ನಿರೀಕ್ಷಿಸಲ್ಪಟ್ಟಿದೆ.

ಜರ್ಮನಿಯಲ್ಲಿ.

ಮೂವರು ಬ್ರಿಟಿಷ್ ಹುದ್ದೇದಾರರು ವಿಮಾನಯಂತ್ರಗಳಲ್ಲಿ ಜರ್ಮನಿಯೊಳಕ್ಕೆ ಪ್ರವೇಶಿಸಿ, ಡಸ್ಸೆಲ್‌ಡಾರ್ಫ್ ನಗರದಲ್ಲಿರುವ ವಿಮಾನಯಂತ್ರಗಳ ಕಾರ್ಖಾನೆಗೆ ಸಿಡಿಮದ್ದಿನ ಗುಂಡುಗಳನ್ನು ಬೀಳಿಸಿದರು. ಈ ಗುಂಡುಗಳಿಂದ ಒಂದು ಭಾರಿ ವಿಮಾನಯಂತ್ರವು ನಾಶವಾಯಿತು. ಅವರೆಲ್ಲಾ ಸುರಕ್ಷಿತವಾಗಿ ವಾಪಸು ಬಂದರು; ಅವರ ವಿಮಾನಗಳು ಹಾಳಾದವು. ಅಲ್ಲಿಂದಲ್ಲಿಗೆ ಸುಮಾರು 100 ಮೈಲಿ ದೂರವಾದೀತು.

ಹಿಂದುಸ್ಥಾನದಲ್ಲಿ.

ಹಿಂದುಸ್ಥಾನದ ದೇಶೀಯ ಸೈನಿಕರು ಫ್ರಾನ್ಸಿನಲ್ಲಿ ಜಹಜು ಬಿಟ್ಟು ಇಳಿದರಷ್ಟೆ. ಅವರನ್ನು ಕುರಿತು ನಮ್ಮ ಚಕ್ರವರ್ತಿ ಸಾರ್ವಭೌಮರವರು ಅಪ್ಪಣೆಕೊಡಿಸಿರುವ ಹುಕುಮಿನ ಸಾರಾಂಶವೇನೆಂದರೆ—

ಬ್ರಿಟಿಷ್ ರಾಜ್ಯದ ಇಜ್ಜತ್ತನ್ನು (ಕೀರ್ತಿ ಪರಾಕ್ರಮಗಳನ್ನು) ನಮ್ಮ ಹಿಂದುಸ್ಥಾನದ ಸಿಪಾಯಿಗಳೆಲ್ಲಾ ಕಾಪಾಡುತ್ತಾರೆಂದು ಎದುರುನೋಡುವೆವು. ನಮ್ಮ ಶತ್ರುಗಳು ಬೇಕೆಂದು ಮೇಲೆಬಿದ್ದು ಬಂದಿದಾರೆ. ಅವರು ಮಹಾ ಕಠಿಣರಾತ್ರಿಗಳು ಮತ್ತು ನಿಷ್ಕರುಣಿಗಳು. ನಮ್ಮ ಚಕ್ರಾಧಿಪತ್ಯದ ಸಮಸ್ತ ವಿಭಾಗಗಳಿಂದ ಬಂದಿರತಕ್ಕ ನಮ್ಮ ಸೈನಿಕರ ಜೊತೆಯಲ್ಲಿ ಭುಜಕ್ಕೆ ಭುಜವನ್ನು ತಾಗಿಸಿಕೊಂಡು ನಿಂತು ಶತ್ರುವಿನ ಮೇಲೆ ಯುದ್ಧಮಾಡುವುದಕ್ಕೆ ಭಕ್ತಿಯುಳ್ಳ ಪರಾಕ್ರಮಿಗಳಾದ ಹಿಂದುಸ್ಥಾನದ ನಮ್ಮ ಸೈನಿಕರು ತುಂಬಾ ಕುತೂಹಲಪಡುತ್ತಿರುವುದನ್ನೂ ಸಿದ್ಧರಾಗಿರುವುದನ್ನೂ ನಾವು ಚೆನ್ನಾಗಿ ತಿಳಿದಿರುತ್ತೇವೆ. ನಮ್ಮ ಆಲೋಚನೆಗಳಲ್ಲೂ ನಮ್ಮ ಪ್ರಾರ್ಥನೆಗಳಲ್ಲೂ ನಿಮ್ಮನ್ನು ಸರ್ವದಾ ಸ್ಮರಿಸಿಕೊಳ್ಳುತ್ತಾ ಇದ್ದೇವೆಂಬುವುದನ್ನು ಖಂಡಿತವಾಗಿ ತಿಳಿದುಕೊಳ್ಳಿ. ನಮ್ಮ ಹಿಂದುಸ್ಥಾನದ ಸೈನ್ಯಕ್ಕೆ ಪುರಾತನ ಕಾಲದಿಂದ ಬಂದಿರುವ ಕೀರ್ತಿಯೂ ಘನತೆಯೂ ಈಗ ನಿಮ್ಮಿಂದ ಕಾಪಾಡಲ್ಪಟ್ಟು ಬೆಳವಣಿಗೆಯನ್ನು ಹೊಂದಬೇಕು. ಹಿಂದೆ ಅನೇಕ ವೇಳೆ ನಮ್ಮ ಪರಾಕ್ರಮವನ್ನು ತೋರಿಸಿ ಪ್ರಖ್ಯಾತಿಯನ್ನು ಪಡೆದಿರುತ್ತೀರಿ. ಅಂಥಾ ಮಹಿಮಾಸ್ಪದವಾದ ಕೀರ್ತಿಯ ಪ್ರಕಾಶನವನ್ನು ವೃದ್ಧಿಮಾಡುವುದಕ್ಕೋಸ್ಕರ ಈಗ ನೀವು ನುಗ್ಗಿಹೋಗಿ ನಮ್ಮ ಶತ್ರುಗಳ ಮೇಲೆ ನಿಮ್ಮ ಸ್ವಭಾವಸಿದ್ಧ ಪರಾಕ್ರಮವನ್ನು ತೋರಿಸುವವರಾಗಬೇಕೆಂಬುವುದೇ ನಮ್ಮ ಆಜ್ಞೆಯಾಗಿದೆ.

ಎಮ್‌ಡೆನ್ ಎಂಬ ಶತ್ರುವಿನ ಜಹಜು ಎಲ್ಲಿ ಇದೆಯೋ ಇನ್ನೂ ಗೊತ್ತಾಗಲಿಲ್ಲ. ಅದನ್ನು ಹುಡುಕುವುದಕ್ಕಾಗಿ ಜಪಾನ್‌ನವರ ಒಂದು ಯುದ್ಧದ ಹಡಗು ಕಳೆದ ವಾರ ಮದರಾಸಿಗೆ ಬಂದಿತ್ತು. ಜರ್ಮನಿಯವರಿಗೆ ಸೇರಿದ ಇನ್ನೂ ನಾಲ್ಕೈದು ಹಡಗುಗಳು ಇರುವುದಾಗಿಯೂ, ಅವುಗಳ ಪೂರ್ವೋತ್ತರವೇನೂ ತಿಳಿಯಲಿಲ್ಲವೆಂದೂ ಹೇಳಲಾಗಿದೆ.

ನಮ್ಮ ವೈಸ್‌ರಾಯಿ ಲಾರ್ಡ್ ಹಾರ್ಡಿಂಗ್‌ರವರ ಕುಮಾರನು ಯುದ್ಧಭೂಮಿಯಲ್ಲಿ ಶತ್ರುಗಳ ಮೇಲೆ ಬಹಳ ಪರಾಕ್ರಮದಿಂದ ಯುದ್ಧ ಮಾಡುವಾಗ್ಗೆ ಗಾಯಪಟ್ಟನಷ್ಟೆ. ಈಗ ಆತನಿಗೆ ಗಾಯಗಳು ವಾಸಿಯಾಗುತ್ತಿರುವುದಾಗಿ ತಿಳಿದು ಬಂದಿದೆ. ಚಕ್ರವರ್ತಿ ಸಾರ್ವಭೌಮರವರು ಆತನಿಗೆ ಆತನ ಪರಾಕ್ರಮವನ್ನು ಮೆಚ್ಚಿ ಒಂದು ಬಿರುದನ್ನು ದಯಪಾಲಿಸಿರುತ್ತಾರೆಂದು ತಿಳಿಸಲು ಸಂತೋಷವಾಗುತ್ತದೆ.

ಇತರ ವಿಷಯಗಳು.

ಜರ್ಮನಿಯ ಸಾಮಂತರಾಜರಾದ ರೊಮೇನಿಯಾ ದೊರೆಯವರು ಕಳೆದ ವಾರ ಕಾಲವಾದರು. ಬೇರೊಬ್ಬ ಜರ್ಮನಿ ರಾಜಕುಮಾರನು ದೊರೆಯಾಗುವನು. ಹೀಗೆ ದೊರೆಗಳು ಬದಲಾವಣೆಯಾದ ಮಾತ್ರಕ್ಕೇ ರೊಮೇನಿಯಾ ರಾಜಕೀಯ ವಿದ್ಯಮಾನಗಳೇನೂ ರೂಪಾಂತರವಾಗುವ ಹಾಗಿಲ್ಲ.

ಜರ್ಮನಿಯವರ ಒಂದು ಸಬ್‌ಮೆರೀನ್ ಜಹಜು ಬಾಲ್ಟಿಕ್ ಕಡಲಿನಲ್ಲಿ ಕಳೆದ ಭಾನುವಾರದ ದಿನ ರಷ್ಯಾದವರ ಒಂದು ಸಣ್ಣ ಯುದ್ಧದ ಹಡಗನ್ನು ನಾಶಮಾಡಿರುತ್ತದೆ.

ಆಸ್ಟ್ರಿಯಾದವರಿಗೂ ಇಟಲಿಯವರಿಗೂ ಏನೋ ಮನಸ್ತಾಪಗಳುಂಟಾಗಿರುವಂತೆ ತೋರುವುದು. ಇಟಲಿಯವರು ಶತ್ರುಗಳಾಗಿ ಪರಿಣಮಿಸಿದ ಪಕ್ಷಕ್ಕೆ ಕೈಸೆರೆ ಹಿಡಿದು ಇಟ್ಟುಕೊಳ್ಳುವುದಕ್ಕಾಗಿ ಆಸ್ಟ್ರಿಯಾದವರು ಟ್ರಿಯಸ್ಟ್ ನಗರದಲ್ಲಿರುವ 1,000 ಮುಖಂಡರಾದ ಇಟಲಿ ಪ್ರಜೆಗಳ ಹೆಸರುಗಳನ್ನು ಪಟ್ಟಿಮಾಡಿಕೊಂಡಿರುವಂತೆ ಒಂದು ತಂತೀ ವರ್ತಮಾನವು ತಿಳಿಸುತ್ತದೆ.

ಪೋರ್ಚುಗಲ್ ರಾಜ್ಯವು ಜರ್ಮನಿಯ ಮೇಲೆ ಯುದ್ಧಕ್ಕೆ ಹೊರಡುವುದೆಂದು ವರ್ತಮಾನವಿದೆ.

ಟರ್ಕಿಯವರು ಡಾರ್ಡನೆಲ್ಸ್ ಎಂಬ ಜಲಮಾರ್ಗವನ್ನು ಕಟ್ಟಿಬಿಟ್ಟು ಜಹಜುಗಳ ಸಂಚಾರವನ್ನು ತಡೆದಿರುತ್ತಾರೆ. ಆದರೆ ಇವರ ಉದ್ದೇಶವೇನೋ ಇನ್ನೂ ಸರಿಯಾಗಿ ತಿಳಿಯುವುದಿಲ್ಲ.

ಇಂಪೀರಿಯಲ್ ಇಂಡಿಯಾ ರಿಲೀಫ್ ಫಂಡು.

"ವೃತ್ತಾಂತ ಪತ್ರಿಕೆ" ಆಫೀಸ್ ಚಂದಾ ಪಟ್ಟಿ.

ಹಿಂದೆ ವಸೂಲಾಗಿರುವ ಚಂದಾ	ರೂ.	164-9-0
ಮಿ॥ ಪಿ. ಗೂಲ್ಡ್, ಮೈಸೂರು	,,	25-0-0
ಸಂಜೀವಮ್ಮ, ಮೈಸೂರು	,,	0-8-0
ಜುಮ್ಲಾ ರೂಪಾಯಿ		190-1-0

ಮೈಸೂರು ಗೆಜೆಟ್ ಸಂಗ್ರಹ.

ಮೈಸೂರು ಡಿಸ್ಟ್ರಿಕ್ಟಿಗೆ ಸೇರಿದ ಬನ್ನೂರು ಮ್ಯುನಿಸಿಪಲ್ ಸರಹದ್ದಿನೊಳಗೆ ದೇವೀ ಕಿಡುಬು ಬಲಾತ್ಕರಿಸಿ ಹಾಕುವ ಕಾನೂನನ್ನು ಇದೇ ಅಕ್ಟೋಬರ್ ಲಾಗಾಯಿತು ಮೂರು ವರ್ಷಗಳ ತನಕ ಜಾರಿಗೆ ತಂದಿರುತ್ತೆ.

ಬೆಂಗಳೂರು ಸಿವಿಲ್ ಆಫೀಸರ್ ಮಿ॥ ಎಂ. ಹುಸೇನ್ ಅಲಿಯವರಿಗೆ ದಸರಾ ರಜಾ ಜೊತೆಗೆ ಹದಿನಾಲ್ಕು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಪ್ರೊ॥ ಅ॥ ಕಮಿಷನರ್ ಮ॥ ಜಿ. ರುದ್ರಪ್ಪನವರು ಅವರ ಕೆಲಸದ ಭಾರ್ಜನ್ನು ವಹಿಸಿರತಕ್ಕದ್ದು.

ಬೆಂಗಳೂರು ಸಬ್ ಜಡ್ಜ್ ಮ॥ ಎನ್. ಟಿ. ಗೋಪಾಲಯ್ಯಂಗಾರ್ರಿಗೆ ದಸರಾ ರಜಾ ಜೊತೆಗೆ ಪೂರಾ ಸಂಬಳದ ಮೇಲೆ ನಾಲ್ಕು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮ॥ ಟಿ. ಕೆ. ಲಕ್ಷ್ಮಣ ಅಯ್ಯರವರು ಛಾರ್ಜು ವಹಿಸಿಕೊಳ್ಳುವ ತನಕ ಶಿರಸ್ತೆದಾರ್ ಮ॥ ಜಿ. ಎಂ. ನರಸಿಂಹನಾಯಕರವರು ದೇವನಹಳ್ಳಿ ತಾಲ್ಲೂಕ್ ಛಾರ್ಜನ್ನು ವಹಿಸಿರತಕ್ಕದ್ದು; ಆ ಕಾಲದಲ್ಲಿ ಇವರಿಗೆ 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ವಹಿಸಿದೆ.

ಮ॥ ಎನ್. ಟಿ. ಗೋಪಾಲಯ್ಯಂಗಾರ್ರಿಗೆ ಸಬ್ ಜಡ್ಜಿ ಕೆಲಸವನ್ನು ಖಾಯಂ ಮಾಡಿ, ಹಂಗಾಮಿಯಾಗಿ ಅವರನ್ನು ಚೀಫ್ ಕೋರ್ಟ್ ರಜಿಸ್ಟ್ರಾರಾಗಿ ನೇಮಿಸಿದೆ.

2 ನೇ ಕ್ಲಾಸ್ ಮುನ್ಸಿಫ್ ಮ॥ ಕೆ. ಲಕ್ಷ್ಮೀನಾರಾಯಣಯ್ಯನವರು ಸಬ್ ಜಡ್ಜರಾಗಿ ಬದಲಿ ನೇಮಿಸಲ್ಪಟ್ಟಿದಾರೆ.

ಖಜಾನಾ ಅ॥ ಕಮಿಷನರ್ ಮಿ॥ ಮಹಮ್ಮದ್ ಪೀರ್ ಯವರು ದಯಾರ್ಫ್ತುಮಾಡುವ ಮೊಕದ್ದಮೆಗಳಲ್ಲಿ ಸಾಕ್ಷಿಗಳ ಕೈಫಿಯತ್ತನ್ನು ಸ್ವಹಸ್ತ ಇಂಗ್ಲಿಷಿನಲ್ಲಿ ಬರೆದುಕೊಳ್ಳುವ ಅಧಿಕಾರ ವಹಿಸಲ್ಪಟ್ಟಿದಾರೆ.

ಕೊಪ್ಪದ ಅಮಲ್ದಾರ್ ಮ॥ ಅಬ್ದುಲ್ ಹಕ್ ರವರಿಗೆ 2 ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರವನ್ನೂ, ಬ್ರೀಚ್ ಆಫ್ ಕಂಟ್ರಾಕ್ಟ್ ಆಕ್ಟಿಗೆ ಸಂಬಂಧಪಡುವ ಮೊಕದ್ದಮೆಗಳನ್ನು ಹಿಡಿದು ವ್ಯವಸ್ಥೆಮಾಡುವ ಅಧಿಕಾರವನ್ನೂ ಕೊಟ್ಟಿದೆ.

ಅ॥ ಕಮಿಷನರ್ ಮ॥ ಟಿ. ಜಿ. ರಾಮಅಯ್ಯರವರನ್ನು ಮೇ ತಾ. 17 ರಿಂದ 4 ನೇ ಕ್ಲಾಸಿಗೆ ಬಡ್ತಿ ಮಾಡಿದೆ.

ರೈಲ್ವೆ ಇಲಾಖೆಯಲ್ಲಿ ಅ॥ ಇಂಜನಿಯರಾಗಿರುವ ಮಿ॥ ಆರ್. ಎನ್. ವಿಚಾರ್ಜರವರಿಗೆ ದಸರಾ ರಜಾ ಜೊತೆಗೆ ನಾಲ್ಕು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮಿ॥ ಇ. ಎ. ಎಸ್. ಬೆಲ್‌ರವರು ರಜದಿಂದ ವಾಪಸು ಬಂದು ರೈಲ್ವೆ ಸಕ್ರೆಟರಿ ಮತ್ತು ರೈಲ್ವೆ ಚೀಫ್ ಇಂಜನಿಯರ್ ಕೆಲಸದ ಛಾರ್ಜನ್ನು ಮ॥ ಕೆ. ಕೃಷ್ಣಯ್ಯಂಗಾರ್ರಿಂದ ಸೆಪ್ಟಂಬರ್ ತಾ. 22 ರಲ್ಲಿ ವಹಿಸಿಕೊಂಡಿದಾರೆ. ಇದರಿಂದ ಮುಂದೆ ಹೇಳುವ ಬದಲಾವಣೆಗಳು ಹುಕುಂ ಮಾಡಲ್ಪಟ್ಟಿವೆ:—ಮ॥ ಡಿ. ಜಿ. ಧಾಣಯವರು ರೈಲ್ವೆ ಚೀಫ್ ಇಂಜನಿಯರವರ ಪರ್ಸನಲ್ ಅಸಿಸ್ಟೆಂಟರಾಗಿಯೂ, ಮಿ॥ ಎಚ್. ಡಿ. ರೈಸ್‌ರವರು ಮೈಸೂರು-ಅರಸೀಕೆರೆ ರೈಲ್ವೆ 1 ನೇ ಡಿವಿಜನ್ ಎಗ್ಸಿಕ್ಯುಟಿವ್ ಇಂಜನಿಯರಾಗಿಯೂ, ಮ॥ ಟಿ. ಕೆ. ಅರುಣಾಚಲಂ ಅಯ್ಯರವರು ಶಿವಮೊಗ್ಗಾ ಸ್ಟೈಟ್ ರೈಲ್ವೆ ಸರ್ವೆ ಛಾರ್ಜಿನ ಅ॥ ಎಗ್ಸಿಕ್ಯುಟಿವ್ ಇಂಜನಿಯರಾಗಿಯೂ ಇರತಕ್ಕದ್ದು.

ಮಾಗಡಿ ತಾಲ್ಲೂಕ್ ಅಮಲ್ದಾರ್ ಮ॥ ಎ. ರಾಜಾರಾಯರಿಗೆ ಅಕ್ಟೋಬರ್ ತಾ. 7 ರಿಂದ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಶಿರಸ್ತೇದಾರ್ ಮ॥ ಕೆ. ಕೃಷ್ಣಯ್ಯಂಗಾರ್ರು ತಾಲ್ಲೂಕ್ ಛಾರ್ಜನ್ನು ವಹಿಸಿರತಕ್ಕದ್ದು.

ತಾಲ್ಲೂಕು ವರ್ತಮಾನಗಳು.

ಕುಣಿಗಲು.—ಇಲ್ಲಿ ತಕ್ಕ ಮಟ್ಟಿಗೆ ಮಳೆಗಳಾದ್ದರಿಂದ ಪೈರು ಚೆನ್ನಾಗಿದೆ. ಇದೇ ಮಾಹೆಯ ಆರಂಭದಿಂದ ಆದ ಮಳೆಯಿಂದ ಇಲ್ಲಿನ ದೊಡ್ಡ ಕೆರೆಗೆ ಕಾಲು ಭಾಗ ನೀರು ಬಂದಿದೆ. ಈ ಗ್ರಾಮದ ಕೆಲವೆಡೆಗಳಲ್ಲಿ ಚರಂಡಿಗಳು ಸರಿಯಾಗಿಲ್ಲದಿರೋಣದರಿಂದ ಮಳೆಯ ನೀರು ಅಲ್ಲಲ್ಲಿಯೇ ಅನೇಕ ದಿನಗಳವರೆಗೂ ನಿಂತು ದುರ್ವಾಸನೆ ಹುಟ್ಟುತ್ತಿರುವುದು. ಈ ವಿಷಯದಲ್ಲಿ ಇಲ್ಲಿನ ಮುನಿಸಿಪಾಲಿಟಿಯವರು ಗಮನಕೊಟ್ಟರೆ ಒಳ್ಳೆಯದು.—ನಮ್ಮ ಸೀಮೆಯ ಅನೇಕ ತಾಲ್ಲೂಕುಗಳಲ್ಲಿ ಅಳತೆಯ ಸೇರುಗಳು, ತೂಕದ ಬೊಟ್ಟುಗಳು ಪ್ರಾಚಾರಕ್ಕೆ ಬಂದು, ವರ್ತಕರು ಅವುಗಳಲ್ಲಿ ವ್ಯಾಪಾರ ಮಾಡುತ್ತಿದ್ದಾಗ್ಗೂ ಈ ಕುಣಿಗಲು ತಾಲ್ಲೂಕಿಗೆ ಮಾತ್ರ ಈ ನಿಬಂಧನೆಯಿಲ್ಲದೆ ಹಳೆಯ ಸೇರು ಮತ್ತು ತೂಕದ ಬೊಟ್ಟುಗಳಲ್ಲಿಯೇ ವ್ಯಾಪಾರಮಾಡುತ್ತಿದಾರೆ. ಪ್ರಾಯಶಃ ಇಲ್ಲಿನ ಅಧಿಕಾರಿಗಳ ನಿಗಾ ಇನ್ನೂ ಈ ವಿಚಾರದಲ್ಲಿ ಪ್ರವೇಶಮಾಡಲಿಲ್ಲವೆಂತ ಕಾಣುತ್ತೆ.—ಕಳೆದ ತಿಂಗಳು ಆಕ್ಟಿಂಗ್ ಅಮಲ್ದಾರರು ಒಂದು ಸಭೆಯನ್ನು ಕೂಡಿಸಿ, ಈ ಕಾಲದಲ್ಲಿ ನಮ್ಮ ಬ್ರಿಟಿಷ್ ಚಕ್ರಾಧಿಪತ್ಯದಿಂದ ಜನಗಳಿಗೆ ಉಂಟಾಗಿರುವ ಸ್ವಾತಂತ್ರ್ಯ, ಧೈರ್ಯ, ನಂಬಿಕೆ, ಕ್ಷೇಮ ಮುಂತಾದವುಗಳನ್ನು ಕುರಿತು ಉಪನ್ಯಾಸಮಾಡಿ, ಈಗ ಇಂಥಾ ಸತ್ಯಸಂಧರಿಗೆ ಉಂಟಾಗಿರತಕ್ಕ ಅಪಾರವಾದ ಇಕ್ಕಟ್ಟನ್ನು ಕುರಿತು ವಿವರಿಸಿ, ಇಂಥಾ ಕಷ್ಟಕಾಲದಲ್ಲಿ ನಮ್ಮ ಇಂಡಿಯಾ ದೇಶದ ಎಲ್ಲಾ ಅರಸುಗಳೂ ಧನಿಕರೂ ಬಡವರೂ ಕೂಡ ಆತ್ಮಶಕ್ತಿಯಿಂದ ಮಾಡುತ್ತಿರುವ ಸಹಾಯಗಳನ್ನು ಕುರಿತು ವಿವರಿಸಿದ್ದಲ್ಲದೆ ಸಕಾಲದಲ್ಲಿ ನೆರೆದಿದ್ದ ಸಭಿಕರು ಕೂಡ ಅವರ ಮೇಲ್ಪಂಕ್ತಿಯನ್ನು ಅನುಸರಿಸಿ ತಂತಮ್ಮ ಕೈಲಾದ ಮಟ್ಟಿಗೂ ಯುದ್ಧಭೂಮಿಯಲ್ಲಿದ್ದುಕೊಂಡು ಕಷ್ಟಪಡತಕ್ಕವರ ಸಂಸಾರ ಮಕ್ಕಳ ಪೋಷಣಾರ್ಥವಾಗಿಯೂ, ಯುದ್ಧದಲ್ಲಿ ಗಾಯಪಟ್ಟವರ ಸಂರಕ್ಷಣೆಗಾಗಿಯೂ ದ್ರವ್ಯಸಹಾಯಮಾಡಬೇಕೆಂದು ಕೇಳಿದ್ದರ ಮೇಲೆ ಕೆಲವರು ಆಗಲೇ ತಮ್ಮ ಶಕ್ತ್ಯನುಸಾರ ದ್ರವ್ಯಸಹಾಯವನ್ನು ಮಾಡಿರುತ್ತಾರೆ; ಇನ್ನು ಕೆಲವರು ಚಂದಾ ಪಟ್ಟಿಯಲ್ಲಿ ತಮ್ಮ ಹೆಸರುಗಳನ್ನು ದಾಖಲ್ಮಾಡಿರುತ್ತಾರೆ.

ಹುಣಸೂರು.—ಅನೇಕ ದಿನಗಳಿಂದ ತಡೆದಿದ್ದ ಮಳೆಯು ಕಳೆದ ವಾರವೆಲ್ಲಾ ಸ್ವಲ್ಪ ಹೆಚ್ಚು ಕಡಮೆ ಧಾರಾಳವಾಗಿ ಬಂತು. ಸಣ್ಣಪುಟ್ಟ ಕೆರೆ, ಹೊಂಡಗಳೆಲ್ಲಾ ಒಂದೇ ಮಳೆಗೆ ಭರ್ತಿಯಾಯಿತು. ಟವನ್ ಆರೋಗ್ಯವಾಗಿದೆ. ಧಾರಣೆವಾಸಿಗಳು ಏರುತ್ತವೆ.—ಸರ್ಕಾರದವರು ನಿಯಮಿಸಿ ಮಾಡಿರುವ ಹೊಸ ಸೇರುಗಳೂ ತೂಕದ ಬಟ್ಟುಗಳೂ ಬಂದಿದ್ದರೂ ಕೆಲವರು ಮಾತ್ರ ಅದನ್ನು ಉಪಯೋಗಿಸುತ್ತಾರೆ. ಪೋಲೀಸ್ ಅಧಿಕಾರಿಗಳು ದರ್ಶನವಿಟ್ಟು ವಿಚಾರಿಸಿ ಕ್ರಮಕ್ಕೆ ತರುವುದು ಉತ್ತಮ.—ಇಲ್ಲಿನ ಪೋಸ್ಟ್ ಮಾಸ್ಟರು ಸಭ್ಯರಾಗಿಯೂ, ತಮ್ಮ ಕೆಲಸಗಳನ್ನು ಕ್ರಮವಾಗಿಯೂ, ಮುತುವರ್ಜಿಯಿಂದಲೂ ನಡಿಸುತ್ತಾ ಸರ್ಕಾರಿ ಮತ್ತು ರೈತಾಪಿ ಜನಗಳೊಂದಿಗೆ ಸ್ನೇಹಪರರಾಗಿಯೂ ಇರುವರು. ಸರಿಯಾದ ಸಪ್ಲೈ ಮಾಡಿ ಇನ್ನೊಬ್ಬ ಗುಮಾಸ್ತೆಯನ್ನು ಇಲಾಖೆಯವರು ಕಳುಹಿಸಿದರೆ ಇನ್ನೂ ತೃಪ್ತಿಕರವಾಗಿಯೂ ಜಾಗ್ರತೆಯಲ್ಲೂ ಇಲ್ಲಿನ ಕೆಲಸಗಳ್ಯಾವತ್ತೂ ನಡೆಯುವದರಲ್ಲಿ ಅನುಮಾನವಿಲ್ಲ.—ಮೊದಲು ಇಲ್ಲಿದ್ದ ಅಮಲ್ದಾರ್ ಮ॥ ಆರ್. ಏ. ನರಸಿಂಹಯ್ಯಂಗಾರ್ರವರು ಇಲ್ಲಿಂದ ಮೈಸೂರಿಗೆ ಹೊರಡುವುದಕ್ಕೆ ಮುಂಚೆ ತಾಲ್ಲೂಕ್ ಕಚೇರಿ ನೌಕರಮಾನೇರರೂ, ಕೋಆಪರೆಟಿವ್ ಸೊಸೈಟಿಯವರೂ, ಟೆನಿಸ್ ಕ್ಲಬ್ಬಿನವರೂ ಡಿನ್ನರ್ ಮತ್ತು ಟೀ ಪಾರ್ಟಿಗಳನ್ನು ನಡಿಸಿದ್ದಲ್ಲದೆ ತಮ್ಮ ತಮ್ಮ ಮನೆಗಳಿಗೆ ಕರೆಯಿಸಿಕೊಂಡು ಹಿಂದೂ ಮುಸಲ್ಮಾನ್ ಪ್ರಜೆಗಳೇನಕರು ಅವರಲ್ಲಿ ತಮಗಿದ್ದ ಭಕ್ತಿ ವಿಶ್ವಾಸಗಳನ್ನು ಮರ್ಯಾದಾಪೂರ್ವಕವಾಗಿ ಪ್ರಕಾಶಪಡಿಸಿದ್ದಲ್ಲದೆ ಮೋಟರ್ ಹೊರಡುವಾಗ್ಗೆ ತಾಲ್ಲೂಕು ಕಚೇರಿಯ ಮುಂಭಾಗದಲ್ಲಿ ಸರ್ಕಾರಿ ನೌಕರರೂ, ಅಮಲ್ದಾರರೂ, ಪೊ ಇನ್ಸ್‌ಪೆಕ್ಟರವರೂ, ಖಾಸಗೀ ದೊಡ್ಡ ಮನುಷ್ಯರೂ, ಶೆಟ್ಟಿ ವರ್ತಕರೂ ಕಾದಿದ್ದು ತಮ್ಮ ಅಭಿನಂದನಗಳನ್ನು ಸಲ್ಲಿಸಿ, ಅವರಿಗೆ ಸುಖಪ್ರಯಾಣವಾಗಲೆಂದು ಹಾರೈಸಿದರು. ಇನ್ನೂ ಕೆಲವರು ಅವರ ಸಂಗಡ ಮೋಟರಿನಲ್ಲಿ ಮೈಸೂರು ವರೆಗೂ ಹೋಗಿ ಬಿಟ್ಟು ಬಂದರು. ಇಂಥಾ ಉತ್ತಮರಾದ ಅಮಲ್ದಾರರಿಗೆ ಇಲ್ಲಿಂದ ವರ್ಗವಾದದ್ದಕ್ಕಾಗಿ ಇಲ್ಲಿನ ಪ್ರಜೆಗಳು ತುಂಬಾ ದುಃಖಪಡುವರು.

ಮೈಸೂರು ಜೈನ ಬೋರ್ಡಿಂಗ್ ಹೋಮ್.

ಶ್ರೀಮನ್ ಯುವರಾಜರವರು ದಯಮಾಡಿದ್ದು.

ರಾಜಧಾನಿಯ ಸಾಹುಕಾರ್ ಮ|| ಎಂ. ಎಲ್. ವರ್ಧಮಾನಯ್ಯನವರು ತಮ್ಮ ತಂದೆಯವರ ಹೆಸರಿನಲ್ಲಿ ಸ್ಥಾಪಿಸಿ ನಡಿಸುತ್ತಿರುವ ಜೈನ್ ಬೋರ್ಡಿಂಗ್ ಹೋಮಿಗೆ ಕಳೆದ ಶುಕ್ರವಾರ ಬೆಳಗ್ಗೆ ಶ್ರೀಮದ್ಯುವರಾಜರವರು ಸರ್ದಾರ್ ಎಂ. ಕಾಂತರಾಜೆ ಅರಸಿನವರ ಸಮೇತ ದಯಮಾಡಿದರು. ಬೋರ್ಡಿಂಗ್ ಹೋಮಿನ ಸಮಸ್ತ ಭಾಗಗಳನ್ನೂ ರಾಜಯೋಗ್ಯವಾಗಿ ನಾನಾ ಪ್ರಕಾರ ನೇತ್ರಾನಂದಕರವಾಗಿ ಅಲಂಕರಿಸಿದ್ದರು. ಬೋರ್ಡಿಂಗ್ ಹೋಮಿನ ವಿದ್ಯಾರ್ಥಿಗಳು ಯುವರಾಜರವರಿಗೆ ಸುಸ್ವಾಗತವನ್ನು ಬಯಸಿ ಹಲವು ಸಂತೋಷಕಾರ್ಯಗಳನ್ನು ನಡಿಸಿದ ಬಳಿಕ ಮ|| ವರ್ಧಮಾನಯ್ಯನವರು ಅವರನ್ನು ಕುರಿತು ಒಂದು ಅಡ್ರೆಸ್ಸನ್ನು ಓದಿ ಒಪ್ಪಿಸಿದರು. ಅದರ ಮುಖ್ಯಾಭಿಪ್ರಾಯಗಳೇನೆಂದರೆ—

ಪ್ರಜೆಗಳ ಕ್ಷೇಮಾಭ್ಯುದಯಕ್ಕಾಗಿ ತಾವು ತಮ್ಮ ಸಮಯ ಸಾಮರ್ಥ್ಯಗಳನ್ನು ವಿನಿಯೋಗಿಸುತ್ತಿರುವುದು ಮಹದಾನಂದಕರನಾಗಿದೆ ತಾವು ಈ ನಿಲಯಕ್ಕೆ ದಯಮಾಡಿದ್ದನ್ನು ನೋಡಿ ಈ ಸಂಸ್ಥಾನದ ಸಮಸ್ತ ಜೈನ ಪ್ರಜೆಗಳೂ ಪರಮ ಸಂತೋಷಭರಿತರಾಗಿದಾರೆ. ಜೈನ ವಿದ್ಯಾರ್ಥಿಗಳಿಗೆ ವಿದ್ಯಾ ಸೌಲಭ್ಯಗಳನ್ನು ಒದಗಿಸುವುದಕ್ಕಾಗಿ 1909 ನೇ ಇಸವಿ ಜೂನ್ ತಿಂಗಳಲ್ಲಿ ಈ ವಿದ್ಯಾರ್ಥಿ ನಿಲಯವು ನಮ್ಮ ಜನಕ ತಂದೆ ಮ|| ಮೋತೀಖಾನೆ ಲಕ್ಷ್ಮೀಪತಯ್ಯನವರ ಜ್ಞಾಪಕಾರ್ಥವಾಗಿ ಸ್ಥಾಪಿಸಲ್ಪಟ್ಟು, ಕ್ರಮೇಣ ಅಭಿವೃದ್ಧಿ ಹೊಂದುತ್ತಾ ಬಂದಿದೆ. ಈಗ ಈ ಹೋಮಿನಲ್ಲಿ 35 ಮಂದಿ ವಿದ್ಯಾರ್ಥಿಗಳಿದಾರೆ. ಇವರು ಕಾಲೇಜ್ ಮತ್ತು ಹೈ ಸ್ಕೂಲ್ ತರಗತಿಗಳಲ್ಲಿ ವಿದ್ಯೆ ಕಲಿಯುತ್ತಿರುವರು. ಇದುವರೆಗೆ ಒಬ್ಬನು ಬಿ. ಎ. ಪರೀಕ್ಷೆಯಲ್ಲೂ, ಇಬ್ಬರು ಎಫ್. ಎ ಪರೀಕ್ಷೆಯಲ್ಲೂ, 7 ಮಂದಿ ಲೋಅರ್ ಸೆಕಂಡರಿ ಪರೀಕ್ಷೆಯಲ್ಲೂ ತೇರ್ಗಡೆಯಾಗಿದಾರೆ. ಇಬ್ಬರು ಶೀಕ್ಷಾರಿಗೆ ತರಪೇತಾಗಿದಾರೆ. ನಾಲ್ಕು ಮಂದಿ ಬ್ರಾಹ್ಮಣ ವಿದ್ಯಾರ್ಥಿಗಳು ವೇತನ ಪಡೆಯುತ್ತಿರುವರು. ಈ ಹೋಮಿನಲ್ಲಿ ಸಂಸ್ಕೃತ ಪಾಠಶಾಲೆಯನ್ನು ಇಟ್ಟಿದೆ; ಅದರಲ್ಲಿ 40 ಮಂದಿ ಓದುತ್ತಿದಾರೆ. ಸರ್ದಾರ್ ಕಾಂತರಾಜೆ ಅರಸಿನವರು ಈ ಹೋಮಿನ ಪುರೋಭಿವೃದ್ಧಿಯಲ್ಲಿ ತುಂಬಾ ಉತ್ಸಾಹಶಾಲಿಗಳಾಗಿ ಒಳ್ಳೊಳ್ಳೆ ಸಲಹೆಗಳನ್ನು ಕೊಡುತ್ತಾ ಬಂದಿರುವುದಕ್ಕಾಗಿ ಅವರಿಗೆ ನಾನು ತುಂಬಾ ಕೃತಜ್ಞನಾಗಿದೇನೆ. ತಾವು ಕೃಪೆಯಿಟ್ಟು ಇಲ್ಲಿಗೆ ದಯಮಾಡಿ ನಮ್ಮ ಜೈನ ಪ್ರಜೆಗಳ ವಿಷಯದಲ್ಲೂ ಈ ಹೋಮಿನ ವಿಷಯದಲ್ಲೂ ತಮಗಿರುವ ಪ್ರೀತಿಯನ್ನು ಪ್ರಕಾಶಪಡಿಸಿರುತ್ತೀರಿ. ಇದಕ್ಕಾಗಿ ನಾವು ತಮ್ಮನ್ನು ಎಷ್ಟು ಕೊಂಡಾಡಿದರೂ ಸಾಲದ್ದಾಗಿದೆ ಎಂಬೀ ಸಂಗತಿಗಳನ್ನು ಅರಿಕೆ ಮಾಡಿದರು.

ಶ್ರೀಮದ್ಯುವರಾಜರವರು ಪ್ರತ್ಯುತ್ತರವಾಗಿ ಅಪ್ಪಣೆ ಕೊಡಿಸಿದ್ದೇನೆಂದರೆ—ಈ ದಿನ ನೀವು ನಮಗೆ ಸುಸ್ವಾಗತವನ್ನು ಬಯಸಿದ್ದು ತುಂಬಾ ಸಂತೋಷಕರವಾಗಿದೆ; ಇದಕ್ಕಾಗಿ ನಿಮ್ಮನ್ನು ವಂದಿಸಲು ನಮಗೆ ಬಲು ಹರ್ಷವಾಗುವುದು. ಜೈನ ಮತಸ್ಥರು ಪ್ರಾಣಿವರ್ಗಗಳ ಮೇಲೆ ತುಂಬಾ ಕನಿಕರವುಳ್ಳವರೆಂಬುವುದು ಲೋಕಪ್ರಸಿದ್ಧವಾಗಿದೆ. ನೀವು ಆ ನಿಮ್ಮ ಪ್ರಾಚೀನವಾದ ಸಂಕಲ್ಪಗಳನ್ನು ಕಾರ್ಯತಃ ಆಚರಣೆಯಲ್ಲಿ ತರಲು ಸಾಹಸಪಡುತ್ತಿರುವುದನ್ನು ನೋಡಿ ನಮಗೆ ತುಂಬಾ ಆನಂದವಾಗುತ್ತದೆ. ನೀವು ನ್ಯಾಯವಾದ ಮಾರ್ಗದಲ್ಲಿ ಧರ್ಮಕಾರ್ಯವನ್ನು ನಡಸುತ್ತಿದೀರಿ. ಮತ್ತು ವಿದ್ಯಾರ್ಥಿಗಳಿಗೆ ನೀವು ಮಾಡುತ್ತಿರುವ ಸಹಾಯವು ಅಪರಿಮಿತವಾದ ಪ್ರಯೋಜನವನ್ನು ಉಂಟುಮಾಡತಕ್ಕದ್ದಾಗಿದೆ. ಮ|| ವರ್ಧಮಾನಯ್ಯನವರೇ, ಈ ಭಾಗದಲ್ಲಿ ನಾವು ನಿಮ್ಮ ಕೂಡ ಸಂತೋಷಪಡುವೆವು ಎಂಬೀ ರೀತಿ ಅಪ್ಪಣೆ ಕೊಡಿಸಿ, ಮ|| ವರ್ಧಮಾನಯ್ಯನವರ ಕೂಡ ಹೋಮಿನ ಎಲ್ಲಾ ಭಾಗಗಳನ್ನೂ ದೇವಸ್ಥಾನವನ್ನೂ ಪರಾಂಬರಿಸಿ ಎಲ್ಲಾ ವಿದ್ಯಮಾನಗಳನ್ನೂ ತಿಳಿದು ಸಂತೋಷಪಡುತ್ತಾ ಬೀಳ್ಕೊಂಡು ತೆರಳಿದರು.

ಯುದ್ಧವೂ ಮತ್ತು ವ್ಯಾಪಾರ.

ಯೂರೋಪ್ ಖಂಡದಲ್ಲಿ ಮಹತ್ತಾದ ಯುದ್ಧವು ಸಂಭವಿಸಿರುತ್ತೆಂದು ನಮ್ಮ ವಾಚಕರಿಗೆಲ್ಲಾ ಗೊತ್ತಾಗಿರುತ್ತೆ. ಮತ್ತು ಈ ಘೋರ ಕದನವು ಈಗಾಗಲೇ ಪರಿಣಾಮವಾಗುವಂತೆ ಕಾಣಬರುವುದಿಲ್ಲವೆಂದು ಹೇಳುತ್ತಿದಾರೆ.

ಬಹಳ ದಿನಗಳಿಂದಲೂ ಇಂಗ್ಲೆಂಡ್, ಆಸ್ಟ್ರಿಯ ಮತ್ತು ಜರ್ಮನಿ, ಈ ದೇಶಗಳ ವ್ಯಾಪಾರವು ಅನ್ಯೋನ್ಯವಾಗಿ ನಡೆದು, ಈ ಮೂರು ದೇಶಗಳಿಂದಲೂ ಆಮದುವಸ್ತುಗಳು ಒಬ್ಬರಿಂದೊಬ್ಬರಿಗೆ ನಡೆದು ಬರುತ್ತಲಿತ್ತು. ಈಗಲಾದರೋ ಯುದ್ಧದ ಪ್ರಯುಕ್ತ ಜರ್ಮನೀ ಮತ್ತು ಆಸ್ಟ್ರಿಯಾ ದೇಶದಲ್ಲಿ ತಯಾರಾಗಿ ಇಂಗ್ಲೆಂಡಿನಲ್ಲಿ ಮತ್ತು ಪ್ರಪಂಚದ ಇತರ ಭಾಗಗಳಲ್ಲಿಯೂ ಮಾರಾಟಕ್ಕೆ ಸಿಕ್ಕುತ್ತಿದ್ದ ವಸ್ತುಗಳು ಆ ದೇಶಗಳಿಂದ ರಫ್ತಾಗದೇ ನಿಂತು ಹೋಗಿವೆ ಈ ಕಾರಣದಿಂದಲೂ ಮತ್ತು ಶತ್ರುಪಕ್ಷದವರ ವ್ಯಾಪಾರವನ್ನು ಅಡಗಿಸಿ, ಈಗ ಸಿಕ್ಕಿರುವ ಸಮಯದಲ್ಲಿ ತಮ್ಮದನ್ನು ವೃದ್ಧಿಮಾಡಿಕೊಳ್ಳಬೇಕೆಂಬ ಉತ್ಸಾಹದಿಂದಲೂ ಇಂಗ್ಲೆಂಡಿನಲ್ಲಿ ವ್ಯಾಪಾರದಲ್ಲಿ ಸಮರ್ಥರಾದ ಮತ್ತು ಹಣವಂತರಾದ ವರ್ತಕರೆಲ್ಲಾ ಸೇರಿ, ಊಹಾಪೋಹಜ್ಞಾನದಿಂದ ಚೆನ್ನಾಗಿ ಚರ್ಚಿಸಿ ಜರ್ಮನಿ ಮತ್ತು ಆಸ್ಟ್ರಿಯಾ ರಾಷ್ಟ್ರಗಳಲ್ಲಿ ತಯಾರಾಗಿ ಬಾಕಿ ದೇಶಗಳಿಗೆ ಕಳುಹಿಸಲ್ಪಡುತ್ತಿದ್ದ ವಸ್ತುಗಳನ್ನೆಲ್ಲಾ ಈ ದೇಶದಲ್ಲಿಯೇ ತಯಾರುಮಾಡಿ ತಮ್ಮ ವ್ಯಾಪಾರವನ್ನು ವಿಶೇಷವಾಗಿ ಅಭಿವೃದ್ಧಿಗೆ ತರಬೇಕೆಂದು ಕುತೂಹಲಪಟ್ಟು ಪ್ರಯತ್ನಗಳನ್ನು ಶ್ಲಾಘ್ಯವಾದ ರೀತಿಯಲ್ಲಿ ಪ್ರಾರಂಭಿಸಿರುತ್ತಾರೆ. ಇಂಗ್ಲೀಷು ಜನರು ಸಮುದ್ರಸಾಮ್ರಾಜ್ಯವನ್ನು ಪಡೆದಿರುವುದರಿಂದ ಶತ್ರುಗಳಿಗೆ ಸೇರಿದ ಹಡಗುಗಳನೆಲ್ಲಾ ಹಿಡಿದು, ಆಯಾ ಶತ್ರು ರಾಜ್ಯಗಳಿಂದ ವ್ಯಾಪಾರ ವಸ್ತುಗಳು ಹೊರಗೆ ಹೋಗದಂತೆಯೂ ಮತ್ತು ಆಹಾರ ಮುಂತಾದ ವಸ್ತುಗಳು ಜರ್ಮನೀ ಮತ್ತು ಆಸ್ಟ್ರಿಯಾ ದೇಶದೊಳಕ್ಕೆ ಹೋಗದಂತೆಯೂ ಬಹಳ ಜಾಗರೂಕತೆಯಿಂದ ನೋಡಿಕೊಳ್ಳುತ್ತಿದಾರೆ ಶೀಘ್ರದಲ್ಲಿಯೇ ಈ ವರ್ತಕರೆಲ್ಲರೂ ಕೃತಕೃತ್ಯರಾಗುತ್ತಾರೆಂಬುವುದರಲ್ಲಿ ಶಂಕೆ ಏನೂ ಇರುವುದಿಲ್ಲ. ಈ ಸಂದರ್ಭದಲ್ಲಿ ನಮ್ಮ ದೇಶದವರೂ ಮನಸ್ಸು ಮಾಡಿದರೆ ಒಂದು ಕಾರ್ಖಾನೆಯನ್ನು ಮೈಸೂರು ದೇಶದಲ್ಲಿ ಶಾಶ್ವತಪಡಿಸಬಹುದು; ಈ ಕಾರ್ಖಾನೆಯನ್ನು ಹೊಸದಾಗಿ ನಿರ್ಮಿಸಬೇಕಾಗಿಲ್ಲ. ನಮ್ಮ ದೇಶದಲ್ಲಿದೆ. ಇದನ್ನು ಈ ಸಮಯದಲ್ಲಿ ಅಭಿವೃದ್ಧಿಗೆ ತರಬಹುದು. ಹೀಗೆ ಮಾಡಬೇಕಾದರೆ ನಮ್ಮ ದೇಶದವರೆಲ್ಲರೂ ಆ ಕಾರ್ಖಾನೆಯಲ್ಲಿ ತಯಾರುಮಾಡುವ ಮತ್ತು ಪ್ರತಿ ನಿತ್ಯವೂ ನಾವುಗಳು ಉಪಯೋಗಿಸುವ ಒಂದು ಸಣ್ಣ ಪದಾರ್ಥವನ್ನು ಕೊಂಡುಕೊಳ್ಳಲು ಮನಸ್ಸು ಮಾಡಬೇಕು ಇದು ಕಷ್ಟವಲ್ಲ. ಅಪಾರವಾಗಿ ದುಡ್ಡು ಖರ್ಚು ಮಾಡಬೇಕಾಗಿಲ್ಲ. ದೇಶವಾತ್ಸಲ್ಯವಿರುವ ಪ್ರತಿಯೊಬ್ಬನೂ ಈ ಕೆಲಸವನ್ನು ಮಾಡಬೇಕು.

ಬಹಳ ದಿನಗಳಿಂದಲೂ ನಮ್ಮ ದೇಶಕ್ಕೆ ಜರ್ಮನೀ ಮತ್ತು ಆಸ್ಟ್ರಿಯಾ ರಾಷ್ಟ್ರಗಳಿಂದ ಸೀಸದ ಕಡ್ಡಿಗಳೂ ಮತ್ತು ಪೆನ್ ಹೋಲ್ಡರ್‌ಗಳೂ (ಮುಳ್ಳು ಇಲ್ಲದ ಬರೀ ಬರವಣಿಗೆ ಕಡ್ಡಿ) ಲಕ್ಷಾಂತರವಾಗಿ ತರಿಸಲ್ಪಡುತ್ತಲಿವೆ ಸೀಸದ ಕಡ್ಡಿಗಳನ್ನು ನಮ್ಮ ದೇಶದಲ್ಲಿ ತಯಾರುಮಾಡುವುದು ಈಗ ಸ್ವಲ್ಪ ಕಷ್ಟವಾಗಿ ಕಾಣುತ್ತೆ. ಆದರೆ ಪೆನ್ ಹೋಲ್ಡರ್‌ಗಳನ್ನು ನಮ್ಮ ದೇಶದಲ್ಲಿ ಬಹಳ ಅಂದವಾಗಿಯೂ ಬಾಳಿಕೆಬರುವಂತೆಯೂ ತಯಾರುಮಾಡುತ್ತಿದಾರೆ. ಇದು ಸ್ವಲ್ಪ ಮಂದಿ ಜನರಿಗೆ ಗೊತ್ತಿರಬಹುದು.

ಚನ್ನಪಟ್ಟಣದಲ್ಲಿ ಅನೇಕ ವಿಧವಾದ ಬಣ್ಣದ ಸಾಮಾನುಗಳನ್ನು ತಯಾರು ಮಾಡುತ್ತಾರೆ. ಇದರೊಡನೆ ಪೆನ್ ಹೋಲ್ಡರ್‌ಗಳನ್ನು ತಯಾರುಮಾಡುತ್ತಾರೆ. ಇವುಗಳು ಮುಳ್ಳಿನ ಸಹಿತ ಬರೆಯಲು ತುಂಬಾ ಅನುಕೂಲವಾಗಿಯೂ ಮತ್ತು ನೋಡುವುದಕ್ಕೆ ಮನೋಹರವಾಗಿಯೂ ಇರುತ್ತವೆ. ನಮ್ಮ ದೇಶದವರೆಲ್ಲಾ ಇದನ್ನು ಅಭಿವೃದ್ಧಿಪಡಿಸಬೇಕು.

ಆದರೆ ಈಗಿನ ಖರೀದಿಯು ಬಹಳ ಹೆಚ್ಚಾಗಿರುವಂತೆ ಕಾಣುತ್ತೆ. ಆದ್ದರಿಂದ ಬಹಳ ಜನಗಳು ಈ ವಸ್ತುವನ್ನು ಪೋಷಿಸುವಂತೆ ಕಾಣುವುದಿಲ್ಲ. ಜನರು ಹೆಚ್ಚಾಗಿ ಕೊಳ್ಳಲು ಪ್ರಾರಂಭಿಸಿದರೆ ಕಾರ್ಖಾನೆಯವರು ಕ್ರಯವನ್ನು ಕಡಮೆ ಮಾಡುತ್ತಾರೆಂಬುವುದರಲ್ಲಿ ಸಂಶಯವಿಲ್ಲ. ಈ ಮಾದರೀ ಪದಾರ್ಥಗಳನ್ನು ಎಷ್ಟು ಎಷ್ಟು ಹೆಚ್ಚಾಗಿ ತಯಾರುಮಾಡುತ್ತಾರೋ ಅಷ್ಟಷ್ಟು ಸುಲಭಕ್ರಯದಲ್ಲಿ ಮಾಡಬಹುದು; ಮತ್ತು ಅಷ್ಟಷ್ಟು ಲಾಭವನ್ನೂ ಸಂಪಾದಿಸಬಹುದು. ಆದ್ದರಿಂದ ಕಾರ್ಖಾನೆಯವರು ಕ್ರಯವನ್ನು ಕಡಮೆಮಾಡಿದರೆ ಜನರು ಹೆಚ್ಚಾಗಿ ಕೊಳ್ಳಲು ಅನುಕೂಲವಾಗಿ ಅದರ ಮೂಲಕ ವ್ಯಾಪಾರವನ್ನು ಅಭಿವೃದ್ಧಿಗೆ ತರಬಹುದು

ಈ ವಿಷಯದಲ್ಲಿ ನಮ್ಮ ಸರ್ಕಾರದವರು ಒಂದು ಸಣ್ಣದಾದ ಸಹಾಯವನ್ನು ಮಾಡಬಹುದು. ಇದು ಆ ಇಲಾಖೆಯನ್ನು ವಹಿಸಿರುವ ಅಧಿಕಾರಿಗಳ ಚಿತ್ತಕ್ಕೆ ಬರಬೇಕು. ಮೈಸೂರು ದೇಶದ ಸರ್ಕಾರದ ಕಛೇರಿ ಮುಂತಾದ ಸ್ಥಳಗಳಲ್ಲಿ ಉಪಯೋಗಿಸುವ ಪೆನ್ ಹೋಲ್ಡರ್‌ಗಳೆಲ್ಲವೂ ಈಗ ಪರದೇಶದಿಂದ ಬರತಕ್ಕವುಗಳಾಗಿವೆ. ಐದು ವರ್ಷಗಳ ಪರ್ಯಂತರವಾದರೂ ನಮ್ಮ ಸರ್ಕಾರದವರು ಚೆನ್ನಪಟ್ಟಣದಲ್ಲಿ ತಯಾರಾದ ಪೆನ್ ಹೋಲ್ಡರುಗಳನ್ನು ಸರ್ಕಾರಕ್ಕೆ ಬೇಕಾಗುವಷ್ಟು ಕೊಳ್ಳುತ್ತೇವೆಂದು ಉದಾರಮನಸ್ಸಿನಿಂದ ಭರವಸೆಕೊಟ್ಟರೆ ನಮ್ಮ ದೇಶದಲ್ಲಿ ಒಂದು ಕಾರ್ಖಾನೆಯನ್ನು ಶಾಶ್ವತಗೊಳಿಸಬಹುದು.

ಲಂಡನ್ ಪಟ್ಟಣದ ಕೆಲವು ವರ್ತಕರು ಚೆನ್ನಪಟ್ಟಣದಲ್ಲಿ ತಯಾರಾದ ಪೆನ್ ಹೋಲ್ಡರುಗಳನ್ನು ಬಹಳ ಕೊಂಡಾಡಿ ಇಲ್ಲಿ ಮಾರಾಟಕ್ಕೆ ಅನುಕೂಲವಾಗುವಷ್ಟು ನಿಮ್ಮ ದೇಶದಲ್ಲಿ ತಯಾರುಮಾಡುತ್ತಾರೆಯೋ ಎಂದು ಕೇಳಿದರು. ಈಗ ಅತ್ಯಂತ ಬಾಲ್ಯದೆಸೆಯಲ್ಲಿರುವ ಈ ಕಾರ್ಖಾನೆಯನ್ನು ನಮ್ಮ ದೇಶದ ಜನರ ಸಹಾಯದಿಂದ ಮುಂದಕ್ಕೆ ತರಬೇಕಾದದ್ದು ನಮ್ಮ ಕರ್ತವ್ಯವಾಗಿದೆ.

ಮತ್ತೊಂದು ವಿಷಯ—ಜರ್ಮನಿ ದೇಶದಿಂದ ನಮ್ಮ ದೇಶಕ್ಕೆ ಬಹಳವಾಗಿ ಆಟದ ಸಾಮಾನುಗಳು ಬರುತ್ತಿತ್ತು ಇವುಗಳಲ್ಲಿ ಅನೇಕ ಪದಾರ್ಥಗಳು ಮನೆಯಲ್ಲಿ ಹೆಂಗಸರು ಮಕ್ಕಳುಗಳು ಹಳ್ಳಿಗಳಲ್ಲಿಯೂ ಮತ್ತು ಪಟ್ಟಣಗಳಲ್ಲಿಯೂ ತಯಾರುಮಾಡಿದವುಗಳಾಗಿ ವರ್ತಕರಿಂದ ಮನೆಯಿಂದ ಮನೆಗೆ ಹೋಗಿ ಕೂಡಿಟ್ಟವುಗಳಾಗಿ, ಬಾಕಿ ದೇಶಕ್ಕೆ ಮಾರಾಟಕ್ಕೆ ಕಳುಹಿಸಲ್ಪಟ್ಟವುಗಳಾಗಿವೆ. ಚೆನ್ನಪಟ್ಟಣದಲ್ಲಿ ಅನುಕೂಲವಾದ ಆಟದ ಸಾಮಾನುಗಳನ್ನೆಲ್ಲಾ ತಯಾರುಮಾಡಿ ನಮ್ಮ ದೇಶದ ಕಾರ್ಖಾನೆಗೆ ಉತ್ತೇಜನ ಕೊಡಬೇಕೆಂಬುವದೇ ನಮ್ಮ ಉದ್ದೇಶವಾಗಿದೆ

ಈ ವಿಷಯದಲ್ಲಿ ಮೈಸೂರು ಸಂಪದಭ್ಯುದಯ ಸಮಾಜದವರು ಪ್ರಕಟಿಸಿರುವ ಪತ್ರಿಕೆಯಲ್ಲಿರುವ ಕೆಲವು ಅಂಶಗಳನ್ನು ಮನಸ್ಸಿನಲ್ಲಿ ದೃಢವಾಗಿ ಇಟ್ಟಿರಬೇಕು. ಮತ್ತು ಈ ವಿಧವಾದ ಪತ್ರಿಕೆಗಳು ಕನ್ನಡದಲ್ಲೂ ಪ್ರಕಟಿಸಲ್ಪಡಬೇಕೆಂದು ಬಹಳವಾಗಿ ಒತ್ತಿ ಹೇಳುತ್ತೇವೆ ಕನ್ನಡದಲ್ಲೂ ಪ್ರಕಟಿಸದೇ ಇದ್ದಲ್ಲಿ ನಮ್ಮ ದೇಶದ ಜನರಿಗೆ ಅವುಗಳಿಂದ ವಿಶೇಷವಾಗಿ ಉಪಯೋಗವಾಗಲಾರದು. ದೇಶಭಾಷೆಯಲ್ಲಿ ಹೆಚ್ಚಾದ ಜನರ ತಿಳುವಳಿಕೆಗೆ ಬರುವಂತೆ ಈ ವಿಧವಾದ ಉಪಯೋಗಕರವಾದ ಪುಸ್ತಕಗಳನ್ನು ಪ್ರಕಟಿಸುತ್ತಾರೆಂದು ನಂಬಿದೇವೆ

ಲಂಡನ್, ತಾ. 12-9-1814. ಎಸ್. ಜಿ. ಶಾಸ್ತ್ರಿ.

ಇಂಪೀರಿಯಲ್ ಇಂಡಿಯನ್ ರಿಲೀಫ್ ಫಂಡು.

ತಾಲ್ಲೂಕುಗಳಲ್ಲಿ ವಸೂಲಾಗಿರುವ ಮೊಬಲಗು.

ಆನೆಕಲ್ಲು.—ಇಂಪೀರಿಯಲ್ ಇಂಡಿಯನ್ ರಿಲೀಫ್ ಫಂಡಿಗೆ ಚಂದಾ ಮೊಬಲಗು ರೂ. 228-12-0 ದೊಡ್ಡ ಮನುಷ್ಯರುಗಳಿಂದ ತಾ 28-9-14 ರ ವರೆಗೆ ವಸೂಲಾಗಿ ಜಮಾ ಆಗಿರುತ್ತೆ

ನೆಲಮಂಗಲ.—ಇಂಪೀರಿಯಲ್ ಇಂಡಿಯನ್ ರಿಲೀಫ್ ಫಂಡಿಗಾಗಿ ಈ ತಾಲ್ಲೂಕಿನಲ್ಲಿ ದೊಡ್ಡದೊಡ್ಡ ಮನುಷ್ಯರುಗಳಿಂದ ಚಂದಾ ಮೊಬಲಗು ತಾ. 26-9-14 ರ ವರಿವಿಗೆ ರೂ. 397-12-0 ವಸೂಲಾಗಿ ಟ್ರೆಜರಿಗೆ ಜಮಾ ಆಗಿರುತ್ತೆ.

ಶಿಕಾರಿಪುರ.—ಯುದ್ಧದ ಇಂಡಿಯನ್ ರಿಲೀಫ್ ಫಂಡು ಮೊಬಲಗು 1914 ನೇ ಸಪ್ಟಂಬರ್ 24 ರಿಂದ ಅಕ್ಟೋಬರ್ 2 ನೇ ತಾರೀಖು ವರೆಗೆ ಇಲ್ಲಿನ ತಾಲ್ಲೂಕು ಟ್ರೆಜರಿಯಲ್ಲಿ 329 ರೂಪಾಯಿ ಜಮಾ ಆಗಿರುತ್ತೆ ಜನಗಳು ಸಂತೋಷದಿಂದ ಮೊಬಲಗು ಕೊಟ್ಟಿರುತ್ತಾರೆ. ಇನ್ನೂ ಮೊಬಲಗು ವಸೂಲು ಕೊಡುತ್ತಾರೆಂಬ ನಿರೀಕ್ಷಣೆಯಲ್ಲಿ ಇದೆ.

ಚನ್ನಪಟ್ಟಣ.—ಇಂಪೀರಿಯಲ್ ಇಂಡಿಯನ್ ರಿಲೀಫ್ ಫಂಡಿಗಾಗಿ ಈ ತಾಲ್ಲೂಕಿನಲ್ಲಿ ಚಂದಾ ಕೊಟ್ಟಿರುವ ದೊಡ್ಡ ಮನುಷ್ಯರ 3 ನೇ ಪಟ್ಟಿಯನ್ನು ಕಳುಹಿಸಿದೆ. 1, 2 ನೇ ಪಟ್ಟಿ ಪ್ರಕಾರ ವಸೂಲಾಗಿರುವದು ರೂ. 300; ತಿಟ್ಟಮಾರನಹಳ್ಳಿ ವೆಂಕಟಗೌಡರು ರೂ. 100, ಮೈನಾಯಕನಹಳ್ಳಿ ಬೋಗಯ್ಯನವರು ರೂ. 20, ಬ್ರಹ್ಮಣ್ಯಪುರದ ಲಿಂಗೇಗೌಡರು ರೂ 15, ದ್ಯಾವರಹಳ್ಳಿ ದಾಸೇಗೌಡರು ರೂ. 5; ಮುಂಲಾ ರೂ 440

ದಕ್ಷಿಣ ಕೆನರಾ ತಾ|| ಸಂಪಾಜೆ.—ಹಿಂದಿನ ಮಂಗಳವಾರ ಕೊಡಗುಜಿಲ್ಲಾ ಸಂಪಾಜೆ ಗ್ರಾಮದಲ್ಲಿ ಪಟೇಲರಿಗೆ ಇಂಡಿಯನ್ ರಿಲೀಫ್ ಫಂಡಿಗೆ ದ್ರವ್ಯಸಹಾಯಮಾಡಬೇಕಾಗಿ ನಮ್ಮ ಸರ್ಕಾರದಿಂದ ಹುಕುಂ ಕೊಟ್ಟ ಪ್ರಕಾರ ಗ್ರಾಮಸ್ಥರನ್ನು ಸಂಪಾಜೆ ಗ್ರಾಮದ ಪಟೇಲ್ ಶೀಲಾರು ರಾಮಚಂದ್ರಯ್ಯನವರು ಅನೇಕ ಮಹಾಸೀಯರುಗಳೂ ಕೂಡಿ ಇಲ್ಲಿಯ ಪೋಲೀಸ್ ಸ್ಟೇಷನಿನಲ್ಲಿ ಸಭೆ ಕೂಡಲಾಯಿತು. ಸಭಾಧ್ಯಕ್ಷರಾಗಿ ಮ|| ಶೀಲಾರು ರಾಮಚಂದ್ರಯ್ಯನವರು ನಮ್ಮ ಬ್ರಿಟಿಷ್ ಸರ್ಕಾರದವರ ಮೇಲೆ ಅನ್ಯಾಯವಾಗಿ ಜರ್ಮನಿಯವರು ಯುದ್ಧ ಮಾಡಲಿಕ್ಕೆ ಬಂದ ಸಂಗತಿಯನ್ನು ಕೂಲಂಕುಶ ಊರ ರೈತರಿಗೆ ತಿಳಿಯುವಂತೆ ಬೋಧಿಸಿದರು. ಅದಕ್ಕೆ ಅನುಗುಣವಾಗಿ ಮ|| ಬಿ. ಶೀನಪ್ಪ ವಗ್ಯೆರೆಗಳು ನಮ್ಮ ಇಂಡಿಯಾ ಸರ್ಕಾರದವರು ನಮ್ಮನ್ನು ನಿಷ್ಪಕ್ಷಪಾತತೆಯಿಂದ ನೋಡುವುದರ ವಿಷಯ ಭಾಷಣಮಾಡಿದರು ನಮ್ಮ ಮಾತೃಭೂಮಿಯನ್ನು ಉಳಿಸಬೇಕಾಗಿ ಯುದ್ಧಮಾಡುವವರ ಕುಟುಂಬದ ಜೀವನಕ್ಕೆ ಬೇಕಾಗಿ ಇಂಪೀರಿಯಲ್ ಇಂಡಿಯನ್ ರಿಲೀಫ್ ಫಂಡಿಗೆ ನಾವು ಕೂಡಿದಂಥಾ ಗೃಹಸ್ಥರೆಲ್ಲಾ ಕೈಲಾದ ಮಟ್ಟಿಗೆ ದ್ರವ್ಯಸಹಾಯಮಾಡಬೇಕಾಗಿ ತಿಳಿಸಿದರು ಅದೇ ಇಲ್ಲಿಯ ಪಟೇಲ್ ಎನ್ ಸಣ್ಣಯ್ಯನವರು ಅನುಮೋದಿಸಿದರು ನಂತರ ಹೇ. ಕೆ. ಬಲ್ ಅಬುದ್ಲ ಯವರು ಕೂಡ ನಾವುಗಳು ದ್ರವ್ಯಸಹಾಯಮಾಡಬೇಕಾದ್ದು ನಮ್ಮ ಮುಖ್ಯ ಕರ್ತವ್ಯವೆಂಬದನ್ನು ಇತರ ಮಹನ್ಯಗೃಹಸ್ಥರಿಗೆ ತಿಳಿಸಿದರು. ಸಭಾಮಹಾಸೀಯರುಗಳು 63 ರೂಪಾಯಿ ಚಂದಾ ಹಣವನ್ನು ಅವರವರ ಕೋರಿಕೆಯಂತೆ ಹಾಕಿದರು. ಈ ಹಣವನ್ನು ಪಟೇಲರು ಜಾಮತಿಮಾಡಿದರು. ಇಲ್ಲಿನ ದೇವಸ್ಥಾನದಲ್ಲಿ ನಮ್ಮ ಇಂಡಿಯಾ ಚಕ್ರವರ್ತಿಗಳಿಗೆ ಜಯವಾಗಬೇಕಾಗಿ ಪ್ರಾರ್ಥನೆಯೊಡನೆ ಸಭೆಯನ್ನು ಮುಕ್ತಾಯಮಾಡಲ್ಪಟ್ಟಿತು.

ಮೈಸೂರು.—ಮೈಸೂರು ರಾಜವರ್ಗಕ್ಕೆ ಸೇರಿದ ಅರಸುಗಳ ಮನೆಗಳ ರಾಣಿವಾಸದವರು ಕಳೆದ 2 ನೇ ತಾ. ಶುಕ್ರವಾರ ಬೆಳಗ್ಗೆ ಇಲ್ಲಿನ ಬಾಲಾಬಂಗಲೆಯಲ್ಲಿ ಸೇರಿ ಒಂದು ಕೂಟವನ್ನು ನಡಿಸಿದರು. ಮಿಸೆಸ್ ಸರ್ವಾಧಿಕಾರಿ ನಂಜರಾಜೆ ಅರಸಿನವರು ಆ ಕೂಟದ ಅಗ್ರಾಸನವನ್ನು ವಹಿಸಿದ್ದು, ಈಗ ಯೂರೋಪ್ ಖಂಡದಲ್ಲಿ ಸಂಭವಿಸಿರುವ ಯುದ್ಧದಲ್ಲಿ ಹಿಂದುಸ್ಥಾನದ ಬ್ರಿಟಿಷ್ ಮತ್ತು ದೇಶೀಯ ಸೈನಿಕರ ಕಷ್ಟನಿವಾರಣೆಗಾಗಿ ದ್ರವ್ಯ ಮುಂತಾದ್ದರ ಮೂಲಕ ಕೂಡಿದಷ್ಟು ಸಹಾಯಮಾಡಬೇಕಾದದ್ದು ಪರಮಾವಶ್ಯಕವಾಗಿದೆ ಎಂಬ ವಿಚಾರವನ್ನು ಕುರಿತು ಮಹಿಳೆಯರಿಗೆ ಚೆನ್ನಾಗಿ ತಿಳಿಯುವಂತೆ ಭಾಷಣಮಾಡಿದರು. ಚಂದಾ ಮುಂತಾದದ್ದು ಕೂಡಿಸುವುದಕ್ಕೆ ಒಂದು ಕಮಿಟಿ ನೇಮಕವಾಯಿತು. ಮಿಸೆಸ್ ಸರ್ವಾಧಿಕಾರಿ ನಂಜರಾಜೆ ಅರಸಿನವರು ಪ್ರೆಸಿಡೆಂಟರಾಗಿಯೂ ಮಿಸೆಸ್ ಬಾಳರಾಜೆ ಅರಸಿನವರು ಸೆಕ್ರೆಟರಿಯಾಗಿಯೂ, ಮಿಸೆಸ್ ಎಚ್. ಲಿಂಗರಾಜೆ ಅರಸಿನವರು ಟ್ರೆಜರರಾಗಿಯೂ ಚುನಾಯಿಸಲ್ಪಟ್ಟರು ರಾಣಿವಾಸದ ಸ್ತ್ರೀಯರಿಂದ ಚಂದಾ ವಸೂಲ್ಮಾಡಿ ಮೈಸೂರು ಶಾಖೆಯ ಸೆಂಟ್ ಜಾನ್ ಅಂಬುಲೆನ್ಸ್ ಸಂಘದ ಸೆಕ್ರೆಟರಿಯವರಿಗೆ ಕಳುಹಿಸಬೇಕೆಂದು ನಿಷ್ಕರ್ಷೆಯಾಯಿತು ಆ ದಿನ ಕೂಟದಲ್ಲಿ ಸೇರಿದ್ದ ರಾಣಿವಾಸದವರಿಂದ 918 ರೂಪಾಯಿ ಚಂದಾ ವಸೂಲಾಗಿರುತ್ತದೆ. ಚಂದಾ ಕೊಟ್ಟವರು ಯಾರೆಂದರೆ—ಮಿಸೆಸ್‌ಗಳಾದ ಸುಬ್ರಹ್ಮಣ್ಯರಾಜೆ ಅರಸ್ ರೂ. 200; ಸರ್ವಾಧಿಕಾರಿ ನಂಜರಾಜೆ ಅರಸ್ ಮತ್ತು ಎಚ್. ಲಿಂಗರಾಜೆ ಅರಸ್, ತಲಾ ರೂ 100; ಎಂ. ಎನ್. ಬಾಳರಾಜೆ ಅರಸ್, ಚಾಮಪ್ಪಾಜಿ ಅರಸ್, ಸಂಜೀವರಾಜೆ ಅರಸ್, ಎ. ಸುಬ್ಬರಾಜೆ ಅರಸ್ ಮತ್ತು ನಂಜುಂಡರಾಜೆ ಅರಸ್, ತಲಾ ರೂ. 50; ಡಿ. ನಂಜರಾಜೆ ಅರಸ್ ರೂ 45; ಸಿ. ಎಚ್ ಲಿಂಗರಾಜೆ ಅರಸ್ ರೂ. 30; ಬಿ. ರಾಜೆ ಅರಸ್ ಮತ್ತು ವೆಂಕಟ ಸುಬ್ರಹ್ಮಣ್ಯರಾಜೆ ಅರಸ್, ತಲಾ ರೂ. 20; ವೀರಪ್ಪಾಜಿ ಅರಸ್, ಎ. ವಿ ಸುಬ್ರಹ್ಮಣ್ಯರಾಜೆ ಅರಸ್, ರಾಜೆ ಅರಸ್, ಮೂಗೂರು ದೇವರಾಜೆ ಅರಸ್, ಮಲ್ಲಪ್ಪಾಜಿ ಅರಸ್, ಮುದ್ದರಾಜೆ ಅರಸ್, ಚಿಕ್ಕವೀರಪ್ಪಾಜಿ ಅರಸ್ ಮತ್ತು ಹಂಪೇ ಅರಸ್, ತಲಾ ರೂ. 10; ರಾಮಗಿರಿ ಸುಬ್ರಹ್ಮಣ್ಯರಾಜೆ ಅರಸ್ ಮತ್ತು ಲಕ್ಷ್ಮೀಕಾಂತ ಅರಸ್, ತಲಾ ರೂ. 7; ಚಾಮರಾಜೆ ಅರಸ್, ರಾಮಗಿರಿ ದೇವರಾಜೆ ಅರಸ್, ರಾಮಗಿರಿ ನಂಜರಾಜೆ ಅರಸ್, ತಿರುಮಲ ಸುಬ್ಬರಾಜೆ ಅರಸ್, ಎಚ್. ಸುಬ್ಬರಾಜೆ ಅರಸ್, ಬಿ ವೆಂಕಟೆ ಅರಸ್, ಸಿ. ದೇವರಾಜೆ ಅರಸ್ ಮತ್ತು ನರಸಿಪುರದ ಅರಸ್, ತಲಾ ರೂ. 5; ಅರೂರು ದೊಡ್ಡ ಅರಸಿನವರು ಮತ್ತು ಹೆಬ್ಬೂರ್ ಅರಸಿನವರು ತಲಾ ರೂ. 4; ಅರೂರು ಚಿಕ್ಕ ಅರಸಿನವರು ಮತ್ತು ವೈ ನಂಜರಾಜೆ ಅರಸಿನವರು, ತಲಾ ರೂ. 3.—ಹಾಸನದ ಸ್ತ್ರೀಯರಿಂದ ಮಿಸೆಸ್ ವೆದರಾಲ್‌ರವರು ಕೂಡಿಸಿ ಕಳುಹಿಸಿಕೊಟ್ಟ 18 ಪೆಟ್ಟಿಗೆಗಳಷ್ಟು ಬಟ್ಟೆಗಳೂ. ಉಡುಪುಗಳೂ ಅಂಬುಲೆನ್ಸ್ ಸೆಕ್ರೆಟರಿಯವರಿಗೆ ತಲುಪಿದವು ಅವರು ಆ ಪೆಟ್ಟಿಗೆಗಳನ್ನೆಲ್ಲಾ ಜಹಜಿನ ಮೇಲೆ ಯುದ್ಧಭೂಮಿಗೆ ಕಳುಹಿಸುವುದಕ್ಕೋಸ್ಕರ ಬೊಂಬಾಯಿಗೆ ರವಾನೆ ಮಾಡಿರುತ್ತಾರೆ

ಚಿತ್ರದುರ್ಗ.—ಕಳೆದ ಜುಲೈ ತಿಂಗಳಲ್ಲಿ ಥಿಯೊಸಾಫಿಕಲ್ ಸೊಸೈಟಿಯ ಬೋಧಕರಾದ ನಾರಾಯಣಶಾಸ್ತ್ರಿಗಳವರು ಈ ಚಿತ್ರದುರ್ಗಕ್ಕೆ ದಯಮಾಡಿಸಿದ್ದರು. ಆ ಕಾಲದಲ್ಲಿ ಈ ಊರ ಗರಲ್ಸ್ ಸ್ಕೂಲಲ್ಲಿ ಸಾವಿತ್ರಿ ಚರಿತ್ರೆಯನ್ನು ಕೀರ್ತನೆಗಳ ಮುಖಾಂತರ ಪ್ರಸಂಗಿಸಿದರು ಊರಿನಲ್ಲಿರುವ ಅನೇಕ ಜನ ಸ್ತ್ರೀಯರು ಸೇರಿದ್ದರು ತರುವಾಯ ಸಂಸಾರವೆಂಬ ರಥವು ಸ್ತ್ರೀಪುರುಷರೆಂಬ ಎರಡು ಪ್ರಾಣಿಗಳಿಂದ ಸಾಗತಕ್ಕದ್ದು. ಇದರಲ್ಲಿ ಪುರುಷರು ಮಾತ್ರ ವಿದ್ಯಾವಂತರಾಗಿದ್ದು ಸ್ತ್ರೀಯರು ವಿದ್ಯಾವತಿಯರೂ ನಾಗರೀಕರೂ ಆಗದಿದ್ದರೆ ಆ ರಥವು ಸರಿಯಾಗಿ ಸಾಗಲಾರದು. ಇದು ಈ ಕಾಲಕ್ಕೆ ತಕ್ಕದ್ದಲ್ಲ. ಸ್ತ್ರೀಯರು ಜ್ಞಾನಾಭಿವೃದ್ಧಿಯನ್ನು ಮಾಡಿಕೊಂಡು ಗೃಹಕಾರ್ಯಕ್ರಮ, ದೇವರ ಸೇವೆ, ಪತಿಭಕ್ತಿ, ಶಿಶುಸಂರಕ್ಷಣೆ, ಆರೋಗ್ಯವಿಚಾರ, ಒಳ್ಳೇ ನಡತೆ, ಈ ಮೊದಲಾದದ್ದನ್ನೆಲ್ಲಾ ಈ ಕಾಲಕ್ಕೆ ತಕ್ಕಂತೆ ತಿದ್ದುಪಾಟು ಮಾಡಿಕೊಳ್ಳಬೇಕಾಗಿದೆ ಇದಕ್ಕಾಗಿ ಅನೇಕರು ಒಂದೇ ಕಡೆ ಸೇರಿ ತಿಳಿದುಕೊಳ್ಳುವದಕ್ಕೆ ಒಂದು ಸಮಾಜವು ಅವಶ್ಯಕವೆಂದು ಅನೇಕರು ಸೂಚಿಸಿದರು. ಮಿಸೆಸ್ ತ್ಯಾಗರಾಜಯ್ಯರ್ ಲಕ್ಷ್ಮಮ್ಮಾಳ್, ಸುಬ್ಬಮ್ಮ ಮೊದಲಾದವರು ಇದಕ್ಕೆ ಒಪ್ಪಿದರು ಜುಲೈ ತಿಂಗಳ ಕೊನೇ ಭಾನುವಾರ ಮೊದಲನೇ ಸಭೆ ಸೇರಿತು. ಅಲ್ಲಿ ಸೇರಿದ್ದ ಸಭಿಕರೆಲ್ಲರೂ ಮಿಸೆಸ್ ತ್ಯಾಗರಾಜಯ್ಯರವರೇ ಪ್ರೆಸಿಡೆಂಟರಾಗಿರಬೇಕೆಂದೂ, ಸೌ|| ಲಕ್ಷ್ಮಮ್ಮಾಳ್ ಗರಲ್ಸ್ ಸ್ಕೂಲ್ ಹೆಡ್ ಮಿಸ್ಟ್ರೆಸ್‌ರವರೂ ಸೆಕ್ರೆಟರಿಗಳಾಗಿರಬೇಕೆಂದೂ ಕೆಲವರು ಸೂಚಿಸಿದರು ಅನೇಕರು ಒಪ್ಪಿದರು. ಆಗಲೇ ಅನೇಕ ಸ್ತ್ರೀಯರು ಮೆಂಬರಾಗಿರಲು ಒಪ್ಪಿದರು ಆಗ ಸಾವಿತ್ರಿ ಸದನವು ಏರ್ಪಾಡಾಯಿತು ಈ ಸದನದ ಮೆಂಬರುಗಳು ಪ್ರತಿ ಭಾನುವಾರವೂ ಸೇರುತ್ತಾರೆ. ಈಗ 7-8 ಉಪನ್ಯಾಸಗಳು ನಡೆದಿರುತ್ತವೆ ಒಂದು ಮೀಟಿಂಗಿನಲ್ಲಿ ಸಭೆಯ ಸೆಕ್ರೆಟರಿ ಸೌ|| ಲಕ್ಷ್ಮಮ್ಮನವರು ಯೂರೋಪ್‌ನಲ್ಲಿ ನಡೆಯುವ ಘೋರವಾದ ಯುದ್ಧದ ಸಮಾಚಾರವನ್ನು ಕುರಿತು ವಿಸ್ತಾರವಾಗಿ ವಿವರಿಸಿ ಹೇಳಿದರು. ಯುದ್ಧದಲ್ಲಿ ನಡೆಯುವ ಅನಾಹುತಗಳನ್ನೂ, ಅನೇಕ ಸೈನಿಕರುಗಳನ್ನು ಕೊಂದು ಹಾಕುವದನ್ನೂ, ಅನೇಕರು ಗಾಯಪಟ್ಟು ನರಳುವರೆಂಬದನ್ನೂ ಕೇಳಿ ಸಭಿಕರು ಬಹಳವಾಗಿ ಮರುಗಿದರು; ಅಲ್ಲದೆ ಈ ಯುದ್ಧವು ಜಾಗ್ರತೆಯಲ್ಲಿಯೇ ನಿಂತುಹೋಗಿ ಲೋಕಕ್ಕೆ ಶಾಂತಿಯನ್ನು ಕೊಡಬೇಕೆಂದು ದೇವರನ್ನು ಕುರಿತು ಪ್ರಾರ್ಥಿಸಿದರು. ಯುದ್ಧದಲ್ಲಿ ಘಾಯಪಟ್ಟವರಿಗೂ ಅವರ ಕುಟುಂಬದವರಿಗೂ ಸಹಾಯವಾಗಬೇಕೆಂದು ಅನೇಕರು ತಮ್ಮ ಕೈಲಾದ ಉಪಕಾರವನ್ನು ಮಾಡುವದಾಗಿ ಒಪ್ಪಿದರು. ಈ ಸಾವಿತ್ರಿ ಸದನದ ಸೆಕ್ರೆಟರಿಗಳಾದ ಸೌ|| ಲಕ್ಷ್ಮಮ್ಮಾಳ್ ಮತ್ತು ಹೆಡ್ ಮಿಸ್ಟ್ರೆಸ್ ಸುಬ್ಬಮ್ಮನವರು ಮುಂದಾಳುಗಳಾಗಿ ನಿಂತು ಮೆಂಬರುಗಳಲ್ಲದ ಇತರ ಸ್ತ್ರೀಯರಲ್ಲಿಯೂ ಹೋಗಿ ಚಂದಾ ಸೇರಿಸಿ ಈ ವರಿವಿಗೆ 127 ರೂಪಾಯನ್ನು ಖಜಾನೆಗೆ ಪಾವತಿ ಮಾಡಿಸಿ, ಮೈಸೂರ್ ದೇಶದ ಸೆಂಟ್ರಲ್ ಕಮಿಟಿಯವರಿಗೆ ಈ ಮೊಬಲಗು ಕಳುಹಿಸಿ ಅವರಿಂದ ಜವಾಬು ತರಿಸಬೇಕೆಂದು ಕೇಳಿಕೊಂಡಿದಾರೆ. ಯುದ್ಧದ ಫಂಡಿಗೆ ಪರೋಪಕಾರಮಾಡುವದರಲ್ಲಿ ಮಾರ್ಗದರ್ಶಿಗಳಾದ ಈ ಸಾವಿತ್ರಿ ಸದನದ ಪ್ರೆಸಿಡೆಂಟ್ ಮಿಸೆಸ್ ತ್ಯಾಗರಾಜಯ್ಯನವರಿಗೆ ಸರ್ವರೂ ಕೃತಜ್ಞರಾಗಿದಾರೆ. ಯುದ್ಧದ ಫಂಡಿಗೆ ಮೊಬಲಗನ್ನು ಕೊಟ್ಟ ಸ್ತ್ರೀಯರ ಹೆಸರನ್ನೆಲ್ಲಾ ದರ್ಜಾವಾರಾಗಿ ಈ ಕೆಳಗೆ ಕಾಣಿಸಿರುತ್ತೇನೆ.

ತಾಲ್ಲೂಕು ವರ್ತಮಾನ.

ಹಾಸನ.—ಯುದ್ಧದ ನಿಧಿಗೆ ಹಣವೂ, ದೇಶೀಯ ಸಿಪಾಯಿಗಳಿಗೆ ಬಟ್ಟೆಯ ಉಡಿಗೆ ತೊಡಿಗೆಗಳೂ, ಸಿದ್ಧವಾಗುತ್ತಲಿವೆ. ಹಣವನ್ನು ಪ್ರತಿಮನೆಯ ಯಜಮಾನನೂ. ಯಜಮಾನತಿಯೂ ಕೊಡುತ್ತಿರುವುದು ಮಾತ್ರವಲ್ಲದೆ, ಬಾಲಿಕಾಬಾಲಕರಿಂದ ಸಹ ಆಯಾ ಸ್ಕೂಲ್ ಉಪಾಧ್ಯಾಯರು ವಸೂಲ್ಮಾಡುತ್ತಿದಾರೆ. ಕಳೆದ ವಾರ ಇಲ್ಲಿನ ವಾಣೀವಿಲಾಸ ಬಾಲಿಕಾ ಪಾಠಶಾಲೆಯಲ್ಲಿ ಇಲ್ಲಿನ ವಿದ್ಯಾರ್ಥಿನಿಯರಿಂದ ಸಾವಿತ್ರೀ ಚರಿತ್ರೆಯನ್ನು ಸಲ್ಲಾಪ ರೂಪದಲ್ಲಿ ಪ್ರದರ್ಶನ ಮಾಡಿಸಿ, ಸುಮಾರು 50 ರೂಪಾಯಿ ನೋಟಕರಿಂದ ವಸೂಲ್ಮಾಡಿ, ರಿಲೀಫ್ ಫಂಡಿಗೆ ಕೂಡಿಸಿದರೆಂದು ತಿಳಿದು ಬಂದಿತು.—ಈ ಪ್ರಾಂತಕ್ಕೆಲ್ಲಾ ಹದ ಮಳೆಯಾಗಿದೆ. ಇಲ್ಲಿನ ಬೀದಿಗೆರೆಯನ್ನು ಶೋಧಿಸುವುದಕ್ಕಾಗಿ ಬಹು ಶ್ರಮ ಮತ್ತು ವೆಚ್ಚದಿಂದ ನೀರನ್ನೆಲ್ಲಾ ಹೊರಡಿಸಿ ಬರಿದುಮಾಡಿದ್ದರು ಮಳೆಯ ದೆಸೆಯಿಂದ ಉದ್ದೇಶಪೂರ್ತಿಗೆ ಅವಕಾಶವೇ ಇಲ್ಲದೆ ನೀರು ತುಂಬಿಕೊಳ್ಳುತ್ತಲಿದೆ.—ರೇಷ್ಮೆ ವ್ಯವಸಾಯಕ್ಕೋಸ್ಕರ ಇಲ್ಲಿ ಕಾರ್ಯ ಪ್ರಾರಂಭವಾಗಿ ಮ್ಯುನಿಸಿಪಲ್ ಉದ್ಯಾನದ ಪಕ್ಕದ ಜಮೀನಿನಲ್ಲಿ ಈ ವ್ಯವಸಾಯವು ನಡೆಯುತ್ತಲಿದೆ. ಇದಕ್ಕಾಗಿಯೇ ಈ ಡಿಸ್ಟ್ರಿಕ್ಟಿಗೆ ಒಬ್ಬ ಇನ್‌ಸ್ಪೆಕ್ಟರು ನೇಮಕವಾಗಿದಾರೆ. ಕಾರೊನೇಷನ್ ಹಾಲ್ ಕೆಲಸವು ಈಚೆಗೆ ಬಹು ಆತುರದಿಂದ ನಡೆಯುವುದು.—ಹೈಸ್ಕೂಲಿಗೋಸ್ಕರ ಒಂದು ಹೊಸ ಕಟ್ಟಡವನ್ನು ಕಟ್ಟಲಿಕ್ಕೂ, ರೈಲ್ವೆ ಸ್ಟೇಷನ್ ಮುಂತಾದ ಕಟ್ಟಡಗಳಿಗೂ ಸ್ಥಳಗಳು ಗೊತ್ತಾದವು. ಸದ್ಯದಲ್ಲೇ ಕಾಮಗಾರಿ ಪ್ರಾರಂಭವಾಗಬಹುದು.

ಮೈಸೂರು ಪ್ರಜಾಪ್ರತಿನಿಧಿ ಸಭೆಯು.

ಸಂಸ್ಥಾನಾಮಳೆ ವ್ಯವಹರಿಸುವ ವಿಚಾರಗಳು.

ಪ್ರತಿನಿಧಿಗಳ ಪ್ರಾರ್ಥನೆಗಳೂ ದಿವಾನ್‌ರವರ ಪ್ರತ್ಯುತ್ತರವೂ.

ಪ್ರಾರ್ಥನೆ.—ಸಣ್ಣ ಪುಟ್ಟ ಕ್ರಿಮಿನಲ್ ಮೊಕದ್ದಮೆಗಳ ದಯಾರ್ಫ್ತಿಗೆ ಮೈಸೂರು, ಬೆಂಗಳೂರು ಪಟ್ಟಣಗಳಲ್ಲಿ ನೇಮಕಮಾಡಿರುವಂತೆ ಇತರ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರುಗಳಲ್ಲೂ ಪ್ರಜಾಪಕ್ಷದ ದೊಡ್ಡ ಮನುಷ್ಯರನ್ನು ಆನರರಿ ಮ್ಯಾಜಿಸ್ಟ್ರೇಟರಾಗಿ ನೇಮಕ ಮಾಡಬೇಕು.

ದಿವಾನ್‌ರವರ ಉತ್ತರ.—ಇದು ಸರ್ಕಾರದವರ ಆಲೋಚನೆಯಲ್ಲಿದೆ. ಪ್ರತಿನಿಧಿಗಳು ಇಂಥಾ ಕೆಲಸಮಾಡಲು ಒಪ್ಪಿ ಬರುವುದಾದರೆ ಆ ರೀತಿ ನೇಮಿಸ ಬಹುದು.

ಪ್ರಾ.—ರೆವಿನ್ಯೂ ಅಧಿಕಾರಿಗಳಿಗೆ ಕ್ರಿಮಿನಲ್ ಮೊಕದ್ದಮೆಗಳನ್ನು ಹಿಡಿದು ಫೈಸಲ್ಪು ಮಾಡುವ ಅಧಿಕಾರವನ್ನು ತಪ್ಪಿಸಿ, ಮುನ್ಸಿಫರು ಇರುವ ಕಡೆ ಅವರಿಗೂ, ಇಲ್ಲದ ಕಡೆ ಬೇರೆ ಹೊಸ ಅಧಿಕಾರಿಗಳಿಗೂ ಮ್ಯಾಜಿಸ್ಟ್ರೇಟ್ ಅಧಿಕಾರವನ್ನು ವಹಿಸಿದರೆ ಕಕ್ಷಿಗಾರರಿಗೆ ಈಗ ಇರುವ ಅಲೆದಾಟವೂ ದ್ರವ್ಯನಷ್ಟವೂ ಅನನುಕೂಲವೂ ತಪ್ಪುವವು. ಮದರಾಸ್ ಅಧಿಪತ್ಯದಲ್ಲಿ ಇದಕ್ಕಾಗಿಯೇ ಸ್ಪೆಷಲ್ ಮ್ಯಾಜಿಸ್ಟ್ರೇಟರನ್ನು ನೇಮಿಸಿದಾರೆ. ಮೊಕದ್ದಮೆಗಳು ಬೇಗನೆ ಇತ್ಯರ್ಥವಾಗುವವು.

ಉ.—ಇದು ಅವಶ್ಯಕವಾಗಿ ಆಗಬೇಕಾದ ಬದಲಾವಣೆ ಎಂದು ಸರ್ಕಾರದವರು ಒಪ್ಪುತ್ತಿದಾರೆ ಆದರೆ ಇದಕ್ಕೆ ಹಣಬೇಕಾಗಿರುವುದೊಂದೇ ದೊಡ್ಡ ಅಡಚಣೆ.

ಪ್ರಾ.—ಈಗ ಹೊಸ ಸೇರುಗಳನ್ನು ಸರ್ಕಾರದವರು ಕಬ್ಬಿಣದ ತಗಡಿನಲ್ಲಿ ಮಾಡಿಸಿದಾರೆ. ಇವನ್ನು ದುರ್ನೀತರಾದ ವರ್ತಕರು ಹೆಚ್ಚು ಕಡಮೆ ಮಾಡುವುದಕ್ಕೆ ಅವಕಾಶವಿದೆ; ಸರ್ಕಾರದವರು ಮಾಡಿಸಿರುವ ಸೇರುಗಳಲ್ಲೂ ಒಂದಕ್ಕೊಂದು ವ್ಯತ್ಯಾಸವಿದೆ. ಸೇರುಗಳನ್ನೂ ಕೊಳಗಗಳನ್ನೂ ಕಂಚಿನಲ್ಲೇ ಮಾಡಿಸಿ, ವರ್ತಕರೆಲ್ಲಾ ಅವನ್ನೇ ಉಪಯೋಗಿಸುವಂತೆ ನಿರ್ಬಂಧ ಮಾಡದಿದ್ದರೆ ಮೋಸವೂ ಕಷ್ಟವೂ ತಪ್ಪುತ್ತವಿಲ್ಲ. ಪ್ರತಿ ಒಂದು ತಾಲ್ಲೂಕಿನಲ್ಲೂ ಅವು ಸುಲಭವಾಗಿ ಸಿಕ್ಕುವಂತೆ ಮಾಡಬೇಕು.

ಉ.—ಕಸಬುಗಳ ಡೈರೆಕ್ಟರವರು ಆ ರೀತಿ ಮಾಡಿಸುತ್ತೇವೆಂದು ಒಪ್ಪಿಕೊಂಡಿದಾರೆ.

ಪ್ರಾ.—ಮೊದಲನೇ ಅಪೀಲ್ ದಾಖಿಲ್ ಮಾಡುವಾಗ್ಗೆ ಅಪೀಲ್ ಕೋರ್ಟಿಗೆ ಹಾಜರು ಮಾಡಿದ ಡಿಕ್ರಿ ಮತ್ತು ಜಡ್ಜ್‌ಮೆಂಟ್ ಕಾಪಿಗಳನ್ನೇ ಎರಡನೇ ಅಪೀಲ್ ದಾಖಲ್ ಮಾಡುವಾಗಲೂ ಹಾಜರ್ಮಾಡುವಂತೆ ರೂಲಸು ಮಾಡಿದರೆ ಕಕ್ಷಿಗಾರರಿಗೆ ತುಂಬಾ ಸಹಾಯವಾದೀತು.

ಉ.—ಅದೇ ರೀತಿ ರೂಲಸು ಮಾಡಿದೆ; ಜಾರಿಯಲ್ಲಿ ತರಲ್ಪಡುವುದು.

ಪ್ರಾ.—ಕ್ರಿಮಿನಲ್ ಕೋರ್ಟುಗಳಲ್ಲಿ ದಾಖಿಲ್ ಮಾಡಿದ ಜಡ್ಜ್‌ಮೆಂಟ್ ಕಾಪಿ ಅಥವಾ ಇತರ ದಾಖಲೆ ಕಾಗದಗಳನ್ನು ವಾಪಸು ಕೊಡುವಂತೆ ಕೇಳಿದರೆ ಕೊಡುವುದಿಲ್ಲ; ಛಾರ್ಜುಕೊಟ್ಟು ನಕಲ್ ಪಡೆಯಬೇಕೆಂದು ಹೇಳುತ್ತಾರೆ. ಇದರಲ್ಲಿ ಕಕ್ಷಿಗಾರರಿಗೆ ಬಹಳ ನಷ್ಟವಾಗುತ್ತದೆ.

ಉ.—ರೂಲಸು ನೀವು ಕೇಳುವಂತೆ ಇದ್ದೇ ಇದೆ. ಹಾಗೆ ಕೊಡದೆ ಹೋದಾಗ ಚೀಫ್ ಕೋರ್ಟಿಗೆ ಅರ್ಜಿ ಬರೆದುಕೊಳ್ಳಿ. ಅವರು ಕ್ರಮ ಕಲ್ಪಿಸುತ್ತಾರೆ.

ಪ್ರಾ.—ಕ್ರಿಮಿನಲ್ ಮೊಕದ್ದಮೆಗಳಲ್ಲಿ ಸಮ್‌ಸ್ ಜತೆಯಲ್ಲಿ ಅಪರಾಧಿಗೆ ಫಿರ್ಯಾದಿನ ನಕಲನ್ನು ಕೊಡುವಂತೆ ಮಾಡಿಸಬೇಕು.

ಉ.—ಯೋಚಿಸಿ ಮಾಡಬೇಕಾಗಿದೆ.

ಪ್ರಾ.—ಸಿವಿಲ್ ಮತ್ತು ರೆವಿನ್ಯೂ ಕಛೇರಿಗಳನ್ನು ಕನಿಷ್ಠ 5 ದಿನ ಕ್ರಿಸ್ಮಸ್ ಹೋಲಿಡೇಗಳಲ್ಲಿ ಮುಚ್ಚಿಸಬೇಕು [ಇದರಲ್ಲಿ ತುಂಬಾ ಅನ್ಯಾಯವಾಗುತ್ತದೆಂದು ಕೆಲವರು ಒಪ್ಪಲಿಲ್ಲ.]

ಉ.—[illegible]

ಪ್ರಾ.—ಸಿವಿಲ್ ಮೊಕದ್ದಮೆಗಳಲ್ಲಿ ಕಕ್ಷಿಗಾರರಿಗೆ ಕೋರ್ಟಿನಿಂದ ಬರಬೇಕಾದ ಹಣಕ್ಕೆ ಚೆಕ್ಕು ಕೊಡುತ್ತಾರೆ. ಅದಕ್ಕೆ ವಕೀಲರ ರುಜುವಾಗದಿದ್ದರೆ ಹಣ ಕೊಡುವುದಿಲ್ಲವೆನ್ನುತ್ತಾರೆ. ಈ ನಿರ್ಬಂಧವನ್ನು ತಪ್ಪಿಸಿಕೊಡಬೇಕು.

ಉ.—ರೂಲಸು ಹಾಗೆ ಇಲ್ಲ; ಕಕ್ಷಿಗಾರನ ಗುರುತಾಗಿ ವಕೀಲರಾಗಲಿ ಅಥವಾ ಇನ್ಯಾರೇ ಆಗಲಿ ರುಜು ಹಾಕಿದರೆ ಹಣ ಕೊಡಬಹುದೆಂದು ರೂಲಸು ಇದೆ.

ಪ್ರಾ.—ಸರ್ಕಾರದವರು ಕಾಪಿ ಬರೆಯುವ 2 ಆಣೆ ಕ್ರಯದ ಕಾಗದಗಳನ್ನು ಈಗ ಜಾರಿಗೆ ತಂದಿದಾರೆ. ಒಂದು ಪಕ್ಕೆಯಲ್ಲಿ 60-70 ಮಾತುಗಳನ್ನು ಮಾತ್ರ ಬರೆಯುವದೂ, 3-4 ಪುಟ ಉಳ್ಳ 2 ಆಣೆ ತೆಗೆದುಕೊಳ್ಳುವುದೂ ರೂಢಿಯಲ್ಲಿದೆ. ಇದು ಕಕ್ಷಿಗಾರರಿಗೆ ತುಂಬಾ ನಷ್ಟ. ಮದರಾಸ್ ಅಧಿಪತ್ಯದಲ್ಲಿ ಒಂದು ಪಕ್ಕೆಗೆ 175 ಮಾತುಗಳನ್ನು ಬರೆಯಬೇಕೆಂಬ ನಿರ್ಬಂಧವಿದೆ. ಅದರಂತೆ ಇಲ್ಲೂ ಮಾಡಿಕೊಡಬೇಕು.

ಉ.—ಈ ವಿಷಯವನ್ನು ಲಾಭ ಸಂಪಾದನೆ ಮಾಡಬೇಕೆಂಬ ಉದ್ದೇಶದಿಂದ ಸರ್ಕಾರದವರು ಮಾಡಿಲ್ಲ. ಇದು ಈಗ ತಾನೇ ಹೊಸದಾಗಿ ಜಾರಿಗೆ ಬಂದಿದೆ ಇನ್ನೂ ಕೆಲವು ಕಾಲ ನಡೆಯಲಿ. ಒಂದು ಪಕ್ಕೆಯಲ್ಲಿ ಇಷ್ಟೇ ಮಾತು ಬರೆಯಬೇಕೆಂಬ ವಿಚಾರವನ್ನು ವಿಚಾರಣೆ ಮಾಡಿ ಹುಕುಂ ಕೊಡುವೆವು.

ಪ್ರಾ.—ಕ್ರಿಮಿನಲ್ ಮೊಕದ್ದಮೆಗಳಲ್ಲಿ ಸಾಕ್ಷಿಗಳಿಗೆ ಭತ್ಯಕೊಡುವಂತೆ ರೂಲಸು ಆಗಬೇಕು. [ಇದನ್ನು ಕೆಲವು ಮೆಂಬರುಗಳು ಕೊಡದೆಂದು ಹೇಳಿದರು.]

ಉ.—ಇದು ಸದ್ಯ ಆಗುವುದಿಲ್ಲ.

ಪ್ರಾ.—ಸಬ್ ರಿಜಿಸ್ಟ್ರಾರುಗಳು ಮರ್ಗ ರಾಜೀನಾಮೆಗಳನ್ನು ತೆಗೆದುಕೊಳ್ಳುತ್ತಾರೆ. ದಾನಪತ್ರ, ರಿಲೀಜ್ ಬಾಂಡು, ವಿಭಾಗಪತ್ರ, ಇವುಗಳ ಕೂಡ ಮರ್ಗ ರಾಜೀನಾಮೆಗಳನ್ನು ಕೊಟ್ಟರೆ ಅಂಗೀಕರಿಸುವಂತೆ ಮಾಡಿಕೊಡಬೇಕು.

ಉ.—ಇದು ಆಗಬಹುದು. ಆ ರೀತಿ ಸರ್ಕ್ಯುಲರ್ ಕೊಟ್ಟರೆ ಮುಂದೆ ಜಾರಿಗೆ ಬರುತ್ತದೆ.

ಪ್ರಾ.—ಛಾಪಾಕಾಗದಗಳು ಗ್ರಾಮಾಂತರಗಳಲ್ಲಿ ರೈತರಿಗೆ ಬೇಕಾದಾಗ ಸಿಕ್ಕದೆ ಬಹಳ ದೂರ ಹೋಗಿ ಬರಬೇಕಾಗಿರೋಣದರಿಂದ ಕರಾರುಗಳನ್ನು ಖಾಲಿ ಕಾಗದದಲ್ಲಿ ಬರೆಯುತ್ತಾರೆ. ಕೋರ್ಟಿಗೆ ದಸ್ತು ಪೆನಲ್ಟಿ ಕೊಡುವುದು ವರುಷೇ ವರುಷ ಹೆಚ್ಚುತ್ತಿದೆ. ಪ್ರತಿ ಒಬ್ಬ ಪಟೇಲನಲ್ಲಿ 10-15 ರೂಪಾಯಿನ ಛಾಪಾಕಾಗದಗಳನ್ನು ವಿಕರಿಗೆ ಇಟ್ಟುಕೊಡಬೇಕು. ಇದರಿಂದ ಖಾಲಿ ಕಾಗದಗಳಲ್ಲಿ ಕರಾರುಗಳನ್ನು ಬರೆಯುವುದು ತಪ್ಪಿ, ಲೇವಾದೇವಿಗೆ ಅನುಕೂಲವಾಗುತ್ತೆ. [ಕೆಲವು ಮೆಂಬರುಗಳು ಇದು ಕೂಡದೆಂದೂ, ಇದರಿಂದ ಕಡಕೇ ಹೊರತು ಉಪಕಾರವಾಗುವುದಿಲ್ಲವೆಂದೂ ಹೇಳಿದರು.]

ಉ.—ವಿಚಾರಿಸಿ ನೋಡೋಣ.

ಪ್ರಾ.—ಆಧಾರದಾರರಿಗೇ ಸ್ವತ್ತನ್ನು ಕ್ರಯಮಾಡಿದರೆ ಕ್ರಯಪತ್ರದ ಕಿಮ್ಮತ್ತನ್ನು ಆಧಾರಪತ್ರದ ಕಿಮ್ಮತ್ತಿಗೆ ಸೇರಿಸಿಕೊಳ್ಳುವಂತೆ ಆಗಬೇಕು.

ಉ.—ಇದು ಆಗಬಹುದು; ಸಬ್ ರಿಜಿಸ್ಟ್ರಾರುಗಳಿಗೆಲ್ಲಾ ಈ ರೀತಿ ಹುಕುಂ ಕಳುಹಿಸುತ್ತೇವೆ.

ಪ್ರಾ.—ಮನೆ ಕಟ್ಟುವುದಕ್ಕೂ, ದುರಸ್ತು ಮಾಡಿಕೊಳ್ಳುವುದಕ್ಕೂ, ಸ್ವಂತ ಜಮೀನಿನಲ್ಲಿ ಸೌದೆಯನ್ನೂ ಸಾಗಿಸುವುದಕ್ಕೂ, ಅರ್ಜಿಗೆ 8 ಆಣೆ ಸ್ಟಾಂಪು ಹಚ್ಚಬೇಕೆಂದು ಕೇಳುತ್ತಾರೆ. ಇದನ್ನು ತಪ್ಪಿಸಿ 1 ಆಣೆ ಸ್ಟಾಂಪು ಹಚ್ಚುವಂತೆ ಮಾಡಿಕೊಡಬೇಕು.

ಉ.—ಅಂಥಾ ಅರ್ಜಿಗಳಿಗೆ 1 ಆಣೆ ಸ್ಟಾಂಪು ಹಚ್ಚಿದರೆ ಸಾಕು; 8 ಆಣೆ ಸ್ಟಾಂಪು ಹಚ್ಚಬೇಕಾದದ್ದಿಲ್ಲ. ಈ ವಿಷಯದಲ್ಲಿ ಸರ್ಕ್ಯುಲರ್ ಹುಕುಂ ಕಳುಹಿಸುತ್ತೇವೆ.

ಪ್ರಾ.—ಪೋಲೀಸ್ ಲಾಕಪ್ಪುಗಳಲ್ಲಿ ಖೈದಿಗಳನ್ನು ರಾತ್ರಿಹೊತ್ತು ಇಡುವುದನ್ನು ತಪ್ಪಿಸಿ, ಸಾಯಂಕಾಲವಾಗುತ್ತಲೇ ಆಯಾ ಸ್ಥಳೀಯ ಬಂದೀಖಾನೆಗಳಿಗೆ ಕಳುಹಿಸುವಂತಾಗಬೇಕು. ಪೋಲೀಸಿನವರು ರಾತ್ರಿಹೊತ್ತು ಖೈದಿಗಳನ್ನು ಬಹು ಕ್ರೂರವಾದ ಹಿಂಸೆಗಳಿಗೆ ಗುರಿಮಾಡುತ್ತಾರೆ. ಇದು ಎಲ್ಲರಿಗೂ ತಿಳಿದ ವಿಷಯವಾದರೂ ರುಜುವಾತು ಮಾಡುವುದು ಬಹಳ ಪ್ರಯಾಸ. ಅನೇಕ ಸಂದರ್ಭಗಳಲ್ಲಿ ಪೋಲೀಸಿನವರ ಮೇಲೆ ಬಂದ ಮೊಕದ್ದಮೆಗಳನ್ನು ಮ್ಯಾಜಿಸ್ಟ್ರೇಟರು ವಜಾ ಮಾಡಿದಾರೆ. ಅಪರೂಪಕ್ಕೆ ಒಂದು ಮೊಕದ್ದಮೆ ರುಜುವಾತಾಗುವುದೇ ಕಷ್ಟ. ಹಗಲೆಲ್ಲಾ ಖೈದಿಗಳನ್ನು ಪೋಲೀಸಿನವರ ವಶಕ್ಕೆ ಪತ್ತೆ ತರದೂದಿಗಾಗಿ ಒಪ್ಪಿಸಿ ರಾತ್ರಿ ಜೈಲಿಗೆ ಕಳುಹಿಸುವಂತಾದರೆ ಎಷ್ಟೋ ಕ್ಷೇಮವಾದೀತು. ಈ ವಿಷಯವನ್ನು ಪ್ರತಿ ವರುಷವೂ ಕೇಳಿಕೊಳ್ಳುತ್ತಾ ಬಂದಿದೇವೆ.

ಉ.—ಅಂಥಾ ಕ್ರೂರತರವಾದ ಹಿಂಸೆಯೇನೂ ನಡೆಯದಂತೆ ವಿಚಾರಿಸಿ ಏರ್ಪಾಡು ಮಾಡುತ್ತೇವೆ.

ಪ್ರಾ.—ಪೋಲೀಸ್ ಡೈರಿಗಳೂ ಅವುಗಳ ನಕಲುಗಳೂ ಒಂದೇ ಸಮನಾಗಿರುವಂತೆ ಡೈರಿ ಬರೆಯತಕ್ಕವರು ಕಾಗದಗಳ ನಡುವೆ ಕಾರ್ಬನ್ ಕಾಗದವನ್ನು ಇಟ್ಟು ಪ್ರತಿ ತಯಾರುಮಾಡುವಂತಾಗಬೇಕು. ಇದರಿಂದ ಪೋಲೀಸ್ ಡೈರಿ ರಿಕಾರ್ಡು ಕ್ರಮಪಡಬಹುದು.

ಉ.—ಸ್ವಲ್ಪ ಖರ್ಚುಗಳಕ್ಕೆ ವಿಷಯ; ಯೋಚಿಸಿ ಮಾಡಬಹುದು.

ಪ್ರಾ.—ಕನ್ನಗಳು ಸಂಭವಿಸಿದರೆ ಪತ್ತೆ ತರದೂದು ನಡಿಸುವುದಕ್ಕೆ ಪೋಲೀಸ್ ಆಫೀಸರು ಸ್ಥಳಾಂತರದಿಂದ ಬರುವುದು ತುಂಬಾ ಸಾವಕಾಶವಾಗುತ್ತದೆ. ದಫೇದಾರರಿಗೇ ತನಿಖೆಮಾಡುವ ಅಧಿಕಾರವನ್ನು ವಹಿಸಿದರೆ ಅನುಕೂಲ.

ಉ.—ಪತ್ತೆ ತರದೂದು ನಡಿಸುವ ಅಧಿಕಾರಿಗಳನ್ನು ಸರ್ಕಾರದವರು ಹೆಚ್ಚು ಮಾಡಬೇಕೆಂದು ಯೋಚಿಸುತ್ತಿದಾರೆ. ಸಣ್ಣ ನೌಕರರು ಜವಾಬ್ದಾರಿ ವಹಿಸದೆ ತನಿಖೆ ಮುಂತಾದ್ದು ನಡಿಸುವುದರಿಂದ ಪ್ರಜೆಗಳಿಗೆ ಕ್ಷೇಮವಲ್ಲ.

ಪ್ರಾ.—ತಸ್ಕರು ಮಾಡತಕ್ಕ ಗುಂಪು ಜನರನ್ನು (ಕ್ರಿಮಿನಲ್ ಗ್ಯಾಂಗ್) ವ್ಯವಸಾಯದಲ್ಲಿ ನಿಲ್ಲಿಸಿ ಸಭ್ಯಪ್ರಜೆಗಳಾಗುವಂತೆ ಮಾಡಬೇಕು. ಎರಡು ವರುಷಕ್ಕಿಂತ ಹೆಚ್ಚು ಸಜಾ ಅನುಭವಿಸತಕ್ಕ ಖೈದಿಗಳನ್ನು ಮಾರಿಕಣಿವೆಗೆ ಕಳುಹಿಸಿ ಅವರಿಂದ ವ್ಯವಸಾಯ ಮಾಡಿಸಬೇಕು.

ಉ.—ಇದು ಬಹು ಪುಣ್ಯವೂ ಪ್ರಯೋಜನಕರವೂ ಆದ ಸಲಹೆ. ಉತ್ತರ ದೇಶದಲ್ಲಿ ಸಾಲ್ವೇಷನ್ ಆರ್ಮಿಯವರು ಇಂಥಾ ಪರಹಿತ ಕಾರ್ಯವನ್ನು ಮಾಡುತ್ತಾರೆ; ಅವರಿಗೆ ಸರ್ಕಾರದವರು ಬೇಕಾದ ಸಹಾಯವನ್ನು ಕೊಡುವರು. ನಮ್ಮ ದೇಶದಲ್ಲೂ ಅಂಥಾ ಪರಹಿತ ಚಿಂತಕರು ಮುಂದೆ ಬಂದು ಆ ರೀತಿ ಕಾರ್ಯ ನಡಿಸುತ್ತೇವೆಂದು ಕೇಳಿದರೆ ಗವರ್ನ್‌ಮೆಂಟಿನವರು ಬಹಳ ಸಂತೋಷದಿಂದ ಸಹಾಯವಾಡುತ್ತಾರೆ. ಸರ್ಕಾರದವರೇ ಇಂಥಾ ಕೆಲಸವನ್ನು ನಡಿಸುವುದಕ್ಕೆ ಅವರಿಗೆ ಸರಿಯಾದ ಸಿಬ್ಬಂದಿ ಇಲ್ಲ.

ಪ್ರಾ.—ಜಮೀನ್‌ದಾರರು ತಮ್ಮ ಫಸಲನ್ನು ಕಾಯುವುದಕ್ಕೆ ತಮ್ಮ ಸ್ವಕ್ಕಿದಾರರಿಗೆ ಕುಸಾಕಿಗಳನ್ನು ಕೊಡುತ್ತಾರೆ. ಜಮೀನ್‌ದಾರರ ಜವಾಬ್ದಾರಿ ಮೇಲೆ ಹಾಗೆ ಕೊಡುವುದಕ್ಕೆ ಅವಕಾಶವಾಗಬೇಕು.

ಉ.—ಆ ರೀತಿ ಮಾಡಬಹುದೆಂದು ಹುಕುಂ ಕೊಡುತ್ತೇವೆ.

ಪ್ರಾ.—ಕುಮಾಕಿ ಲೈಸೆನ್ಸನ್ನು ಅಮಲ್ದಾರರೇ ಎರಡು ವರುಷಕ್ಕೊಂದು ಸಲ ಕೊಡುವಂತೆ ಆಗಬೇಕು.

ಉ.—ಹೀಗೆ ಮಾಡಬಹುದೆಂದು ಅಧಿಕಾರಿಗಳೆಲ್ಲಾ ಒಪ್ಪಿಕೊಂಡಿದಾರೆ. ಆ ರೀತಿ ಹುಕುಂ ಕೊಡುತ್ತೇವೆ.

ಪ್ರಾ.—ಕ್ರಿಮಿನಲ್ ಮೊಕದ್ದಮೆಗಳಲ್ಲಿ ಕಕ್ಷಿಗಾರರುಬೇಕೆಂದು ಮಾನಸ್ಥರ ಮನೆ ಸ್ತ್ರೀಯರನ್ನು ಅಪರಾಧಿ ಅಥವಾ ಸಾಕ್ಷಿಯಾಗಿ ಎಳೆಯುತ್ತಾರೆ. ಅಂಥಾ ಸ್ತ್ರೀಯರನ್ನು ಫೀಜು ತೆಗೆದುಕೊಂಡು ಅವರ ಮನೆಯಲ್ಲೇ ದರ್ಯಾಫ್ತಿ ಮಾಡುವಂತಾಗಬೇಕು.

ಉ.—ಸಂದರ್ಭಾನುಸಾರ ಮ್ಯಾಜಿಸ್ಟ್ರೇಟರು ಹಾಗೆ ಮಾಡಬಹುದು. ಕೋರ್ಟಿನಲ್ಲೂ ಸ್ತ್ರೀಯರನ್ನು ಅಂತರಂಗದಲ್ಲೇ ಕ್ರಾಸ್ ಮಾಡುವರು. ಎಲ್ಲಾ ಸಂದರ್ಭಗಳಲ್ಲೂ ಒಂದೇ ರೀತಿ ನಡೆಯಬೇಕೆಂದು ವಿಧಿಸುವುದು ಕಷ್ಟ.

ಪ್ರಾ.—ಕೋರ್ಟುಗಳಲ್ಲಿ ಮೊಕದ್ದಮೆ ನಡಿಸುವ ವಕೀಲರ ದರ್ಜೆಗಳನ್ನು ಪುನರ್ವಿಮರ್ಶೆಮಾಡಿ, ಈಗಿನ ಕಾಲಕ್ಕೆ ತಕ್ಕಂತೆ ಬದಲಾವಣೆ ಮಾಡಬೇಕು.

ಉ.—ಇದು ಸರ್ಕಾರದವರ ಯೋಚನೆಯಲ್ಲಿದೆ; ಮಾಡುತ್ತೇವೆ.

ಪ್ರಾ.—ವಕೀಲರು ರಜಿಸ್ಟ್ರೇಷನ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕೆಂಬ ವಿಧಿ ಆಗಬೇಕು.

ಉ.—ಇದು ನ್ಯಾಯವೆಂದು ಕಾಣುತ್ತೆ; ಯೋಚಿಸಿ ಮಾಡುವೆವು.

ರೆವಿನ್ಯೂ ವಿಚಾರಗಳು.

ಪ್ರಾ.—ಜಮಾಬಂದಿ ಆಫೀಸರುಗಳು ತಮ್ಮ ತಮ್ಮ ಗುಮಾಸ್ತರು ಹೇಳುವಂತೆ ಬಹು ಸಂಕ್ಷೇಪವಾಗಿ ಹುಕುಂ ಬರೆದಿಡುತ್ತಾರೆ. ತಕರಾರ್, ಫವತಿ, ವಾರಸ್ ಪತ್ರಗಳ ಮೇಲೆ ತಮಗೆ ಕಂಡುಬರುವ ಕಾರಣಗಳನ್ನೆಲ್ಲಾ ಕಾಣಿಸಿ ತಮ್ಮ ತೀರ್ಮಾನವನ್ನು ಸ್ಪಷ್ಟ ಸಂಪೂರ್ಣವಾಗಿ ಬರೆಯುವಂತೆ ಮಾಡಬೇಕು.

ಉ.—ಜಮಾಬಂದಿ ಆಫೀಸರುಗಳು ಬರೆದಿರುವ ಅಂಥಾ ಕೆಲವು ಹುಕುಮುಗಳನ್ನು ತರಿಸಿಕೊಂಡು ನೋಡಿ, ಅವು ಸಮರ್ಪಕವಾಗಿಲ್ಲವೆಂದು ಕಂಡು ಬಂದರೆ ಸರಿಯಾಗಿ ಬರೆಯಬೇಕೆಂದು ಹುಕುಂ ಕೊಡುತ್ತೇವೆ. ಈಗ ಅವರು ಯಾವ ರೀತಿ ಹುಕುಂ ಬರೆಯುತ್ತಾರೆಯೋ ತಿಳಿಯದು.

ಪ್ರಾ.—ಇರಿಗೇಷನ್ ಸೆಸ್ಸನ್ನು (ನೀರಿನ ಕರ) ಆಯಾ ಸ್ಥಳದ ನೀರಾವರಿ ಕಾಮಗಾರಿಗಳಿಗೆ ವಿನಿಯೋಗಿಸುವುದಿಲ್ಲ. ಇದರಿಂದ ಕೆರೆ, ನಾಲೆಗಳು ಕೆಡುವುದಕ್ಕೆ ಮಾರ್ಗವಾಗಿದೆ.

ಉ.—ಆಯಾ ಕೆರೆ, ನಾಲೆಗಳ ಕೆಳಗೆ ಜಮೀನ್‌ಗಳಿಂದ ವಸೂಲಾಗುವ ಸೆಸ್ಸಿನಲ್ಲಿ ಮುಕ್ಕಾಲು ಭಾಗ ಹಣವನ್ನು ಆಯಾ ನೀರಾವರಿಗಳ ದುರಸ್ತಿಗೆ ವಿನಿಯೋಗಿಸುವಂತೆ ಹುಕುಂ ಕೊಟ್ಟಿದೇವೆ; ಇದು ಬೇಗನೆ ಜಾರಿಗೆ ಬರುವುದು.

ಪ್ರಾ.—ಕೆರೆಗಳಲ್ಲಿರುವ ನೀರನ್ನೆಲ್ಲಾ ಜಮೀನುಗಳಿಗೆ ಬಿಟ್ಟುಕೊಳ್ಳುವುದರಿಂದ ಜನಜಾನುವಾರುಗಳಿಗೆ ನೀರಿಲ್ಲದೆ ಬಹಳ ಕಷ್ಟಪಡಬೇಕಾಗಿದೆ. ಇದರಿಂದ ಅವುಗಳ ಕೆಳಗಿರುವ ತೋಟದ ಬಾವಿಗಳೂ ಬತ್ತಿ ಹೋಗುವವು. ಯಾವಾಗಲೂ ಕೆರೆಯಲ್ಲಿ ಕಡೇ ಪಕ್ಷ ಮೂರು ಅಡಿ ನೀರು ಬಿಡುವಂತೆ ಹುಕುಂ ಕೊಡಬೇಕು.

ಉ.—ಇದೇನೋ ಆಗಬೇಕಾದದ್ದೇ. ಸರ್ಕಾರದವರು ಹ್ಯಾಗೆ ಇದನ್ನು ಮಾಡಬಹುದೋ ತಿಳಿಯದು. ಜಮೀನ್‌ದಾರರೆಲ್ಲಾ ಒಪ್ಪಿದ ಕಡೆ ಹಾಗೆ ಮಾಡಬಹುದು. ಆದರೂ ಈ ಏರ್ಪಾಡಿನಿಂದ ನೀರು ನಿಲ್ಲುತ್ತೆಂದು ನಂಬುವುದು ಸಾಧ್ಯವಲ್ಲ. ಹೊಸದಾಗಿ ಕೆರೆಗಳನ್ನು ಕಟ್ಟಬೇಕು; ಇಲ್ಲವೇ ಹಳೇ ಕೆರೆಗಳ ಏರಿಯನ್ನು ಎತ್ತರಿಸಿ ಕಟ್ಟಬೇಕು.

ಸಣ್ಣ ಕೆರೆಗಳ ಆಬಾದು.

ಸಣ್ಣ ಕೆರೆಗಳ ಆಬಾದಿನ ವಿಷಯದಲ್ಲಿ ಸರ್ಕಾರದವರು ಸೂಚಿಸಿದ ಸಲಹೆಗಳನ್ನು ಪ್ರಜಾಪ್ರತಿನಿಧಿಗಳೆಲ್ಲಾ ಅಂಗೀಕರಿಸಿ ಬಹು ಸಂತೋಷಪಟ್ಟು ದಿವಾನ್‌ರವರನ್ನು ವಂದಿಸಿದರು. ಆ ಸಲಹೆಗಳೇನೆಂದರೆ—

ನಮ್ಮ ಸೀಮೆಯಲ್ಲಿ ಈಗ ಆಬಾದು ಮಾಡಬೇಕಾಗಿರುವ ಸಣ್ಣ ಕೆರೆಗಳು 19,600 ಇರುತ್ತವೆ. ಈಗ ಸಾಲೀಯಾನಾ ಸಂಸ್ಥಾನಾಮಳೆ ಆಬಾದಾಗುತ್ತಿರುವ ಕೆರೆಗಳ ಸಂಖ್ಯೆ ಸುಮಾರು 100. ಈ ಪ್ರಕಾರ ಆಬಾದಿನ ಕೆಲಸ ನಡೆದರೆ ವಿಶೇಷವಾದ ಅಭಿವೃದ್ಧಿಯ ಕೆಲಸವನ್ನು ಮಾಡಲಾಗುವುದಿಲ್ಲ. ಆದುದರಿಂದ ಇನ್ನೂ ಹೆಚ್ಚು ಮುತುವರ್ಜಿಯಿಂದ ಕೆಲಸ ನಡಿಸಬೇಕಾದದ್ದು ಆವಶ್ಯಕ. ಈ ವಿಷಯದಲ್ಲಿ ಸರ್ಕಾರದವರು ನ್ಯಾಯವಾದ ಎಲ್ಲಾ ವಿಧವಾದ ಸಹಾಯವನ್ನೂ ಮಾಡಲು ಸಿದ್ಧರಾಗಿರುತ್ತಾರೆ. (1) ನಕಾಸೆಗಳ ಮತ್ತು ಅಂದಾಜುಗಳ ತಯಾರಿ.—ಆರಂಭದಲ್ಲಿ ನಕಾಸೆಗಳನ್ನೂ ಅಂದಾಜುಗಳನ್ನೂ ಸರಿಯಾಗಿ ತಯಾರುಮಾಡಿಸಬೇಕು; ಸದ್ಯದಲ್ಲಿ ಈ ಕೆಲಸಕ್ಕೆ ಸರ್ಕಾರದವರು ಬೇಕಾದ ಕುಮ್ಮಕ್ಕು ಕೊಡುವುದಕ್ಕೂ, ಕೇಳಿಕೊಳ್ಳುವ ಗ್ರಾಮಸ್ಥರಿಗೆ ನಕಾಸೆಗಳನ್ನೂ ಅಂದಾಜುಗಳನ್ನೂ ತಯಾರು ಮಾಡಿಸಿಕೊಡುವುದಕ್ಕೂ ಸಿದ್ಧರಾಗಿರುತಾರೆ. ಕಾಲಕ್ರಮೇಣ ಈ ಕೆಲಸವನ್ನು ಜನರು ತಾವೇ ಮಾಡಿಕೊಳ್ಳಲು ಶಕ್ತರಾಗಬೇಕು. ಆಗ್ಗೆ ಸರ್ಕಾರದವರು ಮೇಲ್ತನಿಖೆಯನ್ನು ಮಾತ್ರ ಇಟ್ಟುಕೊಳ್ಳುತ್ತಾರೆ. (2) ಕಾಮಗಾರಿ ಸಿಬ್ಬಂದಿ.—ತಮ್ಮ ಗ್ರಾಮದ ಕೆರೆಯನ್ನು ಆಬಾದು ಮಾಡುವುದರಲ್ಲಿ ಗ್ರಾಮಸ್ಥರನ್ನು ಸೇರಿಸಿಕೊಳ್ಳುವುದು ಮುಖ್ಯವಾದ್ದರಿಂದ ಈ ಕಾಮಗಾರಿ ಕೆಲಸವನ್ನು ಅವರಿಗೇ ವಹಿಸಿ, ಆ ಕೆರೆ ಕೆಳಗೆ ಇರುವ ಜಮೀನ್ ಹಿಡುವಳೀದಾರರ ಪೈಕಿ ಮೂರು ಜನಗಳಿಗೆ ವಿಸಾರದಂತೆ ಮುಖ್ಯಸ್ಥರಾದವರನ್ನು ಜವಾಬ್ದಾರರನ್ನಾಗಿ ಮಾಡಿ, ಆ ಕಾಮಗಾರಿಯನ್ನು ಸರಿಯಾಗಿ ನಡಿಸಲು ಅವರಿಂದ ಮುಚ್ಚಳಿಕೆಯನ್ನೂ ಜಾಮೀನನ್ನೂ ಪಡೆಯಬೇಕು. ಕಂಟ್ರಾಕ್ಟ್ ಮೂಲಕವಾಗಿಯಾಗಲೀ, ಅಮಾನಿಯಾಗಲಿ, ಗ್ರಾಮಸ್ಥರು ತಾವೇ ಆ ಕೆಲಸವನ್ನು ಮಾಡಿಸಿ, ಮೇಲ್ವಿಚಾರಣೆಗೂ ತಾವೇ ಏರ್ಪಾಟು ಮಾಡಿಕೊಳ್ಳಬೇಕು. (3) ಈ ಏರ್ಪಾಟಿಗೆ ಹಣವನ್ನು ಒದಗಿಸುವ ವಿಧಾನ.—ಒಂದು ಕೆರೆಯ ಆಬಾದಿಗೆ ತಗಲುವ ಒಟ್ಟು ಖರ್ಚಿನಲ್ಲಿ ರೈತರು ಕೊಡಬೇಕಾದದ್ದು ಮೂರರಲ್ಲಿ ಒಂದು ಭಾಗವಾಗಿರುತ್ತದೆ. ಬಾಕಿ ಎರಡು ಭಾಗಗಳ ಖರ್ಚನ್ನು ಸರ್ಕಾರದವರು ಕೊಡುವರು. ಜನಗಳಿಂದಲೂ, ಸರ್ಕಾರದವರಿಂದಲೂ ಬರುವ ಮೊಬಲಗನ್ನು ಖಜಾನೆಯಲ್ಲಿ ಠೇವಣಿ ಇಡತಕ್ಕದ್ದು. ಈ ಹಣದಲ್ಲಿ, ಅತ್ಯವಶ್ಯಕವಾದ ಸಂದರ್ಭಗಳಲ್ಲಿ ರೈತರಿಗೆ ಸ್ವಲ್ಪ ಹಣವನ್ನು ಮುಂಗಡವಾಗಿ ಕೊಡಬಹುದು. ಹಾಗೆ ಕೊಟ್ಟ ಹಣವನ್ನು ಮುಂದೆ ಕೆಲಸ ನಡೆದು, ಬಿಲ್ಲು ಬಂದಾಗ್ಗೆ ಉತ್ತಾರ ಹಾಕಿಕೊಳ್ಳಬಹುದು. ಸಾಮಾನ್ಯವಾಗಿ, ಜವಾಬ್ದಾರರಾದ ಸರ್ಕಾರದ ನೌಕರರು ಮಾಹೆಯಾನಾ ಅಥವಾ ಆಗಾಗ್ಗೆ ವಾಸ್ತವವಾಗಿ ಅಳತೆ ಮಾಡಿದ ಬಳಿಕ, ಅಥವಾ ಮಾಡಿದ ಅಳತೆಯನ್ನು ಪರೀಕ್ಷೆ ಮಾಡಿದ ಬಳಿಕ ತಯಾರು ಮಾಡಲ್ಪಟ್ಟ ಬಿಲ್ಲುಗಳ ಮೇಲೆಯೇ ಹಣವನ್ನು ಕೊಡತಕ್ಕದ್ದು. ಈಗಿನ ಕೆರೆಗಳ ಆಬಾದಿಗೆ ಮಾತ್ರವಲ್ಲದೆ, ಎಲ್ಲಿಯಾದರೂ ಹೊಸ ಕೆರೆಗಳನ್ನು ಕಟ್ಟುವುದಾದರೂ ಇದೇ ಪದ್ಧತಿಗಳನ್ನು ಅನುಸರಿಸಲಾಗುವುದು.—(4) ಜನಗಳಿಂದ ಕಂಟ್ರಿಬ್ಯೂಷನ್ ಮೊಬಲಗನ್ನು ವಸೂಲ್ಮಾಡುವುದು.—ಒಂದು ಕೆರೆಗೆ ಸಂಬಂಧಪಟ್ಟ ಜನಗಳಲ್ಲಿ ಮೂರರಲ್ಲಿ ಎರಡು ಭಾಗದವರು ತಮ್ಮ ಭಾಗದ ಕಂಟ್ರಿಬ್ಯೂಷನ್ ಮೊಬಲಗನ್ನು ಕೊಡಲು ಒಪ್ಪಿದಲ್ಲಿ ಬಾಕಿಯವರಿಂದಲೂ ಅವರವರ ಭಾಗದ ಕಂಟ್ರಿಬ್ಯೂಷನ್ ಮೊಬಲಗನ್ನು ವಸೂಲ್‌ಮಾಡಲು ನಿಯಮಗಳನ್ನು ಏರ್ಪಡಿಸಲಾಗುವದು. ಒಂದು ಗ್ರಾಮದಿಂದ ಬರಬೇಕಾದ ಕಂಟ್ರಿಬ್ಯೂಷನ್ ಮೊಬಲಗನ್ನೆಲ್ಲಾ ರೈತರ ಪೈಕಿ ಒಬ್ಬಿಬ್ಬರೇ ಕೊಟ್ಟಿದ್ದಾದರೆ ಅವರಿಗೆ ಬಾಕೀ ಜನಗಳಿಂದ ಬರಬೇಕಾದ ಹಣವನ್ನು ಸರ್ಕಾರದ ಮೂಲಕ ವಸೂಲ್ ಮಾಡಿಸಿ ಕೊಡಲು ಸೌಲಭ್ಯಗಳನ್ನು ಕಲ್ಪಿಸಲಾಗುವುದು.

ಪ್ರಾ.—ತೋಟ ತಳಾರಿಗಳಿಗೆ ರೈತರು ಕೊಡುವ ಮಿರಾಸನ್ನು ತಪ್ಪಿಸಬೇಕು. ರೈತರಿಗೆ ಬಹಳ ಕಷ್ಟವಾಗಿದೆ.

ಉ.—ಅವರಿಗೆಲ್ಲಾ ಸಂಬಳ ನಿಗದಿಮಾಡಿದರೆ ಸರ್ಕಾರಕ್ಕೆ 8 ಲಕ್ಷ ರೂಪಾಯಿ ಬೇಕಾದೀತು. ಇದನ್ನು ಈಗ ಇತ್ಯರ್ಥಮಾಡಲಾಗುವುದಿಲ್ಲ. ಈ ಮಿರಾಸಿನ ಪೂರ್ವೋತ್ತರವನ್ನೆಲ್ಲಾ ಸರಿಯಾಗಿ ವಿಚಾರಣೆ ಮಾಡಿ ರಿಪೋರ್ಟು ಕೊಡುವುದಕ್ಕೋಸ್ಕರ ಸರ್ಕಾರದವರು ಒಂದು ಕಮಿಟಿಯನ್ನು ನೇಮಕಮಾಡಬೇಕೆಂದಿದಾರೆ.

ಪ್ರಾ.—ಪಟೇಲ್, ಶ್ಯಾನುಭೋಗರಿಗೆ ಸಲ್ಲುವ ಪ್ರೋಟಗಿ ಹಣ ಬಹಳ ಸ್ವಲ್ಪ. ಇದನ್ನು ಜಾಸ್ತಿಮಾಡಿ ಕೊಡಬೇಕು.

ಉ.—ಇದು ಕಷ್ಟವಾದ ವಿಷಯ; ಈಗ ಇತ್ಯರ್ಥವಾಡಲಾಗುವುದಿಲ್ಲ.

ಪ್ರಾ.—ಹಿಸ್ಸೆದಾರರ ಮತ್ತು ಪಾಲುದಾರರ ಹೆಸರುಗಳನ್ನು ಖಾತೆಯಲ್ಲಿ ದಾಖಿಲ್‌ಮಾಡಬೇಕು. ಇದರಿಂದ ಕಂದಾಯದ ಬಾಕಿಗೆ ಜಮೀನ್ ಹರಾಜಾಗದಂತೆಯೂ, ಇತರ ಹಿಸ್ಸೇದಾರರಿಗೂ ನೋಟೀಸ್ ಕೊಡುವುದಕ್ಕೂ ಸಹಾಯವಾದೀತು.

ಉ.—ಈ ವಿಷಯದಲ್ಲಿ ದಿವಾನ್‌ರವರು ರೆವಿನ್ಯೂ ಮತ್ತು ಸರ್ವೆ ಅಧಿಕಾರಿಗಳ ಕೂಡ ಯೋಚನೆಮಾಡಿ ಒಂದು ಹುಕುಮನ್ನು ಬರೆಸಿ ಸಭೆಯಲ್ಲಿ ಓದಿಸಿ ಹೇಳಿದರು. ಅದರ ಮುಖ್ಯಾಂಶಗಳೇನೆಂದರೆ—

(1) ಲ್ಯಾಂಡು ರೆವಿನ್ಯೂ ಕೋಡು 3 ನೇ ಸೆಕ್ಷನ್ 17 ನೆ ಕಲಂ ಮತ್ತು 68 ನೇ ಸೆಕ್ಷನ್‌ನಲ್ಲಿ ನಿರ್ಧರಿಸಿರುವಂತೆ ಒಂದು ಜಮೀನಿನ ಖಾತೆ ಒಬ್ಬನ ಹೆಸರಿನಲ್ಲಿರತಕ್ಕದ್ದೇ ವಿನಹ ಜಮೀನಿನಲ್ಲಿ ಹಿಸ್ಸೆ ಇರತಕ್ಕವರನ್ನೆಲ್ಲಾ ಜಂಟೀ ಖಾತೆದಾರರನ್ನಾಗಿ ಮಾಡಲು ಆಗುವುದಿಲ್ಲ. ಸರ್ಕಾರದ ಕಂದಾಯಕ್ಕೆ ಒಬ್ಬನೇ ಜವಾಬ್ದಾರನಾಗಿದ್ದರೆ ಅದರ ವಸೂಲಿ ಸುಲಭವಾಗಿ ಆಗುತ್ತೆ ಎಂಬುವುದೇ ಲ್ಯಾಂಡು ರೆವಿನ್ಯೂ ಲಾ ವಿನ ಮುಖ್ಯೋದ್ದೇಶ. (2) 54 ನೇ ಸೆಕ್ಷನ್ ಮೇರಿಗೆ ಒಬ್ಬ ಖಾತೆದಾರನಿಂದ ಬರಬೇಕಾದ ಕಂದಾಯದ ಬಾಕಿಗೆ ಅವನ ಖಾತೆಯಲ್ಲಿರುವ ಜಮೀನು ಪೂರ್ತ ಈಡಾಗಿರುತ್ತೆ. ಖಾತೆದಾರನು ಕಂದಾಯವನ್ನು ಕೊಡದೆ ಹೋಗೋಣದರಿಂದ ಜಮೀನ್ ಕೈತಪ್ಪಿ ಹೋಗುವ ಸಂಭವವಿದ್ದಲ್ಲಿ ಹಿಸ್ಸೆದಾರರು ಬಾಕಿಯನ್ನು ಪಾವತಿಮಾಡಿ ಜಮೀನನ್ನು ಉಳಿಸಿಕೊಳ್ಳಬಹುದು. (3) ಹಾಗೆ ಪಾವತಿಮಾಡಿದ ಮೊಬಲಗಿನ ಪೈಕಿ ಇತರ ಹಿಸ್ಸೆದಾರರಿಂದ ಬರಬೇಕಾದ್ದನ್ನು ವಸೂಲು ಮಾಡತಕ್ಕ ಬಗ್ಗೆ ಡೆಪ್ಯುಟಿ ಕಮಿಷನರ್‌ರವರು ಪೂರಾ ಬಾಕಿಯನ್ನು ಪಾವತಿಮಾಡಿದ ಹಿಸ್ಸೆದಾರನಿಗೆ ಅವಶ್ಯಕವಾದ ಸಹಾಯವನ್ನು ಮಾಡಬಹುದು. (4) ಅಲ್ಲದೆ ಹಿಸ್ಸೆದಾರನಿಗೆ ಮೋಸಮಾಡಬೇಕೆಂಬ ಉದ್ದೇಶದಿಂದ ಜಮೀನ್ ಕೈತಪ್ಪಿ ಹೋಗುವಂತೆ ಮಾಡುವ ಪಕ್ಷಕ್ಕೆ ಜಮೀನನ್ನು ಹರಾಜುಮಾಡದೆ ಪೂರಾ ಬಾಕಿಯನ್ನು ಪಾವತಿಮಾಡಿದ ಹಿಸ್ಸೆದಾರನ ಹೆಸರಿಗೆ ಖಾತೆಮಾಡಬಹುದು. (5) 75 ನೇ ರೂಲ್ ಪ್ರಕಾರ ಹಿಸ್ಸೆದಾರರು ಒಂದು ಖಾತೆಯಲ್ಲಿ ತಮಗಿರುವ ಹಿಸ್ಸೆಯನ್ನು ಮತ್ತು ತಮ್ಮ ಹೆಸರನ್ನು ಗ್ರಾಮದ ಲೆಕ್ಕದಲ್ಲಿ ಖಾತೆದಾರನ ಹೆಸರು ಮತ್ತು ಅವನ ಹಿಸ್ಸೆಯೊಂದಿಗೆ ದಾಖಲ್ ಮಾಡಿಸಿಕೊಳ್ಳಬಹುದು. (6) ಹಾಗೆ ದಾಖಿಲ್‌ಮಾಡಿಸಿಕೊಂಡವರು ಮತ್ತು ಸ್ಪೆಷಲ್ ನೋಟೀಸು ರಿಜಿಸ್ಟರಿನಲ್ಲಿ ತಮ್ಮ ಹೆಸರನ್ನು ರಿಜಿಸ್ಟರು ಮಾಡಿಸಿಕೊಂಡವರೂ ಸಹ ಖಾತೆ ಜಮೀನು ಕಂದಾಯದ ಬಾಕಿಗೆ ಫಾರ್‌ಫೀಟಾಗಿ ಹರಾಜಾಗುವುದಕ್ಕೆ ಮುಂಚೆ ಸ್ಪೆಷಲ್ ನೋಟೀಸಿಗೆ ಅರ್ಹರಾಗಿರುತ್ತಾರೆ. (7) ಮಿನಿಮಮ್‌ಗಿಂತ ಕಡಮೆ ಇಲ್ಲದ ಹಿಸ್ಸೆಯನ್ನು ಪ್ರತ್ಯೇಕವಾಗಿ ರಿಜಿಸ್ಟರು ಮಾಡಿಕೊಳ್ಳತಕ್ಕ ಬಗ್ಗೆ 73 ನೇ ರೂಲಿನಲ್ಲಿ ಅವಕಾಶಕೊಟ್ಟಿರುತ್ತೆ. (8) ಪಟ್ಟೆ ಮತ್ತು ಖಿರ್ದಿಯಲ್ಲಿ ಕಂದಾಯ ಪಾವತಿಮಾಡುವವನ ಹೆಸರು ನಮೂದು ಮಾಡಲ್ಪಡುತ್ತೆ. (9) ಯಾವ ಸರ್ವೆ ನಂಬರಿಗೆ ಕಂದಾಯ ಪಾವತಿಮಾಡುತ್ತಾರೋ ಆ ನಂಬರನ್ನು ಖಾತೆ, ಖಿರ್ದಿ ಮತ್ತು ಪಟ್ಟೆಯಲ್ಲಿ ನಮೂದಿಸಬೇಕೆಂಬ ವಿಷಯವು ಆಲೋಚನೆಯಲ್ಲಿದೆ. (10) ಜಮೀನಿನಲ್ಲಿ ಇರತಕ್ಕ ಹಕ್ಕು ಬಾಧ್ಯತೆಯನ್ನು ವಿಚಾರಮಾಡಿ ಇತ್ಯರ್ಥಪಡಿಸುವುದು ರೆವಿನ್ಯೂ ಆಫೀಸರುಗಳಿಗೆ ಸಾಧ್ಯವಿಲ್ಲವಾದ್ದರಿಂದ ಈಗಿರುವುದಕ್ಕಿಂತಲೂ ಹೆಚ್ಚಾದ ಕಲಕಂಠಿಗಳನ್ನು ಉಂಟುಮಾಡಿಕೊಡಲು ಆಗುವುದಿಲ್ಲ. [ಸಶೇಷ.]

ಒಳದೇಶದ ವೃತ್ತಾಂತಗಳು.

ಈ ವಾರ ನಮ್ಮ ಪತ್ರಿಕೆಯು ಹತ್ತು ಪುಟಗಳುಳ್ಳದ್ದಾಗಿದೆ.

ಕಳೆದ ವಾರ ದಿವಾನ್‌ರವರು ರಾಜಧಾನಿಯ ಟೆಕ್ನಿಕಲ್ ಇನ್‌ಸ್ಟಿಟ್ಯೂಟಿಗೂ, ಚನ್ನಪಟ್ಟಣಕ್ಕೂ, ಶ್ರೀರಂಗಪಟ್ಟಣಕ್ಕೂ ದಯಮಾಡಿ ಅಲ್ಲಲ್ಲಿ ನಡೆಯುವ ಕಾರ್ಯಗಳನ್ನು ಪರಾಂಬರಿಸಿಕೊಂಡು ಬಂದರು

ದೊಡ್ಡಬಳ್ಳಾಪುರದ ಸಬ್ ಡಿವಿಜನ್ ಆಫೀಸಿನಲ್ಲಿ ಮದುರೆ ಎಂಬೊಬ್ಬ ಪೋಲೀಸಿನವನು ಆರ್ಡರ್ಲಿ ಆಗಿದ್ದು ಕೆಲವು ದಸ್ತು ಬಾದಾಮಿ ಕಾಗದವನ್ನು ಕದ್ದುಬಿಟ್ಟನು. ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರು ಕಳೆದ ಶನಿವಾರ ಅವನಿಗೆ ಎರಡು ತಿಂಗಳ ಕಠಿಣ ಸಜಾ ವಿಧಿಸಿರುವರು.

ದಿವಾನ್‌ರವರೂ, ಸೆಕ್ರೆಟರಿಗಳೂ, ಕಂಟ್ರೋಲರ್ ಮುಂತಾದ ಅಧಿಕಾರಿಗಳೆಲ್ಲಾ ಕಳೆದ ಶನಿವಾರ ಭಾನುವಾರಗಳಲ್ಲಿ ರಾಜಧಾನಿಯಿಂದ ವಾಪಸು ದಯಮಾಡಿದರು. ದಿವಾನ್‌ರವರು ಪುನಃ ರಾಜಧಾನಿಗೆ ಬಂದು ಇನ್ನು ಎರಡು ವಾರಗಳ ತನಕ ಇಲ್ಲೇ ಇರುತ್ತಾರೆಂದು ತಿಳಿಯುವುದು.

ಮೈಸೂರು ಸಂಗೀತ ವಿದ್ವಾನ್ ವೇ॥ ವಾಸುದೇವಾಚಾರ್ಯರನ್ನು ನಂಜನಗೂಡು ಮಹಾಜನರು ಅಲ್ಲಿಗೆ ಕರೆಸಿಕೊಂಡು ಶ್ರೀರಾಘವೇಂದ್ರಸ್ವಾಮಿಗಳ ಮಠದಲ್ಲಿ ಕಳೆದ ಭಾನುವಾರ ಸಾಯಂಕಾಲ ಅವರ ಹಾಡುಗಾರಿಕೆ ನಡಿಸಿ ಸಂತೋಷಪಟ್ಟು ತಮ್ಮ ಮೆಚ್ಚಿಕೆಯನ್ನು ಪ್ರಕಾಶಪಡಿಸುವುದಕ್ಕಾಗಿ ಸಬ್ ಡಿವಿಜನ್ ಆಫೀಸರ್ ಮ॥ ಎನ್. ಸುಬ್ಬರಾಯರವರ ಅಧ್ಯಕ್ಷತೆಯಲ್ಲಿ ಅವರಿಗೆ ಒಂದು ಭಂಗಾರದ ಮೆಡಲನ್ನು ಕೊಟ್ಟರೆಂದು ತಿಳಿದು ಬಂದಿದೆ.

ಕೊಪ್ಪ ತಾಲ್ಲೂಕು ಕುದುರಗುಂಡಿ ಪೋಲೀಸ್ ಸ್ಟೇಷನ್ ಕಾನ್‌ಸ್ಟೇಬಲ್ ವೆಂಕಟ್ರಮಣನೆಂಬುವನು ಮುನಿಗೆರೆ ಗ್ರಾಮದ ಚೆನ್ನನೆಂಬುವನಿಂದ ನಾಲ್ಕು ಚಿಲ್ಲರೆ ರೂಪಾಯಿ ಲಂಚ ತೆಗೆದುಕೊಂಡನೆಂದು ರುಜುವಾತಾಗಿ ಕಡೂರು ಅಸಿಸ್ಟೆಂಟ್ ಕಮಿಷನರು ಅವನಿಗೆ 30 ರೂಪಾಯಿ ಜುಲ್ಮಾನೆ ವಿಧಿಸಿದ್ದರು. ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಈ ಶಿಕ್ಷೆ ಪೋಲೀಸಿನವನಿಗೆ ಆದದ್ದು ಅವನ ಅಕೃತ್ಯಕ್ಕೆ ಸಾಲದೆಂದು ಚೀಫ್ ಕೋರ್ಟಿಗೆ ಬರೆದರು. ಅಲ್ಲಿ ಜಡ್ಜರವರು ಆ ಅಪರಾಧಿಗೆ ಜುಲ್ಮಾನೆಯನ್ನು ವಜಾಮಾಡಿ, ಆರು ತಿಂಗಳ ಕಠಿಣ ಸಜಾ ವಿಧಿಸಿರುತ್ತಾರೆ.

ಮ॥ ಬಿ. ಸುಬ್ಬರಾಯರವರು ಮೈಸೂರು ಸಿಟಿ ಕೋಆಪರೇಟಿವ್ ಸೊಸೈಟಿಯಲ್ಲಿ ನಾಲ್ಕಾರು ವರುಷ ಗೌರವ ಸೆಕ್ರೆಟರಿಗಳಾಗಿದ್ದುಕೊಂಡು ವಿಶೇಷ ಉತ್ಸಾಹದಿಂದಲೂ ಮುತುವರ್ಜಿಯಾಗಿಯೂ ಸೊಸೈಟಿ ಕಾರ್ಯಗಳನ್ನು ನಡಿಸಿ ತುಂಬಾ ಅಭಿವೃದ್ಧಿಗೆ ತಂದಿರುವುದನ್ನು ನೋಡಿ ಸೊಸೈಟಿಯ ಮೆಂಬರುಗಳು ಚಂದಾ ಹಾಕಿ 200 ಚಿಲ್ಲರೆ ರೂಪಾಯಿ ಕೂಡಿಸಿ, ಈ ಮೊಬಲಗಿನಲ್ಲಿ ಮ॥ ಸುಬ್ಬರಾಯರಿಗೆ ಒಂದು ಭಂಗಾರದ ಗಡಿಯಾರವನ್ನು ಸರಪಣಿ ಸಮೇತ ಬಹುಮಾನವಾಗಿ ಒಪ್ಪಿಸಿ ಅವರ ಮೇಲೆ ತಮಗಿರುವ ಪ್ರೀತಿ ವಿಶ್ವಾಸಗಳನ್ನು ಪ್ರಕಾಶಪಡಿಸಬೇಕೆಂದು ನಿಶ್ಚಯಿಸಿಕೊಂಡಿರುತ್ತಾರೆ.

ಮದರಾಸ್ ಗವರ್ನ್‌ಮೆಂಟಿನ ಎಗ್ಸಿಕ್ಯೂಟಿವ್ ಕೌನ್‌ಸಿಲ್ ಮೆಂಬರಾದ ಮ॥ ಪಿ. ಎಸ್. ಶಿವಸ್ವಾಮಿ ಅಯ್ಯರವರು ಕಳೆದ ಭಾನುವಾರ ರಾಜಧಾನಿಗೆ ದಯಮಾಡಿ ಸರ್ ಶೇಷಾದ್ರಿ ಬಂಗಲೆಯಲ್ಲಿ ಇಳುಕೊಂಡಿದ್ದರು ಮ್ಯುನಿಸಿಪಲ್ ಪ್ರೆಸಿಡೆಂಟ್ ಮ॥ ಟಿ ಲಕ್ಷ್ಮಣರಾಯರು ಅವರನ್ನು ಕರೆದುಕೊಂಡು ಹೋಗಿ ಪಟ್ಟಣದ ಎಲ್ಲಾ ಭಾಗಗಳನ್ನೂ ಚಾಮುಂಡಿಬೆಟ್ಟದ ಮೇಲೆಯೂ ತೋರಿಸಿದರು. ಅವರು ಮರುದಿನ ಮೋಟರಿನಲ್ಲಿ ರಾಜಧಾನಿಯಿಂದ ಹಳೇಬೀಡಿಗೆ ಹೋಗಿ ಅಲ್ಲಿಂದ ಬೆಂಗಳೂರು, ಶಿವಸಮುದ್ರ, ಚನ್ನಪಟ್ಟಣ ಮುಂತಾದ ಸ್ಥಳಗಳನ್ನು ನೋಡಿಕೊಂಡು ನಾಳೆ ಶನಿವಾರ ವಾಪಸು ಮದರಾಸಿಗೆ ದಯಮಾಡುವವರಾಗಿದಾರೆ

ಕಳೆದ ಶನಿವಾರ ರಾಜಧಾನಿಯ ಮಿಷನ್ ಪ್ರೆಸ್ಸಿನ ಸುಮಾರು 60 ಮಂದಿ ಉದ್ಯೋಗಸ್ಥರಿಗೂ ನೌಕರವರ್ಗದವರುಗಳಿಗೂ ಅಧ್ಯಕ್ಷರು ಪದ್ಧತಿಯ ಪ್ರಕಾರ ಶ್ರೀರಂಗಪಟ್ಟಣದ ದರಿಯಾದೌಲತ್ ಬಂಗಲೆಯಲ್ಲಿ ವಾರ್ಷಿಕ ಔತನವನ್ನು ನಡಿಸಿ ಅವರೊಡನೆ ಸಂಭ್ರಮಪಟ್ಟು ಸ್ವಾಮಿ ಭೃತ್ಯರಿಗಿರಬೇಕಾದ ಪರಸ್ಪರ ಪ್ರೀತಿ ಅನುರಾಗಗಳನ್ನು ಪ್ರಕಾಶಪಡಿಸಿದರು. ಆ ಉದ್ಯಾನವನವು ಬಹುನೇತ್ರಾನಂದಕರವಾಗಿ ಇಡಲ್ಪಟ್ಟಿದೆಯಾದರೂ, ಆ ಚರಿತ್ರಾರ್ಹವಾದ ಬಂಗಲೆಯ ಒಳಹೊರ ಭಾಗಗಳು ಅಲ್ಲಲ್ಲಿ ಕಿತ್ತು ಶಿಥಿಲವಾಗಿರುವವು ಸರ್ಕಾರದವರು ಅದನ್ನೆಲ್ಲಾ ದುರುಸ್ತು ಮಾಡಿಸಿ ಶಾಶ್ವತವಾಗಿ ಕಾಪಾಡುವಂಥಾ ಏರ್ಪಾಡು ಇಡಿಸುತ್ತಾರೆಂದು ನಿರೀಕ್ಷಿಸುತ್ತೇವೆ.

ರಾಜಧಾನಿಯಲ್ಲಿ ಹೋದ ವರುಷ ಮ॥ ಎಂ. ವೆಂಕಟಕೃಷ್ಣಯ್ಯನವರನ್ನು ಪ್ರಜಾಪ್ರತಿನಿಧಿಗಳು ಓಟುಕೊಟ್ಟು ನ್ಯಾಯವಿಧಾಯಕ ಸಭೆಯ ಮೆಂಬರಾಗಿ ಚುನಾಯಿಸಿದ್ದಕ್ಕೋಸ್ಕರ ಸಂಸ್ಥಾನಮಳೆಯ ದೊಡ್ಡ ಮನುಷ್ಯರು ಕಳೆದ ಶುಕ್ರವಾರ ಟೌನ್ ಹಾಲಿನಲ್ಲಿ ಅವರಿಗೆ ಒಂದು ಎಂಟರ್‌ಟೇನ್‌ಮೆಂಟ್ ಮಾಡಿದರು. ರಾಯಬಹದೂರ್ ಮ॥ ಎಂ. ಶಾಮರಾಯರು ಸಭೆಯ ಅಗ್ರಾಸನವನ್ನು ವಹಿಸಿ, ಮ॥ ವೆಂಕಟಕೃಷ್ಣಯ್ಯನವರ ಶ್ರೇಷ್ಠತರವಾದ ಗುಣಗಳನ್ನೂ ಪ್ರಜಾರಂಜಕವಾದ ಕಾರ್ಯಗಳನ್ನೂ ಕುರಿತು ಬಹು ಸ್ವಾರಸ್ಯವಾಗಿ ವಿವರಿಸಿ ಅವರ ದೇಶವಾತ್ಸಲ್ಯವನ್ನು ಕೊಂಡಾಡಿದರು. ಈ ಸಂತೋಷ ಕೂಟವು ಬಹು ತೃಪ್ತಿಕರವಾಗಿಯೂ, ಆಹ್ಲಾದಕರವಾಗಿಯೂ ನೆರವೇರಿತು.

ಸುಮಾರು 10-11 ತಿಂಗಳಿಂದ ರಾಜಧಾನಿಯಲ್ಲಿ ಮ್ಯುನಿಸಿಪಲ್ ಇನ್‌ಜನಿಯರಾಗಿದ್ದ ಮ॥ ಸಿ. ವಿ. ಕಾಶೀಪತಿಶಾಸ್ತ್ರಿಯವರಿಗೆ ಮಂಡ್ಯದ ಸಬ್ ಡಿವಿಜನ್ ಇನ್‌ಜನಿಯರ್ ಕೆಲಸಕ್ಕೆ ವರ್ಗವಾಯಿತು. ಮ್ಯುನಿಸಿಪಾಲಿಟಿಯ ಇನ್‌ಜನಿಯರ್ ಶಾಖೆಯ ಉದ್ಯೋಗಸ್ಥರು ಮ॥ ಶಾಸ್ತ್ರಿಗಳಿಗೆ ಒಂದು ಟೀಪಾರ್ಟಿಯನ್ನು ಕೊಟ್ಟರು. ಪ್ರೆಸಿಡೆಂಟರೂ, ವೈಸ್ ಪ್ರೆಸಿಡೆಂಟರೂ, ಕೌನ್‌ಸಿಲರುಗಳೂ ಈ ಕೂಟದಲ್ಲಿ ಹಾಜರಾಗಿದ್ದು ತಮ್ಮ ಪ್ರೀತಿವಿಶ್ವಾಸಗಳನ್ನು ತೋರ್ಪಡಿಸಿದರು. ಫಲಹಾರವೂ ತಾಂಬೂಲವೂ ಆದ ಮೇಲೆ ಹೆಡ್ ಮುನ್‌ಷಿ ಮ॥ ಶ್ರೀಕಂಠಯ್ಯನವರು ಉದ್ಯೋಗಸ್ಥರ ಪರವಾಗಿ ಮ॥ ಶಾಸ್ತ್ರಿಗಳ ಗುಣ ವಿದ್ಯೆ, ವಿನಯ ನಿಪುಣತೆಗಳನ್ನು ವಿವರಿಸಿ ಬಹು ಆಹ್ಲಾದಕರವಾದ ಭಾಷಣವನ್ನು ಮಾಡಿದರು. ಮ॥ ಶಾಸ್ತ್ರಿಗಳು ಸಮಯೋಚಿತ ವಾಕ್ಯಗಳಿಂದ ಅವರನ್ನೆಲ್ಲಾ ಕೃತಜ್ಞತಾಪೂರ್ವಕವಾಗಿ ವಂದಿಸಿದರು.

ಕಳೆದ ಶನಿವಾರ ರಾಜಧಾನಿಯಲ್ಲಿ ದಸರಾ ಪ್ರದರ್ಶನಶಾಲೆಯಲ್ಲಿ ಶ್ರೀಮನ್ ಮಹಾರಾಜರವರು ಅಗ್ರಾಸನವನ್ನು ವಹಿಸಿ ಪ್ರದರ್ಶಕರಿಗೆ ಮೆಡಲುಗಳನ್ನು ದಯಪಾಲಿಸಿದರು. ಆಗ್ಗೆ ರಾಜಧಾನಿಯ ದೊಡ್ಡ ಮನುಷ್ಯರೂ ದಿವಾನ್‌ರೇ ಮೊದಲಾದ ಅಧಿಕಾರಿಗಳೂ ಕರೆಸಲ್ಪಟ್ಟು ಹಾಜರಾಗಿದ್ದರು. ಸರ್ದಾರ್ ಕಾಂತರಾಜೇ ಅರಸಿನವರು ಪ್ರದರ್ಶನದ ವೃತ್ತಾಂತವನ್ನು ಅರಿಕೆ ಮಾಡಿದ ಬಳಿಕ ಶ್ರೀಮನ್ ಮಹಾರಾಜರವರು ಸಮಯೋಚಿತವಾದ ಪ್ರೋತ್ಸಾಹ ವಾಕ್ಯಗಳನ್ನು ಅಪ್ಪಣೆ ಕೊಡಿಸಿ ಮೆಡಲುಗಳನ್ನು ದಯಪಾಲಿಸಿದರು. ಈಚೆಗೆ ಸೋಮವಾರ ಸಾಯಂಕಾಲ ಮಹಾರಾಜಕುಮಾರ್ತೆಯವರು ಪ್ರದರ್ಶನ ಶಾಲೆಯಲ್ಲಿ ಮಹಿಳೆಯರ ಮಂಡಲಿಯಲ್ಲಿ ಅಗ್ರಾಸನವನ್ನು ವಹಿಸಿ ಪ್ರದರ್ಶಕರಾದ ಸ್ತ್ರೀಯರಿಗೆ ಮೆಡಲುಗಳನ್ನು ದಯಪಾಲಿಸಿ, ಮನೆಗಳಲ್ಲಿ ಸ್ತ್ರೀಯರು ಸಣ್ಣ ಕಸಬುಗಳನ್ನು ನಡಿಸಬೇಕೆಂಬ ವಿಷಯವಾಗಿ ಪ್ರೋತ್ಸಾಹಕರವಾದ ಭಾಷಣವನ್ನು ಮಾಡಿದರು.

ಮೊನ್ನೆ ಮಂಗಳವಾರ ರಾತ್ರಿ ಮೈಸೂರಿನ ಇಂಪೀರಿಯಲ್ ಸರ್ವಿಸ್ ಸೈನ್ಯದ ಎರಡು ರೆಜಿಮೆಂಟುಗಳೂ ಸಾರ್ವಭೌಮ ಸರ್ಕಾರದವರ ಸಹಾಯಕ್ಕಾಗಿ ಬೆಂಗಳೂರಿನಿಂದ ಪ್ರಯಾಣ ಮಾಡಿದವು. ಶ್ರೀಮದ್ಯುವರಾಜರವರು ಬೆಂಗಳೂರಿಗೆ ದಯಮಾಡಿದ್ದು ನಮ್ಮ ಸೈನಿಕರಿಗೆ ಶ್ರೀಮನ್ ಮಹಾರಾಜರವರ ಅನುಜ್ಞೆಯನ್ನು ಓದಿ ಅಪ್ಪಣೆಕೊಡಿಸಿ ಅವರನ್ನೆಲ್ಲಾ ಸಾಗಕಳುಹಿಸಿದರು. ಈ ಅನುಜ್ಞೆಯ ನಕಲುಗಳನ್ನು 6 ಕಾಸಿಗೆ ಒಂದರಂತೆ ಬಿಕರಿ ಮಾಡಿ ಉತ್ಪತ್ತಿಯಾಗುವ ಹಣವನ್ನು ಯುದ್ಧದ ರಿಲೀಫ್ ಫಂಡಿಗೆ ಕೊಡಬೇಕೆಂಬ ಉದ್ದೇಶದಿಂದ ಮೈಸೂರು ಜನರಲ್ ಏಜನ್‌ಸಿಯ ಮ॥ ಎಲ್. ರಾಮಚಂದ್ರರಾಯರು ಮಹಾರಾಜರವರ ಅಪ್ಪಣೆಪಡೆದು ವಹಿಸಿಕೊಂಡಿರುತ್ತಾರೆ. ಈ ಸೈನ್ಯದಲ್ಲಿ ಮೈಸೂರು ರಾಜಪಿಂಡೆಯವರ 6-7 ಮಂದಿ ಹುದ್ದೇದಾರರಾಗಿದ್ದು ಸೈನ್ಯದ ಕೂಡ ಹೋಗೋಣದರಿಂದ ಮೈಸೂರು ಅರಸುಗಳ ಕ್ಲಬ್ಬಿನ ಪರವಾಗಿ ಸರ್ದಾರ್ ಗೋಪಾಲಕೃಷ್ಣೆ ಅರಸಿನವರೇ ಮುಂತಾದವರು ಬೆಂಗಳೂರಿನಲ್ಲಿ ಹುದ್ದೇದಾರರಾದ ಅರಸು ಕುಮಾರರನ್ನು ಮಂಗಳವಾರ ಮಧ್ಯಾಹ್ನ ಕಂಡು ಅವರಿಗೆ ಶುಭವಚನಗಳನ್ನು ಹೇಳಿ ಜಯಶೀಲರಾಗಿ ಬರುವಂತೆ ಹಾರೈಸಿದರು.

ರಾಜಧಾನಿಯ ಪತ್ನಿವನಾಭಿವೃದ್ಧಿಯಲ್ಲಿ ಕಾಸ್ಮಾಪಾಲಿಟನ್ ಕ್ಲಬ್ಬಿನ ಮೆಂಬರುಗಳು ಕಳೆದ 16 ವರುಷಗಳಿಂದ ಬಾಡಿಗೆ ಕಟ್ಟಡದಲ್ಲಿ ಕ್ಲಬ್ಬನ್ನು ಮಾಡಿಕೊಂಡಿದ್ದರು ಈಚೆಗೆ ಶ್ರೀಮನ್ ಮಹಾರಾಜರವರು ಕೃಪೆಯಿಟ್ಟು ಮಹಾರಾಜಾ ಕಾಲೇಜಿನ ಎದುರು ಪಾರ್ಶ್ವದ ಮೈದಾನಿನಲ್ಲಿ ಒಂದು ನಿವೇಶನವನ್ನು ಕ್ಲಬ್ಬಿನ ಕಟ್ಟಡಕ್ಕಾಗಿ ದಯಪಾಲಿಸಿದರು. ಈಗ ಸೆಕ್ರೆಟರಿಯಾಗಿರುವ ಡಾ॥ ಸಿ. ರಾಜಾರಾಮರಾಯರವರು ತುಂಬಾ ಮುತುವರ್ಜಿ ವಹಿಸಿ ಮೆಂಬರುಗಳಲ್ಲಿ ಹಣವನ್ನು ಕೂಡಿಸಿ ಬಹಳ ಬೇಗನೆ ಕ್ಲಬ್ಬಿನ ಹೊಸ ಕಟ್ಟಡವನ್ನು ತಯಾರ್ಮಾಡಿಸಿದರು ಕಳೆದ ಸೋಮವಾರ ಸಾಯಂಕಾಲ ಶ್ರೀಮನ್ ಮಹಾರಾಜರವರು ಶ್ರೀಮದ್ಯುವರಾಜರವರೊಡನೆ ದಯಮಾಡಿ ಈ ಕಟ್ಟಡವನ್ನು ಪ್ರತಿಷ್ಠೆಮಾಡಿ ಬಾಗಿಲು ತೆರೆದರು. ಪ್ರೆಸಿಡೆಂಟ್ ಮ॥ ಎಂ. ಕಾಂತರಾಜೆ ಅರಸಿನವರು ಕ್ಲಬ್ಬಿನ ಪೂರ್ವಚರಿತ್ರೆಯನ್ನೂ, ಡಾ॥ ರಾಜಾರಾಮರಾಯರ ಸಾಹಸ ಕಾರ್ಯವನ್ನೂ ವಿವರಿಸಿ ಅರಿಕೆಮಾಡಿದ್ದನ್ನು ಕೇಳಿ ಶ್ರೀಮನ್ ಮಹಾರಾಜರವರು ತುಂಬಾ ಸಂತೋಷಪಟ್ಟು, ಇನ್ನು ಮುಂದೆಯೂ ಈ ಕ್ಲಬ್ಬು ದಿನಕ್ರಮೇಣ ಅಭಿವೃದ್ಧಿಗೆ ಬಂದು ದೊಡ್ಡ ಮನುಷ್ಯರು ಏಕೀಭವಿಸಿ ಸಂತೋಷಪಡಲು ಸಹಾಯವಾಗಲೆಂದು ಹಾರೈಸಿದರು. ಈ ಕಟ್ಟಡಕ್ಕೆ 10,000 ರೂಪಾಯಿ ಖರ್ಚಾಗಿರುವುದು. ಮೆಂಬರುಗಳು 100 ರೂಪಾಯಿನ ಷೇರು ಪತ್ರಗಳನ್ನು ಪಡೆದು ಹಣವನ್ನು ಒದಗಿಸಿರುತ್ತಾರೆ ದೊಡ್ಡದೊಡ್ಡ ಅಧಿಕಾರಿಗಳೂ, ಗಣ್ಯರಾದ ಪ್ರಜೆಗಳೂ ಇನ್ನೂ ಹೆಚ್ಚಾಗಿ ಸೇರಿ ಇಂಥಾ ಕ್ಲಬ್ಬನ್ನು ಅಭಿವೃದ್ಧಿಗೆ ತಂದಾರೆಂದು ಹಾರೈಸುತ್ತೇವೆ.

ಬಾತ್ಮಿದಾರರಿಗೆ ನೋಟೀಸ್.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಸುದ್ದಿಗಾರ, ಕಲ್ಲಿಶನಹಳ್ಳಿ ; ಕೆ. ವೆಂಕಟರಾಯ ಶೆಟ್ಟಿ, ಒಳಗೂರು ; ಬಾತ್ಮಿದಾರ್, ಕರೋಡಿ ಗ್ರಾಮ ; ಜಿ. ಫುಟ್ಟೋರಾವ್, ಗುಂಡ್ಲುಪೇಟೆ ; ವಿದ್ಯಾಇಲಾಖೆಯ ಓರ್ವ ಸೇವಕ, ಸೊರಬ ; ಬಾತ್ಮಿದಾರ್, ಶಿವಮೊಗ್ಗ ; ಗಂಕಾರಿನರಿ, ಬಸರಾಳು ; ಪ್ರತ್ಯಕ್ಷದರ್ಶಿ, ದೇವಾಲದಕೆರೆ— ಈ ಬಾತ್ಮಿಗಳಲ್ಲಿ ಪ್ರಕಟಿಸಲು ಅರ್ಹವಾದ ವರ್ತಮಾನಗಳೇನೂ ಕಂಡುಬರುವುದಿಲ್ಲ

ವೆಂಕಟದಾಸಪ್ಪ, ಗೋಂದಾವಲಹಳ್ಳಿ.—ನೀವು ಹೇಳುವ ನೌಕರನಿಂದ ಪ್ರಜೆಗಳಿಗೆ ಅಷ್ಟು ಹಿಂಸೆ ಇರುವುದಾದರೆ ಆ ಪ್ರಾಂತ್ಯದ ಕೆಲವು ಮಾನ್ಯ ಗೃಹಸ್ಥರು ಸೇರಿ ಮೇಲ್ಪಟ್ಟ ಅಧಿಕಾರಿಗಳಿಗೆ ತಿಳಿಸಿ ವೃತ್ತಾಂತ ಪಡೆಯಬಾರದೇ?

ಹರಿರಾಮ ಮಿಶ್ರ, ಬೆಂಗಳೂರು ಸಿಟಿ —ನೀವು ಹೇಳುವ ವಿಷಯವನ್ನು ಆ ವೈದ್ಯರು ಛಾಪು ಕೊಟ್ಟು ಪ್ರಕಟಮಾಡಿಸಬೇಕು.

ನಿಷ್ಪಕ್ಷಪಾತಿ, ಕೋಲಾರ್ ಗೋಲ್ಡ್.—ಈ ಬಾತ್ಮಿಯನ್ನು ಪ್ರಕಟಿಸಲಾರೆವೆಂದು ವಿಷಾದ ಪಡುತ್ತೇವೆ

ಪ್ರಜಾ ಹಿತಚಿಂತಕ, ಕೋಲಾರ್ ಗೋಲ್ಡ್. ಸ್ಥಳಾಧಿಕಾರಿಗಳಿಗೆ ತಿಳಿಸಿದರೆ ಅವರು ಕ್ರಮಪಡಿಸಬಲ್ಲರು. --ಎಡಿ.]

ಕರೆಸ್‌ಪಾಂಡೆನ್ಸ್.

ಹಾಸನದಲ್ಲಿ ಎರಡು ಕೊರತೆಗಳು.

ಅಯ್ಯಾ,—ಇಲ್ಲಿನ ಆಸ್ಪತ್ರೆಯಲ್ಲಿ 2 ತಿಂಗಳಿಂದ ರೋಗಿಗಳಿಗೆ ಔಷಧಿಗಳು ಕಾಲಕ್ರಮವಾಗಿ ಸಿಕ್ಕುತ್ತಾ ಇಲ್ಲ. ಚೀಟಿ ಬೇಗಬೇಗನೇ ಸಿಕ್ಕುತ್ತಿದ್ದರೂ ಅವುಗಳಂತೆ ಔಷಧಿಗಳನ್ನು ಪಡೆಯುವುದು ಕಷ್ಟವಾಗಿದೆ. ಇದಕ್ಕೆ ಕಾರಣವೇನೆಂದು ವಿಚಾರಿಸಲಾಗಿ ಅನನುಭವಿಯಾದ ಕಾಂಪೌಂಡರನು, ಅಂಥವನೇ ಆದ ವಾಲಂಟಿಯರು ಔಷಧಿಕೊಡುವಂತೆ ನೇಮಕವಾಗಿದಾರೆಂದು ತಿಳಿದುಬಂತು. ನಮ್ಮ ಡಾಕ್ಟರವರು ಕೇವಲ ಪ್ರಜಾಹಿತಚಿಂತಕರು. ಇವರು ಈ ನ್ಯೂನತೆಯನ್ನು ಸರಿಪಡಿಸಬೇಕೆಂದು ಸೂಚಿಸುತ್ತೇನೆ.

ಮೈಸೂರು, ಬೆಂಗಳೂರು ನಗರಗಳಲ್ಲಿಯೂ, ಇತರ ಕೆಲವು ಊರುಗಳಲ್ಲಿಯೂ ಸರ್ಕಾರದವರಿಂದಲೂ, ಸ್ಥಳನಿವಾಸಿಗಳಿಂದಲೂ ಸಕಲಜನೋಪಯೋಗಿಗಳಾದ ವಾಚನಾಲಯಗಳೂ, ಪುಸ್ತಕಭಂಡಾರಗಳೂ ಸ್ಥಾಪಿತಗಳಾಗಿವೆ ಎಂದು ಕೇಳುತ್ತೇನೆ. ಈ ಹಾಸನದಲ್ಲಿ ಒಂದು ವಾಚನಾಲಯವು ಇದ್ದರೂ ಅದು ದೊಡ್ಡ ಮನುಷ್ಯರಿಗೆ ಮಾತ್ರವೇ ಅನುಕೂಲವಾಗಿದೆ. ಚಂದಾ ಕೊಡಲಾರದ ಅನೇಕಾನೇಕ ಮಂದಿ ಬಡಜನಗಳಿಗೆ ಲೌಕಿಕ ವೈದಿಕ ಜ್ಞಾನಬೋಧಕಗಳಾಗಿರುವಂತೆ ನಮ್ಮ ಸರ್ಕಾರದವರು ಈ ನಗರಕ್ಕೆ ಒಂದು ಪಬ್ಲಿಕ್ ಫ್ರೀ ಲೈಬ್ರರಿಯನ್ನು ಸ್ಥಾಪಿಸಿ ಕೊಡುವುದರ ಮೂಲಕ ಮಹೋಪಕಾರ ಮಾಡಬೇಕೆಂದೂ, ಅದಕ್ಕೆ ಒಂದೆರಡು ಇಂಗ್ಲಿಷ್ ಮತ್ತು ಸಲಕ ಕನ್ನಡ ಪತ್ರಿಕೆಗಳನ್ನೂ ತರಿಸಿ ಕೊಡೋಣವಾಗಲೆಂದೂ ಸ್ಥಳಪರಸ್ಥಳದವರೆಲ್ಲರೂ ಬೇಡಿಕೊಳ್ಳುತ್ತಾರೆ.

ಜನಹಿತೈಷಿ.

ಗೋರೀಬಿದನೂರು ತಾಲ್ಲೂಕು ಬಡಮಾಸ್ಟರುಗಳ ಸಂಬಳಗಳ ಗೋಳಾಟ.

ಅಯ್ಯಾ,—ಅನೇಕ ಡಿಪಾರ್ಟ್‌ಮೆಂಟುಗಳಲ್ಲಿ ಒಂದೆರಡು ತಾರೀಖಿನೊಳಗಾಗಿ ಕೆಲವು ಮಾಸ್ತರುಗಳಿಗೆ ತಲಬು ಪಾವತಿಯಾಗುತ್ತದೆ. ಇನ್ನು ಕೆಲವು ತಾಲ್ಲೂಕುಗಳಲ್ಲಿ ಅಂತ್ಯಪಕ್ಷ ಆಯಾ ಮಾಹೆಯ 9-10 ನೇ ತಾರೀಖಿನೊಳಗೆ ತಲಬು ಪಾವತಿಯಾಗುವುದು. ಈ ಗೋರೀಬಿದನೂರು ತಾಲ್ಲೂಕಿನಲ್ಲಿ ಸುಮಾರು 80 ಜನ ಸ್ಕೂಲ್ ಮಾಸ್ಟರುಗಳಿರುವರು. ಪ್ರತಿಯೊಬ್ಬ ಉಪಾಧ್ಯಾಯರಿಗೂ ಪ್ರತಿ ಮಾಹೆಯ ತಲಬು ಮುಂದಿನ ತಿಂಗಳ 18-19 ಅಥವಾ 30 ನೇ ತಾರೀಖಿಗೆ ತಪ್ಪದೆ ಪಾವತಿಯಾಗುತ್ತಿದೆ. ಸಹಜವಾಗಿಯೂ ಟ್ರೆಜರಿ ಆಫೀಸರವರ ಮತ್ತು ನಗದೀ ಗುಮಾಸ್ತೆಯವರ ಏರ್ಪಾಡಾಗಿರುವುದು ಶೇಕ್ದಾರ್‌ರವರು ತಮ್ಮ ಜವಾನನನ್ನು ಸಂಬಳಕ್ಕಾಗಿ ಪ್ರತಿ ತಿಂಗಳಲ್ಲಿ 3-4 ಸಲ ತಾಲ್ಲೂಕ್ ಕಛೇರಿಗೆ ಹೋಗಿ ಬರುವಂತೆ ಏರ್ಪಾಡುಮಾಡಿ ಕಳುಹಿಸಿದಾಗ್ಯೂ ನಗದೀ ಗುಮಾಸ್ತೆಯವರು ಬಿಲ್ ಮಾಡುವುದೇ ಬಹಳ ದುಸ್ತರವಾಗಿದೆ ಎಷ್ಟು ಸಲ ತಾಲ್ಲೂಕ್ ಅಮಲ್ದಾರ್‌ರಿಗೆ ಅರ್ಜಿ ಮುಖಾಂತ್ರವೂ, ರೂಬರೂಬೂ ಹೇಳಿಕೊಂಡರೂ ಸರಿಯಾದ ವಿಮರ್ಶೆಯೇ ಇಲ್ಲವಾಗಿದೆ. ಕ್ಷಾಮದ ನಿವಾರಣೆಗಾಗಿ ಘನ ಸರ್ಕಾರದವರು 1914 ನೇ ಜೂಲೈ ಮಾಹೆಗೆ ಒಂದು ರೂಪಾಯಿನಂತೆ ಮುಂಜೂರು ಮಾಡಿ ಸರ್ಕ್ಯುಲರ್ ಹುಕುಂ ದಯಪಾಲಿಸಿದಾಗ್ಯೂ ಈ ತಾಲ್ಲೂಕ್ ಖಜಾನೆಯಲ್ಲಿ ಖರ್ಚು ಹಾಕಿ ಪಾವತಿಮಾಡಲು ಅವಕಾಶವಿಲ್ಲವಾಗಿ ತಾಲ್ಲೂಕ್ ಆಫೀಸರರ ವಿಚಕ್ಷಣೆಯು ಈ ರೀತಿ ಇರುವುದು. ಈ ರೀತಿಯಾದ ಕುಂದರೆಗಳನ್ನು ಸರ್ಕಾರದವರು ನ್ಯಾಯರೀತಿಯಿಂದ ವಿಚಾರಿಸಿ ತಕ್ಕ ಏರ್ಪಾಡುಗಳನ್ನು ಮಾಡುವರೆಂದು ನಂಬಿರುವ

ಬಡಮಾಸ್ಟರು.

[ತಾಲ್ಲೂಕುಗಳಲ್ಲೂ ಗ್ರಾಮಾಂತರಗಳಲ್ಲೂ ಸಣ್ಣ ನೌಕರರಿಗೆ ಈಗಿನಂಥಾ ಕಷ್ಟಕಾಲದಲ್ಲಿ ಸಾವಕಾಶವಾಗದಂತೆ ಸಂಬಳಗಳನ್ನು ಬಟವಾಡೆ ಮಾಡಿಸಬೇಕಾದದ್ದು ಪರಮಾವಶ್ಯಕ. ಮೇಲ್ಕಂಡ ಬಾತ್ಮಿಯನ್ನು ಪ್ರಕಟಿಸಬೇಕಾಯಿತಲ್ಲಾ ಎಂದು ವಿಷಾದಪಡುತ್ತೇವೆ.—ಎಡಿ.]

ಯುದ್ಧವೂ ಹಳ್ಳಿಯ ಜನರೂ.

ಅಯ್ಯಾ,—ಯೂರೋಪ್ ಖಂಡದಲ್ಲಿ ಜರುಗುತ್ತಿರುವ ಯುದ್ಧ ಸಮಾಚಾರವು ಹಿಂದುಸ್ಥಾನದ ಎಲ್ಲಾ ಜನಗಳಿಗೂ ಆವಶ್ಯಕವಿರುತ್ತೆ. ಅಂಚೇ ಕಛೇರಿಗಳ ಬಾಗಿಲಿನಲ್ಲಿ ವರ್ತಮಾನ ಪತ್ರಿಕೆಗಳ ನಿರೀಕ್ಷಣೆಯಿಂದ ನಿಲ್ಲುವ ನಾಗರಿಕರ ಆತುರವು ಮತ್ತಾವಾಗಲೂ ಇದ್ದಿಲ್ಲ. ಯುದ್ಧವಂದರೇನೆಂಬುದನ್ನು ಕೂಡ ತಿಳಿಯದ ಹಳ್ಳಿಯವರು ವರ್ತಮಾನ ಪತ್ರಿಕೆಯನ್ನು ಕಂಡ ಕೂಡಲೆ ಗುಂಪುಗುಂಪಾಗಿ ಕೂಡಿ ಸಮಾಚಾರವನ್ನು ತಿಳಿಯಲು ಅಪೇಕ್ಷಿಸುತ್ತಿರುವರು. ತಿರುಪದವರು, ಕೂಲಿಯವರು, ಅತ್ಯಲ್ಪ ಬಡ ನೌಕರರು ಇವರುಗಳು ಉದ್ದೇಶಪೂರ್ವಕವಾಗಿ ಯುದ್ಧ ಸಮಾಚಾರವನ್ನು ತಿಳಿಯಲು ದಿನವೂ ಪತ್ರಿಕೆಯನ್ನು ಓದುವ ದೊಡ್ಡ ಮನುಷ್ಯನಲ್ಲಿಗೆ ಹೋಗುತ್ತಿರುವರು ಇದರಿಂದ ಬ್ರಿಟಿಷ್ ಚಕ್ರಾಧಿಪತ್ಯದ ಸದ್ಗುಣವೂ, ಪ್ರಜೆಗಳಿಗಿರತಕ್ಕ ವಾತ್ಸಲ್ಯವೂ ಗೋಚರವಾದಂತಾಯಿತು

ಯುದ್ಧದಲ್ಲಿ ಜರುಗುವ ಕಾರ್ಯಗಳು ರಾಜಕೀಯವಾಗಿರುತ್ತವೆ. ಇದರ ಜವಾಬ್ದಾರಿಕೆಯನ್ನು ವಹಿಸಿರತಕ್ಕ ಅಧಿಕಾರಿಯು ಸಾಮಾನ್ಯ ಪುರುಷನಲ್ಲ ; ಅಲ್ಲದೆ ಯೂರೋಪ್ ಖಂಡದ ರಾಷ್ಟ್ರಗಳ ಚರಿತ್ರೆಗಳನ್ನು ತಿಳಿದವರಲ್ಲದೆ, ಇತರರಿಗೆ ಯುದ್ಧಕ್ಕೆ ಸಂಭವಿಸಿದ ಕಾರಣಗಳೂ, ಆಯಾ ರಾಷ್ಟ್ರಗಳ ಶಕ್ತಿಯೂ ತಿಳಿಯಲಿಕ್ಕೆ ಕಾರಣವಿಲ್ಲ. ಇಂಥಾದ್ದರಲ್ಲಿ ಭಾಷಾ ಪರಿಶ್ರಮ ಮಾತ್ರದಿಂದ ಪತ್ರಿಕೆಗಳನ್ನೋದಿ ಯುದ್ಧ ಸಮಾಚಾರದ ತಾತ್ಪರ್ಯವನ್ನು ಸ್ವಅಭಿಪ್ರಾಯದೊಡನೆ ತಿಳಿಸುವವರ ಮಾತುಗಳಿಗೆ ಹಳ್ಳಿಯ ಜನಗಳು ಕಿವಿಗೊಡಬಾರದು.

ರಣರಂಗವು ನಮಗೆ ಬಹು ದೂರದಲ್ಲಿರುತ್ತದೆ. ಅತಿ ಮುಖ್ಯವಾದ ಸಮಾಚಾರಗಳನ್ನು ಪತ್ರಿಕೆಗಳು ನಮಗೆ ತಿಳಿಸುತ್ತವೆ. ಸಮಾಚಾರಕ್ಕೆ ನಮಗೆ ಪತ್ರಿಕೆಗಳೇ ಆಧಾರವು ಪತ್ರಿಕೆಗಳಲ್ಲಿಲ್ಲದ ಹೆಚ್ಚು ಸಮಾಚಾರಗಳನ್ನು ತಿಳಿಸುವ ಹರಟೆಕಾರರ ಮಾತುಗಳಿಗೆ ಜನರು ಮರುಳಾಗಬಾರದು

ಕನ್ನಡ ಪತ್ರಿಕೆಗಳನ್ನೋದಿ ಆಯಾ ರಾಷ್ಟ್ರಗಳ ಸ್ಥಿತಿಗತಿ ಮತ್ತು ಶಕ್ತಿಯ ವಿಚಾರದಲ್ಲಿ ತಮಗೆ ಸ್ವಲ್ಪ ತಿಳುವಳಿಕೆ ಇಲ್ಲದಿರುವಾಗ ಆ ಭಾಗದಲ್ಲಿ ಅನಕ್ಷರಸ್ಥರಾದ ಪ್ರಜೆಗಳಿಗೆ [illegible] ತಿಳಿಸುತ್ತ [illegible] ಅನಕ್ಷರಸ್ಥರೆಂದು ತಿಳಿದುಕೊಂಡು ವರ್ತಮಾನವನ್ನು ಇತರರಿಂದ ತಿಳಿದು ಕೊಳ್ಳುವುದು ಉತ್ತಮ ; ಅಥವಾ ಪತ್ರಿಕೆಗಳಲ್ಲಿರುವ ಅಂಶಗಳನ್ನು ಮಾತ್ರ ಅವುಗಳ ದೊರೆ ಓದಿದ ಬಳಿಕ ಅದರ ಮೇಲೆ ತಮ್ಮ ಅಭಿಪ್ರಾಯವನ್ನು [illegible] ಮನಸ್ಸು ಮಾಡುವುದು ಸರಿಯಲ್ಲ.

ಪತ್ರಿಕೆಗಳಲ್ಲಿ [illegible] ಸಮಾಚಾರಗಳನ್ನು [illegible] ಸತ್ಯವಾದಿಗಳಿಗೆ ಬೇರೇ ವಿಧವಾದ ಸಮಾಚಾರವು ಎಲ್ಲಿಂದ ಬರುತ್ತೆ ಎಂಬ ಪ್ರಶ್ನೆಗೆ ಅವರು ಉತ್ತರ ಕೊಡಬೇಕು [illegible] ಇಂಥವರ ಮಾತುಗಳನ್ನು [illegible] ಗಳಿಗೆ ತರಬಾರದು.

ಸದ್ಯದಲ್ಲಿ ನಾವು ಮಾಡಬೇಕಾದ ಕಾರ್ಯಗಳೆಂದರೆ (1) ಭಗವಂತನು ಬ್ರಿಟಿಷ್ ಚಕ್ರಾಧಿಪತ್ಯಕ್ಕೂ ಅವರ ಗೆಳೆಯರಾದ ಅರಸರುಗಳಿಗೂ ಜಯವನ್ನೂ, ಯಶಸ್ಸನ್ನೂ ದಯಪಾಲಿಸಲೆಂದು ಪ್ರಾರ್ಥಿಸಬೇಕು ; (2) ರಣಭೂಮಿಯಲ್ಲಿರುವ ಸಿಪಾಯಿಗಳ ಸಂಸಾರಸ್ಥರ ಸಹಾಯಕ್ಕಾಗಿ ಶಕ್ತ್ಯಾನುಸಾರ ಚಂದಾ ಕೊಡಬೇಕು. ಈ ಎರಡು ಕೆಲಸಗಳೂ ನಮ್ಮಲ್ಲಿ ಪ್ರತಿ ಒಬ್ಬರಿಂದಲೂ ಅವಶ್ಯಕವಾಗಿ ಮಾಡಲ್ಪಡತಕ್ಕವುಗಳಾಗಿವೆ. ಬ್ರಿಟಿಷ್ ಸಾರ್ವಭೌಮರವರ ಹೆಚ್ಚು ಪ್ರೀತಿಗೆ ಪಾತ್ರರಾಗಲು ನಮಗೆ ಈಗ ಒಳ್ಳೇ ಸಮಯವಾಗಿರುತ್ತದೆ ಆದುದರಿಂದ ಈಗ ನಮ್ಮ ಕೈಲಾದಷ್ಟು ಸಹಾಯ ಮಾಡಲು ಎಲ್ಲರೂ ಮನಸ್ಸು ಮಾಡಬೇಕು.

ಎನ್. ವಿ. ನಾತನೂರ್.

ಸ್ತ್ರೀಯರಿಗೆ ಬಹಳ ಅವಶ್ಯಕವಾದದ್ದು.

ನೂತನವಾಗಿದೆ. ಬೇಗ ನೋಡಿ. ಆಶ್ಚರ್ಯವಾಗಿದೆ.

ಮಹಂಕಾಳಿ ಭಸ್ಮ ಅಥವಾ ಆಶ್ಚರ್ಯವಾದ ರೋಮಹಾರಿ.

ನಮ್ಮ ಹಿಂದೂ ಸ್ತ್ರೀಯರು ಯೋಗ್ಯವಾದ ರೋಮನಾಶಕ ವಸ್ತುವನ್ನು ತಿಳಿಯದೆ ಬಹಳ ಹಣ ಖರ್ಚುಮಾಡುವರು; ನಾನಾ ಕಷ್ಟನಷ್ಟಗಳಿಗೆ ಗುರಿಯಾಗುತ್ತಾರೆ. ಅಂಥವರಿಗೆ ಈಗ ಒಳ್ಳೇ ಸಮಯ ಒದಗಿದೆ. ನಮ್ಮ ನಂಬಿಕೆಯಾದ ಭಸ್ಮವನ್ನು ಅನೇಕರು ಉಪಯೋಗಿಸಿ ಪ್ರಯೋಜನ ಹೊಂದಿದಾರೆ. ಒಂದಾವರ್ತಿ ಉಪಯೋಗಿಸಿದರೆ ಅದರ ಗುಣ ವೇದ್ಯವಾಗುತ್ತೆ. ಇದು ಹಚ್ಚಿದಾಗ ಉರಿಯಾಗುವುದಿಲ್ಲ ; ಚರ್ಮದ ಮೇಲೆ ಕಲೆ ನಿಲ್ಲುವುದೇ ಇಲ್ಲ. ಸ್ವಲ್ಪ ಭಸ್ಮವನ್ನು ಗಟ್ಟಿಯಾಗಿ ನೀರಿನಲ್ಲಿ ಕಲಸಿ ಬೇಕಾದ ಸ್ಥಳದಲ್ಲಿ ಹಚ್ಚಿ ಸ್ವಲ್ಪ



ಹೊತ್ತಾದ ಮೇಲೆ ನೀರಿನಲ್ಲಿ ತೊಳೆದರೆ ಕೂದಲು ಚೊಕ್ಕಟವಾಗಿ ಹೋಗಿ ನಿಮಗೆ ಹರ್ಷವೂ ಆಶ್ಚರ್ಯವೂ ಉಂಟಾಗುತ್ತೆ. ಕತ್ತಿಗಿಂತ ಇದು ತುಂಬಾ ಅನುಕೂಲ. ಇದರ ಕ್ರಯ 1 ಬಾಟ್ಲಿಗೆ 8 ಆಣೆ. ತಂಜಾವೂರು ಅಡ್ಡಿಕೆ 5 ಆಣೆ. ಹಾರ್ಮೋನಿಯಂ ಪೇಟಿ 6 ಅಣೆ. ಇಲೆಕ್ಟ್ರೊ ಚಿನ್ನದ ಒಡ್ಯಾಣಗೆಜ್ಜೆ ಸಹ (ಚಿಕ್ಕವರಿಗೂ ದೊಡ್ಡವರಿಗೂ) ರೂ. 4-8-0. ಅಂಚೆ ಖರ್ಚು ಬೇರೆ.

[223-2] ವಿಳಾಸ—ಎಸ್. ನರಸಿಂಹನಾಯುಡು, ಟ್ರಿಪ್ಲಿಕೇನ್, ಮದರಾಸ್.

ತಾಲ್ಲೂಕು ವರ್ತಮಾನಗಳು.

ಸಬ್ಬ ತಾಲ್ಲೂಕು ಮತ್ತಿಗೆರೆ.—ಈ ಪ್ರಾಂತ್ಯ ಸುಮಾರು [illegible] ತಿಂಗಳಿಂದ ಮಳೆ ಇಲ್ಲದೆ ಪೈರುಗಳೆಲ್ಲಾ ಬಾಡಿ ಇವೆ. ಧಾನ್ಯಗಳೂ [illegible]; ಅಕ್ಕಿ 6 ಸೇರು, ರಾಗಿ 12 ಸೇರು ಸಿಗುವುದೇ ಎಷ್ಟೋ ದುರ್ಲಭವಾಗಿದೆ. ಬಡವರ ಗತಿ ಹೇಳತೀರದು ಜನ, ದನಗಳು ಕುಡಿಯುವ ನೀರಿಗೂ ಕಷ್ಟ [illegible] ಹೇಳಬೇಕಾಗುವದೇ ಇಲ್ಲ.—ಇಲ್ಲಿ ಪಟ್ಟಾಭಿಷೇಕೋತ್ಸವದ ಉತ್ಸವಗಳು ಹತ್ತು ದಿನಗಳ ತನಕ ಕ್ರಮಪ್ರಕಾರ ನಡೆದು ತಾ 29 ನೇ ಮಂಗಳವಾರ ಮಧ್ಯಾಹ್ನ ಉತ್ಸವವನ್ನು ಬಿಟ್ಟು ಮೆಂಟಪಕ್ಕೆ [illegible] ಸಾಯಂಕಾಲ 6 ಘಂಟೆಗೆ ಅಂಬು ಹಾಯಿಸಿಕೊಂಡು ನೆರೆದ ಸಭಿಕರೆಲ್ಲರೂ [illegible] ತೆಗೆದುಕೊಂಡು ಗ್ರಾಮಾಭಿವೃದ್ಧಿ ಸಂಘದ [illegible] ಗೌಡರಿಗೆ ಆಗ್ರಾಸನವನ್ನು ವಹಿಸಿ ಗ್ರಾಮಾಭಿವೃದ್ಧಿ ಸಂಘದ [illegible] ಪ್ರಾರಂಭಿಸಬೇಕಾಗಿ ವಿಚಾರಗಳು ನಡಿಸಲ್ಪಟ್ಟವು.—ಸರ್ಕಾರದವರು [illegible] ಈ ಗ್ರಾಮದಲ್ಲಿ ಒಂದು ಕುಡಿಯುವ ನೀರಿನ ಭಾವಿ ಮಾಡಿಸಿ [illegible] ಪ್ರಜೆಗಳ ಕಷ್ಟವನ್ನು ಪರಿಹಾರ ಮಾಡುವರೆಂದು ಪ್ರಾರ್ಥಿಸುತ್ತೇವೆ. [illegible] ಗ್ರಾಮಕ್ಕೆ ಸಮೀಪದಲ್ಲಿರುವ ದೇವರಾಯ [illegible] ಕಟ್ಟಿಸಿ ಕೊಡಬೇಕೆಂದು [illegible] ಸಾಹೇಬರನ್ನೂ, ರೆವಿನ್ಯೂ ಕಮಿಷನರ್ ರವರನ್ನೂ ಅನೇಕ ದಫಾ ಈ ಪ್ರಾಂತ್ಯದ ಪ್ರಜೆಗಳು ಅರ್ಜಿಗಳ ಮೂಲಕ ಕೇಳಿಕೊಂಡಿದ್ದಕ್ಕೆ ಸುಮಾರು [illegible],000 ರೂಪಾಯಿ ಎಸ್ಟಿಮೇಟ್ ಮಾಡಿ ಕಾಮಗಾರಿಯು [illegible] ನಲ್ಲಿ ನಡೆ[illegible] ಆದರೂ [illegible] ಚೀಫ್ ಇಂಜಿನಿಯರಾಗಿದ್ದಾಗ್ಗ್ಯೂ ಇದೇ ತಾಲ್ಲೂಕು [illegible] ಪ್ರವಾಸದಲ್ಲಿ ಈ ಪ್ರಾಂತ್ಯದ ಪ್ರಜೆಗಳು [illegible] ಕೇಳಿಕೊಂಡದಕ್ಕೆ ಕೂಡಲೆ ಆವರುಗಳಿಗೆ ಅಪ್ಪಣೆ [illegible] ಮಾಡುವದಾಗಿ ಮಾತು ಕೊಟ್ಟರು. ಇದು ತಮಲ್ ವರೆಗೆ ನಿರೀಕ್ಷಿಸಿದಾಗ್ಯೂ ಪೂರ್ವವಾಗಲಿಲ್ಲ. ಈಗ ಈ ಪ್ರಾಂತ್ಯ ಕುಡಿಯುವ ನೀರಿಲ್ಲ; ತಿನ್ನಲು ಅನ್ನವಿಲ್ಲ. [illegible] ನಾವುಗಳು [illegible] ಕರುಣೆ [illegible] ಜನರು ಕೋ[illegible] ಜೀವನ ಮಾಡಿ [illegible] ಉಂಟಾಗುತ್ತದೆ.

ಬಿನ [illegible] ಪ್ರಾಂತ್ಯದ [illegible] ಆವಾದ ಮಳೆ ಬಿದ್ದುದರಿಂದ [illegible] ಕೆರೆಗಳು ತುಂಬಿದವು. [illegible] ಕೆರೆ ಸಹ ತುಂಬಿತು. ದೊಡ್ಡ ಕೆರೆ [illegible] ತುಂಬಿದೆ. ಇನ್ನೂ ನೀರು ಬರುತ್ತಲೇ ಇದೆ. ಭಾವಿಗಳಲ್ಲಿ ಜಲ ಏರುತ್ತಾ ಇದೆ. ದನಕರುಗಳಿಗೆ ಮೇವಿಗೂ, ಭತ್ತದ [illegible] ಮೋಟಾರಿನಲ್ಲಿ [illegible] ಜನ [illegible] ಉಲ್ಲಾಸದಿಂದ ಭಗವಂತನ ಸ್ತುತಿಸುತ್ತಿದಾರೆ. ನಮ್ಮ ಹೊಸ ಅಮಲ್ದಾರರು ಆಗಾಗ್ಗೆ ಹಳ್ಳಿಗಳನ್ನು ಸುತ್ತುತ್ತಾ [illegible] ಇದ್ದಾರೆ. [illegible] ಸ್ಕೂಲುಗಳನ್ನೂ [illegible] ಹೋಗಿ ಅಲ್ಲಿರುವವರು ಒಳ್ಳೇದಲ್ಲವೆನ್ನುವ ಅಭಿಪ್ರಾಯಕೊಟ್ಟರು. [illegible] ತಯಾರು [illegible] ಬಹಳ ಅನುಕೂಲವಾಗುತ್ತದೆ. ಇನ್ನು ಮೇಲೆಯೂ ಅವರು ಹೀಗೇ ಸಂಚರಿಸುತ್ತಾ ಪ್ರಜೆಗಳ ಅನಾನುಕೂಲಗಳನ್ನು ತಪ್ಪಿಸುವರೆಂದು ನಂಬುತ್ತೇವೆ.—ಮೊನ್ನೆ 26 ನೇ ತಾ. ಇದೇ ಊರಲ್ಲಿರುವ [illegible] ಎಂಬಾತನು ಪೋಲೀಸ್ ಸ್ಟೇಷನಿಗೆ ಬಂದು—ವೆಂಗಟಮ್ಮ ಎಂಬ [illegible] ಸಂಬಂಧಿ ನೇಣ ಬೀಗಹಾಕಿದೆ. [illegible] ಇನ್ಸ್ಪೆಕ್ಟರನ್ನು ಕೇಳುವಾಗ್ಗೆ ಆಕೆ ಇಲ್ಲ ಎಲ್ಲಿಯೋ ಹಳ್ಳಿಗೆ ಹೋಗಿದ್ದಾಳೆ ಎಂದು ಹೇಳುತ್ತಾನೆ. ಆದರೆ ಈ ವಿಷಯ ನನಗೆ ಅನುಮಾನವಿದೆ ಎಂದು ರಿಪೋರ್ಟು ಕೊಟ್ಟನು. [illegible] ರವರು [illegible] ಎಂಬವನನ್ನು ಕರೆ[illegible] ಬೀಗ ತೆಗೆಸಿ ನೋಡಲಾಗಿ ಆ ಮನೆಯ [illegible] ಸುಮಾರು 80 ವರುಷದ ಮುದುಕಿ [illegible] ನರಳುತ್ತಾ [illegible] ಬಿದ್ದಿದ್ದಳು. ಆದರೆ [illegible] ಪೋಲೀಸಿನವರು ಮಹಜರ್ ಮಾಡಿ [illegible] ಆಸ್ಪತ್ರೆಗೆ ರವಾನಿಸಿದರು. [illegible] ಇದು ನೇಣುಹಾಕಿಕೊಂಡದ್ದೆಂದು ಅಭಿಪ್ರಾಯಪಟ್ಟದ್ದರ ಮೇಲೆ [illegible] ರಂಗಶೆಟ್ಟಿಯನ್ನು [illegible] ನೋಡಬೇಕು. ಆದರೆ ಈ ಶವವನ್ನು [illegible] ಆಸ್ಪತ್ರೆಗೆ ಸಾಗಿಸಲು ಪೋಲೀಸಿನವರು ಎಷ್ಟು [illegible] ಈ [illegible] ಬಾಧೆಹೊಂದ [illegible] ಗಳನ್ನು ಕರೆದರೂ [illegible] ಆಸ್ಪತ್ರೆಗೆ ಸಾಗಿಸದರು. ಆ ಮುದುಕಿಯ ಬಳಿ ತುಂಬಾ ಹಣ [illegible] ಜನರು ಹೇಳುತ್ತಿದಾರೆ.—ದೊಡ್ಡಾಯಪೇಟೆಯನ್ನು ಟರ್ನ್ ಮುನಿಸಿಪಾಲಿಟಿಗೆ ಸೇರಿಸಿಕೊಂಡು ಕೆಂಡಾಯ ವಸೂಲ್ಮಾಡುತ್ತಾ ಇದಾರೆ. ಆದರೆ ಅಲ್ಲಿಗೆ ಹೋಗುವ ರಸ್ತೆ ಮೊಣಕಾಲುದ್ದ [illegible] ಕೆಸರು; ಸಂಚಾರಕ್ಕೆ ಜನರಿಗೂ ಗಾಡಿಗಳಿಗೂ ತುಂಬಾ ಸಂಕಟ ಆದಕಾರಣ ಆ ದಾರಿಗೆ ಜಲ[illegible] ಗಟ್ಟಿ ಮಾಡಿಸುವರೆಂದು ನಿರೀಕ್ಷಿಸುತ್ತೇವೆ.—ಮರಹಳ್ಳಿ ಸಂತೆ ತುಂಬಾ ದೊಡ್ಡದು. ಕೋಲಾರ, ಮುತ್ತೂರು, ಸತ್ಯಮಂಗಲ ಮುಂತಾದ ದೂರ ಸ್ಥಳಗಳಿಂದ ಸಾವಿರಾರು ಗಾಡಿಗಳು ಬರುತ್ತವೆ. ಸರ್ಕಾರಕ್ಕೆ ಸಾವಿರಾರು ರೂಪಾಯಿ ಆದಾಯ ಮೇಲಿದೆಯತ್ತೆ. ನಾಗಕಲ್ಲು ಈ ಸಂತೆಗೂ 9 ಮೈಲಿ ದೂರವಿದೆ. ಉದ್ದಕ್ಕೂ ಸರ್ಕಾರಿ ರೋಡೇ ಹೊರತು [illegible] ಆದರೆ ಎರಡೂ ಬಳಿ ಅಡ್ಡಹಳ್ಳಗಳು ಒಂದು ದೊಡ್ಡ ಹಳ್ಳವಿದೆ ಮಳೆಗಾಲದಲ್ಲಿ ಅವುಗಳನ್ನು ದಾಟುವದು ಬಹಳ ಕಷ್ಟ. ಅನೇಕ ಸಂದರ್ಭಗಳ ಗಾಡಿಯವರು ನೀರು ಇಳಿಯುವ ವರೆಗೂ ಒಂದೆರಡು ದಿನ ಅಲ್ಲಿಯೇ ತಂಗಬೇಕಾಗುತ್ತದೆ ಮತ್ತು ಸಾಧಾರಣ ಕಾಲಗಳಲ್ಲಿಯೂ ಮರಳು ತುಂಬಿರುವದರಿಂದ ಸಾಧಾರಣ ಎತ್ತುಗಳು ಗಾಡಿ ಎಳೆಯುವದು ತುಂಬಾ ಪ್ರಯಾಸ. ಆದಕಾರಣ ನಮ್ಮ ಅಮಲ್ದಾರರು ಮುದಾಗಿ [illegible] ಆ ಹಳ್ಳಗಳಿಗೆ ಸೇತುವೆಗಳನ್ನು ಕಟ್ಟಿಸಿದರೆ ಅವರ ಹೆಸರು ಶಾಶ್ವತವಾಗುವದಲ್ಲದೆ ವ್ಯಾಪಾರಿಗಳಿಗೂ ದನಗಳಿಗೂ ದೊಡ್ಡ ಉಪಕಾರವಾದಂತಾಗುವದು.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1914 ನೇ ಇಸವಿ ಸೆಪ್ಟಂಬರ್ 30 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ.

ಲೇಣಿ —(1) ಷೇರು ಮೊಬಲಗು	ರೂ.	9,93,255
,, (2) ಡಿಪಾಜಿಟ್ಟುಗಳು	,,	19,97,093
,, (3) ಇತರೆ	,,	35,049
(ಆಣೆ, ಕಾಸು ಬಿಟ್ಟಿರುತ್ತೆ.) ಜುಮ್ಲಾ	ರೂ.	30,25,397

ದೇಣಿ :—(1) ಕೈಯಲ್ಲೂ, ಬ್ಯಾಂಕುಗಳಲ್ಲಿರುವ ಹಣ	ರೂ.	4,03,099
,, (2) ಖಾತೆ ಮತ್ತು ಇತರ ಸಾಲಗಳು	,,	18,73,600
,, (3) ಡಿಸ್ಕೌಂಟು ಮಾಡಿದ ವಾಯಿದೆ ಹುಂಡಿಗಳು	,,	2,86,034
,, (4) ಇನ್‌ವೆಸ್ಟ್‌ಮೆಂಟುಗಳು	,,	2,60,000
,, (5) ಏಜೆನ್ಸಿಗಳಲ್ಲಿರುವ ಮೊಬಲಗು	,,	1,31,478
,, (6) ಬ್ಯಾಂಕಿನಲ್ಲಿರುವ ಸಾಮಾನುಗಳು	,,	13,092
,, (7) ಇತರೆ	,,	12,304
(ಆಣೆ, ಕಾಸು ಬಿಟ್ಟಿರುತ್ತೆ.) ಜುಮ್ಲಾ	ರೂ.	30,25,307

ಡಬ್ಲ್ಯು. ಸಿ. ರೋಸ್, ಮ್ಯಾನೇಜರ್.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶಗಳು ಮೂತ್ರವನ್ನು ವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಈ ಕಾರ್ಯವನ್ನು ಮಾಡಲಾರದೆ ಹೋದರೆ ಸ್ವಾಭಾವಿಕ ಶರೀರಕ್ಕೇ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ : ಬೆನ್ನುನೋವು; ಅದ್ದೆ ಯಲ್ಲಿ ಊತವು; ಮೂತ್ರವು ಸ್ವಲ್ಪವಾಗಿಯೋ ವಿಪರೀತವಾಗಿಯೋ ಬಿಸುವಾಗಿಯೋ ಇಳಿಯುವುದು; ಬಡವೆ ಬಾಯಾರಿಕೆ; ಬಳಲಿಕೆ; ಎದೆ ತಲ್ಲಣಿಸುವುದು; ತಲೆನೋವು; ಗಾಬರಿ; ಕಣ್ಣುಮಬ್ಬು; ತಲೆ ತಿರುಗುವಿಕೆ; ಮೈನೋವು; ಕೀಲುನೋವು; ಮರವು; ನಿತ್ರಾಣ; ಇವೇ ಮೊದಲಾದುವು ಅಲಕ್ಷ್ಯಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಉರುಮೂತ್ರ ಮೂತ್ರಕೋಶವು ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [198-6]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ಸ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು.



[illegible] ಬುದ್ದಿಗಳಿಗೆ ರೂ. ೧೦. [illegible] ಔಷಧಗಳನ್ನು [illegible] ಮಾರಿಸುತ್ತಾರೆ. ಅಥವಾ ಡೋನ್ಸ್ [illegible]—ಇವರಲ್ಲಿ ದೊರೆಯುವುವು.

ಪ್ರೊಫೆಸರ್ ಗಜ್ಜಾರರವರ
ಗುಣಕಂಡ ಪ್ರಖ್ಯಾತವಾದ ಔಷಧಗಳು.

ವ್ಯರ್ಥವಾದ ಔಷಧಗಳನ್ನು ಉಪಯೋಗಿಸಿ ಪ್ರಾಣಾಪಾಯಕ್ಕೆ ಗುರಿಯಾಗುವುದೇಕೆ? ವಿವೇಕದಿಂದ ತಯಾರ್ಮಾಡಿರುವ ನಮ್ಮ ಔಷಧಗಳನ್ನು ಸೇವನೆ ಮಾಡಬಾರದೇ?

ಟಾನಿಕ್ ಸೋಲ್ಯೂಷನ್.—ಇದರಲ್ಲಿ ಗ್ಲಿಸರೊಫೋಸ್ಫೇಟ್ಸ್ ಎಂಬ ಅಮೂಲ್ಯ ಪದಾರ್ಥಗಳನ್ನು ಹಾಕಿ ತಯಾರ್ಮಾಡಿದೆ. ಇದು ಬೇಗನೆ ಶರೀರಕ್ಕೆ ಸೇರಿಹೋಗುತ್ತೆ. ಆರೋಗ್ಯವನ್ನೂ ಚಟುವಟಿಕೆಯನ್ನೂ ಶಕ್ತಿಯನ್ನೂ ವೃದ್ಧಿ ಮಾಡುವುದು. ನರಗಳ ದುರ್ಬಲತ್ವವನ್ನು ಹೋಗಲಾಡಿಸುವುದರಲ್ಲಿ ಇದು ಬಹಳ ಶ್ರೇಷ್ಠವಾದ ಔಷಧ. ಕ್ರಯ ಶೀಸೆಗೆ 2 ರೂಪಾಯಿ, ಮತ್ತು ರೂ. 1-2-0.

ರಕ್ತಶುದ್ಧಿಗೆ ಮಹೌಷಧ.—ಇದು ರಕ್ತವನ್ನೂ ದೇಹದ ಎಲ್ಲಾ ಭಾಗಗಳನ್ನೂ ಶುದ್ಧಿ ಮಾಡುತ್ತೆ. ಬಹಳ ಚೆನ್ನಾಗಿ ಗುಣಕಂಡ ಔಷಧ. ಕ್ರಯ ಶೀಸೆಗೆ 1 ರೂಪಾಯಿ.

ಲಿವರ್ ಸೊಲ್ಯೂಷನ್.—ಪಿತ್ತಕೋಶದ ಮೇಲೆ ಇದು ಬಹಳ ಚೆನ್ನಾಗಿ ಕೆಲಸಮಾಡೋಣದರಿಂದ ಮಲಬದ್ಧತೆಯುಳ್ಳವರಿಗೆ ಮಹೋಪಕಾರಿಯಾಗಿದೆ. ಜ್ವರಕ್ಕೂ ಇದನ್ನು ಕೊಡುತ್ತಾರೆ. ಇದು ಮನೆಯಲ್ಲಿ ಇದ್ದೇ ತೀರಬೇಕು. ಕ್ರಯ ಶೀಸೆಗೆ ರೂ. 1; ಮತ್ತು ರೂ. 0-10-0.

ಜ್ವರದ ಔಷಧ.—ವಿಷಮಶೀತಜ್ವರ, ಸಂತುಬರುವಜ್ವರ, ಅವಧಿಯಜ್ವರ, ಎಲ್ಲಾ ತರದ ಜ್ವರಗಳಿಗೂ ಇದು ಸಂಜೀವನವಾಗಿದೆ. ಇದು ಕ್ವಿನೈನ್ ಗಿಂತ ಬಹಳ ಅಗ್ಗ. ಕ್ರಯ ಶೀಸೆಗೆ 10 ಆಣೆ ; 4 ಆಣೆ.

ಹುಳುಕಡ್ಡಿ ಔಷಧ.—ಹುಳುಕಡ್ಡಿಯನ್ನು ಖಂಡಿತವಾಗಿ ಗುಣಮಾಡುತ್ತೆ. ಕ್ರಯ ಶೀಸೆಗೆ 4 ಆಣೆ.

ಹಲ್ಲುಪುಡಿ.—ಈ ಪುಡಿಯಿಂದ ಹಲ್ಲು ಉಜ್ಜಿಕೊಂಡರೆ ಬಾಯಿಗೆ ಸುವಾಸನೆ ಕೊಡುತ್ತೆ. ಹಲ್ಲು ಸವೆದು ಕೆಡದಂತೆ ಬಹಳ ಚೆನ್ನಾಗಿಟ್ಟು ಕಾಪಾಡುತ್ತೆ. ಕ್ರಯ ಶೀಸೆಗೆ 4 ಆಣೆ ; 6 ಆಣೆ ; 1 ರೂಪಾಯಿ.

ಇಂಗ್ಲೀಷಿನಲ್ಲೇ ನಮಗೆ ಕಾಗದವನ್ನು ಬರೆಯಬೇಕು.

ಸೋಲ್ ಏಜಂಟರು :- ಎಸ್. ವೈದ್ಯ ಮತ್ತು ಕಂಪನಿ,
ಪಾರ್ಕ್ ಟೌನ್, ಮದರಾಸ್.

[156-14]

ಅಮೃತಾಂಜನ ರಿಜಿಸ್ಟರ್ಡ್

ಇದು ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು. ಇದರ ಉಪಯೋಗದಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗವಾಯು, ಉಳುಕು, ಕೆಮ್ಮು, ಸೊಂಟನೋವು, ಶೀತ, ಚರ್ಮವ್ಯಾಧಿ, ಹಲ್ಲುನೋವು, ಚೇಳು ಕಡಿತ ಮೊದಲಾದ ಎಲ್ಲಾ ತರದ ನೋವುಗಳು ಖಾತ್ರಿಯಾಗಿ ನಿಲ್ಲುವವು. ಬೇರಾರಿ ಔಷಧಗಳನ್ನು ಪಡೆಕೊಳ್ಳಬೇಡಿರಿ. ಈ ನಮ್ಮ ಲೋಕಪ್ರಖ್ಯಾತವಾದ ಅಮೃತಾಂಜನವನ್ನು ನಮ್ಮ ರಿಜಿಸ್ಟರಾದ ಮತ್ತು ಹಲವು ಭಾಷೆಗಳುಳ್ಳ ಸುಂದರವಾದ ಕರಡಿಗೆಯಲ್ಲಿ ಪ್ಯಾಕ್ ಮಾಡಿರುತ್ತೇವೆ. ಕರಡಿಗೆ ಇಲ್ಲದ ಬಾಟ್ಲಿಗಳನ್ನು ಪಡೆಕೊಳ್ಳಬೇಡಿರಿ. ಬಾಟ್ಲಿ ಒಂದರ ಕಿಮ್ಮತು 0-8-0. ಡಜನ್ 1 ಕ್ಕೆ 5-4-0. ವಿ. ಪಿ. ಪ್ರತ್ಯೇಕ. ಗಜಕರ್ಣದ ಮುಲಾಮು 0-6-0. ದಂತಮಂಜನ 0-2-0. ಮೋಹಿನಿ ತೈಲ 0-12-0. ಖಜ್ಜಿ ಮುಲಾಮು 0-3-0. ಜಂಟಾಬು ಮಾತ್ರೆ 0-8-0. ಸುಂದರ ಮುಲಾಮು 0-8-0. ಕ್ಯಾಟಲಾಗಿಗೆ ಬರೆಯಿರಿ. [52-32]

ವ್ಯಾಪಾರಸ್ಥರಿಗೆ ಚೆಲೋ ಕಮಿಷನ್ ದೊರಕುವದು.

ಅಮೃತಾಂಜನ ಡಿಪೋ,

[illegible]. ಮುಂಬಯಿ, ಮತ್ತು ೯ ಜಹಂಗೀರ್ ಸ್ಟ್ರೀಟ್, ಮದ್ರಾಸು.

ಸಂಪೂರ್ಣಾರೋಗ್ಯವು, ಸಂತೋಷಭಾಗ್ಯವು, ಶಾಶ್ವತವಾದ ಸಂಪತ್ತು, ಇವುಗಳನ್ನು ಪಡೆಯುವುದಕ್ಕೋಸ್ಕರ ತಮ್ಮ ಕತ್ತಲೆಯಲ್ಲಿ ಹೋರಾಡುವಿರೋ?

ಹಾಗಾದರೆ ನಮ್ಮ

ಪಂಜಾಬ ಸಾಲಾಮಿಸ್ರಿ ಮುರಬ್ಬ

ವನ್ನು ಸೇವಿಸಿ ಜೀವವಿಮೆಯನ್ನು ಮಾಡಿಕೊಳ್ಳಿರಿ.

ಆಬಾಲವೃದ್ಧರಿಗೂ ಸ್ತ್ರೀಪುರುಷರಿಗೂ ಉಪಯೋಗಿಸತಕ್ಕ ಮತ್ತು ಪುಷ್ಟಿಯನ್ನು ಕೊಡುವ ಔಷಧಿಯು ಇದೇ. ಈ ಪಂಜಾಬ ಸಾಲಾಮಿಸ್ರಿ ಮುರಬ್ಬವು ಮೂತ್ರಕೋಶ ಸಂಬಂಧವಾದ ಎಲ್ಲಾ ತರವೆಯ ರೋಗಗಳನ್ನೂ ನಿವರ್ತಿಮಾಡುತ್ತದೆ. ಪಂಜಾಬ ಸಾಲಾಮಿಸ್ರಿಯೊಂದಿಗೆ ಅಪೂರ್ವವಾದ ಮತ್ತು ಉತ್ತಮವಾದ ವನಸ್ಪತಿಗಳನ್ನು ಸೇರಿಸಿ ಮುರಬ್ಬವನ್ನು ತಯಾರ್ಮಾಡಲ್ಪಟ್ಟಿದೆ. ಒಂದು ಸಲ ಉಪಯೋಗಿಸಿದರೆ ಎಂದಿಗೂ ಮರೆಯಲಾರಿರಿ. ರೋಗರಹಿತವಾದ ಖಾತ್ರಿಯಾದ ದೇಹಪುಷ್ಟಿಯನ್ನು ಕೊಡತಕ್ಕ ಔಷಧಿಯೇ ಇದು.

ಪಂಜಾಬ ಸಾಲಾಮಿಸ್ರೀ ಮುರಬ್ಬಾವು—ನಿದ್ರೆಯಲ್ಲಿಯೂ ಮೂತ್ರದಲ್ಲಿಯೂ ಹೋಗುವ ಧಾತುವನ್ನು ನಿಲ್ಲಿಸುವುದು.
ಪಂಜಾಬ ಸಾಲಾಮಿಸ್ರೀ ಮುರಬ್ಬಾವು—ಮೂತ್ರದಲ್ಲಿ ಉರಿಯುವುದನ್ನು ನಿಲ್ಲಿಸುವುದು.
ಪಂಜಾಬ ಸಾಲಾಮಿಸ್ರೀ ಮುರಬ್ಬಾವು—ರಕ್ತವನ್ನು ವೃದ್ಧಿಪಡಿಸಿ ಮೆದುಳಿಗೆ ಬಲವನ್ನು ಕೊಡುವುದು.
ಪಂಜಾಬ ಸಾಲಾಮಿಸ್ರೀ ಮುರಬ್ಬಾವು—ಕೈ, ಕಾಲು, ಸೊಂಟದ ನೋವುಗಳನ್ನು ಹೋಗಲಾಡಿಸುವುದು.
ಪಂಜಾಬ ಸಾಲಾಮಿಸ್ರೀ ಮುರಬ್ಬಾವು—ಹಸಿವನ್ನು ರಕ್ತವನ್ನು ಹೆಚ್ಚಿಸಿ ಧಾತುವನ್ನು ಶೇಖರಿಸುವುದು.
ಪಂಜಾಬ ಸಾಲಾಮಿಸ್ರೀ ಮುರಬ್ಬಾವು—ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವುದು.
ಪಂಜಾಬ ಸಾಲಾಮಿಸ್ರೀ ಮುರಬ್ಬಾವು—ಉತ್ಸಾಹವು, ಬುದ್ಧಿಕುಶಲತೆಯು, ಶರೀರಕಾಂತಿಯು ಕೊಡುವುದು.
ಪಂಜಾಬ ಸಾಲಾಮಿಸ್ರೀ ಮುರಬ್ಬಾವು—ತಾಂಬೂಲ ಮತ್ತು ಭಂಗಾರಭಸ್ಮಕ್ಕಿಂತಲೂ ಉತ್ತಮವಾದದ್ದು.

ಈ ಮುರಬ್ಬಾದೊಂದಿಗೆ ಬಲಬರುವಂಥ ಪದಾರ್ಥಗಳನ್ನು ಸೇರಿಸಿ ಪ್ರತಿಯೊಬ್ಬರೂ ಸೇವಿಸುವ ಹಾಗೆ ಕೈಯಿಂದ ಮುಟ್ಟದೆ ತಯಾರು ಮಾಡಲ್ಪಟ್ಟಿರುವುದು.

ಒಂದು ಡಬ್ಬಿ ಮುರಬ್ಬಾವನ್ನು 15 ದಿನಗಳು ಉಪಯೋಗಿಸುವುದರಿಂದ ಪೂರಾ ಗುಣ ಕೊಡುತ್ತದೆ. 2-3 ಡಬ್ಬಿಗಳನ್ನು ಉಪಯೋಗಿಸುವದರಿಂದ ಜನ್ಮಾಂತ್ಯದ ವರೆಗೂ ಗುಣಕೊಡುತ್ತೆ. ಈ ಸಾಲಾಮಿಸ್ರೀ ಎಂಬುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲ್ ಕಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿನ ಜನರು ಸಾಲಾಮಿಸ್ರೀಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು. ಅನೇಕರು ಉರುಳುಗಡ್ಡೆ, ತಾವರೆಗಡ್ಡೆ ಇವುಗಳನ್ನು ಪಕ್ವಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಮೋಸಪಡಿಸುವರು. ನಮ್ಮ ಮುರಬ್ಬಾವನ್ನು ಪರೀಕ್ಷಿಸಿ ನೋಡಿದಲ್ಲಿ ಇದು ಪಂಜಾಬ ಸಾಲಾಮಿಸ್ರಿಯೋ ಅಥವಾ ಬೇರೆ ತರಹದ್ದೋ ಎಂಬುದು ತಿಳಿದುಬರುತ್ತೆ. [214-4]

ಈ ಮುರಬ್ಬಾವು "ಪಂಜಾಬ ಸಾಲಾಮಿಸ್ರಿ" ಅಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡುವೆವು

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾವು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. 15 ತೊಲೆ ಮುರಬ್ಬಾವಿನ ಡಬ್ಬಿ 1 ಕ್ಕೆ ರೂಪಾಯಿ 2-0-0. ಟಪಾಲು ಖರ್ಚು 1 ಡಬ್ಬಿಯಿಂದ 3 ಡಬ್ಬಿಗಳ ವರೆಗೆ 6 ಆಣೆ. ಅನುಪಾನ ಪತ್ರಿಕೆ ಔಷಧದ ಸಂಗಡ ಇರುತ್ತೆ.

ಏಜಂಟರು.—ಡಿ. ಸೈಯದ್ ಉಸ್ಮಾನ್ ಅಂಡ್ ಕೊ,
ದೊಡ್ಡ ಪೇಟೆ, ಬೆಂಗಳೂರು ಸಿಟಿ.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ವೃತ್ತಾಂತಪತ್ರಿಕೆ ಏಜಂಟರಿಗೆ ಸೂಚನೆ.

ವೃತ್ತಾಂತ ಪತ್ರಿಕೆಯ 1914-15 ನೇ ವರುಷದ ಒಂದನೇ ಕ್ವಾರ್ಟರು ಕಳೆದ ಆಗಸ್ಟ್ ತಿಂಗಳಿಗೆ ಪೂರೈಸಿದೆ. ಏಜಂಟರುಗಳು ಆ ಕ್ವಾರ್ಟರಿನ ಲೆಕ್ಕಗಳನ್ನು ಸ್ಪಷ್ಟಮಾಡಿ, "ಬಿ" ಫಾರಂಗಳಿಗೆ ಎತ್ತಿ ಬರೆದು, ತಮ್ಮ ತಮ್ಮ ಸೂಪರಿಂಟೆಂಡೆಂಟರಿಗೆ ಒಂದು ಪ್ರತಿಯನ್ನೂ, ನಮಗೆ ಒಂದು ಪ್ರತಿಯನ್ನೂ ಈ ವಾರದಲ್ಲೇ ಜಾಗ್ರತೆಯಿಂದ ಕಳುಹಿಸಿಕೊಡಬೇಕಾಗಿ ಕೃತಪಡಿಸಿದೆ.

ನೀವು ಕೇಳಿದ ಹಾಗೆ ಪತ್ರಿಕೆಗಳನ್ನು ಹೆಚ್ಚಾಗಿ ಕಳುಹಿಸುತ್ತಾ ಬರುವೆವು. ಆದರೆ ಬಿಡಿ ಪತ್ರಿಕೆಗಳನ್ನು ವಾಪಸ್ಸೇ ಕೊಡದು. ಮುಂದಿನ 1915 ನೇ ಅಪ್ರೈಲ್ ವರೆಗೆ ಅಡ್ವಾನ್ಸು ಕೊಟ್ಟು ಕ್ರಮವಾಗಿ ಚಂದಾದಾರರಾಗತಕ್ಕವರಿಗೆ ಮಾತ್ರ ಪತ್ರಿಕೆಗಳನ್ನು ತಪ್ಪಿಸದೆ ಕೊಡುತ್ತಾ ಬರಬೇಕೆಂದು ಕೋರುತ್ತೇವೆ.

ಮ್ಯಾನೇಜರ್, "ವೃತ್ತಾಂತ ಪತ್ರಿಕೆ," ಮೈಸೂರು.

ಮಲೇರಿಯಾ

ಮತ್ತು ಹವಾ ದೆಸೆಯಿಂದುಂಟಾಗುವ ಎಲ್ಲಾ ತರದ ಜ್ವರವೂ

ಈಸಾನೊಫೆಲೆ

ಯ ಸೇವನೆಯಿಂದ ಬೇಗನೆ ನಿವಾರಣೆಯಾಗುತ್ತೆ.

ಕ್ವಿನೈನ್ ಜ್ವರವನ್ನು ಅಣಗಿಸುವುದು ; ಆದರೆ ನಮ್ಮ ಈ ಸಾನೊಫೆಲೆಯು 15 ದಿನದಲ್ಲಿ ವಾಸಿಮಾಡುತ್ತದೆ. ಹಗಲು ರಾತ್ರಿ ಒಂದೊಂದು ಮಾತ್ರೆ ತೆಗೆದುಕೊಳ್ಳುತ್ತಾ ಬಂದರೆ ಜ್ವರ ಬಾರದಂತೆ ಸಂರಕ್ಷಣೆ ಮಾಡಬಲ್ಲದು.

ಜ್ವರವು ಸಂಪೂರ್ಣವಾಗಿ ವಾಸಿಯಾಗುವುದಕ್ಕೆ ಎರಡು ಬಾಟ್ಲಿ ಔಷಧ ಹದಿನೈದು ದಿನಕ್ಕೆ ಸಾಕು.

ಬಾಟ್ಲಿಗೆ ಕ್ರಯ 2 ರೂಪಾಯಿ.

ಬಿಕರಿಯಾಗುವ ಸ್ಥಳಗಳು.

1. ಫಾಸ್ಟರ್ ಕಂಪನಿ, ಕೆಮಿಸ್ಟ್ಸ್, ಬೆಂಗಳೂರು ;
2. ಬಿ. ಜಿ. ಗೋರಿಯೋ ಕಂಪನಿ, ವಾಲೆಸ್ ಬೀದಿ,

[172-10] ಬೊಂಬಾಯಿ ;

ಇದಲ್ಲದೆ

ಎಲ್ಲಾ ಔಷಧ ಮಾರಾಟದ ಷಾಪಿನಲ್ಲೂ ಸಿಕ್ಕುವುದು.

ಗೃಹಕೃತ್ಯದ ನೋಟೀಸು.

ಮೈಸೂರ್ ಡಿಸ್ಟ್ರಿಕ್ಟು ಯಡತೊರೆ ತಾಲ್ಲೂಕು ಮಿರ್ಲೆ ಹೋಬಳಿ ಕಸಬಾ ಗ್ರಾಮದಲ್ಲಿ ಇರುವ ದೇವಾಂಗದ ತಿಮ್ಮಸೆಟ್ರ ಮಗ ಸುಬ್ಬಸೆಟ್ಟಿಯು ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ— ನನ್ನ ಜನಕತಂದೆ ತಿಮ್ಮಸೆಟ್ರು ಬಾಲ್ಯದಿಂದಲೂ ಸಿದ್ಧಪತ್ರೆ ಹೊಗೆ ತೆಗೆಯುವ ಅಭ್ಯಾಸವುಂಟು. ಇವರ ಮೇಲೆ 80-85 ವರುಷ ವಯಸ್ಸಾಗಿದೆ. ಈ ಎರಡು ಕಾರಣಗಳಿಂದ ಬುದ್ಧಿಸ್ಥಿಮಿತವಿಲ್ಲವೆ ಒಂದೊಂದು ಸಮಯದಲ್ಲಿ ಹತ್ತು ರೂಪಾಯಿನ ಪದಾರ್ಥವನ್ನು ಒಂದು ರೂಪಾಯಿಗಾದರೂ ಕೊಟ್ಟುಬಿಡುತ್ತಾರೆ. ಒಂದೊಂದು ಸಮಯದಲ್ಲಿ ಗದ್ದೆ ಮಾರುತ್ತೇನೆಂತಲೂ, ಒಂದು ಸಮಯದಲ್ಲಿ ಮನೇ ಮಾರುತ್ತೇನೆಂತಲೂ ಹೇಳುತ್ತಾರೆ. ಆದ್ದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ, ಮೇಲ್ಕಂಡ ನನ್ನ ತಂದೆ ತಿಮ್ಮಸೆಟ್ರಿಗೆ ಚರ ಸ್ಥಿರ ಸ್ವತ್ತುಗಳ ಮೇಲೇ ಆಗಲಿ, ಕೈಸಾಲವಾಗಲಿ ನನಗೆ ತಿಳಿಸದೆ ನನ್ನ ಅನುಮತಿ ಇಲ್ಲದೆ ಯಾರಾದರೂ ಸಾಲ ವಗೈರೆ ಕೊಟ್ಟರೆ ಆ ನಷ್ಟಕ್ಕೆ ನಾನು ಬದ್ಧನಾಗುವದಿಲ್ಲ; ಅಂಥವರು ನನ್ನ ನಷ್ಟಕ್ಕೆಲ್ಲಾ ಗುರಿಯಾಗಬೇಕಾಗುವುದೆಂದು ಈ ಮೂಲಕ ಎಚ್ಚರಿಸಿರುತ್ತೇನೆ.

[217-3] ಸುಬ್ಬಸೆಟ್ಟಿ ರುಜು.



ಅನಾಹುತಗಳು ಸಂಭವಿಸುವವು !

ಕೆಲಸಮಾಡುವ ಯಾವ ಮನುಷ್ಯನಾದರೂ, ಕೆಲಸಮಾಡದ ಅನೇಕ ಮನುಷ್ಯರಲ್ಲಾದರೂ ಅಪಾಘಾತಗಳು ಆಗುತ್ತವೆ. ಪ್ರತಿದಿನವೂ ಯಾರಿಗಾದರೂ ಸಂಭವಿಸುತ್ತೆ. ಏನಾದರೂ ಒಂದು ದಿನ ಅದು ನಿಮಗೂ ಆದೀತು.

ಇಲಿನಾಯ್ಸಿನ ಕಿಪ್ಪೆಡಿಯಲ್ಲಿರುವ ಮಿ॥ ಓ. ಎಸ್. ಸ್ಕಾಬರ್ ಹೇಳುವದು :— "ಮಹಡಿಯಿಂದ ಇಳಿಯುತ್ತಿದ್ದಾಗ ನನ್ನ ಹೆಂಡತಿಯು ನಿಂತುಕೊಳ್ಳಲಾರದಷ್ಟು ಕಠಿಣವಾದ ರೀತಿಯಲ್ಲಿ ಆಕೆಯ ಮೊಣಕಾಲು ಉಳುಕಿತು. ಕೀಲು ಪಿಡಸಾಗಿ ಬಹಳ ಊದಿಕೊಂಡು, ಪುಟ್ಟಿದರೆ ನೋವು ಸಹಿಸಕೂಡದಷ್ಟು ಮಟ್ಟಿಗೆ ಇತ್ತು. ಆಕೆ ಅನೇಕವಾದ ಔಷಧಿಗಳನ್ನೆಲ್ಲಾ ಉಪಯೋಗಿಸಿ, ಆ ತತ್ಕಾಲಕ್ಕೆ ಸ್ವಲ್ಪ ಮೇಲನ್ನು ಹೊಂದಿದಂತೆ ಕಂಡಳು.

ಚಿಟೀಸ್ ಓರಿಯಂಟಲ್ ಬಾಂ ಎಂಬದನ್ನು ಕುರಿತು ಕೇಳಿ, ಅದನ್ನು ಉಪಯೋಗಿಸಬೇಕೆಂದು ನಿಶ್ಚಯಿಸಿಕೊಂಡಳು. ಅದನ್ನು 3 ದಿನಗಳು ಉಪಯೋಗಿಸಿದನಂತರ ಮನೆಯಲ್ಲಿ ತಿರುಗಾಡುವಷ್ಟು ಶಕ್ತಳಾದಳು."

ಸೀಸೆ 1ಕ್ಕೆ 1 ರೂ., ಮೇರಿಗೆ ಎಲ್ಲಾ ಔಷಧಗಾರರಲ್ಲಿಯೂ ಸಿಗುತ್ತೆ.

101-24

ಟೋಪಿಗಳು: ಟೋಪಿಗಳು.

ಉತ್ತಮವಾದ ಟೋಪಿಗಳು ಹಾಸನದಲ್ಲಿ ದೊರೆಯುತ್ತವೆ.

ವಿವಿಧ ತರಹ ಉಣ್ಣೆ ಧಾರದಿಂದ ತಯಾರಿಸಲ್ಪಡುವ ಸಾಮಾನುಗಳನ್ನೂ, ಮಾದರಿಗಳನ್ನೂ, ದರಗಳನ್ನೂ ಮ್ಯಾನೇಜರವರಿಗೆ ಬರೆದು ತಿಳಿದುಕೊಳ್ಳಬಹುದು.

Men's socks, vests and various knitted articles.

ಮ್ಯಾನೇಜರ್, ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ.

Apply :—MANAGER, WOOL WORKS,

[201-6] GIRLS' INDUSTRIAL SCHOOL, HASSAN.



ಅಕ್ಟೋಬರ್ ಮಹೋತ್ಸವದಕ್ಕೆ ಗಡಿಯಾರ

ಅರ್ಧ ಕ್ರಯ ರೂ. 1–14–0

ಇದೇ ಅಕ್ಟೋಬರ್ ಹಬ್ಬದ ಮಹೋತ್ಸವಕ್ಕಾಗಿ ಈ ಭಾರೀಕ್ರಯದ ಕೈ ಗಡಿಯಾರವನ್ನು ಅಕ್ಟೋಬರ್ ಒಳಗೆ ತರಿಸಿಕೊಳ್ಳುವವರಿಗೆ ರೂಪಾಯಿ 1-14-0 ಆಣೆಗೆ ಕೊಡಲ್ಪಡುತ್ತೆ. [99-19]

ವಿಳಾಸ—ವಿ. ಕೃಷ್ಣಸ್ವಾಮಿ ಮೊದಲಿಯಾರ್, ನಂ.27 ಬಂದರ್ ಬೀದಿ, ಜಿ.ಟಿ., ಮದರಾಸು.

ಮಧುರೆ ಜುನ್ನಡಿ ಅಂಚಿನ ಸೀರೆ ಅವ್ವಲ್ ರಖಂ ರೂ. 3–6–0.

ಅಕ್ಟೋಬರ್ ತಿಂಗಳ ಒಳಗಾಗಿ ತರಿಸಿಕೊಳ್ಳುವರಿಗೆ ಒಂದು ಸಿಂಗಪೂರು ರವಿಕೆಯನ್ನು ಪ್ರತಿ ಸೀರೆಗೂ ಇನಾಮಾಗಿ ಕೊಡುತ್ತೇವೆ.

ಇದು ಉಡುವುದಕ್ಕೆ ದಪ್ಪತಿಯಾಗಿಯೂ ನೋಟಕ್ಕೆ ನಯವಾಗಿಯೂ, ಬೆಲೆ ಸುಲಭವಾಗಿಯೂ ಇವೆ. ಬಣ್ಣ ಹೋಗದು. ಸೀರೆಯ ಉದ್ದ 18 ಮೊಳ. ಸುಂದರವಾದ ಸರಗು ಒಂದನ್ನು ತರಿಸಿ ಪರೀಕ್ಷಿಸಿ. ವಿಳಾಸ— ವಿ. ಕೃಷ್ಣಸ್ವಾಮಿ ಮೊದಲಿಯಾರ್, ನಂ. 27, ಬಂದರ್ ಬೀದಿ, ಜಿ. ಟಿ., ಮದರಾಸು.

[99-19]

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

18—9—1914 ರಿಂದ 25—9—1914 ರ ವರೆಗೆ

ಸ್ಥಳ	ಪ್ಲೇಗ್		ಕಾಲರಾ	
	ತಗಲಿದ್ದು.	ಸತ್ತದ್ದು.	ತಗಲಿದ್ದು.	ಸತ್ತದ್ದು
ಬೆಂಗಳೂರು ಪಟ್ಟಣ	8	4	0	0
ಮೈಸೂರು ,,	41	28	0	0
ಬೆಂಗಳೂರು ಡಿಸ್ಟ್ರಿಕ್ಟು	20	18	0	0
ಮೈಸೂರು ,,	44	20	0	0
ಕೋಲಾರ್ ,,	24	21	16	7
ಕೋಲಾರ್ ಚಿನ್ನದ ಗಣಿಗಳು	0	1	0	0
ತುಂಕೂರು ಡಿಸ್ಟ್ರಿಕ್ಟು	0	0	0	0
ಹಾಸನ ,,	1	0	0	0
ಚಿತ್ರದುರ್ಗ ,,	93	61	6	4
ಕಡೂರ್ ,,	0	0	0	0
ಶಿವಮೊಗ್ಗ ,,	33	14	23	15
ಜುಮ್ಲಾ	264	167	45	26

ಶಾಲಿವಾಹನ ಶಕ ವರುಷಂಗಳು 1837 ನೇ ಆನಂದ ಸಂವತ್ಸರೇ ದಕ್ಷಿಣಾಯನೆ ಶರದೃತೌ ಅಶ್ವೀಜ ಬಹುಳ ದ್ವಾದಶಿ ಶುಕ್ರವಾರದಿಂದ ಅಶ್ವೀಜ ಶುದ್ಧ ಚೌತಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ.

1914 ನೇ ಅಕ್ಟೋಬರ್.

ತಾ.	ವಾರ.		ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ	ಕನ್ಯಾ ತುಲಾ ತೇದಿ
16	ಶುಕ್ರ	*	ದ್ವಾದಶಿ	30-39	ಪುಬ್ಬಾ	44-38	31
17	ಶನಿ	‡	ತ್ರಯೋದಶಿ	26-0	ಉತ್ತರಾ	41-26	1
18	ಭಾನು	§	ಚತುರ್ದಶಿ	20-43	ಹಸ್ತ	37-53	2
19	ಸೋಮ	::	ಅಮಾವಾಸ್ಯೆ	15-0	ಚಿತ್ತ	33-51	3
20	ಮಂಗಳ	†	ಪಾಡ್ಯಮಿ	9-1	ಸ್ವಾತಿ	29-37	4
21	ಬುಧ	;;	ಬಿದಿಗೆ	3-7	ಉಷರಿ	54-2	5
22	ಗುರು		ಚೌತಿ	51-26	ಅನೂ	21-29	6

* ಪ್ರದೋಷ. ‡ ತ್ರಯೋದಶೀ ತಿಥಿ, ನರಕಚತುರ್ದಶೀ ಪ್ರಯುಕ್ತ ನೀರು ತುಂಬುವ ಹಬ್ಬ, ಮಳೆ ನಕ್ಷತ್ರ—ಚಿತ್ತ 3 ನೇ ಪಾದ. § ತಿಥಿದ್ವಯಂ, ಸರ್ವತ್ರಾಮಾವಾಸ್ಯೆ, ಕೇದಾರೇಶ್ವರ ವ್ರತ. :: ಪ್ರಥಮಾತಿಥಿ, ಬಲೀಂದ್ರಪೂಜಾ. † ಚಂದ್ರೋದಯ, ದೀಪಾವಳಿ, ಕಾಮಧೇನು ಪೂಜಾ, ಜಲ್ಲೀಟ್ ಟೆಂಡ್ 1, ಮಳೆ ನಕ್ಷತ್ರ—ಚಿತ್ತ 4 ನೇ ಪಾದ. ;; ಶ್ರೀರಂಗಪಟ್ಟಣ ದೋಲೋತ್ಸವಾರಂಭ, ದಗ್ಧಯೋಗ.

ಅದ್ಭುತವಾದ ಬಲಕಾರಿ ಮತ್ತು ಬಾಯಿನಾತಹರ.

ಜಿನತಾನ

ಜೀರ್ಣಶಕ್ತಿ ಹುಟ್ಟಿಸುವುದರಲ್ಲಿ ಇದಕ್ಕೆ ಸಮಾನವಾದದ್ದು ಇನ್ನೊಂದಿಲ್ಲ; ಅನ್ನಕೋಶವು ಎಷ್ಟೇ ದುರ್ಬಲವಾಗಿದ್ದರೂ ಅದರ ಕಾರ್ಯಗಳನ್ನು ಹೇರುಪೇರು ಮಾಡುವದಿಲ್ಲ. ಇದರ ಸೇವನೆಯಿಂದ ಎಲ್ಲಾ ರೋಗಗಳನ್ನೂ ಅಂಟದಂತೆ ತಡೆಯಬಲ್ಲದು. ಈ ಭಾಗದಲ್ಲಿ ಇದರ ಗುಣವು ಬಹು ಫಲಕಾರಿಯಾಗಿದೆ. ಇದಲ್ಲದೆ ಇದನ್ನು ಸೇವಿಸುವವರ ಬಾಯಿಯಲ್ಲಿ ಎಲ್ಲಾ ತರದ ದುರ್ನಾತವೂ ಹೋಗಿ ಸುಗಂಧವು ಹುಟ್ಟಿ ಹರ್ಷಕರವಾಗಿದ್ದೀತು.

ಗಂಟಲಿನ ನರಗಳು ಇದರ ಸೇವನೆಯಿಂದ ಬಹಲ ಬಲಗೊಳ್ಳುವವು. ಇದರ ಗುಣವನ್ನು ನೋಡಿ ಉಪನ್ಯಾಸಕರೂ, ನಾಟಕಧಾರಿಗಳೂ, ಸಂಗೀತಗಾರರೂ, ಬೋಧಕರೂ, ವಾಚಾಳಕ ಪ್ರಿಯರೂ ಈ ಮಾತ್ರೆಗಳನ್ನು ಬಹಳವಾಗಿ ನೋಹಿಸಿ ಪ್ರೀತಿಯಿಂದ ಉಪಯೋಗಿಸುತ್ತಿದಾರೆ.

ಈ ಮಾತ್ರೆಗಳನ್ನು ಜಪಾನ್‌ನಲ್ಲಿರುವ ಒಸಾಕಾ ಪಟ್ಟಣದ ಮೋರಿಷಿತಾ ಕಂಪನಿಯವರು ತಯಾರ್ಮಾಡುತ್ತಾರೆ.

ಈ ಮಾತ್ರೆಗಳ	30 ಮಾತ್ರೆಗಳುಳ್ಳ ಪೊಟ್ಲಕ್ಕೆ 1½ ಆಣೆ.	65 ಮಾತ್ರೆ ಪೊಟ್ಲಕ್ಕೆ 3 ಆಣೆ.
ಕ್ರಯ	195 ,, ಡಬ್ಬಾ ಸಮೇತ 6 ಆಣೆ.	455 ,, ಕನ್ನಡಿ ಡಬ್ಬಾಕ್ಕೆ 1 ರೂಪಾಯಿ.

ಎಲ್ಲಾ ಅಂಗಡಿಗಳಲ್ಲಿಯೂ ಬಿಕರಿಯಾಗುವುದು.

ಸೋಲ್ ಏಜಂಟರು:— ಎಸ್. ವೈದ್ಯ ಮತ್ತು ಕಂಪನಿ, ಪಾರ್ಕ್‌ಟೌನ್, ಮದ್ರಾಸ್.

[156-14]

Printed and Published by the Rev. H. GULLIFORD, Proprietor and Manager, Wesleyan Mission Press, Mysore. 15/10/1914.

M. 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೮ ಮೈಸೂರು—ಸರ್ ೧೯೧೪ ನೇ ಇಸವಿ ಅಕ್ಟೋಬರ್ ತಾರೀಖು ೨೨ ನೇ ಗುರುವಾರ. ಸಂಚಿಕೆ ೨೧

ಯುದ್ಧವಾರ್ತೆಯು.

ಯೂರೋಪಿನಲ್ಲಿ ನಡೆಯುತ್ತಿರುವ ಯುದ್ಧವಾರ್ತೆಯನ್ನು ಪ್ರತಿ ನಿತ್ಯವೂ ಕನ್ನಡಿಗರ ಉಪಯೋಗಕ್ಕಾಗಿ ಪ್ರಕಟಿಸುತ್ತಿರುವೆವು. ಕ್ರಯ 3 ಪೈ; ತಿಂಗಳಿಗೆ 4 ಆಣೆ; ಅಂಚೆಯಲ್ಲಿ ತರಿಸುವವರಿಗೆ ತಿಂಗಳಿಗೆ ಒಂದು ರೂಪಾಯಿ. ಮೈಸೂರು ಸಂಸ್ಥಾನದ ಎಲ್ಲಾ ಭಾಗದಲ್ಲಿಯೂ ಏಜಂಟರುಗಳು ಬೇಕಾಗಿದೆ. ಹೆಚ್ಚಾಗಿ ಕಮಿಷನ್ ಸಿಗುವುದು.

ಮುಖ್ಯ ಏಜಂಟರು—

[23-41] ಲಕ್ಕೂರು ರಾಮಚಂದ್ರರಾವ್, ಮೈಸೂರು.

ಟೋಪಿಗಳು: ಟೋಪಿಗಳು.

ಉತ್ತಮವಾದ ಟೋಪಿಗಳು ಹಾಸನದಲ್ಲಿ ದೊರೆಯುತ್ತವೆ.

ವಿವಿಧ ತರಹ ಉಣ್ಣೆ ದಾರದಿಂದ ತಯಾರಿಸಲ್ಪಡುವ ಸಾಮಾನುಗಳನ್ನೂ, ಮೊದಲಾದವುಗಳೂ, ದರಗಳನ್ನೂ ಮ್ಯಾನೇಜರವರಿಗೆ ಬರೆದು ತಿಳಿದುಕೊಳ್ಳಬಹುದು.

Men's socks, vests and various knitted articles.

ಮ್ಯಾನೇಜರ್, ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ.

Apply:—MANAGER, WOOL WORKS,

[201-7] GIRLS' INDUSTRIAL SCHOOL, HASSAN.

ಬೇಕಾದವರು ಗಮನಿಸಿ.

ತ್ವರೆಮಾಡಿ! ಕೆಲವು ದಿನಗಳು ಮಾತ್ರ!

ಸೋಲಾಪುರದ ಚೆಕ್ಕು, ತೀರೆ, ಖಣ, ಕಿರಿಗೆ.

ಈಗ ಮುಂಗಡವಾಗಿ ಕೊಳ್ಳತಕ್ಕ ವ್ಯಾಪಾರಿಗಳಿಗೆ ಮಾತ್ರ ತರಸೆವಾರಿ ಚೆಕ್ಕು, ತೀರೆ, ಖಣ, ಕಿರಿಗೆ ಇವು ಬಹಳ ಸುಲಭ ಖರೀದಿಗೆ ಒದಗಿಸುವ ಏರ್ಪಾಟು ಮಾಡಲ್ಪಟ್ಟಿವೆ. ನಮ್ಮ ಕಾಯಂ ಗಿರಾಕಿಗಳಿಗೆ ಎಲ್ಲರಿಗಿಂತ ಸುಲಭ ಕ್ರಯಕ್ಕೆ ಕೊಡಿಸುವೆವು.

ಹೊಸ ಗಿರಾಕಿಗಳು ತಮಗೆ ಬೇಕಾದಷ್ಟು ನಮಗೆ ಬರೆದು ಹಣ ಮುಂಗಡ ಕಳುಹಿಸಿದರೆ ಅವರಿಗೂ ಕಾಯಂ ಗಿರಾಕಿಗಳ ದರಕ್ಕೆ ಜವಳಿ ದೊರೆಯುವುದು.

ಹಣ ಕಳುಹಿಸದೆ ಬರೆಯತಕ್ಕ ಕಾಗದಗಳಿಗೆ ಬೇಗ ಗಮನಕೊಡಲು ಅನುಕೂಲವಿಲ್ಲ. ಕಾಗದ ಪತ್ರಗಳನ್ನು ಬೆಳಸುವದರಿಂದ ಖರೀದಿಗಳು ಬದಲಾಯಿಸುತ್ತಿಲ್ಲವೆಂಬ ವಿಷಯ ಜ್ಞಾಪಕದಲ್ಲಿಡಬೇಕು. [28-39]

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್,

159, ಕಿಲಾರಿ ರೋಡ್ (ಸುಂಕೆನಗರ ಪೇಟೆ), ಬೆಂಗಳೂರು ಸಿಟಿ.

BRAHMAPPA TAVANAPPANAVAR,

Merchant & Commission Agent.

Agent to Messrs. Currimbhoy Ebrahim & Co's Mills, BOMBAY.

ನಾವು ಮುಂಬೈ ಮೆಸ್ಸರ್ಸ್ ಕರೀಂಬಾಯ್ ಇಬ್ರಾಹಿಂ ಅಂಡ್ ಕಂಪೆನಿಯವರ ಬಾಬತು, ಮೆಸ್ಸರ್ಸ್ ಫಜುಲ್ಭಾಯಿ ಮಿಲ್ಸ್ ಲಿಮಿಟೆಡ್ ಮುಂಬೈ, ಕ್ರೆಸೆಂಟ್ ಮಿಲ್ಸ್ ಲಿಮಿಟೆಡ್ ಮುಂಬೈ, ಕರೀಂಬಾಯ್ ಮಿಲ್ಸ್ ಲಿಮಿಟೆಡ್ ಮುಂಬೈ, ದಿ ಇಂಡಿಯನ್ ಬ್ಲೀಚಿಂಗ್, ಡೈಯಿಂಗ್ ಅಂಡ್ ಪ್ರಿಂಟಿಂಗ್ ವರ್ಕ್ಸ್ ಲಿಮಿಟೆಡ್ ಮುಂಬೈ, ದಿ ಇಂಡೋರ್ ಅಂಡ್ ಮಾಳ್ವಾ ಯುನೈಟೆಡ್ ಮಿಲ್ಸ್ ಲಿಮಿಟೆಡ್ ಇಂಡೋರ್, ಇವುಗಳಲ್ಲದೆ ಇನ್ನೂ ಅನೇಕ ಮಿಲ್ಲುಗಳ ಬಟ್ಟೆಗಳನ್ನು ಮೈಸೂರು ಸೀಮೆಯಲ್ಲೆಲ್ಲಾ ವಿಕ್ರಯಮಾಡಲು ಕಮಿಷನ್ ಏಜಂಟರಾಗಿರುತ್ತೇವೆ. ನಮ್ಮ ಮುಖಾಂತರ ಮಾಲು ತರಿಸಿಕೊಳ್ಳತಕ್ಕವರಿಗೆ ಮುಂಬೈಯಲ್ಲಿ ಬಟ್ಟೆಗಳ ಮೇಲೆ ವಿಧಿಸತಕ್ಕ ದಲ್ಲಾಳಿ, ಜೋಡಾದಲ್ಲಾಳಿ, ಮೊಕ್ಕಾಮು, ಗಂಟುಕಟ್ಟುವದು, ಸ್ಟೇಷನ್ನಿಗೆ ಹೇರಿಸುವದು, ಹುಂಡೇಕರಿ ವಗೈರೆ ಯಾವ ವಿಧವಾದ ಖರ್ಚೂ ತಗಲದೆ ಇರುವದರಿಂದ ಮುಂಬೈಯಿಂದ ತರಿಸುವುದಕ್ಕಿಂತಲೂ ಸುಲಭ ದರವಲ್ಲಿ ಸಿಕ್ಕುತ್ತೆ. ಮತ್ತು ಮುಂಬೈಗೆ ಹೋಗಿಬರುವ ದೇಹಶ್ರಮವೂ, ಖರ್ಚೂ ಉಳಿಯುತ್ತೆ. ಹೆಚ್ಚು ಬಟ್ಟೆಗಳನ್ನು ಏಕಕಾಲದಲ್ಲಿ ಕೊಳ್ಳತಕ್ಕವರಿಗೆ ಮಾಲಿನ ಮೇಲೆ ಸೇಕಡ 3 ರೂಪಾಯಿ ಲಾಗಾಯ್ತು 4½ ರೂಪಾಯಿ ವರೆಗೆ ಡಿಸ್ಕೌಂಟು ದೊರೆಯುತ್ತೆ. [97-27]

ನಮ್ಮ ಟ್ರಾವಲಿಂಗ್ ಏಜಂಟರ ವಶ ಬಟ್ಟೆಗಳ ನಮೂನೆಗಳನ್ನು ಕೊಟ್ಟು, ಸಗಟು ವ್ಯಾಪಾರಗಾರರಿಗೆ ತೋರಿಸಿ ಆರ್ಡರು ತೆಗೆದುಕೊಳ್ಳುವ ಏರ್ಪಾಡು ಮಾಡಿರುತ್ತೆ. ನಮ್ಮ ದಾವಣಗೆರೆ ಮತ್ತು ಬೆಂಗಳೂರು ಆಫೀಸುಗಳಲ್ಲಿ ಮಾಲು ಸಾಂಪಲು ಸಹ ದೊರೆಯುತ್ತೆ.

ಬಟ್ಟೆಗಳನ್ನು ವ್ಯಾಪಾರಮಾಡಲು ಅನುಭವಸ್ಥರಾದ ಏಜಂಟರುಗಳೂ ಮತ್ತು ಗುಮಾಸ್ತರುಗಳೂ ಬೇಕಾಗಿದೆ.

ಎಲ್ಲಾ ಕಾಗದಪತ್ರಗಳೂ ದಾವಣಗೆರೆ ಆಫೀಸಿಗೆ ಬರೆಯಲ್ಪಡಬೇಕು.

ಹೆಡ್ ಆಫೀಸು:—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್, ದಾವಣಗೆರೆ. ಬ್ರಾಂಚ್ ಆಫೀಸು:—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್,

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸೂರ್ಯೋದಯ ಪುಸ್ತಕಭಂಡಾರ.

ಹೊಸ ನಾವೆಲ್‌ಗಳು:—ನೀಲಾಂಬರಿ, ಸರಳಿ, ಗುರುತು ಕಂಡ ಕಳ್ಳ, ಮಾಲತೀಮಾಧವೀಯ ಅತ್ಯಾಚಾರ, ಮಾಯಾವಿನಿಯ ಪರಿಣಾಮ ಮುಂತಾದ ಪತ್ತೇದಾರಿ ನಾವೆಲ್‌ಗಳು. ಪುಸ್ತಕ ಒಂದಕ್ಕೆ ಆಣೆ 2 ಮಾತ್ರ. ಶಕ್ತಿ 12 ಆಣೆ. ಮಾಧವ ಕಂಕಣ 1-8-0. ಇದಲ್ಲದೆ ಈ ಡಿಪೋದಲ್ಲಿ ಕನ್ನಡ, ತೆಲುಗು, ಸಂಸ್ಕೃತ, ಇಂಗ್ಲಿಷ್ ಗ್ರಂಥಗಳೂ, ನಾವೆಲ್‌ಗಳೂ, ಕಥೆಗಳೂ, ಪುರಾಣಗಳೂ, ವೈದ್ಯ ಜ್ಯೋತಿಷ ಪುಸ್ತಕಗಳೂ ದೊರೆಯುತ್ತವೆ. ಬೇಕಾದವರು ಬರೆದು ಮುಫತ್ತಾಗಿ ದೊರೆಯುವ ಕ್ಯಾಟಲಾಗನ್ನು ತರಿಸಿಕೊಳ್ಳಬಹುದು.

[143-16] ವಿಳಾಸ:—ಪಿ. ನರಸಿಂಗರಾವ್,

ಎಡಿಟರ್, ಲಾ ಗೆಜೆಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

The General Assurance Society Ltd., Ajmer.

(A Popular Life Office.)

Mr. S. P. Ramanna—Agent at Mysore.

Before Insuring or taking agency elsewhere, it would be to your interest to know the rates of premium and terms of agency specially prepared by the Society's Consulting Actuary, Mr. H. E. W. Lott, F.I.A. (one of the most eminent Actuaries in England).

First Valuation Result:—The total liabilities under all assurances issued up to 31st March 1913, are fully covered by the Society's Life Assurance Fund and Paid up Capital. Write for full particulars, Annual and Valuation Reports to the Manager, Ajmer, or Secretary,

Opposite to Minto Ophthalmic Hospital,

[131-15] Bangalore City.

ಸಿದ್ಧವಾಗಿದೆ.

1915 ನೆಯ ವರ್ಷದ ಲೋವರ್ ಸೆಕಂಡರಿ

ಕನ್ನಡ ಟೆಕ್ಸ್ಟಿನ ನೋಟ್ಸು.—ಕ್ರಯ 6 ಆಣೆ.

ಡಿಸ್ಕೌಂಟು—10 ಕ್ಕೆ 1; 25 ಕ್ಕೆ 3; 50 ಕ್ಕೆ 8; 100 ಕ್ಕೆ 20

ಮಕ್ಕಳ ಭೂವಿವರಣೆ.

ಈಗಿನ ಪಾಠಕ್ರಮಕ್ಕೆ ತಕ್ಕಂತೆ ಹೊಸದಾಗಿ ಆಗಿದೆ. ಇದರಲ್ಲಿ ಮೈಸೂರು ದೇಶದ ಬೆಳೆ, ಎತ್ತರ, ನದೀ ಪರ್ವತಾದಿಗಳು ಇವುಗಳನ್ನು ತೋರಿಸುವ ಮೂರು ಭೂಪಟಗಳೂ, ಚಿತ್ರಗಳೂ ಸೇರಿವೆ. ಕ್ರಯ 2 ಆಣೆ. [49-36]

ಇಲಾಖೆಯ 2 ನೆಯ ಪುಸ್ತಕದ ನೋಟ್ಸು 2½ ಆಣೆ. ಮೆಕ್ಮಿಲನ್ ರವರ 3 ನೇ ಪುಸ್ತಕದ ನೋಟ್ಸು 1½ ಆಣೆ. ಡಿಟೋ 4 ನೇ ಪುಸ್ತಕದ ನೋಟ್ಸು 1¾ ಆಣೆ. ಡಿಟೋ 5 ನೇ ಪುಸ್ತಕದ ನೋಟ್ಸು 4 ಆಣೆ. ನವಬಾಲವ್ಯಾಕರಣ (2 ನೇ ತರಗತಿ) 1 ಆಣೆ. Notes on "Tanglewood Tales," English Lower Secondary Text for 1915—As. 3. Notes on Fairy Tales—As. 2.

ನಮ್ಮ ವಿಳಾಸ:—ಯನ್. ಆರ್. ವೆಂಕಟಸುಬ್ಬಾಚಾರ್ಯ,

ಸುಬೋಧಗ್ರಂಥಾಲಯ, ಮೈಸೂರು

ಹೊಸ ಪುಸ್ತಕಗಳು.—ವಿಷವಿವಾಹ 4 ಆ., ಸನ್ಯಾಸಿ 1½ ಆ., ಸುಶೀಲೆ 6 ಆ., ಬಿ. ವೆಂಕಟಾಚಾರ್ಯರಿಂದ-ದುರ್ಗೇಶನಂದಿನಿ 1½ ರೂ., ಅಮೃತಪುಳಿನ 11 ಆ., ಚಿತ್ರವಿಚಿತ್ರಾವಳಿ II 8 ಆ. ವಗೈರೆ ಎಲ್ಲಾ ಕಾದಂಬರಿಗಳು; ಮತ್ತು ಧರ್ಮವಿಜಯ 3 ರೂ., ರಾಜಭಕ್ತಿ 6 ಆ., ವಿವೇಕ ಚೂಡಾಮಣಿ 10 ಆ., ಇತ್ಯಾದಿ.

[53-35] ಎಂ. ಸುಬ್ಬರಾವ್, ಬುಕ್ ಸೆಲರ್, ಶಂಕರಪುರ, ಬೆಂಗಳೂರು ಸಿಟಿ.

ಬೆಲೆಯಿಲ್ಲ! **ಮಧುರವಾಣೀ.** ಫ್ರೀ!!

ವಾರ್ಷಿಕ ಚಂದಾ—ರೂ. 1-8-0.

ಇದರಲ್ಲಿ ಕಾಲಕ್ಕೆ ತಕ್ಕ ಭಾಷಾಶೈಲಿಯಿಂದ ಬರೆಯಲ್ಪಡುವ ಚಮತ್ಕಾರ, ಹಾಸ್ಯ, ವಿವೇಕಗಳಿಂದ ಕೂಡಿದ ಸಂಗೀತಪ್ರಣೀತ ನಾಟಕ, ಕಾದಂಬರಿ, ಜೀವನ ಚರಿತ್ರೆ ಮೊದಲಾದ ಉದ್ಗ್ರಂಥಗಳೂ; ಮತ, ನೀತಿ, ವಿದ್ಯಾ ವಿಷಯಕವಾದ ಉತ್ತಮೋಪನ್ಯಾಸಗಳೂ; ಹಾಸ್ಯಲಹರಿ, ಸದುಕ್ತಿ ಸಂಗ್ರಹ, ಕುಟುಂಬವಿಚಾರ ಮೊದಲಾದ ಉಪಯುಕ್ತ ವಿಷಯಗಳೂ ಬೇರೆ ಬೇರೆ ಪುಟಗಳೊಡನೆ ಸುಂದರ ಮುದ್ರಣದಿಂದ ಚಿತ್ರಸಹಿತವಾಗಿ ಪ್ರತಿ ಮಾಸವೂ ತಪ್ಪದೆ ಪ್ರಕಟೀಕರಿಸಲ್ಪಡುವುವು. ಮಾದರಿ ಸಂಚಿಕೆಗೂ ಕ್ಯಾಟಲಾಗಿಗೂ ಬೆಲೆಯಿಲ್ಲ. ಸ್ವಲ್ಪ ಪ್ರತಿಗಳೇ ಉಳಿದಿವೆ.

[160-14] ನಮ್ಮ ವಿಳಾಸ—ಹನುಮಾನ್ ಕಂಪೆನಿ, ಮೈಸೂರು.

ಷೇಕ್ಸ್‌ಪಿಯರ್

ಮಹಾ ಕವಿಯ ನಾಟಕದ ಕಥೆಗಳು.

ಸಿಂಬ್ಲೈನ್, ಒಥೆಲೋ, ಮರ್ಚೆಂಟ್ ಆಫ್ ವೆನ್ನಿಸ್, ಕಿಂಗ್‌ಲಿಯರ್ ಮುಂತಾದ ಕೆಲವು ನಾಟಕಗಳನ್ನು ಕಥಾ ರೂಪವಾಗಿ ಬರೆಯಲ್ಪಟ್ಟು, ನಮ್ಮ ದೇಶದ ಹೆಸರನ್ನಿಟ್ಟು ಪ್ರಕಟಿಸಿರುತ್ತೆ. ಪ್ರತಿ ಒಂದಕ್ಕೂ ಎರಡೆರಡಾಣೆ. ಅವು ಯಾವವೆಂದರೆ—ಕಳಾವತಿ, ಪದ್ಮಿನಿ, ವಸುಮತಿ, ಚಿತ್ರಕಳಾವತಿ, ವಿಲಕ್ಷಣ ಶಿಕ್ಷಣ, ಭಾನುಮತಿ, ವೈದರ್ಭೀ ವಿಲಾಸ, ಚಾರುಮತಿ, ಚಾತುರ್ಯವತಿ.

"ಮರುಳಾಟದ ಮದುವೆ" ಎಂಬ ನಕಲಿಯು ಈಗತಾನೇ ಬೆಳಕಿಗೆ ಸಿದ್ಧವಾಗಿದೆ. ಪ್ರತಿಯೊಬ್ಬರೂ ಓದಬೇಕಾದುದು. ಕ್ರಯ 6 ಆಣೆ.

[266-45] ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

ಅರೇಬಿಯನ್ ನೈಟ್ಸ್

ಎಂಬ

ಯವನ ಯಾಮಿನೀ ವಿನೋದ ಕಥೆಗಳು.

(ಕನ್ನಡದಲ್ಲಿ)

ಲೋಕಪ್ರಸಿದ್ಧವಾದ ಈ ಪುಸ್ತಕದ ಮೊದಲನೇ ಮುದ್ರಣವು ಶೀಘ್ರದಲ್ಲಿಯೇ ಮುಗಿದುಹೋದುದರಿಂದ ಎರಡನೇ ಮುದ್ರಣವನ್ನು ತಯಾರಿಸಿರುತ್ತೇವೆ. ಇದರ ಪ್ರಿಂಟಿಂಗ್ ಮತ್ತು ಬೈಂಡ್ ಮುಂತಾದ ಕೆಲಸಗಳು ವೆಸ್ಲಿಯನ್ ಮಿಷನ್ ಪ್ರೆಸ್ಸಿನಲ್ಲಿ ಬಹು ಶ್ಲಾಘ್ಯಕರವಾಗಿ ಮಾಡಲ್ಪಟ್ಟಿರುವವು. ಈ ಎರಡನೇ ಮುದ್ರಣವನ್ನು ಘನ ಪಂಡಿತರು ಆಮೂಲಾಗ್ರವಾಗಿ ಪರಿಶೀಲನೆಮಾಡಿ ತಿದ್ದಿ ಸರಿಪಡಿಸಿರುತ್ತಾರೆ. ಇದರಲ್ಲಿನ ಕಥೆಗಳು ಬಹು ಮನೋರಂಜಕವಾಗಿಯೂ ಭಾಷೆಯು ಅತಿ ಲಲಿತವಾಗಿಯೂ ಇರುತ್ತವೆ. ಪುಸ್ತಕವು ನಾನೂರು ಪುಟಗಳಿಗಿಂತ ಹೆಚ್ಚಾಗಿರುತ್ತದೆ. ಇದರ ಕ್ರಯ ಎರಡೇ ರೂಪಾಯಿ. ವಿ.ಪಿ.ಪಿ. ಮೂಲಕ ತರಿಸಿಕೊಂಡರೆ ರೂ. 2-4-0. ಜಾಗ್ರತೆ ನೋಡಿ. [212-5]

ವಿಳಾಸ—ಮ್ಯಾನೇಜರ್, ಸಿ.ಎಲ್.ಎಸ್. ಬುಕ್ ಡಿಪೋ, ಮೈಸೂರು.

1915 ನೆಯ

ಪಾಕೆಟ್ ಡೈರಿ

ಶ್ರೀ ಸೀತಾರಾಘವ



ಪಾಕೆಟ್ ಡೈರಿಗಳು

[199-7]

ಬಿಕರಿಗೆ ಸಿದ್ಧವಾಗಿವೆ.

ಶಾಯಿ ಇಳಿಯದ ಉತ್ತಮವಾದ ಕಾಗದ! ಮುದ್ದಾದ ಮುದ್ರಣ!

ಅನೇಕವಾದ ಹೊಸ ಸಂಗತಿಗಳಿವೆ.

1 ನಂ. ಸಣ್ಣ ಸೈಜು ಸಾದಾ 0-4-0. 2 ನಂ. ಪೆನ್ಸಲ್ ಮುಚ್ಚಳವುಳ್ಳದ್ದು 0-6-0.

3 ನಂ. ದೊಡ್ಡ ಸೈಜು ಸಾದಾ 0-6-0. 4. ನಂ. ಪೆನ್ಸಲ್ ಮುಚ್ಚಳವುಳ್ಳದ್ದು 0-8-0.

ಒಂದೇ ವಿಳಾಸಕ್ಕೆ 10 ಡೈರಿಗಳನ್ನು ಒಟ್ಟಿಗೆ ತರಿಸಿಕೊಂಡರೆ 1 ಇನಾಂ.

ಹೆಚ್ಚಾಗಿ ತರಿಸುವವರಿಗೆ ರೂಪಾಯಿಗೆ 0-2-0 ಕಮಿಷನ್.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಶರಿವಾತದಿಂದ ಹಿಂಸೆ ಪಡಬೇಡಿ.

ನೀವು ಹಿಂಸೆಪಡಬೇಕಾದದ್ದು ಇಲ್ಲವೇ ಇಲ್ಲ. ಒಂದುವೇಳೆ ಅನೇಕ ಔಷಧಗಳನ್ನು ಉಪಯೋಗಿಸಿದ್ದೀರಿ, ಆದರೂ ಶರೀರನೋವನ್ನಾದರೂ ಹಾರಿಸುವ ಔಷಧಿಯುಂಟು.

ಸೌ। ಸಂಸ್ಥಾನದ ಸೇಂಟ್ ಹೀಲಿಯಾಸಿನ ಮ॥ ಸಾಮುವೇಲ್ ಪಾರ್ಲ್ಕ ಹೇಳುವದೇನಂದರೆ:—ನಾನು ಶರೀರವಾತದಿಂದ ಅಧಿಕ ಕಷ್ಟಪಟ್ಟೆನು. ನನ್ನ ಗೋಳನ್ನು ಯಾರೂ ನೋಡಲಾರದಿತ್ತು. ಕಣ್ಣು ತೆರೆದು ನೋಡಲಾರದಷ್ಟು ಕಷ್ಟವಾಗಿತ್ತು. ನನ್ನ ಕಣ ತಲೆ ಬುರುಡೆಯೂ ತಲೆಯ ಪಕ್ಕಗಳಲ್ಲಿಯೂ ಒಂದಿಷ್ಟು ತೈಲವನ್ನು ತಿಕ್ಕಿದ್ದರಮೇಲೆ 7 ನಿಮಿಷಗಳಲ್ಲಿ ನೋವಿನಿಂದ ಬಿಡುಗಡೆ ಹೊಂದಿದೆನು. ಮೂರು ವಾರಗಳ ತರುವಾಯ ಆ ನೋವು ತಿರುಗಿ ಕಾಣಿಸಲೇ ಇಲ್ಲ. ಲಿಟಲ್ಸ್ ಓರಿಯಂಟಲ್ ಬಾಂ ಎಂಬದನ್ನು ಅರ್ಧ ಸೀಸೆ ಉಪಯೋಗಿಸಿ, ಪೂರ್ಣ ಕ್ಷೇಮ ಹೊಂದಿದೆನು.

ಸೀಸೆ 1ಕ್ಕೆ 1 ರೂ. ಚೀರಿಗೆ ಎಲ್ಲಾ ಔಷಧಗಾರರಲ್ಲಿಯೂ ಸಿಗುತ್ತೆ. 101-25

ಮಲೇರಿಯಾ

ಮತ್ತು ಹವಾ ದೆಸೆಯಿಂದುಂಟಾಗುವ ಎಲ್ಲಾ ತರದ ಜ್ವರವೂ

ಈಸಾನೋಫೆಲಿ

ಯ ಸೇವನೆಯಿಂದ ಬೇಗನೆ ನಿವಾರಣೆಯಾಗುತ್ತೆ.

ಕ್ವಿನೈನ್ ಜ್ವರವನ್ನು ಅಣಗಿಸುವುದು ; ಆದರೆ ನಮ್ಮ ಈ ಸಾನೋಫೆಲೆಯು 15 ದಿನದಲ್ಲಿ ವಾಸಿಮಾಡುತ್ತದೆ. ಹಗಲು ರಾತ್ರಿ ಒಂದೊಂದು ಮಾತ್ರೆ ತೆಗೆದುಕೊಳ್ಳುತ್ತಾ ಬಂದರೆ ಜ್ವರ ಬಾರದಂತೆ ಸಂರಕ್ಷಣೆ ಮಾಡಬಲ್ಲದು.

ಜ್ವರವು ಸಂಪೂರ್ಣವಾಗಿ ವಾಸಿಯಾಗುವುದಕ್ಕೆ ಎರಡು ಬಾಟ್ಲಿ ಔಷಧ ಹದಿನೈದು ದಿನಕ್ಕೆ ಸಾಕು.

ಬಾಟ್ಲಿಗೆ ಕ್ರಯ 2 ರೂಪಾಯಿ.

ಬಿಕರಿಯಾಗುವ ಸ್ಥಳಗಳು.

1. ಫಾಸ್ಟರ್ ಕಂಪನಿ, ಕೆಮಿಸ್ಟ್ಸ್, ಬೆಂಗಳೂರು ;
2. ಬಿ. ಜಿ. ಗೋರಿಯೋ ಕಂಪನಿ, ವಾಲೆಸ್ ಬೀದಿ,

[172-11] ಬೊಂಬಾಯಿ ;

ಇಡಲ್ಲದೆ

ಎಲ್ಲಾ ಔಷಧ ಮಾರಾಟದ ಷಾಪಿನಲ್ಲೂ ಸಿಕ್ಕುವುದು.

CHAMBERLAIN'S PAIN BALM.

ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು.



3-43

ಬೆನ್ನೆಲುಬಿನ ನೋವು, ಪಕ್ಕಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ತಲೆನೋವು, ಜಜ್ಜಾದ ಕಡೆ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ.

ವಾಯುನೋವೆಂದರೇನು ?

ಕೀಲುಗಳಲ್ಲೂ ಮಣಕಟ್ಟುಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಸೆಳೆಯುವ ಬಾಧೆ, ಖಂಡಗಳು ಇರಿಯುವುದು, ವಿಶ್ರಾಂತಿ ಕೊಡದೆ ಇರುವುದು, ನಿದ್ದೆ ಹತ್ತದೆ ಇರುವುದು—ಇವೇ. ಇವೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು.

ಆಗ ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ.

ಮೊದಲನೇ ಸಲ ಇದನ್ನು ಹಾಕಿ ಉಜ್ಜದ ಕೂಡಲೆ ಹಿತಕರವಾದ ಒಂದು ತರಹಾ ಕಾವು ಮೂಳೆಯೊಳಕ್ಕೆ ವ್ಯಾಪಿಸುತ್ತದೆ ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ. ಮನಸ್ಸಿಗೆ ಉಲ್ಲಾಸವಾಗುತ್ತದೆ. ಆದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಮುಟ್ಟಿದ್ದೇನೂ ಅಲ್ಲ.

ಇದು ಎಲ್ಲೆಲ್ಲೂ ಬಿಕರಿಯಾಗುವದು. ಸಣ್ಣ ಸೀಸೆಗೆ ೧ ರೂಪಾಯಿ. ದೊಡ್ಡ ಸೀಸೆಗೆ ೨ ರೂಪಾಯಿ.

ಪ್ರೊಫೆಸರ್ ಬ್ರೇಸ್ಲರ್ ಇಲೆಕ್ಟ್ರೊ ಪೆಯಿನಾಡೈನ್

ಮನುಷ್ಯನ ಶರೀರದಲ್ಲಿ ವಿದ್ಯುಚ್ಛಕ್ತಿ ವ್ಯಾಪಿತವಿರುವದೆಂತಲೂ, ವಿದ್ಯುಚ್ಛಕ್ತಿ ಕಡಮೆಯಾದ ಕೂಡಲೇ ನಾನಾ ತರದ ವ್ಯಾಧಿಗಳು ಏಳುವದೆಂತಲೂ, ಅಂತಹ ವ್ಯಾಧಿಗಳನ್ನು ಶೀಘ್ರ ಗುಣಪಡಿಸಲು ವಿದ್ಯುಚ್ಛಕ್ತಿ ಮಿಶ್ರವಾದ ಔಷಧದ ಉಪಯೋಗದಿಂದಲ್ಲದೆ



ಬೇರೆ ಔಷಧಗಳಿಂದ ವ್ಯಾಧಿಗಳನ್ನು ಶೀಘ್ರ ಗುಣಪಡಿಸುವದು ಕಷ್ಟವೆಂತಲೂ ಅಮೆರಿಕಾ ದೇಶದ ವೈದ್ಯಶಾಸ್ತ್ರ ಪಂಡಿತರು ವೈದ್ಯಶಾಸ್ತ್ರ ಪರಿಶೋಧನೆಯಿಂದ ಸಿದ್ಧಿಸಿರುವರು ಈ ಔಷಧವು ಉಪಯೋಗಿಸಿದ ಕೂಡಲೇ ದೇಹಕ್ಕೆ ಸಾಕಾಗುವಷ್ಟು ವಿದ್ಯುಚ್ಛಕ್ತಿಯನ್ನುಂಟುಮಾಡಿ ವ್ಯಾಧಿಯನ್ನು ಅತಿ ಶೀಘ್ರ ಗುಣಪಡಿಸುತ್ತೆ. ಪ್ರಾಚೀನಕಾಲದ ಔಷಧಗಳಿಗೆಲ್ಲವು ಇದು ಅತ್ಯುತ್ತಮವಾದದ್ದು. ಒಂದಾವರ್ತಿ ಪರೀಕ್ಷಿಸಿ ನೋಡಿದ ಇದರ ಗುಣವು ವ್ಯಕ್ತವಾಗುತ್ತೆ.

ಎಲೆಕ್ಟ್ರೊ ಪೆಯಿನಾಡೈನ್ ತೈಲದಿಂದ ಗುಣಪಡುವ ವ್ಯಾಧಿಗಳು:—

ತಿಮರುವಾಯುವು, ಕೀಲ್ವಾಯುವು, ಪಾರ್ಶ್ವವಾಯುವು, ಕ್ಷಯ, ಕೆಮ್ಮು ನೆಗಡಿ, ವಾಯುನೋವು (ಕೈಕಾಲು ಹಿಡಿತ), ಉಳುಕುಹಿಡಿದಿದ್ದರು, ಕಠಿನಶ್ವಾಸ ನಡುನೋವು (ಸೊಂಟನೋವು), ಪಕ್ಕಶೂಲೆ, ಹಲ್ಲುನೋವು, ತಲೆನೋವು, ಆರೆತಲೆ ನೋವು, ಉಬ್ಬಸ, ವಿಷಜ್ವರದ ಗಡ್ಡೆಗಳಿಗೂ ಮತ್ತು ಮಕ್ಕಳ ಪಕ್ಕಶೂಲೆ, (ಆಳ್ಳಿ) ಕೈತ್ಯದೋಷಗಳೂ, ವಿಷಹುಳಗಳ ಕಡಿತಗಳಿಗೂ (ಚೇಳು ಮುಂತಾದದ್ದು), ಇದಕ್ಕೆಲ್ಲಾ ಬಹಳ ಶ್ಲಾಘನೀಯವಾದದ್ದು. [12-42]

ಉಪಯೋಗಿಸುವ ಕ್ರಮವು ಹಿಂದುದೇಶದ ಎಲ್ಲಾ ಭಾಷೆಗಳಲ್ಲಿಯೂ ಬುಡ್ಡಿಯ ಸಂಗಡ ಕಳುಹಿಸಲಾದೀತು.

ಬುಡ್ಡಿಯ ಕ್ರಯ ರೂ. 0-8-0. ವಿ. ಪಿ. ಖರ್ಚು 0-4-0. ಏಜಂಟರು ಬೇಕು.

ಮುಖ್ಯ ಏಜಂಟರು :—ಗುರುಬಸವ ಅಂಡ್ ಕಂಪನಿ, ಮದರಾಸ್.

ಸಂಪೂರ್ಣಾರೋಗ್ಯವು, ಸಂತೋಷಬಾಳ್ವೆಯು, ಶಾಶ್ವತವಾದ ಸಂಪತ್ತು, ಇವುಗಳನ್ನು ಪಡೆಯುವುದಕ್ಕೋಸ್ಕರ ಇನ್ನೂ ಕತ್ತಲೆಯಲ್ಲಿ ಪೇಚಾಡುವಿರೋ ?

ಹಾಗಾದರೆ ನಮ್ಮ

ಪಂಜಾ ಸಾಲಾಮಿಸ್ರಿ ಮುರಬ್ಬ

ವನ್ನು ಸೇವಿಸಿ ಜೀವವಿಮೆಯನ್ನು ಮಾಡಿಕೊಳ್ಳಿರಿ.

ಆಬಾಲವೃದ್ಧರಿಗೂ ಸ್ತ್ರೀಪುರುಷರಿಗೂ ಉಪಯೋಗಪಡುವ ಮತ್ತು ಪುಷ್ಟಿಯನ್ನು ಕೊಡುವ ಔಷಧಿಯು ಇದೇ. ಈ ಪಂಜಾ ಸಾಲಾಮಿಸ್ರಿ ಮುರಬ್ಬ ಮೂತ್ರಕೋಶ ಸಂಬಂಧವಾದ ಎಲ್ಲಾ ತರಹೆಯ ರೋಗಗಳನ್ನೂ ನಿವರ್ತಿಮಾಡುತ್ತದೆ. ಪಂಜಾ ಸಾಲಾಮಿಸ್ರಿಯೊಂದಿಗೆ ಅಪೂರ್ವವಾದ ಮತ್ತು ಉತ್ತಮವಾದ

ವನಸ್ಪತಿಗಳನ್ನು ಸೇರಿಸಿ ಮುರಬ್ಬವನ್ನು ತಯಾರುಮಾಡಲ್ಪಟ್ಟಿದೆ. ಒಂದು ಸಲ ಉಪಯೋಗಿಸಿದರೆ ಎಂದಿಗೂ ಮರೆಯಲಾರದ ರಸರಹಿತವಾದ ಚಾತ್ರಿಯಾದ ದೇಹಪುಷ್ಟಿಯನ್ನು ಕೊಡತಕ್ಕ ಔಷಧಿಯೇ ಇದು.

ಪಂಜಾ ಸಾಲಾಮಿಸ್ರೀ ಮುರಬ್ಬಾವು—ನಿದ್ರೆಯಲ್ಲಿಯೂ ಮೂತ್ರದಲ್ಲಿಯೂ ಹೋಗುವ ಧಾತುವನ್ನು ನಿಲ್ಲಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಮೂತ್ರದಲ್ಲಿ ಉರಿಯುವುದನ್ನು ನಿಲ್ಲಿಸುವುದು
ಪಂಜಾ ಸಾಲಾಮಿಸ್ರೀ ಮುರಬ್ಬಾವು—ರಕ್ತವನ್ನು ವೃದ್ಧಿಪಡಿಸಿ ಮೆದುಳಿಗೆ ಬಲವನ್ನು ಕೊಡುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಕೈ, ಕಾಲು, ಸೊಂಟದ ನೋವುಗಳನ್ನು ಹೋಗಲಾಡಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಹಸಿವನ್ನು ರಕ್ತವನ್ನು ಹೆಚ್ಚಿಸಿ ಧಾತುವನ್ನು ಕೇಷುರಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಉತ್ಸಾಹವು, ಬುದ್ಧಿಕುಶಲತೆಯು, ಶರೀರಕಾಂತಿಯು ಕೊಡುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ತಾಂಬ್ರಾ ಮತ್ತು ಭಂಗಾರಭಸ್ಮಕ್ಕಿಂತಲೂ ಉತ್ತಮವಾದದ್ದು.

ಈ ಮುರಬ್ಬಾದೊಂದಿಗೆ ಬಲಬರುವಂಥ ಪದಾರ್ಥಗಳನ್ನು ಸೇರಿಸಿ ಪ್ರತಿಯೊಬ್ಬರೂ ಸೇವಿಸುವ ಹಾಗೆ ಕೈಯಿಂದ ಮುಟ್ಟದೆ ತಯಾರು ಮಾಡಲ್ಪಟ್ಟಿರುವುದು.

ಒಂದು ಡಬ್ಬಿ ಮುರಬ್ಬಾವನ್ನು 15 ದಿನಗಳು ಉಪಯೋಗಿಸುವುದರಿಂದ ಪೂರಾ ಗುಣ ಕೊಡುತ್ತದೆ. 2-3 ಡಬ್ಬಿಗಳನ್ನು ಉಪಯೋಗಿಸುವದರಿಂದ ಜನ್ಮಾಂತ್ಯದ ವರೆಗೂ ಗುಣಕೊಡುತ್ತೆ. ಈ ಸಾಲಾಮಿಸ್ರೀ ಎಂಬುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲ್ ಕಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿನ ಜನರು ಸಾಲಾಮಿಸ್ರೀಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು. ಅನೇಕರು ಉರುಳುಗಡ್ಡೆ, ಶಾವುಗಡ್ಡೆ ಇವುಗಳನ್ನು ಪಕ್ವಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಮೋಸಪಡಿಸುವರು. ನಮ್ಮ ಮುರಬ್ಬಾವನ್ನು ಪರೀಕ್ಷಿಸಿ ನೋಡಿದಲ್ಲಿ ಇದು ಪಂಜಾ ಸಾಲಾಮಿಸ್ರಿಯೇ ಅಥವಾ ಬೇರೆ ತರಹದ್ದೇ ಎಂಬುದು ತಿಳಿಯಬರುತ್ತೆ. [214-6

ಈ ಮುರಬ್ಬಾವು "ಪಂಜಾ ಸಾಲಾಮಿಸ್ರಿ" ಅಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡುವೆವು

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. 15 ತೊ ಮುರಬ್ಬಾವಿನ ಡಬ್ಬಿ 1 ಕ್ಕೆ ರೂಪಾಯಿ 3-0-0. ಟಪ್ಪಾಲು ಖರ್ಚು 1 ಡಬ್ಬಿಯಿಂದ 3 ಡಬ್ಬಿಗಳ ವರೆಗೆ 6 ಆಣೆ. ಅನುಪಾನ ಪತ್ರಿಕೆ ಔಷಧದ ಸಂಗಡ ಇರುತ್ತೆ

ಏಜಂಟರು—ಡಿ. ಸೈಯದ್ ಉಸ್ಮಾನ್ ಅಂಡ್ ಕೊ, ದೊಡ್ಡ ಪೇಟೆ, ಬೆಂಗಳೂರು ಸಿಟಿ.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು, ಅವೆನ್ಯೂ ರೋಡ್, ಬೆಂಗಳೂರು ಸಿಟಿ

MELLIN'S FOOD

ಮೆಲಿನ್ಸ್ ಆಹಾರವು [4-42]

ಕೃಸೋಕದ ಮಾಡಿದೆ.

ಮೆಲಿನ್ಸ್ ಆಹಾರದಲ್ಲಿ ಶಿಶುಗಳು ಪುಷ್ಟಿಯಾಗಿ ಬೆಳೆಯುವವು.

ಮೆಲಿನ್ಸ್ ಆಹಾರವನ್ನು ಕ್ರಮಪ್ರಕಾರ ತಯಾರ್ಮಾಡಿ ಸೇವಿಸಿದರೆ ಹುಟ್ಟಿದ ಶಿಶುಗಳು ಮೊದಲುಗೊಂಡು ಮುದಿಪ್ರಾಯದವರ ತನಕ ಎಲ್ಲರಿಗೂ ಸಂಪೂರ್ಣವಾದ ದೇಹಪುಷ್ಟಿಯನ್ನೂ ವಿಶೇಷವಾದ ಬಲವನ್ನೂ ಕೊಡುತ್ತದೆ.

ಮೆಲಿನ್ಸ್ ಆಹಾರದ ಮಾದ್ರಿ ಬೇಕೆಂದು ಕೇಳಿದರೆ ಕೆಳಗಿನ ವಿಳಾಸದಾರರು ಕಳುಹಿಸುತ್ತಾರೆ:—

Messrs. OAKES & Company, Mount Road, Madras.

ವಿಳಾಸ—ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

ದೀಪಾವಳಿ ಬಹುಮತಿ ಗಡಿಯಾರ.

19 ಸಾಮಾನು ಬಹುಮತಿ ಸಹಿತ ಕ್ರಯ ರೂ. 3-14-0.

ಇದರಲ್ಲಿ ತೋರುವ 10 ರೂಪಾಯಿ ಬೆಲೆಯುಳ್ಳ ಗಡಿಯಾರವನ್ನು ದೀಪಾವಳಿ ಉತ್ಸವಕ್ಕಾಗಿ ರೂ 3-14-0 ಕ್ಕೆ 19 ಬಹುಮಾನಗಳ ಸಮೇತ ಉಚಿತವಾಗಿ ಕೊಡುತ್ತೇವೆ. 1 ಗಡಿಯಾರ ಸರಪಣಿ, 2 ಪೇನಾ, 3 ಉತ್ತರಮುಖಿ, 4 ಹಣದ ಚೀಲ, 5 ಬ್ಲೂಬ್ಲಾಕು ರಾಯಿ ಫೌಂಟ್ನ, 6 ಎಲೆಕ್ಟ್ರಿಕ್ ಭಂಗಾರದ ಸಾಮಂತಿಗೆ ಹೂವು, 7 ಇಮಿಟೇಷನ್ ಡೈಮಂಡ್ ಪದಕಗುಂಡಿ, 8 ಜರ್ಮನ್ ಬೆಳ್ಳಿಯ ಕಂಠಾಭರಣೆ, 9 ಡಿಟೋ ಸಾದಿನ ಚಪ್ಪು, 10 ಡಿಟೋ ಕಣ್ಣುಕಪ್ಪಿನ ಭರಣಿ, 11 ಡಿಟೋ ನಸ್ಯದ ಡಬ್ಬಿ, 12 ಇಮಿಟೇಷನ್ ಡೈಮಂಡ್ ಮೂಗುಬಟ್ಟು, 13 ಕತ್ರಿ, 14 ಎಲೆಕ್ಟ್ರೋ ಪ್ಲೇಟು ಉಂಗುರ, 15 ರೇಷ್ಮೆ ಧಾರ, 16 ಸ್ಟೀಲು ಸಟ್ಟು, 17 ಕೆಂಪು ರಾಯಿ ಫೌಂಟ್ನ, 18 ಕೈಗುದ್ದೆ, 19 ಇಮಿಟೇಷನ್ ತಂಜಾವೂರು ಗೆಜ್ಜೆ ಅಡ್ಡಿಗೆ.

ಮಧುವೆ ಚಿನ್ನದ ಸೀರೆ ರೂ 1-15-0; ತಂಜಾವೂರು ಗೆಜ್ಜೆ ಅಡ್ಡಿಗೆ 5 ಆಣೆ; ಕೈ ಗಡಿಯಾರ ರೂ 1-14-0 [232-2]

ನಮ್ಮ ವಿಳಾಸ—ಪಯೋನಿಯರ್, ರಾಜಾವಿಲಾಸ, ಇಲ್ಲವಾಕಂ, ಮದರಾಸು.

ದಸರಾ ಬಹುಮಾನ! ನವರಾತ್ರಿ ಬಹುಮಾನ!

ದೊಡ್ಡವರೂ ಹುಡುಗರೂ ಅಲಂಕಾರ ಪ್ರಾವೀಣರಾಗಿ ಧರಿಸಬಹುದಾದ ಜರಾಕ್ ರೇಷ್ಮೆ ಶಾಲಿನ್ ಚೌಕವು.

2 ಮೊಳವಿರುವ ಚೌಕ ಒಂದಕ್ಕೆ ರೂ. 1-6-0. 1½ ಮೊಳವಿರುವ ಚೌಕ ಒಂದಕ್ಕೆ 15 ಆಣೆ. ಒಂದೇ ಸಲ ಎರಡು ಚೌಕಗಳನ್ನು ತರಿಸಿಕೊಳ್ಳುವವರಿಗೆ ಸ್ತ್ರೀಯರು ಕಂಠದಲ್ಲಿ ಧರಿಸಬಹುವಾದ ಗೆಜ್ಜೆ ಅಡ್ಡಿಗೆಯನ್ನು ಇನಾಮು ಕಳುಹಿಸಿಕೊಡುತ್ತೇವೆ. ಒಂದರಿಂದ ಎರಡರವರೆಗೂ ಪೋಸ್ಟೇಜು 3 ಆಣೆ. ಇದುವರೆಗೆ ಎಲ್ಲರೂ ವಿಕ್ರಯಿಸಿದ ರೇಷ್ಮೆ ಪಂಚೆಗಳು ಇಷ್ಟು ಮೇಲಾದವುಗಳಲ್ಲ. ಈ ಚಿತ್ರದಲ್ಲಿ ಕಾಣುವಂತೆ ಚಿತ್ರವಿಚಿತ್ರವಾದ ಹೂಗಳಿಂದ ತಯಾರಿಸಿದ ಈ ನೂತನವಾದ ಮೇಲಾದ ಚೌಕಗಳು ಈಗತಾನೇ ನಾವು ತರಿಸುತ್ತೇವೆ ಸಂಚಪರ್ವಗಳಲ್ಲಿ ಒಳಗಳೂ, ಹೂಗಳೂ, ಎಲೆಗಳೂ ಬಾಕಿ ಉತ್ತಮವಾದ ರೇಷ್ಮೆ ಅಂಚಟ್ಟು ತಯಾರಿಸಿ ನವರಾತ್ರಿ ಮಹೋತ್ಸವಕ್ಕಾಗಿ ತರಿಸುತ್ತೇವೆ. ಸಾವಿರಾರು ವಿಕ್ರಯವಾಗುತ್ತಿವೆ. ಜಾಗ್ರತೆ ತರಿಸಿಕೊಳ್ಳಿ.

ಆಫೀಸ್—ಜರಾಕ್ ಸಿಲ್ಕ್ ಮರ್ಚೆಂಟ್ಸ್, 1-6 ವೆಂಕಟೇಶ ಮೇಸ್ತ್ರಿ ಬೀದಿ, ಸಾಹುಕಾರಪೇಟೆ, ಮದರಾಸು. [199-23]

ವಾಚಕ ಮಹಾಶಯರೇ! ಈ ಕೆಳಗೆ ಕಂಡ ಆಭರಣಗಳನ್ನು ಅಚ್ಚ ಸ್ವದೇಶದ ಬೆಳ್ಳಿ ಕಂಚಿಯಿಂದ ತಯಾರಿಸಿರುತ್ತೆ. ಇವರ ರಂಗು ಎಷ್ಟು ವರುಷಗಳಾದರೂ ಕೆಡುವದಿಲ್ಲ. ಇದು ಸರ್ವರಿಗೂ ಧರಿಸಿಕೊಳ್ಳುವದಕ್ಕೆ ಉಪಯುಕ್ತವಾದದ್ದು. ಇದಕ್ಕೆ ಏಜಂಟರುಗಳು ಬೇಕು. ಸಂಬಳ ತಿಂಗಳಿಗೆ ರೂ. 15. ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆಯಿರಿ



ಸುಂದರವಾದ ಕಾಲುಕಡಗ.

ದೊಡ್ಡವರಿಗೆ	ಚಿಕ್ಕವರಿಗೆ	ಹುಡುಗರಿಗೆ	ಮಕ್ಕಳಿಗೆ
1-6-0	1-3-0	0-14-0	0-10-0

ಸುಂದರವಾದ ಡಾಬು (ಒಡ್ಯಾಣ).

ದೊಡ್ಡವರಿಗೆ	ಚಿಕ್ಕವರಿಗೆ	ಹುಡುಗಿಯರಿಗೆ
1-6-0	1-3-0	0-15-0

ಸುಂದರವಾದ ಪ್ರಮುಖೇರಿ ಪಿಳಿ (ಕಾಲುಗೊಲಸು).

ದೊಡ್ಡವರಿಗೆ	ಚಿಕ್ಕವರಿಗೆ	ಹುಡುಗರಿಗೆ
1-14-0	1-10-0	1-6-0

ಮಕ್ಕಳಿಗೆ 1-4-0

ತಾಜಾಕಲಂ—ಒಂದು ರೂಪಾಯಿಗೆ ಕಮ್ಮಿ ಇಲ್ಲದೆ ತರಿಸಿಕೊಳ್ಳುವವರಿಗೆ ಸುಂದರವಾದ ಎಲೆಕ್ಟ್ರಿಕ್ ಚಿನ್ನದ ಮೈಸೂರು ಕಪ್ಪವನ್ನು ಪ್ರತಿ ಒಂದು ರೂಪಾಯಿಗೂ 1 ಕಪ್ಪವನ್ನು ಉಚಿತವಾಗಿ ಕೊಡುತ್ತೇವೆ. ಮತ್ತು ರೂಪಾಯಿಗೆ ಎರಡು ಆಣೆ ಕಮಿಷನ್ ಕೊಡುತ್ತೇವೆ. [225-2]

ವಿಳಾಸ—ಎಸ್. ಎಲ್. ಮೂರ್ತಿ ಕಂಪೆನಿ, ತಿರುವಲಿಕ್ಕೇಣಿ, ಮದರಾಸು.

BHARAT PROVIDENT AND BANKING Co., Ltd.

FULLY PAID UP CAPITAL 5,00,000 (FIVE LAKHS)

Most Reliable and Cheapest Life and Marriage Office in India.

Monthly Premium Re. 1 in Marriage Branch, and Re. 1 in Life Branch.

BENEFITS IN LIFE BRANCH.—Rs. 110 if death occurs after six months with a very good bonus; or maximum benefits of Rs. 500 will be paid whenever death occurs after 15 years less the advance of Rs. 200 paid while alive.

BENEFITS IN MARRIAGE BRANCH.—Guarantees to advance double the amount paid on the marriage day.

LOANS.—Loans to Policy holders on proper securities to the extent of Rs. 200 on a low interest is a speciality.

WANTED.—Active and energetic Sole, General, District and Taluk Agents throughout the Madras Presidency and Native States of S. India on liberal terms of Commissions and also monthly office allowance.

For further particulars and prospectus apply to

Messrs. VENKATACHALAM & SONS,
Chief Agents for South India.
243-46. 166, DODPATTA, MYSORE.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1914 ನೇ ಇಸವಿ ಅಕ್ಟೋಬರ್ 8 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ.

ಸಾಲ:—(1) ಷೇರು ಮೊಬಲಗು		ರೂ. 9,94,285
,, (2) ಡಿಪಾಜಿಟ್ಟುಗಳು		,, 21,32,614
,, (3) ಇತರೆ		,, 41,188
(ಆಣೆ, ಕಾಸು ಬಿಟ್ಟಿರುತ್ತೆ.)	ಜುಮ್ಲಾ	ರೂ. 31,68,087

ದೇಣ—(1) ಕ್ಯಾಷ್, ಬ್ಯಾಂಕುಗಳಲ್ಲಿರುವ ಹಣ		ರೂ. 5,97,365
,, (2) ಖಾತೆ ಮತ್ತು ಇತರ ಸಾಲಗಳು		,, 18,87,880
,, (3) ಡಿಸ್ಕೌಂಟು ಮಾಡಿದ ವಾಯಿದೆ ಹುಂಡಿಗಳು		,, 3,14,409
,, (4) ಇನ್‌ವೆಸ್ಟ್‌ಮೆಂಟುಗಳು		,, 2,50,000
,, (5) ಏಜನ್ಸಿಗಳಲ್ಲಿರುವ ಮೊಬಲಗು		,, 92,293
,, (6) ಬ್ಯಾಂಕಿನಲ್ಲಿರುವ ಸಾಮಾನುಗಳು		,, 13,628
,, (7) ಇತರೆ		,, 12,512
(ಆಣೆ, ಕಾಸು ಬಿಟ್ಟಿರುತ್ತೆ.)	ಜುಮ್ಲಾ	ರೂ. 31,68,087

ಡಬ್ಲಿಯು. ಸಿ. ರೋಸ್, ಮ್ಯಾನೇಜರ್.

ಬಾತ್ಮೀದಾರರಿಗೆ ನೋಟೀಸ್.

ಬಾತ್ಮೀದಾರರು ಮಡುವ ಅಭಿಪ್ರಾಯಗಳಿಗೆ ನಾವು ಜೊತೆಗಾರರಾಗುವದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಕರೆಸ್ಪಾಂಡೆನ್ಸ್.

ದಯವಿಟ್ಟು ತಿಳಿಸುವಿರಾ?

ಅಯ್ಯಾ,—ತಾವಾಗಲೀ, ತಮ್ಮ ವಾಚಕಮಹಾಶಯರಲ್ಲಿ ಯಾರಾದರೂ ಆಗಲಿ ಶಿಲಾಯಂತ್ರದಿಂದ ಮುದ್ರಿತವಾದ "ಸೌಗಂಧಿಕಾಪರಿಣಯ, ಭಗವದ್ಗೀತೆ" ಪ್ರತಿಗಳು ಎಲ್ಲಿ ದೊರೆಯುವವು ಎಂಬುವುದನ್ನು ತಿಳಿಸಬೇಕಾಗಿ ಕೋರುವ

ಹೆಗ್ಗಡದೇವನಕೋಟೆ. ಎ. ವಿ. ಕೃಷ್ಣಯ್ಯ.

ಸ್ಕೂಲುಗಳಲ್ಲಿ ಉಪಾಧ್ಯಾಯರ ದರ್ಜೆ.

ಅಯ್ಯಾ,—ಎ. ಇ. ಸ್ಕೂಲ್ ಅಥವಾ ಎ. ವಿ. ಸ್ಕೂಲ್‌ಗಳಲ್ಲಿ ಹೆಡ್ ಮಾಸ್ಟರುಗಳಲ್ಲದೆ ಇನ್ನೂ 8-10 ಜನ ಮಾಸ್ಟರುಗಳು ಇರುತ್ತಾರೆ. ಇವರುಗಳಲ್ಲಿ 1 ನೇ, 2 ನೇ ಅಸಿಸ್ಟೆಂಟ್ ಮಾಸ್ಟರುಗಳೆಂದು ನಮೂದಿಸಲು ಮಾಸ್ಟರುಗಳ ಸರ್ವೀಸು, ತಲಬು, ಕೊಟ್ಟಿರುವ ಪರೀಕ್ಷೆ, ಅಥವಾ ಬೋಧಿಸುತ್ತಿರುವ ತರಗತಿ, ಇವುಗಳಲ್ಲಿ ಯಾವದು ಮುಖ್ಯವಾದುದು? ಇವುಗಳಲ್ಲಿ ಯಾವ್ಯಾವುಗಳ ಆಧಾರದ ಮೇಲೆ ಮೇಲ್ಕಂಡ ದರ್ಜೆಗಳನ್ನು ನಮೂದಿಸಬೇಕು? ಇದನ್ನು ತಾವಾಗಲಿ, ತಮ್ಮ ಪತ್ರಿಕೆಯ ವಾಚಕರಾಗಲಿ ತಿಳಿಸಬೇಕಾಗಿ ಪ್ರಾರ್ಥಿಸುತ್ತೇನೆ.

ಮಾಸ್ಟರುಗಳ ಹಿತಚಿಂತಕ.

ಕಡೂರು ಗೋಕಾಯಿಗಳ ಕಷ್ಟ.

ಅಯ್ಯಾ,—ನಮ್ಮ ಕಡೂರು ಗ್ರಾಮದ ಜಾನುವಾರುಗಳು ಮೇಯುವದಕ್ಕೆ ಸರ್ಕಾರದಿಂದ ಬಿಟ್ಟ ಗೋಮಾಳ ಸ್ವಲ್ಪವೂ ಇಲ್ಲದೆ 4–5 ಸಾವಿರ ರಾಸುಗಳಿಗೆ ಮೇವಿಗೆ ತುಂಬಾ ತೊಂದರೆ ಆಗಿ ಬೀರೂರು ಅಮೃತಮಹಲ್ ಕಾವಲಿನಲ್ಲಿ 600 ಎಕರೆ ಬಿಡಿಸಿಕೊಡಬೇಕಾಗಿ ಕೇಳಿಕೊಂಡು 5-6 ವರುಷವಾದರೂ ಈ ವರೆಗೆ ಯಾವದೂ ಇತ್ಯರ್ಥವಾಗದೆ ಇರುವದು ತುಂಬಾ ವಿಷಾದಕರವಾಗಿದೆ. ಈ ರಿಕಾರ್ಡು ಯಾವ ಇಲಾಖೆಯಲ್ಲಿ ನಿದ್ದೆಯಲ್ಲಿ ಇದೆಯೋ ಎಚ್ಚರಿಸಿ ನಮ್ಮಗಳ ಪ್ರಾರ್ಥನೆಯನ್ನು ಜಾಗ್ರತೆ ನೆರವೇರಿಸಿ ಗೋಪಾಲನಾ ಪುಣ್ಯಕ್ಕೆ ಭಾಗಿಗಳಾಗಬೇಕಾಗಿ ಪ್ರಾರ್ಥನೆ.

ಪುರವಾಸಿ.

ಭಾರಿ ಮಾಲು ಕಳಕೊಂಡವರು ನೋಡಿ.

ಅಯ್ಯಾ,—ಈಗ್ಗೆ ಸುಮಾರು 2 ತಿಂಗಳಲ್ಲಿ ನಾನು ನಮ್ಮ ಗ್ರಾಮದ ಬಳಿ ರಸ್ತೆಯಲ್ಲಿ ಕಸ ಹೊತ್ತುಕೊಂಡು ಹೊಲಕ್ಕೆ ಹೋಗುತ್ತಾ ಇದ್ದೆನು. ಆ ಸಮಯದಲ್ಲೇ ಕೃಷ್ಣರಾಜಪೇಟೆ ಕಡೆಯಿಂದ ಒಂದು ಗಾಡಿ ಬರುತ್ತಾ ಇತ್ತು. ಆ ಗಾಡಿಯಲ್ಲಿ ಎಲ್ಲರೂ ನಿದ್ರೆಯಿಂದ ಮಲಗಿದ್ದರು. ಒಂದು ರೈಲ್ ಚೀಲ ಕೆಳಗೆ ಬಿದ್ದಿತು. ಕೆಂಡೆಕೆರೆ ಗ್ರಾಮದ ಒಬ್ಬ ಹುಡುಗನು ತೆಗೆದುಕೊಂಡು ಹೋದನು. ಇದನ್ನು ತೆಂಡೆಕೆರೆ ಗ್ರಾಮಸ್ಥರು ಬಲ್ಲರು. ಆ ರೈಲು ಚೀಲದಲ್ಲಿ ಎಂಭತ್ತು ಪೌನು, ಒಂದು ಭಾರಿ ಸೀರೆ, ಕಲಾಪತ್ತಿನ ರೇಷ್ಮೆ ವಸ್ತ್ರ ಇದ್ದಿತು ಮತ್ತು ಭಾರಿಭಾರಿ ಚಿನ್ನದ ನಗಗಳು ಇದ್ದವು. ಇದುವರೆವಿಗೂ ಪದಾರ್ಥ ಇಂಥಾವರದೆಂದು ಗೊತ್ತಾಗಲಿಲ್ಲ. ಆದ್ದರಿಂದ ತಮ್ಮ ಪತ್ರಿಕೆಯಲ್ಲಿ ಲೀಟು ಮಾಡಿದರೆ ಯಶಸ್ಸು ಬರುವದು. 14-10-14.

ಹಾಡನೂರು ಗ್ರಾಮದಲ್ಲಿರುವ ಬಲಗ್ಗೆ ಗಂಟೆಹಸುವಿನ ಹೆಂಡತಿ ಕೋಳಿಗುರ್ಕನ ರುಖುವಿಗೆ ಚೋಳೆಗೌಡನ ಬರಹ.

[ಇದು ಎಷ್ಟುಮಟ್ಟಿಗೆ ನಿಜವೋ ನಮಗೆ ತಿಳಿಯದು.—ಎಡಿ.]

ಮಾರ್ಗದಲ್ಲಿ ಜೂಜುಕೋರರ ಹಿಂಸೆ

ಅಯ್ಯಾ,—ಯಡತೊರೆ ತಾಲ್ಲೂಕು ಸಾಲಿಗ್ರಾಮದ ರಂಗಾಚಾರ್ಯರ ಮಗ ಕೃಷ್ಣಯ್ಯಂಗಾರ್ ಎಂಬುವವನು ಯಾವುದೋ ಒಂದು ಕೆಲಸಕ್ಕಾಗಿ ಕನ್ನಂಬಾಡಿ ಕಟ್ಟೆಗೆ ಹೋಗುತ್ತಿರಲು, ಸುಮಾರು ಒಂದು ಘಂಟೆ ಸಮಯದಲ್ಲಿ ಕೆಲವು ಜನ ಪಟಿಂಗರು ಸೇರಿ ಮೂರೆಲೆ ಇಸ್ಪೀಟ್ ಆಟಗಳನ್ನು ಆಡುತ್ತಿರಲು, ಅಲ್ಲಿಗೆ ಕರೆದುಕೊಂಡು ಹೋಗುವುದಕ್ಕೋಸ್ಕರ ಒಬ್ಬ ಮುಸಲ್ಮಾನರವನು ಬಹಳ ಒಳ್ಳೇ ಮಾತುಗಳನ್ನಾಡಿ ಆ ಸ್ಥಳಕ್ಕೆ ಕರೆದುಕೊಂಡುಹೋಗಿ ಆಟಕ್ಕೆ ಕುಳಿತುಕೊಳ್ಳಬೇಕೆಂದು ಬಹಳ ಪ್ರೋತ್ಸಾಹಕೊಟ್ಟಾಗ್ಯೂ, ಕೃಷ್ಣಯ್ಯಂಗಾರ್ ಎಂಬುವವರು ಒಪ್ಪದೆ—ನಾನು ಹೋಗಬೇಕು, ನನಗೆ ಈ ಆಟ ತಿಳಿಯುವುದಿಲ್ಲ ಎಂಬುದಾಗಿ ಹೇಳಿ ಹೊರಟುಹೋಗುತ್ತಿರಲು, ಒಬ್ಬ ಮುಸಲ್ಮಾನವನೂ, ಒಬ್ಬ ಒಕ್ಕಲಿಗರವನೂ, ಇನ್ನೊಬ್ಬ, ಇವರು ಮೂವರೂ ಮೇಲೆ ಬೀಳುವುದಕ್ಕೆ ಬಂದು, ಪದಾರ್ಥಗಳನ್ನು ಅಪಹರಿಸುವುದರಲ್ಲಿದ್ದರು. ಅಷ್ಟರಲ್ಲೇ ಸೇಟಗಳ್ಳಿ ಕಡೆಯಿಂದ ಯಾರೋ ಇಬ್ಬರು ಬರುತ್ತಿದ್ದದ್ದನ್ನು ಕಂಡು ಬಿಟ್ಟುಹೋದರು. ಹೀಗೆ ಮಾರ್ಗದಲ್ಲಿ ಒಬ್ಬಂಟಿಗರಾಗಿ ಹೋಗತಕ್ಕ ದಾರಿಗರಿಗೆ ಈ ರೀತಿ ಮೋಸ ಮಾಡುತ್ತಾರೆ. ಆದ್ದರಿಂದ ಘನಹೊಂದಿದ ಸರ್ಕಾರದವರು ಇದನ್ನು ಪತ್ತೆ ಮಾಡಿ ಪ್ರಯಾಣಿಕರಿಗೆ ಆಗತಕ್ಕ ತೊಂದರೆಯನ್ನು ತಪ್ಪಿಸಿದರೆ ಅನೇಕರು ಸೌಖ್ಯವಾಗಿ ತಿರುಗಾಡಬಹುದು. ಇಲ್ಲವಾದರೆ ಇದು ಪ್ರಬಲವಾಗಿ ಕೊನೆಗೆ ಪ್ರಾಣಹಾನಿಮಾಡಿ ಪದಾರ್ಥಸುಲಿಗೆ ಮಾಡುವುದಕ್ಕೂ ಹೇಸುವುದಿಲ್ಲ. ಈ ವಿಷಯವನ್ನು ಸರ್ಕಾರದವರು ನಿಗಾ ತೆಗೆದುಕೊಳ್ಳುತ್ತಾರೆಂದು ನಂಬಿರುತ್ತೇನೆ.

ಬಾತ್ಮೀದಾರ್.

[ಪೋಲೀಸ್ ಆಫೀಸರು ಅಕಾಲದಲ್ಲಿ ಮೇಲ್ಕಂಡಂಥಾ ಸ್ಥಳಗಳಿಗೆ ಹೋಗಿ ಅಜಮಾಯಿಷಿಮಾಡುತ್ತಿದ್ದರೆ ಅಂಥಾ ದುಷ್ಟರು ಸಿಕ್ಕಿಬಿದ್ದು, ಪ್ರಯಾಣಿಕರಿಗೆ ನಿರುಪಾಧಿಕವಾದೀತು.—ಎಡಿ.]

ಇದೊಂದು ಸೂಚನೆ.

ಅಯ್ಯಾ,—ದೇವನಹಳ್ಳಿ ತಾಲ್ಲೂಕಿನ ವೈಕಿ ವಡಿಗೇನಹಳ್ಳಿಯು ದೊಡ್ಡ ಗ್ರಾಮ; ಸುಮಾರು ಐದು ಸಾವಿರ ಪ್ರಜೆಗಳಿದ್ದಾರೆ. ಇಲ್ಲಿನ ಭಾರಿ ಕೆರೆಯ ನೀರು ಹರಿಯುತಕ್ಕ ಕಾಲುವೆಯು ಊರಿನ ಉತ್ತರ ದಿಕ್ಕಿನ ಬೀದಿಗೆ ಹೊಂದಿಕೊಂಡಿದೆ. ಇದರಲ್ಲಿ ನೀರು ಸದಾ ಹರಿಯುತ್ತಿರುವುದು; ಅಲ್ಲದೆ ಮಳೆಗಾಲದಲ್ಲಿ ಜನ ಸಂಚಾರಕ್ಕೆ ಅವಕಾಶವಿಲ್ಲದೆ ಆಚೆ ಇರುವ ಹುಣ್ಸಿನ ತೋಟ, ಭಾವಿ, ಕೆರೆ ಮತ್ತು ಬಾಗಾಯ್ತು ಜಮೀನುಗಳಿಗೆ ಹೋಗಿಬರಲು ಗ್ರಾಮನಿವಾಸಿಗಳಿಗೂ ಹೊರಗ್ರಾಮದವರಿಗೂ ತುಂಬಾ ತೊಂದರೆ. ನಮ್ಮ ಡೆಪ್ಟಿ ಕಮಿಷನರವರ ಚಿತ್ತಕ್ಕೆ ಬಂದು, ಗ್ರಾಮಸ್ಥರಿಂದ ಒಂದು ಸಾವಿರ ರೂಪಾಯಿ ಚಂದಾ ವಸೂಲುಮಾಡಿ ಕೊಟ್ಟರೆ ಮಿಕ್ಕ ಹಣ ಸರ್ಕಾರದಿಂದ ಕೊಡಿಸಿ ಸೇತುವೆ ಕಟ್ಟಿಸುವದಾಗಿ ಅಪ್ಪಣೆಯಾಗಲು ಗ್ರಾಮಸ್ಥರಲ್ಲಿ ಕೆಲವು ಮುಖಂಡರಿಂದಲೂ, ವ್ಯಾಸಾರಗಾರರಿಂದಲೂ ಚಂದಾ ಪಟ್ಟಿಯು ಬರೆಯಲ್ಪಟ್ಟಿತೇ ಹೊರತು ಪೂರ್ತಿ ಚಂದಾ ಹಣದ ಪಟ್ಟಿಯಾಗಲಿ, ಹಣವಾಗಲಿ ವಸೂಲ್ ಆಗಲಿಲ್ಲ. ಮತ್ತು ಇದರಿಂದ ಗ್ರಾಮದ ಪ್ರಜೆಗಳಿಗೆ ಪ್ರಯೋಜನವಿದ್ದರೂ ಆ ಪ್ರಾಂತ್ಯದ ತರಿ ಮತ್ತು ಬಾಗಾಯ್ತು ಜಮೀನ್‌ದಾರರಿಗೂ ರೈತರಿಗೂ ಹೆಚ್ಚು ಪ್ರಯೋಜನವಾಗುತ್ತದೆ. ಜಮೀನ್‌ದಾರರಿಗೂ ರೈತರಿಗೂ ಹೆಚ್ಚು ಪ್ರಯೋಜನಕರವಾದುದರಿಂದ ಈ ಸೇತುವೆಯು ಮೇಲೆ ಹೊರಡುವ ರಸ್ತೆಯ ಉಭಯ ಪಾರ್ಶ್ವ ಮತ್ತು ಆಚೆ ನಮೂದಿಸಿದ ಜಮೀನುಗಳನ್ನು, 1 ಫರ್ಲಾಂಗಿನಲ್ಲಿರುವ ಜಮೀನುಗಳನ್ನು, 2 ಫರ್ಲಾಂಗಿನಿಂದಾಚೆ ಇರುವ ಜಮೀನುಗಳನ್ನೂ ಮೂರು ವಿಧವಾಗಿ ವಿಂಗಡಿಸಿ, ಎಕರೆಗೆ 5-4-3 ರೂಪಾಯಿ ನಂತೆ ಸೆಸ್ಸು ದಾಖಲ್ ಮಾಡಿ ಆಯಾ ಜಮೀನ್‌ದಾರರಿಂದ ವಸೂಲ್ ಮಾಡಿದರೆ ಸೇತುವೆಯು ಪೂರೈಸುವದು. ಈಗ ಗ್ರಾಮಸ್ಥರು ಕೊಡುವ ಚಂದಾ ಹಣ ಒಂದು ಸಾವಿರ ರೂಪಾಯಿ; ಸರ್ಕಾರದಿಂದ ಮಾಗ್ಜಾನವಾಗಿರುವ ಹಣವನ್ನು ದಯಪಾಲಿಸಿದರೆ ಇವೆರಡು ಹಣದಿಂದ ಆಸ್ಪತ್ರೆಯನ್ನು ಕಟ್ಟಿಸಿದರೆ ಎರಡು ಕೆಲಸಗಳೂ ನಡೆದು ಗ್ರಾಮಸ್ಥರ ಕೋರಿಕೆಯು ನೆರವೇರುವುದು. ಗ್ರಾಮಸ್ಥರಿಗೆ ಚಂದಾ ಕೊಡಲು ಸಂತೋಷವಾಗುತ್ತೆ. ಸರ್ಕಾರದವರು ಈ ಸೂಚನೆ ಸೂಕ್ತವಾಗಿದ್ದರೆ ತಾಲ್ಲೂಕ್ ಅಥವ ಗ್ರಾಮದ ಪಟೇಲ್ ಶ್ಯಾನುಭೋಗರಿಂದ ಲೆಕ್ಕವನ್ನು ತಯಾರುಮಾಡಿಸಿ ಚಂದಾ ವಸೂಲ್ ಮಾಡಿ ಪ್ರಜೆಗಳಿಗೆ ಉಪಯುಕ್ತವಾದ ಈ ಕೆಲಸಗಳನ್ನು ಮಾಡಿಸಿಕೊಡಬೇಕಾಗಿ ಪ್ರಾರ್ಥಿಸಿಕೊಳ್ಳುವ

ಬಡರೈತರ ಹಿತಚಿಂತಕ.

[ಈ ವಾರ ನಮಗೆ ತಲಪಿರುವ ಅನೇಕ ಬಾತ್ಮಿಗಳನ್ನು ಪ್ರಕಟಮಾಡಲು ಅವಕಾಶವಾಗಲಿಲ್ಲವೆಂದು ವಿಷಾದಿಸುತ್ತೇವೆ.—ಎಡಿ.]

ಮೈಸೂರು ಸೀಮೆಯ ವ್ಯವಸಾಯದ ಇಲಾಖೆ.

ಪ್ರಸಿದ್ಧ ಪತ್ರಿಕೆ.

ರಾಗಿ ಮತ್ತು ಕಡ್ಲೆಕಾಯಿ ಬೆಳೆ ವಿಷಯವಾಗಿ ಕೊಡುವ ವ್ಯವಸಾಯ ಸಂಬಂಧಪಟ್ಟ ಸುಲಭ ಪಾಠವು ಹೆಬ್ಬಾಳ ಫಾರಂನಲ್ಲಿ 1914 ನೆಯ ನವಂಬರು 16 ನೇ ತಾರೀಖಿನಿಂದ ಮೊದಲುಮಾಡಿ ಒಂದು ವಾರ ನಡೆಯುವುದು. ಸದರಿ ಸುಲಭ ಪಾಠವನ್ನು ಕೇಳಲು ಬರತಕ್ಕ ಜನಗಳಿಗೆ ಹೆಬ್ಬಾಳ ಫಾರಂನಲ್ಲಿ ಇರಲು ಸ್ಥಳ ಮುಫತ್ತಾಗಿ ಕೊಡಲಾಗುತ್ತದಲ್ಲದೆ ಊಟಕ್ಕೆ ಮಾತ್ರ ತಗಲಬಹುದಾದಷ್ಟು ಖರ್ಚು ಮಾತ್ರ ವಸೂಲ್ಮಾಡಲಾಗುತ್ತೆ. ಸದರಿ ಪಾಠವನ್ನು ಕೇಳಲು ಬರಲು ಅಪೇಕ್ಷೆಯುಳ್ಳ ಜನರು ಒಂದು ವಾರ ಮುಂಚಿತವಾಗಿ ತಿಳಿಸತಕ್ಕದ್ದು.

[320-1] ಲೆಸ್ಲಿ ಸಿ. ಕೋಲ್‌ಮನ್,

ಬೆಂಗಳೂರು: ತಾ. 17-10-1914. ವ್ಯವಸಾಯದ ಇಲಾಖಾ ಡೈರೆಕ್ಟರ್.

ವೃತ್ತಾಂತ ಪತ್ರಿಕೆ.

:o:

ಸನ್ ೧೯೧೪ ನೇ ಇಸವಿ ಅಕ್ಟೋಬರ್ ತಾ. ೨೨ ನೇ ಗುರುವಾರ.

ಮೈಸೂರಿನಲ್ಲಿ ಕಂದಾಯವು.

ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ಈ ಸಲ ಒಂದು ಹೊಸ ತೆರಿಗೆಯನ್ನು ಹಾಕುವ ವಿಚಾರವಾಗಿ ಚರ್ಚೆಗಳು ನಡೆದವು. ದಿವಾನರವರು ಒಟ್ಟು ಸಭೆಯ ಅಭಿಮತವನ್ನು ತಿಳಿಯಬೇಕೆಂದು ಅಪೇಕ್ಷಿಸಿದಾಗ ಆದಾಯದ ಮೇಲಣ ತೆರಿಗೆಯನ್ನು ಹಾಕಬೇಕೆಂಬ ಅಭಿಪ್ರಾಯವು ಬಹಳ ಸ್ವಲ್ಪ ಸಂಖ್ಯೆಯ ಬಹುಮತವಾಗಿರುವಂತೆ ಕಂಡು ಬಂದಿತು. ಅನೇಕ ಐಶ್ವರ್ಯವಂತರಾದ ಪ್ರಜೆಗಳೂ ಅಧಿಕಾರಿಗಳೂ ಸರ್ಕಾರದ ವರಮಾನಕ್ಕೆ ವಿಶೇಷ ಸಹಾಯವೇನೂ ಮಾಡುತ್ತಾ ಇಲ್ಲವೆಂಬುವುದೇ ಈ ಅಭಿಮತಕ್ಕೆ ಕಾರಣವೆಂದು ತಿಳಿಯಲಾಗಿದೆ. ಸರ್ಕಾರದವರು ಆದಾಯದ ಮೇಲಣ ತೆರಿಗೆಯನ್ನು ಹಾಕುವ ಭಾಗದಲ್ಲಿ ನಮ್ಮ ಆಕ್ಷೇಪಣೆಯೇನೂ ಇಲ್ಲ; ಆದರೆ ಪ್ರಜಾಪ್ರತಿನಿಧಿ ಸಭೆಗೆ ಅದರ ಯಥಾರ್ಥವಾದ ವಿದ್ಯಮಾನಗಳು ಪರಿಷ್ಕಾರವಾಗಿ ತಿಳಿದಿಲ್ಲವೆಂದು ನಮಗೆ ಕಾಣುತ್ತಿದೆ.

ಕಂದಾಯಗಳನ್ನು ಯಾತಕ್ಕಾಗಿ ಹಾಕಬೇಕು? ಗವರ್ನಮೆಂಟಿನ ಕೆಲಸಕಾರ್ಯಗಳು ಸರಾಗವಾಗಿ ನಡೆಯುವುದಕ್ಕೋಸ್ಕರ ಕಂದಾಯಗಳನ್ನು ಹಾಕಿ ಹಣವನ್ನು ಕೂಡಿಸಬೇಕಾಗಿದೆ. ಮೈಸೂರು ಗವರ್ನಮೆಂಟಿನಲ್ಲಿ ಉದ್ದೇಶಪಟ್ಟ ಕಾರ್ಯಗಳಿಗೆ ಸಾಕಾಗುವಷ್ಟು ದ್ರವ್ಯವಿರುವುದೋ? ಈಗ ಪ್ರತಿ ವರುಷವೂ ನಮ್ಮ ಗವರ್ನಮೆಂಟಿನವರು ಪ್ರಜೆಗಳಿಂದ ವಸೂಲ್ಮಾಡುವ ಹಣವನ್ನು ವಿವೇಕದಿಂದ ಖರ್ಚುಮಾಡಲಾರದೆ ಇದ್ದಾರೆ; ಇದಲ್ಲದೆ ಖಜಾನೆಯಲ್ಲಿ ಉಳಿಯುವ ಹುಟ್ಟುವಳಿ ಶಿಲ್ಕು ಹಣ ವರುಷೇ ವರುಷ ಹೆಚ್ಚುತ್ತಾ, ಸಂಸ್ಥಾನದ ಆಸ್ತಿಯು ಕ್ರಮೇಣ ವೃದ್ಧಿಯಾಗುತ್ತಾ ಬಂದಿರುವುದು. ಇಂಥಾದ್ದರಲ್ಲಿ ಗವರ್ನಮೆಂಟಿನವರು ಇನ್ನೂ ಹೊಸ ತೆರಿಗೆ ಹಾಕಬೇಕೆನ್ನುವುದಕ್ಕೆ ಕಾರಣವೇನು? ಕಂದಾಯಗಳನ್ನು ವಸೂಲ್ಮಾಡಿ ಬುದ್ಧಿವಂತಿಕೆಯಿಂದಲೂ ವಿವೇಕಪೂರ್ವಕವಾಗಿಯೂ ಖರ್ಚುಮಾಡಲಾರದಂಥಾ ಗವರ್ನಮೆಂಟಿನವರು ಹೊಸ ತೆರಿಗೆಗಳನ್ನು ಹಾಕುವುದು ತರವಲ್ಲ. ಈಗ ವಸೂಲಾಗುತ್ತಿರುವ ಕಂದಾಯಗಳು ಸರಿಯಾಗಿಲ್ಲವೆಂದೂ, ಕೆಲವು ಪ್ರಜೆಗಳು ಕೊಡಲಾರದಷ್ಟು ದುಬಾರಿಯಾಗಿವೆಯೆಂದೂ ಕಂಡುಬಂದಿರುವ ಪಕ್ಷಕ್ಕೆ ಸರ್ಕಾರದವರು ಈಗಿನ ತೆರಿಗೆಗಳನ್ನು ವಜಾ ಮಾಡಿಬಿಟ್ಟು ಆದಾಯದ ಮೇಲಣ ತೆರಿಗೆಯನ್ನು ಹಾಕಿ ವಸೂಲ್ಮಾಡಲಿ.

ಅನೇಕ ರಾಜ್ಯಗಳಲ್ಲಿ ಮುಂದಿನ ಸಾಲಿನ ಆದಾಯ ವ್ಯಯಗಳ ಒಡ್ಡಟ್ಟನ್ನು ತಯಾರುಮಾಡುವಾಗ್ಗೆ ಕಂದಾಯಗಳನ್ನು ಕೂಡಿದ ಮಟ್ಟಿಗೂ ಕಡಮೆ ಮಾಡಬೇಕೆಂದು ಪ್ರಜಾ ಪಾಲಕರು ಸಾಹಸಪಡುತ್ತಾರೆ. ಮೈಸೂರಿನಲ್ಲಾದರೋ ಕಂದಾಯಗಳ ಬಿಮಾರ್ಷನ್ ಬಾಬಿಗೆ ವಿಶೇಷ ಗಮನವೇನೂ ಕೊಡದೆ, ಕಂದಾಯ ಕೌಳಿಗೆಗಳನ್ನು ಇನ್ನೂ ಹೇಗೆ ಹೆಚ್ಚಿಸಬಹುದೆಂದು ಮಾರ್ಗಗಳನ್ನು ಹುಡುಕುವರು. ನಮ್ಮ ಸಂಸ್ಥಾನದ ಪ್ರಜೆಗಳಲ್ಲಿ ಐಶ್ವರ್ಯವಂತರು ತಕ್ಕ ಮಟ್ಟಿಗೆ ಕಂದಾಯ ಕೊಡದೆ ಇದ್ದಲ್ಲಿ ಬಡವರಿಗೆ ಹೊರಿಸಿರುವ ಕಂದಾಯಗಳನ್ನು ಕಡಮೆ ಮಾಡಿ ಅಂಥವರಿಗೆ ಕಂದಾಯವನ್ನು ಧಾರಾಳವಾಗಿ ಹಾಕಲಿ. ಯಾರೂ ಎದುರು ಹೇಳುವುದಿಲ್ಲ. ಐಶ್ವರ್ಯವಂತರಿಂದ ಕಂದಾಯ ವಸೂಲ್ಮಾಡುವುದಕ್ಕೆ ನಾವು ಬೇರೊಂದು ಮಾರ್ಗವನ್ನು ಸೂಚಿಸಬಲ್ಲೆವು. ಐಶ್ವರ್ಯವಂತರು ಸಾಮಾನ್ಯವಾಗಿ ಗ್ರಾಮಾಂತರಗಳನ್ನು ಬಿಟ್ಟು ಪಟ್ಟಣಗಳಲ್ಲೇ ವಾಸಮಾಡುತ್ತಾರೆ. ನಮ್ಮ ಸಂಸ್ಥಾನದ ಮ್ಯುನಿಸಿಪಾಲಿಟಿಗಳು ಪ್ರಜೆಗಳಿಗೆ ಸೌಕರ್ಯಗಳನ್ನು ಒದಗಿಸುವುದಕ್ಕೆ ದ್ರವ್ಯ ಸಹಾಯ ಸಾಲದೆ ಹೀನಸ್ಥಿತಿಯಲ್ಲಿರುವವೆಂದು ನಾವೆಲ್ಲಾ ಬಲ್ಲೆವು. ಆದಕಾರಣ ಪ್ರತಿ ಒಂದು ಮ್ಯುನಿಸಿಪಾಲಿಟಿಯಲ್ಲೂ ಕಸಬಿನ ಕಂದಾಯವೆಂಬುವುದನ್ನು ಹಾಕಿ ವಸೂಲ್ಮಾಡಿದ ಪಕ್ಷದಲ್ಲಿ ಐಶ್ವರ್ಯವಂತರು ಹೆಚ್ಚಾಗಿ ಕೊಡಬೇಕಾಗುವುದು. ಮ್ಯುನಿಸಿಪಾಲಿಟಿಗಳ ಉತ್ಪತ್ತಿ ಹೆಚ್ಚಿ ಮ್ಯುನಿಸಿಪಾಲಿಟಿಗಳ ಕರ್ತವ್ಯಗಳೆಲ್ಲಾ ಸಾರ್ಥಕವಾಗಿ ನೆರವೇರುತ್ತವೆ.

ನಮ್ಮ ಗವರ್ನಮೆಂಟಿನವರು ಈ ಆದಾಯದ ಮೇಲಣ ತೆರಿಗೆಯನ್ನು ಹಾಕಬೇಕೆಂದು ಇತ್ಯರ್ಥಮಾಡುವುದಕ್ಕಿಂತ ಮುಂಚೆ ಅದರಿಂದ ಹುಟ್ಟುವಳಿ ಆಗುವುದು ಎಷ್ಟು, ಅದರ ವಸೂಲಿಗೆ ಎಷ್ಟು ಹೆಚ್ಚು ಖರ್ಚಾಗುವುದು ಎಂಬೀ ವಿಚಾರಗಳನ್ನು ಪರಿಷ್ಕಾರವಾಗಿ ಲೆಕ್ಕಾಚಾರ ಮಾಡಿಸಿ ನೋಡಬೇಕೆಂದು ಸೂಚಿಸುತ್ತೇವೆ. ಇದರಿಂದ ನಿವ್ವಳ ಹುಟ್ಟುವಳಿ ಎಷ್ಟಾಗುವುದೋ ಗೊತ್ತಾಗೀತು. ನಮಗೇನೋ ಇದರಿಂದ ತುಂಬಾ ಹಣ ಉತ್ಪತ್ತಿಯಾಗುವುದಿಲ್ಲವೆಂದು ತೋರಿದೆ. ಸರ್ಕಾರಿ ಅಧಿಕಾರಿಗಳಿಂದಲೂ, ಖಚಿತವಾದ ವರಮಾನವುಳ್ಳ ಇತರರಿಂದಲೂ ಈ ಹೊಸ ತೆರಿಗೆಯನ್ನು ವಸೂಲ್ಮಾಡುವುದೇನೋ ಸುಲಭ; ಆದರೆ ಸಾಹುಕಾರರ, ವರ್ತಕರ ಮತ್ತು ಜಮೀನ್ದಾರರ ವರಮಾನಗಳು ಇಷ್ಟೇ ಸರಿಯೆಂದು ಕಂಡುಹಿಡಿಯುವುದು ಬಹಳ ಪ್ರಯಾಸವಾಗುತ್ತದೆ. ಈ ಕಂದಾಯದ ದೆಸೆಯಿಂದ ಸುಳ್ಳು ಹೇಳುವುದಕ್ಕೂ ವಂಚನೆಮಾಡುವುದಕ್ಕೂ ಬಹಳ ಹೆಚ್ಚಾಗಿ ಅವಕಾಶ ಉಂಟಾಗುವುದು. ಹಾಕದಿದ್ದರೆ ತೀರದೆಂಬ ಸಂದರ್ಭ ಕಂಡುಬಂದ ಹೊರತು ಸರ್ಕಾರದವರು ಈ ಹೊಸ ತೆರಿಗೆಯನ್ನು ಹಾಕಲೇ ಬಾರದು. ಇದು ಅವಶ್ಯಕವಾಗಿ ಹಾಕಬೇಕಾಗಿದೆ ಎಂಬುದಕ್ಕೆ ಖಚಿತವಾದ ಕಾರಣಗಳೇನೂ ತೋರಿಸಿರುವುದಿಲ್ಲ. ಈಗಲೇ ಮೈಸೂರು ಗವರ್ನಮೆಂಟಿನವರು ವಿವೇಕದಿಂದ ಖರ್ಚುಮಾಡಬಹುದಾದಷ್ಟು ಹಣಕ್ಕಿಂತಲೂ ಹೆಚ್ಚಾಗಿ ಪ್ರಜೆಗಳಿಂದ ವಸೂಲ್ಮಾಡುತ್ತಿದ್ದಾರೆ.

ನಮ್ಮ ಗವರ್ನಮೆಂಟಿಗೆ ಕೋಲಾರ್ ಚಿನ್ನದಗಣಿಗಳಿಂದಲೂ, ಶಿವಸಮುದ್ರದ ವಿದ್ಯುಚ್ಛಕ್ತಿಯ ಕಾರ್ಖಾನೆಯಿಂದಲೂ ಬಹಳ ಒಳ್ಳೇ ಹುಟ್ಟುವಳಿ ಬರುತ್ತಿದೆ. ಈ ಹುಟ್ಟುವಳಿಯು ಶಾಶ್ವತವಾಗಿ ಬರತಕ್ಕದ್ದಲ್ಲ. ಮೈಸೂರು ಗವರ್ನಮೆಂಟಿನವರು ವಿವೇಕಿಗಳಾದ ಪಕ್ಷದಲ್ಲಿ ಶಾಶ್ವತವಲ್ಲದಂಥಾ ಈ ಹುಟ್ಟುವಳಿ ನಿಂತು ಹೋಗುವ ಕಾಲಕ್ಕೆ ಈ ಆದಾಯದ ಮೇಲಣ ತೆರಿಗೆಯನ್ನು ಹಾಕೋಣವೆಂದು ಇತ್ಯರ್ಥಮಾಡಿಕೊಳ್ಳುತ್ತಾರೆಂದು ನಂಬಿ ನಿರೀಕ್ಷಿಸುವೆವು. ಖಜಾನೆಯಲ್ಲಿ ಹಣ ತುಂಬಿರುವ ಸಮಯದಲ್ಲಿ, ಮಾಡಬೇಕಾಗಿರುವ ಆಲೋಚನೆಯೂ ಸಾಹಸ ಪ್ರಯತ್ನಗಳೂ ಹೊಸ ತೆರಿಗೆಗಳನ್ನು ಹಾಕುವುದಕ್ಕಾಗಿರಬಾರದು; ಇರುವ ಕಂದಾಯಗಳನ್ನು ಕಡಮೆಮಾಡಲು ಪ್ರಯತ್ನಪಡಬೇಕು. ನಮ್ಮ ಗವರ್ನಮೆಂಟಿನವರು ಈ ಹೊಸ ಕಂದಾಯವನ್ನು ವಿಧಿಸುವುದಕ್ಕೆ ಮುಂಚೆ ಅದರ ಸಾಧಕ ಬಾಧಕಗಳನ್ನೆಲ್ಲಾ ಬಹಳ ಜಾಗರೂಕತೆಯಿಂದ ಪರ್ಯಾಲೋಚನೆ ಮಾಡುತ್ತಾರೆಂದು ನಿರೀಕ್ಷಿಸುವೆವು.

ಯುರೋಪ್ಪಿನ ಯುದ್ಧವು.

ರಾಜಧಾನಿಯಲ್ಲೂ ಈ ಸಂಸ್ಥಾನದ ಇತರ ಪಟ್ಟಣ, ಊರು, ಗ್ರಾಮಾಂತರಗಳಲ್ಲೂ ಜನರು ಈಗಿನ ಯುದ್ಧದ ವಿಷಯದಲ್ಲಿ ಬಿದ್ದುಬಾಕಾರವಾದ ಕಥೆಗಳನ್ನು ಹುಟ್ಟಿಸಿ, ಬಗೆಬಗೆಯಾಗಿ ಮಾತನಾಡುತ್ತಿರುವುದಾಗಿ ನಮ್ಮ ಬಾತ್ಮಿದಾರರಿಂದ ತಿಳಿದುಬಂದಿದೆ. ಅಂಥಾ ಕಥೆಗಳಲ್ಲಿ ಕೆಲವನ್ನು ನಮಗೆ ಬರೆದು ಕಳುಹಿಸಿದ್ದಾರೆ. ನಾವು ನಮ್ಮ ಪತ್ರಿಕೆಯಲ್ಲಿ ಒಂದು ಪಕ್ಷದ ಸುದ್ದಿಯನ್ನು ಮಾತ್ರ ಹೇಳುವೆವೆಂದೂ, ಯುದ್ಧಭೂಮಿಯಿಂದ ಬರುವ ಎಲ್ಲಾ ಸಂಗತಿಗಳನ್ನೂ ನಿಷ್ಪಕ್ಷಪಾತವಾಗಿ ತಿಳಿಸುವುದಿಲ್ಲವೆಂದೂ ಆಕ್ಷೇಪಣೆ ಮಾಡುತ್ತಾರಂತೆ. ನಾವು ಹಾಗೆ ಎಂದಿಗೂ ಪಕ್ಷಪಾತ ಮಾಡುವುದಿಲ್ಲ; ಯುದ್ಧಭೂಮಿಯಿಂದ ಬರತಕ್ಕ ವರ್ತಮಾನಗಳಲ್ಲೆಲ್ಲಾ ಅವು ಬ್ರಿಟಿಷರ ಪಕ್ಷವಾಗಿರಲಿ, ಶತ್ರುಗಳ ಪಕ್ಷವಾಗಿರಲಿ ಯಥಾರ್ಥವಾದವುಗಳೆಂದು ಕಂಡುಬರುವವುಗಳನ್ನು ಎತ್ತಿ, ವಾಚಕರಿಗೆ ಕೂಡಿದ ಮಟ್ಟಿಗೂ ಸ್ಪಷ್ಟವಾಗಿ ತಿಳಿಸಬೇಕೆಂದು ಸಾಹಸಪಡುತ್ತೇವೆ. ಮುಳುಗಿಸಲ್ಪಟ್ಟ ಹಡಗುಗಳು ಬ್ರಿಟಿಷರದಾಗಿರಲಿ, ಶತ್ರುಗಳದಾಗಿರಲಿ ಪಕ್ಷಪಾತವಿಲ್ಲದೆ ಎರಡನ್ನೂ ತಿಳಿಸಿರುವೆವು. ಬ್ರಿಟಿಷರ ಕಡೆ ನಷ್ಟವಾಯಿತೆಂಬುವುದನ್ನು ಈ ಸಲ ಪ್ರಕಟಿಸಿರುವೆವು. ಬ್ರಿಟಿಷರ ಸೋಲಾಗಲಿ ಫ್ರೆಂಚರ ಸೋಲಾಗಲಿ ನಿಜವಾಗಿರುವ ಪಕ್ಷಕ್ಕೆ ಮುಚ್ಚುಮರೆ ಮಾಡಲಾರೆವು. ಈಗಲೂ ನಾವು ಬರೆಯುವ ಪ್ರತಿ ಒಂದು ಮಾತೂ ಯಥಾರ್ಥವಾದದ್ದೆಂದು ಹೇಳಲು ನಮಗೆ ನಂಬಿಕೆ ಸಾಲದು; ಆದಾಗ್ಯೂ ನಮಗೆ ನಿಜವಿದ್ದೀತೆಂದು ಕಂಡುಬರುವ ಸುದ್ದಿಗಳನ್ನು ಆರಿಸಿ ಕ್ರೋಡೀಕರಿಸಿ ಬರೆಯಬೇಕೆಂಬುವುದೇ ನಮ್ಮ ಉದ್ದೇಶ. ಜರ್ಮನಿಯವರು ಸಾಮಾನ್ಯ ಜನರಲ್ಲ; ಬಹಳ ಪರಾಕ್ರಮಶಾಲಿಗಳು; ಯುದ್ಧಕಾರ್ಯಗಳಲ್ಲಿ ತುಂಬಾ ಪೌರುಷವನ್ನು ತೋರಿಸುತ್ತಿದ್ದಾರೆ. ಆದಾಗ್ಯೂ ಅವರಿಗೆ ಫ್ರಾನ್ಸಿನೊಳಗೆ ನಿಲ್ಲುವುದಕ್ಕೆ ಅವಕಾಶಕೊಡದಂತೆ ಬ್ರಿಟಿಷರೂ ಫ್ರೆಂಚರೂ ಅವರನ್ನು ಏಕಕ್ರಮೇಣ ನಿಧಾನವಾಗಿ ಅಟ್ಟುತ್ತಿರುವರು.

ಬ್ರಿಟಿಷ್ ಗೌವರ್ನಮೆಂಟಿನ ಸ್ಥಿತಿಗತಿಯ ವಿಚಾರದಲ್ಲೂ, ಇಂಡಿಯಾ ಗವರ್ನಮೆಂಟಿನ ಕಾರುಬಾರುಗಳ ವಿಷಯದಲ್ಲೂ, ಹಿಂದುಸ್ಥಾನದಿಂದ ಯುದ್ಧಭೂಮಿಗೆ ಕಳುಹಿಸಲ್ಪಟ್ಟಿರುವ ದೇಶೀಯ ಸೈನ್ಯಗಳ ವಿಚಾರವಾಗಿಯೂ ಜನರು ಆಡಿಕೊಳ್ಳುತ್ತಿರುವ ಬಗೆಬಗೆಯ ಕಥೆಗಳಲ್ಲಿ ಯಾವುದೊಂದೂ ನಿಜವಾದದ್ದಲ್ಲ; ಅವೆಲ್ಲಾ ಸುಳ್ಳು ಹರಟೆಗಳು. ಇಂಥಾ ಕಥೆಗಳ ಪೈಕಿ ಕೆಲವನ್ನು ಲಾಹೋರ್ ಪಟ್ಟಣದ ಒಂದು ಪತ್ರಿಕೆಯು ಪ್ರಕಟಮಾಡಿತು. ಅದರ ಎಡಿಟರು ಕೆಲವು ಕಾಲದಿಂದ ಸರ್ಕಾರದವರ ಆಗ್ರಹಕ್ಕೆ ಪಾತ್ರನಾಗಿದ್ದು, ಈಗ ಗವರ್ನಮೆಂಟಿನವರು ಆತನ ಮೇಲೆ ಪೊಲೀಸ್ ಉಸ್ತುವಾರಿ ಇಟ್ಟಿದ್ದಾರೆ. ಆ ಪತ್ರಿಕೆಯಲ್ಲಿ ಪ್ರಕಟವಾಗುವ ಕಥೆಗಳನ್ನು ಜನರು ನಂಬುವುದರಲ್ಲಿ ತುಂಬಾ ಜಾಗರೂಕರಾಗಿರಬೇಕು. ನಮಗೆ ಬರೆದುಬಂದಿರುವ ಕಥೆಗಳನ್ನೆಲ್ಲಾ ಇಲ್ಲಿ ವಿವರಿಸಲು ಸ್ಥಳ ಸಾಲದು; ಪ್ರಕಟಿಸುವುದಕ್ಕೆ ನಮ್ಮ ಮನಸ್ಸೂ ಒಪ್ಪುವುದಿಲ್ಲ. ಅನೇಕ ವಾಚಕರು "ವೃತ್ತಾಂತ ಪತ್ರಿಕೆ" ಯಲ್ಲಿ ಸಮಾಚಾರಗಳನ್ನು ಓದಿ ನಿಜವೆಂದು ನಂಬಿಕೊಳ್ಳುತ್ತೇವೆಂದು ಹೇಳಿದ್ದಾರೆ. ಬ್ರಿಟಿಷರಿಗೆ ಅಪಜಯವಾಗುವ ಪಕ್ಷದಲ್ಲಿ ಅಂಥಾ ಸಂಗತಿಯನ್ನು ಪ್ರಕಟಿಸಲು ನಾವು ಸ್ವಲ್ಪವೂ ಹಿಂಜರಿಯಲಾರೆವು. ಗ್ರಾಮಾಂತರಗಳಲ್ಲಿ ಹರಡುತ್ತಿರುವ ಕಥೆಗಳನ್ನು ಯೋಗ್ಯವಾದ ವೃತ್ತಾಂತಗಳಿಂದ ದೃಢಪಟ್ಟಲ್ಲದೆ ಜನರು ಎಷ್ಟು ಮಾತ್ರಕ್ಕೂ ನಂಬಬಾರದೆಂದು ಸೂಚಿಸುತ್ತೇವೆ.

ಶಿಕ್ಷೆಯ ಉದ್ದೇಶ.

ಶಿಕ್ಷೆಯು ಯಾಕೆ ನಮ್ಮ ಮೇಲೆ ಬರುತ್ತದೆ? ಎಂದು ಯಾರನ್ನಾದರೂ ಕೇಳಿದರೆ—ನಾವು ತಪ್ಪುಮಾಡಿದ ಅಪರಾಧಕ್ಕೆ ಧಣಿಯು ಕೋಪಿಸಿಕೊಂಡು ನಮ್ಮನ್ನು ದಂಡಿಸಿದನು ಎಂದು ಉತ್ತರ ಹೇಳುವರು. ಆದರೆ ಒಳ್ಳೇ ಧಣಿಯು ತನ್ನ ಕೋಪವನ್ನು ಶಾಂತಮಾಡಿಕೊಳ್ಳುವದಕ್ಕೋಸ್ಕರ ಅಪರಾಧಿಯಾದ ಆಳನ್ನು ದಂಡಿಸುವದಿಲ್ಲ. ಅಂತಹ ಒಳ್ಳೆಯ ಧಣಿಗೆ ಅಪರಾಧಿಯನ್ನು ಕಂಡು ವ್ಯಸನವಾಗುವದೇ ಹೊರತು ಕೋಪ ಬರಲಾರದು. ಯಾಕೆಂದರೆ ಆಜ್ಞಾಭಂಗದಿಂದ ಸಂಭವಿಸಿದ ಅಪರಾಧವು ಅಪರಾಧಿಯನ್ನು ಕೆಡಿಸಿಬಿಟ್ಟಿದೆ. ನಷ್ಟಕ್ಕೆ ಗುರಿಮಾಡಿದೆ. ಇದರಿಂದ ಧಣಿಗೆ ಸಹ ನಷ್ಟವೂ ವ್ಯಸನವೂ ಉಂಟಾಯಿತು. ಮಳೆಯಲ್ಲಿ ಮಕ್ಕಳು ಮನೆಯಲ್ಲಿ ನೀರನ್ನು ಚೆಲ್ಲಿ ತೇವದಲ್ಲಿ ಕುಣಿದಾಡಿದ್ದರಿಂದ ಅವರಿಗೆ ನೆಗಡಿ, ತಲೆನೋವು, ಜ್ವರ ಮುಂತಾದ ಉಪದ್ರವಗಳು ಪ್ರಾಪ್ತಿಸಿದವು. ಮುಟ್ಟಬಾರದೆಂದು ಆಜ್ಞಾಪಿಸಿದ್ದ ಆಯುಧಗಳನ್ನು ತೆಗೆದುಕೊಂಡು ಸರಿಯಾಗಿ ಪ್ರಯೋಗಿಸುವದಕ್ಕೆ ತಿಳಿಯದೆ ಗಾಯಮಾಡಿಕೊಂಡು ಅಳುತ್ತಾರೆ. ತಂದೆಯು ಜ್ವರದಲ್ಲಿ ಮಲಗಿರುವ ಮಕ್ಕಳು ತಲೆಸಿಡಿತ, ಕೆಮ್ಮುಗಳಿಂದ ವ್ಯಸನಪಡುತ್ತಿರುವದನ್ನು ನೋಡಿ—ಈಗಲೀಗ ನೀವು ನಿಮ್ಮ ಅಪರಾಧಕ್ಕೆ ತಕ್ಕ ಶಿಕ್ಷೆಗೆ ಗುರಿಯಾಗಿದ್ದೀರಿ. ನೀವೇ ನಿಮಗೆ ಈಗ ಪ್ರಾಪ್ತಿಸಿರುವ ಉಪದ್ರವಗಳಿಗೆ ಕಾರಣರು. ಆದ್ದರಿಂದ ನಿಮಗೆ ನ್ಯಾಯವಾಗಿ ಪ್ರಾಪ್ತಿಸಿರುವ ಕಷ್ಟವನ್ನೂ ರೋಗವನ್ನೂ ಅನುಭವಿಸಿರಿ. ನನ್ನಿಂದ ತಪ್ಪೇನೂ ಇಲ್ಲ. ನಾನು ನಿಮ್ಮನ್ನು ಮೊದಲೇ ಎಚ್ಚರಿಸಿ ಬುದ್ಧಿಹೇಳಿದೆನು. ನೀವು ನನ್ನ ಮಾತನ್ನು ತಿರಸ್ಕರಿಸಿದ್ದರಿಂದ ನಿಮಗೆ ಇದು ಪ್ರಾಪ್ತಿಸಿತು ಎಂತ ಈ ರೀತಿ ಹೇಳಿ ಕೋಪಮಾಡಿಕೊಂಡು ಹೋಗಿಬಿಡುತ್ತಾನೋ? ಇಲ್ಲವಷ್ಟೆ. ಅವಿವೇಕದಿಂದಲೂ ಆಜ್ಞಾಭಂಗಮಾಡಿದ್ದರಿಂದಲೂ ಮಕ್ಕಳು ಅಸ್ವಸ್ಥರಾಗಿರುವದೇನೋ ನಿಜ. ಆದರೆ ತಂದೆಯು ಮಕ್ಕಳ ಅಪರಾಧವನ್ನೆತ್ತಿ ಆಗ ಮಾತನಾಡದೆ ಅವರಿಗೆ ರೋಗದ ಪೀಡನೆಯು ಕಡಿಮೆಯಾಗುವ ಉಪಾಯವನ್ನು ಹುಡುಕುತ್ತಾನಲ್ಲವೇ? ಅವರ ಕಷ್ಟದಲ್ಲಿ ತಾನೂ ಸಹ ಭಾಗಿಯಾಗಿ ಉಪಚರಿಸುತ್ತಾನೆ. ಹೆಚ್ಚಾಗಿ ಹಣವನ್ನು ಖರ್ಚುಮಾಡಿ ತಕ್ಕ ಆಹಾರ, ಔಷಧಿ, ಹೊದಿಕೆಗಳನ್ನು ಒದಗಿಸುತ್ತಾನಲ್ಲವೇ?

ಒಂದು ರಾಜ್ಯದಲ್ಲಿ ಅರಸನ ಆಜ್ಞೆಯನ್ನು ಭಂಗಪಡಿಸಿದವನನ್ನು ಹಿಡಿದು ಬೇಡಿಹಾಕುತ್ತಾರೆ. ತಂದೆಯು ತನ್ನ ಮಕ್ಕಳನ್ನು ಹ್ಯಾಗೂ ಪ್ರೀತಿಮಾಡುತ್ತಾನೆ. ಆದರೆ ಅರಸನು ರಾಜಾಜ್ಞೆ ಮೀರಿದವನನ್ನು ಕ್ರೂರವಾಗಿ ದಂಡಿಸಬೇಕೆಂದು ಯೋಚಿಸುವನೋ! ಕೂಡದು. ಯಾಕೆಂದರೆ ಅರಸನೂ ಸಹ ಪ್ರಜೆಗಳಿಗೆ ತಂದೆ ಮೋಪಾದಿ ಇದ್ದು ಅವರನ್ನು ರಕ್ಷಿಸುವದಕ್ಕೋಸ್ಕರವೇ ಹಗಲು ರಾತ್ರಿ ಚಿಂತಿಸುತ್ತಾನೆ. ತನ್ನ ಪ್ರಜೆಗಳಿಗೆ ಕಷ್ಟ ಪ್ರಾಪ್ತಿಸಿದರೆ ಅದು ತನಗೇ ಸಂಭವಿಸಿತೆಂದು ಭಾವಿಸಿ ಪರಿಹಾರವನ್ನು ಹುಡುಕುತ್ತಾನೆ. ಶತ್ರುಗಳು ಪ್ರಜೆಗಳ ಮೇಲೆ ದಂಡೆತ್ತಿ ಬಂದು ಅವರನ್ನು ಸುಲುಕೊಳ್ಳುತ್ತಿದ್ದರೆ ಅರಸನು ಕತ್ತಿ ಹಿಡಿದು ತನ್ನ ಪ್ರಜೆಗಳನ್ನು ಸಂರಕ್ಷಿಸುವದಕ್ಕಾಗಿ ಯುದ್ಧಮಾಡುತ್ತಾನೆ. ಸಾಂಕ್ರಾಮಿಕ ರೋಗಗಳು ವ್ಯಾಪ್ತವಾಗಿ ಪ್ರಜೆಗಳನ್ನು ಪೀಡಿಸಿದರೆ ವೈದ್ಯರನ್ನು ಕಳಿಸಿ ಪರಿಹಾರವನ್ನು ಮಾಡಿಸುತ್ತಾನೆ. ಕ್ಷಾಮ ಪ್ರಾಪ್ತವಾಯಿತೆಂದರೆ ದ್ವೀಪಾಂತರಗಳಿಂದಾದರೂ ದವಸಧಾನ್ಯಗಳನ್ನು ತರಿಸಿ ಪ್ರಜಾಪೋಷಣೆ ಮಾಡುತ್ತಾನೆ. ಆದರೆ ಇಂತಹ ಕರುಣಾಳುವಾದ ಅರಸನೇ ತನ್ನ ಆಜ್ಞೆಗಳನ್ನು ಭಂಗಪಡಿಸಿದ ಅಪರಾಧಿಯನ್ನು ಬೇಡಿ ಹಾಕಿಸಿ ದಂಡಿಸುತ್ತಾನೆ. ಇದು ಏತಕ್ಕೆ? ಕೋಪದಿಂದಲೋ?

ಅಪರಾಧವನ್ನು ಮಾಡಿದವನು ತನ್ನನ್ನು ತಾನೇ ಒಂದು ಸೂಕ್ಷ್ಮವಾದ ರೋಗಕ್ಕೆ ಗುರಿಮಾಡಿಕೊಂಡಿದ್ದಾನೆ. ಕಳ್ಳತನ ಮಾಡಿದ ಅಪರಾಧಿಯು ಸರಕಾರದವರ ದೃಷ್ಟಿಗೆ ಸಿಕ್ಕದೆ ತಪ್ಪಿಸಿಕೊಂಡು ಮನೆಗೆ ಬಂದರೆ—ಭಲಾ! ನಾನು ಗೆದ್ದೆ! ನನಗೇನೂ ಭಯವಿಲ್ಲ ಎಂದುಕೊಂಡು ಸಂತೋಷಪಡುತ್ತಾನೆ. ಆದರೆ ಅವನ ದೇಹಕ್ಕೆ ಕಷ್ಟ ತಪ್ಪಿದರೂ ಬುದ್ಧಿ ಮನಸ್ಸು ಆತ್ಮ ಹೃದಯಗಳು ರೋಗಗ್ರಸ್ತವಾಗಿ ಕೆಟ್ಟುಹೋಗಿವೆ. ಅವನಿಗೆ ಸಮಾಧಾನವಿಲ್ಲ. ಬುದ್ಧಿ ನಿಲುಗಡೆ ಇಲ್ಲ. ಏನೋ ಒಂದು ವಿಧವಾದ ಭಯವೂ ಮನೋವ್ಯಾಕುಲವೂ ಅವನನ್ನು ಪೀಡಿಸುತ್ತಲಿವೆ. ಗಾಬರಿ, ನಿದ್ರೆ ಚೆನ್ನಾಗಿ ಬರುವದಿಲ್ಲ. ಮನೋರೋಗವೇ ಇದಕ್ಕೆ ಕಾರಣ. ಅವನು ನೆಟ್ಟಗೆ ಅಧಿಕಾರಿಗಳ ಬಳಿಗೆ ಹೋಗಿ ಅಪರಾಧವನ್ನು ಅಂಗೀಕಾರ ಮಾಡಿ ತಕ್ಕ ದಂಡನೆಯನ್ನು ಹೊಂದುವದೇ ಅವನ ಮನೋರೋಗಕ್ಕೆ ಸ್ವಸ್ಥತೆಯನ್ನು ಕೊಡುವ ಮೊದಲನೆಯ ಔಷಧ.

ಅರಸನು ಧರ್ಮಪ್ರಭುವಾಗಿ ಪ್ರಜೆಗಳನ್ನು ಮಕ್ಕಳಂತೆ ಭಾವಿಸಿದರೂ ಮೇಲೆ ಹೇಳಿದ ಅಪರಾಧಿಯನ್ನು ದಂಡಿಸದೆ ಇರಲಾರನು. ಇತರ ಪ್ರಜೆಗಳಿಗೂ ತನ್ನ ಗೌರವಕ್ಕೂ ತಕ್ಕ ಶಿಕ್ಷೆಯನ್ನು ಅಪರಾಧಿಗೆ ವಿಧಿಸುವದು ನ್ಯಾಯವೇ ಸರಿ. ಆದರೆ ಅರಸನು ಮುಖ್ಯವಾಗಿ ಅಪರಾಧಿಯ ಪ್ರಯೋಜನಕ್ಕೋಸ್ಕರವೇ ಅವನನ್ನು ದಂಡಿಸುತ್ತಾನೆ. ಆ ದಂಡನೆಯ ಉದ್ದೇಶವು ಅವನು ತ್ಯಜಿಸಿಬಿಟ್ಟಿರುವ ಸನ್ಮಾರ್ಗಕ್ಕೆ ಪುನಃ ಅಪರಾಧಿಯನ್ನು ತಿರುಗಿ ರಕ್ಷಿಸುವದೇ ಹೊರತು ಮತ್ತೇನೂ ಅಲ್ಲ. ಅವನು ಆರು ತಿಂಗಳೋ ವರುಷವೋ ಶಿಕ್ಷಾಗೃಹದಲ್ಲಿದ್ದು ತಾನು ಮಾಡಿದ ತಪ್ಪನ್ನು ತಿಳಿದು ಅದನ್ನು ತ್ಯಜಿಸಿ ಘನವಂತ ಪ್ರಜೆಯಾಗಿ ಉದ್ಯೋಗ ಮಾಡಿ ಬದುಕಲಿಕ್ಕೆ ಕಲಿತು ಅಲ್ಲಿಂದ ಹೊರಗೆ ಬರಬೇಕು. ಇದು ಅವನಿಗೆ ಶಿಕ್ಷೆಯಲ್ಲ; ರಕ್ಷಣೆ.

ದೇವರು ಇಹಲೋಕದ ತಂದೆಗಿಂತಲೂ ರಾಜನಿಗಿಂತಲೂ ಕಡಿಮೆಯಿಲ್ಲದ ಕರುಣಾಳುವೋ? ಮನುಷ್ಯನು ಆಜ್ಞೋಲ್ಲಂಘನೆ ಮಾಡಿ ದೇವರ ಸ್ವಭಾವಕ್ಕೆ ವಿರೋಧವನ್ನುಂಟುಮಾಡಿ ತನ್ನನ್ನು ಕೆಡಿಸಿಕೊಂಡಿದ್ದಾನೆ. ಅವನ ಕೆಟ್ಟತನವು ಅವನನ್ನು ಪಡಿಸುತ್ತಿದೆ. ಆದರೆ ದೇವರು ನನ್ನ ಕೆಟ್ಟ ಅಪರಾಧಕ್ಕೆ ತಕ್ಕ ದಂಡನೆಯು ನನಗೆ ಪ್ರಾಪ್ತವಾಯಿತು ಎಂದು ಸಂತೋಷಪಡುತ್ತಾನೋ? ಸುಮ್ಮನೆ ನಿಂತುಕೊಂಡು ನೋಡುತ್ತ ಸಂತಾಪಪಡದೆ, ಸಹಾಯಮಾಡದೆ, ಪರಿಹಾರವನ್ನು ಹುಡುಕದೆ ಇರುವನೋ? ಪಾಪಿಯು ತನ್ನ ಸ್ವಕೀಯ ಅಪರಾಧದಿಂದ ಸಂಪಾದಿಸಿಕೊಂಡ ನೋವಿನಿಂದ ನರಳುತ್ತಿರುತ್ತಾನೆ. ಆದರೆ ದೇವರು ಅವನನ್ನು ತಿರಸ್ಕರಿಸಲಿಲ್ಲ. ಕೈಬಿಡಲಿಲ್ಲ. ಅತನು ಪರಮತಂದೆ. ಪುಣ್ಯವಂತರನ್ನು ಮಾತ್ರವಲ್ಲ; ಪಾಪಿಗಳನ್ನೂ ಸಹ ಪ್ರೀತಿಮಾಡಿ ಅವರನ್ನು ರಕ್ಷಿಸುವದಕ್ಕೆ ಈ ಲೋಕಕ್ಕೆ ಬಂದನು. ಅಪರಿಮಿತನಾದ ಆತನು ಪರಿಮಿತಿಯನ್ನು ಹೊಂದಿ ಪಾಪಿಯನ್ನು ರಕ್ಷಿಸಿಕೊಂಡನು. ಅವನ ಅಪರಾಧಕ್ಕೆ ಬರುವ ದಂಡನೆಯನ್ನು ತಾನೇ ಹೊತ್ತು ಸಹಿಸಿದನು.

ಯುದ್ಧದ ಸಮಾಚಾರಗಳು.

ನಿಲುಗಡೆಯಿಲ್ಲದ ಕದನಗಳು.

ಯುದ್ಧವು ಇನ್ನೊಂದು ವಾರ ಮುಂದರಿಸಿತು; ಆದರೆ ಸೋಲು ಗೆಲುವು ಆಯಿತೆಂದು ಹೇಳುವಂಥಾ ಕದನಗಳೇನೂ ಆಗಲಿಲ್ಲ. ಕದನಗಳೇನೋ ವಿಶೇಷವಾಗಿ ನಡೆದಿವೆ. ಒಟ್ಟುಗೂಡಿಸಿ ನೋಡಿದರೆ ಬ್ರಿಟಿಷರಿಗೂ ಫ್ರೆಂಚರಿಗೂ ನಿದಾನವಾಗಿ ಆದರೂ ಖಂಡಿತವಾದ ಅನುಕೂಲವಾಗಿದೆ ಎಂದು ಹೇಳಬೇಕು. ಅತ್ತಲಾಗಿ ರಷ್ಯಾದವರು ಶತ್ರುವಿನ ಅಪಾರವಾದ ಸೈನ್ಯ ಎದುರಿಗೆ ಬಂದಿದ್ದಾಗ್ಯೂ ತಮ್ಮ ಸ್ಥಾನಗಳನ್ನು ಬಿಟ್ಟುಕೊಟ್ಟಿಲ್ಲ. ಇಲ್ಲಿ ನಾವು ವಿವರಿಸುವ ಸ್ಥಳಗಳು ನಮ್ಮ ಯುದ್ಧದ ನಕ್ಷೆಯಲ್ಲಿ ಕಾಣಬರುತ್ತವೆ.

ಫ್ರಾನ್ಸಿನಲ್ಲಿ.

ಫ್ರಾನ್ಸಿನ ಉತ್ತರ ಭಾಗದಲ್ಲೇ ವಿಶೇಷವಾದ ಯುದ್ಧಕಾರ್ಯಗಳು ನಡೆದಿರುತ್ತವೆ; ಅಂದರೆ ಲೀಲ್‌ನಿಂದ ಓಸ್ಟೆಂಡ್ ವರೆಗೆ ಒಂದು ಲೈನು ಎಳೆದರೆ ಅದಕ್ಕೆ ಪಶ್ಚಿಮದಲ್ಲಿ ಕದನಗಳು ನಡೆದಿರುವವು. ಬ್ರಿಟಿಷರೂ ಫ್ರೆಂಚರೂ ಜರ್ಮನಿಯವರನ್ನು ಉತ್ತರ ದಿಕ್ಕಿಗೆ ಓಡಿಸಿದ್ದಾರೆ. ಈಗ ಯುದ್ಧ ನಡೆಯುತ್ತಿರುವ ಲೈನು ಸಮುದ್ರತೀರದ ವರೆಗೂ ವ್ಯಾಪಿಸಿಕೊಂಡಿರುವುದು.

ಜರ್ಮನಿಯವರು ಕಲೆ ಎಂಬ ತೀರಪಟ್ಟಣಕ್ಕೆ ಬರಬೇಕೆಂದು ಒಂದಾವರ್ತಿ ಪ್ರಯತ್ನಪಟ್ಟರು. ಆದರೆ ಅದು ಸಾಧ್ಯವಾಗಲಿಲ್ಲ. ಜರ್ಮನಿಯವರು ಅಲ್ಲಿಂದ ಹಿಂದಕ್ಕೆ ಬೆಲ್ಜಿಯಂ ರಾಜ್ಯದ ಎಲ್ಲೆಯೊಳಕ್ಕೆ ಓಡಿಸಲ್ಪಟ್ಟರು. ಈಗ ಕಲೆಯಿಂದ ಆಚೆಗೆ ರೈಲ್‌ಗಾಡಿಗಳು ಹೋಗಿಬರುತ್ತಿರುವವೆಂದು ಒಂದು ತಂತೀವರ್ತಮಾನ ಹೇಳುತ್ತದೆ. ಈಚೆಗೆ ಬಂದಿರುವ ವರ್ತಮಾನದಿಂದ ಫ್ರಾನ್ಸಿನ ಉತ್ತರ ಭಾಗದಲ್ಲಿ ಜರ್ಮನಿಯವರು ಮೂವತ್ತು ಮೈಲಿ ದೂರ ಹಿಂದಕ್ಕೆ ಓಡಿಸಲ್ಪಟ್ಟಿರುವುದು ಗೊತ್ತಾಗುತ್ತದೆ.

ಫ್ರಾನ್ಸಿನ ಅನೇಕ ಭಾಗಗಳಲ್ಲಿ ಬ್ರಿಟಿಷ್ ಮತ್ತು ಫ್ರೆಂಚ್ ಸೈನ್ಯಗಳು ಸ್ವಲ್ಪಸ್ವಲ್ಪ ಮುಂದರಿಸಿ ಹೋಗಿದ್ದಾರೆ. ರೀಂಸ ಹತ್ತಿರ ಇವರು ಜರ್ಮನಿಯವರನ್ನು ಒಂದು ಮೈಲಿ ದೂರಕ್ಕಿಂತ ಹೆಚ್ಚಾಗಿ ಹಿಂದಕ್ಕೆ ಓಡಿಸಿದರು. ವಿಂಗಡವಾಗಿ ಫ್ರಾನ್ಸಿನಲ್ಲಿ ಜರ್ಮನಿಯವರು ಹಿಂದುಹಿಂದಕ್ಕೆ ಓಡಿಸಲ್ಪಡುತ್ತಿದ್ದಾರೆ. ಅವರು ಆಕ್ರಮಿಸಿಕೊಂಡಿದ್ದ ಪ್ರದೇಶಗಳು ದಿನಕ್ರಮೇಣ ಕಡಮೆಯಾಗುತ್ತಾ ಬರುವುದು. ಎದುರುಬದರಾಗಿರುವ ಎರಡು ಪಕ್ಷಗಳ ಸೈನಿಕರೂ ಕಂದಕಗಳನ್ನು ತೋಡಿ ತಮ್ಮ ಮುಂಭಾಗಗಳಲ್ಲಿ ಏರಿಗಳನ್ನು ಕಟ್ಟಿಕೊಂಡು ಯುದ್ಧಮಾಡುತ್ತಿರುವುದರಿಂದ ಎರಡು ಕಡೆಗಳಲ್ಲೂ ಅಷ್ಟೇನೂ ವಿಶೇಷ ಕೊಲೆಗಳು ಆಗಲಿಲ್ಲ. ಇಂಗ್ಲೀಷರ ಪರಾಕ್ರಮಿಯಾದ ಜನರಲ್ ಹ್ಯಾಮಿಲ್‌ಟನ್‌ರವರು ಕೆಲವರ ಸಂಗಡ ಕುಳಿತಿದ್ದಾಗ ಷೆಲ್ ಎಂಬ ಗುಂಡು ಒಡೆದು ಅದರ ಒಂದು ಚೂರು ಅವರ ತಲೆಗೆ ಬಡಿಯಿತು. ಅವರು ಆ ಕೂಡಲೇ ತೀರಿಹೋದರು. ಉಳಿದವರ್‍ಯಾರಿಗೂ ಅಪಾಯವೇನೂ ಆಗಲಿಲ್ಲ. ಶತ್ರುಗಳ ಸಮೀಪಕ್ಕೆ ಹೋಗಬೇಕೆಂದು ಫ್ರೆಂಚ್ ಸೈನಿಕರು ಭೂಮಿಯೊಳಗೇ 200 ಗಜಗಳ ದೂರ ರಂಧ್ರವನ್ನು ಕೊರೆದುಕೊಂಡು ಹೋಗಿ ಜರ್ಮನಿಯವರು ತಾವು ಹಾಕಿಕೊಂಡಿದ್ದ ಒಂದು ಕಂದಕದ ತಳಭಾಗದಲ್ಲಿ ಡೈನಮೈಟ್ ಹಾಕಿ ಬೆಂಕಿ ತೋರಿಸಿ ಹಾರಿಸಿಬಿಟ್ಟರು. ಇದರಿಂದ ೪೦–೬೦೦ ಜರ್ಮನಿ ಸೈನಿಕರು ಸತ್ತು ಹೋಗಿದ್ದಾರೆ. ಅವರು ಇದೇ ರೀತಿಯಲ್ಲಿ ಜರ್ಮನಿಯವರ ಒಂದು ಭಾರೀ ಫಿರಂಗಿಯನ್ನು ಒಡೆದು ಹಾರಿಸಿಬಿಟ್ಟರು.

ಈಗಿನ ಯುದ್ಧದ ಕಾರ್ಯಗಳಲ್ಲಿ ಸುಡುವ ಮದ್ದು ಸ್ವಲ್ಪವೂ ಹೊಗೆ ಹಾಕುವುದಿಲ್ಲವಾದದ್ದರಿಂದ ಮತ್ತು ಕಾದಾಡುವ ಸೈನ್ಯಗಳು ಕಂದಕಗಳಲ್ಲಿ ಮರೆಸಿಕೊಳ್ಳುವುದರಿಂದ ಶತ್ರುಸೈನ್ಯ ಎಲ್ಲಿ ಇದೆಯೋ ಗೊತ್ತಾಗುವುದೇ ಬಹಳ ಪ್ರಯಾಸ. ಇದರಿಂದ ಬಹಳ ಮದ್ದು ಗುಂಡು ವ್ಯರ್ಥವಾಗಿ ಹೋಗುತ್ತವೆ; ನೆಡೆದ ಗುಂಡುಗಳು ಶತ್ರುಗಳಿಗೆ ಬಡಿಯುವುದೇ ಅಪರೂಪ.

ಬ್ರಿಟಿಷ್ ಸೈನ್ಯಗಳ ಆರೋಗ್ಯಸ್ಥಿತಿಯು ತೃಪ್ತಿಕರವಾಗಿದೆ; ಆದರೆ ಶತ್ರುಗಳಾದ ಜರ್ಮನಿ ಸೈನ್ಯದಲ್ಲಿ ವಿಷಮಶೀತಜ್ವರ ಕಾಣಿಸಿಕೊಂಡಿರುವಂತೆ ಹೇಳಲಾಗಿದೆ.

ಕೆಲವು ವಿಮಾನಯಂತ್ರಗಳು ಅಂತರಿಕ್ಷದಲ್ಲಿ ಬಂದು ಫ್ರಾನ್ಸಿನ ರಾಜಧಾನಿಯಾದ ಪ್ಯಾರಿಸ್ ಪಟ್ಟಣದೊಳಕ್ಕೆ ಸಿಡಿಮದ್ದಿನ ಗುಂಡುಗಳನ್ನು ಹಾಕಿದವು. ಒಂದು ಗುಂಡು ಅತ್ಯಂತ ಸುಂದರವಾದ ದೇವಾಲಯಕ್ಕೆ ಬಡಿಯಿತು. ಆದರೂ ಆ ಕಟ್ಟಡಕ್ಕೆ ವಿಶೇಷ ನಷ್ಟವೇನೂ ಆಗಲಿಲ್ಲ. ಇತರ ಕಡೆ ಬಿದ್ದ ಗುಂಡುಗಳು ಒಡೆದು ನಾಲ್ವರು ಹತರಾದರು; ಇಪ್ಪತ್ತು ಮಂದಿಗೆ ಗಾಯಗಳಾದವು.

ಜರ್ಮನಿ ಸೈನ್ಯದ ಒಬ್ಬ ಹುದ್ದೇದಾರನು ದಿನಚರಿ ಬರೆದಿದ್ದ ಡೈರಿಯು ಸಿಕ್ಕಿದೆ. ಫ್ರಾನ್ಸಿನಲ್ಲಿ ಜರ್ಮನಿ ಸೈನ್ಯಗಳು ಒಂದು ಕಡೆ ಇಳಿದಾಗ, ಅವರು ತಮ್ಮ ಸೈನ್ಯಕ್ಕೆಲ್ಲಾ ಅಪಮಾನಕರವಾದಂಥಾ ಕೃತ್ಯವನ್ನು ನಡೆಸಿದರೆಂದು ಆ ಡೈರಿಯಲ್ಲಿ ಬರೆದಿರುತ್ತಾನೆ. ಜರ್ಮನಿ ಸೈನಿಕರು ಆ ಸ್ಥಳವನ್ನು ಲೂಟಿ ಮಾಡಿದರಂತೆ; ಅವರ ಮೇಲ್ಪಟ್ಟ ಹುದ್ದೇದಾರರು ಸೈನಿಕರ ಕೃತ್ಯವನ್ನು ತಡೆದು ಆಗಿಸದೆ ಅವರು ಕಳುವು ಮಾಡಿ ತಂದ ಆಸ್ತಿಯಲ್ಲಿ ಕೆಲವು ಭಾಗವನ್ನು ತಾವೂ ತೆಗೆದುಕೊಂಡರಂತೆ. ಇನ್ನೊಂದು ಗ್ರಾಮಕ್ಕೆ ರು ಫ್ರೆಂಚ್ ಸೈನಿಕರಿಗೆ ಜರ್ಮನಿಯವರು ಬರುತ್ತಾರೆಂದು ಸೂಚನೆಕೊಟ್ಟಿದ್ದರಿಂದ ಜರ್ಮನಿ ಸೈನಿಕರು ಆ ಗ್ರಾಮಕ್ಕೆ ಬೆಂಕಿಹಾಕಿ ಅಲ್ಲಿನ ಪಾದ್ರಿಯನ್ನು ಗುಂಡಿನಿಂದ ಹೊಡೆದು ಕೊಂದುಬಿಟ್ಟರಂತೆ. ಇನ್ನೂ ಆ ಡೈರಿಯಲ್ಲಿ ಅವನು—“ನಮ್ಮ ಜನಗಳಿಗೆಲ್ಲಾ ಈ ದೇಶದಲ್ಲೇ [ಫ್ರಾನ್ಸ್] ಸಮಾಧಿಯು ಸಿದ್ಧವಾಗಿದೆ ಎಂದು ನಿಂದಿತವಾಗಿ ಹೇಳಬಲ್ಲೆನು” ಎಂದು ಬರೆದಿರುತ್ತಾನೆ.

ಜರ್ಮನಿಯವರೂ ಬ್ರಿಟಿಷರೂ ಆಂಬ್ಯುಲೆನ್ಸ್ [ಗಾಯಪಟ್ಟವರಿಗೆ ಉಪಚಾರ ಮಾಡತಕ್ಕ] ಗುಂಪಿನ 187 ಮಂದಿ ಕೈಸೆರೆಯವರನ್ನು ಅದಲಿಬದಲಿ ಮಾಡಿಕೊಂಡರು. ಇವರು ಯುದ್ಧಮಾಡತಕ್ಕ ಸಿಪಾಯಿಗಳೇನೂ ಅಲ್ಲ, ಯುದ್ಧಭೂಮಿಯಲ್ಲಿ ಕೊಲೆಯಾದವರನ್ನೂ ಗಾಯಪಟ್ಟವರನ್ನೂ ನೋಡಿಕೊಳ್ಳತಕ್ಕವರು.

ಬೆಲ್ಜಿಯಮ್‌ನಲ್ಲಿ.

ಈ ವಾರ ಜರ್ಮನಿಯವರು ಬೆಲ್ಜಿಯಂ ರಾಜ್ಯದಲ್ಲಿ ಬಹಳ ಭಾಗವನ್ನು ಆಕ್ರಮಿಸಿಕೊಂಡಿರುತ್ತಾರೆ. ಅವರು ಸಮುದ್ರಸೈನ್ಯವನ್ನು ತಂದಿಟ್ಟು ಆಂಟ್ವರ್ಪ್ ಪಟ್ಟಣವನ್ನು ಕಾಪಾಡುತ್ತಿದ್ದಾರೆ. ಜರ್ಮನಿಯವರು ಹೇಳುವ ಪ್ರಕಾರ ಅವರಿಗೆ ಆಂಟ್ವರ್ಪ್ ನಗರದಲ್ಲಿ ೫೦೦ ಫಿರಂಗಿಗಳೂ, ಆಹಾರ ಸಾಮಾನುಗಳೂ, 4-5 ಸಾವಿರ ಜನರೂ ಸಿಕ್ಕಿರುವರು. ಆ ಪಟ್ಟಣದ ಬಳಿ ಇರುವ ನದಿಯೊಳಗೆ ಬೆಲ್ಜಿಯನ್ನರ ಅಥವಾ ಬ್ರಿಟಿಷರ ಹಡಗುಗಳು ಇರಲಿಲ್ಲ; ಬೆಲ್ಜಿಯನ್ನರು ಹಿಡಿದು ಇಟ್ಟ 37 ಜರ್ಮನಿ ಹಡಗುಗಳು ಮಾತ್ರ ಸಿಕ್ಕಿದವು. ಇವುಗಳ ಇಂಜನ್‌ಗಳೆಲ್ಲಾ ಮುರಿದು ಕೆಟ್ಟುಹೋಗಿವೆ. ಇವು ಜರ್ಮನಿಯವರಿಗೆ ಮತ್ತೆ ಸಿಕ್ಕಿದಾಗ್ಯೂ ಅವರು ಅವುಗಳನ್ನು ಯಾತಕ್ಕೂ ಉಪಯೋಗಿಸುವ ಹಾಗಿಲ್ಲ. ಒಂದು ವೇಳೆ ಉಪಯೋಗಿಸಿದರೂ ಅವು ಅಲ್ಲಿಂದ ಹೊರಕ್ಕೆ ಉತ್ತರ ಕಡಲಿಗೆ ಹೋದ ಪಕ್ಷದಲ್ಲಿ ಬ್ರಿಟಿಷರ ಜಹಜುಗಳು ಅವುಗಳನ್ನು ಹಿಡಿದುಬಿಡುವವು. ಜರ್ಮನಿಯವರು ಆಂಟ್ವರ್ಪ್ ನಗರದವರಿಂದ ೨,೦೦,೦೦,೦೦೦ ಪೌಂಡನ್ನು ವಸೂಲ್ಮಾಡುವರೆಂದು ಹೇಳುತ್ತಾರೆ. ಜರ್ಮನಿಯವರು ಅಲ್ಲಿನ ನಿವಾಸಿಗಳನ್ನು ಚೆನ್ನಾಗಿ ನಡಿಸುತ್ತಿರುವಂತೆ ಕಾಣುತ್ತದೆ. ಈಗ ಅವರಿಗೆ ಸರಿಯಾಗಿ ಬುದ್ಧಿ ಬಂದಿರಬೇಕೆಂದು ತೋರುವುದು. ಅವರು ಹಿಂದೆ ಬೆಲ್ಜಿಯನ್ನರನ್ನು ಎಷ್ಟೋ ಕ್ರೂರತರವಾಗಿ ನಡಿಸಿ ಹಿಂಸೆಪಡಿಸಿದ್ದರಿಂದ ಪ್ರಪಂಚವೆಲ್ಲಾ ಜರ್ಮನಿಯವರನ್ನು ಅಗ್ರಹದಿಂದ ಹೀಯಾಳಿಸುತ್ತಿದ್ದರು.

ಸಾವಿರಾರು ಬೆಲ್ಜಿಯನ್ನರು ಇಂಗ್ಲೆಂಡಿಗೂ ಹಾಲೆಂಡಿಗೂ ಹೋಗಿ ಸೇರಿಕೊಂಡರು; ಅಲ್ಲಿನವರು ಇವರನ್ನು ಸಂರಕ್ಷಣೆ ಮಾಡುತ್ತಿದ್ದಾರೆ. ಬೆಲ್ಜಿಯನ್ನರು ತಮ್ಮ ಗವರ್ನ್‌ಮೆಂಟನ್ನು ಲಿ ಹಾವ್ರೆ ಎಂಬ ತೀರಪಟ್ಟಣಕ್ಕೆ ಸಾಗಿಸಿಬಿಟ್ಟರು. ಅಲ್ಲಿಂದ ಬೆಲ್ಜಿಯಮ್ ರಾಜ್ಯದ ಕಾರುಬಾರುಗಳನ್ನು ನಡಿಸುವುದಾಗಿ ಫ್ರೆಂಚರು ಅವರಿಗೆ ಅಭಯವನ್ನು ಕೊಟ್ಟಿರುವರು. ಆದರೆ ಗವರ್ನ್‌ಮೆಂಟಿನ ವಶದಲ್ಲಿ ಉಳಿದಿರುವ ಬೆಲ್ಜಿಯಮ್ ರಾಜ್ಯವು ಈಗ ಬಹಳ ಸ್ವಲ್ಪವಾಯಿತು.

ಈಗ ಹಾಲೆಂಡಿನಲ್ಲಿ ಬೆಲ್ಜಿಯನ್ ಮತ್ತು ಬ್ರಿಟಿಷ್ ಸೈನಿಕರು 22,000 ಮಂದಿ ಹೋಗಿ ಸೇರಿಕೊಂಡಿದ್ದಾರೆ. ಈ ಪೈಕಿ ಅನೇಕ ಬೆಲ್ಜಿಯನ್ನರು ವಾಪಸು ಫ್ರಾನ್ಸಿಗೆ ಬಂದು ಅಲ್ಲಿ ಜರ್ಮನಿಯವರ ಮೇಲೆ ಯುದ್ಧಮಾಡಲು ಸಿದ್ಧರಾಗಿದ್ದಾರೆ. ಬ್ರಿಟಿಷ್ ರಾಜ್ಯಭಾರದ ಮಂತ್ರಿ ಶ್ರೇಷ್ಠರಾದ ಮಿ॥ ಆಸ್ಕಿತ್‌ರವರ ಕುಮಾರನು ಆಂಟ್ವರ್ಪ್ ನಗರದಲ್ಲಿದ್ದು ಜರ್ಮನಿಯವರ ಮೇಲೆ ಯುದ್ಧ ಮಾಡಿ ಅಲ್ಲಿಂದ ತಪ್ಪಿಸಿಕೊಂಡು ಬಂದುಬಿಟ್ಟನೆಂದು ಹೇಳುತ್ತಾರೆ.

ಆಂಟ್ವರ್ಪ್ ನಗರವನ್ನು ಗೆದ್ದು ಸ್ವಾಧೀನಪಡಿಸಿಕೊಂಡ ಮೇಲೆ ಜರ್ಮನಿಯವರು ಅಲ್ಲಿಂದ ಮುಂದರಿಸಿ ನುಗ್ಗಿ ಹೋಗಿ ಘೆಂಟ್ ಪಟ್ಟಣವನ್ನು ಆಕ್ರಮಿಸಿಕೊಂಡಿರುತ್ತಾರಲ್ಲದೆ ಅಲ್ಲಿಂದ ಮುಂದಕ್ಕೂ ನುಗ್ಗಿಹೋಗಿ ಸಮುದ್ರತೀರ ಪಟ್ಟಣವಾದ ಓಸ್ಟೆಂಡ್ ಪಟ್ಟಣವನ್ನೂ ಸ್ವಾಧೀನಪಡಿಸಿಕೊಂಡಿರುವಂತೆ ಕಾಣುತ್ತದೆ. ಆಂಟ್ವರ್ಪಿನಲ್ಲಿ ಗಾಯಪಟ್ಟ ೨,೦೦೦ ಸೈನಿಕರನ್ನು ಇಂಗ್ಲೆಂಡಿಗೆ ಕರೆದುಕೊಂಡು ಹೋಗಿದ್ದಾರೆ. ಜರ್ಮನಿಯವರು ಇನ್ನು ಮೇಲೆ ಅಲ್ಲಿಂದ ಮುಂದಕ್ಕೆ ನುಗ್ಗಿ ಹೋಗಲಾರರೆಂದು ನೆನಸುತ್ತೇವೆ.

ಬೆಲ್ಜಿಯನ್ ಸೈನಿಕರ ಪರಾಕ್ರಮವನ್ನೂ ಅವರ ಕಷ್ಟಸ್ಥಿತಿಯನ್ನೂ ನೋಡಿ ಕನಿಕರಪಟ್ಟು ಆಸ್ಟ್ರೇಲಿಯಾದವರು [ಇದು ಇಂಗ್ಲೀಷರ ಒಂದು ಸ್ವಾಸ್ಥ್ಯ] 15,00,000 ರೂಪಾಯಿ ಕೂಡಿಸಿ ಬಹು ಸಂತೋಷದಿಂದ ಅವರಿಗೆ ಕಳುಹಿಸಿಕೊಟ್ಟಿದ್ದಾರೆ.

ರಷ್ಯಾ, ಆಸ್ಟ್ರಿಯಾ, ಜರ್ಮನಿ.

ಪೂರ್ವದಿಗ್ಭಾಗದಲ್ಲಿ ಯುದ್ಧಕ್ರಮೇಯವು ಈಗ ವಿಶೇಷ ರೂಪಾಂತರವಾಗಿರುವುದು. ಮೊದಲು ರಷ್ಯಾದವರು ನುಗ್ಗಿಬಂದು ಪ್ರಷ್ಯಾದೊಳಗೆ ಕೆಲವು ಭಾಗವನ್ನು ಆಕ್ರಮಿಸಿಕೊಂಡರು. ಆಗ ಜರ್ಮನಿಯವರು ಅಪಾರವಾದ ಸೈನ್ಯವನ್ನು ಕಳುಹಿಸಿ ರಷ್ಯಾದವರನ್ನು ಅಲ್ಲಿಂದ ಓಡಿಸಿ ವಾಪಸು ರಷ್ಯಾದೊಳಕ್ಕೆ ಹೋಗುವಂತೆ ಮಾಡಿದರು. ಆದರೆ ಈ ಪ್ರಕರಣದಲ್ಲಿ ರಷ್ಯಾದವರು ಎದುರುಬಿದ್ದು ನಿಂತು ಯುದ್ಧಮಾಡಿ ಜರ್ಮನಿಯವರನ್ನು ಹಿಂದಕ್ಕೆ ಅಟ್ಟಿಬಿಟ್ಟರು. ಘೋರವಾದ ಯುದ್ಧಕಾರ್ಯಗಳು ನಡೆಯುವುದಕ್ಕೆ ಅದು ಮೊದಲಾಯಿತು. ಅತ್ತಲಾಗಿ ರಷ್ಯಾದವರು ಆಸ್ಟ್ರಿಯಾದೊಳಕ್ಕೆ ನುಗ್ಗಿಹೋಗಿ ಆಸ್ಟ್ರಿಯಾದವರನ್ನು ಹಿಂದುಹಿಂದಕ್ಕೆ ಅಟ್ಟಿಬಿಟ್ಟರುವರು. ಈ ಸಮಯದಲ್ಲಿ ಜರ್ಮನಿಯವರೂ ಆಸ್ಟ್ರಿಯದವರೂ ಏಕವಾಗಿ ಕಲೆತು ತಮ್ಮ 18,00,000 ಸೈನ್ಯಗಳನ್ನು ಕೂಡಿಸಿ ನುಗ್ಗಿಸಿದರು. ಈಗ ಈ ಸೈನ್ಯವೆಲ್ಲಾ ಪೋಲೆಂಡಿನಿಂದ ತಾರ್ನೊವರೆಗೂ [ವಾರ್ಸಾಕ್ಕೆ ಪಶ್ಚಿಮದಲ್ಲಿ. ನಮ್ಮ ಯುದ್ಧಭೂಮಿಯ ನಕ್ಷೆಯನ್ನು ನೋಡಿ] ಸಾಲುಕಟ್ಟಿ ನಿಂತಿರುತ್ತದೆ. ಈ ಸೈನ್ಯದಲ್ಲಿ ವಿಶೇಷವಾದ ಭಾಗವೆಲ್ಲಾ ರಷ್ಯಾರಾಜ್ಯದೊಳಗೇ ಇರುವುದು. ಬಹುಶಃ ರಷ್ಯಾದವರು ಬೇಗಬೇಗನೆ ತಮ್ಮ ಸೈನ್ಯಗಳನ್ನು ಕೂಡಿಸಿಕೊಂಡು ಬರಲಾರದೆ ಹೋಗಿರಬೇಕು. ಅವರಲ್ಲಿ ಸುಮಾರು 20,00,000 ಸೈನ್ಯವಿದೆ. ವಾರ್ಸಾ ಅಕ್ಕಪಕ್ಕಗಳಲ್ಲಿ ಕೆಲವು ಕಠಿಣವಾದ ಕದನಗಳು ನಡೆದಿರುವವು. ವಾರ್ಸಾ ಪಟ್ಟಣವು ಕೋಟೆಕೊತ್ತಲಗಳಿರುವ ಬಲವಾದ ದೊಡ್ಡ ಸ್ಥಳ. ಅಲ್ಲಿಂದ ಜರ್ಮನಿಯವರನ್ನು ಹಿಂದಕ್ಕೆ ಓಡಿಸಿರುತ್ತಾರೆ. 160 ಮೈಲಿಯ ಉದ್ದಕ್ಕೂ ಹರಡಿರುವ ಈ ಶತ್ರುಗಳ ಸೈನಿಕರಿಗೆ ಇಷ್ಟರಲ್ಲೇ ಬಹು ಅಗಾಧವಾದ ಘೋರಯುದ್ಧವು ನಡೆಯಬೇಕೆಂದು ಕಾಣುವುದು.

ರಷ್ಯಾದವರು ವಾರ್ಸಾ ಪಟ್ಟಣದ ಹತ್ತಿರ ಜರ್ಮನಿಯವರ ಜಪ್ಲಿನ್ ವಿಮಾನಯಂತ್ರವನ್ನು ಕಿತ್ತು ವಶಮಾಡಿಕೊಂಡರು. ಈ ವಿಮಾನಗಳಲ್ಲಿ 30-40 ಜನರು ಕುಳಿತುಕೊಂಡು ಹೋಗುವುದೂ, ಅವುಗಳಿಂದ ಸಿಡಿಮದ್ದಿನ ಗುಂಡುಗಳನ್ನು ಹಾಕಿ ನಾಶಪಡಿಸುವುದೂ ವಿಶೇಷ.

ರಷ್ಯಾ ರಾಜಕುಮಾರರುಗಳಲ್ಲಿ ಕಾನ್‌ಸ್ಟೆಂಟೈನ್ ರವರ ಕುಮಾರನು ಯುದ್ಧಕ್ಕೆ ಹೋಗಿ ಕಾದಾಡಿ ಗಾಯಪಟ್ಟು ಬಂದು ಈಚೆಗೆ ಕಾಲವಾಗಿರುತ್ತಾನೆ.

ಸರ್ವಿಯಾ ಮತ್ತು ಮಾಂಟೆನೀಗ್ರೊ.

ಈಚೆಗೆ ಬಂದಿರುವ ವರ್ತಮಾನಗಳಿಂದ ಬೊಸ್ನಿಯಾದಲ್ಲಿ ಯಥಾರ್ಥವಾಗಿ ನಡೆದಿರುವ ವಿದ್ಯಮಾನಗಳೇನೋ ಸ್ಪಷ್ಟವಾಗಿ ತಿಳಿಯುವುದಿಲ್ಲ. ಒಂದು ವರ್ತಮಾನವು ಆಸ್ಟ್ರಿಯಾದವರು ಸೆರಜೆವೊ ಪಟ್ಟಣದ ಉತ್ತರ ಭಾಗದಲ್ಲಿ ಸೋತುಹೋದರೆಂದೂ, ಇನ್ನೊಂದು ವರ್ತಮಾನವು ಅವರು ಸೆರಜೆವೊ ಬಳಿಯಲ್ಲಿ ಸೋಲಿಸಲ್ಪಟ್ಟರೆಂದೂ ಹೇಳುವವು. ಇವೆರಡು ಸಂಸ್ಥಾನಗಳೂ ಪರಸ್ಪರ ಕಠಿಣವಾಗಿ ಕಾದಾಡುತ್ತಿವೆ ಎಂದೂ, ಜಯಾಪಜಯಗಳು ನಿದಾನವಾಗಿವೆಯೆಂದೂ ಹೇಳಬೇಕಾಗಿದೆ.

ಫ್ರೆಂಚ್ ಮತ್ತು ಬ್ರಿಟಿಷ್ ಹಡಗುಗಳು ಮಾಂಟೆನೀಗ್ರೊದವರ ಕೂಡ ಮತ್ತೆ ಕಾಟ್ಟಾರೊ ಎಂಬ ಪಟ್ಟಣಕ್ಕೆ ಗುಂಡುಗಳನ್ನು ಸುರಿಸುತ್ತಿದ್ದಾರೆ. ಈ ಪಟ್ಟಣವು ಏಡ್ರಿಯಾಟಿಕ್ ಕಡಲ ಬಳಿ ಇರುತ್ತದೆ. ಮೊದಲೇ ಒಂದಾವರ್ತಿ ಈ ನಗರಕ್ಕೆ ಗುಂಡುಗಳು ಹೊಡೆಯಲ್ಪಟ್ಟವು. ಇದುವರೆಗೆ ಆ ನಗರವನ್ನು ಯಾಕೆ ಆಕ್ರಮಿಸಿಕೊಳ್ಳದೆ ಹೋದರೋ ತಿಳಿಯಲಿಲ್ಲ.

ಚೀನಾದಲ್ಲಿ.

ಚೀನಾದಲ್ಲಿ ಜರ್ಮನಿಯವರಿಗೆ ಸೇರಿದ ಕೋಟೆಗಳಿಗೆ ಜಪಾನ್‌ನವರು ಮುತ್ತಿಗೆ ಹಾಕುವುದನ್ನು ಬಿಟ್ಟಿಲ್ಲ. ಇದುವರೆಗೆ ಜಪಾನ್‌ನವರ ಯುದ್ಧದ ಹಡಗುಗಳು ಎರಡು ಕೋಟೆಗಳಲ್ಲಿ ಕೆಲವು ಭಾಗಗಳನ್ನು ಒಡೆದು ಕೆಡಹಿರುತ್ತವೆ. ಜರ್ಮನಿಯವರ ಸ್ವಾಸ್ಥ್ಯದೊಳಗಿದ್ದ ಯುದ್ಧಭಟರಲ್ಲದ ಸಾಮಾನ್ಯ ಪ್ರಜೆಗಳನ್ನೆಲ್ಲಾ ಯಾವ ಅಪಾಯವೂ ಸಂಭವಿಸದಂತೆ ಹೊರಕ್ಕೆ ಕಳುಹಿಸಿಬಿಟ್ಟರು. ಇದರಿಂದ ಕೋಟೆಯೊಳಗಿರುವ ಜರ್ಮನಿಯವರಿಗೆ ಆಹಾರ ಸಾಮಗ್ರಿಗಳು ಹೆಚ್ಚಾಗಿ ದೊರಕಿದಂತಾಯಿತು. ಆದರೂ ಕಡೆಗೆ ಅವರು ಜಪಾನ್‌ನವರಿಗೆ ಕೋಟೆಯನ್ನೊಪ್ಪಿಸಿ ಶರಣಾಗತರಾಗಲೇ ಬೇಕಾಗುವುದು.

ಜಪಾನ್‌ನವರ ಒಂದು ಯುದ್ಧದ ಜಹಜು ಸಮುದ್ರದೊಳಗಿದ್ದ ಮೈನ್ ಎಂಬ ಸಿಡಿಮದ್ದಿನ ಗುಂಡಿಗೆ ಬಡಿದು ನಾಶವಾಯಿತು. ಅದರಲ್ಲಿದ್ದ ಒಬ್ಬ ಹುದ್ದೇದಾರನೂ ಒಂಭತ್ತು ಮಂದಿ ಸಿಪಾಯಿಗಳೂ ಬದುಕಿ ಬಂದರು. ಉಳಿದ 264 ಮಂದಿ ಸಮುದ್ರದ ಪಾಲಾದರು.

ಸಮುದ್ರದ ಮೇಲೆ.

ಪ್ರಪಂಚದ ನಾನಾ ಭಾಗಗಳಲ್ಲಿ ಸಮುದ್ರಯುದ್ಧಗಳು ನಡೆದಿರುತ್ತವೆ.

ಕಳೆದ ವಾರ ರಷ್ಯಾದವರ ಒಂದು ಪಲ್ಲಾಡ ಎಂಬ ಯುದ್ಧದ ಹಡಗನ್ನು ಜರ್ಮನಿಯವರ ಸಬ್‌ಮೆರೀನ್ ಹಡಗು ಮುಳುಗಿಸಿತೆಂದು ತಿಳಿಸಿದ್ದೆವು. ಅದೇ ಸಮಯದಲ್ಲಿ ರಷ್ಯಾದವರು ಜರ್ಮನಿಯವರ ಎರಡು ಸಬ್‌ಮೆರೀನ್ ಹಡಗುಗಳನ್ನು ನಾಶಮಾಡಿರುತ್ತಾರೆ.

ಇತ್ತಲಾಗಿ ಹಿಂದುಸ್ಥಾನದಲ್ಲಿ ಮದರಾಸಿನ ಮೇಲೆ ಗುಂಡು ಹೊಡೆದ ಯಮ್‌ಡೆನ್ ಎಂಬ ಜರ್ಮನೀ ಯುದ್ಧದ ಜಹಜಿನ ಕೂಡ ಇದ್ದ ಮಾರ್ಕೊಮೇನಿಯಾ ಎಂಬ ಜರ್ಮನಿ ಹಡಗನ್ನು ಬ್ರಿಟಿಷ್ ಯುದ್ಧದ ಹಡಗಾದ ಯಾರ್‌ಮತ್ ಎಂಬುವುದು ಮುಳುಗಿಸಿದ್ದಲ್ಲದೆ ಗ್ರೀಕರ ಹಡಗನ್ನು ಸ್ವಾಧೀನಪಡಿಸಿಕೊಂಡಿರುತ್ತದೆಂದು ತಿಳಿಸಲು ಬಹಳ ಸಂತೋಷವಾಗುವುದು. ಬಹುಶಃ ಯಮ್‌ಡೆನ್ ಎಂಬ ಶತ್ರು ಜಹಜು ತಪ್ಪಿಸಿಕೊಂಡು ಹೋಗಿರಬೇಕು. ಈಗ ಅದಕ್ಕೆ ಬೆಂಬಲವಾಗಿದ್ದ ಹಡಗುಗಳು ಸಿಕ್ಕಿಹೋಗಿರುವ ಕಾರಣ ಅದು ಕೂಡ ಇಷ್ಟರಲ್ಲೇ ಯಾವುದಾದರೊಂದು ತೀರಪಟ್ಟಣದಲ್ಲಿ ಹೋಗಿ ನಿಂತುಬಿಡುತ್ತೆಂದು ಹೇಳಿ ನಿರೀಕ್ಷಿಸಬಹುದು.

ಇನ್ನೂ ಸಿಕ್ಕದೆ ಇರುವ ಜರ್ಮನಿಯವರ ಯುದ್ಧದ ಹಡಗುಗಳಿಗೆ ನಾಲ್ಕು ಜಹಜುಗಳು ಕಲ್ಲಿದ್ದಲನ್ನೂ ಆಹಾರಪದಾರ್ಥಗಳನ್ನೂ ಸಾಗಿಸಿಕೊಂಡು ಹೋಗುತ್ತಿದ್ದವು. ಈ ನಾಲ್ಕು ಜಹಜುಗಳೂ ಬ್ರಿಟಿಷ್ ಯುದ್ಧದ ಹಡಗಿಗೆ ಅಟ್ಲಾಂಟಿಕ್ ಮಹಾಸಾಗರದಲ್ಲಿ ಸಿಕ್ಕಿಬಿದ್ದವು. ಅಂಥಾ ಹಡಗುಗಳು ಇನ್ನೂ ನಾಲ್ಕೈದು ಅಲ್ಲಲ್ಲಿ ಸಮುದ್ರದ ಮೇಲೆ ಅಲೆಯುತ್ತಿವೆ ಎಂದು ಕಾಣುವುದು.

ಜರ್ಮನಿಯ ಒಂದು ಸಬ್‌ಮೆರೀನ್ ಹಡಗು ಉತ್ತರ ಕಡಲಿನಲ್ಲಿ ಬ್ರಿಟಿಷರ ಹಾಕ್ ಎಂಬ ಯುದ್ಧದ ಜಹಜಿನ ಮೇಲೆ ನುಗ್ಗಿಬಂದು ಅದನ್ನು ಮುಳುಗಿಸಿಬಿಟ್ಟಿತು. ಹಾಕ್ ಎಂಬ ಬ್ರಿಟಿಷ್ ಜಹಜಿನಲ್ಲಿ ಸುಮಾರು 400 ಮಂದಿ ಇದ್ದರು. ಈ ಪೈಕಿ ಸುಮಾರು 80 ಜನರು ಬದುಕಿ ಬಂದರು. ಆ ಶತ್ರುಗಳ ಹಡಗು ಇನ್ನೊಂದು ಬ್ರಿಟಿಷ್ ಯುದ್ಧದ ಜಹಜಿನ ಮೇಲೆ ನುಗ್ಗಿ ಬಂದಿತು; ಆದರೆ ಇದು ಸಿಕ್ಕದೆ ತಪ್ಪಿಸಿಕೊಂಡು ಹೋಗಿದೆ.

ಹಾಲೆಂಡಿನ ಸಮುದ್ರ ತೀರದಲ್ಲಿ ಸಮುದ್ರದ ಮೇಲೆ ಒಂದು ಸಣ್ಣ ಕದನವಾಯಿತು. ಒಂದು ಬ್ರಿಟಿಷ್ ಯುದ್ಧದ ಜಹಜು ಡಿಸ್ಟ್ರಾಯರುಗಳೆಂಬ ದೋಣಿಗಳೊಡನೆ ನುಗ್ಗಿಹೋಗಿ ಜರ್ಮನಿಯವರ ನಾಲ್ಕು ಡಿಸ್ಟ್ರಾಯರುಗಳನ್ನು ಮುಳುಗಿಸಿ ಬಂದಿದೆ. ಬ್ರಿಟಿಷರ ಕಡೆ ಒಬ್ಬ ಹುದ್ದೇದಾರನಿಗೂ, ನಾಲ್ವರು ನಾವಿಕ ಸೈನ್ಯದವರಿಗೂ ಗಾಯವಾಗಿದೆ. ಜರ್ಮನಿಯವರಲ್ಲಿ 31 ಜನರನ್ನು ಬದುಕಿಸಿ ಕೈಸೆರೆ ಹಿಡಿದುಕೊಂಡರು; ಉಳಿದವರೆಲ್ಲಾ ಸಮುದ್ರದ ಪಾಲಾದರು.

ಜರ್ಮನಿಯ ಒಂದು ಯುದ್ಧದ ಜಹಜು ಎಂಜಿನ್‌ಗಳನ್ನು ದುರಸ್ತು ಮಾಡಿಕೊಳ್ಳುವುದಕ್ಕಾಗಿ ಪೆಸಿಫಿಕ್ ಸಾಗರದಲ್ಲಿ ಅಮೇರಿಕಕ್ಕೆ ಸೇರಿದ ಒಂದು ತೀರಪಟ್ಟಣಕ್ಕೆ ಹೋಗಬೇಕಾಯಿತು. ಬಹುಶಃ ಅದನ್ನು ಅಲ್ಲಿಂದ ಮತ್ತೆ ಹೊರಕ್ಕೆ ಬಿಡುವುದಿಲ್ಲ.

ರಷ್ಯಾದವರು ಜರ್ಮನಿಯ ಎರಡು ಜಹಜುಗಳನ್ನು ಕಪ್ಪುಕಡಲಿನಲ್ಲಿ ಸ್ವಾಧೀನಪಡಿಸಿಕೊಂಡಿದ್ದಾರೆ.

ಏಡ್ರಿಯಾಟಿಕ್ ಕಡಲಿನಲ್ಲಿ ಫ್ರೆಂಚರ ಒಂದು ಯುದ್ಧದ ಜಹಜು ಆಸ್ಟ್ರಿಯಾದವರ ಒಂದು ಸಬ್‌ಮೆರೀನ್ ಹಡಗನ್ನು ಮುಳುಗಿಸಿರುತ್ತದೆ.

ಸಮುದ್ರದ ಮೇಲೆ ಈ ವಾರದಲ್ಲಿ ಬ್ರಿಟಿಷ್, ಫ್ರೆಂಚ್ ಮತ್ತು ರಷ್ಯಾದವರಿಗೆ ತಕ್ಕಮಟ್ಟಿಗೆ ಅನುಕೂಲವಾಗಿರುತ್ತದೆ.

ಟರ್ಕಿಯಲ್ಲಿ.

ಟರ್ಕಿಯವರ ಮನೋಗತವು ಇನ್ನೂ ಪರಿಷ್ಕಾರವಾಗಿ ಗೊತ್ತಾಗಲಿಲ್ಲ. ಜರ್ಮನಿಯವರ ಎರಡು ಯುದ್ಧದ ಜಹಜುಗಳಲ್ಲೂ ಜರ್ಮನಿ ಅಧಿಪತಿಗಳೇ ಇದ್ದುಕೊಂಡು ಅವೆರಡೂ ಕಪ್ಪುಕಡಲಿನಲ್ಲಿ ಓಡಾಡುತ್ತಿವೆ ಎಂದು ಹೇಳುತ್ತಾರೆ.

ಇಟಲಿಯಲ್ಲಿ.

ಕಳೆದ ವಾರ ಬಂದಿರುವ ತಂತೀ ವರ್ತಮಾನಗಳಿಂದ ಇಟಲಿಯವರು ಇದುವರೆಗೆ ಯಾವ ಪಕ್ಷದವರ ಕಡೆಯೂ ಸೇರದೆ ಇದ್ದುಕೊಂಡು ಬಂದಿರುವಂತೆ ಇನ್ನು ಮುಂದೆ ಇರುವ ಹಾಗೆ ಕಾಣುವುದಿಲ್ಲವೆಂದು ಹೇಳಬೇಕಾಗುತ್ತದೆ. ಇಟಲಿಯವರು ಬೇಗನೆ ಬ್ರಿಟಿಷ್ ಮತ್ತು ಫ್ರೆಂಚರ ಪಕ್ಷವನ್ನು ವಹಿಸುವಂತೆ ಆದೀತೋ ಇಲ್ಲವೋ ನೋಡಬೇಕು.

ದಕ್ಷಿಣ ಆಫ್ರಿಕಾದಲ್ಲಿ.

ದಕ್ಷಿಣ ಆಫ್ರಿಕಾದಲ್ಲಿ ಜರ್ಮನಿಯವರು ಅನೇಕರು ಇದ್ದಾರೆ. ಅಲ್ಲಿರುವ ಬ್ರಿಟಿಷ್ ಪ್ರಜೆಗಳಾದ ಬೋಅರರ ಪೈಕಿ ಕೆಲವರಿಗೆ ಜರ್ಮನಿಯವರ ಮೇಲೆ ವಿಶೇಷವಾದ ಪ್ರೀತಿಯೂ ಅಭಿಮಾನವೂ ಉಂಟು. ಬೋಅರ್ ಸೈನ್ಯದ ಹುದ್ದೇದಾರನಾಗಿದ್ದ ಕರ್ನಲ್ ಮರಿಟ್ಸ್ ಎಂಬಾತನು ಬ್ರಿಟಿಷರಿಗೆ ದ್ರೋಹವನ್ನೆಣಿಸಿ, ತನ್ನ ಕೈಕೆಳಗಿದ್ದ 500 ಸಿಪಾಯಿಗಳ ಸಮೇತ ಶತ್ರುಗಳಾದ ಜರ್ಮನಿಯವರ ಕಡೆಗೆ ಹೋಗಿ ಸೇರಿಕೊಂಡನು. ಜನರಲ್ ಬೋಥಾರವರು ಆ ಪ್ರದೇಶದಲ್ಲೆಲ್ಲಾ ಯುದ್ಧಕಾಲದ ಕಠಿಣತರವಾದ ಕಾನೂನನ್ನು ಜಾರಿಯಲ್ಲಿಟ್ಟು, ಆ ದ್ರೋಹಿಯ ಮೇಲೆ ಯುದ್ಧ ಮಾಡುವುದಕ್ಕೆ ಸೈನ್ಯವನ್ನು ಕಳುಹಿಸಿಕೊಟ್ಟಿದ್ದಾರೆ. ದಕ್ಷಿಣ ಆಫ್ರಿಕದಲ್ಲಿರುವ ಡಚ್ ಪ್ರಜೆಗಳಿಗೆಲ್ಲಾ ಈ ದ್ರೋಹವು ವಿಶೇಷ ರೋಷವನ್ನುಂಟುಮಾಡಿದೆ. ಅವರು ಅವನ ಅಹಂಕಾರವನ್ನು ಮುರಿಯುತ್ತೇವೆಂದು ತಾವಾಗಿಯೇ ಮುಂದೆ ಬಂದು ಹೇಳುತ್ತಿದ್ದಾರೆ. ಈ ಕೃತ್ಯ ನಡೆದಿರುವ ದೆಸೆಯಿಂದ ಬ್ರಿಟಿಷರು ಜರ್ಮನಿಗೆ ಸೇರಿದ ದಕ್ಷಿಣ ಆಫ್ರಿಕಾದೊಳಕ್ಕೆ ನುಗ್ಗಿ ಹೋಗಿ ಯುದ್ಧಕಾರ್ಯಗಳನ್ನು ಮುಂದರಿಸಲು ಸ್ವಲ್ಪ ತಡವಾದೀತಲ್ಲದೆ ಇನ್ನೇನೂ ಆಗಲಾರದು.

ಇಂಗ್ಲೆಂಡಿನಲ್ಲಿ.

ಸೀಮೆಯಿಂದ ಬಂದಿರುವ ವರ್ತಮಾನ ಪತ್ರಿಕೆಗಳು ಈಗ ಫ್ರಾನ್ಸಿನಲ್ಲಿ ಬ್ರಿಟಿಷ್ ಸೈನ್ಯಕ್ಕೆ ಮುಖ್ಯ ಅಧಿಪತಿಯಾಗಿರುವ ಸರ್ ಜಾನ್ ಫ್ರೆಂಚರವರು ಸೆಪ್ಟೆಂಬರ್ ತಾ. 12 ರಿಂದ ಅಕ್ಟೋಬರ್ ತಾ. 8 ರ ವರೆಗೆ ಜರ್ಮನಿಯವರನ್ನು ಹಿಮ್ಮೆಟ್ಟಿಸುವುದರಲ್ಲಿ ನಡಿಸಿದ ಯುದ್ಧಕಾರ್ಯಗಳನ್ನು ಪ್ರಕಟಮಾಡಿರುತ್ತವೆ. ಈ ಯುದ್ಧದ ವಿವರವನ್ನು ಸರ್ ಜಾನ್ ಫ್ರೆಂಚ್‌ರವರೇ ವಿವರಿಸಿ ಬರೆದಿದ್ದಾರೆ. ಆ ಕಾಲದಲ್ಲಿ ಬ್ರಿಟಿಷರ ಕಡೆ ಕೊಲೆಯಾದವರು, ಗಾಯಪಟ್ಟವರು, ಸಿಕ್ಕದೆ ಇರುವವರು ಎಲ್ಲಾ ಸೇರಿ 561 ಮಂದಿ ಹುದ್ದೇದಾರರೆಂದೂ, 12,980 ಮಂದಿ ಸಿಪಾಯಿಗಳೆಂದೂ ಹೇಳುವರು. ಜರ್ಮನಿಯವರ ಕಡೆ ಇದಕ್ಕಿಂತಲೂ ಎಷ್ಟೋ ಹೆಚ್ಚು ಸೈನ್ಯಗಳು ನಷ್ಟಪಟ್ಟವು.

ಅನೇಕ ಇಂಗ್ಲಿಷ್ ಪ್ರಜೆಗಳು ಸೈನ್ಯಕ್ಕೆ ಸೇರಲು ಕುತೂಹಲಪಟ್ಟು ಬರುತ್ತಿದ್ದಾರೆ. ಇದುವರೆಗೆ ಅರ್ಜಿಹಾಕಿಕೊಂಡಿರುವವರು 10,00,000 ಆಗಬಹುದು; ಆದರೆ ಯುದ್ಧದ ಇಲಾಖೆಯವರು ಅವರೆಲ್ಲರ ದೇಹಸ್ಥಿತಿಯನ್ನೂ ಪರೀಕ್ಷೆಮಾಡಿ ತೃಪ್ತಿಕರವಾಗಿಲ್ಲದವರನ್ನು ನಿರಾಕರಿಸಿರುವರು.

ಕ್ಯಾನಡಾ ಸ್ವಾಸ್ಥ್ಯದ ಸೈನ್ಯಗಳು ಕಳೆದ ವಾರ ಇಂಗ್ಲೆಂಡಿನಲ್ಲಿ ಬಂದಿಳಿದವು. ಅಲ್ಲಿನವರು ಇವರನ್ನು ಅತ್ಯಂತ ಉತ್ಸಾಹದಿಂದಲೂ, ಜಯಧ್ವನಿಯಿಂದಲೂ ಎದುರುಗೊಂಡು ಸತ್ಕರಿಸಿದರು.

ನಮ್ಮ ಚಕ್ರವರ್ತಿ ಸಾರ್ವಭೌಮರವರ ಸಹೋದರಿಯಾದ ಪ್ರಿನ್ಸೆಸ್ ಮೇರಿ ಎಂಬ ರಾಜಕುಮಾರಿಯು ಕ್ರಿಸ್‌ಮಸ್ ಹಬ್ಬ ಕಾಲದಲ್ಲಿ ಯುದ್ಧಭೂಮಿಯಲ್ಲಿರುವ ಪ್ರತಿ ಒಬ್ಬ ಬ್ರಿಟಿಷ್ ಸೈನಿಕನಿಗೂ ಬಹುಮಾನವನ್ನು ಕಳುಹಿಸಿಕೊಡಬೇಕೆಂದು ಅಪೇಕ್ಷಪಟ್ಟು ದ್ರವ್ಯಾದಿಗಳನ್ನು ಕೂಡಿಸುತ್ತಿರುವರು. ಪ್ರಜೆಗಳೆಲ್ಲಾ ಈ ಫಂಡಿಗೆ ಸಹಾಯಮಾಡುವುದರಲ್ಲಿ ವಿಶೇಷ ಸಂತೋಷಪಡುತ್ತಿದ್ದಾರೆ. ಅವರ ಉದ್ದೇಶವು ನೆರವೇರುವುದಕ್ಕೆ ಸಂಶಯವಿಲ್ಲ.

ಹಿಂದುಸ್ಥಾನದಲ್ಲಿ.

ಹಿಂದುಸ್ಥಾನದ ಸೈನ್ಯಗಳು ಫ್ರಾನ್ಸಿನಲ್ಲಿ ಜಹಜು ಇಳಿದ ಮೇಲೆ ಅವರ ವಿಷಯದಲ್ಲಿ ವರ್ತಮಾನವೇನೂ ಬಂದಿರುವುದಿಲ್ಲ. ಈ ಸೈನಿಕರು ಯುದ್ಧಭಟರೊಡನೆ ಸೇರಿ ಕದನ ಮಾಡುತ್ತಿರುವರೋ ಇನ್ನೂ ಇಲ್ಲವೋ ತಿಳಿಯದು. ಆದರೆ ಇದುವರೆಗೆ ಈ ಸೈನಿಕರಲ್ಲಿ ನಷ್ಟಪಟ್ಟರೆಂಬ ತಂತೀ ವರ್ತಮಾನವೇನೂ ಇನ್ನೂ ಬಂದಿರುವುದಿಲ್ಲ.

ಪ್ರಜೆಗಳಲ್ಲಿ ನಾನಾ ಬಗೆಯ ಸುಳ್ಳು ಸುದ್ದಿಗಳೂ, ಮುಟ್ಠಾಳ ಮಾತುಗಳೂ ಹುಟ್ಟಿ ಹರಡಿಕೊಳ್ಳುತ್ತಿರುವವು. ಆದರೆ ಈ ಸುದ್ದಿಗಳಲ್ಲಿ ಸ್ವಲ್ಪವೂ ನಿಜವಿಲ್ಲವೆಂದು ತಿಳಿಯಬೇಕು. ಹಿಂದುಸ್ಥಾನವು ಸುರಕ್ಷಿತವಾಗಿದೆ; ಇದಕ್ಕೆ ಯಾವುದೊಂದು ಅಪಾಯವೂ ಸಂಭವಿಸುವುದಿಲ್ಲ. ಶತ್ರುಪಕ್ಷದವರ್‍ಯಾರೇ ಆಗಲಿ ನಮ್ಮ ದೇಶದೊಳಕ್ಕೆ ಕಾಲಿ ಹಾಕುವುದು ಅಸಾಧ್ಯ. ಪ್ರಜೆಗಳು ನೆಮ್ಮದಿಯಾಗಿ ತಮ್ಮ ತಮ್ಮ ನಿಶ್ಚಯಗಳ ಕೆಲಸಕಾರ್ಯಗಳನ್ನು ಎಂದಿನಂತೆ ಆಸಕ್ತಿಯಿಂದಲೂ ಉತ್ಸಾಹವಾಗಿಯೂ ನಡಿಸಿಕೊಂಡು ಬರಬೇಕೆಂತಲೂ, ಎಲ್ಲರೂ ನಮ್ಮ ಸೈನ್ಯಕ್ಕೆ ಜಯವನ್ನು ಕೊಡಬೇಕೆಂದು ದೇವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತಾ ಬರಬೇಕೆಂತಲೂ ಸೂಚಿಸುತ್ತೇವೆ.

ಸಿಲೋನ್ (ಲಂಕಾ) ದ್ವೀಪದೊಳಗೆ ಒಂದು ದೇಶೀಯ ವರ್ತಮಾನ ಪತ್ರಿಕೆಯಲ್ಲಿ ಸುಳ್ಳುಸುದ್ದಿಯನ್ನು ಯಾವ ಆಧಾರವೂ ಇಲ್ಲದೆ ಪ್ರಕಟಿಸಿದ್ದಕ್ಕಾಗಿ ಅದರ ಎಡಿಟರಿಗೆ ಒಂದು ತಿಂಗಳ ಸಜಾ ವಿಧಿಸಿದರು. ಅಂಥಾ ಸುದ್ದಿಗಳು ತಿಳಿಯದವರಲ್ಲಿ ಗಾಬರಿಯನ್ನುಂಟುಮಾಡುವವಲ್ಲದೆ ಅವುಗಳಿಂದ ಯಾವುದೊಂದು ಪ್ರಯೋಜನವೂ ಆಗುವುದಿಲ್ಲ.

ಲಾಹೋರ್ ಪಟ್ಟಣದಲ್ಲಿ ಜಮೀನ್‌ದಾರ್ ಎಂಬ ವರ್ತಮಾನಪತ್ರಿಕೆಯ ಎಡಿಟರಾದ ಜಾಫರ್ ಅಲಿ ಖಾನ್ ಎಂಬಾತನು ಈಗಿನ ಯುದ್ಧದ ವಿಚಾರವಾಗಿ ನಿಜವಲ್ಲದ ನಾನಾ ಸಂಗತಿಗಳನ್ನು ಆ ಪತ್ರಿಕೆಯಲ್ಲಿ ಬರೆಯುತ್ತಾ ಬಂದಿರುವುದನ್ನು ನೋಡಿ, ಆತನು ಇನ್ನು ಮುಂದೆ ಲಾಹೋರ್ ಪಟ್ಟಣವನ್ನು ಬಿಟ್ಟು ತನ್ನ ಗ್ರಾಮಕ್ಕೆ ಹೋಗಿ ಇರಬೇಕೆಂದೂ, ಇನ್ನು ಮೇಲೆ ಆತನು ಆ ಪತ್ರಿಕೆಗೆ ತನ್ನ ಸಂಬಂಧವನ್ನೆಲ್ಲಾ ತ್ಯಜಿಸಬಿಡಬೇಕೆಂದೂ, ಸ್ಥಳಾಧಿಕಾರಿಗಳು ಆ ಗ್ರಾಮದಲ್ಲಿ ಆತನ ಕೆಲಸಕಾರ್ಯಗಳನ್ನು ನಿಗಾ ಇಟ್ಟು ಕೆಲವು ಕಾಲದ ತನಕ ಮೇಲುಸ್ತುವಾರಿ ನೋಡಿಕೊಳ್ಳುತ್ತಿರಬೇಕೆಂದೂ ಪಂಜಾಬ್ ಗವರ್ನ್‌ಮೆಂಟಿನವರು ಹುಕುಂ ಕೊಟ್ಟಿರುವರು. ಈ ಹುಕುಮಿನಂತೆ ಸರ್ಕಾರದವರು ಆತನನ್ನು ಲಾಹೋರಿನಿಂದ ಆತನ ಗ್ರಾಮಕ್ಕೆ ಕರೆದುಕೊಂಡುಹೋಗಿ ಬಿಟ್ಟಿರುತ್ತಾರೆ.

ಮೈಸೂರು ಪ್ರಜಾಪ್ರತಿನಿಧಿ ಸಭೆಯು.

ಸಂಸ್ಥಾನಾಮಳಿ ವ್ಯವಹರಿಸುವ ವಿಚಾರಗಳು.

ಪ್ರತಿನಿಧಿಗಳ ಪ್ರಾರ್ಥನೆಗಳೂ ದಿವಾನ್‌ರವರ ಪ್ರತ್ಯುತ್ತರವೂ.

ರೆವಿನ್ಯೂ ವಿಚಾರಗಳು.

ಪ್ರಾರ್ಥನೆ.—ಜಮೀನುಗಳನ್ನು ರೈತರಿಗೆ ಸಾಗುವಳಿಗೆ ಕೊಟ್ಟು ಜಮೀನ್‌ದಾರರು ದೂರಸ್ಥಳಗಳಲ್ಲಿ ವಾಸಮಾಡುವುದೂ, ಅಂಥಾ ರೈತರು ಜಮೀನ್‌ದಾರರ ಪರವಾಗಿ ಕಂದಾಯ ಕಟ್ಟುವುದೂ ವಾಡಿಕೆಯಾಗಿದೆ. ಕೆಲವು ಸಂದರ್ಭಗಳಲ್ಲಿ ರೈತರು ಕಂದಾಯ ಕೊಡದೆ ಮೋಸಮಾಡೋಣದರಿಂದ ಜಮೀನನ್ನು ಸರ್ಕಾರದವರು ಹರಾಜಿಗೆ ತರುತ್ತಾರೆ. ಜಮೀನ್‌ದಾರರು ಯಾವ ತಾಲ್ಲೂಕಿನಲ್ಲಾಗಲಿ ಖಜಾನೆಗೆ ಕಂದಾಯ ಕಟ್ಟುವಂತೆ ರಿಯಾಯಿತಿ ತೋರಿಸಿದರೆ ಈ ಅನನುಕೂಲ ನಿವಾರಣೆಯಾಗುತ್ತದೆ.

ಉತ್ತರ.—ಇದು ಸಾಧ್ಯವಲ್ಲ; ಸರ್ಕಾರದ ಲೆಕ್ಕಗಳು ಗಲಿಬಿಲಿಯಾಗುತ್ತೆ. ಇಷ್ಟವುಳ್ಳವರು ತಮ್ಮ ಕಂದಾಯವನ್ನು ಮನಿಆರ್ಡರ್ ಮಾಡಬಹುದು.

ಪ್ರಾ.—ರೆವಿನ್ಯೂ ಬಾಬಿನಲ್ಲಿ ಕಾಗದಪತ್ರಗಳು ಇತ್ಯರ್ಥವಾಗುವುದಕ್ಕೆ ಅನೇಕ ವರುಷ ಹಿಡಿಯುತ್ತೆ. ಸಿವಿಲ್ ಮತ್ತು ಕ್ರಿಮಿನಲ್ ಕೋರ್ಟುಗಳಲ್ಲಿ ಆಚರಣೆಯಲ್ಲಿರುವಂಥಾ ರೂಲಸನ್ನು ರೆವಿನ್ಯೂ ಬಾಬಿಗೂ ಜಾರಿಗೆ ತಂದರೆ ಬೇಗ ಇತ್ಯರ್ಥವಾಗಬಹುದು.

ಉ.—ಈ ವಿಷಯ ಬಹಳ ಕಾಲದಿಂದ ಚರ್ಚೆಗೆ ಬರುತ್ತಿದೆ; ಸರ್ಕಾರದವರು ಯೋಚನೆಮಾಡಿ ಬೇಗ ಇತ್ಯರ್ಥಮಾಡುತ್ತಾರೆ.

ಪ್ರಾ.—ಜಮೀನ್‌ನಲ್ಲಿರುವ ಗಂಧದ ಮರಗಳ ಕ್ರಯವನ್ನು ಕಟ್ಟಿ ವ್ಯವಸಾಯಕ್ಕೆ ಪಡೆಯಬೇಕಾಗಿದೆ. ಬಡರೈತರಿಗೆ ಹೊಸ ಜಮೀನ್ ಸಾಗುವಳಿಗೆ ಸಿಕ್ಕುವುದು ಇದರಿಂದ ಕಷ್ಟ. ಹಣ ಕಟ್ಟುವುದನ್ನು ವಜಾಮಾಡಿಕೊಡಬೇಕು.

ಉ.—ಆ ರೀತಿ ಜಾರಿಗೆ ತರಬೇಕೆಂದು ಹುಕುಂ ಬರೆದು ಇಟ್ಟಿದೇನೆ; ಕೂಡ್ಲೆ ಪ್ರಕಟಮಾಡುವೆವು.

ಪ್ರಾ.—ಜೋಡಿ, ಇನಾಮು ಗ್ರಾಮಗಳ ಸರ್ವೆ ಸೆಟ್ಲ್‌ಮೆಂಟು ಮುಂತಾದ ವಿಚಾರಗಳು ಅನೇಕ ವರುಷಗಳಿಂದ ಚರ್ಚೆಗೆ ಬರುತ್ತಾ ಇವೆ. ಈ ಸಲವಾದರೂ ವ್ಯವಸ್ಥೆ ಮಾಡಿಕೊಡಬೇಕು.

ಉ.—ರೈತರ ಮತ್ತು ಇನಾಂದಾರರ ಹಕ್ಕು ಬಾಧ್ಯತೆಗಳನ್ನೂ ಸರ್ವೆ ವಿಚಾರಗಳನ್ನೂ ತನಿಖೆಯಿಂದ ಇತ್ಯರ್ಥಮಾಡುವುದಕ್ಕೆ ಒಂದು ಪಂಚಾಯತಿಯನ್ನು ನೇಮಕಮಾಡುತ್ತೇವೆ. ಅದಕ್ಕೆ ಇನಾಂದಾರರಲ್ಲಿ ಕೆಲವರನ್ನೂ, ಸರ್ಕಾರಿ ಅಧಿಕಾರಿಗಳಲ್ಲಿ ಕೆಲವರನ್ನೂ ಮೆಂಬರಾಗಿ ಗೊತ್ತುಮಾಡುವೆವು. ಈ ಕಮಿಟಿಯವರು ಎಲ್ಲಾ ವಿಷಯಗಳನ್ನೂ ತನಿಖೆಮಾಡಿ ರಿಪೋರ್ಟು ಕೊಡುತ್ತಾರೆ. ಅದರ ಮೇಲೆ ಸರ್ಕಾರದವರು ವ್ಯವಸ್ಥೆಮಾಡಿ ಹುಕುಂ ಕೊಡುವರು. [ಈ ತೀರ್ಮಾನವನ್ನು ಕೇಳಿ ಅನೇಕ ಪ್ರಜಾಪ್ರತಿನಿಧಿಗಳು ದಿವಾನ್‌ರವರನ್ನು ವಂದಿಸಿದರು]

ಪ್ರಾ.—ಕೆಲವು ವೇಳೆ ಒಂದೇ ಸರ್ವೆ ನಂಬರುಳ್ಳ ಜಮೀನಿನಲ್ಲಿ ತರಿ, ಖುಷ್ಕಿ, ಬಾಗಾಯತು ಭಾಗಗಳಿರುತ್ತವೆ. ಇದನ್ನು ಗ್ರಾಮದ ನಕ್ಷೆಯಲ್ಲಾಗಲಿ ಜಮಾ ಮೇಲಾಗಲಿ ತೋರಿಸಿ ವಿಂಗಡಿಸಿಲ್ಲ.

ಉ.—ಈ ವಿಚಾರದಲ್ಲಿ ಅರ್ಜಿಗಳೇನೂ ಬಂದಿಲ್ಲವೆಂದು ರೆವಿನ್ಯೂ ಕಮಿಷನರ್‌ರವರೂ, ಸರ್ವೆ ಸೂಪರಿಂಟೆಂಡೆಂಟರೂ ಹೇಳುತ್ತಾರೆ. ಆದರೂ ಅಂಥಾ ಸಂದರ್ಭವಿರುವುದನ್ನು ತಿಳಿಸಿದರೆ ಸರಿಪಡಿಸಬಹುದು.

ಪ್ರಾ.—ಕಂದಾಯದ ಹಣಕ್ಕೆ ಕೊಡುವ ರಶೀತಿಯನ್ನು ಮೂರು ಪ್ರತಿ ಮಾಡಿ ಒಂದನ್ನು ಕಂದಾಯ ಕಟ್ಟಿದವನಿಗೂ, ಒಂದನ್ನು ತಾಲ್ಲೂಕ್ ಕಚೇರಿಗೂ ಕೊಟ್ಟು ಪಟೇಲನ ಬಳಿ ಒಂದು ಇರುವಂತೆ ಮಾಡಿದರೆ ಸರ್ಕಾರದ ಹಣಕ್ಕೆ ಮೋಸಬರುವುದಿಲ್ಲ; ಕಂದಾಯ ಕಟ್ಟಿದವನಿಗೆ ಯಾವ ತೊಂದರೆಯೂ ಉಂಟಾಗುವುದಿಲ್ಲ.

ಉ.—ಇದು ಸರ್ಕಾರದವರ ವಿಚಾರದಲ್ಲಿದೆ; ಬೇಗ ಆದೀತು.

ಪ್ರಾ.—ಜಮೀನಿನ ಅನುಭವದಾರನ ಹೆಸರನ್ನೂ, ವ್ಯವಸಾಯಮಾಡುವ ರೈತನ ಹೆಸರನ್ನೂ ಪಹಣಿ ತಃಖ್ತೆಯಲ್ಲಿ ಪ್ರತ್ಯೇಕವಾಗಿ ತಿಳಿಯುವಂತೆ ಶ್ಯಾನುಭೋಗರಿಗೆ ಹುಕುಂ ಮಾಡಬೇಕು. ಈಗ ಇಲ್ಲದಿರೋಣದರಿಂದ ಅನೇಕ ರೈತರು ವ್ಯಾಜ್ಯಗಳನ್ನು ನಡಿಸಿ ಕೆಟ್ಟುಹೋಗುತ್ತಿದಾರೆ. ಈ ಪದ್ಧತಿಯು ಪೂರ್ವದಲ್ಲಿ ಆಚರಣೆಯಲ್ಲಿತ್ತು.

ಉ.—ಇದು ಆಗಲಾರದು.

ಪ್ರಾ.—ಗ್ರಾಮಗಳಲ್ಲಿ ಶಕ್ತಿ ಗಳಿರೋಣದರಿಂದ ಈಗಿನ ಗ್ರಾಮಾಭಿವೃದ್ಧಿಯ ಕಾರ್ಯಗಳು ತೃಪ್ತಿಕರವಾಗಿ ನಡೆಯುತ್ತಾ ಇಲ್ಲ. ಇದಕ್ಕಾಗಿ ಕೆಲವು ರೂಲಸು ಮಾಡಿ ಕಟ್ಟುನಿಟ್ಟಾಗಿ ಜಾರಿಗೆ ಬರುವಂತೆ ಮಾಡಿದರೆ ಸರ್ಕಾರದವರ ಉದ್ದೇಶ ಸಾರ್ಥಕವಾದೀತು; ಗ್ರಾಮಗಳು ಅಭಿವೃದ್ಧಿಗೆ ಬರುವವು.

ಉ.—ಈಗಿರುವಂತೆ ಒಂದು ವರುಷ ನಡೆಯಲಿ. ಅಜಮಾಯಿಷಿಗಾಗಿ ಈಗ ಏರ್ಪಾಡುಮಾಡಿರುತ್ತೇವೆ. ಇದರ ಸಾಧಕ ಬಾಧಕಗಳನ್ನು ನೋಡಿಕೊಂಡು ಮುಂದೆ ಅವಶ್ಯವಾದ ಬದಲಾವಣೆ ಮಾಡಬಹುದು.

ಪ್ರಾ.—ಆಯಾ ಗ್ರಾಮದಲ್ಲಿ ಉತ್ಪತ್ತಿಯಾಗುವ ಮೊಹತರ್ಫಾ ಹಣವನ್ನು ಆಯಾ ಸ್ಥಳದ ಅಭಿವೃದ್ಧಿಗಾಗಿ ವಿನಿಯೋಗಿಸುವಂತೆ ಹುಕುಂ ಆಗಬೇಕು.

ಉ.—ಗ್ರಾಮಾಭಿವೃದ್ಧಿ ಕಾರ್ಯಗಳಿಗೋಸ್ಕರ ಈಗ ಸರ್ಕಾರದಿಂದ ಸಾಲಿಯಾನಾ 2,00,000 ರೂಪಾಯಿನಂತೆ ಕೊಡುತ್ತಾ ಇದೇವೆ. ಇದು ಗ್ರಾಮಗಳಲ್ಲಿ ಉತ್ಪತ್ತಿಯಾಗುವ ಮೊಹತರ್ಫಾಕ್ಕಿಂತಲೂ ಎಷ್ಟೋ ಹೆಚ್ಚಾಯಿತಲ್ಲಾ!

ಪ್ರಾ.—ವ್ಯವಸಾಯ ಕೆಲಸಕ್ಕಾಗಲಿ ಇತರ ಕೆಲಸಗಳಿಗಾಗಲಿ ಉಪಯೋಗಿಸುವಂಥಾ ಸಮಸ್ತ ಗಾಡಿಗಳಿಗೂ ಎರಡು ರೂಪಾಯಿನಂತೆ ತೆರಿಗೆ ಹಾಕಿ ವಸೂಲ್ಮಾಡಿ, ಈ ಹಣದಿಂದ ಗ್ರಾಮದಿಂದ ಗ್ರಾಮಕ್ಕೆ ಹೋಗಿ ಬರುವ ರಸ್ತೆಗಳನ್ನು ಒಳ್ಳೇ ಸ್ಥಿತಿಯಲ್ಲಿರುವಂತೆ ಮಾಡಿಸಬೇಕು.

ಉ.—ಗ್ರಾಮಾಭಿವೃದ್ಧಿ ಸಂಘದವರು ಮುತುವರ್ಜಿ ವಹಿಸಿ ಮಾಡಿಸಿದರೆ ಈ ರಸ್ತೆಗಳು ಆಗುತ್ತವೆ. ಹೊಸ ತೆರಿಗೆಯನ್ನು ಹಾಕುವುದು ಸಾಧ್ಯವಲ್ಲ.

ಪ್ರಾ.—ಅನೇಕಾನೇಕ ಗ್ರಾಮಗಳಲ್ಲಿ ಮನೆಗಳು ಬಹಳ ಇಕ್ಕಟ್ಟಾಗಿಯೂ ಒತ್ತಾಗಿಯೂ ಇವೆ. ಗ್ರಾಮವನ್ನು ಬಡಾವಣೆಮಾಡುವುದಕ್ಕೆ ಅನುಕೂಲಮಾಡಿಸಿಕೊಡಬೇಕು.

ಉ.—ಇದು ಬಹಳ ವಿಶೇಷವೂ ಮುಖ್ಯವೂ ಆದ ವಿಷಯ; ಮಾಡತಕ್ಕದ್ದೇ ಸರಿ. ಸರ್ಕಾರದವರು ಸಾಧ್ಯವಾಗುವ ಮಟ್ಟಿಗೂ ಮಾಡುತ್ತಾ ಇದಾರೆ.

ಪ್ರಾ.—ನಮ್ಮ ಸಂಸ್ಥಾನದಲ್ಲಿ ಪ್ರತಿ ಒಂದು ಗ್ರಾಮಕ್ಕೂ ಒಂದು ಸಣ್ಣ ಪುಸ್ತಕ ಮಾಡಿ ಅದರಲ್ಲಿ ಆ ಗ್ರಾಮದ ವಿದ್ಯಮಾನಗಳನ್ನೆಲ್ಲಾ ಬರಸಿ ಪ್ರಕಟಿಸಬೇಕು. ಇಂಥಾದ್ದನ್ನು ಮದರಾಸಿನಲ್ಲಿ ಮಾಡಿರುತ್ತಾರೆ. ಸಂಗತಿಗಳನ್ನು ಹತ್ತು ವರುಷಕ್ಕೊಂದಾವರ್ತಿ ಬದಲಾವಣೆಮಾಡಿ ಹೊಸ ಪುಸ್ತಕಗಳನ್ನು ಪ್ರಕಟಿಸಿದರೆ ಗ್ರಾಮಸ್ಥರೆಲ್ಲಾ ಕೊಂಡು ಇಟ್ಟುಕೊಳ್ಳುತ್ತಾರೆ [ಮೆಂಬರು ಮದರಾಸಿನ ಒಂದು ಗ್ರಾಮದ ಚರಿತ್ರೆ ಪುಸ್ತಕವನ್ನು ದಿವಾನ್‌ರಿಗೆ ಕೊಟ್ಟರು. ದಿವಾನ್‌ರೂ, ಗವರ್ನ್‌ಮೆಂಟಿನ ಮೆಂಬರುಗಳೂ ನೋಡಿ ಚೆನ್ನಾಗಿದೆ ಎಂದು ಒಪ್ಪಿಕೊಂಡರು.]

ಉ.—ಉಪಯೋಗವಾದ ವಿಷಯಗಳನ್ನು ಬಹಳವಾಗಿ ಬರೆದಿಡಬಹುದು. ವಿಚಾರಿಸಿ ಮಾಡುತ್ತೇವೆ.

ಪ್ರಾ.—ಬಂಜರ್ ಜಮೀನಿಗೆ ದರಖಾಸ್ತು ಕೊಟ್ಟರೆ ಹರಾಜು ಮಾಡದೆ ಮೊದಲನೇ ಅರ್ಜಿದಾರನಿಗೇ ಕೊಡಿಸುವಂತೆ ಹುಕುಂ ಆಗಬೇಕು. ಡೆಪ್ಯುಟಿ ಕಮಿಷನ್‌ರು ವಿಚಾರಿಸಿ ಹಾಗೆ ಕೊಡಬಹುದೆಂದು ರೂಲಸು ಇದೆಯೋ ಹೊರ್ತು ಜಾರಿಯಲ್ಲಿಲ್ಲ. ಹರಾಜಿಗೆ ಇಟ್ಟರೆ ಬಡವನಿಗೆ ಜಮೀನು ಸಿಕ್ಕುವುದು ಅಪರೂಪ.

ಉ.—ಆಗಲಿ, ನೋಡೋಣ.

ಪ್ರಾ.—ಮಾರಿಕಣಿವೆ ಮತ್ತು ಕಾವೇರಿ ರಿಜರ್ವಾಯರ್ ಕೆಳಗೆ ಜಮೀನುಗಳನ್ನು 100-120 ಎಕರೆಗಳ ದೊಡ್ಡ ನಂಬರುಗಳಾಗಿ ವಿಂಗಡಿಸಿ ಒಳ್ಳೊಳ್ಳೇ ಬೆಳೆಗಳನ್ನು ಮಾಡುವಂಥಾ ಶಕ್ತರಿಗೂ ಉತ್ಸಾಹಶಾಲಿಗಳಿಗೂ ಕೊಡಬೇಕು.

ಉ.—ವಿಚಾರದಲ್ಲಿದೆ; ಶೀಘ್ರದಲ್ಲಿ ಆದೀತು.

ಪ್ರಾ.—ತೆಂಗಿನ ತೋಟಗಳಿಗೋಸ್ಕರ ಜಮೀನು ಬೇಕೆಂದು ದರಖಾಸ್ತು ಮಾಡಿದರೆ ಅಂಥಾ ಜಮೀನು ಎಕ್ಸೈಸ್ ಅಥವಾ ಅಮೃತಮಹಲ್ ಇಲಾಖೆಗಳಿಗೆ ಇಟ್ಟುಕೊಳ್ಳದೆ ಕೊಡಿಸಬೇಕು.

ಉ.—ವನಗಳ ತೋಪುಗಳನ್ನು ಪುನರ್ವಿಮರ್ಶೆ ಮಾಡಬೇಕೆಂದಿದೇವೆ. ಮಾಡುವಾಗ್ಗೆ ಅವಶ್ಯವಿರುವ ಜಮೀನುಗಳನ್ನು ಬಿಟ್ಟುಕೊಡುವೆವು. ಸಧ್ಯದಲ್ಲೇ ಇದು ಆಗಲಾರದು.

ಪ್ರಾ.—ಫಾರೆಸ್ಟ್ ಇಲಾಖೆಯವರು ಯಾಲಕ್ಕಿ ವ್ಯವಸಾಯಕ್ಕೆ ಜಮೀನನ್ನು ಧಾರಾಳವಾಗಿ ಕೊಡುತ್ತಾರೆ. ರೆವಿನ್ಯೂ ಇಲಾಖೆಯವರು ಸಾಗುವಳಿಗೆ ಕೊಡುವ ಜಮೀನಿನಲ್ಲಿ ರೈತನು ಕಾಫಿಯನ್ನು ಮಾತ್ರ ಬೆಳೆಯಬೇಕೆಂದು ಮುಚ್ಚಳಿಕೆ ತೆಗೆದುಕೊಳ್ಳುವರು. ಈ ನಿರ್ಬಂಧವನ್ನು ತಪ್ಪಿಸಿಕೊಡಬೇಕು.

ಉ.—ವಿಚಾರಿಸಿ ಅನುಕೂಲ ಪಡಿಸಿಕೊಡುತ್ತೇವೆ.

ಪ್ರಾ.—ಎಕ್ಸೈಸ್ ರಿಜರ್ವ್ ಜಮೀನುಗಳನ್ನು ಹರಾಜು ಹಾಕದೆ ಖರೀದಿ ಗೊತ್ತುಮಾಡಿ ಬಿಕರಿಮಾಡಿದರೆ ಬಡವರಿಗೆ ಜಮೀನ್ ಸಿಕ್ಕೀತು.

ಉ.—ಡೆಪ್ಯುಟಿ ಕಮಿಷನ್‌ರಿಗೆ ಅರ್ಜಿ ಬರೆದುಕೊಳ್ಳಿ; ಅವರು ಇತ್ಯರ್ಥ ಮಾಡದೆ ಹೋದರೆ ಗವರ್ನ್‌ಮೆಂಟಿನ ಸೆಕ್ರೆಟರಿಯವರಿಗೆ ಅರ್ಜಿಯ ನಕಲನ್ನು ಕಳುಹಿಸಿ ಕೊಡಿ. ವಿಚಾರಿಸಿ ಹುಕುಂ ಕೊಡುತ್ತಾರೆ.

ಪ್ರಾ.—ಖಾತೆ ಜಮೀನಿನಲ್ಲಿ ಪ್ಲೇಗ್ ನಿಮಿತ್ತ ಜೋಪಡಿ ಹಾಕಿಕೊಳ್ಳುವುದಕ್ಕೆ ಸ್ಥಳಾಧಿಕಾರಿಗಳು ಅಡ್ಡಿ ಮಾಡುತ್ತಾರೆ. ಈ ನಿರ್ಬಂಧವನ್ನು ತಪ್ಪಿಸಿಕೊಡಬೇಕು.

ಉ.—ಹಂಗಾಮಿಯಾಗಿ ಜೋಪಡಿ ಹಾಕಿಕೊಳ್ಳಬಹುದು; ಅದಕ್ಕೆ ಸ್ಥಳಾಧಿಕಾರಿಗಳು ಅಡ್ಡಿ ಮಾಡಕೂಡದು.

ಪ್ರಾ.—ನೀರಿಲ್ಲದೆ ಬೆಳೆಯಾಗದೆ ಇರುವ ಸಾಲಿನ ತರೀ ಕಂದಾಯದಲ್ಲಿ ಅರ್ಧ ರಿಮಿಷನ್ ಮಾಡಿ ಕೊಡಬೇಕು. [ಈ ವಿಷಯವನ್ನು ಅನೇಕ ಮೆಂಬರುಗಳು ಹೇಳಿಕೊಂಡು ರೈತರ ಕಷ್ಟಗಳನ್ನು ಅರಿಕೆ ಮಾಡಿದರು.]

ಉ.—ರಿಮಿಷನ್ ಮಾಡಲಾರಂಭಿಸಿದರೆ ಅದಕ್ಕೆ ಅಂತ್ಯವೇ ಇರುವುದಿಲ್ಲ. ಈ ಸಲ ಫಸಲಿಗೆ ಕಿಮ್ಮತ್ತು ಹೆಚ್ಚಾಗಿ ಸಿಕ್ಕುವುದೆಂದು ನಮ್ಮ ವಿಚಾರಣೆಯಲ್ಲಿ ತಿಳಿದು ಬಂದಿದೆ. ಈ ಸಲ ಈಗೀಗ ಮಳೆ ಬರುತ್ತಾ ಇದೆ; ಮುಂದೆ ನೋಡಬೇಕು. ರೈತರಿಗೆ ತೊಂದರೆಯೇನೋ ಉಂಟು; ಆದರೆ ಪ್ರಜೆಗಳ ಸರ್ಕಾರದ ಕ್ಷೇಮವನ್ನೂ ನೋಡಬೇಕಾಗಿದೆ. ಆದ್ದರಿಂದ ಈಗಲೇ ಈ ವಿಚಾರವನ್ನು ಇತ್ಯರ್ಥ ಮಾಡಲಾಗುವುದಿಲ್ಲ.

ಪ್ರಾ.—ಒಡೆದುಹೋಗಿ ನಿಕಸ್ತಾಗಿರುವ ಕೆರೆಗಳ ಕೆಳಗೆ ಜಮೀನುಗಳನ್ನು ಖುಷ್ಕಿ ಫಸಲಿಡುವುದಕ್ಕೆ ಖುಷ್ಕಿ ದರದಲ್ಲಿ ಹಂಗಾಮಿ ವ್ಯವಸಾಯಕ್ಕೆ ಕೊಡಬೇಕು.

ಉ.—ಏಕಸಾಲ್ ಖುಷ್ಕಿಗೆ ಕೊಡಲು ಅವಕಾಶವಿದೆ. ಐದು ವರುಷಕ್ಕೆ ಕೊಡಬೇಕೆಂದರೆ ಅರ್ಜಿ ಬರೆದುಕೊಳ್ಳಿ. ಡೆಪ್ಯುಟಿ ಕಮಿಷನ್‌ರು ತನಿಖೆಮಾಡಿ ಸಂದರ್ಭಾನುಸಾರ ವ್ಯವಸ್ಥೆ ಮಾಡುತ್ತಾರೆ.

ಪ್ರಾ.—ಕೆರೆ ಕೆಳಗೆ ಅಚ್ಚುಕಟ್ಟಿರುವುದಕ್ಕಿಂತಲೂ ಹೆಚ್ಚು ಜಮೀನಿಗೆ ತರೀ ರೇಟನ್ನು ಹಾಕಿದಾರೆ. ಇದನ್ನು ವಜಾಮಾಡಿ, ತರಿ ಸಾಗುವಳಿ ಆಗಲಾರದ ಜಮೀನಿಗೆ ಖುಷ್ಕಿ ದರವನ್ನು ಹಾಕಿಸಿಕೊಡಬೇಕು.

ಉ.—ಅಂಥಾ ಕೆರೆಗಳು ಎಲ್ಲಿ ಎಷ್ಟು ಇವೆಯೋ ಸರ್ವೆ ಇಲಾಖೆಯಿಂದ ಲೆಕ್ಕ ತರಿಸಿಕೊಂಡು, ಹಾಗೆ ಎಷ್ಟು ಜಮೀನಿಗೆ ಖುಷ್ಕಿ ದರ ಹಾಕಬಹುದೆಂದು ಆ ಇಲಾಖೆಯವರು ಅಭಿಪ್ರಾಯಪಡುವರೋ ತಿಳಿದು ಸ್ಯಾಂಕ್ಷನ್ ಮಾಡುತ್ತೇವೆ.

ಪ್ರಾ.—ಲಾಂಟಾನಾ ಗಿಡಗಳ ಹಾವಳಿಯನ್ನು ತಪ್ಪಿಸಬೇಕು. ಜಮೀನುಗಳೆಲ್ಲಾ ಅದರ ದೆಸೆಯಿಂದ ಹಾಳಾಗುತ್ತಿವೆ.

ಉ.—ಇನಾಮ್ ಮಾಡಿ ರೈತರು ಅದನ್ನು ಸಂಪೂರ್ಣವಾಗಿ ತೆಗೆಯಬೇಕೆಂದು ವಿಧಿಸಬಹುದೆ? [ಅನೇಕ ಮೆಂಬರುಗಳು ರೈತರನ್ನು ಹಾಗೆ ನಿರ್ಬಂಧಪಡಿಸುವುದಕ್ಕೆ ಒಪ್ಪದೆಹೋದರು.]

ಪ್ರಾ.—ಹಿಡುವಳಿ ಜಮೀನ್‌ನಿಂದಲೂ, ಕಾಫಿ ತೋಟಗಳಿಂದಲೂ ರೈತರು ಮರಗಳನ್ನು ಕತರಾಯಿಸಿಕೊಳ್ಳುವುದಕ್ಕೆ ಮಾಫಿ ಲೈಸೆನ್ಸ್ ಕೊಡಿಸಬೇಕು.

ಉ.—ಡೆಪ್ಯುಟಿ ಕಮಿಷನ್‌ರಿಗೆ ಬರೆದುಕೊಂಡಲ್ಲಿ ಅವರು ತನಿಖೆಯಿಂದ ಗವರ್ನ್‌ಮೆಂಟಿಗೆ ರಿಪೋರ್ಟು ಕಳುಹಿಸುತ್ತಾರೆ. ಸರ್ಕಾರದವರು ಸಂದರ್ಭಾನುಸಾರ ಇತ್ಯರ್ಥಮಾಡುವರು.

ಪ್ರಾ.—ಅಮೃತಮಹಲ್ ಕಾವಲುಗಳಿಗೆ ರೈತರು ಛಾಪುರ್ ಕೊಟ್ಟು ತಮ್ಮ ದನಗಳನ್ನು ಬಿಟ್ಟು ಮೇಯಿಸಿಕೊಳ್ಳುವಂತೆ ಅಪ್ಪಣೆ ಆಗಿದ್ದರೂ ಆ ಇಲಾಖೆಯ ಕಾವಲುಗಾರರು ರೈತರನ್ನು ಬಹಳ ಕಷ್ಟನಷ್ಟಗಳಿಗೆ ಗುರಿಮಾಡುತ್ತಾರೆ. ವಿಚಾರಣೆಮಾಡಿ ಈ ತೊಂದರೆಯನ್ನು ತಪ್ಪಿಸಿಕೊಡಬೇಕು.

ಉ.—ಈ ವಿಚಾರವನ್ನು ಕ್ರಮಪಡಿಸಿಕೊಡಬೇಕೆಂದು ಅಮೃತಮಹಲ್ ಸೂಪರಿಂಟೆಂಡೆಂಟರಿಗೆ ಈಗಲೇ ತಿಳಿಸಿದೇವೆ. ಅವರು ಅನುಕೂಲಮಾಡಿಕೊಡುತ್ತೇವೆಂದು ಒಪ್ಪಿರುತ್ತಾರೆ.

ಪ್ರಾ.—ಜಂಟಿ ಖಾತೇದಾರರಲ್ಲಿ ಒಬ್ಬನು ತೀರಿಹೋದರೆ ಅವನ ಬದಲಿಗೆ ವಾರಸ್‌ದಾರನ ಹೆಸರನ್ನು ದಾಖಿಲ್‌ಮಾಡುವಂತೆ ಹುಕುಂ ಆಗಬೇಕು.

ಉ.—ಇದು ಆಗಲಾರದು.

ಪ್ರಾ.—ಕೋಲಾರ, ಶಿವಮೊಗ್ಗ, ಚಿತ್ರದುರ್ಗ ಡಿಸ್ಟ್ರಿಕ್ಟುಗಳಲ್ಲಿ ರೈತರಿಗೆ ಹುಲ್ಲು ಇಟ್ಟುಕೊಳ್ಳುವುದಕ್ಕೂ ಸಣ್ಣ ಕೈತೋಟಕ್ಕೂ ಸರ್ಕಾರದವರು ಕಣ ಎಂಬದಾಗಿ ಸ್ವಲ್ಪ ಸ್ವಲ್ಪ ಜಮೀನನ್ನು ಬಿಟ್ಟುಕೊಟ್ಟಿದಾರೆ. 10 ವರುಷಗಳಿಂದ ಈಚೆಗೆ ರೆವಿನ್ಯೂ ಅಧಿಕಾರಿಗಳು ಈ ಕಣಗಳಿಗೆ ಕಂದಾಯ ಹಾಕುತ್ತಲೂ, ಕೊಡದೆ ಇರುವ ರೈತರಿಂದ ಕಣಗಳನ್ನು ಕಿತ್ತುಕೊಳ್ಳುತ್ತಲೂ ಬಂದಿದಾರೆ. ಇದು ರೈತರಿಗೆ ತುಂಬಾ ನಷ್ಟ.

ಉ.—ಅಂಥಾ ವಿಷಯಗಳನ್ನು ರೈತರು ಡೆಪ್ಯುಟಿ ಕಮಿಷನ್‌ರಿಗೆ ತಿಳಿಸಿದರೆ ಅವರು ಸರಿಪಡಿಸಿಕೊಡುತ್ತಾರೆ. ಮಾಮೂಲ್ ಇರುವುದನ್ನು ಅವರು ತಪ್ಪಿಸುವುದಿಲ್ಲ.

ಪ್ರಾ.—ಸರ್ಕಾರದವರು ಸೇವಿಂಗ್ಸ್ ಬ್ಯಾಂಕಿನ ಹಣಕ್ಕೂ, ಧರ್ಮದ ಫಂಡುಗಳಿಗೂ ಶೇಕಡಾ 4 ಕ್ಕಿಂತ ಕಮ್ಮಿ ಬಡ್ಡಿ ಕೊಡುತ್ತಾರೆ; ಆದರೆ ಸರ್ಕಾರದವರು ರೈತರಿಗೆ ತಕಾವಿ ಸಾಲಗಳನ್ನು ಕೊಟ್ಟು ಅವರಿಂದ ಶೇಕಡ 6 ರೂಪಾಯಿನಂತೆ ಬಡ್ಡಿ ತೆಗೆದುಕೊಳ್ಳುವರು. ಈ ಬಡ್ಡಿ ದರವನ್ನು 4 ಕ್ಕೆ ಇಳಿಸಿಕೊಡಬೇಕು.

ಉ.—ಕೋಲಾರ ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳಲ್ಲಿ ಬಡ್ಡಿ ದರವನ್ನು ಕಡಮೆಮಾಡಬಹುದು. ಯೋಚಿಸಿ ಹುಕುಂ ಕೊಡುತ್ತೇವೆ.

ಫಾರೆಸ್ಟ್ ಬಾಬುಗಳು.

ಪ್ರಾ.—ಸೊಪ್ಪಿನ ಬೆಟ್ಟ, ಗೋಮಾಳ, ಡಿಸ್ಟ್ರಿಕ್ಟ್ ಜಂಗಲು, ಇವೆಲ್ಲಾ ಸ್ಟೇಟ್ ಫಾರೆಸ್ಟಿಗೆ ಸೇರಿಸಿಕೊಂಡಿದಾರೆ. ಕೂಪುಗಳನ್ನು ಬಿಟ್ಟಿದ್ದರೂ ರೈತರಿಗೆ ಬೇಕಾಗುವಂಥಾ ಮರವೇನೂ ಅದರಲ್ಲಿ ಸಿಕ್ಕುವುದಿಲ್ಲ.

ಉ.—ಯಾವ ಸ್ಥಳದಲ್ಲಿ ಅಂಥಾ ಕಷ್ಟವಿದೆಯೋ ಡೆಪ್ಯುಟಿ ಕಮಿಷನ್‌ರಿಗೆ ತಿಳಿಸಿದ ಪಕ್ಷದಲ್ಲಿ ಅವರೇ ಸರಿಮಾಡಿಕೊಡುತ್ತಾರೆ.

ಪ್ರಾ.—ಜಂಗಲಿನಿಂದ ಮರಮುಟ್ಟು ತರುವುದಕ್ಕೆ ರೇಟನ್ನು ನಮ್ಮ ಪ್ರಜೆಗಳಿಗೆ ಕಮ್ಮಿ ಹಾಕಿಕೊಡಬೇಕು.

ಉ.—ಕನ್ಸರ್ವೇಟರಿಂದ ರಿಪೋರ್ಟು ತರಿಸಿಕೊಂಡು ವ್ಯವಸ್ಥೆಮಾಡುತ್ತೇವೆ.

ಪ್ರಾ.—ಇನಾಂ ಗ್ರಾಮಗಳಲ್ಲಿರುವ ಕಾಡಿನಿಂದ ಇನಾಂದಾರರು ಸೌದೆ, ಇಜ್ಜಲು, ಮರಮುಟ್ಟುಗಳನ್ನು ತಂದುಕೊಳ್ಳುವುದಕ್ಕೆ ಅಮಲ್ದಾರರಿಂದ ಮಾಫಿ ಲೈಸೆನ್ಸು ತಂದುಕೊಳ್ಳಬಹುದೆಂದು ಹುಕುಂ ಆಗಬೇಕು.

ಉ.—ಆಗಬಹುದು; ವಿಚಾರಿಸುತ್ತೇವೆ.

ಪ್ರಾ.—ಹೊಸವ ಮರದ ರೇಟನ್ನು ಬಹಳ ದುಬಾರಿಮಾಡಿದಾರೆ; ಕಡಮೆ ಮಾಡಬೇಕು.

ಉ.—ಕನ್ಸರ್ವೇಟರಿಗೆ ಬರೆದು ವಿಚಾರಮಾಡುತ್ತಿದೇವೆ.

ಪ್ರಾ.—ಹೊಂಗೆ ಸೊಪ್ಪು ಜಮೀನಿನ ಆಬಾದಿಗೆ ಅವಶ್ಯವಾದದ್ದು. ಇದನ್ನು ಕಂಟ್ರಾಕ್ಟು ಕೊಡುತ್ತಾರೆ. ಕಂಟ್ರಾಕ್ಟರಿಂದ ದುಬಾರಿ ಹಣ ಕೊಟ್ಟು ರೈತರು ತೆಗೆದುಕೊಳ್ಳಬೇಕಾಗಿದೆ. ಕಂಟ್ರಾಕ್ಟು ಕೊಡುವುದನ್ನು ತಪ್ಪಿಸಿ ಆಯಾ ಗ್ರಾಮದ ರೈತರಿಗೇ ಹರಾಜು ಮುಖಲಕ ವಹಿಸಬೇಕು.

ಉ.—ಇದು ನ್ಯಾಯವಾದದ್ದೆಂದು ಕಾಣುತ್ತೆ; ವಿಚಾರಿಸಿ ಆ ರೀತಿ ಹುಕುಂ ಕೊಡಬಹುದು.

ಪ್ರಾ.—ನಾಗಮಂಗಲ ತಾಲ್ಲೂಕಿನಲ್ಲಿ ಮಾವಿನಕೆರೆಪ್ಪದ ಹಳ್ಳಿ, ಕೃಷ್ಣರಾಜಪುರ, ಈ ಮೊದಲಾದ ಪ್ಲಾಂಟೇಷನ್‌ಗಳಲ್ಲಿ ಗಿಡಮರಗಳೇನೂ ಇಲ್ಲ. ಅಂಥಾ ಪ್ಲಾಂಟೇಷನ್‌ಗಳನ್ನು ರೈತರಿಗೆ ವ್ಯವಸಾಯಕ್ಕೆ ಕೊಡಿಸಬೇಕು.

ಉ.—ಇದು ಸಾಧ್ಯವೆಂದು ಕಾಣುವುದಿಲ್ಲ. ರಿಪೋರ್ಟು ತರಿಸಿಕೊಂಡು ವಿಚಾರಿಸಿ ನೋಡುತ್ತೇವೆ.

ಪ್ರಾ.—ವ್ಯವಸಾಯ ಮತ್ತು ಕೈಗಾರಿಕೆಗಳನ್ನು ಕಲಿಯುವುದಕ್ಕೆ ಬುದ್ಧಿವಂತರಾದ ರೈತರಿಗೆ ವೇತನಕೊಟ್ಟು ದೇಶಾಂತರಗಳಲ್ಲಿ ತರಪೇತುಮಾಡಿಸಬೇಕು.

ಉ.—ವಿದ್ಯೆಬುದ್ಧಿಗಳಲ್ಲಿ ಗಟ್ಟಿಗರಾದವರು ಅರ್ಜಿ ಬರೆದುಕೊಂಡರೆ ಕೊಡಬಹುದು.

ಪ್ರಾ.—ಪಶುವೈದ್ಯರು ಇನ್ನೂ ಹೆಚ್ಚಾಗಿ ನೇಮಕವಾಗಬೇಕು.

ಉ.—ಇದು ಅವಶ್ಯವಾದರೂ ಖರ್ಚಿನ ವಿಚಾರ. ಸಾಧ್ಯವಾಗುವ ಮಟ್ಟಿಗೂ ಮಾಡುತ್ತೇವೆ.

ಪ್ರಾ.—ವ್ಯಾಪಾರವು ಅಭಿವೃದ್ಧಿಯಾಗುವುದಕ್ಕೋಸ್ಕರ ಸರ್ಕಾರದವರು ಒಂದು ವರ್ತಕಮಂಡಲಿಯನ್ನು (ಚೇಂಬರ್ ಆಫ್ ಕಾಮರ್ಸ್) ಏರ್ಪಾಡು ಮಾಡಿ ಕೊಡಬೇಕಾಗಿದೆ.

ಉ.—ಸಂಸ್ಥಾನದಲ್ಲಿ ಮುಖಂಡರಾದ ಇಂಗ್ಲಿಷ್ ತಿಳಿದ ಕೆಲವು ವರ್ತಕರು ಬೆಂಗಳೂರಿನಲ್ಲಿ ಸೇರಿ ಅಂಥಾ ಮಂಡಲಿಯನ್ನು ಪ್ರಾರಂಭಿಸುವುದಕ್ಕೆ ಸರ್ಕಾರದಿಂದ ಯಾವ ಸಹಾಯ ಬೇಕಾಗುವುದೋ ಯೋಚಿಸಿ ತಿಳಿಸಿದರೆ ಸರ್ಕಾರದವರು ಮಾಡಿಕೊಟ್ಟು ಸಂಘವನ್ನು ಸ್ಥಾಪಿಸಿಕೊಡುತ್ತಾರೆ. ಬಳಿಕ ವರ್ತಕರೇ ಅದನ್ನು ನಡಿಸಿಕೊಳ್ಳಬೇಕು. ಇದು ಬಹಳ ಅವಶ್ಯವಾಗಿ ಆಗಬೇಕಾದ ವಿಚಾರವೆಂದು ಹೇಳಬಲ್ಲೆವು.

ವಿದ್ಯಾಭ್ಯಾಸದ ವಿಷಯಗಳು.

ಪ್ರಾ.—ಮೈಸೂರು ಸಂಸ್ಥಾನಕ್ಕೆ ಪ್ರತ್ಯೇಕವಾದ ಯೂನಿವರ್ಸಿಟಿಯನ್ನು ಸ್ಥಾಪಿಸಿಕೊಡಬೇಕು. ಇದು ಬಹಳ ದಿನಗಳಿಂದ ಚರ್ಚೆಯಲ್ಲಿದೆ.

ಉ.—ಈ ವಿಚಾರವನ್ನು ಚರ್ಚಿಸಿ ಗೊತ್ತುಮಾಡುವುದಕ್ಕೆ ಸರ್ಕಾರದವರು ಒಂದು ಕಮಿಟಿಯನ್ನು ಮಾಡಿದಾರೆ. ಯೋಚಿಸಿ ಬೇಗ ವ್ಯವಸ್ಥೆಮಾಡುತ್ತೇವೆ.

ಪ್ರಾ.—ಹೈಸ್ಕೂಲುಗಳಲ್ಲಿ ಯೋಗ್ಯರಾದ ಉಪಾಧ್ಯಾಯರನ್ನು ನೇಮಿಸಬೇಕು. ಕೆಲವರು ಕ್ಲಾಸಿನಲ್ಲಿ ಸಿಗರೇಟ್ ಸೇದುತ್ತಾರೆ; ಕೆಲವರು ವಿದ್ಯಾರ್ಥಿಗಳಿಗೆ ಕಾಸುಕೊಟ್ಟು ಅವರಿಂದ ಸಿಗರೆಟ್ ತರಿಸುತ್ತಾರೆ. ತನಿಖೆಮಾಡಿದರೆ ಇಂಥಾ ಉಪಾಧ್ಯಾಯರು ಶೇಕಡಾ 30 ರಷ್ಟು ಸಿಕ್ಕಬಹುದು. ಕೆಲವರು ಕ್ಲಾಸಿನಲ್ಲಿ ನಿದ್ದೆ ಮಾಡುತ್ತಾರೆ. ಇಂಗ್ಲಿಷ್ ಮತ್ತು ಸೈನ್ಸನ್ನು ಕ್ರಮವಾಗಿ ಹೇಳಿಕೊಡಬಲ್ಲವರು ಅಪರೂಪ. ಹೀಗೆಲ್ಲಾ ಡಿಸ್ಟ್ರಿಕ್ಟುಗಳಲ್ಲಿರುವ ಹೈಸ್ಕೂಲುಗಳು ತುಂಬಾ ಪರಿತಾಪಕರವಾದ ಸ್ಥಿತಿಯಲ್ಲಿವೆ. ಇದನ್ನು ಸರ್ಕಾರದವರು ಪರ್ಜವಿಟ್ಟು ಕ್ರಮಪಡಿಸದೆ ಅಲಕ್ಷ್ಯಮಾಡಿದರೆ ವಿದ್ಯಾರ್ಥಿಗಳು ಕೆಟ್ಟುಹೋಗುತ್ತಾರೆ.

ಉ.—ಅಂಥಾ ಸ್ಥಳಗಳಲ್ಲಿರುವ [illegible]ನುಷರು ಉಪಾಧ್ಯಾಯರ ಆ ರೀತಿಯಾದ ವರ್ತನವನ್ನು ಗುಟ್ಟಾಗಿ ಸರ್ಕಾರದವರಿಗೆ ತಿಳಿಸಿದಲ್ಲಿ ಅಂಥಾ ಉಪಾಧ್ಯಾಯರನ್ನು ತತ್‌ಕ್ಷಣ ಕಠಿಣವಾದ ಶಿಕ್ಷೆಗೆ ಗುರಿಮಾಡುವರು.

ಪ್ರಾ.—ಪಾಠಶಾಲೆಗಳಲ್ಲಿ ಓದತಕ್ಕ ಟೆಕ್ಸ್ಟ್ ಬುಕ್ಕುಗಳನ್ನು ಈಗ ಸರಿಯಾಗಿ ಚುನಾಯಿಸುವುದಿಲ್ಲ. ಪ್ರಜಾಪಕ್ಷದ ಮೆಂಬರುಗಳನ್ನು ಆ ಕಮಿಟಿಗೆ ಇನ್ನೂ ಹೆಚ್ಚಾಗಿ ಸೇರಿಸಬೇಕು. ಹುಡುಗರು ಸಣ್ಣಕ್ಷರದ ಪುಸ್ತಕಗಳನ್ನು ಓದಿ ಕಣ್ಣು ಕೆಡಿಸಿಕೊಳ್ಳುತ್ತಾರೆ.

ಉ.—ಆ ಕಮಿಟಿಗೆ ಯಾರನ್ನು ಸೇರಿಸಬೇಕೋ ಹೆಸರು ತಿಳಿಸಬಹುದು. ದೊಡ್ಡ ಅಕ್ಷರದ ಪುಸ್ತಕಗಳನ್ನು ಗೊತ್ತುಮಾಡುವಂತೆ ಆ ಕಮಿಟಿಗೆ ಬರೆಯುತ್ತೇವೆ.

ಪ್ರಾ.—ಟೆಕ್ಸ್ಟ್ ಬುಕ್ಕುಗಳನ್ನು ಬಹಳ ಬೇಗ ಬದಲಾಯಿಸುತ್ತಾರೆ. ಒಂದು ಸ್ಕೂಲಿನಲ್ಲಿರುವ ಪುಸ್ತಕವನ್ನು ಇನ್ನೊಂದು ಸ್ಕೂಲಿನಲ್ಲಿ ಇಟ್ಟಿಲ್ಲ. ಇದರಿಂದ ತಂದೆತಾಯಿಗಳು ಮಕ್ಕಳಿಗೆ ಪುಸ್ತಕ ಕೊಂಡುಕೊಡುವುದರಲ್ಲೇ ತಮ್ಮ ವರಮಾನವನ್ನು ಕಳೆಯಬೇಕಾಗಿದೆ.

ಉ.—ಇದೆಲ್ಲಾ ಯಥಾರ್ಥವೆಂದು ಒಪ್ಪಿಕೊಳ್ಳುತ್ತೇವೆ. ಆದರೆ ಟೆಕ್ಸ್ಟ್ ಬುಕ್ ಕಮಿಟಿಯವರು ಆಗಿಂದಾಗ್ಗೆ ಪುಸ್ತಕಗಳನ್ನು ಬದಲಾಯಿಸಬೇಕೆಂದು ಅಭಿಪ್ರಾಯಪಡುತ್ತಾರೆ. ಆದಾಗ್ಯೂ ಇನ್ನು ಮುಂದೆ ಒಂದು ವರುಷ ವಿಧಿಸಿದ ಪುಸ್ತಕಗಳನ್ನು ಮೂರು ವರುಷಗಳ ವರೆಗೆ ಬದಲಾವಣೆ ಮಾಡಕೂಡದೆಂದು ಹುಕುಂ ಕೊಡುತ್ತೇವೆ.

ಪ್ರಾ.—ಎ. ವಿ. ಸ್ಕೂಲುಗಳ ಉಪಾಧ್ಯಾಯರನ್ನು ಆಗಿಂದಾಗ್ಗೆ ವರ್ಗಮಾಡುತ್ತಾರೆ; ಇದನ್ನು ತಪ್ಪಿಸಿದರೆ ಅನುಕೂಲವಾದೀತು.

ಉ.—ಇನ್‌ಸ್ಪೆಕ್ಟರ್ ಜನರಲ್‌ರವರು ಮುಂದೆ ಹಾಗೆ ಬದಲಾವಣೆ ಮಾಡುವುದಿಲ್ಲವೆಂದು ಒಪ್ಪಿಕೊಂಡಿದಾರೆ.

ಪ್ರಾ.—ಹೈಸ್ಕೂಲ್ ಮತ್ತು ಕಾಲೇಜುಗಳಲ್ಲಿ ಸ್ಕೂಲ್ ಫೀ ದರಗಳನ್ನು ಕಡಮೆಮಾಡಬೇಕು. ಈಗಿನ ದರಗಳು ವಿದ್ಯಾಪ್ರಚಾರಕ್ಕೆ ಅಡ್ಡಿಯಾಗಿವೆ.

ಉ.—ಕಡಮೆಮಾಡಿದರೆ ಮದರಾಸ್ ಯೂನಿವರ್ಸಿಟಿಯವರು ಸಮ್ಮತಿಸುವುದಿಲ್ಲ. ನಮ್ಮ ಯೂನಿವರ್ಸಿಟಿ ಏರ್ಪಾಡಾದಾಗ ನೋಡೋಣ.

ಪ್ರಾ.—(1) ಇಂಗ್ಲಿಷ್ ಸ್ಕೂಲುಗಳಲ್ಲಿ ಫ್ರೀ ಮಾಡುವುದನ್ನು ಶೇಕಡ 20 ರಿಂದ 30 ಕ್ಕೆ ಹೆಚ್ಚಿಸಬೇಕು. (2) ಮಹಮದೀಯ ವಿದ್ಯಾರ್ಥಿಗಳಿಗೆ ಕಸಬು ದಾರಿ ಸ್ಕೂಲುಗಳಲ್ಲಿ ಈಗಿನ್ನಂತ ಹೆಚ್ಚು ಮಂದಿಗೆ ವೇತನಗಳನ್ನು ಕೊಡಬೇಕು.

ಉ.—(1) ಹೊರಗೆ ಇರುವುದಕ್ಕಿಂತ ನಮ್ಮ ದೇಶದಲ್ಲಿ ಫ್ರೀ ಮಾಡುವ ದರವು ಈಗಲೇ ಬಹಳ ಹೆಚ್ಚಾಗಿದೆ. (2) ಮಹಮದೀಯರು ಕೊಡುವ ತೆರಿಗೆ ಸ್ವಲ್ಪ. ಸಾಧ್ಯವಾಗುವ ಮಟ್ಟಿಗೂ ಅವರ ಹುಡುಗರಿಗೆ ವೇತನ ಕೊಡುವೆವು.

ಪ್ರಾ.—(1) ಸ್ಕೂಲ್ ಫೈನಲ್ ಪರೀಕ್ಷೆಗೆ ಹೋದ ವಿದ್ಯಾರ್ಥಿಗಳಿಗೆ ಬರೀ ನಂಬರುಗಳನ್ನು ಕೊಡುತ್ತಾರಲ್ಲದೆ ತೇರ್ಗಡೆ ಹೊಂದಿದರು, ಇಲ್ಲ ಎಂಬುವುದನ್ನು ಹೇಳುವುದಿಲ್ಲ. (2) ಇಂಟರ್‌ಮೀಡಿಯೆಟ್ ತರಗತಿಗಳಲ್ಲಿ ವಿದ್ಯಾರ್ಥಿಗಳಿಗೆ ಸೇರಲು ಸ್ಥಳವಿಲ್ಲವೆಂದು ಅನೇಕರನ್ನು ನಿರಾಕರಿಸುತ್ತಾರೆ.

ಉ.—(1) ಇದು ಸರ್ಕಾರದವರ ಆಲೋಚನೆಯಲ್ಲಿದೆ. (2) ಎಲ್ಲರಿಗೂ ಓದುವುದಕ್ಕೆ ಅವಕಾಶ ಮಾಡಿಕೊಡುತ್ತೇವೆ.

ಪ್ರಾ.—ವಿ. ಇ., ಹೋಬಳಿ ಮತ್ತು ಎ. ವಿ. ಸ್ಕೂಲ್ ಮಾಸ್ತರುಗಳ ಸಂಬಳಗಳನ್ನು ಬಡ್ತಿ ಮಾಡಿರುವುದನ್ನು ಬೇಗನೆ ಜಾರಿಗೆ ತರಬೇಕು.

ಉ.—ಆಗಬಹುದು, ಜಾಗ್ರತೆಪಡಿಸುತ್ತೇವೆ.

ಪ್ರ.—ಗ್ರಾಮ ಪಾಠಶಾಲೆಗಳಿಗೆ ಇಂಗ್ಲಿಷ್ ಉಪಾಧ್ಯಾಯನನ್ನು ನೇಮಿಸಬೇಕು.

ಉ.—ರೈತರ ಮಕ್ಕಳು 15 ಮಂದಿ ಯಾವ ಗ್ರಾಮದಲ್ಲಿ ಇಂಗ್ಲಿಷ್ ಓದುವುದಕ್ಕೆ ಸಿದ್ಧರಾಗಿದ್ದಾರೆಯೋ ಅಂಥಾ ಗ್ರಾಮಕ್ಕೆ ಇಂಗ್ಲಿಷ್ ಮಾಸ್ಟರನ್ನು ನೇಮಕ ಮಾಡಿಕೊಡುತ್ತೇವೆ.

ಪ್ರ.—ಸಂಸ್ಕೃತ ಕಾಲೇಜುಗಳಿಗೆ ಬ್ರಾಹ್ಮಣೇತರರನ್ನೂ ಸೇರಿಸಿಕೊಳ್ಳಬೇಕು.

ಉ.—ವೇದ ಮೊದಲಾದ ಮತಭಾಗಗಳ ವಿನಹ ಇತರ ಭಾಗಗಳನ್ನು ಕಲಿಯುವವರನ್ನು ಸರ್ಕಾರಿ ಪಾಠಶಾಲೆಗಳಿಗೆ ಸೇರಿಸಿಕೊಳ್ಳಬಹುದು; ಗ್ರಾಂಟು ಪಡೆಯುವ ಪಾಠಶಾಲೆಗಳಲ್ಲಿ ಆಗುವುದಿಲ್ಲ.

ಪ್ರ.—ವಿ. ಎ. ಸ್ಕೂಲುಗಳಲ್ಲಿ ಕನ್ನಡವನ್ನು ವಿದ್ಯಾರ್ಥಿಗಳೆಲ್ಲಾ ಅಗತ್ಯವಾಗಿ ಕಲಿಯಲೇಬೇಕೆಂದೂ, ಇಷ್ಟವುಳ್ಳವರು ಮಾತ್ರ ಇಂಗ್ಲಿಷ್ ಓದಬಹುದೆಂದೂ ರೂಲನ್ನು ಬದಲಾವಣೆ ಮಾಡಬೇಕು.

ಉ.—1911 ನೇ ಇಸವಿಯಲ್ಲಿ ಇದು ಆಗುವುದಿಲ್ಲವೆಂದು ಹುಕುಂ ಆಗಿದೆ. ಆದರೂ ಮುಂದಿನ ವರುಷದಿಂದ ಈ ಪ್ರಾರ್ಥನೆಯನ್ನು ಜಾರಿಗೆ ತರುವಂತೆ ಹುಕುಂ ಕೊಡುತ್ತೇವೆ.

ಪ್ರ.—ಲೋಅರ್ ಸೆಕೆಂಡರಿ ಪರೀಕ್ಷೆಯನ್ನು ಮೊದಲಿನಂತೆ ರೂಪಿಸಿ ಜಾರಿಗೆ ತರಬೇಕು. ಈಗ ಅನೇಕ ಬದಲಾವಣೆ ಮಾಡಿರುವುದರಿಂದ ರೈತರಿಗೂ ವರ್ತಕರಿಗೂ ಅನನುಕೂಲವಾಗಿದೆ.

ಉ.—ಮುಂದಿನ ವರುಷದಿಂದ ಆ ರೀತಿ ಬದಲಾಯಿಸಲಾದೀತು.

ಪ್ರ.—ಮೈಸೂರು ಇಂಜನಿಯರಿಂಗ್ ಸ್ಕೂಲಿನಲ್ಲಿ ಅಪ್ಪರ್ ಸಬಾರ್ಡಿನೇಟುಗಳನ್ನು ತರಪೇತುಮಾಡುವುದಕ್ಕೆ ತರಗತಿಗಳನ್ನು ಇಡಬೇಕು.

ಉ.—ಇದು ಅವಶ್ಯವೆಂದು ಕಾಣುತ್ತದೆ; ಸಾಧ್ಯವಾದಷ್ಟು ಬೇಗ ಮಾಡುತ್ತೇವೆ.

ಪ್ರ.—ವಿ. ವಿ. ಸ್ಕೂಲುಗಳಲ್ಲಿ ವಿದ್ಯಾರ್ಥಿಗಳಿಗೆ ಕೈಚಳಕವನ್ನು ಕಲಿಸುವುದಕ್ಕೆ ಸ್ಲಾಯಿಡ್ ಉಪಾಧ್ಯಾಯರನ್ನು ನೇಮಿಸಬೇಕು.

ಉ.—ಅಂಥಾ ಉಪಾಧ್ಯಾಯರು ದೊರೆತ ಹಾಗೆ ನೇಮಿಸುವೆವು.

ಪ್ರ.—ಮೈಸೂರು ಮಿಲಿಟರಿ ಇಲಾಖೆ ನೌಕರಮಾನ್ಯರುಗಳ ಮಕ್ಕಳ ವಿದ್ಯಾಭ್ಯಾಸವನ್ನು ಕ್ರಮಪಡಿಸಿ, ಅವರು ಅಭಿವೃದ್ಧಿಗೆ ಬರುವಂತೆ ಮಾಡಿಕೊಡಬೇಕು.

ಉ.—ಇದರ ಕ್ರಮಗಳನ್ನು ಯೋಚಿಸಿ ತಿಳಿಸಬೇಕೆಂದು ಮಿಲಿಟರಿ ಇಲಾಖೆಯವರಿಗೆ ಬರೆಯುತ್ತೇವೆ.

ಹಣಕಾಸಿನ ವಿಚಾರಗಳು.

ಪ್ರ.—ಗವರ್ನ್‌ಮೆಂಟಿನ ಹೆಚ್ಚು ಹಣಗಳನ್ನು ಪರದೇಶಗಳ ಬ್ಯಾಂಕುಗಳಲ್ಲಿ ಇಡುವುದಕ್ಕೆ ಪ್ರತಿಯಾಗಿ ನಮ್ಮ ಸಂಸ್ಥಾನದ ವ್ಯಾಪಾರ, ಕೈಗಾರಿಕೆ ಮುಂತಾದವುಗಳನ್ನು ಅಭಿವೃದ್ಧಿ ಮಾಡುವುದಕ್ಕೆ ವಿನಿಯೋಗಿಸಬೇಕು.

ಉ.—ಈಗ ಗವರ್ನ್‌ಮೆಂಟಿನವರು ವ್ಯಾಪಾರಾಭಿವೃದ್ಧಿಗೆ 10 ಲಕ್ಷ ರೂಪಾಯನ್ನು ಮೈಸೂರು ಬ್ಯಾಂಕಿಗೆ ಕೊಟ್ಟಿದ್ದಾರೆ. ಇದಲ್ಲದೆ ತಕಾವಿ ಸಾಲಗಳನ್ನೂ, ಕಸಬುಗಳ ಅಭಿವೃದ್ಧಿಗೆ ಸಾಲಗಳನ್ನೂ, ಅಡ್ವಾನ್ಸುಗಳನ್ನೂ ಕೊಡುತ್ತಿರುವೆವು.

ಪ್ರ.—ವಿದ್ಯೆ, ವೈದ್ಯ, ಈ ಮೊದಲಾದವುಗಳನ್ನು ಹೆಚ್ಚಾಗಿ ತೆರೆಯುವುದಕ್ಕಾಗಿ ಸರ್ಕಾರದವರು ವ್ಯವಸಾಯಗಾರರಲ್ಲದ ಪ್ರಜೆಗಳಿಗೆ ಆದಾಯದ ಮೇಲಣ ತೆರಿಗೆಯನ್ನು (ಇನ್‌ಕಂ ಟ್ಯಾಕ್ಸ್) ಹಾಕಿ ಹಣವನ್ನು ಒದಗಿಸಬಹುದು. ವ್ಯವಸಾಯಗಾರರು ಈಗ ಕೊಡುತ್ತಿರುವ ಹಣದಿಂದ ಸರ್ಕಾರಿ ಅಧಿಕಾರಿಗಳೂ, ವಕೀಲರೂ, ವರ್ತಕರೂ, ಮಾರ್ವಾಡಿಗಳೂ ಅಲ್ಲಿಯ ಎಲ್ಲಾ ಸೌಕರ್ಯಗಳನ್ನೂ ಅನುಭವಿಸುತ್ತಿದ್ದಾರೆ. ಇವರು ಸರ್ಕಾರಕ್ಕೆ ಯಾವ ತರದ ತೆರಿಗೆಯನ್ನೂ ಕೊಡುತ್ತಾ ಇಲ್ಲ. [ಕೆಲವು ಮೆಂಬರುಗಳು ಈ ಹೊಸ ಕಂದಾಯ ಹಾಕಬೇಕಾದ ಅಗತ್ಯವಿಲ್ಲವೆಂದೂ, ಇದರಿಂದ ಮಾನಸ್ಥರಾದ ಅನೇಕ ಪ್ರಜೆಗಳಿಗೆ ನಾನಾ ಬಗೆಯ ಮನೋವ್ಯಥೆಗಳು ಹುಟ್ಟುವವೆಂದೂ, ಈ ತೆರಿಗೆಯಿಂದ ಉತ್ಪತ್ತಿಯಾಗುವ ಸುಮಾರು ಒಂದೂವರೆ ಎರಡು ಲಕ್ಷ ರೂಪಾಯಿಯಿಂದ ಅಷ್ಟೇನೂ ಪ್ರಯೋಜನವಾಗದೆಹೋದರೂ ವಸೂಲಾತಿಯ ಕಿರಿಕಿಯು ವಿಶೇಷವಾಗಿರುತ್ತದೆಂದೂ ಹೇಳಿದರು.]

ದಿವಾನ್‌ರವರು-ಸಭೆಯಲ್ಲಿ ಎಷ್ಟು ಮಂದಿ ಈ ಕಂದಾಯ ಹಾಕಬೇಕೆನ್ನುವರೋ, ಎಷ್ಟು ಮಂದಿ ಬೇಡವೆನ್ನುವರೋ ನೋಡೋಣ ಎಂದು ಹೇಳಿದರು. ಲೆಕ್ಕವನ್ನು ನೋಡಿದಾಗ 60 ಮಂದಿ ಮೆಂಬರುಗಳು ಕಂದಾಯ ಹಾಕಬಹುದೆಂದು ಸಮ್ಮತಿಪಟ್ಟು ಕೈಯೆತ್ತಿದರು; ಕಂದಾಯ ಹಾಕಕೂಡದೆಂದು ಕೈಯೆತ್ತಿದವರು 61 ಮಂದಿ ಆದರು.

ಉ.—ಈಗ ಆದಾಯದ ಮೇಲಣ ತೆರಿಗೆ ಹಾಕಬಹುದೆಂದು ಈ ಸಭೆಯವರು ಒಪ್ಪಿದಂತಾಯಿತು. ಗವರ್ನ್‌ಮೆಂಟಿನವರು ಈ ತೆರಿಗೆಯನ್ನು ಹಾಕಬೇಕೆಂದು ತೀರ್ಮಾನ ಮಾಡಿದ ಪಕ್ಷದಲ್ಲಿ ಬ್ರಿಟಿಷ್ ಸೀಮೆಯಲ್ಲಿರುವ ದರಗಳಿಗಿಂತ ಕಡಮೆ ಮಾಡಿ ಹಾಕುವರು. ಮತ್ತು ಇದರಿಂದ ಉತ್ಪತ್ತಿಯಾಗುವ ಹಣವನ್ನು ವಿದ್ಯಾಭಿವೃದ್ಧಿಗಾಗಿ ವಿನಿಯೋಗಿಸುತ್ತಾರೆ.

ಪ್ರ.—ಸರ್ಕಾರಿ ನೌಕರರನ್ನು ಮಾತ್ರ ಸರ್ಕಾರದ ಜೀವವಿಮೆ ಕಂಪನಿಗೆ (ಲೈಫ್ ಇನ್ಷುರೆನ್ಸ್) ಸೇರಿಸಿಕೊಳ್ಳುತ್ತಾರೆ. ಸಮಸ್ತ ಪ್ರಜೆಗಳೂ ಸೇರಿಕೊಳ್ಳುವಂಥಾ ಕಂಪನಿಯನ್ನು ಮಾಡಬೇಕು. ಈಗ ಅನೇಕ ಜನರು ಮದರಾಸ್, ಬೊಂಬಾಯಿ ಮೊದಲಾದ ಕಡೆಗಳಲ್ಲಿರುವ ಕಂಪನಿಗಳಿಗೆ ದುಡ್ಡು ಹಾಕಿ ಆ ಕಂಪನಿಗಳ ಆದಾಯವನ್ನು ಹೆಚ್ಚಿಸುತ್ತಿದ್ದಾರೆ. ಸರ್ಕಾರದವರೇ ಅಂಥಾ ಕಂಪನಿ ಮಾಡಿ ಸಕಲ ಪ್ರಜೆಗಳಿಗೂ ಸೇರುವಂತೆ ಅವಕಾಶ ಮಾಡಿಕೊಟ್ಟಲ್ಲಿ ನಮ್ಮ ಸೀಮೆಯ ಹಣ ಹೊರಕ್ಕೆ ಹೋಗದಂತೆ ಆದೀತು. [ಎಲ್ಲಾ ಮೆಂಬರುಗಳೂ ಇದನ್ನು ಒಪ್ಪಿದರು.]

ಉ.—ಅಂಥಾ ಕಂಪನಿಯನ್ನು ಮಾಡಬೇಕೆಂದು ಆಲೋಚನೆ ನಡೆಯುತ್ತಿದೆ. ಜಾಗ್ರತೆಯಲ್ಲೇ ಏರ್ಪಾಡಾಗಬಹುದು.

ಪ್ರ.—ಮಲೆನಾಡು ಅಲೋಯನ್ಸನ್ನು ಕೆಲವು ನೌಕರರಿಗೆ ಕೊಡುತ್ತಾರೆ, ಕೆಲವರಿಗೆ ಕೊಡುವುದಿಲ್ಲ. ಎಲ್ಲರಿಗೂ ಕೊಡುವಂತೆ ಅಪ್ಪಣೆ ಆಗಬೇಕು.

ಉ.—ಈ ವಿಚಾರವನ್ನು ಸರ್ಕಾರದವರು ಪುನರ್ವಿಮರ್ಶೆಮಾಡಬೇಕೆಂದು ಇಟ್ಟುಕೊಂಡಿದ್ದಾರೆ.

ಪ್ರ.—ಜಾಯಿಂಟ್ ಸ್ಟಾಕ್ ಕಂಪನಿಗಳಲ್ಲಿ ಷೇರುದಾರರಿಗೆ ಬ್ಯಾಂಕಿನವರು ಷೇರ್ ಹಣವನ್ನು ವಾಪಸು ಕೊಡಕೂಡದೆಂದು ರಿಜಿಸ್ಟ್ರಾರವರು 1914 ನೇ ಫೆಬ್ರವರಿ 27 ನೇ ತಾರೀಖಿನ ಸರ್ಕ್ಯುಲರ್ ಹುಕುಂ ಕೊಟ್ಟಿದ್ದಾರೆ. ಹೀಗೆ ಅಡ್ಡಿಮಾಡುವುದು ನ್ಯಾಯವಲ್ಲ. ಈ ಹುಕುಮನ್ನು ರದ್ದುಮಾಡಬೇಕು.

ಉ.—ವಿಚಾರಿಸಿ ಸರಿಪಡಿಸುತ್ತೇವೆ.

ಪ್ರ.—ಸರ್ಕಾರದವರು ತಮ್ಮ ನೌಕರರಿಗೆ ಅನುಕೂಲವಾದ ಮನೆಗಳನ್ನು ಕಟ್ಟಿಸಿಕೊಟ್ಟು, ಅವರ ಸಂಬಳದಲ್ಲಿ ಬಾಡಿಗೆಯಾಗಿ ಸ್ವಲ್ಪ ಹಿಡಿದುಕೊಳ್ಳುತ್ತಾ ಬರುವಂತೆ ಏರ್ಪಾಡಾದರೆ ನೌಕರರಿಗೆ ನಿಜವಾದ ಮನೆಗಳು ದೊರಕುವವು. ಸರ್ಕಾರದ ಹಣಕ್ಕೆ ಲೋಪವಾಗುವುದಿಲ್ಲ.

ಉ.—ಇದು ಸರ್ಕಾರದವರಿಂದ ಆಗತಕ್ಕ ಕೆಲಸವಲ್ಲ.

ಪ್ರ.—ಮಹಮದಿಯರಲ್ಲಿ ಪರಸ್ಪರ ಸಹಾಯಕ ಸಂಘಗಳನ್ನು ಸ್ಥಾಪಿಸುವುದಕ್ಕೆ ಒಬ್ಬ ಮಹಮದಿಯ ವಿದ್ಯಾವಂತನನ್ನು ನೇಮಿಸಿಕೊಡಬೇಕು.

ಉ.—ಬಿ. ಎ. ಪರೀಕ್ಷೆಕೊಟ್ಟಿರುವಂಥಾ ಮಹಮದಿಯನು ಸಿಕ್ಕಿದರೆ ಈ ಕೆಲಸಕ್ಕಾಗಿ ನೇಮಕಮಾಡುವೆವು.

ಎಕ್ಸೈಸ್ ವಿಚಾರಗಳು.

ಪ್ರ.—ಎಕ್ಸೈಸ್ ರೂಲಿನಲ್ಲಿ ದುಕಾನ್‌ದಾರನ ಅಪರಾಧಕ್ಕೆ ಇಜಾರದಾರನನ್ನು ಗುರಿಮಾಡಿರುವುದನ್ನು ಬದಲಾವಣೆ ಮಾಡಿಸಿಕೊಡಬೇಕು.

ಉ.—ಲೈಸೆನ್ಸ್ ಪಡೆದವನು ಜವಾಬ್ದಾರನಾಗಿರಬೇಕಾದದ್ದೇ ನ್ಯಾಯ.

ಪ್ರ.—ಕಂಟ್ರಾಕ್ಟುದಾರನು ತಿಂಗಳ ಹಣವನ್ನು ಮಾರನೇ ತಿಂಗಳ 10 ನೇ ತಾರೀಖಿನೊಳಗೆ ಕಟ್ಟಬಹುದೆಂಬ ವಿಧಿ ಇತ್ತು. ಈಗ ಅದನ್ನು ತಪ್ಪಿಸಿ ತಿಂಗಳ ಹಣವನ್ನು ಅದೇ ತಿಂಗಳ 20 ನೇ ತಾರೀಖಿನೊಳಗೆ ಪಾವತಿಮಾಡಬೇಕೆಂದೂ, ಆ ತರುವಾಯ ಬಡ್ಡಿ ಸೇರಿಸಿಕೊಡಬೇಕೆಂದೂ, ತಿಂಗಳ ಕೊನೆಯೊಳಗೆ ಪಾವತಿಮಾಡದಿದ್ದರೆ ದುಸರಾ ಹರಾಜು ಹಾಕಬೇಕೆಂದೂ ರೂಲನ್ನು ಮಾಡಿದ್ದಾರೆ. ಇದು ಕಂಟ್ರಾಕ್ಟುದಾರರಿಗೆ ಬಹಳ ಇಕ್ಕಟ್ಟಾಗಿದೆ. ಪೂರ್ವದಲ್ಲಿದ್ದ ರೂಲನ್ನು ಜಾರಿಯಲ್ಲಿ ತರುವಂತೆ ಹುಕುಂ ಆಗಬೇಕು.

ಉ.—ಒಳ್ಳೇದು, ವಿಚಾರಿಸಿ ಸರಿಪಡಿಸುತ್ತೇವೆ.

ಪ್ರ.—ಇನಾಂದಾರರಿಗೆ ಸೇಂದಿ ಉತ್ಪತ್ತಿಯನ್ನು 1897 ನೇ ಇಸವಿಯಿಂದ ಸರ್ಕಾರದವರು ಸರಿಯಾಗಿ ಬಟವಾಡೆ ಮಾಡುತ್ತಾ ಇಲ್ಲ. ಎಷ್ಟು ಅರ್ಜಿ ಬರೆದುಕೊಂಡರೂ 13 ನೇ ರೂಲು ಬದಲಾವಣೆಯಾಗಬೇಕೆಂದು ಹೇಳಿ ನಾವಕಾಶ ಮಾಡುತ್ತಿದ್ದಾರೆ. ಸರ್ಕಾರದವರು ಇನಾಂದಾರರಿಂದ ಬರಬೇಕಾದ ಹಣವನ್ನು ಜಪ್ತಿ ಹರಾಜು ಕ್ರಮ ನಡಿಸಿ ಕೂಡಲೆ ವಸೂಲ್ಮಾಡಿಕೊಳ್ಳುತ್ತಾರೆ. ಸರ್ಕಾರದಿಂದ ಇನಾಂದಾರರಿಗೆ ಸಲ್ಲಬೇಕಾಗಿರುವ ಹಣವನ್ನು ಪಾವತಿ ಮಾಡದೆ ಇರುವರು. ಆ 13 ನೇ ರೂಲನ್ನು ಬದಲಾಯಿಸಿ ಕೊಡಬೇಕು.

ಉ.—ಸರ್ಕಾರದವರ ಆಲೋಚನೆಯಲ್ಲಿದೆ; ಮಾಡಿಕೊಡುತ್ತೇವೆ.

ಪ್ರ.—ಸೇಂದಿ ದುಕಾನುಗಳ ಹರಾಜನ್ನು ಪ್ರತಿ ವರುಷವೂ ಮಾಡೋಣದಿಂದ ಅನೇಕರು ನಷ್ಟ ಪಡುವರು. ಐದು ವರುಷಕ್ಕೊಂದು ಸಲ ಹರಾಜು ಮಾಡಿಸುವಂತೆ ಹುಕುಂ ಕೊಡಬೇಕು.

ಉ.—ಈಗ 15 ತಾಲ್ಲೂಕುಗಳಲ್ಲಿ 3 ವರುಷಕ್ಕೊಂದು ಸಲ ಹರಾಜು ಹಾಕುವ ಪದ್ಧತಿಯನ್ನು ಇಟ್ಟಿವೆ. ಕ್ರಮೇಣ ಇತರ ಕಡೆಗಳಲ್ಲೂ ಆ ರೀತಿ ಮಾಡುವೆವು.

ಮರಾಮತ್ ವಿಚಾರಗಳು

ಪ್ರ.—ಸಂಸ್ಥಾನದಲ್ಲಿ ಪಬ್ಲಿಕ್ ರಸ್ತೆಗಳು ಕೆಟ್ಟು ಹೋಗಿವೆ; ಅವುಗಳನ್ನೆಲ್ಲಾ ದುರಸ್ತು ಮಾಡಿಸಿ ಒಳ್ಳೇ ಸ್ಥಿತಿಯಲ್ಲಿಡಿಸಬೇಕು.

ಉ.—ವಿಚಾರಿಸಿ ಸರಿಮಾಡಿಸುತ್ತೇವೆ.

ಪ್ರ.—ಮರಾಮತ್ ಇಲಾಖೆಯ ದರಗಳನ್ನು ಗೊತ್ತು ಮಾಡಿ ಅನೇಕ ವರುಷಗಳಾದವು. ಈಚೆಗೆ ಧಾರಣೆವಾಸಿಗಳೂ, ಕೂಲಿ ದರಗಳೂ ಬಹಳ ಹೆಚ್ಚಿರೋಣದರಿಂದ ಮೊದಲಿದ್ದ ರೇಟುಗಳನ್ನು ಈಗಿನ ಕಾಲಕ್ಕೆ ತಕ್ಕಂತೆ ಬದಲಾಯಿಸಿ ಹೆಚ್ಚಿಸಬೇಕು.

ಉ.—ಆ ಇಲಾಖೆಯವರಿಗೆ ಈ ವಿಚಾರ ತಿಳಿದಿದೆ; ಬದಲಾವಣೆ ಮಾಡಬೇಕೆಂದು ಯೋಚಿಸುತ್ತಿದ್ದಾರೆ.

ಪ್ರ.—ಕೆರೆ ಏರಿಗಳು ಕಿರಿದಾಗಿರುವುದರಿಂದ ಗಾಡಿಗಳೂ ಎತ್ತುಗಳೂ ಅಚೆ ಈಚೆ ಬಿದ್ದು ಬಹಳ ನಷ್ಟವಾಗುತ್ತದೆ. ಅಂಥಾ ಎಲ್ಲಾ ಏರಿಗಳಿಗೂ ಉದ್ದಕ್ಕೂ ಕಟಕಟೆಗಳನ್ನು ಹಾಕಿಸಬೇಕು. ಡಿಸ್ಟ್ರಿಕ್ಟ್ ಬೋರ್ಡಿನವರೇ ಇದನ್ನು ಮಾಡಿಸಿಕೊಳ್ಳತಕ್ಕದ್ದಾಗಿದ್ದರೂ ಅಲ್ಲಿ ಹಣ ಅನುಕೂಲವಾಗುವುದಿಲ್ಲ.

ಉ.—ಇದು ವಿಚಾರಣೀಯ, ಯೋಚಿಸುತ್ತೇವೆ. ಡೆಪ್ಯುಟಿ ಕಮಿಷನರಿಗೆ ಬರೆದುಕೊಂಡರೆ ಅವರು ಶಿಫಾರಸು ಮಾಡುವರು. ಹಣ ಅನುಕೂಲವಾದ ಹಾಗೆ ಮಾಡಿಸುತ್ತೇವೆ.

ರೈಲ್ವೆ ವಿಚಾರಗಳು.

ಪ್ರ.—(1) ಮಲೆನಾಡಿನಲ್ಲಿ ರೈಲ್ ರಸ್ತೆಗಳನ್ನು ಹೆಚ್ಚಾಗಿ ಹಾಕಿಸಬೇಕು; (2) ಹಾಸನದಿಂದ ಮಂಗಳೂರಿಗೆ ರೈಲ್ ರಸ್ತೆ ಆಗಬೇಕು; (3) ಚಿಕ್ಕಜಾಜೂರಿನಿಂದ ಚಿತ್ರದುರ್ಗ, ಚಳ್ಳಕೆರೆ, ಮೊಳಕಾಲ್ಮೂರು, ರಾಯದುರ್ಗಗಳ ಮೇಲೆ ಬಳ್ಳಾರಿಗೆ ರೈಲು ಹಾಕಿದರೆ ವ್ಯಾಪಾರ ಬಹಳ ಹೆಚ್ಚಾಗುತ್ತದೆ; (4) ಮೈಸೂರು ರೈಲ್ ಗಾಡಿಗಳಲ್ಲಿ ಪ್ರಯಾಣಿಕರ ಸೌಕರ್ಯಗಳನ್ನು ನೋಡಿಕೊಳ್ಳುವುದಕ್ಕೆ ಸ್ಪೆಷಲ್ ಅಧಿಕಾರಿಗಳನ್ನು ನೇಮಕ ಮಾಡಬೇಕು; (5) ಮೈಸೂರು ಬೆಂಗಳೂರು ರೈಲ್ ಗಾಡಿಗಳಲ್ಲಿ ಇಂಟರ್‌ಮೀಡಿಯೇಟ್ ಎಂಬ ಇನ್ನೊಂದು ತರಗತಿಯನ್ನು ಕಲ್ಪಿಸಬೇಕು; (6) ಬೆಂಗಳೂರಿಗೂ ಶಿವಮೊಗ್ಗೆಗೂ ಹೋಗಿ ಬರುವ ರೈಲ್ ಗಾಡಿಗಳಲ್ಲಿ ಮಧ್ಯೆ ಗಾಡಿ ಬದಲಾಯಿಸದಂತೆ ಥ್ರೂ ಗಾಡಿಯನ್ನು ಹಾಕಿಸಿಕೊಡಬೇಕು; (7) ರೈಲ್ ಗಾಡಿಗಳಲ್ಲಿ 3 ನೇ ತರಗತಿಯ ಪ್ರಯಾಣಿಕರ ಅಪಾರವಾದ ಕಷ್ಟ ಅನನುಕೂಲಗಳನ್ನು ನಿವಾರಣೆ ಮಾಡಿಕೊಡಬೇಕು.

ಉ.—ಇವುಗಳನ್ನೆಲ್ಲಾ ದಿವಾನ್‌ರವರು ವಿಚಾರಮಾಡಿ ಇತ್ಯರ್ಥಪಡಿಸುತ್ತೇವೆಂದು ಹೇಳಿ ಗುರುತು ಮಾಡಿಕೊಂಡರು.

ವೈದ್ಯ ಇಲಾಖೆಯ ವಿಷಯಗಳು.

ಪ್ರ.—ಆಸ್ಪತ್ರೆಗಳ ಸಬ್ ಅಸಿಸ್ಟೆಂಟ್ ಸರ್ಜನ್‌ರುಗಳು ಅಮಲ್ದಾರರೇ ಮುಂತಾದ ಅನುಕೂಲಸ್ಥರ ಮನೆಗಳಿಗೆ ಹೋಗಿ ಫೀಜು ಕೇಳದೆ ಚಿಕಿತ್ಸೆಮಾಡುವರು. ಗ್ರಾಮಾಂತರದಲ್ಲಿ ಸಂಚಾರ ಮಾಡಿ ಪ್ರತಿಫಲವೇನೂ ಕೇಳದೆ ಬಡರೋಗಿಗಳಿಗೆ ಚಿಕಿತ್ಸೆ ಮಾಡುವಂತೆ ಆಗಬೇಕು. ಅವರು ಅನುಕೂಲಸ್ಥರ ಮನೆಗಳಿಗೆ ಹೋಗುತ್ತಾರಾದದ್ದರಿಂದ ಆಸ್ಪತ್ರೆಗೆ ಹೋಗುವ ರೋಗಿಗಳ ವಿಷಯದಲ್ಲಿ ಅನಾದರಣೆ ಮಾಡುತ್ತಾರೆ. ಇದನ್ನು ತಪ್ಪಿಸಬೇಕು.

ಉ.—ಗುರುತು ಮಾಡಿಕೊಂಡಿದ್ದೇವೆ. ಇದನ್ನು ಕ್ರಮಪಡಿಸುವಂತೆ ತಿಳಿಸುವೆವು.

ಪ್ರ.—ಆಯುರ್ವೇದ ವೈದ್ಯಶಾಲೆಯನ್ನು ಮಲೆನಾಡು ಪ್ರಾಂತ್ಯಗಳಲ್ಲಿ ಹೆಚ್ಚು ಮಾಡಿ, ವೈದ್ಯರಿಗೂ ಬಡ್ತಿ ಮೊದಲಾದ ರಿಯಾಯಿತಿಗಳನ್ನು ಕಲ್ಪಿಸಬೇಕು.

ಉ.—ಸ್ಥಳೀಯ ದೊಡ್ಡ ಮನುಷ್ಯರೂ ಪುಣ್ಯವಂತರೂ ಅಂಥಾ ವೈದ್ಯಶಾಲೆಗಳಿಗೆ ಸಹಾಯ ಮಾಡಿ ಪ್ರಾರಂಭಿಸಿದರೆ ಸರ್ಕಾರದಿಂದ ಬೇಕಾದ ಸೌಕರ್ಯಗಳನ್ನು ಒದಗಿಸಬಹುದು.

ಪ್ರ.—ಮಲೆನಾಡು ಅಭಿವೃದ್ಧಿಯ ವಿಚಾರಣಾ ಕಮಿಟಿಯವರು ಮಾಡತಕ್ಕ ಕಾರ್ಯಗಳನ್ನು ಪ್ರಜೆಗಳಿಗೆ ತಿಳಿಯುವಂತೆ ಸರ್ಕಾರದವರು ಪ್ರಕಟ ಮಾಡಿಸಬೇಕು. ಇದುವರೆಗೆ ನಡೆದಿರುವ ಕಾರ್ಯಗಳೇನೆಂಬುವುದು ಗೊತ್ತಾಗಲಿಲ್ಲ.

ಉ.—ಸರ್ಕಾರದವರು ಮಾಡಬೇಕೆಂದಿರುವ ಕಾರ್ಯಗಳ ವಿವರವನ್ನು ಪ್ರಕಟ ಮಾಡುವುದರಲ್ಲಿ ಅಡ್ಡಿಯೇನೂ ಇಲ್ಲ.

ಮುಜರಾಯಿ ವಿಚಾರಗಳು.

ಪ್ರ.—ಧರ್ಮದರ್ಶಿಗಳನ್ನು ನೇಮಕ ಮಾಡದೇನೂ, ಅವರ ಕರ್ತವ್ಯ ಮತ್ತು ಅಧಿಕಾರಗಳನ್ನು ಖಂಡಿತ ಮಾಡಿ ತಿಳಿಸದೇನೂ ಇರುವುದರಿಂದ ನಾನಾ ಅನನುಕೂಲಗಳುಂಟಾಗಿವೆ.

ಉ.—ಒಂದು ಕಮಿಟಿಯನ್ನು ಗೊತ್ತು ಮಾಡಿ ತನಿಖೆ ಮಾಡಿಸುತ್ತೇವೆ.

ಪ್ರ.—ಮುಜರಾಯಿ ಬಾಬಿನ ಕಂಟ್ರಾಕ್ಟುದಾರರಿಗೆ ಹಣ ಪಾವತಿ ಆಗುವುದು ಬಹಳ ನಾವಕಾಶ. ಗವರ್ನ್‌ಮೆಂಟಿನವರು ಬಿಲ್ ಸ್ಯಾಂಕ್ಷನ್ ಮಾಡಿದ ಹೊರ್ತು ಹಣ ಬರುವುದಿಲ್ಲ. ಆದಕಾರಣ ಅಂದಾಜಾ ಆದ ಹಣವನ್ನು ಡೆಪ್ಯುಟಿ ಕಮಿಷನರಿಗೆ ಕಳುಹಿಸಿದರೆ ಕಾಮಗಾರಿ ನಡೆದ ಹಾಗೆ ಅವರು ಹಣ ಕೊಡಲು ಅನುಕೂಲಿಸುತ್ತೆ. ಡೆಪ್ಯುಟಿ ಕಮಿಷನರು 250 ರೂಪಾಯಿ ವರೆಗೆ ಬಿಲ್ಲನ್ನು ಪಾವತಿ ಮಾಡುವಂತೆ ಅವರಿಗೆ ಯಖ್ತ್ಯಾರಿ ವಹಿಸಬೇಕು.

ಉ.—ವಿಚಾರಿಸಿ ಡೆಪ್ಯುಟಿ ಕಮಿಷನರೇ ಬಿಲ್ಲುಗಳನ್ನು ಪ್ಯಾಸ್‌ಮಾಡುವಂತೆ ಏರ್ಪಾಡು ಮಾಡುತ್ತೇವೆ.

ಪ್ರ.—ಛತ್ರಗಳಲ್ಲಿ ಹುಟ್ಟುವಳಿ ಆಗಿ ಖರ್ಚು ಜಾತಾ ಉಳಿಯುವ ಹಣವನ್ನು ಅದೇ ಸ್ಥಳದಲ್ಲಿ ಪ್ರಯಾಣಿಕರಿಗೆ ವಸತಿಗಳನ್ನು ಕಲ್ಪಿಸುವುದಕ್ಕೆ ಕಮಿಟಿಯವರಿಗೆ ಅಧಿಕಾರ ಕೊಡಬೇಕು.

ಉ.—ಮಾಗಡಿಯಲ್ಲಿ ಆ ರೀತಿ ಮಾಡಬಹುದೆಂದು ಹುಕುಂ ಕೊಡುತ್ತೇವೆ. ಇತರ ಕಡೆಗಳ ವಿಚಾರವನ್ನೂ ತಿಳಿಸಿದರೆ ಸಂದರ್ಭಾನುಸಾರ ವ್ಯವಸ್ಥೆಮಾಡಬಹುದು.

ಪ್ರ.—ಖಾಸಗಿ ಜನರು ಧರ್ಮಕಾರ್ಯಕ್ಕಾಗಿ ತರೀಬಂಜರ್ ಜಮೀನಿಗೆ ದರಖಾಸ್ತುಮಾಡಿದರೆ ಎಕರೆಗೆ 50 ರೂಪಾಯಿ ಕ್ರಯಕಟ್ಟಿ ಕೊಡಬೇಕು.

ಉ.—ಹಾಗೆ ಎಲ್ಲಾ ಕಡೆಯೂ ಮಾಡಲಾಗದು. ಸಂದರ್ಭಾನುಸಾರ ರಿಯಾಯಿತಿ ತೋರಿಸಬಹುದು.

ಪ್ರ.—ಮಹಮದೀಯ ಮುಜರಾಯಿ ಬಾಬುಗಳನ್ನು ಮೇಲ್ವಿಚಾರಣೆ ನೋಡಿಕೊಳ್ಳುವುದಕ್ಕೆ ಒಬ್ಬ ಮಹಮದೀಯ ಮುಜರಾಯಿ ಸೂಪರ್‌ವೈಜರನ್ನು ನೇಮಕಮಾಡಬೇಕು.

ಉ.—ಒಳ್ಳೇದು, ಯೋಚಿಸಿ ಮಾಡುತ್ತೇವೆ.

ಪ್ರ.—ಶ್ರೀರಂಗಪಟ್ಟಣದ ಗುಂಬಜ್ ಫಂಡಿನಿಂದ ಕೆಲವು ವಿದ್ಯಾರ್ಥಿಗಳನ್ನು ವೇತನಕೊಟ್ಟು ಉತ್ತರದೇಶಕ್ಕೆ ಕಳುಹಿಸಿ ಮುಸಲ್ಮಾನ್ ಮತ ಶಾಸ್ತ್ರಗಳಲ್ಲಿ ಪ್ರವೀಣರಾಗಿ ಬರುವಂತೆ ಮಾಡಬೇಕು. ಅಂಥವರನ್ನು ಮುಸ್ಲಿಂ ಮುಜರಾಯಿ ಮೇಲ್ವಿಚಾರಣೆಗೆ ನಾಜರ್, ದರೋಗ ಮೊದಲಾದ ಕೆಲಸಗಳಿಗೆ ನೇಮಿಸಬಹುದು.

ಉ.—ಇದಕ್ಕಾಗಿ ಕೆಲವು ವೇತನಗಳನ್ನು ಕೊಡುತ್ತೇವೆ.

ಪ್ರ.—ಕಾಶಿಯಲ್ಲಿರುವ ನಮ್ಮ ಮಹಾರಾಜರವರ ಧರ್ಮಸತ್ರದ ಕಾರುಬಾರುಗಳು ಅಲ್ಲಿನ ನೌಕರರಿಗೆ ಪ್ರಯೋಜನಕರವಾಗಿವೆಯಲ್ಲದೆ ಯಾತ್ರಿಕರಿಗೆ ಅನುಕೂಲವಾಗಿಲ್ಲ.

ಉ.—ವಿಚಾರಿಸಿ ಅನುಕೂಲಪಡಿಸುವಂತೆ ಏರ್ಪಾಡು ಮಾಡುತ್ತೇವೆ.

ಪ್ರ.—ಹೊಸ ಮ್ಯುನಿಸಿಪಲ್ ರೆಗ್ಯುಲೇಷನ್ ಪ್ರಕಾರ ಸತ್ರ, ದೇವಸ್ಥಾನ, ಮಸೀತಿಗಳಿಗೆ ನೀರಿನ ತೆರಿಗೆಯನ್ನು ಮಾಫ್ ಮಾಡುತ್ತಿದ್ದಾರೆ. ಹಾಗೆಯೇ ವಿದ್ಯುಚ್ಛಕ್ತಿಯ ದೀಪಗಳ ತೆರಿಗೆಯನ್ನೂ ಮಾಫ್ ಮಾಡಿಸಿಕೊಡಬೇಕು.

ಉ.—ಹೊಸದಾಗಿ ರೂಲನ್ನು ಮಾಡಲಾಗುವುದಿಲ್ಲ.

ಇತರ ವಿಚಾರಗಳು.

ಪ್ರ.—ಯೋಗ್ಯರಾಗಿಯೂ ಸಮರ್ಥರಾಗಿಯೂ ಇರುವ ಅಮಲ್ದಾರರಿಗೆ ಇನ್ನೂ ಹೆಚ್ಚಾಗಿ ಅ॥ ಕಮಿಷನರ ಕೆಲಸ ದೊರಕುವಂತೆ ರೂಲನ್ನು ಬದಲಾವಣೆ ಮಾಡಬೇಕು.

ಉ.—ಇದು ಸಾಧ್ಯವಲ್ಲ.

ಪ್ರ.—ಸಂಸ್ಥಾನದ ಆಯವ್ಯಯಗಳ ಅಂದಾಜು ಪಟ್ಟಿಗಳನ್ನು ಪ್ರತಿನಿಧಿ ಸಭೆಯಲ್ಲಿ ಚರ್ಚೆಗೆ ಇಟ್ಟು ಸಭೆಯ ಅಭಿಮತವನ್ನು ತಿಳಿದರೆ ಸರ್ಕಾರದ ಕಾರುಬಾರುಗಳು ಇನ್ನೂ ಪ್ರಚಾರಂಜಕವಾಗುವವು.

ಉ.—ಇದು ಯೋಚಿಸತಕ್ಕ ವಿಚಾರ.

ಪ್ರ.—ಈ ಪ್ರತಿನಿಧಿ ಸಭೆಯನ್ನು ವರುಷದಲ್ಲಿ ಎರಡನೇ ಸಲ ನಡಿಸುವಂತೆ ಏರ್ಪಾಡಾಗಬೇಕೆಂದು ಹಿಂದೆ ಮೆಂಬರುಗಳೆಲ್ಲಾ ಪ್ರಾರ್ಥಿಸಿಕೊಂಡದ್ದಕ್ಕೆ ಆಗಿನ ದಿವಾನ್‌ರವರು ಆಗಲಿ ಯೋಚಿಸುತ್ತೇವೆ ಎಂದು ಹೇಳಿದ್ದರು. ಇದನ್ನು ಜಾರಿಗೆ ಬರುವಂತೆ ಮಾಡಬೇಕು.

ಉ.—ಒಳ್ಳೇದು; ಗುರುತು ಮಾಡಿಕೊಂಡಿದ್ದೇವೆ.

ಪ್ರ.—ಸುಖಾರಿ ಸೆಸ್ಸಿನ ಉದ್ದೇಶ ನೆರವೇರಿದ ಕಾರಣ ಅದನ್ನು ಈಗ ವಜಾ ಮಾಡಿಬಿಡಬೇಕು.

ಉ.—ವಿಚಾರಿಸಿ ಇತ್ಯರ್ಥ ಮಾಡುವೆವು.

ಪ್ರ.—ಪ್ರತಿ ಒಂದು ತಾಲ್ಲೂಕ್ ಹೆಡ್‌ಕ್ವಾರ್ಟರಿಗೂ ತಂತೀ ವರ್ತಮಾನ ಹೋಗಿ ಬರುವಂತೆ ಸೌಕರ್ಯವನ್ನು ಕಲ್ಪಿಸಿಕೊಡಬೇಕು.

ಉ.—ಬ್ರಿಟಿಷ್ ಸರ್ಕಾರದವರ ಕೂಡ ಕಾಗದ ಪತ್ರಗಳನ್ನು ನಡಿಸುತ್ತಾ ಇದ್ದೇವೆ. ಇದು ನೆರವೇರಬಹುದು.

ಪ್ರ.—ಸರ್ಕಾರದವರು ಸರ್ಕೀಟು ಹೊರಡುವುದಕ್ಕೆ ಹಿಡಿಯುವ ಕೈತರ ಗಾಡಿಗಳಿಗೆ ಬಾಡಿಗೆ ದರಗಳನ್ನು ಗೊತ್ತುಮಾಡಿರುವುದು ಬಹಳ ಕಡಮೆ; ಹೆಚ್ಚಿಸಬೇಕಾದದ್ದು ಅವಶ್ಯ.

ಉ.—ಆಗಲಿ, ಮಾಡುತ್ತೇವೆ.

ಪ್ರ.—ಸರ್ಕಾರೀ ಬುಕ್ ಡಿಪೋದಲ್ಲಿ ಪುಸ್ತಕಗಳೇ ಇಲ್ಲವೆಂದು ಹೇಳುತ್ತಾರೆ. ವಿದ್ಯಾಭ್ಯಾಸ ನಡೆಯುವುದು ಬಹಳ ಕಷ್ಟ.

ಉ.—ಪುಸ್ತಕಗಳು ಡಿಪೋವಿಗೆ ಒದಗದೆ ಇದುವರೆಗೆ ತುಂಬಾ ತೊಂದರೆಯಾಗಿತ್ತು. ಇನ್ನು ಮುಂದೆ ಒಳದೇಶದ ಪ್ರಿಂಟಿಂಗ್ ಆಫೀಸುಗಳಲ್ಲೇ ಬೇಕಾದ ಸ್ಕೂಲ್ ಪುಸ್ತಕಗಳನ್ನು ಅಚ್ಚುಹಾಕಿಸಿಕೊಳ್ಳಬೇಕೆಂದು ಗವರ್ನ್‌ಮೆಂಟಿನವರು ಹುಕುಂ ಕೊಟ್ಟಿದ್ದಾರೆ. ಇನ್ನು ಮೇಲೆ ಈ ಕೊರತೆ ತಪ್ಪುವುದು.

ಪ್ರ.—ಸಿವಿಲ್ ಕೋರ್ಟುಗಳ ಹತ್ತಿರ ಸಾಕ್ಷಿಗಳೂ ಕಕ್ಷಿಗಾರರೂ ಬಿಸಿಲು ಮಳೆ ಗಾಳಿಗಳಲ್ಲಿ ಇರಬೇಕಾಗಿದೆ. ಅವರಿಗೆ ತಕ್ಕ ಸುರಕ್ಷಿತವಾದ ಕಟ್ಟಡಗಳನ್ನು ಸರ್ಕಾರದವರು ಕಟ್ಟಿಸಿಕೊಡಬೇಕು.

ಉ.—ಇದು ಅವಶ್ಯವೆಂದು ಕಾಣುತ್ತೆ; ಮಾಡುತ್ತೇವೆ.

ಚಿತ್ರದುರ್ಗ ಡಿಸ್ಟ್ರಿಕ್ಟ್ ವಿದ್ಯಾಭಿವೃದ್ಧಿ ಸಂಘವು.

ಈ ಸಂಘದ ಮೆಂಬರುಗಳು ಕಳೆದ ತಾ. 11 ನೇ ಭಾನುವಾರ ಮಧ್ಯಾಹ್ನ ತಿಂಗಳ ಗಟ್ಟಲೆ ಮೀಟಿಂಗನ್ನು ನಡಿಸಿದರು. ಸುಮಾರು 22 ಜನ ಉಪಾಧ್ಯಾಯರುಗಳೂ, 5-6 ಜನ ರೈತರೂ, ಅನೇಕ ವಿದ್ಯಾರ್ಥಿಗಳೂ ಹಾಜರಾಗಿದ್ದರು. ಉಪಾಧ್ಯಾಯರಿಗೆ ಸಂಬಂಧಪಟ್ಟ ಮೂರು ವಿಷಯಗಳು ಚರ್ಚಿಸಲ್ಪಟ್ಟುವು. ಮುಖ್ಯವಾದ ಅಂಶಗಳನ್ನು ರಿಕಾರ್ಡುಮಾಡಿದರು. ಈ ಸಂಘದ ಸಂಬಂಧವಾದ ರೂಲ್ಸುಗಳನ್ನು ಪ್ರಿಂಟುಮಾಡಿಸಿ ನಡವಳಿಕೆ ಬಗ್ಗೆ ಪ್ರತಿಯೊಬ್ಬ ಮೆಂಬರಿಗೂ, ಮೆಂಬರಾಗಲು ಅಪೇಕ್ಷಿಸುವವರಿಗೂ ಕೊಡತಕ್ಕದ್ದೆಂದು ಅನೇಕರು ಒಪ್ಪಿದರು. ಸಧ್ಯದಲ್ಲಿ ಫಂಡು ಇಲ್ಲದ್ದರಿಂದ ಡಿಸೆಂಬರ್ ತಿಂಗಳೊಳಗಾಗಿ ಪ್ರಿಂಟು ಮಾಡಿಸಬೇಕೆಂದು ಇತ್ಯರ್ಥಮಾಡಲಾಯಿತು. ಕಿಂಡರ್‌ಗಾರ್ಟನ್ ಕ್ರಮದ ಮಾಡಲ್ ಕ್ಲಾಸೂ, ಮತ್ತು ಮ॥ ಡಿ. ಎಂ. ರಾಮಯ್ಯನವರ ಉಪನ್ಯಾಸವೂ ಮುಂದಿನ ಸಾರಿ ನಡಿಸತಕ್ಕ ಬಗ್ಗೆ ಏರ್ಪಾಡಾಯಿತು. ಹೈಸ್ಕೂಲ್ ಅ॥ ಮಾಸ್ಟರ್ ಮ॥ ಲಕ್ಷ್ಮೀಪತಯ್ಯನವರು ಸಂಘದ ಉದ್ದೇಶಗಳೂ ಬೋಧಕರ ಕರ್ತವ್ಯಗಳೂ ಎಂಬ ವಿಷಯದಲ್ಲಿ ಉಪನ್ಯಾಸಮಾಡಿದರು. ಅದರ ಸಾರಾಂಶವೇನೆಂದರೆ, ಉಪಾಧ್ಯಾಯರು ತಮ್ಮ ಕೆಲಸದ ಅನುಭವದಿಂದ ಬಾಲಕರ ಪಾಠಕ್ಕೆ ತಕ್ಕ ಪುಸ್ತಕಗಳನ್ನು ರಚಿಸಬೇಕೆಂಬ ಉದ್ದೇಶಗಳಿಂದ ಪ್ರೋತ್ಸಾಹ ಪಡಿಸುವಂತಿರುತ್ತಿತ್ತು. ಮುಂದಿನ ತಿಂಗಳ ಮೀಟಿಂಗು ನವೆಂಬರ್ ಮಾಹೆ 8 ನೇ ತಾರೀಖಿನಲ್ಲಿ ನಡೆಯತಕ್ಕದ್ದೆಂದು ಆ ದಿನದ ಕಾರ್ಯಗಳನ್ನು ಗೊತ್ತುಮಾಡಿ, ಉಪನ್ಯಾಸಕರಿಗೂ ಸಭಾಧ್ಯಕ್ಷರಿಗೂ ವಂದನೆಗಳನ್ನು ಹೇಳಿ ಮಂಗಳಗಾನದಿಂದ ಮೀಟಿಂಗನ್ನು ಮುಕ್ತಾಯಮಾಡಿದರು.

ವೀರಭದ್ರಪ್ಪ, ಜಾ. ಸೆಕ್ರೆಟರಿ.

ಒಳದೇಶದ ವೃತ್ತಾಂತಗಳು.

ಈ ವಾರ ನಮ್ಮ ಪತ್ರಿಕೆಯೂ ಹತ್ತು ಪುಟಗಳುಳ್ಳದ್ದಾಗಿದೆ.

ನಮ್ಮ ದಿವಾನ್‌ರವರು ತಮ್ಮ ಸೆಕ್ರೆಟರಿಗಳ ಸಮೇತ ರಾಜಧಾನಿಯಲ್ಲಿ ಇರುತ್ತಾರೆ.

ಯುದ್ಧದ ರಿಲೀಫ್ ಫಂಡಿಗೆ ಮಾಗಡಿ ತಾಲ್ಲೂಕಿನಲ್ಲಿ ರೂ. 11-4-0 ಯೂ, ಅಲ್ಲಿನ ಮ|| ಕೆ. ರಾಮಸ್ವಾಮಯ್ಯಂಗಾರ್ರ ಮುಖಾಂತರ ರೂ. 10-6-10 ಇದೂ ಚಂದಾ ವಸೂಲು ಬಂದಿದೆ ಎಂದು ಅಮಲ್ದಾರರು ತಿಳಿಸುತ್ತಾರೆ.

ಈಚೆಗೆ ಮಳೆಗಳು ಬರಲೇ ಇಲ್ಲವೆಂದು ಅನೇಕ ಸ್ಥಳಗಳಿಂದ ವರ್ತಮಾನ ಬಂದಿದೆ. ರಾಜಧಾನಿಯಲ್ಲೂ ಮೋಡವಾಡುವುದೇ ಹೊರತು ಮಳೆ ಬರಲಿಲ್ಲ. ಧಾರಣೆವಾಸಿಗಳು ಪ್ರಿಯವಾಗುತ್ತಿರುವವು. ಪ್ಲೇಗ್ ಉಪದ್ರದಲ್ಲಿ ದಿನವೂ ಒಬ್ಬಿಬ್ಬರು ಕಾಲವಾಗುತ್ತಿದ್ದಾರೆ.

ಮೈಸೂರು ಫಾರೆಸ್ಟ್ ಇಲಾಖೆಯಲ್ಲಿ ರೇಂಜರಾಗಿದ್ದ ಎ. ಎಸ್. ಕೋಸೀರ್ ಎಂಬಾತನು ಫಾರೆಸ್ಟ್ ಉತ್ಪತ್ತಿಯ ಹಣದಲ್ಲಿ ಸುಮಾರು 400 ರೂಪಾಯಿ ತಿಂದುಹಾಕಿರುವಂತೆ ಮೊಕದ್ದಮೆ ಆಗಿ ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ದರ್ಯಾಫ್ತಿಯಾಗುತ್ತಿದೆ.

ಕಳೆದ ವಿಜಯದಶಮಿ ದಿನ ರಾತ್ರಿ ರಾಜಧಾನಿಯ ಕೃಷ್ಣಸ್ವಾಮಿ ದೇವಸ್ಥಾನದಲ್ಲಿ ಮೇಲ್ಕಟ್ಟು ಬಟ್ಟೆಗಳಿಗೆ ಬೆಂಕಿ ಬಿದ್ದು ಉರಿದು ಹೋಯಿತು. ಅಲ್ಲಿನ ಕೆಲವು ಕಾಗದ ಪತ್ರಗಳು ಸ್ವೈರ್ಲೆಯಾಗಿ ಕಂಟ್ರೋಲರವರು ತನಿಖೆ ಮಾಡುತ್ತಿದ್ದಾರೆ. ಒಬ್ಬ ಶಿರಸ್ತೇದಾರರಿಗೆ ಸಸ್ಪೆಂಡ್ ಆಗಿದೆ ಎಂದು ತಿಳಿದುಬಂದಿದೆ.

ಬೆಂಗಳೂರು ಗುಡುಮಯ್ಯನ ಪೇಟೆಯಲ್ಲಿ ವೆಂಕೋಬರಾಯ, ರಾಮಕೃಷ್ಣರಾಯ ಎಂಬ ಇಬ್ಬರು ಹುಡುಗರು ಮದ್ದಿನಲ್ಲಿ ಬಾಣಗಳನ್ನು ಮಾಡುತ್ತಿದ್ದಾಗ ಅದು ಆಕಸ್ಮಾತ್ತಾಗಿ ಹತ್ತಿಕೊಂಡು ಅವರ ಮೈಯೆಲ್ಲಾ ಸುಟ್ಟು ಗಾಯಗಳಾದವು. ಅವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ಸಾಗಿಸಿ ಚಿಕಿತ್ಸೆಮಾಡುತ್ತಿದ್ದಾರೆ.

ತುಮಕೂರು ತಾಲ್ಲೂಕು ಬೆಳ್ಳಾವೆ ಹೋಬಳಿ ಕಾಗೆರೆ ಗ್ರಾಮದಲ್ಲಿ ಒಬ್ಬ ರೈತನು ತಾ. 10 ರಲ್ಲಿ ರಾಗಿ ತೆಗೆದುಕೊಳ್ಳಬೇಕೆಂದು ತನ್ನ ಗುಣಿ (ಹಗೇವು) ಬಾಯಿನ ಕಲ್ಲು ತೆರೆದನು. ಮೂರು ಮಂದಿ ಹುಡುಗರು ಗುಣಿಯೊಳಗೆ ಬೊಗ್ಗಿ ನೋಡುತ್ತಿರುವಾಗ ಅದರಲ್ಲಿದ್ದ ವಿಷಗಾಳಿಯು ಹತ್ತಿಕೊಂಡು ಉರಿ ಹೊರಟು ಆ ಮೂರು ಹುಡುಗರಿಗೂ ಅಪಾಯವನ್ನುಂಟುಮಾಡಿತೆಂದು ಒಬ್ಬ ಬಾತ್ಮೀದಾರರು ತಿಳಿಸುತ್ತಾರೆ.

ಮೈಸೂರು ಮಹಾರಾಣಿ ಕಾಲೇಜಿನಲ್ಲಿ ಸಹಾಯೋಪಾಧ್ಯಾಯಿನಿಯರಾಗಿರುವ ಶ್ರೀ ಭಾಗೀರಥಮ್ಮನವರು 20 ವರುಷಗಳಿಂದ ಅಲ್ಲಿ ವಿದ್ಯಾರ್ಥಿನಿಯಾಗಿದ್ದಾರಭ್ಯ ತಮಗೆ ಬರುತ್ತಿದ್ದ ವೇತನದಲ್ಲೂ, ಈಚೆಗೆ ತಮ್ಮ ಸಂಬಳದಲ್ಲೂ ಸ್ವಲ್ಪಸ್ವಲ್ಪವನ್ನು ಪುಣ್ಯ ಕೆಲಸಕ್ಕಾಗಿ ತೆಗೆದಿಡುತ್ತಾ ಬಂದರು. ಈಗ ಇದು ಒಂದು ಸಾವಿರ ರೂಪಾಯಿ ಆದದ್ದರಿಂದ ಅದನ್ನು ಇನ್‌ಸ್ಪೆಕ್ಟರ್ ಜನರಲ್ ರವರಿಗೆ ವಹಿಸಿ, ಅದರ ಉತ್ಪತ್ತಿಯಲ್ಲಿ ಬಾಲಕಿಯರಿಗೆ ಪ್ರತಿ ವರುಷವೂ ಎರಡು ಬಹುಮಾನಗಳನ್ನು ಕೊಡುತ್ತಾ ಬರಬೇಕೆಂದು ಕೇಳಿಕೊಂಡಿದ್ದಾರೆ. ಈಕೆಯ ವರ್ತಮಾನವೂ ಧರ್ಮ ವೃತ್ತಿಯೂ ಇತರರಿಗೆ ಒಳ್ಳೇ ಮೇಲ್ಪಂಕ್ತಿಯಾಗಿದೆ.

ರಾಜಧಾನಿಯ ಕಿಪ್ಪಡುಮೂಗರ ಮತ್ತು ಕುರುಡರ ಪಾಠಶಾಲೆಯಲ್ಲಿ ಸುಮಾರು ಎರಡು ವರುಷಗಳಿಂದ ಹೆಡ್ ಮಾಸ್ಟರಾಗಿದ್ದ ಮ|| ಬಿ. ಕೃಷ್ಣಪ್ಪ, ಎಂ. ಎ. ಯವರಿಗೆ ಬಡ್ತಿಯಿಂದ ಇನ್‌ಸ್ಪೆಕ್ಟರ್ ಜನರಲ್‌ರವರ ಆಫೀಸಿಗೆ ವರ್ಗವಾಯಿತು. ಆಕ್ಟಿಂಗ್ ಹೆಡ್ ಮಾಸ್ಟರೂ ಸಹಾಯೋಪಾಧ್ಯಾಯರೂ ಸೇರಿ ಮೊನ್ನೆ ಮಂಗಳವಾರ ಸಾಯಂಕಾಲ ಒಂದು ಸಂತೋಷ ಕೂಟವನ್ನು ಅದೇ ಸ್ಕೂಲಿನಲ್ಲಿ ನಡಿಸಿ ಮ|| ಬಿ ಕೃಷ್ಣಪ್ಪನವರನ್ನು ಸತ್ಕಾರ ಮಾಡಿದರು. ಆ ಸ್ಕೂಲಿನ ಬಹುಮಂದಿ ಹಿತಚಿಂತಕರಾದ ದೊಡ್ಡ ಮನುಷ್ಯರೂ ಕರೆಸಲ್ಪಟ್ಟು ಹಾಜರಾಗಿದ್ದರು. ಮ|| ಬಿ. ಕೃಷ್ಣಪ್ಪನವರ ಕಾಲದಲ್ಲಿ ಈ ಸ್ಕೂಲಿಗೆ ಕೆಲವು ಮೆಡಲುಗಳು ದೊರೆತು, ಅವರ ಫಂಡಿನಲ್ಲಿ ಸುಮಾರು 600 ರೂಪಾಯಿ ಸೇರಿತು.

ಮೈಸೂರು ಗೆಜೆಟ್ ಸಂಗ್ರಹ.

ಶ್ರೀಮನ್ ಮಹಾರಾಜರವರು ಅರಮನೆ ಮುಜರಾಯಿ ಬಾಬುಗಳನ್ನು ಮೇಲ್ವಿಚಾರಣೆಗೆ ನೋಡಿಕೊಳ್ಳುವುದಕ್ಕೆ ಮುಂದೆ ಹೇಳುವವರನ್ನು ಧರ್ಮದರ್ಶಿಗಳಾಗಿ ನೇಮಿಸಿರುತ್ತಾರೆ:—ಮ|| ಗಳಾದ ಅಂಬಳೆ ಅಣ್ಣಯ್ಯಪಂಡಿತರು, ಅರಮನೆ ಮಹಾವಿದ್ವಾನ್ ಲಕ್ಷ್ಮೀಪುರಂ ಶ್ರೀನಿವಾಸಾಚಾರ್ರು, ಅರಮನೆ ಮಹಾವಿದ್ವಾನ್ ಪಿ ರಾಮಚಂದ್ರಾಚಾರ್ರು, ಅರಮನೆ ಖಾಸ್ ಸಮುಖದ ಮೊಖ್ತೇಸರ್ ಎಂ. ಮುದ್ದುರಾಜೆಅರಸಿನವರು, ಮೈಸೂರು ವೆಸ್ಲಿಯನ್ ಮಿಷನ್ ಬಾಯ್ಸ್ ಸ್ಕೂಲ್ ಸೂಪರಿನ್‌ಟೆಂಡೆಂಟ್ ಟಿ. ಎಂ. ರಾಮಸ್ವಾಮಯ್ಯನವರು.

ರಿಟೈರ್ಡ್ ಅಮಲ್ದಾರ್ ಮ|| ಟಿ. ವೆಂಕಟರಾಮಯ್ಯನವರನ್ನು ಮತ್ತೆ ಬೆಂಗಳೂರು ಸಿಟಿ ಸ್ಪೆಷಲ್ ಮ್ಯಾಜಿಸ್ಟ್ರೇಟರಾಗಿ ನೇಮಿಸಿ, ಅವರಿಗೆ 2 ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ವಹಿಸಿದೆ.

ಕಂಟ್ರೋಲರ ಆಫೀಸಿನ ಮರಾಮತ್ ಮತ್ತು ರೈಲ್ವೆ ಬ್ರಾಂಚಿನ ಸೂಪರಿನ್‌ಟೆಂಡೆಂಟರಾದ ಮ|| ಕೆ. ಆರ್. ಕೃಷ್ಣಸ್ವಾಮಿ ಅಯ್ಯಂಗಾರ್ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಚೀಫ್ ಸೂಪರಿನ್‌ಟೆಂಡೆಂಟ್ ಮತ್ತು ಆಕ್ಟಿಂಗ್ ಅ|| ಕಂಟ್ರೋಲರ್ ಮ|| ಎನ್. ಕೃಷ್ಣಸ್ವಾಮಿರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಮ|| ಎಂ. ಎ. ರಂಗಾಚಾರ್ಯರು ಬದಲಿ ನೋಡತಕ್ಕದ್ದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಸ್ಯಾನಿಟರಿ ಆಫೀಸರ್ ಮ|| ಎಂ. ಜಿ. ಶ್ರೀನಿವಾಸ ಪೀರ್‌ಪುಟ್‌ರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಸಂಬಳವಿಲ್ಲದ ರಜಾ ಕೊಟ್ಟಿದೆ. ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರವರೇ ಅವರ ಕೆಲಸದ ಛಾರ್ಜನ್ನೂ ವಹಿಸತಕ್ಕದ್ದು.

ಕಡೂರ್ ಡಿಸ್ಟ್ರಿಕ್ಟ್ ರೆವಿನ್ಯೂ ಹೆಡ್ ಮುನ್‌ಷಿ ಮ|| ಸಿ. ಎನ್. ಗರುಡಯ್ಯಂಗಾರ್ರು 1916 ನೇ ಜೂನ್ ಆಖೈರ್ ತನಕ ಶೃಂಗೇರಿ ಜಹಗೀರಿಯ ಡೆಪ್ಯುಟಿ ಅಮಲ್ದಾರ್ ಮತ್ತು 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಇರತಕ್ಕದ್ದು.

ಪ್ರೊ|| ಅ|| ಕಮಿಷನರ್ ಮ|| ಜಿ. ರುದ್ರಪ್ಪನವರಿಗೆ 2 ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ವಹಿಸಿದೆ.

ಮಿ|| ಆರ್. ಡಬ್ಲ್ಯು. ಸಿಂಡ್‌ಸನ್‌ರವರು ಮತ್ತೊಂದು ಕೆಲಸದ ಮೇಲೆ ಇರುವಾಗ್ಗೆ ಮ|| ಎಸ್. ಡಿ. ಆಚಾರ್‌ಯವರು ಮೈಸೂರ್ ಸ್ಟೇಟ್ ಸೈನ್ಯಗಳ ಚೀಫ್ ವೆಟರ್ನರಿ ಆಫೀಸರಾಗಿರತಕ್ಕದ್ದು.

ಶ್ರೀಮನ್ ಮಹಾರಾಜರವರು ಯುದ್ಧಭೂಮಿಗೆ ಹೋಗುತ್ತಿರುವ ಮೈಸೂರು ಇಂಪೀರಿಯಲ್ ಸರ್ವಿಸ್ ಸೈನಿಕರಲ್ಲಿ ರಿಜಿಮೆಂಟಲ್ ದಫೇದಾರ್ ಮೇಜರ್ ಸುಂದರರಾಮ್‌ರವರನ್ನೂ, ದಫೇದಾರ್ ಅಬ್ದುಲ್ ಗಫೂರ್‌ರವರನ್ನೂ ಜಮಾದಾರರಾಗಿ ನೇಮಕ ಮಾಡಿದ್ದಾರೆ.

ಶ್ರೀಮನ್ ಮಹಾರಾಜರವರು ಮೈಸೂರು ಇಂಪೀರಿಯಲ್ ಸರ್ವಿಸ್ ಕುದುರೆ ಸೈನ್ಯವು ಮೈಸೂರು ಸಂಸ್ಥಾನದ ಹೊರಗೆ ಇರುವಾಗ್ಗೆ ಆ ಸೈನಿಕರಿಗೆ ದರ್ಯಾಫ್ತಿಯಿಂದ ಶಿಕ್ಷೆ ಮಾಡುವ ಅಧಿಕಾರವನ್ನು ಮೈಸೂರು ಸ್ಟೇಟ್ ಸೈನ್ಯಗಳ ಚೀಫ್ ಕಾಮಂಡಾಂಟರಿಗೆ ವಹಿಸಿರುತ್ತಾರೆ.

ಬೆಂಗಳೂರು ಸೆಂಟ್ರಲ್ ಕಾಲೇಜ್ ಉಪಾಧ್ಯಾಯರಾದ ಮ|| ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್ರಿಗೆ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಶಿವಮೊಗ್ಗೆಯಿಂದ ಸಾಗರಕ್ಕೆ ರಿಪ್ಪನ್‌ಪೇಟೆ, ಅನಂತಪುರಗಳ ಮೇಲೆ ರೈಲ್ ರಸ್ತೆ ಹಾಕುವುದಕ್ಕೂ; ರಿಪ್ಪನ್‌ಪೇಟೆಯಿಂದ ತೀರ್ಥಹಳ್ಳಿಗೆ ರೈಲ್ ರಸ್ತೆ ಹಾಕುವುದಕ್ಕೂ ಅಂದಾಜುಗಳು ಸರ್ಕಾರಕ್ಕೆ ಬೇಕಾಗಿವೆ. ಈ ರಸ್ತೆಗಳ ಸರ್ವೆ ಮಾಡುವ ಅಧಿಕಾರವನ್ನು ಅಧಿಕಾರಿಗೆ ವಹಿಸಲಾಗಿದೆ.

ಕಡೂರ್ ಡಿವಿಜನ್ ಅ|| ಇಂಜಿನಿಯರ್ ಮ|| ಎಚ್. ಆರ್. ವೆಂಕಟಸುಬ್ಬರಾಯರಿಗೆ ಹದಿನಾಲ್ಕು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮ|| ಎಂ. ಕೆ. ನರಸಿಂಹ ಅಯ್ಯರನ್ನು 2 ನೇ ಕ್ಲಾಸ್ ಸಬ್ ಅ|| ಇಂಜಿನಿಯರಾಗಿ ಮೂರು ವರುಷಕ್ಕೆ ನೇಮಿಸಿಕೊಂಡು, ನೀರಿನ ಸಪ್ಲೈ ಡಿವಿಜನ್‌ಗೆ ವರ್ಗಮಾಡಿದೆ.

ಬೊಂಬಾಯಿ ಮರಾಮತ್ ಇಲಾಖೆಯ ಮ|| ಎಸ್. ಸೀತಾರಾಮಯ್ಯನವರನ್ನು 3 ವರುಷಕ್ಕೆ ಹಂಗಾಮಿ ಸೂಪರ್‌ವೈಜರಾಗಿ ನೇಮಿಸಿ, ಮೈಸೂರು ಡಿಸ್ಟ್ರಿಕ್ಟಿಗೆ ವರ್ಗಮಾಡಿದೆ.

ಯಡೆಹಳ್ಳಿ ಸಬ್ ತಾಲ್ಲೂಕು ಡೆಪ್ಯುಟಿ ಅಮಲ್ದಾರ್ ಮ|| ಎಂ. ಅಹೋಬಲಶಾಸ್ತ್ರಿಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಇಪ್ಪತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಕೊಪ್ಪದ ಅಮಲ್ದಾರ್ರು ಸಬ್ ತಾಲ್ಲೂಕಿನ ಛಾರ್ಜನ್ನೂ ವಹಿಸತಕ್ಕದ್ದು.

ಸೆಂಟ್ ಜಾನ್ ಅಂಬ್ಯುಲೆನ್ಸ್ ಸಂಘ, ಮೈಸೂರು.

ಮೈಸೂರು ಸಂಸ್ಥಾನದಲ್ಲಿ ಮೇಲ್ಕಂಡ ಸಂಘದ ಸೆಕ್ರೆಟರಿಯವರಾದ ಸರ್ದಾರ್ ಎಂ. ಲಕ್ಷ್ಮೀಕಾಂತರಾಜೆಅರಸಿನವರು ತಮಗೆ ತಲಪಿರುವ ಚಂದಾ ದ್ರವ್ಯವನ್ನು ವಂದನಾಪೂರ್ವಕವಾಗಿ ಸ್ವೀಕರಿಸಿರುತ್ತಾರೆ. ಅವು ಯಾವವೆಂದರೆ—

ಮೈಸೂರು ಅರಸುಗಳ ವನಿತಾಸ್ತ್ರೀ ಸಂಘದ ಮೂಲಕ:—ಮಿಸೆಸ್ ಕಪಡಿ ರಾಜೆ ಅರಸ್ ರೂ. 40; ಮಿಸೆಸ್ ಎಚ್. ಲಿಂಗರಾಜೆ ಅರಸ್ ರೂ. 20; ಮಿಸೆಸ್ ಗೊಲ್ಲಹಳ್ಳಿ ಕೃಷ್ಣ ಅರಸ್ ರೂ. 7; ಮಿಸೆಸ್‌ಗಳಾದ ಪಾಳ್ಯದ ರಂಗಸ್ವಾಜಿ ಅರಸ್, ಹೆಬ್ಬಳ್ಳದ ದೊಡ್ಡ ಅರಸ್, ಬಿ. ಚಲುವೆ ಅರಸ್, ಟಿ. ಲಿಂಗರಾಜೆ ಅರಸ್, ಎಂ. ಸಿ. ಸುಬ್ಬರಾಜೆ ಅರಸ್, ಒಳಬಾಗಲ್ ದೇವಪ್ಪಾಜಿ ಅರಸ್, ದನಗಳ ದೇವರಾಜೆ ಅರಸ್, ಎಂ. ಸುಬ್ಬರಾಜೆ ಅರಸ್, ಸಿ. ಸಿದ್ದರಾಜೆ ಅರಸ್: ತಲಾ ರೂ. 5; ಅರಮನೆ ನಾಟಕದ ಕಂಪನಿಯವರು ನಾಟಕವನ್ನು ಆಡಿ ಕೊಟ್ಟದ್ದು ರೂ. 210-1-3 ಪೈ; ಕೋಲಾರದ ಚಿನ್ನದಗಣಿ ಸೆಂಟರ್ ನೌಕರಮಾನೇರು ಕೊಟ್ಟದ್ದು ರೂ. 60; ರತ್ನಾವಳಿ ಥಿಯಟ್ರಿಕಲ್ ಕಂಪನಿಯವರು ನಾಟಕವನ್ನು ಆಡಿ ಕೊಟ್ಟದ್ದು ರೂ. 587-13-0; ಮಹಾಮಾತೃಶ್ರೀ ಮಹಾರಾಣಿ ಸಿ. ಐ. ರವರು ರೂ. 250; ಮೊದಲೇ ಪಾವತಿ ಬಂದಿರುವುದು ರೂ. 903. ಜುಮ್ಲಾ ರೂ. 2,122-14-3 ಪೈ. ಮೊದಲು ಜಮಾ ಬಂದದ್ದು ರೂ. 918 ಎನ್ನುವುದು ತಪ್ಪು; ಅದುವರೆಗೆ ವಸೂಲಾಗಿದ್ದದ್ದು ರೂ. 903 ಮಾತ್ರ.

ಮೈಸೂರು ಸ್ತ್ರೀಯರ ಕೂಟವು.

ಮೈಸೂರು ಮಹಾರಾಣಿಯವರ ಕಾಲೇಜಿನಲ್ಲಿ ಕಳೆದ 3 ನೇ ತಾ. ಶನಿವಾರ ರಾಜಧಾನಿಯ ಎಲ್ಲಾ ಪಂಗಡಗಳ ಸುಮಾರು ಮುನ್ನೂರು ಮಂದಿ ಸ್ತ್ರೀಯರು ಸೇರಿ ಯುದ್ಧದ ರಿಲೀಫ್ ಫಂಡಿಗೆ ಸಹಾಯಮಾಡಬೇಕೆಂಬ ವಿಚಾರವನ್ನು ಕುರಿತು ಪರ್ಯಾಲೋಚನೆಮಾಡಿದರು. ಬ್ರಿಟಿಷ್ ರೆಸಿಡೆಂಟರವರ ಪತ್ನೀರವರು ದಯಮಾಡಿ ಸಭೆಯ ಅಗ್ರಾಸನವನ್ನು ವಹಿಸಲು ಅನುಕೂಲವಾಗಲಿಲ್ಲವೆಂದು ತಿಳಿದು ಸಭಿಕರೆಲ್ಲಾ ವಿಷಾದಪಟ್ಟರು. ದರ್ಬಾರ್ ಸರ್ಜನ್‌ರವರ ಪತ್ನೀರಾದ ಮಿಸೆಸ್ ಫ್ಲೂಕ್ಸ್‌ರವರು ಅಗ್ರಾಸನವನ್ನು ವಹಿಸಿ ಲೇಡಿ ಹೇಲಿಯವರ ಭಾಷಣವನ್ನು ಓದಿ ಹೇಳಿದರು. ಯುದ್ಧದಲ್ಲಿ ಕಾಯಿಲೆಯಾದವರಿಗೂ ಗಾಯಪಟ್ಟವರಿಗೂ ಉಪಚರಿಸುವುದಕ್ಕೆ ಬೇಕಾಗುವ ಉಪಕರಣಗಳನ್ನು ಸ್ತ್ರೀಯರು ಒದಗಿಸುವುದರಲ್ಲಿ ಉತ್ಸಾಹಶೀಲೆಯರಾಗಬೇಕೆಂದು ಮುಂತಾಗಿ ಅಪ್ಪಣೆಕೊಡಿಸಿದರು. ಆ ಭಾಷಣವನ್ನು ಶ್ರೀರುಕ್ಮಿಣಮ್ಮನವರು ಕನ್ನಡದಲ್ಲೂ, ಮಿಸ್ ಗಫೂರ್ ಬೀಯವರು ಉರುದುಭಾಷೆಯಲ್ಲೂ ಸಭಿಕರಿಗೆ ವಿವರವಾಗಿ ಹೇಳಿದರು. ಮಿಸ್ ಮೂರ್‌ಯವರು ಈ ನಗರದಲ್ಲಿ ಮನೆಮನೆಗೂ ಹೋಗಿ ಚಂದಾ ಕೂಡಿಸಬೇಕೆಂದೂ, ಬಡವರು ಕೊಡುವ ಆಣೆ ಕಾಸುಗಳೂ, ಭಾಗ್ಯವಂತರು ಕೊಡುವ ರೂಪಾಯಿಗಳೂ ಮೈಸೂರಿಗೆ ಕೀರ್ತಿಕರತಕ್ಕವುಗಳಾಗಿವೆ ಎಂದು ಸೂಚಿಸಿದ್ದನ್ನು ಸಭಿಕರು ಒಪ್ಪಿಕೊಂಡರು. ಮಿಸೆಸ್ ವೆದರಾಲ್‌ರವರು ಹಾಸನ ಡಿಸ್ಟ್ರಿಕ್ಟಿನ ಸ್ತ್ರೀಯರು ಈ ಫಂಡಿಗೆ ಹಣವನ್ನೂ ಬಟ್ಟೆಬರೆಗಳನ್ನೂ ಒದಗಿಸುವುದರಲ್ಲಿ ಉತ್ಸಾಹಪಟ್ಟ ವಿಚಾರವನ್ನು ವಿವರಿಸಿ ಹೇಳಿ, ರಾಜಧಾನಿಯಲ್ಲೂ ಬಟ್ಟೆಬರೆಗಳನ್ನು ಕೂಡಿಸುವುದಕ್ಕೋಸ್ಕರ ಒಂದು ಉಗ್ರಾಣವನ್ನು ಪ್ರಾರಂಭಮಾಡಬೇಕೆಂದು ಸೂಚಿಸಿದರು. ಶ್ರೀ ಸುಬ್ಬಮ್ಮನವರೂ, ಮಿಸ್ ತೂಕಿಂಬಾಬಿಯವರೂ ಈ ಏರ್ಪಾಡು ಅವಶ್ಯವಾಗಿ ಆಗಬೇಕೆಂದು ಹೇಳಿ ಅದರ ಉದ್ದೇಶ ಮುಂತಾದದ್ದನ್ನು ವಿವರಿಸಿದರು. ಮಿಷನ್ ಆಸ್ಪತ್ರೆಯ ಮಿಸ್ ವಾಟ್ಸ್‌ರವರು ಸಭೆಯಲ್ಲಿ ಒಂದು ಕಡೆ ಅಣಿಮಾಡಿ ಇಡಿಸಿದ್ದ ಬಟ್ಟೆಬರೆಗಳನ್ನು ಸ್ತ್ರೀಮಂಡಲಿಯವರೆಲ್ಲಾ ನೋಡಿ, ಅಂಥಾದ್ದನ್ನೇ ತಯಾರುಮಾಡಿಸುವುದಕ್ಕೆ ಅನೇಕರು ಚಂದಾ ಹಾಕಿದರು.

ಸೊಂಡೂರು ಸಂಸ್ಥಾನ.

ಸೊಂಡೂರಿನಲ್ಲಿ ಯುದ್ಧದ ರಿಲೀಫ್ ಫಂಡಿಗೆ ವಸೂಲಾಗಿರುವ ಹಣಗಳೆಷ್ಟೆಂದರೆ—ಸೊಂಡೂರು ಶ್ರೀಮನ್ ಮಹಾರಾಜರು ರೂ. 10; ಶ್ರೀಮನ್ ಮಹಾರಾಣಿಯವರು ರೂ. 10; ದಿವಾನರು ಮ|| ಎ. ಸುಬ್ರಾಯಮೊದಲಿಯಾರ್ರು ರೂ. 2; ಪಿ. ಚಂದಮ್ಮನವರೂ, ಕೆ. ಚಿದಾನಂದಪ್ಪನವರೂ ತಲಾ ರೂ. 1; ಒಂದು ರೂಪಾಯಿ ಒಳಗೆ ವಸೂಲಾಗಿರುವುದು ರೂ. 13-2-0; ಜುಮ್ಲಾ ರೂ. 37-2-0. ಇನ್ನೂ ಸ್ವಲ್ಪ ಹಣ ಕೂಡುವುದನ್ನು ನೋಡಿಕೊಂಡು ಒಂದು ಭಾಗವನ್ನು ಮೈಸೂರು ವೆ. ಮಿಷನ್ ದ್ವಾರ ರಿಲೀಫ್ ಫಂಡಿಗೂ, ಇನ್ನೊಂದು ಭಾಗವನ್ನು ಮಿಸ್ ಹಾಸ್ಕಾರ್ಡ್‌ರವರ ದ್ವಾರ ರೆಡ್ ಕ್ರಾಸ್ ಸೊಸೈಟಿಗೂ ಕಳುಹಿಸಬೇಕೆಂದಿದ್ದಾರೆ.

ತಾಲ್ಲೂಕು ವರ್ತಮಾನಗಳು.

ಮಧುಗಿರಿ.—ಒಂದೆರಡು ವಾರಗಳಿಂದ ಮಳೆ ಇಲ್ಲದೆ ಪೈರುಗಳು ಬಾಡಿಹೋಗಿದ್ದು ತಾ. 11 ನೇ ಭಾನುವಾರ ಸುಮಾರು ಒಂದು ಹದ ಮಳೆಯಾಗಿ ಪೈರುಗಳು ಚೆನ್ನಾಗಿವೆ. ಮುಂಗಾರು ಆಗಾಯ್ತು ಈ ತಾಲ್ಲೂಕಿಗೆ ಆಶ್ರಯವಾಗಿರತಕ್ಕ 3 ಕೆರೆಗಳಿಗೂ ನೀರು ಬರಲೇ ಇಲ್ಲ. ಗದ್ದೆ ಫಸಲಿಗೆ ಮಾರ್ಗವಿಲ್ಲ. ಧಾರಣೆವಾಸಿ ಕ್ಷಾಮವನ್ನೇ ಸೂಚಿಸುತ್ತಲಿದೆ. ಬಹಳ ಜನ ರೈತರು ಈಗಾಗಲೇ ಒಪ್ಪತ್ತು ತಿಂಡಿ ತಿನ್ನುವರು. ಸರ್ಕಾರದವರು ಈ ತಾಲ್ಲೂಕಿನಲ್ಲಿ ನಾದುರಸ್ತಾಗಿರುವ ಸಣ್ಣ ದೊಡ್ಡ ಕೆರೆಗಳನ್ನು ರಿಲೀಫ್ ಕಾಮಗಾರಿ ಮಾಡಿಸಿದರೆ ಅನೇಕ ಬಡಬಗ್ಗರಿಗೆ ಅನುಕೂಲವಾಗುವುದರಲ್ಲಿ ಸಂದೇಹವಿಲ್ಲ.—ಪ್ರಜೆಗಳ ಸೌಕರ್ಯಕ್ಕೆ ದಿವಾನ್ ಸಾಹೇಬರವರು ಬಂದಿದ್ದ ವೇಳೆ ಟವನ್ ಮಧ್ಯರಾಷ್ಟ್ರದಲ್ಲಿ ಒಂದು ರೀಡಿಂಗ್ ರೂಮ್ ಸ್ಥಾಪಿಸಬೇಕೆಂದು ಅಪ್ಪಣೆ ಕೊಡಿಸಿದ್ದನ್ನು ಮೆಂಬರುಗಳೂ ಪ್ಲೀಡರುಗಳೂ ಪ್ರಜೆಗಳೂ ಆಗ ಅನುಮೋದಿಸಿದರು. ಆದರೆ ಈ ತನಕ ಸರಿಯಾಗಿ ಆ ವಿಷಯದಲ್ಲಿ ಯಾವ ನಡವಳಿಕೆಯೂ ನಡಿಸಿದಂತೆ ತೋರುವುದಿಲ್ಲ. ಈಗಲಾದರೂ ಈ ವಿಷಯಕ್ಕೆ ಸಿಗಾ ಕೊಟ್ಟಾರೆಂದು ಹಾರೈಸುತ್ತೇವೆ.—ಟವನ್ ಸಲ್ಲಿರತಕ್ಕ ಪ್ರಜೆಗಳಿಗೆ ಕಳೆದ ಎರಡು ಸಾಲುಗಳಿಂದಲೂ ಮಳೆ ಹಿಂಗಿದ್ದರೋಣದರಿಂದ ಸಾಕಾಗುವಷ್ಟು ನೀರು ದೊರೆಕದೆ ಭಾವಿಗಳೆಲ್ಲಾ ಬತ್ತಿ ಹೋಗಿರುತ್ತವೆ. ಮ್ಯುನಿಸಿಪಾಲಿಟಿಯವರು ಗಮನಕೊಟ್ಟು ನೀರಿಗೆ ಅನುಕೂಲ ಪಡಿಸಿಕೊಡುತ್ತಾರೆಂದು ನಿರೀಕ್ಷಿಸುತ್ತೇವೆ.—ಕಸಬಾ ಸಮ್ಮತು ಪದೇರಹಳ್ಳಿ ಗ್ರಾಮದಲ್ಲಿ ಕಳೆದ ತಾ. 6 ರಲ್ಲಿ ಒಂದು ಸಭೆ ನಡೆದು, ಪ್ರಜೆಗಳು ನಮ್ಮ ಚಕ್ರವರ್ತಿಯವರಿಗೆ ಯುದ್ಧದಲ್ಲಿ ಜಯವಾಗಲೆಂದು ಪ್ರಾರ್ಥಿಸಿ, ರಿಲೀಫ್ ಫಂಡಿಗೆ 12 ರೂಪಾಯಿ ಚಂದಾ ಕೂಡಿಸಿದರು.

ಶ್ರೀರಂಗಪಟ್ಟಣ.—ಪ್ಲೇಗ್ ಜಾಡ್ಯವು ಶಲೆ ದೋರಿ ಆಗಲೇ 7-8 ಮರಣಗಳಾದವು. ಹೆಲ್ತ್ ಆಫೀಸರಾದ ಮ|| ಕೃಷ್ಣರಾಯರು ದಯಮಾಡಿಸಿ ಟವನ್ ಇನ್‌ಸ್ಪೆಕ್ಷನ್ ಮಾಡಿಕೊಂಡು ಹೋಗಿರುತ್ತಾರೆ.—ಹೆಣ್ಣು ಮಕ್ಕಳ ಪಾಠಶಾಲೆಯ ಪಕ್ಕದಲ್ಲಿ ಮ|| ನರಸಿಂಗರಾಯರು ಹಾಕಿಸಿದ್ದ ಹುಲ್ಲು ಸುಡೆಯಲ್ಲಿ ಕಳುವು ಮಾಡಿದವರನ್ನು ಪೋಲೀಸಿಗೆ ಕೊಟ್ಟು ಬಹುದಿನಗಳಾದಾಗ್ಯೂ ಫಲಿತಾಂಶ ಇನ್ನೂ ಗೊತ್ತಾಗಲಿಲ್ಲ. ಪೋಲೀಸ್ ಇನ್‌ಸ್ಪೆಕ್ಟರ್ ಮ|| ಎಂ. ಡಿ. ಕೃಷ್ಣಪ್ಪನವರು ಈ ಊರಿಗೆ ಬಂದಂದಿನಿಂದ ಪೋಲೀಸ್ ಏರ್ಪಾಡು ತೃಪ್ತಿಕರವಾಗಿರಲಿಲ್ಲವಾಗಿ ಅನೇಕ ಕಳ್ಳತನಗಳು ನಡೆದು ಒಂದಾದರೂ ಪತ್ತೆ ಆಗಲಿಲ್ಲ. ಇನ್‌ಸ್ಪೆಕ್ಟರ್ ಜನರಲ್ ಸಾಹೇಬರವರು ಕಾರಣವನ್ನು ಕೇಳಿದ್ದರಂತೆ. ಮ|| ಎಂ. ಡಿ ಕೃಷ್ಣಪ್ಪನವರು ಈಗ ವರ್ಗಪಟ್ಟಿರುತ್ತಾರೆ. ಇವರ ಸ್ಥಾನಕ್ಕೆ ಬರುವ ಮ|| ವಸಂತಕಾಳೋಜಿಯವರ ಕಾಲದಲ್ಲಿ ಇಂಥಾದ್ದಕ್ಕೆ ಅವಕಾಶ ದೊರೆಯಲಾರದೆಂದು ನಂಬಿರುತ್ತೇವೆ.—ವೈಸ್ ಪ್ರಸಿಡೆಂಟರವರು ಮೆಂಬರುಗಳ ಅಭಿಪ್ರಾಯವನ್ನನುಸರಿಸಿ ಮಾಡಬೇಕಾದ ಕಾರ್ಯಗಳನ್ನೂ ತಾವೇ ಮಾಡುತ್ತಿರುವುದರಿಂದ ಮೆಂಬರುಗಳಿಗೆ ಅಸಮಾಧಾನವುಂಟಾಗಿರುವಂತೆ ವರ್ತಮಾನವಿದೆ. ತಾಲ್ಲೋಕು ಕಚೇರಿಗೆ ದಕ್ಷಿಣ ಪಾರ್ಶ್ವದಲ್ಲಿರುವ ಮಸೀದಿಯ ಸುತ್ತಲೂ ಇರುವ ನಿವೇಶನದ ಪೈಕಿ ಕೆಲವು ಭಾಗವನ್ನು ಹರಾಜುಮಾಡಿಸಿರುವುದರಿಂದ ಮಸೀದಿಗೆ ಸಂಬಂಧಪಟ್ಟ ಜನಗಳಿಗೆ ಈ ಏರ್ಪಾಡು ಅತೃಪ್ತಿಯನ್ನುಂಟುಮಾಡಿದೆ. ಅಮಲ್ದಾರ್ರವರು ದೇವಸ್ಥಾನ, ಮಸೀದಿ ಮುಂತಾದವುಗಳಿಗೆ ಸಂಬಂಧಪಟ್ಟ ಸೊತ್ತುಗಳ ವಿಷಯದಲ್ಲಿ ಅಭಿಮಾನಶಾಲಿಗಳಾಗಿರುವುದು ಮೇಲು.—ನಲ್ಲಿಗಳ ಮೂಲಕ ನೀರನ್ನು ಒದಗಿಸದೆ ಇರುವುದು ತುಂಬಾ ಶೋಚನೀಯವಾಗಿದೆ.

ನಗರ ತಾ|| ಹುಮಚದಕಟ್ಟೆ.—ನಮ್ಮ ಅಮಲ್ದಾರ್ ಮೆ|| ಮೊಹಿದೀನ್ ಷರೀಫ್‌ರವರು ಇಲ್ಲಿ ಹೋಬಳಿ ಜಮಾಬಂದಿಯನ್ನು ಜರುಗಿಸಿದರು. ಈ ಸಂದರ್ಭದಲ್ಲಿ ಹಾಜರಾದ ರೈತರು, ಪಟೇಲರು ಮತ್ತು ದೊಡ್ಡಮನುಷ್ಯರುಗಳಿಗೆ ವಾಚಕಮಂದಿರ ಮತ್ತು ಕೋಆಪರೇಟಿವ್ ಸೊಸೈಟಿ ಪ್ರಯೋಜನ, ಮತ್ತು ಯುದ್ಧದ ರಿಲೀಫ್ ಫಂಡಿಗೆ ಹಣ ವಸೂಲ್ಮಾಡುವ ಏರ್ಪಾಡುಗಳನ್ನು ನಡಿಸಿದರು. ಹುಮಚದ ಶ್ರೀ ಮಠದ ಸ್ವಾಮಿಗಳವರು ಈ ಮೂರು ಕಾರ್ಯಗಳನ್ನೂ ಜರುಗಿಸಲು ಬಹಳ ಮುತುವರ್ಜಿ ವಹಿಸಿ ಜನಗಳಿಗೆ ತಿಳುವಳಿಕೆ ಕೊಟ್ಟದ್ದಲ್ಲದೆ, ಧರ್ಮರಕ್ಷಣಾರ್ಥವಾಗಿ ಕಾದಾಡುತ್ತಿರುವ ನಮ್ಮ ಸೈನಿಕರ ರಿಲೀಫ್ ಫಂಡಿಗಾಗಿ 200 ರೂಪಾಯಿ ಚಂದಾ ಕೊಟ್ಟಿರುತ್ತಾರೆ. ಇದಲ್ಲದೆ ಇತರರಿಂದ ಅಲ್ಪಸ್ವಲ್ಪದ ಮೇಲೆ 432 ರೂಪಾಯಿವರೆಗೆ ವಸೂಲು ಬಂದಿದೆ. ರೀಡಿಂಗ್ ರೂಮ್ ಸ್ಥಾಪಿಸಲು 30 ಮೆಂಬರು ಸೇರಿ 45 ರೂಪಾಯಿ ವಾರ್ಷಿಕ ಚಂದಾ ಬಗ್ಗೆ ಕೊಟ್ಟು 10 ವರ್ತಮಾನ ಪತ್ರಿಕೆಗಳನ್ನು ತರಿಸುವ ಏರ್ಪಾಡಿಟ್ಟರು. ಕ್ಲಾರಿಟ್ಟು ಬ್ಯಾಂಡು ವಾದ್ಯ ಜನಸಮುದಾಯದ ಜಯಘೋಷದೊಡನೆ ನಮ್ಮ ಅಮಲ್ದಾರ್ರವರೂ, ಶ್ರೀ ಮಠದ ಸ್ವಾಮಿಗಳವರೂ ಒಡಗೊಂಡು ರೀಡಿಂಗ್ ರೂಮ್ ಸ್ಥಾಪನೆಮಾಡಿದರು. ಜಮಾಬಂದಿ ಸಂದರ್ಭದಲ್ಲಿ ನೆರೆದ ರೈತರು, ದೊಡ್ಡಮನುಷ್ಯರಿಗೆ ಕೋಆಪರೇಟಿವ್ ಸೊಸೈಟಿ ಪ್ರಯೋಜನಾಂಶಗಳನ್ನು ತಿಳಿಸಿದ ಮೇಲೆ ಎಲ್ಲರೂ ಮನಃಪೂರ್ವಕವಾಗಿ 410 ರೂಪಾಯಿನವರೆಗೆ ಷೇರ್ ಒಂದಕ್ಕೆ 5 ರೂಪಾಯಿನಂತೆ ಜಮಾಯಿಸಿದರು. ನಂತರ ಪಟ್ಟಿ ತಯಾರುಮಾಡಿಸಿ ಮೈಸೂರು ಕೋಆಪರೇಟಿವ್ ಸೊಸೈಟಿ ರೆಜಿಸ್ಟ್ರಾರ್ರಿಗೆ ಮಂಜೂರು ಅಪ್ಪಣೆ ಬಗ್ಗೆ ಅರ್ಜಿ ಕೊಟ್ಟರು.

ಶಿವಮೊಗ್ಗ.—ಇದೇ ಟವನ್ ವಾಸಿ ಸಾಹುಕಾರ್ ಸರಾಫ್ ಸ್ವಾಮಿರಾಯರ ಗುಮಾಸ್ತೆ ಮೈಸ್ಟರ ಪೆರುಮಾಳು ದಾಸಪ್ಪನವರ ಮಗ ಕೃಷ್ಣಪ್ಪನೂ, ಸದರಿ ಸಾಹುಕಾರರ ಆಳು ಪೇಕು ಎಂಬುವನೂ ಸೇರಿ ಸಾಹುಕಾರ್ ಸ್ವಾಮಿರಾಯರ ಬಾಬತು 2 ಅಡಿಕೆ ಮೂಟೆಗಳನ್ನು ಬಳ್ಳಾರಿಗೆ ಕಳುಹಿಸಿ ಮಾರಾಟ ಮಾಡಿಸಿ ಬಂದ ಹಣವನ್ನು ಇಬ್ಬರೂ ಹಂಚಿಕೊಂಡದ್ದು ಗೊತ್ತಾಗಿ ಸಬ್ ಡಿವಿಜನ್ ಸಾಹೇಬರ ಕೋರ್ಟಿನಲ್ಲಿ ಗುಮಾಸ್ತೆ ಕೃಷ್ಣಪ್ಪನಿಗೆ 30 ರೂಪಾಯಿ ಜುಲ್ಮಾನೆ, 3 ತಿಂಗಳು ಸಜಾ ಶಿಕ್ಷೆಯೂ; ಆಳು ಪೇಕು ಎಂಬುವನಿಗೆ 20 ರೂಪಾಯಿ ಜುಲ್ಮಾನೆ, 3 ತಿಂಗಳು ಸಜಾ ಶಿಕ್ಷೆಯೂ ವಿಧಿಸಲ್ಪಟ್ಟಿತು.—ಕುಂಸಿ ಸಬ್ ತಾಲ್ಲೂಕು ಆಯನೂರು ವಾಸಿಗಳಾದ 3 ಜನ ಲಂಬಾಣಿಯವರು ಶಿವಮೊಗ್ಗಾ ತಾಲ್ಲೂಕ್ ಮಲೆಗೇನಹಳ್ಳಿ ತಾಂಡೆದ ಲಂಬಾಣಿ ರತ್ನಿ ಎಂಬ ಸುಮಾರು 10-12 ವರುಷದ ಹುಡುಗಿಯು ಆಡು ಮೇಯಿಸುತ್ತಿರುವಾಗ್ಗೆ ಆಡುಸಹಿತ ಹುಡುಗಿಯನ್ನು ಬಲಾತ್ಕಾರಮಾಡಿಕೊಂಡು ಹೋದದ್ದಕ್ಕಾಗಿ ಸದರಿ ಹುಡುಗಿಯ ತಂದೆಯು ಡಿಸ್ಟ್ರಿಕ್ಟ್ ಆಫೀಸರಲ್ಲಿ ಫಿರ್ಯಾದು ಮಾಡಿದ್ದರಿಂದ ಹುಡುಗಿಯು ಸಿಕ್ಕಿ ಅಪರಾಧಿಗಳನ್ನು ಜೈಲಿನಲ್ಲಿ ಇಟ್ಟಿದ್ದಾರೆ. ಆಗಲೇ ಸದರಿ ರತ್ನಿ ಎಂಬ ಹುಡುಗಿಯ ಲಗ್ನವನ್ನು ಅಪರಾಧಿಗಳು ಮಾಡಿದ್ದಾರಂತೆ. ಈ ಕೇಸು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಲ್ಲಿಯೇ ವಿಚಾರಣೆ ನಡೆಯುವದಾಗಿದೆ.—ಕುಂಸಿ ಸಬ್ ತಾಲ್ಲೂಕು ಬಿಲಾದ್ರಿಕೊಪ್ಪದ ಪಿವಾಚಾರದ ರುದ್ರಪ್ಪನೆಂಬುವನು ತನ್ನ ಗ್ರಾಮಕ್ಕೆ 3-4 ಮೈಲಿಯಲ್ಲಿರುವ ಸತ್ತಿಕೊಪ್ಪವೆಂಬ ಗ್ರಾಮಕ್ಕೆ ಹೋಗಿ ಅಲ್ಲಿನ ಒಬ್ಬ ಮೇಲ್ವಕ್ರಿಯವನು ತನಗೆ ಸಾಲಕೊಡಬೇಕೆಂತ ಸದರಿಯವನು ಮನೆಯಲ್ಲಿಲ್ಲದಾಗ ಚಕ್ಕಡಿಗಾಡಿಯನ್ನು ಜುಲುಮೆಯಿಂದ ತೆಗೆದುಕೊಂಡು ಹೋದದ್ದಕ್ಕಾಗಿ ಫಿರ್ಯಾದು ನಡೆದು ಮಾಲು ಪತೆ ಆಗಿ ಸದರಿ ರುದ್ರಪ್ಪನನ್ನು ಶಿವಮೊಗ್ಗಾ ಜೈಲಿನಲ್ಲಿ ಇಟ್ಟಿದ್ದಾರೆ. ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ವಿಚಾರ ನಡೆಯುತ್ತಾ ಇದೆ.—ಇಲ್ಲಿನ ಪೋಲೀಸ್ ಹೆಡ್ ಕ್ವಾರ್ಟರ್ ಇನ್‌ಸ್ಪೆಕ್ಟರ್ ಮೆ|| ಆರ್. ಎಸ್. ನಟರಾಜಯ್ಯರವರು ಇಲ್ಲಿಗೆ ಬಂದು ಕೆಲವು ದಿನಗಳಲ್ಲೇ ಪುನಹ ಬಡ್ತಿಯಿಂದ ಬೆಂಗಳೂರು ಡಿಸ್ಟ್ರಿಕ್ಟ್ ಟ್ರೇನಿಂಗ್ ಸ್ಕೂಲಿಗೆ ವರ್ಗವಾದರು. ಇವರು ಇಲ್ಲಿ ಕೊಂಚ ದಿನ ನೌಕರಿಮಾಡಿದಾಗ್ಯೂ ಮೇಲ್ಪಟ್ಟ ಆಫೀಸರಲ್ಲಿ ವಿಶ್ವಾಸ ಗೌರವದಿಂದಲೂ, ಸಣ್ಣ ನೌಕರರಲ್ಲಿ ಪ್ರೀತಿಯಿಂದಲೂ ಕೆಲಸಮಾಡಿದರು. ಇವರು ಗಟ್ಟಿಗರಾಗಿಯೂ, ನಿಸ್ಪೃಹರಾಗಿಯೂ, ಜನಾನುರಾಗಿಗಳಾಗಿಯೂ, ಈ ಕೆಲಸಕ್ಕೆ ಬಂದವರಲ್ಲಿ ಮೊದಲನೆಯವರೆನ್ನಿಸಿಕೊಂಡ ದೊಡ್ಡ ವಂಶೀಯರಾಗಿಯೂ ಇದ್ದರು. ತಾ. 15 ರಲ್ಲಿ ಸೀನಿಯರ್ ಅ|| ಕಮಿಷನ್ ಸಾಹೇಬರು, ಸಬ್ ಜಡ್ಜ್ ಸಾಹೇಬರು, ಪೋಲೀಸ್ ಸೂಪರಿಂಟ್ ಸಾಹೇಬರು ಅವರಿಗೆ ಮರ್ಯಾದೆ ಮಾಡಿ ಸಾಗಕಳುಹಿಸಿದರು. ಡಿ|| ಪೋಲೀಸಿನವರು ಈ ತಾಲ್ಲೂಕು ಮತ್ತು ಟವನ್ ಪೋಲಿಸ್ ಆಫೀಸರು ನವುಕರಮಾನೇರೆಲ್ಲಾ ಸೇರಿ ಇವರ ಗುಣಕಥನಮಾಡಿ ಸಂತೋಷವಾದ ವಂದನೆಗಳನ್ನು ಸಮರ್ಪಿಸಿ ತಮ್ಮ ಪ್ರೀತಿ ವಿಶ್ವಾಸಗಳನ್ನು ಪ್ರಕಾಶಪಡಿಸಿದರು.

ಎನ್. ಆರ್. ವೆಂಕಟಸುಬ್ಬಾಚಾರ್ಯರ ಪುಸ್ತಕಗಳು.

ಮಕ್ಕಳ ಭೂವಿವರಣೆ 2 ಆಣೆ; ನವಬಾಲವ್ಯಾಕರಣ 1 ಆಣೆ; ಇಲಾಖೆಯ 2 ನೇ ಪುಸ್ತಕದ ನೋಟ್ಸು 2½ ಆಣೆ; ಮೆಕ್ಮಿಲನ್‌ರ 3 ನೇ ಪುಸ್ತಕದ ನೋಟ್ಸು 1½ ಆಣೆ; ಡಿಟೋ 4 ನೇ ಪುಸ್ತಕದ ನೋಟ್ಸು 1¾ ಆಣೆ; 5 ನೇ ಪುಸ್ತಕದ ನೋಟ್ಸು 4 ಆಣೆ. ಡಿಸ್ಕೌಂಟು 10 ಕ್ಕೆ 1.

[237-1] ನಮ್ಮ ವಿಳಾಸ—ಸ್ಟೂಡೆಂಟ್ ಹಾಲ್, ಮೈಸೂರು.

ತಾಲ್ಲೂಕು ವರ್ತಮಾನಗಳು.

ಕೃಷ್ಣರಾಜಪೇಟೆ.—ಈ ಊರಿನಲ್ಲಿ ಒಂದು ವಾರದ ಹಿಂದೆ 3 ಹದ ಮಳೆ ಬಂದು ಒಣಗಿದ ಪೈರುಗಳು ಸ್ವಲ್ಪ ಸ್ವಲ್ಪ ಚೇತರಿಸಿಕೊಳ್ಳುತ್ತಾ ಇವೆ. ಆದರೂ ಇನ್ನೂ ಮನೆಗಳ ಭಾವಿಗಳಿಗೆ ನೀರು ಇಲ್ಲದೆ ಜನಗಳು ಬಹಳ ಕಷ್ಟಪಡುತ್ತಿದ್ದಾರೆ. ಕೆರೆಗೆ ಸ್ವಲ್ಪ ಮಟ್ಟಿಗೆ ನೀರು ಬಂದಿದೆ. [illegible] ಬಹಳ ಕಷ್ಟವಾಗಿ ಇದೆ.—ಈ ಊರಿನಲ್ಲಿ ಈ ಮಾಹೆ 1 ರ ಆರಭ್ಯ ಟಪ್ಪಾಲು [illegible] ಮೂಲಕ ಹಿರೀಸಾವೆಗೆ ಬೆಳಗಿನ 7 ಗಂಟೆಗೆ ರವಾನೆಯಾಗುತ್ತಲೂ, ಹಿರೀಸಾವೆಯಿಂದ ಸಾಯಂಕಾಲ 6 ಗಂಟೆಗೆ ಬರುತ್ತಲೂ ಇದೆ. ಇದರಿಂದ ಜನಗಳಿಗೆ ಮುಖ್ಯವಾದವುಗಳು ಬೆಂಗಳೂರು ಮೈಸೂರು ಪ್ರಾಂತ್ಯ ಬರತಕ್ಕದ್ದು ಸಾಯಂಕಾಲವೇ ಸಿಕ್ಕುತ್ತ ಜನಗಳು ಜವಾಬು ಮುಂತಾದ್ದು ಬರೆದು ಬೆಳಗಿನ ಟಪ್ಪಾಲಿಗೇ ಹಾಕಲು ಬಹಳ ಅನುಕೂಲವಾಯಿತು.—ನಮ್ಮ ಸಾರ್ವಭೌಮ ಬ್ರಿಟಿಷ್ ಸರ್ಕಾರದವರು ಎಲ್ಲಾ ಭಾಗದಲ್ಲೂ ಜನಗಳಿಗೆ ಸೌಕರ್ಯ ಉಂಟುಮಾಡುತ್ತಿರುವರು. ಇವರಿಗೆ ಶೀಘ್ರವಾಗಿ ಜಯವಾಗಲೆಂದು ದೇವರುಗಳು ಪ್ರಾರ್ಥಿಸುತ್ತೇವೆ.

ಹೆಗ್ಗಡದೇವನಕೋಟೆ ತಾ|| ಮಗ್ಗೆ.—ಈ ವರ್ಷ ಆರೋಗ್ಯಕರವಾಗಿಲ್ಲ. ಸನ್ನಿಪಾತ ಜ್ವರ ಕಾಣಿಸಿಕೊಂಡಿದ್ದಿತು. ಈಗ ನಿರಂತರ ವೃಷ್ಟಿಯಿಂದ ಪೈರುಗಳೆಲ್ಲ ಚೆನ್ನಾಗಿ ಬಂದಿರುತ್ತ. ಕೆಲವು ಕಡೆ ಕಟಾವು ಆಗಿರುತ್ತ. ಸುತ್ತಮುತ್ತಲ ಗ್ರಾಮಗಳಲ್ಲಿ ಇಲಿ ಸಾಯುತ್ತಲಿದೆ. ಮತ್ತೆ ಕೆಲವು ಗ್ರಾಮಗಳನ್ನು ಬಿಟ್ಟು ಪಡ್ಡಿನಲ್ಲಿ ಜನಗಳು ವಾಸಿಸುತ್ತಿದ್ದಾರೆ.—ಕಳೆದ ತಾ. [illegible] ರಲ್ಲಿ ಹೋಬಳಿ ಅಮಲ್ದಾರ್ ಮ|| ಮಲ್ಲಿಕಾರ್ಜುನಯ್ಯನವರು ಇಲ್ಲಿಗೆ ದಯಮಾಡಿ 1-2 ದಿವಸ ಇದ್ದು ಇಲ್ಲಿಯ ಮತ್ತು ಅಕ್ಕಪಕ್ಕದ ಗ್ರಾಮಗಳ ಅಭಿವೃದ್ಧಿ ವಿಷಯದಲ್ಲಿ ರೈತರಿಗೆ ಸಹಾಯಮಾಡಿದರು. ಮತ್ತು ಇದೇ ಊರಲ್ಲಿ ತಾ. 26 ರಲ್ಲಿ ಒಂದು ರೀಡಿಂಗ್ ರೂಮ್ ಎಂಬ ವಾಚನಶಾಲೆಯು ಅಮಲ್ದಾರರ ಅಧ್ಯಕ್ಷತೆಯಲ್ಲಿ ಸ್ಥಾಪಿಸಲಾಯಿತು. ಆ ರೀಡಿಂಗ್ ರೂಮಿಗೆ ಮ|| ಎಂ. ಕೆ. [illegible] ಅವರು ಸೆಕ್ರೆಟರಿಯಾದರು.—ಈ ಊರು ಹೊರಗೆ ಹೋಗುವ ದಾರಿ [illegible] ಬಿದ್ದು ಗಾಡಿ ಸಂಚಾರಕ್ಕೆ ತುಂಬಾ ಅಡಚಣೆಯಾಗಿರುತ್ತ. ಅಕ್ಕಪಕ್ಕದ ಗ್ರಾಮಗಳ ಗಾಡಿಗಳೆಲ್ಲವೂ ಇದೇ ಮಾರ್ಗವಾಗಿ ಹೋಗಬೇಕಾದ್ದರಿಂದ [illegible] ಕಡೆಯೂ ಅನುಕೂಲವಿಲ್ಲ. ನಮ್ಮ ಅಮಲ್ದಾರರು ಇದರ [illegible] ಕಷ್ಟನಿವಾರಣೆ ಮಾಡಬೇಕಾಗಿ ಪ್ರಾರ್ಥನೆ.

ಮದ್ದೂರು ತಾ|| ಗಂಜಿಗುಂಟೆ.—ಈ ಗ್ರಾಮದ ಮುಸ್ಕಿ ಫಸಲುಗಳು ಮಳೆ ಇಲ್ಲದೆ ಒಣಗುತ್ತಾ ಇದ್ದು ಈಚೆಗೆ ಬಂದ ಮಳೆಯಿಂದ ಚೇತರಿಸಿಕೊಂಡಿವೆ. ತಾ|| 4 ರಲ್ಲಿ ಇಲ್ಲಿನ ಗ್ರಾಮಾಭಿವೃದ್ಧಿ ಸಮಾಜಕರಾದ ಮುಖಂಡರುಗಳು ಸ್ಕೂಲ್ ಕಟ್ಟಡದಲ್ಲಿ ಗ್ರಾಮಸ್ಥರೊಡನೆ ಕೂಡಿ ಈಗ ನಡೆಯುತ್ತಿರುವ ಯುದ್ಧದಲ್ಲಿ ನಮ್ಮ ಚಕ್ರವರ್ತಿ ಸಾರ್ವಭೌಮರವರಿಗೆ ದೇವರು ಜಯಪ್ರದವನ್ನು ಉಂಟುಮಾಡಬೇಕೆಂತಲೂ, ಚಕ್ರವರ್ತಿ ಸಾರ್ವಭೌಮರವರಿಗೂ ಪ್ರಜೆಗಳಿಗೂ ಭಗವಂತನು ಚಿರಕಾಲ ಆಯುರಾರೋಗ್ಯಗಳನ್ನಿತ್ತು ಕಾಪಾಡಬೇಕೆಂತಲೂ ಪ್ರಾರ್ಥನೆ ಮಾಡಿದ ನಂತರ ಸಭಾಧ್ಯಕ್ಷತೆಯನ್ನು ವಹಿಸಿದ್ದ ಮ|| ರಾ|| ಚಿಕ್ಕ ಚಟ್ಟಗೌಡರು ಸಭೆಯಲ್ಲಿ ನೆರೆದಿದ್ದ ಗ್ರಾಮಸ್ಥರಿಗೆಲ್ಲ ಈಗ ಯೂರೋಪ್ ಖಂಡದಲ್ಲಿ ನಡೆಯುತ್ತಿರುವ ಯುದ್ಧ ಸಮಾಚಾರವನ್ನು ಸಂಕ್ಷೇಪವಾಗಿ ತಿಳಿಸಿ, ಇಂಪೀರಿಯಲ್ ಇಂಡಿಯನ್ ರಿಲೀಫ್ ಫಂಡಿಗೆ ಸಹಾಯ ಮಾಡಬೇಕಾದ ಉದ್ದೇಶ್ಯವನ್ನು ತಿಳಿಸಿದರು. ನಂತರ ಗ್ರಾಮಾಭಿವೃದ್ಧಿ ಸಮಾಜದ ಮೆಂಬರುಗಳ ಪೈಕಿ ರಾ|| ಅಬ್ದುಲ್ ಸತ್ತಾರ್ ಸಾಹೇಬರು ಇಂಗ್ಲಿಷ್ ಸರ್ಕಾರದವರಿಂದ ನಮ್ಮಗಳಿಗೆ ಉಂಟಾಗಿರತಕ್ಕ ಪ್ರಯೋಜನಗಳನ್ನು ಜನಗಳೆಲ್ಲರಿಗೂ ವಿಶದವಾಗಿ ತಿಳಿಸಿ, ಯುದ್ಧದಲ್ಲಿ ಮೃತಪಟ್ಟ ಸೈನಿಕರ ಹೆಂಡತಿ ಮಕ್ಕಳಿಗೆ ಸಹಾಯ ಮಾಡುವ ವಿಷಯದಲ್ಲಿ ಉಪನ್ಯಾಸ ಮಾಡಿದ ಮೇಲೆ ಸಭೆಯಲ್ಲಿ ನೆರೆದಿದ್ದ ಪ್ರಜೆಗಳೆಲ್ಲರೂ ತುಂಬಾ ಸಂತೋಷದಿಂದ ಈ ಫಂಡಿನಾಗಿ 19 ರೂಪಾಯಿನ್ನು ಚಂದಾ ಎತ್ತಿ ತಾಲೂಕ್ ಕಚೇರಿಗೆ ರವಾನೆ ಮಾಡಿದ ನಂತರ ಪಾನ್ ಸುಪಾರಿ ಹಂಚಿಕೆಯಿಂದ ಸಭೆ ಬರಖಾಸ್ತು ಆಯಿತು.—ಈ ಗ್ರಾಮದ ಸ್ಕೂಲ್ ತುಂಬಾ ಅಭಿವೃದ್ಧಿಯಲ್ಲಿರುತ್ತ. ಮಾಸ್ಟರ್ ಕೆ. ಅಬ್ದುಲ್ ಸತ್ತಾರ್ ರವರು ತುಂಬಾ ಶ್ರದ್ಧೆಯಿಂದ ಕೆಲಸ ಮಾಡುತ್ತಿದ್ದಾರೆ.—ನಮ್ಮ ರೈತರಿಗೆ ಬೆಳೆಗೆ ಅರ್ಥವನ್ನು ಸಂಪಾದಿಸಿಕೊಳ್ಳಲು ಈಗಿನ ಯುದ್ಧದ ನಿಮಿತ್ತ ಸಹಾಯ ದೊರೆಯದೆ, ದಿನವೂ ಸಾಹುಕಾರರ ದೊಡ್ಡ ಬಡ್ಡಿಗೆ ಹಣವನ್ನು ಎರವಲು ತರುತ್ತಿದ್ದಾರೆ. ನಮ್ಮ ಸರ್ಕಾರದವರು ಶೀಘ್ರ ಈ ಕೊರತೆಯನ್ನು ನಿವಾರಣೆ ಮಾಡ್ಯಾರೆಂದು ನಿರೀಕ್ಷಿಸುತ್ತೇವೆ.

ಚಾಮರಾಜನಗರ.—ಮಳೆ ವಿಪರೀತವಾಗಿ ಸುರಿದು ಕೆರೆ, ಕಟ್ಟೆ, ಭಾವಿ ಎಲ್ಲಾ ತುಂಬಿದವು. ಚಿಲ್ಲರೆ ಬೆಳೆಗಳನ್ನು ಬಿತ್ತಿದಾರೆ. ನಮ್ಮ ಅಮಲ್ದಾರರು ಮುತುವರ್ಜಿಯಿಂದ ಟೌನೆಲ್ಲಾ ಸುತ್ತುತ್ತಾ ಎಲ್ಲಾ ಬಾಬುಗಳನ್ನೂ ನೋಡಿ ಕ್ರಮಪಡಿಸುತ್ತಾ ಇದ್ದಾರೆ. ಚನ್ನಪುರದ ಕಟ್ಟೆಯಲ್ಲಿ ದನಗಳನ್ನು ತೊಳೆಯುವುದರಿಂದ ಕೆಟ್ಟುಹೋಗುತ್ತೆಂದು ಟಾಂಟಾಂ ಹೊಡಿಸಿದರು.—ನೆನ್ನೆ ದಿನ ಅಕಸ್ಮಾತ್ತಾಗಿ ಎಕ್ಸೈಜ್ ಕಮಿಷನರ್ ಸಾಹೇಬರವರು ಟೌನಿನಲ್ಲಿ ದಯಮಾಡಿಸಿ, ರಿಜಿಸ್ಟ್ರಾರ್ ಆಫೀಸ್, ಎಕ್ಸೈಜ್ ಆಫೀಸ್, ಸರಾಯಿ ಕೋಠಿಗಳನ್ನು ನಿಧಾನವಾಗಿ ಪರೀಕ್ಷಿಸಿ, ಒಳ್ಳೆ ಅಭಿಪ್ರಾಯ ಬರೆದು ಹೋಗಿದ್ದಾರೆ.—ಅತ್ತಿಖಾನ್ ಕೊಟ್ಟ ಮಾರಿಸ್ ದೊರೆಯ ಮಗನು ಮರಹಳ್ಳಿ ಸಂತೆಯಲ್ಲಿ ಬೆಳಗಿನ ಜಾವದಲ್ಲಿ ಗಾಡಿ ಹೊಡಿಸಿಕೊಂಡು ಬರುವಾಗ ನೀರು ಗಾಡಿಯನ್ನು ಮಗುಚಿಬಿಟ್ಟಿತು. ಕಡೆಗೆ ಗಾಡಿಯವನು ಎತ್ತುಗಳ ಕಣ್ಣಿ ಕೊಯ್ದು ಬಿಟ್ಟನು. ಬಳಿಕ ಗಾಡಿ ಹೊರಳುತ್ತಿರುವಾಗ ಸಾಹೇಬರು ನೀರಿನಲ್ಲಿ ಬಿದ್ದು ಸಾಯುತ್ತಿರುವಾಗ ಕೂಗಿಕೊಂಡದ್ದರಿಂದ ಗಾಡಿಯವನು ತುಂಬಾ ಸಾಹಸ ಮಾಡಿ ಅವರನ್ನು ಆಚೆಗೆ ಎಳೆದು ಹಾಕಿ ಬದುಕಿಸಿದನು.—ಇದೇ ತಾಲ್ಲೂಕು ಮಂಗಲವೆಂಬ ಗ್ರಾಮದಲ್ಲಿ ಗೌರ್ನಮೆಂಟಿನವರು ಎ. ವಿ. ಸ್ಕೂಲಿಗಾಗಿ ದಯಪಾಲಿಸಿದ ಹೊಸ ಕಟ್ಟಡವು ಈ ಮಾಸ ಆರಂಭದಲ್ಲಿ ಪ್ರತಿಷ್ಠೆಯಾಯಿತು. ಸ್ಕೂಲ್ ಹೆಡ್ ಮಾಸ್ಟರವರು ಬಾಲಕ ಬಾಲಕಿಯರನ್ನೂ ಗ್ರಾಮದ ಎಲ್ಲಾ ಮುಖಂಡರನ್ನೂ ಬಾಜಾ ಭಜಂತ್ರಿಯೊಡನೆ ಮೆರವಣಿಗೆಯಾಗಿ ಕರೆತಂದು ತಳಿರು ತೋರಣಗಳಿಂದಲೂ ಚಿತ್ರಪಟಗಳಿಂದಲೂ ಅಲಂಕೃತವಾಗಿದ್ದ ಸ್ಕೂಲಿನಲ್ಲಿ ಸೇರಿಸಿ ಸಂಗೀತ, ಉಪನ್ಯಾಸಗಳು ಮುಗಿದ ನಂತರ ಚಕ್ರವರ್ತಿ ಸಾರ್ವಭೌಮರವರ ಮತ್ತು ಶ್ರೀಮನ್ ಮಹಾರಾಜರವರ ಶ್ರೇಯಃ ಪ್ರಾರ್ಥನೆಯೂ, ಈಗ ಒದಗಿರುವ ಯುದ್ಧವು ಜಯಪ್ರದವಾಗಿ ಬ್ರಿಟಿಷ್ ಸಾಂಟ್ರಾಜ್ಯವು ಆಚಂದ್ರಾರ್ಕವಾಗಿರಲೆಂಬ ಪ್ರಾರ್ಥನೆಯೂ ಬೆಳೆದ ನಂತರ ಮಂಗಳವಾಗಿ ಸಭಿಕರಿಗೆ ಗಂಧ ಪುಷ್ಪ ತಾಂಬೂಲಾದಿಗಳೂ, ಬಾಲ ಬಾಲಕಿಯರಿಗೆ ಫಲಹಾರಗಳೂ ಹಂಚಲ್ಪಟ್ಟು ಸಭೆ ಬರಖಾಸ್ತಾಯಿತು. ಈ ನಿವೇಶನವನ್ನು ಉಚಿತವಾಗಿ ಕೊಟ್ಟ ಈ ಗ್ರಾಮದ ಇನಾಂದಾರರಾದ ಶ್ರೀಮತಿ ವೆಂಕಟಸುಬ್ಬಮ್ಮಣ್ಣಿಯವರ ಕೀರ್ತಿ ಶಾಶ್ವತವಾಗಿ ನಿಲ್ಲುವದಕ್ಕಾಗಿ ಒಂದು ಶಾಸನವನ್ನು ಸ್ಕೂಲ್ ಮುಂಭಾಗದಲ್ಲಿ ಹಾಕಿಸಿರುತ್ತಾರೆ. ಹೆಡ್ ಮಾಸ್ಟರ್ ಮ|| ಕೆ. ಶ್ರೀನಿವಾಸಾಚಾರ್ಯರು ಇಲ್ಲಿಗೆ ಬಂದ ಮೇಲೆ ಈ ಸ್ಕೂಲ್ ತುಂಬಾ ಅಭಿವೃದ್ಧಿಗೆ ಬಂದಿರುವುದರಲ್ಲಿ ಸಂದೇಹವಿಲ್ಲ. ಇವರು ಎಲ್ಲರಲ್ಲೂ ಸ್ನೇಹವುಳ್ಳವರು. ಮಕ್ಕಳ ವಿದ್ಯಾಭಿವೃದ್ಧಿ ವಿಷಯದಲ್ಲಿ ತುಂಬಾ ಶ್ರಮಪಟ್ಟು ಪಾಠ ಹೇಳಿ ಬೋಧಿಸುತ್ತಾರೆ. ಈಗ 60 ಮಂದಿ ಬಾಲಕರು, 20 ಮಂದಿ ಬಾಲಕಿಯರೂ ಅಂತು 80 ಮಂದಿ ಇದ್ದಾರೆ. ಈ ಗ್ರಾಮದಲ್ಲಿ 600 ಮನೆಗಳವರೆಗೂ ಇವೆ. ಕನಿಷ್ಠ 200 ಮಕ್ಕಳಾದರೂ ಬರಬಹುದು. ಬಲಾತ್ಕಾರ ವಿದ್ಯಾಭ್ಯಾಸದ ಶಾಸನ ಜಾರಿಗೆ ಬರುವದಕ್ಕಿಂತ ಮುಂಚೆಯೇ ಗ್ರಾಮಸ್ಥರು ತಮ್ಮ ಮಕ್ಕಳನ್ನು ಸ್ಕೂಲಿಗೆ ಕಳುಹಿಸಿ ಸರ್ಕಾರದವರ ಉದ್ದೇಶವನ್ನು ಸಾರ್ಥಕ ಪಡಿಸುವರೆಂದು ನಿರೀಕ್ಷಿಸಲ್ಪಟ್ಟಿದೆ.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೇ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಸ್ವಾಯಶಃ ಶರೀರಕ್ಕೆ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ:- ಬೆನ್ನಿನಲ್ಲಿ ಛಳುಕು; ನಿದ್ದೆಯಿಲ್ಲದೆ ಇರುವುದು; ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಿಲುಪಾಗಿಯೋ ಇಳಿಯುವುದು; ಬಿಡದೆ ಬಾಯಾರಿಕೆ; ಬಳಲಿಕೆ; ಎದೆ ಡಬ್ಬಣಿಸುವುದು; ತಲೆನೋವು; ಗಾಬರಿ; ಕಣ್ಣುಮೊಬ್ಬು; ತಲೆ ತಿರುಗುವಿಕೆ; ಮೈನೋವು; ಕೀಲುನೋವು; ಮರವು; ನಿಶ್ಶಕ್ತಿ; ಇವೇ ಮೊದಲಾದುವು. ಅಲಕ್ಷ್ಯಮಾಡಿದರೆ ಮೂತ್ರೋಪದ್ರವ, ವಾಯು, ನೀರುಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂಬು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್ಸ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [198-7]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ಸ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು.



ರೂ. ೨—೦—೦; ಅಥವಾ ೬ ಬುಡ್ಡಿಗಳಿಗೆ ರೂ. ೧೦—೮—೦. ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು. ಅಥವಾ ಡೋನ್ಸ್ ಪಿ. ಓ. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು.

ಪ್ರೊಫೆಸರ್ ಗಜ್ಜಾರರವರ

ಗುಣಕಂಡ ಪ್ರಖ್ಯಾತವಾದ ಔಷಧಗಳು.

ವ್ಯರ್ಥವಾದ ಔಷಧಗಳನ್ನು ಉಪಯೋಗಿಸಿ ಪ್ರಾಣಾಪಾಯಕ್ಕೆ ಗುರಿಯಾಗುವಿರೇಕೆ? ವಿವೇಕದಿಂದ ತಯಾರುಮಾಡಿರುವ ನಮ್ಮ ಔಷಧಗಳನ್ನು ಸೇವನೆ ಮಾಡಬಾರದೇ?

ಟಾನಿಕ್ ಸೊಲ್ಯುಷನ್.—ಇದರಲ್ಲಿ ಗ್ಲಿಸರಿನೊಫೇಟ್ಸ್ ಎಂಬ ಅಮೂಲ್ಯ ಪದಾರ್ಥಗಳನ್ನು ಹಾಕಿ ತಯಾರುಮಾಡಿದೆ. ಇದು ಬೇಗನೆ ಶರೀರಕ್ಕೆ ಸೇರಿಹೋಗುತ್ತೆ. ಆರೋಗ್ಯವನ್ನೂ ಚಟುವಟಿಕೆಯನ್ನೂ ಶಕ್ತಿಯನ್ನೂ ವೃದ್ಧಿಮಾಡುವುದು. ನರಗಳ ದುರ್ಬಲವನ್ನು ಹೋಗಲಾಡಿಸುವುದರಲ್ಲಿ ಇದು ಬಹಳ ಶ್ರೇಷ್ಠವಾದ ಔಷಧ. ಕ್ರಯ ಶೀಸೆಗೆ 2 ರೂಪಾಯಿ, ಮತ್ತು ರೂ. 1-8-0.

ರಕ್ತಶುದ್ಧಿಗೆ ಮಹೌಷಧ.—ಇದು ರಕ್ತವನ್ನೂ ದೇಹದ ಎಲ್ಲಾ ಭಾಗಗಳನ್ನೂ ಶುದ್ಧಮಾಡುತ್ತೆ. ಬಹಳ ಚೆನ್ನಾಗಿ ಗುಣಕಂಡ ಔಷಧ. ಕ್ರಯ ಶೀಸೆಗೆ 1 ರೂಪಾಯಿ.

ಲಿವರ್ ಸೊಲ್ಯುಷನ್.—ಪಿತ್ತಕೋಶದ ಮೇಲೆ ಇದು ಬಹಳ ಚೆನ್ನಾಗಿ ಕೆಲಸಮಾಡೋಣದರಿಂದ ಮಲಬದ್ಧತೆಯುಳ್ಳವರಿಗೆ ಮಹೋಪಕಾರಿಯಾಗಿದೆ. ಜ್ವರಕ್ಕೂ ಇದನ್ನು ಕೊಡುತ್ತಾರೆ. ಇದು ಮನೆಯಲ್ಲಿ ಇದ್ದೇ ತೀರಬೇಕು. ಕ್ರಯ ಶೀಸೆಗೆ ರೂ 1; ಮತ್ತು ರೂ. 0-10-0.

ಜ್ವರದ ಔಷಧ.—ವಿಷಮಶೀತಜ್ವರ, ನಿಂತುಬರುವಜ್ವರ, ಅವಧಿಯಜ್ವರ, ಎಲ್ಲಾ ತರದ ಜ್ವರಗಳಿಗೂ ಇದು ಸಂಜೀವನವಾಗಿದೆ. ಇದು ಕ್ವಿನೈನ್‌ಗಿಂತ ಬಹಳ ಅಗ್ಗ. ಕ್ರಯ ಶೀಸೆಗೆ 10 ಆಣೆ; 4 ಆಣೆ.

ಹುಳುಕಡ್ಡಿ ಔಷಧ.—ಹುಳುಕಡ್ಡಿಯನ್ನು ಖಂಡಿತವಾಗಿ ಗುಣಮಾಡುತ್ತೆ. ಕ್ರಯ ಶೀಸೆಗೆ 4 ಆಣೆ.

ಹಲ್ಲುಪುಡಿ.—ಈ ಪುಡಿಯಿಂದ ಹಲ್ಲು ಉಜ್ಜಿಕೊಂಡರೆ ಬಾಯಿಗೆ ಸುವಾಸನೆ ಕೊಡುತ್ತೆ. ಹಲ್ಲು ಸವೆದು ಕೆಡದಂತೆ ಬಹಳ ಚೆನ್ನಾಗಿಟ್ಟು ಕಾಪಾಡುತ್ತೆ. ಕ್ರಯ ಶೀಸೆಗೆ 4 ಆಣೆ; 6 ಆಣೆ; 1 ರೂಪಾಯಿ.

ಇಂಗ್ಲೀಷಿನಲ್ಲೇ ನಮಗೆ ಕಾಗದವನ್ನು ಬರೆಯಬೇಕು.

ಸೋಲ್ ಏಜಂಟರು:—ಎಸ್. ವೈದ್ಯ ಮತ್ತು ಕಂಪನಿ,

[156-15] ಪಾರ್ಕ್ ಟೌನ್, ಮದರಾಸ್.

ವೃತ್ತಾಂತಪತ್ರಿಕೆ ಏಜಂಟರಿಗೆ ಸೂಚನೆ.

ವೃತ್ತಾಂತ ಪತ್ರಿಕೆಯ 1914-15 ನೇ ವರುಷದ ಒಂದನೇ ಕ್ವಾರ್ಟರು ಕಳೆದ ಆಗಸ್ಟ್ ತಿಂಗಳಿಗೆ ಪೂರೈಸಿದೆ. ಏಜಂಟರುಗಳು ಆ ಕ್ವಾರ್ಟರಿನ ಬಿಲ್ಲುಗಳನ್ನು ಪೈಸಲುಮಾಡಿ, "ಬಿ" ಫಾರಂಗಳಿಗೆ ಎತ್ತಿ ಬರೆದು, ತಮ್ಮ ತಮ್ಮ ಸೂಪರಿಂಟೆಂಡೆಂಟರಿಗೆ ಒಂದು ಪ್ರತಿಯನ್ನೂ, ನಮಗೆ ಒಂದು ಪ್ರತಿಯನ್ನೂ ಈ ವಾರದಲ್ಲೇ ಜಾಗ್ರತೆಯಿಂದ ಕಳುಹಿಸಿಕೊಡಬೇಕಾಗಿ ಕೃತಪಡಿಸಿದೆ.

ನೀವು ಕೇಳಿದ ಹಾಗೆ ಪತ್ರಿಕೆಗಳನ್ನು ಹೆಚ್ಚಾಗಿ ಕಳುಹಿಸುತ್ತಾ ಬರುವೆವು. ಆದರೆ ಬಿಡಿ ಪತ್ರಿಕೆಗಳನ್ನು ಮಾರಲೇ ಕೂಡದು. ಮುಂದಿನ 1915 ನೇ ಅಕ್ಟೋಬರ್ ವರೆಗೆ ಅಡ್ವಾನ್ಸು ಕೊಟ್ಟು ಕ್ರಮವಾಗಿ ಚಂದಾದಾರರಾಗತಕ್ಕವರಿಗೆ ಮಾತ್ರ ಪತ್ರಿಕೆಗಳನ್ನು ತಪ್ಪಿಸದೆ ಕೊಡುತ್ತಾ ಬರಬೇಕೆಂದು ಕೋರುತ್ತೇವೆ.

ಮ್ಯಾನೇಜರ್, "ವೃತ್ತಾಂತ ಪತ್ರಿಕೆ," ಮೈಸೂರು.

ಸುಖಕರ, ಆನಂದ,

ಬಹಳ್ ಅವಶ್ಯ.

ಈಗ ತಾನೇ ಕಂಡುಹಿಡಿದಿದೆ.

ಜರ್ಮನ್ ರಾಜ್ಯದಲ್ಲಿ ನೂರಾರು ವರುಷಗಳಿಂದ ಉಪಯೋಗದಲ್ಲಿದೆ.

ಸೆನ್‌ಸೆನ್ ಬೆಳ್ಳಿಯ ವರಕು ಸುತ್ತಿದ ಮುತ್ತುಗಳು.

(1) ಮನಸ್ಸಿಗೆ ಹರ್ಷವನ್ನೂ ಉಲ್ಲಾಸವನ್ನೂ ಕೊಟ್ಟು ಜೀರ್ಣಶಕ್ತಿಯನ್ನುಂಟುಮಾಡುವುದು.

(2) ಹಾಡುವವರಿಗೆ ವರಪ್ರಸಾದವಾದದ್ದು.

(3) ಬಾಯಿ ದುರ್ಗಂಧ, ಗಂಟಲು ಗಾರೆನ್ನುವುದು, ಉಬ್ಬಸ, ಸಮುದ್ರಯಾನದ ಜುಗುಪ್ಸೆ, ಈ ಮೊದಲಾದವನ್ನು ಹುಟ್ಟದಂತೆ ಅಡ್ಡಿಮಾಡುತ್ತದೆ.

(4) ತಾಂಬೂಲದೊಡನೆ ಸೇವಿಸುವುದಕ್ಕೆ ಅತ್ಯಂತ ಹಿತಕರವಾಗಿದೆ. [73-33]

ಒಂದು ಸಲ ಪರೀಕ್ಷೆಮಾಡಿದಲ್ಲಿ ಯಾವಾಗಲೂ ಒಂದು ಪೊಟ್ಟಣ ಇದ್ದೇ ತೀರಬೇಕೆಂದು ನೀವೇ ನಿಶ್ಚಯಿಸುವಿರಿ.

ಮುತ್ತಿನಂತಿರುವ	45	ಮಾತ್ರೆ ಉಳ್ಳ ಪೊಟ್ಟಣಕ್ಕೆ	ಕ್ರಯ	2	ಆಣೆ.
,,	95	,, ,,	,,	4	,,
,,	200	,, ,,	,,	7	,,
,,	200	,, ಸುಂದರವಾದ ಟಿನ್ ಡಬ್ಬಾ		9	,,
,,	80	,, ,,	,,	4	,,
,,	100	,, ಬಾಟ್ಲಿಯಲ್ಲಿ		4½	,,

ಈ ಕ್ರಯದಷ್ಟು ಸ್ಟಾಂಪನ್ನೂ, ಅಂಚೆ ವೆಚ್ಚಕ್ಕೆ ಜಾಸ್ತಿ ಒಂದಾಣೆಯನ್ನೂ ಸೇರಿಸಿ ಕಳುಹಿಸಬೇಕು. ಕಾಗದಪತ್ರವನ್ನೂ ವಿಳಾಸಗಳನ್ನೂ ನಮಗೆ ಇಂಗ್ಲೀಷಿನಲ್ಲೇ ಬರೆಯತಕ್ಕದ್ದು.

ನಮ್ಮ ವಿಳಾಸ—ಸೆನ್‌ಸೆನ್ ಡಿಪೋ,
ಮಾರ್ಸೂರ್ ಬಿಲ್ಡಿಂಗ್, ಪ್ರಿನ್ಸೆಸ್ ಸ್ಟ್ರೀಟ್,
ಬೊಂಬಾಯಿ 2;
ಅಥವಾ, ಬಿ. ಸಿ. ಷಾ ಕಂಪೆನಿ,
509 ಮಿಂಟ್ ಬೀದಿ, ಮದರಾಸ್.

ಅದ್ಭುತವಾದ ಬಲಕಾರಿ ಮತ್ತು ಬಾಯಿನಾತಹರ.

ಸೋಲ್ ಏಜಂಟರು:—

[156-15]

ಜಿನ್‌ತಾನ

ಜೀರ್ಣಶಕ್ತಿ ಹುಟ್ಟಿಸುವುದರಲ್ಲಿ ಇದಕ್ಕೆ ಸಮಾನವಾದದ್ದು ಇನ್ನೊಂದಿಲ್ಲ; ಅನ್ನಕೋಶವು ಎಷ್ಟೇ ದುರ್ಬಲವಾಗಿದ್ದರೂ ಅದರ ಕಾರ್ಯಗಳನ್ನು ಹೇರುಪೇರು ಮಾಡುವದಿಲ್ಲ. ಇದರ ಸೇವನೆಯಿಂದ ಎಲ್ಲಾ ರೋಗಗಳನ್ನೂ ಅಂಟದಂತೆ ತಡೆಯಬಲ್ಲದು. ಈ ಭಾಗದಲ್ಲಿ ಇದರ ಗುಣವು ಬಹು ಫಲಕಾರಿಯಾಗಿದೆ. ಇದಲ್ಲದೆ ಇದನ್ನು ಸೇವಿಸುವವರ ಬಾಯಿಯಲ್ಲಿ ಎಲ್ಲಾ ತರದ ದುರ್ನಾತವೂ ಹೋಗಿ ಸುಗಂಧವು ಹುಟ್ಟಿ ಹರ್ಷಕರವಾಗಿದ್ದೀತು.

ಗಂಟಲಿನ ನರಗಳು ಇದರ ಸೇವನೆಯಿಂದ ಬಹಳ ಬಲಗೊಳ್ಳುವವು. ಇದರ ಗುಣವನ್ನು ನೋಡಿ ಉಪನ್ಯಾಸಕರೂ, ನಾಟಕಧಾರಿಗಳೂ, ಸಂಗೀತಗಾರರೂ, ಬೋಧಕರೂ, ವಾಚಾಳಕ ಪ್ರಿಯರೂ ಈ ಮಾತ್ರೆಗಳನ್ನು ಬಹಳವಾಗಿ ಮೋಹಿಸಿ ಪ್ರೀತಿಯಿಂದ ಉಪಯೋಗಿಸುತ್ತಿದಾರೆ.

ಈ ಮಾತ್ರೆಗಳನ್ನು ಜಪಾನ್‌ನಲ್ಲಿರುವ ಒಸಾಕಾ ಪಟ್ಟಣದ ಮೋರಿಷಿತಾ ಕಂಪನಿಯವರು ತಯಾರ್ಮಾಡುತ್ತಾರೆ.

ಈ ಮಾತ್ರೆಗಳ	30 ಮಾತ್ರೆಗಳುಳ್ಳ ಪೊಟ್ಟಣಕ್ಕೆ 1½ ಆಣೆ.	65 ಮಾತ್ರೆ ಪೊಟ್ಟಣಕ್ಕೆ 3 ಆಣೆ.
ಕ್ರಯ	195 ,, ಡಬ್ಬಾ ಸಮೇತ 9 ಆಣೆ.	455 ,, ಕನ್ನಡಿ ಡಬ್ಬಾಕ್ಕೆ 1 ರೂಪಾಯಿ.

ಎಲ್ಲಾ ಅಂಗಡಿಗಳಲ್ಲಿಯೂ ವಿಕರಿಯಾಗುವುದು.

ಎಸ್. ವೈದ್ಯ ಮತ್ತು ಕಂಪನಿ,
ಪಾರ್ಕ್‌ಟೌನ್, ಮದರಾಸ್.

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು."

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು. ವಾಯು, ಕೀಲು, ಅರಕರೆ, ತಲೆನೋವುಗಳು; ಯಾವ ಕಾರಣದಿಂದ ಹುಟ್ಟಿನ ಬಾಧೆ ಯಾಗಲಿ, ಉಳುಕು, ಹಲ್ಲುನೋವು, ಗಂಟಲು ಗಾರೆನ್ನುವುದು, ಕೆಮ್ಮುಗಳು, ಶೀತನೆಗಡಿ, ಶ್ವಾಸರೋಗ, ಚಚ್ಚು, ಉಳುಕು, ಛಳುಕು, ಜೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ. ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು. ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲು ಕೊಡಿ ಎಂದು ಕೇಳು. ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡಿಹೆಂದು ಕೇಳಿ ತೆಗೆದುಕೋ. ಈ ಯುಕ್ತಿಯೋಷಧಿ ವಾಸಿಮಾಡುವ ವಿಷಧವು 12 ಆಣೆಗೆ ಸಿಕ್ಕುತ್ತದೆ. ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ. ಲಕ್ಷಾಂತರ ಜನರು ಗುಣಹೊಂದಿದಾರೆ; ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ. [122-21]

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡಿ. ಅದರ ಕ್ರಯ ಬಾಟ್ಲಿಗೆ 12 ಆಣೆ; ಅಂಚೆ ವೆಚ್ಚ 4 ಆಣೆ. 3 ಅಥವಾ ಹೆಚ್ಚು ಬಾಟ್ಲು ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ. ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ. ವಿಳಾಸಗಳು:—(1) ಎಸ್. ಪೀಟರ್ಸ್, 37 ವಡಮಲೈಪಿಳ್ಳೈ ಬೀದಿ, ಪುರಸವಾಕಂ, ವೇಪೇರಿ, ಮದರಾಸ್; (2) ಜೆ. ಎಸ್. ಕನ್ನಯ್ಯಶೆಟ್ಟಿಮು, ಜನರಲ್ ಮರ್ಚೆಂಟ್, ತುಮಕೂರು.

ಮಕ್ಕಳಿರುವ ಮನೆಗಳಲ್ಲಿಯೂ ಪ್ರಯಾಣಕಾಲದಲ್ಲಿಯೂ ಛಳಿ ಮಳೆಗಾಲಗಳಲ್ಲಿಯೂ ಮಲೆನಾಡಿನಲ್ಲಿಯೂ ಸೋಂಕುರೋಗ ಸ್ಥಳಗಳಲ್ಲಿಯೂ ಆರೋಗ್ಯವನ್ನು ಕಾಪಾಡುವುದರಲ್ಲಿ ಶ್ರೇಷ್ಠವಾದ

ಶ್ರೀಕರ ಕಸ್ತೂರಿ ಮಾತ್ರೆ

ಟಿಬೆಟ್ ದೇಶದ ಕಸ್ತೂರಿ—ಅನೇಕ ಪುಟಗಳಿಂದ ತಯಾರಿಸಿದ ಲೋಹ ಭಸ್ಮ—ಚಿನ್ನದ ರೇಖು ಮೊದಲಾದವುಗಳಿಂದ ಹಿರಿಯರ ಕಾಲದಿಂದಲೂ ತಯಾರಿಸಲ್ಪಡುತ್ತಿರುವ ಈ ಶ್ರೀಕರ ಕಸ್ತೂರಿಮಾತ್ರೆಗಳು ತಾಂಬೂಲವನ್ನು ರಂಜಿಸಿ ಎಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸಿ ಬಹಳ ಹೊತ್ತಿನವರೆಗೆ ಬಾಯಿ ಘಮಘಮಿಸುವಂತೆ ಮಾಡುವುವು. ಶೀತವಾಯು-ಕೆಮ್ಮು-ನೆಗಡಿ-ದಿನಜ್ವರ-ಮೂರರ ಜ್ವರ-ನಾಲ್ಕರ ಜ್ವರ-ಮಲೇರಿಯಾಜ್ವರ-ತಲೆನೋವು-ಮೈಕೈನೋವು ಮತ್ತು ಭಾರ-ಅರೋಚಕ ಹಲ್ಲುನೋವು-ಹೊಟ್ಟೆನೋವು-ಮಲಬಂಧ-ಅಜೀರ್ಣಭೇದಿ-ಮಕ್ಕಳಿಗೆ ಸಾಮಾನ್ಯವಾಗಿ ಬರುವ ಪಕ್ಕೆಗಳ ಸೆಳತ-ಹೊಟ್ಟೆಯುಬ್ಬರ-ಮಂದಜ್ವರ-ಭೇದಿ ಮುಂತಾದುವುಗಳನ್ನು ನಂಬಿಕೆಯಾಗಿ ಗುಣಪಡಿಸುತ್ತವೆ. ಒಂದು ವೇಳೆ ಈ ಮಾತ್ರೆಗಳನ್ನು ಪರೀಕ್ಷಿಸಿದರೆ ಯಾವಾಗಲೂ ಇದನ್ನೆ ತರಿಸುವರೆಂದು ನಾವು ಧೈರ್ಯವಾಗಿ ಹೇಳಬಲ್ಲೆವು. 250 ಮಾತ್ರೆ 4 ಆಣೆ. ಐದಕ್ಕೆ ಒಂದು ಇನಾಮು. ವಿ. ಪಿ. ಛಾರ್ಜು ಪ್ರತ್ಯೇಕ. [220-51]

ಬಿ. ವಿ. ಪಂಡಿತ್, ಸದ್ವೈದ್ಯಶಾಲಾ, ನಂಜನಗೂಡು.

ಯಾಕೆ ಪರೀಕ್ಷಿಸಬಾರದು ? ಬಂಗಾರದ ಪದಕ ಬಂದಿದೆ.

ಸೆಂಟ್, ಅತ್ತರುಗಳಲ್ಲೆಲ್ಲಾ ಶ್ರೇಷ್ಠವಾದವು.

ಆಟೋ ಮೋಹಿನಿ.

ಇದು ರಿಜಿಸ್ಟರ್ ಆಗಿದೆ. ಈಗಿನ ಕಾಲದಲ್ಲಿ ಇದೇ ನಿಲ್ಲುವ, ಸುವಾಸನೆಯುಳ್ಳ, ಮನೋಹರವಾದ ಮತ್ತು ಸರಿಯಾದ ಪರಿಮಳದ ದ್ರಾವಕ. ಕರವಸ್ತ್ರಕ್ಕೆ

ನಾಲ್ಕು ತೊಟ್ಟು ಹಾಕಿಕೊಂಡರೆ ನಾಲ್ಕುದಿನಗಳ ತನಕ ಘಮಘಮಿಸುವ ಸುವಾಸನೆ ಇರುತ್ತೆ. ಹಾಗೆ ದೀರ್ಘಕಾಲ ನಿಲ್ಲತಕ್ಕದ್ದಲ್ಲವೆಂದು ರುಜುವಾತು ಮಾಡಿಕೊಡುವವರಿಗೆ ನಾವು ಒಂದು ನೂರು ರೂಪಾಯಿ ಬಹುಮಾನ ಕೊಡುತ್ತೇವೆ. ಪರೀಕ್ಷೆಮಾಡಿ ನೋಡಿ, ಬಹುಮಾನವನ್ನು ಸಂಪಾದಿಸಿಕೊಳ್ಳಿ ! ಕ್ರಯ ¼ ಔನ್ಸ್ ಗಾಜಿನ ಬಿರಡೆಯ ಬಾಟ್ಲಿಗೆ ರೂಪಾಯಿ 2-0-0.

1 ಡ್ರಾಂ ಕೊಳವೆ 12 ಆಣೆ.

ಆಟೋ ಮೋಹಿನಿ ಪರಿಮಳದ ಕಾರ್ಡುಗಳು ಡಜನ್ 1 ಕ್ಕೆ 12 ಆಣೆ.

ಎಲ್ಲರಲ್ಲೂ ಬಿಕರಿಗೆ ಇಟ್ಟಿದೆ. ಮದರಾಸ್ ಅಧಿಪತ್ಯಕ್ಕೆಲ್ಲಾ ಏಜೆಂಟರು—

ಷಾ ಭಗವಾನ್ ದಾಸ್ ಚೂನಿಲಾಲ್ ಕಂಪನಿ,

[261-45] 177, ಚೈನಾಬಜಾರ್ ರೋಡ್, ಮದರಾಸ್.

S U. N. & Co.,

BENARES CITY, U. P.



ಸೊಗಸಾದ ಸರಕುಗಳು !!

ದೊಡ್ಡ ಕಂಪೆನಿ !

ಈ ನಮ್ಮ ಕಂಪೆನಿಯಲ್ಲಿ ನೆಯದು ತಯಾರಿಸುವ ಉತ್ತಮವಾದ ಬನಾರಸ್ ರೇಷ್ಮೆ ಜರಿ ಸೀರೆಗಳು, ಶಲ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ್ಟಿ, ಮಗುಟ, ಜಗನ್ನಾಥ ಜಾಪಟೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಕ್ಯಾಟಲಾಗ್ 1 ನ್ನು ಮತ್ತು 2 ವಿಶ್ವೇಶ್ವರ ಪಟಗಳನ್ನು ಇನಾಮಾಗಿ ಕಳುಹಿಸಲಾಗುವುದು. [69-32]

ಎಸ್. ಯು. ಎನ್. ಮತ್ತು ಕಂಪೆನಿ, ಕಾಶಿ.

MADRAS SNUFF.

ಬಹಳ ಮೇಲಾದ ನಸ್ಯ ಇನ್ನೆಲ್ಲೂ ಸಿಕ್ಕದು.

ನಮ್ಮಲ್ಲಿ ತಯಾರಾಗುವ ನಸ್ಯದ ಪುಡಿಯನ್ನು ಹಿಂದುಸ್ಥಾನದ ಸಮಸ್ತ ಭಾಗಗಳವರೂ, ಅನ್ಯದೇಶಗಳವರೂ ಹತ್ತಾರು ವರುಷಗಳಿಂದ ತರಿಸಿಕೊಂಡು ಉಪಯೋಗಿಸುತ್ತಿದಾರೆ. ನಮ್ಮ ನಸ್ಯವು ಬಹಳ ಪ್ರಖ್ಯಾತಿ ಪಡೆದಿದೆ. ಬಹುಮೇಲಾದ "ಬಂದರ್" ಸೊಪ್ಪಿನಿಂದ ಸುವಾಸನೆಯಾದ ಅಚ್ಚ ತುಪ್ಪ ಹಾಕಿ ವಿಶೇಷ ರುಚಿಕರವಾಗಿಯೂ ಸ್ವಚ್ಛವಾಗಿಯೂ ತಯಾರುಮಾಡುತ್ತೇವೆ. ಕಡಿದ ಮಟ್ಟಿಗೂ ನಮ್ಮ ಧಾರಣೆ ಕಡಮೆಯಾಗಿರುವುದು. ನಮ್ಮ ಪದಾರ್ಥವನ್ನು ನಾವೇ ಹೊಗಳಿಕೊಳ್ಳುವದರಿಂದ ಫಲವೇನು ? ವಾಚಕರು ಒಂದಾವರ್ತಿ ಪರೀಕ್ಷೆಗಾಗಿ ತರಿಸಿಕೊಂಡರೆ ಚೆನ್ನಾಗಿ ವೇದ್ಯವಾಗುತ್ತೆ. ಕ್ರಯ ಪೌಂಡೀಗೆ 2 ರೂಪಾಯಿ; 1 ಸೇರಿಗೆ 10 ಆಣೆ. ಪೋಸ್ಟೇಜ್ ಬೇರೆ. ನಸ್ಯವನ್ನು ಅಂಚೆಯ ಮೂಲಕವೋ, ರೈಲಿನಲ್ಲೋ ಹ್ಯಾಗೆ ಕಳಿಸಬೇಕೆಂದು ಬರೆಯಿರಿ.

ನಮ್ಮ ವಿಳಾಸ—ಜೆ. ನಾರಾಯಣಸಾಮಿ ನಾಯುಡು,

43, ಪಳಯಪ್ಪನ್ ಸ್ಟ್ರೀಟ್, ಮಿಂಟ್ ಬಿಲ್ಡಿಂಗ್ ಪೋಸ್ಟ್,

[168-12] ಮದರಾಸ್, ಇ.

ವನಸ್ಪತಿ ಬಲಕಾರಿಣಿ.

ಸಾರಸಪರಿಲಾ, ಸುಗಂಧಪಾಲ ಮುಂತಾದ ಅನೇಕ ವನಮೂಲಿಕೆಗಳಿಂದ ತಯಾರಾದದ್ದು. ಬೆಳಿಗ್ಗೆ ಸಾಯಂಕಾಲ ಉಪಹಾರದ ಕಾಲದಲ್ಲಿ ಅಥವಾ ಇಲ್ಲದೇ ಇದ್ದರೂ ಕಾಫಿಯಂತೆ ನೀರಿನಲ್ಲಿ ಚೆನ್ನಾಗಿ ಮರಳಿಸಿ ಹಾಲು ಸಕ್ಕರೆ ಸೇರಿಸಿ ಸೇವನೆ ಮಾಡುವುದು. ಈ ಸೇವನೆಯಿಂದ ಆಬಾಲವೃದ್ಧರ ಮತ್ತು ಗರ್ಭಿಣೀ ಸ್ತ್ರೀಯರ, ಬಾಣಂತಿಯರ ಅಬಲತ್ವ, ಮಂದಾಗ್ನಿ, ರಕ್ತದೋಷ, ತಿನಸು, ನಿತ್ರಾಣ, ವಾಯು ಶೂಲೆಗಳು, ವಾತ ಪಿತ್ತ ಶ್ಲೇಷ್ಮಾದಿಗಳ ವಿಕಾರಗಳು, ಮಕ್ಕಳ ಕೃಶತ್ವವು, ಯೌವನಸ್ಥರ ನಿಶ್ಶಕ್ತತೆಯು, ಉಷ್ಣಸಂಬಂಧ ರೋಗಗಳು, ಬಹುಮೂತ್ರರೋಗಗಳಿಗೂ, ಬುದ್ಧಿ ಉಪಯೋಗಿಸತಕ್ಕ ಜಡ್ಜಿಗಳು, ಲಾಯರುಗಳು, ವಿದ್ಯಾರ್ಥಿಗಳಿಗೂ ಸಹ ಉತ್ಕೃಷ್ಟವಾದದ್ದು. ನಿದ್ರೆ ಬಾರದವರಿಗೂ, ನಿದ್ರೆ ಕಟ್ಟಿದವರಿಗೂ ಬಹಳ ಅನುಕೂಲ. ಕ್ರಯ 24 ತೋಲಾ ಪುಡಿಯುಳ್ಳ ಪೊಟ್ಟಣಕ್ಕೆ 1 ರೂಪಾಯಿ. ವಿ. ಪಿ. ಛಾರ್ಜು ಬೇರೆ. ಎಲ್ಲಾ ಕಡೆಗಳಲ್ಲೂ ಏಜಂಟರು ಬೇಕು.

ಮತ್ತು ಲೇಹಗಳು, ತೈಲಗಳು, ಔಷಧಗಳು ಬೇಕಾದವರು ದೇಹಧರ್ಮವನ್ನು ತಿಳಿಸಿ ತರಿಸಿಕೊಳ್ಳುವುದಾದರೆ ಪ್ರತ್ಯುತ್ತರಕ್ಕೆ ಲೇಬಲ್ ಆಗಲಿ, ರಿಪ್ಲೈ ಕಾರ್ಡು ಆಗಲಿ ಬರೆಯತಕ್ಕದ್ದು.

[216-4] ವಿಳಾಸ—ವಿ. ಪಿ. ಲಕ್ಷ್ಮಣಪಂಡಿತರು,

ಪಂಡಿತ ವೆಂಕಟರಮಣಪ್ಪನವರ ವೈದ್ಯಶಾಲೆ, ಬುರುಜನಹಟ್ಟಿ, ಚಿತ್ರದುರ್ಗ.

ಕುಂತಳಾನಂದ ತೈಲವು.

213-5

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಚಿನ್ನದ ಬೆಳ್ಳಿಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ. ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು. ಈ ತೈಲವು ಕೂದಲನ್ನು ದಟ್ಟವಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುತ್ತದೆ. ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದ್ದಾಗಿದೆ. ಬೆಲೆ ಬಾಟ್ಲಿಗೆ 1 ರೂಪಾಯಿ. 3 ಬಾಟಲಿಗೆ 2 ರೂಪಾಯಿ 10 ಆಣೆ. ಅಂಚೆ ಹಾಸಲು ಬೇರೆ. ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ.

ನಮ್ಮ ವಿಳಾಸ:—ಬಿ. ಎಮ್. ಸಾಥ ಮತ್ತು ಕಂಪೆನಿ,

ವೇಪೇರಿ, ಮದರಾಸ್.

ಅಮೃತಾಂಜನ ರಿಜಿಸ್ಟರ್ಡ್

ಇದು ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು. ಇದರ ಉಪಯೋಗದಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗವಾಯು, ಉಳುಕು, ಕೆಮ್ಮು, ಸೊಂಟದನೋವು, ಶೀತ, ಚರ್ಮ ವ್ಯಾಧಿ, ಹಲ್ಲುನೋವು, ಚೇಳು ಕಡಿತ ಮೊದಲಾದ ಎಲ್ಲಾ ತರದ ನೋವುಗಳು ಖಾತ್ರಿಯಾಗಿ ನಿಲ್ಲುವವು. ನಕಲಿ ಔಷಧಗಳನ್ನು ಪಡಕೊಳ್ಳಬೇಡಿರಿ. ಈ ನಮ್ಮ ಲೋಕಪ್ರಖ್ಯಾತವಾದ ಅಮೃತಾಂಜನವನ್ನು ನಮ್ಮ ರಿಜಿಸ್ಟ್ರಿಯಾದ ಮತ್ತು ಹಲವು ಭಾಷೆಗಳುಳ್ಳ ಸುಂದರವಾದ ಕರಡಿಗೆಯಲ್ಲಿ ಪ್ಯಾಕ್ ಮಾಡಿರುತ್ತೇವೆ. ಕರಡಿಗೆ ಇಲ್ಲದ ಬಾಟ್ಲುಗಳನ್ನು ಪಡಕೊಳ್ಳಬೇಡಿರಿ. ಬಾಟ್ಲು ಒಂದರ ಕಿಮ್ಮತು 0-8-0. ಡಜನ್ 1 ಕ್ಕೆ 5-4-0. ವಿ. ಪಿ. ಪ್ರತ್ಯೇಕ. ಗಜಕರ್ಣದ ಮುಲಾಮು 0-6-0. ದಂತಮಂಜನ 0-2-0. ಮೋಹಿನಿ ತೈಲ 0-12-0 ಚುಚ್ಚು ಮುಲಾಮು 0-3-0. ಜುಲಾಬು ಮಾತ್ರೆ 0-8-0. ಸುಂದರಿ ಮುಲಾಮು 0-8-0. ಕ್ಯಾಟಲಾಗಿಗೆ ಬರೆಯಿರಿ. [62-36]

ವ್ಯಾಪಾರಸ್ಥರಿಗೆ ಚಿಲ್ಲರೆ ಕಮಿಷನ್ ದೊರಕುವದು.

ಅಮೃತಾಂಜನ ಡಿಪೋ,

ಫೋರ್ಟು. ಮುಂಬಯಿ, ಮತ್ತು ೯ ಜಹಂಗೀರ್ ಸ್ಟ್ರೀಟ್, ಮದ್ರಾಸು.



ಅಕ್ಟೋಬರ್ ಮಹೋತ್ಸವದಲ್ಲಿ ಗಡಿಯಾರ ಅರ್ಧ ಕ್ರಯ ರೂ. 1-14-0

ಇದೇ ಅಕ್ಟೋಬರ್ ಹಬ್ಬದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದ ಕೈ ಗಡಿಯಾರವನ್ನು ಅಕ್ಟೋಬರ್ ಒಳಗೆ ತರಿಸಿಕೊಳ್ಳುವವರಿಗೆ ರೂಪಾಯಿ 1-14-0 ಆಣೆಗೆ ಕೊಡಲಾಗುತ್ತೆ. [99-30]

ವಿಳಾಸ—ವಿ. ಕೃಷ್ಣಸ್ವಾಮಿ ಮೊದಲಿಯಾರ್, ನಂ.27 ಬಂದರ್ ಬೀದಿ, ಜಿ.ಟಿ., ಮದರಾಸು.

ಮಧುರೆ ಚುನ್ನಡಿ ಅಂಚಿನ ಸೀರೆ ಅವ್ವಲ್ ರಕಂ ರೂ. 2-6-0. ಅಕ್ಟೋಬರ್ ತಿಂಗಳ ಒಳಗಾಗಿ ತರಿಸಿಕೊಳ್ಳುವರಿಗೆ ಒಂದು ಸಿಂಗಪೂರು ರವಿಕೆಯನ್ನು ಪ್ರತಿ ಸೀರೆಗೂ ಇನಾಮಾಗಿ ಕೊಡುತ್ತೇವೆ.

ಇವು ಉದುರದೆ ದಢೂತಿಯಾಗಿಯೂ ಬೆಳ್ಳಿ ನಯವಾಗಿಯೂ, ಬೆಲೆ ಸುಲಭವಾಗಿಯೂ ಇವೆ. ಬಣ್ಣ ಹೋಗದು. ಸೀರೆಯ ಉದ್ದ 18 ಮೊಳ. ಸುಂದರವಾದ ಸರಗು. ಒಂದನ್ನು ತರಿಸಿ ಪರೀಕ್ಷಿಸಿ. ವಿಳಾಸ—ವಿ. ಕೃಷ್ಣಸ್ವಾಮಿ ಮೊದಲಿಯಾರ್, ನಂ. 27, ಬಂದರ್ ಬೀದಿ, ಜಿ. ಟಿ., ಮದರಾಸು. [99-20]

ಓರಿಯಂಟಲ್ ಗ॥ ಸೆಕ್ಯುರಿಟಿ ಲೈಫ್ ಅಷ್ಯೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು .... ರೂ. 4,45,00,000

ಕಂಪನಿಯಿಂದ ಪಾವತಿ ಆಗಿರುವದು ,, 4,00,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ.—ಮಿ॥ ಎಂ. ಎಸ್. ರಟಲೊ, ಚೀಫ್ ಏಜೆಂಟ್, ಬೆಂಗಳೂರು; ಮ॥ ಎಂ. ಎಸ್. ನಂಜಪ್ಪನವರು ಅಥವಾ ಮ॥ ವೆಂಕಟಪತಯ್ಯನವರು, ಕಂಪನಿ ಏಜಂಟರು, ಮೈಸೂರು; ಅಥವಾ

[221-3] ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ, ಮದರಾಸ್

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

25—9—1914 ರಿಂದ 2—10—1914 ರ ವರೆಗೆ

ಸ್ಥಳ		ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಕಾಲರಾ ತಗಲಿದ್ದು.	ಕಾಲರಾ ಸತ್ತದ್ದು
ಬೆಂಗಳೂರು	ಪಟ್ಟಣ	32	12	0	0
ಮೈಸೂರು	,,	27	25	0	0
ಬೆಂಗಳೂರು ಡಿಸ್ಟ್ರಿಕ್ಟು		21	18	7	5
ಮೈಸೂರು	,,	58	48	0	0
ಕೋಲಾರ್	,,	35	17	2	1
ಕೋಲಾರ್ ಚಿನ್ನದ ಗಣಿಗಳು		5	3	0	0
ತುಮಕೂರು ಡಿಸ್ಟ್ರಿಕ್ಟು		21	15	0	0
ಹಾಸನ	,,	0	0	0	0
ಚಿತ್ರದುರ್ಗ	,,	146	81	50	16
ಕಡೂರ್	,,	19	11	0	0
ಶಿವಮೊಗ್ಗ	,,	36	32	2	3
	ಜುಮ್ಲಾ	378	262	61	25

ಶಾಲಿವಾಹನ ಶಕೆ ವರುಷಂಗಳು 1837 ನೇ ಆನಂದ ಸಂವತ್ಸರೇ ದಕ್ಷಿಣಾಯನೆ ಶರದೃತೌ ಕಾರ್ತೀಕ ಶುದ್ಧ ಪಂಚಮಿ ಶುಕ್ರವಾರದಿಂದ ಕಾರ್ತೀಕ ಶುದ್ಧ ಏಕಾದಶಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ.

1914 ನೇ ಅಕ್ಟೋಬರ್.

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತುಲಾ ಮಾಸ ತೇದಿ
23	ಶುಕ್ರ ::	ಪಂಚಮಿ	46-23	ಜ್ಯೇಷ್ಠ	18-0	7
24	ಶನಿ	ಷಷ್ಠಿ	42-8	ಮೂಲ	15-5	8
25	ಭಾನು	ಸಪ್ತಮಿ	38-48	ಪೂರ್ವಾ	13-0	9
26	ಸೋಮ *	ಅಷ್ಟಮಿ	36-27	ಉತ್ತರಾ	11-57	10
27	ಮಂಗಳ §	ನವಮಿ	35-30	ಶ್ರವಣ	11-50	11
28	ಬುಧ †	ದಶಮಿ	35-24	ಧನಿಷ್ಠ	12-58	12
29	ಗುರು ‡	ಏಕಾದಶಿ	36-49	ಶತಭಿಷ	15-21	13

:: ಮಳೆ ನಕ್ಷತ್ರ—ಸ್ವಾತಿ 1 ನೇ ಪಾದ. * ಅಷ್ಟಮೀಸೋಮವಾರ, ಮೃತ್ಯುಯೋಗ. § ಮಳೆ ನಕ್ಷತ್ರ—ಸ್ವಾತಿ 2 ನೇ ಪಾದ. † ಮೇಲುಕೋಟೆಯಲ್ಲಿ ಅಷ್ಟತೀರ್ಥೋತ್ಸವ. ‡ ಸರ್ವತ್ರ ಏಕಾದಶಿ.

Printed and Published by the Rev. H. Gulliford, Proprietor and Manager, Wesleyan Mission Press, Mysore. 20/10/1914.

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೮ ಮೈಸೂರು—ಸನ್ ೧೯೧೪ ನೇ ಇಸವಿ ಅಕ್ಟೋಬರ್ ತಾರೀಖು ೨೯ ನೇ ಗುರುವಾರ. ಸಂಚಿಕೆ ೨೨

ಹೊಸ ಪುಸ್ತಕಗಳು.—ವಿಷವಿವಾಹ 4 ಆ., ಸನ್ಯಾಸಿನಿ 1½ ಆ., ಸುಶೀಲೆ 6 ಆ., ಬಿ. ವೆಂಕಟಾಚಾರ್ಯರಿಂದ-ದುರ್ಗೇಶನಂದಿನಿ 1½ ರೂ., ಅಮೃತಪುಳಿನ 11 ಆ., ಚಿತ್ರವಿಚಿತ್ರಾವಳಿ 1½ 8 ಆ. ವಗೈರೆ ಎಲ್ಲಾ ಕಾದಂಬರಿಗಳು; ಮುಕ್ತ ವಿಜಯ 3 ಆ. ರಾಜಭಕ್ತಿ 6 ಆ., ವಿವೇಕ ಚೂಡಾಮಣಿ 10 ಆ., ಇತ್ಯಾದಿ.

[63-30] ಎಂ. ಸುಬ್ಬರಾವ್, ಬುಕ್ ಸೆಲರ್, ಶಂಕರಪುರ, ಬೆಂಗಳೂರು ಸಿಟಿ

ಯಸ್. ಆರ್. ವೆಂಕಟಸುಬ್ಬಾಚಾರ್ಯರ ಪುಸ್ತಕಗಳು.

ಮಕ್ಕಳ ಭೂವಿವರಣೆ 2 ಆಣೆ, ನವಬಾಲವ್ಯಾಕರಣ 1 ಆಣೆ; ಇಲಾಖೆಯ 2 ನೇ ಪುಸ್ತಕದ ನೋಟ್ಸು 2½ ಆಣೆ; ಮೆಕ್ಮಿಲನ್‌ರ 3 ನೇ ಪುಸ್ತಕದ ನೋಟ್ಸು 1½ ಆಣೆ; ಡಿಟೋ 4 ನೇ ಪುಸ್ತಕದ ನೋಟ್ಸು 1½ ಆಣೆ; 5 ನೇ ಪುಸ್ತಕದ ನೋಟ್ಸು 4 ಆಣೆ. ಡಿಸ್ಕೌಂಟು 10 ಕ್ಕೆ 1.

[23-2] ನಮ್ಮ ವಿಳಾಸ—ಸ್ಟುಡೆಂಟ್ ಹಾಲ್, ಮೈಸೂರು.

ಯುದ್ಧವಾರ್ತೆಯು.

ಯೂರೋಪಿನಲ್ಲಿ ನಡೆಯುತ್ತಿರುವ ಯುದ್ಧವಾರ್ತೆಯನ್ನು ಪ್ರತಿ ನಿತ್ಯವೂ ಕನ್ನಡಿಗರ ಉಪಯೋಗಕ್ಕಾಗಿ ಪ್ರಕಟಿಸುತ್ತಿರುವೆವು. ಕ್ರಯ 3 ಪೈ; ತಿಂಗಳಿಗೆ 8 ಆಣೆ; ಅಂಚೆಯಲ್ಲಿ ಕಳುಹುವವರಿಗೆ ತಿಂಗಳಿಗೆ ಒಂದು ರೂಪಾಯಿ. ಮೈಸೂರು ಸಂಸ್ಥಾನದ ಎಲ್ಲಾ ಭಾಗದಲ್ಲಿಯೂ ಏಜಂಟರುಗಳು ಬೇಕಾಗಿವೆ. ಹೆಚ್ಚಾಗಿ ಕಮೀಷನ್ ಸಿಗುವುದು.

ಮುದ್ರಿಸುವರು—

[93-12] ಚಿಕ್ಕೂರು ರಾಮಚಂದ್ರರಾವ್, ಮೈಸೂರು.

ಬೇರೆಯಿಲ್ಲ! **ಮಧುರವಾಣೀ.** ಫ್ರೀ!!

ವಾರ್ಷಿಕ ಚಂದಾ—ರೂ. 1 8 0.

ಇದರಲ್ಲಿ ಕಾಲಕ್ಕೆ ತಕ್ಕ ಭಾಷಾಶೈಲಿಯಿಂದ ಬರೆಯಲ್ಪಡುವ ಚಮತ್ಕಾರ, ಹಾಸ್ಯ, ವಿನೋದಗಳಿಂದ ಕೂಡಿದ ಸಂಗೀತಪ್ರಯೋಗ ನಾಟಕ, ಕಾದಂಬರಿ, ಜೀವನ ಚರಿತ್ರೆ ಮೊದಲಾದ ಉಪನ್ಯಾಸಗಳೂ; ಮತ, ನೀತಿ, ವಿದ್ಯಾ ವಿಷಯಕವಾದ ಉತ್ತಮೋಪನ್ಯಾಸಗಳೂ ಹಾಸ್ಯಲಹರಿ, ಸದುಕ್ತಿ ಸಂಗ್ರಹ, ಕುಚೋದ್ಯಗಳು ಮೊದಲಾದ ಉಪಯುಕ್ತ ವಿಷಯಗಳೂ ಬೇರೆ ಬೇರೆ ಪುಟಗಳೊಡನೆ ಸುಂದರ ಮುದ್ರಣದಿಂದ ಚಿತ್ರಸಹಿತವಾಗಿ ಪ್ರತಿ ತಿಂಗಳೂ ತಪ್ಪದೆ ಪ್ರಕಟಿಸಲ್ಪಡುವುವು. ಮಾದರಿ ಸಂಚಿಕೆಗೂ ಸ್ಟಾಂಪುಗಳಿಗೂ ಬೇಡವಿಲ್ಲ. ಸ್ವಲ್ಪ ಪ್ರತಿಗಳೇ ಉಳಿದಿವೆ.

[180-15] ನಮ್ಮ ವಿಳಾಸ. ಹನುಮಾನ್ ಕಂಪೆನಿ, ಮೈಸೂರು

ಷೇಕ್ಸ್‌ಪಿಯರ್

ಮಹಾ ಕವಿಯ ನಾಟಕದ ಕಥೆಗಳು.

ಸಿಂಬೆಲಿನ್. ಒಥೆಲೋ. ಮರ್ಚೆಂಟ್ ಆಫ್ ವೆನ್ನಿಸ್, ಕಿಂಗ್‌ಲಿಯರ್ ಮುಂತಾದ ಕೆಲವು ನಾಟಕಗಳನ್ನು ಕಥಾರೂಪವಾಗಿ ಬರೆಯಲ್ಪಟ್ಟು ನಮ್ಮ ದೇಶದ ಹೆಸರನ್ನಿಟ್ಟು ಪ್ರಕಟಿಸುತ್ತ ಪ್ರತಿ ಒಂದಕ್ಕೂ ಎಂಟೆರಡಾಣೆ. ಅವು ಯಾವವೆಂದರೆ—ಕಳಾವತಿ. ಸದ್ಗುಣಿ, ವಸುಮತಿ. ಚಿತ್ರಕಳಾವತಿ, ವಿಲಕ್ಷಣ ಶಿಕ್ಷಣ, ಭೀಮಮತಿ, ವೈವಾಹಿಕ ವಿಲಾಸ, ಚಾರುಮತಿ, ಚಾತುರ್ಯವತಿ

ಮರುಳಾಟದ ಮದುವೆ ಎಂಬ ನಾಟಕವೂ ಈಗತಾನೇ ಅಚ್ಚಾಗಿ ಸಿದ್ಧವಾಗಿದೆ. ಪ್ರತಿಯೊಬ್ಬರೂ ಓದಬೇಕಾದುದು. ಕ್ರಯ 6 ಆಣೆ.

[266-46] ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

ಸೂರ್ಯೋದಯ ಪುಸ್ತಕಭಂಡಾರ.

ಹೊಸ ನಾವೆಲ್‌ಗಳು:—ನೀಲಾಂಬರಿ, ಸರಳೆ, ಗುರುತು ಕಂಡ ಕಳ್ಳ, ಮಾಜನಾಬಿಯ ಅತ್ಯಾಚಾರ, ಮಾಯಾವಿನಿಯ ಪರಿಣಾಮ ಮುಂತಾದ ಪತ್ತೇದಾರಿ ನಾವೆಲ್‌ಗಳು. ಪುಸ್ತಕ ಒಂದಕ್ಕೆ ಆಣೆ 2 ಮಾತ್ರ. ಶಕ್ತಿ 12 ಆಣೆ. ಸಾಧ್ವಿ ಶಂಕರ 1-8-0. ಇದಲ್ಲದೆ ಈ ಡಿಪೋದಲ್ಲಿ ಕನ್ನಡ, ತೆಲುಗು, ಸಂಸ್ಕೃತ, ಇಂಗ್ಲಿಷ್ ಗ್ರಂಥಗಳೂ, ನಾವೆಲ್‌ಗಳೂ, ಕಥೆಗಳೂ, ಪುರಾಣಗಳೂ, ವೈದ್ಯ ಜ್ಯೋತಿಷ ಪುಸ್ತಕಗಳೂ ದೊರೆಯುತ್ತವೆ. ಬೇಕಾದವರು ಬರೆದು ಸುಭಗತ್ವಾಗಿ ದೊರೆಯುವ ಕ್ಯಾಟಲಾಗನ್ನು ತರಿಸಿಕೊಳ್ಳಬಹುದು.

[143-16] ವಿಳಾಸ:—ಬಿ. ನರಸಿಂಗರಾವ್, ಎಡಿಟರ್, ಅರಿ ಗೆಜೆಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

The General Assurance Society Ltd., Ajmer.

(A Popular Life Office.)

Mr. S. P. Ramanna—Agent at Mysore.

Before insuring or taking agency elsewhere, it would be to your interest to know the rates of premium and terms of agency specially prepared by the Society's Consulting Actuary, Mr. H. E. W. Lott, F.I.A. (one of the most eminent Actuaries in England).

First Valuation Result:—The total liabilities under all assurances issued up to 31st March 1913, are fully covered by the Society's Life Assurance Fund and Paid up Capital. Write for full particulars, Annual and Valuation Reports to the Manager, Ajmer, or Secretary.

Opposite to Minto Ophthalmic Hospital.

[131-10] Bangalore City.

ಸಿದ್ಧವಾಗಿದೆ.

1915 ನೆಯ ವರ್ಷದ ಲೋವರ್ ಸೆಕಂಡರಿ

ಕನ್ನಡ ಟೆಕ್ಸ್ಟಿನ ನೋಟ್ಸು.—ಕ್ರಯ 6 ಆಣೆ

ಡಿಸ್ಕೌಂಟು—10 ಕ್ಕೆ 1; 25 ಕ್ಕೆ 3; 50 ಕ್ಕೆ 8; 100 ಕ್ಕೆ 20

ಮಕ್ಕಳ ಭೂವಿವರಣೆ.

ಈಗಿನ ಪಾಠಕ್ರಮಕ್ಕೆ ತಕ್ಕಂತೆ ಹೊಸದಾಗಿ ಆಗಿದೆ. ಇದರಲ್ಲಿ ಮೈಸೂರು ದೇಶದ ಬೆಳೆ, ಎತ್ತರ, ನದೀ ಪರ್ವತಾದಿಗಳು ಇವುಗಳನ್ನು ತೋರಿಸುವ ಮೂರು ಭೂಪಟಗಳೂ, ಚಿತ್ರಗಳೂ ಸೇರಿವೆ. ಕ್ರಯ 2 ಆಣೆ [49-37]

ಇಲಾಖೆಯ 2 ನೆಯ ಪುಸ್ತಕದ ನೋಟ್ಸು 2½ ಆಣೆ, ಮೆಕ್ಮಿಲನ್ ರವರ 3 ನೇ ಪುಸ್ತಕದ ನೋಟ್ಸು 1½ ಆಣೆ, ಡಿಟೊ 4 ನೇ ಪುಸ್ತಕದ ನೋಟ್ಸು 1½ ಆಣೆ, ಡಿಟೋ 5 ನೇ ಪುಸ್ತಕದ ನೋಟ್ಸು 4 ಆಣೆ, ನವಬಾಲವ್ಯಾಕರಣ (2 ನೇ ತರಗತಿಗೆ) 1 ಆಣೆ. Notes on "Tanglewood Tales," English Lower Secondary Text for 1915—As. 3. Notes on Fairy Tales—As. 2.

ನಮ್ಮ ವಿಳಾಸ:—ಯಸ್. ಆರ್. ವೆಂಕಟಸುಬ್ಬಾಚಾರ್ಯ, ಸುಬೋಧಗ್ರಂಥಾಲಯ, ಮೈಸೂರು

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶರಾಶಿಯನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾದರೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ. ಈ ತೈಲವನ್ನು ಹಚ್ಚಿಕೊಳ್ಳುತ್ತಲೇ, ಮಸ್ತಿಷ್ಕದ ಬಿಸಿಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ಹಚ್ಚಿಯ ತೊಡಗಿದ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು; ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು.

ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ಕಲೆಯನ್ನೂ ಹಾಳುಮಾಡುವುದಕ್ಕಿಂತ ಒಂದೇಯೊಂದು ಬಾರಿ ಈ "ಕಾಮಿನಿಯಾ ತೈಲ" ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ನಿಮಿತ್ತದಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಆಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಅವುಗಳಲ್ಲಿ ಒಂದನ್ನೇ ನೋಡಿರಿ! ನೇಗಿನಹಾಳಕರ ಬಂಧುಗಳು ಬಸವನಗಲ್ಲಿ, ಬೆಳಗಾಂವ—ತಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ. ಆದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ. ಪಿ. ದ್ವಾರಾ ರವಾನಿಸುವುದು. ಸೀಸೆಯೊಂದರ ಕ್ರಯ ರೂ 1-0-0, ಅ. ವೆ. 0-4-0 ಬೇರೆ; 3 ಸೀಸೆಗಳ ಕ್ರಯ ರೂ 2-10-0, ಅ. ವೆ. 0-7-0 ಬೇರೆ

ಸೂಚನೆ.—ಅನೇಕ ಮರ್ಯಾದೆಹೀನರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಬೆಳೆಯಿಂದ ತಮಗೆ ಅತ್ಯಲ್ಪ ನಫೆಯೇ ದೊರಕುತ್ತದೆಂದು, ನೀವು "ಕಾಮಿನಿಯಾ ತೈಲ" ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭ ದೊರಕತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅದಲ್ಲಿ ಇದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳುವದು. ಮೊದಲು ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಿಬೀಳದೆ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಒಟ್ಟೋ ದಿಲ್ ಬಹಾರ್!!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಆಲ್ಕೋಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ. ಈ ಒಟ್ಟೋ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಯುವುದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ. [19-40]

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಡ್ರೆಮಿನ (ಮೀಡಿಯಂ) ಸೀಸೆ 1 ಕ್ಕೆ 0-12-0 ಅರ್ಧ ಔನ್ಸಿನ ಮೆಚ್ಚಿ ಸೀಸೆಯ ಬೆಲೆ ರೂ. 2-0-0. ಅಂಚೆಯ ವೆಚ್ಚ ಬೇರೆ ರೂ. 0-4-0. ಒಟ್ಟೋ-ದಿಲ್ ಬಹಾರ್ ಪರಿಮಳದ ಸಾಬೂನುಗಳು ಡಜನ್ ಒಂದಕ್ಕೆ 0-12-0.

ಮೇಲೆ ಕಂಡ ಎಲ್ಲಾ ಸುಗಂಧಗಳು ಸಿಕ್ಕುವ ಪತ್ತೆ:—

ಆಂಗ್ಲೋ-ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮಾಮಸ್‌ಜಿದ್, ಬೊಂಬಾಯಿ.

ಏಜೆಂಟ್, ದಿ ಉಲ್ಲನ್ ವರ್ಕ್ಸ್, ಮಂಗಳೂರು.

Mellin's Food

ಮೆಲ್ಲಿನ್ಸ್ ಆಹಾರವು

ಕೈಸೋಕದೆ ಮಾಡಿದೆ

ಶಿಶುಗಳಿಗೂ ರೋಗಿಷ್ಠರಿಗೂ

ಮೆಲ್ಲಿನ್ಸ್ ಆಹಾರವು ಕ್ರಮಪ್ರಕಾರ ತಯಾರ್ಮಾಡಿ ಸೇವಿಸಿದರೆ ಹುಟ್ಟಿದ ಶಿಶುಗಳು ಮೊದಲುಗೊಂಡು ಮುದಿಪ್ರಾಯದವರ ತನಕ ಎಲ್ಲರಿಗೂ ಸಂಪೂರ್ಣವಾದ ದೇಹಪುಷ್ಟಿಯನ್ನೂ ವಿಶೇಷವಾದ ಬಲವನ್ನೂ ಕೊಡುತ್ತದೆ. [4-43]

ಮೆಲ್ಲಿನ್ಸ್ ಆಹಾರವೆಂಬ ಬೇರೆ ಬೇರೆ ತಿಂಡಿ ಪದಾರ್ಥಗಳನ್ನು ಹಿಂದುಸ್ಥಾನ, ಬರ್ಮಾ ಮತ್ತು ಸಿಲೋನ್ ದ್ವೀಪಗಳಲ್ಲಿ ಎಲ್ಲಾ ವ್ಯಾಪಾರಗಾರರೂ ವಿಕರಿಮಾಡುತ್ತಾರೆ. **Messrs. OAKES & Company, Mount Road, Madras.**

ವಿಳಾಸ—ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ. ಮೌಂಟ್ ರೋಡ್. ಮದರಾಸ್.

ವೃತ್ತಾಂತಪತ್ರಿಕೆ ಏಜಂಟರಿಗೆ ಸೂಚನೆ.

ವೃತ್ತಾಂತ ಪತ್ರಿಕೆಯ 1914-15 ನೇ ವರುಷದ ಒಂದನೇ ಕ್ವಾರ್ಟರು ಕಳೆದ ಆಗಸ್ಟ್ ತಿಂಗಳಿಗೆ ಪೂರೈಸಿದೆ. ಏಜಂಟರುಗಳು ಆ ಕ್ವಾರ್ಟರಿನ ಲೆಕ್ಕಗಳನ್ನು ಖೈದುಮಾಡಿ, "ಬಿ" ಫಾರಂಗಳಿಗೆ ಎತ್ತಿ ಬರೆದು, ತಮ್ಮ ತಮ್ಮ ಸೂಪರಿಂಟೆಂಡೆಂಟರಿಗೆ ಒಂದು ಪ್ರತಿಯನ್ನೂ, ನಮಗೆ ಒಂದು ಪ್ರತಿಯನ್ನೂ ಈ ವಾರದಲ್ಲೇ ಜಾಗ್ರತೆಯಿಂದ ಕಳುಹಿಸಿಕೊಡಬೇಕಾಗಿ ಕೃತಪಡಿಸಿದೆ.

ನೀವು ಕೇಳಿದ ಹಾಗೆ ಪತ್ರಿಕೆಗಳನ್ನು ವೆಚ್ಚಾಗಿ ಕಳುಹಿಸುತ್ತಾ ಬರುವೆವು. ಆದರೆ ಬಿಡಿ ಪತ್ರಿಕೆಗಳನ್ನು ಸಾಲದಲ್ಲಿ ಕೊಡದು. ಮುಂದಿನ 1915 ನೇ ಏಪ್ರಿಲ್ ವರೆಗೆ ಅಡ್ವಾನ್ಸು ಕೊಟ್ಟು ಕ್ರಮವಾಗಿ ಚಂದಾದಾರರಾಗತಕ್ಕವರಿಗೆ ಮಾತ್ರ ಪತ್ರಿಕೆಗಳನ್ನು ತಪ್ಪಿಸದೆ ಕೊಡುತ್ತಾ ಬರಬೇಕೆಂದು ಕೋರುತ್ತೇವೆ.

ಮ್ಯಾನೇಜರ್, "ವೃತ್ತಾಂತ ಪತ್ರಿಕೆ," ಮೈಸೂರು.

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು."

ಎಂಥಾ ರೋಗಿಷ್ಟರೂ ವಾಸಿಮಾಡಿಕೊಳ್ಳುವೆನೆಂದು ಹೇಳು. ವಾಯು, ಕೀಲು, ಆರಕಲಿ, ತಲೆನೋವುಗಳು; ಯಾವ ಕಾರಣದಿಂದ ಹುಟ್ಟುವ ಬಾಧೆಯಾಗಲಿ, ಉಬ್ಬಸ, ಹಲ್ಲುನೋವು, ಗಂಟ್ಲು ಗಾರೆನ್ನುವುದು, ಕೆಮ್ಮುಗಳು, ಶೀತನೆಗಡಿ, ಶ್ವಾಸರೋಗ, ಬಚ್ಚು, ಉಳುಕು, ಥಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ. ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು ಕ್ಲೆಮೆಂಟಿನ ಮ್ಯಾಜಿಕ್ ಬಾಂ ಒಂದು ಬಾಟ್ಲಿ ಕೊಡಿ ಎಂದು ಕೇಳು. ಅವಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೋ. ಈ ಯುಕ್ತಿಯೋಪಾದಿ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ. ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ. ಲಕ್ಷಾಂತರ ಜನರು ಗುಣಹೊಂದಿದಾರೆ; ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ [152-22]

"ಕ್ಲೆಮೆಂಟಿನ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡಿ. ಅದರ ಕ್ರಯ ಬಾಟ್ಲಿಗೆ 12 ಆಣೆ, ಅಂಚೆ ವೆಚ್ಚ 4 ಆಣೆ. 3 ಅಥವಾ ಹೆಚ್ಚು ಬಾಟ್ಲಿ ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ. ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ. ವಿಳಾಸಗಳು:—(1) ಎಸ್. ಪೀಟರ್ಸ್, 37 ನಡಮರಿಪಿಳ್ಳೆ ಬೀದಿ, ಪುರಸವಾಕಂ. ವೇಪೇರಿ, ಮದರಾಸ್; (2) ಬಿ ಎಸ್. ಕನ್ನಯ್ಯಶೆಟ್ಟರು, ಜನರಲ್ ಮರ್ಚಂಟ್ ತುಮಕೂರು.

ಮಕ್ಕಳಿರುವ ಮನೆಗಳಲ್ಲಿಯೂ ಪ್ರಯಾಣಕಾಲದಲ್ಲಿಯೂ ಛಳಿ ಮಳೆಗಾಲಗಳಲ್ಲಿಯೂ ಮಲೆನಾಡಿನಲ್ಲಿಯೂ ಸೋಂಕುರೋಗ ಸ್ಥಳಗಳಲ್ಲಿಯೂ ಆರೋಗ್ಯವನ್ನು ಕಾಪಾಡುವುದರಲ್ಲಿ ಶ್ರೇಷ್ಠತಮವಾದ

ಶ್ರೀಕರಕಸ್ತೂರಿಮಾತ್ರೆ

ಟಿಬೆಟ್ ದೇಶದ ಕಸ್ತೂರಿ—ಅನೇಕ ಪುಟಗಳಿಂದ ತಯಾರಿಸಿದ ಲೋಹಭಸ್ಮ—ಚಿನ್ನದ ರೇಕು ಮೊದಲಾದವುಗಳಿಂದ ಹಿರಿಯರ ಕಾಲದಿಂದಲೂ ತಯಾರಿಸಲ್ಪಡುತ್ತಿರುವ ಈ ಶ್ರೀಕರ ಕಸ್ತೂರಿಮಾತ್ರೆಗಳು ತಾಂಬೂಲವನ್ನು ರಂಜಿಸಿ ಎಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸಿ ಬಹಳ ಹೊತ್ತಿನವರೆಗೆ ಬಾಯಿ ಘಮಘಮಿಸುವಂತೆ ಮಾಡುವುವು. ಶೀತವಾಯು-ಕೆಮ್ಮು-ನೆಗಡಿ-ದಿನಜ್ವರ-ಮೂರರ ಜ್ವರ-ನಾಲ್ಕರ ಜ್ವರ-ಮಲೇರಿಯಾಜ್ವರ-ತಲೆನೋವು-ಮೈಕೈನೋವು ಮತ್ತು ಭಾರ-ಅರೋಚಕ ಹಲ್ಲುನೋವು-ಹೊಟ್ಟೆನೋವು-ಮಲಬಂಧ-ಅಜೀರ್ಣಭೇದಿ-ಮಕ್ಕಳಿಗೆ ಸಾಮಾನ್ಯವಾಗಿ ಬರುವ ಪಕ್ಕೆಗಳ ಸೆಳತ-ಹೊಟ್ಟೆಯುಬ್ಬರ-ಮಂದಜ್ವರ-ಭೇದಿ ಮುಂತಾದುವುಗಳನ್ನು ನಂಬಿಕೆಯಾಗಿ ಗುಣಪಡಿಸುತ್ತವೆ. ಒಂದು ವೇಳೆ ಈ ಮಾತ್ರೆಗಳನ್ನು ಪರೀಕ್ಷಿಸಿದರೆ ಯಾವಾಗಲೂ ಇದನ್ನೆ ತರಿಸುವರೆಂದು ನಾವು ಧೈರ್ಯವಾಗಿ ಹೇಳಬಲ್ಲೆವು. 250 ಮಾತ್ರೆ 4 ಆಣೆ. ಐದಕ್ಕೆ ಒಂದು ಇನಾಮು. ವಿ. ಪಿ. ಛಾರ್ಜು ಪ್ರತ್ಯೇಕ. [220-52]

ಟಿ. ವಿ. ಪಂಡಿತ್, ಸದ್ವೈದ್ಯಶಾಲಾ, ನಂಜನಗೂಡು.

ಪ್ರೊಫೆಸರ್ ಗಜ್ಜಾರರವರ

ಗುಣಕಂಡ ಪ್ರಖ್ಯಾತವಾದ ಔಷಧಗಳು.

ವ್ಯರ್ಥವಾದ ಔಷಧಗಳನ್ನು ಉಪಯೋಗಿಸಿ ಪ್ರಾಣಾಪಾಯಕ್ಕೆ ಗುರಿಯಾಗುವುದೇಕೆ? ವಿವೇಕದಿಂದ ತಯಾರುಮಾಡಿರುವ ನಮ್ಮ ಔಷಧಗಳನ್ನು ಸೇವನೆ ಮಾಡಬಾರದೇ?

ಟಾನಿಕ್ ಸೊಲ್ಯೂಷನ್.—ಇದರಲ್ಲಿ ಗ್ಲಿಸರೊಫೋಸ್ಫೇಟ್ಸ್ ಎಂಬ ಅಮೂಲ್ಯ ಪದಾರ್ಥಗಳನ್ನು ಹಾಕಿ ತಯಾರುಮಾಡಿದೆ. ಇದು ಬೇಗನೆ ಶರೀರಕ್ಕೆ ಸೇರಿಹೋಗುತ್ತೆ. ಆರೋಗ್ಯವನ್ನೂ ಚಟುವಟಿಕೆಯನ್ನೂ ಶಕ್ತಿಯನ್ನೂ ವೃದ್ಧಿಮಾಡುವುದು. ನರಗಳ ದುರ್ಬಲವನ್ನೂ ಹೋಗಲಾಡಿಸುವುದರಲ್ಲಿ ಇದು ಬಹಳ ಶ್ರೇಷ್ಠವಾದ ಔಷಧ ಕ್ರಯ ಶೀಸೆಗೆ 2 ರೂಪಾಯಿ, ಮತ್ತು ರೂ. 1-2-0.

ರಕ್ತಶುದ್ಧಿಗೆ ಮಹೌಷಧ.—ಇದು ರಕ್ತವನ್ನೂ ದೇಹದ ಎಲ್ಲಾ ಭಾಗಗಳನ್ನೂ ಶುದ್ಧಿಮಾಡುತ್ತೆ. ಬಹಳ ಚೆನ್ನಾಗಿ ಗುಣಕಂಡ ಔಷಧ. ಕ್ರಯ ಶೀಸೆಗೆ 1 ರೂಪಾಯಿ.

ಲಿವರ್ ಸೊಲ್ಯೂಷನ್.—ಪಿತ್ತಕೋಶದ ಮೇಲೆ ಇದು ಬಹಳ ಚೆನ್ನಾಗಿ ಕೆಲಸಮಾಡೋಣದರಿಂದ ಮಲಬದ್ಧತೆಯುಳ್ಳವರಿಗೆ ಮಹೋಪಕಾರಿಯಾಗಿದೆ. ಜ್ವರಕ್ಕೂ ಇದನ್ನು ಕೊಡುತ್ತಾರೆ. ಇದು ಮನೆಯಲ್ಲಿ ಇದ್ದೇ ತೀರಬೇಕು. ಕ್ರಯ ಶೀಸೆಗೆ ರೂ. 1; ಮತ್ತು ರೂ. 0-10-0.

ಜ್ವರದ ಔಷಧ.—ವಿಷಮಶೀತಜ್ವರ, ಸಿಂತುಬರುವಜ್ವರ, ಅವಧಿಯಜ್ವರ, ಎಲ್ಲಾ ತರದ ಜ್ವರಗಳಿಗೂ ಇದು ಸಂಜೀವನವಾಗಿದೆ. ಇದು ಕ್ವಿನೈನ್‍ಗಿಂತ ಬಹಳ ಅಗ್ಗ. ಕ್ರಯ ಶೀಸೆಗೆ 10 ಆಣೆ; 4 ಆಣೆ.

ಹುಳುಕಡ್ಡಿ ಔಷಧ.—ಹುಳುಕಡ್ಡಿಯನ್ನು ಖಂಡಿತವಾಗಿ ಗುಣಮಾಡುತ್ತೆ. ಕ್ರಯ ಸೀಸೆಗೆ 4 ಆಣೆ.

ಹಲ್ಲುಪುಡಿ.—ಈ ಪುಡಿಯಿಂದ ಹಲ್ಲು ಉಜ್ಜಿಕೊಂಡರೆ ಬಾಯಿಗೆ ಸುವಾಸನೆ ಕೊಡುತ್ತೆ. ಹಲ್ಲು ಸವೆದು ಕೆಡದಂತೆ ಬಹಳ ಚೆನ್ನಾಗಿಟ್ಟು ಕಾಪಾಡುತ್ತೆ. ಕ್ರಯ ಸೀಸೆಗೆ 4 ಆಣೆ; 6 ಆಣೆ; 1 ರೂಪಾಯಿ.

ಇಂಗ್ಲೀಷಿನಲ್ಲೇ ನಮಗೆ ಕಾಗದವನ್ನು ಬರೆಯಬೇಕು.

ಸೋಲ್ ಏಜಂಟರು:—ಎಸ್. ವೈದ್ಯ ಮತ್ತು ಕಂಪನಿ,

[156-16] ಪಾರ್ಕ್ ಟೌನ್, ಮದರಾಸ್.

ವನಸ್ಪತಿ ಬಲಕಾರಿಣಿ.

ಸಾರಸಪರ್ಲಾ, ಸುಗಂಧಬಾಲ ಮುಂತಾದ ಅನೇಕ ವನಮೂಲಿಕೆಗಳಿಂದ ತಯಾರಾದದ್ದು. ಬೆಳಿಗ್ಗೆ ಸಾಯಂಕಾಲ ಉಪಹಾರದ ಕಾಲದಲ್ಲಿ ಅಥವಾ ಇಲ್ಲದೇ ಇದ್ದರೂ ಶಕ್ತಿಯಂತೆ ನೀರಿನಲ್ಲಿ ಚೆನ್ನಾಗಿ ಮರಳಿಸಿ ಹಾಲು ಸಕ್ಕರೆ ಸೇರಿಸಿ ಸೇವನೆ ಮಾಡುವುದು. ಈ ಸೇವನೆಯಿಂದ ಆಬಾಲವೃದ್ಧರ ಮತ್ತು ಗರ್ಭಿಣೀ ಸ್ತ್ರೀಯರ, ಬಾಣಂತಿಯರ ಅಬಲತ್ವ, ಮಂದಾಗ್ನಿ, ರಕ್ತದೋಷ, ತಿನಸು, ಪಿತ್ತಪ್ರಾಣ, ವಾಯುಶೂಲೆಗಳು, ವಾತ ಪಿತ್ತ ಶ್ಲೇಷ್ಮಾದಿಗಳ ವಿಕಾರಗಳು, ಮಕ್ಕಳ ಕೃಶತ್ವವು, ಯೌವನಸ್ಥರ ನಿಶ್ಶಕ್ತತೆಯು, ಉಷ್ಣಸಂಬಂಧ ರೋಗಗಳು, ಬಹುಮೂತ್ರರೋಗಗಳಿಗೂ, ಬುದ್ಧಿ ಉಪಯೋಗಿಸತಕ್ಕ ಜಡ್ಜಿಗಳು, ಲಾಯರುಗಳು, ವಿದ್ಯಾರ್ಥಿಗಳಿಗೂ ಸಹ ಉತ್ಕೃಷ್ಟವಾದದ್ದು. ಬಡ್ಡಿ ಬಾರದವರಿಗೂ, ನಿದ್ರೆ ಕಟ್ಟಿದವರಿಗೂ ಬಹಳ ಅನುಕೂಲ. ಕ್ರಯ 24 ತೋಲಾ ಹಿಡಿಯುಳ್ಳ ಪೊಟ್ಟಣಕ್ಕೆ 1 ರೂಪಾಯಿ. ವಿ. ಪಿ. ಛಾರ್ಜು ಬೇರೆ. ಎಲ್ಲಾ ಕಡೆಗಳಲ್ಲೂ ಏಜಂಟರು ಬೇಕು.

ಮತ್ತು ಲೇಹಗಳು, ತೈಲಗಳು, ಔಷಧಗಳು ಬೇಕಾದವರು ದೇಹಧರ್ಮವನ್ನು ತಿಳಿಸಿ ತರಿಸಿಕೊಳ್ಳುವುದಾದರೆ ಪ್ರತ್ಯುತ್ತರಕ್ಕೆ ಲೇಬಲ್ ಆಗಲಿ, ರಿಪ್ಲೈ ಕಾರ್ಡು ಆಗಲಿ ಬರೆಯತಕ್ಕದ್ದು.

[216-5] ವಿಳಾಸ—ವಿ. ಪಿ. ಲಕ್ಷ್ಮಣಪಂಡಿತರು,
ಪಂಡಿತ ವೆಂಕಟರಮಣಪ್ಪನವರ ವೈದ್ಯಶಾಲಾ, ಬುರಜನಹಟ್ಟಿ, ಚಿತ್ರದುರ್ಗ.

ಕುಂತಳಾನಂದ ತೈಲವು.

213-6

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಿರುದಿನ ಬಿಲ್ಲೆಗಳನ್ನೂ, ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ. ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು. ಈ ತೈಲವು ಕೂದಲನ್ನು ಚೆನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುತ್ತದೆ. ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ.

ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕುದಾಗಿದೆ. ಬೆಲೆ ಬಾಟ್ಲಿಗೆ 1 ರೂಪಾಯಿ. 3 ಬಾಟಲಿಗೆ 2 ರೂಪಾಯಿ. 10 ಆಣೆ. ಅಂಚೆ ಹಾಸಲು ಬೇರೆ. ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ.

ನಮ್ಮ ವಿಳಾಸ:—ಟಿ. ಎಮ್. ನಾಥ ಮತ್ತು ಕಂಪೆನಿ,
ವೇಪೇರಿ, ಮದರಾಸ್.

S U. N. & Co.,

BENARES CITY, U. P.

ಸೊಗಸಾದ ಸರಕುಗಳು!! ದೊಡ್ಡ ಕಂಪೆನಿ!

ಈ ನಮ್ಮ ಕಂಪನಿಯಲ್ಲಿ ನೆಯುದು ತಯಾರಿಸುವ ಉತ್ತಮವಾದ ಬನಾರಸ್ ರೇಷ್ಮೆ ಜರಿ ಸೀರೆಗಳು, ಕಣ, ಪೇಟಾ, ಕಾಶ್ಮೀರ್ ಶಾಲು, ದುಪಟ್ಟಿ, ಮಗುಟ, ಜಗನ್ನಾಥ ಜಾಗಟೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಕ್ಯಾಟಲಾಗ್ 1 ನ್ನು ಮತ್ತು 2 ವಿಶ್ವೇಶ್ವರ ಪಟಗಳನ್ನು ಇನಾಮಾಗಿ ಕಳುಹಿಸಲಾಗುವುದು. [69-33]

ಎಸ್. ಯು. ಎನ್. ಮತ್ತು ಕಂಪೆನಿ, ಕಾಶಿ.

ಯಾಕೆ ಪರೀಕ್ಷಿಸಬಾರದು? ಭಂಗಾರದ ಪದಕ ಬಂದಿದೆ.

ಸೆಂಟ್, ಅತ್ತರುಗಳಲ್ಲೆಲ್ಲಾ ಶ್ರೇಷ್ಠವಾದವು.

ಆಟೋ ಮೋಹಿನಿ.

ಇದು ರೆಜಿಸ್ಟರ್ ಆಗಿದೆ. ಈಗಿನ ಕಾಲದಲ್ಲಿ ಇದೇ ನಿಲ್ಲುವ, ಸುವಾಸನೆಯುಳ್ಳ, ಮನೋಹರವಾದ ಮತ್ತು ಸರಿಯಾದ ಪರಿಮಳದ ದ್ರಾವಕ. ಕರವಸ್ತ್ರಕ್ಕೆ ನಾಲ್ಕು ತೊಟ್ಟು ಹಾಕಿಕೊಂಡರೆ ನಾಲ್ಕುದಿನಗಳ ತನಕ ಘಮಘಮಿಸುವ ಸುವಾಸನೆ ಇರುತ್ತೆ. ಹಾಗೆ ದೀರ್ಘಕಾಲ ನಿಲ್ಲತಕ್ಕದ್ದಲ್ಲವೆಂದು ರುಜುವಾತು ಮಾಡಿಕೊಡುವವರಿಗೆ ನಾವು ಒಂದು ನೂರು ರೂಪಾಯಿ ಬಹುಮಾನ ಕೊಡುತ್ತೇವೆ. ಪರೀಕ್ಷೆಮಾಡಿ ನೋಡಿ, ಬಹುಮತಿಯನ್ನು ಸಂಪಾದಿಸಿಕೊಳ್ಳಿ! ಕ್ರಯ ½ ಔನ್ಸ್ ಗಾಜಿನ ಬಿರಡೆಯ ಬಾಟ್ಲಿಗೆ ರೂಪಾಯಿ 2-0-0.

1 ಡ್ರಾಂ ಕೊಳವೆ 12 ಆಣೆ.

ಆಟೋ ಮೋಹಿನಿ ಪರಿಮಳದ ಕಾರ್ಡುಗಳು ಡಜನ್ 1 ಕ್ಕೆ 12 ಆಣೆ.

ಎಲ್ಲರಲ್ಲೂ ಬಿಕರಿಗೆ ಇಟ್ಟಿದೆ. ಮದರಾಸ್ ಆಧಿಪತ್ಯಕ್ಕೆಲ್ಲಾ ಏಜೆಂಟರು—
ಷಾ ಭಗವಾನ್ ದಾಸ್ ಚೂನಿಲಾಲ್ ಕಂಪನಿ,
[251-16] 177, ಚೈನಾಬಜಾರ್ ರೋಡ್, ಮದರಾಸ್.

ಬಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಹೊಡೆತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಜೂವ ಕಾಯಿಲೆಗಳ ವಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಪುಷ್ಟಿಯನ್ನು ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ಸನ್ನಿಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—220 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ; 5 ಕುಪ್ಪಿಗೆ ಒಂದು ಕುಪ್ಪಿ ಬಿಟ್ಟು, 1 ರಿಂದ 12 ಕುಪ್ಪೀ ವರೆಗೆ ಪೋಸ್ಟೇಜು 4 ಆಣೆ. [199-8]



೨. ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈವಿಡಿದಂತೆ ವೈದ್ಯರುಗಳೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರಿಸಿದ, ಮೂತ್ರವು ಕಟ್ಟಿದ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿ! ಒಂದೇ ಒಂದು ಬುಡ್ಡಿಯು ನಿಮ್ಮಲ್ಲಿರಲಿ! ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುವುದು. ಬೆಲೆ ರೂ. 1; ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಅದ್ಭುತವಾದ ಬಲಕಾರಿ ಮತ್ತು ಬಾಯಿನಾತಹರ.

ಜಿನತಾನ

ಜೀರ್ಣಶಕ್ತಿ ಹುಟ್ಟಿಸುವುದರಲ್ಲಿ ಇದಕ್ಕೆ ಸಮಾನವಾದದ್ದು ಇನ್ನೊಂದಿಲ್ಲ; ಅನ್ನಕೋಶವು ಎಷ್ಟೇ ದುರ್ಬಲವಾಗಿದ್ದರೂ ಅದರ ಕಾರ್ಯಗಳನ್ನು ಹೇರುಪೇರು ಮಾಡುವದಿಲ್ಲ. ಇದರ ಸೇವನೆಯಿಂದ ಎಲ್ಲಾ ರೋಗಗಳನ್ನೂ ಅಂಟದಂತೆ ತಡೆಯಬಲ್ಲದು. ಈ ಭಾಗದಲ್ಲಿ ಇದರ ಗುಣವು ಬಹು ಫಲಕಾರಿಯಾಗಿದೆ. ಇದಲ್ಲದೆ ಇದನ್ನು ಸೇವಿಸುವವರ ಬಾಯಿಯಲ್ಲಿ ಎಲ್ಲಾ ತರದ ದುರ್ನಾತವೂ ಹೋಗಿ ಸುಗಂಧವು ಹುಟ್ಟಿ ಹರ್ಷಕರವಾಗಿದ್ದೀತು.

ಗಂಟಲಿನ ನರಗಳು ಇದರ ಸೇವನೆಯಿಂದ ಬಹಳ ಬಲಗೊಳ್ಳುವವು. ಇದರ ಗುಣವನ್ನು ನೋಡಿ ಉಪನ್ಯಾಸಕರೂ, ನಾಟಕಧಾರಿಗಳೂ, ಸಂಗೀತಗಾರರೂ, ಬೋಧಕರೂ, ವಾಚಾಳಕ ಪ್ರಿಯರೂ ಈ ಮಾತ್ರೆಗಳನ್ನು ಬಹಳವಾಗಿ ಮೋಹಿಸಿ ಪ್ರೀತಿಯಿಂದ ಉಪಯೋಗಿಸುತ್ತಿದಾರೆ.

ಈ ಮಾತ್ರೆಗಳನ್ನು ಜಪಾನ್‍ನಲ್ಲಿರುವ ಒಸಾಕಾ ಪಟ್ಟಣದ ಮೋರಿಷಿತಾ ಕಂಪನಿಯವರು ತಯಾರ್ಮಾಡುತ್ತಾರೆ.

ಈ ಮಾತ್ರೆಗಳ	30 ಮಾತ್ರೆಗಳುಳ್ಳ ಪೊಟ್ಲಕ್ಕೆ 1½ ಆಣೆ.	65 ಮಾತ್ರೆ ಪೊಟ್ಲಕ್ಕೆ 3 ಆಣೆ.
ಕ್ರಯ	195 ,, ಡಬ್ಬಾ ಸಮೇತ 8 ಆಣೆ.	455 ,, ಕನ್ನಡಿ ಡಬ್ಬಾಕ್ಕೆ 1 ರೂಪಾಯಿ.

ಎಲ್ಲಾ ಅಂಗಡಿಗಳಲ್ಲಿಯೂ ಬಿಕರಿಯಾಗುವುದು.

ಸೋಲ್ ಏಜಂಟರು:—

ಎಸ್. ವೈದ್ಯ ಮತ್ತು ಕಂಪನಿ,
ಪಾರ್ಕ್‍ಟೌನ್. ಮದರಾಸ್.

[156-16]

ಅಮೃತಾಂಜನ ರಿಜಿಸ್ಟರ್ಡ್

ಇದು ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು. ಇದರ ಉಪಯೋಗದಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗವಾಯು, ಉಳುಕು, ಕೆಮ್ಮು, ಗೊಂಟಲನೋವು, ಶೀತ, ಚರ್ಮ ವ್ಯಾಧಿ, ಹಲ್ಲುನೋವು, ಚೇಳು ಕಡಿತ ಮೊದಲಾದ ಎಲ್ಲಾ ತರದ ನೋವುಗಳು ಖಾತ್ರಿಯಾಗಿ ನಿಲ್ಲುವವು. ಠಕಾರಿ ಔಷಧಗಳನ್ನು ಪಡೆಕೊಳ್ಳಬೇಡಿರಿ. ಈ ನಮ್ಮ ಲೋಕಪ್ರಖ್ಯಾತವಾದ ಅಮೃತಾಂಜನವನ್ನು ನಮ್ಮ ರಿಜಿಸ್ಟ್ರರಾದ ಮುತ್ತು ಹಲವು ಭಾಷೆಗಳುಳ್ಳ ಸುಂದರವಾದ ಕರಡಿಗೆಯಲ್ಲಿ ಪ್ಯಾಕ್‌ಮಾಡಿರುತ್ತೇವೆ. ಕರಡಿಗೆ ಇಲ್ಲದ ಬಾಟ್ಲಿಗಳನ್ನು ಪಡೆಕೊಳ್ಳಬೇಡಿರಿ. ಬಾಟ್ಲಿ ಒಂದರ ಕಿಮ್ಮತ್ತು 0-8-0. ಡಜನ್ 1 ಕ್ಕೆ 5-1-0. ವಿ. ಪಿ. ಪ್ರತ್ಯೇಕ. ಗಜಕರ್ಣದ ಮುಲಾಮು 0-6-0. ದಂತಮಂಜನ 0-2-0. ಮೋಹಿನಿ ತೈಲ 0-12-0. ಬಿಜ್ಜ ಮುಲಾಮು 0-3-0. ಖರಾಬು ಮಾತ್ರೆ 0-8-0. ಸುಂದರಿ ಮುಲಾಮು 0-8-0. ಕ್ಯಾಟಲಾಗಿಗೆ ಬರೆಯಿರಿ. [62-34]

ವ್ಯಾಪಾರಸ್ಥರಿಗೆ ಚಲೋ ಕಮಿಷನ್ ದೊರಕುವದು.

ಅಮೃತಾಂಜನ ಡಿಪ್ಪೋ,

ಫೋರ್ಟ್, ಮುಂಬಯಿ, ಮತ್ತು ೯ ಜಹಂಗೀರ್ ಸ್ಟ್ರೀಟ್, ಮದ್ರಾಸು.

MADRAS SNUFF.

ಬಹಳ ಮೇಲಾದ ನಸ್ಯ ಇನ್ನೆಲ್ಲೂ ಸಿಕ್ಕದು.

ನಮ್ಮಲ್ಲಿ ತಯಾರಾಗುವ ನಸ್ಯದ ಪುಡಿಯನ್ನು ಹಿಂದುಸ್ಥಾನದ ಸಮಸ್ತ ಭಾಗದವರೂ, ಅನ್ಯದೇಶಗಳವರೂ ಹತ್ತಾರು ವರುಷಗಳಿಂದ ತರಿಸಿಕೊಂಡು ಉಪಯೋಗಿಸುತ್ತಿದ್ದಾರೆ. ನಮ್ಮ ನಸ್ಯವು ಬಹಳ ಪ್ರಖ್ಯಾತಿ ಪಡೆದಿದೆ. ಬಹು ಮೇಲಾದ "ಬಂದರ್" ಸೊಪ್ಪಿನಿಂದ ಸುವಾಸನೆಯಾದ ಅಟ್ಟ ತುಪ್ಪ ಹಾಕಿ ವಿಶೇಷ ರುಚಿಕರವಾಗಿಯೂ ಸ್ವಚ್ಛವಾಗಿಯೂ ತಯಾರಿಸುತ್ತೇವೆ. ಕೂಡಿದ ಮಟ್ಟಿಗೂ ನಮ್ಮ ಧಾರಣೆ ಕಡಿಮೆಯಾಗಿರುವುದು. ನಮ್ಮ ಪದಾರ್ಥವನ್ನು ನಾವೇ ಹೊಗಳಿಕೊಳ್ಳುವದರಿಂದ ಫಲವೇನು? ವಾಚಕರು ಒಂದಾವರ್ತಿ ಪರೀಕ್ಷೆಗಾಗಿ ತರಿಸಿಕೊಂಡರೆ ಚೆನ್ನಾಗಿ ವೇದ್ಯವಾಗುತ್ತೆ. ಕ್ರಯ ಪಂಥೀರಿಗೆ 3 ರೂಪಾಯಿ; 1 ಸೇರಿಗೆ 10 ಆಣೆ. ಪೋಸ್ಟೇಜ್ ಬೇರೆ. ನಸ್ಯವನ್ನು ಅಂಚೆಯ ಮೂಲಕವೋ, ರೈಲಿನಲ್ಲೋ ಹ್ಯಾಗೆ ಕಳಿಸಬೇಕೆಂದು ಬರೆಯಿರಿ.

ನಮ್ಮ ವಿಳಾಸ—ಜೆ. ನಾರಾಯಣಸಾಮಿ ನಾಯುಡು,
43, ಪಳಯಪ್ಪನ್ ಸ್ಟ್ರೀಟ್, ಮಿಂಟ್ ಬಿಲ್ಡಿಂಗ್ ಪೋಸ್ಟ್,
[168-13] ಮದರಾಸ್, ಇ.



ಅಕ್ಟೋಬರ್ ಮಹೋತ್ಸವದ ಕೈಗಡಿಯಾರ
ಅರ್ಧ ಕ್ರಯ ರೂ. 1-14-0

ಇದೇ ಅಕ್ಟೋಬರ್ ಹಬ್ಬದ ಮಹೋತ್ಸವಕ್ಕಾಗಿ ಈ ಭಾರೀಕ್ರಯದ ಕೈ ಗಡಿಯಾರವನ್ನು ಅಕ್ಟೋಬರ್ ಒಳಗೆ ತರಿಸಿಕೊಳ್ಳುವವರಿಗೆ ರೂಪಾಯಿ 1-14-0 ಆಣೆಗೆ ಕೊಡಲಾಗುತ್ತೆ. [99-21]

ವಿಳಾಸ—ಎ. ಕೃಷ್ಣಸ್ವಾಮಿ ಮೊದಲಿಯಾರ್, ನಂ.27 ಬಂದರ್ ಬೀದಿ, ಜಿ.ಟಿ., ಮದರಾಸು.

ಮಧುರೆ ಜುನ್ನಡಿ ಅಂಚಿನ ಸೀರೆ ಅವ್ವಲ್ ರಕಂ ರೂ. 2-6-0.

ಅಕ್ಟೋಬರ್ ತಿಂಗಳ ಒಳಗಾಗಿ ತರಿಸಿಕೊಳ್ಳುವರಿಗೆ ಒಂದು ಸಿಂಗಪೂರು ರವಿಕೆಯನ್ನು ಪ್ರತಿ ಸೀರೆಗೂ ಇನಾಮಾಗಿ ಕೊಡುತ್ತೇವೆ.



ಇದು ಉಡುವುದಕ್ಕೆ ದಫಡಿತಿಯಾಗಿಯೂ ನೋಟಕ್ಕೆ ನಯವಾಗಿಯೂ, ಬೆಲೆ ಸುಲಭವಾಗಿಯೂ ಇದೆ. ಬಣ್ಣ ಹೋಗದು. ಸೀರೆಯು ಉದ್ದ 18 ಮೊಳ. ಸುಂದರವಾದ ಸೆರಗು. ಒಂದನ್ನು ತರಿಸಿ ಪರೀಕ್ಷಿಸಿ. ವಿಳಾಸ—ಎ. ಕೃಷ್ಣಸ್ವಾಮಿ ಮೊದಲಿಯಾರ್, ನಂ. 27, ಬಂದರ್ ಬೀದಿ, ಜಿ. ಟಿ., ಮದರಾಸು. [99-21]

ವಿಚಿತ್ರ ಮಹಾಶಯರೇ! ಈ ಕೆಳಗೆ ಕಂಡ ಆಭರಣಗಳನ್ನು ಆಸ್ಟ್ರೇಲಿಯಾ ದೇಶದ ಬೆಳ್ಳಿ ಕಂಚಿಯಿಂದ ತಯಾರಿಸಿರುತ್ತೆ. ಇದರ ರಂಗು ಎಷ್ಟು ವರುಷಗಳಾದರೂ ಕೆಡುವದಿಲ್ಲ. ಇದು ಸರ್ವರಿಗೂ ಧರಿಸಿಕೊಳ್ಳುವದಕ್ಕೆ ಅನುಕೂಲವಾದದ್ದು. ಇದಕ್ಕೆ ಏಜೆಂಟರುಗಳು ಬೇಕು. ಸಂಬಳ ತಿಂಗಳಿಗೆ ರೂ. 15. ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆಯಿರಿ.

ಸುಂದರವಾದ ಕಾಲುಕಡಗ.

ದೊಡ್ಡವರಿಗೆ	ಚಿಕ್ಕವರಿಗೆ	ಹುಡುಗರಿಗೆ	ಮಕ್ಕಳಿಗೆ
1-6-0	1-3-0	0-14-0	0-10-0

ಸುಂದರವಾದ ಪಾಡಿ (ಬಿಲ್ಲೆ).

ದೊಡ್ಡವರಿಗೆ	ಚಿಕ್ಕವರಿಗೆ	ಹುಡುಗಿಯರಿಗೆ
1-6-0	1-3-0	0-15-0

ಸುಂದರವಾದ ಪ್ರಮುಖ ರುಳಿ (ಕಾಲುಗೊಲಸು).

ದೊಡ್ಡವರಿಗೆ	ಚಿಕ್ಕವರಿಗೆ	ಹುಡುಗರಿಗೆ	ಮಕ್ಕಳಿಗೆ
1-14-0	1-10-0	1-6-0	1-4-0

ತಾಕೀತು.—ಒಂದು ರೂಪಾಯಿಗೆ ಕಮ್ಮಿ ಇಲ್ಲದೆ ತರಿಸಿಕೊಳ್ಳುವವರಿಗೆ ಸುಂದರವಾದ ಎಲೆಕ್ಟ್ರಿಕ್ ಚಿನ್ನದ ಮೈಸೂರು ಕಪ್ಪವನ್ನು ಪ್ರತಿ ಒಂದು ರೂಪಾಯಿಗೂ 1 ಕಪ್ಪವನ್ನು ಉಚಿತವಾಗಿ ಕೊಡುತ್ತೇವೆ. ಮತ್ತು ರೂಪಾಯಿಗೆ ಎರಡು ಆಣೆ ಕಮಿಷನ್ ಕೊಡುತ್ತೇವೆ. [225-3]

ವಿಳಾಸ—ಎಸ್. ಎನ್. ಮೂರ್ತಿ ಕಂಪೆನಿ, ತಿರುವಲಿಕ್ಕೇಣಿ, ಮದರಾಸು.

BHARAT PROVIDENT AND BANKING Co., Ltd.

FULLY PAID UP CAPITAL 5,00,000
(FIVE LAKHS)

Most Reliable and Cheapest Life and Marriage Office in India.

Monthly Premium Re. 1 in Marriage Branch, and Re. 1 in Life Branch.

BENEFITS IN LIFE BRANCH.- Rs. 110 if death occurs after six months with a very good bonus; or maximum benefits of Rs. 500 will be paid whenever death occurs after 15 years less the advance of Rs. 200 paid while alive.

BENEFITS IN MARRIAGE BRANCH. -Guarantees to advance double the amount paid on the marriage day.

LOANS.—Loans to Policy holders on proper securities to the extent of Rs. 200 on a low interest is a speciality.

WANTED.- Active and energetic Sole, General, District and Taluk Agents throughout the Madras Presidency and Native States of S. India on liberal terms of Commissions and also monthly office allowance.

For further particulars and prospectus apply to

Messrs. VENKATACHALAM & SONS,
Chief Agents for South India,
[241-47] **166, DODPATTA, MYSORE.**

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1914 ನೇ ಇಸವಿ ಅಕ್ಟೋಬರ್ 15 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ.

ಲೇಣಿ:—(1) ಷೇರು ಮೊಬಲಗು	ರೂ.	9,94,285
„ (2) ಡಿಪಾಜಿಟ್ಟುಗಳು	„	22,14,338
„ (3) ಇತರೆ	„	42,577
(ಆಣೆ ಪೈ ಬಿಟ್ಟಿರುತ್ತೆ.)	ಜುಮ್ಲಾ ರೂ.	32,51,200

ದೇಣಿ:—(1) ಕೈಯಲ್ಲೂ, ಬ್ಯಾಂಕುಗಳಲ್ಲಿರುವ ಹಣ	ರೂ.	6,80,816
„ (2) ಖಾತೆ ಮತ್ತು ಇತರ ಸಾಲಗಳು	„	18,84,416
„ (3) ಡಿಸ್ಕೌಂಟು ಮಾಡಿದ ವಾಯಿದೆ ಹುಂಡಿಗಳು	„	3,31,894
„ (4) ಇನ್ವೆಸ್ಟ್‌ಮೆಂಟುಗಳು	„	2,50,000
„ (5) ಏಜನ್ಸಿಗಳಲ್ಲಿರುವ ಮೊಬಲಗು	„	77,653
„ (6) ಬ್ಯಾಂಕಿನಲ್ಲಿರುವ ಸಾಮಾನುಗಳು	„	13,720
„ (7) ಇತರೆ	„	12,711
(ಆಣೆ, ಪೈ ಬಿಟ್ಟಿರುತ್ತೆ.)	ಜುಮ್ಲಾ ರೂ.	32,51,200

ಡಬ್ಲ್ಯು. ಸಿ. ರೋಸ್, ಮ್ಯಾನೇಜರ್.

ನಮ್ಮ ಪುಸ್ತಕಭಂಡಾರವು.

ಕರ್ನಾಟಕ ನಳಚರಿತ್ರ ನಾಟಕಂ:—ಮೈಸೂರು ಶ್ರೀಮನ್ಮಹಾರಾಜರವರ ಆಸ್ಥಾನ ಮಹಾ ವಿದ್ವಾಂಸರಾಗಿಯೂ, ಕವಿತಿಲಕರೆಂಬ ಬಿರುದು ಪಡೆದವರಾಗಿಯೂ, ಕರ್ನಾಟಕ ಶೇಷರಾಮಾಯಣ, ವಿಕ್ರಮೋರ್ವಶೀಯ ನಾಟಕ, ರಾಮಾಯಣನಾಟಕವೇ ಮೊದಲಾದ ಹಲವು ಶ್ರೇಷ್ಠ ಕನ್ನಡ ಗ್ರಂಥಗಳನ್ನು ರಚಿಸಿ ಹೆಸರುವಾಸಿ ಪಡೆದಿರುವ ವೇ|| ಸೊಸಲೆ ಅಯ್ಯಾಶಾಸ್ತ್ರಿಗಳು ನಳಚರಿತ್ರೆಯನ್ನು ತಿಳಿಗನ್ನಡದಲ್ಲಿ ರಚಿಸಿ ಪ್ರಕಟಿಸಿರುತ್ತಾರೆ. ಸಾಮಾನ್ಯವಾಗಿ ಈ ನಾಟಕದ ಕಥಾಸಂದರ್ಭವು ನಮ್ಮ ವಾಚಕರಿಗೆಲ್ಲಾ ತಿಳಿದೇ ಇದೆ. ವೇ|| ಶಾಸ್ತ್ರಿಗಳು ಈ ನಾಟಕವನ್ನು ಓದುವವರಿಗೂ, ಅಭಿನಯಿಸುವವರಿಗೂ ಅನುಕೂಲಿಸುವಂತೆ ರಚನೆಮಾಡಿದ್ದಾರೆ. ಇದರ ಕಥಾಸರಣಿಯೂ, ಪದಬಂಧವೂ, ಸಂದರ್ಭಾನುಸಾರವಾದ ವೃತ್ತಕಂದಗಳೂ, ಯೋಗ್ಯವಾದ ಗಾನಪದ್ಯಗಳೂ ಬಹು ಸರಳವಾಗಿಯೂ, ಲಲಿತವಾಗಿಯೂ, ಮನೋಹರವಾಗಿಯೂ ಇರುತ್ತವೆ. ಏಳು ಅಂಕಗಳುಳ್ಳ ಈ ಜನರಂಜಕವಾದ ಕಥೆಯನ್ನು ಒಳ್ಳೆಯ ಕಾಗದದ ಮೇಲೆ ಚೆನ್ನಾಗಿ ದೊಡ್ಡಕ್ಷರಗಳಲ್ಲಿ ಮುದ್ರಿಸಿ 12 ಆಣೆ ಕ್ರಯವಿಟ್ಟಿರುವುದು ಹೆಚ್ಚಲ್ಲವೆಂದೂ, ಕನ್ನಡ ಭಾಷಾಭಿಮಾನಿಗಳು ಇದನ್ನು ಓದುವುದರ ಮೂಲಕ ಗ್ರಂಥಕರ್ತರನ್ನು ಪ್ರೋತ್ಸಾಹ ಮಾಡುವರೆಂದೂ ನಂಬಿದೇವೆ.

ಶ್ರೀಪದ್ಮಾವತೀ ಮಹಾತ್ಮ್ಯ ಅಥವಾ ಜನದತ್ತರಾಯನ ಚಾರಿತ್ರವು:—ಸಾಕೇತರಾಯನಿಗೆ ಜನದತ್ತನೆಂಬ ಮಗನು ಹುಟ್ಟುವನು. ತರುವಾಯ ಸಾಕೇತನು ತಾನು ಮೋಹಿಸಿ ಇಟ್ಟುಕೊಂಡ ಕಿರಾತ ಸ್ತ್ರೀಯಲ್ಲಿ ಹುಟ್ಟಿದ ಮಾರಿದತ್ತನೆಂಬವನಿಗೆ ರಾಜ್ಯವನ್ನು ಕೊಡುವುದಕ್ಕೋಸ್ಕರ ಜನದತ್ತನನ್ನು ಕೊಲ್ಲಿಸುವುದಕ್ಕೆ ಪ್ರಯತ್ನಿಸಲು; ಅದು ಅಕಸ್ಮಾತ್ ತಪ್ಪಿ ಮಾರಿದತ್ತನೇ ಸಾಯುವನು. ಇದರಿಂದ ಕುಪಿತನಾದ ರಾಜನು ಜನದತ್ತನನ್ನು ಸಂಹರಿಸುವಂತೆ ಘಟಕರಿಗೆ ಆಜ್ಞಾಪಿಸಲು, ಆವರು—ತಾಯಿ, ಗುರು ಇವರಿಂದ ಮೊದಲೇ ಕಳುಹಿಸಲ್ಪಟ್ಟು ಅಶ್ವಾರೂಢನಾಗಿ ದಕ್ಷಿಣ ದಿಕ್ಕನ್ನು ಕುರಿತು ಹೋಗುತ್ತಿದ್ದ ಜನದತ್ತನನ್ನು ಸಂಧಿಸುವರು. ಮನೆದೇವತೆಯಾದ ಪದ್ಮಾವತೀ ದೇವಿಯ ಮತ್ತು ಗುರುವಿನ ಅನುಗ್ರಹದಿಂದ ಕಳುಹಿಸಲ್ಪಟ್ಟವರಾದ ಭಟರು ಹೆದರಿ ಜನದತ್ತನಿಗೆ ಶರಣಾಗತರಾಗಿ ಹಿಂದಕ್ಕೆ ಹೊರಟುಹೋಗುವರು. ಆ ಮೇಲೆ ಜನದತ್ತನು ಒಂದು ಮಹಾರಣ್ಯವನ್ನು ಸೇರಿ ಅಲ್ಲೇ ಒಂದು ಹೊಂಬುಜವೆಂಬ ಪಟ್ಟಣವನ್ನು ನಿರ್ಮಿಸಿ ತನ್ನ ತಾಯಿಯಾದ ಶ್ರೀಯಲದೇವಿ, ಪೂರ್ವದ ಮಂತ್ರಿ, ಪಿತೃವಿನ ಸರ್ವಸೇನೆ ಮುಂತಾದ ಎಲ್ಲರೊಡನೆ ಕೂಡಿ ಶ್ರೀಪದ್ಮಾವತಿಯ ಪ್ರಸಾದದಿಂದ ಲೋಕಪ್ರಖ್ಯಾತನಾಗಿ ಬಾಳುವನು ಎಂಬುದೇ ಈ ಚರಿತ್ರದ ಸಾರಾಂಶವಾಗಿದೆ. ಪದ್ಮನಾಭನೆಂಬ ಕವಿಯಿಂದ ಬರೆಯಲ್ಪಟ್ಟ ಈ ಗ್ರಂಥವು ಸಾಂಗತ್ಯ ಪದ್ಯಮಯವಾಗಿದೆ. ಭಾಷಾಶೈಲಿಯು ಬಹು ಸುಲಭವಾಗಿದ್ದು ಸರ್ವರಿಗೂ ಅನುಕೂಲವಾಗಿದೆ. ಈ ಪುಸ್ತಕದಲ್ಲಿ ವರ್ಣನೆಗಳು ಮನೋಹರವಾಗಿವೆ. ಅಲ್ಲದೆ ಇದು ಭಕ್ತಿರಸಪುಷ್ಟವಾದ ಗ್ರಂಥ. ಇದರಲ್ಲಿ ಹೊಸಗನ್ನಡ ಮಾತುಗಳ ಪ್ರಯೋಗವೇ ಹೆಚ್ಚು. ಇಂಥ ಗ್ರಂಥಗಳು ಪ್ರಚುರಕ್ಕೆ ಬರುವುದು ಅಗತ್ಯವಾಗಿದೆ. ಅಲ್ಲದೆ ಹೊಳಲಕೆರೆ ನಗರದ ಚಂ. ಬ್ರಹ್ಮಯ್ಯ ಎಂಬವರಿಂದ ಬರೆಯಲ್ಪಟ್ಟ ವಚನರೂಪವಾದ ಕಥಾಸಾರಾಂಶವೂ ಇದರಲ್ಲಿ ಇದೆ. ಕಥೆಯು ಕೇಳುವವರಿಗೆ ಇಂಪಾಗಿದ್ದು ಸದ್ಭಾವವನ್ನು ನೆಲೆಗೊಳಿಸುವ ಸಾಮರ್ಥ್ಯವುಳ್ಳದಾಗಿದೆಯೆಂದು ನಾವು ಹೇಳಬಲ್ಲೆವು. ಮುದ್ರಾದೋಷಗಳನ್ನು ತೋರಿಸುವುದಕ್ಕಾಗಿ ಶುದ್ಧಾಶುದ್ಧ ಪತ್ರವು ಇದ್ದರೂ ಅಲ್ಲಲ್ಲಿ ಅನೇಕ ಸಂಧಿದೋಷಗಳೂ ಶಬ್ದದೋಷಗಳೂ ಇವೆ. ಇದರ ಸಂಪಾದಕರೂ ಪ್ರಕಾಶಕರೂ ಆದ ಶ್ರೀಯುತ ಭರಮಪ್ಪ ಪದಮಪ್ಪ ಪಾಟೀಲ ಹೊಸೂರ ಬೆಳಗಾಂವ ಈ ಮಹನೀಯರ ದೇಶಭಾಷೋದ್ಧರಣ ಕಾರ್ಯಕ್ಕಾಗಿ ನಾವು ಹೆಚ್ಚಾಗಿ ಪ್ರೋತ್ಸಾಹಕರಾಗಿದ್ದೇವೆಂಬ ಅಂಶವನ್ನು ಈ ಮೂಲಕ ತಿಳಿಸುತ್ತೇವೆ.

ಜಯ ವಾಲ್ಮೀಕಿ:—ಹರಪ್ರಸಾದ ಶಾಸ್ತ್ರಿಗಳೆಂಬವರಿಂದ ಬಂಗಾಳಿ ಭಾಷೆಯಲ್ಲಿ ಬರೆಯಲ್ಪಟ್ಟಿದ್ದ ಈ ಪುಸ್ತಕವು ಸೂಕ್ತಿಸಂಪಾದಕರಾದ ಎನ್. ಗೋಪಾಲಕೃಷ್ಣ ಎಂಬವರಿಂದ ಕನ್ನಡಕ್ಕೆ ಪರಿವರ್ತಿಸಲ್ಪಟ್ಟಿದೆ. ಈ ಲೋಕದಲ್ಲಿ ಸುಜನರಾಗಿದ್ದು ಸತ್ತುಹೋದ ಪಿತೃಗಳು ಪರಲೋಕದಲ್ಲಿ ಋಭುಗಳೆಂಬ ದೇವತೆಗಳಾಗುತ್ತಾರೆಂದು ಸಂದೇಹರೂಪವಾಗಿ ಹೇಳಿ, ಆ ದೇವತೆಗಳು ಒಂದು ದಿವಸ ಹಿಮಾಲಯದ ಶಿಖರಸ್ಥರಾಗಿ ಸರ್ವತ್ರ ಒದಗುಟ್ಟಿದವರಾಗಿದ್ದಾರೆಂಬ ಅರ್ಥವುಳ್ಳ ಬ್ರಾಹ್ಮ್ಯಗೀತವನ್ನು ಹಾಡಿದರೆಂದೂ ಅದನ್ನು ವಸಿಷ್ಠ, ವಿಶ್ವಾಮಿತ್ರ, ವಾಲ್ಮೀಕಿ ಎಂಬೀ ಮೂರು ಮಂದಿಯೂ ಕೇಳಿ ಪ್ರಪಂಚವೆಲ್ಲವೂ ಬ್ರಾಹ್ಮತ್ವವುಳ್ಳದೆಂದು ತಿಳಿದು ತದೇಕಧ್ಯಾನಲೀನರಾಗಿ ಹೋಗುತ್ತಾರೆ. ಆ ಮೇಲೆ ಬ್ರಾಹ್ಮಣನಾದ ವಸಿಷ್ಠನಿಗೂ, ಕ್ಷತ್ರಿಯನಾದ ವಿಶ್ವಾಮಿತ್ರನಿಗೂ ಜಗಳವು ಪ್ರಾರಂಭವಾಗುತ್ತದೆ. ವಿಶ್ವಾಮಿತ್ರನು ಬ್ರಾಹ್ಮಣನಾಗುವುದಕ್ಕೆ ತಪಸ್ಸು ಮಾಡುತ್ತಾನೆ. ಅದನ್ನು ಕೆಡಿಸುವುದಕ್ಕೆ ವಿರೋಧಿಗಳು ಮಾಡಿದ ಪ್ರಯತ್ನಗಳೆಲ್ಲಾ ವ್ಯರ್ಥವಾಗುತ್ತವೆ. ಆ ಮೇಲೆ ಪ್ರತ್ಯಕ್ಷನಾದ ಬ್ರಹ್ಮನು ನಿನಗೇನುಬೇಕೆಂದು ವಿಶ್ವಾಮಿತ್ರನನ್ನು ಕೇಳಲು ಅವನು ನನ್ನನ್ನು ಬ್ರಾಹ್ಮಣನೆಂದು ಹೇಳಬೇಕೆಂದು ಕೇಳುತ್ತಾನೆ. ವಸಿಷ್ಠಾದಿಗಳಾದ ಋಷಿಗಳಿಂದ ಪ್ರೇರಿತನಾದ ಬ್ರಹ್ಮನು ವಿಶ್ವಾಮಿತ್ರನ ಅಭಿಪ್ರಾಯವನ್ನು ಅನುಮೋದಿಸುವುದಿಲ್ಲ. ತರುವಾಯ ಕುಪಿತನಾದ ವಿಶ್ವಾಮಿತ್ರನು ಹೊಸ ಪ್ರಪಂಚವನ್ನು ನಿರ್ಮಿಸುವೆನೆಂದೂ ಅಲ್ಲಿಗೆ ತಾನೇ ಬ್ರಹ್ಮನಾಗುವೆನೆಂದೂ ನಿರ್ಧರಿಸಿ ಅಂಥ ಒಂದು ಲೋಕವನ್ನು ನಿರ್ಮಿಸಿಬಿಡುವನು. ಕಡೆಗೆ ಒಂದು ಯುದ್ಧವು ಪ್ರಾರಂಭವಾಗುವುದು. ಅಷ್ಟರಲ್ಲಿ ಸರಸ್ವತಿಯಿಂದ ಒಂದು ವೀಣೆಯನ್ನು ಪಡೆದು ಅದರೊಡನೆ ಮೇಲೆ ಕಂಡ ಬ್ರಾಹ್ಮ್ಯಗೀತವನ್ನು ಹಾಡಿ ಆನಂದಿಸುತ್ತಿದ್ದ ಬೇಡರ ನಾಯಕನಾದ ವಾಲ್ಮೀಕಿಯು ವಿರೋಧಿಗಳ ಗುಂಪಿನ ಮಧ್ಯದಲ್ಲಿ ಬ್ರಾಹ್ಮ್ಯಗೀತವನ್ನು ಹಾಡಿಹಾಡಿ ಸರ್ವರ ಹೃದಯದಲ್ಲೂ ವೈರಭಾವವು ಹೋಗಿ ಬ್ರಾಹ್ಮತ್ವವುಂಟಾಗುವ ಹಾಗೆ ಮಾಡುತ್ತಾನೆ. ಆದುದರಿಂದಲೇ ಈ ಪುಸ್ತಕಕ್ಕೆ ಜಯವಾಲ್ಮೀಕಿ ಎಂಬ ಹೆಸರಾಗಿದೆ ಎಂದು ಗೊತ್ತಾಗುತ್ತದೆ. ಕಡೆಗೆ ಬ್ರಹ್ಮವಸಿಷ್ಠಾದಿ ಸರ್ವರೂ ಸೇರಿ ವಿಶ್ವಾಮಿತ್ರನನ್ನು ಬ್ರಾಹ್ಮಣನೆಂದು ಹೇಳಿಬಿಡುತ್ತಾರೆ ಎಂಬುದೇ ಈ ಕಥೆಯ ಸಾರಾಂಶವಾಗಿದೆ. ಇದು ರಾಮಾಯಣದ ಒಂದು ಕಥೆಯಾಗಿದ್ದರೂ ಅದರ ಹಿಂದೆ ಕಳಪದಿಯನ್ನು ಬೇರೆ ಹಾಕಿಕೊಂಡು ಮಧ್ಯದಲ್ಲಿ ಸರಿಯಾಗಿ ಒಂದು ಮುಂದಣ ಭಾಗವನ್ನು ಪೂರ್ಣವಾಗಿ ಆರ್ಯಸಮಾಜವೆಂಬ ನೂತನ ಮತದ ಅಭಿಪ್ರಾಯಕ್ಕೆ ಸರಿಯಾಗಿ ಮುಗಿಸಿದ್ದಾರೆ. ರಾಮಾಯಣಸ್ಥವಾದ ಈ ಕಥೆಯನ್ನು ನೆನೆಸಿಕೊಂಡು ಅದರ ಹಿಂದಣ ಮುಂದಣ ಭಾಗಗಳನ್ನು ಯೋಚಿಸಿ ನೋಡುವಲ್ಲಿ, ಇದು ಆರ್ಯ ಸಮಾಜದ ಪರವಾಗಿ, ಹಿಂದೆಯೂ ಮುಂದೆಯೂ ಕೆಲವಿಷಯಗಳನ್ನು ಸೇರಿಸಿ ಬರೆದಿರುವುದರಿಂದ ಮೂರನೇ ಎರಡು ಭಾಗ ಕಲ್ಪಿತ ಕಥೆಯಾಗಿದೆಯೆಂದು ನಾವು ಅಭಿಪ್ರಾಯಪಡುತ್ತೇವೆ. ಈ ಭಾಷೆಯು ಕೇವಲ ಸಂಸ್ಕೃತ ಶಬ್ದಮಯವಾಗಿದೆ. ಇದು ಮಧುರವಾಣೀ ಗ್ರಂಥಮಾಲೆಯಲ್ಲಿ ಸೇರಿ ಹನುಮಾನ್ ಕಂಪನಿಯವರಿಂದ ಪ್ರಕಟವಾಗಿದೆ. ಜೋಡಣೆಯು ಅಂದವಾಗಿದ್ದು ವರ್ಣನೆ, ಭಕ್ತಿ, ಪ್ರೀತಿ, ಈ ಭಾಗಗಳು ಒಪ್ಪಿಕೆಯಾಗಿವೆ. ನೂರು ಪುಟಗಳುಳ್ಳ ಈ ಪುಸ್ತಕದ ಕ್ರಯ ಹನ್ನೆರಡಾಣೆಗಳು.

ಸೀತಾ ಚರಿತ್ರ:—ಇದು ರಾಬರ್ಟ್‌ಸನ್ ಪೇಟೆ ಗೌರ್ನಮೆಂಟ್ ಎ. ವಿ. ಸ್ಕೂಲಿನ ಸಹಾಯೋಪಾಧ್ಯಾಯರಾದ ಸಿ. ಎ. ಅಣ್ಣಯ್ಯ ಎಂಬವರಿಂದ ನೂತನವಾಗಿ ವಿರಚಿತವಾಗಿದೆ. ಆಂದರೆ ಶ್ರೀಮದ್ರಾಮಾಯಣವನ್ನು ಆಧಾರಮಾಡಿಕೊಂಡು ಭಾಮಿನೀ ಷಟ್ಪದಿ ಪದ್ಯಗಳಿಂದ ಬರೆಯಲ್ಪಟ್ಟುದಾಗಿದೆ. ಇದರ ಭಾಷೆಯು ಸರಳವಾಗಿದ್ದು, ಪದ್ಯ ಗ್ರಂಥಗಳ ಮೂಲಕ ರಾಮಾಯಣವನ್ನು ತಿಳಿಯಬೇಕೆಂದು ಬಯಸುವವರಿಗೆ ಇತರ ಪದ್ಯರೂಪ ರಾಮಾಯಣಗಳಿಗಿಂತಲೂ ಇದು ಉಪಯುಕ್ತವಾಗಿದೆ ಎಂದು ನಾವು ಹೇಳಬಲ್ಲೆವು. ರಾಮನ ಚರಿತ್ರೆಯು ಈ ರೀತಿಯಾಗಿ ಪದ್ಯ, ಗದ್ಯ, ಗದ್ಯಪದ್ಯೋಭಯ ರೂಪಗಳಾಗಿ ಪ್ರತಿ ವರ್ಷವೂ ಹುಟ್ಟುತ್ತಲೇ ಬಂದು, ಈಗಾಗಲೇ ನೂರಾರು ರಾಮಾಯಣ ಗ್ರಂಥಗಳಾಗಿರಬಹುದೆಂದು ನಾವು ಊಹಿಸುತ್ತೇವೆ. ಈ ರೀತಿಯಾಗಿ ಒಂದೇ ಚರಿತ್ರೆಯು ಅನೇಕರಿಂದ ಅನೇಕ ಪುಸ್ತಕಗಳಾಗಿ ಒಂದೇ ಭಾಷೆಯಲ್ಲಿ ಬರೆಯಲ್ಪಡುತ್ತಿರುವುದಕ್ಕೆ ಕಾರಣವೇನಿರುವುದೋ ನಮಗೆ ತಿಳಿಯದು. ಅಥವಾ ಆ ಗ್ರಂಥದ ಪ್ರತಿ ಪದ್ಯದಲ್ಲಿಯೂ ಇರುವ ಶಬ್ದಾರ್ಥವಲ್ಲದೆ ರಹಸ್ಯವಾದ ಸತ್ಯಾರ್ಥವೇನಾದರೂ ಇದ್ದರೆ ವಿವರಿಸಿ ಜನಾಂಗವನ್ನು ಉದ್ಧರಿಸುವ ಮಾರ್ಗವನ್ನಾದರೂ ಇಂಥಾ ಪಂಡಿತರು ಯಾಕೆ ಮಾಡದಿರುವರೋ ನಮಗೆ ತಿಳಿಯದು. ಇಲ್ಲಿ ಸಂಕ್ಷೇಪವಾದ ಒಂದು ವಿಷಯವನ್ನು ಸೂಕ್ಷ್ಮವಾಗಿ ವಿಚಾರಮಾಡುತ್ತೇವೆ. ಈ ಪುಸ್ತಕದ 310 ನೇ ಪುಟದಲ್ಲಿ ಅಯೋಧ್ಯೆಯಲ್ಲಿ ಒಬ್ಬ ಬ್ರಾಹ್ಮಣನ 5 ವರ್ಷದ ಮಗನು ಸತ್ತನೆಂದೂ ಅದಕ್ಕೆ ಕಾರಣವು ಒಬ್ಬ ಶೂದ್ರನು ತಪಸ್ಸು ಮಾಡುವುದೇ ಎಂದೂ ತಿಳಿದು, ಶ್ರೀರಾಮನು ಅಯೋಧ್ಯೆಯಿಂದ ಹೊರಟು, ವಿಂಧ್ಯಪರ್ವತಕ್ಕೆ ಬಂದು ಅಲ್ಲಿ ತಪಸ್ಸು ಮಾಡುತ್ತಿದ್ದ ಶೂದ್ರನನ್ನು ಕೊಂದನೆಂದೂ ಅದರಿಂದ ಅಯೋಧ್ಯೆಯಲ್ಲಿ ಸತ್ತಿದ್ದ ಬ್ರಾಹ್ಮಣ ಪುತ್ರನು ತಿರುಗಿ ಬದುಕಿದನೆಂದೂ ಇದೆ. ಇದರ ಮರ್ಮವೇನೆಂಬುದನ್ನು ನಾವು ಎಷ್ಟು ವಿಧವಾಗಿ ಯೋಚಿಸಿದರೂ ನಮಗೆ ತಿಳಿಯದು. ಈಗಿನ ಬ್ರಾಹ್ಮಣರೂ ಕ್ಷತ್ರಿಯರೂ ಇಂಥ ಕೃತ್ಯವನ್ನು ಕಣ್ಣಿಂದಲಾದರೂ ನೋಡುವುದಕ್ಕೆ ಅಪೇಕ್ಷಿಸಲಾರರೆಂದು ನಾವು ಅಭಿಪ್ರಾಯಪಡುತ್ತೇವೆ. ಹಾಗೆ ಆ ದೈವಭಕ್ತನಾದ ಶೂದ್ರನನ್ನು ಕೊಂದುದು ಯುಕ್ತವಾಗಿರುವುದಾದರೆ ಅವನು ದೇವರಲ್ಲಿ ಭಕ್ತಿಯಿಟ್ಟುದೇ ಅವನ ದುರ್ಮರಣಕ್ಕೆ ಕಾರಣವಾಯಿತು. ಇಂಥ ಮರಣವು ಯೇಸುಸ್ವಾಮಿಗೂ ಸಂಭವಿಸಿತೆಂದು ನಾವು ಬಲ್ಲೆವಾದರೂ ಇದು ದೇವರೂಪನಾದ ಶ್ರೀರಾಮನ ಮಹಿಮೆಗೆ ಸರಿಯಾಗಿದೆಯೋ ಎಂದು ನಾವು ತುಂಬಾ ಚಿಂತೆಪಡುತ್ತೇವೆ. ಹಾಗಾದರೆ ಆ ಕಾಲದಲ್ಲಿದ್ದ ವಾಲ್ಮೀಕ್ಯಾದಿಗಳೂ ಶೂದ್ರ ತಪಸ್ವಿಗಳೇ ಆಗಿದ್ದರೆಂದು ನಾವು ಅಭಿಪ್ರಾಯಪಡುತ್ತೇವೆ. ಈಗಿನ ವಿದ್ವಾಂಸರಾದರೂ ಪೂರ್ವ ಚರಿತ್ರೆಗಳಲ್ಲಿರುವ ಅಗಾಧ ಸಂಶಯಗಳನ್ನು ನಿವಾರಣೆ ಮಾಡುತ್ತಾ ಗ್ರಂಥಗಳನ್ನು ಬರೆಯುವವರಾಗುವುದನ್ನು ನೋಡುವುದಕ್ಕೆ ನಾವು ಕುತೂಹಲದಿಂದ ಕಾದಿರುತ್ತೇವೆ.

ವೃತ್ತಾಂತ ಪತ್ರಿಕೆ.

—:o:—

೫೮ ೧೯೧೪ ನೇ ಇಸವಿ ಅಕ್ಟೋಬರ್ ತಾ. ೨೯ ನೇ ಗುರುವಾರ

ಯೂರೋಪಿನ ಯುದ್ಧವು.

ಯೂರೋಪಿನಲ್ಲಿ ಸುಮಾರು ಮೂರು ತಿಂಗಳಿಂದಲೂ ದೊಡ್ಡ ಯುದ್ಧ ನಡೆಯುತ್ತಾ ಬಂದಿದೆ. ಜರ್ಮನಿಯವರು ಆಗಸ್ಟ್ 1 ನೇ ತಾರೀಖಿನಲ್ಲಿ ರಷ್ಯಾ ಮತ್ತು ಫ್ರಾನ್ಸ್ ರಾಜ್ಯಗಳ ಮೇಲೆ ಯುದ್ಧವನ್ನು ಪ್ರಾರಂಭಿಸಿ, ತಾ. ೩ ರಲ್ಲಿ ಬೆಲ್ಜಿಯಮ್ ರಾಜ್ಯದ ಮೇಲೆ ಸೈನ್ಯವನ್ನು ಕಳುಹಿಸಿದರು. ಈ ಮೂರು ತಿಂಗಳಲ್ಲಿ ನಡೆದಿರುವ ವಿದ್ಯಮಾನಗಳನ್ನು ಚೆನ್ನಾಗಿ ತಿಳಿದುಕೊಂಡಿರುವುದು ಒಳ್ಳೇದು.

ಜರ್ಮನಿಯವರು ಯುದ್ಧಕ್ಕೆ ಹೊರಡುವುದಕ್ಕೆ ಸಿದ್ಧರಾಗಿದ್ದರೆಂಬುವುದು ಎಲ್ಲರಿಗೂ ತಿಳಿದಿದೆ. ಅವರು ತಮ್ಮ ಪ್ಲಾನುಗಳನ್ನೆಲ್ಲಾ ಮೊದಲೇ ಸಿದ್ಧಪಡಿಸಿಕೊಂಡಿದ್ದರು; ಸೈನ್ಯಗಳು ಕೂಡಿಸಲ್ಪಟ್ಟಿದ್ದವು. ಈಗಿನ ಯುದ್ಧಕಾರ್ಯಗಳಿಗೆ ಉಪಯುಕ್ತವಾದ ತಯುಧ ಮದ್ದುಗುಂಡುಗಳನ್ನು ತಯಾರುಮಾಡಿಕೊಂಡಿದ್ದರು. ಅವರ ಸಹಾಯಕ್ಕೆ ಆಸ್ಟ್ರಿಯಾದವರು ಒದಗಿದರು. ಆದರೂ ಜರ್ಮನಿಯವರು ತಾವು ಒಬ್ಬರೇ ತಮ್ಮ ಉದ್ದೇಶಪಟ್ಟ ಕಾರ್ಯಗಳನ್ನೆಲ್ಲಾ ಕೈಗೂಡಿಸಿಕೊಳ್ಳುತ್ತೇವೆಂದು ನೆನಸಿದ್ದಂತೆ ಕಾಣುತ್ತದೆ. ಜರ್ಮನಿಯವರ ಉದ್ದೇಶಗಳೇನೆಂದು ಕೇಳಬಹುದು. ಬೆಲ್ಜಿಯಮ್ ದೇಶದ ಮೂಲಕ ನುಗ್ಗಿಹೋಗಿ ಫ್ರೆಂಚರು ಯುದ್ಧಸನ್ನದ್ಧರಾಗುವುದಕ್ಕಿಂತ ಮುಂಚೆಯೇ ಅವರ ಮೇಲೆ ನುಗ್ಗಿ ಅವರ ಸೈನ್ಯವನ್ನು ನಾಶಪಡಿಸಿ, ಅಲ್ಲಿಂದ ಪೂರ್ವದಿಕ್ಕಿಗೆ ತಿರುಗಿ ರಷ್ಯಾದವರು ಸೈನ್ಯವನ್ನು ಜೊತೆಮಾಡುವುದು ಸಾವಕಾಶವಾಗಿರೋಣದರಿಂದ ಅವರ ಮೇಲೆ ಯುದ್ಧಮಾಡಲು ಸಿದ್ಧಪಡಿಸಿಕೊಳ್ಳಬೇಕೆಂದು ಜರ್ಮನಿಯವರು ಏರ್ಪಾಡುಮಾಡಿಕೊಂಡಿದ್ದಂತೆ ಕಾಣುತ್ತದೆ. ಅವರು ಸೆಪ್ಟಂಬರ ಎರಡನೇ ವಾರದೊಳಗಾಗಿ ಫ್ರೆಂಚರ ಸೈನ್ಯವನ್ನು ನಾಶಪಡಿಸುತ್ತೇವೆಂದೂ, ೮ ಏಕೆ ಅಕ್ಟೋಬರ್ ಎರಡನೇ ವಾರದಲ್ಲಿ ರಷ್ಯಾದವರನ್ನು ನಾಶಮಾಡುವ ಕಾರ್ಯದಲ್ಲಿ ಉದ್ಯುಕ್ತರಾಗಿರುತ್ತೇವೆಂದೂ ಊಹಿಸಿದ್ದಂತೆ ತೋರುವುದು. ಅವರು ಲೆಕ್ಕಹಾಕಿಕೊಂಡಿದ್ದ ಕಾಲವೇನೋ ಕಳೆದುಹೋಯಿತು.

ಪ್ರಾರಂಭದಲ್ಲೇ ಬೆಲ್ಜಿಯರ್ಸ್ರು ಜರ್ಮನಿಯ ಸೈನ್ಯಗಳನ್ನು ತಮ್ಮ ದೇಶದ ಮೂಲಕ ನುಗ್ಗಿ ಹೋಗದಂತೆ ತಡೆದು ಬಿಟ್ಟರು. ಬೆಲ್ಜಿಯಮ್ ರಾಜ್ಯವು ನಮ್ಮ ಮೈಸೂರು ಸಂಸ್ಥಾನದಲ್ಲಿ ಅರ್ಧಕ್ಕಿಂತಲೂ ಬಹಳ ಕಡಮೆ. ಅದರ ವಿಸ್ತೀರ್ಣವೆಲ್ಲಾ 11,370 ಚದರ ಮೈಲಿಗಳು. ಮೈಸೂರು, ಬೆಂಗಳೂರು, ಕೋಲಾರ, ಈ ಮೂರು ಡಿಸ್ಟ್ರಿಕ್ಟುಗಳನ್ನು ಸೇರಿಸಿದಷ್ಟಾಗಬಹುದು. ಇಷ್ಟು ಸಣ್ಣ ದೇಶವನ್ನು ಜರ್ಮನಿಯವರು ಸ್ವಲ್ಪದರಲ್ಲೇ ತಮ್ಮ ಅಧೀನಮಾಡಿಕೊಂಡುಬಿಡುತ್ತೇವೆಂದು ನೆನಸಿಕೊಂಡಿದ್ದರು. ಈಗ ಮೂರು ತಿಂಗಳು ಕಳೆದು ಹೋಗಿದ್ದಾಗ್ಯೂ ಅವರು ಇನ್ನೂ ಬೆಲ್ಜಿಯಮ್ ದೇಶವನ್ನೆಲ್ಲಾ ಗೆದ್ದುಕೊಳ್ಳುವುದು ಸಾಧ್ಯವಾಗದೆ ಹೋಗಿದೆ; ಇದು ಅವರಿಂದ ಆಗಲಾರದೆಂದೂ ಹೇಳಬಹುದು. ಬೆಲ್ಜಿಯರ್ಸ್ರು ತಮ್ಮ ದೇಶದ ಪಶ್ಚಿಮ ಭಾಗದಲ್ಲಿ ಜರ್ಮನಿಯವರಿಗೆ ಸ್ವಲ್ಪವೂ ಸಗ್ಗದೆ ಅತ್ಯಂತ ಪರಾಕ್ರಮದಿಂದ ಅವರ ಮೇಲೆ ಕಾದುತ್ತಿದ್ದಾರೆ. ಇವರ ಮೇಲೆ ಯುದ್ಧ ಮಾಡುವುದರಲ್ಲೇ ಜರ್ಮನಿಯವರು ಅನೇಕ ಸೈನ್ಯವನ್ನೂ ಯುದ್ಧಸಾಮಗ್ರಿಗಳನ್ನೂ ಕಳೆದುಕೊಂಡರು. ಬೆಲ್ಜಿಯಮಿನ ಮುಖ್ಯ ಮುಖ್ಯ ಪಟ್ಟಣಗಳನ್ನು ಜರ್ಮನಿಯವರು ಗೆದ್ದು ಸ್ವಾಧೀನ ಪಡಿಸಿಕೊಂಡಿರುವುದೇನೋ ನಿಜ; ಇದಲ್ಲದೆ ಬೆಲ್ಜಿಯರ್ಸ್ ಪ್ರಜೆಗಳನ್ನು ಅವರ ಮನೆಮಠಗಳಿಂದ ಓಡಿಸಿಬಿಟ್ಟಿರುವುದೂ, ಅವರಿಗೆ ನಾನಾ ಕಷ್ಟನಷ್ಟಗಳುಂಟಾಗಿರುವುದೂ ನಿಜ. ಇಷ್ಟಾದರೂ ಜರ್ಮನಿಯವರು ಬೆಲ್ಜಿಯಮ್ ಸೈನ್ಯವನ್ನು ಜಯಿಸಿ ಗೆಲ್ಲಲಾರದೆಹೋಗಿದ್ದಾರೆ.

ಅಲ್ಲಿಂದ ಮುಂದೆ ಲಕ್ಸೆಂಬರ್ಗ್ ಎಂಬ ಒಂದು ಸಣ್ಣ ಅಧಿಪತ್ಯವಿರುತ್ತದೆ. ಇದರ ವಿಸ್ತೀರ್ಣವೆಲ್ಲಾ ಸುಮಾರು 1,000 ಚದರ ಮೈಲಿ ಆದೀತು. ಇದು ಮೈಸೂರು ಮತ್ತು ಹುಣಸೂರು ತಾಲ್ಲೂಕುಗಳಷ್ಟಾಗಬಹುದು. ಈ ಅಧಿಪತ್ಯದಲ್ಲಿ ಸ್ವತಂತ್ರವಾದ ಸೈನ್ಯವೇನೂ ಇರುವುದಿಲ್ಲ. ಇಂಥಾದ್ದನ್ನು ಜರ್ಮನಿಯವರು ಆಕ್ರಮಿಸಿಕೊಂಡು ಇನ್ನೂ ತಮ್ಮ ಸ್ವಾಧೀನದಲ್ಲೇ ಇಟ್ಟುಕೊಂಡಿದ್ದಾರೆ.

ಈ ಪ್ರಕಾರ ಬೆಲ್ಜಿಯಮ್ ಮತ್ತು ಲಕ್ಸೆಂಬರ್ಗ್ ಸೀಮೆಗಳನ್ನು ನುಗ್ಗಿಬಂದ ಮೇಲೆ ಜರ್ಮನಿಯವರು ಫ್ರಾನ್ಸಿನೊಳಕ್ಕೆ ಪ್ರವೇಶಮಾಡಿದರು. ಫ್ರಾನ್ಸಿನ ರಾಜಧಾನಿಯಾದ ಪಾರಿಸ್ ಪಟ್ಟಣದ ಸಮೀಪಕ್ಕೆ ಬಂದರು, ಆದರೇನು? ಬ್ರಿಟಿಷ್ ಮತ್ತು ಫ್ರೆಂಚ್ ಸೈನ್ಯಗಳು ಸೆಪ್ಟಂಬರ್ ತಾ. ೧೧ ರಲ್ಲಿ ನುಗ್ಗಿ ಹೋಗಿ ಶತ್ರುಗಳನ್ನು ಅನೇಕ ಮೈಲಿಗಳ ತನಕ ಹಿಮ್ಮೆಟ್ಟಿಸಿ ಓಡಿಸಿಬಿಟ್ಟರು. ಈಗ ಜರ್ಮನಿಯವರ ಸ್ವಾಧೀನದಲ್ಲಿ ಫ್ರಾನ್ಸಿನೊಳಗೆ 6,000 ಚದರ ಮೈಲಿಯಷ್ಟು ಅಂದರೆ ನಮ್ಮ ಮೈಸೂರು ಡಿಸ್ಟ್ರಿಕ್ಟಿನಷ್ಟು ಇರುತ್ತದೆ. ಹೀಗಿದ್ದಾಗ್ಯೂ ಅವರನ್ನು ಅಲ್ಲಿಂದಲೂ ದಿನಕ್ರಮೇಣ ಹಿಂದುಹಿಂದಕ್ಕೆ ಓಡಿಸುತ್ತಿದ್ದಾರೆ. ಇತ್ತಲಾಗಿ ಫ್ರೆಂಚರು ಆಲ್ಸೇಸ್ ಅಧಿಪತ್ಯದಲ್ಲಿ ಒಂದು ಭಾಗವನ್ನು ಜರ್ಮನಿಯವರಿಂದ ಯುದ್ಧಪ್ರಾರಂಭವಾದಾಗಲೇ ಕಿತ್ತುಕೊಂಡು ತಮ್ಮ ಸ್ವಾಧೀನದಲ್ಲಿಟ್ಟುಕೊಂಡಿದ್ದಾರೆ. ಜರ್ಮನಿಯವರು ಸಂಪೂರ್ಣವಾಗಿ ಯುದ್ಧಸನ್ನದ್ಧರಾಗಿದ್ದರೂ, ಮದ್ದು ಗುಂಡುಗಳನ್ನೆಲ್ಲಾ ಅಪಾರವಾಗಿ ಒದಗಿಸಿಕೊಂಡಿದ್ದರೂ, ಬಹಳ ಪರಾಕ್ರಮಶಾಲಿಗಳಾಗಿದ್ದರೂ ಫ್ರಾನ್ಸಿನಲ್ಲಿ ತಮ್ಮ ಉದ್ದೇಶವನ್ನು ನೆರವೇರಿಸಿಕೊಳ್ಳದೆಹೋಗಿರುವರು; ಮತ್ತು ಅದು ನೆರವೇರುವ ಸಂಭವವೂ ಕಾಣುವುದಿಲ್ಲ.

ಇತ್ತಲಾಗಿ ಜರ್ಮನಿ ಮತ್ತು ಆಸ್ಟ್ರಿಯಾದ ಪೂರ್ವ ದಿಕ್ಕಿನಲ್ಲಿ ಏನಾಗಿದೆಯೋ ನೋಡೋಣ. ಜರ್ಮನಿಯವರೂ ಆಸ್ಟ್ರಿಯಾದವರೂ ರಷ್ಯಾದೊಳಕ್ಕೆ ನುಗ್ಗಿಹೋಗಿ ಪೋಲೆಂಡಿನಲ್ಲಿ ಒಂದು ಭಾಗವನ್ನು ಆಕ್ರಮಿಸಿಕೊಂಡರು. ಅದರಲ್ಲಿ ಜರ್ಮನಿಯವರು ಊಹಿಸಿದ್ದದ್ದಕ್ಕಿಂತ ಮೊದಲೇ ರಷ್ಯಾದವರು ತಮ್ಮ ಸೈನ್ಯವನ್ನು ಜೊತೆಮಾಡಿಕೊಂಡು ಯುದ್ಧಕ್ಕೆ ಸಿದ್ಧರಾಗಿದ್ದರು. ರಷ್ಯಾ ಸೈನ್ಯಗಳು ಬೇಗಬೇಗನೆ ಪೂರ್ವ ಪ್ರಷ್ಯಾದೊಳಕ್ಕೆ ನುಗ್ಗಿಹೋದವು. ಇವರನ್ನು ಹಿಂದಕ್ಕೆ ಓಡಿಸುವುದಕ್ಕೋಸ್ಕರ ಜರ್ಮನಿಯವರು ಫ್ರಾನ್ಸಿಗೆ ಕಳುಹಿಸಿದ ಸೈನ್ಯಗಳನ್ನು ಅಲ್ಲಿಂದ ಕರಸಿಕೊಳ್ಳಬೇಕಾಯಿತು. ಅವರು ಸೈನ್ಯವನ್ನು ತರಿಸಿಕೊಂಡು ರಷ್ಯಾದವರನ್ನು ಹಿಂದಕ್ಕೆ ಓಡಿಸಿಯೂ ಬಿಟ್ಟರು. ಅಲ್ಲಿಂದ ಜರ್ಮನಿಯವರು ರಷ್ಯಾದೊಳಕ್ಕೆ ನುಗ್ಗಿಬಂದರು. ಆದರೆ ರಷ್ಯಾದವರು ಅವರಿಗೆ ಸ್ವಲ್ಪವೂ ಅವಕಾಶಕೊಡದೆ ಅವರನ್ನೆಲ್ಲಾ ಸೋಲಿಸಿ ಚೆಲ್ಲಾಪಿಲ್ಲಿಯಾಗಿ ಓಡಿಸಿಬಿಟ್ಟಿರುತ್ತಾರೆ.

ಇನ್ನೊಂದು ಕಡೆಯಲ್ಲಿ ರಷ್ಯಾದವರು ಆಸ್ಟ್ರಿಯಾದೊಳಕ್ಕೆ ನುಗ್ಗಿಹೋಗಿ ಪ್ರತಿ ಒಂದು ಯುದ್ಧದಲ್ಲೂ ಜಯಪ್ರದಹೊಂದಿ ಆಸ್ಟ್ರಿಯಾದವರನ್ನು ಸಾವಿರಗಟ್ಲೆ ಕೈಸೆರೆ ಹಿಡಿದದ್ದಲ್ಲದೆ ಅವರ ನೂರಾರು ಫಿರಂಗಿಗಳನ್ನು ಕಿತ್ತು ಸ್ವಾಧೀನ ಪಡಿಸಿಕೊಂಡರು. ಬೆಲ್ಜಿಯಮ್‌ನಲ್ಲೂ ಫ್ರಾನ್ಸಿನಲ್ಲೂ ಜರ್ಮನಿಯವರು ಎಷ್ಟು ಪ್ರದೇಶವನ್ನು ಗೆದ್ದು ತಮ್ಮ ಸ್ವಾಧೀನದಲ್ಲಿಟ್ಟುಕೊಂಡಿರುತ್ತಾರೆಯೋ ರಷ್ಯಾದವರು ಅಷ್ಟಕ್ಕಿಂತಲೂ ಹೆಚ್ಚಾಗಿಯೇ ಆಸ್ಟ್ರಿಯಾ ರಾಜ್ಯದಲ್ಲಿ ಗೆದ್ದುಕೊಂಡಿರುವುದಲ್ಲದೆ ಇನ್ನೂ ಮುಂದುಮುಂದಕ್ಕೆ ನುಗ್ಗಿಬರುತ್ತಿರುವರು.

ರಷ್ಯಾದವರಿಗೆ ಸೇರಿದ ಪೋಲೆಂಡಿನಲ್ಲಿ ಕೆಲವು ಭಾಗವನ್ನು ಜರ್ಮನಿಯವರು ಗೆದ್ದುಕೊಂಡಿದ್ದಾರಷ್ಟೆ. ಇದು ಬಹುಶಃ ರಷ್ಯಾದವರು ಆಸ್ಟ್ರಿಯಾದಲ್ಲಿ ಗೆದ್ದುಕೊಂಡಿರುವಷ್ಟಾಗಬಹುದು. ಆದರೆ ರಷ್ಯಾದವರು ಜರ್ಮನಿಯವರನ್ನು ಕ್ರಮೇಣ ಪೋಲೆಂಡಿನಿಂದ ಹಿಮ್ಮೆಟ್ಟಿಸುತ್ತಾ ಬಂದಿದ್ದಾರೆಂದು ತಿಳಿಯಬೇಕು.

ಆಸ್ಟ್ರಿಯಾದವರು ಮೊದಲು ಸರ್ವಿಯಾದವರ ಮೇಲೆ ಸೈನ್ಯವನ್ನು ಕಟ್ಟಿ ಯುದ್ಧಕ್ಕೆ ಕಳುಹಿಸಿದರು. ಈಗ ಏನಾಗಿದೆಯೆಂದರೆ, ಸರ್ವಿಯಾದವರು ಆಸ್ಟ್ರಿಯದವರನ್ನೆಲ್ಲಾ ತಮ್ಮ ಸೀಮೆಯಿಂದ ಹಿಂದಕ್ಕೆ ಓಡಿಸಿಬಿಟ್ಟಿದ್ದಾರೆ. ಇಷ್ಟೇ ಅಲ್ಲದೆ ಅವರೂ ಮಾಂಟಿನೀಗ್ರೊದವರೂ ಸೇರಿಕೊಂಡು ಬೋಸ್ನಿಯಾ ಅಧಿಪತ್ಯದಲ್ಲಿ ಬಹಳ ದೊಡ್ಡ ಭಾಗವನ್ನು ಗೆದ್ದುಕೊಂಡುಬಿಟ್ಟಿದ್ದಾರೆ.

ಸಮುದ್ರದ ಮೇಲೆ ಏನಾಗಿದೆ ಎಂದು ನೋಡಿದರೆ ಜರ್ಮನಿಯವರ ಬಂಧಿಸ್ತು ಯುದ್ಧದ ಹಡಗುಗಳ ಹೊರತು ಅವರ ಯುದ್ಧದ ಹಡಗುಗಳೆಲ್ಲಾ ಜರ್ಮನಿಯ ತೀರಪಟ್ಟಣಗಳಲ್ಲೋ ಅಥವಾ ಬಾಲ್ಟಿಕ್ ಕಡಲಿನಲ್ಲೋ ಚಲಿಸದಂತೆ ನಿಂತುಬಿಟ್ಟಿರುವವು. ಮಹಾ ಸಾಗರಗಳ ಮೇಲೆ ಅವರ ವ್ಯಾಪಾರದ ಹಡಗು ಒಂದಾದರೂ ಇಲ್ಲದಂತಾಗಿದೆ. ಬ್ರಿಟಿಷರ ಹಡಗುಗಳಾದರೋ ಪ್ರಪಂಚದ ಎಲ್ಲಾ ಕಡೆಗಳಲ್ಲೂ ನಾಹಿಸಾರು ಸಂಚಾರ ಮಾಡುತ್ತಲೇ ಬಂದಿರುವವು. ಇದಲ್ಲದೆ ಜರ್ಮನಿಯವರ ಅನೇಕ ಸ್ವಾಸ್ಥ್ಯಗಳನ್ನು ದ್ವೀಪಗಳನ್ನೂ ಬ್ರಿಟಿಷರೂ, ಜಪಾನ್‌ನವರೂ ಕಿತ್ತುಕೊಂಡುಬಿಟ್ಟಿದ್ದಾರೆ.

ಈ ಯುದ್ಧವು ಪ್ರಾರಂಭವಾದ ಮೂರು ತಿಂಗಳೊಳಗೆ ಭೂಯುದ್ಧದಲ್ಲಿ ಜರ್ಮನಿ ಮತ್ತು ಆಸ್ಟ್ರಿಯಾದವರು ತಮ್ಮ ಉದ್ದೇಶವಾದುದನ್ನು ನೆರವೇರಿಸಿಕೊಳ್ಳಲಿಲ್ಲ. ಪ್ರತಿ ಒಂದು ಕಡೆಯಲ್ಲೂ ಅವರು ಹಿಮ್ಮೆಟ್ಟಿ ಹೋಗುವಂತಾಗಿದೆ. ಸಮುದ್ರದ ಮೇಲಾದರೋ ಅವರ ಹೆಸರೇ ಕಾಣುವುದಿಲ್ಲ.

ಇದುವರೆಗೆ ಆಗಿರುವ ಯುದ್ಧ ಮುಂತಾದವುಗಳಲ್ಲಿ ಕೊಲೆಯಾದವರು, ಗಾಯಪಟ್ಟವರು, ಕೈಸೆರೆ ಸಿಕ್ಕಿದವರು ಇಷ್ಟೆಷ್ಟು ಮಂದಿಯೋ ಖಚಿತವಾದ ಸಂಖ್ಯೆಗಳನ್ನು ತಿಳಿಸುವುದು ಅಸಾಧ್ಯ. ಯಾಕೆಂದರೆ ಯಾವ ಯುದ್ಧದ ವಿವರಗಳೂ ತಿಳಿದು ಬಂದಿಲ್ಲ. ಆದರೂ ಸ್ವಲ್ಪಮಟ್ಟಿಗೆ ಊಹಿಸಿ ಹೇಳಬಹುದು. ಜರ್ಮನಿಯವರ ಕಡೆ 6,00,000 ಸೈನ್ಯವೂ, ಆಸ್ಟ್ರಿಯಾದವರಲ್ಲಿ 4,00,000 ಸೈನ್ಯವೂ, ಫ್ರೆಂಚರಲ್ಲಿ 4,00,000 ಸೈನ್ಯವೂ, ರಷ್ಯಾದವರಲ್ಲಿ 2,00,000 ಸೈನ್ಯವೂ, ಬ್ರಿಟಿಷರಲ್ಲಿ 20,000 ಸೈನ್ಯವೂ, ಬೆಲ್ಜಿಯರ್ಸ್ರಲ್ಲಿ 1,00,000 ಸೈನ್ಯವೂ ನಷ್ಟವಾಗಿರಬೇಕೆಂದು ಊಹಿಸುತ್ತೇವೆ. ಇದೆಲ್ಲಾ ನಿಂದಿತವೆಂದು ಗೊತ್ತಾದ ನಷ್ಟವೆಂದು ತಿಳಿಯಕೂಡದು. ಈ ಸಂಖ್ಯೆಗಳಲ್ಲಿ ಕೊಲೆಯಾದವರನ್ನೂ, ಗಾಯಪಟ್ಟವರನ್ನೂ, ಕೈಸೆರೆಯಾದವರನ್ನೂ ಸೇರಿಸಿದೆ. ಇದರಿಂದ ಯುದ್ಧವೆಂಬುವುದು ಎಷ್ಟು ಘೋರವಾದದ್ದೋ ವಾಚಕರೇ ಊಹಿಸಿಕೊಳ್ಳಬಹುದು. ಯುದ್ಧದಲ್ಲಿ ದ್ರವ್ಯ ಖರ್ಚಾಗಿರುವುದೂ ಅಪಾರವಾಗಿದೆ ಎಂದು ತಿಳಿಯಬೇಕು; ಹೇಗೂ ಈ ಖರ್ಚು ದಿನ ಒಂದಕ್ಕೆ 8,00,00,000 ರೂಪಾಯಿ ಆದೀತು. ಈ ರೀತಿ ಯುದ್ಧವು ಬಹು ಕಾಲ ತಿಂಗಳು ಗಟ್ಲೆಯಾಗಿ ನಡೆಯುತ್ತಾ ಬರುವುದು ಸಾಧ್ಯವಲ್ಲ. ಆದರ ಕಾರ್ಯವು ಕಡಮೆಯಾಗಿ ದೀರ್ಘಕಾಲ ನಡೆಯುತ್ತಾ ಬರಬಹುದು; ಇಲ್ಲವೇ ಈಗಿಗಿಂತ ಇನ್ನೂ ಘೋರವಾಗಿ ನಡೆದು ಬೇಗನೆ ಮುಕ್ತಾಯವಾಗಬಹುದು. ದೇವರು ಕರುಣವಿಟ್ಟು ಇದನ್ನು ಬೇಗನೆ ಮುಕ್ತಾಯಕ್ಕೆ ತರಲಿ!

ಸಮಾಧಾನ.

ಈಗ ಯೂರೋಪ್ ಖಂಡವೆಲ್ಲಾ ಘೋರವಾದ ರಣರಂಗವಾಗಿದೆ. ಮತ್ತು ಈ ಯುದ್ಧವು ಲೋಕವನ್ನೆಲ್ಲಾ ಕಂಪಾಯಮಾನವಾಗಿ ಮಾಡುತ್ತಿದೆ. ಈ ವರೆಗೂ ಭೂಮಂಡಲದಲ್ಲಿನ ಸಕಲ ಯುದ್ಧಗಳಲ್ಲಿ ಯಾವದೂ ಇಷ್ಟು ಭಯಂಕರವಾದುದಲ್ಲ. ಇದರಲ್ಲಿ ಬೆರಸಿ ಬಂದಿರುವ ಉಭಯಪಕ್ಷದವರನ್ನು ಕರೆಸಿ ಒಬ್ಬರೇ ಸಮಾಧಾನಕ್ಕೊಡಂಬಡಿಸುವ ದಕ್ಷತೆಯು ಯಾರಿಗೂ ಇಲ್ಲವಾಗಿ ಕಾಣುತ್ತದೆ. ಅತಿಬಲರು ಅನ್ನಿಸಿಕೊಂಡಿರುವ ಪ್ರಖ್ಯಾತ ಜನಾಂಗದವರೂ ಲೋಕವನ್ನು ಆಳುವವರೂ ಯುದ್ಧಕ್ಕೆ ನಿಂತರೆ ಪ್ರಜೆಗಳ ಪಾಡೇನು? ಯಾವ ಸಾಮಂತರಾಜರು ತಾನೇ ಮಧ್ಯಸ್ಥಿಕೆ ಮಾಡುವದಕ್ಕಾದೀತು? ಮುಂದೆ ಲೋಕದ ಕ್ಷೇಮವು ಹೇಗೆ? ಈ ಮಹಾ ದುರ್ದೆಸೆಯಲ್ಲಿ ಜಗತ್ಪಾಲಕನು ತಾನೇ ಈ ಸಂಕಟವನ್ನು ಪರಿಹರಿಸುವ ಕಾರ್ಯದಕ್ಷತೆಯನ್ನು ವಹಿಸಬೇಕು.

ಶಾಶ್ವತವಾದ ಸಮಾಧಾನವು ಲೋಕದಲ್ಲಿ ಹೇಗೆ ನೆಲೆಗೊಳ್ಳುವದು? ಯುದ್ಧದಲ್ಲಿ ಅಸಕ್ತರಾಗಿ ಕಡಿದಾಡುತ್ತಿರುವ ಒಂದು ಪಕ್ಷದವರು ಮತ್ತೊಂದು ಪಕ್ಷದವರನ್ನು ಎದುರಾಯಿಸಿ ಯುದ್ಧಮಾಡಲಾರೆವೆಂದು ಒಪ್ಪಂದವನ್ನು ಬಯಸಿದರೆ ಸಮಾಧಾನವಾಗುವದು. ಅಥವಾ ಉಭಯಪಕ್ಷದವರೂ ಕಾದಿ ಬೇಸತ್ತು ಜಯಾಪಜಯಗಳನ್ನು ನಿರ್ಣಯಿಸುವದು ಅಸಾಧ್ಯವಾಗಿದೆ; ಉಭಯಪಕ್ಷದವರೂ ಸಮಾನವಾದ ಪರಾಕ್ರಮಶಾಲಿಗಳು; ಆದ್ದರಿಂದ ಯುದ್ಧವನ್ನು ನಿಲ್ಲಿಸೋಣವೆಂದು ಒಪ್ಪಿದರೂ ಸಮಾಧಾನವಾಗಬಹುದು. ಆದರೆ ಈ ವಿಧಗಳಿಂದ ಲಭ್ಯವಾಗಬಹುದಾದ ಸಮಾಧಾನವು ಶಾಶ್ವತವಾದದ್ದೆನ್ನಿಸಿಕೊಳ್ಳಲಾರದು. ಯಾಕೆಂದರೆ ಅಪಜಯವನ್ನು ಹೊಂದಿದ ಪಕ್ಷದವರು—ನಮ್ಮ ಜನಾಂಗಕ್ಕೂ ರಾಜ್ಯಕ್ಕೂ ಅಪಕೀರ್ತಿಯೂ ಹೇರಳವಾದ ನಷ್ಟವೂ ಪ್ರಾಪ್ತಿಸಿತಲ್ಲಾ? ಎಂದು ಅದರ ಪರಿಹಾರಕ್ಕೆ ಸಮಯವನ್ನು ನಿರೀಕ್ಷಿಸುತ್ತಿರುವರು. ಜಯಾಪಜಯಗಳು ಉಭಯಪಕ್ಷದವರಲ್ಲಿ ಸಮವಾಗಿದ್ದರೂ ಪುನಃ ಯುದ್ಧಮಾಡಿ ಗೆಲ್ಲಬೇಕೆಂಬ ಕಾಂಕ್ಷೆಯು ಉಭಯಪಕ್ಷದವರನ್ನು ಕಾಡುತ್ತಿರುವದೇ ಹೊರತು ತೃಪ್ತಿಯನ್ನುಂಟುಮಾಡಲಾರದು.

ಇದು ನಿಜವಾದ ಸಮಾಧಾನವಲ್ಲ; ಯಾವದು ನಿಜವಲ್ಲವೋ ಅದು ಶಾಶ್ವತವಾಗಿರಲರಿಯದು. ಹೀಗಿದ್ದರೆ ನಿಜ ಸಮಾಧಾನದ ಸ್ವಭಾವವೇನಾದ್ದು? ಅಂತಹ ಸಮಾಧಾನವನ್ನು ಹೊಂದಿ ಅನುಭವಿಸಿದವರು ಯಾರಾದರೂ ಇದ್ದಾರೋ? ಅಂಥವರ್ಯಾರಾದರೂ ಇದ್ದರೆ ಅವರು ಅದರ ಹಂಚಿಕೆಯನ್ನು ಕೆಲಂಕಷವಾಗಿ ಹೇಳಲಿ. ನಮಗೆ ಅಂಥವರು ಹೇಳುವದನ್ನು ಕೇಳುವದಕ್ಕೆ ಮನಸ್ಸುಂಟು.

ಶಾಶ್ವತವಾದ ದಿವ್ಯ ಸಮಾಧಾನವನ್ನು ಅನವರತವೂ ಹೊಂದಿ ವಿಚ್ಛಿತ್ತಿಯಿಲ್ಲದೆ ಅದನ್ನು ಅನುಭವಿಸುತ್ತಿದ್ದ ಒಬ್ಬ ಮಹಾತ್ಮನನ್ನು ನಾವು ಬಲ್ಲೆವು. ಲೋಕಾದಿಯಿಂದ ಈ ವರೆಗೂ ಅಂತಹ ಸಮಾಧಾನವನ್ನು ಹೊಂದಿದವನು ಇನ್ನಾರೂ ಇರಲಿಲ್ಲ. ಆದ್ದರಿಂದ ಆತನನ್ನು ಅದ್ವಿತೀಯವಾದ ಸಮಾಧಾನದ ಕರ್ತನೆಂದು ಹೇಳುತ್ತೇವೆ. ಆತನು ಯಾರು ಅಂದರೆ ಯೇಸು ಕ್ರಿಸ್ತನೇ. ಆತನಿಗೆ ಐಶ್ವರ್ಯವೂ ಅಧಿಕಾರವೂ ಇರಲಿಲ್ಲ. ಸ್ವಂತ ಮನೆಯಿಲ್ಲ. ಅಥವಾ ಆತನು ತನ್ನ ಸಮಾಧಾನವು ಜನಸಂದಣಿಯಿಂದ ನಷ್ಟಹೊಂದೀತೆಂಬ ಭಯದಿಂದ ನಿರ್ಜನಪ್ರದೇಶವಾದ ಅಡವಿಗೆ ಹೋಗಲಿಲ್ಲ. ಜನಸಮೂಹದಲ್ಲಿ ಯಾವಾಗಲೂ ಇರುತ್ತಿದ್ದನು. ಅವರೊಳಗಾಗಿ ಕೇವಲ ಪಾಮರರೂ ಪಾಪಿಗಳೆಂದು ಹೆಸರುಗೊಂಡವರ ಕೇರಿ, ಬೀದಿಗಳಲ್ಲಿ ನಡೆದಾಡಿ, ನಿಂತು, ಕೂತು ಅವರ ಸಂಗದ ಮಾತನಾಡಿ ಸ್ನೇಹ ಬೆಳೆಸಿದನು. ಅವರ ಸುಖದುಃಖಗಳಲ್ಲಿ ತಾನೂ ಭಾಗಿಯಾಗಿದ್ದನು. ಅವರಲ್ಲಿ ಅಲ್ಪಸ್ವಲ್ಪವಾಗಿ ಕಾಣಬಂದ ಒಳ್ಳೇ ಅಭಿಪ್ರಾಯಗಳನ್ನು ಒಳ್ಳೇ ಗುಣನಡತೆಗಳನ್ನೂ ಮೆಚ್ಚಿ ಪ್ರೋತ್ಸಾಹಗೊಳಿಸಿದನು. ದುರಭಿಪ್ರಾಯ ದುರ್ನಡತೆಗಳನ್ನು ಖಂಡಿಸಿದನು. ಅವರು ಆತನ ಉಪದೇಶವನ್ನೂ ಸನ್ನಡತೆಯನ್ನೂ ಪರೋಪಕಾರವನ್ನೂ ನೋಡಿ—ನೀನು ನಮ್ಮ ಗುರುವೂ ಅರಸನೂ ಆಗಿರು ಎಂತ ಬೇಡಿದರು. ಅದಕ್ಕೆ ಆತನು ಒಪ್ಪಿ ಹಿಗ್ಗಲಿಲ್ಲ. ಇನ್ನೊಂದು ವೇಳೆ ಅವರು ಆತನ ಖಂಡನೆಗಳನ್ನು ಕೇಳಿ ಆತನನ್ನು ತಿರಸ್ಕರಿಸಿಬಿಟ್ಟು ಹೋದರು. ಆಗ ಆತನು ತಗ್ಗಿ ಬೊಗ್ಗಿ ತನ್ನ ಸಮಾಧಾನವನ್ನು ಕಳೆದುಕೊಳ್ಳಲಿಲ್ಲ. ವ್ಯಾಕುಲಚಿತ್ತನಾಗಿರಲಿಲ್ಲ.

ಐಶ್ವರ್ಯವಂತರು, ಅಧಿಕಾರಿಗಳು, ವಿದ್ವಾಂಸರು, ತತ್ವ ಬೋಧಕರು ಮುಂತಾದವರು ಆತನಿಗೆ ಎದುರುಬಿದ್ದು ಆತನನ್ನು ಕೆಣಕಿದರು. ಮಾತಿನಲ್ಲಿ ತಪ್ಪು ಹಿಡಿಯಬೇಕೆಂದು ಚಮತ್ಕಾರದ ಪ್ರಶ್ನೆಗಳನ್ನು ಕಲ್ಪಿಸಿ ಕೇಳಿದರು. ಆತನ ನಡತೆಯನ್ನು ಹೊಂಚುಕಾದರು. ಕೊನೆಗೆ ಅಪರಾಧವನ್ನು ಹೊರಿಸಿ ಸಂಹರಿಸಬೇಕೆಂದು ಯತ್ನಗಳನ್ನು ಸಾಧಿಸಿದರು. ಆತನ ಅಣ್ಣ ತಮ್ಮಂದಿರೂ ಆತನನ್ನು ಹಗೆಮಾಡಿದರು. ಲೋಕದಲ್ಲಿ ಅನೇಕವೇಳೆ ಆತನೊಬ್ಬನೇ ಒಬ್ಬಂಟಿಗನಾಯಿತು. ಆತನ ಪಕ್ಷವನ್ನು ವಹಿಸುವವರೇ ಇಲ್ಲ. ಯಾರಾದರೂ ಆತನ ವಿಷಯ ಒಳ್ಳೇ ಮಾತನಾಡಿದರೆ ಅವರನ್ನು ದಂಡಿಸುವರೆಂಬ ಭಯವು ಆತನ ಸ್ನೇಹಿತರನ್ನು ಕಾಡಿತು. ಮತ್ತು ಕಟ್ಟಕಡೆಗೆ ನೀತಿವಂತನೂ ನಿರಪರಾಧಿಯೂ ಸತ್ಯವಂತನೂ ಪರೋಪಕಾರಿಯೂ ಆದ ಆತನನ್ನು ಹಿಡಿದು ಅಪರಾಧಿಯೆಂತ ಸುಳ್ಳುಸಾಕ್ಷಿಗಳಿಂದ ನಿರ್ಣಯಿಸಿ ಅಪಮಾನವಾಗಿ ಹಾಸ್ಯಮಾಡಿ ಪೆಟ್ಟು ಹೊಡೆದು ಕ್ರೂರವಾಗಿ ಕೊಂದರು. ಆದರೂ ಆತನು ಕಳವಳಪಟ್ಟು ಗಾಬರಿಯಾಗಿ ಸಮಾಧಾನವನ್ನು ತ್ಯಜಿಸಲಿಲ್ಲ. ತನಗೆ ಮರಣ ಸಂಭವಿಸುವದೆಂದು ತಿಳಿದರೂ ಶಾಂತನಾಗಿಯೂ ಸಮಾಧಾನಭರಿತನಾಗಿಯೂ ಇದ್ದನು. ತಾನು ಮೃತನಾಗುತ್ತೇನೆಂದು ಕೇಳಿ ವ್ಯಾಕುಲಚಿತ್ತರಾದ ತನ್ನ ಶಿಷ್ಯರನ್ನು ನೋಡಿ ತಾನು ಸಾಯುವ ಹಿಂದಿನ ಸಾಯಂಕಾಲ ಅವರನ್ನು ಸಮಾಧಾನಪಡಿಸಿ ಹೇಳಿದ್ದನ್ನು ಸ್ಮರಿಸಿರಿ. ಏನೆಂದರೆ—"ಸಮಾಧಾನವನ್ನು ನಿಮಗೆ ಕೊಟ್ಟು ಹೋಗುತ್ತೇನೆ. ನನ್ನ ಸಮಾಧಾನವನ್ನು ನಿಮಗೆ ಕೊಡುತ್ತೇನೆ ಲೋಕವು ಕೊಡುವ ರೀತಿಯಿಂದ ನಾನು ನಿಮಗೆ ಕೊಡುವದಿಲ್ಲ. ನಿಮ್ಮ ಹೃದಯವು ಕಳವಳಗೊಳ್ಳದಿರಲಿ; ಹೆದರದಿರಲಿ" ಎಂಬುವದೇ.

ಎಲ್ಲವೆ ತಿರುಗುತ್ತಿರುವ ಗಾಡಿಯ ಚಕ್ರದ ಹಾಗೆ ಲೋಕದಲ್ಲಿ ಸಕಲವೂ ಚಂಚಲವಾಗಿದೆ. ಕಷ್ಟ, ಸುಖ, ರೋಗ, ಹಾನಿ, ಯುದ್ಧ, ಬರ, ವಿಯೋಗ ತಾಪ, ರಕ್ತಗಳಕಾಟ, ಚಾವಡಿ ಚಿಂತೆ ಇವು ಒಂದರ ಮೇಲೊಂದು ಬಂದು ಒದಗುತ್ತಿರುವವು. ಕ್ರಿಸ್ತನೊಬ್ಬನೇ ಇಂಥಾ ಲೋಕದಲ್ಲಿ ನಿತ್ಯಸಮಾಧಾನವನ್ನು ಅನುಭವಿಸಿದನು. ಇದು ಆತನಿಗೆ ದೊರಕಿದ್ದು ಹೇಗೆ? ಅದನ್ನು ಆತನು ಕಾಪಾಡಿಕೊಂಡಿದ್ದು ಹೇಗೆ? ಬಹಿರಂಗದಲ್ಲಿ ಲೋಕವೆಲ್ಲಾ ಕ್ಷೋಭೆಯಿಂದ ಕಂಪಾಯಮಾನವಾಗಿದ್ದರೂ ಆತನಿಗೂ ತಂದೆಯಾದ ದೇವರಿಗೂ ನಿತ್ಯವಾದ ಸಮಾಧಾನವಿದ್ದಿತು. ಇದೇ ಸಕಲಸಮಾಧಾನದ ಮೂಲ, ಸಮಾಧಾನವನ್ನು ಕಾಪಾಡುವ ಉಪಾಯ. ಸೈತಾನನು ಎಷ್ಟೆಷ್ಟೋ ವಿಧದಲ್ಲಿ ಆತನನ್ನು ಸಮೀಪಿಸಿ ತನ್ನ ಸುಖವನ್ನು ತೋರಿಸಿದರೂ ಅದೊಂದಕ್ಕೂ ಆತನು ಒಡಂಬಡದೆ ತಂದೆಯ ಚಿತ್ತವನ್ನು ಮಾಡಿ ನೆರವೇರಿಸುವವರಲ್ಲಿ ನಿರತನಾಗಿದ್ದನು. ತಂದೆಯ ಸಂಗಡ ಆತನಿಗೆ ಎಡೆಬಿಡದ ಸಮಾಗಮವಿದ್ದದ್ದರಿಂದ ಲೋಕದ ಯಾವ ವಿದ್ಯಮಾನವೂ ಆತನ ಸಮಾಧಾನವನ್ನು ಕೆಡಿಸಲಾರದಿತ್ತು. ಆತನನ್ನು ಆಶ್ರಯಿಸುವವರಿಗೆ ಪಾಪಪರಿಹಾರವೂ ದೇವರ ಸಂಗಡ ಅನ್ಯೋನ್ಯವೂ ದೊರಕುವವು. ಇದನ್ನೇ ಆತನು "ನನ್ನ ಸಮಾಧಾನ" ವೆಂದು ಕರೆದನು.

ಯುದ್ಧದ ಸಮಾಚಾರಗಳು.

ಬೆಲ್ಜಿಯಮ್‌ನಲ್ಲಿ ಭಯಂಕರವಾದ ಕದನಗಳು.

ಜರ್ಮನಿಯವರು ರಷ್ಯಾದಿಂದ ಹಿಮ್ಮೆಟ್ಟುವುದು.

ಸಲುಗಡೆ ಇಲ್ಲದೆ ಕದನಗಳು ನಡೆಯುತ್ತಾ ಬಂದಿದ್ದರೂ ಸೋಲುಗೆಲುವಿಗೆ ಆದಂಥಾ ಕದನಗಳ ವಾರ್ತೆ ಬಂದಿಲ್ಲ. ಆದಾಗ್ಯೂ ಈ ವಾರ

...ವ ಸಮಾಚಾರಗಳನ್ನು ನೋಡುವಲ್ಲಿ ಪಶ್ಚಿಮ ಯುದ್ಧಭೂಮಿಯಲ್ಲಿ ... ಯುದ್ಧಭೂಮಿಯಲ್ಲೂ ಬ್ರಿಟಿಷ್, ಫ್ರೆಂಚ್ ಮತ್ತು ರಷ್ಯಾದವರಿಗೆ ... ಮಟ್ಟಿಗೂ ಅನುಕೂಲವಾಗಿದೆ ಎಂದು ಹೇಳಬಹುದು. ಪಶ್ಚಿಮದಲ್ಲಿ ... ಈಗ ಫ್ರಾನ್ಸಿನಿಂದ ಉತ್ತರಕ್ಕೆ ಬೆಲ್ಜಿಯಮ್‌ನೊಳಕ್ಕೂ ವ್ಯಾಪನೆ ... ಆ ಪ್ರಾಂತ್ಯವೆಲ್ಲಾ ಯುದ್ಧಭೂಮಿಯಾಗಿ ಪರಿಣಮಿಸಿರುತ್ತದೆ.

ಫ್ರಾನ್ಸಿನಲ್ಲೂ, ಬೆಲ್ಜಿಯಮ್‌ನಲ್ಲೂ.

...ದ ವಾರವೆಲ್ಲಾ ಫ್ರಾನ್ಸಿನ ಎಲ್ಲೆಕಟ್ಟಿನಲ್ಲೂ ಬೆಲ್ಜಿಯಮ್‌ನೊಳಗೂ ...ಠಿಣವಾಗಿ ಕದನಗಳು ನಡೆಯುತ್ತಾ ಬಂದವು; ಅದರಲ್ಲೂ ಲೀಲ್ ...ಪಟ್ಟಣ ಬಳಿಯೂ ಯುದ್ಧಗಳು ಮಹಾ ಘೋರವಾಗಿ ನಡೆದಿರುತ್ತವೆ. ಆ ...ಯುತ್ತಿನಲ್ಲಿ ಬಹುಮಾ ಬೆಲ್ಜಿಯನ್, ಬ್ರಿಟಿಷ್ ಮತ್ತು ಫ್ರೆಂಚ್ ಸೈನ್ಯ ... ಏಕವಾಗಿ ಶತ್ರುವಿನ ಮೇಲೆ ಯುದ್ಧಮಾಡುತ್ತಿರಬಹುದು. ಶತ್ರುವಾದ ಜರ್ಮನಿಯವರು ಅಲ್ಲಿಗೆ ಅಪಾರವಾಗಿ ಸೈನ್ಯಗಳನ್ನು ತಂದುಕೊಂಡು ಬಹಳ ಶೌರ್ಯದಿಂದ ಯುದ್ಧ ಕೊಡುತ್ತಿದ್ದಾರೆ. ಈ ಶತ್ರುವಿನ ಸೈನ್ಯದಲ್ಲಿ ಬಹು ಮಂದಿ ವಯಸ್ಸು ಮೀರಿದವರೂ, ಇನ್ನೂ ವಯಸ್ಸಾಗದವರೂ ಸೇರಿಕೊಂಡಿದ್ದಾರೆಂದೂ, ಬೇರೆ ಬೇರೆ ರೆಜಿಮೆಂಟುಗಳಿಗೆ ಸೇರಿದವರನ್ನು ಕೂಡಿಸಿದ್ದಾರೆಂದೂ ತಿಳಿದಾಗಿದೆ. ಆದರೂ ಜರ್ಮನಿಯವರು ಬಹು ವಿಶೇಷವಾದ ಚಮತ್ಕಾರದಿಂದಲೂ, ಪರಾಕ್ರಮದಿಂದಲೂ ಯುದ್ಧಮಾಡುತ್ತಾ ಬಂದು, ಕೆಲವು ಸ್ಥಳಗಳಲ್ಲಿ ಶತ್ರುಗಳನ್ನು ಹಿಮ್ಮೆಟ್ಟಿಸಿ ಕೆಲವು ಸ್ಥಳಗಳನ್ನು ಆಕ್ರಮಿಸಿಕೊಂಡಿದ್ದಾರೆ.

ಅಲ್ಲಿ ಕದನಗಳಾಗುತ್ತಿರುವ ಪ್ರದೇಶವು ಯುದ್ಧಕ್ಕೆ ಅನುಕೂಲವಾದ ...ದ್ದಾಗಿಲ್ಲ. ಆ ಪ್ರದೇಶವು ಬಹಳ ಬಯಲಾಗಿಯೂ, ನಾಲೆಗಳಿಂದ ತುಂಬಿದ್ದಾಗಿಯೂ ಇದೆ. ಇವುಗಳನ್ನು ದಾಟಿಕೊಂಡು ಹೋಗುವುದಕ್ಕೆ ಹಲಗೆಗಳನ್ನೂ ಏಣಿಗಳನ್ನೂ ಉಪಯೋಗಿಸದಿದ್ದರೆ ಸೈನ್ಯಗಳು ನುಗ್ಗಿ ಹೋಗುವುದು ಸಾಧ್ಯವಲ್ಲ. ಬೆಲ್ಜಿಯನ್ನರು ನಾಲೆಗಳನ್ನು ಒಡೆದುಹಾಕಿಬಿಟ್ಟಿದ್ದಾರೆ; ಆ ಪ್ರಾಂತ್ಯದಲ್ಲೆಲ್ಲಾ ನೀರು ಪ್ರವಾಹರೋಪಾದಿಯಲ್ಲಿ ಹರಡಿಕೊಂಡಿದೆ. ಆದಕಾರಣ ಯುದ್ಧಕಾರ್ಯಗಳನ್ನು ನಡೆಸುವುದು ಬಹಳ ಪ್ರಯಾಸವಾಗಿ, ನಿಧಾನಕ್ಕೆ ಅವಕಾಶವಾಗಿದೆ. ಈಗ ಜರ್ಮನಿಯವರನ್ನು ಮೊದಲಿನಂತೆ ಅನೇಕ ಸೈನ್ಯಗಳನ್ನು ಏಕಕಾಲದಲ್ಲಿ ಶತ್ರುಗಳ ಮೇಲೆ ನುಗ್ಗಿಸಿ ಯುದ್ಧಮಾಡುವುದನ್ನು ಬಿಟ್ಟು, ಸೈನ್ಯವನ್ನು ಹಿಂದೆ ಇಟ್ಟುಕೊಂಡು ಫಿರಂಗಿಗಳಿಂದ ಗುಂಡುಗಳ ಮಳೆ ಸುರಿಸುತ್ತಿದ್ದಾರೆ. ಈಗೀಗ ಅವರ ಮದ್ದು ಗುಂಡುಗಳು ತುಂಬಾ ಕಡಮೆಯಾಗುತ್ತಿವೆಯೆಂದೂ, ಹೊಸ ಸಾಮಗ್ರಿಗಳು ಅವರು ಒದಗಿಸಿಕೊಳ್ಳಲಾರದೆ ಹೋಗಿದ್ದಾರೆಂದೂ ತಿಳಿದುಬರುತ್ತದೆ. ಜರ್ಮನಿಯವರು ಗ್ರಾಮಗಳನ್ನು ಆಕ್ರಮಿಸಿಕೊಂಡು ಮನೆಗಳೊಳಗೆ ಸೇರಿಕೊಳ್ಳುತ್ತಿದ್ದಾರೆ. ಶತ್ರುಗಳು ಪ್ರತಿ ಮನೆಗೂ ನುಗ್ಗಿ ಅವರನ್ನು ಹೊರಡಿಸಬೇಕಾಗಿ ಬಂದಿದೆ. ಇದಕ್ಕೋಸ್ಕರ ಶತ್ರುಗಳು ಜರ್ಮನಿಯವರ ಸ್ವಾಧೀನದಲ್ಲಿರುವ ಗ್ರಾಮಗಳಿಗೆ ಫಿರಂಗಿಗಳನ್ನು ಹೊಡೆದು ನಾಶಪಡಿಸುತ್ತಾರೆ. ಇದರಿಂದ ಅಪಾರವಾದ ಆಸ್ತಿಪಾಸ್ತಿಗಳೂ ಕಟ್ಟಡಗಳೂ ಹಾಳಾಗುವುದಕ್ಕೆ ಕಾರಣವಾಗಿದೆ. ಕದನಗಳಾದರೋ ಮಹಾ ಘೋರವಾಗಿ ನಡೆದು, ಎರಡು ಕಡೆಗಳಲ್ಲೂ ತುಂಬಾ ನಷ್ಟವಾಗುತ್ತಿದೆ. ಓಸ್ಟೆಂಡಿನ ಹತ್ತಿರ ಒಂದು ಕಡೆಯಲ್ಲಿ ಜರ್ಮನಿಯವರ 1,500 ಯುದ್ಧಭಟರ ಹೆಣಗಳನ್ನು ಸಮಾಧಿ ಮಾಡಿದರು.

ಯುದ್ಧ ನಡೆಯುವ ಲೈನು ಒಂದು ಕಡೆ ಓಸ್ಟೆಂಡೆಂಬ ಸಮುದ್ರತೀರದವರೆಗೂ ವ್ಯಾಪಿಸಿಕೊಂಡಿದೆ. ಸಮುದ್ರದ ಸಮೀಪದಲ್ಲೇ ಭೂ ಯುದ್ಧಗಳು ನಡೆಯುತ್ತಿರುವುದರಿಂದ ಬ್ರಿಟಿಷರು ತಮ್ಮ ಯುದ್ಧದ ಹಡಗುಗಳನ್ನು ಆ ಸಮುದ್ರತೀರಕ್ಕೆ ತಂದುಕೊಂಡಿದ್ದಾರೆ. ಬ್ರೆಜಿಲ್ ದೇಶಕ್ಕೋಸ್ಕರ ಇಂಗ್ಲೆಂಡಿನಲ್ಲಿ ಆಳವಿಲ್ಲದ ತಳವನ್ನು ಕಟ್ಟಿ ಕೆಲವು ಹಡಗುಗಳನ್ನು ರಚಿಸಿದ್ದರು. ಇವು ನದಿಗಳ ಮೇಲೆ ಹೋಗಬಹುದಾದಂಥವುಗಳಾಗಿವೆ. ಬ್ರಿಟಿಷರು ಇವುಗಳ ಮೇಲೆ ಭಾರಿ ಫಿರಂಗಿಗಳನ್ನು ಹಾಕಿಕೊಂಡು ಬೆಲ್ಜಿಯಮ್ ಸಮುದ್ರತೀರಕ್ಕೆ ತಂದು ನಿಲ್ಲಿಸಿ ಅವುಗಳಿಂದ ತೀರದಲ್ಲಿರುವ ಜರ್ಮನಿಯವರ ಮೇಲೆ ಗುಂಡುಗಳನ್ನು ಸುರಿಸುತ್ತಿದ್ದಾರೆ. ಈ ಪ್ರಕಾರ ಯುದ್ಧದ ಹಡಗುಗಳು ವಿಶೇಷವಾಗಿ ಸಹಾಯಮಾಡಿರುವುವು. ಆ ಸಮೀಪದಲ್ಲಿ ಗಾಯಪಟ್ಟು ಬಿದ್ದುಕೊಂಡ 4,000 ಜರ್ಮನ್ ಯುದ್ಧಭಟರನ್ನು ಯುದ್ಧಸಾಲಿನಿಂದ ಹಿಂದಕ್ಕೆ ಹೊತ್ತು ಸಾಗಿಸಿದರೆಂದೂ, ಈ ... ನಾಯಮಾಡುವುದಕ್ಕೆ ಆಸೇತುಗೆ ಮೇಲ್ಗಡೆ ಹಡಗುಗಳ ಫಿರಂಗಿ ಗುಂಡುಗಳೇ ಕಾರಣವಾದವೆಂದೂ ತಿಳಿದುಬಂದಿದೆ. ಈ ಹಡಗುಗಳ ಬೆಂಬಲಕ್ಕಾಗಿ ಬ್ರಿಟಿಷ್ ವಿಮಾನಯಂತ್ರಗಳು ಒಂದು ಅಂತರಿಕ್ಷಕ್ಕೆ ಹೋಗಿ ಜರ್ಮನಿಯ ಯುದ್ಧಭಟರ ಸ್ಥಾನಗಳನ್ನು ಕಂಡುಹಿಡಿದು ಕೆಳಗಿರುವ ಹಡಗುಗಳಿಗೆ ಸೌಜ್ಞೆಮಾಡಿ ತಿಳಿಸುತ್ತವೆ. ಬಳಿಕ ಹಡಗುಗಳಲ್ಲಿರುವ ಫಿರಂಗಿಗಳು ಶತ್ರುಗಳ ಕಡೆಗೆ ಗುರಿಯಿಟ್ಟು ಗುಂಡುಗಳ ಮಳೆ ಸುರಿಸುವುವು. ಈ ಪ್ರಕಾರ ಜರ್ಮನಿಯ ಸೈನ್ಯಗಳು ಗುಂಡಿನ ಪೆಟ್ಟಿಗೆ ಸಿಕ್ಕಿ ಬಹಳ ನಷ್ಟಪಾದವು. ಒಂದು ಕಂದಕದಲ್ಲಿ 1,600 ಜರ್ಮನಿಯವರು ಕೊಲೆಯಾದರೆಂದೂ, ಅವರ ಆರು ನಾಲು ಫಿರಂಗಿಗಳು ನಾಶವಾದವೆಂದೂ ತಿಳಿಯುತ್ತದೆ. ಜರ್ಮನಿಯವರು ಬ್ರಿಟಿಷ್ ಹಡಗುಗಳನ್ನು ನಾಶಪಡಿಸಬೇಕೆಂದು ಫಿರಂಗಿಗಳನ್ನು ಹೊಡೆದಾಗ್ಯೂ ಆ ಗುಂಡುಗಳು ಅಷ್ಟು ದೂರ ಹೋಗಲಾರದೆ ಹೋಗಿವೆ. ಆದರೆ ಒಂದು ಆಟಾ ಕುರ್ಯದ ದೆಸೆಯಿಂದ ಒಂದು ಹಡಗಿನಲ್ಲಿ ಕೆಲವು ನಾವಿಕರು ಮೃತರಾದರು. ಜರ್ಮನಿಯವರು ತಮ್ಮ ಸಬ್‌ಮೆರೀನ್ ಹಡಗುಗಳನ್ನು ತಂದುಬಿಟ್ಟು ಬ್ರಿಟಿಷರ ಹಡಗುಗಳನ್ನು ಒಡೆಸಬೇಕೆಂದು ಪ್ರಯತ್ನಪಟ್ಟರು; ಆದರೆ ಅವು ಬರುವ ಸುಳಿವನ್ನು ತಿಳಿದು ಬ್ರಿಟಿಷ್ ಹಡಗುಗಳು ಅವುಗಳನ್ನೆಲ್ಲಾ ಹಿಂದಕ್ಕೆ ಅಟ್ಟಿಬಿಟ್ಟಿರುತ್ತವೆ. ಇದರಲ್ಲಿ ಬ್ರಿಟಿಷರ ಕಡೆ ನಷ್ಟವೇನೂ ಆಗಲಿಲ್ಲ. ಒಂದು ಹಡಗು 12 ಗಂಟೆಗಳಲ್ಲಿ 1,000 ಗುಂಡುಗಳನ್ನು ಸುರಿಸಿತು.

ಬೆಲ್ಜಿಯಮ್ ಒಳಗೂ, ಫ್ರಾನ್ಸಿನ ಎಲ್ಲೆಕಟ್ಟಿನಲ್ಲೂ ಬಹು ಭಯಂಕರವಾದ ಯುದ್ಧಗಳು ಆಗುತ್ತಿದ್ದಾಗ್ಯೂ, ಆ ಕಾಲದ ಉದ್ದಕ್ಕೂ ಜರ್ಮನಿಯವರು ಸುಮ್ಮನಿರದೆ ನುಗ್ಗಿ ಬರುತ್ತಿದ್ದಾರೆ. ಫ್ರಾನ್ಸಿನ ಪೂರ್ವಭಾಗದಲ್ಲಿ ಕಠಿಣವಾದ ಕದನ ನಡೆಯಿತು; ಇದರಲ್ಲಿ ಜರ್ಮನಿಯವರ ಕಡೆ ತುಂಬಾ ನಷ್ಟವಾಯಿತು. ಜರ್ಮನಿಯವರು ಬ್ರಿಟಿಷ್ ಸೈನ್ಯದಲ್ಲಿ 2,000 ಸೈನಿಕರನ್ನು ಕೈಸೆರೆ ಹಿಡಿದುಕೊಂಡೆವೆಂದು ಹೇಳುತ್ತಾರೆ. ಬ್ರಿಟಿಷ್ ಮತ್ತು ಬೆಲ್ಜಿಯನ್ ಸೈನಿಕರು ಜರ್ಮನಿಯವರ 2,200 ಸೈನಿಕರನ್ನೂ 8 ಫಿರಂಗಿಗಳನ್ನೂ ವಶಪಡಿಸಿಕೊಂಡಿದ್ದಾರೆ.

ಕಳೆದ ವಾರದಲ್ಲಿ ನಡೆದಿರುವ ದೀರ್ಘವಾದ ಯುದ್ಧಗಳಿಂದ ಬ್ರಿಟಿಷ್ ಮತ್ತು ಫ್ರೆಂಚರಿಗೆ ವಿಶೇಷವಾಗಿಲ್ಲದಿದ್ದರೂ ಸ್ವಲ್ಪಮಟ್ಟಿಗೆ ಅನುಕೂಲ ಉಂಟಾಗಿ ಕೆಲವು ಭಾಗಗಳಲ್ಲಿ ನುಗ್ಗಿ ಹೋಗಿದ್ದಾರೆ. ಅವರ ಸೈನ್ಯದಲ್ಲಿ ಉತ್ಸಾಹವು ಸ್ವಲ್ಪವೂ ಕಡಮೆಯಾಗಿಲ್ಲ; ಅವರು ಬೇಗನೆ ಮುಂದರಿಸಿಕೊಂಡುಹೋಗುವ ನಿರೀಕ್ಷೆಯಲ್ಲಿದ್ದಾರೆ.

ಜರ್ಮನಿಯ ಸೈನಿಕರಲ್ಲಿ ದೊರಕಿದ ಕಾಗದಗಳಿಂದ ಅವರ ಕಡೆ ಬಹಳ ವಿಶೇಷವಾಗಿ ನಷ್ಟವಾಗಿದೆ ಎಂದು ಗೊತ್ತಾಗುತ್ತದೆ. ಒಬ್ಬ ಹುದ್ದೆದಾರನು 60 ಮಂದಿ ಹುದ್ದೆದಾರರುಳ್ಳ ಒಂದು ರೆಜಿಮೆಂಟಿನ ಸೈನ್ಯವು ಯುದ್ಧಕ್ಕೆ ಹೋದದ್ದರಲ್ಲಿ ಐದು ಮಂದಿ ಮಾತ್ರ ಬದುಕಿ ಬಂದರೆಂದು ತಿಳಿಸುತ್ತಾನೆ. ಕೊಲೆಯಾದವರೂ ಗಾಯಪಟ್ಟವರೂ 7,000 ಮಂದಿ ಎಂದೂ, ಸೈನಿಕರಲ್ಲಿ ಕೆಲವರು ಮಾತ್ರವೇ ಉಳಿದರೆಂದೂ ಹೇಳಿದ್ದಾನೆ. ಇಷ್ಟು ಹುದ್ದೆದಾರರ ಕಾಗದದಿಂದ ಸೈನ್ಯವು ಅಪೂರ್ವವಾದ ಪರಾಕ್ರಮದಿಂದ ಯುದ್ಧ ಮಾಡಿದಾಗ್ಯೂ ಸ್ವಲ್ಪವೂ ಪ್ರಯೋಜನವಾಗಿ ಇಲ್ಲವೆಂದು ತಿಳಿಯುತ್ತದೆ. 1,200 ಸೈನಿಕರಿದ್ದ ಒಂದು ಬಟ್ಯಾಲಿಯನ್ (ಪಟಾಲಂ) ಜರ್ಮನಿಯವರಲ್ಲಿ 194 ಮಂದಿ ಮಾತ್ರ ಉಳಿದುಕೊಂಡಿದ್ದಾರೆಂದು ಹೇಳಲಾಗಿದೆ. ಕೈಸೆರೆ ಸಿಕ್ಕಿರುವ ಜರ್ಮನಿಯವರು ಅವರ ಕಡೆ ಸೈನ್ಯದಲ್ಲಿ ಆಹಾರ ಪದಾರ್ಥಗಳು ದೊರಕುವುದು ಪ್ರಯಾಸವಾಗಿದೆ ಎಂದು ಹೇಳುತ್ತಾರೆ.

ಫ್ರೆಂಚರೂ ಬೆಲ್ಜಿಯನ್ನರೂ ಮಹಾ ಪೌರುಷವಂತರು. ಭೂಯುದ್ಧವನ್ನು ಮಾಡುತ್ತಿದ್ದ ಕೆಲವು ಫ್ರೆಂಚ್ ನಾವಿಕ ಸೈನ್ಯದವರು ಜರ್ಮನಿಯವರಿಗೆ ಕಾಣಬರದಂತೆ ಮಂಜಿನ ಮರೆಯಲ್ಲೇ ತಪ್ಪಿಸಿಕೊಂಡು ಜರ್ಮನಿಯವರಿದ್ದ ಕಂದಕದ ಸಮೀಪಕ್ಕೆ ಹೋಗಿ ಅಲ್ಲಿ ಸಂಗೀನುಗಳನ್ನು ತೋರಿಸುತ್ತಾ ಜರ್ಮನಿಯವರ ಮೇಲೆ ನುಗ್ಗಿಬಿಟ್ಟರು. ಆ ಕಂದಕದಲ್ಲಿದ್ದ ಜರ್ಮನಿಯವರೆಲ್ಲಾ ಕೊಲೆಯಾದರು, ಇಲ್ಲವೇ ಕೈಸೆರೆ ಹಿಡಿಯಲ್ಪಟ್ಟರು. ಕೈಸೆರೆ ಸಿಕ್ಕಿದವರು 400 ಮಂದಿ ಎಂತಲೂ, ಫ್ರೆಂಚರ ಕಡೆ 10 ಮಂದಿ ಕೊಲೆಯಾಗಿ 100 ಜನ ಗಾಯಪಟ್ಟರೆಂದೂ ತಿಳಿಯುತ್ತದೆ.

ಈ ವಾರದಲ್ಲಿ ಜರ್ಮನಿಯವರ ಕಡೆ ಅಪಾರ ನಷ್ಟ ಸಂಭವಿಸಿದೆ. ಜರ್ಮನಿ ಸರ್ವಸೇನಾಪತಿಯಾದ ಜನರಲ್ ವಾನ್ ಮೋಲ್ಟ್ಕೆ ಯವರ ಕುಮಾರನು ಯುದ್ಧಭೂಮಿಯಲ್ಲಿ ಮಡಿದುಹೋದನು; ಹೆಸ್ಸಿ ರಾಜಕುಮಾರನಿಗೆ ಗಾಯವಾಯಿತು.

ಹಿಂದುಸ್ಥಾನದಿಂದ ಹೋಗಿರುವ ಸೈನ್ಯಗಳು ಯುದ್ಧಕಾರ್ಯಗಳಲ್ಲಿ ಬಿರದಿರುವವು; ಯಾವ ಸ್ಥಳದಲ್ಲಿ ಎನ್ನುವುದು ಮಾತ್ರ ಪ್ರಕಟವಾಗಲಿಲ್ಲ. ಇವರು ಬಹಳ ಪರಾಕ್ರಮದಿಂದ ಕಾದಾಡಿದರೆಂದು ಹೇಳಲಾಗಿದೆ. ಹಿಂದುಸ್ಥಾನದ ಸವಾರ್ ಸೈನ್ಯದವರು ಜರ್ಮನಿಯವರ ಕಾಲ್ಬಲದ ಮೇಲೆ ಬಹು ಪರಾಕ್ರಮದಿಂದ ನುಗ್ಗಿಹೋಗಿ ಅವರನ್ನು ಚದರಿಸಿದ್ದಲ್ಲದೆ ಅವರನ್ನು ಒಂದು ಮೈಲಿ ದೂರದ ತನಕ ಬೆನ್ನುಹತ್ತಿ ಓಡಿಸಿಕೊಂಡು ಹೋದರೆಂದು ಈಚೆಗೆ ತಂತೀವರ್ತಮಾನ ಬಂದಿದೆ.

ಈ ಯುದ್ಧದ ಲೈನಿನ ದಕ್ಷಿಣ ಭಾಗದ ಅಂತ್ಯದಲ್ಲಿರುವ ಆಲ್ಸೇಸ್ ಎಂಬ ಅಧಿಪತ್ಯದ ಒಂದು ಭಾಗವು ಇನ್ನೂ ಫ್ರೆಂಚರ ಸ್ವಾಧೀನದಲ್ಲೇ ಇದೆ.

ಯುದ್ಧದ ಖರ್ಚು ಅಪಾರವಾಗಿರುತ್ತದೆ. ಕಳೆದ ಹತ್ತು ವಾರಗಳಲ್ಲಿ ಬ್ರಿಟಿಷ್ ಗವರ್ನ್‌ಮೆಂಟಿನವರು ವಾರ ಒಂದಕ್ಕೆ 65 ಲಕ್ಷ ಪೌಂಡುಗಳ ಪ್ರಕಾರ ಖರ್ಚುಮಾಡಿದರು. ಕಳೆದ ವಾರ ಇನ್ನೂ ಹೊಸ ಸೈನ್ಯಗಳು ಯುದ್ಧಭೂಮಿಗೆ ಕಳುಹಲ್ಪಟ್ಟರಿಂದ 82½ ಲಕ್ಷ ಪೌಂಡು ಖರ್ಚಾಗಿರುವುದು. ಅಂತು ಈ ಯುದ್ಧದಲ್ಲಿ ದಿನ ಒಂದಕ್ಕೆ ಒಟ್ಟು 9 ಕೋಟಿ ಪೌಂಡಿನಂತೆ ದ್ರವ್ಯ ಖರ್ಚಾಗುವುದೆಂದು ತಿಳಿಯುತ್ತದೆ.

ಬೆಲ್ಜಿಯನ್ನರು ನಾನಾ ಕಡೆಗಳಲ್ಲಿ ಚದರಿ ಹೋಗಿದ್ದಾರೆ. ಇವರನ್ನು ಹಾಲೆಂಡ್, ಇಂಗ್ಲೆಂಡ್, ಫ್ರಾನ್ಸ್ ರಾಜ್ಯಗಳ ಪ್ರಜೆಗಳು ಸಂರಕ್ಷಣೆ ಮಾಡುತ್ತಿರುವರು. ಇಂಗ್ಲೆಂಡಿನಲ್ಲಿ ಅನೇಕ ಪಟ್ಟಣಗಳ ಪ್ರಜೆಗಳು ಅವರನ್ನು ತಮ್ಮ ಊರಿಗೆ ಬರಮಾಡಿಕೊಂಡು ಸತ್ಕಾರ ಮಾಡುತ್ತಿದ್ದಾರೆ. ಕೆಲವು ಸ್ಥಳಗಳವರು ಇನ್ನೂ ಹೆಚ್ಚುಮಂದಿ ಬೆಲ್ಜಿಯನ್ನರು ಬಂದರೂ ಆರೈಕೆ ಮಾಡಬಲ್ಲೆವೆಂದು ಉತ್ಸಾಹಪಡುವರು. ಬೆಲ್ಜಿಯನ್ನರ ಒಂದು ವರ್ತಮಾನ ಪತ್ರಿಕೆಯು ಈಗ ಲಂಡನ್ ಪಟ್ಟಣದಲ್ಲಿ ಮುದ್ರಿಸಲ್ಪಟ್ಟು ಪ್ರಕಟವಾಗುತ್ತಿದೆ. ಬೆಲ್ಜಿಯನ್ನರನ್ನು ವಾಪಸು ಆಂಟ್ವರ್ಪ್ ಪಟ್ಟಣಕ್ಕೆ ಕಳುಹಿಸಿಕೊಳ್ಳಬೇಕೆಂದು ಜರ್ಮನಿಯವರು ಎಷ್ಟೋ ಪ್ರಯತ್ನಪಟ್ಟರು; ಇದು ಸಾರ್ಥಕವಾಗದೆ ಇದೆ.

ರಷ್ಯಾ, ಜರ್ಮನಿ, ಆಸ್ಟ್ರಿಯಾ.

ಪೂರ್ವ ದಿಗ್ಭಾಗದಲ್ಲಿ ಯುದ್ಧ ನಡೆಯುತ್ತಿರುವ ಲೈನು ಸುಮಾರು 250 ಮೈಲಿ ಉದ್ದವಾಗಿದೆ. ಅಲ್ಲಿ ಜರ್ಮನಿಯವರೂ ಆಸ್ಟ್ರಿಯಾದವರೂ ಒಟ್ಟುಕೂಡಿ ಸೇರಿಕೊಂಡಿರುವರು. ರಷ್ಯಾದವರು ಜರ್ಮನಿಯವರ ಮೇಲೆ ವಾರ್ಸಾ ಪಟ್ಟಣದ ಬಳಿ ಯುದ್ಧಮಾಡಿ ಸೋಲಿಸಿಬಿಟ್ಟರೆಂದು ಕಳೆದ ವಾರ ತಿಳಿಸಿದೆವು. ಅಲ್ಲಿ ರಷ್ಯಾದವರು ಲೆಕ್ಕವಿಲ್ಲದಷ್ಟು ಜರ್ಮನಿಯವರನ್ನು ಕೈಸೆರೆ ಹಿಡಿದುಕೊಂಡರು. ಜರ್ಮನಿಯವರು ಗೆದ್ದು ಕೋಟೆಕೊತ್ತಲಗಳನ್ನು ಕಟ್ಟಿ ಬಲಪಡಿಸಿಕೊಂಡಿದ್ದ ಸ್ಥಾನಗಳನ್ನು ಬಿಟ್ಟು ಹಿಮ್ಮೆಟ್ಟಿಹೋಗಬೇಕಾಯಿತು. ಅಕ್ಟೋಬರ್ ತಾ. 15 ರೊಳಗೆ ಅವರು ವಾರ್ಸಾ ನಗರವನ್ನು ಗೆದ್ದು ಸ್ವಾಧೀನಪಡಿಸಿಕೊಳ್ಳಬೇಕೆಂದು ಸಂಕಲ್ಪಮಾಡಿಕೊಂಡಿದ್ದರು. ಈಗ ನೋಡಿದರೆ ಅವರು ಆ ಬಳಿಯಿಂದ ಸೋತು ಹಿಂದಕ್ಕೆ ಓಡಿಹೋಗಬೇಕಾಗಿ ಬಂದಿದೆ. ಇಷ್ಟೇ ಅಲ್ಲ, ರಷ್ಯಾದವರು ಸುಮ್ಮನಿರದೆ ಅವರ ಬೆನ್ನುಹತ್ತಿ ಓಡಿಸಿಕೊಂಡು ಹೋಗುತ್ತಾ, ಅವರ ಮೇಲೆ ನುಗ್ಗಿ ಯುದ್ಧಮಾಡುತ್ತಾ ಬಂದಿದ್ದಾರೆ. ವಾರ್ಸಾ ಪಟ್ಟಣದ ಪ್ರಜೆಗಳು ಫಿರಂಗಿಗಳ ಪೆಟ್ಟನ್ನು ಕೇಳಿ ಗಾಬರಿಬಿದ್ದು ಕಳವಳಪಡುತ್ತಿದ್ದರು. ಈಗ ಜರ್ಮನಿಯವರ ಭೀತಿ ನಿವೃತ್ತಿಯಾಗಿ ಅವರೆಲ್ಲಾ ನೆಮ್ಮದಿಯಾಗಿಯೂ, ತಮ್ಮ ತಮ್ಮ ಕೆಲಸಗಳನ್ನು ಮಾಡಿಕೊಳ್ಳುತ್ತಲೂ ಇದ್ದಾರೆ.

ಜರ್ಮನಿಯ ವಿಮಾನ ಯಂತ್ರಗಳು ವಾರ್ಸಾ ಪಟ್ಟಣದ ಮೇಲೆ ಹೋಗಿ ಸಿಡಿಮದ್ದಿನ ಗುಂಡುಗಳನ್ನು ಪಟ್ಟಣದೊಳಕ್ಕೆ ಹಾಕಿದವು. ಎರಡು ದಿನಗಳಲ್ಲಿ 108 ಮಂದಿಗೆ ಗಾಯಗಳಾದವು. ಇವರಲ್ಲಿ 9 ಮಂದಿ ಮಾತ್ರ ಸೈನಿಕರೆಂದೂ, ಉಳಿದವರ ಪೈಕಿ ಮಕ್ಕಳೇ ಬಹಳ ಮಂದಿ ಎಂದೂ ತಿಳಿದು ಬಂದಿದೆ.

ಜರ್ಮನಿಯವರು ವಾರ್ಸಾ ಪಟ್ಟಣವನ್ನು ಗೆದ್ದು ಆಕ್ರಮಿಸಿಕೊಂಡೆವೆಂದು ಹೇಳುತ್ತಾರೆ. ಆದರೆ ರಷ್ಯಾದವರ ಕಡೆಯಿಂದ ಬಂದಿರುವ ತಂತೀವರ್ತಮಾನಗಳನ್ನು ನೋಡಿದರೆ ರಷ್ಯಾದವರು ಜರ್ಮನಿಯವರನ್ನು ಆ ಪಟ್ಟಣದಿಂದ ಪಶ್ಚಿಮಕ್ಕೆ 30 ಮೈಲಿ ದೂರ ಓಡಿಸಿಬಿಟ್ಟಿದ್ದಾರೆಂದೂ, ಅಲ್ಲಿಂದಲೂ ಹಿಂದಕ್ಕೆ ಹೊಡೆಯುತ್ತಲೇ ಬಂದಿದ್ದಾರೆಂದೂ ತಿಳಿಯುತ್ತದೆ.

ಈ ಯುದ್ಧದ ಲೈನಿನಲ್ಲಿ ದಕ್ಷಿಣ ಕಡೆ ಆಸ್ಟ್ರಿಯಾದಲ್ಲಿ ಕಠಿಣವಾದ ಕದನಗಳು ನಡೆದವು. ಹತ್ತು ದಿನಗಳಿಂದ ಘೋರವಾದ ಯುದ್ಧಗಳು ನಡೆಯುತ್ತಿವೆ. ಇಲ್ಲಿ ಯುದ್ಧ ಕೊಡುವವರು ವಿಶೇಷವಾಗಿ ಆಸ್ಟ್ರಿಯಾದವರು. ಇವರಲ್ಲಿ ಬಹಳ ಸೈನಿಕರನ್ನು ರಷ್ಯಾದವರು ನಾಶಮಾಡಿರುತ್ತಾರೆ. ಒಂದು ಸ್ಥಳದಲ್ಲಿ ಆಸ್ಟ್ರಿಯಾದ ಒಂದು ಬಟ್ಯಾಲಿಯನ್ ಸೈನ್ಯಕ್ಕೆ ಸೈನ್ಯವೇ ಶತ್ರುಗಳಿಗೆ ಶರಣಾಗತವಾಯಿತು. ಇನ್ನೊಂದು ಸ್ಥಾನದಲ್ಲಿ ರಷ್ಯಾದವರು 2,000 ಆಸ್ಟ್ರಿಯಾದವರನ್ನು ಕೈಸೆರೆ ಹಿಡಿದುಕೊಂಡರು.

ಪೂರ್ವ ಪ್ರಷ್ಯಾದೊಳಗೆ ಅಂದರೆ ಯುದ್ಧದ ಸಾಲಿನ ಉತ್ತರ ಭಾಗದಲ್ಲಿ ಯುದ್ಧಕಾರ್ಯಗಳೇನೂ ವಿಶೇಷ ನಡೆದಿಲ್ಲ.

ಇನ್ನು ಕೆಲವು ದಿನಗಳಲ್ಲೇ ರಷ್ಯಾ ಸೈನ್ಯಗಳು ಬಹಳ ಮಟ್ಟಿಗೆ ಮುಂದರಿಸಿ ನುಗ್ಗಿ ಹೋಗಬೇಕು. ಆದರೆ ಅದಕ್ಕಿಂತ ಮುಂಚೆ ಅವರು ಕೆಲವು ಕಡೆಗಳಲ್ಲಿ ಅತ್ಯಂತ ಘೋರವಾದ ಕದನಗಳನ್ನು ನಡೆಸಿ ಜಯಪ್ರದಹೊಂದಬೇಕಾಗುವುದು.

ಚೀಣಾದಲ್ಲಿ.

ಜಪಾನ್‌ನವರಿಗೂ ಜರ್ಮನಿಯವರಿಗೂ ವಿಶೇಷ ಕದನವೇನೂ ಆದಂತೆ ಕಂಡುಬರಲಿಲ್ಲ. ಜರ್ಮನಿಯವರ ಡಿಸ್ಟ್ರಾಯರ್ ಎಂಬ ಒಂದು ಹಡಗು ತನ್ನ ರೇವಿನಿಂದ ಹೇಗೋ ತಪ್ಪಿಸಿಕೊಂಡು ಹೊರಸಮುದ್ರಕ್ಕೆ ಹೊರಟುಹೋಯಿತು. ಆದರೆ ಅದು ಅಲ್ಲಿಂದ ಕೆಳಭಾಗದಲ್ಲಿ 60 ಮೈಲಿ ದೂರ ಹೋಗುವಷ್ಟರೊಳಗೇ ಸಮುದ್ರತೀರದ ನೆಲದ ಮೇಲೆ ಹರಿದು ಸಿಂತುಹೋಗಿದೆ.

ಜಪಾನ್‌ನವರ ಹಡಗಿನ ಸೈನ್ಯವು ಪೆಸಿಫಿಕ್ ಸಾಗರದಲ್ಲಿ ಸಂಚಾರಮಾಡಿ ಜರ್ಮನಿಯವರಿಗೆ ಸೇರಿದಂಥಾ ಅನೇಕ ದ್ವೀಪಗಳನ್ನು ಸ್ವಾಧೀನಪಡಿಸಿಕೊಂಡಿತು. ಈ ಸುದ್ದಿಯನ್ನು ಕೇಳಿ ಬ್ರಿಟಿಷ್ ನಾವೆಗಳ ಇಲಾಖಾ ಮಂತ್ರಿಯಾದ ಮಿ॥ ವಿನ್‌ಸ್ಟನ್ ಚರ್ಚಿಲ್‌ರವರು ತುಂಬಾ ಸಂತೋಷಪಟ್ಟು, ಜಪಾನ್ ಹಡಗಿನ ಸೈನ್ಯವನ್ನು ವಂದಿಸಿದರು. ಅದಕ್ಕೆ ಪ್ರತಿಯಾಗಿ ಜಪಾನ್ ಮಂತ್ರಿಯವರು ಜವಾಬು ಕೊಟ್ಟಿರುತ್ತಾರೆ. ಬ್ರಿಟಿಷ್ ಮತ್ತು ಜಪಾನ್ ಹಡಗಿನ ಸೈನ್ಯಗಳ ಉದ್ದೇಶವು ಶತ್ರುವನ್ನು ಸೋಲಿಸಿ ಅಡಗಿಸುವ ಭಾಗದಲ್ಲಿ ಒಂದೇ ಆಗಿರುವುದರಿಂದ ಮೇಲ್ಕಂಡ ವಿಚಾರವು ತುಂಬಾ ಸಂತೋಷಪ್ರದವಾಗಿದೆ.

ಆಫ್ರಿಕಾದಲ್ಲಿ.

ದಕ್ಷಿಣ ಆಫ್ರಿಕಾದಲ್ಲಿ ಕಾಣಿಸಿಕೊಂಡ ಅಲ್ಪಮಾತ್ರವಾದ ರಾಜದ್ರೋಹವು ಅಡಗಿಸಲ್ಪಟ್ಟಿತೆಂದೇ ಹೇಳಬಹುದು. ಗವರ್ನ್‌ಮೆಂಟಿನವರು 3 ಮಂದಿ ಹುದ್ದೆದಾರರನ್ನೂ 70 ಮಂದಿ ಸೈನಿಕರನ್ನೂ ದಸ್ತಗಿರಿಮಾಡಿದರು; ದಂಗೆಕೋರರಾಗಿದ್ದ 4 ಮಂದಿ ಹುದ್ದೆದಾರರೂ 40 ಜನ ಸಿಪಾಯಿಗಳೂ ಬಂದು ಶರಣಾಗತರಾದರು. ಈಗ ಗವರ್ನ್‌ಮೆಂಟಿನವರು ಜರ್ಮನಿಗೆ ಸೇರಿದ ದಕ್ಷಿಣ ಪೂರ್ವ ಆಫ್ರಿಕಾದೊಳಕ್ಕೆ ದಂಡುಕಟ್ಟಿ ಕಳುಹಿಸುವುದಕ್ಕೆ ಸನ್ನಾಹ ಮಾಡುತ್ತಿದ್ದಾರೆ. ಈಚೆಗೆ ಬಂದಿರುವ ತಂತೀ ವರ್ತಮಾನದಿಂದ ದಂಗೆಯೆದ್ದ ಕರ್ನಲ್ ಮೆರಿಟ್ಜನು ಬ್ರಿಟಿಷ್ ಸೈನ್ಯದ ಮೇಲೆ ನುಗ್ಗಿ ಬಂದು ಕದನ ಮಾಡಿದನೆಂದೂ, ಅವನು ಸೋತುಹೋದನೆಂದೂ, ಗಾಯಪಟ್ಟು ಹಿಮ್ಮೆಟ್ಟಿ ಜರ್ಮನಿಯ ಸೀಮೆಯೊಳಕ್ಕೆ ಹೋಗಿರುತ್ತಾನೆಂದೂ ತಿಳಿದುಬರುತ್ತದೆ.

ಪಶ್ಚಿಮ ಆಫ್ರಿಕಾದಲ್ಲಿ ಫ್ರೆಂಚರು ಕ್ಯಾಮರೂನ್ಸ್‌ನಲ್ಲಿ ಕೆಲವು ತೀರಪಟ್ಟಣಗಳಿಗೆ ಫಿರಂಗಿಗಳನ್ನು ಹೊಡೆದಿರುವರು.

ಇತ್ಯಾದರೂ ವರ್ತಮಾನ ಬಂದಿರುವುದು ಬಹಳ ಸ್ವಲ್ಪ.

ಸಮುದ್ರದ ಮೇಲೆ.

ಜರ್ಮನಿಯವರ ಒಂಭತ್ತು ಯುದ್ಧದ ಹಡಗುಗಳು ಇನ್ನೂ ಸಿಕ್ಕದೆ ಸಾಗರಗಳಲ್ಲಿ ಅಲ್ಲಲ್ಲಿ ತಿರುಗಾಡುತ್ತಿವೆ ಎಂದು ಬ್ರಿಟಿಷ್ ಗವರ್ನ್‌ಮೆಂಟಿನವರು ಈಗ ತಿಳಿಸಿರುತ್ತಾರೆ. ಅವುಗಳನ್ನು ಹಿಡಿಯುವುದಕ್ಕೋಸ್ಕರ ಬ್ರಿಟಿಷರು 70 ಯುದ್ಧದ ಹಡಗುಗಳನ್ನು ಕಳುಹಿಸಿ ಹುಡುಕಿಸುತ್ತಿದ್ದಾರೆ. ಈ ಮಧ್ಯೆ ಅವು ಬ್ರಿಟಿಷ್ ಹಡಗುಗಳ ಸಂಚಾರಕ್ಕೆ ಸ್ವಲ್ಪ ಮಟ್ಟಿಗೆ ಅಡ್ಡಿಮಾಡಿ ನಷ್ಟಪಡಿಸಿರುತ್ತವೆ.

ಯೆಮ್‌ಡೆನ್ ಎಂಬ ಜರ್ಮನಿಯ ಯುದ್ಧದ ಜಹಜು ಮತ್ತೆ ಹಿಂದುಸ್ಥಾನದ ಪಶ್ಚಿಮದಲ್ಲಿ ಅರಬ್ಬೀ ಕಡಲಿನೊಳಗೆ ಕೆಡುಕನ್ನುಂಟುಮಾಡಿದೆ. ಅದು ಬ್ರಿಟಿಷರ ಏಳು ಹಡಗುಗಳನ್ನು ಹಿಡಿದು ಮುಳುಗಿಸಿಬಿಟ್ಟಿತು. ಇದರಿಂದ ವರ್ತಕರ ವ್ಯಾಪಾರ ಸಾಮಾನುಗಳು ಸುಮಾರು 3,00,00,000 ರೂಪಾಯಿಯಷ್ಟು ಹಾಳಾದವು. ಕಾರಲ್ಸ್‌ರೂಹೆ ಎಂಬ ಇನ್ನೊಂದು ಯುದ್ಧದ ಜಹಜು ಅಟ್ಲಾಂಟಿಕ್ ಮಹಾಸಾಗರದಲ್ಲಿ ಬ್ರಿಟಿಷರ 13 ಜಹಜುಗಳನ್ನು ಮುಳುಗಿಸಿರುತ್ತದೆ. ಇವುಗಳ ಲೆಕ್ಕ ಅಷ್ಟೇನೂ ದೊಡ್ಡದಾಗಿರಲಿಲ್ಲ.

4,000 ಬ್ರಿಟಿಷ್ ಹಡಗುಗಳು ಸಂಚಾರದಲ್ಲಿರುತ್ತವೆಂದೂ, ಈ ಪೈಕಿ 37 ಮಾತ್ರ ಶತ್ರುಗಳಿಂದ ಮುಳುಗಿಸಲ್ಪಟ್ಟವೆಂದೂ, ಜರ್ಮನಿಯವರ ವ್ಯಾಪಾರದ ಹಡಗು ಒಂದಾದರೂ ಯಾವ ಸಮುದ್ರದ ಮೇಲೂ ಸಂಚರಿಸದಂತೆ ತಡೆಯಲ್ಪಟ್ಟಿದೆಯೆಂದೂ ಬ್ರಿಟಿಷ್ ಗವರ್ನ್‌ಮೆಂಟಿನವರು ಪ್ರಕಟಿಸಿದ್ದಾರೆ.

ಆದಾಗ್ಯೂ ಯೆಮ್‌ಡೆನ್ ಎಂಬ ಶತ್ರುವಿನ ಜಹಜನ್ನು ಹಿಡಿದು ಅದರಿಂದುಂಟಾಗುವ ನಷ್ಟವನ್ನು ತಪ್ಪಿಸಬೇಕೆಂದು ಎಲ್ಲರೂ ಅಪೇಕ್ಷಿಸುತ್ತಿದ್ದಾರೆ. ಬ್ರಿಟಿಷ್ ಗವರ್ನ್‌ಮೆಂಟಿನವರು ಸಾಹಸಪಟ್ಟು ಈ ಜಹಜಿನ ಆಟವನ್ನು ನಿಲ್ಲಿಸುವರೆಂದು ನಂಬಿ ನಿರೀಕ್ಷಿಸುವೆವು.

ಬ್ರಿಟಿಷರ ಡಿಸ್ಟ್ರಾಯರೆಂಬ ಒಂದು ಹಡಗು ಹಾಲೆಂಡಿನ ತೀರದಲ್ಲಿ ಜರ್ಮನಿಯವರ ಒಂದು ಸಬ್‌ಮೆರೀನ್ ಎಂಬ ಹಡಗಿನ ಮೇಲೆ ನುಗ್ಗಿಹೋಗಿ ಅದನ್ನು ಒಡೆದು ಮುಳುಗಿಸಿರುತ್ತದೆ.

ಉತ್ತರ ಕಡಲಿನಲ್ಲಿ ಬ್ರಿಟಿಷರ ಒಂದು ಸಬ್‌ಮೆರೀನ್ ಹಡಗು ಹಾಳಾಗಿರುವಂತೆ ಕಾಣುತ್ತದೆ. ಅದು ಸ್ಥಳಕ್ಕೆ ಬಾರದೆ ಬಹಳ ತಾಮಸವಾಗಿದೆ. ಇದನ್ನು ಜರ್ಮನಿಯವರು ಹಿಡಿದು ಮುಳುಗಿಸಿದರೆನ್ನುವುದೂ ತಿಳಿಯಲಿಲ್ಲ. ಆದರೂ ಅವರು ಅದನ್ನು ಮುಳುಗಿಸಿರಬಹುದೆಂದೇ ತೋರುತ್ತದೆ. ಉತ್ತರ ಕಡಲಿನಲ್ಲಿ ಜರ್ಮನಿಯವರು ಹಾಕಿರುವ ಮೈನ್ ಎಂಬ ಸಿಡಿಮದ್ದಿನ ಗುಂಡುಗಳಿಗೆ ಕೆಲವು ವ್ಯಾಪಾರಸ್ಥರ ಹಡಗುಗಳು ಒಡೆದು ಮುಳುಗಿಹೋದವು. ಜರ್ಮನಿಯ ಒಂದು ಸಬ್‌ಮೆರೀನ್ ಹಡಗು ನಾರ್ವೆ ರಾಜ್ಯದ ಸಮುದ್ರ ತೀರದಿಂದ ಸ್ವಲ್ಪ ದೂರದಲ್ಲಿ ಒಂದು ಬ್ರಿಟಿಷ್ ಜಹಜನ್ನು ಮುಳುಗಿಸಿರುತ್ತದೆ. ಒಬ್ಬ ಜರ್ಮನಿ ಹುದ್ದೆದಾರನು ಬ್ರಿಟಿಷ್ ಬಾವುಟವನ್ನು ತನ್ನ ಕಾಲಿನಿಂದ ತುಳಿದಿರುತ್ತಾನೆ.

ಇತರ ವಿಷಯಗಳು.

ಬ್ರಿಟಿಷರ ಒಂದು ವಿಮಾನಯಂತ್ರವು ಪ್ರಷ್ಯಾ ದೇಶದಲ್ಲಿರುವ ಕೊಲೋನ್ ಪಟ್ಟಣದ ಮೇಲೆ ಹೋಗಿ ಅಲ್ಲಿನ ರೈಲ್ವೆ ಸ್ಟೇಷನ್‌ಗೆ ಒಂದು ಸಿಡಿಮದ್ದಿನ ಗುಂಡನ್ನು ಹಾಕಿತು. ಜರ್ಮನಿಯವರಿಗೆ ಈ ಗುಂಡುಗಳನ್ನು ಕಂಡರಾಗದು.

ಪೋರ್ಚುಗಲ್ ರಾಜವು ಬ್ರಿಟಿಷರಿಗೆ ಸಹಾಯಮಾಡಬೇಕೆಂದು ಅಪೇಕ್ಷೆಪಡುತ್ತಿದೆ; ಆದರೆ ಆ ರಾಜ್ಯದಲ್ಲಿ ಒಳದೇಶದ ಗಲಭೆಗಳೂ ಕಷ್ಟಗಳೂ ಇನ್ನೂ ಸಮಾಧಾನೆಯಾಗಲಿಲ್ಲ.

ಒಂದು ಸಬ್‌ಮೆರೀನ್ ಹಡಗು ಡೆನ್‌ಮಾರ್ಕಿನ ಸಮುದ್ರತೀರದಲ್ಲಿ ಡೆನ್‌ಮಾರ್ಕಿನ ಒಂದು ಸಬ್‌ಮೆರೀನನ್ನು ಮುಳುಗಿಸಬೇಕೆಂದು ನುಗ್ಗಿಹೋಯಿತು. ಡೆನ್‌ಮಾರ್ಕಿನವರು ಇದರ ವಿಷಯದಲ್ಲಿ ಪ್ರತಿಭಟಿಸಿ ಆಕ್ಷೇಪಣೆಮಾಡಿದ್ದಾರೆ. ಆದರೆ ಮೇಲೆ ಬಿದ್ದ ಆ ಸಬ್‌ಮೆರೀನ್ ಯಾವ ರಾಜ್ಯಕ್ಕೆ ಸೇರಿದ್ದೋ ತಿಳಿಯಲಿಲ್ಲ.

ಸೂಯೆಜ್ ಕಡಲು ಕಾಲುವೆಯ ಬಾಗಿಲಲ್ಲಿ ಜರ್ಮನಿಯ ಮತ್ತು ಆಸ್ಟ್ರಿಯಾದ ಕೆಲವು ಜಹಜುಗಳು ಲಂಗರುಹಾಕಿಕೊಂಡಿವೆ. ಅಲ್ಲಿಂದ ಹೊರಕ್ಕೆ ಹೊರಟರೆ ಶತ್ರುಗಳು ಹಿಡಿದುಬಿಡುತ್ತಾರೆಂಬುವುದೇ ಅವುಗಳಿಗೆ ಉಂಟಾಗಿರುವ ಹೆದರಿಕೆ. ಈಜಿಪ್ಟ್ ಗವರ್ನ್‌ಮೆಂಟಿನವರು ಆ ಜಹಜುಗಳು ಅಲ್ಲಿ ಬಹಳ ಕಾಲ ಹೀಗೆ ಇರುವುದರಿಂದ ವ್ಯಾಪಾರದ ಹಡಗುಗಳ ಸಂಚಾರಕ್ಕೆ ಅಡ್ಡಿಯಾಗಿದೆ ಎಂದೂ, ಅವನ್ನೆಲ್ಲಾ ಬೇಗನೆ ಅಲ್ಲಿಂದ ತೆಗೆದುಬಿಡಬೇಕೆಂದೂ ತಿಳಿಸಿದ್ದಾರೆ.

ನ್ಯೂಫೌಂಡ್‌ಲೆಂಡ್ ಎಂಬ ಬ್ರಿಟಿಷ್ ಸ್ವಾಸ್ಥ್ಯದವರು ಕಳುಹಿಸಿಕೊಟ್ಟ ಸೈನ್ಯಗಳು ಕಳೆದ ವಾರ ಇಂಗ್ಲೆಂಡಿಗೆ ಹೋಗಿ ತಲುಪಿದವು.

ಯೂರೋಪಿನ ಯುದ್ಧದ ದೆಸೆಯಿಂದ ಅಮೇರಿಕದ ಸಂಯುಕ್ತ ಸಂಸ್ಥಾನಗಳ ವ್ಯಾಪಾರಕ್ಕೆ ಅಡಚಣೆಯುಂಟಾಗಿ ರಾಜಾದಾಯವು ಕಡಮೆಯಾಯಿತು. ಈಗ ಆ ಸರ್ಕಾರದವರು 30,00,00,000 ರೂಪಾಯನ್ನು ಬೇರೆ ರೀತಿಯಲ್ಲಿ ಉತ್ಪತ್ತಿಮಾಡಿಕೊಳ್ಳಬೇಕಾಗಿದೆ.

ಟರ್ಕಿಯವರು ಜರ್ಮನಿಯವರಿಂದ ಕ್ರಯಕ್ಕೆ ಕೊಂಡುಕೊಂಡ ಜಹಜುಗಳಲ್ಲಿ ಜರ್ಮನಿ ಹುದ್ದೆದಾರರನ್ನೇ ಇನ್ನೂ ನೇಮಿಸಿಕೊಂಡಿದ್ದಾರೆ. ಅವರನ್ನು ಕೆಲಸದಿಂದ ವಜಾ ಮಾಡಬೇಕೆಂದು ತಿಳಿದರೂ ಅವರು ಆ ರೀತಿ ಮಾಡಿ ಇಲ್ಲ. ಇದರಿಂದ ಕಷ್ಟ ಸಂಭವಿಸಬಹುದೆಂದು ಕಾಣುತ್ತದೆ. ಆದರೆ ಟರ್ಕಿಯವರು ಈ ಯುದ್ಧದಲ್ಲಿ ಯಾವ ಕಡೆಗೂ ಸೇರದೆ ತಟಸ್ಥರಾಗಿದ್ದುಕೊಂಡೇ ಬರುತ್ತೇವೆಂದು ಹೇಳುತ್ತಿದ್ದಾರೆ.

ಕೆನಡಾ ಎಂಬ ಬ್ರಿಟಿಷ್ ಸ್ವಾಸ್ಥ್ಯಕ್ಕೆ ಸೇರಿದ ಮಾಂಟ್ರಿಯಲ್ ಪಟ್ಟಣದೊಳಗೆ ರಷ್ಯಾದವರು ವಾಸಮಾಡುತ್ತಿದ್ದ ಕೆಲವು ಮನೆಗಳ ಮುಂದೆ ಆಸ್ಟ್ರಿಯಾದವರು ಸಿಡಿಮದ್ದಿನ ಗುಂಡುಗಳನ್ನು ಹಾಕಿ ಮನೆಗಳನ್ನು ನಾಶಮಾಡಿದರು. ಆ ಗುಂಡುಗಳನ್ನು ಹಾಕಿದ ಆಸ್ಟ್ರಿಯಾದವರು ಕೊಲ್ಲಲ್ಪಟ್ಟರು.

ಇಟಲಿಯವರು ಹೊಸ ಬಾಲ್ಕನ್ ಅಧಿಪತ್ಯದ ಪ್ರಜೆಗಳನ್ನು ಕಾಪಾಡುವುದಕ್ಕೋಸ್ಕರ ಎಂದು ಹೇಳಿ ಆ ಅಧಿಪತ್ಯಕ್ಕೆ ತಮ್ಮ ಕೆಲವು ಸೈನ್ಯಗಳನ್ನು ಕಳುಹಿಸಿರುತ್ತಾರೆ. ಇದರಿಂದ ಕಷ್ಟ ಸಂಭವಿಸಬಹುದೆಂದು ಕಾಣುತ್ತದೆ.

ಮೈಸೂರು ಗೆಜೆಟ್ ಸಂಗ್ರಹ.

ಶಿವಮೊಗ್ಗಾ ಸಬ್ ಡಿವಿಜನ್ ಅ|| ಕಮಿಷನರ್ ಮ|| ಜ. ಬಿ. ಹೆಬ್ಬಿ ಕರ್‌ಯವರಿಗೆ ಅಕ್ಟೋಬರ್ ತಾ. 12 ರಿಂದ ಎರಡು ತಿಂಗಳು ಹನ್ನೆರಡು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ; ಇವರು ಅದರ ಜೊತೆಗೆ ಕ್ರಿಸ್ಮಸ್ ರಜವನ್ನೂ ಉಪಯೋಗಿಸಿಕೊಳ್ಳಬಹುದು.

ಅ|| ಕಮಿಷನರ್ ಮ|| ನರಸಿಂಗರಾವ್ ಪೂರ್ಣಯ್ಯನವರು ತುಮಕೂರು ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜಿನಲ್ಲೇ ಇರತಕ್ಕದ್ದು.

ಸ್ಪೆಷಲ್ ಡ್ಯೂಟಿಯ ಮೇಲಿರುವ ಗವರ್ನ್‌ಮೆಂಟ್ ಸೆಕ್ರೆಟರಿ ಮ|| ಕೆ. ಆರ್. ಶ್ರೀನಿವಾಸಯ್ಯಂಗಾರ್ರನ್ನು ತುಮಕೂರು ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರ್ ಮತ್ತು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಿ ವರ್ಗಮಾಡಿದೆ. ಕೂಡಲೇ ಕೆಲಸದ ಛಾರ್ಜು ವಹಿಸತಕ್ಕದ್ದು.

ಅ|| ಸೆಕ್ರೆಟರಿ ಮ|| ಎಸ್. ಪಿ. ರಾಜಗೋಪಾಲಾಚಾರಿಯವರನ್ನು ಗವರ್ನ್‌ಮೆಂಟಿನ ಅಂಡರ್ ಸೆಕ್ರೆಟರಿಯಾಗಿ ನೇಮಕಮಾಡಿದೆ.

ಸರ್ಕಾರಿ ಕೆಲಸದ ನಿಮಿತ್ತ ಮುಂದೆ ಹೇಳುವ ಅ|| ಕಮಿಷನ್‌ರುಗಳ ವರ್ಗಾವರ್ಗಿ ಹುಕುಂ ಮಾಡಿದೆ:—(1) ಮ|| ಎಸ್. ಎನ್. ಅಪ್ಪಣ್ಣ ಅಯ್ಯಂಗಾರ್ರನ್ನು ಚನ್ನರಾಯಪಟ್ಟಣದಿಂದ ಶಿವಮೊಗ್ಗಾ ಸಬ್ ಡಿವಿಜನ್‌ಗೆ; (2) ಮ|| ಸಿ. ಗೋಪಾಲಚಾರ್ರು ಹಾಸನದ ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜಿನಿಂದ ಹಂಗಾಮಿಯಾಗಿ ಚನ್ನರಾಯಪಟ್ಟಣದ ಸಬ್ ಡಿವಿಜನ್‌ಗೆ; ಇವರಿಗೆ ಆ ಕಾಲದಲ್ಲಿ 1 ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ವಹಿಸಿದೆ; (3) ಮ|| ಪಿ. ಗೋಪಾಲರಾಜೆಅರಸಿನವರು ಹಾಸನದ ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜನ್ನು ವಹಿಸತಕ್ಕದ್ದು.

ಸೆಂಟ್ರಲ್ ಜೈಲ್ ಅ|| ಸೂಪರಿಂಟೆಂಡೆಂಟರಾಗಿರುವ ಮ|| ಪಿ. ಪಲ್ಲಯವರು ಹಂಗಾಮಿಯಾಗಿ ಬರೋಡಾ ಸಂಸ್ಥಾನದ ಸರ್ವಿಸಿಗೆ ಕಳುಹಲ್ಪಡುವುದರಿಂದ ಸರ್ಜನ್ ಮ|| ಟಿ. ಎಸ್. ನಂಜಪ್ಪನವರು ಬೆಂಗಳೂರು ಸೆಂಟ್ರಲ್ ಜೈಲಿನ ಮತ್ತು ವ್ಯಾಕ್ಸಿನ್ ಇನ್‌ಸ್ಟಿಟ್ಯೂಟಿನ ಛಾರ್ಜನ್ನು ಹಂಗಾಮಿಯಾಗಿ ವಹಿಸತಕ್ಕದ್ದು.

ಮ|| ಬಿ. ನರಸಿಂಹಯ್ಯಂಗಾರ್ರು ಯೂರೋಪಿಗೆ ಕಳುಹಲ್ಪಡುವುದರಿಂದ ಮ|| ಕೆ. ಭೀಮರಾಯರು ವ್ಯವಸಾಯ ಇಲಾಖೆಯಲ್ಲಿ ಸೀನಿಯರ್ ಅ|| ಕೆ. ಮಿಸ್ಟರಾಗಿ ಬದಲಿ ನೇಮಿಸಲ್ಪಟ್ಟಿದಾರೆ.

ಗೌರಿಬಿದನೂರು ತಾಲ್ಲೂಕಿನ, ಗ್ರಾಮಾಭಿವೃದ್ಧಿ ಕಾರ್ಯಗಳು.

ಈ ತಾಲ್ಲೂಕಿನ ಅಮಲ್ದಾರ್ ಮ|| ಸಿ. ಪಿ. ಕೃಷ್ಣಸ್ವಾಮಿರಾವ್, ಬಿ.ಎ. ಯವರು ಸರ್ಕಾರದ ಹುಕುಂ ಪ್ರಕಾರ ತಾಲ್ಲೂಕಿನಲ್ಲಿ ಗ್ರಾಮಾಭಿವೃದ್ಧಿಯ ಉಚಿತವಾದ ಏರ್ಪಾಡನ್ನು ಆಚರಣೆಗೆ ತರುವ ವಿಷಯದಲ್ಲಿ ವಹಿಸಿರುವ ಶ್ರದ್ಧೆಯನ್ನು ಅಷ್ಟಿಷ್ಟೆಂದು ವಿವರಿಸಲು ಸಾಧ್ಯವಲ್ಲ. ಇವರ ಉತ್ಸಾಹಕ್ಕೆ ತಕ್ಕಂತೆ ಹೊಸೂರು ಹೋಬಳಿ ಶೇಕ್ದಾರ್ ಮ|| ಸಿ. ರಾಘವೇಂದ್ರರಾಯರು ಶ್ರೀಮನ್ ಮಹಾರಾಜಾ ಸರ್ಕಾರದವರಿಂದ ಪ್ರಯುಕ್ತವಾದ ಪ್ರೋತ್ಸಾಹಸೂಚಕ ಆಜ್ಞಾಪತ್ರದ ಉದಾರಾಶಯವನ್ನು ತಮ್ಮ ಹೋಬಳಿಗೆ ಸೇರಿದ ಗ್ರಾಮಗಳಲ್ಲೆಲ್ಲಾ ಪ್ರಕಟವಾಗುವಂತೆ ಬೋಧಿಸಿ, ಪ್ರತಿಯೊಬ್ಬರೂ ಲೋಕೋಪಕಾರದಲ್ಲಿ ನಿರತರಾಗಿರಬೇಕಲ್ಲದೆ ತಮ್ಮ ಹೊಟ್ಟೆಯನ್ನು ಮಾತ್ರ ಹೊರೆದುಕೊಳ್ಳುವ ಯಂತ್ರವಿಶೇಷದಂತೆ ಪರಿಣಮಿಸುವುದು ಭೂಭಾರವಲ್ಲದೆ ಅನ್ಯಥಾ ಅಲ್ಲವೆಂಬ ನೀತಿಯನ್ನು ಮನಸ್ಸಿಗೆ ಹಿಡಿಯುವಂತೆ ತಿಳಿಯಪಡಿಸಿದ್ದು ನೋಡಲು ಪ್ರತಿ ಗ್ರಾಮದಲ್ಲಿಯೂ ತಕ್ಕ ಸಂಘಗಳು ಏರ್ಪಡಿಸಲ್ಪಟ್ಟು 2-3 ತಿಂಗಳಿಂದಲೂ ಪ್ರತಿ ಸೋಮವಾರವೂ ತಪ್ಪದೆ ಜನೋಪಯೋಗಕರವಾದ ಕಾರ್ಯಗಳು ರಾಜಭಕ್ತಿಯುತರಾದ ಜನರಿಂದ ನಡೆಯುತ್ತಿವೆ. ಅನಾಗರಿಕರ ಅನಾಚಾರಗಳಿಂದಲೂ, ತಿಪ್ಪೆಗಳ ದುರ್ಗಂಧದಿಂದಲೂ ಅನಾರೋಗ್ಯಕ್ಕೆ ನೆಲೆಯೆನಿಸಿ ಆ ಕಡೆ ಸುಳಿದಾಡುವುದಕ್ಕೇ ಅಸಹ್ಯವನ್ನು ಹುಟ್ಟಿಸುತ್ತಿದ್ದ ಕುಗ್ರಾಮಗಳೂ ಕೂಡ ಅನುಕೂಲವಾದ ರಸ್ತೆಗಳಿಂದಲೂ, ವೈಮಲ್ಯದಿಂದಲೂ ಶೋಭಿಸುತ್ತಿರುವುದನ್ನು ನೋಡಿ ಆಶ್ಚರ್ಯ ಸಂತೋಷಗಳನ್ನು ಪಡೆಯುತ್ತಿರುವೆವು. ಈ ಹೋಬಳಿಯ 40 ಗ್ರಾಮಗಳಿಂದ ಒಟ್ಟು 18 ಸಂಘಗಳು ಏರ್ಪಡಿಸಲ್ಪಟ್ಟು, ಪ್ರತಿ ಒಂದು ಸಂಘವೂ ಧಾರಾಳಮನಸ್ಕರಾದ ಹಲವರು ಮೆಂಬರುಗಳನ್ನುಳ್ಳದಾಗಿದೆ. ಇವರು ತೋರಿಸಿರುವ ಕೆಲಸಗಳು ಮುಂದಣ ಅಭಿವೃದ್ಧಿಗೆ ಸೂಚನೆಯಾಗಿವೆ.

ಹಲವು ದಿನಗಳ ಕೆಳಗೆ ಈ ತಾಲ್ಲೂಕಿಗೆ ಕೋಲಾರ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಸಾಹೇಬರವರು ಚಿತ್ತೈಸಿದಾಗ ಈ ಹೋಬಳಿಯ ಹಲವು ಗ್ರಾಮಗಳಲ್ಲಿನ ಉಚಿತವಾದ ಏರ್ಪಾಡುಗಳನ್ನು ಪರಾಂಬರಿಸಿ ತುಂಬಾ ಸಂತೋಷಿಸಿದರು. ಹೊಸೂರು ರೀಡಿಂಗ್ ರೂಮಿನ ಸ್ಥಾಪನೆ, ಕೆಂಕೆರೆಯ ಸಿಹಿನೀರು ಭಾವಿಯ ವಸತಿ, ಗೆದರೆಯ ಸ್ಕೂಲ್ ಕಟ್ಟಡದ ಪ್ರಯತ್ನ ಇತ್ಯಾದಿಗಳನೇಕ ನಮ್ಮ ಕೇಶಾಸ್ತ್ರ ಪ್ರೋತ್ಸಾಹದ ಫಲಿತಾಂಶಗಳಾಗಿವೆ. ಇವರಿಂದ ಇನ್ನೂ ಅನೇಕಾನೇಕ ಸುಕಾರ್ಯಗಳು ನಡೆಯಿಸಲ್ಪಡುವುದರಲ್ಲಿ ಸಂದೇಹವಿಲ್ಲ. ಈ ಹೋಬಳಿಯ 2-3 ಗ್ರಾಮಗಳಲ್ಲಿ ಮಾತ್ರ ಉಚಿತವಾದ ಏರ್ಪಾಡುಗಳು ಪ್ರಾರಂಭಿಸಲ್ಪಟ್ಟಂತೆ ಇಲ್ಲ; ಅವು ಕೇವಲ ಕುಗ್ರಾಮಗಳು. ಅವುಗಳಲ್ಲಿಯೂ ಕ್ಷಿಪ್ರದಲ್ಲಿಯೇ ತಕ್ಕಂತೆ ಕಾರ್ಯಾರಂಭವಾದೀತೆಂದು ನಿರೀಕ್ಷಿಸಲ್ಪಟ್ಟಿದೆ. ರಾಜಕಾರ್ಯದಲ್ಲಿ ಅತ್ಯಂತ ಭಕ್ತಿಯೂ, ಜನಸಮುದಾಯದಲ್ಲಿ ಅನಿವಾರ್ಯವಾದ ಅನುರಾಗವೂ ಉಳ್ಳ ಮ|| ಕೃಷ್ಣಸ್ವಾಮಿರಾಯರೂ ಮತ್ತು ಮ|| ರಾಘವೇಂದ್ರರಾಯರಂತಹ ಅಧಿಕಾರಿಗಳು ಸ್ತೋತ್ರಾರ್ಹರಾಗಿದಾರೆ. ಲೋಕಬಂಧು.

ಒಂದು ಹೊಸ ಸ್ಕೂಲು ಮನೆಯ ಪ್ರವೇಶೋತ್ಸವ.

ಆನೆಕಲ್ ತಾಲ್ಲೂಕು ಮಾಯಸಂದ್ರ.

ಈ ಗ್ರಾಮದಲ್ಲಿ ಸ್ಕೂಲಿಲ್ಲದೆ ಬಾಲಕರ ವಿದ್ಯಾಭ್ಯಾಸಕ್ಕೆ ಬಹಳ ತೊಂದರೆಯಾಗಿತ್ತು. ನಮ್ಮ ಗ್ರಾಮದ ಶಾನುಭೋಗರಾಗಿಯೂ, ರೆಪ್ರಸೆಂಟೆಟಿವ್ ಮೆಂಬರಾಗಿಯೂ, ತಾ|| ಬೋರ್ಡು ಮೆಂಬರಾಗಿಯೂ ಇರುವ ಮ|| ಜಮೀನ್‌ದಾರ್ ಧಾಳಪ್ಪನವರು ಈ ಗ್ರಾಮದಲ್ಲಿ ವಿದ್ಯಾಭಿವೃದ್ಧಿಯುಂಟುಮಾಡುವ ವಿಷಯದಲ್ಲಿ ಪ್ರಯತ್ನಪಟ್ಟು ವಿದ್ಯಾಭ್ಯಾಸದ ಇಲಾಖೆಯವರಿಗೆ ಅನೇಕ ಸಾರಿ ಬರೆದುಕೊಂಡು ಸರ್ಕಾರಿ ಪಾಠಶಾಲೆಯನ್ನೇರ್ಪಡಿಸಿದರು. ಸ್ಕೂಲು ಪ್ರಥಮತಃ ಸ್ಥಾಪಿತವಾದ ಕಾಲದಲ್ಲಿ ಸ್ಕೂಲಿಗಾಗಿ ಊರಿನಲ್ಲಿರುವ ತಮ್ಮದೇ ಒಂದು ಮನೆಯನ್ನು ಬಿಟ್ಟು ಕೊಟ್ಟರು. ಕೆಲವು ದಿನಗಳ ನಂತರ ಈ ಮನೆಯು ಬಾಲಕರ ಆರೋಗ್ಯಕ್ಕೆ ಅನುಕೂಲವಿಲ್ಲವೆಂತಲೂ, ಸ್ಥಳ ಸಂಕೋಚವೆಂತಲೂ ತಿಳಿದು ಈ ಮಹನೀಯರು ಬೇರೆ ಕಟ್ಟಡವನ್ನು ಸ್ಕೂಲಿಗಾಗಿ ಕಟ್ಟಿಸಿ ಕೊಡಬೇಕೆಂದು ಉದ್ದೇಶ ಮಾಡಿ ಊರು ಹೊರಗೆ ತಮ್ಮ ಸ್ವಂತ ಖರ್ಚಿನಿಂದಲೇ ಸುಮಾರು ಒಂದು ಸಾವಿರ ರೂಪಾಯಿಗಳ ವರೆಗೂ ಖರ್ಚು ಮಾಡಿ ಸ್ಕೂಲು ಮನೆಯನ್ನು ಕಟ್ಟಿಸಿದರು. ಈ ಕಟ್ಟಡದ ನೂತನ ಪ್ರವೇಶ ಮಹೋತ್ಸವವು ಅತಿ ವಿಜೃಂಭಣೆಯಿಂದ ನಡೆಯಿತು. ಇದಕ್ಕಾಗಿ ನಮ್ಮ ಅಮಲ್ದಾರ್ ಮ|| ಗೋಪಾಲಕೃಷ್ಣಯ್ಯಂಗಾರ್ರೂ, ಹೆಸ್ತೇದಾರ್ರೂ, ಸ್ಕೂಲುಗಳ ಡೆಪ್ಯುಟಿ ಇನ್‌ಸ್ಪೆಕ್ಟರ್ ಮ|| ಎಚ್. ವೆಂಕಟರಮಣಯ್ಯನವರೂ, ಅ|| ಡೆಪ್ಯುಟಿ ಇನ್‌ಸ್ಪೆಕ್ಟರ್ ಮ|| ಅನಂತಸುಬ್ಬರಾಯರೂ, ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರು ಮ|| ಮುತ್ತುಸಾಮಿದಾಸ್ ಯವರೂ, ಇನ್ನೂ ಅನೇಕ ದೊಡ್ಡಮನುಷ್ಯರುಗಳೂ, ಸಾಹುಕಾರರುಗಳೂ ಸಹ ದಯಮಾಡಿಸಿದ್ದರು. ಮ|| ಜಮೀನ್‌ದಾರ್ ಧಾಳಪ್ಪನವರು ಅವರುಗಳನ್ನು ಮಂಗಳವಾದ್ಯ ಮೊದಲಾದ ಉಚಿತ ಮರ್ಯಾದೆಯೊಡನೆ ಎದುರುಗೊಂಡ ನಂತರ ಆ ದಿನ ಸೇರಿದ್ದ ಅಧಿಕಾರಿಗಳಿಗೂ, ದೊಡ್ಡ ಮನುಷ್ಯರುಗಳಿಗೂ ಸಹ ಅವರ ಮತಧರ್ಮಕ್ಕೆ ಅನುಸಾರವಾಗಿ ಫಲಹಾರಾದಿಗಳನ್ನು ಸಮರ್ಪಿಸಿದರು. ಹೊಸ ಕಟ್ಟಡದ ಎದುರಿನಲ್ಲಿ ಅಲಂಕರಿಸಿದ್ದ ಚಪ್ಪರದ ಬಳಿ ನಮ್ಮ ಸ್ಕೂಲಿನ ಬಾಲಕ, ಬಾಲಕಿಯರು ಸೇರಿ ಎಲ್ಲರನ್ನೂ ಸ್ವಾಗತ ಪೂರ್ವಕವಾಗಿ ಬರಮಾಡಿಕೊಂಡರು. ನಂತರ ಧರ್ಮಕರ್ತರು ರಿಪೋರ್ಟು ಓದಿ ತಾವು ಮಾಡಿಸಿದ್ದ ಬೆಳ್ಳಿಯ ಬೀಗದ ಕೈಯನ್ನು ನಮ್ಮ ಅಮಲ್ದಾರ್ರಿಗೆ ಸಮರ್ಪಿಸಲಾಗಿ ಅವರು ಅದರಿಂದ ಸ್ಕೂಲಿಗೆ ಹಾಕಿದ್ದ ಬೀಗವನ್ನು ತೆಗೆದು ಸ್ಕೂಲು ಓಪನ್ ಮಾಡಿದರು. ಅಲ್ಲಿ ಸೇರಿದ್ದ ಸಭೆಯವರೆಲ್ಲರೂ ಒಳಹೊಕ್ಕು ಸಭೆಯು ಆ ದಿನ ಮಧ್ಯಾಹ್ನ 3 ಗಂಟೆಗೆ ಪ್ರಾರಂಭವಾಯಿತು. ನಮ್ಮ ಅಮಲ್ದಾರ್ರು ಅಗ್ರಾಸನವನ್ನು ವಹಿಸಿದ್ದರು. ಮೂರು ಘಂಟೆ ಹೊತ್ತು ಕಾರ್ಯಗಳೆಲ್ಲವೂ ಸಾಂಗವಾಗಿ ನಡೆದವು. ವಿದ್ಯಾರ್ಥಿಗಳು ಗೀತಾರೂಪವಾಗಿ ಮಾಡಿದ ಸಭಾವಂದನೆ, ದೇವರ ಸ್ತುತಿ, ಕುಶಲ ಪ್ರಶ್ನೆ, ಸಂಭಾಷಣೆ, ಕಂಠಪಾಠ, ಅಭಿನಯ ಗೀತ ಮೊದಲಾದುವುಗಳು ಆನಂದಕರವಾಗಿದ್ದವು. ಸ್ಕೂಲ್ ಮಾಸ್ಟರಿಂದ ರಿಪೋರ್ಟು ಓದಲಾಯಿತು. ಅಗ್ರಾಸನಾಧಿಪತಿಗಳು ಧರ್ಮಕರ್ತರ ಉದಾರ ಗುಣ ವಿಷಯವಾಗಿಯೂ, ಇನ್ನೂ ಈ ಗ್ರಾಮದಲ್ಲಿ ಹಗಲು ಸ್ಕೂಲು ಆಗತಕ್ಕ ವಿಷಯದಲ್ಲಿಯೂ ಉಪನ್ಯಾಸ ಮಾಡಿದರು. ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರು ಮ|| ಮುತ್ತುಸಾಮಿದಾಸ್‌ಯವರೂ, ಸ್ಕೂಲುಗಳ ಡೆಪ್ಯುಟಿ ಇನ್‌ಸ್ಪೆಕ್ಟರ್ ಮ|| ಎಚ್. ವೆಂಕಟರಮಣಯ್ಯನವರೂ ವಿದ್ಯಾಭ್ಯಾಸದ ವಿಷಯದಲ್ಲಿ ಉಪನ್ಯಾಸ ಮಾಡಿದ ನಂತರ ಸಂಗೀತ ನಡೆದು ಗಂಧ ಪುಷ್ಪಗಳ ವಿನಿಯೋಗಾನಂತರ ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನೆ ಮುಂತಾದುವುಗಳ ಸಮೇತ ಸಭೆಯು ಮುಕ್ತಾಯವಾಯಿತು. ಸರ್ವರೂ ಮ|| ಜಮೀನ್‌ದಾರ್ ಧಾಳಪ್ಪನವರು ಮಾಡಿರುವ ಈ ಮಹೋಪಕಾರಕ್ಕಾಗಿ ತುಂಬಾ ಆನಂದಪಟ್ಟುಕೊಂಡು ತೆರಳಿದರು.

ನಿಮ್ಮ ವಾಚಕ.

ಬಾತ್ಮಿದಾರರಿಗೆ ನೋಟೀಸ್.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಕರೆಸ್‌ಪಾಂಡೆನ್ಸ್.

ಕೊಲೀಸ್‌ಪೇಟೆ ವಿದ್ಯಾರ್ಥಿಗಳ ಫುಟ್‌ಬಾಲ್ ಕ್ಲಬ್.

ಅಯ್ಯಾ,—ಈ ಊರು ಇಂಗ್ಲಿಷ್ ಸ್ಕೂಲಿನಲ್ಲಿ 50 ಜನ ವಿದ್ಯಾರ್ಥಿಗಳಿದಾರೆ. ಈ ಊರು ಸ್ಥಾಪಿತವಾದಲಾಗಾಯಿತು ಈ ಊರಲ್ಲಿ ಫುಟ್‌ಬಾಲ್ ಕ್ಲಬ್ ಇರಲಿಲ್ಲ. ಈಚೆಗೆ 2 ವರುಷಗಳಿಂದ ನಮ್ಮ ಇಂಗ್ಲಿಷ್ ಮಾಸ್ಟರ್‌ರವರುಗಳು ಒಂದು ಕ್ಲಬ್ಬನ್ನು ಏರ್ಪಡಿಸಿರುತ್ತಾರೆ. ಸರ್ಕಾರದಿಂದ ಫೀಲ್ಡಿಗಾಗಿ ಬಿಡಲ್ಪಟ್ಟಿರುವ ಸ್ಥಳದಲ್ಲಿ ಮ್ಯುನಿಸಿಪಲ್ ಗೊಬ್ಬರ ಹಾಕಿರುವದಲ್ಲದೆ ಹಳ್ಳ ದಿಣ್ಣೆಯಾಗಿದೆ. ಇಷ್ಟು ದಿವಸದಿಂದ ಆಡುತ್ತಿದ್ದ ಸ್ಥಳವು ಮಹಮದಿಯರ ಮಸೀತಿಗೆ ಸೇರಿರುತ್ತೆ ಎಂಬದಾಗಿ ಆ ಜನಗಳು ಅಲ್ಲಿ ಆಡಗೊಡಿಸಲಿಲ್ಲ. ಈ ವಿಷಯವನ್ನು ಹೆಡ್ ಮಾಸ್ಟರವರು ಸರ್ಕಾರದಿಂದ ಬಿಟ್ಟಿರುವ ಫೀಲ್ಡನ್ನೇ ಸರಿಮಾಡಿಸಿಕೊಡಬೇಕೆಂದು ನಮ್ಮ ಸಬ್ ಡಿವಿಜನ್ ಆಫೀಸರವರಲ್ಲಿ ಅರಿಕೆ ಮಾಡಿಕೊಳ್ಳಲು, ಕೂಡಲೆ ಸರಿಮಾಡಿಸಿಕೊಡುವುದಾಗಿ ಅಪ್ಪಣೆಕೊಡಿಸಿರುತ್ತಾರೆ. ಸಬ್ ಡಿವಿಜನ್ ಆಫೀಸರವರೂ ತಾಲ್ಲೂಕ್ ಆಫೀಸರವರೂ ವಿದ್ಯಾರ್ಥಿಗಳ ವಿಷಯದಲ್ಲಿ ಕರುಣವಿಟ್ಟು ವಿದ್ಯಾರ್ಥಿಗಳ ಕ್ಲಬ್ಬನ್ನು ಅಭಿವೃದ್ಧಿಗೆ ತಂದು ಕಾಪಾಡಿಕೊಂಡು ಬರುತ್ತಾರೆಂದು ಹಾರೈಸುವ ವಿದ್ಯಾರ್ಥಿಗಳ ಹಿತಚಿಂತಕ.

ಶಿವಮೊಗ್ಗಾ ಡಿಸ್ಟ್ರಿಕ್ಟ್ ಅರಗದ ವಿಚಾರಗಳು.

ಅಯ್ಯಾ,—ಈ ಊರಿನಲ್ಲಿರುವ ಕನಡಾ ವಿ. ಇ. ಬಾಯ್ಸ್ ಸ್ಕೂಲಿನಲ್ಲಿ ಸೀನೀರಿನ ಬಾವಿಯೊಂದನ್ನೂ, ಪೇಟೆವರ್ತಕ ಚಿನಿವಾರ ಕೇರಿಯಲ್ಲಿರುವ ಕನಡಾ ಬಾಯ್ಸ್ ಸ್ಕೂಲಿನಲ್ಲಿ ಒಂದು ಭಾವಿಯನ್ನೂ ಪೇಟೆ ನಿವಾಸಿಗಳ ವಿದ್ಯಾರ್ಥಿಗಳ ಉಪಯೋಗಕ್ಕಾಗಿಯೂ ಮಾಡಿಸಿಕೊಡುತ್ತೇವೆಂಬುದಾಗಿಯೂ, ಶ್ರೀ ಕಲಾನಾಥ ಸ್ವಾಮಿ ದೇವಸ್ಥಾನದ ಎದುರು ಭಾಗವೂ ಒಂದು ಸೀನೀರಿನ ಭಾವಿ ಮಾಡಿಸಲಾಗುತ್ತೆಂದೂ ಅಮಲ್ದಾರ್ ಮ|| ಎಸ್. ಧರ್ಮರಾಯರು ಅಭಯವನ್ನಿತ್ತಿದಾರೆಂಬುದಾಗಿ ಕೇಳಿ ಸಂತೋಷಪಡುತ್ತೇವೆ. ಇವರು ತಾಲ್ಲೂಕು ಆಫೀಸರಾಗಿ ದಯಮಾಡಿಸಿದಂದಿನಿಂದಲೂ ತಾಲ್ಲೂಕಿನ ಎಲ್ಲಾ ಭಾಗಗಳಲ್ಲೂ ಪ್ರಜಾನೆಮ್ಮದಿಗಾಗಿಯೂ, ಗ್ರಾಮಾಭಿವೃದ್ಧಿ ವಿಚಾರದಲ್ಲೂ ಏರ್ಪಾಟು ನಡಿಸಿ ತಕ್ಕ ಮಟ್ಟಿಗೆ ಉತ್ತಮಸ್ಥಿತಿಗೆ ತಂದಿದಾರೆ. ಈ ಊರಿನಲ್ಲಿ ಸ್ವಲ್ಪ ದಿವಸಗಳ ಹಿಂದೆ ನೋಡಿದ್ದಾದರೆ ಶೀಘ್ರದಲ್ಲೇ ಯಾವದಾದರೊಂದು ಅಂಟುರೋಗ ತಲೆದೋರುತ್ತೆಂಬ ಸಂಭವವಿತ್ತು. ಅಮಲ್ದಾರ್ರವರು ಸ್ಯಾನಿಟೇಷನ್ ರೂಲ್ಸು ಜಾರೀಗೆ ತಂದರು. ಮ್ಯುನಿಸಿಪಲ್ ಸ್ಥಾಪಿಸಿ ಕಚವಾ ತೆಗೆವರೆ ಸಹಾ 3-4 ಜನ ಮಾದಿಗರನ್ನು ನೇಮಿಸಿಕೊಟ್ಟರು. ಈಗ ನೋಡಿದ್ದಾದರೆ ಸಾಮಾನ್ಯ ಆನಂದ ಸೂಚಕವಾಗಿದೆ.—ಈ ಊರಿನಲ್ಲಿ ಈ ತನಕವರೆಗೂ ಸರ್ಕಾರಿ ಹೊಸ ತೂಕ, ಅಳತೆಸೇರು ಪಟ್ಟಿಗಳು ಜಾರೀಗೆ ಬಾರದಿರುವದಕ್ಕೆ ಕಾರಣವೇನೋ ಊಹಿಸಲಾರೆವು. ನಮ್ಮ ಅಮಲ್ದಾರ್ರವರ ಗಮನಕ್ಕೂ ಈ ವಿಷಯ ಬಂದಂತಿಲ್ಲ. ಈಗಲಾದರೂ ಗಮನಕ್ಕೆ ತೆಗೆದುಕೊಂಡು ಕ್ರಮಪಡಿಸುವರೆಂದು ಹಾರೈಸುತ್ತೇವೆ.—ಈ ಊರಿನ ಆಸುಪಾಸುಗಳಲ್ಲೂ, ಇಲ್ಲಿಯೂ ಅನೇಕ ಸಣ್ಣ ಸಣ್ಣ ಅಕೃತ್ಯ ಎಡೆಬಿಡದೆ ನಡೆಯುತ್ತಿದೆ. ಈ ವಿಷಯ ಅನೇಕ ಸಾರಿ ಗಮನಕ್ಕೆ ಬಂದಿದ್ದಾದರೂ ಅಮಲ್ದಾರರು ಇಲ್ಲಿ ಒಂದು ಔಟ್ ಪೋಸ್ಟನ್ನಾದರೂ ಕೊಡದಿರುವರು. ಅದಷ್ಟು ತ್ವರೆಯಿಂದ ಜಾರಿಗೆ ತಂದದ್ದಾದರೆ ಎಷ್ಟೋ ಉಪಕಾರವಾಗುವದು. ಈ ಊರಿನಲ್ಲಿ ಮದ್ಯಪಾಯಿಗಳ ಪ್ರತಾಪವಂತೂ ದಿನೇ ದಿನೇ ಹೆಚ್ಚಾಗುತ್ತಿದೆ. ಒಕ್ಕಲಿ.

ವಿ. ಎ. ಸ್ಕೂಲುಗಳಲ್ಲಿನ ಕೆಲವು ಕೊರತೆಗಳು.

ಅಯ್ಯಾ,—ಉಪಾಧ್ಯಾಯರುಗಳು ಕೆಲಸ ಮಾಡಲು ಕೆಲವು ಕಡೆ ಸ್ಕೂಲು ಕಟ್ಟಡವಿರುವುದಿಲ್ಲ. ಕೆಲವು ಇದ್ದಾಗ್ಯೂ ಶಿಥಿಲವಾಗಿರುತ್ತವೆ. ಕೆಲವು ಕಡೆ ದೇವಸ್ಥಾನಗಳಲ್ಲಿಯೋ, ಮಸೀತಿ ಗುಡಿಗಳಲ್ಲಿಯೋ, ಮಂಟಪಗಳಲ್ಲಿಯೋ, ಪುರಾತನ ಮನೆಗಳಲ್ಲಿಯೋ ಇರುತ್ತವೆ. ಕಪ್ಪು ಹಲಗೆ ಇಲ್ಲದೆ ಕೆಲಸ ಮಾಡಿದಲ್ಲಿ ಹುಡುಗರಿಗೆ ನಿದರ್ಶನವಾಗಿ ತೋರಿಸಲು ಅವಕಾಶವಿಲ್ಲ. ಪ್ರತಿಯೊಬ್ಬನಿಗೂ ಉಪಯೋಗವಾಗುವಂತೆ ಕಾಲವನ್ನು ತೋರಿಸತಕ್ಕ ಯಾವ ವಿಧವಾದ ಗಡಿಯಾರವೂ ಇರುವುದಿಲ್ಲ. ಹಳ್ಳಿಗಳಲ್ಲಿ ಮೊದಲೇ ಯಾವ ಹುಡುಗನೂ ಸರಿಯಾಗಿ ಉಡುಪು ಹಾಕುವುದಿಲ್ಲ. ಅಂಥಾದ್ದರಲ್ಲಿ ಬೆಂಚುಗಳಿಲ್ಲದೆ ಹುಡುಗರ ಪಿರ್ರಿಗಳೂ, ಒಬ್ಬಿಬ್ಬರು ಹಾಕಿಕೊಂಡಿರುವ ಷರಾಯಿ ಪಂಚೆ ಮೊದಲಾದುವುಗಳೂ ನೆಲದ ಮೇಲೆ ಕೂತುಕೂತು ಒಂದೆರಡು ತಿಂಗಳುಗಳಲ್ಲಿಯೇ ನೆಲವೂ ಗುಣಿ ಬೀಳುವುದಲ್ಲದೆ ಉಡುಪೂ ಕೆಡುತ್ತದೆ. ಉಪಾಧ್ಯಾಯರಿಗಂತೂ ಕೆಲವು ಕಡೆ ತಹಲ್ ವರಿವಿಗೂ ಕುರ್ಚಿ ಎಂಬ ಸಾಮಾನೇ ಇಲ್ಲವಾಗಿದೆ. ಸರ್ಕಾರದವರು ಕೊಡುತ್ತಿರುವ ಸಾದಿಲ್ವಾರು ಎಂಬ ಸಾಮಾನು ಈಗಿನ ನವೀನ ಶಿಕ್ಷಣಪದ್ಧತಿಯಂತೆ ಎರಡು ತಿಂಗಳಿಗೆ ಸಾಲದು. ಕೆಲವು ಕಡೆ ಈ ಸಾದಿಲ್ವಾರೇ ಇಲ್ಲವಾಗಿದೆ. ಇವರುಗಳು ತಮ್ಮ ಸ್ವಂತ ಖರ್ಚಿನಿಂದ ಕೆಲಸ ನಡಿಸುತ್ತಿರುವಂತೆ ಕಾಣುತ್ತದೆ. ಹಳ್ಳಿಗಳಲ್ಲಿ ಇದಕ್ಕಾಗಿ ಹುಡುಗರಿಂದ ವಸೂಲ್ಮಾಡಿದಲ್ಲಿ ಆಕ್ಷೇಪಣೆಗೆ ಗುರಿಯಾಗುವುದಲ್ಲದೆ ಸ್ಥಳದಿಂದಲೂ ಉಚ್ಚಾಟನೆಯಾಗಬಹುದು. ನವನಾಗರಿಕತೆ ಎಂಬುದನ್ನೇ ಹಳ್ಳಿಗಳವರು ಅರಿಯರು. ಅಲ್ಲದೆ ಪ್ರಾತಃಕಾಲ 6 ಘಂಟೆಯಿಂದ ಮಧ್ಯಾಹ್ನ 11-12 ಘಂಟೆ ವರಿವಿಗೂ, ಮಧ್ಯಾಹ್ನ 2 ಘಂಟೆಯಿಂದ ಸಾಯಂಕಾಲ 6 ಘಂಟೆಗಳ ವರಿವಿಗೂ ಒಬ್ಬ ಉಪಾಧ್ಯಾಯನೇ 5 ತರಗತಿಗಳಲ್ಲಿ ಕೆಲಸ ಮಾಡಿದಾಗ್ಯೂ ಅಲ್ಲಿಗೂ ಆಕ್ಷೇಪಣೆಯೇ ತೀರದು. ಮೇಲ್ಪಟ್ಟ ಆಫೀಸರುಗಳಾದರೋ ಬಹಳವಾಗಿ ಆಕ್ಷೇಪಿಸುತ್ತಾರೆ. ಇದರ ಮೂಲಕಾರಣವಾವುದೋ ತಿಳಿಯದು. ಹೀಗಿರುವಲ್ಲಿ ಸಲಕರಣೆಗಳಿಲ್ಲದೇನೇ ವಿ. ಎ. ಸ್ಕೂಲುಗಳಲ್ಲಿ ಮಕ್ಕಳುಗಳನ್ನು ಸ್ವಲ್ಪವಾದರೂ ಯೋಗ್ಯತೆಯುಳ್ಳವರಾಗಿ ತಿದ್ದುಪಾಟು ಮಾಡುವುದು ಸುಲಭಸಾಧ್ಯವೇ?

ವಿದ್ಯಾಪಕ್ಷಪಾತಿ.

ಮೈಸೂರು ಹೆಲ್ತ್ ಆಫೀಸರು ಇನ್ನೂ ಏನೂ ಮಾಡಲಿಲ್ಲ.

ಅಯ್ಯಾ,—ಮೈಸೂರು ಸಿಟಿ ಸಯ್ಯಾಜಿರಾವ್ ರೋಡಿನಲ್ಲಿರುವ ಎನ್. ಕೃಷ್ಣಸ್ವಾಮಿಚೆಟ್ಟಿಯಾರ್ ಅಂಡ್ ಸನ್ ರವರ ಷಾಪಿಗೂ, ಬ್ರಾಂದಿ ಅಂಗಡಿ ಇಟ್ಟಿರುವ ವಿ|| ಮಾನಕ್‌ಜಿ ಸೇಟರವರ ಷಾಪಿಗೂ ನಡುವೆ ಇರುವ ಗಲ್ಲಿಯು ಕೇವಲ ಬಹಿರ್ದೇಶಕ್ಕೆ ಅನುಕೂಲವಾದ ಪ್ರಾಂತ್ಯವಾಗಿದೆ. ರಾತ್ರಿಯ ಹೊತ್ತು ಆ ಗಲ್ಲಿಯಲ್ಲಿ ವಾಸವಾಗಿರುವವರು ಹ್ಯಾಗಿದ್ದರೂ ಆ ದುರ್ವಾಸನೆಯನ್ನು ಸ್ವೀಕರಿಸಿಕೊಂಡು ಊಟ ಉಪಚಾರ ನಿದ್ರೆಗಳನ್ನು ಮಾಡುವರೋ ನಾನು ಬೇರೆ ಕಾಣೆ. ಆದರೆ ಬೆಳಕು ಹರಿದ ಮೇಲೆ ನಮ್ಮಗಳ ಅಂದರೆ ವ್ಯಾಪಾರಸ್ಥರ ಪಾಡನ್ನು ಏನೆಂದು ಹೇಳಲಿ? ಈ ಗಲ್ಲಿಯ ಸುತ್ತಲೂ ಸುಮಾರು ಒಂದು ನೂರು ಅಡಿಗಳ ಫಾಸಲೆಯ ವರಿವಿಗೂ ದುರ್ವಾಸನೆಯು ಚುತ್ತಿಕೊಂಡು, ಅಲ್ಲಿ ಮೂರು ಹೊತ್ತೂ ಕುಳಿತಿರುವ ವರ್ತಕರಿಗೊಬ್ಬರಿಗೇ ಅಲ್ಲದೆ ದಾರಿಹೋಕರಿಗೂ ಕೂಡ ಮೂಗಿನ ಮೇಲೆ ಬಟ್ಟೆ ಹಾಕಿಸಿಬಿಡುವದು. ಈ ದುರವಸ್ಥೆಯನ್ನು ಹೋಗಲಾಡಿಸುವ ಬಗ್ಗೆ ಕೈಲಾದಷ್ಟು ಪ್ರಯತ್ನಪಟ್ಟಿದ್ದಾಯಿತು. ಅಲ್ಲಿ ಗೋಡೆಯ ಮೇಲೆ "ಇಲ್ಲಿ ಜಲಬಾಧೆ ಮಾಡಬಾರದು" ಎಂದು ಬರೆದದ್ದಾಯಿತು. ಅದನ್ನು ವಿಚಾರಿಸದಂಗೆ ಬಾಯಿಂದ ಹೇಳಿದ್ದಾಯಿತು. ಸ್ಯಾನಿಟರಿ ಇನ್‌ಸ್ಪೆಕ್ಟರುಗಳನ್ನು ತಕ್ಕ ಏರ್ಪಾಡು ಮಾಡಿಕೊಡಬೇಕೆಂದು ಕೇಳಿಕೊಂಡದ್ದಾಯಿತು. ಯಾವದೊಂದೂ ಸಾಗಲಿಲ್ಲ. ಕೊನೆಗೆ ವರ್ತಕರೆಲ್ಲಾ ಸೇರಿ ಸಿಟಿ ಹೆಲ್ತಾಫೀಸರವರಿಗೆ ಅರ್ಜಿ ಬರೆದುಕೊಂಡೆವು. ಹೆಲ್ತಾಫೀಸರ್ ಮಿ|| ಎ. ಕೆ. ಖಾಜೆಯವರು ದಯವಿಟ್ಟು ಖುದ್ದಾಗಿ ದಯಮಾಡಿಸಿ ಪರಾಂಬರಿಸಿದರು. ಅವರ ಮನಸ್ಸಿಗೆ ನಮ್ಮಗಳ ದುರವಸ್ಥೆಯು ಚೆನ್ನಾಗಿಯೂ ತಟ್ಟಿರಬಹುದು. ಇದು ನಡೆದು ಈಗ್ಗೆ ಸುಮಾರು ಮೂರು ತಿಂಗಳುಗಳಾದವು. ಈ ವರಿವಿಗೂ ನಿರೀಕ್ಷಿಸಿ ನೋಡಿದ್ದರಲ್ಲಿ ಯಾವ ವಿಧವಾದ ಬಂದೋಬಸ್ತೂ ಕೂಡ ನಡೆದಿಲ್ಲ. ಹೀಗಿರುವದು ಜನರ ಸೌಖ್ಯಕ್ಕೆ ಬಹಳ ಮಟ್ಟಿಗೆ ಅಡಚಣೆಯಾಗಿದೆ. ಕಾಯಿಲೆಗಳುಂಟಾಗುವದಕ್ಕೆ ಯಾವದೊಂದು ಅಭ್ಯಂತರವೂ ಇಲ್ಲ. ಈಗಲಾದರೂ ಸಿಟಿ ಹೆಲ್ತಾಫೀಸರವರು ಈ ವಿಷಯವನ್ನು ಗಮನಕ್ಕೆ ತಂದುಕೊಂಡು ಮೇಲ್ಕಂಡ ಗಲ್ಲಿಯಲ್ಲಿ ಹೇಸಿಗೆಯನ್ನು ನಿರ್ಬಂಧದಿಂದ ತಪ್ಪಿಸಿಯಾರೆಂದು ಹಾರೈಸುತ್ತೇನೆ. ಹಿತಚಿಂತಕ.

[ಹೇಸಿಗೆಮಾಡತಕ್ಕವರನ್ನು ಹಿಡಿದು ಶಿಕ್ಷೆಮಾಡಿಸುವರೆ ಇದು ತಪ್ಪುವುದು. ಇದರಲ್ಲಿ ಅಲ್ಲಿನ ವರ್ತಕರು ಹೆಲ್ತ್ ಇಲಾಖೆಯವರಿಗೆ ಸಹಾಯಕರಾಗಿ ನಿಲ್ಲಬೇಕು.—ಎಡಿ.]

ಚಿತ್ರದುರ್ಗದ ವಿಚಾರಗಳು.

ಅಯ್ಯಾ,—ಚಿತ್ರದುರ್ಗವು ಬಹು ಕಾಲಗಳಿಂದ ಶಾಂತವಾಗಿದ್ದು, ಈಚೆಗೆ 2-3 ವರುಷಗಳ ಲಾಗಾಯ್ತು ಒಬ್ಬಾನೊಬ್ಬ ಮನೆ ಬಾಗಿಲು ಇಲ್ಲದ ಸಂಸಾರಿಕನಲ್ಲದ ದಾವಣಗೆರೆ ತಾಲ್ಲೋಕುವಾಸಿಯು ಇಲ್ಲಿಗೆ ಬಂದು ನೆಲಸಿ, ಸರ್ಕಾರದ ಮೇಲೂ ಗೌರವಸ್ಥರ ಮೇಲೂ ತರಲೆ ಅರ್ಜಿಗಳನ್ನು ಬರೆಯುತ್ತಿರುವದಾಗಿಯೂ, ಮೊದಲು ಇವನ ಗ್ರಾಮಗಳಲ್ಲಿ ಪಾರ್ಟಿಗಳನ್ನು ಕಲ್ಪಿಸಿ ಗ್ರಾಮದೂಷಿತನಾಗಿ ಕೊನೆಗೆ ಗ್ರಾಮತ್ಯಾಗಮಾಡಿ ಹೊಳಲ್ಕೆರೆ, ಜಗಲೂರು ಮೊದಲಾದ ಸ್ಥಳಗಳಲ್ಲಿ ಕೊಂಚ ಕೊಂಚ ದಿವಸವಿದ್ದು ಅಲ್ಲಿಯೂ ತನ್ನ ಮಹಿಮೆಯನ್ನು ಬೀರಿ, ಕೊನೆಗೆ ಇಲ್ಲಿಗೆ ಬಂದಿರುತ್ತಾನಾಗಿ ತಿಳಿಯಬಂತು. ಹಿಂದೆ ಈತನು ಇದ್ದು ಬಂದ ಸ್ಥಳದ ಮತ್ತು ಈತನ ನಡತೆ ವಿಚಾರದಲ್ಲಿ ಸರ್ಕಾರಿ ಆಫೀಸರ ಅಭಿಪ್ರಾಯದಿಂದ ಈತನ ವಿಚಾರ ಅನೇಕರಿಗೆ ತಿಳಿದಿರಬಹುದು. ಆದಾಗ್ಯೆ ಈತನ ಬರವಣಿಗೆಯಿಂದ ಸರ್ಕಾರವೂ ಪ್ರಜೆಗಳೂ ತೊಂದರೆಪಡಬಹುದು. ಸರ್ಕಾರದ ಆಫೀಸರುಗಳನ್ನು ದೂಷಿಸಿ ಬರೆಯತಕ್ಕ ಅರ್ಜಿಗಳಿಂದ ಸರ್ಕಾರದ ದರ್ಪವೇ ಇಲ್ಲದಂತೆ ಆಯ್ತು. ಇಂಥವುಗಳಿಗೆ ಸರ್ಕಾರದವರು ಅವಕಾಶಕೊಡದಂತೆ ದುಷ್ಟರನ್ನು ಶಿಕ್ಷಿಸತಕ್ಕದ್ದು ಧರ್ಮವಾದದ್ದರಿಂದ ಮೇಲ್ಕಂಡ ಮನುಷ್ಯನನ್ನು ಶಿಕ್ಷಿಸುತ್ತಾರೆಂದಾಗಿ ನಂಬಲ್ಪಟ್ಟಿರುತ್ತೆ.

ಯೂರೋಪ್ ಖಂಡವೆಲ್ಲಾ ಯುದ್ಧಪ್ರಸಕ್ತಿಯಲ್ಲಿರುವದರಿಂದ ಇಲ್ಲಿ ಪದಾರ್ಥಗಳ ಬೆಲೆಯು ವಿಶೇಷ ಹೆಚ್ಚಿರುತ್ತೆ. ಕೂಲಿಯಾಳಿನ ಜನರ ತೊಂದರೆ ಹೇಳತೀರದು. ವರ್ತಕರಂತೂ ಜನಸುಗಳನ್ನು ಮನಸ್ಸಿಗೆ ಬಂದಂತೆ ಮಾರಾಟಮಾಡುತ್ತಾರೆ. ಡೆಪ್ಯುಟಿ ಕಮಿಷನರವರು ಸ್ವಲ್ಪ ಮುತುವರ್ಜಿ ವಹಿಸಿದರೆ ಮಾರಾಟವು ಕ್ರಮಪಡಬಹುದು. ಜೀವಾದೇಷಿಗಳು ನಿಂತು ಮಾತಾಡಿ ವರ್ತಕರಿಂದ ಇತರರುಗಳಿಗೆ ಆಗತಕ್ಕ ಹಿಂಸೆ ಹೆಚ್ಚಾಗಿದೆ. ಈಗ ಇಲ್ಲಿಗೆ ದಯಮಾಡಿಸಿರುವ ಮುನ್ಸೀಫರು ಮಾರ್ವಾಡಿ ವರ್ತಕರ ಅನ್ಯಾಯಗಳನ್ನು ಕಂಡುಹಿಡಿದು ಪ್ರತಿವಾದಿಗಳಿಗೆ ತಕ್ಕ ರಿಯಾಯತಿ ತೋರಿಸಿ ಕಾಪಾಡುತ್ತಿರುವುದು ಮತ್ತು ವಾದಿಗಳ ಹಣ ಹೋಗದಂತೆ ಮಾಡುತ್ತಿರುವುದು ಬಹಳ ಸ್ತೋತ್ರಾರ್ಹವಾಗಿರುತ್ತೆ. ಇವರನ್ನು ಸರ್ವಪ್ರಜೆಗಳೂ ಹೊಗಳುತ್ತಿರುವರು.

ಈ ಡಿಸ್ಟ್ರಿಕ್ಟ್ ಕೊನೆಯದಾದ್ದರಿಂದ ಅನೇಕ ಆಫೀಸರುಗಳು ಬಂದ ಲಾಗಾಯ್ತು ಎಲ್ಲಿಗೂ ವರ್ಗವಾಗದೆ 4-5 ವರುಷಗಳ ಲಾಗಾಯ್ತು ತವರುಮನೆ ಮಾಡಿಕೊಂಡಿರುತ್ತಾರೆ. ಮುಖ್ಯವಾಗಿ ಪೋಲೀಸು, ಮ್ಯುನಿಸಿಪಾಲಿಟಿ, ರೆವಿನ್ಯೂ ಡಿಪಾರ್ಟ್‌ಮೆಂಟುಗಳಲ್ಲಿ ಅನೇಕ ಜನ ನೌಕರರು ನೆಲೆಯಾಗಿದ್ದಾರೆ. ಪ್ರಜೆಗಳ ಸೌಕರ್ಯಕ್ಕಾಗಿ ಈ ಡಿಪಾರ್ಟ್‌ಮೆಂಟುಗಳಲ್ಲಿ ತಾತ್ಕಾಲಿಕ ವರ್ಗಾವರ್ಗಿಯು ಅತ್ಯಾವಶ್ಯಕವಾಗಿರುತ್ತಾಗಿ ನಂಬಲ್ಪಟ್ಟಿರುತ್ತೆ. ಈ ವಿಷಯವನ್ನು ಸರ್ಕಾರದವರು ಪೂರ್ಣಗಮನಕ್ಕೆ ತರಬೇಕಾಗಿ ಪ್ರಾರ್ಥನೆ. ಸತ್ಯವಾದಿ.

[ಆನೆಕಲಗೂಡಿನಲ್ಲಿ ಕೆಲವು ವರುಷಗಳಿಂದ ಎರಡು ಪಾರ್ಟಿಗಳು ಹುಟ್ಟಿವೆ ಎಂದು ಒಬ್ಬ ಬಾತ್ಮಿದಾರರು ಬರೆಯುತ್ತಾರೆ. ಪ್ರಾಗಳಲ್ಲಿ ಗಣ್ಯರಾಗಿಯೂ ಐಶ್ವರ್ಯವಂತರಾಗಿಯೂ ಇರತಕ್ಕವರೇ ಪಕ್ಷ ಪ್ರತಿಪಕ್ಷಗಳಾಗಿ ವೈರವನ್ನು ಹೆಚ್ಚಿಸುತ್ತಿರುವುದನ್ನು ಕೇಳಿ ತುಂಬಾ ವಿಷಾದಪಡುತ್ತೇವೆ. ಈ ಬಾತ್ಮಿಯನ್ನು ಪ್ರಕಟಮಾಡುವುದರಲ್ಲಿ ಫಲವೇನೂ ಕಾಣುವುದಿಲ್ಲ; ಆದರೆ ಹೀಗೆ ಪಾರ್ಟಿಗಳನ್ನು ಮಾಡಿಕೊಂಡು ಪ್ರಜೆಗಳಲ್ಲಿ ಕ್ರೋಧ ವೈಷಮ್ಯಗಳನ್ನು ವೃದ್ಧಿಮಾಡುತ್ತಾ ಬಂದಿರುವವರನ್ನು ನೋಡಿ ಯೋಗ್ಯರಾದ ಪ್ರಜೆಗಳೆಲ್ಲಾ ಅಸಹ್ಯವನ್ನೂ ಆಕ್ರೋಶವನ್ನೂ ಪಟ್ಟುಕೊಂಡಾರೆನ್ನುವುದಕ್ಕೆ ಸಂಶಯವಿಲ್ಲ. ಈ ಭಾಗವನ್ನು ಪಾರ್ಟಿಗಳ ಮುಖಂಡರು ಎಂದಿಗೂ ಮರೆಯಬಾರದು.—ಎಡಿ.]

ತಾಲ್ಲೂಕು ವರ್ತಮಾನಗಳು.

ಚನ್ನರಾಯಪಟ್ಟಣ.—ಒಂದು ವಾರದಿಂದ ಹದವಾಗುವಂತೆ ಮಳೆ ಬರುತ್ತಿದೆ. ಕೆರೆಯಲ್ಲಿ ಕುಡಿಯಲು ಸುತರಾಂ ನೀರಿಲ್ಲ. ಧಾರಣೆವಾಸಿಗಳು ಪ್ರಿಯವಾಗಿದೆ. ಸಂತೆಯ ವ್ಯಾಪಾರ ಬಹಳ ಚಾತುರ್ಯ. ಬೆಲೆ ಏರಿ ದ್ವಿಗುಣವಾಗಿದೆ.

ಆವರೆಟ್ಟಿ ಆಕಿತ್ತು ಸೇರು ಪಾವು ಹಿಟ್ಟು; ತೂಕದ ಕಲ್ಲು ಮೋಸ. ಆದರೆ ಹೊಸದಾಗಿ ಬಂದಿರುವ ಅಮಲ್ದಾರ್ ನರಸಿಂಹಾಚಾರ್ಯರು ಈ ವಿಷಯದಲ್ಲಿ ಬಹಳ ಮುತುವರ್ಜಿ ವಹಿಸಿ ಶುದ್ಧ ಅಜಮಾಯಿಷಿಯಿಂದ ಅಂಥಾ ಪಿಟ್ಟುಸೇರು ಪಾತ್ರೆಗಳನ್ನು ತೆಗೆಸಿಹಾಕುತ್ತಿದಾರೆ. ಸಂತೆಯಲ್ಲಿ ಬೆಣ್ಣೆ ವ್ಯಾಪಾರಿಗಳು ತೂಗು ತಕ್ಕ ಕಲ್ಲುಗಳೆಲ್ಲಾ ಸೀಲು ಹಾಕಿದ್ದರಿಂದ ಬಟ್ಟನಲ್ಲಿ ತೂಗುತ್ತಿದಾರೆ.

ನಾಗಲೂರು ತಾ|| ಸೊಕ್ಕೆಗ್ರಾಮ.—ತಾ. 10 ರಲ್ಲಿ ನಮ್ಮ ಅಮಲ್ದಾರ್ ಮ|| ಸಿ. ರಾಮಚಂದ್ರರಾಯರು ದಯಮಾಡಿ ರೆವಿನ್ಯು ಮತ್ತು ಯೂನಿಯನ್ ಪಂಚಾಯಿತಿ ಬಂದಿಯನ್ನು ಪೂರೈಸಿ ಮರುದಿನ ಗ್ರಾಮಾಭಿವೃದ್ಧಿ ಸಮಾಜದ ವಿಚಾರಿಸಿ ಪ್ರಮುಖ ಈ ಸಮಾಜಕ್ಕೆ ಮೆಂಬರುಗಳನ್ನು ನೇಮಕ ಮಾಡಿದರು ಮ|| ರಾಯರು ಗ್ರಾಮದಲ್ಲಿ ಐಕಮತ್ಯ, ಪತ್ರಿಕೆಗಳನ್ನು ಓದುವದರಿಂದ ಉಂಟಾಗುವ ಪ್ರಯೋಜನಗಳನ್ನು ಸಹ ಕುರಿತು ಬಹಳ ಸರಳವಾಗಿ ಭಾಷಣ ಮಾಡಿ, ವಾರಕ್ಕೆ ಒಂದು ದಿನ ಗ್ರಾಮಸಾಕೀಜು ವಗೈರೆ ಕೆಲಸಗಳನ್ನು ಮಾಡುವಂತೆಯೂ, ವಾರ ಕ್ಕೊಂದಾವರ್ತಿ ಗುಡಿಯಲ್ಲಿ ಎಲ್ಲಾ ಜನಗಳನ್ನೂ ಒಟ್ಟುಗೂಡಿಕೊಂಡು ವರ್ತಮಾನ ಪತ್ರಿಕೆಗಳನ್ನು ಓದಬೇಕೆಂತಲೂ ತಿಳಿಸಿದರು. ಇವರಂತೆ ಗ್ರಾಮಸ್ಥರು ಐಕಮತ್ಯದಿಂದ ಗ್ರಾಮಾಭಿವೃದ್ಧಿ ಕಾರ್ಯಗಳಲ್ಲಿ ಆಸಕ್ತರಾದಾರೆಂದು ಕೋರುತ್ತೇನೆ.

ಮಧುಗಿರಿ ತಾ|| ಬಡವನಹಳ್ಳಿ.—ಈಚೆಗೆ ಈ ಪ್ರಾಂತ್ಯ ಕಂಬಳಿ ಹಾಕುವ ಮಳೆಯಾದರೂ ಹೊತ್ತು ಕೆರೆಕುಂಟೆಗಳಿಗೆ ಸುತರಾಂ ನೀರು ಬರಲಿಲ್ಲ. ಕಸಿಲಿ ಸಹಾಯದ ಜಮೀನುಗಳು ಕಮ್ಮಿಯಾಗುತ್ತಿವೆ. ದಿಣ್ಣೆ ಹೊಲಗಳು ತುಂಬಿರಾಗಿವೆ.—ಬ್ಯಾಲ್ಯಗ್ರಾಮದಲ್ಲಿ ಕೋಆಪರೇಟಿವ್ ಸೊಸೈಟಿಯನ್ನು ಸ್ಥಾಪಿಸಿ ಕೆಲವರು ಇದಕ್ಕೆ ಮೆಂಬರುಗಳಾಗಿ ಬಡಬಗ್ಗರಿಗೆ ಸಹಾಯಮಾಡುತ್ತಾ ಅನೇಕರನ್ನು ಉತ್ತಮಸ್ಥಿತಿಗೆ ತರುತ್ತಿರುವಲ್ಲಿ ಹಣವಂತರಾಗಿಯೂ ದುರಾಶೆಯುಳ್ಳವರಾಗಿಯೂ ಇರುವ ಒಬ್ಬಿಬ್ಬರು ತಮ್ಮ ವ್ಯಾಪಾರ ಕೆಡುತ್ತೆಂಬ ಅಭಿಪ್ರಾಯದಿಂದ ಪ್ರತಿಗಳಿಗೆ ದುರ್ಬೋಧನೆಮಾಡುತ್ತಾ, ಸದರಿ ಸೊಸೈಟಿಯಲ್ಲಿ ಹಣ ತೆಗೆದುಕೊಂಡ ಅಂತರಂಗವಾದುತ್ತಿದಾರೆಂದು ಕೇಳುತ್ತೇನೆ. ಇದರಿಂದ ಸರ್ಕಾರದವರ ಘನವಾದ ಉದ್ದೇಶಕ್ಕೂ ಪ್ರಜೆಗಳ ಏಳಿಗೆಗೂ ಹಾನಿಯುಂಟಾಗುತ್ತದೆ. ಈ ದುರಾಶೆಗಳು [illegible] ಪದಗಳನ್ನು ನೋಡಿಕೊಂಡಿದ್ದು ಕಳೆದ 2-3 ವರ್ಷದ ಒಡ್ಡಿ ತೆಗೆದುಕೊಳ್ಳುವದು ಕೇವಲ ಹೋಯಿನಾದುದು.—ಈ ಪ್ರಾಂತ್ಯ ಅನೇಕರಲ್ಲಿ ಒಂದು ವದಂತಿ ಹಬ್ಬಿರುತ್ತೆ. ಸರ್ಕಾರದವರು ನಮ್ಮ ಸೀಮೆಯ [illegible] ಯುದ್ಧಭೂಮಿಗೆ ಕಳುಹಿಸುತ್ತಾರೆಂದು ಮುಂತಾಗಿ ಕೇಳುವದು ಕೇವಲ ಬುದ್ಧಿಹೀನರ ಮಾತಾಗಿದೆ.

ಅರಸೀಕೆರೆ.—ಈಗ ಎರಡು ವಾರಗಳಿಂದ ಆಗಾಗ್ಗೆ ಇಲ್ಲಿ ಸ್ವಲ್ಪ ಮಳೆ ಬಂದದ್ದರಿಂದ ರಾಗಿ ಪೈರು ತಕ್ಕ ಮಟ್ಟಿಗೂ ತೃಪ್ತಿಕರವಾಗಿದೆ. ಭಾವಿ ಕೆರೆ ಕುಂಟೆಗಳಿಗೆ ಸ್ವಲ್ಪ ನೀರು ಬಂದಿರುತ್ತದೆ. ದವಸಗಳ ಧಾರಣೆ ವಿಪರೀತವಾಗಿಲ್ಲದೆ.—ಕಳೆದ ಆಷಾಢ ಮಾಸದಲ್ಲಿ ನಡೆಯಬೇಕಾಗಿದ್ದ ತಿರುಪತಿ ರಥೋತ್ಸವವು ಮಳೆ ಸಲುವಾಗಿ ಮುಂದಿನ [illegible] ನಿಂತುಹೋಗಿತ್ತು. ಈಗ ಈ ತಿಂಗಳು 31 ರಿಂದ ರಥೋತ್ಸವ ಪ್ರಾರಂಭವಾಗಿ 30 ರವರೆಗೂ ನಡೆಯುವದು. ತಾ. 31 ರಲ್ಲಿ ಕೋಆಪರೇಟಿವ್ ಸೊಸೈಟಿ ಸಂಘಗಳ ಕಾನ್ಫರೆನ್ಸು ಕಾರ್ಯಗಳು ಮ|| ನಾರಾಯಣಅಯ್ಯಂಗಾರ್ರವರಿಂದ ಪ್ರಾರಂಭಿಸಲ್ಪಡುವವು.—ಕಳೆದ ತಾ. 21 ರಲ್ಲಿ ಗುಬ್ಬಿ ಮಿಷನ್ ರೆವ್. ಟಿ [illegible] ರವರ ಜೊತೆ ಉಪದೇಶಿಗಳು ಪ್ರಸಂಗಪ್ರಯಾಣವಾಗಿ ಗಂಡಸಿಗೆ ಹೋಗುತ್ತಿರುವಾಗ ಸಾಯಂಕಾಲದ ಹೊತ್ತಿನಲ್ಲಿ ಕಳ್ಳರು ದಾರಿಯಲ್ಲಿ [illegible] ಎಂಬ ಸ್ಥಳದಲ್ಲಿ ಹೊಂಚು ಹಾಕಿಕೊಂಡಿದ್ದ ಹಾಗೂ, ಉಪದೇಶಿಗಳ ಗಾಡಿಗಳೊಂದಿಗೆ ಕಳ್ಳರು ಸಹಾ ಗಂಡಸಿಗೆ ಬಂದ ಹಾಗೂ, ಅವರುಗಳು [illegible] ಬಂಗಲೆಯಲ್ಲಿ ಮಲಗಿದ್ದಾಗ ಕಳ್ಳರು ಅವರ 2 ಪೆಟ್ಟಿಗೆಗಳನ್ನು ತೆಗೆದುಕೊಂಡು ಹೋಗಿ ಅವರಲ್ಲಿದ್ದ ಸಾಮಾನುಗಳನ್ನು ತೆಗೆದುಕೊಂಡು ಪೆಟ್ಟಿಗೆಗಳನ್ನು ಹಳ್ಳದಲ್ಲಿ ಹಾಕಿ ಹೋಗಿದ್ದರೆಂದು ತಿಳಿಯುತ್ತದೆ.

ತುಮಕೂರು ತಾ|| ಕೋರ.—ಇಲ್ಲಿ ಈ ವರ್ಷ ಫಸಲು ಚೆನ್ನಾಗಿದೆ. ಜನಗಳೆಲ್ಲರೂ [illegible] ರಾಗಿರುವರು. ಆದರೆ ನಮ್ಮ ಚಕ್ರವರ್ತಿ ಸಾರ್ವಭೌಮನಿಗೆ ಬಂದಿರುವ ಯುದ್ಧವು ಮಾತ್ರ ಸ್ವಲ್ಪ ವ್ಯಸನವನ್ನುಂಟುಮಾಡಿರುವುದರಿಂದ ಪರಮೇಶ್ವರನು ಈ ಯುದ್ಧದಲ್ಲಿ ನಮ್ಮ ಸಾರ್ವಭೌಮ ಸರ್ಕಾರದವರಿಗೆ ವಿಜಯವನ್ನು ಉಂಟುಮಾಡಿ ಆಶೀರ್ವದಿಸಬೇಕಾಗಿ ಈ ಪ್ರಭುತ್ವವನ್ನು ಕಾಪಾಡಲೆಂದು ಈ ಗ್ರಾಮದ ಮುಖಂಡರಾದ ಪಾ|| ಚಿಕ್ಕಣ್ಣನವರು, ಪಾ|| ಕಾಳಣ್ಣಗೌಡರು, ಶ್ಯಾ|| [illegible] ಜಯವರು, ಪಾ|| ಚನ್ನಪ್ಪನವರು, ಸಾ|| ಮುಷ್ಟಪ್ಪನವರು, ಕೆ|| [illegible] ಪ್ಪನವರು, ನೆಟ್ಟೆಗರ ರಾಮಯ್ಯನವರು ಮತ್ತು ಲಂಗಪ್ಪನವರು, ಮುನಿಯಾನರ ನಾರಯ್ಯನವರು, ಅಮರನಪ್ಪನವರು, ಕೇ|| ರಂಗಯ್ಯ, ಲಿಂಗಪ್ಪ ವಗೈರೆಯರು ಸೇರಿ ಒಂದು ಮೀಟಿಂಗ್ ನಡಿಸಿ, ಈ ಕಾರ್ಯದಲ್ಲಿ ನಮ್ಮ ಸಾರ್ವಭೌಮನಿಗೆ ಜಯವಾಗಲೆಂದು ಹರಕೆಯನ್ನು ಕೈಗೊಂಡು ಈ ಊರ ಮಲ್ಲೇಶ್ವರಸ್ವಾಮಿಗೆ ಮೊಸರು ಅಭಿಷೇಕವನ್ನು ತಾ. 23 ರಲ್ಲಿ ಬಹು ವೈಭವದಿಂದಲೂ, ಸಂತರ್ಪಣೆಯಿಂದಲೂ ನಡಿಸಿದರು. 5.6 ಪಲ್ಲಾ ದವಸವೂ, 20.30 ರೂಪಾಯಿ ನಗದೂ ಖರ್ಚಾಯಿತು. ಹಳ್ಳಿಗಳ ಜನಗಳೆಲ್ಲಾ ಒಂದು ದಿನ ಪೂರ್ತಿಯಾಗಿ ಭುಜಿಸಿ ಎಲ್ಲರೂ ಸಾರ್ವಭೌಮರವರಿಗೆ ದಿಗ್ವಿಜಯವನ್ನು ಬಯಸಿದರು.

ಕುಣಿಗಲ್ ತಾ|| ಎಡೆಯೂರು.—ದೇಶಕ್ಷೇಮಚಿಂತನೆಯೇ ಪ್ರಜೆಗಳ ಮುಖ್ಯ ಕರ್ತವ್ಯವಾಗಿದೆ. ಅಂತಹ ದೇಶವನ್ನು ಸುಖದಿಂದ ಪರಿಪಾಲಿಸತಕ್ಕ ದೇಶಾಧಿಪತಿಯಾದ ಸಾರ್ವಭೌಮರ ಸೌಖ್ಯವರ್ಧನವೇ ಪ್ರಜಾಭಿವೃದ್ಧಿ ಪುರಸ್ಸರವಾದ ಪ್ರಮಾಣದಂತಿರುವುದು. ಪ್ರಕೃತ ನಮ್ಮ ಇಂಡಿಯಾ ದೇಶ ಪಾಲಕರಾದ ಶ್ರೀಮಾನ್ ಜಾರ್ಜ್ ಪ್ರಭುಗಳು ಚಕ್ರವರ್ತಿತ್ವವನ್ನು ವಹಿಸಿ ಕೆಲವು ವರ್ಷಗಳೇ ಆದಾಗ್ಯೂ ಈಗಾಗಲೇ ಅಲ್ಲಲ್ಲಿ ತೋರಿಬರುವ ಪ್ರಬಲವಾದ ಯುದ್ಧಾದಿಗಳಿಂದ ಜಯಶೀಲರಾಗಿ ಚಿರಕಾಲವೂ ಯಥಾರೀತಿಯಾಗಿ ದೇಶವನ್ನು ಸಂರಕ್ಷಿಸುವಂತೆ ಮಾಡಲಿ ಎಂಬುದಾಗಿ ಸರ್ವಾಂತರ್ಯಾಮಿಯಾದ ಪರಮಾತ್ಮನನ್ನು ಧ್ಯಾನಿಸಲು ಮತ್ತು ಪೂಜಿಸಲು ಅವರವರ ಮತಾನುಸಾರ ಸರ್ವ ಪ್ರಜೆಗಳೂ ಭಾಗಿಗಳಾದ ಪ್ರಯುಕ್ತ ಇದೇ ಅಕ್ಟೋಬರ್ ತಾ. 16 ನೇ ಶುಕ್ರವಾರ ಕುಣಿಗಲ್ ತಾ|| ಎಡೆಯೂರು ಗ್ರಾಮಸ್ಥರೂ ಮ|| ಅಂತರ್ಹೊನ್ನಪ್ಪನವರೂ ಮ|| ಚಿಕ್ಕನಂಜೇಗೌಡರೂ ಸೇರಿ ಈ ಸುತ್ತುಮುತ್ತಿನ ಗ್ರಾಮಗಳ ಎಂಟು ದೇವರುಗಳನ್ನು ಈ ಊರಿನಲ್ಲಿ ಮೆರವಣಿಗೆ ಮಾಡಿಸಿದರು. ಆ ದಿನ ರಾತ್ರಿ ವಿಶೇಷ ಪರಿಮಳಯುಕ್ತವಾದ ಪುಷ್ಪ ಮಂಟಪಾದುವುಗಳ ಅಲಂಕಾರದಿಂದಲೂ, ಬ್ಯಾಂಡುವಾದ್ಯಗಳಿಂದಲೂ, ಬಾಣ ಬಿರುಸುಗಳಿಂದಲೂ, ಮಾವಿನ ತಳಿರುಗಳಿಂದಲೂ ಮತ್ತು ಬಾಳೆಯ ಕಂಬಗಳಿಂದಲೂ ಅಲಂಕೃತವಾದ ಈ ಊರಿನ ಬೀದಿಗಳಲ್ಲೆಲ್ಲಾ ನಿರೀಕ್ಷಿತವಾದ ಜನಸಮುದಾಯದಿಂದೊಡಗೂಡಿ 7 ಗಂಟೆಯಿಂದ ಬೆಳಗಿನ ಜಾವ 4 ಗಂಟೆ ತನಕ ಮೆರವಣಿಗೆಯನ್ನು ಮಾಡಿಸಿದರು. ನೋಟಕ್ಕಾಗಿ ಬಂದಿದ್ದ ಸಾವಿರಾರು ಭಕ್ತಜನಗಳ ಮನಸ್ಸಂತೋಷವನ್ನು ವೃದ್ಧಿಗೊಳಿಸಿದರು. ನೋಟಕರೆಲ್ಲರಿಗೂ ಗ್ರಾಮನಿವಾಸಿಗಳ ಮನೆಗಳಲ್ಲಿ ಊಟ ಉಪಚಾರಾದಿಗಳು ನಡೆದುವು. ಬಂದಿದ್ದವರೆಲ್ಲರೂ ನಮ್ಮ ಶ್ರೀಮಾನ್ ಜಾರ್ಜ್ ಚಕ್ರವರ್ತಿಗಳ ಮತ್ತು ಶ್ರೀಮನ್ಮಹಾರಾಜಾ ಕೃಷ್ಣರಾಜ ಒಡೆಯರವರ ಶ್ರೇಯಃಪ್ರಾರ್ಥನೆಗಳನ್ನು ಬಯಸಿದಂಥವರಾದರು.

ಹುಣಸೂರು.—ಒಂದು ವಾರದಿಂದ ಸೇತುವೆಯ ಮೇಲೆ ಪ್ಲೇಗ್ ತಲೆದೋರಿ 5-6 ಜನರು ಕಾಲವಾದರು. ಟವನಿಗೆಲ್ಲಾ ಎಲ್ಲಿ ಹರಡಿಕೊಳ್ಳುವುದೋ ಎಂಬ ಕಳವಳ ಉಂಟಾಗಿದೆ.—ದವಸಧಾನ್ಯಗಳ ಬೆಲೆ ಏರುತ್ತಲೇ ಇದೆ. ಬಡಬಗ್ಗರು ಜೀವನಮಾಡುವುದು ತುಂಬಾ ಕಷ್ಟ.—ತಾ. 22 ನೇ ಗುರುವಾರ ರಾತ್ರಿ ಒಂದು ಹದ ಒಳ್ಳೇ ಮಳೆಯಾಯಿತು. ಇನ್ನೂ ಮೋಡ ಮುಚ್ಚಿಕೊಂಡು ತುಂತುರು ಬೀಳುತ್ತಿದೆ. ಈ ಪ್ರಾಂತ್ಯ ಕೆಲವು ಗ್ರಾಮಗಳಲ್ಲಿ ಜನಗಳಿಗೆ ನೀರಿಲ್ಲದೆ ಕಷ್ಟಪಡುತ್ತಿದಾರೆ.—ಕೊರಮರ ಗ್ಯಾಂಗುಗಳನ್ನು ಹಿಡಿದು ಪೋಲೀಸಿನವರು ಉಸ್ತುವಾರಿ ಮಾಡುವುದು ಎಲ್ಲೆಲ್ಲೂ ರೂಢಿ. ಅವರ ಗಂಡಸರನ್ನೂ, ಹೆಂಗಸರನ್ನೂ, ಮಕ್ಕಳನ್ನೂ ಒಟ್ಟಿಗೆ ಹಿಡಿದುಹಾಕಿಕೊಂಡು ಭಕ್ಷ ಕೊಡದಿದ್ದರೆ ಅವರು ಹೊಟ್ಟೆಹೊರೆಯುವುದು ಹ್ಯಾಗೆ? ಕೆಲಸಮಾಡಲು ಬಿಡುವುದಿಲ್ಲ. ತಿರುಪಕ್ಕೆ ಹೋದರೆ ಯಾರು ಎಷ್ಟು ದಿನ ತಾನೇ ಕೊಟ್ಟಾರು? ಅವರಲ್ಲಿ ಏನಾದರೂ ಅಲ್ಲ ಸ್ವಲ್ಪ ದೋಷವನ್ನು ಕಂಡರೆ ಮೃಗಗಳನ್ನು ಕಂಡಂತೆ ಹೊಡೆಯುತ್ತಾರೆ. 2-3 ವಾರಗಳ ಕೆಳಗೆ ಹುಣಸೂರಲ್ಲಿ ಒಂದು ಗ್ಯಾಂಗಿನವರನ್ನು ಹೊಡೆಯುತ್ತಿದ್ದುದನ್ನು ಕಚೇರಿಯ ಆವರಣದಲ್ಲಿದ್ದವರೆಲ್ಲಾ ನೋಡಿ ತುಂಬಾ ಪರಿತಾಪಪಟ್ಟು ಇದು ಎಂಥಾ ಪರಿಪಾಲನೆಯೆಂದು ಅಸೂಯೆಪಟ್ಟರು. ಪೋಲೀಸ್ ಇಲಾಖೆಯ ಮೇಲಧಿಕಾರಿಗಳು ಇದನು ತನಿಖೆ ಮಾಡಿ ಕ್ರಮಪಡಿಸಬೇಕಾಗಿದೆ.—ಕಳೆದ ವಾರ ಪೋಸ್ಟಲ್ ಇನ್‌ಸ್ಪೆಕ್ಟರವರು ಇಲ್ಲಿನ ಪೋಸ್ಟ್ ಮಾಸ್ಟರ ಮೇಲೆ ಬಂದಿದ್ದ ಅರ್ಜಿಗಳ ವಿದ್ಯಮಾನವನ್ನು ತಿಳಿಯುವುದಕ್ಕಾಗಿ ಹುಣಸೂರಿಗೆ ಬಂದು ವರ್ತಕರ ಅಭಿಪ್ರಾಯವನ್ನು ತಿಳಿಯಬೇಕೆಂದು ಪ್ರಯತ್ನಪಟ್ಟಾಗ ಅವರು ಸೂಪರಿಂಟೆಂಡೆಂಟರಿಗೆ ತಂತಿ ಕೊಟ್ಟರು. ಬಳಿಕ ಇನ್‌ಸ್ಪೆಕ್ಟರವರು ಶಾಂತಚಿತ್ತರಾಗಿ ಅವರನ್ನು ಸಮಾಧಾನಿಸಿ, ಆ ಸ್ಥಳದಲ್ಲಿದ್ದ ಇತರರ ವಾಜ್ಮೂಲವನ್ನು ಬರೆದುಕೊಂಡು ತನಿಖೆಮಾಡಿ ರಿಪೋರ್ಟು ಬರೆದುಕೊಂಡು ವಾಪಸ್ ತೆರಳಿದರು.

ಮಳವಳ್ಳಿ.—ಈ ಊರಲ್ಲಿ ಈಚೆಗೆ 2-3 ಹದ ಮಳೆ ಆಗಿ ಕೆರೆಕಟ್ಟೆಗಳೆಲ್ಲಾ ತುಂಬಿ ಬೆಳೆಗಳೂ ಸಾಧಾರಣವಾಗಿರುತ್ತೆ.—ಹಿರೋಡೆಯಲ್ಲಿ ಪ್ಲೇಗು ತಗುಲಿದ ರೋಗಿಯನ್ನು ಅಗ್ರಹಾರದಲ್ಲಿರುವ ಅವರ ಮನೆಯವರು ತಂದಿಟ್ಟುಕೊಂಡಿರುವದು ಜನಗಳಲ್ಲೆಲ್ಲಾ ಭಯವನ್ನುಂಟುಮಾಡಿರುತ್ತೆ.—ನಮ್ಮ ಅಮಲ್ದಾರರವರೂ ಸಬ್ ರೆಜಿಸ್ಟ್ರಾರವರೂ ಮುಂದಾಳಾಗಿ ನಿಂತು ಟೌನ್ ಹಾಲಿನಲ್ಲಿ ಒಂದು ರೀಡಿಂಗ್ ರೂಮ್ ಸ್ಥಾಪಿಸಿ ಈಗ್ಗೆ 2-3 ತಿಂಗಳುಗಳಿಂದಲೂ ನಡಿಸಿಕೊಂಡು ಬರುತ್ತಿರುವದು ಬಹಳ ಶ್ಲಾಘನೀಯವಾಗಿದೆ.—ಈಗ ನಮ್ಮ ಎ. ವಿ. ಸ್ಕೂಲಿನಲ್ಲಿ ಸಹಾಯೋಪಾಧ್ಯಾಯರುಗಳು ಕಮ್ಮಿಯಾಗಿ ಪಾಠ ಸರಿಯಾಗಿ ನಡೆಯಲು ತೊಂದರೆಯಾಗುತ್ತೆ. ಖಾಲಿ ಇರುವ ಸ್ಥಳಗಳನ್ನೆಲ್ಲಾ ಕೂಡಲೆ ಸರಿಯಾದ ಆಸಾಮಿಗಳಿಂದ ಭರ್ತಿಮಾಡಬೇಕೆಂದು ಪ್ರಾರ್ಥಿಸಲ್ಪಟ್ಟಿದೆ. ಅ|| ಮಾಸ್ಟರು ಮ|| ಬ್ರಹ್ಮದೇವ ಪಂಡಿತರಿಗೆ ಟಿ. ನರಸೀಪುರಕ್ಕೆ ವರ್ಗವಾದುದು ಈ ಸ್ಕೂಲಿಗೆ ಒಂದು ನಷ್ಟವೇ ಸರಿ. ಇವರು ಬಂದು ಸ್ವಲ್ಪ ದಿವಸಗಳಾದರೂ ಬಹಳ ಮುತುವರ್ಜಿ ವಹಿಸಿ ಕೆಲಸಮಾಡಿ ಅನೇಕ ಹುಡುಗರನ್ನು ಲೋಅರ್ ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆಹೊಂದಿಸಿ ಪುರಜನಗಳ ವಿಶ್ವಾಸಕ್ಕೆ ಪಾತ್ರರಾಗಿದ್ದರು. ಇವರಿಗೆ ವರ್ಗವಾದುದಕ್ಕಾಗಿ ಇಲ್ಲಿನ ವಿದ್ಯಾರ್ಥಿಗಳೆಲ್ಲಾ ಸೇರಿ ತಮಗೆ ಅವರಲ್ಲಿದ್ದ ವಿಶ್ವಾಸ ಕೃತಜ್ಞತೆಗಳನ್ನು ತೋರಿಸತಕ್ಕ ಬಗ್ಗೆ ಕಳೆದ ಶನಿವಾರ ಒಂದು ಸಂತೋಷಕೂಟವನ್ನು ನಡಿಸಿ ಭಾನುವಾರ ಅವರನ್ನು ಕಳುಹಿಸಿಕೊಟ್ಟರು.—ಇಲ್ಲಿನ ಗರಲ್ಸ್ ಸ್ಕೂಲಿನ ಸ್ಥಿತಿ ಈಗ ಅಷ್ಟೇನೂ ಚೆನ್ನಾಗಿಲ್ಲ. ಹೆಡ್ ಮಿಸ್ಟ್ರೆಸ್‌ರವರು ಅಶಾವಯಸ್ಕರಾಗಿಯೂ, ಹಾಡು ಕಸೂತಿ ಹೆಣಿಗೆ ವಗೈರೆ ಈಗಿನ ಕಾಲದ ಕುಶಲ ವಿದ್ಯೆಗಳು ತಿಳಿಯದವರಾಗಿಯೂ ಇರುತ್ತಾರೆ. ಹ್ಯಾಗೂ ಬಾಲಕಿಯರ ಸಂಖ್ಯೆ ಕಡಮೆಯಾಗುತ್ತಿದೆ. ಸಂಗೀತದ ಮಾಸ್ಟರು ಹೊರಟುಹೋಗಿ 4-5 ತಿಂಗಳಾಯಿತು. ಈಗ 14-15 ವಯಸ್ಸಿನ ಎ. ವಿ. ಸ್ಕೂಲ್ ವಿದ್ಯಾರ್ಥಿಯೊಬ್ಬನನ್ನು ನೇಮಿಸಿಕೊಂಡಿರುವರು. ನಮ್ಮ ಡಿ|| ಇನ್‌ಸ್ಪೆಕ್ಟರವರು ಈ ಕೊರತೆಗಳನ್ನು ಸರಿಪಡಿಸುವರೆಂದು ಕೋರಲ್ಪಟ್ಟಿದೆ.—ಈಗ ಪೋಲೀಸ್ ಉಸ್ತುವಾರಿ ಚೆನ್ನಾಗಿದೆ, ಕಳ್ಳರ ಹಾವಳಿ ಸ್ವಲ್ಪಮಟ್ಟಿಗೆ ಕಡಮೆ.

ಶಿವಮೊಗ್ಗಾ.—ಇಲ್ಲಿನ ದೊಡ್ಡಪೇಟೆ ಜವಳಿ ಅಂಗಡಿ ಮಾರ್ವಾಡಿಯವರು ಮತ್ತು ಇತರೆ ಅಂಗಡಿಯವರು ದೀಪಾವಳಿ ಹಬ್ಬದ ಸಂತೋಷಕ್ಕಾಗಿ ತಮ್ಮ ಅಂಗಡಿಗಳನ್ನು ನೇತ್ರಾನಂದಕರವಾಗಿ ಶೃಂಗರಿಸಿ ಬಂದವರಿಗೆ ದಕ್ಷಿಣೆ ತಾಂಬೂಲ ಮಿಠಾಯಿ ಹಂಚಿದರು. ಬಸವೇಶ್ವರದೇವರ ಗೋಪುರಿಯನ್ನು ಶೃಂಗಾರ ಮಾಡಿ ಚಕ್ಕಡಿ ಗಾಡಿ ಮೇಲೆ ನಿಲ್ಲಿಸಿ ಬ್ಯಾಂಡ್ ಬಾಜಾ ಭಜಂತ್ರಿಯಿಂದ ಊರಲ್ಲಿ ಮೆರವಣಿಗೆ ಹೊರಡುವವರಿಗೂ ಸದ್ರಿ ಗೋಪುರಿಯು ಕದಲದೆ ಗಾಡಿಯ ಮೇಲೆ ಸುಮ್ಮನೆ ನಿಂತಿತ್ತು. ಬೇರೆ ಗಾಡಿಯವರು ತಮ್ಮ ಬಾಟ್ಲು ಹೋರಿಗಳನ್ನು ಶೃಂಗರಿಸಿಕೊಂಡು ಸದರಿ ಹೋರಿಗಳ ಎದುರಿನಲ್ಲಿ ಹುಲಿವೇಷ ಬ್ಯಾಂಡ್ ವಾದ್ಯ ವಗೈರೆಯಿಂದ ಉತ್ಸವ ಬೆಳಸಿದರು. ಇನ್ನು ಕೆಲವರು ಮಾಡುತ್ತಲೂ ಇದ್ದಾರೆ. ಟವನ್ನಿನ ಸಾಕೀಜು ಕ್ರಮವು ಆಗಾಗ್ಗೆ ತೃಪ್ತಿಕರವಾಗಿ ಜರುಗುತ್ತಾ ಇದೆ. ಆದ್ದರಿಂದ ತಕ್ಕಮಟ್ಟಿಗೆ ಆರೋಗ್ಯವಾಗಿದೆ.—ಧಾರವಾಡ ಜಿಲ್ಲಾ ಹಿರೇಕೆರೂರು ತಾಲ್ಲೂಕು ನಡನೇಗಲಿ ಗ್ರಾಮದ ಲಂಬಾಣಿ ಲಕ್ಷ್ಮಣನಾಯ್ಕ ವಗೈರೆ 6 ಜನರು ಶಿವಮೊಗ್ಗಾ ಡಿ|| ಶಿಕಾರಿಪುರದ ತಾ|| ಶಿರಾಳಕೊಪ್ಪದ ಸೆಂಟ್ರಿನ ಸೇರಿದ ಅಡಗಂಟೇ ಗ್ರಾಮದ ಬೇಡರ ಬಸಕ್ಕ ಎಂಬುವಳಲ್ಲಿದ್ದ ದೊಡ್ಡ ಹೊನ್ನ ಒಡವೆಗಳನ್ನು ಕಳವುಮಾಡಲು ರಾತ್ರಿಕಾಲದಲ್ಲಿ ಸದರಿಯವಳ ಮನೆ ನುಗ್ಗಿದ ಕೂಡ್ಲೆ ಬಸಕ್ಕನು ಗಟ್ಟಿಯಾಗಿ ಕೂಗಿಕೊಂಡದ್ದಕ್ಕೆ ಮೇಲ್ಕಂಡ ಅಪರಾಧಿಗಳು ಕತ್ತಿಗೆ ತಿವಿ ಮಚ್ಚಾಡಿ ಕಡಿದಿದರು. ಹೋತಗಳನ್ನು ಕದ್ದುಕೊಂಡು ಪರಾರಿಯಾಗಿದ್ದರು. ಪ್ಲೇಗ್ ಗಲಾಟೆಯಿಂದ ಊರಿನವರೆಲ್ಲಾ ಷೆಡ್ಡುಗಳಲ್ಲಿದ್ದದ್ದರಿಂದ ಕೇವಲ ಓಡಲು ಸಾವಕಾಶವಾಯ್ತು. ನಂತರ ಗ್ರಾಮಸ್ಥರು ಸೇರಿ ನೋಡುವಲ್ಲಿ ಬಸಕ್ಕನು ಸತ್ತು ಮಲಗಿದ್ದಳು. ಈಗ ಸದರಿ ಅಪರಾಧಿಗಳು ದಸ್ತಗಿರಿಮಾಡಲ್ಪಟ್ಟು ಶಿವಮೊಗ್ಗಾ ಸಬ್ ಡಿವಿಜನ್ ಕೋರ್ಟಿನಲ್ಲಿ ವಿಚಾರ ನಡೆಯುತ್ತಾ ಇದೆ.—ಸರಾಫ್ ನಾಮಗಿರಿಯರ ಗುಮಾಸ್ತೆ ಪೆರುಮಾಳುದಾಸಪ್ಪನವರ ಮಗ ಕೃಷ್ಣಪ್ಪ, ಆಲು ಷೇಕು ಎಂಬವರಿಗೆ ಅಡಿಕೆ ಮೂಟೆ ಕಳುವಾಗಿ ಮಾರಾಟಮಾಡಿದ್ದಕ್ಕೆ ಶಿಕ್ಷೆಯಾಯಿತೆಂದು ಪ್ರಕಟಿಸಿತ್ತಷ್ಟೆ. ಸದರಿ ಕೃಷ್ಣಪ್ಪನಿಗೆ ಡೆಪ್ಯುಟಿ ಕಮಿಷನರ್ ಸಾಹೇಬರವರ ಕೋರ್ಟಿನಲ್ಲಿ ತಾ. 22 ರಲ್ಲಿ ಖುಲಾಸೆಯೂ, ಷೇಕು ಎಂಬವನಿಗೆ ಶಿಕ್ಷೆ ಖಾಯಮೂ ಮಾಡಲ್ಪಟ್ಟಿರುತ್ತೆ.

ಹೊಸದುರ್ಗ.—ಒಂದೆರಡು ವಾರಗಳಿಂದ ಮಳೆ ಇಲ್ಲದಿದ್ದು ಚಿತ್ರಮಳೆಯಲ್ಲಿ ಹದ ಮಳೆ ಆಗಿ ಪೈರುಗಳು ಚೆನ್ನಾಗಿರುತ್ತೆ. ಇನ್ನೊಂದು ಹದ ಮಳೆಯಾದರೆ ರಾಗಿ ಬೆಳೆ ಕೈಸೇರುತ್ತೆ. ಇಷ್ಟಾದರೂ ಇಲ್ಲಿನ ಸಣ್ಣ ಕಟ್ಟೆಗಳಿಗೆ ನೀರು ಬರಲಿಲ್ಲ; ಧಾರಣೆಗಳೂ ಇಳಿಯಲಿಲ್ಲ.—ಸ್ಕೂಲ್ ಮಾಸ್ಟರುಗಳಿಗೆ ಕೆಲವರಿಗೆ ಪ್ರಮೋಷನ್ ಆಗಿರುತ್ತೆ. ಇವರಲ್ಲಿ ಸರ್ವೀಸಿನ್ನಾಗಿರುವ ಕೆಲವರಿಗೆ ಪ್ರಮೋಷನ್ ಆಗಲಿಲ್ಲ. ಇದರಿಂದ ಅವರಲ್ಲಿ ವೈಮನಸ್ಯ ಅಸಮಾಧಾನವೂ ಉಂಟಾಗಿದೆ. ಅನೇಕ ಸ್ಕೂಲುಗಳಲ್ಲಿ ಇದೇ ರೀತಿ ಮಾಡಿರುತ್ತಾರೆಂದು ಹೇಳುವರು. ಇಲಾಖಾ ಅಧಿಕಾರಿಗಳು ಕ್ರಮಪಡಿಸಿ ಬಡ ಮಾಸ್ಟರುಗಳನ್ನು ಪಕ್ಷಪಾತವಿಲ್ಲದಂತೆ ಕಾಪಾಡಬೇಕು.—ಇಲ್ಲಿನ ದೇವಾಂಗದವರಲ್ಲಿ ಎರಡು ಪಂಗಡವಾಗಿ ಅವರ ಕುಲದೇವತೆಯಾದ ಬನಶಂಕರಿದೇವಸ್ಥಾನದಲ್ಲಿ ಪೂಜೆ ಇಲ್ಲದೆ ಎರಡು ಮೂರು ತಿಂಗಳಿಂದ ನಿಂತು ಹೋಗಿತ್ತು. ಇದಕ್ಕಾಗಿ ಚಿತ್ರದುರ್ಗದ ಡೆಪ್ಯುಟಿ ಕಮಿಷನರ್ ಸಾಹೇಬರಲ್ಲಿ ವ್ಯಾಜ್ಯಮಾಡುತ್ತಾ ಇದ್ದರು. ಹೀಗಿರುವಾಗ ದಾವಣಗೆರೆ ಸಬ್ ಡಿವಿಜನ್ ಸಾಹೇಬರಾದ ಮ|| ಬೊಕ್ಕಣ್ಣನವರು ಈ ವ್ಯಾಜ್ಯವನ್ನು ತಿಳಿದು ಹೊಸದುರ್ಗಕ್ಕೆ ದಯಮಾಡಿಸಿ ದೇವಸ್ಥಾನವನ್ನು ಪರಾಂಬರಿಸಿ ಕೆಳಪೇಟೆ ನಗಾರಿಚಿಕ್ಕಣ್ಣ ವಗೈರೆಯವರಿಂದ ಮೇಲಿನ ಪೇಟೆ ಗವೀರಂಗಪ್ಪ ವಗೈರೆರಿಗೆ ಮಾಮೂಲು ಪೂಜೆ ಕೊಡಬೇಕೆಂದು ಪಂಚಾಯಿತರ ಮುಖಿತಃ ತೀರ್ಮಾನಿಸಿ ಬೀಗ ತೆಗಿಸಿಕೊಟ್ಟರು. ದೊಡ್ಡಬಳ್ಳಾಪುರದ ಮ|| ಕೆ. ವೀರಪ್ಪಶಾಸ್ತ್ರಿಗಳನ್ನು ಕರಸಿ ದೇವರಿಗೆ ಸಂಪ್ರೋಕ್ಷಣೆ ಮಾಡಿಸಿ ನಂತರ ಗಂಗಾಸ್ನಾನ, ಅಗ್ನಿಕುಂಡ, ಮಹಾನೈವೇದ್ಯ, ಸಮಾರಾಧನೆ ಸಹ ನೆರವೇರಿಸಿ ದೊಡ್ಡ ಉತ್ಸವವನ್ನು ಮಾಡಿಸಿದರು. ಈ ಮೂರು ನಾಲ್ಕು ದಿನಗಳೂ ದೇವಸ್ಥಾನದಲ್ಲಿ ಅಭಿಷೇಕಪೂಜೆ ಉತ್ಸವಾದಿಗಳನ್ನು ಮಾಡಿಸಿ ಈಗ ನಡೆಯುವ ಯುದ್ಧಕಾರ್ಯಗಳಲ್ಲಿ ನಮ್ಮ ಬ್ರಿಟಿಸ್ ಸಾಮ್ರಾಜ್ಯಕ್ಕೆ ಜಯ ಉಂಟಾಗುವಂತೆ ದೇವರ ಪ್ರಾರ್ಥನೆಯೂ, ನವಗ್ರಹಪೂಜೆಯೂ ಮ|| ವೀರಪ್ಪಶಾಸ್ತ್ರಿಯವರಿಂದ ನಡಿಸಿ, ಅಲ್ಲಿ ಕೂಡಿದ್ದ ಸರ್ವರೂ ಜಯಘೋಷವನ್ನು ಮಾಡಿದರು. ಸಬ್ ಡಿವಿಜನ್ ಸಾಹೇಬರವರೂ ಅಮಲ್ದಾರರವರೂ ಪರಾಂಬರಿಸಿ ಸಂತೋಷಪಟ್ಟು ಮಹಾಮಂಗಳಾರತಿ ಕಲಾಪ್ಪ ನೋಡಲು ದಯಮಾಡಿದರು. ಇವರು ಪಂಗಡಗಳನ್ನು ತಪ್ಪಿಸಿ, ನಿಂತುಹೋಗಿದ್ದ ಪೂಜೆಯನ್ನು ನಡಿಸಿ ಉತ್ಸವಾದಿಗಳನ್ನು ಜರುಗಿಸಿದ್ದಕ್ಕೆ ಅವರ ಉದಾರಗುಣವನ್ನು ಸರ್ವರೂ ಕೊಂಡಾಡಿದರು.

ಹೊಳೆನರಸಿಪುರ.—ಈಚೆಗೆ ಈ ಪ್ರಾಂತ್ಯ ಮಳೆಯಾಗಿ ದನಕರುಗಳಿಗೂ, ಈಗಿನ ಪೈರುಗಳಿಗೂ ತಕ್ಕಮಟ್ಟಿಗೆ ಅನುಕೂಲವಾಗಿದೆ. ಆದರೆ ಕೆರೆ ಕುಂಟೆಗಳಿಗೆ ಮಾತ್ರ ನೀರು ಸಾಲದು. ಧಾರಣೆವಾಸಿಗಳು ಮಾತ್ರ ಅಗ್ಗವಾಗಲಿಲ್ಲ. ರಾಗಿ ರೂಪಾಯಿಗೆ 12½-13 ಸೇರು, ಅಕ್ಕಿ 7-7½ ಸೇರು ಮಾರುತ್ತಾರೆ. ನಮ್ಮ ಅಮಲ್ದಾರ್ರು ಪ್ರತಿ ಸೋಮವಾರ ಸಂತೆಗೆ ದಯಮಾಡಿ ಅಳತೆ, ತೂಕ ವಗೈರೆ ಅಜಮಾಯಿಷಿಮಾಡಿ ಹೆಚ್ಚುಕಡಮೆ ಇದ್ದಲ್ಲಿ ಅಂಥವರುಗಳಿಗೆ ತಕ್ಕಮಟ್ಟಿಗೆ ಹೆದರಿಕೆಯನ್ನು ಸಹ ಉಂಟುಮಾಡುತ್ತಲಿದಾರೆ. ಅಲ್ಲದೆ ಮ್ಯುನಿಸಿಪಾಲಿಟಿ ವಿಚಾರದಲ್ಲಿ ಸಹಾ ನಿಗಾ ನೋಡುತ್ತಲಿರುವರು. ಈ ವಿಚಾರದಲ್ಲಿ ಬೆಳಗಿನ ಹೊತ್ತು ಬೀದಿಗಳಿಗೆ ನಮ್ಮ ಅಮಲ್ದಾರ್ರವರು ಸಂಚಾರ ಹೊರಟರೆ ಇಲ್ಲಿರತಕ್ಕ ನ್ಯೂನತೆಗಳು ಗೋಚರವಾಗುವುದರಲ್ಲಿ ಸಂದೇಹವಿಲ್ಲ.—ಕಳೆದ ತಾ. 19 ನೆ ಸೋಮವಾರ ಹಾಸನದಿಂದ ರೆವ್. ಬ್ರಾಕ್‌ಬ್ಯಾಂಕ್ ಸಾಹೇಬರವರು ಮತ್ತು ಅ|| ಕಮಿಷನರ್ ಮ|| ಅಪ್ಪಣ್ಣಯ್ಯಂಗಾರ್ರವರು, ನಮ್ಮ ಅಮಲ್ದಾರ್ ಮ|| ವೆಂಕಟರಾಯರೂ ಸೇರಿ ಯುದ್ಧದ ರಿಲೀಫ್ ಫಂಡಿನ ವಿಚಾರದಲ್ಲಿ ಅನೇಕ ಜನಗಳಿಗೆ ಪ್ರೋತ್ಸಾಹಕೊಟ್ಟು ಚಂದಾ ವೆಂಬಲಗನ್ನು ವಸೂಲ್ ಮಾಡಿದರು.—ಹಾಸನಕ್ಕೂ ಹೊಳೆನರಸಿಪುರಕ್ಕೂ ಮಧ್ಯೆ ಮೊಸಳೆಕೆರೆ ಕೋಡಿ ನೀರಿನಿಂದ ಅಟಕಾವಾಗಿ ಹೈರೋಡಿನಲ್ಲಿ ತಿರುಗಾಡುವ ಜನಗಳಿಗೆ ಬಹಳ ತೊಂದರೆಯಾಗಿರುತ್ತೆ. ನಮ್ಮ ಗೌರ್ನಮೆಂಟಿನವರು ಜಾಗ್ರತೆಯಾಗಿ ಈ ತೊಂದರೆಯನ್ನು ತಪ್ಪಿಸುವರೆಂದು ನಂಬಿರುತ್ತೇವೆ.—ಹೊಳೆನರಸಿಪುರದ ತಾಲ್ಲೂಕು ಗಸ್ತಿ ಕಡು, ಇಷ್ಟೆ ಕಡು, ಗೊಂದಲಹಳ್ಳಿ ಕಡು, ಈ ಕಡುಗಳಲ್ಲಿ ದೋಣಿ ಹರಿಗೋಲನ್ನು ಸಹ ಒಳ್ಳೇ ಸ್ಥಿತಿಯಲ್ಲಿ ಇಟ್ಟುಕೊಳ್ಳದೆ ಕಂಟ್ರಾಕ್ಟದಾರರು ಜನಗಳಿಗೆ ತುಂಬಾ ತೊಂದರೆ ಮತ್ತು ನಷ್ಟ ಸಹ ಉಂಟುಮಾಡುತ್ತಲಿದಾರೆ. ನಮ್ಮ ಗೌರ್ನಮೆಂಟಿನವರು ಅಂಥವುಗಳನ್ನು ಸರಿಪಡಿಸುವರೆಂದು ನಂಬಿರುತ್ತೇವೆ.—ಈ ಊರು ನಡುಪೇಟೆಯಲ್ಲಿ ಸೋಮವಾರ ಮಧ್ಯಾಹ್ನ 3 ಗಂಟೆ ಸಮಯದಲ್ಲಿ ಒಬ್ಬ ವೈಶ್ಯರ ಗಂಡು ಮಗುವಿನ ಮೇಲೆ ಭರ್ತಿ ಗಾಡಿ ಹೊಡೆದಿದ್ದ ಖೂನಿ ಪ್ರಕರಣವೂ ಮತ್ತು ಇದೇ ಕಸಬೆಗೆ ಸೇರಿದ ವಡೇರಕೊಪ್ಪಲ ಖೂನಿ ಮೊಕದ್ದಮೆಯು ಸಹ ಇನ್ನೂ ತೀರ್ಮಾನವಾಗಲಿಲ್ಲವೆಂದು ತೋರುತ್ತೆ.—ಈ ಊರಿಗೆ ದಯಮಾಡಿರುವ ಪೋಸ್ಟ್ ಮಾಸ್ಟರವರು ತಮ್ಮ ಕೆಲಸಗಳನ್ನು ಬಹಳ ಚಟುವಟಿಕೆಯಿಂದ ನಡಿಸುತ್ತಾ, ಜನರ ಪ್ರೀತಿಯನ್ನು ಸಂಪಾದಿಸಿಕೊಂಡಿದಾರೆ.—ಹೊಳೆನರಸಿಪುರದ ಉತ್ತರಾದಿ ಮಠದ ಮೇಲೆ ಚೀಫ್ ಕೋರ್ಟಿನಲ್ಲಿ ಕೆಲವು ಜನಗಳು ಡಿಕ್ರಿ ಪಡೆದ ನಂತರ ಅದು ಸುಳ್ಳೆಂದು ಪುನಃ ಶ್ರೀಮಠದವರು ದಾವಾಮಾಡಿದ್ದರು. ಸದರಿ ದಾವಾಗಳು ವಜಾ ಆಗಿ ಚೀಫ್ ಕೋರ್ಟಿನಲ್ಲಿ ಸಹ ಕೆಳಕೋರ್ಟಿನಂತೆ ತೀರ್ಮಾನವಾದ್ದರಿಂದ ಈ ವಿಚಾರದಲ್ಲಿ ಹುಜೂರ್ ದಿವಾನ್ ಸಾಹೇಬರವರಲ್ಲಿ ಹೋಗಿ ಹೇಳಿಕೊಳ್ಳಬೇಕೆಂದು ಈ ಮಠದ ಮೇಲಿನ ಡಿಕ್ರಿದಾರರೆಲ್ಲಾ ಮೀಟಿಂಗ್ ನಡಿಸುತ್ತಲಿದಾರೆ.

ತುಮಕೂರು ತಾ|| ತರೂರು.—ಕಳೆದ ಜೂಲೈ ತಾ. 16 ನೇ ಪತ್ರಿಕೆಯಲ್ಲಿ ಪ್ರಕಟಿಸಿರುವ ಮೇರೆ ಈ ಗ್ರಾಮದ ಗ್ರಾಮಾಭಿವೃದ್ಧಿ ಸಂಘದವರಿಂದ ತುಮಕೂರು ಮತ್ತು ಕುಣಿಗಲ ಹೈರೋಡಿಗೆ ಈ ಊರು ಪೇಟೆಯಿಂದ ಸರಿಯಾದ ರಸ್ತೆಯನ್ನು ಮಾಡಿರುತ್ತಾರೆ. ಈ ರಸ್ತೆ ಮಾಡುವಾಗ ಗ್ರಾಮಸ್ಥರು ಜುಗುಪ್ಸೆಯಾದ ಕೆಲಸವೆಂತ ತಿಳಿದಿದ್ದದ್ದು ಈಗ ಅವರಿಂದಲೇ ಶ್ಲಾಘಿಸಲ್ಪಡುತ್ತದೆ. ಈ ಗ್ರಾಮದ ಸುತ್ತುಮುತ್ತಿನ ಸಣ್ಣ ಸಣ್ಣ ಗ್ರಾಮಗಳಲ್ಲೂ ಕೂಡ ಈ ಏರ್ಪಾಡುಗಳು ನಡೆದು ಯಾವ ಗ್ರಾಮಕ್ಕೆ ಹೋದರೂ ರಸ್ತೆಗಳನ್ನೂ ಗ್ರಾಮ ಸಾಕೀಜಾವನ್ನೂ ಸಹ ನೋಡಬಹುದು. ಕಳೆದ ಸೆಪ್ಟಂಬರ್ ತಾ. 7 ರಲ್ಲಿ ದಿವಂಗತರಾದ ಡೆಪ್ಯುಟಿ ಕಮಿಷನರ್ ಮ|| ಬಿ. ಜಿ. ಕುಮಾರಸ್ವಾಮಿನಾಯುಡ್ ರವರು ಈ ಗ್ರಾಮಕ್ಕೆ ದಯಮಾಡಿ ಗ್ರಾಮಾಭಿವೃದ್ಧಿ ಕಾರ್ಯಗಳನ್ನೆಲ್ಲಾ ಪರಾಂಬರಿಸಿ ಬಹುಸಂತೋಷಪಟ್ಟು ಈ ಗ್ರಾಮದಲ್ಲಿ ಕೂಡಲೇ ಯೌವನಸ್ಥರಿಗೋಸ್ಕರ ಒಂದು ನೈಟ್ ಸ್ಕೂಲನ್ನು ಸ್ಥಾಪಿಸಬೇಕೆಂದು ಮಾಸ್ಟರಿಗೆ ತಿಳಿಸಿ ಕೂಡಲೆ ಹುಡುಗರನ್ನು ಜಮಾಯಿಸಕೊಡಬೇಕೆಂದು ಗ್ರಾಮದ ಪಟೇಲರಿಗೆ ಅಪ್ಪಣೆಕೊಡಿಸಿ ಹಾಲಿ ಕಟ್ಟುತ್ತಿದ್ದ ಸ್ಕೂಲ್ ಹೊಸಕಟ್ಟಡಕ್ಕೆ ದಯಮಾಡಿ ಕಟ್ಟಡವನ್ನೆಲ್ಲಾ ಪರಾಂಬರಿಸಿ, ಊರಿನ ಪ್ರಜಾಸಂಖ್ಯೆಯು 700 ಇರುವುದರಿಂದಲೂ, ಸ್ಕೂಲಿಗೆ ಬರತಕ್ಕ ವಯಸ್ಕರಾದ ಬಾಲಕರು 150 ರ ಮೇಲೆ ಇರುವುದರಿಂದ ಈ ಕಟ್ಟಡಕ್ಕಿಂತಲೂ 3-4 ರಷ್ಟು ದೊಡ್ಡದಾಗಿ ಕಟ್ಟಡವಿರಬೇಕಾಗಿತ್ತು. ಹಾಲಿ ಶಾಲೆಯಲ್ಲಿ ಓದುತ್ತಿರುವ ಮಕ್ಕಳಿಗೂ ಕೂಡ ಈ ಕಟ್ಟಡವು ಸಾಲುವುದಿಲ್ಲ. ಆದರೆ ಇಲಾಖೆಯವರು ಹೆಚ್ಚು ವಿಸ್ತೀರ್ಣವಾದ ಕಟ್ಟಡಗಳನ್ನು ನಮ್ಮ ಗ್ರಾಮಕ್ಕೆ ಕಟ್ಟಿಸಿಕೊಡುತ್ತಾರೆಂದು ಅಪ್ಪಣೆಕೊಡಿಸಿ ಮೋಟರಿನಲ್ಲಿ ಕುಮ್ಮೂರ್ ಮಾರ್ಗವಾಗಿ ದಯಮಾಡಿದವರು ಪುನಃ ದರ್ಶನವನ್ನು ಕೊಡದೆ ಕಾಲವಾದ ವಾರ್ತೆಯು ತಮ್ಮ ಪತ್ರಿಕಾ ಮುಖೇನ ಕೇಳಿದಾಗ ಎಲ್ಲಾ ಜನರೂ ರೀಡಿಂಗ್ ರೂಮಿನಲ್ಲಿ ಸೇರಿ ಅವರ ಸಹಾನುಭೂತಿ ಮೊದಲಾದ ಸುಗುಣಗಳನ್ನು ಹೊಗಳಿ ವ್ಯಸನಪಟ್ಟುಕೊಂಡರು. ಅವರ ಮಾತನ್ನು ನೆರವೇರಿಸುವುದಕ್ಕಾಗಿಯೇ ಈ ಗ್ರಾಮಸ್ಥರೆಲ್ಲಾ ಒಟ್ಟುಗೂಡಿ ಕ್ಷಿಪ್ರದಲ್ಲಿಯೇ ಅಂದರೆ ಈ ವರಿಗೆ 10 ನೇ ತಾ|| ದಿವಸ ಈ ಗ್ರಾಮದಲ್ಲಿ ರಾತ್ರಿ ಪಾಠಶಾಲೆಯನ್ನು ಸ್ಥಾಪಿಸಿದರು. ಸದರಿ ಶಾಲೆಗೆ ಹಾಲಿ 31 ಮಂದಿ ವಿದ್ಯಾರ್ಥಿಗಳು ದಾಖಿಲಾಗಿ ವ್ಯಾಸಂಗ ಮಾಡುತ್ತಿದಾರೆ.—ಈ ಗ್ರಾಮಕ್ಕೆ ಪೋಸ್ಟಾಫೀಸ್ ಬೇಕೆಂತ ಕೇಳಿದ್ದಕ್ಕೆ ಪೋಸ್ಟಲ್ ಇನ್‌ಸ್ಪೆಕ್ಟರಿಂದ ಪೋಸ್ಟಾಫೀಸು ಕೊಡುತ್ತೇವೆಂತಲೂ, ಡಿಪಾಜಿಟ್ ವೊಬಲಗನ್ನು ಕೊಡುವ ವಿಷಯದಲ್ಲಿ ಮುಚ್ಚಳಿಕೆ ಕೊಡಬೇಕೆಂತಲೂ ಹುಕುಂ ಬಂದಿತ್ತು. ತದನುಸಾರವಾಗಿ ಮುಚ್ಚಳಿಕೆಯನ್ನು ಕೊಟ್ಟಿದೇವೆ. ಇಷ್ಟರಲ್ಲೇ ನಮ್ಮ ಗ್ರಾಮದಲ್ಲಿ ಪೋಸ್ಟಾಫೀಸ್ ಸ್ಥಾಪಿಸಿದರೆ ನಾವು ಪ್ರತಿ ದಿನವೂ ಪತ್ರಿಕೆಗಳನ್ನು ಓದಲು ಸಹಾಯವಾಗುತ್ತದೆ. ಈಗ ತಮ್ಮ ಪತ್ರಿಕೆಗಳು ನಮಗೆ ಸಕಾಲದಲ್ಲಿ ದೊರೆಯದೆ ತುಂಬಾ ಅನನುಕೂಲವಾಗಿದೆ.—ಹೋದ ಸಾರಿ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದ್ದ 4 ವಿಷಯಗಳ ಪೈಕಿ 2 ವಿಷಯಗಳು ಇತ್ಯರ್ಥವಾದವು. ಬಾಕಿ ಇರುವದು ಹಾಲಿ ಇರುವ ಬಾಯ್ಸ್ ಸ್ಕೂಲಿಗೆ ಮತ್ತೊಬ್ಬ ಸಹಾಯೋಪಾಧ್ಯಾಯರನ್ನು ಕೊಡಬೇಕಾದದ್ದು ಒಂದು; ಗರಲ್ಸ್ ಸ್ಕೂಲ್ ಸ್ಥಾಪಿಸಬೇಕಾದದ್ದು ಎರಡನೇದು. ಮಾಸ್ಟರನ್ನು ಕೊಡುವ ವಿಚಾರದಲ್ಲಿ ಇಲಾಖೆಯವರು ಒಪ್ಪಿಕೊಂಡಿದ್ದಾಗ್ಯೂ, ಇದುವರೆಗೂ ಕೊಟ್ಟಿಲ್ಲ. ಹಾಲಿ ಪಾಠಶಾಲೆಯಲ್ಲಿ 56 ಮಂದಿ ಓದುತ್ತಿರುವುದರಿಂದಲೂ, 6 ವರ್ಗಗಳಿರುವುದರಿಂದಲೂ ಒಬ್ಬ ಮಾಸ್ಟರಿಂದ ಪಾಠಹೇಳುವುದು ಸಾಧ್ಯವಿಲ್ಲ.—ನಮ್ಮ ಹೊಸ ಸ್ಕೂಲ್ ಕಟ್ಟಡವು ಮ|| ನರಸೇಗೌಡರ ಚಟುವಟಿಕೆಯಿಂದ ಆಗಲೇ ಮುಗಿಯಿತು. ಇನ್ನೂ ಇಂಜನಿಯರಿಂಗ್ ಇಲಾಖೆಯವರು ಯಾತಕ್ಕಾಗಿ ಫೈನಲ್ ಪರೀಟನ್ನು ಮಾಡಲಿಲ್ಲವೋ ತಿಳಿಯದು. ನಮಗೆ ಎಷ್ಟು ಹೊತ್ತಿಗೆ ಈ ಕಟ್ಟಡದಲ್ಲಿ ಪಾಠ ಹೇಳಲು ಸಾಧ್ಯವಾಗುವುದೋ ಎಂದು ತುಂಬಾ ಕುತೂಹಲವಿದೆ. ನಮ್ಮ ಕಡೆಯಲ್ಲಿ ಪ್ರತಿ ದಿವಸವೂ ಮಳೆ ಹುಯ್ಯುತ್ತಿದೆ. ಬೆಳೆಗಳೆಲ್ಲಾ ಬಹು ಮನೋಹರವಾಗಿವೆ. ಕೆರೆಯಲ್ಲಿ ನೀರು ಬಂದಿದೆ.—ಯುದ್ಧದ ಇಂಪೀರಿಯಲ್ ಇಂಡಿಯನ್ ರಿಲೀಫ್ ಫಂಡಿಗಾಗಿ ನಮ್ಮ ಮಾಸ್ಟರು ಮ|| ಭವಾನಿಸಿಂಗರು ಸ್ಕೂಲ್ ಬಾಲಕರಿಂದ ರೂ. 2-6-5 ಪೈಯನ್ನು ವಸೂಲ್ಮಾಡಿ ತಮ್ಮ ಇಲಾಖಾ ಮೊಕ್ತೇಸರರಿಗೆ ರವಾನಿಸಿದಾರೆ.

ಇಂಪೀರಿಯಲ್ ಇಂಡಿಯಾ ರಿಲೀಫ್ ಫಂಡು.

"ವೃತ್ತಾಂತ ಪತ್ರಿಕೆ" ಆಫೀಸ್ ಚಂದಾ ಪಟ್ಟಿ.

ಹಿಂದೆ ವಸೂಲಾಗಿರುವ ಚಂದಾ	ರೂ.	100-1-0
ಮ॥ ಬಿ. ಚನ್ನಪ್ಪಗೌಡರು, ಮಂಡಗನ್ದೆ	,,	3-0-0
ಮ॥ ಜಾರ್ಜ್ ಸತ್ಯೇಂದ್ರ ಪ್ರಸನ್ನ, ಮೈಸೂರು	,,	1-0-0
ಟಿ. ಮರಿಯಮ್ಮ, ಮೈಸೂರು	,,	1-0-0
ಜುಮ್ಲಾ ರೂಪಾಯಿ		105-1-0

ತಾಲ್ಲೂಕು ವರ್ತಮಾನ.

ಶ್ಯಾವುಗೊಂಡ್ಲು.—ಹಿಂಗಾರು ಮಳೆಯು ಕಾಲಕ್ಕೆ ಸರಿಯಾಗಿ ಬಿದ್ದದ್ದರಿಂದ ರೈತರೆಲ್ಲಾ ತೆನೆಗಳನ್ನು ಕಂಡು, ಹಸನ್ಮುಖಿಗಳಾಗಿರುತ್ತಾರೆ. ರೋಗೋಪದ್ರವಗಳೇನೂ ಇಲ್ಲ. ಧಾರಣೆವಾಸಿಗಳು ಯುದ್ಧದ ಗಲಾಟೆಯಿಂದ ಏರಿಹೋಗಿರುತ್ತವೆ. ಮಳೆ ಸರಿಯಾಗಿ ಆಗಿದ್ದರೂ ಕೆರೆ ಕುಂಟೆಗಳಿಗೆ ಮಾತ್ರ ತಕ್ಕಷ್ಟು ನೀರು ಬಂದಿಲ್ಲ.—ಕೆಲವು ದಿನಗಳ ಹಿಂದೆ ಈ ಊರಿಗೆ ಸಮೀಪವಾಗಿರುವ ಎಮ್ಮೇದಾಸನ ಪಾಳ್ಯದಲ್ಲಿದ್ದ ಬೈರಣ್ಣ ಎಂಬುವರು ಪಾರ್ಶ್ವವಾಯುರೋಗದಿಂದ ಕಾಲವಾದರು. ಇವರ ಗುಣಾತಿಶಯಗಳು ಸ್ತೋತ್ರಾರ್ಹವಾದುವು.—ಈ ಟವರ್‍ನಲ್ಲಿ ಶಾರದಾ ಮಂದಿರವೆಂಬ ರೀಡಿಂಗ್ ರೂಮು ಮ॥ ಚನ್ನಪ್ಪನವರ ಅಧ್ಯಕ್ಷತೆಯಲ್ಲಿ ಬಹು ತೃಪ್ತಿಕರವಾಗಿ ನಡೆದು, ಸುಮಾರು ತಿಂಗಳಿಗೆ 200 ಮಂದಿ ವರೆಗೆ ಸೇರುವದಲ್ಲದೆ ಇನ್ನೆರಡು ಹೊಸ ರೀಡಿಂಗ್ ರೂಮುಗಳು ಸ್ಥಾಪಿಸಲ್ಪಟ್ಟಿರುತ್ತವೆ. ಕಳೆದ ವಾರ ಸೊಸೈಟಿಗಳ ಮುಖ್ಯ ಅಧ್ಯಕ್ಷರು ಬಂದು ಇಲ್ಲಿನ ಸೊಸೈಟಿ ಕಾರುಬಾರುಗಳನ್ನು ಪರಾಂಬರಿಸಿ ತೃಪ್ತಿಪಟ್ಟರು.—ತಾ. 23 ನೇ ಶುಕ್ರವಾರ ರಾತ್ರಿ ಮ॥ ಪಟೇಲ್ ಅಪ್ಪಾಜಪ್ಪನವರ ಮನೆಯಲ್ಲಿ ಮ॥ ಶಿವದೇವ ಶಾಸ್ತ್ರಿಗಳ ಶಿವಕಥೆಯು ಬಹು ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು.—ಈ ಟವರ್ ಪ್ರಜೆಗಳು ನಮ್ಮ ಘನವೊಂದಿದ ಚಕ್ರವರ್ತಿ ಸಾರ್ವಭೌಮರವರಿಗೆ ಈಗಿನ ಯುದ್ಧದಲ್ಲಿ ಜಯವಾಗಲೆಂದು ಪ್ರತಿ ದಿನವೂ ಜಗದೀಶ್ವರನನ್ನು ಪ್ರಾರ್ಥಿಸುತ್ತಾರೆ.

ಮೈಸೂರು ಸರ್ಕಾರು ಹುಕುಮುಗಳು.

ಸರ್ವೆ ನಂಬರುಗಳನ್ನು ಪೋಡುಮಾಡುವುದು.—ಜಮೀನು ಒಡುವೆಯಲ್ಲಿದ್ದರೂ, ಸರ್ಕಾರಿ ಬಂಜರಾಗಿದ್ದರೂ ಪೋಡುಮಾಡಿದರೆ ಅಂಥಾ ಪ್ರತಿ ಪೋಡಿನ ವಿಚಾರವನ್ನೂ ಸರ್ಕಾರಕ್ಕೆ ತಿಳಿಸಿ ಅವರ ಸ್ಯಾಂಕ್ಷನ್ ಪಡೆಯಬೇಕೆಂಬದಾಗಿ ರೂಲಸು ಇದುವರೆಗೆ ಜಾರಿಯಲ್ಲಿದೆ. ಈಗ ಸರ್ಕಾರದವರು ಈ ರೂಲನ್ನು ರದ್ದುಮಾಡಿ, ಇನ್ನು ಮುಂದೆ ಪೋಡುಮಾಡತಕ್ಕ ಅಧಿಕಾರವನ್ನು ಸರ್ವೆ ಸೂಪರಿಂಟೆಂಡೆಂಟರಿಗೆ ವಹಿಸಿರುತ್ತಾರೆ. ಸರ್ಕಾರದವರ ಅನುಕೂಲಕ್ಕಾಗಲಿ, ಹೊಸ ಜಮೀನು ಹಿಡುವಳಿಗೆ ಬರುವುದಕ್ಕಾಗಲಿ ಸರ್ವೆ ಸೂಪರಿಂಟೆಂಡೆಂಟರೇ ಜಮೀನುಗಳ ಪೋಡನ್ನು ಸ್ಯಾಂಕ್ಷನ್ ಮಾಡಬಹುದೆಂದು ಹುಕುಂ ಆಗಿದೆ.

ದೇವಸ್ಥಾನಗಳಲ್ಲಿ ಸೇವಾರ್ಥ.—50 ರೂಪಾಯಿ ಮತ್ತು ಅದಕ್ಕಿಂತ ಹೆಚ್ಚು ಖರ್ಚಾಗುವ ಸೇವಾರ್ಥಗಳಿಗೆ ದೇವಸ್ಥಾನಗಳಲ್ಲಿ ಕ್ರಮವಾದ ಹೊಸ ರೆಜಿಸ್ಟರು ಇಡಬೇಕೆಂದೂ, ಟಿಕೆಟುಗಳನ್ನು ಇಡುವುದಕ್ಕೋಸ್ಕರ ಸೇವಾರ್ಥಮಾಡಿಸುವವರಿಂದ ರೂಪಾಯಿಗೆ ಒಂದು ಆಣೆಯಂತೆ ರುಸುಂ ವಸೂಲ್ಮಾಡಬೇಕೆಂದೂ, 500 ರೂಪಾಯಿಯೊಳಗೆ ನಡೆಯುವಂಥಾ ಸೇವಾರ್ಥಗಳನ್ನು ಧರ್ಮಾಧಿಗಳು ದೇವಸ್ಥಾನದ ಅಧಿಕಾರಿಗಳಿಗೆ ತಿಳಿಸದೆ ತಾವೇ ಒಳ ಏರ್ಪಾಡುಗಳನ್ನು ಮಾಡಿ ನಡಿಸಿಕೊಳ್ಳಬಹುದೆಂದೂ, ಇಂಥಾದ್ದಕ್ಕೆ ದೇವಸ್ಥಾನದ ನೌಕರರ ಜವಾಬ್ದಾರಿ ಇರಕೂಡದೆಂದೂ ಸರ್ಕಾರದವರು ಹುಕುಂ ಕೊಟ್ಟಿದ್ದಾರೆ.

ತಕಾವಿ ಸಾಲಗಳು.—ಸಂಸ್ಥಾನಾಮಳ ರೈತರಿಗೆ ಜಮೀನ್ ಆಬಾದಿಗಾಗಿ ತಕಾವಿ ಸಾಲಗಳನ್ನು ಕೊಡುವುದಕ್ಕೆ ಸರ್ಕಾರದವರು ಈ ಮೊದಲೇ 2,00,000 ರೂಪಾಯಿ ಸ್ಯಾಂಕ್ಷನ್ ಮಾಡಿದ್ದರು. ರೆವಿನ್ಯೂ ಕಮಿಷನರ್‍ರವರು ಈ ಹಣವೆಲ್ಲಾ ಕೊಟ್ಟಾಯಿತೆಂದೂ, ಇನ್ನೂ ಈ ಬಾಬಿಗೆ ಹಣ ಬೇಕಾಗಿವೆಯೆಂದೂ ಬರೆದಿದ್ದರ ಮೇಲೆ ಸರ್ಕಾರದವರು ಹೊಸದಾಗಿ 50,000 ರೂಪಾಯಿ ಸ್ಯಾಂಕ್ಷನ್ ಮಾಡಿ, ಈ ಒಟ್ಟು ಹಣಗಳಲ್ಲಿ ಯಾವ ಯಾವ ಡಿಸ್ಟ್ರಿಕ್ಟಿಗೆ ಎಷ್ಟೆಷ್ಟು ಹಣ ವಿನಿಯೋಗಿಸಲ್ಪಟ್ಟಿದೆಯೋ ಇನ್ನೂ ಎಷ್ಟು ಹಣ ಉಳಿದಿದೆಯೋ ಇದನ್ನೆಲ್ಲಾ ತಪ್ಪದೆ ಹಾಕಿ ರಿಪೋರ್ಟು ಕೊಡಬೇಕೆಂದು ಅಪ್ಪಣೆ ಮಾಡಿದಾರೆ.

ಲೋಕಲ್ ಫಂಡ್ ಸಿಬ್ಬಂದಿ ಸಂಬಳ.—ಅಮಲ್ದಾರರು ಹೆಡ್‌ಕ್ವಾರ್ಟರುಗಳಲ್ಲಿ ಇಲ್ಲದಿರುವಾಗ್ಗೆ ಲೋಕಲ್ ಫಂಡ್ ಸಿಬ್ಬಂದಿ ಸಂಬಳದ ಬಟವಾಡೆಗೂ, ಚೆಕ್ಕುಗಳನ್ನು ಮುರಿಸಿ ಹಣ ಕೊಡುವುದಕ್ಕೂ ಬಹಳ ಅನಾನುಕೂಲವಾಗುತ್ತೆಂದು ಗವರ್ನ್‌ಮೆಂಟಿಗೆ ತಿಳಿದುಬಂದದ್ದರಿಂದ ಇನ್ನು ಮುಂದೆ ಅಮಲ್ದಾರರ ಗೈರ್ ಹಾಜರಿಯಲ್ಲಿ ಶಿರಸ್ತೇದಾರರು ಸಂಬಳ ಬಟವಾಡೆಮಾಡಬಹುದೆಂದೂ, ಚೆಕ್ಕುಗಳಿಗೆ ಹಣ ಪಾವತಿಮಾಡಬಹುದೆಂದೂ ಸ್ಯಾಂಕ್ಷನ್ ಮಾಡಿರುತ್ತಾರೆ.

ಪಟೇಲರೂ, ಕೃತ್ಯ ನಡೆದ ರಿಪೋರ್ಟೂ.—ಗ್ರಾಮಾಂತರಗಳಲ್ಲಿ ತಕ್ಸೀರುಗಳೇನಾದರೂ ನಡೆದರೆ ಅವುಗಳ ರಿಪೋರ್ಟನ್ನು ಮೂರು ನಕಲುಗಳಾಗಿ ಬರೆದು ಒಂದು ಪಟೇಲನ ಹತ್ತಿರವೂ, ಒಂದು ಪೋಲೀಸಿಗೂ, ಒಂದು ಮ್ಯಾಜಿಸ್ಟ್ರೇಟರಿಗೂ ಸಿಕ್ಕುವಂತೆ ಮಾಡಿಸಿದರೆ ಬನಾವಣೆ ಮುಂತಾದವು ತಪ್ಪುವುದಕ್ಕೆ ಅವಕಾಶವಾದೀತೆಂದು ಪ್ರಜಾಪ್ರತಿನಿಧಿಗಳು ಸಭೆಯಲ್ಲಿ ಕೇಳಿಕೊಂಡದ್ದಕ್ಕೆ ಅದು ಸಾಧ್ಯವಲ್ಲವೆಂದು ಜವಾಬು ಕೊಟ್ಟಿದ್ದರು. ಈಚೆಗೆ ಚೀಫ್ ಕೋರ್ಟಿನವರು ಈ ರೀತಿ ಏರ್ಪಾಡು ಮಾಡುವುದು ಅವಶ್ಯವೆಂದು ಬೇಳ ಶಿಫಾರಸು ಮಾಡಿದರು. ಸರ್ಕಾರದವರು ಮೇಲ್ಕಂಡ ಹುಕುಮನ್ನು ಪುನರಾಲೋಚನೆ ಮಾಡಿ, ಚೀಫ್ ಕೋರ್ಟಿನ ಶಿಫಾರಸನ್ನು ಅಂಗೀಕರಿಸಿ, ಇನ್ನು ಮುಂದೆ ಪಟೇಲರು ಫಸ್ಟ್ ಇನ್‌ಫರ್ಮೇಷನ್ ರಿಪೋರ್ಟನ್ನು ಮೂರು ನಕಲ್ ಮಾಡಿ ಮೇಲ್ಕಂಡಂತೆ ಪೋಲೀಸಿಗೂ, ಮ್ಯಾಜಿಸ್ಟ್ರೇಟರಿಗೂ ಒಂದೇ ದಿನ ಕಳುಹಿಸಿಕೊಡಬೇಕೆಂದು ವಿಧಿಸಿರುತ್ತಾರಲ್ಲದೆ ಅದಕ್ಕೆ ಬೇಕಾಗಿರುವ ಫಾರಮನ್ನು ರಚಿಸಿ, ಮುದ್ರಿಸಿಕೊಡಬೇಕೆಂದು ಹುಕುಂ ಮಾಡಿದಾರೆ. ಈ ವಿಷಯದಲ್ಲಿ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‍ರವರು ತಮ್ಮ ಇಲಾಖೆಯ ಮೂಲಕ ಅವಶ್ಯವಾದ ತಿಳುವಳಿಕೆಯನ್ನು ಪಟೇಲರಿಗೆ ಪ್ರಚಾರ ಮಾಡಬೇಕಾಗಿದೆ.

ಒಳದೇಶದ ವೃತ್ತಾಂತಗಳು.

ಈ ವಾರ ನಮ್ಮ ಪತ್ರಿಕೆಯು ಹತ್ತು ಪುಟಗಳುಳ್ಳದ್ದಾಗಿದೆ.

ನಾಳೆ ತಾ. ೩ ನೇ ಸೋಮವಾರ ಬ್ರಿಟಿಷ್ ರೆಸಿಡೆಂಟವರು ಬೆಂಗಳೂರಿಂದ ರಾಜಧಾನಿಗೆ ದಯಮಾಡುವರೆಂದು ಕೇಳುತ್ತೇವೆ.

ದಿವಾನ್‌ರವರು ಕಳೆದ ಭಾನುವಾರ ಬೆಂಗಳೂರಿಗೆ ಹೋಗಿ ಒಂದು ದಿನ ಅಲ್ಲಿದ್ದು ಮತ್ತೆ ಮಂಗಳವಾರ ರಾಜಧಾನಿಗೆ ದಯಮಾಡಿದರು.

ನೊವೆಂಬರ್ ತಾ. 21 ನೇ ಶನಿವಾರ ಮಧ್ಯಾಹ್ನ ಬೆಂಗಳೂರು ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ನ್ಯಾಯವಿಧಾಯಕ ಸಭೆಯ ಮೀಟಿಂಗು ನಡೆಯುವುದಾಗಿದೆ.

ನಮ್ಮ ಮೈಸ್‌ರಾಯರವರ ಸ್ನೇಹಿತರಾದ ಒಬ್ಬ ಸರ್ದಾರರು ಶಿಕಾರಿಮಾಡುವುದಕ್ಕಾಗಿ ಗುಂಡ್ಲುಪೇಟೆಯ ವೈಸ್‌ರಾಯರವರ ಕ್ಯಾಂಪಿಗೆ ಮುಂದಿನ ವಾರ ಬರುವವರಾಗಿದಾರೆ.

ಶ್ರೀಮನ್ ಮಹಾರಾಜರವರು ಅರಮನೆಯ ರಾಣೀವಾಸದವರ ಸಮೇತ ತುಲಾಸಂಕ್ರಮಣದ ನಿಮಿತ್ತ ಕೊಡಗು ಭಾಗಮಂಡಲದಲ್ಲಿ ತಲಕಾವೇರಿಗೆ ಮುಂದಿನ ತಿಂಗಳು 9 ನೇ ತಾ. ದಯಮಾಡಿಸುವಂತೆ ಏರ್ಪಾಡಾಗಿದೆ.

ಬೆಂಗಳೂರು ಕುಂಬಾರಪೇಟೆಯಲ್ಲಿ ರೇವಮ್ಮನೆಂಬ 19 ವಯಸ್ಸಿನ ಹುಡುಗಿಯು ತನ್ನ ಮನೆ ಕೊಟಡಿಯಲ್ಲಿ ನೇಣುಹಾಕಿಕೊಂಡು ಕಾಲವಾದಳು. ಮಹಜರಿನಲ್ಲಿ ಅವಳು ಆತ್ಮಹತ್ಯಮಾಡಿಕೊಂಡಳೆಂದು ತೀರ್ಮಾನವಾಯಿತು.

ರಾಜಧಾನಿಯಲ್ಲಿ ನಿಖಿಲರೋಗಹಾರಿ ಕರ್ಣಾಟಕ ವೈದ್ಯಶಾಲೆಯನ್ನಿಟ್ಟುಕೊಂಡು ಬಹು ಕಾಲದಿಂದ ಅನೇಕ ರೋಗಿಗಳಿಗೆ ಚಿಕಿತ್ಸೆಮಾಡಿ ಹೆಸರುವಾಸಿಗೆ ಬಂದಿದ್ದ ಮ॥ ಪಂಡಿತ ಕೃಷ್ಣಾಜಟ್ಟಪ್ಪನವರು ಕಳೆದ ವಾರ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಅರಕಲಗೂಡು ತಾಲ್ಲೂಕು ರಾಮನಾಥಪುರದಲ್ಲಿ ನೊವೆಂಬರ್ ತಾ. 24 ಮತ್ತು 25 ನೇ ಮಂಗಳವಾರವೂ ಬುಧವಾರವೂ ಗೋಜಾತಿಗಳ ಪ್ರದರ್ಶನವನ್ನು ನಡಿಸಿ ಉತ್ತಮವಾದ ರಾಸುಗಳಿಗೆ ಬಹುಮಾನಗಳನ್ನು ಕೊಡುವಂತೆ ಡೆಪ್ಯುಟಿ ಕಮಿಷನರ್‍ರವರು ಪ್ರಕಟಮಾಡಿದಾರೆ.

ಇಂಪೀರಿಯಲ್ ಇಂಡಿಯನ್ ರಿಲೀಫ್ ಫಂಡಿಗೆ ದೊಡ್ಡಬಳ್ಳಾಪುರದ ತಾಲ್ಲೂಕಿನಲ್ಲಿ ರೂ 30-4-0 ಯೂ, ಆನೇಕಲ್ ತಾಲ್ಲೂಕಿನಲ್ಲಿ ಸೆಪ್ಟಂಬರ್ ತಾ 22 ರಿಂದ ಅಕ್ಟೋಬರ್ ತಾ 14 ರವರೆಗೆ ರೂ 114-10-0 ಯೂ ಚಂದಾ ವಸೂಲಾಗಿದೆ ಎಂದು ತಿಳಿದುಬರುತ್ತದೆ.

ಬೆಂಗಳೂರು ಸಿಟಿ ರೈಲ್ವೆ ಸ್ಟೇಷನ್‍ನಲ್ಲಿ ಅಡಿಕೆ ಮೂಟೆಯನ್ನು ಕಳುವು ಮಾಡಿದ ರತ್ನಂ ಎಂಬ ರೈಲ್ವೆ ನೌಕರನಿಗೆ 6 ತಿಂಗಳ ಕಠಿಣ ಸಜಾವೂ, ಕಡೂರು ರೈಲ್ವೆ ಸ್ಟೇಷನ್‍ನಲ್ಲಿ ಒಬ್ಬ ಪ್ರಯಾಣಿಕನ ಬಳಿ ಹಣವನ್ನು ಕದ್ದುಕೊಂಡು ಹೋಗುತ್ತಿದ್ದ ಶಂಕರನೆಂಬವನಿಗೆ 4 ತಿಂಗಳ ಕಠಿಣ ಸಜಾವೂ ವಿಧಿಸಲ್ಪಟ್ಟಿದೆ.

ರಾಜಧಾನಿಯಲ್ಲಿದ್ದ ಕೊಪ್ಪರಂ ದೊಡ್ಡ ಅಪ್ಪಾವುಶೆಟ್ಟರು ಹಿಂದಿನ ವಾರ ಕಾಲವಾದರೆಂದು ತಿಳಿಸಲು ವಿಷಾದವಾಗುವುದು. ಇವರು ಬಹುಕಾಲದಿಂದಲೂ ತೆಲುಗಿನಲ್ಲಿ ಕವಿತ್ವ ಮಾಡುವುದರಲ್ಲಿ ತುಂಬಾ ಕುಶಲಬುದ್ಧಿಯುಳ್ಳವರಾಗಿ ಮಹಾರಾಜರುಗಳಿಂದಲೂ ಅನೇಕ ಮಹನೀಯರಿಂದಲೂ ಗಣ್ಯತೆಯನ್ನೂ ಬಹುಮಾನಗಳನ್ನೂ ಪಡೆದವರಾಗಿದ್ದರು.

ಒಬ್ಬ ಬಾತ್ಮಿದಾರರು ಬರೆಯುವುದು.—ಸೊರಬ ತಾಲ್ಲೂಕು ಚಂದ್ರಗುತ್ತಿಯಲ್ಲಿ ಬಾಲಬ್ರಹ್ಮಚಾರಿಗಳಾಗಿಯೂ, ಸುಮಾರು 80 ವಯಸ್ಸಿನವರಾಗಿಯೂ, ಶಾಸ್ತ್ರಜ್ಞರೂ ವೇದಾಂತಿಗಳೂ ಆಗಿಯೂ, ವಿಶೇಷ ಪರೋಪಕಾರಿಗಳಾಗಿಯೂ ಇದ್ದ ವೇ॥ ಶಂಭುಭಟ್ಟರು ಕಳೆದ ತಾ 16 ರಲ್ಲಿ ಕಾಲವಾದದ್ದು ಈ ಪ್ರಾಂತ್ಯದವರಿಗೆಲ್ಲಾ ವ್ಯಸನವನ್ನುಂಟುಮಾಡಿದೆ.

ಒಬ್ಬ ಬಾತ್ಮಿದಾರರಿಂದ.—ಸಂಡೂರು ಸಂಸ್ಥಾನದಲ್ಲಿ ಯುದ್ಧದ ರಿಲೀಫ್ ಫಂಡಿಗೆ 12 ವರುಷದೊಳಗಿನ ಲಂಡನ್ ಮಿಷನ್ ಗರ್ಲ್ಸ್ ಸ್ಕೂಲ್ ಬಾಲಕಿಯರು ತಿರಕಾರಿಯನ್ನು ಹಾಕಿ ಅದರಿಂದ ಈ ಮರಿಮಿಗೂ ಸೇರಿಸಿದ ಮೊಬಲಗು ರೂ. 37-3-0; ಇದಲ್ಲದೆ ಒಬ್ಬ ಸಂಡೂರು ನಿದರ್ಶಕರು ರೂ. 1 ನ್ನೂ, ಮಿ॥ ಜೆ. ಜೆ. ಫ್ಲೋರೆಂಡ್‍ರವರು ರೂ 5 ನ್ನೂ ಚಂದಾ ಕೊಟ್ಟಿದ್ದಾರೆ.

ರಾಜಧಾನಿಯ ಟ್ರೈನಿಂಗ್ ಕಾಲೇಜಿನಲ್ಲಿ ಕನ್ನಡ ಲೋಅರ್ ಸೆಕೆಂಡರಿ ಟ್ರೈನಿಂಗ್ ತರಗತಿಗೆ ಬಂದು ಓದುತ್ತಿರುವ ಪರಸ್ಥಳದ ಸುಮಾರು 60 ಮಂದಿ ಉಪಾಧ್ಯಾಯರಿಗೆ ಮೂರು ತಿಂಗಳಿಂದ ಸರ್ಕಾರದವರು ಸಂಬಳ ಬಟವಾಡೆ ಮಾಡಲಿಲ್ಲವೆಂದೂ, ಈ ಪ್ರಕೆ ಸರ್ಕಾರಿ ಬೋರ್ಡಿಂಗ್ ಹೋಮಿಗೆ ಸೇರದೆ ಇರುವ ಉಪಾಧ್ಯಾಯರು ಜೀವನಕ್ಕೆ ಬಹಳ ಕಷ್ಟಪಡುತ್ತಿದ್ದಾರೆಂದೂ ಕೇಳುತ್ತೇವೆ.

ಮೈಸೂರು ಫಾರೆಸ್ಟ್ ಇಲಾಖೆಯ ನೌಕರನಾದ ಶಂಕರಸ್ವಾಮಿ ಅಯ್ಯರೆಂಬುವನು ಸರ್ಕಾರದ ಹಣ ಸುಮಾರು 400 ರೂಪಾಯನ್ನು ತಿಂದುಹಾಕಿ ಒಂದು ತಿಂಗಳಿಂದ ಸಿಕ್ಕದೆ ತಲೆತಪ್ಪಿಸಿಕೊಂಡು ಹೋಗಿದ್ದನು. ಪೋಲೀಸಿನವರು ಅವನನ್ನು ಕಲ್ಕತ್ತಾ ಪಟ್ಟಣದ ಒಂದು ಹೋಟೇಲಿನಲ್ಲಿ ಹಿಡಿದು ಬೆಂಗಳೂರಿಗೆ ಕರೆತಂದಿದಾರೆ. ಅವನೂ ಫಾರೆಸ್ಟ್ ರೇಂಜರ್ ಮ॥ ಎಂ. ಎಸ್. ಕೇಶವನ್ ಎಂಬವರೂ ಈ ಮೊಕದ್ದಮೆಯಲ್ಲಿ ಅಪರಾಧಿಗಳಾಗಿರುತ್ತಾರೆ.

ಅಮ್ಮಿಕಾರದ ನ್ಯಾಷನಲ್ ಇನ್ಷುರೆನ್ಸ್ ಕಂಪನಿಯ ಲೇಟ್ ಬ್ರಾಂಚ್ ಸೆಕ್ರೆಟರಿ ಮ॥ ಟಿ ಎಸ್. ಆರ್. ಅಯ್ಯರವರು ಅದೇ ಕಂಪನಿಯ ಲೇಟ್ ಚೀಫ್ ಏಜಂಟ್ ಮ॥ ಎಂ. ಎಲ್. ನಾಗಣ್ಣನವರ ಮೇಲೆ ರಾಜಧಾನಿಯ ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಕ್ರಿಮಿನಲ್ ಮೊಕದ್ದಮೆ ಮಾಡಿದ್ದರಷ್ಟೆ. ಮ್ಯಾಜಿಸ್ಟ್ರೇಟರು ದೀರ್ಘಕಾಲ ಈ ಮೊಕದ್ದಮೆಯನ್ನು ವಿಚಾರಣೆ ಮಾಡಿ ಕಳೆದ ತಾ 22 ರಲ್ಲಿ ಫಿರ್ಯಾದನ್ನು ವಜಾ ಮಾಡಿಬಿಟ್ಟರು. ಈಗ ಮ॥ ಅಯ್ಯರವರ ಮೇಲೆ ಫಿರ್ಯಾದು ಮಾಡಬೇಕೆಂದು ಮ॥ ನಾಗಣ್ಣನವರು ಮ್ಯಾಜಿಸ್ಟ್ರೇಟರ ಅಪ್ಪಣೆಯನ್ನು ಕೇಳಿರುತ್ತಾರೆ.

ದಿವಾನ್‍ರವರು ಕಳೆದ ವಾರ ರಾಜಧಾನಿಯಲ್ಲಿರುವ ಗವರ್ನ್‌ಮೆಂಟ್ ಪಂಚಮಾ ಸ್ಕೂಲಿಗೆ ದಯಮಾಡಿ, ವಿದ್ಯಾರ್ಥಿಗಳು ವಿದ್ಯೆಯನ್ನೂ ಕಸಬುಗಳನ್ನೂ ಕಲಿಯುವುದರಲ್ಲೂ, ದುರಭ್ಯಾಸಗಳನ್ನೆಲ್ಲಾ ಬಿಟ್ಟು ಎಲ್ಲಾ ಭಾಗಗಳಲ್ಲೂ ಇತರ ಪಂಗಡಗಳ ಬಾಲಕರಂತೆ ಸಚ್ಚರಿತ್ರರಾಗುವುದರಲ್ಲೂ ಸಾಹಸಪಡುತ್ತಿರುವುದನ್ನು ನೋಡಿ ತುಂಬಾ ಸಂತೋಷಪಟ್ಟು, ಸೆಕ್ರೆಟರಿಗಳ ಏರ್ಪಾಡುಗಳನ್ನು ಶ್ಲಾಘನೆಮಾಡಿ, ಇಂಥಾ ಪಾಠಶಾಲೆಗಳನ್ನು ಸಂಸ್ಥಾನಾಮಳ ಸ್ಥಾಪಿಸಿ ನಡಿಸುತ್ತಾ ಬಂದಲ್ಲಿ ಹಿಂದೆಬಿದ್ದಿರುವ ಈ ಪಂಚಮರೆಲ್ಲಾ ತುಂಬಾ ಅಭಿವೃದ್ಧಿಗೆ ಬಂದಾರೆಂದು ಅಭಿಪ್ರಾಯಪಟ್ಟರು.

ಒಬ್ಬ ಬಾತ್ಮಿದಾರರಿಂದ.—ಮೊಳಕಾಲ್ಮೂರು ಜವಳಿ ವರ್ತಕರು ಸಂಕಪ್ಪನವರ ಅಯ್ಯನವರು ವ್ಯಾಪಾರಕ್ಕಾಗಿ ಚಾಮರಾಜನಗರದ ಆಚೆ ಇರುವ ಮರಹಳ್ಳಿ ಬಳಿ ಹೋಗುತ್ತಿರುವಾಗ್ಗೆ ಕಳೆದ ತಾ 25 ನೇ ಭಾನುವಾರ ಬೆಳಗ್ಗೆ 11-12 ಗಂಟೆ ಹೊತ್ತಿನಲ್ಲಿ ಕಳ್ಳರು ಬಿದ್ದು ಅವರ ಬಳಿ ಇದ್ದ 30-40 ರೂಪಾಯಿನ ಪದಾರ್ಥಗಳನ್ನು ಕಳುವುಮಾಡಿದರು. ಅವರು ಅಲ್ಲಿನ ಜಮಾದಾರರಿಗೆ ತಿಳಿಸಿ ಮೂರು ಮಂದಿ ಕಳ್ಳರನ್ನು ಪತ್ತೆಮಾಡಿಕೊಟ್ಟರೂ ಅವರ ಮೇಲೆ ಮೊಕದ್ದಮೆ ಮಾಡದೆ ಅವರನ್ನು ಬಿಟ್ಟು ಇರುತ್ತಾರೆ, ಹೀಗಾದರೆ ಪ್ರಯಾಣಿಕರ ಪಾಡೇನೋ, ಪೋಲೀಸಿನವರಿದ್ದೂ ಪ್ರಯೋಜನವೇನೋ ತಿಳಿಯಲಿಲ್ಲ.

ಮೈಸೂರು ಗವರ್ನ್‌ಮೆಂಟಿನ ರೈಲ್ವೆ ಇಲಾಖೆಯಲ್ಲಿ ಅಧಿಕಾರಿಯಾಗಿ ಬಂದಿದ್ದ ಮ॥ ಡಿ ಜಿ ಫಾಣೆಯವರು ವಾಪಸು ಬ್ರಿಟಿಷ್ ನೌಕರಿಗೆ ಹೊರಟು ಹೋದರು. ಕಳೆದ ವಾರ ಅವರನ್ನೂ ಅವರ ಪತ್ನೀರವರನ್ನೂ ಬೆಂಗಳೂರಿನಲ್ಲಿ ಅವರ ಮಿತ್ರರು ಸತ್ಕರಿಸಿ ಅವರ ಸತ್ಕಾರ್ಯವನ್ನು ಕೊಂಡಾಡಿದರು. ಇವರು ಎರಡು ವರುಷಗಳಿಂದ ತುಂಬಾ ಚಟುವಟಿಕೆಯಾಗಿ ಸರ್ಕಾರಿ ಕೆಲಸಗಳನ್ನು ನಡಿಸಿ ರೈಲ್ವೆ ಹೊಸ ಕಾಮಗಾರಿಯನ್ನು ಬಹಳಮಟ್ಟಿಗೆ ಮುಂದರಿಸಿರುತ್ತಾರೆ. ನಮ್ಮ ಸರ್ಕಾರದವರು ಇವರನ್ನು ಇನ್ನು ಕೆಲವು ಕಾಲ ಇಲ್ಲೇ ಇಟ್ಟುಕೊಂಡಿದ್ದರೆ ಚೆನ್ನಾಗಿತ್ತೆಂದು ತಿಳಿದವರು ಹೇಳುತ್ತಾರೆ.

ಚಿಕ್ಕಜಾಜೂರಿನಿಂದ ಚಿತ್ರದುರ್ಗಕ್ಕೆ ರೈಲು ಹಾಕುವ ವಿಷಯದಲ್ಲಿ ಚಿತ್ರದುರ್ಗದ ಡಿಸ್ಟ್ರಿಕ್ಟ್ ಬೋರ್ಡಿನವರು ಸರ್ಕಾರಕ್ಕೆ ಅರಿಕೆ ಮಾಡಿರುವುದೇನೆಂದರೆ:—ಮೇಲ್ಕಂಡ ರಸ್ತೆ ಕಾಮಗಾರಿ ಬಗ್ಗೆ ಬೇಕಾಗುವ ಹಣವನ್ನು ಅಂದರೆ 8½ ಲಕ್ಷ ರೂಪಾಯನ್ನು ಸರ್ಕಾರದವರು ಮುಂಗಡವಾಗಿ ಬೋರ್ಡಿನವರಿಗೆ ಶೇಕಡಾ 4 ರೂಪಾಯಿನಂತೆ ಸಾಲ ಕೊಡತಕ್ಕದ್ದು ಅವಶ್ಯವಾಗಿದೆ. ಮೇಲ್ಕಂಡ ಹಣದಿನ ಬಡ್ಡಿ ಕೊಡತಕ್ಕ ಮತ್ತು ಸಾಲವನ್ನು ತೀರಿಸತಕ್ಕ ಬಗ್ಗೆ ಸಹ ಬಂಡವಾಳ ಉಳಿಸಿಕೊಳ್ಳುವುದಕ್ಕೋಸ್ಕರ ರೂಪಾಯಿಗೆ ಆರು ಪೈ ನಂತೆ ಸೆಸ್ಸು ವಸೂಲ್ಮಾಡುವುದಕ್ಕೆ ಗೌರ್ನಮೆಂಟಿನವರು ಹುಕುಂ ಕೊಡಬೇಕು. ಡಿಸ್ಟ್ರಿಕ್ಟಿನಲ್ಲಿಯೇ ಮೇಲ್ಕಂಡ ಬೇಕಾಗುವ ಮೊಬಲಗನ್ನು ಮುಂಚಿಂದ ಜನಗಳಿಂದ ಸಾಲದ ಮೂಲಕ ಪಡೆಯಲು ಸಾಧ್ಯವಿರುವುದಿಲ್ಲ.

ಕೊಡಗಿನಲ್ಲಿ ಕೋಆಪರೇಟಿವ್ ಸೊಸೈಟಿಗಳು ಕಳೆದ ವರುಷ ಅಭಿವೃದ್ಧಿ ಹೊಂದಿವೆಂದು ನಮಗೆ ತಲುಪಿರುವ ವಾರ್ಷಿಕ ರಿಪೋರ್ಟಿನಿಂದ ಗೊತ್ತಾಗುತ್ತದೆ. ಕಳೆದ ವರುಷ ಹೊಸ ಸೊಸೈಟಿ ಯಾವುವೂ ಏರ್ಪಾಡಾಗಲಿಲ್ಲ. ಈಗ ಅಲ್ಲಿ 22 ಸೊಸೈಟಿಗಳಿರುವವು. ಮೆಂಬರುಗಳ ಸಂಖ್ಯೆಯಲ್ಲಿ 120 ಮಂದಿ ಹೆಚ್ಚಾಗಿರುತ್ತಾರೆ. ಸೊಸೈಟಿಗಳ ಮೂಲಧನವು 91,434 ರೂಪಾಯಿನಿಂದ 1,06,020 ರೂಪಾಯಿಗೆ ಜಾಸ್ತಿಯಾಗಿರುವುದು. ರಿಜರ್ವ್ ಫಂಡು ಮೊದಲು 15,043 ರೂಪಾಯಿ ಇದ್ದದ್ದು ಈಗ 18,106 ರೂಪಾಯಿ ಆಗಿದೆ. ಅನೇಕ ಸೊಸೈಟಿಗಳಲ್ಲಿ ಮೆಂಬರುಗಳಿಗೆ ಕಳೆದ ವರುಷ ಸರಾಸರಿ ಶೇಕಡಾ 14 ರೂಪಾಯಿನಂತೆ ಬಡ್ಡಿಯನ್ನು ಹಂಚಿದರು. ಈ ಪ್ರಕೆ ಕೆಲವು ಸೊಸೈಟಿಗಳು ಹತ್ತು ವರುಷಗಳಿಂದ ಲೇವಾದೇವಿ ಮಾಡುತ್ತಾ ಬಂದು, ಜನಗಳ ನಂಬಿಕೆ ವಿಶ್ವಾಸಗಳನ್ನು ಸಂಪಾದಿಸಿಕೊಂಡಿರುತ್ತವೆ. ಮೊಕದ್ದಮೆಗಳು ಕೋರ್ಟಿನ ತನಕ ಹೋದದ್ದು ಬಹಳ ಕಡಮೆ.

ಮೈಸೂರು ಸೀಮೆಯ ವ್ಯವಸಾಯದ ಇಲಾಖೆ.

ಪ್ರಸಿದ್ಧ ಪತ್ರಿಕೆ.

ರಾಗಿ ಮತ್ತು ಕಬ್ಬೆ ಇವು ಬೆಳೆ ವಿಷಯವಾಗಿ ಕೊಡುವ ವ್ಯವಸಾಯ ಸಂಬಂಧಪಟ್ಟ ಸುಲಭ ಪಾಠವು ಹೆಬ್ಬಾಳ ಫಾರಂನಲ್ಲಿ 1914 ನೆಯ ನವಂಬರು 16 ನೇ ತಾರೀಖಿನಿಂದ ಮೊದಲುಮಾಡಿ ಒಂದು ವಾರ ನಡೆಯುವುದು. ಸದರಿ ಸುಲಭ ಪಾಠವನ್ನು ಕೇಳಲು ಬರತಕ್ಕ ಜನಗಳಿಗೆ ಹೆಬ್ಬಾಳ ಫಾರಂನಲ್ಲಿ ಇರಲು ಸ್ಥಳ ಮುಫತ್ತಾಗಿ ಕೊಡಲಾಗುತ್ತದೆ. ... ಊಟಕ್ಕೆ ಮಾತ್ರ ತಗಲಬಹುದಾದಷ್ಟು ಖರ್ಚು ಮಾತ್ರ ವಸೂಲ್ಮಾಡಲಾಗುತ್ತೆ. ಸದರಿ ಪಾಠವನ್ನು ಕೇಳಲು ಬರಲು ಅಪೇಕ್ಷೆಯುಳ್ಳ ಜನರು ಒಂದು ವಾರ ಮುಂಚಿತವಾಗಿ ತಿಳಿಸತಕ್ಕದ್ದು.

[226-2] ಲೆಸ್ಲಿ ಸಿ ಕೋಲ್‌ಮನ್,

ಬೆಂಗಳೂರು : ತಾ. 17-10-1914 ವ್ಯವಸಾಯದ ಇಲಾಖಾ ಡೈರೆಕ್ಟರ್



Cap Manufacturer. Bangalore City.

ಹುಡುಗರಿಗೆ ಅಕ್ಷರ ಕಲಿಯಲಿಕ್ಕೆ ಸುಕರವಾದ ದೊಡ್ಡಕ್ಷರದ ಕನ್ನಡ ಅಕ್ಷರಮಾಲೆ ನಮ್ಮಲ್ಲಿ ದೊರೆಯುತ್ತೆ. ಪೋಸ್ಟೇಜು ವಿ. ಪಿ. ಕಮಿಷನ್ ಪ್ರತ್ಯೇಕ ಬೀಳುತ್ತೆ. ಕ್ರಯ. ಪ್ರತಿ 1 ಕ್ಕೆ 3 ಪೈ, ಪ್ರತಿ 25 ಕ್ಕೆ 5 ಆಣೆ, ಪ್ರತಿ 50 ಕ್ಕೆ 8 ಆಣೆ, ಪ್ರತಿ 100 ಕ್ಕೆ 12 ಆಣೆ, ಪ್ರತಿ 250 ಕ್ಕೆ 1-10-0, ಪ್ರತಿ 500 ಕ್ಕೆ 2-10-0, ಪ್ರತಿ 1,000 ಕ್ಕೆ 5-0-0. ಹೆಸರು ವಿಳಾಸ ಸ್ಪಷ್ಟವಾಗಿ ಬರೆಯಿರಿ.

ನಮ್ಮ ವಿಳಾಸ—ಚಬಿಲ್ ದಾಸ್ ದಯಾಭಾಯ್ ಟೋಪಿಗಳ ಕಾರ್ಖಾನೆ,

[230-1] ಚಿಕ್ಕಪೇಟೆ- ಬೆಂಗಳೂರು ಸಿಟಿ.

೧೯೧೫ ನೇ ಸಾಲಿನ ಶ್ರೀ ಸೀತಾರಾಘವ

ಪಾಕೆಟ್ ಡೈರಿಗಳು

ಬಿಕರಿಗೆ ಸಿದ್ಧವಾಗಿವೆ.

ಪಾಕೆಟ್ ಡೈರಿ

ಶಾಯಿ ಇಳಿಯದ ಉತ್ತಮವಾದ ಕಾಗದ. ಮುದ್ದಾದ ಮುದ್ರಣ. ಅನೇಕವಾದ ಹೊಸ ಸಂಗತಿಗಳಿವೆ

ನಂ. 1 ಚಿಕ್ಕ ಸೈಜು ಸಾದಾ	ಆಣೆ 4
,, 2 ,, ,, ಪೆನ್ಸಿಲ್ ಮುಚ್ಚಳ ಉಳ್ಳದ್ದು	,, 6
,, 3 ದೊಡ್ಡ ಸೈಜು ಸಾದಾ	,, 6
,, 4 ,, ,, ಪೆನ್ಸಿಲ್ ಮುಚ್ಚಳ ಉಳ್ಳದ್ದು	,, 8

ಹೆಚ್ಚಾಗಿ ತರಿಸುವವರಿಗೆ ರೂಪಾಯಿ 1 ಕ್ಕೆ 2 ಆಣೆ ಕಮಿಷನ್ ದೊರೆಯುವುದು. [239-1]

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ನಮ್ಮ ದೇಶದ ಗೋಶಾಲೆಗಳ ಸ್ಥಿತಿ.

[ನಮ್ಮ ಮೈಸೂರು ಸಂಸ್ಥಾನದಿಂದ ಸರ್ಕಾರಿ ವೇತನವನ್ನು ಪಡೆದು ಇಂಗ್ಲೆಂಡಿನಲ್ಲಿ ವ್ಯಾಸಂಗ ಮಾಡುತ್ತಿರುವ ಮ।। ಎಸ್. ಗರಳಪುರಿ ಶಾಸ್ತ್ರಿಯವರು ಬರೆದ ಈ ಲೇಖನವನ್ನು ಬಹಳ ಸಂತೋಷದಿಂದ ಪ್ರಕಟಿಸುತ್ತೇವೆ.—ಎಡಿ]

ನಮ್ಮ ದೇಶಕ್ಕೆ ಸದ್ಯ ವ್ಯವಸಾಯವೇ ಮುಖ್ಯವಾದುದು. ಸರಿಯಾದ ಮಳೆಗಳು ಆಗದಿದ್ದರೆ ಕ್ಷಾಮ ಪ್ರಾಪ್ತವಾಗುವುದು. ವ್ಯವಸಾಯವು ಯಾವ ಪ್ರಮಾಣದಲ್ಲಿ ಸರಿಯಾಗಿ ನಡೆಯುತ್ತಿದ್ದರೆ ದೇಶವು ಅಭಿವೃದ್ಧಿಯಾಗುವುದು. ಕಾಲಕಾಲಕ್ಕೆ ಸರಿಯಾಗಿ ಮಳೆಯಾಗದಿದ್ದರೆ ನಾವೇನೂ ಮಾಡಲಾಗುವುದಿಲ್ಲ. ಇದು ದೈವಯತ್ನ. ನಮ್ಮ ಸ್ವಾಧೀನದಲ್ಲಿ ಇಲ್ಲ. ಆದರೆ ಕೃಷಿಯಲ್ಲಿ ಆಗುವ ಅನೇಕ ವ್ಯವಸಾಯಕ್ಕೆ ಸಂಬಂಧಪಟ್ಟ ವಿಷಯಗಳನ್ನು ನಾವು ಸೋಮಾರಿತನದಿಂದಲೋ ಅಥವಾ ಮೂಢತನದಿಂದಲೋ ಯೋಚಿಸದೆ ನಮ್ಮ ಮುಖ್ಯ ಜೀವನೋಪಾಯವಾದ ವ್ಯವಸಾಯವನ್ನು ಬಹಳ ಹೀನಸ್ಥಿತಿಗೆ ತರುತ್ತಿದ್ದೇವೆ. "ಪೂರ್ವದಲ್ಲಿ ಇದ್ದಂತೆಯೇ ಈಗಲೂ ಕೂಡ ವ್ಯವಸಾಯವನ್ನು ನಡೆಸುತ್ತಿದ್ದೇವೆಯಲ್ಲಾ ಹೀನಸ್ಥಿತಿ ಎಲ್ಲಿಂದ ಬಂತು" ಎಂದು ಕೇಳಬಹುದು. ಬಾಕಿ ದೇಶದವರೆಲ್ಲಾ ಮುಂದು ಮುಂದಕ್ಕೆ ಹೋಗುತ್ತಿರುವಾಗ್ಗ ನಾವು ಹಿಂದೆ ಇರುವುದು ಹೀನಾಯವಲ್ಲವೆ? ಇದೂ ಅಲ್ಲದೆ ನಾವು ಪೂರ್ವದಲ್ಲಿ ನಡೆಸುತ್ತಿದ್ದಂತೆ ವ್ಯವಸಾಯವನ್ನು ಕೆಲವು ವಿಧಗಳಲ್ಲಿ ನಡೆಸುತ್ತಿರುವುದು ಕಾಣುವುದಿಲ್ಲ.

ನಮ್ಮ ದೇಶದ ವ್ಯವಸಾಯವನ್ನು ಉತ್ತಮ ಸ್ಥಿತಿಗೆ ತರಬೇಕಾದಲ್ಲಿ ಹಲವು ವಿಷಯಗಳನ್ನು ಮನಸ್ಸಿನಲ್ಲಿ ಇಡಬೇಕು. ಪ್ರಥಮತಃ ನಮ್ಮ ದನಕರುಗಳನ್ನು ಚೆನ್ನಾಗಿ ಸಾಕಬೇಕು. ಉಳುವುದಕ್ಕೂ ಮತ್ತು ಗಾಡಿಗಳನ್ನು ಎಳೆಯುವುದಕ್ಕೂ ಎತ್ತುಗಳನ್ನು ಬಹಳವಾಗಿ ಉಪಯೋಗಿಸುತ್ತೇವೆ. ಉಳುವುದಕ್ಕೆ ಸರಿಯಾದ ಎತ್ತುಗಳಿಲ್ಲದಿದ್ದರೆ ನಮ್ಮ ಜನಗಳಿಲ್ಲರೂ ತಿನ್ನುವುದಕ್ಕೆ ಹಿಟ್ಟಿಲ್ಲದೆ ಇರಬೇಕಾಗುತ್ತೆ. ಹಾಗಾದಾಗ್ಯೂ ಕೂಡ ನಮ್ಮ ಅನ್ನವನ್ನು ಕೊಡುವ ಆ ಬಡಪ್ರಾಣಿಗಳನ್ನು ನಾವು ಸರಿಯಾಗಿ ಸಾಕುತ್ತಿಲ್ಲ. ಅವುಗಳಿಗೆ ಸಾಕಾದಷ್ಟು ಆಹಾರವನ್ನು ಕೊಡುವುದಿಲ್ಲ. ಅವುಗಳ ಆರೋಗ್ಯವನ್ನು ಮಾತ್ರ ಒಂದಕ್ಕೆ ನಾಲ್ಕರಷ್ಟು ನೋಡಿಕೊಳ್ಳುತ್ತೇವೆ. ಸೂರ್ಯೋದಯದಿಂದ ಸೂರ್ಯಾಸ್ತಮಾನದ ವರೆಗೂ ದುಡಿಯುವ ಪ್ರಾಣಿಗಳಿಗೆ ತಕ್ಕಷ್ಟು ಪುಷ್ಟಿಕರವಾದ ಆಹಾರವನ್ನು ಕೊಡುವುದಿಲ್ಲ. ನಮ್ಮ ದೇಶದ ಗೋಶಾಲೆಗಳು ದಿನೇ ದಿನೇ ಕ್ಷೀಣದೆಸೆಗೆ ಬರುತ್ತಾ ಇವೆ.

ಯೂರೋಪ್ ಖಂಡದ ಎಲ್ಲಾ ಭಾಗಗಳಲ್ಲಿಯೂ ವ್ಯವಸಾಯದಲ್ಲಿ ಉಳುವುದು ಮುಂತಾದ ಕೆಲಸಗಳಿಗೆಲ್ಲಾ ಕುದುರೆಗಳನ್ನು ಉಪಯೋಗಿಸುತ್ತಾರೆ. ಆಶ್ಚರ್ಯ ನೋಡಿದಷ್ಟು ಈ ದೇಶದ ರೈತರುಗಳು ನಮ್ಮ ದೇಶದವರಿಗಿಂತಲೂ ಬಹಳ ಹೆಚ್ಚಾಗಿ ಕೆಲಸಮಾಡುತ್ತಾರೆ. ನಮ್ಮವರಂತೆ ಸೋಮಾರಿಗಳಲ್ಲ. ತಮ್ಮ ಕೆಲಸಕ್ಕೆ ಉಪಯೋಗಿಸುವ ಕುದುರೆಗಳನ್ನು ಬಹಳ ಚೆನ್ನಾಗಿ ಸಾಕಿ ಇಟ್ಟುಕೊಂಡಿರುತ್ತಾರೆ.

ನಮ್ಮ ದೇಶದ ರೈತರೂ ಕೂಡ ಎತ್ತುಗಳನ್ನು ಸರಿಯಾಗಿ ಸಾಕಿ ಇಟ್ಟುಕೊಂಡರೆ ಅವುಗಳಿಂದ ಹೆಚ್ಚಾದ ಕೆಲಸವನ್ನು ತೆಗೆಯಬಹುದು. ಬಲಹೀನವಾದ, ಬಡವಾದ ಮತ್ತು ಸಾಮಾನ್ಯವಾದ ಎತ್ತುಗಳನ್ನು ನೇಗಿಲಿಗೆ ಕಟ್ಟಿ, ಅವುಗಳನ್ನು ಹೊಡೆದು ಬಡಿದು ಚಿತ್ರಹಿಂಸೆಮಾಡಿ ಕೆಲಸವನ್ನು ತೆಗೆಯುತ್ತಾರೆ. ಹೀಗೆ ಮಾಡುವುದರಿಂದ ಹೆಚ್ಚಾದ ಉಪಯೋಗವೇನೂ ಕಾಣಬರುವುದಿಲ್ಲ. ಪುಷ್ಟಿಕರವಾದ ಆಹಾರವನ್ನು ಕೊಟ್ಟು ಚೆನ್ನಾಗಿ ಸಾಕಿರುವ ಒಂದು ಜೊತೆ ಬಲಿಷ್ಠವಾದ ಎತ್ತುಗಳಿಂದ ಸರಾಯಾಸವಾಗಿ ನಾಲ್ಕು ಜೊತೆ ಬಡ ಎತ್ತುಗಳು ಮಾಡುವಷ್ಟು ಕೆಲಸವನ್ನು ತೆಗೆಯಬಹುದು.

ಮತ್ತು ಸರಿಯಾದ ರೀತಿ ಎತ್ತುಗಳನ್ನು ಸಾಕಿ ಇಟ್ಟುಕೊಂಡಿದ್ದರೆ ಉತ್ತಮವಾದ ಕಬ್ಬಿಣದ ನೇಗಿಲುಗಳನ್ನು ಸುಲಭವಾಗಿ ಉಪಯೋಗಿಸಬಹುದು. ಕಬ್ಬಿಣದ ನೇಗಿಲನ್ನು ನಮ್ಮ ದೇಶದ ರೈತರಿಗೆ ಅನುಕೂಲವಾದ ಮಾದರಿಯಲ್ಲಿ ತಯಾರುಮಾಡಿರುವವುಗಳನ್ನು ಮೈಸೂರು ಸರ್ಕಾರದ ವ್ಯವಸಾಯದ ಇಲಾಖಾ ಮುಖಾಂತರ ಪಡೆಯಬಹುದು. ಒಂದು ಜೊತೆ ಒಳ್ಳೇ ಎತ್ತು, ಒಂದು ಕಬ್ಬಿಣದ ನೇಗಿಲು ಇಟ್ಟುಕೊಂಡರೆ ಪ್ರತಿ ಒಬ್ಬ ರೈತನೂ ಈಗ ಮಾಡುತ್ತಿರುವ ಕೆಲಸಕ್ಕಿಂತ ಎಷ್ಟೋ ಹೆಚ್ಚಾಗಿ ಮಾಡಬಹುದು.

ಈಗಾಗಲೇ ನಮ್ಮ ದೇಶದ ಎತ್ತುಗಳು ದಿನೇ ದಿನೇ ಕ್ಷೀಣದೆಸೆಗೆ ಬರುತ್ತಿವೆ. ಗೋಶಾಲೆಗಳು ಕಡಿಮೆಯಾಗುತ್ತಿರುವುದು ನಮ್ಮ ದೇಶಕ್ಕೆ ಬಹಳ ಅಪಾಯಕರ. ಸರ್ಕಾರದವರು ಅಮೃತಮಹಲ್ ಮುಂತಾದ ಕಾವಲುಗಳಲ್ಲಿ ಗೋಶಾಲೆಗಳ ಪ್ರದರ್ಶನವನ್ನು ಏರ್ಪಡಿಸುತ್ತಾರೆ. ಇದು ಬಹಳ ಶ್ಲಾಘ್ಯವಾದ ವಿಷಯವೇ ಸರಿ. ಆದರೆ ಜನಗಳು ಈ ವಿಷಯವನ್ನು ಮನಸ್ಸಿನಲ್ಲಿ ಮುಂದಾಗಿ ಇಟ್ಟುಕೊಂಡು ದನಕರುಗಳನ್ನು ಉತ್ತಮ ಸ್ಥಿತಿಗೆ ತರುವಂತೆ ಪ್ರಯತ್ನಗಳನ್ನು ಮಾಡಬೇಕು.

ದನಕರುಗಳಿಗೆ ಸಾಕಾದಷ್ಟು ಹುಲ್ಲು ಕಡ್ಡಿಗಳನ್ನು ಕೊಡಬೇಕು. ಹುರುಳಿ, ಎಳ್ಳು, ಕಡಲೆ, ಹಿಂಡಿ ಮುಂತಾದವುಗಳನ್ನು ತಪ್ಪದೇ ಕೊಡಬೇಕು. ಎತ್ತುಗಳು ಸುಮ್ಮನೇ ಮೈಬೆಳಸಿ ಸೋಮಾರಿಯಾಗಿರುವಂತಿರದೆ ಚಟುವಟಿಕೆಯಿಂದ ಸರಿಯಾಗಿ ಕೆಲಸಮಾಡುವಂತೆ ಏರ್ಪಾಟು ಮಾಡಿಸಬೇಕು. ಹೀಗೆ ಮಾಡಿದಲ್ಲಿ ಅತ್ಯುತ್ತಮವಾದ ರಾಸುಗಳನ್ನು ಅಭಿವೃದ್ಧಿಪಡಿಸಲು ಅನುಕೂಲವಾದೀತು.

ಇದೇ ಸಂದರ್ಭದಲ್ಲಿ ಮತ್ತೆ ಒಂದೆರಡು ವಿಷಯಗಳನ್ನು ಮನಸ್ಸಿನಲ್ಲಿಡಬೇಕು. ಕೈಲಾದ ಮಟ್ಟಿಗೂ ದೇಶದ ಎಲ್ಲಾ ಭಾಗಗಳಲ್ಲಿಯೂ ಗ್ರಾಮಸ್ಥರುಗಳು ಸೇರಿ ಸರಿಯಾದ ಹುಲ್ಲುಗಾವಲುಗಳನ್ನು ಆಯಾ ಗ್ರಾಮಕ್ಕೆ ಸಂಬಂಧಪಟ್ಟಂತೆ ಇಟ್ಟುಕೊಂಡಿರಬೇಕು. ನಮ್ಮ ದೇಶದಲ್ಲಿ ಜನಗಳು ಈ ವಿಷಯದಲ್ಲಿ ಸರಿಯಾದ ಏರ್ಪಾಡು ಮಾಡಿಕೊಂಡಿರುವಂತೆ ಕಾಣುವುದಿಲ್ಲ. ಅಮೃತಮಹಲ್ ಇಲಾಖೆಯ ಪಶುಗಳ ಉಪಯೋಗಕ್ಕೋಸ್ಕರಲೂ, ಅರಮನೆಯ ಕುದುರೆಗಳ ಮತ್ತು ದನಗಳ ಉಪಯೋಗಕ್ಕೋಸ್ಕರಲೂ ಕೆಲವು ಶ್ಲಾಘ್ಯವಾದ ಹುಲ್ಲುಗಾವಲುಗಳು ಇರುವಂತೆ ಕಾಣುತ್ತೆ. ಅದೇ ರೀತಿಯಲ್ಲಿ ಪ್ರತಿ ಗ್ರಾಮದವರೂ ಒಟ್ಟುಕೂಡಿ ಗ್ರಾಮಕ್ಕೆ ಹತ್ತಿರದಲ್ಲಿ ಸರಿಯಾದ ಹುಲ್ಲುಗಾವಲುಗಳನ್ನು ಒದಗಿಸಿಕೊಳ್ಳಬೇಕು. ಈಗ ನಮ್ಮ ಸರ್ಕಾರದಿಂದ ಮುಫತ್ತಾಗಿ ಕೊಡಲ್ಪಟ್ಟಿರುವ ಗೋಮಾಳದ ಜಾಗವನ್ನು ದನಗಳಿಗೆ ವಿಶೇಷವಾಗಿ ಉಪಯೋಗವಾಗುವ ರೀತಿಯಲ್ಲಿ ಗ್ರಾಮದವರು ನೋಡಿಕೊಳ್ಳುವಂತೆ ಕಾಣುವುದಿಲ್ಲ. ಈ ವಿಷಯದಲ್ಲಿ ಸರ್ಕಾರದವರಿಂದ ಏನೂ ಆಗುವಂತೆ ತೋರುವುದಿಲ್ಲ. ಆದ್ದರಿಂದ ಪ್ರಜೆಗಳೇ ಅಲ್ಲಲ್ಲಿ ಒಟ್ಟುಕೂಡಿ ಸರಿಯಾದ ಏರ್ಪಾಡುಗಳನ್ನು ಮಾಡಿಕೊಳ್ಳಬೇಕು.

ಮತ್ತೊಂದು ವಿಷಯವೇನೆಂದರೆ, ನಮ್ಮ ದೇಶದ ಜನಗಳು ದನದ ಕೊಟ್ಟಿಗೆಗಳನ್ನು ಬಹಳವಾಗಿಯೂ ಗಲೀಜನಂತೆ ಇಟ್ಟುಕೊಂಡಿರುತ್ತಾರೆ. ಇದರಿಂದ ಅನೇಕ ರೋಗ ಮುಂತಾದವುಗಳು ಪ್ರಾಪ್ತವಾಗುವುದಕ್ಕೆ ಅವಕಾಶವಾಗುತ್ತೆ. ಜನಗಳ ಆರೋಗ್ಯಕ್ಕೆ ಬಹಳ ಕುಂದಕ. ದನಕರುಗಳ ಆರೋಗ್ಯಕ್ಕೂ ಕೊಳಕು ಕೊಟ್ಟಿಗೆಗಳು ಬಹಳ ವಿರೋಧವಾದದ್ದು. ಪಟ್ಟಣಗಳಲ್ಲೇ ಈ ರೀತಿ ಇದ್ದರೆ ಹಳ್ಳಿಗಳಲ್ಲಿ ಯಾವ ರೀತಿ ಇದೆಯೋ ಊಹಿಸಬಹುದು. ಇದೆಲ್ಲಾ ನಮ್ಮಲ್ಲಿ ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಈ ವಿಷಯದಲ್ಲಿ ಜನಗಳು ಬಹಳ ಮುತುವರ್ಜಿಯನ್ನು ವಹಿಸಿ ಸರಿಯಾದ ಕೊಟ್ಟಿಗೆಗಳನ್ನು ಕಟ್ಟಿಕೊಳ್ಳಬೇಕು. ಗಂಜಲ ಮುಂತಾದ್ದು ನಿಲ್ಲದೆ ಹೊರಕ್ಕೆ ಸರಿಯಾಗಿ ಹರಿದುಹೋಗುವಂತೆ ಕಲ್ಲುಚಪ್ಪಡಿಗಳನ್ನು ಹಾಕಿಸಿ ಕೊಟ್ಟಿಗೆಗಳನ್ನು ಕಟ್ಟಿಸಬೇಕು. ಸರ್ಕಾರದ "ಹೆಲ್ತ್ ಆಫೀಸರ್" ಈ ವಿಷಯದಲ್ಲಿ ಆಗಿಂದಾಗ್ಗೆ ಜನರಿಗೆ ಬೋಧನೆಗಳನ್ನು ಮಾಡುತ್ತಾರೆಂದು ನಂಬುತ್ತೇವೆ. ಸರಿಯಾದ ಶುಚಿಯಾದ ಕೊಟ್ಟಿಗೆಗಳನ್ನು ಇಟ್ಟುಕೊಂಡಿರಬೇಕೆಂದು ಪಟ್ಟಣಗಳಲ್ಲಾದರೂ ಖಂಡಿತವಾದ ಕಾನೂನುಗಳನ್ನು ಮಾಡಿದರೆ ಎಷ್ಟೋ ಅನುಕೂಲ.

ಮೇಲೆ ಹೇಳಿದ ರೀತಿಯಲ್ಲಿ ನಮ್ಮ ದೇಶದ ದನಕರುಗಳನ್ನು ಸರಿಯಾಗಿ ಕಾಪಾಡಿಕೊಂಡು ಬರಬೇಕು. ಹಸುವನ್ನು ಚೆನ್ನಾಗಿ ಸಾಕಿದರೆ ಹೆಚ್ಚಾಗಿ ಹಾಲನ್ನು ಕೊಡುತ್ತೆ. ಕೊಟ್ಟಿಗೆ ಮುಂತಾದ್ದನ್ನು ಚೊಕ್ಕಟವಾಗಿ ಇಟ್ಟದ್ದರೆ ಹಾಲಿನಲ್ಲಿ ಕ್ರಿಮಿ ಮುಂತಾದವುಗಳು ಹೆಚ್ಚಾಗಿ ಸೇರದೆ ಬಹಳ ರುಚಿಯಾದ ಹಾಲು ದೊರಕುತ್ತೆ; ಮತ್ತು ಜನರ ಆರೋಗ್ಯಕ್ಕೆ ಅನುಕೂಲವಾಗುತ್ತೆ. ಎತ್ತುಗಳನ್ನು ಸರಿಯಾಗಿ ಸಾಕಿಕೊಂಡಿದ್ದರೆ ನಮ್ಮ ದೇಶದ ವ್ಯವಸಾಯ ಸ್ಥಿತಿಯು ಮುಂದಕ್ಕೆ ಬರಲು ಬಹಳ ಅನುಕೂಲವಾಗುತ್ತೆ.

ಇಲ್ಲಿ ಹೇಳಿದ ವಿಷಯಗಳು ಎಲ್ಲರಿಗೂ ವಿದಿತ ವಿಷಯವೇ ಆಗಿರುತ್ತೆ. ಆದಾಗ್ಯೂ ಮೇಲೆ ಹೇಳಿದ ಕುಂದಕಗಳೆಲ್ಲಾ ವಿಶೇಷವಾಗಿ ಹರಡಿವೆ. ಅವುಗಳನ್ನೆಲ್ಲಾ ಪರಿಹರಿಸಬೇಕು. ನಮ್ಮ ದೇಶದ ವಿದ್ವಾಂಸರೆಲ್ಲಾ ಈ ವಿಷಯದಲ್ಲಿ ಮುತುವರ್ಜಿಯನ್ನು ವಹಿಸಬೇಕಾಗಿದೆ.

ಲಂಡನ್, ತಾ. 2-9-14. ಎಸ್. ಜಿ. ಶಾಸ್ತ್ರಿ.

ನಿನಗೆ ಮೈ ಸ್ವಸ್ಥವಿಲ್ಲವೋ?

ನಿನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ, ನಿನಗೆ ಯಾವ ನೋವೂ ಉಂಟಾಗಿರಲಿ—"ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತಿದೆಯೇ?" ಎಂದು ನಿನ್ನನ್ನು ನೀನೇ ಕೇಳಿಕೋ; ಹಾಗೆ ಆಗದಿದ್ದರೆ ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ. ಮಾರನೇ ದಿನ ಬೆಳಿಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನಿನಗೆ ಮೈ ಸ್ವಸ್ಥವಾಗುವುದು.

(೧೨ ಆಣೆ ಬುಡ್ಡಿ ಪರಿಮಾಣ)

ಮಲಬಂಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ ಪರಿಣಮಿಸುವುದು. ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲಕಾರಣವಾಗಿರುವುದು. ಮಲಬಂಧದಿಂದ ರೋಗಗಳೇಕೆ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು. ಆ ರೋಗಗಳಾವುವೆಂದರೆ :—ಪಿತ್ತಕೋಶ ರೋಗ; ಪಿತ್ತ; ಪಿತ್ತಜ್ವರ; ಅಜೀರ್ಣ; ಅಗ್ನಿಮಾಂದ್ಯ; ಗಾಬರಿ; ಅಶಕ್ತಿ; ಎದೆಯು ತಲ್ಲಣಿಸುವುದು; ತಲೆತಿರುಗುವುದು; ತಲೆನೋವು; ಹೊಟ್ಟೆಯುಬ್ಬರ; ಮುಳತೇಗಿನ ಹೊಟ್ಟೆನೋವು; ಹೆಂಗಸರ ವ್ಯಾಧಿಗಳು; ಇವೇ ಮೊದಲಾದವು ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು.

ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು. ಗಂಡಸರಿಗಾಗಲಿ ಹೆಂಗಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ ಕೆಟ್ಟದ್ದಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ಶುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇಗ ನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು. [198-8]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ. ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು. ಔಷಧಗಳನ್ನು ಮಾರುವವರ ಬಳಿಯೆಲ್ಲಾ ದೊರೆಯುವುದು; ಅಥವಾ ಡೋನ್, ಪಿ. ಒ. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು.

ಟೋಪಿಗಳು: ಟೋಪಿಗಳು.

ಉತ್ತಮವಾದ ಟೋಪಿಗಳು ಹಾಸನದಲ್ಲಿ ದೊರೆಯುತ್ತವೆ.

ವಿವಿಧ ತರಹ ಉಣ್ಣೆ ದಾರದಿಂದ ತಯಾರಿಸಲ್ಪಡುವ ಸಾಮಾನುಗಳನ್ನೂ, ಮಫ್ಲರುಗಳನ್ನೂ, ದರಗಳನ್ನೂ ಮ್ಯಾನೇಜರವರಿಗೆ ಬರೆದು ತಿಳಿದುಕೊಳ್ಳಬಹುದು.

Men's socks, vests and various knitted articles.

ಮ್ಯಾನೇಜರ್, ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ.

Apply:—MANAGER, WOOL WORKS,

[201-8] GIRLS' INDUSTRIAL SCHOOL, HASSAN.



ಲಿಟ್ಲ್ಸ್ ಓರಿಯೆಂಟಲ್ ಬಾಮ್ ಎಂಬದು.

ಹಳೇ ನೋವಿದ್ದರೂ, ಊತ ಇದ್ದರೂ, ಯಾವತರದ ಕಷ್ಟವಿದ್ದರೂ ಸ್ವಸ್ಥಮಾಡಿ, ಬಿಡುಗಡೆಯ ಆಶೀರ್ವಾದಕೊಡುತ್ತದೆ.

ಸಟ್ಟರ್‌ಕೋಲ್ಡ್ ಫೀಲ್ಡ್ಸ್ ಜೆ. ಹ್ಯೂಜೆಸ್ ಬರೆಯುವದು :—"ನನ್ನ ಹತ್ರವಿದ್ದ ಲಿಟಲ್‌ಸ್ ಓರಿಯೆಂಟಲ್ ಬಾಂ ಎಂಬದರ 1 ಸೀಸಾಯನ್ನು ನನ್ನ ಕಾಲಿಗೂ, ಮೊಣಕಾಲಿಗೂ ಹಚ್ಚಿದ 10 ನಿಮಿಷಗಳಲ್ಲಿ ನೋವು ಬಿಟ್ಟಿತು. ಮತ್ತೆರಡಾವರ್ತಿ ಉಪಯೋಗಿಸಿದೆನು—ನನಗಿದ್ದ ನೋವು ತಿರಿಗಿ ಬರಲೇ ಇಲ್ಲ. ಆ ತೈಲದಲ್ಲಿ ಸ್ವಲ್ಪ ಅಂಗೈಗೆ ಹಾಕಿಕೊಂಡು ನನ್ನ ಮಗನಿಗೆ ಟಾನ್ಸಿಲ್ ನೋವಿಗೆ ಹಚ್ಚಿದೆನು. ಅವನಿಗೆ ಸ್ವಸ್ಥವಾಯಿತು. ಒಬ್ಬ ಹೆಂಗಸಿದ್ದಳು! ಅವಳ ಕಾಲು 1 ವರುಷದವರೆಗೆ ಬಿರಸಾಗಿತ್ತು. ಅದರಿಂದ ಅವಳು ಅಧಿಕ ನೋವನ್ನು ಅನುಭವಿಸಿದಳು. ಲಿಟಲ್‌ಸ್ ಓರಿಯೆಂಟಲ್ ಬಾಂ ಎಂಬದನ್ನು ಉಪಯೋಗಿಸಲು ಹೇಳಿದೆನು. ನನ್ನಲ್ಲಿದ್ದ 1 ಸೀಸೆಯ ತೈಲವನ್ನು ಮಾತ್ರ ಆಕೆಗೆ ಕೊಟ್ಟೆನು. ಅದರಿಂದಲೇ ಆಕೆಗೆ ಕ್ಷೇಮವಾಯಿತು."

ಸೀಸೆ 1ಕ್ಕೆ 1 ರೂ. ಮೊದಲಾದ ಔಷಧಗಾರರಲ್ಲಿಯೂ ಸಿಗುತ್ತೆ. 101-26

ಸಂಪೂರ್ಣಾರೋಗ್ಯವೂ, ಸಂತೋಷಬಾಳ್ವೆಯೂ, ಶಾಶ್ವತವಾದ ಸಂಪತ್ತು, ಇವುಗಳನ್ನು ಪಡೆಯುವುದಕ್ಕೋಸ್ಕರ ಇನ್ನೂ ಕತ್ತಲೆಯಲ್ಲಿ ಪರದಾಡುವಿರೋ?

ಹಾಗಾದರೆ ನಮ್ಮ

ಪಂಜಾ ಸಾಲಾಮಿಸ್ರಿ ಮುರಬ್ಬ

ವನ್ನು ಸೇವಿಸಿ ಜೀವವಿಮೆಯನ್ನು ಮಾಡಿಕೊಳ್ಳಿರಿ.

ಆಬಾಲವೃದ್ಧರಿಗೂ ಸ್ತ್ರೀಪುರುಷರಿಗೂ ಉಪಯೋಗಪಡುವ ಮತ್ತು ಪುಷ್ಟಿಯನ್ನು ಕೊಡುವ ಔಷಧಿಯು ಇದೇ. ಈ ಪಂಜಾ ಸಾಲಾಮಿಸ್ರಿ ಮುರಬ್ಬವು ಶುಕ್ರಕೋಶ ಸಂಬಂಧವಾದ ಎಲ್ಲಾ ತರಹೆಯ ರೋಗಗಳನ್ನೂ ನಿವರ್ತಿಮಾಡುತ್ತದೆ. ಪಂಜಾ ಸಾಲಾಮಿಸ್ರಿಯೊಂದಿಗೆ ಅಪೂರ್ವವಾದ ಮತ್ತು ಉತ್ತಮವಾದ ವನಸ್ಪತಿಗಳನ್ನು ಸೇರಿಸಿ ಮುರಬ್ಬವನ್ನು ತಯಾರುಮಾಡಲ್ಪಟ್ಟಿದೆ. ಒಂದು ಸಲ ಉಪಯೋಗಿಸಿದರೆ ಎಂದಿಗೂ ಮರೆಯಲಾರಿರಿ. ರಸರಹಿತವಾದ ಖಾತ್ರಿಯಾದ ದೇಹಪುಷ್ಟಿಯನ್ನು ಕೊಡತಕ್ಕ ಔಷಧಿಯೇ ಇದು.

ಪಂಜಾ ಸಾಲಾಮಿಸ್ರೀ ಮುರಬ್ಬಾವು—ನಿದ್ರೆಯಲ್ಲಿಯೂ ಮೂತ್ರದಲ್ಲಿಯೂ ಹೋಗುವ ಧಾತುವನ್ನು ನಿಲ್ಲಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಮೂತ್ರದಲ್ಲಿ ಉರಿಯುವುದನ್ನು ನಿಲ್ಲಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ರಕ್ತವನ್ನು ವೃದ್ಧಿಪಡಿಸಿ ಮೆದುಳಿಗೆ ಬಲವನ್ನು ಕೊಡುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಕೈ, ಕಾಲು, ಸೊಂಟದ ನೋವುಗಳನ್ನು ಹೋಗಲಾಡಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಹಸಿವನ್ನು ರಕ್ತವನ್ನು ಹೆಚ್ಚಿಸಿ ಧಾತುವನ್ನು ಶೋಧಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಉತ್ಸಾಹವು, ಬುದ್ಧಿಕುಶಲತೆಯು, ಶರೀರಕಾಂತಿಯು ಕೊಡುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಕಾಂಬ್ರಾ, ಮತ್ತು ಭಂಗಾರಭಸ್ಮಕ್ಕಿಂತಲೂ ಉತ್ತಮವಾದದ್ದು.

ಈ ಮುರಬ್ಬಾದೊಂದಿಗೆ ಬಲಗರುವಂಥ ಪದಾರ್ಥಗಳನ್ನು ಸೇರಿಸಿ ಪ್ರತಿಯೊಬ್ಬರೂ ಸೇವಿಸುವ ಹಾಗೆ ಕೈಯಿಂದ ಮುಟ್ಟದೆ ತಯಾರು ಮಾಡಲ್ಪಟ್ಟಿರುವುದು.

ಒಂದು ಡಬ್ಬಿ ಮುರಬ್ಬಾವನ್ನು 15 ದಿನಗಳು ಉಪಯೋಗಿಸುವುದರಿಂದ ಪೂರಾ ಗುಣ ಕೊಡುತ್ತದೆ. 2-3 ಡಬ್ಬಿಗಳನ್ನು ಉಪಯೋಗಿಸುವದರಿಂದ ಜನ್ಮಾಂತ್ಯದ ವರೆಗೂ ಗುಣಕೊಡುತ್ತೆ. ಈ ಸಾಲಾಮಿಸ್ರೀ ಎಂಬುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲ್ ಕಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿನ ಜನರು ಸಾಲಾಮಿಸ್ರೀಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು. ಅನೇಕರು ಉರುಳುಗಡ್ಡೆ, ಶಾಮಗಡ್ಡೆ ಇವುಗಳನ್ನು ಪಕ್ವಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಮೋಸಪಡಿಸುವರು. ನಮ್ಮ ಮುರಬ್ಬಾವನ್ನು ಪರೀಕ್ಷಿಸಿ ನೋಡಿದಲ್ಲಿ ಇದು ಪಂಜಾ ಸಾಲಾಮಿಸ್ರಿಯೋ ಅಥವಾ ಬೇರೆ ತರಹದ್ದೋ ಎಂಬುದು ತಿಳಿದುಬರುತ್ತೆ. [214-6]

ಈ ಮುರಬ್ಬಾವು "ಪಂಜಾ ಸಾಲಾಮಿಸ್ರಿ" ಅಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡುವೆವು

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾವು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನಮ್ಮಿಂದ ಪಡೆಯಬಹುದು. 15 ತೊಲೆ ಮುರಬ್ಬಾವಿನ ಡಬ್ಬಿ 1 ಕ್ಕೆ ರೂಪಾಯಿ 2-0-0. ಟಪಾಲು ಖರ್ಚು 1 ಡಬ್ಬಿಯಿಂದ 3 ಡಬ್ಬಿಗಳ ವರೆಗೆ 6 ಆಣೆ. ಅನುಪಾನ ಪತ್ರಿಕೆ ಔಷಧದ ಸಂಗಡ ಇರುತ್ತೆ.

ಏಜಂಟರು—ಡಿ. ಸೈಯದ್ ಉಸ್ಮಾನ್ ಅಂಡ್ ಕೊ, ದೊಡ್ಡ ಪೇಟೆ, ಬೆಂಗಳೂರು ಸಿಟಿ.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ಪ್ರಸಿದ್ಧವಾದ

ಜ್ವರದ ಗುಳಿಗೆಗಳು.

ಎಲ್ಲಾ ವಿಧವಾದ ಜ್ವರಗಳಿಗೂ (ಮಲೇರಿಯಾ ವಗೈರೆ) ಮುಖ್ಯೌಷಧ. 40 ಮಾತ್ರೆಗಳಿರುವ ಸೀಸೆಗೆ ರೂ. 1; 6 ಸೀಸೆಗೆ ರೂ. 5; 12 ಸೀಸೆಗೆ ರೂ. 9. ಮೈಸೂರು ಸರ್ಕಾರದ ಅ|| ಮೈಕಾಲಜಿಸ್ಟ್ ಮ|| ಎಂ. ಕೆ. ವೆಂಕಟರಾವ್, ಎಂ.ಎ. ಯವರು ಬರೆಯುವುದು—"ಜ್ವರಾರಿ ಕಂಪನಿಯವರ ಜ್ವರದ ಗುಳಿಗೆಗಳು ಮಲೆನಾಡಿನ ಜ್ವರಕ್ಕೆ ಮುಖ್ಯ ಔಷಧವೆಂದು ನಾನು ಶಿಫಾರಸುಮಾಡುತ್ತೇನೆ." ವಿಶೇಷ ಸಂಗತಿ ಕೆಳಗಿನ ವಿಳಾಸಕ್ಕೆ ಬರೆಯಬಹುದು. ಕ್ಯಾಟಲಾಗ್ ಫ್ರೀ.

[228-1] ವಿಳಾಸ—ಜ್ವರಾರಿ ಕಂಪನಿ, ತೀರ್ಥಹಳ್ಳಿ.

ಮಲೇರಿಯಾ

ಮತ್ತು ಹವಾ ದೆಸೆಯಿಂದುಂಟಾಗುವ ಎಲ್ಲಾ ತರದ ಜ್ವರವೂ

ಈಸಾನೊಫೆಲ್

ಯ ಸೇವನೆಯಿಂದ ಬೇಗನೆ ನಿವಾರಣೆಯಾಗುತ್ತೆ.

ಕ್ವಿನೈನ್ ಜ್ವರವನ್ನು ಅಡಗಿಸುವುದು ; ಅದರೆ ನಮ್ಮ ಈ ಸಾನೊಫೆಲೆಯು 15 ದಿನದಲ್ಲಿ ವಾಸಿಮಾಡುತ್ತದೆ. ಹಗಲು ರಾತ್ರಿ ಒಂದೊಂದು ಮಾತ್ರೆ ತೆಗೆದುಕೊಳ್ಳುತ್ತಾ ಬಂದರೆ ಜ್ವರ ಬಾರದಂತೆ ಸಂರಕ್ಷಣೆ ಮಾಡಬಲ್ಲದು.

ಜ್ವರವು ಸಂಪೂರ್ಣವಾಗಿ ವಾಸಿಯಾಗುವುದಕ್ಕೆ ಎರಡು ಬಾಟ್ಲಿ ಔಷಧ ಹದಿನೈದು ದಿನಕ್ಕೆ ಸಾಕು.

ಬಾಟ್ಲಿಗೆ ಕ್ರಯ 2 ರೂಪಾಯಿ.

ಬಿಕರಿಯಾಗುವ ಸ್ಥಳಗಳು.

1. ಫಾಸ್ಟರ್ ಕಂಪನಿ, ಕೆಮಿಸ್ಟ್ಸ್, ಬೆಂಗಳೂರು ;
2. ಬಿ. ಜಿ. ಗೋರಿಯೋ ಕಂಪನಿ, ವಾಲೆನ್ ಬೀದಿ,

[172-12] ಬೊಂಬಾಯಿ ;

ಇದಲ್ಲದೆ

ಎಲ್ಲಾ ಔಷಧ ಮಾರಾಟದ ಷಾಪಿನಲ್ಲೂ ಸಿಕ್ಕುವುದು.

ಓರಿಯಂಟಲ್ ಗ|| ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು............ರೂ. 4,46,00,000
ಕಂಪನಿಯಿಂದ ಪಾವತಿ ಆಗಿರುವದು ,, 4,00,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಆವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ.—ಮ|| ಎಂ. ಎಸ್. ರೆಬಿರೊ, ಚೀಫ್ ಏಜೆಂಟ್, ಬೆಂಗಳೂರು; ಮ|| ಎಂ ಎಸ್. ಸಂಜಪ್ಪನವರು ಅಥವಾ ಮ|| ವೆಂಕಟಸುಬ್ಬಯ್ಯನವರು, ಕಂಪನಿ ಏಜಂಟರು, ಮೈಸೂರು; ಅಥವಾ

[221-4] ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ, ಮದರಾಸ್

ಸುಖಕರ, ಆನಂದ, ಬಹಳ್ ಅವಶ್ಯ.

ಈಗ ತಾನೇ ಕಂಡುಹಿಡಿದಿದೆ.

ಜಪಾನ್ ರಾಜ್ಯದಲ್ಲಿ ನೂರಾರು ವರುಷಗಳಿಂದ ಉಪಯೋಗದಲ್ಲಿದೆ.

ಸೆಶಿಂತ್ರಾನ

ಬೆಳ್ಳಿಯ ವರಕು ಸುತ್ತಿದ ಮುತ್ತುಗಳು.

(1) ಮನಸ್ಸಿಗೆ ಹರ್ಷವನ್ನೂ ಉಲ್ಲಾಸವನ್ನೂ ಕೊಟ್ಟು ಜೀರ್ಣಶಕ್ತಿಯನ್ನುಂಟುಮಾಡುವುದು.

(2) ಹಾಡುವವರಿಗೆ ವರಪ್ರಸಾದವಾದದ್ದು.

(3) ಬಾಯಿ ದುರ್ಗಂಧ, ಗಂಟಲು ಗಾರೆನ್ನುವುದು, ಉಬ್ಬಸ, ಸಮುದ್ರಯಾನದ ಜುಗುಪ್ಸೆ, ಈ ಮೊದಲಾದವನ್ನು ಹುಟ್ಟದಂತೆ ಅಡ್ಡಿಮಾಡುತ್ತದೆ.

(4) ತಾಂಬೂಲದೊಡನೆ ಸೇವಿಸುವುದಕ್ಕೆ ಅತ್ಯಂತ ಹಿತಕರವಾಗಿದೆ. [73-33]

ಒಂದು ಸಲ ಪರೀಕ್ಷೆಮಾಡಿದಲ್ಲಿ ಯಾವಾಗಲೂ ಒಂದು ಪೊಟ್ಟಣ ಇದ್ದೇ ತೀರಬೇಕೆಂದು ನೀವೇ ನಿಶ್ಚಯಿಸುವಿರಿ.

ಮುತ್ತಿನಂತಿರುವ 45 ಮಾತ್ರೆ ಉಳ್ಳ ಪೊಟ್ಟಣಕ್ಕೆ ಕ್ರಯ 2 ಆಣೆ.
,, 95 ,, ,, ,, ,, 4 ,,
,, 200 ,, ,, ,, ,, 7 ,,
,, 200 ,, ಸುಂದರವಾದ ಟಿನ್ ಡಬ್ಬಾ 9 ,,
,, 80 ,, ,, ,, ,, 4 ,,
,, 100 ,, ಬಾಟ್ಲಿಯಲ್ಲಿ 4½ ,,

ಈ ಕ್ರಯದನ್ವಯ ಸ್ಟಾಂಪನ್ನೂ, ಅಂಚೆ ವೆಚ್ಚಕ್ಕೆ ಜಾಸ್ತಿ ಒಂದಾಣೆಯನ್ನೂ ಸೇರಿಸಿ ಕಳುಹಿಸಬೇಕು. ಕಾಗದಪತ್ರವನ್ನೂ ವಿಳಾಸಗಳನ್ನೂ ನಮಗೆ ಇಂಗ್ಲೀಷಿನಲ್ಲೇ ಬರೆಯತಕ್ಕದ್ದು.

ನಮ್ಮ ವಿಳಾಸ—ಸೆಶಿಂತ್ರಾನ ಡಿಪೋ,
ಮಾರ್ಸೂರ್ ಬಿಲ್ಡಿಂಗ್, ಪ್ರಿನ್ಸೆಸ್ ಸ್ಟ್ರೀಟ್,
ಬೊಂಬಾಯಿ 2;
ಅಥವಾ, ಬಿ. ಸಿ. ಷಾ ಕಂಪೆನಿ,
509 ಮಿಂಟ್ ಬೀದಿ, ಮದರಾಸ್.

BRAHMAPPA TAVANAPPANAVAR,

Merchant & Commission Agent.
Agent to Messrs. Currimbhoy Ebrahim & Co's Mills,
BOMBAY.

ನಾವು ಮುಂಬೈ ಮೆಸರ್ಸ್ ಕರೀಂಬಾಯ್ ಇಬ್ರಾಹಿಂ ಅಂಡ್ ಕಂಪೆನಿಯವರ ಬಾಬತು, ಮೆಸರ್ಸ್ ಫಜುಲ್ಬಾಯ ಮಿಲ್ಸ್ ಲಿಮಿಟೆಡ್ ಮುಂಬೈ, ದಿ ಕ್ರೆಸೆಂಟ್ ಮಿಲ್ಸ್ ಲಿಮಿಟೆಡ್ ಮುಂಬೈ, ಕರೀಂಬಾಯ್ ಮಿಲ್ಸ್ ಲಿಮಿಟೆಡ್ ಮುಂಬೈ, ದಿ ಇಂಡಿಯನ್ ಬ್ಲೀಚಿಂಗ್, ಡೈಯಿಂಗ್ ಅಂಡ್ ಪ್ರಿಂಟಿಂಗ್ ವರ್ಕ್ಸ್ ಲಿಮಿಟೆಡ್ ಮುಂಬೈ, ದಿ ಇಂಡೋರ್ ಅಂಡ್ ಮಾಳ್ವಾ ಯುನೈಟೆಡ್ ಮಿಲ್ಸ್ ಲಿಮಿಟೆಡ್ ಇಂಡೋರ್, ಇವುಗಳಲ್ಲದೆ ಇನ್ನೂ ಅನೇಕ ಮಿಲ್ಲುಗಳ ಬಟ್ಟೆಗಳನ್ನು ಮೈಸೂರು ಸೀಮೆಯಲ್ಲೆಲ್ಲಾ ವಿಕ್ರಯಮಾಡಲು ಕಮಿಷನ್ ಏಜಂಟರಾಗಿರುತ್ತೇವೆ. ನಮ್ಮ ಮುಖಾಂತರ ಮಾಲು ತರಿಸಿಕೊಳ್ಳತಕ್ಕವರಿಗೆ ಮುಂಬೈಯಲ್ಲಿ ಬಟ್ಟೆಗಳ ಮೇಲೆ ವಿಧಿಸತಕ್ಕ ದಳ್ಳಾಳಿ, ಜೋಡುದಳ್ಳಾಳಿ, ಮೊಹ್ತಾದುಮ್ಮ, ಗಂಟುಕಟ್ಟುವದು, ಸ್ಟೇಷನ್ನಿಗೆ ಹೇರಿಸುವದು, ಹುಂಡೀಕರಿ ವಗೈರೆ ಯಾವ ವಿಧವಾದ ಖರ್ಚೂ ತಗಲದೆ ಇರುವದರಿಂದ ಮುಂಬೈಯಿಂದ ತರಿಸುವ ದಕ್ಕಿಂತಲೂ ಸುಲಭ ದರದಲ್ಲಿ ಸಿಕ್ಕುತ್ತೆ. ಮತ್ತು ಮುಂಬೈಗೆ ಹೋಗಿಬರುವ ದೇಹಶ್ರಮವೂ, ಖರ್ಚೂ ಉಳಿಯುತ್ತೆ. ಹೆಚ್ಚು ಬಟ್ಟೆಗಳನ್ನು ಏಕಕಾಲದಲ್ಲಿ ಕೊಳ್ಳತಕ್ಕವರಿಗೆ ನೂರಿನ ಮೇಲೆ ಕೆಳಕಂಡ 3 ರೂಪಾಯಿ ಲಾಗಾಯ್ತು 4½ ರೂಪಾಯಿ ವರೆಗೆ ಡಿಸ್ಕೌಂಟು ದೊರೆಯುತ್ತೆ. [97-28]

ನಮ್ಮ ಟ್ರಾವಲಿಂಗ್ ಏಜಂಟರ ವಶ ಬಟ್ಟೆಗಳ ನಮೂನೆಗಳನ್ನು ಕೊಟ್ಟು, ದರ ಒಬ್ಬ ವ್ಯಾಪಾರಗಾರನಿಗೆ ತೋರಿಸಿ ಆರ್ಡರು ತೆಗೆದುಕೊಳ್ಳುವ ಏರ್ಪಾಡು ಮಾಡಿರುತ್ತೆ. ನಮ್ಮ ದಾವಣಗೆರೆ ಮತ್ತು ಬೆಂಗಳೂರು ಆಫೀಸುಗಳಲ್ಲಿ ಮಾಲು ಹಾಜರು ಸಹ ದೊರೆಯುತ್ತೆ.

ಬಟ್ಟೆಗಳನ್ನು ವ್ಯಾಪಾರಮಾಡಲು ಅನುಭವಸ್ಥರಾದ ಏಜಂಟರುಗಳೂ ಮತ್ತು ಗುಮಾಸ್ತರುಗಳೂ ಬೇಕಾಗಿದೆ.

ಎಲ್ಲಾ ಕಾಗದಪತ್ರಗಳೂ ದಾವಣಗೆರೆ ಆಫೀಸಿಗೆ ಬರೆಯಲ್ಪಡಬೇಕು.

ಹೆಡ್ ಆಫೀಸು :—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್, ದಾವಣಗೆರೆ. ಬ್ರಾಂಚ್ ಆಫೀಸು :—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

2-10-1914 ರಿಂದ 9-10-1914 ರ ವರೆಗೆ

ಸ್ಥಳ		ಪ್ಲೇಗ್ ತಗಲಿದ್ದು.	ಸತ್ತದ್ದು	ಕಾಲರ್ ತಗಲಿದ್ದು	ಸತ್ತದ್ದು
ಬೆಂಗಳೂರು	ಪಟ್ಟಣ	7	4	0	0
ಮೈಸೂರು	,,	31	17	1	1
ಬೆಂಗಳೂರು ಡಿಸ್ಟ್ರಿಕ್ಟು		30	16	0	0
ಮೈಸೂರು	,,	24	20	0	0
ಕೋಲಾರ್	,,	28	17	0	0
ಕೋಲಾರ್ ಚಿನ್ನದ ಗಣಿಗಳು		11	9	0	0
ತುಮಕೂರು ಡಿಸ್ಟ್ರಿಕ್ಟು		13	6	0	0
ಹಾಸನ	,,	1	1	0	0
ಚಿತ್ರದುರ್ಗ	,,	91	56	95	40
ಕಡೂರ್	,,	19	12	0	0
ಶಿವಮೊಗ್ಗ	,,	26	17	6	6
	ಜುಮ್ಲಾ	281	175	102	47

ಶಾಲಿವಾಹನ ಶಕ ವರುಷಂಗಳು 1837 ನೇ ಆನಂದ ಸಂವತ್ಸರದ ದಕ್ಷಿಣಾಯನೆ ಶರದೃತೌ ಕಾರ್ತೀಕ ಶುದ್ಧ ದ್ವಾದಶಿ ಶುಕ್ರವಾರದಿಂದ ಕಾರ್ತೀಕ ಬಹುಳ ಬಿದಿಗೆ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ.

1914 ನೇ ಅಕ್ಟೋಬರ್ ಮತ್ತು ನವಂಬರ್.

ತಾ	ವಾರ		ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತುಲಾ ಮಾಸ ತೇದಿ
30	ಶುಕ್ರ	*	ದ್ವಾದಶಿ	39-28	ಪೂಭಾ	19-1	14
31	ಶನಿ	‡	ತ್ರಯೋದಶಿ	43-16	ಉತ್ತರಭಾ	23-48	15
1	ಭಾನು	+	ಚತುರ್ದಶಿ	47-57	ರೇವತಿ	29-26	16
2	ಸೋಮ	§	ಪೌರ್ಣಮಿ	53-13	ಅಶ್ವಿನಿ	35-16	17
3	ಮಂಗಳ		ಪಾಡ್ಯಮಿ	58-39	ಭರಣಿ	43-19	18
4	ಬುಧ		ಬಿದಿಗೆ	60-0	ಕೃತ್ತಿಕೆ	48-50	19
5	ಗುರು		ಬಿದಿಗೆ	3-42	ರೋಹಿಣಿ	54-41	20

* ಸ್ಮಾರ್ತೋಚಿಷಮನ್ವಾದಿ, ಉತ್ಥಾನದ್ವಾದಶಿ, ತುಳಸೀಬೃಂದಾವನೋತ್ಸವ, ಮಳೆ ನಕ್ಷತ್ರ—ಸ್ವಾತಿ 3 ನೇ ಪಾದ. ‡ ಶನಿಪ್ರದೋಷ, ಮೇಲುಕೋಟೆಯಲ್ಲಿ ಅಷ್ಟತೀರ್ಥ ರಥ. + ವೈಕುಂಠಚತುರ್ದಶಿ, ಏಯಲಕ್ಷ್ಮಮ್ಮಣ್ಣಿಯವರ ಆರಾಧನೆ. § ರುದ್ರಸಾವರ್ಣಿಮನ್ವಾದಿ, ವ್ಯಾಸಪೂಜಾ, ಕಾರ್ತೀಕ ಸೋಮವಾರ, ಮಳೆ ನಕ್ಷತ್ರ—ಸ್ವಾತಿ 4 ನೇ ಪಾದ.

ಪ್ರೊಫೆಸರ್ ಬ್ರೇಸ್ಟರ್ ಎಲೆಕ್ಟ್ರೋ ಪೆಯಿನಾಡ್ಯೆನ್

ಮನುಷ್ಯನ ಶರೀರದಲ್ಲಿ ವಿದ್ಯುಚ್ಛಕ್ತಿ ವ್ಯಾಪಿತವಿರುವದೆಂತಲೂ, ವಿದ್ಯುಚ್ಛಕ್ತಿ ಕಡಮೆಯಾದ ಕೂಡಲೇ ನಾನಾ ತರದ ವ್ಯಾಧಿಗಳು ಲಭಿಸುವದೆಂತಲೂ, ಅಂತಹ ವ್ಯಾಧಿಗಳನ್ನು ಶೀಘ್ರ ಗುಣಪಡಿಸಲು ವಿದ್ಯುಚ್ಛಕ್ತಿ ಮಿಶ್ರವಾದ ಔಷಧದ ಉಪಯೋಗದಿಂದಲ್ಲದೆ



ಬೇರೆ ಔಷಧಗಳಿಂದ ವ್ಯಾಧಿಗಳನ್ನು ಶೀಘ್ರ ಗುಣಪಡಿಸುವದು ಕಷ್ಟವೆಂತಲೂ ಅಮೇರಿಕಾ ದೇಶದ ವೈದ್ಯಶಾಸ್ತ್ರ ಪಂಡಿತರು ವೈದ್ಯಶಾಸ್ತ್ರ ಪರಿಶೋಧನೆಯಿಂದ ಸಿದ್ಧಿಸಿರುವರು. ಈ ಔಷಧವು ಉಪಯೋಗಿಸಿದ ಕೂಡಲೇ ದೇಹಕ್ಕೆ ಸಾಕಾಗುವಷ್ಟು ವಿದ್ಯುಚ್ಛಕ್ತಿಯನ್ನುಂಟುಮಾಡಿ ವ್ಯಾಧಿಯನ್ನು ಅತಿ ಶೀಘ್ರ ಗುಣಪಡಿಸುತ್ತೆ. ಪ್ರಾಚೀನಕಾಲದ ಔಷಧಗಳಿಗೆಲ್ಲವು ಇದು ಅತ್ಯುತ್ತಮವಾದದ್ದು. ಒಂದಾವರ್ತಿ ಪರೀಕ್ಷಿಸಿ ನೋಡಿದರೆ ಇದರ ಗುಣವು ವ್ಯಕ್ತವಾಗುತ್ತೆ.

ಎಲೆಕ್ಟ್ರೋಪೆಯಿನಾಡ್ಯನ್ ತೈಲದಿಂದ ಗುಣಪಡುವ ವ್ಯಾಧಿಗಳು:—

ತಿಮರುವಾಯುವು, ಕೀಲ್ವಾಯುವು, ಪಾರ್ಶ್ವವಾಯುವು, ಕ್ಷಯ, ಕಮ್ಮಿನಗಡಿ, ವಾಯುನೋವು (ಕೈಕಾಲು ಹಿಡಿತ), ಉಳುಕುಹಿಡಿದಿದ್ದರು, ಕಠಿನಶ್ವಾಸ, ನಡುನೋವು (ಸೊಂಟನೋವು), ಪಕ್ಕಶೂಲೆ, ಹಲ್ಲುನೋವು, ತಲೆನೋವು, ಆರೆತಲೆನೋವು, ಉಬ್ಬಸ, ವಿಷಜ್ವರದ ಗಡ್ಡೆಗಳಿಗೂ ಮತ್ತು ಮಕ್ಕಳ ಪಕ್ಕಶೂಲೆ, (ಅಳ್ಳೆ) ಶೈತ್ಯದೋಷಗಳೂ, ವಿಷಜಂತುಗಳ ಕಡಿತಗಳಿಗೂ (ಚೇಳು ಮುಂತಾದದ್ದು), ಇದಕ್ಕೆಲ್ಲಾ ಬಹಳ ಶ್ಲಾಘನೀಯವಾದದ್ದು. [12-43]

ಉಪಯೋಗಿಸುವ ಕ್ರಮವು ಹಿಂದುದೇಶದ ಎಲ್ಲಾ ಭಾಷೆಗಳಲ್ಲಿಯೂ ಬುಡ್ಡಿಯ ಸಂಗಡ ಕಳುಹಿಸಲಾದೀತು.

ಬುಡ್ಡಿಯ ಕ್ರಯ ರೂ. 0-8-0. ವಿ. ಪಿ. ಖರ್ಚು 0-4-0. ಏಜಂಟರು ಬೇಕು.

ಮುಖ್ಯ ಏಜಂಟರು :—ಗುರುಬಸವ ಅಂಡ್ ಕಂಪನಿ, ಮದರಾಸ್.

Printed and Published by the Rev. H. Gulliford, Proprietor and Manager, Wesleyan Mission Press, Mysore. 29/10/1914.

REGISTERED
M. 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಬೆಲೆ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೮ ಮೈಸೂರು—ಸನ್ ೧೯೧೪ ನೇ ಇಸವಿ ನವಂಬರ್ ತಾರೀಖು ೫ ನೇ ಗುರುವಾರ. ಸಂಚಿಕೆ ೪೩

ಹೊಸ ಪುಸ್ತಕಗಳು.—ವಿಷವಿವಾಹ 4 ಆ., ಸನ್ಯಾಸಿನಿ 1½ ಆ., ಸುಶೀಲೆ ಆ., ತಿ. ವೆಂಕಟಾಚಾರ್ಯರಿಂದ-ದುರ್ಗೇಶನಂದಿನಿ 1½ ರೂ., ಅಮೃತಪುಳಿನ ಆ., ಚಕ್ರವರ್ತಿನೀ 1 | 8 ಆ. ವಗೈರೆ ಎಲ್ಲಾ ಕಾದಂಬರಿಗಳು; ಮತ್ತು ವಿಜಯ 3 ರೂ., ರಾಜಭಕ್ತಿ 8 ಆ., ವಿವೇಕ ಚೂಡಾಮಣಿ 10 ಆ., ಇತ್ಯಾದಿ.
[133] ಎಂ. ಸುಬ್ಬರಾವ್, ಬುಕ್ ಸೆಲರ್, ಶಂಕರಪುರ, ಬೆಂಗಳೂರು ಸಿಟಿ.

ಯ. ಆರ್. ವೆಂಕಟಸುಬ್ಬಾಚಾರ್ಯರ ಪುಸ್ತಕಗಳು.

ಮಕ್ಕಳ ಭೂವಿವರಣೆ 2 ಆಣೆ; ನವಬಾಲವ್ಯಾಕರಣ 1 ಆಣೆ; ಇಲಾಖೆಯ 2 ನೇ ಪುಸ್ತಕದ ನೋಟ್ಸು 2½ ಆಣೆ; ಮೆಕ್ಮಿಲನ್ನರ 3 ನೇ ಪುಸ್ತಕದ ನೋಟ್ಸು 1½ ಆಣೆ; ಡಿಟೋ 4 ನೇ ಪುಸ್ತಕದ ನೋಟ್ಸು 1¾ ಆಣೆ; 5 ನೇ ಪುಸ್ತಕದ ನೋಟ್ಸು 4 ಆಣೆ. ಡಿಸ್ಕೌಂಟು 10 ಕ್ಕೆ 1.
[213] ನಮ್ಮ ವಿಳಾಸ—ಸ್ಟೂಡೆಂಟ್ ಹಾಲ್, ಮೈಸೂರು.

ಯುದ್ಧ ವಾರ್ತೆಯು.

ಯೂರೋಪಿನಲ್ಲಿ ನಡೆಯುತ್ತಿರುವ ಯುದ್ಧ ವಾರ್ತೆಯನ್ನು ಪ್ರತಿ ದಿವಸವೂ ಜನರ ಉಪಯೋಗಕ್ಕಾಗಿ ಪ್ರಕಟಿಸುತ್ತಿರುವೆವು. ಕ್ರಯ 3 ಪೈ; ತಿಂಗಳಿಗೆ 1 ½ ಅಂಚೆಯಲ್ಲಿ ತರಿಸುವವರಿಗೆ ತಿಂಗಳಿಗೆ ಒಂದು ರೂಪಾಯಿ. ಮೈಸೂರು ಸಂಸ್ಥಾನದ ಎಲ್ಲಾ ಭಾಗದಲ್ಲಿಯೂ ಏಜಂಟರುಗಳು ಬೇಕಾಗಿದೆ. ಹೆಚ್ಚಾಗಿ ಕಮಿಷನ್ ಸಿಗುವುದು.

ಮುದ್ರಿಸಿ ಪ್ರಕಟಿಸುವವರು—
[13] ಬಿಕ್ಕನ್ನೂರು ರಾಮಚಂದ್ರರಾವ್, ಮೈಸೂರು.

ಇಲ್ಲಿ! ಮಧುರವಾಣೀ. ಸ್ತ್ರೀ!!!

ವಾರ್ಷಿಕ ಚಂದಾ ರೂ. 1 8 0.

ಇದರಲ್ಲಿ ಕಾಲಕ್ಕೆ ತಕ್ಕ ಭಾಷಾಶೈಲಿಯಿಂದ ಬರೆಯಲ್ಪಡುವ ಚಮತ್ಕಾರ, ಹಾಸ್ಯ, ವಿವೇಕಗಳಿಂದ ಕೂಡಿದ ಪಂಡಿತಪ್ರಣೀತ ನಾಟಕ, ಕಾದಂಬರಿ, ಜೀವನ ಚರಿತ್ರೆ ಮೊದಲಾದ ಉದ್ಗ್ರಂಥಗಳೂ; ಮತ, ನೀತಿ, ವಿದ್ಯಾ ವಿಷಯಕವಾದ ಉತ್ತಮೋಪನ್ಯಾಸಗಳೂ, ಹಾಸ್ಯಲಹರಿ, ಸದುಕ್ತಿ ಸಂಗ್ರಹ, ಕುಟುಂಬವಿಚಾರ ಮೊದಲಾದ ಉಪಯುಕ್ತ ವಿಷಯಗಳೂ ಬೇರೆ ಬೇರೆ ಪುಟಗಳೊಡನೆ ಸುಂದರ ಮುದ್ರಣದಿಂದ ಚಿತ್ರಸಹಿತವಾಗಿ ಪ್ರತಿ ಮಾಸವೂ ತಪ್ಪದೆ ಪ್ರಕಟೀಕರಿಸಲ್ಪಡುವವು. ಮಾದರಿ ಸಂಚಿಕೆಗೂ ಕ್ಯಾಟಲಾಗಿಗೂ ಬೆಲೆಯಿಲ್ಲ. ಸ್ವಲ್ಪ ಪ್ರತಿಗಳೇ ಉಳಿದಿವೆ.
[180-16] ನಮ್ಮ ವಿಳಾಸ—ಹನುಮಾನ್ ಕಂಪೆನಿ, ಮೈಸೂರು.

ಷೇಕ್ಸ್‌ಪಿಯರ್

ಮಹಾ ಕವಿಯ ನಾಟಕದ ಕಥೆಗಳು.

ಸಿಂಬೆಲಿನ್, ಒಥೆಲೋ, ಮರ್ಚೆಂಟ್ ಆಫ್ ವೆನ್ನಿಸ್, ಕಿಂಗ್‌ಲಿಯರ್ ಮುಂತಾದ ಕೆಲವು ನಾಟಕಗಳನ್ನು ಕಥಾ ರೂಪವಾಗಿ ಬರೆಯಲ್ಪಟ್ಟು ನಮ್ಮ ದೇಶದ ಹೆಸರನ್ನಿಟ್ಟು ಪ್ರಕಟಿಸಿರುತ್ತೆ. ಪ್ರತಿ ಒಂದಕ್ಕೂ ಎರಡರಾಣೆ. ಅವು ಯಾವುವೆಂದರೆ—ಕಳಾವತಿ, ಪದ್ಮಿನಿ, ವಸುಮತಿ, ಚಿತ್ರಕಳಾವತಿ, ವಿಲಕ್ಷಣ ಶಿಕ್ಷಣ, ಭಾನುಮತಿ, ವೈದೇಹೀ ವಿಲಾಪ, ಚಾರುಮತಿ, ಚಾತುರ್ಯವತಿ.

“ ಮರುಳಾಟದ ಮದುವೆ ” ಎಂಬ ನಕಲಿಯು ಈಗಲಾನೇ ಬೆಳಕಿಗೆ ಸಿದ್ಧವಾಗಿದೆ. ಪ್ರತಿಯೊಬ್ಬರೂ ಓದಬೇಕಾದುದು. ಕ್ರಯ 6 ಆಣೆ.
[166-17] ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

ಲಾ ಪುಸ್ತಕಗಳನ್ನು ಓದಿ ಜ್ಞಾನವನ್ನು ಸಂಪಾದಿಸಿಕೊಳ್ಳಿರಿ.

ಸಿವಿಲ್, ಕ್ರಿಮಿನಲ್, ರೆವಿನ್ಯೂ (ಲಾ) ವ್ಯವಹಾರಗಳ ಅರ್ಜಿಗಳನ್ನು ಬರೆಯುವಕ್ಕೆ ಪ್ರಶ್ನೋತ್ತರ ಲಾ ಬೋಧಿನಿ ರೂ. 1-4-0. ಇಂಡಿಯನ್ ಪೀನಲ್ ಕೋಡು ರೂ. 2 ; ಹೊಸ ಪ್ರತಿ ರೂ. 2-8-0 ಸಿವಿಲ್ ಪ್ರೊಸೀಜರ್ ಕೋಡು ರೂ 2-8-0. ಲ್ಯಾಂಡ್ ರೆವಿನ್ಯೂ ರೂಲ್ಸ್ ಮತ್ತು ತಿದ್ದುಪಾಟು 12 ಆಣೆ. ಎಕ್ಸೈಜು ರೂಲ್ಸ್ 12 ಆಣೆ. ಸಾರಾಯಿ ರೂಲ್ಸ್ 8 ಆಣೆ.

[143-17] ಪ್ರಕಾಶ:—ಬಿ. ನರಸಿಂಗರಾವ್,
ಎಡಿಟರ್, ಲಾ ಗೆಜೆಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

The General Assurance Society Ltd., Ajmer.

(A Popular Life Office.)

Mr. S. P. Ramanna, Agent at Mysore.

Before Insuring or taking agency elsewhere, it would be to your interest to know the rates of premium and terms of agency specially prepared by the Society's Consulting Actuary, Mr. H. E. W. Lutt, F.I.A. (one of the most eminent Actuaries in England).

First Valuation Result:—The total liabilities under all assurances issued up to 31st March 1913, are fully covered by the Society's Life Assurance Fund and Paid up Capital. Write for full particulars, Annual and Valuation Reports to the Manager, Ajmer, or Secretary,

Opposite to Minto Ophthalmic Hospital,
[131-17] Bangalore City.

ಸಿದ್ಧವಾಗಿದೆ.

1915 ನೆಯ ವರ್ಷದ ಲೋವರ್ ಸೆಕಂಡರಿ
ಕನ್ನಡ ಟೆಕ್ಸ್ಟಿನ ನೋಟ್ಸು.—ಕ್ರಯ 6 ಆಣೆ.
ಡಿಸ್ಕೌಂಟು—10 ಕ್ಕೆ 1; 25 ಕ್ಕೆ 3; 50 ಕ್ಕೆ 8; 100 ಕ್ಕೆ 20

ಮಕ್ಕಳ ಭೂವಿವರಣೆ.

ಈಗಿನ ಪಾಠಕ್ರಮಕ್ಕೆ ತಕ್ಕಂತೆ ಹೊಸದಾಗಿ ಆಗಿದೆ. ಇದರಲ್ಲಿ ಮೈಸೂರು ದೇಶದ ಬೆಳೆ, ಎತ್ತರ, ನದೀ ಪರ್ವತಾದಿಗಳು ಇವುಗಳನ್ನು ತೋರಿಸುವ ಮೂರು ಭೂಪಟಗಳೂ, ಚಿತ್ರಗಳೂ ಸೇರಿವೆ. ಕ್ರಯ 2 ಆಣೆ. [49-38]

ಇಲಾಖೆಯ 2 ನೆಯ ಪುಸ್ತಕದ ನೋಟ್ಸು 2½ ಆಣೆ, ಮೆಕ್ಮಿಲನ್ನರವರ 3 ನೇ ಪುಸ್ತಕದ ನೋಟ್ಸು 1½ ಆಣೆ, ಡಿಟೋ 4 ನೇ ಪುಸ್ತಕದ ನೋಟ್ಸು 1¾ ಆಣೆ, ಡಿಟೋ 5 ನೇ ಪುಸ್ತಕದ ನೋಟ್ಸು 4 ಆಣೆ, ನವಬಾಲವ್ಯಾಕರಣ (2 ನೇ ತರಗತಿಗೆ) 1 ಆಣೆ. Notes on "Tanglewood Tales," English Lower Secondary Text for 1915—As. 3. Notes on Fairy Tales—As. 2.

ನಮ್ಮ ವಿಳಾಸ:—ಯಸ್. ಆರ್. ವೆಂಕಟಸುಬ್ಬಾಚಾರ್ಯ,
ಸುಬೋಧಗ್ರಂಥಾಲಯ, ಮೈಸೂರು.

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಳವಾಯಿಂದ ನಿಬಿಡವಾದ ಕೇಶಪಾಶವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಇಂತಹ ಕೇಶ ರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾವುದೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಆಗತ್ಯದ ಸಹಕಾರಿಯಾಗಿರುತ್ತದೆ. ಈ ತೈಲವನ್ನು ಹಚ್ಚಿಕೊಳ್ಳುತ್ತಲೇ, ಮಸ್ತಿಷ್ಕದ ಬೇಗೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ಹೊಡೆಯ ತೊಡಗಿದ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು; ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು.

ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡುವುದಕ್ಕಿಂತ ಒಂದೇಯೊಂದು ಬಾರಿ ಈ “ ಕಾಮಿನಿಯಾ ತೈಲ ” ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ “ ಸರ್ಟಿಫಿಕೇಟ್ ಒಫ್ ಮೆರಿಟ್ ” ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಅವುಗಳಲ್ಲಿ ಒಂದನ್ನೇ ನೋಡಿರಿ। ಬೇಗಿನಹಾಳಕರ ಬಂಧುಗಳು. ಬಸವನ ಗಲ್ಲಿ, ಬೆಳಗಾಂವ—ತಾವು ಕೆಲ ತಿಂಗಳ ಹಿಂದೆ ಕಳುಹಿಸಿದ “ ಕಾಮಿನಿಯಾ ” ತೈಲವು ಕೂದಲುಗಳನ್ನು ಬೆಳೆಯಿಸುವುದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ. ಆದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ. ಪಿ. ದ್ವಾರಾ ರವಾನಿಸುವುದು. ಸೀಸೆಯೊಂದರ ಕ್ರಯ ರೂ. 1-0-0, ಅ. ವೆ. 0-4-0 ಬೇರೆ; 3 ಸೀಸೆಗಳ ಕ್ರಯ ರೂ. 2-10-0, ಅ. ವೆ. 0-7-0 ಬೇರೆ.

ಸೂಚನೆ.—ಅನೇಕ ದುರ್ವಿನೀತರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಬಿಕರಿಯಿಂದ ತಮಗೆ ಅತ್ಯಲ್ಪ ನಫೆಯೇ ದೊರಕುತ್ತದೆಂದು, ನೀವು “ ಕಾಮಿನಿಯಾ ತೈಲ ” ವನ್ನು ಕೇಳಿದರೆ, “ ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ ” ಎಂದು ಅವರಿಗೆ ಬಹಳ ಲಾಭ ದೊರಕತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸ ಹೋಗದಂತೆ “ ಕಾಮಿನಿಯಾ ಓಯಿಲ್ ” ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಇದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳುವದು ಮೆಹರುಬಾನ್ ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಬೇಕಾದ್ದಿಲ್ಲ. ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಒಟ್ಟೊ ದಿಲ್ ಬಹಾರ್ !!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಆಲ್ಕೋಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ. ಈ ಒಟ್ಟೊ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಯುವದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ. [19-41]

ಸಣ್ಣ ಸೀಸೆಯ ಬೆಲೆ ರೂ. 0-8-0, ಒಂದು ಡ್ರಾಮಿನ (ಮೀಡಿಯಂ) ಸೀಸೆ 1 ಕ್ಕೆ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 1-0-0. ಅಂಚೆಯ ವೆಚ್ಚ ಬೇರೆ ರೂ. 0-4-0. ಒಟ್ಟೊ-ದಿಲ್ ಬಹಾರ್ ಪರಿಮಳದ ಕಾರ್ಡುಗಳ ಡಜನ್ ಒಂದಕ್ಕೆ 0-12-0.

ಮೇಲೆ ಕಂಡ ಎಲ್ಲಾ ಸುಗಂಧಗಳು ಸಿಕ್ಕುವ ಪತ್ತೆ:—

ಆಂಗ್ಲೊ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,
ಜುಮ್ಮಾಮಸ್‌ಜಿದ್, ಬೊಂಬಾಯಿ.
ಏಜೆಂಟ್, ದಿ ಬುಕ್ ಡಿಪೋ, ಮಂಗಳೂರು.

Mellin's Food

ಮೆಲ್ಲಿನ್ಸ್ ಆಹಾರವು
ಕೈಸೋಕದೆ ಮಾಡಿದೆ
ಶಿಶುಗಳಿಗೂ ರೋಗಿಷ್ಠರಿಗೂ

ಮೆಲ್ಲಿನ್ಸ್ ಆಹಾರದ ಬಿಸ್ಕತ್ತುಗಳು [4-44]

ಬೆಳೆಯುವ ಮಕ್ಕಳಿಗೆ ಎದೆಹಾಲು ತಪ್ಪುವ ಕಾಲದಲ್ಲಿ ಇದು ಶ್ರೇಷ್ಠವಾದ ಆಹಾರ; ಮತ್ತು ದೊಡ್ಡವರಿಗೆ ದೇಹ ಪುಷ್ಟಿಯನ್ನೂ ಬಲವನ್ನೂ ಕೊಡತಕ್ಕದ್ದು.

Messrs. OAKES & Company, Mount Road, Madras.
ವಿಳಾಸ-ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

ವೃತ್ತಾಂತಪತ್ರಿಕೆ ಏಜಂಟರಿಗೆ ಸೂಚನೆ.

ವೃತ್ತಾಂತ ಪತ್ರಿಕೆಯ 1914-15 ನೇ ವರುಷದ ಒಂದನೇ ಕ್ವಾರ್ಟರು ಕಳೆದ ಆಗಸ್ಟ್ ತಿಂಗಳಿಗೆ ಪೂರೈಸಿದೆ. ಏಜಂಟರುಗಳು ಆ ಕ್ವಾರ್ಟರಿನ ಲೆಕ್ಕಗಳನ್ನು ಖೈದುಮಾಡಿ, "ಬಿ" ಫಾರಂಗಳಿಗೆ ಎತ್ತಿ ಬರೆದು, ತಮ್ಮ ತಮ್ಮ ಸೂಪರಿಂಟೆಂಡೆಂಟರಿಗೆ ಒಂದು ಪ್ರತಿಯನ್ನೂ, ನಮಗೆ ಒಂದು ಪ್ರತಿಯನ್ನೂ ಈ ವಾರದಲ್ಲೀ ಜಾಗ್ರತೆಯಿಂದ ಕಳುಹಿಸಿಕೊಡಬೇಕಾಗಿ ಕೃತಪಡಿಸಿದೆ.

ನೀವು ಕೇಳಿದ ಹಾಗೆ ಪತ್ರಿಕೆಗಳನ್ನು ಹೆಚ್ಚಾಗಿ ಕಳುಹಿಸುತ್ತಾ ಬರುವೆವು. ಆದರೆ ಬಿಡಿ ಪತ್ರಿಕೆಗಳನ್ನು ವಾಪಸು ತೆಗೆದುಕೊಳ್ಳಲಾಗುವುದಿಲ್ಲ. ಮುಂದಿನ 1916 ನೇ ಆಪ್ರಿಲ್ ವರೆಗೆ ಅಡ್ವಾನ್ಸು ಕೊಟ್ಟು, ಕ್ರಮವಾಗಿ ಚಂದಾದಾರರಾಗಿರುವವರಿಗೆ ಮಾತ್ರ ಪತ್ರಿಕೆಗಳನ್ನು ತಪ್ಪಿಸದೆ ಕೊಡುತ್ತಾ ಬರಬೇಕೆಂದು ಕೋರುತ್ತೇವೆ.

ಮ್ಯಾನೇಜರ್, "ವೃತ್ತಾಂತ ಪತ್ರಿಕೆ," ಮೈಸೂರು

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು"

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು. ವಾಯು ಕೀಲು, ಅರಶಲೆ, ತಲೆನೋವುಗಳು; ಯಾವ ಕಾರಣದಿಂದ ಹುಟ್ಟುವ ಬಾಧೆಯಾಗಲಿ, ಉಬ್ಬಸ, ಹಲ್ಲುನೋವು, ಗಂಟ್ಲು ಗಾರೆನ್ನುವುದು, ಕೆಮ್ಮುಗಳು, ಶೀತನೆಗಡಿ, ಶ್ವಾಸರೋಗ, ದದ್ದು, ಉಳುಕು, ಥಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ. ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು. ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲು ಕೊಡಿ ಎಂದು ಕೇಳು. ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೋ. ಈ ಯುಕ್ತಿಯೋಪಾಧಿ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ. ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ. ಲಕ್ಷಾಂತರ ಜನರು ಗುಣಹೊಂದಿದಾರೆ; ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ [122-23]

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡಿ ಅದರ ಕ್ರಯ ಬಾಟ್ಲಿಗೆ 12 ಆಣೆ; ಅಂಚೆ ವೆಚ್ಚ 4 ಆಣೆ 3 ಅಥವಾ ಹೆಚ್ಚು ಬಾಟ್ಲು ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫ ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ. ವಿಳಾಸಗಳು—(1) ಎಸ್ ಪೀಟರ್ಸ್, 37 ವಡಮಲೈಪಿಳ್ಳೈ ಬೀದಿ, ಪುರಸವಾಕಂ, ವೇಪೇರಿ, ಮದರಾಸ್; (2) ಜಿ ಎಸ್. ಚೆನ್ನಯ್ಯಶೆಟ್ಟಿ, ಜನರಲ್ ಮರ್ಚೆಂಟ್, ತುಮಕೂರು.

ಮಕ್ಕಳಿರುವ ಮನೆಗಳಲ್ಲಿಯೂ ಪ್ರಯಾಣಕಾಲದಲ್ಲಿಯೂ ಛಳಿ ಮಳೆಗಾಲಗಳಲ್ಲಿಯೂ ಮಲೆನಾಡಿನಲ್ಲಿಯೂ ಸೋಂಕುರೋಗ ಸ್ಥಳಗಳಲ್ಲಿಯೂ ಆರೋಗ್ಯವನ್ನು ಕಾಪಾಡುವುದರಲ್ಲಿ ಶ್ರೇಷ್ಠತಮವಾದ

ಶ್ರೀಕರಕಸ್ತೂರಿಮಾತ್ರೆ

ಟಿಬೆಟ್ ದೇಶದ ಕಸ್ತೂರಿ—ಅನೇಕ ಪುಟಗಳಿಂದ ತಯಾರಿಸಿದ ಲೋಹ ಭಸ್ಮ—ಚಿನ್ನದ ರೇಖು ಮೊದಲಾದವುಗಳಿಂದ ಹಿರಿಯರ ಕಾಲದಿಂದಲೂ ತಯಾರಿಸಲ್ಪಡುತ್ತಿರುವ ಈ ಶ್ರೀಕರ ಕಸ್ತೂರಿಮಾತ್ರೆಗಳು ತಾಂಬೂಲವನ್ನು ರಂಜಿಸಿ ಎಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸಿ ಬಹಳ ಹೊತ್ತಿನವರೆಗೆ ಬಾಯಿ ಘಮಘಮಿಸುವಂತೆ ಮಾಡುವುವು. ಶೀತವಾಯು-ಕೆಮ್ಮು-ನೆಗಡಿ-ದಿನಜ್ವರ-ಮೂರರ ಜ್ವರ-ನಾಲ್ಕರ ಜ್ವರ-ಮಲೇರಿಯಾಜ್ವರ-ತಲೆನೋವು-ಮೈಕೈನೋವು ಮತ್ತು ಭಾರ-ಅರೋಚಕ ಹಲ್ಲುನೋವು-ಹೊಟ್ಟೆನೋವು-ಮಲಬಂಧ-ಅಜೀರ್ಣ ಭೇದಿ-ಮಕ್ಕಳಿಗೆ ಸಾಮಾನ್ಯವಾಗಿ ಬರುವ ಪಕ್ಕೆಗಳ ಶೀತ-ಹೊಟ್ಟೆಯುಬ್ಬರ-ಮಂದಜ್ವರ-ಭೇದಿ ಮುಂತಾದುವುಗಳನ್ನು ನಂಬಿಕೆಯಾಗಿ ಗುಣಪಡಿಸುತ್ತವೆ. ಒಂದು ವೇಳೆ ಈ ಮಾತ್ರೆಗಳನ್ನು ಪರೀಕ್ಷಿಸಿದರೆ ಯಾವಾಗಲೂ ಇದನ್ನೆ ತರಿಸುವರೆಂದು ನಾವು ಧೈರ್ಯವಾಗಿ ಹೇಳಬಲ್ಲೆವು. 260 ಮಾತ್ರೆ 4 ಆಣೆ. ಏದಕ್ಕೆ ಒಂದು ಇನಾಮು ವಿ. ಪಿ. ಛಾರ್ಜು ಪ್ರತ್ಯೇಕ. [231-1]

ಬಿ. ವಿ. ಪಂಡಿತ್, ಸದ್ವೈದ್ಯಶಾಲಾ, ನಂಜನಗೂಡು.

ಪ್ರೊಫೆಸರ್ ಗಜ್ಜಾರರವರ

ಗುಣಕಂಡ ಪ್ರಖ್ಯಾತವಾದ ಔಷಧಗಳು.

ವ್ಯರ್ಥವಾದ ಔಷಧಗಳನ್ನು ಉಪಯೋಗಿಸಿ ಪ್ರಾಣಾಪಾಯಕ್ಕೆ ಗುರಿಯಾಗುವುದೇಕೆ? ವಿವೇಕದಿಂದ ತಯಾರಾಗಿರುವ ನನ್ನ ಔಷಧಗಳನ್ನು ಸೇವನೆ ಮಾಡಬಾರದೇ?

ಟಾನಿಕ್ ಸೋಲ್ಯೂಷನ್.—ಇದರಲ್ಲಿ ಗ್ಲಿಸರಿನೋಫೇಟ್ಸ್ ಎಂಬ ಅಮೂಲ್ಯ ಪದಾರ್ಥಗಳನ್ನು ಹಾಕಿ ತಯಾರ್ಮಾಡಿದೆ. ಇದು ಬೇಗನೆ ಶರೀರಕ್ಕೆ ಸೇರಿ ಹೋಗುತ್ತೆ. ಆರೋಗ್ಯವನ್ನೂ ಚಟುವಟಿಕೆಯನ್ನೂ ಶಕ್ತಿಯನ್ನೂ ವೃದ್ಧಿಮಾಡುವುದು. ನರಗಳ ದುರ್ಬಲವನ್ನೂ ಹೋಗಲಾಡಿಸುವುದರಲ್ಲಿ ಇದು ಬಹಳ ಶ್ರೇಷ್ಠವಾದ ಔಷಧ. ಕ್ರಯ ಶೀಸೆಗೆ 2 ರೂಪಾಯಿ, ಮತ್ತು ರೂ. 1-2-0.

ರಕ್ತಶುದ್ಧಿಗೆ ಮಹೌಷಧ.—ಇದು ರಕ್ತವನ್ನು ದೇಹದ ಎಲ್ಲಾ ಭಾಗಗಳನ್ನೂ ಶುದ್ಧಿಮಾಡುತ್ತೆ. ಬಹಳ ಚೆನ್ನಾಗಿ ಗುಣಕಂಡ ಔಷಧ. ಕ್ರಯ ಶೀಸೆಗೆ 1 ರೂಪಾಯಿ.

ಲಿವರ್ ಸೊಲ್ಯೂಷನ್—ಪಿತ್ತಕೋಶದ ಮೇಲೆ ಇದು ಬಹಳ ಚೆನ್ನಾಗಿ ಕೆಲಸಮಾಡೋಣದರಿಂದ ಮಲಬದ್ಧತೆಯುಳ್ಳವರಿಗೆ ಮಹೋಪಕಾರಿಯಾಗಿದೆ. ಡ್ಯಾಕ್ಟರುಗಳು ಇದನ್ನು ಕೊಡುತ್ತಾರೆ. ಇದು ಮನೆಯಲ್ಲಿ ಇದ್ದೇ ತೀರಬೇಕು. ಕ್ರಯ ಶೀಸೆಗೆ ರೂ. 1; ಮತ್ತು ರೂ. 0-10-0.

ಜ್ವರದ ಔಷಧ.—ವಿಷಮಶೀತಜ್ವರ, ನಿಂತುಬರುವಜ್ವರ, ಅವಧಿಯಜ್ವರ, ಎಲ್ಲಾ ತರದ ಜ್ವರಗಳಿಗೂ ಇದು ಸಂಜೀವನವಾಗಿದೆ. ಇದು ಕ್ವಿನೈನ್‌ಗಿಂತ ಬಹಳ ಅಗ್ಗ. ಕ್ರಯ ಶೀಸೆಗೆ 10 ಆಣೆ; 4 ಆಣೆ.

ಹುಳುಕಡ್ಡಿ ಔಷಧ—ಹುಳುಕಡ್ಡಿಯನ್ನು ಖಂಡಿತವಾಗಿ ಗುಣಮಾಡುತ್ತೆ. ಕ್ರಯ ಸೀಸೆಗೆ 4 ಆಣೆ.

ಹಲ್ಲುಪುಡಿ.—ಈ ಪುಡಿಯಿಂದ ಹಲ್ಲು ಉಜ್ಜಿಕೊಂಡರೆ ಬಾಯಿಗೆ ಸುವಾಸನೆ ಕೊಡುತ್ತೆ. ಹಲ್ಲು ಸವೆದು ಕೆಡದಂತೆ ಬಹಳ ಚೆನ್ನಾಗಿಟ್ಟು ಕಾಪಾಡುತ್ತೆ. ಕ್ರಯ ಸೀಸೆಗೆ 4 ಆಣೆ; 6 ಆಣೆ; 1 ರೂಪಾಯಿ.

ಇಂಗ್ಲೀಷಿನಲ್ಲೇ ನಮಗೆ ಕಾಗದವನ್ನು ಬರೆಯಬೇಕು.

ಸೋಲ್ ಏಜಂಟರು:—ಎಸ್. ವೈದ್ಯ ಮತ್ತು ಕಂಪನಿ,
[156-17] ಪಾರ್ಕ್ ಟೌನ್, ಮದರಾಸ್.

೧೯೧೫ನೆಯ ಶ್ರೀ ಸೀತಾರಾಘವ ಪಾಕೆಟ್ ಡೈರಿಗಳು

ಬಿಕರಿಗೆ ಸಿದ್ಧವಾಗಿವೆ.

ಪಾಕೆಟ್ ಡೈರಿ

ಶಾಯಿ ಇಳಿಯದ ಉತ್ತಮವಾದ ಕಾಗದ. ಮುದ್ದಾದ ಮುದ್ರಣ. ಅನೇಕವಾದ ಹೊಸ ಸಂಗತಿಗಳಿವೆ.

ನಂ. 1 ಸಣ್ಣ ಸೈಜು ಸಾದಾ	ಆಣೆ 4
,, 2 ,, ,, ಪೆನ್ಸಲ್ ಮುಚ್ಚಳ ಉಳ್ಳದ್ದು	,, 6
,, 3 ದೊಡ್ಡ ಸೈಜು ಸಾದಾ	,, 6
,, 4 ,, ,, ಪೆನ್ಸಲ್ ಮುಚ್ಚಳ ಉಳ್ಳದ್ದು	,, 8

ಹೆಚ್ಚಾಗಿ ತರಿಸುವವರಿಗೆ ರೂಪಾಯಿ 1 ಕ್ಕೆ 2 ಆಣೆ ಕಮಿಷನ್ ದೊರೆಯುವುದು. [220-2]

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಯಾಕೆ ಪರೀಕ್ಷಿಸಬಾರದು? ಭಂಗಾರದ ಪದಕ ಬಂದಿದೆ.
ಸೆಂಟ್, ಅತ್ತರುಗಳಲ್ಲೆಲ್ಲಾ ಶ್ರೇಷ್ಠವಾದವು.

ಆಟೋ ಮೋಹಿನಿ.

ಇದು ರಿಜಿಸ್ಟರ್ ಆಗಿದೆ. ಈಗಿನ ಕಾಲದಲ್ಲಿ ಇದೇ ನಿಲ್ಲುವ, ಸುವಾಸನೆಯುಳ್ಳ, ಮನೋಹರವಾದ ಮತ್ತು ಸರಿಯಾದ ಪರಿಮಳದ ದ್ರಾವಕ. ಕರವಸ್ತ್ರಕ್ಕೆ ನಾಲ್ಕು ತೊಟ್ಟು ಹಾಕಿಕೊಂಡರೆ ನಾಲ್ಕುದಿನಗಳ ತನಕ ಘಮಘಮಿಸುವ ಸುವಾಸನೆ ಇರುತ್ತೆ.' ಹಾಗೆ ದೀರ್ಘ ಕಾಲ ನಿಲ್ಲತಕ್ಕದ್ದಲ್ಲವೆಂದು ರುಜುವಾತು ಮಾಡಿಕೊಡುವವರಿಗೆ ನಾವು ಒಂದು ನೂರು ರೂಪಾಯಿ ಬಹುಮತಿ ಕೊಡುತ್ತೇವೆ. ಪರೀಕ್ಷೆಮಾಡಿ ನೋಡಿ, ಬಹುಮತಿಯನ್ನು ಸಂಪಾದಿಸಿಕೊಳ್ಳಿ! ಕ್ರಯ ½ ಔನ್ಸ್ ಗಾಜಿನ ಬಿರಡೆಯ ಬಾಟ್ಲಿಗೆ ರೂಪಾಯಿ 2-0-0.



1 ಡ್ರಾಂ ಕೊರವೆ 12 ಆಣೆ.

ಆಟೋ ಮೋಹಿನಿ ಪರಿಮಳದ ಕಾರ್ಡುಗಳು ಡಜನ್ 1 ಕ್ಕೆ 12 ಆಣೆ.

ಎಲ್ಲರಲ್ಲೂ ಬಿಕರಿಗೆ ಇಟ್ಟಿದೆ. ಮದರಾಸ್ ಅಧಿಪತ್ಯಕ್ಕೆಲ್ಲಾ ಏಜೆಂಟರು—
ಸಾ ಭಗವಾನ್‌ದಾಸ್ ಚೂನಿಲಾಲ್ ಕಂಪನಿ,
[251-17] 177, ಬೈನಾಬಜಾರ್ ರೋಡ್, ಮದರಾಸ್.

ಅಮೃತಾಂಜನ ರಜಿಸ್ಟರ್ಡ್

ಇದು ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು. ಇದರ ಉಪಯೋಗದಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗವಾಯು, ಉಳುಕು, ಕೆಮ್ಮು, ಸೊಂಟನೋವು, ಶೀತ, ಚರ್ಮ ವ್ಯಾಧಿ, ಹಲ್ಲುನೋವು, ಚೇಳು ಕಡಿತ ಮೊದಲಾದ ಎಲ್ಲಾ ತರದ ನೋವುಗಳು ಖಾತ್ರಿಯಾಗಿ ನಿಲ್ಲುವವು. ತರಾರಿ ಔಷಧಗಳನ್ನು ಪಡಕೊಳ್ಳಬೇಡಿರಿ ಈ ನಮ್ಮ ಲೋಕಪ್ರಖ್ಯಾತವಾದ ಅಮೃತಾಂಜನವನ್ನು ನಮ್ಮ ರಿಜಿಸ್ಟ್ರಿಯಾದ ಮತ್ತು ಹಲವು ಭಾಷೆಗಳುಳ್ಳ ಸುಂದರವಾದ ಕರಡಿಗೆಯಲ್ಲಿ ಪ್ಯಾಕ್ ಮಾಡಿರುತ್ತೇವೆ. ಕರಡಿಗೆ ಇಲ್ಲದ ಬಾಟ್ಲಿಗಳನ್ನು ಪಡಕೊಳ್ಳಬೇಡಿರಿ ಬಾಟ್ಲು ಒಂದರ ಕಿಮ್ಮತು 0-8-0. ಡಜನ್ 1 ಕ್ಕೆ 5-4-0 ವಿ. ಪಿ. ಪ್ರತ್ಯೇಕ. ಗಜಕರ್ಣದ ಮುಲಾಮು 0-6-0. ದಂತಮಂಜನ 0-2-0. ಮೋಹಿನಿ ತೈಲ 0-12-0 ಚಿಜ್ಜ ಮುಲಾಮು 0-3-0. ಜುಲಾಬು ಮಾತ್ರೆ 0-8-0. ಸುಂದರಿ ಮುಲಾಮು 0-8-0 ಕ್ಯಾಟಲಾಗಿಗೆ ಬರೆಯಿರಿ [52-35]

ವ್ಯಾಪಾರಸ್ಥರಿಗೆ ಹೆಚ್ಚು ಕಮಿಷನ್ ದೊರಕುವದು.

ಅಮೃತಾಂಜನ ಡಿಪೋ,

ಫೋರ್ಟ್. ಮುಂಬಯಿ, ಮತ್ತು ೯ ಜಹಂಗೀರ್ ಸ್ಟ್ರೀಟ್, ಮದ್ರಾಸು.

ಶಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇ ಶೂಲಿ, ಸಂದುಗಳ ನೋವು, ಮೈ ಕಾಲು ಹೊಡೆತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನೆಗಡಿ, ಬಿಕ್ಕಳಿಕೆ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸಹಿಸುವಂತೆ ಮಾಡಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಮುಟ್ಟುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ —220 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ: 6 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪೀ ವರೆಗೆ ಪೋಸ್ಟೇಜು 4 ಆಣೆ. [199-9]

೨. ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕ್ಷಣಮಾತ್ರದಲ್ಲಿ ಕೂಡಲೇ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರಿಸಿದೆ, ಮೂತ್ರವು ಕಟ್ಟಿದೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿ! ಒಂದೇ ಒಂದು ಬುದ್ಧಿಯು ನಿಮ್ಮಲ್ಲಿರಲಿ! ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ

ಅನುಪಾನ ಪತ್ರವು ಔಷಧದೊಡನೆ ಇರುವುದು. ಬೆಲೆ ರೂ 1; ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಅದ್ಭುತವಾದ ಬಲಕಾರಿ ಮತ್ತು
ಬಾಯಿನಾತಹರ.

ಜಿನತಾನ

ಜೀರ್ಣಶಕ್ತಿ ಹುಟ್ಟಿಸುವುದರಲ್ಲಿ ಇದಕ್ಕೆ ಸಮಾನವಾದದ್ದು ಇನ್ನೊಂದಿಲ್ಲ; ಅನ್ನಕೋಶವು ಎಷ್ಟೇ ದುರ್ಬಲವಾಗಿದ್ದರೂ ಅದರ ಕಾರ್ಯಗಳನ್ನು ಸೇರುಪೇರು ಮಾಡುವದಿಲ್ಲ. ಇದರ ಸೇವನೆಯಿಂದ ಎಲ್ಲಾ ರೋಗಗಳನ್ನೂ ಅಂಟದಂತೆ ತಡೆಯಬಲ್ಲದು. ಈ ಭಾಗದಲ್ಲಿ ಇದರ ಗುಣವು ಬಹು ಫಲಕಾರಿಯಾಗಿದೆ. ಇದಲ್ಲದೆ ಇದನ್ನು ಸೇವಿಸುವವರ ಬಾಯಿಯಲ್ಲಿ ಎಲ್ಲಾ ತರದ ದುರ್ನಾತವೂ ಹೋಗಿ ಸುಗಂಧವು ಹುಟ್ಟಿ ಹರ್ಷಕರವಾಗಿದ್ದೀತು.

ಗಂಟಲಿನ ನರಗಳು ಇದರ ಸೇವನೆಯಿಂದ ಬಹಳ ಬಲಗೊಳ್ಳುವವು. ಇದರ ಗುಣವನ್ನು ನೋಡಿ ಉಪನ್ಯಾಸಕರೂ, ನಾಟಕಧಾರಿಗಳೂ, ಸಂಗೀತಗಾರರೂ, ಬೋಧಕರೂ, ವಾಚಾಳಕ ಪ್ರಿಯರೂ ಈ ಮಾತ್ರೆಗಳನ್ನು ಬಹಳವಾಗಿ ಪೋಷಿಸಿ ಪ್ರೀತಿಯಿಂದ ಉಪಯೋಗಿಸುತ್ತಿದಾರೆ.

ಈ ಮಾತ್ರೆಗಳನ್ನು ಜಪಾನ್‌ನಲ್ಲಿರುವ ಒಸಾಕಾ ಪಟ್ಟಣದ ಮೋರಿಶಿತಾ ಕಂಪನಿಯವರು ತಯಾರ್ಮಾಡುತ್ತಾರೆ.

ಈ ಮಾತ್ರೆಗಳ	30 ಮಾತ್ರೆಗಳುಳ್ಳ ಪೊಟ್ಟಣಕ್ಕೆ 1½ ಆಣೆ.	65 ಮಾತ್ರೆ ಪೊಟ್ಟಣಕ್ಕೆ 3 ಆಣೆ.
ಕ್ರಯ	195 ,, ಡಬ್ಬಾ ಸಮೇತ 8 ಆಣೆ.	455 ,, ಕನ್ನಡಿ ಡಬ್ಬಾಕ್ಕೆ 1 ರೂಪಾಯಿ.

ಎಲ್ಲಾ ಅಂಗಡಿಗಳಲ್ಲಿಯೂ ಬಿಕರಿಯಾಗುವುದು.

ಸೋಲ್ ಏಜಂಟರು:—

ಎಸ್. ವೈದ್ಯ ಮತ್ತು ಕಂಪನಿ,
ಪಾರ್ಕ್‌ಟೌನ್, ಮದ್ರಾಸ್.

[156-17]

Messrs. Petrie-Hay & Son, Hunsur.

5 ಅಂಗುಲದ ಎತ್ತು ತೆಗೆಯುವ ಸ್ಕ್ರೂ ಪ್ರೆಸ್‌ಗಳು ಎರಡು ಪೆಟ್ರಿಹೆ ಅಂಡ್ ಕಂಪನಿ ಹುಣಸೂರು, ಅವರಲ್ಲಿ ಇರುತ್ತವೆ. ಧಾರಣೆ ಎರಡರಿಂದ ರೂ. 400. ಬೇಕಾದವರು ಅವರಿಗೆ ಬರೆಯಬಹುದು. [233-1]

Messrs. Petrie-Hay & Son, Hunsur.

ಹಸ್ಸಲ್ಲಿ ತೆಗೆದ ಕೊಳಗಳು 2 ಸಲೀ ಅಡಿ ದಾಗಾಯಿತು 30-40 ಸಲೀ ಅಡಿ ವರೆಗೂ ಇರುತ್ತವೆ. ಇಷ್ಟವುಳ್ಳವರು ಕಪ್ಪೀಲನ್ನು ಹುಣಸೂರಿನಲ್ಲಿರುವ ಪೆಟ್ರಿಹೆ ಅಂಡ್ ಕಂಪನಿಗೆ ಬರೆದು ತಿಳಿದುಕೊಳ್ಳಬಹುದು. ಈ ಕೊಳೀ ಗಳು ತಯಾರಿಗೂ ಮನೆ ಕಟ್ಟುವುದಕ್ಕೂ ಆಗುತ್ತವೆ. [232-1]

ಅಕ್ಟೋಬರ್ ಮಹೋತ್ಸವದಕೈಗಡಿಯಾರ

ಅರ್ಧ ಕ್ರಯ ರೂ. 1-14-0

ಇದೇ ಅಕ್ಟೋಬರ್ ಹಬ್ಬದ ಮಹೋತ್ಸವಕ್ಕಾಗಿ ಈ ಭಾರೀಕ್ರಯದ ಕೈ ಗಡಿಯಾರವನ್ನು ಅಕ್ಟೋಬರ್ ಒಳಗೆ ತರಿಸಿಕೊಳ್ಳುವವರಿಗೆ ರೂಪಾಯಿ 1-14-0 ಆಣೆಗೆ ಕೊಡಲಾಗು. [99-22]

ವಿಳಾಸ—ವಿ. ಕೃಷ್ಣಸ್ವಾಮಿ ಮೊದಲಿಯಾರ್, ನಂ.27 ಬಂದರ್ ಬೀದಿ, ಜಿ.ಟಿ., ಮದರಾಸು.

ಮಧುರೆ ಚುಸ್ನಡಿ ಬಂಚಿನ ಸೀರೆ ಅಪ್ಪಲ್ ರಮಂ ರೂ. 2-6-0.

ಅಕ್ಟೋಬರ್ ತಿಂಗಳ ಒಳಗಾಗಿ ತರಿಸಿಕೊಳ್ಳುವರಿಗೆ ಒಂದು ಸಿಂಗಪೂರು ರವಿಕೆಯನ್ನು ಪ್ರತಿ ಸೀರೆಗೂ ಇನಾಮಾಗಿ ಕೊಡುತ್ತೇವೆ.



ಇದು ಉಡುವುದಕ್ಕೆ ದಪ್ಪತೆಯಾಗಿಯೂ, ನೋಟಕ್ಕೆ ನಯವಾಗಿಯೂ, ಬೆಲೆ ಸುಲಭವಾಗಿಯೂ ಇವೆ. ಬಣ್ಣ ಹೋಗದು. ಸೀರೆಯು ಉದ್ದ 18 ಮೊಳ. ಸುಂದರವಾದ ಸೆರಗು ಒಂದನ್ನು ತರಿಸಿ ಪರೀಕ್ಷಿಸಿ. ವಿಳಾಸ—

[99-22] ವಿ. ಕೃಷ್ಣಸ್ವಾಮಿ ಮೊದಲಿಯಾರ್, ನಂ 27, ಬಂದರ್ ಬೀದಿ, ಜಿ. ಟಿ., ಮದರಾಸು.

ದಸರಾ ಬಹುಮಾನ! ಎನಾಮತ್ತು ಬಹುಮಾನ!

ದೊಡ್ಡ ನರಿ ಹುಡುಗರೂ ಅಲಂಕಾರ ಪೂರ್ವಕವಾಗಿ ಧರಿಸಬಹುದಾದ ಜನಾರ್ ರೇಷ್ಮೆ ಜಾಲರ್ ಚೌಕವು.

2 ಮೊಳವಿರುವ ಚೌಕ ಒಂದಕ್ಕೆ ರೂ. 1-6-0. 1½ ಮೊಳವಿರುವ ಚೌಕ ಒಂದಕ್ಕೆ 15 ಆಣೆ. ಒಂದೇ ಸಲ ಎರಡು ಚೌಕಗಳನ್ನು ತರಿಸಿಕೊಳ್ಳುವವರಿಗೆ ಸ್ತ್ರೀಯರು ಕೊರಳಲ್ಲಿ ಧರಿಸಬಹುದಾದ ನೆಕ್ ಟೈ ಒಂದನ್ನು ಇನಾಮು ಕಳುಹಿಸಿಕೊಡುತ್ತೇವೆ. ಒಂದರಿಂದ ಎರಡರ ವರೆಗೂ ಪೋಸ್ಟೇಜು 3 ಆ. ಇದುವರೆಗೆ ಎಲ್ಲರೂ ವಿಕ್ರಯಿಸಿದ ರೇಷ್ಮೆ ಜಾಲರ್‌ಗಳು ಇಷ್ಟು ಮೌಲ್ಯವುಳ್ಳವುಗಳಲ್ಲ. ಈ ಚಿತ್ರದಲ್ಲಿ ಕಾಣುವಂತೆ ಚಿತ್ರವಿಚಿತ್ರವಾದ ಹೂಗಳಿಂದ ತಯಾರಿಸಿದ ಈ ನೂತನವಾದ ನೋಟದ ಚೌಕಗಳು ಈಗತಾನೇ ನಾವು ತರಿಸುತ್ತೇವೆ. ಪಂಚವರ್ಣಗಳಲ್ಲಿ ಬಳ್ಳಿಗಳೂ, ಹೂಗಳೂ, ಎಲೆಗಳೂ ಹಾಕಿ ಉತ್ತಮವಾದ ರೇಷ್ಮೆ ಅಂಚಿಟ್ಟು ತಯಾರಿಸಿ ನವರಾತ್ರಿ ಮಹೋತ್ಸವಕ್ಕಾಗಿ ಕಳಿಸಿದ್ದೇವೆ. ನಾಲ್ದಾರು ವಿಕ್ರಯವಾಗುತ್ತವೆ. ಜಾಗ್ರತೆ ತರಿಸಿಕೊಳ್ಳಿ.

ಅಡ್ರೆಸ್—ಜನಾರ್ ಸಿಲ್ಕು ವೇರ್‌ಹೌಸ್, 1-6 ವೆಂಕಟೇಶ ಮೇಸ್ತ್ರಿ ಬೀದಿ,
[188-24] ಸಾಹುಕಾರಪೇಟೆ, ಮದರಾಸು.



Cap Manufacturer, Bangalore City.

ಹುಡುಗರಿಗೆ ಅಕ್ಷರ ಕಲಿಯಲಿಕ್ಕನುಕೂಲವಾದ ದೊಡ್ಡಕ್ಷರದ "ಕನ್ನಡ ಅಕ್ಷರಮಾಲೆ" ನಮ್ಮಲ್ಲಿ ದೊರೆಯುತ್ತೆ. ಪೋಸ್ಟೇಜು ವಿ. ಪಿ. ಕಮಿಷನ್ ಪ್ರತ್ಯೇಕ ಬೀಳುತ್ತೆ. ಕ್ರಯ—ಪ್ರತಿ 1 ಕ್ಕೆ 3 ಪೈ. ಪ್ರತಿ 25 ಕ್ಕೆ 5 ಆಣೆ. ಪ್ರತಿ 50 ಕ್ಕೆ 8 ಆಣೆ. ಪ್ರತಿ 100 ಕ್ಕೆ 12 ಆಣೆ. ಪ್ರತಿ 250 ಕ್ಕೆ 1-10-0 ಪ್ರತಿ 500 ಕ್ಕೆ 3-10-0 ಪ್ರತಿ 1,000 ಕ್ಕೆ 5-0-0 ಹೆಸರು ವಿಳಾಸ ಸ್ಪಷ್ಟವಾಗಿ ಬರೆಯಿರಿ.

ನಮ್ಮ ವಿಳಾಸ—ಚಬಿಲ್‌ದಾಸ್ ದಯಾಭಾಯ್, ಟೋಪಿಗಳ ಕಾರ್ಖಾನೆ,
[230-2] ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸ್ಫಟಿಕದ ಉಪನೇತ್ರ.

ಬಹಳ ಮೇಲಾದ ಉಪನೇತ್ರ. ಕ್ರಯ ರೂ. 2-6-0.

ಸ್ಫಟಿಕದ ಉಪನೇತ್ರವನ್ನು ಉಪಯೋಗಿಸಿ ನಿಮ್ಮ ದೃಷ್ಟಿಯನ್ನು ಕಾಪಾಡಿಕೊಳ್ಳಿರಿ. ನಮ್ಮಲ್ಲಿ ಸ್ಫಟಿಕದ ಉಪನೇತ್ರಗಳು ಕ್ರಯಕ್ಕೆ ದೊರೆಯುತ್ತವೆ. ಬೇಕಾದವರು ಬರೆದರೆ ಎಲ್ಲಾ ತರಹದ ಮತ್ತು ಎಲ್ಲಾ ನಂಬರಿನ ಉಪನೇತ್ರಗಳನ್ನು ಕಳಿಸುತ್ತೇವೆ. ಅವರವರ ವಯಸ್ಸು ತಿಳಿಸಬೇಕು; ತಕ್ಕದ್ದು ಪರೀಕ್ಷೆಮಾಡಿ ಕಳಿಸುತ್ತೇವೆ.

ಈ ಕೆಳಗೆ ಕಂಡ ನಗಗಳು ಆಸ್ಟ್ರೇಲಿಯಾ ಬೆಳ್ಳಿ ಕಂಚಿಯಿಂದ ತಯಾರಾಗಿ ಇವೆ. ಇವು ಎಂದಿಗೂ ಕೆಡುವದಿಲ್ಲ. ಇವು ಎಲ್ಲರೂ ಧರಿಸಿಕೊಳ್ಳಬಹುದು.

ಸುಂದರವಾದ ಕಾಲು ಕಡಗ.

ದೊಡ್ಡವರಿಗೆ	ಚಿಕ್ಕವರಿಗೆ	ಹುಡುಗರಿಗೆ	ಮಕ್ಕಳಿಗೆ
1-4-0	1-2-0	0-12-0	0-8-0

ಅಂದವಾದ ಪಾಜು (ಒಡ್ಯಾಣ).

ದೊಡ್ಡವರಿಗೆ	ಚಿಕ್ಕವರಿಗೆ	ಹುಡುಗಿಯರಿಗೆ
1-4-0	1-2-0	0-14-0

ಅಂದವಾದ ಪ್ರದುಜೋರಿ ರುಳಿ (ಕಾಲುಗೊಲಸು).

ದೊಡ್ಡವರಿಗೆ	ಚಿಕ್ಕವರಿಗೆ	ಹುಡುಗರಿಗೆ	ಮಕ್ಕಳಿಗೆ
1-12-0	1-9-0	1-5-0	1-3-0

ಪೋಸ್ಟೇಜ್ ಬೇರೆ.

ವಿಳಾಸ—ದಯಾನಿಧಿ, ರಾಜಾವಿಲಾಸ,
[222-3] ಪಿಲ್ಲಿವಾಕಂ, ಮದ್ರಾಸು.

BHARAT PROVIDENT AND BANKING Co., Ltd.

FULLY PAID UP CAPITAL 5,00,000 (FIVE LAKHS)

Most Reliable and Cheapest Life and Marriage Office in India.

Monthly Premium Re. 1 in Marriage Branch, and Re. 1 in Life Branch.

BENEFITS IN LIFE BRANCH.—Rs. 110 if death occurs after six months with a very good bonus; or maximum benefits of Rs. 500 will be paid whenever death occurs after 15 years less the advance of Rs. 200 paid while alive.

BENEFITS IN MARRIAGE BRANCH. Guarantees to advance double the amount paid on the marriage day.

LOANS.—Loans to Policy holders on proper securities to the extent of Rs. 200 on a low interest is a speciality.

WANTED.—Active and energetic Sole, General, District and Taluk Agents throughout the Madras Presidency and Native States of S. India on liberal terms of Commissions and also monthly office allowance.

For further particulars and prospectus apply to

Messrs. VENKATACHALAM & SONS,
Chief Agents for South India,
[242-4] **166, DODPATTA, MYSORE.**

ಶ್ರೇಷ್ಠವಾದ ವಾಚ್! ನೂತನವಾದ ವಾಚ್! ನಾಜೂಕಾದ ವಾಚ್!

ಸ್ಪ್ರಿಂಗ್ ಪಾಕೆಟ್ ಲೀವರ್ ವಾಚ್.

ಇದರ ಕ್ರಯ 7 ಬಹುಮಾನಗಳ ಸಮೇತ ರೂ. 3-8-0 ಮಾತ್ರ.

ಏಳು ವರ್ಷಗಳ ಖಾತ್ರಿಯಾದ ಗ್ಯಾರಂಟಿ.



ಘನವಂತರೇ,

ಈ ನೂತನ ನಮೂನೆ ವಾಚ್ ಈಗ ತಾನೇ ಬಂದಿರುತ್ತೆ. ಪ್ರಪಂಚದಲ್ಲೆಲ್ಲಾ ಹೆಸರುವಾಸಿಯಾದ ಮತ್ತು ಶ್ರೇಷ್ಠವಾದ ಲೀವರ್ ಕೆಲಸದಿಂದಲೂ, ಬಲಿಷ್ಠವಾದ ಮತ್ತು ನಾಜೂಕಾದ ಯಂತ್ರ ಸಾಮಾನುಗಳಿಂದಲೂ ತಯಾರಾಗಿ ಬಂದಿರುತ್ತೆ. ಈಗ ಕಾಲ ಹೊಸದಾಗಿ ನಾವು ಪ್ರತ್ಯೇಕವಾಗಿ ತರಿಸಿರುತ್ತೇವೆ. ಗೌರ್ನಮೆಂಟು ಟೈಮಿಗೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದದ್ದು. ನಂಬಿಕೆಯಾಗಿ ದೀರ್ಘಕಾಲ ಅನೇಕ ವರ್ಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು. ಬಹು ರಮಣೀಯವಾದ ವಾಚ್ ಬೇರೆ ಎಲ್ಲಿ ದೊರೆಯುವುದು? ಹರಿಪರ ಬಾಳಿಕೆ ಬರುವ ವಾಚ್ ಇದೇ. ಇದರ 7 ಬಹುಮಾನಗಳ ತಪಸಿಲ್:—(1) ಸುಂದರವಾದ ವಾಚ್ ಸರಪಣಿ, (2) ದಿಕ್ಕುಗಳನ್ನು ತೋರಿಸುವ ಉತ್ತರಮುಖಿ, (3) ವಾಚ್‌ಗೆ ಧೂಳು ಸೇರದಂತೆ ಭದ್ರಪಡಿಸುವ ತೊಗಲಿನ ಚೀಲ, (4) ಕುತ್ತಿಗೆಗೆ ವಾಚ್ ಸಂಗಡ ಧರಿಸಿಕೊಳ್ಳುವ ರೇಷ್ಮೆ ದಾರ, (5) ವಾಚ್ ಪೆಟ್ಟಿಗೆ (ಬಹು ಸುಂದರವಾದದ್ದು), (6) ಪರಿಮಳವುಳ್ಳ ಸುವಾಸನೆ ಸೀಸೆ, (7) ಕರವಸ್ತ್ರ.

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.—

ಟಿ. ಸೀತಾರಾಮ ಮೊದಲಿಯಾರ್, ನಂ 3, ಕಂದಪ್ಪ
[180-7] ಮೊದಲಿ ಬೀದಿ, ತಿರುವಲ್ಲಿಕೇಣಿ, ಮದರಾಸು.

ದೀಪಾವಳಿ ಬಹುಮತಿ ಗಡಿಯಾರ.

19 ಸಾಮಾನು ಬಹುಮತಿ ಸಹಿತ ಕ್ರಯ ರೂ. 3-14-0.

ಇದರಲ್ಲಿ ತೋರುವ 10 ರೂಪಾಯಿ ಬೆಲೆಯುಳ್ಳ ಗಡಿಯಾರವನ್ನು ದೀಪಾವಳಿ ಉತ್ಸವಕ್ಕಾಗಿ ರೂ. 3-14-0 ಕ್ಕೆ 19 ಬಹುಮಾನಗಳ ಸಮೇತ ಉಚಿತವಾಗಿ ಕೊಡುತ್ತೇವೆ. 1 ಗಡಿಯಾರ ಸರಪಣಿ, 2 ಪೇನಾ, 3 ಉತ್ತರಮುಖಿ, 4 ಪರ್ಸ ಚೀಲ, 5 ಬಣ್ಣಬ್ಯಾಳು ನಾಯಿ ಪೊಟ್ಟು, 6 ಎಲೆಕ್ಟ್ರಿಕ್ ಭಂಗಾರದ ಶಾಮಂತಿಗೆ ಹೂವು, 7 ಇಮಿಟೇಷನ್ ಡೈಮಂಡ್ ಶರಟುಗುಂಡಿ, 8 ಜರ್ಮನ್ ಬೆಳ್ಳಿಯ ಕುಂಕುಮಭರಣಿ, 9 ಡಿಟೋ ಸಾಡಿನ ಚಿಪ್ಪು, 10 ಡಿಟೋ ಕಣ್ಣುಕಪ್ಪಿನ ಭರಣಿ, 11 ಡಿಟೋ ನಸ್ಯದ ಡಬ್ಬಿ, 12 ಇಮಿಟೇಷನ್ ಡೈಮಂಡ್ ಮೂಗುಬಟ್ಟು, 13 ಕತ್ರಿ, 14 ಎಲೆಕ್ಟ್ರೋ ಸೀಲು ಉಂಗುರ, 15 ರೇಷ್ಮೆ ಧಾರ, 16 ಸ್ಟೀಲು ಸಿಬ್ಬು, 17 ಕೆಂಪು ನಾಯಿ ಪೊಟ್ಟು, 18 ಕೈಗುಲ್ಲು, 19 ಇಮಿಟೇಷನ್ ತಂಜಾವೂರು ಗೆಜ್ಜೆ ಅಡ್ಡಿಗೆ.

ಮಧುರೆ ಚುಸ್ನಡಿ ಸೀರೆ ರೂ. 1-15-0; ತಂಜಾವೂರು ಗೆಜ್ಜೆ ಅಡ್ಡಿಗೆ 5 ಆಣೆ; ಕೈ ಗಡಿಯಾರ ರೂ. 1-14-0. [222-3]

ನಮ್ಮ ವಿಳಾಸ—ದಯಾನಿಧಿ, ರಾಜಾವಿಲಾಸ, ಪಿಲ್ಲಿವಾಕಂ, ಮದರಾಸು.

BRAHMAPPA TAVANAPPANAVAR,

Merchant & Commission Agent.

Agent to Messrs. Currimbhoy Ebrahim & Co's Mills, BOMBAY.

ನಾವು ಮುಂಬೈ ಮೆಸ್ಸರ್ಸ್ ಕರೀಂಬಾಯ್ ಇಬ್ರಾಹಿಂ ಅಂಡ್ ಕಂಪನಿಯವರ ಬಾಬತು, ಪಿಸ್ಸರ್ಸ್ ಫಜಲ್ಭಾಯ್ ಮಿಲ್ಸ್ ಲಿಮಿಟೆಡ್ ಮುಂಬೈ, ದಿ ಕ್ರೆಸೆಂಟ್ ಮಿಲ್ಸ್ ಲಿಮಿಟೆಡ್ ಮುಂಬೈ, ಕರೀಂಬಾಯ್ ಮಿಲ್ಸ್ ಲಿಮಿಟೆಡ್ ಮುಂಬೈ, ದಿ ಇಂಡಿಯನ್ ಬ್ಲೀಚಿಂಗ್, ಡೈಯಿಂಗ್ ಅಂಡ್ ಪ್ರಿಂಟಿಂಗ್ ವರ್ಕ್ಸ್ ಲಿಮಿಟೆಡ್ ಮುಂಬೈ, ದಿ ಇಂದೋರ್ ಅಂಡ್ ಮಾಳ್ವಾ ಯುನೈಟೆಡ್ ಮಿಲ್ಸ್ ಲಿಮಿಟೆಡ್ ಇಂದೋರ್, ಇವುಗಳಲ್ಲದೆ ಇನ್ನೂ ಅನೇಕ ಮಿಲ್ಲುಗಳ ಬಟ್ಟೆಗಳನ್ನು ನೈಸರ್ಗಿಕ ನೇಮಿಯುತ್ತಲ್ಲಾ ವಿಕ್ರಯಮಾಡಲು ಕಮಿಷನ್ ಏಜಂಟರಾಗಿರುತ್ತೇವೆ. ನಮ್ಮ ಮುಖಾಂತರ ಮಾಲು ತರಿಸಿಕೊಳ್ಳತಕ್ಕವರಿಗೆ ಮುಂಬೈಯಲ್ಲಿ ಬಟ್ಟೆಗಳ ಮೇಲೆ ವಿಧಿಸತಕ್ಕ ದಳ್ಳಾಳಿ, ದೋಣೀಭಾಡಿಗೆ, ಹಮಾಲಿ, ಗಂಟುಕಟ್ಟುವದು, ಸ್ಟೇಷನ್ನಿಗೆ ಹೇರಿಸುವದು, ಹುಂಡೇಕರಿ ವಗೈರೆ ಯಾವ ವಿಧವಾದ ಜುಬರ್ ತಗಲದೆ ಇರುವದರಿಂದ ಮುಂಬೈಯಿಂದ ತರಿಸುವ ದಕ್ಕಿಂತಲೂ ಸುಲಭ ದರದಲ್ಲಿ ಸಿಕ್ಕುತ್ತೆ. ಮತ್ತು ಮುಂಬೈಗೆ ಹೋಗಿಬರುವ ದೇಹಶ್ರಮವೂ, ಖರ್ಚೂ ಉಳಿಯುತ್ತೆ. ಜೆಬ್ಬು ಬಟ್ಟೆಗಳನ್ನು ಏಕಕಾಲದಲ್ಲಿ ಕೊಳ್ಳತಕ್ಕವರಿಗೆ ಮಾಲಿನ ಮೇಲೆ ಶೇಕಡ 3 ರೂಪಾಯಿ ಆಣಾಯಿ 4½ ರೂಪಾಯಿ ವರಿಗೆ ಡಿಸ್ಕೌಂಟು ದೊರೆಯುತ್ತೆ. [87-29]

ನಮ್ಮ ಟ್ರಾವಲಿಂಗ್ ಏಜಂಟರ ವಶ ಬಟ್ಟೆಗಳ ನಮೂನೆಗಳನ್ನು ಕೊಟ್ಟು ದಿ ಒಬ್ಬ ವ್ಯಾಪಾರಗಾರನಿಗೆ ತೋರಿಸಿ ಆರ್ಡರು ತೆಗೆದುಕೊಳ್ಳುವ ಏರ್ಪಾಡು ಮಾಡಿರುತ್ತೆ. ನಮ್ಮ ದಾವಣಗೆರೆ ಮತ್ತು ಬೆಂಗಳೂರು ಆಫೀಸುಗಳಲ್ಲಿ ಮಾಲು ಹಾಜರು ಸಹ ದೊರೆಯುತ್ತೆ.

ಬಟ್ಟೆಗಳನ್ನು ವ್ಯಾಪಾರಮಾಡಲು ಅನುಭವಸ್ಥರಾದ ಏಜಂಟರುಗಳೂ ಮತ್ತು ಗುಮಾಸ್ತರುಗಳೂ ಬೇಕಾಗಿದೆ.

ಎಲ್ಲಾ ಕಾಗದಪತ್ರಗಳೂ ದಾವಣಗೆರೆ ಆಫೀಸಿಗೆ ಬರೆಯಲ್ಪಡಬೇಕು.

ಹೆಡ್ ಆಫೀಸು:—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್, ದಾವಣಗೆರೆ. ಬ್ರಾಂಚ್ ಆಫೀಸು:—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

ವನಸ್ಪತಿ ಬಲಕಾರಿಣಿ.

ನಾನಾ ಫಲಗಳು, ಸುಗಂಧಪಾಲ ಮುಂತಾದ ಅನೇಕ ವನಮೂಲಿಕೆಗಳಿಂದ ತಯಾರಾದದ್ದು. ಬೆಳಿಗ್ಗೆ ಸಾಯಂಕಾಲ ಉಪಹಾರದ ಕಾಲದಲ್ಲಿ ಅಥವಾ ಇಲ್ಲದೇ ಇದ್ದರೂ ಶಕ್ತಿಯಂತೆ ನೀರಿನಲ್ಲಿ ಚೆನ್ನಾಗಿ ಮರಳಿಸಿ ಹಾಲು ಸಕ್ಕರೆ ಸೇರಿಸಿ ಸೇವನೆ ಮಾಡುವುದು. ಈ ಸೇವನೆಯಿಂದ ಆಬಾಲವೃದ್ಧರ ಮತ್ತು ಗರ್ಭಿಣೀ ಸ್ತ್ರೀಯರ, ಬಾಣಂತಿಯರ ಅಬಲತ್ವ, ಮಂದಾಗ್ನಿ, ರಕ್ತದೋಷ, ತಿನಸು, ನಿತ್ರಾಣ, ವಾಯು ಶೂಲೆಗಳು, ವಾತ ಪಿತ್ತ ಶ್ಲೇಷ್ಮಾದಿಗಳ ವಿಕಾರಗಳು, ಮಕ್ಕಳ ಕೃಶತ್ವವು, ಯೌವನಸ್ಥರ ನಿಸ್ಸತ್ವತೆಯು, ಉಷ್ಣಸಂಬಂಧ ರೋಗಗಳು, ಬಹುಮೂತ್ರರೋಗಗಳೂ, ಬುದ್ಧಿ ಉಪಯೋಗಿಸತಕ್ಕ ವಿದ್ವಾಂಸರು, ಲಾಯರುಗಳು, ವಿದ್ಯಾರ್ಥಿಗಳಿಗೂ ಸಹ ಉತ್ಕೃಷ್ಟವಾದದ್ದು. ನಿದ್ರೆ ಬಾರದವರಿಗೂ, ನಿದ್ರೆ ಕಟ್ಟಿದವರಿಗೂ ಬಹಳ ಅನುಕೂಲ. ಕ್ರಯ 24 ತೊಲಾ ಹಿಡಿಯುಳ್ಳ ಪೊಟ್ಟಣಕ್ಕೆ 1 ರೂಪಾಯಿ. ವಿ. ಪಿ. ಛಾರ್ಜು ಬೇರೆ. ಎಲ್ಲಾ ಕಡೆಗಳಲ್ಲೂ ಏಜಂಟರು ಬೇಕು.

ಮತ್ತು ಲೇಹಗಳು, ತೈಲಗಳು, ಔಷಧಗಳು ಬೇಕಾದವರು ದೇಹಧರ್ಮವನ್ನು ತಿಳಿಸಿ ತರಿಸಿಕೊಳ್ಳುವುದಾದರೆ ಪ್ರತ್ಯುತ್ತರಕ್ಕೆ ಲೇಬಲ್ ಆಗಲಿ, ರಿಪ್ಲೈ ಕಾರ್ಡು ಆಗಲಿ ಬರೆಯತಕ್ಕದ್ದು.

[216-6] ವಿಳಾಸ—ವಿ. ಪಿ. ಲಕ್ಷ್ಮಣಪಂಡಿತರು,

ಪಂಡಿತ ವೆಂಕಟರಮಣಪ್ಪನವರ ವೈದ್ಯಶಾಲಾ, ಬುರುಜನಹಟ್ಟಿ, ಚಿತ್ರದುರ್ಗ.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1914 ನೇ ಇಸವಿ ಅಕ್ಟೋಬರ್ 22 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ.

ಜೇಣಿ.—(1)	ಷೇರು ಮೊಬಲಗು	ರೂ. 9,94,286
,, (2)	ಡಿಪಾಜಿಟ್ಟುಗಳು	,, 22,01,170
,, (3)	ಇತರೆ	,, 43,975
(ಆಣೆ, ಕಾಸು ಬಿಟ್ಟಿರುತ್ತೆ.)	ಜುಮ್ಲಾ	ರೂ. 32,39,430

ದೇಣಿ:—(1)	ಕೈಯಲ್ಲೂ, ಬ್ಯಾಂಕುಗಳಲ್ಲಿರುವ ಹಣ	ರೂ. 6,51,560
,, (2)	ಖಾತೆ ಮತ್ತು ಇತರ ಸಾಲಗಳು	,, 19,16,467
,, (3)	ಡಿಸ್ಕೌಂಟು ಮಾಡಿದ ವಾಯಿದೆ ಹುಂಡಿಗಳು	,, 3,36,189
,, (4)	ಇನ್ವೆಸ್ಟ್‌ಮೆಂಟುಗಳು	,, 2,60,000
,, (5)	ಏಜನ್ಸಿಗಳಲ್ಲಿರುವ ಮೊಬಲಗು	,, 57,727
,, (6)	ಬ್ಯಾಂಕಿನಲ್ಲಿರುವ ಸಾಮಾನುಗಳು	,, 14,453
,, (7)	ಇತರೆ	,, 13,034
(ಆಣೆ, ಕಾಸು ಬಿಟ್ಟಿರುತ್ತೆ.)	ಜುಮ್ಲಾ	ರೂ. 32,39,430

ಡಬ್ಲ್ಯು. ಸಿ. ರೋಸ್, ಮ್ಯಾನೇಜರ್.

ವೃತ್ತಾಂತ ಪತ್ರಿಕೆ.

ಸನ್ ೧೯೧೪ ನೇ ಇಸವಿ ನವಂಬರ್ ತಾ. ೫ ನೇ ಗುರುವಾರ.

ಟರ್ಕಿಯವರ ಕಾರ್ಯಭಾಗವು.

ಈಗಿನ ಯುದ್ಧದಲ್ಲಿ ಟರ್ಕಿಯವರ ನಡವಳಿಕೆಯನ್ನು ಕುರಿತು ನಮ್ಮ ವೈಸ್‌ರಾಯಿಯವರು ಒಂದು ಇಸ್ತಿಹಾರನಾಮೆಯನ್ನು ಪ್ರಕಟಿಸಿದಾರೆ. ಇದರ ನಕಲನ್ನು ನಮ್ಮ ಮೈಸೂರು ಗವರ್ನ್‌ಮೆಂಟಿನವರು ಸರ್ಕಾರು ವಿಶೇಷ ಪತ್ರಿಕೆಯಾಗಿ ಛಾಯಿಪ್‌ಮಾಡಿರುವರು. ಯುದ್ಧವು ಪ್ರಾರಂಭವಾದಾಗ ಟರ್ಕಿಯವರು ಯಾರ ಪಕ್ಷವನ್ನೂ ವಹಿಸದೆ ತಟಸ್ಥರಾಗಿರುತ್ತೇವೆಂದು ತಿಳಿಸಿದರು; ಮತ್ತು ಅದೇ ಮಾತನ್ನೇ ಇದುವರೆಗೂ ಹೇಳುತ್ತಾ ಬಂದಿದಾರೆ.

ವೈಸ್‌ರಾಯರವರ ಇಸ್ತಿಹಾರಿನಿಂದ ಟರ್ಕಿಯವರ ಕಾರ್ಯಭಾಗಗಳು ಅವರು ಹೇಳುತ್ತಿರುವ ಮಾತಿಗೆ ವಿರೋಧವಾಗಿವೆ ಎಂದು ಚೆನ್ನಾಗಿ ಗೊತ್ತಾಗುತ್ತದೆ. ಈ ಇಸ್ತಿಹಾರು ಪ್ರಕಟವಾದ ಈಚಿಗೆ ಟರ್ಕಿ ರಾಜಧಾನಿಯಾದ ಕಾನ್‌ಸ್ಟಂಟಿನೋಪಲ್‌ನಲ್ಲಿ ಬ್ರಿಟಿಷ್ ರಾಯಭಾರಿಗೆ ಬ್ರಿಟಿಷ್ ಗವರ್ನ್‌ಮೆಂಟಿನವರು ವರ್ತಮಾನ ಕೊಟ್ಟು ಜವಾಬು ತರಿಸಿಕೊಳ್ಳದಂತೆ ಟರ್ಕಿ ಗವರ್ನ್‌ಮೆಂಟಿನವರು ಅಡ್ಡಿಮಾಡಿಬಿಟ್ಟರು. ಆದಕಾರಣ ಆ ಬ್ರಿಟಿಷ್ ರಾಯಭಾರಿಗೆ ಅಲ್ಲಿ ಇರುವುದರಿಂದ ಪ್ರಯೋಜನವೇನೂ ಕಾಣಲಿಲ್ಲ. ಆ ರಾಯಭಾರಿಯು ಅಲ್ಲಿಂದ ಹಿಂತಿರುಗಬೇಕಾಯಿತು. ಇದರ ಮೇಲೆ ಟರ್ಕಿಯವರಿಗೂ ಬ್ರಿಟಿಷರಿಗೂ ವಿರೋಧವೂ ಯುದ್ಧಪ್ರಸಂಗವೂ ಉಂಟಾದಂತೆ ಕಾಣಿಸಿಕೊಂಡಿದೆ. ಈ ವಿಚಾರವನ್ನೇ ಇಂಡಿಯಾ ಗವರ್ನ್‌ಮೆಂಟಿನವರು ವಿವರಿಸಿ ಸರ್ಕಾರು ಯಾಗಿ ಇಸ್ತಿಹಾರು ಕೊಟ್ಟಿದಾರೆ.

ಟರ್ಕಿಯವರು ಜರ್ಮನಿಯವರ ದುರ್ಬೋಧನೆಗೆ ಒಳಗಾದರಲ್ಲಾ ಎಂದೂ, ಜರ್ಮನಿಯವರಂತೆಯೇ ಮೊದಲೇ ತಿಳಿಸದೇನೂ ಕಾರಣ ಹೇಳದೇನೂ ರಷ್ಯಾದವರ ಮೇಲೆ ಯುದ್ಧಕ್ಕೆ ಹೊರಟುಬಿಟ್ಟರಲ್ಲಾ ಎಂದೂ ನಾವು ತುಂಬಾ ದುಃಖಿಸುತ್ತೇವೆ. ಟರ್ಕಿಯವರಿಗೆ ರಷ್ಯಾದವರ ಮೇಲೂ ಬ್ರಿಟಿಷರ ಮೇಲೂ ಯುದ್ಧಕ್ಕೆ ಹೊರಡುವುದರಲ್ಲಿ ಕಾರಣಗಳಿದ್ದರೂ ಇರಬಹುದು. ಹಾಗೆ ಇದ್ದ ಪಕ್ಷದಲ್ಲಿ ಅಂಥಾ ಕಾರಣಗಳನ್ನು ಮೊದಲೇ ಸ್ಪಷ್ಟವಾಗಿ ಹೇಳಿಬಿಟ್ಟರೆ ಅವರು ಯಾತಕ್ಕೋಸ್ಕರ ಯುದ್ಧಕ್ಕೆ ಹೊರಟರೆಂಬುವುದು ಪ್ರಪಂಚಕ್ಕೆಲ್ಲಾ ಸ್ಪಷ್ಟವಾಗಿ ಗೊತ್ತಾಗುತ್ತಿತ್ತು.

ಹಿಂದುಸ್ಥಾನದಲ್ಲಿ ತೊಂದರೆಯನ್ನು ಹುಟ್ಟಿಸಬೇಕೆಂಬ ಉದ್ದೇಶದಿಂದ ಜರ್ಮನಿಯವರು ಟರ್ಕಿಯವರನ್ನು ಹುರಿಗೊಳಿಸಿರಬೇಕೆಂದು ನಮಗೆ ತೋರುತ್ತದೆ. ಜರ್ಮನಿಯವರು ಹಾಗೆ ತಿಳಿದುಕೊಂಡಿದ್ದೂ, ಅವರ ಚಿತಾವಣೆಗೆ ಟರ್ಕಿಯವರು ಕಿವಿಕೊಟ್ಟದ್ದೂ ಅವರುಗಳ ತಪ್ಪುತಿಳುವಳಿಕೆಯಿಂದೇ ಭಾವಿಸುತ್ತೇವೆ. ಹಿಂದುಸ್ಥಾನದಲ್ಲಿರುವ ಮಹಮದೀಯ ಪ್ರಜೆಗಳು ಅನೇಕ ಸಲ ನಾನಾ ಸಂದರ್ಭಗಳಲ್ಲಿ ತಾವು ಬ್ರಿಟಿಷ್ ಸಾರ್ವಭೌಮ ಸರ್ಕಾರದ ಧರ್ಮಪ್ರಜೆಗಳೆಂದೂ, ಬ್ರಿಟಿಷ್ ಚಕ್ರಾಧಿಪತ್ಯದಲ್ಲಿ ತಮಗೆ ಉಚಿತವಾದ ಭಕ್ತಿಪ್ರೀತಿಗಳಿರುವವೆಂದೂ ಸಾರಿ ಹೇಳಿರುತ್ತಾರೆ. ಹೊನ್ನೆ ತಾನೇ ನಡೆದ ಬಕ್ರೀದ್ ಹಬ್ಬದಲ್ಲಿ ಮಹಮದೀಯರು ದೇವರಿಗೆ ಪ್ರಾರ್ಥನೆಗಳನ್ನು ಸಲ್ಲಿಸುವಾಗ್ಗೆ ಬ್ರಿಟಿಷ್ ಸೈನ್ಯಕ್ಕೆ ಜಯಪ್ರದವುಂಟಾಗಲೆಂದು ಅನೇಕವಾಗಿ ಬೇಡಿಕೊಂಡಿರುವರು. ಆದಕಾರಣ ಟರ್ಕಿಯವರು ಮನಸ್ಸು ಬದಲಾಯಿಸಿಕೊಂಡ ಮಾತ್ರಕ್ಕೇನೇ ಹಿಂದುಸ್ಥಾನದ ಮಹಮದೀಯರೂ ಬದಲಾಯಿಸಿಕೊಳ್ಳುತ್ತಾರೆಂದು ನಾವು ನಂಬುವದಿಲ್ಲ. ಮಹಮದೀಯರ ಮೇಲೆ ಟರ್ಕಿಯವರ ದರ್ಪವು ಕ್ರಮೇಣ ಸಡಿಲವಾಗುತ್ತಲೂ, ಕಡಮೆಯಾಗುತ್ತಲೂ ಬಂದಿರುತ್ತದೆ. ಯಾಕಂದರೆ ಟರ್ಕಿಯವರು ಪ್ರಜೆಗಳನ್ನು ಧರ್ಮದಿಂದಲೂ ಪ್ರೀತಿವಿಶ್ವಾಸದಿಂದಲೂ ಪರಿಪಾಲನೆಮಾಡದೆ ಇರುವರು. ಈಗಲಾದರೋ ಟರ್ಕಿಯವರು ತಪ್ಪುತಿಳುವಳಿಕೆಯಿಂದ ಯುದ್ಧಕ್ಕೆ ಹೊರಟಿರುವುದು ದೊಡ್ಡ ಕೇಡೆಂದೇ ಭಾವಿಸಬೇಕಾಗಿದೆ. ಈಗ ಹಿಂದುಸ್ಥಾನದ ಮುಸಲ್ಮಾನರು ಟರ್ಕಿಯ ಮನೋಗತವನ್ನು ಬದಲಾಯಿಸುವುದಕ್ಕೆ ಪ್ರಯತ್ನಪಡುವುದರಿಂದ ಫಲವೇನೂ ಕಾಣುವುದಿಲ್ಲ; ಅದರ ಕಾಲ ಮೀರಿ ಹೋಯಿತು. ಟರ್ಕಿಯೊಳಗೇ ಅನೇಕರಿಗೆ ಬ್ರಿಟಿಷರ ಮೇಲೆ ಯುದ್ಧಕ್ಕೆ ಹೊರಡುವುದರಲ್ಲಿ ಮನಸ್ಸಿಲ್ಲವೆಂದು ಹೇಳಬಹುದು; ಆದರೆ ಯುದ್ಧಮಾಡಬೇಕೆಂದು ಹೊರಟಿರುವ ಪಾರ್ಟಿಯ ಮಾತೇ ಅಲ್ಲಿ ಪ್ರಧಾನವಾಗಿರುವುದು. ಟರ್ಕಿಯಲ್ಲಿ ಈ ಯುದ್ಧದ ಪಾರ್ಟಿಯವರ ವರ್ತನವನ್ನು ಹಿಂದುಸ್ಥಾನದ ಮುಸಲ್ಮಾನ್ ಪ್ರಜೆಗಳು ಚೆನ್ನಾಗಿ ಖಂಡನೆಮಾಡಿ ಟರ್ಕಿಗೆ ತಿಳಿಸುವುದರಿಂದಲೂ, ತಾವು ಬ್ರಿಟಿಷ್ ಗವರ್ನ್‌ಮೆಂಟಿನ ಪಕ್ಷದವರಾಗಿರುತ್ತೇವೆಂಬುವುದನ್ನು ಇನ್ನೊಂದುಸಲ ಒತ್ತಿಹೇಳಿ ಪ್ರಕಟಮಾಡೋಣದರಿಂದಲೂ ನಮ್ಮವರನ್ನು ನೆಲೆಗೊಳಿಸಬೇಕೆಂಬವರಿಗೆ ತುಂಬಾ ಸಹಾಯವಾಗುವುದು.

ಹೈದರಾಬಾದ್ ಸಂಸ್ಥಾನದ ನೈಜಾಮರವರು ಟರ್ಕಿಯವರಿಗೆ ಬಹು ಉಚಿತವಾದ ಜವಾಬನ್ನು ಕೊಟ್ಟಿರುತ್ತಾರೆ. ಅವರು ಹೊನ್ನೆ ಪ್ರಕಟಮಾಡಿರುವ ಇಸ್ತಿಹಾರಿನಲ್ಲಿ ತಿಳಿಸುವುದೇನೆಂದರೆ— ಬ್ರಿಟಿಷ್ ಗವರ್ನ್‌ಮೆಂಟಿನಲ್ಲಿ ಹಿಂದುಸ್ಥಾನದ ಮುಸಲ್ಮಾನ್ ಪ್ರಜೆಗಳು ಬಹು ಕಾಲದಿಂದ ಭಕ್ತಿ ಪ್ರೀತಿಗಳನ್ನು ಇಟ್ಟುಕೊಂಡಿದಾರೆ. ಬ್ರಿಟಿಷರ ಉದ್ದೇಶವೂ, ಪರಿಪಾಲನಾಕ್ರಮಗಳೂ ಅವರಿಗೆ ಚೆನ್ನಾಗಿ ಅನುಭವಕ್ಕೆ ಬಂದಿರುವವು. ಹಿಂದುಸ್ಥಾನದಲ್ಲಿ ಮುಸಲ್ಮಾನರು ತಮ್ಮ ದೇಶ ಮತ್ತು ಮತಶಕ್ತಿಯನ್ನು ಕಾಪಾಡಿಕೊಳ್ಳುವುದರಲ್ಲಿ ಬ್ರಿಟಿಷ್ ಗವರ್ನ್‌ಮೆಂಟಿನವರು ಅವರಿಗೆ ಕೊಟ್ಟಿರುವ ಹಕ್ಕುಬಾಧ್ಯತೆಗಳನ್ನೂ ಸೌಕರ್ಯಗಳನ್ನೂ ಪ್ರಪಂಚದ ಇನ್ನಾವ ಮುಸಲ್ಮಾನ್ ಪ್ರಭುವಾಗಲಿ ಇತರ ಪ್ರಭುವಾಗಲಿ ಕಲ್ಪಿಸಿಕೊಟ್ಟಿಲ್ಲ. ಆದಕಾರಣ ಹಿಂದುಸ್ಥಾನದ ಮಹಮದೀಯರು ಬ್ರಿಟಿಷ್ ಸಾರ್ವಭೌಮರಲ್ಲಿ ತಮಗಿರುವ ಭಕ್ತಿ ಪ್ರೀತಿಗಳನ್ನು ಇಂಥಾ ಕಾಲದಲ್ಲಿ ಇನ್ನೂ ಚೆನ್ನಾಗಿ ಕಾಪಾಡಿಕೊಂಡು ಬರಬೇಕಾದದ್ದು ಪರಮಾವಶ್ಯಕವಾಗಿದೆ ಎಂದು ತಿಳಿಯಬೇಕು. ಬ್ರಿಟಿಷ್ ಗವರ್ನ್‌ಮೆಂಟಿನವರು ಕಾಲಾನುಕಾಲದಿಂದಲೂ ಇಸ್ಲಾಮ್ ಮತಸ್ಥರ ಪರಮ ಹಿತಚಿಂತಕರಾಗಿಯೇ ಇದ್ದುಕೊಂಡು ಬಂದಿದಾರೆ; ಇನ್ನು ಮುಂದೆಯೂ ಅವರ ವರ್ತನವು ಬೇರಾಗುವುದಿಲ್ಲ. ಬ್ರಿಟಿಷ್ ಗವರ್ನ್‌ಮೆಂಟು ಧರ್ಮವಾದದ್ದೆಂದೂ ಸತ್ಯವಾದದ್ದೆಂದೂ ನನಗೆ ಉಚಿತವಾಗಿ ತಿಳಿದಿರುವುದು. ಆದಕಾರಣ ಆ ಗವರ್ನ್‌ಮೆಂಟಿನಲ್ಲಿ ನಮ್ಮ ಪ್ರಜೆಗಳು ಇಟ್ಟುಕೊಂಡಿರುವ ಭಕ್ತಿ ಪ್ರೀತಿಗಳನ್ನು ಕೂದಲಿನ ಮೊನೆಯಷ್ಟೂ ಕಡಮೆಯಾಗದಂತೆ ಕಾಪಾಡಿಕೊಂಡು ಬರಬೇಕೆಂಬದಾಗಿ ಒತ್ತಿ ಹೇಳುತ್ತೇನೆ. ನನ್ನ ಸರ್ವಸ್ವವನ್ನೂ ಬ್ರಿಟಿಷ್ ಗವರ್ನ್‌ಮೆಂಟಿನವರ ವಶಕ್ಕೆ ಒಪ್ಪಿಸಿಬಿಡುತ್ತೇನೆಂದು ಹಿಂದೆ ನಾನು ಕೊಟ್ಟಿರುವ ಭಾಷೆಯನ್ನೇ ಇನ್ನೊಂದಾವರ್ತಿ ತಿಳಿಯಪಡಿಸುವೆನು. ಹೀಗೆಯೇ ಹಿಂದುಸ್ಥಾನದ ಸಮಸ್ತ ಮಹಮದೀಯರೂ ನಮ್ಮ ಹೇಳಿಕೆಯನ್ನೇ ಅನುಸರಿಸಿ ಬ್ರಿಟಿಷ್ ಗವರ್ನ್‌ಮೆಂಟಿನ ಮೇಲೆ ಸಂಪೂರ್ಣವಾದ ಭರವಸೆಯನ್ನು ಇಟ್ಟುಕೊಂಡು ಬರಬೇಕೆಂದು ಸೂಚಿಸುತ್ತೇನೆ ಎಂಬದಾಗಿ ನೈಜಾಮರವರು ಪ್ರಕಟಮಾಡಿದಾರೆ.

ಘನವಂತ್ಯೆಬಿದ ಆಗಾಖಾನ್‌ರವರು ಬೊಂಬಾಯಿಗೆ ತಂತೀ ವರ್ತಮಾನವನ್ನು ಕಳುಹಿಸಿ, ಟರ್ಕಿಯವರು ಜರ್ಮನಿಯವರಿಂದ ದುರ್ಮಾರ್ಗಕ್ಕೆ ಎಳೆಯಲ್ಪಟ್ಟರೆಂದೂ, ಹಿಂದುಸ್ಥಾನದ ಮಹಮದೀಯರು ಬ್ರಿಟಿಷ್ ಸಾರ್ವಭೌಮರ ವಿಷಯದಲ್ಲಿ ಭಕ್ತಿ ಪ್ರೀತಿಗಳನ್ನು ಇಟ್ಟುಕೊಂಡು ವರ್ತಿಸಬೇಕೆಂದೂ ತಿಳಿಸಿರುತ್ತಾರೆ.

ಟರ್ಕಿಯವರ ಈಗಿನ ನಡವಳಿಕೆಯಿಂದ ಈ ಯುದ್ಧದ ಫಲಿತಾಂಶವು ಬದಲಾವಣೆಹೊಂದುವುದೆಂದು ನಮಗೆ ಎಷ್ಟು ಮಾತ್ರಕ್ಕೂ ಅನುಮಾನವಿಲ್ಲ. ಯುದ್ಧಗಳೂ ರಕ್ತಪ್ರವಾಹವೂ ಇನ್ನೂ ಸ್ವಲ್ಪ ಹೆಚ್ಚಾಗಬಹುದು. ಫಲಿತಾಂಶದಲ್ಲಿ ಸತ್ಯವೂ ಧರ್ಮವೂ ಜಯಭೇರಿ ಹೊಡೆಯುತ್ತವೆ.

ಈಗಿನ ಯುದ್ಧವು ಆಧ್ಯಾತ್ಮಿಕವಾದುದೋ?

ಯೂರೋಪ್ ಖಂಡದಲ್ಲಿ ಕ್ರೈಸ್ತರು ಒಬ್ಬರ ಮೇಲೊಬ್ಬರು ಯುದ್ಧಮಾಡುತ್ತಾ ಒಬ್ಬರನ್ನೊಬ್ಬರು ಸಂಹಾರಮಾಡುತ್ತಾ ಇರುತ್ತಾರೆ; ಆದಕಾರಣ ಕ್ರೈಸ್ತ ಮತವು ಸತ್ಯವಾದುದಲ್ಲವೆಂದು ಕೆಲವರು ಹೇಳುತ್ತಿರುವರು. ಕ್ರೈಸ್ತರೆಂಬ ನಾಮಧೇಯವನ್ನು ಧರಿಸಿಕೊಂಡಿರುವವರು ಈಗ ಪರಸ್ಪರವಾಗಿ ಕಾದಾಡುತ್ತಿರುವುದೇನೋ ವಾಸ್ತವ. ಆದರೆ ಇದರಿಂದ ಕ್ರೈಸ್ತ ಮತವು ಸತ್ಯವಾದುದಲ್ಲವೆಂದು ಸಿದ್ಧಾಂತವಾಗುವುದಿಲ್ಲ.

ಕ್ರೈಸ್ತ ಮತವು ಏನು ಬೋಧಿಸುತ್ತದೆ? ದೇವರು ನೀತಿವಂತನಾಗಿಯೂ ಸತ್ಯವಂತನಾಗಿಯೂ ಪವಿತ್ರನಾಗಿಯೂ ಇರುತ್ತಾನೆಂದೂ ನೀತಿ, ಸತ್ಯತೆ, ಪವಿತ್ರತೆ ಈ ವಿಷಯಗಳಲ್ಲಿ ದೇವರು ಮನುಷ್ಯರನ್ನು ತನ್ನ ಹೋಲಿಕೆಯಾಗಿ ಉಂಟುಮಾಡಿರುವ ಕಾರಣ ಅವರೂ ಕೂಡ ನೀತಿವಂತರಾಗಿಯೂ ಸತ್ಯವಂತರಾಗಿಯೂ ಪವಿತ್ರರಾಗಿಯೂ ಇರಬೇಕೆಂದೂ ಕ್ರೈಸ್ತ ಮತವು ಬೋಧಿಸುತ್ತದೆ. ಮನುಷ್ಯರು ನೀತಿವಂತರಾಗಿಯೂ ಸತ್ಯವಂತರಾಗಿಯೂ ಪವಿತ್ರರಾಗಿಯೂ ಇರಬೇಕಾದರೆ ಜನಾಂಗಗಳೂ ಕೂಡ ಆ ಧರ್ಮಗುಣಗಳುಳ್ಳವರಾಗಿಯೇ ಇರತಕ್ಕದ್ದು.

ನೀತಿ, ಸತ್ಯತೆ, ಪವಿತ್ರತೆ ಈ ವಿಷಯಗಳಲ್ಲಿ ಮನುಷ್ಯರೂ ಜನಾಂಗಗಳೂ ಈಗ ಹೊಂದಿಕೊಂಡಿರುವ ತಿಳುವಳಿಕೆಯು ಅವರಿಗೆ ಕಾಲಕ್ರಮೇಣ ಬಹು ನಿಧಾನವಾಗಿ ಬಂದಿರುತ್ತದೆ. ಪುರಾತನ ಕಾಲದ ಅನೇಕ ಜನಾಂಗಗಳವರು ಸ್ವಲ್ಪಮಟ್ಟಿಗೆ ಧೈರ್ಯಶಾಲಿಗಳಾಗಿಯೂ ಸತ್ಯಸಂಧರಾಗಿಯೂ ನೀತಿವಂತರಾಗಿಯೂ ಇದ್ದರೆಂದು ಚರಿತ್ರೆಯಿಂದ ನಮಗೆ ತಿಳಿದುಬರುತ್ತದೆ. ನೀತಿ, ಸತ್ಯತೆ, ಪವಿತ್ರತೆ ಈ ವಿಷಯಗಳಲ್ಲಿ ಈಗಿನ ಕಾಲದ ಮನುಷ್ಯರಲ್ಲಿಯೂ ಜನಾಂಗಗಳಲ್ಲಿಯೂ ಅತ್ಯುತ್ತಮವಾದವರ ಅಭಿಪ್ರಾಯಗಳನ್ನೂ ಎರಡು ಅಥವಾ ಮೂರು ಸಾವಿರ ವರುಷಗಳ ಹಿಂದೆ ಇದ್ದವರ ಅಭಿಪ್ರಾಯಗಳನ್ನೂ ಒಂದಕ್ಕೊಂದು ಹೋಲಿಸಿ ನೋಡಿದರೆ ಈಗಿನವರ ಅಭಿಪ್ರಾಯವು ಪುರಾತನರ ಅಭಿಪ್ರಾಯಕ್ಕಿಂತ ಎಷ್ಟೋ ಉತ್ತಮವಾಗಿರುತ್ತದೆ.

ನೀತಿಯ ವಿಷಯದಲ್ಲಿ ಬಹು ಪುರಾತನ ಕಾಲದವರು ಮಾಡಿಕೊಂಡಿದ್ದ ಅಭಿಪ್ರಾಯಗಳಲ್ಲಿ ಒಂದು ಏನೆಂದರೆ— ಕಣ್ಣಿಗೆ ಪ್ರತಿಯಾಗಿ ಕಣ್ಣನ್ನು ಹಲ್ಲಿಗೆ ಪ್ರತಿಯಾಗಿ ಹಲ್ಲನ್ನು ತೆಗೆ ಎಂಬುದೇ. ಎಷ್ಟನ್ನು ನನಗೆ ಎಷ್ಟರ ಮಟ್ಟಿಗೆ ಕೇಡನ್ನು ಮಾಡುತ್ತಾನೋ ಅಷ್ಟರ ಮಟ್ಟಿಗೆ ನಾನು ಅವನಿಗೆ ಪ್ರತಿಯಾಗಿ ಕೇಡನ್ನು ಮಾಡುವುದು ನ್ಯಾಯವಾಗಿರುತ್ತದೆ ಎಂಬುದೇ ಇದರ ಅಭಿಪ್ರಾಯವಾಗಿದೆ. ಲಕ್ಷೋಪಲಕ್ಷ ಜನರು ಈಗಿನ ಕಾಲದಲ್ಲಿಯೂ ಇದೇ ಅಭಿಪ್ರಾಯವುಳ್ಳವರಾಗಿರುತ್ತಾರೆ. ಆದರೆ ಯೇಸು ಕ್ರಿಸ್ತನು ಹೇಳುವುದೇನೆಂದರೆ— ಜನರಿಂದ ನಿಮಗೆ ಏನೇನು ಆಗಬೇಕೆಂದು ಅಪೇಕ್ಷಿಸುತ್ತೀರೋ ಅದನ್ನೇ ನೀವು ಅವರಿಗೆ ಮಾಡಿ ಎಂಬುದೇ. ಈ ನಿಯಮವು ಆ ನಿಯಮಕ್ಕಿಂತ ಎಷ್ಟೋ ಉತ್ತಮವಾದುದೆಂದು ನಾವು ಕೂಡಲೆ ತಿಳಿದುಕೊಳ್ಳಬಹುದು.

ಬಲವೇ ನ್ಯಾಯ, ಅಂದರೆ ಮತ್ತೊಬ್ಬನ ಸೊತ್ತನ್ನು ನನ್ನ ಸ್ವಾಧೀನಮಾಡಿಕೊಳ್ಳುವಷ್ಟರ ಮಟ್ಟಿನ ಸಾಮರ್ಥ್ಯವು ನನಗಿದ್ದರೆ, ಹಾಗೆ ಮಾಡುವುದು ದೋಷವಲ್ಲವೆಂಬ ಅಭಿಪ್ರಾಯವನ್ನು ಇಟ್ಟುಕೊಂಡಿದ್ದವರು ಅನೇಕರಿದ್ದರು. ಆದರೆ ಈ ಕಾಲದಲ್ಲಿ, ನ್ಯಾಯವಾದ ಕಾರಣವಿದ್ದರೆ ಹೊರತು, ಮತ್ತೊಬ್ಬನ ಸೊತ್ತನ್ನು ಬಲಾತ್ಕಾರವಾಗಿ ಅವನಿಂದ ಕಿತ್ತುಕೊಳ್ಳುವುದಕ್ಕೆ ಯಾವನಿಗಾದರೂ ಅಧಿಕಾರವಿರುವುದಿಲ್ಲವೆಂದು ನಾಗರಿಕತೆಗೆ ಬಂದಿರುವ ಸರ್ವರೂ ಒಪ್ಪಿಕೊಳ್ಳುವರು.

ಈಗ ಯೂರೋಪಿನಲ್ಲಿ ಜರ್ಮನಿಯವರು ಬಲವೇ ನ್ಯಾಯವೆಂಬ ಹಳೇ ನಿಯಮವನ್ನು ಕೈಕೊಳ್ಳುತ್ತಿದ್ದಾರೆಂಬುದು ಸ್ಪಷ್ಟವಾಗಿದೆ. ಜರ್ಮನಿಯವರು ಬಲಹೀನರಾದ ಚಿಕ್ಕ ಚಿಕ್ಕ ಜನಾಂಗಗಳವರನ್ನು ಭೂಗತಮಾಡುವಷ್ಟರ ಮಟ್ಟಿನ ಸಾಮರ್ಥ್ಯವು ತಮಗಿರುವುದರಿಂದ ಹಾಗೆ ಮಾಡುವುದೇ ನ್ಯಾಯವಾಗಿದೆಯೆಂದು ಯೋಚಿಸುತ್ತಿರುವರು. ಇಷ್ಟೇ ಅಲ್ಲ. ತಾವು ಹೀಗೆ ಮಾಡಬೇಕೆಂಬುದು ದೈವಸಂಕಲ್ಪವಾಗಿದೆಯೆಂದು ಭಾವಿಸಿ, ಈ ಕಾರ್ಯದಲ್ಲಿ ತಮಗೆ ಜಯಪ್ರದವನ್ನು ಅನುಗ್ರಹಿಸಬೇಕೆಂದು ದೇವರಿಗೆ ಪ್ರಾರ್ಥನೆಮಾಡುತ್ತಿರುವರು.

ಇದಕ್ಕಿಂತಲೂ ಉತ್ತಮವಾದ ಬೇರೊಂದು ಧರ್ಮವು ಇರುತ್ತದೆ. ಅದನ್ನು ಜನರೂ ಜನಾಂಗಗಳೂ ನಿಧಾನವಾಗಿ ಕಲಿತುಕೊಳ್ಳುತ್ತಾ ಬರುತ್ತಿದ್ದಾರೆ. ಒಂದು ಜನಾಂಗವು ಚಿಕ್ಕದಾಗಿಯೂ ಬಲಹೀನವಾಗಿಯೂ ಇರುವುದರಿಂದ ಅದನ್ನು ಹಾಳುಮಾಡುವುದು ಧರ್ಮವಲ್ಲವೆಂದು ಅವರು ತಿಳಿದುಕೊಂಡಿರುತ್ತಾರೆ. ಈ ಜನಾಂಗವು ದೇವರ ಮತ್ತು ಜನಾಂಗಗಳ ನಿಯಮಗಳನ್ನು ಕೈಕೊಳ್ಳುತ್ತಾ ಬರುವ ಪಕ್ಷದಲ್ಲಿ ಅದನ್ನು ಸಂರಕ್ಷಿಸಬೇಕಾದುದು ತಮ್ಮ ಕರ್ತವ್ಯವೆಂದೂ ಅವರು ತಿಳಿದುಕೊಂಡಿರುತ್ತಾರೆ. ನೀತಿ, ಸತ್ಯತೆ, ಪವಿತ್ರತೆ ಇವುಗಳು ಜನಾಂಗಗಳನ್ನು ಆಳುತ್ತಿರಬೇಕೆಂಬುದನ್ನು ಈಗ ಜನರು ತಿಳಿದುಕೊಂಡಿರುತ್ತಾರೆ.

ಜರ್ಮನಿಯವರು— ಬೆಲ್ಜಿಯಂ ತಟಸ್ಥವಾದ ಒಂದು ಚಿಕ್ಕ ಜನಾಂಗವೆಂಬುದೇನೋ ವಾಸ್ತವ; ಆದರೆ ನಾವು ಅವರ ದೇಶವನ್ನು ಹಾದು ನಮ್ಮ ಶತ್ರುಗಳಾದ ಫ್ರಾನ್ಸಿನವರನ್ನು ಭೂಗತಮಾಡುವುದಕ್ಕಾಗಿ ಹೋಗಬೇಕಾಗಿದೆ; ಅವರ ದೇಶದೊಳಗೆ ಅತಿಕ್ರಮಪ್ರವೇಶ ಮಾಡುತ್ತೇವಲ್ಲವೆಂದು ನಾವು ಭಾಷೆಕೊಟ್ಟಿರುವುದುಂಟು; ಆದರೆ ನಮಗೆ ದಾರಿಬಿಡುವಂತೆ ಬೆಲ್ಜಿಯಂನವರನ್ನು ಬಲಾತ್ಕರಿಸುವಷ್ಟು ಸಾಮರ್ಥ್ಯವು ನಮಗಿರುತ್ತದೆ; ಆದಕಾರಣ ನಾವು ಮಾಡುವಂಥದು ಜನಾಂಗಗಳ ನಿಯಮಕ್ಕೂ ದೇವರ ಉತ್ತಮವಾದ ನಿಯಮಕ್ಕೂ ಪ್ರತಿಕೂಲವಾಗಿದ್ದಾಗ್ಗ್ಯೂ ನಾವು ಅವರ ದೇಶದೊಳಗೆ ನುಗ್ಗಿ ನುಗ್ಗಿ ಹೋಗುತ್ತೇವೆ ಎಂದು ಹೇಳಿರುತ್ತಾರೆ. ಇದು ನೀತಿಯ ವಿಷಯದಲ್ಲಿ ಪುರಾತನರು ಮಾಡಿಕೊಂಡಿದ್ದ ಕನಿಷ್ಠವಾದ ಅಭಿಪ್ರಾಯವನ್ನನುಸರಿಸಿ ನಡೆಯುವ ಮಾರ್ಗವಾಗಿರುತ್ತದೆ.

ಬೆಲ್ಜಿಯಂನವರು— ನಮ್ಮ ದೇಶದ ಮೇಲೆ ನಮಗೆ ಅಧಿಕಾರವಿರುತ್ತದೆ, ನಾವು ನೀತಿಯ ಉತ್ತಮವಾದ ಧರ್ಮವನ್ನು ಹಿಡಿದು ಅದಕ್ಕಾಗಿ ಹೋರಾಡುತ್ತೇವೆಂದು ಹೇಳಿರುತ್ತಾರೆ. ತಟಸ್ಥರಾದ ಬೆಲ್ಜಿಯಂನವರನ್ನು ಕಾಪಾಡುವುದಾಗಿ ಅಭಯವನ್ನು ಕೊಟ್ಟಿದ್ದ ಬ್ರಿಟಿಷರು— ಒಂದು ದೊಡ್ಡ ಜನಾಂಗವು ಒಂದು ಚಿಕ್ಕ ಜನಾಂಗದ ಮೇಲೆ ಬಿದ್ದು ಅದನ್ನು ಸಂಹಾರಮಾಡುವುದನ್ನು ನಾವು ನೋಡಿಕೊಂಡಿರಲಾರೆವು; ನಾವು ಅದಕ್ಕೆ ಅಭಯವನ್ನು ಕೊಟ್ಟಿರುತ್ತೇವೆ; ನಾವು ಕೊಟ್ಟ ಭಾಷೆಯನ್ನು ಕೈಕೊಳ್ಳಬೇಕು; ನೀತಿಗೆ ಜಯವಾಗುವುದನ್ನು ನಾವು ನೋಡಬೇಕು; ಆದಕಾರಣ ಜರ್ಮನಿಯವರು ಬೆಲ್ಜಿಯಂನವರನ್ನು ನಾಶನಮಾಡದಂತೆ ಅವರ ಪ್ರಯತ್ನಗಳನ್ನು ನಾವು ನಿರರ್ಥಕಪಡಿಸಬೇಕು; ದೇವರು ನೀತಿ, ಸತ್ಯತೆ ಇವುಗಳ ಪಕ್ಷದವನಾಗಿರುತ್ತಾನೆಂದೂ ಆತನು ನಮಗೆ ಜಯವನ್ನು ಕೊಡುವನೆಂದೂ ನಾವು ನಂಬಿರುತ್ತೇವೆ ಎಂಬದಾಗಿ ಹೇಳಿರುತ್ತಾರೆ.

ಕಾರ್ಯಗಳು ವಾಸ್ತವವಾಗಿ ಹೀಗೆಯೇ ನಡೆದಿರುವ ಪಕ್ಷದಲ್ಲಿ (ಇದು ಹೀಗೆಯೇ ನಡೆದಿದೆಯೆಂದು ನಾವು ನಂಬುತ್ತೇವೆ) ನೀತಿಯ ವಿಷಯದಲ್ಲಿರುವ ದ್ವಂದ್ವಾಭಿಪ್ರಾಯಗಳಿಗೆ ಅಂದರೆ ಬಲವೇ ನ್ಯಾಯವೆಂಬ ಹಳೇ ಅಭಿಪ್ರಾಯವು ಒಂದು, ನೀತಿ, ಸತ್ಯತೆ ಇವುಗಳು ಜನಾಂಗಗಳನ್ನು ಮಾತ್ರವಲ್ಲದೆ ಅವುಗಳಲ್ಲಿರುವ ವ್ಯಕ್ತಿಗಳನ್ನೂ ಕೂಡ ನಡೆಸುತ್ತಿರಬೇಕೆಂಬ ಉತ್ತಮವಾದ ಅಭಿಪ್ರಾಯವು ಮತ್ತೊಂದು, ಪರಸ್ಪರ ಹೋರಾಟವು ಬಂದಿದೆಯೆಂಬುದು ವ್ಯಕ್ತವಾಗುತ್ತದೆ. ಆದಕಾರಣ ಈಗ ನಡೆಯುತ್ತಿರುವ ಯುದ್ಧವು ಆಧ್ಯಾತ್ಮಿಕ ಯುದ್ಧವಾಗಿದೆಯೆಂದೂ ಇದರ ಮೂಲಕವಾಗಿ ದೇವರು ಲೋಕದ ಎಲ್ಲಾ ಜನಾಂಗಗಳವರನ್ನೂ ಶಿಕ್ಷಿತರನ್ನಾಗಮಾಡುತ್ತಿದ್ದಾನೆಂದೂ ಸ್ಪಷ್ಟವಾಗಿ ಕಂಡುಬರುತ್ತದೆ.

ಮಹಲ ಬ್ರಿಟಿಷರು ತಮ್ಮ ಸಾಂರಾಜ್ಯವನ್ನು ಇನ್ನೂ ವಿಸ್ತರಿಸಿಕೊಳ್ಳಬೇಕೆಂಬ ಉದ್ದೇಶದಿಂದ ಜರ್ಮನಿಯವರ ಮೇಲೆ ಯುದ್ಧೋನ್ಮುಖರಾಗಿದ್ದರೆ, ಇಂಡಿಯ, ಐರ್ಲೆಂಡ್, ಕೆನಡ, ಆಸ್ಟ್ರೇಲಿಯ ಮುಂತಾದ ದೇಶಗಳವರೆಲ್ಲರೂ ಇಷ್ಟರಮಟ್ಟಿಗೆ ತಾವಾಗಿ ಉತ್ಸಾಹದೊಡನೆ ಬ್ರಿಟಿಷರ ಬೆಂಬಲವಾಗಿ ನಿಲ್ಲುತ್ತಿದ್ದರೋ? ಇವರು ಹಾಗೆ ಮಾಡುತ್ತಿದ್ದರೆಂದು ನಾವು ನಂಬಲಾರೆವು. ಇವರು ಯುದ್ಧಾಸಕ್ತಿಯುಳ್ಳವರಾಗಿರುವುದರಿಂದಾಗಲಿ ಬ್ರಿಟಿಷ್ ಸಾಂರಾಜ್ಯವನ್ನು ಮತ್ತಷ್ಟು ಬಲಪಡಿಸಬೇಕೆಂಬ ಉದ್ದೇಶದಿಂದಾಗಲಿ ರಣಾಂಗಣಕ್ಕೆ ಬಂದಿಳಿದಿರುವುದಿಲ್ಲ. ನೀತಿಯನ್ನೂ ಸತ್ಯತೆಯನ್ನೂ ಜನಾಂಗಗಳಲ್ಲಿ ನೆಲೆಗೊಳಿಸಬೇಕೆಂಬ ಉದ್ದೇಶದಿಂದಲೇ ಇವರೆಲ್ಲರೂ ಬಂದಿರುತ್ತಾರೆ.

ಆದರೆ ಯುದ್ಧಮಾಡುವುದೂ ಒಬ್ಬನನ್ನೊಬ್ಬರು ಕೊಲ್ಲುವುದೂ ನಿಜಾ ಕ್ರೂರಕೃತ್ಯ; ಇಂಥದು ಎಂದಿಗೂ ನಡೆಯಬಾರದೆಂದು ಕೆಲವರು ಹೇಳಬಹುದು. ಪ್ರಕೃತದಲ್ಲಿ ಇದನ್ನು ಬಿಟ್ಟರೆ ಬೇರೆ ಮಾರ್ಗವಿರುವುದಿಲ್ಲ. ಪ್ರಯಾಸಪಟ್ಟು, ಶಕ್ತಿಯನ್ನು ಪ್ರಯೋಗಿಸಿ, ಹೋರಾಡುವುದರಿಂದಲೇನೇ ಎಲ್ಲಾ ಕಾರ್ಯಗಳು ಊರ್ಜಿತವಾಗುತ್ತವೆ. ಪ್ರತಿಯೊಂದು ಮೃಗವೂ ತನ್ನ ದೇಹಸಂರಕ್ಷಣೆಗಾಗಿ ಕಾಳಗ ಮಾಡುವುದಕ್ಕೆ ಯಾವಾಗಲೂ ಸಿದ್ಧವಾಗಿರುತ್ತದೆ. ಅನೇಕರು ಕೋರ್ಟಿಗೆ ಹೋಗಿ ತಮ್ಮ ವ್ಯಾಜ್ಯವನ್ನು ಬಗೆಹರಿಸಿಕೊಳ್ಳುವುದಕ್ಕಿಂತಲೂ ಹೊಡೆದಾಡುವುದಕ್ಕೇ ಯಾವಾಗಲೂ ಸಿದ್ಧರಾಗಿರುತ್ತಾರೆ. ಆದರೆ ನೀತಿ, ಸತ್ಯತೆ, ಪವಿತ್ರತೆ ಈ ವಿಷಯಗಳಲ್ಲಿ ದೇವರು ಕೊಟ್ಟಿರುವ ನಿಯಮಗಳು ಜನರ ತಿಳುವಳಿಕೆಗೆ ಬಂದ ಹಾಗೆಲ್ಲಾ ದೇವರಿಗೆ ಭಯಪಡುವವರು ಆ ನಿಯಮಗಳಿಗೆ ವಿಧೇಯರಾಗಲು ಪ್ರಯತ್ನಪಡುವರು. ಹೋರಾಟವು ಕಡಿಮೆಯಾದ ಹಾಗೆ ಕೆಟ್ಟದ್ದು ಒಳ್ಳೆಯದು ಬರುವುದು.

ಯೂರೋಪಿನಲ್ಲಿ ನಡೆಯುತ್ತಿರುವ ಯುದ್ಧವು ಆಧ್ಯಾತ್ಮಿಕಯುದ್ಧ. ಇದು ಕ್ರೈಸ್ತ ಮತದಿಂದ ಬಂದ ಫಲಗಳಲ್ಲಿ ಒಂದಾಗಿದೆ. ಯೇಸು ಕ್ರಿಸ್ತನು ನೀತಿ, ಸತ್ಯತೆ, ಪವಿತ್ರತೆ ಈ ವಿಷಯಗಳಲ್ಲಿ ಉತ್ತಮವಾದ ಪಾಠಗಳನ್ನು ಕಲಿಸಿಕೊಟ್ಟಿರುವುದರಿಂದ ಈ ಯುದ್ಧವು ನಡೆಯುತ್ತಾ ಇದೆ. ಕ್ರೈಸ್ತರೆಂಬ ಹೆಸರನ್ನು ಇಟ್ಟುಕೊಂಡಿರುವವರು ಒಬ್ಬರ ಸಂಗಡಒಬ್ಬರು ಯುದ್ಧಮಾಡುತ್ತಿರುವುದು ವಾಸ್ತವ. ಅವರು ಯುದ್ಧಮಾಡುತ್ತಿರುವುದು ಕ್ರೈಸ್ತ ಮತವು ಸತ್ಯವಾಗಿದೆ ಎಂಬುದನ್ನು ದೃಢಪಡಿಸುತ್ತದೆ. ಹೇಗೆಂದರೆ ಅವರಲ್ಲಿ ಒಂದು ಪಕ್ಷದವರು ನೀತಿ, ಸತ್ಯತೆ, ಪವಿತ್ರತೆ ಇವುಗಳ ವಿಷಯ ಶ್ರೇಷ್ಠವಾದ ಅಭಿಪ್ರಾಯಗಳನ್ನು ಇಟ್ಟುಕೊಂಡು ಅವುಗಳಿಗಾಗಿ ಹೊಡೆದಾಡುತ್ತಿದ್ದಾರೆ. ಈ ಯುದ್ಧದಿಂದ ಉತ್ತರೋತ್ತರದ ಜನಾಂಗಗಳಲ್ಲಿ ಪರಸ್ಪರ ನೀತಿ, ನಂಬಿಕೆ, ಸತ್ಯತೆ ಇವುಗಳು ವೃದ್ಧಿಯಾಗುವುದಲ್ಲದೆ ಯೇಸು ಕ್ರಿಸ್ತನು ಲೋಕದವರೆಲ್ಲರ ಸತ್ಯವಾರ್ಗದಲ್ಲಿ ನಡಿಸುವ ಏಕ ಪ್ರಭುವಾಗುವನು. ಇದರಿಂದ ಕ್ರೈಸ್ತ ಮತವು ಸತ್ಯವಾದುದೆಂದು ಸ್ಪಷ್ಟವಾಗಿ ಕಂಡುಬರುವುದು.

ಯುದ್ಧದ ಸಮಾಚಾರಗಳು.

ನಿಲುಗಡೆಯಿಲ್ಲದ ಕದನಗಳು.

ಜರ್ಮನಿಯವರೂ ಆಸ್ಟ್ರಿಯಾದವರೂ ಹಿಡಿಸಲ್ಪಟ್ಟರು.

ಟರ್ಕಿಯವರು ಯುದ್ಧಕ್ಕೆ ನಿಂತರು.

ಪಶ್ಚಿಮ ಯುದ್ಧಭೂಮಿಯಲ್ಲೂ, ಪೂರ್ವ ಯುದ್ಧರಂಗದಲ್ಲೂ ವಿಶೇಷವಾದ ಕದನಗಳಾಗಿವೆ. ಜರ್ಮನಿಯವರೂ, ಆಸ್ಟ್ರಿಯಾದವರೂ ವಿಶೇಷ ನಷ್ಟಕ್ಕೆ ಗುರಿಯಾದರು. ಇನ್ನು ಕೆಲವು ತಿಂಗಳ ತನಕ ಜಯಾಪಜಯಗಳು ನಿರ್ಧಾರವಾಗುವಂಥಾ ಭಾರೀ ಕದನಗಳು ಆಗುವಂತೆ ಕಾಣುವುದಿಲ್ಲ.

ಫ್ರಾನ್ಸ್ ಮತ್ತು ಬೆಲ್ಜಿಯಮ್‌ನಲ್ಲಿ.

ಬ್ರಿಟಿಷ್ ಮತ್ತು ಫ್ರೆಂಚ್ ಸೈನ್ಯಗಳ ಸಾಲುಗಳನ್ನು ಒಡೆದು ನುಗ್ಗುವುದು ಸಾಧ್ಯವಲ್ಲವೆಂದು ಜರ್ಮನಿಯವರು ಬೇರೊಂದು ಉಪಾಯಂತ್ರವನ್ನು ಮಾಡಿದರು. ಅವರ ಸೈನ್ಯಗಳು ಬೆಲ್ಜಿಯಮ್ ದೇಶದಲ್ಲಿ ಸಮುದ್ರತೀರಕ್ಕೆ ಹೋಗಿತ್ತು. ಜರ್ಮನಿಯವರು ತಮ್ಮ ಸೈನ್ಯವನ್ನು ಸಮುದ್ರತೀರಕ್ಕೆ ನಡಿಸಿಕೊಂಡು ಹೋಗಿ ಬ್ರಿಟಿಷ್ ಮತ್ತು ಬೆಲ್ಜಿಯನ್ ಸೈನ್ಯಗಳನ್ನು ಸುತ್ತುಹಾಕಿಕೊಳ್ಳಬೇಕೆಂದು ಪ್ರಯತ್ನಪಟ್ಟರು. ಅವರ ಈ ಪ್ರಯತ್ನವು ಸಾಗಲಿಲ್ಲ; ಅವರನ್ನು ಎದುರುಪಕ್ಷದವರು ಸೋಲಿಸಿ ಅಲ್ಲಿಂದ ಹಿಮ್ಮೆಟ್ಟಿಸಿಬಿಟ್ಟರು. ಈ ವಿಚಾರವಾಗಿ ಬಂದಿರುವ ತಂತೀ ವರ್ತಮಾನಗಳು ಸ್ಪಷ್ಟವಾಗಿಲ್ಲ. ಆದರೂ ಹಿಂದುಸ್ಥಾನದಿಂದ ಹೋಗಿರುವ ಸೈನ್ಯಗಳನ್ನು ಫ್ರಾನ್ಸಿನ ಉತ್ತರಭಾಗಕ್ಕೆ ಕಳುಹಿಸಿ, ಕೆಲವು ಕಾಲ ರಿಜರ್ವಿನಲ್ಲಿ ಇಟ್ಟುಕೊಂಡಿದ್ದರು. ಸಮುದ್ರತೀರದಲ್ಲಿ ಜರ್ಮನಿಯವರು ಸೇರಿದ್ದು ಹೆಚ್ಚಾಗುತ್ತಾ ಬಂದದ್ದನ್ನು ಕಂಡು, ಅವರಿಗೆ ದಿಗ್ಭ್ರಮೆಯಾಗುವಂತೆ ಹಿಂದುಸ್ಥಾನದ ಸೈನ್ಯವನ್ನು ಎದುರುಮಾಡಿದರು. ಲಿಲ್ ಪಟ್ಟಣಕ್ಕೂ, ಓಸ್ಟೆಂಡ್ ಪಟ್ಟಣಕ್ಕೂ ಕದನಗಳು ಜರುಗಿದವು. ಕೆಲವು ದಿನಗಳವರೆಗೆ ಯುದ್ಧ ನಡೆಯುತ್ತಲೇ ಬಂತು. ಕಡೆಯಲ್ಲಿ ಕಳೆದ ವಾರ ನಾವು ತಿಳಿಸಿದ ಪ್ರಕಾರ

ಜರ್ಮನಿಯವರು ಮುಂದೆ ನುಗ್ಗಿ ಹೋಗದಂತೆ ಅಡ್ಡಿಯಾಯಿತು. ಅಲ್ಲಿಂದ ಮತ್ತೆ ಯುದ್ಧಗಳು ಪ್ರಾರಂಭವಾಗಿ ನಡೆಯುತ್ತಾ ಬಂದಿವೆ. ಅನೇಕ ಯುದ್ಧಭಟರು ಸತ್ತಿದ್ದಾರೆ. ಯಾವ ಕಡೆಯವರಿಗೂ ಶತ್ರುವನ್ನು ಭೇದಿಸಿಕೊಂಡು ಮುಂದಕ್ಕೆ ನುಗ್ಗಿ ಹೋಗಲು ಸಾಧ್ಯವಾಗಲಿಲ್ಲ.

ಹಿಂದುಸ್ಥಾನದ ದೇಶೀಯ ಸೈನಿಕರು ಜರ್ಮನಿಯವರ ಮೇಲೆ ಬಹು ಪರಾಕ್ರಮದಿಂದ ನುಗ್ಗಿ ಕಾದಾಡಿ, ಹಲವು ವೇಳೆ ಅವರನ್ನು ಹಿಂದಕ್ಕೆ ಓಡಿಸಿದರು. ಒಂದಾನೊಂದು ರಾತ್ರಿ ಕೆಲವು ಗೂರ್ಖಾ ಸೈನಿಕರು ನುಗ್ಗಿ ಹೋಗಿ ಜರ್ಮನಿಯವರ ಸೈನ್ಯಗಳ ಹಿಂದೆ ಬಂದು, ಜರ್ಮನಿಯವರ ಯಂತ್ರಗಳೆಂಬ ತೋಪು ಸೈನಿಕರನ್ನು ಕೊಂದುಹಾಕಿದ್ದಲ್ಲದೆ ಅವರು ಮದ್ದು ಗುಂಡು ಇಟ್ಟಿದ್ದ ಉಗ್ರಾಣಕ್ಕೆ ಬೆಂಕಿಹಾಕಿ ಸುಟ್ಟುಬಿಟ್ಟರು. ಇದಾದ ಮೇಲೆ ಜರ್ಮನಿಯವರು ತಮ್ಮ ಫಿರಂಗಿಗಳನ್ನು ಅಲ್ಲಿಂದ ಹಿಂದಕ್ಕೆ ಸಾಗಿಸಿಕೊಂಡು ಹೋಗಬೇಕಾಯಿತು. ಹಿಂದುಸ್ಥಾನದ ಸೈನಿಕರು ಬಹಳ ಚುರುಕಿನವರಾದದ್ದರಿಂದ ಜರ್ಮನಿಯವರಿಗೆ ಇವರನ್ನು ಕಂಡರೆ ಸೈರಣೆ ಇಲ್ಲ. ಇನ್ನೂ ೩,೦೦,೦೦೦ ಸೈನ್ಯವನ್ನು ಎದುರು ನೋಡುತ್ತಿದ್ದಾರೆ. ದಕ್ಷಿಣ ಆಫ್ರಿಕಾದಲ್ಲಿ ಬ್ರಿಟಿಷರಿಗೆ ಕಷ್ಟಗಳು ಬರುವುವೆಂದು ಜರ್ಮನಿಯವರು ನೆನೆಸಿದ್ದರು. ಬ್ರಿಟಿಷರು ಹಿಂದುಸ್ಥಾನದ ಸೈನ್ಯವನ್ನು ದಕ್ಷಿಣ ಆಫ್ರಿಕಾಕ್ಕೆ ಕಳುಹಿಸಬೇಕಾದೀತೆಂದೂ, ಅದನ್ನು ಫ್ರಾನ್ಸಿಗೆ ಕರೆಸಿಕೊಳ್ಳುವುದಿಲ್ಲವೆಂದೂ ಜರ್ಮನಿಯವರು ಯೋಚಿಸಿಕೊಂಡಿದ್ದರು.

ಬ್ರಿಟಿಷರು ಗಾಯಪಟ್ಟ ಹಿಂದುಸ್ಥಾನದ ಸೈನಿಕರನ್ನು ಇಂಗ್ಲೆಂಡಿನ ಬಳಿಯ ಐಲ್ ಆಫ್ ವೈಟ್ ಎಂಬ ದ್ವೀಪಕ್ಕೆ ಸಾಗಿಸಿ, ಅಲ್ಲಿ ಚಿಕಿತ್ಸೆ ಶುಶ್ರೂಷೆಗಳನ್ನು ಮಾಡಿಸುತ್ತಿದ್ದಾರೆ.

ಬೆಲ್ಜಿಯಮ್‌ದವರು ಜರ್ಮನಿಯವರ ಮೇಲೆ ಬಹು ಪರಾಕ್ರಮದಿಂದ ಕಾದಿದರು. ಅವರಿಗೆ ಸುಮಾರು ಹತ್ತು ದಿನಗಳಿಂದ ಸರಿಯಾದ ಆಹಾರವೇ ಇರಲಿಲ್ಲ. ಅವರ ಸೈನಿಕರಲ್ಲಿ ೧೦,೦೦೦ ಮಂದಿ ಕೊಲೆಯಾಗಿಯೂ ಗಾಯಪಟ್ಟೂ ನಷ್ಟವಾದಾಗ್ಯೂ, ಶತ್ರುಗಳಿಗೆ ಸ್ಥಳವನ್ನು ಬಿಟ್ಟುಕೊಡದೆ ಬಹಳ ಶೌರ್ಯವನ್ನು ಪ್ರಕಟನ ಮಾಡಿದರು. ಬೆಲ್ಜಿಯಮ್‌ದಲ್ಲಿ ದೇಶಾಭಿಮಾನವು ವಿಶೇಷವಾಗಿರೋಣದರಿಂದ ಇನ್ನೂ ಸಾವಿರಾರು ಪ್ರಜೆಗಳು ಬಂದು ಸೈನಿಕರಾಗಿ ಸೇರುತ್ತಿದ್ದಾರೆ. ಆ ದೇಶದವರು ಇದ್ದದ್ದೆಲ್ಲಾ ಸೈನ್ಯ ನಷ್ಟವಾಗಿದ್ದರೂ ಮೊದಲಿನಷ್ಟೇ ಸೈನ್ಯ ಮತ್ತೆ ಹೊಸದಾಗಿ ಸಿದ್ಧವಾಗುವುದೆಂದು ಹೇಳಿದಾರೆ.

ಬ್ರಿಟಿಷರ ಯುದ್ಧದ ಹಡಗುಗಳಿಂದ ಈ ಕದನಗಳಲ್ಲಿ ತುಂಬಾ ಸಹಾಯ ದೊರೆಯಿತು. ಬ್ರಿಟಿಷ್ ಹಡಗುಗಳು ಹದಿನಾಲ್ಕು ದಿನಗಳಿಂದ ನಿಲುಗಡೆಯಿಲ್ಲದೆ ಜರ್ಮನಿಯವರ ಮೇಲೆ ಗುಂಡುಗಳ ಮಳೆಯನ್ನು ಸುರಿಸುತ್ತಿರುವವು. ವೆನರೆಬಲ್ ಎಂಬ ಯುದ್ಧದ ಹಡಗು ಕಳೆದ ದಿನಗಳಲ್ಲೆಲ್ಲಾ ಯುದ್ಧಮಾಡಿತು. ಒಂದು ವೇಳೆ ಜರ್ಮನಿಯವರನ್ನು ಮೂರು ಕಡೆಗಳಿಂದ ಸುತ್ತಿಕೊಂಡರು. ಹಡಗುಗಳಿಂದ ಸುರಿದ ಗುಂಡುಗಳು ಜರ್ಮನ್ ಸೈನ್ಯದಲ್ಲಿ ಅನೇಕರನ್ನು ಕೊಂದು ರಾಶಿರಾಶಿಯಾಗಿ ಮಲಗಿಬಿಟ್ಟವು. ಒಂದು ಹಡಗಿಗೆ ಹಾನಿ ಆಯಿತು. ಒಬ್ಬ ಉತ್ತರಾಧಿಕಾರನೂ, ಎಂಟು ಮಂದಿ ನಾವೆಯ ಸೈನಿಕರೂ ಮೃತಪಟ್ಟರು. ಬ್ರಿಟಿಷರ ನಾವೆಯಲ್ಲಿ ಇದಕ್ಕಿಂತ ಹೆಚ್ಚು ನಷ್ಟವೇನೂ ಆಗಿರಲಾರದು.

ಭೂಯುದ್ಧದಲ್ಲಿ ಬ್ರಿಟಿಷ್ ಸೈನಿಕರಲ್ಲಿ ಕೆಲವು ಸಾವಿರ ಮಂದಿಯೇ ಕೊಲೆಯಾದರು. ನಮ್ಮ ಚಕ್ರವರ್ತಿಯವರ ದಾಯಾದಿಯಾದ ಪ್ರಿನ್ಸ್ ಮಾರಿಸ್ ಆಫ್ ಬ್ಯಾಟನ್‌ಬರ್ಗ್ ಎಂಬ ದಳಪತಿಯೂ, ಹಿಂದುಸ್ಥಾನದಲ್ಲಿ ಹಿಂದೆ ವೈಸ್‌ರಾಯರಾಗಿದ್ದ ಲಾರ್ಡ್ ಲ್ಯಾನ್ಸ್‌ಡೌನ್ ಅವರ ಕುಮಾರರೂ ಕೊಲೆಯಾದರು.

ಜರ್ಮನಿಯವರ ಪಕ್ಷದಲ್ಲಿ ಆಗಿರುವ ಸೈನ್ಯನಷ್ಟವನ್ನು ಅಂದಾಜು ಹೇಳುವುದು ಕಷ್ಟಕರ. ಅಪಾರ ಸೈನ್ಯಗಳು ಮಡಿದು ಹೋಗಿವೆ. ೭೦,೦೦೦ ಮಂದಿ ಬಲಿಯಾಗಿರಬಹುದೆಂದು ಹೇಳುತ್ತಾರೆ. ಅಕ್ಟೋಬರ್ ತಾ. ೧೪ ರಿಂದ ೨೦ ರ ವರೆಗೆ ೭,೦೦೦ ಮಂದಿ ಜರ್ಮನಿಯವರು ಕೈಸೆರೆ ಹಿಡಿಯಲ್ಪಟ್ಟಿದ್ದಾರೆ. ಈ ಸಂಖ್ಯೆಯಲ್ಲಿ ಗಾಯಪಟ್ಟವರು ಸೇರಿಲ್ಲ. ಅನೇಕ ವೇಳೆ ಜರ್ಮನಿಯವರು ಹೊಸ ಸೈನ್ಯಗಳನ್ನು ತರಿಸಿ ಯುದ್ಧಭೂಮಿಗೆ ತಂದರು. ಅವರಲ್ಲಿ ಸಣ್ಣ ವಯಸ್ಸಿನವರು ಕೂಡ ಇರುತ್ತಾರೆ. ಮಕ್ಕಳಿಗೆ ವಿದ್ಯೆ ಕಲಿಸುವ ಉಪಾಧ್ಯಾಯರು ದೇಶದ ಒಂದು ಭಾಗವನ್ನು ಯುದ್ಧಭೂಮಿಗೆ ಸೈನಿಕರಾಗಿ ಬಂದು ನಿಲ್ಲಬೇಕೆಂದು ಜರ್ಮನಿಯವರು ಹುಕುಂ ಕೊಟ್ಟಿದ್ದಾರೆ. ಬ್ರಿಟಿಷರು ಸಾವಿರಾರು ಜರ್ಮನ್ ಸೈನಿಕರನ್ನು ಒಬ್ಬ ದಳಪತಿ ಮೇಜರ್ ಜನರಲ್‌ರ ಸಮೇತ ಕೈಸೆರೆ ಹಿಡಿದುಕೊಂಡರು, ಇದಲ್ಲದೆ ಜರ್ಮನಿಯ ಕೆಲವು ಫಿರಂಗಿಗಳೂ ಅನೇಕ ಮೆಷೀನ್ ಫಿರಂಗಿಗಳೂ ಕಿತ್ತುಕೊಂಡು ಬಂದಿದ್ದಾರೆ.

ಹಾಲೆಂಡ್ ದೇಶದ ವರ್ತಮಾನ ಪತ್ರಿಕೆಗಳಲ್ಲಿ ಜರ್ಮನಿಯವರು ಬೆಲ್ಜಿಯಮ್‌ನಲ್ಲಿ ಸಾರಿ ಎಂಬ ಪಟ್ಟಣವನ್ನು ಸುಟ್ಟು ಲೂಟಿಮಾಡಿದರೆಂದೂ, ನಾಮೂರ್ ಪ್ರಾಂತಗಳಲ್ಲಿ ಸುಮಾರು ಒಂದು ಸಾವಿರ ಜನರನ್ನು ಕೊಂದುಹಾಕಿದರೆಂದೂ ಬರೆದಿದ್ದಾರೆ.

ಜರ್ಮನಿ ಸೈನ್ಯದವರು ಕೊಟ್ಟ ಒಂದು ಹುಕುಮಿನ ನಕಲು ಸಿಕ್ಕಿದೆ. ಅದರಲ್ಲಿ ಆಯಾ ಪಟ್ಟಣಗಳಲ್ಲಿಯೂ ಮದ್ದುಗುಂಡುಗಳು ಕ್ರಮವಾಗಿ ಒದಗಿಸಲ್ಪಡುತ್ತಿದ್ದು ಸೈನಿಕರು ನೆಟ್ಟಗೆ ಗುರಿಕೊಡಬೇಕೆಂದು ಬರೆದಿದೆ.

ಫ್ರಾನ್ಸಿನೊಳಗೆ ಯುದ್ಧದ ಲೈನಿನ ದಕ್ಷಿಣದಲ್ಲಿ ಉಗ್ರಘೋರವಾದ ಕದನಗಳೇನೂ ಅಷ್ಟು ಹೆಚ್ಚಾಗಿ ನಡೆಯಲಿಲ್ಲ. ಆದರೂ ಕೆಲವು ಯುದ್ಧಗಳು ಜರುಗಿದವು. ಅದೂ ವೇರ್ಡನ್ ಬಳಿಯಲ್ಲಿ. ಕಳೆದ ಗುರುವಾರ ಜರ್ಮನಿಯವರು ಮತ್ತೆ ಆ ನಗರಕ್ಕೆ ಫಿರಂಗಿಗಳನ್ನು ಎತ್ತಿ ಕಟ್ಟಿ ಗುಂಡುಗಳನ್ನು ಸುರಿಸಿದರು. ಬಿಟ್ಟುಕೊಟ್ಟ ಸೋಮ್‌ನಲ್ಲಿ ಫ್ರೆಂಚರಿಗೆ ಅನುಕೂಲವಾಗಿದೆ ಎಂದು ಹೇಳಬಹುದು. ಇವರು ಜರ್ಮನಿಯವರ ಕೆಲವು ಕಂದಕಗಳನ್ನು ಸ್ವಾಧೀನಪಡಿಸಿಕೊಂಡು, ಅವರ ಫಿರಂಗಿ ಸಾಲುಗಳನ್ನು ನಾಶಮಾಡುತ್ತಾರೆ. ನ್ಯಾನ್ಸಿಯಿಂದ ಪೂರ್ವದಿಕ್ಕಿನಲ್ಲಿ ಜರ್ಮನಿಯವರು ನಿಲ್ಲಲು ಅವಕಾಶ ತಪ್ಪಿಹೋಗಿ ಆ ಬಳಿ ಅವರು ಫ್ರಾನ್ಸಿನ ಹೊರಗಡೆಗೆ ಓಡಿಸಲ್ಪಟ್ಟಿರುತ್ತಾರೆ. ಆಲ್ಸೇಸಿನಲ್ಲಿ ಫ್ರೆಂಚರು ಮುಂದಕ್ಕೆ ನುಗ್ಗಿಹೋಗುವ ತರವಾಯಿನಲ್ಲಿರುವಂತೆ ತೋರುತ್ತದೆ.

ರಷ್ಯಾ, ಜರ್ಮನಿ ಮತ್ತು ಆಸ್ಟ್ರಿಯಾ.

ಕಳೆದ ವಾರ ಬಂದಿದ್ದ ತಂತೀ ವರ್ತಮಾನಗಳು ಸಂದಿಗ್ಧವಾಗಿದ್ದದ್ದರಿಂದ ಸಂಗತಿಗಳು ಸರಿಯಾಗಿ ಗೊತ್ತಾಗದೆ ಹೋಯಿತು. ಜರ್ಮನಿಯವರು ತಮಗೆ ಜಯವಾಯಿತೆಂದು ಹೇಳಿದರು; ರಷ್ಯಾದವರು ತಮಗೆ ಜಯವಾಯಿತೆಂದು ತಿಳಿಸಿದರು. ಈಚೆಗೆ ಬಂದಿರುವ ತಂತೀ ವರ್ತಮಾನಗಳಿಂದ ಜರ್ಮನಿಯವರೇ ಬಹಳವಾಗಿ ಸೋತು ಹಿಂದಕ್ಕೆ ಓಡಿಸಲ್ಪಟ್ಟರೆಂದು ಗೊತ್ತಾಗುತ್ತದೆ. ತಮಗೆ ಸೋಲಾಯಿತೆಂದು ಜರ್ಮನಿಯವರೇ ಒಪ್ಪಿಕೊಂಡಿದ್ದಾರೆ. ವಾರ್ಸಾ ಪಟ್ಟಣದ ಬಳಿ ಕದನವು ಪ್ರಾರಂಭವಾಯಿತು. ಜರ್ಮನಿಯವರು ಎಷ್ಟು ಸಾಹಸ ಮಾಡಿದಾಗ್ಯೂ ಪ್ರಯೋಜನವಾಗದೆ ಹಿಮ್ಮೆಟ್ಟಿದರು. ಈಗ ಅವರು ಅಲ್ಲಿಂದ ಸುಮಾರು ಎಂಭತ್ತು ಮೈಲಿ ದೂರಕ್ಕೆ ಬಂದುಬಿಟ್ಟಿದ್ದಾರೆ. ಆದಾಗ್ಯೂ ಅವರು ಇನ್ನೂ ರಷ್ಯಾ ದೇಶದೊಳಗೇ ಇರುವರು.

ಅನೇಕ ರಣಗಳಲ್ಲಿ ಬಹು ಘೋರವಾದ ಯುದ್ಧಗಳು ನಡೆದಿರುತ್ತವೆ. ಒಂದು ಕಡೆ ನಾಲ್ಕು ದಿನ ಕಡಿದಾಟವಾಯಿತು. ಅದರಲ್ಲಿ ರಷ್ಯಾದವರು ೩,೦೦೦ ಶತ್ರುಭಟರನ್ನು ಕೆಲವು ಫಿರಂಗಿಗಳ ಸಮೇತ ಕೈಸೆರೆ ಹಿಡಿದುಕೊಂಡರು. ಇನ್ನೊಂದು ರಣ್ಯದಲ್ಲಿ ರಷ್ಯಾದವರು ೨೦ನೇ ಸೈನ್ಯವನ್ನು ಎದುರಿಸಿ ಯುದ್ಧಮಾಡಿ ಸೋಲಿಸಿ, ಅಲ್ಲಿಂದ ಹಿಂದಕ್ಕೆ ಓಡಿಸಿಬಿಟ್ಟರು. ಕೆಲವು ಸಾವಿರ ಮಂದಿ ಸೈನಿಕರೂ, ಭಾರಿ ಫಿರಂಗಿಗಳೂ, ಮೆಷೀನ್ ಫಿರಂಗಿಗಳೂ, ಬೈಸಿಕಲ್‌ಗಳೂ, ಮೋಟರ್ ವ್ಯಾಗನ್ ಬಂಡಿಗಳೂ ರಷ್ಯಾದವರಿಗೆ ಸಿಕ್ಕಿವೆ. ಈಗ ರಷ್ಯಾದವರು ಅಲ್ಲಿಂದ ಅಪಾರವಾದ ಸೈನ್ಯಸಮೇತ ಮುಂದಕ್ಕೆ ನುಗ್ಗಿ ಬರುತ್ತಿದ್ದಾರೆ.

ಆಸ್ಟ್ರಿಯಾದಲ್ಲಿ ರಷ್ಯಾದವರು ಆಸ್ಟ್ರಿಯಾದ ೫೦ನೇ ಡಿವಿಜನ್ ಸೈನ್ಯವನ್ನು ಸುತ್ತಿಕೊಂಡು ಆ ಸೈನ್ಯವನ್ನು ನಾಶಮಾಡಿದರು. ಅಲ್ಲಿ ಅವರಿಗೆ ೨೦ ಫಿರಂಗಿಗಳೂ, ಅಪಾರವಾದ ಸಾಮಾನುಗಳೂ ಸಿಕ್ಕಿದವು. ಅಲ್ಲಿಂದ ರಷ್ಯಾದವರು ಹೊರಟು ಇನ್ನೊಂದು ಸ್ಥಳವನ್ನು ಸ್ವಾಧೀನಪಡಿಸಿಕೊಂಡು, ಕ್ರೈಕ್ಸ್‌ಬರ್ಗ ಎಂಬ ಕೆಲವು ಫಿರಂಗಿಗಳ ಸಹಿತ ೫೦೦ ಆಸ್ಟ್ರಿಯಾ ಸಿಪಾಯಿಗಳನ್ನು ಕೈಸೆರೆ ಹಿಡಿದುಕೊಂಡರು.

ಪೂರ್ವ ರಷ್ಯಾದಲ್ಲಿ ಜರ್ಮನಿಯವರು ಹಲವು ವೇಳೆ ರಷ್ಯಾದವರ ಮೇಲೆ ನುಗ್ಗಿ ಅವರನ್ನು ಸೋಲಿಸಬೇಕೆಂದು ಪ್ರಯತ್ನಪಟ್ಟರು. ಆದರೆ ಈ ಪ್ರಯತ್ನ ವೆಲ್ಲಾ ನಿಷ್ಪ್ರಯೋಜನವಾಯಿತು. ಅವರು ಕಡೆಗೆ ಅನೇಕ ಸೈನ್ಯಾದಿಗಳನ್ನು ಕಳೆದುಕೊಂಡು ಹಿಂದಕ್ಕೆ ಬಂದುಬಿಟ್ಟರು. ಅಲ್ಲಿ ಇನ್ನೂ ಕದನಗಳು ನಡೆಯುತ್ತಲೇ ಇವೆ. ಜರ್ಮನಿಯವರು ಅಪಾರವಾದ ಸೈನ್ಯವನ್ನು ಕಳೆದುಕೊಂಡದ್ದರಿಂದ ರಷ್ಯಾದವರ ಮೇಲೆ ಬಿದ್ದು ನುಗ್ಗಿ ಯುದ್ಧಮಾಡುವುದನ್ನು ನಿಲ್ಲಿಸಿರುತ್ತಾರೆ.

ಇದುವರೆಗೆ ನಡೆದಿರುವ ಯುದ್ಧಕಾರ್ಯಗಳು ರಷ್ಯಾದವರಿಗೆ ಅನುಕೂಲವಾಗಿರುವುವು. ಆದರೂ ಅವರು ಜರ್ಮನಿಯವರ ಮೇಲೆ ಸಂಪೂರ್ಣವಾದ ಜಯಪ್ರದವನ್ನು ಹೊಂದಬೇಕಾದರೆ ಇನ್ನೂ ಬಹಳ ಸಾಹಸಕಾರ್ಯಗಳನ್ನು ಮಾಡಬೇಕಾಗಿರುತ್ತದೆ.

ಹಂಗೇರಿಯಲ್ಲೂ ಆಸ್ಟ್ರಿಯಾದಲ್ಲೂ ರಾಜಭೇದಿ ಉಪದ್ರವವು ಕಾಣಿಸಿಕೊಂಡು ಹರಡಿಕೊಳ್ಳುತ್ತಿದೆ ಎಂದು ವರ್ತಮಾನ ಬಂದಿದೆ.

ಚೀಣಾದಲ್ಲಿ.

ಸುತುಧವರ್ಗದ ಬದಲಾವಣೆಯಿಂದ ಜಪಾನ್‌ನವರ ಯುದ್ಧಕಾರ್ಯಗಳು ಸ್ವಲ್ಪ ಸಾವಕಾಶಕ್ಕೆ ಬಿದ್ದಿವೆ. ಆದರೂ ಅವರು ಜರ್ಮನಿಯವರ ಕೋಟೆಗಳಿಗೆ ಮುತ್ತಿಗೆ ಹಾಕಿ ಗುಂಡುಗಳನ್ನು ಹಾಕಿದರು. ಕೋಟೆಗಳೊಳಗಿಂದ ಜವಾಬೇ ಬರಲಿಲ್ಲ. ಎರಡು ಕೋಟೆಗಳಿಂದ ಮಾತ್ರ ಜರ್ಮನಿಯವರ ಗುಂಡುಗಳು ಬಂದವು. ಒಂದು ಕೋಟೆಯು ಹತ್ತಿಕೊಂಡು ಉರಿಯುತ್ತಿದೆ. ಹಿಂದುಸ್ಥಾನದ ಯುದ್ಧಭಟರು ಹೋಗಿ ಜಪಾನ್‌ನವರ ಕೂಡ ಸೇರಿಕೊಂಡು ಸಹಾಯ ಮಾಡುತ್ತಿದ್ದಾರೆಂದು ತಿಳಿಯುವುದು. ಕ್ಲಿಂಗ್‌ಟೌ ಎಂಬ ಸಮುದ್ರತೀರದಲ್ಲಿ ಜರ್ಮನಿಯವರ ಫಿರಂಗಿ ಹಡಗನ್ನು ಹಿಡಿದು ಮುಳುಗಿಸಿಬಿಟ್ಟರು.

ಆಫ್ರಿಕಾದಲ್ಲಿ.

ದಕ್ಷಿಣ ಆಫ್ರಿಕಾದಲ್ಲಿ ಜನರಲ್ ಬೇಯರ್ಸ್ ಎಂಬ ಬೋಅರ್ ದಳಪತಿಯೂ ಇಂಗ್ಲಿಷರಿಗೆ ದ್ರೋಹಿಯಾಗಿ ಪರಿಣಮಿಸಿದನು. ಅವನ ಹಿಂಬಾಲಕರನ್ನು ಚದರಿಸಿಬಿಟ್ಟಿರುವಂತೆ ಹೇಳಲಾಗಿದೆ. ಮಂತ್ರಿಶ್ರೇಷ್ಠರಾದ ಜನರಲ್ ಬೋಥಾರವರು ಈ ದ್ರೋಹಿಗಳನ್ನು ಶಿಕ್ಷಿಸುವ ಸನ್ನಾಹಗಳನ್ನು ಮಾಡುತ್ತಿರುವರು. ಅವರನ್ನು ಕೆಲವರು ದಂಡಿನ ಕೂಡ ಹೋಗದಂತೆ ತಡೆದರು. ಆದರೆ ಅವರು ತಮ್ಮ ಜನರನ್ನು ಬ್ರಿಟಿಷರ ಬೆಂಬಲಕ್ಕಾಗಿ ನಡಿಸಿಕೊಂಡು ಹೋಗುವುದೇ ಸಿದ್ಧವೆಂದು ಗೊತ್ತುಮಾಡಿದರು. ಮರಿತ್ಸ್ ಎಂಬ ರಾಜದ್ರೋಹಿಯ ಸೈನ್ಯದಲ್ಲಿ ೧೩ ಜನ ಕೊಲೆಯಾದರು, ೩೬ ಮಂದಿ ಗಾಯಪಟ್ಟರು, ೩೧೦ ಮಂದಿ ಕೈಸೆರೆ ಹಿಡಿಯಲ್ಪಟ್ಟರು. ರಾಜದ್ರೋಹಿಗಳಾದವರನ್ನು ಬಹು ಮಟ್ಟಿಗೆ ಅಡಗಿಸಿರುತ್ತಾರೆ. ಈ ಕಾರ್ಯವು ಪೂರೈಸಿದ ಮೇಲೆ ಅವರು ಜರ್ಮನಿಯವರ ಮೇಲೆ ಯುದ್ಧಕ್ಕೆ ಹೊರಡುವರು.

ಪಶ್ಚಿಮ ಆಫ್ರಿಕಕ್ಕೆ ಸೇರಿದ ಕಾಮರೂನ್ಸ್ ಎಂಬಲ್ಲಿ ಕದನಗಳಾಗಿವೆ. ಬ್ರಿಟಿಷ್ ಮತ್ತು ಫ್ರೆಂಚ್ ಸೈನ್ಯಗಳು ಬಹಳ ಘೋರವಾಗಿ ಯುದ್ಧಮಾಡಿ ಜರ್ಮನಿಯವರ ಒಂದು ಪಟ್ಟಣವನ್ನು ಗೆದ್ದು ಸ್ವಾಧೀನಪಡಿಸಿಕೊಂಡವು. ಅಲ್ಲಿರುವ ಸೈನ್ಯಗಳು ಅಷ್ಟೇನೂ ಹೆಚ್ಚಾಗಿಲ್ಲ.

ಪೋರ್ಚುಗೀಸರಿಗೆ ಸೇರಿದ ಪಶ್ಚಿಮ ಆಫ್ರಿಕಾದಲ್ಲಿ ಜರ್ಮನಿಯವರು ಸೈನ್ಯವನ್ನು ಅಂಗೋಲಾ ಎಂಬ ಸ್ಥಳಕ್ಕೆ ಕಳುಹಿಸಿದರು. ಅಲ್ಲಿ ನಡೆದ ಕದನದಲ್ಲಿ ಮೂರು ನೂರು ಮಂದಿ ಜರ್ಮನಿಯವರು ಕೊಲೆಯಾದರು. ಇದರಿಂದ ಪೋರ್ಚುಗಲ್ ರಾಜ್ಯವೂ ಈ ಯುದ್ಧದಲ್ಲಿ ಬಂದು ಸೇರಿಕೊಳ್ಳುವುದೋ ಏನೋ ಮುಂದೆ ನೋಡಬೇಕು.

ಸಮುದ್ರದ ಮೇಲೆ.

ಎಮ್ಡೆನ್ ಎಂಬ ಜರ್ಮನಿಯ ಯುದ್ಧದ ಹಡಗು ಹಿಂದಿನಂತೆ ಬಹಳ ಅನ್ಯಾಯ ಕೆಡಕನ್ನುಂಟುಮಾಡಿದೆ. ಅದು ತನ್ನ ರೂಪವನ್ನು ಬದಲಾಯಿಸಿಕೊಂಡು ಅಂದರೆ ಸುಳ್ಳು ಬಾವುಟವನ್ನು ಕಟ್ಟಿಕೊಂಡು, ಸಂಚರಿಸುವ ಹಡಗುಗಳಿಗೆ ವಂಚನೆಮಾಡಿಬಿಟ್ಟಿತು. ಅದು ರಷ್ಯಾದವರ ಯುದ್ಧದ ಹಡಗನ್ನು ಸಂಧಿಸಿ ಅದಕ್ಕೆ ಟಾರ್ಪಿಡೋ ಎಂಬುದನ್ನು ಬಿಟ್ಟು ಘಾತುಮಾಡಿ ಮುಳುಗಿಸಿಬಿಟ್ಟಿತು. ಒಂದು ಫ್ರೆಂಚರ ಹಡಗು ಮಸ್ಕ್ಯೂಯೆಟ್ ಎಂಬ ಜಹಜೂ ಅವರ ಕೈಗೆ ಸಿಕ್ಕಿ ಮುಳುಗಿಸಲ್ಪಟ್ಟಿತು. ಇವೆರಡರಿಂದಲೂ ೮೫ ಮಂದಿ ಸಮುದ್ರದ ಪಾಲಾದರು. ೨೫೦ ಮಂದಿ ಬದುಕಿಬಂದರೂ ಅವರಲ್ಲಿ ೧೧೨ ಮಂದಿಗೆ ಗಾಯಗಳಾಗಿವೆ.

ಜರ್ಮನಿಯವರು ಐರ್ಲೆಂಡಿನ ಉತ್ತರ ಭಾಗದ ಸಮುದ್ರದೊಳಗೆ ಮೈನ್ ಎಂಬ ಸಿಡಿಮದ್ದಿನ ಗುಂಡುಗಳನ್ನು ಹಾಕಿಬಿಟ್ಟಿದ್ದಾರೆ. ಒಂದು ವರ್ತಕ ಜಹಜು ಅದಕ್ಕೆ ತಗುಲಿ ಒಡೆದು ಮುಳುಗಿಹೋಯಿತು. ಅದರಲ್ಲಿದ್ದ ಕ್ಯಾಪ್ಟನ್ ಎಂಬ ಅಧಿಪತಿಯೂ, ಹದಿಮೂರು ಮಂದಿ ಸೇವಕರೂ ಸಮುದ್ರದ ಪಾಲಾದರು.

ಸ್ಕಾಟ್ಲೆಂಡಿನ ಹತ್ತಿರ ಫ್ರೆಂಚರ ಒಂದು ಜಹಜು ನಾಶವಾಯಿತು. ಇದಕ್ಕೆ ಕಾರಣವೇನೋ ಸರಿಯಾಗಿ ತಿಳಿಯಲಿಲ್ಲ. ಅದರಲ್ಲಿ ಬೆಲ್ಜಿಯಮ್‌ನಿಂದ ತಪ್ಪಿಸಿಕೊಂಡು ಬಂದ ೨,೫೦೦ ಪ್ರಜೆಗಳೂ, ೧೦೦ ಮಂದಿ ಬೆಲ್ಜಿಯಮ್ ಸೈನಿಕರೂ ಇದ್ದರು. ಸುಮಾರು ೨೦ ಮಂದಿ ವಿನಾ ಉಳಿದವರೆಲ್ಲಾ ಬದುಕಿರುತ್ತಾರೆ.

ಆಸ್ಪತ್ರೆಯಾಗಿ ರಚಿಸಿದ್ದ ಒಂದು ಬ್ರಿಟಿಷ್ ಜಹಜು ಇಂಗ್ಲೆಂಡಿನ ಸಮುದ್ರತೀರದಲ್ಲಿ ಸುಂಟರಗಾಳಿಗೆ ಸಿಕ್ಕಿ ಬಂಡೆಗೆ ಬಡಿದು ಒಡೆದುಹೋಯಿತು. ಅದು ಗಾಯಪಟ್ಟ ಸೈನಿಕರನ್ನು ಕರೆತರುವುದಕ್ಕಾಗಿ ಬೆಲ್ಜಿಯಮ್‌ಗೆ ಹೋಗುತ್ತಿತ್ತು. ಅದರಲ್ಲಿದ್ದ ನರ್ಸುಗಳನ್ನೂ ಬಹುಮಂದಿ ಸೇವಕರನ್ನೂ ಬದುಕಿನ ದೋಣಿಗಳಲ್ಲಿ ಕಾಪಾಡಿದರು.

ಸೂಯೆಜ್ ಕಾಲುವೆಯಲ್ಲಿ ತಂಗಿದ್ದ ಶತ್ರುವಿನ ಜಹಜುಗಳನ್ನೆಲ್ಲಾ ಅಲ್ಲಿಂದ ಹೊರಕ್ಕೆ ಬಲಾತ್ಕಾರದಿಂದ ಕಳುಹಿಸಿಬಿಟ್ಟರು. ಅವುಗಳನ್ನು ಹಿಡಿದು ಈಜಿಪ್ಟಿನಲ್ಲಿರುವ ಅಲೆಕ್ಸಾಂಡ್ರಿಯಾ ಎಂಬ ತೀರಪಟ್ಟಣಕ್ಕೆ ತೆಗೆದುಕೊಂಡು ಹೋಗಿದ್ದಾರೆ. ಆ ಪೈಕಿ ಅನೇಕ ಜಹಜುಗಳಲ್ಲಿ ಹಿಂದುಸ್ಥಾನಕ್ಕೆ ಬರಬೇಕಾದ ಹಲವು ಸಾಮಾನುಗಳೂ ಸರಕುಗಳೂ ಇರುತ್ತವೆ. ಅಂಥಾ ಸಾಮಾನುಗಳನ್ನು ಹಿಂದುಸ್ಥಾನಕ್ಕೆ ರವಾನೆಮಾಡುವ ಏರ್ಪಾಡು ನಡೆಯುತ್ತದೆ.

ಡೋವರ್ ಜಲಸಂಧಿಯಲ್ಲಿ ಜರ್ಮನಿಯ ಸಬ್‌ಮೆರೀನ್ ಎಂಬ ಹಡಗು ಬಡಿದು ಬ್ರಿಟಿಷರ ಹರ್ಮಿಸ್ ಎಂಬ ಯುದ್ಧದ ಜಹಜು ಮುಳುಗಿಹೋಯಿತು. ಇದು ಬೆಲ್ಜಿಯಮ್‌ನಿಂದ ವಾಪಸು ಬರುತ್ತಿತ್ತೆಂದು ತಿಳಿಯುವುದು. ಅದರಲ್ಲಿದ್ದವರಲ್ಲಿ ೪೦ ಮಂದಿ ಮಾತ್ರ ಸಮುದ್ರದಲ್ಲಿ ಮುಳುಗಿ ಸತ್ತುಹೋಗಿದಾರೆ. ಈ ಜಹಜು ಅಷ್ಟೇನೂ ಗಣ್ಯವಾದದ್ದಾಗಿರಲಿಲ್ಲ.

ಇತರ ವಿಷಯಗಳು.

ಅಲ್ಬೇನಿಯದಲ್ಲಿ ಪ್ರಿನ್ಸ್ ಆಫ್ ವೀಡ್ ಎಂಬಾತನಿಗೆ ದೊರೆತನವನ್ನು ಕೊಟ್ಟಿದ್ದರು. ಇದು ಅಲ್ಲಿನ ಪ್ರಜೆಗಳಿಗೆ ಒಪ್ಪಿತವಾಗದೆ ಹೋಯಿತು. ಆ ದೊರೆಯು ಅಲ್ಬೇನಿಯಾವನ್ನು ಬಿಟ್ಟು ಇರಬೇಕೆಂದು ಕಾಣುತ್ತದೆ. ಅಲ್ಲಿನ ಪ್ರಜೆಗಳನ್ನು ಸಂರಕ್ಷಣೆಮಾಡುವುದಕೋಸ್ಕರ ಇಟಲಿಯವರೂ ಗ್ರೀಕರೂ ಸೈನ್ಯಗಳನ್ನು ವೆಲೋನಾ ಎಂಬಲ್ಲಿ ಇಳಿಸಿದಾರೆ. ಅದು ಏಡ್ರಿಯಾಟಿಕ್ ಕಡಲಿನಲ್ಲಿ ಅಲ್ಬೇನಿಯಾಕ್ಕೆ ಸೇರಿದ ತೀರಪಟ್ಟಣ.

ಇದಲ್ಲದೆ ಗ್ರೀಕರು ಅಲ್ಬೇನಿಯಾದಲ್ಲಿ ದಕ್ಷಿಣ ಭಾಗವನ್ನು ಆಕ್ರಮಿಸಿಕೊಳ್ಳುತ್ತಿರುವರು. ಬಾಲ್ಕನ್ ಯುದ್ಧದಲ್ಲಿ ಗ್ರೀಕರು ಈ ಭಾಗವನ್ನು ಗೆದ್ದುಕೊಂಡಿದ್ದರು, ಪರರಾಜ್ಯಗಳವರು ಅದನ್ನು ಗ್ರೀಕರಿಂದ ಬಿಡಿಸಿ ಅಲ್ಬೇನಿಯದ ಸಂಸ್ಥಾನಕ್ಕೆ ಸೇರಿಸಿಬಿಟ್ಟಿದ್ದರು. ಈಗ ಅಲ್ಲಿನ ಪ್ರಜೆಗಳು ಗ್ರೀಕರನ್ನು ಬರಮಾಡಿಕೊಂಡರು.

ಆಸ್ಟ್ರಿಯದ ಯುವರಾಜರನ್ನು ಪತ್ನೀಸಮೇತ ಗುಂಡುಹಾಕಿ ಕೊಂದುಬಿಟ್ಟ ಕೊಲೆಪಾತಕಿಯನ್ನು ಸೆರಜೀವೊ ನಗರದಲ್ಲಿ ವಿಚಾರಣೆಮಾಡಿ, ಅವನೂ ಅವನ ಸಂಗಾತಿಗಳೂ ಅಪರಾಧಿಗಳೆಂದು ಇತ್ಯರ್ಥವಾಯಿತು. ಈ ಮೊಕದ್ದಮೆ ವಿಚಾರಣೆಯಾಗುತ್ತಿದ್ದಾಗ ಪಟ್ಟಣದವರು ಫಿರಂಗಿಗಳ ಶಬ್ದವನ್ನು ಕೇಳುತ್ತಿದ್ದರು. ಅಪರಾಧಿಗಳಲ್ಲಿ ಐದು ಮಂದಿಗೆ ಫಾಸಿ ಸಜವನ್ನೂ, ಹನ್ನೊಂದು ಜನರಿಗೆ ಬೇರೆಬೇರೆ ಅವಧಿಯ ಬಂದೀಖಾನೆ ಸಜವನ್ನೂ ವಿಧಿಸಿರುತ್ತಾರೆ. ಯುವರಾಜರನ್ನು ಕೊಂದುಹಾಕಿದವನನ್ನು ಗಲ್ಲಿಗೆ ಹಾಕದೆ ಅವನಿಗೆ ೨೦ ವರುಷಗಳ ಸಜಾ ವಿಧಿಸಿದರೆಂದು ಹೇಳಲಾಗಿದೆ.

ನಮ್ಮ ಚಕ್ರವರ್ತಿ ಸಾರ್ವಭೌಮರವರ ಭಾವಮೈದನಾದ ಪ್ರಿನ್ಸ್ ಲೂಯಿ ಆಫ್ ಬ್ಯಾಟೆನ್‌ಬರ್ಗ್ ಎಂಬಾತನಿಗೆ ಬ್ರಿಟಿಷ್ ಹಡಗಿನ ಸೈನ್ಯದ ಇಲಾಖೆಯಲ್ಲಿ ಫಸ್ಟ್ ಲಾರ್ಡ್ ಎಂಬ ಹುದ್ದೆ ಇದ್ದದ್ದನ್ನು ಆತನು ರಾಜೀನಾಮೆಕೊಟ್ಟು ಬಿಟ್ಟು ಇರುತ್ತಾನೆ. ಈತನು ಜರ್ಮನಿಯವರ ಹಿತಚಿಂತಕನೆಂಬುದಾಗಿ ಈತನ ಮೇಲೆ ಅಪವಾದ ಬಂದದ್ದಾಗೂ, ಅದಕ್ಕಾಗಿ ಕೆಲಸ ಬಿಡುವುದೇ ಉತ್ತಮವೆಂದು ತೋರಿ ಆತನು ರಾಜೀನಾಮೆ ಕೊಟ್ಟನೆಂದೂ ಹೇಳಲಾಗಿದೆ. ದೊರೆಯವರು ಆತನಿಗೆ ಪ್ರಿವಿ ಕೌನ್ಸಿಲರ್ ಎಂಬ ನ್ಯಾಯಾಧಿಪತಿ ಸ್ಥಾನವನ್ನು ವಹಿಸಿದರು. ಈತನು ಬ್ರಿಟಿಷ್ ನಾವೆಯ ಇಲಾಖೆಯಲ್ಲಿ ಬಹಳ ಶ್ರೇಷ್ಠವಾದ ಸರ್ವೀಸನ್ನು ಮಾಡಿರುವುದಾಗಿ ಆ ಇಲಾಖೆಯ ಸೆಕ್ರೆಟರಿಯವರಾದ ಮಿ|| ವಿನ್ಸ್ಟನ್ ಚರ್ಚಿಲ್‌ರವರು ಆತನನ್ನು ವಂದಿಸಿ ಆತನಿಗೆ ಒಂದು ಕಾಗದವನ್ನು ಬರೆದಿರುತ್ತಾರೆ.

ಈ ಯುದ್ಧದಿಂದ ಇಂಡಿಯಾ ಗವರ್ನ್‌ಮೆಂಟಿಗೆ ವಿಶೇಷ ಅನನುಕೂಲವೇನೂ ಉಂಟಾಗಿಲ್ಲ. ಸೆಪ್ಟೆಂಬರ್ ತಿಂಗಳ ಆಖೈರಿನಲ್ಲಿ ಇಂಡಿಯಾ ಸರ್ಕಾರದ ಖಜಾನೆಯಲ್ಲಿ ಹದಿನೈದು ಕೋಟಿ ರೂಪಾಯಿ ಉಳಿದಿತ್ತು.

ಟರ್ಕಿಯ ಕಾರ್ಯಭಾಗ.

ಹಿಂದುಸ್ಥಾನದ ವೈಸ್‌ರಾಯರವರು ಈಗತಾನೇ ಪ್ರಕಟಮಾಡಿರುವ ಒಂದು ವರ್ತಮಾನವು ಭೀತಿಯನ್ನುಂಟುಮಾಡುವುದಾಗಿದೆ. ಈ ವರ್ತಮಾನವು ಟರ್ಕಿಯವರ ಕಾರ್ಯಭಾಗವನ್ನು ತೋರಿಸಿರುವುದು. ಇದುವರೆಗೆ ಟರ್ಕಿಯವರು ನಡಿಸಿದ ಕಾರ್ಯಗಳೂ, ಈಗ ಅವರು ಮಾಡಿದ ಕೃತ್ಯಗಳೂ ಅವರನ್ನು ರಷ್ಯಾ, ಬ್ರಿಟನ್ ಮತ್ತು ಫ್ರಾನ್ಸ್ ರಾಜ್ಯಗಳ ಶತ್ರುವಾಗಿಯೇ ಮಾಡಿಬಿಟ್ಟವು.

ವೈಸ್‌ರಾಯರವರು ಪ್ರಕಟಿಸಿರುವ ಇಸ್ತಿಹಾರಿನಿಂದ ತಿಳಿದುಬರುವ ಮುಖ್ಯ ವಿಷಯಗಳೇನೆಂದರೆ—ಅಕ್ಟೋಬರ್ ತಾ|| ೨೯ರಲ್ಲಿ ಟರ್ಕಿಯವರ ಟಾರ್ಪಿಡೋ ಹಡಗುಗಳು ಕಪ್ಪುಕಡಲಿನ ತೀರದಲ್ಲಿರುವ ಒಡೆಸ್ಸಾ ಪಟ್ಟಣಕ್ಕೆ ಮುತ್ತಿಗೆ ಹಾಕಿ ರಷ್ಯಾದವರ ಒಂದು ಫಿರಂಗಿಗಳ ಹಡಗನ್ನು ಮುಳುಗಿಸಿದವು. ಅದರಲ್ಲಿದ್ದವರ ಪೈಕಿ ಕೆಲವರು ಕೊಲೆಯಾದರು; ಕೆಲವರು ಗಾಯಪಟ್ಟರು. ಇದಲ್ಲದೆ ಟರ್ಕಿಯವರ ಟಾರ್ಪಿಡೋ ಹಡಗುಗಳು ರಷ್ಯಾದವರ ಮೂರು ವರ್ತಕ ಜಹಜುಗಳಿಗೂ, ಫ್ರೆಂಚರ ಒಂದು ಜಹಜಿಗೂ ನಷ್ಟಮಾಡಿರುತ್ತವೆ. ಇಷ್ಟೇ ಅಲ್ಲದೆ ಅವುಗಳಿಂದ ಹೊಡೆಯಲ್ಪಟ್ಟ ಗುಂಡುಗಳು ಆ ಪಟ್ಟಣದೊಳಕ್ಕೆ ಬಿದ್ದು ಹಲಾಕು ಮಾಡಿದ್ದಲ್ಲದೆ ಕೆಲವು ಪ್ರಜೆಗಳನ್ನು ಕೊಂದುಬಿಟ್ಟವು. ಕಾನ್ಸ್ಟಾಂಟಿನೋಪಲ್ ಪಟ್ಟಣದ ತೀರದಲ್ಲಿದ್ದ ರಷ್ಯಾದವರ ಹಡಗುಗಳ ಮೇಲೂ ಗುಂಡುಗಳನ್ನು ಹಾಕಿರುತ್ತವೆ. ಯುದ್ಧಮಾಡುತ್ತೇವೆಂಬುವುದನ್ನು ಮೊದಲೇ ಹೇಳದೆ ಟರ್ಕಿಯವರು ಇಂಥಾ ಕ್ರೂರಕೃತ್ಯಗಳನ್ನು ನಡಿಸಿರುತ್ತಾರೆ. ಈ ವಿಚಾರವನ್ನು ಹಿಂದುಸ್ಥಾನದ ಸಾಮಂತರಾಜರುಗಳೂ, ಸಕಲ ಪ್ರಜೆಗಳೂ ತಿಳಿಯುವವರಾಗಲಿ ಎಂದು ವೈಸ್‌ರಾಯರವರು ಸಾರಿಸಿರುತ್ತಾರೆ.

ಹಿಂದೆ ಜರ್ಮನಿಯವರ ಎರಡು ಯುದ್ಧದ ಹಡಗುಗಳು ಮೆಡಿಟರ್ರೇನ್ ಕಡಲಿನಲ್ಲಿ ಬ್ರಿಟಿಷ್ ಮತ್ತು ಫ್ರೆಂಚ್ ಜಹಜುಗಳಿಗೆ ಸಿಕ್ಕದೆ ತಪ್ಪಿಸಿಕೊಂಡುಹೋಗಿ ಡಾರ್ಡನೆಲ್ಸ್ ಎಂಬ ಜಲಸಂಧಿಯಲ್ಲಿ ಸೇರಿಕೊಂಡವು. ಟರ್ಕಿಯವರು ಆಗಲೇ ಅವೆರಡು ಜಹಜುಗಳಲ್ಲೂ ಇದ್ದ ಜರ್ಮನಿ ಹುದ್ದೇದಾರರನ್ನು ವಜಾಮಾಡಿ, ಫಿರಂಗಿ ಮದ್ದುಗುಂಡುಗಳನ್ನು ತೆಗೆದುಬಿಡಬೇಕಾಗಿತ್ತು. ಇದಕ್ಕೆ ಪ್ರತಿಯಾಗಿ ಟರ್ಕಿಯವರು ಆ ಜಹಜುಗಳನ್ನು ಕೊಂಡುಕೊಂಡರು. ಬಳಿಕ ಅವರು ಅವುಗಳಲ್ಲಿ ಟರ್ಕಿಯವರನ್ನು ಅಧಿಪತಿಗಳಾಗಿ ನೇಮಿಸಿಕೊಂಡು ಬಿಟ್ಟಿದ್ದರೆ ಯಾರ ಆಕ್ಷೇಪಣೆಯೂ ಇರುತ್ತಿರಲಿಲ್ಲ. ಆದರೆ ಅವರು ಆ ರೀತಿ ಮಾಡದೆ ಜರ್ಮನಿ ಅಧಿಪತಿಗಳನ್ನೇ ಖಾಯಮಾಗಿ ಇಟ್ಟುಕೊಂಡರು. ಟರ್ಕಿಯ ತೀರಪಟ್ಟಣಗಳಲ್ಲಿರುವ ಬ್ರಿಟಿಷ್ ಜಹಜುಗಳನ್ನು ಹೊರಕ್ಕೆ ಬಿಡದೆ ತಡೆದುಕೊಂಡಿದ್ದಾರೆ. ಇದಲ್ಲದೆ ಟರ್ಕಿಯವರು ಡಾರ್ಡನೆಲ್ಸ್ ಎಂಬ ಜಲಮಾರ್ಗವನ್ನು ಕಟ್ಟಿಬಿಟ್ಟರು. ಈಜಿಪ್ಟಿಗೆ ಕಳುಹಿಸಿ ಸೂಯೆಜ್ ಕಾಲುವೆಯನ್ನು ಸ್ವಾಧೀನಪಡಿಸಿಕೊಳ್ಳಬೇಕೆಂದು ಟರ್ಕಿಯವರು ಸಿರಿಯಾದಲ್ಲಿರುವ ತಮ್ಮ ಸೈನ್ಯಗಳನ್ನು ಜೊತೆಮಾಡಿಕೊಂಡಿದ್ದಾರೆ. ಕೆಂಪುಕಡಲಿನಲ್ಲಿ ಜಹಜುಗಳ ಸಂಚಾರವನ್ನು ನಿಲ್ಲಿಸಬೇಕೆಂದು ಸಿಡಿಮದ್ದಿನ ಗುಂಡುಗಳನ್ನು ಆ ಸಮುದ್ರದಲ್ಲಿ ಇಡುವಂತೆ ಕಳುಹಿಸಿಕೊಟ್ಟಿರುವರು. ಮತ್ತು ಬ್ರಿಟನ್ ಮೇಲೆ ತಿರುಗಿಬೀಳಬೇಕೆಂದು ಮಹಮದೀಯ ಜನಗಳನ್ನು ಚಿತಾವಣೆಮಾಡುವುದಕೋಸ್ಕರ ಟರ್ಕಿಯವರು ತಮ್ಮ ಕಡೆಯ ಜನರನ್ನು ಎಲ್ಲಾ ಕಡೆಗಳಿಗೂ ಕಳುಹಿಸಿಕೊಟ್ಟಿದಾರೆ. ಕಾನ್ಸ್ಟಾಂಟಿನೋಪಲ್‌ನಿಂದ ಬಂದಿದ್ದ ಒಬ್ಬ ಟರ್ಕಿ ಗೂಢಚಾರನು ಸಿಕ್ಕಿಬಿದ್ದನು. ಅವನ ಹತ್ತಿರ ಸೂಯೆಜ್ ಕಾಲುವೆಯ ನಕ್ಷೆಯೂ, ಕೆಲವು ಕಾಗದ ಪತ್ರಗಳೂ ಸಿಕ್ಕಿರುತ್ತವೆ. ಅವನು ಒಬ್ಬ ಹಡಗಿನ ಸೇವಕನ ಬಳಿ ಕೆಲವು ಪೆಟ್ಟಿಗೆಗಳನ್ನು ಬಿಟ್ಟುಹೋಗಿದ್ದನು. ಅವುಗಳಲ್ಲಿ ಅಪಾರವಾದ ಸಿಡಿಮದ್ದು ತುಂಬಿತ್ತು. ಟರ್ಕಿ ಗವರ್ನ್‌ಮೆಂಟಿನವರು ಬಾಗ್ದಾದಲ್ಲಿರುವ ಸೈನ್ಯಾಧಿಪತಿಗೆ ಯುದ್ಧಪ್ರಾರಂಭವಾದ ಮೇಲೆ ಯಾವ ರೀತಿ ನಡೆದುಕೊಳ್ಳಬೇಕೋ ಅದನ್ನೆಲ್ಲಾ ಬರೆದು ಕಳುಹಿಸಿದ್ದರು. ಅದರಲ್ಲಿ ಬ್ರಿಟಿಷರನ್ನು ಟರ್ಕಿಯ ಶತ್ರುಗಳೆಂದು ಹೇಳಿರುತ್ತಾರೆ. ಟರ್ಕಿಯಲ್ಲಿ ಅನೇಕ ಜರ್ಮನಿ ಹುದ್ದೇದಾರರು ಈಗಲೂ ಇರುವರು. ಇದರಿಂದ ಟರ್ಕಿಯ ಕಾರ್ಯಭಾಗಗಳು ತೃಪ್ತಿಕರವಾಗಿಯೂ, ಸತ್ಯವಾಗಿಯೂ ಇಲ್ಲವೆಂದು ಗೊತ್ತಾಗುವುದು. ಇದನ್ನು ನೋಡಿ ಬ್ರಿಟನ್ ರಾಜ್ಯವು ವ್ಯಸನಪಡುತ್ತದೆ. ದುಷ್ಟರು ಚಿತಾವಣೆಮಾಡಿ ಟರ್ಕಿಯವರನ್ನು ಬಲಾತ್ಕಾರದಿಂದ ಬ್ರಿಟಿಷರಿಗೆ ಶತ್ರುಗಳಾಗುವಂತೆ ಮಾಡಿದ್ದಾರೆ. ಈ ವರ್ತನವು ಧರ್ಮಸಂಬಂಧವಲ್ಲವೆಂದು ಹಿಂದುಸ್ಥಾನದ ಮುಸಲ್ಮಾನ್ ಪ್ರಜೆಗಳು ಟರ್ಕಿಯವರಿಗೆ ತಿಳಿಸಬೇಕಾದದ್ದು ಅವಶ್ಯಕವಾಗಿದೆ. ಅವರು ಆ ರೀತಿ ಮಾಡದಿರಲಾರರೆಂದು ನಂಬುವೆವು.

ಟರ್ಕಿಯವರು ಯುದ್ಧಕ್ಕೆ ನಿಂತರು.

ಟರ್ಕಿಯವರು ಗ್ರೇಟ್ ಬ್ರಿಟನ್ ರಾಜ್ಯದ ಮೇಲೆ ಯುದ್ಧಕ್ಕೆ ಬಂದಿದಾರೆಂದು ಸರ್ಕಾರದಿಂದ ಪ್ರಕಟಮಾಡಲ್ಪಟ್ಟಿದೆ. ಇದರಿಂದ ಟರ್ಕಿಯವರು ರಷ್ಯಾದವರಿಗೂ ಫ್ರಾನ್ಸಿನವರಿಗೂ ಶತ್ರುಗಳಾದರೆಂದು ಹೇಳಿದ ಹಾಗಾಯಿತು. ಟರ್ಕಿಯ ರಾಜಧಾನಿಯಾದ ಕಾನ್ಸ್ಟಾಂಟಿನೋಪಲ್ ಪಟ್ಟಣದಲ್ಲಿದ್ದ ಪರರಾಷ್ಟ್ರಗಳ ರಾಯಭಾರಿಗಳೆಲ್ಲಾ ಅಪ್ಪಣೆ ಚೀಟಿಗಳನ್ನು ಪಡೆದು ಅಲ್ಲಿಂದ ಹಿಂತಿರುಗಿದರು. ಕಾನ್ಸ್ಟಾಂಟಿನೋಪಲ್ ಪಟ್ಟಣದಲ್ಲಿದ್ದ ಇಂಗ್ಲಿಷ್ ರಾಯಭಾರಿಗೆ ತಂತೀ ವರ್ತಮಾನಗಳು ಹೋಗಿ ಬರದಂತೆ ಟರ್ಕಿಯವರು ಅಡ್ಡಿ ಮಾಡಿಬಿಟ್ಟಿದ್ದರು.

ಟರ್ಕಿಯವರ ಒಂದು ಯುದ್ಧದ ಜಹಜು ಕಳೆದ ಗುರುವಾರ ಕಪ್ಪುಕಡಲಿನಲ್ಲಿರುವ ಕ್ರಿಮಿಯಾ ಎಂಬ ದ್ವೀಪಕ್ಕೆ ಸೇರಿದ ಥಿಯೊಡೋಸಿಯಾ ಎಂಬ ರಷ್ಯಾ ನಗರಕ್ಕೆ ಗುಂಡುಗಳನ್ನು ಹಾಕಿತು. ಇನ್ನೊಂದು ಯುದ್ಧದ ಜಹಜು ಇನ್ನೊಂದು ರಷ್ಯಾ ಪಟ್ಟಣಕ್ಕೆ ಗುಂಡು ಹೊಡೆಯಿತು. ಕಪ್ಪುಕಡಲಿನಲ್ಲಿ ಸಿಡಿಮದ್ದಿನ ಗುಂಡುಗಳನ್ನಿಟ್ಟು ರಷ್ಯಾದವರ ಎರಡು ವ್ಯಾಪಾರದ ಹಡಗುಗಳನ್ನು ಮುಳುಗಿಸಿದರು. ಕಪ್ಪುಕಡಲಿನಲ್ಲಿ ಟರ್ಕಿಯ ಜಹಜುಗಳು ಹೀಗೆಯೇ ಇನ್ನೂ ನಷ್ಟವನ್ನು ಮಾಡಬಹುದು; ಆದರೆ ರಷ್ಯಾದೊಳಕ್ಕೆ ಸೈನ್ಯಗಳನ್ನು ಕಳುಹಿಸಿಕೊಡುವುದು ಅವರಿಂದ ಸಾಧ್ಯವಾಗಲಾರದೆಂದು ಊಹಿಸುತ್ತೇವೆ.

ಒಂಮ ಗ್ರಾಮಾಭಿವೃದ್ಧಿ ಸಂಘದ ಕಾರ್ಯಗಳು.

ಕಾರ್ಕಾನಹಳ್ಳಿ ತಾಲ್ಲೂಕು ಸಾತನೂರು ಹೋಬಳಿ ದಾಳಂಬದ ಗ್ರಾಮದ ಗ್ರಾಮಾಭಿವೃದ್ಧಿ ಸಂಘದ ಮೆಂಬರುಗಳು ವರ್ಗವಾದ ಅಮಲ್ದಾರರವರ ಅಪ್ಪಣೆ ಮೇರೆಗೆ ಮಾಡಿಸಿರುವ ಕೆಲಸವೇನೆಂದರೆ—ಇದೇ ಊರು ಬಸವೇಶ್ವರ ದೇವಸ್ಥಾನದ ಬಳಿ ಅನೇಕ ವರ್ಷಗಳಿಂದ ಮಳೆ ಹೊಯ್ದು ಎರಡು ಗಣಿಗಲ ಮರಗಳು ಕೊರೆದು ಬಿದ್ದುಹೋಗುತ್ತಾ ಇದ್ದವು ಅದನ್ನು ಬಹಳ ರಿಪೇರಿ ಮಾಡಿ ಬೇರುಗಳಿಗೆಲ್ಲಾ ಮಣ್ಣು ಸುರಿಯಿಸಿ ಕಲ್ಲುಹಾಕಿ ಜಗಲಿ ಕಟ್ಟಿಸಿ ನೀರು ಬೇರೆ ಹೋಗುವಂತೆ ಮೂರು ಆಣೆ ಕಟ್ಟೆಗಳನ್ನು ಕಟ್ಟಿಸಿದಾರೆ. ಕಟಬ್ಬನಹಳ್ಳಿಗೆ ಹೋಗುವ ರಸ್ತೆ ಬಹಳ ಕೆಳಸ್ತಾಗಿ ನೀರು ಕೊರೆದು ಹಳ್ಳಗಳು ಬಿದ್ದಿದ್ದವು. ಇದನ್ನು ಸರಿಯಾಗಿ ಜನಗಳು ಹೋಗುವುದಕ್ಕೂ, ಗಾಡಿಗಳು ಹೋಗಿಬರುವುದಕ್ಕೂ ಅಡಚಣೆಯಿಲ್ಲದಂತೆ ಸಲೀಸ್ ಕೆಲಸಮಾಡಿಸಿದಾರೆ. ಇದೂ ಅಲ್ಲದೆ ಈ ಊರಿಗೆ ಸುಮಾರು ಒಂದು ಮೈಲಿ ದೂರದಲ್ಲಿ ಕಸಬಾ ಸಾತನೂರು ಗ್ರಾಮದ ಬಳಿ ನಾಲ್ಕು ರಸ್ತೆಗಳು ಕೂಡಿ ಇರುತ್ತೆ. ಈ ಬಳಿ ದೊಡ್ಡ ಸಂತೆ ಕೂಡುತ್ತೆ. ಇದಕ್ಕೆ ಮೇಲ್ಕಂಡ ಕಟಬ್ಬನಹಳ್ಳಿ ದಾರಿಯಲ್ಲಿ 2-3 ಮೈಲಿ ದೂರದಿಂದಲೂ ಜನಗಳು ಬರುತ್ತಾರೆ ಇದು ವಾರಕ್ಕೊಂದಾವರ್ತಿ ಸಂತೆ ಕೂಡುವ ಸ್ಥಳವಾದ್ದರಿಂದ ಈ ಕೆಲಸಮಾಡಿರುವುದು ಬಹಳ ಉಪಕಾರವಾದದ್ದು. ಈ ಗ್ರಾಮದ ಪಸಗಳು ಗಿಡಕ್ಕೆ ಹೋಗುವುದಕ್ಕೆ ಮೂರು ಓಣಿಗಳಿವೆ ಇವುಗಳನ್ನು ನೀರು ಕೊರೆದು ಬಹಳ ಕೆಳಸ್ತಾಗಿತ್ತು. ಅವುಗಳಲ್ಲಿ ಜಾನುವಾರುಗಳೂ ಗಾಡಿಗಳೂ ಸಲೀಸಾಗಿ ಹೋಗುವಂತೆ ಬಹಳ ಕೆಲಸಮಾಡಿದಾರೆ. ಈ ಗ್ರಾಮದ ಬಳಿ ಸರ್ಕಾರಿ ಭಾವಿಯಲ್ಲಿ ನೀರು ಬಾರದೆ ಪಾಳು ಬಿದ್ದಿತ್ತು ಇದು ಗ್ರಾಮದ ಪೂರ್ವಕಡೆ ಮುಂಭಾಗದಲ್ಲಿ ಜನ ಜಾನುವಾರುಗಳು ತಿರುಗಾಡುವ ಸ್ಥಳದಲ್ಲಿದ್ದದ್ದರಿಂದ 5-6 ವೇಳೆ ದನಗಳು ಬಿದ್ದು ಕೆಲವು ಸತ್ತುಹೋದವು. ಕೆಲವು ಬದುಕಿಕೊಂಡವು. ಇದೂ ಅಲ್ಲದೆ ಒಂದು ಹೆಣ್ಣುಮಗುವೂ ಬಿದ್ದಿತ್ತು ಅದನ್ನು ತೆಗೆಯುವಲ್ಲಿ ದೇವರ ಕೃಪೆಯಿಂದ ಬದುಕಿಕೊಂಡಿತು ಆದ್ದರಿಂದ ತಾಲ್ಲೂಕು ಜಮಾಬಂದಿ ವೇಳೆ ಅರ್ಜಿಕೊಟ್ಟಿದ್ದರ ಮೇಲೆ ಮುಚ್ಚಿಬಿಡುವಂತೆ ಅಮಲ್ದಾರರವರು ಅಪ್ಪಣೆ ಕೊಟ್ಟಿದ್ದರಿಂದ ಅದನ್ನು ಮುಚ್ಚಿಸಿ ಸಲೀಸಾಗಿ ಮಾಡಿದಾರೆ ಇದು ರಾತ್ರಿ ವೇಳೆ ಜನಗಳು ತಿರುಗಾಡುವುದಕ್ಕೆ ಬಹಳ ಅಡಚಣೆಯಾಗಿತ್ತು. ಈ ಕೆಲಸಮಾಡಿಸಿರುವುದು ಬಹಳ ಉತ್ತಮವಾಗಿದೆ. ಈ ಗ್ರಾಮಕ್ಕೆ ಎರಡು ಬೀದಿಗಳಿವೆ ಈ ಬೀದಿಗಳಲ್ಲಿ ಕಲ್ಲುಗಳು ಬಹಳವಾಗಿದ್ದವು. ಇವಕ್ಕೆ ಅನೇಕ ಮಣ್ಣು ಹೊಡಿಸಿ ಬಹಳ ಸೊಗಸಾಗಿ ಮಾಡಿದಾರೆ ಈ ಹೋಬಳಿಯಲ್ಲಿ ಯಾವ ಗ್ರಾಮದಲ್ಲೂ ಇಷ್ಟರ ಮಟ್ಟಿಗೆ ಬೀದಿಗಳು ಇಲ್ಲ ಬಹಳ ಚೆನ್ನಾಗಿ ಮಾಡಿಸಿದಾರೆ ಈವಾಗಲೇ ಮೇಲ್ಕಂಡ ಮೆಂಬರುಗಳು ಇಷ್ಟು ಕೆಲಸ ಮಾಡಿಸಿರುವುದು ಬಹಳ ಸ್ತೋತ್ರಾರ್ಹವಾಗಿದೆ.

ಇಂಪೀರಿಯಲ್ ಇಂಡಿಯನ್ ರಿಲೀಫ್ ಫಂಡು.

ದೊಡ್ಡ ಬಳ್ಳಾಪುರದ ತಾಲ್ಲೂಕು ಮಜರೆ ಹೊಸಹಳ್ಳಿ

ದೊಡ್ಡ ಬಳ್ಳಾಪುರದ ತಾಲ್ಲೂಕು ಕಚೇರಿಗೆ ಮೇಲ್ಕಂಡ ಗ್ರಾಮದ ಮ॥ ಗಳಾದ ಪಟೇಲ್ ಬಚ್ಚೇಗೌಡ್ರು ರೂ. 7-8-0, ಕೆಂಪೇಗೌಡ್ರು ರೂ. 1-12-0, ಸುಬ್ಬಯ್ಯನವರು ರೂ. 1-13-0, ಮುನಿಯಪ್ಪನವರು ರೂ. 3, ಹನುಮಂತಯ್ಯನವರು ರೂ. 2-8-0, ಜುಮ್ಲಾ ರೂ. 16-8-0 ಚಂದಾ ವಸೂಲಾಗಿದೆ ಎಂದು ತಿಳಿದು ಬಂದಿದೆ. ಇದಲ್ಲದೆ ಇದೇ ತಾಲ್ಲೂಕು ಲಿಂಗನಹಳ್ಳಿ ಗ್ರಾಮದಲ್ಲಿ ರೂ. 60-4-0, ಹೆಗ್ಗಡಹಳ್ಳಿ ಗ್ರಾಮದಲ್ಲಿ ರೂ. 17-12-0, ವಿರೂಪಾಪುರ ಗ್ರಾಮದಲ್ಲಿ ರೂ. 7-8-0, ಕಸಬಾ ದೊಡ್ಡ ಬಳ್ಳಾಪುರದಲ್ಲಿ 3 ಜುಮ್ಲಾ ರೂ. 88-8-0 ಚಂದಾವಸೂಲಾಗಿದೆ ಎಂದು ತಾಲ್ಲೂಕ್ ಕಚೇರಿಯಿಂದ ತಿಳಿಸಲ್ಪಟ್ಟಿದೆ

ಚೆನ್ನಪಟ್ಟಣದ ತಾಲ್ಲೂಕಿನಲ್ಲಿ

ಚೆನ್ನಪಟ್ಟಣದ ತಾಲ್ಲೂಕ್ ಕಛೇರಿಯಿಂದ ಬರೆದು ಬಂದಿರುವುದೇನೆಂದರೆ—ತಾಲ್ಲೂಕ್ ಮುಜಕೂರಿನಲ್ಲಿ ಇಂಡಿಯನ್ ರಿಲೀಫ್ ಫಂಡಿಗೋಸ್ಕರ ಇದುವರೆಗೆ ವಸೂಲಾದ ಚಂದಾ ಮೊಬಲಗು 457 ರೂಪಾಯಿ ಈ ಪಾವತಿಯಲ್ಲಿ ರೂ. 036-4-0, ಜುಮ್ಲಾ ರೂ. 1,493-4-0 ಗ್ರಾಮಾಂತರಗಳಲ್ಲಿ ಜನಗಳಿಗೆ ಚೆನ್ನಾಗಿ ಈ ವಿಚಾರ ತಿಳುವಳಿಕೆ ಕೊಟ್ಟಿದ್ದರೆ ಮೇಲೆ ಪ್ರಜೆಗಳು ಬಹಳ ಉತ್ಸಾಹದಿಂದ ಚಂದಾ ಹಾಕಿರುತ್ತಾರೆ. ಗ್ರಾಮಗಳೂ, ಹಣಗಳೂ ಎಷ್ಟೆಂದರೆ—ಹಿಂದಿನ ಪಟ್ಟಿಗಳಲ್ಲಿ ವಸೂಲಾಗಿರುವ ಮೊಬಲಗು ರೂ. 457 ; ಮೂಳಗಾಳು ಗ್ರಾಮದ ರೈತರಿಂದ ರೂ. 114 ; ಹನಿಯೂರು ಗ್ರಾಮದ ರೈತರಿಂದ ರೂ. 68; ವಿರುಪಸಂದ್ರದ ರೈತರಿಂದ ರೂ. 74 ; ಬಂಡೂರು ಒಳಗೆರೆಹಳ್ಳಿಯ ರೈತರಿಂದ ರೂ. 130, ಬಲ್ಲಾಪಟ್ಟಣದ ರೈತರಿಂದ ರೂ. 31, ಕೋಡಂಬಳ್ಳಿ ರೈತರಿಂದ ರೂ. 107 ಹುಣಸನಹಳ್ಳಿ ರೈತರಿಂದ ರೂ. 32-4-0 ; ಜುಮ್ಲಾ ರೂ. 1,493-4-0

ಸೆಂಟ್ ಜಾನ್ ಆಂಬ್ಯುಲೆನ್ಸ್ ಸಂಘ—ಮೈಸೂರು ಸೆಂಟರ್.

ಈ ಸಂಘದ ಸೆಕ್ರೆಟರಿ ಸರ್ದಾರ್ ಎಂ. ಲಕ್ಷ್ಮೀಕಾಂತರಾಜೆ ಅರಸಿನವರು ಕೆಳಗೆ ಕಾಣಿಸಿರುವಂತೆ ಚಂದಾ ವಸೂಲಾಗಿದೆ ಎಂದು ತಿಳಿಸಿರುತ್ತಾರೆ:—ಶ್ರೀಮದ್ಯುವರಾಜರವರು ರೂ. 250, ಮೊದಲನೇ ಮಹಾರಾಜ ಕುಮಾರಿಯವರು ರೂ. 300, ಮ. ವಿ. ಆರ್. ತ್ಯಾಗರಾಜ ಅಯ್ಯರವರು ರೂ. 100, ದಿವಾನ್ ಬಹದ್ದೂರ್ ಶ್ರೀಕಂಠೇಶ್ವರ ಅಯ್ಯರು ರೂ. 75, ನಗರ್ ತಾಲ್ಲೂಕು ಸ್ತ್ರೀಯರು (ಶಿವಮೊಗ್ಗ ಡೆಪ್ಯುಟಿ ಕಮೀಷನರ್ ಮೂಲಕ) ರೂ. 50, ಮಿಸೆಸ್ ಎಚ್. ಎಸ್. ಸುಬ್ಬರಾಯರು (ಮಿಸ್ ವರ್ಡ್ಸ್‌ವರ್ತ್ ಮೂಲಕ) ರೂ. 40, ದೇವನಹಳ್ಳಿಯಲ್ಲಿ ವಸೂಲಾದದ್ದು ಅಮಲ್ದಾರ್ ಮೂಲಕ ರೂ. 21-12-0, ರತ್ನಾವಳಿ ಕಂಪನಿ ಮ್ಯಾನೇಜರು (ಬಾಕಿ) ರೂ. 3, ಮೈಸೂರು ಅರಸು ಸ್ತ್ರೀಯರಿಂದ—3 ನೇ ಪಟ್ಟಿ—ಮಿಸೆಸ್ ಗೋಪಾಲರಾಜ ಅರಸ್ ರೂ. 50, ಮಿಸೆಸ್ ನರಸಿಪುರದ ನಂಜರಾಜ ಅರಸ್ ಮತ್ತು ಮಿಸೆಸ್ ನರಸಿಪುರದ ದೇವರಾಜ ಅರಸ್ ತಲಾ ರೂ. 3, ಹಿಂದೆ ವಸೂಲಾಗಿರುವುದು 2,122-14-3 ಜುಮ್ಲಾ ರೂಪಾಯಿ 3,021-10-3 ಪೈ

ಮೈಸೂರು ಬ್ರಾಂಚ್—1 ನೇ ಚಂದಾಪಟ್ಟಿ.

ಮೈಸೂರು ಬ್ರಾಂಚಿನ ಸೆಕ್ರೆಟರಿ ಮತ್ತು ಟ್ರೆಜರರವರು ಕೆಳಗೆ ನಮೂದಾಗುವವರಿಂದ ಚಂದಾ ಹಣ ತಲಪಿದೆ ಎಂದು ತಿಳಿಸುತ್ತಾರೆ.—ಟಿ. ನರಸಿಪುರದ ತಾಲ್ಲೂಕಿಗೆ ಸೇರಿದವರು—ಮ॥ ಗಳಾದ ಮುದ್ದೂರಿಗೌಡರು ನಂಜೇಗೌಡರು ರೂ. 16, ಸಂ. ಯಜಮಾನ್ ಆಲಾಚಾರ್ರು 6, ಯಜಮಾನ್ ಗುಳ್ಳಮಲ್ಲಯ್ಯನವರು 6, ಅಲಗೂಡು ಯಜಮಾನ್ ಮರಿಚಿಟ್ಟಯ್ಯನವರು ಚಿಟ್ಟಿ ಚೋಯಿ ಮೂಲಕ 16-0-0, ಯಜಮಾನರು ಬಸವ, ಚಿಕ್ಕಮಾದ ಇವರು 6, ಮುತ್ತನಾಯ್ಕರು 3, ಬೇವಿನಹಳ್ಳಿ ಪಟೇಲ್ ಲಿಂಗೇಗೌಡ್ರು 10, ಸೋನಾಪತಿಹಳ್ಳಿ ರಾ॥ ಪಟ್ಟಾಭಿರಾಮಯ್ಯನವರು 10, ದೊಡ್ಡಬ್ಯಾಗಲ್ ಜೋಡಿದಾರ್ ತಿರುಮಲೆ ಶ್ರೀರಂಗಾಚಾರ್ರು 100, ಕಂಚನಹಳ್ಳಿ ಪಟೇಲ್ 10, ತಾಲ್ಲೂಕ್ ನೌಕರರು 24-12-0 ; ಕೃಷ್ಣಶಾಸ್ತ್ರಿಗಳು, ನರಸಿಂಹಗೋಪಾಲಾಚಾರ್ರು, ಪುಟ್ಟಸ್ವಾಮಿಶಾಸ್ತ್ರಿಗಳು, ಲಿಂಗಾಚಾರ್ರು, ಅಲಗುಡಿ ರಾ॥ ವೆಂಕಟಸುಬ್ಬಯ್ಯನವರು, ಶ್ರೀಕಂಠಶಾಸ್ತ್ರಿಗಳು, ನಾಲಾ ರಾಮಯ್ಯಂಗಾರ್ರು, ದೊರೆಸಾಮಯ್ಯಂಗಾರ್ ಶೇಷಯ್ಯಂಗಾರ್ರು ತಲಾ ರೂ. 1 ; ಅಬ್ದುಲ್ ರಹಿಮಾನ್ ಸಾಹೇಬರು 5, ಓವರ್ಸೀರ್ ವೆಂಕಟಯ್ಯನವರು 1-4-0 ; ಹೆಡ್ ಸಿರಸ್ತೇದಾರ್ ಸೂರಪ್ಪನವರು, ಕಂಟ್ರಾಕ್ಟರ್ ತಿಂಗಳಾಚಾರ್ರು, ಲಾಯರ್ ಶ್ರೀನಿವಾಸಯ್ಯಂಗಾರ್ರು, ರಾ॥ ವರದಯ್ಯನವರು, ಕಂಟ್ರಾಕ್ಟರ್ ನರಸಿಂಹಾಚಾರ್ರು, ಜಮೀನ್‌ದಾರ್ ಕ. ಕೃಷ್ಣರಾಯರು—ತಲಾ ರೂ. 2 ; ಹೊಸ ಅಗ್ರಹಾರ, ಹಳೇ ಅಗ್ರಹಾರಗಳಲ್ಲಿ ಚಿಲ್ರೆ ವಸೂಲಾದದ್ದು ರಾ॥ ವರದಯ್ಯನವರ ಮೂಲಕ 9 ; ತೇರಿನ ಬೀದಿ, ಚಿಕ್ಕಂಗಡಿ ಬೀದಿ, ಎದುರು ಬೀದಿ ಬ್ರಾಹ್ಮಣರಿಂದ ವಸೂಲಾದದ್ದು ನರಸಿಂಹಾಚಾರ್ರ ಮೂಲಕ 4-9-0 ; ಬಿ. ನಾಗೇಶಶಾಸ್ತ್ರಿಗಳು, ಗಿರಿಜಾವಾಣಿಯವರು, ತಲಾ 5 ; ಡಾ॥ ಎಚ್. ರಂಗಾಚಾರ್ರು, 10, ಮಿ॥ ತಾಜುದೀನ್ ಬೇಗ್‌ರು 15 : ಜುಮ್ಲಾ ರೂಪಾಯಿ 377-0-0.

ಸ್ವದೇಶಾಭಿಮಾನ ಮತ್ತು ರಾಜಭಕ್ತಿ.

ತಾಯಿತಂದೆಗಳು ತಮಗೂ ತಮ್ಮ ಮಕ್ಕಳಿಗೂ ಭೇದಮಾಡದೆ ಅವರಲ್ಲಿ ಅತ್ಯಂತ ಪ್ರೇಮದಿಂದ ಅವರಿಗಾಗಿ ಯಾವ ಕಷ್ಟವನ್ನಾದರೂ ಅನುಭವಿಸುವರು. ಮಕ್ಕಳು ಮುಂದಕ್ಕೆ ಬರಬೇಕೆಂದು ಮಾಡಬಹುದಾದುದನ್ನೆಲ್ಲಾ ಮನಃಪೂರ್ವಕವಾಗಿ ಮಾಡುವರು. ಇದರಿಂದ ಅವರ ಮಕ್ಕಳು ಅಭಿವೃದ್ಧಿಗೆ ಬರುವರು. ಹಾಗೆಯೇ ಒಂದು ದೇಶವು ಏಳಿಗೆಗೆ ಬರಬೇಕಾದರೆ ಅದರಲ್ಲಿರುವ ಪ್ರತಿ ಮನುಷ್ಯನೂ ಸ್ವದೇಶವನ್ನು ತನ್ನ ಸಂಸಾರದಂತೆ ಭಾವಿಸಿಕೊಂಡು ಪ್ರೀತಿಸುತ್ತಾ, ಅದರ ಶ್ರೇಯಸ್ಸಿಗಾಗಿ ಯಾವ ಕಷ್ಟವನ್ನಾದರೂ ಅನುಭವಿಸುವುದಕ್ಕೆ ಹಿಂಜರಿಯದಿರಬೇಕು. ಸ್ವದೇಶದ ವಿಷಯದಲ್ಲಿ ಪ್ರತಿಯೊಬ್ಬರಿಗೂ ಇರಬೇಕಾದ ಇಂತಹ ಪ್ರೀತಿಗೆ ಸ್ವದೇಶಾಭಿಮಾನವೆಂದು ಹೆಸರು. ಯಾವ ದೇಶದ ಪ್ರಜೆಗಳು ಸ್ವಾರ್ಥಪರರಾಗಿಯೂ, ದೇಶಾಭಿಮಾನ ಹೀನರಾಗಿಯೂ ಇರುವರೋ ಆ ದೇಶವು ಎಂದಿಗೂ ಏಳಿಗೆಗೆ ಬರಲಾರದು.

ಸ್ವದೇಶಾಭಿಮಾನಕ್ಕೆ ಪ್ರಖ್ಯಾತಿಗೊಂಡ ಮಹಾಪುರುಷರು ಪ್ರತಿ ದೇಶದಲ್ಲಿಯೂ ಉಂಟು. ಪೂರ್ವಕಾಲದಲ್ಲಿ ಗ್ರೀಕರಲ್ಲಿಯೂ, ರೋಮನ್ ಜನರಲ್ಲಿಯೂ ಇಂಥವರನೇಕರಿದ್ದರು. ಆದದರಿಂದಲೇ ಅವರ ರಾಜ್ಯಗಳು ಬಹಳ ಉನ್ನತಸ್ಥಿತಿಗೆ ಬಂದವು. ಹಿಂದೂ ದೇಶದಲ್ಲಿಯೂ ಪೂರ್ವದಲ್ಲಿ ರಾಜಪುತ್ರರೂ ಮರಾಟೆಯವರೂ ಸ್ವದೇಶಕ್ಕಾಗಿ ಪ್ರಾಣಗಳನ್ನು ಒಪ್ಪಿಸಿರುವರು. ಈಗಿನ ಕಾಲದಲ್ಲಿ ಇಂಗ್ಲೆಂಡ್, ಸ್ವಿಟ್ಜರ್ಲೆಂಡ್, ಜಪಾನ್ ಮೊದಲಾದ ದೇಶಗಳ ಜನರು ಸ್ವದೇಶಾಭಿಮಾನಕ್ಕೆ ಪ್ರಸಿದ್ಧರು. ಜಪಾನ್ ದೇಶದ ಪ್ರತಿಯೊಬ್ಬ ಪುರುಷನೂ ಸ್ತ್ರೀಯೂ ಸ್ವದೇಶಕ್ಕಾಗಿ ಪ್ರಾಣಕೊಡಲು ಸಿದ್ಧರಾಗಿರುವರು. ಕೆಲವು ವರ್ಷಗಳ ಕೆಳಗೆ ಜಪಾನಿಗೂ ರಷ್ಯಾಕ್ಕೂ ನಡೆದ ಯುದ್ಧದಲ್ಲಿ ಲಕ್ಷಾಂತರ ಜಪಾನ್ ದೇಶೀಯರು ಹೋರಾಡಿ ಪ್ರಾಣಗಳನ್ನೊಪ್ಪಿಸಿದ್ದರಿಂದಲೇ ಅವರ ಕಡೆ ಅದ್ಭುತವಾದ ಜಯವು ಉಂಟಾಯಿತು. ಆ ಯುದ್ಧದಲ್ಲಿ ಮನೆ ಮನೆಗೂ ಒಬ್ಬೊಬ್ಬರಿಗೆ ಕಡಮೆಯಿಲ್ಲದೆ ಕಾಳಗಕ್ಕೆ ತಾವಾಗಿಯೇ ನುಗ್ಗಿದರು ಒಂದು ಮನೆಯಲ್ಲಿ ತಾಯಿಗೆ ಒಬ್ಬನೇ ಮಗನಿದ್ದನು. ಎಲ್ಲರಂತೆ ತಾನೂ ಯುದ್ಧಸನ್ನದ್ಧನಾಗಿದ್ದರೂ, ಆತನು ತನ್ನ ತಾಯಿಯನ್ನು ದಿಕ್ಕಿಲ್ಲದೆ ಬಿಟ್ಟುಹೋಗಲಾರದೆ ಚಿಂತಿಸುತ್ತಿದ್ದನು. ಇದನ್ನು ಅರಿತು ಆತನ ತಾಯಿ—ನನ್ನ ದೇಶವು ನನಗಿಂತ ಹೆಚ್ಚು ಪ್ರೀತಿಗೆ ಪಾತ್ರವಾದುದು ; ಅದಕ್ಕೆ ಮಹಾ ವಿಪತ್ತು ಬಂದಿರುವಲ್ಲಿ ನನ್ನ ಕರ್ತವ್ಯವನ್ನು ಮಾಡದೆ ಬಿಟ್ಟುಬಿಟ್ಟೆನು ಎಂದು ಹೇಳುತ್ತಾ, ತನ್ನ ಪ್ರಾಣವನ್ನು ಕಳೆದುಕೊಂಡು, ತನ್ನ ಮಗನಿಗೆ ಯುದ್ಧಕ್ಕೆ ಹೋಗಲು ಅನುಕೂಲಮಾಡಿಕೊಟ್ಟಳು.

ಸ್ವದೇಶಾಭಿಮಾನವನ್ನು ತೋರಿಸಲು ಎಲ್ಲರೂ ಸಿಪಾಯಿಗಳಾಗಿ ಪ್ರಾಣ ವಿಡಬೇಕಾದುದಿಲ್ಲ ಸ್ವದೇಶಾಭಿಮಾನವು ಎಂತಹ ಕೆಲಸ ಮಾಡುವವನಲ್ಲಿ ದರೂ ಇರಬಹುದು ಯಾರು ತಮ್ಮ ದೇಶಕ್ಕೆ ಕೆಟ್ಟ ಹೆಸರು ಬಾರದಂತೆ ಎಚ್ಚರಿಕೆಯಾಗಿರುವರೋ, ಯಾರು ತಮ್ಮ ಕಾರ್ಯಗಳಿಂದ ತಮ್ಮ ದೇಶಕ್ಕೆ ಗೌರವವೂ ಯಶಸ್ಸೂ ಬರುವಂತೆ ನಡೆದುಕೊಳ್ಳುವರೋ ಅವರು ಸ್ವದೇಶಾಭಿಮಾನವುಳ್ಳವರು ಸ್ವದೇಶಾಭಿಮಾನಿಯು ಎಷ್ಟೇ ಕೀಳುತರದ ಕೆಲಸಮಾಡುತ್ತಿರಲಿ, ಅದನ್ನು ತನ್ನ ಶಕ್ತಿಯನ್ನೆಲ್ಲಾ ಉಪಯೋಗಿಸಿ ಚೆನ್ನಾಗಿ ಮಾಡುವನು. ಅವನು ಎಂದಿಗೂ ಸನ್ಮಾರ್ಗವನ್ನು ಬಿಟ್ಟು ಹೋಗನು. ಅವನು ಸ್ವದೇಶೀಯರನ್ನು ತನ್ನ ಸಹೋದರರಂತೆ ಪ್ರೀತಿಸುವನು. ಅವನು ತನ್ನ ಒಳ್ಳೆಯ ನಡತೆಯಿಂದ ಎಲ್ಲರಿಗೂ ಮೇಲ್ಪಂಕ್ತಿಯಾಗಿರುವನು ಇತರರಲ್ಲಿ ಕಂಡುಬರುವ ದೋಷಗಳನ್ನು ಅವನು ತನ್ನ ಕೈಲಾದಷ್ಟು ಪರಿಹರಿಸಲು ಪ್ರಯತ್ನಿಸುವನು ಅವನು ಒಬ್ಬರಿಗೆ ದ್ರೋಹಮಾಡಿ ಲಾಭಸಂಪಾದಿಸನು. ಅವನು ಯಾವಾಗಲೂ ಪ್ರಜಾಕ್ಷೇಮಚಿಂತನೆಯಲ್ಲಿಯೂ ರಾಜಭಕ್ತಿಯಲ್ಲಿಯೂ ನಿರತನಾಗಿರುವನು ಅನ್ಯದೇಶೀಯರನ್ನು ದ್ವೇಷಿಸುವುದೂ, ನಿಂದಿಸುವುದೂ, ಸ್ವದೇಶೀಯರ ವಿಷಯದಲ್ಲಿ ಕಣ್ಣು ಮುಚ್ಚಿಕೊಂಡಿರುವುದೂ, ಸರಕಾರವನ್ನು ಸುಮ್ಮನೆ ದೂಷಿಸುವುದೂ ಸ್ವದೇಶಾಭಿಮಾನಕ್ಕೆ ಲಕ್ಷಣಗಳಲ್ಲ. ಕೆಲವರು ವಾಚಾಲರು ದೇಶಾಭಿಮಾನಿಗಳೆಂದು ತೋರ್ಪಡಿಸಿಕೊಂಡು, ಉಪನ್ಯಾಸಗಳನ್ನು ಮಾಡಿ ಜನರಿಗೆ ತಮ್ಮಲ್ಲಿ ನಂಬಿಕೆ ಹುಟ್ಟಿಸಿ ಅವರನ್ನು ವಶಮಾಡಿಕೊಂಡು ಅವರಿಂದ ತಮ್ಮ ಕೆಲಸವನ್ನು ನೆರವೇರಿಸಿಕೊಳ್ಳುವುದುಂಟು. ಇಂತಹ ಸ್ವಾರ್ಥಪರರನ್ನು ಸ್ವದೇಶಾಭಿಮಾನಿಗಳೆಂದು ಗಣಿಸದೆ ದೂರ ತ್ಯಜಿಸಬೇಕು

ಸ್ವದೇಶಾಭಿಮಾನಕ್ಕೆ ಎಲ್ಲೆಲ್ಲಿಯೂ ಪುರಸ್ಕಾರವುಂಟು. ಸ್ವದೇಶಾಭಿಮಾನಿಗಳಲ್ಲದ ದೇಶದ್ರೋಹಿಗಳಿಗೆ ಅತಿ ಕಠಿಣವಾದ ಶಿಕ್ಷೆಯನ್ನು ವಿಧಿಸುವರು. ಪೂರ್ವಕಾಲದಲ್ಲಿ ನಮ್ಮ ದೇಶವು ಪಡೆದಿದ್ದ ಹೆಚ್ಚುಗಾರಿಕೆಯನ್ನು ನೆನೆದುಕೊಂಡು ಸುಮ್ಮನೆ ತೃಪ್ತರಾಗಿದ್ದರೆ ಏನೂ ಫಲವಿಲ್ಲ. ಪೂರ್ವದ ಯಶಸ್ಸು ಮುಂದೆಯೂ ನಿಂತು, ಅದಕ್ಕಿಂತ ಅತಿಶಯವಾದ ಕೀರ್ತಿಯು ನಮ್ಮ ದೇಶಕ್ಕೆ ಒದಗುವಂತೆ ನಾವೆಲ್ಲರೂ ಸ್ವದೇಶದ ಶಕ್ತಿಸಮಯಗಳಿಗೆ ಭಾಗಿಗಳಾಗಿರುವುದು ಕರ್ತವ್ಯವಾಗಿದೆ.

ನಮ್ಮ ಭರತಖಂಡದಲ್ಲಿ ಪ್ರಬಲವಾದ ಆಂಗ್ಲೇಯ ಸಾರ್ವಭೌಮರ ಆಧಿಪತ್ಯವು ನಾಲ್ಕು ಶತಮಾನಗಳಿಂದಲೂ ನೆಲೆಗೊಂಡಿರುವುದರಿಂದ ನಮಗೆ ಪರಸ್ಪರ ಯುದ್ಧಾಭಿನಿವೇಶನಗಳೇ ಆಗಲಿ, ವಿದೇಶೀಯರಾದ ಇತರರ ದಾಳಿಯೇ ಆಗಲಿ ತಟ್ಟುವುದು ಅಸಂಭವವಾಗಿ, ಯುದ್ಧವೆಂಬುದೂ ಈ ದೇಶಕ್ಕೆ ಸ್ವಲ್ಪವಲ್ಲೂ ಕಾಣಬಂತಾಗಿತ್ತು. ಈಗ ಆಕಸ್ಮಾತ್ತಾಗಿ ಸಂಭವಿಸಿರುವ ಕ್ಷಾತ್ರಯುದ್ಧ ಪ್ರಸಕ್ತಿಯನ್ನು ನಿಲ್ಲಿಸುವ ಭಾರವು ಜಗನ್ನಿಯಾಮಕನಾದ ಆ ಭಗವಂತನಿಗೊಬ್ಬನಿಗೇ ಸಾಧ್ಯವಲ್ಲದೆ ಮಾನುಷ ಸಾಮಾನ್ಯರಿಂದ ಸಾಧ್ಯವಲ್ಲ. ಈಗ ನಡೆಯುತ್ತಿರುವ ಬ್ರಿಟಿಷ್ ಜರ್ಮನರ ಯುದ್ಧದಲ್ಲಿ ನಮ್ಮ ಪರಿಪಾಲಕರಾದ ಬ್ರಿಟಿಷರ ಕಡೆ ನಿಂತು ಹೋರಾಡಿ ನಮ್ಮ ಒಡೆಯರಾದ ಇಂಗ್ಲೀಷ್ ಪ್ರಭುಗಳಿಗೆ ಸರ್ವ ವಿಧದಲ್ಲಿಯೂ ಜಯವುಂಟಾಗುವಂತೆ ಮಾಡಿ ಪ್ರಸಿದ್ಧವಾದ ಆಂಗ್ಲ ಸಾಮ್ರಾಜ್ಯವು ನಿರ್ಭಯವಾಗಿಯೂ, ಸ್ವೇಚ್ಛಾನುಸಾರವಾಗಿಯೂ, ಆಚಂದ್ರಾರ್ಕವಾಗಿಯೂ ಇರುವಂತೆ ಸ್ವದೇಶೀಯರಾದ ನಾವುಗಳು ಸರ್ವಕಾಲದಲ್ಲಿಯೂ ಹಾರೈಸಬೇಕಾದುದಲ್ಲದೆ ಕೆಲವು ವೇಳೆ ಪ್ರಾಣಗಳನ್ನು ಒಪ್ಪಿಸುವುದಕ್ಕೂ ಸಿದ್ಧರಾಗಿರಬೇಕು

ಒಬ್ಬ ಸ್ವದೇಶಾಭಿಮಾನಿ.

ಹೊಸ ವಾಚಕ ಮಂದಿರಗಳ ಸ್ಥಾಪನೆ.

ಕೋಲಾರ.—ಕಳೆದ ತಿಂಗಳು 29 ನೇ ತಾರೀಖಿನ ದಿವಸ ಶ್ರೀಕೋಲಾರೇಶ್ವರ ಸ್ವಾಮಿ ದೇವಸ್ಥಾನದ ಕಟ್ಟಡದಲ್ಲಿ ಈ ಊರಿನಲ್ಲಿ ಒಂದು ವರುಷದ ಕೆಳಗೆ ಸ್ಥಾಪಿಸಲ್ಪಟ್ಟ ಫ್ರೆಂಡ್ಸ್ ಯೂನಿಯನ್ ರೀಡಿಂಗ್ ರೂಮನ್ನು ಪಬ್ಲಿಕ್ ರೀಡಿಂಗ್ ರೂಮಾಗಿ ಪ್ರಾರಂಭಿಸಲ್ಪಟ್ಟಿತು. ಇದೇ ಉದ್ದೇಶದಿಂದ ಮೊನ್ನೆ ಭಾನುವಾರ ಸಾಯಂಕಾಲ ಮೀಟಿಂಗ್ ಸೇರಿತ್ತು. ವರ್ತಮಾನ ಪತ್ರಿಕೆಗಳಲ್ಲಿ ಕುತೂಹಲವುಳ್ಳ ಸ್ಥಳೀಕರು ಮತ್ತು ಸರ್ಕಾರಿ ನೌಕರರು ಸೇರಿದ್ದರು. ಸ್ವಲ್ಪ ಹೊತ್ತಿನವರೆಗೆ ರೀಡಿಂಗ್ ರೂಮಿನ ನಿರ್ವಹಣೆಯ ಬಗ್ಗೆ ಚರ್ಚೆ ನಡೆದು ಹತ್ತು ಜನ ಮೆಂಬರುಗಳುಳ್ಳ ಒಂದು ಕಮಿಟಿಯು ಏರ್ಪಾಡಾಯಿತು. ಸುಮಾರು ನಲವತ್ತೈದು ರೂಪಾಯಿಗಳವರೆಗೆ ಚಂದಾಹಣ ವಾಗ್ದಾನ ಮಾಡಲ್ಪಟ್ಟು ಅದಕ್ಕೆ ತಕ್ಕಂತೆ ವರ್ತಮಾನ ಪತ್ರಿಕೆಗಳನ್ನು ತರಿಸತಕ್ಕದ್ದೆಂದು ಗೊತ್ತಾಯಿತು. ಸಾರ್ವಜನಿಕವಾದ ವಿಷಯಗಳಿಗೆ ಈಗೀಗ ಮುಂದರಿಯುತ್ತಿರುವ ನಮ್ಮ ಉದ್ದೇಶಕ್ಕೆ ನಮ್ಮ ಉದಾರ ಸರ್ಕಾರದವರು ಪ್ರೋತ್ಸಾಹ ಕೊಡುವರೆಂದು ನಂಬಿದೇವೆ.

ತುಮಕೂರು ತಾ॥ ಗೂಳೂರು ಗ್ರಾಮ.—ಕಳೆದ 12 ನೇ ತಾ. ಸೋಮವಾರ ಇಲ್ಲಿನ ವೆಸ್ಲಿಯನ್ ಮಿಷನ್ ಬಾಯ್ಸ್ ಸ್ಕೂಲ್ ಕಟ್ಟಡವು ತಳಿರುತೋರಣಾದಿಗಳಿಂದ ಅತ್ಯಂತ ಮನೋಹರವಾಗಿ ಅಲಂಕರಿಸಲ್ಪಟ್ಟಿತ್ತು. ಇಲ್ಲಿನ ಪುರಪ್ರಮುಖರೇ ಮುಂತಾದ ದೊಡ್ಡ ಮನುಷ್ಯರುಗಳ ಪ್ರಾರ್ಥನೆಯಂತೆ ಡಿಸ್ಟ್ರಿಕ್ಟ್ ಎಕನಾಮಿಕ್ ಕಾನ್ಫರೆನ್ಸ್ ಸೂಪರಿಂಟೆಂಡೆಂಟ್ ಮ॥ ಎಂ. ಎಸ್. ರಾಮಚಂದ್ರರಾವ್, ಬಿ. ಎ. ಯವರು ತುಮಕೂರಿಂದ ದಯಮಾಡಿ ಸಭೆಯ ಅಗ್ರಾಸನವನ್ನು ವಹಿಸಿದ್ದರು. ಮ॥ ಜ. ತಿಮ್ಮರಾಯಪ್ಪನವರು ರೀಡಿಂಗ್ ರೂಮಿನಿಂದುಂಟಾಗುವ ಪ್ರಯೋಜನವನ್ನು ಕುರಿತು ಒಂದು ಉಪನ್ಯಾಸವನ್ನು ಓದಿದ ತರುವಾಯ ರೀಡಿಂಗ್ ರೂಮ್ ಸೆಕ್ರೆಟರಿ ಮ॥ ಎಂ. ಕೃಷ್ಣರಾಯರು ರಿಪೋರ್ಟನ್ನು ಓದಿದರು. ಬಾಲಕಿಯರು ಶ್ರೀಮನ್ ಮಹಾರಾಜರವರ ಮತ್ತು ಶ್ರೀಮದ್ಯುವರಾಜರವರ ಶ್ರೇಯಃ ಪ್ರಾರ್ಥನೆಯನ್ನು ಮಾಡಿ ಇಂಪಾಗಿ ಹಾಡಿದರು. ಮ॥ ಶ್ರೀನಿವಾಸಶಾಸ್ತ್ರಿಗಳು ಪುರುಷಪ್ರಯತ್ನವನ್ನು ಕುರಿತು ಸ್ವಾರಸ್ಯವಾದ ಒಂದು ಉಪನ್ಯಾಸವನ್ನು ಓದಿದನಂತರ ಸಭಾಧ್ಯಕ್ಷರ ಅಪ್ಪಣೆ ಮೇರೆಗೆ ಗೌರ್ನಮೆಂಟಿನವರಿಂದ ಪ್ರಕಟವಾಗಿರುವ ಗ್ರಾಮಾಭಿವೃದ್ಧಿಯ ನಿಯಮಗಳನ್ನು ಹೆಡ್ ಮಾಸ್ಟರವರು ಓದಿದರು. ಸಭಾಧ್ಯಕ್ಷರು ರೀಡಿಂಗ್ ರೂಮಿನಿಂದಾಗುವ ಪ್ರಯೋಜನವನ್ನೂ, ಅದರ ನಡವಳಿಕೆಯನ್ನೂ ವಿವರಿಸಿದ್ದಲ್ಲದೆ ಇಲ್ಲಿನ ಕೆಲವು ದೊಡ್ಡ ಮನುಷ್ಯರು ಸೇರಿ ಸೀರಿನ ಯಂತ್ರವನ್ನು ತರಿಸಿಕೊಂಡು ಉಪಯೋಗಿಸುವ ವಿಷಯದಲ್ಲಿ ಪ್ರೋತ್ಸಾಹಿಸಿ ಕೆಲವು ಸಲಹೆಗಳನ್ನು ಕೊಟ್ಟರು ತರುವಾಯ ಬಾಲಕಿಯರು ಮಂಗಳಸ್ತೋತ್ರವನ್ನು ಹಾಡುತ್ತಿರಲು ಸಭಿಕರಿಗೆಲ್ಲಾ ಗಂಧ ಪುಷ್ಪ ತಾಂಬೂಲಾದಿಗಳು ವಿನಿಯೋಗಿಸಲ್ಪಟ್ಟು ಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು.

ತ್ಯಾಮಗೊಂಡ್ಲು—"ಮಂಡಲಭಾಷಿಣಿ" ಎಂಬ ಹೆಸರಿನಿಂದ ಈ ಗ್ರಾಮದಲ್ಲಿ ಒಂದು ವಾಚಕಾಲಯವು ಈಗ್ಗೆ ಸುಮಾರು 12-13 ವರ್ಷಗಳ ಹಿಂದೆ ಸ್ಥಾಪಿಸಲ್ಪಟ್ಟದ್ದು, ಕಾರಣಾಂತರಗಳಿಂದ ನಾಮಾವಶೇಷವಾಗಿ ಹೋಗಿ, ಇಂಥಾ ದೊಡ್ಡ ಗ್ರಾಮದಲ್ಲಿ ಒಂದು ವಾಚಕಾಲಯವು ಇಲ್ಲವೆಂಬ ಕೊರತೆಯು ಸರ್ವರ ಮನಸ್ಸಿನಲ್ಲಿಯೂ ಉಂಟಾಗಿತ್ತು. ಅದನ್ನು ಹೋಗಲಾಡಿಸಬೇಕೆಂಬ ಸದುದ್ದೇಶದಿಂದ ಕೆಲವರು ವಿದ್ಯಾರ್ಥಿಗಳು ಈ ವಿಷಯವನ್ನು ಯೋಚಿಸಿ ಶ್ರೀಶಾರದಾ ಮಂದಿರವೆಂಬುವ ಹೆಸರಿನಿಂದ ಒಂದು ವಾಚಕಾಲಯವನ್ನು ಸ್ಥಾಪಿಸಿ ಅದಕ್ಕೆ ಶಕ್ತ್ಯನುಸಾರ ಕೆಲವು ವಾರ, ಕೆಲವು ದಿನ, ಕೆಲವು ಮಾಸಪತ್ರಿಕೆಗಳನ್ನು ತರಿಸುತ್ತಾ ಅದನ್ನು ದೀರ್ಘಕಾಲ ನಡಿಸಿಕೊಂಡು ಬರಬೇಕೆಂಬ ಅಭಿಲಾಷೆಯಿಂದ ವೇ॥ ಡಿ. ಕೃಷ್ಣಮೂರ್ತ್ಯಾಚಾರ್ಯರು ಮಂದಿರದ ಪುರೋಭಿವೃದ್ಧಿ ವಿಷಯದಲ್ಲಿ ಆಬಾಲವೃದ್ಧರಿಗೂ ಮನನವಾಗುವಂತೆ ಉಪನ್ಯಾಸಮಾಡಿದರು ತಾ. 27 ರಲ್ಲು ವೇ॥ ಡಿ. ಕೃಷ್ಣಮೂರ್ತ್ಯಾಚಾರ್ಯರ ಅಧ್ಯಕ್ಷತೆಯಲ್ಲಿ ಸನಾತನಾರ್ಯ ಧರ್ಮವಿಚಾರವನ್ನು ವೇ॥ ರಾಮಶಾಸ್ತ್ರಿಗಳವರು ಬಹುಮಧುರಿಯಿಂದ ಕರ್ಣಾನಂದವನ್ನುಂಟುಮಾಡಿದರು ಮರುದಿನ ಡಾಕ್ಟರ್ ರಾಮಾನುಜ ಪಿಳ್ಳೆಯವರ ಅಧ್ಯಕ್ಷತೆಯಲ್ಲಿ ವೇ॥ ಲಕ್ಷ್ಮೀನರಸಿಂಹ ಶಾಸ್ತ್ರಿಗಳವರು ಆಯುರ್ವೇದ ವಿಚಾರವನ್ನು ಲಲಿತಶೈಲಿಯಿಂದ ಉಪನ್ಯಾಸಮಾಡಿದರು. ಅದನ್ನು ಅಧ್ಯಕ್ಷರೂ ಮತ್ತು ವೇ॥ ಡಿ. ಕೃಷ್ಣಮೂರ್ತ್ಯಾಚಾರ್ಯರೂ ಪುಷ್ಟೀಕರಿಸಿ ಆ ರೀತಿ ನಾವೆಲ್ಲರೂ ನಡೆದುಕೊಳ್ಳಬೇಕೆಂಬುವುದನ್ನು ಉದಾಹರಣೆಗಳ ಮೂಲಕ ನಿದರ್ಶಿಸಿದರು ಆ ಮೂರನೇ ದಿನ ವೇ॥ ಡಿ. ಕೃಷ್ಣಮೂರ್ತ್ಯಾಚಾರ್ಯರ ಅಧ್ಯಕ್ಷತೆಯಲ್ಲಿ ವೇ॥ ರಾಮಶಾಸ್ತ್ರಿಗಳವರು ರಾಜಭಕ್ತಿ ವಿಚಾರದಲ್ಲಿಯೂ, ಅಧ್ಯಕ್ಷರು ಅದನ್ನು ಸರಳ ಶೈಲಿಯಿಂದಲೂ, ಮ॥ ಶ್ರೀಪಾದರಾಯರವರು ಈ ಮಂದಿರದ ದೀರ್ಘಾಯುಷಿನ ವಿಚಾರದಲ್ಲಿ ಮಹನೀಯರುಗಳು ತಮ್ಮ ಉದಾರವಾದ ಸಹಾಯವನ್ನು ಮಾಡಿ ಪುರೋಭಿವೃದ್ಧಿಗೆ ತರಬೇಕೆಂದು ನೆರೆದಿದ್ದ ಸಭಾಸದರ ಮನದಲ್ಲಿ ಪ್ರತಿಬಿಂಬಿಸುವಂತಹ ಉಪನ್ಯಾಸಮಾಡಿದರು. ರಾಜಭಕ್ತಿಯ ವಿಷಯದಲ್ಲಿ ಒಬ್ಬ ವಿದ್ಯಾರ್ಥಿಯು ಮಾಡಿದ ಉಪನ್ಯಾಸವು ಬಹಳ ರಸ್ಯವಾಗಿತ್ತು ಅನಂತರ ಮಂಗಳವು ಘೋಷಿಸಲ್ಪಟ್ಟು ನಮ್ಮ ಚಕ್ರವರ್ತಿ ಸಾರ್ವಭೌಮರಿಗೂ, ನಮ್ಮ ಶ್ರೀಮನ್ ಮಹಾರಾಜರವರಿಗೂ, ಅವರವರ ಬಾಂಧವರವರಿಗೂ ಮತ್ತು ಶ್ರೀಶಾರದಾಮಂದಿರಕ್ಕೂ ಇಷ್ಟೈಶ್ವರ್ಯದೀರ್ಘಾಯುರಾರೋಗ್ಯಗಳನ್ನು ಕೋರಿ ಸಭೆಯು ವಿಸರ್ಜಿಸಲ್ಪಟ್ಟಿತು. ಈ ಮಂದಿರಕ್ಕೆ ಬರತಕ್ಕ ದೈನಂದಿನ, ವಾರ ಮತ್ತು ಮಾಸಪತ್ರಿಕೆಗಳ ವಿಷಯವನ್ನು ನೋಡಲು ಮಂದಿ ಸೇರುವುದು ಮತ್ತು ಕರ್ಣಗಳ ಮೂಲಕ ಮನನ ಮಾಡಿ, ಆನಂದ ಮಗ್ನರಾಗಿರುವರು ಈ ಮಂದಿರದಲ್ಲಿ ಒಂದು ಪುಸ್ತಕ ಭಂಡಾರವನ್ನೂ ಸ್ಥಾಪಿಸಿರುವುದರಿಂದ ವಾಚಕರಿಗೆ ಬಹಳ ಪ್ರಯೋಜನವಾಗಿರುವುದು. ಈ ಮಂದಿರವು ನಮ್ಮ ಜನಾಂಗದವರಾದ ಬಾಲಕರುಗಳಿಂದಲೇ ಸ್ಥಾಪಿಸಲ್ಪಟ್ಟಿರುವುದರಿಂದ ವಿಯೋಪೃದ್ಧರೂ, ಜ್ಞಾನವೃದ್ಧರೂ, ಸಿರಿವಂತರೂ ಆದ ಮಹಾಭಾವರಾಗಳು ಸಹಾಯ ಬಗೆಯಾಗುವಂತೆ ಮಾಡಿಯಾರೆಂದು ನಂಬಿದೇವೆ

ಬಾತ್ಮೀದಾರರಿಗೆ ನೋಟೀಸು.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಜವಾಬುದಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಕರೆಸ್ಪಾಂಡೆನ್ಸ್.

ದೊಡ್ಡಬಳ್ಳಾಪುರದಲ್ಲಿ ಕೆಲವು ಕೊರತೆಗಳು.

ಅಯ್ಯಾ, ಮಳೆಗಾಲಕ್ಕೂ, ರಸ್ತೆಗಳು ಮ್ಯುನಿಸಿಪಾಲಿಟಿಯಲ್ಲಿ ಹಸನಾಗಿಲ್ಲದೆ ಇರುವದಕ್ಕೂ, ಲಾಂದ್ರಗಳು ಹಚ್ಚದೇ ಇರುವದಕ್ಕೂ, ರಿಪೇರಿ ಆಗತಕ್ಕ ಲಾಂದ್ರಗಳು ದೀಪದಂತೆ ರಾತ್ರಿ ವೇಳೆ ಕತ್ತಲಲ್ಲಿ ನಿಂತಿರುವದಕ್ಕೂ, ಮ್ಯುನಿಸಿಪಾಲಿಟಿಯಲ್ಲಿ ಕತ್ತೆಗಳು ಅಗಸರು ಮೇಯಿಸಲು ಹುಲ್ಲುಗಾವಲು ಮಾಡಿಕೊಂಡಿರುವಂತೆ ರಾತ್ರಿ ಕತ್ತಲಲ್ಲಿ ಸಂಚರಿಸುವ ಕಾರಣ ಅವುಗಳು ರಾತ್ರಿ ವೇಳೆ ಸಂದಿಗಳಲ್ಲಿ ಉದ್ದಕ್ಕೂ ಟೌನ್ ಪ್ರಜೆಗಳ ಸೌಖ್ಯವೂ ನೆಮ್ಮದಿಯೂ ಎಷ್ಟರಮಟ್ಟಿಗಿರುತ್ತೋ ವಾಚಕರೇ ಯೋಚಿಸಬೇಕು ಈ ವಿಚಾರಕ್ಕೆ ವೈಸ್ ಪ್ರಸಿಡೆಂಟರು ಪ್ರಜಾನುರಾಗಿಗಳಾಗಿದ್ದಾಗ್ಯೂ ಸರಿಯಾದ ಏರ್ಪಾಡು ಮಾಡದಿರುವದು ಆಶ್ಚರ್ಯ. ಈಗಲಾದರೂ ಈ ವಿಚಾರಗಳಿಗೆ ನಿಗಾಕೊಡಬೇಕಾಗಿ ಪ್ರಜೆಗಳು ಬೇಡುತ್ತಾರೆ.

ಸ್ಯಾನಿಟರಿ ಇನ್ಸ್‌ಪೆಕ್ಟರು ಟೌನ್ ಗಸ್ತು ಮಾಡಿದರೆ ರಸ್ತೆಗಳು ದಿನಾಲೂ ಯಾಕೆ ಸಾಫಾಗುವದಿಲ್ಲವೋ ? ಸರ್ಕಾರದವರು ಪ್ರಜೆಗಳಿಗೆ ಇಷ್ಟು ಅನುಕೂಲಗಳನ್ನು ಕಲ್ಪಿಸಿದ್ದಾಗ್ಯೂ ಸ್ಥಳಾಧಿಕಾರಿಗಳು ನಿಗಾ ಕೊಡದಿರುವದು ವಿಷಾದವೇ ಸರಿ.

ಈ ಊರಿನಲ್ಲಿ ದೇವಾಂಗದವರ ಪೇಟೆಯಲ್ಲಿ ಜೂಜಿನ ಆಟ ಪ್ರಬಲವಾಗಿ ಅಭಿವೃದ್ಧಿಗೆ ಬರತಕ್ಕ ಅನೇಕ ಹುಡುಗರು ಕೆಡಲು ಅವಕಾಶವಾಗಿರುತ್ತೆ ಪೋಲೀಸಿನವರು ಸರಿಯಾದ ನಿಗಾ ಕೊಡದಿರುವ ಕಾರಣ ಈ ವಾಪಾ ಆಟವೆಂಬ ಜೂಜಿಗೆ ಅವಕಾಶವಾಗಿರುತ್ತೆ. ಘನವುಳ್ಳ ಸರ್ಕಾರದವರು ಈ ಟೌನಲ್ಲಿ ಗ್ಯಾಂಬ್ಲಿಂಗ್ ಆಕ್ಟನ್ನು ಜಾರಿಗೆ ತಂದಲ್ಲಿ ಅನೇಕ ಜನ ಹುಡುಗರು ಬದುಕಿಕೊಳ್ಳುತ್ತಾರೆ.

ಪ್ರಜಾ ಹಿತಚಿಂತಕ.

ಎಕ್ಸ್‌ಪೆರಿಮೆಂಟಲ್ ಸ್ಕೂಲುಗಳ ವಿಷಯ.

ಅಯ್ಯಾ,—ನಮ್ಮ ಗೌರ್ನಮೆಂಟಿನವರು ಹೊಸದಾಗಿ ಒಂದು ಸಾವಿರ ಎಕ್ಸ್‌ಪೆರಿಮೆಂಟಲ್ ಸ್ಕೂಲುಗಳನ್ನು ಏರ್ಪಾಟುಮಾಡಿಸಿ ಗೌರ್ನಮೆಂಟಿನಿಂದ ... ಲಕ್ಷ ರೂಪಾಯಿ ಗ್ರಾಂಟನ್ನೂ, ಕಟ್ಟಡಗಳಿಗಾಗಿ ಒಂದುವರೆ ಲಕ್ಷ ... ಗ್ರಾಂಟನ್ನೂ ಸ್ಯಾಂಕ್ಷನ್ ಮಾಡಿಸಿರುತ್ತಾರೆ. ಈ ಸ್ಕೂಲುಗಳಲ್ಲಿ ... ಕನ್ನಡ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಪ್ಯಾಸಾದವರನ್ನು ...ಮಿಸುತ್ತಾರೆ. ಇವರಿಗೆ ಇದುವರಿಗೂ ಸಂಬಳಗಳೇನೂ ಕೊಡುತ್ತಾ ಬಂದಿಲ್ಲ. ... ಸ್ಕೂಲುಗಳಿರುವ ಗ್ರಾಮಗಳಲ್ಲಿಯೂ, ಇತರ ಕಡೆಗಳಲ್ಲಿಯೂ ಮಳೆ ...ವಿಲ್ಲದ್ದರಿಂದ ಜೀವನೋಪಾಯಕ್ಕೆ ಯಾವ ವಿಧವಾದ ಮಾರ್ಗವೂ ... ಗ್ರಾಮಸ್ಥರಾದ ಜನಗಳೇ ಅವರ ಪ್ರಾಣಧಾರಣೆ ಮಾಡಿಕೊಳ್ಳುವುದು ... ಇಂಥಾ ಕಾಲದಲ್ಲಿ ಸದರಿ ಸ್ಕೂಲುಗಳ ಮಾಸ್ಟರುಗಳು ಸಂಸಾರ ಸಂರಕ್ಷಣೆಯನ್ನು ಯಾವ ರೀತಿ ಮಾಡಿಕೊಂಡಿರಬೇಕೋ ತಿಳಿಯದು. ಸರ್ಕಾರದವರು ಮತ್ತು ಗ್ರಾಮಸ್ಥರು ಮೇಲ್ಕಂಡವರ ಕಷ್ಟಸುಖಗಳನ್ನು ವಿಚಾರಿಸದೇಹೋದರೆ ...ವರು ಯಾವ ರೀತಿ ಜೀವನಮಾಡಬೇಕು ? ಇಂಥಾ ದುರ್ಭಿಕ್ಷ ಕಾಲದಲ್ಲಿ ಈ ... ರೂಪಾಯಿ ಸಂಬಳದವರಿಗೆ ಮಹಾಸ್ವಾಮಿಯವರು ಕರುಣಿಸಿಕೊಡತಕ್ಕ ...ಧನವನ್ನು ಕೂಡ ಜಾಗ್ರತೆ ಕೊಡಿಸದೆಹೋದರೆ ಬಡವರಾದ ಈ ನೌಕರರು ಯಾವ ರೀತಿ ಜೀವನಮಾಡಬೇಕೋ! ತಾವೇ ಯೋಚಿಸಿ.

ಒಬ್ಬ ಬಡ ಮಾಸ್ಟರು.

ಉಪಾಧ್ಯಾಯರ ಗ್ರೇಡುಗಳ ಅನ್ಯಾಯ.

ಅಯ್ಯಾ,—ನಮ್ಮ ಮೈಸೂರು ಸೀಮೆಯ ಎ.ವಿ. ಮತ್ತು ವಿ.ಇ. ಸ್ಕೂಲುಗಳ ಉಪಾಧ್ಯಾಯರುಗಳ ಸಂಬಳ ಕೇವಲ ಕಡಮೆಯಾಗಿಹೋಗಿದ್ದುದರಿಂದ ಅವರಿಗೆ ತಕ್ಕ ಸಂಬಳ ಕೊಟ್ಟು ಸಮರ್ಥರಾದ ಉಪಾಧ್ಯಾಯರುಗಳನ್ನಾಗಿ ಮಾಡಿ ವಿದ್ಯಾಭ್ಯಾಸದ ಇಲಾಖೆಯನ್ನು ಅಭಿವೃದ್ಧಿಗೆ ತರಬೇಕೆಂದು ನಮ್ಮ ದಯಾಳುವಾದ ಸರ್ಕಾರದವರು ರಾಜಾದಾಯದಲ್ಲಿ ಈ ಇಲಾಖೆಗೋಸ್ಕರ ಹೆಚ್ಚು ಹಣ ಸ್ಯಾಂಕ್ಷನ್ ಮಾಡಿರುತ್ತಾರೆ. ಈ ಹಣವನ್ನು ಉಪಾಧ್ಯಾಯರುಗಳ ಯೋಗ್ಯತೆ ಮತ್ತು ಸರ್ವೀಸು ನೋಡಿ ಸರಿಯಾಗಿ ಹಂಚುವ ಅಧಿಕಾರಿಗಳು ಲಭಿಸಲಿಲ್ಲ. ತುಂಬ ಅನೇಕ ಸರ್ವೀಸುದಾರರಿಂದ ಬಡ ಸ್ಕೂಲು ಮಾಸ್ಟರುಗಳು ಚಿಂತಾಕ್ರಾಂತರಾಗಿ, ಉತ್ಸಾಹಭಂಗರಾಗಿ ತಮ್ಮ ಕೆಲಸಗಳಲ್ಲಿ ಅಶ್ರದ್ಧೆತೆಯನ್ನು ತೋರಿಸಿ ನಿಸ್ಸಾರವಾದ ವಿದ್ಯಾಭ್ಯಾಸವನ್ನು ಈಗಿರುವುದಕ್ಕಿಂತಲೂ ಕೀಳುಸ್ಥಿತಿಗೆ ತರುವರೆಂದು ಬಹಳ ಭಯ ಉಂಟಾಗಿದೆ. ಈ ಹಂಚಿಕೆಯಲ್ಲಿ ಕಡಮೆ ಯೋಗ್ಯತೆ ಇರುವ ಹೊಸದಾಗಿ ಕೆಲಸಕ್ಕೆ ಸೇರುವವರಿಗೆ ಮಾತ್ರ ಹೆಚ್ಚು ಹಣ ವಿನಿಯೋಗಿಸಲ್ಪಟ್ಟಿದೆಯೇ ಹೊರತು ನ್ಯಾಯವಾದ ಯೋಗ್ಯತೆ ಇರುವ ಮತ್ತು ಅನೇಕ ವರ್ಷ ಸರ್ವೀಸು ಮಾಡಿರುವ ಹಳೇ ಉಪಾಧ್ಯಾಯರುಗಳಿಗೆ ಯಾವ ಪ್ರಯೋಜನವೂ ಇಲ್ಲದಂತಾಗಿರುತ್ತೆ. ಈ ನಮ್ಮ ಸೀಮೆಯ ಎಲ್ಲಾ ಉಪಾಧ್ಯಾಯರುಗಳೂ ವಿಶೇಷ ... ಗಳಿಸಿದ ಇನ್ಸ್‌ಪೆಕ್ಟರ್ ಜನರಲ್ ವಿಯರ್ ಸಾಹೇಬರನ್ನೂ ಸರ್ಕಲ್ ಇನ್ಸ್‌ಪೆಕ್ಟರ್ ಮ|| ಬಿ. ಆರ್. ವೆಂಕಟಸ್ವಾಮಿ ನಾಯುಡು ಯವರನ್ನೂ ಸ್ಮರಿಸುವ ಕಾಲ ಬಂತು. ಈ ಬಡ ಸ್ಕೂಲು ಮಾಸ್ಟರ ಈ ಗೋಳಾಟ ತಪ್ಪಿಸುವವರು ನಮ್ಮ ಸೀಮೆಯಲ್ಲಿ ಯಾರೂ ಇಲ್ಲವೇ ?

ಒಬ್ಬ ಸ್ಕೂಲ್ ಮಾಸ್ಟರು.

ಯುದ್ಧದ ಸಮಾಚಾರಗಳು.

ಅಯ್ಯಾ,—ಈಗ ಯೂರೋಪ್ ಖಂಡದಲ್ಲಿ ಯುದ್ಧಗಳು ನಡೆಯುತ್ತಿರುವುದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಆ ಯುದ್ಧಗಳ ಸಮಾಚಾರವನ್ನು ಕೇಳುವುದಕ್ಕೆ ಜನರು ಕುತೂಹಲಪಡುತ್ತಿದ್ದಾರೆ. ಸದರಿ ಯುದ್ಧಗಳ ಸಮಾಚಾರವನ್ನು ಅತ್ಯಂತವಾಗಿ ಪತ್ರಿಕೆಗಳಲ್ಲಿ ಪ್ರಕಟಿಸುವುದಿಲ್ಲವೆಂದು ಜನರು ಗುಣಗುಟ್ಟುತ್ತಾರೆ. ಇಂಥವರನ್ನು ಪತ್ರಿಕಾಕರ್ತರು ತೃಪ್ತಿಪಡಿಸುವುದು ಹೇಗೆ? ಯುದ್ಧದ ಸಮಾಚಾರವನ್ನು ಸಂಪೂರ್ಣವಾಗಿ ಮರೆಮಾಚಿದರೆ ಇದಕ್ಕೆ ಜನರು —ಇಂಗ್ಲಿಷರಿಗೆ ಏನೋ ವಿಪತ್ತು ಸಂಭವಿಸಿರುವುದರಿಂದ ಮುಚ್ಚುಮರೆ ಮಾಡಿರುತ್ತಾರೆಂದು ಆಡಿಕೊಳ್ಳುವರು. ಒಂದು ವೇಳೆ ಇಂಗ್ಲಿಷರಿಗೆ ದೊರೆಯುವ ಪ್ರತಿ ದಿನದ ಜಯವನ್ನು ಪ್ರಕಟಿಸಿದರೆ ಅದಕ್ಕೆ ಜನರು —ಪ್ರಜೆಗಳು ಭೀತಿಪಡಬಾರದೆಂದು ಊಹಿಸಿ ಅಬದ್ಧ ಸಮಾಚಾರಗಳನ್ನು ಬರೆಯುತ್ತಾರೆ ಎಂದು ಮಾತನಾಡಿಕೊಳ್ಳುತ್ತಾರೆ. ಇಲ್ಲವೇ ಬ್ರಿಟಿಷರ ಕಡೆ ಇಷ್ಟಿಷ್ಟು ನಷ್ಟವಾಯಿತೆಂದು ಪ್ರಕಟಿಸಿದರೆ ಅದಕ್ಕೆ ಜನರು—ಇಷ್ಟು ನಷ್ಟವಾದ ಮೇಲೆ ನಮ್ಮ ಗತಿಯೇನು? ಸಾವಿರಕ್ಕೆ ಹತ್ತು ಮಂದಿಯನ್ನು ಮಾತ್ರ ತೋರಿಸುತ್ತಾರೆ. ಎಷ್ಟು ಲಕ್ಷ ದಂಡು ನಾಶಹೊಂದಿತೋ! ಶಿವನೇ ಎಂದು ಹೇಳಿಕೊಳ್ಳುತ್ತಾರೆ. ಶತ್ರುಗಳ ನಷ್ಟವನ್ನು ಕುರಿತು ಹೇಳಿದರೆ—ಜರ್ಮನಿಯವರ ವಿಷಯದಲ್ಲಿ ಯಾವ ಒಳ್ಳೇದನ್ನೂ ಹೇಳುವುದಿಲ್ಲವಷ್ಟೆ ಎನ್ನುವರು. ಆದ್ದರಿಂದ ಎಡಿಟರವರೇ, ಜನಗಳಲ್ಲಿರುವ ಮೌಢ್ಯವನ್ನು ಹೋಗಲಾಡಿಸುವುದಕ್ಕಾಗಿ ಜರ್ಮನಿಯವರ ಕ್ರೂರವಾದ ಪ್ರಜಾಪರಿಪಾಲನೆಯ ಕ್ರಮವನ್ನು ಕುರಿತು ಒಂದು ದೀರ್ಘವಾದ ಉಪನ್ಯಾಸವನ್ನು ಉದಾಹರಣೆಗಳಿಂದ ಪ್ರಕಟಿಸಬೇಕೆಂದು ನಂಬುವ ನಿಮ್ಮ ವಾಚಕರಲ್ಲಿ

ಒಬ್ಬ ಹಿತೈಷಿ.

ತಾಲ್ಲೂಕು ವರ್ತಮಾನಗಳು.

ಅರಕಲಗೂಡು.—ಈ ಊರಿನಲ್ಲಿ ಕೆಲವು ದಿನಗಳಿಂದ ಮಳೆ ಬಾರದೆ ಗಂತಿದೆ. ಚಳಿಯುಂಟಾಗಿದೆ. ರಾಗೀ ಪೈರೆಲ್ಲಾ ಕಟಾವಾಗಿ ಪೂರೈಸಿತು. ಹಿಂಗಾರಿ ಪೈರು ತಕ್ಕಮಟ್ಟಿಗೆ ಚೆನ್ನಾಗಿದೆ. ದಾರಣೆವಾಸಿ ದಿನದಿನಕ್ಕೆ ಏರುತ್ತಲೇ ಇದೆ. ಈ ಊರಿನ ವರ್ತಕರು ಸೊಸೆ ಸೇರು ತೂಕದ ಬಟ್ಟುಗಳಲ್ಲಿ ವ್ಯಾಪಾರ ಮಾಡದೆ ಹಳೆಯ ಸಾಧನಗಳಲ್ಲಿಯೇ ವ್ಯಾಪಾರ ಮಾಡುತ್ತಾರೆ. ಹಳೆಯವುಗಳನ್ನು ತಪ್ಪಿಸಿ ಹೊಸವುಗಳಲ್ಲಿ ವ್ಯಾಪಾರಮಾಡುವಹಾಗೆ ನಮ್ಮ ಅಮಲ್ದಾರರೂ ಪೋಲೀಸ್ ಇನ್ಸ್‌ಪೆಕ್ಟರೂ ಸೇರಿ ಮಾಡ್ಯಾರೆಂದು ನಂಬುತ್ತೇನೆ.—ತಾ. ೫ರಲ್ಲಿ ಈ ಊರಿನ ಮಹಮ್ಮದಿಯರು ಯೂರೋಪಿನಲ್ಲಿ ನಡೆಯುವ ಯುದ್ಧದ ದೆಸೆಯಿಂದ ನವಾಬ್ ಹಬ್ಬವನ್ನು ವ್ಯಸನದಿಂದ ಆಚರಿಸಿ, ನಮ್ಮ ಚಕ್ರವರ್ತಿಸಾರ್ವಭೌಮರವರಿಗೆ ಜಯವಾಗಲೆಂದು ಪ್ರಾರ್ಥಿಸಿದರು.

ದೊಡ್ಡಬಳ್ಳಾಪುರ.—ಈ ಪ್ರಾಂತ್ಯವೆಲ್ಲಾ ಕಳೆದ ಒಂದು ತಿಂಗಳಿಂದಲೂ ಸುರಿದ ಮಳೆಗಳ ದೆಸೆಯಿಂದ ರಾಗಿ ಬೆಳೆ ಕೈಸೇರುವಂತಾಗಿದೆ. ಕೆರೆಗಳಿಗೆ ಮಾತ್ರ ತುಂಬಾ ನೀರು ಬರಲಿಲ್ಲ. ಆದರೂ ಕೆಲವು ಕೆರೆಗಳ ಹಿಂದೆ ಭತ್ತ, ಕಬ್ಬು ಪೈರುಗಳಿಗೆ ಅನುಕೂಲವಾಗಿದೆ.—ಇಲ್ಲಿಗೆ ವರ್ಗಪಟ್ಟು ಬಂದಿರುವ ಡಾ|| ಕಣ್ಣಾಕ್ಷಮೊದಲಿಯಾರ್ರು ರೋಗಿಗಳಿಗೆ ಮುತುವರ್ಜಿಯಿಂದ ಚಿಕಿತ್ಸೆ ಮಾಡುತ್ತಾ, ಈ ತಾಲ್ಲೂಕಿನವರಿಗೆಲ್ಲಾ ತೃಪ್ತಿಯನ್ನೂ ಸಂತೋಷವನ್ನೂ ಉಂಟುಮಾಡಿರುತ್ತಾರೆ.—ಮ್ಯುನಿಸಿಪಲ್ ಕೌನ್ಸಿಲರ್ ಮ|| ಸಾಹುಕಾರ್ ಚಂದ್ರಶೇಖರಯ್ಯನವರಿಗೆ ಗಂಡು ಮಗು ಆದದ್ದಕ್ಕಾಗಿ ಅವರು ತಮ್ಮ ಮಿತ್ರಮಂಡಲಿಯವರಿಗೂ ಇತರರಿಗೂ ಸತ್ಕರಿಸಿ ಸಂತೋಷಪಡಿಸಿದರು.—ಮ್ಯುನಿಸಿಪಾಲಿಟಿಯವರು ಸ್ವಲ್ಪ ಶ್ರದ್ಧೆ ವಹಿಸಿ ಮುಖ್ಯ ಬೀದಿಗಳನ್ನು ಶುಚಿಮಾಡಿಸುತ್ತಾ ಇದಾರೆ. ಈ ದೊಡ್ಡಬಳ್ಳಾಪುರದ ಪ್ರಜೆಗಳು ಇದುವರಿಗೆ ಯುದ್ಧದ ಸಹಾಯಕ ಧರ್ಮಫಂಡಿಗೆ ರೂ. 1,090-10-0 ಯನ್ನು ಚಂದಾ ಕೊಟ್ಟಿರುವರಲ್ಲದೆ ಇನ್ನೂ ಕೊಡುವವರೂ ಇರುತ್ತಾರೆ.

ಶಿವಮೊಗ್ಗ.—ಈ ಟವನ್‌ನಲ್ಲಿ ಪೋಲಿಯಾಗಿ ತಿರುಗುವ ಆಡುಗಳು, ದನಗಳು, ಕತ್ತೆಗಳು ವರ್ತಕರ ಅಂಗಡಿಯಲ್ಲಿ ಜಿನಸುಗಳನ್ನು ತಿನ್ನುವವು. ಮನೆ ಬಾಗಿಲು, ಹಿತ್ತಲು ರಸ್ತೆ ವಗೈರೆಯಲ್ಲಾ ಹಾಳುಮಾಡುತ್ತವೆ. ಮಾಲೀಕರು ಯಾಕೆ ನಿಗಾವಣೆಯಿಂದ ಕಾಪಾಡುವದಿಲ್ಲವೋ ತಿಳಿಯದು.—ಚನ್ನಗಿರಿ ತಾಲ್ಲೂಕು ದೇವರಹಳ್ಳಿಯಲ್ಲಿರುವ ಬೇಡರ ಕೆಂಚನಿಯು ಎಂಬುವನು ಮೇಲ್ಕತ್ತೆ ಸಣ್ಣ ರಂಗನ ಮನೆಗೆ ನುಗ್ಗಿ ಕಳವು ಮಾಡಿಕೊಂಡು ಹೋಗುತ್ತಿದ್ದುದು ಸಿಕ್ಕಿ ಮಾಲು ಪತ್ತೇ ಆಗಿ ಶಿವಮೊಗ್ಗ ಸಬ್ ಡಿವಿಜನ್ ಸಾಹೇಬರ ಕೋರ್ಟಿನಲ್ಲಿ ವಿಚಾರ ನಡೆಯುತ್ತಾ ಇದೆ.—ತೀರ್ಥಹಳ್ಳಿ ತಾಲ್ಲೂಕಿಗೆ ಸೇರಿದ ಒಂದು ಗ್ರಾಮದಲ್ಲಿ ಕೆನರಾ ಜಿಲ್ಲಾದ ಕಾಶ್ಮೀರ್ ಕೃಷ್ಣದಾಸ್ ಎಂಬುವನು ಒಬ್ಬನಲ್ಲಿ ನೌಕರನಾಗಿದ್ದು ಸದರಿಯವನ ಬಾಬ್ತು ತಾಲಿ ವಗೈರೆ ಕಳವು ಮಾಡಿ, ತೀರ್ಥಹಳ್ಳಿ ಹೋಟಲಿಗೆ ಬಂದು ಊಟಮಾಡಿಕೊಂಡು ಅಲ್ಲಿಯೂ ಬಟ್ಟೆ ಬರೆ ವಗೈರೆ ಕಳವು ಮಾಡಿ, ಹೋಗುತ್ತಿದ್ದದ್ದನ್ನು ಬೀಟು ಕಾನ್‌ಸ್ಟೇಬಲ್ಲನು ಕಂಡು ಹಿಡಿದು ಮಾಲು ಪತ್ತೆಮಾಡಿದನು. ಕೇಸು ಮ್ಯಾಜಿಸ್ಟ್ರೇಟರಲ್ಲಿ ವಿಚಾರಣೆ ನಡೆಯುತ್ತಾ ಇದೆ.

ಮಧುಗಿರಿ.—ಹಾಲಿ ೨ ವಾರಗಳಿಂದ ಬಿಸಲಿನ ತಾಪವು ಹೆಚ್ಚಾಗಿರುತ್ತೆ. ಶರದೃತುವಿನ ಕಾಲವು ಬದಲಾಯಿಸಿರುತ್ತೆ. ಸ್ವಾತಿ ಮಳೆ ಹುಟ್ಟಿದಾರಭ್ಯ ನೆಲಕ್ಕೆ ಒಂದು ಹನಿಯೂ ಬೀಳಲಿಲ್ಲ. ರಾಗಿ ಬೆಳೆ ಯಾವತ್ತೂ ಒಣಗಿಹೋಗುವಂತೆ ಆಗಿರುತ್ತೆ. ಈ ಟವನ್ನಿನ ಬ್ರಾಹ್ಮಣರ ಶ್ರೇಣಿಯಲ್ಲಿ ನೀರಿಗೆ ಬಹಳ ಕ್ಷಾಮ ಪ್ರಾಪ್ತವಾಗಿದೆ. ಧಾರಣೆವಾಸಿಯಾದರೋ ದಿನ ದಿನಕ್ಕೆ ಭಡಾವಾಗುತ್ತಾ ಇದೆ. ಬಡವರ ಕಷ್ಟವನ್ನು ವಿಚಾರಿಸುವವರೇ ದಿಕ್ಕಿಲ್ಲ. ಇಲ್ಲಿನ ಅಧಿಕಾರಿಗಳು ಸ್ವಲ್ಪ ಗಮನಕ್ಕೆ ತಂದುಕೊಂಡು ಒಂದು ಸೊಸೈಟಿಯನ್ನು ಏರ್ಪಡಿಸಿ ರಾಗಿ, ಅಕ್ಕಿ ವಗೈರೆ ಆಹಾರ ಪದಾರ್ಥಗಳು ಬಡಬಗ್ಗರಿಗೆ ಅನುಕೂಲವಾಗುವಹಾಗೆ ಒಂದು ಅಂಗಡಿ ಇಡಿಸಿ ಸರಿಯಾದ ಧರಗಳ ನಿರಖಿನಿಂದ ಅನುಕೂಲಪಡಿಸಿ ಕೊಟ್ಟಾರೆಂದು ಹಾರೈಸುತ್ತಿರುವರು. ಸರ್ಕಾರದವರು ಪ್ರಜೆಗಳ ಜೀವನೋಪಾಯವಾಗುವಂತೆ ಕೆರೆ, ಕಟ್ಟೆ, ಕಾಲ್ವೆ, ನಾದುರಸ್ತಾಗಿರುವ ಕುಂಟೆಗಳನ್ನು ಮಾಡಿಸುವರೆಂದು ಜನಗಳೆಲ್ಲರೂ ಹಾರೈಸುತ್ತಾರೆ.—ತಾ. 19ರಲ್ಲಿ ತುಮಕೂರು ಸಾ|| ರಾದ ಎಚ್. ಎಚ್. ನ್ಯಾಥಾಂ ಸಾಹೇಬರವರು ಬಂದು ಸ್ಕೂಲ್ ಇನ್ಸ್‌ಪೆಕ್ಷನ್ ಮಾಡಿಕೊಂಡು ಗ್ರಾಮಾಂತ್ರ ಸರ್ಕೀಟುಮಾಡಿ ತಾ. 30ರಲ್ಲಿ ವಾಪಸು ಹೋದರು.

ನಾಗಮಂಗಲ.—ಈ ಗ್ರಾಮದಲ್ಲಿ ಈಗ್ಗೆ ಸುಮಾರು ಒಂದೂವರೆ ವರ್ಷದ ಲಾಗಾಯ್ತು ಮಳೆ ಇಲ್ಲದೆ ಕುಡಿಯುವ ನೀರಿಗೆ ಬಹಳ ತೊಂದರೆಯಾಗಿದ್ದು ಹೊಸದಾಗಿ ಇಲ್ಲಿಗೆ ದಯಮಾಡಿದ ನಮ್ಮ ಅಮಲ್ದಾರ್ ಮ|| ಬಸವರಾಜೆ ಅರಸಿನವರ ಅವಗಾಹನೆಗೆ ಬಂದು ಹೊಸದಾಗಿ ಭಾವಿಗಳನ್ನು ತೆಗಿಸಿ ಹಂಪೆ ಅರಸಿನವರ ಕೊಳವನ್ನು ಶೋಧಿಸಿ ನೀರಿಗೆ ಉಂಟಾಗಿದ್ದ ಕಷ್ಟವನ್ನು ಪರಿಹಾರ ಮಾಡಿದ್ದಕ್ಕಾಗಿ ಈ ಗ್ರಾಮದವರೆಲ್ಲಾ ಬಹಳ ಕೃತಜ್ಞರಾಗಿರುತ್ತಾರೆ. ಮತ್ತು ಈ ಗ್ರಾಮದಲ್ಲಿ ನಮ್ಮ ಅಮಲ್ದಾರವರ ಅಧ್ಯಕ್ಷತೆಯಲ್ಲಿ ಹೊಸದಾಗಿ ಒಂದು ರೀಡಿಂಗ್ ರೂಮು ಎ. ವಿ. ಸ್ಕೂಲಿನಲ್ಲಿ ಸ್ಥಾಪಿಸಲ್ಪಟ್ಟಿರುತ್ತೆ. ಅಮಲ್ದಾರ್ ಮ|| ಬಸವರಾಜೆ ಅರಸಿನವರು ಈ ತಾಲ್ಲೋಕಿಗೆ ದಯಮಾಡಿಸಿದ ಮೇಲೆ ಈಚೆಗೆ ಮಳೆ ಆಗಿ ಕೆರೆಗಳಿಗೆ ಸ್ವಲ್ಪ ಸ್ವಲ್ಪ ನೀರು ಬಂದಿರುತ್ತೆ. ಕೊಳ ತುಂಬಿ ಕುಡಿಯುವ ನೀರಿನ ಕ್ಷಾಮ ತಪ್ಪಿರುತ್ತೆ.—ಈ ಗ್ರಾಮಕ್ಕೆ ಈಗ್ಗೆ ಸುಮಾರು 1-5 ತಿಂಗಳಲ್ಲಿ ಪೋಸ್ಟ್ ಮಾಸ್ಟರಾಗಿ ಬಂದಿರುವ ಮ|| ಎಂ. ಎಸ್. ತಿರುಮಲಾಚಾರ್ರು ತುಂಬಾ ಜನಾನುರಾಗವುಳ್ಳವರಾಗಿದಾರೆ. ಇಂಥಾವರನ್ನು ಹಾಸನಕ್ಕೆ ವರ್ಗಮಾಡಿರುವದಾಗಿ ವರ್ತಮಾನವಿದೆ. ಇಲಾಖೆಯವರು ಇವರನ್ನು ಇನ್ನೂ ಕೆಲವು ಕಾಲ ಇಲ್ಲೇ ಇಟ್ಟಿದ್ದರೆ ಜನಗಳಿಗೆ ತುಂಬಾ ಸೌಕರ್ಯವಾಗುತ್ತಿತ್ತು.—ಈ ಗ್ರಾಮದ ಗರಲ್ಸ್ ಸ್ಕೂಲಿನಲ್ಲಿ ಬಾಲಕಿಯರು ಕಮ್ಮಿಯಾಗಿ ಮಾಸ್ಟರುಗಳ ಸಂಖ್ಯೆ ಹೆಚ್ಚಾಗಿರುತ್ತೆ. ಹೆಡ್ ಮಿಷ್ಟ್ರೆಸ್ ರವರ ತರಗತಿಯಲ್ಲಿ 3 ಹುಡುಗಿಯರಿಗಿಂತ ಜಾಸ್ತಿಯಾಗಿಲ್ಲ. ಇಲಾಖೆಯವರು ಕ್ರಮಪಡಿಸಬೇಕಾಗಿದೆ.

ಹೊಸಕೋಟೆ.—ಈಗ ಇಲ್ಲಿ ಬೆಳೆಗಳಿಗೆ ಒಳ್ಳೇ ಮಳೆ ಆಗಬೇಕು. ಇಲ್ಲದಿದ್ದರೆ ಕೈಗೆ ಬಂದದ್ದು ಬಾಯಿಗೆ ಬಾರದೆ ಹೋಗುತ್ತದಲ್ಲಾ ಎಂದು ರೈತರು ದುಃಖಪಡುತ್ತಾರೆ. ಇದುವರೆಗೂ ಇಲ್ಲಿ ಬಲವಾದ ಮಳೆಯೇ ಬರಲಿಲ್ಲ. ಪೈರುಗಳಿಗೆ ಅನುಕೂಲವಾದ ಮಳೆ ಮಾತ್ರ ಬಂತು. ಆದರೆ ಒಳ್ಳೇ ಸಮಯದಲ್ಲಿ ಮಳೆ ಹಿಂದಾಗಿದೆ. ಕೆರೆಗಳಿಗೆ ಅರ್ಧ ನೀರು ಸಹಾ ಬಂದಿಲ್ಲ. ಧಾರಣೆವಾಸಿಗಳು ಇನ್ನೂ ಬಡಾವಾಗಿಯೇ ಇವೆ. ಕೂಲಿ ನಾಲಿಮಾಡುವ ಬಡಜನಗಳ ಮತ್ತು ಕಮ್ಮಿ ಸಂಬಳದ ನೌಕರರ ಪಾಡು ಬಹಳ ಕಷ್ಟ. ಹೊಸ ಅಮಲ್ದಾರರು ಮ|| ಶ್ರೀನಿವಾಸಯ್ಯಂಗಾರ್ರು ಬಹಳ ಅನುಭವಶಾಲಿಗಳಾಗಿಯೂ, ಸರ್ಕಾರದ ಕೆಲಸಗಳಲ್ಲಿ ಬಹಳ ಮುತುವರ್ಜಿಯುಳ್ಳವರಾಗಿಯೂ ಇರುವದು ಮಾತ್ರವಲ್ಲದೆ ಪ್ರಜೆಗಳ ಅನುಕೂಲಕ್ಕೆ ತಕ್ಕ ಕೆಲಸಗಳನ್ನು ಮಾಡುವವರಲ್ಲಿಯೂ, ಟವನ್ ಪಾಠಶಾಲಾ ವಿಷಯದಲ್ಲಿಯೂ ತುಂಬಾ ನಿಗಾ ಕೊಡುವವರಾಗಿದಾರೆ. ಇಲ್ಲಿ ಮೂರು ತಿಂಗಳುಗಳಿಂದ ಪ್ಲೇಗಿನ ಅವಾಂತ್ರ ಹೆಚ್ಚಾಗಿತ್ತು. ಈಗ ಬಹಳಮಟ್ಟಿಗೆ ಕಡಮೆಯಾಗಿದೆ. ಅಕ್ಟೋಬರ್ ತಿಂಗಳಿನ ಕಡೆಯವರೆಗೆ ಪ್ಲೇಗ್ ತಗಲಿದವರ ಸಂಖ್ಯೆ 107; ಪ್ಲೇಗ್ ಮರಣದ ಒಟ್ಟು ಸಂಖ್ಯೆ 70. ಇನ್ನೂ ಕೆಲವು ಜಾಡ್ಯದವರು ಇದಾರೆ. ಡಾಕ್ಟರ್ ಮುತ್ತುಸ್ವಾಮಿದಾಸ್‌ಯವರು ಆಗಿಂದಾಗ್ಗೆ ಬಂದು ಬಹಳ ಮುತುವರ್ಜಿಯಿಂದ ಜನಗಳಿಗೆ ಇನಾಕ್ಯುಲೇಷನ್ ಮಾಡುತ್ತಾ ಇದ್ದರು. ಸುಮಾರು ಆರು ಸಾವಿರ ಪ್ರಜಾಸಂಖ್ಯೆಯುಳ್ಳ ಈ ಹೊಸಕೋಟೆಯಲ್ಲಿ ಒಂದು ಸಾವಿರ ಮಂದಿ ಮಾತ್ರ ಇನಾಕ್ಯುಲೇಷನ್ ಮಾಡಿಸಿಕೊಂಡಿದಾರೆ. ಇಲ್ಲಿ ಪ್ಲೇಗ್ ಹೆಚ್ಚಾಗಿದ್ದಾಗ ತಿಗಳರು ಮಾತ್ರ ತಮ್ಮ ತೋಟಗಳಲ್ಲಿರುವ ಮನೆಗಳಿಗೆ ಹೊರಟುಹೋದರು. ಅಲ್ಪಸ್ವಲ್ಪ ಜನ ಬೇರೆ ಬೇರೆ ಊರುಗಳಿಗೆ ಹೋದರು. ಮಿಕ್ಕಾದವರು ಇಲ್ಲೇ ಇದ್ದರು.—ತಾ. 25ರಲ್ಲಿ ಇಲ್ಲಿನ ಎ. ವಿ. ಸ್ಕೂಲಿನಲ್ಲಿ ವಾಡಿಕೆ ಪ್ರಕಾರ ಮಾಸಿಕ ಟೀಚರ್ಸ್ ಅಸೋಸಿಯೇಷನ್ ಎಂಬ ಕೂಟವು ಜರುಗಿತು. ಈ ಕೂಟದಲ್ಲಿ ಕೆಲವು ಕಛೇರಿ ಉದ್ಯೋಗಸ್ಥರೇ ಮುಂತಾದವರು ಸೇರಿದ್ದರು. ನಮ್ಮ ಅಮಲ್ದಾರ್ ಮ|| ಶ್ರೀನಿವಾಸಯ್ಯಂಗಾರ್, ಬಿ. ಎ. ಯವರು ಅಗ್ರಾಸನವನ್ನು ವಹಿಸಿದ್ದರು. ರಸದಿ ಪ್ರಕಾರ ನೇಮಕವಾದ ಒಬ್ಬ ಮಾಸ್ಟರು ಒಂದು ಪದ್ಯವನ್ನು ಬೋರ್ಡಿನ ಮೇಲೆ ಬರೆದು ಹುಡುಗರಿಗೆ ಕಲಿಸುವ ವಿಧಾನವನ್ನು ಕುರಿತು ಬೇಕಾಗಿರುವ ಎಲ್ಲಾ ಅಂಶವನ್ನೂ ಸ್ವಲ್ಪಕಾಲದಲ್ಲಿ ಹೇಳಿ ಕಲಿಸಿದರು. ಅದೇ ಪ್ರಕಾರ ಇನ್ನೊಬ್ಬ ಮಾಸ್ಟರು ಹುಡುಗರಿಗೆ ಒಂದು ಇಂಗ್ಲಿಷ್ ಪಾಠವನ್ನು ಕಲಿಸಿದರು. ಆ ಸಮಯದಲ್ಲಿ ಪಾಠಗಳು ಮುಗಿಯುವವರಿಗೂ ನಾನಾ ಕಡೆಯಿಂದ ಕೂಟ ಬಂದಿರುವ ಮಾಸ್ಟರುಗಳು ಸುಮ್ಮನೆ ನೋಡಿಕೊಂಡಿರುವರು; ಮತ್ತು ಕೂಟವು ಮುಗಿದನಂತರ ಹೊರಟುಹೋಗುವರು. ಆದರೆ ಈಗ ಹೊಸ ಹೆಡ್ ಮಾಸ್ಟರ್ ಮ|| ಸಭಾಪತಯ್ಯನವರು ಬಂದ ತರುವಾಯ ಒಬ್ಬ ಮಾಸ್ಟರು ತನ್ನ ಕ್ಲಾಸಿನ ಹುಡುಗರಿಗೆ ಕಲಿಸುವ ಪಾಠಗಳ ವಿಧಾನವನ್ನು ಮುಗಿಸಿದ ನಂತರ ಇತರ ಮಾಸ್ಟರುಗಳ ಪೈಕಿ ಯಾರಿಗಾದರೂ ಇಷ್ಟವಿದ್ದರೆ ತಮಗೆ ತೋರಿದ ಆಕ್ಷೇಪಣೆಗಳನ್ನು ಕುರಿತು ಚರ್ಚಿಸಿ ಕಲಿಸುವ ವಿಧಾನವನ್ನು ಸಹ ತೋರಿಸಿಕೊಡಬೇಕು. ಇದೇ ಪ್ರಕಾರ ಇಂಥಾ ಚರ್ಚೆಗಳು ಈ ಕೂಟದಲ್ಲಿ ಜರುಗಿದವು. ಇನ್ನು ಮೇಲೆ ಇದೇ ಪ್ರಕಾರ ಒಬ್ಬರ ತಪ್ಪುಗಳನ್ನು ಇನ್ನೊಬ್ಬರು ತಿದ್ದಬಹುದೆಂದು ಹೆಡ್ ಮಾಸ್ಟರು ತಿಳಿಸಿದಾರೆ. ಇವರು ಇಲ್ಲಿಗೆ ಬಂದು ಎರಡು ತಿಂಗಳಾದಾಗ್ಯೂ ಸ್ಕೂಲಿನ ವಿಷಯದಲ್ಲಿ ಬಹಳ ಮುತುವರ್ಜಿಯುಳ್ಳವರಾಗಿಯೂ ಎಲ್ಲರಲ್ಲೂ ಸ್ನೇಹಪರರಾಗಿಯೂ ಇರುವದಲ್ಲದೆ ಕೆಲವು ಹೊಸ ಕ್ರಮಗಳನ್ನು ಮಾಡಿದಾರೆ. ಎಲ್ಲರೂ ಇವರ ವಿಷಯದಲ್ಲಿ ಬಹಳ ಸಂತೋಷಪಡುತ್ತಾರೆ.

ಶಿರಾ ತಾ|| ಮದಲೂರು.—ಈ ಗ್ರಾಮದಲ್ಲಿ ಎರಡು ಕೆರೆಗಳಿದ್ದಾಗ್ಯೂ ನಾಲ್ಕು ವರುಷದಿಂದ ಕೆರೆಗಳು ತುಂಬದೆ ಪ್ರಜೆಗಳು ಪಡುವ ಕಷ್ಟವು ಹೇಳತೀರದು. ಕಾಲಕಾಲಕ್ಕೆ ಹದ ಮಳೆಯು ಸಹ ಬಾರದೆ ಫಸಲೆಲ್ಲಾ ಒಣಗಿ ಹೋಗುತ್ತದೆ. ಈ ಗ್ರಾಮಕ್ಕೆ ತಾಲ್ಲೋಕ್ ಅಮಲ್ದಾರ್ರು ದಯಮಾಡಿ ಪ್ರಜೆಗಳ ಕಷ್ಟಸುಖಗಳನ್ನು ವಿಚಾರಿಸಿ ಬುದ್ಧಿವಾದಗಳಿಂದಲೂ ಗ್ರಾಮಾಭಿವೃದ್ಧಿ ಕಾರ್ಯಗಳನ್ನು ಆದರಿಸಿ ತಕ್ಕ ಪ್ರೋತ್ಸಾಹಗಳಿಂದಲೂ ಜನಗಳನ್ನು ಸಂತೋಷಗೊಳಿಸಿದರು. ಪರಸ್ಪರಸಹಾಯ ಸಂಘಕ್ಕೂ ಗ್ರಾಮಾಭಿವೃದ್ಧಿ ಸಂಘದ ಪ್ರೋತ್ಸಾಹಕ್ಕೂ ನಮ್ಮ ಗ್ರಾಮದ ಸ್ಕೂಲ್ ಮಾಸ್ಟರ್ ಕೆ. ವೆಂಕಟರಾಮಯ್ಯನವರೇ ಪ್ರಮುಖರೆಂದು ಹೇಳಿ, ಸದರಿ ಮೇರೆಗೆ ಜನಗಳಿಂದ ಪ್ರತಿ ಸೋಮವಾರ ಕೆಲಸಮಾಡಿಸುವಂತೆಯೂ ಪಾನಾರ್ಹವಾದ ನೀರನ್ನು ಒದಗಿಸಿಕೊಳ್ಳುವಂತೆಯೂ ಉತ್ಸಾಹಕೊಟ್ಟರು. ಕೋಆಪರೇಟಿವ್ ಸೊಸೈಟಿಯು ದಿನೇದಿನೇ ವೃದ್ಧಿಯಲ್ಲಿ ಬರುತ್ತಿದೆ.—ಈ ಗ್ರಾಮದವರೂ, ಬಾಜು ಗ್ರಾಮದವರು ಸಹ ಯುದ್ಧದ ಫಂಡಿಗೋಸ್ಕರ ಚಂದಾ ಕೊಡಲು ಉತ್ಸಾಹಶೀಲರಾಗಿರುತ್ತಾರೆ. ಸ್ಕೂಲ್ ಬಾಲಕ ಬಾಲಕಿಯರು ಇಂಡಿಯನ್ ವಾರ್ ರಿಲೀಫ್ ಫಂಡಿಗೋಸ್ಕರ ತಮ್ಮ ಶಕ್ತ್ಯಾನುಸಾರ ಕೊಡಲು ಉದ್ಯುಕ್ತರಾಗಿರುತ್ತಾರೆ. ನಮ್ಮನ್ನಾಳುವ ಬ್ರಿಟಿಷ್ ಸಾರ್ವಭೌಮರವರಿಗೆ ಜಯವಾಗಲೆಂದು ಭಗವಂತನನ್ನು ಪ್ರಾರ್ಥಿಸುತ್ತೇವೆ.

ಮಳವಳ್ಳಿ.—ಈ ಊರಿನಲ್ಲಿ ಓಡೋಡೆಯಿಂದ ಬಂದ ಪ್ಲೇಗ್ ರೋಗಿಗೆ ಗುಣವಾಗುತ್ತಿದೆ. ಈಗ್ಗೆ 10-12 ದಿವಸಗಳಿಂದಲೂ ಈ ಪ್ರಾಂತ್ಯ ರಾಗಿ ಬೆಳೆ ಆದ ಬೆಳೆಗಳಿಗೆಲ್ಲಾ ಹುಳು ಹತ್ತಿ ದಪ್ಪ ಕಡ್ಡಿ ಮಾತ್ರ ನಿಂತಿರುತ್ತೆ. ಹುಳುಗಳು ಸುಮಾರು ಎರಡಂಗುಲ ಉದ್ದವಿದ್ದು ಹರಳು ಗಿಡದ ಹುಳುವಿನಂತೆ ಇವೆ. ಇದು ಹಗಲು ವೇಳೆ ಪೈರುಗಳ ಬುಡದಲ್ಲಿ ಮಂದೆ ಮಂದೆಯಾಗಿದ್ದು, ಸಾಯಂಕಾಲವಾಗುತ್ತಲೂ ಮೇಲೆ ಹೊರಟು ಪೈರನ್ನು ನಾಶಮಾಡಲಿಕ್ಕೆ ಮೊದಲುಮಾಡಿ, ಒಂದು ರಾತ್ರಿಗೆ ಸುಮಾರು ಒಂದೆರಡು ಹೊಲಗಳನ್ನು ನಿರ್ಮೂಲವಾಗಿಬಿಡುವುದಲ್ಲದೆ ಹೊಲದಿಂದ ಹೊಲಕ್ಕೆ ಹೋಗುವಾಗ್ಗೆ ಮಧ್ಯದ ತವರಿಯಲ್ಲಿರುವ ಹುಲ್ಲನ್ನೂ ಸಹಾ ತಿಂದುಬಿಡುತ್ತೆ. ಇದಕ್ಕಾಗಿ ರೈತರೆಲ್ಲಾ ಬಹಳ ವ್ಯಸನಪಡುತ್ತಾ, ಹಿರಿಯರ ದಿವಸದಿಂದಲೂ ಇಂಥಾ ಹುಳುಗಳನ್ನು ನೋಡಿಲ್ಲವೆಂದು ಹೇಳುತ್ತಾರೆ. ಇದಕ್ಕೆ ಮಾಡಿದ ಪ್ರತೀಕಾರವೆಲ್ಲಾ ವ್ಯರ್ಥವಾಗುತ್ತಿದೆ.—ನಮ್ಮ ಆಸ್ಪತ್ರೆ ಡಾಕ್ಟರವರು ಈ ಊರು ಗರಲ್ಸ್ ಸ್ಕೂಲ್ ಅಭಿವೃದ್ಧಿ ವಿಷಯದಲ್ಲಿ ಮಾಡುತ್ತಿರುವ ನಿಗಾ ಸ್ತೋತ್ರಾರ್ಹವಾದುದು. ಇವರಂತೆ ಬಾಕೀ ಮೆಂಬರುಗಳೂ ನಿಗಾ ಕೊಡುವುದಾದರೆ ಸ್ಕೂಲ್ ತುಂಬಾ ಅಭಿವೃದ್ಧಿಗೆ ಬರುತ್ತೆ.—ಮದ್ದೂರಿನಿಂದ ಟ್ಯಾಕ್ಸಿಗೆ ಜನಗಳ ಅನುಕೂಲಕ್ಕಾಗಿ ಮೋಟರು ಗಾಡಿ ಇಟ್ಟಿದಾರೆ. ಆದರೆ ಛಾರ್ಜು ಜಾಸ್ತಿ ಎಂದು ಹೇಳಿಕೊಳ್ಳುವರು. ಆದಾಗ್ಯೂ ಗಾಡಿಗೇನೋ ಸ್ಥಳವಿಲ್ಲದಂತೆ ಭರ್ತಿ ಇದ್ದೇ ಇರುತ್ತೆ.

ಹೊಳೇನರಸೀಪುರ.—ಈ ಊರಿನಲ್ಲಿ ಬಾಲಿಕಾ ಪಾಠಶಾಲೆಯು 1887ನೆ ಜನವರಿ ಲಾಗಾಯಿತು ಪ್ರಾರಂಭವಾಗಿರುತ್ತೆ. ಈ ಊರಿನಲ್ಲಿ ಬಾಡಿಗೆ ಕೊಟ್ಟಾಗ್ಯೂ ಕಟ್ಟಡಗಳಿಗೆ ಗಾಳಿ, ಬೆಳಕು ಇಲ್ಲದೆ ಆರೋಗ್ಯಕ್ಕೆ ಕೊರತೆಯುಂಟಾದದ್ದು ರೆವ್. ಎಚ್. ಸ್ಪೆನ್ಸರ್ ಸಾಹೇಬರವರ ಗಮನಕ್ಕೆ ಬಂದು, ಅವರು ಇಲ್ಲಿನ ತಾಲ್ಲೋಕ್ ಕಛೇರಿ ಸಮೀಪದ ಮೈದಾನದಲ್ಲಿ ಉಚಿತವಾಗಿ ಸ್ಥಳವನ್ನು ಪಡೆದು ಕಟ್ಟಡದ ಅಸ್ತಿವಾರ ವಗೈರೆ ಹಾಕಿ ಕಟ್ಟಡವು ಪೂರೈಸುತ್ತಾ ಬರುವುದರೊಳಗೇ ಮೈಸೂರಿಗೆ ವರ್ಗಪಟ್ಟು ಹೋಗಿರೋಣದರಿಂದ ಇವರು ನೂತನ ಸ್ಕೂಲ್ ಪ್ರವೇಶಕಾಲದಲ್ಲಿ ಹಾಜರಿಲ್ಲವೆಂಬ ಕೊರತೆ ಒಂದು ಕೊರತೆ ಇದ್ದಾಗ್ಯೂ, ಇವರ ಸ್ಥಾನಕ್ಕೆ ದಯಮಾಡಿರುವ ರೆವ್. ಬ್ರಾಕ್‌ಬ್ಯಾಂಕ್ ಸಾಹೇಬರವರು ಹಾಸನದಿಂದ ಈ ಊರಿಗೆ ದಯಮಾಡುವಾಗ ದಾರಿಯಲ್ಲಿ ಆಕಸ್ಮಾತ್ ಬೈಸಿಕಲ್‌ನಿಂದ ಬಿದ್ದು ಪೆಟ್ಟಿನ ಬಾಧೆಯಲ್ಲಿದ್ದಾಗ್ಯೂ, ಅದನ್ನು ಗಣನೆಗೆ ತಾರದೆ ನೂತನ ಪಾಠಶಾಲಾ ಪ್ರವೇಶಕಾಲಕ್ಕೆ ದಯಮಾಡಿಸಿ ಕಾರ್ಯನಿರ್ವಾಹ ಮಾಡಿರುವುದಕ್ಕಾಗಿ ಬಹಳ ವಂದನೆಗಳನ್ನು ಮಾಡುತ್ತೇವೆ. ಕಳೆದ ತಾ|| 3ನೇ ಬುಧವಾರ ಬೆಳಿಗ್ಗೆ 8 ಘಂಟೆಗೆ ಈ ನೂತನ ಗೃಹಪ್ರವೇಶ ಕಾರ್ಯವನ್ನು ನೆರವೇರಿಸುವುದಾಗಿ ಒಪ್ಪಿ ಅ|| ಕಮಿಷನರ್ ಮ|| ಅಪ್ಪಣ್ಣಯ್ಯಂಗಾರ್ರವರು ತಮಗೆ ಶಿವಮೊಗ್ಗ ಡಿಸ್ಟ್ರಿಕ್ಟಿಗೆ ವರ್ಗವಾಗಿ ಛಾರ್ಜು ಕೊಟ್ಟಿದ್ದಾಗ್ಯೂ, ಪ್ರಯಾಣವನ್ನು ನಿಲ್ಲಿಸಿ ಈ ಕೆಲಸವೇ ಮುಖ್ಯವೆಂದು ಭಾವಿಸಿ ಇಲ್ಲಿಗೆ ದಯಮಾಡಿ ಅಗ್ರಾಸನವನ್ನು ವಹಿಸಿ, ಈ ಸ್ಕೂಲ್ ಕಟ್ಟಡವು ಏತಕ್ಕಾಗಿ ಮಾಡಿಸಲ್ಪಟ್ಟಿತೆಂಬುದನ್ನೂ, ಬಾಲಿಕೆಯರ ವಿದ್ಯಾಭ್ಯಾಸದಿಂದ ಉಂಟಾಗುವ ಪ್ರಯೋಜನವನ್ನೂ ಕುರಿತು ಕೊಂಚದೂರ ಉಪನ್ಯಾಸ ಮಾಡಿದರು. ಉಪದೇಶಿಗಳಾದ ಎ. ಸತ್ಯವೇದಯ್ಯನವರು ಸ್ಕೂಲ್ ರಿಪೋರ್ಟನ್ನು ಓದಿದರು. ಬಳಿಕ ಮರ್ಚಂಟ್ ಚೀಫ್ ಮ|| ಎಚ್. ಕೆ. ವೀರಬಸಪ್ಪನವರು ಪೂರ್ವದಲ್ಲಿದ್ದ ಸತ್ಯವತಿಯರುಗಳು ವಿದ್ಯಾವತಿಯರಾಗಿದ್ದರೆಂತಲೂ, ಅವರು ಲೋಕದಲ್ಲಿರತಕ್ಕ ಸ್ತ್ರೀಯರಿಗೆಲ್ಲಾ ಮೇಲ್ಪಂಕ್ತಿಯಾಗಿದ್ದಾರೆಂತಲೂ, 300 ವರ್ಷಗಳಿಂದೀಚೆಗೆ ಕಾರಣಾಂತರಗಳಿಂದ ಸ್ತ್ರೀವಿದ್ಯಾಭ್ಯಾಸವು ಕಮ್ಮಿಯಾಗಿ ಹುಟ್ಟತಕ್ಕ ಮಕ್ಕಳಿಗೆ ನೀತಿಮಾರ್ಗಗಳು ಬೋಧೆಯಾಗುವುದಕ್ಕೆ ಅವಕಾಶ ತಪ್ಪಿದ್ದರಿಂದಲೇ ಈಗಿನ ಹೀನಸ್ಥಿತಿಗೆ ಕಾರಣವಾಯಿತೆಂತಲೂ, ವಿದ್ಯಾವತಿಯಾದ ಸ್ತ್ರೀಯರು ತಮ್ಮ ಮಕ್ಕಳಿಗೆ ನೀತಿಮಾರ್ಗಗಳನ್ನು ಬೋಧಿಸುತ್ತಾ ಬಂದರೆ ಉತ್ತರೋತ್ತರ ಹೆಣ್ಣು ಗಂಡು ಮಕ್ಕಳು ನೀತಿವಂತರಾಗಿಯೂ ಬುದ್ಧಿ ಕುಶಲರಾಗಿಯೂ ಬೆಳೆಯುತ್ತಾರೆಂತಲೂ, ಅದ್ದರಿಂದ ಸ್ತ್ರೀಯರು ವಿದ್ಯಾವತಿಯರಾದರೆ ಸಂಸಾರಕೆಲಸಗಳು ಸರಿಹತ್ತವಾಗಿಯೂ ಅನ್ಯೋನ್ಯವಾಗಿಯೂ ನಡೆದು ಕೀರ್ತಿಯುಂಟಾಗುವುದೆಂತಲೂ ಬಹು ಸ್ವಾರಸ್ಯವಾದ ಉಪನ್ಯಾಸ ಮಾಡಿದ್ದಕ್ಕೆ ಅಲ್ಲಿ ನೆರೆದಿದ್ದ ಮಹಾಶಯರುಗಳು ಕರತಾಡನವನ್ನು ಮಾಡಿ ಬಹಳ ಕುತೂಹಲದಿಂದ ತಮ್ಮ ತಮ್ಮ ಮಕ್ಕಳನ್ನು ಪಾಠಶಾಲೆಗಳಿಗೆ ಕಳುಹಿಸಿಕೊಡುವುದಾಗಿ ಏಕಮುಖದಿಂದ ಘಂಟಾಘೋಷವಾಗಿ ಹೇಳಿದರು. ರೆವ್. ಬ್ರಾಕ್‌ಬ್ಯಾಂಕ್ ಸಾಹೇಬರವರು ಇದೇ ವಿಚಾರದಲ್ಲಿ ಇಂಗ್ಲೀಷಿನಲ್ಲಿ ಇನ್ನೂ ವಿಶೇಷವಾಗಿ ಹೇಳಿದ ಬಳಿಕ ಪ್ಲೀಡರ್ ಮ|| ರಾಮಣ್ಣನವರು ಈ ಸ್ಕೂಲಿನಲ್ಲಿ ಇಂಗ್ಲೀಷ್ ಪಾಠ ಪ್ರಾರಂಭವಾಗಿ ಕೊಂಚಕಾಲವಾಗಿದ್ದಾಗ್ಯೂ ಬಾಲಿಕೆಯರುಗಳು ಪಾಠಗಳನ್ನು ಬಹುಮಟ್ಟಿಗೆ ಹೆಚ್ಚಾಗಿ ಅಭ್ಯಾಸ ಮಾಡಿರುವುದಾಗಿಯೂ, ಮುಂದೆ ಈ ಸ್ಕೂಲಿಗೆ ಒಬ್ಬ ಇಂಗ್ಲೀಷ್ ಟ್ರೈನಿಂಗ್ ಉಪಾಧ್ಯನನ್ನು ಮಾಡಿದರೆ ಅನುಕೂಲವೆಂತ ವಗೈರೆ ಹೇಳಿದರು. ಈ ಸ್ಕೂಲಿಗೆ ಕಾಂಪೌಂಡ್ ಗೇಟ್ ಇಲ್ಲವೆಂದು ತಿಳಿದು ನಮ್ಮ ಅಮಲ್ದಾರ್ ಮ|| ಜಿ. ವೆಂಕಟರಾಯರವರು ಅಲ್ಲಿ ನೆರೆದಿದ್ದ ಮಹಾಶಯರುಗಳಿಗೆಲ್ಲಾ ತೋರಿಸಿ ಆಗಲೇ ಸ್ವಲ್ಪ ಚಂದಾ ಮೊಬಲಗನ್ನು ಹಾಕಿಸಿರುವುದಲ್ಲದೆ ಈ ಕೆಲಸವನ್ನು ತಾವೇ ಮಾಡಿಸಿಕೊಡುವುದಾಗಿ ಸಹ ವಾಗ್ದಾನಮಾಡಿರುವಂತೆ ಕೇಳುತ್ತೇನೆ. ಅನಂತರ ಬಾಲಿಕೆಯರುಗಳ ಮನೋಹರವಾದ ಗಾನವು ನೆರವೇರಿತು. ನಮ್ಮನ್ನಾಳುವ ಶ್ರೀಮದಿಂಡಿಯಾ ಚಕ್ರವರ್ತಿಗಳ ಮತ್ತು ನಮ್ಮ ಮಹಾರಾಜರವರ ಶ್ರೇಯಃಪ್ರಾರ್ಥನೆಯನ್ನು ಮಾಡಿ ಬಾಲಿಕೆಯರು ಮಂಗಳಗಾನದಿಂದಲೂ ವಾದ್ಯಘೋಷದಿಂದಲೂ ಕರೆದು ಮ|| ಅಪ್ಪಣ್ಣಯ್ಯಂಗಾರ್ರು ನೂತನ ಪಾಠಶಾಲೆಯ ಬಾಗಿಲನ್ನು ತೆರೆದು ಗೃಹಪ್ರವೇಶ ಮಾಡಿದರು. ಅನಂತರ ಹಾರ ತುರಾಯಿಗಳನ್ನು ಒಪ್ಪಿಸಿದರು. ನೆರೆದಿದ್ದ ಮಹಾಶಯರುಗಳಿಗೆಲ್ಲಾ ಪಾನ್ ತಾಂಬೂಲ ಹಂಚಲ್ಪಟ್ಟಿತು. ಆ ದಿವಸ ಸಾಯಂಕಾಲ ನಮ್ಮ ಅ|| ಕಮಿಷನರ್ ಮ|| ಅಪ್ಪಣ್ಣಯ್ಯಂಗಾರ್ರು ವರ್ಗಪಟ್ಟ ಸ್ಥಳಕ್ಕೆ ಹೊರಟುಹೋಗುವರು. ಇವರು ನಮ್ಮಗಳಿಗೆ ಮಾಡಿದ ಮಹದುಪಕಾರಕ್ಕೆ ಪ್ರತಿಯಾಗಿ ಕೃತಜ್ಞತೆಯನ್ನು ತೋರಿಸುವುದಕ್ಕಾಗಿ ಈ ಪುರವಾಸಿಗಳೆಲ್ಲರೂ ಇವರಿಗೆ ಟೆನ್ನಿಸ್ ಕೋರ್ಟಿನಲ್ಲಿ ಟೀಪಾರ್ಟಿ ಮಾಡಿದ್ದಲ್ಲದೆ ಮಂಗಳವಾದ್ಯ ಸಮೇತ ಕಾರೊನೇಷನ್ ಹಾಲಿಗೆ ಕರೆದುಕೊಂಡು ಬಂದು ಅವರಿಗೆ ಹಾರ ತುರಾಯಿಗಳನ್ನು ಒಪ್ಪಿಸಿ, ಅವರ ಶ್ರೇಯಃಪ್ರಾರ್ಥನೆಯನ್ನು ಮಾಡಿ ಕಳುಹಿಸಲ್ಪಟ್ಟರು.

ಇಂಪೀರಿಯಲ್ ಇಂಡಿಯಾ ರಿಲೀಫ್ ಫಂಡು.

"ವೃತ್ತಾಂತ ಪತ್ರಿಕೆ" ಆಫೀಸ್ ಚಂದಾ ಪಟ್ಟಿ.

ಹಿಂದೆ ವಸೂಲಾಗಿರುವ ಚಂದಾ	....	ರೂ. 195-1-0
ವೆಸ್ಲಿ ಗಿಲ್ಡ್, ಮೈಸೂರು	....	,, 8-0-4
ಮಿಸೆಸ್ ಮಾರ್ಥಮ್ಮ ಲೂಕ್, ಮೈಸೂರು	......	,, 1-0-0
ಎಸ್. ಎನ್. ಸುಮಿತ್ರಮ್ಮ, ಚಿಕ್ಕನಾಯ್ಕನಹಳ್ಳಿ, ಇವರ ಮೂಲಕ:-ಗರಲ್ಸ್‌ಸ್ಕೂಲ್ ಬಾಲಕಿಯರು ಶ್ರೀ ಲಕ್ಷ್ಮಿದೇವಮ್ಮ, ಲಕ್ಕಮ್ಮ, ಶ್ರೀರಂಗಮ್ಮ: ತಲಾ ರೂ. 1, ಮಿಡ್ ವೈಫ್ ತಾಯಮ್ಮನವರ ಕುಮಾರಿ ಸುಮಿತ್ರಮ್ಮ ರೂ. 2: ಜುಮ್ಲಾ		6-9-0
	ಜುಮ್ಲಾ ರೂಪಾಯಿ	209-10-4

ತಾಲ್ಲೂಕು ವರ್ತಮಾನ.

ಹಾಸನ.—ಚನ್ನರಾಯಪಟ್ಟಣದ ಸಬ್ ಡಿವಿಷನ್ ಆಫೀಸರ್ ಮ|| ಎಸ್. ಎನ್. ಅಪ್ಪಣ್ಣಯ್ಯಂಗಾರ್‍ರವರು ಶಿವಮೊಗ್ಗೆಗೆ ವರ್ಗಪಟ್ಟು ಪ್ರಯಾಣಮಾಡಿದರು. ಇವರು ಈ ಡಿಸ್ಟ್ರಿಕ್ಟಿನಲ್ಲಿ ಎಂಟು ವರ್ಷಗಳಿಂದ ಅಮಲ್ದಾರರಾಯೂ, ಅ|| ಕಮಾಷನರಾಗಿಯೂ ಇದ್ದುಕೊಂಡು ಪ್ರಜೆಗಳಿಗೆ ನಾನಾ ವಿಧದಲ್ಲಿ ಮಹೋಪಕಾರಿಗಳಾಗಿದ್ದರು. ಇವರನ್ನು ಇಲ್ಲಿನವರು ಅಗಲಬೇಕಾಗಿ ಬಂದುದಕ್ಕೆ ಮಹಾ ವ್ಯಸನಾಕ್ರಾಂತರಾಗಿ, ತಮ್ಮ ಪ್ರೀತಿ ವಿಶ್ವಾಸಗಳನ್ನು ನಾನಾ ಸತ್ಕಾರಗಳ ಮೂಲಕ ಒಂದು ವಾರದವರೆಗೂ ವಿರಾಮವಿಲ್ಲದ ರೀತಿ ಪ್ರಕಾಶಪಡಿಸಿದರು. ನಮ್ಮ ಡೆಪ್ಯುಟಿ ಕಮಿಷನರ್ ಮಿ|| ವೆದರಾಲ್ ದೊರೆಯವರೂ ಕೂಡ ಇವರನ್ನು ಬಹಳವಾಗಿ ಸತ್ಕರಿಸಿದರು. ಇದುವರೆಗೆ ಇಲ್ಲಿಗೆ ಬಂದ ಅ|| ಕಮಿಷನರುಗಳಲ್ಲಿ ಯಾರೂ ಇಷ್ಟರ ಮಟ್ಟಿನ ಜನಾನುರಾಗವನ್ನು ಪಡೆದಂತೆ ಕಾಣಲಿಲ್ಲವೆಂದು ಎಲ್ಲರೂ ಹೇಳುತ್ತಾರೆ. ಇವರ ಬದಲಿಗೆ ಮ|| ಸಿ. ಗೋಪಾಲಾಚಾರ್‍ರವರು ಬಂದು ಇದಾರೆ.—ಟವನ್ ಮ್ಯುನಿಸಿಪಾಲಿಟಿಯ ವೈಸ್ ಪ್ರೆಸಿಡೆಂಟ್ ಕೆಲಸದ ಭಾರವನ್ನು ಪುನಹ ಮ|| ಗೋಪಾಲರಾಜೆಅರಸಿನವರೇ ವಹಿಸಿಕೊಂಡಿದಾರೆ. ಕಳೆದ ಮಾರ್ಚಿ ತಿಂಗಳಿನಿಂದ ಈಚೆಗೆ ಈ ಮುನಿಸಿಪಾಲಿಟಿಗೆ ಐದು ಸಾರಿ ವೈಸ್ ಪ್ರೆಸಿಡೆಂಟರ ಬದಲಾವಣೆ ಆಯಿತು. ಕೆಲಸಗಳು ಎಷ್ಟು ಚುರುಕಾಗಿಯೂ, ಕ್ರಮವಾಗಿಯೂ, ವಿಚಕ್ಷಣೆಯಾಗಿಯೂ ನಡೆಯುತ್ತಿರಬಹುದೋ ಊಹಿಸಿಕೊಳ್ಳಬಹುದು. ಬಹಳ ಹಣವನ್ನು ಖರ್ಚುಮಾಡಿದರೂ, ವಿಶೇಷಕಾಲ ಪ್ರಯಾಸಪಟ್ಟರೂ ಇಲ್ಲಿನ ಸೀನರಿಗೆ ಮುಖ್ಯಾಧಾರವಾದ ದೇವಿಕೆರೆಯ ಕೆಲಸ ಸರಿಯಾಗಿ ಪೂರೈಸಲಿಲ್ಲ.—ಇಲ್ಲಿನ ಸಪ್ತಮಾತೃಕೆಗಳ ದೇವಾಲಯದಲ್ಲಿ ಬಾಗಿಲು ತೆರೆಯಲ್ಪಟ್ಟು ಪದ್ಧತಿಯ ಪ್ರಕಾರ ಪೂಜೆ ಉತ್ಸವಾದಿಗಳು ವಿಜೃಂಭಣೆಯಿಂದ ನಡೆದವು. ಸ್ಥಳ ಪರಸ್ಥಳಗಳ ವಿಶೇಷ ಜನರು ಸೇರಿದ್ದರು. ಕಳೆದ ಬುಧವಾರಕ್ಕೆ ಎಲ್ಲಾ ಅಂತ್ಯವಾಗಿ ದೇವಾಲಯದ ಬಾಗಿಲು ಮುಚ್ಚಲ್ಪಟ್ಟಿತು. ಇನ್ನು ಒಂದು ವರ್ಷದವರೆಗೂ ತೆರೆಯುವುದೇ ಇಲ್ಲ.—ಈ ಪ್ರಾಂತ್ಯ ಹಸ್ತ, ಚಿತ್ತ ಮಳೆಗಳು ತಕ್ಕಮಟ್ಟಿಗೂ ಆಯಿತು. ಆದರೆ ಹಿಂದಿನ ವರ್ಷಗಳಿಗಿಂತ ಕಡಮೆ. ಇನ್ನೂ ಅನೇಕ ಕೆರೆಗಳು ತುಂಬಲೇ ಇಲ್ಲ. ಪೈರುಗಳಿಗೇನೋ ಸಾಕಾದಷ್ಟಾಗಿದೆ ಎನ್ನುತ್ತಾರೆ. ಧಾರಣೆವಾಸಿಗಳು ಬಹುಟ್ಟಿಗೆ ಏರಿಹೋಗಿವೆ. ಚುಕ್ಕುಮುತ್ತಲೂ ರೈಲ್ ರಸ್ತೆಯ ಕಾಮಗಾರಿ ನಡೆಯುತ್ತಿರುವುದರಿಂದ ಕೂಲೀ ಜನರಿಗೆ ಜೀವನ ನಡೆಯುತ್ತಲಿದೆ.—ಥಿಯೋಸಾಫಿಕಲ್ ಸೊಸೈಟಿ ಮೈಸೂರು ಶಾಖೆಯ ಇನ್ಸ್‌ಪೆಕ್ಟರ್ ಮ|| ಕೆ. ನರಹರಿಶಾಸ್ತ್ರಿಗಳು ಇಲ್ಲಿಗೆ ಬಂದು ಕಳೆದ ವಾರ ಜನ ಸಾಮಾನ್ಯಕ್ಕೆಲ್ಲಾ ಪ್ರಿಯವೂ ಹಿತಕರವೂ ಆದ ಉಪನ್ಯಾಸಗಳನ್ನೂ ಹರಿಕಥೆಯನ್ನೂ ಮಾಡಿದರು. ನೂರಾರು ಜನರವರೆಗೂ ಕೇಳಿ ಸಂತೋಷಪಟ್ಟರು.—ಈ ತಾಲ್ಲೂಕಿಗೆ ಸೇರಿದ ಕಟ್ಟಾಯದಲ್ಲಿ ಒಬ್ಬ ಮುದುಕನು ಒಬ್ಬ ಯುವತಿಯನ್ನು ಕುತ್ತಿಗೇ ಹಿಸುಕಿ ಕೊಂದುಹಾಕಿ ಪರಾರಿಯಾದನೆಂದು ಪೋಲೀಸಿಗೆ ತಿಳಿಯಿತು. ಅವರು ಅಪರಾಧಿಯನ್ನು ಪತ್ತೆಮಾಡುತ್ತಿದಾರೆ. ಹೆಣವು ಡಾಕ್ಟರ ಪರೀಕ್ಷೆ ಆಯಿತು.

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು.

ಕಳೆದ ಗುರುವಾರ ಬೆಳಗ್ಗೆ ಮೈಸೂರು ಮ್ಯುನಿಸಿಪಲ್ ಕೌನ್ಸೆಲರುಗಳು ಟೌನ್ ಹಾಲ್ ಮಂದಿರದಲ್ಲಿ ಸಭೆ ಸೇರಿ ತೀರ್ಮಾನವಾಡಿರುವ ವಿಚಾರಗಳೇನೆಂದರೆ—ಕಸರ್ ಹಾಕೀನಲ್ಲೂ ನಜರಬಾದ್ ರಸ್ತೆಯಲ್ಲೂ ಪೋಲೀ ದನಗಳು ತಿರುಗದಂತೆ ನೋಡಿಕೊಳ್ಳುವುದಕ್ಕೆ 6 ರೂಪಾಯಿ ತಲಬಿನ ಮೇಲೆ ಇಬ್ಬರು ಜವಾನರನ್ನು ನೇಮಿಸಬೇಕೆಂಬ ವಿಷಯ ಚರ್ಚೆಯಾಗಿ ಈ ಸಿಬ್ಬಂದಿ ಅವಶ್ಯವಿಲ್ಲವೆಂದು ತೀರ್ಮಾನವಾಯಿತು.—ಮ್ಯುನಿಸಿಪಲ್ ಕಾನೂನ್ ಮೀರಿರುತ್ತಾರೆಂಬ ವರ್ತಮಾನವನ್ನು ತಂದು ತಿಳಿಸುವವರಿಗೆ ಬಹುಮಾನ ಕೊಡಬಹುದೆಂಬ ಠರಾವು ಬಿದ್ದುಹೋಯಿತು.—ಟ್ರಸ್ಟ್ ಬೋರ್ಡಿನವರು ಸರ್ಕಾರಿ ಹಣದಿಂದ ಬಚ್ಚಲ ರೊಚ್ಚು ನೀರನ್ನು ಸಾಗಿಸುವುದಕ್ಕೆ ಪಟ್ಟಣದ ಎಲ್ಲಾ ಕೇರಿ ಬೀದಿಗಳಲ್ಲೂ ನಲ್ಲಿಗಳನ್ನು ಹಾಕಿಸುತ್ತಿದಾರೆ. ಪ್ರತಿ ಒಂದು ಮನೆಗೂ ಇಂಥಾ ನಲ್ಲಿಯ ಸಂಬಂಧವನ್ನು ಕಲ್ಪಿಸಿಕೊಟ್ಟರೆ ಮನೆಯವರಿಗೆ ಒಂದು ಸೆಸ್ಸನ್ನು ಹಾಕಬೇಕೆಂದು ಸೂಚಿಸಲಾಯಿತು. ಮೆಂಬರುಗಳು ಅಂಥಾ ತೆರಿಗೆಯನ್ನು ಹಾಕಬಹುದೆಂದು ಒಪ್ಪಿಕೊಂಡರು. ಮೊದಲನೇ ಬಚ್ಚಲಿಗೆ ಮನೆಯವರಿಂದ ವರುಷಕ್ಕೆ 12 ಆಣೆಯಂತೆಯೂ, ಒಂದಕ್ಕಿಂತ ಹೆಚ್ಚು ಬಚ್ಚಲ ನಲ್ಲಿಗಳನ್ನು ಇಡಿಸಿಕೊಂಡರೆ ಅಂಥಾದ್ದಕ್ಕೆ ವರುಷಕ್ಕೆ ರೂ. 1-4-0 ಯಂತೆಯೂ, ಈ ನಲ್ಲಿ ಕಾಮಗಾರಿಯನ್ನು ಮನೆಯವರೇ ಮಾಡಿಸಿಕೊಂಡರೆ 12 ಆಣೆ ಮಾತ್ರ ತೆರಿಗೆ ಹಾಕುವಂತೆಯೂ ಇತ್ಯರ್ಥಮಾಡಿದರು.—ರಾಜಧಾನಿಗೆ ಇನ್ನೂ 400 ವಿದ್ಯುಚ್ಛಕ್ತಿಯ ದೀಪಗಳನ್ನು ಇಡಿಸಿಕೊಳ್ಳಬಹುದೆಂದು ಸರ್ಕಾರದವರು ಸ್ಯಾಂಕ್ಷನ್ ಮಾಡಿದಾರೆ. ಪೀನಲ್ ಹಾಕೀನ ಸಿಬ್ಬಂದಿಯವರಿಗೆ ಒಂದು ರೂಪಾಯಿ ಸಂಬಳ ಬಡ್ತಿಮಾಡಬಹುದೆಂದೂ, ಪಶುವೈದ್ಯದ ಇನ್ಸ್‌ಪೆಕ್ಟರ ಸಂಬಳವನ್ನು 30 ರಿಂದ 35 ರೂಪಾಯಿಗೆ ಹೆಚ್ಚಿಸಬಹುದೆಂದೂ ಗವರ್ನಮೆಂಟ್ ಸ್ಯಾಂಕ್ಷನ್ ಆಗಿದೆ.

ಮ|| ದೊಡ್ಡಯ್ಯನವರು ತಮ್ಮ ಮನೆ ಪಕ್ಕದಲ್ಲಿರುವ ತೋಟದೊಳಗೆ ಛತ್ರದ ಮಿಷನ್ ಇಟ್ಟುಕೊಂಡು ನಡಿಸುವುದಕ್ಕೆ ಅವಕಾಶಕೊಡಬೇಕೆಂದು ಕೇಳಿಕೊಂಡಿದ್ದರು. ಡೆಪ್ಯುಟಿ ಸ್ಯಾನಿಟರಿ ಕಮಿಷನರವರು ಸ್ಥಳ ಅಜಮಾಯಿಷಿಯಿಂದ ಈ ಕಾರ್ಖಾನೆ ಇಡಲು ಅಪ್ಪಣೆ ಕೊಡಕೂಡದೆಂದೂ, ಅದರಲ್ಲಿ ಅನನುಕೂಲಗಳಿರುತ್ತವೆಂದೂ ಅಭಿಪ್ರಾಯ ಪಟ್ಟರು. ಮೆಂಬರುಗಳು ಈ ವಿಚಾರವನ್ನು ಚರ್ಚೆಮಾಡಿ ಓಟ್ ಹಾಕಿದ್ದರಲ್ಲಿ ಕಾರ್ಖಾನೆ ಇಡಲು ಮ|| ದೊಡ್ಡಯ್ಯನವರಿಗೆ ಅಪ್ಪಣೆ ಕೊಡಬಹುದೆಂದು ಬಹುಮತವಾಯಿತು. [ಇದನ್ನು ಗವರ್ನಮೆಂಟಿನವರು ಒಪ್ಪಿ ಸ್ಯಾಂಕ್ಷನ್ ಮಾಡಬೇಕಾಗಿದೆ.—ಎಡಿ.] ದೇವರಾಜ ಮಾರ್ಕೆಟ್ಟಿನೊಳಗೆ ಪೋಲೀ ದನಗಳ ಕಾಟವನ್ನು ತಪ್ಪಿಸುವುದಕ್ಕೋಸ್ಕರ ಅವುಗಳನ್ನು ಹಿಡಿದು ದೊಡ್ಡಿಗೆ ಕೂಡಿದವರಿಗೆ ರಾಸು ಒಂದಕ್ಕೆ ಒಂದಾಣೆ ಜಾಸ್ತಿ ಇನಾಮು ಕೊಡಬೇಕೆಂಬ ವಿಚಾರ ಚರ್ಚೆಗೆ ಬಂದು ಇದು ಅವಶ್ಯವಿಲ್ಲವೆಂದು ಇತ್ಯರ್ಥವಾಯಿತು.—ಬಾಡಿಗೆ ಗಾಡಿಗಳ ಕಾನೂನಿನಂತೆ ಬಾಡಿಗೆ ಹೊಡೆಯುವವರು ನಡೆದುಕೊಳ್ಳುತ್ತಾರೆಯೋ ಇಲ್ಲವೋ ಎಂಬುದನ್ನು ಉಸ್ತುವಾರಿ ಇಟ್ಟು ನೋಡಿಕೊಳ್ಳುವುದಕ್ಕೋಸ್ಕರ ಹೊಸ ಸಿಬ್ಬಂದಿಯನ್ನು ನೇಮಿಸಬಹುದೆಂದು ಮೆಂಬರುಗಳು ಒಪ್ಪಿಕೊಂಡರು.—ಮಿ|| ಟಿ. ಎನ್. ಮಿಾರ್ ಕಮಾಲುದ್ದೀನ್ ಅಲ್ಲಿಖಾನ್‌ರವರು ಚಾಮರಾಜಪೇಟೆಯಲ್ಲಿ ತಮ್ಮ ಬಾಬತು ದಿವಾನ್ ಖಾನೆ ಎಂಬ ಕಟ್ಟಡವನ್ನು ಸ್ಕೂಲು ಇಡುವುದಕ್ಕಾಗಿ ಮ್ಯುನಿಸಿಪಾಲಿಟಿಗೆ ವಹಿಸಿರುತ್ತೇವೆಂದು ಕಾಗದ ಬರೆದಿದ್ದರು. ಮೆಂಬರುಗಳು ಬಹು ಸಂತೋಷದಿಂದ ಆ ಕಟ್ಟಡವನ್ನು ವಹಿಸಿಕೊಂಡು ಅವರನ್ನು ವಿಶೇಷವಾಗಿ ವಂದನೆ ಮಾಡಿರುತ್ತಾರೆ.—ಮ್ಯುನಿಸಿಪಾಲಿಟಿಯ ಪರವಾಗಿ ಮ|| ಎಂ. ವಿ ವೆಂಕಟಕೃಷ್ಣಯ್ಯನವರೂ, ಮ|| ಎಂ. ಸಿ. ರಂಗಯ್ಯಂಗಾರ್‍ರೂ ಟ್ರಸ್ಟ್ ಬೋರ್ಡಿನ ಮೆಂಬರಾಗಿರತಕ್ಕದ್ದೆಂದು ಒಪ್ಪಲಾಯಿತು.—ಮ್ಯುನಿಸಿಪಲ್ ಆಸ್ಪತ್ರೆಗಳಲ್ಲಿ ಕೆಲಸ ಮಾಡುವ ಸರ್ಕಾರಿ ವೈದ್ಯರಿಗೆ ಮನೆ ಬಾಡಿಗೆಗಳನ್ನು ಮ್ಯುನಿಸಿಪಾಲಿಟಿಯಿಂದ ಕೊಡಬೇಕೆಂದು ಸೀನಿಯರ್ ಸರ್ಜನ್‌ರವರು ಬರೆದಿದ್ದರು. ಅವರಿಗೆ ಈಗ ಸಲ್ಲುವ ಲೋಕಲ್ ಅಲೋಯನ್ಸನ್ನು ಸರ್ಕಾರದವರು ವಹಿಸಿಕೊಳ್ಳುವ ಪಕ್ಷಕ್ಕೆ ಈ ಖರ್ಚಿನಲ್ಲಿ ಮೂರನೇ ಒಂದು ಭಾಗವನ್ನು ಮ್ಯುನಿಸಿಪಾಲಿಟಿಯಿಂದ ಕೊಡಬಹುದೆಂದು ಮೆಂಬರುಗಳು ಒಪ್ಪಿಕೊಂಡರು.

ಒಳದೇಶದ ವೃತ್ತಾಂತಗಳು.

ಈ ವಾರ ನಮ್ಮ ಪತ್ರಿಕೆಯು ಹತ್ತು ಪುಟಗಳುಳ್ಳದ್ದಾಗಿದೆ.

ನಮ್ಮ ದಿವಾನ್‌ರವರು ಸೆಕ್ರೆಟರಿಗಳ ಸಮೇತ ಕಳೆದ ಭಾನುವಾರ ರಾಜಧಾನಿಯಿಂದ ಬೆಂಗಳೂರಿಗೆ ದಯಮಾಡಿದರು.

ಶ್ರೀಮನ್ ಮಹಾರಾಜರವರು ಕೊಡಗಿನ ಪ್ರಯಾಣವನ್ನು ನಿಲ್ಲಿಸಿ, ಉತ್ತರ ದೇಶಕ್ಕೆ ದಯಮಾಡುವವರಾಗಿದಾರೆಂದೂ, ದೆಹಲಿಯಲ್ಲಿ ವೈಸ್‌ರಾಯರವರ ಭೇಟಿಯಾಗುವುದೆಂದೂ ವರ್ತಮಾನವಿದೆ.

ಚಿತ್ರದುರ್ಗದ ಜಯದೇವ ಮುರುಘರಾಜೇಂದ್ರ ಸ್ವಾಮಿಗಳು ಕರ್ನಾಟಕ ವಿದ್ಯಾಶಾಲೆಯಲ್ಲಿ ತಮ್ಮ ಮಠದ ಹೆಸರಿನ ಮೇಲೆ ವೇತನಗಳನ್ನು ಕೊಡಬೇಕೆಂದು 5,000 ರೂಪಾಯಿ ಚಂದಾ ಕಳುಹಿಸಿದರೆಂದು ಕೇಳಿ ಸಂತೋಷಪಡುತ್ತೇವೆ.

ಕಳೆದ ಅಕ್ಟೋಬರ್ ತಾ. 27 ರವರೆಗೆ ಇಂಪೀರಿಯಲ್ ಇಂಡಿಯಾ ರಿಲೀಫ್ ಫಂಡಿಗೆ ಚಿಂತಾಮಣಿ ತಾಲ್ಲೂಕಿನಲ್ಲಿ 1,145 ರೂಪಾಯಿ ಚಂದಾ ವಸೂಲಾಗಿವೆಯೆಂದೂ, ಅದರಲ್ಲಿ ರೂ. 715-6-0 ಖಜಾನೆಗೆ ಪಾವತಿಯಾಗಿದೆಯೆಂದೂ ಸೆಕ್ರೆಟರಿ ಮ|| ಎ. ರಾಮರಾಯರು ತಿಳಿಸುತ್ತಾರೆ.

ರಾಜಧಾನಿಯಲ್ಲಿ ಕಳೆದ ಸೋಮವಾರ ಸುಮಾರು 2 ಅಂಗುಲವೂ, ಮರುದಿನ 1 ಅಂಗುಲವೂ ಮಳೆ ಸುರಿಯಿತು. ಸೋಮವಾರ ಬೆಳಗ್ಗೆ ಪ್ರಾರಂಭವಾದ ಮಳೆ ಸಾಯಂಕಾಲದ ತನಕ ನಿಲ್ಲದೆ ಸುರಿಯುತ್ತಲೇ ಇತ್ತು; ಮಂಗಳವಾರ ಸಾಯಂಕಾಲ ಸ್ವಲ್ಪಹೊತ್ತಿನಲ್ಲೇ ಬಹಳ ಬಿರುಸಾದ ಮಳೆ ಬಂತು.

ಮಾಗಡಿ ತಾಲ್ಲೂಕ್ ಕಚೇರಿಯಿಂದ—ಈ ತಾಲ್ಲೂಕಿನಲ್ಲಿ ಇಂಡಿಯನ್ ರಿಲೀಫ್ ಫಂಡಿಗೋಸ್ಕರ ವಸೂಲಾದ ರೂ. 181-11-0 ನ್ನು ತಾಲ್ಲೂಕು ಮುಜರೂರು ಟ್ರೆಜರಿಗೆ ತಾ|| 31 ರಲ್ಲಿ ಜಮಾ ಮಾಡಿರುತ್ತೆ. ಈ ಫಂಡಿಗೋಸ್ಕರ ಈವರೆಗೆ ಈ ತಾಲ್ಲೂಕಿನಲ್ಲಿ ರೂ. 250-12-11 ಪೈ ವಸೂಲಾಗಿ ಟ್ರೆಜರಿಗೆ ಜಮಾ ಆಗಿರುತ್ತೆ.

ದಾವಣಗೆರೆಯಲ್ಲಿ ತಾಲ್ಲೂಕ್ ಕಚೇರಿಯ ಕಾರುಬಾರುಗಳು ಪ್ರಜೆಗಳಿಗೆ ಹಿತಕರವಾಗಿಲ್ಲವೆಂತಲೂ, ನೌಕರರೇ ಮುಂತಾದವರನ್ನು ವರ್ಗಮಾಡಬೇಕೆಂದೂ ಒಬ್ಬ ಬಾತ್ಮೀದಾರರು ಬರೆಯುತ್ತಾರೆ. ಪ್ರಜೆಗಳಲ್ಲಿ ಮುಖಂಡರಾದವರು ಈ ವಿಚಾರವನ್ನು ಡೆಪ್ಯುಟಿ ಕಮಿಷನರಿಗೂ ರೆವಿನ್ಯೂ ಕಮಿಷನರಿಗೂ ಕಾರಣಗಳ ಸಮೇತ ಬರೆದು ತಿಳಿಸಿದರೆ ಅವರು ಕ್ರಮಪಡಿಸುತ್ತಾರೆ.

ತೀರ್ಥಹಳ್ಳಿ ತಾಲ್ಲೂಕು ಹನ್ನೆರಿಗಿರಿಯಲ್ಲಿನ ಘಟ್ಟದಲ್ಲಿ ಈಗ್ಗೆ ಸುಮಾರು ಕೆಲವು ದಿವಸಗಳಿಂದಲೂ ಒಂದು ಹುಲಿಯು ಸೇರಿಕೊಂಡು ಸುತ್ತುಮುತ್ತಲಿನ ಹಳ್ಳಿಗಳಲ್ಲಿರುವ ಜಾನುವಾರುಗಳನ್ನು ಹಿಂಸೆಪಡಿಸುತ್ತಿದೆ. ಈಗಾಗಲೇ ಸಾಧಾರಣ 16-20 ಕಾಲ್ನಡೆ ಅದಕ್ಕೆ ತುತ್ತಾಗಿರುತ್ತೆ. ಅದನ್ನು ಬೇಗನೆ ಶಿಕಾರಿಮಾಡಿ ಕೊಂದುಹಾಕಿದರೆ ಗೋಕಾಯಿಗಳಿಗೆ ಕ್ಷೇಮವಾದೀತು.

ಶ್ರೀರಂಗಪಟ್ಟಣದ ತಾಲ್ಲೂಕು ಮೇಲುಕೋಟೆಯಲ್ಲಿ ಇಂಗ್ಲಿಷ್ ಮಾಸ್ಟರಾಗಿದ್ದ ಮ|| ಬಿ. ನರಹರಿಶಾಸ್ತ್ರಿಗಳು ಬಹಳ ಮುತುವರ್ಜಿಯಿಂದ ವಿದ್ಯೆ ಕಲಿಸಿ ಗ್ರಾಮಸ್ಥರ ವಿಶ್ವಾಸಕ್ಕೆ ಪಾತ್ರರಾಗಿದ್ದರು. ಇವರಿಗೆ ತಿಪಟೂರಿಗೆ ವರ್ಗವಾದದ್ದರಿಂದ ಪ್ರಜೆಗಳು ಅವರಿಗೆ 2-3 ದಿನ ಸಂತೋಷಕೂಟಗಳನ್ನು ನಡಿಸಿ ಸತ್ಕಾರ ಮಾಡಿ ಸಾಗಕಳುಹಿಸಿದರೆಂದು ಒಬ್ಬ ಬಾತ್ಮೀದಾರರು ಬರೆಯುತ್ತಾರೆ.

ಕಳೆದ ಶನಿವಾರ ರಾತ್ರಿ ರಾಜಧಾನಿಯ ಮಹಾರಾಜಾ ಕಾಲೇಜಿನಲ್ಲಿ ಪ್ರೈಮಿ ಪರಿಣಯವೆಂಬ ಸಂಸ್ಕೃತ ನಾಟಕವನ್ನು ಅಭಿನಯಿಸಿದರು. ಶ್ರೀಮನ್ ಮಹಾರಾಜರವರೂ, ದಿವಾನ್‌ರೇ ಮುಂತಾದ ಅಧಿಕಾರಿಗಳೂ ದಯಮಾಡಿದ್ದರು. ಈ ನಾಟಕವನ್ನು ವೇ|| ಮಂಡಿಕಲ್ ರಾಮಾಶಾಸ್ತ್ರಿಗಳು ರಚಿಸಿ, ಸರ್ದಾರ್ ಎಂ. ಕಾಂತರಾಜೆ ಅರಸ್, ಸಿ.ಎಸ್.ಐ ರವರ ಸಹಾಯಪಡೆದು ಪ್ರಕಟಿಸಿರುತ್ತಾರೆ.

ಬೆಂಗಳೂರು ಚೋರಿಪೇಟೆಯಲ್ಲಿರುವ ಮ|| ಸಿ ದೇವದತ್ತಯ್ಯನವರು ಒಂದು ಹೊಸ ತರದ ಸಚಿತ್ರ ಕನ್ನಡ ಅಕ್ಷರಮಾಲೆಯನ್ನು ಛಾಪಿಸಿ, ಅದರ ಒಂದು ಪ್ರತಿಯನ್ನು ನಮಗೆ ಕಳುಹಿಸಿಕೊಟ್ಟಿರುತ್ತಾರೆ. ಇದು ಬಹು ನೇತ್ರಾನಂದಕರವಾಗಿದೆ. ಇದರ ಕ್ರಯ 6 ಪೈ. ಮಕ್ಕಳು ಅಕ್ಷರಗಳ ಗುರುತುಗಳನ್ನೂ ಉಚ್ಚಾರಣೆಗಳನ್ನೂ ಸುಲಭವಾಗಿ ಕಲಿತುಕೊಳ್ಳುವುಕ್ಕೆ ಇದು ತುಂಬಾ ಸಹಕಾರಿಯಾಗಿರುವುದೆಂದು ನಾವು ನಂಬುತ್ತೇವೆ.

ಸಂಡೂರಿನ ಬಾತ್ಮೀದಾರರಿಂದ—ತಾ|| 20ನೇ ಮಂಗಳವಾರ ಮಧ್ಯಾಹ್ನ ಕೆಲವು ಒಡ್ಡರ ಗುಡಿಸಲುಗಳಿಗೆ ಬೆಂಕಿ ಬಿದ್ದು ಗಾಳಿಯಿಂದ ಹರಡುತ್ತಾ ಇರಲು ನಮ್ಮ ಸಂಸ್ಥಾನದ ಶ್ರೀಮನ್ ಮಹಾರಾಜರೇ ಖುದ್ದು ತಮ್ಮ ಪರಿವಾರದೊಂದಿಗೆ ಅಲ್ಲಿಗೆ ತೀವ್ರ ಓಡಿಬಂದು ತಾವೂ, ಪರಿವಾರದವರೂ ಬೆಂಕಿ ಆರಿಸುವುದಕ್ಕೆ ವಿಶೇಷ ಪ್ರಯಾಸಪಟ್ಟದ್ದರಿಂದ ಕೆಲವು ಗುಡಿಸಲುಗಳೂ, ಸುಡುತ್ತಿದ್ದ ಗುಡಿಸಲುಗಳೊಳಗಿನ ಕೆಲವು ಸಾಮಾನುಗಳೂ ಉಳಿದವು. ಹೀಗೆ ನಮ್ಮ ಮಹಾರಾಜರು ಪ್ರಜೆಗಳ ಕಷ್ಟಗಳಲ್ಲಿ ಯಾವಾಗಲೂ ಪಾಲುಗಾರರಾಗಿ ಪ್ರಜೆಗಳ ಮೇಲನ್ನು ಕೋರುವವರಾಗಿರುವುದು ಇಲ್ಲಿಯ ಪ್ರಜೆಗಳಿಗೆ ಎಷ್ಟೋ ಆನಂದವಾಗಿರುವುದು.

ಒಬ್ಬ ಬಾತ್ಮೀದಾರರಿಂದ—ರಾಜಧಾನಿಯ ವಸೋಲೀಜನ್ ಆಸ್ಪತ್ರೆಯ ಡಾಕ್ಟರ್ ಮ|| ಬಿ ವಿಶ್ವೇಶ್ವರಯ್ಯನವರಿಗೆ ಯಮೇಯ್ಕೆಗೆ ವರ್ಗವಾಯಿತು. ಇವರು ಬಂದ ಸುಮಾರು ಐದು ವರುಷಗಳಲ್ಲಿ ಈ ಪಟ್ಟಣದ ಪ್ರಜೆಗಳಲ್ಲಿ ಬಡವರು, ಪುಣ್ಯವಂತರು ಮುಂತಾದ ಸರ್ವರಲ್ಲೂ ಏಕರೀತಿಯಾದ ಪ್ರೀತಿಯನ್ನುಂಟುಮಾಡಿದ್ದುದರಿಂದ ಇವರ ಅಗಲಿಕೆಯು ವ್ಯಸನಕರವಾಗಿದೆ. ಇವರು ಅನೇಕ ಜನರಿಗೆ ಅವರ ಕಾಹಿಲೆಯ ಕಷ್ಟಕಾಲದಲ್ಲಿ ದಯಾಪೂರ್ವಕವಾಗಿ ಮಾಡಿರುವ ಉಪಕಾರಗಳನ್ನು ಈ ಊರಿನ ಪ್ರಜೆಗಳಲ್ಲಿ ಅನೇಕರು ಸ್ಮರಿಸಿರುವುದನ್ನು ಕೇಳಿದೇವೆ. ಕೆರೂಣಾಪುರದ ನಿವಾಸಿಗಳು ಇವರಿಂದ ಉಪಕಾರಹೊಂದಿದ್ದಕ್ಕೆ ಕೃತಜ್ಞತಾಪೂರ್ವಕವಾಗಿ ವಂದನೆಗಳನ್ನು ಅರ್ಪಿಸಿರುತ್ತಾರೆ. ಇವರ ಸುಗುಣಕ್ಕಾಗಿ ಈ ಊರಿನಲ್ಲಿ ಸಂತೋಷಕೂಟಗಳನ್ನು ಹಲವರು ನಡಿಸಿ ತಮ್ಮ ಪ್ರೀತಿ ವಿಶ್ವಾಸಗಳನ್ನು ಪ್ರಕಾಶಪಡಿಸಿದರು.

ಚಿಕ್ಕಪೇಟೆ ತಾಲ್ಲೂಕು ತಿಮ್ಮಸಂದ್ರದ ವರ್ನ್ಯಾಕ್ಯುಲರ್ ಸ್ಕೂಲ್ ಮಾಸ್ಟರ್ ಮ|| ಬಿ. ಭೀಮರಾಜರವರು "ಪಂಚಮ ಪರಿವೇದನಂ" ಎಂಬ ಹೆಸರಿನಿಂದ ಒಂದು ಚಿಕ್ಕ ಪುಸ್ತಕವನ್ನು ಕಂದ ಪದ್ಯ ರೂಪವಾಗಿ ರಚಿಸಿ ಅದರ ಒಂದು ಪ್ರತಿಯನ್ನು ನಮ್ಮಲ್ಲಿಗೆ ಕಳುಹಿಸಿಕೊಟ್ಟಿರುವರು. ಹೀನಸ್ಥಿತಿಯಲ್ಲಿ ಬಿದ್ದಿರುವ ಪಂಚಮರೇ ಮುಂತಾದ ಜನಗಳಿಗೆ ವಿದ್ಯಾದಾನಮಾಡಿ ಅವರನ್ನು ಉತ್ತಮ ಸ್ಥಿತಿಗೆ ತರಬೇಕೆಂಬುವುದೇ ಗ್ರಂಥಕರ್ತರ ಮುಖ್ಯೋದ್ದೇಶವಾಗಿರುತ್ತದೆ. ವಿದ್ಯಾವಂತರೆಲ್ಲರೂ ಈ ಚಿಕ್ಕ ಪುಸ್ತಕವನ್ನು ತರಿಸಿಕೊಂಡು ಪ್ರೀತಿಯಿಂದ ಓದುವರೆಂದು ನಿರೀಕ್ಷಿಸುತ್ತೇವೆ. ಇವರ ವಿಷಯದಲ್ಲಿ ಒಬ್ಬ ಬಾತ್ಮೀದಾರರು ಬರೆಯುವುದೇನೆಂದರೆ :ಮ|| ಭೀಮರಾಜರವರು ಮೈಸೂರಿಗೆ ಬಂದಲಾಗಾಯ್ತು ಕೆಲವು ಕಥೆಗಳನ್ನು ಮಾಡಿರುವರು. ಈ ಕಥೆಗಳು ಸರ್ವಸಮ್ಮತವಾಗಿಯೂ, ನೀತಿಬೋಧಕವಾಗಿಯೂ, ಗಂಭೀರವಾಗಿಯೂ ಇರುತ್ತವೆ. ಬ್ರಾಹ್ಮಣೇತರರಲ್ಲಿ ಈ ರೀತಿ ಕಥೆಗಳನ್ನು ಮಾಡುವವರು ಅತಿ ವಿರಳ. ಇಂಥಾ ಕಥೆಗಳಿಗೆ ಆವಶ್ಯಕವಾಗಿ ಪ್ರೋತ್ಸಾಹವನ್ನು ಕೊಡಬೇಕಾದ್ದು ಯುಕ್ತವಾಗಿರುತ್ತೆ.

ಮೈಸೂರು ಗೆಜೆಟ್ ಸಂಗ್ರಹ.

ಬೆಂಗಳೂರು 3 ನೇ ಮುನ್‌ಸಿಫ್ ಮ|| ಎಸ್. ಕೃಷ್ಣರಾಯರನ್ನು 3 ನೇ ಕ್ಲಾಸಿಗೂ; ಮೊದಲನೇ ಮುನ್‌ಸಿಫರಾಗಿದ್ದು ಈಗ ಸಬ್ ಜಡ್ಜರಾಗಿ ಬದಲಿ ನೇಮಿಸಲ್ಪಟ್ಟಿರುವ ಮ|| ಕೆ. ಲಕ್ಷ್ಮೀನಾರಣಯ್ಯನವರನ್ನು 1 ನೇ ಕ್ಲಾಸಿಗೂ ಬಡ್ತಿಮಾಡಿದೆ.

ಅ|| ಸರ್ಜನ್ ಮ|| ಎಸ್. ನಾರಾಯಣರಾಯರನ್ನು 4 ನೇ ಕ್ಲಾಸಿಗೂ, ಮ|| ಎನ್. ಎಸ್. ನಂಜುಂಡಯ್ಯನವರನ್ನು 5 ನೇ ಕ್ಲಾಸಿಗೂ ಬಡ್ತಿಮಾಡಿದೆ.

ಬೆಂಗಳೂರು ಸಿವಿಲ್ ಆಫೀಸರ್ ಮ|| ಎಂ. ಹುಸೇನ್ ಅಲಿಯವರನ್ನು 3 ನೇ ಕ್ಲಾಸ್ ಅ|| ಕಮಿಷನರಾಗಿ ಬಡ್ತಿಮಾಡಿದೆ.

ಜಮಾದಾರ್ ಗೋಪಾಲರಾಜೆಅರಸಿನವರು ರಾಜೀನಾಮೆ ಕೊಟ್ಟದ್ದರಿಂದ ಜಮಾದಾರ್ ಇಸೂಫ್ ಖಾನ್‌ರವರನ್ನು ಲೋಕಲ್ ಸರ್ವಿಸ್ ರೆಜಿಮೆಂಟಿನಲ್ಲಿ 3 ನೇ ಗ್ರೇಡ್ ಟ್ರೂಪ್ ಕಮ್ಯಾಂಡರಾಗಿ ಬಡ್ತಿಮಾಡಲಾಗಿದೆ.

ಟಿ ನರಸೀಪುರದ ತಾಲ್ಲೂಕ್ ಅಮಲ್ದಾರ್ ಮ|| ಟಿ ಪಿ. ಎ. ಈಶ್ವರನ್‌ರವರಿಗೂ, ಹೊನ್ನಾಳಿ ತಾಲ್ಲೂಕ್ ಅಮಲ್ದಾರ್ ಮ|| ಎಸ್. ಸುಂದರರಾಜಯ್ಯಂಗಾರ್‍ರಿಗೂ 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಟ್ಟಿದೆ.

ಶಿವಮೊಗ್ಗಾ ಅಡ್ವೊಕೇಟ್ ಮ|| ಎನ್. ಶೇಷಶಾಸ್ತ್ರಿಯವರನ್ನು ಹಂಗಾಮಿಯಾಗಿ ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿ ಸಂಪದಭಿವೃದ್ಧಿ ಸಮಾಜದ ಸೂಪರಿನ್‌ಟೆಂಡೆಂಟರಾಗಿ ನೇಮಕಮಾಡಿದೆ.

ಮೈಸೂರು ಇಂಪೀರಿಯಲ್ ಸರ್ವಿಸ್ ಕೋರಿನಲ್ಲಿ ಗುಲಾಮ್ ಮುರ್ತುಜಾ ಬೇಗ್‌ರವರನ್ನು ಡಿವಿಜನ್ ಕಮ್ಯಾಂಡರಾಗಿಯೂ, ಹೀರಾಸಿಂಗ್‌ರವರನ್ನು ಜಮಾದಾರ್ ಕ್ವಾರ್ಟರ್ ಮಾಸ್ಟರಾಗಿಯೂ, ಮಾನ್‌ಸಿಂಗ್‌ರವರನ್ನು ಜಮಾದಾರರನ್ನಾಗಿಯೂ ನೇಮಕಮಾಡಿದೆ.

ಕಾವೇರಿ ರಿಜರ್ವಾಯರ್ ಕೆಲಸದಲ್ಲಿರುವ ಸಬ್ ಅ|| ಇಂಜಿನಿಯರ್ ಮ|| ಎಂ. ರಾಮಯ್ಯನವರನ್ನು, ಓವರ್‌ಸಿಯರ್ ಮ|| ಕೆ. ವಿ. ರಂಗಸ್ವಾಮಿ ಅಯ್ಯಂಗಾರ್‍ರನ್ನೂ ಪಿ.ಡಬ್ಲ್ಯು.ಡಿ. ಕಾಮಗಾರಿ ಇಲಾಖೆಗೆ ವರ್ಗಮಾಡಿದೆ.

ಮೈಸೂರು ಸೀಮೆಯ ವ್ಯವಸಾಯದ ಇಲಾಖೆ.

ಪ್ರಸಿದ್ಧ ಪತ್ರಿಕೆ.

ರಾಗಿ ಮತ್ತು ಕಡ್ಲೆಕಾಯಿ ಬೆಳೆ ವಿಷಯವಾಗಿ ಕೊಡುವ ವ್ಯವಸಾಯ ಸಂಬಂಧಪಟ್ಟ ಸುಲಭ ಪಾಠವು ಹೆಬ್ಬಾಳ ಫಾರಂನಲ್ಲಿ 1914 ನೆಯ ನವಂಬರು 16 ನೇ ತಾರೀಖಿನಿಂದ ಮೊದಲುಮಾಡಿ ಒಂದು ವಾರ ನಡೆಯುವುದು. ಸದರಿ ಸುಲಭ ಪಾಠವನ್ನು ಕೇಳಲು ಬರತಕ್ಕ ಜನಗಳಿಗೆ ಹೆಬ್ಬಾಳ ಫಾರಂನಲ್ಲಿ ಇರಲು ಸ್ಥಳ ಮುಫತ್ತಾಗಿ ಕೊಡಲಾಗುತ್ತದಲ್ಲದೆ ಊಟಕ್ಕೆ ಮಾತ್ರ ತಗಲಬಹುದಾದಷ್ಟು ಖರ್ಚು ಮಾತ್ರ ವಸೂಲ್ಮಾಡಲಾಗುತ್ತೆ. ಸದರಿ ಪಾಠವನ್ನು ಕೇಳಲು ಬರಲು ಅಪೇಕ್ಷೆಯುಳ್ಳ ಜನಗಳು ಒಂದು ವಾರ ಮುಂಚೆಯಾಗಿ ತಿಳಿಸತಕ್ಕದ್ದು.

[226.3] ಲೆಸ್ಲಿ ಸಿ. ಕೋಲ್‌ಮನ್,

ಬೆಂಗಳೂರು: ತಾ. 17-10-1914. ವ್ಯವಸಾಯದ ಇಲಾಖಾ ಡೈರೆಕ್ಟರ್.

ಮೈಸೂರು ಗೌರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಂಡ್ ಮ್ಯಾರಿಯೇಜ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಹೆಡ್ ಆಫೀಸು—ಮೈಸೂರು.

ನೋಟೀಸು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—

ನಮ್ಮ ಕಂಪೆನಿಗೆ ಬೆಂಗಳೂರು, ಶಿವಮೊಗ್ಗಾ ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳಿಗೆ ಹಿಂದೆ ಛೀಫ್ ಏಜೆಂಟರಾಗಿದ್ದ ಬೆಂಗಳೂರಿನ ಮನ್. ಶೇಷಗಿರಿರಾವ್ ಎಂಬುವರನ್ನು ಅವರ ಅಕ್ರಮವಾದ ನಡವಳಿಕೆಗೋಸ್ಕರ ಕಂಪೆನಿ ಸರ್ವೀಸಿನಿಂದ ವಜಾಮಾಡಿದೆ. ಇವರು ಕಂಪೆನಿಯ ಅನೇಕ ಏಜೆಂಟರುಗಳಿಂದಲೂ, ಅನೇಕ ಚಂದಾದಾರರುಗಳಿಂದಲೂ ಹಣಗಳನ್ನು ವಸೂಲ್ ಮಾಡಿಕೊಂಡು ತಿಂಗಳುಗಟ್ಟಲೆ ಆಗಿದ್ದರೂ ಕಂಪೆನಿಗೆ ಹಣವನ್ನು ಕಳುಹಿಸದೆ ಇರುವ ವಿಷಯ ವಿಶದವಾಗಿ ಅನೇಕ ಜನಗಳ ಫಿರ್ಯಾದು ಮೂಲಕ ನಮಗೆ ತಿಳಿದುಬಂದಿದೆ.

ಆದಕಾರಣ ಕಂಪೆನಿ ಏಜೆಂಟುಗಳೇ ಆಗಲಿ, ಅಥವಾ ಚಂದಾದಾರರುಗಳೇ ಆಗಲಿ, ಯಾರಾದರೂ ಇವರಿಗೆ ಹಣವನ್ನು ಕೊಟ್ಟು, ಅಂಥಾದ್ದಕ್ಕೆ ಕಂಪೆನಿಯಿಂದ ಕ್ರಮವಾದ ರಸೀತಿ ಬರದೇ ಇದ್ದ ಪಕ್ಷದಲ್ಲಿ ಅಂಥಾವರು ದಯವಿಟ್ಟು ಈ ಲಾಗಾಯ್ತು ಒಂದು ವಾರದ ಒಳಗಾಗಿ ಕಂಪೆನಿಯ ಹೆಡ್ ಆಫೀಸಿಗೆ ಶೇಷಗಿರಿರಾಯರು ಅವರಿಂದ ವಸೂಲ್ಮಾಡಿಕೊಂಡು ಕಂಪೆನಿಗೆ ಕಳುಹಿಸದ್ದಕ್ಕೆ ಯಾವ ದಾಖಲೆಯೂ ಇಲ್ಲದೆ ಇದಕ್ಕೆ ಮೊದಲಿಗೆ ಒಂದು ತಪ್ಸೀಲ್ ಪಟ್ಟಿಯನ್ನು ಕಳುಹಿಸತಕ್ಕದ್ದು. [234.1]

All those who are concerned will gladly note that the Criminal Complaint, No. 358 of 1913-14, lodged by one T. S. R. Iyer, late Branch Secretary, of the Amritsar National Insurance and Banking Co., Ltd., Madras, against Mr. M. L. Nagannah, our Company's Managing Director, was quashed on the 22nd ultimo, and that Mr. Nagannah in his turn, has applied to the Court to accord sanction to prosecute the said Iyer for his having given false evidence in the above case.

(Sd.) K. V. PUTTANNAH,
Secretary.

ಮಾರ್ಜರೀನ್.

[ನಮ್ಮ ಮೈಸೂರು ಸಂಸ್ಥಾನದಿಂದ ಸರ್ಕಾರಿ ವೇತನವನ್ನು ಪಡೆದು ಇಂಗ್ಲೆಂಡಿನಲ್ಲಿ ವಿದ್ಯಾಭ್ಯಾಸಮಾಡುತ್ತಿರುವ ಮ|| ಎಸ್. ಗುರಳಪ್ಪರಿ ಶಾಸ್ತ್ರಿಗಳವರು ಬರೆದಿರುವ ಈ ಲೇಖನವನ್ನು ಬಹಳ ಸಂತೋಷದಿಂದ ಪ್ರಕಟಿಸುವೆವು.—ಎಡಿ.]

ಯಾವ ದೇಶ ಮುಂದಕ್ಕೆ ಬರಬೇಕಾದರೂ ಆ ದೇಶದ ಜನರು ನಾಗರಿಕರಾಗಿಯೂ, ವಿದ್ಯಾವಂತರಾಗಿಯೂ ಮತ್ತು ಶಾಸ್ತ್ರಜ್ಞಾನದಲ್ಲಿ ಪಂಡಿತರಾಗಿಯೂ ಇರಬೇಕು. ಯಾವ ದೇಶದಲ್ಲಿ ಜನಗಳಿಗೆ ಅಲ್ಪವಾದ ತೊಂದರೆಗಳು ಮತ್ತು ಕಷ್ಟಗಳು ಇರುತ್ತವೆಯೋ ಮತ್ತು ಅತ್ಯಧಿಕವಾದ ಸೌಕರ್ಯಗಳು ಇರುತ್ತವೆಯೋ ಆ ದೇಶವೇ ಬಹಳ ಮುಂದಾದ ದೇಶವಾಗುತ್ತದೆ. ಜರ್ಮನಿ, ಇಂಗ್ಲೆಂಡ್, ಫ್ರಾನ್ಸ್, ಅಮೆರಿಕಾದ ಸಂಯುಕ್ತ ಸಂಸ್ಥಾನಗಳು ಮತ್ತು ಜಪಾನ್, ಈ ದೇಶಗಳು ಉದಾಹರಣೆಗಳಾಗಿರುತ್ತವೆ.

ಶಾಸ್ತ್ರ ಪರಿಶೋಧನೆಯಿಂದ ಮೇಲ್ಕಂಡ ದೇಶಗಳಲ್ಲಿ ಅದ್ಭುತವಾದ ಅನೇಕ ಕಾರ್ಯಗಳನ್ನು ಸಾಧಿಸಿರುತ್ತಾರೆ. ಯುದ್ಧದ ಹಡಗುಗಳನ್ನು ಕಟ್ಟುವುದು, ಆಕಾಶದಲ್ಲಿ ಸಂಚರಿಸುವ ವಿಮಾನಗಳನ್ನು ಕಲ್ಪಿಸುವುದು, ಮುಂತಾದವುಗಳು ಎಲ್ಲ ಜನರಿಗೆ ಗೊತ್ತಿರಬಹುದು. ಇವುಗಳಲ್ಲದೆ ಜನರಿಗೆ ಸಾಮಾನ್ಯವಾಗಿ ತಿಳಿಯದೇ ಇರುವ ಭಾಗಗಳಲ್ಲಿಯೂ ಸಾಹಸ ಪಟ್ಟು ಆಶ್ಚರ್ಯಕರವಾದ ಅನೇಕ ವಿಷಯಗಳನ್ನು ಸಾಧಿಸಿರುತ್ತಾರೆ. ಪ್ರಾಣಿ ಮತ್ತು ಸಸ್ಯಗಳಿಂದಲೇ ನಮಗೆ ದೊರಕುತ್ತಿದ್ದ ಅನೇಕ ವಸ್ತುಗಳನ್ನು ರಸಾಯನ ಶಾಸ್ತ್ರಸಹಾಯದಿಂದ ಪ್ರಾಣಿ ಸಸ್ಯಗಳ ಸಹಾಯವಿಲ್ಲದೇನೇ ತಯಾರುಮಾಡುತ್ತಿದ್ದಾರೆ. "ಇಂಡಿಗೊ" ಎಂಬ ನೀಲಿಯು ಗಿಡಗಳಿಂದ ತೆಗೆಯಲ್ಪಟ್ಟು ಮಾರಾಟಕ್ಕೆ ಬರುತ್ತಿತ್ತು. ಈಗಲಾದರೋ ಜರ್ಮನಿ ದೇಶದವರು ಅವನ್ನು ಭೂಮಿಯಲ್ಲಿ ಬೆಳೆಯುವುದನ್ನು ಬಿಟ್ಟು ಕಾರ್ಖಾನೆಗಳಲ್ಲಿ ವಸ್ತುಸಂಯೋಜನ ಚಾತುರ್ಯದಿಂದ ಆ ನೀಲಿಯನ್ನು ಬಹಳ ಸುಲಭದಿಂದ ತಯಾರುಮಾಡುತ್ತಿದ್ದಾರೆ. ಅದರಂತೆಯೇ "ಮಾರ್ಜರೀನ್" ಎಂಬ ಬೆಣ್ಣೆಯನ್ನು ನಿರಾಯಾಸವಾಗಿ ತಯಾರುಮಾಡುತ್ತಿದ್ದಾರೆ. ಹಸು ಮತ್ತು ಎಮ್ಮೆ ಹಾಲಿನಿಂದ ತೆಗೆಯುವ ಬೆಣ್ಣೆಗೂ, ಮಾರ್ಜರೀನ್ ಬೆಣ್ಣೆಗೂ ಸ್ವಲ್ಪವೂ ಭೇದವಿರುವದಿಲ್ಲ. ನಮ್ಮ ದೇಶದಲ್ಲಿ ಅನೇಕರಿಗೆ ಈ ವಿಷಯ ತಿಳಿದಿರಲಾರದು.

ಪ್ರಥಮತಃ ರಸಾಯನ ಶಾಸ್ತ್ರಜ್ಞರು ಬೆಣ್ಣೆಯಲ್ಲಿ ಯಾವ ಯಾವ ವಸ್ತುಗಳು ಸಂಕಲಿತವಾಗಿವೆಯೋ ಅವುಗಳನ್ನು ಪರಿಶೋಧಿಸಿ ತಿಳಿದುಕೊಂಡರು. ಕೊಬ್ಬಿನ ಭಾಗ ಎಷ್ಟು? ನೀರಿನ ಭಾಗ ಎಷ್ಟು? ಸಾರಜನಕ (ನೈಟ್ರೋಜನ್ ಎಂಬ ವಸ್ತು) ಸಂಯುಕ್ತವಾದ ಭಾಗವೆಷ್ಟು? ಇದೇ ರೀತಿಯಲ್ಲಿ ಯಾವ ಯಾವ ವಸ್ತುವು ಎಷ್ಟೆಷ್ಟಿದೆಯೋ ಅವುಗಳ ಪರಿಮಾಣಗಳನ್ನು ಟಿಪ್ಪಣಿ ರೀತಿ ಗೊತ್ತುಮಾಡಿಕೊಂಡರು. ಅನಂತರ ಆ ಪದಾರ್ಥಗಳನ್ನೆಲ್ಲಾ ಬೇರೆ ಬೇರೆಯಾಗಿ ತೆಗೆದುಕೊಂಡು ಬೆಣ್ಣೆಯಲ್ಲಿರುವಂತೆ ಸಮನಾದ ಭಾಗಗಳಲ್ಲಿ ಸೇರಿಸಿದರೆ ಬೆಣ್ಣೆ ಯಾಗುತ್ತದೆಯೋ ಎಂದು ನೋಡುವುದಕ್ಕೆ ಪ್ರಯತ್ನಪಟ್ಟರು. ಪ್ರಾರಂಭದಲ್ಲಿ ಪ್ರಯತ್ನಗಳೆಲ್ಲಾ ನಿಷ್ಪ್ರಯೋಜನವಾದಾಗ್ಯೂ, ಧೈರ್ಯಗುಂದದೆ ಪುನಃಪುನಃ ಸಾಹಸಪಟ್ಟು ಕೊನೆಗೆ ಜಯಶೀಲರಾದರು. ಈಗಲಾದರೋ ಅಚ್ಚ ಹಸುವಿನ ಬೆಣ್ಣೆಯಂತೆ ಶುಭ್ರವಾಗಿಯೂ, ಪುಷ್ಟಿಕರವಾಗಿಯೂ, ಹಸುವಿನ ಬೆಣ್ಣೆಗೆ ಸ್ವಲ್ಪವೂ ಭೇದವಿಲ್ಲದೆಯೂ ಇರುವಂತೆ ಕಾರ್ಖಾನೆಗಳಲ್ಲಿ ಮಾರ್ಜರೀನ್ ಎಂಬ ಬೆಣ್ಣೆಯನ್ನು ತಯಾರುಮಾಡಿ ಮೇಲ್ಕಂಡ ದೇಶಗಳಲ್ಲೆಲ್ಲಾ ಜನರು ವಿಶೇಷವಾಗಿ ಉಪಯೋಗಿಸುತ್ತಲಿದ್ದಾರೆ.

ಬಹಳ ದಿನಗಳಿಂದಲೂ ಈ ವಿಧವಾಗಿ ಬೆಣ್ಣೆಯನ್ನು ತಯಾರುಮಾಡಲು ಪ್ರಾರಂಭದಲ್ಲಿ ಪ್ರಾಣಿಗಳ ಕೊಬ್ಬನ್ನು ಉಪಯೋಗಿಸುತ್ತಿದ್ದರು. ಪ್ರಾಣಿಗಳ ಕೊಬ್ಬು ಎಂದರೆ ನಮ್ಮ ದೇಶದವರಿಗೆ ಸ್ವಲ್ಪ ಅಸಹ್ಯವುಂಟಾಗಬಹುದು. ಆದರೆ ಹಸುವಿನ ಹಾಲು ಮತ್ತು ಬೆಣ್ಣೆ, ತುಪ್ಪ ಮುಂತಾದವುಗಳೆಲ್ಲಾ ಪ್ರಾಣಿಸಂಬಂಧದ ಕೊಬ್ಬು ತಾನೇ ಇರಬೇಕಲ್ಲ. ಅದುಹಾಗಿರಲಿ. ಪ್ರಾಣಿಸಂಬಂಧವಾದ ಕೊಬ್ಬುಗಳನ್ನು ಬೇರೆ ವಿಧವಾಗಿ ಉಪಯೋಗಿಸಲು ಅನುಕೂಲವಾಗಿ ಕಂಡುಬಂದುದರಿಂದ ಇತ್ತೀಚೆಗೆ ಕೊಬ್ಬರೀ ಎಣ್ಣೆ, ಹತ್ತೀ ಬೀಜ ಮುಂತಾದವುಗಳನ್ನು ಉಪಯೋಗಿಸಿ ಬೆಣ್ಣೆಯನ್ನು ತಯಾರುಮಾಡುತ್ತಾರೆ. ಆದ್ದರಿಂದ ಕೇವಲ ಸಸ್ಯಗಳಿಂದ ಬಂದ ಪದಾರ್ಥಗಳನ್ನೇ ಉಪಯೋಗಿಸಿರುವುದರಿಂದ ಮತಸಂಬಂಧವಾದ ಆಚಾರಶೀಲರೂ ಕೂಡ ನಿಸ್ಸಂಶಯದಿಂದ ಶಾಸ್ತ್ರವಿರುದ್ಧವಿಲ್ಲದೆ ಈ ಬೆಣ್ಣೆಯನ್ನು ಅನೇಕರಿಗೆ ಅಭಿರುಚಿಯಾದಲ್ಲಿ ಉಪಯೋಗಿಸಬಹುದು.

ಒಂದು ಇಂಗ್ಲೀಷು ಕಾರ್ಖಾನೆಯವರು ಕೊಬ್ಬರೀ ಎಣ್ಣೆಯಿಂದ ಪ್ರಾರಂಭಿಸಿ ಬೆಣ್ಣೆಯನ್ನು ತಯಾರು ಮಾಡುತ್ತಲಿದ್ದಾರೆ. ಈ ಒಂದು ಕಾರ್ಖಾನೆಯವರೇ ವರ್ಷಕ್ಕೆ 1,50,000 ಟನ್ ಕೊಬ್ಬರಿಯನ್ನು ಉಪಯೋಗಿಸುವರು. 1913 ನೇ ಇಸವಿಯಲ್ಲಿ ತೆಂಗಿನ ಗಿಡದಿಂದ ಪ್ರಪಂಚದ ಎಲ್ಲಾ ಭಾಗಗಳಲ್ಲಿಯೂ ಸೇರಿ 7,50,00,000 ಪೌಂಡು ಉತ್ಪತ್ತಿಯಾಯಿತು. " ಆರು ವರ್ಷಗಳ ಕೆಳಗೆ ಅದೇ ಕಾರ್ಖಾನೆಯಲ್ಲಿ ಒಂದು ರೂಪಾಯಿ ತೂಕದ ಕೊಬ್ಬರಿಯನ್ನೂ ಉಪಯೋಗಿಸುತ್ತಿರಲಿಲ್ಲ; ಈಗ ವರುಷಕ್ಕೆ 1,50,000 ಟನ್ ಕೊಬ್ಬರಿಯನ್ನು ಕೊಂಡು ಬೆಣ್ಣೆ ಮುಂತಾದದ್ದು ತಯಾರುಮಾಡುತ್ತಾರೆ. ಬೆಣ್ಣೆಯನ್ನು ತಯಾರುಮಾಡಲು ಒಂದು ಕಾರ್ಖಾನೆಯಲ್ಲಿಯೇ 1,50,000 ಟನ್ ಕೊಬ್ಬರಿಯಿಂದ ಬಂದ ಎಣ್ಣೆಯನ್ನು ಉಪಯೋಗಿಸಿದರೆ ಪ್ರಪಂಚದ ಎಲ್ಲಾ ಭಾಗಗಳಲ್ಲಿಯೂ ಎಷ್ಟು ಉಪಯೋಗಿಸುತ್ತಾರೆಯೋ ನಾವೆಲ್ಲರೇ ಊಹಿಸಬಹುದು. ವಿಶೇಷವಾಗಿ ಮಾರ್ಜರೀನ್ ತಯಾರಾಗುವುದು ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ, ಆಸ್ಟ್ರಿಯಾ, ಅಮೇರಿಕಾದ ಸಂಯುಕ್ತ ಸಂಸ್ಥಾನಗಳು, ಈ ದೇಶಗಳಲ್ಲೇ.

ನೀರಿನಂತೆ ಇರುವ ಕೊಬ್ಬರೀ ಎಣ್ಣೆಯಿಂದ ಘನೀಭೂತವಾಗಿರುವ ಬೆಣ್ಣೆಯನ್ನು ಹ್ಯಾಗೆ ತಯಾರುಮಾಡುತ್ತಾರೆಂದು ಶಂಕೆಯು ಹುಟ್ಟಬಹುದು. ಛಳಿಗಾಲದಲ್ಲಿಯೂ ಮತ್ತು ಛಳಿದೇಶಗಳಲ್ಲಿಯೂ ಕೊಬ್ಬರೀ ಎಣ್ಣೆಯೂ ಮತ್ತು ಹತ್ತೀ ಬೀಜದಿಂದ ಬಂದ ಎಣ್ಣೆಯೂ ಗಟ್ಟಿ ಕಟ್ಟಿಕೊಂಡು ಘನೀಭೂತವಾಗಿಯೇ ಇರುತ್ತವೆ. ಮೊದಲು ಈ ಎಣ್ಣೆಗಳನ್ನು ಕಲ್ಮಷರಹಿತವಾದವುಗಳನ್ನಾಗಿ ಮಾಡುವದಕ್ಕೋಸ್ಕರ ಪರಿಶೋಧಿಸುತ್ತಾರೆ. ಅನಂತರ ಎರಡು ಮೂರು ತರಹಾ ಎಣ್ಣೆಗಳನ್ನು ಸರಿಯಾದ ಪರಿಮಾಣಗಳಲ್ಲಿ ಬೆರಸಿ ಮಿಶ್ರಿತವಾದ ಎಣ್ಣೆಗಳನ್ನು ಪುನಃ ಶೋಧಿಸುತ್ತಾರೆ.

ಹಾಲಿನಿಂದ ಬೆಣ್ಣೆಯನ್ನು ತೆಗೆದುಬಿಟ್ಟು ಹಿಂದೆ ನಿಂತಿರುವ ಹಾಲನ್ನು ಶೋಧಿಸಿ ಕ್ರಿಮಿ ಮುಂತಾದವುಗಳು ಸೇರದಂತೆ ಬಹಳ ಹುಷಾರಿನಿಂದ ನೋಡಿಕೊಂಡಿದ್ದು, ಹಿಂದೆ ಹೇಳಿದ ಮಿಶ್ರಿತವಾದ ಎಣ್ಣೆಗಳನ್ನು ಬೆಣ್ಣೆರಹಿತವಾದ ಈ ಹಾಲಿನೊಡನೆ ಸೇರಿಸಿ ಕಡೆಯುತ್ತಾರೆ. ಹೀಗೆ ಕೆಲವು ಕಾಲ ಕಡೆದಲ್ಲಿ ಎಣ್ಣೆಯೂ ಹಾಲೂ ಒಂದಕ್ಕೊಂದು ಹೊಂದಿಕೊಂಡು ಸೇರಿಕೊಂಡು ಕ್ರಮೇಣ ಗಟ್ಟಿಯಾಗುತ್ತಾ ಬಂದು ಸಣ್ಣ ಸಣ್ಣ ಬೆಣ್ಣೆ ಕಣಗಳು ಮೇಲಕ್ಕೆ ಬರುತ್ತಾ, ನೀರುಮಾತ್ರ ಬೇರೆಯಾಗುತ್ತಾ ಬರುತ್ತದೆ. ಹೀಗಾದ ಮೇಲೆ ಸ್ವಲ್ಪ ಹೊತ್ತು ಕಡೆಯುವುದನ್ನು ನಿಲ್ಲಿಸಿ ನೀರಿನ ಭಾಗವನ್ನೂ ಮತ್ತು ಬೆಣ್ಣೆಯ ಭಾಗವನ್ನೂ ಬೇರೆಬೇರೆಯಾಗಿ ಮಾಡುತ್ತಾರೆ. ಆದಾಗ್ಯೂ ಬೆಣ್ಣೆಯಲ್ಲಿ ಇನ್ನೂ ನೀರು ವಿಶೇಷವಾಗಿರುವುದರಿಂದ ಸ್ವಲ್ಪ ಉಪ್ಪನ್ನು ಸೇರಿಸಿ, ಭಾರವಾದ ಗುಂಡುಗಳ ಸಹಾಯದಿಂದ ನೀರನ್ನು ಅದುಮಿ ಹಿಂಡಿ ತೆಗೆದುಬಿಡುತ್ತಾರೆ. ಹೀಗೆ ಗುಂಡುಗಳು ಬೆಣ್ಣೆಯ ಮೇಲೆ ತಿರುಗಾಡುವುದರಿಂದ ಬೆಣ್ಣೆಯ ಕಣಗಳು ಅನ್ಯೋನ್ಯಮಿಳಿತವಾಗಿ ಒಂದರ ಲ್ಲೊಂದು ಸೇರಿಕೊಳ್ಳುತ್ತವೆ.

ಅನಂತರ ಈ ಬೆಣ್ಣೆಗೆ ಹಸುವಿನ ಬೆಣ್ಣೆಯ ರುಚಿಯನ್ನು ಕೊಡುವುದಕ್ಕೋಸ್ಕರ ಬೆಣ್ಣೆಯಲ್ಲಿ ದೊರಕುವ ಕೆಲವು ಪದಾರ್ಥಗಳನ್ನು ಸೇರಿಸುತ್ತಾರೆ. ಮತ್ತು ಹಸುವಿನ ಬೆಣ್ಣೆಯಂತೆ ಕಾಣುವುದಕ್ಕೋಸ್ಕರ ಸ್ವಲ್ಪ ಹಳದೀ ಬಣ್ಣವನ್ನೂ ಕೊಡುತ್ತಾರೆ. ಮತ್ತು ಬೆಣ್ಣೆಯಲ್ಲಿರುವಂತೆ ಕೆಲವು ಸಾರಜನಕ ಪದಾರ್ಥವಿಶೇಷವನ್ನೂ ಸೇರಿಸುತ್ತಾರೆ. ಹೀಗೆ ತಯಾರುಮಾಡುವ ಬೆಣ್ಣೆಯನ್ನು ಹಸುವಿನ ಬೆಣ್ಣೆಯಿಂದ ತುಂಬಾ ಚತುರರೂ ಕೂಡ ಕಂಡುಹಿಡಿಯಲಾರರು; ರಸಾಯನ ಶಾಸ್ತ್ರಪರೀಕ್ಷೆ ಮಾಡಿದರೂ ಕಂಡುಹಿಡಿಯುವುದು ಕಷ್ಟ. ವಾಸನೆ, ರುಚಿ, ಪುಷ್ಟಿಕರವಾದ ಗುಣಗಳು, ಬೆಣ್ಣೆಯನ್ನು ಕಾಯಿಸಿದರೆ ಆಗುವ ವ್ಯತ್ಯಾಸಗಳು, ಇವೆಲ್ಲವೂ ಸ್ವಲ್ಪವೂ ವ್ಯತ್ಯಾಸವಾಗದಂತೆ ಮಾರ್ಜರೀನ್ ಬೆಣ್ಣೆಯಲ್ಲಿ ಹಸುವಿನ ಬೆಣ್ಣೆಯಲ್ಲಿರುವಂತೆಯೇ ಕಂಡುಬರುವವು. ಈ ಮಾರ್ಜರೀನ್ ಬೆಣ್ಣೆಯು ನಿರ್ಮಲವಾದ ಪದಾರ್ಥವಾದ್ದರಿಂದ ಯಾರು ಬೇಕಾದರೂ ಉಪಯೋಗಿಸಬಹುದು.

ಸಾಮಾನ್ಯ ಜನಗಳಿಗೆ ಸುಲಭರೀತಿಯಲ್ಲಿ ತಿಳಿಯಬೇಕೆಂದು ಕೆಲವು ಕ್ಲಿಷ್ಟವಾದ ಭಾಗಗಳನ್ನು ಬಿಟ್ಟು ಮುಖ್ಯಾಂಶಗಳನ್ನು ಮಾತ್ರ ಈ ಪತ್ರಿಕೆಯಲ್ಲಿ ಪ್ರಕಟಿಸಿದೆ. ಹೆಚ್ಚು ವಿಷಯಗಳನ್ನು ತಿಳಿಯಬೇಕೆಂದು ಅಪೇಕ್ಷೆಯುಳ್ಳವರು ಭಾರೀ ಪುಸ್ತಕಗಳನ್ನು ಓದಬೇಕಾಗುತ್ತೆ. ಕೊಬ್ಬರಿ ಎಣ್ಣೆಯನ್ನು ಶೋಧಿಸುವ ವಿಚಾರದಲ್ಲಿ ಮೈಸೂರು ಸಂಪದಭ್ಯುದಯ ಸಮಾಜದವರು ಕೆಲವು ವಿಷಯಗಳನ್ನು 1914 ನೇ ಜನವರಿ ತಿಂಗಳಲ್ಲಿ ಪ್ರಕಟಿಸಿರುತ್ತಾರೆ. ಕೊಬ್ಬರೀ ಎಣ್ಣೆಯನ್ನು ಮೇಲೆ ಹೇಳಿದ ರೀತಿ ಬೆಣ್ಣೆಯನ್ನು ತಯಾರುಮಾಡುವುದಕ್ಕೂ ಮತ್ತು ಇನ್ನೂ ಅನೇಕ ಕಾರ್ಯಗಳಿಗೂ ವಿಶೇಷವಾಗಿ ಉಪಯೋಗಿಸುತ್ತಿದ್ದಾರೆ. ದಿನ ಕ್ರಮೇಣ ಇನ್ನೂ ಹೆಚ್ಚಾಗಿ ಉಪಯೋಗಿಸುತ್ತಾ ಬಂದಾರು. ಆದ್ದರಿಂದ ನಮ್ಮ ದೇಶದವರು ಕೈಲಾದಮಟ್ಟಿಗೂ ತೆಂಗಿನ ಬೆಳೆಯನ್ನು ಅಭಿವೃದ್ಧಿಗೆ ತಂದರೆ ಅಪಾರವಾದ ಲಾಭವುಂಟು.

ಲಂಡನ್. ಎಸ್. ಜಿ. ಶಾಸ್ತ್ರಿ.

ಸ್ವಸ್ಥವಾಗುವುದಕ್ಕೆ ಉಪಾಯವು.

ಬೆಲ್ಜಿಯಮ್ ರಾಜಧಾನಿಯಾದ ಬ್ರಸೆಲ್ಸ್ ಪಟ್ಟಣದವರು 80,00,000 ಪೌಂಡನ್ನು ಎತ್ತಿಕೊಡಬೇಕೆಂದು ಜರ್ಮನಿಯವರು ಮೊದಲು ಕೇಳಿದ್ದರಷ್ಟೆ. ಈಗ ಅದನ್ನು 18 ಲಕ್ಷ ಪೌಂಡಿಗೆ ಇಳಿಸಿರುತ್ತಾರೆಂದು ತಿಳಿಯುವುದು.

ಹಿಂದೂಸ್ಥಾನದ ಸೈನಿಕರು ಬಹಳ ಚುರುಕಾಗಿ ಕದನ ಮಾಡಿರುತ್ತಾರೆ. ತಂತೀವರ್ತಮಾನಗಳಿಂದ ಹಲವರು ಕೊಲೆಯಾದರೆಂದೂ, ಗಾಯಪಟ್ಟರೆಂದೂ ತಿಳಿಯುವುದು. ಬ್ರಿಟಿಷ್ ದಳಪತಿಯಾದ ಜನರಲ್ ಸರ್ ಜಾನ್ ಫ್ರೆಂಚರವರು ಅವರ ಪರಾಕ್ರಮವನ್ನು ಕೊಂಡಾಡಿರುತ್ತಾರೆ.

ಜರ್ಮನಿಯ ಸೈನಿಕರು ಬೆಲ್ಜಿಯಮ್ ಉತ್ತರ ಭಾಗದಿಂದ ಹಿಮ್ಮೆಟ್ಟಿ ಹೋಗುತ್ತಿರುವರೆಂದೂ, ಅವರ ಸೈನ್ಯಗಳು ಬ್ರೂಜ್‌ನಿಂದ ಘೆಂಟ್ ಕಡೆಗೆ ಸಾಗಿಹೋಗುತ್ತಿರುವವೆಂದೂ ತಿಳಿದು ಬಂದಿದೆ. ಇದಲ್ಲದೆ ಬೆಲ್ಜಿಯಮ್‌ನೊಳಗಿನ ಜರ್ಮನಿ ಸೈನ್ಯಗಳನ್ನು ಅಲ್ಲಿಂದ ಪೂರ್ವದಿಕ್ಕಿಗೆ ಕಳುಹುತ್ತಿರುವುದಾಗಿಯೂ ಸಮಾಚಾರ ಬಂದಿದೆ. ಬಹುಶಃ ಪೂರ್ವದಿಕ್ಕಿನಲ್ಲಿ ರಷ್ಯಾದವರ ಮೇಲೆ ಯುದ್ಧ ಮಾಡುವುದಕ್ಕೋಸ್ಕರ ಈ ಸೈನ್ಯಗಳನ್ನು ಸಾಗಿಸುತ್ತಿರಬೇಕೆಂದು ಕಾಣುವುದು.

ಜರ್ಮನಿ ಚಕ್ರವರ್ತಿ ವಿಲ್ಹೆಲ್ಮ್‌ರವರು ಪರಿವಾರ ಸಮೇತ ಇದ್ದ ಒಂದು ಬಂಗಲೆಗೆ ಬ್ರಿಟಿಷರು ಒಂದು ವಿಮಾನಯಂತ್ರವು ಆಕಾಶದಿಂದ ಒಂದು ಸಿಡಿಮದ್ದಿನ ಗುಂಡನ್ನು ಹಾಕಿತೆಂದೂ, ಅದು ಒಡೆದು ಆ ಕೋಟೆಯನ್ನು ನಾಶ ಮಾಡಿದ್ದಲ್ಲದೆ ಚಕ್ರವರ್ತಿಯವರ ಪರಿವಾರದವರ ಪೈಕಿ ಇಬ್ಬರು ಉದ್ಯೋಗಸ್ಥರನ್ನು ಕೊಂದುಹಾಕಿತೆಂದೂ, ಆದರೆ ಚಕ್ರವರ್ತಿಯವರು ಮಾತ್ರ ಆ ಕೋಟೆಯನ್ನು ಬಿಟ್ಟು ಹೊರಗೆ ಅದಕ್ಕೆ ಸುಮಾರು ಇಪ್ಪತ್ತು ನಿಮಿಷಗಳ ಹಿಂದೆ ಹೋಗಿದ್ದರೆಂದೂ ತಂತೀ ವರ್ತಮಾನವು ತಿಳಿಸುತ್ತದೆ.

ರಷ್ಯಾ, ಆಸ್ಟ್ರಿಯಾ ಮತ್ತು ಜರ್ಮನಿ.

ಈ ಪ್ರದೇಶದಿಂದ ಬಹಳ ವರ್ತಮಾನಗಳೇನೂ ಬಂದಿಲ್ಲ. ತಂತೀ ವರ್ತಮಾನಗಳು ಜರ್ಮನಿ ಮತ್ತು ಆಸ್ಟ್ರಿಯಾ ಸೈನ್ಯಗಳು ಪೂರ್ವಪ್ರಷ್ಯಾದಿಂದಲೂ ಪೋಲೆಂಡಿನಿಂದಲೂ ಹಿಮ್ಮೆಟ್ಟಿ ಬರುತ್ತಿರುವುದನ್ನು ವಿವರಿಸುತ್ತವೆ. ಒಂದಾನೊಂದು ಕಾಳಗದಲ್ಲಿ ರಷ್ಯಾದವರು 200 ಉದ್ಯೋಗಸ್ಥರನ್ನೂ 16,000 ಸೈನಿಕರನ್ನೂ ಅನೇಕ ಫಿರಂಗಿಗಳ ಸಮೇತ ಸೆರೆ ಹಿಡಿದುಕೊಂಡಿದ್ದಾರೆ.

ಗೆಲಿಸಿಯಾದೊಳಗೆ ರಷ್ಯಾದವರು ಜಾಸ್ಲಾವ್ ಎಂಬ ಸ್ಥಳವನ್ನು ಮತ್ತೆ ಗೆದ್ದು ಸ್ವಾಧೀನಪಡಿಸಿಕೊಂಡಿದ್ದಾರೆ. ಅಲ್ಲಿ ಅವರಿಗೆ 5,000 ಸೈನಿಕರು ಸೆರೆ ಸಿಕ್ಕಿದರು. ಇವರಲ್ಲಿ ಹಲವರು ಇನ್ನೂ 15-16 ವಯಸ್ಸಿನ ಪಡ್ಡೆ ಹುಡುಗರು. ಇವರಿಗೆ ಸರಿಯಾದ ವಿರಸು ಮೂಂತಾದದ್ದು ಇರಲಿಲ್ಲ; ಸೈನ್ಯದಲ್ಲಿ ಕವಾಯತಾದವರೂ ಅಲ್ಲ.

ಈ ಪಡ್ಡೆ ಹುಡುಗರ ಪರಾಕ್ರಮವನ್ನೂ ದೇಶಾಭಿಮಾನವನ್ನೂ ನೋಡಿದರೆ ಯಾರೂ ಹೊಗಳಬೇಕು; ಆದರೂ ಅಂಥವರನ್ನು ರಣರಂಗದಲ್ಲಿ ಕಾದಾಡುವುದಕ್ಕೆ ಕಳುಹಿಸುವುದು ಬಹಳ ಅನ್ಯಾಯ.

ಆಕ್ಟೋಬರ್ ತಾ. 23 ರಿಂದ ನೋವೆಂಬರ್ ತಾ. 4 ರ ವರೆಗೆ ರಷ್ಯಾದವರು 274 ಮಂದಿ ಉದ್ಯೋಗಸ್ಥರನ್ನೂ, 18,600 ಮಂದಿ ಸಿಪಾಯಿಗಳನ್ನೂ ಸೆರೆ ಹಿಡಿದುಕೊಂಡಿದ್ದಾರೆ; ಇದಲ್ಲದೆ ಅವರಿಗೆ 3 ಹೌವಿಟ್ಜರ್ ಎಂಬ ಭಾರಿ ಫಿರಂಗಿಗಳೂ, 40 ಫಿರಂಗಿಗಳೂ, 38 ಮೆಷೀನ್ ಫಿರಂಗಿಗಳೂ, ಅಪಾರವಾದಷ್ಟು ಮದ್ದುಗುಂಡು ಸಾಮಾನುಗಳೂ ಸಿಕ್ಕಿರುವವು.

ರಷ್ಯಾದವರು ಜರ್ಮನಿಯೊಳಕ್ಕೆ ನುಗ್ಗಿರುವರು. ಅಲ್ಲಿ ಸಿಕ್ಕಿದ ಒಂದು ರೈಲ್ವೆ ಸ್ಟೇಷನನ್ನು ನಾಶಪಡಿಸಿರುತ್ತಾರೆ.

ಜರ್ಮನಿಯವರೂ ಆಸ್ಟ್ರಿಯಾದವರೂ 30,00,000 ಸೈನ್ಯವನ್ನು ರಷ್ಯಾದವರ ಮೇಲೆ ನುಗ್ಗಿಸುವುದಕ್ಕಾಗಿ ಜೊತೆಮಾಡುತ್ತಿರುವಂತೆ ವರ್ತಮಾನವಿದೆ. ಒಬ್ಬಾನೊಬ್ಬನು ಜರ್ಮನಿಯ ಸೈನ್ಯದಲ್ಲಿ 17,50,000 ಮಂದಿ ನಷ್ಟವಾಗಿರಬೇಕೆಂದು ಹೇಳುತ್ತಾನೆ.

ಚೀನಾದಲ್ಲಿ.

ಜಪಾನ್‌ನವರು ಚೀನಕ್ಕೆ ಬಂದ ಕೆಲಸವನ್ನು ಪೂರೈಸಿಕೊಂಡದ್ದಾಯಿತು. ಟ್ಸಿಂಗ್-ಟ್ಸಿ ನಗರದ ಕೋಟೆಗಳು ಅವರ ಪಾಲಾದವು. ಅಲ್ಲಿ ಜಪಾನ್‌ನವರೇ ಸರ್ವಸ್ವತಂತ್ರರಾಗಿರುತ್ತಾರೆ. ಅಲ್ಲಿ ಜರ್ಮನಿಯವರ ಸ್ವಾಸ್ಥ್ಯವೂ ಅವರ ಪರಾಕ್ರಮವೂ ಕೊಚ್ಚಿಹೋದವು.

ಕಡೇ ಭಾಗದಲ್ಲಿ ಕಠಿಣವಾದ ಯುದ್ಧಗಳಾದವು. ಒಂದು ದಿನ ಜಪಾನ್‌ನವರು 800 ಸಿಪಾಯಿಗಳನ್ನು 20 ಫಿರಂಗಿಗಳ ಸಮೇತ ಸೆರೆ ಹಿಡಿದುಕೊಂಡರು. ಇನ್ನೊಂದು ದಿನ 200 ಮಂದಿ ಸೆರೆ ಸಿಕ್ಕಿದರು. ಜಪಾನ್ ಸೈನಿಕರನ್ನು ಜನರಲ್ ಯಮದ ಎಂಬ ದಳಪತಿಯೇ ಸ್ವತಃ ನಡೆಸಿಕೊಂಡು ಹೋಗಿ ಜರ್ಮನಿಯವರ ಮೇಲೆ ಯುದ್ಧ ಮಾಡಿದನು.

ಇನ್ನು ಜಪಾನ್‌ನವರ ಯುದ್ಧದ ಹಡಗುಗಳು ಇತರ ಕಡೆಗಳಲ್ಲಿ ಕಾರ್ಯಗಳನ್ನು ನಡೆಸಲು ಅವಕಾಶವಾಯಿತು.

ಜಪಾನ್‌ನವರಿಗೆ ಯುದ್ಧದಲ್ಲಿ ಸಿಕ್ಕಿರುವ ಜರ್ಮನಿ ಸೈನಿಕರು 2,300 ಮಂದಿ. ಕೋಟೆಯಲ್ಲಿದ್ದ ಮಿಕ್ಕ ಜರ್ಮನಿಯವರೆಲ್ಲಾ ಜಪಾನ್‌ನವರಿಗೆ ಶರಣಾಗತರಾದರು. ಇವರು ಎಷ್ಟು ಜನರೋ ಇನ್ನೂ ಪ್ರಕಟವಾಗಲಿಲ್ಲ. ಕೊನೇ ಯುದ್ಧದಲ್ಲಿ ಜಪಾನ್‌ನವರ ಕಡೆ 440 ಮಂದಿಯನ್ನು ಕಳೆದುಕೊಂಡರು. ಬ್ರಿಟಿಷ್ ಉದ್ಯೋಗಸ್ಥರಲ್ಲಿ ಇಬ್ಬರು ಗಾಯಪಟ್ಟಿದ್ದಾರೆ.

ಟರ್ಕಿಯಲ್ಲಿ.

ರಷ್ಯಾ, ಫ್ರಾನ್ಸ್, ಬ್ರಿಟನ್ ಸೈನಿಕರು ಸ್ವಲ್ಪವೂ ತಡಮಾಡದೆ ಟರ್ಕಿಯನ್ನು ಮೂರು ಕಡೆಗಳಲ್ಲಿ ಮುತ್ತಿಗೆ ಹಾಕಿಬಿಟ್ಟರು.

ಒಂದು ಯುದ್ಧದ ಹಡಗು ಅಕಬಾ ಎಂಬ ತೀರಪಟ್ಟಣಕ್ಕೆ ಗುಂಡುಗಳನ್ನು ಹಾಕಿತು. ಈ ಪಟ್ಟಣವು ಕೆಂಪು ಕಡಲಿನ ಪೂರ್ವ ಬಾಜೆಯ ಉತ್ತರ ದಿಕ್ಕಿನ ತೀರದಲ್ಲಿದೆ. ಕೋಟೆಯೂ, ಸೈನಿಕರ ಸಾಲು ಮನೆಗಳೂ, ಉಗ್ರಾಣಗಳೂ ನಾಶಹೊಂದಿದವು. ಆ ಹಡಗಿಗೆ ಅಪಾಯವೇನೂ ಸಂಭವಿಸಲಿಲ್ಲ.

ಟರ್ಕಿ ರಾಜಧಾನಿಯಾದ ಕಾನ್‌ಸ್ಟೆಂಟಿನೋಪಲ್ ಪಟ್ಟಣಕ್ಕೆ ಹೋಗುವಲ್ಲಿ ಡಾರ್ಡನಲ್ಸ್ ಎಂಬ ಜಲಮಾರ್ಗವಿದೆ. ಈ ಮಾರ್ಗದ ಬಾಗಿಲಲ್ಲಿ ಬಲವಾದ ಕೋಟೆಗಳಿರುವವು. ಈ ಕೋಟೆಗಳನ್ನು ಒಡೆದುಹಾಕಬೇಕೆಂದು ಬ್ರಿಟಿಷ್ ಮತ್ತು ಫ್ರೆಂಚ್ ಯುದ್ಧದ ಹಡಗುಗಳು ಫಿರಂಗಿಗಳನ್ನು ಎತ್ತಿಕಟ್ಟಿ ಗುಂಡುಗಳನ್ನು ಹಾಕುತ್ತಿವೆ.

ರಷ್ಯಾದವರು ಏಷ್ಯಾ ಖಂಡದಲ್ಲಿರುವ ಟರ್ಕಿ ರಾಜ್ಯದ ಪೂರ್ವ ಪ್ರಾಂತ್ಯದೊಳಗೆ ನುಗ್ಗಿಹೋಗಿ ಹಲವು ಸಣ್ಣ ಊರುಗಳನ್ನು ಸ್ವಾಧೀನಪಡಿಸಿಕೊಂಡರು. ಇವಕ್ಕೆ ರಷ್ಯಾ ಸೈನಿಕರು ಹಿಮದಿಂದ ಆವರಿಸಿದ್ದ ಪರ್ವತಗಳನ್ನು ಹತ್ತಿ ಇಳಿದು ಹೋಗಬೇಕಾಯಿತು. ಆದರೂ ಅವರು 30 ಗಂಟೆ ಹೊತ್ತಿನಲ್ಲಿ 50 ಮೈಲಿ ದೂರ ತಮ್ಮ ಸೈನ್ಯವನ್ನು ಕಳುಹಿಸಿದ್ದು ಹೊಗಳತಕ್ಕದ್ದಾಗಿದೆ. ಈಗ ಈ ಸೈನ್ಯಗಳು ಎರ್ಜರೂಮ್ ಎಂಬ ನಗರವನ್ನು ಹಿಡಿಯಬೇಕೆಂದು ಹೋಗುತ್ತಿರುವವು. ಆ ಪ್ರಾಂತ್ಯಕ್ಕೆಲ್ಲಾ ಇದೇ ಮುಖ್ಯ ನಗರವಾಗಿದೆ.

ಟರ್ಕಿಯವರು ಕಪ್ಪುಕಡಲಿನಲ್ಲಿ ರಷ್ಯಾದವರ ಒಂದು ಹಳೇ ಯುದ್ಧದ ಹಡಗನ್ನು ಮುಳುಗಿಸಿದರು. ಇದಲ್ಲದೆ ಅವರ ಫಿರಂಗಿ ಗುಂಡುಗಳು ಬಟೂಮ್ ಎಂಬ ನಗರದ ಮೇಲೆ ಬಿದ್ದವು.

ನಾನಾ ಬಗೆಯ ಸುಳ್ಳು ಸುದ್ದಿಗಳು ಹರಡಿಕೊಂಡಿರುತ್ತವೆ. ಮಹಮದೀಯ ಯಾತ್ರಿಕರು ಅರೇಬಿಯದಲ್ಲಿ ಹಡಗಿನಿಂದ ಜೆಡ್ಡಾ ಪಟ್ಟಣದಲ್ಲೇ ಇಳಿಯಬೇಕು. ಬ್ರಿಟಿಷರು ಈ ಜೆಡ್ಡಾ ಎಂಬ ಪಟ್ಟಣಕ್ಕೆ ಗುಂಡುಹೊಡೆದರಂತೆ. ಅದು ಸುಳ್ಳು ಸುದ್ದಿ. ಬ್ರಿಟಿಷ್ ಗವರ್ನ್‌ಮೆಂಟಿನವರು ಪುಣ್ಯಸ್ಥಳಗಳ ತಂಟೆಗೆ ಹೋಗುವುದಿಲ್ಲವೆಂದು ಮಾತುಕೊಟ್ಟಿದ್ದಾರೆ. ಮತ ಸಂಬಂಧವಾದ ಸ್ಥಳ ಮತ್ತು ಕಾರ್ಯಗಳಿಗೂ ಈ ಯುದ್ಧಕ್ಕೂ ಯಾವ ಸಂಬಂಧವೂ ಇರುವುದಿಲ್ಲ.

ಯುದ್ಧಕ್ಕೆ ಹೊರಟ ವಿಷಯದಲ್ಲಿ ಟರ್ಕಿಯೊಳಗೇ ಎರಡು ಪಂಗಡಗಳು ಹುಟ್ಟಿವೆ. ಕಳೆದ ವಾರ ಟರ್ಕಿಯ ಮೂರು ಇಲಾಖೆಗಳ ಮಂತ್ರಿಗಳು ರಾಜೀನಾಮೆಕೊಟ್ಟು ಕೆಲಸ ಬಿಟ್ಟಿದ್ದಾರೆ.

ಮೆಡಿಟರೇನಿಯನ್ ಕಡಲಿನಲ್ಲಿ ಸೈಪ್ರಸ್ ಎಂಬ ಒಂದು ದೊಡ್ಡ ದ್ವೀಪವಿದೆ. ಟರ್ಕಿಯವರ ಪರವಾಗಿ ಬ್ರಿಟಿಷ್ ಗವರ್ನ್‌ಮೆಂಟಿನವರು ಈ ದ್ವೀಪವನ್ನು ಆಳುತ್ತಿದ್ದರು. ಯುದ್ಧ ಪ್ರಾರಂಭವಾದ ಮೇಲೆ ಅಂದರೆ ಕಳೆದ ವಾರ ಬ್ರಿಟಿಷರು ಈ ದ್ವೀಪವನ್ನು ತಮ್ಮ ರಾಜ್ಯಕ್ಕೆ ಸೇರಿಸಿಕೊಂಡುಬಿಟ್ಟರು. ಈ ದ್ವೀಪದ ಹುಟ್ಟುವಳಿಯಲ್ಲಿ ಬ್ರಿಟಿಷ್ ಗವರ್ನ್‌ಮೆಂಟಿನವರು ಟರ್ಕಿಗೆ ಸಾಲಿಯಾನಾ 13,87,500 ರೂಪಾಯಿ ಪಾವತಿ ಮಾಡುತ್ತಿದ್ದರು. ಈ ವರಮಾನವು ಇನ್ನು ಮುಂದೆ ತಪ್ಪಿಹೋಯಿತು.

ಟರ್ಕಿಯವರು ಯುದ್ಧಕ್ಕೆ ಹೊರಟದ್ದನ್ನು ನ್ಯಾಯವೆಂದು ಒಪ್ಪಿಕೊಳ್ಳುವ ಮಹಮದೀಯರು ತುಂಬಾ ಅಪರೂಪ. ಹಿಂದೂಸ್ಥಾನದಲ್ಲೆಲ್ಲಾ ಮುಸಲ್ಮಾನ್ ಪ್ರಜೆಗಳು ಪಬ್ಲಿಕ್ ಮೀಟಿಂಗುಗಳನ್ನು ನಡೆಸುತ್ತಾ, ತಾವು ಬ್ರಿಟಿಷ್ ಗವರ್ನ್‌ಮೆಂಟಿನವರ ನಿಷ್ಕಪಟ ಪ್ರಜೆಗಳೆಂದು ಸಾರಿಹೇಳುತ್ತಾ ಬಂದಿದ್ದಾರೆ. ಆಫ್ರಿಕಾ ಉತ್ತರ ಭಾಗದಲ್ಲಿರುವ ಮಹಮದೀಯರು ತಾವು ಫ್ರೆಂಚರ ನಿಷ್ಕಪಟ ಪ್ರಜೆಗಳೆಂದು ಹೇಳಿಬಿಟ್ಟರು. ಹಾಗೆಯೇ ರಷ್ಯಾದಲ್ಲಿರುವ ಮುಸಲ್ಮಾನರುಗಳು ತಾವು ರಷ್ಯಾ ರಾಜ್ಯದ ಪ್ರಜೆಗಳೆಂದು ಹೇಳಿದ್ದಾರೆ.

ಈಚೆಗೆ ಬಂದಿರುವ ತಂತೀವರ್ತಮಾನವೇನೆಂದರೆ, ರಷ್ಯಾದವರು ಕಪ್ಪು ಕಡಲಿನ ತೀರದಲ್ಲಿ ಟರ್ಕಿಗೆ ಸೇರಿದ ಒಂದು ತೀರಪಟ್ಟಣಕ್ಕೆ ಗುಂಡುಗಳನ್ನು ಹಾಕಿದರು. ಟರ್ಕಿಯವರ ಮೂರು ಹಡಗುಗಳು ಮುಳುಗಿಸಲ್ಪಟ್ಟವು. ಅವುಗಳಲ್ಲಿ ಯುದ್ಧಸಾಮಗ್ರಿಗಳು ಭರ್ತಿಯಾಗಿದ್ದವು; ಒಂದರಲ್ಲಿ ಟರ್ಕಿಯವರ ಸೈನಿಕರಿದ್ದರೆಂದು ಕಾಣುತ್ತದೆ.

ಸಮುದ್ರದ ಮೇಲೆ.

ಜರ್ಮನಿಯವರ ಕೆಲವು ಯುದ್ಧದ ಹಡಗುಗಳು ಉತ್ತರ ಕಡಲಿಗೆ ನುಗ್ಗಿ ಹೋದವು; ಆದರೆ ತಾವು ಬಂದದ್ದು ಬ್ರಿಟಿಷರಿಗೆ ಗೊತ್ತಾಯಿತೆಂದು ತಿಳಿದ ಒಡನೆಯೇ ಹಾಗೇ ವಾಪಸು ಹೊರಟುಹೋದವು. ಬಹುಶಃ ಅವು ಸಮುದ್ರದೊಳಗೆ ಮೈನ್ ಎಂಬ ಸಿಡಿಮದ್ದಿನ ಗುಂಡುಗಳನ್ನು ಇಡುತ್ತಿದ್ದವೆಂದು ಕಾಣುತ್ತದೆ.

ಜರ್ಮನಿಯ ಉತ್ತರ ಪಾರ್ಶ್ವದ ಸಮುದ್ರತೀರದಲ್ಲಿ ಜರ್ಮನಿಯವರು ಇಟ್ಟಿದ್ದ ಸಿಡಿಮದ್ದಿನ ಗುಂಡು ಬಡಿದು ಜರ್ಮನಿಯವರ ಒಂದು ಯುದ್ಧದ ಹಡಗು ಮುಳುಗಿಹೋಯಿತು.

ದಕ್ಷಿಣ ಅಮೇರಿಕದ ಬಳಿ ಜರ್ಮನಿಯ ಒಂದು ಯುದ್ಧದ ಹಡಗು ಬ್ರಿಟಿಷರ ಮೂರು ವ್ಯಾಪಾರ ಹಡಗುಗಳನ್ನು ಹಿಡಿದು ಮುಳುಗಿಸಿರುತ್ತದೆ.

ದಕ್ಷಿಣ ಅಮೇರಿಕಕ್ಕೆ ಸೇರಿದ ಚಿಲ್ಲಿ ಅಧಿಪತ್ಯದ ಸಮುದ್ರತೀರದಲ್ಲಿ ಸಮುದ್ರದ ಮೇಲೆ ಒಂದು ಯುದ್ಧವಾಯಿತು. ಬ್ರಿಟಿಷರ ಕಡೆ ಮೂರು ಹಡಗುಗಳಿದ್ದವು; ಜರ್ಮನಿಯವರ ಕಡೆ ಐದು ಹಡಗುಗಳಿದ್ದವು. ಸಂಜೆ ಹೊತ್ತಿನಲ್ಲಿ ಕದನ ಪ್ರಾರಂಭವಾಯಿತು. ಬ್ರಿಟಿಷ್ ಹಡಗುಗಳ ಪೈಕಿ ಒಂದರಲ್ಲಿ ಏನೋ ಆಕಸ್ಮಿಕ ನಡೆದು ಮಹಾ ಶಬ್ದದೊಡನೆ ಹಾರಿ ಒಡೆದು ಆ ಹಡಗು ಮುಳುಗಿಹೋಯಿತು. ಇನ್ನೊಂದು ಬ್ರಿಟಿಷ್ ಹಡಗು ಓಡಿಹೋಗಿ ನೆಲದ ಮೇಲೆ ನಿಂತುಬಿಟ್ಟಿತು. ಮೂರನೆಯದು ತಪ್ಪಿಸಿಕೊಂಡುಹೋಯಿತು. ಬ್ರಿಟಿಷರಿಗಿಂತ ಜರ್ಮನಿಯವರ ಕಡೆ ಸೈನ್ಯ ಬಹಳ ಹೆಚ್ಚಾಗಿತ್ತು. ಆದರೂ ಅವರು ಶತ್ರುಗಳಿಗೆ ಯುದ್ಧಕೊಡಲು ಹಿಂಜರಿಯಲಿಲ್ಲ. ಇದರಲ್ಲಿ ಬ್ರಿಟಿಷರಿಗೆ ಅಪಜಯವಾಯಿತು. ಆದರೆ ಬ್ರಿಟಿಷರು ಇನ್ನೂ ಹಡಗುಗಳನ್ನು ಆ ಕಡೆಗೆ ಕಳುಹಿಸುತ್ತಾರೆ.

ಇತರ ವಿಷಯಗಳು.

ಈಚೆಗೆ ಕೆನಡಾದಿಂದ ಇಂಗ್ಲೆಂಡಿಗೆ ಕಳುಹಲ್ಪಟ್ಟ ಸಹಾಯಕ ಸೈನ್ಯವನ್ನು ಚಕ್ರವರ್ತಿ ಸಾರ್ವಭೌಮರವರೂ ಲಾರ್ಡ್ ಕಿಚ್ನರ್ ಯವರೂ ಖುದ್ದಾಗಿ ಪರಾಂಬರಿಸಿ, ಮೈದಾನದಲ್ಲಿ ಅವರಿಂದ ಕವಾಯತು ಮುಂತಾದದ್ದನ್ನು ಮಾಡಿಸಿದರು.

ಬ್ರಿಟಿಷ್ ಗವರ್ನ್‌ಮೆಂಟಿನಲ್ಲಿ ಹಣದ ಕಷ್ಟವೇನೂ ಇರುವುದಿಲ್ಲ. ಅವರು ಯುದ್ಧದ ಖರ್ಚಿಗೆ 1,50,00,000 ಪೌಂಡು ಸಾಲಬೇಕಾಗಿದೆ ಎಂದು ಇಸ್ತಿಹಾರು ಹಾಕಿದ್ದಕ್ಕೆ 2,70,00,000 ಪೌಂಡು ಸಾಲಕೊಡುತ್ತೇವೆಂದು ಅರ್ಜಿಗಳು ಬಂದವು.

ವ್ಯಾಪಾರಕ್ಕೆ ಅಂದರೆ ಆಮದು ರಫ್ತಿಗೆ ಕುಂದಕ ಉಂಟಾಗಿರುವುದರಿಂದ ಎಲ್ಲಾ ಜನಾಂಗದವರಿಗೂ ತುಂಬಾ ಕಷ್ಟನಷ್ಟಗಳು ಪ್ರಾಪ್ತವಾಗಿವೆ. ಗ್ರೇಟ್ ಬ್ರಿಟನ್ ರಾಜ್ಯದ ಆಮದುರಫ್ತು ಬಹಳ ಕಡಮೆಯಾಯಿತು; ಅದು ಈಗೀಗ ಚೇತರಿಸಿ ಕೊಳ್ಳುತ್ತಿದೆ. ಜರ್ಮನಿಯ ಪರದೇಶಗಳ ಆಮದು ರಫ್ತೆಲ್ಲಾ ಸಂಪೂರ್ಣವಾಗಿ ನಿಂತುಹೋಯಿತೆಂದು ಹೇಳಬಹುದು.

ಇಂಪೀರಿಯಲ್ ಇಂಡಿಯಾ ರಿಲೀಫ್ ಫಂಡು.

"ವೃತ್ತಾಂತ ಪತ್ರಿಕೆ" ಆಫೀಸ್ ಚಂದಾ ಪಟ್ಟಿ.

ಹಿಂದೆ ವಸೂಲಾಗಿರುವ ಚಂದಾ.	....	ರೂ. 209-14-4
ಬಡಚೌಡನಹಳ್ಳಿ ಮ॥ ಎಚ್. ಆನಂದಪ್ಪನವರ ಮೂಲಕ—ಸ್ಕೂಲ್ ಮಕ್ಕಳು 0-6-3, ಮಾರಣ್ಣನ ಸಂಜೀವಪ್ಪನವರು ರೂ. 1, ಸಂಕಮ್ಮನ ನರಸಪ್ಪನವರು 8 ಆ; ಬ್ಯಾಲ್ಯದ ಪಟೇಲ್ ಚಿಕ್ಕಪಾಪಯ್ಯನವರು, ಶ್ಯಾನುಭೋಗ ಸಂಕಪ್ಪಾಚಾರ್ರು, ತಲಾ 4 ಆ ಜುಮ್ಲಾ	,,	2-10-3
	ಜುಮ್ಲಾ ರೂಪಾಯಿ	212- 4-7

ಸೆಂಟ್ ಜಾನ್ ಆಂಬುಲೆನ್ಸ್ ಸಂಘ.

ಮೈಸೂರು ಶಾಖೆಯ ಸೆಕ್ರೆಟರಿ ಸರ್ದಾರ್ ಎಂ. ಲಕ್ಷ್ಮೀಕಾಂತರಾಜೆ ಅರಸಿನವರು ಯುದ್ಧದ ರಿಲೀಫ್ ಫಂಡಿಗಾಗಿ ತಮಗೆ ಮುಂದೆ ಹೇಳುವ ಚಂದಾ ಹಣಗಳು ತಲುಪಿವೆ ಎಂದು ತಿಳಿಸುತ್ತಾರೆ.

ವಡಿಗೇನಹಳ್ಳಿ ಪ್ರಜೆಗಳು ಅಮಲ್ದಾರ್ರ ಮೂಲಕ ರೂ. 200, ಮ॥ ಪಿ. ಆರ್. ತ್ಯಾಗರಾಜ ಅಯ್ಯರವರು ರೂ. 150, ಜಗಲೂರು ಪ್ರಜೆಗಳು ಮ॥ ಹನುಮಂತರಾಯರ ಮೂಲಕ ರೂ. 125, ಮ॥ ಎ. ಸಿ. ಲಿಂಗರಾಜೆಅರಸಿನವರು ರೂ. 40, ಚಿಕ್ಕಮಗಳೂರು ಹೈಸ್ಕೂಲ್ ವಿದ್ಯಾರ್ಥಿಗಳು ಮತ್ತು ಉಪಾಧ್ಯಾಯರು ಹೆಡ್ ಮಾಸ್ಟರ ಮೂಲಕ ರೂ. 30, ಚನ್ನಪಟ್ಟಣದ ಪ್ರಜೆಗಳು ಅಮಲ್ದಾರ್ರ ಮೂಲಕ ರೂ. 24-12-0, ಕೃಷ್ಣರಾಜಪೇಟೆ ಪ್ರಜೆಗಳು ಅಮಲ್ದಾರ್ರ ಮೂಲಕ ರೂ. 19-8-0, ಚನ್ನಗಿರಿ ಎ. ವಿ. ಸ್ಕೂಲ್ ವಿದ್ಯಾರ್ಥಿಗಳು ಮತ್ತು ಉಪಾಧ್ಯಾಯರು ಹೆಡ್ ಮಾಸ್ಟರ ಮೂಲಕ ರೂ. 10-11-6, ಮಿಸೆಸ್ ಶಿವರಾವ್ ಬಹದೂರ್ ರೂ. 10, ಮಹಾರಾಜರವರ ಬಾಡಿಗಾರ್ಡ್ ಚಾಮುಂಡಾಟಿರೂ ಆಫೀಸರುಗಳೂ ರೂ. 10; ಮಿ॥ ಇ. ಎ. ಸ್ಯಾಸಿಂಡರ್, ಮ॥ ವರ್ಧಮಾನಯ್ಯನವರು, ಮಿಸೆಸ್ ಲಿಂಗರಾಜಮ್ಮಣ್ಣಿಯವರು, ತಲಾ ರೂ. 5; ಗೌರಿಬಿದನೂರು ಆಸ್ಪತ್ರೆ ನೌಕರರು ರೂ. 5, ಐದು ರೂಪಾಯಿನೊಳಗಿನ ಚಂದಾಗಳು ರೂ. 13-5-0; ಜುಮ್ಲಾ ರೂ. 653-4-8. ಹಿಂದೆ ವಸೂಲಾಗಿರುವುದು ರೂ. 3,021-10-3; ಜುಮ್ಲಾ ರೂಪಾಯಿ 3,674-14-9.

ಇದಲ್ಲದೆ ಮೈಸೂರು ಲೇಡೀಸ್ ಕಮಿಟಿಯವರೂ, ವೆಸ್ಲಿಯನ್ ಮಿಷನ್‌ನವರೂ ಕಳುಹಿಸಿದ ಏಳು ಪೆಟ್ಟಿಗೆಗಳ ಬಟ್ಟೆಬರೆಗಳು ತಲುಪಿ, ಇವನ್ನು ಬೊಂಬಾಯಿಗೆ ರವಾನೆಮಾಡಿರುತ್ತೆ.

ಹತ್ತಿಯ ಹಿಂಡಿ ಮತ್ತು ಹೊಟ್ಟು.

ಮೈಸೂರು ದೇಶದ ವ್ಯವಸಾಯ ಇಲಾಖಾ ಡೈರೆಕ್ಟರವರಾದ ಡಾ॥ ಲೆಸ್ಲಿ ಸಿ. ಕೋಲ್‌ಮನ್‌ರವರು ಕೈಗಾರಿಕೆ ಮತ್ತು ವ್ಯಾಪಾರ ಸಂಘದ ಸೆಕ್ರೆಟರಿ ಮ॥ ಸಿ. ರಂಗನಾಥರಾವ್ ಸಾಹೇಬ್‌ರವರಿಗೆ ಬರೆಯುವುದೇನೆಂದರೆ,—

ಪ್ರಿಯರೇ,—ನಿಮ್ಮ ಕಾಗದವನ್ನೂ ಅದರ ಲಗತ್ತಿದ್ದ ಕಾಗದವನ್ನೂ ಆತ್ಯಾದರದಿಂದ ಸ್ವೀಕರಿಸಿದೆನು. "ಹತ್ತಿಯ ಬೀಜದ ಘಟಕಾಂಗಗಳ ವಿಷಯವನ್ನು ನೀವು ಬಹಳ ಜಾಗರೂಕತೆಯಿಂದ ಬರೆದಿರುವಂತೆ ಕಾಣಬರುತ್ತದೆ. ಮತ್ತು ಅದರ ವಿಷಯದಲ್ಲಿ ಎಷ್ಟು ವಿಷಯಗಳಿವೆಯೋ ಅಷ್ಟೂ ಈ ನಿಮ್ಮ ಪುಸ್ತಕದಲ್ಲಿ ಗರ್ಭೀಕೃತವಾಗಿದೆ ಎಂದು ಯೋಚಿಸುತ್ತೇನೆ.—ಈ ದೇಶದಲ್ಲಿ ಬಹುಕಾಲದಿಂದಲೂ ಹತ್ತಿಯ ಬೀಜವು ದನಗಳಿಗೆ ಉಪಯುಕ್ತವಾದ ಆಹಾರವಾಗಿ ಪರಿಗಣಿಸಲ್ಪಟ್ಟಿರುವುದೆಂಬ ವಿಷಯವನ್ನು ಪುನಃ ಹೇಳುವುದು ಪುನರುಕ್ತಿಯಾಗುವುದೆಂದು ತೋರುತ್ತದೆ. ದನಗಳು ಚೆನ್ನಾಗಿ ತಿಂದು ಎಷ್ಟು ಕೊಬ್ಬನ್ನು ಉಪಯೋಗಿಸಿಕೊಳ್ಳಬಲ್ಲವೋ ಅದಕ್ಕಿಂತಲೂ ಹೆಚ್ಚಾದ ಕೊಬ್ಬು ಹತ್ತಿಯ ಬೀಜದಲ್ಲಿ ಅಡಗಿದೆ; ಆದಕಾರಣ ಎಣ್ಣೆಯ ಬಹು ಭಾಗವನ್ನು ತೆಗೆದನಂತರ ಹಿಂಡಿಯನ್ನು ದನಗಳಿಗೆ ಆಹಾರವಾಗಿ ಉಪಯೋಗಿಸಬೇಕೆಂದು ಪುಸ್ತಕದಲ್ಲಿ ನಿರೂಪಿತವಾಗಿರುವುದು ಖಂಡಿತವಾಗಿಯೂ ಲಾಭದಾಯಕವಾದದ್ದು. ಹತ್ತಿಯ ಬೀಜದ ಹೊಟ್ಟನ್ನು ದನಗಳಿಗೆ ಬೊಂಬಾಯಿ ಪ್ರಾಂತ್ಯದಲ್ಲಿ ಉಪಯೋಗಿಸಿದ್ದರಲ್ಲಿ ತೃಪ್ತಿಕರವಾದ ಫಲಿತಾಂಶವು ಕಂಡುಬಂದಿದೆ. ಬೆಂಗಳೂರಿನಲ್ಲಿರುವ ಗೌರ್ನಮೆಂಟ್ ಮಿಲಿಟರಿ ಹೈನದ ಕ್ಷೇತ್ರದ ಮ್ಯಾನೇಜರವರೂ ಸಹ ಹಾಲು ಕರೆಯುವ ದನಗಳಿಗೆ ಹಿಂಡಿಯನ್ನೂ ಬೀಜದ ಹೊಟ್ಟನ್ನೂ ಉಪಯೋಗಿಸುವುದರ ಮಹತ್ವವನ್ನು ಬಹು ಹೆಚ್ಚಾಗಿ ಹೇಳುತ್ತಾರೆ. ಹಿಂಡಿ ಮತ್ತು ಹೊಟ್ಟು ಇವೆರಡನ್ನೂ ಮೈಸೂರು ದೇಶದಲ್ಲಿ ದನಗಳಿಗೆ ಸಾಧಾರಣವಾಗಿ ಉಪಯೋಗಿಸುವುದರಿಂದ ಅವುಗಳ ಸ್ಥಿತಿಯು ಉತ್ತಮವಾಗುವುದೆಂದು ದೃಢವಾಗಿ ನಂಬುತ್ತೇನೆ.—ಭೂಮಿಗೆ ಇವೆರಡರ ಪೈಕಿ ಯಾವುದನ್ನೇ ಆಗಲಿ ಗೊಬ್ಬರವಾಗಿ ಉಪಯೋಗಿಸಿದರೂ ಅಥವಾ ದನಗಳು ಇವುಗಳನ್ನು ತಿಂದನಂತರ ಅವುಗಳ ಗೊಬ್ಬರವನ್ನು ಉಪಯೋಗಿಸಿದರೂ ನೈಟ್ರೋಜನ್ ಎಂಬ ಉತ್ತಮವಾದ ಗೊಬ್ಬರವನ್ನು ಕೊಡುತ್ತದೆ.

ತಾಲ್ಲೂಕು ವರ್ತಮಾನ.

ಮಾಗಡಿ.—ಈ ಪ್ರಾಂತ್ಯ ರಾಗಿಯ ಬೆಳೆ ಬಹಳ ಚೆನ್ನಾಗಿದೆ. ಆರಿ ಫಸಲಿಗೆ ನೀರಿಲ್ಲ. ಮುಂದೆ ದೊಡ್ಡ ಮಳೆ ಬರುವ ಸಂಭವವಿಲ್ಲದ್ದರಿಂದ ನೀರಿಗೆ ಕಷ್ಟವಾಗಬಹುದು. ಚನ್ನಪಟ್ಟಣದಿಂದ ಬಂದವರ ಮೂಲಕ ಈ ಊರಿಗೆ ಡೆಂಗ್ಯು ಫೀವರ್ ಬಂದು ನೂರಾರು ಮಂದಿಯನ್ನು ಪೀಡಿಸಿತು. ಇನ್ನೂ ಕಾಹಿಲೆ ಹೆಚ್ಚುತ್ತಿದೆ.—ಇಲ್ಲಿಯ ಸ್ಕೂಲುಗಳಲ್ಲಿ ಚೆನ್ನಾಗಿ ಕೆಲಸ ನಡೆಯುತ್ತಿದೆ. ಒಂದು ತಿಂಗಳಿಂದ ಎ. ವಿ. ಕ್ಲಾಸುಗಳ ಹುಡುಗರಿಗೆ ಮರಗೆಲಸ ಕಲಿಸುತ್ತಿದ್ದಾರೆ. ನೇಗೆಯ ಕೆಲಸವನ್ನು ಕಲಿಸಲು ಪ್ರಯತ್ನ ನಡೆಯುತ್ತಿದೆ.—ಈ ತಾಲ್ಲೂಕಿನ ಉಪಾಧ್ಯಾಯರ ಸಂಘವು ಚೆನ್ನಾಗಿಯೇ ನಡೆಯುತ್ತಿದೆ. ಪ್ರತಿ ತಿಂಗಳ ಮೂರನೆಯ ಭಾನುವಾರ ಸಂಘವು ಸೇರಿ ಮಾದರಿ ಪಾಠ, ಸ್ಕೂಲ್ ಮ್ಯಾನೇಜ್‌ಮೆಂಟು, ಉಪನ್ಯಾಸ ಮುಂತಾದವು ನಡೆಯುವವು. ಕಳೆದ ಮೀಟಿಂಗಿಗೆ 40 ಮಂದಿ ಮಾಸ್ತರುಗಳು ಬಂದಿದ್ದರು. ಇದು ಇನ್ನೂ ವೃದ್ಧಿಗೆ ಬರಬಹುದಾಗಿದೆ.—ಪೋಸ್ಟ್ ಆಫೀಸು 16 ವರುಷಗಳಿಂದ ಇದ್ದ ಸ್ಥಳವು ನಾದುರಸ್ತಿಯಾಗಿದ್ದ ಕಾರಣ ಈ ಗುತ್ತಿಗೆಯಿಂದ ನಮ್ಮ ಕಚೇರಿಯ ಮನೆಗೆ ವರ್ಗಾಯಿಸಲ್ಪಟ್ಟಿದ್ದು ಬಹುಜನಕ್ಕೆ ಸಂತೋಷಕರವಾಗಿದೆ.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1914 ನೇ ಇಸವಿ ಅಕ್ಟೋಬರ್ 31 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ.

ಲೇಣಿ:—(1)	ಷೇರು ಮೊಬಲಗು	ರೂ. 9,94,295
,, (2)	ಡಿಪಾಜಿಟ್ಟುಗಳು	,, 21,96,459
,, (3)	ಇತರೆ	,, 47,206
	(ಆಣೆ, ಕಾಸು ಬಿಟ್ಟಿರುತ್ತೆ.)	ಜುಮ್ಲಾ ರೂ. 33,37,960

ದೇಣಿ :—(1)	ಕೈಯಲ್ಲೂ, ಬ್ಯಾಂಕುಗಳಲ್ಲಿರುವ ಹಣ	ರೂ. 6,83,544
,, (2)	ಖಾತೆ ಮತ್ತು ಇತರ ಸಾಲಗಳು	,, 18,71,210
,, (3)	ಡಿಸ್ಕೌಂಟು ಮಾಡಿದ ವಾಯಿದೆ ಹುಂಡಿಗಳು	,, 3,21,889
,, (4)	ಇನ್ವೆಸ್ಟ್‌ಮೆಂಟುಗಳು	,, 2,50,000
,, (5)	ಏಜೆನ್ಸಿಗಳಲ್ಲಿರುವ ಮೊಬಲಗು	,, 81,853
,, (6)	ಬ್ಯಾಂಕಿನಲ್ಲಿರುವ ಸಾಮಾನುಗಳು	,, 14,460
,, (7)	ಇತರೆ	,, 15,004
	(ಆಣೆ, ಕಾಸು ಬಿಟ್ಟಿರುತ್ತೆ.)	ಜುಮ್ಲಾ ರೂ. 33,37,960

ಡಬ್ಲಿಯು. ಸಿ. ರೋಸ್, ಮ್ಯಾನೇಜರ್.

ಯುದ್ಧವೂ ಮಹಮದಿಯ ಪುಣ್ಯಸ್ಥಳಗಳೂ.

ಅರೇಬಿಯಾ ದೇಶದೊಳಗಿರುವ ಯಾತ್ರಾಸ್ಥಳಗಳ ವಿಷಯದಲ್ಲಿ ಇಂಡಿಯಾ ಸರ್ಕಾರದವರು ಕೊಟ್ಟಿರುವ ಪ್ರಕಟನೆಯನ್ನು ಸಮಸ್ತರ ತಿಳುವಳಿಕೆಯ ಬಗ್ಗೆ ಈ ಕೆಳಗೆ ಛಾಯಿಸ್ ಮಾಡಿ ಇದೆ:—

«ಆಟೋಮನ್ ಸರ್ಕಾರದವರು ಯುಕ್ತಾಯುಕ್ತ ವಿಮರ್ಶೆ ಇಲ್ಲದೆಯೂ, ಕೋಪೋದ್ರೇಕಕ್ಕೆ ಕಾರಣವಿಲ್ಲದೆಯೂ, ತಿಳಿದೂ ತಿಳಿದೂ ಕೂಡ, ಗ್ರೇಟ್ ಬ್ರಿಟನ್ ದೇಶದೊಡನೆ ಯುದ್ಧಕ್ಕೆ ಉದ್ಯುಕ್ತರಾಗಿರುವಪ್ರಯುಕ್ತ, ಗ್ರೇಟ್ ಬ್ರಿಟನ್ ದೇಶದವರು ವಿವಾದಿಸುತ್ತಾರಲ್ಲದೆ, ಹೀಗೆ ಗ್ರೇಟ್ ಬ್ರಿಟನ್ ದೇಶಕ್ಕೂ ತುರ್ಕಿ ದೇಶಕ್ಕೂ ಯುದ್ಧ ಪ್ರಾಪ್ತವಾಗಿರುವುದರಿಂದ, ಮತಸಂಬಂಧವಾದ ಯಾವ ಕಾರಣವೂ ಇಲ್ಲದೇ ಇರುವ ಈ ಯುದ್ಧದ ವಿಷಯದಲ್ಲಿ ಇಂಡಿಯಾ ಚಕ್ರವರ್ತಿಯವರ ಸರ್ಕಾರದವರು ತೋರ್ಪಡಿಸಿರುವ ನಡವಳಿಕೆಗಳ ವಿಷಯವಾಗಿ ರಾಜಭಕ್ತಿಯುಕ್ತರಾದ ಅವರ ಮುಸಲ್ಮಾನ್ ಪ್ರಜೆಗಳಿಗೆ ಯಾವ ತಪ್ಪು ತಿಳುವಳಿಕೆಗೂ ಅವಕಾಶ ಉಂಟಾಗಕೂಡದೆಂಬ ಉದ್ದೇಶದಿಂದ ಘನತೆಯನ್ನೈದಿದ ವೈಸ್ ರಾಯಿಯವರು ಅರೇಬಿಯಾ ಮತ್ತು ಮಿಸೊಪೊಟೋಮಿಯಾ ದೇಶಗಳ ಪುಣ್ಯಸ್ಥಳಗಳ ವಿಷಯದಲ್ಲಿಯೂ, ಜೆಡ್ಡಾ ರೇವು ಪಟ್ಟಣದ ವಿಷಯದಲ್ಲಿಯೂ ಈ ಕೆಳಗೆ ನಮೂದಿಸಿರುವಂತೆ ಬಹಿರಂಗವಾದ ಪ್ರಕಟನೆಯನ್ನು ಪ್ರಚುರಪಡಿಸಲು ಶ್ರೀಮದಿಂಡಿಯಾ ಚಕ್ರವರ್ತಿಯವರ ಸರ್ಕಾರದವರಿಂದ ಅಧಿಕಾರವನ್ನು ಹೊಂದಿರುತ್ತಾರೆ—ಮೇಲ್ಕಂಡ ಪುಣ್ಯಸ್ಥಳಗಳಿಗೆ ಇಂಡಿಯಾ ದೇಶದಿಂದ ಹೋಗುವ ಯಾತ್ರಾರ್ಥಿಗಳಿಗೆ ಯಾವ ತೊಂದರೆಯೂ ಉಂಟಾಗದೆ ಇರುವ ತನಕ, ಬ್ರಿಟಿಷ್ ನಾವಿಕ ಸೈನ್ಯದವರೂ ಮಿಲಿಟರಿ ಸೈನ್ಯದವರೂ ಸಹ ಸದರಿ ಪುಣ್ಯಸ್ಥಳಗಳಿಗೂ ಜೆಡ್ಡಾ ರೇವು ಪಟ್ಟಣಕ್ಕೂ ಮುತ್ತಿಗೆಹಾಕುವುದೂ ಇಲ್ಲ, ಅವುಗಳ ತಂಟೆಗೆ ಹೋಗುವುದೂ ಇಲ್ಲ. ಇಂಡಿಯಾ ಚಕ್ರವರ್ತಿಗಳ ಸರ್ಕಾರದವರ ಪ್ರಾರ್ಥನಾನುಸಾರವಾಗಿ ಫ್ರೆಂಚ್ ಮತ್ತು ರಷ್ಯಾ ಸರ್ಕಾರದವರೂ ಸಹ ಇದೇ ರೀತಿಯಾಗಿ ಭರವಸೆಗಳನ್ನು ಕೊಟ್ಟಿರುತ್ತಾರೆ.»

ಇಂಪೀರಿಯಲ್ ಇಂಡಿಯನ್ ರಿಲೀಫ್ ಫಂಡು.

ಮೈಸೂರು ಬ್ರಾಂಚ್—3 ನೇ ಚಂದಾ ಪಟ್ಟಿ.

ಮೈಸೂರು ಬ್ರಾಂಚಿನ ಸೆಕ್ರೆಟರಿ ಮತ್ತು ಟ್ರೆಜರರ್ ಮ॥ ಟಿ. ಲಕ್ಷ್ಮಣರಾಯರು ಕೆಳಗೆ ನಮೂದಾಗುವವರಿಂದ ತಮಗೆ ಚಂದಾ ಹಣ ತಲಪಿದೆ ಎಂದು ತಿಳಿಸುತ್ತಾರೆ.

ಬನ್ನೂರು ತಾಲ್ಲೂಕು ಶ್ಯಾನುಭೋಗ್ ಮ॥ ಸೂರ್ಯನಾರಾಣಪ್ಪನವರ ಮೂಲಕ ವಸೂಲಾದದ್ದು:—ಮ॥ ಗಳಾದ ಅಪ್ಪೇಗೌಡ್ರು, ಚಿನ್ನೇಗೌಡ್ರು, ರೂ. 30, ಪ. ದಾಸೇಗೌಡ್ರು ಮತ್ತು ಪ. ಕೆಂಪಬೋರೇಗೌಡ್ರು, ತಲಾ ರೂ. 25, ಪ. ಬಸವೇಗೌಡ್ರು, ರೂ. 20; ಪ. ಹೊನ್ನಗಂಟೆಗೌಡ್ರು, ಪ. ಜವರೇಗೌಡ್ರು ತಲಾ ರೂ. 15; ಪ. ಗೂಳಿಗೌಡ್ರು, ಪ. ಲಿಂಗೇಗೌಡ್ರು, ಪ. ಮಲ್ಲೇಗೌಡ್ರು, ಪ. ಬೋರೇಗೌಡ್ರು, ತಲಾ ರೂ. 10; ಶೇಷಾಚಲ ಜೋಯಿಸರು, ಸುಬ್ಬಾಜೋಯಿಸರು, ವೆಂಕಟನಾರಣಯ್ಯನವರು, ಸಾ॥ ಅಬ್ದುಸಾಬರು, ಸಾಹೆಬ್‌ಜಾನ್ ಸಾಬರು, ಪ. ಪುಟ್ಟಮಾದೇಗೌಡ್ರು ಮತ್ತು ಪ. ಪುಟ್ಟೇಗೌಡರು, ತಲಾ ರೂ. 5; ಮಾದೇಗೌಡರು ರೂ. 4, ಗೌಸ್ ಪೀರ್ ಸಾಹೇಬರು, ಕಾಳನಂಗಯ್ಯನವರು, ಸೂರ್ಯನಾರಾಣಪ್ಪ ಮತ್ತು ಬಿ. ವೆಂಕಟರಾಮಯ್ಯನವರು ಸಹ, ತಲಾ ರೂ. 3; ಪ. ಮಾಯಪ್ಪನವರು ರೂ. 2; 37 ಮಂದಿ, ತಲಾ ರೂ. 1: ಜುಮ್ಲಾ ರೂ. 257.

ಟಿ. ನರಸೀಪುರದಲ್ಲಿರುವ ಮ॥ ಕೆ. ವರದಾಚಾರ್ರು ಮೂಲಕ ವಸೂಲಾದದ್ದು:—ಮ॥ ಗಳಾದ ಪ. ಗೂಳಿಗೌಡರು ರೂ. 15; ಪ. ಚಿಕ್ಕನೀಲೆಗೌಡರು, ಪುಟ್ಟಭಟ್ರು ವಗೈರೆ, ಸಿದ್ದಯ್ಯನವರು, ತಲಾ ರೂ. 10; ಪ. ಶಿಂಗ್ರಿಗೌಡ್ರು ರೂ. 5, ಲಕ್ಷ್ಮೀಪುರದ ಗರುಡಾಚಾರ್ರು ರೂ. 2, ಪ. ಅಣ್ಣಯ್ಯನವರು ರೂ. 1: ಜುಮ್ಲಾ ರೂಪಾಯಿ 53.

ಟಿ. ನರಸೀಪುರದ ಅಮಲ್ದಾರ್ರು ಮೂಲಕ:—ಉಕ್ಕಲಗೆರೆ ಜೋಡಿದಾರ್ ಮ॥ ರಂಗಾಚಾರ್ರು ರೂ. 50, ಹೊರಳಹಳ್ಳಿ ಪಟೇಲರಿಂದ ರೂ. 30, ಮ॥ ಮೈಸೂರು ಮಾದಮ್ಮನವರು ರೂ. 20 ಜುಮ್ಲಾ ರೂಪಾಯಿ 100.

1 ನೇ, 2 ನೇ ಪಟ್ಟಿಗಳ ಒಟ್ಟು ಜಮಾ ರೂಪಾಯಿ 687-0-0.

ನೆಲಮಂಗಲದ ತಾಲ್ಲೂಕು.

ಕಳೆದ ಅಕ್ಟೋಬರ್ ತಾ. 10 ರ ವರೆಗೆ ನೆಲಮಂಗಲದ ತಾಲ್ಲೂಕಿನಲ್ಲಿ ಚಂದಾ ಪಟ್ಟಿಗೆ ರೂ. 1,317-2-0 ಕೊಡುವಂತೆ ಜನಗಳು ವಾಗ್ದಾನಮಾಡಿರುತ್ತಾರೆಂದೂ, ಈ ಪೈಕಿ ರೂ. 1,100-12-0 ವಸೂಲಾಗಿ ಖಜಾನೆಗೆ ಜಮಾ ಆಗಿರುತ್ತೆಂದೂ ಅಮಲ್ದಾರ್ರವರು ತಿಳಿಸುತ್ತಾರೆ.

ವ್ಯವಸಾಯಗಾರರು ತಿಳಿಯಬೇಕಾದ ವಿಷಯಗಳು.

1. ಕೊಂಕಣ ಡಿವಿಜನ್‌ನಲ್ಲಿ ರೈತರು ಉಪ್ಪು ಮತ್ತು ಉಪ್ಪುಮಣ್ಣು, ಇವುಗಳನ್ನು ಮಾವಿನ ಫಸಲಿಗೂ ತೆಂಗಿನ ಫಸಲಿಗೂ ಗೊಬ್ಬರವಾಗಿ ಉಪಯೋಗಿಸುತ್ತಾರೆ. ಮಾವಿನ ಗಿಡಗಳು ಹುವ್ವು ಬಿಡದೆ ಇದ್ದರೆ ಉಪ್ಪನ್ನು ಗೊಬ್ಬರವಾಗಿ ಹಾಕುತ್ತಾರೆ. ಹೀಗೆ ಮಾಡುವುದರಿಂದ ಗಿಡವು ಫಲಿಸುವುದಕ್ಕೆ ಆರಂಭಿಸುತ್ತೆ. ರತ್ನಗಿರಿಯಲ್ಲಿರುವ ರೈತನೊಬ್ಬನು ತೆಂಗು ಮತ್ತು ಮಾವಿನ ಗಿಡಗಳಿಗೆ ಕೆಳಗೆ ಕಂಡ ಮೇರೆ ಗೊಬ್ಬರವನ್ನು ಹಾಕುವುದು ವಾಡಿಕೆ—ಮೊದಲನೇ ವರ್ಷ ದನದ ಗೊಬ್ಬರ, ಎರಡನೆಯ ವರ್ಷ ಮೀನುಗೊಬ್ಬರ; ಮೂರನೆಯ ವರ್ಷ ಗಿಡ ಒಂದಕ್ಕೆ ಹತ್ತು ಪೌಂಡಿನಷ್ಟು ಉಪ್ಪು.

2. ಗೋವಾದೇಶದಲ್ಲಿ ಭತ್ತದ ಪೈರಿಗೆ ಉಪ್ಪನ್ನು ಗೊಬ್ಬರವಾಗಿ ಹಾಕುತ್ತಾರೆ. ಇದರಿಂದ ಫಸಲುತ್ಪತ್ತಿಯು ಜಾಸ್ತಿಯಾಗುತ್ತೆ. ಅಲ್ಲದೆ ನಿಂಬೆ, ಹಸಲು ಮುಂತಾದ ಗಿಡಗಳಿಗೂ ಉಪ್ಪನ್ನು ಹಾಕುತ್ತಾರೆ. ಉಪ್ಪಿನ ಮೇಲೆ ಸುಂಕವಿರುವುದರಿಂದ ಇದನ್ನು ಕೊಂಡು ಉಪಯೋಗಿಸಲು ಆಗುವದು ದುಬಾರಿಯಾಗುತ್ತೆ. ತಿರುವಾಂಕೂರಿನಲ್ಲಿ ರೋಗ ತಗಲಿದ ಗಿಡಗಳಿಗೆ ಉಪ್ಪನ್ನು ಉಪಯೋಗಿಸಿದ್ದರಿಂದ ರೋಗವು ಪರಿಹಾರವಾಗಿ ಗಿಡಗಳು ಸರಿಯಾದವು.

3. ಸಾಮುಲ್‌ಕೋಟಾ ವ್ಯವಸಾಯ ಫಾರಂನಲ್ಲಿ ಕಬ್ಬಿನ ಫಲಿಸಿಗೆ ದನವಿನ ಗೊಬ್ಬರವನ್ನು ಕಡಮೆಮಾಡಿ, ನಂತರ ಹರಳು ಹಿಂಡಿಯನ್ನು ಉಪಯೋಗಿಸಿದ್ದರಲ್ಲಿ ಪ್ರಯೋಜನವು ಏಕರೀತಿಯಾಗಿತ್ತು. ಒಂದು ತಾಕಿಗೆ 30 ಟನ್ ದನವಿನ ಗೊಬ್ಬರವನ್ನು ಹಾಕಿದರು. ಮತ್ತೊಂದು ತಾಕಿಗೆ 10 ಟನ್ ದನದ ಗೊಬ್ಬರವನ್ನು ಹಾಕಿ ನಂತರ 5 ಮೂಟೆ ಹರಳುಹಿಂಡಿಯನ್ನು ಹಾಕಿ ಬೆಳೆ ಇಟ್ಟರು. ಹೀಗೆ ಮಾಡಿದ್ದರಲ್ಲಿ ಫಸಲುತ್ಪತ್ತಿಯು ಒಂದೇ ರೀತಿಯಾಗಿ ಇತ್ತು.

4. ಗತ ಸಾಲಿನಲ್ಲಿ ಈ ದೇಶಕ್ಕೆ 90 ಲಕ್ಷ ರೂಪಾಯಿಗಳ ಬೆಂಕಿಕಡ್ಡಿಗಳು ತರಿಸಲ್ಪಟ್ಟವು. ಹಿಂದಿನ ವರ್ಷದಲ್ಲಿ ತರಿಸಿದ್ದಕ್ಕಿಂತ ಈ ವರ್ಷ 9 ಲಕ್ಷ ರೂಪಾಯಿನಷ್ಟು ಕಮ್ಮಿಯಾಗಿರುತ್ತೆ. ಸರಬರಾಜು ಮಾಡಿದ ದೇಶಗಳು ಯಾವುವೆಂದರೆ—ಜಪಾನ್, ಸ್ಕ್ಯಾಂಡಿನೇವಿಯಾ, ಆಸ್ಟ್ರಿಯಾ, ಜರ್ಮನಿ, ಬೆಲ್ಜಿಯಂ ಮುಂತಾದವುಗಳು. ಹಾಲಿ ಯೂರೋಪು ಖಂಡದಲ್ಲಿ ನಡೆಯುತ್ತಿರುವ ಯುದ್ಧದಿಂದ ಬೆಂಕಿಕಡ್ಡಿಯ ಬೆಲೆಯು ಇನ್ನೂ ಏರುವ ಸಂಭವವು ಇದೆ. ಇಂಡಿಯಾ ದೇಶದಲ್ಲಿ ಬೆಂಕಿಕಡ್ಡಿ ತಯಾರಿಸುವುದಕ್ಕೆ ಬೇಕಾದ ಸಾಮಗ್ರಿಗಳು ಹೇರಳವಾಗಿ ಇರುವುವೆಂದು ಶಾಸ್ತ್ರಜ್ಞರು ಹೇಳುತ್ತಾರೆ. ಅಹಮದಾಬಾದಿನಲ್ಲಿ ಒಂದು ಕಾರ್ಖಾನೆಯನ್ನು ಸ್ಥಾಪಿಸಲು ಏರ್ಪಾಡುಗಳು ನಡೆಯುತ್ತಿವೆ. 1912 ನೇ ಸಾಲಿನಲ್ಲಿ ಈ ದೇಶದಲ್ಲಿ 6 ಕಾರ್ಖಾನೆಗಳು ಮಾತ್ರ ಇದ್ದ ಹಾಗೆ ತಿಳಿಯಬರುತ್ತೆ.

ಮೈಸೂರು ಗೆಜೆಟ್ ಸಂಗ್ರಹ.

ಜಹಗೀರ್‌ದಾರ್ ಮ॥ ಬಿ. ರಾಮಚಂದ್ರಪ್ಪನವರು ಮ॥ ಎಚ್. ಕೆ. ವೀರಬಸವಯ್ಯನವರಿಗೆ ಬದುಲಾಗಿ ಬೆಂಗಳೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲ್ ಮೆಂಬರಾಗಿ ಚುನಾಯಿಸಲ್ಪಟ್ಟಿದಾರೆ.

ಕುಂಸಿ ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್ದಾರ್ ಮ॥ ಎಸ್. ಅನಂತರಾಮಯ್ಯಂಗಾರ್ರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ 1915 ನೇ ಜನವರಿ ತಾ. 10 ರ ವರೆಗೆ ಪ್ರಿವಿಲೆಜ್ ರಜಾ ಕೊಟ್ಟಿದೆ.

ಶಿವಮೊಗ್ಗಾ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರ ಆಫೀಸ್ ಜುಡಿಷಲ್ ಹೆಡ್ ಮುನ್ಷಿ ಮ॥ ಎಸ್. ನಾರಾಯಣರಾಯರು ಕುಂಸಿ ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್ದಾರ್ ಮತ್ತು 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಲ್ಪಟ್ಟಿದಾರೆ.

ಮುಂದೆ ಹೇಳುವ ಅಮಲ್ದಾರರುಗಳ ಬಡ್ತಿಗಳನ್ನು ಹುಕುಂ ಮಾಡಿದೆ—ಮ॥ ಗಳಾದ ಕೆ. ಶ್ರೀನಿವಾಸರಾಯರು 2 ನೇ ಕ್ಲಾಸಿಗೆ; ಮ॥ ಎಂ. ಎಸ್. ರಾಮಚಂದ್ರರಾಯರು ಮತ್ತು ಮ॥ ಕೆ. ಆರ್. ಕೃಷ್ಣಸ್ವಾಮಿ ಅಯ್ಯಂಗಾರ್ರು 3 ನೇ ಕ್ಲಾಸಿಗೆ; ಮ॥ ಎನ್. ಗೋಪಾಲಯ್ಯಂಗಾರ್ರು, ಮ॥ ಜಿ. ವೆಂಕಟರಾಯರು ಮತ್ತು ಮ॥ ಆರ್. ತಿರುನಾರಾಯಣಅಯ್ಯಂಗಾರ್ರು 4 ನೇ ಕ್ಲಾಸಿಗೆ.

ಮಿ॥ ಡಿ. ಡಬ್ಲಿಯು. ಮರ್ಫಿನ್‌ರವರನ್ನು ಕಡೂರು ಡಿಸ್ಟ್ರಿಕ್ಟಿನ ಸಂಪದಭಿವೃದ್ಧಿ ಕಾರ್ಯಗಳ ಸೂಪರಿನ್‌ಟೆಂಡೆಂಟರಾಗಿ ಹಂಗಾಮಿ ತರೀಖು ನೇಮಕ ಮಾಡಿದೆ.

ಚಿತ್ರದುರ್ಗದ ಸ್ಕೂಲುಗಳ ಡೆಪ್ಯುಟಿ ಇನ್ಸ್‌ಪೆಕ್ಟರ್ ಮ॥ ಎಂ. ಕೆ. ತಿರುಮಲಾಚಾರ್ರವರಿಗೆ ಅಕ್ಟೋಬರ್ ತಾ. 7 ರಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಶಿವಮೊಗ್ಗಾ ಡಿಸ್ಟ್ರಿಕ್ಟಿನ ಸ್ಕೂಲುಗಳ ಅ॥ ಇನ್ಸ್‌ಪೆಕ್ಟರ್ ಮ॥ ಕೆ. ಸುಬ್ಬರಾಯರು ಚಿತ್ರದುರ್ಗದ ಡೆಪ್ಯುಟಿ ಇನ್ಸ್‌ಪೆಕ್ಟರಾಗಿ ಬದಲಿ ನೋಡತಕ್ಕದ್ದು.

ಮಾಗಡಿ ತಾಲ್ಲೂಕು ಅಮಲ್ದಾರ್ ಮ॥ ಎ. ರಾಜಾರಾಯರಿಗೆ ನವಂಬರ್ ತಾ. 10 ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ವಾರಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಶಿರಸ್ತೆದಾರ್ ಮ॥ ಕೆ. ಕೃಷ್ಣಯ್ಯಂಗಾರ್ರು ತಾಲ್ಲೂಕಿನ ಛಾರ್ಜಿನಲ್ಲಿರತಕ್ಕದ್ದು.

ಮೈಸೂರು ವಿದ್ಯಾಭ್ಯಾಸದ ಇಲಾಖೆ.

ಬಲಾತ್ಕಾರ ವಿದ್ಯಾಭ್ಯಾಸದ ಪ್ರಕಟನ ಪತ್ರಿಕೆಯು.

ಶ್ರೀಮನ್ ಮಹಾರಾಜ ರಾವಾಸಾಹೇಬ್ಬಹದ್ದೂರವರ ಸರ್ಕಾರದವರು ಮೈಸೂರು ಸೀಮೆಯ ಪ್ರಜೆಗಳ ಪುರೋಭಿವೃದ್ಧಿಗಾಗಿ ವ್ಯವಸಾಯ, ಕೈಗಾರಿಕೆ, ವ್ಯಾಪಾರ ಇವೇ ಮೊದಲಾದ ವಿಷಯಗಳಲ್ಲಿ ಪ್ರಕೃತದಲ್ಲಿ ಮಾಡುತ್ತಿರುವ ಏರ್ಪಾಟುಗಳನ್ನು ಸಂಸ್ಥಾನಾಮುಳಿಯ ಎಲ್ಲಾ ಭಾಗದಲ್ಲಿಯೂ ಸಾಮಾನ್ಯವಾಗಿ ಎಲ್ಲರೂ ತಿಳಿದಿರಬಹುದು. ದೇಶದ ಎಲ್ಲಾ ವಿಧವಾದ ಏಳಿಗೆಗೂ ವಿದ್ಯೆಯೇ ಮುಖ್ಯಕಾರಣವಾದದ್ದು. ವಿದ್ಯೆ ಇಲ್ಲದವನು ಪಶುವಿಗೆ ಸಮಾನನೆಂದು ಹಿರಿಯರು ಆದಿಯಿಂದಲೂ ಹೇಳುತ್ತಿರುವುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಅನ್ಯ ದೇಶಗಳಲ್ಲಿ ಈಗ ಇರತಕ್ಕ ವಿದ್ಯಾಪ್ರಚುರತೆಯು ಎಷ್ಟೆಂದು ವಿಚಾರಿಸಿ ನೋಡಿದಲ್ಲಿ ನಮ್ಮ ದೇಶದ ಜನರಿಗೆ ಆ ದೇಶಗಳಲ್ಲಿನ ವಿದ್ಯಾವಿಶೇಷತೆಗೆ ಆಶ್ಚರ್ಯವೂ ಈ ದೇಶದ ವಿದ್ಯಾವಿಹೀನತೆಗೆ ಭಯವೂ ಹುಟ್ಟೀತು! ಆ ಪ್ರಾಂತ್ಯಗಳ ಜನಗಳಲ್ಲಿ ಶೇಕಡ ನಲವತ್ತರಿಂದ ಎಂಭತ್ತರವರೆಗೂ ವಿದ್ಯಾವಂತರಾಗಿದಾರೆ. ನಮ್ಮ ಪ್ರಾಂತದಲ್ಲಾದರೊ ಶೇಕಡಾ 7.3 ಜನರು ಮಾತ್ರವೇ ವಿದ್ಯಾವಂತರಾಗಿದಾರೆ. ವಾಚಕರಿಗೆ ಇದರಿಂದಲೇ ಮೈಸೂರು ಸೀಮೆಯು ವಿದ್ಯೆಯ ವಿಷಯದಲ್ಲಿ ಎಷ್ಟು ಹೀನಸ್ಥಿತಿಯಲ್ಲಿದೆ ಎಂಬುದು ನಿಸ್ಸಂದೇಹವಾಗಿ ಗೊತ್ತಾಗುತ್ತದೆ. ಈ ಸ್ಥಿತಿಯನ್ನು ಚೆನ್ನಾಗಿ ಪರ್ಯಾಲೋಚಿಸಿ ಅಕ್ಷರಜ್ಞಾನವನ್ನಾದರೂ ನಿರ್ಬಂಧದಿಂದಲಾದರೂ ಕಲಿಸಬೇಕೆಂಬ ಉದಾರವಾದ ಮತ್ತು ಘನವಾದ ಇಚ್ಛೆಯಿಂದ ಜನಗಳಿಗೆ ಮುಖಂಡರಾಗಿಯೂ ಅವರಿಂದ ಸನ್ಮಾನಿತರಾಗಿಯೂ ಇರುವ ಅನೇಕ ಜನ ದೊಡ್ಡಮನುಷ್ಯರು ಕೇಳಿಕೊಂಡದ್ದರಿಂದ ಶ್ರೀಮನ್ಮಹಾರಾಜರವರ ಸರ್ಕಾರದವರು ಪ್ರಾಥಮಿಕ ವಿದ್ಯಾಭ್ಯಾಸದ ರೆಗ್ಯುಲೇಷನ್ ಎಂಬ ಕಾನೂನನ್ನೂ, ಇದಕ್ಕೆ ಅನುಗುಣವಾಗಿ ರೂಲ್ಸುಗಳನ್ನೂ ಪ್ರಕಟಿಸಿರುತ್ತಾರೆ. ಎಲ್ಲರೂ ಇವುಗಳನ್ನು ಚೆನ್ನಾಗಿ ಓದಿಕೊಳ್ಳಬೇಕು.

ಈ ಕಾನೂನನ್ನು ಮೈಸೂರು ಸೀಮೆಯ ಎಲ್ಲಾ ಕಡೆಗೂ ಜಾರಿಯಲ್ಲಿ ತರಬಹುದಾದರೂ, ಪ್ರಕೃತದಲ್ಲಿ ಈ ಕೆಳಗೆ ಕಂಡ ಊರುಗಳಲ್ಲಿ ಮಾತ್ರ ಜಾರಿಯಲ್ಲಿ ತಂದಿರುತ್ತದೆ—ಬೆಂಗಳೂರು, ದೊಡ್ಡಬಳ್ಳಾಪುರ, ಮೈಸೂರು, ನಂಜನಗೂಡು, ಶ್ರೀರಂಗಪಟ್ಟಣ, ಹಾಸನ, ಹೊಳೆನರಸೀಪುರ, ಶಿವಮೊಗ್ಗ, ಕಡೂರು, ತುಮಕೂರು, ಮಧುಗಿರಿ, ಚಿತ್ರದುರ್ಗ, ದಾವಣಗೆರೆ, ಕೋಲಾರ, ಚಿಕ್ಕಬಳ್ಳಾಪುರ.

ಮೇಲ್ಕಂಡ ಕಾನೂನಿನ ಮತ್ತು ಅದನ್ನನುಸರಿಸಿದ ರೂಲ್ಸುಗಳ ಮುಖ್ಯ ಸಾರಾಂಶವನ್ನು ಈ ಕೆಳಗೆ ಸಂಕ್ಷೇಪವಾಗಿ ವಿವರಿಸೋಣಾಗಿದೆ.

ಪ್ರಾಥಮಿಕ ವಿದ್ಯಾಭ್ಯಾಸವೆಂದರೆ ಓದುವುದು, ಬರೆಯುವುದು, ಲೆಕ್ಕಮಾಡುವುದು. 7 ವರುಷದ ಮೇಲೆ 11 ವರುಷದೊಳಗೆ ಇರತಕ್ಕ ಪ್ರತಿಯೊಬ್ಬ ಹುಡುಗನೂ ವಿದ್ಯಾಭ್ಯಾಸದ ಇಲಾಖೆಯಿಂದ ಅಂಗೀಕರಿಸಲ್ಪಟ್ಟ ಸರ್ಕಾರಿ ಸ್ಕೂಲುಗಳಾಗಲಿ, ಸರ್ಕಾರದಿಂದ ದ್ರವ್ಯ ಸಹಾಯವನ್ನು ಪಡೆಯುವ ಗ್ರಾಂಟ್ ಸ್ಕೂಲುಗಳಾಗಲಿ, ಅಥವಾ ಹಳ್ಳಿಮಠದಂಥಾ ಸ್ಕೂಲುಗಳಾಗಲಿ, ಯಾವುದಾದರೂ ಒಂದು ಸ್ಕೂಲಿಗೆ ಹೋಗಬೇಕು.

2. ಹಾಗೆ ಹುಡುಗನು ಹೋಗದೇ ಇರುವುದಾದರೆ, ಮೇಲ್ಕಂಡ ಕಾನೂನಿನಲ್ಲಿ ವಿವರಿಸಿರುವಂತೆ ನ್ಯಾಯವಾದ ಕಾರಣವಿರುವುದರಿಂದ ಸ್ಕೂಲಿಗೆ ಹೋಗುವುದು ಅವಶ್ಯವಿಲ್ಲವೆಂದು ವಿನಾಯಿತಿ ಸರ್ಟಿಫಿಕೇಟನ್ನು ಕೊಡಲು ಅಧಿಕಾರವನ್ನು ಪಡೆದಿರುವವರಿಂದ ಅಂಥಾ ಸರ್ಟಿಫಿಕೇಟನ್ನು ಪಡೆಯಬೇಕು.

(1) ನ್ಯಾಯವಾದ ಕಾರಣಗಳು—(1) ಹುಡುಗನು ವಾಸಮಾಡುವ ಸ್ಥಳದಿಂದ ಅತ್ಯಂತ ಸಮೀಪವಾದ ಮಾರ್ಗದಲ್ಲಿ ಒಂದು ಮೈಲಿಯ ಫಾಸಲೆಯೊಳಗೆ ಅವನು ಹೋಗಬಹುದಾದಂಥಾ ಅಂಗೀಕರಿಸಲ್ಪಟ್ಟ ಸ್ಕೂಲು ಯಾವುದೂ ಇಲ್ಲದಿರುವುದು; (2) ಖಾಯಿಲೆಯಿಂದ, ಅಶಕ್ತಿಯಿಂದ, ಮನೆಗೆಲಸದ ಅವಶ್ಯಕತೆಯಿಂದ, ಆಯಾ ಕಾಲದಲ್ಲಿ ಮಾಡಬೇಕಾದ ವ್ಯವಸಾಯ ಕಾರ್ಯಗಳ ಅವಶ್ಯಕತೆಯಿಂದ, ಅಥವಾ ಸಾಕಾದ ಇತರ ಕಾರಣದಿಂದ ಹುಡುಗನಿಗೆ ಸ್ಕೂಲಿಗೆ ಹೋಗದಂತೆ ಅಡ್ಡಿಯಾಗಿರುವುದು; (3) ಯಾವುದಾದರೂ ತೃಪ್ತಿಕರವಾದ ಇತರ ರೀತಿಯಲ್ಲಿ ಹುಡುಗನಿಗೆ ವಿದ್ಯಾಭ್ಯಾಸವು ನಡೆಯುತ್ತಿರುವುದು; ಮತ್ತು (4) ಹುಡುಗನು ಹಾಗೆ ಸ್ಕೂಲಿಗೆ ಹೋಗಲು ಅವಶ್ಯವಿಲ್ಲವೆಂದು ಸರಿಯಾದ ಅಧಿಕಾರಿಗಳು ಅವನನ್ನು ವಿನಾಯಿಸಿರುವುದು.

(2) ಸರ್ಟಿಫಿಕೇಟನ್ನು ಕೊಡಲು ಅಧಿಕಾರವನ್ನು ಹೊಂದಿರುವವರು. ಯಾರು ಅಂದರೆ—(1) ಆಯಾ ಪ್ರದೇಶದ ಸ್ಕೂಲ್ ಕಮಿಟಿಯ ಯಾರಾದರೂ ಮೆಂಬರು; (2) ಯಾರಾದರೂ ಸರ್ಕಾರಿ ಗೆಜೆಟೆಡ್ ಆಫೀಸರು ಅಥವಾ ತಾಲ್ಲೂಕಿನ ಅಮಲ್ದಾರರು, ಡೆಪ್ಯುಟಿ ಅಮಲ್ದಾರರು, ಶಿರಸ್ತೇದಾರರು, ಪೋಲೀಸ್ ಇನ್ಸ್‌ಪೆಕ್ಟರರು, ಸಬ್ ರೆಜಿಸ್ಟ್ರಾರರು ಮತ್ತು ಹೋಬಳಿ ಶೇಕ್‌ದಾರರು ಇವರಲ್ಲಿ ಯಾರಾದರೂ; (3) ಆಯಾ ಪ್ರದೇಶದಲ್ಲಿನ ಗೌರ್ನಮೆಂಟ್ ಯಾ ಏಡೆಡ್ ಸ್ಕೂಲಿನ ಯಾರಾದರೂ ಹೆಡ್ ಮಾಸ್ತರು; (4) ಯಾರಾದರೂ ಮ್ಯಾಜಿಸ್ಟ್ರೇಟರು; (5) ಒಂದು ಮ್ಯುನಿಸಿಪಲ್ ಬೋರ್ಡಿನ, ಡಿಸ್ಟ್ರಿಕ್ಟ್ ಬೋರ್ಡಿನ, ತಾಲ್ಲೂಕು ಬೋರ್ಡಿನ, ಮ್ಯುನಿಸಿಪಾಲಿಟಿಯ ಯಾ ಯೂನಿಯನ್ನಿನ ಯಾರಾದರೂ ಮೆಂಬರು; ಅಥವಾ ಆಯಾ ಪ್ರದೇಶದಲ್ಲಿ ವಾಸಮಾಡುವ ಯಾರಾದರೂ ನ್ಯಾಯವಿಧಾಯಕ ಸಭೆಯ, ಪ್ರಜಾಪ್ರತಿನಿಧಿಸಭೆಯ, ಸಂಪದಭಿವೃದ್ಧಿ ಸಮಾಜದ ಮೆಂಬರು, ಮತ್ತು (6) ಗೊತ್ತಾದ ಸ್ಥಳೀಯ ಪ್ರದೇಶಗಳಿಗಾಗಿ ಇನ್ಸ್‌ಪೆಕ್ಟರ್ ಜನರಲ್‌ರವರಿಂದಲಾಗಲಿ, ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರವರಿಂದಲಾಗಲಿ, ಸಂಬಂಧಪಟ್ಟ ಮ್ಯುನಿಸಿಪಾಲಿಟಿಯ ಪ್ರೆಸಿಡೆಂಟರಿಂದಲಾಗಲಿ, ಪ್ರತ್ಯೇಕವಾಗಿ ಅಧಿಕಾರ ಪಡೆದಿರಬಹುದಾದ ಯಾರಾದರೂ ಇತರ ಮನುಷ್ಯನು.

3. ಇವೆರಡರ ಪೈಕಿ ಯಾವುದನ್ನಾದರೂ ಮಾಡದಿದ್ದರೆ ತಂದೆ ತಾಯಿಗಳಾಗಲಿ ಅಥವಾ ಪೋಷಕರಾಗಲಿ ಕಾನೂನಿನಲ್ಲಿ ಕಂಡ ಶಿಕ್ಷೆಗಳಿಗೆ ಒಳಪಡುತ್ತಾರೆಂದು ಎಚ್ಚರಿಸಿದಾಗ್ಯೂ ಲಕ್ಷ್ಯೀಕರಿಸದೇ ಇರುವಲ್ಲಿ, ಮ್ಯಾಜಿಸ್ಟ್ರೇಟರ ಮುಂದೆ ತಪ್ಪು ಸಾಬೀತಾದ ತರುವಾಯ ಮೊದಲನೇ ಆವರ್ತಿ 2 ರೂಪಾಯಿ, ಪದೇಪದೇ ಮಾಡಿದಲ್ಲಿ 10 ರೂಪಾಯಿ ವರಿವಿಗೂ; ಯಾವ ಮನುಷ್ಯನು ತಿಳಿದೂ ತಿಳಿದೂ ಕೂಡ ನೌಕರಿಗೆ ನೇಮಿಸಿಕೊಳ್ಳುತ್ತಾನೋ ಅವನು ಮ್ಯಾಜಿಸ್ಟ್ರೇಟರ ಮುಂದೆ ತಪ್ಪು ಸಾಬೀತಾದ ತರುವಾಯ 20 ರೂಪಾಯಿಗೆ ಮೀರದ ಜುಲ್ಮಾನೆಗೆ ಗುರಿಯಾಗುವನು.

4. ಮೇಲ್ಕಂಡ ಊರುಗಳಲ್ಲಿ ಆಯಾ ಸ್ಥಳದ ಸಂದರ್ಭಾನುಸಾರವಾಗಿ ಒಂದು ಅಥವಾ ಒಂದಕ್ಕಿಂತ ಹೆಚ್ಚಾದ ಸ್ಕೂಲ್ ಕಮಿಟಿಗಳನ್ನು ವಿದ್ಯಾಭ್ಯಾಸದ ಇಲಾಖಾ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರು ಏರ್ಪಡಿಸಿ ಮೆಂಬರುಗಳ ಹೆಸರುಗಳನ್ನು ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟಿಸುತ್ತಾರೆ. ಈ ಮೆಂಬರುಗಳು ಮುಖ್ಯವಾಗಿ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಬೇಕಾದ ಎಲ್ಲಾ ಸಲಕರಣೆಗಳನ್ನೂ ಒದಗಿಸಿಕೊಡುವ ಏರ್ಪಾಟು ಮಾಡುವುದಕ್ಕೂ ಮತ್ತು ಈಗಿರತಕ್ಕ ಸ್ಕೂಲುಗಳನ್ನು ಅಭಿವೃದ್ಧಿಸ್ಥಿತಿಗೆ ತಂದು ಹೊಸದಾಗಿ ಬೇಕಾಗುವ ಸ್ಕೂಲುಗಳನ್ನು ಸ್ಥಾಪಿಸತಕ್ಕ ಸಲಹೆಗಳನ್ನು ಕೊಡುವುದಕ್ಕೂ, ಇವೆರಡಕ್ಕಿಂತಲೂ ಹೆಚ್ಚಾಗಿ ಈ ಸ್ಕೂಲುಗಳ ಸ್ಥಿರಾಭಿವೃದ್ಧಿಗೆ ಬೇಕಾದ ಕಾರ್ಯಭಾಗಗಳನ್ನು ಮಾಡಲೂ ಸಹ ಸ್ವತಂತ್ರರಾಗಿರುತ್ತಾರೆ. ಲೋಕಹಿತೈಷಿಗಳಾಗಿಯೂ ದೇಶಾಭಿಮಾನಿಗಳಾಗಿಯೂ ಇರುವ ನಮ್ಮ ದೇಶೀಯರೆಲ್ಲರೂ ತಂತಮ್ಮ ಸಂದರ್ಭಾನುಸಾರವಾಗಿ ತಮಗೆ ಸೂಕ್ತ ತೋರಿದಂತೆ ವಿದ್ಯಾವ್ಯಾಸಂಗವನ್ನು ಪ್ರೋತ್ಸಾಹಿಸಬೇಕೆಂದು ಈ ಮೂಲಕ ಕೋರಿದೆ.

ಎಂ. ಶಾಮರಾವ್, ಇನ್ಸ್‌ಪೆಕ್ಟರ್ ಜನರಲ್

ಯುದ್ಧವೂ ಭಾರತೀಯರ ಕರ್ತವ್ಯವೂ.

ಭಾರತೀಯರಿಗೆ ಮಾತೃಸ್ಥಾನವಾಗಿರುವ ಭರತಖಂಡವು ಅನೇಕ ರಾಜರುಗಳಿಂದ ಆಳಲ್ಪಡುತ್ತಿದ್ದು ಇವರಿವರಲ್ಲಿ ಜಗಳಗಳುಂಟಾಗಿ ಸದೇ ಪದೇ ಯುದ್ಧಗಳಾಗಿ ಜನರ ಪ್ರಾಣಗಳೂ, ಐಶ್ವರ್ಯವೂ, ಮಾನವೂ ಸರ್ವದಾ ಅಪಾಯಸ್ಥಿತಿಯಲ್ಲಿದ್ದುವು. ಇಂಗ್ಲಿಷ್‌ನವರು ಈ ರಾಜ್ಯಕ್ಕೆ ಬಂದು ಇದನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡು ಸುಮಾರು 150 ವರುಷಗಳಾಗುತ್ತಾ ಬಂದುವು. ಅಂದಿನಿಂದ ಹಿಂದುಸ್ಥಾನದಲ್ಲಿ ಸಮಾಧಾನ ವೃದ್ಧಿಯಾಗಿ ಸಕಲ ರಾಜರೂ ಅವರಿಗೆ ಅಧೀನರಾಗಿಯೂ, ವಿಶ್ವಾಸಪೂರ್ಣರಾಗಿಯೂ ಇದ್ದುಕೊಂಡು ಅವರಿಗೆ ಕಪ್ಪಗಳನ್ನು ಕೊಡುತ್ತಿರುವರು.

ಈ ನಮ್ಮ ಜಂಬೂ ದ್ವೀಪಕ್ಕೆ ಇಂಗ್ಲಿಷ್‌ನವರು ಬರುವುದಕ್ಕೆ ಮೊದಲು ಸರ್ಕಾರದ ಬಂದೋಬಸ್ತು ಇಲ್ಲದೆ ಕಳ್ಳತನ, ದರೋಡೆ, ಖೂನಿ ಮುಂತಾದ ಅಪರಾಧಗಳು ಹೇರಳವಾಗಿದ್ದುವು. ಈಗ ಅಂತಹ ಅಪರಾಧಗಳು ಬಹಳ ಮಟ್ಟಿಗೆ ಕಡಿಮೆಯಾಗುತ್ತಿರುವುವು. ಪೂರ್ವಕಾಲದಲ್ಲಿ ಸರ್ವಜನಕ್ಕೂ ಸಮ್ಮತವಾದ ನ್ಯಾಯನಿಬಂಧನೆಗಳಿಲ್ಲದೆ ಅನೇಕ ರಾಜರು ಸ್ವೇಚ್ಛೆಯಾಗಿ ರಾಜ್ಯಭಾರ ಮಾಡುತ್ತಿದ್ದರು. ಈಗ ಸರ್ವ ಜನರಿಗೂ ಸಮ್ಮತವಾದ ನ್ಯಾಯನಿಬಂಧನೆಗಳಿಂದ ಹಿಂದುಸ್ಥಾನವನ್ನು ವೈಸ್‌ರಾಯ್ ಮತ್ತು ಗವರ್ನರ್ ಜನರಲ್ ಎಂಬ ರಾಜಪ್ರತಿನಿಧಿಯು ಆಳುತ್ತಿರುವರು.

ಹಿಂದೆ ನ್ಯಾಯಾಧಿಪತಿಗಳೂ, ಅಧಿಕಾರಿಗಳೂ ಪ್ರಾಯೇಣ ಸಂಬಳವಿಲ್ಲದೆ ಕೆಲಸಮಾಡುತ್ತಿದ್ದುದರಿಂದ ಅವರು ಸಾಮಾನ್ಯವಾಗಿ ಲಂಚದ ಆಶೆಗೆ ಒಳಪಟ್ಟು ಜನರಿಗೆ ನ್ಯಾಯವೆಂಬುದೇ ಸಿಕ್ಕುತ್ತಿರಲಿಲ್ಲ. ಈಗ ಭಾರೀ ಸಂಬಳಗಳನ್ನು ಕೊಟ್ಟು ಒಳ್ಳೆಯ ನಡತೆಯುಳ್ಳ ನ್ಯಾಯಾಧಿಪತಿಗಳನ್ನೂ ಅಧಿಕಾರಿಗಳನ್ನೂ ನೇಮಕ ಮಾಡುತ್ತಿರುವದರಿಂದ ನ್ಯಾಯವು ವೃದ್ಧಿಯನ್ನು ಹೊಂದುತ್ತಿರುವುದು.

ಪೂರ್ವದಲ್ಲಿ ಕ್ಷಾಮ ಬಂದರೆ ದೇಶದಲ್ಲಿ ರಸ್ತೆಗಳಿಲ್ಲದೆ ಇದ್ದುದರಿಂದಲೂ, ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಧಾನ್ಯಗಳನ್ನು ಸಾಗಿಸುವುದಕ್ಕೆ ಅನುಕೂಲವಿಲ್ಲದೆ ಇದ್ದುದರಿಂದಲೂ, ಸರ್ಕಾರದವರು ಕ್ಷಾಮನಿವಾರಣೆಗಾಗಿ ಏನೂ ಏರ್ಪಾಡು ಮಾಡದೆ ಇದ್ದುದರಿಂದಲೂ ಬಡವರಲ್ಲದೆ ಐಶ್ವರ್ಯವಂತರೂ ಕೂಡ ಆಹಾರ ಪದಾರ್ಥಗಳು ಸಿಕ್ಕದೆ ಇದ್ದುದರಿಂದ ಕಷ್ಟಪಡುತ್ತಿದ್ದರು. ಸಾಧಾರಣ ರಸ್ತೆಗಳನ್ನೂ ರೈಲ್ ರಸ್ತೆಗಳನ್ನೂ ವೃದ್ಧಿಪಡಿಸಿರುವದರಿಂದ ಸಾವಿರಾರು ಮೈಲುಗಳ ದೂರದಿಂದ ಧಾನ್ಯಗಳು ಮಾರಾಟಕ್ಕೆ ಬರುವುದಕ್ಕೆ ಅನುಕೂಲವಾಗಿರುವುದು. ಆದುದರಿಂದ ಈಗ ಕ್ಷಾಮ ಬಂದರೂ ಜನರು ಹೇಗಾದರೂ ತಮ್ಮ ಪ್ರಾಣಗಳನ್ನು ಕಾಪಾಡಿಕೊಳ್ಳಬಹುದೆಂದು ಧೈರ್ಯವಾಗಿರುವರು.

ಹಿಂದೆ ಜನರು ಮನೆಯಿಂದ ಹೊರಗೆ ಸಂಚಾರಕ್ಕೆ ಹೋಗುವಾಗ ಆಯಾ ಧನಗಳಿಗಾಗಿ ಹೆದರುತ್ತಿದ್ದರು. ಜನರು ಒಂಟಿಯಾಗಿ ಪ್ರಯಾಣಮಾಡುವುದಕ್ಕೆ ಭಯಪಡುತ್ತಿದ್ದರು. ಪಿಂಡಾರಿಗಳು ರಾತ್ರಿವೇಳೆ ಗ್ರಾಮದ ಸುತ್ತಲೂ ಸುತ್ತಿಕೊಂಡು ಗ್ರಾಮಸ್ಥರನ್ನು ನಾನಾ ವಿಧವಾಗಿ ಹಿಂಸಿಸಿ ಲೂಟಿಮಾಡುತ್ತಿದ್ದರು; ಶರೀರಗಳನ್ನು ಸುಡುತ್ತಿದ್ದರು; ಕಿವಿಗಳನ್ನು ಹರಿದು ಕರ್ಣಾಭರಣ

ನ್ನು ಕಿತ್ತುಕೊಳ್ಳುತ್ತಿದ್ದರು; ಮತ್ತು ಹಸ್ತಗಳನ್ನೂ, ಪಾದಗಳನ್ನೂ ಕತ್ತರಿ ಸಿ ಅವುಗಳಲ್ಲಿ ಧರಿಸಿದ್ದ ಒಡವೆಗಳನ್ನು ಕಿತ್ತುಕೊಳ್ಳುತ್ತಿದ್ದರು. ಕೆಲವು ಕಳ್ಳರು ಪ್ರಯಾಣಿಕರೊಡನೆ ಪ್ರಯಾಣಿಕರಂತೆ ವೇಷಧಾರಿಗಳಾಗಿ ಹೊರಟು ಮಾರ್ಗಮಧ್ಯದಲ್ಲಿ ಸಮಯವರಿತು ನಟಿಸಿ ಹಿಂದುಮುಂದೆ ಯಾರೂ ಇಲ್ಲದೆ ಇರುವುದನ್ನು ನೋಡಿ ಆ ಪ್ರಯಾಣಿಕರ ಕೊರಳನ್ನು ಹಿಸುಕಿ ಸುಲಿಗೆಮಾಡುತ್ತಿದ್ದರು. ಹಿಂದೆ ಹೆಂಗಸರು ಎಲ್ಲಿ ಮಾನಭಂಗವಾದೀತೋ ಎಂಬ ಭಯದಿಂದ ಮನೆಯನ್ನು ಬಿಟ್ಟು ಹೊರಗೆ ಹೋಗುವುದಕ್ಕೆ ಹೆದರುತ್ತಿದ್ದರು. ಈಗ ಒಬ್ಬಂಟಿಗರಾಗಿ ಧೈರ್ಯದಿಂದ ತಿರುಗುತ್ತಿರುವರು. ಈ ದೇಶದಲ್ಲಿ ಪ್ರಬಲವಾಗಿ ವ್ಯಾಪಿಸಿಕೊಂಡಿದ್ದ ಸಹಗಮನವನ್ನೂ, ನರಬಲಿಯನ್ನೂ, ಶಿಶುಹತ್ಯವನ್ನೂ, ಗುಲಾಮರ ವಿಕ್ರಯ ವನ್ನೂ ಇಂಗ್ಲಿಷ್‌ನವರು ತಮ್ಮ ರಾಜ್ಯಭಾರದಲ್ಲಿ ನಿಲ್ಲಿಸಿದರು. ಈಗ ಜನರಿಗೆ ಯಾವ ಭಯವೂ ಇಲ್ಲದೆ ಸೌಖ್ಯವಾಗಿರುವರು. ಇದೆಲ್ಲಾ ಇಂಗ್ಲಿಷ್‌ನವರ ಉತ್ತಮವಾದ ರಾಜ್ಯಭಾರದಿಂದಲ್ಲವೇ? ಪೂರ್ವದಲ್ಲಿ ವೈದ್ಯಶಾಲೆಗಳಿಲ್ಲದೆ ಬಡವ ರನೇಕರು ಔಷದಿಗಳಿಲ್ಲದೆ ಮೃತಿಯನ್ನೈದುತ್ತಿದ್ದರು. ಈಗ ಸರ್ಕಾರದಿಂದ ವೈದ್ಯಶಾಲೆಗಳು ಏರ್ಪಟ್ಟು ಜನರ ಆರೋಗ್ಯವು ಹೆಚ್ಚುತ್ತಿರುವುದು. ಹಿಂದೆ ವಿದ್ಯಾಭಿವೃದ್ಧಿಗೆ ಏನೊಂದೂ ಏರ್ಪಾಡು ಮಾಡದೆ ಇದ್ದುದರಿಂದ ಅನೇಕರು ಮೂರ್ಖರಾಗಿದ್ದರು. ಈಗ ನಮ್ಮ ಸರ್ಕಾರದವರು ಪ್ರತಿಯೊಂದು ಪಟ್ಟಣದ ಲ್ಲಿಯೂ ವಿದ್ಯೆಯನ್ನೂ, ಶಿಲ್ಪಾದ್ಯುಗ್ಯೋಗಗಳನ್ನು ಬೋಧಿಸುವ ಪಾಠಶಾಲೆ ಗಳನ್ನೂ, ಮತ್ತು ಪ್ರತಿ ಗ್ರಾಮದಲ್ಲಿಯೂ ಸಾಧಾರಣವಾಗಿ ಓದು ಬರಹ ಕಲಿಸುವ ಪಾಠಶಾಲೆಯನ್ನೂ ಸರ್ಕಾರದ ಖರ್ಜಿನಿಂದ ಇಟ್ಟಿದ್ದಾರೆ.

ಮೊಗಲಾಯಿ ರಾಜ್ಯಭಾರಕ್ಕೂ ಇಂಗ್ಲಿಷ್‌ನವರ ರಾಜ್ಯಭಾರಕ್ಕೂ ಹೋಲಿಸಿ ನೋಡೋಣ. ಮೊಗಲಾಯಿ ರಾಜ್ಯಭಾರದಲ್ಲಿ ಹಿಂದುಸ್ಥಾನದ ಕೊಂಚ ಭಾಗ ಮಾತ್ರಗೆ ಅವರ ಸ್ವಾಧೀನವಾಗಿತ್ತು. ಆಗ ಜಮೀನಿನ ಕಂದಾಯವೂ, ಇತರ ತೆರಿಗೆಗಳೂ ಸೇರಿ ಸರ್ಕಾರದ ಉತ್ಪತ್ತಿಯು ವರ್ಷಂ ಪ್ರತಿ ಸರಾಸರಿ 80 ಕೋಟಿ ರೂಪಾಯಿಯೂ, ಜಮೀನಿನ ಕಂದಾಯಮಟ್ಟಿಗೆ 32 ಕೋಟಿ ರೂಪಾಯಿಯೂ ಹುಟ್ಟುವಳಿ ಇತ್ತು. ಹಿಂದೆ ಇದಲ್ಲದೆ ಜೆಸಿಯಾ ಎಂಬ ತಲೆಗಂದಾಯವನ್ನೂ, ತೀರ್ಥಯಾತ್ರೆಗೆ ಹೋಗುವ ಹಿಂದುಗಳ ಮೇಲೆ ತೆರಿಗೆಗಳನ್ನೂ ಹಾಕುತ್ತಿದ್ದರು. ಇಂಗ್ಲಿಷ್‌ನವರ ರಾಜ್ಯಭಾರದಲ್ಲಿ ವ್ಯಾಪಾರವು ಹಿಂದೆ ಇದ್ದುದಕ್ಕೆ ನೂರರಷ್ಟು ಅಧಿಕವಾಗಿ ವೃದ್ಧಿಯಾಯಿತು. ನಮ್ಮ ಆಂಗ್ಲೇಯರ ರಾಜ್ಯಭಾರದಲ್ಲಿ ಒಟ್ಟು ಹಿಂದುಸ್ಥಾನದ ಜಮೀನಿನ ಕಂದಾಯವೂ, ಇತರ ತೆರಿಗೆಗಳೂ ಸೇರಿ ಹೆಚ್ಚು ಕಡಮೆ 40 ಕೋಟಿ ರೂಪಾಯಿಯೂ, ಜಮೀನಿನ ಕಂದಾಯಮಟ್ಟಿಗೆ 20 ಕೋಟಿ ರೂಪಾಯಿಯೂ ಹುಟ್ಟುವಳಿ ಇರುವುದು. ಇಂಗ್ಲಿಷ್‌ನವರು ಜೆಸಿಯಾ ಮತ್ತು ಇತರ ಹಿಂಸಕರವಾದ ತೆರಿಗೆಗಳನ್ನು ತೆಗೆದುಹಾಕಿದುದರಿಂದ ತೆರಿಗೆಗಳ ಹುಟ್ಟುವಳಿಯು ಕಡಮೆಯಾಗಿರುವುದು. ಇಂಗ್ಲಿಷ್‌ನವರ ರಾಜ್ಯಭಾರದಲ್ಲಿ ಪೂರ್ವಕ್ಕಿಂತಲೂ ಜಮೀನಿನ ಸಾಗುವಳಿಯು ಹೆಚ್ಚಾಗಿದ್ದರೂ ಇದರ ಕಂದಾಯ ವನ್ನು ಕಡಮೆಮಾಡಿದುದರಿಂದ ಜಮೀನಿನ ಹುಟ್ಟುವಳಿಯು ಕಡಮೆಯಾಗಿರು ವುದು. ಇದೆಲ್ಲಾ ಪರೋಪಕಾರಿಗಳಾದ ಇಂಗ್ಲಿಷ್‌ನವರ ಉತ್ತಮವಾದ ರಾಜ್ಯ ಭಾರದಿಂದಲ್ಲವೇ?

ನಮ್ಮ ಭಾರತೀಯರುಗಳು ಮೇಲ್ಕಂಡ ಅಂಶಗಳನ್ನೆಲ್ಲಾ ತಿಳಿದಿರಬಹುದು. ಸಹೋದರರುಗಳೇ, ಪಾಶ್ಚಿಮಾತ್ಯರಿಂದ ಅಭಿವೃದ್ಧಿಸ್ಥಿತಿಗೆ ಬಂದ ನಾವುಗಳು ಆ ಪಾಶ್ಚಿಮಾತ್ಯರಿಗೆ ತೊಂದರೆ ಸಂಭವಿಸಿರುವಾಗ ಪ್ರತ್ಯುಪಕಾರವನ್ನು ಮಾಡು ವುದಕ್ಕೂ, ಅವರ ಶ್ರೇಯೋಭಿವೃದ್ಧಿಯಲ್ಲಿ ಭಾಗಿಗಳಾಗುವುದಕ್ಕೂ ನಾವುಗಳು ಅರ್ಹರಲ್ಲವೇ? ಸೈನ್ಯಗಳು ನೂರೆಂಟು ತರಹ ಗಾಳಿ ಮಾತನಾಡದೆ ಏಕಮುಖ ವಾಗಿ ಅವರಿಗೆ ಶಕ್ತ್ಯಾನುಸಾರ ಸಹಾಯಮಾಡುವುದಕ್ಕೂ, ನಮ್ಮ ಮತ್ತು ಅವರ ಪರಿಪಾಲಕನಾದಂಥ ಜಗದ್ರಕ್ಷಕನನ್ನು ಅವರ ಶ್ರೇಯೋಭಿವೃದ್ಧಿಯ ವಿಷಯವಾಗಿ ಬೇಡಿಕೊಳ್ಳುವುದಕ್ಕೂ ನಾವು ಅರ್ಹರಾಗಿರುತ್ತೇವೆ. ಇದೆಲ್ಲಾ ನಮ್ಮ ಕರ್ತವ್ಯವಲ್ಲವೇ?

ಬಿ. ಎಸ್.

ಕೆಡ್ಡೀಕೆ ಗೃಹಚಾರ ಕಾಲ ಒದಗಲ್
ಅಟ ಭೂಪಜನಾಪದೋ ಬೇರ್ನಿಷ್ಕಾರವು ಕಷ್ಟಂ॥
ಮಹಿಜನರ ಪಾಪೋನು ದೋಷ್ವಿತಿತೊ
ಗತ ವಿಜನೆ ಪೊರೆವುದು ಆಂಗ್ಲರ ರಾಜ್ಯಮಂ॥

ಇದಕ್ಕೆ ಅನುಸಾರವಾಗಿ ಸರಪರಾಧಿಗಳಾದ ಬೆಲ್‌ಜಿಯಂ ಪ್ರಜೆಗಳಿಗೆ ಕುಹಕಿಗಳು ಮತ್ತು ಕ್ರೂರಿಗಳು ಆದ ಜರ್ಮನರು ಉಂಟುಮಾಡಿರುವ ಹಾನಿ ಯನ್ನು ಪತ್ರಿಕೆಗಳಿಂದ ಓದಿದರೇನೇ ದುಃಖಬರುವದು. ಕಣ್ಣಿಂದ ನೋಡಿದರೆ ಇನ್ನೆಂಥಾ ದುಃಖ ಉಂಟಾಗುವದೋ ಲೋಕಕರ್ತನೇ ಬಲ್ಲ. ದುಷ್ಟನಿಗ್ರಹ ಶಿಷ್ಟಪರಿಪಾಲನೆ... ಬಿರುದಂ ಪೊಂದಿದ ಆಂಗ್ಲ ಪ್ರಭುತ್ವದವರು ಇದು ಕಣ್ಣಾರ ನೋಡಿ ಕಷ್ಟವ ಪರಿಹರಿಸುವದು ನಮ್ಮ ಕಾರ್ಯವಾಗಿರುವದೆಂದು ಬಗೆದು, ಪ್ರಾಣದ ಆಸೆಯನ್ನು ತೊರೆದು, ಹಣದ ಲಕ್ಷ್ಯ ವಿಡದೆ, ಸತ್ಯಮಾರ್ಗವನ್ನನುಸರಿಸಿ ಯುದ್ಧಕ್ಕೆ ನಿಂತಿರುವರು. ಕ್ರೋಧ, ಮದ, ಮಾತ್ಸರ್ಯವೆಂಬವಗುಣಗಳಿಂದ ಕೂಡಿದ ಜರ್ಮನಿಯವರು ಪ್ರಸ್ತುತರಾದರೂ, ಕಾಲವಶೇಷದಿಂದ ಕೆಲವುಕಾಲ ತೊಂದರೆ ಕೊಟ್ಟರೂ, ಸತ್ಯ, ವಿವೇಕಾದಿ ಗುಣಗಳಿಂದ ಕೂಡಿದ ನಮ್ಮ ಸಾರ್ವ ಭೌಮ ಸರಕಾರಕ್ಕೆ ತಡವಾಗಿಯಾದರೂ ಜಯಲಕ್ಷ್ಮಿಯು ವರವೀಯದೆ ಇರ ಲಾರಳು. ಅವರ ಪುಷ್ಟಿಯಂ ಜೈಸಬೇಕಾದರೆ ಏನು ಮಾಡಬೇಕು? ಯುದ್ಧ ಮಾಡಬೇಕು. ಯುದ್ಧಕ್ಕೆ ಬೇಕಾಗುವದೇನು? 1 ನೇದು ಜನಸಹಾಯ, 2 ನೇದು ಧನಸಹಾಯ. ಆದ ಪ್ರಯುಕ್ತ ನಮ್ಮ ಮೈಸೂರು ಸರ್ಕಾರದವರು ಮೇಲ್ಕಂಡ ಎರಡು ಭಾಗವನ್ನು ತುಂಬಾ ಸಹಾಯ ಮಾಡಿರುವರಲ್ಲದೆ ಮುಂದೆ ಕೂಡಾ ಮಾಡುವರೆಂಬುದಾಗಿ ಇದಕ್ಕಾಗಿ ಚಿತ್ರದುರ್ಗದ ತಾಲ್ಲೋಕು ಆವ ಲ್ದಾರರವರು ಭರಮಸಾಗರಕ್ಕೆ ದಯಮಾಡಿ, ಮಹಾಜನ್ ಛತ್ರದಲ್ಲಿ ಸಭೆಗೂ ಡಿಸಿ ಯೂರೋಪ್ ಖಂಡದಲ್ಲಿ ಒದಗಿರುವ ಯುದ್ಧ ವಿಷಯವಾಗಿ ಉಪನ್ಯಾಸ ವನ್ನು ಮಾಡಿ ಜನಗಳಿಗೆ ಸಂತೋಷಪಡಿಸಿ ವಾರ್ ಫಂಡಿಗೋಸ್ಕರ ಪ್ರಜೆಗಳು ಧನಸಹಾಯ ಮಾಡಬೇಕು ಎಂದು ತಿಳಿಸಿದ್ದರಿಂದ ಇಲ್ಲಿಯ ಪ್ರಜೆಗಳು ತಮ್ಮ ಶಕ್ತ್ಯಾನುಸಾರ ಸಂತೋಷದಿಂದ ಧನಸಹಾಯ ಮಾಡಿ ಆಂಗ್ಲ ಪ್ರಭುತ್ವದವರಿಗೆ ಜಯವಾಗಲೆಂದು ಹಾರೈಸಿ ತಮ್ಮ ತಮ್ಮ ಮನೆಗಳಿಗೆ ತೆರಳಿದರು.

ಸಿದ್ದಲಿಂಗಪ್ಪ ಆಚಾ.

ಬಾತ್ಮೀದಾರರಿಗೆ ನೋಟೀಸ್.

ಬಾತ್ಮೀದಾರರು ಬರೆಯುವ ಅಭಿಪ್ರಾಯಗಳಿಗೆ ನಾವು ಜವಾಬುದಾರರಾಗುವುದಿಲ್ಲ ವೆಂಬ ಅಂಶವನ್ನು ಸರ್ವರೂ ತಿಳಿಯತಕ್ಕದ್ದು.

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಎಡೆ ಕೊಡಲಾರೆವು. ಬರೆಯುವ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸವನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಎಡೆ ಕೊಡಲಾರೆವು.

ಪ್ರಕಟಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮ ವಾರದೊಳಗಾಗಿ ನಮಗೆ ತಲುಪುವಂತೆ ಕಳುಹಿಸಬೇಕು. ಮಂಗಳವಾರ, ಬುಧ ವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ. ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ.

ಕರೆಸ್‌ಪಾಂಡೆನ್ಸ್.

ಶ್ರೀಚಾಮುಂಡೇಶ್ವರಿ ಬೆಟ್ಟದ ಸ್ಕೂಲು.

ಅಯ್ಯಾ,—ಪೂರ್ವಕ್ಕಿಂತಲೂ ಓದತಕ್ಕ ಬಾಲಕ ಬಾಲಕಿಯರ ಸಂಖ್ಯೆ ಹೆಚ್ಚುತ್ತಿದೆ ಎಂದು ಸರ್ಕಾರದವರು ಪ್ರಕಟಿಸಿರುವುದು ನಿಜ. ಆದರೆ ಗ್ರಾಮಸ್ಥ ರಲ್ಲಿ ಖಂಡಿತವಾಗಿಯೂ ವಿದ್ಯಾಪೇಕ್ಷೆಯುಂಟೆಂದು ಹೇಳಲಾಗದು. ಅವರು ಅನೇಕಹಾಗಿ ವಿದ್ಯೆಯಲ್ಲಿ ಅಲಕ್ಷ್ಯವನ್ನೂ, ಅಪ್ರಯೋಜನವೆಂಬುದನ್ನೂ ತೋರ್ಪಡಿಸುತ್ತಾರೆ. ಆದರೆ ಅಧಿಕಾರಿಗಳ ಎದುರಿನಲ್ಲಿ ಮಾತ್ರ ವಿದ್ಯೆಯೇ ಸಕಲ ಸಾಧನವೆಂತ ನಟಿಸುವರು. ತತ್ರಾಪಿ ಈ ಗ್ರಾಮಸ್ಥರಿಗೆ ಸ್ಕೂಲ್ ಪಾಠ ಕ್ರಮಗಳನ್ನು ದೂಷಿಸುವುದೇ ಸ್ವಭಾವವಾಗಿರುತ್ತೆ. ಇವರು ವಿದ್ಯೆಯ ಪ್ರಯೋ ಜನವೂ, ಅದರ ಅರ್ಥವೂ ತಿಳಿದವರಲ್ಲವೆಂತಲೇ ಹೇಳಬಹುದು. ಗ್ರಾಮ ಪಾಠ ಶಾಲೆಗಳಿಗೆ ಸ್ಕೂಲ್ ಫೀಸನ್ನು ವಜಾಮಾಡಿರತಕ್ಕದ್ದೇ ವಿದ್ಯೆಯಲ್ಲಿ ಅಪೇಕ್ಷೆ ಯಿಲ್ಲದಿರಲು ಮತ್ತೊಂದು ಕಾರಣವೆಂದು ಯೋಚಿಸಬಹುದಾಗಿದೆ. ಹ್ಯಾಗಂದರೆ ಒಬ್ಬ ತಂದೆಯು ಗಳಿಸಿದ್ದ ಪದಾರ್ಥಗಳಿಗಿಂತಲೂ ಮಗನು ಕಷ್ಟಪಟ್ಟು ಸಂಪಾ ದನೆಮಾಡಿ ಆ ಹಣದಿಂದ ಪಡೆದ ಪದಾರ್ಥಕ್ಕೆ ಅಕ್ಕರೆಯೂ, ಗೌರವವೂ, ಜೋಪಾನ ಮೊದಲಾದವುಗಳೂ ಉಂಟಾಗುವವು. ಆದ್ದರಿಂದ ಫೀಸು ವಸೂಲ್ಮಾ ಡುವುದು ಯುಕ್ತವಾಗಿದೆ. ರೈತರು ಬಡವರೆಂತಲೂ, ಫೀಸು ಕೊಡಲಾರೆವೆಂ ತಲೂ ನಟಿಸುವರು. ಇದು ಸುಳ್ಳು. ಪ್ರಾಯಶಃ ರೈತರೆಲ್ಲಾ ಬೆಳೆಯತಕ್ಕಂಥಾ ವರು. ಈಗಿನ ಧಾರಣೆಯಲ್ಲಿ ವರ್ಷಕ್ಕೆ ಒಂದು ಖಂಡಗವನ್ನು ಮಾರುವುದ ರಿಂದಲೇ ಫೀಸನ್ನು ಕೊಡಬಹುದು. ವಿದ್ಯೆಯೆಂಬ ಆಸ್ತಿಯನ್ನೇ ಸಂಪಾದಿಸಿ ಕೊಳ್ಳುವಾಗ ಇದು ನಷ್ಟವಾಗಲಾರದು. ಅಂಥಾ ಬಡ ರೈತರಿಗೆ ಫೀಸು ಮಾಫು ಮಾಡಬಹುದು. ಈ ವಸೂಲಾದ ಹಣವನ್ನು ಈ ಕ್ಷಾಮಕಾಲದಲ್ಲಿ ಮಾಸ್ಟರು ಗಳಿಗೆ ಆಯಾ ತರಗತಿಯ ರೇಟಿನಂತೆ ತೀರ್ಗಡೆಯಾದಷ್ಟು ಹುಡುಗರ ಮೇಲೆ ಗ್ರಾಂಟಿನ ರೂಪವಾಗಿ ಕೊಟ್ಟರೆ ಅವರಿಗೆ ಪ್ರೋತ್ಸಾಹವಾಗಬಹುದು.

ಒಬ್ಬ ದೇಶಿಕ.

ತೀರ್ಥಹಳ್ಳಿ ತಾಲ್ಲೂಕು ಅಗ್ರಹಾರ ಆರಗದ ಸ್ಕೂಲ್ ವಿದ್ಯಾರ್ಥಿಗಳಿಗೆ ಮಾಸ್ಟರುಗಳಿಂದ ನಾನಾ ತರಹ ಕಷ್ಟಗಳುಂಟಾದೂ, ವಿದ್ಯಾಭ್ಯಾಸವು ಈಚೆಗೆ ತೃಪ್ತಿಕರವಾಗಿ ನಡೆಯುತಾ ಇಲ್ಲವೆಂದೂ ಒಂದು ಬಾತ್ಮಿ ಬರೆದುಬಂದಿದೆ. ಅಂಥಾ ಮಕ್ಕಳ ತಂದೆತಾಯಿಗಳೂ, ಮುಖಂಡ ಪ್ರಜೆಗಳೂ ಮೊದಲು ಈ ವಿಚಾರಗಳನ್ನು ಸರ್ಕಾರದ ತಿಳುವಳಿಕೆಗೆ ತಂದರೆ ಅನುಕೂಲವಾಗುವುದು. ಪ್ರಜೆ ಗಳಿಗೆ ಸತ್ಯವನ್ನು ನುಡಿಯುವುದಕ್ಕೆ ಧೈರ್ಯವೂ, ನಿಷ್ಪಕ್ಷಪಾತತೆಯೂ ಉಂಟಾ ಗುವ ತನಕ ಇಂಥಾ ಕೊರತೆಗಳು ನಿವಾರಣೆಯಾಗುವುದಿಲ್ಲವೆಂದು ಖಂಡಿತವಾಗಿ ಹೇಳುತ್ತೇವೆ.—ಎಡಿ]

ತಾಲ್ಲೂಕು ವರ್ತಮಾನಗಳು.

ಬೆಂಗಳೂರು ತಾ|| ಯಲಹಂಕ.—ಈ ಪ್ರಾಂತ್ಯ ಎರಡು ತಿಂಗಳಿಂದ ಆದ ಹುಳಿಯಿಂದ ರಾಗಿಯ ಪೈರು ಬಹಳ ಚೆನ್ನಾಗಿ ಬೆಳೆದು ಎಲ್ಲವೂ ಕೊಯ್ಲಿಗೆ ಬಂದಿರುತ್ತವೆ. ಭತ್ತದ ಪೈರು ಮಾತ್ರ ಸುತರಾಂ ಕೆಟ್ಟುಹೋಯಿತು. ಧಾರಣೆ ವಾಸಿಗಳು ಬರಗಾಲದ ವ್ಯಾಪಾರದಂತೆಯೇ ಇದೆ. ಇದರಲ್ಲಿಯೂ ಇಲ್ಲಿನ ಕೆಲವು ವರ್ತಕರು ಅಂಗಡಿಗಳಲ್ಲಿ ಪಿಟ್ಟೀ ಸೇರುಗಳನ್ನೇ ಉಪಯೋಗಿಸುತ್ತಿದ್ದಾರೆ. ಇದಕ್ಕೆ ನಮ್ಮ ಪೋಲೀಸ್ ಆಫೀಸರುಗಳು ಸರಿಯಾದ ನಿಗಾವಣೆಯನ್ನು ಕೊಟ್ಟು ಬಡಬಗ್ಗರ ಕಷ್ಟವನ್ನು ನೀಗಿಸುತ್ತಾರೆಂದು ಹಾರೈಸುತ್ತೇನೆ.—ಇಲ್ಲಿ ಕೆಲವು ಜನ ಮಹಮದೀಯರು ಈಗ ನಡೆಯುವ ನಮ್ಮ ಬ್ರಿಟಿಷ್ ಸಾರ್ವಭೌಮರವರ ಯುದ್ಧ ದ ವಿಷಯವಾಗಿ ಅವರನ್ನು ಬಹಳವಾಗಿ ದೂಷಣೆಮಾಡಿ ಇಲ್ಲಿನ ಮತ್ತು ಸುತ್ತು ಮುತ್ತು ಗ್ರಾಮದ ರೈತರುಗಳಿಗೆ ತುಂಬಾ ವಿಷಾದವನ್ನೂ ಭಯವನ್ನೂ ಉಂಟು ಮಾಡುತ್ತಿದ್ದಾರೆ. ಇದನ್ನು ಘನವನ್ನೈದಿದ ನಮ್ಮ ಸರ್ಕಾರದವರು ಸರಿಯಾದ ಬಂದೋಬಸ್ತಿನಿಂದ ಸರಿಪಡಿಸುತ್ತಾರೆಂದು ಹಾರೈಸುತ್ತೇನೆ.

ಪ್ರೆಂಚ್ ರಾಕ್ಸ್.—ಇಲ್ಲಿ ಪ್ಲೇಗ್ ಪ್ರಾರಂಭವಾಗಿ 7-8 ಮರಣಗಳಾದವು. ಊರಿನಲ್ಲಿ ಇಲಿಗಳು ವಿಶೇಷವಾಗಿ ಸಾಯುತ್ತಿವೆ. ಕೆಲವು ಜನಗಳು ಊರು ಬಿಟ್ಟು ಬೇರೆ ಬೇರೆ ಹಳ್ಳಿಗಳಲ್ಲಿ ವಾಸಮಾಡುತ್ತಿದ್ದಾರೆ. ಜನಗಳೆಲ್ಲರೂ ಊರು ಬಿಟ್ಟರೆ ಪ್ಲೇಗ್ ಶಮನವಾದೀತು. ಬಡ ಜನಗಳಿಗೆ ಕೊಡುವದಕ್ಕಾಗಿ ಸರ್ಕಾರ ದವರು ಟೆಂಟು ಗಳುಗಳನ್ನು ತರಿಸಿದ್ದಾರೆ. ಜಾಗ್ರತೆಯಾಗಿ ಅವುಗಳನ್ನು ಹಂಚಿದರೆ ಒಳ್ಳೇದು. ಊರಿನ ಸಂದುಗಳಲ್ಲಿ ಗಲೀಜು ಹೆಚ್ಚಾಗಿದೆ. ಬೀದಿಗ ಳಲ್ಲೇ ಇಲಿಗಳನ್ನು ಬಿಸಾಡುತ್ತಾರೆ. ಇದನ್ನು ನೋಡುವವರೇ ಇಲ್ಲ. ಈ ಕಾಲದಲ್ಲಿ ಜಾಡಮಾಲಿಗಳು ಚುರುಕಾಗಿ ಕೆಲಸಮಾಡುವದು ಒಳ್ಳೇದು.— ನಮ್ಮ ಸಬ್ ಡಿವಿಜನ್ ಸಾಹೇಬರವರೂ ಅಮಲ್ದಾರರೂ ಆಗಾಗ್ಗೆ ಟೌನ್ ಇನ್ಸ್‌ಪೆಕ್ಷನ್ ಮಾಡುತ್ತಿದ್ದಾರೆ.—ಈ ಸ್ಥಳದಿಂದಲೂ, ಬೇರೆ ಕಡೆಗಳಿಂದಲೂ ವ್ಯಾಪಾರಿಗಳು ಕನ್ನಂಬಾಡಿ ಕಟ್ಟೆಯ ಸಂತೆಗೆ ವಿಶೇಷವಾಗಿ ಹೋಗುತ್ತಾರೆ. ಅನೇಕ ವೇಳೆ ಅಲ್ಲಿನ ಕೆಲವು ಜನರು ವ್ಯಾಪಾರಿಗಳನ್ನು ತೊಂದರೆ ಪಡಿಸು ವದೂ ಅಲ್ಲದೆ ಅಂಗಡಿಗಳಿಗೂ ನುಗ್ಗಿ ಗಲಾಟೆಮಾಡುತ್ತಾರೆಂದು ಸಮಾಚಾರ ವಿದೆ. ಪೋಲೀಸಿನವರು ಅಲ್ಲಿ ಸರಿಯಾದ ಬಂದೋಬಸ್ತು ಮಾಡುತ್ತಾರೋ ಇಲ್ಲವೋ ತಿಳಿಯದು. ಇದನ್ನು ಬೇಗನೆ ಅಲ್ಲಿನ ಅಧಿಕಾರಿಗಳು ಕ್ರಮಪಡಿಸುವರೆಂದು ನಂಬಿದೇವೆ.

ಆನೆಕಲ್ ತಾ|| ಕೊಡ್ಲುಗ್ರಾಮ.—ಈ ಪ್ರಾಂತ್ಯ ಕಾಲ ಕಾಲಕ್ಕೆ ಸರಿ ಯಾಗಿ ಮಳೆ ಬಂದು, ಬೆಳೆ ಚೆನ್ನಾಗಿರುತ್ತೆ. ಕೆರೆಗಳೆಲ್ಲಾ ಭರ್ತಿಯಾಗಿರುತ್ತೆ. ತರಿ ಫಸಲು ಚೆನ್ನಾಗಿರುತ್ತೆ. 12 ಆಣೆ ಫಸಲು ಆದೀತು. ಧಾರಣೆವಾಸಿಗಳು ಏರುತ್ತಲೇ ಇವೆ. ರೂಪಾಯಿಗೆ ರಾಗಿ 12 ಸೇರು, ಅಕ್ಕಿ 6 ಸೇರು ಇರುತ್ತೆ. ಬಡವರ ಜೀವನೋಪಾಯ ನಡೆಯುವುದು ಕಷ್ಟ.—ನಮ್ಮ ಗ್ರಾಮಾಭಿವೃದ್ಧಿ ಸಂಘದ ಮುಖಂಡರುಗಳು ಗ್ರಾಮದಲ್ಲಿರುವ ಕಸಗಳನ್ನು ತೆಗೆಸದೆ, ಗ್ರಾಮದ ಸುತ್ತಲೂ ಇರುವ ಲಂಟಾನಾ ಪೊದೆಗಳನ್ನು ಕಡಿಸದೆ ಇರುವುದರಿಂದ ಜನಗಳ ಆರೋಗ್ಯಕ್ಕೆ ಬಹಳ ತೊಂದರೆಯಾಗಿರುತ್ತೆ. ಊರಿಂದ ಊರಿಗೆ ಹೋಗುವ ದಾರಿ ಕೊರಕಲು ಬಿದ್ದುಹೋಗಿ ಸಂಚಾರಕ್ಕೆ ಬಹಳ ತೊಂದರೆಯಾಗಿರುತ್ತೆ. ಇಂತಹವ್ವೆಲ್ಲಾ ಗ್ರಾಮಾಭಿವೃದ್ಧಿ ಸಂಘದವರು ಯಾತಕ್ಕೆ ಸಾಧಿಸದೆ ಇರುತ್ತಾರೆಯೋ ಗೊತ್ತಿಲ್ಲ. ನಮ್ಮ ತಾಲ್ಲೂಕು ಅಮಲ್ದಾರರು ಪ್ರತಿ ತಿಂಗಳಲ್ಲಿಯೂ ಗ್ರಾಮಕ್ಕೆ ಬಂದು 40 ಮಾರ ಏರ್ಪಾಟು ಇವರುಗಳಿಗೆ ತಿಳಿಸುತ್ತಾರೆಂದು ನಿರೀಕ್ಷಿಸುತ್ತೇನೆ.—ಯುದ್ಧ ದ ನಿಮಿತ್ತ ಫಂಡಿಗಾಗಿ ನಮ್ಮ ಅಮಲ್ದಾರರು ಬಹಳ ಪರಿಶ್ರಮವಹಿಸಿ ಹಣ ಕೂಡಿಸುತ್ತಿದ್ದಾರೆ.—ಈಗ ಮೂರು ನಾಲ್ಕು ವಾರದ ಮಳೆ ಇರುತ್ತೆ. ವಿದ್ಯಾ ಭ್ಯಾಸ ಮಾಡತಕ್ಕ ಹುಡುಗರು 30 ಜನವಿರುತ್ತೆ. ಇಂಥಾಸ್ಥಳದಲ್ಲಿ ಬಾಲಕರ ವಿದ್ಯಾಭ್ಯಾಸಕ್ಕೆ ಸರ್ಕಾರದ ಸ್ಕೂಲ್ ಇಲ್ಲದೆ ಇರುವದು ತೊಂದರೆ. ಸರ್ಕಾರದ ವರು ಬಡವರ ಮಕ್ಕಳ ವಿದ್ಯಾಭ್ಯಾಸಕ್ಕೆ ಒಂದು ಸ್ಕೂಲ್ ಸ್ಥಾಪಿಸಿಕೊಡುತ್ತಾ ರೆಂದು ಬೇಡುತ್ತೇನೆ.

ಹೆಗ್ಗಡದೇವನಕೋಟೆ.—ಹವಾ ಚಳಿಗಾಲವನ್ನು ಅನುಸರಿಸಿ ಜನರಿಗೆ ಆರೋಗ್ಯವನ್ನು ಕಡಮೆಮಾಡುತ್ತಿದೆ. ಚಿತ್ತ ಮೊದಲಾದ ಮಳೆಗಳು ಜೋರಾಗಿ ಬಂದು ಊರಿನ ರಸ್ತೆಗಳೆಲ್ಲಾ ಕೊರೆದುಹೋಗಿ ರಾತ್ರಿ ವೇಳೆ ಜನಗಳ ಸಂಚಾರ ಕ್ಕೆ ತೊಂದರೆಯಾಗಿದೆ. ಮ್ಯುನಿಸಿಪಾಲಿಟಿಯವರು ಇದಕ್ಕೆ ಗಮನಕೊಟ್ಟು ಕ್ರಮ ಪಡಿಸುತ್ತಾರೆಂಬ ನಿರೀಕ್ಷೆ. ಆಮಶಂಕೆ, ಜ್ವರ ಮೊದಲಾದುವು ತಲೆದೋರಿವೆ; ಈ ಮಧ್ಯೆ ತಿಂಗಳೀಚೆಗೆ 3-4 ಪ್ಲೇಗ್ ಕೇಸುಗಳು ನಡೆದು ಊರಿನವರಿಗೆ ಗಾಬರಿ ಹುಟ್ಟಿ ಅನೇಕರು ಷೆಡ್ಡುಗಳನ್ನು ತಯಾರುಮಾಡಿದರು. ಆದರೆ ಕೆಲವರು ಮಾತ್ರ ಷೆಡ್ಡುಗಳಲ್ಲಿ ವಾಸಮಾಡುವುದೂ, ಮತ್ತೆ ಕೆಲವರು ಊರಲ್ಲೇ ಇರುವುದೂ ಸರಿ ಯಾಗಿ ತೋರುವುದಿಲ್ಲ. ಹೋದ ಸಾರಿ ಪ್ಲೇಗಿನಿಂದ ಜನಗಳಿಗೆ ಬಹಳ ಘಾಸಿ ಯಾದುದರ ಭಯದಿಂದ ಅನೇಕರು ಬೇರೆ ಬೇರೆ ಕಡೆ ಸೇರಿ ಹೋಗಲಿ! ಇಲ್ಲಿನ ಸ್ಕೂಲಿಗೆ ಬಹಳ ಹುಡುಗರು ಗೈರ್ಹಾಜರು. ಅದಕ್ಕೆ ಸರಿಯಾಗಿ ಖಾಯಂ ಹೆಡ್ ಮಾಸ್ಟರೂ, ಅ|| ಮಾಸ್ಟರೊಬ್ಬರೂ ಟ್ರೈನಿಂಗ್ ಕ್ಲಾಸಿಗೆ ಕಳುಹಿಸಲ್ಪ ಟ್ಟಿರುವುದೂ, ಅನುಭವಶಾಲಿಯಾದ ಅ|| ಮಾಸ್ಟರೊಬ್ಬರಿಗೆ ವರ್ಗವನ್ನು ಸೂಚಿಸಿ ಇರುವುದೂ, ಸಾಕಾದಷ್ಟು ಉಪಾಧ್ಯಾಯರಿಲ್ಲದೆ ಸ್ಕೂಲಿನ ಕೆಲಸಗಳಿಗೆ ಕುಂದಕ ತೋರುತ್ತೆ.—ಹೊಸದಾಗಿ ಬಂದ ಡಾಕ್ಟರಿಗೆ ಇಲ್ಲಿನ ಹವಾ ವಗೈರೆ ಸರಿಬೀಳದೆ ದೇಹಾಲಸ್ಯವೂ ಅದರಿಂದ ಆಸ್ಪತ್ರೆಗೆ ಹೋಗುವ ರೋಗಿಗಳ ವಿಷಯದಲ್ಲಿ ತಾತ್ಸಾರವೂ ಉಂಟಾಗಿರುವಂತೆ ತಿಳಿಯುತ್ತದೆ. ಅವರಿಗೆ ಈ ಸ್ಥಳದಲ್ಲಿ ಬೇಸರ ವಾಗದೆ ಅವರಿಂದ ಜನೋಪಕಾರವು ನಡೆದೀತೆಂದು ಹಾರೈಸುತ್ತೇವೆ.—ಈ ತಾಲ್ಲೂಕಿನಿಂದ ಚಾಮರಾಜನಗರಕ್ಕೆ ವರ್ಗಪಟ್ಟ ಶಿರಸ್ತೇದಾರ್ ಮ|| ಸಿ. ನಾರಾ ಯಣರಾಯರವರಿಗೆ ತಾ|| ನೌಕರರೂ, ಗ್ರಾಮ ಮುಖಂಡರೂ ಕಳೆದ ತಾ. 28 ನೇ ಬುಧವಾರ ಒಂದು ಎಂಟರ್‌ಟೇನ್‌ಮೆಂಟ್ ನಡಿಸಿದರು. ಇದಕ್ಕಾಗಿ ಪ್ರಜಾಮು ರಾಗಿಗಳಾದ ನಮ್ಮ ಹೊಸ ಅಮಲ್ದಾರರು, ಇತರ ಆಫೀಸರ್ ಮತ್ತು ಅಫಿಷಿ ಯಲ್ಸ್, ಮೆಂಬರುಗಳೂ, ಗ್ರಾಮ ಮಹಾಜನರೂ, ಇಲ್ಲಿನ ಎ. ವಿ. ಸ್ಕೂಲಿನಲ್ಲಿ ಸಭೆಯನ್ನಲಂಕರಿಸಿದ್ದರು. ಯಥೋಚಿತವಾಗಿ ಟಿಫನ್ ವಗೈರೆ ನಡೆದು, ಸಭಿಕರ ಪರವಾಗಿ ಆಕ್ಟಿಂಗ್ ಹೆಡ್ ಮಾಸ್ಟರ್ ಮ|| ಸಿಂಗಂಭಟ್ಟರವರು ಭಾಷಣಮಾಡಿ ಶಿರಸ್ತೇದಾರ್ರವರ ಗುಣಕಥನವನ್ನು ಮಾಡಿದರು.

ಚಿತ್ರದುರ್ಗದ ತಾ|| ಭರಮಸಾಗರ.—ಕಳೆದ ಬುಧವಾರ ಇಲ್ಲಿನ ವಿ. ಇ. ಸ್ಕೂಲು ಅಲಂಕೃತವಾಗಿತ್ತು. ಮಧ್ಯಾಹ್ನ ಹೆಡ್ ಮಾಸ್ಟರು ಮ|| ಶ್ರೀಗುರುರಾಜ ಪ್ಪನವರು ಅ|| ಮಾಸ್ಟರುಗಳೊಂದಿಗೂ, ಕಮಿಟಿ ಮೆಂಬರುಗಳು ಮತ್ತು ವರ್ತ ಕರು, ಪುರಪ್ರಮುಖರೊಂದಿಗೂ ದಯಮಾಡಿದರು. ಶೇಕದಾರ್ ಶ್ರೀನಿವಾಸರಾ ಯರು ಸಭೆಯ ಅಗ್ರಾಸನವನ್ನು ವಹಿಸಿದರು. ಬಳಿಕ ಹೆಡ್ ಮಾಸ್ಟರು ಇದೇ ಸ್ಕೂಲಿನಲ್ಲಿದ್ದ ಅ|| ಮಾಸ್ಟರು ಮ|| ಸುಬ್ರಹ್ಮಣ್ಯ ಶಾಸ್ತ್ರಿಗಳು ಸ್ಥಳವಂದಿಗರಾಗಿ ಇಲ್ಲಿನ ಬಾಲಕರಲ್ಲಿ ತುಂಬಾ ಅಭಿಮಾನ ಶಾಲಿಗಳಾಗಿಯೂ, ಕೆಲಸದಲಿ ಉತ್ಸಾಹಶಾಲಿಗಳಾಗಿಯೂ, ತಮಗೆ ತುಂಬಾ ಸಹಾಯಕರಾಗಿಯೂ ಇದ್ದು ಈ ಸ್ಕೂಲಿಗೆ ಕೀರ್ತಿ ತಂದರೆಂದೂ, ಈಗ ಪ್ರಮೋಷನ್ ಮೇಲೆ ಬಾಗೂರು ಸ್ಕೂಲಿಗೆ ಹೆಡ್ ಮಾಸ್ಟರಾಗಿ ವರ್ಗಪಟ್ಟು ಹೋಗುವುದರಿಂದ ಅವರಿಗೆ ಕೃತ ಜ್ಞತಾ ರೂಪವಾಗಿ ಈ ಸಂತೋಷಕೂಟ ಕಲೆಯಬೇಕಾಯಿತೆಂದೂ, ಅವರು ಉತ್ಸಾಹಶಾಲಿಗಳಾಗಿ ಮುಂದೆ ಸಂಪೂರ್ಣ ಕೀರ್ತಿಗೆ ಭಾಜನರಾಗಬೇಕೆಂದೂ ಭಾವಗರ್ಭಿತವಾದ ಉಪನ್ಯಾಸದಿಂದ ಅ|| ಮಾಸ್ಟರಲ್ಲಿ ತಮಗಿದ್ದ ಅಭಿಮಾನ ವನ್ನು ಸಂತೋಷದಿಂದ ವ್ಯಕ್ತಪಡಿಸಿದರು. ಅನಂತರ ಶ್ಯಾನುಭೋಗರು ಮ|| ನಂಜುಂಡಪ್ಪನವರು ಸಭೆಯವರ ಪರವಾಗಿ ಮ|| ಸುಬ್ರಹ್ಮಣ್ಯ ಶಾಸ್ತ್ರಿಗಳ ಕಾರ್ಯಗಳನ್ನು ವಿವರಿಸಿದರು. ಆ ಮೇಲೆ ಮ|| ಸುಬ್ರಹ್ಮಣ್ಯ ಶಾಸ್ತ್ರಿಗಳವರೂ ಸಮಯೋಚಿತವಾದ ಮಾತುಗಳನ್ನಾಡಿ ಸಭಿಕರನ್ನು ವಂದನೆ ಮಾಡಿದರು. ಆ ಮೇಲೆ ಅಗ್ರಾಸನಾಧಿಪತಿಗಳು ವಿದ್ಯೆಯ ಮತ್ತು ವಿದ್ಯಾರ್ಥಿಗಳ ಮಹತ್ವದ ವಿಷ ಯದಲ್ಲಿ ಉಪನ್ಯಾಸವನ್ನು ಮಾಡಿ, ಆಂಗ್ಲಸಾಮ್ರಾಜ್ಯದ ಮಹದುಪಕಾರವನ್ನು ವರ್ಣಿಸಿ, ಪ್ರಕೃತಕಾಲದಲ್ಲಿ ನಮ್ಮಾಂಗ್ಲಸಾಮ್ರಾಜ್ಯದವರಿಗೆ ಒದಗಿರುವ ಯುದ್ಧ ದಲ್ಲಿ ಜಯವೂ ಕೀರ್ತಿಯೂ ಲಭಿಸಲು ಈ ಸಂತೋಷ ಸಮಾರಂಭದಲ್ಲಿ ದೇವ ರನ್ನು ಸ್ತೋತ್ರಮಾಡಬೇಕೆಂದಪ್ಪಣೆ ಕೊಡಿಸಿದ ಮೇಲೆ ಸ್ಕೂಲು ಬಾಲಕರಿಂದ ಸಾರ್ವಭೌಮರವರ ಮತ್ತು ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆ ನಡೆದು, ಸರ್ವರೂ ಆಂಗ್ಲಸಾಮ್ರಾಜ್ಯದವರ ಜಯಕ್ಕಾಗಿ ಸ್ತೋತ್ರವನ್ನು ಮಾಡಿ ದರು. ನಂತರ ಗಂಧ, ಪುಷ್ಪ, ತಾಂಬೂಲ ಸಭೆಯವರಿಗೆಲ್ಲಾ ಹಂಚಲ್ಪಟ್ಟು ಸಭೆ ವಿಸರ್ಜಿತವಾಗಿ, ಸರ್ವರೂ ಮ|| ಸುಬ್ರಹ್ಮಣ್ಯ ಶಾಸ್ತ್ರಿಗಳವರನ್ನು ಮರ್ಯಾದೆ ಯಿಂದ ಕಳುಹಿಸಿಕೊಟ್ಟರು.

ಚಿತ್ರದುರ್ಗ.—ಸ್ವಾತಿ ಮಳೆಯು ಸರಿಹೋ ಇಲ್ಲ. ಮಂಜು ಬೀಳುತ್ತಾ ಇರುವದರಿಂದ ಮಳೆ ಬರುವ ನಿರೀಕ್ಷೆಯಿಲ್ಲ. ಪೈರು ಅನೇಕ ಕಡೆ ಕೆಟ್ಟು ಹೋಗುತ್ತದೆ; ಕೆಲವು ಕಡೆ 7 ಆಣೆ ಪೈರು ಆಗಬಹುದು.—ಈ ಊರ ಕೆರೆ ಎರಡು ವರ್ಷದಿಂದಲೂ ಒಣಗಿದೆ. ಕೆರೆ ಪಕ್ಕದಲ್ಲಿರುವ ನಿಜಾಮ್‌ರವರಲ್ಲಿ ಭಾವಿ ತೆಗೆದು ಯಂತ್ರಗಳಿಂದ ನೀರನ್ನು ಎತ್ತಿಸಿ ಸುಮಾರು 7-8 ತಿಂಗಳಿಂದ ನಲ್ಲಿಗಳ ಮುಖಾಂತರ ಊರಿಗೆ ಸಾಗಿಸುವರು. ಎತ್ತರದ ಪ್ಯಾಪುಗಳಿಗೆ ನೀರು ಹತ್ತುವದು ಕಷ್ಟ. ನೀರಿಗಾಗಿ ಜನಗಳು ಬಹಳ ವ್ಯಥೆಪಡುತ್ತಿದ್ದಾರೆ. ಸದ್ಯಕ್ಕೆ ಕೋಟೆ ಬಾಗಿಲಲ್ಲಿರುವ ಕಾಮನ ಭಾವಿಯಿಂದ ಊರಿನ ಅರ್ಧ ಭಾಗದ ಜನರು ಜೀವನಮಾಡುತ್ತಿದ್ದಾರೆ. ಮ್ಯುನಿಸಿಪಾಲಿಟಿಯವರು ಈ ಭಾವಿಯ ತಂಟೆಗೆ ಬರದಿ ದ್ದರೆ ಕ್ಷೇಮವಾದೀತು (?)—ಕಳೆದ ಮೂರು ವಾರಗಳಿಂದ 6-6 ಸೆಷನ್ಸ್ ಕೇಸುಗಳು ವಿಚಾರಣೆಯಾದವು. ಮೊಳಕಾಲ್ಮೂರು ಬಳ್ಳಾರಿ ರಸ್ತೆಯಲ್ಲಿ ಕಳ್ಳತನ ಮಾಡಿದ ಇಬ್ಬರಿಗೆ ತಲಾ 7 ವರ್ಷ ಸಜಾವೂ, ಒಬ್ಬನಿಗೆ 5 ವರ್ಷ ಸಜಾವೂ ಆಗಿದೆ. ಮತ್ತು ಚಿತ್ರದುರ್ಗದ ತಾಲ್ಲೂಕು ಗುಂಟನೂರು ಗ್ರಾಮದ ಕೆಂಚ, ತಿಪ್ಪ ಎಂಬಿಬ್ಬರು ಹೆಂಗಸರು ಸಾತಮ್ಮನೆಂಬ ಮುದುಕಿಯನ್ನು ಕೊಂದರೆಂದು ಅವರಿಬ್ಬರಿಗೂ ಕೊಲೆಪಾತಕಕ್ಕಾಗಿ ಫಾಸಿ ಸಜಾ ವಿಧಿಸಿರುತ್ತಾರೆ.—ಹೊಳಲ್ಕೆರೆ ರೈಲ್ವೆ ಸ್ಟೇಷನ್‌ಗೆ ಹೋಗುವ ಮೋಟಾರು ಗಾಡಿಗಳವರು ಪ್ರಯಾಣಿಕರಿಗೆ ಬಹಳ ವಾಗಿ ತೊಂದರೆಕೊಡುತ್ತಾರೆ. ತಿಳುವಳಿಕೆಯಿಲ್ಲದ ಕೆಲವು ಮನುಗಳು ಗಾಡಿ ಗಳನ್ನು ಮನಸ್ಸು ಓಡಿಸಿದ್ದರಿಂದ ಗಾಡಿ ಮುರಿದು ಅನೇಕರು ಗಾಯಪಟ್ಟಿರು ತ್ತಾರೆ. ಚಕ್ರಗಳು, ತಗಡು, ಕುದುರೆ ಮೊದಲಾದವುಗಳು ಸರಿಯಾಗಿವೆಯೆಂದು ಪರೀಕ್ಷೆ ಮಾಡಿದ್ದರೆ ಪ್ರಯಾಣಕ್ಕೆ ಅವಕಾಶ ಕೊಡಬಾರದು. ನಮ್ಮ ಟ್ರಾನ್ ಪ್ರೆಸಿಡೆಂಟರವರು ಈ ವಿಷಯದಲ್ಲಿ ಗಮನಿಸುವರೆಂದು ಬಹು ಹೇಳಿ ಪ್ರಯಾಣಿ ಕರ ಪ್ರಾಣ, ಮಾನಗಳನ್ನು ಕಾಪಾಡಬೇಕಾಗಿ ಪ್ರಾರ್ಥನೆ. ಧಾನ್ಯಾದಿಗಳು ಬಹಳ ಪ್ರಿಯವಾಗಿವೆ. ಕೃತಕವೆಂದು ಧಾನ್ಯವು ರೂಪಾಯಿಗೆ 4 ಸೇರು ಮಾರುವ ಕಾಲ ಬಂದಿದೆ. ಬಡವರೂ, ಮಧ್ಯಸ್ಥರೂ ಜೀವಿಸುವದು ಕಷ್ಟ ವಾಯಿತು. ಇದಕ್ಕಿಂತ ಕ್ಷಾಮ ಬರಬೇಕಾದ್ದಿಲ್ಲ.—ಸ್ವದೇಶಿ ಬಂದೋವಸ್ತು ಡಿಪೋ ಇಲ್ಲ. ಘಾಟೆಸ್ ಇಲಾಖೆಯವರು ಮಾಡದರಿಗಾಗಿ ಒಂದು ಡಿಪೋ ಇಡಿಸಿ ಜನಗಳಿಗೆ ಅನುಕೂಲಮಾಡಿದರೆ ಆ ಮೇಲೆ ಜನಗಳೇ ಆ ರೀತಿ ಡಿಪೋ ಇಡಲು ಪ್ರಯತ್ನಿಸುವರು. ಲೈಸೆನ್ಸ್ ಸರಿಯಾಗಿ ಸಿಕ್ಕುವದಿಲ್ಲವೆಂದೂ, ದೂರಭಾಗಗಳ ಯಿಂದ ತರಬೇಕೆಂದೂ, ಚಕಿಲೊಪೆಯವರು ಒಂದು ಹೊರೆಗೆ 8-10 ಆಣೆ ವರೆಗೆ ಹೆಚ್ಚಿಸಿದ್ದಾರೆ. ಬೆಲೆ ಪೂರ್ವಕ್ಕಿಂತ ನಾಲ್ಕರಷ್ಟು ಹೆಚ್ಚಾಗಿಹೋಗಿದೆ. ಜಂಗಲು ನಕ್ಷೆ ಜಬಾಬು ಹೊತ್ತು ಇದನ್ನು ತಪ್ಪಿಸಿದರೆ ಉಪಕಾರವಾದೀತು.—ಊರ ಮಧ್ಯೆ ಒಂದು ಪುಸ್ತಕ ಭಂಡಾರವೂ, ವಾಚನಾಲಯವೂ ಅವಶ್ಯಕವಾಗಿದೆ. ಅನೇಕರು ವಿರಾಮಕಾಲದಲ್ಲಿ ದುಷ್ಟ ಹವ್ಯಾಸಗಳಿಗೆ ಅವಕಾಶವಿಲ್ಲದಂತೆ ಲೋಕ ವಾರ್ತೆಯನ್ನು ತಿಳಿಯುವುದಕ್ಕೂ ಜ್ಞಾನಾಭಿವೃದ್ಧಿಗೂ ಸಹಾಯವಾಗುವದು. ಇದನ್ನು ಪ್ರಮುಖರಾದ ಸಾಹುಕಾರರುಗಳು ಏರ್ಪಡಿಸಿದರೆ ಅನೇಕರಿಗೆ ಪ್ರಯೋ ಜನವಾದೀತು. ಸದ್ಯಕ್ಕೆ ಸರ್ಕಾರದವರು ವಾಚನಮಂತ್ರ ಲೈಬ್ರೆರಿಯನ್ನಾದರೂ ಊರ ಮಧ್ಯ ಇಡಿಸಿಕೊಟ್ಟರೆ ಎಷ್ಟೋ ಉಪಕಾರವಾಗಬಹುದು

ಒಳದೇಶದ ವೃತ್ತಾಂತಗಳು.

ಈ ವಾರ ನಮ್ಮ ಪತ್ರಿಕೆಯು ಹತ್ತು ಪುಟಗಳುಳ್ಳದ್ದಾಗಿದೆ.

ಬೆಂಗಳೂರು ದಂಡಿನ ಪೋಲೀಸ್ ಸೂಪರಿಂಟೆಂಡೆಂಟರಾಗಿದ್ದ ಮ|| ಎ. ಎ. ಗೋವರ್‌ಯವರು ಹಿಂದಿನ ಭಾನುವಾರ ಬೆಳಿಗ್ಗೆ ಆಸ್ಪತ್ರೆಯಲ್ಲಿ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಶ್ರೀರಂಗಪಟ್ಟಣದ ಲಾಕಪ್ಪಿನಲ್ಲಿದ್ದ ಒಬ್ಬ ತಕ್ಸೀರುದಾರನು ತಪ್ಪಿಸಿಕೊಂಡು ಹೋಗಿದ್ದಾನೆ. ಧನವನ್ನು ಕಳುವು ಮಾಡಿದನೆಂದು ಪೋಲೀಸಿನವರು ಅವನನ್ನು ಹಿಡಿದು ಲಾಕಪ್ಪಿನಲ್ಲಿ ಇಟ್ಟಿದ್ದಂತೆ ತಿಳಿಯುತ್ತದೆ.

ಕರ್ನಲ್ ಜೆ. ದೇಸರಾಜೆ ಅರಸಿನವರ ಗೈರ್‌ಹಾಜರಿಯಲ್ಲಿ ಲೆಫ್ಟಿನೆಂಟ್ ಕರ್ನಲ್ ಎ. ಎ. ಜೋನ್ಸರವರು ಮೈಸೂರು ಸೈನ್ಯಗಳ ಚೀಫ್ ಕಮಾಂಡಾಂಟರ ಕೆಲಸದ ಛಾರ್ಜನ್ನು ವಹಿಸಬೇಕೆಂದು ಸರ್ಕಾರದವರು ನೇಮಕ ಮಾಡಿದಾರೆ.

ಮುಂದಿನ ಜನವರಿ ತಾ. 4 ಮತ್ತು 5 ರಲ್ಲಿ ಹಾಸನದ ಡಿಸ್ಟ್ರಿಕ್ಟ್ ಪೋಲೀಸ್ ಆಫೀಸಿನ ಮೈದಾನಿನಲ್ಲಿ ಗೋಕಾಯಿಗಳ ಪ್ರದರ್ಶನವನ್ನು ನಡಿಸಿ, ಉತ್ತಮವಾದ ರಾಸುಗಳಿಗೆ ಬಹುಮಾನ ಕೊಡುತ್ತೇವೆಂದು ಡೆಪ್ಯುಟಿ ಕಮೀಷನರವರು ಪ್ರಕಟಮಾಡಿರುತ್ತಾರೆ.

ಒಬ್ಬ ಬಾತ್ಮೀದಾರರಿಂದ—ರಾಜಧಾನಿಯ ಹಳೇ ಅಗ್ರಹಾರದಲ್ಲಿ ತಾ. 9 ನೇ ಸೋಮವಾರ ರಾತ್ರಿ ರಾಯಚೂರ್‌ನಿಂದ ಬಂದಿರುವ ವೇ|| ಶ್ರೀಕಂಠಶಾಸ್ತ್ರಿಗಳವರು "ಶಬರಶಂಕರ ವಿಲಾಸ" ಎಂಬ ಕಥೆಯನ್ನು ಮಾಡಿದರು. ಅನೇಕ ಜನರು ಸೇರಿದ್ದು ಆನಂದಪಟ್ಟರು.

ಹತ್ತೀ ಬೀಜದಿಂದ ಎಣ್ಣೇ ತೆಗೆಯುವುದಕ್ಕೆ ಒಂದು ಕಾರ್ಖಾನೆಯನ್ನು ಏರ್ಪಡಿಸಬೇಕೆಂದು ಕಂಪನಿಮಾಡಿ, ಅದಕ್ಕೆ ಷೇರುಗಳ ಮೂಲಕ ಹಣವನ್ನು ಕೂಡಿಸುತ್ತಿದ್ದಾರಷ್ಟೆ. ಈಗ ಅರ್ಧ ಭಾಗದಷ್ಟು ಷೇರುಗಳನ್ನು ಸಂಸ್ಥಾನಾಮಲೆ ಜನಗಳು ಪಡೆದುಕೊಂಡಿದಾರೆಂದು ಪ್ರಕಟವಾಗಿದೆ.

ಕಳೆದ ವಾರ ನಂಜನಗೂಡು ರೈಲ್ವೇ ಸ್ಟೇಷನ್ನಿನಲ್ಲಿರುವ ಸ್ಟಾಂಡರ್ಡ್ ಎಣ್ಣೆ ಕಂಪನಿಯ ಸುಮಾರು 2,000 ಟಿನ್ನುಗಳ ಸೀಮೆಯೆಣ್ಣೆ ಉರಿದು ನಷ್ಟವಾಯಿತು. ಸಿಡಿಲು ಬಿದ್ದು ಎಣ್ಣೆ ಹತ್ತಿಕೊಂಡಿತೆಂದು ಕಾರಣ ಹೇಳಲಾಗಿದೆ. ಕಂಪನಿಯ ಏಜಂಟರು ಬಂದಿದ್ದು ತನಿಖೆಮಾಡಿಕೊಂಡು ಹೋಗಿದಾರೆ.

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯವರು ಪ್ರಜೆಗಳಲ್ಲಿ ಮಲೇರಿಯಾ ಜ್ವರ ಹೆಚ್ಚುತ್ತಿರುವುದಕ್ಕೆ ಕಾರಣವನ್ನು ತನಿಖೆಯಿಂದ ಗೊತ್ತುಮಾಡಿ ಪರಿಹಾರಗಳನ್ನು ಸೂಚಿಸುವುದಕ್ಕೋಸ್ಕರ ಈ ವರುಷ 2,000 ರೂಪಾಯಿ ಖರ್ಚು ಮಾಡುತ್ತೇವೆಂದು ತಿಳಿಸಿದ್ದನ್ನು ನಮ್ಮ ಗವರ್ನ್‌ಮೆಂಟಿನವರು ಒಪ್ಪಿ ಸ್ಯಾಂಕ್ಷನ್ ಮಾಡಿದಾರೆ.

ಒಬ್ಬ ಬಾತ್ಮೀದಾರರಿಂದ—ಮಾಲೂರು ತಾಲ್ಲೂಕು ಕಸಬಾ ಟೇಕಲ್‌ನಲ್ಲಿ ಶ್ರೀ ಸೋಮೇಶ್ವರಸ್ವಾಮಿ ದೇವಸ್ಥಾನದಲ್ಲಿ ಬನಹಳ್ಳಿ ರಾಮಸ್ವಾಮಿಶೆಟ್ಟರು ಶ್ರೀಮನ್ಮಹಾರಾಜಾ ಸಾಹೇಬ್ ಬಹದ್ದೂರ್ ರವರಿಗೂ, ಶ್ರೀಮದಿಂಡಿಯಾ ಚಕ್ರವರ್ತಿ ಸಾರ್ವಭೌಮರವರಿಗೂ ಶ್ರೇಯಃಪ್ರಾರ್ಥನೆ ಮಾಡಿ, ಶಾಶ್ವತವಾಗಿ ಅಖಂಡ ಇರಿಸಿರುತ್ತಾರೆ.

ತುರ್ಕಿ (ಆಟೋಮಾನ್) ಅಧಿಪತ್ಯದ ಪ್ರಜೆಯಾಗಿರತಕ್ಕವನು ನಮ್ಮ ಸೀಮೆಗೆ ಬಂದ ಕೂಡಲೇ ಸ್ಥಳೀಯ ಮ್ಯಾಜಿಸ್ಟ್ರೇಟರಿಗೆ ತಿಳಿಸಬೇಕೆಂದೂ, ಅಂಥಾ ಪ್ರಜೆಗಳು ಬಂದು ಇಳುಕೊಂಡಿರುವ ಮನೆಗಳ ಯಜಮಾನರು ಆ ಸಂಗತಿಯನ್ನು ಸ್ಥಳದ ಮ್ಯಾಜಿಸ್ಟ್ರೇಟರಿಗೆ ಕೂಡಲೇ ಅರ್ಜಿಮಾಡಿ ತಿಳಿಸಬೇಕೆಂದೂ ನಮ್ಮ ಸರ್ಕಾರದವರು ಇಸ್ತಿಹಾರು ಕೊಟ್ಟಿದಾರೆ.

ಚನ್ನಪಟ್ಟಣದಲ್ಲಿ ಒಬ್ಬ ವೈಶ್ಯವರ್ತಕರ ಹೆಣ್ಣುಮಗುವನ್ನು ಯಾರೋ ಕೊಂದುಹಾಕಿದ್ದರಷ್ಟೆ. ಪೋಲೀಸಿನವರು ನಾಲ್ಕಾರು ವಾರಗಳಿಂದ ಪತ್ತೇ ತರದೂದು ನಡಿಸಿ, ಆ ಸಾಹುಕಾರರ ನೆಂಟರಾದ ಗುಂಡನೆಂಬ ವಿಧವೆಯನ್ನು ದಸ್ತಗಿರಿ ಮಾಡಿದಾಗ ಅವಳಲ್ಲಿ ಮಗು ಹಾಕಿಕೊಂಡಿದ್ದ ಕೆಲವು ಆಭರಣಗಳೂ ಸಿಕ್ಕಿದವು. ಈ ಮೊಕದ್ದಮೆಯನ್ನು ಸೆಷನ್ಸ್ ವಿಚಾರಣೆಗೆ ಗುರಿಮಾಡಿರುತ್ತಾರೆ.

ಮೈಸೂರು ಸ್ಟೇಟ್ ಲೈಫ್ ಇನ್ಷೂರೆನ್ಸ್ ಕಂಪನಿಗೆ ಗವರ್ನ್‌ಮೆಂಟ್ ಪ್ರೆಸ್ಸಿನಲ್ಲಿ ಪೀಸ್ ವರ್ಕ್ ನೌಕರಿ ಮಾಡತಕ್ಕವರ ಪೈಕಿ ಐದು ವರುಷಕ್ಕಿಂತ ಹೆಚ್ಚು ಸರ್ವಿಸ್ ಆದವರನ್ನೆಲ್ಲಾ ಸೇರಿಸಿಕೊಳ್ಳಬೇಕೆಂದೂ, ಅದಕ್ಕಿಂತ ಕಮ್ಮಿ ಸರ್ವಿಸ್ ಮಾಡಿದವರೂ, ಇಷ್ಟಪಟ್ಟರೆ ಸೇರಿಕೊಳ್ಳಬಹುದೆಂದೂ, ಅವರುಗಳು ತಿಂಗಳಿಗೆ ಒಂದು ರೂಪಾಯಿನಂತೆ ಚಂದಾ ಕಟ್ಟಬೇಕೆಂದೂ ಸರ್ಕಾರದವರು ಸ್ಯಾಂಕ್ಷನ್ ಮಾಡಿದಾರೆ.

ರಾಜಧಾನಿಯಲ್ಲಿ ಡಿಸ್ಟ್ರಿಕ್ಟ್ ಖಜಾನೆಯ ಅ|| ಕಮೀಷನರಾದ ಮ|| ವೈ. ವಿ. ಕೃಷ್ಣಮೂರ್ತಿಯವರು ತಮ್ಮ ಕುಮಾರಿಯನ್ನು ಚಿತ್ರದುರ್ಗದ ಫಾರೆಸ್ಟ್ ಆಫೀಸರ್ ಮ|| ಡಿ. ರಾಜಾರಾಯರ ಕುಮಾರನಿಗೆ ಕೊಟ್ಟು ಕಳೆದ ಭಾನುವಾರ ವಿವಾಹ ಮಾಡಿದರು. ಬಹು ಮಂದಿ ಅಧಿಕಾರಿಗಳೂ, ದೊಡ್ಡ ಮನುಷ್ಯರೂ ಹೋಗಿದ್ದು ನೂತನ ವಧೂವರರನ್ನು ಆಶೀರ್ವದಿಸಿದರು. ಉತ್ಸವ ದೀಪಾದಿಗಳು ಸಂತೋಷವಾಗಿ ನೆರವೇರಿದವು.

ದೇವನಹಳ್ಳಿ ತಾಲ್ಲೂಕು ಕಾರಹಳ್ಳಿ ಗ್ರಾಮದಲ್ಲಿ ಸ್ಕೂಲ್ ಮಾಸ್ಟರ್ ಮ|| ಎಸ್. ಡಿ. ಭವಾನಿಶಂಕರರಾಯರು ವೇ|| ಸುಬ್ಬರಾಯಭಟ್ಟರ ಉದಾರಾಶ್ರಯವನ್ನೂ ಪ್ರೋತ್ಸಾಹವನ್ನೂ ಪಡೆದು ಒಂದು ರೀಡಿಂಗ್ ರೂಮನ್ನೂ ಬಾಲಕರ ಅಭಿವೃದ್ಧಿಗಾಗಿ ಒಂದು ಸಂಘವನ್ನೂ ಪ್ರಾರಂಭಿಸಿರುತ್ತಾರೆ. ಅ|| ಡೆಪ್ಯುಟಿ ಇನ್ಸ್‌ಪೆಕ್ಟರ್ ಮ|| ಪಿ. ಅನಂತಸುಬ್ಬರಾಯರು ಅವೆರಡನ್ನೂ ಪ್ರಾರಂಭಿಸಿ, ಅವುಗಳ ಪುರೋಭಿವೃದ್ಧಿಗಾಗಿ ಆ ಗ್ರಾಮಸ್ಥರೆಲ್ಲಾ ಸಹಾಯಮಾಡಬೇಕೆಂದು ಪ್ರೋತ್ಸಾಹಪಡಿಸಿರುತ್ತಾರೆ.

ಶ್ರೀರಂಗಪಟ್ಟಣದಲ್ಲಿ ಸ್ಥಾಪಿಸಿರುವ ಪಬ್ಲಿಕ್ ರೀಡಿಂಗ್ ರೂಮಿನ ಅಭಿವೃದ್ಧಿಗೋಸ್ಕರ ಕೋಆಪರೆಟಿವ್ ಸೊಸೈಟಿಯವರು ಪ್ರತಿ ಸಂವತ್ಸರವೂ ಇಪ್ಪತ್ತೈದು ರೂಪಾಯನ್ನೂ, ಎಕ್ಸೈಸ್ ಕಂಟ್ರಾಕ್ಟರುಗಳಾದ ಸಾಹುಕಾರ್ ತಮ್ಮಯ್ಯನವರೂ, ಸಿಡುಗಟ್ಟದ ಅಣ್ಣೇಗೌಡರೂ, ಪುಟ್ಟನಂಜಪ್ಪನವರೂ ಸೇರಿ ಆರವತ್ತು ರೂಪಾಯನ್ನು ಕೊಡುವುದಾಗಿ ವಾಗ್ದಾನಮಾಡಿದಾರೆ. ಮೇಲ್ಕಂಡ ಸಾಹುಕಾರರುಗಳ ಉದಾರಗುಣಕ್ಕಾಗಿ ಪುರನಿವಾಸಿಗಳೆಲ್ಲಾ ಅವರಿಗೆ ಕೃತಜ್ಞರಾಗಿರುತ್ತಾರೆ.

ನಮ್ಮ ಸರ್ಕಾರದವರೂ ಈ ರೀಡಿಂಗ್ ರೂಮಿಗೆ ದ್ರವ್ಯ ಸಹಾಯಮಾಡುವರೆಂಬ ಭರವಸೆಯುಂಟು ಎಂಬದಾಗಿ ಒಬ್ಬ ಬಾತ್ಮೀದಾರರು ಬರೆಯುತ್ತಾರೆ.

ಹುಣಸಮಾರನಹಳ್ಳಿ ಮಠದ ಏಜಂಟ್ ಮ|| ಗುರುನಂಜನಗೌಡರು ಬರೆಯುವುದು—ದೇವನಹಳ್ಳಿ ತಾಲ್ಲೂಕು ಹುಣಸಮಾರನಹಳ್ಳಿ ಶ್ರೀ ಚಂದ್ರಮೌಳೀಶ್ವರ ಜಾತ್ರೆಯು ಡಿಸೆಂಬರ್ 1 ನೇ ತಾರೀಖು ಆರಂಭವಾಗಿ 9 ನೇ ತಾರೀಖಿನ ವರಿಗೆ ನಡೆಯುತ್ತೆ. ಮಾಮೂಲು ಪ್ರಕಾರ ಎತ್ತಿನ ಪರಿಷೆಯು ಸೇರುತ್ತೆ. ಬರತಕ್ಕ ವರ್ತಕರು ಮತ್ತು ಆಗಂತುಕರಿಗೆ ಎಲ್ಲಾ ಸೌಕರ್ಯಗಳೂ ಉಂಟುಮಾಡಲ್ಪಡುತ್ತೆ. ಬೆಂಗಳೂರಿಗೆ 12 ಮೈಲಿಯೂ, ಎಲಹಂಕದ ರೈಲ್ವೆ ಸ್ಟೇಷನ್ನಿಗೆ 3 ಮೈಲಿಯೂ, ಚಿಕ್ಕಬಳ್ಳಾಪುರದ ಹೈ ರೋಡ್ ಪಕ್ಕದಲ್ಲೂ ಇರುತ್ತೆ.

ಕಳೆದ ಶನಿವಾರ ಸಾಯಂಕಾಲ ರಾಜಧಾನಿಯ ವೆಸ್ಲಿಯನ್ ಹೈ ಸ್ಕೂಲಿನಲ್ಲಿ ರೆವ್. ಎಚ್. ಗಲ್ಲಿಫೋರ್ಡ್ ಸಾಹೇಬರವರು ಈಗಿನ ಯುದ್ಧದ ಕಾರಣಗಳನ್ನೂ, ಯುದ್ಧ ಪ್ರಾರಂಭವಾದಾರಭ್ಯ ಇದುವರೆಗೆ ಯುದ್ಧಭೂಮಿಯಲ್ಲಿ ನಡೆದಿರುವ ಕದನಗಳನ್ನೂ, ಪ್ರಪಂಚದ ಎಲ್ಲಾ ಕಡೆಗಳಲ್ಲೂ ಜರ್ಮನಿಯವರ ಸ್ವಾಸ್ಥ್ಯಗಳು ಅವರ ಕೈತಪ್ಪಿಹೋಗುತ್ತಿರುವುದನ್ನೂ ದಿವ್ಯವಾದ ನಕ್ಷೆಯ ಮೂಲಕ ಬಹಳ ಚೆನ್ನಾಗಿ ವಿವರಿಸಿ ಉಪನ್ಯಾಸಮಾಡಿದರು. ಕಟ್ಟಡದ ತುಂಬಾ ವಿದ್ಯಾವಂತರು ಸೇರಿ ಯುದ್ಧದ ವೃತ್ತಾಂತವನ್ನು ಪರಿಷ್ಕಾರವಾಗಿ ತಿಳಿದುಕೊಂಡು ಉಪನ್ಯಾಸಕರನ್ನು ಬಹಳವಾಗಿ ವಂದನೆಮಾಡಿದರು.

ದಕ್ಷಿಣ ಕನರಾ ಡಿಸ್ಟ್ರಿಕ್ಟ್ ಬೋರ್ಡಿನವರು ಕಳೆದ ವಾರ ಮದರಾಸ್ ಗವರ್ನರವರು ಅಲ್ಲಿಗೆ ದಯಮಾಡಿದ್ದಾಗ ಕಂದಾಯದ ಮೇಲೆ ರೈಲ್ವೆ ಸೆಸ್ಸನ್ನು ಹಾಕಿ ವಸೂಲ್ಮಾಡುವುದಕ್ಕೆ ಒಪ್ಪಿಕೊಂಡು ಮಂಗಳೂರಿಂದ ಅರಸಿಕೆರೆಗೆ ರೈಲ್ ರಸ್ತೆ ಹಾಕಿಸಿಕೊಡಬೇಕೆಂದು ಕೇಳಿಕೊಂಡರು. ಗವರ್ನರವರು ತುಂಬಾ ಸಂತೋಷಪಟ್ಟು, ಈ ರೈಲ್ವೆ ಕಾಮಗಾರಿ ಅವಶ್ಯವಾದದ್ದೆಂದು ಒಪ್ಪಿಕೊಂಡು, ಇದಕ್ಕೆ ಗವರ್ನ್‌ಮೆಂಟಿನವರು ಸಹಾಯಮಾಡುತ್ತಾರೆಂತಲೂ, ಈ ವಿಷಯದಲ್ಲಿ ಮೈಸೂರು ಸರ್ಕಾರದವರ ಕೂಡ ಕಾಗದ ಪತ್ರಗಳನ್ನು ನಡಿಸುತ್ತಿದೇವೆಂತಲೂ, ಅದೆಲ್ಲಾ ಜಾಗ್ರತೆಯಲ್ಲೇ ಇತ್ಯರ್ಥವಾದೀತೆಂತಲೂ ಜವಾಬು ದಯಪಾಲಿಸಿರುತ್ತಾರೆ.

ಮೈಸೂರು ಗವರ್ನ್‌ಮೆಂಟಿನವರು ನಡಿಸಿದ ಆಯುರ್ವೇದ ವಿದ್ಯಾ ಪರೀಕ್ಷೆಯಲ್ಲಿ ಮುಂದೆ ಹೇಳುವವರು ಪಂಡಿತರಾಗಿ ತೇರ್ಗಡೆಹೊಂದಿರುತ್ತಾರೆ. 1 ನೇ ತರಗತಿಯಲ್ಲಿ ತೇರ್ಗಡೆಯಾದವರು ಮ|| ಟಿ. ಶ್ರೀನಿವಾಸಯ್ಯಂಗಾರ್ರು ಮತ್ತು ಮ|| ವೈ. ಲಕ್ಷ್ಮೀನರಸಿಂಹಶಾಸ್ತ್ರಿಗಳು ; 2 ನೇ ತರಗತಿಯಲ್ಲಿ ತೇರ್ಗಡೆಯಾದವರು ಮ|| ಗಳಾದ ಎಚ್. ನರಸಿಂಹಶಾಸ್ತ್ರಿಗಳು, ಬಿ. ವೆಂಕಟಸುಬ್ಬಯ್ಯನವರು, ಪಿ. ಬಿಳಿಗಿರಿಅಯ್ಯಂಗಾರ್ರು, ಎನ್. ಲಕ್ಷ್ಮೀನರಸಿಂಹಭಟ್ಟರು, ಎಚ್. ಪಿ. ರಾಮರಾಯರು, ಬಿ. ಎಸ್. ರಾಮಕೃಷ್ಣಯ್ಯನವರು, ಎಸ್. ಸುಬ್ರಮಯ್ಯನವರು. ಇವರು ಮೂರು ವರುಷಗಳಿಂದ ಸರ್ಕಾರಿ ವೇತನಗಳನ್ನು ಪಡೆದು ರಾಜಧಾನಿಯಲ್ಲಿ ಗವರ್ನ್‌ಮೆಂಟ್ ಆಯುರ್ವೇದ ವಿದ್ಯಾಶಾಲೆಯಲ್ಲಿ ವ್ಯಾಸಂಗ ಮಾಡಿರುತ್ತಾರೆ.

ಧಾನ್ಯದ ಧಾರಣೆಗಳು ಪ್ರಿಯವಾಗಿರುವುದನ್ನು ನೋಡಿ ನಮ್ಮ ಸರ್ಕಾರದವರು 30 ರೂಪಾಯಿ ಕಲಬಿನೊಳಗಿರುವ ನೌಕರಮಾನೇರುಗಳಿಗೆ ಧಾನ್ಯದ ಅಲೋಯನ್ಸನ್ನು ಕೊಡಬೇಕೆಂದು ಹುಕುಂ ಕೊಟ್ಟು, ಇದಕ್ಕಾಗಿ 50,000 ರೂಪಾಯಿ ಸ್ಯಾಂಕ್ಷನ್ ಮಾಡಿ ಕಳೆದ ಜೂಲೈ ಆರಭ್ಯ ಕೊಡಿಸುತ್ತಾ ಬಂದಿದಾರೆ. ಈ ಅಲೋಯನ್ಸು ಜಾರಿ ಆಗುತ್ತಿರುವ ತಾಲ್ಲೂಕುಗಳ್ಯಾವುವೆಂದರೆ—ಬೆಂಗಳೂರು, ಹೊಸಕೋಟೆ, ದೊಡ್ಡಬಳ್ಳಾಪುರ, ಚನ್ನಪಟ್ಟಣ, ಆನೆಕಲ್ಲು, ದೇವನಹಳ್ಳಿ ; ಕೋಲಾರ್ ಡಿಸ್ಟ್ರಿಕ್ಟಿನ ಎಲ್ಲಾ ತಾಲ್ಲೂಕುಗಳೂ, ಸಬ್ ತಾಲ್ಲೂಕೂ ; ಮಧುಗಿರಿ, ಪಾವಗಡ, ಕುರುವೆಕೆರೆ ; ಶ್ರೀರಂಗಪಟ್ಟಣ, ಮಂಡ್ಯ, ಕೃಷ್ಣರಾಜಪೇಟೆ, ನಾಗಮಂಗಲ, ಮಳವಳ್ಳಿ ; ತೀರ್ಥಹಳ್ಳಿ ; ಕೊಪ್ಪ, ಯಡೆಹಳ್ಳಿ.

ಮೈಸೂರಿಗೂ ಬೆಂಗಳೂರಿಗೂ ದಿನವಹಿ ರಾತ್ರಿ 11 ಗಂಟೆಯಲಿ ಹೋಗಿ ಬರುವ ರೈಲ್ ಗಾಡಿಯನ್ನು ರೈಲ್ವೆ ಕಂಪನಿಯವರು ನಿಲ್ಲಿಸಿಬಿಡಬೇಕೆಂದು ಪ್ರಯತ್ನಮಾಡುತ್ತಿರುವಂತೆ ಕೇಳುತ್ತೇವೆ. ದಿನವಹಿ ಮೂರು ಸಲ ರೈಲು ಬಿಡುತ್ತಿದ್ದರೂ ಈಗಲೇ ಪ್ರಯಾಣಿಕರಿಗೂ ಸಾಮಾನು ಸಾಗುವುದಕ್ಕೂ ನಾನಾ ತೊಂದರೆಗಳಿವೆ. ಇಂಥಾದ್ದರಲ್ಲೂ ಒಂದು ರೈಲನ್ನು ನಿಲ್ಲಿಸಿಬಿಟ್ಟರೆ ತೊಂದರೆಗಳು ಇನ್ನೂ ಹೆಚ್ಚುವವೆನ್ನುವುದಕ್ಕೆ ಸಂಶಯವಿಲ್ಲ. ಕಂಪನಿಯವರು ಲೈನ್ ಯರ್ಗಳನ್ನು ಇನ್ನೂ ಹೆಚ್ಚಾಗಿ ಕಲ್ಪಿಸಿಕೊಟ್ಟು, ಮಧ್ಯೆ ಸ್ಟೇಷನ್ನುಗಳಲ್ಲಿನ ಅತಿಬಾಧೆಗಳನ್ನು ತಪ್ಪಿಸಿದರೆ ಅನುಕೂಲ ಇನ್ನೂ ಹೆಚ್ಚಾದೀತು. ಮೈಸೂರು ಸರ್ಕಾರದವರು ಈ ವಿಷಯದಲ್ಲಿ ಪ್ರಜೆಗಳಿಗೆ ಯಾವ ನ್ಯೂನತೆಯೂ ಪ್ರಾಪ್ತವಾಗದಂತೆ ನೋಡಿಕೊಂಡಾರೆಂದು ನಿರೀಕ್ಷಿಸುತ್ತೇವೆ.

ರಾಜಧಾನಿಯ ಮಹಾರಾಜಾ ಕಾಲೇಜಿನ ವಿದ್ಯಾರ್ಥಿನಿಲಯ (ಹಾಸ್ಟಲ್) ನಲ್ಲಿ ಇಲಿಗಳು ಬಿದ್ದ ಕಾರಣ ವಿದ್ಯಾರ್ಥಿಗಳನ್ನು ಸದ್ಯ ಸರ್ ಶೇಷಾದ್ರಿ ಅಯ್ಯರವರ ಬಂಗಲೆಯಲ್ಲಿ ಇರುವಂತೆ ಏರ್ಪಾಡು ಮಾಡಿದಾರೆ. ಕಾಲೇಜಿನ ಕೆಲವು ಭಾಗಗಳಲ್ಲೂ ಒಂದೆರಡು ಸತ್ತ ಇಲಿ ಅಳಲುಗಳು ಸಿಕ್ಕಿರುವಂತೆ ಕೇಳುತ್ತೇವೆ. ಅರಸುಗಳ ಬೋರ್ಡಿಂಗ್ ಸ್ಕೂಲಿನಲ್ಲಿ ಇಲಿ ಸತ್ತ ಕಾರಣ ಬೋರ್ಡಿಂಗ್ ಸ್ಕೂಲ್ ವಿದ್ಯಾರ್ಥಿಗಳನ್ನು ಸೀತಾ ವಿಲಾಸ ಧರ್ಮಶಾಲೆಗೆ ಕಳುಹಿಸಿದರು. ನಾಲ್ಕಾರು ದಿನಗಳಲ್ಲಿ ಅಲ್ಲೂ ಇಲಿಗಳು ಸತ್ತವು. ವಿದ್ಯಾರ್ಥಿಗಳನ್ನು ಅಲ್ಲಿಂದ ಗವರ್ನ್‌ಮೆಂಟ್ ಗೆಸ್ಟ್ ಕ್ವಾರ್ಟರ್ ಎಂಬ ಕಟ್ಟಡಗಳಿಗೆ ಕಳುಹಿಸಿದರು. ಅಲ್ಲೂ ಇಲಿ ಸತ್ತು, ಈಗ ಒಬ್ಬ ಅರಸು ಬಾಲಕನಿಗೆ ಪ್ಲೇಗ್ ಕಾಣಿಸಿಕೊಂಡಿದೆ. ಇನಾಕ್ಯುಲೇಷನ್ ಆಗಿರೋಣದರಿಂದ ಆ ವಿದ್ಯಾರ್ಥಿಗೆ ವಾಸಿಯಾದೀತೆಂದು ಹೇಳುತ್ತಾರೆ.

ರಾಜಧಾನಿಯ ಸಂತೇಪೇಟೆಯ ಹಿಂಭಾಗದಲ್ಲಿ ವಾಸವಾಗಿರುವ ಕುಂಚಿಗರ ನರಸಿಂಹಯ್ಯನು ಕಳೆದ ಶುಕ್ರವಾರ ಬೆಳಿಗ್ಗೆ ಮಗುವನ್ನೆತ್ತಿಕೊಂಡು ಮನೆಯಿಂದ ಹೊರಕ್ಕೆ ಬರುತ್ತಿರುವಾಗ ಕುಂಚಿಗರ ಈರಯ್ಯನು ಹೊರಗಡೆ ಕತ್ತಿಯ ಸಮೇತ ಕಾದಿದ್ದು ಅವನ ಮುಖದ ಮೇಲೂ, ಹಸ್ತದ ಮೇಲೂ, ತೊಡೆಯ ಮೇಲೂ ಮೂರು ಏಟು ಹೊಡೆದು ಓಡಿಹೋದನು. ಬಲಗೈ ಹೆಬ್ಬೆರಳು ಕತ್ತರಿಸಿಹೋಯಿತು. ಮೈಯೆಲ್ಲಾ ರಕ್ತವಾಗಿ ಬೀದಿಯಲ್ಲೂ ಎರಚಿತು. ಗಾಯಪಟ್ಟ ನರಸಿಂಹಯ್ಯನನ್ನು ಆಸ್ಪತ್ರೆಗೆ ಸಾಗಿಸಿ ಚಿಕಿತ್ಸೆಮಾಡುತ್ತಿದಾರೆ. ಅತನಿಗೆ ಪ್ರಾಣಭಯವೇನೂ ಇಲ್ಲ. ಮಗುವಿಗೂ ಅಪಾಯವೇನೂ ಆಗಲಿಲ್ಲ. ಡಿವಿಜನ್ ಇನ್ಸ್‌ಪೆಕ್ಟರ್ ಎಂ. ಪಿ. ರಾಮರಾಯರು ಅಪರಾಧಿಯನ್ನು ಅವನ ಮನೆಯಲ್ಲಿ ಹಿಡಿದುತಂದರು. ಕತ್ತಿಯೂ ಸಿಕ್ಕಿತು. ಆ ಘಾತುಕನು ನರಸಿಂಹಯ್ಯನ ಬಾಡಿಗೆದಾರನೆಂದೂ, ಬಾಡಿಗೆ ಕೊಡೆಂದು ತಗಾದೆಮಾಡಿ ಮನೆ ಬಿಡಿಸಿಕೊಂಡದ್ದಕ್ಕಾಗಿ ಈ ಕೃತ್ಯವನ್ನು ನಡಿಸಿದನೆಂದೂ ಹೇಳುತ್ತಾರೆ. ಮ್ಯಾಜಿಸ್ಟ್ರೇಟರ ಮುಂದೆ ವಿಚಾರಣೆಯಾಗುವಲ್ಲಿ ನಿಜಸ್ಥಿತಿ ಹೊರಪಡುವುದು.

ಅರಮನೆಯ ಗುರುಗಳಾದ ಶ್ರೀಪರಕಾಲ ಮಠದ ಸ್ವಾಮಿಗಳವರಿಗೆ ಈಚೆಗೆ ಕಾಯಿಲೆ ಸಂಭವಿಸಿದ್ದರಿಂದ ಶ್ರೀಮನ್ಮಹಾರಾಜರವರೂ ಮಹಾರಾಣಿಯವರೂ ಸ್ವಾಮಿಗಳ ಅಪೇಕ್ಷೆಯನ್ನು ಅಂಗೀಕರಿಸಿ ಅವರ ಪೂರ್ವಾಶ್ರಮದ ಅಳಿಯಂದಿರಿಗೆ ಮಠದ ಉತ್ತರಾಧಿಕಾರವನ್ನು ದಯಪಾಲಿಸಿದರು. ಉತ್ತರಾಧಿಕಾರಿಗಳ ಪಟ್ಟಾಭಿಷೇಕವೂ ಅದಕ್ಕೆ ಸಂಬಂಧಪಟ್ಟ ವಿಧ್ಯುಕ್ತವಾದ ಆಚರಣೆಗಳೂ ಒಂದು ವಾರದ ಕೆಳಗೆ ನೆರವೇರಿ ಕಳೆದ ಗುರುವಾರ ಅವರಿಗೆ ಶ್ರೀವಾಗೀಶ ಬ್ರಹ್ಮತಂತ್ರ ಪರಕಾಲಸ್ವಾಮಿಗಳೆಂಬ ಹೆಸರಿನಿಂದ ಪಟ್ಟಾಭಿಷೇಕವಾಯಿತು. ಆಗ್ಗೆ ಅರಮನೆಯ ಬಿರುದುಗಳೆಲ್ಲಾ ಕಟ್ಟಳೆ ಪ್ರಕಾರ ಕೊಡಲ್ಪಟ್ಟಿದ್ದವು. 21 ತೋಪುಗಳು ಹಾರಿಸಲ್ಪಟ್ಟವು. ಸಮಾರಾಧನೆಗಳೂ ಮರ್ಯಾದೆಗಳೂ ಭೂರಿದಕ್ಷಿಣೆಯೂ ಉದಾರವಾಗಿ ಅರಮನೆಯಿಂದ ನಡೆಸಲ್ಪಟ್ಟವು. ಶ್ರೀಮನ್ಮಹಾರಾಜರವರು ಆ ದಿನ ಮಠಕ್ಕೆ ಚಿತ್ತೈಸಿದ್ದರು. ಸ್ವಾಮಿಗಳಿಗೆ ಸುಮಾರು 48 ವಯಸ್ಸಾಗಿದೆ ಎಂದು ತಿಳಿಯುತ್ತದೆ.—ಅತ್ತಲಾಗಿ ಕಾಯಿಲೆಯಲ್ಲಿದ್ದ ಸ್ವಾಮಿಗಳು ಈಚೆಗೆ ಚೈತನ್ಯವು ಬೇಗನೆ ಕುಂದಿ ಕಳೆದ ಭಾನುವಾರ ಬೆಳಿಗ್ಗೆ 7 ಗಂಟೆಯಲ್ಲಿ ಮಠದಲ್ಲಿ ಕಳೇಬರವನ್ನು ತ್ಯಜಿಸಿದರು. ಅವರಿಗೆ ಸುಮಾರು 76 ವಯಸ್ಸಾಗಿ, ಕಳೆದ ವಿರೋಧಿ ಸಂವತ್ಸರದ ಭಾದ್ರಪದ ಬಹುಳ ದಶಮಿಯಲ್ಲಿ ಪಟ್ಟಾಭಿಷೇಕವಾಗಿ ಅಂದಿನಿಂದ ಮಠದ ಪೀಠವನ್ನಲಂಕರಿಸಿದ್ದರು. ಇವರು ಸ್ವತಃ ಶಾಸ್ತ್ರಪಂಡಿತರಾಗಿದ್ದು ಅನೇಕ ವೇಳೆ ವೇದಾಂತ ಗೋಷ್ಠಿಗಳನ್ನು ನಡಿಸಿ ಪಂಡಿತರಿಗೆ ಬಹುಮಾನಾದಿಗಳನ್ನು ಕೊಡುತ್ತಾ ವಿದ್ಯಾ ಪ್ರೋತ್ಸಾಹಕರಾಗಿದ್ದರು. ಆ ದಿನ ವಿಧ್ಯನುಸಾರವಾದ ಆಚರಣೆಗಳೆಲ್ಲಾ ನಡೆದು ಸಾಯಂಕಾಲ ಸುಮಾರು 5 ಗಂಟೆಗೆ ಅವರ ಕಳೇಬರವನ್ನು ಮಠದ ಆವರಣದೊಳಗೆ ಸಮಾಧಿ ಮಾಡಿದರು. ಕ್ರಿಯೆಗಳೂ ದಾನಧರ್ಮಾದಿಗಳೂ ಪದ್ಧತಿಯಂತೆ ನಡಿಸಲ್ಪಟ್ಟವು. ಪಟ್ಟಾಭಿಷಿಕ್ತರಾಗಿರುವ ಸ್ವಾಮಿಗಳು ವೇದಶಾಸ್ತ್ರಾದಿಗಳ ಪ್ರಚಾರಕ್ಕೂ ಧರ್ಮಾಚರಣೆಗೂ ಉದಾರವಾದ ಸಹಾಯಮಾಡಿ ಪ್ರೋತ್ಸಾಹಪಡಿಸುತ್ತಾ, ಮಠದ ಕೀರ್ತಿಯನ್ನು ಅತಿಶಯವಾಗಿ ಹೆಚ್ಚಿಸುವರಾಗುತ್ತಾರೆಂದು ನಿರೀಕ್ಷಿಸಲ್ಪಟ್ಟಿದೆ. ಗವರ್ನ್‌ಮೆಂಟಿನವರು ಇವರ ಪಟ್ಟಾಭಿಷೇಕವನ್ನು ಮಂಜೂರುಮಾಡಿ ಹುಕುಂ ದಯಪಾಲಿಸಿರುತ್ತಾರೆ.

ಇಂಡಿಯಾ ದೇಶದ ವೃತ್ತಾಂತಗಳು.

ಇಂಪೀರಿಯಲ್ ಇಂಡಿಯನ್ ರಿಲೀಫ್ ಫಂಡಿಗೆ ಅಕ್ಟೋಬರ್ ತಾ 31 ರ ವರೆಗೆ ಒಟ್ಟು 54,13,308 ಚಿಲ್ಲರೆ ರೂಪಾಯಿ ಚಂದಾ ವಸೂಲಾಗಿರುತ್ತದೆ.

ಸೀಮೆಯಿಂದ ಏಳು ಜಹಜುಗಳ ತುಂಬಾ ಹೊಸ ಸೈನ್ಯಗಳು ಕಳೆದ ಸೋಮವಾರ ಬೊಂಬಾಯಿಗೆ ಬಂದವು. ಅವುಗಳ ಜೊತೆಯಲ್ಲಿ ಫ್ರೆಂಚ್ ಒಂದು ಯುದ್ಧದ ಜಹಜು ಬಂದಿದೆ.

ಕಲ್ಕತ್ತಾ ಪಟ್ಟಣದಲ್ಲಿ ಹತ್ತು ಮಂದಿ ಬಂಗಾಳಿಗಳು ರೋಡಾ ಎಂಬುವರ ಅಂಗಡಿಯಿಂದ 50 ಪಿಸ್ತೂಲುಗಳನ್ನೂ 46,000 ತೋಟಾಗಳನ್ನೂ ಕಳುವುಮಾಡಿದರೆಂದು ಹಿಡಿಯಲ್ಪಟ್ಟಿದಾರೆ. ಮೊಕದ್ದಮೆ ವಿಚಾರಣೆಯಾಗುತ್ತಿದೆ.

ಮದರಾಸ್ ಪಟ್ಟಣದ ಆಚಾರ್ ಮಲೀಕ್ ಬೀದಿಯಲ್ಲಿ ಕಳೆದ ಶನಿವಾರ ವಿಶೇಷ ಮಳೆ ಸುರಿಯಿತು. ಒಂದು ಗುಡಿಸಲಿನಲ್ಲಿ ಮಲಗಿದ್ದ 25 ವರುಷದ ಒಬ್ಬ ಹೆಂಗಸೂ, 1-7 ವಯಸ್ಸಿನ ಇಬ್ಬರು ಹೆಣ್ಣುಮಕ್ಕಳೂ ಗೋಡೆ ಕಳಚಿಬಿದ್ದು ಅದರ ಕೆಳ ಸಿಕ್ಕಿ ಸತ್ತುಹೋದರು.

ಬಾರಿಸಾಲ್ ಡಿಸ್ಟ್ರಿಕ್ಟಿನಲ್ಲಿ ಆಗುವ ಭತ್ತದ ಬೆಳೆಯೇ ಬಂಗಾಳಕ್ಕೆ ಪ್ರಾಮುಖ್ಯವಾದದ್ದು. ಈ ಸಲ ಅಲ್ಲಿ ಮಳೆಯು ಕಾಲಕ್ಕೆ ಸರಿಯಾಗಿ ಸುರಿಯದೆ ಭತ್ತದ ಪೈರುಗಳೆಲ್ಲಾ ಬೇರು ಸಮೇತ ಒಣಗಿಹೋದವು. ಇದು ಆ ಪ್ರಾಂತ್ಯದ ಪ್ರಜೆಗಳಲ್ಲಿ ಗಾಬರಿಯನ್ನುಂಟುಮಾಡಿದೆ.

ಅಲಹಾಬಾದ್ (ಪ್ರಯಾಗ) ಪಟ್ಟಣದ ಒಂದು ಹೋಟೇಲಿನಲ್ಲಿ ಮಿ|| ಫಿಲಿಪ್ ಎಂಬಾತನು ಸಂಸಾರ ಸಮೇತ ವಾಸಮಾಡಿಕೊಂಡಿದ್ದನು. ಕಳೆದ ಶುಕ್ರವಾರ ರಾತ್ರಿ ಅವನು ತನ್ನ ಹೆಂಡತಿಯನ್ನು ಕೊಂದು ತಾನೂ ಆತ್ಮಹತ್ಯಮಾಡಿಕೊಂಡನು. ಇದಕ್ಕೆ ಕಾರಣವೇನೋ ತಿಳಿಯಲಿಲ್ಲ. ಅವರ ಮಕ್ಕಳು ದಿಕ್ಕಿಲ್ಲದವರಾದರು.

ಭಾವನಗರ ಸಂಸ್ಥಾನದ ರಾಜರು ಶಿಕಾರಿಮಾಡುವುದರಲ್ಲಿ ಹೆಸರುವಾಸಿ. ಜುನಾಘಡದ ಕಡೆ ಕಳೆದ ಎರಡು ವರುಷಗಳಿಂದ ಕಾಡಿನಲ್ಲಿ ಸೇರಿಕೊಂಡು ಅನೇಕ ಗೋಕಾಯಿಗಳನ್ನೂ, ನಾಲ್ಕಾರು ಜನಗಳನ್ನೂ ಕೊಂದು ಹಾಕಿ, ಆ ಸಂಸ್ಥಾನದಲ್ಲಿ ತುಂಬಾ ಭೀತಿಯನ್ನುಂಟುಮಾಡಿದ್ದ ಸುಮಾರು 7 ಅಡಿ ಉದ್ದ ಭಾರೀ ಹುಲಿಯನ್ನು ಕಳೆದ ವಾರ ರಾಜರು ಶಿಕಾರಿಮಾಡಿ ಕೊಂದುಹಾಕಿದರು. ಈ ರಾಜರು ಇದುವರೆಗೆ ಹತ್ತು ಬಂಗಾಳಾ ಹುಲಿಗಳನ್ನೂ, ಸುಮಾರು 120 ಬೇರೆ ಜಾತಿಯ ಕ್ರೂರ ಮೃಗಗಳನ್ನೂ ಕೊಂದು ಇರುವರು.

ಬೊಂಬಾಯಿ ಪಟ್ಟಣದಲ್ಲಿ ಭಾಟಿಯಾ ಗುಂಪಿನ ಮೇಂಜಿ ವರ್ಜಿ ಎಂಬ ವರ್ತಕನೂ ಈತನ ಮಗ ಹೀರಜಿ ಎಂಬಾತನೂ ನಾರ್ಸಿ ಧಾರ್ಜಿಯ ಮೇಲೂ ಈತನ ಇಬ್ಬರು ಸಹೋದರಿಯರ ಮೇಲೂ 20,000 ರೂಪಾಯಿ ಡ್ಯಾಮೇಜಿಗೆ ದಾವಾ ಹೂಡಿದರು. ಪ್ರತಿವಾದಿಗಳು ಚಾಡಿ ಹೇಳಿ ವಾದಿ ಮಗನಿಗೆ ಮದುವೆಯಾಗುವ ಹೆಣ್ಣನ್ನು ತಪ್ಪಿಸಿದ್ದೇ ಈ ಮೊಕದ್ದಮೆಯ ಕಾರಣ. ಹೈಕೋರ್ಟ್ ಜಡ್ಜಿಯವರು ಹಿಂದುಗಳಲ್ಲಿ ಹೆಣ್ಣಿನ ತಂದೆಯು ಬೇಕಾದ ವರನಿಗೆ ಮಗಳನ್ನು ವಿವಾಹ ಮಾಡಿಕೊಡಬಹುದೆಂದೂ, ಇದಕ್ಕೆ ನಿರ್ಬಂಧವೇನೂ ಇಲ್ಲವೆಂದೂ ಹೇಳಿ ಮೊಕದ್ದಮೆಯನ್ನು ವಜಾ ಮಾಡಿರುತ್ತಾರೆ.

ಹರಿದ್ವಾರದಲ್ಲಿ ಸರ್ಕಾರದವರು ಆಣೆಯನ್ನು ಕಟ್ಟಿ ನಾಲೆಗಳ ಮೂಲಕ ಜಮೀನಿಗೆ ನೀರು ಉಪಯೋಗಿಸಬೇಕೆಂದು ಏರ್ಪಾಡು ಮಾಡಿದಾರೆ. ಇದರಿಂದ ಗಂಗಾನದಿಯು ಮಹತ್ವವು ಹೋಗುವುದೆಂದು ಅಲ್ಲಿನ ಹಿಂದುಗಳಲ್ಲಿ ಕಳವಳವುಂಟಾಯಿತು. ಲೆಫ್ಟಿನೆಂಟ್ ಗವರ್ನರವರು ಹರಿದ್ವಾರಕ್ಕೆ ಹೋಗಿ ಹಿಂದುಗಳ ಅರ್ಜಿಯನ್ನು ಕೇಳಿ, ಅವರ ಮತಸಂಬಂಧವಾದ ಕಾರ್ಯಗಳಿಗೆ ಯಾವ ಅಡಚಣೆಯನ್ನೂ ಸರ್ಕಾರದವರು ಮಾಡುವುದಿಲ್ಲವೆಂದು ನಂಬಿಕೆ ಹೇಳಿ ಸಮಾಧಾನಪಡಿಸಿದರು. ಹಿಂದು ಮಂಡಲಿಯ ಪರವಾಗಿ ಜಯಪುರದ ಮಹಾರಾಜರೂ, ಆಲ್ವಾರ್ ಸಂಸ್ಥಾನದ ಮಂತ್ರಿಯವರೂ, ದರ್ಭಾಂಗ ಮಹಾರಾಜರೂ, ಮಿ|| ಜಸ್ಟಿಸ್ ಛಾಟರ್ಜೀ ಮೊದಲಾದ ಹಿಂದು ದೊಡ್ಡ ಮನುಷ್ಯರೂ ಆ ದಿನ ಲೆಫ್ಟಿನೆಂಟ್ ಗವರ್ನರವರ ಭೇಟಿಗಾಗಿ ಹೋಗಿದ್ದರು.

ಯುದ್ಧದ ದಿನ ವರ್ತಮಾನವು.

ಯೂರೋಪ್ ಖಂಡದಲ್ಲಿ ಈಗ ನಡೆಯುತ್ತಿರುವ ಯುದ್ಧಸಮಾಚಾರಗಳನ್ನು ಕನ್ನಡಿಗರ ತಿಳುವಳಿಕೆಗಾಗಿ ಪ್ರತಿ ದಿನವೂ ಪ್ರಕಟಿಸುತ್ತಿರುವೆವು. ವಾರ್ಷಿಕ ಚಂದಾ—ಸ್ಥಳದವರಿಗೆ ರೂ. 4; ತಿಂಗಳಿಗೆ 6 ಆಣೆ. ಪರಸ್ಥಳದವರಿಗೆ ವಾರ್ಷಿಕ ರೂ. 10; ತಿಂಗಳಿಗೆ 14 ಆಣೆ. ಏಜಂಟರು ಮತ್ತು ಬಾತ್ಮೀದಾರರು ಬೇಕಾಗಿದೆ.

[242-1] ವಿಳಾಸ :—"ಸರ್ವಜನೋಪಕಾರಿಣಿ" ಆಫೀಸ್, ಮೈಸೂರು.

ವನಸ್ಪತಿ ಬಲಕಾರಿಣಿ.

ಜರ್ಮನಿಯವರು ಹ್ಯಾಗಾದರೂ ಮಾಡಿ ಇಪ್ರೆ ಎಂಬ ಸ್ಥಳವನ್ನು ಸ್ವಾಧೀನಪಡಿಸಿಕೊಳ್ಳಬೇಕೆಂಬ ಕುತೂಹಲವುಳ್ಳವರಾಗಿದ್ದಾರೆ. ಈ ಸ್ಥಳವು ಸ್ವಲ್ಪ ಉನ್ನತ ಪ್ರದೇಶದಲ್ಲಿದೆ. ಮೂರು ವಾರಗಳಿಂದಲೂ ಜರ್ಮನಿಯವರು ಈ ಸ್ಥಳದ ಮೇಲೆ ಹಗಲೂ ರಾತ್ರಿ ನಿಲುಗಡೆಯಿಲ್ಲದೆ ಗುಂಡುಗಳ ಮಳೆಯನ್ನು ಸುರಿಸುತ್ತಾ ಬಂದಿದ್ದಾರೆ. ಸೈನಿಕರು ಕಂದಕಗಳನ್ನು ತೋಡಿಕೊಂಡು ಅವುಗಳ ಮರೆ ಬಿಟ್ಟು ಹೊರಕ್ಕೆ ಬರಲಿಲ್ಲ. ಆದಕಾರಣ ಆ ಸ್ಥಳವನ್ನು ಜರ್ಮನಿಯವರು ಸ್ವಾಧೀನಪಡಿಸಿಕೊಳ್ಳಲಾರದೆ ಹೋಗಿದ್ದಾರೆ.

ಕೆಲವು ದಿನಗಳ ಕೆಳಗೆ ಬ್ರಿಟನ್ ಸೈನಿಕರು ಆರು ಮೆಷೀನ್ ಪಿರಂಗಿಗಳ ಸಮೇತ 100 ಸಿಪಾಯಿಗಳನ್ನು ಕೈಸೆರೆ ಹಿಡಿದು ತಂದರು.

ಈಗೀಗ ಮುತ್ತಿಗೆಯು ಬಿಗಿಯು ಕಡಮೆಯಾಗಿರುತ್ತದೆ. ಈಗ ಬ್ರಿಟನ್ ಸೈನ್ಯದಿಂದ ಕೆಲವು ಮುಂಗಾವಲಿನವರು ಓಸ್ಟೆಂಡಿನ ತನಕ ಹೋಗಿ ಬರುತ್ತಿದ್ದಾರೆಂದು ಹೇಳಲಾಗಿದೆ.

ಬ್ರಿಟಿಷ್ ರಾಜ್ಯದ ಮಂತ್ರಿಶ್ರೇಷ್ಠರಾದ ಮಿ|| ಆಸ್ಕಿತ್ ರವರು ಹೌಸ್ ಆಫ್ ಕಾಮನ್ಸ್ ಎಂಬ ಪಾರ್ಲಿಮೆಂಟ್ ಸಭೆ ಮನೆಯಲ್ಲಿ ಮೆಂಬರುಗಳನ್ನು ಕುರಿತು ಈ ಯುದ್ಧವು ಪ್ರಾರಂಭವಾದಾರಭ್ಯ ಅಕ್ಟೋಬರ್ ಕೊನೆಯವರೆಗೆ ಮೂರು ತಿಂಗಳಲ್ಲಿ ಬ್ರಿಟಿಷ್ ಸೈನಿಕರಲ್ಲಿ 57,000 ಮಂದಿ ನಷ್ಟವಾಗಿರುತ್ತಾರೆಂದು ತಿಳಿಸಿದರು. ಈ ಸಂಖ್ಯೆಯಲ್ಲಿ ಕೊಲೆಯಾದವರೂ, ಗಾಯಪಟ್ಟವರೂ, ಸಿಕ್ಕದೆ ಇರುವವರೂ, ಕೈಸೆರೆಯಾಗಿರುವವರೂ ಎಲ್ಲಾ ಸೇರಿಹೋಗಿದ್ದಾರೆ.

ರಷ್ಯಾ, ಆಸ್ಟ್ರಿಯಾ, ಜರ್ಮನಿ.

ರಷ್ಯಾದವರು ಜರ್ಮನಿಯವರನ್ನೂ ಆಸ್ಟ್ರಿಯಾದವರನ್ನು ಬೇರೆ ಬೇರೆಯಾಗಿ ಎರಡು ವಿಭಾಗ ಮಾಡಿ, ಆ ಎರಡು ಸೈನಿಕರನ್ನೂ ಹಿಂದಕ್ಕೆ ಓಡಿಸಿರುತ್ತಾರೆಂದು ಗೊತ್ತಾಗುವುದು. ಅವು ಒಂದರ ಸಹಾಯಕ್ಕೊಂದು ಬಾರದಂತೆ ಪ್ರತ್ಯೇಕ ಮಾಡಲ್ಪಟ್ಟವೆ. ಈಗ ರಷ್ಯಾದವರು ಪೂರ್ವ ಪ್ರಷ್ಯಾದಲ್ಲಿ ಜರ್ಮನಿಯವರ ಮೇಲೂ, ದಕ್ಷಿಣ ಪೋಲೆಂಡ್ ಮತ್ತು ಗೆಲಿಷಿಯಾದಲ್ಲಿ ಆಸ್ಟ್ರಿಯಾದವರ ಮೇಲೂ ನುಗ್ಗಿ ಕದನಗಳನ್ನು ನಡಿಸುತ್ತಿರುವಂತೆ ಕಾಣುತ್ತದೆ.

ರಷ್ಯಾದವರು ಪೂರ್ವ ರಷ್ಯಾ ಎಲ್ಲೆಕಟ್ಟನ್ನು ದಾಟಿಕೊಂಡು ಮತ್ತೆ ನುಗ್ಗಿ ಬಂದು ಜರ್ಮನಿಯವರನ್ನು ಅಲ್ಲಿಂದಲೂ ಹಿಂದುಹಿಂದಕ್ಕೆ ಓಡಿಸುತ್ತಿದ್ದಾರೆ. ದಾರಿಯಲ್ಲಿ ಸಿಕ್ಕಿದ ಹಲವು ಪಟ್ಟಣಗಳು ರಷ್ಯಾದವರ ಪಾಲಾದವು. ಈಗ ರಷ್ಯಾದವರು ಕೆರೆಗಳಿರುವ ಪ್ರಾಂತ್ಯದೊಳಕ್ಕೆ ನುಗ್ಗಿ ಬರುತ್ತಿದ್ದಾರೆ. ಹಿಮದ ಮಳೆ ಸುರಿಯುತ್ತಿದೆ ; ಸೈನ್ಯಗಳು ಅದರಲ್ಲೇ ತುಂಬಾ ಪ್ರಯಾಸಪಟ್ಟುಕೊಂಡು ನುಗ್ಗಿ ಬರಬೇಕಾಗಿರುವುದು.

ರಷ್ಯಾದವರು ಕ್ರಾಕೋ ಎಂಬ ಭಾರಿ ಪಟ್ಟಣದ ಸಮೀಪಕ್ಕೆ ಬರುತ್ತಿದ್ದಾರೆ. ಅಲ್ಲಿ ಆಸ್ಟ್ರಿಯಾದವರ ಸೈನ್ಯವು ಬಹಳ ಹೆಚ್ಚಾಗಿ ಜಮಾಯಿಸಿಕೊಂಡಿದೆ. ಇನ್ನು ಕೆಲವು ದಿನಗಳಾಗುವಷ್ಟರಲ್ಲೇ ಆ ಸ್ಥಳದಲ್ಲಿ ಬಹು ಭಯಂಕರವಾದ ಕದನಗಳಾಗುವವು.

ದಕ್ಷಿಣ ದಿಕ್ಕಿನಲ್ಲಿಯೂ ರಷ್ಯಾದವರು ನುಗ್ಗಿ ಹೋಗುತ್ತಾ ಇರುವರು ; ಈಗಾಗಲೇ ಅವರು 1,000 ಆಸ್ಟ್ರಿಯಾ ಸೈನಿಕರನ್ನು ಕೈಸೆರೆ ಹಿಡಿದುಕೊಂಡಿದ್ದಾರೆ.

ಅಕ್ಟೋಬರ್ ತಾ. 23 ರಿಂದ ನೊವೆಂಬರ್ ತಾ. 5 ರ ವರೆಗೆ ರಷ್ಯಾದವರು 323 ಉದ್ಯೋಗದಾರರನ್ನೂ 21,750 ಮಂದಿ ಸಿಪಾಯಿಗಳನ್ನು ಕೈಸೆರೆ ಹಿಡಿದುಕೊಂಡರು ; ಇದಲ್ಲದೆ 4 ಹೊವಿಟ್ಸರ್ ಎಂಬ ಪಿರಂಗಿಗಳೂ, ಅನೇಕ ಸಾಧಾರಣ ಪಿರಂಗಿಗಳೂ ಅವರಿಗೆ ಸಿಕ್ಕಿರುತ್ತವೆ.

ಟರ್ಕಿ.

ಬ್ರಿಟಿಷರು ಪಾರ್ಶಿ ಖಾರಿಯ ನೆತ್ತಿಯಲ್ಲಿರುವ ಫಾವೊ ಎಂಬ ಪಟ್ಟಣವನ್ನು ಸ್ವಾಧೀನಪಡಿಸಿಕೊಂಡರು. ಇದು ಒಂದು ನದಿಯ ಮುಖದಲ್ಲಿದೆ ; ಆ ನದಿಯ ದಡದ ಮೇಲೆ ತುಂಬಾ ಆಮದು ರಫ್ತು ಇರುವಂಥಾ ಬಾಸ್ರಾ ಎಂಬ ದೊಡ್ಡ ವ್ಯಾಪಾರ ಪಟ್ಟಣವಿದೆ.

ಆರ್ಮೀನಿಯಾದಲ್ಲಿ ಬಹಳ ಕಠಿಣವಾದ ಕದನಗಳು ನಡೆದವು. ಟರ್ಕಿಯವರು ಅನೇಕ ಸೈನ್ಯವನ್ನು ಕಳೆದುಕೊಂಡು ಸೋತುಹೋದರು. ಅಲ್ಲಿ ರಷ್ಯಾದವರು ಅಪಾರವಾದ ಮದ್ದುಗುಂಡಿನ ಸಮೇತ ಅನೇಕ ಟರ್ಕಿ ಸೈನಿಕರನ್ನು ಕೈಸೆರೆ ಹಿಡಿದುಕೊಂಡಿದ್ದಾರೆ. ಜರ್ಮನಿಯವರೇ ಉದ್ಯೋಗದಾರರಾಗಿ ನಿಂತು ಟರ್ಕಿ ಸೈನಿಕರಿಂದ ಯುದ್ಧ ಮಾಡಿಸಿದರು. ಇದಲ್ಲದೆ ಲೇಕ್ ವಾನ್ ಎಂಬ ಕಡೆಯಲ್ಲೂ ಯುದ್ಧ ನಡೆದು ಟರ್ಕಿಯವರು ಅಲ್ಲೂ ಸೋತುಹೋದರು.

ಟರ್ಕಿಯವರು ಒಂದು ಯುದ್ಧದ ಹಡಗನ್ನು ತಂದು ಕಪ್ಪು ಕಡಲಿನ ದಡದ ಮೇಲಿರುವ ಪೋಟಿ ಎಂಬ ತೀರಪಟ್ಟಣಕ್ಕೆ ಪಿರಂಗಿ ಗುಂಡುಗಳನ್ನು ಹೊಡೆದರು. ಆದರೆ ಸ್ವಲ್ಪ ಹೊತ್ತಿನಲ್ಲೇ ಆ ಹಡಗು ಅಲ್ಲಿಂದ ಓಡಿಹೋಗಬೇಕಾಯಿತು.

ಈಚೆಗೆ ಬಹಳ ಮಂದಿ ಟರ್ಕಿ ಸಿಪಾಯಿಗಳು ಬಂದದ್ದರಿಂದ ರಷ್ಯಾದವರು ಸ್ವಲ್ಪ ಹಿಂದಕ್ಕೆ ಹೋಗಿರುವರು.

ಕೆಂಪು ಕಡಲಿನ ದಕ್ಷಿಣ ಮುಖದಲ್ಲಿರುವ ಬ್ಯಾಬೆಲ್ ಮ್ಯಾಂಡೆಬ್ ಪಟ್ಟಣದ ಹತ್ತಿರ ಅರೇಬಿಯಾದಲ್ಲಿ ಬ್ರಿಟಿಷರು ಒಂದು ಕೋಟೆಗೆ ಗುಂಡುಗಳನ್ನು ಹೊಡೆದರು. ಹಿಂದುಸ್ಥಾನದ ಸೈನ್ಯಗಳನ್ನು ಹಡಗಿನಿಂದ ತೀರಕ್ಕೆ ಇಳಿಸಿದಾಗ ಈ ಸೈನಿಕರು ನುಗ್ಗಿ ಹೋಗಿ ಟರ್ಕಿಯವರ ಆರು ಪಿರಂಗಿಗಳನ್ನೂ ಬಹಳ ಮದ್ದುಗುಂಡುಗಳನ್ನೂ ಸ್ವಾಧೀನ ಪಡಿಸಿಕೊಂಡರು. ಬ್ರಿಟಿಷರ ಕಡೆ 4 ಮಂದಿ ಕೊಲೆಯಾದರು, 16 ಮಂದಿ ಗಾಯಪಟ್ಟಿದ್ದಾರೆ.

ಟರ್ಕಿಯವರು ಉತ್ತರ ಆಫ್ರಿಕಾದಲ್ಲಿ ಮುಸಲ್ಮಾನ್ ಪ್ರಜೆಗಳನ್ನು ಇಟಲಿಯವರ ಮೇಲೆ ತಿರುಗಿಬೀಳುವಂತೆ ಚಿತಾವಣೆ ಮಾಡುತ್ತಿದ್ದಾರೆಂದು ವರ್ತಮಾನವಿದೆ. ಇಟಲಿಯವರು ಈ ಸಂಗತಿಯನ್ನು ಜರ್ಮನಿಯವರಿಗೆ ಹೇಳಿ ಕಳುಹಿಸಿದ್ದರ ಮೇಲೆ ಅವರು ಟರ್ಕಿಯವರಿಗೆ ಆ ರೀತಿ ಮಾಡದಂತೆ ತಿಳಿಸಿ ತಡೆದಿರುತ್ತಾರೆ.

ಚೀಣಾದಲ್ಲಿ.

ಜಪಾನ್ನವರು ಚೀಣಾದಲ್ಲಿ ಯಾವ ಸ್ಥಳಗಳನ್ನು ಗೆದ್ದು ಸ್ವಾಧೀನ ಪಡಿಸಿಕೊಂಡರೋ ತಂತಿ ವರ್ತಮಾನಗಳು ಸ್ಪಷ್ಟವಾಗಿ ತಿಳಿಸುವುದಿಲ್ಲ. ಅಂತ್ಯಭಾಗದಲ್ಲಿ ಬಹಳ ಕ್ರೂರವಾದ ಕದನವಾಯಿತು. ಜಪಾನ್ನವರು ಬಹು ಪರಾಕ್ರಮದಿಂದ ಕೋಟೆಗಳಿಗೆ ಮುತ್ತಿಗೆ ಹಾಕಿಕೊಂಡರು.

ಪಟ್ಟಣವನ್ನು ಗೆದ್ದು ಸ್ವಾಧೀನ ಪಡಿಸಿಕೊಂಡ ಈಚೆಗೆ ಜಪಾನ್ನವರು ಹಡಗುಗಳು ನಿಲ್ಲುವ ಸಮುದ್ರ ಭಾಗದಲ್ಲಿ ಮೈನ್ ಎಂಬ ಸಿಡಿಮದ್ದಿನ ಗುಂಡುಗಳೇನೂ ಇಲ್ಲದಂತೆ ಶೋಧನೆಮಾಡಿ ತೆಗೆದು ಹಾಕುತ್ತಿದ್ದಾರೆ. ಇದರಲ್ಲಿ ಸಮುದ್ರದೊಳಗಿದ್ದ ಒಂದು ಗುಂಡು ಬಡಿದು ಜಪಾನ್ನವರ ಒಂದು ಟಾರ್ಪೀಡೋ ಎಂಬ ಹಡಗು ನಾಶವಾಯಿತು.

ಸಮುದ್ರ ತೀರದಲ್ಲಿದ್ದ ಜರ್ಮನಿ ಮತ್ತು ಆಸ್ಟ್ರಿಯಾದವರ ಹಡಗುಗಳೆಲ್ಲಾ ಸಮುದ್ರದೊಳಗೆ ಮುಳುಗಿಸಲ್ಪಟ್ಟಿದ್ದವೆಂದು ಅಲ್ಲಿಗೆ ಜಪಾನ್ನವರು ಹೋದಾಗ ಅವರಿಗೆ ತಿಳಿದುಬಂದಿತು.

ಸಮುದ್ರದ ಮೇಲೆ.

ಯೆಮ್‍ಡೆನ್ ಎಂಬ ಜರ್ಮನಿಯ ಯುದ್ಧದ ಹಡಗನ್ನು ನಾಶಮಾಡಿದ ವರ್ತಮಾನವೇ ಅತ್ಯಂತ ಸಂತೋಷಪ್ರದವಾದದ್ದಾಗಿದೆ. ಆ ಹಡಗು ಪಿನಾಂಗಿನಲ್ಲಿ ಎರಡು ಹಡಗುಗಳನ್ನು ಮುಳುಗಿಸಿದ ಮೇಲೆ ಅಲ್ಲಿಂದ ಸುಮಾತ್ರ ದ್ವೀಪಕ್ಕೆ ಪಶ್ಚಿಮದಲ್ಲಿರುವ ಕೊಕೊ ಎಂಬ ದ್ವೀಪ ಸಮುದಾಯದ ಒಳಗೆ ಹೋಯಿತು. ಈ ದ್ವೀಪ ಸಮುದಾಯವು ಬ್ರಿಟಿಷರಿಗೆ ಸೇರಿದ್ದು ; ತಂತಿಗಳಿಲ್ಲದೆ ವರ್ತಮಾನಗಳನ್ನು ಕೊಟ್ಟು ತರಿಸುವ ಏರ್ಪಾಡು ಆ ದ್ವೀಪದಲ್ಲಿ ಮಾಡಿಟ್ಟಿದ್ದಾರೆ. ಆ ಶತ್ರು ಹಡಗು ಈ ಏರ್ಪಾಡನ್ನು ಹಾಳುಮಾಡಿ, ಆ ಬಳಿ ಸಮುದ್ರದೊಳಗೆ ಹಾಕಿರುವ ತಂತಿ ವರ್ತಮಾನದ ತಂತಿಯನ್ನು ಕತ್ತರಿಸಬೇಕೆಂದು ಪ್ರಯತ್ನಪಟ್ಟಿತು. ಯೆಮ್‍ಡೆನ್ ಹಡಗು ಅಲ್ಲಿಗೆ ಬಂದ ವರ್ತಮಾನವು ಆ ಠಾಣ್ಯದಿಂದ ತಿಳಿದ ಕೂಡಲೇ ಆಸ್ಟ್ರೇಲಿಯಾ ದ್ವೀಪದ ಸಿಡ್ನಿ ಎಂಬ ಯುದ್ಧದ ಹಡಗು 40 ಮೈಲಿ ದೂರದಲ್ಲಿದ್ದು ಆ ಸ್ಥಳಕ್ಕೆ ನುಗ್ಗಿ ಬಂದಿತು. ಅವೆರಡೂ ಕದನಮಾಡಿದವು. ಸಿಡ್ನಿಯು ಯೆಮ್‍ಡೆನ್ನನ್ನು ತೀರಕ್ಕೆ ಓಡಿಸಿ ಸುಟ್ಟುಹಾಕಿತು. ಅದರಲ್ಲಿ 200 ಮಂದಿ ಕೊಲೆಯಾದರೆಂದೂ, 30 ಮಂದಿ ಗಾಯಪಟ್ಟರೆಂದೂ ಹೇಳಲಾಗಿದೆ. ಶತ್ರು ಹಡಗಿನ ಅಧಿಪತಿಗೂ, ಅದರಲ್ಲಿದ್ದ ಜರ್ಮನಿ ಚಕ್ರವರ್ತಿಯ ದಾಯಾದಿಯಾದ ಪ್ರಿನ್ಸ್ ಆಫ್ ಹೊಹೆನ್‍ಜೊಲರನ್ ಎಂಬ ರಾಜಕುಮಾರನಿಗೂ ಗಾಯಗಳೇನೂ ಆಗಲಿಲ್ಲ. ಇವರಿಬ್ಬರೂ ಕೈಸೆರೆಯಾದರು. ಸಿಡ್ನಿಯೊಳಗೆ 3 ಮಂದಿ ಕೊಲೆಯಾದರು ; 15 ಮಂದಿಗೆ ಗಾಯಗಳಾಗಿವೆ. ಶತ್ರು ಹಡಗಿನಲ್ಲಿದ್ದ ಪಿರಂಗಿಗಳನ್ನೂ, ಇತರ ಮುಖ್ಯ ಪದಾರ್ಥಗಳನ್ನೂ ಯುದ್ಧದಲ್ಲಿ ಗೆದ್ದ ಪದಾರ್ಥಗಳಂತೆ ಆಸ್ಟ್ರೇಲಿಯಾ ದ್ವೀಪಕ್ಕೆ ಸಾಗಿಸಿಕೊಂಡು ಹೋಗಿರುತ್ತಾರೆ.

ಬ್ರಿಟಿಷರ ಛಾಥಮ್ ಎಂಬ ಯುದ್ಧದ ಹಡಗು ಪೂರ್ವ ಆಫ್ರಿಕಾದಲ್ಲಿ ಜರ್ಮನಿಯ ಇನ್ನೊಂದು ಯುದ್ಧದ ಹಡಗನ್ನು ಕಂಡು ಹಿಡಿದಿದೆ. ಆ ಶತ್ರುವಿನ ಹಡಗು ಆ ಪ್ರಾಂತ್ಯದಲ್ಲಿ ಅತಿಬಾಧೆಯನ್ನುಂಟುಮಾಡುತ್ತಿತ್ತು. ಈ ಜರ್ಮನಿಯ ಹಡಗು ಒಂದು ನದಿಯೊಳಗೆ ನುಗ್ಗಿ ಆರು ಮೈಲಿ ದೂರ ಹೋಗಿ ಅಲ್ಲೇ ಅಡಗಿಕೊಂಡಿದೆ ಎಂಬ ಸಮಾಚಾರವು ತಿಳಿದುಬಂದಿತು. ಆ ನದಿಯು ಬಹಳ ಆಳವಾಗಿಲ್ಲದ್ದರಿಂದ ಛಾಥಮ್ ಎಂಬ ಹಡಗು ನದಿಯೊಳಗೆ ಹೋಗಲಾರದೆ ಇದೆ. ಆದರೆ ಆ ನದಿಯ ಮುಖದಲ್ಲೇ ಇನ್ನೊಂದು ಹಡಗನ್ನು ಮುಳುಗಿಸಿಬಿಟ್ಟಿತು. ಈಗ ಅಡಗಿಕೊಂಡಿರುವ ಶತ್ರುವಿನ ಹಡಗು ಈಚೆಗೆ ಬಾರದಂತೆ ಇದರಿಂದ ತಡೆಯಾಗಿರುತ್ತದೆ.

ಇಂಗ್ಲೆಂಡಿನ ದಕ್ಷಿಣ ಸಮುದ್ರತೀರದಲ್ಲಿ ಬ್ರಿಟಿಷರ ಒಂದು ಟಾರ್ಪೀಡೋ ಎಂಬ ಹಡಗು ನಿಂತಿತ್ತು. ಅದರಲ್ಲಿದ್ದವರು ಭೋಜನಮಾಡುತ್ತಿರುವ ಸಮಯದಲ್ಲಿ ಜರ್ಮನಿಯವರ ಒಂದು ಸಬ್‍ಮೆರೀನ್ ಎಂಬ ಹಡಗು ಬಂದು ಅದಕ್ಕೆ ಬಡಿದು ಅದನ್ನು ಮುಳುಗಿಸಿಬಿಟ್ಟಿತು. ಆದರೆ ಅದರಲ್ಲಿದ್ದವರೆಲ್ಲಾ ದೋಣಿಗಳಲ್ಲಿ ಉಳಿದು ಬದುಕಿಬಂದರು. ಆ ಪೈಕಿ ನಾಲ್ಕರಿಗೆ ಗಾಯಗಳಾಗಿರುತ್ತವೆ.

ದಕ್ಷಿಣ ಆಫ್ರಿಕಾದಲ್ಲಿ.

ದಕ್ಷಿಣ ಆಫ್ರಿಕಾದಲ್ಲಿ ಬೋಯರರ ದಳಪತಿಗಳು ದಂಗೆ ಎದ್ದು ಸೈನ್ಯ ಸಹಿತ ಜರ್ಮನಿಯವರ ಕಡೆಗೆ ಹೋಗಿದ್ದರಷ್ಟೆ. ಈ ದಂಗೆಯು ಅಷ್ಟೇನೂ ದೊಡ್ಡದಲ್ಲವೆಂದು ಮೊದಲು ತಿಳಿದಿತ್ತು ; ಈಚೆಗೆ ಅದು ಚೆನ್ನಾಗಿ ಆ ಪ್ರಾಂತ್ಯ ಹರಡಿಕೊಂಡಿದ್ದಂತೆ ಗೊತ್ತಾಗುತ್ತದೆ. ಗವರ್ನ್‍ಮೆಂಟಿನವರು ದಳಪತಿಗಳು ಹೊರತು ಉಳಿದವರೆಲ್ಲಾ ನೊವೆಂಬರ್ ತಾ. 21 ರೊಳಗಾಗಿ ಬಂದು ಶರಣಾಗತರಾದರೆ ಅಂಥವರಿಗೆ ಕ್ಷಮಾಪಣೆಯನ್ನು ಕೊಡುವುದಾಗಿ ವಾಗ್ದಾನಮಾಡಿ ಇಸ್ತಿಹಾರು ಹಾಕಿಸಿದ್ದಾರೆ.

ಜನರಲ್ ಬೋಥಾರವರು ಸೈನ್ಯ ಸಮೇತ ಹೋಗಿ ಆ ದಂಗೆಕೋರರ ಮೇಲೆ ಯುದ್ಧಮಾಡಿ ಅವರನ್ನು ಸೋಲಿಸಿ ಎರಡು ಕ್ಯಾಂಪುಗಳನ್ನು ಸ್ವಾಧೀನ ಪಡಿಸಿಕೊಂಡರು ; ಮತ್ತು 250 ಮಂದಿ ಕೈಸೆರೆ ಸಿಕ್ಕಿರುತ್ತಾರೆ. ರಾಜದ್ರೋಹಿಯಾದ ಜನರಲ್ ಬೆಯರ್ಸನ ಸೈನ್ಯವನ್ನೂ ಚೆದರಿಸಿ, ಅದರಲ್ಲಿ 364 ಜನರನ್ನು ಕೈಸೆರೆ ಹಿಡಿದು ತಂದಿದ್ದಾರೆ. ರಾಜದ್ರೋಹಿಗಳ ಒಂದು ದಂಡು ಜನರಲ್ ಕ್ರಾನ್‍ಜಿಯವರ ಸೈನ್ಯದ ಮೇಲೆ ನುಗ್ಗಿ ಕದನ ಮಾಡಿತು. ಆದರೆ ಫಲವೇನೂ ಆಗಲಿಲ್ಲ. ಈ ದಂಗೆಯನ್ನು ಅಡಗಿಸದ ಹೊರತು ದಕ್ಷಿಣ ಆಫ್ರಿಕಾ ಸೈನ್ಯಗಳು ಜರ್ಮನಿಯವರ ಸ್ವಾಸ್ಥ್ಯಗಳ ಮೇಲೆ ನುಗ್ಗಿ ಹೋಗುವುದಕ್ಕಾಗಲಾರದು.

ಇತರ ವಿಷಯಗಳು.

ಗ್ರೇಟ್ ಬ್ರಿಟನ್ನೊಳಗೆ ಅನೇಕ ಪ್ರಾಯಸಮರ್ಥರು ಬಂದು ಸೈನ್ಯಕ್ಕೆ ಸೇರಿಕೊಳ್ಳುತ್ತಿದ್ದಾರೆ. ಕೆಲವು ರಿಜಿಮೆಂಟುಗಳಲ್ಲಿ 13-14 ಬೆಟಾಲಿಯನ್ ಗಳು ಇರುತ್ತವೆ ; ಅಂದರೆ 13,000-14,000 ಸಿಪಾಯಿಗಳಿರುತ್ತಾರೆ.

ಬ್ರಿಟಿಷ್ ಪಾರ್ಲಿಮೆಂಟ್ ಸಭೆ ಮನೆಯು ತೆರೆಯಲ್ಪಟ್ಟಿತು. ಚಕ್ರವರ್ತಿ ಸಾರ್ವಭೌಮರವರು ಅಪ್ಪಣೆ ಕೊಡಿಸಿದ ವಾಕ್ಯಗಳ ಒಂದೆರಡನ್ನು ಇಲ್ಲಿ ಪ್ರಕಟಿಸುತ್ತೇವೆ. "ಟರ್ಕಿಯವರು ನಮ್ಮ ಮನಸ್ಸು ಒಪ್ಪದಿದ್ದರೂ ನಾವು ಅವರ ಮೇಲೆ ಯುದ್ಧಕ್ಕೆ ಹೊರಡುವಂತೆ ಮಾಡಿಬಿಟ್ಟರು. ಈ ಸಂಗತಿಯನ್ನು ನಮ್ಮ ಮುಸಲ್ಮಾನ ಪ್ರಜೆಗಳೆಲ್ಲಾ ಚೆನ್ನಾಗಿ ಬಲ್ಲವರಾಗಿರುತ್ತಾರೆ. ಇವರು ನಮ್ಮ ಮೇಲೆ ಸಂಪೂರ್ಣವಾದ ಭಕ್ತಿ ಪ್ರೀತಿಗಳನ್ನು ಇಟ್ಟುಕೊಂಡಿರುವುದಾಗಿ ದೃಢನಿಶ್ಚಯ ಪಡಿಸಿ ಹೇಳಿರುವುದು ನಮಗೆ ಆನಂದವನ್ನುಂಟುಮಾಡಿದೆ." ನಮ್ಮ ಉದ್ದೇಶವು ಜಯಪ್ರದವಾಗುವ ತನಕ ನಾವು ಯುದ್ಧ ಮಾಡುವುದನ್ನು ನಿಲ್ಲಿಸುವುದಿಲ್ಲವೆಂದು ನಮ್ಮ ರಾಜ್ಯಕ್ಕೆ ರಾಜ್ಯವೇ ಸಂಕಲ್ಪ ಮಾಡಿಕೊಂಡಿರುತ್ತದೆ.

ಬ್ರಿಟಿಷ್ ಪಾರ್ಲಿಮೆಂಟಿನವರು ಯುದ್ಧದ ಖರ್ಚಿಗೋಸ್ಕರ 22,50,00,000 ಪೌಂಡುಗಳನ್ನು (ಪೌಂಡಿಗೆ 15 ರೂಪಾಯಿ) ಸಾಲ ಮಾಡುವವರಾಗಿದ್ದಾರೆ. ಈ ಹಣವು ಮುಂದಿನ ಏಪ್ರಿಲ್ ತನಕ ಖರ್ಚಿಗೆ ಸಾಕಾಗುವುದೆಂದು ಊಹಿಸಲ್ಪಟ್ಟಿದೆ. ಈ ಹಣದ ಪೈಕಿ ಬೆಲ್ಜಿಯಮ್ ಗವರ್ನ್‍ಮೆಂಟಿಗೆ 10,00,000 ಪೌಂಡನ್ನೂ, ಸರ್ವಿಯಾ ಗವರ್ನ್‍ಮೆಂಟಿಗೆ 8,00,000 ಪೌಂಡನ್ನೂ ಕೊಡುತ್ತಾರೆ.

ಲಂಡನ್ ಪಟ್ಟಣದ ಬಳಿ ವೋಕಿಂಗ್ ಎಂಬ ಸ್ಥಳದಲ್ಲಿ ಒಂದು ಖಬರಸ್ತಾನವನ್ನು ಬಿಡಿಸಿಕೊಟ್ಟಿದ್ದಾರೆ. ಯುದ್ಧ ಭೂಮಿಯಲ್ಲಿ ಗಾಯಪಟ್ಟು ಬಂದು ಕಾಲವಾಗುವ ಮುಸಲ್ಮಾನ್ ಸೈನಿಕರ ಶವಗಳನ್ನು ಅಲ್ಲಿ ಸಮಾಧಿ ಮಾಡತಕ್ಕದ್ದೆಂದು ಗೊತ್ತಾಗಿದೆ. ಅಲ್ಲೇ ಮುಸಲ್ಮಾನರ ಒಂದು ಮಸೀತಿಯೂ ಇರುವುದು.

ಜರ್ಮನಿಯವರ ಸಮುದ್ರ ಸೈನ್ಯದ ಲೆಫ್ಟಿನೆಂಟ್ ಎಂಬ ಒಬ್ಬ ಉದ್ಯೋಗದಾರನು ಗೂಢ ಚಾರನಾಗಿ ಲಂಡನ್ ಪಟ್ಟಣದಲ್ಲಿ ಸಿಕ್ಕಿಬಿದ್ದನು. ಅವನನ್ನು ಹಿಡಿದು ಮಿಲ್ಟೇರಿ ಕೋರ್ಟಿನಲ್ಲಿ [illegible] ಮಾಡಿ ಗುಂಡಿನಿಂದ ಹೊಡೆದು ಕೊಂದುಹಾಕಿದರು. ಇದುವರೆಗೆ ಬ್ರಿಟನ್ನಲ್ಲಿ ಗೂಢಚಾರರ್‍ಯಾರನ್ನೂ ಗುಂಡಿನಿಂದ ಕೊಂದದ್ದಿಲ್ಲ.

ತಾಲ್ಲೂಕು ವರ್ತಮಾನಗಳು.

ಕುಣಿಗಲು.—ಮಳೆಯು ತಕ್ಕಮಟ್ಟಿಗೂ ಚೆನ್ನಾಗಿ ನಡಿಸುತ್ತಾ ಬಂದದ್ದರಿಂದ ರಾಗಿ ಪೈರೆಲ್ಲಾ ಚೆನ್ನಾಗಿದೆ. ಅಲ್ಲದೆ ಆಗಲೇ ಅನೇಕರು ಕೊಯ್ಯುತ್ತಿದ್ದಾರೆ. ಇಲ್ಲಿನ ಚಿಕ್ಕಕೆರೆಯೂ, ದೊಡ್ಡಕೆರೆಯೂ ತುಂಬಲಿಲ್ಲ. ದೊಡ್ಡಕೆರೆಗೆ ಕಾಲುಭಾಗ ಹೊಸ ನೀರು ಬಂದಿರುತ್ತೆ. ನಮ್ಮ ಹೊಸ ಅಮಲ್ದಾರರಾದ ಮ|| ವೆಂಕಟೇಶಯ್ಯನವರು ಇಲ್ಲಿನ ಚಾರ್ಜು ವಹಿಸಿದ ಲಾಗಾಯ್ತು ತಮ್ಮ ಕೆಲಸಗಳನ್ನು ಬಹು ಚಟುವಟಿಕೆಯಿಂದ ನಡಿಸುತ್ತಾ, ಕೈಕೆಳಗಿನ ನೌಕರರನೇಕರಲ್ಲಿಯೂ ಪ್ರಜೆಗಳಲ್ಲಿಯೂ ತುಂಬಾ ಪ್ರೀತಿಗೆ ಪಾತ್ರರಾಗಿರುವದನ್ನು ನೋಡಿ ಸಂತೋಷಪಡಬೇಕಾಗುತ್ತೆ. ಇವರು ಇಲ್ಲಿ ಟೆನ್ನಿಸ್ ಎಂಬ ಚೆಂಡಿನಾಟವನ್ನು ಏರ್ಪಡಿಸಿ, ಅನೇಕರಿಗೆ ತುಂಬಾ ಸಂತೋಷವನ್ನು ಉಂಟುಮಾಡಿರುತ್ತಾರೆ. ಇಲ್ಲಿನ ವರ್ತಕರು ಹಳೆಯ ಸೇರು ಮತ್ತು ತೂಕದಬಟ್ಟುಗಳನ್ನು ಬಿಟ್ಟು ಈಗಿನ ಏರ್ಪಾಡಿನಂತೆ ಹೊಸದಾಗಿ ಇಟ್ಟುಕೊಳ್ಳಬೇಕೆಂದು ನಮ್ಮ ಅಮಲ್ದಾರರು ದಂಡೋರೆ ಮೂಲಕ ಊರಿನೊಳಗೆಲ್ಲಾ ಸಾರಿಸಿದರೂ ಇನ್ನೂ ಅನೇಕರು ಗಣನೆಗೆ ತಾರದೆ ಹಳೆಯವುಗಳಲ್ಲಿಯೇ ವ್ಯಾಪಾರಮಾಡುತ್ತಿರುವರು. ಇನ್ನು ಮೇಲಾದರೂ ಇವುಗಳು ಬೇಗನೆ ಬದಲಾಯಿಸಲ್ಪಡುವವೆಂಬ ನಿರೀಕ್ಷೆ ಇದೆ.—ಯೂರೋಪ್ ಖಂಡದಲ್ಲಿ ನಮ್ಮ ಚಕ್ರವರ್ತಿ ಸಾರ್ವಭೌಮರವರಿಗೆ ಯುದ್ಧದ ದೆಸೆಯಿಂದ ಪ್ರಾಪ್ತವಾಗಿರುವ ಕಷ್ಟಗಳಲ್ಲಿ ನಾವೂ ಪಾಲುಗಾರರಾಗಿರಬೇಕೆಂಬ ಉಪನ್ಯಾಸವನ್ನು ನಮ್ಮ ಅಮಲ್ದಾರರು ಪ್ರಜೆಗಳಲ್ಲಿ ಅಂದರೆ ಈ ಟವನಿನಲ್ಲಿಯೂ ಗ್ರಾಮಾಂತರಗಳಲ್ಲಿಯೂ ಮಾಡುತ್ತಾ, ಯುದ್ಧದ ರಿಲೀಫ್ ಫಂಡಿಗೋಸ್ಕರ ಅನೇಕರಿಂದ ಚಂದಾ ಹಣವನ್ನು ವಸೂಲ್ಮಾಡಿರುತ್ತಾರೆ.—ಮೈಸೂರು ಸೀಮೆಯ ಕೋಆಪರೇಟಿವ್ ಸೊಸೈಟಿಗಳ ರೆಜಿಸ್ಟ್ರಾರಾದ ಮ|| ನಾರಣಯ್ಯಂಗಾರ್‍ರವರು ಇಲ್ಲಿಗೆ ದಯಮಾಡಿಸಿ, ಎರಡು ದಿನ ಇಲ್ಲಿನ ಸೊಸೈಟಿಯ ಕಾರುಬಾರುಗಳನ್ನು ವಿಮರ್ಶೆಮಾಡಿ ಈ ಸೊಸೈಟಿಯು ತುಂಬಾ ಅಭಿವೃದ್ಧಿ ಸ್ಥಿತಿಯಲ್ಲಿರುವದನ್ನು ತಿಳಿದು ತುಂಬಾ ಸಂತೋಷಪಟ್ಟದ್ದಲ್ಲದೆ, ಕೆಲವು ಹೊಸ ಏರ್ಪಾಡುಗಳನ್ನು ಕಲ್ಪಿಸಿಕೊಟ್ಟು, ಸೊಸೈಟಿಯ ಸೆಕ್ರೆಟರಿಯವರಿಗೆ ನೂರು ರೂಪಾಯಿ ಬಹುಮಾನವನ್ನೂ, ರೈಟರಿಗೆ ಮಾಹೆಯಾನ ಎರಡು ರೂಪಾಯಿ ಇಜಾಫೆಯನ್ನೂ, ಜವಾನನಿಗೆ ಒಂದು ತಿಂಗಳ ಸಂಬಳ ಬಹುಮಾನವನ್ನೂ, ಮೆಂಬರುಗಳ ಅನುಮತಿಯಂತೆ ದಯಪಾಲಿಸಿ, ಮೇಲೆ ಉಳಿದ ಮೊಬಲಗು ಅಂದರೆ, ಹುಟ್ಟುವಳಿಯಾದ ಬಡ್ಡಿಯು ಷೇರುದಾರರಿಗೆ ಶೇಕಡ 8 ರೂಪಾಯಿಗಳಂತೆಯೂ, ಬಡ ವಿದ್ಯಾರ್ಥಿಗಳ ವೇತನಕ್ಕಾಗಿ 10 ರೂಪಾಯಿಗಳೂ, ಗ್ರಾಮಶಾಲೆಯಲ್ಲಿ ಬಡವರ ಅನ್ನದಾನಕ್ಕಾಗಿ 10 ರೂಪಾಯಿಗಳೂ ಹಂಚಲಾಯಿತು.—ಈ ತಾಲ್ಲೂಕಿನ ಗ್ರಾಮಾಂತರಗಳಲ್ಲಿರುವ ಎಲ್ಲಾ ಸೊಸೈಟಿಗಳೂ ಇಲ್ಲಿನ ಸೊಸೈಟಿಗೆ ಯೂನಿಯನ್ನಾಗಿ ಸೇರಿಸಲ್ಪಟ್ಟಿರುತ್ತವೆ. ಇದರಿಂದ ಗ್ರಾಮಾಂತರಗಳಲ್ಲಿರುವ ಜನಗಳು ತಮಗೆ ಬೇಕಾದಷ್ಟು ಹಣವನ್ನು ಧಾರಾಳವಾಗಿ ಸಾಲ ತೆಗೆದುಕೊಳ್ಳಲು ತುಂಬಾ ಅನುಕೂಲವಾಯಿತು.

ತರೀಕೆರೆ.—ಈಗ್ಗೆ ಪ್ಲೇಗ್ ನಿಂತಿದೆ. ಜನರು ಊರಿಗೆ ಸೇರಲು ಪ್ರಯತ್ನಿಸುವರು. ಜನರು ಮನೆಗಳಿಗೆ ಬರುವ ಮೊದಲು ಸ್ಯಾನಿಟರಿ ಆಫೀಸರವರು ಜನಗಳಿಗೆ ತಕ್ಕ ಎಚ್ಚರಿಕೆ ಕೊಟ್ಟು ತಕ್ಕಂತೆ ಶುದ್ಧಿ ಮಾಡಿಸಿ ಮನೆಗಳಿಗೆ ಬರಲು ಏರ್ಪಡಿಸುವರೆಂದು ನಂಬಲಾಗಿದೆ. ಯಾಕೆಂದರೆ ಜನರು ಗುಡಿಸಲಿನಲ್ಲಿರುವದಕ್ಕೆ ಛಳಿಯಿಂದ ಆಗಲಾರದೆ ಆತುರವಾಗಿ ಸ್ವಲ್ಪ ಮಟ್ಟಿಗೆ ಮಾತ್ರ ಮನೆಗಳನ್ನು ಶುದ್ಧಿ ಮಾಡಬಹುದು.—ಕೆಲವು ದಿನಗಳ ಕೆಳಗೆ ಬ್ರಾಹ್ಮಣರ ಯುವಕನೊಬ್ಬನು ಭಾವಿಗೆ ಬಿದ್ದು ಸತ್ತನು. ಯೌವನಸ್ಥನು, ಹಾಗೂ ಬ್ರಾಹ್ಮಣ ಜಾತಿಯವನು ಬಿದ್ದದ್ದು ಸೋಜಿಗವೇ.—ಕಳೆದ ವಾರ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರು ಬಂದು ಇಲ್ಲಿನ ಆಸ್ಪತ್ರೆಯನ್ನು ಇನ್ಸ್ಪೆಕ್ಷನ್ ಮಾಡಿಕೊಂಡು ಹೋದರು. ಹೀಗೆ ಅನೇಕ ಇನ್ಸ್ಪೆಕ್ಷನ್ ಆದರೂ ಆಸ್ಪತ್ರೆಯು ಸೋರುವದೂ, ನೆಲವು ಗಾರೆ ಕೆಟ್ಟು ಹಳ್ಳ ಬಿದ್ದಿರುವದೂ, ವರಾಂಡದಲ್ಲಿ ಜನಗಳೂ ಕತ್ತೆಗಳೂ ರಾತ್ರಿಯಲ್ಲಿ ವಾಸಮಾಡುವದೂ ಇವು ಮಾತ್ರ ಸರಿಯಾದದ್ದು ಕಾಣಲಿಲ್ಲ. ಸ್ಯಾಂಕ್ಷನ್ ಆಗಿದೆ ಎಂದು ಹೇಳುವದು ಮಾತ್ರ ತಪ್ಪುವದಿಲ್ಲ. ಇದು ನಿಜವೋ ಸುಳ್ಳೋ ತಿಳಿಯದು. ಇಲ್ಲಿನ ಕಂಪೌಂಡರು ಡಾಕ್ಟರವರು ಇಲ್ಲದಿದ್ದರೂ ತುಂಬಾ ಮುತುವರ್ಜಿಯಿಂದ ಕೆಲಸಮಾಡುವದನ್ನು ನೋಡಿ ಸಂತೋಷಪಟ್ಟರೂ ಅವರ ಕೆಲಸಕ್ಕೆ ತಕ್ಕ ಪ್ರತಿಫಲ ಸಿಕ್ಕುವದಿಲ್ಲವೆಂದು ವ್ಯಸನಪಡಬೇಕು. ಡಾಕ್ಟರು ಬಹಳ ಪ್ರಯಾಸಪಟ್ಟು 15-18 ಮೈಲಿ ದೂರದ ಕಾಫಿ ತೋಟಕ್ಕೆ ಹೋಗಿ ಪ್ಲೇಗ್ ಇದ್ದು ಬನ್ನು ಸೂರಾದು ಬನಕ್ಕೆ ಹಾಕಿ ಬಂದರು. ಇವರೋ ಬಹುಮಾನಕ್ಕೆ ತಕ್ಕವರೆಂದು ಹೇಳಬೇಕು. ಈಗ ಆಗಲೇ ವಿಷಮಶೀತ ಜ್ವರವೂ, ನ್ಯೂಮೋನಿಯ (ಶ್ಲೇಷ್ಮಜ್ವರವೂ) ಕಾಣಿಸಿಕೊಂಡು ಅನೇಕರು ಅಲ್ಲಲ್ಲಿ ಮರಣಕ್ಕೆ ತುತ್ತಾಗುತ್ತಾರೆ.—ಸರ್ಕಾರಿ ಅಧಿಕಾರಿಗಳು ಆಗಾಗ್ಗೆ ಗ್ರಾಮದ ಇನ್ಸ್ಪೆಕ್ಷನ್ಗೆ ಹೋಗುವರು. ಅವರು ಮುಂದಾಗಿ ತಿಳಿಸಿ ಹೋಗುವದು ಕೆಲವು ಸಮಯಗಳಲ್ಲಿ ಅವಶ್ಯಕವಿಲ್ಲವಾದರೂ, ಜನರ ಸ್ಥಿತಿಗತಿಯನ್ನು ತಿಳಿಯಬೇಕಾದಾಗ್ಗೆ ಜನರಿಗೆ ನಾನಾ ಸಂಗತಿ ತಿಳಿಸಬೇಕಾದಲ್ಲಿ ಮೊದಲು ನೋಟೀಸು ಕೊಟ್ಟು ಜನರನ್ನು ಕೂಡಿಸಿ ಅವರನ್ನು ಕೇಳುವದೂ, ವಿಚಾರಿಸುವದೂ ಉತ್ತಮವಲ್ಲವೇ ? ಅನೇಕ ಸಾರಿ ಹೀಗೆ ಮಾಡುವದಿಲ್ಲವಾದ್ದರಿಂದ ತುಂಬಾ ವಿಷಾದಪಡುತ್ತೇವೆ.—ಈ ಪ್ರಾಂತ್ಯದಲ್ಲಿ ಕೆಲವು ಕಡೆ ಹುಲ್ಲುಗಾವಲುಗಳಲ್ಲಿಯೂ, ರಾಗಿ ಹೊಲಗಳಲ್ಲಿಯೂ ಹುಳ ಬಿದ್ದು ಪೈರೆಲ್ಲಾ ನಾಶವಾಗುವ ಹಾಗೆ ಕಾಣುತ್ತೆ. ಆಗಲೇ ಕೆಲವು ಹೊಲಗಳು ನಾಶವಾದವು. ರಾಗಿ ಪೈರು ಬುಡಕ್ಕೇನೆ ಕತ್ತರಿಸಿ ಹಾಕುತ್ತೆ. ಈ ಹುಳಗಳು ಕಂಬಳಿ ಹುಳವಲ್ಲವಾದರೂ ಅದರ ಹಾಗೆ ನಡೆದು ಹಸುರಾಗಿರುತ್ತದೆ. ಇವು ಹೆಚ್ಚಿದರೆ ಬರ ಬಂತೆಂದು ಹೇಳಬೇಕು. ಸರ್ಕಾರದವರು ಇದನ್ನು ಅಡಗಿಸುವ ವಿಧಾನವನ್ನು ಶೀಘ್ರಗತಿ ತೋರಿಸದಿದ್ದರೆ ಮುಂದೆ ಏನಾಗುತ್ತೋ ! ಹೇಳಲಾಗದು.

ಇಂಪೀರಿಯಲ್ ಇಂಡಿಯನ್ ರಿಲೀಫ್ ಫಂಡು.

ಮೈಸೂರು ಬ್ರಾಂಚ್.—3 ಮತ್ತು 4 ನೇ ಚಂದಾ ಪಟ್ಟಿಗಳು.

ಮೈಸೂರು ಬ್ರಾಂಚಿನ ಸೆಕ್ರೆಟರಿ ಮತ್ತು ಟ್ರೆಜರರ್ ಮ|| ಬಿ. ಲಕ್ಷ್ಮಣರಾಯರು ಕೆಳಗೆ ನಮೂದಾಗುವವರಿಂದ ತಮಗೆ ಚಂದಾ ಹಣ ತಲಪಿದೆ ಎಂದು ತಿಳಿಸುತ್ತಾರೆ.

ಯಡತೊರೆ ಮ|| ಬೋರೆಗೌಡರ ಮೂಲಕ—ಮ|| ಗಳಾದ ಬೋರೆಗೌಡರು ರೂ. 20, ಸಯ್ಯದ್ ಅಹಮದ್ ಸಾಹೇಬರು ರೂ 10, ನಂಧರಾಮಜಿಯವರು ರೂ. 6 ; ಬಸಪ್ಪನವರು, ಧರಣಪ್ಪನವರು, ಕುಬೇರಶೆಟ್ಟರು, ತಲಾ ರೂ. 5 ; ಲಕ್ಷ್ಮೀಪತಿರಾಯರು, ಬ್ರಹ್ಮದೇವಯ್ಯನವರು, ಅಬ್ದುಲ್ ರಹಿಮಾನ್ ಸಾಬರು, ಸೈದ್ ಖಾಸಿಂ ಸಾಬರು, ತಲಾ ರೂ. 3 ; ಜವರೇಗೌಡರು, ಉಪಾಧ್ಯ ವಾಸುದೇವಯ್ಯನವರು, ದ್ಯಾವಣ್ಣಗೌಡರು, ಅನಂತರಾಜಯ್ಯನವರು, ಮಹದಿ ಮನೆ ಗುಂಡಪ್ಪನವರು, ರಂಗನಾಯ್ಕರು, ಮತ್ತು ಹಸ್ತಾಂತರದ ಸೂರಯ್ಯನವರು, ಬೊಮ್ಮರಸಯ್ಯನವರು, ತಲಾ ರೂ. 2 ; ಸಣ್ಣತಿಮ್ಮೇಗೌಡರು, ಪದ್ಮರಾಜಯ್ಯನವರು, ಮರಿಗೌಡರು, ಡಿ. ಲಿಂಗಣ್ಣನವರು, ನರಸಿಂಹಯ್ಯನವರು, ಬಸ್ತಿ ಪಾಪಯ್ಯನವರು, ನಾಗಣ್ಣನವರು, ಕಲ್ಲೇಗೌಡರು, ಸಣ್ಣನಾಯ್ಕರು ಮತ್ತು ತಿಮ್ಮಣ್ಣನವರು, ಗುಂಡಯ್ಯನವರು, ಹಸ್ತಾಂತರದ ಧರ್ಮಯ್ಯನವರು, ಅಮಾನುದ್ದೀನ್ ಸಾಬರು, ಪದ್ಮರಾಜಯ್ಯನವರು, ಪೀರ್ ಸಾಬರು, ಗುಲಾಂ ಮಹಮದ್ ಸಾಬರು, ಕಾರ್ಖಾನೆ ಬಾಷಾ ಸಾಬರು, ಸುಬ್ಬಶೆಟ್ಟರು, ಧರಣಯ್ಯನವರು, ಮೂಡ್ಲಗಿರಯ್ಯನವರು, ತಲಾ ರೂ. 1 ; ಒಂದು ರೂಪಾಯಿ ಒಳಗೆ ಚಂದಾ ಕೊಟ್ಟವರಿಂದ ರೂ 5-12-0 ; ಜುಮ್ಲಾ ರೂಪಾಯಿ 101-12-0.

ಮಾದಗೌಡನಹುಂಡಿ ಮ|| ಕರಿಗೌಡರ ಮೂಲಕ ರೂ. 5, ಹೆಳವರಹುಂಡಿ ಮ|| ಮಾದಪ್ಪ ಸಪ್ಪೆಗೌಡರು ರೂ. 10, ಕುಂಬಳದ ಬೋರೆಗೌಡ್ರು ವಗೈರೆ ರೂ. 5, ಪಟೇಲ್ ಲಿಂಗೇಗೌಡ್ರು ವಗೈರೆ ರೂ. 2, ಶಿರಗಸೂರು ಮ|| ಕೆಂಪನಂಜಯ್ಯ, ಕುಳ್ಳೇಗೌಡರು ವಗೈರೆ ರೂ. 12 ; ಜುಮ್ಲಾ ರೂ. 34-0-0.

ಮೈಸೂರು ಮಿಷನ್ ಹೈಸ್ಕೂಲ್ ರೆವ್. ಟೂಬ್ ಸಾಹೇಬರವರ ಮೂಲಕ ರೂ. 130, ಮೈಸೂರು ಸಿಟಿ ವೈಸ್ ಪ್ರೆಸಿಡೆಂಟ್ ಮ|| ಜಿ. ನಾರಾಯಣರಾಯರು ರೂ. 10 ; ಜುಮ್ಲಾ ರೂಪಾಯಿ 275-12-0. ಇದುವರೆಗೆ ವಸೂಲಾಗಿರುವ ಒಟ್ಟು ಚಂದಾ ರೂ. 962-12-0.

ನಂಜನಗೂಡು ತಾಲ್ಲೂಕು ಮ|| ಟಿ. ಗೋವಿಂದರಾಮಯ್ಯನವರ ಮೂಲಕ—ಮ|| ಗಳಾದ ಚಿನ್ನಂಬಳ್ಳಿ ರಾಮೇಗೌಡ್ರು ದೊಡ್ಡಮಲ್ಲೇಗೌಡ್ರು ರೂ. 5 ; ದೊಡ್ಡಮಾದಪ್ಪನವರು, ಸಾಗರೆ ಗೋಪಾಲಕೃಷ್ಣರಾಜೆ ಅರಸಿನವರು, ತಗಡೂರು ಸುಬ್ರಹ್ಮಣ್ಯ ಅರಸಿನವರು, ದೇವನೂರು ಬಸಪ್ಪನವರು, ಮರಹಳ್ಳಿ ಪುಟ್ಟಮಾದಯ್ಯನವರು, ತಲಾ ರೂ. 2 ; ತಗಡೂರು ನಂಜುಂಡಸ್ವಾಮಯ್ಯನವರು, ಚಂದ್ರಶೇಖರಯ್ಯನವರು, ಉಮ್ಮತ್ತೂರು ದ್ಯಾವಯ್ಯ ಸಿದ್ದಯ್ಯನವರು, ದೇವನೂರು ಸಿದ್ದಪ್ಪನವರು, ನಂಜಪ್ಪನವರು, ಬಸಪ್ಪನವರು, ತಗಡೂರು ಗೋಪಾಲಶೆಟ್ಟರು, ತಲಾ ರೂ. 1 ; ಒಂದು ರೂಪಾಯಿ ಒಳಗೆ ವಸೂಲಾಗಿರುವುದು ರೂ. 2-12-0 ; ಜುಮ್ಲಾ ರೂ 25-12-0.

ನಂಜನಗೂಡು ತಾಲ್ಲೂಕು ಸುತ್ತೂರು ಶಿವರಾತ್ರಿ ಸ್ವಾಮಿಗಳ ಮೂಲಕ—ಮ|| ಗಳಾದ ಬೆಳಗಲಿ ಶಿವನಪ್ಪನವರು ಮತ್ತು ಸುತ್ತೂರು ಮಲ್ಲಪ್ಪನವರು, ತಲಾ ರೂ. 10 ; ನಗರ್ಲೆ ಲಿಂಗಪ್ಪನವರು ರೂ. 5, ಕಾಮಹಳ್ಳಿ ಮಲ್ಲಪ್ಪನವರು ರೂ. 4 ; ಕಲ್ಲಹಳ್ಳಿ ಜ್ಯಾವಪ್ಪನವರು, ಕುಕ್ಕರಹಳ್ಳಿ ನಾರಣಪ್ಪನವರು, ಕಲ್ಲು ಕುಂದದ ಪುಟ್ಟಲಿಂಗಪ್ಪನವರು, ತಲಾ ರೂ 3 ; ಕಿರುಗುಂದ ಬಸಪ್ಪನವರು, ತಾಯೂರು ಮಲ್ಲಪ್ಪನವರು, ಸರಗೂರು ಮಾದಪ್ಪನವರು, ಈಶ್ವರಗೌಡ್ನ ಹಳ್ಳಿ ಮುದ್ದೇಗೌಡ್ರು, ಬಿಳಗೆರೆ ಸಿದ್ದಪ್ಪನವರು, ಸುತ್ತೂರು ಶಿವರಾತ್ರಿ ಸ್ವಾಮಿಗಳು, ತಲಾ ರೂ. 2 ; ಜುಮ್ಲಾ ರೂ. 50-0-0.

ಟಿ. ನರಸೀಪುರದ ಅಮಲ್ದಾರ್ರವರ ಮೂಲಕ—ಮ|| ಗಳಾದ ದಣಾಯಕನಪುರದ ಬಾಳರಾಜೆ ಅರಸಿನವರ ಮೂಲಕ ರೂ. 37, ವೆಂಕಟ್ರಮಣಶೆಟ್ರು, ಪುಟ್ಟಣ್ಣನವರು ರೂ. 37-8-0, ಕುರುಬರ ಮಲ್ಲಿಕಾರ್ಜುನಯ್ಯನವರು ರೂ. 20, ಮುತ್ತಲವಾಡಿ ಪಟೇಲರು ರೂ. 50 ; ಜುಮ್ಲಾ ರೂ. 137-8-0.

ಮೈಸೂರು ಡಿ|| ಜಡ್ಜ್ ಮ|| ವಿಜರ್ ಹಂಜಾ ಹುಸೇನ್ ಸಾಹೇಬರು ರೂ. 100, ಇವರ ಮೂಲಕ ವಸೂಲಾದದ್ದು ರೂ. 80, ಮಹಾರಾಣಿ ಕಾಲೇಜ್ ಸೂಪರಿಂಟೆಂಡೆಂಟರ ಮೂಲಕ ರೂ 61, ಸಾಹುಕಾರ್ ಎಂ. ಎಲ್ ವರ್ಧಮಾನಯ್ಯನವರು ರೂ. 100 ; ಮ|| ಕೆ. ಪರಮೇಶ್ವರಯ್ಯನವರು ರೂ. 5, ಮ|| ಮಹದೇವಶಾಸ್ತ್ರಿಗಳು ರೂ. 10, ಮ|| ಎಂ. ಶ್ರೀನಿವಾಸರಾಯರು ರೂ. 15 ; ಒಟ್ಟು ಇದುವರೆಗೆ ವಸೂಲಾಗಿರುವುದು ರೂ. 1,547-0-0.

ಬಾತ್ಮಿದಾರರಿಗೆ ನೋಟೀಸ್.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸವನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲಿ ಬರೆಯಕೂಡದು ; ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು.

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು. ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ. ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ.

ಕರೆಸ್ಪಾಂಡೆನ್ಸ್.

ವಿಷಯ ತಿಳಿಯಬೇಕು.

ಅಯ್ಯಾ,—ನಮ್ಮ ಮೈಸೂರು ಸರ್ಕಾರದವರು ಗ್ರಾಮಾಂತರದ ಅನಾಗರಿಕರಿಗೆ ವಿದ್ಯಾಭ್ಯಾಸದ ಅಗತ್ಯತೆ, ಆರೋಗ್ಯಸಂಪಾದನ ರೀತಿ, ಗ್ರಾಮನೈರ್ಮಲ್ಯ, ಗೌರವಸಂಪಾದನ ಮಾರ್ಗ, ಕೈಗಾರಿಕೆ ಕುಶಲವಿದ್ಯೆಗಳ ಉಪಯೋಗ, ಇತ್ಯಾದಿ ವಿಷಯಗಳನ್ನು ಬೋಧಿಸುವುದಕೋಸ್ಕರ ಎಲ್ಲಾ ಡಿಸ್ಟ್ರಿಕ್ಟುಗಳಿಗೂ ಅನುಭವಶಾಲಿಗಳೂ, ವಾಚಾಳಿಗಳೂ ಆದ ಬೋಧಕರನ್ನು ಆರಿಸಿ ನೇಮಿಸುವವರಾಗಿದ್ದಾರೆಂದು ಕೇಳಿ ಕೆಲವು ತಿಂಗಳು ಕಳೆದುಹೋದುವು. ಆದರೆ ಇನ್ನೂ ಆ ಪ್ರಕಾರ ಆಚರಣೆಗೆ ಬಂದಂತೆ ಕಾಣಲಿಲ್ಲ. ಇದು ನಡೆದರೆ ಜನರಿಗೆ ನಾನಾ ಪ್ರಯೋಜನಗಳುಂಟೆಂಬುವದರಲ್ಲಿ ಸಂದೇಹವಿಲ್ಲ. ಆಚರಣೆಗೆ ತರುವರೋ ? ಹಾಗಿಲ್ಲವಾದರೆ ಯಾವಾಗ ?

ದೇಶಹಿತೈಷಿ.

ಗವರ್ನ್‌ಮೆಂಟ್ ಟ್ರೈನಿಂಗ್ ಕಾಲೇಜ್.

ಅಯ್ಯಾ,—ನವಂಬರು ತಾ 16 ಆದರೂ ಕಳೆದ ತಿಂಗಳಿನ ಸ್ಕಾಲರ್‌ಷಿಪ್ಪು ಇನ್ನೂ ಪಾವತಿಯಾಗಿಲ್ಲ. ನಾವು ಕೆಲಸದ ಮೇಲೆ ಹಳ್ಳಿಯ ಸ್ಕೂಲುಗಳಲ್ಲಿರುವಾಗಲೂ 8-10 ರೊಳಗಾಗಿ ಸಂಬಳ ಪಾವತಿಯಾಗುತ್ತಿತ್ತು. ನಮ್ಮ ಸ್ಥಿತಿಯನ್ನು ಯೋಚಿಸುವವರೇ ಇಲ್ಲ. ಕೇಳಿಕೊಂಡರೆ ತಾನಾಗಿಯೇ ನಾವೇ ಕರೆಸಿಕೊಡುತ್ತೇವೆಂದು ಹೇಳುವರು. ಪದೇ ಪದೇ ಇದೇ ರೀತಿಯಾಗಿ ತೊಂದರೆಯನ್ನನುಭವಿಸುತ್ತಿದೇವೆ. ತುಂಬಾ ಕುಟುಂಬಿಗಳಾಗಿಯೂ, ಬಡವರಾಗಿಯೂ ಇರುವ ಅಲ್ಪ ನೌಕರರುಗಳಾದ ನಮ್ಮ ಮೊರೆಯನ್ನು ವಿಚಾರಿಸಿ ಕಾಪಾಡುವ ಧರ್ಮಪ್ರಭುಗಳಾರೂ ಇಲ್ಲವೇ ?

ವಿದ್ಯಾರ್ಥಿಗಳು.

[ಸ್ಕಾಲರ್‌ಷಿಪ್ಪುಗಳನ್ನು ಬೇಗನೆ ಪಾವತಿಮಾಡದಿದ್ದರೆ ಪರಸ್ಥಳಗಳ ವಿದ್ಯಾರ್ಥಿಗಳಿಗೆ ಬಹಳ ತೊಂದರೆ.—ಎಡಿ.]

ಕಾವೇರಿ ಪಲಾವ್ ಕಾಮಗಾರಿ ಕ್ಯಾಂಪಿನಲ್ಲಿ ವರ್ತಕರಿಗೆ ನಷ್ಟ—ಜವಾಬು.

ಅಯ್ಯಾ,—ತಮ್ಮ ಕಳೆದ ವಾರದ ಪತ್ರಿಕೆಯ ಫ್ರೆಂಚ್ ರಾಕ್ಸ್ ವರ್ತಮಾನದಲ್ಲಿ ಕನ್ನಂಬಾಡಿ ಕಟ್ಟೆಯ ಕಂತೆಗೆ ಫ್ರೆಂಚ್ ರಾಕ್ಸ್ ಕಡೆಯಿಂದಲೂ, ಇತರ ಕಡೆಯಿಂದಲೂ ವ್ಯಾಪಾರ ಮಾಡಲಿಕ್ಕೆ ಬರುವ ವರ್ತಕರನ್ನು ಅಲ್ಲಿಯ ಒಡ್ಡರು ತೊಂದರೆಪಡಿಸುವದಲ್ಲದೆ ಅಂಗಡಿಗಳನ್ನೂ ಸಹಾ ಲೂಟಿಮಾಡುತ್ತಾರೆಂತಲೂ, ಇದನ್ನು ಅಲ್ಲಿಯ ಅಧಿಕಾರಿಗಳು ಕ್ರಮಪಡಿಸ್ಸಾರೆಂದೂ ನಮೂದಿಸಿರುತ್ತೆ. ಇಲ್ಲಿ ಅಂಥಾ ಅಕ್ರಮಗಳೇನೂ ನಡೆಯುವದಿಲ್ಲ. ಅಲ್ಲದೆ ನಮ್ಮ ಪೊಲೀಸ್ ಇನ್‌ಸ್ಪೆಕ್ಟರವರೂ ಜವಾಬ್ದಾರರೂ ಡಾಕ್ಟರವರೂ ತುಂಬಾ ಮುತುವರ್ಜಿ ವಹಿಸಿ ಬಂದ ವರ್ತಕರಿಗೆಲ್ಲಾ ಅನುಕೂಲವನ್ನು ಕಲ್ಪಿಸಿಕೊಟ್ಟಿರುವದಲ್ಲದೆ ತಾವ್ವೂ ಇದ್ದು ನೋಡಿಕೊಳ್ಳುತ್ತಿದಾರೆ. ಪತ್ರಿಕೆಯಲ್ಲಿ ನಮೂದಿಸಿರುವಂತೆ ಏನೂ ತೊಂದರೆ ಉಂಟಾಗುತ್ತಿಲ್ಲ. ಮೇಲ್ಕಂಡ ಫ್ರೆಂಚ್ ರಾಕ್ಸ್ ಬಾತ್ಮಿದಾರರು ಈ ರೀತಿಯಾದ ಬಾತ್ಮಿಯನ್ನು ಬರೆದರೆ ಜನಗಳಿಗೂ ವ್ಯಾಪಾರಸ್ಥರಿಗೂ ಬರುವದಕ್ಕೆ ಕೊಂಚ ಅನುಮಾನವುಂಟಾಗುವದರಲ್ಲಿ ಏನೂ ಅಡ್ಡಿ ಇರುವದಿಲ್ಲ. ಇನ್ನು ಮುಂದಾದರೂ ಈ ರೀತಿಯಾದ ಬಾತ್ಮಿಯನ್ನು ಪ್ರಕಟಿಸಲಿಕ್ಕೆ ಅವರು ಖಂಡಿತವಾಗಿಯೂ ಬರಸುವದಿಲ್ಲವೆಂದು ನಾನು ನನ್ನ ಸ್ವಂತ ಅನುಭವದಿಂದ ಹೇಳುತ್ತೇನೆ.

ಒಬ್ಬ ಕನ್ನಂಬಾಡಿ ವಾಸಸ್ಥ.

ಪಂಜಿನ ಹುಡುಗರಂತೆ.

ಅಯ್ಯಾ,—ತರೀಕೆರೆ ಪ್ರಾಂತ್ಯದ ಗ್ರಾಮಗಳಲ್ಲಿ ದೀಪಾವಳಿ ಹಬ್ಬ ಕಾಲದಲ್ಲಿ ಆಯಾ ಗ್ರಾಮದ ಯೌವನಸ್ಥರು, ಚಿಕ್ಕ ಹುಡುಗರು, ಮುಖ್ಯ ಸ್ಕೂಲು ಹುಡುಗರು ರಾತ್ರಿಕಾಲದಲ್ಲಿ ಮೂರು ದಿನಗಳ ವರಿಗೂ ಪ್ರತಿ ಮನೆಗೆ ಹೋಗುವದು, ಆ ಮನೆಯ ಹೆಣ್ಣು ಮಕ್ಕಳನ್ನು ಬೈಯ್ಯುವದು, ಗಂಡ ಹೆಂಡತಿಯರನ್ನು ಹೀನಾವಮಾನವಾಗಿ ಹಾಸ್ಯಮಾಡುವದು, ದೂಷಿಸುವದು, ಬೈಯುವದು, ಹೀಗೆಲ್ಲಾ ಮಾಡುತ್ತಾರೆ. ದುಡ್ಡು ಕೊಟ್ಟರೆ ಹೀನವಾದ ಮಾತುಗಳಿಂದ ಆಶೀರ್ವಾದ ವಚನ ಹೇಳುವರು. ಇವರಿಗೆ ಪ್ರತಿ ಊರಿನಲ್ಲಿರುವ ದೊಡ್ಡವರೂ ಸಹಾಯಕರು. ಹಾಗೂ ಯಾರಾದರೂ ಇವರ ಮಾತುಗಳಿಗೆ ಬೇಸತ್ತು ಗದರಿಸಿದರೆ ಜಗಳಕ್ಕೆ ಬರುವಷ್ಟು ಮಟ್ಟಿಗೆ, ಮೇಲೆ ಬೀಳುವಂತೆ ಮಾತನಾಡುವದೂ ಉಂಟು. ನಾಗರಿಕಕಾಲದಲ್ಲಿ ಈ ಸ್ಥಿತಿ ಹೀನವಾದದ್ದು. ಅಲ್ಲದೆ ಈ ವಿಚಾರದಲ್ಲಿ ಒಂದು ಊರಲ್ಲಿ ಈ ರೀತಿಯಾದ ನಡವಳಿಕೆಯೂ ಮಾತುಗಳೂ ಯೋಗ್ಯವಲ್ಲವೆಂದು ಕೆಲವರೂ, ಕೆಲವರು ಸರಿಯೆಂದೂ ಹೇಳಿ ಪಂಚಾಯಿತಿಯು ಸುತ್ತಮುತ್ತಿನ ಗ್ರಾಮದಲ್ಲಿ ನಡೆದದ್ದೂ ಉಂಟು. ಸರ್ಕಾರದವರು ಊರಿನ ಪಟೇಲರೇ ಆದಿಯಾಗಿ ಸಮಸ್ತರಿಗೂ ಖಂಡಿತವಾಗಿ ಅಪ್ಪಣೆ ಕೊಟ್ಟು ನಿಲ್ಲಿಸುವದು ಉತ್ತಮ. ಅಲ್ಲದೆ ಪುನಃ ಸ್ಕೂಲು ಹುಡುಗರೂ ಇತರರೂ ಸೇರಿದರೆ ಅಂಥಾ ಸ್ಕೂಲ್ ಪಜಾ ಮಾಡುವದೂ, ಇತರ ಯೌವನಸ್ಥರಿಗೆ ತಕ್ಕ ಶಿಕ್ಷೆ ಮಾಡುವದೂ, ತಂದೆ ತಾಯಿಗಳಿಗೆ ತಕ್ಕಷ್ಟು ಶಿಕ್ಷೆ ವಿಧಿಸುವದೂ ಒಳ್ಳೇದು. ಸರ್ಕಾರದವರು ಹೀಗೆ ಮಾಡದಿದ್ದರೆ ಜನರಲ್ಲಿ ಸತ್ಯತೆಯೂ, ಒಳ್ಳೇತನವೂ ಹುಟ್ಟಲಾರದು. ಮತ್ತು ಹುಡುಗರು ಬಾಲ್ಯದಲ್ಲಿಯೇ ನೀಚ ಬುದ್ಧಿಯುಳ್ಳವರಾಗಲು ಅವಕಾಶವಿದೆ.

ಪ್ರತ್ಯಕ್ಷ ದರ್ಶಿ.

ದೊಡ್ಡಬಳ್ಳಾಪುರ ತಾ|| ಆನೂಡಿ ಸ್ಕೂಲು.

ಅಯ್ಯಾ,—ನಮ್ಮ ವಿ. ಇ. ಸ್ಕೂಲಲ್ಲಿ 4 ತಿಂಗಳು ಮಾತ್ರ ಅ|| ಮಾಸ್ಟರಾಗಿ ಬಂದಿದ್ದ ನಾಲಯ್ಯನವರ ಮೆಹನತ್ತಿನಿಂದ ತುಂಬಾ ಅಭಿವೃದ್ಧಿಗೆ ಬರುವಂತೆ ತೋರಿತು. ವಜ್ರಕುಂಠ ರೈತರಿಗೂ ಪ್ರಾಜ್ಞರಿಗೂ ಆಸಕ್ತಿ ಹೆಚ್ಚಿತ್ತು. ಫ್ರೀ ರೀಡಿಂಗ್ ರೂಮ್ ಸಹಾ ಸ್ಥಾಪಿತವಾಯಿತು. ಇಂಗ್ಲಿಷ್ ಗ್ರಾಂಟು ಸ್ಕೂಲಿಗೂ ಅಸ್ತಿಭಾರ ಹಾಕಲು ಉಪಕ್ರಮವಾಯಿತು. ಇತ್ಯಾದ್ಯುತ್ಸಾಹಗಳು ಅವರ ನಿರ್ಗಮನದಿಂದ ಬಿಟ್ಟು ಬಯಲಾದುವು. ದಿವಾನ್ ಸಾಹೇಬರ ಮೊರೆಗೂ ಪ್ರಜೆಗಳು ಅವರನ್ನಿಲ್ಲೇ ನಿಲ್ಲಿಸಿಕೊಡಲು ಪ್ರಾರ್ಥಿಸಿದರು. ಆ ಅರ್ಜಿಗಳನ್ನು ಕೇಳುವವರೇ ಇಲ್ಲ. ಹೆಡ್ ಮಾಸ್ಟರಂತೂ ಅವರ ನಂತರ ತತ್ಪ್ರಾಪ್ತಿ ಸುಮಾರು 3 ತಿಂಗಳಿಂದ ಹಾಜರೇ ಇಲ್ಲ ; ಬಾಯಿಲೆ ಇರುವರೆಂದು ವದಂತಿ. ಹಾಜರಿದ್ದರೂ ವಿದ್ಯಾಭಿವೃದ್ಧಿಯಲ್ಲಿ ಕಟಕ್ಷರೇ. ಬಾಲಕರ ಸಂಖ್ಯೆ ಹೆಚ್ಚುತ್ತಿದ್ದುದು ಕ್ಷೀಣವಾಗುತ್ತಿದೆ. ಕಮಿಟಿ ಮೆಂಬರುಗಳ ಮಾತಿನ ತೂಕವೇ ಇವರಿಗಿರುವಂತೆ ತೋರದು. ತನಿಖೆ ಆಫೀಸರು ಸಿಗವೇ ಕೊಡುವಂತಿಲ್ಲ. ಹೆಚ್ಚು ಹೇಳುವದೇನು ಗ್ರಾಮಕ್ಕೇ ಕೆಟ್ಟ ಆಪವಾದ. ಇನ್ನೊಂದು ಕಡೆ ಹುಡುಗರನ್ನು ಕಳುಹಿಸಿ ವಿದ್ಯಾ ಕಲಿಸುವಷ್ಟು ಶಕ್ತಿ ಪ್ರಜೆಗಳಿಗಿಲ್ಲ. ಸ್ಥಳದ ಕಿರುಕುಳಗಳಿಗೆ ಪಾರವಿಲ್ಲ. ಶಕ್ತಿಗಳ ಖರ್ಚುಟು ಬೇರೆ. ಬಂದವರೂ ಯಾವುದಾದರೊಂದು ಕಡೆ ನಿಲ್ಲಬೇಕಾಗುತ್ತೆ. ಏರ್ಪಡಿಸಿದ ಪಾಠಶಾಲೆ ಸರ್ಕಾರದವರ ಸಹಾಯ ಸರ್ವರಿಗೂ ದೊರೆಯದಂತಾಗಿದೆ. ಅರ್ಜಿಗಳು ಬರೆದರೆ ವಿಚಾರಿಸುವವರೇ ದಿಕ್ಕಿಲ್ಲ ; ಇಲ್ಲವೇ ಅಧಿಕಾರಿಗಳ ದಬಾವಣೆ ಬಲ. ನ್ಯಾಯಾನ್ಯಾಯ ವಿಮರ್ಶೆ ಈ ಇಲಾಖೆಯಲ್ಲೇ ಇಲ್ಲವೆಂದು ಆಡಿಕೊಳ್ಳುತ್ತಾರೆ. ಈ ಅವಸ್ಥೆ ಎಂದಿಗೆ ಹೋಗುವುದೋ ತಿಳಿಯದು. ಅಂತೂ ನಮ್ಮ ಸ್ಕೂಲಿಗೆ ಶಕ್ತರಾದ ಮಾಸ್ಟರುಗಳು ಬಂದ ಹೊರತು ಅಭಿವೃದ್ಧಿಗೆ ಬರಲಾರದು.

ವಿದ್ಯಾಭಿಮಾನಿ.

ನಾಲ್ಕೈದು ತಿಂಗಳಾದರೂ ಸಂಬಳವೇ ಇಲ್ಲವಂತೆ.

ಅಯ್ಯಾ,—ಹಳ್ಳಿ ಹಳ್ಳಿ ಮಠಗಳಿಗೆ ಗ್ರಾಂಟುಕೊಡುತ್ತೇವೆಂದು ಅನೇಕ ಗ್ರಾಮಗಳಲ್ಲಿ ಗ್ರಾಂಟು ಸ್ಕೂಲುಗಳನ್ನು ಸ್ಥಾಪಿಸಿ, ಸ್ಕೂಲುಗಳಿಗೆ ಲೋವರ್ ಸೆಕೆಂಡರಿ ಪ್ಯಾಸಾದವರಿಗೆ ಮಾಹೆಯಾನ ಏಳು ರೂಪಾಯಿನ ತಲಬಿನ ಮೇಲೆಯೂ, ಪ್ಯಾಸಾಗದೆ ಇದ್ದವರಿಗೆ ಐದು ರೂಪಾಯಿನ ತಲಬಿನ ಮೇಲೆಯೂ ಏಡೆಡ್ ಸ್ಕೂಲ್ ಮಾಸ್ಟರಾಗಿ ಚುನಾಯಿಸಿ ಹುಕುಂ ಸಹ ಕಳುಹಿಸಿರುವದು ಸರಿಯಷ್ಟೆ. ಸದರಿ ಮಾಸ್ಟರುಗಳು ನಾಲ್ಕು ಐದು ತಿಂಗಳಿಂದ ಕೆಲಸಮಾಡಿದರೂ ಇನ್ನೂ ತಲಬೇ ಪಾವತಿಯಾಗಿಲ್ಲ. ತಲಬು ಕೊಡಿಸಿಕೊಡಬೇಕೆಂದು ಅನೇಕಾವರ್ತಿ ರಿಪೋರ್ಟು ಮಾಡಿಕೊಂಡಾಗ್ಯೂ ಯೆಡ್ಯುಕೇಷನ್ ಡಿಪಾರ್ಟ್‌ಮೆಂಟಿನವರು ಗಮನಕ್ಕೆ ತಾರದೇ ಇರುವದನ್ನು ನೋಡಿದರೆ ತುಂಬಾ ಶೋಚನೀಯವಾಗಿರುತ್ತದೆ. ಹೀಗೆ ಮಾಡಿದರೆ ಬಡ ಮಾಸ್ಟರುಗಳ ಗತಿಯೇನು ? ಈ ಬಡ ಮಾಸ್ಟರುಗಳಿಗೆ ಗೌರ್ನಮೆಂಟಿನವರು ಗ್ರಾಂಟುಕೊಡುತ್ತೇವೆಂಬದಾಗಿ ಹುಕುಂ ಕೊಟ್ಟಿದ್ದಲ್ಲದೆ ಗ್ರಾಮಸ್ಥರಿಗೂ ಸಹ ಧನಧಾನ್ಯ ರೂಪವಾಗಿ ಗೌರ್ನಮೆಂಟ್ ಆರ್ಡರ್ ಪ್ರಕಾರ ಐದು ರೂಪಾಯಿ, ಮೂರು ರೂಪಾಯಿನಂತೆ ಕೊಡಬೇಕೆಂದು ಹುಕುಂ ಕಳುಹಿಸಿದರು. ಸದರಿ ಗ್ರಾಮಸ್ಥರು ನಮಗೆ ಸರ್ಕಾರಿ ಸಂಬಳವೂ ಮಾಹೆಯಾನ ಬರುವದರಿಂದ ನಾವು ಕೊಡಬೇಕಾದುದನ್ನು ಕಂತು ಕೊಡುತ್ತೇವೆಂದು ಹೇಳುವದರ ಮೂಲಕ ಸಂತುಷ್ಟರಾಗಿರುತ್ತವೆ. ಹೀಗಾದರೆ ಈ ಬಡ ಮಾಸ್ಟರುಗಳು ಎಷ್ಟು ಶ್ರದ್ಧೆಯಿಂದ ಕೆಲಸಮಾಡ ಬಲ್ಲರು ? ಇವರ ಸಂಸಾರವು ಎಷ್ಟು ಸುಖವಾಗಿ ನಡೆಯುತ್ತಿರುವುದು ? ಈ ವಿಷಯವನ್ನು ನಮ್ಮ ಗೌರ್ನಮೆಂಟಿನವರು ಗಮನಕ್ಕೆ ತೆಗೆದುಕೊಳ್ಳಬೇಕು ಎರಡು ಕೊಡಬೇಕಾದವನ್ನು ಕಾದ ದಯವಿಟ್ಟು ಸಂತೆ ಬಡ ಈ ಬಡ ಮಾಸ್ಟರುಗಳ ಸ್ಥಿತಿಯನ್ನು ನಮ್ಮ ಗೌರ್ನಮೆಂಟಿನವರು ಅನುಗ್ರಹಿಸಿ ತರುತ್ತಾರೆ, ಈ ಕಷ್ಟವನ್ನು ಪರಿಹರಿಸುತ್ತಾರೆಂತ ನಂಬಿದೇನೆ.

ಪ್ರತ್ಯಕ್ಷ ದರ್ಶಿ.

[ಇಂಥಾ ಬಾತ್ಮಿಯನ್ನು ಪ್ರಕಟಿಸಬೇಕಾಗಿದೆಯಲ್ಲಾ ಎಂದು ನಾವು ತುಂಬಾ ವಿಷಾದಪಡುತ್ತೇವೆ.—ಎಡಿ.]

ಮಲೆನಾಡು ಇಂಪ್ರೂವ್‌ಮೆಂಟ್.

ಅಯ್ಯಾ,—ಮೈಸೂರು ಸರ್ಕಾರದವರು ಮಲೆನಾಡು ಕೇವಲ ಹೀನಸ್ಥಿತಿಯಲ್ಲಿರುತ್ತಂತ ಇಂಪ್ರೂವ್‌ಮೆಂಟು ಸ್ಕೀಂ ಏರ್ಪಡಿಸಿ ವಿಶೇಷ ಹಣ ಖರ್ಚು ಮಾಡುತ್ತಾ ಇರುವರು. ಒಳ ಆವರಣೆಗಳನ್ನು ಪರಿಶೋಧಿಸಿ ನೋಡಿದರೆ ತೃಪ್ತಿಕರವಾಗಿಲ್ಲ. ಈ ಮಲೆನಾಡು ಇಂಪ್ರೂವ್‌ಮೆಂಟು ಸ್ಕೀಂ ಆಫೀಸರು ಕೇವಲ ಹೀನಸ್ಥಿತಿಯಲ್ಲಿರುವ ಗ್ರಾಮ ಸಂಚಾರಮಾಡಿ ಅಂಥಾ ಸ್ಥಳದಲ್ಲಿ ನೀರು, ಗಾಳಿ, ಆಹಾರ ಮುಂತಾದ ವಿಷಯದಲ್ಲಿ ಅವಶ್ಯವಾಗಿ ಆಗಬೇಕಾದ ಏರ್ಪಾಡುಗಳನ್ನು ಮಾಡಿಸಲೂ, ಮಾಡುವುದಕ್ಕೆ ಉದ್ಯುಕ್ತಪಡುವವರಲ್ಲಿಯೂ ಇಲ್ಲ. ಅನೇಕ ಗ್ರಾಮಾಂತರಗಳಲ್ಲಿ ಬಡರೈತರು ಗೊಂಟೆ ಗೊಂಡವ ನೀರು ಕುಡಿದು, ಗೊಬ್ಬರ ಮುಂತಾದ ಗಲೀಜು ಸ್ಥಳದಲ್ಲಿ ಗಾಳಿಯಿಲ್ಲದೇ ಇರತಕ್ಕ ಮನೆಗಳಲ್ಲಿ ವಾಸಮಾಡುತ್ತಾ, ಮಲೇರಿಯಾ ಜ್ವರ ಮುಂತಾದ ಕಾಹಿಲೆಯನ್ನು ಅನುಭವಿಸುತ್ತಾರೆ. ಹೀಗೆ ಕಷ್ಟಪಡುವ ಗ್ರಾಮಾಂತರಗಳಿಗೆ ಕುದುರೆಗಾಡಿ ಹೋಗಿಬರಲು ರಸ್ತೆಗಳು ಇಲ್ಲದೇ ಇರುವವರಿಂದ ಯಾವ ಆಫೀಸರುಗಳ ದೃಷ್ಟಿಗೂ ಇಂತಹ ಗ್ರಾಮಗಳು ಬಿದ್ದಿಲ್ಲ. ಸರ್ಕಾರಿ ರಸ್ತೆಬದಿಯಲ್ಲಿ ದೊಡ್ಡ ಜಮಾಸ್ಥರುಗಳಿಗೆ ಮಾತ್ರ ಅನುಕೂಲವಾಗುವಂತೆ ಕೆಲವು ಬಾವಿಗಳನ್ನು ಮಾತ್ರ ಈ ಇಂಪ್ರೂವ್‌ಮೆಂಟು ಸ್ಕೀಮಿನ ಹಣದಿಂದ ಮಾಡಿಸಿಕೊಟ್ಟಿದ್ದು, ಮತ್ತು ಕೆಲವು ಗಿಡ ಗಿಜರು ಕಡಿಸಿರುವದು ವಿನಹಾ ರಸ್ತೆಗೆ ಬಹು ದೂರದಲ್ಲಿರುವ ಹಳ್ಳಿಗಳ ಅವಸ್ಥೆಯನ್ನು ಯಾರು ನೋಡಬೇಕು. ಇಂತಹ ಆಫೀಸರುಗಳು ಮಾಡುವ ರಿಪೋರ್ಟುಗಳನ್ನು ಸರ್ಕಾರದವರು ಒಪ್ಪಿಕೊಂಡಂತೆ ಕಾಣುತ್ತೆ. ಸ್ಥಳದಲ್ಲಿ ಅಜಮಾಯಿಷಿ ನೋಡಿದರೆ ಈ ಸುಧಿ ದುಃಖಗಳ ತಾರತಮ್ಯವು ತಿಳಿಯುತ್ತೆ. ಸ್ಥಳೀಯ ಮುಖಂಡರಲ್ಲಿ ಕೆಲವರು ಅಧಿಕಾರಿಗಳು ಕೇವಲ ಸ್ನೇಹಭಾವದಿಂದಿರುವವರಿಂದ ನ್ಯೂನತೆಗಳು ಸರ್ಕಾರಕ್ಕೆ ವೇದ್ಯವಾಗುವದಿಲ್ಲ. ಬಡರೈತರು ಏನು ಕೂಗಿದರೂ ಯಾರೂ ಕೇಳುವದಿಲ್ಲ. ಸರ್ಕಾರದ ಹಣವನ್ನು ಹೀಗೆ ದುರ್ವಿನಿಯೋಗಮಾಡಿ, ಉದ್ದೇಶವೂ ನೆರವೇರದೇ ಹೋಗುವುದಲ್ಲಾ ಎಂಬ ಪಶ್ಚಾತ್ತಾಪವು ಜನಗಳಲ್ಲಿ ತುಂಬಿರುವದು. ಸರ್ಕಾರದವರು ದಯವಿಟ್ಟು ಪ್ರಜೆಗಳಿಗೆ ಈ ಭಾಗದಲ್ಲಿ ಸಾಧ್ಯವಾದಷ್ಟು ಅನುಕೂಲಗಳನ್ನು ಇನ್ನು ಮುಂದಾದರೂ ಕಲ್ಪಿಸಿಕೊಡುತ್ತಾರೆಂದು ನಂಬಿರುತ್ತಾರೆ.

ಕೆ ರಾಘವೇಂದ್ರರಾವ್

[ಸರ್ಕಾರದವರು ಮಾಡತಕ್ಕ ಕಾರ್ಯಗಳು ಸಾರ್ಥಕವಾಗಬೇಕಾದರೆ ಬೇಕಾಗುವವೆಂದು ಎಲ್ಲರಿಗೂ ತಿಳಿದಿದೆ. ಪ್ರಜೆಗಳು ಸ್ವಸಹಾಯಿಗಳಾಗುವ ತನಕ ಅಭಿವೃದ್ಧಿಯು ಸಾಧ್ಯವಲ್ಲ. ಸರ್ಕಾರದವರ ಕಾರ್ಯಗಳನ್ನೇ ಎದುರು ನೋಡಿಕೊಂಡಿದ್ದರೆ ಹೀಗೇ ಆದೀತು.—ಎಡಿ.]

"ಜನಮರುಳೋ, ಜಾತ್ರೆಮರುಳೋ ?"

ಅಯ್ಯಾ,—ನಮ್ಮ ಕೊಪ್ಪ ತಾಲ್ಲೂಕು ಕುಂಬಾರಕೊಪ್ಪ ಹಿರಿಕೊಡಿಗೆ ಗ್ರಾಮಕ್ಕೆ ಈಗ ನಾಲ್ಕಾರು ತಿಂಗಳ ಹಿಂದೆ ದಕ್ಷಿಣ ಕನ್ನಡ ಕಾರ್ಕಳ ತಾಲ್ಲೂಕು ಕಡೆಯಿಂದ ಎರಡು ಜನ ಬ್ರಾಹ್ಮಣರು ಬಂದರು. ಇವರು ಜಾತಕ ಬರೆಯುವದರಲ್ಲೂ, ಕವಡೆಗಳನ್ನಿಟ್ಟು ಪಂಚಾಂಗನೋಡುವುದರಲ್ಲೂ, ಮಾಟ ದೈವ್ಯ ಕಿತ್ತು ಎಸೆಯುವುದರಲ್ಲೂ ಗಟ್ಟಿಗರೆಂದು ಹೆಸರುವಾಸಿಯಾಗಿ, ಇವರ ಹೆಸರು ಅಮ್ಮಡಿಯಿಂದ ತೀರ್ಥಹಳ್ಳಿ ಗಡಿ ಕಲ್ಲಿನವರೆಗೂ ಹರಡಿಕೊಂಡಿತು. ಆಗ ಈ ಊರಿನ ಗೌಡರು ಆದಿಯಾಗಿ ಆ ಬ್ರಾಹ್ಮಣರನ್ನು ಸಂತೋಷದಿಂದ ಕಂಡು,—"ಮಹಾಸ್ವಾಮಿ, ನನ್ನ ಮನೆಗೆ ಮಾಟ ಕೃತ್ಯ ಮಾಡಿದ್ದನ್ನು ಕಿತ್ತುಕೊಡಬೇಕು," ಇನ್ನೊಬ್ಬರು—"ದೈವ್ಯ ಬಿಡಿಸಿಕೊಡಬೇಕು ;" ಮತ್ತೊಬ್ಬರು,—"ನಮ್ಮ ಮಕ್ಕಳ ಜಾತಕ ಬರೆದುಕೊಡಬೇಕೆಂದು" ಹೇಳಿದ್ದಕ್ಕೆಲ್ಲಾ ಒಪ್ಪಿಕೊಂಡು, ಒಂದೊಂದು ದಿನ ಅವರ ಮನೆಗೆ ಹೋಗಿ ಗೌಡರು ಹೇಳಿದಂತೆ ಮಾಟ ದೈವ್ಯ ನಾಶನಮಾಡುತ್ತೇವೆಂದೂ, ಅದಕ್ಕೆ ಬೇಕಾಗುವ ಸಾಮಗ್ರಿಗಳನ್ನು ಒದಗಿಸಿಕೊಡಬೇಕೆಂದೂ, ಬ್ರಾಹ್ಮಣರು ಹೇಳಿದ ಮೇರಿಗೆ ಗೌಡರೂ ನಾಯಕರೂ ಒದಗಿಸಿಕೊಟ್ಟು ಮಾಟ ದೈವ್ಯ ಕಿತ್ತುದಾಯಿತು. ಬ್ರಾಹ್ಮಣರ ದಕ್ಷಿಣೆಯು ಜೇಬುಕಡೆ ಬಿತ್ತು. ನಾಯಕರು ಐವತ್ತು ರೂಪಾಯಿ ಕೊಟ್ಟರು. ಮನೆಮುಂದಿಗೆ ಕಾಹಿಲೆ ಕಷ್ಟ ಇಲ್ಲ. ಇದೇ ರೀತಿಯಲ್ಲಿ ಈ ಬ್ರಾಹ್ಮಣರು ಈ ಗ್ರಾಮದಿಂದ ನೂರಾರು ರೂಪಾಯಿಗಳನ್ನು ತೆಗೆದುಕೊಂಡು ಬೇರೆ ಕಡೆ ಪಯಣ ಬೆಳಸಿದ್ದಾರೆ. ಇದು ಹಾಗಿರಲಿ, ಮುಂದೆ ನೋಡೋಣ.

ಈಚೆಗೆ ಇನ್ನೊಬ್ಬರು ಬಂದಿದ್ದಾರೆ. ಇವರು ಕುಂದಾಪುರ ತಾಲ್ಲೂಕು ಕೋಟೇಶ್ವರದವರು. ಮರಗೆಲಸದ ಆಚಾರ್ಯರು (ಹೆಸರು ಗೊತ್ತಿಲ್ಲ). ಇವರು ಪೂರ್ವಿಕರು ಹೂಳಿಟ್ಟ ಗಂಟು ತೆಗೆಯುವುದರಲ್ಲಿ ಬಹಳ ಜಾಣರು. ಇವರನ್ನು ಒಬ್ಬ ಗೌಡರವರು ಅವರ ಮನೆಯಲ್ಲಿ ಪೂರ್ವಿಕರು ಹೂಳಿಟ್ಟ ಗಂಟು ತೆಗೆಯುವದಕ್ಕಾಗಿ ಸಂತೋಷದಿಂದ ಕರೆದುಕೊಂಡು ಹೋಗಿದ್ದರು. ಆಚಾರ್ಯರು ಮನೆಗೆ ತಲ್ಲಿದೊಡನೆಯೇ ಮನೆಯ ಗೋಡೆಯನ್ನೆಲ್ಲಾ ಬಡಿದು ನೋಡುವುದಕ್ಕೆ ಪ್ರಾರಂಭಿಸಿದರು. ಗೋಡೆಯು ಪ್ರತ್ಯುತ್ತರ ಕೊಡಲಿಲ್ಲ. ಆಸ್ವರಲ್ಲಿಯೇ ಮನೆ ಯಜಮಾನರೊಂದಿಗೆ—"ಗೌಡರೇ, ಪೂರ್ವಿಕರು ಹಣವನ್ನು ಹೂಳಿಟ್ಟ ಸ್ಥಳವು ನಿಮಗೆ ಗೊತ್ತುಂಟೇ, ಹೇಳಿರಿ ಎಂದು ಆಚಾರ್ಯರು ಕೇಳಲು ;—ಹೌದು, ಇದೇ ಗೋಡೆಯಲ್ಲಿ ಇದೆ ಎಂದು ಹೇಳಿದ್ದಾರೆ ಎಂದು ಯಜಮಾನರು ಹೇಳಿದ್ದಕ್ಕೆ, ಆಚಾರ್ಯರು ಹಾರೆಕೋಲಿನಿಂದ ಅಗೆಯುವುದಕ್ಕೆ ಪ್ರಾರಂಭಿಸಿದರು. ಗಂಟು ಸಿಕ್ಕಲಿಲ್ಲ, ಆಚಾರ್ಯರ ಗುಟ್ಟು ಹೊರಕ್ಕೆ ಬಿತ್ತು. ಆಚಾರ್ಯರು ಇಲ್ಲೇ ಸಮೀಪದಲ್ಲಿ ಅಲೆಯುತ್ತಿದ್ದಾರೆ. ಮನೆಯಲ್ಲಿ ಹೂಳಿಟ್ಟ ಗಂಟು ತೆಗೆಯಬೇಕಾದರೆ ಇನ್ನೊಬ್ಬರು ಬೇಕೇ ? ಈ ಮರುಳಾಟಕ್ಕೆ ಏನು ಹೇಳೋಣ ? ಇದಲ್ಲವೇ ಜನಮರುಳು ! ತಂತ್ರಶಾಸ್ತ್ರಿಯರು ಆಗಲಿ, ಗಾಡಿಗರು ಆಗಲಿ, ಮಾಟ ದೈವ್ಯ ಕಿತ್ತಿಸದು ನಮಗೆ ಬಂದಿರುವ ವಿಪತ್ತನ್ನು ಹೋಗಲಾಡಿಸುತ್ತೇವೆಂದು ಹೇಳಿದರೂ ಕೂಡ ಈ ನವನಾಗರಿಕ ಕಾಲದಲ್ಲಿ ಯಾರೂ ನಂಬತಕ್ಕದ್ದಾಗಿ ಕಾಣುವುದಿಲ್ಲ. ಇದರಿಂದ ಅನೇಕ ದ್ರವ್ಯ ವ್ಯಯವಾಗಿ ಹೋಗುವುದಲ್ಲದೆ ಇನ್ನೇನೂ ಪ್ರಯೋಜನವಿಲ್ಲವೆಂದು ಇದರಿಂದ ಸೂಚಿಸುತ್ತೇನೆ.

ಬಾತ್ಮಿದಾರ್.

ರೈತರ ಮತ್ತು ಗೋಕಾಯಿಗಳ ಕಷ್ಟ

ಅಯ್ಯಾ,—ಚಿತ್ರದುರ್ಗ ತಾಲ್ಲೂಕು ಕರ್ಣಬೇವು ಪ್ರಾಂತ್ಯ ಕಳೆದ ಸಾಲಿನಲ್ಲಿ ಮುಂಗಾರು ಮಳೆ ಇಲ್ಲದೆ ಹಿಂಗಾರು ಮಳೆಗಳಲ್ಲಿಯೂ ಕೂಡ ತುಸಾರುವೃಷ್ಟಿಗಳಿಂದ ಒಕ್ಕಲತನಕ್ಕೆ ದವಸಧಾನ್ಯದ ಮತ್ತು ಮೇವಿನ ಬಂಡವಾಳವು ಬಹಳ ಮಟ್ಟಿಗೆ ಕಡಮೆಯಾಗಿತ್ತು. ಈ ಸಾಲಿನಲ್ಲಿಯೂ ಕೂಡ ಮುಂಗಾರು ಮಳೆಯು ಸುತರಾಂ ಬೀಳಬೇ ಇಲ್ಲ. ಜುಲೈ ತಾ. 20 ರ ಲಾಗಾಯ್ತು ಒಂದು ಹದ ಮಳೆಯಾಯ್ತು. ಇದರಿಂದ ರೈತರು ರಾಗಿ ಸಜ್ಜೆ, ನವಣೆ, ಹತ್ತಿ, ತೊಗರಿ ಮೊದಲಾದುವುಗಳನ್ನು ಬಿತ್ತಿಕೊಳ್ಳುವದಕ್ಕೆ ಮಾರ್ಗ

...ಈ ಪವನ್ನೇನೇ ಮೇಲೆ ಹೇಳಿದ ಎಲ್ಲಾ ಬಿತ್ತನೆಗಳನ್ನೂ ಪೂರೈಸಿಕೊಂಡರು. ಆಗಸ್ಟು ತಾ. ೨೩ ರಲ್ಲಿ ಒಂದು ಹದ ಮಳೆಯಾಯ್ತು. ಇದರಿಂದ ಸಸಿಗಳಿಗೆ ಬಹಳ ಅನುಕೂಲವಾಯ್ತು. ರೈತರಿಗೆ ಹೆಡೆ ಹೊಡೆಯುವದಕ್ಕೆ ಅನುಕೂಲವಾಯ್ತು. ಸಸಿಗಳು ಪಾತ್ರ ಬಹಳ ಅಭಿವೃದ್ಧಿ ಸ್ಥಿತಿಯಲ್ಲಿದ್ದವು. ಸೆಪ್ಟೆಂಬರ್ ತಾ. ೧ ರಲ್ಲಿ ಕೂಡ ಒಂದು ಹದ ಮಳೆಯಾಯ್ತು. ಇದರಿಂದ ರೈತರು ತಮ್ಮ ಜಮೀನುಗಳಲ್ಲಿರುವ ಸಸ್ಯಾದಿಗಳನ್ನು ನೋಡಿ ಸಂತೋಷಪಡುತ್ತಾ, ಈ ವರ್ಷ ಜನಪದ ಸ್ವಾತಂತ್ರ್ಯವಾದ್ದರಿಂದ ಎಲ್ಲಾ ವಿಷಯದಲ್ಲಿಯೂ ಪ್ರಪಂಚ ದಲ್ಲೆಲ್ಲಾ ಆನಂದವು ತುಂಬುತ್ತಿರುವುದಾಗಿ ಹೇಳಿಕೊಳ್ಳುತ್ತಾ, ಮುಂದೆಯೂ ಇದೇ ರೀತಿ ಮಳೆ ಬರುವುದೆಂದು ಊಹಿಸಿ ತಮ್ಮ ಮನೆಗಳಲ್ಲಿದ್ದ ದವಸ ಧಾನ್ಯಗಳನ್ನು ಅಳೆದು ತಮ್ಮ ಜಮೀನುಗಳಲ್ಲಿರುವ ಕಳೆ ಕಾಸಿಗೆಗಳನ್ನು ತೆಗೆಸಿದರು. ಅದೇ ಮಾಸ ತಾ. ೩೦ ರಲ್ಲಿ ಸ್ವಲ್ಪ ನೆನೆಮಳೆಯಾಯ್ತು. ಇಲ್ಲಿಗೆ ಪೈರುಗಳೆಲ್ಲಾ ಎರಡು ತಿಂಗಳ ಪ್ರಾಯವುಳ್ಳವಾದ್ದರಿಂದ ಪೈರುಗಳಿಗೇನೂ ಪ್ರಯೋಜನವಾಗಲಿಲ್ಲ. ಯಾಕೆಂದರೆ ಈ ಸಲ ಆಗಸ್ಟ್ ವರೆಗೆ ಬಂದ ಮಳೆಗಳಿಂದ ಸಸ್ಯಗಳಿಗೆ ಅನುಕೂಲವಾಗಿತ್ತೇ ಹೊರತು ಕೆರೆ ಕುಂಟೆಗಳಿಗೆ ಮಾತ್ರ ನೀರು ಬರಲಿಲ್ಲ. ಆದ್ದರಿಂದ ಈ ಮಳೆಯಿಂದ ಪೈರುಗಳಿಗೂ ಕೂಡ ತೃಪ್ತಿಯಾಗಲಿಲ್ಲ. ಆ ಬಳಿಕ ಮತ್ತು ಆಕ್ಟೋಬರ್ ನಲ್ಲಿಯೂ ಬರೀ ಆಡಂಬರವಾದ ಮೋಡಗಳಾದುವೇ ಹೊರತು ಒಂದು ಹನಿಯಾದರೂ ಭೂಮಿಗೆ ಬೀಳಲಿಲ್ಲ. ಇದರಿಂದ ಪೈರುಗಳಿಗೆ ತೆನೆ ಬಿಟ್ಟಿದ್ದರೂ ಕಾಳು ಮಾಗದಿಲ್ಲದೆ ಕೆಲವು ಬಾಡುತ್ತಲೂ, ಕೆಲವು ಸಂಪೂರ್ಣ ಒಣಗಿಹೋಗುತ್ತಲೂ ಇವೆ. ಇದರಿಂದ ರೈತರಿಗೆ ಈ ವರುಷದ ಕಷ್ಟವು [illegible] ತಮ್ಮ ಮನೆಗಳಲ್ಲಿದ್ದ ದವಸ ಧಾನ್ಯಗಳನ್ನೂ ಕಳೆದುಕೊಂಡು [illegible] ಕಷ್ಟದಾಗಿ ಮುಂದಿನ ವರ್ಷ ಈ ಗ್ರಾಮದಲ್ಲಿ ಬಹಳ ಜನ ರೈತರು ಒಪ್ಪತ್ತು ತಿಂದು ತಿನ್ನುವರು. ಇದೇ ಕಾಲ ಕ್ಷಾಮಕಾಲವನ್ನೇ ಸೂಚಿಸುತ್ತದೆ.

ಮತ್ತು [illegible] ರೈತರಿಗೆ ಇನ್ನೊಂದು ಮುಖ್ಯವಾದ [illegible] ಅದು ಯಾವುದೆಂದರೆ ಜಾನುವಾರುಗಳಿಗೆ [illegible] ಮೇವೂ ನೀರೂ ಇಲ್ಲದೆ [illegible] ರೈತರಿಗೆ ಜಾನುವಾರುಗಳು ಮುಖ್ಯವಾದ ಒಂದು ಭಾಗವಾಗಿರುತ್ತವೆ. ಇವುಗಳಿಲ್ಲದಿದ್ದರೆ ರೈತರಿಗೆ ಯಾವ ಕೆಲಸಗಳೂ ನಡೆಯುವದಿಲ್ಲ. ಇಂತಹ ರೈತರು ಇವುಗಳನ್ನು ಕಾಪಾಡುವದಕ್ಕಾಗಿ ತಮಗೆ [illegible] ಒತ್ತಟ್ಟಿಗಿರಿಸಿ ತಮ್ಮ ಜಾನುವಾರುಗಳನ್ನು [illegible] ಕಾಡು ಪ್ರದೇಶಕ್ಕೆ [illegible] ಹೋಗಿರುತ್ತಾರೆ. ಅಲ್ಲಿಯೂ ಅವರ ತೊಂದರೆಗಳನ್ನು ಹೇಳತೀರದು. ಯಾಕೆಂದರೆ ಅಲ್ಲಿಯ ಫಾರೆಸ್ಟ್ ರೇಂಜರುಗಳು ದನ ಒಂದಕ್ಕೆ ನಾಲ್ಕಾಣೆ ಮೇಲೆ ಬನ್ನಿಯನ್ನು ಕೊಟ್ಟ ಮೇಲೆ ಕಾಡು ಬಿಡಗೊಡುವದಿಲ್ಲ. ಗ್ರಾಮದ ಗೋಮಾಳಗಳಲ್ಲಿ ಇರೋಣವೆಂದರೆ ಗ್ರಾಮದ ಪಟೇಲರುಗಳು ಕೂಡ ದನ ಒಂದಕ್ಕೆ ಮೇಲ್ಕಂಡಂತೆ ಬನ್ನಿಯನ್ನು ಕೊಟ್ಟರೆ ಸರಿ, ಇಲ್ಲವಾದರೆ ದೊಡ್ಡಿಗೆ ಹೊಡೆಯುತ್ತೇವೆಂತ ಹೇಳುತ್ತಾ, ಇಲ್ಲದಕ್ಕೂ ಕೂಡ ಸ್ವಲ್ಪ ಕಿರುಕುಳ ಮಾಡುತ್ತಾರೆ. ಮೇಲ್ಕಂಡ ಜಾನುವಾರುಗಳ ತೊಂದರೆಗಳನ್ನು ಹೋಗಲಾಡಿಸುವದಕ್ಕಾಗಿ ಒಂದು ಎರಡು ರೂಪಾಯಿಗಳನ್ನಾದರೂ ಕೊಡಬೇಕೆಂದರೆ ಹಣಗಳನ್ನು ಕೊಡುತ್ತೇವೆನ್ನುವರೇ ಇಲ್ಲದಂತಾಗಿದೆ. ಇದರಿಂದ ಮೇಲ್ಕಂಡ ತೊಂದರೆಗಳನ್ನೆಲ್ಲಾ ರೈತರು ಸಹಿಸುವದು ಬಹಳ ಕಷ್ಟವಾಗಿರುತ್ತದೆ. ನಮ್ಮ ದಯಾಳು ಸರ್ಕಾರದವರು ಜಾನುವಾರುಗಳಿಗಿರುವ ತೊಂದರೆಗಳನ್ನು ಹೋಗಲಾಡಿಸುವದಕ್ಕಾಗಿ ಸರ್ಕಾರಿ ಜಂಗಲುಗಳನ್ನು ಬಡ ರೈತರು ತಮ್ಮ ಜಾನುವಾರುಗಳನ್ನು ಮೇಯಿಸಿಕೊಳ್ಳುವದಕ್ಕೆ ಮುಫತ್ತಾಗಿ ಬಿಟ್ಟುಕೊಟ್ಟು ಕೀರ್ತಿಗೆ ಭಾಗಿಗಳಾಗುತ್ತಾರೆಂತ ಪ್ರಾರ್ಥಿಸುತ್ತೇನೆ.

ಕೊರಟಗೆರೆ ಗ್ರಾಮ. ಪ್ರಜಾ ಪ್ರೇಕ್ಷಕ.

ಗುಬ್ಬಿ ಅಪ್ಪಣ್ಣ [illegible], ದೊಡ್ಡಬಳ್ಳಾಪುರದ.—ಪೋಕರದವು ಕೋರ್ಟಿನಲ್ಲಿ ನಡೆಯುತ್ತಿದೆ. ಇಂಥಾ ಸಂದರ್ಭದಲ್ಲಿ ನೀವು ಬರೆಯುವ ಬಾತ್ಮಿಯನ್ನು ಪ್ರಕಟಿಸಬಾರದು. ಧರ್ಮವೇ ಜಯಿಸುವದಲ್ಲದೆ ಅಧರ್ಮವೂ ಅನ್ಯಾಯವೂ ಎಂದಿಗೂ ಊರ್ಜಿತವಾಗುವುದಿಲ್ಲ.

ದೇವಿತ್, ಚೀಲೂರು ಚಿಟ್ಟಿ; ಒಬ್ಬ [illegible] ಮಂಬರು, ದೊಡ್ಡಬಾಣಾವರ; ಪ್ರತ್ಯಕ್ಷದರ್ಶಿ, ದೇವನೂರು; ಸಂಬಿಗ್ಗ, ಸಂಪಾಜೆ; ಸತ್ಯಮೇರಿ, ಆಲಗಟ್ಟ ಗ್ರಾಮ.—ಈ ಪತ್ರಿಕೆಗಳಲ್ಲಿ ಪ್ರಕಟನೆಗೆ ಅರ್ಹವಾದ ವರ್ತಮಾನಗಳೇನೂ ಕಂಡುಬರುವುದಿಲ್ಲ. [ಎ.]

ತಾಲ್ಲೂಕು ವರ್ತಮಾನಗಳು.

ಚಿಕ್ಕಮಗಳೂರು.—ಕಳೆದ ತಾ. ೧೪ ನೇ ರವಿವಾರ ಸಾಯಂಕಾಲ ಚಿಕ್ಕಮಗಳೂರು ಟೌನ್ ಹಾಲಿನಲ್ಲಿ ಒಂದು ಸ್ತ್ರೀಯರ ಸಭೆಯು ಸೇರಿತ್ತು. ಆ ಕಾಲದಲ್ಲಿ ಮೈಸೂರು ಎಗ್ಸಿಬಿಷನ್ ಗೆ ಕಳುಹಿಸಲ್ಪಟ್ಟಿದ್ದ ಸಾಮಾನುಗಳು ಅವರವರಿಗೆ ಕೊಡಲ್ಪಟ್ಟವು. ಮಿಸೆಸ್ ರೀಡ್ ದೊರೆಸಾನಿಯವರು ಅಗ್ರಾಸನವನ್ನು ವಹಿಸಿದ್ದರು. ಅನೇಕ ದೊಡ್ಡ ಮನುಷ್ಯರ ಮನೆ ಹೆಂಗಸರು ಬಂದಿದ್ದರು. ಗರ್ಲ್ಸ್ ಸ್ಕೂಲಿನ ಬಾಲೆಯರು ನಾನಾ ವಿಧವಾದ ಆಟಗಳಿಂದ ಸಭಿಕರನ್ನು ಆನಂದಗೊಳಿಸಿದರು. ಬಾಲಮ್ಮನು ಹಾರ್ಮೋನಿಯಂ ಬಹಳ ಇಂಪಾಗಿ ನುಡಿಸಿದರು. ಪಂಡಿತ ಸುಂದರಮ್ಮನವರು ವೀಣೆಯಲ್ಲಿ ಗಾನವನ್ನು ಆಲಾಪನೆಮಾಡಿ ಬ್ಯಾಂಡಿನಂತೆ ನುಡಿಸಿದರು.

ಹರಿಹರ.—ಈಗ್ಗೆ ನಾಲ್ಕೈದು ವರುಷಗಳ ಹಿಂದೆ ಹರಿಹರದ ಟವರ್ ಗೆ ನೀರಿನ ತೊಂದರೆ ಬಹಳವಾಗಿದೆ ಎಂದೂ, ಜನಗಳಿಗೆ ಬಹಳ ಕಷ್ಟವೆಂದೂ ತಿಳಿದು ಸರಕಾರದವರು ಜನೋಪಕಾರಾರ್ಥವಾಗಿ ನಲ್ಲಿಯನ್ನು ಏರ್ಪಡಿಸಿದರು. ಈಗ ಅದು ಜನಗಳಿಗೆ ಅನನುಕೂಲವಾಗಿದೆ. ಏಕೆಂದರೆ ಟವರ್ ನಗೆ ನಲ್ಲಿಗಳು ಕಡಮೆ; ಅವುಗಳಲ್ಲೂ ನಲ್ಲಿಯ ನೀರು ಧಾರಾಳವಾಗಿ ಬಾರದೆ, ಸಣ್ಣಗೆ ಧಾರೆ ದೋಷಾದಿಯಲ್ಲಿ ಬೀಳುತ್ತಿರುವುದು ಮತ್ತು ಬ್ರಾಹ್ಮಣರ ಕೇರಿ ನಲ್ಲಿಗಳಿಗೆ ಇತರ ಮೊಹಲ್ಲಾ ವಗೈರೆ ಜನಗಳು ಬಂದು ಜಗಳವಾಡುವುದು ಇದ್ದೇ ಇದೆ. ಇವುಗಳ ವಿಷಯದಲ್ಲಿ ಸರಕಾರದವರು ಸರಿಯಾದ ಏರ್ಪಾಟು ಮಾಡಿಸಿ ಕೊಡುವರೆಂದು ನಂಬಿದ್ದೇನೆ.

ಕಾವೇರಿ ರಿಜರ್ವಾಯರ್.—ಹವ ತಕ್ಕ ಮಟ್ಟಿಗೆ ಚೆನ್ನಾಗಿದೆ. ಧಾರಣೆ ವಾಸಿಗಳು ಮಾತ್ರ ಪ್ರಿಯವಾಗಿದೆ.—ನಾತರ್ನ ಬ್ಯಾಂಕಿನ ಗಲಾಟೆ ಈಗ ಏನೂ ಇಲ್ಲದೆ ಅನುಕೂಲವಾಗಿರುತ್ತದೆ. ರಿಜರ್ವಾಯರ್ ಕಾಮಗಾರಿ ಚುರುಕಾಗಿ ನಡೆಯುತ್ತಿದೆ. ಆಗಲೇ ಒಂದು ಸಲ್ಲಿಸನ್ನು (ತೂಬು) ನಿಲ್ಲಿಸಿರುತ್ತಾರೆ. ಸುಮಾರು ೧೦-೧೨ ದಿನಗಳ ಕೆಳಗೆ ೨-೩ ಹದ ಒಳ್ಳೇ ಮಳೆಯಾಯ್ತು. ಈಚೆಗೆ ಏನೂ ಇಲ್ಲ.—ಸುಮಾರು ೧೦-೧೫ ದಿನಗಳ ಕೆಳಗೆ ಇಲ್ಲಿಯ ಸರ್ಕಾರಿ ಸೌದೆ ಡಿಪೋದಲ್ಲಿ [illegible] ಗಿರುವರೆಂಬುವನಿಗೆ ೧೫ ದಿನ ಸಜಾ ವಿಧಿಸಿದರು. ಅಲ್ಲದೆ ಇಲ್ಲಿನ ಡ್ಯಾಂ ಆಕ್ಸಿಜಿಕ್ಯೂಟಿವ್ ಆಫೀಸ್ ರೈಟರ್ ವೆಂಕಟಕೃಷ್ಣಯ್ಯನವರ ಮನೆಯಲ್ಲಿ ಹಗಲು ಹೊತ್ತಿನಲ್ಲೇ ಮನೆಯವರು ಒಳಗೆ ಇದ್ದ ವೇಳೆಯಲ್ಲಿ ಕೆಲವು ಸಾಮಾನುಗಳನ್ನು ಕಳವು ಮಾಡಿಕೊಂಡು ಹೋಗಿದ್ದ ಆಸಾಮಿಯನ್ನು ಪೋಲೀಸಿನವರು ಪತ್ತೆ ಹಚ್ಚಿ ಮೈಸೂರಲ್ಲಿ ಹಿಡಿದು ಇಲ್ಲಿ ತಂದಿದ್ದಾರೆ.—ತಾ. ೧೪ ನೇ ಶನಿವಾರದ ಲಗಾಯ್ತು ಮಿಸ್ ತಾರಾಬಾಯಿಯವರ ಕಂಪನಿಯವರು ಬಂದು ಬಯಾಸ್ಕೋಪ್ ಎಂಬ ನೋಟವನ್ನು ತೋರಿಸುತ್ತಿದ್ದಾರೆ.

ಗೋರಿಬಿದನೂರು ತಾ॥ ಸಲೆ ಉಪ್ಪಾರಹಳ್ಳಿ.—ಈ ಗ್ರಾಮಕ್ಕೆ ಸರ್ಕಾರದವರು ಮಂಜೂರು ಮಾಡಿರುವ ಹೊಸ ಸ್ಕೂಲನ್ನು ಹಿಂದಿನ ವಾರ ಸ್ಥಾಪಿಸಿದರು. ಈ ಗ್ರಾಮದ ಪಟೇಲ್ ಶ್ಯಾನುಭೋಗರು ಮತ್ತು ಗ್ರಾಮದ ಮುಖ್ಯ ರೈತರು ಸೇರಿದ್ದರು ಮತ್ತು ನಮ್ಮ ತಾ॥ ಶೇಕದಾರ್ ಮ॥ ರಾಘವೇಂದ್ರರಾಯರು ಈ ಸಭೆಯ ಅಗ್ರಾಸನಾಧಿಪತ್ಯವನ್ನು ವಹಿಸಿದ್ದರು. ಸ್ಕೂಲ್ ಮಾಸ್ಟರ್ ಕೆಲಸಕ್ಕೆ ಬಂದಿರುವ ಸುಬ್ಬರಾಯರು ಒಳ್ಳೆಯ ವಾಕ್ಯದಿಂದ ವಿದ್ಯಾಭ್ಯಾಸವು ಪ್ರಯೋಜನವಾಗಿರುತ್ತೆಂದು ಸರ್ವರಿಗೂ ತಿಳಿಯುವಂತೆ ಉಪನ್ಯಾಸವಾಡಿದರು ಮತ್ತು ಹೊಸೂರು ಸ್ಕೂಲ್ ಹೆಡ್ ಮಾಸ್ಟರವರು ಸಹ ವಿದ್ಯಾ ವಿಷಯವಾಗಿ ಉಪನ್ಯಾಸ ಮಾಡಿದರು. ಸಂತರ ಬಾಲಕರಿಂದಲೂ ಗ್ರಾಮಸ್ಥರಿಂದಲೂ ಸ್ಕೂಲ್ ಸ್ಥಾಪನೆ ಮಾಡಿದಕ್ಕೆ ದೇವಸ್ಥಾನಕ್ಕೆ ಜಯಮಾಡಲಾಯಿತು. ಸ್ಕೂಲ್ ಮಾಸ್ಟರ್ ಕೆಲಸಕ್ಕೆ ಬಂದಿರುವ ಉಪಾಧ್ಯಾಯರು ಸ್ಕೂಲನ್ನು ಅಭಿವೃದ್ಧಿಗೆ ತಂದು ಕೀರ್ತಿಯನ್ನು ಪಡೆಯುತ್ತಾರೆಂದು ನಂಬಿದೇವೆ.

ಕಾರ್ಕಾನಹಳ್ಳಿ ತಾ॥ ಮುರಳವಾಡಿ.—ಮುರಳವಾಡಿ ಗ್ರಾಮದಲ್ಲಿ ಒಂದು ಪೋಸ್ಟ್ ಆಫೀಸು ಇದೆ. ವಾರಕ್ಕೆ ೨ ದಫ ಹಾರೋಹಳ್ಳಿಯಿಂದ ಇಲ್ಲಿಗೆ ಪೋಸ್ಟು ಬರುತ್ತೆ. ಇದರಿಂದ ಕಾಗದಗಳ ಆಮದು ರಫ್ತಿಗೆ ತುಂಬಾ ಅಡಚಣೆಯಾಗಿರುವ ಸಂಗತಿ ಕಂಡು ಈ ಗ್ರಾಮದಲ್ಲಿರುವ ಸಾಹುಕಾರ್ ಪಟೇಲ್ ವೀರಭದ್ರಪ್ಪನವರು ಮತ್ತು ಸಾಹುಕಾರ್ ಸೈಯದ್ ಮಹಮದ್ ಲಬ್ಬೆ ಸಾಹೇಬರು ಇಲ್ಲಿನ ಶೇಕದಾರ್ ಮ॥ ಶೇಷಗಿರಿರಾಯರ ಪ್ರೋತ್ಸಾಹದಿಂದ ದಿನವೂ ಪೋಸ್ಟು ಬರಲು ಆರು ತಿಂಗಳ ಅಡ್ವಾನ್ಸು ೪೨ ರೂಪಾಯನ್ನು ಪೋಸ್ಟು ಸೂಪರಿಂಟೆಂಡೆಂಟ್ ಸಾಹೇಬರಿಗೆ ರವಾನಿಸಿರುತ್ತಾರೆ. ವೃತ್ತಾಂತ ಪತ್ರಿಕೆಯನ್ನು ಪ್ರತಿಯೊಬ್ಬರೂ ತರಿಸಿ ಓದುವುದರ ಮೂಲಕ ನಾಗರೀಕತೆಯನ್ನು ಪಡೆಯಲು ಈ ಶೇಕದಾರ್ ಮ॥ ಶೇಷಗಿರಿರಾಯರು ತಮಗೆ ಸೇರಿದ ಹೋಬಳಿ ಗ್ರಾಮಗಳಲ್ಲೆಲ್ಲಾ ಜನಗಳಿಗೆ ಪ್ರೋತ್ಸಾಹಪಡಿಸಿ ಮುತುವರ್ಜಿ ಮಾಡುತ್ತ ಇರುವುದು ಸ್ತೋತ್ರಾರ್ಹವಾಗಿದೆ. ಈ ಗ್ರಾಮಸ್ಥರ ಉಪಯೋಗಕ್ಕಾಗಿ ಮೇಲ್ಕಂಡ ಇಬ್ಬರು ಸಾಹುಕಾರರು ಇಷ್ಟು ಉಪಕಾರ ಮನಸ್ಸಿನಿಂದ ಪ್ರಜೆಗಳಿಗೆ ಅನುಕೂಲ ಪಡಿಸಬೇಕೆಂಬ ಉದಾರ ಸ್ವಭಾವದ ಸಹಾಯಮಾಡಿರುತ್ತಾರೆ.

ಗುಬ್ಬಿ.—ಕಳೆದ ತಾ. ೧೩ ನೇ ಶುಕ್ರವಾರ ಸಾಯಂಕಾಲ ಪೆ. ಮಿಸೆಸ್ ಎ. ವಿ. ಸ್ಕೂಲ್ ಹಾಲಿನಲ್ಲಿ ಗುಬ್ಬಿ ಮಹಮ್ಮದೀಯ ಜನರೆಲ್ಲರೂ ಸಬ್ ಅ॥ ಸರ್ಜನ್ ಮಿ. ಸ. ಷೇಕ್ ಅಬ್ದುಲ್ಲಾ ಸಾಹೇಬರ ಅಧ್ಯಕ್ಷತೆಯಿಂದ ಸಭೆ ಸೇರಿ, ಈಗ ಯೂರೋಪಿನಲ್ಲಿ ನಡೆಯುತ್ತಿರುವ ಮಹಾ ಯುದ್ಧಕ್ಕೆ ಟರ್ಕಿಯವರು ನಮ್ಮ ಬ್ರಿಟಿಷ್ ರಾಜ್ಯದವರಿಗೆ ಶತ್ರುಗಳಾಗಿ ಸೇರಿದುದು ಅನ್ಯಾಯವೆಂದು ನಿರ್ಧರಿಸಿ, ಬ್ರಿಟಿಷ್ ಸಾರ್ವಭೌಮ ಸರ್ಕಾರದವರಲ್ಲಿ ತಮಗಿರತಕ್ಕ ಅಕುಟಿಲ ರಾಜಭಕ್ತಿಯನ್ನು ಪ್ರದರ್ಶಿಸುವುದೂ, ಇಲ್ಲಿನ ಮಹಮ್ಮದೀಯರಲ್ಲಿ ಚಂದಾ ವಸೂಲ್ ಮಾಡಿ ರಿಲೀಫ್ ಫಂಡಿಗೆ ಕಳುಹಿಸಿಕೊಡುವುದು ಅವಶ್ಯವೆಂದೂ ಗೊತ್ತುಮಾಡಿ ಈ ಸಂಗತಿಯನ್ನು ಶ್ರೀಮನ್ ಮಹಾರಾಜಾ ಸರ್ಕಾರದವರಿಗೆ ತಿಳಿಸಬೇಕೆಂದು ತೀರ್ಮಾನ ಮಾಡಿದರು. ರೆವ್. ಪರ್ಗ್ಯುಸನ್ ಸಾಹೇಬರೂ, ಅದಲ್ಲಾದರೇ ಮೊದಲಾದ ತಾಲ್ಲೋಕು ಅಧಿಕಾರಿಗಳೂ ಸಭೆಗೆ ದಯಮಾಡಿಸಿದ್ದರು. ಈಗಿನ ಯುದ್ಧದಲ್ಲಿ ಶ್ರೀ ದೇವರು ನಮ್ಮ ಬ್ರಿಟಿಷ್ ಸಾಮ್ರಾಜ್ಯದವರಿಗೆ ವಿಜಯೋತ್ಸಾಹಗಳನ್ನು ದಯಪಾಲಿಸಬೇಕೆಂಬ ಪ್ರಾರ್ಥನೆಯನ್ನು ಮಾಡಿ, ಸಭಿಕರಿಗೆ ಗಂಧ ಪುಷ್ಪಾದಿಗಳನ್ನು ಹಂಚಿದ ಬಳಿಕ ಸಭೆಯು ಮುಕ್ತಾಯ ಹೊಂದಿತು.

ತಾ, ಮಗೊಂಡು.—ಮಳೆ ಕೊಂಚಕಾಲ ವಿಶ್ರಾಂತಿ ಕೊಟ್ಟದ್ದರಿಂದ ರೈತರೆಲ್ಲಾ ಹೊಲಗಳನ್ನು ಕೊಯ್ಯುತ್ತಿರುವರು. ಮ್ಯುನಿಸಿಪಾಲಿಟಿಯವರು ಈ ಟವರ್ ನನ್ನು ಆರೋಗ್ಯಕರವಾಗಿಯೂ, ಶುಚಿಯಾಗಿಯೂ ಇಟ್ಟಿರುತ್ತಾರೆ.—ಈಗ್ಗೆ ಕೆಲವು ದಿನಗಳ ಹಿಂದೆ ಬೆಂಗಳೂರು ಡಿ॥ ಡೆಪ್ಯುಟಿ ಕಮಿಷನರ್ ಸಾಹೇಬರವರು ಈ ಗ್ರಾಮಕ್ಕೆ ದಯಮಾಡಿದ್ದರು.—ಈ ತಿಂಗಳು ೧೧ ರಲ್ಲಿ ಮಿಸೆಸ್ ಇಲಾಖಾ ಸೂಪರಿಂಟೆಂಡರಾದ ರೆವ್. ಹೆಚ್. ಹೆಚ್. ನ್ಯೂಹಾಂ ದೊರೆಯವರು ದಯಮಾಡಿಸಿ ಮಿಸೆಸ್ ಸ್ಕೂಲನ್ನು ಪರೀಕ್ಷಿಸಿ ತೃಪ್ತಿಪಟ್ಟು ತೆರಳಿದರು. ವಿನೀತರಾದವರಾಗಿಯೂ, ಬುದ್ಧಿವಂತರಾಗಿಯೂ, ಶಾಸ್ತ್ರದಲ್ಲಿ ಪಂಡಿತರಾಗಿಯೂ, ಲಂಚವನ್ನು ಮುಟ್ಟದೆ ಇರುವವರಾಗಿಯೂ ಇರತಕ್ಕ ಒಬ್ಬ ಅಧಿಕಾರಿಗಳು ನೆಲಮಂಗಲ ತಾಲ್ಲೋಕಿನಲ್ಲಿರುತ್ತಾರೆ. ಅವರ ಗುಣಗಳೂ ನಡತೆಯೂ ಹೆಸರಿಗೆ ತಕ್ಕವಾಗಿರುತ್ತವೆ. ಇಂಥ ಸದ್ಗುಣಗಳನ್ನು ಪಡೆದಿರುವ ಅವರ ಹೆಸರು ಮ॥ ಸೂರ್ಯನಾರಾಯಣ ಶಾಸ್ತ್ರಿಗಳೇ. ಇವರು ನಮ್ಮ ತಾಲ್ಲೋಕಿನಲ್ಲಿರುವದು ನಮಗೆಲ್ಲರಿಗೂ ಬಹು ಸಂತೋಷವಾಗಿದೆ.—ಕೋಟೆಯಲ್ಲಿ ಹೊಸದಾಗಿ ಮಾಡಿರುವ ಆರ್ಯ ಧರ್ಮೋಜ್ಜೀವಿನಿ ಸಭೆಯಲ್ಲಿ ಕಳೆದ ತಿಂಗಳು ೨೫ ನೇ ತಾ॥ ಸಾಯಂಕಾಲ ಲ॥ ಸಿ. ಸದಾನಂದ ಸೋಮಯಾಜಿಗಳು ಬಾಲಗ್ರಾಮರುಪನ್ಯಾಸವನ್ನು ಕೃಪ್ತಿಕರವಾಗಿ ನಡೆಸಿ ಸನ್ಮಾನಿತರಾದರು. ಈ ಉಪನ್ಯಾಸವನ್ನು ಈ ವರಿವಿಗೂ ಈ ಪ್ರಾಂತ್ಯ ಯಾರೂ ಮಾಡಿರಲಿಲ್ಲ. ಇದನ್ನು ಕೇಳಿದವರ ಮನಸ್ಸು ಬಹು ಆಹ್ಲಾದವನ್ನು ಹೊಂದಿತು.

ದೊಡ್ಡಬಳ್ಳಾಪುರ.—ಇಲ್ಲಿ ದೀಪಾವಳಿ ಹುಟ್ಟಿದ ಲಾಗಾಯ್ತು ೨-೩ ದಿನ ಒಳ್ಳೇ ಮಳೆಯಾಯಿತು. ಇನ್ನು ಮಳೆ ಬಗದಿದ್ದರೂ ಈ ತಾಲ್ಲೂಕಿನ ಕೆಲವು ಕಡೆ ಚೆನ್ನಾಗಿ ಬೆಳೆಯಾಗುತ್ತೆ. ನೆನ್ನೆ ಸಂತೆಯಲ್ಲಿ ರಾಗಿ ರೂ. ೧೫ ಸೇರು ಕೊಟ್ಟರು. ಇಲ್ಲಿನ ಸಾಹುಕಾರ್ ವೆಂಕಟನಾರಾಯಣಶೆಟ್ಟರ ಮೊಮ್ಮಗನ ಲಗ್ನವು ಇಲ್ಲಿಯೂ, ದೇವಶೆಟ್ಟಪ್ಪನವರ ಲಗ್ನವು ಯಲಹಂಕದಲ್ಲಿಯೂ ಈ ಮಾಹೆ ೫-೬ ನೇ ತಾ॥ ಗಳಲ್ಲಿ ಬಹಳ ವಿಜೃಂಭಣೆಯಿಂದ ನಡೆದವು. ಊರಿನ ಮುಖ್ಯಸ್ಥರೂ ಸರ್ಕಾರಿ ನೌಕರರೂ ಹೋಗಿದ್ದು ವಧೂವರರನ್ನು ಆಶೀರ್ವದಿಸಿ ಬಂದರು.—ಶಿವದೇವಶಾಸ್ತ್ರಿಗಳವರ ಶಿವಕಥೆಯು ರುಮಾಲೆ ರುದ್ರಪ್ಪನವರ ಛತ್ರದಲ್ಲಿ ತಾ. ೧೧ ರಲ್ಲಿ ನಡೆಯಿತು. ಅನೇಕ ಜನರು ಸೇರಿ ಆನಂದಿಸಿದರು.—ಎ. ವಿ. ಸ್ಕೂಲಿನಲ್ಲಿ ಬಹಳ ಸರ್ವಿಸ್ ಆದ ಮಾಸ್ಟರುಗಳಿಗೆ ಪ್ರಮೋಷನ್ ಕೊಡದೆ ಕಮ್ಮಿ ಸರ್ವಿಸ್ ಮಾಡಿದವರಿಗೆ ಮಾತ್ರ ಪ್ರಮೋಷನ್ ಆಗಿರುವುದರಿಂದ ಮಾಸ್ಟರುಗಳಲ್ಲಿ ವೈಷಮ್ಯ ಹುಟ್ಟಿ ಕೆಲಸಗಳು ಕ್ರಮವಾಗಿ ನಡೆಯುವುದಿಲ್ಲ. ವಿದ್ಯಾ ಇಲಾಖೆ ಇನ್ಸ್ಪೆಕ್ಟರ್ ಜನರಲ್ ರವರು ಎಲ್ಲರನ್ನೂ ಸಮಭಾವನೆಯಿಂದ ಕಾಪಾಡುವರೆಂದು ಪ್ರಾರ್ಥಿಸುತ್ತೇನೆ. ಇನ್ಫೆಂಟ್ ಕ್ಲಾಸುಗಳಲ್ಲಿ ಮೊದಲಿನಂತೆ ಸರಿಯಾದ ಮಾಸ್ಟರುಗಳು ಇಲ್ಲದ್ದರಿಂದ ೪೦-೫೦ ಜನ ಹುಡುಗರಿದ್ದ ಎ. ಕ್ಲಾಸುಗಳು ಈಗ ೨೦ ಕ್ಕೆ ಇಳಿಯಿತು. ಈ ಕ್ಲಾಸುಗಳು ಹಳೆ ಕಛೇರಿಯಲ್ಲಿದ್ದಾಗ ಉತ್ತಮಸ್ಥಿತಿಯಲ್ಲಿದ್ದವು. ಅಲ್ಲಿನ ಹೆಚ್ಚು ಸಂಬಳದ ಮಾಸ್ಟರು ಎ. ಕ್ಲಾಸುಗಳನ್ನು ಕ್ರಮಪಡಿಸಬೇಕು.—ಇಲ್ಲಿನ ಗೋಣಿಗರಪೇಟೆ ತುಳಸೋಜಿರಾಯರ ಮನೆಯಲ್ಲಿ ಒಂದು ಹಸುವು ಎರಡು ಹೆಣ್ಣುಕರುಗಳನ್ನು ಈದಿರುತ್ತೆ.

ಬೆಂಗಳೂರು ಸಿಟಿ.—ನಮ್ಮ ಚಕ್ರವರ್ತಿಯವರಿಗೆ ಆಕಸ್ಮಿಕವಾಗಿ ಧರ್ಮಯುದ್ಧ ಮಾಡಬೇಕಾದ ಪ್ರಸಂಗಪ್ರಾಪ್ತವಾದ್ದರಿಂದ ಪ್ರಸ್ತುತ ಕೈಕೊಂಡಿರುವ ನ್ಯಾಯವಾದ ಯುದ್ಧದಲ್ಲಿ ನಮ್ಮ ಶ್ರೀಮನ್ ಚಕ್ರವರ್ತಿಗಳಿಗೆ ಜಯಪ್ರದವೆಂದಾಗಬೇಕೆಂಬ ಉದ್ದೇಶದಿಂದ ಇಲ್ಲಿ ಇರತಕ್ಕ ಮ॥ ಸುಬ್ಬಾಜಿಮಹಾದೇವ್ ಇನಾಂದಾರ್ ಹಿಂಡಗಿರಿ ಎಂಬವರು ನಗರ್ತಪೇಟೆಯಲ್ಲಿರುವ ಶ್ರೀ ಚಾಮುಂಡೇಶ್ವರೀ ದೇವಸ್ಥಾನದಲ್ಲಿ ಕಳೆದ ಶುಕ್ರವಾರ ರಾತ್ರಿ ಪೂಜಾದಿಗಳನ್ನು ಮಾಡಿಸಿದ ಕಾಲದಲ್ಲಿ ಈ ಪಟ್ಟಣದ ಕೆಲವು ಸಂಸ್ಕೃತ ಪಂಡಿತರೂ, ಜಮೀನ್ದಾರರೂ, ಪವಾರ್ದಾರರೂ, ಸೇಟ್ ಸಾಹುಕಾರರೂ, ಮುಂತಾದವರು ದೇವಾಲಯಕ್ಕೆ ದಯಮಾಡಿಸಿದ್ದರು. ಸಕಲ ವಾದ್ಯ ವೈಭವದೊಡನೆ ಮಂಗಳಾರ್ತಿ, ರಾಜೋಪಚಾರ, ಸಂಗೀತ ಭಜನೆಗಳು ಆದ ತರುವಾಯ ಶ್ರೀಮನ್ ಭರತಖಂಡ ಚಕ್ರವರ್ತಿಯವರ ಮತ್ತು ಶ್ರೀಮನ್ ಮೈಸೂರು ಮಹಾರಾಜ ಯುವರಾಜರವರ ಸೇನೆಗಳವರೆಲ್ಲರಿಗೂ ಶ್ರೇಯೋಭಿವೃದ್ಧಿ ಜಯವಾದ ಸಂಸ್ಕೃತ ಶ್ಲೋಕಗಳು ಬ್ರ. ಶ್ರೀ ಪಂಡಿತ ಗೋಪಾಲಕೃಷ್ಣಶಾಸ್ತ್ರಿಗಳಿಂದ ಹೇಳಲ್ಪಟ್ಟವು. ನಮ್ಮ ಮೈಸೂರು ಮಂತ್ರಿವರ್ಯರಾದ ವಿಶ್ವೇಶ್ವರಯ್ಯನವರಿಗೂ ಶ್ರೇಯೋಭಿವೃದ್ಧಿಯನ್ನು ಬಯಸಿದರು. ಮ॥ ಇನಾಮ್ದಾರರು ಎಲ್ಲಾ ಮಿತ್ರಮಂಡಲಿಯೊಡನೆ ಬ್ರಿಟಿಷ್ ಸಿಂಹಾಸನಕ್ಕೆ ಕ್ಷಿಪ್ರದಲ್ಲಿಯೇ ಜಯಪ್ರದ ಉಂಟಾಗಲೆಂತಲೂ, ಭರತಖಂಡದ ಪ್ರಜೆಗಳಾಗಿ ನಮ್ಮೆಲ್ಲರಿಗೂ ಬ್ರಿಟಿಷ್ ಚಕ್ರಾಧಿಪತ್ಯವೇ ಆಚಂದ್ರಾರ್ಕವಾಗಿರಬೇಕೆಂತಲೂ, ತಮ್ಮ ತನುಮನಧನಗಳನ್ನಿಟ್ಟು ಬ್ರಿಟಿಷ್ ಸಿಂಹಾಸನಕ್ಕೆ ಅಸಾಧ್ಯಕರವಾದ ರಾಜಭಕ್ತಿಯನ್ನು ತೋರ್ಪಡಿಸುತ್ತಿರುವ ನಮ್ಮ ಶ್ರೀಮನ್ ಮೈಸೂರು ಮಹಾರಾಜರವರಿಗೆ ಘನತರವಾದ ಕೀರ್ತಿ ಪ್ರಾಪ್ತವಾಗಲೆಂತಲೂ ಪ್ರಾರ್ಥಿಸಿಕೊಂಡರು.

ಶಿವಮೊಗ್ಗಾ.—ಇಲ್ಲಿ ಒಂದು ಹದ ಮಳೆ ಆಗಿದೆ. ರಾಗಿಯು ಪೈರಿಗೆ ಉತ್ತಮವೆಂತ ಹೇಳುತ್ತಾರೆ. ಹವ ಆರೋಗ್ಯಕರವಾಗಿದೆ. ಮ॥ ಹೆಬ್ಲಿಕರ್ ಸಾಹೇಬರವರ ಕಾಲಿಗೆ ಪೆಟ್ಟು ತಗಲಿದ್ದು ಸ್ವಲ್ಪ ಗುಣಮುಖವಾಗುತ್ತಿದೆ. ಹೊಸ ಸಬ್ ಡಿವಿಜನ್ ಸಾಹೇಬರವರಾದ ಮ॥ ಅಪ್ಪಣ್ಣಯ್ಯಂಗಾರ್ರು ಛಾರ್ಜ ವಹಿಸಿದರು. ಕಂಟ್ರೋಲರ್ ಸಾಹೇಬರವರು ಈ ಊರಿಗೆ ಬಂದು ಇನ್ಸ್ಪೆಕ್ಷನ್ ಕೆಲಸ ನಡೆಸುತ್ತಾ ಇದ್ದಾರೆ.—ಗ್ರಾಮದಲ್ಲಿ ತಿರುಗುವ ಕತ್ತೆಗಳನ್ನು ದೊಡ್ಡಿಗೆ ಸೇರಿಸುವ ಏರ್ಪಾಡು ಮಾಡಿದ್ದಾರೆ.—ಪೇಟೆಯಲ್ಲಿ ಗುಜರಾತ್ ಕಡೆಯಿಂದ ಬಂದ ಒಬ್ಬ ಹುಡುಗನು ಬಹಳ ಸ್ವಾರಸ್ಯವಾಗಿ ಜಾಡಿ ನಟಿಸಿದನು. ಬಹಳ ಜನಗಳು ಸಂತೋಷಪಟ್ಟರು. ಚೌಕದಲ್ಲಿ ಬೆಂಗಳೂರವರು ಹರಿಕಥೆ ಚೆನ್ನಾಗಿ ಮಾಡಿದರು.—ಮ॥ ಎ. ಚಲುವಯ್ಯಂಗಾರ್ರು ಬಂಗ್ಲೆ ಹಿಂದುಗಡೆ ಇರುವ ಕೆರೆಯಲ್ಲಿ ದನಾ ಕಾಯುತ್ತಿದ್ದ ಬೇಡರ ರಾಮನೆಂಬುವನು ಎಮ್ಮೆ ಮೈತೊಳೆಯಲು ಹೋಗಿ ಕಾಲು ಜಾರಿ ನೀರಿನಲ್ಲಿ ಬಿದ್ದು ಸತ್ತನು. ಶುಕ್ರವಾರ ಕ್ರಮವಾದ ವಿಚಾರಣೆಯಿಂದ ಶವವನ್ನು ದಫನ್ ಮಾಡಿದರು. ಮಾರ್ಕೆಟ್ ಬಳಿ ಇರುವ ರಸ್ತೆ ಬಹಳ ಹೀನಸ್ಥಿತಿಯಲ್ಲಿದೆ. ಅನೇಕ ಗುಂಡಿಗಳಿವೆ. ಸರ್ಕಾರದವರು ರಿಪೇರಿಮಾಡಿಸಿಕೊಟ್ಟಾರಾಗಿ ನಂಬಿದೇವೆ.—ರಾತ್ರಿ ಕಾಲದಲ್ಲಿ ಸೇತುವೆ ಮೇಲೆ ಲಾಂದ್ರಾ ಹಚ್ಚುತ್ತಾ ಇಲ್ಲ ಆದ್ದರಿಂದ, ಜನಗಳು ತಿರುಗಲು ತೊಂದರೆಯಾಗಿದೆ. ಇದನ್ನು ತಪ್ಪಿಸಿಕೊಟ್ಟಾರಾಗಿ ನಂಬಿದೇವೆ.—ಕೊಡ್ಲೋ ಎಂಬುವನ ಮೇಲೆ ಕಳವು ಕೇಸು ಆಗಿದ್ದು ತೀರ್ಥಹಳ್ಳಿ ತಾಲ್ಲೂಕಿನಲ್ಲಿ ವಿಚಾರ ನಡೆದು ರುಜುವಾತಾಗಿ ಅವನಿಗೆ ಸಜಾ ಆಯಿತು. ಅವನ ಮೇಲೆ ಇನ್ನೂ ಒಂದು ಕೇಸು ವಿಚಾರದಲ್ಲಿದೆ.—ಬಿಲ್ಲಾಧರ ಕೊಪ್ಪದ ರುದ್ರಪ್ಪನ ಮೇಲೆ ಬಂದಿರುವ ಕೇಸು ಸಾಗರದ ಸಬ್ ಡಿವಿಜನ್ ಕೋರ್ಟಿನಲ್ಲಿ ತಾ ೧೦ಕ್ಕೆ ಹಿಯರಿಂಗ್ ಇದೆ ಎಂತ ಕೇಳುತ್ತೇನೆ. ತಾ. ೧೦ರಲ್ಲಿ ಪೇಟೆ ಬಸವಣ್ಣ ದೇವಸ್ಥಾನದ ಜಗುಲಿಯ ಮೇಲೆ ಮಲಗಿದ್ದ ಮುಸಲ್ಮಾನನು ಅಕಸ್ಮಾತ್ತಾಗಿ ಸತ್ತು ಹೋಗಿದ್ದನು.

ಹಾಸನ.—ಇಲ್ಲಿ ಹಿಂದಿನ ವಾರ ಸುಮಾರು ೪ ಅಂಗುಲ ಮಳೆ ಸುರಿಯಿತು. ಈ ಪ್ರಾಂತ್ಯಕ್ಕೆಲ್ಲಾ ಅನುಕೂಲವಾಗಿ ಮಳೆಯಾಗಿ ಕೆರೆ ಕಟ್ಟೆಗಳೆಲ್ಲವೂ ತುಂಬಿಕೋಡಿ ಬಿದ್ದಿವೆ. ಇನ್ನು ಈ ಮಳೆಯು ನಿಂತುಹೋದರೂ ಸದ್ಯಕ್ಕೆ ಯಾವ ನಷ್ಟವೂ ಆಗಲಾರದೆಂದು ತಿಳಿಯ ಬರುತ್ತದೆ. ಚಳಿಗಾಲದ ಸೂಚನೆಯು ಕಾಣ ಬರುತ್ತಲಿದೆ. ಪೈರುಗಳೆಲ್ಲವೂ ಬಹುಮಟ್ಟಿಗೆ ಚೆನ್ನಾಗಿವೆ. ಆವರೆ ಅವರೆ ತೊಗರಿಗಳಿಗೆ ಮಾತ್ರ ಸ್ವಲ್ಪ ನಷ್ಟವಾದೀತೆಂದು ತೋರುತ್ತದೆ.—ರೆವ್. ಬ್ಲ್ಯಾಕ್ ಬ್ಯಾಂಕ್ ದೊರೆಯವರು ಹಿಂದಿನ ಗುರುವಾರ ರಾತ್ರಿ ಇಲ್ಲಿನ ಕ್ರೈಸ್ತದೇವಾಲಯದಲ್ಲಿಯೂ, ಮರುದಿನ ವಾಣೀವಿಲಾಸ ಶಾಲೆಯಲ್ಲಿಯೂ ಖಗೋಳ ಶಾಸ್ತ್ರ ಸಂಬಂಧವಾದ ಚಿತ್ರಪಟಗಳನ್ನು ಮ್ಯಾಜಿಕ್ ಲ್ಯಾಂಟರ್ನ್ ಎಂಬ ಮಾಯಾದೀಪದ ಮೂಲಕ ಪ್ರದರ್ಶನ ಮಾಡಿದರು. ವಿದ್ಯಾರ್ಥಿಗಳೆಲ್ಲಾ ಈ ಪ್ರದರ್ಶನದಿಂದ ಭೂಗೋಳಶಾಸ್ತ್ರ ಸಂಬಂಧದ ಅನೇಕ ದೃಷ್ಟಾಂತಗಳನ್ನು ಚೆನ್ನಾಗಿ ಗ್ರಹಿಕೆಗೆ ತಂದುಕೊಂಡರು.—ಕಳೆದ ವಾರ ಇಲ್ಲಿಗೆ ಮೈಸೂರು ಸೆಷನ್ಸ್ ಜಡ್ಜ್ ಯವರು ಮೊಕದ್ದಮೆಗಳ ವಿಚಾರಣೆಗೋಸ್ಕರ ಬಂದಿದ್ದಾರೆ. ವಿಷಹಾಕಿದ್ದು, ಕೊಲೆಮಾಡಿದ್ದು, ಮುಂತಾದ ಕೇಸುಗಳ ವಿಚಾರಣೆ ನಡೆಯುತ್ತಿದೆ.—ಇಲ್ಲಿನ ವಾಣೀವಿಲಾಸ ಬಾಲಿಕಾ ಪಾಠಶಾಲೆಯಲ್ಲಿ ಕಳೆದ ಶನಿವಾರ ವಿದ್ಯಾರ್ಥಿನಿಗಳಿಗೆ ವಾರ್ಷಿಕ ಬಹುಮಾನವು ಕೊಡಲ್ಪಟ್ಟಿತು. ಡೆಪ್ಯುಟಿ ಕಮಿಷನರ್ ವೆದರಾಲ್ ದೊರೆಯವರು ಸಸ್ತ್ರೀಸಮೇತ ದಯಮಾಡಿ ಸಭಾಧ್ಯಕ್ಷತೆಯನ್ನು ವಹಿಸಿದ್ದರು. ಈ ಸ್ಕೂಲನ್ನು ೧೯೦೬ ನೇ ಫೆಬ್ರವರಿಯಲ್ಲಿ ಸ್ಥಾಪಿಸಿ, ಇದಕ್ಕಾಗಿ ಒಂದು ಒಳ್ಳೇ ಕಟ್ಟಡವನ್ನೂ ಕಟ್ಟಿಸಿ ಆರು ವರ್ಷಕಾಲ ನಡೆಸಿದ ಮೇಲೆ ಸರ್ಕಾರದ ಆಡಳಿತಕ್ಕೆ ಒಪ್ಪಿಸಿದ ರಿಟೈರ್ಡ್ ಅಮಲ್ದಾರ್ ಮ॥ ಶ್ರೀನಿವಾಸರಾಯರು ಕಳೆದ ಫೆಬ್ರವರಿಯಲ್ಲಿ ಕಾಲವಾದುದರಿಂದ ಆ ಮಹನೀಯರ ಭಾವಚಿತ್ರವು ಈ ಸ್ಕೂಲ್ ಕಟ್ಟಡದಲ್ಲಿ ಪ್ರತಿಷ್ಠೆಯಾಗಬೇಕೆಂದು ಈಗ್ಗೆ ಕೆಲವು ತಿಂಗಳ ಹಿಂದೆ ತೀರ್ಮಾನವಾಗಿತ್ತು. ಆ ಪ್ರಕಾರ ತಯಾರಿಸಿದ್ದ ಅವರ ಶ್ರೇಷ್ಠವಾದ ಭಾವಚಿತ್ರ ಪಟವು, ಈ ದಿನ ನಮ್ಮ ಡೆಪ್ಯುಟಿ ಕಮಿಷನರವರಿಂದಲೇ ಈ ಭವನದ ಮಧ್ಯದಲ್ಲಿ ಪ್ರತಿಷ್ಠೆಯಾಯಿತು. ಕೊನೆಯಲ್ಲಿ ಲೇಟ್ ಶ್ರೀನಿವಾಸರಾಯರ ಗುಣಕಥನವು ನಡೆದು, ಶ್ರೀಮನ್ಮಹಾರಾಜರವರ ಮತ್ತು ಚಕ್ರವರ್ತಿಯವರ ಶ್ರೇಯಃಪ್ರಾರ್ಥನೆಯ ಮಂಗಳಗಳು ವಿದ್ಯಾರ್ಥಿನಿಯರಿಂದ ಹಾಡಲ್ಪಟ್ಟವು.

ದೊಡ್ಡಬಾಣಾವಾರ.—ಈ ಪ್ರಾಂತ್ಯ ಎರಡು ತಿಂಗಳಿಂದ ಆದ ಮಳೆಯಿಂದ ರಾಗಿಯ ಪೈರು ಚೆನ್ನಾಗಿ ಬೆಳೆದು ಕೊಯ್ಲಿಗೆ ಬಂದಿರುತ್ತದೆ. ಧಾರಣೆವಾಸಿಗಳು ತುಟ್ಟಿಯಾಗಿಯೇ ಇರುವುದರಿಂದ ಬಡ ಜನಗಳ ಜೀವನ ನಡೆಯಲು ತುಂಬಾ ಕಷ್ಟವಾಗಿದೆ. ಅಲ್ಲದೆ ಜನಗಳಿಗೆ ಕುಡಿಯುವುದಕ್ಕೆ ನೀರೂ, ದನಕರುಗಳಿಗೆ ಮೇವೂ ಅನುಕೂಲವಾಗಿದ್ದರೂ, ಕೆರೆ ಕಟ್ಟೆಗಳೆಲ್ಲಾ ನೀರಿಲ್ಲದೆ ಒಣಗಿರುವುದರಿಂದ ಕುಡಿಯುವ ನೀರಿನ ಕಷ್ಟವನ್ನು ಹೇಳತೀರದು.—ಈ ಊರಿನ ಗ್ರಾಮಸ್ಥರು ೧೨೦ ರೂಪಾಯಿ ಚಂದಾ ವಸೂಲ್ಮಾಡಿ ತಾಲ್ಲೋಕು ಟ್ರೆಜರಿಗೆ ಇರಸಾಲ್ಮಾಡಿ ಮೂರು ತಿಂಗಳಾಗುತ್ತಾ ಬಂದರೂ ಸರಕಾರದವರು ಇನ್ನೂ ಇಂಗ್ಲಿಷ್ ಸ್ಕೂಲನ್ನು ಸ್ಥಾಪಿಸಲಿಲ್ಲವೆಂದು ಪ್ರಜೆಗಳು ವ್ಯಸನಪಡುತ್ತಾರಾದ್ದರಿಂದ ಗೌವರ್ನಮೆಂಟಿನವರು ಜಾಗ್ರತೆಯಿಂದ ಇಂಗ್ಲಿಷ್ ಮಾಸ್ಟರನ್ನು ಕಳುಹಿಸಿಕೊಟ್ಟು, ಬಾಲಕರಿಗೆ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಟ್ಟಾರೆಂದು ನಿರೀಕ್ಷಿಸುತ್ತೇನೆ.—ಅಲ್ಲದೆ ಈ ಊರಿನ ಅಂಗಡಿ ಬೀದಿ ಉಪ್ಪರಿಕ್ಕೆ ಮತ್ತು ಮಂಡಿಗಳ ಬಳಿಯಲ್ಲೂ ಗಾಡಿಗಳನ್ನು ನಿಲ್ಲಿಸಿ, ಜನಗಳು ತಿರುಗಾಡಲು ತುಂಬಾ ತೊಂದರೆಯನ್ನುಂಟುಮಾಡುವುದರಿಂದ ಮ್ಯುನಿಸಿಪಾಲಿಟಿಯವರು ಈ ವಿಚಾರಕ್ಕೆ ಸರಿಯಾದ ಗಮನಕೊಟ್ಟು ಕ್ರಮಪಡಿಸಬೇಕಾಗಿ ಕೋರುತ್ತೇನೆ.—ಈ ಊರಿನ ವಿ. ಇ. ಬಾಯ್ಸ್ ಸ್ಕೂಲಿನಲ್ಲಿ ಎಲ್ಲಾ ಸ್ಕೂಲುಗಳ ಉಪಾಧ್ಯಾಯರೂ ಗಂಡು ಹೆಣ್ಣುಮಕ್ಕಳೂ ಸೇರಿ, ಯೂರೋಪ್ ಖಂಡದಲ್ಲಿ ಯುದ್ಧಪ್ರಾಪ್ತಿಯಿಂದ ಉಂಟಾಗಿರತಕ್ಕ ಕಷ್ಟ ನಿಷ್ಠುರಗಳನ್ನು ಘನವನ್ನುಳ್ಳ ನಮ್ಮನ್ನಾಳುವ ಬ್ರಿಟಿಷ್ ಚಕ್ರಾಧಿಪತಿಗಳು ಈ ಘೋರಯುದ್ಧವನ್ನು ನಿಲ್ಲಿಸಿ, ಶಾಂತಿ ಸಮಾಧಾನಗಳನ್ನು ನೆಲೆಗೊಳಿಸಬೇಕೆಂದು ಬಹಳ ಪ್ರಯತ್ನಪಟ್ಟಾಗ್ಯೂ ಸಾಧ್ಯವಾಗದ ಘೋರಯುದ್ಧವು ದಿನೇ ದಿನೇ ದೊಡ್ಡದಾಗುತ್ತಲೇ ಬಂದಿರುವುದನ್ನೂ, ಯಾವ ಶಕ್ತಿಯು ಪ್ರಪಂಚಕ್ಕೆ ಶಾಂತಿ ಸಮಾಧಾನಗಳನ್ನು ಉಂಟುಮಾಡುತ್ತಿರುವುದೋ ಆ ಶಕ್ತಿಗೆ ಕೂಡಿದ ಮಟ್ಟಿಗೆ ಎಲ್ಲಾ ವಿಧವಾದ ಸಹಾಯವನ್ನೂ ಮಾಡಬೇಕೆಂದೂ ಧರ್ಮ ಪ್ರಜೆಗಳಿಗೆ ಮುಖ್ಯ ಕರ್ತವ್ಯವೆಂದೂ, ಆದ್ದರಿಂದಲೇ ನಮ್ಮ ದೇಶಿಯ ರಾಜರುಗಳು ರಾಜಭಕ್ತಿಗಾಗಿ ತಮ್ಮ ತನುಮನಧನಗಳ ಮೂಲಕ ಸಹಾಯ ಮಾಡುತ್ತಿರುವರೆಂದೂ, ಈ ಯುದ್ಧಕ್ಕಾಗಿ ಹೋದ ಇಂಡಿಯಾ ಸೈನ್ಯಗಳಲ್ಲಿ ಮೃತಪಟ್ಟವರ ಕುಟುಂಬ ಪೋಷಣೆ ಮಾಡುವುದು ನಮೆಲ್ಲರ ಕರ್ತವ್ಯವಾಗಿದೆಯೆಂದೂ, ಇತ್ಯಾದಿ ಹೆಡ್ಮಾಸ್ಟರಾದ ಮ॥ ಅಹೋಬಲಶಾಸ್ತ್ರಿಗಳು ಎಲ್ಲರಿಗೂ ಚೆನ್ನಾಗಿ ತಿಳಿಯಪಡಿಸಿದ ಮೇಲೆ ವಸೂಲಾದ ೧೪ ರೂಪಾಯನ್ನು ತಾಲ್ಲೋಕು ಟ್ರೆಜರಿ ಕಳುಹಿಸುವುದಕ್ಕೆ ಏರ್ಪಾಡುಮಾಡಿ ಚಕ್ರವರ್ತಿಗಳವರಿಗೂ, ಶ್ರೀಮನ್ಮಹಾರಾಜರವರಿಗೂ ಆಯುರಾರೋಗ್ಯಾದಿಗಳನ್ನುಂಟುಮಾಡಲೆಂದು ಪ್ರಾರ್ಥಿಸಿದರು.

ಮೈಸೂರು ಗೆಜೆಟ್ ಸಂಗ್ರಹ.

ಬಲಾತ್ಕರಿಸಿ ವೇಶ್ಯೆ ಬಿಡುಬು ಹಾಕುವ ಕಾನೂನನ್ನು ಶ್ರೀರಂಗಪಟ್ಟಣದ ಮ್ಯುನಿಸಿಪಲ್ ಸರಹದ್ದಿನೊಳಗೆ 1914ನೇ ಡಿಸೆಂಬರ್ ಲಾಗಾಯಿತು ಎರಡು ವರುಷ ಜಾರಿಗೆ ತರಲ್ಪಡುವುದು.

ಚಿತ್ರದುರ್ಗದ ಫಾರೆಸ್ಟ್ ಸಬ್ ಅ|| ಕನ್ಸರ್ವೆಟರ್ ಮ|| ಡಿ. ರಾಜಾರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಟ್ರೈನಿ ಅ|| ಕನ್ಸರ್ವೆಟರ್‌ರವರು ಅವರ ಕೆಲಸದ ಛಾರ್ಜನ್ನು ವಹಿಸಿರತಕ್ಕದ್ದು.

ಅಕ್ಟಿಂಗ್ ಅ|| ಕಂಟ್ರೋಲರ್ ಮ|| ಎಂ. ಎ. ರಂಗಾಚಾರ್ಯರು ಮ|| ಎಲ್. ಬಿಷೊಪ್ಪಂತ್ ಬಾದಾಮಿಯವರಿಗೆ ಬದಲಾಗಿ ಇನ್ನೊಂದು ತಿಂಗಳು ಬದಲಿ ನೋಡತಕ್ಕದ್ದು.

ಶಿವಸಮುದ್ರದ ಆಸ್ಪತ್ರೆಯ ಅ|| ಸರ್ಜನ್ ಮ|| ಎ. ಶೇಷಗಿರಿರಾಯರಿಗೆ ಅಕ್ಟೋಬರ್ ತಾ. 10ರಿಂದ ಒಂದು ತಿಂಗಳು ಎಂಟು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಅ|| ಸರ್ಜನ್ ಮ|| ಎಸ್. ಕೆ. ಹನುಮಂತರಾಯರು ಅವರ ಕೆಲಸದ ಛಾರ್ಜನ್ನು ವಹಿಸಿರತಕ್ಕದ್ದು.

ಬೆಂಗಳೂರು ಸೆಂಟ್ರಲ್ ಕಾಲೇಜ್ ಭೂಗರ್ಭ ಶಾಸ್ತ್ರ ಪಂಡಿತರಾದ ಮ|| ವಿ. ಎಸ್. ಸಾಂಬಶಿವ ಅಯ್ಯರವರಿಗೆ ನೊವೆಂಬರ್ ತಾ 16 ರಿಂದ ಪೂರಾ ತಲಬಿನ ಮೇಲೆ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಅ|| ಇಂಜನಿಯರ್ ಮ|| ಸಿ. ವಿಜಯರಂಗಂ ನಾಯುಡುಯವರನ್ನು ಬೆಂಗಳೂರಿನಿಂದ ಸ್ಯಾನಿಟರಿ ಡಿವಿಜನ್‌ಗೆ ವರ್ಗಮಾಡಿದೆ

ಸಬ್ ಅ|| ಇಂಜನಿಯರ್ ಮ|| ಸಿ. ವಿ. ಕಾಶೀಪತಿಶಾಸ್ತ್ರಿಗಳನ್ನು ಮೈಸೂರು ಸಿಟಿ ಮ್ಯುನಿಸಿಪಾಲಿಟಿಯಿಂದ ಇಂಜನಿಯರ್ ಇಲಾಖೆಗೆ ತೆಗೆದುಕೊಂಡು ಮೈಸೂರು ಡಿವಿಜನ್‌ಗೆ ವರ್ಗಮಾಡಿದೆ.

ಓವರ್‌ಸಿಯರ್ ಮ|| ಇ. ರಾಮಸ್ವಾಮಿ ಅಯ್ಯರವರನ್ನು ಮೈಸೂರು ಸಿಟಿ ಮ್ಯುನಿಸಿಪಲ್ ಇಂಜನಿಯರಾಗಿ ವರ್ಗಮಾಡಿದೆ.

ಮೈಸೂರು ಡಿವಿಜನ್ ಸಬ್ ಅ|| ಇಂಜನಿಯರ್ ಮ|| ಎಸ್. ಮುತ್ತುಸ್ವಾಮಿ ಅಯ್ಯರವರಿಗೆ ಒಂದು ತಿಂಗಳು ಹತ್ತು ದಿನಗಳ ಪ್ರಿವಿಲೆಜ್ ರಜಾಕೊಟ್ಟಿದೆ.

ಒಳದೇಶದ ವೃತ್ತಾಂತಗಳು.

ಈ ವಾರ ನಮ್ಮ ಪತ್ರಿಕೆಯು ಹತ್ತು ಪುಟಗಳುಳ್ಳದ್ದಾಗಿದೆ.

ರಿಟೈರ್ಡ್ ಡೆಪ್ಯುಟಿ ಕಮಿಷನರ್ ಮ|| ಎಂ. ಚೆಂಗಯ್ಯಚೆಟ್ಟಿಯವರನ್ನು ಸರ್ಕಾರದವರು ನ್ಯಾಯವಿಧಾಯಕ ಸಭೆಯ ಮೆಂಬರಾಗಿ ನೇಮಕಮಾಡಿರುತ್ತಾರೆ.

ರಾಜಧಾನಿಯಲ್ಲಿ ಪೂರ್ವ ದಿಕ್ಕಿನ ಕೋಟೆ ಕಂದಕವನ್ನು ಮುಚ್ಚಿ ನೀರನ್ನು ದೊಡ್ಡಕೆರೆಗೆ ಸಾಗಿಸುವ ಕಾಮಗಾರಿಗಳಿಗೆ 37,940 ರೂಪಾಯಿ ಸ್ಯಾಂಕ್ಷನ್ ಆಗಿದೆ.

ಕೊಲಾರ್ ಪೇಟೆ ಸಬ್ ತಾಲ್ಲೂಕಿನಲ್ಲಿ ಇಂಪೀರಿಯಲ್ ಇಂಡಿಯನ್ ರಿಲೀಫ್ ಫಂಡಿಗೆ ಒಟ್ಟು ರೂ. 306-7-0 ಚಂದಾ ವಸೂಲಾಗಿದೆ ಎಂದು ತಾಲ್ಲೂಕ್ ಕಚೇರಿಯಿಂದ ತಿಳಿಯಬಂದಿದೆ.

ಬೆಂಗಳೂರು ಸಿಟಿ ಕೋಆಪರೇಟಿವ್ ಸೊಸೈಟಿಯ ಮೆಂಬರುಗಳು ಕಳೆದ ವರುಷದ ನಫೆಯಲ್ಲಿ ಯುದ್ಧದ ರಿಲೀಫ್ ಫಂಡಿಗೆ 200 ರೂಪಾಯಿ ಚಂದಾ ಕೊಡಬೇಕೆಂದು ಇತ್ಯರ್ಥಮಾಡಿದಾರೆ.

ಮುಂದಿನ ವರುಷ ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯವರು ಕಬ್ಬನ್ ಪಾರ್ಕಿನಲ್ಲಿ ಒಂದು ಪ್ರದರ್ಶನವನ್ನು ನಡಿಸಬೇಕೆಂದು ಗೊತ್ತುಮಾಡಿ, ಅದರ ಖರ್ಚಿಗೆ 5,000 ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ.

ಮೊನ್ನೆ ಸೋಮವಾರ ಶ್ರೀಮನ್ ಮಹಾರಾಜರವರು ರಾಜಧಾನಿಯಿಂದ ಮೋಟರಿನಲ್ಲಿ ನಂಜನಗೂಡಿಗೆ ದಯಮಾಡಿ ದೇವಸ್ಥಾನದಲ್ಲಿ ಸೇವಾದಿಗಳನ್ನು ತೀರಿಸಿಕೊಂಡು ಸಾಯಂಕಾಲ ವಾಪಸು ಚಿತ್ತೈಸಿದರು.

ರಾಜಧಾನಿಯ ಕೃಷ್ಣರಾಜ ವೊಹಲ್ಲೆಯಲ್ಲಿ ಹೊಸದಾಗಿ ಕಟ್ಟುತ್ತಿರುವ ದಳವಾಯಿ ಎ. ವಿ. ಸ್ಕೂಲಿಗೆ ಬಾಡು ನಿವೇಶನಗಳನ್ನು ಕೊಂಡು ಮುಫತ್ತಾಗಿ ಸೇರಿಸಿಕೊಡಬೇಕೆಂದು ಟ್ರಸ್ಟ್ ಬೋರ್ಡಿನವರು ಒಪ್ಪಿರುತ್ತಾರೆ.

ಚೀಫ್ ಜಡ್ಜಿರಾದ ಸರ್ ಲೆಸ್ಲಿ ಮಿಲ್ಲರವರು ಕೋಲಾರ್ ಚಿನ್ನದ ಗಣಿಗಳಿಗೆ ದಯಮಾಡಿ ಅಲ್ಲಿನ ಸಿವಿಲ್ ಮತ್ತು ಕ್ರಿಮಿನಲ್ ಕೋರ್ಟುಗಳ ಅದಾಲತಗಳನ್ನು ತನಿಖೆಮಾಡಿಕೊಂಡು, ಗಣಿಗಳಲ್ಲಿ ಚಿನ್ನ ತೆಗೆಯುವ ವಿಧಾನವನ್ನೂ ಪರಾಂಬರಿಸಿ ವಾಪಸು ಬೆಂಗಳೂರಿಗೆ ಹೋದರು.

ಕೋಲಾರ್ ಡಿಸ್ಟ್ರಿಕ್ಟಿನಲ್ಲಿ 1914 ನೇ ಜುಲೈ ಲಾಗಾಯಿತು ರೆವಿನ್ಯೂ ಕಂದಾಯದ ಜೊತೆಗೆ ರೂಪಾಯಿಗೆ 6 ಪೈ ಸಂತೆ ರೈಲ್ವೆ ಸೆಸ್ಸನ್ನು ವಸೂಲ್ಮಾಡಬೇಕೆಂದು ಸರ್ಕಾರದವರು ಸ್ಯಾಂಕ್ಷನ್ ಮಾಡಿದಾರೆ. ಈ ಹಣವನ್ನು ಪ್ರತ್ಯೇಕವಾಗಿಟ್ಟು ಅದರಿಂದ ಟ್ರಾಮ್‌ವೇ ಮತ್ತು ರೈಲ್ವೆಗಳನ್ನು ಹಾಕಿಸಬೇಕೆಂದು ತೀರ್ಮಾನವಾಗಿದೆ.

ಬೆಂಗಳೂರು ಬಂಡಿಸ ಶ್ರೀಸ್ವಯಂ ಬ್ರಹ್ಮಾನಂದಸ್ವಾಮಿಯವರು ಅರಸಿಕೆರೆ ತಾಲ್ಲೂಕು ಜಾವಗಲ್ಲಿನಲ್ಲಿ ಕಳೆದ 6 ನೇ ತಾ. ಶುಕ್ರವಾರ ಮಧ್ಯಾಹ್ನ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ಬಹುಕಾಲದಿಂದ ದೇಶಾಟನೆ ಮಾಡುತ್ತಾ ಪ್ರಜೆಗಳ ಹಿತವನ್ನು ಬಯಸಿ ಅಲ್ಲಲ್ಲಿ ಆತ್ಮೀಯವಾದ ಉಪನ್ಯಾಸಗಳನ್ನು ಮಾಡಿ ಹೆಸರುವಾಸಿಯನ್ನು ಪಡೆದಿದ್ದರು.

ಕೊಡಗಿನಲ್ಲಿ ಪ್ರಖ್ಯಾತರಾಗಿದ್ದ ಲೇಟ್ ರಾಯಬಹದೂರ್ ಸಿ. ಸೋಮಯ್ಯನವರ ಕುಮಾರ್ತೆಯು ಯೂರೋಪ್ ಖಂಡದಲ್ಲಿ ಸಂಚಾರ ಮಾಡಿಕೊಂಡು ಪತಿಯುಕ್ತಳಾಗಿ ವಾಪಸು ಬಂದಿದಾರೆ ಈಕೆಯನ್ನು ಮಡಿಕೇರಿಯ ದೊಡ್ಡ ಮನುಷ್ಯರು ಸತ್ಕಾರ ಮಾಡಿದರು. ಇವರು ಕೊಡಗು ಸ್ತ್ರೀಯರಿಗೆ ಒಂದು ಸಂಘವನ್ನು ಏರ್ಪಾಟುಮಾಡಿ, ಅವರನ್ನೆಲ್ಲಾ ಅಭಿವೃದ್ಧಿಗೆ ತರಬೇಕೆಂದು ಸಾಹಸಪಡುತ್ತಾರೆ. ಇವರ ಪ್ರಯತ್ನವು ಸಾಫಲ್ಯವಾದೀತೆಂದು ನಿರೀಕ್ಷಿಸಲ್ಪಟ್ಟಿದೆ.

ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿರುವ ಮ|| ಸಿ. ಆರ್. ನಾರಾಯಣರಾಯರನ್ನು ಮೈಸೂರು ಟ್ರೈಯಿನಿಂಗ್ ಕಾಲೇಜಿನ ಪ್ರಿನ್ಸಿಪಲ್ ಕೆಲಸಕ್ಕೆ ನೇಮಕಮಾಡಿದಾರೆ. ಮ|| ಪಿ. ಸುಬ್ರಹ್ಮಣ್ಯಶಾಸ್ತ್ರಿಗಳು ಇನ್ಸ್‌ಪೆಕ್ಟರ್ ಜನರಲ್ ರವರ ಆಫೀಸಿಗೆ ವರ್ಗವಾಗಿಯೂ, ಮ|| ಎಚ್. ಆರ್. ಕೃಷ್ಣಮೂರ್ತಿಯವರು ಬೆಂಗಳೂರು ಹೈಸ್ಕೂಲ್ ಹೆಡ್ ಮಾಸ್ಟರಾಗಿಯೂ, ಮ|| ಡಿ. ವೆಂಕಟರಾಮಯ್ಯನವರು ಮೈಸೂರು ಹೈಸ್ಕೂಲ್ ಹೆಡ್ ಮಾಸ್ಟರಾಗಿಯೂ ನೇಮಕವಾಗಿರುತ್ತಾರೆ.

ಬೆಂಗಳೂರಿನಲ್ಲಿ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ರವರು ಪೋಲೀಸ್ ಹುದ್ದೇದಾರರನ್ನು ಕರಸಿಕೊಂಡು ಮೂರು ದಿನ ಕೂಟಗಳನ್ನು ನಡಿಸಿ ಪೋಲೀಸಿನವರ ನಡವಳಿಕೆ ಕ್ರಮಗಳನ್ನು ಚರ್ಚೆಮಾಡಿದರು. ಸಣ್ಣ ಹುಡುಗರು ಬೀಡಿ ಸೇದುವುದು, ಕರಹೇವಾರಿ ಜೂಜಾಟಗಳು, ಪೇಟೆ ಮತ್ತು ಸಂತೆಗಳಲ್ಲಿ ವರ್ತಕರು ಮೋಸದ ಅಳತೆ ತೂಕಗಳನ್ನು ಉಪಯೋಗಿಸುವುದು, ಇವುಗಳನ್ನು ಪೋಲೀಸಿನವರು ಅಜಮಾಯಿಷಿಯಿಂದ ಅಡಗಿಸಿದರೆ ಸಂಸ್ಥಾನದ ಏಳಿಗೆಗೆ ಅವರು ಎಷ್ಟೋ ಉಪಕಾರ ಮಾಡಿದಂತಾಗುವುದು.

ಮೈಸೂರು ಮಹಾರಾಣಿ ಕಾಲೇಜಿನ ಮ್ಯಾನೆಜಿಂಗ್ ಕಮಿಟಿಗೆ ಮುಂದೆ ಹೇಳುವವರು ಮೆಂಬರುಗಳಾಗಿ ನೇಮಕವಾಗಿರುತ್ತಾರೆ.—ಸರ್ದಾರ್ ಎಂ. ಕಾಂತರಾಜೆ ಅರಸಿನವರು (ಪ್ರೆಸಿಡೆಂಟರು), ರಾಯಬಹದೂರ್ ಎ. ನರಸಿಂಹಯ್ಯಂಗಾರ್ರು, (ವೈಸ್ ಪ್ರೆಸಿಡೆಂಟರು), ಮಿಸೆಸ್ ಟಿ ಡೆನ್‌ಹೆಮ್‌ರವರು, ಮಿ|| ಗಳಾದ ಆರ್. ಎಚ್. ಕ್ಯಾಂಬೆಲ್‌ರವರು, ವೈ. ಶ್ರೀನಿವಾಸರಾಯರು, ಎಂ. ವೆಂಕಟಕೃಷ್ಣಯ್ಯನವರು, ಎ. ಮಹದೇವಶಾಸ್ತ್ರಿಗಳು, ಎಂ ಸಿ ರಂಗಯ್ಯಂಗಾರ್ರು, ಸಿ. ಶ್ರೀನಿವಾಸರಾಯರು, ಡಿ. ವೆಂಕಟರಾಮಯ್ಯನವರು

ಬೆಂಗಳೂರು ಸಿಟಿಯಲ್ಲಿ ನೆಯ್ಗೆಯವರಿಗೆ ವ್ಯಾಪಾರವಾಗದೆ ತುಂಬಾ ಕಷ್ಟಪಡುತ್ತಿದಾರೆಂದು ತಿಳಿದು ಮಿ|| ಎ. ಛಾಟರ್‌ಟನ್‌ರವರು ಕಳೆದ ವಾರ ಒಂದು ಮೀಟಿಂಗನ್ನು ನಡಿಸಿ ವರ್ತಕಮಂಡಲಿಯವರ ಮತ್ತು ನೆಯ್ಗೆಯವರ ಕೂಡ ಆಲೋಚನೆ ಮಾಡಿದರು. ಈಗ ನೂಲಿನ ದಾರಣೆ ಇಳಿದು, ಸರಕುಗಳ ಕ್ರಯ ಕಡಮೆಯಾಗಿದೆ. ವರ್ತಕರು ಒಂದು ಪಂಚಾಯಿತಿಯನ್ನು ಮಾಡಿಕೊಂಡು ನೆಯ್ಗೆಯವರಿಂದ ಸರಕುಗಳನ್ನು ಕೊಂಡಿಡಬೇಕೆಂದೂ, ಅವಶ್ಯವಿದ್ದರೆ ಪಂಚಾಯಿತಿಯವರು ಮೈಸೂರು ಬ್ಯಾಂಕಿನಿಂದ ದ್ರವ್ಯಸಹಾಯವನ್ನು ಪಡೆಯಬಹುದೆಂದೂ ಇತ್ಯರ್ಥವಾಯಿತು.

Tailoring taught by an "Honours" graduate of two West End Schools and an examiner of the world famous Tailor and Cutter of London; possessing long and varied experience as a practical Cutter. Certificates given to Students at the end of the term. Special arrangements for London examination and diploma. Send half-anna stamp for prospectus.

RAO'S COLLEGE OF TAILORING,

[245-1] *30, Picket Road, Kalbadevi, Bombay.*

ಗೃಹಕೃತ್ಯದ ನೋಟೀಸು.

ಮೈಸೂರು ಮಂಡಿಮೊಹಲ್ಲಾ ಕಾಳಮ್ಮನವರ ಗುಡಿ ಬೀದಿಯಲ್ಲಿರುವ ಶಿಲ್ಪಿ ಗುರುವಾಚಾರ್ರ ಮಗ ಶಿಲ್ಪಿ ದೊಡ್ಡನಂಜಪ್ಪಾಚಾರಿಯು ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ--ನನ್ನ ತಮ್ಮ ಶಿಲ್ಪಿ ಚಿಕ್ಕನಂಜಪ್ಪಾಚಾರಿಯು ನಮ್ಮ ಕುಟುಂಬಕ್ಕೆ ಸೇರಿ ಹಾಲಿ ನಮ್ಮಗಳಿಗೆ ವಿಭಾಗವಾಗದೆ ಇರುವ ಮೈಸೂರು ಮಂಡಿಮೊಹಲ್ಲಾ ಮ್ಯುನಿಸಿಪಲ್ 650 ನೇ ನಂಬರ್ ಮನೆಯನ್ನು ಕ್ರಯಭೋಗ್ಯಾದಿಗಳನ್ನು ಮಾಡಬೇಕೆಂದು ಇರುವಂತೆ ತಿಳಿಯಬಂತು. ಹಾಗೇನಾದರೂ ನನಗೆ ತಿಳಿಯದೆ ಯಾರಾದರೂ ಕ್ರಯ ಭೋಗ್ಯಾದಿಗಳನ್ನು ಮಾಡಿಕೊಂಡರೆ ಅಂಥವರು ಸ್ವತ್ತನ್ನು ಕಳೆದುಕೊಳ್ಳುವದಲ್ಲದೆ ನನ್ನ ನಷ್ಟಕ್ಕೆ ಗುರಿಯಾಗಬೇಕಾಗುವುದೆಂದು ಎಚ್ಚರಿಸಿರುತ್ತೇನೆ.

[243-1] ಶಿಲ್ಪಿ ದೊಡ್ಡನಂಜಾಚಾರಿ ರುಜು.

ಗೃಹಕೃತ್ಯದ ನೋಟೀಸು.

ತೀರ್ಥಹಳ್ಳಿ ತಾಲ್ಲೂಕು ಮಾಳೂರು ಹೋಬಳಿ ಉಬ್ಬೂರು ಗ್ರಾಮದ ಅಡ್ಡಗುಡ್ಡೆಯಲ್ಲಿರುವ ತಮ್ಮೇಗೌಡ ಬಿನ್ ಹೊನ್ನೇಗೌಡನು ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನೆಂದರೆ:—ನನ್ನ ಅವಿಭಕ್ತ ದೊಡ್ಡಪ್ಪ ತಿಮ್ಮೇಗೌಡನು ವಾರ್ಧಕ್ಯದೆಶೆಯಲ್ಲಿ ತಾನು ಸೀರೆಉಡಿಸಿ ಮದುವೆಮಾಡಿಕೊಂಡ ಯೌವನಸ್ಥೆಯಾದ ರುದ್ರಮ್ಮ ಹೆಗ್ಗಡ್ತಿಯ ನಡೆನುಡಿಯನ್ನು ನಡಸದೆ ಬಹುಕಾಲ ಕಾಹಿಲೆ ಅನುಭವಿಸಿ ಇವಳನ್ನು ಬಿಟ್ಟು ಬುದ್ಧಿ ಕೆಟ್ಟು ಕಳೆದ ಮೇ ತಿಂಗಳು ಆ ಸುಮಾರಿನಲ್ಲಿ ಪವತಿಯಾದನು. ಅನಂತರ ಒಟ್ಟು ಕುಟುಂಬದ ಆಸ್ತಿಯೆಲ್ಲಾ ನನ್ನ ವಶದಲ್ಲಿದ್ದು ನಾನು ಅನುಭವಿಸುತ್ತಿರುವಲ್ಲೂ ಈ ರುದ್ರಮ್ಮ ಹೆಗ್ಗಡ್ತಿಯೂ ಇವಳ ಗೆಳೆಕಾರರೂ ಕೂಡ ನನ್ನ ದ್ವೇಷಿಗಳ ದುಷ್ಪ್ರೇರಣೆಗೆ ಒಳಗಾಗಿ ನನಗೆ ಕೊಟ್ಟ ತೊಂದರೆಯನ್ನು ನಿರ್ವಹಿಸಲಾರದೆ ಕೆಲವು ಸೊತ್ತುಗಳನ್ನು ವಿಕ್ರಯಿಸಿರುತ್ತೇನೆ. ನನಗೆ ಸೇರಿದ ಕುಟುಂಬದ ಆಸ್ತಿಯಲ್ಲಿ ಇವಳಿಗೆ ಯಾವ ವಿಧವಾದ ಹಕ್ಕು ಬಾಧ್ಯತೆಯೂ ಇರುವದಿಲ್ಲ. ಬಲಾತ್ಕಾರವಾಗಿ ನನ್ನ ಹಕ್ಕನ್ನು ಬಾಧಿಸುವುದಕ್ಕಾಗಿ ಇನ್ನು ಹುಟಾರು ಕಾರ್ಯಗಳನ್ನು ನಡಿಸುವ ಪ್ರಯತ್ನ ಮಾಡುತ್ತಾ ಇದಾರೆ. ನನ್ನನ್ನಾಗಲೀ, ನನ್ನ ಆಸ್ತಿಯನ್ನಾಗಲೀ ಬಾಧಿಸುವದಕ್ಕಾಗಿ ಯಾವ ಯೋಗ್ಯತೆಯೂ ಇಲ್ಲದ ಇವಳಿಂದ ಮಾಡಿಕೊಳ್ಳುವ ಯಾವ ಕರಾರಾಗಲಿ ಎಷ್ಟು ಮಾತ್ರವೂ ಫಲಿಸಲಾರದಲ್ಲದೆ ಅಂಥವರು ನನ್ನ ನಷ್ಟವನ್ನೆಲ್ಲಾ ತರಬೇಕಾಗುವುದನ್ನು ತಿಳಿದಿರಬೇಕು.

[240-1] ತಮ್ಮೇಗೌಡನ ರುಜು.

ನೋಟೀಸು.

ಮೈಸೂರು ಮತ್ತು ಇತರ ಕನ್ನಡ ಭಾಷೆ ಸೀಮೆಗಳಾದ ಮಂಗಳೂರು, ಬಳ್ಳಾರಿ, ಧಾರವಾಡ, ಬೆಳಗಾವ, ಬೊಂಬಾಯಿ, ವಗೈರೆ ಪ್ರದೇಶಗಳಲ್ಲಿ ಕನ್ನಡ ಕಾದಂಬರಿ ಲೇಖಕರೆಂದು ಪ್ರಸಿದ್ಧರಾಗಿದ್ದ ಮ|| ಬಿ. ವೆಂಕಟಾಚಾರ್ಯರವರು ಇದೇ ಇಸವಿ ಜೂನ್ ತಿಂಗಳ ಆಖೈರು ಭಾಗದಲ್ಲಿ ದೈವಾಧೀನರಾದರು. ಇವರಿಗೆ ನಾಲ್ಕು ಜನ ಅವಿಭಕ್ತ ಪುತ್ರರು ಇರುತ್ತಾರೆ. ಆ ಪೈಕಿ ಜ್ಯೇಷ್ಠ ಪುತ್ರರು ಮ|| ಅಡ್ವೋಕೇಟ್ ಬಿ.ಎ., ಬಿ.ಎಲ್. ಬಿ., ರಾಮಣ್ಣನವರು ಅವರ ಪಿತರಾರ್ಜಿತವಾದ ಪಿತ್ರಾರ್ಜಿತ ಆಸ್ತಿಗೆ ಯಜಮಾನರಾಗಿ ಮೇನೇಜ್‌ಮೆಂಟ್ ನಡಿಸುತ್ತಾ ಇರುತ್ತಾರೆ. ಮ|| ವೆಂಕಟಾಚಾರ್ಯರವರು ರಚಿಸಿರುವ ವಿಶಿಷ್ಟ ಕನ್ನಡ ಕಾದಂಬರಿಗಳನ್ನು ಬಿಕರಿಮಾಡುವುದಕ್ಕೂ, ಪರಿಷ್ಕರಣೆ ಮಾಡಿ ಪುನಃ ಅಚ್ಚುಹಾಕಿಸುವುದಕ್ಕೂ, ಅವುಗಳನ್ನು ಭಾಷಾಂತರಮಾಡಲು ಅಪ್ಪಣೆಯ ಅನುಮತಿ ಕೊಡುವುದಕ್ಕೂ ಮತ್ತು ಆ ಸಂಬಂಧವಾಗಿ ಕಾಗದ ಪತ್ರಗಳನ್ನು ನಡಿಸುವುದಕ್ಕೂ ಅವರ ಜ್ಯೇಷ್ಠ ಪುತ್ರರಾದ ಬಿ. ರಾಮಣ್ಣನವರೇ ಲಾ ಪ್ರಕಾರ ಸ್ವತಂತ್ರರು ಮತ್ತು ಬಾಧ್ಯರಾಗಿರುತ್ತಾರೆ. ಲೇಟ್ ಬಿ. ವೆಂಕಟಾಚಾರ್ಯರವರಿಗೆ ನಾಲ್ಕನೆ ಸಂಬಂಧದ ಹೆಂಡತಿ ಮತ್ತು ನಮ್ಮ ಬಲತಾಯಿಯಾದ ಬಿ. ಕಲ್ಲಮ್ಮನೆಂಬುವರಿಗೆ ಮೇಲ್ಕಂಡ ಪುಸ್ತಕಗಳ ವಿಚಾರದಲ್ಲಿ ಯಾವ ಸ್ವಾತಂತ್ರ್ಯವೂ ಇರುವುದಿಲ್ಲ. ಈ ನೋಟೀಸಿಗೆ ವಿರೋಧವಾಗಿ ಯಾರಾದರೂ ನಮ್ಮ ಬಲತಾಯಿ ಕಲ್ಲಮ್ಮನವರಿಂದ ಪುಸ್ತಕಗಳನ್ನು ಹೊಂದಿದ್ದ ಆಗಲೀ, ಅಥವಾ ಅಚ್ಚುಮಾಡಿದ್ದ ಆಗಲೀ ಮೈಸೂರು ಕಾಪಿರೈಟ್ ಕಾನೂನಿನ ಪ್ರಕಾರದ ಕ್ರಮಗಳಿಗೆ ಗುರಿಯಾಗುವರಲ್ಲದೆ ನಮ್ಮ ನಷ್ಟಗಳಿಗೂ ಸಹ ಜವಾಬ್ದಾರರಾಗುತ್ತಾರೆಂದು ಈ ಮೂಲಕ ತಿಳಿಸಿರುತ್ತೆ. ಯಾವ ಕರೆಸ್‌ಪಾಂಡೆನ್ಸು ಮಾಡಬೇಕಾದರೂ ನಮಗಾಗಿ ನಮ್ಮ ತಮ್ಮಂದಿರಾದ ಬಿ ವಿ. ನರಸಿಂಹಯ್ಯಂಗಾರ್ರವರ ಮೂಲಕ ನಡಿಸಬಹುದಾಗಿ ತಿಳಿಸಿದೆ. [244-1]

ತಾ. 10-11-14. ಬಿ. ರಾಮಣ್ಣ,

ಮೈಸೂರು ಅಡ್ವೋಕೇಟ್.

ನೋಟೀಸು.

ಕಳೆದ ಎರಡು ತಿಂಗಳು ಮುಂಚೆ ನಂಜನಗೂಡಿನಲ್ಲಿರುವ ವೈಶ್ಯರ ಕಾರ್ಖಾನೆ ಕಲ್ಲು ತಿಮ್ಮಶೆಟ್ಟಿ ಮಗ ಕಾರ್ಖಾನೆಕಲ್ಲು ಭಾಸ್ಕರಶೆಟ್ಟಿ ಎಂಬುವನು ಕೆ. ಅಣ್ಣಪ್ಪಶೆಟ್ಟಿಗೆ ಹಣ ಕೊಡಬೇಕಾಗಿದ್ದು, ಮೋಸಪಡಿಸುವದಕ್ಕೆ ಪ್ರಯತ್ನಮಾಡಿದ್ದರಿಂದ ವಾರಂಟಿನಿಂದ ಹಿಡಿಯಲ್ಪಟ್ಟು ಮೈಸೂರು ಸಿವಲ್ ಜೈಲಿನಲ್ಲಿ ಹಾಕಲ್ಪಟ್ಟಿದಾನೆ. ಹೀಗೆಯೇ ಈತನು ಅನೇಕ ಜನಗಳಿಗೆ ಮೋಸಮಾಡಿ ಇರುವದು ಅಲ್ಲದೆ ವ್ಯಾಪಾರ ಸಂಬಂಧದಲ್ಲಿ ಅನೇಕ ಹಳ್ಳಿಹಳ್ಳಿ ಜನಗಳನ್ನು ವಂಚಿಸಿದಾನೆಂದು ತಿಳಿದುಬರುತ್ತದೆ. ಈತನಿಗೆ ಹಿಂದೆ ಒಂದು ಸಲ ಸಿವಲ್ ಜೈಲು ಆಗಿ ಇದೆ. [248-1]

ನಂಜನಗೂಡು. ಕೆ. ಅಣ್ಣಪ್ಪಶೆಟ್ಟಿ.

ಗೃಹಕೃತ್ಯದ ನೋಟೀಸ್.

ಮೈಸೂರು ಮಂಡಿಮೊಹಲ್ಲಾ ತೊಗರಿಬೀದಿ ವೆಂಕಟರಮಣಸ್ವಾಮಿ ದೇವಸ್ಥಾನದ ಬಾಜುನಲ್ಲಿರುವ ರಾಮಾನುಜಯ್ಯ ಉರುಫ್ ತಿರುವೆಂಗಡಯ್ಯನವರ ೨ ನೇ ಮಗ ಅಳಸಿಂಗ್ರಯ್ಯ, ೩ ನೇ ಮಗ ಚಲುವಯ್ಯ ಮೈನರ್ ಗಾರ್ಡಿಯನ್ ತಾಯಿ ತಿರುಮಲಮ್ಮ ಸಹ ಈ ಮೂಲಕ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನಂದರೆ—ಮೇಲ್ಕಂಡ ತಿರುವೆಂಗಡಯ್ಯ ಎಂಬುವರು ಇವರ ೧ ನೇ ಮಗ ನಮ್ಮ ಅಣ್ಣ ನರಸಿಂಹಯ್ಯನವರು ಸಹ ಸುಮಾರು 4-5 ವರುಷಗಳ ಕೆಳಗೆ ಗಾರ್ಡಿಯನ್ ತಾಯಿಯ ಸಂಗಡ ಕಲಹಮಾಡಿಕೊಂಡು ಏಕಗೃಹಕೃತ್ಯವನ್ನು ಬಿಟ್ಟು ಬೇರೆ ಹೋದರು. ಏಕ ಗ್ರಹಕೃತ್ಯದಲ್ಲಿದ್ದಾಗ್ಗೆ ನಮ್ಮ ತಂದೆ ಪಿತ್ರಾರ್ಜಿತದ ಚರಸ್ವತ್ತು ವಿಲೆಯಿಂದ ಮೈಸೂರು ಮಂಡಿಮೊಹಲ್ಲಾ ತೊಗರಿಬೀದಿ ವೆಂಕಟರಮಣಸ್ವಾಮಿ ದೇವಸ್ಥಾನದ ಬಾಜುನಲ್ಲಿ ಇರುವ ಮುನಿಸಿಪಲ್ ಡೋರ್ ನಂ. 2278 ನೇ ಹೆಂಚಿನ ಮನೆಯನ್ನು ಕ್ರಯಕ್ಕೆ ತಗೆದುಕೊಂಡಿರುತ್ತೆ. ಇವರು ಬೇರೆ ಹೋದ ಲಾಗಾಯಿತು ಡಿಟೋ ಮನೆ ಕಂದಾಯವನ್ನು ಗಾರ್ಡಿಯನ್ ತಾಯಿಯವರೇ ಕೊಟ್ಟು ರಶೀತಿ ಪಡೆದಿರುತ್ತಾರೆ. ಇವರ ಹೆಸರಿಗೆ ಖಾತೇ ಸಹ ಆಗಿ ಹಾಲಿ ನಮ್ಮಗಳ ಅನುಭವದಲ್ಲೇ ಇರುತ್ತೆ ನಮ್ಮ ನಮಗೆ ವಿಭಾಗವು ಆಗಿಲ್ಲ. ನಮ್ಮಗಳಿಗೆ ಡಿಟೋ ಮನೆ ವಿನಹ ಮತ್ಯಾವ ಸ್ವತ್ತು ಇಲ್ಲ. ಡಿಟೋ ಯವರು ಬೇರೆ ಹೋದ ಲಾಗಾಯಿತು ಗಾರ್ಡಿಯನ್ ತಾಯಿಯೇ ತಮ್ಮ ಸ್ವಂತ ಸಂಪಾದನೆಯಿಂದ ಆರು ಮಕ್ಕಳ ಕಷ್ಟ ಸುಖ ಶೋಭನಗಳನ್ನು ನಡಿಸಿ ಕಾಪಾಡಿಕೊಂಡು ಬಂದಿರುತ್ತಾರೆ. ಡಿಟೋ ನಮ್ಮ ತಂದೆ ತಿರುವೆಂಗಡಯ್ಯನವರೂ, ನಮ್ಮ ೧ ನೇ ಅಣ್ಣ ನರಸಿಂಹಯ್ಯನವರೂ ಏಕವಾಗಿ ನಮಗೆ ನೋವುಪಡಿಸಬೇಕೆಂಬ ದುರಾಲೋಚನೆಯಿಂದ ಡಿಟೋ ಮನೆಯನ್ನು ನಮಗೆ ತಿಳಿಯದ ಹಾಗೆ ಕ್ರಯ, ಆಧಾರ, ಭೋಗ್ಯ, ವಗೈರೆ, ಪರಾಧೀನಮಾಡಬೇಕೆಂದು ಮೋಸದ ನಡವಳಿಕೆ ನಡಿಸುತ್ತಿರುವದಾಗಿ ಕೇಳುತ್ತೇವೆ. ಯಾರೇ ಆಗಲಿ ನಮ್ಮ ಅನುಮತಿ ಇಲ್ಲದೆ ಹಾಗೆ ಪರಾಧೀನಮಾಡಿಕೊಂಡಲ್ಲಿ ಅದು ಊರ್ಜಿತವಾಗುವದಿಲ್ಲ; ಮತ್ತು ನಮ್ಮ ನಷ್ಟಗಳಿಗೆಲ್ಲಾ ಅವರೇ ಗುರಿಯಾಗಬೇಕಾಗುವದೆಂದು ಈ ಮೂಲಕ ಎಚ್ಚರಿಸಿರುತ್ತೇವೆ [248-1]

ಅಳಸಿಂಗ್ರಯ್ಯ ಮತ್ತು ತಿರುಮಲಮ್ಮನ ರುಜು

ಜಾಂನಗರದ ಸುಪ್ರಸಿದ್ಧರಾದ ರಾಜವೈದ್ಯರವರ ಬಹು ಖಾತ್ರಿಯಾದ ಔಷಧಗಳು.

(1) ಗರ್ಭಾಮೃತ ಚೂರ್ಣವು—ಸ್ತ್ರೀಯರ ಗರ್ಭಾಶಯ ಮತ್ತು ಇತರವಾದ ರೋಗಗಳಿಗೆ ರಾಮಬಾಣವು ಕ್ರಯ ರೂ. 2-0-0

(2) ಬಾಲಪುಷ್ಟಿಕರಣ ವಟಿಕ—ಶಿಶುಗಳ ಸಮಸ್ತ ವ್ಯಾಧಿಗಳನ್ನು ತಡೆದು ಬಲವನ್ನು ಕೊಡತಕ್ಕದ್ದು ರೂ. 1-0-0

(3) ಶ್ವಾಸಕಾಸಾರಿ ಅವಲೇಹವು—ಅಸಾಧ್ಯವಾದ ಶ್ವಾಸ, ಉಬ್ಬಸ, ಕಾಸ, ಕ್ಷಯರೋಗಗಳಿಗೆ ಮಹೌಷಧವು ರೂ. 1-8-0

ದೇವರು ಸರ್ವವ್ಯಾಪಕನಾಗಿ ಎಲ್ಲೆಲ್ಲಿಯೂ ಇರುವದು ನಿಜ. ನಾವೂ ಸಕಲ ಚರಾಚರ ವಸ್ತುಗಳೂ ಆತನಲ್ಲಿ ಇದ್ದುಕೊಂಡು ಜೀವಿಸುತ್ತಿರುವದೂ ನಿಜ. ಆದರೂ ದೇವರ ಚಿತ್ತವನ್ನೂ ಆಜ್ಞೆಗಳನ್ನೂ ಕೇಳಿ ನೈಕೊಳ್ಳುವದಕ್ಕೂ ಅಥವಾ ಅವುಗಳನ್ನು ಉಲ್ಲಂಘಿಸಿ ನಿರಾಕರಿಸುವದಕ್ಕೂ ನಾವು ಸ್ವತಂತ್ರರಾಗಿದ್ದೇವೆ. ಮನುಷ್ಯರಾದ ನಮ್ಮ ಹುಟ್ಟುಸ್ವಭಾವ ಅಂಥಾದ್ದು. ಚೆನ್ನಾಗಿ ಯೋಚಿಸಿ ನೋಡಿದರೆ ಇದರೊಳಗೇನೂ ಆಶ್ಚರ್ಯವಿಲ್ಲ. ಒಂದೊಂದು ವರ್ಗದ ಪ್ರಾಣಿಗಳು ಆದರವರ ಹುಟ್ಟುಸ್ವಭಾವದಂತೆ ನಡೆಯುತ್ತವೆ. ಪಕ್ಷಿಗಳು ಅಂತರಿಕ್ಷದಲ್ಲಿ ಹಾರುತ್ತವೆ. ಮೀನುಗಳು ನೀರಿನಲ್ಲಿ ಈಜುತ್ತವೆ. ಹಾರುವ ಶಕ್ತಿ ಇಲ್ಲದ್ದು ಪಕ್ಷಿಯಲ್ಲ; ಈಜಲಾಗದ ಮೀನುಗಳಿಲ್ಲ. ಹಾಗೆಯೇ ಸ್ವತಂತ್ರ ಪಡೆಯದಿರುವವನು ಮನುಷ್ಯನಲ್ಲ. ಸ್ವತಂತ್ರವು ಮನುಷ್ಯನ ಸ್ವಭಾವ ಧರ್ಮ. ಇದು ಒಳ್ಳೇದು, ಅದು ಕೆಟ್ಟದ್ದು, ಇದು ಧರ್ಮ, ಅದು ಅಧರ್ಮ; ಇದು ನ್ಯಾಯ, ಅದು ಅನ್ಯಾಯವೆಂದು ಸಕಲ ಸಂದರ್ಭಗಳಲ್ಲಿ ಬೇರೆ ಪ್ರಾಣಿಗಳಿಗೆ ತಿಳಿಯುವದಕ್ಕಿಂತ ಮನುಷ್ಯನಿಗೆ ಪತಾರ್ಶ ಚೆನ್ನಾಗಿ ತಿಳಿಯುತ್ತದೆ. ಆದರೆ ಅಷ್ಟು ತಿಳಿದ ಮಾತ್ರಕ್ಕೆ ಅವನು ಮನುಷ್ಯನೆನ್ನಿಸಿಕೊಳ್ಳುವದಿಲ್ಲ. ತಿಳಿದನಂತರ—ನನಗೆ ಇದು ಇರಲಿ; ಅದು ಬೇಡವೆಂದು ಆರಿಸಿಕೊಂಡು ಅದನ್ನೇ ಕಡೇ ವರೆಗೆ ಸಾಧಿಸುವದು ಮನುಷ್ಯನಿಗೆ ಸ್ವಾಭಾವಿಕವಾಗಿ ಹುಟ್ಟು ಜಾಯಮಾನವಾಗಿದೆ. ಇದು ಮನುಷ್ಯನನ್ನು ಬಿಟ್ಟು ಇತರ ಪ್ರಾಣಿಗಳಿಗಿಲ್ಲವೆಂದು ಒತ್ತಿ ಹೇಳಬೇಕಾಗಿದೆ. ಮನುಷ್ಯನು ದೇವರ ಹೋಲಿಕೆಯಲ್ಲಿ ಅಥವಾ ಆತನ ಸ್ವಭಾವದಲ್ಲಿ ನಿರ್ಮಾಣವಾಗಿದ್ದಾನೆಂದು ಸತ್ಯವೇದವು ಹೇಳುತ್ತದೆ. ದೇವರ ಸ್ವಭಾವದಲ್ಲಿ ಒಂದು ಮುಖ್ಯವಾದ ಗುಣವು ಸ್ವತಂತ್ರ. ಮತ್ತು ದೇವರು ಸ್ವತಂತ್ರವನ್ನು ಕೊಡದೆ ಮನುಷ್ಯನನ್ನು ತನ್ನ ಸ್ವಭಾವದಲ್ಲಿ ನಿರ್ಮಿಸುವದಕ್ಕಾದೀತೇ? ದೇವರು ತನ್ನ ಸ್ವಭಾವದಲ್ಲಿ ಮನುಷ್ಯನನ್ನು ನಿರ್ಮಿಸಿದ್ದಾನೆ. ಆದ್ದರಿಂದ ದೇವರಿಗೆ ಸ್ವಭಾವವಾಗಿರುವ ಸ್ವತಂತ್ರವು ಆತನ ಸ್ವಭಾವದಲ್ಲಿ ನಿರ್ಮಾಣವಾಗಿರುವ ಮನುಷ್ಯನಿಗೂ ಸ್ವಭಾವಿಕವಾಗಿ ಬಂದ ಲಕ್ಷಣವಾಗಿದೆ. ಈಜಲಾರದ ಮೀನು ಹ್ಯಾಗೆ ಅಸಾಧ್ಯವೋ ಸ್ವತಂತ್ರವಿಲ್ಲದ ಮನುಷ್ಯನೂ ಅಸಾಧ್ಯ. ಹೀಗಿರುವದರಿಂದ ದೇವರು—ಪಾಪ ಮಾಡಬೇಡ; ಪುಣ್ಯವನ್ನೇ ಮಾಡು ಎಂದು ಮನುಷ್ಯನನ್ನು ಬಲಾತ್ಕರಿಸುವದಿಲ್ಲ. ಹಾಗೆ ಬಲಾತ್ಕರಿಸಿದರೆ ಮನುಷ್ಯನ ಸ್ವಭಾವ ಲಕ್ಷಣ ಊನವಾಗಿ, ಹೀನವಾಗಿ, ಕೊರತೆಯಾಗುವದು.

ಒಬ್ಬ ದೊಡ್ಡ ಮನುಷ್ಯನಿಗೆ ಒಬ್ಬನೇ ಮಗನಿದ್ದನು. ಆತನಿಗೆ ಅನುದಿನದ ಊಟ, ಉಪಚಾರ, ಉಡಿಗೆತೊಡಿಗೆಗಳು ತಂದೆಯ ಸಂಪಾದನೆಯಾದ ಸಂಬಳದಿಂದ ಜರುಗುತ್ತಿದ್ದವು. ತಂದೆಯ ಮನೆಯಲ್ಲಿಯೇ ಸುಖವಾಗಿ ವಾಸಮಾಡಿಕೊಂಡಿದ್ದನು. ಅವನು ಪ್ರಾಯಸಮರ್ಥನಾದವನು. ಆದಾಗ್ಯೂ ತನ್ನ ಬುದ್ಧಿಬಲ, ಸ್ವತಂತ್ರಗಳನ್ನು ತಂದೆಯ ಚಿತ್ತಕ್ಕೆ ಅಧೀನಪಡಿಸಿ ನಡಕೊಳ್ಳುತ್ತಿದ್ದನು. ಅವನಿಗೂ ತಂದೆಗೂ ಪರಸ್ಪರ ಅನ್ಯೋನ್ಯವೂ ಅನುರಾಗವೂ ಸಮಗ್ರವಾಗಿ ನಡೆಯುತ್ತಿದ್ದಿತು. ಆದರೆ ಆ ಹುಡುಗನು ಪೋಲೀಹುಡುಗರ ದುರ್ಬೋಧೆಗೆ ಕಿವಿಯೊಡ್ಡಿ ತಂದೆಯ ಆಜ್ಞೆಯನ್ನು ತಿರಸ್ಕರಿಸಿ ಅವನ ಮನಸ್ಸಿಗೆ ಬೇಸರವನ್ನುಂಟುಮಾಡುತ್ತಾನೆ ತಂದೆಯ ಸಂಗಡ ತರ್ಕಮಾಡಿ ವಿರೋಧಾಭಿಪ್ರಾಯವನ್ನು ಪ್ರತಿಭಟಿಸುತ್ತಾನೆ. ಕುಟುಂಬದ ಸೌಕರ್ಯಕ್ಕೆಂದು ವಿಧಿಸಿದ ಆಜ್ಞೆಯನ್ನು ಅತಿಕ್ರಮಿಸುತ್ತಾನೆ. ಆದರೂ ತಂದೆಯ ಮನೆಯನ್ನು ಬಿಟ್ಟು ಹೋಗುವದಿಲ್ಲ. ತಂದೆಯ ಮನೆಯನ್ನು ಬಿಟ್ಟರೆ ಅವನಿಗೆ ಬೇರೆ ಗತಿ ಇಲ್ಲ. ತಂದೆಯ ಪೋಷಣೆಯೂ ಸಂರಕ್ಷಣೆಯೂ ಬೇಕು. ಆದರೆ ತಂದೆಗೆ ವಿರೋಧಭಾವವನ್ನು ಬಿಡುವದಿಲ್ಲ. ಇದರಿಂದ ಮಗನು ಕೆಟ್ಟುಹೋದ. ಮನೆಯ ನೆಮ್ಮದಿಯೂ ಸಮಾಧಾನವೂ ಭಂಗವಾದವು. ತಂದೆಯು ಈಗ ಏನು ಮಾಡಬೇಕು? ಅವನು ನನ್ನ ಮಗನಲ್ಲವೆಂದು ಹೇಳಲಾರನು. ಹೇಳಿದರೆ ಅದು ನಿಜವಲ್ಲ. ಮಗನೆಂದು ಅವನನ್ನು ಮನಸ್ಸೋಚ್ಛೆ ಬಿಟ್ಟರೆ ಕೆಟ್ಟುಹೋಗುತ್ತಾನೆ. ತಂದೆಯು ಇದನ್ನೆಲ್ಲಾ ಆಲೋಚಿಸಿ ಆಳುಗಳನ್ನು ಕರೆದು ಅವನನ್ನು ಹಿಡಿಸಿ ಬೇಡಿ ಹಾಕಿಸಿ ಮನೆಯ ಒಂದು ಮೂಲೆಯಲ್ಲಿ ಕಟ್ಟಿಸುತ್ತಾನೆಂದು ಭಾವಿಸೋಣ. ತಂದೆಯ ಮನಸ್ಸಿಗೆ ಸಮಾಧಾನವಾಯಿತೋ? ಮನೆಯ ನೆಮ್ಮದಿಯು ಸುರಕ್ಷಿತವಾಗಿ ನಡೆಯುತ್ತದೆಯೋ? ಪಂಕೋದ್ಧಾರಕನಾದ ಮಗನು ಒಲಿದು ಅವನ ಪಕ್ಷವನ್ನು ವಹಿಸಿದನೋ? ಇಲ್ಲವಷ್ಟೆ. ಆದರೆ ಹೀಗೆ ಮಾಡುವದಕ್ಕೆ ಬದಲಾಗಿ ಅವನನ್ನು ಪ್ರೀತಿಸಿ ಬುದ್ಧಿ ಹೇಳಿ ಮುದ್ದಿಸಿ, ಮಗನ ಹಕ್ಕು ಬಾಧ್ಯತೆಗಳನ್ನು ತೋರಿಸಿ ಸನ್ಮಾರ್ಗಕ್ಕೆ ಪ್ರೇರಿಸುತ್ತಾನೆ ಅವನ ತಪ್ಪನ್ನೂ ಪಿತೃದ್ರೋಹವನ್ನೂ ವ್ಯಕ್ತಪಡಿಸುತ್ತಾನೆ, ವಿಧೇಯತ್ವದಿಂದ ಲಭಿಸುವ ಪ್ರಯೋಜನವನ್ನೂ ಸಂತೋಷವನ್ನೂ ಅವನ ಮುಂದೆ ವಿವರಿಸುತ್ತಾನೆ, ಹಟ ಅವಿಧೇಯತ್ವಗಳಿಂದ ಪ್ರಾಪ್ತಿಸುವ ಕಷ್ಟವನ್ನು ಪ್ರಕಟಿಸುತ್ತಾನೆ. ಮತ್ತು ಮಗನು ಇಷ್ಟೊಂದು ಉಪಕಾರವನ್ನೂ ಪ್ರೀತಿಯನ್ನೂ ನೋಡಿ ಪಶ್ಚಾತ್ತಾಪಪಟ್ಟು ದುಷ್ಟರ ಸಹವಾಸವನ್ನು ಬಿಟ್ಟು ತಂದೆಯ ಮುಂದೆ ಅಡ್ಡಬಿದ್ದು ಗದ್ಗದ ಸ್ವರದಿಂದ ಬಿಕ್ಕಿ ಬಿಕ್ಕಿ ಅತ್ತು—ಅಪ್ಪಾ! ತಂದೆಯೇ, ನಾನು ಪಿತೃದ್ರೋಹಿ. ನಿನಗೆ ವಿರೋಧವಾಗಿ ಪಾಪಮಾಡಿ ನಿನ್ನ ಮಗನೆನ್ನಿಸಿಕೊಳ್ಳುವದಕ್ಕೆ ಯೋಗ್ಯನಲ್ಲ. ನಿನ್ನ ಕೂಲಿ ಆಳುಗಳಲ್ಲಾದರೂ ನನ್ನನ್ನು ಕರುಣದಿಂದ ಸೇರಿಸಿಕೋ ಎಂದು ಬೇಡುತ್ತಾನೆ. ಪಾಪಿಷ್ಠರಾದ ಮನುಷ್ಯರನ್ನು ದೇವರು ಬಿಡದೆ ಇನ್ನು ತನ್ನಲ್ಲಿಯೇ ಸೇರಿಸಿಕೊಂಡು ಅವರಿಗೆ ಜೀವವನ್ನೂ ಸ್ವತಂತ್ರವನ್ನೂ ತನ್ನ ಲೋಕದಲ್ಲಿ ಕೊಟ್ಟು

...ದ ಸಾಹಾಯ್ಯದಿಂದ ಅವರ ಅಕ್ರಮವನ್ನೆಲ್ಲಾ ಸಹಿಸಿಕೊಂಡಿರುವುದು ದಂಗೆ ...ದ ಪಾಪಿಗಳನ್ನು ತನ್ನ ಕಡೆಗೆ ಹೇಗಾದರೂ ಒಲಿಸಿಕೊಳ್ಳಬೇಕೆಂಬ ...ದುದ್ದೇಶವಲ್ಲವೋ ?

ಯುದ್ಧದ ಸಮಾಚಾರಗಳು.

ಫ್ಲೇಂಡಿಸಲ್ಲಿ ದೊಡ್ಡ ಕದನಗಳು.

...ಕದನಗಳು ಮುಕ್ತಾಯವಾಗುವುದು ಬಹಳ ದೀರ್ಘಕಾಲವಾದದ್ದರಿಂದ ...ಯುದ್ಧಗಳ ಫಲಿತಾಂಶಗಳನ್ನು ಒಂದು ವಾರದಲ್ಲಿ ನಿರ್ಧರಿಸಿ ತಿಳಿಸುವುದು ಸಾಧ್ಯ ...ಹಿಂದಿನ ವಾರದಲ್ಲಿ ನಡೆದಷ್ಟು ಹೆಚ್ಚಾದ ಯುದ್ಧಗಳು ಈ ವಾರ ನಡೆಯ ...ಆದರೂ ಕದನಗಳೇನೋ ನಡೆಯುತ್ತಲೇ ಬಂದಿರುವವು. ಜರ್ಮನಿಯ ...ಕಡೆಯವರನ್ನು ಆತುರಪಟ್ಟು ನುಗ್ಗಿ ಬಂದು ಯುದ್ಧ ಮಾಡದೆ ಇರುತ್ತಾರೆ.

ಫ್ರಾನ್ಸ್ ಮತ್ತು ಬೆಲ್ಜಿಯಮ್.

...ಕಡೆ ಅನೇಕ ಠಾಣ್ಯಗಳಲ್ಲಿ ಯುದ್ಧಗಳು ನಡೆಯಿದ್ದರೂ ಸಾಮಾನ್ಯವಾಗಿ ...ವಾರದಲ್ಲಿ ಸ್ವಲ್ಪ ವಿರಾಮವಾಗಿತ್ತೆಂದು ಹೇಳಬಹುದು. ಬ್ರಿಟಿಷ್ ಸೈನಿಕ ...ರು ಹುದ್ದೆದಾರರು ಅಲ್ಪಸ್ವಲ್ಪ ರಜಾ ಪಡೆದು ಹೋಗಿದ್ದಾರೆಂದು ...ಲಾಗಿದೆ. ಈಗ ಹವಾ ಅನುಕೂಲವಾಗಿಲ್ಲ ; ಅದು ಕೆಟ್ಟಿದೆ ಎಂದು ಹೇಳ ...ದು ಮಳೆಯೂ ಹಿಮವೂ ಸುರಿಯುತ್ತಿದೆ ; ಚಳಿ ಹೆಚ್ಚಾಗಿರುವುದು. ಪ್ರ ...ವಾರ ಕಡೆಯಿಂದ ಜರ್ಮನಿಯವರು ಅವರ ಎರಡು ಭಾರೀ ಫಿರಂಗಿಗಳನ್ನು ...ಬಿಟ್ಟುಹೋಗಬೇಕಾಯಿತು. ಅವರು ಬೇರೆ ಸ್ಥಳಕ್ಕೆ ಫಿರಂಗಿಗಳನ್ನು ಎತ್ತಿಕಟ್ಟಿ ...ಗುಂಡುಗಳನ್ನು ಹೊಡೆದರು.

ಬ್ರಿಟಿಷ್ ಸೈನ್ಯಗಳ ಹುದ್ದೆದಾರರಾದ ಜನರಲ್ ಸ್ಮಿತ್ ಡೋರ್ರಿಯನ್‌ರವರು ...ಮ ಹಲವು ಸೈನಿಕರ ಸಾಹಸಕಾರ್ಯಗಳನ್ನು ಕೊಂಡಾಡಿ ಅವರಿಗೆ ...ವನ್ನು ತಿಳಿಸಿದರು. ಜರ್ಮನಿಯವರ ಕಡೆ 25 ಆರ್ಮಿ ಕೋರ್ ಎಂಬ ...ಸೈನ್ಯಗಳು ಇದ್ದವು. ಈ ಪೈಕಿ ಅವರು 20 ಸೈನ್ಯಗಳನ್ನು ಬ್ರಿಟಿಷ್ ಸೈನ್ಯ ...ಮೇಲೆ ಯುದ್ಧಕ್ಕೆ ಕಳುಹಿಸಿದರು. ಇವರಲ್ಲಿ ಅನೇಕರು ಹಿಂತಿರುಗಿ ಹೋಗ ...ಲ್ಲ. ಎದುರು ಶಕ್ತಿಯವರಿಗೆ ಯುದ್ಧಕಾರ್ಯಗಳಲ್ಲಿ ತುಂಬಾ ಅನುಕೂಲ ...ಗುತ್ತಿದೆ.

ಜರ್ಮನಿಯವರ ಸೈನಿಕರಲ್ಲಿ 5,19,217 ಮಂದಿ ಪ್ರಷ್ಯಾದವರೂ, ಸುಮಾರು ...00 ಮಂದಿ ದಕ್ಷಿಣ ಜರ್ಮನಿಯವರೂ ನಷ್ಟವಾಗಿರುತ್ತಾರೆಂದು ಅವರ ...ರಿ ಪ್ರಕಟನೆಗಳಿಂದ ತಿಳಿದುಬಂದಿವೆ.

ಜರ್ಮನಿ ಚಕ್ರವರ್ತಿಯವರ ಕುಮಾರರಾದ ಪ್ರಿನ್ಸ್ ಆಗಸ್ಟ್ ವಿಲ್ಹೆಲ್ಮ್ ...ರವರಿಗೆ ಕಾಡಿಗೆ ಮುರಿದು, ಮುಖದಲ್ಲಿ ಗಾಯಗಳಾಗಿವೆ.

ಬ್ರಿಟಿಷ್ ಸೈನಿಕರಲ್ಲಿ ಸುಮಾರು 440 ಮಂದಿ ಸೋಲ್ಜರುಗಳಿಗೆ ಹುದ್ದೆ ...ಗಳಿಗೆ ಬಡ್ತಿ ಆಗಿರುತ್ತದೆ.

ರಷ್ಯಾ, ಜರ್ಮನಿ ಮತ್ತು ಆಸ್ಟ್ರಿಯಾ.

ಈ ಭಾಗದ ಯುದ್ಧಭೂಮಿಯಲ್ಲಿ ನಡೆದಿರುವ ಯಥಾರ್ಥವಾದ ವಿದ್ಯ ...ಮಾನಗಳನ್ನು ಈಗ ಬಂದಿರುವ ತಂತೀವರ್ತಮಾನಗಳಿಂದ ಗೊತ್ತುಮಾಡಿ ...ಕೊಳ್ಳುವುದು ಕಷ್ಟ. ನಮಗೆ ತಿಳಿದುಬಂದಿರುವ ಮಟ್ಟಿಗೆ ನಾಲ್ಕೈದು ಠಾಣ್ಯಗ ...ಳಲ್ಲಿ ಯುದ್ಧಗಳು ನಡೆಯುವಂತೆ ಕಾಣುವುದು.

ಪೂರ್ವ ಪ್ರಷ್ಯಾದಲ್ಲಿ ದೊಡ್ಡ ಕದನಗಳು ನಡೆಯುವುವು. ರಷ್ಯಾದವರು ಮುಂದಕ್ಕೆ ನುಗ್ಗಿ ಹೋಗಿದ್ದಾರೆ. ಐದಾರು ಸಹಸ್ರ ಮಂದಿ ಸೈನಿಕರನ್ನು 19 ...ಗಳ ಮತ್ತು 6 ಮೆಷೀನ್ ಫಿರಂಗಿಗಳ ಸಮೇತ ಕೈಸೆರೆ ಹಿಡಿದುಕೊಂಡಿ ...ದ್ದಾರೆ. ಇದಲ್ಲದೆ ರಷ್ಯಾದವರು ಗೆದ್ದು ಆಕ್ರಮಿಸಿಕೊಂಡಿರುವಂಥಾ ಪಟ್ಟಣಗಳ ...ಶಕ್ತಿಯಿಂದ ಯುದ್ಧದ ವಿಚಾರವನ್ನು ನೆರವೇರಿಸಲು ಮಾಡುತ್ತಿದ್ದಾರೆ.

ಅಲ್ಲಿಂದ ಪಶ್ಚಿಮದಲ್ಲಿ ಜರ್ಮನಿಯವರು ರಷ್ಯಾದವರನ್ನು ಹಿಂದಕ್ಕೆ ...ಓಡಿಸಿಬಿಟ್ಟಿದ್ದಾರೆಂದೂ, ಈಗ ರಷ್ಯಾದವರು ಕಳೆದ ವಾರ ಠಾಣ್ಯ ಹಾಕಿಕೊಂಡಿದ್ದ ...ಸ್ಥಳಗಳಿಂದ ಬಹಳ ದೂರ ಹಿಮ್ಮೆಟ್ಟಿ ಹೋಗಿರುತ್ತಾರೆಂದೂ ಹೇಳಲಾಗಿದೆ. ಜರ್ಮನಿಯವರು ತಮಗೆ ಜಯಪ್ರದವಾಯಿತೆಂದು ಹೇಳಿಕೊಳ್ಳುತ್ತಾರೆ ; ಮತ್ತು ...ಅವರ ರಾಜಧಾನಿಯನ್ನು ಅಲಂಕರಿಸಿ ಸಂತೋಷ ಕಾರ್ಯಗಳನ್ನು ನಡೆಸಿದರು. ...ರಷ್ಯಾದವರಾದರೋ ಈ ಜಯ ತಮಗೆ ಸ್ವಲ್ಪ ತಡೆಯಾಗಿರುತದೆಂದೂ, ಇಷ್ಟರಲ್ಲೇ ...ಅವು ಮುಂದಕ್ಕೆ ನುಗ್ಗಿ ಹೋಗುವೆವೆಂದೂ ಹೇಳುತ್ತಾರೆ.

ಅಲ್ಲಿಂದ ಇನ್ನೂ ದಕ್ಷಿಣಭಾಗದಲ್ಲಿ ಅಂದರೆ ಕ್ರಾಕೋ ನಗರಕ್ಕೆ ಹೋಗುವ ...ಮಾರ್ಗದಲ್ಲಿ ಇನ್ನೊಂದು ಕದನವಾಯಿತು. ಇದರಲ್ಲಿ ಆಸ್ಟ್ರಿಯಾದವರು ...ಸೋತು ಹಿಂದಕ್ಕೆ ಓಡಿಹೋದರು. ಆದರೆ ತಂತೀ ವರ್ತಮಾನಗಳು ಸೂಚಿಸುವ ...ಸ್ಥಳಗಳೂ ಇದಕ್ಕೂ ಸಂಬಂಧವೇನೂ ಕಾಣುವುದಿಲ್ಲ.

ಇನ್ನೂ ದಕ್ಷಿಣಕ್ಕೆ ಆಸ್ಟ್ರಿಯಾದೊಳಗೇನೇ ರಷ್ಯಾದವರು ಹಲವು ಮುಖ್ಯ ...ಸ್ಥಳಗಳನ್ನು ಗೆದ್ದು ಸ್ವಾಧೀನ ಪಡಿಸಿಕೊಂಡಿದ್ದಾರೆಂದೂ, ಭಾರಿಯಾದ ಆರು ಫಿರಂಗಿ ...ಗಳೂ, 10 ಕ್ವಿಕ್ ಫೈರಿಂಗ್ ಫಿರಂಗಿಗಳೂ ಸಿಕ್ಕಿರುವುದಲ್ಲದೆ 3,000 ಆಸ್ಟ್ರಿಯಾ ...ದವರನ್ನು ಕೈಸೆರೆ ಹಿಡಿದಿರುತ್ತೇವೆಂದೂ, ಆಸ್ಟ್ರಿಯಾದವರಲ್ಲಿ ಅನೇಕ ಸೈನಿಕರು ...ಕೊಲೆಯಾದವರೆಂದೂ ಬಹುಮಂದಿ ಗಾಯಪಟ್ಟರೆಂದೂ ಹೇಳುತ್ತಾರೆ.

ಮೇಲ್ಕಂಡ ಸಂಗತಿಗಳನ್ನೆಲ್ಲಾ ಒಟ್ಟು ಕೂಡಿಸಿ ನೋಡಿದರೆ ಈ ಭಾಗದ ಯುದ್ಧಭೂಮಿಯಲ್ಲಿ ದೊಡ್ಡ ಕದನಗಳು ನಡೆದಿವೆ ಎಂದೂ, ರಷ್ಯಾದವರಿಗೆ ...ಸಾಮಾನ್ಯವಾಗಿ ಅನುಕೂಲವಾಗಿದ್ದರೂ ಎಲ್ಲಾ ಕಡೆಗಳಲ್ಲೂ ಅವರಿಗೆ ಜಯಪ್ರದ ...ವಾಗಿಲ್ಲವೆಂದೂ ಹೇಳಬೇಕಾಗಿದೆ.

ಜರ್ಮನ ಸೈನಿಕರಲ್ಲಿ ಸುಮಾರು 1,00,000 ಮಂದಿ ಪೂರ್ವ ಪ್ರಷ್ಯಾದಿಂ ...ದಲೂ, ಸೈಲೀಸಿಯಾದಿಂದಲೂ ತಪ್ಪಿಸಿಕೊಂಡು ತಮ್ಮ ರಾಜಧಾನಿಯಾದ ...ಬರ್ಲಿನ್ ಪಟ್ಟಣಕ್ಕೆ ಓಡಿಹೋದರೆಂದು ಹೇಳುತ್ತಾರೆ. ಇದರಿಂದ ರಷ್ಯಾದವರು ...ಜರ್ಮನಿಯವರಿಗೆ ಸೇರಿದ ಪ್ರದೇಶಗಳನ್ನು ಆಕ್ರಮಿಸಿಕೊಳ್ಳುತ್ತಿದ್ದಾರೆಂದು ...ತಿಳಿಯಬೇಕಾಗುವುದು.

ಜರ್ಮನಿಯವರು ಬಾಲ್ಟಿಕ್ ಕಡಲಿನ ತೀರದಲ್ಲಿರುವ ಲಿಬೌ ಎಂಬ ...ಪಟ್ಟಣಕ್ಕೆ ಸಮುದ್ರದ ಕಡೆಯಿಂದ ಫಿರಂಗಿ ಗುಂಡುಗಳನ್ನು ಹಾಕಿ ಜಹಜುಗಳು ...ನಿಲ್ಲುವ ಹಾರ್ಬರ್ ಎಂಬ ಭಾಗವನ್ನು ಮುಚ್ಚಿಬಿಟ್ಟರು.

ಟರ್ಕಿಯಲ್ಲಿ.

ಟರ್ಕಿ ರಾಜ್ಯದ ಅನೇಕ ಕಡೆಗಳಲ್ಲಿ ಕದನಗಳು ನಡೆದವು. ರಷ್ಯಾದವರು ...ಆರ್ಮೇನಿಯಾದಲ್ಲಿ ನುಗ್ಗಿ ಹೋಗಿ ಎರ್ಜೆರೂಂ ಪಟ್ಟಣದ ಹತ್ತಿರ ಟರ್ಕಿ ...ಸೈನ್ಯದ ಮೇಲೆ ಯುದ್ಧ ಮಾಡಿ ಅದನ್ನು ಸೋಲಿಸಿದರು. ಇದಲ್ಲದೆ ಅವರು ...ಯೂಫ್ರಟೀಸ್ ನದಿಯ ಕಣಿವೆಯಲ್ಲಿರುವ ಒಂದು ಮುಖ್ಯವಾದ ನಗರವನ್ನು ...ವಶ ಸ್ವಾಧೀನ ಪಡಿಸಿಕೊಂಡಿದ್ದಾರೆ.

ಕಪ್ಪು ಕಡಲಿನಲ್ಲಿ ರಷ್ಯಾದವರು ಟರ್ಕಿ ತೀರದಲ್ಲಿ ಎರಡು ಪಟ್ಟಣಗಳಿಗೆ ...ಫಿರಂಗಿಗಳನ್ನು ಹೊಡೆದರು. ಒಂದು ಪಟ್ಟಣದ ಹಲವು ಕಟ್ಟಡಗಳು ನಾಶ ...ಮಾಡಲ್ಪಟ್ಟವು.

ಕಪ್ಪು ಕಡಲಿನಲ್ಲಿ ರಷ್ಯಾದವರಿಗೂ ಟರ್ಕಿಯವರಿಗೂ ಒಂದು ಕಡೆ ಸಮುದ್ರ ಯುದ್ಧವಾಯಿತು. ಮೆಡಿಟರೇನಿಯನ್ ಕಡಲಿನಿಂದ ಕಾನ್‌ಸ್ಟಾಂಟಿನೋಪಲ್ ...ಇದು ಟರ್ಕಿಯವರ ರಾಜಧಾನಿ] ತೀರಪಟ್ಟಣಕ್ಕೆ ಹೋದ ಜರ್ಮನಿಯವರ ...ಎರಡು ಜಹಜುಗಳನ್ನೇ ಟರ್ಕಿಯವರು ಈ ಸಮುದ್ರ ಯುದ್ಧದಲ್ಲಿ ಉಪಯೋಗಿಸಿಕೊಂಡರು. ಈ ಯುದ್ಧದಲ್ಲಿ ಟರ್ಕಿಯವರ ಕಡೆ ಇದ್ದ ಜರ್ಮನಿಯ ...ಗೊಬೆನ್ ಎಂಬ ಯುದ್ಧದ ಜಹಜಿಗೆ ಏಟು ತಗಲಿ ಸ್ವಲ್ಪ ಕೆಟ್ಟುಹೋಯಿತು. ಆದಲೇ ಜರ್ಮನಿಯವರ ಈ ಎರಡು ಜಹಜುಗಳೂ ಮಂಜಿನಲ್ಲಿ ತಲೆತಪ್ಪಿಸಿಕೊಂಡು ಹೊರಟುಹೋದವು. ಈ ಯುದ್ಧದಲ್ಲಿ ರಷ್ಯಾದವರ ಕಡೆ 26 ಮಂದಿಗೆ ಗಾಯಗಳಾಗಿರುತ್ತವೆ.

ಹಿಂದುಸ್ಥಾನದಿಂದ ಕಳುಹಲ್ಪಟ್ಟ ಬ್ರಿಟಿಷ್ ಸೈನ್ಯಗಳು ಪಾರ್ಷಿಯಾ ಖಾರಿಯ ಮೇಲಕ್ಕೆ ಹೋಗಿ ಇಳಿದವು. ಬ್ರಿಟಿಷ್ ಸೈನಿಕರು ಫಾವೋ ಎಂಬ ಟರ್ಕಿ ನಗರವನ್ನು ಗೆದ್ದುಕೊಂಡರೆಂದು ಕಳೆದ ವಾರ ತಿಳಿಸಿರುತ್ತೇವೆ. ಬ್ರಿಟಿಷ್ ಸೈನ್ಯವು ನುಗ್ಗಿ ಹೋಗಿ ಟರ್ಕಿಯವರ ಮೇಲೆ ಮೂರು ದಿನಗಳ ಕಾಲ ಕದನ ಮಾಡಿದರು. ಒಂದು ದಿನ ಟರ್ಕಿಯವರು ಬ್ರಿಟಿಷರ ಮೇಲೆ ನುಗ್ಗಿ ಯುದ್ಧ ಮಾಡಿದರು. ಇದರಲ್ಲಿ ಟರ್ಕಿಯವರ ಕಡೆ 80 ಮಂದಿ ನಷ್ಟವಾದರು. ಬಳಿಕ ಒಂದೆರಡು ದಿನಗಳ ಮೇಲೆ ಬ್ರಿಟಿಷ್ ಸೈನಿಕರು ಟರ್ಕಿಯವರ ರಾಜ್ಯದ ಮೇಲೆ ನುಗ್ಗಿ ಅವನ್ನು ಗೆದ್ದು ಸ್ವಾಧೀನಪಡಿಸಿಕೊಂಡರು. ಹಿಂದುಸ್ಥಾನದ ಯುದ್ಧಭಟರೂ ಸೇರಿ ಬ್ರಿಟಿಷರ ಕಡೆ 45 ಮಂದಿ ಕೊಲೆಯಾದರು ; 400 ಜನರು ಗಾಯಪಟ್ಟರು.

ಬ್ರಿಟಿಷ್ ಸೈನಿಕರು, ಬಹುಶಃ ಇವರು ಏಡೆನ್‌ನಿಂದ ಹೋದವರಾಗಿರಬಹುದು, ಕೆಂಪು ಕಡಲಿಗೆ ಹೋಗುವ ಮಾರ್ಗದಲ್ಲಿರುವ ಟರ್ಕಿಯವರ ಒಂದು ಕೋಟೆಗೆ ಮುತ್ತಿಗೆಹಾಕಿದರು. ಆ ಕೋಟೆಯ ಹೆಸರು ಷೇಖ್ ಸೇದ್. ಟರ್ಕಿಯವರು ಅಲ್ಲಿಂದ ಸೋತು ಓಡಿಹೋದರು ; ಅವರ ಕಡೆ ಹಲವರು ಕೊಲೆಯಾದರು, ಅನೇಕರು ಗಾಯಪಟ್ಟರು, ಕೆಲವರನ್ನು ಬ್ರಿಟಿಷರು ಕೈಸೆರೆ ಹಿಡಿದುಕೊಂಡರು. ಬಳಿಕ ಬ್ರಿಟಿಷರು ಆ ಕೋಟೆಯನ್ನು ನಾಶಮಾಡಿ, ಅಲ್ಲಿದ್ದ ಬಹಳ ಮದ್ದುಗುಂಡನ್ನೆಲ್ಲಾ ಹಾಳುಮಾಡಿದರು. ಬ್ರಿಟಿಷರ ಕಡೆ 4 ಮಂದಿ ಕೊಲೆಯಾದರು, 16 ಮಂದಿ ಗಾಯಪಟ್ಟಿದ್ದಾರೆ.

ಈಜಿಪ್ಟ್ ದೇಶದಲ್ಲಿ ಪ್ರಜೆಗಳಿಗೆ ಟರ್ಕಿಯವರ ವಿಷಯದಲ್ಲಿ ಪ್ರೀತಿವಿಶ್ವಾಸಗಳೇನೂ ಇರುವುದಿಲ್ಲ. ರಾಜಧಾನಿಯಾದ ಕೈರೋ ಪಟ್ಟಣದ ಭಾರೀ ಮುಸಲ್ಮಾನ ವಿದ್ಯಾನಿಲಯದಲ್ಲಿರುವ ಮುಖ್ಯರಾದ ಮಹಮದೀಯ ಬೋಧಕರೂ, ಈಜಿಪ್ಟಿನ ಷೇಕ್-ಉಲ್-ಇಸ್ಲಾಂರವರೂ, ಪ್ರಧಾನ ಮುಫ್ತಿಯವರೂ ಇಸ್ತಿಹಾರನ್ನು ಪ್ರಕಟಿಸಿ ಪ್ರಜಗಳೆಲ್ಲಾ ಬ್ರಿಟಿಷ್ ಗವರ್ನ್‌ಮೆಂಟಿನ ಸತ್ಪ್ರಜೆಗಳಾಗಿರಬೇಕೆಂದು ತಿಳಿಸಿರುತ್ತಾರೆ. ಈ ಯುದ್ಧವನ್ನು ಕೆಲವು ಮುಸಲ್ಮಾನರು ಮಹಮದೀಯರ ಯುದ್ಧವೆಂದು ಮಾತನಾಡುತ್ತಾರೆ. ಆದರೆ ಈ ಮಾತನ್ನು ಅನೇಕ ಮಹಮದೀಯರು ಒಪ್ಪದೆ ಅಪಹಾಸ್ಯ ಮಾಡುತ್ತಿರುವರು.

ಸರ್ವಿಯಾದಲ್ಲಿ.

ಸರ್ವಿಯದಿಂದ ಬಂದಿರುವ ವರ್ತಮಾನಗಳು ಅಷ್ಟು ಸಂತೋಷಪ್ರದವಾಗಿಲ್ಲ. ಬಹುಶಃ ಆಸ್ಟ್ರಿಯಾದವರು ಹೊಸ ಸೈನ್ಯಗಳನ್ನು ಕೂಡಿಸಿ ಸರ್ವಿಯಾದೊಳಕ್ಕೆ ನುಗ್ಗಿ ಸುಮಾರು 20-30 ಮೈಲಿ ದೂರ ಹೋಗಿರುವಂತೆ ಕಾಣುತ್ತದೆ. ಇವರ ಸೈನ್ಯವು ಬಹಳ ಹೆಚ್ಚಾಗಿರುವುದನ್ನು ನೋಡಿ ಸರ್ವಿಯಾದವರು ಯುದ್ಧ ಕೊಡದೆ ಹಿಮ್ಮೆಟ್ಟಿ ಹೋದರು. ಸರ್ವಿಯಾದವರು ಬೋಸ್ನಿಯಾದೊಳಕ್ಕೆ ನುಗ್ಗಿ ಹೋಗಲಾರದೆ ಇದ್ದಾರೆಂದು ಕಾಣುವುದು.

ಆಫ್ರಿಕಾದಲ್ಲಿ.

ಆಫ್ರಿಕಾದಿಂದ ಬಂದಿರುವ ವರ್ತಮಾನಗಳು ಬಹಳ ಸ್ವಲ್ಪ. ಬ್ರಿಟಿಷ್ ಪಾರ್ಲಿಮೆಂಟಿನ ಹೌಸ್ ಆಫ್ ಕಾಮನ್ಸ್ ಸಭೆ ಮನೆಯಲ್ಲಿ ಅಧಿಕಾರಿಗಳು ತಿಳಿಸಿರುವ ವರ್ತಮಾನದಿಂದ ಪೂರ್ವ ಆಫ್ರಿಕಾದಲ್ಲಿ ಐದಾರು ಸಾವಿರ ಜರ್ಮನಿಯವರಿದ್ದಾರೆಂದೂ, ಇವರಲ್ಲಿ ಮದ್ದುಗುಂಡು ಬೇಕಾದಷ್ಟು ಇವೆ ಎಂದೂ ಗೊತ್ತಾಗುತ್ತದೆ. ಅಲ್ಲಿ ಹಲವು ಸಣ್ಣ ಕದನಗಳು ನಡೆದವು. ಬ್ರಿಟಿಷರ ಕಡೆ ಒಟ್ಟು 800 ಮಂದಿ ನಷ್ಟಪಟ್ಟಂತೆ ತಿಳಿಯುತ್ತದೆ. ಈಚೆಗೆ ಬ್ರಿಟಿಷರು ಹೊಸ ಸೈನ್ಯಗಳನ್ನು ಅಲ್ಲಿಗೆ ಕಳುಹಿಸಿದ್ದಾರೆ.

ದಕ್ಷಿಣ ಆಫ್ರಿಕಾದಲ್ಲಿ ದಂಗೆಯೆಲ್ಲಾ ಮುಕ್ಕಾಲು ಭಾಗ ಅಡಗಿಸಲ್ಪಟ್ಟಿದೆ ಎಂದೂ, ದಂಗೆಕೋರರಲ್ಲಿ ಅನೇಕರು ಆಗಲೇ ಬಂದು ಶರಣಾಗತರಾದರೆಂದೂ ತಿಳಿದುಬಂದಿದೆ.

ಜಪಾನ್‌ನವರು.

ಜಪಾನ್ ಸೈನ್ಯದವರು ತ್ಸಿಂಗ್‌ತಾವ್ ಎಂಬ ಜರ್ಮನೀ ಸ್ವಾಸ್ಥ್ಯವನ್ನು ಗೆದ್ದುಕೊಂಡನಂತರ, ಈಗ ಜಪಾನ್‌ನವರು ಅಧಿಕಾರಿಗಳ ಸಮೇತ ಪಟ್ಟಣದೊಳಕ್ಕೆ ಪ್ರವೇಶಮಾಡಿ, ಅಲ್ಲಿ ನಡೆದ ಯುದ್ಧಗಳಲ್ಲಿ ಮಡಿದು ಹೋದವರಿಗೆಲ್ಲಾ ಉತ್ತರಕ್ರಿಯೆಗಳನ್ನು ನಡಿಸಿ ಪ್ರಾರ್ಥನಾದಿಗಳನ್ನು ಮಾಡಿದರು. ಅಲ್ಲಿ ಜಪಾನ್‌ನವರು ಎಷ್ಟು ಮಂದಿಯನ್ನು ಕೈಸೆರೆ ಹಿಡಿದರೋ, ಎಷ್ಟು ಯುದ್ಧ ಸಾಮಗ್ರಿಗಳು ಅವರಿಗೆ ಸಿಕ್ಕಿದವೋ ತಿಳಿಸಿರುವುದಿಲ್ಲ. ಅಲ್ಲಿದ್ದ ಜರ್ಮನಿಯವರ ಮತ್ತು ಆಸ್ಟ್ರಿಯಾದವರ ಹಡಗುಗಳೆಲ್ಲಾ ಸಮುದ್ರದೊಳಗೆ ಮುಳುಗಿಸಲ್ಪಟ್ಟಿದ್ದವು.

ಸಮುದ್ರದ ಮೇಲೆ.

ಸಮುದ್ರದ ಮೇಲೆ ಬ್ರಿಟಿಷರ ಕಡೆ ನಷ್ಟಪಟ್ಟವರ ಸಂಖ್ಯೆಗಳು ಪ್ರಕಟವಾಗಿವೆ. 222 ಮಂದಿ ಹುದ್ದೆದಾರರೂ, 3,455 ಮಂದಿ ಸಿಪಾಯಿಗಳೂ ಕೊಲೆಯಾದರು ಇಲ್ಲವೇ ಸಮುದ್ರದ ಪಾಲಾದರು ; 37 ಮಂದಿ ಹುದ್ದೆದಾರರಿಗೂ, 425 ಮಂದಿ ಸಿಪಾಯಿಗಳಿಗೂ ಗಾಯಗಳಾಗಿವೆ. ಹಾಲೆಂಡಿಗೆ ಹೋಗಿರುವ ಸಂಖ್ಯೆ ಇದರಲ್ಲಿ ಸೇರಿ ಇಲ್ಲ, ಮತ್ತು ಸಿಕ್ಕದೆ ಇರುವವರನ್ನು ಅದರಲ್ಲಿ ಸೇರಿಸಿಲ್ಲ. ಇವರು ಸುಮಾರು 1,000 ಸೈನಿಕರಾಗಬಹುದು. ಇದಲ್ಲದೆ ಗುಡ್ ಹೋಪ್‌ನಲ್ಲಿ ಸುಮಾರು 876 ಮಂದಿ ನಷ್ಟವಾಗಿರುತ್ತಾರೆ.

ಚಿಲಿಯ ಬಳಿ ನಡೆದ ಸಮುದ್ರ ಯುದ್ಧದಲ್ಲಿ ಗ್ಲ್ಯಾಸ್ಗೋ ಎಂಬ ಬ್ರಿಟಿಷ್ ಯುದ್ಧದ ಜಹಜು ಸೇರಿರಲಿಲ್ಲವೆಂದು ತಿಳಿದು ಬಂದಿದೆ. ಯಾಕೆಂದರೆ ಅದು ಇತರ ಜಹಜುಗಳ ಕೂಡ ಹೋಗಿ ಸೇರಿಕೊಳ್ಳುವಷ್ಟು ವೇಗವಾಗಿ ಹೋಗಲಾರದೆ ಹೋಯಿತು.

ಬರ್ಲಿನ್ ಎಂಬ ಜರ್ಮನಿಯವರ ಜಹಜು ಸಮುದ್ರದ ಮೇಲೆ ಸಂಚಾರ ಮಾಡಿಕೊಂಡಿರುವುದು ಸಾಧ್ಯವಾಗದೆ ನಾರ್ವೇ ದೇಶದ ಒಂದು ತೀರಪಟ್ಟಣಕ್ಕೆ ಹೋಯಿತು. ಅಲ್ಲಿನವರು ಅದನ್ನು ಹೊರಕ್ಕೆ ಬಿಡದೆ ತಡೆದಿಟ್ಟುಕೊಂಡಿದ್ದಾರೆ.

ಎಮ್‌ಡೆನ್ ಜಹಜಿನಲ್ಲಿ ಸಿಕ್ಕಿದ 150 ಮಂದಿಯನ್ನು ಸಿಂಗಪುರಕ್ಕೆ ಹಿಡಿದು ತಂದಿದ್ದಾರೆ.

ಇಂಗ್ಲಿಷ್ ಖಾರಿಯಲ್ಲಿ ಜರ್ಮನಿಯವರ ಒಂದು ಚಿಕ್ಕದಾದ ಹಡಗನ್ನು ಮುಳುಗಿಸಿಬಿಟ್ಟರು. ಇದರ ಪೂರ್ವೋತ್ತರವೇನೂ ತಿಳಿಯಲಿಲ್ಲ.

ಇತರ ವಿಷಯಗಳು.

ಕಳೆದ ಗುರುವಾರ ಲಾರ್ಡ್ ರಾಬರ್ಟ್ಸ್‌ರವರ ಶವವನ್ನು ಸೆಂಟ್ ಪಾಲ್ಸ್ ಕೆಥೀಡ್ರಲ್ ಎಂಬ ದೇವಾಲಯದ ಆವರಣದಲ್ಲಿ ಲಾರ್ಡ್ ನೆಲ್ಸನ್‌ರವರ ಸಮಾಧಿಯ ಬಳಿ ಮಣ್ಣು ಮಾಡಿದರು. ಜಾರ್ಜ್ ಸಾರ್ವಭೌಮರು ದಯಮಾಡಿದ್ದರು. ಹಿಂದುಸ್ಥಾನದ ಕೆಲವು ಮಹಾರಾಜರುಗಳೂ ಸಿಪಾಯಿಗಳೂ ಹಾಜರಾಗಿದ್ದರು. ಹೌಸ್ ಆಫ್ ಕಾಮನ್ಸ್ ಎಂಬ ಪಾರ್ಲಿಮೆಂಟ್ ಸಭೆ ಮನೆಯಲ್ಲಿ ಲಾರ್ಡ್ ರಾಬರ್ಟ್ಸ್‌ರವರು ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಬಹು ವಿಶೇಷವಾದ ಸರ್ವಿಸ್ ಮಾಡಿರುತ್ತಾರೆಂದೂ, ಆದಕಾರಣ ಅವರ ಹೆಸರನ್ನು ಶಾಶ್ವತಪಡಿಸುವುದಕ್ಕೆ ಒಂದು ಸ್ಮಾರಕವನ್ನು ಕಟ್ಟಬೇಕೆಂದೂ ತೀರ್ಮಾನಮಾಡಿರುತ್ತಾರೆ.

ಪ್ರಿನ್ಸ್ ಆಫ್ ವೇಲ್ಸ್‌ರವರು ಯುದ್ಧಭೂಮಿಗೆ ಹೋಗಿ ಜನರಲ್ ಸರ್ ಜಾನ್ ಫ್ರೆಂಚ್‌ರವರ ಬಳಿ ಇದ್ದುಕೊಂಡು ಯುದ್ಧಕಾರ್ಯಗಳನ್ನು ನಡೆಸುತ್ತಿದ್ದಾರೆ. ಇವರು ಫ್ರಾನ್ಸಿನಲ್ಲಿ ಹೋಗಿ ಇಳಿದಾಗ ಅಲ್ಲಿನವರು ಅವರನ್ನು ಅತ್ಯಂತ ಉತ್ಸಾಹದಿಂದಲೂ ಉತ್ತಮ ಪೂರ್ವಕವಾಗಿಯೂ ಎದುರುಗೊಂಡು ಸತ್ಕಾರಮಾಡಿದರು.

ಚಕ್ರವರ್ತಿಯವರ ಎರಡನೆಯ ಪುತ್ರರಾದ ಪ್ರಿನ್ಸ್ ಆಲ್ಬರ್ಟ್‌ರವರಿಗೆ ಕಾಯಿಲೆಯು ಚೆನ್ನಾಗಿ ವಾಸಿಯಾಗಿದೆ. ಅವರು ಇಷ್ಟರಲ್ಲೇ ಹಡಗಿನಲ್ಲಿ ತಮ್ಮ ಕೆಲಸದ ಮೇಲೆ ದಯಮಾಡುವರು.

ಬ್ರಿಟಿಷ್ ಗವರ್ನ್‌ಮೆಂಟಿನವರು ಯುದ್ಧದ ಖರ್ಚುಗಳಿಗೋಸ್ಕರ 35,00,00,000 ಪೌಂಡುಗಳನ್ನು (525 ಕೋಟಿ ರೂಪಾಯಿ) ಬ್ರಿಟನ್ನಿನಲ್ಲಿ ಸಾಲಮಾಡಿದರು. ಅವರು ಈ ಹಣ ಸಾಲವಾಗಿ ಬೇಕೆಂದು ಇಸ್ತಿಹಾರು ಹಾಕಿದಾಗ ಪ್ರಜೆಗಳು ಅದರ ಎರಡಷ್ಟು ಹಣವನ್ನು ಕೊಡುವುದಕ್ಕೆ ಸಿದ್ಧರಾಗಿದ್ದೇವೆಂದು ಅರ್ಜಿಗಳನ್ನು ಕೊಟ್ಟರು. ಇದನ್ನು ನೋಡಿದರೆ ಈ ಯುದ್ಧವು ದೀರ್ಘವಾಗಿ ನಡೆದಾಗ್ಯೂ ಬ್ರಿಟಿಷ್ ಪ್ರಜೆಗಳು ಹಣವನ್ನು ಒದಗಿಸುವುದಕ್ಕೆ ಉತ್ಸಾಹಶಾಲಿಗಳಾಗಿದ್ದಾರೆಂಬುವುದು ಖಚಿತವಾಯಿತು. ಈ ಯುದ್ಧಕ್ಕೆ ಬ್ರಿಟಿಷರಿಗೆ ದಿನಕ್ಕೆ 10,00,000 ಪೌಂಡು (ಒಂದೂವರೆ ಕೋಟಿ ರೂಪಾಯಿ) ನಂತೆ ಖರ್ಚಾಗುತ್ತಿರುವುದು. ಈಗ ಅವರು ಸಾಲಮಾಡಿರುವ ಹಣವು ಮುಂದಿನ ವರುಷದ ಮಾರ್ಚಿ ಆಖೈರು ತನಕ ಸಾಕಾಗುವುದೆಂದು ಅಂದಾಜು ಮಾಡಲ್ಪಟ್ಟಿದೆ. ಆಗ್ಗೆ ಅವಶ್ಯವಾದಲ್ಲಿ ಇನ್ನಷ್ಟು ಹಣವನ್ನು ಸಾಲಮಾಡುತ್ತಾರೆ. ಈ ಹಣದಲ್ಲಿ ಕೆನಡಾ ದೇಶಕ್ಕೆ 120 ಲಕ್ಷ ಪೌಂಡನ್ನೂ, ಆಸ್ಟ್ರೇಲಿಯಾಕ್ಕೆ 180 ಲಕ್ಷ ಪೌಂಡನ್ನೂ, ನ್ಯೂಜೀಲೆಂಡಿಗೆ 51,35,000 ಪೌಂಡನ್ನೂ, ದಕ್ಷಿಣ ಆಫ್ರಿಕಾಗೆ 70 ಲಕ್ಷ ಪೌಂಡನ್ನೂ ಕೊಟ್ಟು ಸಹಾಯ ಮಾಡುವರು. ಯಾವ ಅನನುಕೂಲಗಳಿಗೂ ಅವಕಾಶವಾಗದಂತೆ ಬೇಕಾದ ಹಣವನ್ನೆಲ್ಲಾ ಒಂದೇ ಸಲ ಸಾಲಮಾಡಿ ಇಟ್ಟುಕೊಂಡಿದ್ದಾರೆ.

ಯುದ್ಧಭೂಮಿಯಲ್ಲಿ ಗಾಯಪಟ್ಟ ಹಿಂದುಸ್ಥಾನದ ಸೈನಿಕರನ್ನು ಇಂಗ್ಲೆಂಡಿಗೆ ಕಳುಹಿಸಿ ಆಸ್ಪತ್ರೆಗಳಲ್ಲಿಟ್ಟು ಉಪಚಾರಮಾಡುತ್ತಿದ್ದಾರೆ. ಚಕ್ರವರ್ತಿಯವರೂ ಚಕ್ರವರ್ತಿನಿಯವರೂ ಆಸ್ಪತ್ರೆಗೆ ದಯಮಾಡಿ ಎಲ್ಲರನ್ನೂ ವಿಚಾರಿಸಿ ಅವರಿ ಯಾವುದರಿಂದಲೂ ಕೊರತೆಯುಂಟಾಗದಂತೆಯೂ, ಅವರನ್ನು ಚೆನ್ನಾಗಿ ನೋಡಿಕೊಳ್ಳುವಂತೆಯೂ ಏರ್ಪಾಡು ಮಾಡಿದರು. ಯುದ್ಧಭೂಮಿಯಲ್ಲಿರುವ ಹಿಂದುಸ್ಥಾನದ ಸೈನಿಕರು ಯುದ್ಧಕಾರ್ಯಗಳಲ್ಲಿ ತುಂಬಾ ಉತ್ಸಾಹಶಾಲಿಗಳಾಗಿರುತ್ತಾರೆಂದು ತಿಳಿದುಬಂದಿದೆ. ಹಿಂದುಸ್ಥಾನದ ಎರಡನೇ ಸೈನ್ಯವು ಕಳೆದ ವಾರ ಜಹಜಿನ ಮೇಲೆ ಹೋಗಿ ಫ್ರಾನ್ಸಿನ ದಕ್ಷಿಣ ತೀರಪಟ್ಟಣವಾದ ಮಾರ್ಸೇಲ್ಸ್ ನಗರದಲ್ಲಿ ಇಳಿದಿತು.

ಇಂಪೀರಿಯಲ್ ಇಂಡಿಯಾ ರಿಲೀಫ್ ಫಂಡು.

"ವೃತ್ತಾಂತ ಪತ್ರಿಕೆ" ಆಫೀಸ್ ಚಂದಾ ಪಟ್ಟಿ.

ಹಿಂದೆ ವಸೂಲಾಗಿರುವ ಚಂದಾ		ರೂ. 212- 4-7
ಮ|| ಕೆ. ಕೇಶವಯ್ಯನವರು, ಸ್ಕೂಲ್ ಮಾಸ್ಟರ್, ಬೆಳಗೋಡು, ಹಾಸನ ಡಿಸ್ಟ್ರಿಕ್ಟ್	,,	1-0-0
	ಜುಮ್ಲಾ ರೂಪಾಯಿ	213- 4-7

ಮೈಸೂರು ಗೆಜೆಟ್ ಸಂಗ್ರಹ.

ನಗರ್ ತಾಲ್ಲೂಕಿನ ಶಿರಸ್ತೇದಾರರು ಕಳಪ್ಪುರುಕಟ್ಟೆ ಮ್ಯುನಿಸಿಪಲ್ ಬೋರ್ಡಿನ ಮೆಂಬರಾಗಿ ನೇಮಿಸಲ್ಪಟ್ಟಿದ್ದಾರೆ.

ಬೆಂಗಳೂರು ಸಿವಿಲ್ ಆಫೀಸರವರು ಬೆಂಗಳೂರು ಡಿಸ್ಟ್ರಿಕ್ಟ್ ಬೋರ್ಡಿನ ವೈಸ್ ಪ್ರೆಸಿಡೆಂಟರಾಗಿ ನೇಮಿಸಲ್ಪಟ್ಟಿದ್ದಾರೆ.

ಶಿವಮೊಗ್ಗಾ ತಾಲ್ಲೂಕು ಸಿದ್ದಗ್ರಾಮದ ಕೆರೆ ಪಂಚಾಯತಿಗೆ 4 ರೂಪಾಯಿ ಕಂದಾಯ ಕೊಡತಕ್ಕವರನ್ನು ಮೆಂಬರಾಗಿ ನೇಮಿಸಬಹುದೆಂದು ಆಜ್ಞಾಯಿತ ತೋರಿಸಲಾಗಿದೆ.

ಶಿವಮೊಗ್ಗಾ ಡಿಸ್ಟ್ರಿಕ್ಟಿನ ಫಾರಸ್ಟ್ ಅಸಿಸ್ಟೆಂಟ್ ಕನ್ಸರ್ವೇಟರ್ ಮ|| ಬಿ. ವಿ. ರಾಮಯ್ಯಂಗಾರ್ರಿಗೆ ನೊವೆಂಬರ್ ತಾ. 7 ರಿಂದ ಒಂದು ತಿಂಗಳೂ ಹದಿನೇಳು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಸ್ಪೆಷಲ್ ಡ್ಯೂಟಿ ಮೇಲಿರುವ ಅ|| ಕನ್ಸರ್ವೇಟರ್ ಮ|| ಜಿ. ಕೃಷ್ಣಮೂರ್ತಿನಾಯುಡು ಯವರು ಶಿವಮೊಗ್ಗಾ ಡಿಸ್ಟ್ರಿಕ್ಟ್ ಫಾರೆಸ್ಟಿನ ಛಾರ್ಜನ್ನು ವಹಿಸತಕ್ಕದ್ದು.

ಚೀಫ್ ಕೋರ್ಟ್ ಜಡ್ಜರಾದ ಮ|| ಕೆ. ಎಸ್ ಚಂದ್ರಶೇಖರಯ್ಯನವರಿಗೆ ನೊವೆಂಬರ್ ತಾ 23 ರಿಂದ ಮೂವತ್ತೊಂದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ; ಇವರು ಅದರ ಜೊತೆಗೆ ಕ್ರಿಸ್ಮಸ್ ರಜವನ್ನೂ ಉಪಯೋಗಿಸಿಕೊಳ್ಳ ಬಹುದಾಗಿದೆ.

ಕಡೂರು ಡಿಸ್ಟ್ರಿಕ್ಟ್ ಸ್ಯಾನಿಟರಿ ಆಫೀಸರ್ ಮ|| ಎಂ ಜಿ ಸಾಮ್ಯುಯಲ್ ರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಅ|| ಸರ್ಜನ್ ಮ|| ಎಂ ಪದ್ಮನಾಭ ಪಿಳ್ಳೆಯವರು ಕಡೂರು ಡಿಸ್ಟ್ರಿಕ್ಟಿನ ಸ್ಯಾನಿಟರಿ ಆಫೀಸರಾಗಿ ವರ್ಗಮಾಡಲ್ಪಟ್ಟಿದ್ದಾರೆ.

ಶ್ರೀಮನ್ ಮಹಾರಾಜರವರು ಮ|| ಮಿರ್ ಹಂಜಾ ಹುಸೇನ್‌ರವರನ್ನು ಚೀಫ್ ಕೋರ್ಟಿನ ಜಡ್ಜರಾಗಿ ನೇಮಕ ಮಾಡಿರುತ್ತಾರೆ. ಆ ಕಾಲದಲ್ಲಿ ಮುಂದೆ ಹೇಳುವ ಬದಲಾವಣೆಗಳು ಜಾರಿಯಲ್ಲಿರತಕ್ಕದ್ದು.—ಶಿವಮೊಗ್ಗಾ ಸಬ್ ಜಡ್ಜ್ ಮ|| ಬಿ. ನಾಗಪ್ಪನವರು ಮೈಸೂರು ಸೆಷನ್ಸ್ ಜಡ್ಜರಾಗಿಯೂ, ಹಾಸನದ ಮುನ್‌ಸಿಫ್ ಮ|| ಟಿ ಕೃಷ್ಣಯ್ಯಂಗಾರ್ರವರು ಶಿವಮೊಗ್ಗಾ ಸಬ್ ಜಡ್ಜರಾಗಿಯೂ ಇರತಕ್ಕದ್ದು.

ಶ್ರೀಮನ್ ಮಹಾರಾಜರವರು ಇಂಪೀರಿಯಲ್ ಸರ್ವಿಸ್ ಟ್ರಾನ್ಸ್‌ಪೋರ್ಟ್ ಕೋರಿನ ಡಿವಿಜನ್ ಕಮ್ಯಾಂಡರ್ ತ್ಯಾಗರಾಜ್‌ರವರನ್ನು ಇಂಪೀರಿಯಲ್ ಸರ್ವಿಸ್ ರೆಜಿಮೆಂಟಿನ 3 ನೇ ಗ್ರೇಡ್ ಸ|| ಜಮಾದಾರ್ ಟ್ರೂಪ್ ಕಮ್ಯಾಂಡರಾಗಿ ನೇಮಕ ಮಾಡಿರುತ್ತಾರೆ.

ಮುಂದೆ ಹೇಳುವ ಸಬ್ ರಿಜಿಸ್ಟ್ರಾರುಗಳ ವರ್ಗಾವರ್ಗಗಳನ್ನು ಹುಕುಂ ಮಾಡಿದೆ :—ಮ|| ಗಳಾದ ಎಂ. ನರಸಿಂಹಯ್ಯಂಗಾರ್ರು ಟಿ. ನರಸೀಪುರದಿಂದ ಚನ್ನಗಿರಿಗೆ ; ಎ. ಕೆ ವೆಂಕಟ್ರಮಣಶೆಟ್ಟರು ಚನ್ನಗಿರಿಯಿಂದ ನಾಗಮಂಗಲಕ್ಕೆ ; ಎಂ ರಾಮರಾಯರು ನಾಗಮಂಗಲದಿಂದ ಕೋಲಾರ್ ಪೇಟೆಗೆ ; ಜಿ. ಎಸ್ ಚನ್ನಮಲ್ಲಪ್ಪಶೆಟ್ಟರು ಕೋಲಾರ್ ಪೇಟೆಯಿಂದ ಮಳವಳ್ಳಿಗೆ, ಎಸ್. ಎ ಸುಬ್ರಹ್ಮಣ್ಯ ಅಯ್ಯರವರು ಮಳವಳ್ಳಿಯಿಂದ ಬೌರಿಂಗ್‌ಪೇಟೆಗೆ ; ಸಿ. ಜಯರಾಯರು ಬೌರಿಂಗ್‌ಪೇಟೆಯಿಂದ ಟಿ ನರಸೀಪುರಕ್ಕೆ.

ವಿದ್ಯಾಭ್ಯಾಸದ ಇಲಾಖೆಯಲ್ಲಿ ಮುಂದೆ ಹೇಳುವ ವರ್ಗಾವರ್ಗ ಹುಕುಂ ಮಾಡಿದೆ:—ಮ|| ಸಿ. ಆರ್ ನಾರಾಯಣರಾಯರನ್ನು ಬೆಂಗಳೂರು ಸೆಂಟ್ರಲ್ ಕಾಲೇಜಿನಿಂದ ಮೈಸೂರು ಟ್ರೈನಿಂಗ್ ಕಾಲೇಜಿಗೆ ಪ್ರಿನ್ಸಿಪಾಲ್ ಕೆಲಸಕ್ಕೆ; ಮ|| ಕೆ. ಕರುಣಾಕರನ್ ನಾಯರ್‌ರವರು ಸೆಂಟ್ರಲ್ ಕಾಲೇಜಿನಲ್ಲಿ ಅ|| ಪ್ರೊಫೆಸರಾಗಿರತಕ್ಕದ್ದು.

ಬೆಂಗಳೂರು—ಚಿಕ್ಕಬಳ್ಳಾಪುರದ ಲೈಟ್ ರೈಲ್ವೆ ಚೀಫ್ ಸ್ಟೋರ್ ಕೀಪರ್ ಮತ್ತು ಸೂಪರಿಂಟೆಂಡೆಂಟ್ ಮ|| ಬಿ. ವೆಂಕೋಬರಾಯರು ಕೊಟ್ಟಿರುವ ರಾಜೀನಾಮೆಯನ್ನು ಗವರ್ನ್‌ಮೆಂಟಿನವರು ಅಂಗೀಕರಿಸಿರುತ್ತಾರೆ.

ಶಿವಸಮುದ್ರದಲ್ಲಿ ಚೀಫ್ ಆಪರೇಟರಾಗಿರುವ ಮ|| ಎಸ್. ಜಿ. ಫಾರ್ಬಿಸ್‌ರವರನ್ನು ಚೀಫ್ ಎಲೆಕ್ಟ್ರಿಕಲ್ ಇಂಜನಿಯರಾಗಿ ನೇಮಕಮಾಡಿದೆ.

ಮುಂದೆ ಹೇಳುವ ವರ್ಗಾವರ್ಗಗಳನ್ನು ಹುಕುಂ ಮಾಡಿದೆ:—ಮ|| ಎಸ್. ಡಿ. ಶೇಷಾದ್ರಿ ಅಯ್ಯಂಗಾರ್ರು ಶಿವಸಮುದ್ರದಲ್ಲಿ ಚೀಫ್ ಆಪರೇಟರಾಗಿಯೂ, ಸೂಪರಿಂಟೆಂಡೆಂಟ್ ಮ|| ಜಿ ಆರ್. ನರಸಿಂಹಅಯ್ಯಂಗಾರ್ರು ಆಫೀಸ್ ಅಸಿಸ್ಟೆಂಟ್ ಮತ್ತು ಬೆಂಗಳೂರು ಟ್ರಾಮ್‌ವೇ ಛಾರ್ಜನಲ್ಲೂ ಇರತಕ್ಕದ್ದು. ಮ|| ಬಿ. ದ್ವಾರಕನಾಥ್‌ರವರನ್ನು ಬೆಂಗಳೂರಿಗೂ, ಮ|| ಸಿ. ಎಂ. ಕಾರಿಯಪ್ಪನವರನ್ನು ಮೈಸೂರಿಗೂ ವರ್ಗಮಾಡಿದೆ.

ಇಂಪೀರಿಯಲ್ ಇಂಡಿಯನ್ ರಿಲೀಫ್ ಫಂಡು.

ಮಾಗಡಿ ತಾಲ್ಲೂಕು.

ಮಾಗಡಿ ತಾಲ್ಲೂಕಿನ ಗ್ರಾಮಾಂತರಗಳಲ್ಲಿ ರೂ. 22-12-0 ಚಂದಾ ವಸೂಲಾಗಿ ತಾ. 20 ರಲ್ಲಿ ಖಜಾನೆಗೆ ಜಮಾ ಆಗಿರುತ್ತದೆ. ಈ ವರೆಗೆ ಈ ತಾಲ್ಲೂಕಿನಲ್ಲಿ ಈ ಫಂಡಿಗೆ ರೂ. 252-8-11 ಸೈ ವಸೂಲಾಗಿ ಜಮಾ ಆಗಿದೆ.

ಚನ್ನಪಟ್ಟಣದ ತಾಲ್ಲೂಕು.

ಚನ್ನಪಟ್ಟಣದ ತಾಲ್ಲೂಕ್ ಅಮಲ್ದಾರ್ರವರು ಕೆಳಗೆ ಕಂಡ ಚಂದಾ ಹಣಗಳು ತಮಗೆ ಪಾವತಿ ಆಗಿರುವುದಾಗಿ 8 ನೇ ಚಂದಾ ಪಟ್ಟಿ ಕಳುಹಿಸಿರುತ್ತಾರೆ. ಅದರ ವಿವರವೇನೆಂದರೆ—ಹಿಂದಿನ ಪಟ್ಟಿ ಪ್ರಕಾರ ವಸೂಲಾಗಿರುವ ಚಂದಾ ರೂ. 2,200-6-0; ರಾಂಪುರದ ಗ್ರಾಮಸ್ಥರಿಂದ ರೂ. 61-4-0, ಸಿದ್ದನಹಳ್ಳಿ ಗ್ರಾಮಸ್ಥರಿಂದ ರೂ. 50, ತಿಟ್ಟಮಾರನಹಳ್ಳಿ ಗ್ರಾಮಸ್ಥರಿಂದ ರೂ. 22-4-0, ಕದರಮಂಗಲ ಗ್ರಾಮಸ್ಥರು ರೂ. 42, ಮುಂಡ್ಯದ ಗ್ರಾಮಸ್ಥರು ರೂ. 87, ಗೌಡಗೆರೆ ಗ್ರಾಮಸ್ಥರು ರೂ. 45, ಒಟ್ಟು ವಸೂಲಾಗಿರುವುದು ರೂ. 2,507-14-0.

ಶಿವಮೊಗ್ಗ ಬ್ರಾಂಚು.

ಶಿವಮೊಗ್ಗ ಡಿಸ್ಟ್ರಿಕ್ಟಿನ ನಿವಾಸಿಗಳು ಈ ಫಂಡಿನ ಬಗ್ಗೆ ಬಹು ಔದಾರ್ಯದಿಂದ ಚಂದಾ ಹಣವನ್ನು ಕೊಟ್ಟಿರುತ್ತಾರೆ. ನಮ್ಮ ಜನಗಳಿಗೆ ಎಂದಿಗೂ ಇರುವ ಧರ್ಮ ಬುದ್ಧಿಯು ಈ ಕಾಲದಲ್ಲಿ ಬಹು ಪ್ರಬಲವಾಗಿ ಪ್ರದರ್ಶನವಾಗಿ ಇದೆ. ನಮ್ಮ ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ವಸೂಲಾದ ಹಣದ ಪೈಕಿ ತೀರ್ಥಹಳ್ಳಿ ಮತ್ತು ನಗರ ತಾಲ್ಲೂಕಿನ ಪ್ರಜೆಗಳು ಬಹಳ ಔದಾರ್ಯದಿಂದ ಚಂದಾ ಹಣವನ್ನು ಕೊಟ್ಟಿರುತ್ತಾರೆ. ಅಲ್ಲಿನ ಅಮಲ್ದಾರ್ರು ಮ|| ಎಸ್. ಧರ್ಮರಾಯರೂ, ಮ|| ಎಸ್. ಮಹಮದ್ ಷರೀಫ್‌ರವರೂ, ಇತರ ಕೆಲವು ದೊಡ್ಡ ಮನುಷ್ಯರೂ ಈ ಭಾಗದಲ್ಲಿ ಬಹಳ ಶ್ರಮವಹಿಸಿ ಈ ಯಶಸ್ಸಿಗೆ ಪಾತ್ರರಾಗಿರುತ್ತಾರೆಂಬುವದು ಸರ್ವರಿಗೂ ತಿಳಿದಿದೆ.

ವಸೂಲಾದ ಹಣದ ತಪಶೀಲು:—ಶಿವಮೊಗ್ಗ ಟೌನ್ ರೂ. 723-11-3, ಶಿವಮೊಗ್ಗ ತಾಲ್ಲೂಕು ರೂ. 350, ಚನ್ನಗಿರಿ ತಾಲ್ಲೂಕು ರೂ. 458-14-0, ಹೊನ್ನಾಳಿ ತಾಲ್ಲೂಕು ರೂ. 73, ಶಿಕಾರಿಪುರ ತಾಲ್ಲೂಕು ರೂ. 817-5-0, ಸೊರಬ ತಾಲ್ಲೂಕು ರೂ. 41-12-0, ಸಾಗರ ತಾಲ್ಲೂಕು ರೂ. 79-13-0, ನಗರ ತಾಲ್ಲೂಕು ರೂ. 1,312-10-0, ತೀರ್ಥಹಳ್ಳಿ ತಾಲ್ಲೂಕು ರೂ. 2,181-8-0, ಕುಂಸಿ ಸಬ್ ತಾಲ್ಲೂಕು ರೂ. 93-4-0, ಜುಮ್ಲಾ ರೂಪಾಯಿ 6,134-13-3 ಸೈ.

ಎಸ್. ಆರ್. ಬಾಲಕೃಷ್ಣರಾವ್ ಸೆಕ್ರೆಟರಿ.

ಮೈಸೂರು ಬ್ರಾಂಚ್.—5 ನೇ ಚಂದಾ ಪಟ್ಟಿ;

ಮೈಸೂರು ಬ್ರಾಂಚಿನ ಸೆಕ್ರೆಟರಿ ಮತ್ತು ಟ್ರೆಜರರ್ ಮ|| ಟಿ. ಲಕ್ಷ್ಮಣರಾಯರು ಕೆಳಗೆ ನಮೂದಾಗುವವರಿಂದ ತಮಗೆ ಚಂದಾ ಹಣ ತಲಪಿದೆ ಎಂದು ತಿಳಿಸುತ್ತಾರೆ.

ಟಿ. ನರಸೀಪುರದ ತಾ|| ಅಮಲ್ದಾರರ ಮೂಲಕ:—ಮ|| ಗಳಾದ ನಗರ ಗ್ಯಾತನಹಳ್ಳಿ ಪಟೇಲರ ಮುಖಾಂತರ ರೂ. 15, ಸೋಸಲೆ ಶಿಲೇದಾರ್ ಸಾಬರ ಮುಖಾಂತರ ರೂ. 25, ಕೆಂಪಾಚಾರ್ ಕೊನ್ನಾಚಾರ್ ಪುಟ್ಟಾಚಾರ್ರು ರೂ. 20, ತಲ್ಕಾಡು ಗುರುನಂಜಪ್ಪನವರು ಮತ್ತು ಸಿದ್ದಲಿಂಗಪ್ಪನವರು ತಲಾ ರೂ. 2, ಕೊಟ್ಟವಾಡಿ ಪಟೇಲ್ರು ಮತ್ತು ಚಿಟ್ಟಹಳ್ಳಿ ಪಟೇಲ್ರು ತಲಾ ರೂ. 10, ವಿಜಯಾಪುರದ ಪಟೇಲ್ರು ಮತ್ತು ವಾಲಂಗಿ ಪಟೇಲ್ರು ಮುಖಾಂತರ ತಲಾ ರೂ. 15, ಮರಡೀಪುರದ ಪಟೇಲ್ರು ಮುಖಾಂತರ ರೂ. 6, ಶುಕಸ್ಯಾರು ಕೆ. ವೆಂಕಟಸುಬ್ಬಯ್ಯನವರ ಮುಖಾಂತರ ರೂ. 20, ತಲ್ಕಾಡು ಮುಸಲ್ಮಾನ್ ಜನಗಳು ರೂ. 6; ತಲ್ಕಾಡು ಸಂಚನುರು ರೂ. 4, ವಡಯಾಂಡಹಳ್ಳಿ ಪಟೇಲ್ರು ಮುಖಾಂತರ ರೂ. 5, ಜುಮ್ಲಾ ರೂಪಾಯಿ 164.

ಮೈಸೂರು ರೈಲ್ವೆ ಸ್ಟೇಷನ್ ಮಾಸ್ಟರವರ ಮೂಲಕ ರೂ. 8-10-0.

ಮೈಸೂರು ಮ|| ಎಂ. ಎಲ್. ನರಸಿಂಹಯ್ಯಗಾರ್ರು ರೂ. 5; ಟಿ. ನರಸಿಪುರದ ಅಮಲ್ದಾರರ ಮೂಲಕ—ಕೊಟ್ಟಗಾಲದ ಮ|| ಗುರುಮಲ್ಲಯ್ಯನವರ ಮುಖಾಂತರ ರೂ. 12, ಕುರುಬೂರು ಪಟೇಲ್ ಮ|| ಮಲ್ಲಿಕಾರ್ಜುನಯ್ಯನವರ ಮುಖಾಂತರ ರೂ. 10, ತಾಲ್ಲೂಕ್ ಪೋಲೀಸ್ ನೌಕರವರ್ಗದವರುಗಳು ರೂ. 8-10-0.

ಮೈಸೂರು ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್ ಸೆಕ್ರೆಟರಿಯವರ ಮೂಲಕ ರೂ. 13.

ಹಿಂದೆ ಜಮಾ ಬಂದಿರುವುದು ರೂ. 1,547; ಒಟ್ಟು ರೂ. 1,757-4-0.

ಮೈಸೂರು ಸರ್ಕಾರಿ ಹುಕುಮುಗಳು.

ಗ್ರಾಮಗಳ ಆರೋಗ್ಯರಕ್ಷಣೆಯ ರೂಲುಗಳು.—ಸಂಸ್ಥಾನದಲ್ಲಿ 25 ಮನೆಗಳುಳ್ಳ ಮತ್ತು ಅದಕ್ಕಿಂತ ದೊಡ್ಡದಾಗಿರುವ ಗ್ರಾಮಗಳು ಇನಾಮತಿ, ಜೋಡಿ, ಸರ್ಕಾರಿ, ಯಾವುದೇ ಆಗಿದ್ದರೂ ಅಂಥಾ ಪ್ರತಿ ಒಂದು ಗ್ರಾಮದಲ್ಲೂ ವಿಲೇಜ್ ಸ್ಯಾನಿಟೇಷನ್ ರೂಲಸನ್ನು ಡೆಪ್ಯುಟಿ ಕಮಿಷನರುಗಳು ಕೂಡಲೇ ಜಾರಿಗೆ ತರಬೇಕೆಂದು ಸರ್ಕಾರದವರು ಹುಕುಂ ಕೊಟ್ಟಿದ್ದಾರೆ. ಇದಲ್ಲದೆ ದೊಡ್ಡ ಪಟ್ಟಣ, ಮುಖ್ಯವಾದ ರೈಲ್ವೆ ಸ್ಟೇಷನ್‌ಗಳ ಸಮೀಪದಲ್ಲಿರುವ ಗ್ರಾಮಗಳೊಳಗೆ 25 ಮನೆಗಳಿಗಿಂತ ಕಡಮೆಯಾಗಿದ್ದರೂ ಈ ರೂಲಸನ್ನು ಅಲ್ಲೂ ಜಾರಿಗೆ ತರಬೇಕೆಂದು ತಿಳಿಸಿದಾರೆ.

ಸರ್ಕಾರಿ ಕಟ್ಟಡಗಳನ್ನು ರಿಪೇರಿಮಾಡುವುದು.—ಒಬ್ಬ ಅಧಿಕಾರಿಯು ಒಂದಾನೊಂದು ಸರ್ಕಾರಿ ಕಟ್ಟಡದಲ್ಲಿ ವಾಸವಾಗಿದ್ದು ಸರ್ಕಾರದ ಸ್ಯಾಂಕ್ಷನ್ ಪಡೆಯದೆ ಆ ಕಟ್ಟಡಕ್ಕೆ ತನಗೆ ಅವಶ್ಯವೆಂದು ತೋರಿದ ರೀತಿಯಲ್ಲಿ ಕಾಮಗಾರಿ ಮಾಡಿಸಿಕೊಂಡನು. ಇದು ಸರ್ಕಾರಕ್ಕೆ ತಿಳಿಯಬಂತು. ಇನ್ನು ಮುಂದೆ ಎಲ್ಲಾ ಅಧಿಕಾರಿಗಳಿಗೂ ಆ ರೀತಿ ಮಾಡಕೂಡದೆಂದೂ, ಮೊದಲು ಅಂದಾಜು ಮುಂತಾದದ್ದು ಮಾಡಿಸಿ ಸರ್ಕಾರದ ಸ್ಯಾಂಕ್ಷನ್ ಪಡೆದು, ಬಳಿಕ ಕಾಮಗಾರಿ ಮಾಡಿಸಬೇಕೆಂದೂ, ಇಲ್ಲವಾದರೆ ಖರ್ಚನ್ನೆಲ್ಲಾ ಅವರೇ ವಹಿಸಿಕೊಳ್ಳಬೇಕಾಗುವುದೆಂದೂ ಸರ್ಕಾರದವರು ಹುಕುಂ ಕೊಟ್ಟಿದ್ದಾರೆ.

ಆನರರಿ ಮ್ಯಾಜಿಸ್ಟ್ರೇಟರುಗಳು.—ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ತುಮಕೂರು ಟೌನ್‌ಗಳಲ್ಲಿ ಮೂರು ವರುಷ ಕಾಲ ಆನರರಿ ಮ್ಯಾಜಿಸ್ಟ್ರೇಟರನ್ನು ಹಂಗಾಮಿಯಾಗಿ ಇಟ್ಟು ನೋಡತಕ್ಕದ್ದೆಂದು ಸರ್ಕಾರದವರು ಸ್ಯಾಂಕ್ಷನ್ ಮಾಡಿದಾರೆ. ಈ ಪೈಕಿ ಪ್ರತಿ ಒಂದು ಸ್ಥಳದಲ್ಲೂ ಮ್ಯಾಜಿಸ್ಟ್ರೇಟರಾಗಲು ಅರ್ಹರಾದ ಆರೇಳು ಮಂದಿ ದೊಡ್ಡ ಮನುಷ್ಯರ ಹೆಸರುಗಳನ್ನೂ, ಕೋರ್ಟು ಮಾಡಬಹುದಾದ ಕಟ್ಟಡಗಳನ್ನೂ, ಸಿಬ್ಬಂದಿ ಖರ್ಚನ್ನೂ ತಿಳಿಸಬೇಕೆಂದು ಡೆಪ್ಯುಟಿ ಕಮಿಷನರನ್ನು ಕೇಳಿದಾರೆ. ಏರ್ಪಾಡು ಎಂದಿನಿಂದ ಜಾರಿಗೆ ಬರತಕ್ಕದ್ದೋ ಸರ್ಕಾರದವರು ಬೇರೆ ಹುಕುಂ ಕೊಡುವರು.

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.—ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯ ಸಿಬ್ಬಂದಿ ಖರ್ಚನ್ನು ಸರ್ಕಾರದವರು ಪುನರ್ವಿಮರ್ಶೆಮಾಡಿ ಹೊಸ ಸಿಬ್ಬಂದಿ ಖರ್ಚನ್ನು ಸ್ಯಾಂಕ್ಷನ್ ಮಾಡಿ, ಇದರಂತೆ 1914 ನೇ ಅಕ್ಟೋಬರ್ ತಾ. 1 ರಿಂದ ಜಾರಿಗೆ ಬಿಡಬೇಕೆಂದೂ, ಇದುವರೆಗೆ ಬೇರೆಬೇರೆ ಬಾಬುಗಳಲ್ಲಿ ನೇಮಿಸಿಕೊಂಡಿರುವ ಹಂಗಾಮಿ ಸಿಬ್ಬಂದಿಯನ್ನೆಲ್ಲಾ ವಜಾಮಾಡಿಬಿಡಬೇಕೆಂದೂ ಹುಕುಂ ಕೊಟ್ಟಿದ್ದಾರೆ. ಸಿಬ್ಬಂದಿ ಖರ್ಚು ಮೊದಲಿದ್ದದ್ದಕ್ಕಿಂತಲೂ ಸಾಲಿಯಾನಾ 7,578 ರೂಪಾಯಿ ಅಂದರೆ ತಿಂಗಳಿಗೆ 631½ ರೂಪಾಯಿ ಜಾಸ್ತಿಮಾಡಿದ್ದಾರೆ. ಮೊದಲು ತಿಂಗಳಿಗೆ 1,400 ರೂಪಾಯಿ ಸಿಬ್ಬಂದಿ ಖರ್ಚು ಆಗುತ್ತಿತ್ತು; ಈಗ ಇದನ್ನು 2,031½ ರೂಪಾಯಿಗೆ ಬಡ್ತಿಮಾಡಿರುವರು. ಮ್ಯಾನೇಜರ ಸಂಬಳವು 70 ರೂಪಾಯಿ ಎಂದೂ, ಡೆಪ್ಯುಟಿ ಅಕೌಂಟೆಂಟಿನ ಸಂಬಳವು 30 ರಿಂದ 40 ರೂಪಾಯಿ ವರೆಗೆ ಹೆಚ್ಚುವುದೆಂದೂ ನಿಗದಿ ಆಗಿದೆ. ಕಲೆಕ್ಟರಿಗೆ ಆಕ್ಟ್ರಾಯಿ ಬಾಬೂ ಸೇರಿಸಲ್ಪಟ್ಟು ಆತನ ಸಂಬಳವನ್ನು 60+15 ರೂಪಾಯಿ ಎಂದು ನಿಷ್ಕರ್ಷೆ ಮಾಡಿದಾರೆ. ಮ್ಯುನಿಸಿಪಾಲಿಟಿಯಿಂದ ಅಬ್ಕಾರಿ ಸರಾಫನಿಗೆ ಸಲ್ಲುತ್ತಿದ್ದ ಅಲೋಯನ್ಸು ವಜಾ ಮಾಡಲಾಯಿತು.

ಕೋಆಪರೇಟಿವ್ ಸೊಸೈಟಿಗಳ ಮೇಲ್ವಿಚಾರಣೆ.—ಮೈಸೂರು ಸಂಸ್ಥಾನದಲ್ಲಿ ಕೋಆಪರೇಟಿವ್ ಸೊಸೈಟಿಗಳನ್ನು ಪ್ರಾರಂಭಿಸುವುದೇ ಮುಂತಾದದ್ದಕ್ಕೆ ಸರ್ಕಾರದವರು ಪ್ರಾರಂಭದಲ್ಲಿ ಒಬ್ಬ ಸೀನಿಯರ್ ಅ|| ಕಮಿಷನರನ್ನೂ, ಇವರ ಶಾಖೆಯಲ್ಲಿ 2-3 ಮಂದಿ ಇನ್‌ಸ್ಪೆಕ್ಟರನ್ನೂ, 4 ಮಂದಿ ಗುಮಾಸ್ತರನ್ನೂ ನೇಮಿಸಿ, ಈ ಇಲಾಖೆಯನ್ನು ರೆವಿನ್ಯೂ ಕಮಿಷನರ್‌ರವರ ಶಾಖೆಯಲ್ಲಿಟ್ಟಿದ್ದರು. ಬರಬರುತ್ತಾ ಸೊಸೈಟಿಗಳು ಹೆಚ್ಚಿ ಕೆಲಸಗಳು ಹರಡಿಕೊಳ್ಳುತ್ತಿದ್ದದ್ದನ್ನು ಕಂಡು ಸರ್ಕಾರದವರು ಇದಕ್ಕೆ ಡೆಪ್ಯುಟಿ ಕಮಿಷನರ ದರ್ಜೆಯ ಒಬ್ಬ ಅಧಿಕಾರಿಯನ್ನು ನೇಮಿಸಿ, ಈ ಇಲಾಖೆಯನ್ನೇ ಪ್ರತ್ಯೇಕವಾಗಿ ಮಾಡಿಡಬೇಕಾಯಿತು. ಈಗ ರಿಜಿಸ್ಟ್ರಾರವರ ಕೈಕೆಳಗೆ 15 ಮಂದಿ ಇನ್‌ಸ್ಪೆಕ್ಟರುಗಳೂ, 12 ಜನ ಗುಮಾಸ್ತರೂ ಕೆಲಸಮಾಡುತ್ತಿದ್ದಾರೆ. ಇದಲ್ಲದೆ ಒಬ್ಬ ಅಸಿಸ್ಟೆಂಟರೂ, ಹಂಗಾಮಿ ಸಿಬ್ಬಂದಿಯೂ ನೇಮಕವಾಗಿರುವರು. ಇಷ್ಟಾದಾಗ್ಯೂ ಈ ಇಲಾಖೆಯ ಕೆಲಸಗಳನ್ನು ಸರಿಯಾಗಿ ನಿರ್ವಹಿಸುವುದು ಕಷ್ಟವೆಂದು ಕಂಡುಬಂದಿದೆ. ಈಗ 530 ಸೊಸೈಟಿಗಳು ಆಗಿರುವವು. ಇದಕ್ಕಾಗಿ ಇಲಾಖೆಯ ಸಿಬ್ಬಂದಿಯನ್ನೂ, ಮೇಲ್ವಿಚಾರಣೆ ಅಧಿಕಾರಿಗಳನ್ನೂ ಹೆಚ್ಚಿಸಿ ಕ್ರಮಕ್ಕೆ ತಂದಿಡಬೇಕೆಂದು ರಿಜಿಸ್ಟ್ರಾರವರು ಗವರ್ನ್‌ಮೆಂಟಿಗೆ ತಿಳಿಯಪಡಿಸಿದರು. ಸರ್ಕಾರದವರು ಇದನ್ನೆಲ್ಲಾ ಪರ್ಯಾಲೋಚನೆಮಾಡಿ ಈ ಇಲಾಖೆಯ ಖಾಯಂ ಬರಾವರ್ದಿನಲ್ಲಿ 13 ಮಂದಿ ಇನ್‌ಸ್ಪೆಕ್ಟರುಗಳನ್ನೂ, 13 ಮಂದಿ ಗುಮಾಸ್ತರನ್ನೂ, 30 ಮಂದಿ ಜವಾನರುಗಳನ್ನೂ ನೇಮಕಮಾಡಿ ಸಂಬಳಗಳ ದರನನ್ನು ಸ್ವಲ್ಪಮಟ್ಟಿಗೆ ಹೆಚ್ಚಿಸಿದಾರೆ. ಇನ್‌ಸ್ಪೆಕ್ಟರುಗಳ ಸಂಬಳವು 40 ರೂಪಾಯಿನಿಂದ 100 ರೂಪಾಯಿವರೆಗೂ, ಗುಮಾಸ್ತೆಯರ ಸಂಬಳವು 20 ರೂಪಾಯಿನಿಂದ 80 ರೂಪಾಯಿ ವರೆಗೂ ಬಡ್ತಿಯಾಗುವಂತೆ ಮಾಡಿದಾರೆ. ಇದಲ್ಲದೆ ಕೆಲವು ಹಂಗಾಮಿಯಾದ ಸಿಬ್ಬಂದಿಯೂ ಸ್ಯಾಂಕ್ಷನ್ ಆಗಿದೆ. ಇವರಲ್ಲಿ 40 ರಿಂದ 60 ರೂಪಾಯಿ ವರೆಗೆ ಹೆಚ್ಚುವ ಸಂಬಳವುಳ್ಳ 4 ಮಂದಿ ಇನ್‌ಸ್ಪೆಕ್ಟರುಗಳನ್ನೂ 30 ರಿಂದ 35 ರ ವರೆಗೆ ಬಡ್ತಿ ಆಗುವ ಇಬ್ಬರು ಗುಮಾಸ್ತೆಯರೂ, 4 ಮಂದಿ ಜವಾನರೂ ನೇಮಿಸಲ್ಪಟ್ಟಿದ್ದಾರೆ. ಇದಲ್ಲದೆ 530 ಕ್ಕಿಂತ ಮೇಲ್ಪಟ್ಟ ಪ್ರತಿ 30 ಹೊಸ ಸೊಸೈಟಿಗಳಿಗೂ ಒಬ್ಬ ಇನ್‌ಸ್ಪೆಕ್ಟರನ್ನೂ ಒಬ್ಬ ಜವಾನನನ್ನೂ, ಪ್ರತಿ 60 ಸೊಸೈಟಿಗಳಿಗೂ ಒಬ್ಬ ಗುಮಾಸ್ತೆಯನ್ನೂ ನೇಮಿಸಿಕೊಳ್ಳಬಹುದೆಂದು ಸರ್ಕಾರದವರು ರಿಜಿಸ್ಟ್ರಾರವರಿಗೆ ಅಧಿಕಾರವನ್ನು ವಹಿಸಿರುತ್ತಾರೆ. ಸೊಸೈಟಿಗಳ ಕ್ಷೇಮಾಭಿವೃದ್ಧಿಯನ್ನು ಕಾಪಾಡಿಕೊಂಡು ಬರಬೇಕೆಂದೂ, ಸಾಧ್ಯವಾಗುವ ಮಟ್ಟಿಗೂ ಗ್ರಾಮ್ಯಪ್ರಜೆಗಳೇ ಸೊಸೈಟಿಗಳ ಆಡಳಿತಗಳನ್ನು ನೋಡಿಕೊಳ್ಳುವಂತೆ ಪ್ರೋತ್ಸಾಹಿಸಬೇಕೆಂದೂ, ಜಮಾ ಖರ್ಚು ತನಿಖೆಯ ಖರ್ಚನ್ನು ಸೊಸೈಟಿಗಳೇ ವಹಿಸಿಕೊಳ್ಳುವಂತೆ ಮಾಡಬೇಕೆಂದೂ ಸರ್ಕಾರದವರು ರಿಜಿಸ್ಟ್ರಾರವರಿಗೆ ಸೂಚಿಸಿರುತ್ತಾರೆ.

ಆರ್ಯಮಹಿಳಾ ಸಮಾಜ, ಚಿಕ್ಕಮಗಳೂರು.

ಈ ಊರು ಗರಲ್ಸ್ ಸ್ಕೂಲಿನಲ್ಲಿ ತಾ. 18 ರಲ್ಲಿ ಒಂದು ಮಹಿಳೆಯರ ಸಭೆಯು ಸೇರಿತ್ತು. ಆ ಕಾಲದಲ್ಲಿ ಬಿ. ಶಂಕರಮ್ಮನವರು ಪ್ಲೇಗಿನ ವಿಚಾರವಾಗಿ ಎಲ್ಲರಿಗೂ ಉಪಯೋಗವಾದ ಒಂದು ಉಪನ್ಯಾಸವನ್ನು ಬಹಳ ಚೆನ್ನಾಗಿ ಬರೆದು ಓದಿದರು. ರತ್ನಮ್ಮನೆಂಬ ಬಾಲಕಿಯು ಹಾರ್ಮೋನಿಯಂ ನುಡಿಸಿ ಸಭಿಕರನ್ನು ಬಹಳವಾಗಿ ಸಂತೋಷಪಡಿಸಿದಳು. ಸ್ಕೂಲ್ ಬಾಲಕಿಯರು ಸರಸ್ವತೀ ಪೂಜೆಯನ್ನು ಮಾಡಿ ಶ್ರೀಮನ್ ಮಹಾರಾಜರವರಿಗೂ ಅವರ ಪರಿವಾರಕ್ಕೂ ಮಂಗಳವನ್ನು ಹಾಡಿ ಸಭೆಯನ್ನು ಪೂರೈಸಿದರು. ಇಲ್ಲಿ ನಡೆದ ಪ್ಲೇಗಿನ ವಿಚಾರದ ಉಪನ್ಯಾಸವನ್ನು ಇದರೊಡನೆ ರವಾನಿಸಿರುತ್ತೆ. ದಯವಿಟ್ಟು ಈ ವಾರದಲ್ಲಿ ಪ್ರಕಟಿಸಬೇಕಾಗಿ ಕೋರುತ್ತೇನೆ.

ಸಭಾಸದರಾದ ಆರ್ಯಕುಲ ಶಿರೋಮಣಿಯರಿರಾ, ಅಲ್ಪಜ್ಞಳಾದ ನಾನು ಒಂದು ಸಣ್ಣ ಉಪನ್ಯಾಸವನ್ನು ಓದಬೇಕೆಂದು ಬಹಳ ಕುತೂಹಲೆಯಾಗಿದೇನೆ. ಆದರೆ ತಾವುಗಳು ದಯವಿಟ್ಟು ಕೇಳಬೇಕೆಂದು ಕೋರುತ್ತೇನೆ. ಪ್ಲೇಗ್ ವ್ಯಾಧಿಯು ಅಂಟುರೋಗವಲ್ಲ; ಅಂದರೆ ರೋಗಿಯನ್ನು ಮುಟ್ಟುವುದರಿಂದ ಇತರರಿಗೆ ಆ ವ್ಯಾಧಿಯು ಬರುವುದಿಲ್ಲ. ಹೀಗೆ ರೋಗಿಯನ್ನು ಮುಟ್ಟುವುದರಿಂದ ಬರಬಹುದಾದ ವ್ಯಾಧಿಗೆ ಸಿಡುಬು ಉದಾಹರಣೆಯಾಗಿದೆ. ಪ್ಲೇಗ್ ವ್ಯಾಧಿಯ ವಿಷಯವು ಇತರರಿಗೆ ಸಿಡುಬುವ್ಯಾಧಿಯ ವಿಷದಂತೆ ಗಾಳಿಯ ಮುಖಾಂತರವಾಗಿಯಾಗಲೀ; ಕಾಲರಾ ವ್ಯಾಧಿಯ ವಿಷಯದಂತೆ ನೀರಿನ ಮುಖಾಂತರವಾಗಿಯಾಗಲೀ ಬರುವುದಿಲ್ಲ. ಆದರೆ ಈ ವ್ಯಾಧಿಯ ಪ್ಲೇಗ್ ವ್ಯಾಧಿಯಿಂದ ಪೀಡಿತವಾದ ಇಲಿಯ ದೇಹದ ಮೇಲಿರುವ ಚಿಗಟಗಳು ಮನುಷ್ಯರನ್ನು ಕಚ್ಚುವುದರಿಂದ ಮಾತ್ರವೇ ಪ್ರಾಪ್ತವಾಗುತ್ತದೆ. ಪ್ಲೇಗ್ ವ್ಯಾಧಿಯು ಮೊಟ್ಟಮೊದಲು ಮನುಷ್ಯರಲ್ಲಿ ಹುಟ್ಟುವ ವ್ಯಾಧಿಯಲ್ಲ. ಇದು ಇಲಿಗಳಲ್ಲಿ ಮೊದಲು ಪ್ರಾಪ್ತವಾಗಿ ಇಲಿಗಳಿಂದ ಚಿಗಟಗಳ ಮುಖಾಂತರ ಮನುಷ್ಯರಿಗೆ ಪ್ರಾಪ್ತವಾಗುತ್ತದೆ. ಆದುದರಿಂದ ಇಲಿಗಳೇ ಇಲ್ಲದಿದ್ದರೆ ಪ್ಲೇಗ್ ವ್ಯಾಧಿಯು ಇರುತ್ತಲೇ ಇರಲಿಲ್ಲ. ಒಂದು ವೇಳೆ ಇರುತ್ತಿದ್ದರೂ ಇಲಿಗಳಿಗೆ ನಾವು ದೂರವಾಗಿದ್ದರೆ ವ್ಯಾಧಿಯಿಂದ ತಪ್ಪಿಸಿಕೊಳ್ಳುತ್ತಿದ್ದೆವು. ಈಗಿನ ನಡವಳಿಕೆಗಳಿಂದ ನಾವು ಇಲಿಗಳೊಂದಿಗೆ ವಾಸಿಸಬೇಕಾಗಿದೆ. ಈ ವ್ಯಾಧಿಯು ಕೊಂಕು ಕೆಲವು ಇಲಿಗಳಲ್ಲಿ ಸ್ಥಿರವಾಗಿ ನಿಂತು ಕಾಲಾಂತರದಿಂದ ಉದ್ರೇಕಿಸಿ, ಇಲಿಗಳ ಸಂಖ್ಯೆಯು ಹೆಚ್ಚಾದ ಹಾಗೆಲ್ಲಾ ಈ ವ್ಯಾಧಿಯು ಹೆಚ್ಚುತ್ತಲೂ, ಅವುಗಳ ಸಂಖ್ಯೆಯು ಕಡಮೆಯಾದ ಹಾಗೆಲ್ಲಾ ಕಡಮೆಯಾಗುತ್ತಲೂ ಇರುವುದು. ಪ್ಲೇಗ್ ವ್ಯಾಧಿಯನ್ನುಂಟುಮಾಡುವ ವಿಷವು ಬಹು ಸೂಕ್ಷ್ಮವಾದ ಒಂದು ಕ್ರಿಮಿಯು. ಈ ಕ್ರಿಮಿಯು ವ್ಯಾಧಿಗ್ರಸ್ತವಾದ ಇಲಿಯ ರಕ್ತದಲ್ಲಿ ವಿಶೇಷವಾಗಿ ಇರುವುದು. ಇಂತಹ ಒಂದೆರಡು ಕ್ರಿಮಿಗಳು ಆರೋಗ್ಯವಾಗಿರುವ ಇಲಿಯ ರಕ್ತಕ್ಕೆ ಸೇರಿದರೆ ಬಹು ಸ್ವಲ್ಪ ಕಾಲದಲ್ಲಿ ಅಪರಿಮಿತವಾಗಿ ಹೆಚ್ಚಿ ವಿಶೇಷವಾಗಿ ಪರಿಣಮಿಸಿ ಸಾಧಾರಣವಾಗಿ ಸಾವನ್ನುಂಟುಮಾಡುವವು. ಇಲಿಯ ದೇಹದಲ್ಲಿ ಚಿಗಟಗಳು ಇರುವವು. ಇವುಗಳು ಇಲಿಯ ರಕ್ತವನ್ನೇ ಹೀರಿ ಜೀವಿಸುವವು. ಇಲಿಗೆ ಪ್ಲೇಗ್ ವ್ಯಾಧಿಯು ಪ್ರಾಪ್ತವಾದಾಗ ಅದರ ರಕ್ತದಲ್ಲಿರುವ ವಿಷಕ್ರಿಮಿಗಳನ್ನು ಈ ಚಿಗಟಗಳು ಹೀರುತ್ತಲೇ ಇದ್ದು, ಇಲಿಯು ಸತ್ತ ನಂತರವಾಗಲೀ, ಬೇರೊಂದು ಇಲಿಯನ್ನು ಕಚ್ಚಿ ಆಗಲೀ ಆ ಇಲಿಯಲ್ಲಿ ವಿಷಕ್ರಿಮಿಗಳನ್ನಿಟ್ಟು ವ್ಯಾಧಿಯನ್ನುಂಟುಮಾಡುವವು. ಹೀಗೆಯೇ ವ್ಯಾಧಿಯು ಒಂದು ಇಲಿಯಿಂದ ಮತ್ತೊಂದು ಇಲಿಗೆ ಚಿಗಟಗಳ ಮುಖಾಂತರ ಹರಡುವುದು. ಒಂದು ಮನೆಯಲ್ಲಿಯೇ ಆಗಲೀ, ಒಂದು ಕೇರಿಯಲ್ಲಿಯೇ ಆಗಲೀ ಇರಬಹುದಾದ ಅನೇಕ ಇಲಿಗಳು ಸತ್ತ ಕೂಡಲೇ ಇವುಗಳ ಮೇಲಿದ್ದ ಚಿಗಟಗಳು ಸಮೀಪದಲ್ಲಿರಬಹುದಾದ ಮನುಷ್ಯರನ್ನು ಆಹಾರಕ್ಕಾಗಿ ಕಚ್ಚುವವು. ಹೀಗೆ ಕಚ್ಚುವ ಕಾಲದಲ್ಲಿ ವ್ಯಾಧಿಗ್ರಸ್ತವಾದ ಇಲಿಯು ರಕ್ತದಿಂದ ಹೀರಿದ್ದ ವಿಷಕ್ರಿಮಿಗಳು ಮನುಷ್ಯನ ದೇಹದೊಳಕ್ಕೆ ಸೇರುವವು. ಅಂಥವನಿಗೆ ಪ್ಲೇಗ್ ವ್ಯಾಧಿಯು ಪ್ರಾಪ್ತವಾಗುವುದು. ಇಂಥಾ ವ್ಯಾಧಿಗ್ರಸ್ತನ ದೇಹದಲ್ಲೂ ಬಟ್ಟೆಗಳಲ್ಲೂ ರೋಗದ ಚಿಗಟಗಳಿದ್ದು, ಅವನ ಸಮೀಪಕ್ಕೆ ಬಂದವರನ್ನೂ ಅವನನ್ನು ಮುಟ್ಟುವವರನ್ನೂ ಕಚ್ಚುತ್ತಾ, ವ್ಯಾಧಿಯನ್ನು ಮನುಷ್ಯರಿಂದ ಮನುಷ್ಯರಿಗೆ ಹರಡುವವು. ಈ ವ್ಯಾಧಿಯು ಇರುವ ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಜನರು ವ್ಯಾಧಿಗ್ರಸ್ತವಾದ ಇಲಿಗಳನ್ನಾಗಲೀ, ರೋಗದ ಚಿಗಟಗಳನ್ನಾಗಲೀ ತಮ್ಮ ಬಟ್ಟೆಬರೆಗಳೊಡನೆ ತೆಗೆದುಕೊಂಡು ಹೋಗುವುದರಿಂದ ಈ ಚಿಗಟಗಳು ಅಲ್ಲಿನ ಇಲಿಗಳನ್ನು ಪ್ರವೇಶಿಸಿ ಇಲಿಗಳಲ್ಲಿ ವ್ಯಾಧಿಯನ್ನುಂಟುಮಾಡುವವು. ಈ ರೋಗವು ಆರಂಭಿಸುವುದಕ್ಕೆ 1 ರಿಂದ 4 ವಾರಗಳು ಬೇಕಾಗುವುದು. ಆದುದರಿಂದ ಒಂದು ಮನೆಯಲ್ಲಿ ಇಲಿಯು ಸತ್ತು ಬೀಳುವುದು ವ್ಯಾಧಿಯ ಆರಂಭವೆಂತಲೂ, ಹೀಗಾದ 1 ರಿಂದ 3 ವಾರದೊಳಗಾಗಿ ಮನುಷ್ಯರಲ್ಲಿ ವ್ಯಾಧಿಯು ಆರಂಭಿಸುವುದೆಂತಲೂ ತಿಳಿಯಬೇಕು.

ವ್ಯಾಧಿಯ ನಿವಾರಣೋಪಾಯಗಳು.—ಇಲಿಗಳೇ ಇಲ್ಲದಿದ್ದರೆ ಪ್ಲೇಗ್ ವ್ಯಾಧಿಯು ಇರುತ್ತಲೇ ಇರಲಿಲ್ಲವೆಂತಲೂ, ವ್ಯಾಧಿಗ್ರಸ್ತವಾದ ಇಲಿಗಳಿಂದ ನಾವು ಬಹಳ ದೂರದಲ್ಲಿದ್ದರೆ ಈ ವ್ಯಾಧಿಯಿಂದ ತಪ್ಪಿಸಿಕೊಳ್ಳಬಹುದೆಂತಲೂ ಮೊದಲೇ ಹೇಳಿದೆಯಷ್ಟೆ. ಆದುದರಿಂದ ಪ್ಲೇಗ್ ವ್ಯಾಧಿಯನ್ನು ಸಮೂಲವಾಗಿ ನಮ್ಮ ದೇಶದಿಂದ ಓಡಿಸಬೇಕಾದರೆ ಇಲಿಗಳ ವಂಶವನ್ನೇ ಇಲ್ಲದಂತೆ ಮಾಡಬೇಕು. ಇದಕ್ಕಾಗಿ ನಾವು ವಾಸಿಸುವ ಮನೆಗಳನ್ನು ಆರೋಗ್ಯಶಾಸ್ತ್ರಕ್ಕನುಸರಿಸಿ ಇಟ್ಟುಕೊಳ್ಳಬೇಕು. ಇಲಿಗಳು ನೆಲದಲ್ಲಿ ಬಿಲಗಳು ಮಾಡದಂತೆ ಗಾರೆ ಹಾಕಿ ಭದ್ರಪಡಿಸಬೇಕು. ಗೋಡೆಗಳು ಮಣ್ಣಿಗೆ ಬದಲಾಗಿ ಇಟ್ಟಿಗೆಗಳಿಂದ ಕಟ್ಟಿದವುಗಳಾಗಿರಬೇಕು. ಮೇಲ್ಛಾವಣಿಯಲ್ಲಿ ಇಲಿಗಳು ಸೇರದಂತೆ ಮಂಗಳೂರ್ ಹಂಚು ಹಾಕಬೇಕು. ಬೆಳಕೂ ಗಾಳಿಯೂ ಧಾರಾಳವಾಗಿ ಬರುವಂತೆ ಅನೇಕ ಕಿಟಕಿಗಳನ್ನಿಡಬೇಕು. ಕತ್ತಲಾದ ಪ್ರದೇಶಗಳಲ್ಲಿ ಇಲಿಗಳಿಗೂ ಚಿಗಟಗಳಿಗೂ ಬಹಳ ವಿಶ್ವಾಸ. ಉಗ್ರಾಣದ ಮನೆಯು ಪ್ರತ್ಯೇಕವಾಗಿರಬೇಕು. ಇದೇ ಮೇರೆಗೆ ಅಡಿಗೆಯ ಮನೆಯೂ, ಬಚ್ಚಲ ಮನೆಯೂ, ದನಕರುಗಳನ್ನು ಕಟ್ಟುವ ಮನೆಯೂ ಪ್ರತ್ಯೇಕವಾಗಿರಬೇಕು. ಅನ್ನ ಆಹಾರ ಪದಾರ್ಥಗಳನ್ನೂ, ಎಂಜಲೆಲೆ, ಬೂದಿ ಮೊದಲಾದವುಗಳನ್ನೂ ಸಿಕ್ಕಿದ ಸ್ಥಳಗಳಲ್ಲಿ ಬಿಸಾಡಬಾರದು. ಇವು ಇಲಿಗಳಿಗೆ ಸಿಕ್ಕದಂತೆ ಬೇರೆ ಸ್ಥಳಗಳನ್ನು ಕಲ್ಪಿಸಬೇಕು. ಹೀಗೆ ಪ್ರತಿಯೊಬ್ಬರೂ ಮಾಡುವುದರಿಂದ ಇಲಿಗಳ ವಂಶವೂ ಪ್ಲೇಗ್ ವ್ಯಾಧಿಯೂ ಸ್ವಲ್ಪ ಕಾಲದಲ್ಲಿಯೇ ನಾಶವಾಗುವವು. ಸಕಲರೂ ಇವುಗಳನ್ನು ಆಚರಣೆಯಲ್ಲಿ ತರುವುದಕ್ಕೆ ಬಡತನವೇ ದೊಡ್ಡ ಪ್ರತಿಬಂಧಕವಾಗಿರುವುದರಿಂದ ತತ್ಕಾಲದಲ್ಲಿ ಇದು ನೆರವೇರುವ ಕಾರ್ಯವಲ್ಲ.

ಪ್ಲೇಗ್ ವ್ಯಾಧಿಯು ಪ್ರಾಪ್ತವಾದಾಗ ಅದು ವಿಶೇಷವಾಗಿ ಹರಡದಂತೆ ಬೆಕ್ಕುಗಳನ್ನು ಸಾಕುವುದು, ಇಲಿಗಳನ್ನು ಬೋನಿನಲ್ಲಿ ಹಿಡಿದು ಕೊಲ್ಲುವುದು. ಇದನ್ನು ಪ್ರತಿಯೊಂದು ಮನೆಯವರೂ ಆಚರಣೆಗೆ ತರಬೇಕು. ಇದಕ್ಕೆ ಒಂದು ಉದಾಹರಣೆಯನ್ನು ಹೇಳಬಹುದು. ಪಂಜಾಬ್ ದೇಶದ ಒಂದು ಗ್ರಾಮದಲ್ಲಿ ಬೆಕ್ಕುಗಳನ್ನು ಪ್ರತಿಯೊಂದು ಮನೆಯವರೂ ಸಾಕಿದ್ದುದರಿಂದ ಆ ಗ್ರಾಮಕ್ಕೆ ಮಾತ್ರ ಪ್ಲೇಗ್ ವ್ಯಾಧಿಯು ಇದುವರೆವಿಗೂ ಬರಲಿಲ್ಲವೆಂಬುದಾಗಿ ತಿಳಿಯಬರುತ್ತದೆ. ಪ್ಲೇಗ್ ವ್ಯಾಧಿಯು ಪ್ರಾಪ್ತವಾದಾಗ ಅದರಿಂದ ತಪ್ಪಿಸಿಕೊಳ್ಳುವ ಉಪಾಯಗಳೇನೆಂದರೆ—ಊರನ್ನು ಬಿಡುವುದು. ವ್ಯಾಧಿಯು ಇಲಿಗಳಲ್ಲಿ ಕಾಣಿಸಿದಾಗಲೇ ಜನರು ಮನೆಗಳನ್ನು ಬಿಟ್ಟು ಸ್ವಲ್ಪ ಊರ ಹೊರಗೆ ಗುಡಿಸಲುಗಳಲ್ಲಿ ವಾಸಮಾಡಬೇಕು. ಹಾಗೆ ಮನೆಗಳನ್ನು ಬಿಟ್ಟನಂತರ ಪುನಃ ಅವುಗಳನ್ನು 15-20 ದಿವಸಗಳ ವರಿಗೂ ಪ್ರವೇಶಿಸಕೂಡದು. ಏಕೆಂದರೆ ರೋಗದ ಚಿಗಟಗಳು ಆಹಾರಕ್ಕಾಗಿ ಮನೆಯೆಲ್ಲಾ ಹುಡುಕುತ್ತಿರುವವು. ಆ ಕಾಲದಲ್ಲಿ ಅಂಥಾ ಮನೆಯನ್ನು ಪ್ರವೇಶಿಸಿ ಕೂಡಲೇ ಹೊರಕ್ಕೆ ಬಂದಾಗ್ಯೂ ವ್ಯಾಧಿಯನ್ನು ತರಬಹುದು. ಆದರೆ ಪ್ರತಿಯೊಬ್ಬರೂ ಇದನ್ನು ಸಕಾಲದಲ್ಲಿ ಆಚರಣೆಗೆ ತರದೆ ಇರುವುದಕ್ಕೆ ನಾಲ್ಕು ಕಾರಣಗಳುಂಟು. ಅವು ಯಾವವೆಂದರೆ—(1) ಬಡತನ, (2) ಮಳೆಗಾಲ, (3) ಗುಡಿಸಲು ಕಟ್ಟುವುದಕ್ಕೆ ಅನುಕೂಲವಾದ ಪ್ರದೇಶ ಇಲ್ಲದೇ ಇರುವುದು, (4) ಒಂದೆರಡು ಸಂಸಾರದವರು ಮಾತ್ರ ಹೋಗಿ ಗುಡಿಸಲುಗಳಲ್ಲಿರಲು ಕಳ್ಳರ ಭಯ. ಇವೇ ಮೊದಲಾದ ಕಾರಣಗಳು ಅಡಚಣೆಯಾಗಿರುವವು. ಸರ್ವಪ್ರಯತ್ನದಿಂದಲೂ ಸಾಧ್ಯವಾದಷ್ಟು ಜಾಗ್ರತೆಯಾಗಿ ಮನೆಗಳನ್ನು ಬಿಡುವುದರಿಂದ ಎಷ್ಟೋ ಗುಣಉಂಟು.

ಪ್ಲೇಗ್ ಸಿಡುಬು ಹಾಕಿಸಿಕೊಳ್ಳುವುದು.—ಇದಕ್ಕೆ ಇಂಗ್ಲೀಷಿನಲ್ಲಿ ಇನಾಕ್ಯುಲೇಷನ್ ಅನ್ನುವರು. ಈ ಉಪಾಯದಿಂದ ನಮ್ಮ ದೇಹದ ಶಕ್ತಿಯನ್ನು ಹೆಚ್ಚಿಸಿ ಪ್ಲೇಗ್ ವ್ಯಾಧಿಯು ಬಾರದಂತೆಯೂ, ಬಂದರೆ ವಿಶೇಷವಾಗಿ ಹರಡದಂತೆಯೂ ಕಾಪಾಡುತ್ತದೆ. ಸಿಡುಬಿನ ಇನ್ನೊಂದು ಪ್ರಯೋಜನವೇನಂದರೆ, ಸಿಡುಬು ಹಾಕಿಸಿಕೊಂಡವರು ವ್ಯಾಧಿಗೆ ಸಾಧಾರಣವಾಗಿ ತುತ್ತಾಗುವುದಿಲ್ಲ. ಈ ಕಾರಣಗಳಿಂದ ಇತರ ಬಂಧುಬಳಗಗಳು ಇಷ್ಟರಲ್ಲಿಯೇ ಬರುವ ಸಂದರ್ಭವೂ ಕಡಮೆ. ಹೀಗೆ ವ್ಯಾಧಿಯು ಇತರ ಗ್ರಾಮಗಳಿಗೆ ಒಯ್ಯಲ್ಪಡುವ ಸಂದರ್ಭವೂ ಕಡಮೆ. ಇದೂ ಅಲ್ಲದೆ ಸಿಡುಬು ಹಾಕಿಸಿಕೊಂಡವರಿಗೆ ವ್ಯಾಧಿಯು ಬರುವುದಿಲ್ಲವೆಂಬ ಧೈರ್ಯವುಂಟಾಗುವುದು. ಈ ಕಾರಣದಿಂದ ಇವರು ಗ್ರಾಮಗಳನ್ನು ಬಿಟ್ಟು ಇತರ ಸ್ಥಳಗಳಿಗೂ ಹೋಗಬೇಕಾಗುವುದಿಲ್ಲ. ಇದರಿಂದ ವ್ಯಾಧಿಯು ಇತರ ಸ್ಥಳಗಳಿಗೂ ಹರಡುವುದಿಲ್ಲ. ಪ್ಲೇಗ್ ಸಿಡುಬಿನ ವಿಷಯವಾಗಿ ನನ್ನ ಅನುಭವವನ್ನು ಅರಿಕೆ ಮಾಡಿ ಇರುತ್ತೇನೆ. ಇದರಲ್ಲಿ ಈ ವ್ಯಾಧಿಯ ಸಂರಕ್ಷಣಾಶಕ್ತಿಯು ಬಹಳ ಮಟ್ಟಿಗಿರುತ್ತದೆಂಬ ನಂಬಿಕೆಯನ್ನು ತಮ್ಮಲ್ಲಿ ಉಂಟುಮಾಡುತ್ತೇನೆಂಬುದಾಗಿ ದೃಢಳಾಗಿರುತ್ತೇನೆ. ಪ್ರಜೆಗಳು ಸಕಾಲದಲ್ಲಿ ಸಿಡುಬು ಹಾಕಿಸಿಕೊಂಡು ಅದರ ಪ್ರಯೋಜನವನ್ನು ಪಡೆಯುವುದಲ್ಲದೆ ತಮ್ಮ ಸಮೀಪದಲ್ಲಿರುವ ಬಂಧುಬಳಗಗಳಿಗೂ, ನೆರೆಹೊರೆಯವರಿಗೂ, ದೂರದಲ್ಲಿರುವ ಸ್ನೇಹಿತರುಗಳಿಗೂ ಸಿಡುಬನ್ನು ಹಾಕಿಸಿಕೊಳ್ಳುವಂತೆ ಪ್ರೋತ್ಸಾಹಿಸಿ ಪ್ರಾಣದಾನವನ್ನು ಮಾಡುತ್ತೀರಿ ಎಂಬುದಾಗಿ ಹೇಳಿ ಈ ಸಣ್ಣ ಉಪನ್ಯಾಸವನ್ನು ಇಲ್ಲಿಗೆ ಮುಗಿಸಿರುತ್ತೇನೆ. ಎಂ. ಕೆ.

ಮೈಸೂರು ನ್ಯಾಯವಿಧಾಯಕ ಕೌನ್ಸಿಲ್ ಮೀಟಿಂಗು.

ಕಳೆದ ಸನವಾರ ಮಧ್ಯಾಹ್ನ ಬೆಂಗಳೂರು ಪಬ್ಲಿಕ್ ಆಫೀಸ್ ಕಟ್ಟಡದ ಕೌನ್ಸಿಲ್ ಮಂದಿರದಲ್ಲಿ ಮೈಸೂರು ನ್ಯಾಯವಿಧಾಯಕ ಸಭೆಯ ಮೆಂಬರುಗಳು ಸೇರಿ ಮೀಟಿಂಗ್ ನಡಿಸಿದರು. ಶ್ರೀಮನ್ ಯುವರಾಜರವರು ದಯಮಾಡಿದ್ದರು. ಸಭೆಯು ಪ್ರಾರಂಭವಾದ ಕೂಡಲೆ ದಿವಾನ್ ಮ|| ಎಂ. ವಿ. ವಿಶ್ವೇಶ್ವರಯ್ಯನವರು ಮೆಂಬರುಗಳನ್ನು ಕುರಿತು ಅಪ್ಪಣೆಕೊಡಿಸಿದ ಮುಖ್ಯಾಭಿಪ್ರಾಯಗಳೇನೆಂದರೆ—

ಯೂರೋಪ್ ಖಂಡದಲ್ಲಿ ಯುದ್ಧ ಹುಟ್ಟಿದ ಮೇಲೆ ನಾವು ಸಭೆ ಸೇರಿದ್ದು ಇದೇ ಮೊದಲು. ಈ ಸಂದರ್ಭದಲ್ಲಿ ಶ್ರೀಮನ್ ಮಹಾರಾಜರವರ ಪರಿಪಾಲನೆಗೆ ಸೇರಿರುವ ಸಮಸ್ತ ಪ್ರಜೆಗಳ ರಾಜಭಕ್ತಿ ಪ್ರೀತಿಗಳನ್ನು ನಾವು ಪ್ರಕಾಶಮಾಡಬೇಕೆಂದು ನಮ್ಮಗಳೆಲ್ಲರ ಅಭಿಮತವೂ ಕುತೂಹಲವೂ ಆಗಿರುತ್ತದೆ. ಯುದ್ಧದ ದೆಸೆಯಿಂದ ಇತರ ಕಡೆಗಳಲ್ಲಿ ಹಾಗೋ ನಮ್ಮ ಸೀಮೆಯಲ್ಲಿ ಹಾಗೇ ಕಷ್ಟಗಳುಂಟಾಗಿರುತ್ತವೆ. ಆಮದುರಫ್ತು ಕಡಮೆಯಾಗಿದೆ, ದಿನಸಿಗಳ ಧಾರಣೆ ಹೆಚ್ಚಿದೆ, ಹಣವು ಸ್ವಲ್ಪ ಮಟ್ಟಿಗೆ ಕಡಮೆಯಾಗಿದೆ, ವ್ಯಾಪಾರವು ನಿಧಾನಕ್ಕೆ ಬಿದ್ದಿದೆ. ಆದರೆ ಯುದ್ಧದ ವಿಚಾರವನ್ನೂ ಬ್ರಿಟಿಷ್ ಚಕ್ರಾಧಿಪತ್ಯದಲ್ಲೆಲ್ಲಾ ಕಷ್ಟನಷ್ಟಗಳನ್ನು ಅನುಭವಿಸಬೇಕಾಗಿರುವುದನ್ನೂ ನೋಡಿದರೆ ಮೇಲ್ಕಂಡ ಅನನುಕೂಲಗಳು ಪರಿಗಣಿಸಲಾರವು. ಯುದ್ಧವನ್ನು ಮುಂದರಿಸುವುದಕ್ಕೂ ಸಮಾಧಾನವನ್ನು ಕಾಪಾಡಿಕೊಂಡು ಬರುವುದಕ್ಕೂ ನಮ್ಮ ಶ್ರೀಮನ್ ಮಹಾರಾಜರವರು ಸೈನ್ಯವನ್ನೂ ಧನವನ್ನೂ ಒದಗಿಸಿರುತ್ತಾರೆ. ಅವರ ಈ ಸಹಾಯವು ಅಲ್ಪಮಾತ್ರವಾಗಿದ್ದಾಗ್ಯೂ ಅದು ಒಂದು ಅಂಶವೆನ್ನುವುದಾಗಿ ಹೇಳಬಹುದು. ನಮ್ಮ ಮಹಾರಾಜರವರ ಸೈನಿಕರಿಗೆ ಚಕ್ರವರ್ತಿಯವರ ಸೈನ್ಯದ ಕೂಡ ಕಲೆತು ಶತ್ರುಗಳ ಮೇಲೆ ಯುದ್ಧಮಾಡುವಂಥಾ ಅವಕಾಶವನ್ನು ಕಲ್ಪಿಸಿಕೊಟ್ಟದ್ದಕ್ಕಾಗಿ ನಾವುಗಳು ತುಂಬಾ ಕೃತಜ್ಞರಾಗಿರುತ್ತೇವೆ. ನಮ್ಮ ಸಂಸ್ಥಾನದ ಪ್ರಜೆಗಳು ಯುದ್ಧ ಸಮಾಚಾರಗಳನ್ನು ತಿಳಿಯಬೇಕೆಂದು ಅತ್ಯಂತ ಕುತೂಹಲವನ್ನಿ

...ವನ್ನು ನಡಸುತ್ತಿದಾರೆ. ಒಟ್ಟೋಬರ ವರ್ತಮಾನ ಪತ್ರಿಕೆಗಳ ಪ್ರಚಾರವು ಕಾರಣವಾಗಿ ಹೆಚ್ಚುತ್ತಿರುವುದೇ ಇದಕ್ಕೆ ದೃಷ್ಟಾಂತವಾಗಿದೆ. ಟರ್ಕಿಯ ವಿಷಯವಾಗಿ ನಾನಾಬಗೆಯಾಗಿಯೂ ನಮ್ಮ ಸಂಸ್ಥಾನದ ಮುಸಲ್ಮಾನ್ ಪ್ರಜೆಗಳು ಪ್ರತ್ಯೇಕವಾಗಿ ತಮಗಿರುವ ರಾಜಭಕ್ತಿ ವಿಶ್ವಾಸಗಳನ್ನು ಬಯಲಾಗಿ ಕಾಗದಗಳನ್ನೂ ತಂತೀವರ್ತಮಾನಗಳನ್ನೂ ಬರೆಯುತ್ತಿದಾರೆ. ...ಳಕ ಮ|| ಕೆ. ಪಿ. ಪುಟ್ಟಣ್ಣಚೆಟ್ಟಿಯವರೂ, ಮ|| ಎಂ. ವೆಂಕಟಕೃಷ್ಣಯ್ಯನವರೂ ಮೇಲ್ಕಂಡ ಅಭಿಪ್ರಾಯಗಳನ್ನೇ ಪುಷ್ಟೀಕರಿಸಿ ಭಾಷಣಗಳನ್ನು ಮಾಡಿದರು.

ಪ್ರಶ್ನೋತ್ತರಗಳು.

ಶ್ರೀರಂಗಪಟ್ಟಣದ ಮ|| ಬಿ. ನರಸಿಂಗರಾಯರು.

(1) ಚಿಕ್ಕಬಳ್ಳಾಪುರದ ಅಮುಲ್ದಾರ್ ಮ್ಯಾಜಿಸ್ಟ್ರೇಟರು ದಯಾಳ್ವಿ... ...ದ ಪೈದಿಗಳನ್ನು 7 ತಿಂಗಳು 20 ದಿನಗಳ ತನಕ ಲಾಕಪ್ಪಿನಲ್ಲಿ ಇಡಿಸಿದ್ದ ವಿಷಯದಲ್ಲಿ ಗವರ್ನ್‌ಮೆಂಟಿನವರು ಏನು ಮಾಡಿದರು ? ಉತ್ತರ.—ಆ ಮ್ಯಾಜಿಸ್ಟ್ರೇಟನ್ನು ತಕ್ಕ ಹಾಗೆ ಎಚ್ಚರಿಸಿದೆ.

(2) ಚಿಕ್ಕಮಗಳೂರು ಎಕ್ಸಿಕ್ಯೂಟಿವ್ ಇಂಜಿನಿಯರ್ ಮ|| ಬಾಪ್ಟಿ ಶ್ರೀನಿವಾಸರಾಯರು ತಮ್ಮ ತೋಟಕ್ಕೆ ಯಾರೋ ಬೆಂಕಿಹಾಕಿದರೆಂದು ಅರ್ಜಿ ಕೊಟ್ಟದ್ದರ ವಿಷಯ ... ಪೊಲೀಸಿನವರು ಅಲಕ್ಷ್ಯಮಾಡಿದಂತೆ ಪ್ರಕಟವಾಗಿದೆ. ಅವರು ಆಕ್ಷೇಪಣೆ ಮಾಡುವುದೆಲ್ಲಾ ನಿಜವೇ ? ಹಾಗಾದರೆ ಅಲಕ್ಷ್ಯಮಾಡಿದಂಥಾ ಅಧಿಕಾರಿಗಳ ವಿಷಯದಲ್ಲಿ ಗವರ್ನ್‌ಮೆಂಟಿನವರು ಏನು ಮಾಡಿದಾರೆ ? ಉತ್ತರ.—ಈ ವಿಚಾರ ...ಕ್ಕೆ ಸೇರಿದೆ ಮೊಕದ್ದಮೆ ಇನ್ನೂ ತನಿಖೆಯಲ್ಲಿದೆ, ಇತ್ಯರ್ಥವಾಗಿಲ್ಲ. ಫಿರ್ಯಾದಿ ಬಿ. ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ಹೋಗಿದೆ ಹೀಗಿರುವಲ್ಲಿ ಅರ್ಜಿಯಲ್ಲಿ ಕಂಡ ಸಂಗತಿಗಳನ್ನು ಯಥಾರ್ಥವಾದವುಗಳೆಂದು ಗವರ್ನ್‌ಮೆಂಟಿನವರು ಹೇಳಲಾಗುವುದಿಲ್ಲ.

ಬಿ. ಹಫೀಜ್ ಅಬ್ದುಲ್ ಹಕೀಮ್ ರವರು.

(1) ಸಣ್ಣ ವಯಸ್ಸಿನವರು ಬೀಡಿ ಸೇದುವುದು ಹೆಚ್ಚುತ್ತಾ ಇದೆ ಇದನ್ನು ತಪ್ಪಿಸುವದಕ್ಕೆ ಜಾರಿಗೆ ತಂದಿರುವ ಕಾನೂನನ್ನು ಸರಿಯಾಗಿ ರೂಢಿಸುತ್ತಿದಾರೆಯೋ ? ಇಲ್ಲವಾ, ಕಾನೂನನ್ನು ಬದಲಾಯಿಸಿ ಇನ್ನೂ ಕಠಿಣವಾಗಿ ಮಾಡಬೇಕೇ ? ಉತ್ತರ.—1913 ನೇ ಜೂನ್ ಅಂತ್ಯಕ್ಕೆ ಮುಗಿದ ಸಾಲಿನಲ್ಲಿ 40 ಮಂದಿಯ ಮೇಲೆ ಪ್ರಕರಣ ಮಾಡಿದಾರೆ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್ ಟವುನ್‌ಗಳಲ್ಲೂ, ...ರ್ ಚಿಕ್ಕದ ಗಳಲ್ಲೂ ಈ ಕಾನೂನನ್ನು ಜಾರಿಗೆ ತಂದಿದೆ. ಕಾನೂನ್ ಬದಲಾಯಿಸುವುದೂ ಬೇಕಾಗಿಲ್ಲ.

ಶಿವಮೊಗ್ಗದ ಮ|| ಎಸ್. ಆರ್. ಬಾಲಕೃಷ್ಣರಾಯರು.

(1) ಶಿವಮೊಗ್ಗಾ ಮುನ್ಸಿಫ್ ಕೋರ್ಟಿನಲ್ಲಿ ವೆಂಕಟರಾವ್ • ವಿಶ್ವನಾಥ ಶಾಸ್ತ್ರಿ ಎಂಬ ವಕೀಲರ ಮೊಯಲ್ಲಿ ಜಡ್ಜಿಯವರು ಬರೆದ ಅಭಿಪ್ರಾಯ ಸರಿಯೋ ? ಉತ್ತರ.—ಕಕ್ಷಿಗಳ ವರ್ತನೆಯನ್ನು ಕಾಪಾಡುವುದಕ್ಕೆ ಗವರ್ನ್‌ಮೆಂಟಿನವರು ತಕ್ಕ ಹುಕುಂ ಕೊಟ್ಟದಾರೆ

(2) ಮೈಸೂರಿನಲ್ಲಿ ನಡೆದ ಜುಡಿಷಲ್ ಕಾನ್ಫರೆನ್ಸಿನ ತೀರ್ಮಾನಗಳು ಏನಾದವು ? ಉತ್ತರ ಅವು ಗವರ್ನ್‌ಮೆಂಟಿನವರ ಪರ್ಯಾಲೋಚನೆಯಲ್ಲಿರುತ್ತವೆ.

ಚಿತ್ರದುರ್ಗದ ಮ|| ಬಿ. ವೆಂಕಟರಾಮಣ್ಣನವರು

(1) ಚಿತ್ರದುರ್ಗದ ಟೌನ್ ನೀರಿನ ಏರ್ಪಾಡು ಎಲ್ಲಿಗೆ ಬಂದಿದೆ ? ನೀರು ಒದಗಿಸುವ ಕೆಲಸ ಯಾವಾಗ ಪ್ರಾರಂಭವಾಗುವುದು ? ಉತ್ತರ.—18,500 ರೂಪಾಯಿನ ಕಾಮಗಾರಿ ಪಟ್ಟಿಯನ್ನು ಗವರ್ನ್‌ಮೆಂಟಿನವರು ಸ್ಯಾಂಕ್ಷನ್ ಮಾಡಿದಾರೆ ಅಲ್ಲಿಗೆ ನೀರು ಒದಗಿಸುವ ವಿಚಾರ ಸ್ವಲ್ಪ ಕಷ್ಟವಾಗಿದೆ. ಇದನ್ನು ತನಿಖೆ ಮಾಡಿಸುತ್ತಿದಾರೆ.

(3) ಬಲಾತ್ಕಾರದ ವಿದ್ಯಾಭ್ಯಾಸವು ಈಗ ಎಲ್ಲೆಲ್ಲಿ ಜಾರಿಗೆ ತರಲಾಗಿದೆ ? ಇತರ ಗೊತ್ತಾದ ಸ್ಥಳಗಳಿಗೆ ಜಾರಿಗೆ ತರುವುದಕ್ಕೆ ಇನ್ನೂ ಎಷ್ಟು ಕಾಲವಾಗುವುದು ? ಉತ್ತರ.—ಈ ಏರ್ಪಾಡು ಬೆಂಗಳೂರು, ಮೈಸೂರು, ನಂಜನಗೂಡು, ಶ್ರೀರಂಗಪಟ್ಟಣ, ಈ ಸ್ಥಳಗಳಲ್ಲಿ ಜಾರಿಗೆ ಬಂದು ನಡೆಯುತ್ತಾ ಇದೆ. ಗೊತ್ತಾದ ಇತರ ಕಡೆಗಳಲ್ಲೂ ಏಪ್ರಿಲ್ ಒಳಗಾಗಿ ಜಾರಿಗೆ ತರಲ್ಪಡುವುದು.

ಬೆಂಗಳೂರು ಮ|| ಪಿ. ಕೆ. ಗರುಡಾಚಾರ್ಯರು.

(1) ಪ್ರಜಾಪ್ರತಿನಿಧಿಸಭೆಯವರಾಗಲಿ, ಒಂದು ಸಂಘದವರಿಗಾಗಲಿ ಉಪಕಾರವಾಗಲೆಂದು ಧರ್ಮಾರ್ಥವು ಪರೋಪಕಾರ ಕಾರ್ಯಗಳನ್ನುಮಾಡಿ ದ್ರವ್ಯಸಹಾಯಮಾಡಿದ್ದರೆ ಸರ್ಕಾರದವರು ಅವುಗಳನ್ನು ಕಾಪಾಡಿ ನಡಸಿಕೊಂಡು ಬರುವುದಕ್ಕೆ ತೃಪ್ತಿಕರವಾದ ಏರ್ಪಾಡು ಮಾಡಿದಾರೆಯೋ ? ಉತ್ತರ.—ಸಿವಿಲ್ ಪ್ರೊಸೀಜರ್ ಕೋಡಿನಲ್ಲೂ, ಮುಜರಾಯಿ ರೆಗ್ಯುಲೇಷನ್ನಲ್ಲೂ ಅದಕ್ಕೆ ತಕ್ಕ ಏರ್ಪಾಡು ಮಾಡಲಾಗಿದೆ. ಕೆಲವು ಸಂದರ್ಭಗಳಲ್ಲಿ ಸರ್ಕಾರದವರು ಪ್ರವರ್ತಿಸಿ ಧರ್ಮಕಾರ್ಯಗಳನ್ನು ಕ್ರಮಪಡಿಸಿದಾರೆ.

(2) ಹಾಸನದ ಡೆಪ್ಯುಟಿ ಕಮಿಷನರ್ ರ ಆಫೀಸಿನಲ್ಲಿ ಎರಡು ತಿಂಗಳಿಂದ ನೌಕರರುಗಳಿಗೆ ಸಂಬಳ ಬಟವಾಡೆ ಆಗಿಲ್ಲವೇ ? ಹೀಗಾದರೆ ಬಡವರಿಗೆ ಜೀವನ ಕಷ್ಟವಾಗುವುದೆಂದೂ, ಬುದ್ಧಿಕರವಾಗಿಯೂ ನ್ಯಾಯವಾಗಿಯೂ ಸರ್ಕಾರದ ಕೆಲಸಗಳು ನಡೆಯುವುದಿಲ್ಲವೆಂದೂ ಗವರ್ನ್‌ಮೆಂಟಿನವರಿಗೆ ತಿಳಿಯದೇ ? ಆ ಡಿಸ್ಟ್ರಿಕ್ಟಿನಲ್ಲಿ ಬಹಳ ಕಾಲದಿಂದ ಹೀಗೆ ನಡೆಯುವುದೆಂದೂ, ಒಂದೊಂದು ವೇಳೆ 3-4 ತಿಂಗಳ ಸಂಬಳ ಬಟವಾಡೆ ಆಗದೆ ಇರುವುದೂ ಉಂಟೆಂದೂ ಹೇಳುತ್ತಾರೆ. ಹೀಗೆ ಎಷ್ಟು ದಿನಗಳಿಂದ ನಡೆದು ಬಂದಿದೆಯೋ, ಗವರ್ನ್‌ಮೆಂಟಿನವರು ಇದಕ್ಕೇನಾದರೂ ಪರಿಹಾರವನ್ನು ಕಲ್ಪಿಸಿದಾರೆಯೋ ದಯವಿಟ್ಟು ತಿಳಿಸಬೇಕು. ಉತ್ತರ.—ಆ ಆಫೀಸಿನಲ್ಲಿ ಬಟವಾಡೆ ಆಗುವುದು ಆ ರೀತಿ ತಡವಾಗುವುದೆಂದು ತಿಳಿಸಲು ವಿಷಾದಿಸುತ್ತೇವೆ ಸಂಬಳ ಕೇಳುವುದನ್ನು ಸರ್ಕಾರದವರು ನ್ಯಾಯವೆಂದು ಒಪ್ಪಿಕೊಳ್ಳುವರು. ಕೆಲವು ವರುಷಗಳಿಂದ ಆ ರೀತಿ ತಡವಾಗುತ್ತದೆ ಇನ್ನು ಮುಂದೆ ಹಾಗೆ ಆಗದಂತೆ ಸರ್ಕಾರದವರು ತಕ್ಕ ನಿಗಾ ಕೊಟ್ಟು ಏರ್ಪಾಡುಮಾಡಿದಾರೆ.

ಹಾಸನದ ಮ|| ಎಸ್. ವೆಂಕಟೇಶಯ್ಯನವರು

(1) ಆದಾಯದ ಮೇಲೆ ತೆರಿಗೆ (ಇನ್‌ಕಂ ಟ್ಯಾಕ್ಸ್) ಹಾಕಿದರೆ ಎಷ್ಟು ಉತ್ಪತ್ತಿಯಾಗುತ್ತೆಂದು ಅಂದಾಜಾ ಪಟ್ಟಿಗಳನ್ನು ತಯಾರ್ಮಾಡಿಸಿದಾರೆಯೋ ? ಆ ಕಾಗದ ಪತ್ರಗಳನ್ನು ನಾವು ನೋಡಬಹುದೇ ? ಉತ್ತರ.—ಈ ತೆರಿಗೆಯಿಂದ ಬ್ರಿಟಿಷ್ ಸೀಮೆಯಲ್ಲಿರುವ ದರಗಳಂತೆ ವಸೂಲ್ಮಾಡಿದರೆ ಸುಮಾರು 3 ಲಕ್ಷ ರೂಪಾಯಿ ಹುಟ್ಟುವಳಿ ಆಗಬಹುದೆಂದು ಕಾಣುವುದು ಕಾಗದ ಪತ್ರಗಳನ್ನು ತೋರಿಸಬೇಕಾದ ಅಗತ್ಯ ಕಾಣುವುದಿಲ್ಲ.

(2) ಲೋಕಲ್ ಸರ್ವಿಸ್ ಪರೀಕ್ಷೆಗಳಲ್ಲಿ ಈಚೆಗೆ ತೇರ್ಗಡೆಯಾಗುವವರ ಸಂಖ್ಯೆ ಕಡಮೆಯಲ್ಲವೇ ? ಸರ್ಕಾರಿ ನೌಕರರು ಪರೀಕ್ಷಕರಾಗಿದಾರೆಯೋ ? ಪರೀಕ್ಷಕರ ಪೈಕಿ ಗ್ರ್ಯಾಜುಯೇಟುಗಳಲ್ಲದವರು ಇದಾರೆಯೋ ? ಉತ್ತರ.—ಕೆಲವು ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದುವವರ ಸಂಖ್ಯೆ ಕಡಮೆಯಾಗಿರುವುದು ನಿಜ. ನೌಕರರು ಪರೀಕ್ಷಕರಾಗಿದಾರೆ. ಗ್ರ್ಯಾಜುಯೇಟುಗಳಲ್ಲದವರು ಯಾರೂ ಇಲ್ಲ.

ಬೆಂಗಳೂರು ಮ|| ಕಠಾರೀ ಕೃಷ್ಣಮೂರ್ತಿರಾಯರು.

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯಲ್ಲಿ ಶ್ಯಾನುಭೋಗ ರಂಗಪ್ಪ, ಅಬ್ದುಲ್ ಅಜೀಜ್ ಈ ಮೊದಲಾದ ನೌಕರರು ತಿಂದುಹಾಕಿದ ಹಣವನ್ನು ವಸೂಲ್ಮಾಡುವುದಕ್ಕೆ ಏನಾದರೂ ಏರ್ಪಾಡು ಆಗಿದೆಯೋ ? ಕಳೆದ ಹತ್ತು ಸಾಲುಗಳಲ್ಲಿ ಮ್ಯುನಿಸಿಪಲ್ ಹಣವನ್ನು ನೌಕರರು ತಿಂದುಹಾಕಿರುವುದು ಎಷ್ಟು ? ಉತ್ತರ.—ವಸೂಲ್ಮಾಡುವುದಕ್ಕೆ ಏರ್ಪಾಡು ಮಾಡಿದೆ. ಮುಂದೆ ಹಾಗೆ ಆಗದಂತೆ ನೋಡಿಕೊಳ್ಳಲು ಏರ್ಪಾಡುಮಾಡುತ್ತಿದೇವೆ ಕಳೆದ ಹತ್ತು ಸಾಲುಗಳಲ್ಲಿ ಸುಮಾರು 10,000 ರೂಪಾಯಿಗಳನ್ನು ಆ ಮ್ಯುನಿಸಿಪಾಲಿಟಿಯ ನೌಕರಮಾನೇರು ತಿಂದುಹಾಕಿರುವಂತೆ ವರ್ತಮಾನವಿದೆ.

ಕರೆಸ್‌ಪಾಂಡೆನ್ಸ್.

ದಿ ಪೀಪಲ್ಸ್ ಬ್ಯಾಂಕ್, ತೀರ್ಥಹಳ್ಳಿ.

ಅಯ್ಯಾ,—1914 ನೇ ನವಂಬರು 1 ನೇ ತಾ. ಜನರಲ್ ಮೀಟಿಂಗ್‌ನಲ್ಲಿ ಈ ಬ್ಯಾಂಕಿನ ಎರಡನೇ ವರ್ಷದ ಲಾಭನಷ್ಟದ ಫಲಿತಾಂಶದ ಇತ್ಯರ್ಥವನ್ನು ತಿಳಿಸಲು ಈ ಮೀಟಿಂಗು ನಡೆಯಿತು. ಸುಮಾರು 200 ಜನ ಮೆಂಬರುಗಳ ಪೈಕಿ 60 ಜನ ಮಾತ್ರ ಈ ಮೀಟಿಂಗಿನಲ್ಲಿ ಹಾಜರಾಗಿದ್ದರು ಕೆಲವು ಡೈರೆಕ್ಟರುಗಳ ಚುನಾವಣೆಯಾಯಿತು. ಗತ ಸಾಲಿನಲ್ಲಿ ಷೇರ್ ಹೋಲ್ಡರುಗಳಿಗೆ ಶೇಕಡಾ ವರುಷ ಒಂದಕ್ಕೆ 6 ರೂಪಾಯಿನಂತೆ ಬಡ್ಡಿ ಹಂಚಲ್ಪಟ್ಟಿತು. ಬ್ಯಾಂಕಿನ ಆಡಳಿತಗಳು, ಒಳ ಆಡಳಿತಗಳು ಸಹಾ ಈ ವರುಷವೂ ಸಾಮಾನ್ಯವಾಗಿ ಒಳ್ಳೇ ರೀತಿಯಲ್ಲಿ ನಡೆದಿದೆಯಾಗಿ ಜನಗಳಲ್ಲಿ ಪ್ರಶಂಸನೀಯವಾಗಿತ್ತು. ಆದರೆ ಬ್ಯಾಂಕಿನ ಉದ್ದೇಶ್ಯದ ಮೊದಲನೆ ಕಾಲಂನಲ್ಲಿ ಮಲೆನಾಡಿನ ಪ್ರಜೆಗಳಲ್ಲಿ ಬಡವರ ಸಹಾಯಾರ್ಥವಾಗಿ ಏರ್ಪಡಿಸಿದೆ ಎಂದು ಘಂಟಾಘೋಷವಾಗಿ ಹೇಳಿದೆ ಬ್ಯಾಂಕಿನವರು ಹೇಳುವಂತೆ ಚಾಲ್ತಿ ಇರುವ ಬಡ್ಡಿ ದರದಲ್ಲಿ ಹಾಗೂ ಕಂಡೀಷನ್ ರೂಲ್ಸಿನಿಂದಲೂ ಮತ್ತು ಹಾಲಿ ಸಾಲಗಳನ್ನು ಕೊಟ್ಟಿರುವ ರೀತಿಯಲ್ಲೂ ಸಹಾ ಬಡವರಿಗೆ ಯಾವ ಪ್ರಯೋಜನವೂ ಆಗಿಲ್ಲ; ಮುಂದೂ ಆಗುವಂತೆ ಇಲ್ಲ. ಹಾಗೆ ಪ್ರಯೋಜನವು ಆಗಬೇಕೆಂದು ಬ್ಯಾಂಕಿನವರು ಉದ್ದೇಶಪಟ್ಟರೆ ಸಾಲಗಳನ್ನು ಕೊಡತಕ್ಕದ್ದಕ್ಕೆ ಬಡ್ಡಿ ದರವನ್ನು ಕಡಮೆಮಾಡಿ, ಬಡ ಪ್ರಜೆಗಳಿಗೆ ಸಾಧ್ಯವಾದಷ್ಟು ಸಾಲಗಳನ್ನು ಕೊಟ್ಟು, ಅವರವರ ಕೆಲಸಕ್ಕೆ ಉತ್ತೇಜನ ಕೊಟ್ಟರೆ ಬಡವರಿಗೂ ಭಾಗ್ಯ, ಬ್ಯಾಂಕಿಗೂ ಶ್ರೇಯಸ್ಸೆಂದು ಒತ್ತಿ ಹೇಳಬಹುದು. ಈ ಭಾಗದಲ್ಲಿ ಇನ್ನು ಮುಂದೆಯಾದರೂ ಬ್ಯಾಂಕು ಬೋರ್ಡಿನವರು ಗಮನಕೊಟ್ಟು ಕ್ರಮಪಡಿಸುತ್ತಾರಾಗಿ ನಿರೀಕ್ಷಿಸಲ್ಪಟ್ಟಿದೆ.

ಕರೆಸ್ಪಾಂಡೆಂಟ್.

ಗ್ರಾಮವಾಸಿಗಳೂ, ಕನ್ನಡ ಪತ್ರಿಕೆಗಳೂ.

ಅಯ್ಯಾ,—ಗ್ರಾಮವಾಸಿಗಳೆಂದರೆ ಯಾರಿಗೆ ಆಹ್ಲಾದವಾಗದಿರುವುದು ? ಪಟ್ಟಣಿಗರೆಂದರೆ ಮಹಾ ಬುದ್ಧಿಶಾಲಿಗಳೆಂದು ತಿಳುಕೊಂಡು ಅನೇಕರು ಅಹಂಭಾವವನ್ನು ತೋರಿಸುವರು ಇದು ಒಂದು ಭಾಗ ನಿಜವೆಂದೇ ಊಹಿಸುತ್ತೇನೆ ಯಾಕೆಂದರೆ ಅನೇಕ ಗ್ರಾಮವಾಸಿಗಳು ಈ ಪ್ರಪಂಚದ ಯಾವದೊಂದು ಸಂಗತಿಯನ್ನೂ ತಿಳಿದವರಾಗಿಲ್ಲ; ಹಾಗೂ ವಿಶೇಷ ವಿದ್ಯಾವಂತರೂ ಆಗಿರುವದಿಲ್ಲ. ನಾಗರೀಕ ಕಾಲದ ನಡೆನುಡಿಗಳನ್ನು ಸ್ವಪ್ನದಲ್ಲಿ ಕೇಳಿದವರಲ್ಲ. ಇಂಥವರನ್ನು ಪಟ್ಟಣಿಗರು ನೋಡಿ ಮಾತನಾಡಿಸುವಲ್ಲಿ ಹಳ್ಳಿಯವರ ಒಡ್ಡು ನುಡಿಗೆ ಹೊಟ್ಟೆ ಗಡ್ಡೆಯು ನೋಯುವಂತೆ ನಗಾಡುವದಕ್ಕೆ ಉಪಕ್ರಮ ಮಾಡುವರು. ಅದಕ್ಕೂ ಹಳ್ಳಿಯವರು ಹೇಸುವದಿಲ್ಲ. ಹಾಗಾದರೂ ಪ್ರತಿಯೊಬ್ಬನೂ ನಾಗರಿಕನಾಗಬೇಕೆಂಬ ಉದ್ದೇಶದಿಂದ ನಮ್ಮನ್ನಾಳುವ ಮಹಾಸ್ವಾಮಿಯವರು ಪ್ರತಿ ಗ್ರಾಮದಲ್ಲೂ ಸ್ಕೂಲು, ರೀಡಿಂಗ್ ರೂಮ್ ಮೊದಲಾದುವನ್ನು ಸ್ಥಾಪಿಸಿ ಒಡ್ಡು ಹಳ್ಳಿಯವರನ್ನು ದೊಡ್ಡ ದಾರಿಗೆ ತರಲು ಮಹಾ ಪ್ರಯತ್ನ ಮಾಡುತ್ತಿರುವರು. ಅದಕ್ಕೂ ಗ್ರಾಮಿಕರು ತಕ್ಕ ಅನುಕೂಲಗಳನ್ನು ಮಾಡಿಕೊಳ್ಳುವದಿಲ್ಲ. ಪ್ರತಿ ವಿಷಯಕ್ಕೂ ಮಾತು ಮುಚ್ಚಿ, ಮಾತಾಡುವದಕ್ಕೆ ಬಾರದವರೆಷ್ಟು ಜನರಿದಾರೆ? ಮಾತು ಬರುವದಿಲ್ಲವೆಂದು ನನ್ನ ಅಭಿಪ್ರಾಯವಲ್ಲ. ಶುದ್ಧ ಭಾಷೆಯೇ ತಿಳಿಯದು. ಇದನ್ನು ಹೋಗಲಾಡಿಸಿಕೊಳ್ಳುವದಕ್ಕೆ ಆಯಾ ಭಾಷೆಯ ವಾರ, ಪಕ್ಷ, ಮಾಸ ಪತ್ರಿಕೆಗಳೆಷ್ಟು ಹೊರಡುತ್ತಿವೆ ? ಅವುಗಳಿಗೆ ಯತ್ಕಿಂಚಿತ್ ಹಣದ ಸಹಾಯ ಸಿಗರೇಟ್ ಬೀಡಿಗಳ ವೆಚ್ಚದಲ್ಲಿ ಒಂದು ಭಾಗ ವ್ಯಯಮಾಡಿ ನಾಗರಿಕ ದೇಶದ ಸುವಾರ್ತೆಯನ್ನು ಸಂಗ್ರಹಿಸುವುದು ಯೋಗ್ಯವಲ್ಲವೇ ? ಆದುದರಿಂದ ಭಾಷಾಭ್ಯಾಸಮಾಡಲು ಪತ್ರಿಕೆಗಳೇ ಮುಖ್ಯ ಕಾರಣವಾದುದರಿಂದ ಪ್ರತಿಯೊಬ್ಬನೂ ಕನ್ನಡ ಪತ್ರಿಕೆಗಳನ್ನು ತರಿಸಿ ಓದುವದು ಮುಖ್ಯವೆಂದು ನನ್ನ ಅಭಿಪ್ರಾಯವಾಗಿರುತ್ತೆ. ಇನ್ನು ನೀವು ಮೊದಲಿನಂತೆ ಮಾತಾಡಲು ಇಚ್ಛೆ ಇರುವ ಭಾಗ ಅದರಂತೆಯೇ ಮಾಡಬಹುದು. ಇಂತು ನಿಮ್ಮ ಮಿತ್ರ

ಎಚ್. ವಿ. ಕೆ.

ತೀರ್ಥಹಳ್ಳಿ ತಾಲೂಕು ಆರಗ ಅಗ್ರಹಾರ ಸ್ಕೂಲು.

ಅಯ್ಯಾ,—ತಮ್ಮ ತಾ. 12 ನೇ ಪತ್ರಿಕೆಯಲ್ಲಿ ಯಾರೋ ಈ ಸ್ಕೂಲ್ ವಿಷಯವಾಗಿ ಬರೆದ ವಾರ್ತೆಯನ್ನು ಓದಿ ನೋಡಿದೆನು ಈ ಸ್ಕೂಲ್ ಸ್ಥಿತಿ ಮತ್ತು ಮಾಸ್ಟರುಗಳ ನಡತೆಯನ್ನು ಚೆನ್ನಾಗಿ ಪರಿಶೀಲನೆ ಮಾಡದೆ ಆಧಾರವಿರದ ಇಲ್ಲದ ಬರವಣಿಗೆಯನ್ನು ಉಪಯೋಗಿಸಿದಾರೆ. ನಾನು ಮತ್ತೂ ಈ ಗ್ರಾಮದ ನಿವಾಸಿಗಳು ಸಹಾ ವಿಷಾದಪಡುತ್ತೇವೆ ಈ ಸ್ಕೂಲಿನ ಹೆಡ್ ಮಾಸ್ಟರು ಮತ್ತು ಅಸಿ. ಮಾಸ್ಟರು ಸಹಾ ಬಾಲಕರಿಗೆ ವಿದ್ಯಾಭ್ಯಾಸವನ್ನು ಯಾವ ತೊಂದರೆಯೂ ಇಲ್ಲದಂತೆ ಚೆನ್ನಾಗಿ ನಡಸುತ್ತಾ ಇರುವವಲ್ಲದೆ ಈ ಸ್ಕೂಲಿನಲ್ಲಿ ಬಾಲಕರಿಗೆ ಕಿಂಡರ್‌ಗಾರ್ಟನ್ ಪದ್ಧತಿ ಮೇರೆಗೆ ಆಟ ಪಾಠಗಳಿಗೆ ಅನುಕೂಲವಾಗುವಂತೆ ಸ್ಕೂಲಿನ ಮುಂಭಾಗದ ಕಾಂಪೌಂಡಿನಲ್ಲಿ ಮನೋಹರವಾದ ಕೈ ತೋಟವನ್ನು ರಚಿಸಿ ವಿದ್ಯಾಭ್ಯಾಸವನ್ನು ಬಹಳ ಮಟ್ಟಿಗೆ ಅಭಿವೃದ್ಧಿಗೆ ತಂದು ತುಂಬಾ ಶ್ರದ್ಧೆಯಿಂದ ಕೆಲಸ ಮಾಡುತ್ತಾ ಇರುವವಲ್ಲದೆ ಗ್ರಾಮನಿವಾಸಿಗಳ ಉಪಯೋಗಕ್ಕಾಗಿ ನಮ್ಮ ತಾಲೂಕ್ ಅಮುಲ್ದಾರ್ ಮ|| ಎಸ್. ಧರ್ಮರಾಯರವರು ಹೊಸದಾಗಿ ನಿರ್ಮಿಸಿದ ರೀಡಿಂಗ್ ರೂಮ್ ಅಭಿವೃದ್ಧಿಗೆ ತರುವದಕ್ಕೆ ಹೆಡ್ ಮಾಸ್ಟರು ಬದ್ಧಕಂಕಣರಾಗಿ ಗ್ರಾಮಸ್ಥರ ಅನುರಾಗಕ್ಕೂ ಪಾತ್ರರಾಗಿದಾರೆ ಅಲ್ಲದೆ ಆರಗ ಅಗ್ರಹಾರವೂ ಸೇರಿ ಯೂನಿಯನ್ ಆಗಿರುವ ಕಾರಣ ಆಗಾಗ್ಗೆ ಅಧಿಕಾರಿಗಳು ಈ ಊರಿಗೆ ಬಂದು ಸ್ಕೂಲ್ ಆಜಮಾಯಿಸಿ ಮಾಡಿ ಒಳ್ಳೇ ಅಭಿಪ್ರಾಯ ಪಟ್ಟಿರುವರು. ಈ ಸ್ಕೂಲ್ ಮೇಲ್ಪಟ್ಟ ಆಫೀಸರುಗಳೂ ಕೂಡ ಈ ಭಾಗದಲ್ಲಿ ಸದಭಿಪ್ರಾಯವನ್ನು ಪಟ್ಟಿರುತ್ತಾರೆ. ಈ ಸ್ಕೂಲ್ ಮಾಸ್ಟರುಗಳು ವಾರ್ತಾದಾರರು ಹೇಳುವಂತೆ ಸ್ಕೂಲಿನಲ್ಲಿ ಓದುವ ಬಾಲಕರಿಗೆ ನಾನಾವಿಧವಾಗಿ ಕಷ್ಟವನ್ನುಂಟುಮಾಡುತ್ತಾ ಇರುತ್ತಿದ್ದರೆ ಈ ವಿಷಯವನ್ನು ಮೇಲ್ಪಟ್ಟ ಅಧಿಕಾರಿಗಳಿಗೆ ಅರಿಕೆ ಮಾಡಿಕೊಳ್ಳುವದಕ್ಕೆ ಈ ಗ್ರಾಮ ನಿವಾಸಿಗಳು ಹಿಂಜರಿಯತಕ್ಕವರಲ್ಲವೆಂತಲೂ, ಈ ಭಾಗದಲ್ಲಿ ತಕ್ಕ ಮಟ್ಟಿಗೆ ನಾಗರೀಕರಾಗಿದಾರೆಂತಲೂ ದೃಢವಾಗಿ ನಂಬುತ್ತೇನೆ

ವಿದ್ಯಾಭಿಮಾನಿ.

ಆಕ್ಷೇಪಣೆಗೆ ಜವಾಬು.

ಅಯ್ಯಾ,—ಬೆಂಗಳೂರ್ ತಾಲ್ಲೂಕ್ ಯಲಹಂಕದಲ್ಲಿ ಮತ್ತು ಆಸ್ ಪಾಸ್ ಗ್ರಾಮಗಳಲ್ಲಿರುವ ಶಿಷ್ಟ ದೊಡ್ಡ ಮನುಷ್ಯರೂ ಸೇರಿ ನಡಿಸಿದ ಪ್ರೊಸೀಡಿಂಗ್ಸು—ಈ ಮೀಟಿಂಗಿಗೆ ಛೇರ್‌ಮನ್ ಆಗಲು ಮ|| ಜಮೀನ್‌ದಾರ್ ಮತ್ತು ತಾಲ್ಲೂಕ್ ಬೋರ್ಡ್ ಮೆಂಬರ್ ನಾರಣಪ್ಪನವರನ್ನು ಎಲ್ಲರೂ ಅಭಿಪ್ರಾಯಪಟ್ಟ ಮೇರಿಗೆ ಸಭೆಯವರು ಸಭೆಯನ್ನಲಂಕರಿಸಿ, ಹೇಳಿದ್ದೇನೆಂದರೆ—ಇದೇ ಮಾಹೆ 12 ನೇ ತಾ ಮೈಸೂರ್ "ವೃತ್ತಾಂತ ಪತ್ರಿಕೆ" ಯಲ್ಲಿ "ಇಲ್ಲಿನ ಕೆಲವು ಜನ ಮಹಮ್ಮದೀಯರು ಈಗ ನಡೆಯುತ್ತಿರುವ ನಮ್ಮ ಬ್ರಿಟಿಷ್ ಸಾರ್ವಭೌಮರವರ ಯುದ್ಧದ ವಿಷಯವಾಗಿ ಅವರನ್ನು ಬಹಳವಾಗಿ ದೂಷಣೆಮಾಡಿ ಇಲ್ಲಿನ ಮತ್ತು ಸುತ್ತುಮುತ್ತು ಗ್ರಾಮದ ರೈತರಿಗೆ ತುಂಬಾ ವಿಷಾದವನ್ನೂ ಭಯವನ್ನೂ ಉಂಟುಮಾಡುತ್ತಿದಾರೆ" ಎಂದು ನಮೂದಿಸುತ್ತೆ. ಇದು ಶುದ್ಧ ಸುಳ್ಳಾಗಿರುತ್ತೆ. ಇದನ್ನು ಗಣನೆಗೆ ಬಾರದ ವಿವೇಕಹೀನನಾದವನಿಂದ ಈ ವಾರ್ತೆ ತಿಳಿಸಿರುವದಾಗಿ ತೋರುತ್ತೆ. ನಮ್ಮ ಗ್ರಾಮದ ಮುಸಲ್ಮಾನರ ವಿಷಯದಲ್ಲಿ ಈ ರೀತಿ ಅನ್ಯಾಯವಾದ ದೂಷಣೆಮಾಡಿದ್ದಕ್ಕೆ ನಾವುಗಳೆಲ್ಲರೂ ವಿಷಾದಿಸುತ್ತೇವೆ. ಈ ಅಂಶವನ್ನು ಈ ಮೂಲಕ ಎಲ್ಲರಿಗೂ ತಿಳಿಯಪಡಿಸುವ ಉದ್ದೇಶ್ಯ ಸದರಿ ಪತ್ರಿಕೆಯಲ್ಲಿ ಪ್ರಾಯಶ್ ಮಾಡಲು ಇದರ ಕಾಪಿಯನ್ನು ಕಳುಹಿಸಬೇಕೆಂದು ಹಾಜರಿದ್ದ ಎಲ್ಲಾ ಜನಗಳ ಅಭಿಪ್ರಾಯದಂತೆ ತೀರ್ಮಾನಿಸಲಾಯಿತು.

ನಾರಣಪ್ಪ, ಛೇರ್ಮನ್.

ಬೆಂಗಳೂರ್ ತಾಲ್ಲೂಕು ಯಲಹಂಕ ಗ್ರಾಮದ ವಾಸಸ್ಥರಾದ ಮುಸಲ್ಮಾನ್ ಜನಗಳು ತಾ. 14 ರಲ್ಲಿ ಸಭೆ ಸೇರಿ ನಡಿಸಿದ ಪ್ರೊಸೀಡಿಂಗ್ಸು:—ಹಜರತ್ ಫಕ್ರುಲ್ಲಾಬೇಗ್ ಸಾಹೇಬರವರು ಈ ಗ್ರಾಮದಲ್ಲಿ ಜನಗಳ ಅನುರಾಗಕ್ಕೆ ಪಾತ್ರರಾಗಿಯೂ, ಭಾರೀ ಕಂದಾಯದಾರರಾಗಿಯೂ ಇರುವ ಹಜರತ್ ಮಹಮ್ಮದ್ ಟೀಪೂ ಸಾಹೇಬರವರು ಈ ಸಭೆಗೆ ಅಧ್ಯಕ್ಷರಾಗಿ ಚುನಾಯಿಸಲ್ಪಡಬೇಕೆಂದು ಪ್ರಾರ್ಥಿಸಿದ್ದನ್ನು ಎಲ್ಲರೂ ಅನುಮೋದಿಸಿದರು. ಬೆಲ್ಜಿಯಂ ರಾಜ್ಯಕ್ಕೆ ಬ್ರಿಟಿಷ್ ಸಾರ್ವಭೌಮರವರು ಕೊಟ್ಟ ಮಾತನ್ನು ನಡಿಸಿಕೊಡುವುದಕ್ಕಾಗಿ ಈ ಯುದ್ಧದಲ್ಲಿ ಪ್ರವೇಶಮಾಡಿರುತ್ತಾರೆ. ತುರ್ಕಿ ರಾಜ್ಯವು ಹಾಲಿ ಇವರಿಗೆ ವಿರೋಧವಾಗಿ ಸದರಿ ಯುದ್ಧದಲ್ಲಿ ಯುಕ್ತವಿಲ್ಲದೆ ಸೇರಿ ತುರ್ಕಿ ಸುಲ್ತಾನರು ಮತ್ತು ಅನನುಭವಶಾಲಿಗಳಾದ ದೊಡ್ಡ ಮನುಷ್ಯರೂ ಮತ್ತು ಎಲ್ಲಾ ದೇಶಗಳಲ್ಲಿರುವ ಮುಸಲ್ಮಾನ್ ಜನಗಳ ಅಭಿಪ್ರಾಯಕ್ಕೆ ವಿರೋಧವಾಗಿ ಕೆಲವು ಟರ್ಕಿಷ್ ಅನುಭವಶಾಲಿಗಳಲ್ಲದ ಪೂರ್ವವಯಸ್ಸಿನವರು ಜರ್ಮನಿಯರ ದುಬೋಧನೆಗೆ ಒಳಪಟ್ಟು ನ್ಯಾಯವಿಲ್ಲದೆ ಇರುವ ಕಡೆಯಲ್ಲಿ ಪಕ್ಷಪಾತಿಸಿ ಈ ಯುದ್ಧದಲ್ಲಿ ಸೇರಿರುತ್ತಾರೆಂದು ಕೇಳಿ ನಾವುಗಳೆಲ್ಲರೂ ವಿಷಾದಪಡಬೇಕಾಗಿರುತ್ತೆ. ಇದು ನ್ಯಾಯವಿರುದ್ಧವಾದ ವ್ಯಾಜ್ಯವಾದದ್ದರಿಂದಲೂ, ನಾವು ಬ್ರಿಟಿಷ್ ಸಾರ್ವಭೌಮರವರ ಸಂರಕ್ಷಣೆಯಲ್ಲಿರುವ ನಮ್ಮ ಶ್ರೀಮನ್ಮಹಾರಾಜರವರ ರಾಜ್ಯಭಾರದಲ್ಲಿ ಸೌಖ್ಯವಾಗಿರುವದರಿಂದಲೂ ಯಾವಾಗ್ಯೂ ಬ್ರಿಟಿಷ್ ರಾಜ್ಯದ ಅಭಿವೃದ್ಧಿ ವಿಷಯದಲ್ಲಿ ನಮ್ಮ ದೇಹದಿಂದಲೂ, ದ್ರವ್ಯದಿಂದಲೂ ತಕ್ಕ ಸಹಾಯ ಮಾಡುವದು ಮತ್ತು ರಾಜ್ಯದ ಅಭಿವೃದ್ಧಿ ವಿಷಯದಲ್ಲಿ ದೇವರಲ್ಲಿ ಯಾವಾಗಲೂ ಪ್ರಾರ್ಥನೆ ಮಾಡಬೇಕೆಂದು ಸಭಾಧ್ಯಕ್ಷರು ಹೇಳಿದ್ದನ್ನು ಎಲ್ಲರೂ ಅನುಮೋದಿಸಿದರು. ಇದೇ ಮಾಹೆ 12 ನೇ ತಾ. ಮೈಸೂರ್ "ವೃತ್ತಾಂತ ಪತ್ರಿಕೆ" ಯಲ್ಲಿ ಯಾರೋ ಗಣನೆಗೆ ಬಾರದ ವಿಚಾರವಿಹೀನನಾದವನೊಬ್ಬನು ಇಲ್ಲಿನ ಮುಸಲ್ಮಾನ್ ಜನಗಳು ಈ ಬ್ರಿಟಿಷ್ ಸಾರ್ವಭೌಮರವರ ಯುದ್ಧದ ವಿಷಯದಲ್ಲಿ ಅವರನ್ನು ಬಹಳವಾಗಿ ದೂಷಣೆ ಮಾಡುತ್ತಿದಾರೆಂದು ಬರೆದಿರುವದು ನೋಡಿ ನಮಗೆ ಬಹಳ ವ್ಯಸನಕ್ಕೆ ಕಾರಣವಾಗಿದೆ. ಆದರೂ ಈ ಕೃತ್ಯಕ್ಕೆ ನಮ್ಮ ಮುಸಲ್ಮಾನ್ ಜನಗಳಲ್ಲಿ ಯಾರೂ ಈ ರೀತಿ ರಾಜಭಕ್ತಿ ವಿಹೀನತೆಯನ್ನು ತೋರಿಸತಕ್ಕವರಿಲ್ಲವಾಗಿ ದ್ವೇಷಾಸೂಯತೆಯನ್ನು ಹುಟ್ಟಿಸತಕ್ಕ ಬಗ್ಗೆ ಬರೆದಿರುವದಾಗಿ ತೋರುತ್ತೆ. ನಮ್ಮನ್ನು ಆಳುತ್ತಿರುವ ಶ್ರೀಮದಿಂಡಿಯಾ ಚಕ್ರವರ್ತಿಸಾರ್ವಭೌಮರವರಿಗೂ ಮತ್ತು ಅವರ ಸಹಾಯಕರಾದ ಸನ್ಮಿತ್ರರಿಗೂ ಯುದ್ಧದಲ್ಲಿ ವಿಜಯವನ್ನು ಅನುಗ್ರಹಿಸಬೇಕೆಂದು ಭಗವಂತನನ್ನು ನಾವುಗಳೆಲ್ಲರೂ ಏಕಕಂಠದಿಂದ ಪ್ರಾರ್ಥಿಸುತ್ತೇವೆ.

ಮಹಮದ್ ಟೀಪೂ ಸಾಹೇಬ್, ಸಭಾಧ್ಯಕ್ಷ, ಯಲಹಂಕ.

ಮಲೆನಾಡಿನಲ್ಲಿಯೂ ಬಲಾತ್ಕಾರ ವಿದ್ಯೆಯ ಕಾನೂನು ಬೇಕು.

ಅಯ್ಯಾ,—ಮಲೆನಾಡು ಅಭಿವೃದ್ಧಿಸ್ಥಿತಿಗೆ ಬರಬೇಕಾದರೆ ಮಟ್ಟಮೊದಲು ಯಾವುದನ್ನು ಕೈಕೊಳ್ಳಬೇಕೆಂದು ಒಬ್ಬಾನೊಬ್ಬ ವಿದ್ವಾಂಸನನ್ನು ಕೇಳಿದರೆ ಮಲೆನಾಡು ದೇಶದ ಮಕ್ಕಳಿಂದಲೇ ಅದು ಅಭಿವೃದ್ಧಿಗೆ ಬರಬೇಕೆಂದು ಸಂತೋಷದಿಂದ ಹೇಳಿದನು. ಆದುದರಿಂದ ನಮ್ಮ ಘನವೆತ್ತಿದ ಮಹಾರಾಜಾ ಸರಕಾರದವರು ಕೂಡ ಇದನ್ನೇ ಅನುಮೋದಿಸಿ ಆಗಲೇ ಬಲಾತ್ಕಾರ ವಿದ್ಯಾಭ್ಯಾಸದ ರೆಗ್ಯುಲೇಷನ್ ಎಂಬ ಕಾನೂನನ್ನು ಸಂಸ್ಥಾನದ ಎಲ್ಲಾ ಹೆಡ್ ಕ್ವಾರ್ಟರುಗಳಲ್ಲಿಯೂ, ಕೆಲವು ಕಾಲ್ಲೋಕುಗಳಲ್ಲಿಯೂ ಜಾರೀಗೆ ತಂದಿರುವುದು ಸ್ತೋತ್ರಾರ್ಹವಾಗಿದೆ. ಆದರೆ ಈ ಕಾನೂನು ಮಲೆನಾಡು ಪೈಕಿ ಶಿವಮೊಗ್ಗ, ಕಡೂರು ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರುಗಳಲ್ಲಿಯೇ ಹೊರತು ಗ್ರಾಮಾಂತರಗಳಲ್ಲಿ ಜಾರಿಗೆ ಬಂದಹಾಗೆ ಕಾಣಲಿಲ್ಲ. ಮಲೆನಾಡು ಪ್ರಾಂತ್ಯದ ಗ್ರಾಮಾಂತರಗಳ ಪೈಕಿ ಸದ್ಯಕ್ಕೆ ಸ್ಕೂಲ್ ಇರುವ ಕಡೆಯಲ್ಲೆಲ್ಲಾ ಈ ರೂಲ್ಸು ಜಾರಿಗೆ ಬರಬೇಕಾದದ್ದು ತುಂಬಾ ಅವಶ್ಯಕವೆಂದೂ, ಹೀಗೆ ಜಾರಿಗೆ ಬರುವದರಿಂದ ಸ್ಕೂಲ್ ಇಲ್ಲದ ಇನ್ನೊಂದು ಗ್ರಾಮಸ್ಥರಿಗೆ ಎಚ್ಚರಿಕೆ ಉಂಟಾಗಿ ಮಕ್ಕಳು ಇರುವ ಗ್ರಾಮದಲ್ಲೆಲ್ಲಾ ಬೇಗ ಬೇಗನೆ ಘನ ಸರ್ಕಾರದವರಿಂದ ಸ್ಕೂಲ್ ಕೇಳಿಕೊಳ್ಳಲು ಪ್ರೋತ್ಸಾಹ ಉಂಟಾಗುವುದೆಂದೂ ತೋರುತ್ತೆ. ಇನ್ನೊಂದು ಕಾರಣವಿದೆ ಅದೇನೆಂದರೆ—ಹೆಡ್‌ಕ್ವಾರ್ಟರುಗಳಲ್ಲಿಯಾಗಲಿ ಕಾಲ್ಲೋಕು ಟವುನ್‌ಗಳಲ್ಲಿಯಾಗಲಿ ಇರುವ ಮಕ್ಕಳು ಕೇವಲ ಬಡವರಾದಾಗ್ಯೂ, ತಂದೆ ತಾಯಿಗಳು ಅಂಥಾ ಮಕ್ಕಳಿಗೆ ಅಲ್ಪಸ್ವಲ್ಪ ಓದು ಬರಹವನ್ನು ಕಲಿಸುತ್ತಾರೆ ಮತ್ತೆ ಬಾಲಕನು ಹೋಗಲಿ, ಹೋಗದೆ ಇರಲಿ, ಚಟುವಟಿಕೆಯುಳ್ಳವನಾಗಿಯೂ ಓದು ಬರಹ ಬಾರದಿದ್ದಾಗ್ಯೂ, ಬಂದವನಂತೆ ನಟಿಸಿಕೊಳ್ಳುವನು ಆದರೆ ಹಳ್ಳಿಯ ಮಕ್ಕಳು ಹೀಗಿಲ್ಲ. ಅಲ್ಪಸ್ವಲ್ಪ ಓದು ಬರಹ ಇದ್ದಾಗ್ಯೂ ಕೂಡ ಇಲ್ಲದವನಂತೆ ನಟಿಸಿಕೊಂಡು, ಚಟುವಟಿಕೆ ಇಲ್ಲದೆ ಭಯಸ್ಥನಾಗಿರುವನು. ದೃಷ್ಟಾಂತಕ್ಕೆ, ಓದು ಬರಹ ಕಲಿತ ಒಬ್ಬ ಹಳ್ಳಿ ಬಾಲಕನನ್ನೂ, ಕಲಿಯದೆ ಇರುವ ಇನ್ನೊಬ್ಬ ಪೇಟೆ ಬಾಲಕನನ್ನೂ ಪರೀಕ್ಷಿಸಿ ನೋಡೋಣ. ಕಾವೇರಿ ನದಿ ಎಲ್ಲಿದೆ ಎಂದು ಹಳ್ಳಿ ಬಾಲಕನನ್ನು ಕೇಳಿದರೆ ಯೋಚನೆಮಾಡದೆ ತಲಕಾಡಿನಲ್ಲಿದೆ ಎಂದು ತಪ್ಪು ಉತ್ತರವನ್ನು ಹೇಳುವನು. ಇದೇ ಸವಾಲನ್ನು ಓದದೆ ಇರುವ ಪೇಟೆ ಬಾಲಕನಲ್ಲಿ ಕೇಳಿದರೆ ಆ ನದಿ ತಲಕಾವೇರಿಯಲ್ಲಿ ಉದ್ಭವಿಸುತ್ತದೆಂದು ಸರಿಯಾದ ಉತ್ತರ ಕೊಡುತ್ತಾನೆ. ಹಾಗಾದರೆ ಈ ಜ್ಞಾನವು ಆ ಬಾಲಕನಿಗೆ ಎಲ್ಲಿಂದ ಬಂತು ? ಟವುನ್‌ಗಳಲ್ಲಿ ಇರುವ ಸ್ಕೂಲ್ ಬಾಲಕರೊಡನೆ ಆಡಿಕೊಂಡು ಇದ್ದದ್ದರಿಂದ ಬಂತೆಂದು ಊಹಿಸಬಹುದು. ಹಳ್ಳೀ ಬಾಲಕನು ಭೂಗೋಳ ಪುಸ್ತಕವನ್ನು ಓದಿಯೂ ಪಾಠವನ್ನು ನೋಡಿಕೊಂಡು ತಪ್ಪು ಉತ್ತರ ಹೇಳುವುದಕ್ಕೆ ಕಾರಣವೇನು ? ಸ್ಕೂಲಿಗೆ ಬರುವ ಹಳ್ಳೀ ಬಾಲಕನು ಕ್ರಮವಾಗಿ ಪಾಠಶಾಲೆಗೆ ಬಾರದೆಯೂ, ಉಪಾಧ್ಯಾಯನ ಪಾಠಕ್ಕೆ ಒಳಪಡದೆಯೂ ಇರುವುದೇ ಇದಕ್ಕೆ ಕಾರಣವೆಂದು ನಿಸ್ಸಂದೇಹವಾಗಿ ಹೇಳಬಹುದು. ಹಾಗಾದರೆ ಇಂಥಾ ಬಾಲಕನನ್ನು ಹ್ಯಾಗೆ ಮುಂದಕ್ಕೆ ತರೋಣ ? ಮಕ್ಕಳನ್ನು ಕ್ರಮವಾಗಿ ಪಾಠಶಾಲೆಗೆ ಕಳುಹಿಸಿರೆಂದು ಉಪಾಧ್ಯಾಯರು ಮಕ್ಕಳ ತಂದೆ ತಾಯಿಗಳಲ್ಲಿ ಸಾರಿ ಹೇಳಿದಾಗ್ಯೂ ಒಂದೆರಡು ದಿವಸ ಕಳುಹಿಸಿ ಬಾಕಿ ದಿವಸಗಳಲ್ಲೆಲ್ಲಾ ಗೈರ್ಹಾಜರಿಯ ಗುರುತು ಪಡೆಯುತ್ತಿರುವಲ್ಲಿ ಬಾಲಕರ ವಿದ್ಯೆ ಎಷ್ಟರ ಮಟ್ಟಿಗೆ ಅಭಿವೃದ್ಧಿಯಾದೀತು ? ಆದುದರಿಂದ ಘನವುಳ್ಳ ನಮ್ಮ ಸರ್ಕಾರದವರು ಪ್ರಾಥಮಿಕ ವಿದ್ಯಾಭ್ಯಾಸದ ರೆಗ್ಯುಲೇಷನ್ ಎಂಬ ಕಾನೂನಿನ ಪೈಕಿ ಎಂಟನೇ ಒಂದು ಭಾಗವನ್ನಾದರೂ ಮಲೆನಾಡು ಪ್ರಾಂತ್ಯ ಸ್ಕೂಲ್ ಇರುವ ಗ್ರಾಮಾಂತರಗಳಲ್ಲಿ ಜಾರಿಗೆ ತಂದು, ಹಾಗೆ ತಂದಿರುವ ಭಾಗವನ್ನು ಡಿಸ್ಟ್ರಿಕ್ಟ್ ಸ್ಕೂಲ್ ಡೆಪ್ಯುಟಿ ಇನ್ಸ್‌ಪೆಕ್ಟರ್ ಸಾಹೇಬರ ಮುಖಾಂತರ ಎಲ್ಲಾ ಉಪಾಧ್ಯಾಯರಿಗೂ ನೋಟೀಸ್ ಮೂಲಕ ತಿಳುವಳಿಕೆ ಕೊಟ್ಟು ಕೀರ್ತಿಗೆ ಪಾತ್ರರಾಗಬೇಕಲ್ಲದೆ ಬಡಪಾಯಿಗಳಾಗಿರುವ ಮಲೆನಾಡು ದೇಶದ ಮಕ್ಕಳು ಅಭಿವೃದ್ಧಿಸ್ಥಿತಿಗೆ ಬರುವದರಲ್ಲಿ ಏನೂ ಸಂದೇಹವಿರಲಾರದೆಂದು ಅಭಿಪ್ರಾಯಪಡುತ್ತೇನೆ.

ಕೆ. ಎ.

ಒಳದೇಶದ ವೃತ್ತಾಂತಗಳು.

ಈ ವಾರ ನಮ್ಮ ಪತ್ರಿಕೆಯು ಹತ್ತು ಪುಟಗಳುಳ್ಳದ್ದಾಗಿದೆ.

ಬೆಂಗಳೂರು ಸಿಟಿಗೂ ದಂಡಿಗೂ ನಡುವೆ ನಿಲ್ಲಿಸಿದ ಎಡ್ವರ್ಡ್ ಚಕ್ರವರ್ತಿಯವರ ಪ್ರತಿಮೆಯನ್ನು ಇಡುವುದಕ್ಕೆ ಕೆಳಗಿನ ಪೀಠವನ್ನು ಕಟ್ಟಿ ಅದರ ನಾಲ್ಕು ಕಡೆಗಳಲ್ಲಿ ಇಂಗ್ಲಿಷ್, ಕನ್ನಡ, ತಮಿಳು, ಹಿಂದುಸ್ಥಾನಿ ಭಾಷೆಗಳಲ್ಲಿ ಶಾಸನವನ್ನು ಕೆತ್ತಿಸಿದ್ದಾಗಿದೆ.

ಬೆಂಗಳೂರು ಕುರುವಿಜಯ ಪತ್ರಿಕೆ ಆಫೀಸಿನಲ್ಲಿ ಮುದ್ರಾಯಂತ್ರವು ಕೆಟ್ಟುಹೋಗಿ ಸರಿಮಾಡಿಸುತ್ತಿರುವುದರಿಂದ ಆ ಪತ್ರಿಕೆ ಹೊರಡಲಿಲ್ಲವೆಂದೂ, ಒಂದೆರಡು ವಾರಗಳಲ್ಲೇ ಪತ್ರಿಕೆಯನ್ನು ಕಳುಹಿಸುತ್ತೇವೆಂದೂ ಎಡಿಟರ್ ಮ|| ಎಂ. ಎಸ್. ಲಿಂಗಪ್ಪನವರು ತಿಳಿಸುತ್ತಾರೆ.

ಡಿಸೆಂಬರ್ ಕಡೇ ವಾರದಲ್ಲಿ ಮದರಾಸಿನಲ್ಲಿ ಹಿಂದುಸ್ಥಾನದ ಸಾರ್ವಜನಿಕ ಸಂಘ ಪರಿಷ್ಕರಣ (ಸೋಷಲ್ ಕಾನ್ಫರೆನ್ಸ್) ಸಮಾಜವು ನಡೆಯುವುದಾಗಿದೆ. ನಮ್ಮ ಶ್ರೀಮದ್ಯುವರಾಜರವರು ಆ ಸಮಾಜದ ಅಗ್ರಾಸನವನ್ನು ವಹಿಸುವುದಾಗಿ ಒಪ್ಪಿಕೊಂಡಿರುವಂತೆ ತಿಳಿದುಬರುತ್ತದೆ.

ರಾಜಧಾನಿಯಲ್ಲಿ ಈಗ 600 ವಿದ್ಯುಚ್ಛಕ್ತಿಯ ದೀಪಗಳಿವೆ. ಸರ್ಕಾರದವರು ಇನ್ನೂ 400 ದೀಪಗಳನ್ನು ಇಡಿಸಿಕೊಳ್ಳಬಹುದೆಂದು ಸ್ಯಾಂಕ್ಷನ್ ಮಾಡಿದಾರೆ. ಮ್ಯುನಿಸಿಪಲ್ ಕೌನ್ಸಿಲರುಗಳು ಆಯಾ ಮೊಹಲ್ಲೆಗಳಿಗೆ ಬೇಕಾಗಿರುವ ದೀಪಗಳೆಷ್ಟೆಂದು ಗೊತ್ತುಮಾಡುವುದರಲ್ಲಿದಾರೆ.

ಕಳೆದ ಅಕ್ಟೋಬರ್ ತಾ. 20 ನೇ ರಾತ್ರಿ ಸ್ಮಿತ್ ಎಂಬ ದೊರಸಾನಿಯು ಬೆಂಗಳೂರಿಗೆ ಹೋಗುತ್ತಿದ್ದಾಗ ರೈಲ್ವೆ ಗಾರ್ಡ್ ಟಿ. ಫೆಡ್ಸ್ ಎಂಬುವನು ಕೋಲಾರ್‌ಫೀಲ್ಡ್ ಹತ್ತಿರ ಆಕೆಯ ಗಾಡಿಯೊಳಕ್ಕೆ ಹೋಗಿ ಮಾನಭಂಗಮಾಡಿದನೆಂಬದಾಗಿ ಮೊಕದ್ದಮೆ ಬಂದಿದೆ. ಬೆಂಗಳೂರಿನಲ್ಲಿ ಮಿ|| ಆರ್. ಬಿ ಪ್ಲಮರವರು ವಿಚಾರಣೆ ಮಾಡುತ್ತಿದಾರೆ.

ಇಂಗ್ಲಿಷ್ ಸ್ಕೂಲನ್ನಾಗಲಿ, ಇಂಗ್ಲಿಷ್ ತರಗತಿಗಳನ್ನಾಗಲಿ ಇಟ್ಟುಕೊಡಬೇಕೆಂದು ಯಾವ ಗ್ರಾಮಸ್ಥರಾದರೂ ಕೇಳಿಕೊಂಡ ಪಕ್ಷದಲ್ಲಿ ಅಂಥವರು ಆ ಖರ್ಚಿನಲ್ಲಿ ಮೂರನೇ ಎರಡು ಹಿಸ್ಸೆ ಖರ್ಚನ್ನು ವಹಿಸಿಕೊಳ್ಳಬೇಕಾಗಿತ್ತು. ಸರ್ಕಾರದವರು ಇನ್ನು ಮುಂದೆ ಅಂಥಾ ಖರ್ಚಿನಲ್ಲಿ ಅರ್ಧವನ್ನು ಗ್ರಾಮಸ್ಥರು ಕೊಟ್ಟರೆ ಸಾಕೆಂದು ರಿಯಾಯಿತಿ ತೋರಿಸಿ ಹುಕುಂ ಕೊಟ್ಟಿದಾರೆ.

ಪೆನುಗೊಂಡೆಯಲ್ಲಿ ಕಳೆದ ಗುರುವಾರ ಒಂದು ವಿದ್ವತ್ ಸಭೆ ನಡೆಯಿತು. ಅರಮನೆ ಕಂಟ್ರೋಲರವರಾದ ಮ|| ಬಿ. ರಾಮಕೃಷ್ಣರಾಯರು ಸಭೆಯ ಅಗ್ರಾಸನವನ್ನು ವಹಿಸಿ ವಿದ್ವಾಂಸರಿಗೆ ಬಹುಮಾನಗಳನ್ನು ಕೊಟ್ಟು ಹಿಂದೂ ಸಿದ್ಧಾಂತಗಳ ವಿಷಯವಾಗಿ ಉಪನ್ಯಾಸಮಾಡಿ ಸಭಾ ಕಾರ್ಯಗಳನ್ನು ಕೊಂಡಾಡಿದರು. ಮಹಾ ಸಭೆಯವರೆಲ್ಲಾ ಸೇರಿ ಬ್ರಿಟಿಷ್ ರಾಜ್ಯಭಾರಕ್ಕೆ ಜಯಪ್ರದವಾಗಲೆಂದು ದೇವರ ಆಶೀರ್ವಾದವನ್ನು ಬೇಡಿದರು.

ಹಿಂದುಸ್ಥಾನದಲ್ಲಿ ಪರಸ್ಪರ ಸಹಾಯ ಸಂಘಗಳು ಯಾವ ರೀತಿ ಕೆಲಸ ಕಾರ್ಯಗಳನ್ನು ನಡಿಸುತ್ತಿರುವವೋ ತನಿಖೆಮಾಡಿ ತಿಳಿಬೇಕೆಂದು ಇಂಡಿಯಾ ಗವರ್ನ್‌ಮೆಂಟಿನವರು ಒಂದು ಪಂಚಾಯತಿಯನ್ನು ನೇಮಕಮಾಡಿ ಎಲ್ಲಾ ಕಡೆಗಳಿಗೂ ಕಳುಹಿಸಿರುತ್ತಾರೆ. ಈ ಪಂಚಾಯತರ ಪೈಕಿ ಮೂರು ಮಂದಿ ಕಳೆದ ವಾರ ಬೆಂಗಳೂರಿಗೆ ಬಂದಿದ್ದು, ಮ|| ಗಳಾದ ಸಿ. ಶ್ರೀನಿವಾಸಯ್ಯಂಗಾರ್ರು, ಕೆ. ಪಿ. ಪುಟ್ಟಣ್ಣಚೆಟ್ಟರು, ಎಂ. ಎ. ನಾರಾಯಣಯ್ಯಂಗಾರ್ರು, ಡಿ. ಅಪ್ಪುರಾಯರೇ ಮುಂತಾದ 14 ಮಂದಿ ದೊಡ್ಡ ಮನುಷ್ಯರುಗಳ ಅನುಭವಗಳನ್ನು ಕೇಳಿ ಬರೆದುಕೊಂಡು, ಬೆಂಗಳೂರಿನಲ್ಲಿರುವ ಕೆಲವು ಪರಸ್ಪರ ಸಹಾಯ ಸಂಘಗಳನ್ನು ನೋಡಿಕೊಂಡು ಪ್ರಯಾಣಮಾಡಿದರು.

ಮೈಸೂರು ಸಬ್ ಜಡ್ಜ್ ಮ|| ಬಿ. ಸುಬ್ಬಣ್ಣನವರು ಕಳೆದ ಭಾನುವಾರ ಮಿ|| ಹಂಜಾ ಹುಸೇನ್‌ರವರನ್ನು ತಮ್ಮ ಮನೆಗೆ ಕರಸಿಕೊಂಡು ಒಂದು ಅಟ್ ಹೋಮ್ ನಡಿಸಿದರು. ಬಹುಜನ ವಕೀಲರೂ ಲಾಯರುಗಳೂ ಅಲ್ಲಿಗೆ ಹೋಗಿದ್ದು ಮಿ. ಹಂಜಾ ಹುಸೇನ್‌ರವರಿಗೆ ಶುಭವಾದವನ್ನು ಹೇಳಿದರು. ಲಾಯರುಗಳ ಪರವಾಗಿ ಕಳೆದ ಶನಿವಾರ ಕೋರ್ಟಿನಲ್ಲಿ ಅಡ್ವೊಕೇಟ್ ಮ|| ಎಂ. ಸಿ. ರಂಗಯ್ಯಂಗಾರ್ರು ಮಿ|| ಹಂಜಾ ಹುಸೇನ್‌ರವರಿಗೆ ಚೀಫ್ ಕೋರ್ಟಿನ ಜಡ್ಜಿ ಕೆಲಸವು ದೊರಕಿದ್ದಕ್ಕಾಗಿ ತಮ್ಮ ಸಂತೋಷವನ್ನು ಪ್ರಕಾಶಪಡಿಸಿದರು. ಮಿ|| ಹಂಜಾ ಹುಸೇನ್‌ರವರು ಮೊನ್ನೆ ಸೋಮವಾರ ಹೋಗಿ ಚೀಫ್ ಕೋರ್ಟಿನಲ್ಲಿ ಜಡ್ಜಿ ಕೆಲಸದ ಛಾರ್ಜನ್ನು ವಹಿಸಿಕೊಂಡಿದಾರೆ.

ತಾಲ್ಲೂಕು ವರ್ತಮಾನಗಳು.

ಹುಣಸೂರು.—ಮೋಟರ್ ಸರ್ವಿಸ್ ಪ್ರೊಪ್ರೈಟರು ಈಚೆಗೆ ಬುದ್ಧಿವಂತನಾದ ಡ್ರೈವರನ್ನಿಟ್ಟಿರುವುದರಿಂದ 2-3 ವಾರಗಳಿಂದ ಒಂದು ದಿನವಾದರೂ ನಿಲ್ಲದ ರೀತಿ ಮೋಟರ್ ಹೋಗಿ ಬರುತ್ತಿರುವುದು. ಇದರಿಂದ ಪ್ರಯಾಣಿಕರಿಗೆ ತುಂಬಾ ಅನುಕೂಲವಾಯಿತು. ಹಾಲಿ ವರಮಾನವು ಕಮ್ಮಿಯಾಗಿರುವುದಕ್ಕಾಗಿ ಇದೇ ಮಾಹೆ 20 ನೇ ತಾ. ನಿಂದ ಮುಂದೆ ಪಿರಿಯಾಪಟ್ಟಣಕ್ಕೂ ಮೈಸೂರಿಗೂ ಮೋಟರ್ ಹೋಗಿ ಬರುವಂತೆ ಅನುಕೂಲಮಾಡಿರುವರು.—ಪ್ಲೇಗ್ ಗಲಾಟೆ ಶಮನವಾಗಿದೆ. ಋತುಧರ್ಮವನ್ನನುಸರಿಸಿ ಬೆಳಗ್ಗೆ ಸಾಯಂಕಾಲ ಮಂಜು ಸುರಿದು ಕೊರತಕ್ಕೆ ಆರಂಭಿಸಿದೆ.

ಮಂಜರಾಬಾದು ತಾ|| ಬೆಳಗೋಡು.—ಈ ಗ್ರಾಮದಲ್ಲಿ ಸ್ಕೂಲು ಸ್ಥಾಪನೆಯಾದ 4-5 ವರುಷಗಳ ಲಾಗಾಯ್ತಿನಿಂದಲು ಉಪಾಧ್ಯಾಯರಾಗಿರುವ ಮ|| ಕೆ. ಕೇಶವಯ್ಯನವರಿಗೆ ಯಸಳೂರು ಪ್ಯಾಟೆ ಸ್ಕೂಲು ಹೆಡ್ ಮಾಸ್ಟರ ಕೆಲಸಕ್ಕೆ ವರ್ಗವಾಗಿರುವದಾಗಿ ಕೇಳಿ ಗ್ರಾಮಸ್ಥರೂ ಸ್ಕೂಲು ಬಾಲಕರೂ ಬಹಳ ಚಿಂತಾಕ್ರಾಂತರಾಗಿದಾರೆ. ಈ ಉಪಾಧ್ಯಾಯರು ಇಲ್ಲಿಗೆ ವರ್ಗವಾಗಿ ಬಂದು ಹೊಸದಾಗಿ ಸ್ಕೂಲು ಓಪನ್ ಮಾಡಿ ಆ ಲಾಗಾಯ್ತಿನಿಂದಲೂ ಬಾಲಕರ ಅಜ್ಞಾನಾಂಧಕಾರವನ್ನು ನಿವೃತ್ತಿಮಾಡುತ್ತ ಸರ್ವರಲ್ಲಿಯೂ ಸಮದೃಷ್ಟಿಯುಳ್ಳವರಾಗಿ ಗ್ರಾಮಸ್ಥರ ಪ್ರೀತಿ ಗೌರವಗಳಿಗೆ ಪಾತ್ರರಾಗಿದ್ದರು.—ಈ ಗ್ರಾಮದಲ್ಲಿ ಇರುವ ಕೋಆಪರೇಟಿವ್ ಸೊಸೈಟಿಯು ಅಭಿವೃದ್ಧಿ ಹೊಂದುತ್ತಿದೆ. ಸೊಸೈಟಿಯ ಕಾರ್ಯಗಳು ಕ್ರಮವಾಗಿ ಜರುಗುತ್ತಲಿವೆ. ಈ ಹೋಬಳಿಗೆ ವರ್ಗವಾಗಿ ಬಂದಿರುವ ಶೇಕದಾರ್ರು ಮ|| ಬಿ. ನರಸಿಂಹಯ್ಯಂಗಾರ್ರು ವಿಶೇಷವಾದ ಪ್ರಜಾನುರಾಗಕ್ಕೆ ಪಾತ್ರರಾಗಿ ಸೊಸೈಟಿಯ ಅಭಿವೃದ್ಧಿಗೆ ತುಂಬ ಮುತುವರ್ಜಿಯಿಂದ ಸಹಾಯಮಾಡುತ್ತಲಿದಾರೆ. ಮತ್ತು ಈ ಹೋಬಳಿಯಲ್ಲಿ ಅನೇಕ ಗ್ರಾಮಗಳಲ್ಲಿ ಗ್ರಾಮಾಭಿವೃದ್ಧಿಯ ಸಂಘಗಳನ್ನು ಇವರೇ ಸ್ವತಃ ಏರ್ಪಡಿಸಿ, ಸಕಲ ಭಾಗದಲ್ಲೂ ಈ ಹೋಬಳಿಯನ್ನು ಅತ್ಯುತ್ತಮ ಸ್ಥಿತಿಗೆ ತರುವದರಲ್ಲಿ ಅತ್ಯಾಸಕ್ತರಾಗಿರುವದು ಬಹಳ ಸಂತೋಷಪ್ರದವಾಗಿರುತ್ತೆ. ಪೋಲೀಸ್ ಕಾರ್ಯಕ್ರಮವು ತೃಪ್ತಿಕರವಾಗಿರುತ್ತೆ.

ಇದಕ್ಕೆ ಪ್ರತ್ಯುತ್ತರವೇನೆಂದರೆ :—ಮೋಕ್ಷ ಸುಖವಾಗಲಿ ನರಕದ ವೇದನೆಯಾಗಲಿ ನಾವು ಮಾಡಿದ ಸುಕೃತ ದುಷ್ಕೃತಗಳಿಗೆ ಪ್ರತಿಫಲವಾಗಿ ನಮಗೆ ದೊರಕುವದಿಲ್ಲ. ದೇವರ ಸನ್ನಿಧಾನಕ್ಕೆ ಯಾವ ಪುಣ್ಯಾತ್ಮನಾದರೂ ಹೋಗಿ—ಸ್ವಾಮಿ, ನಾನು ಇಹಲೋಕದಲ್ಲಿ ಇಂತಿಂತಹ ಉಪಕಾರ ಕ್ರಿಯೆಗಳನ್ನು ನಡಿಸಿದ್ದೇನೆ. ಈ ಉಪಕಾರಗಳಿಗೂ ನನ್ನ ಸದ್ವರ್ತನೆಗೂ ಪ್ರತಿಫಲವಾಗಿ ನನಗೆ ಪರಲೋಕ ಸುಖವನ್ನು ಕೊಡು ಎಂದು ತನ್ನ ಯೋಗ್ಯತೆಯನ್ನು ಹೇಳಿ ಹಕ್ಕಿನಿಂದ ಬೇಡುವದಕ್ಕಾಗುವದಿಲ್ಲ. ದೇವರ ಮೇಲೆ ನಮಗೆ ಏನು ಹಕ್ಕು ಇದೆ ? ನಮ್ಮನ್ನು ಈ ಲೋಕಕ್ಕೆ ತಂದವನು ಆತನೇ. ನಮಗೆ ಜೀವವನ್ನು ಕೊಟ್ಟು ಅದನ್ನು ಕಾಪಾಡುತ್ತಾ ಬರುವವನು ಆತನೇ. ಜೀವ ಸಂರಕ್ಷಣೆಗೋಸ್ಕರ ಈ ಭೂಮಂಡಲವನ್ನೂ ಸೂರ್ಯ ಚಂದ್ರರನ್ನೂ ಗಾಳಿ ಮಳೆ ಬೆಳಕು ಬಿಸಿಲನ್ನೂ ಕ್ರಮವಾಗಿ ಒದಗಿಸಿಕೊಡುತ್ತಿರುವವನು ಆತನೇ. ಹೀಗಿರುವದರಿಂದ ನಾವು ಆತನ ಆಜ್ಞಾ ಧಾರಕರಾಗಿ ನಿರಂತರ ನಡೆಯುವದು ನಮ್ಮ ಕರ್ತವ್ಯವಾಗಿದೆ. ನಾವು ಎಷ್ಟೇ ಸುಕೃತಗಳನ್ನು ನಡಿಸಿದರೂ ನಮ್ಮ ಇಷ್ಟಾನಿಷ್ಟರಾಗಿದ್ದರೂ ನಾವು ಆ ನಮ್ಮಗಳ ಫಲವನ್ನು ಬಯಸಿ ಅಥವಾ ಸುಕೃತಗಳ ರಾಶಿಯನ್ನು ಮಾಡಿ—ನಾನು ಎಷ್ಟು ಪವಿತ್ರನು, ಎಷ್ಟು ಸತ್ಯವಂತನು, ಪರೋಪಕಾರಿ. ದೇವರೇ, ಇದನ್ನೆಲ್ಲಾ ನೋಡಿ ನನ್ನ ಪುಣ್ಯದ ಮೊತ್ತಕ್ಕೆ ನ್ಯಾಯವಾಗಿ ನನಗೆ ಬರತಕ್ಕ ಪರಲೋಕ ಸುಖವನ್ನು ನನಗೆ ಕೊಡು ಎಂದು ಹೇಳುವದಕ್ಕಾಗುವದೇ ಇಲ್ಲ. ಯಾಕೆಂದರೆ ನಾವೂ ನಮಗಿರುವದೆಲ್ಲಾ ದೇವರದೇ ಆಗಿದೆ. ನಾನು ಕ್ರಯಕೊಟ್ಟು ಒಂದು ಒಳ್ಳೇ ದೀಪವನ್ನು ತಂದು ಎಣ್ಣೆ, ಬತ್ತಿಹಾಕಿ ಹಚ್ಚಿದೆನು. ಅದು ಒಳ್ಳೇ ಶುಭ್ರವಾದ ಪ್ರಕಾಶವನ್ನು ಕೋಣೆಯೊಳಗೆಲ್ಲಾ ಹರಡಿ ಅದನ್ನು ಶೋಭಾಯಮಾನವಾಗಿ ಮಾಡಿತು. ಸರಿ. ಆದರೆ ಬೆಳಕನ್ನು ಕೊಟ್ಟದ್ದು ದೀಪದ ಪುಣ್ಯವಂತ ಸ್ವಭಾವವೂ ಯಾರಾದರೂ ಭಾವಿಸುವದಿಲ್ಲ. ಬೆಳಕನ್ನು ಸಂಪಾದಿಸಬೇಕೆಂಬ ಉದ್ದೇಶದಿಂದ ಅದಕ್ಕೆ ತಕ್ಕ ಸಲಕರಣೆಗಳನ್ನು ನಾನು ಒದಗಿಸಿದೆ. ಬೆಳಕು ಲಭ್ಯವಾಯಿತು. ಇದರೊಳಗೆ ದೀಪದ ಪುಣ್ಯವೇನೂ ಇಲ್ಲ. ಒಂದು ಇಂಜಿನ್ ಗಾಡಿಗೆ ತಕ್ಕಷ್ಟು ನೀರನ್ನೂ ಇದ್ದಲಿಯನ್ನೂ ಹಾಕಿದರೆ ಅದು ನಡಿಸುವವನ ಚಿತ್ತವನ್ನು ಅನುಸರಿಸಿ ಗಂಟೆಗೆ ಇಪ್ಪತ್ತು ಮೂವತ್ತು ಮೈಲು ಪ್ರಯಾಣಮಾಡುತ್ತದೆ. ಅದು ಇಂಜಿನ್‍ಗಾಡಿಯ ಪುಣ್ಯವಲ್ಲ. ನಾವು ಸಾಕುವ ಎತ್ತು, ಕತ್ತೆ, ಕುದುರೆಗಳಾದರೂ ದುಡಿದ ನಂತರ ಅವುಗಳ ದುಡಿಮೆಯು ಅವುಗಳ ಪುಣ್ಯವೆಂತ ನಾವು ಭಾವಿಸುವದಿಲ್ಲವಷ್ಟೆ. ಹಾಗಾದರೆ ದೇವರು ನಮ್ಮನ್ನು ಸೃಷ್ಟಿಸಿ ಪರಾಮರಿಸುತ್ತಿರುವಲ್ಲಿ, ಆತನ ಚಿತ್ತವೇನೆಂದು ಗ್ರಹಿಸಿ ಅದನ್ನೇ ಅನವರತವೂ ಮಾಡುತ್ತಿರುವದು ನಮ್ಮ ಕರ್ತವ್ಯವೇ ಆಗಿದೆ. ಇದರೊಳಗೇನೂ ಪುಣ್ಯವಿಲ್ಲ. ಆತನ ಚಿತ್ತಾನುಸಾರವಾಗಿ ನಮ್ಮಿಂದ ಸಾಧ್ಯವಾದ ಮಟ್ಟಿಗೂ ಸದಾಚಾರ, ಸದ್ವರ್ತನೆಯಲ್ಲಿ ಆಸಕ್ತರಾಗಿ ಸತ್ಯವನ್ನೇ ನುಡಿದು ತ್ರಿಕರಣಶುದ್ಧರಾಗಿ ಪರೋಪಕಾರವನ್ನೇ ಮಾಡುತ್ತಿರುವದು ನಮ್ಮ ಧರ್ಮ. ಹೀಗೆ ನಡೆಯುವದಕ್ಕೆ ಕರ್ತವ್ಯಬದ್ಧರಾಗಿದ್ದೇವೆ. ನಡೆದರೆ ಕರ್ತವ್ಯವನ್ನು ನೆರವೇರಿಸಿದವರಾದೆವು. ಅಷ್ಟೆ.

ಆದರೆ ದೇವರು ಈ ಲೋಕದಲ್ಲಿ ನಮಗೆ ಜೀವವನ್ನೂ ಜೀವ ಸಂರಕ್ಷಣೆಯ ಸಲಕರಣೆಗಳನ್ನೂ ಉಚಿತವಾಗಿ ತನ್ನ ಕೃಪೆಯಿಂದ ಒದಗಿಸಿಕೊಟ್ಟಿರುವ ಹಾಗೆಯೇ ಈ ಲೋಕದ ಬಾಳುವೆಯು ಮುಗಿದ ನಂತರವೂ ನಮಗೆ ಜೀವವೂ ಸುಖವೂ ಇರಬೇಕೆಂತ ತನ್ನ ಸನ್ನಿಧಾನವಾದ ಪರಲೋಕದಲ್ಲಿ ಎಲ್ಲರಿಗೂ ನೇಮಿಸಿದ್ದಾನೆ. ಆದರೆ ಇದು ಸಹ ಆತನ ಉಚಿತವಾದ ಕೃಪೆಯೇ ಹೊರತು ನಾವು ಸಂಪಾದಿಸಿದ್ದಲ್ಲ. ಅಥವಾ ನಮ್ಮ ಪುಣ್ಯ ಕ್ರಿಯೆಗಳಿಂದ ನಾವು ದೇವರಿಂದ ಕೊಂಡುಕೊಂಡ ಸ್ವಾಸ್ಥ್ಯವಲ್ಲ, ಆಸ್ತಿಯಲ್ಲ. ಈ ಪರಲೋಕ ಸುಖವನ್ನು ನಿತ್ಯವಾಗಿ ತನ್ನ ಸಾನ್ನಿಧ್ಯದಲ್ಲಿ ಐಕ್ಯವಾದ ಪರಮಭಾಗ್ಯವನ್ನು ಒಬ್ಬ ಮಾನವನಿಗೂ ತಪ್ಪದೆ ಸಕಲರಿಗೂ ಕೊಡಬೇಕೆಂತ ದೇವರಲ್ಲಿ ಪ್ರೀತಿಯುಂಟು. ಎಲ್ಲರಿಗೂ ಸಾಕಲ್ಯವಾಗಿ ತೃಪ್ತಿಯನ್ನುಂಟುಮಾಡುವಷ್ಟು ಸುಖವೂ ಭಾಗ್ಯವೂ ಆತನಲ್ಲಿ ಸಹಜವಾಗಿರುತ್ತವೆ.

ಹಾಗಾದರೆ ಇವು, ಈ ನಿತ್ಯಸುಖವೂ ಭಾಗ್ಯವೂ ಉಚಿತವಾಗಿ ಕ್ರಯವಿಲ್ಲದೆ, ಕೃಪೆಯಿಂದ ಎಲ್ಲರಿಗೂ ಕೊಡುವಷ್ಟು ದೇವರಲ್ಲಿದ್ದು, ಎಲ್ಲರಿಗೂ ಕೊಡುವದಕ್ಕೆ ಆತನಿಗೆ ಮನಸ್ಸಿರುವಲ್ಲಿ, ನಾವು ಇವುಗಳನ್ನು ಹೊಂದುವದಕ್ಕೆ ಅಡ್ಡಿಯೇನು ? ಅಡ್ಡಿ ಏನೂ ಇಲ್ಲ. ಆದರೆ ಅವುಗಳನ್ನು ಹೊಂದಿ ಅನುಭವಿಸಬೇಕೆಂಬ ಆಶೆಯು ಯಾರಲ್ಲಿದೆಯೋ ಅವರಿಗೆ ಮಾತ್ರ ಇವುಗಳನ್ನು ಕೊಡೋಣಾಗುವದು. ಅಪೇಕ್ಷೆಯಿಲ್ಲದವನಿಗೆ ಅದರಿಂದ ಪ್ರಯೋಜನವಾಗಲಾರದು. ಅವನು ಅದರ ಅಮೂಲ್ಯತ್ವವನ್ನು ತಿಳಿಯನು. ಅದನ್ನು ಕಾಪಾಡಿಕೊಳ್ಳಲಾರನು. ಅದರ ಪ್ರಯೋಜನವನ್ನು ಅನುಭವಿಸಲಾರನು. ಕೆಸರಿನಲ್ಲಿ ಹೊರಳಾಡುವದರಲ್ಲಿ ಸಂತೋಷಪಡುವ ಹಂದಿಗೆ ಮಡೀವಸ್ತ್ರಗಳ ಪ್ರಯೋಜನವೇನು ? ಹೇನು ಬಲ್ಲದೆ ಮುಡಿದ ಹೂವಿನ ಪರಿಮಳವ ! ಈಗಲೇ ನಾವು ಆರಿಸಿಕೊಂಡು ಅಭ್ಯಾಸಮಾಡುವ ಗುಣ, ಶೀಲ, ಸ್ವಭಾವ, ನಡತೆ ಎಂಥಾದ್ದೆಂದು ಯೋಚಿಸುವದಕ್ಕೆ ತಕ್ಕ ಅವಕಾಶ. ನಮ್ಮ ಆಶೆಯೂ ನಮ್ಮ ಕೋರಿಕೆಯೂ ಪರಲೋಕವೇ ಆಗಿದ್ದರೆ ಇಹಲೋಕದ ಇಪ್ಪತ್ತು ಮುವತ್ತು ವರುಷಗಳಲ್ಲಿ ಅದನ್ನು ಹೊಂದುವದಕ್ಕೂ ಕಾಪಾಡಿಕೊಳ್ಳುವದಕ್ಕೂ ಅನುಭವಿಸುವದಕ್ಕೂ ತಕ್ಕ ಸ್ವಭಾವ, ಗುಣ, ನಡತೆಗಳನ್ನು ಸಾಧಿಸಬೇಕು. ಹೊಂದುವದಕ್ಕೆ ತಕ್ಕ ಆಶೆಯಿದೆಯಿಂದೂ ಅದನ್ನು ಹೊಂದುವದಕ್ಕೆ ಏನು ಬೇಕಾದರೂ ಬಿಡುತ್ತೇವೆ; ಯಾವದನ್ನು ಬೇಕಾದರೂ ಮಾಡುತ್ತೇವೆಂದು ಆರಿಸಿಕೊಂಡು ಅದನ್ನೇ ಸಾಧಿಸೋಣ. ದೇವರು ನಮ್ಮ ಆಶೆಯನ್ನೂ ಅಭಿಲಾಷೆಯನ್ನೂ ನೋಡಿ ಉಚಿತವಾಗಿ ನಮಗೆ ಅದನ್ನು ಕರುಣಿಸುವನು. ಪರಲೋಕದಲ್ಲಿ ದೇವರ ಸನ್ನಿಧಾನ ಬೇಕೆಂತ ಕಾಂಕ್ಷಿಸಿ ಅದನ್ನು ಹೊಂದಿ, ಕಾಪಾಡಿಕೊಂಡು, ಅನುಭವಿಸುವದಕ್ಕೆ ತಕ್ಕವರಾಗಿ ನಮ್ಮನ್ನು ಸಿದ್ಧಮಾಡಿಕೊಳ್ಳುವದೇ ನಮ್ಮ ಕೆಲಸ. ಇದನ್ನು ಬೇಕಾದರೆ ಸ್ವಾಭಾವಿಕ ಕರೆಯಿರಿ. ಆದರೆ ಒಬ್ಬನು ಇಂಥಾ ಅಪೇಕ್ಷೆ ಏನೂ ಇಲ್ಲದೆ ಹಂದಿಯ ಹಾಗೆ ಹೊಟ್ಟೆತುಂಬ ತಿಂದು ವಿಷಯಾಸಕ್ತನಾಗಿ ದೇವರ ಭಕ್ತಿಯನ್ನು ತ್ಯಜಿಸಿ ಪಾಪಾತ್ಮನಾಗಿ ಅದರ ಸುಖವನ್ನೇ ಬಯಸಿ ಅದನ್ನೇ ನನಗಿರಲಿ ಎಂದು ಆರಿಸಿಕೊಂಡು ಜೀವಮಾನದಲ್ಲಿ ಅದನ್ನೇ ರೂಢಿಸುತ್ತಿದ್ದರೆ ಅವನು ತನ್ನ ನರಕವನ್ನು ತಾನೇ ಉಂಟುಮಾಡಿಕೊಂಡಾನೆಂದು ಸಂದೇಹವಿಲ್ಲದೆ ಹೇಳಬೇಕಲ್ಲವೇ ?

ಯುದ್ಧದ ಸಮಾಚಾರಗಳು.

ಪರಾಕ್ರಮಿಯಾದ ಒಬ್ಬ ಹಿಂದೂ ಸಿಪಾಯಿ.

ಫ್ಲ್ಯಾಂಡರ್ಸಿನಲ್ಲಿ ಕಠಿಣವಾದ ಕದನಗಳು.

ಬೆಲ್ಜಿಯಮ್‍ನಲ್ಲಿ ಘೋರ ಯುದ್ಧವಾದ ಈಚೆಗೆ ಎರಡು ಕಕ್ಷಿಯವರೂ ಸ್ವಲ್ಪಮಟ್ಟಿಗೆ ವಿಶ್ರಾಂತರಾಗಿರುವಂತೆ ಕಾಣುವುದು; ಆದರೂ ಕದನಗಳು ನಿಂತು ಹೋಗಿರುವಂತೆ ಎಣಿಸಬಾರದು. ಇನ್ನೂ ಅಲ್ಲಿ ಕಾದಾಟಗಳು ನಡೆಯುತ್ತಲೇ ಬಂದಿವೆ. ಈಗ ಪೂರ್ವ ದಿಕ್ಕಿನಲ್ಲಿ ನಡೆಯುವ ಕದನಗಳೇ ವಿಶೇಷ. ಜರ್ಮನಿಯವರೂ ರಷ್ಯಾದವರೂ ಕಾದಾಡುತ್ತಿದ್ದಾರೆ. ಸೋಲು ಗೆಲುವುಗಳು ನಿರ್ಧಾರವಾಗುವ ಪರಿಸ್ಥಿತಿಯು ಪ್ರಾಪ್ತವಾಗಿಲ್ಲ. ಯುದ್ಧಗಳು ಮಹಾ ಘೋರವಾಗಿ ನಡೆಯುತ್ತಾ ಬಂದಿವೆ.

ಫ್ರಾನ್ಸಿನಲ್ಲೂ, ಬೆಲ್ಜಿಯಮ್‍ನಲ್ಲೂ.

ಜರ್ಮನಿಯವರು ಸಮುದ್ರ ತೀರವನ್ನು ಹೋಗಿ ಸೇರಬೇಕೆಂದು ಮಹಾ ಪರಾಕ್ರಮವಾದ ಸಾಹಸ ಕಾರ್ಯಗಳನ್ನು ಎರಡಾವರ್ತಿ ನಡಿಸಿ ಸುಗ್ಗಿ ಬಂದರೆಂದು ಈಗ ಗೊತ್ತಾಗುತ್ತದೆ. ಇವರ ಉದ್ದೇಶವನ್ನು ನಾಶಮಾಡಿ ಅವರನ್ನು ಮುಂದಕ್ಕೆ ಬಾರದಂತೆ ತಡೆಯುವುದರಲ್ಲೂ, ಅವರನ್ನು ಸ್ವಳಾಂತರದಿಂದ ಹಿಮ್ಮೆಟ್ಟಿಸುವುದರಲ್ಲೂ ಫ್ರೆಂಚರೂ ಬ್ರಿಟಿಷರೂ ಹಿಂದೂಸ್ಥಾನದವರೂ ಅತ್ಯಂತ ಪರಾಕ್ರಮವನ್ನು ಪ್ರಕಾಶಪಡಿಸಿರುತ್ತಾರೆನ್ನುವುದೂ ತಿಳಿಯಲಾಗಿದೆ. ಇವರುಗಳಿಗೆ ಇಷ್ಟು ಸಾಹಸ ಪಟ್ಟದ್ದರಲ್ಲಿ ತುಂಬಾ ಅನುಕೂಲವಾಗಿರುತ್ತದೆ. ಸೈನಿಕರು ಹಲವು ದಿನಗಳ ತನಕ ನೀರೂ ಕೆಸರೂ ತುಂಬಿದ ಕಂದಕಗಳಲ್ಲಿ ಇದ್ದುಕೊಂಡು ಬರಬೇಕಾಯಿತು; ಇದಲ್ಲದೆ ಶೀತವೂ ಚಳಿಯೂ ಸಹಿಸಕೂಡದಷ್ಟಾಯಿತು. ಕಂದಕಗಳಲ್ಲಿ ಸೈನಿಕರು ಚಳಿಯಿಂದ ಮರಗಟ್ಟಿಹೋಗಿದ್ದ ಕಾರಣ ಹಲವರನ್ನು ಹೊರಕ್ಕೆ ಎತ್ತಿ ಹೊರಿಸಿಕೊಂಡು ಬರಬೇಕಾಯಿತು. ಹಗಲೂ ರಾತ್ರಿ ನಿಲುಗಡೆಯಿಲ್ಲದೆ ಯುದ್ಧಕಾರ್ಯಗಳು ನಡೆಯುತ್ತಾ ಬಂದವು. ಅದರಿಂದ ಸೈನಿಕರಿಗೆ ಅಲ್ಪಸ್ವಲ್ಪವಾದರೂ ವಿಶ್ರಾಂತಿಯಾಗಲಿ ನಿದ್ದೆಯಾಗಲಿ ಅವಕಾಶವೇ ಇರಲಿಲ್ಲ. ನಮ್ಮ ಕಡೆಯ ಸೈನಿಕರೆಲ್ಲಾ ಅನೇಕ ಕಷ್ಟಗಳನ್ನು ಸಹಿಸಿಕೊಂಡು ಬಹಳ ಪರಾಕ್ರಮದಿಂದ ಯುದ್ಧಮಾಡಿದರು; ದಳಪತಿಯಾದ ಸರ್ ಜಾನ್ ಫ್ರೆಂಚ್‍ರವರು—ಬ್ರಿಟಿಷ್ ಸೈನ್ಯದ ಯಾವ ಕಾಲದ ಚರಿತ್ರೆಯಲ್ಲಾಗಲಿ ಇಷ್ಟು ಸ್ತೋತ್ರಾರ್ಹವಾದ ಪರಾಕ್ರಮ ಕಾರ್ಯಗಳು ನಡೆದಿರುವುದುಂಟೇ ಎಂದು ಸಂಶಯಪಡಬೇಕಾಗಿದೆ ಎಂದು ಹೇಳುತ್ತಾರೆ.

ನಮ್ಮ ಹಿಂದೂಸ್ಥಾನದ ಸೈನಿಕರು ಅಷ್ಟು ಚೆನ್ನಾಗಿ ಯುದ್ಧಮಾಡುತ್ತಿದ್ದರೆಂದು ಕೇಳುವುದಕ್ಕೆ ಸಂತೋಷವಾಗುತ್ತದೆ. ಇವರು ಕಂದಕಗಳಲ್ಲಿ ಸೈತ್ಯಬಾಧೆ ಮೊದಲಾದ ಕಷ್ಟ ಸಂಕಟಗಳನ್ನು ಅನುಭವಿಸಬೇಕಾಯಿತಾದರೂ ಎಲ್ಲವನ್ನು ಬಹಳ ಪರಾಕ್ರಮದಿಂದ ಸಹಿಸಿಕೊಂಡು ಬಂದಿದ್ದಾರೆ. ಇವರಲ್ಲಿ ಗೂರ್ಖಾ ಜಾತಿಯ ಹವಾಲ್ದಾರ್ ಗಂಗಾಸಿಂಗ್ ಎಂಬಾತನಿಗೆ "ವಿಕ್ಟೋರಿಯಾ ಕ್ರಾಸ್" ಎಂಬ ಬಿರುದು ಕೊಡಬೇಕೆಂದು ಶಿಫಾರಸು ಆಗಿದೆ. ಇದು ಬ್ರಿಟಿಷ್ ಸೈನ್ಯದಲ್ಲಿ ಪರಾಕ್ರಮಿ ಎನಿಸಿಕೊಂಡ ಯುದ್ಧಭಟನಿಗೆ ಕೊಡಬಹುದಾದ ಬಿರುದುಗಳಲ್ಲೆಲ್ಲಾ ಅತ್ಯಂತ ಘನತರವಾದ ಬಿರುದು. ಈ ಯುದ್ಧಭಟನು ಪಂಜಾಬ್ ಆಧಿಪತ್ಯದಲ್ಲಿ ಕಾಂಗ್ರಾ ಡಿಸ್ಟ್ರಿಕ್ಟಿನೊಳಗಿನ ಟಿಕ್ಕಾ ಎಂಬ ಊರಿನವನೆಂದು ತಿಳಿಯುವುದು. ಈತನು ನಡಿಸಿದ ಪರಾಕ್ರಮಕಾರ್ಯವೇನೆಂದರೆ, ಈ ಹವಾಲ್ದಾರನು ಕಂದಕದಲ್ಲಿ ಒಂದು ಕಡೆ 16 ಸಿಪಾಯಿಗಳನ್ನಿಟ್ಟುಕೊಂಡಿದ್ದನು. ಜರ್ಮನಿಯವರು ಇವರ ಮೇಲೆ ನುಗ್ಗಿಬಂದು ಯುದ್ಧಮಾಡಿದರು. ಜರ್ಮನಿಯ ಒಬ್ಬ ಹುದ್ದೇದಾರನು ಈ ಹವಾಲ್ದಾರನ ತಲೆಗೆ ಗುರಿಯಿಟ್ಟು ರಿವಾಲ್ವರ್ ಎಂಬ ಪಿಸ್ತೂಲಿನಿಂದ ಹೊಡೆದನು. ಆ ಏಟು ಅವನಿಗೆ ಬಿದ್ದರೂ ಲಕ್ಷ್ಯವಾದದೆ ಅವನು ಆ ಹುದ್ದೇದಾರನಿಗೆ ಗುಂಡುಹೊಡೆದು ಅವನನ್ನು ಕೊಂದು ಮಲಗಿಸಿದನು. ಇದಲ್ಲದೆ ಅವನ ಕೈಲಿದ್ದ ಕತ್ತಿಯನ್ನು ಕಿತ್ತುಕೊಂಡು, ಹತ್ತು ಜನ ಜರ್ಮನಿಯವರನ್ನು ಕಡಿದುಹಾಕಿದನು. ಇಷ್ಟಾಗುವಾಗ್ಗೆ ಇವನ ಕಾಲಿಗೆ ಗುಂಡು ಬಿದ್ದು ಗಾಯವಾದದ್ದರಿಂದ ಅವನು ಕಾದಾಡುವುದನ್ನು ನಿಲ್ಲಿಸಬೇಕಾಯಿತು. ಅವನಿಗೆ ಐದು ಕಡೆ ಗಾಯಗಳಾಗಿವೆ. ಅವನ ಕೈಕೆಳಗಿದ್ದ ಸಿಪಾಯಿಯರೆಲ್ಲಾ ಕೊಲೆಯಾದರೆಂದು ಹೇಳಲಾಗಿದೆ.

ಹೈದರಾಬಾದ್ ಸಂಸ್ಥಾನದ ನೈಜಾಮರವರು ಸಹಾಯಮಾಡಿದ್ದರಿಂದ ಗಾಯಪಟ್ಟ ಹಿಂದೂಸ್ಥಾನದ ಸಿಪಾಯಿಗಳನ್ನು ಯುದ್ಧಭೂಮಿಯಿಂದ ಸಾಗಿಸುವಂಥಾ ಮೋಟರ್ ಅಂಬ್ಯುಲೆನ್ಸ್ ಗಾಡಿಯು ಒದಗಿಸಲ್ಪಟ್ಟಿದೆ.

ಈ ಕಡೆಯ ಯುದ್ಧಭೂಮಿಯು ಕಳೆದ ವಾರ ಶಾಂತವಾಗಿದ್ದಿತೆಂದು ಹೇಳಿದ್ದಾದರೂ ಫಿರಂಗಿ ಗುಂಡುಗಳ ಹಾರಾಟಕ್ಕೆ ನಿಲುಗಡೆಯೇ ಇರಲಿಲ್ಲ. ಅನೇಕ ಸೈನಿಕರು ಅದರಿಂದ ದಿನಾಲೂ ಕೊಲೆಯಾಗುತ್ತಲೂ, ಗಾಯಪಡುತ್ತಲೂ ಇದ್ದಾರೆ.

...ಬೇರೊಂದು ಸಮಯದಲ್ಲಿ ಕಾಲ್ಬಲದವರು ಮೇಲೆ ಬಿದ್ದು ಯುದ್ಧಮಾಡು ವರು. ಆದರೆ ಜರ್ಮನ ಸೈನಿಕರನ್ನು ಪ್ರತಿ ಒಂದು ವೇಳೆಯೂ ನಮ್ಮವರು ಹಿಮ್ಮೆಟ್ಟಿಸಿ ಓಡಿಸುತ್ತಾರೆ; ಇಷ್ಟೇ ಅಲ್ಲದೆ ಶತ್ರುವಿನ ಸ್ಥಾನಗಳಲ್ಲಿ ಕೆಲವನ್ನು ಸ್ವಾಧೀನಪಡಿಸಿಕೊಂಡಿದಾರೆ.

ಜರ್ಮನಿಯವರು ಹಾಲೆಂಡಿನ ಸಮುದ್ರತೀರದಲ್ಲಿರುವ ಜ್ಹೀಬ್ರುಗ್ಗೆ ಎಂಬ ಸ್ಥಳದ ತೀರಪಟ್ಟಣದಲ್ಲಿ ತಮ್ಮ ಸಬ್‌ಮೆರೀನ್ ಎಂಬ ನಾವೆಗಳ ಠಾಣ್ಯವನ್ನು ಮಾಡಿಕೊಳ್ಳಬೇಕೆಂದು ಪ್ರಯತ್ನಪಟ್ಟಿದ್ದನ್ನು ಕಂಡು ಬ್ರಿಟಿಷರು ಆ ತೀರಪಟ್ಟಣಕ್ಕೆ ತಮ್ಮ ಯುದ್ಧದ ಜಹಜುಗಳಿಂದ ಫಿರಂಗಿ ಗುಂಡುಗಳನ್ನು ಹೊಡೆದರು. ಬ್ರಿಟಿಷ್ ಜಹಜುಗಳಿಂದ ಬಿದ್ದ ಈ ಗುಂಡುಗಳು ಆ ಪಟ್ಟಣದಲ್ಲಿ ಜರ್ಮನಿಯವರು ಕಟ್ಟಿಕೊಂಡಿದ್ದ ಹಲವು ಕಟ್ಟಡಗಳನ್ನು ನಾಶಪಡಿಸಿದವೆಂದು ತಿಳಿಯುವುದು.

ರಷ್ಯಾ, ಜರ್ಮನಿ ಮತ್ತು ಆಸ್ಟ್ರಿಯಾ.

ಪೂರ್ವದಿಕ್ಕಿನ ಯುದ್ಧರಂಗದಲ್ಲಿ ನಡೆದಿರುವ ವಿದ್ಯಮಾನಗಳೇನೋ ತಂತೀ ವರ್ತಮಾನಗಳಿಂದ ಸ್ಪಷ್ಟವಾಗಿ ತಿಳಿಯುವುದು ಕಷ್ಟ. ಪೂರ್ವಪ್ರಷ್ಯಾದಲ್ಲಿ ಏನು ನಡೆಯಿತೋ ವರ್ತಮಾನವೇ ಬಂದಿಲ್ಲ. ಆದರೆ ಪೋಲೆಂಡಿನ ಅನೇಕ ಸ್ಥಳಗಳಲ್ಲಿ ಹಲವು ಘೋರ ಯುದ್ಧಗಳು ಆಗಿವೆ; ಇವುಗಳಲ್ಲಿ ಬಹು ತರವಾಗಿ ರಷ್ಯಾದವರಿಗೇ ಅನುಕೂಲವಾಗಿರುವಂತೆ ಕಾಣುವುದು. ಒಂದಾನೊಂದು ತಂತೀ ವರ್ತಮಾನವು ರಷ್ಯಾದವರು ಒಂದು ದಿನ 3,000 ಸೈನಿಕರನ್ನೂ, ಇನ್ನೊಂದು ದಿನ 5,000 ಸೈನಿಕರನ್ನೂ, ಮತ್ತೊಂದು ದಿನ 6,000 ಸೈನಿಕರನ್ನೂ ಕೈಸೆರೆ ಹಿಡಿದು ತಂದರೆಂದೂ; ಇನ್ನೊಂದು ದಿನ ಒಬ್ಬ ದಳಪತಿ (ಜನರಲ್) ಯನ್ನೂ, 40 ಜನ ಉದ್ಯೋಗಸ್ಥರನ್ನೂ, 3,500 ಸೈನಿಕರನ್ನೂ ಅಲ್ಲದೆ ಮೂರು ರೈಲ್ವೆ ಗಾಡಿಗಳನ್ನೂ ಅನೇಕ ಫಿರಂಗಿಗಳನ್ನೂ ಹಿಡಿದು ಸ್ವಾಧೀನಪಡಿಸಿಕೊಂಡರೆಂದೂ; ಮತ್ತೊಂದು ದಿನ 8,000 ಸೈನಿಕರನ್ನು ಅಂದರೆ ಮುದ್ದೇದಾರರ ಸಮೇತ ಎರಡು ರೆಜಿಮೆಂಟ್ ಸೈನಿಕರು ನೇರ ಕೈಸೆರೆ ಹಿಡಿದುಕೊಂಡರೆಂದೂ ಹೇಳುತ್ತದೆ. ಈ ಸುದ್ದಿಗಳಲ್ಲಿ ಒಂದಾವರ್ತಿ ಹೇಳಿದವರನ್ನು ಇನ್ನೊಂದಾವರ್ತಿ ಹೇಳಿದವರಲ್ಲಿ ಸೇರಿಸುತ್ತಾರೆಯೋ ಹೇಳಲಾಗದು. ಆದರೆ ಸಾಮಾನ್ಯವಾಗಿ ಕಾಣಬರುವುದೇ ನೆಂದರೆ, ಕಳೆದ ಎಂಟು ಹತ್ತು ದಿನಗಳಲ್ಲಿ ಜರ್ಮನಿಯವರಿಗೂ ಆಸ್ಟ್ರಿಯಾ ದವರಿಗೂ ತುಂಬಾ ಸೋಲಾಗಿರಬೇಕು. ರಷ್ಯಾದವರೂ ಅಷ್ಟೇನೂ ಮುಂದಕ್ಕೆ ನುಗ್ಗಿ ಹೋಗಿರುವಂತೆ ಕಾಣುವುದಿಲ್ಲ. ಆದರೂ ಯುದ್ಧಗಳು ಘೋರವಾಗಿ ನಡೆದದ್ದರಲ್ಲಿ ರಷ್ಯಾದವರಿಗೆ ಅನುಕೂಲವಾಗಿಯೇನೋ ಇದೆ. ಜರ್ಮನಿಯವರು ಕೌಶಲವನ್ನು ಪ್ರಕಾಶಪಡಿಸಿ ತಮ್ಮ ಠಾಣ್ಯಗಳನ್ನು ಬಿಟ್ಟುಕೊಡದೆ ಪರಾಕ್ರಮದಿಂದ ಕಾದಾಡುತ್ತಿದಾರೆ. ಆದರೂ ಅವರಿಗೆ ತುಂಬಾ ನಷ್ಟವಾಗುತ್ತಿರುವುದು. ಅವರ ಕಡೆ ಅನೇಕರು ಕೊಲೆಯಾದರು, ಗಾಯಪಟ್ಟರು; ಸುಮಾರು 30-40 ಸಾವಿರ ಸೈನಿಕರು ರಷ್ಯಾದವರಿಗೆ ಕೈಸೆರೆ ಸಿಕ್ಕಿಬಿದ್ದರು.

ಟರ್ಕಿ.

ಈಜಿಪ್ಟಿನೊಳಗೆ ಸೂಯೆಸ್ ಕಾಲುವೆಯ ಪೂರ್ವದಿಕ್ಕಿನಲ್ಲಿ ಸುಮಾರು 30 ಮೈಲಿ ದೂರದಲ್ಲಿ ಕಳೆದ ವಾರ ಕೆಲವು ಕದನಗಳು ನಡೆದಂತೆ ಹೇಳಲಾಗಿದೆ. ಬ್ರಿಟಿಷರ ಕಡೆ ಬಿಕಾನೀರ್ ಸಂಸ್ಥಾನದ ಒಂಟೆಗಳ ಸೈನಿಕರು ಬಹು ಪರಾಕ್ರಮವಾಗಿ ಯುದ್ಧಮಾಡಿ ಶತ್ರು ಸೈನ್ಯದಲ್ಲಿ ಸುಮಾರು 70 ಮಂದಿ ಬೆಡೊಯಿನ್ ಜನರನ್ನೂ, 3 ನಾಯಕರನ್ನೂ ಕೊಂದುಹಾಕಿದಾರೆ. ಈ ಮೂರು ಮಂದಿಯ ಪೈಕಿ ಒಬ್ಬನು ಟರ್ಕಿ ಸರ್ವಸೇನಾಪತಿಯಾದ ಸರ್ ಫಿ ಪಾಷಾರವರ ಸಹೋದರನೆಂದು ಗೊತ್ತಾಗಿದೆ.

ಅರ್ಮೀನಿಯಾದಲ್ಲಿ ಪರ್ವತಗಳ ಮಧ್ಯೆ ಯುದ್ಧಮಾಡುವುದು ತುಂಬಾ ಪ್ರಯಾಸವಾಗಿದ್ದರೂ ರಷ್ಯಾದವರು ಟರ್ಕಿಯವರನ್ನು ಸೋಲಿಸಿಬಿಟ್ಟರು. ಅನೇಕ ಟರ್ಕಿ ಸೈನಿಕರು ಯುದ್ಧಮಾಡುವುದಕ್ಕೆ ಇಷ್ಟಪಡದೆ ಸೈನ್ಯವನ್ನು ಬಿಟ್ಟುಹೋಗುತ್ತಿದಾರೆಂದು ವರ್ತಮಾನವಿದೆ.

ಬಾಸ್ರ ಎಂಬಿಯ ಸಮೀಪದಲ್ಲಿರುವ ಬಾಸ್ರಾ ಪಟ್ಟಣವು ಇನ್ನೂ ಬ್ರಿಟಿಷರ ಸ್ವಾಧೀನದಲ್ಲಿದೆ ಎಂದೂ, ಅವರು ಅಲ್ಲಿ ಎಂಟು ಫಿರಂಗಿಗಳನ್ನು ಕಿತ್ತಿಟ್ಟು ಕೊಂಡಿದಾರೆಂದೂ ತಿಳಿದು ಬರುತ್ತದೆ.

ಸರ್ವಿಯಾ ಮತ್ತು ಮಾಂಟೆನೀಗ್ರೋ.

ಈ ಪ್ರದೇಶಗಳಿಂದ ಬಂದಿರುವ ವರ್ತಮಾನಗಳು ಬಹಳ ಸ್ವಲ್ಪ. ರಷ್ಯಾದಿಂದ ಬಂದಿರುವ ಒಂದು ತಂತೀ ವರ್ತಮಾನವು ಆಸ್ಟ್ರಿಯಾದವರು ಸರ್ವಿಯಾ ದೊಳಕ್ಕೆ ಏನು ಅರ್ಮಿ ಕೋರ್ ಎನ್ನುವಷ್ಟು ಅಪಾರವಾದ ಸೈನ್ಯಗಳನ್ನು ಕಳುಹಿಸಿದಾರೆಂದೂ, ಅಲ್ಲಿ ಒಂದು ದೊಡ್ಡ ಯುದ್ಧ ನಡೆಯುತ್ತಿದೆ ಎಂದೂ ತಿಳಿಸುವುದು.

ಮಾಂಟಿನೀಗ್ರೋದವರು ಬೋಸ್ನಿಯಾ ಸೀಮೆಯ ಎಲ್ಲೆಕಟ್ಟಿನ ಬಳಿ ಆಸ್ಟ್ರಿಯಾದವರನ್ನು ಸೋಲಿಸಿದರೆಂದು ಹೇಳಲಾಗಿದೆ. ಇದರಿಂದ ಆಸ್ಟ್ರಿಯಾ ದವರು ಸೆರಜೀವೋ ನಗರದ ಬಳಿಯಿಂದ ಹೊರಟುಹೋಗಿದಾರೆಂದು ಗೊತ್ತಾಗುತ್ತದೆ. ಮಾಂಟಿನೀಗ್ರೋದವರು ಅನೇಕ ಸೈನಿಕರನ್ನು ಬಹಳ ಯುದ್ಧಸಾಮಗ್ರಿ ಗಳೊಡನೆ ಕೈಸೆರೆ ಹಿಡಿದುಕೊಂಡಿರುವಂತೆ ವರ್ತಮಾನ ಬಂದಿದೆ.

ಆಫ್ರಿಕಾದಲ್ಲಿ.

ಆಫ್ರಿಕಾದಿಂದ ಬಂದಿರುವ ಸುದ್ದಿಯು ಬಹಳ ಸ್ವಲ್ಪ. ಪೂರ್ವ ಆಫ್ರಿಕಾ ದಲ್ಲಿ ಬ್ರಿಟಿಷರಿಗೆ ಆದ ನಷ್ಟ ವಿಶೇಷವೇನೂ ಕಾಣುವುದು.

ದಕ್ಷಿಣ ಆಫ್ರಿಕಾದಲ್ಲಿ ದಂಗೆಯೆದ್ದವರ ಪೈಕಿ ಡಿವೆಟ್ ಎಂಬೊಬ್ಬ ಮುಖಂಡನು ತನ್ನ ಜನಗಳ ಸಂಗಡ ತಲೆತಪ್ಪಿಸಿಕೊಂಡು ಓಡಿಹೋಗಿದಾನೆ.

ಸಮುದ್ರದ ಮೇಲೆ.

ಸ್ಕಾಟ್‌ಲೆಂಡಿನ ಉತ್ತರ ಸಮುದ್ರತೀರದ ಅಟಿ ಸ್ವಲ್ಪ ದೂರದಲ್ಲಿ ಜರ್ಮನಿಯವರ ಒಂದು ಸಬ್‌ಮೆರೀನ್ ಹಡಗನ್ನು ನಾಶಮಾಡಿದರು. ಅದರಲ್ಲಿದ್ದ 27 ಜನರನ್ನು ಕರೆದುತಂದು ಬದುಕಿಸಿದರು. ಒಬ್ಬ ಮಾತ್ರ ಮುಳುಗಿ ಸತ್ತನು. ಅವರನ್ನು ಈಗ ಕೈಸೆರೆ ಹಿಡಿದು ಇಟ್ಟುಕೊಂಡಿದಾರೆ.

ಡೆನ್ಮಾರ್ಕಿನ ಸಮುದ್ರ ತೀರದಲ್ಲಿ ಜರ್ಮನಿಯವರ ಡಿಸ್ಟ್ರಾಯರ್ ಎಂಬ ಹಡಗನ್ನು ಮುಳುಗಿಸಿಬಿಟ್ಟರು. ಅದು ಡೇನಿಷ್ ಜಹಜಿಗೆ ಬಡಿದು ಮುಳುಗಿದಂತೆ ತಿಳಿಯುತ್ತದೆ.

ಥೇಮ್ಸ್ ನದೀ ಮುಖದಲ್ಲಿ ಷೀರ್‌ನೆಸ್ ಎಂಬಲ್ಲಿ ಬುಲ್ವಾರ್ಕ್ ಎಂಬ ಬ್ರಿಟಿಷರ ಒಂದು ಯುದ್ಧದ ಜಹಜಿಗೆ ಯುದ್ಧ ಸಾಮಗ್ರಿಗಳನ್ನು ಸಾಗಿಸುತ್ತಿರುವಾಗ ಅದು ಒಡೆದು ಹಾಳಾಯಿತು. ಆಗ ಅದರಲ್ಲಿದ್ದ ಸುಮಾರು 700 ಜನಗಳ ಪೈಕಿ 14 ಮಂದಿ ಮಾತ್ರ ಬದುಕಿಬಂದರು. ಇದು ಏನೋ ಅಜಾಗರೂಕತೆಯಿಂದ ನಡೆದ ಆಕಸ್ಮಿಕ ಅಪಾಯವೆಂದು ಊಹಿಸಲ್ಪಟ್ಟಿದೆ.

ಜರ್ಮನಿಯವರ ಒಂದು ಸಬ್‌ಮೆರೀನ್ ಹಡಗು ಫ್ರಾನ್ಸಿನ ಉತ್ತರ ಸಮುದ್ರ ತೀರದ ಬಳಿ ಎರಡು ವ್ಯಾಪಾರದ ಜಹಜುಗಳನ್ನು ಮುಳುಗಿಸಿರುತ್ತದೆ. ಅವುಗಳಲ್ಲಿದ್ದವರೆಲ್ಲಾ ಬದುಕಿಸಲ್ಪಟ್ಟರು.

ಬ್ರಿಟಿಷ್ ನಾವೆಯ ಇಲಾಖೆಯ ಅಧ್ಯಕ್ಷರಾದ ಮಿ॥ ವಿನ್‌ಸ್ಟನ್ ಚರ್ಚಿಲ್ ರವರು ಬ್ರಿಟಿಷರ ಒಟ್ಟು 10,123 ವ್ಯಾಪಾರದ ಹಡಗುಗಳಲ್ಲಿ 9,928 ಹಡಗು ಗಳು ಸರಕುಗಳನ್ನು ಸಾಗಿಸುತ್ತಿವೆ ಎಂದೂ, ಅತ್ತಲಾಗಿ ಜರ್ಮನಿಯವರ ಒಟ್ಟು 2,090 ವ್ಯಾಪಾರದ ಹಡಗುಗಳಲ್ಲಿ ಈಗ 10 ಹಡಗುಗಳು ಮಾತ್ರ ವ್ಯಾಪಾರ ಸರಕುಗಳನ್ನು ಸಾಗಿಸುವ ಹಾಗಾಗಿವೆ ಎಂದೂ ಹೇಳಿದಾರೆ. ಜರ್ಮನಿಯವರ ಉಳಿದ ಹಡಗುಗಳೆಲ್ಲಾ ಕೈಸೆರೆಯಾಗಿರುತ್ತವೆ; ಇಲ್ಲವೇ ಅಲ್ಲಲ್ಲಿ ತಡೆದಿಡ ಲ್ಪಟ್ಟಿವೆ.

ನಾರ್ವೆ ದೇಶದ ಎರಡು ಜಹಜುಗಳು 3,000 ಟನ್‌ಗಳ ತಾಂಬ್ರವನ್ನು ಜರ್ಮನಿಗೆ ಸಾಗಿಸಿಕೊಂಡು ಹೋಗುತ್ತಿದ್ದವು. ಅವೆರಡು ಹಡಗುಗಳನ್ನೂ ಹಿಡಿದುಕೊಂಡದ್ದಾಯಿತು. ಯುದ್ಧಸಾಮಗ್ರಿಗಳನ್ನು ತಯಾರುಮಾಡುವುದಕ್ಕೆ ಜರ್ಮನಿಯವರಿಗೆ ತಾಂಬ್ರವು ಬಹಳ ಅವಶ್ಯ ಬೇಕಾಗಿರುತ್ತದೆ.

ಇತರ ವಿಷಯಗಳು.

ಬ್ರಿಟಿಷರ ಎರಡು ವಿಮಾನ ಯಂತ್ರಗಳು ಫ್ರೆಡ್ರಿಕ್‌ಷೇಫನ್ ಎಂಬ ನಗರದ ಮೇಲಿನ ತನಕ ಅಂತರಿಕ್ಷದಲ್ಲಿ ಹೋದವು. ಅದು ಜರ್ಮನಿ ರಾಜ್ಯದೊಳಗೆ 120 ಮೈಲಿಯುಲ್ಲಿದೆ. ಆ ಯಂತ್ರಗಳು ಆ ನಗರದಲ್ಲಿ ಜರ್ಮನಿಯವರು ದೊಡ್ಡ ವಿಮಾನ ಯಂತ್ರಗಳನ್ನು ಮಾಡಿಡುವ ಕಾರ್ಖಾನೆಯೊಳಕ್ಕೆ ಸಿಡಿಮದ್ದಿನ ಗುಂಡುಗಳನ್ನು ಹಾಕಿದವು. ಅವುಗಳ ಉದ್ದೇಶವು ಸಾರ್ಥಕವಾಗಿ, ಆ ಕಟ್ಟಡದಲ್ಲಿ ಬಹಳ ಭಾಗವು ಕೆಟ್ಟು ಹಾಳಾಯಿತು. ಬ್ರಿಟಿಷ್ ವಿಮಾನಕಾರರಲ್ಲಿ ಒಬ್ಬನು ಕೈಸೆರೆ ಹಿಡಿಯಲ್ಪಟ್ಟನು; ಇನ್ನಿಬ್ಬರು ಸುರಕ್ಷಿತವಾಗಿ ವಾಪಸು ಬಂದರು.

ಪೋರ್ಚುಗಲ್ ರಾಜ್ಯದವರು ನಮ್ಮ ಸಹಾಯಕರಾಗಿ ನಿಲ್ಲುವೆವೆಂದು ತೀರ್ಮಾನಮಾಡಿದಾರೆ. ಇದರಲ್ಲಿ ಅಷ್ಟೇನೂ ವಿಶೇಷತೆ ಇಲ್ಲ. ಅವರು ಪೋರ್ಚುಗಲ್ ದೇಶದ ತೀರಗಳಲ್ಲಿರುವ ಜರ್ಮನಿ ಹಡಗುಗಳನ್ನು ವಶಮಾಡಿಕೊಳ್ಳಬಹುದು. ಪೋರ್ಚುಗೀಸರು ದಕ್ಷಿಣ ಆಫ್ರಿಕಾದಲ್ಲಿ ಬ್ರಿಟಿಷರಿಗೆ ಸಹಾಯಕರಾಗಿ ನಿಲ್ಲಬಹುದೆಂದು ಕಾಣುತ್ತದೆ.

ಬಲ್ಗೇರಿಯಾದಲ್ಲಿ ಗವರ್ನ್‌ಮೆಂಟಿನವರು ಯಾವ ಪಕ್ಷವನ್ನೂ ವಹಿಸದೆ ತಟಸ್ಥರಾಗಿರಬೇಕೆಂದು ಕುತೂಹಲಪಡುತ್ತಿರುವುದಾಗಿಯೂ, ಆದರೆ ಅಲ್ಲಿನ ಪಾರ್ಲಿಮೆಂಟಿನ ಅನೇಕ ಮೆಂಬರುಗಳೂ ಪ್ರಜೆಗಳೂ ಬ್ರಿಟಿಷ್, ಫ್ರೆಂಚ್ ಮತ್ತು ರಷ್ಯಾದವರಿಗೆ ಸಹಾಯಮಾಡಬೇಕೆಂದು ಅಪೇಕ್ಷಿಸುತ್ತಿರುವುದಾಗಿಯೂ ಸಮಾಚಾರವಿದೆ.

ನಮ್ಮ ವೈಸ್‌ರಾಯರವರು ಬ್ರಿಟಿಷರಿಗೂ ಟರ್ಕಿಯವರಿಗೂ ಶತ್ರುತ್ವ ವುಂಟಾಗಿದೆ ಎಂಬ ಸಂಗತಿಯನ್ನು ಅಫ್ಘಾನಿಸ್ಥಾನದ ಅಮೀರರಿಗೆ ತಿಳಿಸಿದ್ದಕ್ಕೆ ಅವರು ಈ ಸುದ್ದಿಯನ್ನು ಕೇಳಿ ವ್ಯಸನಪಡುವುದಾಗಿಯೂ, ಟರ್ಕಿಯವರು ಜರ್ಮನಿಯವರ ಕೂಡ ಸೇರಿಕೊಂಡದ್ದು ಅವಿವೇಕವೆಂದೂ, ಈ ಕಾದಾಟದಲ್ಲಿ ತಾವು ಯಾರ ಕಡೆಯೂ ಸೇರದೆ ಪ್ರತ್ಯೇಕವಾಗಿರುತ್ತೇವೆಂದೂ ವೈಸ್‌ರಾಯರವರಿಗೆ ಜವಾಬು ಕಳುಹಿಸಿರುತ್ತಾರೆ.

ಕೈಸೆರೆ ಹಿಡಿದ ಸುಮಾರು 2,000 ಜರ್ಮನಿ ಸೈನಿಕರನ್ನು ಬ್ರಿಟಿಷರು ಇಂಗ್ಲೆಂಡಿಗೂ ಐರ್ಲೆಂಡಿಗೂ ಮಧ್ಯೆ ಇರುವ ಐಲ್ ಆಫ್ ಮ್ಯಾನ್ ಎಂಬ ದ್ವೀಪದಲ್ಲಿ ಇಟ್ಟಿದಾರೆ. ಆ ಜರ್ಮನಿಯವರು ತಪ್ಪಿಸಿಕೊಂಡು ಹೋಗುವುದಕ್ಕೆ ಪ್ರಯತ್ನಪಟ್ಟಾಗ ಅವರ ಮೇಲೆ ಪಹರೆ ಕಾಯುತ್ತಿದ್ದ ಬ್ರಿಟಿಷ್ ಸಿಪಾಯಿಯು ಅವರ ಮೇಲೆ ಗುಂಡು ಹೊಡೆಯಬೇಕಾಯಿತು. ಖೈದಿಗಳಲ್ಲಿ ಐದು ಮಂದಿ ಮೃತಪಟ್ಟರು; ಹನ್ನೆರಡು ಜನರಿಗೆ ಗಾಯಗಳಾದವು. ಉಳಿದವರೆಲ್ಲಾ ಸುಮ್ಮನಾದರು.

ಅಮೇರಿಕಕ್ಕೆ ಸೇರಿದ ಸಂಯುಕ್ತ ಸಂಸ್ಥಾನಗಳಿಂದ 1,00,000 ಜನರು ಕೆನಡಾ ಎಂಬ ಇಂಗ್ಲಿಷ್ ಸ್ವಾಸ್ಥ್ಯಕ್ಕೆ ಹೋಗಿ ಸೈನ್ಯದಲ್ಲಿ ಸೇರಿಕೊಂಡು ಜರ್ಮನಿಯವರ ಮೇಲೆ ಯುದ್ಧಮಾಡುವುದಕ್ಕೆ ಸಿದ್ಧರಾಗಿದಾರೆಂದು ತಿಳಿದುಬಂದಿದೆ.

ಎಮ್‌ಡೆನ್ ಜಹಜನ್ನು ಹಿಡಿದ ವಿಚಾರವು.

ಜರ್ಮನಿಯವರ ಎಮ್‌ಡೆನ್ ಎಂಬ ಯುದ್ಧದ ಜಹಜನ್ನು ಹಿಡಿದು ಸುಟ್ಟುಹಾಕಿದ ವೃತ್ತಾಂತವನ್ನು ಮೊದಲೇ ತಿಳಿಸಿದೇವೆ. ಈ ವಿಷಯದಲ್ಲಿ ಈಚೆಗೆ ತಿಳಿದ ಸಂಗತಿಗಳೇನೆಂದರೆ—ಕಳೆದ ನೊವೆಂಬರ್ ತಾ. 9 ನೇ ಸೋಮವಾರ ಬೆಳಿಗ್ಗೆ 7 ಗಂಟೆಗೆ ಎಮ್‌ಡೆನ್ ಎಂಬ ಜಹಜು ಕೋಕೋ ದ್ವೀಪಗಳ ಬಳಿ ಇದೆ ಎಂಬ ತಂತೀವರ್ತಮಾನವು ಆಸ್ಟ್ರೇಲಿಯದ ಸಿಡ್ನಿ ಎಂಬ ಜಹಜಿಗೆ ತಲುಪಿತು. ಸಿಡ್ನಿಯು ಆ ಕೂಡಲೇ ಅತ್ಯಂತ ವೇಗವಾಗಿ ಆ ದ್ವೀಪಗಳ ಬಳಿಗೆ ಹೋಯಿತು. ಸುಮಾರು 9½ ಗಂಟೆ ಹೊತ್ತಿನಲ್ಲಿ ಅದು ಎಮ್‌ಡೆನ್ ಜಹಜನ್ನು ಕಂಡು ಅದರ ಮೇಲೆ ಯುದ್ಧಮಾಡಲಾರಂಭಿಸಿತು. ಎಮ್‌ಡೆನ್ ಜಹಜು 10,000 ಗಜಗಳ ದೂರದಿಂದ ಅಂದರೆ ಸುಮಾರು ಆರು ಮೈಲಿ ಫಾಸಲೆಯಿಂದ ಸಿಡ್ನಿಯ ಮೇಲಕ್ಕೆ ಮೊದಲು ಗುಂಡುಹಾರಿಸಿತು. ಪ್ರಾರಂಭದಲ್ಲಿ ಅದರ ಗುಂಡುಗಳು ನೇರವಾಗಿ ಹೊಡೆಯಲ್ಪಟ್ಟದ್ದರಿಂದ ಅವು ಸಿಡ್ನಿ ಜಹಜಿಗೆ ಬಡಿದು ಸ್ವಲ್ಪ ನಷ್ಟಮಾಡಿತು. ಕೂಡಲೇ ಸಿಡ್ನಿ ಜಹಜಿನ ಫಿರಂಗಿ ಗುಂಡುಗಳು ಶತ್ರು ಜಹಜಿನ ಮೇಲೆ ಬೀಳಲಾರಂಭಿಸಿದವು. ಬಳಿಕ ಗುಂಡುಗಳ ಹಾರಾಟವು ಹೆಚ್ಚಿ, ಯುದ್ಧವು ಘೋರವಾಯಿತು. ಜಹಜುಗಳು ಸುತ್ತಿ ಸುತ್ತಿ ಬಂದು ಗುಂಡುಗಳನ್ನು ಹೊಡೆದವು. ಸಿಡ್ನಿಯ ಗುಂಡುಗಳು ಎಮ್‌ಡೆನ್ ಒಳಗೆ ಹೆಚ್ಚಾಗಿ ಬಿದ್ದು, ಅದರ ಹೊಗೆ ಹೋಗುವ ದೊಡ್ಡ ಕೊಳವೆಗಳನ್ನೂ, ಧ್ವಜಪಟಗಳನ್ನೂ ಕಂಭಗಳನ್ನೂ ಕೆಡವಿ ಹಾಳುಮಾಡಿದವು. ಆ ಜಹಜು ಬಹಳ ಮಟ್ಟಿಗೆ ಕೆಟ್ಟುಹೋಯಿತು. ಅದರೊಳಗೆ ಬೆಂಕಿಹತ್ತಿಕೊಂಡು ಉರಿ ಹೊರಟಿತು. ನಡಿಸುವವರು ಅದನ್ನು ದ್ವೀಪದ ಸಮೀಪಕ್ಕೆ ನಡಿಸಿಕೊಂಡು ಹೋದಾಗ ಅದು ನೆಲದ ಮೇಲೆ ತಳಹಿಡಿದು ನಿಂತುಬಿಟ್ಟಿತು.

ಬಳಿಕ ಸಿಡ್ನಿ ಜಹಜು ಎಮ್‌ಡೆನ್ ಜಹಜಿನ ಕೂಡ ಇದ್ದ ಹಡಗಿನ ಮೇಲೆ ನುಗ್ಗಿ ಹೋಗಿ ನೋಡುವಲ್ಲಿ ಆ ಹಡಗೂ ಬಹಳ ಕೆಟ್ಟುಹೋಗಿದ್ದುದರಿಂದ ಅದನ್ನು ಉಳಿಸಿ ತರುವುದು ಸಾಧ್ಯವಾಗಲಿಲ್ಲ. ಆಗ ಅದರೊಳಗಿದ್ದ ಜನರನ್ನು ಸಿಡ್ನಿಯು ಬದುಕಿಸಿತು. ಆ ಹಡಗು ಮುಳುಗಿಹೋಯಿತು.

ತರುವಾಯ ಸಿಡ್ನಿಯು ಎಮ್‌ಡೆನ್ ಬಳಿಗೆ ಬಂದು, ಅದರಿಂದ ಸಮುದ್ರದೊಳಗೆ ಬಿದ್ದುಬಿಟ್ಟಿದ್ದ ಜರ್ಮನಿಯವರನ್ನು ಬದುಕಿಸಬೇಕೆಂದು ಕೆಲವು ದೋಣಿಗಳನ್ನು ಕಳುಹಿಸಿ, ಎಮ್‌ಡೆನ್ ಜಹಜಿನ ಮೇಲೆ ಜರ್ಮನಿ ಬಾವುಟಾ ಇನ್ನೂ ಎತ್ತಿಕಟ್ಟಿದ್ದದ್ದನ್ನು ಕಂಡು, ಮತ್ತೆ ಅದರ ಮೇಲೆ ಗುಂಡು ಸುರಿಸಿತು. ಐದು ನಿಮಿಷಗಳಲ್ಲೇ ಎಮ್‌ಡೆನ್ ತನ್ನ ಬಾವುಟಾವನ್ನು ಇಳಿಸಿಕೊಂಡುಬಿಟ್ಟಿತು.

ಈ ಸಮುದ್ರ ಯುದ್ಧವು ಸುಮಾರು ಎರಡು ಗಂಟೆ ಹೊತ್ತು ನಡೆಯಿತು. ಅಷ್ಟರೊಳಗೆ ಎಮ್‌ಡೆನ್ ಜಹಜು 1,500 ಗುಂಡುಗಳನ್ನೂ, ಸಿಡ್ನಿಯು 700 ಗುಂಡುಗಳನ್ನೂ ಹೊಡೆದವೆಂದು ಹೇಳಲಾಗಿದೆ.

ಅದರಲ್ಲಿದ್ದ ಜರ್ಮನಿಯವರನ್ನು ಕೈಸೆರೆ ಹಿಡಿದುಕೊಂಡರು. ಈ ಎರಡು ಜಹಜುಗಳಲ್ಲೂ ಗಾಯಪಟ್ಟವರನ್ನು ಸಿಲೋನ್ ದ್ವೀಪದ ರಾಜಧಾನಿಯಾದ ಕೊಲಂಬೊ ನಗರಕ್ಕೆ ಸಾಗಿಸಿಕೊಂಡು ಬಂದಿದಾರೆ.

ಒಳದೇಶದ ವೃತ್ತಾಂತಗಳು.

ಈ ವಾರ ನಮ್ಮ ಪತ್ರಿಕೆಯು ಹತ್ತು ಪುಟಗಳುಳ್ಳದ್ದಾಗಿದೆ.

* * *

ಶ್ರೀಮನ್ ಮಹಾರಾಜರವರು ನಿನ್ನೆ ನಂಜನಗೂಡಿಗೆ ದಯಮಾಡಿದ್ದರು; ಮತ್ತೆ ಈ ದಿನವೂ ಚಿತ್ತೈಸುವರೆಂದು ಕೇಳುತ್ತೇವೆ. ಅವರು ಬರುವ ವಾರ ಬೆಂಗಳೂರಿಗೆ ದಯಮಾಡುತ್ತಾರೆಂಬ ವರ್ತಮಾನವಿದೆ.

* * *

ರಾಜಧಾನಿಯ ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟಿನಲ್ಲಿ ಸರಕಾರದವರು ಏರ್ಪಾಡು ಮಾಡಿರುವ ಪ್ರಕಾರ ವರ್ತಕರ ಲೆಕ್ಕಗಳು, ವ್ಯಾಪಾರಕ್ಕೆ ಸಂಬಂಧಪಡುವ ಭೂಗೋಳ, ಗುಜರಾತಿ ಮತ್ತು ಮರಾಟಿ ಭಾಷೆ, ವರ್ತಕತನದ ಕಾಗದ ಪತ್ರಗಳು, ಇವುಗಳನ್ನೆಲ್ಲಾ ಕನ್ನಡದಲ್ಲೂ ಬೇಕಾದವರಿಗೆ ಹೇಳಿಕೊಟ್ಟು ಕಲಿಸುತ್ತಾರೆ. ರಾಜಧಾನಿಯ ವರ್ತಕರು ಅಭಿವೃದ್ಧಿಗೆ ಬರುವುದಕ್ಕೆ ಇದರಿಂದ ತುಂಬಾ ಸಹಾಯವಾಯಿತು. ವರ್ತಕರು ತಮ್ಮ ಹುಡುಗರನ್ನು ಕಳುಹಿಸಿ ಕಲಿಸಬೇಕು ಮಾಡಿಸಿಕೊಳ್ಳುತ್ತಾರೆಂದು ನಿರೀಕ್ಷಿಸಲ್ಪಟ್ಟಿದೆ.

* * *

ಕಳೆದ ಭಾನುವಾರ ರಾಜಧಾನಿಯಲ್ಲಿ ಮೊಹರಂ ಕಡೇ ದಿನ ತಾಬೂತುಗಳ ಮತ್ತು ಗಿರೋವುಗಳ ಮೆರವಣಿಗೆಗಳು ಗಲಭೆಯಿಲ್ಲದೆ ನೆರವೇರಿದವು. ಈ ಸಲ ಅನೇಕರಿಗೆ ಲೈಸೆನ್ಸು ಕೊಟ್ಟಿರಲಿಲ್ಲವಾಗಿ, ತಮಾಷೆಗಳು ಹೆಚ್ಚಾಗಿರಲಿಲ್ಲ.

* * *

ಒಬ್ಬ ಬಾತ್ಮಿದಾರರಿಂದ—ಜಗಲೂರು ತಾಲ್ಲೂಕ್ ಸೊಕ್ಕೆಗ್ರಾಮಕ್ಕೆ ಅಮಲ್ದಾರ್ ಮ॥ ಸಿ. ರಾಮಚಂದ್ರರಾಯರು ಹೋಗಿ ಯೂನಿಯನ್ ಪ್ರಜೆಗಳನ್ನು ಕೂಡಿಸಿ ಯುದ್ಧವಿಚಾರವನ್ನು ತಿಳಿಸಿದ್ದರ ಮೇಲೆ ಜನಗಳು ರಿಲೀಫ್ ಫಂಡಿಗಾಗಿ 106 ರೂಪಾಯನ್ನು ಚಂದಾ ಕೂಡಿಸಿಕೊಟ್ಟು ನಮ್ಮ ಇಂಗ್ಲಿಷ್ ಪ್ರಭುಗಳಿಗೆ ಜಯವಾಗಲೆಂದು ಪ್ರಾರ್ಥಿಸಿದರು.

* * *

ರಾಜಧಾನಿಯ ರೈಲ್ವೆ ಸ್ಟೇಷನ್ನಿಂದ ಸಯ್ಯಾಜಿ ರಾವ್ ರೋಡಿನಲ್ಲಿ ಉದ್ದಕ್ಕೂ ಎರಡು ಕಡೆಗಳಲ್ಲೂ ಮ್ಯುನಿಸಿಪಾಲಿಟಿಯಿಂದ ಒಳ್ಳೊಳ್ಳೇ ಸಾಲು ಗಿಡಗಳನ್ನು ಹಾಕಿಸಬೇಕೆಂದು ಏರ್ಪಾಟಾಗಿದೆ. ಇದಕ್ಕೆ 1,692 ರೂಪಾಯಿ ಖರ್ಚಾಗುವುದು. ಈ ಪೈಕಿ 500 ರೂಪಾಯನ್ನು ಶ್ರೀಮನ್ ಮಹಾರಾಜರವರು ಉಚಿತವಾಗಿ ದಯಪಾಲಿಸುವಂತೆ ಅಪ್ಪಣೆಯಾಗಿರುತ್ತದೆ.

* * *

ಬೆಂಗಳೂರು ಅರಮನೆಯಲ್ಲಿ ಶ್ರೀಮದ್ಯುವರಾಜರವರ ಆಫೀಸಿನ ಪುಟ್ಟನಂಜನೆಂಬೊಬ್ಬ ದಲಾಯತನು ಅವರ ಪೆಟ್ಟಿಗೆಯನ್ನು ಎತ್ತಿಹಾಕಿ ಹಣ ಕಾಗದಪತ್ರ ಮುಂತಾದವುಗಳನ್ನು ದುರುಪಯೋಗ ಪಡಿಸಿದ್ದನೆಂದು ಪೋಲೀಸಿಗೆ ತಿಳಿದು ಬಂದದ್ದರ ಮೇಲೆ ಅವರು ಅವನನ್ನು ಹಿಡಿದು ಪತ್ತೆಕರಡೂದು ನಡಿಸಿದಾಗ ಆ ಮಾಲುಗಳೆಲ್ಲಾ ಅವನ ಬಳಿ ಸಿಕ್ಕಿದವೆಂದು ಹೊರಪಟ್ಟಿದೆ.

* * *

ಹೆಗ್ಗಡದೇವನಕೋಟೆ ತಾಲ್ಲೂಕಿಗೆ ಸೇರಿದ ಭೃಗುನದಿ ನಾಲಾ ಕಾಮಗಾರಿ ವಿಷಯದಲ್ಲಿ 30-40 ವರುಷಗಳಿಂದ ಚರ್ಚೆನಡೆಯುತ್ತಾ ಇದ್ದು ಈಗ ಅದು ಸ್ಯಾಂಕ್ಷನ್ ಆಗಿದೆ ಎಂದೂ, ಇದನ್ನು ಇನ್‌ಜನಿಯರ್ ಇಲಾಖೆಯವರು ಈ ಬೇಸಿಗೆಯೊಳಗೇ ಪ್ರಾರಂಭಿಸಿ ಬೇಗನೆ ಪೂರೈಸಿದರೆ ಆ ಪ್ರಾಂತ್ಯದವರಿಗೆ ತುಂಬಾ ಹಿತಕರವಾದೀತೆಂದೂ ಒಬ್ಬ ಬಾತ್ಮಿದಾರರು ಬರೆಯುತ್ತಾರೆ.

* * *

ಉಡುಪಿ ತಾಲ್ಲೂಕು ಪೆರಡೂರಿನಲ್ಲಿ ನಡೆಯುವ ರಥೋತ್ಸವ ಮತ್ತು ಜಾತ್ರೆ ಕಾಲದಲ್ಲಿ ಗೋಶಾಲೆಯಗಳ ಪ್ರದರ್ಶನವನ್ನು ನಡಸಬೇಕೆಂದು ಡಿಸ್ಟ್ರಿಕ್ಟ್ ಬೋರ್ಡಿನವರು ಏರ್ಪಾಡುಮಾಡಿದಾರೆ. ಈ ಜಾತ್ರೆಗೆ ತರಲ್ಪಡುವ ಗೋಶಾಲೆಯಗಳಿಗೆ ಮೂರು ದಿನ ಸರಕಾರದವರೇ ಬಿಟ್ಟಿಯಾಗಿ ಹುಲ್ಲು ಸೊಪ್ಪನ್ನು ಒದಗಿಸುವರು. ಈ ಜಾತ್ರೆಯು ಮುಂದಿನ ವರುಷ ಮಾರ್ಚಿ ತಾ. 13 ಕ್ಕೆ ಪ್ರಾರಂಭವಾಗುವುದು.

* * *

ಒಬ್ಬ ಬಾತ್ಮಿದಾರರು ಬರೆಯುವುದು.—ಇಂಪೀರಿಯಲ್ ಯುದ್ಧದ ರಿಲೀಫ್ ಫಂಡಿಗೆ ನವಂಬರ್ ತಾ 15 ರ ವರೆಗೆ ಮಾಲೂರು ತಾಲ್ಲೂಕು ಟ್ರೆಜರಿಗೆ ರೂ. 2,316-3-0 ಚಂದಾ ಹಣ ವಸೂಲಾಗಿರುತ್ತೆ. ಈ ವರ್ಷದ ಕಾಲಸ್ಥಿತಿಯನ್ನು ನೋಡಿ ಬಡಬಗ್ಗರಾದ ಪ್ರಜೆಗಳನ್ನು ಬಿಟ್ಟು ಪ್ರಮುಖರಾದವರನ್ನು ಮಾತ್ರ ಪ್ರೋತ್ಸಾಹಪಡಿಸಿ ವಸೂಲಿ ವಿಚಾರದಲ್ಲಿ ಲೋಪಬಾರದಂತೆ ಇತರರಿಗೆ ಅವಕಾಶಕೊಡದೆ ಖುದ್ದು ನಗೇವಾಣಿಯಿಂದ ತಾರತಮ್ಯವರಿತು ಚಂದಾ ವಸೂಲ್ಮಾಡಿದ ಅಮಲ್ದಾರ್ ಮಿ॥ ಎಸ್. ರಾಬರ್ಟ್ ಸಾಹೇಬರ ಏರ್ಪಾಡು ಸ್ತೋತ್ರಾರ್ಹವಾಗಿರುತ್ತೆ.

* * *

ರಾಜಧಾನಿಯ ಮಾರ್ಕೆಟ್ಟಿನ ಚೌಕವನ್ನು ವಿಸ್ತರಿಸಿ ಅಲಂಕಾರವಾಗಿ ಮಾಡುವುದಕ್ಕೆ 4 ಲಕ್ಷ ರೂಪಾಯಿ, ಕೋಟೆಯೊಳಗೆ ಉಳಿದಿರುವ ಮನೆಗಳನ್ನು ಒಡೆದು ಬೈಲನ್ನು ಚೊಕ್ಕಟವಾಗಿಯೂ ಸಮವಾಗಿಯೂ ಮಾಡುವುದಕ್ಕೆ 5 ಲಕ್ಷ ರೂಪಾಯಿ ಸ್ಯಾಂಕ್ಷನ್ ಆಗಿವೆ. ಇದಲ್ಲದೆ ಚಟ್ಟಹಳ್ಳಿ ಬಡಾವಣೆಯಲ್ಲಿ 1,000 ಹೊಸ ಮನೆಗಳನ್ನು ಕಟ್ಟಿಸಲು ಏರ್ಪಾಟಾಗಿದೆ. ಈ ಕಾಮಗಾರಿಗಳೆಲ್ಲಾ ಬಲು ಜಾಗ್ರತೆಯಾಗಿ ನಡೆಯಬೇಕೆಂದು ಹುಕುಂ ಕೊಟ್ಟಿದಾರೆ. ಪುಣ್ಯವಂತರಾದ ಗೃಹಸ್ಥರುಗಳಿಂದ ಕೆಲಕೆಲವು ಮನೆಗಳನ್ನು ಕಟ್ಟಿಸಿ ಬಾಡಿಗೆಗೆ ಕೊಡುವಂತೆ ಮಾಡಬೇಕೆಂದು ಪ್ರಯತ್ನಗಳು ನಡೆಯುತ್ತಿರುವವು.

* * *

ಮೈಸೂರು ವ್ಯವಸಾಯದ ಇಲಾಖೆ ಡೈರೆಕ್ಟರವರು ತಿಳಿಸುವುದೇನೆಂದರೆ— ಕಳೆದ ನವಂಬರು 16 ನೇ ತಾ. ನಿಂದ ನಡೆಯಬೇಕೆಂದು ವಿಧಾಯಕವಾಗಿದ್ದ ಹೆಬ್ಬಾಳಿನಲ್ಲಿ ಒಂದು ಪ್ಲೇಗು ಕೇಸು ಆದ ಪ್ರಯುಕ್ತ ನಿಲ್ಲಿಸಿದ್ದರಾಗಿ ಮತ್ತು ಕಬ್ಬಿನಕಾಯಿ ಸಂಬಂಧ ಸುಲಭ ಪಾಠವು ಮತ್ತು ಯಂತ್ರದಿಂದ ಕಬ್ಬುಮಾಡುವ ವಿಧಾನವನ್ನು ತೋರಿಸುವ ಸುಲಭ ಪಾಠವು ಸಹಾ ಹೆಬ್ಬಾಳ ಫಾರಂನಲ್ಲಿ ಈ ತಿಂಗಳು 7 ನೇ ತಾ. ಊಗಾಯಿತು ಪ್ರಾರಂಭಿಸಲ್ಪಡುವವು. ಈ ಪಾಠಗಳನ್ನು ಕೇಳಲಪೇಕ್ಷೆಯುಳ್ಳ ಸಂಸ್ಥಾನಾಮುಲ್ದಾರರೂ ಮತ್ತು ರೈತರು ಸಹಾ ನದರಿ ಪಾಠಗಳನ್ನು ಕೇಳಲು ಬರಲು ಅವರ ಊಟ ಮತ್ತು ಇರಲು ಸ್ಥಳ ವಗೈರೆಗೆ ತಕ್ಕ ಏರ್ಪಾಡು ಮಾಡತಕ್ಕ ಬಗ್ಗೆ ಮುಂಚಿತವಾಗಿ ನಮಗೆ ತಿಳಿಸತಕ್ಕದ್ದು.

* * *

ರಾಜಧಾನಿಯ ಮಹಮದೀಯ ದೊಡ್ಡ ಮನುಷ್ಯರೂ ಆ ಸಂಗಡ ಸಾಮಾನ್ಯ ಪ್ರಜೆಗಳು ಕಳೆದ ಶನಿವಾರ ಒಂದು ದೊಡ್ಡ ಸಭೆಯನ್ನು ನಡಿಸಿ, ಬಾಲ್ಕನ್ಸ್, ಫ್ರಾನ್ಸ್, ಬೆಲ್ಜಿಯಮ್ ಮೊದಲಾದ ಸ್ಥಳಗಳಲ್ಲಿ ಈಗ ನಡೆಯುತ್ತಿರುವ ಘೋರವಾದ ಯುದ್ಧಗಳ ವಿಷಯದಲ್ಲಿ ತಮಗುಂಟಾಗಿರುವ ಮನಃಖೇದವನ್ನು ಪ್ರಕಾಶಪಡಿಸಿ, ಬೇಗನೆ ಎಲ್ಲಾ ಕಡೆಗಳಲ್ಲೂ ಸಮಾಧಾನವು ನೆಲೆಗೊಳ್ಳುವಂತಾಗಲೆಂದು ಬಹುತರವಾಗಿ ಹಾರೈಸಿದರು. "ಟರ್ಕಿಯವರು ಬ್ರಿಟಿಷ್ ಗವರ್ನ್‌ಮೆಂಟಿನವರ ಮೇಲೆ ಯುದ್ಧಕ್ಕೆ ಹೊರಟಿದ್ದಾಗ್ಯೂ, ನಮ್ಮಗಳ ರಾಜಭಕ್ತಿ ಪ್ರೀತಿಗಳು ನಮ್ಮ ಮಹಾರಾಜರವರ ದೌಲತ್ತಿನಲ್ಲೂ ನಮ್ಮ ಬ್ರಿಟಿಷ್ ಗವರ್ನ್‌ಮೆಂಟಿನವರ ಆಳ್ವಿಕೆಯಲ್ಲೂ ಅಚಂಚಲವಾಗಿ ನೆಲೆಗೊಂಡಿರುತ್ತವೆ" ಎಂಬೀ ರೀತಿಯಾಗಿ ತೀರ್ಮಾನ ಮಾಡಿ, ಈ ತಮ್ಮ ಅಭಿಮತವನ್ನು ದಿವಾನ್‌ರವರ ಮೂಲಕ ನಮ್ಮ ಮಹಾರಾಜರವರಿಗೂ, ರೆಸಿಡೆಂಟರವರ ಮೂಲಕ ವೈಸ್‌ರಾಯರವರಿಗೂ ಅರಿಕೆಮಾಡಬೇಕೆಂದು ಇತ್ಯರ್ಥಮಾಡಿರುತ್ತಾರೆ. ಈ ಸಭೆಗೆ ರಿಟೈರ್ಡ್ ಪ್ರೊ॥ ಸೂಪರಿಂಟೆಂಡೆಂಟ್ ಮಿ॥ ಮಹಮದ್ ಜಾಫರ್ ಸಾಹೇಬರು ಪ್ರೆಸಿಡೆಂಟರಾಗಿದ್ದರು.

ಇಂಪೀರಿಯಲ್ ಇಂಡಿಯಾ ರಿಲೀಫ್ ಫಂಡು.

"ವೃತ್ತಾಂತ ಪತ್ರಿಕೆ" ಆಫೀಸ್ ಚಂದಾ ಪಟ್ಟಿ.

ಹಿಂದೆ ವಸೂಲಾಗಿರುವ ಚಂದಾ	ರೂ. 213-2-7
ರತ್ನಮ್ಮ, ಚನ್ನಪ್ಪಗೌಡರು, ಮಂಡಗದ್ದೆ	,, 3-0-0
ಜಮಾ ರೂಪಾಯಿ	216-2-7

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು.

ಕಳೆದ ಶನಿವಾರ ಮೈಸೂರು ಪಟ್ಟಣದ ಮ್ಯುನಿಸಿಪಲ್ ಮೀಟಿಂಗು ನಡೆಯಿತು. ಉತ್ಪತ್ತಿಯ ಅಕ್ಟ್ರಾಯಿ ಬಾಬಿನಲ್ಲಿ ಕಳೆದ ಅಕ್ಟೋಬರ್ ತಿಂಗಳಲ್ಲಿ ಸುಮಾರು 2,000 ರೂಪಾಯಿ ಕಡಿಮೆಯೂ, ಮೊಹತರ್ಫಾ ಬಾಬಿನಲ್ಲಿ ಸುಮಾರು 1,000 ರೂಪಾಯಿ ಜಾಸ್ತಿಯೂ ಆಯಿತೆಂದೂ, ಕನ್ಸರ್ವೆನ್ಸಿ ಸೆಸ್ಸು ವಸೂಲಾಗಲಿಲ್ಲವೆಂದೂ ಆಡಿಟರು ಬರೆದಿದ್ದರು. ಆ ತಿಂಗಳಲ್ಲಿ ಜನನ 170; ಮರಣ 350, ಈ ಪೈಕಿ ಪ್ಲೇಗ್ 76 ಎಂದು ಗೊತ್ತಾಯಿತು.—ನಲ್ಲೀ ನೀರಿನಲ್ಲಿ ಉದ್ಭವವಾದ ಸಣ್ಣ ಹುಳಗಳಿವೆ ಎಂದು ಮ॥ ಶ್ರೀಕಂಠಯ್ಯನವರು ಸೂಚಿಸಿದರು. ಹೆಲ್ತ್ ಆಫೀಸರು ನೀರನ್ನು ಪರೀಕ್ಷಿಸಿದೆ ಎಂದೂ, ಆ ಹುಳಗಳಿಂದ ಬಾಧಕವೇನೂ ಇಲ್ಲವೆಂದೂ, ಆದರೂ ಜನರು ಶೋಧಿಸಿ ಉಪಯೋಗಿಸಬೇಕೆಂದೂ ಹೇಳಿದರು.—ಮಾರ್ಕೆಟ್ಟಿನ ಹೊರಪಾರ್ಶ್ವದ ಅಂಗಡಿಗಳ ಬಾಡಿಗೆದಾರರು ಬಾಡಿಗೆಯನ್ನು ಕಮ್ಮಿ ಹಾಕಿಕೊಡಬೇಕೆಂದು ಅರ್ಜಿ ಬರೆದಿದ್ದರು. ಇದು ಆಗಲಾರದೆಂದು ತೀರ್ಮಾನವಾಯಿತು.—ಶ್ರೀರಂಗಪಟ್ಟಣದ ಕಡೆ ರೈತರು ಪ್ರತಿದಿನವೂ ರಾಜಧಾನಿಗೆ ಬಂದು ಗೊಬ್ಬರವನ್ನೂ ಕಸವನ್ನೂ ತುಂಬಿಕೊಂಡು ಹೋಗುವುದರಿಂದ ಅಂಥಾ ಪ್ರತಿ ಗಾಡಿಗೂ ಒಂದು ರೂಪಾಯಿ ರುಸುಂ ಹಾಕಿ ವಸೂಲ್ಮಾಡಬೇಕೆಂದು ಹೆಲ್ತ್ ಆಫೀಸರು ಸೂಚಿಸಿದರು. ಇದರ ಆಲೋಚನೆಗೆ ಒಂದು ಕಮಿಟಿ ನೇಮಿಸಲಾಯಿತು.—ಖಾಲಿ ಹಾತ್ ಸಿಬ್ಬಂದಿಗೆ ಇಬ್ಬರು ಮೇಸ್ತ್ರಿಗಳನ್ನೂ, 40 ಆಳುಗಳನ್ನೂ ನೇಮಿಸಿಕೊಂಡರೆ ಸಾಕೆಂದು ಮೆಂಬರುಗಳು ತೀರ್ಮಾನಮಾಡಿದರು.—10 ರೂಪಾಯಿನೊಳಗೆ ತಲಬುಳ್ಳ ಮುತ್ಸದ್ದಿಗಳಿಗೂ ಪೆನ್ಷನ್ ಬರುವಂತೆ ಮಾಡಿಕೊಡಬೇಕೆಂದು ಮೆಂಬರುಗಳು ಒಪ್ಪಿ ಸರ್ಕಾರಕ್ಕೆ ಸಿಫಾರಸು ಮಾಡಿದರು.—ಬೀದಿಗಳಲ್ಲಿದ್ದುಕೊಂಡು ಅಲೆಯುವ ದನಗಳನ್ನೂ ಕತ್ತೆಗಳನ್ನೂ ಹಿಡಿದು ದೊಡ್ಡಿಗೆ ಕೊಡುವುದಕ್ಕೆ 6 ಜವಾನರನ್ನು ತಲಾ 7 ರೂಪಾಯಿ ತಲಬಿನ ಮೇಲೆ ನೇಮಿಸಬೇಕೆಂದೂ, ಮೊದಲು ಮೂರು ದಿನಗಳ ತನಕ ಬೆಳಗಿನ ಹೊತ್ತು ಎಲ್ಲಾ ಮೊಹಲ್ಲಿಗಳಲ್ಲೂ ದಂಡೋರೆ ಮೂಲಕ ಈ ವಿಚಾರವನ್ನು ಪ್ರಜೆಗಳಿಗೆ ಸಾರಿಸಿ ತಿಳಿಸಬೇಕೆಂದೂ ತೀರ್ಮಾನವಾಯಿತು.

ಬಡಬಗ್ಗರ ಮನೆಗಳಿಗೆ ಕಿಟಕಿಗಳನ್ನು ಮಾಡಿಸುವುದಕ್ಕೆ 1,000 ರೂಪಾಯಿ ವಿನಿಯೋಗಿಸಬಹುದೆಂದು ಮೆಂಬರುಗಳು ಒಪ್ಪಿದರು. ಪಟ್ಟಣದ ಎಲ್ಲಾ ಕಡೆಗಳಲ್ಲೂ ನೀರು ನಿಲ್ಲುವ ಗುಂಡಿಗಳನ್ನು ಮುಚ್ಚಿಸಿ, ಸೊಳ್ಳೆಗಳ ಬೆಳವಣಿಗೆಯನ್ನು ಅಡಗಿಸಬೇಕೆಂದೂ, ಇದಕ್ಕಾಗಿ 16 ರೂಪಾಯಿ ತಲಬುಳ್ಳ ಒಬ್ಬ ಓವರ್ಸಿಯರ್‌ಯನ್ನೂ, 7 ರೂಪಾಯಿ ತಲಬಿನಂತೆ 6 ಆಳುಗಳನ್ನೂ ಏಳು ತಿಂಗಳ ತನಕ ನೇಮಿಸಿಕೊಳ್ಳಬಹುದೆಂದು ಹೆಲ್ತ್ ಆಫೀಸರಿಗೆ ಅಧಿಕಾರಕೊಟ್ಟರು.—ಸರ್ಕಾರದವರು ರಾಜಧಾನಿಯಲ್ಲಿ ಪ್ರಾರಂಭಿಸಬೇಕೆಂದಿರುವ ಸರಸ್ವತೀ ಭಂಡಾರಕ್ಕೂ ಫ್ರೀ ರೀಡಿಂಗ್ ರೂಮಿಗೂ ಸದ್ಯದಲ್ಲಿ ಮ್ಯುನಿಸಿಪಾಲಿಟಿಯಿಂದ ದ್ರವ್ಯ ಸಹಾಯ ಮಾಡಲಾಗುವುದಿಲ್ಲವೆಂದು ಅರಿಕೆಮಾಡುವಂತೆ ಇತ್ಯರ್ಥವಾಯಿತು.

ಮೈಸೂರು ಗೆಜೆಟ್ ಸಂಗ್ರಹ.

ದೊಡ್ಡಬಳ್ಳಾಪುರದ ತಾಲ್ಲೂಕು ಘಾಟಿ ಸುಬ್ರಹ್ಮಣ್ಯಸ್ವಾಮಿ ಜಾತ್ರೆಗೆ ಇದೇ ಡಿಸೆಂಬರ್ ತಾ. 22 ರಿಂದ 31 ರ ವರೆಗೆ ಪ್ಲೇಗ್ ಇರುವ ಸ್ಥಳದ ಯಾವ ಜನಗಳನ್ನೂ ಬಿಡುವುದಿಲ್ಲವೆಂದು ತಿಳಿಯತಕ್ಕದ್ದು.

ಹೊಸಕೋಟೆ ತಾಲ್ಲೂಕು ಸೂಲಿಬೆಲೆ ಯೂನಿಯನ್‌ಗೆ ವರ್ತಕ ಮ॥ ದಾಸಪ್ಪನವರನ್ನು ಮೆಂಬರಾಗಿ ನೇಮಕ ಮಾಡಿದೆ.

ಕಡೂರ್ ತಾಲ್ಲೂಕ್ ಬೋರ್ಡಿಗೆ ಜಮೀನ್‌ದಾರ್ ಮತ್ತು ಸಾಹುಕಾರ್ ಮ॥ ಖರೀದಿ ತಿಮ್ಮಪ್ಪನವರನ್ನು ಮೆಂಬರಾಗಿ ಚುನಾಯಿಸಿರುತ್ತಾರೆ.

ಸಾಗರದ ಸಬ್ ಡಿವಿಜನ್ ಅ॥ ಕಮಿಷನರ್ ಮ॥ ಎಸ್. ನಾರಾಯಣರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನಾಲ್ಕು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಶಿವಮೊಗ್ಗ ಡೆಪ್ಯುಟಿ ಕಮಿಷನರ್ ರವರೇ ಅವರ ಕೆಲಸದ ಛಾರ್ಜನ್ನೂ ವಹಿಸಿರತಕ್ಕದ್ದು.

ಮೈಸೂರು ಸಿಟಿ ಮ್ಯಾಜಿಸ್ಟ್ರೇಟ್ ಮ॥ ಬಿ. ಬಸವಾರಾಧ್ಯರವರಿಗೆ ಇದೇ ಡಿಸೆಂಬರ್ ತಾ. 7 ರಿಂದ ಏವತ್ತಮೂರು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ರಜದ ಮೇಲಿರುವ ಅ॥ ಕಮಿಷನರ್ ಮ॥ ಸಿ. ಎಸ್. ಕುಪ್ಪುಸ್ವಾಮಿ ಅಯ್ಯಂಗಾರ್ರವರು ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನ ಛಾರ್ಜಿನಲ್ಲಿರತಕ್ಕದ್ದು (ಇವರು ಇದೇ ಡಿಸೆಂಬರ್ ತಾ. 7 ರಲ್ಲಿ ಕೆಲಸದ ಛಾರ್ಜನ್ನು ವಹಿಸಬೇಕು).

ತಿಪ್ಟೂರು ತಾಲ್ಲೂಕು ಅಮಲ್ದಾರ್ ಮ॥ ಬಿ. ಕೃಷ್ಣರಾಯರು ಯಳಂದೂರು ಜಹಗೀರಿಯ ಅಮಲ್ದಾರ್ ಮತ್ತು 2 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿದಾರೆ (ಇವರು ಇದೇ ಡಿಸೆಂಬರ್ ತಾ. 15 ರಲ್ಲಿ ಕೆಲಸದ ಮೇಲೆ ಹಾಜರಾಗತಕ್ಕದ್ದು).

ರಜದ ಮೇಲಿರುವ ಅ॥ ಕಮಿಷನರ್ ಮ॥ ಜಿ. ಬಿ. ಹೆಬ್ಳೀಕರ್ ಯವರನ್ನು ಚನ್ನರಾಯಪಟ್ಟಣದ ಸಬ್ ಡಿವಿಜನ್ ಛಾರ್ಜಿಗೆ ವರ್ಗಮಾಡಿದೆ (ರಜಾ ಪೂರೈಸಿದ ಬಳಿಕ ಕೆಲಸದ ಮೇಲೆ ಹಾಜರಾಗತಕ್ಕದ್ದು).

ಪ್ರೊ॥ ಅ॥ ಕಮಿಷನರ್ ಮ॥ ಎಂ. ವೆಂಕಟನಾರಣಪ್ಪನವರನ್ನು ಜನರಲ್ ಮತ್ತು ರೆವಿನ್ಯೂ ಸೆಕ್ರೆಟೇರಿಯಟ್‌ನಿಂದ ಶಿವಮೊಗ್ಗ ಡಿಸ್ಟ್ರಿಕ್ಟಿಗೆ ವರ್ಗ ಮಾಡಿದೆ.

ಅಮಲ್ದಾರ್ ಮ॥ ಸಿ. ಬಿ. ಲಕ್ಷ್ಮೀನಾರಾಯಣರನ್ನು ತಿಪ್ಟೂರು ತಾಲ್ಲೂಕಿಗೆ ವರ್ಗಮಾಡಿರುವುದರಿಂದ ಡೆಪ್ಯುಟಿ ಅಮಲ್ದಾರ್ ಮ॥ ಜಿ. ಮಲ್ಲಿಕಾರ್ಜುನಯ್ಯನವರನ್ನು ಗುಂಡ್ಲುಪೇಟೆ ತಾಲ್ಲೂಕ್ ಅಮಲ್ದಾರ್ ಮತ್ತು 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಲಾಗಿದೆ. (ಜನವರಿ ತಾ. 3 ರಲ್ಲಿ ಕೆಲಸದ ಮೇಲೆ ಹಾಜರಾಗತಕ್ಕದ್ದು.)

ಮೈಸೂರು ಸಬ್ ರೆಜಿಸ್ಟ್ರಾರ್ ಮ॥ ಜಿ. ಶ್ರೀಕಂಠರಾಯರನ್ನು ಹಂಗಾಮಿಯಾಗಿ ಗುಂಡ್ಲುಪೇಟೆ ತಾಲ್ಲೂಕಿಗೆ ಮ॥ ಮಲ್ಲಿಕಾರ್ಜುನಯ್ಯನವರು ಛಾರ್ಜು ವಹಿಸಿಕೊಳ್ಳುವ ವರೆಗೆ ಅಮಲ್ದಾರ್ ಮತ್ತು 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ನೇಮಕ ಮಾಡಿದೆ.

ಚಿತ್ರದುರ್ಗದ ಫಸ್ಟ್ ಗ್ರೇಡ್ ಪ್ಲೀಡರ್ ಮಿ॥ ಸಿ. ಅಬ್ದುಲ್ ಘನಿಯವರನ್ನು ನೊವೆಂಬರ್ ತಾ. 23 ರಿಂದ ಮ॥ ಟಿ. ಕೃಷ್ಣಯ್ಯಂಗಾರ್ರು ಬೇರೆ ಕೆಲಸದ ಮೇಲಿರುವಾಗ್ಗೆ ಹಾಸನದ ಮುನ್ಸಿಫರಾಗಿ ಬದಲಿ ನೇಮಿಸಲಾಗಿದೆ.

ಅಮಲ್ದಾರ್ ಮ॥ ಸಿ. ಬಿ. ಲಕ್ಷ್ಮೀನಾರಾಯಣರನ್ನು ಗುಂಡ್ಲುಪೇಟೆಯಿಂದ ತಿಪ್ಟೂರು ತಾಲ್ಲೂಕಿಗೆ ವರ್ಗಮಾಡಿದೆ.

ಮುರಹಮ್ಮತ್ ಇಲಾಖೆಯಲ್ಲಿ ಮ॥ ಎ. ಚಿನ್ನಸ್ವಾಮಿ ಮೊದಲಿಯಾರ್ರನ್ನು ಓವರ್ಸಿಯರ್ 1 ನೇ ಕ್ಲಾಸಿಗೂ, ಮ॥ ಆರ್. ಕೃಷ್ಣರಾಯರನ್ನು 2 ನೇ ಕ್ಲಾಸಿಗೂ ವಾಪಸ್ ಮಾಡಿದೆ.

ಖಾತ್ರಿದಾರರಿಗೆ ನೋಟೀಸ್.

ಖಾತ್ರಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಕರೆಸ್ಪಾಂಡೆನ್ಸ್.

ಎಚ್ಚರಿಕೆಯಿಲ್ಲದಿದ್ದರೆ ನಷ್ಟವುಂಟಾಗುವುದು.

ಅಯ್ಯಾ,—ಬೆಂಗಳೂರು ಸಿಟಿ ಮಾರ್ಕೆಟ್ಟಿನ ಹೊರಗಿನ ಕಾಂಪೌಂಡಿನಲ್ಲಿ ಕೆಲವು ಮುಸಲ್ಮಾನ ವಗೈರೇ ಒಡಕು ಸಾಮಾನುಗಳನ್ನಿಟ್ಟುಕೊಂಡು ವ್ಯಾಪಾರ ಮಾಡುತ್ತಿರುವರು. ನೋಟಕರು ಅಲ್ಲಿಗೆ ಬಂದಾಗ ಕೆಲವು ಮೋಸಗಾರರು ಅವರಿಗೆ ತಿಳಿಯದಂತೆ ದೂರದಲ್ಲಿದ್ದು ಅಲ್ಲಿಗೆ ಹೋಗಿ ಗಿಲೀಟಿನ ಕನ್ನಡಕ ವಗೈರೆ ಪದಾರ್ಥಗಳನ್ನು ತಂದು ಅಂಗಡಿಯವನಿಗೆ ತೋರಿಸಿ ಅವುಗಳ ಕ್ರಯ ಎಂಟು ಹತ್ತು ರೂಪಾಯಿಗಳೆಂದೂ, ಎರಡು ಅಥವಾ ಮೂರು ರೂಪಾಯಿ ಕೊಟ್ಟರೆ ಕೊಟ್ಟುಬಿಡುವನೆಂದೂ ಹೇಳುವರು. ಅಂಗಡಿಯವನು ಅವುಗಳನ್ನು ತಗೆದುಕೊಂಡು ರೂಪಾಯಿ ಮೊದಲ್ಗೊಂಡು ಆಣೆ, ದೊಡ್ಡಾಣೆ, ಪಾವಲಿ ಮುಂತಾದವುಗಳನ್ನು ಕೊಟ್ಟು ಚಿಪ್ಪುಕಸಿ ಮಾಡುವಂತೆ ನೋಟಕರಿಗೆ ಮರುಳು ಮಾಡಿ, ಆ ಪದಾರ್ಥಗಳ ಮೇಲೆ ಕುತೂಹಲವುಂಟಾಗುವಂತೆ ಮಾಡಿ ಅವರಿಂದ ಹಣವನ್ನು ಸೆಳೆದು ಇಬ್ಬರೂ ಹಂಚಿಕೊಂಡು ಮೋಸಮಾಡುವರು. ಈ ವಿಷಯದಲ್ಲಿ ಪೊಲೀಸಿನವರು ನಿಗಾಕೊಡಬೇಕಲ್ಲದೆ ನೋಟಕರು ಇಂಥಾ ಮೋಸಕ್ಕೊಳಗಾಗದೆ ಎಚ್ಚರವಾಗಿರಬೇಕು.

ಒಬ್ಬ ನೋಟಕ.

ಗ್ರಾಮಾಂತರಗಳ ನಾಗರಿಕತೆ.

ಅಯ್ಯಾ,—ಈ ದೇಶದ ಗ್ರಾಮವಾಸಿಗಳು ನಾಗರಿಕದಲ್ಲಿ ತಮ್ಮ ಸ್ವದೇಶ ಹೊರ್ತು ಇತರ ಪ್ರಾಂತ್ಯಗಳಲ್ಲಿ ಬಹಳ ಕಮ್ಮಿಯಾಗಿರಬಹುದೆಂದು ತಿಳಿದುಕೊಂಡಿರುವರು. ಮಾಡತಕ್ಕ ದಿನಚರಿ ಕೃತ್ಯಗಳು ಮಾತ್ರ ವ್ಯತಿರಿಕ್ತವಾಗಿರುವೆ. ಅಂದರೆ ಮಕ್ಕಳ ಸ್ವಭಾವವು ಯಾವ ವಿಷಯವನ್ನಾದರೂ ಚಿಕ್ಕಂದಿನಲ್ಲಿ ತಕ್ಷಣವೇ ಗ್ರಾಹ್ಯಮಾಡಿಕೊಳ್ಳತಕ್ಕ ಸ್ಥಿತಿಯಲ್ಲಿರುತ್ತೆ. ಅದನ್ನು ತಿಳಿಯದೆ ತಂದೆ ತಾಯಿಗಳು ಮುದ್ದಿಗೋಸ್ಕರ ನಸ್ಯ, ಬೀಡಿ, ಇಸ್ಪೀಟು, ಪಗಡೆ ಮೊದಲಾದ ದುರಭ್ಯಾಸಗಳನ್ನೂ, ಅಪ್ಪ ಅಮ್ಮ ಎಂಬೀ ಮೊದಲಾದ ಬೈಗಳನ್ನೂ ಕಲಿಸಿ ಮಕ್ಕಳು ಮಾಡತಕ್ಕದ್ದನ್ನು ನೋಡಿ ಹಿಗ್ಗುವರು; ಅಥವಾ ಇಂಥಾ ಸಮಯಗಳಲ್ಲಿ ಮಕ್ಕಳನ್ನು ಹತ್ತಿರವೇ ಕೂಡಿಸಿಕೊಂಡಿರುವುದರಿಂದ ದುರಭ್ಯಾಸಗಳೇ ವೃದ್ಧಿಯಾಗಿರುವವು. ದೊಡ್ಡ ಚಿಕ್ಕವರೆಂಬ ತಾರತಮ್ಯವಿಲ್ಲದೆ ದುರ್ಭಾಷೆಗಳ ಪಾರಾಯಣವೇ ಆಚರಣೆಯಲ್ಲಿರುತ್ತೆ. ಕೆಲವರಿಗೆ ಕಾಗುಣಿತ ಸರಿಯಾಗಿ ಬಾರದಿದ್ದರೂ ಜೈಮಿನಿ ಮೊದಲಾದ ಗ್ರಂಥಗಳನ್ನು ಹೆಚ್ಚು ಕಡಮೆ ಓದಿಕೊಳ್ಳುತ್ತ ವಿದ್ವಾಂಸರೆಂದೇ ಭಾವಿಸಿರುವರು. ಈಗತಾನೇ ವಿದ್ಯೆಯೆಂಬ ಬೀಜಗಳಲ್ಲಿ ಮೊಳಕೆ ಹೊರಡುತ್ತಿರುವುದಾಗಿ ಕಾಣುತ್ತಿದೆ. ಇಂಥಾ ದುರ್ಗುಣಗಳೇ ವರ್ಣಿಸಲಶಕ್ಯವಾಗಿ ತುಂಬಿರುವುದರಿಂದ ನಾಗರಿಕವೆಂಬ ಮಾತಿಗೆ ಅರ್ಥವನ್ನು ತಿಳಿದಿಲ್ಲವೆಂದೇ ಹೇಳಬಹುದಾಗಿದೆ. ಬಾಲಕರ ದುರ್ಗುಣಗಳನ್ನು ಮಾಸ್ತರುಗಳೇನಾದರೂ ತಿದ್ದಿ ಕ್ರಮಪಡಿಸೋಣವೆಂದರೆ ಬಾಲಕರನ್ನು ಹಿಡಿದು ಕೇಳುವಷ್ಟು ಸ್ವಾತಂತ್ರ್ಯ ಮೊದಲೇ ಇಲ್ಲ. ಮೊದಲು ಗ್ರಾಮಾಂತರಗಳಲ್ಲಿ ಬಲಾತ್ಕಾರದ ವಿದ್ಯಾಭ್ಯಾಸದ ರೂಲನ್ನು ಜಾರಿಗೆ ತಂದು, ಫೀಜನ್ನೂ ವಸೂಲ್ಮಾಡುವುದರಿಂದ ದೇಶಾಭಿವೃದ್ಧಿಯಾಗುವುದಲ್ಲದೆ ಎಲ್ಲಾ ಉದ್ದೇಶವೂ ನೆರವೇರಬಹುದೆಂದು ತೋರುತ್ತೆ. ಟವನುಗಳಲ್ಲೆಂದರೆ ತನ್ನಷ್ಟಕ್ಕೆ ತಾನೇ ವೃದ್ಧಿಯಾಗಬಹುದು. ಈ ಪ್ರಕಾರ ಏಕಕಾಲದಲ್ಲಿ ದೇಶವೆಲ್ಲಾ ವಿದ್ಯಾಭಿವೃದ್ಧಿಯಾಗಬಹುದೆಂದು ಕೆಲವರು ಅಭಿಪ್ರಾಯಪಡುವರು.

ದೇಶಿಕ.

ದಿ ಸೀವಲ್ಸ್ ಬ್ಯಾಂಕ್ ಲಿಮಿಟೆಡ್, ತೀರ್ಥಹಳ್ಳಿ.

ಅಯ್ಯಾ,—ನಿಮ್ಮ ತಾ. 26 ನೇ ಸಂಚಿಕೆಯಲ್ಲಿ ಕರೆಸ್ಪಾಂಡೆಂಟ್ ಎಂಬುವರು ಬರೆದ ಖಾತ್ರಿಯು ಬರೆದವರ ಅಜ್ಞತೆಯನ್ನು ಮಾತ್ರ ಪ್ರಕಾಶಪಡಿಸುತ್ತದೆ ಎಂಬದನ್ನು ತಿಳಿಸುವದಕ್ಕೆ ತುಂಬಾ ವ್ಯಸನವಾಗುತ್ತದೆ. ಈ ಬ್ಯಾಂಕನ್ನು ಸ್ಥಾಪಿಸಿದ ಉದ್ದೇಶಗಳು ಶೀಘ್ರವಾಗಿ ನೆರವೇರುವದಕ್ಕೆ ಅಡ್ಡಿಯಾಗಿರುವದರ ಕಾರಣಗಳು ಬ್ಯಾಂಕಿನ ಬೋರ್ಡಿನವರಿಂದ ಇವರ ರಿಪೋರ್ಟಿನಲ್ಲಿ ವಿವರಿಸಲ್ಪಟ್ಟಿವೆಯಲ್ಲದೆ ಸಾಮಾನ್ಯವಾಗಿ ಎಲ್ಲರಿಗೂ ತಿಳಿದೂ ಇರುವ ವಿಷಯವಾಗಿದೆ. ಈ ಬ್ಯಾಂಕು ಸ್ಥಾಪಿತವಾಗಿ ಇನ್ನೂ ಎರಡು ವರ್ಷ ಪೂರ್ತಿಯಾಗಲಿಲ್ಲ. ಬ್ಯಾಂಕಿನ ಉದ್ದಿಷ್ಟ ಮೂಲಧನವೂ ಭರ್ತಿಯಾಗಿಲ್ಲ. ಈ ಕಾರಣಗಳಿಂದಲೇ ಈ ಬ್ಯಾಂಕಿನ ಉದ್ದೇಶಗಳು ಕಾರ್ಯದಲ್ಲಿ ಸಫಲವಾಗುವದಕ್ಕೆ ಅನುಕೂಲವಿಲ್ಲ. ಈ ಪ್ರಾಂತ್ಯದಲ್ಲಿ ಇಂತಹ ಸಂಘಗಳೇ ಅಪರೂಪ. ಹೀಗಿರುವದರಿಂದ ಈ ಬ್ಯಾಂಕಿನ ಉದ್ದೇಶವು ಸಾರ್ಥಕವಾಗಲಿಲ್ಲವೆಂದು ಈ ಕರೆಸ್ಪಾಂಡೆಂಟರು ಸುಲಭವಾಗಿ ಆಕ್ಷೇಪಿಸುವದರಲ್ಲಿ ಪ್ರಯತ್ನಪಡುವದಕ್ಕಿಂತಲೂ, ಈ ಉದ್ದೇಶ ಸಾಫಲ್ಯಕ್ಕೆ ಅಡ್ಡವಾಗಿರುವ ಕಾರಣಗಳನ್ನು ನಿವಾರಣೆ ಮಾಡುವ ಪ್ರಯತ್ನದಲ್ಲಿ ತಮ್ಮ ಶ್ರಮವನ್ನೂ, ಕಾಲವನ್ನೂ ವ್ಯಯಮಾಡಿದ್ದರೆ ಇವರು ಹೇಳುವ ತೊಂದರೆಯ ನಿವಾರಣೆಗೂ, ಬ್ಯಾಂಕಿನ ಶ್ರೇಯಸ್ಸಿಗೂ ಎಷ್ಟೋ ಸಹಾಯವಾಗುತ್ತಿತ್ತು. "ಬಡವರಿಗೆ ಯಾವ ಪ್ರಯೋಜನವೂ ಆಗಿಲ್ಲ; ಮುಂದೆಯೂ ಆಗುವಂತೆ ಇಲ್ಲ" ಎಂದು ಇವರು ಹೇಳುತ್ತಾರೆ. ನನ್ನ ತಿಳುವಳಿಕೆಗೆ ಬಂದಿರುವದರಲ್ಲಿ ಹಾಲಿ ಇನ್ನೂ ಆಗಿರತಕ್ಕ ಹಣದಲ್ಲಿ ಹೆಚ್ಚಾಗಿ ರೈತರ ಮತ್ತು ವ್ಯಾಪಾರಿಗಳ ಉಪಯೋಗಕ್ಕಾಗಿ ಸಾಲಗಳು ಕೊಡಲ್ಪಟ್ಟಿದೆ ಎಂದು ಹೇಳಬಹುದು. ಆದರೆ ಈ ಬ್ಯಾಂಕಿನ ಷರತ್ತುಗಳೂ, ರೂಲುಗಳೂ ಬಡಜನರಿಗೆ ಬಹಳ ಕಠಿಣವಾಗಿ ಇವೆ ಎಂದು ಈ ಕರೆಸ್ಪಾಂಡೆಂಟರ ಮನಸ್ಸಿಗೆ ತೋರಿರಬಹುದು; ಇವರ ಜೊತೆಯಲ್ಲಿಯೇ ಖಾತರಿಯನ್ನಿಟ್ಟುಕೊಳ್ಳದವನಿಗೆ ಯಾವ ಬ್ಯಾಂಕಿನಿಂದಲೇ ಆಗಲಿ ಎಷ್ಟರ ಮಟ್ಟಿನ ಪ್ರಯೋಜನವೂ ದೊರೆಯಲಾರದು ಎಂಬುದು ಯಾಕೆ ಇವರ ಮನಸ್ಸಿಗೆ ಬರಲಿಲ್ಲವೋ ಗೊತ್ತಾಗುವುದಿಲ್ಲ.

ತಾ. 28-11-14. ಒಬ್ಬ ಮೆಂಬರ್.

ಮಿಷನ್ ಸ್ಕೂಲು ಉಪಾಧ್ಯಾಯರ ಕಷ್ಟ.

ಅಯ್ಯಾ,—ಮಿಷನ್ ಸ್ಕೂಲ್ ಉಪಾಧ್ಯಾಯರ ಜೀವನದ ಕಷ್ಟವನ್ನು ಗಮನಕ್ಕೆ ತೆಗೆದುಕೊಳ್ಳುವವರೇ ಇಲ್ಲ. ಈಗಿನ ಕಾಲವನ್ನು ನೋಡಿದರೆ ದುರ್ಭಿಕ್ಷಕಾಲ ಬಂದಿದೆ. ಧಾರಣೆವಾಸಿಯಂತು ಹೇಳತೀರದು. ರೂಪಾಯಿಗೆ 13-14 ಸೇರು ರಾಗಿ, 5-5½ ಸೇರು ಅಕ್ಕಿ, 5-6 ಸೇರು ಬೇಳೆ, 2½ ಸೇರು ಉಪ್ಪು, ಬಾಕಿ ಚಿಲ್ಲರೆ ದಿನಸುಗಳು ಒಂದಕ್ಕೊಂದು ಏರುತ್ತಲೇ ಇರುತ್ತವೆ. ಉಪ್ಪು ಒಂದು ಹೊರತು ಉಳಿದ ದಿನಸುಗಳು ನೀರಕ್ಷಾಮವನ್ನೇ ಸೂಚಿಸುತ್ತವೆ. ಈ ಕಾಲದಲ್ಲಿ ಮಿಷನ್ ಸ್ಕೂಲ್ ಉಪಾಧ್ಯಾಯರಿಗೆ ಹಿಂದೆ ಸುಭಿಕ್ಷಕಾಲದಲ್ಲಿ ಕೊಡುತ್ತಾ ಇದ್ದಂತೆ 6-7-8 ರೂಪಾಯಿಗಳನ್ನೇ ಕೊಡುತ್ತಾ ಬಂದರೆ ಅವರು ಹ್ಯಾಗೆ ಜೀವನಮಾಡಬೇಕು? ಗವರ್ನ್‌ಮೆಂಟ್ ಸ್ಕೂಲುಗಳಿಗೆ ತಲಬು ನೂತನವಾದಂತೆ 7 ರಿಂದ 10-12-15 ಈ ರೀತಿಯಾಗಿ ಕೊಡುತ್ತಾ ಬಂದರೂ ಈಗ ಇದರಿಂದಲೂ ಜೀವನಕ್ಕೆ ತೊಂದರೆ ಎಂದು ಹೋಬಳಿ ಸ್ಕೂಲುಗಳಿಗೆಲ್ಲಾ ದಿವಾನ್ ಸಾಹೇಬರವರು 25 ರೂಪಾಯಿಗಳ ವರೆಗೂ ಕೊಡಬೇಕೆಂದು ಅಪ್ಪಣೆಕೊಡಿಸಿರುತ್ತಾರೆ. ಇದನ್ನು ಮಿಷನ್ ಅಧಿಕಾರಿಗಳು ತಿಳಿದಿದ್ದಾಗ್ಯೂ ತಮ್ಮ ಸ್ಕೂಲುಗಳಿಗೆ ಯಾವ ಏರ್ಪಾಡೂ ಮಾಡದೆ ಇದಾರೆ. 10-12 ವರುಷ ಸರ್ವೀಸು ಆದಾಗ್ಯೂ ಮೇಲಿನ ತಲಬನ್ನೇ ಕೊಡುತ್ತಾರೆ. ಸ್ಕೂಲುಗಳ ತನಿಖೆ ಮಾತ್ರ ತಿಂಗಳು ತಿಂಗಳಿಗೆ ಸಾಹೇಬರಾಗಲಿ, [illegible] ಗ್ರಾಂಟ್ ಮಾಡುತ್ತಲೇ ಇರುತ್ತಾರೆ. ಇನ್ಸ್‌ಪೆಕ್ಟರ್ ಸಾಹೇಬರವರೂ ವರುಷಕ್ಕೆ ಒಂದು ಸಾರಿ [illegible]. ಎಲ್ಲಾ ಸ್ಕೂಲುಗಳಿಗಿಂತಲೂ ಮಿಷನ್ ಸ್ಕೂಲುಗಳಿಗೆ ತನಿಖೆ ಹೆಚ್ಚು. ಆದರೆ ಸಂಬಳ ಕಡಮೆ. ಈ ವಿಷಯವನ್ನು ಘನವನ್ನು ಹೊಂದಿದ ಥೇರ್ವೆನ್ ಸಾಹೇಬರವರು ಮನಸ್ಸಿಗೆ ತಂದುಕೊಂಡು ಅಲ್ಪ ಸಂಬಳದ ಬಡ ಮಾಸ್ತರುಗಳಿಗೆ ಈಗಿನ ಕಾಲಕ್ಕೆ ತಕ್ಕಂತೆ ವೇತನಗಳನ್ನು ಹೆಚ್ಚಿಸಿ ಕಾಪಾಡುವಂತೆ ಬೇಡುತ್ತೇನೆ. ಈಗಿನ ಅಲ್ಪ ಸಂಬಳದಲ್ಲಿ ಒಂದು ಹೊತ್ತು ಊಟ, ಒಂದು ಹೊತ್ತು ಉಪವಾಸವಾಗಿ ಸ್ಕೂಲಿನಲ್ಲಿ ಪಾಠಹೇಳಿದರೆ ಧರ್ಮವೋ? ಅದು ಹುಡುಗರ ಮನಸ್ಸಿಗೆ ತಾನೇ ನಾಟೀತೇ? ಹುಡುಗರ ಮನಸ್ಸು ಒಂದು ಕಡೆ, ಉಪಾಧ್ಯಾಯರ ಮನಸ್ಸು ಒಂದು ಕಡೆ, ಈ ರೀತಿಯಾಗುತ್ತೆ. ಇವರು ಮೈಸೂರು ಸರ್ಕಾರದ ಪ್ರಜೆಗಳಲ್ಲವೇ? ನಮ್ಮ ಮಹಾರಾಜರವರೂ, ಮಂತ್ರಿಶ್ರೇಷ್ಠರಾದ ದಿವಾನ್ ಸಾಹೇಬರವರೂ, ವಿದ್ಯಾಭ್ಯಾಸದ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರೂ ಇವರುಗಳ ವಿಷಯವನ್ನು ಮನಸ್ಸಿಗೆ ತಂದುಕೊಂಡು, ಒಂದು ಕಣ್ಣಿಗೆ ಬೆಣ್ಣೆ, ಒಂದು ಕಣ್ಣಿಗೆ ಸುಣ್ಣವನ್ನು ಇಡದಂತೆ ಗ್ರಾಂಟನ್ನು ಹೆಚ್ಚಿಸಿಕೊಟ್ಟು ಗವರ್ನ್‌ಮೆಂಟ್ ಉಪಾಧ್ಯಾಯರಂತೆ ಇವರನ್ನು ಕಾಪಾಡಬೇಕೆಂದು ಈ ಮೂಲಕ ಅರಿಕೆಮಾಡಿಕೊಂಡಿದೇನೆ.

ಒಬ್ಬ ಚಂದಾದಾರ.

[ಈ ಖಾತ್ರಿದಾರರು ಹೇಳುವಂತೆ ಸರ್ಕಾರದವರು ಗ್ರಾಂಟನ್ನು ಹೆಚ್ಚುಮಾಡಿದ ಪಕ್ಷದಲ್ಲಿ ಮಿಷನ್ ಸಂಘದವರು ಸಂತೋಷದಿಂದ ಸಂಬಳಗಳನ್ನು ಹೆಚ್ಚುಮಾಡಲು ಸಹಾಯವಾದೀತೆಂದು ತೋರುವುದು.—ಎಡಿ.]

ತಾಲ್ಲೂಕು ವರ್ತಮಾನಗಳು.

ಹರಿಹರ.—ಮೊನ್ನೆ ಮಿರ್ಜಿ ಜಹಗೀರುದಾರ್ ರಾವ್ ಸಾಹೇಬ್ ಬಾಳಾಸಾಹೇಬರವರು ಶನಿವಾರ ಸಮೇತ ಈ ಕ್ಷೇತ್ರಕ್ಕೆ ದಯಮಾಡಿಸಿರು. ನಮ್ಮ ಅಮಲ್ದಾರ್ ಮ॥ ಪದ್ಮನಾಭರಾಯರು ಶ್ರೀಮಂತರಿಗೆ ತಕ್ಕ ಏರ್ಪಾಡನ್ನು ಮಾಡಿದ್ದರು. ರಾವ್ ಸಾಹೇಬ್ ಬಾಳಾಸಾಹೇಬರು ತುಂಗಭದ್ರಾ ಸ್ನಾನ, ದೇವರ ದರ್ಶನ ಮತ್ತು ಬ್ರಾಹ್ಮಣ ಸಂತರ್ಪಣೆ ವಗೈರೆ ಬಹು ವಿಶ್ವಾಸದಿಂದ ನೆರವೇರಿಸಿದರು. ಭೋಜನೋತ್ತರ ಸಾಹೇಬರು ಸಮಸ್ತರಿಗೂ ಸಂಭಾವನೆ ದಯಪಾಲಿಸಿದರು. ಬ್ರಾಹ್ಮಣ ಸಂಘಕ್ಕೆ 30 ರೂಪಾಯಿ, ಡೆಪ್ಯುಟಿ ಇನ್ಸ್‌ಪೆಕ್ಟರು ಮ॥ ಎಂ. ಕೆ. ತಿರುಮಲಾಚಾರ್ಯರಿಂದ ಸ್ಥಾಪಿಸಲ್ಪಟ್ಟ ಬ್ರಹ್ಮವಿದ್ಯಾ ಪಾಠಶಾಲಾಧ್ಯಕ್ಷರಾದ ವೇ॥ ಕೃಷ್ಣದೀಕ್ಷಿತರಿಗೆ 5 ರೂಪಾಯಿ, ಈ ರೀತಿ ಎಲ್ಲಾ ಇಲಾಖೆಯವರಿಗೂ ಮರ್ಯಾದೆ ಮಾಡಿದರು. ಮಕ್ಕಳಿಗೆಲ್ಲಾ ಮಿಠಾಯಿ ಹಂಚಿದರು. ಹೀಗೆ ಆ ದಿವಸವೆಲ್ಲಾ ಯಾವದೋ ಒಂದು ಉತ್ಸವದಂತೆ ಎಲ್ಲರಿಗೂ ಆನಂದಕರವಾಗಿತ್ತು.

ತುಮಕೂರು ತಾ॥ ವಕ್ಕೋಡಿ.—ಇಲ್ಲಿನ ರೀಡಿಂಗ್ ರೂಮಿನ ಮೆಂಬರುಗಳೂ, ಸ್ಕೂಲ್ ಬಾಲಕರೂ, ಮಾಸ್ತರೂ ಮತ್ತು ಇತರ ದೊಡ್ಡ ಮನುಷ್ಯರೂ ಈ ಊರಿನ ದೇವಸ್ಥಾನದಲ್ಲಿ ಸಭೆ ಸೇರಿದ್ದರು. ಈಗ ನಡೆಯುತ್ತಿರುವ ಯುದ್ಧದಲ್ಲಿ ನಮ್ಮ ಚಕ್ರವರ್ತಿಯವರಿಗೆ ಜಯವಾಗಲೆಂದು ದೇವರಿಗೆ ವಿಶೇಷ ಭಕ್ತಿಪುರಸ್ಸರವಾಗಿ ಪ್ರಾರ್ಥನಾದಿಗಳನ್ನು ನಡಿಸಿದರು. ಮ॥ ತಿರುಮಲಯ್ಯನವರು ಇಂಗ್ಲಿಷ್ ಪ್ರಭುತ್ವದಿಂದ ನಮಗುಂಟಾಗಿರುವ ಸೌಕರ್ಯಗಳನ್ನು ತಿಳಿಸಿದರು. ರೀಡಿಂಗ್ ರೂಮಿನ ವಿಷಯವಾಗಿ ಅನೇಕ ವಿಷಯಗಳನ್ನು ಸ್ಕೂಲ್ ಮಾಸ್ತರು ಎ. ಸಂಕರಯ್ಯನವರು ಉಪನ್ಯಾಸ ಮಾಡಿದರು.—ಈ ಊರಿನಲ್ಲಿ ಒಂದು ಸೊಸೈಟಿ ರೀಡಿಂಗ್ ರೂಮು ಆದದ್ದು ಮುಖ್ಯ ವಿಷಯ.—ವಾರಕ್ಕೆ ಒಂದು ಸಾರಿ ಟಪ್ಪಾಲು ಬಗಬೇಕಾಗಿರುತ್ತೆಂದೂ, ಇದರಿಂದ ಸರಿಯಾದ ಕಾಗದ ಪಾವತಿಯಾಗುವದಿಲ್ಲವೆಂದೂ, ಇದಕ್ಕಾಗಿ ಆ ಇಲಾಖೆಗೆ ತಿಳಿಸಬೇಕೆಂದೂ ಒಪ್ಪಿದರು. ಅನಂತರ ನಮ್ಮ ಶ್ರೀಮನ್ ಮಹಾರಾಜಾಸಾಹೇಬರವರಿಗೂ ರಾಜವರ್ಗದವರಿಗೂ ಶ್ರೇಯಃಪ್ರಾರ್ಥನೆಯನ್ನು ನಡಿಸಿ ಸಭೆಯನ್ನು ಮುಕ್ತಾಯಮಾಡಿದರು.

ಶಿವಮೊಗ್ಗ.—ಕಳೆದ ಕಾರ್ತಿಕ ಬಹುಳ ಅಮಾವಾಸ್ಯೆಯ ರಾತ್ರಿ ದೊಡ್ಡ ಬ್ರಾಹ್ಮಣ ಬೀದಿಯಲ್ಲಿರುವ ಶ್ರೀಲಕ್ಷ್ಮೀನಾರಾಯಣದೇವರ ಉತ್ಸವ ನಡೆಯಿತು. ರಾತ್ರಿ ಉತ್ಸವ ಕೇರಿಯಲ್ಲಿ ಹೊರಟಾಗ ಅಕಸ್ಮಾತ್ತಾಗಿ ಮದ್ದಿನ ಪುಟ್ಟಿಗೆ ಬೆಂಕಿ ತಗಲಿತು. ಬೆಂಕಿ ತಗಲಿದ ಒಡನೆ ಸದರಿ ಪುಟ್ಟಿಯನ್ನು ಹೊತ್ತುಕೊಂಡಿದ್ದ ಹುಡುಗನು ಆ ಪುಟ್ಟಿಯನ್ನು ಮ॥ ಕೆರೋಡಿ ರಾಮರಾಯರ ಮನೆಯ ಸಮೀಪದಲ್ಲಿ ಬಿಸಾಟು ಓಡಿಹೋದನು. ಯಾರಿಗೂ ಏನೂ ಗಾಯ ವಗೈರೆ ಆಗಲಿಲ್ಲ.—ತಾ. 21 ನೆಯ ದಿವಸ ಲಷ್ಕರ್ ಮೊಹಲ್ಲಾದಲ್ಲಿ ಬಟ್ಟೆ ವ್ಯಾಪಾರ ಮಾಡುವ ಜಮಾಲ್ ಸಾಬಿ ಎಂಬವನು ಸೇತುವೆ ಹತ್ತಿರ ಗಾಡಿಯನ್ನು ಹೊಡೆದುಕೊಂಡು ಬಂದನು. ಹಾಸಲ್ ಮಾಲ್ ನೋಡಬೇಕು, ಗಾಡಿ ಬಿಡು ಎಂತ ಕೋಲುಕಾರ ಸಿದ್ಧಪ್ಪ ಕೇಳಿದನು. ಅವನು ಗಾಡಿ ಬಿಡಲಿಲ್ಲ; ಎತ್ತನ್ನು ಮಾತ್ರ ನಿಲ್ಲಿಸಿದನು. ಸದರಿ ಕೋಲುಕಾರ ಸಿದ್ಧಪ್ಪನಿಗೆ ಕಾರಣವಿಲ್ಲದೆ ಹೊಡೆದನು. ನಂತರ ಪೊಲೀಸ್ ಸ್ಟೇಷನ್‌ಗೆ ಹಿಡಿದುಕೊಂಡು ಹೋದರು. ಗಾಡಿಯಲ್ಲಿ ಹಾಸಲ್ ಮಾಲಾದ ಕಡ್ಡಿಪುಡಿ ಇತ್ತು. ಇದು ಕೇಸು ನಡೆದು ತಾ. 2 ಕ್ಕೆ ಹೀರಂಗು ಇರುತ್ತದೆ.

ಯಳಂದೂರು.—ಈ ತಾಲ್ಲೂಕು ಕಸಬೆಗೆ ಸೇರಿದ ಹೆಗ್ಗಡೆ ಹುಂಡಿಯಲ್ಲಿ ಒಂದು ಕೊಲೆ ನಡೆಯಿತು. ಕಳೆದ ಎರಡನೇ ಗುರುವಾರ ಹಗಲು ಸುಮಾರು ಮೂರೂವರೆ ಘಂಟೆ ಸಮಯದಲ್ಲಿ ಈ ಊರಿನಲ್ಲಿ ವಾಸವಾಗಿರುವ ನೆಯ್ಗೆ ಕೆಲಸದ ಕೆಂಪನ ಮಗ ಚಿಕ್ಕರಂಗ ಎನ್ನುವನು ಬೂದಂಬಳ್ಳಿಗೆ ಹೋಗಿ ಬರುತ್ತಿರುವಾಗ್ಗೆ ಸದರಿ ಜಾತಿ ಚಿಕ್ಕರಂಗದಾಸನ ಮಗ ಮೂರನೇ ಮರಿಯರಂಗ ಒಂದು, ಎರಡನೇ ಇವನ ಅಣ್ಣ ವೆಂಕಟದಾಸ ಒಂದು, ಈ ಜನಗಳು ಸೇರಿ ಮೊಲ್ಕಂಡ ಚಿಕ್ಕರಂಗ ಎನ್ನುವ ಹುಡುಗನನ್ನು ಕತ್ತರಿಸಿ ಇಬ್ಬರೂ ಪರಾರಿಯಾಗುವುದಕ್ಕೆ ಪ್ರಯತ್ನಪಟ್ಟರು. ಆ ಗ್ರಾಮದ ಕುರುಬರು ಮೊಲ್ಕಂಡ ಅಪರಾಧಿಗಳನ್ನು ಹಿಡಿದುಕೊಂಡು ರಿಪೋರ್ಟು ವಗೈರೆ ಪಟೇಲರ ಕಡೆಯಿಂದ ನಡಿಸಿ ಕಚೇರಿಗೆ ಕಳುಹಿಸಿದರು. ಆಗ್ಗೆ ಅದೇ ದಿನ ರಾತ್ರಿ ಪೊಲೀಸಿನವರು ಬಂದು ಅಪರಾಧಿಗಳನ್ನು ಹಿಡಿದುಕೊಂಡು ಹೋದರು. ಮತ್ತು ಬೆಳಗ್ಗೆ ನಮ್ಮ ತಾಲ್ಲೂಕಿನ ಅಮಲ್ದಾರ್ರವರು ಚಿತ್ತೈಸಿ ಲಾಷ್ ಅಜಮಾಯಿಷಿ ಮಾಡಿ ಇದಕ್ಕೆ ಕಾರಣವನ್ನು ಕೇಳಿದರು. ಮೊಲ್ಕಂಡ ಅಪರಾಧಿಗಳು ಅಮಲ್ದಾರ್ರವರ ಮೊಖ್ತಾ ಈತನನ್ನು ಕತ್ತರಿಸಿದವರೇ ನಾವು, ಇನ್ನ್ಯಾರೂ ಅಲ್ಲ ಎಂದು ಮರಿಯರಂಗ ಎನ್ನುವನು ತಿಳಿಸಿದಾನಂತೆ.

ಹುಳಿಯಾರು.—ಈ ಪ್ರಾಂತ್ಯ ಮುಸ್ಕಿ ಬೆಳೆಗೆ ತಕ್ಕಷ್ಟು ಮಳೆ ನಡಿಸಿದ್ದರಿಂದ ಕೆಲವು ಕಡೆ ಬೆಳೆ ಚೆನ್ನಾಗಿದೆ. ಆದರೆ ನೀರಿನ ತೊಂದರೆ ತಪ್ಪಲಿಲ್ಲ. ಈಗ 1-1½ ವರ್ಷದಿಂದಲೂ ಊರೊಳಗಿನ ಯಾವ ಭಾವಿಯಲ್ಲಿಯೂ ಬಿಂದಿಗೆ ಮುಳುಗುವಷ್ಟು ನೀರೂ ಇರಲಿಲ್ಲ. ಇಲ್ಲಿಗೆ 1-2 ಮೈಲಿಯಲ್ಲಿ ಒಂದು ತೊರೆ ಇದೆ. ಗಾಡಿ ಮುಂತಾದ ಅನುಕೂಲವಿದ್ದವರು ಅಲ್ಲಿಂದ ತರುತ್ತಿದ್ದರು. ಮಿಕ್ಕವರು ಕಾದಿದ್ದು ಇಲ್ಲಿನ ಭಾವಿಗಳಲ್ಲಿಯೇ ಗೊಜಿಕೊಳ್ಳುತ್ತಿದ್ದರು. ಈಚೆಗೆ 1-2 ತಿಂಗಳಿಂದ ಸ್ವಲ್ಪ ನೀರಿನ ತೊಂದರೆ ತಪ್ಪಿದಂತಿತ್ತು. ಅದು ಈಗ ಪುನಃ ಪ್ರಾರಂಭವಾಯಿತು. ಈಗಲೇ ನೀರಿಗೆ ಇಷ್ಟು ತೊಂದರೆಯಾದರೆ ಮುಂದಿನ ಬೇಸಿಗೆಯಲ್ಲಿ ಇನ್ನೆಷ್ಟು ಅವಸ್ಥೆಯೋ ತಿಳಿಯದು. ಗ್ರಾಮದಲ್ಲಿ ಸಾಹುಕಾರರಾದವರು ಮತ್ತು ಸರ್ಕಾರದವರು ಈ ನೀರಿನ ತೊಂದರೆಯನ್ನು ಪರಿಹರಿಸುವರೆಂದು ನಂಬಿದೆ.—ಈ ಮಾಹೆ 18-19 ರಲ್ಲಿ ಡಿಸ್ಟ್ರಿಕ್ಟ್ ಸರ್ಜನರು ಈ ಗ್ರಾಮಕ್ಕೆ ದಯಮಾಡಿಸಿದ್ದರು. ಆಗ ಇಲ್ಲಿನ ಎಲ್ಲಾ ಸ್ಕೂಲುಗಳಿಗೂ ದಯಮಾಡಿಸಿದ್ದು ಸಿಡುಬು ಹಾಕಿಸಿಕೊಂಡಿದ್ದವರು, ಎದ್ದವರು ಮುಂತಾದ ವಿಷಯದಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯನ್ನೂ ಅಜಮಾಯಿಷಿಮಾಡಿ ಸಿಡುಬು ಏಳದೇಲೂ, ಹಾಕಿಸಿಕೊಳ್ಳದೇಲೂ ಇರುವವರ ವಿಷಯದಲ್ಲಿ ಸದ್ಯದಲ್ಲೇ ದೇವಿ ಹಾಕಿಸಿಕೊಳ್ಳುವ ಏರ್ಪಾಡುಮಾಡಿ ದಯಮಾಡಿಸಿದರು.—ಇಲ್ಲಿಗೆ 7-8 ಮೈಲಿಯಲ್ಲಿರುವ ಗಾಜದಹಾಳು ಎಂಬ ಗ್ರಾಮದಲ್ಲಿ ಅಲ್ಲಿನ ವ್ಯಾಸಭೋಗರ ಮಗನು ಹಗಲು ಹೊತ್ತು [illegible]ಮಾಪವಾಗಿಯೇ ಹೊರಗೆ ಹೋಗಿರುವಾಗ್ಗೆ ಒಂದು ದೊಡ್ಡ ಚಿರುಬನು ಬಂದು ಅವನ ಕತ್ತನ್ನು ಕಚ್ಚಿತಂತೆ. ಅವನನ್ನು ಇಲ್ಲಿನ ಆಸ್ಪತ್ರೆಗೆ ತೆಗೆದುಕೊಂಡು ಬಂದು ಇಲಾಜು ಮಾಡಿಸುತ್ತಿದಾರೆ. ಇಲ್ಲಿನ ಸಬ್ ಅಸಿಸ್ಟೆಂಟ್ ಸರ್ಜನ್ ಮ॥ ಅಪ್ಪುರಾಯರು ಇಂಥಾ ಅಪಾಯಕರವಾದ ರೋಗಿಗಳ ವಿಷಯದಲ್ಲಿ ತೋರಿಸುವ ಪ್ರೀತಿಯು ಬಹಳ ಶ್ಲಾಘನೀಯವಾಗಿದೆ.

ಮಾಗಡೀ ತಾ॥ ವೀರೇಗೌಡನದೊಡ್ಡಿ.—ಹಿಂದಿನ ಗುರುವಾರ ಈ ಗ್ರಾಮಕ್ಕೆ ತಾಲ್ಲೂಕ್ ಅಮಲ್ದಾರ್ರು ದಯಮಾಡಿ ಇಲ್ಲಿನ ಸ್ಕೂಲಿನಲ್ಲಿ ಈ ಗ್ರಾಮದ ಮುಖ್ಯಜನಗಳನ್ನು ಬರಮಾಡಿಕೊಂಡು ಪ್ರಜೆಗಳ ಕಷ್ಟಸುಖಗಳನ್ನು ವಿಚಾರಿಸಿ ಬುದ್ಧಿವಾದಗಳಿಂದಲೂ ಗ್ರಾಮಾಭಿವೃದ್ಧಿ ಕಾರ್ಯಗಳನ್ನು ಆದರಿಸಿ ತಕ್ಕ ಪ್ರೋತ್ಸಾಹ

ಜನಗಳನ್ನು ಸಂತೋಷಗೊಳಿಸಿದರು. ಇಲ್ಲಿನ ಪರಸ್ಪರಸಹಾಯ ಗ್ರಾಮಾಭಿವೃದ್ಧಿ ಸಂಘದ ಪ್ರೋತ್ಸಾಹದಿಂದ ನಮ್ಮ ಗ್ರಾಮದ ಪಟೇಲ್ ಚಿಕ್ಕವೀರೇಗೌಡರೇ ಪ್ರಮುಖರೆಂದು ಹೇಳಿ ಆ ಮೇರೆಗೆ ಜನಗಳಿಂದ ಕಮಿಟಿ ಸೇರಿಸಿ ಕೆಲಸಮಾಡಿಸುವಂತೆ ಅಪ್ಪಣೆ ದಯಪಾಲಿಸಿ ಜನಗಳಿಗೆ ಉತ್ಸಾಹಕೊಟ್ಟರು.—ಇಲ್ಲಿನ ಕೋಆಪರೇಟಿವ್ ಸೊಸೈಟಿಯು ದಿನೇ ವೃದ್ಧಿಯಲ್ಲಿ ಬರುತ್ತಿದೆ. ಇದನ್ನು ಅಭಿವೃದ್ಧಿಗೆ ತರಲೋಸುಗ ಸೊಸೈಟಿಯ ಸೂಪರ್‌ವೈಸರ್ ಮ|| ಕೇಶವರಾಯರೂ, ಸೆಕ್ರೆಟರಿ ಮ|| ರಾಜಾರಾ ಬಹಳ ಮುತುವರ್ಜಿ ವಹಿಸಿ ಇಲ್ಲಿನ ಮತ್ತು ಅಡುಬಾಜು ಗ್ರಾಮಾಂತರಗಳಿಗೆ ಪ್ರೋತ್ಸಾಹಿಸಿ ಬಡವರು ತೆರುವ ದುಬಾರಿ ಬಡ್ಡಿಯನ್ನು ದಿನಕ್ರಮೇಣ ಕಮ್ಮಿಮಾಡಿಸಿ ಅವರನ್ನು ಋಣಮುಕ್ತರನ್ನಾಗಿ ಮಾಡುವ ಉದ್ದಿಷ್ಟ ಬಹು ಕ್ರಮವಿಟ್ಟು ಕಾರ್ಯಗಳನ್ನು ನಡೆಸುತ್ತಿರುವುದು ತುಂಬಾ ಉಪಕಾರವಾಗಿದೆ.—ಈ ಗ್ರಾಮದ ಸ್ಕೂಲ್ ಮಾಸ್ಟರು ಈ ದಿನ ನಮ್ಮನ್ನಾಳುವ ಬ್ರಿಟಿಷ್ ಸಾರ್ವಭೌಮ ಸರ್ಕಾರದವರಿಂದ ನಮ್ಮಗಳಿಗೆ ಉಂಟಾಗಿರುವ ಅನಂತಾನಂತ ಸುಖ ಸೌಕರ್ಯಗಳನ್ನು ಕುರಿತು ಆನಂದ ಉಂಟಾಗುವ ಹಾಗೆ ಉಪನ್ಯಾಸಮಾಡಿದರು. ಅನಂತರ ಪಟೇಲ್ ಚಿಕ್ಕವೀರೇಗೌಡರು ಬಹಳ ಮುತುವರ್ಜಿವಹಿಸಿ ಯುದ್ಧದ ಫಂಡಿಗೋಸ್ಕರ ಇಲ್ಲಿನ ಜನಗಳಿಂದ ಅವರವರ ಶಕ್ತ್ಯಾನುಸಾರ ಚಂದಾ ಹಣವನ್ನು ವಸೂಲ್‌ಮಾಡಿ ತತ್ ಕ್ಷಣವೇ ಅಮಲ್ದಾರ್ ಸಾಹೇಬರಿಗೆ ಒಪ್ಪಿಸಿದರು. ಜನಗಳೆಲ್ಲರೂ ಉತ್ಸಾಹಶೀಲರಾಗಿ ಚಂದಾ ಹಣವನ್ನು ಕೊಟ್ಟರು.—ಈ ಗ್ರಾಮದ ಸ್ಕೂಲ್ ಕಟ್ಟಡವು ಬಹಳ ಇಕ್ಕಟ್ಟಾಗಿ ಬಾಲಕರ ಅಭ್ಯಾಸಕ್ಕೆ ತೊಂದರೆಯಾಗಿದೆ. ಇದನ್ನು ವಿಸ್ತರಿಸಬೇಕೆಂದು ಅಮಲ್ದಾರ್ರು ಅಪ್ಪಣೆ ಕೊಡಿಸಿದ್ದಕ್ಕೆ ಪಟೇಲ್ ಚಿಕ್ಕವೀರೇಗೌಡರು ಗ್ರಾಮಸ್ಥರಿಂದ 50 ರೂಪಾಯಿ ವಸೂಲ್ ಮಾಡುತ್ತೇವೆಂತಲೂ, ಸರ್ಕಾರದವರಿಂದ 50 ರೂಪಾಯಿ ಕೊಡಿಸಬೇಕೆಂದೂ ಹೇಳಿದರು. ಅನಂತರ ಮ|| ರಾಜಾಧ್ಯಕ್ಷರು ಬ್ರಿಟಿಷ್ ಸಾರ್ವಭೌಮರವರಿಗೆ ಜಯವಾಗಲೆಂದು ಸ್ಕೂಲ್ ಬಾಲಕ ಬಾಲಕಿಯರಿಂದ ವೃತ್ತ ಪದ್ಯಗಳೊಡನೆ ಗಾನರೂಪವಾಗಿ ಸರ್ವಶಕ್ತನಾದ ಭಗವಂತನನ್ನು ಪ್ರಾರ್ಥಿಸಿದ ತರುವಾಯ ಸರ್ವರೂ ಜಯಘೋಷನೆಯೊಡನೆ ಸಭೆಯನ್ನು ಬರಖಾಸ್ತು ಮಾಡಿದರು.

ಹಾಸನ.—ಕಳೆದ ವಾರ ಇಲ್ಲಿ ತೀರ್ಮಾನವಾದ ಸೆಷನ್ಸ್ ಮೊಕದ್ದಮೆಗಳಲ್ಲಿ ಒಂದಾದ ವಿಷಪ್ರಯೋಗದ ತಕ್ಸೀರು ರುಜುವಾತಾಗದೆ ಅಪರಾಧಿಗೆ ಬಿಡುಗಡೆಯಾಯಿತು. ಎರಡನೇದಾದ ಶಿಶುಹತ್ಯೆಕ್ಕೆ ಗುಂಡಮ್ಮನೆಂಬ ಅಪರಾಧಿಯು ತಾನೇ ಒಪ್ಪಿಕೊಂಡುದರಿಂದ ಅವಳಿಗೆ ಜನ್ಮಾವಧಿ ಸಜಾ ವಿಧಿಸಿದರು. ಇದು ಚನ್ನರಾಯಪಟ್ಟಣದಲ್ಲಿ ನಡೆದುದು.—ಈ ಡಿಸ್ಟ್ರಿಕ್ಟ್ ಆಫೀಸಿನಲ್ಲಿ ಚಿಲ್ಲರೆ ನೌಕರರಿಗೆ ಬಡತಿಗಳು ಸಿಕ್ಕಿದುವೆಂದು ತಿಳಿದು ಬಂದಿದೆ. ಆದರೆ ತಾಲ್ಲೂಕು ನೌಕರರಿಗೆ ಮಾತ್ರ ಇನ್ನೂ ಬಂದಿಲ್ಲವಾದುದರಿಂದ ಅವರೆಲ್ಲರೂ ತಮ್ಮ ಬಡತಿಗಳು ಯಾವಾಗ ಜಾರಿಗೆ ಬರುವವೋ ಎಂದು ಹಂಬಲಿಸುತ್ತಾ ಕಾದುಕೊಂಡಿದ್ದಾರೆ. ಇತ್ತಲಾಗಿ ಇಲ್ಲಿನ ಹೈಸ್ಕೂಲಿನಲ್ಲಿಯೂ ಉಪಾಧ್ಯಾಯರಿಗೆ ಬಡತಿಗಳು ಜಾರಿಗೆ ಬಂದಿವೆ. ಆದರೆ ಬಡವರಾದ ತಾಲ್ಲೂಕು ಮತ್ತು ಹೋಬಳಿ ಕನ್ನಡ, ಹಿಂದುಸ್ತಾನಿ ಸ್ಕೂಲ್ ಮಾಸ್ಟರುಗಳಿಗೆ ಮಾತ್ರ ಇನ್ನೂ ಬಡತಿಯಾಗಲಿಲ್ಲವೆಂದು ಅವರು ಕೊರಗುತ್ತಲಿದ್ದಾರೆ.—ಇಲ್ಲಿ ನ್ಯಾಯಪರರಾಗಿಯೂ, ಜನಾಭಿಮಾನಿಗಳಾಗಿಯೂ ಇದ್ದ ಮುನ್‌ಸೀಫ್ ಮ|| ಕೃಷ್ಣಯ್ಯಂಗಾರ್ರವರು ಸಬ್ ಜಡ್ಜ್ ಪದವಿಗೆ ಬಡ್ತಿ ಹೊಂದಿ ಶಿವಮೊಗ್ಗೆಗೆ ಪ್ರಯಾಣಮಾಡಿದರು. ಇವರ ಸ್ಥಾನಕ್ಕೆ ಇಲ್ಲಿಗೆ ಒಬ್ಬ ಮಹಮ್ಮದೀಯ ದೊಡ್ಡ ಮನುಷ್ಯರು ದಯಮಾಡಿದ್ದಾರೆ. ಇವರೂ ಸಹ ಅವರಂತೆಯೇ ಪ್ರಜಾಭಿಮಾನಿಗಳಾದವರೆಂದು ಕಾಣುತ್ತದೆ.—ಕಳೆದ ತಿಂಗಳು ತಾ. 24-25 ರಲ್ಲಿ ಈ ಡಿಸ್ಟ್ರಿಕ್ಟಿಗೆ ಸೇರಿದ ರಾಮನಾಥಪುರದಲ್ಲಿ ಒಂದು ವಿಶೇಷ ಜಾತ್ರೆಯೂ, ಅದೇ ಸಮಯದಲ್ಲಿ ಪಶು ಪ್ರದರ್ಶನವೂ ನಡೆದುವು. ರೇಷ್ಮೆ ವ್ಯವಸಾಯದ ಇನ್‌ಸ್ಪೆಕ್ಟರ್ ಮ|| ಎಂ. ನಾರಾಯಣಸ್ವಾಮಿಗೌಡರು ರೇಷ್ಮೆ ವ್ಯವಸಾಯವನ್ನು ಕುರಿತು ಸಕಲ ಜನ ಮನೋರಂಜಕವಾಗಿ ತಮ್ಮ ಅನುಭವದ ಶಕ್ತ್ಯಾ ಬಹು ಚೆನ್ನಾಗಿ ಉಪನ್ಯಾಸಮಾಡಿದರೆಂದೂ, ಅದರಲ್ಲಿ ಹಿಪ್ಪುನೇರಳೆ ಬೆಳೆಯುವ ಕ್ರಮ, ಅದಕ್ಕೆ ಯೋಗ್ಯವಾದ ಭೂಮಿ, ರೇಷ್ಮೆಹುಳುಗಳನ್ನು ಸಾಕುವ ಕ್ರಮ ಮತ್ತು ರೇಷ್ಮೆಯನ್ನು ತಯಾರುಮಾಡುವುದಕ್ಕೆ ಬೇಕಾದ ಸಲಕರಣೆಗಳು, ಇತ್ಯಾದಿ ಉಪಯೋಗಾಂಶಗಳೆಲ್ಲವೂ ಅಡಗಿದ್ದುವೆಂದೂ ತಿಳಿದು ಬಂದಿದೆ. ಮತ್ತು ಸಂಪದಭ್ಯುದಯ ಸಮಾಜದ ಉದ್ದೇಶವನ್ನೂ ಅವರು ತಿಳಿಸಿದರು.—ಈ ಪ್ರಾಂತ್ಯ ಎರಡು ವಾರಗಳಿಂದ ಚಳಿ ಹುಟ್ಟಾಗಿತ್ತು. ಆದರೆ ನೆನ್ನೆಯಿಂದ ಮೋಡವೂ ಮಳೆಗಾಳಿಯೂ ಪ್ರಾರಂಭವಾಗಿವೆ. ಪೈರುಗಳು ಚೆನ್ನಾಗಿವೆ. ಮಕ್ಕಳಿಗೆ ನಾಯಿಕೆಮ್ಮು ಮಾತ್ರ ವ್ಯಾಪಿಸುತ್ತಲಿದೆ.

ಹೊಸಕೋಟೆ.—ಇಲ್ಲಿ ಹಿಂದಿನ ಬಿತ್ತನೆಗಳಿಗೆ ಮಳೆ ಸಾಲದೆ ಬೆಳೆಗಳು ಒಣಗುತ್ತಾ ಬಂದವು. ಆದರೆ ಮುಂದಿನ ಬಿತ್ತನೆಯ ಬೆಳೆಗಳು ಮಾತ್ರ ಸುಮಾರಾಗಿ ಕಟಾವಿಗೆ ಬಂದಿವೆ. ಈಗಲಾದರೂ ಒಂದೆರಡು ಮಳೆ ಬಂದರೆ ಹಿಂದಿನ ಬೆಳೆಗಳಿಗೆ ಅನುಕೂಲವಾಗುವದು ಮಾತ್ರವಲ್ಲದೆ ಅವರೆ, ಹುರುಳಿ, ಇತ್ಯಾದಿ ಬೆಳೆಗಳಿಗೂ, ಮುಖ್ಯವಾಗಿ ದನಗಳ ಮೇವಿಗೂ ಬಹಳ ಪ್ರಯೋಜನವಾಗುತ್ತದೆ. ಈ ವರುಷ ಇಲ್ಲಿನ ಕೆರೆಗಳಲ್ಲಿ ಸಾಕಾದಷ್ಟು ನೀರು ಇಲ್ಲದೆ ಇರುವದರಿಂದ ಕೆರೆ ಫಸಲು ಸಹ ನಿಂತುಹೋಯಿತು. ಧಾರಣೆವಾಸಿಗಳು ಯಥಾಪ್ರಕಾರವಾಗಿ ಹೆಚ್ಚಾಗಿವೆಯೇ ಹೊರತು ಇಳಿಯಲಿಲ್ಲ. ಈ ಕಾಲದಲ್ಲಿ ಕಮ್ಮಿ ಸಂಬಳದ ನೌಕರರಿಗೂ, ಬಡ ಜನಗಳಿಗೂ ಜೀವನೋಪಾಯ ನಡೆಯುವದು ಕಷ್ಟ.—ಈ ಊರಿನ ಜನಸಂಖ್ಯೆ 4,500 ; ಈ ಪೈಕಿ ಇನಾಕ್ಯುಲೇಷನ್ ಹಾಕಿಸಿಕೊಂಡವರು 1,081 ; ಇವರಲ್ಲಿ 32 ಜನರು ಕಾಯಿಲೆಬಿದ್ದು ಎಲ್ಲರಿಗೂ ವಾಸಿಯಾಯಿತು. ಇನಾಕ್ಯುಲೇಷನ್ ಹಾಕಿಸಿಕೊಳ್ಳದೆ ಇರುವವರ ಸಂಖ್ಯೆ 3,419 ; ಈ ಪೈಕಿ ಖಾಯಿಲೆಯಾದವರು 125 ಜನ ; ಇವರಲ್ಲಿ 85 ಜನ ಮೃತಪಟ್ಟರು ; 40 ಜನ ಬದುಕಿಕೊಂಡರು. ಈಗ ಒಂದು ವಾರದಿಂದ ಹೊಸ ಪ್ಲೇಗ್ ಖಾಯಿಲೆಗಳೇನೂ ಇರಲಿಲ್ಲ. ಆದರೆ ಇನಾಕ್ಯುಲೇಷನ್ ಹಾಕಿಸಿಕೊಳ್ಳದೆ ಇದ್ದ ಮನೆಗಳ ಪೈಕಿ ಅಲ್ಲಲ್ಲೇ ಪುನಃ ಖಾಯಿಲೆ ತಗಲುತ್ತಾ ಇದೆ. ಆದ್ದರಿಂದ ಇಲ್ಲಿ ಪ್ಲೇಗ್ ಸಂಪೂರ್ಣವಾಗಿ ನಿಂತಹಾಗಿಲ್ಲ. ಇನಾಕ್ಯುಲೇಷನ್ ಹಾಕಿಸಿಕೊಂಡು ಊರೊಳಗೆ ಇದ್ದರೂ ಅಪಾಯವಿಲ್ಲವೆಂತಲೂ, ಇನಾಕ್ಯುಲೇಷನ್ ಹಾಕಿಸಿಕೊಳ್ಳದೆ ಊರಾಚೆ ಹೋದರೂ ಅಪಾಯ ತಪ್ಪುವದಿಲ್ಲವೆಂತಲೂ ಊರಿನವರು ಮಾತ್ರವಲ್ಲದೆ ಮುಖ್ಯವಾಗಿ ಊರಾಚೆ ಹೋಗಿ ಈಗ ವಾಸಮಾಡಿಕೊಂಡು ಕಷ್ಟವನ್ನು ಅನುಭವಿಸುತ್ತಾ ಇರುವ ಜನಗಳೂ ತಿಳುಕೊಂಡಿದ್ದಾರೆ. ಇನಾಕ್ಯುಲೇಷನ್ ಹಾಕಿಸಿಕೊಳ್ಳುವದರಿಂದ ಪ್ರಯೋಜನವುಂಟೆಂದು ಜನರು ಮಾತನಾಡಿಕೊಳ್ಳುತ್ತಾರೆ.—ಅಮಲ್ದಾರರವರು ಪ್ಲೇಗಿನ ವಿಷಯದಲ್ಲಿ ತುಂಬಾ ನಿಗಾ ಇಡುವವರಾಗಿದ್ದಾರೆ.—ತಾ. 21 ರಲ್ಲಿ ಡೆಪ್ಯುಟಿ ಕಮಿಷನರವರು ಉದ್ಯೋಗಸ್ಥರ ಮಂಡಲಿಯೊಡನೆ ಇಲ್ಲಿಗೆ ಬಂದು ಜಮಾಬಂದಿ ನಡೆಸಿದರು. ಆ ಕಾಲದಲ್ಲಿ ಅವರು ಎಲ್ಲಾ ವಿಷಯಗಳನ್ನೂ ಕುರಿತು ವಿಚಾರಿಸಿದ್ದಲ್ಲದೆ, ಇಲ್ಲಿನ ಎ. ವಿ. ಸ್ಕೂಲನ್ನು ಪರಾಂಬರಿಸಿ ಹೆಡ್ ಮಾಸ್ಟರು ಮಾಡಿರುವ ಏರ್ಪಾಡುಗಳಿಗೂ, ವಿದ್ಯಾರ್ಥಿಗಳು ಕೊಟ್ಟ ಉತ್ತರಕ್ಕೂ ಬಹಳ ಸಂತೋಷಪಟ್ಟರು. ಅವರು ಮೂರು ದಿನ ಇದ್ದು ವಾಪಸು ಬೆಂಗಳೂರಿಗೆ ಹೊರಟು ಹೋದರು.

ಚಿಂತಾಮಣಿ ತಾ|| ಕೋಟಿಗಲ್ಲು.—ಈ ಪ್ರಾಂತ್ಯ ಮುಸ್ಕಿ ಬೆಳೆ ಕಟಾವಾಗುತ್ತಿರುತ್ತದೆ. ಮಳೆ ಬಾರದ್ದರಿಂದ ಯಾವ ಕೆರೆಯೂ ತುಂಬಲಿಲ್ಲ. ಈ ಊರು ಕೆರೆಯು 5-6 ವರ್ಷಗಳಿಗೊಂದು ಸಲ ತುಂಬುವುದು ದುಸ್ತರ. ತುಂಬಿದಾಗ್ಯೂ ಕೋಡಿ ತಗ್ಗಿಸಿದ್ದರಿಂದ ಬೆಳೆಗೆಲ್ಲಾ ನೀರು ಸಾಕಾಗುವುದಿಲ್ಲ. ಕೋಡಿ ಎತ್ತರಿಸಿಕೊಡಬೇಕೆಂದು ಗೌರ್ನಮೆಂಟಿನಲ್ಲಿ ಎಷ್ಟು ಚರ್ಚಿಸಿದಾಗ್ಯೂ ಫಲಕಾರಿಯಾಗಲಿಲ್ಲ.—ಒಳಗೆರೆಯಲ್ಲಿ ಮುಜರಾಯಿಗೆ ಸೇರಿದ ಶಿಥಿಲವಾಗಿದ್ದ ಪುರಾತನವಾದ ದೇವಸ್ಥಾನವನ್ನು ಗ್ರಾಮಸ್ಥರೆಲ್ಲರೂ 200 ರೂಪಾಯಿ ವರೆಗೂ ಚಂದಾ ಹಾಕಿ ಜೀರ್ಣೋದ್ಧಾರಮಾಡಿಸುತ್ತಿದ್ದಾರೆ. ಸರ್ಕಾರದವರ ಸಹಾಯ ದೊರಕಲಿಲ್ಲ.—ನಮ್ಮ ಚಕ್ರವರ್ತಿ ಸಾರ್ವಭೌಮರವರಿಗೆ ಪ್ರಸಕ್ತ ಈ ಘೋರ ಯುದ್ಧದಲ್ಲಿ ಜಯಪ್ರದ ಉಂಟಾಗಿ ರಾಜ್ಯಪದವಿಯು ಆಚಂದ್ರಾರ್ಕಸ್ಥಾಯಿಯಾಗಿ ನಡೆಯುವಂತೆ ಶ್ರೇಯಃಪ್ರಾರ್ಥನೆಗಳು ಪ್ರತಿ ದಿನವೂ ನಮ್ಮ ಶ್ರೀಮನ್ ಮಹಾರಾಜರವರಿಗೂ ಸಹ ನಡಿಸಲ್ಪಡುತ್ತಲಿವೆ.—ಇಲ್ಲಿನ ಸ್ಕೂಲು ಒಂದು ವರ್ಷದ ಈಗಾಯಿತು ಒಳ್ಳೇ ಅಭಿವೃದ್ಧಿಸ್ಥಿತಿಗೆ ಬಂದಿದೆ. ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿರುವುದನ್ನು ಇನ್‌ಸ್ಪೆಕ್ಟರವರು ಪರೀಕ್ಷಾ ಕಾಲದಲ್ಲಿ ಖುದ್ದಾಗಿ ನೋಡಿ ಸಹಾಯಕ್ಕೆ ಮತ್ತೊಬ್ಬ ಉಪಾಧ್ಯಾಯರನ್ನು ಕಳುಹಿಸಿಕೊಡುವಂತೆ ಹೇಳಿದರು. ಇದು ಎಂದಿಗೆ ಜಾರಿಗೆ ಬರುತ್ತದೆಯೋ ತಿಳಿಯದು.—ಅ|| ಇನ್‌ಸ್ಪೆಕ್ಟರವರ ಸಲಹೆ ಮೇರಿಗೆ ಇಲ್ಲಿ ಒಂದು ರೀಡಿಂಗ್ ರೂಮ್ ಸ್ಥಾಪನೆಗಾಗಿ ಮಾಸ್ಟರವರ ಪ್ರೋತ್ಸಾಹದಿಂದ ಶ್ಯಾನುಭೋಗರೂ, ಪಟೇಲರೂ, ಸ್ಕೂಲಿನ ವಿಶಿಷ್ಟ ಕಮಿಟಿ ಮೆಂಬರುಗಳೂ, ಗ್ರಾಮದ ಮುಖಂಡರುಗಳೂ ಸ್ಕೂಲಿನಲ್ಲಿ ಸಭೆ ಸೇರಿ ಮೀಟಿಂಗ್ ನಡಿಸಿ ವಾಚಕಶಾಲೆಯಿಂದುಂಟಾಗುವ ಪ್ರಯೋಜನಾಂಶಗಳನ್ನು ಮಾಸ್ಟರವರು ವಿಶದವಾಗಿ ತಿಳಿಯಪಡಿಸಲಾಗಿ ಚಂದಾ ಹಣ ಏರ್ಪಾಡಾಯಿತು. 4-5 ವೃತ್ತ ಪತ್ರಿಕೆಗಳನ್ನು ತರಿಸಿ ಪ್ರತಿ ಸೋಮವಾರವೂ ತಪ್ಪದೆ ಮಧ್ಯಾಹ್ನಾನಂತರ ರೀಡಿಂಗ್ ರೂಮಿನಲ್ಲಿ ಸರ್ವರೂ ಸೇರಿ ಪತ್ರಿಕೆಗಳನ್ನು ಓದಿ ಲೋಕವಾರ್ತೆಗಳನ್ನು ತಿಳಿದುಕೊಳ್ಳುವಂತೆಯೂ, ಆಗಾಗ್ಗೆ ನೀತಿಬೋಧಕವಾದ ಉಪನ್ಯಾಸಗಳನ್ನು ಮಾಡುವಂತೆಯೂ ನಿರ್ಧರಿಸಲ್ಪಟ್ಟು, ಅದರಂತೆ ತಹಲ್ ವರೆಗೂ ಆಚರಣೆಯಲ್ಲಿ ನಡೆದು ಬಂದು ಇನ್ನೂ ಹೆಸರುವಾಸಿಯನ್ನು ಪಡೆಯುವದರಲ್ಲಿದೆ.—ಗ್ರಾಮಾಭಿವೃದ್ಧಿಯ ವಿಷಯದಲ್ಲಿಯೂ ಮಾಸ್ಟರು ಬಹಳ ಉತ್ಸಾಹದಿಂದ ರೈತಾಪಿ ಮೊದಲ್ಗೊಂಡು ಸಮಸ್ತ ಜನರಿಗೂ ಆರೋಗ್ಯ ಮತ್ತು ಅವಶ್ಯಕವಾದ ಕಟ್ಟಳೆಗಳ ಸಂಗತಿಗಳನ್ನು ಆಗಾಗ್ಗೆ ಹೇಳುತ್ತಲೂ, ಅದರಂತೆ ನಡವಳಿಕೆಗೆ ಬರುವಂತೆ ಮಾಡುತ್ತಲೂ ಅತಿ ಪ್ರಯಾಸಪಡುತ್ತಲಿದ್ದಾರೆ.—ಇವರ ಪ್ರೋತ್ಸಾಹದ ದೆಸೆಯಿಂದ ಈ ಸ್ಥಳದಲ್ಲಿ ಕೋಆಪರೇಟಿವ್ ಸೊಸೈಟಿಯೂ, ಭಜನೆ ಮಂದಿರವೂ ಸ್ಥಾಪನೆಯಾಗುವ ತರದೂದಿನಲ್ಲಿದೆ.

ಗೌರಿಬಿದನೂರು ತಾ|| ಮಂಚೇನಹಳ್ಳಿ.—ಒಂದು ಹದ ಮಳೆ ಬಂದಿದ್ದರೆ ಬುಸ್ಕಿ ಫಸಲು ಇನ್ನೂ ಚೆನ್ನಾಗಿ ಆಗುತ್ತಿತ್ತು. ಕೆರೆಗಳಿಗೆ ನೀರಿಲ್ಲದ್ದರಿಂದ ಭತ್ತದ ಬೆಳೆ ಕಡಮೆ. ಧಾರಣೆಗಳು ತಗ್ಗಲಿಲ್ಲ. ಬಡ ನೌಕರರು ಜೀವಿಸುವುದು ತುಂಬಾ ಪ್ರಯಾಸ.—ಈ ಗ್ರಾಮವು ಈ ತಾಲ್ಲೂಕಿನಲ್ಲೆಲ್ಲಾ ದೊಡ್ಡ ಸ್ಥಳವಾಗಿಯೂ, ಬಹಳ ವ್ಯಾಪಾರ ನಡೆಯತಕ್ಕದ್ದಾಗಿಯೂ, ತುಂಬಾ ವರ್ತಕರಿಂದ ಕೂಡಿದ್ದಾಗಿಯೂ ಇದೆ. ಇಲ್ಲಿನ ಯೂನಿಯನ್ ಇನ್ನೂ ಕ್ರಮಪಟ್ಟಂತೆ ಕಾಣಲಿಲ್ಲ. ಯೂನಿಯನ್ ಮುತ್ಸದ್ದಿಯು ಹೆಚ್ಚು ಶ್ರದ್ಧೆ ವಹಿಸಿದಲ್ಲಿ ಗ್ರಾಮದ ಎಲ್ಲಾ ಬೀದಿಗಳೂ ಶುಚಿಯಾಗಿಯೂ, ರಾತ್ರಿ ಕಾಲದಲ್ಲಿ ಜನಸಂಚಾರಕ್ಕೆ ಅನುಕೂಲವಾಗಿಯೂ ಆದೀತು.—ಇಲ್ಲಿನ ಶೇಕದಾರ್ ಮ|| ನಾರಣಯ್ಯನವರೂ, ಹೊಸ ಜಮಾದಾರರೂ ಪ್ರಜಾಹಿತಚಿಂತಕರಾಗಿಯೂ, ನಿಷ್ಪಕ್ಷಪಾತಿಗಳಾಗಿಯೂ ಇದ್ದಾರೆ.—ಸಂತೆಯಲ್ಲಿ ಹೊಸ ಅಳತೆ ಸೇರು ಮತ್ತು ತೂಕದ ಕಲ್ಲುಗಳು ಜಾರಿಗೆ ಬಂದಂತೆ ತೋರಲಿಲ್ಲ.—ವಿದ್ಯಾವಂತರಿಂದಲೂ, ವರ್ತಕರಿಂದಲೂ ಕೂಡಿರುವ ಈ ದೊಡ್ಡ ಗ್ರಾಮದಲ್ಲಿ ಕೋಆಪರೇಟಿವ್ ಸೊಸೈಟಿಯೂ, ರೀಡಿಂಗ್ ರೂಮೂ ಸಹ ಇಲ್ಲದಿರುವುದು ಶೋಚನೀಯವಾಗಿದೆ. ನಮ್ಮ ಸಾಹುಕಾರರು ವಿಶಾಲಮನಸ್ಸಿನಿಂದ ಸಹಾಯಮಾಡಿದರೆ ಲೋಕಲ್ ಫಂಡಿನಿಂದಲೋ, ಯೂನಿಯನ್ ಫಂಡಿನಿಂದಲೋ ಒಂದು ನೇಟಿವ್ ವೈದ್ಯಶಾಲೆಯು ಆಗಬಹುದು.—ಕನ್ನಡ, ಇಂಗ್ಲಿಷ್ ಮತ್ತು ಸಂಸ್ಕೃತ ಪಾಠಶಾಲೆಗಳಲ್ಲಿ ಕ್ರಮವಾಗಿ ಕೆಲಸ ನಡೆಯುತ್ತಿದ್ದಾಗ್ಯೂ ಅವು ಪ್ರತ್ಯೇಕ ಪ್ರತ್ಯೇಕ ಇರುವುದರಿಂದಲೂ, ವಿದ್ಯಾರ್ಥಿಗಳಿಗೆ ಎಲ್ಲಾ ಭಾಷೆಗಳನ್ನೂ ಕಲಿಯಲು ಅನುಕೂಲವಿಲ್ಲದ್ದರಿಂದಲೂ ಯಾರೋ ಪರೋಪಕಾರಿಗಳು ಎಲ್ಲಾ ಸ್ಕೂಲುಗಳನ್ನೂ ಸೇರಿಸಿ ಈ ಗ್ರಾಮದಲ್ಲಿ ಲೋಕಲ್ ಫಂಡ್ ಎ. ವಿ. ಸ್ಕೂಲು ಮಾಡಿಸಿಕೊಡಬೇಕೆಂದು ನಮ್ಮ ಸರ್ಕಾರದವರನ್ನು ಕೇಳಿಕೊಂಡದ್ದಕ್ಕೆ ಅದನ್ನು ಕಂಡು ತಮ್ಮ ಅಸಹನವನ್ನು ತಡೆಯಲು ಸ್ಥಳಸಂಕೋಚದಿಂದ ವಿದ್ಯಾರ್ಥಿಗಳ ಹಿತಚಿಂತಕರೆಂಬ ನೆಪದಿಂದ 14 ನೇ ಜುಲೈ ? ಮತ್ತು 23 ನೇ ತಾ. ಗಳಲ್ಲಿ ತಮ್ಮ ಪತ್ರಿಕಾ ಮೂಲಕ ಹೇಳಿದ್ದರು. ಸರ್ಕಾರಿ ಎ. ವಿ. ಸ್ಕೂಲು ಆದರೆ ತಮಗೆ ಎಲ್ಲಿ ತೊಂದರೆ ಬರುವುದೋ ಎಂದು ಎ. ವಿ. ಸ್ಕೂಲು ಬೇಡವೆಂದು ಅರ್ಜಿ ಬರೆದು ಮನೆ ಮನೆಗೂ ತಿರುಗಿ ರುಜು ಹಾಕಿಸಿ ಮೇಲಕ್ಕೆ ರವಾನಿಸಿದವರೇ ಈಗ ಅಗತ್ಯವಾಗಿ ಅಂಥಾ ಸ್ಕೂಲು ಮಾಡಿಸಿಕೊಡಬೇಕೆಂದು ಸರ್ಕಾರದವರನ್ನು ಕೇಳಿಕೊಂಡಿದ್ದಾರೆ. ಇಲ್ಲಿನ ಎಲ್ಲಾ ಸ್ಕೂಲುಗಳನ್ನೂ ಏಕತ್ರ ಸೇರಿಸಿ ಎ. ವಿ. ಸ್ಕೂಲು ಮಾಡಿಸಿಕೊಡಬೇಕಾಗಿ ಸರ್ಕಾರದವರನ್ನು ಪ್ರಾರ್ಥಿಸುತ್ತೇವೆ. ಇಲ್ಲಿನ ಗೌರ್ನಮೆಂಟ್ ಕನ್ನಡ ಸ್ಕೂಲನ್ನು ಹೊಸದಾಗಿ ಕಟ್ಟಲು ಮಂಜೂರಾಗಿರುವುದು.—ಸರ್ವೆ ಇಲಾಖೆಯವರು ಬಂದು ಸರ್ವೆ ಕೆಲಸವನ್ನು ಪ್ರಾರಂಭಿಸುವವರಾಗಿದ್ದಾರೆ.—ಇಲ್ಲಿ ಗ್ರಾಮಾಭಿವೃದ್ಧಿ ಸಂಘ ಪ್ರಾರಂಭಿಸಿದ್ದಾಗ್ಯೂ ಗ್ರಾಮಾಭಿವೃದ್ಧಿ ಕಾರ್ಯಗಳ್ಯಾವೂ ನಡೆಯದಿರುವುದಕ್ಕೆ ಕಾರಣವೇನೋ ತಿಳಿಯಲಿಲ್ಲ.

ಹೆಗ್ಗಡದೇವನಕೋಟೆ.—ಕಳೆದ ತಿಂಗಳು ಆರಂಭದಲ್ಲಿ ಆದ ಒಂದು ಹದ ಸೊಗಸಾದ ಮಳೆ ಹೊರತು ತಹಲ್‌ವರೆಗೂ ಒಂದು ಹನಿಯಾದರೂ ಬಿದ್ದಿರುವದಿಲ್ಲ. ಹಗಲು ಸಹಿಸಲಾಗದಷ್ಟು ಸೆಕೆಯೂ, ರಾತ್ರಿ ನಡುಗಿಸುವಷ್ಟು ಚಳಿಯೂ ಉಂಟಾಗಿದೆ. ಕೆಲವು ದಿನಗಳಿಂದ ಹವ ಸಂಪೂರ್ಣವಾಗಿ ಬದಲಾಯಿಸಿರುತ್ತೆ. ಊರಲ್ಲೆಲ್ಲಾ ನೆಗಡಿ, ಕೆಮ್ಮು, ಚಳಿಜ್ವರ, ಆಮಶಂಕೆಗಳಿಂದ ತೊಂದರೆಪಡುವದು ಸಾಧಾರಣವಾಗಿದೆ. ಸಾಲದುದಕ್ಕೆ ಪ್ಲೇಗು ಉಪದ್ರವೂ ತಲೆದೋರಿದೆ. ಇದರ ಅವಾಂತರವು ಈ ಸಲ ಇಲ್ಲಿ ಕಮ್ಮಿಯಾಗಿದ್ದರೂ ತಾಲ್ಲೋಕಾಮಳೆ ಬಹಳ ಹಾವಳಿಯನ್ನುಂಟುಮಾಡುತ್ತಿದೆ.—ಸ್ಯಾನಿಟೇಷನ್ ಕ್ರಮವಾಗಲಿಲ್ಲ. ನಮ್ಮ ಮ್ಯುನಿಸಿಪಾಲಿಟಿಯು ಪ್ರಜೆಗಳ ಸೌಕರ್ಯದ ವಿಷಯದಲ್ಲಿ ಕಿಂಚಿತ್ತಾದರೂ ಶ್ರದ್ಧೆಯನ್ನೂ ಚಟುವಟಿಕೆಯನ್ನೂ ವಹಿಸದೇ ಇರುವುದಕ್ಕಾಗಿ ಬಹಳ ವಿಷಾದಪಡಬೇಕಾಗಿದೆ. ಒಬ್ಬ ರೆವಿನ್ಯೂ ದಫೇದಾರನು ಜಾಡಮಾಲಿಗಳ ನೋಟಿ ನೇಮಕವಾಗಿರುವುದಾಗಿ ಕೇಳುತ್ತೇನೆ; ಆದರೆ ಅವನು ಒಂದು ದಿನವಾದರೂ ಬೀದಿಯ ಮೇಲೆ ಬಂದಂತೆ ತೋರುವುದಿಲ್ಲ. ಸ್ಯಾನಿಟರಿ ಇನ್‌ಸ್ಪೆಕ್ಟರೇನೋ ಇದ್ದಾರೆ; ಆದರೆ ಅವರಿಗೆ ಸ್ಯಾನಿಟರಿ ಸಂಬಂಧಪಟ್ಟ ಕಾರ್ಯಗಳನ್ನು ನೇಮಿಸಿಲ್ಲವೆಂತ ತೋರುತ್ತೆ. ಹೊಳೆಗೆ ಹೋಗುವ ದಾರಿಯಲ್ಲಿ ಎಡಗಡೆ ಕಂದಕದಲ್ಲಿ ಒಂದು ನಾಯಿ ಸತ್ತು ಕೊಳೆತು ದುರ್ವಾಸನೆಯಾಗಿ ನೀರಿಗಾಗಿ ಹೋಗುವವರು ಮೂಗು ಮುಚ್ಚಿಕೊಂಡು ತಿರುಗಬೇಕಾಗಿದೆ. ಅಲ್ಲದೆ ಬಲಗಡೆ ಪಡಖಾನೆ ಇರೋಣದರಿಂದ ಕುಡಕರ ವಾಚಾಮಗೋಚರವಾದ ಭಾಷೆಯೂ ಗದ್ದಲವೂ ಸಮೀಪದಲ್ಲಿರುವ ವಾಸಸ್ಥರಿಗೆ ಬಹಳ ಬೇಸರಿಕೆಯನ್ನುಂಟುಮಾಡುತ್ತಿದೆ. ನಮ್ಮ ಹೊಸ ಅಮಲ್ದಾರರವರು ಪಡಖಾನೆಯನ್ನು ಹೊಳೆಯ ಮೇಲ್ಭಾಗದಲ್ಲಿಡಲು ಕೂಡಲೇ ಆರ್ಡರ್ ಮಾಡುತ್ತಾರಾಗಿ ನಂಬಿರುತ್ತೇನೆ. ಟವನ್‌ನಲ್ಲಿ ಸಾಕಾದಷ್ಟು ಲಾಂದ್ರಕಂಭಗಳು ಇಲ್ಲ. ಪೋಲೀ ದನಗಳೂ ಕತ್ತೆಗಳೂ ಬೀದಿಯಲ್ಲಿ ಬಿದ್ದಿರುವವು. ರಾತ್ರಿ ತಿರುಗತಕ್ಕವರಿಗೆ ಬಹಳ ಅಪಾಯಕರವಾಗಿದೆ. ಸ್ಥಳಾಧಿಕಾರಿಗಳು ಈ ವಿಷಯಕ್ಕೆ ಗಮನಕೊಡಬೇಕಾಗಿದೆ.—ಕಳೆದ ವಾರ ಡಿ|| ಹೆಲ್ತ್ ಆಫೀಸರ್ ಮ|| ಬಿ. ಕೃಷ್ಣರಾಯರು ಇಲ್ಲಿಗೆ ದಯಮಾಡಿ ಮೊದಲನೆಯ ದಿವಸ ಇಲ್ಲಿನ ಎ. ವಿ. ಸ್ಕೂಲ್ ಹೆಡ್ ಮಾಸ್ಟರ ಪ್ರೋತ್ಸಾಹದ ಮೇಲೆ ಸುಮಾರು 30-35 ಹುಡುಗರ ವರೆಗೆ ಇನಾಕ್ಯುಲೇಷನ್ ಮಾಡಿದರು. ಪುರವಾಸಿಗಳಲ್ಲಿ ಅನೇಕರು ಪಡ್ಡಿನಲ್ಲಿರುವುದರಿಂದಲೂ, ಪ್ರೋತ್ಸಾಹವಿಲ್ಲದೆಹೋದುದರಿಂದಲೂ 7-8 ಜನ ಮಾತ್ರ ಚಿಕಿತ್ಸೆ ಮಾಡಿಸಿಕೊಂಡರು.—ದಿನಸಿಗಳ ಧಾರಣೆಯಾದರೋ ದಿನೇದಿನೇ ತುಟ್ಟಿಯಾಗಿ ಕ್ಷಾಮಕಾಲವನ್ನು ಸೂಚಿಸುತ್ತಿದೆ. ಇಂಥಾ ಕಾಲದಲ್ಲಿ ಕೆಲವು ಅಕ್ಕಿಕೆಯುಳ್ಳ ವರ್ತಕರು ಅಲ್ಪಲಾಭಕ್ಕಾಗಿ, ಕೊಡಗು ಜಿಲ್ಲಾ ಕಡೆಯಿಂದ ಬರತಕ್ಕ ನಾಡಿನ ವರ್ತಕರಿಗೆ ಚಿತಾವಣೆಮಾಡಿ ಅಕ್ಕಿಯನ್ನು ಕಮ್ಮಿಯಾಗಿ ಮಾರುವಂತೆ ಪ್ರೇರೇಪಿಸಿದರು. ಸ್ಥಳಾಧಿಕಾರಿಗಳು ಆ ವಿಚಾರಕ್ಕೆ ಪ್ರವೇಶಿಸಲಿಲ್ಲ. ಬಡ ಜನರ ಸಲುವಾಗಿಯಾದರೂ ಸದರೀ ವರ್ತಕರನ್ನು ಹತಬಂದಿಗೆ ತರಕೂಡದೇನು? ಗೌರ್ನಮೆಂಟು ಸೇರು, ಬಟ್ಟುಗಳು ಜಾರಿಯಲ್ಲಿದ್ದಾಗ್ಯೂ ಬಂದು ಅಂಗಡಿಯಲ್ಲಾದರೂ ಹಳೆಯ ಸವೆದುಹೋದ ಬಟ್ಟುಗಳು ವಿನಹ ಹೊಸ ಬಟ್ಟುಗಳು ಉಪಯೋಗಿಸುತ್ತಿಲ್ಲ. ಸಂತೆಯಲ್ಲಾದರೋ ಅನೇಕರು ಕಲ್ಲುಗಳನ್ನು ಬಟ್ಟುಗಳಾಗಿ ಉಪಯೋಗಿಸುತ್ತಿದ್ದಾರೆ. ಅದರ ತೂಕ ಎಷ್ಟೋ ಯಾರಿಗೆ ಗೊತ್ತು? ಅಂತೂ ಇಂತು ಗರೀಬರು ಬದುಕುವ ಕಾಲ ಬಂದಿಲ್ಲ.—ನಮ್ಮನ್ನಾಳುವ ಸಾರ್ವಭೌಮ ಸರ್ಕಾರದವರಿಗೆ ಅಪ್ರಾರ್ಥಿತವಾಗಿ ಬಂದೊದಗಿರುವ ಯುದ್ಧದಲ್ಲಿ ಹೋರಾಡುತ್ತಿರುವಂಥಾ ನಮ್ಮ ಸಹೋದರರಸಲುವಾಗಿ ಏರ್ಪಡಿಸಿರುವ ಫಂಡಿಗೆ ಈ ತಾಲ್ಲೋಕಿನಿಂದಲೂ ಚಂದಾ ಹಣವು ರವಾನಿಸಲ್ಪಡುವುದಕ್ಕೆ ಆಗಲೇ ತಕ್ಕ ಏರ್ಪಾಡುಗಳು ಮಾಡಲ್ಪಟ್ಟಿವೆ.

ದೊಡ್ಡಬಳ್ಳಾಪುರ.—ಕಳೆದ 20 ನೆ ತಾ. ಶುಕ್ರವಾರ ಮಧ್ಯಾಹ್ನ ಈ ಊರಿನಲ್ಲಿರುವ ಮಹಮ್ಮದೀಯರೆಲ್ಲರೂ ಮಸೀದಿಗೆ ಹೋಗಿ ದೇವರ ಪ್ರಾರ್ಥನೆಯನ್ನು ನಡಿಸಿದ ಮೇಲೆ ಹಳೆ ಕಛೇರಿ ಕಟ್ಟಡದಲ್ಲಿ ಸಭೆ ಸೇರಿ ನಮ್ಮ ಚಕ್ರವರ್ತಿ ಸಾರ್ವಭೌಮರಿಗೆ ಜಯವಾಗಲೆಂತಲೂ, ಯೂರೋಪಿನ ಟರ್ಕಿಯವರು ಇಂಗ್ಲಿಷ್‌ನವರ ಮೇಲೆ ಕೈಯೆತ್ತಿರುವದು ತಮಗೆ ತೀರಾ ಅಸಮ್ಮತವಾದ ಕಾರ್ಯವೆಂತಲೂ, ಈಗಲೂ ನಮ್ಮನ್ನು ಆಳುವ ಸಾರ್ವಭೌಮರವರು ನಮ್ಮ ಮತದ ಪುಣ್ಯಸ್ಥಳಗಳನ್ನು ಕಾಪಾಡುತ್ತೇವೆಂತ ತಿಳಿಸಿ ವಾಗ್ದಾನ ಮಾಡಿರುವದು ತಮ್ಮ ಕೃತಜ್ಞತೆಗೆ ದೊಡ್ಡ ಕಾರಣವೆಂತಲೂ ವ್ಯಕ್ತಪಡಿಸಿ ಏಕಮನಸ್ಸಿನಿಂದ ಎಲ್ಲಾ ಮಹಮ್ಮದೀಯರೂ ಆ ರೀತಿ ಅರಿಕೆಮಾಡಿ ಪ್ರಾರ್ಥನೆಮಾಡಿದರು. ಈ ಸಭೆಗೆ ಜವಳಿ ಅಂಗಡಿ ಮೆ|| ಹೇಷ್ ಇಮಾಮ್ ಅಬ್ದುಲ್ ರಜಾಕ್ ಸಾಹೇಬರು ಅಗ್ರಾಸನಾಧಿಪತಿಗಳಾಗಿದ್ದರು. ಹಿಂದುಸ್ಥಾನಿ ಸ್ಕೂಲ್ ಅ|| ಮಾಸ್ಟರ್ ಷೇಕ್ ಅಹ್ಮದ್ ಸಾಹೇಬರು ಅತ್ಯಂತ ಗಂಭೀರವಾದ ರೀತಿಯಲ್ಲಿ ಇಂಗ್ಲಿಷ್ ಸರ್ಕಾರದವರ ಆಳ್ವಿಕೆಯಲ್ಲಿ ತಮಗೆ ಉಂಟಾಗಿರುವ ಸುಖ ಸಮಾಧಾನಗಳನ್ನು ವಿವರಿಸಿ ಸರ್ವರಿಗೂ ತೃಪ್ತಿಯನ್ನುಂಟುಮಾಡಿದರು. ಕಡೆಯಲ್ಲಿ ಸಭಿಕರೆಲ್ಲರೂ ಶ್ರೀಮನ್ ಇಂಡಿಯಾ ಚಕ್ರವರ್ತಿಯವರಿಗೂ, ಶ್ರೀಮನ್ ಮಹಾರಾಜರವರಿಗೂ ಜಯಘೋಷವನ್ನು ನಡಿಸಿ ಸಭೆಯನ್ನು ಬರಖಾಸ್ತುಮಾಡಿದರು. ಈ ಸಭೆಗೆ ಕೆಲವು ಮುಖ್ಯ ಅಧಿಕಾರಿಗಳೂ ಹಿತೈಷಿಗಳೂ ವಿದ್ಯಾವಂತರೂ ಮತಬೋಧಕರೂ ಆಗಂತುಕರಾಗಿ ದಯಮಾಡಿಸಿ ಸಭೆಯವರನ್ನು ಸಂತೋಷಪಡಿಸಿದರು.—ಈ ತಿಂಗಳು 20 ನೇ ತಾ. ಶುಕ್ರವಾರ ಬೆಳಿಗ್ಗೆ ಇಲ್ಲಿಗೆ 3½ ಮೈಲು ದೂರವಾಗಿರುವ ಒಡ್ಡಹಳ್ಳಿಯಲ್ಲಿ ಒಕ್ಕಲಿಗರ ಕೆಂಪಣ್ಣನ ಹೆಂಡತಿ ಹನುಮಿ ಎಂಬ ಹೆಂಗಸು ಸುಮಾರು 2 ವರ್ಷದ ತನ್ನ ಗಂಡುಮಗವನ್ನು ತಾನೇ ಕುತ್ತಿಗೆ ಕೊಯಿದು ತಾನೂ ಕುತ್ತಿಗೆ ಕೊಯಿದುಕೊಂಡಿರುತ್ತಾಳೆ. ಮಗು ಆಗಲೇ ತೀರಿಹೋಯಿತು. ಅವಳು ಮಾತ್ರ ಕುತ್ತಿಗೆ ತೀರಾ ಹರಿದುಹೋಗದ್ದರಿಂದ ಜೀವಿಸಿ ಈಗ ಆಸ್ಪತ್ರೆ ಇಲಾಜಿನಲ್ಲಿ ಚೆನ್ನಾಗಿರುತ್ತಾಳೆ. ಪೊ|| ಸೂ|| ಸಾಹೇಬರವರೂ ಸಹ ಅಜಮಾಯಿಷಿ ಮಾಡಿರುವದರಿಂದ ವೈದ್ಯರ ಮೂಲಕ ಇವಳ ಬುದ್ಧಿಸ್ಥಿತಿ ಹ್ಯಾಗಿದೆ ಎಂದು ತಿಳಿಯದೆ ಇರಲಾರದು.—ಕೆಲವು ದಿವಸಗಳ ಹಿಂದೆ ಸದರ ಮ|| ಸಾಹುಕಾರ್ ಆಲಂಪಲ್ಲಿ ವೆಂಕಟನಾರಣಶೆಟ್ಟರ ಮೊಮ್ಮಗನ ಮದುವೆಗೋಸ್ಕರ ತಾಳ್ಯದಿಂದ ಕರೆಸಲ್ಪಟ್ಟಿದ್ದ ಕೊಳಲು ವಾದ್ಯದ ಮ|| ರಂಗಯ್ಯದಾಸ್ ಎಂಬುವವರು ಥಿಯೊಸಾಫಿಕಲ್ ಹಾಲಿನಲ್ಲಿ ಕೊಳಲು ವಾದ್ಯದ ಸಂಗೀತವನ್ನು ಮಾಡಿ ಅಲ್ಲಿ ಆ ರಾತ್ರಿ ಸೇರಿದ್ದ ಮಹನೀಯರುಗಳಿಗೆಲ್ಲಾ ಅತ್ಯಾನಂದವನ್ನುಂಟುಮಾಡಿದರು.—ಈ ಊರು ಅಂಗಡಿಬೀದಿ ಚೌಕದ ಹತ್ತಿರ ಇರುವ ಜವಳಿ ಅಂಗಡಿ ನಾರಪ್ಪನವರ ಅಂಗಡಿಮೇಲಿನ ಮಾಳಿಗೆಯನ್ನು ಯಾರೋ ಕಳ್ಳರು ತಾ. 15 ನೇ ರಾತ್ರಿ ಕನ್ನಾ ಕೊರೆದು ಕೈಗೆ ಸಿಕ್ಕಿದ ನೂರಾರು ರೂಪಾಯಿನ ಥಾನುಬಟ್ಟೆಗಳನ್ನು ತೆಗೆದುಕೊಂಡು ಹೋದರು. ಈ ಕಳ್ಳರನ್ನು ಪೋಲೀಸಿನವರು ಪತ್ತೇಮಾಡುವರೆಂತ ನಿರೀಕ್ಷಿಸಲ್ಪಟ್ಟಿದೆ. ಅಂಗಡಿಬೀದಿ ಚೌಕದಲ್ಲೇ ಇಂಥಾ ಕಳ್ಳತನಗಳು ನಡೆದದ್ದು ಸೋಜಿಗವಾಗಿದೆ.—ಈ ಊರು ಸ್ಟೇಷನ್‌ಗೂ ಊರಿಗೂ ಒಂದೂವರೆ ಮೈಲು ದೂರವಿರುತ್ತೆ. ಮೆಯಿಲ್ ಗಾಡಿಗಳಿಗೆ ಹೋಗುವ ಪ್ರಯಾಣಿಕರಿಗೆ ಮಾರ್ಗದಲ್ಲಿ ಲಾಂದ್ರ ಬೆಳಕು ಇಲ್ಲದೆಹೋದರೆ ಅಪಾಯಗಳಿಗೆ ಆಸ್ಪದವಾಗಿದೆ. ಈ ವಿಷಯವನ್ನೂ, ಊರೊಳಗಿನ ಲಾಂದ್ರಗಳ ಸಂಗತಿಯನ್ನೂ ಯಾರು ಸಂಪಡಿಸುತ್ತಾರೋ ತಿಳಿಯದು.—ಗರ್ಲ್ಸ್ ಸ್ಕೂಲು ಹಳೆ ಕಛೇರಿ ಬಿಟ್ಟ ಬಾಗಾಯಿತು ಬೇರೆಬೇರೆ ಕಡೆ ನಡೆಯುತ್ತೆ. ಇದು ಅನೇಕ ಚಿಕ್ಕಮಕ್ಕಳಿಗೆ ತುಂಬಾ ಕಷ್ಟವೆನ್ನುವುದು ಮೇಲಿನವರಿಗೆ ತಿಳಿದಿದ್ದರೂ ಹೊಸ ಕಟ್ಟಡಕ್ಕಾಗಲೀ ಹಳೇ ಕಟ್ಟಡದ ರಿಪೇರಿಗಾಗಲೀ ಇನ್ನೂ ಪ್ರಾರಂಭಿಸದೆ ಇರುವದು ದೊಡ್ಡ ಕೊರತೆಯಾಗಿದೆ.—ಈ ಊರಲ್ಲಿ ಸಂತೇ ದಿನ ಅಳೆಯುವ ಸೇರು ಸಾವು ಮುಂತಾದವುಗಳಲ್ಲಿ ಕೆಲವರು ಸಗಣಿ ತುಂಬಿ ಪದಾರ್ಥ ಮಾರುತ್ತಾರಂತೆ. ಇಂಥವರಿಗೆ ಸ್ವಲ್ಪ ಎಚ್ಚರಿಕೆ ವಿವೇಕ ಕಲಿಸಬೇಕಾಗಿದೆ. ಸೌದೆ ಧಾರಣೆ ಈಗ ಅಗ್ಗವಾಗಿದೆ. ರೂಪಾಯಿಗೆ 20 ಮಣ. ಸರ್ವೆ ಸೌದೆ ಸೀಳಿದ್ದು ಕೊಡುತ್ತಾರೆ. ಆದರೆ ರಾಗಿ ಅಕ್ಕಿ ಮುಂತಾದ್ದು ಯಥಾ ಪ್ರಕಾರ ತುಟ್ಟಿಯಾಗಿವೆ.—ಡೆಪ್ಯುಟಿ ಇನ್‌ಸ್ಪೆಕ್ಟರವರು ಈ ಊರಿಗೆ ಕಳೆದ ವಾರ ಬಂದು ಇಲ್ಲಿ ಸ್ಕೂಲುಗಳ ಸ್ಥಿತಿಗತಿಗಳನ್ನು ಪರಾಂಬರಿಸಿಕೊಂಡು ಹೋದರು.—ಕೆರೆಗಳು ಮಾತ್ರ ಇನ್ನೂ ತುಂಬಲಿಲ್ಲ.—(ಇನ್ನೊಬ್ಬ ಬಾತ್ಮಿದಾರರಿಂದ) ಈ ಊರು ಆಸ್‌ಪಾಸ್ ಚಿಕ್ಕಬಳ್ಳಾಪುರ ದೇವನಹಳ್ಳಿಯಲ್ಲಿ ಪ್ಲೇಗ್ ಉಪದ್ರ ತಲೆದೋರಿದೆ. ಇಲ್ಲಿ ಅದು ತಲೆದೋರದಿರಲು ಪ್ಲೇಗ್ ಜಾಗಗಳಿಂದ ಬರತಕ್ಕ ಜನರನ್ನು ಡಾಕ್ಟರು ನೋಡುವಂತೆ ಸರ್ಕಾರದವರು ಏರ್ಪಾಟು ಮಾಡ್ಯಾರೆಂದು ನಿರೀಕ್ಷಿಸಲಾಗಿದೆ.—ಇಲ್ಲಿಗೆ ಮ|| ಪರಶುರಾಮರವರ ಸರ್ಕಸ್ ಕಂಪನಿ ಬಂದು 3-4 ಆಟಗಳಿಂದ ಈ ತಾಲ್ಲೂಕ್ ಪ್ರಜೆಗಳಿಗೆ ಸಂತೋಷಪಡಿಸಿದ್ದಲ್ಲದೆ ಹಾಲಿ ನಡೆಯುತ್ತಿರುವ ಯುದ್ಧದ ರಿಲೀಫ್ ಫಂಡಿಗೆ ಆಟದಲ್ಲಿ ಉತ್ಪತ್ತಿಯಾದ ಅರ್ಧ ಹಣವನ್ನು ಕೊಡುವಂತೆ ಸಭೆಯಲ್ಲಿ ವಾಗ್ದಾನಮಾಡಿ ಮೊಲಲು ಸಾವತಿಮಾಡಿದರು.—ಕಳೆದ ಶುಕ್ರವಾರ ವೇ|| ವೆಂಕಣ್ಣದಾಸರೆಂಬುವರು ಇಲ್ಲಿಗೆ ಬಂದು ಹರಿಕಥೆಯನ್ನು ಮಾಡಿ ಪ್ರಜೆಗಳಿಗೆಲ್ಲಾ ಸಂತೋಷವನ್ನುಂಟುಮಾಡಿದರು. ಅಲ್ಲಿ ಸೇರಿದ್ದ ಎಲ್ಲಾ ಜನರ ಪರವಾಗಿ ಸ್ಥಳ ಪುರೋಹಿತರು ವೇ|| ಸುಬ್ಬಾಜೋಯಿಸರು ಈಗ ನಡೆಯುತ್ತಿರುವ ಯುದ್ಧದಲ್ಲಿ ನಮ್ಮ ಜಾರ್ಜ್ ಚಕ್ರವರ್ತಿಯವರಿಗೆ ಜಯವಾಗಿ ಇವರನ್ನೂ, ಇವರ ರಾಜ್ಯಭಾರದ ಪ್ರಜೆಗಳನ್ನೂ, ನಮ್ಮ ಶ್ರೀಮನ್ ಮಹಾರಾಜರವರನ್ನೂ ಕಾಪಾಡುವಂತೆ ಕಥಾ ಸಮಾಪ್ತಿ ಕಾಲದಲ್ಲಿ ಭಗವಂತನನ್ನು ಎಲ್ಲರೂ ಬೇಡಬೇಕೆಂದು ಅತಿ ಮಧುರವಾದ ವಾಕ್ಯಗಳಿಂದ ತೋರ್ಪಡಿಸಿದರು. ಎಲ್ಲಾ ಜನರೂ ಜಯಧ್ವನಿ ಮಾಡಿ ದೇವರ ಪ್ರಾರ್ಥನೆ ಮಾಡಿದರು.—ಮ್ಯುನಿಸಿಪಾಲಿಟಿ ವಿಚಾರ ಎಂದಿಗೆ ಕ್ರಮಪಟ್ಟು ಮುಖ್ಯವಾಗಿ ಲಾಂದ್ರಗಳ ದೀಪ ಉರಿದು ಜನರಿಗೆ ಕ್ಷೇಮವಾದೀತೆಂಬುವದೇ ಪ್ರಜೆಗಳ ಕೋರಿಕೆ. ಸಂದುಗೊಂದುಗಳಲ್ಲಿ ಸ್ಯಾನಿಟರಿ ಇನ್‌ಸ್ಪೆಕ್ಟರು ದಿಡ್ಡಾಟ ಇಟ್ಟುಕೊಂಡರೆ ಪ್ಯಾಗಾದರೂ ಮೇಲು ಉಂಟಾಗಿ ತಿಂಗಳಿಗೆ ಒಂದಾವರ್ತಿಯಾದರೂ ಕಚರಾ ಸಾಗೀತು.—ಈ ಊರು ಬಳಿ ಪ್ರಸಿದ್ಧವಾದ ಶ್ರೀ ಘಾಟಿ ಸುಬ್ರಹ್ಮಣ್ಯಸ್ವಾಮಿ ಜಾತ್ರೆ ಈ ತಿಂಗಳಲ್ಲಿ ನಡೆದು ಲಕ್ಷಾಂತರ ಪ್ರಜೆಗಳೂ, 70-80 ಸಾವಿರ ಎತ್ತುಗಳೂ ಸೇರುತ್ತೆ. ಜನರಿಗೆ ರೋಗಾದಿಗಳು ಉಂಟಾಗದೆ ಜನ, ಜಾನ್‌ವಾರುಗಳಿಗೆ ನೀರು ಒದಗುವಂತೆ ಹೋದ ವರ್ಷಕ್ಕಿಂತ ಅಧಿಕವಾದ ವಿತರಣೆ, ಸಮಾರಾಧನೆ ವಗೈರೆ, ಪರಸ್ಥಳದ ಆದರಣೆ ಮುಂತಾದ್ದಕ್ಕೆ ನಮ್ಮ ಅಮಲ್ದಾರ್ರವರು ತುಂಬಾ ಮೆಹನತ್ತು ವಹಿಸ್ಯಾರೆಂದು ನಿರೀಕ್ಷಿಸಲಾಗಿದೆ.

ತೀರ್ಮಾನವಾಯಿತು.

ಕುರುಬರ ಯಜಮಾನ್ ಮ|| ಭೋಜಪ್ಪನವರು ಒಕ್ಕಲಿಗರ ಪತ್ರಿಕೆಯ ಮೇಲೆ ಹಾಕಿದ್ದ ಮೊಕದ್ದಮೆಯ ವಿಷಯವಾಗಿ ಕಳೆದ 20 ನೇ ತಾರೀಖಿನಲ್ಲಿ ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರವರು ಜಡ್ಜ್‌ಮೆಂಟು ಹೇಳಿದ್ದರಲ್ಲಿ ಪಂಕುಬ್ಧರಾದ ಕುರುಬರನ್ನು ವಿಲೋಮ ಜಾತಿಯವರು ಎಂದು ಪ್ರಕಟಿಸಿ ಅವಮಾನ ಪಡಿಸಿದ್ದು ತಪ್ಪು ಎಂದು ಡಿಟೋ ಪತ್ರಿಕೆಯ ಪ್ರೆಸಿಡೆಂಟ್ ಮ|| ಬಿ. ಎಸ್ ಮಾರಪ್ಪನವರಿಗೂ, ಸಬ್ ಎಡಿಟರ್ ಮ|| ವೆಂಕಟರಾಮಯ್ಯನವರಿಗೂ, ಅನ್ನು ಕೂರು ಮ|| ಎಲ್. ಬೋರೆಗೌಡರಿಗೂ ತಲಾ ಒಂದು ನೂರು ರೂಪಾಯಿಯಂತೆ ಜುಲ್ಮಾನೆ ವಿಧಿಸಿದರು. [257-2] ಮೈಸೂರು ಟಿ. ದಾಸಪ್ಪ.

Tailoring taught by an "Honours" graduate of two West End Schools and an examiner of the world famous Tailor and Cutter of London; possessing long and varied experience as a practical Cutter. Certificates given to Students at the end of the term. Special arrangements for London examination and diploma. Send half-anna stamp for prospectus.

RAO'S COLLEGE OF TAILORING,

[245-3] *30, Picket Road, Kalbadevi, Bombay.*

ದೀಪಾವಳಿ ಬಹುಮತಿ ಗಡಿಯಾರ.

19 ಸಾಮಾನು ಬಹುಮತಿ ಸಹಿತ ಕ್ರಯ ರೂ. 3-14-0.



ಮೈಸೂರು ಮತ್ತು ಇತರ ಕನ್ನಡ ಭಾಷೆ ಸೀಮೆಗಳಾದ ಮಂಗಳೂರು, ಬಳ್ಳಾರಿ, ಧಾರವಾಡ, ಬೆಳಗಾವ, ಬೊಂಬಾಯಿ, ವಗೈರೆ ಪ್ರದೇಶಗಳಲ್ಲಿ ಕನ್ನಡ ಕಾದಂಬರಿ ಲೇಖಕರೆಂದು ಪ್ರಸಿದ್ಧರಾಗಿದ್ದ ಮ|| ಬಿ. ವೆಂಕಟಾಚಾರ್ಯರವರು ಇದೇ ಇಸವಿ ಜೂನ್ ತಿಂಗಳ ಆಖೈರು ಭಾಗದಲ್ಲಿ ದೈವಾಧೀನರಾದರು. ಇವರಿಗೆ ನಾಲ್ಕು ಜನ ಅವಿಭಕ್ತ ಪುತ್ರರು ಇರುತ್ತಾರೆ. ಆ ಪೈಕಿ ಜ್ಯೇಷ್ಠ ಪುತ್ರರು ಮ|| ಅಡ್ವೋಕೇಟ್ ಬಿ ಎ., ಬಿ.ಎಲ್. ಬಿ., ರಾಮಣ್ಣನವರು ಅವರ ಪಿತರಾರ್ಜಿತವಾದ ವಿಶಿಷ್ಟ ಆಸ್ತಿಗೆ ಯಜಮಾನರಾಗಿ ಮೇನೇಜ್‌ಮೆಂಟ್ ನಡೆಸುತ್ತಾ ಇರುತ್ತಾರೆ. ಮ|| ವೆಂಕಟಾಚಾರ್ಯರವರು ರಚಿಸಿರುವ ವಿಶಿಷ್ಟ ಕನ್ನಡ ಕಾದಂಬರಿಗಳನ್ನು ವಿಕರಿಮಾಡುವುದಕ್ಕೂ, ಪರಿಷ್ಕರಣೆ ಮಾಡಿ ಪುನಃ ಅಚ್ಚು ಹಾಕಿಸುವುದಕ್ಕೂ, ಅವುಗಳನ್ನು ಭಾಷಾಂತರಮಾಡಲು ಅಪ್ಪಣೆ ಯಾ ಅನುಮತಿ ಕೊಡುವುದಕ್ಕೂ ಮತ್ತು ಆ ಸಂಬಂಧವಾಗಿ ಕಾಗದ ಪತ್ರಗಳನ್ನು ನಡಿಸುವುದಕ್ಕೂ ಅವರ ಜ್ಯೇಷ್ಠ ಪುತ್ರರಾದ ಬಿ. ರಾಮಣ್ಣನವರೇ ಆ ಪ್ರಕಾರ ಸ್ವತಂತ್ರರು ಮತ್ತು ಬಾಧ್ಯರಾಗಿರುತ್ತಾರೆ. ಲೇಟ್ ಬಿ. ವೆಂಕಟಾಚಾರ್ಯರವರಿಗೆ ನಾಲ್ಕನೆ ಸಂಬಂಧದ ಹೆಂಡತಿ ಮತ್ತು ನಮ್ಮ ಬಲತಾಯಿಯಾದ ಬಿ. ಕಲ್ಲಮ್ಮನೆಂಬುವರಿಗೆ ಮೇಲ್ಕಂಡ ಪುಸ್ತಕಗಳ ವಿಚಾರದಲ್ಲಿ ಯಾವ ಸ್ವಾತಂತ್ರ್ಯವೂ ಇರುವುದಿಲ್ಲ. ಈ ನೋಟೀಸಿಗೆ ವಿರೋಧವಾಗಿ ಯಾರಾದರೂ ನಮ್ಮ ಬಲತಾಯಿ ಕಲ್ಲಮ್ಮನವರಿಂದ ಪುಸ್ತಕಗಳನ್ನು ಹೊಂದಿದ್ದ ಆಗಲೀ, ಅಥವಾ ಅಚ್ಚು ಮಾಡಿದ್ದ ಆಗಲೀ ಮೈಸೂರು ಕಾಪಿರೈಟ್ ಕಾನೂನಿನ ಪ್ರಕಾರದ ಕ್ರಮಗಳಿಗೆ ಗುರಿಯಾಗುವರಲ್ಲದೆ ನಮ್ಮ ನಷ್ಟಗಳಿಗೂ ಸಹ ಜವಾಬ್ದಾರರಾಗುತ್ತಾರೆಂದು ಈ ಮೂಲಕ ತಿಳಿಸಿರುತ್ತೆ. ಯಾವ ಕರೆಸ್ಪಾಂಡೆನ್ಸು ಮಾಡಬೇಕಾದರೂ ನಮಗಾಗಿ ನಮ್ಮ ತಮ್ಮಂದಿರಾದ ಬಿ. ವಿ. ನರಸಿಂಹಯ್ಯಂಗಾರ್ರವರ ಮೂಲಕ ನಡಿಸಬಹುದಾಗಿ ತಿಳಿಸಿದೆ. [241-4]

ತಾ. 16-11-14, ಮೈಸೂರು. — ಬಿ. ರಾಮಣ್ಣ, ಅಡ್ವೋಕೇಟ್.

ಪ್ರೊಫೆಸರ್ ಗಜ್ಜರರವರ

ಗುಣಕಂಡ ಪ್ರಖ್ಯಾತವಾದ ಔಷಧಗಳು.

ವ್ಯರ್ಥವಾದ ಔಷಧಗಳನ್ನು ಉಪಯೋಗಿಸಿ ಪ್ರಾಣಾಪಾಯಕ್ಕೆ ಗುರಿಯಾಗುವುದೇಕೆ ? ವಿವೇಕದಿಂದ ತಯಾರುಮಾಡಿರುವ ನಮ್ಮ ಔಷಧಗಳನ್ನು ಸೇವನೆ ಮಾಡಬಾರದೇ ?

ಟಾನಿಕ್ ಸೊಲ್ಯೂಷನ್.—ಇದರಲ್ಲಿ ಗ್ಲಿಸರಿನೋಫೇಟ್ಸ್ ಎಂಬ ಅಮೂಲ್ಯ ಪದಾರ್ಥಗಳನ್ನು ಹಾಕಿ ತಯಾರುಮಾಡಿದೆ. ಇದು ಬೇಗನೆ ಶರೀರಕ್ಕೆ ಸೇರಿಹೋಗುತ್ತೆ. ಆರೋಗ್ಯವನ್ನೂ ಚಟುವಟಿಕೆಯನ್ನೂ ಶಕ್ತಿಯನ್ನೂ ವೃದ್ಧಿಮಾಡುವುದು. ನರಗಳ ದುರ್ಬಲವನ್ನೂ ಹೋಗಲಾಡಿಸುವುದರಲ್ಲಿ ಇದು ಬಹಳ ಶ್ರೇಷ್ಠವಾದ ಔಷಧ ಕ್ರಯ ಶೀಸೆಗೆ 2 ರೂಪಾಯಿ, ಮತ್ತು ರೂ. 1-2-0.

ರಕ್ತಶುದ್ಧಿಗೆ ಮಹೌಷಧ.—ಇದು ರಕ್ತವನ್ನೂ ದೇಹದ ಎಲ್ಲಾ ಭಾಗಗಳನ್ನೂ ಶುದ್ಧಿಮಾಡುತ್ತೆ. ಬಹಳ ಚೆನ್ನಾಗಿ ಗುಣಕಂಡ ಔಷಧ. ಕ್ರಯ ಶೀಸೆಗೆ 1 ರೂಪಾಯಿ.

ಲಿವರ್ ಸೊಲ್ಯೂಷನ್.—ಪಿತ್ತಕೋಶದ ಮೇಲೆ ಇದು ಬಹಳ ಚೆನ್ನಾಗಿ ಕೆಲಸಮಾಡೋಣದರಿಂದ ಮಲಬದ್ಧತೆಯುಳ್ಳವರಿಗೆ ಮಹೋಪಕಾರಿಯಾಗಿದೆ ಜ್ವರಕ್ಕೂ ಇದನ್ನು ಕೊಡುತ್ತಾರೆ. ಇದು ಮನೆಯಲ್ಲಿ ಇದ್ದೇ ತೀರಬೇಕು ಕ್ರಯ ಶೀಸೆಗೆ ರೂ. 1; ಮತ್ತು ರೂ. 0-10-0.

ಜ್ವರದ ಔಷಧ.—ವಿಷಮಶೀತಜ್ವರ, ನಿಂತುಬರುವಜ್ವರ, ಅವಧಿಯಜ್ವರ, ಎಲ್ಲಾ ತರದ ಜ್ವರಗಳಿಗೂ ಇದು ಸಂಜೀವನವಾಗಿದೆ. ಇದು ಕ್ವಿನೈನ್‌ಗಿಂತ ಬಹಳ ಅಗ್ಗ. ಕ್ರಯ ಶೀಸೆಗೆ 10 ಆಣೆ ; 4 ಆಣೆ.

ಹುಳುಕಡ್ಡಿ ಔಷಧ.—ಹುಳುಕಡ್ಡಿಯನ್ನು ಖಂಡಿತವಾಗಿ ಗುಣಮಾಡುತ್ತೆ. ಕ್ರಯ ಸೀಸೆಗೆ 4 ಆಣೆ

ಹಲ್ಲುಪುಡಿ.—ಈ ಪುಡಿಯಿಂದ ಹಲ್ಲು ಉಜ್ಜಿಕೊಂಡರೆ ಬಾಯಿಗೆ ಸುವಾಸನೆ ಕೊಡುತ್ತೆ. ಹಲ್ಲು ಸವೆದು ಕೆಡದಂತೆ ಬಹಳ ಚೆನ್ನಾಗಿಟ್ಟು ಕಾಪಾಡುತ್ತೆ. ಕ್ರಯ ಸೀಸೆಗೆ 4 ಆಣೆ ; 6 ಆಣೆ ; 1 ರೂಪಾಯಿ.

ಇಂಗ್ಲೀಷಿನಲ್ಲೇ ನಮಗೆ ಕಾಗದವನ್ನು ಬರೆಯಬೇಕು.

ಸೋಲ್ ಏಜಂಟರು :—ಎಸ್. ವೈದ್ಯ ಮತ್ತು ಕಂಪನಿ, ಪಾರ್ಕ್ ಟೌನ್, ಮದರಾಸ್.

[156-23]

ವೃತ್ತಾಂತ ಪತ್ರಿಕೆ.

—:0:—

ಶಕ ೧೯೧೪ ನೇ ಇಸವಿ ಡಿಸೆಂಬರ್ ತಾ. ೧೦ ನೇ ಗುರುವಾರ.

ಮಲೆನಾಡಿನ ಸ್ಥಿತಿಗತಿಯು.

ನಮ್ಮ ಗವರ್ನಮೆಂಟಿನವರು ಮಲೆನಾಡಿನ ಸ್ಥಿತಿಗತಿಯನ್ನು ಪ್ರತ್ಯೇಕವಾದ ಏರ್ಪಾಡು ಇಟ್ಟು ತನಿಖೆಮಾಡಿಸಿ, ಅಂಥಾ ಡಿಸ್ಟ್ರಿಕ್ಟುಗಳಲ್ಲಿ ಪ್ರಜೆಗಳು ಲಯವಾಗುತ್ತಿರವುದನ್ನು ತಪ್ಪಿಸುವುದಕ್ಕೋಸ್ಕರ ಪರಿಹಾರ ಕಾರ್ಯಗಳನ್ನು ನಡಿಸಲು ಪ್ರತ್ಯೇಕವಾದ ಸಿಬ್ಬಂದಿಯನ್ನು ನೇಮಕ ಮಾಡಿರುತ್ತಾರೆ. ಈ ಕಾರ್ಯವು ಸ್ತೋತ್ರಾರ್ಹವಾದದ್ದು ; ಇದಕ್ಕಾಗಿ ಪ್ರತಿ ತಿಂಗಳಲ್ಲೂ ಸಿಬ್ಬಂದಿಯ ಖರ್ಚೇ ಹೆಚ್ಚಾಗಿ ಸ್ಯಾಂಕ್ಷನ್ ಮಾಡಿರುತ್ತಾರೆ.

ಈ ಸಿಬ್ಬಂದಿಯವರು ನಡಿಸುವ ಕಾರ್ಯಗಳ ರಿಪೋರ್ಟನ್ನು ಆಗಾಗ್ಗೆ ತರಿಸಿಕೊಳ್ಳುವ ಏರ್ಪಾಡು ನಡೆದಿದೆಯೋ ಇಲ್ಲವೋ ನಮಗೆ ತಿಳಿಯದು. ಅವರು ಇದುವರೆಗೆ ಮಾಡಿರುವ ಕಾರ್ಯಗಳೇನು ? ಈಗ ಮಾಡುತ್ತಿರುವ ಕೆಲಸಗಳ್ಯಾವವು ? ಮುಂದೆ ಯಾವ ಕಾರ್ಯಗಳನ್ನು ನಡಿಸಬೇಕಾಗಿದೆ ? ಎಂಬೀ ವಿಷಯಗಳಲ್ಲಿ ಸರ್ಕಾರದವರು ಆಗಿಂದಾಗ್ಗೆ ರಿಪೋರ್ಟುಗಳನ್ನು ತರಿಸಿಕೊಂಡು ಪ್ರಕಟಿಸುತ್ತಾ ಬರುವುದು ಒಳ್ಳೇದೆಂದು ನಮಗೆ ತೋರುತ್ತದೆ. ಸಿಬ್ಬಂದಿ ಮೊದಲಾದವುಗಳಿಗೆ ಎಷ್ಟು ಬೇಕಾದರೂ ಹಣವನ್ನು ಖರ್ಚು ಮಾಡುವುದು ಸುಲಭ; ಆದರೆ ಅಂಥಾ ಖರ್ಚಿನಿಂದ ಎಷ್ಟು ಮಟ್ಟಿಗೆ ಪ್ರಯೋಜನವುಂಟಾಗಿದೆ ಎಂಬುವುದನ್ನು ತಿಳಿಯುವುದಕ್ಕೆ ಅವಕಾಶವಿಲ್ಲದಿದ್ದರೆ ಖರ್ಚು ಸಾರ್ಥಕವಿಲ್ಲದೆ ಹೋಗಬಹುದು.

ಈ ಏರ್ಪಾಡಿನ ಅಭಿವೃದ್ಧಿಯ ರಿಪೋರ್ಟಿನಲ್ಲಿ ಕಾಣಿಸಿರಬೇಕೆಂದು ನಮಗೆ ತೋರುವ ಭಾಗಗಳೇನೆಂದರೆ—ಮಲೆನಾಡು ಪ್ರದೇಶದಲ್ಲಿ ಪ್ರಜಾ ಸಂಖ್ಯೆಯು ಕಡಮೆಯಾಗುತ್ತಿರುವುದಕ್ಕೆ ಮುಖ್ಯವಾದ ಕಾರಣಗಳೇನೆಂದೂ, ಅವುಗಳ ಪರಿಹಾರಕ್ಕೆ ಸೂಚಿಸಲ್ಪಟ್ಟಿರುವ ಕಾರ್ಯಗಳೇನೆಂದೂ ಸ್ಪಷ್ಟವಾಗಿ ತಿಳಿಯುವಂತೆ ಒಂದು ರಿಪೋರ್ಟನ್ನು ಪ್ರಕಟಿಸಬೇಕಾದದ್ದು ಮೊದಲನೇ ಕಾರ್ಯ. ಈಗ ಏರ್ಪಾಡಾಗಿರುವಂತೆ ಯಾವ ಯಾವ ಕಾರ್ಯಗಳು ನಡೆದಿವೆಯೋ, ಮುತುವರ್ಜಿಯಾಗಿ ನಡಿಸಲ್ಪಡುತ್ತಿರುವ ಕಾರ್ಯಗಳ್ಯಾವವೋ ಈ ಭಾಗವನ್ನೂ ತಿಳಿಸಬೇಕು. ಮಲೆನಾಡಿನಲ್ಲಿ ಕೇಡುಕಾರಿಗಳಾದ ಅಂಶಗಳನ್ನು ಇನ್ನೂ ನಿವಾರಣೆಮಾಡಿಲ್ಲವೆಂದು ಹೇಳಬಹುದು. ಆದರೂ ಅದಕ್ಕಾಗಿ ಸೂಚಿಸಲ್ಪಟ್ಟಿರುವ ಏರ್ಪಾಡುಗಳ ವಿಷಯದಲ್ಲಿ ಆ ಪ್ರಾಂತ್ಯದ ಪ್ರಜೆಗಳ ಅಭಿಮತವೇನೆಂದೂ, ಅವುಗಳ ಪರಿಣಾಮವೇನೆಂದೂ ಸರ್ಕಾರದವರು ಗೊತ್ತುಮಾಡಿ ಪ್ರಕಟಿಸುವುದು ಒಳ್ಳೇದು.

ಯಾವ ಯಾವ ಕಾರ್ಯಗಳನ್ನು ನಡಿಸಬೇಕಾಗಿದೆಯೋ ಅವುಗಳನ್ನೆಲ್ಲಾ ಈಗಾಗಲೇ ಸರ್ಕಾರದವರು ಗೊತ್ತುಮಾಡಿದಾರೆಂದು ಊಹಿಸುತ್ತೇವೆ. ಈ ವಿಶೇಷತರವಾದ ಕಾರ್ಯಗಳೆಲ್ಲಾ ಎಂದಿಗೆ ಪೂರೈಸಬಹುದೆಂದು ತಿಳಿಯಲಪೇಕ್ಷಿಸುತೇವೆ. ಈಗಿನ ಸಿಬ್ಬಂದಿಯೂ ಖರ್ಚುಗಳೂ ಶಾಶ್ವತವಾಗಿ ನಡೆಯಬೇಕೋ, ಇಲ್ಲವೇ ಕಾಲವನ್ನೂ ಖರ್ಚನ್ನೂ ಇಷ್ಟಿಷ್ಟರಲ್ಲೇ ಆಗಬೇಕೆಂದು ನಿರ್ಧಾರಯುತಮಾಡಿದಾರೆಯೋ ನಮಗೆ ತಿಳಿಯಲಿಲ್ಲ.

ಮಲೆನಾಡಿನಲ್ಲಿ ಹಾಕಬೇಕೆಂದು ಈಗ ಏರ್ಪಾಡಾಗುತ್ತಿರುವ ರೈಲು ಮಾರ್ಗವು ಕಾಮಗಾರಿ ನಡೆದು, ಅದು ಬೇಗ ಸರಾಗವಾಗುವುದೆಂದು ಹಾರೈಸುತ್ತೇವೆ. ಒಳ್ಳೇ ಫಲವತ್ತಾದ ಪ್ರದೇಶಗಳಿಗೆ ರೈಲು ಹಾಕಿದರೆ ಇತರ ಕಡೆಗಳಿಂದ ಜನಗಳು ಹೋಗಿ ಸಂಸಾರ ಸಮೇತ ನಿಲ್ಲಲು ತುಂಬಾ ಸಹಾಯವಾಗುವುದು. ರೈಲು ರಸ್ತೆಯ ಕಾಮಗಾರಿ ಆಗುವುದಕ್ಕೆ ಕೆಲವು ಕಾಲ ಹಿಡಿದೀತು ; ಆದರೂ ರೈಲ್ವೆ ಕಾಮಗಾರಿ ಆಗುವುದು ಖಂಡಿತವೆಂದೂ, ಇಂಥಿಂಥಾ ಕಡೆಯಲ್ಲೇ ಖಂಡಿತವಾಗಿ ಹಾಕಲ್ಪಡುವುದೆಂದೂ ತಿಳಿದು ಬಂದ ಪಕ್ಷದಲ್ಲಿ ಜನಗಳು ಆಯಾ ಸ್ಥಳಗಳ ಪೈಕಿ ಫಲವತ್ತಾದ ಪ್ರದೇಶಗಳಲ್ಲಿ ಮೊದಲೇ ಹೋಗಿ ನಿಂತುಬಿಡಲು ಕುತೂಹಲಪಡುತ್ತಾರೆನ್ನುವುದಕ್ಕೆ ಸಂಶಯವಿಲ್ಲ.

ಮಲೆನಾಡು ಪ್ರದೇಶಗಳಲ್ಲಿ ಸರ್ಕಾರದವರು ಆಸ್ಪತ್ರೆಗಳನ್ನೂ ವೈದ್ಯರ ಸಂಖ್ಯೆಯನ್ನೂ ಹೆಚ್ಚಿಸಿರಬೇಕೆಂದು ಊಹಿಸುತ್ತೇವೆ. ಇವರ ಮೂಲಕ ಆ ಪ್ರಾಂತ್ಯಗಳಲ್ಲಿ ಪ್ರಜೆಗಳಿಗೆ ಬೇಗನೆ ಒಳ್ಳೆಯ ಔಷಧಿ ಚಿಕಿತ್ಸೆಗಳು ದೊರಕುವಂತಾದೀತೆಂದು ನಿರೀಕ್ಷಿಸಲ್ಪಟ್ಟಿದೆ. ವಿಷಮ ಶೀತಜ್ವರವೆಂಬುವುದೊಂದೇ ಅಲ್ಲಿ ಪ್ರಜೆಗಳನ್ನು ವಿಶೇಷವಾಗಿ ಕಾಡಿಸತಕ್ಕ ರೋಗವೆಂದು ಕಾಣುವುದು. ಇದರೇನು ? ಈ ರೋಗಕ್ಕೆ ಔಷಧವು ಗೊತ್ತಾಗಿರೋಣದರಿಂದ ಪಟ್ಟಣ ಊರು ಗ್ರಾಮಗಳಲ್ಲಿ ಈ ರೋಗದ ಹುಟ್ಟನ್ನು ಅಣಗಿಸುವುದೇನೂ ಕಷ್ಟವಲ್ಲ. ಸೊಳ್ಳೆಗಳು ಕಡಿದು ಈ ರೋಗ ಹುಟ್ಟುವುದೆಂದೂ, ಕ್ವಿನೈನ್ ಎಂಬ ಜ್ವರದ ಪುಡಿಯನ್ನು ಧಾರಾಳವಾಗಿಯೂ ಸುಲಭವಾಗಿಯೂ ಒದಗಿಸುತ್ತಾ ಬಂದರೆ ಈ ಜ್ವರವು ನಿವಾರಣೆಯಾಗುವುದೆಂದೂ ಸಿದ್ಧಾಂತವಾಗಿದೆ. ಈಗ ಏರ್ಪಾಡಾಗಿರುವ ಸಿಬ್ಬಂದಿಯು ಪ್ರಜೆಗಳ ಸಹಾಯವನ್ನು ಪಡೆದು ಸೊಳ್ಳೆಗಳು ಹುಟ್ಟಿ ಬೆಳೆಯತಕ್ಕ ಪ್ರದೇಶಗಳನ್ನೆಲ್ಲಾ ಶೋಧಿಸಿ ನಾಶಪಡಿಸುತ್ತಾರೆಂದು ನೆನಸುತ್ತೇವೆ.

ಗವರ್ನಮೆಂಟಿನವರು ಈಗ ಮಲೆನಾಡಿನ ಅಭಿವೃದ್ಧಿಗೆ ಮಾಡಿರುವ ಏರ್ಪಾಡು ಸಾರ್ಥಕವಾದೀತೆಂದು ನಿರೀಕ್ಷಿಸುತೇವೆ. ಮತ್ತು ಇದುವರೆಗೆ ಈ ಭಾಗದಲ್ಲಿ ನಡಿಸಲ್ಪಟ್ಟಿರುವ ಅಭಿವೃದ್ಧಿ ಕಾರ್ಯಗಳೇನೆಂಬುವುದನ್ನೂ, ಆಗಿಂದಾಗ್ಗೆ ನಡೆಯುವ ಕಾರ್ಯಗಳ ವಿವರವನ್ನೂ ಸರ್ಕಾರದವರು ತಿಳಿಸುತ್ತಾ ಬಂದಲ್ಲಿ ಎಷ್ಟೋ ಅನುಕೂಲವಾಗುವುದು.

ಕ್ರೈಸ್ತ ಮತದ ಮುಖ್ಯ ಗುರಿಯೇನು ?

ಕ್ರೈಸ್ತ ಮತದ ಮುಖ್ಯ ಗುರಿಯು ಏನೆಂದರೆ,—ದೇವರಿಗೂ ಮನುಷ್ಯರಿಗೂ ಇರುವ ನಿಜಸಂಬಂಧವನ್ನು ಮನುಷ್ಯನಿಗೆ ಬೋಧಿಸಿ ಆ ಸಂಬಂಧಕ್ಕೆ ಪುನಃ ಅವನನ್ನು ಕರೆತಂದು ಆ ಸಂಬಂಧದಲ್ಲಿ ಅವನು ತಪ್ಪದೆ ಎಂದೆಂದಿಗೂ ಇರುವಂತೆ ಕಾಪಾಡುವದೇ. ಮನುಷ್ಯನನ್ನು ದೇವರು ನಿರ್ಮಾಣಮಾಡಿ ಸಾಕಿ ಸಲಹುತ್ತಾ ಇದ್ದಾನೆ. ದೇವರು ಕೋಟ್ಯಂತರ ಜೀವರಾಸಿಗಳನ್ನೂ ಅವೆಲ್ಲಾ ವಾಸಮಾಡುವದಕ್ಕೆ ವಿಸ್ತಾರವಾಗಿರುವ ಈ ಭೂಮಂಡಲವನ್ನೂ ಸೃಷ್ಟಿಸಿದನು. ಮತ್ತು ಸಕಲ ಜೀವರಾಸಿಗಳನ್ನೂ ಪೋಷಿಸಿ ಕಾಪಾಡುವದಕ್ಕೆ ಅವಶ್ಯಕವಾದ ಸಕಲ ಸಲಕರಣೆಗಳನ್ನು ನಿರ್ಮಿಸಿ ಇದೆಲ್ಲವನ್ನು ಸ್ವಾಧೀನಕ್ಕೆ ತಂದುಕೊಂಡು ಆಳಿ ಅನುಭವಿಸತಕ್ಕ ಮನುಷ್ಯನನ್ನು ಉತ್ಪತ್ತಿಮಾಡಿದನು. ಮನುಷ್ಯನಗೋಸ್ಕರವೇ ಈ ಸಕಲ ಸಂಪತ್ತೂ ಇದೆ ಎಂದು ಹೇಳಬಹುದು. ಮತ್ತು ಮನುಷ್ಯನು ದೇವರನ್ನೂ ಆತನಿಗೂ ತನಗೂ ಇರುವ ನ್ಯಾಯವಾದ ಸಂಬಂಧವನ್ನೂ ತಿಳಿದು ಆತನನ್ನು ಸ್ಮರಿಸಿ ಸೇವಿಸಿ ಪ್ರೀತಿಮಾಡುತ್ತಾ ಸದಾ ಸುಖಿಯಾಗಿರಬೇಕೆಂಬುವದೇ ದೇವರ ಚಿತ್ತವಾಗಿದೆ. ಈ ಸಂಬಂಧವನ್ನು ಕುಂತು ಯೋಚಿಸಿದರೆ ದೇವರು ಸಕಲ ಮನುಷ್ಯರ ನಿರ್ಮಾಣಕರ್ತನೂ ಅರಸನೂ ಪೋಷಕನೂ ತಂದೆಯೂ ಆಗಿದ್ದಾನೆ; ಪ್ರತಿ ಮನುಷ್ಯನೂ ದೇವರ ಸೃಷ್ಟಿಯೂ ಪ್ರಜೆಯೂ ಮಗನೂ ಆಗಿದ್ದಾನೆಂದು ಸುಲಭವಾಗಿ ಗ್ರಹಿಸಬಹುದು.

ಆದರೆ ಈ ಸಂಬಂಧವನ್ನು ಮನುಷ್ಯನು ದೃಢವಾಗಿ ಹಿಡಿದು ಸಾಧಿಸಲಿಲ್ಲ. ಅದಕ್ಕೆ ಬದಲಾಗಿ ಅವನು ದೇವರ ಸಂಬಂಧವನ್ನು ಗುರಿತಪ್ಪಿ ಅಧಮ ಸ್ಥಾನವನ್ನೂ ಸ್ಥಿತಿಯನ್ನೂ ಸೇರಿದನು. ಕೆಟ್ಟದ್ದು ಯಾವದು ? ಒಳ್ಳೇದು ಯಾವದು ? ನೀತಿ ಯಾವದು ? ದುರ್ನೀತಿ ಯಾವದು ಎಂದು ತಿಳಿಯುವ ಅರಿವುಳ್ಳವನಾಗಿದ್ದರೂ ತನ್ನನ್ನು ದೇವರ ಸಂಬಂಧದಲ್ಲಿ ಕಾಪಾಡುವ ಒಳ್ಳೇದನ್ನೂ ನೀತಿಯನ್ನೂ ಅರಿಸಿಕೊಂಡು ಸಾಧಿಸದೆ ಕೆಟ್ಟದ್ದೂ ದುರ್ನೀತಿಯೂ ಪಾಪವೂ ತನಗಿರಲೆಂದು ಒಪ್ಪಿ ಆರಿಸಿಕೊಂಡು ತನ್ನ ಜೀವಮಾನದಲ್ಲಿ ಅದನ್ನೇ ರೂಢಿಸುತ್ತಾ ಬಂದನು. ಇದರಿಂದ ದೇವರ ಸಂಬಂಧವು ಅವನಿಗೆ ತಪ್ಪಿಹೋಯಿತು. ಮಗನು ತಂದೆಯನ್ನು ನೋಡಿ, ಪ್ರೀತಿಮಾಡಿ, ತಂದೆಯ ಚಿತ್ತವನ್ನು ತಿಳಿದು ಅದನ್ನು ನಡಿಸುವದರಿಂದ ಸುಖಿಯಾಗಿರುತ್ತಾನಷ್ಟೆ. ಆದರೆ ಮಗನು ಸ್ವೇಚ್ಛಾಪರನಾಗಿ ತಂದೆಯನ್ನು ಉಲ್ಲಂಘಿಸಿ ನಡೆದರೆ ತಂದೆ ಮಕ್ಕಳ ಅನ್ಯೋನ್ಯವು ತಪ್ಪಿಹೋಗುವದಿಲ್ಲವೇ ? ಮನುಷ್ಯನು ತನ್ನನ್ನು ನಿರ್ಮಿಸಿ ಕಾಪಾಡುತ್ತಾ ಬರುವ ದೇವರನ್ನು ತ್ಯಜಿಸಿ ಸ್ವೇಚ್ಛಾಪರನಾಗಿ ನಡೆಯುವದರಿಂದ ದೇವರ ಸಂಬಂಧವೂ ಪ್ರೀತಿಯೂ ತಪ್ಪಿಹೋಗಿವೆ. ಇದರಿಂದ ಮನುಷ್ಯನ ಬುದ್ಧಿಯೂ ಮಂದವಾಯಿತು. ಅವನು ದೇವರನ್ನು ಮನೋದೃಷ್ಟಿಯಿಂದ ನೋಡುವದಕ್ಕಾಗದಂತೆ ಮನಸ್ಸು ಮಬ್ಬಾಯಿತು. ದೇವರು ಇದ್ದಾನೋ ? ಎಂದು ಯೋಚಿಸಿ ಊಹಿಸಿ ಅನುಮಾನಪಡಬೇಕಾಯಿತು. ನಿಜತ್ವ ಗೊತ್ತಿಲ್ಲ. ಇದು ಅತಿ ಶೋಚನೀಯವಾದ ಸ್ಥಿತಿಯಲ್ಲವೇ ?

ಈಗಲಾದರೂ ಲಕ್ಷಾಂತರ ಜನಗಳು ಇದೇ ಸ್ಥಿತಿಯಲ್ಲಿ ತಪ್ಪಿಸುತ್ತಾ ಇರುವದು ಸುಲಭವಾಗಿ ತಿಳಿಯುತ್ತೆ. ಕದಿಯುವದು, ಮೋಸ, ಸುಳ್ಳುಹೇಳುವದು, ವಂಚನೆ, ಹಾದರ, ಕುಡಿಕತನ, ಮತ್ಸರ ಮೊದಲಾದವು ಲಾಭಕರವಾಗಿಯೂ ಹಿತಕರವಾಗಿಯೂ ಇವೆಯೆಂದು ಅನೇಕ ಮಂದಿ ನಂಬುವವರಿಂದಲ್ಲದೆ ಅವುಗಳನ್ನು ನಡಿಸುವದು. ಆದರೆ ಇವು ತಪ್ಪು ಮತ್ತು ಪಾಪವೂ ಆಗಿದೆಯೆಂದು ಹೇಳಬೇಕೇ ? ಇದೀಗ ಮರುಳುತನ. ಮತ್ತು ಈ ಮರುಳುತನ ಲೋಕವನ್ನು ಕನ್ನಿಕ್ಕಿ ಬಂದ ಹಾಗೆ ಆಳುತ್ತಲಿವೆ; ಕೆಡಿಸಿ ಹಾಳುಮಾಡುತ್ತಲಿದೆ. ಪಾಪಮಾಡಿ ಬದುಕಿದವರಿಲ್ಲ. ನಿಜವಾಗಿ ಲಾಭವೂ ಹಿತವೂ ಅದರಲ್ಲಿಲ್ಲವೆಂತ ಯಾರಾದರೂ ಹೇಳುವರು. ಆದರೆ ಸಮಯ ಸಂದರ್ಭ ಒದಗಿಬಂದಾಗ ಪಾಪಕ್ಕೆ ಮನಸೋಲದೆ ದೃಢವಾಗಿ ದೇವರ ಪಕ್ಷವನ್ನು ಹಿಡಿದು ನಿಲ್ಲುವವರು ಎಷ್ಟು ಮಂದಿ ? ಮನುಷ್ಯನ ಮನಸ್ಸು ಅಜ್ಞಾನಕ್ಕೂ ಪಾಪಕ್ಕೂ ವಶವಾಗಿದೆ.

ಆದರೆ ಲೋಕಾದಿಯಿಂದ ದೇವರು ಉಪ್ಪಕ್ಕೂ ತನ್ನ ಕಡೆಯ ಕೆಲಸವನ್ನು ಮನುಷ್ಯನ ಪರವಾಗಿ ನಡಿಸುತ್ತಾ ಬಂದಿದ್ದಾನೆ. ಆತನ ಪರಾಮರಿಕೆಯು ಪಾಪಸನ್ನಿಹಿತವಾದ ಈ ಲೋಕದಲ್ಲಿ ಇನ್ನೂ ನಡೆಯುತ್ತಾ ಇವೆ. ದೇವರ ಆಜ್ಞೆಯನ್ನು ಭಂಗಪಡಿಸಿ ಆತನಿಗೆ ವಿರೋಧವಾಗಿ ವೈರತ್ವವನ್ನು ಸಾಧಿಸಿ ಮನುಷ್ಯನು ತನ್ನನ್ನು ಅಜ್ಞಾನಕ್ಕೂ ಮನೋವ್ಯಥೆಗೂ ಗುರಿಮಾಡಿಕೊಳ್ಳುತ್ತಾ ಬಂದಿದ್ದರೂ ಆತನು ನಮ್ಮನ್ನು ಧಿಕ್ಕರಿಸದೆ ಪ್ರೀತಿಮಾಡುತ್ತಾ ಪರಾಮರಿಸುತ್ತಾ ಬಂದಿದ್ದಾನೆ. ಆತನ ಶಾಂತಿಯೂ ಸಹನವೂ ಅಪರಿಮಿತವಾಗಿವೆ.

ಮನುಷ್ಯನನ್ನು ದೇವರ ನಿಜಸಂಬಂಧಕ್ಕೆ ತಂದು ನಿಲ್ಲಿಸುವದಕ್ಕೆ ಒಂದು ದೊಡ್ಡ ಅಡ್ಡಿಯಿದೆ. ಅದೇನೆಂದರೆ, ಮನುಷ್ಯನು ಸ್ವೇಚ್ಛೆಯಿಂದ ಒಪ್ಪಿ ಮಾಡಿರುವ ಪಾಪವೇ. ದೇವರು ಪವಿತ್ರನು, ಪಾಪರಹಿತನು, ನಿಷ್ಕಳಂಕನು. ಮನುಷ್ಯನ ಅಪರಾಧ ಅನ್ಯಾಯಕೆಲಸಗಳನ್ನು ಆತನು ಒಪ್ಪುವದಿಲ್ಲ. ಮತ್ತು ಅದಕ್ಕಾಗಿ ಅವನನ್ನು ದಂಡಿಸುವನು. ಆದರೆ ಆತನು ಮನುಷ್ಯರ ಕಡೆಗೆ ಪೂರ್ಣ ದಯಾಳುವಾಗಿ ತನ್ನನ್ನೂ ತನ್ನ ನಿಜಸ್ವಭಾವವನ್ನೂ ಪ್ರಕಟಮಾಡಿದನು. ಹ್ಯಾಗೆಂದರೆ ಆತನು ಈ ಲೋಕವನ್ನು ಪ್ರೀತಿಸಿ ಅವರನ್ನು ಪಾಪದ ಅಪರಾಧದಿಂದ ಬಿಡಿಸಿ ರಕ್ಷಿಸಬೇಕೆಂದು ಸಂಕಲ್ಪಮಾಡಿಕೊಂಡನು. ಈ ಸಂಕಲ್ಪವನ್ನು ನೆರವೇರಿಸುವದಕ್ಕೆ ಆತನು ಯೇಸು ಕ್ರಿಸ್ತನು ಎಂಬ ಹೆಸರಿನಿಂದ ಈ ಲೋಕಕ್ಕೆ ಅವತಾರವೆತ್ತಿ ಬಂದನು. ಆತನ ಸತ್ಯೋಪದೇಶವೂ ನಿಷ್ಕಳಂಕವಾದ ನಡತೆಯೂ ಸಕಲ ಮನುಷ್ಯರನ್ನು ಆಕರ್ಷಿಸುತ್ತವೆ. ಮತ್ತು ಆತನು ನಮ್ಮನ್ನು ಪಾಪದಿಂದ ಬಿಡಿಸಿ ರಕ್ಷಿಸುವದಕ್ಕೆ ಮರಣವನ್ನು ಹೊಂದಬೇಕಾದರೂ ಹಿಮ್ಮೆಟ್ಟಲಿಲ್ಲ. ಆತನ ಪ್ರೀತಿಯು ಇನ್ನೆಷ್ಟಾಗಿರುವದು ! ಈಗ ಯಾರ್ಯಾರು ಪಾಪವನ್ನು ಮಾಡುವದರಲ್ಲಿ ಅಸಹ್ಯಪಟ್ಟು ಬೇಸತ್ತಿದ್ದರೋ ಅವರೆಲ್ಲರೂ ಯಥಾರ್ಥವಾಗಿ ಪಶ್ಚಾತ್ತಾಪಪಟ್ಟು ಆತನ ಶರಣಾಗತರಾಗಿ ಪಾಪಕ್ಷಮೆಯನ್ನು ಬೇಡಿದರೆ ಆತನು ಪಾಪಪರಿಹಾರವನ್ನೂ ನೂತನಸ್ವಭಾವವನ್ನೂ ಶುದ್ಧೀಕರಣವನ್ನೂ ದಯಪಾಲಿಸುತ್ತಾನೆ. ಹೀಗಾಗುವದರಿಂದ ಮನುಷ್ಯನಿಗೆ ಕಳೆದುಹೋಗಿದ್ದ ದೇವರ ಸಂಬಂಧವು ಪುನಃ ದೊರೆತು ಅವನು ದೇವರ ಮಗನ ಬಾಧ್ಯತೆಯಲ್ಲಿ ಸೇರುತ್ತಾನೆ. ದೇವರು ಇಷ್ಟು ಮಾಡಿರಲಾಗಿ ಮನುಷ್ಯನು ತನ್ನ ಪಕ್ಷದಲ್ಲಿ ತನ್ನ ಪಾಪವನ್ನು ತ್ಯಜಿಸಿ ದೇವರನ್ನು ಪಶ್ಚಾತ್ತಾಪದಿಂದ ಮರೆಯೊಗಬೇಕು.

ಯುದ್ಧದ ಸಮಾಚಾರಗಳು.

ಪಶ್ಚಿಮ ಭಾಗದಲ್ಲಿ ಶಾಂತವಾಗಿದೆ.

ಪೂರ್ವಭಾಗದಲ್ಲಿ ದೊಡ್ಡ ಕದನಗಳು.

ಈಗಿನ ಕಾಲದ ಯುದ್ಧಗಳ ರೀತಿಯು ಬೇಗನೆ ತೀರ್ಮಾನವಾಗುವಂಥಾದ್ದಲ್ಲ; ಕದನಗಳು ಇತ್ಯರ್ಥವಾಗುವುದಕ್ಕೆ ಕೆಲವು ತಿಂಗಳುಗಳೇ ಹಿಡಿಯುತ್ತವೆ. ಒಂದು ವಾರದ ವರ್ತಮಾನಗಳನ್ನೆಲ್ಲಾ ಕೂಡಿಸಿ ನೋಡಿದಾಗ್ಯೂ, ನಡೆದಿರುವ ಯುದ್ಧ ಕಾರ್ಯಗಳು ಬಹಳ ಸ್ವಲ್ಪವೆಂದೇ ಕಾಣುವವು. ಕಳೆದ ವಾರ ನಡೆದಿರುವಂತೆ ತಿಳಿದು ಬಂದಿರುವ ಸಮಾಚಾರಗಳಿಂದ ಫ್ರಾನ್ಸ್‌ನಲ್ಲೂ ಬೆಲ್ಜಿಯಮ್‌ನಲ್ಲೂ ಸುಮಾರಾಗಿ ಶಾಂತವಾಗಿತ್ತೆಂತಲೇ ಹೇಳಬಹುದು. ಆದರೆ ಪೂರ್ವ ದಿಕ್ಕಿನೊಳಗೆ ಪೋಲೆಂಡಿನಲ್ಲೂ ಆಸ್ಟ್ರಿಯಾದಲ್ಲೂ ನಿಲುಗಡೆ ಇಲ್ಲದೆ ಕದನಗಳು ನಡೆದಿರುವವು. ಈ ಕದನಗಳೊಳಗೆ ರಷ್ಯಾದವರಿಗೆ ತಕ್ಕ ಮಟ್ಟಿಗೆ ಅನುಕೂಲವಾಗಿರುವಂತೆ ಕಾಣುವುದು. ನಮ್ಮ ಚಕ್ರವರ್ತಿ ಸಾರ್ವಭೌಮರವರೂ, ಬ್ರಿಟಿಷ್ ಯುದ್ಧದ ಇಲಾಖೆಯ ಅಧಿಪತಿಯಾದ ಲಾರ್ಡ್ ಕಿಚ್ನರ್ ರವರೂ ಕಳೆದ ವಾರ ಇಂಗ್ಲೆಂಡಿನಿಂದ ಯುದ್ಧಭೂಮಿಗೆ ದಯಮಾಡಿ ಬ್ರಿಟಿಷ್ ಮತ್ತು ಹಿಂದೂಸ್ಥಾನದ ಸೈನಿಕರಿಗೆ ಭೇಟಿ ದಯಪಾಲಿಸಿ ವಾಪಸು ಹೋದರು.

ಫ್ರಾನ್ಸ್ ಮತ್ತು ಬೆಲ್ಜಿಯಮ್.

ಸುಮಾರು ಒಂದು ತಿಂಗಳ ಹಿಂದೆ ಜರ್ಮನಿಯವರು ನಮ್ಮ ಕಡೆಯ ಸೈನ್ಯಗಳ ಮೇಲೆ ನುಗ್ಗಿ ಸಾಲುಗಳನ್ನು ಭೇದಿಸಿ ಮುಂದಕ್ಕೆ ನುಗ್ಗಿ ಬರಬೇಕೆಂದು ಸಾಹಸಪ್ರಯತ್ನಗಳನ್ನು ಪಡಿಸಿ ಕಡೆಗೆ ಸೋತುಹೋದರಷ್ಟೆ. ಆ ದೊಡ್ಡ ಯುದ್ಧದಲ್ಲಿ ಜರುಗಿದ ಕಾರ್ಯ ವಿಶೇಷಗಳನ್ನು ಕುರಿತ ಸಮಾಚಾರಗಳೇ ಈಗ್ಗೂ ಬರುತ್ತಿರುವವು. ಜರ್ಮನಿಯವರಿಗೆ ನುಗ್ಗಿ ಬರಲು ಅವಕಾಶವಾಗದಂತೆ ಅವರನ್ನು ತಡೆಯುವುದಕ್ಕಾಗಿ ಬ್ರಿಟಿಷರು ತಮ್ಮ ಎಲ್ಲಾ ಸೈನ್ಯವನ್ನೂ ಮುಂದಕ್ಕೆ

...ಯುತ, ಫಿರಂಗಿಯವರು, ಕುದುರೆ ಸವಾರರು, ಅಡಿಗೆಯವರು ಈ ... ಸಮಸ್ತರನ್ನೂ ಅವರು ಕಂದಕಗಳೊಳಗೆ ಕಳುಹಿಸಿದರು. ಈ ... ಯುದ್ಧದಲ್ಲಿ ಸುಮಾರು 3,00,000 ಸೈನ್ಯಗಳು ನಷ್ಟವಾಗಿರಬೇ ... ಎನ್ನಲ್ಪಟ್ಟಿದೆ. ಈ ಪೈಕಿ ಜರ್ಮನಿಯವರಲ್ಲಿ 2,00,000 ಯುದ್ಧ ... ಫ್ರೆಂಚರಲ್ಲಿ 50,000 ಸಿಪಾಯಿಗಳೂ, ಬ್ರಿಟಿಷರ ಕಡೆ 5,000 ಹಿಂದು ... ಸೇರಿ 50,000 ಸೈನಿಕರೂ ನಷ್ಟವಾದರು. ಹಿಂದುಸ್ಥಾನದವರಲ್ಲಿ ... ಸರ್ ಪರತಾಪ ಸಿಂಗ್‌ರವರ ಕುಮಾರರೊಬ್ಬರೂ ಕೊಲೆಯಾದರು. ಈ ... ಯನ್ನು ಕೇಳಿ ನಮ್ಮ ಚಕ್ರವರ್ತಿ ದಂಪತಿಗಳು ಆ ರಾಜರವರಿಗೆ ... ಸಂತಾಪವನ್ನು ತಿಳಿಸಿರುತ್ತಾರೆ.

ನಮ್ಮ ಕಡೆಯ ಸೈನ್ಯಗಳು ಈಗ ತಮ್ಮ ಠಾಣ್ಯಗಳನ್ನು ಬಹಳವಾಗಿ ಬಲಪ...ಕೊಂಡಿದ್ದಾರೆ; ಇದಲ್ಲದೆ ಹೊಸ ಸೈನ್ಯಗಳು ಅಲ್ಲಿಗೆ ಕಳುಹಿಸಲ್ಪಟ್ಟಿರುವವು. ... ಜರ್ಮನಿಯವರು ನುಗ್ಗಿ ಬಂದು ನಮ್ಮ ಸಾಲುಗಳನ್ನು ಒಡೆದು ... ರೆಂಬ ಶಂಕೆಯೇ ಕಾಣುವುದಿಲ್ಲ. ಈಗ ಅಲ್ಲಿ ಹವಾ ಬಹಳ ಶೈತ್ಯ... ಕಂದಕಗಳೊಳಗಿರುವ ನಮ್ಮ ಸೈನಿಕರಿಗೆ ನಾಯವಾಗುವುದಕ್ಕಾಗಿ ಬೆಂಕಿ ...ಗಳನ್ನು ಇಟ್ಟುಕೊಂಡಿದ್ದಾರೆ. ಕಂದಕಗಳೊಳಗೆ ಸೈನಿಕರಿಗೋಸ್ಕರ ಹಲಗೆ ... ಹುಲ್ಲನ್ನೂ ಹಾಕಿಸಿ ಛಳಿಯಾಗದಂತೆ ಮಾಡಿರುವರು.

ಬ್ರಿಟಿಷರೂ ಮತ್ತು ಇವರ ಕಕ್ಷಿಯವರೂ ನಾನಾ ಕಡೆಗಳಲ್ಲಿ ಮುಂದರಿಸಿ...ದ್ದಾರೆ. ಹಿಂದಿನ ವಾರಕ್ಕಿಂತಲೂ ಈಗ ಅವರುಗಳ ಠಾಣ್ಯಗಳು ತುಂಬಾ ...ವಾಗಿರುತ್ತವೆ. ಪ್ರತಿ ದಿವಸವೂ ಸೈನಿಕರ ಕಾದಾಟಗಳು ಇಲ್ಲದೆ ಹೋದರೂ ... ಗುಂಡುಗಳ ಮಳೆಯೇನೋ ಸುರಿಯುತ್ತಲೇ ಇದೆ. ಇದಕ್ಕೆ ನಿಲುಗಡೆಯೇ ಇಲ್ಲ. ಇದರಿಂದ ಅನೇಕ ಸೈನಿಕರು ಕೊಲೆಯಾಗುವುದೂ, ಅನೇಕರಿಗೆ ...ಗಾಯಗಳಾಗುವುದೂ ಇದ್ದೇ ಇದೆ. ಗುಂಡುಗಳು ಬಿದ್ದು ಒಡೆದು ನಾಶವಾಡೋ... ಅನೇಕ ಗ್ರಾಮಗಳು ಸಂಪೂರ್ಣವಾಗಿ ಹಾಳಾಗಿರು...ವೆ. ಡಿಸೆಂಬರ್ ತಾ. 3 ರಲ್ಲಿ ಒಂದು ಕದನ ನಡೆದದ್ದರಲ್ಲಿ 900 ಜರ್ಮನಿಯವರು ಕೈಸೆರೆ ಸಿಕ್ಕಿರುತ್ತಾರೆ.

ನಮ್ಮ ಚಕ್ರವರ್ತಿ ಸಾರ್ವಭೌಮರಾದ ಜಾರ್ಜ್ ದೊರೆಯವರು ನೊವೆಂಬರ್ ತಾ. 30 ರಲ್ಲಿ ಇಂಗ್ಲೆಂಡಿನಿಂದ ಫ್ರಾನ್ಸಿಗೆ ದಯಮಾಡಿ ಡಿಸೆಂಬರ್ ತಾ. 5 ರ ವರೆಗೆ ಅಲ್ಲೇ ಇದ್ದರು. ಅವರು ಅಲ್ಲಿ ಆಸ್ಪತ್ರೆಗಳಿಗೆ ಭೇಟಿ ಕೊಟ್ಟು, ಗಾಯಪಟ್ಟು ಚಿಕಿತ್ಸೆ ಹೊಂದುತ್ತಿರುವ ಸೈನಿಕರ ಕೂಡ ಸಂಭಾಷಣೆಯನ್ನು ... ಹಿಂದುಸ್ಥಾನದ ಸಿಪಾಯಿಗಳ ಯೋಗಕ್ಷೇಮವನ್ನೂ ಅತ್ಯಾದರ...ದಿಂದ ವಿಚಾರಿಸಿದರು. ಇವರು ಪ್ರಭುಗಳ ಪ್ರೀತಿ ವಿಶ್ವಾಸಗಳನ್ನು ನೋಡಿ ಪರಮಾನಂದಪಟ್ಟರು. ಪ್ರಭುಗಳು ಗಾಯಪಟ್ಟು ಬಿದ್ದಿದ್ದ ಜರ್ಮನಿ ಸೈನಿಕರಿಗೂ ದರ್ಶನವನ್ನು ಕೊಟ್ಟು ಅವರ ಯೋಗಕ್ಷೇಮವನ್ನೂ ವಿಚಾರಣೆ ತೆಗೆದುಕೊಂಡರು. ಇಷ್ಟೇ ಅಲ್ಲ; ಜಾರ್ಜ್ ಸಾರ್ವಭೌಮರವರು ಯುದ್ಧಭೂಮಿಯಲ್ಲಿರುವ ಕಂದಕಗಳಿಗೆ ಚಿತ್ತೈಸಿ, ಯುದ್ಧಸಾಲುಗಳಲ್ಲಿ ನಿಂತಿದ್ದ ಸೈನಿಕರನ್ನು ಅಂದರೆ ಬ್ರಿಟಿಷ್ ಮತ್ತು ಹಿಂದುಸ್ಥಾನದ ಯುದ್ಧಭಟರನ್ನು ಕಂಡು, ಅವರಿಗೆಲ್ಲಾ ಅವರ ಪರಾಕ್ರಮ ಕಾರ್ಯಗಳಿಗಾಗಿ ಕೊಂಡಾಡಿ ಸಂತೋಷವನ್ನುಂಟುಮಾಡಿದರು. ಅವರು ಸ್ವತಃ ಅನೇಕ ಹುದ್ದೇದಾರರಿಗೂ ಯುದ್ಧಭಟರಿಗೂ ಅವರ ಪರಾಕ್ರಮವನ್ನು ಮೆಚ್ಚಿಕೊಂಡು ಬಿರುದುಗಳನ್ನು ದಯಪಾಲಿಸಿದರು. ಇವರು ಭೇಟಿ ದಯಪಾಲಿಸಿದ್ದು ಸೈನಿಕರಿಗೆ ಅನೇಕ ವಿಧದಲ್ಲಿ ಹರ್ಷವನ್ನೂ ಉತ್ಸಾಹವನ್ನೂ ಉಂಟುಮಾಡಿದೆ. ಫ್ರಾನ್ಸ್ ರಾಜ್ಯದ ಪ್ರೆಸಿಡೆಂಟರವರೂ ಬೆಲ್ಜಿಯನ್ನರ ದೊರೆಯವರೂ ಬ್ರಿಟಿಷ್ ಹೆಡ್‌ಕ್ವಾರ್ಟರಿಗೆ ಬಂದು ಇದ್ದರು. ನಮ್ಮ ಚಕ್ರವರ್ತಿಯವರು ಅವರುಗಳ ಕೂಡ ಹಲವು ವಿಚಾರಗಳನ್ನು ಕುರಿತು ಸಂಭಾಷಣೆ ಬೆಳಸಿದರು. ಚಕ್ರವರ್ತಿಯವರು ಒಂದು ಔತಣವನ್ನು ಮಾಡಿಸಿದರು. ಅಗ್ಗೆ ಫ್ರೆಂಚ್ ಪ್ರೆಸಿಡೆಂಟರವರೂ, ನಮ್ಮ ಪ್ರಿನ್ಸ್ ಆಫ್ ವೇಲ್ಸ್‌ರವರೂ, ಫ್ರೆಂಚ್ ದಳಪತಿಯಾದ ಜನರಲ್ ಜೊಫ್ರೆಯವರೂ, ಲಾರ್ಡ್ ಕಿಚ್ನರ್‌ರವರೂ, ಸರ್ ಜಾನ್ ಫ್ರೆಂಚರವರೂ ದಯಮಾಡಿ ಸಹಪಂಕ್ತಿ ಭೋಜನವನ್ನು ಮಾಡಿದರು.

ನಮ್ಮ ಚಕ್ರವರ್ತಿ ಸಾರ್ವಭೌಮರವರು ಫ್ರಾನ್ಸಿನಿಂದ ವಾಪಸು ಚಿತ್ತೈಸುವುದಕ್ಕಿಂತ ಮುಂಚೆ "ನಾಯಕ್" ದರ್ವಾನ್ ಸಿಂಗ್ ನೇಗಿ ಎಂಬಾತನಿಗೂ, ಖುದಾದಾದ್ ಎಂಬ ಸಿಪಾಯಿಗೂ "ವಿಕ್ಟೋರಿಯಾ ಕ್ರಾಸ್" ಎಂಬ ಮಹಾ ಗೌರವವಾದ ಬಿರುದಿನ ಬಿಲ್ಲೆಗಳನ್ನು ಸ್ವಹಸ್ತ ದಯಪಾಲಿಸಿರುತ್ತಾರೆ. ಮೊದಲನೇ ಸೈನಿಕನು 39 ನೇ ಘರ್ವಾಲ್ ರೈಫಲ್ಸ್ ಎಂಬ ರೆಜಿಮೆಂಟಿನಲ್ಲಿ "ನಾಯಕ್" ನಾಗಿರುತ್ತಾನೆ. ಈತನು ನಡಿಸಿದ ಪರಾಕ್ರಮ ಕಾರ್ಯವನ್ನು ಕಳೆದ ವಾರ ವಿವರಿಸಿರುವೆವು. ಎರಡನೆಯ ಸೈನಿಕನು 129 ನೇ ಬೆಲೂಚೀಸ್ ಎಂಬ ರೆಜಿಮೆಂಟಿನಲ್ಲಿ ಒಬ್ಬ ಸಿಪಾಯಿ. ಈತನಿಗೆ ಬ್ರಿಟಿಷ್ ಸೈನ್ಯದಲ್ಲಿ ಪರಾಕ್ರಮಕಾರ್ಯಕ್ಕಾಗಿ ಕೊಡುವಂಥಾ ಮೇಲ್ಕಂಡ ಅತ್ಯಂತ ಘನತರವಾದ ಬಿರುದು ದೊರಕಲು ಯಾವ ರೀತಿಯಲ್ಲಿ ತನ್ನ ಶೌರ್ಯವನ್ನು ಪ್ರಕಾಶಪಡಿಸಿ ಆ ಬಿರುದನ್ನು ಪಡೆದುಕೊಂಡನೋ ಅದರ ವಿವರವು ತಿಳಿದುಬಂದಿಲ್ಲ. ನಮ್ಮ ವೈಸ್‌ರಾಯರವರು ಮೇಲ್ಕಂಡ ಯುದ್ಧಭಟರಿಬ್ಬರಿಗೂ ತಮ್ಮ ಪರಮಾನಂದವನ್ನು ತಂತೀವರ್ತಮಾನ ಕೊಟ್ಟು ತಿಳಿಸಿರುತ್ತಾರೆ. ಮೇಲ್ಕಂಡ ಎರಡನೆಯ ಸಿಪಾಯಿಯು ಗಾಯಪಟ್ಟವನಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದಾನೆ.

ಫ್ರೆಂಚರು ತಮ್ಮ ಸೈನ್ಯಗಳನ್ನು ಹೆಚ್ಚಿಸುತ್ತಿದ್ದಾರೆಂದು ಕಾಣುತ್ತದೆ. ಅವರ ಸೈನಿಕರಿಗೆ ಬೇಕಾಗುವ ಬಟ್ಟೆಬರೆ ಮುಂತಾದ ಸಲಕರಣೆಗಳು ಒದಗದೆ ತಾವಕಾಶವಾಯಿತು. ಕೆಲಕೆಲವು ವಾರಗಳು ಕಳೆಯುತ್ತಾ ಬಂದ ಹಾಗೆಲ್ಲಾ ಬ್ರಿಟಿಷ್ ಮತ್ತು ಫ್ರೆಂಚ್ ಸೈನ್ಯಗಳು ಬಹಳ ಮಟ್ಟಿಗೆ ಹೆಚ್ಚುತ್ತಾ ಹೋಗುವವು. ಇವರನ್ನೆಲ್ಲಾ ಸಿದ್ಧಮಾಡಿ ಯುದ್ಧಭೂಮಿಗೆ ಯಾವಾಗ ಕಳುಹಿಸಿಕೊಡುತ್ತಾರೆಯೋ ನೋಡಬೇಕಾಗಿದೆ; ಆದರೆ ಅನೇಕರು ಇದು ತಡವಾಗುವುದಿಲ್ಲವೆಂದೂ, ಹೊಸ ವರುಷದ ಪ್ರಾರಂಭದಲ್ಲೇ ಎಲ್ಲಾ ಸೈನಿಕರೂ ಸಿದ್ಧರಾಗುತ್ತಾರೆಂದೂ ಹೇಳುವರು.

ಹಿಂದುಸ್ಥಾನದ ಸಿಪಾಯಿಗಳು ತಮ್ಮ ಪೇಟಾ (ತಲೆ ಬಟ್ಟೆ)ಗಳನ್ನು ಕಳೆದುಕೊಂಡಿದ್ದಾರೆಂಬ ಸುದ್ದಿಯನ್ನು ಕೇಳಿ ಮಹಾರಾಜ್ಞೀ ಚಕ್ರವರ್ತಿನಿಯವರು ಕನಿಕರಪಟ್ಟು 400 ಗಜಗಳಷ್ಟು ಮಸಲಿನ್ ಬಟ್ಟೆಯನ್ನು ತರಿಸಿ ಅವರುಗಳಿಗೆಲ್ಲಾ ದಯಪಾಲಿಸಿದರು. ನಮ್ಮ ಸಿಪಾಯಿಗಳು ಅದನ್ನು ತಲೆಗೆ ಸುತ್ತಿಕೊಳ್ಳದೆ ಹಿಂದುಸ್ಥಾನಕ್ಕೆ ಬಹುಮಾನ ರೂಪವಾಗಿ ತೆಗೆದುಕೊಂಡು ಹೋಗಬೇಕೆಂದು ಹಾಗೇ ಎತ್ತಿಟ್ಟುಕೊಂಡಿದ್ದಾರಂತೆ.

ರಷ್ಯಾ, ಜರ್ಮನಿ, ಆಸ್ಟ್ರಿಯಾ.

ರಷ್ಯಾದಿಂದ ಬಂದಿರುವ ತಂತೀವರ್ತಮಾನಗಳು ಪೂರ್ವಭಾಗದ ಯುದ್ಧಭೂಮಿಯ ವಿದ್ಯಮಾನಗಳನ್ನು ಕಳೆದ ವಾರಕ್ಕಿಂತ ಚೆನ್ನಾಗಿಯೂ ಪರಿಷ್ಕಾರವಾಗಿಯೂ ತಿಳಿಯಹೇಳುವುದಿಲ್ಲ. ಅನೇಕ ಠಾಣ್ಯಗಳಲ್ಲಿ ಯುದ್ಧಗಳು ಬಹು ಕಠಿಣವಾಗಿ ನಡೆಯುತ್ತವೆ. ರಷ್ಯಾದವರು ತಮಗೆ ಜಯವಾಗಿದೆ ಎಂದು ಹೇಳಿಕೊಳ್ಳುವರು. ಜರ್ಮನಿಯವರು ರಷ್ಯಾ ಸೈನ್ಯದಲ್ಲಿ 18 ಫಿರಂಗಿ ಮತ್ತು ಮದ್ದುಗುಂಡು ಭರ್ತಿಯಾದ ವಾಗಿನ್ ಬಂಡಿಗಳ ಸಮೇತ 9,500 ಯುದ್ಧ ಭಟರನ್ನು ಕೈಸೆರೆ ಹಿಡಿದಿರುವಂತೆ ಹೇಳುತ್ತಾರೆ. ಒಂದಾನೊಂದು ಪಟ್ಟಣದ ಮೇಲೆ 120 ಜರ್ಮನಿ ಹುದ್ದೇದಾರರನ್ನು ಹಿಡಿದು ಸಾಗಿಸಿಕೊಂಡು ಹೋದರೆಂದೂ, ಇವರಲ್ಲಿ ದಳಪತಿಗಳು ಇಬ್ಬರೂ, ಕರ್ನಲ್‌ಗಳು 6 ಮಂದಿಯೂ, ಮೇಜರುಗಳು 18 ಮಂದಿಯೂ ಇದ್ದರೆಂದು ರಷ್ಯಾದವರು ಹೇಳುವರು. ವಿಸ್ಟುಲ ನದಿಯಲ್ಲಿ ರಷ್ಯಾದವರು ಜರ್ಮನಿಯವರ ಐದು ಜಹಜುಗಳನ್ನೂ, ಆಹಾರ ಪದಾರ್ಥಗಳೂ ಮದ್ದುಗುಂಡೂ ಭರ್ತಿಯಾಗಿದ್ದ ಐದು ಭಾರಿ ದೋಣಿಗಳನ್ನೂ ಹಿಡಿದು ಸ್ವಾಧೀನಪಡಿಸಿಕೊಂಡರು. ದಕ್ಷಿಣ ಭಾಗದಲ್ಲಿ ರಷ್ಯಾದವರು ತುಂಬಾ ಮುಂದರಿಸಿ ಹೋಗಿರುತ್ತಾರೆಂದೂ, ಅಲ್ಲಿ ಅವರಿಗೆ ಅನುಕೂಲವಾಗಿದೆಯೆಂದೂ ಸ್ಪಷ್ಟವಾಗಿ ಕಂಡುಬರುತ್ತದೆ. ಅವರು ಈಗ ಕ್ರಾಕೊ ನಗರಕ್ಕೆ ಸುಮಾರು ಏಳುಮರೆ ಮೈಲಿ ಸಮೀಪಕ್ಕೆ ಹೋಗಿದ್ದಾರೆ. ಈ ನಗರವು ಜರ್ಮನಿಯ ಎಲ್ಲೆಕಟ್ಟಿನಲ್ಲಿ ಇದೆ; ಅದು ದೊಡ್ಡ ಪಟ್ಟಣ, ಅಲ್ಲಿನ ಕೋಟೆಯು ಬಹಳ ಬಲವಾದದ್ದು.

ರಷ್ಯಾದವರು ನೊವೆಂಬರ್ ತಿಂಗಳ ಮೊದಲನೇ ಎರಡು ವಾರಗಳಲ್ಲಿ 50,000 ಮಂದಿ ಆಸ್ಟ್ರಿಯಾದವರನ್ನು ಕೈಸೆರೆ ಹಿಡಿದಿರುತ್ತಾರೆ. ಅವರು ಕೈಸೆರೆ ಹಿಡಿದ 1,30,000 ಯುದ್ಧಭಟರನ್ನು (ಇವರಲ್ಲಿ 2,600 ಮಂದಿ ಹುದ್ದೇದಾರರು) ಕೀವ್ ನಗರದ ಮಾರ್ಗವಾಗಿ ಸಾಗಿಸಿಕೊಂಡುಹೋದರೆಂದು ತಿಳಿದು ಬರುತ್ತದೆ.

ರಷ್ಯಾ ಚಕ್ರಾಧಿಪತ್ಯದ ಸಾರ್ವಭೌಮ ಜಾರ್ ಪ್ರಭುಗಳು ತಮ್ಮ ರಾಜಧಾನಿಯಿಂದ ಯುದ್ಧಭೂಮಿಗೆ ದಯಮಾಡಿದರು. ಇತ್ತಲಾಗಿ ಜರ್ಮನಿ ಚಕ್ರವರ್ತಿಯವರು ಪೋಲೆಂಡಿಗೆ ಹೋಗಿದ್ದು ಅಲ್ಲಿಂದ ತಮ್ಮ ರಾಜಧಾನಿಯಾದ ಬರ್ಲಿನ್ ನಗರಕ್ಕೆ ಕೆಲವು ದಿನಗಳ ಮಟ್ಟಿಗೆ ವಾಪಸು ಬಂದರೆಂದು ತಿಳಿಯುತ್ತದೆ.

ಟರ್ಕಿಯಲ್ಲಿ.

ಟರ್ಕಿಯಿಂದ ವರ್ತಮಾನಗಳೇನೂ ವಿಶೇಷವಾಗಿ ಬಂದಿಲ್ಲ. ರಷ್ಯಾದವರಿಗೂ ಟರ್ಕಿಯವರಿಗೂ ಯೂಫ್ರೆಟೀಸ್ ನದಿಯ ಕಣಿವೆಯಲ್ಲಿ ಕದನವಾಗಿ ಟರ್ಕಿಯವರು ಸೋತುಹೋದರು. ರಷ್ಯಾದವರು ಎರಡು ಫಿರಂಗಿಗಳ ಸಮೇತ ಕೆಲವು ಟರ್ಕಿ ಸೈನಿಕರನ್ನು ಕೈಸೆರೆ ಹಿಡಿದಿರುತ್ತಾರೆ. ನೊವೆಂಬರ್ ತಾ. 21 ರಿಂದ ಈಚೆಗೆ ಕಪ್ಪು ಕಡಲಿನಲ್ಲಿ ಟರ್ಕಿಯವರ ಯುದ್ಧದ ಜಹಜುಗಳ ಸುಳಿಯೇ ಕಾಣುವುದಿಲ್ಲ.

ಟರ್ಕಿಯವರ ಹಮಿದಿಯಾ ಎಂಬ ಒಂದು ಯುದ್ಧದ ಜಹಜು ಸಮುದ್ರದೊಳಗಿದ್ದ ಸಿಡಿಮದ್ದಿನ ಗುಂಡಿಗೆ ಬಡಿದು ಬಹಳ ಕೆಟ್ಟುಹೋಯಿತೆಂದು ಹೇಳಲಾಗಿದೆ.

ಈಜಿಪ್ಟಿನಲ್ಲಿ ವಿಮಾನ ಯಂತ್ರಗಳು ಹೋಗಿ ಟರ್ಕಿ ಪಕ್ಷದವರ ಸ್ಥಾನಗಳನ್ನು ನೋಡಿಕೊಂಡು ಬಂದವು. ಸೂಯೆಸ್ ಕಾಲುವೆಯ ಪಶ್ಚಿಮ ಭಾಗದಲ್ಲಿ ಟರ್ಕಿ ಸೈನಿಕರ ಹೆಸರೇ ಇಲ್ಲವಾಗಿದೆ. ಬ್ರಿಟಿಷರು ಪೋರ್ಟ್ ಸೈಯಿದ್ ನಗರದ ಪೂರ್ವ ದಿಕ್ಕಿನ ಪ್ರದೇಶಕ್ಕೆ ಸಮುದ್ರದ ನೀರನ್ನು ಹಾಯಿಸಿ ಕೆಲವು ಮೈಲಿಗಳ ದೂರದ ತನಕ ನೀರು ನಿಲ್ಲುವಂತೆ ಮಾಡಿರುತ್ತಾರಾದದ್ದರಿಂದ ಆ ನಗರಕ್ಕೆ ಶತ್ರುಗಳ ಉಪಟಳವೇನೂ ಇರುವುದಿಲ್ಲ.

ಸೋಮಾಲಿಲ್ಯಾಂಡಿನಲ್ಲಿ ಕದನವಾಯಿತು. ಬ್ರಿಟಿಷರು ದರ್ವಿಷರೆಂಬ ಟರ್ಕಿ ಕಡೆಯವರನ್ನು ಸೋಲಿಸಿ ಚೆಲ್ಲಾಪಿಲ್ಲಿಯಾಗಿ ಓಡಿಸಿಬಿಟ್ಟದ್ದಲ್ಲದೆ ಅವರು ಇದ್ದ ಕೋಟೆಗಳನ್ನು ಸ್ವಾಧೀನಪಡಿಸಿಕೊಂಡಿದ್ದಾರೆ.

ಸರ್ವಿಯಾದಲ್ಲಿ.

ಆಸ್ಟ್ರಿಯಾದವರು ಸರ್ವಿಯಾ ರಾಜಧಾನಿಯಾದ ಬೆಲ್‌ಗ್ರೇಡ್ ಪಟ್ಟಣವನ್ನು ಆಕ್ರಮಿಸಿಕೊಂಡಿರುವುದು ನಿಜವಾಗಿ ಪರಿಣಮಿಸಿತು. ಈ ಯುದ್ಧದಲ್ಲೆಲ್ಲಾ ಅವರಿಗೆ ಜಯವಾಗಿರುವುದು ಇದೇ ಮೊದಲನೆಯದಾಗಿದೆ. ಈಚೆಗೆ ಬಂದಿರುವ ಸಮಾಚಾರದಿಂದ ಸರ್ವಿಯಾದವರು ಅಲ್ಲಿಂದ ದಕ್ಷಿಣ ಭಾಗದಲ್ಲಿ ಒಂದು ಕಡೆ ಆಸ್ಟ್ರಿಯಾದವರನ್ನು ಸೋಲಿಸಿದರೆಂದೂ, ಅಲ್ಲಿ ಅವರಿಗೆ 2,000 ಮಂದಿ ಕೈಸೆರೆ ಸಿಕ್ಕಿದರೆಂದೂ ತಿಳಿಯುತ್ತದೆ. ಸಣ್ಣ ದೇಶವಾದ ಸರ್ವಿಯಾದವರು ಆಸ್ಟ್ರಿಯಾದವರ ಅಪಾರವಾದ ಸೈನ್ಯಗಳನ್ನು ತಡೆದಟ್ಟುವುದರಲ್ಲಿ ಬಹಳ ಕಷ್ಟಕರವಾದ ಸಾಹಸಪ್ರಯತ್ನಗಳನ್ನು ಮಾಡಬೇಕಾಗಿರುತ್ತದೆ.

ಆಫ್ರಿಕಾದಲ್ಲಿ.

ದಕ್ಷಿಣ ಆಫ್ರಿಕಾದಲ್ಲಿ ದಂಗೆಯೆದ್ದಿದ್ದ, ಡಿವೆಟ್ ಎಂಬಾತನನ್ನು ಹಿಡಿದದ್ದೇ ಬಹು ವಿಶೇಷವಾದ ವರ್ತಮಾನವು. ಬ್ರಿಟಿಷರು ದಂಗೆಯೆದ್ದಿದ್ದವರನ್ನು ಕಂಡುಹಿಡಿಯಬೇಕೆಂದು ಇಷ್ಟಪಡಲಿಲ್ಲವಾದದ್ದರಿಂದ ಮೋಟರುಗಳಲ್ಲಿ ಅವರ ಬೆನ್ನು ಹತ್ತಿಹೋಗಿದ್ದರು. ದಂಗೇಕೋರರು ಕುದುರೆಗಳನ್ನು ವೇಗವಾಗಿ ಓಡಿಸಿಕೊಂಡು ಹೋಗಲಾರದೆ ಸ್ವಲ್ಪದರಲ್ಲೇ ಪೂರಾ ದಣಿದುಹೋದರು. ಬ್ರಿಟಿಷರು ಅವರನ್ನೆಲ್ಲಾ ಹಿಡಿದುಕೊಂಡರು. ಈ ದಂಗೆಯು ಸಾಮಾನ್ಯವಾದದ್ದಾಗಿರಲಿಲ್ಲ; ಬಹಳ ವಿಸ್ತಾರವಾಗಿ ಹರಡಿಕೊಂಡಿತ್ತು. ತಂತೀವರ್ತಮಾನಗಳಿಂದ ಈ ದಂಗೆಯು ಅಷ್ಟು ದೊಡ್ಡದಾಗಿತ್ತೆಂದು ತಿಳಿದಿರಲಿಲ್ಲ. ಈಗ ಸ್ಥಳಾಧಿಕಾರಿಗಳು ದಂಗೆಯನ್ನು ಸಂಪೂರ್ಣವಾಗಿ ಅಡಗಿಸಿ ದಂಗೇಕೋರರನ್ನು ಹತೋಟಿಗೆ ತಂದುಕೊಂಡಿರುತ್ತಾರೆ.

ಇತರ ವಿಷಯಗಳು.

ಜರ್ಮನಿಯ ಪಾರ್ಲಿಮೆಂಟಿನವರು 25,00,00,000 ಪೌಂಡನ್ನು (ಅಂದರೆ, 375 ಕೋಟಿ ರೂಪಾಯಿ) ಸಾಲಮಾಡಬೇಕೆಂದು ಒಪ್ಪಿ ಸ್ಯಾಂಕ್ಷನ್ ಮಾಡಿದ್ದಾರೆ. ಈ ಸಾಲವು ಜರ್ಮನಿಯವರಿಗೆ ದೊರಕುವುದು ಕಷ್ಟವೆಂದು ಕಾಣುತ್ತದೆ.

ಯುದ್ಧದ ರಿಲೀಫ್ ಫಂಡಿಗಾಗಿ ನಮ್ಮ ಪ್ರಿನ್ಸ್ ಆಫ್ ವೇಲ್ಸ್‌ರವರ ಹೆಸರಿನ ಮೇಲೆ ಪ್ರಾರಂಭಿಸಲ್ಪಟ್ಟಿರುವ ಫಂಡಿಗೆ 40,00,000 (ಅಂದರೆ, 6 ಕೋಟಿ ರೂಪಾಯಿ) ಚಂದಾ ಕೂಡಿರುತ್ತದೆ.

ಜರ್ಮನಿಯವರು ಆಫ್ರಿಕಾದಲ್ಲಿ ಪೋರ್ಚುಗಲ್ ರಾಜ್ಯಕ್ಕೆ ಸೇರಿದ ದೇಶದೊಳಕ್ಕೆ ದಂಡು ತೆಗೆದುಕೊಂಡು ಹೋದರಷ್ಟೆ. ಇದಕ್ಕಾಗಿ ಜರ್ಮನಿಯವರು ಅವರ ಕ್ಷಮೆಯನ್ನು ಬೇಡಿ ಕಾಗದ ಬರೆದುಕೊಂಡಿದ್ದಾರೆಂದು ಹೇಳಲಾಗಿದೆ.

ಇಟಲಿ ರಾಜ್ಯದೊಳಗೆ ಕಳವಳವುಂಟಾಗಿರುವಂತೆ ಕಾಣುತ್ತದೆ. ಇಟಲಿಯವರು ಇಷ್ಟರಲ್ಲೇ ಬ್ರಿಟಿಷರ ಪಕ್ಷವನ್ನು ವಹಿಸಿ ಯುದ್ಧಕ್ಕೆ ಹೊರಡುವ ಸೂಚನೆಗಳು ತೋರುತ್ತಿರುವವು. ಅವರು ಯುದ್ಧಸನ್ನದ್ಧರಾಗಿ ಆಯುಧ ಮೊದಲಾದವುಗಳನ್ನು ಸಿದ್ಧಪಡಿಸಿಕೊಂಡಿದ್ದಾರೆ. ಇನ್ನು ಕೆಲವು ಕಾಲ ಕಳೆದ ಬಳಿಕ ಅವರು ತಲೆಹಾಕಬಹುದು.

ರೋಮ್ಯಾನಿಯಾ ರಾಜ್ಯದವರೂ ಬ್ರಿಟಿಷರ ಪಕ್ಷವನ್ನು ವಹಿಸುವುದಕ್ಕೆ ಸಿದ್ಧವಾಗಿರುವಂತೆ ವರ್ತಮಾನವಿದೆ. ಆದರೆ ಇದು ಎಷ್ಟು ಮಟ್ಟಿಗೆ ನಿಜವೋ ನಾವು ಹೇಳಲಾರೆವು.

ಪರ್ಷಿಯಾ ರಾಜ್ಯವು ಈ ಯುದ್ಧದಲ್ಲಿ ಯಾವ ಪಕ್ಷವನ್ನೂ ವಹಿಸದೆ ಪ್ರತ್ಯೇಕವಾಗಿ ಇರುವಂತೆ ತಿಳಿಯಪಡಿಸಿರುತ್ತದೆ. ಆದರಿಂದ ಟರ್ಕಿಗೆ ಯಾವ ಸಹಾಯವೂ ಒದಗುವುದಿಲ್ಲ.

ಚೀಣಾ ರಾಜ್ಯದಲ್ಲಿದ್ದ ಜರ್ಮನಿ ಸ್ವಾಧೀನವಾದ ಕ್ಸಿಂಗ್‌ಟಾ ಎಂಬ ಭಾಗವನ್ನು ಜಪಾನ್ನವರು ಗೆದ್ದು ಸ್ವಾಧೀನಪಡಿಸಿಕೊಂಡಿದ್ದಾರಷ್ಟೆ. ಅಲ್ಲಿ ಅವರು 3,300 ಜನ ಜರ್ಮನಿ ಯುದ್ಧಭಟರನ್ನು ಕೈಸೆರೆ ಹಿಡಿದುಕೊಂಡಿದ್ದಾರೆಂದೂ, 2,500 ಬಂದೂಕುಗಳೂ, 100 ಮೆಷೀನ್ ಫಿರಂಗಿಗಳೂ, 30 ಭಾರೀ ಫಿರಂಗಿಗಳೂ, 40 ಮೋಟರ್ ಗಾಡಿಗಳೂ, 5,000 ಜನರಿಗೆ ಮೂರು ತಿಂಗಳಿಗೆ ಬೇಕಾಗುವ ಆಹಾರ ಸಾಮಗ್ರಿಗಳೂ ಸಿಕ್ಕಿದವೆಂದೂ ತಿಳಿದುಬಂದಿದೆ. ಅಲ್ಲಿದ್ದ ಜರ್ಮನಿ ಹಡಗುಗಳೆಲ್ಲಾ ಸಮುದ್ರದಲ್ಲಿ ಮುಳುಗಿಸಲ್ಪಟ್ಟಿದ್ದವು.

ಒಳದೇಶದ ವೃತ್ತಾಂತಗಳು.

ಈ ವಾರ ನಮ್ಮ ಪತ್ರಿಕೆಯು ಹತ್ತು ಪುಟಗಳುಳ್ಳದ್ದಾಗಿದೆ.

* * *

ಚಾಮರಾಜನಗರದ ಕಾಡಿನಲ್ಲಿ ಸೇರಿಕೊಂಡು ಗ್ರಾಮಗಳಲ್ಲಿರುವ ಗೋಕಾಯಿಗಳನ್ನು ಹೊಡೆದು ತಿನ್ನುತ್ತಿದ್ದ ದೊಡ್ಡ ಹೆಬ್ಬುಲಿಯನ್ನು ಮ|| ಮುತ್ತಯ್ಯನವರು ಕೊಂದುಹಾಕಿ, ಅದರ ನಾಲ್ಕು ಮರಿಗಳನ್ನು ರಾಜಧಾನಿಯ ಅರಮನೆ ಮೃಗಾಲಯಕ್ಕೆ ಕಳುಹಿಸಿಕೊಟ್ಟಿದ್ದಾರೆ.

* * *

ಬೆಂಗಳೂರಿಗೆ ಸೇರಿದ ಡಾಬಸ್‌ಪೇಟೆಯ ಪಾರ್ಕೆರಿ ಎಂಬ ಭಾಗವನ್ನು ಸಂಪೂರ್ಣವಾಗಿ ಒಡೆದು ಬಯಲುಮಾಡಿ, ಫ್ರೇಜರ್ ಟವನ್ ಬಳಿ ಕಟ್ಟಬೇಕೆಂದು ಇತ್ಯರ್ಥವಾಗಿದೆ.

* * *

ಬೆಂಗಳೂರಿನಲ್ಲಿ ನಮ್ಮ ಯುವರಾಜರವರ ಆಫೀಸಿನಲ್ಲಿ ಕಳುವುಮಾಡಿದ್ದ ದಳಾಯತನಿಗೆ ಕಳೆದ ವಾರ ಅಲ್ಲಿನ ಸಿಟಿ ಮ್ಯಾಜಿಸ್ಟ್ರೇಟರು ಮೂರು ತಿಂಗಳ ಕಠಿಣ ಸಜಾ ವಿಧಿಸಿದರು.

* * *

ರಾಜಧಾನಿಯ ಮ್ಯುನಿಸಿಪಲ್ ಸರಹದ್ದಿನೊಳಗೆ ರೈಲ್ವೆ ಕಂಪನಿಯ ಅಮಾನೆದೊಳಗಿರುವ ಖಾಲಿ ನಿವೇಶನದ ಮೇಲೆ ಮ್ಯುನಿಸಿಪಲ್ ತೆರಿಗೆಯನ್ನು ಹಾಕಿ ವಸೂಲ್ಮಾಡಬಹುದೆಂದು ಸರ್ಕಾರದವರು ಒಪ್ಪಿ ಸ್ಯಾಂಕ್ಷನ್ ಮಾಡಿದ್ದಾರೆ.

* * *

ರಾಜಧಾನಿಯ ಸಂತೇಪೇಟೆ ಪ್ರಸನ್ನನಂಜುಂಡೇಶ್ವರದೇವಸ್ಥಾನದಲ್ಲಿ ಗುಬ್ಬಿಯಿಂದ ಬಂದಿರುವ ಮ|| ಸಂಜೀವಯ್ಯನವರು ಕಳೆದ ವಾರ ಮೂರು ದಿನ ರಾತ್ರಿ ಹರಿಕಥೆಗಳನ್ನು ನಡಿಸಿದರು. ನೂರಾರು ಮಂದಿ ಪ್ರಜೆಗಳು ಸೇರಿ ಕಥೆಗಳನ್ನು ಕೇಳಿ ಸಂತೋಷಪಟ್ಟರೆಂದು ಒಬ್ಬ ಬಾತ್ಮಿದಾರರು ತಿಳಿಸುತ್ತಾರೆ.

* * *

ಶ್ರೀಮನ್ ಮಹಾರಾಜರವರು ಪರಿವಾರ ಸಮೇತ ಕಳೆದ ಸೋಮವಾರ ಮಧ್ಯಾಹ್ನ ಸುಮಾರು 3½ ಗಂಟೆಗೆ ಮೋಟರುಗಳಲ್ಲಿ ರಾಜಧಾನಿಯಿಂದ ಬೆಂಗಳೂರಿಗೆ ದಯಮಾಡಿದರು. ಅವರು ಈ ತಿಂಗಳ ಮೂರನೇ ವಾರದಲ್ಲಿ ಎರಡು ಮೂರು ದಿನಗಳ ಮಟ್ಟಿಗೆ ದಾವಣಗೆರೆ ಮುಂತಾದ ಕಡೆಗಳಿಗೆ ಚಿತ್ತೈಸುವರೆಂದು ತಿಳಿದುಬರುತ್ತದೆ.

* * *

ಒಬ್ಬ ಬಾತ್ಮಿದಾರರಿಂದ—ಬೆಂಗಳೂರು ವೆಸ್ಲಿಯನ್ ಲಿಟರರಿ ಸಂಘದವರು ಡಿಸೆಂಬರ್ 11 ನೇ ತಾ. ಶುಕ್ರವಾರ (ಅಂದರೆ, ನಾಳೆ) ಸಾಯಂಕಾಲ 6-30 ಘಂಟೆಗೆ, ಮ|| ಎ. ವಿ. ವರದಾಚಾರ್ಯರವರ "ಪ್ರಹ್ಲಾದಚರಿತ್ರೆ" ಯನ್ನು ದಿವಾನ್ ಬಹದೂರ್ ರಾಜಸಭಾ ಭೂಷಣ ಕೆ. ಪಿ. ಪುಟ್ಟಣ್ಣಶೆಟ್ಟರವರ ಅಧ್ಯಕ್ಷತೆಯಲ್ಲಿ ಇಂಗ್ಲಿಷ್ ಭಾಷೆಯಲ್ಲಿ ಅಭಿನಯಿಸುವರು.

* * *

ಪಾವಗಡ ತಾಲ್ಲೂಕಿಗೆ ಸೇರಿದ ನಾಗಲಮಡಿಕೆ ಗ್ರಾಮದಲ್ಲಿ ಸುಬ್ರಹ್ಮಣ್ಯಸ್ವಾಮಿ ಜಾತ್ರೆ ಕಾಲದಲ್ಲಿ ಅಂದರೆ ಈ ತಿಂಗಳು ತಾ. 25 ನೇ ಶುಕ್ರವಾರ ಗೋಕಾಯಿಗಳ ಪ್ರದರ್ಶನ ನಡೆಯುವುದೆಂದೂ, ಉತ್ತಮವಾದ ರಾಸುಗಳಿಗೆ ಸುಮಾರು 150 ರೂಪಾಯಿ ತನಕ ಬಹುಮಾನಗಳೂ ಮೆಡಲುಗಳೂ ಸರ್ಟಿಫಿಕೇಟುಗಳೂ ಕೊಡಲ್ಪಡುವವೆಂದೂ ಪ್ರಕಟಮಾಡಿದ್ದಾರೆ.

* * *

ಫುಡ್ ಎಂಬೊಬ್ಬ ರೈಲ್ವೆ ಗಾರ್ಡು ತನ್ನ ಪಟ್ಟಣದ ಮಿಸೆಸ್ ಇ. ಸ್ಪೀನಿ ಎಂಬಾಕೆ ಪ್ರಯಾಣಮಾಡುತ್ತಿದ್ದ ರಾತ್ರಿ ಗಾಡಿಯೊಳಕ್ಕೆ ನುಗ್ಗಿ ಅತ್ಯಾಚಾರ ನಡಿಸಬೇಕೆಂದು ಪ್ರಯತ್ನಪಟ್ಟನೆಂಬ ಮೊಕದ್ದಮೆಯಲ್ಲಿ ಬೆಂಗಳೂರು ಸೆಷನ್ಸ್ ಜಡ್ಜಿರವರು ಅವನಿಗೆ 50 ರೂ. ಜುಲ್ಮಾನೆ ಕೊಡದಿದ್ದರೆ ಒಂದು ತಿಂಗಳ ಕಠಿಣ ಸಜಾ ಅನುಭವಿಸಬೇಕೆಂದು ಶಿಕ್ಷೆ ವಿಧಿಸಿದರು. ಅಪರಾಧಿಯು ಈಗ ಮದರಾಸ್ ಹೈ ಕೋರ್ಟಿನಲ್ಲಿ ಅಪೀಲ್ ಮಾಡಿರುತ್ತಾನೆಂದು ಪ್ರಕಟವಾಗಿದೆ.

* * *

ರಾಜಧಾನಿಯ ದೊಡ್ಡಪೇಟೆಯಲ್ಲಿ ಭಾರಿ ಮಂಡಿ ವರ್ತಕರಾದ ಮ|| ಕೃಷ್ಣರಾಮಯ್ಯಶೆಟ್ಟರು ಪ್ರತಿ ವರುಷವೂ ನಡಿಸುವ ಪ್ರಕಾರ ಪಟ್ಟಣದಲ್ಲೆಲ್ಲಾ ದಂಡೋರ ಮೂಲಕ ಸಾರಿಸಿ ಕಳೆದ ಮಂಗಳವಾರ ಬಾಡಿ ಗಾರ್ಡ್ ಲೈನ್ ಕಟ್ಟಡದ ಆವರಣದಲ್ಲಿ ಬಡಬಗ್ಗರಿಗೆ ಅನ್ನದಾನಮಾಡಿದರು. ಈ ಸಮಾರಾಧನೆಗೆ ಸುಮಾರು 10,000 ಬಡಜನರು ಹೋಗಿ ಸುಖಭೋಜನವನ್ನು ಮಾಡಿ ಸಂತೋಷಪಟ್ಟು ಮ|| ರಾಮಯ್ಯಶೆಟ್ಟರ ಧರ್ಮಕಾರ್ಯವನ್ನು ಕೊಂಡಾಡಿದರು.

* * *

ಒಬ್ಬ ಬಾತ್ಮಿದಾರರಿಂದ—ಹಿಂದೂಪುರದಲ್ಲಿ ಒಬ್ಬ ಲಿಂಗಾಯತ ಮತಸ್ಥ ಜಂಬಯ್ಯ ಎಂಬಾತನನ್ನು ಕೆಲವರು ದುಷ್ಟರು ಸೇರಿ ತಾ. 29 ನೇ ಭಾನುವಾರ ರಾತ್ರಿ ಕೊಂದುಹಾಕಿ ಕಯ್ಯಿ ಕಾಲುಗಳು ಕಟ್ಟಿ ಬಾಯಿಗೆ ಬಂಧನೆಯನ್ನು ಮಾಡಿ ಆತನ ಬಳಿಯಲ್ಲಿದ್ದ ಬೀಗದ ಕಯ್ಯಿಗಳಿಂದ ಕಬ್ಬಿಣದ ಪೆಟ್ಟಿಗೆಯನ್ನು ತೆಗೆದು ಅದರಲ್ಲಿದ್ದ ನಗ ನಾಣ್ಯಗಳು ಸುಮಾರು 6,000 ರೂಪಾಯಿನ ಬೆಲೆಯುಳ್ಳ ಮಾಲನ್ನು ಅಪಹರಿಸಿರುವರು. ಪತ್ತೆ ತರದೂದಿನಲ್ಲಿ ಪೋಲೀಸಿನವರು ಚಟುವಟಿಕೆಯಿಂದ ಕೆಲಸಮಾಡುತ್ತಲಿದ್ದಾರೆ.

* * *

ಒಬ್ಬ ಬಾತ್ಮಿದಾರರು ಬರೆಯುವುದು—ಗೋರಿಬಿದನೂರು ಎ. ವಿ. ಸ್ಕೂಲ್ ಹೆಡ್ ಮಾಸ್ಟರ್ ಮ|| ಎಂ. ಎನ್. ವೆಂಕಟನರಸಯ್ಯನವರ ಮಗ ವಿ. ಕೃಷ್ಣಮೂರ್ತಿ ಎಂಬ ಹತ್ತು ವರುಷದ ಬಾಲಕನು ಹಿಂದಿನ ಬುಧವಾರ ... ನಾದನು. ಈ ಚಿಕ್ಕ ವಯಸ್ಸಿನ ಬಾಲಕನು ಇಂಗ್ಲಿಷ್ ಲೋ. ಸೆ. ಕ್ಲಾಸಿನಲ್ಲಿ ಓದುತ್ತಾ ಇಂಗ್ಲಿಷ್ ಭಾಷೆ ಮತ್ತು ಗಣಿತದಲ್ಲಿ ವಿಶೇಷ ಜ್ಞಾನವನ್ನು ಸಂ... ಕೊಂಡು ತರಗತಿಯಲ್ಲಿ ಮೊದಲನೆಯವನಾಗಿದ್ದನು. ಅನೇಕ ವೇಳೆ ಸ್ಕೂಲಿನ ಡಿಬೇಟಿಂಗ್ ಸೊಸೈಟಿಯಲ್ಲಿ ಬಹಳ ಚಟುವಟಿಕೆಯಾಗಿ ಉಪನ್ಯಾಸಮಾಡುತ್ತಿದ್ದನು. ಈ ಅಕಾಲಮರಣವನ್ನು ನೋಡಿ ಈ ಗ್ರಾಮಸ್ಥರೆಲ್ಲರೂ ವ್ಯಸನಪಡುತ್ತಿರುವರು.

* * *

ಬೆಂಗಳೂರು ಲಾಲ್ ಬಾಗಿನ ಹತ್ತಿರ ಸಿದ್ಧಾಪುರದ ಆಂಜನೇಯ ದೇವಸ್ಥಾನದಲ್ಲಿ ಕರ್ನೂಲ್ ಡಿಸ್ಟ್ರಿಕ್ಟಿನ ಹನುಮಂತರಾಯನೆಂಬೊಬ್ಬ ವ್ಯಾಸುಭೋಗನಿಗೆ ಆಂಡಾಳಮ್ಮನೆಂಬ ಹುಡುಗಿಯನ್ನು ಕೊಟ್ಟು ಮದುವೆಯಾಯಿತು. ಈಚೆಗೆ ಆ ಹುಡುಗಿಯು ಬಣಜಿಗರವಳೆಂದೂ, ಅವಳಿಗೆ 30 ವರುಷವಾಗಿದೆಯೆಂದೂ, 400 ರೂಪಾಯಿ ಕನ್ಯಾಶುಲ್ಕವನ್ನು ತೆಗೆದುಕೊಂಡು ಮದುವೆ ಮಾಡಿಕೊಟ್ಟರೆಂದೂ ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಫಿರ್ಯಾದು ದಾಖಲಾಗಿದೆ. ಈ ಮೊಕದ್ದಮೆಯಲ್ಲಿ ರಾಜಯ್ಯಂಗಾರ್, ವೆಂಕಟ್ರಾಮಶಾಸ್ತ್ರಿ, ಲಕ್ಷ್ಮಮ್ಮ, ಆಂಡಾಳಮ್ಮ (ಮದುವೆ ಹೆಣ್ಣು), ವೆಂಕಮ್ಮ ಎಂಬೀ ನಾಲ್ಕು ಮಂದಿಯೂ ಅಪರಾಧಿಗಳಾಗಿದ್ದಾರೆ.

* * *

ಕಳೆದ ಭಾನುವಾರ ರಾಜಧಾನಿಯ ಈದ್ಗಾ ಬಡಾವಣೆಯಲ್ಲಿ ಒಂದು ಹೋಲೀ ನಾಯಿಯು ಒಬ್ಬ ಹಿಂದು, ಇಬ್ಬರು ಕ್ರೈಸ್ತ ಬಾಲಕರನ್ನು ಕಚ್ಚಿಯಿತು. ನಾಯಿಯನ್ನು ತಕ್ಷಣವೇ ಕೊಂದುಹಾಕಿದರು. ಅದರ ಮೆದುಳನ್ನು ಸರ್ಕಾರದವರು ಪರೀಕ್ಷೆಗೋಸ್ಕರ ಕೂನೂರಿಗೆ ಕಳುಹಿಸಿದ್ದಾರೆ. ನಾಯಿಗೆ ಹುಚ್ಚು ಹಿಡಿದಿತ್ತೆಂದು ಕೂನೂರಿನಿಂದ ಜವಾಬು ಬಂದರೆ ಈ ಮೂವರು ಬಾಲಕರೂ ಕೂನೂರಿನಲ್ಲಿರುವ ಹುಚ್ಚುನಾಯಿ ಆಸ್ಪತ್ರೆಗೆ ಚಿಕಿತ್ಸೆಗೋಸ್ಕರ ಹೋಗಬೇಕಾಗುತ್ತದೆ. ಹೋಲೀ ನಾಯಿಗಳನ್ನು ಸಂಪೂರ್ಣವಾಗಿ ನಾಶಮಾಡುವ ವಿಷಯದಲ್ಲಿ ಪ್ರಜೆಗಳೂ ಸರ್ಕಾರದವರೂ ತುಂಬಾ ಸಾಹಸಪಡಬೇಕೆಂದು ಇದರಿಂದ ಪರಿಷ್ಕಾರವಾಗಿ ಗೊತ್ತಾಗುತ್ತದೆ.

ಇಂಡಿಯನ್ ಇಂಪೀರಿಯಲ್ ಫಂಡು.

ಆನೇಕಲ್ಲು.—ಆನೇಕಲ್ ತಾಲ್ಲೂಕಿನಲ್ಲಿ ಕಳೆದ ನೊವೆಂಬರ್ ತಾ. ವರೆಗೆ ರೂ. 45-12-0 ಚಂದಾ ವಸೂಲಾಗಿದೆ ಎಂದು ಅಮಲ್ದಾರ್ರವರು ಚಂದಾ ಪಟ್ಟಿಯನ್ನು ಕಳುಹಿಸಿರುತ್ತಾರೆ.

ಮಾಗಡಿ.—ಮಾಗಡಿ ತಾಲ್ಲೂಕು ಕಸಬಾ ಹೋಬಳಿ ಮರಳಗೊಂಡ್ಲ, ಅಡಕಮಾರನಹಳ್ಳಿ, ಶ್ಯಾನುಭೋಗನಹಳ್ಳಿ ಗ್ರಾಮಸ್ಥರುಗಳಿಂದ 15 ರೂಪಾಯಿ ಚಂದಾ ವಸೂಲಾಗಿದೆ ಎಂದೂ, ನೊವೆಂಬರ್ ಆಖೈರ್ ವರೆಗೆ ಈ ತಾಲ್ಲೂಕಿನಲ್ಲಿ ಒಟ್ಟು ರೂ. 297-8-11 ಪೈ ಜಮಾ ಆಗಿದೆ ಎಂದೂ ಅಮಲ್ದಾರ್ರವರು ತಿಳಿಸಿರುತ್ತಾರೆ.

ಚನ್ನಪಟ್ಟಣ.—ಚನ್ನಪಟ್ಟಣದ ತಾಲ್ಲೂಕಿಗೆ ಸೇರಿದ ಹೊಡಕೆಹೊಸಹಳ್ಳಿ ರೂ. 85, ಮಾಗೇನಹಳ್ಳಿ ರೂ. 160, ಜೋಡಿ ಬಾಣಂತಹಳ್ಳಿ ರೂ. 42, ಮುಲ್ಲಾಹಳ್ಳಿ ರೂ. 69, ಮಾಕಳಿ ರೂ. 34, ಕುರಣಗೆರೆ ರೂ. 78-8-0, ಸಂಕಲಗೆರೆ ರೂ. 100, ಗೋವಿಂದನಹಳ್ಳಿ ರೂ. 62, ಚಕ್ಕೆರೆ ರೂ. 100, ಹಿಂದೆ ವಸೂಲಾಗಿರುವುದು ರೂ. 2,507-14-0, ಜುಮ್ಲಾ ರೂ. 3,236-6-0 ಕಚೇರಿಗೆ ದಾಖಲು ಬಂದಿದೆ ಎಂದು ಅಮಲ್ದಾರ್ರವರು ತಿಳಿಸಿದಾರೆ.

ಬೆಂಗಳೂರು.—ಬೆಂಗಳೂರು ತಾಲ್ಲೂಕಿನಲ್ಲಿ ನವಂಬರ್ ತಾ. 30 ರ ವರೆಗೆ ರೂ. 43, ಡಿಸೆಂಬರ್ ತಾ. 1 ರಲ್ಲಿ ರೂ. 75; ಜುಮ್ಲಾ ರೂ. 118 ವಸೂಲಾಗಿರುವಂತೆ ಅಮಲ್ದಾರ್ರವರು ತಿಳಿಸಿರುವರು.

ಹಿಂದುಸ್ಥಾನದ ಸೈನಿಕರು ಯುದ್ಧಭೂಮಿಯಲ್ಲಿ ನಡಿಸಿದ ಪ್ರಖ್ಯಾತವಾದ ಕಾರ್ಯಗಳು.

ಹಿಂದುಸ್ಥಾನದಿಂದ ಯುದ್ಧಭೂಮಿಗೆ ಕಳುಹಿಸಲ್ಪಟ್ಟಿರುವ ಯುದ್ಧಭಟರಲ್ಲಿ ಕೆಲವರು ಕಾದಾಟಗಳಲ್ಲಿ ಸೇರಿ ಕಳೆದ ನೊವೆಂಬರ್ ತಾ. 23 ರಲ್ಲಿ ನಡಿಸಿದ ಪರಾಕ್ರಮ ಕಾರ್ಯಗಳನ್ನು ಸೆಕ್ರಿಟರಿ ಆಫ್ ಸ್ಟೇಟ್‌ರವರು ನಮ್ಮ ವೈಸ್‌ರಾಯರವರಿಗೆ ತಿಳಿಯಪಡಿಸಿರುತ್ತಾರೆ. ಈ ವೃತ್ತಾಂತವನ್ನು ವಾಚಕರ ತಿಳುವಳಿಕೆಗೋಸ್ಕರ ಇಲ್ಲಿ ಪ್ರಕಟಿಸುವೆವು.

ಆ ದಿನ ಬೆಳಿಗ್ಗೆ 9 ಗಂಟೆ ಹೊತ್ತಿಗೆ ಜರ್ಮನಿಯವರು ನಮ್ಮ ಹಿಂದುಸ್ಥಾನದ ಸೈನಿಕರು ಇದ್ದ ಕಂದಕಗಳ ಮೇಲೆ ಬಹಳ ಪರಾಕ್ರಮದಿಂದ ನುಗ್ಗಿ ಬಂದರು. ಅವರ ಸಹಾಯಕ್ಕೆ ಫಿರಂಗಿಗಳನ್ನೂ, ಸಮೀಪದಲ್ಲಿ ಯುದ್ಧಮಾಡುವಂಥಾ ಮದ್ದುಗುಂಡನ್ನೂ ಜೊತೆಮಾಡಿಕೊಂಡು ಬಂದಿದ್ದರು. ನಮ್ಮ ಸೈನಿಕರು ಕಂದಕಗಳನ್ನು ಕಾಪಾಡಿಕೊಳ್ಳುವುದು ಸಾಧ್ಯವಾಗದೆ ಹೋಯಿತು. ಶತ್ರು ಸೈನಿಕರು ಬಹಳ ಬಿರುಸಾಗಿ ನುಗ್ಗಿ ಬಂದು ನಮ್ಮ ಸೈನಿಕರ ಸಮೀಪವನ್ನು ಸೇರಿ ಆ ಲೈನಿನ ಕಂದಕಗಳನ್ನು ಗೆದ್ದುಕೊಂಡರು. ನಮ್ಮ ಸೈನಿಕರು ಹೀಗೆ ತಮ್ಮ ಠಾಣ್ಯವನ್ನು ಶತ್ರುಗಳಿಗೆ ಒಪ್ಪಿಸಿಕೊಟ್ಟು ಸುಮ್ಮನಾಗಲು ಒಪ್ಪಲಿಲ್ಲ. ಅವರು ಶತ್ರುವಿನ ಮೇಲೆ ನುಗ್ಗಿ ಅವರನ್ನು ಹಿಂದಕ್ಕೆ ಓಡಿಸಬೇಕೆಂದು ನಿಶ್ಚಯಿಸಿಕೊಂಡರು. ಅದೇ ಪ್ರಕಾರ ನಮ್ಮವರು ಮಧ್ಯಾಹ್ನ 1½ ಗಂಟೆಗೆ ಸನ್ನಾಹ ಮಾಡಿಕೊಂಡು ಶತ್ರುವಿನ ಮೇಲೆ ನುಗ್ಗಿ ಹೋದರು; ಬಹು ಭಯಂಕರವಾದ ಕಾದಾಟವಾಯಿತು. ನಮ್ಮವರು ಎಷ್ಟೋ ಪರಾಕ್ರಮದಿಂದಲೂ ಜತಮನಸ್ಸಿನಿಂದಲೂ ಪ್ರಯತ್ನಪಟ್ಟಾಗ್ಯೂ ಅವರ ಉದ್ದೇಶವು ಸಾರ್ಥಕವಾಗದೆ ಹೋಯಿತು. ಯಾಕೆಂದರೆ ಜರ್ಮನಿಯವರು ಫಿರಂಗಿಗಳಿಂದಲೂ, ಬಂದೂಕುಗಳಿಂದಲೂ ನಿಲುಗಡೆಯಿಲ್ಲದೆ ನಮ್ಮವರ ಮೇಲೆ ಗುಂಡುಗಳನ್ನು ಸುರಿಸುತ್ತಾ ಬಂದರು. ಆದಕಾರಣ ನಮ್ಮ ಸೈನ್ಯಗಳು ಅಪಾಭಗ್ನರಾಗಿ ವಾಪಸು ಬರಬೇಕಾಯಿತು. ಆದರೆ ಇವರು ತಮ್ಮ ಉದ್ದೇಶವನ್ನು ಬಿಡಲಿಲ್ಲ. ಇವರು ಮತ್ತೆ ಸಂಜೆಯಾಗುವಾಗ್ಗೆ ಅಂದರೆ 4½ ಗಂಟೆ ಹೊತ್ತಿಗೆ ಫಿರಂಗಿ ಮದ್ದುಗುಂಡುಗಳನ್ನು ಜೊತೆಮಾಡಿಕೊಂಡು ಜರ್ಮನಿಯವರ ಮೇಲೆ ನುಗ್ಗಿ ಹೋಗಿ ಕಾದಾಡಿದರು. ಆ ಪ್ರಾಂತ್ಯದಲ್ಲಿ ದೊರಕಬಹುದಾದ ಫಿರಂಗಿಗಳನ್ನೆಲ್ಲಾ ಇವರು ತೆಗೆದುಕೊಂಡು ಹೋಗಿದ್ದರು. ಎಂಥಾ ಸಾಹಸಕಾರ್ಯಗಳನ್ನಾದರೂ ನಡಿಸಿ ಜರ್ಮನಿಯವರನ್ನು ಕಂದಕಗಳಿಂದ ಓಡಿಸಿ ಅವನ್ನು ಆಕ್ರಮಿಸಿಕೊಳ್ಳಬೇಕೆಂದು ಸಂಕಲ್ಪಮಾಡಿಕೊಂಡರು. ಇವರು ತಮ್ಮ ಸಂಕಲ್ಪದಂತೆ ಜರ್ಮನಿಯವರ ಮೇಲೆ ಮತ್ತೆ ನುಗ್ಗಿ ಹೋಗುತ್ತಾ ಅವರ ಲೈನುಗಳನ್ನು ಭೇದಿಸಬೇಕೆಂದು ಮೇಲೆಬಿದ್ದು ಮಹಾ ಘೋರವಾಗಿಯೂ ಜತಮನಸ್ಸಿನಿಂದಲೂ ಕಾದಾಡುತ್ತಾ ಬಂದರು. ಆದರೆ ಶತ್ರುಗಳಿಗೆ ವಿಶೇಷವಾದ ಅನುಕೂಲಗಳು ಇದ್ದದ್ದರಿಂದ ಅವರನ್ನು ಸಂಪೂರ್ಣವಾಗಿ ಸೋಲಿಸಿ ಓಡಿಸುವುದು ಮಹಾ ಪ್ರಯಾಸವಾಯಿತು. ಇದರಲ್ಲಿ ನಮ್ಮವರ ಕಡೆಯಲ್ಲಿ ಹೆಚ್ಚಾದ ಸೈನ್ಯಗಳ ಸಹಾಯವಿರಲಿಲ್ಲ. ಆದರೂ ನಮ್ಮ ಸೈನಿಕರ ಉದ್ದೇಶವು ಸಂಪೂರ್ಣವಾಗಿ ವ್ಯರ್ಥವಾಗಲಿಲ್ಲ. ಕೆಲಕೆಲವು ಸೈನಿಕರು ಕಾದಾಡುತ್ತಾ ಮಾರ್ಗವನ್ನು ಬಿಡಿಸಿಕೊಂಡು ನುಗ್ಗಿ ಹೋಗಿ ಕಂದಕಗಳಲ್ಲಿ ಕೆಲವು ಭಾಗಗಳನ್ನು ಆಕ್ರಮಿಸಿಕೊಂಡು ರಾತ್ರಿಯೆಲ್ಲಾ ಹತ್ತಿರದಲ್ಲೇ ಶತ್ರುಗಳ ಮೇಲೆ ಕಾದಾಡಿ ಶತ್ರುಗಳನ್ನು ಕೊಲ್ಲುತ್ತಾ ಬಂದದ್ದರಿಂದ ಕಡೆಗೆ ಹಿಂದಿದ್ದವರೂ ಅವರ ಸಹಾಯಕ್ಕೆ ಹೋಗಿ ಸೇರಿಕೊಳ್ಳುವುದಕ್ಕೂ, ಎಲ್ಲರೂ ಸೇರಿ ಶತ್ರುಗಳ ಮೇಲೆ ನುಗ್ಗಿ ಅವರನ್ನು ಓಡಿಸುವುದಕ್ಕೂ ಅನುಕೂಲವಾಯಿತು.

ಸಾಯಂಕಾಲ 5-30 ಗಂಟೆ ಹೊತ್ತಿನಲ್ಲಿ ನಮ್ಮ ಸೈನಿಕರಿಗೆ ತಮ್ಮ ಉದ್ದೇಶವು ನೆರವೇರುವುದಿಲ್ಲವೆಂಬದಾಗಿ ಕಂಡು ಬಂದಾಗ ಮನಸ್ಸು ಒಪ್ಪದಿದ್ದರೂ ಎಲ್ಲರೂ ಅಲ್ಲಿಂದ ಹಿಂದಕ್ಕೆ ಬಂದುಬಿಡಬೇಕಾಯಿತು. ಸ್ವಲ್ಪ ಹೊತ್ತಾಗುವಷ್ಟರಲ್ಲೇ ಯುದ್ಧಕ್ಕೆ ಕಳುಹಿಸದೆ ತಡೆದಿಟ್ಟುಕೊಂಡಿದ್ದ ಹಿಂದುಸ್ಥಾನದ ಸೈನ್ಯವು ಮುಂದಕ್ಕೆ ಬಂದಿತು. ಈ ಸೈನಿಕರೂ, ಎರಡಾವರ್ತಿ ಆಶಾಭಗ್ನರಾಗಿ ವಾಪಸು ಬಂದಿದ್ದ ಮೇಲ್ಕಂಡ ಸೈನಿಕರೂ ಮೂರನೇ ಸಲ ರಾತ್ರಿ 10½ ಗಂಟೆಗೆ ಬಹು ಪರಾಕ್ರಮದಿಂದ ಶತ್ರುಗಳ ಮೇಲೆ ನುಗ್ಗಿ ಹೋಗಿ ಅತ್ಯಂತ ಶೌರ್ಯದಿಂದ ಯುದ್ಧಮಾಡುತ್ತಾ ಬಂದರು. ಈ ಕದಿವಾಟದ ವೃತ್ತಾಂತವು ಆ ರೆಜಿಮೆಂಟಿನಿಂದ ತಿಳಿದುಬಂದಿಲ್ಲವಾದಕಾರಣ ಅದರ ವಿವರಗಳನ್ನು ತಿಳಿಸುವುದು ಸಾಧ್ಯವಲ್ಲ. ಆದರೂ ಅದು ಮಹಾ ಘೋರವಾಗಿ ನಡೆಯಿತೆನ್ನುವುದಕ್ಕೆ ಸಂಶಯವಿಲ್ಲ. ಬಹು ಕಾಲದ ವರೆಗೆ ಯಾರಿಗೆ ಜಯವಾಗುವುದೆಂದು ಹೇಳುವುದು ಕಷ್ಟವಾಗಿತ್ತು. ಅದರೆ ತಾ. 24 ನೇ ಬೆಳಿಗ್ಗೆ 6 ಗಂಟೆಗೆ ನಮ್ಮವರು ಶತ್ರುಗಳಿಗಿಂತ ವಿಶೇಷ ಬಲಶಾಲಿಸಿಕೊಂಡರೆಂದು ಗೊತ್ತಾಯಿತು. ಕಡೆಗೆ 6½ ಗಂಟೆ ಹೊತ್ತಿಗೆ ನಮ್ಮವರು ಶತ್ರುಗಳನ್ನೆಲ್ಲಾ ಸೋಲಿಸಿ ಓಡಿಸಿ ಕಂದಕಗಳನ್ನು ಮತ್ತೆ ಸಂಪೂರ್ಣವಾಗಿ ಗೆದ್ದು ಸ್ವಾಧೀನಪಡಿಸಿಕೊಂಡರು. ನಮ್ಮವರು ಅದನ್ನು ಗೆಲ್ಲುವುದಕ್ಕೆ 24 ಗಂಟೆ ಹೊತ್ತು ನಿಲುಗಡೆ ಇಲ್ಲದಂಥಾ ಘೋರವಾದ ಯುದ್ಧವನ್ನು ಮಾಡಿ ರಕ್ತಪ್ರವಾಹವನ್ನು ಹರಿಸಬೇಕಾಯಿತು. ಕಡೆಯಲ್ಲಿ ಸಂಪೂರ್ಣವಾದ ಜಯಪ್ರದವುಂಟಾಯಿತು. ಮೂರು ಮಂದಿ ಹುದ್ದೇದಾರರೂ, 17 ಜನ ಸೈನಿಕರೂ ನಮ್ಮವರಿಗೆ ಕೈಸೆರೆ ಸಿಕ್ಕಿದರು. 3 ಮೆಷೀನ್ ಫಿರಂಗಿಗಳೂ, 1 ಮೋರ್ಟರೂ ಸಿಕ್ಕಿದವು. ಕಂದಕಗಳ ಸಮೀಪದಲ್ಲಿ ಜರ್ಮನಿ ಸೈನಿಕರ 100 ಹೆಣಗಳು ಬಿದ್ದಿದ್ದವು.

ಶತ್ರುಗಳ ಕಡೆ ಅನೇಕರಿಗೆ ಗಾಯಗಳಾಗಿವೆ. ಅವರು ಮಹಾ ಶೌರ್ಯದಿಂದ ಯುದ್ಧ ಕೊಟ್ಟಿದ್ದರಿಂದ ನಮ್ಮ ಸೈನಿಕರಲ್ಲೂ ತುಂಬಾ ನಷ್ಟವಾಗಿರುತ್ತದೆ. ಆದರೆ ಇಂಥಾ ಘೋರವಾದ ಯುದ್ಧಕ್ಕೆ ಅನುಗುಣವಾದಷ್ಟು ನಷ್ಟವಾಗಲಿಲ್ಲ. ಇಷ್ಟು ಪ್ರಖ್ಯಾತವಾದ ರೀತಿಯಲ್ಲಿ ಕಾದಾಡಿ ಜಯಪ್ರದ ಹೊಂದಿದ ಮೇಲೆ ನಮ್ಮ ಸೈನಿಕರ ಪರಾಕ್ರಮವನ್ನೂ ಜತ ಮನಸ್ಸನ್ನೂ ನೋಡಿ ಬ್ರಿಟಿಷ್ ಸೈನ್ಯದ ಮುಖ್ಯ ದಳಪತಿಯಾದ ಸರ್ ಜಾನ್ ಫ್ರೆಂಚ್‌ರವರು ಅವರನ್ನು ಅತ್ಯಂತ ವಿಶೇಷವಾಗಿ ಕೊಂಡಾಡಿರುತ್ತಾರೆ.

ಮೈಸೂರು ಗೆಜೆಟ್ ಸಂಗ್ರಹ.

ಮ॥ ಕೆ. ಸೂರಯ್ಯನವರನ್ನು ಚಿಂತಾಮಣಿ ಟವನ್ ಮ್ಯುನಿಸಿಪಲ್ ಕೌನ್ಸಿಲ್ ಮೆಂಬರಾಗಿ ನೇಮಿಸಿದೆ.

ಗುಬ್ಬಿ ತಾಲ್ಲೂಕು ಅಮಲ್ದಾರ್ ಮ॥ ಟಿ. ಸ್ವಾಮಿನಾಥ ಶಾಸ್ತ್ರಿಯವರಿಗೆ ಆರು ತಿಂಗಳ ರಜಾ ಕೊಟ್ಟಿದೆ.

ಕೊರಟಗೆರೆ ಡೆಪ್ಯುಟಿ ಅಮಲ್ದಾರ್ ಮ॥ ಎಸ್. ಸುಬ್ಬರಾಯರು ಗುಬ್ಬಿ ತಾಲ್ಲೂಕು ಅಮಲ್ದಾರರಾಗಿಯೂ, ಶಿವಮೊಗ್ಗ ಡಿಸ್ಟ್ರಿಕ್ಟ್ ಶಿರಸ್ತೇದಾರ್ ಮ॥ ಜಿ. ಸಂತಾನಂ ಅಯ್ಯಂಗಾರ್ರು ಕೊರಟಗೆರೆ ಡೆಪ್ಯುಟಿ ಅಮಲ್ದಾರ್ ಮತ್ತು 1 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿಯೂ ಬದಲಿ ನೇಮಿಸಲ್ಪಟ್ಟಿದಾರೆ.

ಅ॥ ಕಂಟ್ರೋಲರ್ ಮ॥ ಟಿ. ಲಕ್ಷ್ಮೀನರಸಿಂಹರಾಯರಿಗೆ ಡಿಸೆಂಬರ್ ತಾ. 1 ರಿಂದ ಇಪ್ಪತ್ತುಮೂರು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ; ಇವರು ಕ್ರಿಸ್ಮಸ್ ರಜವನ್ನೂ ಉಪಯೋಗಿಸಿಕೊಳ್ಳಬಹುದಾಗಿದೆ.

ಅ॥ ಕಂಟ್ರೋಲರ್ ಮ॥ ಎನ್. ಕೃಷ್ಣಸ್ವಾಮಿರಾಯರಿಗೆ ಕೊಟ್ಟಿರುವ ಒಂದು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೊಂದು ವಾರ ಜಾಸ್ತಿಮಾಡಿದೆ ಈಗಿನ ಬದಲಿ ಏರ್ಪಾಡೇ ಜಾರಿಯಲ್ಲಿರತಕ್ಕದ್ದು.

ಅ॥ ಸರ್ಜನ್ ಮ॥ ಎ. ಶೇಷಗಿರಿರಾಯರಿಗೆ ಕೊಟ್ಟಿರುವ ಪ್ರಿವಿಲೆಜ್ ರಜವನ್ನು ಇನ್ನೂ ಇಪ್ಪತ್ತೆರಡು ದಿನಗಳಿಗೆ ಜಾಸ್ತಿಮಾಡಿದೆ.

ಡೆಪ್ಯುಟಿ ಚೀಫ್ ಸೆಕ್ರೆಟರಿ ಮಿ॥ ಪಿ. ಜಿ. ಡಿಸೌಜಾರವರಿಗೆ ಕ್ರಿಸ್ಮಸ್ ರಜಾ ಜೊತೆಗೆ ಹದಿನಾಲ್ಕು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಗವರ್ನ್ಮೆಂಟ್ ಅ॥ ಸೆಕ್ರೆಟರಿ ಮ॥ ಎ. ವಿ. ರಾಮನಾಥನ್‌ರವರಿಗೆ ಡಿಸೆಂಬರ್ ತಾ. 8 ರಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ದಿವಾನ್‌ರವರ ಆಫೀಸ್ 1 ನೇ ಡಿವಿಜನ್ ಕ್ಲಾರ್ಕ್ ಮ॥ ಎಸ್. ಶ್ರೀನಿವಾಸಯ್ಯಂಗಾರ್ರನ್ನು ನಾಗಮಂಗಲ ತಾಲ್ಲೂಕಿನ ಅಮಲ್ದಾರ್ ಮತ್ತು 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ನೇಮಿಸಿದೆ.

ಅ॥ ಸರ್ಜನ್ ಮಿಸ್ ಎ. ಜಿ. ಆಲೆನ್ ಯವರನ್ನು ರಾಬರ್ಟ್‌ಸನ್ ಪೇಟೆಯ ಹೊಸ ಹೆಂಗಸರ ಆಸ್ಪತ್ರೆಗೆ ವರ್ಗಮಾಡಿದೆ.

ಗವರ್ನ್ಮೆಂಟ್ ತಬೇಲೆಗಳ ಸೂಪರಿನ್‌ಟೆಂಡೆಂಟ್ ಮಿ॥ ಜೆ. ಎ. ಕ್ಯಾಂಟಲ್‌ರವರನ್ನು ಇಂಪೀರಿಯಲ್ ಸರ್ವಿಸ್ ಟ್ರಾನ್ಸ್‌ಪೋರ್ಟ್ ಕೋರಿನ ಕಮಾಂಡಾಂಟರ ಆಫೀಸ್ ಛಾರ್ಜನ್ನೂ ವಹಿಸುವಂತೆ ನೇಮಕಮಾಡಿದೆ.

ಮುಂದೆ ಹೇಳುವ ಅಮಲ್ದಾರರ ವರ್ಗಾವರ್ಗಿಗಳನ್ನು ಹುಕುಂ ಮಾಡಲಾಗಿದೆ—ಮ॥ ಪಿ. ಸುಬ್ಬರಾಯರು ಶ್ರೀನಿವಾಸಪುರದಿಂದ ಹೊಳಲ್ಕೆರೆಗೆ, ಮ॥ ಬಿ. ಲಿಂಗಯ್ಯನವರು ಹೊಳಲ್ಕೆರೆಯಿಂದ ಶ್ರೀನಿವಾಸಪುರಕ್ಕೆ, ಮ॥ ಎಚ್. ಬಸವರಾಜೆ ಅರಸಿನವರು ನಾಗಮಂಗಲದಿಂದ ಮಂಡ್ಯಕ್ಕೆ.

ಮಿ॥ ಮೆಕ್‌ಆಲ್‌ಪೈನ್ ರವರನ್ನು ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಇಂಗ್ಲಿಷ್ ಬೋಧಕರಾಗಿ ನೇಮಿಸಿದೆ; ಇವರು ಕಳೆದ ಅಕ್ಟೋಬರ್ ತಾ. 19 ರಲ್ಲಿ ಕೆಲಸಕ್ಕೆ ದಾಖಲಾಗಿರುತ್ತಾರೆ.

ಸ್ಯಾನಿಟರಿ ಇನ್‌ಜನಿಯರ್ ಮಿ॥ ಜೆ. ಭೋರ್‌ಯವರನ್ನು ಹಂಗಾಮಿಯಾಗಿ ಸ್ಯಾನಿಟರಿ ಡಿವಿಜನ್‌ನಿಂದ ನೀರಿನ ಸಂಪರಾಜು ಮತ್ತು ಸ್ಯುವೇರ್ ಡಿವಿಜನ್‌ಗೆ ವರ್ಗಮಾಡಿದೆ.

ಅ॥ ಇನ್‌ಜನಿಯರ್ ಮ॥ ಸಿ. ವಿಜಯರಂಗಂ ನಾಯುಡುರವರನ್ನು 4 ನೇ ಕ್ಲಾಸ್ ಎಗ್ಜಿಕ್ಯುಟಿವ್ ಇನ್‌ಜನಿಯರಾಗಿ ಬಡ್ತಿಮಾಡಿ ಸ್ಯಾನಿಟರಿ ಡಿವಿಜನ್‌ಗೆ ವರ್ಗಮಾಡಿದೆ.

ರೈಲ್ವೆ ಇಲಾಖೆಯ ಅಂಡರ್ ಸೆಕ್ರೆಟರಿ ಮತ್ತು ರೈಲ್ವೆ ಚೀಫ್ ಇನ್‌ಜನಿಯರ್ ಮತ್ತು ಪರ್ಸನಲ್ ಅಸಿಸ್ಟೆಂಟ್ ಮಿ॥ ಡಿ. ಜಿ. ದಾಣಿಯವರು ವಾಪಸು ಬ್ರಿಟಿಷ್ ಸರ್ಕಾರದ ಸರ್ವಿಸಿಗೆ ಹೋದದ್ದರಿಂದ ಅವರ ಕೆಲಸಕ್ಕೆ ಅ॥ ಇನ್‌ಜನಿಯರ್ ಮ॥ ವೈ. ಕೆ. ರಾಮಚಂದ್ರರಾಯರನ್ನು ನೇಮಕ ಮಾಡಿದೆ.

ಮೈಸೂರು ಡಿಸ್ಟ್ರಿಕ್ಟಿನ ಸ್ಕೂಲುಗಳ ಅ॥ ಇನ್‌ಸ್ಪೆಕ್ಟರ್ ಮ॥ ಎಂ. ಲಕ್ಷ್ಮೀನರಸಿಂಹಯ್ಯನವರನ್ನು ಮೈಸೂರು ಪಟ್ಟಣದಲ್ಲಿ ಸ್ಕೂಲ್ ಕಮಿಟಿಗಳ ಅಟೆಂಡೆನ್ಸ್ ಆಫೀಸರಾಗಿ ನೇಮಕಮಾಡಿದೆ.

ಬಾತ್ಮಿದಾರರಿಗೆ ನೋಟೀಸ್.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಜವಾಬುದಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಕರೆಸ್ಪಾಂಡೆನ್ಸ್.

ಸಂದೇಹ.

ಅಯ್ಯಾ,—ಮುಂದೆ ಬರುವ ರಾಕ್ಷಸನಾಮ ಸಂವತ್ಸರದಲ್ಲಿ ಮೈಸೂರಲ್ಲಿ ರತಕ್ಕ ನಕ್ಷತ್ರ ಡೈರಿಯಲ್ಲೂ, ಶ್ರೀ ಸೀತಾರಾಘವ ಡೈರಿಯಲ್ಲಿಯೂ ಅಧಿಕ ಜ್ಯೇಷ್ಠ ಮಾಸವೆಂದೂ, ಬೆಂಗಳೂರಲ್ಲಿ ರತಕ್ಕ ಕೆಲವು ಡೈರಿಗಳಲ್ಲಿ ಅಧಿಕ ವೈಶಾಖ ಮಾಸವೆಂದೂ ಪ್ರಕಟಿಸಿರುವರು. ಇದರಿಂದ ಅಧಿಕ ಬರುವುದು ವೈಶಾಖವೋ, ಜ್ಯೇಷ್ಠವೋ ಸಂದೇಹವಾಗಿದೆ. ಈ ನನ್ನ ಸಂಶಯವನ್ನು ನಿವಾರಿಸಿಕೊಡಬೇಕೆಂದು ಕೋರುವ

ವೇದಾಭಿಮಾನಿ.

ತೀರ್ಥಹಳ್ಳಿ ಪೀಪಲ್ಸ್ ಬ್ಯಾಂಕು.

ಅಯ್ಯಾ,—ತಮ್ಮ ನವಂಬರ್ 26 ನೇ ತಾ. ಪತ್ರಿಕೆಯಲ್ಲಿ ತೀರ್ಥಹಳ್ಳಿ ಪೀಪಲ್ಸ್ ಬ್ಯಾಂಕಿನ ವಿಷಯದಲ್ಲಿ ಬ್ಯಾಂಕಿನಲ್ಲಿ ಕೆಲಸ ಮಾಡತಕ್ಕವರ ಮತ್ತು ಬ್ಯಾಂಕಿನ ಸ್ಥಿತಿಗತಿಯನ್ನು ಚೆನ್ನಾಗಿ ಪರಿಶೀಲನೆ ಮಾಡದೆ ಅವಿಚಾರ ಪರರಾಗಿ ಪ್ರಚುರಪಡಿಸಿದ ಬಾತ್ಮಿಯನ್ನು ಓದಿ ವಿಷಾದಿಸುತ್ತೇನೆ. ಬ್ಯಾಂಕಿನ ನ್ಯೂನತೆಗಳಿದ್ದಲ್ಲಿ ತಾ. 16 ರಲ್ಲಿ ನಡೆದ ಪಬ್ಲಿಕ್ ಮೀಟಿಂಗಿನಲ್ಲಿ ಇತ್ಯರ್ಥ ಪಡಿಸಬಹುದಾಗಿತ್ತು. ಈ ಬಾತ್ಮಿದಾರರು ಬ್ಯಾಂಕಿನ ಷೇರ್‌ದಾರರೂ ಅಲ್ಲ, ಯಾ ಬ್ಯಾಂಕಿನಲ್ಲಿ ಆದಾಯ ವೆಚ್ಚಗಳನ್ನು ನಡಿಸಿದವರೂ ಅಲ್ಲ. ಕೇವಲ ಪ್ರತಿಫಲ ವಿಮುಖರಾಗಿ ಕುಯುಕ್ತಿಯಿಂದ ಹೊರಪಡಿಸಿದ್ದಾಗಿದೆ. ಬ್ಯಾಂಕಿನ ರೂಲ್ಸಿಗೆ ವಿರೋಧವಾಗಿ ಬಡ ಪ್ರಜೆಗಳ ಪ್ರಯೋಜನಕ್ಕಲ್ಲದೆ ಇದ್ದಲ್ಲಿ ಬ್ಯಾಂಕಿನ ಅಭಿವೃದ್ಧಿಯು ಕಡಮೆಯಾಗುತ್ತಾ ಇತ್ತು. ಬ್ಯಾಂಕಿನ ರೂಲ್ಸು ಅನುಸರಿಸಿ ಸಾಲ ಕೇಳತಕ್ಕವರಿಗೆ ಹಣ ದೊರೆಯಲು ಯಾವ ಅಭ್ಯಂತರವೂ ತೋಚುವದಿಲ್ಲ. ಈ ಬ್ಯಾಂಕು ಆಯಾ ಕಾಲಕ್ಕೆ ಅನುಸಾರವಾಗಿ ಬಡ ಪ್ರಜೆಗಳ ಸೌಲಭ್ಯತೆಗೋಸ್ಕರವೇ ಈ ಚಿಕ್ಕ ಟೌನಿನಲ್ಲಿ ಏರ್ಪಡಿಸಲಾಗಿದೆ.

ಜೀ. ಡಿ., ಷೇರ್ ಹೋಲ್ಡರ್.

ರೈಲಿನ ಸೌಕರ್ಯ.

ಅಯ್ಯಾ,—ಮೈಸೂರಿಂದ ರಾತ್ರಿ 11 ಘಂ. 10 ನಿಮಿಷಕ್ಕೆ ಹೊರಡತಕ್ಕ ಗೂಡ್ಸ್ ಟ್ರೈನ್‌ನನ್ನು ಬರುವ 1 ನೆ ತಾ. ನಿಂದ ನಿಲ್ಲಿಸುತ್ತಾರೆಂದು ಜನಪ್ರವಾದವಾಗಿದೆ. ಪ್ರಯಾಣಿಕರು ಹೆಚ್ಚಾಗಿ ಬರುವದಿಲ್ಲವೆಂಬುವದೇ ಕಾರಣವಂತೆ. ನಿಜ, ಆದರೆ ರಾತ್ರಿ 9 ಘಂ. 30 ನಿಮಿಷಕ್ಕೆ ಹೊರಡುವ ಪ್ಯಾಸೆಂಜರ್‌ನಲ್ಲಿ ಅನೇಕರು ಪ್ರಯಾಣಮಾಡುತ್ತಾರೆ. ಇದು ಕಾಲಕ್ಕೆ ಸರಿಯಾಗಿ ಬೆಂಗಳೂರಿಗೆ ಸೇರುವುದರಿಂದ ಮದರಾಸ್, ಗುಂತಕಲ್ಲು, ತುಮಕೂರು ಲೈನ್‌ನಲ್ಲಿ ಪ್ರಯಾಣ ಮಾಡುವವರಿಗೆ ತುಂಬಾ ಅನುಕೂಲವಾಗಿದೆ. 11 ಘಂ. 10 ನಿಮಿಷಕ್ಕೆ ಹೊರಡುವ ಗಾಡಿ ಬೆಂಗಳೂರಿಗೆ ಸಕಾಲಕ್ಕೆ ತಲಪುವದಿಲ್ಲ. ಇದರಿಂದ ಅನೇಕ ಪ್ರಯಾಣಿಕರು 9 ಘಂ. 30 ನಿಮಿಷಕ್ಕೆ ಹೊರಡುವ ಗಾಡಿಯಲ್ಲೇ ಹೊರಡುತ್ತಾರೆ. ಆದ್ದರಿಂದ ನಮ್ಮ ರೈಲ್ವೆ ಇಲಾಖೆಯವರು ದಯವಿಟ್ಟು 11 ಘಂ. 10 ನಿಮಿಷಕ್ಕೆ ಹೊರಡುವ ಗಾಡಿಯನ್ನೂ ಬೆಂಗಳೂರಿಗೆ ಬೆಳಗಿನ 6 ಘಂ. 30 ನಿಮಿಷಕ್ಕೆ ತಲಪುವ ಸೌಕರ್ಯವನ್ನು ಕಲ್ಪಿಸಿಕೊಟ್ಟರೆ ಅನೇಕ ಪ್ರಯಾಣಿಕರಿಗೆ ಕ್ಷೇಮವಾಗುತ್ತದೆ. ವಾಸ್ತವ್ಯವಾಗಿ ಮೇಲ್ಕಂಡ ಗಾಡಿಯನ್ನು ನಿಲ್ಲಿಸುವದಾದರೆ ಅನೇಕ ಪ್ರಯಾಣಿಕರಿಗೆ ತುಂಬಾ ತೊಂದರೆಯಾಗುತ್ತೆ. ಕಂಪನಿಯವರು ಈ ವಿಷಯವನ್ನು ಯೋಚಿಸಿ ಪ್ರಜೆಗಳಿಗೆ ಸೌಕರ್ಯವನ್ನು ಉಂಟುಮಾಡಬೇಕಾಗಿ ಪ್ರಯಾಣಿಕರ ಪರವಾಗಿ ಪ್ರಾರ್ಥಿಸುತ್ತೇನೆ.

ಮೈಸೂರು ಟಿ. ದಾಸಪ್ಪ.

ಮೈಸೂರು ಟ್ರೈಯ್ನಿಂಗ್ ಕಾಲೇಜ್.

ಅಯ್ಯಾ,—ನಮ್ಮ ದಯಾಳುಗಳಾದ ಸರಕಾರದವರು ದೇಶೋನ್ನತಿಗೆ ವಿದ್ಯಾಭಿವೃದ್ಧಿಯೇ ಮುಖ್ಯವಾಗಿರುವುದೆಂಬುದಕ್ಕೆ ಗಮನಕೊಟ್ಟು ನಡಿಸುತ್ತಿರುವ ಏರ್ಪಾಡುಗಳಲ್ಲಿ ಕನ್ನಡ ಭಾಷಾಭಿವೃದ್ಧಿಗೆ ಅನುಕೂಲವಾಗುವ ಹಾಗೆ ಸಂಸ್ಥಾನದ ಎಲ್ಲಾ ಉಪಾಧ್ಯಾಯರೂ ಮೊದಲು ವಿದ್ಯಾಭಿವೃದ್ಧಿ ಪಡೆದುಕೊಳ್ಳಬೇಕೆಂದು ಗೊತ್ತುಮಾಡಿ ಆ ಬಗ್ಗೆ ರಾಜಧಾನಿಯಲ್ಲಿ ಭಾಷೋಪಜೀವಿನೀ ಪಾಠಶಾಲೆಯೊಂದನ್ನು ಆಳಿದ ಮಹಾಸ್ವಾಮಿಯವರಾದ ಮುಮ್ಮಡಿ ಕೃಷ್ಣರಾಜಒಡೆಯರವರ ಜ್ಞಾಪಕಾರ್ಥವಾಗಿ ಸ್ಥಾಪಿಸಿದರು. ಈ ಪಾಠಶಾಲೆಯ ಪುರೋಭಿವೃದ್ಧಿಗಾಗಿ ನಮ್ಮ ಸರಕಾರದವರು ತಕ್ಕ ಮುಖ್ಯೋಪಾಧ್ಯಾಯರುಗಳನ್ನು ಕ್ರಮಕ್ರಮವಾಗಿ ನೇಮಿಸುತ್ತಿರುವುದರ ಮೂಲಕ ಈ ಪಾಠಶಾಲೆಯು ತುಂಬಾ ಅಭಿವೃದ್ಧಿಗೆ ಬಂದದ್ದರಿಂದ ನಾರ್ಮಲ್ ಸ್ಕೂಲ್ ಎಂಬದಾಗಿ ಹೆಸರಿಟ್ಟು ಕನ್ನಡ ಭಾಷಾಭಿವೃದ್ಧಿಯೂ ಗುತ್ತಿರುವುದರ ಜೊತೆಯಲ್ಲಿ ಇತರ ಶಿಕ್ಷಣ ಕ್ರಮದ ತರಗತಿಗಳನ್ನೇರ್ಪಡಿಸಿದರು. ಈಚೆಗೆ ಇದನ್ನು ಇನ್ನೂ ಅಭಿವೃದ್ಧಿಗೆ ತರಬೇಕೆಂಬುವುದು ನಮ್ಮ ಸರಕಾರದವರ ಮುಖ್ಯೋದ್ದೇಶವಾಗಿದ್ದದ್ದರಿಂದ ಮೇಲ್ಕಂಡ ವಿದ್ಯಾಭ್ಯಾಸಗಳ ಜೊತೆಗೆ ರಾಜಭಾಷೆಯ ಉಪಾಧ್ಯಾಯರುಗಳಿಗೂ ಶಿಕ್ಷಣ ಕ್ರಮದ ಏರ್ಪಾಡನ್ನು ಮಾಡಿ ಇಂಗ್ಲಿಷ್ ಟ್ರೈಯ್ನಿಂಗ್ ಕ್ಲಾಸನ್ನು ಪ್ರಾರಂಭಿಸಿದರು. ಹಾಲಿ ಈ ಸ್ಕೂಲಿಗೆ ಈಗ ಸ್ವಲ್ಪ ದಿವಸಗಳಲ್ಲಿ ಮುಖ್ಯೋಪಾಧ್ಯಾಯರಾಗಿ ನೇಮಿಸಲ್ಪಟ್ಟಿದ್ದ ಮ॥ ಡಿ. ವೆಂಕಟರಾಮಯ್ಯ, ಬಿ.ಎ., ಎಲ್.ಟಿ. ಇವರು ತುಂಬಾ ಕಾರ್ಯದಕ್ಷತೆಯಿಂದ ಸಹಾಯ ಕರೊಡಗೂಡಿ ಈ ಸ್ಕೂಲಿನ ಅಭಿವೃದ್ಧಿಯನ್ನು ನಮ್ಮ ಸರಕಾರದವರ ಗಮನಕ್ಕೆ ತಂದು ಗ್ರಾಜುಯೆಟ್‌ಗಳ ಟ್ರೈಯ್ನಿಂಗ್ ತರಗತಿಯನ್ನೂ ಏರ್ಪಡಿಸುವ ತರಬೇತುಗಳನ್ನು ನಡಿಸಿದ್ದರ ಮೇಲೆ ಆ ತರಗತಿಯು ಏರ್ಪಟ್ಟು ಟ್ರೈಯ್ನಿಂಗ್ ಕಾಲೇಜೆಂಬ ಹೆಸರೂ ಉಂಟಾಯಿತು. ಹಾಲಿ ಮ॥ ಡಿ. ವೆಂಕಟರಾಮಯ್ಯನವರು ಈ ಕಾಲೇಜಿನಿಂದ ವರ್ಗವಾದ ಕಾರಣ ಸಂಸ್ಥಾನದ ಅನೇಕ ಕಡೆಗಳಿಂದ ವ್ಯಾಸಂಗಕ್ಕೆ ಬಂದು ಅಲ್ಪಕಾಲ ಮಾತ್ರ ಇವರ ಉತ್ತಮವಾದ ಬೋಧನೆಯನ್ನು ಹೊಂದಿ ಮುಂದೆ ಇವರಿಂದ ತುಂಬಾ ಪ್ರಯೋಜನವನ್ನು ನಿರೀಕ್ಷಿಸಿಕೊಂಡಿದ್ದ ಉಪಾಧ್ಯಾಯರನೇಕರು ಇವರ ವರ್ಗದಿಂದ ಆಶಾಭಂಗರಾಗಿ ತುಂಬಾ ವ್ಯಸನಾಕ್ರಾಂತರಾಗಿದ್ದರು. ಆದರೆ ಇವರ ಮನಸ್ಸಂತೋಷವಾಗುವಂತೆ ಈ ಕಾಲೇಜಿನ ಪುರೋಭಿವೃದ್ಧಿಗಾಗಿ ಬೆಂಗಳೂರು ಸೆಂಟ್ರಲ್ ಕಾಲೇಜಿನಿಂದ ವರ್ಗವಾಗಿ ಬಂದಿರುವ ಮ॥ ಸಿ. ಆರ್. ನಾರಾಯಣರಾವ್, ಎಂ.ಎ., ಎಲ್.ಟಿ. ಯವರು ಪ್ರಿನ್ಸಿಪಾಲರಾಗಿರುತ್ತಾರೆ. ಇವರು ಇನ್ನೂ ಪೂರ್ವ ವಯಸ್ಕರಾಗಿಯೂ, ವಿದ್ಯಾಪಕ್ಷಪಾತಿಗಳಾಗಿಯೂ, ತುಂಬಾ ಸಮರ್ಥರಾಗಿಯೂ, ಕಾರ್ಯದಕ್ಷತೆಯುಳ್ಳವರಾಗಿಯೂ ಇರುವುದರಿಂದ ಸರಕಾರದವರು ದೇಶೋನ್ನತಿಗೆ ಏರ್ಪಡಿಸಿರುವ ಈ ಕಾಲೇಜಿನ ಜವಾಬ್ದಾರಿ ಕೆಲಸವನ್ನು ಸಮರ್ಪಕವಾಗಿ ನಡಿಸುತ್ತಾ ಬಂದು ನಮ್ಮಗಳ ವಿದ್ಯಾಭಿವೃದ್ಧಿಗೂ ಕಾರಣಭೂತರಾಗಿ ಮುಂದೆ ಇನ್ನೂ ಅಧಿಕವಾದ ಪದವಿಯನ್ನು ಹೊಂದುವಂತೆ ಆಗಲೆಂದು ಪ್ರಾರ್ಥಿಸುತ್ತೇವೆ. ಅಲ್ಲದೆ ನಮ್ಮಗಳ ಮೇಲೆ ನಮ್ಮ ಸರಕಾರದವರು ತುಂಬಾ ಅಭಿಮಾನವಿಟ್ಟು ಮೇಲ್ಕಂಡ ಪ್ರಿನ್ಸಿಪಾಲರವರನ್ನು ನೇಮಿಸಿರುವುದಕ್ಕಾಗಿ ಕೃತಜ್ಞರಾಗಿದೇವೆ.

ಒಬ್ಬ ವಾಚಕ.

ಮೊಹರಂ ಮಾರಾಮಾರಿ.

ಅಯ್ಯಾ,—ಚನ್ನಪಟ್ಟಣವು ಹಬ್ಬ ಕಾಲಗಳ ದೊಂಬಿಗಳಿಗೆ ಎತ್ತಿದ ಕೈಯಾಗಿರುತ್ತದೆ. ಹಿಂದೆ ಕೆಲವು ಸಾರಿ ದೊಂಬಿ ನಡೆದಿರುವುದುಂಟು. ಆದರೆ ಈಗ್ಗೆ ಕೆಲವು ವರ್ಷಗಳಿಂದ ಪೋಲೀಸ್ ಬಂದೋಬಸ್ತಿನ ಬಿಗಿಯಿಂದ ದೊಂಬಿಗೆ ಅವಕಾಶವಿರಲಿಲ್ಲ. ಈ ವರ್ಷ ಮೊಹರಂ ತಮಾಷೆಯು ಅತಿರಯವಾದ ರೀತಿಯಲ್ಲಿ ನಡೆಯಿತೆಂದು ಹೇಳಬಹುದು. ಯೂರೋಪ್ ಖಂಡದಲ್ಲಿ ಸಮುದ್ರ ಯುದ್ಧವು ನಡೆಯುತ್ತಲಿದೆಯಷ್ಟೆ. ಅದರ ಮಾದರಿಯಾಗಿ ತಮಾಷೆಯು ನಡೆಯಿತು. ಒಂದು ಹಡಗನ್ನು ಮಾಡಿದ್ದರು. ಆ ಹಡಗವು ಸಮುದ್ರದ ಮೇಲೆ ತೇಲುತ್ತಿರುವ ಹಾಗೂ, ದುರ್ಬೀನು ಮೂಲಕ ನೋಡಿ ಶತ್ರುಗಳ ಹಡಗು ಹತ್ರ ಬಂದರೆ ತಮ್ಮ ಹಡಗಿನ ಬಾವುಟಗಳನ್ನು ಇಳಿಸಿ ಶತ್ರುಗಳ ಹಡಗಿನ ಮೇಲೆ ಫಿರಂಗಿ ಎತ್ತಿ ಕಟ್ಟಿ ಹೊಡೆಯುತ್ತಲಿರುವ ಹಾಗೂ ನೋಟಕರಿಗೆ ಕಾಣುತ್ತಿತ್ತು. ಆದರೆ ಈ ವರ್ಷ ದೊಂಬಿ ನಡೆದು ಮಾರಾಮಾರಿಯಾದದ್ದು ವಿಷಾದಕರವಾಗಿರುತ್ತದೆ. ಕೋಟೆಯ ಮಹಮ್ಮದೀಯರಿಗೂ ಪೇಟೆಯ ಪಠಾಣ್ ವಾಡಿ ಮಹಮ್ಮದೀಯರಿಗೂ ಮಾರಾಮಾರಿಗಳು ಆದವು. ಒಬ್ಬಿಬ್ಬರು ಪೆಟ್ಟುತಿಂದ ಸ್ಥಳದಲ್ಲೇ ವಿಕಲರಾಗಿ ಬಿದ್ದುಹೋದರು. ಮತ್ತೆ ಕೆಲವರನ್ನು ಅಟ್ಟಿಸಿಕೊಂಡು ಹೋಗಿ ಹೊಡೆದರು. ಈ ಮಾರಾಮಾರಿಯು ಪೋಲೀಸ್ ಸ್ಟೇಷನ್ ಬಳಿಯಲ್ಲಿಯೇ ನಡೆಯಿತು. ಸುಮಾರು ಮಾರಾಮಾರಿಯು ಪ್ರಾರಂಭವಾದಾಗ 7 ಘಂಟೆ ಇರಬಹುದು. ಉಭಯ ಪಾರ್ಟಿಗಳವರಿಗೂ ದ್ವೇಷ ಆಗಿರುತ್ತದೆ. ಆದರೆ ಬಿಳ್ಳಿಯವರಿಗೆ ಹೆಚ್ಚು ಪೆಟ್ಟುಗಳು ಬಿದ್ದವೆಂದು ಹೇಳಬಹುದು. ತಾಬೂತನ್ನು ಹೊತ್ತುಕೊಂಡಿದ್ದ ಬಿಳ್ಳಿ ಕಡೆಯವರು ಅದನ್ನು ಪೋಲೀಸ್ ಸ್ಟೇಷನ್ ಬಳಿಯಲ್ಲಿಯೇ ಎತ್ತಿ ಹಾಕಿ [illegible] ದರು. ತರುವಾಯ ಎರಡು ದಿನಗಳ ಮೇಲೆ ಅದನ್ನು [illegible] ತೋರುತ್ತೆ. ಆ ದಿನದಲ್ಲಿ ನಮ್ಮ ಊರಿನ ಪೋಲೀಸ್ ಇನ್‌ಸ್ಪೆಕ್ಟರವರೂ ಮತ್ತು ಕೆಲವು ಮಂದಿ ಕಾನ್‌ಸ್ಟೇಬಲ್‌ಗಳೂ ತುಂಬಾ ಮೆಹನತ್ತು ಮಾಡಿ ಬೀದಿಯಲ್ಲಿ ತಮಾಷೆನೋಡುವುದಕ್ಕೋಸ್ಕರ ಜಮಾಯಿಸಿಕೊಂಡಿದ್ದ ಜನಗಳನ್ನೆಲ್ಲಾ ಸ್ವಲ್ಪ ಹೊತ್ತಿನಲ್ಲೇ ಚದರಿಸಿದ್ದರಿಂದ ನೋಡಲಿಕ್ಕೆ ಬಂದಿದ್ದ ಹಿಂದು ಜನರಿಗೆ ಯಾವ ಅಪಾಯವೂ ಆಗಲಿಲ್ಲ. ಮತ್ತು ಮಹಮ್ಮದೀಯರ ಪೈಕಿಯೂ ಮಾರಾಮಾರಿಯು ಕಡಮೆಯಾಯ್ತೆಂದು ಹೇಳಬಹುದು. ಪೆಟ್ಟು ತಿಂದವರು ಸರ್ಕಾರಿ ಡಾಕ್ಟರವರಿಂದ ಇಲಾಜು ಹೊಂದುತ್ತಲಿದಾರೆ. ಬೆಂಗಳೂರಿಂದ ಪೋಲೀಸ್ ಸೂಪರಿಂಟೆಂಡೆಂಟ್ ಸಾಹೇಬರವರು ಬಂದು ಎರಡು ದಿನಗಳಿದ್ದು ವಿಚಾರಮಾಡಿ ಕೈಫಿಯತ್ತು ತೆಗೆದುಕೊಂಡು ಹೋಗಿರುತ್ತಾರೆ. ಜಗಳ ಮಾಡಿದ ಉಭಯ ಪಾರ್ಟಿಗಳೂ ಸಮಾಧಾನವಾದರೆ ಮೇಲಾಗಿರುತ್ತೆ. ಮುಂದೇನಾಗುವುದೋ ನೋಡಬೇಕು. ಇಲ್ಲಿ ಮೊಹರಂ ತಮಾಷೆಗಳು ಅರ್ಧ ರಾತ್ರಿಯ ವರೆಗೂ ನಡೆಯುತ್ತೆ. ಅದನ್ನು ತಪ್ಪಿಸಿ ಜಾಗ್ರತೆ ಶುರುಮಾಡಿ, ಜಾಗ್ರತೆ ಮುಗಿಸಿದರೆ ದೊಂಬಿಗೆ ಅವಕಾಶವಾಗಲಾರದೆಂದು ಕಾಣುತ್ತೆ. ಈ ವಿಷಯದಲ್ಲಿ ಸರ್ಕಾರದವರು ನಿಗಾ ಕೊಡುವರೆಂದು ನಂಬಲಾಗಿದೆ.

ಹಿತಚಿಂತಕ.

ದೇವರ ಬೆಳಕು ಜ್ಞಾನದ ಬಲ.

ಅಯ್ಯಾ,—ಈ ನಮ್ಮ ಭರತಖಂಡವು ವಿದ್ಯೆಯಲ್ಲಿಯೂ ಕುಶಲ ಕೆಲಸಗಳಲ್ಲಿಯೂ ಕೇವಲ ಹಿಂದುಳಿದಿರುವ ದೇಶಗಳಲ್ಲಿ ಒಂದಾಗಿತ್ತು. ಇಂಥಾ ದೇಶವು

...ದ ನವನಾಗರಿಕ ಕಾಲದಲ್ಲಿ ಕಣ್ಣು ತೆರೆದು, ಸುತ್ತಲೂ ಇರುವ ದೇಶಗಳನ್ನು ನೋಡಿ, ಈಗ ತಕ್ಕ ಮಟ್ಟಿಗೆ ವಿದ್ಯೆಯೇ ಮೊದಲಾದ ಕುಶಲ ವಿದ್ಯೆಗಳಲ್ಲಿ ಬಿರುವನವೆಲ್ಲಾ ಮುಂದುವರಿಯುತ್ತಾ ಬರುತ್ತಿರುವುದನ್ನು ನಾವೆಲ್ಲರೂ ನೋಡುತ್ತಾ ಇದೇವೆ. ಈ ಪ್ರಕಾರದಲ್ಲಿಯೇ ನಮ್ಮ ಮೈಸೂರು ದೇಶವು ಸಹಾ ಜನಸಕ್ತಿ ಪ್ರೌಢವಿದ್ಯಾಭ್ಯಾಸದಲ್ಲಿಯೂ, ಕುಶಲ ವಿದ್ಯೆಗಳಲ್ಲಿಯೂ, ವಾಣಿಜ್ಯ ವೃತ್ತಿಯಲ್ಲಿಯೂ ಇನ್ನೂ ಅನೇಕ ತರಹವಾದ ಕೆಲಸಗಳಲ್ಲಿಯೂ ಮುಂದೆ ಮುಂದಕ್ಕೆ ಬರುತ್ತಿರುವುದು ನಮಗೆಲ್ಲರಿಗೂ ಸಂತೋಷಪ್ರದವಾಗಿದೆ. ಈ ರೀತಿ ಪಟ್ಟಣಗಳಲ್ಲಿ ದೇಶವು ಏಳಿಗೆಗೆ ಬರುತ್ತಿದ್ದರೂ ಕೂಡ ಕೇವಲ ಮಲೆನಾಡೆಂದು ಹೆಸರುಗೊಂಡಿರುವ ಕೊಪ್ಪ ತಾಲ್ಲೋಕಿನ ಪೈಕಿ ಕಂಬಾರಕೊಪ್ಪ ಮತ್ತು ಹಿರೆಕೊಡಿಗೆ ಗ್ರಾಮಗಳಲ್ಲಿ ಇದುವರೆಗೂ ನಮ್ಮ ನಾಮಧಾರಿ ಮಹನೀಯರು ನಿದ್ರೆ ಸೋಮಾರಿಸುವಂಥ, ಕೇಳುವುದು ಇರುವುದು ತುಂಬಾ ಶೋಚನೀಯವಾಗಿದೆ. ಈ ಗ್ರಾಮಗಳಲ್ಲಿ ಇದುವರೆಗೆ ಈ ಮಹನೀಯರಲ್ಲನೇಕರು ನೂರರಿಂದ ಐನೂರು ರೂಪಾಯಿಗಳ ವರೆಗೆ ಸರಕಾರಕ್ಕೆ ಕಂದಾಯ ಕೊಟ್ಟು ಐಶ್ವರ್ಯವಂತರೆನ್ನಿಸಿಕೊಂಡು ಕೀರ್ತಿಗೆ ಪಾತ್ರರಾಗಿರುತ್ತಾರೆ. ಹೀಗೆ ಇದ್ದರೂ ಕೂಡ ಇವರು ವಾಸಿಸುವ ಊರು ಗ್ರಾಮಗಳಲ್ಲಿ ವಿದ್ಯೆಯ ಬೆಳಕು ಸ್ವಲ್ಪವೂ ಬಾರದೆ, ಅಜ್ಞಾನಾಂಧಕಾರವು ಮುಚ್ಚಿಕೊಂಡಿರುವುದನ್ನು ನೋಡಿದರೆ ಇವರುಗಳ ಮೌಢ್ಯವನ್ನು ಸೂಚಿಸುತ್ತದೆ. ದೃಷ್ಟಾಂತಕ್ಕೆ ಅಜ್ಞಕವೃಂದಿರಂತೆ ಇದಕ್ಕೆ ಮೇಲ್ಕಂಡ ಗ್ರಾಮಗಳ ಪೈಕಿ ಹಿರೆಕೊಡಿಗೆ ಗ್ರಾಮದಲ್ಲಿ ಅಲ್ಲಿಗೆ ಸ್ಕೂಲ್ ಎಂಬ ನಾಮವೇ ಇರುವ ಒಂದು ಮಿಸಲ್ ಸ್ಕೂಲ್ ಇರುತ್ತದೆ. ಈ ಸ್ಕೂಲ್ ಸ್ಥಾಪಿಸಲ್ಪಟ್ಟು ಸುಮಾರು ಆರೇಳು ವರುಷಗಳಾಯಿತು. ಆ ಲಾಗಾಯಿತು ಮಿಷನ್ ಡಿಪಾರ್ಟ್ ಮೆಂಟಿನವರು ತುಂಬಾ ಮುತುವರ್ಜಿಯನ್ನು ವಹಿಸಿ ಸ್ಕೂಲನ್ನು ನಡಿಸುತ್ತಾ ಬಂದಿದ್ದಾರೆ. ಆದರೂ ಇವರ ಸಾಹಸವು ಸಾರ್ಥಕ ಹೊಂದುವ ಹಾಗೆ ಒಬ್ಬ ವಿದ್ಯಾರ್ಥಿಯಾದರೂ ಮೈಸೂರು ದೇಶದ ಲೋ.ಸೆ. ಪರೀಕ್ಷೆಗೆ ಹೋಗಬೇಕಾಗಿತ್ತು. ಇದಕ್ಕೆ ಕಾರಣವೇನು? ಉಪಾಧ್ಯಾಯರು ಕ್ರಮದಂತೆ ಪಾಠಶಾಲೆಗೆ ಬಂದು ಮಕ್ಕಳಿಗೆ ಪಾಠ ಮಾಡಿಸುವುದಿಲ್ಲವೋ? ಎಂದು ಕೇಳಬಹುದು. ಹಾಗಲ್ಲ, ಈ ಸ್ಕೂಲ್ ಉಪಾಧ್ಯಾಯರಾದ ಮ॥ ಕೆ ಅನಂದರಾಯ ಎಂಬುವರು ಬಹಳ ಸದಾಚಾರಿಯರು. ಬಾಲಕರಲ್ಲಿಯೂ ಗ್ರಾಮದ ಎಲ್ಲಾ ಜನಗಳಲ್ಲಿಯೂ ಪ್ರೀತಿ ವಿಶ್ವಾಸಗಳನ್ನು ಸಂಪಾದಿಸಿಕೊಂಡು ಇರುತ್ತಾರಲ್ಲದೆ ಗ್ರಾಮದ ಪ್ರತಿ ಒಬ್ಬ ಬಾಲಕರ ಮನೆಗಳಿಗೆ ಹೋಗಿ ಬಾಲಕರ ತಂದೆತಾಯಿಗಳಲ್ಲಿ ವಿದ್ಯೆಯಿಂದ ಉಂಟಾಗುವ ಪ್ರಯೋಜನವನ್ನೂ, ಇಲ್ಲದೆ ಇರುವದರಿಂದ ಉಂಟಾಗುವ ಕೇಡುಗಳನ್ನೂ ಕುರಿತು ಬೋಧಿಸುವುದನ್ನು ನಾನು ಎಷ್ಟೋ ಸಲ ಕಣ್ಣಾರ ಕಂಡಿರುತ್ತೇನೆ. ಇವರು ಇಷ್ಟು ಮುತುವರ್ಜಿಯನ್ನು ವಹಿಸಿ ತಮ್ಮ ಕೆಲಸವನ್ನು ಮಾಡುತ್ತಾ ಇದ್ದಾಗ್ಯೂ ಕೂಡ ಬಾಲಕರ ತಂದೆತಾಯಿಗಳು ತಂತಮ್ಮ ಮಕ್ಕಳನ್ನು ಕ್ರಮವಾಗಿ ಪಾಠಶಾಲೆಗೆ ಕಳುಹಿಸಿಕೊಡುವುದಿಲ್ಲವಲ್ಲಾ ಎಂಬುದು ಚಿಂತಿಸಬೇಕಾಗಿದೆ. ಹಾಗೂ ಉಪಾಧ್ಯಾಯರು ಬಲವಂತಕ್ಕೆ ಒಂದೆರಡು ದಿವಸ ಸ್ಕೂಲಿಗೆ ಕಳುಹಿಸಿ ಮೂರನೇ ದಿವಸ ಖಂಡಿತವಾಗಿಯೂ ಗೈರ್ ಹಾಜರಿಯಾಗಿರುತ್ತಾನೆಂಬುದಕ್ಕೆ ಅಟೆಂಡೆನ್ಸ್ ರಿಜಿಸ್ಟರ್ ಸಜನಾದ ಸಾಕ್ಷಿ ಕೊಡಬಹುದು. ತಂದೆತಾಯಿಗಳು ಬಾಲಕರಿಗೆ ಮೋಹವನ್ನು ತೋರಿಸದೆ ಬೆಸರಿಕೆಯನ್ನು ಇಟ್ಟು ಓದುವದಕ್ಕೆ ಕಳುಹಿಸುವ ಕರ್ತವ್ಯ ಅವರದಾಗಿದೆ. ಹಾಗಿಲ್ಲದೆ ಮಕ್ಕಳನ್ನು ಮೋಹಿಸಿ ಮಠಕ್ಕೆ ಕಳುಹಿಸದೆ, ಬರಿ ಕಲ್ತು ಮಾಂಪ್ರೆ ಮಾಡಬೇಕೇನು? ಎಂದು ಹೇಳಿ ಸ್ವಕಾರ್ಯಕ್ಕೆ ಇರಿಸಿಕೊಂಡು ದನ, ಎತ್ತು, ಕುರಿ ವಗೈರೆ ಕಾಯುವುದಕ್ಕೆ ಕಳುಹಿಸುವದು ಯಾರಿಗೆ ತೃಪ್ತಿಯಾಗಬಹುದು? ಗ್ರಾಮದಲ್ಲಿ ಇದಕ್ಕೆ ಮತ ತಂತಮ್ಮ ಮಕ್ಕಳನ್ನು ಕನಸ್ಪಪಕ್ಷ ಓದುವುದಕ್ಕೂ, ಬರೆಯುವುದಕ್ಕೂ, ಲೆಕ್ಕ ವಗೈರೆ ಮಾಡುವುದಕ್ಕೂ ಕಲಿಸಬೇಕೆಂಬ ಜ್ಞಾನವು ಎಂದಿಗೆ ಲಭಿಸುವುದೋ ನೋಡೋಣ.

ಈ ಗ್ರಾಮದವರು ತಂತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡುವುದಕ್ಕೆ ಇಷ್ಟು ಉದಾಸೀನರಾಗಿರುವಲ್ಲಿ ಪ್ರಪಂಚವನ್ನು ವಿಷಾ ತಿಳಿಯದೆ ಪಡುವಿನಂತೆ ಇರುವ ಜನಗಳಿಗೂ ಏಳಿಗೆಗೆ ಬರುವಂತೆ ಮಾಡುವ ಏರ್ಪಾಡುಗಳು, ಅಂದರೆ ಪುಸ್ತಕಗಳು, ಸಮಾಜಗಳು, ವಾಚಕಶಾಲೆಗಳು, ಇಂಥವುಗಳನ್ನು ಇವರು ಸ್ಥಾಪಿಸಿ, ಈ ಮೂಲಕ ತಮ್ಮ ಊರು ಗ್ರಾಮಗಳನ್ನು ಅಭಿವೃದ್ಧಿಗೆ ತಂದುಕೊಂಡು ಪ್ರಪಂಚವನ್ನು ತಿಳಿದು ಸದ್ಭಕ್ತರಾಗಿಯೂ ಸಚ್ಚರಿತರಾಗಿಯೂ ಜೀವಿಸಿ ಕೀರ್ತಿಯನ್ನು ಪಡೆಯುವ ಕಾಲ ಯಾವಾಗ ಲಭಿಸುವುದೋ ವಾಚಕರೇ ಊಹಿಸಬಹುದು. ಮುಂದೆಯಾದರೂ ಈ ಗ್ರಾಮದಲ್ಲಿ ಇದಕ್ಕೆ ನಮ್ಮ ನಾಮಧಾರಿಗಳು ವಿದ್ಯಾಭ್ಯಾಸದ ವಿಷಯದಲ್ಲಿ ತುಂಬಾ ಗಮನವಿಟ್ಟು ತಂತಮ್ಮ ಮಕ್ಕಳನ್ನು ಗೈರ್ ಹಾಜರಿ ಇಲ್ಲದ ರೀತಿಯಲ್ಲಿ ಪಾಠಶಾಲೆಗೆ ಕಳುಹಿಸಿಕೊಡುವುದಲ್ಲದೆ, ಗ್ರಾಮದ ಮುಖಂಡರು ಆವಿಯಾಗಿ ಸೇರಿ ಉತ್ಸಾಹದಿಂದ ಗ್ರಾಮಾಭಿವೃದ್ಧಿ ಕಾರ್ಯಗಳನ್ನು ಬೇಗನೇ ಕೈಗೊಂಡು ನಡಿಸುತ್ತಾ ಬರುತ್ತಾರೆಂದು ನಂಬಿ ನಿರೀಕ್ಷಿಸುವ

ವಿದ್ಯಾಭಿಮಾನಿ.

ಎಚ್ ವಿ ಕೆ, ತೀರ್ಥಹಳ್ಳಿ:—ಕಾರಣವನ್ನು ಕಳೆದ ವಾರದ ಪತ್ರಿಕೆಯಲ್ಲಿ ತಿಳಿಸಿರುತ್ತೇವೆ.

ದೇವಿಪ್ರಸಾದ, ಕೇಸನೂರು, ಸಿದ್ದಲಿಂಗಪ್ಪ ಅಣಜಿ, ಭದ್ರಮಾಗರ:—ಇವನ್ನು ಪ್ರಕಟಿಸಲಾರೆವೆಂದು ವಿಷಾದಿಸುವೆವು.

ನಗರ ತಾಲ್ಲೋಕು ವಿಲೇಜ್ ಪೋಸ್ಟ್ ಮ್ಯಾನ್ ಯಡೂರು ವಾಗಣೆ ಬೇಗದಾಳ ಗ್ರಾಮಕ್ಕೆ ಕಾಗದಗಳನ್ನೂ ವರ್ತಮಾನ ಪತ್ರಿಕೆಗಳನ್ನೂ ಸಕಾಲದಲ್ಲಿ ತಲುಪಿಸುತ್ತಿಲ್ಲವೆಂಬ ಆಕ್ಷೇಪಣೆಯುಳ್ಳ ಬಾತ್ಮಿ ತಲುಪಿದೆ.

ಮೂಡಿಗೆರೆ ತಾಲ್ಲೋಕು ನಂದೀಪುರದ ಮ॥ ಕಲ್ಲೇಗೌಡರು ಕಾಶೀಯಾತ್ರೆಯನ್ನು ತೀರಿಸಿಕೊಂಡು ಬಂದು ಎಲ್ಲಾ ಪಂಗಡಗಳ ಪ್ರಜೆಗಳಿಗೂ ಬಹು ಉದಾರವಾಗಿ ಅನ್ನದಾನ ಮಾಡಿ ಭೂರಿ ತೃಪ್ತಿಯನ್ನುಂಟುಮಾಡಿ ಸಂತೋಷ ಪಡಿಸಿದರೆಂದು ಮುಂತಾಗಿ ನಮಗೆ ಒಂದು ಬಾತ್ಮಿ ಬರೆದುಬಂದಿದೆ.

ಶಿವಮೊಗ್ಗಾ ಡಿಸ್ಟ್ರಿಕ್ಟಿಗೆ ಸೇರಿದ ಆಗರದಲ್ಲಿ ಆಸ್ಪತ್ರೆಯೂ, ಪೋಲೀಸ್ ಔಟ್ ಪೋಸ್ಟು ಇಲ್ಲದೆ ಪ್ರಜೆಗಳಿಗೆ ತುಂಬಾ ಅನನುಕೂಲವೂ ಕಷ್ಟನಷ್ಟಗಳೂ ಉಂಟಾಗುತ್ತಿವೆ ಎಂದೂ, ಅವನ್ನು ಇಡುವುದಾಗಿ ಸರ್ಕಾರದವರು ಮಾತು ಕೊಟ್ಟು ಹನ್ನೆರಡು ತಿಂಗಳು ಕಳೆದು ಹೋದರೂ ಇನ್ನೂ ಇಟ್ಟುಕೊಡಲಿಲ್ಲವೆಂದೂ ಒಬ್ಬ ಬಾತ್ಮಿದಾರರು ಬರೆಯುತ್ತಾರೆ.

ಹರಿಹರದಲ್ಲಿ ಮೊಹರಂ ಹಬ್ಬದ 9 ನೇ, 10 ನೇ ದಿನಗಳಲ್ಲಿ ಬಹು ನೇತ್ರಾನಂದಕರವಾದ ಅನೇಕ ತಾಬೂತುಗಳ ಮತ್ತು ಗಿರೋವುಗಳ ಮೆರವಣಿಗೆಗಳು ನಡೆದವೆಂದೂ, ಅಮಲ್ದಾರರೂ ಅ॥ ಕಮಿಷನರ್ ರವರೂ ನೋಡಿ ಸಂತೋಷಪಟ್ಟರೆಂದೂ, ಯಾವ ಗಲಾಟೆಗೂ ಆಸ್ಪದ ವಿಲ್ಲದಂತೆ ಪೋಲೀಸ್ ಉಸ್ತುವಾರಿಯು ಚೆನ್ನಾಗಿತ್ತೆಂದೂ ಒಬ್ಬ ಬಾತ್ಮಿದಾರರು ಬರೆದಿದಾರೆ.

ಕೊಪ್ಪ ತಾಲ್ಲೋಕು ಗುಡ್ಡೆತೋಟ ಗ್ರಾಮದಲ್ಲಿ ಮ॥ ಅನಂತಯ್ಯನವರು ರೀಡಿಂಗ್ ರೂಮಿಗಾಗಿ ಮಂಗಳೂರು ಹೆಂಚು ಹಾಕಿ ಗಾರೆಯಿಂದ ಕಟ್ಟಿದ ದೊಡ್ಡ ಉಪ್ಪರಿಗೆಯುಳ್ಳ ಕಟ್ಟಡವನ್ನು ಉಚಿತವಾಗಿ ಕೊಟ್ಟಿರುತ್ತಾರೆಂದೂ, ಹಿಂದಿನ ಭಾನುವಾರ ರೀಡಿಂಗ್ ರೂಮಿನ ಪ್ರವೇಶೋತ್ಸವವು ಬಹು ಸಂತೋಷದಿಂದ ನಡೆಸಲಾಯಿತೆಂದೂ ನಮಗೆ ಒಂದು ಬಾತ್ಮಿ ತಲುಪಿದೆ.

ಚಿಕ್ಕನಾಯಕನಹಳ್ಳಿ ತಾಲ್ಲೂಕ್ ಅಮಲ್ದಾರರೂ, ಹಂದನಕೆರೆ ಹೋಬಳಿ ಶೇಕ್ದಾರರೂ ಪ್ರಜೆಗಳಿಗೆ ಪ್ರೋತ್ಸಾಹಪಡಿಸಿ ಅನೇಕ ಗ್ರಾಮಾಭಿವೃದ್ಧಿ ಸಂಘಗಳನ್ನು ಮಾಡಿಸುತ್ತಿದಾರೆಂತಲೂ, ಮತಿಘಟ್ಟ ಗ್ರಾಮದಲ್ಲಿ ಪ್ರಜೆಗಳು ಗ್ರಾಮಾಭಿವೃದ್ಧಿ ಕಾರ್ಯಗಳನ್ನು ಮಾಡುತ್ತಿದಾರೆಂದೂ, ಈಚೆಗೆ ಅಲ್ಲಿ ಶುಕ್ರವಾರ ಸಂತೆ ನಡೆಯುವಂತೆ ಏರ್ಪಾಡಾಗಿರುವುದರಿಂದ ಪ್ರಜೆಗಳಿಗೆ ತುಂಬಾ ಸಹಾಯವಾಗಿದೆ ಎಂದೂ ಒಬ್ಬ ಬಾತ್ಮಿದಾರರು ಬರೆಯುತ್ತಾರೆ.

ಚಳ್ಳಕೆರೆ ತಾಲ್ಲೋಕು ಕೆರೆತಿಮ್ಮಲಾಪುರ ಯಾನೆ ಕಾಟೆಂದೇವರಕೋಟೆ ಗ್ರಾಮದಲ್ಲಿ ಸುಮಾರು 27 ತಿಂಗಳಿಂದ ಉಪಾಧ್ಯಾಯರಾಗಿದ್ದು ವಿದ್ಯಾಭ್ಯಾಸವನ್ನು ಮಾಡಿಸುವುದರಲ್ಲಿ ತುಂಬಾ ಉತ್ಸಾಹಶಾಲಿಗಳಾಗಿದ್ದ ಮ॥ ಜಿ. ಶ್ರೀನಿವಾಸರಾಯರಿಗೆ ಅಲ್ಲಿಂದ ವರ್ಗವಾದದ್ದರಿಂದ ಗ್ರಾಮಸ್ಥರೆಲ್ಲಾ ಅವರಿಗಾಗಿ ಒಂದು ಸಂತೋಷಕೂಟವನ್ನು ನಡಿಸಿ ಅವರ ಗುಣಕಥನವನ್ನು ಮಾಡಿ, ಮರ್ಯಾದೆಯಿಂದ ಅವರನ್ನು ಸಾಗಕಳುಹಿಸಿದರೆಂದು ಮುಂತಾಗಿ ಒಂದು ಬಾತ್ಮಿ ನಮಗೆ ತಲುಪಿದೆ.

ಮಾಗಡಿ ತಾಲ್ಲೋಕು ಕುದೂರುಗದ ಹಳ್ಳಿಯಲ್ಲಿ ಮೊಹರಂ ಉತ್ಸವಗಳು ಲಾಗಾಯಿತಿನಿಂದಲೂ ಒಂದು ತೆರದ ಜವಾನನಲ್ಲಿ ಸೇರುತ್ತಿದ್ದವೆಂತಲೂ, ಈ ಸಲ ಅಡ್ಡಿ ಉಂಟಾಗಿ ಜಾತ್ರೆಯಾಗಲಿ ಉತ್ಸವಗಳಾಗಲಿ ಅಂಗಡಿಗಳ ವ್ಯಾಪಾರವಾಗಲಿ ನಡೆಯದೆ ಎಲ್ಲಾ ಚದರಿ ಹೋಯಿತೆಂತಲೂ, ಸರ್ಕಾರದವರು ಅದನ್ನು ತನಿಖೆ ಮಾಡಿ ಇನ್ನು ಮುಂದೆ ಆ ರೀತಿ ಯಾವ ಅಡಚಣೆಯೂ ಆಗದಂತೆ ಏರ್ಪಾಡು ಮಾಡಿಕೊಡಬೇಕೆಂತಲೂ ಒಬ್ಬ ಬಾತ್ಮಿದಾರರು ಆಕ್ಷೇಪಣೆಯುಳ್ಳ ಪತ್ರವನ್ನು ಬರೆದಿರುತ್ತಾರೆ.

ಶಿವಮೊಗ್ಗಾ ಡಿಸ್ಟ್ರಿಕ್ಟ್ ಆರಗದಲ್ಲಿ ದೇವಸ್ಥಾನಗಳಲ್ಲಿ ಪೂಜೆ ಉತ್ಸವಾದಿಗಳು ಕ್ರಮವಾಗಿಯೂ, ತೃಪ್ತಿಕರವಾಗಿಯೂ ನಡೆಯುತ್ತಾ ಇಲ್ಲವೆಂದು ಧರ್ಮಪಕ್ಷಿ ಎಂಬ ಬಾತ್ಮಿದಾರರು ಬರೆಯುತ್ತಾರೆ. ಸ್ಥಳದಲ್ಲಿ ಆಸ್ಥೆಯುಳ್ಳ ಪ್ರಜಾಪ್ರಮುಖರು ಇಂಥಾ ಲೋಪದೋಷಗಳನ್ನು ಮುಜರಾಯಿ ಇಲಾಖೆಗೆ ತಿಳಿಸಿದರೆ ಅವರು ತನಿಖೆಯಿಂದ ಕ್ರಮಪಡಿಸುತ್ತಾರೆ. ಹೀಗೆಯೇ ಆರಗದ ಸ್ಕೂಲಿನ ವಿಷಯದಲ್ಲೂ ವಿದ್ಯಾ ಇಲಾಖೆಯವರಿಗೆ ಮುಖಂಡರು ಬರೆದುಕೊಂಡು ಯಥಾರ್ಥ ವಿದ್ಯಮಾನಗಳನ್ನು ತಿಳಿಸತಕ್ಕದ್ದಾಗಿದೆ.

ತಾಲ್ಲೋಕು ವರ್ತಮಾನಗಳು.

ಚನ್ನರಾಯಪಟ್ಟಣ.—ಚನ್ನರಾಯಪಟ್ಟಣದ ತಾಲ್ಲೋಕಿನಿಂದ ಒಂದು ಖೂನಿ ಮೊಕದ್ದಮೆಯೂ, ಹಾಸನ್ ತಾಲ್ಲೋಕಿನಿಂದ ಎರಡು ಖೂನಿ ಮೊಕದ್ದಮೆಗಳೂ ಕೋರ್ಟಿನಲ್ಲಿ ವಿಚಾರಣೆ ಆದವು. ಮೊದಲನೆಯದರಲ್ಲಿ ಅಪರಾಧಿ ಗುಂಡಮ್ಮನಿಗೆ ಮರಣಾವಧಿ ಸಜಾ ವಿಧಿಸಲ್ಪಟ್ಟಿದೆ; ಉಳಿದ ಮೊಕದ್ದಮೆಗಳಲ್ಲಿ ಆಪರಾಧಿಗಳು ಖುಲಾಸಾದರು.—ನಮ್ಮ ಅಮಲ್ದಾರ್ ಮಿ॥ ಸ್ನೈದರಲ್ಲಿ ಖಾನ್ ರವರು ಯುದ್ಧದ ರಿಲೀಫ್ ಫಂಡಿಗೆ ಈ ತಾಲ್ಲೋಕಿನಲ್ಲಿ ಒಂದೂವರೆ ಸಾವಿರ ರೂಪಾಯಿಗಿಂತಲೂ ಜಾಸ್ತಿಯಾಗಿ ವಸೂಲ್ಮಾಡಿರುತ್ತಾರೆ.—ಅಣತಿ ಹೋಬಳಿಯಲ್ಲಿ ಈಚೆಗೆ ಒಂದು ಖೂನಿ ಮೊಕದ್ದಮೆ ನಡೆದಿರುತ್ತೆ. ನಮ್ಮ ಪೋಲೀಸಿನವರು ಇದನ್ನು ಪತ್ತೆಮಾಡುತ್ತಾರಾಗಿ ನಿರೀಕ್ಷಿಸಲ್ಪಟ್ಟಿದೆ.

ಶಿಡ್ಲಘಟ್ಟ ತಾ॥ ಗಂಜಿಗುಂಟೆ.—ಈ ವಾರದ ಈ ಪ್ರಾಂತ್ಯ ಮೋಡವಾಗುತ್ತ ತುಂತುರು ಹನಿ ಬೀಳುತ್ತ ಇದೆ. ರಾಗಿ ಫಸಲು ಕಟಾವಾಗುತ್ತಿದೆ. ಸುಮಾರು 8 ಆಣೆ ಲಾಗಾಯಿತು 12 ಆಣೆ ವರಿಗೆ ಬೆಳೆಯಾಗಿರುತ್ತೆ.—ಈ ಗ್ರಾಮದಲ್ಲಿ ಸ್ಕೂಲ್ ಸುಮಾರು 30 ವರುಷಗಳ ಲಾಗಾಯ್ತು ಇದ್ದು ಈಗ 1 ವರುಷದ ಕೆಳಗೆ ವಜಾ ಆಯ್ತು. ಈಚೆಗೆ ಅರ್ಜಿಗಳು ಕೊಟ್ಟು ರಿಕಾರ್ಡು ನಡೆಸಿದ್ದರ ಮೇಲೆ ಏಡೆಡ್ ಎಕ್ಸ್‌ಪೆರಿಮೆಂಟಲ್ ಸ್ಕೂಲ್ ಮಾಡಿಕೊಳ್ಳುವಂತೆ ಹುಕುಂ ಬಂದಿರುತ್ತೆ. ಯಾರಾದರೂ ಈ ಊರಿಗೆ ಮಾಸ್ಟರ್ ಕೆಲಸಕ್ಕೆ ಬರತಕ್ಕ ಇರಾದೆಯುಳ್ಳವರು ಬಂದರೆ ಮನೆಯು ಮತ್ತು ಬೇಕಾದ ಅನುಕೂಲಗಳು ಸಹಾ ಏರ್ಪಾಡು ಮಾಡುವೆವಲ್ಲದೆ ಗ್ರಾಮಸ್ಥರು ಕೊಡಬೇಕಾದ ಮೌಲ್ಯಕ್ಕೆ ಧಾನ್ಯರೂಪವಾಗಿಯಾದರೂ ಅಥವಾ ಮಾಬಲಗು ಆದರೂ ಕೊಡುತ್ತೇವೆ.—ಮೊದಲು ಈ ಗ್ರಾಮದಲ್ಲಿ ಪೋಲೀಸ್ ಉಸ್ತುವಾರಿ ಸರಿಯಾಗಿ ನಡೆಯದೆ ಇತ್ತು. ಈಚೆಗೆ ಬಂದಿರುವ ಮ॥ ನಾಗೇಶರಾಯರು ಬಹಳ ಮುತುವರ್ಜಿಯಿಂದ ಸ್ಪೆಟ್ ಕಾವಲ್ ವಗೈರೆ ತನಿಖೆ ಬಹಳ ಚೆನ್ನಾಗಿ ನಡಿಸುತ್ತಾರಲ್ಲದೆ ಅವರೇ ಖುದ್ದು ರಾತ್ರಿ ವೇಳೆ ಗ್ರಾಮ ಗಸ್ತು ಮಾಡುತ್ತಾ ಉಸ್ತುವಾರಿ ನಡಿಸುತ್ತಾ ಇದಾರೆ.—ಈ ಗ್ರಾಮದ ಸೊಸೈಟಿ ಓಪನ್ ಆಗಿ 5 ತಿಂಗಳಾಯ್ತು, 250 ಷೇರುಗಳಾಗಿರುತ್ತೆ. ಮ॥ ರಾ॥ ದೊಡ್ಡಣ್ಣನವರೂ ಮ॥ ಮುನಿಸ್ವಾಮಿ ಮೊದಲಿಯಾರ್ರು ಡಿಪಾಜಿಟ್ ಮಾಡಿರುವದರಿಂದ ಆಡಳಿತ ಚೆನ್ನಾಗಿ ನಡೆಯುತ್ತಿದೆ.

ಶಿವಗಂಗೆ—ಈ ಗ್ರಾಮವು ಸುಮಾರು 300-400 ಮನೆಗಳಿಂದ ಕೂಡಿ ದೇವಸ್ಥಾನಗಳೂ, ಮಠಗಳೂ ಇರುವುದರಿಂದ ದಕ್ಷಿಣ ಕಾಶಿ ಎಂದು ಹೆಸರು ಪಡೆದು ಯಾತ್ರಾಸ್ಥಳವಾಗಿ ಪ್ರಸಿದ್ಧಿಗೊಂಡಿದೆ. ಇಲ್ಲಿಗೆ ಅನೇಕ ಯಾತ್ರಿಕರು ಬರುತ್ತಲೇ ಇರುವರು. ರಾತ್ರಿ ವೇಳೆ ಪೇಟೆಯಲ್ಲಿ ಲಾಂದ್ರಗಳೇ ಇಲ್ಲ. ಲಾಂದ್ರಗಳನ್ನು ಏರ್ಪಾಡುಮಾಡಿಕೊಟ್ಟು ಅನೇಕ ಪ್ರಜೆಗಳಿಗೆ ಸೌಕರ್ಯವನ್ನು ಒದಗಿಸಿ ಕೊಡುತ್ತಾರೆಂದು ಧೃಡವಾಗಿ ನಂಬಿರುತ್ತೇವೆ.—ಈ ಗ್ರಾಮದಲ್ಲಿ ಗ॥ ಕನ್ನಡ ಬಾಯ್ಸ್ ಸ್ಕೂಲೂ, ಇಂಗ್ಲಿಷ್ ನೈಟ್ ಸ್ಕೂಲೂ, ಪೋಸ್ಟ್ ಆಫೀಸೂ, ಕೋಆಪರೇಟಿವ್ ಸೊಸೈಟಿ ಸಂಘವೂ ಸ್ಥಾಪಿಸಲ್ಪಟ್ಟಿರುತ್ತವೆ—ಕನ್ನಡಾ ಬಿ. ಇ. ಸ್ಕೂಲಿಗೆ ಬಂದಿರುವ ಮಾಸ್ಟರು ಮ॥ ಸಿ. ವೆಂಕಟಸುಬ್ಬಯ್ಯನವರು ಬಂದ ನಂತರ ಹಾಲಿ 70 ... ಬಾಲಕರ ಸಂಖ್ಯೆ ಇರುತ್ತೆ. ಇಷ್ಟು ಬಾಲಕರಿಗೂ ಒಬ್ಬರೇ ಪಾಠ ನಡಿಸ... ಕಷ್ಟ. ನಮ್ಮ ಸ್ಕೂಲಿಗೆ ಉಪಾಧ್ಯಾಯರ ಸಂಖ್ಯೆ ಹೆಚ್ಚಿಸಿದರೆ ಅದು ಇನ್ನೂ ಉತ್ತಮ ಸ್ಥಿತಿಗೆ ಬರುವುದರಲ್ಲಿ ಸಂಶಯವಿಲ್ಲ. ಹಾಲೀ ಇದಕ್ಕೆ ಸ್ಕೂಲು ಬಹಳ ... ದಾಗಿರುತ್ತೆ. ಇಂಥಾದ್ದರಲ್ಲಿ ಹೆಚ್ಚು ಮಕ್ಕಳೂ ವಿದ್ಯಾಭ್ಯಾಸಮಾಡುತ್ತಾ ಇರುವರು.—ನಮ್ಮನ್ನು ಪರಿಪಾಲಿಸುತ್ತಿರುವ ಬ್ರಿಟಿಷ್ ಸರ್ಕಾರದವರಿಗೆ ಜಯವಾಗಲೆಂದು ಈ ಗ್ರಾಮದ ಮುಖಂಡರೆಲ್ಲರೂ ಸರ್ವಾಂತರ್ಯಾಮಿಯಾದ ಶ್ರೀವೀರಭದ್ರಸ್ವಾಮಿ ದೇವಸ್ಥಾನದಲ್ಲಿ ಮಂಗಳಾರತಿಯೂ, ರಾಜಾಶೀರ್ವಾದಗಳೂ, ಮಂಗಳ ವಾದ್ಯಗಳೊಡನೆ ದೀಪಾರಾಧನೆಯೂ ನಡಿಸುತ್ತಿರುವರು.—ಈಗ 4-5 ದಿನಗಳಿಂದ ಮೋಡ ಕವಿದುಕೊಂಡು ತುಂತುರು ಹನಿ ಬೀಳುತ್ತಿದೆ.

ಶ್ರೀರಂಗಪಟ್ಟಣ.—ಹಿಮಗಾಲವು ಪ್ರಾರಂಭವಾಗಿ ಮೋಡವು ಕವಿದುಕೊಂಡು ಆಗಾಗ್ಗೆ ಸಣ್ಣ ಹನಿ ಸುರಿಯುವುದು. ಫಸ್ತಿನ ಕೊಯಿಲಿಗೆ ತೊಂದರೆ ಉಂಟಾಗಬಹುದೆಂಬ ಭೀತಿಯು ರೈತಪ್ರಜೆಗಳ ಮನಸ್ಸಿನಲ್ಲಿ ಹುಟ್ಟುತ್ತಿದೆ.—ಪ್ಲೇಗು ಜಾಡ್ಯವು ಅನೇಕರನ್ನು ಆಹುತಿಯಾಗಿ ತೆಗೆದುಕೊಂಡರೂ ಶಮನವಾಗದೆ ಕಾಡುತ್ತಿದೆ. ದೇವರ ಉತ್ಸವಾದಿಗಳನ್ನು ಮಾಡುವುದರ ಜೊತೆಗೆ ಊರು ಬಿಡುವ ಮತ್ತು ಸಾಧ್ಯವಾದಲ್ಲಿ ಇನಾಕ್ಯುಲೇಷನ್ ಮಾಡಿಸಿಕೊಳ್ಳುವ ಯೋಚನೆಯನ್ನೂ ಗ್ರಾಮಸ್ಥರು ಮಾಡಿದರೆ ಕ್ಷೇಮವುಂಟಾದೀತು.—ಸಬ್ ಡಿವಿಜನ್ ಆಫೀಸರಾದ ಮ॥ ಕೃಷ್ಣಸ್ವಾಮಯ್ಯಂಗಾರ್ರವರೂ, ಅಮಲ್ದಾರ್ರಾದ ಮ॥ ವೆಂಕಟ್ರಮಣಪ್ಪನವರೂ ಅಸಮಾಧಾನಕ್ಕೆ ಅವಕಾಶಕೊಡದೆ ಅಧಿಕಾರಮಾಡಲಿಕ್ಕೆ ನಿಸುತ್ತಿರುವುದೂ, ಆಯಾ ಮೊಹಲ್ಲಾ ಮೆಂಬರುಗಳು ಕೊಟ್ಟ ಸಲಹೆ ಪ್ರಕಾರವೇ ರಸ್ತೆ, ಚರಂಡಿ ಮತ್ತು ಬೆಳಕು ಮುಂತಾದ ಅನುಕೂಲಗಳನ್ನು ಪ್ರಜೆಗಳಿಗೆ ಕಲ್ಪಿಸಿಕೊಡಲು ಮಾಡಿದ್ದ ಪಟ್ಟಿಯನ್ನು ಮೀಟಿಂಗಿನಲ್ಲಿ ಒಪ್ಪಿದ್ದೂ ಸರ್ವರ ಮನಸ್ಸಿಗೂ ಆನಂದವನ್ನುಂಟುಮಾಡುತ್ತದೆ.—ಮ್ಯುನ್ಸಿಪಲ್ ಅ॥ ಇನ್ಸ್‌ಪೆಕ್ಟರು ಮ॥ ಸಿ ಶ್ರೀನಿವಾಸಯ್ಯನವರು ಮದ್ದೂರಿಗೆ ವರ್ಗಹೊಟ್ಟಿರುತ್ತಾರೆ. ಇವರು ತುಂಬಾ ಗುಣಾಢ್ಯರು, ಸಹಜವಾದ ಮಿತ್ರರು ಮತ್ತು ನಿರ್ಮೋಹಿಗಳು.—ಪೋಲೀಸಿನವರು ತಮಗೆ ಅಧಿಕಾರವಿಲ್ಲದ ಕೃತ್ಯಗಳಲ್ಲಿ ಪ್ರವೇಶಿಸುವುದನ್ನು ಕಂಡು ಹಿಡಿದು ಜವಾಬ್ದಾರರನ್ನು ಶಿಕ್ಷೆಗೆ ಗುರಿಪಡಿಸುವುದು ಉತ್ತಮ.—ಕೊಡ್ಲಿಪೇಟೆಗೆ ಹೋಗುವ ದಾರಿಯಲ್ಲಿ ಕಟ್ಟುತ್ತಿರುವ ಒಂದು ಸಣ್ಣ ಸೇತುವೆಯು ಮಿ॥ ಗುಲಾಂ ಮಹಮ್ಮದ್ ಮೊಕ್ತೆಯವರ ಕಾಲದಲ್ಲಿ ಪ್ರಾರಂಭವಾದದ್ದು ಇನ್ನೂ ಪೂರೈಸಿರುವುದಿಲ್ಲ.

ಹೊಸಕೋಟೆ ತಾ॥ ಕಲ್ಕುಂಟೆ ಅಗ್ರಹಾರ.—ಈ ಅಗ್ರಹಾರವು ಸುಮಾರು 1,000 ಪ್ರಜಾ ಸಂಖ್ಯೆಯುಳ್ಳದ್ದಾಗಿದೆ. ಕಾಲಕಾಲಕ್ಕೆ ಮಳೆ ಬಂದದ್ದರಿಂದ ಕುಷ್ಕಿ ಮತ್ತು ತರಿ ಬೆಳೆಗಳು ಚೆನ್ನಾಗಿ ಆಗಿದೆ. ರೈತರೆಲ್ಲರೂ ಸಂತೋಷದಿಂದ ಕಟಾವಿನ ಕೆಲಸದಲ್ಲಿ ನಿರತರಾಗಿದಾರೆ.—ಈ ಊರಲ್ಲಿ ನಾಲ್ಕು ಜನ ಉಪಾಧ್ಯಾಯರುಗಳಿಂದ ಕೂಡಿದ ಒಂದು ಕನ್ನಡ ಬಾಯ್ಸ್ ಸ್ಕೂಲು, ಸಂಸ್ಕೃತ ಪಾಠಶಾಲೆ, ಗರ್ಲ್ಸ್ ಸ್ಕೂಲು, ಇಂಗ್ಲಿಷು ಸ್ಕೂಲು ಮತ್ತು ಪೋಸ್ಟ್ ಆಫೀಸು ಸಹ ಇವೆ. ಈಗಿನ ಹೆಡ್ ಮಾಸ್ತರು ಇಲ್ಲಿಗೆ ಬಂದ ಮೇಲೆ ಈ ಸ್ಕೂಲನ್ನು ತುಂಬಾ ಉತ್ತಮ ಸ್ಥಿತಿಗೆ ತಂದು ಗ್ರಾಮಸ್ಥರ ವಿಶ್ವಾಸಕ್ಕೂ, ಸರ್ಕಾರದವರ ಪ್ರೋತ್ಸಾಹಕ್ಕೂ ಪಾತ್ರರಾಗಿರುವದಲ್ಲದೆ ಇವರ ಪ್ರೋತ್ಸಾಹದಿಂದ ಇಲ್ಲಿ ಒಂದು ವಾಚಕಶಾಲೆಯು ಸ್ಥಾಪಿತವಾಗಿ ಅಭಿವೃದ್ಧಿಗೆ ಬರುತ್ತಾ ಇದೆ. ಕೇವಲ ನಿರ್ಗತಿಕರಾದ ಪರಸ್ಥಳದ ವಿದ್ಯಾರ್ಥಿಗಳಿಗೆ ವಾರಗಳನ್ನು ಕೊಡಿಸಿ ಸಹಾಯಮಾಡುತ್ತಲೂ ಇದಾರೆ. ಈಗಿರುವ ಸ್ಕೂಲು ಕಟ್ಟಡವು ಬಾಲಕರಿಗೆ ಸಾಲದೆ ಗಾಳಿ ಬೆಳಕು ಬರುವದಕ್ಕೂ ಸಹ ಅವಕಾಶವಿಲ್ಲದ್ದಾಗಿದೆ. ಸರ್ಕಾರದವರ ಗಮನವು ಶೀಘ್ರದಲ್ಲಿಯೇ ಕೊಡಲ್ಪಡುವದೆಂದು ನಂಬಿದೆ—ಈಗ ಪ್ರಾಪ್ತವಾಗಿರುವ ಘೋರ ಯುದ್ಧದಲ್ಲಿ ನಮ್ಮ ಚಕ್ರವರ್ತಿ ಸಾರ್ವಭೌಮರವರಿಗೆ ಜಯವಾಗುವದಕ್ಕಾಗಿ ಇಲ್ಲಿನ ಮುಖಂಡರಾದ ಮ॥ ದೊರೆರಾಮಸ್ವಾಮಿ ಅಯ್ಯಂಗಾರ್ರು, ಮತ್ತು ಮ॥ ಲಕ್ಷ್ಮೀನರಸಿಂಹಾಚಾರ್ರು ಸಹ ಮುತುವರ್ಜಿಯಿಂದ ಜನಗಳಿಗೆ ಪ್ರೋತ್ಸಾಹಿಸಿ ದೇವಸ್ಥಾನದಲ್ಲಿ ಪೂಜಾದಿಗಳನ್ನು ನಡಿಸುತ್ತಾ ಇದಾರೆ.—ಈ ಗ್ರಾಮವು ಅಗ್ರಹಾರವಾಗಿದ್ದಾಗ್ಯೂ ಬಹಳ ಗಲೀಜಿಗೆ ಆಕರವಾಗಿದೆ. ಇದಕ್ಕಾಗಿ ವಿನಾದಿಸಬೇಕಾಗಿದೆ.

ಚಿತ್ರದುರ್ಗ ತಾ॥ ತುರುವನೂರು.—ಈ ಪ್ರಾಂತ್ಯ ಹಿಂಗಾರು ಮುಂಗಾರು ಮಳೆಗಳು ಸರಿಯಾಗಿ ಬಾರದೆ ಇದ್ದುದರಿಂದ ನವಣೆ, ಹತ್ತಿ ಬೆಳೆಗಳು ಅರ್ಧಭಾಗವೂ ಕೂಡ ಆಗಲಿಲ್ಲ. ಇದರಿಂದ ಜನ ಜಾನುವಾರುಗಳಿಗೆ ದವಸವೂ ಮೇವೂ ಇಲ್ಲದೆ ಬಹಳ ತೊಂದರೆಯಾಗಿರುತ್ತದೆ. ಜನಗಳೆಲ್ಲರೂ ತಮ್ಮ ದನಕರುಗಳನ್ನು ಮೇವಿಗಾಗಿ ರಾಯಣ್ಣನಹಳ್ಳಿ, ಗಾದರಿಗುಡ್ಡ, ಈ ಪ್ರಾಂತ್ಯಗಳಿಗೆ ಹೊಡೆದುಕೊಂಡು ಹೋಗಿರುತ್ತಾರೆ. ಧಾರಣೆವಾಸಿಗಳು ಕ್ಷಾಮಕಾಲವನ್ನೇ ಸೂಚಿಸುತ್ತಾ ಇವೆ. ಇದರಿಂದ ಬಡಬಗ್ಗರು ಜೀವನ ಮಾಡುವುದು ತುಂಬಾ ಕಷ್ಟವಾಗಿದೆ. ಊರಿಗೆ ಅರ್ಧ ಮೈಲಿ ದೂರದಲ್ಲಿರುವ ಭಾವಿಯಲ್ಲಿ ಮಾತ್ರ ನೀರು ಸಮೃದ್ಧಿಯಾಗಿದೆ.—ಈ ಗ್ರಾಮದಲ್ಲಿ ಒಂದು ಬಾಯ್ಸ್ ಸ್ಕೂಲು, ಒಂದು ಗರಲ್ಸ್ ಸ್ಕೂಲು ಇದ್ದವು. ಇವುಗಳ ಜೊತೆಗೆ ಹೊಸದಾಗಿ ಒಂದು ಪಂಚಮರ ಸ್ಕೂಲೂ ಮಂಜೂರಾಗಿ ಇರುತ್ತೆ. ರಾಂಪುರದ ಸ್ಕೂಲಿನಿಂದ ವರ್ಗಹೊಟ್ಟು ಬಂದಿರುವ ಮ॥ ಎಚ್. ಹನುಮಂತಪ್ಪನವರು ಈ ಸ್ಕೂಲನ್ನು ತಾ. 27 ರಲ್ಲಿ ಪ್ರಾರಂಭ ಮಾಡಿದರು. 25 ಜನಗಳ ವರೆಗೂ ಬಾಲಕರು ಹಾಜರಾಯಿ ಇರುತ್ತಾರೆ. ಸ್ಕೂಲ್ ಮಾಡುವುದಕ್ಕೆ ಕಟ್ಟಡವಿಲ್ಲದೆ ಇರುವುದು ತುಂಬಾ ಕೊರತೆಯಾಗಿದೆ. ಯಾರಾದರೂ ಗ್ರಾಮಸ್ಥರು ಒಂದು ಸ್ಕೂಲ್ ಮನೆಯನ್ನು ಶೀಘ್ರವಾಗಿಯೇ ಕಟ್ಟಿಸಿಕೊಟ್ಟಾರೆಂದು ನಿರೀಕ್ಷಿಸುತ್ತೇವೆ.—ಇಲ್ಲಿನ ಗರಲ್ಸ್ ಸ್ಕೂಲು ಸ್ಥಾಪನೆ ಆದ ಲಾಗಾಯ್ತು ಬಾಡಿಗೆ ಮನೆಯಲ್ಲಿಯೇ ಇತ್ತು. ಈಗ 2 ತಿಂಗಳ ಲಾಗಾಯ್ತು ಹಳೆ ಬಾಯ್ಸ್ ಸ್ಕೂಲು ಕಟ್ಟಡದಲ್ಲಿ ಕ್ಲಾಸ್ ಮಾಡುತ್ತಿದಾರೆ. ಕಟ್ಟಡವು ಬಹಳ ನಾದುರಸ್ತಾಗಿದುತ್ತದೆ. ಹೀಗೆ ಇದ್ದರೆ ಕೆಲಸಕ್ಕೆ ಅಡಚಣೆ. ಆದ್ದರಿಂದ ಗೌರ್ನಮೆಂಟಿನವರು ಜಾಗ್ರತೆಯಾಗಿ ಇದನ್ನು ರಿಪೇರಿ ಮಾಡಿಸಿ ಕೊಡುವರೆಂದು ನಂಬಿದೇವೆ.

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸೀದ್, ಬೊಂಬಾಯಿ.

ಏಜೆಂಟ್, ದಿ ಬುಲ್ಕ ಮಾರ್ಟ್, ಮಂಗಳೂರು.

MELLIN'S FOOD

ಮೆಲಿನ್ಸ್ ಆಹಾರವು [4-50]

TRADE MARK. TRADE MARK.

ಕೈಸೋಕದೆ ಮಾಡಿದ. ಮೆಲಿನ್ಸ್ ಆಹಾರದಲ್ಲಿ ಶಿಶುಗಳು ಪುಷ್ಟಿಯಾಗಿ ಬೆಳೆಯುವವು.

ಮೆಲಿನ್ಸ್ ಆಹಾರವನ್ನು ಕ್ರಮಪ್ರಕಾರ ತಯಾರುಮಾಡಿ ಸೇವಿಸಿದರೆ ಹುಟ್ಟಿದ ಶಿಶುಗಳು ಮೊದಲುಗೊಂಡು ಮುದಿಪ್ರಾಯದವರ ತನಕ ಎಲ್ಲರಿಗೂ ಸಂಪೂರ್ಣವಾದ ದೇಹಪುಷ್ಟಿಯನ್ನೂ ವಿಶೇಷವಾದ ಬಲವನ್ನೂ ಕೊಡುತ್ತದೆ.

ಮೆಲಿನ್ಸ್ ಆಹಾರದ ಮಾದ್ರಿ ಬೇಕೆಂದು ಕೇಳಿದರೆ ಕೆಳಗಿನ ವಿಳಾಸದಾರರು ಕಳುಹಿಸುತ್ತಾರೆ:—

Messrs. OAKES & Company, Mount Road, Madras.

ವಿಳಾಸ -ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಪಡೆದಿರುವ (ರಿಜಿಸ್ಟರ್ಡ್) ಶಕುಂತಲೆ ಕೂದಲು ಬೆಳೆಯುವ ಪರಿಮಳ ತೈಲವು.

ಡಬ್ಬಿ 1 ಕ್ಕೆ 36 ವಿಧವಾದ ಇನಾಂ ಸಾಮಾನುಗಳ ಸಮೇತ 15 ತೊಲೆ ಎಣ್ಣೆಯ ಕ್ರಯ ರೂ. 1-0-0.

ಈ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚನ್ನಾಗಿ ಉಜ್ಜಿ ತಲೆಯ ಕೂದಲುಗಳಿಗೆ ಹಚ್ಚಿಕೊಂಡು ಬಾಚಿಕೊಳ್ಳುತ್ತಾ ಬಂದರೆ ಬೆಳೆಯದೆ ಇರುವ ಕೂದಲು ಬೆಳೆಯುವದು. ಒರಟಾಗಿರುವ ಕೂದಲು ಮೃದುವಾಗುವದು. ನೇರಳೆ ಹಣ್ಣಿನಂತೆ ಕಪ್ಪಾಗಿ ಥಳಥಳಿಸುವದು. ದೇಹದಲ್ಲಿ ಇರತಕ್ಕ ಉಷ್ಣವನ್ನು ತೆಗೆಯುವದು. ಕಣ್ಣಿಗೆ ತಂಪು ಕೊಡುವದು. ತಲೆಯಲ್ಲಿರುವ ಹೊಟ್ಟನ್ನು ಸರಿಮಾಡುವದು. ಕಣ್ಣಿನಲ್ಲಿ ಮಂಜನ್ನು ತೆಗೆದು, ಮುಖಕ್ಕೆ ಕಾಂತಿಯನ್ನು ದೇಹಕ್ಕೆ ಆರೋಗ್ಯವನ್ನು ಮನಸ್ಸಿಗೆ ಸಂತೋಷವನ್ನು ಕೆಲಸಕ್ಕೆ ಉಲ್ಲಾಸವನ್ನು ಓದುವವರಿಗೆ ಆಹ್ಲಾದವನ್ನು ಉಂಟುಮಾಡುವದಲ್ಲದೆ ಜವ್ವಾಜಿ, ಪುನುಗು, ಅಂಬರ್, ಕೇಸರ್, ಪಚ್ಚಕರ್ಪೂರ ಮತ್ತು ಜಾಜಿಮಲ್ಲಿಗೆ, ಸಂಪಿಗೆ, ಇರುವಂತಿಗೆ, ಶ್ಯಾವಂತಿಗೆ, ಕ್ಯಾದಿಗೆ, ಗುಲಾಬಿ, ವಿರೂಪಾಕ್ಷಿ, ದವನ, ಮರುಗ, ಇತ್ಯಾದಿ ಪುಷ್ಪಗಳ ವಾಸನೆಯಾಗಿರುವ ಈ ಒಂದು ತೈಲವನ್ನು ತಲೆಯ ಕೂದಲಿಗೆ ಹಚ್ಚಿಕೊಂಡರೆ ಯಾವತ್ತು ದಿವಸಗಳ ವರಿಗೂ ಇದರ ವಾಸನೆ ಹೋಗುವದಿಲ್ಲ. ಈ ತೈಲವು ಹೆಂಗಸರು, ಗಂಡಸರು, ಹುಡುಗರು, ಮಕ್ಕಳು ಪ್ರತಿಒಬ್ಬರಿಗೂ ಬಹಳ ಅನುಕೂಲವಾದದ್ದು. ಪ್ರತಿ ಕುಟುಂಬದಲ್ಲು ಈ ತೈಲವು ಅವಶ್ಯಕವಾಗಿ ಇರಬೇಕಾದದ್ದು.

15 ತೊಲ ತೈಲವುಳ್ಳ ಡಬ್ಬಿ 1 ಕ್ಕೆ ಕ್ರಯ 36 ಇನಾಂ ಸಾಮಾನುಗಳ ಸಮೇತ ರೂ. 1-0-0.

ಇನಾಂ ಸಾಮಾನುಗಳ ತಪ್ಸೀಲು—ಸ್ತ್ರೀಯರು ತಲೆಯಲ್ಲಿ ಧರಿಸುವ ಕೊಂಡೆಪುಷ್ಪ 1, ದಂತದ ಬಾಚಣಿಗೆ 1, ಮುಖ ನೋಡಿಕೊಳ್ಳುವ ಕನ್ನಡಿ 1, ಜರ್ಮನ್ ಸಿಲ್ವರ್ ಕಾಡಿಗೆ ಭರಣಿ 1, ಅಕ್ಷರು ಬಿಲ್ಲೆ 1, ವಾಸನೆಯುಳ್ಳ ಸೋಪು 1, ತಾಂಬೂಲಪಾತ್ರೆ ೨೨, ಕೊಂಡೆ ಗಿಣಿಗಳು 6, ಕಾರ್ಪೋರೇಷನ್ ಬ್ರಷ್ 1, ಜವಾಜಿ ಡಬ್ಬಿ 1. ಈ ತರಹ 36 ಇನಾಂ ಕೊಡಲ್ಪಡುತ್ತೆ.

ನಮ್ಮ ವಿಳಾಸ:—ಎಸ್. ಎಮ್. ಸ್ವಾಮಿ ಅಂಡ್ ಕಂಪೆನಿ,

[250-1] ನಂ. 44, ನಂಬುಳಯ್ಯರ ಬೀದಿ, ಮದರಾಸು.

ವೃತ್ತಾಂತ ಪತ್ರಿಕೆ.

—:0:—

ಶಕೆ ೧೮೩೬ ನೇ ಆನಂದ ಡಿಸೆಂಬರ್ ತಾ. ೧೭ ನೇ ಗುರುವಾರ

ಗವರ್ನಮೆಂಟಿನವರು ಮಾಸಪತ್ರಿಕೆಗಳನ್ನು ನಡಿಸುವುದು.

ನಮ್ಮ ಸರ್ಕಾರದವರು ಮೈಸೂರು ಸಂಪದಭ್ಯುದಯ ಸಮಾಜದ ಪರವಾಗಿ ನಾಳೆ ಜನವರಿ ಲಾಗಾಯತು ಒಂದು ಪತ್ರಿಕೆಯನ್ನು ಪ್ರತಿ ತಿಂಗಳಲ್ಲೂ ಹೊರಡಿಸಬೇಕೆಂದು ತೀರ್ಮಾನ ಮಾಡಿ ಅದಕ್ಕೋಸ್ಕರ ಪ್ರತ್ಯೇಕವಾದ ಹುಕುಂ ಕೊಟ್ಟಿದಾರೆ. ಈ ಮಾಸಪತ್ರಿಕೆಯ ಆಶಯವೇನೆಂದರೆ, ಸಂಸ್ಥಾನದ ಸಂಪತ್ತನ್ನು ಅಭಿವೃದ್ಧಿಗೆ ತರುವ ವಿಚಾರಗಳಲ್ಲಿ ಖಂಡಿತವಾದ ಮಾರ್ಗಗಳನ್ನು ಕ್ರಮವಾಗಿ ಪ್ರಕಟಿಸುತ್ತಾ ಬರುವುದು; ವಿದ್ಯಾಭ್ಯಾಸ, ವ್ಯವಸಾಯ, ಕಸಬುಗಳು, ವಾಣಿಜ್ಯ, ಈ ವಿಚಾರಗಳನ್ನು ಅಭಿವೃದ್ಧಿಗೆ ತರುವ ಕಾರ್ಯಗಳನ್ನು ಅನ್ಯೋನ್ಯ ಹೊಂದಿಕೆಯಿಂದ ನಡಿಸುವುದು; ಮತ್ತು ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕುಗಳಲ್ಲಿ ಅಭಿವೃದ್ಧಿಗಾಗಿ ಏರ್ಪಟ್ಟಿರುವಂಥಾ ಪಂಚಾಯತಿಗಳು (ಪ್ರೋಗ್ರೆಸ್ ಕಮಿಟಿಗಳು) ಮಾಡತಕ್ಕ ಕಾರ್ಯಗಳನ್ನು ಕ್ರಮವಾಗಿ ಪ್ರಕಟಿಸುತ್ತಾ ಬರುವುದು. ಇದೇ ಈ ಮಾಸಪತ್ರಿಕೆಯ ಉದ್ದೇಶ ಕಾರ್ಯಗಳು. ಸಂಪದಭಿವೃದ್ಧಿ ಸಮಾಜದ ಸೆಕ್ರೆಟರಿಯವರು ಈ ಮಾಸಪತ್ರಿಕೆಯನ್ನು ಪ್ರಕಟಿಸುವುದಕ್ಕೆ ಅವಶ್ಯವಾದ ಸಿಬ್ಬಂದಿ ಮೊದಲಾದ ಖರ್ಚುಪಟ್ಟಿಯನ್ನು ತಯಾರುಮಾಡಿ ಗವರ್ನಮೆಂಟಿಗೆ ಕಳುಹಿಸಿದ್ದರು. ಸರ್ಕಾರದವರು ಈ ಸಮಾಜದ ಬಜೆಟ್ಟಿನಲ್ಲಿ "ಉಪನ್ಯಾಸಕರಿಗಾಗಿಯೂ, ವಿಷಯಗಳನ್ನು ಪ್ರಕಟಿಸುವುದಕ್ಕಾಗಿಯೂ" ಎಂಬ ಭಾಗಕ್ಕೆ ವಿನಿಯೋಗಿಸಬಹುದೆಂದು ತೆಗೆದಿಟ್ಟಿರುವ 21,000 ರೂಪಾಯಿನಲ್ಲಿ ಮೇಲ್ಕಂಡ ಮಾಸಪತ್ರಿಕೆಯನ್ನು ಹೊರಡಿಸುವ ಖರ್ಚು ಮಾಡಿಕೊಳ್ಳತಕ್ಕದ್ದೆಂದು ಸೆಕ್ರೆಟರಿಯವರ ಸಿಫಾರಸನ್ನು ಸ್ಯಾಂಕ್ಷನ್ ಮಾಡಿರುತ್ತಾರೆ.

ಈ ಮಾಸಪತ್ರಿಕೆಗಾಗಿ ಸೆಕ್ರೆಟರಿಯವರು ಮಾಡಿರುವ ಏರ್ಪಾಡುಗಳನ್ನೂ, ಸೂಚಿಸಿರುವ ಸಲಹೆಗಳನ್ನೂ ನೋಡಿ ತಿಳಿಯಬೇಕೆಂದು ನಮಗೆ ಕುತೂಹಲವುಂಟಾಗಿದೆ. ಅದನ್ನು ನೋಡಿದಲ್ಲದೆ ಸರ್ಕಾರದ ಮೇಲ್ಕಂಡ ಹುಕುಮನ್ನು ಪುರಸ್ಕಾರವಾಗಿ ತಿಳಿಯುವುದಕ್ಕೂ, ಅದರ ಸಾಧಕಬಾಧಕಗಳನ್ನು ಹುಡುಕಿ, ತೃಪ್ತಿಕರವಾಗಿ ಚರ್ಚೆಮಾಡುವುದಕ್ಕೂ ಅವಕಾಶವಿಲ್ಲ. ಈ ಹುಕುಮಿನಿಂದ ಮೇಲ್ಕಂಡ ಮಾಸಪತ್ರಿಕೆಯು ಇಂಗ್ಲಿಷಿನಲ್ಲೋ ಅಥವಾ ಕನ್ನಡದಲ್ಲೋ, ಇಲ್ಲವೇ ಆ ಎರಡು ಭಾಷೆಗಳಲ್ಲೂ ಪ್ರಕಟವಾಗುವುದೋ, ಅದು ಸಚಿತ್ರವಾಗಿರುವುದೋ ಅಲ್ಲವೋ, ಅದರಲ್ಲಿ ಎಷ್ಟು ಪುಟಗಳಿರುವವೋ, ಒಂದೊಂದೂ ಗೋಚರವಾಗುವುದಿಲ್ಲ. ಇದರೆ ಅದು 1915 ನೇ ಜನವರಿ 1 ನೆಯ ತಾರೀಖಿನಿಂದಲೇ ಪ್ರಕಟವಾಗಬೇಕೆಂದು ವಿಧಾಯಕವಾಗಿರುವ ಕಾರಣ ಮೇಲ್ಕಂಡ ಸಂಗತಿಗಳನ್ನು ಕಾಣಿಸಿ ಒಂದು ಹಸ್ತಪತ್ರವನ್ನು (ಪ್ರಾಸ್ಪೆಕ್ಟಸ್) ಇಷ್ಟರಲ್ಲೇ ಬಟವಾಡೆ ಮಾಡಬಹುದೆಂದು ನಿರೀಕ್ಷಿಸುತ್ತೇವೆ: ಅಂಗಕ್ಕೂ ಈಗ ಸಮಯವಿಲ್ಲವೆಂದೇ ಹೇಳಬೇಕಾಗಿದೆ.

ಗವರ್ನಮೆಂಟಿನವರ ಮೇಲ್ಕಂಡ ಹುಕುಮಿನಲ್ಲಿ ಎಂಬ ಉದ್ದೇಶವು ಶ್ಲಾಘ್ಯವಾಗಿರುತ್ತದೆಂದು ನಾವು ಸಂಪೂರ್ಣವಾಗಿ ಒಪ್ಪಿಕೊಳ್ಳುವೆವು. ಆದರೆ ಮೈಸೂರು ಸಂಸ್ಥಾನದಲ್ಲಿ ಅಭಿವೃದ್ಧಿಗೆ ಸಹಕಾರಿಗಳಾದ "ಉಚಿತವಾದ ಅಭಿಪ್ರಾಯಗಳನ್ನು" ಚೆನ್ನಾಗಿ ಬಲ್ಲವರ್ಯಾರಿದಾರೆ? ಅವು ಗವರ್ನಮೆಂಟಿನವರ ಅಭಿಪ್ರಾಯಗಳೇನು? ಯಾಗಾದರೆ ಅಭಿವೃದ್ಧಿಗೆ ಸಾಧಕಗಳಾದ ವಿಚಾರಗಳನ್ನು ವಿಮರ್ಶೆಮಾಡುವುದಕ್ಕೆ ಅವರಿಗೆ ಸಮಯವಿದೆಯೋ ಎಂಬ ಸಂಶಯವುಂಟಾಗುತ್ತದೆ. ಅಥವಾ ಗವರ್ನಮೆಂಟಿಗೆ ಸಹಾಯಕರಾಗಿ ನೇಮಿಸಲ್ಪಟ್ಟಿರುವ ಅಧಿಕಾರಿಗಳ ಅಭಿಪ್ರಾಯಗಳಾಗಿಯೋ, ಇಲ್ಲವೇ ಸಂಪದಭಿವೃದ್ಧಿ ಸಮಾಜದ ಅಭಿಮತಗಳಾಗಿಯೋ ಇರಬಹುದಲ್ಲವೇ? ಒಂದು ವೇಳೆ ಎಡಿಟರಾಗಿ ನಿಲ್ಲತಕ್ಕ ಪುರುಷನು ಅಭಿವೃದ್ಧಿಯ ಸಾಧನಗಳಲ್ಲಿ ತುಂಬಾ ಪರಿಶ್ರಮವುಳ್ಳವನಾಗಿದ್ದರೂ ಇರಬಹುದು. ಆತನು ನಮ್ಮ ಸೀಮೆಯ ಅಭಿವೃದ್ಧಿಗೆ ಸಾಧಕವಾದ ವಿಚಾರಗಳನ್ನೆಲ್ಲಾ ಪ್ರತ್ಯೇಕವಾಗಿ ದೀರ್ಘಕಾಲ ಚರ್ಚಿಸಿ ನಿಷ್ಕರ್ಷೆ ಮಾಡಿಕೊಂಡಿರುತ್ತಾನೆಯೋ ಏನೋ ತಿಳಿಯಲಿಲ್ಲ.

ನಮ್ಮ ಗವರ್ನಮೆಂಟಿನಲ್ಲಿ ಬೇರೆ ಬೇರೆ ಇಲಾಖೆಗಳು ಒಳ್ಳೆ ತರವಾಗಿ ಕಾರ್ಯಗಳನ್ನು ನಡಿಸುವುದು ಈಗ ಅಷ್ಟೇನೂ ಹಿತಕರವಾಗಿರುವಂತೆ ಕಾಣುವುದಿಲ್ಲ. ಈ ವಿಚಾರವನ್ನು ಬೇಗನೆ ಸರಿಪಡಿಸಿಕೊಂಡರಾಗಬೇಕೆಂದು ನಮಗೆ ತೋರುತ್ತದೆ. ಪ್ರತಿ ಒಂದು ಇಲಾಖೆಯಲ್ಲೂ ಈಗ ತನ್ನಷ್ಟಕ್ಕೆ ತಾನೇ ಪ್ರತ್ಯೇಕವಾದದ್ದೆಂಬ ಭಾವನೆಯೂ, ತನಗೆ ತೋರಿದಂತೆ ಕಾರ್ಯನಡಿಸುವುದೂ, ತನ್ನ ವರ್ತನೆಯಿಂದ ಇತರ ಇಲಾಖೆಗಳ ಅನುಕೂಲ ಪ್ರತಿಕೂಲಗಳನ್ನು ಅಷ್ಟಾಗಿ ಲಕ್ಷ್ಯಮಾಡದೆ ಇರುವುದೂ ವಾಡಿಕೆಯಲ್ಲಿ ಇರುವುದೆಂಬ ಶಂಕೆಯುಂಟಾಗಿದೆ. ಈ ಮಾಸಪತ್ರಿಕೆಯು ಇಂಥಾ ಕೆಡುಕನ್ನು ತಪ್ಪಿಸುವ ಪಕ್ಷಕ್ಕೆ, ಅದರ ಕಾರ್ಯವು ಸಾರ್ಥಕವಾದೀತು. ಆದರೆ ಎಡಿಟರವರ ಮಾತಿಗೆ ಯಾರೂ ಎಲ್ಲಿ ಕಿವಿಗೊಡದೆ ಹೋಗುವರೋ ಎಂಬ ಅನುಮಾನವು ಹುಟ್ಟಿ ನಮ್ಮನ್ನು ಬಾಧಿಸುತ್ತದೆ. ಆದರ ಅಭಿಪ್ರಾಯಗಳನ್ನು ಒತ್ತಟ್ಟಿಗಿಟ್ಟು ಪ್ರತಿ ಒಂದು ಇಲಾಖೆಯೂ ಎಂದಿನಂತೆ ತನ್ನ ಮಾರ್ಗವನ್ನೇ ಹಿಡಿದು ಹೋದೀತೆಂದು ತೋರುವುದು.

ಈಗ ಹೊರಡತಕ್ಕ ಮಾಸಪತ್ರಿಕೆಯು ಯಾರಿಗೋಸ್ಕರ? ಸರ್ಕಾರಿ ಸಂಬಳಗಾರರಿಗೋ, ವಿದ್ಯಾವಂತರಿಗೋ, ವರ್ತಕರಿಗೋ, ರೈತರಿಗೋ, ಮಠದಲ್ಲಿ ಓದುವ ಬಾಲಕರಿಗೋ, ಗೊತ್ತಾಗಲಿಲ್ಲ. ಅದೇನು ಬಿಟ್ಟಿ ಹಂಚುವಂಥಾದ್ದೋ? ಅಥವಾ ಕ್ರಯವಿಟ್ಟು ಮಾರತಕ್ಕದ್ದೋ? ಅದರಲ್ಲಿ ಬರೀ ಮೀಟಿಂಗುಗಳ ವಿಷಯಗಳೂ, ಅವುಗಳ ತೀರ್ಮಾನಗಳೂ ಪ್ರಕಟವಾಗುವವೋ, ಇಲ್ಲವೇ ನಮ್ಮ ಸಂಸ್ಥಾನದ ಶ್ರೇಯಸ್ಸಿಗೆ ಸಾಧಕಗಳಾದ ಉಚಿತವಾದ ಸಂಗತಿಗಳು ಪ್ರಚಾರವಾಗುವವೋ? ನಮಗೆ ತಿಳಿದಿರುವ ಮಟ್ಟಿಗೂ ಸರ್ಕಾರದವರು ವರ್ತಮಾನ ಪತ್ರಿಕೆಗಳ ಪದವಿಯನ್ನು ವಹಿಸಿಕೊಂಡು ನಡಿಸಿದ ಯಾವ ಪತ್ರಿಕೆಗಳೂ ತಲೆಯೆತ್ತಲಿಲ್ಲ. ಸಂಪದಭಿವೃದ್ಧಿಯು ಒಂದು ಮುಖವುಳ್ಳದ್ದಲ್ಲ; ಅದಕ್ಕೆ ಅನೇಕ ಮುಖಗಳುಂಟು. ಹೀಗೆ ನಾನಾ ಮುಖಗಳ ಅಭಿಪ್ರಾಯಗಳನ್ನು ಎಡಿಟರಾಗಿ ನಿಂತ ಒಬ್ಬ ಮನುಷ್ಯನು ಧಾರಾಳವಾಗಿ ಹೇಳುವುದು ಪ್ರಯಾಸ; ಆತನ ಕೈಕಾಲುಗಳು ಕಟ್ಟಿಹೋಗುವವು. ಆದಕಾರಣ ಆತನು ಬಹು ಜನಗಳನ್ನು ತೃಪ್ತಿಪಡಿಸಲಾರದೆ ಹೋಗುತ್ತಾನೆ. ಇದಕ್ಕೋಸ್ಕರ ಆತನು ಯಾರ ನಿಂದೆಗೂ ಗುರಿಯಾಗದಂತೆ ಎಲ್ಲರಿಗೂ ಪರಿಶ್ರಮವಿರುವಂಥಾ ಸ್ವತಸ್ಸಿದ್ಧವಾದ ವಿಚಾರಗಳನ್ನು ಪ್ರಕಟಮಾಡುತ್ತಾ ಬರುವನು.

ಈ ಹೊಸ ಮಾಸಪತ್ರಿಕೆಗೆ ನಾವು ಸುಸ್ವಾಗತವನ್ನು ಬಯಸಲು ಸಿದ್ಧರಾಗಿದ್ದೇವೆ. ಅದು ಯಾವ ರೀತಿ ಪ್ರಜೆಗಳಿಗೆ ಒಂದು ಉಪಕಾರಿಯಾಗುವುದೋ ಎಂದು ಉತ್ಸಾಹದಿಂದ ನೋಡುತ್ತಾ ಬರುವೆವು. ಆದರೆ ಇದರಿಂದ ಆಗುವ ಫಲ ಪ್ರಯೋಜನಾದಿಗಳ ವಿಷಯದಲ್ಲಿ ನಮಗೇನೋ ತುಂಬಾ ಸಂಶಯವುಂಟು.

ದೀರ್ಘಾಯುಷ್ಯವು ಅಪೇಕ್ಷಿಸಲ್ಪಡತಕ್ಕುದೋ?

ಈ ಲೋಕದಲ್ಲಿ ಕೆಲವರು ಹುಟ್ಟಿದ ಮೇಲೆ ಇಪ್ಪತ್ತು ಮೂವತ್ತು ವರುಷಗಳು ಮಾತ್ರ ಬದುಕಿದ್ದು ಮೃತಪಡುತ್ತಾರೆ. ಬೇರೆ ಕೆಲವರು ತೊಂಭತ್ತು ಅಥವಾ ನೂರು ವರುಷಗಳು ಬದುಕಿರುತ್ತಾರೆ. ದೀರ್ಘಕಾಲ ಬದುಕುವದು ದೇವರ ಅನುಗ್ರಹವೆಂತಲೂ ಅಲ್ಪಾಯುಷ್ಯದಲ್ಲಿ ಗತಿಸಿಹೋಗುವದು ದುರದೃಷ್ಟವೆಂತಲೂ ಭಾವಿಸಬೇಕೋ?

ದೀರ್ಘಾಯುಷ್ಯವು ದೇವರ ಅನುಗ್ರಹವೇ? ಅಲ್ಪಾಯುಷ್ಯವು ದುರದೃಷ್ಟವೇ? ಎಂದು ವಿಚಾರಿಸುವದಕ್ಕಿಂತಲೂ ದೇವರು ನಮಗೆ ನಿಯಮಿಸಿರುವ ಆಯುಷ್ಕಾಲವನ್ನು ಹೇಗೆ ವ್ಯಯಮಾಡುತ್ತೇವೆ? ಎಂದು ವಿಚಾರಿಸುವದು ಪ್ರಯೋಜನಕರವಾಗಿದೆ. ನಮ್ಮ ಆಯುಷ್ಯವು ದೀರ್ಘವಾದುದೇ ಆಗಲಿ ಅಲ್ಪವಾದುದೇ ಆಗಲಿ ಅದು ಅತ್ಯಮೂಲ್ಯವಾದುದೆಂಬುದಕ್ಕೆ ಸಂದೇಹವಿಲ್ಲ. ಅದನ್ನು ಅಲ್ಪವೆಣಿಸದೆ ಅದನ್ನು ವೃದ್ಧಿಗೊಳಿಸಿಕೊಳ್ಳುವದಕ್ಕೆ ನಮ್ಮಿಂದ ಏನೇನು ಸಾಧ್ಯವೋ ಅವನ್ನೆಲ್ಲಾ ನಾವು ಮಾಡುತ್ತಾ ಬರಬೇಕು. ಮಿತಾಹಾರ, ವಿಶ್ರಾಂತಿ, ವ್ಯಾಯಾಮ ಮುಂತಾದ ಆರೋಗ್ಯಸೂತ್ರಗಳನ್ನು ಅನುಸರಿಸಿ ನಡೆಯುವದು ನಮಗೆ ನಾವು ಮಾಡಿಕೊಳ್ಳಬೇಕಾದ ಕರ್ತವ್ಯವಾಗಿದೆ. ಮತ್ತು ಮದ್ಯಪಾನ, ವಿಷಯಲಂಪಟತ್ವ, ದೀರ್ಘದ್ವೇಷ ಇವುಗಳು ನಮ್ಮನ್ನು ಆಕ್ರಮಿಸಿಕೊಂಡು ಆಳತೊಡಗಿದವೆಂದರೆ ಆರೋಗ್ಯವು ಕೆಟ್ಟು ಅಕಾಲಮೃತ್ಯು ಪ್ರಾಪ್ತಿಸಬಹುದು. ಆದರೆ ಒಬ್ಬನು ಆರೋಗ್ಯಸೂತ್ರಗಳನ್ನು ಕ್ರಮವಾಗಿ ಕೈಕೊಂಡು ದುವ್ಯಸನಗಳನ್ನು ದೂರಮಾಡಿದರೂ ಮೃತ್ಯುವು ವೇಗವಾಗಿಯೋ ಅಥವಾ ನಿಧಾನವಾಗಿಯೋ ಅವನನ್ನು ಹಿಡಿದೇಹಿಡಿಯುವದು. ಇದಲ್ಲದೆ ಪ್ಲೇಗ್ ಕಾಲರಾ ಮುಂತಾದ ಸಾಂಕ್ರಾಮಿಕ ರೋಗಗಳೂ ಯುದ್ಧಗಳೂ ಜಲಪ್ರಳಯಗಳೂ ಬೆಂಕಿಯೂ ಅನೇಕ ವೇಳೆ ಅಕಸ್ಮಾತ್ತಾಗಿ ನೂರಾರು ಮಂದಿಯನ್ನು ನಾಶಮಾಡುವದುಂಟು. ಈ ಅನಿಶ್ಚಿತವಾದ ಪ್ರಾಣವನ್ನು ಎಷ್ಟೋ ಜೋಕೆಯಿಂದ ಪೋಷಿಸಿ ಕಾಪಾಡಿದರೂ ಮರಣವು ಸಂಭವಿಸದೆ ಇರಲಾರದು. ಆದ್ದರಿಂದ ದೇವರು ನಮಗೆ ಕೊಟ್ಟಿರುವಷ್ಟು ಕಾಲವೂ ಆರೋಗ್ಯವಾಗಿರುವದಕ್ಕೆ ತಕ್ಕ ಯತ್ನಗಳನ್ನು ಮಾಡುತ್ತಿರುವದು ನ್ಯಾಯವಾಗಿದ್ದರೂ ದೀರ್ಘಾಯುಷ್ಯವು ನಮಗೆ ಲಭಿಸಬೇಕು, ಇದಕ್ಕಾಗಿ ನಾನೇನು ಮಾಡಲಿ? ಎಂದು ಚಿಂತಿಸುವದಕ್ಕಿಂತ ಈ ಅಲ್ಪಾಯುಷ್ಯವನ್ನು ಹೇಗೆ ವ್ಯಯಮಾಡುವದು ನ್ಯಾಯ? ಆಯುಷ್ಯವು ಲೋಕದಲ್ಲಿ ಸಿಗಬಹುದಾದ ಐಶ್ವರ್ಯ, ಅಧಿಕಾರ, ಕೀರ್ತಿ, ಸುಖಗಳಿಗಿಂತ ಅತಿ ಅಮೂಲ್ಯವಾದದ್ದು; ಇವುಗಳೆಲ್ಲಾ ಹೋಗುತ್ತವೆ ಮತ್ತು ಬರುತ್ತವೆ; ಆದರೆ ಹೋದ ಪ್ರಾಣವು ಪುನಃ ಬರುವದೇ ಇಲ್ಲ. ಎಲ್ಲವೂ ಇದ್ದರೂ ಪ್ರಾಣ ಇಲ್ಲದಿದ್ದರೆ ಅವೆಲ್ಲಾ ಏತಕ್ಕೆ? ಒಬ್ಬ ಮನುಷ್ಯನು ಲೋಕವನ್ನೆಲ್ಲಾ ಸಂಪಾದಿಸಿಕೊಂಡರೂ ಅವನ ಪ್ರಾಣ ನಷ್ಟಪಟ್ಟರೆ ಅವನಿಗೆ ಪ್ರಯೋಜನವೇನು? ಅಥವಾ ಒಬ್ಬನು ತನ್ನ ಪ್ರಾಣಕ್ಕೆ ಏನು ಈಡುಕೊಟ್ಟಾನು? ಮತ್ತು ಈ ದೇಹದೊಂದಿಗೆ ಜೀವಂತರಾಗಿ ಈ ಲೋಕದಲ್ಲಿ ಎಷ್ಟು ಕಾಲವಿರುವೆವೋ? ತಿಳಿಯದು. ನಾನು ದೀರ್ಘಕಾಲ ಬದುಕುತ್ತೇನೆಂದು ಯಾರೂ ನಿಶ್ಚಯಿಸಲಾರರು? ಮೃತ್ಯು ಬಾಲಕರನ್ನೂ ಯೌವನಸ್ಥರನ್ನೂ ವೃದ್ಧರನ್ನೂ ಬಿಟ್ಟು ಮುದುಕರನ್ನೂ ರೋಗಿಗಳನ್ನೂ ಮಾತ್ರ ಹಿಡಿಯುತ್ತದೆಂತ ಹೇಳುವದಕ್ಕೆ ಅನುಭವವು ವಿರೋಧವಾಗಿದೆ.

ಹಾಗಾದರೆ ಕೊಂಚಕಾಲಕ್ಕೆ ಮಾತ್ರ ನಮ್ಮದಾಗಿದ್ದು ಆ ಮೇಲೆ ನಮ್ಮಿಂದ ಖಂಡಿತವಾಗಿ ತೆಗೆದುಕೊಳ್ಳಲ್ಪಡುವ ಈ ಅಮೂಲ್ಯವಾದ ವಸ್ತುವನ್ನು ನಾವು ಹೇಗೆ ಪ್ರಯೋಗಿಸಿ ಸಾಧ್ಯವಾದಷ್ಟು ಪ್ರಯೋಜನವನ್ನೂ ಲಾಭವನ್ನೂ ಪಡೆಯೋಣ? ಯಾವ ವ್ಯಾಪಾರ ಅಥವಾ ಉದ್ಯೋಗಕ್ಕೆ ಹಾಕಿದರೆ ನಾವು ಕೃತಕೃತ್ಯರಾದೇವು? ಹೀಗೆಂದು ಯೋಚಿಸುವದೇ ಅತಿ ಪ್ರಯೋಜನಕಾರಿಯಾಗಿರುವದು.

ಈ ಸಂದರ್ಭದಲ್ಲಿ ನಾವು ಲೋಕಕ್ಕೆ ಯಾತಕ್ಕೆ ಬಂದಿದ್ದೇವೆ? ನಾವಿಲ್ಲಿರುವದರ ಉದ್ದೇಶವೇನು? ಏನು ಸಂಪಾದಿಸಬೇಕೆಂಬುದು ನಮ್ಮ ಮುಖ್ಯ ಗುರಿ? ಎಂದು ವಿಚಾರಿಸುವದು ಆಗತ್ಯ. ಧನಾರ್ಜನೆ, ವಿಷಯಸುಖ, ಅಧಿಕಾರಾಪೇಕ್ಷೆ ಮುಂತಾದವುಗಳು ವಿಚಾರಪರರ ಲಕ್ಷ್ಯಕ್ಕೆ ದೀರ್ಘಕಾಲ ಜೀವಮಾನದ ಉದ್ದಿಷ್ಟಗಳಾಗಿ ನಿಲ್ಲಲಾರವು. ಹಾಗಾದರೆ ಮತ್ತೇನದು? ನಾವು ಯಾವದನ್ನು ಲಕ್ಷಿಸಿ ಅದನ್ನು ಸಂಪಾದಿಸಿಕೊಳ್ಳುವದಕ್ಕಾಗಿ ಈ ಬಾಳನ್ನು ವ್ಯಯಮಾಡಬೇಕು?

ಇಹಲೋಕದ ಬಾಳು ನಿತ್ಯವಲ್ಲವಾದರೂ ಅದು ನಿತ್ಯವಾದ ಪರಲೋಕದ ಅಥವಾ ನರಕದ ಬಾಳಿಗೆ ನಮ್ಮನ್ನು ಸಿದ್ಧಪಡಿಸಿಕೊಳ್ಳುವದಕ್ಕಾಗಿ ನಿಯಮಿತವಾದ ಅವಧಿಯಾಗಿದೆ. ದೇವರು ನಮಗೆ ಈ ಆಯುಷ್ಯವನ್ನು ನೇಮಿಸಿ ಅದರ ಕೊನೆಗೆ ತಕ್ಕಷ್ಟು ಅನುಕೂಲವಾದ ಸಮಯವನ್ನು ಗೊತ್ತುಮಾಡಿ—ನಮಗೇನು ಬೇಕೋ ಈ ಸ್ವಲ್ಪ ಕಾಲದಲ್ಲಿ ಅದನ್ನು ಆರಿಸಿಕೊಳ್ಳಿರಿ. ಮತ್ತು ನೀವು ಆರಿಸಿಕೊಂಡದ್ದನ್ನು ಸಂಪಾದಿಸಿಕೊಳ್ಳುವದಕ್ಕೆ ಮಡಿಯಿರಿ; ಪ್ರಯತ್ನಮಾಡಿರಿ ಎಂದು ಹೇಳಿದ್ದಾನೆ. ಆದ್ದರಿಂದ ನಮ್ಮ ಈ ಲೋಕದ ಬಾಳನ್ನು ನಾವು ಒಪ್ಪಿ ಆರಿಸಿಕೊಳ್ಳುವ ಪರಲೋಕಕ್ಕೋ ಅಥವಾ ನರಕಕ್ಕೋ "ಉಮೇದುವಾರಿ" ಎಂತ ಭಾವಿಸಬೇಕು. ಈ ಉಮೇದುವಾರಿಯ ಕಾಲವನ್ನು ದೇವರು ಯಾರ್ಯಾರಿಗೆ ಎಷ್ಟೆಷ್ಟಿರಬೇಕೆಂದು ತನ್ನ ದಿವ್ಯ ಜ್ಞಾನದಿಂದ ನಿಶ್ಚಯಿಸಿ ನೇಮಿಸುತ್ತಾನೆ. ಅದು ನಮ್ಮ ಕೆಲಸವಲ್ಲ. ನಮ್ಮ ಕೆಲಸವು ಪರಿಷ್ಕಾರವಾಗಿ ಗೊತ್ತಾಯಿತು. ಅದೇನಂದರೆ:—ದೇವರ ಸಾನ್ನಿಧ್ಯದಲ್ಲಿ ನಿತ್ಯವಾಗಿ ಇರಬೇಕೆಂಬ ಅಭಿಲಾಷೆ ನಮಗಿದೆಯೋ? ಎಂದು ನಿಶ್ಚಯಿಸಿಕೊಂಡು ಆ ಪವಿತ್ರಸ್ಥಿತಿಗೆ ನಮ್ಮನ್ನು ಸಿದ್ಧಮಾಡಿಕೊಳ್ಳುವದೇ. ದೇವರು ಉಚಿತವಾಗಿ ಸಕಲರಿಗೂ ಇಹಲೋಕದ ಬಾಳುವೆಯನ್ನು ಅವಧಿಯಾಗಿ ಕೊಟ್ಟಿರುವ ಪ್ರಕಾರವಾಗಿಯೇ ಪರಲೋಕದ ನಿತ್ಯವಾದ ಸುಖವನ್ನು ತನ್ನ ಸನ್ನಿಧಾನದಲ್ಲಿ ಪ್ರತಿಯೊಬ್ಬನಿಗೂ ಉಚಿತವಾಗಿ ಕ್ರಯವಿಲ್ಲದೆ ಕೊಡಬೇಕೆಂದು ನಿಶ್ಚಯಿಸಿದ್ದಾನೆ. ಆದರೆ ಅದು ನನಗೆ ಬೇಕೆಂದು ಕಾಂಕ್ಷೆಪಟ್ಟು ತನ್ನ ಅಭಿಲಾಷೆಯನ್ನು ಅದಕ್ಕೆ ತಕ್ಕ ನಡತೆಯಿಂದ ತೋರಿಸಿ ಅದನ್ನು ಸಂಪಾದಿಕೊಂಡು ಅನುಭವಿಸುವದಕ್ಕೆ ತ್ಯಜಿಸಬೇಕಾದ ಪಾಪವೆಲ್ಲವನ್ನು ಬಿಟ್ಟು ಮಾಡಬೇಕಾದದ್ದನ್ನೆಲ್ಲಾ ಮಾಡುವದಕ್ಕೆ ಪ್ರಯತ್ನಿಸುವದೇ ಈ ಅಲ್ಪಾಯುಷ್ಯದಲ್ಲಿ ನಮ್ಮ ಕರ್ತವ್ಯವಾಗಿದೆ.

ಆದರೆ ಮಾಡಬೇಕಾದ ಕರ್ತವ್ಯವನ್ನು ಮಾಡುವದಕ್ಕೂ [illegible] ಪಾಪವನ್ನು ವಿಸರ್ಜಿಸುವದಕ್ಕೂ ಮುಂಚೆ ಪಾಪಪರಿಹಾರವೂ ಪವಿತ್ರವಾದ ಮನಸ್ಸೂ ನಮಗೆ ಬೇಕಾಗಿವೆ. ಯಾಕೆಂದರೆ ಪಾಪವೆಂಬ ರೋಗವು ನಮ್ಮೆಲ್ಲರ ಮೇಲೆ ವ್ಯಾಪಿಸಿ ಪವಿತ್ರತ್ವವನ್ನು ಅಭಿಲಾಷೆಪಟ್ಟು ನಡಿಸದ ಹಾಗೆ ನಮ್ಮನ್ನೂ, ನಮ್ಮ ಸ್ವಭಾವ ಮನಸ್ಸುಗಳನ್ನೂ ಕೆಡಿಸಿಬಿಟ್ಟಿದೆ. ಪಾಪವೆಂಬ ರೋಗವು ನಮ್ಮನ್ನು ವಂಚಿಸಿ ಕೆಟ್ಟದ್ದನ್ನೇ ಮಾಡುವದಕ್ಕೆ ನಮ್ಮ ಸ್ವಭಾವವು ಮನಸ್ಸುಗೊಳ್ಳುವಂತೆ ಮಾಡಿದೆ. ನಾವು ನಮ್ಮ ಜೀವಮಾನದ ಉದ್ದೇಶವನ್ನು ಕೈಕೊಂಡು ದೇವರನ್ನೂ ಪರಲೋಕದ ದಾರಿಯನ್ನೂ ಹಿಡಿದು ನಡೆಯದ ಹಾಗೆ ನಮ್ಮನ್ನು ಬಂಧಿಸಿಬಿಟ್ಟಿದೆ. ಇದರಿಂದ ಬಿಡುಗಡೆಯನ್ನು ಸಂಪಾದಿಸುವದು ನಮಗೆ ಮೊಟ್ಟಮೊದಲು ಅಗತ್ಯವಾಯಿತು.

ಯುದ್ಧದ ಸಮಾಚಾರಗಳು.

ಬ್ರಿಟಿಷರಿಗೆ ಸಮುದ್ರಯುದ್ಧದಲ್ಲಿ ಜಯ.

ಸರ್ವಿಯಾದವರ ದೊಡ್ಡ ಜಯಪ್ರದ.

ಅಮೇರಿಕದ ದಕ್ಷಿಣಕ್ಕೆ ಪೂರ್ವ ಭಾಗದಲ್ಲಿ ಜರ್ಮನಿಯವರ ನಾಲ್ಕು ಯುದ್ಧದ ಹಡಗುಗಳನ್ನು ನಾಶಪಡಿಸಿದ ಸುದ್ದಿಯೇ ಈ ವಾರದ ವರ್ತಮಾನಗಳಲ್ಲೆಲ್ಲಾ ಪ್ರಮುಖ್ಯವಾದದ್ದಾಗಿದೆ. ಅದು ಡಿಸೆಂಬರ್ ತಾ. 8 ರಲ್ಲಿ ನಡೆದದ್ದು. ಎರಡನೆಯದಾಗಿ ಸರ್ವಿಯಾದವರು ಆಸ್ಟ್ರಿಯಾದವರನ್ನು ಪೂರಾ ಸೋಲಿಸಿ ದೊಡ್ಡ ಜಯಪ್ರದವನ್ನು ಹೊಂದಿದರು. ಇವರಲ್ಲಿ ಆಸ್ಟ್ರಿಯಾದವರು ಅನೇಕ ಸೈನ್ಯಗಳನ್ನು ಕಳೆದುಕೊಂಡು ಹಿಮ್ಮೆಟ್ಟಿ ಓಡಿಸಲ್ಪಟ್ಟರು. ಈಗ ಮೊದಲು ಸಮುದ್ರಯುದ್ಧವನ್ನು ವಿವರಿಸುತ್ತೇವೆ.

ಸಮುದ್ರದ ಮೇಲೆ

ಕೆಲವು ವಾರಗಳ ಹಿಂದೆ ದಕ್ಷಿಣ ಅಮೇರಿಕದ ಸಮುದ್ರತೀರದಿಂದಾಚೆ ಪೆಸಿಫಿಕ್ ಸಾಗರದಲ್ಲಿ ಒಂದು ಸಣ್ಣ ಸಮುದ್ರ ಯುದ್ಧವಾಯಿತೆಂದೂ, ಅದರಲ್ಲಿ ಬ್ರಿಟಿಷರ ಎರಡು ಹಡಗುಗಳು ಮುಳುಗಿಹೋದವೆಂದೂ ವಾಚಕರಿಗೆ ಜ್ಞಾಪಕವಿರಬಹುದು. ಅಲ್ಲಿಂದೀಚೆಗೆ ಬ್ರಿಟಿಷ್ ಮತ್ತು ಜಪಾನ್ ಹಡಗುಗಳು ಆ ಪ್ರಾಂತ್ಯದಲ್ಲೆಲ್ಲಾ ಜರ್ಮನಿಯವರ ಹಡಗುಗಳನ್ನು ಹುಡುಕುತ್ತಲೇ ಇದ್ದವು. ಡಿಸೆಂಬರ್ ತಾ. 8 ರಲ್ಲಿ ದಕ್ಷಿಣ ಅಮೇರಿಕದ ಪೂರ್ವದಿಕ್ಕಿನಲ್ಲಿರುವ ಫಾಕ್ಲೆಂಡ್ ದ್ವೀಪಗಳ ಬಳಿಯಲ್ಲಿ ಜರ್ಮನಿಯವರ ಹಡಗುಗಳನ್ನು ಕಂಡರು. ಅವರಲ್ಲಿ ಐದು ಹಡಗುಗಳಿದ್ದವು. ಬ್ರಿಟಿಷ್ ಹಡಗುಗಳು ಈ ಯುದ್ಧದಲ್ಲಿ ಎಷ್ಟಿದ್ದವೋ ಹೇಳಿ ಇಲ್ಲ. ನಾಲ್ಕು ಹಡಗುಗಳ ಹೆಸರುಗಳು ಮಾತ್ರ ತಿಳಿಸಲಾಗಿದೆ. ಯುದ್ಧ ಪ್ರಾರಂಭವಾದ ಮೂರು ಗಂಟೆ ಹೊತ್ತಿನೊಳಗಾಗಿ ಜರ್ಮನಿಯವರ ಅತ್ಯಂತ ದೊಡ್ಡ ಹಡಗನ್ನು ಮುಳುಗಿಸಿಬಿಟ್ಟರು. ಬಳಿಕ ಎರಡು ಗಂಟೆಯಲ್ಲಿ ಎರಡನೇ ಹಡಗು ನಾಶಮಾಡಲ್ಪಟ್ಟಿತು. ಇನ್ನು ಸ್ವಲ್ಪ ಹೊತ್ತಿನಲ್ಲೇ ಮೂರನೇ ಹಡಗನ್ನು ಮುಳುಗಿಸಿದರು. ಉಳಿದ ಎರಡು ಹಡಗುಗಳು ತಪ್ಪಿಸಿಕೊಂಡು ಹೋಗಬೇಕೆಂದು ಪ್ರಯತ್ನಪಟ್ಟವು. ಬ್ರಿಟಿಷರ ಹಡಗುಗಳು ನುಗ್ಗಿಹೋಗಿ ಆ ಪೈಕಿ ಒಂದನ್ನು ಮುಳುಗಿಸಿದವು. ಅಲ್ಲಿಗೆ ನಾಲ್ಕು ಹಡಗುಗಳು ನಾಶವಾದವು. ಐದನೇ ಹಡಗು ಇದುವರೆಗೆ ಇನ್ನೂ ಸಿಕ್ಕಿರುವುದಿಲ್ಲ. ಈ ಯುದ್ಧದಲ್ಲಿ ಬ್ರಿಟಿಷ್ ಹಡಗುಗಳಿಗೆ ವಿಶೇಷ ನಷ್ಟವೇನೂ ಆದಂತೆ ತಿಳಿದುಬಂದಿಲ್ಲ. ಏಳು ಮಂದಿ ಕೊಲ್ಲಲ್ಪಟ್ಟರೆಂದೂ, ನಾಲ್ವರು ಗಾಯಪಟ್ಟರೆಂದೂ ಹೇಳಲಾಗಿದೆ. ಇನ್ನು ಮುಂದೆ ಈ ಸಂಖ್ಯೆಗಳು ವ್ಯತ್ಯಾಸವಾಗಬಹುದು. ಇದು ಬಹು ಸಂತೋಷಕರವಾದ ಜಯಪ್ರದ. ಇದರಿಂದ ಜರ್ಮನಿಯವರ ಭಾರೀ ಯುದ್ಧದ ಹಡಗುಗಳೆಲ್ಲಾ ನಾಶವಾದಂತಾಯಿತು. ಇದಲ್ಲದೆ ಜರ್ಮನಿಯ ಹಡಗುಗಳಿಗೋಸ್ಕರ ಕಲ್ಲಿದ್ದಲನ್ನು ಸಾಗಿಸಿಕೊಂಡುಹೋಗುತ್ತಿದ್ದ ಎರಡು ಹಡಗುಗಳನ್ನು ಹಿಡಿದದ್ದಾಯಿತು. ಜರ್ಮನಿಯ ನಾವಿಕರಲ್ಲಿ ಎಷ್ಟು ಮಂದಿಯನ್ನು ಬದುಕಿಸಿದರೋ ಗೊತ್ತಾಗಲಿಲ್ಲ. ಇನ್ನೂ ಅಲ್ಲಲ್ಲಿ ಸಮುದ್ರ ಮೇಲೆ ಜರ್ಮನಿಯವರ ಮೂರು ಯುದ್ಧದ ಹಡಗುಗಳೂ, ಶಿಪಂಗಿಸಹಿತವಾದ ಎರಡು ವ್ಯಾಪಾರ ಹಡಗುಗಳೂ ಇರುತ್ತವೆ. ಆದರೆ ಇವುಗಳಿಂದ ಅಷ್ಟೇನೂ ಕೇಡುಂಟಾಗದೆಂದು ಊಹಿಸಲ್ಪಟ್ಟಿದೆ. ಈ ಪೈಕಿ ಒಂದರ ಮೇಲೆ ಬ್ರಿಟಿಷರ ಹಡಗು ನುಗ್ಗಿಹೋಗಿ ಹಿಡಿದು ಮುಳುಗಿಸಿದೆ ಎಂದು ವರ್ತಮಾನ ಬಂದಿದೆ. ಆದರೆ ಜರ್ಮನಿಯ ತೀರಪಟ್ಟಣಗಳಲ್ಲಿ ಅನೇಕ ಹಡಗುಗಳಿರುವವು.

ಬಾಲ್ಟಿಕ್ ಕಡಲಿನಲ್ಲಿ ಜರ್ಮನಿಯವರು ಹಾಕಿದ್ದ ಸಿಡಿಮದ್ದಿನ ಗುಂಡಿಗೆ ಜರ್ಮನಿಯ ಒಂದು ಯುದ್ಧದ ಹಡಗು ಬಡಿದು ನಾಶವಾಯಿತೆಂದು ಸಮಾಚಾರ ಬಂದಿದೆ.

ಜರ್ಮನಿಯವರು ಸ್ವೀಡನ್ ದೇಶದ ಸಮುದ್ರ ತೀರದಿಂದ ಆಚೆ ಫಿನ್ಲೆಂಡ್ ಕೊಲ್ಲಿಯೊಳಗೆ ಸಿಡಿಮದ್ದಿನ ಗುಂಡುಗಳನ್ನು ಹಾಕುತ್ತವಾರೆ. ಈ ಗುಂಡುಗಳಿಗೆ ಬಡಿದು ಎರಡು ಸ್ವೀಡನ್ ದೇಶದ ವ್ಯಾಪಾರ ಹಡಗುಗಳು ಮುಳುಗಿಹೋದವು. ಒಂದರಲ್ಲಿ 20 ಮಂದಿ ಸಮುದ್ರದ ಪಾಲಾದರು.

ಸರ್ವಿಯಾದಲ್ಲಿ.

ಆಸ್ಟ್ರಿಯಾದವರು ಅಪಾರವಾದ ಸೈನ್ಯಗಳನ್ನು ಕೂಡಿಸಿಕೊಂಡು ಸರ್ವಿಯಾದೊಳಕ್ಕೆ ನುಗ್ಗಿಹೋಗಿದ್ದರು. ಆದರೆ ಸರ್ವಿಯಾದವರು ಅವರ ಮೇಲೆ ದೊಡ್ಡ ಯುದ್ಧವನ್ನು ಮಾಡಿ ಸೋಲಿಸಿ, ಅವರಲ್ಲಿದ್ದ 100 ಮಂದಿ ಮುಖ್ಯ ದಾರರನ್ನೂ 20,000 ಸೈನಿಕರನ್ನೂ ಕೈಸೆರೆ ಹಿಡಿದುಕೊಂಡರು. ಇದಲ್ಲದೆ ಅವರು ಆಸ್ಟ್ರಿಯಾದವರಿಂದ 70 ಸಾಧಾರಣ ಫಿರಂಗಿಗಳನ್ನೂ, 50 ಕ್ವಿಕ್ ಫೈರಿಂಗ್ ಫಿರಂಗಿಗಳನ್ನೂ ಕಿತ್ತು ವಶಮಾಡಿಕೊಂಡಿದಾರೆ. ಆಸ್ಟ್ರಿಯಾದವರು ಸೋತು ಚೆಲ್ಲಾಪಿಲ್ಲಿಯಾಗಿ ಹಿಮ್ಮೆಟ್ಟಿಹೋಗುತ್ತಿರುವರು. ಸರ್ವಿಯಾದವರು ಅವರನ್ನು ಓಡಿಸಿಕೊಂಡು ಹೋಗಿದಾರೆ. ಆಸ್ಟ್ರಿಯಾದವರು ತಮಗೆ ಸೋಲಾಯಿತೆಂದು ಒಪ್ಪಿಕೊಂಡರು. ಈ ಯುದ್ಧದಲ್ಲಿ ರಷ್ಯಾದವರು ಬಂದು ಸರ್ವಿಯಾದವರಿಗೆ ಸಹಾಯಮಾಡಿದರೆಂದು ವರ್ತಮಾನವಿದೆ. ರಷ್ಯದ ಉತ್ತರ ಭಾಗದಲ್ಲಿರುವ ಆರ್ಕೇಂಜಲ್ ಎಂಬ ತೀರಪಟ್ಟಣದಿಂದ ರಷ್ಯಾ ರಾಜ್ಯದ ಐದು ರೆಜಿಮೆಂಟಿನ ಸೈನಿಕರು ಹಡಗುಗಳ ಮೇಲೆ ಹೊರಟು ಗ್ರೇಟ್ ಬ್ರಿಟನ್ ಸುತ್ತುಹಾಕಿಕೊಂಡು ಮೆಡಿಟರೇನಿಯನ್ ಕಡಲಿಗೆ ಬಂದು ನೊವೆಂಬರ್ ತಾ. 28 ರಲ್ಲಿ ಏಡ್ರಿಯಾಟಿಕ್ ಕಡಲಿನ ಒಂದು ತೀರಪಟ್ಟಣದಲ್ಲಿ ಹಡಗು ಇಳಿದು ಅಲ್ಲಿಂದ ಹೋಗಿ ಸರ್ವಿಯಾದವರಿಗೆ ಸಹಾಯಮಾಡಿದರೆಂದು ಹೇಳುತ್ತಾರೆ. ಇದು ಸರ್ಕಾರಿ ವರ್ತಮಾನವಲ್ಲದಿದ್ದರೂ ನಿಜವಾಗಿರಬಹುದೆಂದು ಕಾಣುತ್ತದೆ. ಇದು ಹ್ಯಾಗಾದರೂ ಇರಲಿ; ಸರ್ವಿಯಾದವರು ತಮ್ಮ ದೇಶವನ್ನು ಸಂರಕ್ಷಣೆಮಾಡಿಕೊಳ್ಳುವುದಕ್ಕೆ ಬಹು ಸ್ತೋತ್ರಾರ್ಹವಾದ ಶೌರ್ಯವನ್ನೂ ಪರಾಕ್ರಮವನ್ನೂ ತೋರಿಸುತ್ತಿರುವರು. ಅವರು ಇಷ್ಟರಲ್ಲೇ ಆಸ್ಟ್ರಿಯಾದವರನ್ನೆಲ್ಲಾ ತಮ್ಮ ದೇಶದಿಂದ ಹೊರಕ್ಕೆ ಹೊರಡಿಸಿಬಿಡುವಂತಾಗಲೆಂದು ಹಾರೈಸುತ್ತೇವೆ.

ಸರ್ವಿಯಾದವರು ಒಂದು ಕಠಿಣವಾದ ಯುದ್ಧವನ್ನು ಮಾಡಿ ಆಸ್ಟ್ರಿಯಾದವರನ್ನು ಸೋಲಿಸಿ, ಮತ್ತೆ ತಮ್ಮ ರಾಜಧಾನಿಯಾದ ಬೆಲ್‌ಗ್ರೇಡ್ ಪಟ್ಟಣವನ್ನು ಅವರಿಂದ ಕಿತ್ತು ಸ್ವಾಧೀನಪಡಿಸಿಕೊಂಡರೆಂದು ವರ್ತಮಾನ ಬಂದಿದೆ.

ಫ್ರಾನ್ಸ್ ಮತ್ತು ಬೆಲ್ಜಿಯಮ್.

ಫ್ರಾನ್ಸಿನಲ್ಲೂ ಬೆಲ್ಜಿಯಮ್‌ನಲ್ಲೂ ಉಗ್ರಕ್ಕೂ ಯುದ್ಧಗಳು ನಡೆಯುತ್ತಲೇ ಇವೆ ಎಂದು ಹೇಳಬಹುದು. ನಮ್ಮವರಿಗೆ ಹಲವು ಕಡೆಗಳಲ್ಲಿ ಅನುಕೂಲ

...ಅತ್ಯಂತ ಪಶ್ಚಿಮ ಭಾಗದ ಕೊನೆಯಲ್ಲಿ ಅಂದರೆ ಆಲ್ಸೆಸ್ಸಿನಲ್ಲಿ ... ಒಂದು ರೈಲ್ವೆ ಸ್ಟೇಷನನ್ನು ಕಿತ್ತು ಆಕ್ರಮಿಸಿಕೊಂಡರು. ಫ್ರಾನ್ಸಿನ ... ಭಾಗದಲ್ಲಿ ಅವರು ಎರಡು ಗ್ರಾಮಗಳನ್ನು ಆಕ್ರಮಿಸಿಕೊಂಡಿದ್ದಾರೆ. ... ದಾರಗಳಿಂದಲೂ ಬಹಳ ಕಠಿಣವಾದ ಕದನಗಳು ನಡೆಯುತ್ತಾ ... ಬ್ರಿಟಿಷರೂ ಕೂಡ ಬೆಲ್ಜಿಯಮ್‌ನಲ್ಲಿ ಮುಂದರಿಸಿ ನುಗ್ಗಿ ಹೋಗಿರು... ಅಧಿಕ ವಿಶೇಷವಾದ ಸಂಗತಿಗಳೇನೂ ನಮಗೆ ತಿಳಿದುಬಂದಿಲ್ಲ. ಬಹುಶಾ ... ಫ್ರೆಂಚರೂ ಮುಂದೆ ನುಗ್ಗಿ ಹೋಗುವುದಕ್ಕೆ ಸನ್ನಾಹಮಾಡಿಕೊಳ್ಳು... ತ್ತಾರೆ. ಈವರೆಗೆ ಇದುವರೆಗೆ ಎಲ್ಲಾ ಅನುಕೂಲವಾಗುವಂತ ... ಕಾಣಬರುವವು.

...ಹವಾ ಬಹಳ ಥಂಡಿಯಾಗಿದೆ; ಸೈನಿಕರಲ್ಲಿ ಅನೇಕರಿಗೆ ಶೀತ ...ವೂ; ಅಂದರೆ, ಚಳಿಯ ದೆಸೆಯಿಂದ ಕಾಲುಗಳೆಲ್ಲಾ ಬಿಗಿ ಹಿಡಿಯು... ಕ್ರಮೇಣ ಅಲ್ಲಲ್ಲಿ ಹುಣ್ಣುಗಳಾಗಿ ಬಾಧೆಪಡಿಸುತ್ತವೆ.

ರಷ್ಯಾ, ಜರ್ಮನಿ ಮತ್ತು ಆಸ್ಟ್ರಿಯಾ.

...ಬರುವ ತಂತಿವರ್ತಮಾನಗಳು ಈ ಭಾಗದ ಸ್ಥಿತಿಗತಿಯನ್ನು ಸ್ಪಷ್ಟವಾಗಿ ತಿಳಿಸುವುದಿಲ್ಲ. ಅನೇಕ ಸ್ಥಳಗಳಲ್ಲಿ ಬಹು ಭಯಂಕರವೂ ... ಅದ ಕೆಲವು ಯುದ್ಧಗಳು ನಡೆದಿವೆ. ಒಂದು ಕಾಡ್ಯದಲ್ಲಿ ಜರ್ಮನಿಯ ... ರಷ್ಯಾದವರ ಸಾಲುಗಳನ್ನು ಭೇದಿಸಿ ನುಗ್ಗಿ ಹೋದರು; ಆದರೆ ರಷ್ಯಾದ ... ಒಟ್ಟು ಸೇರಿ ಜರ್ಮನಿಯವರನ್ನು ಸುತ್ತಿಕಟ್ಟಿಬಿಟ್ಟರು. ಜರ್ಮನಿಯ ... ಸೈನ್ಯ ಬಹು ವಿಶೇಷವಾಗಿದ್ದದ್ದನ್ನು ತಿಳಿದು ತಮ್ಮ ಸೈನ್ಯಗಳನ್ನು ... ಹಿಂದಕ್ಕೆ ಕರಸಿಕೊಂಡರು. ಬಳಿಕ ಜರ್ಮನಿಯವರು ಹೊಸ ಸೈನ್ಯಗ... ತರಿಸಿಕೊಂಡಾಗ್ಯೂ ರಷ್ಯಾದವರನ್ನು ಸೋಲಿಸುವಷ್ಟು ಸಮರ್ಥರಾಗಲಿಲ್ಲ. ...ಯವರು ಪ್ರಾಣದ ಮೇಲೆ ಲಕ್ಷ್ಯವಿಡದೆ ಅತ್ಯಂತ ಶೌರ್ಯದಿಂದ ಶತ್ರು... ಮೇಲೆ ಬಿದ್ದು ಯುದ್ಧ ಮಾಡಿದ್ದರಲ್ಲಿ 1,00,000 ಸೈನಿಕರನ್ನು ಕಳೆದು ...ಕೊಂಡರು ಎಂದು ಹೇಳಲಾಗಿದೆ. ರಷ್ಯಾದವರು ತಮ್ಮ ಸಾಲುಗಳನ್ನು ಬಲಪಡಿಸಿಕೊ... ...ಕ್ಕಿಸ್ಕಿ ಆ ಕಾಡ್ಯದಿಂದ ಸ್ವಲ್ಪ ಹಿಂದಕ್ಕೆ ಹೋದರು. ಇವರಿಗೆ ...ಯುವುದಕ್ಕೆ ಕಾರಣಗಳೇನೂ ಕಾಣುವುದಿಲ್ಲ.

ಆಸ್ಟ್ರಿಯಾದಲ್ಲಿ ರಷ್ಯಾದವರು ಕ್ರಾಕೊ ಪಟ್ಟಣವನ್ನು ಕುರಿತು ನುಗ್ಗಿ ...ತ್ತಾರೆ. ಇವರು ಆಸ್ಟ್ರಿಯಾದವರನ್ನೂ ಜರ್ಮನಿಯವರನ್ನೂ ಸೋ... ಅನೇಕ ಫಿರಂಗಿಗಳನ್ನು ಕಿತ್ತುಕೊಂಡರು, ಅನೇಕ ಸೈನಿಕರನ್ನು ಕೈಸೆರೆ ...ಡಿದುಕೊಂಡರು.

ಅಲ್ಲಿನ ವಿದ್ಯಮಾನಗಳು ಪರಿಷ್ಕಾರವಾಗಿ ಗೊತ್ತಾಗುವುದಿಲ್ಲ. ಆದರೂ ...ಕಾರ್ಯಗಳಲ್ಲಿ ರಷ್ಯಾದವರು ತಮ್ಮ ಸ್ಥಾನಗಳನ್ನು ಶತ್ರುಗಳಿಗೆ ಬಿಟ್ಟುಕೊ... ...ಬಲವಾಗಿ ಕಾಪಾಡಿಕೊಂಡಿರುತ್ತಾರಲ್ಲದೆ ಕೆಲವು ಕಡೆ ಅವರು ಮುಂದಕ್ಕೆ ನುಗ್ಗಿ ಹೋಗಿದ್ದಾರೆಂದು ಹೇಳಬಹುದು.

ಟರ್ಕಿ

ಟರ್ಕಿಯು ಇದುವರೆಗೆ ಏನೂ ಮಾಡಲಾರದೆ ಹೋಗಿದೆ. ಆದರ ಬಾದು ... ಆಗಿರುವುದು. ಆರ್ಮೀನಿಯದಲ್ಲಿ ರಷ್ಯಾದವರು ಮುಂದರಿಸಿ ನುಗ್ಗಿ ಹೋಗುತ್ತಾ, ಕೆಲವು ಪ್ರಮುಖವಾದ ಸ್ಥಳಗಳನ್ನು ಗೆದ್ದು ಸ್ವಾಧೀನಪಡಿಸಿಕೊಂಡಿರುತ್ತಾರೆ.

ಬ್ರಿಟಿಷರು ಬೇಗಬೇಗನೆ ಯೂಫ್ರೆಟೀಸ್ ನದಿಯ ಮೇಲಕ್ಕೆ ಹೋಗುತ್ತಿರು... ...ಶಿಯನ್ ಕೊಲ್ಲಿಯ ತೀರದಲ್ಲಿರುವ ಫಾವೋ ಎಂಬ ನಗರವನ್ನು ಬ್ರಿಟಿಷರು ...ಗೆದ್ದು ಸ್ವಾಧೀನಪಡಿಸಿಕೊಂಡಿದ್ದಾರಷ್ಟೆ. ಅವರು ಅಲ್ಲಿಂದ ಮುಂದೆ ನುಗ್ಗಿ ಹೋಗಿ ಬಾಸ್ರಾ ನಗರವನ್ನು ಆಕ್ರಮಿಸಿಕೊಂಡರು. ಈಗ ಅವರು ಕುರ್ನಾ ಎಂಬ ಪಟ್ಟಣಕ್ಕೆ ಹೋಗಿದ್ದಾರೆ. ಅಲ್ಲಿ ಒಂದು ಕದನವಾಯಿತು. ಅದರಲ್ಲಿ ಟರ್ಕಿಯವರ ಕಡೆ ಅನೇಕರು ಕೊಲ್ಲಲ್ಪಟ್ಟರು, ಹಲವರಿಗೆ ಗಾಯಗಳಾದವು. ಬ್ರಿಟಿಷರು ಎರಡು ಫಿರಂಗಿಗಳ ಸಮೇತ 700 ಮಂದಿಯನ್ನು ಕೈಸೆರೆಹಿಡಿದುಕೊಂಡಿದ್ದಾರೆ. ಇವಾದ ಮೇಲೆ ಆ ಸ್ಥಳವನ್ನು ಸಂರಕ್ಷಣೆ ಮಾಡಿಕೊಳ್ಳುತ್ತಿದ್ದ ಟರ್ಕಿ ಸೈನ್ಯದ ಅಧಿಪತಿಯು ಬ್ರಿಟಿಷರಿಗೆ ಶರಣಾಗತನಾದನು. ಗಾಯಪಟ್ಟವರಲ್ಲದೆ 1,101 ಸೈನಿಕರು ಕೈಸೆರೆಯಾದರು. ಮತ್ತು ಒಂಭತ್ತು ಫಿರಂಗಿಗಳೂ ಸಿಕ್ಕಿದವು. ಕುರ್ನಾ ಎಂಬುವುದು ಒಂದು ಕೋಟೆ ಸ್ಥಳ. ಇದು ಯೂಫ್ರೆಟೀಸ್, ಟೈಗ್ರಿಸ್ ನದಿಗಳು ಸಂಗಮವಾಗುವ ಕಡೆ ಇದೆ. ಈ ನಗರವು ಬಹಳ ಪ್ರಾಮುಖ್ಯವಾದದ್ದೆಂದು ಎಣಿಸಲ್ಪಟ್ಟಿರುತ್ತೆ. ಹಿಂದೂಸ್ಥಾನದ ಸೈನ್ಯಗಳು ಅಲ್ಲಿ ವಿಶೇಷವಾಗಿ ಹೋರಾಡಿದವು. ಗಾಯಪಟ್ಟವರನ್ನು ಅಲ್ಲಿಂದ ಬೊಂಬಾಯಿಗೆ ಸಾಗಿಸಿಕೊಂಡು ಬಂದಿದ್ದಾರೆ.

ಕಪ್ಪು ಕಡಲಿನಲ್ಲಿ ಟರ್ಕಿಯವರ ಒಂದು ಯುದ್ಧದ ಹಡಗು ರಷ್ಯಾ ಸಮುದ್ರತೀರವನ್ನು ಸಮೀಪಿಸಿ ಹೋಯಿತೆಂದೂ ರಷ್ಯಾ ಹಡಗು ನುಗ್ಗಿ ಬಂದ ಕೂಡಲೇ ಅದು ಅಲ್ಲಿಂದ ಬೇಗನೆ ಪಲಾಯನ ಮಾಡಿ ಹೋಯಿತೆಂದೂ ವರ್ತಮಾನ ಬಂದಿದೆ.

ಟರ್ಕಿಯವರು ಡಾರ್ಡನೆಲ್ಸ್ ಎಂಬ ಜಲಮಾರ್ಗದಲ್ಲಿ ಸಿಡಿಮದ್ದಿನ ಗುಂಡುಗಳನ್ನು ಹಾಕಿ ಆ ಮಾರ್ಗದಲ್ಲಿ ಶತ್ರುಗಳಾರೂ ಬಾರದಂತೆ ತಮ್ಮ ಮೆಸ್ಸುಡಿಯಾ ಎಂಬ ಮುಖ್ಯವಾದ ಹಡಗನ್ನು ಇಟ್ಟು ಉಸ್ತುವಾರಿ ಮಾಡುತ್ತಿದ್ದರು. ಬ್ರಿಟಿಷರ ಒಂದು ಸಬ್‌ಮರೀನ್ ಎಂಬ ಹಡಗು ಅಲ್ಲಿಗೆ ನುಗ್ಗಿ ಹೋಗಿ ಟರ್ಕಿಯವರ ಆ ಯುದ್ಧದ ಹಡಗಿಗೆ ಒಡೆಯುವಂತೆ ಒಂದು ಟಾರ್ಪೆಡೋವನ್ನು ಬಿಟ್ಟು ಹೊಡೆದು ಅದನ್ನು ಮುಳುಗಿಸಿಬಿಟ್ಟಿತು. ಬ್ರಿಟಿಷರ ಸಬ್‌ಮರೀನ್ ಎಂಬ ಹಡಗು ಒಂಭತ್ತು ಗಂಟೆಗಳ ಕಾಲ ನೀರಿನೊಳಗೇ ಇದ್ದುಕೊಂಡು, ಸಿಡಿಮದ್ದಿನ ಗುಂಡುಗಳಿಗೆ ತಗಲದಂತೆ ಈ ಕಾರ್ಯವನ್ನು ಮಾಡಿರುತ್ತದೆ.

ಇಟಲಿಗೂ ಟರ್ಕಿಗೂ ವಿರೋಧಭಾವ ಉಂಟಾಗಿರುತ್ತದೆ. ಇಟಲಿಯಲ್ಲಿ ಅನೇಕರು ಯುದ್ಧಕ್ಕೆ ಹೋಗಬೇಕೆಂದು ಅಪೇಕ್ಷಿಸುವರು.

ಆಫ್ರಿಕಾದಲ್ಲಿ.

ಆಫ್ರಿಕಾದಿಂದ ಈ ವಾರ ಹೆಚ್ಚು ಸಮಾಚಾರಗಳೇನೂ ಬಂದಿಲ್ಲ. ದಂಗೇಕೋರರ ಮುಖಂಡನಾದ ಬೇಯರ್ಸ್ ಎಂಬುವನು ಕೊಲ್ಲಲ್ಪಟ್ಟನೆಂಬುವುದೇ ಮುಖ್ಯವಿಷಯ. ಅವನಿಗೆ ಗಾಯವಾಯಿತು. ಅವನು ಹಾಗೇ ಕುದುರೆ ಸವಾರಿ ಮಾಡಿಕೊಂಡು ವಾಲ್ ನದಿಯನ್ನು ದಾಟುತ್ತಿದ್ದಾಗ ಕುದುರೆಯಿಂದ ಬಿದ್ದು ನದಿಯಪಾಲಾದನು. ದಕ್ಷಿಣ ಆಫ್ರಿಕಾದಲ್ಲಿ ಎದ್ದಿದ್ದ ದಂಗೆಕೋರರನ್ನೆಲ್ಲಾ ಸಂಪೂರ್ಣವಾಗಿ ಅಡಗಿಸಿದಂತಾಯಿತು. ಈಗ ಅಲ್ಲಿರುವ ಬ್ರಿಟಿಷ್ ಸೈನಿಕರು ಅಲ್ಲಿ ಜರ್ಮನಿಯವರಿಗೆ ಸೇರಿರುವ ಪ್ರದೇಶಗಳ ಮೇಲೆ ನುಗ್ಗಿ ಹೋಗುವವರಾಗಿದ್ದಾರೆ. ಇದು ಸಾಧ್ಯವಾಗದಂತೆ ಜರ್ಮನಿಯವರು ಆಶೆಯನ್ನು ಇದುವರೆಗೆ ಕಲ್ಪಿಸಿದ್ದರು. ಈಗ ಅದೆಲ್ಲಾ ನಿಸ್ಸಾರವಾಯಿತು.

ಇತರ ವಿಷಯಗಳು.

ಜರ್ಮನಿಯ ಚಕ್ರವರ್ತಿಯವರಿಗೆ ಶೀತಹಿಡಿದು ಕಾಯಿಲೆಯಾಗಿದ್ದಾರೆ. ಅವರು ಕೆಲವು ದಿನಗಳಿಂದ ತಮ್ಮ ರಾಜಧಾನಿಯಾದ ಬರ್ಲಿನ್ ನಗರದಲ್ಲೇ ಹಾಸಿಗೆಯಲ್ಲಿ ಮಲಗಿರುವರು. ಯುದ್ಧಭೂಮಿಗಳಿಂದ ವರ್ತಮಾನಗಳು ಅವರಿಗೆ ತಲುಪುತ್ತಿರುವವು.

ಫ್ರೆಂಚ್ ಗವರ್ನ್‌ಮೆಂಟಿನವರು ರಾಜಧಾನಿಯಾದ ಪಾರಿಸ್ ನಗರಕ್ಕೆ ಬಂದು ಅಲ್ಲಿ ಒಂದು ಸಭೆಯನ್ನು ನಡಿಸಿದರು. ಈಗ ಜರ್ಮನಿಯವರು ಆ ಪಟ್ಟಣಕ್ಕೆ ನುಗ್ಗಿಬರುತ್ತಾರೆಂಬ ಶಂಕೆಯು ತಪ್ಪಿಹೋಗಿರುತ್ತದೆ. ಫ್ರೆಂಚರ ಖಜಾನೆಯಲ್ಲಿ ದ್ರವ್ಯಾನುಕೂಲವು ಚೆನ್ನಾಗಿರುವುದರಿಂದ ಅವರು ಯುದ್ಧವನ್ನು ಮುಂದರಿಸುವುದಕ್ಕೆ ಸಾಲಮಾಡಬೇಕಾದ ಪ್ರಕೃತವೇನೂ ಇರುವುದಿಲ್ಲ.

ಬ್ರಿಟಿಷ್ ಸ್ವಾಸ್ಥ್ಯಗಳಿಂದ ಸಹಾಯ ಸಂಪತ್ತುಗಳು ಗ್ರೇಟ್ ಬ್ರಿಟನ್‌ಗೆ ಬರುತ್ತಲೇ ಇವೆ. ಆಫ್ರಿಕಕ್ಕೆ ಸೇರಿದ ಟೋಗೊಲೆಂಡ್ ಎಂಬ ಜರ್ಮನಿಯವರ ಸ್ವಾಸ್ಥ್ಯವನ್ನು ಕಿತ್ತು ಸ್ವಾಧೀನಪಡಿಸಿಕೊಂಡದ್ದಕ್ಕೆ ಆದ ಖರ್ಚನ್ನು ಅಂದರೆ 9,00,000 ರೂಪಾಯನ್ನು ಅಲ್ಲಿರುವ ಗೋಲ್ಡ್ ಕೋಸ್ಟ್ ಎಂಬ ಇಂಗ್ಲಿಷ್ ಸ್ವಾಸ್ಥ್ಯದವರು ವಹಿಸಿಕೊಳ್ಳುವಂತೆ ಒಪ್ಪಿಕೊಂಡಿರುತ್ತಾರಲ್ಲದೆ ಅವರು ಯುದ್ಧದ ಖರ್ಚಿಗಾಗಿ 12,00,000 ರೂಪಾಯನ್ನು ಒದಗಿಸುತ್ತಾರೆ. ಮಧ್ಯ ಅಮೇರಿಕದಲ್ಲಿರುವ ಬ್ರಿಟಿಷ್ ಗಯಾನಾ ಎಂಬ ಸ್ವಾಸ್ಥ್ಯದವರು ಯುದ್ಧಭೂಮಿಯಲ್ಲಿರುವ ನಮ್ಮ ಹಿಂದುಸ್ಥಾನದ ಸೈನ್ಯಗಳಿಗಾಗಿ 5,00,000 ಪೌಂಡು ಅಕ್ಕಿಯನ್ನು ಕಳುಹಿಸಿಕೊಡುತ್ತಾರೆ.

ಒಬ್ಬಾನೊಬ್ಬ ಜರ್ಮನಿಯವನು ಇಂಗ್ಲೆಂಡಿಗೆ ಸೇರಿದ ಸಂಡರ್ಲೆಂಡಿನಲ್ಲಿ ಬ್ರಿಟಿಷ್ ಪ್ರಜೆಯ ಹಕ್ಕು ಸ್ವಾತಂತ್ರ್ಯಗಳನ್ನು ಸಂಪಾದಿಸಿಕೊಂಡು ಆ ಪಟ್ಟಣದಲ್ಲಿ ಕಾನ್‌ಸಲ್ ಆಗಿದ್ದನು. ಇವನು ಯುದ್ಧ ಪ್ರಾರಂಭವಾದಾಗ ಯುದ್ಧಭಟರಾಗಬಹುದಾದ ಜರ್ಮನಿಯ ಪ್ರಜೆಗಳಿಗೆ ವಾಪಸು ಜರ್ಮನಿಗೆ ಹೋಗುವಂತೆ ಅವಕಾಶವನ್ನು ಕಲ್ಪಿಸಿಕೊಟ್ಟನು. ಇದು ರಾಜದ್ರೋಹವಾದದ್ದರಿಂದ ಬ್ರಿಟಿಷರು ಅವನನ್ನು ಹಿಡಿದು ದರ್ಯಾಫ್ತಿ ಮಾಡಿ ಅವನಿಗೆ ಮರಣದಂಡನೆಯನ್ನು ವಿಧಿಸಿದರು.

ಆಸ್ಟ್ರಿಯಾದವರು ಸರ್ವಿಯಾದವರ ಮೇಲೆ ಯುದ್ಧಮಾಡಬೇಕೆಂದಿರುವುದಾಗಿ ಕಳೆದ 1913 ನೇ ವರುಷದಲ್ಲೇ ಇಟಲಿಯವರಿಗೆ ತಿಳಿಸಿದ್ದರಂತೆ. ಇದರಿಂದ ಅವರು ಈ ವರುಷ ಅಷ್ಟು ಆತುರಪಟ್ಟು ಯುದ್ಧಕ್ಕೆ ಹೊರಡಲು ಕಾರಣ ವ್ಯಕ್ತವಾಗುತ್ತದೆ.

ಫ್ರೆಂಚರ ಕೆಲವು ವಿಮಾನ ಯಂತ್ರಗಳು ಜರ್ಮನಿಗೆ ಹೋಗುವಾಗ್ಗೆ ಸ್ವಿಟ್ಜರ್‌ಲೆಂಡಿನ ಮೇಲೆ ಹಾದುಹೋದವಂತೆ. ಇದು ನ್ಯಾಯಕ್ಕೆ ವಿರುದ್ಧವಾದ ಕಾರ್ಯವೆಂದು ಈಗ ಸ್ವಿಟ್ಜರ್‌ಲೆಂಡಿನ ಗವರ್ನ್‌ಮೆಂಟಿನವರು ಆಕ್ಷೇಪಣೆ ಮಾಡಿದ್ದಾರೆ. ಆ ವಿಮಾನ ಯಂತ್ರಗಳಿಗೆ ಆ ರೀತಿ ಸ್ವಿಟ್ಜರ್‌ಲೆಂಡಿನ ಮೇಲೆ ಹೋಗುವಂತೆ ಹೇಳಿರಲಿಲ್ಲವೆಂದೂ, ಹಾಗೆ ಹಾದುಹೋಗಿದ್ದರೆ ಅದು ಸರಿಯಲ್ಲವೆಂದೂ ಜವಾಬು ಕೊಡಲಾಗಿದೆ.

ಫ್ರೆಂಚರ ಕೆಲವು ವಿಮಾನ ಯಂತ್ರಗಳು ಜರ್ಮನಿಗೆ ಹೋಗಿ ಫ್ರೀಬರ್ಗ್‌ನಲ್ಲಿ ಜರ್ಮನಿಯವರ ವಿಮಾನಯಂತ್ರಗಳಿದ್ದ ಕಡೆಗೆ ಅಂತರಿಕ್ಷದಿಂದ ಸಿಡಿಮದ್ದಿನ ಗುಂಡುಗಳನ್ನು ಹಾಕಿದುತ್ತವೆ.

ಯುದ್ಧಭೂಮಿಯ ವಿಶೇಷ ಸಮಾಚಾರಗಳು.

ಚಕ್ರವರ್ತಿಸಾರ್ವಭೌಮರವರೂ, ಸೈನ್ಯವೂ.

ನಮ್ಮ ಚಕ್ರವರ್ತಿಯವರು ಇಂಗ್ಲೆಂಡಿನಿಂದ ಯುದ್ಧಭೂಮಿಗೆ ಹೊರಟಿದ್ದು ಅಲ್ಲಿನ ವಿದ್ಯಮಾನಗಳನ್ನೆಲ್ಲಾ ಪರಾಂಬರಿಸಿಕೊಂಡು ವಾಪಸು ಬಿಜಯಂಗೈದರೆಂದು ಕಳೆದ ವಾರ ತಿಳಿಸಿದೆವಷ್ಟೆ. ಹೊರಡುವುದಕ್ಕೆ ಮುಂಚೆ ಅವರು ನಮ್ಮ ಸೈನಿಕರಿಗೆ ದಯಪಾಲಿಸಿದ ಆಜ್ಞಾಪತ್ರವು ಪ್ರಕಟವಾಗಿದೆ. ಇದರ ಮುಖ್ಯಾಭಿಪ್ರಾಯವೇನಂದರೆ—

ನಾವು ಯುದ್ಧಭೂಮಿಗೆ ಬಂದು ನನ್ನ ಸೈನಿಕರಾದ ನಿಮ್ಮಗಳನ್ನು ನೋಡಿದ್ದರಲ್ಲೂ, ನಿಮ್ಮ ನಡವಳಿಕೆಗಳು ಯಾವ ರೀತಿಯಲ್ಲಿವೆ ಎಂಬುದನ್ನು ಸ್ವಲ್ಪ ಮಟ್ಟಿಗೆ ತಿಳಿದುಕೊಂಡದ್ದರಲ್ಲೂ ನಮಗೆ ಸಂತೋಷವಾಗಿರುತ್ತದೆ. ತುಂಬಾ ಬಲಿಷ್ಠರೂ ನಿಷ್ಕರುಣಿಗಳೂ ಆದ ಶತ್ರುಗಳ ಮೇಲೆ ನೀವುಗಳು ಎಷ್ಟೋ ದಿವ್ಯತರವಾಗಿ ಯುದ್ಧಮಾಡಿಯೂ, ಇನ್ನೂ ಮಾಡುತ್ತಲೂ ಇರುವುದನ್ನು ನೋಡಿ ನನಗೆ ಉಂಟಾಗಿರುವ ಪರಮಾನಂದವನ್ನೂ, ಮೆಚ್ಚುಗೆಯನ್ನೂ ಕುರಿತು ನಿಮ್ಮನ್ನೆಲ್ಲಾ ಸಂಧಿಸಿ ನಿಮ್ಮಗಳ ಕೂಡ ಮುಖತಃ ಮಾತನಾಡಿ ಬರಬೇಕೆಂದು ತುಂಬಾ ಕುತೂಹಲವುಳ್ಳವನಾಗಿದ್ದೆವು. ನೀವು ತುಂಬಾ ಪರಾಕ್ರಮದಿಂದಲೂ, ಚಟುವಟಿಕೆಯಿಂದಲೂ, ಧೈರ್ಯದಿಂದಲೂ ಯುದ್ಧಮಾಡುತ್ತಾ ಬ್ರಿಟಿಷ್ ಸೈನಿಕರ ಕೀರ್ತಿಯನ್ನು ಕಾಪಾಡಿಕೊಂಡು ಬಂದಿರುತ್ತೀರೆಂದೂ, ನಿಮ್ಮ ದೆಸೆಯಿಂದ ಆ ಕೀರ್ತಿಗೆ ಹೊಸ ಕಳೆಗಳು ಉಂಟಾಗಿರುವವೆಂದೂ ಸಂತೋಷದಿಂದ ನಮಗೆ ಹೇಳುವೆವು. ನೀವು ಯುದ್ಧಸನ್ನದ್ಧರಾಗಿಯೂ, ಆರೋಗ್ಯಶಾಲಿಗಳಾಗಿಯೂ, ಉತ್ಸಾಹಪೂರಿತರಾಗಿಯೂ ಇರುವುದನ್ನು ನೋಡಿ ನಾವು ಉಲ್ಲಾಸಪಡುತ್ತೇವೆ. ನಾವು ನಮಗೆ ಸಂಭವಿಸುವ ಕಷ್ಟಗಳಲ್ಲಿ, ಅಪಾಯಗಳಲ್ಲಿ, ಜಯಪ್ರದಗಳಲ್ಲೂ ಭಾಗಿಗಳಾಗಲಾರೆವು. ಆದರೂ ನಾವೂ ನಿಮ್ಮ ದೇಶೀಯರಾದ ಸಹೋದರವರ್ಗದವರೂ ನಿಮ್ಮ ಮೇಲೆ ಸಂಪೂರ್ಣವಾದ ಭರವಸವನ್ನು ಇಟ್ಟುಕೊಂಡಿರುತ್ತೇವೆಂಬ ಅಂಶವನ್ನು ನೀವುಗಳೆಲ್ಲಾ ಉಚಿತವಾಗಿ ತಿಳಿಯಬೇಕು. ನೀವುಗಳು ಜಯಶೀಲರಾಗಿಯೇ ಬರುವಿರೆಂಬುದಾಗಿ ಪ್ರತಿನಿತ್ಯವೂ ನಿರೀಕ್ಷಿಸಿಕೊಂಡು ಬರುತ್ತೇವೆ ಎಂಬ ಪ್ರಕಾರ ಅಪ್ಪಣೆ ದಯಪಾಲಿಸಿರುವರು.

"ವಿಕ್ಟೋರಿಯಾ ಕ್ರಾಸ್" ಎಂಬ ಬಿರುದು ಹಿಂದೂಸ್ಥಾನದ ಸೈನಿಕರಿಗೆ ದೊರಕಿದ್ದು ಹೇಗೆ?

ಹಿಂದೂಸ್ಥಾನದ ಸೈನಿಕರಿಬ್ಬರಿಗೆ ಮಹಾ ಉತ್ಕೃಷ್ಟವಾದ "ವಿ. ಸಿ." ಎಂಬ ಬಿರುದು ದೊರಕಿದ ವಿಷಯದಲ್ಲಿ ಸ್ಟೇಟ್ ಸೆಕ್ರಿಟರಿಯವರು ನಮ್ಮ ವೈಸ್‌ರಾಯ್ ಪ್ರಭುಗಳಿಗೆ ಬರೆದಿರುವುದೇನೆಂದರೆ—

ಇದಕ್ಕೆ ಸಂಬಂಧಪಟ್ಟ ಕದನಗಳ ವಿವರಗಳನ್ನು ಕೊಡುವ ಮಟ್ಟಿಗೂ ಚೆನ್ನಾಗಿ ತಿಳಿಯಬೇಕೆಂದು ಕಚೇರಿ ಮಾಡಿಸಿದ್ದಾಯಿತು. ಹಿಂದೂಸ್ಥಾನದ ಸೈನ್ಯದವರು ಬಾಸ್ತ್ರಾಹಾರವಾಕ ರೀತಿಯಲ್ಲಿ ಅತ್ಯಂತ ಪರಾಕ್ರಮದಿಂದ ಕದನಗಳನ್ನು ನಡಿಸಿರೋದರಿಂದ ಅವರ ಕಾರ್ಯಗಳಲ್ಲಿ ಯಾವುದು ಸಾಮಾನ್ಯವಾದದ್ದು, ಯಾವುದು ಅಸಾಧಾರಣವಾದದ್ದು ಎಂಬುದನ್ನು ಗೊತ್ತುಮಾಡುವುದು ಬಹಳ ಕಷ್ಟವಾಯಿತು. ಮಹಾವಿಶೇಷವಾದ ಗಣನೆಗೆ ಯೋಗ್ಯವೆನಿಸಲ್ಪಟ್ಟ ಕಾರ್ಯವನ್ನು ಸರ್ಕಾರಿ ರಿಪೋರ್ಟಿನಲ್ಲಿ ಹೀಗೆಂದು ವಿವರಿಸಿರುತ್ತಾರೆ.— ಅಕ್ಟೋಬರ್ ತಾ 31 ರಲ್ಲಿ 129 ನೇ ಬಲೂಚಿ ರೆಜಿಮೆಂಟಿನ 4050 ನೇ ನಂಬರ್ ಸಿಪಾಯಿ ಖುದಾದಾದ್ ಎಂಬುವನು ಹೊಲ್ಲೆಬೆಕ್ ಎಂಬ ಠಾಣ್ಯದಲ್ಲಿ ತನ್ನ ರೆಜಿಮೆಂಟಿಗೆ ಸೇರಿದ ಒಂದು ಮೆಷೀನ್ ಫಿರಂಗಿಯ ಬಳಿ ಇತರ ಸಿಪಾಯಿಗಳ ಕೂಡ ಇದ್ದನು. ಈ ಸೈನಿಕರ ಮೇಲೆ ಶತ್ರುಗಳು ಅನೇಕವಾಗಿ ನುಗ್ಗಿ ಬಂದರು. ಶತ್ರುಗಳ ಫಿರಂಗಿ ಗುಂಡು ಬಿದ್ದು ಆ ಫಿರಂಗಿಯು ಕೆಟ್ಟುಹೋಯಿತು. ಅದರ ಬಳಿ ಇದ್ದ ಬ್ರಿಟಿಷ್ ಹುದ್ದೇದಾರನಿಗೆ ಗಾಯವಾಗಿತ್ತು. ಅಲ್ಲಿ ಉಳಿದಿದ್ದ ಮೂರು ಮಂದಿ ಸಿಪಾಯಿಗಳನ್ನು ಹಿಂದಕ್ಕೆ ಬಂದುಬಿಡುವಂತೆ ಹುಕುಂ ಕೊಟ್ಟರು. ಸಿಪಾಯಿ ಖುದಾದಾದನು ತನ್ನ ಬಳಿ ಇದ್ದ ಐದು ಮಂದಿ ಸಿಪಾಯಿಗಳೂ ಕೊಲ್ಲಲ್ಪಟ್ಟಾಗ್ಯೂ, ತಾನು ಮಾತ್ರ ಇನ್ನೊಂದು ಫಿರಂಗಿಯ ಬಳಿ ಇದ್ದುಕೊಂಡು ಗುಂಡು ಹೊಡೆಯುತ್ತಲೇ ಇದ್ದನು. ಇವನಿಗೂ ಏಟುಬಿದ್ದು ಗಾಯವಾಯಿತು. ಈಚೆಗೆ ಇವನನ್ನು ಆಸ್ಪತ್ರೆಗೆ ಸಾಗಿಸಿ ಇಲಾಜು ಮಾಡಿದ್ದರಿಂದ ವಾಸಿಯಾಗಿ ಮತ್ತೆ ಅವನು ತನ್ನ ರೆಜಿಮೆಂಟಿಗೆ ಹೋಗಿ ಸೇರಿಕೊಂಡಿರುತ್ತಾನೆ.

ಇನ್ನೊಂದು ಕಡೆ ಅಂದರೆ ಫೆಸ್ಟುಬರ್ಟ್ ಎಂಬ ಠಾಣ್ಯದಲ್ಲಿ ನೋವೆಂಬರ್ ತಾ 23 ನೇ ರಾತ್ರಿಯೂ ಮರುದಿವಸವೂ ಒಂದು ಕದನವಾಯಿತು. ಜರ್ಮನಿಯವರು ನಮ್ಮ ಕಂದಕಗಳನ್ನು ಆಕ್ರಮಿಸಿಕೊಂಡಿದ್ದರು. ನಮ್ಮ ರೆಜಿಮೆಂಟಿನವರು ಆ ಕಂದಕಗಳನ್ನು ಕಿತ್ತುಕೊಂಡು ಅಲ್ಲಿದ್ದ ಶತ್ರುಗಳನ್ನು ಓಡಿಸುವುದಕ್ಕೆ ಬಹಳ ಪರಾಕ್ರಮದಿಂದ ಕಾದಿದರು. ಈ ರೆಜಿಮೆಂಟಿನಲ್ಲಿ 39 ನೇ ಘರ್ವಾಲ್ ರೈಫಲ್ಸಿನ 1 ನೇ ಬಟಾಲಿಯನ್ ಬಿ. ಕಂಪನಿಯ 1909 ನೇ ನಂಬರ್ ಸಿಪಾಯಿ ನಾಯಕ್ ದರ್ವಾನ್ ಸಿಂಗ್ ನೇಗಿ ಎಂಬುವನು ಶತ್ರುಗಳ ಫಿರಂಗಿ ಸಿಡಿಮದ್ದಿನ ಗುಂಡುಗಳೂ ಬಂದೂಕಿನ ಗೋಲಿಗಳೂ ಬಂದು ಸುರಿಯುತ್ತಿದ್ದರೂ ಅವುಗಳ ಮಧ್ಯೆ ಪದೇಪದೆ ನುಗ್ಗಿ ಹೋಗುತ್ತಾ ಶತ್ರುಗಳನ್ನು ಕೊಲ್ಲುತ್ತಾ ನಾಯಕರಿಗೆ ಸುತ್ತಾ ಬಹಳ ಪರಾಕ್ರಮವನ್ನು ತೋರಿಸಿದನು. ಇವನಿಗೆ ಶತ್ರುಗಳ ಗೋಲಿ ಏಟು ತಗುಲಿ ತಲೆಯಲ್ಲೂ ತೋಳಿನಲ್ಲೂ ಗಾಯಗಳಾದವು. ಆದಾಗ್ಯೂ ಇವನು ಅವನ್ನು ಲಕ್ಷ್ಯ ಮಾಡದೆ ಕದನವೆಲ್ಲಾ ಪೂರೈಸಿ ತನ್ನ ಪಲಟಣಿಯನ್ನು ಸಂಧಿಸುವ ತನಕ ತನಗೆ ಗಾಯವಾಯಿತೆಂದು ಯಾರಿಗೂ ಹೇಳಿಕೊಳ್ಳದೆ ಮುಂಭಾಗದ ಸಾಲಿನಲ್ಲೇ ಇದ್ದುಕೊಂಡು ಯುದ್ಧಮಾಡುತ್ತಾ ಬಂದನು. ಕಳೆದ 5 ನೇ ತಾ. ಶನಿವಾರ ಚಕ್ರವರ್ತಿಸಾರ್ವಭೌಮರವರು ನಾಯಕ್ ದರ್ವಾನ್ ಸಿಂಗ್ ನೇಗಿ ಎಂಬಾತನನ್ನು ಯುದ್ಧಭೂಮಿಯಿಂದ ಜನರಲ್ ಹೆಡ್‌ಕ್ವಾರ್ಟರ್ಸಿಗೆ ಕರಸಿಕೊಂಡು, ಆತನಿಗೆ ತಾವೇ ಸ್ವಹಸ್ತ "ವಿ. ಸಿ." ಎಂಬ ಘನತರವಾದ ಬಿರುದನ್ನು ದಯಪಾಲಿಸಿರುತ್ತಾರೆ.

ಒಳದೇಶದ ವೃತ್ತಾಂತಗಳು.

ಈ ವಾರ ನಮ್ಮ ಪತ್ರಿಕೆಯು ಹತ್ತು ಪುಟಗಳುಳ್ಳದ್ದಾಗಿದೆ.

ಮಾಗಡಿ ತಾಲ್ಲೂಕಿನಲ್ಲಿ ಯುದ್ಧದ ರಿಲೀಫ್ ಫಂಡಿಗೆ ಡಿಸೆಂಬರ್ ತಾ 17 ವರೆಗೆ ರೂ. 307-8-11 ಪೈ ಚಂದಾ ವಸೂಲಾಗಿದೆ ಎಂದು ಅಮಲ್ದಾರರವರು ತಿಳಿಸುತ್ತಾರೆ.

ಹಿಂದಿನ ವಾರ ರಾಜಧಾನಿಯಲ್ಲಿ ಹುಚ್ಚುನಾಯಿ ಕಡಿದ ಐದು ಮಂದಿಯೂ ಅವರ ಸಂಬಂಧಿಗಳೊಡನೆ ಕೂನ್ನೂರು ಆಸ್ಪತ್ರೆಗೆ ಚಿಕಿತ್ಸೆ ಮಾಡಿಸಿಕೊಂಡು ಬರುವುದಕ್ಕೆ ಪ್ರಯಾಣಮಾಡಿದರು.

ನಮ್ಮ ಮಹಾರಾಜರವರೂ ಯುವರಾಜರವರೂ ಈ ದಿನ ಬೆಂಗಳೂರಿನಲ್ಲಿ ಲೀಟ್ ಮಹಾರಾಜರವರ ಪ್ರತಿಮೆಯನ್ನು ತೆರವೇರಿಸುತ್ತಾರೆ. ಜನಾನೇಯು ರಾಣೀವಾಸದವರೆಲ್ಲಾ ಅಲ್ಲೇ ಚಿತ್ತೈಸಿರುವರು.

ಶ್ರೀಮನ್ ಮಹಾರಾಜರವರು ನಾಳೆ ಪರಿವಾರ ಸಮೇತ ಬೆಂಗಳೂರಿಂದ ದಯಮಾಡಿ ಚಿತ್ರದುರ್ಗದ ಡಿಸ್ಟ್ರಿಕ್ಟಿನಲ್ಲಿ ಒಂದು ವಾರದ ತನಕ ಸಂಚಾರ ಮಾಡಿಕೊಂಡು ವಾಪಸು ಚಿತ್ತೈಸುವವರಾಗಿದ್ದಾರೆ.

ಹಾಸನದ ಸೆಷನ್ಸ್ ಜಡ್ಜರು ನಂಗೇಗೌಡನೂ ಎಂಬುವನು ಸೇರಿ ... ಗೌಡನನ್ನು ಕೊಂದದ್ದಕ್ಕಾಗಿ ಅವರಿಬ್ಬರಿಗೂ ಮರಣದಂಡನೆಯನ್ನು ವಿಧಿಸಿದ್ದರು. ಚೀಫ್ ಜಡ್ಜರು ಮೊನ್ನೆ ಮಂಗಳವಾರ ಆ ಶಿಕ್ಷೆಯನ್ನು ಖಾಯಂ ಮಾಡಿರುತ್ತಾರೆ.

ಮೈಸೂರಿನಲ್ಲಿ ಪಬ್ಲಿಕ್ ಪ್ರಾಸಿಕ್ಯೂಟರಾಗಿದ್ದ ಮ|| ಬಿ. ಕೃಷ್ಣಮಾಚಾರ್ಯರು ಕಳೆದ ವಾರ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ತುಂಬ ಸಂಸಾರಿಗಳೂ ಗುಣವಂತರೂ ಸ್ನೇಹಪರರೂ ಆಗಿದ್ದರು.

ರಾಜಧಾನಿಯ ಗವರ್ನ್‌ಮೆಂಟ್ ಹೈಸ್ಕೂಲ್ ಹೆಡ್ ಮಾಸ್ಟರ್ ಮಿ. ಕೆ. ವೆಂಕಟರಾಮಯ್ಯನವರಿಗೆ ಕಳೆದ ವಾರ ಪತ್ನೀವಿಯೋಗ ದುಃಖವೂ, ... ವಯಸ್ಸಿನ ಐದು ಮಕ್ಕಳನ್ನು ಆರೈಕೆಮಾಡಬೇಕಾದ ಚಿಂತೆಯೂ ಪ್ರಾಪ್ತವಾದದ್ದಕ್ಕಾಗಿ ವಿಷಾದಪಡುತ್ತೇವೆ.

ಶ್ರೀಮದ್ಯುವರಾಜರವರ ಕೂಡ ನಮ್ಮ ದಿವಾನ್‌ರವರು ಜನವರಿ ತಿಂಗಳ ಮೊದಲನೇ ವಾರದಲ್ಲಿ ಶಿವಮೊಗ್ಗ ಮತ್ತು ಕಡೂರು ಡಿಸ್ಟ್ರಿಕ್ಟುಗಳಲ್ಲಿ ಸಂಚಾರ ದಯಮಾಡುವರೆಂದೂ, ಕೊಪ್ಪ ತಾಲ್ಲೂಕು ಹೊಸ ಕೆರೆಯಲ್ಲಿ ಮ|| ಎಚ್ ಕೃಷ್ಣರಾಯರು ಅವರನ್ನು ಸತ್ಕಾರಮಾಡುವರೆಂದೂ ತಿಳಿಯುವುದು.

ಮದರಾಸ್ ಪಟ್ಟಣದ ಶ್ರೀ ಕನ್ನನ್ ಕಂಪನಿಯ ಪ್ರೊಪ್ರೈಟರಾದ ಮ. ಜಿ. ನಾರಾಯಣಸಾಮಿ ನಾಯುಡುಯವರು ತಮ್ಮ ಕಂಪನಿಯಲ್ಲಿ ತಯಾರಾಗುವ ನಶ್ಯ ಮತ್ತು ಚುಟ್ಟಾಗಳ ಪ್ರಕಟನೆಯನ್ನು ಹಾಕಿ ಮುಂದಿನ ವರುಷದ ಕ್ಯಾಲೆಂಡರನ್ನು ರಚಿಸಿ ನಮಗೊಂದು ಪ್ರತಿಯನ್ನು ಕಳುಹಿಸಿರುತ್ತಾರೆ.

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿಗೆ ಸರ್ಕಾರದವರು ಹೊಸದಾಗಿ ಮೆಂಬರುಗಳನ್ನು ನೇಮಕ ಮಾಡಿದ್ದಾರೆ. ಅವರ್‍ಯಾರೆಂದರೆ—ರೆವ್. ಜಿ. ಡಬ್ಲ್ಯು. ಸಾಡೇ ಸಾಹೇಬರು, ಮೈ|| ಮಹಮದ್ ಜಾಫರ್ ಸಾಹೇಬರು, ಮ|| ಗಳಾದ ವೈ. ಶ್ರೀನಿವಾಸರಾಯರು, ಎಂ. ಎ. ರಂಗಯ್ಯಂಗಾರ್ರು ಮತ್ತು ಎಂ. ವೆಂಕಟಕೃಷ್ಣಯ್ಯನವರು.

ಮಾಗಡಿಯಲ್ಲಿ ಅಬ್ದುಲ್ ಖಾದರ್ ಎಂಬುವನು ಒಂದು ದೇವಸ್ಥಾನದಲ್ಲಿ ಕಳುವು ಮಾಡಿದನೆಂದು ಹಿಡಿಯಲ್ಪಟ್ಟನು. ಇವನಿಗೆ ಬುದ್ಧಿ ಸ್ವಾಧೀನವಿಲ್ಲವೆಂದು ತಿಳಿದು ಅವನನ್ನು ಬೆಂಗಳೂರು ಹುಚ್ಚರ ಆಸ್ಪತ್ರೆಯಲ್ಲಿಟ್ಟು ಚಿಕಿತ್ಸೆ ಮಾಡುತ್ತಿದ್ದರು. ಅವನು ಕಳೆದ ಶನಿವಾರ ಆಸ್ಪತ್ರೆಯೊಳಗೆ ತನ್ನ ಕೊರಳಿಗೆ ನೇಣು ಹಾಕಿಕೊಂಡು ಆತ್ಮಹತ್ಯಮಾಡಿಕೊಂಡಿರುತ್ತಾನೆ.

ಬೆಂಗಳೂರು ಸಿಟಿಯಲ್ಲಿ ನೇಯ್ಗೆಯವರ ಪರಸ್ಪರ ಸಹಾಯ ಸಂಘವು ಪ್ರಾರಂಭವಾಯಿತು. ಮೈಸೂರು ಬ್ಯಾಂಕಿನಿಂದ 35,000 ರೂಪಾಯಿ ಸಾಲ ತಂದಿಟ್ಟುಕೊಂಡು ನೇಯ್ಗೆಯವರು ತಯಾರುಮಾಡಿದ ಸಾಮಾನುಗಳನ್ನು ಸೊಸೈಟಿಯಲ್ಲಿ ಕೊಂಡು ಇಟ್ಟುಕೊಂಡು, ಅವರಿಗೆ ಕಸುಬು ನಡೆಯುವುದಕ್ಕೆ ದ್ರವ್ಯಸಹಾಯಮಾಡಬೇಕೆಂದು ಗೊತ್ತುಮಾಡಿದ್ದಾರೆ.

ರಾಜಧಾನಿಯ ಕಿವುಡು ಮೂಗರ ಮತ್ತು ಕುರುಡರ ಪಾಠಶಾಲೆಯಲ್ಲಿ ಹೆಡ್ ಮಾಸ್ಟರಾಗಿ ಬದಲಿ ನೋಡುತ್ತಿರುವ ಮ|| ... ಎಸ್. ವೆಂಕಟರಾಯರಿಗೆ ನಮ್ಮ ಸರ್ಕಾರದವರು ತಿಂಗಳಿಗೆ 50 ರೂಪಾಯಿ ವೇತನವನ್ನು ಸ್ಥಿರಪಡಿಸಿ ಮಾಡಿದ್ದಾರೆ. ಅವರು ಕಲ್ಕತ್ತೆಗೆ ಹೋಗಿ ಅಲ್ಲಿ ಇಂಥಾ ಪಾಠಶಾಲೆಯ ವಿದ್ಯಾರ್ಥಿಗಳಿಗೆ ವಿದ್ಯೆ ಕಲಿಸುವ ಮಾರ್ಗಗಳನ್ನು ಕಲಿತು ಬಂದರು.

ಒಬ್ಬ ಬಾತ್ಮಿದಾರರಿಂದ: ಕುಣಿಗಲು ತಾಲ್ಲೂಕು, ಕಸಬಾ ಹೋಬಳಿ ಮಲ್ಲಸಂದ್ರ ಗ್ರಾಮದ ಪಟೇಲ್ ಚಿಕ್ಕಗೌಡ ಮತ್ತು ಶ್ಯಾನುಭೋಗ ವೀರಪ್ಪಯ್ಯ ಇವರು ಹನುಮಂತಯ್ಯನೆಂಬುವರ ಬಾಬತು ಕಂದಾಯದ ಹಣ ಐದು ರೂಪಾಯಿ ದಸ್ತುಮಾಡಿದರೆಂದು ಕುಣಿಗಲು ಮ್ಯಾಜಿಸ್ಟ್ರೇಟರವರ ಕೋರ್ಟಿನಲ್ಲಿ ಮೊಕದ್ದಮೆ ನಡೆದು, ಸದರೀ ಅಪರಾಧಿಗಳ ಮೇಲೆ ಜುಲ್ಮಾನೆ ಮಾಡಿರುತ್ತಾರೆ.

ನಮ್ಮ ಸಂಸ್ಥಾನದಲ್ಲಿ ಚೀಫ್ ಮೆಡಿಕಲ್ ಆಫೀಸರಾಗಿದ್ದ ಕರ್ನಲ್ ಪಿ. ಸಿ. ಮಾಧವಯ್ಯನವರ ಯೋಗ್ಯತೆಯಿಂದ ಅವರಿಗೆ ... ಇಂಡಿಯಾ ಗವರ್ನ್‌ಮೆಂಟಿನವರು ವೈದ್ಯರಾಗಿ ಸೇರಿಸಿಕೊಂಡು, ಸ್ವಲ್ಪದಲ್ಲಿ ಲೆಫ್ಟಿನೆಂಟ್ ಎಂಬ ಹುದ್ದೆಯನ್ನು ದಯಪಾಲಿಸಿದರು. ಇವರು ಹಿಂದೂಸ್ಥಾನದ ಸೈನಿಕರ ಕೂಡ ವೈದ್ಯರಾಗಿ ಹೋಗುವರು. ಕಳೆದ ಶನಿವಾರ ರಾತ್ರಿ ಬೆಂಗಳೂರಿನಲ್ಲಿ ಕೊಡಗರೆಲ್ಲಾ ಸೇರಿ ಅವರಿಗೆ ಔತಣಮಾಡಿ ಅವರನ್ನು ಸನ್ಮಾನಿಸಿ ಕಳುಹಿಸಿದರು.

ದಕ್ಷಿಣ ಮಹಾರಾಷ್ಟ್ರ ಜೈನ ಮಹಾಸಭೆಯ 17 ನೇ ವರುಷದ ಬೈಠಕವು ಬೆಳಗಾವಿಯಲ್ಲಿ ಡಿಸೆಂಬರ್ ತಾ 27-28 ರಲ್ಲಿ ನಡೆಯುವುದೆಂದೂ, ಹಾನಗಲ್ಲ ಸಂಸ್ಥಾನಾಧಿಪತಿಗಳಾದ ಶ್ರೀಮಂತ ಅಪ್ಪಾಸಾಹೇಬ ದೇಸಾಯಿಯವರು ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸುವರೆಂದೂ, ಈ ಸಭೆಯಲ್ಲಿ ಜೈನಮಂಡಲಿಯವರ ಏಳಿಗೆಗೆ ಸಂಬಂಧಪಡುವ ವಿಶೇಷ ವಿಷಯಗಳು ಚರ್ಚೆಯಾಗುವವೆಂದೂ, ಆ ಸಮಯದಲ್ಲೇ ಜೈನ ಮಹಿಳೆಯರ ಸಭೆಯೂ ಜರುಗುವುದೆಂದೂ ಸ್ವಾಗತ ಕಮಿಟಿಯ ಅಧ್ಯಕ್ಷರಾದ ರಾ|| ಸಂಗಪ್ಪ ಮಲ್ಲಪ್ಪ ... ತಿಳಿಸುತ್ತಾರೆ.

ಒಬ್ಬ ಬಾತ್ಮಿದಾರರಿಂದ.—ದೊಡ್ಡಬಳ್ಳಾಪುರದ ಕೋಆಪರೇಟಿವ್ ಸೊಸೈಟಿಯಲ್ಲಿ ಶುರುವಾಗಿಯ್ಯು ಇದುವರೆಗೆ 19,080 ರೂಪಾಯಿನ ಜಮಾ ಖರ್ಚು ನಡೆದಿರುತ್ತೆ. ಇದುವರೆಗೆ ಜನರಲ್ ಮೀಟಿಂಗು ನಡೆದುಹೋಯ್ತು, ಕೆಲಸಮಾಡತಕ್ಕವರಿಗೆ ಯಾವದೊಂದು ಪ್ರತಿ ಫಲವೂ ದೊರೆಯದಿದ್ದರೂ ಇರುತ್ತೆ. ಸೊಸೈಟಿಯು 1,163 ರೂಪಾಯಿ ಖರ್ಚು ಕಳೆದು ಉತ್ಪತ್ತಿಯಾಗಿದೆ. ಈ ಸೊಸೈಟಿಯಿಂದ ಕೆಲಸಮಾಡತಕ್ಕ ಕೈಗಾರಿಕೆಯವರಿಗೆ ಸರಿಯಾದ ಸಹಾಯವಿಲ್ಲದೆ ಇರುವದರಿಂದ ಅದಕ್ಕೆ ತಕ್ಕ ಏರ್ಪಾಟನ್ನು ರಿಜಿಸ್ಟ್ರಾರ್‌ರವರು ಮಾಡಿಕೊಡಬೇಕಾಗಿದೆ. ಈಗ್ಗೆ 3 ತಿಂಗಳಲಾಗಾಯ್ತು ಯುದ್ಧದ ಗಲಾಟೆಯಿಂದ ಕೈಗಾರಿಕೆಯವರಿಗೆ ಕಸುಬುಗಳು ನಡೆಯದೆ ಅವಸ್ಥೆಯಾಗಿರುವದರಿಂದ ಸೊಸೈಟಿಗೆ ಬರತಕ್ಕ ಸಾಲ ಮೊಬಲಗೂ, ಬಾಕಿಗಳೂ ವಸೂಲಾಗುವುದು ಕಷ್ಟ.

"ದರ್ಬಾರ್ ಡೇ" ಉತ್ಸವಗಳು.

ಡೆಹಲಿ "ದರ್ಬಾರ್ ಡೇ" ಮಹೋತ್ಸವದ ಜ್ಞಾಪಕಾರ್ಥವಾಗಿ ಸಂಸ್ಥಾನದ ಎಲ್ಲಾ ಸ್ಕೂಲುಗಳಿಗೂ ಕಳೆದ ತಾ. 12 ನೇ ಶನಿವಾರ ರಜಾ ಕೊಡಲ್ಪಟ್ಟಿತು ಆ ದಿನ ಸಂಸ್ಥಾನಾದ್ಯಂತ ಸ್ಕೂಲುಗಳಲ್ಲಿ ಸ್ಥಳಾಧಿಕಾರಿಗಳೂ, ಪ್ರ[illegible] ಮುಖಂಡರೂ, ಸ್ಕೂಲ್ ಉಪಾಧ್ಯಾಯರುಗಳೂ ಸಂತೋಷಕೂಟಗಳ[illegible] ನಡಿಸಿ, ಬ್ರಿಟಿಷ್ ಸಾಮ್ರಾಜ್ಯದ ಮಹತ್ವವನ್ನೂ, ಅದರಿಂದ ಪ್ರಜಾಕೋಟಿ[illegible]ಗಳಿಗೆ ಉಂಟಾಗಿರುವ ಉಪಕಾರಗಳನ್ನೂ ಕುರಿತು ವಿದ್ಯಾರ್ಥಿಗಳಿಗೂ, [illegible] ವಿದ್ಯಾರ್ಥಿನಿಯರಿಗೂ ಉಪನ್ಯಾಸಗಳ ಮೂಲಕ ಪ್ರಶಂಸೆಮಾಡಿ ವಿವರಿಸಿ, [illegible] ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಈಗಿನ ಘೋರ ಯುದ್ಧದಲ್ಲಿ ಜಯಪ್ರದವುಂಟಾ[illegible], ಅದು ಅಚಂದ್ರಾರ್ಕವಾಗಿ ನಮ್ಮಗಳನ್ನೂ ನಮ್ಮ ಸೀಮೆಯನ್ನೂ ಕಾ[illegible]ಡುತ್ತಾ ಇನ್ನೂ ಅಭಿವೃದ್ಧಿಗೆ ತರುವಂತಾಗಲೆಂದು ಮಕ್ಕಳ ಜಯಘೋ[illegible]ಗಳ ಮೂಲಕ ಪ್ರಾರ್ಥನೆಗಳನ್ನು ನಡಿಸಿದರು. ಈ ಉತ್ಸವ ನಡೆದ ವೃತ್ತಾ[illegible]ಂತಗಳ ಕರಕರವಾದ ವಿವರಣೆಯುಳ್ಳ ಬಾತ್ಮಿಗಳು ಅನೇಕ ಕಡೆಗಳಿಂದ ನಮ[illegible] ಕಳುಹಿಸುತ್ತವೆ. ಇವುಗಳನ್ನೆಲ್ಲಾ ಪ್ರತಿರತಿಯಾಗಿ ವಿವರಿಸಿ ಪ್ರಕಟಿಸಲು [illegible] ಸ್ಥಳ ಸಂಕೋಚವಾಗಿದೆಯಲ್ಲಾ ಎಂದು ವಿಷಾದಪಟ್ಟು, ಬಾತ್ಮಿದಾರರ [illegible] ಕ್ಷಮೆಯನ್ನು ಬೇಡುವೆವು. ನಮಗೆ ತಲಪಿರುವ ಬಾತ್ಮಿಗಳು ಯಾವವೆಂದರೆ. ಬ[illegible] —ದೊಡ್ಡಬಳ್ಳಾಪುರ, ಶಿವಮೊಗ್ಗಾ ತಾ॥ ಹೊಳೆಹೊನ್ನೂರು, ದೊಡ್ಡ[illegible]ಪುರದ ತಾ॥ ತೂಬಗೆರೆ, ಮಂಡ್ಯ ತಾ॥ ಸರ್ವಮಾನ್ಯ ಕೆಸ್ತೂರು, ಹಾಸನ, ಮುಳಬಾಗಲ ತಾ॥ ಕುರುಡುಮಲೆ, ಹುಣಸೂರು, ಆನೆಕಲ್ ತಾ॥ ಸರ್ಜಾಪುರ, ಚಿಕ್ಕನಾಯಕನಹಳ್ಳಿ ತಾ॥ ಶೆಟ್ಟಿಕೆರೆ, ಚನ್ನಪಟ್ಟಣದ ತಾ॥ ಮಳೂರು, ಚನ್ನಪಟ್ಟಣ, ನೆಲಮಂಗಲ, ಸಿರಾ ತಾ॥ ಕಂಚಿಗನಹಳ್ಳಿ, ಗೋರಿಬಿದನೂರು ತಾ॥ ಮಂಚೇನಹಳ್ಳಿ, ಶಿವಗಂಗೆ, ಕೊಪ್ಪ ತಾ॥ ಅಲಿಗೆ, ಶಿವಮೊಗ್ಗೆ, ಚಾಮರಾಜನಗರದ ತಾ॥ ರಾಮಸಮುದ್ರ, ಶ್ರೀರಂಗಪಟ್ಟಣ ತಾ॥ ಗಂಜಾಂ, ಕೊಪ್ಪ ತಾ॥ ಛಂಡಿಗಡ. ರಾಜಧಾನಿಯ ಹಲವು ಸ್ಕೂಲುಗಳು, ಇತ್ಯಾದಿ. ಬಾತ್ಮಿದಾರರು ಈ ಉತ್ಸವದ ವಿವರಗಳನ್ನು ಬರೆದು ಕಳುಹಿಸಿರುವುದಕ್ಕಾಗಿ ಅವರನ್ನೆಲ್ಲಾ ಕೃತಜ್ಞತಾಪೂರ್ವಕವಾಗಿ ವಂದಿಸುವೆವು.

ವಾರ್ಷಿಕ ರಿಪೋರ್ಟಿನ ಸಂಗ್ರಹವು.

ಬೆಂಗಳೂರು ಶ್ರೀನಿವಾಸ ಮಂದಿರ.—ಬೆಂಗಳೂರು ಶ್ರೀನಿವಾಸ ಮಂದಿರದ ವಾರ್ಷಿಕ ರಿಪೋರ್ಟು ನಮಗೆ ತಲಪಿದೆ. ಈ ಮಂದಿರದಲ್ಲಿ 25 ಮಕ್ಕಳು ಇರುತ್ತಾರೆ. ಇವರಿಗೆ ದೊಡ್ಡವರಾದ ಮೇಲೆ ಜೀವನ ಸಂಪಾದಿಸಿಕೊಳ್ಳುವದಕ್ಕೆ ಅನುಕೂಲವಾದ ವಿದ್ಯೆ ಮೊದಲಾದವುಗಳನ್ನು ಕಲಿಸುತ್ತಿದಾರೆಂದೂ, ಅವರನ್ನೆಲ್ಲಾ ಚೆನ್ನಾಗಿ ಆದರಿಸಿ ಸಂರಕ್ಷಿಸಲಾಗುತ್ತಿದಾರೆಂದೂ ತಿಳಿದುಬರುವುದು. ಕಳೆದ ವರುಷ ಈ ಮಂದಿರದ ಖರ್ಚು ರೂ. 4,620-12-6 ಪೈ ಆಯಿತು. ಈ ಮೊಬಲಗನ್ನು ಚಂದಾ ಮೊದಲಾದ ನಾನಾ ರೀತಿಯಲ್ಲಿ ಕೂಡಿಸಿರುತ್ತಾರೆಂದು ತಿಳಿಯುವುದು.

ಮೈಸೂರು ಕಿವುಡು ಮೂಗರ ಮತ್ತು ಕುರುಡರ ಪಾಠಶಾಲೆ.—ಈ ಪಾಠಶಾಲೆಯ ಮೇಲ್ವಿಚಾರಣಾಕರ್ತರು ಕಳೆದ ವರುಷದ ರಿಪೋರ್ಟನ್ನು ರಚಿಸಿ ನಮಗೊಂದು ಪ್ರತಿಯನ್ನು ಕಳುಹಿಸಿದಾರೆ. ಇದರಲ್ಲಿ ಮೊದಲು ಪೋಷಕರಾದ ಶ್ರೀಮನ್ಮಹಾರಾಜರವರ ತಸ್ವೀರನ್ನೂ, 1913 ನೇ ನೊವೆಂಬರಿನಲ್ಲಿ ವೈಸ್ ರಾಯರವರು ರಾಜಧಾನಿಗೆ ದಯಮಾಡಿದಾಗ ಈ ಪಾಠಶಾಲೆಯ ವಿದ್ಯಾರ್ಥಿಗಳು ಒಂದು ಕಡೆ ಸೇರಿ ಅವರಿಗೆ ಸುಸ್ವಾಗತವನ್ನು ಬಯಸಿದ ತಸ್ವೀರನ್ನೂ ಅಚ್ಚು ಹಾಕಿಸಿರುತ್ತಾರೆ. ಇವೆರಡೂ ನೇತ್ರಾನಂದಕರವಾಗಿರುತ್ತವೆ. ರಿಪೋರ್ಟನ್ನು ಓದಿ ನೋಡುವಲ್ಲಿ ಈ ಪಾಠಶಾಲೆಯು ತೃಪ್ತಿಕರವಾದ ರೀತಿಯಲ್ಲಿ ನಡಿಸಲ್ಪಡುತ್ತಾ ಅಭಿವೃದ್ಧಿಹೊಂದುತ್ತಿದೆ ಎಂದು ತಿಳಿದು ಸಂತೋಷಪಡುವೆವು. ಅದರಲ್ಲಿ 41 ವಿದ್ಯಾರ್ಥಿಗಳಿದಾರೆ. ಈ ಪೈಕಿ 14 ಮಂದಿ ಕಿವುಡು ಮೂಗರು, 27 ಮಂದಿ ಕುರುಡರು. ಎಲ್ಲಾ ಜಾತಿ ಪಂಗಡಗಳ ವಿದ್ಯಾರ್ಥಿಗಳನ್ನೂ ಸೇರಿಸಿಕೊಳ್ಳುತ್ತಾರೆ. ಸದ್ಯದಲ್ಲಿ ಬ್ರಾಹ್ಮಣ ಬಾಲಕರೇ ಹೆಚ್ಚಾಗಿರುವರು ; ಅಂದರೆ 24 ಮಂದಿ ಇದಾರೆ. ಕೆಲವರಿಗೆ ಸಂಗೀತವನ್ನೂ, ಕೆಲವರಿಗೆ ನೆಯ್ಗೆಯನ್ನೂ, ಕೆಲವರಿಗೆ ಚಿತ್ರದ ಕೆಲಸವನ್ನೂ ಈ ಪಾಠಶಾಲೆಯಲ್ಲಿ ಕಲಿಸುತ್ತಾರೆ. ಈ ವಿದ್ಯಾರ್ಥಿಗಳ ಪೈಕಿ 25 ಮಂದಿ ಪಾಠಶಾಲೆಯೊಳಗೇ ವಾಸಮಾಡಿಕೊಂಡು ಅಲ್ಲೇ ಭೋಜನಾದಿಗಳನ್ನು ಮಾಡುವರು. ಹೊರಗಿನಿಂದ 16 ಮಂದಿ ಬಂದು ಪಾಠಶಾಲೆಯಲ್ಲಿ ವಿದ್ಯಾದಿಗಳನ್ನು ಕಲಿತುಕೊಂಡು ಹೋಗುತ್ತಿದಾರೆ. ಗವರ್ನ್‌ಮೆಂಟ್ ಗ್ರ್ಯಾಂಟು ಸೇರಿ ಕಳೆದ ವರುಷ ಒಟ್ಟು ಈ ಪಾಠಶಾಲೆಗೆ ರೂ. 4,458-6-3 ಪೈ ಜಮಾ ಆಯಿತು ; ಖರ್ಚು ರೂ. 3,703-0-8 ಪೈ ಆಗಿರುತ್ತದೆ. ಮೈಸೂರಿನಲ್ಲಿ ಕಿವುಡರಿಗೂ ಕುರುಡರಿಗೂ ಇಂಥಾ ಅನುಕೂಲವಾದ ಏರ್ಪಾಡನ್ನು ಮಾಡಿ ನಡಿಸುತ್ತಾ, ಅವರ ಜೀವನವನ್ನು ಸಂತೋಷಪ್ರದವಾಗುವಂತೆ ಮಾಡಿರುವುದನ್ನು ನೋಡಿ ಹರ್ಷಪಡುತ್ತೇವೆ.

ಋತುಮತಿಯರ ವಿವಾಹವು.

ಕಳೆದ ನವಂಬರ್ 21 ನೇ ತಾ. ನಲ್ಲಿ ಸೇರಿದ ಮದರಾಸ್ ಲೆಜಿಸ್ಲೆಟಿವ್ ಕೌನ್ಸಿಲ್ ಸಭೆಯಲ್ಲಿ ಆನರೆಬಲ್ ವಿ. ಶ್ರೀನಿವಾಸಶಾಸ್ತ್ರಿಯವರು ಋತುಮತಿಯರಾದ ಹಿಂದೂ ಸ್ತ್ರೀಯರ ವಿವಾಹವು ನ್ಯಾಯಸಮ್ಮತವಾಗಿದೆ ಎಂಬ ವಿಚಾರವನ್ನು ಚರ್ಚಿಸುವದಕ್ಕೆ ಸಭೆಯವರ ಅನುಮತಿಯನ್ನು ಕೇಳಿದರು. ಈ ಮಸೂದೆಯ ಮುಖ್ಯಾಂಶಗಳೇನೆಂದರೆ—(1) ಈ ಮಸೂದೆಯು 1914 ನೇ ಇಸವಿಯ ಹಿಂದೂ ಋತುಮತೀ ವಿವಾಹದ ಮಸೂದೆಯೆಂದು ಕರೆಯಲ್ಪಡತಕ್ಕದ್ದು. (2) ಈ ಮಸೂದೆಯು ಮದರಾಸ್ ಆಧಿಪತ್ಯದೊಳಗೆ ಹಿಂದೂ ಕಾನೂನಿಗೆ ಒಳಪಟ್ಟ ಸರ್ವರಿಗೂ ಅನ್ವಯಿಸತಕ್ಕದ್ದು. (3) ಇದಕ್ಕೆ ವಿರುದ್ಧವಾಗಿ ಪದ್ಧತಿಯಾಗಲಿ ಕಾನೂನಾಗಲಿ ಇದ್ದರೂ ಈ ಮಸೂದೆಯು ಜಾರಿಗೆ ಬರುವದಕ್ಕೆ ಮೊದಲಾಗಲಿ ಅನಂತರವಾಗಲಿ ನಡೆದ ವಿವಾಹವು, ವಿವಾಹ ಕಾಲದಲ್ಲಿ ಹುಡುಗಿ ಮೈನೆರೆದಿದ್ದಳು ಎಂಬ ಕಾರಣದಿಂದ ನ್ಯಾಯವಿರುದ್ಧವೆಂದು ಭಾವಿಸಲ್ಪಡಕೂಡದು. ದಕ್ಷಿಣ ಹಿಂದುಸ್ಥಾನದ ನಂಬೂದ್ರಿ ಬ್ರಾಹ್ಮಣರ ಹೊರತು ಉಳಿದ ಬ್ರಾಹ್ಮಣರಲ್ಲಿಯೂ, ಬ್ರಾಹ್ಮಣರಲ್ಲದ ಹಿಂದುಗಳ ಪೈಕಿ ಕೆಲವು ಪಂಗಡದವರಲ್ಲಿಯೂ ಹುಡುಗಿಯು ಪ್ರಾಯಕ್ಕೆ ಬರುವ ಮೊದಲೇ ಮದುವೆಮಾಡುವ ಪದ್ಧತಿ ಇರುತ್ತದೆ. ಸ್ಮೃತಿಗಳ ಪ್ರಕಾರ ಹುಡುಗಿಯು ಮೈನೆರೆದ ನಂತರ ಮಾಡುವ ಮದುವೆಯು ಶಾಸ್ತ್ರಸಮ್ಮತವಾಗಲಾರದು. ಮತ್ತೆ ಕೆಲವು ಸ್ಮೃತಿಗಳು ಹೆಣ್ಣುಮಕ್ಕಳು ಪ್ರಾಯಕ್ಕೆ ಬಂದ ನಂತರ ಮೂರು ವರ್ಷಗಳ ನಂತರವಾದರೂ ಮದುವೆಮಾಡಬೇಕೆಂದು ಹೇಳುತ್ತವೆ. ನಂತರ ಸ್ಮೃತಿಯು ಹೆತ್ತವರು ತಮ್ಮ ಹುಡುಗಿಗೆ ಪ್ರಾಯ ಬಂದ ನಂತರ ಮದುವೆಮಾಡಬೇಕೆಂಬ ಅಭಿಪ್ರಾಯಪಡುತ್ತದೆ. ಪ್ರಾಚೀನ ಪದ್ಧತಿಗಳನ್ನು ತಿಳಿದುಕೊಳ್ಳುವದಕ್ಕೆ ಆಧಾರವಾಗಿರುವ ಗೃಹ್ಯಸೂತ್ರಗಳ ಪ್ರಕಾರ ಕೆಲವು ಅಪವಾದಗಳ ಹೊರತು ಮದುವೆಮಾಡಿದವರು ಮದುವೆಯಾದ ನಾಲ್ಕು ದಿವಸಗಳ ಮೇಲೆ ಗಂಡಹೆಂಡರು ಸಹವಾಸದಲ್ಲಿ ಇರುವದು ವಿವಾಹ ಸಂಸ್ಕಾರದ ಒಂದಂಶವಾಗಿದೆ. ಇವೇ ಮೊದಲಾದ ಕಾರಣಗಳಿಂದ ಋತುಮತೀ ವಿವಾಹವು ಶಾಸ್ತ್ರಸಮ್ಮತವಲ್ಲವೆಂದು ಕೆಲವರು ಊಹಿಸುತ್ತಾರೆ. ಪ್ರಾಪ್ತವಯಸ್ಕರಾದ ಮೇಲೆ ವಿವಾಹಮಾಡಿದರೆ ಹೆಣ್ಣುಮಕ್ಕಳು ಹೆಚ್ಚಾಗಿ ವಿದ್ಯೆಯನ್ನು ಕಲಿಯಲು ಅವಕಾಶವಾಗುವದಲ್ಲದೆ, ಅವರು ಬಾಲವಿಧವೆಯರಾಗುವ ಸಂಭವವೂ ಕಡಮೆಯಾಗುತ್ತದೆ. ಇದರಿಂದ ಸ್ತ್ರೀಯರ ಸಾಮಾನ್ಯಸ್ಥಿತಿಯೂ, ತನ್ಮೂಲಕ ಜನಾಂಗದ ಸ್ಥಿತಿಯೂ ಏಳಿಗೆಗೆ ಬರುವದು. ಆದರೆ ಈ ರೀತಿ ಆಚರ[illegible]ನೆಗೆ ತರು[illegible]ವಕ್ಕೆ ಈಗಿರುವ ಯಾವ ಕಾನೂನೂ ಸಹಕಾರಿಯಾಗಿಲ್ಲ. ಹಿಂದೆ ಈ ವಿಚಾ[illegible]ವಾಗಿ ನಡೆದ ಒಂದು ವ್ಯಾಜ್ಯದಲ್ಲಿ, ಗತಿಸಿದ ಕೃಷ್ಣಸ್ವಾಮಿ ಅಯ್ಯರವರು [illegible]ಋತುಮತೀ ವಿವಾಹವು ಕಾನೂನಿಗೆ ವಿರೋಧವಲ್ಲವೆಂದು ಬರೆದಿದಾರೆ. ಆದರೆ ಸರ್ ಟಿ. ಮುತ್ತುಸ್ವಾಮಿ ಅಯ್ಯರವರು ಇದಕ್ಕೆ ಪ್ರತಿಕೂಲವಾಗಿ ಹೇಳಿರುತ್ತಾರೆ. ಹೀಗೆ ಶಾಸ್ತ್ರಾಧಾರಗಳಲ್ಲಿಯೂ, ಜನರ ಅಭಿಪ್ರಾಯಗಳಲ್ಲೂ ಭೇದ ಕಾಣುವಾಗ ಕೋರ್ಟಿನ ವ್ಯಾಜ್ಯದಲ್ಲಿ ಋತುಮತೀ ವಿವಾಹವು ನ್ಯಾಯಸಮ್ಮತವಾದದ್ದಲ್ಲವೆಂದು ತೀರ್ಮಾನವಾಗಬಹುದು. ಯಾರಾದರೂ ಪ್ರಾಯಸಮರ್ಥೆಯಾದ ಹುಡುಗಿಗೆ ಮದುವೆಮಾಡಿಕೊಟ್ಟರೆ ಆ ಮದುವೆಯು ನ್ಯಾಯವಾದದ್ದೆಂದು ತೀರ್ಮಾನಿಸುವುದಕ್ಕೆ ಅನುಕೂಲವಾಗಿ ಒಂದು ಕಾನೂನು ಮಾಡುವದು ಅವಶ್ಯಕವಾಗಿದೆ. ಈ ಮಸೂದೆಯು ಹಿಂದೂ ವಿವಾಹಕ್ರಮ ಪದ್ಧತಿಗಳಿಗೆ ವಿರೋಧವಾಗಿದೆಯೆಂದು ಎಣಿಸಕೂಡದು. ಪ್ರಾಚೀನಪದ್ಧತಿಯನ್ನೇ ಅನುಸರಿಸತಕ್ಕವರಿಗೆ ಈ ಮಸೂದೆಯು ಯಾವ ತೊಂದರೆಯನ್ನೂ ಉಂಟುಮಾಡುವದಿಲ್ಲ. ಮೇಲೆ ಹೇಳಿದ ಮಸೂದೆಯನ್ನು ವಿವರಿಸುವಾಗ ಆನರೆಬಲ್ ಶ್ರೀನಿವಾಸಶಾಸ್ತ್ರಿಯವರು ಬಾಲ್ಯ ವಿವಾಹದಿಂದ ಉಂಟಾಗತಕ್ಕ ಕೇಡುಗಳನ್ನೂ, ವರದಕ್ಷಿಣೆ ಬಳುವಳಿ ಇವುಗಳಿಂದ ಸಂಭವಿಸುವ ತೊಂದರೆಗಳನ್ನೂ, ಹುಡುಗಿಯರಿಗೆ ವಿದ್ಯೆಯ ವಿಷಯದಲ್ಲಿ ಉಂಟಾಗುವ ಅಭ್ಯಂತರಗಳನ್ನೂ ವಿವರಿಸಿದರು. ಹಲವು ಮೆಂಬರುಗಳು ಇವರ ಅಭಿಪ್ರಾಯವನ್ನೇ ಅನುಮೋದಿಸಿ ಭಾಷಣಮಾಡಿದರು. ಸರ್ ಹಾರಲ್ಡ್ ಸ್ಟೂವರ್ಟರವರು ಈ ಮಸೂದೆಯನ್ನು ಸಭೆಯ ಮುಂದಿಡುವದರಲ್ಲಿ ಸರ್ಕಾರದವರ ಆಕ್ಷೇಪವೇನೂ ಇಲ್ಲದಿದ್ದರೂ ಅದನ್ನು ಹಿಡಿದು ಚರ್ಚಿಸುವದಕ್ಕೆ ವೈಸರಾಯರವರ ಕೌನ್ಸಿಲ್ಲಿನ ಅನುಮತಿ ಬೇಕಾಗಿದೆಯೆಂತಲೂ, ಈ ಮಸೂದೆಯ ವಿಷಯದಲ್ಲಿ ಜನರ ಅಭಿಪ್ರಾಯವನ್ನು ತಿಳಿಯುವದಕ್ಕೆ ಮೊದಲು ತಮ್ಮ ಅಭಿಪ್ರಾಯವನ್ನು ಹೇಳುವದಕ್ಕೆ ಆಗುವದಿಲ್ಲವೆಂತಲೂ ತಿಳಿಸಿದರು. ಸಮಾಜದ ಏಳಿಗೆಯನ್ನು ಬಯಸುವ ಸಕಲ ಹಿಂದುಗಳೂ ಈ ಹೊಸ ಮಸೂದೆಯನ್ನು ಸಂತೋಷಪೂರ್ವಕವಾಗಿ ಅಂಗೀಕರಿಸುವರೆಂಬುದು ನಮ್ಮ ಬಯಕೆ

ಸೆಂಟ್ ಜಾನ್ ಅಂಬ್ಯುಲೆನ್ಸ್ ಸಂಘ, ಮೈಸೂರು.

ಮೇಲ್ಕಂಡ ಸಂಘದ ಆನರರಿ ಸೆಕ್ರೆಟರಿ ಸರದಾರ್ ಎಂ. ಲಕ್ಷ್ಮೀಕಾಂತರಾಜೆಅರಸಿನವರು ಯುದ್ಧದ ರಿಲೀಫ್ ಫಂಡಿಗೆ ವಸೂಲಾಗಿರುವ ಐದನೇ ಚಂದಾಪಟ್ಟಿಯನ್ನು ನಮ್ಮಲ್ಲಿಗೆ ಕಳಿಸಿದಾರೆ. ಮೊಬಲಗು ಎಷ್ಟೆಂದರೆ :—

ಮೈಸೂರು ಲೇಡೀಸ್ ಕಮಿಟಿ ರೂ. 223-11-10, ಚನ್ನರಾಯಪಟ್ಟಣದ ಅಮಲ್ದಾರರು ಆ ತಾಲ್ಲೂಕಿನ ಗ್ರಾಮಾಂತರಗಳಲ್ಲಿ ಕೂಡಿಸಿದ್ದು ರೂ. 110, ಹಾಸನದ ಸ್ತ್ರೀಯರು ಮಿಸೆಸ್ ವೆದರಾಲ್‌ರವರ ಮೂಲಕ ರೂ. 136-11-0, ಹರಿಹರದ ಪ್ರಜೆಗಳು ಅಮಲ್ದಾರ್ರ ಮೂಲಕ ರೂ. 105, ಬೌರಿಂಗ್‌ಪೇಟೆಯ ಪ್ರಜೆಗಳು ಅಮಲ್ದಾರ್ರ ಮೂಲಕ ರೂ. 83-10-0, ಕೃಷ್ಣರಾಜಪೇಟೆಯ ಪ್ರಜೆಗಳು ಅಮಲ್ದಾರ್ರ ಮೂಲಕ 2 ನೇ, 3 ನೇ ಸಲ ರೂ. 56, ಬೆಂಗಳೂರು ವ್ಯವಸಾಯದ ಆಫೀಸ್ ನೌಕರವರ್ಗದವರು ರೂ. 48-7-0, ಬಿಡ್‌ಕೋಟೆ ಪ್ರಜೆಗಳು ರೂ. 38-5-0, ಕೊಲಾರ್‌ಪೇಟೆ ತಾಲ್ಲೂಕು ಪ್ರಜೆಗಳು ರೂ. 37-15-0, ಜಗಲೂರು 2 ನೇ ದಫಾ ರೂ. 32, ಹೊಳೆನರಸಿಪುರ ರೂ. 30, ದಾವಣಗೆರೆ ರೂ. 30, ಚಿಕ್ಕಮಗಳೂರು ಡಿ॥ ಮೆಡಿಕಲ್ ಆಫೀಸ್ ರೂ. 23-8-0, ತುರುವೆಕೆರೆಗ್ರಾಮ ರೂ. 20, ಶಿವಮೊಗ್ಗಾ ಹೈಸ್ಕೂಲ್ ಮಾಸ್ಟರುಗಳೂ ವಿದ್ಯಾರ್ಥಿಗಳೂ ರೂ. 17-9-0 ಬೆಂಗಳೂರು ಡಿ. ಪಿ. ಡಬ್ಲ್ಯು. ಆಫೀಸ್ ರೂ. 16, ನೇರಲಕೆರೆ ಗ್ರಾಮ ರೂ. 13-13-0, ಮೈಸೂರು ಟ್ರೇನಿಂಗ್ ಕಾಲೇಜ್ ಮಾಸ್ಟರುಗಳೂ ವಿದ್ಯಾರ್ಥಿಗಳೂ ರೂ. 12-7-0, ಬಾಗೆಪಲ್ಲಿ ಫಾರೆಸ್ಟ್ ರೇಂಜ್ ಆಫೀಸ್ ರೂ. 12, ಮೈಸೂರು ಸಿಟಿ ಪೊಲೀಸ್ ಇಲಾಖೆ ಕೀಳು ನೌಕರರು ರೂ. 11-1-0, ಹಮುಕಂಟಿ ಗ್ರಾಮಸ್ಥರು ರೂ. 10-7-0, ಮೂಡಿಗೆರೆ ಎಕ್ಸೈಸ್ ಆಫೀಸಿನವರು ರೂ. 10-6-0, ಮ॥ ಎ. ಕೃಷ್ಣೆ ಅರಸಿನವರು ರೂ. 10, ಒಡೆಕೆರೆಹಳ್ಳಿ ಗ್ರಾಮಸ್ಥರು ರೂ. 9-14-0, ಕೋಲಾರ್ ಹೆಂಗಸರ ಆಸ್ಪತ್ರೆ ಡಾಕ್ಟರು ಮತ್ತು ನೌಕರರು ರೂ. 7-8-0, ಕೋಲಾರ್ ಫಾರೆಸ್ಟ್ ಆಫೀಸು ರೂ. 6-10-0, ಬೆಂಗಳೂರು ರೈಲ್ವೆ ಸೆಕ್ರೆಟೇರಿಯಟ್ ನೌಕರರು ರೂ. 6-10-0, ಮಾಗಡಿ ಪ್ರಜೆಗಳು ರೂ. 6-7-0, ಬೆಂಗಳೂರು ಪ್ರಾಚೀನ ಲಿಪಿಸಂಶೋಧನ ಆಫೀಸ್ ರೂ. 6-8-0 ; ಕೆಳಗೂರು ಕಟ್ಟೆ ಸ್ಕೂಲ್ ಮಾಸ್ಟರುಗಳೂ ವಿದ್ಯಾರ್ಥಿಗಳೂ, ಮ॥ ಎಚ್. ಎಸ್. ನಾರಾಯಣರಾಯರು, ಮ॥ ಸಿ. ರಾಜಗೋಪಾಲ್‌ರವರು, ಪ್ರ॥ ಡಿ. ಚೇಂಬರ್ಸ್, ತಲಾ ರೂ. 5 ; 5 ರೂಪಾಯಿನೊಳಗೆ ಬಂದ ಚಂದಾಗಳು ರೂ. 31-15 ; ಹಿಂದೆ ವಸೂಲಾಗಿರುವ ಚಂದಾ ರೂ. 3,674-14-0 ; ಜುಮ್ಲಾ ರೂಪಾಯಿ 4,868-8-7.

ಮೈಸೂರು ಗೆಜೆಟ್ ಸಂಗ್ರಹ.

ಶ್ರೀರಂಗದಲ್ಲಿ ವಾಂತಿಭೇದಿ ಉಪದ್ರವಿರೋಣವರಿಂದ ವೈಕುಂಠ ಏಕಾದಶಿ ಉತ್ಸವಕ್ಕೆ ಅಲ್ಲಿಗೆ ಯಾತ್ರಿಕರು ಹೋಗದೆ ಇರುವುದು ಒಳ್ಳೇದೆಂದು ಎಚ್ಚರಿಕೆ ಕೊಟ್ಟಿದೆ.

ಇದೇ ಡಿಸೆಂಬರ್ ತಾ. 24 ನೇ ಗುರುವಾರದಿಂದ ಜನವರಿ ತಾ. 1 ನೇ ಶುಕ್ರವಾರದ ವರೆಗೆ (ಎರಡು ದಿನಗಳೂ ಸೇರಿ) ಕ್ರಿಸ್ಮಸ್ ಪಬ್ಲಿಕ್ಕಾಗಿ ರಜಾ ಕೊಟ್ಟಿರೋಣದರಿಂದ ಪಬ್ಲಿಕ್ ಆಫೀಸುಗಳೂ, ಕೋರ್ಟುಗಳೂ, ವಿದ್ಯಾಶಾಲೆಗಳೂ ಮುಚ್ಚಲ್ಪಡತಕ್ಕದ್ದು.

ಚಾಮರಾಜನಗರದ ತಾಲ್ಲೂಕ್ ಬೋರ್ಡಿನವರು ಮ॥ ವೆಂಕಟರಾಮಯ್ಯನವರನ್ನು ಮೈಸೂರು ಡಿಸ್ಟ್ರಿಕ್ಟ್ ಬೋರ್ಡಿನ ಮೆಂಬರಾಗಿ ಚುನಾವಣೆ ಮಾಡಿರುತ್ತಾರೆ.

ಕುಣಿಗಲ್ ಡೆಪ್ಯುಟಿ ಅಮಲ್ದಾರ್ ಮ॥ ಎಸ್. ಅನಂತರಾಮಯ್ಯಂಗಾರ್ರಿಗೆ ಕೊಟ್ಟಿರುವ ಪ್ರಿವಿಲೆಜ್ ರಜಾ ಜೊತೆಗೆ ಮುಂದಿನ ಏಪ್ರಿಲ್ ತಾ. 10 ರ ತನಕ ಫರ್ಲೋ ರಜಾ ಕೊಟ್ಟಿದೆ. ಈಗಿನ ಬದಲಿ ಏರ್ಪಾಡು ಜಾರಿಯಲ್ಲಿರತಕ್ಕದ್ದು.

ರೆವಿನ್ಯೂ ಕಮಿಷನರ್ ಮ॥ ಕೆ. ಎಸ್. ದೊರೆಸಾಮಿ ಅಯ್ಯರವರಿಗೆ ಕ್ರಿಸ್ಮಸ್ ರಜಾ ಜೊತೆಗೆ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಅವರ ಮೊದಲನೇ ಅಸಿಸ್ಟೆಂಟರು ಆಫೀಸಿನ ಚಾಲ್ತಿ ಕೆಲಸಗಳ ಭಾರವನ್ನು ವಹಿಸತಕ್ಕದ್ದು.

ಮುಜಮ್ಮತ್ ಇಲಾಖಾ ಅ॥ ಎಗ್ಸಾಮಿನರ್ ಮ॥ ಎ. ಅಪ್ಪಾಜಪ್ಪ ಮೊದಲಿಯಾರ್ರಿಗೆ ಡಿಸೆಂಬರ್ ತಾ. 9 ರಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ; ಇವರು ಕ್ರಿಸ್ಮಸ್ ರಜವನ್ನೂ ಉಪಯೋಗಿಸಿಕೊಳ್ಳಬಹುದಾಗಿದೆ. 1 ನೇ ಗ್ರೇಡ್ ಅಕೌಂಟೆಂಟ್ ಮ॥ ಎಸ್. ರಾಮಸ್ವಾಮಿ ಅಯ್ಯಂಗಾರ್ರು ಅವರ ಕೆಲಸದ ಭಾರವನ್ನು ವಹಿಸತಕ್ಕದ್ದು.

ಕೋಲಾರದ ಡಿಸ್ಟ್ರಿಕ್ಟ್ ಪೊಲೀಸ್ ಸೂಪರಿಂಟೆಂಡೆಂಟ್ ಮ॥ ಸಿ. ದೇವರಾಜೆ ಅರಸಿನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಮಾಲೂರ್ ತಾಲ್ಲೂಕ್ ಅಮಲ್ದಾರ್ ಮಿ॥ ಸಿ. ಮೆ. ರಾಬರ್ಟ್ಸನ್‌ರವರನ್ನು ಕೋಲಾರದ ಡಿಸ್ಟ್ರಿಕ್ಟ್ ಪೊಲೀಸ್ ಸೂಪರಿಂಟೆಂಡೆಂಟರಾಗಿ ಬದಲಿ ನೇಮಕ ಮಾಡಿದೆ.

3 ನೇ ಕ್ಲಾಸ್ ಸರ್ಜನ್ ಮಿಸ್ ಆಯಿಷಮ್ಮಾಳ್ ರವರನ್ನು ಶಿವಮೊಗ್ಗಾ ಹೆಂಗಸರ ಆಸ್ಪತ್ರೆಗೆ ವರ್ಗಮಾಡಿದೆ.

ಮ॥ ಎಂ. ಜಿ. ಶಿಂಗ್ರಾಚಾರ್ರನ್ನು 2 ನೇ ಕ್ಲಾಸ್ ಸಬ್ ಅಸಿಸ್ಟೆಂಟ್ ಸರ್ಜನರಾಗಿ ನೇಮಿಸಿ ಮೈಸೂರು ಡಿವಿಜನ್‌ಗೆ ವರ್ಗಮಾಡಿದೆ.

ನಮ್ಮ ಪುಸ್ತಕ ಭಂಡಾರವು.

"ಯುದ್ಧ"—ಬೊಂಬಾಯಿನಲ್ಲಿರುವ ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್ಸಿನವರು ಈ ಪುಸ್ತಕವನ್ನು ಕನ್ನಡದಲ್ಲಿ ಅಚ್ಚುಹಾಕಿಸಿರುತ್ತಾರೆ. ಇದು ಸರ್ ಎ. ಕೊನನ್ ಡಾಯಲ್‌ರವರು ಬರೆದಿರುವ ಇಂಗ್ಲಿಷ್ ಪುಸ್ತಕದ ಭಾಷಾಂತರ. ಈಗ ನಡೆಯುತ್ತಿರುವ ಯುದ್ಧದಲ್ಲಿ ನಮ್ಮ ಬ್ರಿಟಿಷ್ ಗವರ್ನ್‌ಮೆಂಟಿನವರು ಯಾತಕ್ಕಾಗಿ ತಲೆಹಾಕಿದರೋ ಅದರ ಕಾರಣಗಳನ್ನು ಈ ಪುಸ್ತಕವು ತಿಳಿಸುವುದಲ್ಲದೆ ನಾವುಗಳು ನಮ್ಮ ಸಾರ್ವಭೌಮರವರಿಗೆ ನಮ್ಮ ಕೈಲಾಗುವಷ್ಟು ಸಹಾಯ ಮಾಡಬೇಕೆಂದು ಹೇಳುವುದು. ಈ ಸಣ್ಣಪುಸ್ತಕದ ಕ್ರಯ 1 ಆಣೆ; ಇದನ್ನು ಬೆಂಗಳೂರು ಸಿಟಿ ಚಾಮರಾಜಪೇಟೆ ಪಿ. ಟಿ. ಎ. ಬುಕ್ ಡಿಪೋದಿಂದ ತರಿಸಿಕೊಳ್ಳಬಹುದು. ಹೆಚ್ಚು ಪ್ರತಿಗಳನ್ನು ತರಿಸಿಕೊಳ್ಳುವವರಿಗೆ ರಿಯಾಯತಿ ಉಂಟು. ಈ ಪುಸ್ತಕದ ಕನ್ನಡ ಭಾಷಾ ಬಂಧವೂ ಸರಣಿಯೂ ನಮ್ಮ ಮೈಸೂರು ಕನ್ನಡದಂತಿಲ್ಲವಾದದ್ದರಿಂದ ಬೇಗನೆ ಓದಿ ತಿಳಿದುಕೊಳ್ಳುವುದು ಸ್ವಲ್ಪ ಕಷ್ಟ. ಆದರೂ ಅದರಲ್ಲಿ ಅಡಗಿರುವ ಅಭಿಪ್ರಾಯಗಳು ಗ್ರಾಹ್ಯವಾಗುವುದೇನೂ ಪ್ರಯಾಸವಲ್ಲ.

"ಶ್ರೀಚಾಮರಾಜೇಂದ್ರ ಒಡೆಯರವರ ಚರಿತ್ರೆ"—ಈ ಚರಿತ್ರೆಯನ್ನು ಮೈಸೂರು ಗವರ್ನ್‌ಮೆಂಟ್ ಬ್ರಾಂಚ್ ಪ್ರೆಸ್ಸಿನಲ್ಲಿರುವ ಮ॥ ಶಿಂಗ್ರಯ್ಯನವರು ರಚಿಸಿರುತ್ತಾರೆ ಇದರ ಮೊದಲನೇ ಛಾಪೆಯ ಪ್ರತಿಗಳೆಲ್ಲಾ ಮುಗಿದು ಈಗ ಎರಡನೆಯ ಮುದ್ರಣವಾಗಿರುತ್ತದೆ. ಮ॥ ಶಿಂಗ್ರಯ್ಯನವರು ಇದರಲ್ಲಿ ಮೈಸೂರು ಚರಿತ್ರೆಗೆ ಸಂಬಂಧಪಟ್ಟ ಅನೇಕ ಹೊಸ ವಿಚಾರಗಳನ್ನು ಸೇರಿಸಿ ಪುಸ್ತಕವನ್ನು ದೊಡ್ಡದು ಮಾಡಿದಾರೆ ಇದಲ್ಲದೆ ಅನೇಕ ಅಪೂರ್ವವಾದ ಹೊಸ ಚಿತ್ರಗಳನ್ನು ಸೇರಿಸಿರುವರು. ಇದನ್ನು ಓದುವ ಕನ್ನಡಿಗರಿಗೆ ನಮ್ಮ ಲೇಟ್ ಮಹಾರಾಜರವರ ಜೀವಮಾನಚರಿತ್ರೆಯೂ, ಮೈಸೂರು ಚರಿತ್ರೆಯ ಅನೇಕ ವಿಚಾರಗಳೂ ತಿಳಿದುಬರುವವು ಈ ಪುಸ್ತಕವನ್ನು ಶ್ರೀಮನ್ಮಹಾರಾಜರವರೂ ರಾಜಮಾತೆಯವರೂ ಪರಿಗ್ರಹಿಸಿ ಸಂತೋಷಪಟ್ಟಿರುವಂತೆ ತಿಳಿದುಬರುತ್ತದೆ. ಮೈಸೂರು ಸೀಮೆಯ ಪ್ರಜೆಗಳು ಓದಿ ಸಂತೋಷಪಡಲು ಅರ್ಹವಾದದ್ದಾಗಿದೆ.

"ರಾಜಭಕ್ತಿಸಂಪುಟ"—ನಮ್ಮ ವೈಸ್‌ರಾಯ್ ಲಾರ್ಡ್ ಹಾರ್ಡಿಂಗ್ ಪ್ರಭುಗಳಿಗೆ ದೆಹಲಿಯಲ್ಲಿ ಸಂಭವಿಸಿದ ವಿಪತ್ತಿನಿಂದ ಮುಕ್ತರಾದ ಸಂತೋಷವನ್ನು ಸೂಚಿಸುವುದಕ್ಕಾಗಿ ಮಾಗಡಿಯ ಮ॥ ಕೆ. ರಾಮಸ್ವಾಮಯ್ಯಂಗಾರ್ರು 101 ಪದ್ಯಗಳನ್ನು ರಚಿಸಿರುತ್ತಾರೆ ಇದಲ್ಲದೆ ಇವರು "ಬಾಲಿಕಾ ನೀತಿಮಾಲೆ" ಎಂಬ ಪುಸ್ತಕವನ್ನು ರಚಿಸಿರುವರು.

ನಮಗೆ ತಲಪಿರುವ ಇತರ ಪುಸ್ತಕಗಳ್ಯಾವವೆಂದರೆ ಶ್ರೀಚಾಮರಾಜಪೇಟೆ ಪಟ್ಟದ ಮ॥ ವೇಶಿಕಾಸ್ತ್ರಿಯರು ಬರೆದಿರುವ "ಸಂಗೀತ ಚಿಂತಾಮಣಿ", ನಂಜನಗೂಡು ತಿರುಮಲಮ್ಮನವರು ರಚಿಸಿದ "ಸತೀಹಿತ ರತ್ನಸೇ", ಚನ್ನರಾಯಪಟ್ಟಣದ ತಾಲ್ಲೂಕು ಹಿರೀಸಾವೆ ವಿದ್ಯಾರ್ಥಿಗಳ ವಾಚಕಮಂದಿರದ ನಿಬಂಧನೆಗಳು

ಬಾತ್ಮಿದಾರರಿಗೆ ನೋಟೀಸ್.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳ ಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸವನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು ; ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು

ಕರೆಸ್ಪಾಂಡೆನ್ಸ್.

ಅಧಿಕ ವೈಶಾಖವೋ ಅಧಿಕ ಜ್ಯೇಷ್ಠವೋ — ಉತ್ತರ.

ಅಯ್ಯಾ,—ತಮ್ಮ ಕಳೆದ ವಾರದ ಪತ್ರಿಕೆಯಲ್ಲಿ ಅಧಿಕಮಾಸದ ಸಂದೇಹವಿಷಯವಾಗಿ ಪ್ರಕಟಿಸಿದ್ದು ಸರಿಯಷ್ಟೆ. ಅಧಿಕಮಾಸವೆಂದರೆ "ಅಸಂಕ್ರಾಂತಮಾಸೋಧಿಮಾಸಃ" ಎಂಬ ಪ್ರಕಾರ ಯಾವ ಚಾಂದ್ರಮಾಸದಲ್ಲಿ ಸಂಕ್ರಮಣ ಹುಟ್ಟುವದಿಲ್ಲವೋ ಆ ತಿಂಗಳಿಗೆ ಅಧಿಕಮಾಸವೆಂದು ಹೆಸರು. ಪ್ರಸ್ತುತ ಬರುವ ರಾಕ್ಷಸ ಸಂವತ್ಸರದಲ್ಲಿ ವೈಶಾಖ ಬಹುಳ ಅಮಾವಾಸ್ಯೆ ಶುಕ್ರವಾರ [illegible]. ಈ ದಿವಸ ದಿವಾ [illegible] ಘಳಿಗೆಗೆ ವೃಷಭ ಸಂಕ್ರಮಣ ಹುಟ್ಟುತ್ತೆ. ಈ ದಿವಸವೆಲ್ಲಾ ವೈಶಾಖಮಾಸಕ್ಕೆ ಸೇರಿದ್ದೇ ವಿನಹ ಜ್ಯೇಷ್ಠಮಾಸಕ್ಕೆ ಸೇರಿದ್ದಲ್ಲವೆಂಬುವುದು ಎಲ್ಲರಿಗೂ ವ್ಯಕ್ತವಾಗಿಯೇ ಇದೆ. ಜ್ಯೇಷ್ಠಮಾಸದಲ್ಲಿ ಪ್ರಥಮಾ ಶನಿವಾರದಿಂದ ತಿಂಗಳು ಮುಗಿಯುವವರಿಗೂ ಸಂಕ್ರಮಣ ಹುಟ್ಟುವುದಿಲ್ಲವಾದ್ದರಿಂದ ಜ್ಯೇಷ್ಠವೇ ಅಧಿಕವೆಂದು ಹೇಳಬೇಕು. ಆದರೆ ಕೆಲವರು ವೈಶಾಖ ಬಹುಳ ಅಮಾವಾಸ್ಯೆ [illegible] ಘಳಿಗೆ ಮುಗಿದನಂತರ ಸಂಕ್ರಮಣ ಹುಟ್ಟುವುದರಿಂದ ಈ ಸಂಕ್ರಮಣವು ಜ್ಯೇಷ್ಠದಲ್ಲಿ ಹುಟ್ಟಿದಹಾಗಾಯಿತಾದ್ದರಿಂದ ವೈಶಾಖ ಅಧಿಕವೆಂದು ಅಭಿಪ್ರಾಯಪಡುತ್ತಾರೆ. ಅಮಾವಾಸ್ಯೆ ಕಲಾಮಾತ್ರವಿದ್ದರೂ ಆ ದಿವಸವು ಆ ತಿಂಗಳಿಗೆ ಸೇರಿದ್ದೇ ವಿನಹ ಮುಂದಿನ ತಿಂಗಳಿಗೆ ಸೇರಿದ್ದಲ್ಲವೆಂಬುವುದು ಶಾಸ್ತ್ರದಿಂದ ಗೊತ್ತಾಗಿರುವುದಲ್ಲದೆ ನಮ್ಮ ಅನುಭವದಲ್ಲಿಯೂ ತಿಳಿದ ವಿಷಯವಾಗಿದೆ. ಕೆಲವರ ಅಭಿಪ್ರಾಯದ ಮೇರೆ ನಾನು ರಬಾಂಗದಲ್ಲಿ ವೈಶಾಖವನ್ನೇ ಅಧಿಕವನ್ನಾಗಿ ಹಾಕುತ್ತೇನೆಯಾದರೂ ಜ್ಯೇಷ್ಠವೇ ಅಧಿಕವೆಂಬುವದು ನನ್ನ ಅಭಿಮತವು ಪತ್ರಿಕೆಯಲ್ಲಿ ಪ್ರಕಟಿಸಿರುವ ಎರಡು ಪಂಚಾಂಗಗಳಲ್ಲದೆ ಇತರ ಮೂರು ಪ್ರತಿ ಮತ್ತು ಕ್ಯಾಲೆಂಡರುಗಳಲ್ಲಿ ಸಹ ಅಧಿಕ ಜ್ಯೇಷ್ಠವೆಂದೇ ಬರೆದಿದಾರೆ ಅದ್ದರಿಂದ ಪ್ರಜೆಗಳು ಎಲ್ಲವನ್ನೂ ವಿಚಾರಮಾಡಿ ಸೂಕ್ತ ಕಂಡು ಬಂದಂತೆ ಆಚರಿಸಬಹುದಾಗಿ ಪ್ರಾರ್ಥನೆ.

ಯಜ್ಞಾ ಸಂಪತ್ಕುಮಾರಜೋಯಿಸ್,
ಜ್ಯೋತಿಷವಿದ್ವಾನ್, ಮೈಸೂರು.

ತೀರ್ಥಹಳ್ಳಿ ತಾಲ್ಲೋಕಿನ ರೋಡ್ಡು ರಸ್ತೆ ವಿಚಾರ.

ಅಯ್ಯಾ,—ಈ ಜನಿಯರ್ ಸಾಹೇಬರು ಬಂದಿದ್ದರೆಂದೂ, ಗುಡ್ಡೆಕೊಪ್ಪದಿಂದ ತೀರ್ಥಹಳ್ಳಿಗೆ ಗಂಜ ನಗೊಡಿಗೆ ಮೇಲೆ ರಸ್ತೆಹಾಕುವುದಾಗಿಯೂ ತಿಳಿಯಬಂದಿರುತ್ತೆ. ಈ ರಸ್ತೆಯಲ್ಲಿ ಬಂದಲ್ಲಿ ಆರಗದ ರೋಡಿಗಿಂತ ಸುಮಾರು 1½ ಮೈಲಿ ಕಮ್ಮಿ ಆಗಬಹುದು. ಒಂದು ದೊಡ್ಡಹೊಳೆ, ಒಂದು ಸಣ್ಣಹೊಳೆ, ಕೆಲವು ಸಣ್ಣ ನಾಲೆಗಳೂ, ತರಿ ಜಮೀನುಗಳೂ ಸಿಕ್ಕುತ್ತವೆ. ಹೊಳೆಗಳ ಪ್ರವಾಹದ ನೀರು ಮಳೆಗಾಲದಲ್ಲಿ ಅಲ್ಲಲ್ಲಿ ನಿಲ್ಲುವದು. ಮಣ್ಣುಭರ್ತಿ ಜಾಸ್ತಿಮಾಡಬೇಕಾಗಬಹುದು. ಗಂಜ ನಗೊಡಿಗೆಯಿಂದ ತೀರ್ಥಹಳ್ಳಿವರಿಗೂ ಜೌಗು ಪ್ರದೇಶದ ರಸ್ತೆಯಾಗಿ, ಆಗಾಗ್ಗೆ ರಿಪೇರಿ ಲಾಗವಾದು ಬೀಳಬಹುದು. ಗುಡ್ಡೆಕೊಪ್ಪದಿಂದ ತೀರ್ಥಹಳ್ಳಿವರಿಗೆ ಯಾವ ವ್ಯಾಪಾರದ ಸ್ಥಳವಾಗಲಿ, ಜಸ್ತಿ ವಸತಿ ಮಾಡು ಕಡೆ ಇರುವ ಗ್ರಾಮಗಳು ಇಲ್ಲ. ಗುಡ್ಡೆಕೊಪ್ಪದಿಂದ ಆರಗದ ರೋಡಿನಲ್ಲಿ ಬಂದರೆ ತೀರ್ಥಹಳ್ಳಿವರಿಗೆ ಗಟ್ಟಿಯಾದ ಪ್ರದೇಶವು ಆರಗದವರಿಗೆ ನೇರವಾಗಿಯೂ, ಅಲ್ಲಿಂದ ತೀರ್ಥಹಳ್ಳಿಗೆ ನೇರವಾಗಿಯೂ ರಸ್ತೆ ಸಿಕ್ಕುವದು. ಜಾಸ್ತಿ ತರಿ ಜಮೀನು ಸಿಕ್ಕುವದಿಲ್ಲ, ಮಳೆಗಾಲದಲ್ಲಿ ರಸ್ತೆ ಕೆಡಲಾರದು. ರಿಪೇರಿ ಕಮ್ಮಿ ಆಗುತ್ತೆ. ತೀರ್ಥಹಳ್ಳಿ ತಾಲ್ಲೋಕಿನ ಸಾಲುರು ಕಲ್ಲುಕೊಡಿಗೆ ಮಾಗಣಿಗಳ ಮತ್ತು ನಗರದ ತಾಲ್ಲೋಕಿನ ಕೆಲವು ಪ್ರಜೆಗಳಿಗೆ ಆರಗವು ಸಮೀಪವಾದ್ದರಿಂದ ಆರಗದ ಮೇಲೆ ಬಂದರೆ ಬಹು ಪ್ರಜೆಗಳಿಗೆ ಸೌಲಭ್ಯವಾಗುತ್ತೆ. ಮೇಲ್ಕಂಡ ಗ್ರಾಮಗಳ ಅಡಿಕೆ ಭತ್ತ ಸಾಗಿಸುವದಕ್ಕೂ ಅನುಕೂಲವಾಗುತ್ತೆ. ಆರಗವು ಸಾಧಾರಣ ಜನಸಿ ವ್ಯಾಪಾರವೂ,

...ಕೆ ವ್ಯಾಪಾರವು ನಡೆಯುವದಲ್ಲದೆ ಆಮದು ರಫ್ತು ಆಗುವ ಸ್ಥಳವಾಗಿದೆ. ಪ್ರಯಾಣಿಕರು ಈ ಊರಲ್ಲಿ ಇಳಿ[illegible] ಪ್ರಯಾಣವಮಾಡುವದಕ್ಕೆ ಅನುಕೂಲವಾಗಿದೆ. ... ಆಗುವದು ಜಾಸ್ತಿ ಬೀಳುತ್ತದೆಂದು ಈ ಆರಗವನ್ನು ಬಿಟ್ಟಲ್ಲಿ ಬಹು ... ಪ್ರಜೆಗಳ ಗೌರವ ತಪ್ಪಿ ಹೋಗುತ್ತೆ. ಇನ್‌ಜನಿಯರ್ ಸಾಹೇಬರು ಪುನರಾಲೋಚನೆ ಮಾಡಿದವರಾದರೆ ಈ ಪ್ರಾಂತ್ಯದ ಪ್ರಜೆಗಳ ಮೇಲೆ ಉಪಕಾರಮಾಡಿಕೊಂಡಿರುತ್ತೀರಿ. ... ಗಳನ್ನು ಹಿಂದಿನಂತೆ ಅಂದಾಜು ಮಾಡಿದಲ್ಲಿ ಬೇಧ್ಯವಾಗುತ್ತೆ.

ಪ್ರಜಾ ಹಿತಚಿಂತಕ.

ಮಲೆನಾಡು ಇಂಪ್ರೂವ್‌ಮೆಂಟ್ ಜಾರಿಯಲ್ಲಿರುತ್ತದೆಯೋ ?

ಆಯ್ಕೂ.—ಮೈಸೂರು ಪೇರಿದ ಪಶ್ಚಿಮ ಸಂಸ್ಥಾನದಲ್ಲಿ ಕೊಪ್ಪದ ತಾಲ್ಲೂಕು ಕೇವಲ ಮಲೆನಾಡೆಂದೂ, ಅತ್ಯಂತ ಅನಾರೋಗ್ಯಸ್ಥಳವೆಂದೂ, ಈ ಮೂಲಕ ಪ್ರಜಾಭಿವೃದ್ಧಿಯು ದಿನದಿನಕ್ಕೂ ಕ್ಷಯಿಸುತ್ತಿರುವದೆಂದೂ ಜನಜನಿತವಾಗಿದೆ. ನಮ್ಮ ಘನಸರ್ಕಾರದವರ ಆಜ್ಞಾನುಸಾರ ... ಮಂತ್ರಿಶ್ರೇಷ್ಠರು ... ಈ ವಿಷಯದಲ್ಲಿ ... ಹಳ್ಳಿಗ್ರಾಮಗಳಲ್ಲಿಯೂ ಜನಾರೋಗ್ಯವಾದ ಏರ್ಪಾಡುಗಳನ್ನು ... ನಡೆಸುತ್ತಲೇ ಬರಬೇಕೆಂದೂ, ಆ ಬಗ್ಗೆ ಸಾಲಿಯಾನಾ ಒಂದು ಲಕ್ಷ ರೂಪಾಯಿ ... ಆವಶ್ಯಕವಾದ ... ಕೆಲವು ಜನಗಳನ್ನು ಆಧಿಕಾರಿಗಳನ್ನಾಗಿ ... ಮೊದಲು ಒಂದು ಲಕ್ಷ ರೂಪಾಯಿ ... ಡಿಸ್ಟ್ರಿಕ್ಟು ಒಂದಕ್ಕೇ ಮುಪ್ಪತ್ತು ಸಾವಿರ ರೂಪಾಯಿಗಳನ್ನು ... ಮೈಸೂರು ಗೆಜೆಟ್ಟಿನಲ್ಲಿ ಪ್ರಕಟಿಸಲ್ಪಟ್ಟಿತ್ತು. ... ಕಡೂರು ಡಿಸ್ಟ್ರಿಕ್ಟಿನಲ್ಲಿ ಮುಖ್ಯವಾಗಿ ಕೊಪ್ಪ ತಾಲ್ಲೂಕಿನಲ್ಲಿ ಜನಾರೋಗ್ಯದ ... ವಿಷಯವು ಸರ್ಕಾರದವರ ಗಮನಕ್ಕೆ ಕೊಡ ಬೇಕು ... ಕೊಪ್ಪ ತಾಲ್ಲೂಕಿನಲ್ಲಿ ... ಹಳ್ಳಿ ಗ್ರಾಮಾಂತರದಲ್ಲಿಯೇ ಆಗಲೀ ಸದರಿ ... ಏರ್ಪಾಡನ್ನು ... ಕಂಡುಬರುವದಿಲ್ಲ. ಈಗ ನಡೆದಿರುವ ಏರ್ಪಾಡುಗಳಲ್ಲಿ ... ಜೀವನಾಂಶವು ಯಾವ ತೊಂದರೆಯೂ ಇಲ್ಲ. ... ವಿಶೇಷವಾದ ಏರ್ಪಾಡುಗಳಾಗಿವೆ ಎಂದು ಹೇಳುವದಕ್ಕೆ ನನಗೆ ಸಂದೇಹ ಕಾಣುವದಿಲ್ಲ.

ಗ್ರಾಮಾಂತರದಲ್ಲಿ ಆರೋಗ್ಯಕ್ಕೆ ... ಮುಖ್ಯವಾದ ಕೆಲಸವಾಗಿದೆ. ... ಆರೋಗ್ಯಸಂಸ್ಥೆ ... ಹಳ್ಳಿಗಳಲ್ಲಿ ... ಶೇಕಡಾ 4-7 ರಂತೆ ... ಮನೆಗಳ ... ನಾಗರೀಕತೆ ... ಹಳ್ಳಿ ... ಪ್ರಸ್ತುತ ... ಜನರು ... ಗ್ರಾಮಾಂತರ ... ವಿದ್ಯ ... ಗ್ರಾಮಾಂತರ ಭಾಗ್ಯ ... ಕಾಣುತ್ತದೆ.

ಹಳ್ಳಿಯ ಜನರು ಗ್ರಾಮಾಂತರಗಳಿಂದ ... ಔಷಧ ತೆಗೆದುಕೊಂಡು ಹೋಗಲು ಕೊಪ್ಪದ ಆಸ್ಪತ್ರೆಗೆ ... ಡಾಕ್ಟರು ... ಬಾಳೆ ಎಲೆ ಹೊರೆ, ಬಾಳೆಕಾಯಿ, ... ಒಂದು ಔಷಧ ಸಿಕ್ಕುತ್ತೆ. ನಮ್ಮ ಸರ್ಕಾರದವರು ಪ್ರಜೆಗಳ ಅಭಿವೃದ್ಧಿಗೆ ಬರಬೇಕೆಂಬ ... ಇದಾರೆ. ಆದರೆ ... ಶ್ರೇಯಸ್ಕರವಲ್ಲ.

ಕೊಪ್ಪ ತಾಲ್ಲೂಕಿನ ಒಬ್ಬ ರೈತ.

ಕುಲಿಗ್ ... ಪಿದ್ಯಾರ್ಥಿಗಳಿಗೋಸ್ಕರ ಒಂದು ... ರೂಮನ್ನು ... ತಿಳಿದು ಸಂತೋಷವಾಯಿತು.

... ಕೊಪ್ಪ ತಾಲ್ಲೂಕು ... ನೆರವೇರಿಸುವ ... ಪ್ರಾರ್ಥನೆಯಾಗುವ ... ಪ್ರಕಟಿಸಲಾಗಿದೆ.

... ತಾಲ್ಲೂಕು ... ಗ್ರಾಮದ ... ಸಂಗೀತ, ಉಪನ್ಯಾಸಗಳು, ... ಬಹು ಸಂಭ್ರಮದಿಂದ ಜರುಗಿದವೆಂದು ತಿಳಿದುಬಂದಿದೆ.

... ಒಂದು ರೀಡಿಂಗ್ ರೂಮು ಒಂದು ವರುಷದಿಂದ ... ಪ್ರಜೆಗಳು ಒಂದು ... ಅಭಿವೃದ್ಧಿಗೆ ... ಒಂದು ... ಬೇಕು ...

... ಸಂಘ ... ಸ್ಥಾಪಿಸಲ್ಪಟ್ಟಿ ... ಈ ಸಂತೋಷವಾದ ... ವಿದ್ವಾಂಸರನ್ನು ... ಪ್ರಕಟಿಸಲಾಗಿಲ್ಲವೆಂದು ವಿಷಾದಿಸುತ್ತೇವೆ.

... ತಾಲ್ಲೂಕು ... ಹಳ್ಳಿ ಗ್ರಾಮದಲ್ಲಿ ... ಸುಮಾರು ಒಂದು ಸಾವಿರ ರೂಪಾಯಿ ... ಒಂದು ಸ್ಕೂಲ್ ಮನೆಯನ್ನು ಕಟ್ಟಿಸಿದರೆಂದೂ, ಈ ಕಟ್ಟಡವನ್ನು ... ಪ್ರಾರಂಭ ... ಬರೆಯುತ್ತಾರೆ.

ತಾಲ್ಲೂಕು ವರ್ತಮಾನಗಳು.

ಚನ್ನರಾಯಪಟ್ಟಣದ ತಾ|| ಕೆಂಬಾಳು.—ಈ ಊರಿನಲ್ಲಿ ಗ್ರೌ. ವಿ. ಇ. ಬಾಯ್ಸ್ ಸ್ಕೂಲು ಗ್ರಾಮ ಮಧ್ಯದಲ್ಲಿ ಒಕ್ಕಲಿಗರ ಕ್ರೀಡೆಯಲ್ಲಿ ಉತ್ತರದಿಂದಲೂ, ... ಕೆಲವರು ... ಉಪದ್ರವದಿಂದಲೂ ಬಾಲಕರ ಆರೋಗ್ಯಕ್ಕೆ ... ಸ್ಕೂಲಿನಲ್ಲಿ ... ವಿದ್ಯಾರ್ಥಿ ಬಾಲಕರು ... ಗ್ರಾಮಸ್ಥರು ಊರು ಹೊರಗಿರುವ ... ಸ್ಕೂಲು ಮನೆಯನ್ನು ಕಟ್ಟಿಸಿಕೊಟ್ಟರೆ ... ಸ್ಕೂಲು ಮನೆಯನ್ನು ಕಟ್ಟಿಸಿಕೊಡುವದು ... ಬಾಲಕರ ... ವರ್ತಮಾನ ಪತ್ರಿಕೆಗಳನ್ನು ಮ|| ಪಟೇಲ್ ಗೌಡರು, ಮ|| ... ಗೌಡರು, ಮ||

ಪಟೇಲ್ ರಂಗೇಗೌಡರು ಸಹ್ಯರಿಗೆ ಪರಿಚಯಿಸುತ್ತಿರುವರು. ಬಾಲಕರು ಈ ವರ್ತಮಾನ ಪತ್ರಿಕೆಗಳನ್ನೋದಿ ನಮ್ಮ ಶ್ರೀ|| ಸಾರ್ವಭೌಮ ಸರ್ಕಾರದವರಿಗೆ ಆಪಾರ ವಾದ ಯುದ್ಧ ... ದುಃಖಪಟ್ಟು ಯುದ್ಧದ ಫಂಡಿಗೆ 10 ಮಂದಿ ವಿದ್ಯಾರ್ಥಿಗಳು ರೂ. 1-3-0 ಕೊಟ್ಟು ಯುದ್ಧದ ರಿಲೀಫ್ ಫಂಡಿಗೆ ಡೆಪ್ಯುಟಿ ಇನ್‌ಸ್ಪೆಕ್ಟರ ಆಫೀಸಿಗೆ ಕಳುಹಿಸಿದರು.

ಪ್ಲೇಗ್ ರಾಜ್ಯ.—ಇಲ್ಲಿ ಪ್ಲೇಗ್ ರೋಗವು ದಿನೇದಿನೇ ಹೆಚ್ಚುತ್ತಲೇ ಇದೆ. ಪ್ರಜೆಗಳೆಲ್ಲಾ ಹೆಚ್ಚು ಕಡಮೆ ಊರುಬಿಟ್ಟಿರೆಂದೇ ಹೇಳಬೇಕು. ... ಪ್ಲೇಗ್ ವ್ಯಾಧಿಯು ... ಚಾಮುಂಡೇಶ್ವರಿ ... ಬಹು ... ದೇವಸ್ಥಾನದ ... ಪೊಲೀಸಿನವರು ... ಅವರ ... ಈ ಕಾಲ ದಲ್ಲಿ ... ಆವಶ್ಯಕವಾಗಿದೆ. ... ಊರಿನ ... ಕಟ್ಟಕ್ಕೆ ... ಮನೆಸ್ಥ ಬಂದ ಕಡೆಗಳಲ್ಲಿ ... ತುಂಬಾ ಅನುಕೂಲವುಂಟು. ಈ ಸಂತೆಯು ಎಂದಿಗೆ ... ಯಿದು. ಆಧಿಕಾರಿಗಳು ಇದನ್ನು ಮುಂದೆ ಪರಾಂಬರಿಸಿದರೆ ಒಳ್ಳೇದು.

ಶ್ರೀರಂಗಪಟ್ಟಣ.—ಪ್ಲೇಗು ಜಾಡ್ಯವು ದಿನೇ ದಿನೇ ಉಲ್ಬಣಸ್ಥಿತಿಗೆ ಬರುತ್ತಿರುವದು ... ಗ್ರಾಮದೇವತೆಯನ್ನು ಆರಾಧಿಸುವ ... ಪೊಲೀಸ್ ಇನ್‌ಸ್ಪೆಕ್ಟರ್ ಬಂದು ... ಗಂಜಾಂನಲ್ಲಿ ... ಶ್ರೀನಿವಾಸಯ್ಯಂಗಾರರ ... ಸಂಗೀತ ... ಗಂಜಾಂನಲ್ಲಿದ್ದ ... ಪ್ಲೇಗಿನಿಂದ ಮೃತ ಪಟ್ಟರೆಂದು ತಿಳಿಯಲು ವಿಷಾದಪಡುತ್ತೇವೆ. ... ಚಿಕ್ಕ ವಯಸ್ಸಿನಲ್ಲಿಯೇ ... ಕಣ್ಣು ಮುಚ್ಚಿ ಹೋದದ್ದು ವ್ಯಸನ.

ಮುಳಬಾಗಲು.—ಈ ತಾಲ್ಲೂಕಿನಲ್ಲಿ ಅನಾರಾಧಾ ಮಳೆ ಬೀಳಲೇ ಇಲ್ಲ. ಕೆರೆ ಕುಂಟೆಗಳಿಗೆ ನೀರು ಇಲ್ಲ. ಕರಿ ಫಸಲು ಇಲ್ಲ. ಧಾರಣೆವಾಸಿಗಳು ಬಹಳ ... ರೆವಿನ್ಯೂ ಇನ್ಸ್‌ಪೆಕ್ಟರ್ ... ವರ್ಗವಾಯಿತು. ಅವರ ... ಮಿತ್ರಮಂಡಲಿ ... ತಾ. 4 ನೇ ... ಸಾಯಂಕಾಲ ... ಸೆಂಟ್ರಲ್ ... ಸಂಘ ... ಕೊಟ್ಟರು. ... ಕಾರ್ಯಗಳನ್ನು ಬಹು ... ತುಂಬಾ ಅನುರಾಗ ... 6,000 ರೂಪಾಯಿ ... 500 ರೂಪಾಯಿ ... ತಾಲ್ಲೂಕು ಟ್ರೆಜರಿಯಲ್ಲಿ ಇರಿಸಲಾಗಿದೆ.

ಶಿವಮೊಗ್ಗೆ.—ಈ ಟವುನ್ನಿನಲ್ಲಿರುವ ತುಂಗಾ ನದಿ ... ಮಲಮೂತ್ರ ವಿಸರ್ಜನೆ ಮಾಡಿದ ... ಜನರು ... ತುಂಬಾ ... ಸುಮಾರು 5-6 ಸಾವಿರ ಮನೆಗಳಿರತಕ್ಕ ಈ ಟವುನ್ನಿನಲ್ಲಿ ... ಬಹು ... ಇವುಗಳು ... ಮುನಿಸಿಪಾಲಿಟಿಯವರು ... ತಿಳಿದಿರುವ ... ಶಿವಮೊಗ್ಗೆ ... ಮುಸಾಫರ್ ... ರೈಲ್ವೇ ಸ್ಟೇಷನ್ ... ಬಾಗಿಲಿಂದ ... ಕೊಂಡುಹಾಕಿರು.

ಶಿವಮೊಗ್ಗ ತಾ|| ಹೊಳಲೂರು.—ಇಲ್ಲಿ ... ಮಹಮ್ಮದ್ ... ಸರಕಾರದ ಕೆಲಸದಲ್ಲಿ ... ಸುಧಾರಣೆ ... ಸಾಗರ ತಾಲ್ಲೂಕು ... ಗಂಡ ... ಬಿ. ... ಈ ಊರಿನ ... ಮಹಮ್ಮದ್ ... ಗ್ರಾಮದ ... 300-300 ಜನರ ... ವರ್ಷ ... ಸಾಯಂಕಾಲ 7 ಗಂಟೆ ... 30 ರೂಪಾಯಿ ... ಹೊರಟ ... ಇರುವದಿಲ್ಲ. ... ಹಿತ ... ಕೊಟ್ಟುರಿಗೆ ನಂಬುತ್ತೇವೆ.

ದೇವನಹಳ್ಳಿ.—ಈ ಪ್ರಾಂತ್ಯ ಬೆಳೆಗಳು ಚೆನ್ನಾಗಿ ರೈತರು ತಮ್ಮ ಕೆಲಸದಲ್ಲಿ ... ಈ ಸಾರಿ ಬೆಳೆಗಳು ಚೆನ್ನಾಗಿವೆ. ರೈತರು ಸಂತೋಷವಾಗಿದ್ದಾರೆ. ಆದರೆ ಪ್ಲೇಗು ಈ ಊರಿಗೆ ... 3-4 ಮರಣಗಳಾದವು. ... ಮನೆಗಳಲ್ಲಿ ... ಜನಗಳು ... ಇದಾರೆ.—16-20 ದಿನಗಳ ಹಿಂದೆ ... ಗ್ರಾಮದಲ್ಲಿ ... ಕಳ್ಳರು ... 600-000 ರೂಪಾಯಿ ... ಪೊಲೀಸ್ ಇಲಾಖೆಯವರು ಬಹಳ ... 3 ಜನ ಕಳ್ಳರನ್ನು ತಾ. 6 ನೇ ರಾತ್ರಿ 10 ಘಂಟೆಗೆ ದೇವನಹಳ್ಳಿಗೆ ಹಿಡಿದು ತಂದರು.—... ಆಂಗಡಿಯಲ್ಲಿ ... ಶಿಕ್ಷೆ ಮಾಡಿ ... ಮ್ಯುನಿಸಿಪಲ್ ... ಕಂಟ್ರಾಕ್ಟರನ್ನೋ ... ಗೊತ್ತಿಲ್ಲ. ... ರಾಗುವರೆಂದು ನಂಬುತ್ತೇವೆ.—... ಜನರಲ್ ... ಸುಮಾರು 30 ಜನರಾದರೂ ... ಸೊಸೈಟಿಯ ವಿಷಯದಲ್ಲಿ ... ಡಾಕ್ಟರರು ... ಹೋಗಿ ... ಜನರನ್ನು ... ಡಿಸ್ಟ್ರಿಕ್ಟ್ ಸರ್ಜನ್‌ರವರು ದಯಮಾಡಿ ಸುಮಾರು 156 ಜನರ ... ಇಂಜೆಕ್ಷನ್ ಮಾಡಿ ಹೋದರು. ... ಡಾಕ್ಟರ್ ... ನಾಡುತ್ತಾ ಇದಾರೆ.

ಚಿತ್ರದುರ್ಗ.—ಈ ವರುಷ ಇಲ್ಲಿ ಸರಿಯಾಗಿ ಮಳೆ ಬಾರದೆ ಬೆಳೆಗಳು ಚೆನ್ನಾಗಿ ಆಗಲಿಲ್ಲ. ಜನರ ಧಾರಣೆ ಬಹಳ ತುಟ್ಟಿಯಾಗಿರುತ್ತೆ. ಬಡವರು ಜೀವಿಸುವದೇ ಕಷ್ಟವಾಗಿದೆ.—ಈ ಟೌನಿಗೆ ನೀರು ಸಪ್ಲೈ ಆಗುತ್ತಿದ್ದ ತಿಮ್ಮಣ್ಣನಾಯ್ಕನ ಕೆರೆ ಈ ವರುಷ ತುಂಬಲೇ ಇಲ್ಲ. ... ದಾರೆ. ... 2-3 ದಿವಸದಲ್ಲಿ ಬರೀದಾಗಬಹುದು. ... ತಾ. 3 ರಲ್ಲಿ ... ನಮ್ಮ ದಿವಾನ್ ಸಾಹೇಬರವರು ದಯಮಾಡಿಸಿ 3 ದಿವಸ ಇಲ್ಲಿ ... ತಾಲ್ಲೂಕಿನ ಸ್ಥಿತಿಗಳನ್ನೂ, ... ಬೆಂಗಳೂರಿಗೆ ದಯಮಾಡಿದರು. ... ಶ್ರೀಮನ್ ಮಹಾರಾಜರವರು ಈ ತಿಂಗಳು 19 ಕ್ಕೆ ದಾವಣಗೆರೆಗೆ ದಯಮಾಡಿಸುತ್ತಾರೆಂಬ ವರ್ತಮಾನ ಇದೆ.—... 4-5 ದಿವಸದ್ದು ... ಶಿವಮೊಗ್ಗೆಗೆ ದಯಮಾಡಿದರು.—ಇಲ್ಲಿ ... ಸಕಲ ಸ್ಕೂಲುಗಳಲ್ಲಿಯೂ ವಿದ್ಯಾರ್ಥಿಗಳೂ ... ಬ್ರಿಟಿಷ್ ಚಕ್ರಾಧಿಪತ್ಯದಿಂದ ... ಯುದ್ಧದಲ್ಲಿ ನಮ್ಮ ಚಕ್ರವರ್ತಿ ಸಾರ್ವಭೌಮರಿಗೆ ಜಯಪ್ರದವನ್ನು ದಯಪಾಲಿಸಬೇಕೆಂದು ದೇವರನ್ನು ಪ್ರಾರ್ಥಿಸಿದರು. ಈ ಊರಿನಲ್ಲಿರುವ ... ದಾಮ್ಲಪ್ಪ, ಪೋಸ್ಟ್‌ಆಫೀಸ್ ... ದೇವಸ್ಥಾನದಲ್ಲಿ ... ಮಾಡಿದರು.—ಇಲ್ಲಿ ಆರ್ಥ ... ಮಳೆ ಆಯಿತು.

ಹಾಸನ.—ಇಲ್ಲಿಗೆ ಸಮೀಪವಾದ ... ಎಂಬ ಒಂದು ಗ್ರಾಮದಲ್ಲಿ ಒಬ್ಬ ಬ್ರಾಹ್ಮಣನು ... ಯುದ್ಧಕ್ಕೆ ... ಯುದ್ಧಕ್ಕೆ ಹೋಗಲು ... ಹಳ್ಳಿ ಜನರನ್ನು ಭಯಪಡಿಸಿ ... ಪೊಲೀಸಿನವರು ... ತಾ. 12 ನೇ ... ಡಿಸೆಂಬರ್ ತಿಂಗಳಲ್ಲಿ ಮಳೆ ... ಅಧಿಕ ... ಆಹಾರ ... ಭತ್ತ, ಕಡಲೆ, ಅವರೆ, ತೊಗರಿ, ... ಡಿಸ್ಟ್ರಿಕ್ಟ್ ಆಫೀಸರವರ ... ಬಂದರು ... ಹೈಸ್ಕೂಲ್ ... ತಾ. 4 ನೇ ... ಪಾಠಶಾಲೆಗಳ ... ಬಾಲಕಿಯರ ... ಈ ಊರಿಗೆ ... ಕಟ್ಟಡವನ್ನು ... ಬಾಲಿಕಾಪಾಠಶಾಲೆಯ ... ನಡೆದುವು. ಈ ... ಸಭೆ ... ಸಮಯದಲ್ಲಿ ... ನಡೆದು ದೇವರ ಪ್ರಾರ್ಥನೆಯೊಡನೆ ಎಲ್ಲಾ ಮುಕ್ತಾಯವಾಯಿತು.

ಶಾಲಿವಾಹನ ಶಕ ವರುಷಂಗಳು 1837 ನೇ ಆನಂದ ಸಂವತ್ಸರೇ ದಕ್ಷಿಣಾಯನೆ ಹೇಮಂತಋತೌ ಪುಷ್ಯ ಶುದ್ಧ ಪಾಡ್ಯಮಿ ಶುಕ್ರವಾರದಿಂದ ಪುಷ್ಯ ಶುದ್ಧ ಅಷ್ಟಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ.

1914 ನೇ ಡಿಸೆಂಬರ್.

ತಾ.	ವಾರ.	ತಿಥಿ.	ಘಳಿಗೆ	ನಕ್ಷತ್ರ	ಘಳಿಗೆ	ಧನುರ್ಮಾಸ ಶೇಡಿ
18	ಶುಕ್ರ *	ಪಾಡ್ಯಮಿ	0-20	ಉತ್ತರಾ	55.31	4
19	ಶನಿ	ಬಿದಿಗೆ	52-31	ಶ್ರವಣಾ	50-11	5
20	ಭಾನು †	ತದಿಗೆ	50-41	ಶ್ರವಣ	49-35	6
21	ಸೋಮ	ಪಂಚಮಿ	49-43	ಧನಿಷ್ಠ	50-8	7
22	ಮಂಗಳ §	ಷಷ್ಠಿ	49-58	ಶತಭಿಷ	51-56	8
23	ಬುಧ ::	ಸಪ್ತಮಿ	52-18	ಪೂಭಾ	54-58	9
24	ಗುರು ‡	ಅಷ್ಟಮಿ	54-41	ಉ.ಭಾ	59-15	10

* ಉತ್ತರಾ, ಅಮಾವಾಸ್ಯೆ, ಚಂದ್ರೋದಯ, ಸಫರ್ ಚಂದ್ 1, ಮಳೆ ನಕ್ಷತ್ರ—ಮೂಲ 2 ನೇ ಪಾದ. † ದೂರ್ವಾ ಗಣಪತೀ ವ್ರತ. § ಕುಮಾರಷಷ್ಠೀ, ಮೃತ್ಯುಯೋಗ, ಮಳೆ ನಕ್ಷತ್ರ—ಮೂಲ 3 ನೇ ಪಾದ :: ಮಕರಾಯನಂ. ‡ ಮಾರ್ಗಶಿರ ಲಕ್ಷ್ಮೀ ವ್ರತ.

ಸಂಪೂರ್ಣಾರೋಗ್ಯವು, ಸಂತೋಷಬಾಳ್ವೆಯು, ಶಾಶ್ವತವಾದ ಸಂಪತ್ತು, ಇವುಗಳನ್ನು ಪಡೆಯುವುದಕ್ಕೋಸ್ಕರ ಇನ್ನೂ ಕತ್ತಲೆಯಲ್ಲಿ ಪೇಚಾಡುವಿರೋ ?

ಹಾಗಾದರೆ ನಮ್ಮ

ಪಂಜಾ ಸಾಲಾಮಿಸ್ರಿ ಮುರಬ್ಬ

ವನ್ನು ಸೇವಿಸಿ ಜೀವವಿಮೆಯನ್ನು ಮಾಡಿಕೊಳ್ಳಿರಿ.

ಆಬಾಲವೃದ್ಧರಿಗೂ ಸ್ತ್ರೀಪುರುಷರಿಗೂ ಉಪಯೋಗಪಡುವ ಮತ್ತು ಪುಷ್ಟಿಯನ್ನು ಕೊಡುವ ಔಷಧಿಯು ಇದೇ. ಈ ಪಂಜಾ ಸಾಲಾಮಿಸ್ರಿ ಮುರಬ್ಬವು ಮೂತ್ರಕೋಶ ಸಂಬಂಧವಾದ ಎಲ್ಲಾ ತರಹೆಯ ರೋಗಗಳನ್ನೂ ನಿವರ್ತಿಮಾಡುತ್ತದೆ. ಪಂಜಾ ಸಾಲಾಮಿಸ್ರಿಯೊಂದಿಗೆ ಅಪೂರ್ವವಾದ ಮತ್ತು ಉತ್ತಮವಾದ ವನಸ್ಪತಿಗಳನ್ನು ಸೇರಿಸಿ ಮುರಬ್ಬವನ್ನು ತಯಾರು ಮಾಡಲ್ಪಟ್ಟಿದೆ. ಒಂದು ಸಲ ಉಪಯೋಗಿಸಿದರೆ ಎಂದಿಗೂ ಮರೆಯಲಾರಿರಿ. ರಸರಹಿತವಾದ ಖಾತ್ರಿಯಾದ ದೇಹಪುಷ್ಟಿಯನ್ನು ಕೊಡತಕ್ಕ ಔಷಧಿಯೇ ಇದು.

ಪಂಜಾ ಸಾಲಾಮಿಸ್ರೀ ಮುರಬ್ಬಾವು—ನಿದ್ರೆಯಲ್ಲಿಯೂ ಮೂತ್ರದಲ್ಲಿಯೂ ಹೋಗುವ ಧಾತುವನ್ನು ನಿಲ್ಲಿಸುವುದು.

ಪಂಜಾ ಸಾಲಾಮಿಸ್ರೀ ಮುರಬ್ಬಾವು—ಮೂತ್ರದಲ್ಲಿ ಉರಿಯುವುದನ್ನು ನಿಲ್ಲಿಸುವುದು.

ಪಂಜಾ ಸಾಲಾಮಿಸ್ರೀ ಮುರಬ್ಬಾವು—ರಕ್ತವನ್ನು ವೃದ್ಧಿಪಡಿಸಿ ಮೆದುಳಿಗೆ ಬಲವನ್ನು ಕೊಡುವುದು.

ಪಂಜಾ ಸಾಲಾಮಿಸ್ರೀ ಮುರಬ್ಬಾವು—ಕೈ, ಕಾಲು, ಸೊಂಟದ ನೋವುಗಳನ್ನು ಹೋಗಲಾಡಿಸುವುದು.

ಪಂಜಾ ಸಾಲಾಮಿಸ್ರೀ ಮುರಬ್ಬಾವು—ಹಸಿವನ್ನು ರಕ್ತವನ್ನು ಹೆಚ್ಚಿಸಿ ಧಾತುವನ್ನು ಶೇಖರಿಸುವುದು.

ಪಂಜಾ ಸಾಲಾಮಿಸ್ರೀ ಮುರಬ್ಬಾವು—ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವುದು.

ಪಂಜಾ ಸಾಲಾಮಿಸ್ರೀ ಮುರಬ್ಬಾವು—ಉತ್ಸಾಹವು, ಬುದ್ಧಿಕುಶಲತೆಯು, ಶರೀರಕಾಂತಿಯು ಕೊಡುವುದು.

ಪಂಜಾ ಸಾಲಾಮಿಸ್ರೀ ಮುರಬ್ಬಾವು—ಕಾಂಬ್ರಾ ಮತ್ತು ಭಂಗಾರಭಸ್ಮಕ್ಕಿಂತಲೂ ಉತ್ತಮವಾದದ್ದು.

ಈ ಮುರಬ್ಬಾದೊಂದಿಗೆ ಬಲಬರುವಂಥ ಪದಾರ್ಥಗಳನ್ನು ಸೇರಿಸಿ ಪ್ರತಿಯೊಬ್ಬರೂ ಸೇವಿಸುವ ಹಾಗೆ ಕೈಯಿಂದ ಮುಟ್ಟದೆ ತಯಾರು ಮಾಡಲ್ಪಟ್ಟಿರುವುದು.

ಒಂದು ಡಬ್ಬಿ ಮುರಬ್ಬಾವನ್ನು 15 ದಿನಗಳು ಉಪಯೋಗಿಸುವುದರಿಂದ ಪೂರಾ ಗುಣ ಕೊಡುತ್ತದೆ. 2-3 ಡಬ್ಬಿಗಳನ್ನು ಉಪಯೋಗಿಸುವದರಿಂದ ಪ್ರಾಣಾಂತ್ಯದ ವರೆಗೂ ಗುಣಕೊಡುತ್ತೆ. ಈ ಸಾಲಾಮಿಸ್ರೀ ಎಂಬುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲ್ ಕಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿನ ಜನರು ಸಾಲಾಮಿಸ್ರೀಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು. ಅನೇಕರು ಉರುಳುಗಡ್ಡೆ, ಕಾಮಗಡ್ಡೆ ಇವುಗಳನ್ನು ಪಕ್ವಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಮೋಸಪಡಿಸುವರು. ನಮ್ಮ ಮುರಬ್ಬಾವನ್ನು ಪರೀಕ್ಷಿಸಿ ನೋಡಿದಲ್ಲಿ ಇದು ಪಂಜಾ ಸಾಲಾಮಿಸ್ರಿಯೇ ಅಥವಾ ಬೇರೆ ತರಹದ್ದೇ ಎಂಬುದು ತಿಳಿದುಬರುತ್ತೆ. [214-13]

ಈ ಮುರಬ್ಬಾವು "ಪಂಜಾ ಸಾಲಾಮಿಸ್ರಿ" ಅಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡುವೆವು

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. 15 ತೊಲೆ ಮುರಬ್ಬಾವಿನ ಡಬ್ಬಿ 1 ಕ್ಕೆ ರೂಪಾಯಿ 2-0-0. ಟಪ್ಪಾಲು ಖರ್ಚು 1 ಡಬ್ಬಿಯಿಂದ 3 ಡಬ್ಬಿಗಳ ವರೆಗೆ 6 ಅಣೆ. ಅನುಪಾನ ಪತ್ರಿಕೆ ಔಷಧದ ಸಂಗಡ ಇರುತ್ತೆ.

ಏಜಂಟರು—ಡಿ. ಸೈಯದ್ ಉಸ್ಮಾನ್ ಅಂಡ್ ಕೊ, ದೊಡ್ಡ ಪೇಟೆ, ಬೆಂಗಳೂರು ಸಿಟಿ.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

Printed and Published by the Rev. H. Gulliford, Proprietor and Manager, Wesleyan Mission Press, Mysore. 17/12/1914.

REGISTERED M. 80

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೮ ಮೈಸೂರು—ಸನ್ ೧೯೧೪ ನೇ ಇಸವಿ ಡಿಸೆಂಬರ್ ತಾರೀಖು ೨೪ ನೇ ಗುರುವಾರ. ಸಂಚಿಕೆ ೩೦

ಓದಿ! "ಚಾತುರ್ಯ" ಮಾಸ ಪತ್ರಿಕೆ!

ಹಾಸ್ಯ, ವಿನೋದ ರಸಪೂರ್ಣ ಈ ಮಾಸಪತ್ರಿಕೆಯು ಎಂತಹ ದುರ್ಮಾರ್ಗಗಾಮಿಗಳನ್ನೂ ಸನ್ಮಾರ್ಗಕ್ಕೆ ತರುವುದು! ವಾರ್ಷಿಕ ಚಂದಾ ವಿ. ಪಿ. ಸೇರಿ 11 ಆಣೆ; ಸ್ತ್ರೀಯರಿಗೂ, ವಿದ್ಯಾರ್ಥಿಗಳಿಗೂ ಮಾತ್ರ ಚಂದಾ 7 ಆಣೆ.

[284-4] ವಿಳಾಸ:—ಮ್ಯಾನೇಜರ್, "ಚಾತುರ್ಯ," ಬೆಂಗಳೂರು ಸಿಟಿ.

ಗುಳಿಗೆಯವರ ಬಾಲಸಂಜೀವಿನಿ—ಮಕ್ಕಳ ಸರ್ವವಿಧ ಜ್ವರ, ಕೆಮ್ಮು, ಕಫ, ಮಂದ, ವಾಯು, ಸಿಪಕ್ಕೆಸೆಳೆತ, ಎಲವುಗಳಿಗೆ ಅಮೃತ. ಇದನ್ನು ಆಗಾಗ್ಗೆ ಕೊಟ್ಟರೆ ಮೇಲೆ ಕಂಡ ರೋಗಗಳು ಬರವು. ಡಬ್ಬಿಗೆ 4 ಆಣೆ. 4 ಡಬ್ಬಿಗೆ 1 ರೂಪಾಯಿ. ಜ್ವರದ ಮಾತ್ರೆ—ದೊಡ್ಡವರಿಗೆ. ಮಲೇರಿಯಾ, ಚಳಿ, ಮತ್ತು ವಿಷಮ ಶೀತಜ್ವರಗಳಿಗೆ ಖಾತರಿ ಗುಣ. 24 ಮಾತ್ರೆ ಶೀಶೆಗೆ 8 ಆಣೆ.

[282-4] ನಮ್ಮ ವಿಳಾಸ.—ಓರಿಯಂಟಲ್ ಫಾರ್ಮಸಿ, ಮೈಸೂರು.

ನೂಲು ವ್ಯಾಪಾರಿಗಳಿಗೆ

ಈ ಮೂಲಕ ತಿಳಿಯಪಡಿಸುವದೇನಂದರೆ—ಪ್ರಸಿದ್ಧವಾದ ಬೊಂಬಾಯಿ ಶಾ ಸನ್ಸ್ ಸ್ವದೇಶೀ ಮಿಲ್ಸನಲ್ಲಿ ತಯಾರಾಗುವ ನಂಬರು 4, 6, 8, 10, 12, 14, 16, 20, 30 ಮತ್ತು ಇತರ ನಂಬರು ಖಾದಿ ನೂಲು ನಮ್ಮಲ್ಲಿ ಸಿಕ್ಕುವದರಿಂದ ದರ ಮುಂತಾಗಿ ತಿಳಿಯಲಪೇಕ್ಷಿಸುವವರು ಈ ಕೆಳಗಿನ ವಿಳಾಸಕ್ಕೆ ಬರೆಯತಕ್ಕದ್ದು. [277-2]

ಬೊಂಬಾಯಿ ಶಾಶಾ ಸನ್ಸ್ ಸ್ವದೇಶೀ ಮಿಲ್ಸ್ ಏಜೆನ್ಸಿ,

ಕೊಲ್ಲೂರಯ್ಯನ ಬೀದಿ, ಶಿವಮೊಗ್ಗ.

ಅಥವಾ, 145, ಅವಿನ್ಯೂ ರೋಡ್, ಬೆಂಗಳೂರು ಸಿಟಿ,

ಯುದ್ಧವಾರ್ತೆಯು.

ಯೂರೋಪಿನಲ್ಲಿ ನಡೆಯುತ್ತಿರುವ ಯುದ್ಧವಾರ್ತೆಯನ್ನು ಪ್ರತಿ ನಿತ್ಯವೂ ಕನ್ನಡಿಗರ ಉಪಯೋಗಕ್ಕಾಗಿ ಪ್ರಕಟಿಸುತ್ತಿರುವೆವು. ಕ್ರಯ 3 ಪೈ; ತಿಂಗಳಿಗೆ 6 ಆಣೆ; ಅಂಚೆಯಲ್ಲಿ ತರಿಸುವವರಿಗೆ ತಿಂಗಳಿಗೆ ಒಂದು ರೂಪಾಯಿ. ಮೈಸೂರು ಸಂಸ್ಥಾನದ ಎಲ್ಲಾ ಭಾಗದಲ್ಲಿಯೂ ಏಜಂಟರುಗಳು ಬೇಕಾಗಿದೆ. ಹೆಚ್ಚಾಗಿ ಕಮಿಷನ್ ಸಿಗುವುದು.

ಮುಖ್ಯ ಏಜಂಟರು—

[23-50] ಲಕ್ಷ್ಮೀಪುರ ರಾಮಚಂದ್ರರಾವ್, ಮೈಸೂರು.

ಲಾ ಪುಸ್ತಕಗಳನ್ನು ಓದಿ ಜ್ಞಾನವನ್ನು ಸಂಪಾದಿಸಿಕೊಳ್ಳಿರಿ.

ಸಿವಿಲ್, ಕ್ರಿಮಿನಲ್, ರೆವಿನ್ಯೂ (ಲಾ) ವ್ಯವಹಾರಗಳ ಅರ್ಜಿಗಳನ್ನು ಬರೆಯತಕ್ಕ ಪ್ರಶ್ನೋತ್ತರ ಲೇಖ್ಯ ಬೋಧಿನಿ ರೂ. 1-8-0. ಇಂಡಿಯನ್ ಪೆನಲ್ ಕೋಡು ರೂ. 2; ಹಸನು ಪ್ರತಿ ರೂ. 2-8-0. ಸಿವಿಲ್ ಪ್ರೊಸೀಜರ್ ಕೋಡು ರೂ. 2-8-0. ಲ್ಯಾಂಡ್ ರೆವಿನ್ಯೂ ರೂಲ್ಸ್ ಮತ್ತು ತಿದ್ದುಪಾಟು 12 ಆಣೆ. ಎಕ್ಸೈಜು ರೂಲ್ಸ್ 12 ಆಣೆ. ಸಾರಾಯಿ ರೂಲ್ಸ್ 8 ಆಣೆ.

[143-24] ವಿಳಾಸ:—ಬಿ. ನರಸಿಂಗರಾವ್,

ಎಡಿಟರ್, ಲಾ ಗೆಜೆಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಪಾಶ್ಚಾತ್ಯ ದೇಶಗಳ ನಮೂನೆಯುಳ್ಳ ಬಹಳ ಸೊಗಸಾಗಿಯೂ, ಅಚ್ಚುಕಟ್ಟಾಗಿಯೂ, ಬೆಲೆ ಬಹಳ ಸುಲಭವಾಗಿಯೂ ಇರುವ ಉಕ್ಕಿನ ಪೆಟ್ಟಿಗೆಗಳು ಬೆಂಗಳೂರು ಟೇಬಲ್ ಮಿಷನ್ ಮೆಕ್ಯಾನಿಕಲ್ ಎಸ್ಟಾಬ್ಲಿಷ್‌ಮೆಂಟಿನಲ್ಲಿ ತಯಾರಾಗಿ ಗೌರ್ನಮೆಂಟುಗಳಲ್ಲಿ ಮೆಡಲುಗಳನ್ನು ಹೊಂದಿ ಬಿಕರಿಗೆ ಸಿದ್ಧವಾಗಿವೆ. ಇಷ್ಟಪಡುವ ಯಾವ ನಮೂನೆಯಲ್ಲಿ ಬೇಕಾದರೂ ಹೊಸದಾಗಿಯೂ ತಯಾರ್ ಮಾಡಿ ಕೊಡಲ್ಪಡುತ್ತೆ.

ಮೈಸೂರು ದೇಶದ ಪ್ರತಿಯೊಂದು ಡಿಸ್ಟ್ರಿಕ್ಟಿನಲ್ಲಿಯೂ ಏಜಂಟರುಗಳು ಬೇಕಾಗಿದೆ. ಎಲ್ಲಾ ವಿಷಯಗಳನ್ನೂ ಈ ಕೆಳಗಿನ ವಿಳಾಸದಾರರಿಗೆ ಬರೆದು ತಿಳಿದುಕೊಳ್ಳಬಹುದು.

ಬಿ. ಜಿ. ಅಯ್ಯಂಗಾರ್, ಚೀಫ್ ಏಜಂಟರು,

[255-5] 290, ದೇವಾಂಬಾ ಅಗ್ರಹಾರ, ಮೈಸೂರು.

ಅರೇಬಿಯನ್ ನೈಟ್ಸ್

ಎಂಬ

ಯವನ ಯಾಮಿನೀ ವಿನೋದ ಕಥೆಗಳು.

(ಕನ್ನಡದಲ್ಲಿ)

ಲೋಕಪ್ರಸಿದ್ಧವಾದ ಈ ಪುಸ್ತಕದ ಮೊದಲನೇ ಮುದ್ರಣವು ಶೀಘ್ರದಲ್ಲಿಯೇ ಮುಗಿದುಹೋದುದರಿಂದ ಎರಡನೇ ಮುದ್ರಣವನ್ನು ತಯಾರಿಸಿರುತ್ತೇವೆ. ಇದರ ಪ್ರಿಂಟಿಂಗ್ ಮತ್ತು ಬೈಂಡ್ ಮುಂತಾದ ಕೆಲಸಗಳು ವೆಸ್ಲಿಯನ್ ಮಿಷನ್ ಪ್ರೆಸ್ಸಿನಲ್ಲಿ ಬಹು ಶ್ಲಾಘ್ಯಕರವಾಗಿ ಮಾಡಲ್ಪಟ್ಟಿರುವವು. ಈ ಎರಡನೇ ಮುದ್ರಣವನ್ನು ಘನ ಪಂಡಿತರು ಆಮೂಲಾಗ್ರವಾಗಿ ಪರಿಶೀಲನೆಮಾಡಿ ತಿದ್ದಿ ಸರಿಪಡಿಸಿರುತ್ತಾರೆ. ಇದರಲ್ಲಿನ ಕಥೆಗಳು ಬಹು ಮನೋರಂಜಕವಾಗಿಯೂ ಭಾಷೆಯು ಅತಿ ಲಲಿತವಾಗಿಯೂ ಇರುತ್ತವೆ. ಪುಸ್ತಕವು ನಾನೂರು ಪುಟಗಳಿಗಿಂತ ಹೆಚ್ಚಾಗಿರುತ್ತದೆ. ಇದರ ಕ್ರಯ ಎರಡೇ ರೂಪಾಯಿ. ವಿ.ಪಿ.ಪಿ. ಮೂಲಕ ತರಿಸಿಕೊಂಡರೆ ರೂ. 2-4-0. ಜಾಗ್ರತೆ ನೋಡಿ. [289-4]

ವಿಳಾಸ—ಮ್ಯಾನೇಜರ್, ಸಿ.ಎಲ್.ಎಸ್. ಬುಕ್ ಡಿಪೋ, ಮೈಸೂರು.

ಶ್ರೀಮತಿ ನಂಜನಗೂಡು ತಿರುಮಲಮ್ಮನವರಿಂದ ಬರೆಯಲ್ಪಟ್ಟ

ಅತ್ಯುತ್ತಮ ಕಾದಂಬರಿಗಳು.

ಸುಶೀಲೆ 0-6-0. I ನೇ ನಭಾ 0-8-0.

ಈ ಗ್ರಂಥಗಳು ಅತ್ಯಂತ ಶ್ರೇಷ್ಠವಾದುವೆಂದೂ ಮನೋಹರವೂ ಸರಳವೂ ಶುದ್ಧವೂ ಆದ ಭಾಷಾ ಶೈಲಿಯಲ್ಲಿ ಬರೆಯಲ್ಪಟ್ಟುವೆಂದೂ ಹೆಸರು ಪಡೆದಿವೆ. ಬಹಳ ಸ್ವಲ್ಪ ಪ್ರತಿಗಳೇ ಉಳಿದಿವೆ. ಬೇಗ ಬರೆದುಕೊಳ್ಳಿರಿ.

[160-23] ವಿಳಾಸ—ಹನುಮಾನ್ ಕಂಪೆನಿ, ಮೈಸೂರು.

ಷೇಕ್ಸ್ಪಿಯರ್

ಮಹಾ ಕವಿಯ ನಾಟಕದ ಕಥೆಗಳು.

ಸಿಂಬೆಲಿನ್, ಒಥೆಲೋ, ಮರ್ಚೆಂಟ್ ಆಫ್ ವೆನ್ನಿಸ್, ಕಿಂಗ್‌ಲಿಯರ್ ಮುಂತಾದ ಕೆಲವು ನಾಟಕಗಳನ್ನು ಕಥಾ ರೂಪವಾಗಿ ಬರೆಯಲ್ಪಟ್ಟು ನಮ್ಮ ದೇಶದ ಹೆಸರನ್ನಿಟ್ಟು ಪ್ರಕಟಿಸಿರುತ್ತೆ. ಪ್ರತಿ ಒಂದಕ್ಕೂ ಎರಡೆರಡಾಣೆ. ಅವು ಯಾವವೆಂದರೆ—ಕಳಾವತಿ, ಪದ್ಮಿನಿ, ವಸುಮತಿ, ಚಿತ್ರಕಳಾವತಿ, ವಿಲಕ್ಷಣ ಶಿಕ್ಷಣ, ಭಾನುಮತಿ, ವೈದರ್ಭೀ ವಿಲಾಸ, ಚಾರುಮತಿ, ಚಾತುರ್ಯವತಿ.

"ಮರುಳಾಟದ ಮದುವೆ" ಎಂಬ ನಕಲಿಯು ಈಗತಾನೇ ಬೆಳಕಿಗೆ ಸಿದ್ಧವಾಗಿದೆ. ಪ್ರತಿಯೊಬ್ಬರೂ ಓದಬೇಕಾದುದು. ಕ್ರಯ 6 ಆಣೆ.

[275-2] ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

ಸಿದ್ಧವಾಗಿದೆ.

1915 ನೆಯ ವರ್ಷದ ಲೋವರ್ ಸೆಕಂಡರಿ

ಕನ್ನಡ ಟೆಕ್ಸ್ಟಿನ ನೋಟ್ಸು.—ಕ್ರಯ 6 ಆಣೆ.

ಡಿಸ್ಕೌಂಟು—10 ಕ್ಕೆ 1; 25 ಕ್ಕೆ 3; 50 ಕ್ಕೆ 8; 100 ಕ್ಕೆ 20.

ಮಕ್ಕಳ ಭೂವಿವರಣೆ.

ಈಗಿನ ಪಾಠಕ್ರಮಕ್ಕೆ ತಕ್ಕಂತೆ ಹೊಸದಾಗಿ ಆಗಿದೆ. ಇದರಲ್ಲಿ ಮೈಸೂರು ದೇಶದ ಬೆಳೆ, ಎತ್ತರ, ನದೀ ಪರ್ವತಾದಿಗಳು ಇವುಗಳನ್ನು ತೋರಿಸುವ ಮೂರು ಭೂಪಟಗಳೂ, ಚಿತ್ರಗಳೂ ಸೇರಿವೆ. ಕ್ರಯ 2 ಆಣೆ. [49-46]

ಇರಾಬೆಯ 3 ನೆಯ ಪುಸ್ತಕದ ನೋಟ್ಸು 2½ ಆಣೆ. ಮೆಕ್ಮಿಲನ್ ರವರ 3 ನೇ ಪುಸ್ತಕದ ನೋಟ್ಸು 1½ ಆಣೆ. ಡಿಟೊ 4 ನೇ ಪುಸ್ತಕದ ನೋಟ್ಸು 1½ ಆಣೆ. ಡಿಟೋ 6 ನೇ ಪುಸ್ತಕದ ನೋಟ್ಸು 4 ಆಣೆ. ನವಬಾಲವ್ಯಾಕರಣ (2 ನೇ ತರಗತಿಗೆ) 1 ಆಣೆ. Notes on "Tanglewood Tales," English Lower Secondary Text for 1915—As. 3. Notes on Fairy Tales—As. 2.

ನಮ್ಮ ವಿಳಾಸ:—ಯನ್. ಆರ್. ವೆಂಕಟಸುಬ್ಬಾಚಾರ್ಯ,

ಸುಬೋಧಗ್ರಂಥಾಲಯ, ಮೈಸೂರು.

(ಪ್ಲೀಡರ್ ಎಂ. ಮಲ್ಲಾರಾಧ್ಯರಿಂದ ರಚಿತವಾದುವುಗಳು).

ವ್ಯವಹಾರ ನಿರ್ಣಯ.

[279-2]

ಕನ್ನಡದ ಲಾ ಪುಸ್ತಕವು.

ತೃತೀಯ ಮುದ್ರಣ 616 ಪುಟಗಳುಳ್ಳದು.

ಕ್ರಯ ದಪ್ಪ ಕಾಗದದ ಪ್ರತಿಗೆ ರೂ. 1-8-0 } ಪೋಸ್ಟೇಜು

,, ಗ್ಲೇಜ್ ಕಾಗದದ ಪ್ರತಿಗೆ ,, 2-4-0 } ಪ್ರತಿ 1 ಕ್ಕೆ 4 ಆ.

ಇದರಲ್ಲಿ ಹಿಂದೂ ಲಾ, ಮಹಮದೀಯ ಲಾ, ಪೀನಲ್ ಕೋಡು ಇವು ವಿಸ್ತಾರವಾಗಿ ಬರೆಯಲ್ಪಟ್ಟಿವೆ. ಮೈಸೂರು, ಮದ್ರಾಸು, ಬೊಂಬಾಯಿ ದೇಶಗಳಿಗೆಲ್ಲಾ ಸಾಮಾನ್ಯವಾದ ಲಾ. ಮೃತಪಟ್ಟವನ ವಿಲೇವಾರಿ, ಅನಾಥ ರಕ್ಷಣೆ, ಸ್ತ್ರೀಯರ ಪಾಲನ್ನು ಹಕ್ಕು ಈ ವಿಷಯಕವಾದ ಖಾನೂನುಗಳೂ, ಕ್ರಯ, ದಾನ, ವಿಲ್ಲು, ಹುಂಡಿ, ಗೇಣಿ ಮೊದಲಾದ ಸಮಸ್ತ ವ್ಯವಹಾರವನ್ನೊಳಗೊಂಡಿರುವ 92 ವಿಧದ ದಸ್ತಾವೇಜು ನಮೂನೆಗಳೂ, ಲಾ ಪ್ರಕಾರ ಸಿವಿಲ್ ಕ್ರಿಮಿನಲ್ ಕೋರ್ಟುಗಳಿಗೂ ಪೋಲೀಸಿಗೂ ಬರೆಯುವ ಅರ್ಜಿಗಳ 49 ನಮೂನೆಗಳೂ, ಅವುಗಳ ಸಂಬಂಧವಾದ ವಿಶೇಷ ವಿಷಯ ವಿಚಾರಗಳೂ ಬಹಳ ಚೆನ್ನಾಗಿ ಬರೆಯಲ್ಪಟ್ಟಿವೆ. ಇಷ್ಟು ದೊಡ್ಡ ಉಪಯುಕ್ತವಾದ ಗ್ರಂಥವನ್ನು ಇಷ್ಟು ಕಡಮೆ ಬೆಲೆಗೆ ಯಾರೂ ಮಾರುವುದಿಲ್ಲ.

"ಶೇಖಾವಿ ಲಾ"

ಇದು ಕೃಷಿಯ ಅಭಿವೃದ್ಧಿಗಾಗಿಯೂ, ರೈತರ ಸಹಾಯಾರ್ಥವಾಗಿಯೂ, ಸರ್ಕಾರದವರು ಕೊಡುವ ಸಾಲ ಮೊದಲಾದ ಸಹಾಯ ವಿಷಯಕವಾದ ಲಾವನ್ನು ವಿವರಿಸುವ ಉಪಯುಕ್ತವಾದ ಪುಸ್ತಕ. ಬೆಲೆ 8 ಆಣೆ. ಪೋಸ್ಟೇಜು 2 ಆಣೆ.

ನಮ್ಮ ವಿಳಾಸ—ಎಂ. ಎಂ. ಪಂಡಿತಾರಾಧ್ಯ, ಮೈಸೂರು.

ಹೊಸ ಪುಸ್ತಕಗಳು.—ವಿಷವಿವಾಹ 4 ಆ., ಸನ್ಯಾಸಿನಿ 1½ ಆ., ಸುಶೀಲೆ 6 ಆ., ಬಿ. ವೆಂಕಟಾಚಾರ್ಯರಿಂದ-ದುರ್ಗೇಶನಂದಿನಿ 1½ ರೂ., ಅಮೃತಪುಳಿನ 11 ಆ., ಚಿತ್ರವಿಚಿತ್ರಾವಳಿ 1 | 8 ಆ. ವಗೈರೆ ಎಲ್ಲಾ ಕಾದಂಬರಿಗಳು; ಮತ್ತು ಭಕ್ತವಿಜಯ 3 ರೂ., ರಾಜಭಕ್ತಿ 6 ಆ., ವಿವೇಕ ಚೂಡಾಮಣಿ 10 ಆ., ಇತ್ಯಾದಿ.

[53-44] ಎಂ. ಸುಬ್ಬರಾವ್, ಬುಕ್ ಸೆಲರ್, ಶಂಕರಪುರ, ಬೆಂಗಳೂರು ಸಿಟಿ.

ಯುದ್ಧ!

ಈಗ ಯೂರೋಪಿನಲ್ಲಿ ನಡೆಯುವ ಯುದ್ಧದ ಕಾರಣ, ಅದರ ನ್ಯಾಯಾನ್ಯಾಯ ವಿಚಾರ, ಅದರ ಮುಂದಿನ ಪ್ರತಿಫಲ, ಈ ಸಮಯದಲ್ಲಿ ಬ್ರಿಟಿಷ್ ಸಾಮ್ರಾಜ್ಯದ ಪ್ರಜೆಗಳು ಆಚರಿಸತಕ್ಕ ಕರ್ತವ್ಯ, ಇವೇ ಮುಂತಾದ ವಿಷಯಗಳನ್ನು ಕುರಿತು ಸರ್ ಆರ್ಥರ್ ಕೊನನ್ ಡೊಯಿಲ್ ಎಂಬ ಪ್ರಸಿದ್ಧ ಗ್ರಂಥಕರ್ತರು ರಚಿಸಿದ ಈ ಚಿಕ್ಕಪುಸ್ತಕದ ಭಾಷಾಂತರ.

ಕ್ರಯ: ಒಂದು ಆಣೆ. ಡಜನ್: ಒಂಭತ್ತು ಆಣೆ. ವ್ಯಾಪಾರಸ್ಥರಿಗೂ ಮತ್ತು ಸ್ಕೂಲುಗಳಿಗೂ ರಿಯಾಯತಿಯ ದರ.

ನಮ್ಮ ವಿಳಾಸ—ಪಿ. ಟಿ. ಎ. ಬುಕ್ಕು ಡಿಪೋ, 156 ಚಾಮರಾಜಪೇಟೆ,

[267-3] ನಾಲ್ಕನೇ ರಸ್ತೆ, ಬೆಂಗಳೂರು ಸಿಟಿ.

೧೯೧೫ ನೆಯ ಶ್ರೀ ಸೀತಾರಾಘವ

ಪಾಕೆಟ್ ಡೈರಿಗಳು

ಬಿಕರಿಗೆ ಸಿದ್ಧವಾಗಿವೆ.

ಪಾಕೆಟ್ ಡೈರಿ

ಶಾಯಿ ಇಳಿಯದ ಉತ್ತಮವಾದ ಕಾಗದ. ಮುದ್ದಾದ ಮುದ್ರಣ. ಅನೇಕವಾದ ಹೊಸ ಸಂಗತಿಗಳಿವೆ.

ನಂ. 1 ಸಣ್ಣ ಸೈಜು ಸಾದಾ	....	ಆಣೆ 4
,, 2 ,, ,, ಪೆನ್ಸಲ್ ಮುಚ್ಚಳ ಉಳ್ಳದ್ದು	......	,, 6
,, 3 ದೊಡ್ಡ ಸೈಜು ಸಾದಾ	....	,, 6
,, 4 ,, ,, ಪೆನ್ಸಲ್ ಮುಚ್ಚಳ ಉಳ್ಳದ್ದು		,, 8

ಹೆಚ್ಚಾಗಿ ತರಿಸುವವರಿಗೆ ರೂಪಾಯಿ 1 ಕ್ಕೆ 2 ಆಣೆ ಕಮಿಷನ್ ದೊರೆಯುವುದು. [229-9]

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

1915 ದಿ ನಟ್ಮಲ್ 1915

ಮಾಡಲ್ ಪಾಕೆಟ್ ಡೈರಿ.

ನಮ್ಮಲ್ಲಿ ಪ್ರತಿ ವರುಷವೂ ನಾಲ್ಕು ನಮೂನೇ ಕನಡಾ ಮಾಡಲ್ ಪಾಕೆಟ್ಟು ಡೈರಿಗಳು ತಯಾರಾಗುವದು ಸರಿಯಷ್ಟೆ. ಈ ವರುಷ ಬಹಳ ಹಸನಾದ ಕಾಗದದಲ್ಲಿ ಸ್ಫುಟವಾದ ಅಕ್ಷರಗಳಿಂದ ಅನೇಕ ಹೊಸ ಸಂಗತಿಗಳನ್ನು ಪ್ರಿಂಟುಮಾಡಿಸಿ ಸೊಗಸಾದ ಕ್ಯಾಲಿಕೋದಿಂದ ಬೈಂಡು ಮಾಡಿಸಿ ೨ ಮತ್ತು ೪ ನೇ ನಂಬರು ಡೈರಿಗಳಿಗೆ ಭಂಗಾರದ ಗಿಲೀಟಿನ ಬಟನ್ನು ಹಾಕಿ ಇದೆ. ಈಗಲೇ ಬರೆದು ತರಿಸಿಕೊಳ್ಳಿರಿ. ಕಾಲ ವಿಳಂಬಮಾಡಿದಲ್ಲಿ ದೊರೆಯಲಾರದು.

೧ ನೇ ನಂಬರು	ಚಿಕ್ಕದು	ಸಾದಾ		೦-೪-೦
೨ ,,	ಡಿಟೊ	ಡಿಟೊ	ಮುಚ್ಚಳ ಬಟನ್ನು	೦-೬-೦
೩ ,,	ಡಿಟೊ	ಡಿಟೊ	ದೊಡ್ಡದು ಸಾದಾ	೦-೬-೦
೪ ,,	ಡಿಟೊ	ಡಿಟೊ	ಮುಚ್ಚಳ ಬಟನ್ನು	೦-೮-೦

ಒಂದೇ ನಮೂನೆಯಲ್ಲಿ ಒಂದು ಡಜನ್ನು ತರಿಸಿಕೊಳ್ಳುವವರಿಗೆ ೧ ಡೈರಿ ಜಾಸ್ತಿ. ಹೆಚ್ಚಾಗಿ ತರಿಸಿಕೊಳ್ಳುವರಿಗೆ ರೂಪಾಯಿಗೆ ೩ ಆಣೆಯಂತೆ ಡಿಸ್ಕೌಂಟು ದೊರೆಯುತ್ತೆ. ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿರಿ. ಈ ಡೈರಿಗಳು ಮೈಸೂರಲ್ಲಿರುವ ಸಿ. ಎಲ್. ಎಸ್. ಬುಕ್ಕು ಡಿಪೋದಲ್ಲಿಯೂ ಸಹಾ ದೊರೆಯುತ್ತೆ.

ವಿಳಾಸ.—ಎಸ್. ಡಿ. ನಟ್ಮಲ್ ಕಂಪೆನಿ,

[280-4] ದೊಡ್ಡಪೇಟೆ, ಮೈಸೂರು.

ಬಾಲಕೇಸರಿ.

ಶ್ರೇಷ್ಠವಾದ ಮೂಲಿಕೆಗಳಿಂದಲೂ, ಚಿಟ್ಟಿಹರಳಿನಿಂದಲೂ ತಯಾರಾದ ಈ ತೈಲವು ಮಕ್ಕಳಿಗೆ ಉಂಟಾಗುವ ಜ್ವರ, ಕೆಮ್ಮು, ನಾಯಿಕೆಮ್ಮು, ಸೆಳವು, ಗಂಟಲಲ್ಲಿ ಗುರುಗುಟ್ಟುವುದು, ಉಬ್ಬಸ, ಕುರಿ, ಕ್ಷಯ, ಮಾಂದ್ಯ, ಗರ್ಭವೆಟ್ಟು ಮುಂತಾದ ಅನೇಕ ವ್ಯಾಧಿಗಳನ್ನು ನಾಶ ಮಾಡಿ, ಮಕ್ಕಳನ್ನು ಸಶಕ್ತರನ್ನಾಗಿ ಮಾಡುವುದಲ್ಲದೆ 2-3 ಸಲ ಸುಖಭೇದಿಯಾಗುತ್ತದೆ. ಕ್ರಯ ಬಾಟ್ಲು ೧ಕ್ಕೆ ೧೨ ಆಣೆ ವಿ. ಪಿ ಛಾರ್ಜು ಬೇರೆ.

ವಿಳಾಸ.—ಎಂ. ಗೋವಿಂದಶೆಟ್ಟಿ, ಆಯುರ್ವೇದಿಕ್ ಮೆಡಿಕಲ್

[235-7] ಪ್ರಾಕ್ಟಿಷನರ್, ದೇವನಹಳ್ಳಿ ಟೌನ್.

" ......Preparations of M. Govinda Chetty seem to be greatly in demand by his constituents, many of whom are English-educated people in good positions.. ... "

(Sd.) P. S. ACHYUTA RAO,
Senior Surgeon and Sanitary Commr.

ಜ್ಞಾಪಕಮಾಡಿರಿ! ನಮ್ಮ 1915 ನೇ ಇಸವಿಯ ಸುಂದರವಾದ ಕೆಲೆಂಡರ್.

ಇದು ನಮ್ಮ ಕಂಪೆನಿಯ ಎರಡು ರೂಪಾಯಿಗಳ ಸಾಮಾನುಗಳನ್ನು ಕೊಂಡುಕೊಳ್ಳುವವರಿಗೆ ಉಚಿತವಾಗಿ ಕೊಡಲ್ಪಡುವುದು. ಟಪ್ಪಾಲು ಹಾಸಲು ಸಹ ಮಾಫಿ. ಇತರರಿಗೆ ವಿ. ಪಿ ಛಾರ್ಜು ಸೇರಿ ಒಂದಕ್ಕೆ 3 ಆಣೆ ; 6 ಕ್ಕೆ 13 ಆಣೆ ; 12 ಕ್ಕೆ ರೂ. 1-10-0. ಇವು ಐನೂರು ಜನರು ವರೆಗೆ ಮಾತ್ರ ಸಿಗುವವು. ನಂತರ ಉಳಿಯಲಾರವು. ಆದುದರಿಂದ ತ್ವರೆಮಾಡಿರಿ !

ಅಮೃತಾಂಜನ ರಿಜಿಸ್ಟರ್ಡ್

[52-42]

ಇದು ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು. ಇದರ ಉಪಯೋಗದಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗವಾಯು, ಉಳುಕು, ಕೆಮ್ಮು, ಸೊಂಟದನೋವು, ಶೀತ, ಚರ್ಮವ್ಯಾಧಿ, ಹಲ್ಲುನೋವು, ಚೇಳು ಕಡಿತ ಮೊದಲಾದ ಎಲ್ಲಾ ತರದ ನೋವುಗಳು ಖಾತ್ರಿಯಾಗಿ ನಿಲ್ಲುವವು. ನಕಲಿ ಔಷಧಗಳನ್ನು ಪಡೆಕೊಳ್ಳಬೇಡಿರಿ. ಈ ನಮ್ಮ ಲೋಕಪ್ರಖ್ಯಾತವಾದ ಅಮೃತಾಂಜನವನ್ನು ನಮ್ಮ ರಿಜಿಸ್ಟ್ರಿಯಾದ ಮತ್ತು ಹಲವು ಭಾಷೆಗಳುಳ್ಳ ಸುಂದರವಾದ ಕರಡಿಗೆಯುಳ್ಳ ಪ್ಯಾಕ್ ಮಾಡಿರುತ್ತೇವೆ. ಕರಡಿಗೆ ಇಲ್ಲದ ಬಾಟ್ಲುಗಳನ್ನು ಪಡೆಕೊಳ್ಳಬೇಡಿರಿ. ಬಾಟ್ಲು ಒಂದರ ಕಿಮ್ಮತು 0-8-0. ಡಜನ್ 1 ಕ್ಕೆ 5-4-0. ವಿ. ಪಿ. ಪ್ರತ್ಯೇಕ. ಗಜಕರ್ಣದ ಮುಲಾಮು 0-6-0. ದಂತಮಂಜನ 0-2-0. ನೋಟಿನ ತೈಲ 0-12-0. ಜಿಜ್ಜು ಮುಲಾಮು 0-3-0. ಜುಲಾಬು ಮಾತ್ರೆ 0-8-0. ಸುಂದರಿ ಮುಲಾಮು 0-8-0. ಕ್ಯಾಟಲಾಗಿಗೆ ಬರೆಯಿರಿ. ವ್ಯಾಪಾರಸ್ಥರಿಗೆ ಚಲೋ ಕಮಿಷನ್ ದೊರಕುವದು.

ಅಮೃತಾಂಜನ ಡಿಪ್ರೋ, ಫೋರ್ಟ್. ಮುಂಬಯಿ, ಮತ್ತು ೯ ಜಹಂಗೀರ್ ಸ್ಟ್ರೀಟ್, ಮದ್ರಾಸು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಸೆಳೆತ (ಭಾತ), ಮೈ ನಡುಕ, ಶೀತಾಂಶಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹನಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಹುತುಶೂಲೆ, ಮಕ್ಕಳ ಎಳವು, ಜ್ವರ, ಸಚ್ಚು ಜ್ವರ, ಕ್ಷಯಕ್ಷಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—220 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ; 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪೀ ವರೆಗೆ ಪೋಸ್ಟೇಜು 4 ಆಣೆ. [199-16]



೨. ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈವಾಡಿಕೆಂದು ಕೋರೋಣಗಳೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರಿಸಿ, ಮೂತ್ರವು ಕಟ್ಟಿದ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿ ; ಒಂದೇ ಸಿಂದು ಬುಡ್ಡಿಯು ನಮ್ಮಲ್ಲಿರಲಿ ! ವಿಷಭೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ

ಅನುಪಾನ ಪತ್ರವು ಔಷಧದೊಡನೆ ಇರುವುದು. ಬೆಲೆ ರೂ. 1; ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ :—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯುಳ್ಳ ನಿಬಿಡವಾದ ಕೇಶದಾಮವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು ? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಾಪ ಉಪಕರಣವಾದರೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತಿದೆಯೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ. ಈ ತೈಲವನ್ನು ಹಚ್ಚಿಕೊಳ್ಳುತ್ತಲೇ, ಮಸ್ತಿಷ್ಕದ ಬೇಗೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ಹಚ್ಚಲು ತೊಡಗಿದ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು; ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮನೋಹರವೂ ಆಗಿರುವುದು.



ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡುವದಕ್ಕಿಂತ ಒಂದೇಯೊಂದು ಬಾರಿ ಈ "ಕಾಮಿನಿಯಾ ತೈಲ" ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯು ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಒಫ್ ಮೇರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಅವುಗಳಲ್ಲಿ ಒಂದನ್ನೇ ನೋಡಿರಿ! ನೇಗಿನಹಾಳಕರ ಬಂಧುಗಳು. ಬಸವನಗಲ್ಲಿ, ಬೆಳಗಾಂವ—ತಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವುದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ. ಆದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ. ಪಿ ದ್ವಾರಾ ರವಾನಿಸುವುದು. ಸೀಸೆಯೊಂದರ ಕ್ರಯ ರೂ. 1-0-0, ಅ. ವೆ. 0-4-0 ಬೇರೆ. 3 ಸೀಸೆಗಳ ಕ್ರಯ ರೂ. 2-10-0, ಅ. ವೆ. 0-7-0 ಬೇರೆ.

ಸೂಚನೆ.—ಅನೇಕ ದುರ್ಜನರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಬಿಕರಿಯಿಂದ ತಮಗೆ ಅಲ್ಪ ನಫೆಯೇ ದೊರಕುತ್ತದೆಂದು, ನೀವು "ಕಾಮಿನಿಯಾ ತೈಲ" ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭ ದೊರಕತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಅದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳುವಷ್ಟು ಮೆಹರಬಾನ್ ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಿಬೀಳದೆ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಒಟ್ಟೊ ದಿಲ್ ಬಹಾರ್ !!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಆಲ್ಕೋಹೋಲ್) ಸಂಪರ್ಕವಿಲ್ಲವು ಒಂದೇ ಒಂದು ಸಲ ನಿಮ್ಮ ಕೈಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ. ಈ ಒಟ್ಟೊ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವುದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ. [19-48]

ಸಣ್ಣ ಸೀಸೆಯ ಬೆಲೆ ರೂ. 0-8-0 ಒಂದು ಮಧ್ಯಮ (ಮೀಡಿಯಂ) ಸೀಸೆ 1ಕ್ಕೆ 0-12-0 ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0. ಅಂಚೆಯ ವೆಚ್ಚ ಬೇರೆ ರೂ. 0-4-0. ಒಟ್ಟೊ-ದಿಲ್ ಬಹಾರ್ ಪರಿಮಳದ ಕಾರ್ಡುಗಳು ಡಜನ್ ಒಂದಕ್ಕೆ 0-12-0.

ಮೇಲೆ ಕಂಡ ಎಲ್ಲಾ ಸುಗಂಧಗಳು ಸಿಕ್ಕುವ ಪತೆ:—

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್ ಜಿದ್, ಬೊಂಬಾಯಿ.

ಏಜೆಂಟ್, ದಿ ಉಲನ್ ಮಾರ್ಟ್, ಮಂಗಳೂರು.

Mellin's Food

ಮೆಲ್ಲಿನ್ಸ್ ಆಹಾರವು

ಕ್ರೈಸೋಕದ ಮಾಡಿದ

ಶಿಶುಗಳಿಗೂ ರೋಗಿಷ್ಠರಿಗೂ

ಮೆಲ್ಲಿನ್ಸ್ ಆಹಾರವು ಕ್ರಮಪ್ರಕಾರ ತಯಾರುಮಾಡಿ ಸೇವಿಸಿದರೆ ಹುಟ್ಟಿದ ಶಿಶುಗಳು ಮೊದಲುಗೊಂಡು ಮುದಿಪ್ರಾಯದವರ ತನಕ ಎಲ್ಲರಿಗೂ ಸಂಪೂರ್ಣವಾದ ದೇಹಪುಷ್ಟಿಯನ್ನೂ ವಿಶೇಷವಾದ ಬಲವನ್ನೂ ಕೊಡುತ್ತದೆ. [4-51]

ಮೆಲ್ಲಿನ್ಸ್ ಆಹಾರವೆಂಬ ಬೇರೆ ಬೇರೆ ತಿಂಡಿ ಪದಾರ್ಥಗಳನ್ನು ಹಿಂದುಸ್ಥಾನ, ಬರ್ಮಾ ಮತ್ತು ಸಿಲೋನ್ ದ್ವೀಪಗಳಲ್ಲಿ ಎಲ್ಲಾ ವ್ಯಾಪಾರಗಾರರೂ ವಿಕ್ರಯಮಾಡುತ್ತಾರೆ. Messrs. OAKES & Company, Mount Road, Madras,

ವಿಳಾಸ—ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಪಡೆದಿರುವ (ರಿಜಿಸ್ಟರ್ಡು) ಶಕುಂತಲೆ ಕೂದಲು ಬೆಳೆಯುವ ಪರಿಮಳ ತೈಲವು.

ಡಬ್ಬಿ 1 ಕ್ಕೆ 36 ವಿಧವಾದ ಇನಾಂ ಸಾಮಾನುಗಳ ಸಮೇತ 15 ತೊಲೆ ಎಣ್ಣೆಯ ಕ್ರಯ ರೂ. 1-0-0.

ಈ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚನ್ನಾಗಿ ಉಜ್ಜಿ ತಲೆಯ ಕೂದಲುಗಳಿಗೆ ಹಚ್ಚಿಕೊಂಡು ಬಾಚಿಕೊಳ್ಳುತ್ತಾ ಬಂದರೆ ಬೆಳೆಯದೆ ಇರುವ ಕೂದಲು ಬೆಳೆಯುವದು ಒರಟಾಗಿರುವ ಕೂದಲು ಮೃದುವಾಗುವದು. ನೇರಳೆ ಹಣ್ಣಿನಂತೆ ಕಪ್ಪಾಗಿ ಥಳಥಳಿಸುವದು. ದೇಹದಲ್ಲಿ ಇರತಕ್ಕ ಉಷ್ಣವನ್ನು ತೆಗೆಯುವದು. ಕಣ್ಣಿಗೆ ತಂಪು ಕೊಡುವದು. ತಲೆಯಲ್ಲಿರುವ ಹೊಡಡನ್ನು ಸರಿಮಾಡುವದು ಕಣ್ಣಿನಲ್ಲಿ ಮಂಜನ್ನು ತೆಗೆದು, ಮುಖಕ್ಕೆ ಕಾಂತಿಯನ್ನು ದೇಹಕ್ಕೆ ಆರೋಗ್ಯವನ್ನು ಮನಸ್ಸಿಗೆ ಸಂತೋಷವನ್ನು ಕೆಲಸಕ್ಕೆ ಉಲ್ಲಾಸವನ್ನು ಓದುವವರಿಗೆ ಆಹ್ಲಾದವನ್ನು ಉಂಟುಮಾಡುವದಲ್ಲದೆ ಜವ್ವಾಜಿ, ಪುನುಗು, ಅಂಬರ್, ಕೇಸರ್, ಪಚ್ಚಕರ್ಪೂರ ಮತ್ತು ಜಾಜಿಮಲ್ಲಿಗೆ, ಸಂಪಿಗೆ, ಇರುವಂತಿಗೆ, ಶ್ಯಾವಂತಿಗೆ, ಕ್ಯಾದಗೆ, ಗುಲಾಬಿ, ಪಿಂಡಿಪಾಚ್ಚಿ, ದವನ, ಮರುಗ, ಇತ್ಯಾದಿ ಪುಷ್ಪಗಳ ವಾಸನೆಯಾಗಿರುವ ಈ ಬಂದು ತೈಲವನ್ನು ತಲೆಯ ಕೂದಲಿಗೆ ಹಚ್ಚಿಕೊಂಡರೆ ಯಾವತ್ತು ದಿವಸಗಳ ವರಿಗೂ ಇದರ ವಾಸನೆ ಹೋಗುವದಿಲ್ಲ. ಈ ತೈಲವು ಹೆಂಗಸರು, ಗಂಡಸರು, ಹುಡುಗರು, ಮಕ್ಕಳು ಪ್ರತಿಒಬ್ಬರಿಗೂ ಬಹಳ ಅನುಕೂಲವಾದದ್ದು. ಪ್ರತಿ ಕುಟುಂಬದಲ್ಲು ಈ ತೈಲವು ಅವಶ್ಯಕವಾಗಿ ಇರಬೇಕಾದದ್ದು.

15 ತೊಲ ತೈಲವುಳ್ಳ ಡಬ್ಬಿ 1 ಕ್ಕೆ ಕ್ರಯ 36 ಇನಾಂ ಸಾಮಾನುಗಳ ಸಮೇತ ರೂ. 1-0-0.

ಇನಾಂ ಸಾಮಾನುಗಳ ತಪ್ಸೀಲು—ಸ್ತ್ರೀಯರು ತಲೆಯಲ್ಲಿ ಧರಿಸುವ ಕೊಂಡೆಪುಷ್ಪ 1, ದಂತದ ಬಾಚಣಿಗೆ 1, ಮುಖ ನೋಡಿಕೊಳ್ಳುವ ಕನ್ನಡಿ 1, ಜರ್ಮನ್ ಸಿಲ್ವರ್ ಕಾಡಿಗೆ ಭರಣಿ 1, ಅತ್ತರು ಬಿಲ್ಲೆ 1, ವಾಸನೆಯುಳ್ಳ ಸೋಪು 1, ತಾಂಬೂಲಪಾತ್ರೆ 22, ಕೊಂಡೆ ಗಿಣಗಳು 6, ಕಾರ್ಬೊನೇಷನ್ ಬ್ರೂಚ್ 1, ಜವಾದು ಡಬ್ಬಿ 1. ಈ ತರಹ 36 ಇನಾಂ ಕೊಡಲ್ಪಡುತ್ತೆ.

ನಮ್ಮ ವಿಳಾಸ:—ಎಸ್. ಎಮ್. ಸ್ವಾಮಿ ಅಂಡ್ ಕಂಪೆನಿ

[250-5] ನಂ. 44, ಸಂಬುಳಯ್ಯರ ವೀದಿ, ಮದರಾಸು.

ಟೋಪಿಗಳು: ಟೋಪಿಗಳು:

ಉತ್ತಮವಾದ ಟೋಪಿಗಳು ಹಾಸನದಲ್ಲಿ ದೊರೆಯುತ್ತವೆ.
ಬಿಳಿ ತರದ ಉಣ್ಣೆ ದಾರದಿಂದ ತಯಾರಿಸಲ್ಪಡುವ ಸಾಮಾನುಗಳಿಗೂ, ಬೆಲೆಗಳಿಗೂ, ದರಗಳಿಗೂ ಮ್ಯಾನೇಜರವರಿಗೆ ಬರೆದು ತಿಳಿದುಕೊಳ್ಳಬಹುದು.
Men's socks, vests and various knitted articles.
ಮ್ಯಾನೇಜರ್, ಗರ್ಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ.
Apply:—MANAGER, WOOL WORKS,
[101-16] GIRLS' INDUSTRIAL SCHOOL, HASSAN.

ನೋಟೀಸ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ.—

ಬೆಂಗಳೂರು ಡಿವಿಜನ್ ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನ ಇನ್‌ಸಾಲ್ವೆನ್ಸಿ Miscellaneous 55/1911-12 ಮತ್ತು 3/1913-14 ನೆಯ ನಂಬರು ಕೇಸುಗಳಲ್ಲಿ ವೆಂಕಟರಾಗಿರುವ ರಿಸೀವರು ಸದರಿ ಮೊಕದ್ದಮಾ ಅರ್ಜದಾರ ಸಿದ್ದಪ್ಪನ ಬಾಬತು ಷೆಡ್ಯೂಲ್‌ನಲ್ಲಿ ಕಂಡ ಸ್ಥಿರಸ್ವತ್ತುಗಳನ್ನು ಸದರಿ ಸ್ವತ್ತುಗಳ ಬಾಬ್ತಿನಲ್ಲಿ ಕಂಡ ಸ್ಥಳ ಮತ್ತು ಕಾಲಗಳಲ್ಲಿ ಹಾಲಿ ಜಾರಿಯಲ್ಲಿರುವ ಸಿವಿಲ್ ಪ್ರೊಸೀಜರ್ ಕೋಡಿನ ನಿಬಂಧನೆಗಳಿಗೆ ಒಳಪಟ್ಟು ಬಹಿರಂಗವಾಗಿ ಹರಾಜುಮಾಡುತ್ತಾರೆ. ಇಷ್ಟವುಳ್ಳವರು ಸ್ವತ್ತುಗಳನ್ನು ಛಡಸವಾಲಿನಲ್ಲಿ ಕೊಳ್ಳಬಹುದು.

ಷೆಡ್ಯೂಲ್.

ತುಮಕೂರು ಮುನ್‌ಸಿಫ್ ಕೋರ್ಟಿನ ಬಳಿ 26 ನೇ ಡಿಸೆಂಬರ್ 191 .
ಶನಿವಾರ ಹಗಲು 11 ರ ಆರಭ್ಯ 5 ಗಂಟೆವರೆಗೆ.

(1) ತುಮಕೂರು ಟವನ್‌ನಲ್ಲಿ ಖಾನೇಷುಮಾರಿ ನಂಬರು 1019 ಮ್ಯುನಿಸಿಪಲ್ ನಂಬರು 999 ಉಳ್ಳ ಮನೆ ಮತ್ತು ಹಿತ್ತಲಿಗೆ ಚಕ್ಕುಬಂದಿ—ಪೂರ್ವಕ್ಕೆ ರಸ್ತೆ ಮತ್ತು ಬಾಬುಸಾಬರ ಮತ್ತು ದಸ್ತಗಿರಿಸಾಬರ ಮನೆ, ಪಶ್ಚಿಮಕ್ಕೆ ಖಜಾಂಚಿ ಪುಟ್ಟರಾಯರ ಹಿತ್ತಲು, ಉತ್ತರಕ್ಕೆ ಸಿದ್ದಪ್ಪನ ಮನೆ, ದಕ್ಷಿಣಕ್ಕೆ ದಫೇದಾರ ನರಸಿಂಹಯ್ಯನವರ ಮನೆ. ಅಂದಾಜು 1,500 ರೂಪಾಯಿ.

ಸ್ವತ್ತಿನ ಬಳಿ 28 ನೇ ಡಿಸೆಂಬರ್ 1914 ಸೋಮವಾರ ಹಗಲು
11 ರ ಆರಭ್ಯ 5 ಗಂಟೆವರೆಗೆ.

(4) ತುಮಕೂರು ಟವನ್‌ನಲ್ಲಿ ಸಿರಾ ಗೇಟ್ ಅಂದರೆ ಸಿರಾ ರೋಡ್ ಟೋಲ್ ಗೇಟ್ ಬಳಿ ಇರುವ ಖಾನೇಷುಮಾರಿ 2172-2173 ನೇ ನಂಬರು ಮನೆಗಳು ಮತ್ತು ಖಾಲೀ ನಿವೇಶನಕ್ಕೆ ಚಕ್ಕುಬಂದಿ—ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಮಲ್ಲಯ್ಯನ ಹೊಲ, ಉತ್ತರಕ್ಕೆ ಬಿ. ಲಿಂಗಪ್ಪನವರ ಹೊಲ, ದಕ್ಷಿಣಕ್ಕೆ ಓಣಿ. ಅಂದಾಜು ಷೆಡ್ಯೂಲ್‌ನಲ್ಲಿ 2,000 ರೂ. ಹಾಕಿದೆ; ಪಂಚಾಯಿತರು 1,500 ರೂಪಾಯಿ ಕಟ್ಟುತ್ತಾರೆ

ಸ್ವತ್ತುಗಳ ಬಳಿ 29 ನೇ ಡಿಸೆಂಬರ್ 1914 ಮಂಗಳವಾರ ಹಗಲು
11 ರ ಆರಭ್ಯ 5 ಗಂಟೆವರೆಗೆ.

(5) ತುಮಕೂರು ಅಮಾನಿಕೆರೆಗೆ ಸೇರಿದ ಸರ್ವೆ ನಂಬರು 126, ಎಕರೆ 2 ಗುಂಟೆ 24, ಆಕಾರ 16-0-0 ರೂ. ಉಳ್ಳ ಜಮೀನಿಗೆ ಚಕ್ಕುಬಂದಿ—ಪೂರ್ವಕ್ಕೆ ಕುರಿಪಾಳ್ಯದ ಲಕ್ಷ್ಮಪ್ಪ ರಂಗಪ್ಪ ಇವರ ಗದ್ದೆ, ಪಶ್ಚಿಮಕ್ಕೆ ಪಾಪಾಜೋಯಿಸರ ಇನಾಂತಿ ಗದ್ದೆ, ಉತ್ತರಕ್ಕೆ ಅಮಾನಿಕೆರೆ ಶ್ಯಾನುಭೋಗರ ಗದ್ದೆ ಮತ್ತು ಕಸಬದ ಶ್ರೀನಿವಾಸಯ್ಯಂಗಾರರವರ ಗದ್ದೆ, ದಕ್ಷಿಣಕ್ಕೆ ಗಾರೆ ಮುದ್ದಣ್ಣನ ಗದ್ದೆ. ಅಂದಾಜು 300 ರೂಪಾಯಿ.

(8) ತುಮಕೂರು ಅಮಾನಿಕೆರೆಗೆ ಸೇರಿದ ಸರ್ವೆ ನಂಬರು 103, ಎಕರೆ 2 ಗುಂಟೆ 28, ಆಕಾರ 5-0-0 ರೂ. ಉಳ್ಳ ಗದ್ದೆಗೆ ಚಕ್ಕುಬಂದಿ—ಪೂರ್ವಕ್ಕೆ ಕುರಿಪಾಳ್ಯದ ಪುಟ್ಟಗನ ಹೊಲ, ಪಶ್ಚಿಮಕ್ಕೆ ಅದೆಪ್ಪನವರ ಹೊಲ, ಉತ್ತರಕ್ಕೆ ರೈಲು ರಸ್ತೆ, ದಕ್ಷಿಣಕ್ಕೆ ಅದೆಪ್ಪನವರ ಹೊಲ. ಅಂದಾಜು 200 ರೂ.

(9) ತುಮಕೂರು ಅಮಾನಿಕೆರೆ ಸರ್ವೆ ನಂಬರು 95, ಎಕರೆ 6 ಗುಂಟೆ 30, ಆಕಾರ 10-0-0 ರೂ. ಉಳ್ಳ ಜಮೀನಿಗೆ ಚಕ್ಕುಬಂದಿ—ಪೂರ್ವಕ್ಕೆ ಮಾದಿಗರ ಇನಾಂತಿ ಮತ್ತು ಚಂದ್ರಯ್ಯನವರ ಜಮೀನ್, ಪಶ್ಚಿಮಕ್ಕೆ ಕುರಿಪಾಳ್ಯದ ಯರೆಗೆ ಚಿಕ್ಕನ ಜಮೀನು, ಉತ್ತರಕ್ಕೆ ತಿಗಳರ ದುರ್ಗಯ್ಯನ ಜಮೀನು, ದಕ್ಷಿಣಕ್ಕೆ ಮಾದಿಗರ ಇನಾಂತಿ ಜಮೀನು. ಅಂದಾಜು 200 ರೂ.

ಸ್ವತ್ತುಗಳ ಬಳಿ 30 ನೇ ಡಿಸೆಂಬರ್ 1914 ಬುಧವಾರ ಹಗಲು
11 ರ ಆರಭ್ಯ 5 ಗಂಟೆವರೆಗೆ

(10-a) ತುಮಕೂರು ಟವನ್‌ನಲ್ಲಿ ಹೊಸ ಮಂಡಿಗಳು ಕಟ್ಟುವ ಸ್ಕೀಮ್ ನಂಬರು 2760, ಪೂರ್ವ ಪಶ್ಚಿಮ ಅಡಿ 45, ಉತ್ತರ ದಕ್ಷಿಣ ಅಡಿ 160—ಪೂರ್ವಕ್ಕೆ ನಾಗರಾಜಯ್ಯನ ನಿವೇಶನ ಪಶ್ಚಿಮಕ್ಕೆ ಕಲ್ಯಾಣಪ್ಪನ ನಿವೇಶನ, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ಮಾದಿಗರ ತೋಪು. (10-b) ನಂಬರು 2759, ಪೂರ್ವ ಪಶ್ಚಿಮ 45 ಅಡಿ, ಉತ್ತರ ದಕ್ಷಿಣ 106 ಅಡಿ ಪೂರ್ವಕ್ಕೆ ಪಾಕೀರ್ ಸಾಹೇಬರ ನಿವೇಶನ, ಪಶ್ಚಿಮಕ್ಕೆ ಷಕೀಲುಸಾಬರ ನಿವೇಶನ, ಉತ್ತರಕ್ಕೆ ಮುಕಾನ್ ನಿವೇಶನ, ದಕ್ಷಿಣಕ್ಕೆ ರಸ್ತೆ. ಈ ಎರಡಕ್ಕೂ ಅಂದಾಜು 450 ರೂ.

ಸ್ವತ್ತು ಬಳಿ 31 ನೇ ಡಿಸೆಂಬರ್ 1914 ಗುರುವಾರ ಹಗಲು
11 ರ ಆರಭ್ಯ 5 ಗಂಟೆವರೆಗೆ.

(7) ತುಮಕೂರು ತಾಲೂಕು ಕಸಬಾ ಸಮ್ಮತು ಹೊನ್ನೇನಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ 55 ನೇ ನಂ, ಎಕರೆ 5 ಗುಂಟೆ 28, ಆಕಾರ 15-0-0 ರೂ.; ಖುಷ್ಕಿ ಎಕರೆ 4 ಗುಂಟೆ 9, ಆಕಾರ 3-12-0 ರೂ. ಉಳ್ಳ ಜಮೀನಿಗೆ ಚಕ್ಕುಬಂದಿ—ಪೂರ್ವಕ್ಕೆ ಪುಟ್ಟಮ್ಮನ ಹೊಲ ಮತ್ತು ವೀರಣ್ಣ ಸಿದ್ದಪ್ಪ ವಗೈರೆಯರ ಗದ್ದೆ, ಪಶ್ಚಿಮಕ್ಕೆ ರಹಿಮಾನ್ ಸಾಬರ ಹೊಲ ಗದ್ದೆ ಸಹ, ಉತ್ತರಕ್ಕೆ ಪುಟ್ಟಮ್ಮ ಹೈದರಸಾಬರವರ ಹೊಲ, ದಕ್ಷಿಣಕ್ಕೆ ಮಾದಿಗರ ಕೊಪಗಿ ಮತ್ತು ವೆಂಕಟಾಚಲಯ್ಯ ನಾಗಣ್ಣನವರ ಗದ್ದೆ. ಅಂದಾಜು 1,200 ರೂ.

ಸ್ವತ್ತುಗಳ ಬಳಿ 2 ನೇ ಜನವರಿ 1915 ಶನಿವಾರ ಹಗಲು 11 ಗಂಟೆ
ಆರಭ್ಯ 5 ಗಂಟೆವರೆಗೆ

(11) ಗುಬ್ಬಿ ತಾಲೂಕು ಚೇಳೂರು ಗ್ರಾಮದ ಸರ್ವೆ 192 ನೇ ಪೋಡು 1 ನೇ ಖುಷ್ಕಿ ಎಕರೆ 3 ಗುಂಟೆ 35, ಆಕಾರ 3-12-0 ರೂ. ಉಳ್ಳ ಜಮೀನಿಗೆ ಚಕ್ಕುಬಂದಿ—ಪೂರ್ವಕ್ಕೆ ನರಸಪ್ಪನವರ ಹೊಲ, ಪಶ್ಚಿಮಕ್ಕೆ ಶೀನಪ್ಪನವರ ಹೊಲ, ಉತ್ತರಕ್ಕೆ ಕೆರೆ ಅಂಗಳ, ದಕ್ಷಿಣಕ್ಕೆ ಓಣಿ. ಅಂದಾಜು 300 ರೂ.

(12) ಡಿಟೋ ಗ್ರಾಮದ ಸರ್ವೆ 193 ನೇ ಪೋಡು 1 ನೇ ಎಕರೆ 6 ಗುಂಟೆ 25, ಆಕಾರ 6-4-0 ರೂ. ಉಳ್ಳ ಜಮೀನಿಗೆ ಚಕ್ಕುಬಂದಿ—ಪೂರ್ವಕ್ಕೆ ನಾರಾಯಣರಾಯರ ಹೊಲ, ಪಶ್ಚಿಮಕ್ಕೆ ನರಸಪ್ಪನವರ ಹೊಲ, ಉತ್ತರಕ್ಕೆ ಕೆರೆ ಅಂಗಳ, ದಕ್ಷಿಣಕ್ಕೆ ಓಣಿ. ಅಂದಾಜು 600 ರೂ.

(13) ಡಿಟೋ ಗ್ರಾಮದ ಖಾನೇಷುಮಾರಿ 68 ನೇ ನಂಬರು ಅಂಕಣ 24 ಉಳ್ಳ ಮನೆಗೆ ಚಕ್ಕುಬಂದಿ—ಪೂರ್ವಕ್ಕೆ ಪಟ್ವಾರಿರಾಮಯ್ಯನ ಮನೆ ಮತ್ತು ನಿವೇಶನ, ಪಶ್ಚಿಮಕ್ಕೆ ದಾರಿ, ಉತ್ತರಕ್ಕೆ ದಾರಿ, ದಕ್ಷಿಣಕ್ಕೆ ಹೊಸ ಸಂತೆ ಮೈದಾನದ ದಾರಿ. ಅಂದಾಜು 300 ರೂ. [280-2]

ತುಮಕೂರು, ತಾ|| 31 ನೇ ನವಂಬರ್, 14. K. RAMASWAMAYYA, Pleader, *Receiver*.

The General Assurance Society Ltd., Ajmer.

(A Popular Life Office.)

Mr. S. P. Ramanna—Agent at Mysore.

Before Insuring or taking agency elsewhere, it would be to your interest to know the rates of premium and terms of agency specially prepared by the Society's Consulting Actuary, Mr. H. E. W. Lutt, F.I.A. (one of the most eminent Actuaries in England).

First Valuation Result:—The total liabilities under all assurances issued up to 31st March 1913, are fully covered by the Society's Life Assurance Fund and Paid up Capital. Write for full particulars, Annual and Valuation Reports to the Manager, Ajmer, or Secretary,

Opposite to Minto Ophthalmic Hospital,
[131-24] Bangalore City.

ಮೈಸೂರಿಯನ್ ನಶ್ಯವು

ಸಾದಾ ನಶ್ಯ ಶೇರು 1 ಕ್ಕೆ 0-15-0.
ವಾಸನೆ ನಶ್ಯ ಡಬ್ಬಿ 1 ಕ್ಕೆ 0-4-0. ಡಜನ್ 2-8-0.

ಈ ನಶ್ಯವು ಇತರ ದೇಶದ ಬಹಳ ಮೇಲಾದ ಹೊಗೆಸೊಪ್ಪಿನಲ್ಲಿ ಶಕ್ತವಾಗಿ ತಯಾರಿಸಿ ಎಲ್ಲಾ ಸ್ಥಳಗಳಿಗೂ ಕಳುಹಿಸಿ ಒಳ್ಳೇ ಹೆಸರನ್ನು ಪಡೆದಿರುತ್ತೇವೆ. ಇದರಲ್ಲಿ ಸಾದಾ ನಶ್ಯ, ವಾಸನೆ ನಶ್ಯ ಎಂದು ಎರಡು ವಿಧವುಂಟು. ಬಹು ದಿನದ ವರೆಗೂ ಇದರ ಘಾಟು ಹೋಗುವುದಿಲ್ಲ. ನಮ್ಮ ವಾಸನೆ ನಶ್ಯವನ್ನು ಒಂದು ಚಿಟಿಕೆಯನ್ನು ಸಾದಾ ನಶ್ಯ 7-8 ಚಿಟಿಕೆಯಲ್ಲಿ ಬೆರಸಿ ಹಾಕಿಕೊಂಡರೆ ದಿವ್ಯಾನಂದವಾಗಿರುತ್ತೆ. ಅನೇಕ ವ್ಯಾಪಾರಸ್ಥರು ನಮ್ಮಲ್ಲಿಂದ ಪೀಸಗಟ್ಟಿ ತರಿಸಿ ಸಪ್ಲೈ ಮಾಡುತ್ತಿರುತ್ತಾರೆ. ಬಹು ಜಾಗ್ರತೆ ಕೊಂಡಿರಿ ಒಂದು ಸಲ ತರಿಸಿ ನೋಡಿ. ಅತ್ತರು ದಿನಸುಗಳು ಬೇಕಾದವರು "ದಿ ಮೈಸೂರಿಯನ್, ಮದರಾಸು" ಎಂಬ ಅಡ್ರೆಸ್ಸಿಗೆ ಬರೆದು ಕೃಪೆಯಿಟ್ಟು ತರಿಸಿಕೊಳ್ಳಿ.

ನಮ್ಮ ವಿಳಾಸ:—ಟ್ರೇಡ್ಸ್ ಏಜನ್ಸಿ ಕಂಪೆನಿ,
[246-6] 32, ವೆಂಕಯ್ಯರ ಬೀದಿ, ಮದರಾಸು.

S U. N. & Co.,

BENARES CITY, U. P.

ಸೊಗಸಾದ ಸರಕುಗಳು !!
ದೊಡ್ಡ ಕಂಪೆನಿ !

ಈ ನಮ್ಮ ಕಂಪನಿಯಲ್ಲಿ ನೆಯುದು ತಯಾರಿಸುವ ಉತ್ತಮವಾದ ಬನಾರಸ್ ರೇಷ್ಮೆ ಜರೀ ಸೀರೆಗಳು, ಶಲ್ಲೆ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ್ಟಿ, ಮಗುಟ, ಜಗನ್ನಾಥ ಜಾಗಟೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಕ್ಯಾಟಲಾಗ್ 1 ನ್ನು ಮತ್ತು 2 ವಿಶ್ವೇಶ್ವರ ಪಟಗಳನ್ನು ಉಚಿತವಾಗಿ ಕಳುಹಿಸಲಾಗುವುದು. [89-40]

ಎಸ್. ಯು. ಎನ್. ಮತ್ತು ಕಂಪೆನಿ, ಕಾಶಿ.

ವನಸ್ಪತಿ ಬಲಕಾರಿಣಿ.

ಸಾಸಪರಿಲಾ, ಸುಗಂಧಪಾಲ ಮುಂತಾದ ಅನೇಕ ವನಮೂಲಿಕೆಗಳಿಂದ ತಯಾರಾದದ್ದು. ಬೆಳಿಗ್ಗೆ ಸಾಯಂಕಾಲ ಉಪಹಾರದ ಕಾಲದಲ್ಲಿ ಅಥವಾ ಇಲ್ಲದೇ ಇದ್ದರೂ ಕಾಫಿಯಂತೆ ನೀರಿನಲ್ಲಿ ಚೆನ್ನಾಗಿ ಮರಳಿಸಿ ಹಾಲು ಸಕ್ಕರೆ ಸೇರಿಸಿ ಸೇವನೆ ಮಾಡುವುದು. ಈ ಸೇವನೆಯಿಂದ ಆಬಾಲವೃದ್ಧರ ಮತ್ತು ಗರ್ಭಿಣೀ ಸ್ತ್ರೀಯರ, ಬಾಣಂತಿಯರ ಅಬಲತ್ವ, ಮಂದಾಗ್ನಿ, ರಕ್ತದೋಷ, ಕೆಮ್ಮು, ನಿದ್ರಾಭಂಗ, ವಾಯು ಶೂಲೆಗಳು, ವಾತ ಪಿತ್ಥ ಶ್ಲೇಷ್ಮಾದಿಗಳ ವಿಕಾರಗಳು, ಮಕ್ಕಳ ಕೃಶತ್ವವು, ಯೌವನಸ್ಥರ ನಿಶ್ಶಕ್ತತೆಯು, ಉಷ್ಣಸಂಬಂಧ ರೋಗಗಳು, ಬಹುಮೂತ್ರರೋಗಗಳಿಗೂ, ಬುದ್ಧಿ ಉಪಯೋಗಿಸತಕ್ಕ ಪಂಡಿತರು, ಲಾಯರುಗಳು, ವಿದ್ಯಾರ್ಥಿಗಳಿಗೂ ಸಹ ಉತ್ಕೃಷ್ಟವಾದದ್ದು. ನಿದ್ರೆ ಬಾರದವರಿಗೂ, ನಿದ್ರೆ ಕೆಟ್ಟವರಿಗೂ ಬಹಳ ಅನುಕೂಲ. ಕ್ರಯ 24 ತೋಲಾ ಪುಡಿಯುಳ್ಳ ಪೊಟ್ಟಣಕ್ಕೆ 1 ರೂಪಾಯಿ. ವಿ. ಪಿ. ಛಾರ್ಜು ಬೇರೆ. ಎಲ್ಲಾ ಕಡೆಗಳಲ್ಲೂ ಏಜಂಟರು ಬೇಕು.

ಮತ್ತು ಲೇಹಗಳು, ತೈಲಗಳು, ಔಷಧಗಳು ಬೇಕಾದವರು ದೇಹಧರ್ಮವನ್ನು ತಿಳಿಸಿ ತರಿಸಿಕೊಳ್ಳುವದಾದರೆ ಪ್ರತ್ಯುತ್ತರಕ್ಕೆ ಟಿಕೆಟ್ ಆಗಲಿ, ರಿಪ್ಲೈ ಕಾರ್ಡು ಆಗಲಿ ಬರೆಯತಕ್ಕದ್ದು.

[216-13] ವಿಳಾಸ—ವಿ. ಪಿ. ಲಕ್ಷ್ಮಣಪಂಡಿತರು,
ಪಂಡಿತ ವೆಂಕಟರಮಣಪ್ಪನವರ ವೈದ್ಯಶಾಲಾ, ಬುರಜನಹಟ್ಟಿ, ಚಿತ್ರದುರ್ಗ.

ನೋಟೀಸು.

ಶಿವಮೊಗ್ಗ ಡಿಸ್ಟ್ರಿಕ್ಟ್ ಬೋರ್ಡು ರೈಲ್ವೆ ಡಿಬೆಂಚರ್‌ಗೋಸ್ಕರ ೧೯೧೪ ನೇ ಇಸವಿ ನವಂಬರ್ ೩೦ ರ ಒಳಗೆ ಪಾವತಿಮಾಡುವ ಮೊಬಲಗಿನ ಮೇಲೆ ಶೇಕಡ ಒಂದು ರೂಪಾಯಿಸಂತೆ ಡಿಸ್ಕಾಂಟು ಕೊಡುವುದಾಗಿ ಈ ಮೊದಲೇ ಮಂಜೂರುಮಾಡಿರುವುದು ಸರಿಯಷ್ಟೆ. ಸದರಿ ಅವಧಿಯನ್ನು ಬರುವ ೧೯೧೫ ನೇ ಜನವರಿ ಆಖೈರು ವರಿಯಂತರ ಬಡಾಯಿಸಿ ಇರುವುದನ್ನು ಗವರ್ನಮೆಂಟಿನವರು ತಾ. ೩೦-೧೧-೧೯೧೪ ನೇ ಮಕೂಮ್ Fel $\frac{2916}{\text{G. F. 63-14-5}}$ ನೇ ಆರ್ಡರ್‌ನಲ್ಲಿ ಮಂಜೂರು ಮಾಡಿರುತ್ತಾರೆ.

ತಾ. 2-12-1914, ಕೆ. ಮಾಥ್ಯು,
ಶಿವಮೊಗ್ಗಾ. ಡೆಪ್ಯುಟಿ ಕಮಿಷನರ್ ಮತ್ತು
[269-3] ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟ್.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1914 ನೇ ಇಸವಿ ಡಿಸೆಂಬರ್ 10 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ.

ಲೇಣೆ—(1) ಷೇರು ಮೊಬಲಗು		ರೂ.	9,96,326
,, (2) ಡಿಪಾಜಿಟ್ಟುಗಳು		,,	23,86,174
,, (3) ಇತರ		,,	51,923
(ಆಣೆ, ಕಾಸು ಬಿಟ್ಟಿರುತ್ತೆ.)	ಜುಮ್ಲಾ	ರೂ.	34,34,423

ದೇಣೆ—(1) ಕೈಮುಲ್ಲೂ, ಬ್ಯಾಂಕುಗಳಲ್ಲಿರುವ ಹಣ		ರೂ.	9,07,891
,, (2) ಖಾತೆ ಮತ್ತು ಇತರ ಸಾಲಗಳು		,,	18,10,118
,, (3) ಡಿಸ್ಕೌಂಟು ಮಾಡಿದ ಮಾಯಿದೆ ಹುಂಡಿಗಳು		,,	3,00,632
,, (4) ಇನ್‌ವೆಸ್ಟ್‌ಮೆಂಟುಗಳು		,,	2,50,000
,, (5) ಏಜನ್ಸಿಗಳಲ್ಲಿರುವ ಮೊಬಲಗು		,,	1,32,677
,, (6) ಬ್ಯಾಂಕಿನಲ್ಲಿರುವ ಸಾಮಾನುಗಳು		,,	15,377
,, (7) ಇತರೆ		,,	17,727
(ಆಣೆ, ಕಾಸು ಬಿಟ್ಟಿರುತ್ತೆ.)	ಜುಮ್ಲಾ	ರೂ.	34,34,423

ಡಬ್ಲ್ಯು. ಸಿ. ರೋಸ್, ಮ್ಯಾನೇಜರ್.

ಪರದೇಶಪ್ರಯಾಣ.

ಪರದೇಶಕ್ಕೆ ಹೋಗಿಬಂದವರನ್ನು ಸ್ವಾಮಿಗಳವರು ಜಾತಿಯಿಂದ ಬಹಿಷ್ಕಾರ ಕೊಡುತ್ತಾರೆಂತ ಅನೇಕರು ಹೇಳುವದು ನಾವು ಈಗ ಕೇಳುತ್ತೇವೆ. ಪರದೇಶವೆಂಬ ಶಬ್ದಕ್ಕೆ ಅನೇಕ ಅರ್ಥಗಳನ್ನು ಕೊಡಬಹುದು

(1) ಭರತಖಂಡದ ಹೊರಗೆ ಇರುವ ದೇಶಗಳನ್ನೆಲ್ಲಾ ಪರದೇಶವೆಂತ ಅನ್ನಬಹುದು. ಸಿಲೋನ್ ಅಥವಾ ಲಂಕೆಯು ಭರತಖಂಡಕ್ಕೆ ಸೇರಿಯದೋ ? ಇಲ್ಲ. ಆದದರಿಂದ ಮೇಲಿನ ಅರ್ಥ ತೆಕ್ಕೊಂಡರೆ ಅಲ್ಲಿಗೆ ಹೋಗಿಬಂದವರಿಗೆ ಬಹಿಷ್ಕಾರ ಕೊಡಬೇಕು. ಆದರೆ ಅನೇಕರು ಅಲ್ಲಿಗೆ ಹೋಗಿ ಬಂದಿದ್ದಾರೆ. ಅವರಿಗೆ ಬಹಿಷ್ಕಾರ ಕೊಡಲಿಲ್ಲ. ಸೌತ ಆಫ್ರಿಕಕ್ಕೆ ಹೋಗಿಬಂದವರು ತಮ್ಮ ಜಾತಿಯ ಜನರೊಂದಿಗೆ ಕೂಡಿ ನಡಿಯುತ್ತಾರೆ. ಅವರಿಗೆ ಏನೂ ಬಹಿಷ್ಕಾರ ಕೊಡಲಿಲ್ಲ. ಹೀಗಿರುತ್ತಾ ಪರದೇಶವೆಂಬ ಶಬ್ದಕ್ಕೆ ಮೇಲೆ ಹೇಳಿದ ಅರ್ಥವಾದರೆ ಒಬ್ಬನು ಅಮೇರಿಕಕ್ಕಾಗಲಿ ಆಸ್ಟ್ರೇಲಿಯಕ್ಕಾಗಲಿ ವಿಲಾಯಿತಿಗಾಗಲಿ ಹೋಗುವದಕ್ಕೆ ಏನೂ ಅಡ್ಡಿ ಇಲ್ಲವೆಂತ ಹೇಳಬೇಕಾಗಿರುತ್ತದೆ. ಆಫ್ರಿಕಕ್ಕೆ ಯಾವಾಗ ಹೋಗಬಹುದೋ ಆಗ್ಗೆ ಅಮೇರಿಕಕ್ಕೆ, ವಿಲಾಯಿತಿಗೆ ಹೋಗುವದಕ್ಕೆ ಏನೂ ಅಡ್ಡಿ ಇರಕೂಡದು ಯಾಕಂದರೆ ಅಮೇರಿಕ, ವಿಲಾಯಿತಿ ಮತ್ತು ಜಪಾನ್ ದೇಶದವರು ಬಹಳ ವಿದ್ಯಾವಂತರಾಗಿಯೂ, ಎಲ್ಲಾ ವ್ಯಾಪಾರ ಕೈಗಾರಿಕೆಗಳಲ್ಲಿ ನಿಪುಣರಾಗಿಯೂ ಇರುತ್ತಾರೆ. ಅಂಥಾ ಸ್ಥಳಗಳು ಪ್ರಾಚೀನ ಕಾಶಿ, ರಾಮೇಶ್ವರಗಳಂತೆಯೇ ಪುಣ್ಯಕ್ಷೇತ್ರಗಳಂತೆ ಭಾವಿಸಬೇಕಾಗಿರುತ್ತದೆ ಆದದರಿಂದ ಅಂಥಾ ಪುಣ್ಯಕ್ಷೇತ್ರಗಳನ್ನು ನೋಡಿಬರುವಂತೆ ಎಲ್ಲರೂ ಕೈಲಾಗುವಷ್ಟು ಪ್ರಯತ್ನಮಾಡೇ ತೀರಬೇಕು. ಹೊರತು ಸ್ವಾಮಿಗಳು ಹೋಗುವದಕ್ಕೆ ಅಡ್ಡಿಮಾಡುತ್ತಾರೆಂತ ಹೇಳಿ ನೆವಮಾಡಿಕೊಂಡು ಬೆದರಿ ಕೂತುಕೊಳ್ಳುವದು ನ್ಯಾಯವೆಂತ ಯಾರೂ ಹೇಳಲಿಕ್ಕಿಲ್ಲ.

(2) ಪರದೇಶವೆಂದರೆ ಪರರಾಜ್ಯ ಅಥವಾ ನಮಗೆ ಸೇರದ ರಾಜ್ಯ. ಅದು ಯಾವದು ? ನಮ್ಮ ಆಳ್ವಿಕೆಯೊಳಗೆ ಯಾವ ರಾಜ್ಯವಿದೆ ? ಯಾವ ರಾಜ್ಯವೂ ಇಲ್ಲ. ನಮ್ಮ ಈ ಭರತಖಂಡವನ್ನು ಬ್ರಿಟಿಷರು ಆಳುತ್ತಾರೆ ಆದದರಿಂದ ಹಿಂದುಸ್ಥಾನವು ಬ್ರಿಟಿಷ್ ರಾಜ್ಯದ ಒಂದು ಭಾಗವಾಗಿರುತ್ತದೆ. ಹೀಗಿರುತ್ತಾ ಬ್ರಿಟಿಷ್ ರಾಜ್ಯವೆಲ್ಲಾ ನಮ್ಮ ರಾಜ್ಯವೇ. ಆದರೆ ಬ್ರಿಟಿಷ್ ರಾಜ್ಯದ ಹೊರಗೆ ಹೋದರೆ ಬಹಿಷ್ಕಾರ ಕೊಡುತ್ತಾರೆ. ಈ ಅರ್ಥ ತೆಕ್ಕೊಂಡರೆ ಜನರು ವಿಲಾಯತಿ, ಕೆನಡಾ, ಆಸ್ಟ್ರೇಲಿಯಾ ಈ ಮೊದಲಾದ ದೇಶಗಳಿಗೆ ಹೋಗಬಹುದು ಪುದುಚೇರಿ, ಮಾಹೆ, ಗೋವಾಗಳಿಗೆ ಹೋದರೆ ಜಾತಿಯಿಂದ ತೆಗೆಯುವರು ಎಂಬ ಅರ್ಥವಾಗುತ್ತದೆ.

(3) ಪರದೇಶವೆಂದರೆ ಸಮುದ್ರಪ್ರಯಾಣವೆಂತ ಇನ್ನು ಕೆಲವರು ಹೇಳುತ್ತಾರೆ. ಮಂಗಳೂರಿಂದ ಬೊಂಬಾಯಿಗೆ ಸ್ಟೀಮರ್ ಮೂಲಕ ಹೋಗಬೇಕಾಗಿರುತ್ತದೆ. ಹಾಗೆ ಹೋದವರಿಗೆಲ್ಲಾ ಬಹಿಷ್ಕಾರ ಉಂಟೇ ? ಇಷ್ಟರವರೆಗೆ ಹೋದವರಿಗೆ ಬಹಿಷ್ಕಾರ ಕೊಟ್ಟಿರುತ್ತಾರೋ ? ಇಲ್ಲ. ಎರಡು ಯಾ ಮೂರು ದಿವಸ ಸಮುದ್ರಪ್ರಯಾಣ ಮಾಡಬಹುದೆಂದಿದ್ದರೆ ಹೆಚ್ಚು ಯಾಕೆ ಕೂಡದು ?

ಈ ಮೂರು ಅರ್ಥಗಳನ್ನು ತೆಕ್ಕೊಂಡರೆ ವಿಲಾಯತಿಗೆ ಹೋಗಕೂಡದೆಂಬುದಕ್ಕೆ ನ್ಯಾಯವೇ ಕಾಣುವದಿಲ್ಲ. ಈ ಅರ್ಥಗಳು ಹಾಗೆ ಇರಲಿ ಪರದೇಶಕ್ಕೆ ಹೋಗಕೂಡದು ಎಂತ ಹೇಳುವವರು ಯಾರು ? ಯಾವ ಆಧಾರದ ಮೇಲೆ ಅವರು ಹೇಳುತ್ತಾರೆ ? ಹೋಗುವದಕ್ಕೆ ಏನು ಅಡ್ಡಿ ? ಹೋದರೆ ಏನು ಕೆಟ್ಟದ್ದು ? ನಮ್ಮ ಹಿರಿಯರು ಹಿಂದೆ ಹೋಗಿದ್ದಾರೋ, ಇಲ್ಲವೋ ? ಈ ಪ್ರಶ್ನೆಗಳಿಗೆಲ್ಲಾ ಉತ್ತರಕೊಡದೆ ವಿಚಾರವಿಲ್ಲದೆ ಪರದೇಶಕ್ಕೆ ಹೋಗಕೂಡದೆಂಬ ಒಂದೇ ಹಟ್ಟಿಯಾ ಹಟವಾದರೆ ಅಂಥವನನ್ನು ಯಾರೂ ಮನುಷ್ಯನೆಂತ ಭಾವಿಸಲಿಕ್ಕಿಲ್ಲ. ಯಾಕೆಂದರೆ ಮನುಷ್ಯ ಎಂಬ ಶಬ್ದಕ್ಕೆ ಎರಡು ಅರ್ಥ ಬರುತ್ತದೆ ಮನುವಂಶದಲ್ಲಿ ಹುಟ್ಟಿದವನು ಎಂತ ಹೇಳಬೇಕಾದರೆ ಮನುಷ್ಯನಿಗೆ ಇದ್ದ ಬುದ್ಧಿಯು ಎಳ್ಳಷ್ಟಾದರೂ ಇರಬೇಕು. ಅಷ್ಟುಮಾತ್ರ ಕೂಡ ಬುದ್ಧಿ ಇದ್ದವನಾದರೆ ಯಾವ ವಿಷಯದಲ್ಲಿಯೂ ತಕರಾರ್ ಮಾಡಿ ಒಳ್ಳೇದೋ ಕೆಟ್ಟದ್ದೋ ಎಂಬವನ್ನು ವಿಚಾರಿಸುತ್ತಾರೆ. ಮನಸ್ಸನ್ನು ಉಪಯೋಗಿಸುವವನು ಮನುಷ್ಯ ಎಂಬದು ಎರಡನೇ ಅರ್ಥ. ಆದದರಿಂದ ತನ್ನ ಸ್ವಂತ ಬುದ್ಧಿಗೆ ತಾರದೆ ಶಾಸ್ತ್ರದಲ್ಲಿ ಹೇಳಿಯದೆ ಅಥವಾ ಒಬ್ಬ ಸ್ವಾಮಿಯು ಹೇಳುತ್ತಾನೆ ಎಂತ ಹೇಳಿ ಆ ಪ್ರಕಾರ ನಡಿಯುವದು ಮನುಷ್ಯನಿಗೆ ಯೋಗ್ಯವಾದದ್ದಲ್ಲ

ಪರದೇಶಕ್ಕೆ ಹೋಗಕೂಡದು ಎಂತ ಶಾಸ್ತ್ರದಲ್ಲಿ ಹೇಳಿರುತ್ತದಾಗಿ ಕೆಲವರು ಹೇಳುತ್ತಾರೆ. ಇವರಿಗೆ ಶಾಸ್ತ್ರವೇ ಆಧಾರ. ಹೀಗೆ ಹೇಳುವವರು ಶಾಸ್ತ್ರದಲ್ಲಿ ಇದ್ದ ಹಾಗೆ ಎಲ್ಲಾ ಸಂಗತಿಗಳಲ್ಲಿಯೂ ನಡಿಯುತ್ತಾರೆಯೇ ? ಒಬ್ಬನೂ ನಡಿಯುವದಿಲ್ಲ. ಅದು ಹಾಗಿರಲಿ ಯಾವ ಶಾಸ್ತ್ರದಲ್ಲಿ ಪರದೇಶಕ್ಕೆ ಹೋಗಕೂಡದು ಎಂತ ಹೇಳಿರುತ್ತದೆ, ನೋಡೋಣ. ಮಹಾಭಾರತವನ್ನು ನಮ್ಮ ಇಡಿ ಭರತಖಂಡದಲ್ಲಿ ಪೂಜಿಸುತ್ತಾರೆ. ಆದದರಿಂದ ಅದಕ್ಕಿಂತ ದೊಡ್ಡ ಶಾಸ್ತ್ರ ಬೇಕೆ ಬೇಡ. ಅದರಲ್ಲಿ ಭೀಮನು ಪಾತಾಳಕ್ಕೆ (ಅಮೇರಿಕಕ್ಕೆ) ಹೋದನೆಂತಲೂ, ಧೃತರಾಷ್ಟ್ರರಾಯನು ಗಾಂಧಾರಿಯನ್ನು (ಕಾಂಧಾರ್) ವಿವಾಹವಾದಿಕೊಂಡನೆಂತಲೂ, ಅಮೇರಿಕಾ, ಯುರೋಪ್, ಮೊದಲಾದ ದೇಶಗಳಿಂದ ರಾಜರು ಧರ್ಮರಾಯನ ರಾಜಸೂಯ ಯಜ್ಞಕ್ಕೆ ಬಂದಿದ್ದಾರೆಂತ ನಾವು ಓದುತ್ತೇವೆ. ಸಗರನ ಪುತ್ರರು ಕುದುರೆಯನ್ನು ಹುಡುಕಿ ತರುವದಕ್ಕೆ ಪಾತಾಳಕ್ಕೆ ಹೋಗಿದ್ದರು. ರಾಮಾಯಣದಲ್ಲಿ ರಾಮ ಲಕ್ಷ್ಮಣರನ್ನು ಮೈರಾವಣನು ಪಾತಾಳಕ್ಕೆ ಕೊಂಡುಹೋದನಂತೆ. ಹೀಗೆಲ್ಲಾ ಈ ಗ್ರಂಥಗಳಲ್ಲಿ ಉದಾಹರಣೆಗಳು ಇರುವಾಗ್ಗೆ ನಾವು ವ್ಯರ್ಥವಾಗಿ ಇಂಥಾ ಕಟ್ಟಾಚಾರಕ್ಕೆ ಹೆದರಿ ಕೂತುಕೊಳ್ಳುವದು ನ್ಯಾಯವೆಂತ ನನಗೆ ಕಾಣುವದಿಲ್ಲ. ಪ್ರಕೃತ ಇಂಗ್ಲಿಷ್ ವಿದ್ಯೆ ಪಡೆದವರು ಕೂಡಾ ವಿಲಾಯತಿಗೆ ಹೋಗುವರೆ ಮನಸ್ಸೂ ಹಣವೂ ಇದ್ದು, ಸ್ವಾಮಿಗಳು ಬಹಿಷ್ಕಾರ ಕೊಡುತ್ತಾರೆಂತ ಹೆದರಿ ಕೂತುಕೊಳ್ಳುವದು ಆಶ್ಚರ್ಯವಾಗಿದೆ. ಸರಿ. ಉತ್ತರ ಹಿಂದುಸ್ಥಾನ, ಬೊಂಬಾಯಿ ಪ್ರಾಂತ್ಯಗಳಲ್ಲಿ ಅನೇಕ ಜನರು ಬ್ರಾಹ್ಮಣರು ವಿಲಾಯತಿಗೆ ಹೋಗಿ ಬಂದಿರುತ್ತಾರೆ. ನಮ್ಮ ಈ ಪ್ರಾಂತ್ಯದಲ್ಲಿ ಮಾತ್ರ ಇಂಗ್ಲಿಷ್ ವಿದ್ಯಾವಂತರೂ ಕೂಡಾ ಬಹಿಷ್ಕಾರಕ್ಕೆ ಹೆದರಿ, ಹಣವೂ ಮನಸ್ಸೂ ಎಲ್ಲಾ ತರದ ಅನುಕೂಲವೂ ಇದ್ದೂ ಹೋಗದೆ ಇರುವದು ಬಹಳ ದುಃಖಕರವಾಗಿ ಕಾಣುತ್ತದೆ.

ಬಿ. ವಿ. ರಾವ್.

ಗೊಬ್ಬರದ ಮಾರಾಟ.

ಬೂದಿ ಗೊಬ್ಬರ ಗಾಡಿ 1 ಕ್ಕೆ 10 ಆಣೆಯಂತೆ ವಿಕರಿ ಮಾಡುತ್ತೇವೆ. ಬೇಕಾದವರು ಜಾಗ್ರತೆಯಾಗಿ ಬಂದು ತೆಗೆದುಕೊಳ್ಳಬೇಕು. ಗೊಬ್ಬರ ಸಿಕ್ಕುವ ಸ್ಥಳ:—ಪಿ. ಸಿದ್ದಯ್ಯ, ಸಿ. ಮದಾರ್ ಸಾಹೇಬ್, ಮಂಡಿ, ಫ್ರೆಂಚ್‌ರಾಕ್ಸ್.

Messrs. Petrie-Hay & Son, Hunsur.

ನಮ್ಮಲ್ಲಿ ಹೇಗದ ಕೂಲಿಗಳು 3 ಸಲೀ ಅದಿ ಆಗಾಯಿತು 30-40 ಸಲೀ ಅದಿಯ ವರಿಗೂ ಇರುತ್ತವೆ. ಅಪೇಕ್ಷೆಯುಳ್ಳವರು ತಪ್ಪೀಲನ್ನು ಹುಣಸೂರಿನಲ್ಲಿರುವ ಮೆ|| ಪಿಟ್ರಿಹೆ ಅಂಡ್ ಕಂಪನಿಗೆ ಬರೆದು ತಿಳಿದುಕೊಳ್ಳಬಹುದು. ಈ ಕೂಲೀ ಗಾಡಿ ತಯಾರಿಗೂ ಮನೆ ಕಟ್ಟುವುದಕ್ಕೂ ಆಗುತ್ತವೆ. [232-8]

NOTICE

Sealed tenders for the supply of cleaned good kulthi and chenna for the Imperial Service Transport Corps and Government Stables will be received up to 2 P.M., on Saturday, the 2nd January, 1915, in the office of the Military Secretary to His Highness the Maharaja of Mysore, Bangalore. The contract for the supply of the grains will be from 1st March, 1915, to the end of February, 1916.

For further particulars, reference is invited to the detailed Notification published in the issue of the *Mysore Gazette*, dated 17th December, 1914, page 2293.

[291-1] (Sd.) **A. A. JONES, Lt.-Col.,**
Military Secretary.

ಬೆಂಗಳೂರು ಡಿವಿಜನ್ ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ.

ಡಿಸ್ಟ್ರಿಕ್ಟ್ ಜಡ್ಜ್ ಆರ್. ಬಿ. ಪ್ಲಮರ್, ಎಸ್ಕ್ವೈಯರ್. ಬ್ಯಾರಿಸ್ಟರ್ ಅಟ್ ಲಾ ಯವರ ಸಮಕ್ಷಮ.

1911–12 ನೇ ಇಸವಿ ಕಂಪನಿ ಮಿಸ್ ಕೇಸ್ ನಂಬರು 23.

ಕೋಲಾರ ಡಿಸ್ಟ್ರಿಕ್ಟ್ ಚಿಂತಾಮಣಿ ತಾಲ್ಲೂಕು ಗಂಜುಗುಂಟೆ ನರಸಿಂಹ ಅನುಗ್ರಹ ಧನಸಹಾಯದ ಕಂಪನಿ ಲಿಮಿಟೆಡ್ ವಿಚಾರದಲ್ಲಿ

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ—

ಹಾಲಿ ಬರಖಾಸ್ತಾಗಿರುವ ಮೇಲ್ಕಂಡ ಕಂಪನಿಯ ಷೇರುಹೋಲ್ಡರುಗಳ ಪೈಕಿ ಇದುವರೆಗೆ ತಮಗೆ ಸಲ್ಲತಕ್ಕ ಡಿವಿಡೆಂಡ್ ಮೊಬಲಗನ್ನು ತೆಗೆದುಕೊಳ್ಳದೆ ಇರತಕ್ಕಂಥಾವರು ಈ ಕೋರ್ಟು ರೂಬರೂಬು 1915 ನೇ ಇಸವಿ ಫೆಬ್ರವರಿ 1 ನೇ ತಾರೀಖು ಅಥವಾ ಆ ಒಳಗಾಗಿ ಯಾವದಾದರೂ ಕೋರ್ಟು ಇರುವ ದಿನ ಹಾಜರಾಗಿ ತಮಗೆ ಸಲ್ಲತಕ್ಕ ಮೊಬಲಗನ್ನು ತೆಗೆದುಕೊಳ್ಳತಕ್ಕದ್ದಿದೆ. ಇದಕ್ಕೆ ತಪ್ಪಿದಲ್ಲಿ ಆಯಾ ಷೇರುಹೋಲ್ಡರುಗಳ ಮೊಬಲಗನ್ನು ಶಿವಾಯಿ ಜಮೆಗೆ ಸೇರಿಸಲ್ಪಡುತ್ತೆ.

1914 ನೇ ಇಸವಿ ಡಿಸೆಂಬರು ತಾ. 15 ರಲ್ಲು ಈ ಕೋರ್ಟು ಮೊಹರು ಮತ್ತು ನಮ್ಮ ದಸ್ತಖತ್ತಿನೊಡನೆ ಕೊಡಲಾಗಿದೆ.

(ಸೈನ್) ಆರ್. ಬಿ. ಪ್ಲಮರ್,
[290–1] ಡಿಸ್ಟ್ರಿಕ್ಟ್ ಜಡ್ಜ್.

ವೃತ್ತಾಂತ ಪತ್ರಿಕೆ.

—:0:—

ಸನ್ ೧೯೧೪ ನೇ ಇಸವಿ ಡಿಸೆಂಬರ್ ತಾ. ೨೪ ನೇ ಗುರುವಾರ.

ಮೈಸೂರು ಸರ್ಕಾರಿ ಹುಕುಮುಗಳು.

ಗವರ್ನ್‌ಮೆಂಟಿನವರು ತಮಗೆ ಬರುವ ಕಾಗದಪತ್ರಗಳನ್ನು ನೋಡಿ ಹುಕುಮುಗಳನ್ನು ಬರೆಯುವುದೇನೂ ಕಷ್ಟವಲ್ಲವೆಂದು ಊಹಿಸಬೇಕಾಗಿದೆ. ಯಾಕಂದರೆ ಅವರು ಕೆಲವು ಹುಕುಮುಗಳಲ್ಲಿ ತಮ್ಮ ಇಷ್ಟಾರ್ಥ ಕುತೂಹಲಗಳನ್ನು ಪ್ರಕಟಿಸುತ್ತಾರೆಂದು ಹೇಳಬೇಕಾಗುವುದೇ ಹೊರತು ತಮ್ಮ ಹುಕುಮಿನಂತೆ ಕಾರ್ಯಗಳು ನಡೆಯುವುದು ಸಾಧ್ಯವೇ ಸಾಧ್ಯವಲ್ಲವೇ ಎಂಬುದನ್ನು ಅವರು ಯೋಚಿಸುವಂತೆ ಕಾಣುವುದಿಲ್ಲ. ಕೆಲವು ಸರ್ಕಾರಿ ಹುಕುಮುಗಳನ್ನು ನೋಡಿದ್ದರಲ್ಲಿ ನಮಗೆ ಮೇಲ್ಕಂಡಂತೆ ಸಂಶಯವುಂಟಾಗಿರುವುದು. ಮೈಸೂರು ಸರ್ಕಾರದವರು ಎರಡು ದೊಡ್ಡ ವಿಚಾರಗಳನ್ನು ಕುರಿತು ಈಗತಾನೇ ಹುಕುಮುಗಳನ್ನು ಕೊಟ್ಟಿದ್ದಾರೆ. ಮೊದಲನೆಯದು ಸಣ್ಣ ಕೆರೆಗಳನ್ನು ದುರಸ್ತುಮಾಡಿ ಆಬಾದಿಗೆ ತರಬೇಕೆಂಬ ವಿಷಯ; ದೊಡ್ಡ ದೊಡ್ಡ ಹಿಡುವಳಿ ಜಮೀನುಗಳನ್ನು ಕಲ್ಪಿಸಿ ವ್ಯವಸಾಯಮಾಡಿಸಬೇಕೆಂಬುವುದು ಎರಡನೆಯ ವಿಷಯವಾಗಿದೆ.

ನಮ್ಮ ಸೀಮೆಯಲ್ಲಿ ರೈತರ ಶ್ರೇಯೋಭಿವೃದ್ಧಿಗೆ ಕೆರೆಗಳು ವಿಶೇಷ ಕಾರಣಗಳಾಗಿರುತ್ತವೆ. ಆ ಪೈಕಿ ದೊಡ್ಡ ಕೆರೆಗಳು ಸರ್ಕಾರದವರ ಸಂರಕ್ಷಣೆಗೂ, ಸಣ್ಣ ಕೆರೆಗಳು ರೈತರ ಸಂರಕ್ಷಣೆಗೂ ಸೇರಿರುವವು. ಈಗಲಾದರೋ ಪ್ರಜೆಗಳು ಆಗಿಂದಾಗ್ಗೆ ಕಾಮಗಾರಿ ಮುಂತಾದದ್ದು ಮಾಡದೆ ತಾತ್ಸಾರಮಾಡುತ್ತಾ ಬಂದದ್ದರಿಂದ ಸಣ್ಣ ಕೆರೆಗಳು ಕ್ರಮೇಣ ಹೂಳುಬಿದ್ದೂ ಕಾಮಗಾರಿ ಇಲ್ಲದೇನೂ ಕೆಟ್ಟುಹೋದವು. ರೈತರು ಯಾತಕ್ಕಾಗಿ ಈ ರೀತಿ ಆಗಿಂದಾಗ್ಗೆ ಕಾಮಗಾರಿ ಮಾಡದೆಹೋದರೋ ಕಾರಣವನ್ನು ತಿಳಿಸಿಲ್ಲ. ರೈತರಲ್ಲಿ ಆತ್ಮಾವಲಂಬನೆಯನ್ನು ಮೊದಲಿನಂತೆ ಇಟ್ಟು ಕಾಪಾಡಿಕೊಂಡು ಬರಬೇಕೆಂದೂ, ಅದನ್ನು ದಿನ ಕ್ರಮೇಣ ವೃದ್ಧಿಮಾಡಬೇಕೆಂದೂ ನಮ್ಮ ಗವರ್ನ್‌ಮೆಂಟಿನವರು ಕುತೂಹಲಪಡುವುದು ನ್ಯಾಯವಾಗಿದೆ. ರೈತರು ಆ ರೀತಿ ಮೊದಲು ಮಾಡುತ್ತಿದ್ದು ಈಗ ಯಾಕೆ ಮಾಡದೆ ಬಿಟ್ಟರೋ ಗೊತ್ತಾಗುವುದಿಲ್ಲ. ಸರ್ಕಾರದವರು ಇದರ ಕಾರಣಗಳನ್ನು ಸ್ಪಷ್ಟವಾಗಿ ತಿಳಿಸಿದ್ದರೆ ಚೆನ್ನಾಗಿತ್ತು. ಈ ಕೆಲಸಗಳನ್ನೆಲ್ಲಾ ಸರ್ಕಾರದವರೇ ಮಾಡಿಸಿಕೊಡಲಿ ಎಂದು ರೈತರು ಬಿಟ್ಟುಕೊಂಡು ಬಂದಿರುವುದಾದರೆ ಆ ರೀತಿ ಯಾವುದೊಂದೂ ನಡೆಯದೆ ಇರುವುದು ಆಶ್ಚರ್ಯವಲ್ಲ. ಗವರ್ನ್‌ಮೆಂಟಿನವರು ಒಂದು ಉದ್ದೇಶವನ್ನಿಟ್ಟುಕೊಂಡು ಅದಕ್ಕೆ ವಿರೋಧವೇನೂ ಆಗದಂತೆ ನಡೆಯಬೇಕು. ಉದ್ದೇಶಕ್ಕೆ ಅನುಗುಣವಾದ ರೀತಿಯಲ್ಲಿ ಕಾರ್ಯಗಳನ್ನು ನಡಿಸದೆಹೋದರೆ ಆಭಾಸವಾಗುತ್ತದೆ. ರೈತರು ತಮ್ಮ ಭಾಗದ ಕಾಮಗಾರಿ ಮುಂತಾದ ಕೆಲಸಗನ್ನು ಮಾಡದೆ ತಪ್ಪಿದ ಪಕ್ಷದಲ್ಲಿ ಸರ್ಕಾರದವರೇ ಪ್ರವೇಶಿಸಿ ಕಾಮಗಾರಿ ಮಾಡಿಸಿಬಿಟ್ಟು ಅದರ ಖರ್ಚನ್ನು ಜಮೀನುದಾರರಿಂದ ಯಾಕೆ ವಸೂಲ್‌ಮಾಡಿಕೊಳ್ಳಬಾರದೋ ತಿಳಿಯುವುದಿಲ್ಲ.

ಇನ್ನು ಹನ್ನೆರಡು ತಿಂಗಳೊಳಗಾಗಿ 1,000 ಕೆರೆಗಳು ದುರಸ್ತಾಗಬೇಕೆಂದು ಹುಕುಂ ಕೊಟ್ಟಿದಾರೆ; ಅಂದರೆ, ಕೋಲಾರದಲ್ಲಿ 150 ಕೆರೆಗಳು, ಹಾಸನದಲ್ಲಿ 100, ಶಿವಮೊಗ್ಗೆಯಲ್ಲಿ 100, ತುಮಕೂರಿನಲ್ಲಿ 100, ಮೈಸೂರಿನಲ್ಲಿ 200, ಬೆಂಗಳೂರಿನಲ್ಲಿ 150, ಚಿತ್ರದುರ್ಗದಲ್ಲಿ 100, ಕಡೂರಿನಲ್ಲಿ 100, ಈ ರೀತಿ ದುರಸ್ತಾಗಬೇಕಂತೆ. ಇದಕ್ಕೆಲ್ಲಾ ಆಗುವ ಕಾಮಗಾರಿ ಖರ್ಚಿನಲ್ಲಿ ಆಯಾ ಕೆರೆ ಕೆಳಗಣ ಹಿಡುವಳಿ ಜಮೀನ್‌ದಾರರು ಮೂರನೇ ಒಂದು ಪಾಲು ಖರ್ಚನ್ನು ವಹಿಸಿಕೊಂಡು ಕೊಡಬೇಕೆಂದೂ, ಎರಡು ಪಾಲು ಖರ್ಚನ್ನು ಸರ್ಕಾರದಿಂದ ಕೊಡಲ್ಪಡುವುದೆಂದೂ ಅಪ್ಪಣೆಕೊಡಿಸಿದಾರೆ. ರೈತರು ಮಟ್ಟಿ ಕಾಮಗಾರಿಯನ್ನೂ, ಕಲ್ಲುಕಟ್ಟಡವನ್ನೂ ಮಾಡಬೇಕಾಗಿದೆ. ಈ ಕೆರೆಗಳನ್ನು ದುರಸ್ತುಮಾಡುವ ಕಾಮಗಾರಿಗಳನ್ನೆಲ್ಲಾ ಆಯಾ ಗ್ರಾಮಸ್ಥರಿಗೇ ವಹಿಸಿ ಮಾಡಿಸಬೇಕೆಂದೂ, ಕಾಮಗಾರಿಯ ಮೇಲ್ವಿಚಾರಣೆ ಮುಂತಾದದ್ದನ್ನು ಮಾತ್ರ ಇಂಜನಿಯರ್ ಇಲಾಖೆಯವರು ನೋಡಿಕೊಳ್ಳತಕ್ಕದೆಂದೂ ಏರ್ಪಾಡಾಗಿದೆ. ಇದಕ್ಕಾಗಿ ಸರ್ಕಾರದವರು ಮಾಡಿರುವ ನಿಬಂಧನೆಗಳು ಎಲ್ಲಾ ಭಾಗಗಳಲ್ಲೂ ತುಂಬಾ ಹಿತಕರವಾಗಿರುವಂತೆ ನಮಗೆ ತೋರುತ್ತದೆ. ಸರ್ಕಾರದವರು ಗ್ರಾಮಸ್ಥರ ವಿಷಯದಲ್ಲಿ ವಿಶೇಷ ರಿಯಾಯತಿಗಳನ್ನು ತೋರಿಸಿರುವರು. ಆದರೆ ಅಷ್ಟು ಬೇಗನೆ ಇಂಜನಿಯರ್ ಇಲಾಖೆಯವರು ಮುತುವರ್ಜಿ ವಹಿಸಿ ಕಾಮಗಾರಿಗಳನ್ನು ಪೂರೈಸುತ್ತಾರೆಂಬುವುದೇ ನಮಗೆ ದೊಡ್ಡ ಸಂಶಯ. ಡೆಪ್ಟಿ ಕಮೀಷನರ್‌ರೂ, ಅಮಲ್ದಾರರುಗಳೂ ತುಂಬಾ ಮುತುವರ್ಜಿ ವಹಿಸಿ ವಿಶೇಷ ಚಟುವಟಿಕೆಯಾಗಿ ಕೆಲಸಗಳನ್ನು ಮಾಡಿದ ಹೊರತು ಇದು ಸಾಧ್ಯವಾಗಲಾರದು. ಅದಾಗ್ಯೂ ಸರ್ಕಾರದವರು ಈಗ ದೇಶೋನ್ನತಿಯ ಹಿತಚಿಂತನೆಯಿಂದ ಮಾಡಿರುವ ಉದಾರವಾದ ಹುಕುಮನ್ನು ಅಧಿಕಾರಿಗಳೂ ರೈತಪ್ರಜೆಗಳೂ ಏಕೀಭವಿಸಿ ಬೇಗನೇ ಸಾರ್ಥಕಪಡಿಸುವಂತಾಗಲೆಂದು ಹಾರೈಸುತ್ತೇವೆ.

ನಮ್ಮ ಸೀಮೆಯಲ್ಲಿ ದೊಡ್ಡ ದೊಡ್ಡ ಜಮೀನ್‌ದಾರಿಗಳನ್ನು ಕಲ್ಪಿಸಬೇಕೆಂದು ನಮ್ಮ ಸರ್ಕಾರದವರು ಕುತೂಹಲಪಡುತ್ತಾರೆ. ಇದು ರುಜುವಾಗಿ ನಡೆಯುವ ಪಕ್ಷದಲ್ಲಿ ನಮ್ಮ ಸೀಮೆಯಲ್ಲಿ ದವಸಧಾನ್ಯಗಳ ಬೆಳೆಯು ತುಂಬಾ ಹೆಚ್ಚುವುದಕ್ಕೆ ಸಂಶಯವಿಲ್ಲ. ಇದಕ್ಕೋಸ್ಕರ ಈಗ ಮಾಡಿರುವ ಏರ್ಪಾಡನ್ನು ರೂಢಿಸಿ ನೋಡಬೇಕಾದದ್ದೇ ಅವಶ್ಯ. ಈ ಹುಕುಮಿನ ಕೂಡ ಸರ್ಕಾರದವರು ಪ್ರಕಟಮಾಡಿರುವ ಕೆಲವು ರಿಪೋರ್ಟುಗಳನ್ನು ನೋಡಿದೆವು. ಇವುಗಳಿಂದ ಈಗ ಸರ್ಕಾರದವರು ಭಾರೀ ಜಮೀನುಗಳಿಗಾಗಿ ವಿಂಗಡಿಸಿರುವಂಥಾ ಜಮೀನುಗಳು ಕ್ರಮಕ್ಕೆ ತಕ್ಕ ಪ್ರತಿಫಲವನ್ನು ಕೊಡಲಾರವೆಂಬಂತೆ ಕಾಣುವುದು. ವ್ಯವಸಾಯಕ್ಕೆ ಹಾಕುವ ಹಣಕ್ಕೆ ನ್ಯಾಯವಾದ ಬಡ್ಡಿ ಉತ್ಪತ್ತಿಯಾಗುವಂತೆ ಇಲ್ಲದೆ ಹೋದರೆ ಅದಕ್ಕೆ ಉತ್ಸಾಹಪಡುವುದಿಲ್ಲ. ವ್ಯವಸಾಯ ಕ್ರಮಗಳನ್ನು ಅನುಭವದಿಂದ ಚೆನ್ನಾಗಿ ಬಲ್ಲಂಥಾವರಿಗೇನೇ ಈ ಭಾರೀ ಜಮೀನುಗಳನ್ನು ವಹಿಸುವುದು ಹಿತಕರವಾದದ್ದೆಂದೂ, ಹೀಗೆ ಮಾಡಿದರೇನೇ ಸರ್ಕಾರದವರ ಉದ್ದೇಶವು ಸಾರ್ಥಕವಾದೀತೆಂದೂ ನಮಗೆ ತೋರುತ್ತದೆ. ಹಾಗಿಲ್ಲದೆ ಈ ವಿಸ್ತಾರವಾದ ಜಮೀನುಗಳನ್ನು ಬರಿಯ ದ್ರವ್ಯಾಶಾಪರರಿಗೂ ಸಾಹುಕಾರರಿಗೂ ಕೊಟ್ಟುಬಿಟ್ಟರೆ ಅವರು ಆ ಜಮೀನುಗಳನ್ನು ಸಣ್ಣ ಕುಳಗಳಿಗೆ ಹಂಚಿಹಾಕಿ ಅವರಿಂದ ವ್ಯವಸಾಯ ಮಾಡಿಸುತ್ತಾರೆ. 50 ರಿಂದ 200 ಎಕರೆಗಳ ವಿಸ್ತಾರವುಳ್ಳ ಭಾರೀ ಜಮೀನ್‌ದಾರಿಗಳನ್ನು ಕಲ್ಪಿಸಬೇಕೆಂಬ ನಮ್ಮ ಸರ್ಕಾರದ ಉದ್ದೇಶವು ವ್ಯರ್ಥವಾದೀತೆನ್ನುವುದಕ್ಕೆ ಸಂಶಯವಿಲ್ಲ. ಈಗ ಮಾಡಿಟ್ಟಿರುವ ನಿಬಂಧನೆಗಳನ್ನು ನೋಡಿದರೆ ಇಂಥಾ ಜಮೀನುಗಳನ್ನು ವಿಭಾಗಮಾಡಲೇ ಕೂಡದೆಂದು ಗೊತ್ತಾಗುತ್ತದೆ; ಆದರೆ ಅಂಥಾ ಜಮೀನು ಪಡೆದವರು ಚಿಕ್ಕವಾರರಿಗೆ ಕೆಲಕೆಲವು ಭಾಗಗಳನ್ನು ಹಂಚಿಹಾಕಿಕೊಡುವುದನ್ನು ಈ ನಿಬಂಧನೆಗಳು ಅಡ್ಡಿಮಾಡಲಾರವು. ಈ ರೀತಿ ವಿಭಾಗ ಮಾಡಲವಕಾಶವಿಲ್ಲದಂತೆ ಸರ್ಕಾರದವರು ಕಟ್ಟುನಿಟ್ಟಾಗಿ ನೋಡಿಕೊಂಡಾರೆಂದು ನಿರೀಕ್ಷಿಸುತ್ತೇವೆ. ಈಗಿನ ಸಾಧನಗಳನ್ನು ಉಪಯೋಗಿಸಿ ದೊಡ್ಡ ಜಮೀನುಗಳನ್ನು ವ್ಯವಸಾಯ ಮಾಡುವಲ್ಲಿ ಚಿಕ್ಕ ರೈತರನ್ನು ಇಟ್ಟುಕೊಂಡು ಅವರಿಗೆ ಜಮೀನು ಹಂಚಿಕೊಡಬೇಕಾದ ಅಗತ್ಯವೇನೂ ಇರುವುದಿಲ್ಲ. ಈ ಏರ್ಪಾಡು ಸಾರ್ಥಕವಾದೀತೆಂಬ ವಿಷಯದಲ್ಲಿ ನಮಗೆ ತುಂಬಾ ಸಂಶಯವುಂಟು. ಈ ವಿಚಾರದಲ್ಲಿ ವ್ಯವಸಾಯದ ಇಲಾಖಾ ಡೈರೆಕ್ಟರವರ ಸಲಹೆಯನ್ನು ತೆಗೆದುಕೊಂಡು ಈ ಹುಕುಮಿನ ಸಂಗಡ ಸರ್ಕಾರದವರು ಪ್ರಕಟಮಾಡಿದ್ದರೆ ಚೆನ್ನಾಗಿತ್ತೆಂದು ನಮಗೆ ತೋರುತ್ತದೆ. ವ್ಯವಸಾಯದ ಇಲಾಖೆಯ ಡೈರೆಕ್ಟರವರು ಈ ಏರ್ಪಾಡನ್ನು ಒಪ್ಪಿಕೊಂಡಿರುತ್ತಾರೆಂಬ ಸಂಗತಿಯು ಗೊತ್ತಾದ ಪಕ್ಷದಲ್ಲಿ ಸಕಲ ಪ್ರಜೆಗಳ ಕೂಡ ನಮಗೂ ಇನ್ನೂ ವಿಶೇಷವಾದ ಭರವಸೆಯುಂಟಾಗುತ್ತಿತ್ತು. ಆದಾಗ್ಯೂ ಸರ್ಕಾರದವರು ಈಗ ಮಾಡಿರುವ ಈ ಹೊಸ ಏರ್ಪಾಡು ಯಾವ ರೀತಿಯಾಗಿ ನಮ್ಮ ಸೀಮೆಯ ಏಳಿಗೆಗೆ ಸಹಕಾರಿಯಾಗುವುದೋ ಎಂದು ಕುತೂಹಲದಿಂದ ನೋಡುತ್ತಾಬರುವೆವು.

ಶುಭಸಮಾಚಾರ.

"ಕೇಳಿರಿ; ಜನರಿಗೆಲ್ಲಾ ಮಹಾ ಸಂತೋಷವನ್ನುಂಟುಮಾಡುವ ಶುಭಸಮಾಚಾರವನ್ನು ನಿಮಗೆ ತಿಳಿಸುತ್ತೇನೆ. ಅದೇನಂದರೆ ಈ ಹೊತ್ತು ನಿಮಗೋಸ್ಕರ ದಾವೀದನೂರಲ್ಲಿ ಒಬ್ಬ ರಕ್ಷಕನು ಹುಟ್ಟಿದ್ದಾನೆ. ಆತನು ಸ್ವಾಮಿಯಾಗಿರುವ ಕ್ರಿಸ್ತನೇ."

ಈಗ್ಗೆ ಸುಮಾರು ಎರಡು ಸಾವಿರ ವರುಷಗಳಿಗೆ ಮುಂಚೆ ಅಡವಿಯಲ್ಲಿ ಕುರಿಮಂದೆಯನ್ನು ಕಾಯುತ್ತಿದ್ದ ಕುರುಬರಿಗೆ ಒಬ್ಬ ದೇವದೂತನು ಅಕಸ್ಮಾತ್ತಾಗಿ ದರ್ಶನಕೊಟ್ಟು ಅವರಿಗೆ ಈ ಮಾತುಗಳನ್ನು ತಿಳಿಸಿದನೆಂದು ಕ್ರಿಸ್ತನ ಜನನವನ್ನು ಕುರಿತು ಬರೆದಿರುವ ಗ್ರಂಥಕಾರನು ಹೇಳಿರುತ್ತಾನೆ. ಈ ಗ್ರಂಥಕಾರನು ಕ್ರಿಸ್ತನ ಚರಿತ್ರೆಯನ್ನು ಬರೆದನು. ಆತನು ಬರೆಯುವದಕ್ಕಿಂತ ಮುಂಚಿತವಾಗಿ ಈ ವಿಷಯಗಳು ಸತ್ಯವೋ? ಎಂದು ಬಹು ಶ್ರದ್ಧೆಯಿಂದ ವಿಚಾರಿಸಿ ಸತ್ಯವೆಂದು ಆಧಾರಪೂರ್ವಕವಾಗಿ ಖಚಿತವಾದ ಸಂಗತಿಗಳನ್ನು ಬರೆದನು. ಈ ಚರಿತ್ರೆಯನ್ನು ಆವನು ತನ್ನ ಆಪ್ತಮಿತ್ರನಿಗೆ ಬರೆದನು. ಇದರ ವಿಷಯದಲ್ಲಿ ತನ್ನ ಮಿತ್ರನಿಗೆ ತಕ್ಕ ನಂಬುಗೆಯುಂಟಾಗಬೇಕೆಂದು ಈ ಚರಿತ್ರೆಯ ಆರಂಭದಲ್ಲಿ ಒಂದು ಸಣ್ಣ ಪೀಠಿಕೆಯನ್ನು ಬರೆದನು. ಆ ಪೀಠಿಕೆಯಲ್ಲಿ ತನ್ನ ಮಿತ್ರನಿಗೆ—ಈ ವಿಷಯಗಳನ್ನು ಕಣ್ಣಾರ ಕಂಡವರು ಮತ್ತು ಆ ಸುವಾರ್ತಾ ವಾಕ್ಯವನ್ನು ಸಾರುತ್ತಿದ್ದವರು ನಮಗೆ ತಿಳಿಸಿದರು. ಈ ಕಾರ್ಯಗಳು ನಮ್ಮಲ್ಲಿ ಪೂರ್ಣ ನಿಶ್ಚಯಕ್ಕೆ ಬಂದಿವೆ. ಮತ್ತು ಈ ಕಾರ್ಯಗಳನ್ನು ಚರಿತ್ರರೂಪವಾಗಿ ಬರೆಯುವದಕ್ಕೆ ಅನೇಕರು ಪ್ರಯತ್ನಪಟ್ಟಿದ್ದಾರೆ. ಹೀಗಿರಲಾಗಿ ನಾನು ಸಹ ಮೊದಲಿಂದ ಎಲ್ಲವನ್ನು ಚನ್ನಾಗಿ ವಿಚಾರಿಸಿದವನಾದಕಾರಣ ಅವುಗಳನ್ನು ನಿನಗೆ ಕ್ರಮವಾಗಿ ಬರೆದಿರುತ್ತೇನೆ. ನಿನಗೆ ನಾನು ಬರೆದಿರುವ ಈ ವಿಷಯಗಳು ಯಥಾರ್ಥವಾದವುಗಳೆಂದು ಇದರಿಂದ ನೀನು ಗೊತ್ತುಮಾಡಿಕೊಳ್ಳಬಹುದು ಎಂದು ಹೇಳಿದ್ದಾನೆ. ಮತ್ತು ಈ ಚರಿತ್ರಕಾರನು ವೈದ್ಯನಾಗಿದ್ದದ್ದರಿಂದ ತಕ್ಕ ಪಾಂಡಿತ್ಯವುಳ್ಳವನಾಗಿದ್ದನು. ಕೇಳಿದ ಸಮಾಚಾರಗಳನ್ನು ಸುಮ್ಮನೆ ನಂಬದೆ ನಿಜತ್ವವನ್ನು ವಿಚಾರಿಸುತ್ತಿದ್ದನು.

ಇಂತಹ ಮನುಷ್ಯನು ತಕ್ಕ ವಿಚಾರಮಾಡಿದ ಮೇಲೆ ಯಥಾರ್ಥವಾದುದನ್ನೆ ಬರೆಯುತ್ತೇನೆಂದು ಮಾತುಕೊಟ್ಟವನು ನಾವು ಮೇಲೆ ಎತ್ತಿ ಬರೆದಿರುವ ವಾಕ್ಯವನ್ನು ತಾನು ಬರೆದಿರುವ ಕ್ರಿಸ್ತನ ಚರಿತ್ರೆಯಲ್ಲಿ ಬರೆದಿದ್ದಾನೆ. ಆದುದರಿಂದ ಈ ಸಂಗತಿಗಳು ಯಥಾರ್ಥವಾದಿಗಳು ಕಣ್ಣಾರ ಕಂಡು ಚನ್ನಾಗಿ ಪರಿಶೋಧಿತವಾದವುಗಳು ಎಂಬುವದಕ್ಕೆ ಸಾಕಾದಷ್ಟು ಆಧಾರವಿಳೆಯಲ್ಲವೇ?

ಇದರಲ್ಲಿ ಕ್ರಿಸ್ತನ ಜನನವನ್ನು ಕುರಿತು ಒಂದೆರಡು ವಚನಗಳನ್ನು ಮಾತ್ರ ವಾಚಕರ ಲಕ್ಷ್ಯಕ್ಕೆ ತರಬೇಕೆಂದು ಅಪೇಕ್ಷಿಸುತ್ತೇವೆ.

ದೇವದೂತನು ಮಹಿಮಾತೀತನಾಗಿ ಕಾಣಿಸಿಕೊಂಡನು; ಕರ್ತನ ಪ್ರಭೆಯು ಕುರುಬರ ಸುತ್ತಲು ಪ್ರಕಾಶಿಸಿತು; ಅವರು ಬಹಳವಾಗಿ ಹೆದರಿದರು ಎಂದು ಈ ಚರಿತ್ರಕಾರನು ಹೇಳುತ್ತಾನೆ. ಆದರೆ ಇವೆಲ್ಲಕ್ಕಿಂತ ದೂತನು ಹುಟ್ಟಿದ ಕೂಸಿನ ವಿಷಯದಲ್ಲಿ ಹೇಳಿರುವದು ನಮಗೆ ಬಹಳ ಆಶ್ಚರ್ಯವಾಗಿದೆ. ಅದೇನಂದರೆ—ಈಗ ಹುಟ್ಟಿದ ಕೂಸಿನ ಜನನವು ಜನರಿಗೆಲ್ಲಾ ಮಹಾ ಸಂತೋಷವನ್ನುಂಟುಮಾಡುವ ಶುಭಸಮಾಚಾರವೆಂದು ಹೇಳುತ್ತಾನೆ. ಈ ವರ್ತಮಾನದ ವಿಸ್ತಾರತ್ವವನ್ನು ನೋಡಿರಿ. ಜನರಿಗೆಲ್ಲಾ ಅಂದರೆ ಯಾವ ಜನಗಳು? ಆಗ ಇದ್ದವರು; ಮತ್ತು ಅವರಿಗೆ ಮುಂಚೆ ಲೋಕದಲ್ಲಿದ್ದು ಬಾಳಿ ಬದುಕಿದವರು; ಮತ್ತು ಅವರ ಅನಂತರ ಲೋಕದಲ್ಲಿ ಹುಟ್ಟಿಬರುವವರೆಲ್ಲರೂ ಎಂದು ಅರ್ಥವಾಗುತ್ತದೆ. ಮತ್ತು ಯಾವ ದೇಶದವರು? ಅಥವಾ ಜಾತಿಯವರು? ಎಲ್ಲಾ ದೇಶದವರು; ಸಕಲ ಜಾತಿಯವರು; ಸಕಲ ಭಾಷೆಗಳವರು. ಅಂದರೆ ಈ ಭೂಮಂಡಲದಲ್ಲಿ ಆಗ ಬದುಕುತ್ತಿದ್ದ ಮತ್ತು ಅವರ ಹಿಂದೆ ಬದುಕಿದ್ದು ಗತಿಸಿ ಹೋಗಿರುವ ಮತ್ತು ಮುಂದೆ ಈ ಭೂಲೋಕದಲ್ಲಿ ಹುಟ್ಟುವ ಸಕಲ ದೇಶಗಳ, ಭಾಷೆಗಳ, ಬಣ್ಣಗಳವರು ಮತ್ತು ವರ್ತಮಾನಭೂತಭವಿಷ್ಯತ್ಕಾಲಗಳಲ್ಲಿ ಇದ್ದವರಿಗೂ ಸಂತೋಷವನ್ನು ಆದರೊಳಗಾಗಿ ಮಹಾ ಸಂತೋಷವನ್ನು ಉಂಟುಮಾಡುವ ಸಮಾಚಾರ. ಈ ದೂತನ ಅಭಿಪ್ರಾಯದ ಪ್ರಕಾರ ಕ್ರಿಸ್ತನು ಕಾಲಭೇದ, ಸ್ಥಳಭೇದವನ್ನು ಎಣಿಸದೆ ಸಕಲರಿಗೂ ಮಹಾ ಸಂತೋಷವನ್ನುಂಟುಮಾಡುವವನು. ಇದು ಬಹಳ ಆಶ್ಚರ್ಯವಾದ ಮಾತಲ್ಲವೇ? ಎಲ್ಲರಿಗೂ ಬೇಕಾದ ಒಬ್ಬ ಮನುಷ್ಯನು ಈ ಲೋಕದಲ್ಲಿ ಯಾರಿದ್ದಾನು? ಲೋಕದಲ್ಲಿ ಕೆಲವು ವಸ್ತುಗಳು ಮಾತ್ರ ಸ್ಥಳಭೇದ ಕಾಲಭೇದಗಳನ್ನೆಣಿಸದೆ ಬದುಕಿರುವ ಸಕಲರಿಗೂ ಒಂದೇಸಮನಾಗಿ ಬೇಕಾಗಿವೆ; ಮತ್ತು ಅಗತ್ಯವಾಗಿ ಬೇಕಾಗಿವೆ. ಅಂಥವುಗಳ್ಯಾವವು? ಗಾಳಿ, ನೀರು, ಬಿಂಕಿ, ಬೆಳಕು ಮೊದಲಾದವುಗಳು. ಇವುಗಳು ಬೇಡವೆಂದು ಯಾವ ಜಾತಿಯವರೂ, ದೇಶದವರೂ ಎಂದಿಗೂ ಹೇಳಕೂಡದಾಗಿದೆ. ಮತ್ತು ಜೀವಾಧಾರಕ್ಕೆ ಇವುಗಳೂ ಇವುಗಳಂತಿರುವ ಇನ್ನೂ ಕೆಲವು ಲೋಕದಲ್ಲಿ ಜೀವಂತರಾಗಿರುವವರಿಗೆ ಅಗತ್ಯ. ಹಾಗಾದರೆ ಕ್ರಿಸ್ತನು ಇಂತಹ ವಸ್ತುಗಳಲ್ಲಿ ಒಂದೋ? ಮತ್ತು ಇವುಗಳೆಲ್ಲಾ ಇದ್ದರೂ ಜೀವವು ಇತ ಲೋಕದಲ್ಲಿ ಶಾಶ್ವತವಲ್ಲ. ಸತ್ಯವಾದ ರಕ್ಷಣೆ, ಮರಣಕ್ಕೆ ತಪ್ಪಿಸಿ ಕಾಯುವ ರಕ್ಷಣೆ ಯಾರಿಗೂ ದೊರಕಲಿಲ್ಲ. ಕ್ರಿಸ್ತನು ಮಾತ್ರ ಎಲ್ಲರಿಗೆ ರಕ್ಷಕನು. ಅಂದರೆ ಈ ಲೋಕದಲ್ಲಿ ಜೀವಾಧಾರಕ್ಕಾಗಿ ಸರ್ವರಿಗೂ ಬೇಕಾಗಿರುವ ವಸ್ತುಗಳಲ್ಲಿ ಒಂದು ಎಂದು ಕ್ರಿಸ್ತನನ್ನು ಕುರಿತು ನಂಬುವದು ಸಾಲದು. ಆತನು ಅನುತ್ತರನಾಗಿ ಸಕಲರನ್ನು ಕಾಲಸ್ಥಳ ಭೇದಗಳಿಲ್ಲದ ಮಹಾ ಸಂತೋಷದಿಂದ ರಕ್ಷಿಸುವವನು. ಅಂದರೆ ಗಾಳಿ, ನೀರು, ಬೆಂಕಿಗಳಿಗೂ ಆಧಾರವಾಗಿ ಸಕಲ ಚರಾಚರ ವಸ್ತುಗಳನ್ನು ನಿರ್ಮಿಸಿ ಕಾಪಾಡುವ ದೇವರು.

ಇಂತಹ ದೇವರನ್ನು ಕುರಿತು ದೂತನು ಕುರುಬರಿಗೆ ಹೇಳುವದೇನಂದರೆ— ನಿಮಗೋಸ್ಕರ, ಈ ಹೊತ್ತು ಈ ರಕ್ಷಕನು ಹುಟ್ಟಿದ್ದಾನೆ ಎಂಬುವದೇ. ಆ ಕೂಸಿನ ತಂದೆತಾಯಿಗಳಿಗೆ ಆ ದಿನ ಆ ಕೂಸು ಹುಟ್ಟಿತೆಂದು ಹೇಳುವದು ಸರಿ. ಆದರೆ ಆ ಕುರುಬರಿಗೆ ಆ ಕೂಸಿನ ಸಂಬಂಧವೇನು? ಆತನು ಆ ದಿನ ಆ ಕುರುಬರಿಗೆ ಲಭ್ಯವಾದದ್ದು. ಆತನು ಅವರ ರಕ್ಷಕನೆಂದು ತಿಳಿಸುವದಕ್ಕೆ. ಹಾಗೆಯೇ ಈ ದಿನ ಆತನನ್ನು ಆಶ್ರಯಿಸುವವರೆಲ್ಲರಿಗೆ ಈ ದಿನವೇ ಆತನು ರಕ್ಷಕನಾಗಿ ಲಭ್ಯವಾಗುತ್ತಾನೆ. ಅದಕ್ಕೋಸ್ಕರ ಕ್ರಿಸ್ತನ ಜನನದ ಹಬ್ಬವನ್ನು ಎಲ್ಲರೂ ಸಂತೋಷದಿಂದ ಆಚರಿಸಬೇಕು. ಈತನು ದೇವರು. ಈತನನ್ನು ಯಾರು ಆಶ್ರಯಿಸುವರೋ ಅವರಿಗೆ ಭೇದವಿಲ್ಲದೆ ಆತನು ರಕ್ಷಕನಾಗಿದ್ದಾನೆ.

ಒಳದೇಶದ ವೃತ್ತಾಂತಗಳು.

ಈ ವಾರ ನಮ್ಮ ಪತ್ರಿಕೆಯು ಹತ್ತು ಪುಟಗಳುಳ್ಳದ್ದಾಗಿದೆ.

ರಾಜಧಾನಿಯ ಪ್ರಜೆಗಳು ಮೊನ್ನೆ ಸಾಯಂಕಾಲ ಟೌನ್ ಹಾಲ್ ಬಂಗಲೆಯಲ್ಲಿ ಒಂದು ಸಭೆಯನ್ನು ನಡಿಸಿ ನಮ್ಮ ವೈಸ್‌ರಾಯರವರಿಗೆ ಪುತ್ರವಿಯೋಗದುಃಖವು ಪ್ರಾಪ್ತವಾದದ್ದಕ್ಕಾಗಿ ವಿಷಾದಪಟ್ಟು ಅವರಿಗೆ ತಮ್ಮ ಸಂತಾಪವನ್ನು ಅರಿಕೆಮಾಡುವಂತೆ ತೀರ್ಮಾನಮಾಡಿದರು.

ಹಾಸನದಲ್ಲಿ ಜನವರಿ ತಾ. 4 ಮತ್ತು 5 ರಲ್ಲಿ ಡಿಸ್ಟ್ರಿಕ್ಟ್ ಕೋಆಪರೇಟಿವ್ ಸಭೆ ನಡೆಯುತ್ತದೆ. ಡೆಪ್ಟಿ ಕಮೀಷನರ್ ಮಿ|| ವೆದರಾಲ್ ಸಾಹೇಬರು ಸಭೆಯ ಅಗ್ರಾಸನವನ್ನು ವಹಿಸುವರು. ಡಿಸ್ಟ್ರಿಕ್ಟಿನ ಎಲ್ಲಾ ಸಂಘಗಳಿಂದಲೂ ಈ ಸಭೆಗೆ ಮೆಂಬರುಗಳು ಬರುವಂತೆ ನಿರೀಕ್ಷಿಸಲ್ಪಟ್ಟಿದೆ.

ಕ್ರಿಸ್ಮಸ್ ಹಬ್ಬದ ನಿಮಿತ್ತ ಮೈಸೂರು ಬ್ಯಾಂಕಿನ ಮುಂದೆ ಹೇಳುವ ಶಾಖೆಗಳನ್ನು ತಾ. 25 ರಿಂದ 8 ದಿನಗಳ ವರೆಗೆ ಮುಚ್ಚಿಬಿಡುತ್ತಾರೆಂದು ಮ್ಯಾನೇಜರವರು ತಿಳಿಸುತ್ತಾರೆ. ಶಾಖೆಗಳ್ಯಾವವೆಂದರೆ—ಮೈಸೂರು, ಚನ್ನಪಟ್ಟಣ, ಚಿಕ್ಕಮಗಳೂರು, ತಿಪ್ಟೂರು, ತುಮಕೂರು, ದಾವಣಗೆರೆ, ಶಿವಮೊಗ್ಗೆ.

...ಕೃಷ್ಣರಾಯಪಟ್ಟಣದಲ್ಲಿ ಒಂದು ಮನೆಯನ್ನು ಕೆಡವಿ ಕಾಮಗಾರಿಯವರು ...ದ ಒಂದು ಮಡಕೆಯಲ್ಲಿ ನಿಧಿ ಸಿಕ್ಕಿತು. ಪೋಲೀಸಿಗೆ ತಿಳಿದು ಅದನ್ನು ... ಸಾಗಿಸಿದರು. ಅದರಲ್ಲಿ 200 ವರುಷಗಳ ಹಿಂದಿನ ಮುಹಮ್ಮದಿಯರ ...124 ನಾಣ್ಯಗಳೂ, ಕುಟಿನ 125 ಕುಂಭಣಿ ನಾಣ್ಯಗಳೂ ಇದ್ದವು.

...ಬೆಳನರಸೀಪುರದ ಮುನ್ಸಿಫರವರ ಅಪ್ಪಣೆ ಪ್ರಕಾರ ಕಳೆದ ವಾರದ ನಮ್ಮ ...ಯಲ್ಲಿ ಒ. ಎಸ್. 747 ನೇ ನಂಬರು ಸಿವಿಲ್ ವ್ಯಾಜ್ಯದ ನೋಟೀಸು ...ವಾಗಿತ್ತಷ್ಟೆ. ಈ ನೋಕದ್ದಮೆಯ ಹೀರಿಂಗನ್ನು ಮುನ್ಸಿಫರವರು ...ನ ಜನವರಿ 8 ನೇ ತಾ. ಶುಕ್ರವಾರಕ್ಕೆ ಇಟ್ಟಿದೆ ಎಂದು ತಿಳಿಸುತ್ತಾರೆ.

...ಯುದ್ಧದ ರಿಲೀಫ್ ಫಂಡಿಗೆ ಮಾಗಡಿ ತಾಲುಕಿನಲ್ಲಿ ತಾ. 19 ರ ವರೆಗೆ ...3|9-8-11 ಪ್ಪ ಚಂದಾ ವಸೂಲಾಗಿದೆ. ಈ ಫಂಡಿನ ದೇವನಹಳ್ಳಿ ಸೆಕ್ರೆಟರಿ ...ವರಿ ಮ|| ರಾ. ಶ್ರೀಕಂಠರಾಯರು ರೂ. 12¼, ಅ|| ಇಂಜಿನಿಯರ್ ಮ|| ...ಆರ್. ಗರುಡಾಚಾರ್‍ರು ರೂ. 12¼, ಮ|| ಮಾಧವರಾಯರು ರೂ. 2, ...ತು 27 ರೂಪಾಯಿ ಚಂದಾ ಕೊಟ್ಟಿರುತ್ತಾರೆ.

...ಹುಡುಕೂರು ವ್ಯಾಥಿಕನ್ ಕಂಪನಿಯ ಮ|| ಜಾರ್ಜ್ ಬ್ರೀಡಿಯವರು ಕಳೆದ ...ವಾರ ಒಂದು ಭಾರೀ ಹೆಣ್ಣು ಹುಲಿಯನ್ನು ಶಿಕಾರಿಮಾಡಿ ತಂದು ಊರಲ್ಲಿ ...ರವಣಿಗೆ ಮಾಡಿದರು. ಜನರು ನೋಡಿ ತುಂಬಾ ಸಂತೋಷಪಟ್ಟು ಅವರನ್ನು ...ಗೌರವಿಸಿದರು. ಅವರು 60 ಗಜ ದೂರದಲ್ಲಿ ಎದುರುಬಿದ್ದ ಈ ಹುಲಿಯನ್ನು ...ತಾಕ ಬಹು ಧೈರ್ಯದಿಂದ ಶಿಕಾರಿಮಾಡಿದರು. ಇವರು ಹಿಂದೆ ಕಳ್ಳ ...ರ ದಾರಿಯಲ್ಲಿದ್ದ ದುಷ್ಟ ಕಿರುಬನನ್ನು ಶಿಕಾರಿಮಾಡಿದ್ದರು.

ಒಬ್ಬ ವಾರ್ತಾದಾರರು ಬರೆಯುವುದು.—ದಾವಣಗೆರೆ ತಾಲೂಕು ಹದಡಿ ...ಯಲ್ಲಿ ಶೇಕ್‌ದಾರರಾಗಿದ್ದ ಮ|| ರಂಗಯ್ಯನವರಿಗೆ ವರ್ಗವಾಯಿತೆಂದು ತಿಳಿ...ಸು ವ್ಯಸನವಾಗುತ್ತೆ. ಇವರು ಎರಡು ವರ್ಷದಿಂದ ಎಲ್ಲರ ವಿಶ್ವಾಸಕ್ಕೆ ಪಾ...ತ್ರರಾಗಿ ಪುಂಡರ ಅವಾಂತ್ರವನ್ನು ಕಮ್ಮಿಮಾಡಿದ್ದರು. ಅನೇಕ ಗ್ರಾಮದವರು ...ವನ್ನು ಹೇಳಿದರು. ಅವರು ಲೋಕಿಕೆರೆ, ತ್ಯಾಗಲಿ, ಕೊಳ್ಳುವಾಡ, ಬಿಸಲೇರಿ ಗ್ರಾಮಗಳಿಗೆ ಮಾತ್ರ ಒಪ್ಪಿಕೊಂಡರು. ಆ ಗ್ರಾಮಗಳಲ್ಲಿ ಜನಗಳು ಸರಿಯಾದ ...ನ ಮನ್ನಣೆಗಳನ್ನು ನಡಿಸಿಕಳುಹಿಸಿದರು.

ಬೊಂಬಾಯಿ ಗಿರ್ಗಾಮದ ಡಾಕ್ಟರ್ ಗೋಪೀನಾಥ ಕೃಷ್ಣಾಜಿ ಕ್ಷತ್ರಿಯರ ...ವರು, ಬೆಂಗಳೂರು ಚಿಕ್ಕಪೇಟೆ ಸಿಟಿ ಮಾರ್ಕೆಟ್ಟಿನ ಮ|| ಬಿ. ಗರುಡಾಚಾರ್ಯರ್ ...ರು 1916 ನೇ ಇಸವಿಯ ಕ್ಯಾಲೆಂಡರುಗಳನ್ನು ದಿವ್ಯವಾಗಿ ಮಾಡಿಸಿ ನಮಗೊಂದು ...ಪ್ರತಿಯನ್ನು ಕಳುಹಿಸಿದ್ದಾರೆ. ಮೈಸೂರು ದೇವೀರಾಂಬಾ ಅಗ್ರಹಾರದಲ್ಲಿರುವ ...ಜ್ಯೋತಿಷ ವಿದ್ವಾನ್ ವೇ|| ಯಾಜ್ಞ್ವಲ್ಕ್ಯ ಸಂಪತ್ಕುಮಾರ ಜೋಯಿಸ್ಯರವರು ತಾವು ಗುಣಿ...ಸುವ ರಾಕ್ಷಸ ಸಂವತ್ಸರದ ಸಿದ್ಧಾಂತ ಮತ್ತು ವಾಕ್ಯ ಪಂಚಾಂಗವನ್ನು ಕಳು...ಹಿಸಿಕೊಟ್ಟಿದ್ದಾರೆ. ಇವುಗಳನ್ನು ಸಂತೋಷದಿಂದ ಅಂಗೀಕರಿಸಿ ಅವರನ್ನು ಆದರ...ದಿಂದ ವಂದಿಸುವೆವು.

ಶ್ರೀಮನ್ ಮಹಾರಾಜರವರೂ ಯುವರಾಜರವರೂ ಪಂಚಾರ ಸಮೀಪ...ದ ಶುಕ್ರವಾರ ದಾವಣಗೆರೆಗೆ ದಯಮಾಡಿದರು. ಅಲ್ಲಿನ ಪ್ರಜೆಗಳು ಅವರಿಗೆ ಒಂದು ಅಡ್ರೆಸ್ಸನ್ನು ಓದಿ ದಿವ್ಯವಾದ ಕೈಪೆಟ್ಟಿಗೆಯಲ್ಲಿಟ್ಟು ಒಪ್ಪಿಸಿದರು. ನೀರ...ನ್ನು ಒದಗಿಸುವ ಕಾಮಗಾರಿಗೆ ಸರ್ಕಾರದವರು 30,000 ರೂಪಾಯಿ ಕೊಟ್ಟ...ದ್ದಕ್ಕೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಅರ್ಪಿಸಿ, ಬಚ್ಚಲ ನೀರನ್ನು ...ಸಾಗಿಸುವ ಕಾಮಗಾರಿಗೆ ಸಹಾಯಮಾಡಬೇಕೆಂದೂ, ಆದಾಯದ ಮೇಲಣ ತೆರಿಗೆ...ಯನ್ನು ಹಾಕಕೂಡದೆಂದೂ, ಆಕ್ಟ್ರಾಯಿ ಸುಂಕವನ್ನು ತೆಗೆದುಹಾಕಬೇ...ಕೆಂದೂ, ಯುದ್ಧದ ದೆಸೆಯಿಂದ ನೂಲಿನ ವರ್ತಕರಿಗೂ ಕಾರ್ಖಾನೆಯವರಿಗೂ ...ಸಂಭವಿಸಿರುವ ಕಷ್ಟವನ್ನು ತಪ್ಪಿಸುವುದಕ್ಕೆ ಸರ್ಕಾರದಿಂದ ಅವರಿಗೆ ಅಡ್ವಾನ್ಸ್ ...ಕೊಡಿಸಿ ಕಾಪಾಡಬೇಕೆಂದೂ, ಇಂಗ್ಲಿಷ್ ಹೈಸ್ಕೂಲನ್ನು ಇಡಿಸಬೇಕೆಂದೂ ಪ್ರಜೆಗಳು ಕೇಳಿಕೊಂಡರು. ಶ್ರೀಮನ್ ಮಹಾರಾಜರವರು ಪ್ರತ್ಯುತ್ತರವಾಗಿ ಬಚ್ಚ...ಲು ನೀರು ಸಾಗಿಸುವ ಏರ್ಪಾಡಿಗೆ ಟೌನ್ ನವರು ದ್ರವ್ಯವನ್ನು ಕೂಡಿಸಿದರೆ ಸರ್ಕಾರ...ದಿಂದ ಸಹಾಯ ಮಾಡಲಾಗುವುದೆಂದೂ, ಜವಳಿಗೆ ಆಕ್ಟ್ರಾಯಿ ಸುಂಕವನ್ನು ...ಮ್ಯುನಿಸಿಪಾಲಿಟಿಯವರೇ ವಜಾ ಮಾಡಲಾಗದೆಂದು ಇತ್ಯರ್ಥಪಡಿಸಿದ್ದಾರೆಂದೂ, ಹೈಸ್ಕೂಲ್ ವಿಚಾರ ಯೋಚಿಸಲ್ಪಡುವುದೆಂದೂ, ಯುದ್ಧದ ವಿಚಾರದಲ್ಲಿ ಎಲ್ಲರೂ ಅನುಭವಿಸಬೇಕಾಗಿ ಬಂದಿರುವ ಕಷ್ಟ ನಷ್ಟಗಳನ್ನು ನಾವೂ ಕೆಲವು ಮಟ್ಟಿಗೆ ಅನುಭವಿಸುವುದು ಸಹಜವಾಗಿದೆ ಎಂದೂ, ಆದಾಯದ ಮೇಲಣ ತೆರಿಗೆ ವಿಚಾರದಲ್ಲಿ ಸಾಧಕ ಬಾಧಕಗಳನ್ನು ಯೋಚಿಸಿ ಮುಂದೆ ಕೊಡಲ್ಪಡುವು...ದೆಂದೂ ಅಪ್ಪಣೆಕೊಡಿಸಿದರು.

ಯುದ್ಧದ ಸಮಾಚಾರಗಳು.

ಗ್ರೇಟ್ ಬ್ರಿಟನ್ ಮೇಲೆ ಗುಂಡು ಹಾಕಿದ್ದು.

ಬ್ರಿಟಿಷರು ಈಜಿಪ್ಟನ್ನು ಸೇರಿಸಿಕೊಂಡದ್ದು.

ನಮ್ಮ ವೈಸ್‌ರಾಯರವರ ಕುಮಾರನ ಮರಣ.

ಕದನಗಳು ನಡೆದ ವರ್ತಮಾನಗಳು ಈ ವಾರ ಬಂದಿರುವುದು ಬಹಳ ಸ್ವಲ್ಪ. ರಣರಂಗಗಳ ಪ್ರತಿ ಒಂದು ಭಾಗದಲ್ಲೂ ಕಾದಾಟಗಳೇನೋ ನಡೆದಿರುವವು. ಆದರೆ ಅವೆಲ್ಲಾ ಸಣ್ಣಪುಟ್ಟ ಕದನಗಳು.

ಗ್ರೇಟ್ ಬ್ರಿಟನ್‌ನಲ್ಲಿ.

ಈ ವಾರದ ವಿಶೇಷವಾದ ವರ್ತಮಾನವೇನೆಂದರೆ, ಜರ್ಮನಿಯ ಮೂರು ನಾಲ್ಕು ಯುದ್ಧದ ಜಹಜುಗಳು ಉತ್ತರಕಡಲಿನಲ್ಲಿ ಹ್ಯಾಗೋ ನುಗ್ಗಿಬಂದು ಬಹು ವಿಶೇಷವಾಗಿ ಸುರಿಯುತ್ತಿದ್ದ ಮಂಜಿನ ಮರೆಯಲ್ಲಿ ಯಾರ್ಕ್‌ಷೀರ್ ಮತ್ತು ಡರ್ಹಂ ಡಿಸ್ಟ್ರಿಕ್ಟುಗಳ ಸಮುದ್ರ ತೀರದ ಮೇಲೆ ಡಿಸೆಂಬರ್ ತಾ. 16 ನೇ ಬುಧವಾರ ಬೆಳಗ್ಗೆ 8 ಗಂಟೆಯ ಮೇಲೆ 9 ಗಂಟೆಯೊಳಗೆ ಗುಂಡುಗಳನ್ನು ಹಾಕಿದವು. ಇಷ್ಟೇ ಜಹಜುಗಳು ಬಂದಿದ್ದವೆಂದು ಹೇಳಿ ಇಲ್ಲ. ಬಂದಿದ್ದ ಜಹಜುಗಳು ಜರ್ಮನಿಯ ಜಹಜುಗಳ ಪೈಕಿ ತುಂಬಾ ವೇಗವಾಗಿ ಸಂಚರಿಸತಕ್ಕವುಗಳಾಗಿದ್ದವು. ಸ್ಕಾರ್ಬರೋ ಎಂಬುವುದು ಒಂದು ತೀರದ ಪಟ್ಟಣ. ಅಲ್ಲಿ ಅವುದುರಷ್ಟು ಪೇಟೆಯಾಗಿದೆ. ಮತ್ತು ಒಂದು ಬಲವಾದ ಕೋಟೆಯೂ ಇರುತ್ತದೆ. ಜರ್ಮನಿಯ ಜಹಜುಗಳು ಆ ಕೋಟೆಗೂ ನಗರದೊಳಕ್ಕೂ ಗುಂಡುಗಳನ್ನು ಹಾಕಿದವು. ಪ್ರಜೆಗಳು ವಾಸಮಾಡುತ್ತಿದ್ದ ಭಾಗಕ್ಕೆ ಗುಂಡುಗಳು ಬಿದ್ದವಲ್ಲದೆ ಅಂಗಡಿ ಮುಂಗಟ್ಟುಗಳೂ ಕಸಬುದಾರಗಳೂ ಇದ್ದ ಭಾಗದಲ್ಲಿ ಬೀಳಲಿಲ್ಲ. ಕೂಡಲೇ ಕೋಟೆಯ ಮೇಲಿದ್ದ ಫಿರಂಗಿಗಳು ಶತ್ರುವಿನ ಮೇಲೆ ಗುಂಡುಗಳನ್ನು ಜವಾಬಾಗಿ ಹೊಡೆದವು. ಮತ್ತು ಅದೇ ಸಮುದ್ರ ತೀರದಲ್ಲಿ ಕಾವಲಿಗಾಗಿ ನೇಮಿಸಿರುವ ಬ್ರಿಟಿಷ್ ಜಹಜುಗಳು ಶತ್ರು ಜಹಜುಗಳ ಮೇಲೆ ಯುದ್ಧಕ್ಕೆ ನುಗ್ಗಿಹೋದವು. ಇದನ್ನು ತಿಳಿದೊಡನೆಯೇ ಜರ್ಮನಿಯ ಜಹಜುಗಳು ಬಹು ವೇಗವಾಗಿ ತಲೆತಪ್ಪಿಸಿಕೊಂಡು ಹೊರಟುಹೋದವು. ಆದರೂ ಶತ್ರು ಜಹಜುಗಳಿಂದ ಬಿದ್ದ ಗುಂಡುಗಳಿಂದ ತುಂಬಾ ನಷ್ಟವಾಯಿತು. 103 ಜನರು ಮೃತಪಟ್ಟರು, 444 ಜನರಿಗೆ ಗಾಯಗಳಾದವು. ಈ ಪೈಕಿ ಅನೇಕರು ಹೆಂಗಸರು ಮಕ್ಕಳೆಂದು ತಿಳಿಯುತ್ತದೆ. ಯುದ್ಧಭಟರಲ್ಲಿ 7 ಮಂದಿ ಕೊಲೆಯಾದರು ; 14 ಜನರಿಗೆ ಗಾಯಗಳಾಗಿವೆ. ಆ ಪಟ್ಟಣದಲ್ಲಿ ಸ್ವಲ್ಪ ಹೊತ್ತಿನ ವರೆಗೆ ಗಲಿಬಿಲಿಯುಂಟಾಯಿತು. ಈಗ ಎಲ್ಲಾ ನೆಮ್ಮದಿಯಾಗಿದೆ. ಪ್ರಜೆಗಳು ತಮ್ಮ ಕೆಲಸಕಾರ್ಯಗಳನ್ನು ಮಾಡುತ್ತಿದ್ದಾರೆ.

ಸ್ಕಾರ್ಬರೋ ಎಂಬುವುದೊಂದು ತೀರಪಟ್ಟಣ. ಬೇಸಗೆಯಲ್ಲಿ ಜನರು ಅಲ್ಲಿಗೆ ವಿಶೇಷವಾಗಿ ಹೋಗುತ್ತಾರೆ. ಅದೇನೂ ವ್ಯಾಪಾರ ಸ್ಥಳವಲ್ಲ. ಅಲ್ಲಿ ಕೋಟೆ ಕೊತ್ತಲಗಳೂ ಇರುವುದಿಲ್ಲ. ಇಂಥಾ ಪಟ್ಟಣದ ಮೇಲೆ ಜರ್ಮನಿಯವರು ಮುತ್ತಿಗೆಹಾಕುವುದಕ್ಕೆ ಕಾರಣವಿಲ್ಲ. ಶತ್ರುಗಳ ಗುಂಡುಗಳು ಬಿದ್ದು ಈ ಪಟ್ಟಣದೊಳಗೆ 17 ಮಂದಿ ಮೃತಪಟ್ಟರು ; 60 ಜನರಿಗೆ ಗಾಯಗಳಾಗಿವೆ. ಪ್ರಜೆಗಳು ಅದೇನೆಂದು ನೋಡುವುದಕ್ಕಾಗಿ ಆತುರಪಟ್ಟು ಸಮುದ್ರ ತೀರಕ್ಕೆ ಹೋಗಿ ನಿಂತರು. ಅಷ್ಟರಲ್ಲೇ ಶತ್ರುವಿನ ಜಹಜುಗಳಿಗೆ ಗಾಬರಿಹುಟ್ಟಿ ತೀರವನ್ನು ಬಿಟ್ಟುಬಿಟ್ಟು ಓಡಿಹೋದವು.

ವ್ಹಿಟ್‌ಬಿ ಎಂಬುವುದು ಒಂದು ಗ್ರಾಮ ; ಇದು ಸ್ಕಾರ್ಬರೋವಿಗೂ ಹಾರ್ಟಲ್‌ಪೂಲಿಗೂ ಮಧ್ಯೆ ಇದೆ. ಈ ಗ್ರಾಮದ ಸಮುದ್ರ ತೀರದಲ್ಲಿ ಪೂರ್ವ ಕಾಲದ ಒಂದು ದೇವಾಲಯವಿದೆ. ಜರ್ಮನಿಯವರ ಗುಂಡು ಬಿದ್ದು ಈ ದೇವಾಲಯವು ಕೆಲವು ಕಡೆ ಮುಂದುಹೋಯಿತೆಂದೂ, ಇಬ್ಬರು ಮೃತಪಟ್ಟರೆಂದೂ, ಕೆಲವರಿಗೆ ಗಾಯಗಳಾದವೆಂದೂ ಹೇಳಲಾಗಿದೆ. ಈ ಸಂಖ್ಯೆಗಳು ಖರಾವಾಕ್ಕಾ ಎಂದು ಹೇಳಲಾರೆವು ; ತಂತೀವರ್ತಮಾನಗಳು ಬೇರೆ ಬೇರೆ ಸಂಖ್ಯೆಗಳನ್ನು ತಿಳಿಸುತ್ತಾ ಬಂದಿವೆ. ಹೆಚ್ಚಾದ ಸಂಖ್ಯೆಗಳನ್ನೇ ಇಲ್ಲಿ ಕಾಣಿಸಿರುತ್ತೇವೆ. ಬ್ರಿಟಿಷ್ ಹಡಗುಗಳು ಹೊಡೆದ ಗುಂಡುಗಳು ಜರ್ಮನಿ ಜಹಜುಗಳಿಗೆ ಬಡಿದವು ; ಆದರೆ ಅವುಗಳಲ್ಲಿದ್ದವರ ಪೈಕಿ ಎಷ್ಟು ಮಂದಿ ನಷ್ಟವಾದರೋ ಗೊತ್ತಾಗದೆಹೋಯಿತು.

ಮೇಲ್ಕಂಡ ಪ್ರಕಾರ ಜರ್ಮನಿಯ ಕೆಲವು ಗುಂಡುಗಳು ಗ್ರೇಟ್ ಬ್ರಿಟನ್ ಮೇಲೆ ಬಿದ್ದುದರ ಫಲವೇನಾಯಿತೆಂದರೆ, ಬ್ರಿಟಿಷ್ ಪ್ರಜೆಗಳು ಇನ್ನೂ ವಿಶೇಷವಾಗಿ ಆತುರಪಟ್ಟು ಉತ್ಸಾಹದಿಂದ ಬ್ರಿಟಿಷ್ ಸೈನ್ಯಕ್ಕೆ ಸೇರಲು ಬರುತ್ತಿದ್ದಾರೆ. ಸ್ವರಾಜ್ಯವನ್ನೂ ಜನ್ಮಭೂಮಿಯನ್ನೂ ಕಾಪಾಡಿಕೊಳ್ಳಬೇಕೆಂದು ಸಾವಿರಾರು ಜನರು ಮುಂದೆ ಬರುತ್ತಿರುವರು. ಜರ್ಮನಿಯವರು ಎದುರಿಗೆ ಬಂದು ಯುದ್ಧಭಟರ ಮೇಲೆ ತಮ್ಮ ಪರಾಕ್ರಮವನ್ನು ತೋರಿಸದೆ ಕಳ್ಳರಂತೆ ಮೋಸಮಾಡಿ ಬಂದು ನಿರಪರಾಧಿಗಳಾದ ಹೆಂಗಸರು ಮಕ್ಕಳನ್ನು ಕೊಂದದ್ದು ಅಪಮಾನಕರವಾಗಿದೆ. ಇಂಥಾ ಘಾತುಕ ಕೃತ್ಯವನ್ನು ಯುದ್ಧವೆಂದು ಹೇಳಲಾಗದು.

ಫ್ರಾನ್ಸ್ ಮತ್ತು ಬೆಲ್ಜಿಯಮ್‌ನಲ್ಲಿ.

ನಮ್ಮ ಪಕ್ಷದವರು ಬೆಲ್ಜಿಯಮ್‌ನಲ್ಲಿ ಮುಂದಕ್ಕೆ ನುಗ್ಗಿ ಹೋಗುವುದಕ್ಕೆ ಅನುಕೂಲಿಸುವಂತೆ ಹೊಸ ಸೈನ್ಯಗಳನ್ನು ಕರಸಿಕೊಂಡಿರುವುದು ಬಹು ಒಳ್ಳೆಯ ಸಮಾಚಾರವಾಗಿದೆ. ನಮ್ಮ ಸೈನ್ಯಗಳು ಓಸ್ಟೆಂಡಿನ ಕಡೆ ನುಗ್ಗಿ ಹೋಗುತ್ತಿರುವವು. ದಾರಿಯಲ್ಲಿ ಸಿಕ್ಕಿದ ಜರ್ಮನಿಯವರ ಹಲವು ಕಂದಕಗಳನ್ನು ಅವರಿಂದ ಕಿತ್ತು ಸ್ವಾಧೀನಪಡಿಸಿಕೊಂಡಿದ್ದಾರೆ. ಬ್ರಿಟಿಷ್ ಜಹಜುಗಳು ಮತ್ತೆ ಸಮುದ್ರದಿಂದ ಬೆಲ್ಜಿಯಮ್ ತೀರದ ಮೇಲಕ್ಕೆ ಗುಂಡುಗಳನ್ನು ಹಾಕಿ, ಜರ್ಮನಿಯವರನ್ನು ಅಲ್ಲಿಂದ ಒಳದೇಶಕ್ಕೆ ಓಡಿಸಿಬಿಟ್ಟವು. ನಮ್ಮ ಸೈನ್ಯಗಳು ನುಗ್ಗಿ ಹೋಗುತ್ತಿರುವುದು ನಿಧಾನ ; ಆದರೂ ಇನ್ನು ಮುಂದೆ ಜರ್ಮನಿಯವರನ್ನು ಬೆಲ್ಜಿಯಮ್‌ನೊಳಗಿಂದ ಹಿಂದಕ್ಕೆ ಓಡಿಸಿಬಿಡುವ ಸನ್ನಾಹವಮಾಡಿಕೊಂಡಿದ್ದಾರೆಂದು ಹೇಳಲ್ಪಟ್ಟಿದೆ. ಇದು ನೆರವೇರುವುದಕ್ಕೆ ಕೆಲವು ತಿಂಗಳೇ ಹಿಡಿಯಬಹುದು ; ಆದಾಗ್ಯೂ ಅವರನ್ನು ಬೆಲ್ಜಿಯಮ್‌ನಿಂದ ಹೊರಡಿಸಿಬಿಡುವುದೇನೋ ಖಂಡಿತ.

ಈ ರಣರಂಗದ ದಕ್ಷಿಣ ಪ್ರದೇಶ ಅಂದರೆ ಆಲ್ಸೇಸ್‌ನಲ್ಲೂ ನಮ್ಮ ಪಕ್ಷದವರಿಗೆ ಸಕ್ಕ ಮಟ್ಟಿಗೆ ಅನುಕೂಲವಾಗಿರುತ್ತದೆ. ಬಹು ದೂರದ ವರೆಗೆ ಉದ್ದಕ್ಕೂ ಕಾಯ್ದುಹಾಕಿಕೊಂಡಿರುವ ಜರ್ಮನಿ ಸೈನ್ಯದ ಸಾಲುಗಳನ್ನು ನಮ್ಮ ಪಕ್ಷದವರು ಎರಡು ಕಡೆಗಳಿಂದ ಬಂದು ಸುತ್ತುಕಟ್ಟಿಕೊಳ್ಳುವರೇನೋ ಎಂದು ಕಾಣುತ್ತದೆ.

ಫ್ರೆಂಚರ ಕೆಲವು ವಿಮಾನ ಯಂತ್ರಗಳು ಜರ್ಮನಿಯೊಳಕ್ಕೆ ಹೋಗಿ ಫ್ರೈಬರ್ಗ್ ಎಂಬ ನಗರದೊಳಕ್ಕೆ ರೈಲ್ವೆಯ ಮೇಲೂ, ವಿಮಾನಯಂತ್ರಗಳ ಠಾಣ್ಯಕ್ಕೂ ಸಿಡಿಮದ್ದಿನ ಗುಂಡುಗಳನ್ನು ಹಾಕಿ ವಿಶೇಷವಾದ ನಷ್ಟವನ್ನುಂಟುಮಾಡಿ ಸುರಕ್ಷಿತವಾಗಿ ವಾಪಸು ಬಂದವು.

ಜರ್ಮನಿಯ ವರ್ತಮಾನ ಪತ್ರಿಕೆಗಳು ತಮ್ಮ ಸೈನಿಕರು ಜಯಹೊಂದಿ ಮುಂದಕ್ಕೆ ನುಗ್ಗಿಹೋದರೆಂಬ ವಿಷಯದಲ್ಲಿ ಏನೂ ಬರೆಯದೆ ತಮ್ಮ ಸೈನಿಕರ ಲೈನುಗಳನ್ನು ಭೇದಿಸಿಕೊಂಡು ಬರುವುದು ಸಾಧ್ಯವೇ ಎಂಬ ವಿಚಾರವನ್ನು ಹಿಡಿದು ಚರ್ಚೆಮಾಡುತ್ತಾ ಬಂದಿರುವವು. ತಮಗೆ ಜಯವಾಗಲಾರದೆಂಬ ಸಂಗತಿಯು ಜರ್ಮನಿಯವರಿಗೆ ಗೊತ್ತಾಗಿದೆ ಎಂದು ಕಾಣುತ್ತದೆ.

ರಷ್ಯಾ, ಜರ್ಮನಿ, ಆಸ್ಟ್ರಿಯಾ.

ಪೋಲೆಂಡಿನ ಉತ್ತರಭಾಗದಲ್ಲೂ ಯುದ್ಧಗಳು ನಡೆಯುತ್ತಲೇ ಬಂದಿರುವವು. ಆದರೆ ಖಚಿತವಾದ ವರ್ತಮಾನಗಳೇನೂ ಬಂದಿರುವುದಿಲ್ಲ. ರಷ್ಯಾದವರು ಮುಂದು ಮುಂದಕ್ಕೆ ನುಗ್ಗಿ ಬರುತ್ತಿರುವುದನ್ನು ಎದುರು ಬಿದ್ದು ತಡೆಯಬೇಕೆಂದು ಜರ್ಮನಿಯವರೂ ಆಸ್ಟ್ರಿಯಾದವರೂ ಅನೇಕವಾಗಿ ಹೊಸ ಸೈನ್ಯಗಳನ್ನು ಸೇರಿಸಿಕೊಂಡು ಹೋದರು. ಇದುವರೆಗೆ ಅವರ ಉದ್ದೇಶವೇನೂ ನೆರವೇರಲಿಲ್ಲ. ಈಗಲೂ ವಾರ್ಸಾ ಮತ್ತು ಕ್ರಾಕೋಗಳ ಬಳಿಯಲ್ಲಿ ಬಹು ಕಠಿಣವಾದ ಯುದ್ಧಗಳು ನಡೆಯುತ್ತಿರುವವು. ಉತ್ತರ ದಿಕ್ಕಿನಲ್ಲಿ ರಷ್ಯಾದವರು ತಮಗೆ ಜಯವಾಯಿತೆಂದೂ, ಜರ್ಮನಿಯವರಲ್ಲಿ ಅನೇಕರನ್ನು ಕೈಸೆರೆ ಹಿಡಿದುಕೊಂಡೆವೆಂದೂ, ಅವರನ್ನೆಲ್ಲಾ ಅಲ್ಲಿಂದ ಹಿಂದಕ್ಕೆ ಓಡಿಸಿಬಿಟ್ಟೆವೆಂದೂ ಹೇಳಿಕೊಳ್ಳುತ್ತಾರೆ. ದಕ್ಷಿಣ ಭಾಗದಲ್ಲಿ ಅವರು 3,000 ಜರ್ಮನಿ ಸೈನಿಕರನ್ನು ಕೆಲವು ಫಿರಂಗಿಗಳ ಸಮೇತ ಕೈಸೆರೆ ಹಿಡಿದಿರುವುದಾಗಿ ತಿಳಿಸುತ್ತಾರೆ.

ಆಸ್ಟ್ರಿಯಾದಲ್ಲಿರುವ ಭಾರಿ ಕೋಟೆಯ ವಿಚಾರದಲ್ಲಿ ಕೆಲವು ಕಾಲದಿಂದೀಚೆಗೆ ಯಾವ ವರ್ತಮಾನವೂ ಬಂದಿರಲಿಲ್ಲ. ಈಗ ಈ ವಿಚಾರವನ್ನು ಕುರಿತು ತಂತೀವರ್ತಮಾನಗಳು ಬಂದಿರುತ್ತವೆ. ರಷ್ಯಾದವರು ಅದಕ್ಕೆ ಸುತ್ತು ಕಟ್ಟಿ ಮುತ್ತಿಗೆಹಾಕಿಕೊಂಡಿರಬೇಕೆಂದು ಹೇಳಬೇಕಾಗಿದೆ. ಈ ರಣರಂಗದಿಂದ ಇಷ್ಟರಲ್ಲೇ ಖಚಿತವಾದ ಸಮಾಚಾರಗಳು ಬರುವವೆಂದು ನಿರೀಕ್ಷಿಸಬಹುದಾಗಿದೆ.

ಸರ್ವಿಯಾದಲ್ಲಿ.

ಸರ್ವಿಯಾದವರು ಮತ್ತೆ ತಮ್ಮ ರಾಜಧಾನಿಯನ್ನು ಆಸ್ಟ್ರಿಯಾದವರಿಂದ ಗೆದ್ದು ಸ್ವಾಧೀನಪಡಿಸಿಕೊಂಡಿದ್ದಕ್ಕೆ ಅನೇಕ ವಿಜಯೋತ್ಸವಗಳನ್ನು ಮಾಡಿ ಆನಂದಪಡುತ್ತಿದ್ದಾರೆ. ಆಸ್ಟ್ರಿಯಾದವರನ್ನೆಲ್ಲಾ ಅವರು ತಮ್ಮ ದೇಶದಿಂದ ಹೊರಹೊರಡಿಬಿಟ್ಟಿದ್ದಾರೆಂದೂ, 60,000 ಆಸ್ಟ್ರಿಯಾ ಸೈನಿಕರನ್ನು ಕೈಸೆರೆ ಹಿಡಿದಿಟ್ಟುಕೊಂಡಿದ್ದಾರೆಂದೂ ಹೇಳಲಾಗಿದೆ.

ಟರ್ಕಿ.

ಟರ್ಕಿಗೆ ಸಂಬಂಧಪಟ್ಟ ವರ್ತಮಾನಗಳಲ್ಲೆಲ್ಲಾ ಪ್ರಾಮುಖ್ಯವಾದ ಸುದ್ದಿಯೇನೆಂದರೆ, ಬ್ರಿಟಿಷರು ಈಜಿಪ್ಟ್ ದೇಶವನ್ನು ಟರ್ಕಿಯ ಅಧಿಕಾರದಿಂದ ತಪ್ಪಿಸಿ ತಮ್ಮ ಆಳ್ವಿಕೆಗೆ ಸೇರಿಸಿಕೊಂಡುಬಿಟ್ಟರು. ಈಜಿಪ್ಟಿನ ಖಿಡೈವ್ ರಾಜನು ಕೆಲವು ಕಾಲದಿಂದ ಟರ್ಕಿ ರಾಜಧಾನಿಯಲ್ಲಿದ್ದುಕೊಂಡು ಜರ್ಮನಿಯ ಪಕ್ಷವನ್ನು ವಹಿಸಿರುತ್ತಾನೆ. ಬ್ರಿಟಿಷ್ ಗವರ್ನ್‌ಮೆಂಟಿನವರು ಆತನಿಗೆ ದೊರೆತನವನ್ನು ತಪ್ಪಿಸಿ, ಆತನ ಚಿಕ್ಕಪ್ಪನಾದ ಪ್ರಿನ್ಸ್ ಹುಸ್ಸೇನ್ ಎಂಬಾತನಿಗೆ ಪಟ್ಟ ಕಟ್ಟಿದರು. ಇನ್ನು ಮುಂದೆ ಈ ರಾಜನಿಗೆ ಈಜಿಪ್ಟ್ ದೇಶದ ಸುಲ್ತಾನನೆಂಬ ಹೆಸರು ಕೊಡಲಾಯಿತು. ಹಿಂದುಸ್ಥಾನದಲ್ಲಿ ಇಂಡಿಯಾ ಗವರ್ನ್‌ಮೆಂಟಿನ ಫಾರಿನ್ ಸೆಕ್ರೆಟರಿಯಾಗಿದ್ದ ಸರ್ ಹೆನ್ರಿ ಮೆಕ್‌ಮೋಹನ್‌ರವರು ಈಜಿಪ್ಟಿನ ಮೊದಲನೇ ಬ್ರಿಟಿಷ್ ಕಮಿಷನರಾಗಿ ನೇಮಿಸಲ್ಪಟ್ಟಿದ್ದಾರೆ. ನಮ್ಮ ಜಾರ್ಜ್ ಸಾರ್ವಭೌಮರವರು ಹೊಸ ಸುಲ್ತಾನರಿಗೆ ಶುಭವಾದನವನ್ನೂ, ತಮ್ಮ ಪ್ರೀತಿ ವಿಶ್ವಾಸಗಳನ್ನೂ ತಂತೀವರ್ತಮಾನಕೊಟ್ಟು ತಿಳಿಸಿದ್ದಾರೆ. ಹೊಸ ಸುಲ್ತಾನರವರಿಗೆ ರಾಜ್ಯಾಭಿಷೇಕವೂ, ಮೆರವಣಿಗೆಯೂ ಜರಿಗಿದವು, ಅವರೀಗ ಅರಮನೆಯಲ್ಲಿ ಇರುತ್ತಾರೆ. ಪ್ರಜಾಕೋಟಿಗಳು ಅವರನ್ನು ಬಹು ಸಂತೋಷದಿಂದಲೂ, ಉತ್ಸಾಹಪೂರ್ವಕವಾಗಿಯೂ ಅಂಗೀಕರಿಸಿಕೊಂಡಿದ್ದಾರೆ. ಟರ್ಕಿಯವರು ಮೊದಲು ಸೈಪ್ರಸ್ ದ್ವೀಪವನ್ನು ಕಳಕೊಂಡರು ; ಈಗ ಈಜಿಪ್ಟ್ ದೇಶವೂ ಅವರ ಕೈಬಿಟ್ಟುಹೋಯಿತು. ಇದು ಇನ್ನು ಮುಂದೆ ಬ್ರಿಟಿಷ್ ಮೇಲ್ವಿಚಾರಣೆಯಲ್ಲಿರುತ್ತದೆ. ಈ ಏರ್ಪಾಡನ್ನು ಫ್ರಾನ್ಸಿನವರು ಒಪ್ಪಿಕೊಂಡಿರುವರು. ಇದರಿಂದ ಇನ್ನು ಮುಂದೆ ಈಜಿಪ್ಟ್ ದೇಶವು ನಾನಾಮುಖಗಳಲ್ಲಿ ಇನ್ನೂ ಅಭಿವೃದ್ಧಿಗೆ ಬರಲು ಅನುಮಾನವಿಲ್ಲ.

ಬ್ರಿಟಿಷ್ ಯುದ್ಧದ ಜಹಜುಗಳು ಡಾರ್ಡನೆಲ್ಸ್ ಎಂಬ ಜಲಮಾರ್ಗದ ಬಳಿ ಇರುವ ಟರ್ಕಿ ಸೈನ್ಯಗಳ ಸಾಲು ಮನೆಗಳಿಗೆ ಗುಂಡುಗಳನ್ನು ಹಾಕಿದವು. ಜನಗಳು ಗಾಬರಿಬಿದ್ದು ಓಡಿಹೋದರು.

ಇಷ್ಟೇ ಅಲ್ಲ, ರಷ್ಯಾದವರು ಅರ್ಮೀನಿಯಾದಲ್ಲಿ ಇನ್ನೊಂದು ಕಡೆ ಟರ್ಕಿಯವರನ್ನು ಸೋಲಿಸಿದರು. ಟರ್ಕಿ ಸೈನಿಕರು ರಾಜಧಾನಿಯಾದ ಕಾನ್‌ಸ್ಟಾಂಟಿನೋಪಲ್‌ನಲ್ಲೂ, ಯುದ್ಧದ ಜಹಜುಗಳಲ್ಲೂ ತಮ್ಮ ಜರ್ಮನಿ ಉದ್ಯೋಗಸ್ಥರ ಮೇಲೆ ರೇಗಿ ತಿರುಗಿಬೀಳುತ್ತಿದ್ದಾರೆಂದು ವರ್ತಮಾನವಿದೆ.

ಬ್ರಿಟಿಷರು ಬಾಸ್ರಾದಲ್ಲಿ ಕೈಸೆರೆ ಹಿಡಿದಿರುವ ಟರ್ಕಿ ಸೈನಿಕರನ್ನು ಅಲ್ಲಿಂದ ಬರ್ಮಾದೇಶಕ್ಕೆ ಕರೆದುತಂದಿದ್ದಾರೆ. 40 ಮಂದಿ ಉದ್ಯೋಗಸ್ಥರೂ, 1,100 ಮಂದಿ ಸೈನಿಕರೂ ಈಗ ಅಲ್ಲಿ ಬಂಧನದಲ್ಲಿ ಹಾಕಲ್ಪಟ್ಟಿದ್ದಾರೆ.

ಆಫ್ರಿಕಾದಲ್ಲಿ.

ಪೂರ್ವ ಆಫ್ರಿಕಾದೊಳಗೆ ಕಳೆದ ಸೆಪ್ಟೆಂಬರ್ ತಿಂಗಳಲ್ಲಿ ನಡೆದ ಕದನಗಳ ವೃತ್ತಾಂತವು ಪತ್ರಿಕೆಗಳಲ್ಲಿ ವಿಸ್ತಾರವಾಗಿ ಹೇಳಲಾಗಿದೆ. ಅಲ್ಲಿ ಅಗ್ಗಿ ಪ್ರತಿಬಂಧಕಗಳಿಷ್ಟೆಂಬುವುದಾಗಲಿ, ಶತ್ರುಗಳು ಎಷ್ಟು ಮಂದಿ ಇದ್ದಾರೆಂಬುವುದಾಗಲಿ ಬ್ರಿಟಿಷರಿಗೆ ತಿಳಿಯಲಾರದೆ ಹೋಯಿತು. ಬ್ರಿಟಿಷ್ ಸೈನಿಕರ ಕೂಡ ನಮ್ಮ ಹಿಂದುಸ್ಥಾನದ ಸೈನ್ಯಗಳೂ ಸೇರಿಕೊಂಡು ಶತ್ರುಗಳ ಮೇಲೆ ಬಹು ಪರಾಕ್ರಮದಿಂದ ಕಾದಿದರು. ಆದರೂ ಬ್ರಿಟಿಷರಿಗೆ ಅಲ್ಲಿ ಸೋಲಾಯಿತು. ಬಹುಜನರು ಕೊಲ್ಲಲ್ಪಟ್ಟರು, ಅನೇಕರಿಗೆ ಗಾಯಗಳಾದವು.

ಪಶ್ಚಿಮ ಆಫ್ರಿಕಾದಲ್ಲಿ ಕ್ಯಾಮರೂನ್ಸ್ ಎಂಬ ದೇಶದಲ್ಲಿ ಬ್ರಿಟಿಷರಿಗೆ ಅನುಕೂಲವಾಗುತ್ತಿರುವಂತೆ ಕಾಣುತ್ತದೆ. ಅವರು ಮುಂದರಿಸಿ ನುಗ್ಗಿ ಹೋಗಿ ದೇಶೀಯ ಜನರಿರುವ ಒಂದು ನಗರವನ್ನು ಸ್ವಾಧೀನಮಾಡಿಕೊಂಡು, 60 ಮಂದಿ ಯೂರೋಪಿಯನ್‌ರನ್ನು ಎರಡು ವಿಮಾನಯಂತ್ರಗಳ ಸಹಿತ ಕೈಸೆರೆಹಿಡಿದಿರುತ್ತಾರೆ.

ದಕ್ಷಿಣ ಆಫ್ರಿಕಾದಲ್ಲಿ ದಂಗೆಕೋರರ ಪೈಕಿ ಒಬ್ಬಾನೊಬ್ಬ ಕ್ಯಾಪ್ಟನ್ ಫೌರಿ ಎಂಬುವ ಮುಖಂಡನನ್ನು ಸರ್ಕಾರದವರು ವಿಚಾರಣೆಮಾಡಿ ಮರಣ ದಂಡನೆಗೆ ಗುರಿಮಾಡಿ, ಗುಂಡಿನಿಂದ ಹೊಡೆದು ಕೊಂದುಹಾಕಿದರು. ಉಳಿದವರನ್ನು ಬಂದೀಖಾನೆಗೆ ಹಾಕಿದ್ದಾರೆ.

ಸಮುದ್ರದ ಮೇಲೆ.

ಆಡ್ರಿಯಾಟಿಕ್ ಕಡಲಿನಲ್ಲಿ ಆಸ್ಟ್ರಿಯಾದವರ ಎರಡು ಸಣ್ಣ ಯುದ್ಧದ ಜಹಜುಗಳು ಮೈನ್ ಎಂಬ ಸಿಡಿಮದ್ದಿನ ಗುಂಡುಗಳಿಗೆ ಬಡಿದು ಮುಳುಗಿಹೋದವು ಎಂದು ಹೇಳುತ್ತಾರೆ.

ಬಾಲ್ಟಿಕ್ ಕಡಲಿನಲ್ಲಿ ಜರ್ಮನಿಯವರ ಒಂದು ಯುದ್ಧದ ಜಹಜು ಮುಳುಗಿಸಲ್ಪಟ್ಟಿತು. ಸುಮಾರು 400 ಜನರು ಸಮುದ್ರದ ಪಾಲಾದರು.

ಫಿರಂಗಿಗಳ ಸಹಿತವಾದ ಒಂದು ಜರ್ಮನಿ ವ್ಯಾಪಾರದ ಜಹಜು ತಲೆತಪ್ಪಿಸಿಕೊಂಡು ಪೆಸಿಫಿಕ್ ಸಾಗರದಲ್ಲಿ ಸಂಯುಕ್ತ ಸಂಸ್ಥಾನಗಳಿಗೆ ಸೇರಿದ ಒಂದು ದ್ವೀಪಕ್ಕೆ ಹೋಗಿ ಸೇರಿಕೊಳ್ಳುವಂತಾಯಿತು.

ಹಾಲೆಂಡಿನ ತೀರದ ಸಮೀಪದಲ್ಲಿ ಬ್ರಿಟಿಷರ ಒಂದು ಸಮುದ್ರ ಯಂತ್ರವು ಕೆಟ್ಟುಹೋಯಿತು. ಅದರಲ್ಲಿ ಇಬ್ಬರು ಇದ್ದರು. ಅವರ ಉದ್ಯೋಗದಾರನು ತನ್ನನ್ನು ಹಿಡಿದಿಟ್ಟುಕೊಳ್ಳುತ್ತಾರೆಂದು ಹೆದರಿ ಹೊರಕ್ಕೆ ಬರಲೊಲ್ಲದೆ ಹೋದನು. ಅಂಥಾದ್ದೇನೂ ಸಂಭವಿಸುವುದಿಲ್ಲವೆಂದು ಧೈರ್ಯಕೊಟ್ಟ ಮೇಲೆ ಆತನು ಆ ಯಂತ್ರವನ್ನು ಬಿಟ್ಟು ಬಂದನು. ಸಮುದ್ರ ಯಂತ್ರವೆನ್ನುವುದು ಸಮುದ್ರದ ಮೇಲೂ, ಅಂತರಿಕ್ಷದಲ್ಲೂ ಹೋಗಬಲ್ಲುದು.

ಮೆಡಿಟರ್ರೇನಿಯನ್ ಕಡಲಿನಲ್ಲಿ ಬ್ರಿಟಿಷರ ಒಂದು ಯುದ್ಧದ ಜಹಜು ಜರ್ಮನಿಯವರ ಒಂದು ವ್ಯಾಪಾರದ ಜಹಜನ್ನು ಹಿಡಿದುಕೊಂಡದ್ದಲ್ಲದೆ ಬೆಯಿರೂಟ್ ಎಂಬ ತೀರಪಟ್ಟಣದ ಬಳಿ ಟರ್ಕಿಯ ಎರಡು ವ್ಯಾಪಾರ ಜಹಜುಗಳನ್ನು ಮುಳುಗಿಸಿರುತ್ತದೆ.—ಒಂದು ಬ್ರಿಟಿಷ್ ಜಹಜು ಐರ್ಲೆಂಡಿನ ಉತ್ತರ ಸಮುದ್ರ ತೀರದಲ್ಲಿ ಮೈನ್ ಎಂಬ ಸಿಡಿಮದ್ದಿನ ಗುಂಡನ್ನು ತಗುಲಿ ಮುಳುಗಿಹೋಯಿತು. ಅದರಲ್ಲಿದ್ದವರನ್ನೆಲ್ಲಾ ಬದುಕಿಸಿಕೊಂಡಿದ್ದಾರೆ.

ಇತರ ವಿಷಯಗಳು.

ನಮ್ಮ ವೈಸರಾಯಿ ಲಾರ್ಡ್ ಹಾರ್ಡಿಂಗ್‌ರವರ ಕುಮಾರನು ಯುದ್ಧಭೂಮಿಯಲ್ಲಿ ಕೆಲವು ತಿಂಗಳ ಕೆಳಗೆ ಗಾಯಪಟ್ಟು ಚಿಕಿತ್ಸೆ ಹೊಂದುತ್ತಿದ್ದನು. ಈತನು ಕಾಲವಾದನೆಂಬ ಸುದ್ದಿಯು ಹಿಂದುಸ್ಥಾನದ ಸಕಲ ಪ್ರಜೆಗಳಲ್ಲೂ ಮಹತ್ತರವಾದ ದುಃಖವನ್ನುಂಟುಮಾಡಿದೆ. ಆತನ ಗಾಯಗಳು ವಾಸಿಯಾಗುತ್ತಿವೆ ಎಂದು ವರ್ತಮಾನ ಬರುತ್ತಿತ್ತು. ಕಳೆದ ವಾರ ಅದು ಕಠಿಣವಾಗಿ, ಆ ಸುಕುಮಾರನಾದ ವೀರನು ಡಿಸೆಂಬರ್ ತಾ 18 ನೇ ಶುಕ್ರವಾರ ಕಾಲವಾದನು.

ಜರ್ಮನಿಯ ಚಕ್ರವರ್ತಿಯವರಿಗೆ ಆರೋಗ್ಯವಾಗಿ ಮತ್ತೆ ಯುದ್ಧಭೂಮಿಗೆ ಹೋಗುತ್ತಿದ್ದಾರೆ. ಯಾವ ಕಡೆಗೆಂಬುವುದು ತಿಳಿಯಲಿಲ್ಲ.

ಈಗ ಜನರಲ್ ವಾನ್ ಫಾಲ್ಕೆನ್‌ಹೈಯನ್ ಎಂಬಾತನು ಜರ್ಮನಿಯ ಸರ್ವ ಸೇನಾಪತಿಯಾಗಿರುತ್ತಾನೆ. ಇದುವರೆಗೆ ಸೇನಾಪತಿಯಾಗಿದ್ದ ಜನರಲ್ ವಾನ್ ಮಾಲ್ಟ್‌ಕೆ ಎಂಬಾತನಿಗೆ ಏನೋ ಕಾಯಿಲೆಯಾಯಿತಂತೆ. ಈಗ ಈತನಿಗೆ ವಾಸಿಯಾಗಿದೆ; ಆದರೂ ಆತನಿಗೆ ಸೈನ್ಯಾಧಿಪತ್ಯವನ್ನು ಕೊಟ್ಟಿಲ್ಲ.—ಸಿಂಧಿಯಾ ಮಹಾರಾಜರವರು ನಮ್ಮ ಹಿಂದುಸ್ಥಾನದ ಸೈನಿಕರಿಗೆ ಶೀತಹಿಡಿದು ಕೀಲುಗಾಯಗಳಾಗಿವೆ ಎಂಬುದನ್ನು ಕೇಳಿ ಅವರಿಗೋಸ್ಕರ 1,05,000 ಟನ್‌ಗಳ ವ್ಯಾಸಲೀನ್ ಎಂಬ ಮುಲಾಮನ್ನು ಕೊಂಡು ಕಳುಹಿಸುವಂತೆ ಅಪ್ಪಣೆ ಕೊಟ್ಟಿದ್ದಾರೆ.

ಅರೇಬಿಯದಲ್ಲಿರುವ ಹೊಡೀಡಾ ಪಟ್ಟಣದಲ್ಲಿ ಇಟಲಿಯವರ ರಾಯಭಾರಿಯ ಬಂಗಲೆಯಲ್ಲಿದ್ದ ಬ್ರಿಟಿಷ್ ರಾಯಭಾರಿಯನ್ನು ಟರ್ಕಿ ಸೈನಿಕರು ಆ ಬಂಗಲೆಗೆ ನುಗ್ಗಿ ಕೈಸೆರೆ ಹಿಡಿದುಕೊಂಡರು. ಇಟಲಿಯವರಿಗೆ ಟರ್ಕಿಯ ಮೇಲೆ ಆಗ್ರಹವುಂಟಾಯಿತು. ಈಗ ಟರ್ಕಿಯವರು ಇಟಲಿಯವರ ಕ್ಷಮಾಪಣೆಯನ್ನು ಕೇಳಿಕೊಂಡು ಬ್ರಿಟಿಷ್ ರಾಯಭಾರಿಯನ್ನು ಬಿಡಿಸಿಬಿಟ್ಟರು. ಇದಲ್ಲದೆ ಅವರನ್ನು ಹಿಡಿದ ಸೈನಿಕರನ್ನು ಶಿಕ್ಷಿಸುವುದಾಗಿ ಒಪ್ಪಿಕೊಂಡಿದ್ದಾರೆ.

ಟರ್ಕಿ ರಾಜಧಾನಿಯಲ್ಲಿದ್ದ ಗ್ರೀಸಿನ ಒಬ್ಬ ಪ್ರಜೆಯನ್ನು ಟರ್ಕಿಯವರು ಗೂಢಚಾರನೆಂದು ಹಿಡಿದು ವಿಚಾರಣೆಮಾಡಿ ಮರಣದಂಡನೆಗೆ ಗುರಿಮಾಡಿದ್ದಾರೆ. ಆತನನ್ನು ಗಲ್ಲಿಗೆ ಹಾಕಿದರೆ ಗ್ರೀಕರು ಟರ್ಕಿಯ ಮೇಲೆ ಯುದ್ಧಕ್ಕೆ ಹೊರಡುತ್ತೇವೆಂದು ತಿಳಿಸಿದಾರಂತೆ.—ಇಂಗ್ಲೆಂಡಿನಲ್ಲಿ ಬ್ರಿಟಿಷ್ ಪ್ರಜೆಯಾಗಿದ್ದ ಒಬ್ಬ ಜರ್ಮನಿಯವನು ರಾಜದ್ರೋಹಮಾಡಿದನೆಂದು ಅವನಿಗೆ ಮರಣದಂಡನೆ ವಿಧಿಸಲ್ಪಟ್ಟಿತ್ತು. ಅಪೀಲಿನಲ್ಲಿ ಆತನಿಗೆ ಬಿಡುಗಡೆಯಾಯಿತು.

ನಾರ್ವೆ, ಸ್ವೀಡನ್, ಡೆನ್ಮಾರ್ಕ್ ರಾಜ್ಯಗಳ ದೊರೆಗಳು ಕಳೆದ ವಾರ ಒಂದು ಕಡೆ ಸೇರಿ ಈಗಿನ ಯುದ್ಧದ ದೆಸೆಯಿಂದ ಯೂರೋಪಿನ ಎಲ್ಲಾ ಭಾಗಗಳಲ್ಲೂ ಉಂಟಾಗಿರುವ ಸ್ಥಿತಿಗತಿ ವಿದ್ಯಮಾನಗಳನ್ನು ಕುರಿತು ಪರ್ಯಾಲೋಚನೆ ಮಾಡಿದರು.—ಬುಲ್ವಾರ್ಕ್ ಎಂಬ ಬ್ರಿಟಿಷ್ ಜಹಜು ನಷ್ಟವಾಯಿತು. ಇದಕ್ಕೆ ಕಾರಣವೇನೆಂದು ತನಿಖೆಮಾಡಿಸಿದ್ದರಲ್ಲಿ ಜಹಜಿನೊಳಗೆ ಏನೋ ಅಚಾತುರ್ಯ ನಡೆದು ಒಡೆದುಹೋಯಿತೆಂದು ಗೊತ್ತಾಯಿತು.

ಜರ್ಮನಿಯ ಮಂತ್ರಿಶ್ರೇಷ್ಠರ ಕುಮಾರನಿಗೆ ಯುದ್ಧಭೂಮಿಯಲ್ಲಿ ಗಾಯವಾಯಿತೆಂದೂ, ಆತನನ್ನು ರಷ್ಯಾದವರು ಕೈಸೆರೆ ಹಿಡಿದುಕೊಂಡು ಹೋಗಿದ್ದಾರೆಂದೂ ಹೇಳಲಾಗಿದೆ.—ಬೆಲ್ಜಿಯನ್‌ನವರು ಜರ್ಮನಿಯವರಿಗೆ ಈ ತಿಂಗಳಲ್ಲಿ 1,40,00,000 ಪೌನುಗಳನ್ನು (ಅಂದರೆ, 21 ಕೋಟಿ ರೂಪಾಯಿ) ಪಾವತಿ ಮಾಡಬೇಕಾಗಿದೆ ಎಂದು ತಿಳಿಯುವುದು.

ಸೆಂಟ್ ಜಾರ್ಜ್ ಅಂಬ್ಯುಲೆನ್ಸ್ ಸಂಘ, ಮೈಸೂರು.

ಸೇಂಟ್ಜಾನ್ ಅಂಬ್ಯುಲೆನ್ಸ್ ಸಂಘದ ಮೈಸೂರು ಶಾಖೆಯ ಆನರರಿ ಸೆಕ್ರೆಟರಿ ಸರ್ದಾರ್ ಎಂ. ಲಕ್ಷ್ಮೀಕಾಂತರಾಜೆ ಅರಸಿನವರು ವಸೂಲಾಗಿರುವ ಆರನೆಯ ಚಂದಾ ಪಟ್ಟಿಯನ್ನು ಕಳುಹಿಸಿದ್ದಾರೆ. ಚಂದಾ ಕೊಟ್ಟಿರುವವರು ಯಾರೆಂದರೆ—ಮೈಸೂರು 3 ನೇ ಮಹಾರಾಜ ಕುಮಾರ್ತೆಯವರು ರೂ. 300, ನೆಲಮಂಗಲದ ಜನಗಳು (1 ನೇ ಪಟ್ಟಿ) ರೂ. 300, ತುಂಕೂರು ಡಿಸ್ಟ್ರಿಕ್ಟ್ ಜನಗಳು ರೂ. 221-5-0, ಹುಣಸೂರು ಪಿಟ್ರಿ ಟೀ ಕಂಪನಿಯವರು ರೂ. 40, ಅರಕಲಗೂಡು ಪ್ರಜೆಗಳು ಅಮಲ್ದಾರರ ಮೂಲಕ ರೂ. 38-1-0, ಕೋಲಾರದ ಡಿಸ್ಟ್ರಿಕ್ಟ್ ವೈದ್ಯಶಾಖೆಯವರು ರೂ. 36-12-0, ತಾವರೆಕೆರೆ ಜನರು ಮಾಗಡಿ ಶೇಕ್ದಾರರ ಮೂಲಕ ರೂ. 19, ಶಿಷ್ಟಸಂದ್ರದ ಜನಗಳು ಡಿಟೋ ಶೇಕ್ದಾರರ ಮೂಲಕ ರೂ. 17-12-0, ಕೃಷ್ಣರಾಜಪೇಟೆ ಪ್ರಜೆಗಳು ರೂ. 16-4-0, ಕಳಸದ ಪ್ರಜೆಗಳು ರೂ. 16, ಚಿತ್ರದುರ್ಗದ ಫಾರೆಸ್ಟ್ ಆಫೀಸರು ಮತ್ತು ನೌಕರರು ರೂ 10, ಚಿಕ್ಕಮಗಳೂರು ಫಾರೆಸ್ಟ್ ರೇಂಜರು ಮತ್ತು ನೌಕರರು ರೂ. 8-2-0, ಗುಂಡ್ಲುಪೇಟೆ ಫಾರೆಸ್ಟ್ ರೇಂಜರು ಮತ್ತು ನೌಕರರು ರೂ. 7-12-0, ಹೊಮ್ಮಗಡೊಸಹಳ್ಳಿ ಜನರು ರೂ. 2-8-0, ಸಾಲಿಗ್ರಾಮದ ಹೋಬಳಿ ಜನರು ರೂ. 2-6-0, ಮೈಸೂರು ಮಿ|| ಮಹಮದ್ ಜಾಫರ್ ಸಾಹೇಬರು ರೂ. 2 ; ಹಿಂದೆ ವಸೂಲಾಗಿರುವುದು ರೂ. 4,868-8-7 ; ಜುಮ್ಲಾ ರೂಪಾಯಿ 5,906-6-7. ಇದಲ್ಲದೆ ದೇಶೀಯ ಮತ್ತು ಬ್ರಿಟಿಷ್ ಸ್ಟೇಷನ್‍ಗಾಗಿ ಇದುವರೆಗೆ 20 ಪೆಟ್ಟಿಗೆಗಳ ಬಟ್ಟೆಬರೆಗಳು ತಲಪಿರುತ್ತವೆ.

ಮೈಸೂರು ಗೆಜೆಟ್ ಸಂಗ್ರಹ.

ಕೋಲಾರ್ ಟವರ್ ಮ್ಯುನಿಸಿಪಲ್ ಕೌನ್ಸಿಲ್ಲಿಗೆ ಹೆಡ್ ಮಾಸ್ಟರ್ ಮ|| ಕೆ. ಎ. ಕೃಷ್ಣಸ್ವಾಮಿ ಅಯ್ಯರವರನ್ನು, ರೈಲ್ವೆ ಸೂಪರಿಂಟೆಂಡೆಂಟ್ ಮಿ|| ಎ. ಜಿ. ಆಮಂಡ್ ರವರನ್ನೂ ಮೆಂಬರುಗಳಾಗಿ ನೇಮಕ ಮಾಡಿದೆ.

ಸೊರಬದ ತಾ|| ಅಮಲ್ದಾರ್ ಮ|| ಕೆ. ಕೆ. ವೆಂಕಟಸಾಮಿ ಅಯ್ಯರವರಿಗೆ ಜನವರಿ ತಾ. 3 ರಿಂದ ಆರು ತಿಂಗಳ ರಜಾ ಕೊಟ್ಟಿದೆ.

ಹಂಗಾಮಿ ಡೆಪ್ಯುಟಿ ಅಮಲ್ದಾರ್ ಮ|| ಪಿ. ಎಸ್. ಪೂರ್ಣಯ್ಯನವರನ್ನು ಸೊರಬ ತಾಲ್ಲೂಕ್ ಅಮಲ್ದಾರ್ ಮತ್ತು 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಿದೆ.

ಚಿತ್ರದುರ್ಗದ ಡಿ|| ಫಾರೆಸ್ಟ್ ಆಫೀಸರ್ ಮ|| ಡಿ. ರಾಜಾರಾಯರಿಗೆ ಕೊಟ್ಟಿದ್ದ ಹತ್ತು ದಿನಗಳ ಪ್ರಿವಿಲೆಜ್ ರಜವನ್ನು ಇನ್ನೆರಡು ದಿನ ಜಾಸ್ತಿಮಾಡಿದೆ.

ಅ|| ಅ|| ಸರ್ಜನ್ ಮ|| ಪಿ ಎಸ್. ರಾಮಚಂದ್ರ ಅಯ್ಯರವರಿಗೆ ಡಿಸೆಂಬರ್ ತಾ. 16 ರಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಗವರ್ನ್‍ಮೆಂಟ್ ಅ|| ಸೆಕ್ರೆಟರಿ ಮ|| ಎನ್. ಮಾಧವರಾಯರಿಗೆ ಮೂರು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು.

ಶಿವಮೊಗ್ಗ ಸೀನಿಯರ್ ಅ|| ಕಮಿಷನರ್ ಮ|| ಮಹಮದ್ ಜಹಿರುದ್ದೀನ್ ಮಿಸ್ಕೀಯವರಿಗೆ 1 ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ವಹಿಸಿದೆ.

ಶಿವಮೊಗ್ಗ ಸಬ್ ಡಿವಿಜನ್ ಆಕ್ಟಿಂಗ್ ಅ|| ಕಮಿಷನರ್‍ರವರಾದ ಮ|| ಎಸ್. ಎನ್. ಅಪ್ಪಣ್ಣಯ್ಯಂಗಾರ್ರಿಗೆ ಅವರು ದರ್ಯಾಫ್ತು ಮಾಡುವ ಮೊಕದ್ದಮೆಗಳಲ್ಲಿ ಸಾಕ್ಷಿಗಳ ಕೈಫಿಯತ್ತನ್ನು ಸ್ವಹಸ್ತ ಇಂಗ್ಲಿಷಲ್ಲಿ ಬರೆದುಕೊಳ್ಳುವಂತೆ ಅಧಿಕಾರಕೊಟ್ಟಿದೆ.

ರೈಲ್ವೆ ಕಾಮಗಾರಿ ಇಲಾಖೆಯಲ್ಲಿದ್ದ ಓವರ್‌ಸಿಯರ್ ಮ|| ಎ. ವಿ. ತ್ಯಾಗರಾಜ ಅಯ್ಯರವರನ್ನು ಕಡೂರು ಡಿವಿಜನ್‍ಗೆ ವರ್ಗವಾಗಿದೆ.

ಮೈಸೂರು ಡಿಸ್ಟ್ರಿಕ್ಟ್ ಸ್ಕೂಲುಗಳ ಡೆಪ್ಯುಟಿ ಇನ್ಸ್‌ಪೆಕ್ಟರ್ ಮ|| ಎಂ. ನಾರಾಯಣರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಅ|| ಡೆಪ್ಯುಟಿ ಇನ್ಸ್‌ಪೆಕ್ಟರ್ ಮ|| ಎಂ. ಲಕ್ಷ್ಮೀನರಸಿಂಹಯ್ಯನವರು ಮತ್ತೊಂದು ಹುಕುಂ ಕೊಡಲ್ಪಡುವ ತನಕ ಮ|| ನಾರಾಯಣರಾಯರ ಕೆಲಸಗಳನ್ನೂ ನೋಡಿಕೊಳ್ಳತಕ್ಕದ್ದು.

ಬೆಂಗಳೂರು ಬಿ. ಆರ್. ಎಸ್. ಕ್ಲಬ್ಬಿನಲ್ಲಿ ನಡೆದ ಒಂದು ಸಂತೋಷ ಕೂಟವು.

ಕಳೆದ 16 ನೆಯ ತಾ. ಬುಧವಾರ ಬೆಂಗಳೂರು ಜನರಲ್ ಮತ್ತು ರೆವಿನ್ಯೂ ಸೆಕ್ರೆಟೇರಿಯಟ್ ಮ|| ಹೆಚ್. ಸುಬ್ಬರಾವ್ ಮತ್ತು ಮ|| ಡಿ. ಎಸ್. ರಾಮಚಂದ್ರರಾವ್‌ಯವರ ಮುತವರ್ಜಿಯಿಂದ ಅನೇಕ ದೊಡ್ಡ ಮನುಷ್ಯರೂ, ವರ್ತಕರುಂಡಲಿಯವರೂ, ಇತರ ಮಹಾಜನರೂ ಬರಮಾಡಲ್ಪಟ್ಟಿದ್ದರು. ವೇ|| ಶಿಲ್ಪಿ ಶೇಷಪ್ಪನವರಿಗೆ ಶ್ರೀಶಿವಗಂಗಾ ಶ್ರೀಶಾರದಾ ಪೀಠದಿಂದ ಅನುಗ್ರಹವಾಗಿರುವ "ರಮಲಶಾಸ್ತ್ರ ವಿದ್ಯಾ ವಿಶಾರದಾ" ಎಂಬ ಬಿರುದನ್ನು ವಹಿಸುವುದೇ ಸಭೆಯ ಮುಖ್ಯೋದ್ದೇಶವಾಗಿದ್ದಿತು. ಮ್ಯುನಿಸಿಪಲ್ ಕೌನ್ಸಿಲರೂ ಬೆಂಚ್ ಮ್ಯಾಜಿಸ್ಟ್ರೇಟರೂ ಆದ ಮ|| ಡಿ ಆದೆಪ್ಪನವರು ಸಭೆಯ ಅಗ್ರಾಸನವನ್ನು ವಹಿಸಿದ್ದರು. ಸಭೆಯ ಪ್ರಾರಂಭದಲ್ಲಿ ಬ್ರ|| ಶ್ರೀ|| ಸಾಲಿಗ್ರಾಮದ ನಾರಾಯಣಶಾಸ್ತ್ರಿಗಳವರು ಸಭಿಕರನ್ನುದ್ದೇಶಿಸಿ ಹೇಳಿದ್ದೇನೆಂದರೆ—ನಾವೆಲ್ಲರೂ ಈ ದಿವಸ ಇಲ್ಲಿ ನೆರೆದಿರುವುದು ಬಹಳ ಸಂತೋಷಪ್ರದವಾಗಿರುವುದು. ನನ್ನ ಮಿತ್ರರು ಶೇಷಪ್ಪನವರನ್ನು ನಾನು ಬಹಳ ದಿವಸಗಳಿಂದಲೂ ಬಲ್ಲೆನು. ಇವರು ಜ್ಯೋತಿಶ್ಶಾಸ್ತ್ರದಲ್ಲಿಯೂ ನಿಪುಣರಲ್ಲದೆ ಅದ್ಭುತ ರಮಲ ಶಾಸ್ತ್ರದಲ್ಲಿಯೂ ಬಹಳ ಪಂಡಿತರು ಉಳ್ಳವರೆಂಬುದು ಅವರಿಗೆ ದೊರೆತಿರುವ ಬಿರುದಿನಿಂದಲೇ ವ್ಯಕ್ತಪಡುತ್ತಿದೆ ರಮಲಶಾಸ್ತ್ರವು ಅರಬ್ಬೀ ದೇಶದಲ್ಲಿ ಬಹಳ ಪ್ರಸಿದ್ಧಿಹೊಂದಿತ್ತು. ಅದು ಸುಲಭವಾಗಿ ಲಭಿಸತಕ್ಕದಲ್ಲ. ಮಹಾ ಪ್ರಯಾಸದಿಂದ ವೇ|| ಶೇಷಪ್ಪನವರು ಅದನ್ನು ದೇಶಹಿತಾರ್ಥವಾಗಿಯೇ ಆರ್ಜನೆ ಮಾಡಿರುವರು. ಇವರು ಈ ಶಾಸ್ತ್ರದಲ್ಲಿ ನಿಪುಣರೆಂಬುದಕ್ಕೆ ಹಿಂದೆ ಶ್ರೀ ಕೂಡ್ಲಿ ಸ್ವಾಮಿಗಳವರ ವಿಷಯದಲ್ಲಿ ಹೇಳಿದ ಹಲವು ನಿದರ್ಶನಗಳೇ ಸಾಕ್ಷಿಯಾಗಿವೆ ಇವರು ಸರ್ಕಾರಿಯ ಉದ್ಯೋಗದಲ್ಲಿದ್ದರೂ ಶಾಸ್ತ್ರಪಾಠಕ್ಕೆ ವಿರಾಮವನ್ನು ಮಾಡಿಕೊಂಡು ಪೂರ್ಣಾನುಭವವನ್ನು ಹೊಂದಿರುವುದನ್ನು ನೋಡುವುದು ನಮಗೆಲ್ಲರಿಗೂ ಆನಂದವೇ ಸರಿ. ಅನಂತರ ಗವರ್ನಮೆಂಟ್ ಅ|| ಸೆಕ್ರೆಟರಿಯವರಾದ ಮ|| ಬಿ. ವಿ. ಲಕ್ಷ್ಮಣರಾಯರವರು ವೇ|| ಶಿಲ್ಪಿ ಶೇಷಪ್ಪನವರ ವಿಷಯದಲ್ಲಿ ತಮಗಿರುವ ವಿಶ್ವಾಸವನ್ನೂ, ರಮಲಶಾಸ್ತ್ರದಲ್ಲಿ ಅವರು ಜ್ಞಾನಿಗಳೆಂಬುದನ್ನೂ ಹೇಳಿದರು. ಕಡೆಯಲ್ಲಿ ಮ|| ಡಿ. ಆದೆಪ್ಪನವರು ಸಭಿಕರನ್ನು ಕುರಿತು ತಾವು ಅಮೂಲ್ಯವಾದ ಬಿರುದನ್ನು ರಮಲಸಿದ್ಧಾಂತಿ ಶೇಷಪ್ಪನವರಿಗೆ ವಹಿಸುವುದರಲ್ಲಿ ಬಹಳ ಸಂತೋಷವುಳ್ಳವರಾಗಿರುವೆವೆಂದೂ, ತಮ್ಮನ್ನು ಅಂತಹ ಸಂದರ್ಭದಲ್ಲಿ ಬರಮಾಡಿಕೊಂಡುದಕ್ಕಾಗಿ ಸಭಿಕರನ್ನು ವಂದಿಸುವುದಾಗಿಯೂ ಹೇಳಿ ಸಭೆಯನ್ನು ಮುಕ್ತಾಯಮಾಡಿದರು. ಸಭಿಕರೆಲ್ಲರಿಗೂ ಪುಷ್ಪ ಮುಂತಾದುವುಗಳು ಹಂಚಲ್ಪಟ್ಟುವು.

ಕೆ. ಬಿ. ಹೆ.

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು.

ಕಳೆದ ಶನಿವಾರ ಬೆಳಿಗ್ಗೆ ಮೈಸೂರು ಮ್ಯುನಿಸಿಪಲ್ ಕೌನ್ಸಿಲರುಗಳು ಟವರ್ ಹಾಲ್ ಬಂಗಲೆಯಲ್ಲಿ ಸಭೆ ಸೇರಿ ತಿಂಗಳುಗಟ್ಟಲೆಯ ಮ್ಯುನಿಸಿಪಲ್ ಮೀಟಿಂಗ್ ನಡೆಸಿದರು. ನೊವೆಂಬರ್ ತಿಂಗಳ ಜಮಾ ಖರ್ಚು ಮುಂತಾದ ಲೆಕ್ಕಗಳನ್ನು ಓದಿಸಿ ಪ್ಯಾಸ್‍ಮಾಡಿದರು. ಆ ತಿಂಗಳಲ್ಲಿ ಮ್ಯುನಿಸಿಪಾಲಿಟಿಗೆ ಎಲ್ಲಾ ಬಾಬುಗಳಿಂದಲೂ ರೂ 10,630-0-11 ಷ್ಟು ಜಮಾ ಆಯಿತೆಂದೂ, ರೂ. 17,100-14-5 ಷ್ಟು ಖರ್ಚಾಯಿತೆಂದೂ ತಿಳಿಯಿತು ಆ ತಿಂಗಳಲ್ಲಿ ಜನನ 202 ; ಮರಣ—ಪ್ಲೇಗ್ 43, ಸಿಡುಬು 1, ಜ್ವರ 32, ಇತರ ಕಾರಣಗಳು 142, ಜುಮ್ಲಾ 218. ಆಡಿಟರುಗಳ ರಿಪೋರ್ಟಿನಂತೆ ಆಕ್ಟ್ರಾಯಿ ಉತ್ಪತ್ತಿಯು 700 ರೂಪಾಯಿ ಕಡಮೆ ಆಯಿತೆಂದೂ, ಐದಾರು ವರುಷಗಳ ಹಿಂದೆ ಪಬ್ಲಿಕ್ ಪ್ರಾಸಿಕ್ಯೂಟರಿಗೆ ಅಡ್ವಾನ್ಸು ಕೊಟ್ಟಿದ್ದ ಸುಮಾರು 30 ರೂಪಾಯಿ ಇನ್ನೂ ವ್ಯವಸ್ಥೆ ಆಗಿಲ್ಲವೆಂದೂ ತಿಳಿಯಿತು ಮಾರ್ಕೆಟುಗಾರರನ್ನು ಪ್ರತಿ ತಿಂಗಳಲ್ಲೂ ಉಕ್ಕಡಗಳಿಂದ ಬದಲಾವಣೆ ಮಾಡುವುದನ್ನು ನಿಲ್ಲಿಸುವಂತೆಯೂ, ಪಬ್ಲಿಕ್ ಪ್ರಾಸಿಕ್ಯೂಟರಲ್ಲಿ ಬಾಕಿ ಉಳಿದಿರುವ ಹಣವನ್ನು ಮಿಂಡಿತವಾದ ನೋಟೀಸ್ ಕೊಟ್ಟು ವಸೂಲ್ಮಾಡುವಂತೆಯೂ ಮೆಂಬರುಗಳು ಸೂಚಿಸಿದಾರೆ. ಕೆಲವು ಕುಸ್ಬದ ಟೌನ್‍ಗಳ ಸುಂಕ ವಸೂಲ್ಮಾಡದೆ ತಪ್ಪಿದ ವಿಷಯದಲ್ಲಿ ಮ್ಯುನಿಸಿಪಲ್ ಅಧಿಕಾರಿಗಳು ಕ್ರಮ ನಡಿಸಿರುವುದಾಗಿಯೂ, ಅದನ್ನು ಮ್ಯಾನೇಜಿಂಗ್ ಕಮಿಟಿಗಾಗಲಿ ಕೌನ್ಸಿಲ್‍ಗಾಗಲಿ ತಿಳಿಸಬೇಕೆಂದು ಮ|| ಅಣ್ಣಯ್ಯ ಪಂಡಿತರವರು ಕೇಳಿದಾಗ, ವೈಸ್ ಪ್ರೆಸಿಡೆಂಟರು ಹಾಗೆ ತಿಳಿಸಬೇಕಾದದ್ದಿಲ್ಲವೆಂದು ಹೇಳಿದರೆಂತಲೂ ಮ|| ಪಂಡಿತರವರು ಸೂಚಿಸಿದರು. ಕೌನ್ಸಿಲರುಗಳ ಮತ್ತು ಅಧಿಕಾರಿಗಳ ಜವಾಬ್ದಾರಿ ವಿಷಯದಲ್ಲಿ ಪ್ರೆಸಿಡೆಂಟರವರು ಮ|| ರಂಗಯ್ಯಂಗಾರ್ರ ಕೂಡ ಆಲೋಚಿಸಿ ಅನಂತರ ಕೌನ್ಸಿಲ್ ತಿಳುವಳಿಕೆಗೆ ಹೇಳುವುದಾಗಿ ಸಮಾಧಾನ ಹೇಳಿದರು

ದೊಡ್ಡ ಹೊಲಗೇರಿ ಮನೆಗಳವರು ತಮ್ಮ ಮನೆಗಳಿಗೆ ಕಿಟಕಿಗಳನ್ನು ಇಟ್ಟುಕೊಳ್ಳುವುದಕ್ಕೆ ತಮಗೆ ಚೈತನ್ಯವಿಲ್ಲವೆಂದು ಹೇಳುತ್ತಾರೆಂದು ಹೆಲ್ತ್ ಆಫೀಸರವರು ಸೂಚಿಸಿದರು. ಪ್ರತಿಯೊಂದು ಮೊಹಲ್ಲೆಯಲ್ಲೂ ಬಡವರ ಮನೆಗಳು ಎಷ್ಟಿವೆ ? ಎಷ್ಟು ಕಿಟಕಿಗಳನ್ನು ಇಡಿಸಿಕೊಡಬೇಕಾಗಿದೆ ಎಂಬೀ ವಿಷಯನ್ನು ಹೆಲ್ತ್ ಕಮಿಟಿಯವರು ಚರ್ಚಿಸಿ ರಿಪೋರ್ಟು ಕಳುಹಿಸುವಂತೆ ಮೆಂಬರುಗಳು ಇತ್ಯರ್ಥಮಾಡಿದರು.—ಮ್ಯುನಿಸಿಪಲ್ ಸ್ಕೂಲ್ ಕಮಿಟಿಯವರು ಮಿಷನ್ ಖಾರ ಶಾಲೆಗಳಿಗೆ ಗ್ರಾಂಟು ಜಾಸ್ತಿಮಾಡಬೇಕೆಂದು ಸಿಫಾರಸು ಮಾಡಿದ್ದರು. ಎಲ್ಲಾ ಮೊಹಲ್ಲೆಗಳಲ್ಲೂ ಇರುವ ಪಾಠಶಾಲೆಗಳ ಗ್ರಾಂಟನ್ನು ಹೆಚ್ಚಿಸುವ ವಿಷಯದಲ್ಲಿ ಒಟ್ಟಿಗೆ ಸಿಫಾರಸು ಬಂದರೆ ಒಂದೇ ಸಲ ಯೋಚಿಸಿ ಸ್ಯಾಂಕ್ಷನ್ ಮಾಡಬಹುದೆಂದು ಮ|| ರಂಗಯ್ಯಂಗಾರ್ರು ಸೂಚಿಸಿದರು ರೆವ್. ಗಲ್ಲಿಫರ್ಡ್ ಸಾಹೇಬರವರು ಪ್ರೆಸಿಡೆಂಟರನ್ನು ಈ ವಿಚಾರವಾಗಿ ಕೇಳಿರುವ ಪ್ರಶ್ನೆಗಳಿಗೆ ಆರು ವಾರಗಳಿಂದ ಜವಾಬೇ ಬಂದಿಲ್ಲವೆಂದು ತಿಳಿಸಿದರು. ಅದರ ಮೇಲೆ ಈ ಪ್ರಶ್ನೆಗಳಿಗೆ ಪ್ರೆಸಿಡೆಂಟರು ಜವಾಬು ಕೊಟ್ಟ ಮೇಲೆ ಗ್ರಾಂಟುಗಳ ವಿಚಾರ ಇತ್ಯರ್ಥವಾಗಬೇಕೆಂದು ತೀರ್ಮಾನವಾಯಿತು.

ಕೃಷ್ಣರಾಜ ಮೊಹಲ್ಲಾ ಮಿ|| ನವಾಬ್ ವಿಸಾರ್ ಉಸುಫಲ್ಲಿಖಾನ್ ಎಂಬ ಹಕೀಮರು ತಮಗೆ ಗ್ರಾಂಟು ಕೊಡಬೇಕೆಂದು ಅರ್ಜಿ ಬರೆದಿದ್ದರು. ಇವರಿಗೆ ಗ್ರಾಂಟು ಕೊಡಬೇಕೆಂದು ಎರಡಾವರ್ತಿ ಸಿಫಾರಸು ಮಾಡಿದಾಗ್ಯೂ, ಗವರ್ನ್‍ಮೆಂಟಿನವರು ಅದನ್ನು ಸ್ಯಾಂಕ್ಷನ್ ಮಾಡದೆಹೋಗಿರುವ ಕಾರಣ ಮತ್ತೆ ಸಿಫಾರಸು ಮಾಡುವುದು ಕೌನ್ಸಿಲ್ಲಿನ ಗೌರವಕ್ಕೆ ಕುಂದಕವಾದೀತೆಂದು ಮ|| ರಂಗಯ್ಯಂಗಾರ್ರು ಸೂಚಿಸಿದ್ದನ್ನು ಮೆಂಬರುಗಳೆಲ್ಲಾ ಅನುಮೋದಿಸಿದರು.—ಚಾಮರಾಜಪೇಟೆಯಲ್ಲಿ ಮ|| ಹಿರಿಯಣ್ಣಯ್ಯನವರು ಭಸ್ತಿ ಕಟ್ಟುವ ಕಾರ್ಖಾನೆಯನ್ನು ಇಟ್ಟಿರುವುದರಿಂದ ಅಕ್ಕಪಕ್ಕದ ಪ್ರಜೆಗಳಿಗೆ ಅನನುಕೂಲವಾಗಿದೆ ಎಂದು ಅಡ್ವೊಕೇಟ್ ಮ|| ರಾಮಚಂದ್ರಯ್ಯನವರು ಮ್ಯುನಿಸಿಪಾಲಿಟಿಗೆ ನೋಟೀಸ್ ಕೊಟ್ಟಿದ್ದರು. ಕೆಲವು ಕೌನ್ಸಿಲರುಗಳು ಸೇರಿ ಹೋಗಿ ಆ ಕಾರ್ಖಾನೆಯನ್ನೂ ಅದರಲ್ಲಿ ಕೆಲಸ ನಡೆಯುವುದನ್ನೂ ಖುದ್ದು ನೋಡಿ, ಅದರಿಂದ ನೆರೆಹೊರೆಯವರಿಗೆ ತೊಂದರೆ ಏನೂ ಇಲ್ಲವೆಂದೂ, ಭಸ್ತಿ ಕಡಿಸಿಟ್ಟುಕೊಳ್ಳುವುದಕ್ಕೆ ಮ|| ಹಿರಿಯಣ್ಣಯ್ಯನವರಿಗೆ ಸಮೀಪದಲ್ಲಿರುವ ಸ್ವಲ್ಪ ಖಾಲಿ ನಿವೇಶನವನ್ನು ಮ್ಯುನಿಸಿಪಾಲಿಟಿಯಿಂದ ಕೊಡಿಸುವುದು ಒಳ್ಳೇದೆಂದೂ ರಿಪೋರ್ಟು ಕೊಟ್ಟಿದ್ದರು. ಕೌನ್ಸಿಲರುಗಳು ಈ ರಿಪೋರ್ಟನ್ನು ಅಂಗೀಕರಿಸಿರುತ್ತಾರೆ.—ನಜರ್ಬಾದು ಮತ್ತು ಚಾಮರಾಜ ಮೊಹಲ್ಲೆಗಳಲ್ಲಿ ವಸೂಲಾಗದೆ ಬಾಕಿ ನಿಂತಿರುವ ಸುಮಾರು 600 ಚಿಲ್ಲರೆ ರೂಪಾಯಿ ಕನ್ಸರ್ವೆನ್ಸಿ ಸೆಸ್ಸನ್ನು ವಸೂಲ್ಮಾಡುವುದಕ್ಕೆ 10 ರೂಪಾಯಿ ತಲಬಿನ ಮೇಲೆ ಒಬ್ಬ ಮುತ್ಸದ್ದಿ ನೇಮಕವಾಗಬೇಕೆಂದು ಹೆಲ್ತ್ ಆಫೀಸರರು ಸೂಚಿಸಿದರು. ಇದು ಅವಶ್ಯವಿಲ್ಲವೆಂದು ವಜಾ ಆಯಿತು. ಜನವರಿಯಿಂದ ಈ ಸೆಸ್ಸನ್ನೇ ಮಾಫಮಾಡಬೇಕೆಂದೂ, ಈಗ ನಿಂತಿರುವ ಬಾಕಿಯನ್ನು ರಿಮಿಷನ್ ಮಾಡಬೇಕೆಂದೂ ಮೆಂಬರುಗಳು ಅಭಿಪ್ರಾಯಪಟ್ಟಿದಾರೆ.

ದೊಡ್ಡಪೇಟೆಯಲ್ಲಿರುವ ಹಳೇ ತಾಲ್ಲೂಕ್ ಕಚೇರಿ ಕಟ್ಟಡವನ್ನು ಮ್ಯುನಿಸಿಪಾಲಿಟಿಗೆ ಕೊಡುವಂತೆ ಸರ್ಕಾರದವರನ್ನು ಕೇಳಿಕೊಳ್ಳಬೇಕೆಂದು ಸಬ್ ಕಮಿಟಿಯವರು ಸಿಫಾರಸು ಮಾಡಿದ್ದರು. ಸಾಹುಕಾರ್ ಮ|| ಬಸಮಯ್ಯನವರು ತಮಗೆ ಆ ಕಟ್ಟಡವನ್ನು ಕೊಡಿಸಿದರೆ ಅದಕ್ಕೆ 4,000 ರೂಪಾಯಿ ತನಕ ಮುಟ್ಟಿಸಿ ಕಾಮಗಾರಿ ಮಾಡಿಸಿ ಅಲ್ಲಿ ಒಂದು ಛತ್ರವನ್ನೋ, ವಿದ್ಯಾರ್ಥಿಗಳ ನಿಲಯವನ್ನೋ, ತಮ್ಮ ತಾಯಿಯ ಹೆಸರಿನ ಮೇಲೆ ಒಂದು ಬಾಲಿಕಾ ಪಾಠಶಾಲೆಯನ್ನೋ, ಇಲ್ಲವೇ ಒಂದು ಆಸ್ಪತ್ರೆಯನ್ನೋ ಮಾಡಿಸುತ್ತೇವೆಂದು ಅರ್ಜಿ ಬರೆದಿದ್ದರು ಕೌನ್ಸಿಲರುಗಳು ಅದನ್ನು ಬಹು ಸಂತೋಷದಿಂದ ಒಪ್ಪಿಕೊಂಡು, ಆ ಕಟ್ಟಡವನ್ನು ಸರ್ಕಾರದವರು ಮ್ಯುನಿಸಿಪಾಲಿಟಿಗೆ ವಹಿಸುವಂತೆ ಕೇಳಿಕೊಂಡಿದಾರೆ.

ಮೈಸೂರು ಸರ್ಕಾರಿ ರಿಪೋರ್ಟುಗಳೂ, ಹುಕುಮುಗಳೂ.

ಮೈಸೂರು ಗವರ್ನ್‍ಮೆಂಟ್ ಛಾಪಖಾನೆ.—ಸೆನ್ಸಸ್ ಯಾನೆ ಖಾನೇಷುಮಾರಿ ಲೆಕ್ಕಗಳ ಕೆಲಸ ಪೂರೈಸಿದ್ದರಿಂದ ಸರ್ಕಾರಿ ಛಾಪಖಾನೆಯಲ್ಲಿ ಹಿಂದಿನ ವರುಷಕ್ಕಿಂತ ಹೋದ ವರುಷ ಕೆಲಸ ಕಡಮೆಯಾಯಿತು. ಬೆಂಗಳೂರು ಛಾಪಖಾನೆಯ ಖರ್ಚು ರೂ. 1,42,443-9-8 ಷ್ಟು, ಮೈಸೂರು ಛಾಪಖಾನೆಯ ಖರ್ಚು ರೂ 6,018-14-1 ಷ್ಟು ಆಗಿರುತ್ತೆ. ಕೆಲವು ಇಲಾಖೆಗಳಲ್ಲಿ ಅನಾವಶ್ಯವಾಗಿ ಹೆಚ್ಚು ಪ್ರಿಂಟಿಂಗ್ ಕೆಲಸಗಳನ್ನು ಮಾಡಿಸಿಕೊಳ್ಳುತ್ತಿರುವಂತೆ ಕಾಣುತ್ತದೆ ಸರ್ಕಾರದವರು ತನಿಖೆಯಿಂದ ಅಂಥವುಗಳನ್ನು ಕಡಮೆಮಾಡಬೇಕೆಂದು ಪ್ರಯತ್ನಪಟ್ಟಿದಾರೆ. ಛಾಪಖಾನೆಯ ವಿದ್ಯೆಯನ್ನು ಕಲಿತು ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವುದಕ್ಕೆ ಸೂಪರಿಂಟೆಂಡೆಂಟರಾದ ಮಿ|| ಯೇಟ್ಸ್‌ರವರು ಏರ್ಪಾಡು ಮಾಡಿದಾರೆ. ಈ ಏರ್ಪಾಡು ವ್ಯರ್ಥವಾಯಿತು ಯಾಕೆಂದರೆ ಇಬ್ಬರು ಮಾತ್ರ ಈ ಪರೀಕ್ಷೆಗೆ ಹೋಗಿ ಅವರಿಬ್ಬರೂ ಪ್ಯಾಸಾಗದೆ ಹೋದರು. ಹಿಂದೂಸ್ಥಾನದಲ್ಲಿ ಕಸಬುಗಳು ಅಭಿವೃದ್ಧಿಗೆ ಬಾರದೆ ಇರುವುದಕ್ಕೆ ಒಂದು ದೊಡ್ಡ ಕಾರಣವೇನೆಂದರೆ, ಜನರು ಸ್ವಲ್ಪ ಮಟ್ಟಿಗೆ ಕಸಬು ತಿಳಿದರೆ ಅಷ್ಟರಲ್ಲೇ ತೃಪ್ತಿಹೊಂದಿ, ಅದರಲ್ಲಿ ಪೂರ್ಣ ಪರಿಶ್ರಮವನ್ನು ಪಡೆಯಬೇಕೆಂದು ಸಾಹಸಪಡುವದಿಲ್ಲ. ಮಿ|| ಯೇಟ್ಸ್‌ರವರು ಕಳೆದ ವರುಷ ಛಾಪಖಾನೆಯ ಕೆಲಸಕಾರ್ಯಗಳನ್ನು ತುಂಬಾ ಮೇಲ್ಮೆಯಿಂದ ನಡಿಸಿರುತ್ತಾರೆಂದು ಗವರ್ನ್‍ಮೆಂಟಿನವರು ಮೆಚ್ಚಿಕೊಂಡಿದಾರೆ.

ಸರ್ಕಾರಿ ಸಾದಿಲ್ವಾರ್ ಇಲಾಖೆ.—ಕಳೆದ ವರುಷ ಸರ್ಕಾರಿ ಸಾದಿಲ್ವಾರ್ ಇಲಾಖೆಯಿಂದ ರೂ 1,33,177-5-0 ಕ್ರಯದ ಕಾಗದ ಕಡ್ಡಿ ಶಾಯಿ ಮೊದಲಾದ ಸಾಮಾನುಗಳನ್ನು ಸಂಸ್ಥಾನದ ಎಲ್ಲಾ ಇಲಾಖೆಗಳಿಗೂ ಸರಬರಾಜುಮಾಡಿರುತ್ತಾರೆ. ಈ ಬಾಬಿನಲ್ಲಿ ವಿಶೇಷ ನಷ್ಟವಾಗುತ್ತಿರುವಂತೆ ಕಾಣುತ್ತದೆ. ಅಚ್ಚಾದ ಫಾರಮು ಮುಂತಾದವುಗಳನ್ನು ಬಹಳ ಹೆಚ್ಚಾಗಿ ತರಿಸಿಕೊಳ್ಳುತ್ತಾರೆಂದೂ, ಇದರ ಮೇಲ್ವಿಚಾರಣೆ ತೃಪ್ತಿಕರವಾಗಿಲ್ಲವೆಂದೂ, ಇಂಥಾ ಫಾರಮುಗಳನ್ನು ಸರಿಯಾಗಿ ಸಂರಕ್ಷಣೆಮಾಡುವುದಿಲ್ಲವೆಂದೂ ಸೂಪರಿಂಟೆಂಡೆಂಟರವರು ಗವರ್ನ್‍ಮೆಂಟಿಗೆ ಅರಿಕೆಮಾಡಿದಾರೆ.

ಬೆಂಗಳೂರು ತಮಾಷೆಬಂಗಲೆ (ಮ್ಯೂಜಿಯಂ).—ಪ್ರಜೆಗಳು ನೋಡಿ ನೇತ್ರಾನಂದಹೊಂದಿ ಪ್ರಯೋಜನಪಡೆಯಲೆಂದು ಈ ತಮಾಷೆ ಬಂಗಲೆಯನ್ನು ಸರ್ಕಾರದವರು ಇಟ್ಟು ನಡಿಸುತ್ತಾರೆ. ಇದರಲ್ಲಿ ನಾನಾ ವಸ್ತುಗಳು ಪ್ರದರ್ಶನ ಮಾಡಲ್ಪಟ್ಟಿರುತ್ತವೆ. ಕಳೆದ ವರುಷ ಒಟ್ಟು 4,77,309 ಪ್ರಜೆಗಳು ಈ ಬಂಗಲೆಗೆ ಹೋಗಿ ಅಲ್ಲಿನ ವಸ್ತು ವಿಶೇಷಗಳನ್ನು ನೋಡಿ ಬಂದರೆಂದೂ, ಇವರಲ್ಲಿ ಹೆಂಗಸರೇ 2,15,045 ಮಂದಿ ಎಂದೂ ತಿಳಿಯುತ್ತೇನೆ. ಚಿತ್ರವಸ್ತುಗಳನ್ನು ಮಾರಿಕೆಗಾಗಿ ಮೊದಲು ಈ ಬಂಗಲೆಯಲ್ಲಿ ಇಟ್ಟಿದ್ದರು ಈಗ ಇಂಥಾ ಪದಾರ್ಥಗಳನ್ನು ಸಂಪದಭ್ಯುದಯಸಮಾಜಕ್ಕೆ ಸಂಬಂಧಪಟ್ಟ ಪ್ರತ್ಯೇಕವಾದ ಕಟ್ಟಡದಲ್ಲಿ ಇಡಿಸಿರುತ್ತಾರೆ. ತಮಾಷೆ ಬಂಗಲೆಗೆ ಅನೇಕ ಹೊಸ ವಸ್ತುಗಳನ್ನು ಕಳೆದ ವರುಷ ತರಿಸಿಡಲಾಗಿವೆ ; ಈಗ ಅಲ್ಲಿರುವ ಕೆಲವು ಹಳೆಯ ಪದಾರ್ಥಗಳನ್ನು ತೆಗೆದುಹಾಕಿ, ಹೊಸ ಪದಾರ್ಥಗಳನ್ನು ತರಿಸಬೇಕಾದದ್ದು ಅವಶ್ಯವೆಂದು ಕಾಣುತ್ತದೆ ಕಳೆದ ವರುಷ ಈ ಮ್ಯೂಜಿಯಂಗಾಗಿ ಸರ್ಕಾರದವರು ಒಟ್ಟು ರೂ 3,734-14-3 ಷ್ಟು ಖರ್ಚುಮಾಡಿದಾರೆ.

ಗವರ್ನ್‍ಮೆಂಟ್ ಉದ್ಯಾನವನಗಳು.—ಸರ್ಕಾರಿ ಉದ್ಯಾನವನಗಳಲ್ಲಿ ಪ್ರಾಮುಖ್ಯವಾದವುಗಳ್ಯಾವವೆಂದರೆ—ಲಾಲ್‍ಬಾಗ್, ಕಬ್ಬನ್ ಪಾರ್ಕ್, ಹಣ್ಣಿಗೋಸ್ಕರವಾದ ಫಲ ಬೆಳೆಯುವ ಫಾರಮು, ಇವೆಲ್ಲಾ ಬೆಂಗಳೂರಿನಲ್ಲಿರುತ್ತವೆ. ಗಾರ್ಡನ್ ಪಾರ್ಕ್, ಕರ್ಜನ್ ಪಾರ್ಕ್, ಪ್ರೈವೆಟ್ ಸೆಕ್ರೆಟರಿಯವರ ಬಂಗಲೆ ಆವರಣ, ಇಲವಾಲ್ ರೋಡಿನಲ್ಲಿರುವ ಗವರ್ನ್‍ಮೆಂಟ್ ಕಟ್ಟಡಗಳ ಆವರಣಗಳು, ಲಾ ಕೋರ್ಟುಗಳು, ಮಿಲಿಟರಿ ಅಸಿಸ್ಟೆಂಟರ ಬಂಗಲೆ ಆವರಣ, ಇವು ರಾಜಧಾನಿಯಲ್ಲಿರುವವು. ಶ್ರೀರಂಗಪಟ್ಟಣದಲ್ಲಿ ದರಿಯಾ ದೌಲತ್ ಬಾಗ್, ನಂದಿ ಬೆಟ್ಟದ ಮೇಲಿರುವ ತೋಟಗಳು, ಇವೂ ಸರ್ಕಾರಿ ಉದ್ಯಾನವನಗಳು. ಇವುಗಳಿಗೆಲ್ಲಾ ಸರ್ಕಾರದವರು ಕಳೆದ ಸಾಲಿನಲ್ಲಿ ರೂ 12,828-7-7 ಷ್ಟು ಖರ್ಚು ಮಾಡಿರುತ್ತಾರೆ. ಈ ಉದ್ಯಾನವನಗಳಲ್ಲಿ ಬಿಕರಿ ಮಾಡಲ್ಪಟ್ಟ ನಾನಾ ಪದಾರ್ಥಗಳಿಂದ ಸರ್ಕಾರಕ್ಕೆ ರೂ. 9,728-9-9 ಷ್ಟು ಹುಟ್ಟುವಳಿ ಆಯಿತು. ನಾನಾ ಬಗೆಯ ಗಿಡಗಳನ್ನೂ ಬೀಜಗಳನ್ನೂ ಬಿಕರಿ ಮಾಡಿರುವರು ; ಕೆಲವನ್ನು ಹಾಗೇ ಹಂಚಿರುವುದೂ ಉಂಟು ಸರ್ಕಾರದವರು ಈ ಉದ್ಯಾನವನಗಳಿಗಾಗಿ ಬಹಳ ಹೆಚ್ಚು ಹಣವನ್ನು ಖರ್ಚುಮಾಡುತ್ತಾ ಬಂದಿರೋಣದರಿಂದ ಪ್ರಜೆಗಳು ಅವುಗಳಿಂದ ತುಂಬಾ ಪ್ರಯೋಜನವನ್ನು ಪಡೆಯಬೇಕೆಂದು ನಮಗೆ ತೋರುತ್ತದೆ

ಆಕ್ಟ್ರಾಯಿ ಸುಂಕ.—ಹಾಸನದ ಮ್ಯುನಿಸಿಪಾಲಿಟಿಯಲ್ಲಿ ಮಿಸಾಬ್ ಖಾನೆಗೆ ಬರುವ ಕುರಿ, ಆಡು, ಎತ್ತು, ಹಸು, ಎಮ್ಮೆ, ಕೋಣ, ಕರುಗಳಿಗೆ ಆಕ್ಟ್ರಾಯಿ ತೆರಿಗೆ ಹಾಕಿರುವುದನ್ನು ಕಂಟ್ರಾಕ್ಟ್ ಕೊಡಬಹುದೇ ಎಂದು ಹಾಸನದ ಡೆಪ್ಯುಟಿ ಕಮಿಷನರವರು ಕೇಳಿದರು ಕುರಿ, ಆಡುಗಳಿಗೆ ವಸೂಲ್ಮಾಡುವ ಸುಂಕ ಆಕ್ಟ್ರಾಯಿ ಸುಂಕವಾಗುತ್ತೆಂದು ಸರ್ಕಾರದವರು ಒಪ್ಪಿಕೊಂಡು, ಉಳಿದ ಪ್ರಾಣಿಗಳಿಗೆ ಸುಂಕವನ್ನು ಯಾವ ರೂಲಸು ಪ್ರಕಾರ ಮ್ಯುನಿಸಿಪಾಲಿಟಿಯವರು ವಸೂಲ್ಮಾಡುವರೆಂದು ಸರ್ಕಾರದವರು ಪ್ರಶ್ನೆಮಾಡಿದಾರೆ. ಇದಲ್ಲದೆ ಹಾಸನದಲ್ಲಿ ಮ್ಯುನಿಸಿಪಲ್ ಮಿಸಾಬ್ ಖಾನೆ ಇದೆಯೇ ? ಅಲ್ಲಿ ಸುಂಕವೇನಾದರೂ ವಸೂಲಾಗುವುದೇ ? ಯಾವ ರೂಲಸು ಪ್ರಕಾರ ಯಾವ ಯಾವ ದರಗಳನ್ನಿಟ್ಟು ಯಾವ ರೀತಿ ವಸೂಲ್ಮಾಡುತ್ತಿದಾರೆ ? ಈ ವಿಚಾರಗಳನ್ನೆಲ್ಲಾ ತಿಳಿಸಬೇಕೆಂದು ಕೇಳಿರುವರು. ಕೆಲವು ತರಿಗಳನ್ನು ಚೀಫ್ ಕಮಿಷನರವರ ಹುಕುಂ ಪ್ರಕಾರವೂ, ಇನ್ನು ಕೆಲವನ್ನು ಮ್ಯುನಿಸಿಪಲ್ ರೆಗ್ಯುಲೇಷನ್ ಪ್ರಕಾರವೂ ಹಾಕಿ ವಸೂಲ್ಮಾಡುತ್ತಿರುವುದು ಸರಿಯಲ್ಲ. ಎಲ್ಲಾ ಡೆಪ್ಯುಟಿ ಕಮಿಷನರುಗಳೂ ಮ್ಯುನಿಸಿಪಲ್ ರೆಗ್ಯುಲೇಷನ್ ಪ್ರಕಾರ ಯೋಗ್ಯವಾದ ಆಕ್ಟ್ರಾಯಿ ಮೊದಲಾದ ಬೈಲಾಗಳನ್ನು ರಚಿಸಿ ಜಾರಿಗೆ ತರಬೇಕಾದದ್ದು ಅವಶ್ಯವೆಂದು ಗವರ್ನ್‍ಮೆಂಟಿನವರು ಹುಕುಂ ಕೊಟ್ಟಿದಾರೆ.

ಖಾತ್ರಿದಾರರಿಗೆ ನೋಟೀಸ್.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜಾಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸವನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು ; ಇಂಥವುಗಳಿಗೆ ನಾವು ಜಾಗಾ ಕೊಡಲಾರೆವು.

ಕರೆಸ್ಪಾಂಡೆನ್ಸ್.

ಕನ್ನಡ ಭೂಪಟಗಳ ಅಭಾವ.

ಅಯ್ಯಾ,—ನಮ್ಮ ಸಂಸ್ಥಾನದ ಕನ್ನಡ ಶಾಲೆಗಳಲ್ಲಿ ಯಾವ ನಕ್ಷೆಗಳೂ ಅನುಕೂಲವಾಗಿಲ್ಲ. ಪ್ರಪಂಚ, ಏಷ್ಯಾಖಂಡ, ಯೂರೋಪ್‍ಖಂಡ, ಆಫ್ರಿಕ, ಅಮೇರಿಕ, ಇಂಡಿಯಾ, ಮೈಸೂರು, ಈ ಮೊದಲಾದ ಕನ್ನಡನಕ್ಷೆಗಳನ್ನು ಕಳುಹಿಸಬೇಕೆಂದು ಮೈಸೂರು ಸರ್ಕಾರಿ ಬುಕ್ ಡಿಪೋಕ್ಕೆ ಬರೆದರೂ, ಶಿವಮೊಗ್ಗಾಕ್ಕೆ ಆರ್ಟಿಸ್ಟ್ ತಿಪ್ಪಾಜಯ್ಯವರಿಗೆ ಬರೆದರೂ ಉತ್ತರವಾಗಲಿ ನಕ್ಷೆಗಳಾಗಲಿ ಬರಲಿಲ್ಲ ಇವು ಇನ್ನೆಲ್ಲಿ ಸಿಕ್ಕಬಹುದೋ ಯಾರಾದರೂ ತಿಳಿಸಿದರೆ ಮಹೋಪಕಾರವಾಗುವುದು

ಸರ್ವ ಹಿತೈಷಿ.

[ಈ ಭೂಪಟಗಳೆಲ್ಲಾ ಬೆಂಗಳೂರು ಬಾಸೆಲ್ ಮಿಷನ್ ಪುಸ್ತಕಾಲಯದಲ್ಲಿ ದೊರೆಯುತ್ತವೆ.—ಎಡಿ]

ಮಕ್ಕಳನ್ನು ಓಡಿಸಿಕೊಂಡು ಹೋಗುವುದು.

ಅಯ್ಯಾ,—ಗ್ರಾಮಾಂತರಗಳಲ್ಲಿ ದುಷ್ಟ ಜನರುಗಳು ತಿಳುವಳಿಕೆಯಿಲ್ಲದ ಮೈನರು ವಯಸ್ಸಿನ ಹೆಣ್ಣು ಗಂಡು ಹುಡುಗರನ್ನು ಅವರ ತಂದೆ ತಾಯಿ ಅಥವಾ ಪೋಷಕರಿಗೆ ತಿಳಿಯದಂತೆ ಮೋಸಪಡಿಸಿ ಉಪಾಯಾಂತರಗಳಿಂದ ಆ ಹುಡುಗರನ್ನು ಮರುಳುಮಾಡಿ ಸಿಲೋನ್‍ಗೆ ಕರೆದುಕೊಂಡುಹೋಗಿ ಸೇರಿಸಿಬಿಟ್ಟು ತಾವು ಮಾತ್ರ ಕೆಲವು ದಿವಸಗಳಲ್ಲೇ ಸ್ಥಳಕ್ಕೆ ಬಂದು ಸೇರುತ್ತಾರೆ. ಹೀಗೆ ಮಾಡಿ ಹಾಳು ಇರುವ ದುಷ್ಟರಾದರೋ ಮೊದಲಿಗಿಂತ ದ್ರವ್ಯಸ್ಥರಾಗಿ ಸುಖದಿಂದ ಜೀವಿಸುತ್ತಾರೆ. ಆ ಬಡರೈತರ ಮಕ್ಕಳ ಸ್ಥಿತಿ ಹೇಗಿರುತ್ತೋ ಅದು ಮಾತ್ರ ತಿಳಿಯುವುದೇ ಇಲ್ಲ. ಈ ಕಾರಣದಿಂದ ಆ ಹುಡುಗರ ಪೋಷಕರ ಯಾ ತಾಯಿ ತಂದೆಗಳ ಸಂಕಟಕ್ಕೆ ಪಾರವೇ ಇಲ್ಲವಾಗಿರುತ್ತೆ ಅದರೆ ಅಂಥಾ ಹುಡುಗರ ಕ್ಷೇಮಸಮಾಚಾರವೇ ತಿಳಿಯದೆ ಇರುವಲ್ಲಿ ಸ್ಥಳವನ್ನು ಸೇರುವುದೇ ಅಪೂರ್ವವಾಗಿರುತ್ತೆ. ಘಾತುಕರು ಸ್ವಪ್ರಯೋಜನಕ್ಕಾಗಿ ಅಬಲರಾದ ಹುಡುಗರಿಗೆ ಉಂಟುಮಾಡಿರುವ ಬಂಧನಕ್ಕೆ ವಿಮೋಚನೆಯೇ ಇಲ್ಲವೇ ? ಇದಕ್ಕಾಗಿ ಕಷ್ಟಪಡುತ್ತಿರುವ ಆ ಬಡಪಾಯಿಗಳ ಪೋಷಕರು ಯಾವ ವಿಧವಾಗಿ ಯಾವ ಮಹಾಪ್ರಭುವಿನಲ್ಲಿ ಪ್ರಾರ್ಥಿಸಿಕೊಂಡರೆ ತಮ್ಮ ಕಷ್ಟವನ್ನು ನೀಗಿಸಿಕೊಂಡು ದೇಶಾಂತರಗತರಾಗಿದ್ದ ಮಕ್ಕಳನ್ನು ಹೊಂದಿ ಸುಖಿಸುವರು ? ಈ ವಿಚಾರದಲ್ಲಿ ಅಮೋಘವಾದ ತಮ್ಮ ಪತ್ರಿಕೆಯಲ್ಲಿ ಬಡರೈತರುಗಳ ಕಷ್ಟನಿವಾರಣೆಗೆ ಮಾರ್ಗದರ್ಶನವನ್ನೀಯುವುದರಿಂದ ದುಷ್ಟರು ಅಡಗಿ ಲೋಕೋಪಕಾರವಾಗುತ್ತೆಂದು ಹಾರೈಸುತ್ತಿರುವ

ಬಡರೈತರ ಹಿತಚಿಂತಕ.

[ಮೈನರ್ ಮಕ್ಕಳನ್ನು ಅವರ ತಂದೆತಾಯಿ ಅಥವಾ ಪೋಷಕರ ಅನುಮತಿ ಇಲ್ಲದೇನೂ, ಪೊಲೀಸ್ ಸ್ಟೇಷನ್‍ನಲ್ಲೂ ತಾಲ್ಲೂಕಿನಲ್ಲೂ ರೆಕಾರ್ಡು ಮಾಡಿಸದೇನೂ ಯಾರೂ ಕರೆದುಕೊಂಡು ಹೋಗಕೂಡದೆಂದು ನಮ್ಮ ಸರ್ಕಾರ

ವರು ಶಾನಸರ್ ಮಾಡಿದಾರೆ. ಹಾಗೆ ಮಾಡಿದವರನ್ನು ಶಿಕ್ಷೆಗೆ ಗುರಿಪಡಿಸ ಬಹುದು. ಈ ರೀತಿ ಮಕ್ಕಳನ್ನು ಕಳೆದುಕೊಂಡಿರುವ ತಂದೆತಾಯಿಗಳಾಗಲಿ ಸ್ಥಳದ ಪೊಲೀಸ್ ಇನ್ಸ್‌ಪೆಕ್ಟರಿಗೂ ಅಮಲ್ದಾರರಿಗೂ ಬರೆದು ತಿಳಿಸಿ ದ ಅವರು ತಕ್ಕ ಏರ್ಪಾಡು ಮಾಡಿಕೊಳಬಹುದೆಂದು ಊಹಿಸುತ್ತೇವೆ.—ಎಡಿ]

ಬಿ. ಎನ್. ಎ., ಕಲ್ಲೀಸ್‌ಪೇಟೆ.—ಅದು ನಿಜವಲ್ಲ.

ಚಿಕ್ಕನಾಯಕನಹಳ್ಳಿ ಹಂದನಕೆರೆ ಗ್ರಾಮದಲ್ಲಿ ಹಿಂದಿನ ವಾರ ಹೊಸಸಂತೆ ಯನ್ನು ಪ್ರಾರಂಭಿಸಿದರು. ಅಗ್ಗೆ ಅಮಲ್ದಾರರೂ ಪಶರ್ಕಮಂಡಲಿಯವರೂ ಸ್ಥಳಕ್ಕೆ ಬಹಳ ವಿಜೃಂಭಣೆಯಿಂದ ಸಂತೆಯನ್ನು ಪ್ರಾರಂಭಿಸಿ, ಉಪನ್ಯಾಸಗಳ ನ್ನು ಮಾಡಿದಂತೆ ತಿಳಿದುಬಂದಿದೆ.

ನ್ಯಾಯವಾದಿ, ಶಿವಮೊಗ್ಗ.—ನೀವು ಹೇಳುವ ಬಾತ್ಮಿಯನ್ನು ಪ್ರಕಟಿಸ ಲಾರೆವು. ಮೊಕದ್ದಮೆಯು ಇನ್ನೂ ಇತ್ಯರ್ಥವಾಗುತ್ತಿದೆ. ನಿಮಗೆ ನಷ್ಟ ವಾದ ಲಾಯರ ಮೇಲೆ ಇಷ್ಟವಿದ್ದರೆ ನೀವು ಮೊಕದ್ದಮೆ ಮಾಡಬಹುದು. ಈ ಬಾತ್ಮಿ ಪ್ರಕಟಿಸೋಣದರಲ್ಲಿ ಫಲವೇನೂ ಕಾಣಬರುವುದಿಲ್ಲ.

ಚನ್ನಗಿರಿಯಲ್ಲಿ ರೀಡಿಂಗ್ ರೂಮು ಇದುವರೆಗೆ ಮುನಿಸಿಪಲ್ ಆಫೀಸಿನಲ್ಲಿದ್ದು ಕಳೆದ ವಾರ ಒಂದು ಹೊಸ ಕಟ್ಟಡಕ್ಕೆ ವರ್ಗಮಾಡಲ್ಪಟ್ಟಿತೆಂದೂ, ಆಗ್ಗೆ ಅಮ ಲ್ದಾರರೇ ಮುಂತಾದ ಅಧಿಕಾರಿಗಳೂ, ಪ್ರಜೆಗಳ ಪ್ರಮುಖರೂ ಸೇರಿ ಒಂದು ಕೂಟವನ್ನು ನಡಿಸಿ ಪ್ರಜೆಗಳ ಏಳಿಗೆಗೆ ಹಿತಕರವಾದ ಹಲವು ಉಪನ್ಯಾ ಸಗಳು ನಡೆದವೆಂದೂ, ಒಂದು ಪುಸ್ತಕಭಂಡಾರವನ್ನು ಇಡಬೇಕೆಂದು ತೀರ್ಮಾನ ವಾಗಿ ಅದಕ್ಕೆ ಕೆಲವರು ಪುಸ್ತಕಗಳನ್ನೂ ಕೆಲವರು ಸಾಮಾನುಗಳನ್ನೂ ಉಚಿತ ವಾಗಿ ಕೊಡುತ್ತೇನೆಂದು ಒಪ್ಪಿಕೊಂಡಿರುತ್ತಾರೆಂದೂ ತಿಳಿದು ಸಂತೋಷಪಡುವೆವು.

ದೆಹಲಿ ದರ್ಬಾರ್ ಡೇ ಉತ್ಸವಗಳು ನಮ್ಮ ಸಂಸ್ಥಾನದಲ್ಲಿ ನಡಿಸ ಲ್ಪಟ್ಟು ಸ್ಕೂಲ್ ಮಕ್ಕಳಿಗೆ ಎಲ್ಲಾ ಕಡೆಗಳಲ್ಲೂ ಆಟಗಳನ್ನು ಕಲ್ಪಿಸಿ ಸಂತೋಷ ಪಡಿಸಿದಲ್ಲದೆ ಸಭೆಗಳನ್ನು ನಡಿಸಿ ಬ್ರಿಟಿಷ್ ಸಾಮ್ರಾಜ್ಯದ ಮಹಿಮೆಯನ್ನೂ ಶೌರ್ಯವನ್ನೂ ಸ್ವಾಮಿಕಾರ್ಯಗಳನ್ನೂ ಕುರಿತು ಉಪನ್ಯಾಸಗಳು ನಡಿಸಲ್ಪಟ್ಟವು ಈ ಉತ್ಸವಗಳು ನಡೆದ ಅನೇಕ ಸ್ಥಳಗಳಿಂದ ಅವುಗಳ ವಿವರಗಳುಳ್ಳ ಬಾತ್ಮಿ ಗಳು ಪ್ರಕಟನೆಗಾಗಿ ಈ ವಾರವೂ ನಮಗೆ ತಲುಪಿರುತ್ತವೆ. ಇವುಗಳನ್ನೆಲ್ಲಾ ಕೃತ ಜ್ಞತೆಯಿಂದ ಅಂಗೀಕರಿಸಿ ಬಾತ್ಮಿದಾರರುಗಳ ಉತ್ಸಾಹವನ್ನು ಕೊಂಡಾಡುವೆವು ಸ್ಥಳಸಂಕೋಚದಿಂದ ಅವುಗಳನ್ನೆಲ್ಲಾ ಪ್ರಕಟಿಸಲಾಗಲಿಲ್ಲವೆಂದು ವಿಷಾದಪಟ್ಟು ಬಾತ್ಮಿದಾರರ ಕ್ಷಮಾಪಣೆಯನ್ನು ಬೇಡುವೆವು. ಈ ಬಾತ್ಮಿಗಳು ನಮಗೆ ತಲುಪಿ ರುವ ಸ್ಥಳಗಳ್ಯಾವುವೆಂದರೆ—ಚನ್ನರಾಯಪಟ್ಟಣದ ತಾ|| ಹಿಂಡಲಹಳ್ಳಿ, ನೆಲ ಮಂಗಲ ತಾ|| ಗುಬ್ಬಿ, ಸೋಂಪೆಕೊಪ್ಪ, ನಾಗಪ್ಪೇಟೆ, ಗುಬ್ಬಿ ತಾ|| ಕಡಬ, ಮುಳಬಾಗಲ ತಾ|| ದೇವರಾಯಸಮುದ್ರ, ತಿಪಟೂರು ತಾ|| ಕೋಟನಾಯಕನ ಹಳ್ಳಿ, ಹೊಸಕೋಟೆ ತಾ|| ಮಾರಸಹಳ್ಳಿ, ಕೊಪ್ಪ, ಮೊಳಕಾಲ್ಮೂರು, ಮಾಗಡಿ ತಾ|| ತೊರೆಬೆಟ್ಟ ಕಲ್ಲುಗ್ರಾಮ, ಚಾಮರಾಜನಗರದ ತಾ|| ಹರವೆಗ್ರಾಮ, ಗೌರಿ ಬಿದನೂರು ತಾ|| ನೊಸಹೂರು, ಚಿತ್ರದುರ್ಗದ ತಾ|| ಬಿಂಗುಂಟನೂರು, ಚನ್ನ ರಾಯಪಟ್ಟಣ, ಶ್ರವಣಬೆಳ್ಗೊಳ, ಮುರನಳ್ಳಿ, ಮಾಗಡಿ, ದಾವಣಗೆರೆ ತಾ|| ಅನಗೋಡು ಗ್ರಾಮ, ಸಿರಾ ತಾ|| ಬುಕ್ಕಾಪಟ್ಟಣ, ಮಧುಗಿರಿ ತಾ|| ಬಾಲ್ಯಗ್ರಾಮ, ಮುದೇಹಳ್ಳಿ, ಚಿತ್ರದುರ್ಗ ತಾ|| ಸಿರಿಗೆರೆ, ಬೀರೂರು, ಹೊಸಕೋಟೆ, ಇತ್ಯಾದಿ.

ತಾಲ್ಲೂಕು ವರ್ತಮಾನಗಳು.

ಅರಕಲಗೂಡು.—ಈ ಊರಿನಲ್ಲಿ ಹವ ತಕ್ಕಮಟ್ಟಿಗೆ ಆರೋಗ್ಯಕರವಾ ಗಿದೆ. ಮಳೆ ಆಗಾಗ್ಗೆ ಬರುತ್ತಲೇ ಇದೆ. ತಾ. 5 ರಲ್ಲೂ, 13 ರಲ್ಲೂ ಬಿದ್ದ ಮಳೆಯಿಂದ ಕಾಲುವೆ ಅವೇ ಕೆರೆ ಕಟ್ಟೆಗಳೆಲ್ಲಾ ತುಂಬಿ ನೀರು ಸಮೃದ್ಧಿಯಾಗಿದೆ. ... ಭತ್ತ, ಹುರುಳಿ, ತೊಗರಿ ಮೊದಲಾದ ಪೈರುಗಳನ್ನು ... ತುಂಬಾ ತೊಂದರೆಯಾಗಿ ಜವಿಗಾನುಗಳ ... ರೈತರಿಗೆ ತುಂಬಾ ನಷ್ಟವುಂಟು.—ಈ ಊರಿನ ... ಒಬ್ಬ ... ಕಳೆದ ತಿಂಗಳು ತಾ. 20 ರಲ್ಲಿ ... ಕಡೆಯ ದಿವಸವನ್ನು ತಾ. 30 ರಲ್ಲಿ ಆಚರಿಸಿದರು. ... ಕೆಲಸವಾಗಿತ್ತು.

ತ್ಯಾಮಗೊಂಡ್ಲು.—ಈ ಪ್ರಾಂತ್ಯ ಪೈರುಗಳಿಗೆ ತಂಗಾಳಿ ಬೀಸುತ್ತಾ ಇದೆ. ರೈತರ ಕೆಲಸವು ... ಕೆಲವು ದಿನಗಳ ಹಿಂದೆ ಕೇಪಣ್ಣನವರ ಗೋರಿ ಹತ್ತಿರ ಜನಗಳ ... 8 ದಿನ ನಡೆದು ಟೌನ್‌ನಲ್ಲಿ 3 ದಿವಸ ದೇವರ ಮೆರವ ಣಿಗೆಗಳು ಬಹು ಅಟ್ಟಹಾಸದಿಂದಲೂ, ವೈಭವದಿಂದಲೂ ತೃಪ್ತಿಕರವಾಗಿಯೂ ನಡೆದವು. ಆ ಕಾಲಗಳಲ್ಲಿ ... ಮ|| ಅಪ್ಪಾಜಿಗೌಡರ ಮತ್ತು ಪೊಲೀಸ ಏರ್ಪಾಡು ತೃಪ್ತಿಕರವಾಗಿದ್ದವು. ಈ ಟೌನ್‌ಗೆ ಹೊಸದಾಗಿ ಅನುಭವಶಾಲಿಯಾದ ಒಬ್ಬ ಸಾಲಗಿತ್ತಿಯನ್ನು ಕೊಟ್ಟಿರುತ್ತಾರೆ.—ತಾ. 12 ನೇ ದಿನ ಮಧ್ಯಾಹ್ನ ಒಂದು ಜಡ ಮಳೆ ... ಸ್ವಲ್ಪ ನೀರು ಬಿತ್ತು. ಅದೇ ರಾತ್ರಿ ... ಉಪನ್ಯಾಸಗಳನ್ನು ಮಾಡಿದರು.—ಬೆಳಗ್ಗೆ 7 ಘಂಟೆಗೆ ... 10 ಕ್ಕೆ ಬೆಂಗಳೂರು ಸೇರುತ್ತಿದ್ದ ರೈಲ್‌ಗಾಡಿಯನ್ನು ನಿಲ್ಲಿಸಿದ್ದರಿಂದ ಬಹು ತೊಂದರೆಯಾಗಿದೆ.

ಮೊಸಳೆಹೊಸಹಳ್ಳಿ.—ಶ್ರೀಮನ್ ಮಹಾರಾಜರವರ ಸವಾರಿಯು ತಾ. 21 ಕ್ಕೆ ಇಲ್ಲಿಗೆ ದಯಮಾಡಿಸುವುದಾಗಿದೆ. ಅವರ ಆಗಮನಕ್ಕಾಗಿ ನಡಿಸಬೇಕಾದ ಕೆಲಸ ಗಳನ್ನು ನಮ್ಮ ಅಮಲ್ದಾರರು ಹಗಲೂ ರಾತ್ರಿ ಆಹಾರ ನಿದ್ರೆಗಳನ್ನು ಲಕ್ಷ್ಯಸದೆ ತಮ್ಮ ನೌಕರವರ್ಗಗಳಿಂದ ಕೂಡಿ ನಡಿಸುತ್ತಿದ್ದಾರೆ. ಪ್ರಭುಗಳ ಸವಾರಿಯು ಇಲ್ಲಿಗೆ ದಯಮಾಡಿಸುವುದು ಇದೇ ಮೊಟ್ಟಮೊದಲಾಗಿರುವುದರಿಂದ ಇಲ್ಲಿನ ಪ್ರಜೆ ಗಳೆಲ್ಲಾ ಅವರ ಸಂದರ್ಶನವನ್ನು ಅತ್ಯಂತ ಕುತೂಹಲದಿಂದ ನಿರೀಕ್ಷಿಸುತ್ತಿರು ವರು. ಪ್ರಜೆಗಳಿಂದ ಅವರಿಗೆ ಸ್ವಲ್ಪವೂ ಹಿಂಸೆ ಕೊಡದಂತೆ ಬೇಕಾದ ಕೆಲಸಗಳ ನ್ನು ನಡೆಸುತ್ತಿರುವುದು ನೋಡಿದರೆ ನಮ್ಮ ಅಮಲ್ದಾರರಿಗಿರತಕ್ಕ ಅನುಭವ ದಿಂದಲೇ ಹೊರತು ಮತ್ತೆ ಬೇರೆಯಲ್ಲ. ಊರಲ್ಲಿ ನಡೆಯುತ್ತಿರುವ ಸಂಭ್ರಮ ವನ್ನು ನೋಡುವುದರಿಂದಲೇ ಜನರೆಲ್ಲರೂ ಎಷ್ಟೋ ಸಂತೋಷಪಡುತ್ತಿರುವಲ್ಲಿ ಮಹಾರಾಜರವರ ಸವಾರಿಯು ಬಂದ ನಂತರ ಅವರ ಸಂತೋಷಕ್ಕೆ ಪಾರವುಂಟೇ?

ಹೆಗ್ಗಡದೇವನಕೋಟೆ ತಾ|| ಮಗ್ಗೆ.—ಇಲ್ಲಿ ಪ್ಲೇಗ್ ಗಲಾಟೆಯಿಂದ ಜನ ಗಳು ಊರುಬಿಟ್ಟು ಹಟ್ಟಿನಲ್ಲಿ ವಾಸಿಸುತ್ತಿದ್ದಾರೆ. ಇಲ್ಲಿಯ ಜ್ಯೋತಿಷ್ಯರಾಗಿದ್ದ ಮ|| ಮಳಲಿ ಸುಬ್ಬಣ್ಣನವರು ತಾ. 15 ನೇ ಮಂಗಳವಾರ ಮಧ್ಯಾಹ್ನ ಕಾಲವಾ ದರೆಂದು ಅನೇಕರು ವಿಷಾದಿಸುತ್ತಾರೆ.—ಹಿಂದಿನ ಸೋಮವಾರ ಇಲ್ಲಿಗೆ ಸಮಾ ಪದಲ್ಲಿರುವ ಭೀಮನಕೊಲ್ಲಿಯೆಂಬ ಗ್ರಾಮದಲ್ಲಿ ಮಹದೇಶ್ವರನ ಜಾತ್ರೆ ನಡೆ ದಿತು. ದನಗಳ ಪ್ರದರ್ಶನವನ್ನು ಈ ದಫ ನಮ್ಮ ಅಮಲ್ದಾರ್ ಮ|| ಮಲ್ಲಿಕಾ ರ್ಜುನಯ್ಯನವರು ಹೊಸದಾಗಿ ನಡಿಸಿದರು. ಸುಮಾರು 200 ರಾಸುಗಳು ಬಂದಿ ದ್ದುವು. ಉತ್ತಮವಾದವುಗಳಿಗೆ ಮೆಡಲುಗಳು ಕೊಡಲಾಯಿತು. ಈ ದಫ ಜನ ಸಂದಣಿಯು ಅಷ್ಟೊಂದು ಹೆಚ್ಚಾಗಿರಲಿಲ್ಲ. ದಂಡಿಗೆ (ಯುದ್ಧಕ್ಕೆ) ಜನಗಳನ್ನು ಹಿಡಿಯುತ್ತಾರೆಂಬ ಸುಳ್ಳು ಸುದ್ದಿಯನ್ನು ಯಾರೋ ದುರಾತ್ಮರು ಹುಟ್ಟಿಸಿದ್ದರು. ಸೇರಿದ್ದರಲ್ಲೂ ಒಬ್ಬ ಕಳ್ಳನು ಒಂದು ಅಂಗಡಿಯಲ್ಲಿ ಕೆಲವು ಮಾಲ್ ಅಪಹರಿಸಿದ್ದ ರಿಂದ ಪೊಲೀಸಿನವರು ಪತ್ತೆ ಸರಿ ಹಿಡಿದುಕೊಳ್ಳಲು ಹೋಗೆ ಎಲ್ಲರನ್ನೂ ಹಿಡಿದು ಕೊಳ್ಳುತ್ತಾರೆಂದು ಬಂದಿದ್ದ ನೋಟಕರೆಲ್ಲರೂ ಹೆದರಿ ಪಲಾಯನವಾದರು ಅಷ್ಟರಲ್ಲಿ ನಮ್ಮ ಅಮಲ್ದಾರರೂ ಪೊಲೀಸ್ ಇನ್ಸ್‌ಪೆಕ್ಟರವರೂ ತುಂಬಾ ಪ್ರಯತ್ನದಿಂದ ಅವರಿಗೆಲ್ಲಾ ಹಿತೋಪದೇಶಮಾಡಿ ಕೆಲವರನ್ನು ಬರಮಾಡಿದರು.

ಆದರೂ ವ್ಯಾಪಾರವು ಅಷ್ಟು ತೃಪ್ತಿಕರವಾಗಿ ನಡೆಯಲಿಲ್ಲ. ಗುರುವಾರ ಸಾಯಂ ಕಾಲ ಜಾತ್ರೆಯು ಮುಕ್ತಾಯವಾಯಿತು.—ಈ ಕಡೆಗೆ ಎರಡು ವಾರಕ್ಕೆ ಒಂದು ದಫ ಪೋಸ್ಟ್ ಮ್ಯಾನ್ ಬರುತ್ತಾನೆ. ಇದರಿಂದ ಸರ್ಕಾರಿ ಕಾಗದಗಳು ತಲಪದೆ ತುಂಬಾ ತೊಂದರೆಯಾಗಿರುತ್ತೆ. ಮಣಿಯಾರ್ಡರು ಸರೀಸು ಪಾವತಿ ಮಾಡುವ ದಿಲ್ಲ. ತೆಗೆದುಕೊಳ್ಳತಕ್ಕವನು ಊರಲ್ಲಿ ಇದ್ದಾಗ್ಯೂ ಹಾಜರಿಲ್ಲವೆಂದು ಹೇಳಿ ವಾಪಸು ತೆಗೆದುಕೊಂಡು ಹೋಗುತ್ತಾನೆ. ಇದು ಬಹಳ ಅನ್ಯಾಯ. ಇದನ್ನು ಮೇಲ್ಪಟ್ಟವರು ಕ್ರಮಪಡಿಸಬೇಕಾಗಿ ಕೋರುತ್ತೇನೆ.

ಹಾಸನ.—ಕಳೆದ ತಾ. 15 ನೇ ಮಂಗಳವಾರ ಸಾಯಂಕಾಲ ಇಲ್ಲಿನ ಮಾಡೆಲ್ ಲೋವರ್ ಸೆಕೆಂಡರಿ ಶಾಲೆಯಲ್ಲಿ ಒಂದು ಸಭೆಯು ಸೇರಿದ್ದಿತು. ನಮ್ಮ ಡೆಪ್ಯುಟಿ ಕಮಿಷನರ್ ಮಿ|| ಪಿ. ಆರ್. ಡಬ್ಲ್ಯು. ವೆದರಾಲ್ ಸಾಹೇಬರವರು ಅಧ್ಯಕ್ಷ ತೆಯನ್ನು ವಹಿಸಿದರು. ಮ|| ಭುಟಾಲಾ ಎಂಬುವರು ಇಂಗ್ಲಿಷ್ ಭಾಷೆಯಲ್ಲೂ, ಮಿ|| ಅಬ್ದುಲ್ ರಹಿಮಾನ್ ಖಾನ್‌ರವರು ಹಿಂದುಸ್ಥಾನಿ ಭಾಷೆಯಲ್ಲೂ ಈಗ ನಡೆಯುತ್ತಿರುವ ಐರೋಪ್ಯ ಯುದ್ಧದ ಚರಿತ್ರೆಯನ್ನೂ, ಮಹಮದೀಯ ಮತ ಕ್ಕೂ ಈ ಯುದ್ಧಕ್ಕೂ ಏನೇನೂ ಸಂಬಂಧವಿಲ್ಲವೆಂಬುದನ್ನೂ, ತುರ್ಕಿ ಸುಲ್ತಾ ನರು ಜರ್ಮನಿಯವರ ಚಿತಾವಣೆಗೆ ಗುರಿಯಾದುದರಿಂದ ಮಾತ್ರವೇ ಈ ಯುದ್ಧ ದಲ್ಲಿ ಪ್ರವೇಶಿಸಿದಾರೆಂಬುದನ್ನೂ, ಆದುದರಿಂದ ಈ ಸಮಯದಲ್ಲಿ ಈ ದೇಶೀಯ ರಾದ ವಿಶಿಷ್ಟ ಮಹಮ್ಮದೀಯರೂ ನಮ್ಮ ಬ್ರಿಟಿಷ್ ಸಾಮ್ರಾಜ್ಯದ ಶ್ರೇಯಸ್ಸನ್ನು ಬಯಸುತ್ತಾ ನಿರಂತರ ರಾಜಭಕ್ತಿಯುಳ್ಳವರಾಗಿ ವರ್ತಿಸಿಕೊಂಡಿರುವುದೇ ಪ್ರಾಮು ಖ್ಯ ಕರ್ತವ್ಯವಾಗಿದೆ ಎಂಬುದನ್ನೂ, ಸದಸ್ಯರೆಲ್ಲರ ಮನೋರಂಜಕವಾಗಿರುವ ರೀತಿಯಲ್ಲಿ ವ್ಯಕ್ತಗೊಳಿಸಿ ಇಂಥಾದ ಉಪನ್ಯಾಸಗಳನ್ನು ಮಾಡಿದರು. ಈ ಕಾಲ ದಲ್ಲಿ ಈ ಸ್ಥಳೀಯರಾದ ಹಿಂದೂ ಮಹಮ್ಮದೀಯರೇ ಮೊದಲಾದ ಸಕಲ ಜನಾಂ ಗವೂ, ಸ್ಥಳವು ಇಕ್ಕಟ್ಟಾಗುವಂತೆ ನೆರೆದಿದ್ದಿತು. ಈ ಉಪನ್ಯಾಸಕರಲ್ಲಿ ಮೊದಲ ನೆಯವರು ಕೇಂಬ್ರಿಡ್ಜ್ ಡೌನಿಂಗ್ ಕಾಲೇಜ್‌ನಿಂದಲೂ, ಎರಡನೆಯವರು ಅಲಿಘ ರ್ ಕಾಲೇಜಿನಿಂದಲೂ ಪದವಿಯನ್ನು ಪಡೆದಿದ್ದಾರೆಂದು ತಿಳಿದು ಬಂದಿದೆ. ಇವರ ಉಪ ನ್ಯಾಸದಿಂದ ನಮ್ಮ ಬ್ರಿಟಿಷ್ ಚಕ್ರಾಧಿಪತ್ಯದ ಸತ್ಸಂಬಂಧವನ್ನೂ, ಸಕಲ ಪ್ರಜಾ ಸಮೂಹದ ... ಬಹು ಮಟ್ಟಿಗೆ ವ್ಯಕ್ತಪಟ್ಟಿತೆಂದು ಸದಸ್ಯರಲ್ಲಿ ಬಹು ಮಂದಿ ಸಂತೋಷಪಟ್ಟರು. ಕಡೆಯಲ್ಲಿ ಮಿ|| ಟಿ. ಅಬ್ದುಲ್ ಖಾದರ್ ರವರು ಉಪನ್ಯಾಸಕರನ್ನು ಸಭಾಪರವಾಗಿ ವಂದಿಸಿದರು. ಇಲ್ಲಿನ ಹೈ ಸ್ಕೂಲ್ ಮೌಲ್ವಿ ಯವರು ಬಹು ಚೆನ್ನಾಗಿ ಅನುವಾದಮಾಡಿದರು. ನಮ್ಮ ಡೆಪ್ಯುಟಿ ಕಮಿಷನ್ ರವರು ವಿಶಿಷ್ಟ ... ನಮ್ಮ ಶ್ರೀಮಚ್ಚಕ್ರವರ್ತಿಯವರ ಮತ್ತು ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನೆಯನ್ನು ಮಾಡಿ ಸಭೆ ಯನ್ನು ಮುಕ್ತಾಯಮಾಡಿದರು.

ಸಿರಾ ತಾ|| ಬುಕ್ಕಾಪಟ್ಟಣ.—ನಮ್ಮ ಅಮಲ್ದಾರರವರು ಜಮಾಬಂದಿಯನ್ನು ಪೂರೈಸಿಕೊಂಡು ಗ್ರಾಮ ಮುಖಂಡರನ್ನೆಲ್ಲಾ ಬರಮಾಡಿಕೊಂಡು ಅನ್ಯಾ ಕ್ರಾಂತವಾಗಿ ಯುದ್ಧ ನಡೆಯುತ್ತಿರುವ ವಿಚಾರ ಎಲ್ಲರಿಗೂ ವಿಶದವಾಗಿ ತಿಳಿಸಿ ಯುದ್ಧದ ರಿಲೀಫ್ ಫಂಡಿಗಾಗಿ ಅವರವರ ಸಾಮರ್ಥ್ಯಾನುಸಾರ ಚಂದಾ ಹಾಕಿಸಿ ಪಟ್ಟಿ ಯನ್ನು ... ವಶಕ್ಕೆ ಕೊಟ್ಟು, ಗ್ರಾಮಾಭಿವೃದ್ಧಿ ವಿಚಾರ ಎಲ್ಲಾ ಪ್ರಜೆಗಳಿಗೂ ಪ್ರೋತ್ಸಾಹಿಸಿ ಕಾರ್ಯಗಳನ್ನು ಮಾಡುವಂತೆ ಏರ್ಪಡಿಸಿ, ವಿಲೇಜು ಕಮಿಟಿ ಈ ಗ್ರಾಮಕ್ಕೆ ಸ್ಯಾಂಕ್ಷನ್ ಆಗಿರತಕ್ಕ ವಿಚಾರ ಎಲ್ಲರಿಗೂ ವಿಶದ ವಾಗಿ ತಿಳಿಸಿ ಸರ್ಕಾರದವರಿಂದ ಜಾರಿಯಾಗಿರುವ ಹುಕುಂ ಸನ್ನದುಗಳನ್ನು ಸ್ವಹ ಸ್ತ ಗ್ರಾಮಮುಖಂಡರಿಗೆ 14 ಜನ ಕಮಿಟಿ ಮೆಂಬರುಗಳಿಗೂ ಕೊಟ್ಟು ವಿವೇಕಾದಿಗಳನ್ನು ಹೇಳಿ ಮರ್ಯಾದಾರ್ಥವಾದ ತಾಂಬೂಲಗಳನ್ನು ಕೊಡಿಸಿದರು. ಅನಂತರ ಯೂನಿಯನ್ ಮೀಟಿಂಗು ನಡಿಸಿ ಯೂನಿಯನ್‌ನಲ್ಲಿ ನಡೆಯಬೇಕಾದ ಕಾರ್ಯಗಳನ್ನು ತಿಳಿಸಿ ಜವಳಿ ಅಂಗಡಿ ವೈಶ್ಯರ ಸುಬ್ಬರಾಯಸೆ ಟ್ಟಿರ ಮನೆಗೆ ಲಗತ್ತಾಗಿರುವ ದೊಡ್ಡಿಯನ್ನು ಅಪವಾಯನೆ ಮಾಡಿ ಅದರಿಂದ ಅವರಿಗೆ ಅನಾರೋಗ್ಯವುಂಟೆಂದು ತಿಳಿದು ದೊಡ್ಡಿಯನ್ನು ಬೇರೆ ಕಡೆ ಬದಲಾಯಿ ಸಬೇಕೆಂತ ತೀರ್ಮಾನ ಮಾಡಿದರು.—ಈ ಪ್ರಾಂತ್ಯ ಮಳೆ ಇಲ್ಲದೆ ಇಟ್ಟ ಬೆಳೆ ಯಲ್ಲಾ ಕೆಟ್ಟುಹೋಗಿ ಎರಡನೆ ಫಸಲು ಸಹ ಆಗಿಲ್ಲ. ದನಕರುಗಳಿಗೆ ಮೇವು ಸಹ ದೊರೆಯುವುದಿಲ್ಲ. ಜನ ಜಾನುವಾರುಗಳ ಆಹಾರಕ್ಕೆ ಬಹಳ ತೊಂದರೆಯಾ ಗಿರುತ್ತದೆ. ಊರೊಳಗೆ ಭಾವಿಗಳಲ್ಲಿ ಕುಡಿ ನೀರೇ ಇಲ್ಲ. ಕಂದಾಯ ಕಾಲ ಸಮೀಪಿಸುತ್ತಾ ಬಂತು. ಬಡರೈತರುಗಳು ಏನು ತೊಡುತ್ತಾರೋ. ಈಗ್ಗೆ 10-15 ದಿವಸಗಳ ಮುಂಚೆ ನಮ್ಮ ಡೆಪ್ಯುಟಿ ಕಮಿಷನ್‌ರವರು ದಯಮಾಡಿಸಿದ್ದರು. ಪ್ರಜೆಗ ಳೆಲ್ಲರೂ ತಮ್ಮತಮ್ಮ ಗೋಳುಕರೆಗಳನ್ನೆಲ್ಲಾ ಹೇಳಿಕೊಂಡು, ಕೆಲವು ಕಂದಾ ಯಗಳನ್ನು ರಮಿಷನ್ ಮಾಡಿಸಿ ಕಾಪಾಡಬೇಕೆಂದು ಪ್ರಾರ್ಥಿಸಿಕೊಂಡದ್ದರ ಮೇಲೆ ಆಗಲಿ ನೋಡೋಣವೆಂದು ಹೇಳಿದರು. ಈಗ ತಾಲ್ಲೂಕು ಜಮಾಬಂದಿ ಪೂರೈಸಿತು. ಹುಜೂರು ಜಮಾಬಂದಿ ನಿರೀಕ್ಷಿಸಬಲ್ಲಿರುತ್ತೆ. ಅದರೊಳಗೆ ಕಂದಾ ಯ ರಮಿಷನ್ ಆದರೆ ಆದಹಾಗೆ; ಇಲ್ಲವಾದರೆ ಇಲ್ಲವೆಂಬುದಾಗಿ ಎಲ್ಲರೂ ಪಶ್ಚಾತ್ತಾಪಪಡುತ್ತಾ ಹುಜೂರು ಜಮಾಬಂದಿ ನಿರೀಕ್ಷಿಸುತ್ತಿರುವರು.

ಬೆಂಗಳೂರು.—ಇಲ್ಲಿನ ಹವಾ ಕೆಟ್ಟು ಇದೆ. ಹಗಲು ಬಿಸಿಲಿನ ತಾಪ ಸಹಿ ಸಲು ಅಸಾಧ್ಯ. ಪ್ಲೇಗು ಹಾವಳಿ ಪುನಃ ತಲೆದೋರಿದೆ. ಧಾರಣೆವಾಸಿ ಎಂದಿನಂ ತ್ಲೇ ಇರುತ್ತೆ. ಕುಪ್ಪದ ಧಾರಣೆ ಮಾತ್ರ ಸ್ವಲ್ಪ ಇಳಿದು ಇದೆ. ಇಲ್ಲಿನ ಟೌನ್ ಮಾರ್ಕೆಟ್ಟಿನಲ್ಲಿ ಕಮ್ಮಿ ತೂಕದ ಒಟ್ಟು ವಗೈರೆ ಅನೇಕರು ಇಟ್ಟುಕೊಂಡು ಜನ ಗಳನ್ನು ಮೋಸಪಡಿಸುತ್ತಾರೆ. ಇವರ ಪೈಕಿ ರಾಮಯ್ಯನೆಂಬವನಿಗೆ ಬೆಂಚ್ ಕೋ ರ್ಟಿನವರು 10 ರೂಪಾಯಿ ಜುಲ್ಮಾನೆ ವಿಧಿಸಿದರು. ಸರ್ಕಾರದವರು ಮುತುವ ರ್ಜಿ ವಹಿಸಿದರೆ ಈ ಅನ್ಯಾಯಗಳಿಗೆ ಅವಕಾಶವಾಗಲಾರದು.—ನಮ್ಮ ಡೆಪ್ಯುಟಿ ಕಮಿಷನ್‌ರವರು ಜಮಾಬಂದಿ ಕೆಲಸದ ಮೇಲೆ ಸರ್ಕೀಟು ದಯಮಾಡಿರುತ್ತಾರೆ. ಡಿಸ್ಟ್ರಿಕ್ಟ್ ಆಫೀಸ್ ಕಟ್ಟಡಗಳಲ್ಲಿ ಇಲಿಗಳು ಸತ್ತದ್ದರಿಂದಲೂ, 3-4 ಜನ ಪ್ಲೇಗು ರೋಗಕ್ಕೆ ತುತ್ತಾದ್ದರಿಂದಲೂ, ಒಂದು ತಿಂಗಳಿಂದ ಕಾಂಪೌಂಡಿನಲ್ಲಿ ಡೇರಾಗಳನ್ನು ಹಾಕಿಕೊಂಡು ಆಫೀಸ್ ಮಾಡುತ್ತಿದ್ದರು. ಈಗ ಕಟ್ಟಡಕ್ಕೆ ವಾಪಸ್ ಹೋಗುವವರಾಗಿದಾರೆ.—ನಮ್ಮ ಹಿಂದಿನ ವಾರದ ಪತ್ರಿಕೆಯಲ್ಲಿ ಸಂಪ ದಭಿವೃದ್ಧಿ ಸಭೆಯವರು ಜನೋಪಕಾರಕ್ಕಾಗಿ ಮಾಸಪತ್ರಿಕೆಯನ್ನು ಹೊರಡಿಸು ತ್ತಾರೆಂತಲೂ, ಉಪನ್ಯಾಸಕರನ್ನು ನೇಮಿಸತಕ್ಕವರ ವೇತನಕ್ಕಾಗಿ ಮಂಜೂರಾದ ಹಣವನ್ನು ಈ ಪತ್ರಿಕೆಗಾಗಿ ಉಪಯೋಗಿಸಬೇಕೆಂತಲೂ, ಇದರಿಂದ ಅಷ್ಟೇನೂ ಪ್ರಯೋಜನವಾಗಲಾರದೆಂತಲೂ ನೀವು ಅಭಿಪ್ರಾಯಪಟ್ಟಿದ್ದೀರಿ. ಇದನ್ನು ನೋಡಿ ದರೆ ಸಂಶಯವೇನೂ ಕಂಡುಬರುವದಿಲ್ಲ. ಯಾಕೆಂದರೆ ಪತ್ರಿಕೆಗಳನ್ನು ಪ್ರಿಂಟು ಮಾಡಿಸಿ ಸಂಬಂಧಪಟ್ಟ ಅಧಿಕಾರಿಗಳಿಗೂ ಪಟೇಲ್ ಶ್ಯಾನುಭೋಗರಿಗೂ ಪ್ರಸಿದ್ಧಪಡಿಸುವದಕ್ಕೋಸ್ಕರ ಸರ್ಕಾರದವರು ರವಾನಿಸಿರುತ್ತಾರೆ. ಇವು ಅವರ ವರ ಪೆಟ್ಟಿಗೆಯಲ್ಲಿ ಭದ್ರವಾಗಿರುವದೇ ವಿನಹ ರೈತಾಪಿ ಜನಗಳಿಗೆ ಉಪಯೋಗ ವೇನೂ ಕಂಡುಬರುವದಿಲ್ಲ. ಆದ್ದರಿಂದ ಮಾಸಪತ್ರಿಕೆಯನ್ನು ಸಹಾ ಕಳುಹಿಸಲಿ. ಇದಕ್ಕನುಸಾರವಾಗಿ ಉಪನ್ಯಾಸಕರನ್ನೂ ನೇಮಕಮಾಡಿ ಅವರ ದರ್ಜೆಗೆ ಸರಿ ಯಾದ ವೇತನವನ್ನು ಕೊಟ್ಟು ಮೇಲ್ವಿಚಾರಣೆ ಸರ್ಕಾರದವರು ಇಟ್ಟುಕೊಂಡಲ್ಲಿ ರೈತಾಪಿ ಜನಗಳಿಗೆ ಇದರಿಂದ ಅನೇಕ ಉಪಯೋಗವುಂಟು. ಆದ್ದರಿಂದ ಸರ್ಕಾ ರದವರು ಈ ಏರ್ಪಾಟು ಜಾಗ್ರತೆಯಾಗಿ ಮಂಜೂರುಮಾಡಿದರೆ ಒಳ್ಳೇದಾದೀತೆಂತ ತೋರುತ್ತದೆ.

ಮಧುಗಿರಿ.—ಈಗ 2-3 ವಾರಗಳಿಂದಲೂ ಬಿಸಿಲಿನ ತಾಪವು ಹೆಚ್ಚುತ್ತಿ ದೆ. ಮಳೆ ಬಾರದ್ದರಿಂದಲೂ, ಮಂಜು ಬೀಳದೆ ಇರುವುದರಿಂದಲೂ ತೊಗರಿ, ಅವರೆ, ಹುರುಳಿ ಮುಂತಾದ ದ್ವಿದಳ ಧಾನ್ಯಗಳ ಫಸಲು ಒಣಗಿಹೋಯಿತು. ಜನಗಳಿಗೆಲ್ಲಾ ಹಾಹಾಕಾರ ಹುಟ್ಟಿರುತ್ತೆ. ಧಾರಣೆವಾಸಿಯಂತೂ ಹೇಳ ತೀರದು. ರೂಪಾಯಿಗೆ 6 ಸೇರು ಅಕ್ಕಿ, 12 ಸೇರು ರಾಗಿ, 4 ಸೇರು ಬೇಳೆ, ಬೆಲ್ಲ ಮಣ ಕ್ಕೆ 3-12, ಈ ರೀತಿ ಧಾರಣೆ ಹೆಚ್ಚಿರುತ್ತೆ. ಗುಂಟೂರು, ಕೃಷ್ಣಾ, ಈ ಪ್ರಾಂತ್ಯ ಗಳಿಂದ ಅಕ್ಕಿ ಬಂದಿರೋಣದರಿಂದ ಮೇಲ್ಕಂಡಂತೆ ದೊರೆಯುತ್ತೆ; ಇಲ್ಲದಿದ್ದರೆ ರೂಪಾಯಿಗೆ 4 ಸೇರು ಅಕ್ಕಿ ಸಿಕ್ಕುತ್ತಿರಲಿಲ್ಲ. ದೊಡ್ಡ ಆಫೀಸರುಗಳು ಒಂದು ಮಂಡಿಯನ್ನೇರ್ಪಡಿಸಿ ಬಡಬಗ್ಗರಿಗೆ ಅನುಕೂಲಪಡಿಸಿಕೊಡುವರೆಂದು ಹಾರೈ ಸುತ್ತಿರುವರು.—ಈ ಟೌನ್ ಅಗ್ರಹಾರ ಶ್ರೇಣಿಯಲ್ಲಿರತಕ್ಕ ಜನರಿಗೆ ನೀರಿನ ಗೋಟ್ಟು ಬಹಳವಾಗಿದೆ. ಮ್ಯುನಿಸಿಪಾಲಿಟಿಯವರು ಇದನ್ನು ಗಮನಕ್ಕೆ ತಂದು, ಈ ಬೀದಿಯ ಸಂದುಗೊಂದುಗಳಿಗೆ ಅನುಕೂಲವಾಗುವಂತೆ ಮಲ್ಲೇಶರ ಮನೆಯ ಲ್ಲಿರತಕ್ಕ ಭಾವಿಗಳನ್ನು ಇಳಿಸಿ ನೀರಿನ ಸೌಕರ್ಯಕ್ಕೆ ತಕ್ಕ ಏರ್ಪಾಡು ಮಾಡು ವರೆಂದು ಹಾರೈಸುತ್ತಾರೆ. ಪ್ರಜೆಗಳ ಕ್ಷೇಮಚಿಂತನೆಗಾಗಿ ನೇಮಕವಾಗಿರುವ ಅಧಿಕಾರಿಗಳೂ ಪ್ರಜಾಪಕ್ಷದ ಮೆಂಬರುಗಳೂ ಮೇಲ್ಕಂಡ ವಿಷಯದಲ್ಲಿ ಗಮನಿ ಸಿದರೆ ಪ್ರಜೆಗಳ ನೀರಿನ ಸಂಕಟ ತಪ್ಪೀತು.—ಪ್ರಥಮ ಆರ್ಯಮಹಿಳೆಯರ ಸಭೆಯು ಗೌರ್ನಮೆಂಟ್ ಗರಲ್ಸ್ ಸ್ಕೂಲಿನಲ್ಲಿ ಕೂಡಿತ್ತು. ಅಗ್ರಾಸನವನ್ನು ಮ|| ಕೃಷ್ಣಸ್ವಾಮಯ್ಯಂಗಾರ್ಯರ ಕುಮಾರ್ತೆಯಾದ ಶ್ರೀಮತಿ ಸುಂದರಮ್ಮನವರು ವಹಿಸಿ, ಈಗ ಪಾಶ್ಚಿಮಾತ್ಯ ದೇಶದಲ್ಲಿ ನಡೆಯುವ ಯುದ್ಧದ ವಿಷಯದಲ್ಲಿ ಸ್ವದೇಶೀಯರಾದ ಸೋಜರುಗಳ ಕಷ್ಟ ನಿವಾರಣೆಗಾಗಿ ಸಹಾಯಮಾಡುವಂತೆ ಬಹು ಸ್ವಾರಸ್ಯವಾದ ಉಪನ್ಯಾಸವನ್ನು ಮಾಡಿದರು. ಸಭಾಸದೆಯರು ಅದನ್ನು ಬಹು ಸಂತೋಷದಿಂದ ಅನುಮೋದಿಸಿ ಕೂಡಲೇ ಒಂದು ಚಂದಾಪಟ್ಟಿಯನ್ನು ಮಾಡಲಾಗಿ ಹಾಜರಿದ್ದ 47 ಮಂದಿ ಮಹಿಳೆಯರು 26 ರೂಪಾಯಿ ಚಂದಾ ಕೊಡಿಸಿದರು. ಅನಂತರ ಸಭೆಯು ಬರಖಾಸ್ತಾಯಿತು. ಇಂಥಾ ಧರ್ಮಕಾ ರ್ಯದಲ್ಲಿ ಆಸಕ್ತರಾಗಿ ಸ್ತ್ರೀಮಂಡಲಿಯವರನ್ನು ಪ್ರೋತ್ಸಾಹಿಸಿ ದ್ರವ್ಯ ಮತ್ತು ಪದಾರ್ಥಗಳ ಸಹಾಯಕ್ಕಾಗಿ ಪ್ರಯಾಸಪಟ್ಟ ನಮ್ಮ ಸಬ್ ಡಿವಿಜನ್ ಆಫೀಸ ರವರ ಬಾಲಕುಮಾರ್ತೆಯವರಾದ ಶ್ರೀಮತಿಯವರನ್ನು ಎಷ್ಟು ಶ್ಲಾಘಿಸಿದರೂ ಸಾಲದು.—ಮಧುಗಿರಿ ವೃತ್ತಾಂತ ಪತ್ರಿಕಾ ಚಂದಾದಾರರ ಪೈಕಿ ಅನೇಕರು ಇಂಪೀರಿಯಲ್ ಇಂಡಿಯನ್ ರಿಲೀಫ್ ಫಂಡಿಗೆ ಮೊದಲನೇ ಚಂದಾಪಟ್ಟಿಗೆ 12 ರೂಪಾಯಿ ಸಹಾಯ ಮಾಡಿರುವುದು ತುಂಬಾ ಸ್ತೋತ್ರಾರ್ಹವಾಗಿದೆ. ಉಳಿದ ವರು 2 ನೇ ಚಂದಾಪಟ್ಟಿಗೆ ಸಹಾಯಮಾಡುವರೆಂದು ಸ್ಥಳೀಯ ಏಜಂಟರವರು ನಿರೀಕ್ಷಿಸುತ್ತಾರೆ.

ಶಿಡ್ಲಘಟ್ಟದ ತಾ|| ಕೋಟಹಳ್ಳಿ.—ಪ್ರಜಾಪ್ರತಿನಿಧಿ ಸಭೆಯ ಮೆಂಬರು ಶಿಡ್ಲಘಟ್ಟದ ಮ|| ಎಸ್. ವೆಂಪಯ್ಯನವರ ಪ್ರೋತ್ಸಾಹದಿಂದ ಈ ಊರಿನಲ್ಲಿ ಸ್ಥಾಪಿತವಾಗಿರುವ ಪರಸ್ಪರಸಹಾಯ ಸಂಘವು ರೆಜಿಸ್ಟರಾಗಿ ಒಂದು ತಿಂಗಳು ಮಾತ್ರ ಆಗಿದ್ದಾಗ್ಯೂ ಇದರ ಸುತ್ತಣ ಆರು ಗ್ರಾಮದವರು ಇದಕ್ಕೆ ಸೇರಿ 600 ರೂಪಾಯಿ ವರೆಗೆ ಜಮೆ ಆಗಿರುವದೂ, ಅನುಕೂಲವಾದ ಬಾಬುಗಳಿಗಾಗಿ 270 ರೂಪಾಯಿ ಸಾಲವಾಗಿ ಖರ್ಚಾಗಿರುವದೂ ನೋಡಿದರೆ ಸಂತೋಷವಾಗು ತ್ತದೆ. ತಾ. 15 ರಲ್ಲಿ ಇಲ್ಲಿನ ಅಮಲ್ದಾರ್ ಮ|| ಥಾಂಸನ್ ಸಾಹೇಬರವರು ಈ ಊರಿಗೆ ದಯಮಾಡಿಸಿ ಜನರಲ್ ಮೀಟಿಂಗು ನಡಿಸಿ ಲೆಕ್ಕ ಪತ್ರಗಳನ್ನೂ, ನಾಲ್ಕಾರು ಗ್ರಾಮಗಳ ರೈತರು ಒಗ್ಗಟ್ಟಿನಿಂದ ಸೇರಿರುವದನ್ನೂ ನೋಡಿ ಸಂತೋ ಷಿಸಿ, ತಾವು ಆಗಾಗ್ಗೆ ದಯಮಾಡಿಸುತ್ತಾ ಇದರ ಅಭಿವೃದ್ಧಿಯನ್ನು ನಿರೀಕ್ಷಿಸು ವದಾಗಿ ಅಪ್ಪಣೆಕೊಡಿಸಿರುತ್ತಾರೆ.—ಅಲ್ಲದೆ ಇದಕ್ಕೆ ಸೇರಿದಂತೆ ಒಂದು ವ್ಯವ ಸಾಯ ಸಂಘವನ್ನೂ ಇದರ ಮೆಂಬರುಗಳು ಏರ್ಪಡಿಸಿಕೊಂಡು ವ್ಯವಸಾಯದ ಇಲಾಖಾ ಡೆಪ್ಯುಟಿ ಡೈರೆಕ್ಟರ್ ಸಾಹೇಬರಿಗೆ ಬರೆದುಕೊಂಡಿರಲು, ಅವರು ಇದೇ ತಾ. 13 ರಲ್ಲಿ ಇಲ್ಲಿಗೆ ದಯಮಾಡಿ ಮೀಟಿಂಗ್ ನಡಿಸಿ ಸಂಘದವರನ್ನು ಪರಿಚಯ ಮಾಡಿಕೊಂಡು ಅವರು ಮಾಡಬೇಕಾದ ಮಾದ್ರಿ ವ್ಯವಸಾಯ ವಿಧಾನಗಳನ್ನು ಕುರಿತು ಅಪ್ಪಣೆಕೊಡಿಸಿ ತಾವು ಪ್ರತಿ ತಿಂಗಳಲ್ಲೂ ದಯಮಾಡಿಸುತ್ತಾ, ಪಾಶ್ಚಿಮಾತ್ಯ ಯ ವ್ಯವಸಾಯದ ವಿಷಯದಲ್ಲಿ ತಿಳುವಳಿಕೆಯನ್ನು ಕೊಡುವದಾಗಿ ಅಪ್ಪಣೆ ಕೊಡಿಸಿರುತ್ತಾರೆ. ಅವರ ಅಪ್ಪಣೆಯಂತೆ ಕೆಲವು ಮಾದ್ರಿಗಳನ್ನು ಅನುಸರಿಸಲು ಈ ಸಂಘದವರು ಮುತುವರ್ಜಿ ಮಾಡುತ್ತಿರುವದೂ, ರಾಗಿಯನ್ನು ಕಣ ಮಾಡುವ ಯಂತ್ರವನ್ನು ತರಿಸಿಕೊಡುವಂತೆ ಕೇಳಿರುವದೂ ತುಂಬಾ ಸಂತೋಷ ವಾಗಿರುತ್ತೆ. ಮತ್ತು ಕಬ್ಬಿನ ಹಾಲು ತೆಗೆಯುವ ಯಂತ್ರವನ್ನು ಸ್ಥಾಪಿಸಬೇಕೆಂಬ ಉದ್ದೇಶದಿಂದ ಅರ್ಜಿ ಬರೆದುಕೊಂಡಿರಲು ಕೋಲಾರದ ಇನ್ ಛಾರ್ಜಿನ ಸೂಪ್ರಿಂಟೆಂಡಾದ ಮ|| ಎಫ್. ಎಸ್. ರಾಘವಾಚಾರ್ಯರೂ, ಮ|| ವೈ. ನರ ಸಿಂಗರಾಯರೂ ದಯಮಾಡಿ ಅದರ ಅನುಕೂಲತೆಗಳನ್ನು ತಿಳಿಸಿರುತ್ತಾರೆ. ಇದು ಕೊಂಚ ಸಾವಕಾಶವಾಗಿ ನೆರವೇರುವಂತೆ ಕಾಣುತ್ತೆ.—ಈ ಊರಿನಲ್ಲಿ ರಾತ್ರಿ ಪಾಠಶಾಲೆ ಸಹಾ ಏರ್ಪಡಿಸಿರುತ್ತಾರೆ. ಗ್ರಾಮಾಭಿವೃದ್ಧಿ ವಿಷಯದಲ್ಲಿ ಮುಂದಾಳ್ಗ ಳಾದ ಇವರು ಈ ನಾಲ್ಕಾರು ಹಳ್ಳಿಗಳಲ್ಲೂ ಒಂದೊಂದು ರೀಡಿಂಗ್ ರೂಂ ವಗೈರೆ ನವೀನವಾದ ಏರ್ಪಾಡುಗಳನ್ನು ಮಾಡುವವರಾಗಿದಾರೆ. ಇವರಂತೆಯೇ ಇತರ ಮೆಂಬರುಗಳೂ ಆಚರಿಸುವದಾದರೆ ಸರ್ಕಾರದವರ ಸಂಕಲ್ಪವು ನೆರವೇರು ವದರಲ್ಲಿ ಆಕ್ಷೇಪವಿಲ್ಲ.

ಕುಮಸೋಡು.—ಇಲ್ಲಿ ಪ್ಲೇಗ್ ಹುಟ್ಟಿ ಮೂರು ತಿಂಗಳು ಕಳೆಯಿತು. ಕೋಟೆಯಲ್ಲೂ, ಹೊಸಪೇಟೆಯಲ್ಲೂ, ಪೆದ್ದುಗಳಲ್ಲೂ ನಿಲುಗಡೆಯಿಲ್ಲದೆ ದಿನ ಕ್ಕೆ 3, 4, 5 ಜನಗಳು ಮೃತಪಡುತ್ತಾರೆ. ಈ ವರ್ಷ ಪ್ಲೇಗಿನಲ್ಲಿ ಈ ವರೀ ವಿಗೆ ಮೃತಪಟ್ಟವರು ನೂರು ಮಂದಿ ಮೇಲಿರಬಹುದು. ಈ ಊರಿಗೆ ಪ್ಲೇಗು ಬಂದರೆ 300-400 ಜನಗಳ ವರಿವಿಗೂ ಮೃತಪಡುತ್ತಿದ್ದರು. ಆದರೆ ಈ ವರ್ಷ ಜನಗಳು ಜಾಗ್ರತೆಯಾಗಿ ಊರು ಬಿಟ್ಟಿದ್ದರಿಂದಲೂ, ಅನೇಕರು ಇನಾಕ್ಯುಲೇಷನ್ ಮಾಡಿಸಿಕೊಂಡದ್ದರಿಂದಲೂ ಪ್ಲೇಗಿಗೆ ತುತ್ತಾಗಲಿಲ್ಲ. ಊರಲ್ಲಿ ಜನಗಳು ಅಲ್ಲ ಲ್ಲಿ ವಾಸವಾಗಿಯೇ ಇದಾರೆ. ವೈಸ್ ಪ್ರೆಸಿಡೆಂಟ್ ಮ|| ವೆಂಕಟಾದ್ರಿಯಯ್ಯಂಗಾರ್ಯ ಈ ಕಾಲದಲ್ಲಿ ಬಹಳ ಮುತುವರ್ಜಿ ವಹಿಸಿ ಅನೇಕ ಬಡವರಿಗೆ ಇನಾಕ್ಯುಲೇ ಷನ್ ಮಾಡಿಸಿ ಮದ್ದುಗಳನ್ನು ಕೊಡಿಸಿದ್ದಲ್ಲದೆ ಮುನಿಸಿಪಾಲಿಟಿಯ ವಿಷಯ ದಲ್ಲಿ ಬಹಳ ತೃಪ್ತಿಕರವಾಗಿ ಕಾರ್ಯಗಳನ್ನು ನಡಿಸುತ್ತಾ ಬಂದಿದಾರೆ.—ಕಳೆದ ವಾರ ದಿವಾನ್ ಸಾಹೇಬರವರು ಈ ಊರಿಗೆ ಚಿತ್ತೈಸಿದಾಗ ವೈಸ್ ಪ್ರೆಸಿಡೆಂಟರು ಮತ್ತು ಮ|| ಹೇಮನಾಥನಮುಂತಯ್ಯನವರು, ಇನ್ನು ಕೆಲವು ವರ್ತಕರು ಸೇರಿ ಈ ಊರಿನಲ್ಲಿ ಪ್ರತಿವರ್ಷವೂ ಜನಗಳು ನೀರಿನ ವಿಷಯದಲ್ಲಿ ತೊಂದರೆ ಪಡುವು ದನ್ನು ಬಹಳವಾಗಿ ಒತ್ತಿ ಹೇಳಿಕೊಂಡದ್ದರ ಮೇಲೆ ದಿವಾನ್ ಸಾಹೇಬರವರು ಕಸಿ ಕರ ಪಟ್ಟಿನಲ್ಲಿ ಹಾಕಿಸಿಕೊಡುತ್ತೇವೆಂತ ಪ್ರತ್ಯುತ್ತರ ದಯಪಾಲಿಸಿದರು. ಇವ ರ ಕಾಲದಲ್ಲಿ ಈ ಊರಿಗೆ ನಲ್ಲಿ ಹಾಕಿಸಿಕೊಟ್ಟರೆ ಅವರ ಹೆಸರು ಈ ಊರಿನಲ್ಲಿ ಶಾಶ್ವತವಾಗಿ ನಿಲ್ಲುವುದು. ಪ್ರಜೆಗಳು ನೀರಿನ ತೊಂದರೆ ಯಾವಾಗ ತಪ್ಪೀತೆಂತ ನಿರೀಕ್ಷಣೆ ಮಾಡಿಕೊಂಡಿದಾರೆ.—ಮುನಿಸಿಪಾಲಿಟಿಯವರು ಬರುವ ಸಾಲಿಗೆ ಊರಿನಲ್ಲಿರುವ ಸಾಧಾರಣವಾದ ಮನೆಗಳಿಗೆ ಮನೆ ಒಂದಕ್ಕೆ 8 ಆಣೆಯಂತೆಯೂ, ಗಾರೆಯಿಂದ ಕೂಡಿದ ಮಹಡಿ ಮನೆ ಮತ್ತು ಅಂಗಡಿಗಳಿಗೆ ಅವಕ್ಕೆ ತಕ್ಕಂತೆ 2, 3, 4 ರೂಪಾಯಿಯೂ ಜಾಸ್ತಿ ಕಂದಾಯ ಹಾಕಿರುತ್ತಾರೆ. ಯಾವ ಡಿಸ್ಟ್ರಿ ಕ್ಟುಗಳಲ್ಲಿಯೂ ಈ ರೀತಿ ಇಲ್ಲದೆ ಇಲ್ಲಿ ಮಾತ್ರ ಹೀಗೆ ಕಂದಾಯ ಹೆಚ್ಚಿಸಿರು ವುದು ಯಾಕೋ ತಿಳಿಯದು.—ಈ ಊರಿನ ಕೆರೆ ತುಂಬದೆ ಕರೀ ಫಸಲು ಸುತ ರಾಂ ಇಲ್ಲವೇ ಇಲ್ಲ. ರೈತರೆಲ್ಲಾ ದಂಡದ ಕಂದಾಯ ತೆರಬೇಕಾದ ಗತಿ ಬಂತು. ಕೆರೆಯಲ್ಲಿ ಅಲ್ಪಸ್ವಲ್ಪ ನೀರು ಇದೆ. ಈ ನೀರನ್ನು ತೋಟಗಳಿಗೆ ಬಿಟ್ಟು ಕಳೆ ಯುತ್ತಾ ಇದಾರೆ. ಮುಂದ ಜೀವರಾಸಿಗಳಿಗೆ ನೀರಿನ ತೊಂದರೆ ಹೇಳತೀರ ದಷ್ಟು ಆದೀತು.—ಹಿಂದೆ ಇಷ್ಟ ಅಮಲ್ದಾರ್ರು ಕೆರೆಗಳ ನೀರಿನ ವಿಷಯದಲ್ಲಿ ಬಹಳ ಜೋಪಾನವಾಗಿ ಭದ್ರಪಡಿಸುತ್ತಾ ಇದ್ದರು. ಈಗಿನ ಅಮಲ್ದಾರ್ರು ಕೆರೆ ರವಿಟ್ಟು ಬಾಗಾಯ್ತುಗಳಿಗೆ ನೀರು ಬಿಡದಂತೆ ಅಡ್ಡಿ ಪಡಿಸಿದಲ್ಲಿ ಜೀವರಾಶಿಗಳಿಗೆ ಎಷ್ಟೋ ಕ್ಷೇಮವಾದೀತು.

ಹೊಸ ನೇಗಿಲುಗಳೂ, ಕೋಆಪರೇಟಿವ್ ಸೊಸೈಟಿಗಳೂ.

ನಮ್ಮ ಸರ್ಕಾರದವರು ಗ್ರಾಮಾಂತ್ರದ ಎಲ್ಲಾ ಕೋಆಪರೇಟಿವ್ ಸೊಸೈಟಿಗಳ ಸೆಕ್ರೆಟರಿಗಳಿಗೂ ತಿಳಿಸುವುದೇನಂದರೆ—

ಈಗ ನಮ್ಮ ರೈತಾಪಿ ಜನಗಳು ಅವರ ಬೇಸಾಯದ ಕಸಬುಗಳಲ್ಲಿ ಬಹಳ ಪುರಾತನದಿಂದ ನಡೆದುಬಂದಂಥ ನೇಗಿಲು ವಗೈರೆ ವ್ಯವಸಾಯದ ಮುಟ್ಟು ಗಳನ್ನೇ ಉಪಯೋಗಿಸುವದರಿಂದ ಅನೇಕ ವಿಧಗಳಲ್ಲಿ ಅವರುಗಳಿಗೆ ನಷ್ಟವೂ ಕಾಲವ್ಯಯವೂ ಉಂಟಾಗುತ್ತಿರುವುದಷ್ಟೆ. ಇದನ್ನು ತಪ್ಪಿಸಿ ನಮ್ಮ ರೈತರುಗಳನ್ನು ಅಭಿವೃದ್ಧಿಸ್ಥಿತಿಗೆ ತರಲು ಸರ್ಕಾರದವರು ಅನೇಕ ಅನುಕೂಲಗಳನ್ನು ಕಲ್ಪಿಸಿರುತ್ತಾರೆ. ಇದರಲ್ಲಿ ರೈತರುಗಳಿಗೆ ಸುಲಭ ಕ್ರಯದಲ್ಲಿ ಸಣ್ಣ ಸಣ್ಣ ವ್ಯವಸಾಯದ ಮುಟ್ಟುಗಳನ್ನು ಒದಗಿಸಿಕೊಡುವದು ಒಂದು. ಈ ಶ್ಲಾಘನೀಯವಾದ ಕೆಲಸದಲ್ಲಿ ನೀವೂ, ನಿಮ್ಮ ಸೊಸೈಟಿಯ ಮೆಂಬರುಗಳೂ ಸರ್ಕಾರದವರಿಗೆ ಸಹಾಯಮಾಡಿ ಅವರ ಉದ್ದೇಶವನ್ನು ನೆರವೇರಿಸುವುದಲ್ಲದೆ ನೀವೂ ಕೂಡ ಅನೇಕ ಪ್ರಯೋಜನಗಳನ್ನು ಹೊಂದಬಹುದು.

ಈಗ ನಿಮ್ಮ ಕಮಿಟಿಯವರು ಒಪ್ಪಿದಲ್ಲಿ ನಿಮ್ಮ ಸೊಸೈಟಿಗೆ ಒಂದೊಂದಕ್ಕೆ ಸುಮಾರು ಹದಿನೇಳೂವರೆ ರೂಪಾಯಿ ಬೆಲೆ ಬಾಳುವ ಮೂರು ಒಳ್ಳೇ ನೇಗಿಲುಗಳನ್ನು ಕಳುಹಿಸಲು ಏರ್ಪಾಡು ಮಾಡಲಾಗುತ್ತೆ. ಇದರ ಖರೀದಿಯನ್ನಾಗಲೀ ಅಥವಾ ಇದನ್ನು ಸಾಗಿಸುವ ಖರ್ಚು ಮುಂತಾದದ್ದು ಯಾವದನ್ನೂ ನೀವು ಕೊಡಬೇಕಾದ್ದಿಲ್ಲ. ಹೀಗೆ ಮುಫತ್ತಾಗಿ ನೇಗಿಲುಗಳನ್ನು ನಿಮ್ಮ ಸೊಸೈಟಿಗೆ ಕಳುಹಿಸುವದಲ್ಲದೆ ಅದನ್ನು ಉಪಯೋಗಿಸುವ ಕ್ರಮವನ್ನೂ ಅದರಿಂದ ಉಂಟಾಗುವ ಪ್ರಯೋಜನಗಳನ್ನೂ ತೋರಿಸಲು ವ್ಯವಸಾಯದ ಇಲಾಖೆಯವರು ಒಬ್ಬರನ್ನು ಕೆಲವು ದಿನಗಳ ಮಟ್ಟಿಗೆ ನಿಮ್ಮ ಗ್ರಾಮಕ್ಕೆ ಕಳುಹಿಸುತ್ತಾರೆ. ನೀವು ಆ ಕಾಲಕ್ಕೆ ಎಲ್ಲಾ ಮೆಂಬರುಗಳನ್ನೂ ಸೇರಿಸಿ ಆ ನೇಗಿಲನ್ನೂ ಅದರ ಪ್ರಯೋಜನಗಳನ್ನೂ ಸ್ವತಃ ನೋಡಬಹುದು. ಮತ್ತು ಯಾರಿಗಾದರೂ ಬೇಕಾಗಿದ್ದಲ್ಲಿ ಅವರಿಂದ ಒಂದು ಅಪ್ಲಿಕೇಷನ್ ತೆಗೆದು ನಮಗೆ ಕಳುಹಿಸಬಹುದು. ಮೂರಕ್ಕೆ ಜಾಸ್ತಿ ಇಲ್ಲದೆ ಅಪ್ಲಿಕೇಷನ್ ಬಂದಲ್ಲಿ ನಿಮಗೆ ಕಳುಹಿಸುವ ಮೂರು ನೇಗಿಲುಗಳನ್ನೂ ಅದಕ್ಕೆ ಆಗುವ ಬೆಲೆಯಂತೆ ಮಾರಿ ಆ ಹಣ ಕೂಡ್ಲೆ ನಮಗೆ ಕಳುಹಿಸುವದು. ಹಾಗೆ ಯಾರಿಗೂ ಬೇಕಾಗದೇ ಇದ್ದಲ್ಲಿ ಮೂರು ತಿಂಗಳು ಆದ ನಂತರ ನಾವು ಆ ನೇಗಿಲುಗಳನ್ನು ವಾಪಸು ತರಿಸಿಕೊಳ್ಳುತ್ತೇವೆ. ಈ ನೇಗಿಲುಗಳಲ್ಲಿ ಗುಳಗಳು ಕೆಟ್ಟುಹೋದಲ್ಲಿ ಸುಮಾರು ಒಂದು ರೂಪಾಯಿಗೆ ಬೇರೆ ಒಂದು ಹೊಸ ಭಾಗವನ್ನು ಕೊಂಡುಕೊಳ್ಳಬಹುದು.

ಈ ವಿಷಯದಲ್ಲಿ ನೀವೂ ಮತ್ತು ನಿಮ್ಮ ಕಮಿಟಿಯವರೂ ಬಹಳ ಮುತುವರ್ಜಿ ತೆಗೆದುಕೊಳ್ಳುತ್ತೀರೆಂದು ನಾವು ನಂಬಿದೇವೆ. ಈ ರೀತಿಯಾಗಿ ಆಗಲೇ ಮೂರು ನಾಲ್ಕು ಕಡೆಗಳಲ್ಲಿ ಈ ನೇಗಿಲುಗಳ ಉಪಯೋಗವನ್ನು ಪ್ರದರ್ಶಿಸಿದೆ. ನಿಮ್ಮಲ್ಲಿಯೂ ಹಾಗೆ ಮಾಡುವುದಕ್ಕೆ ತಕ್ಕ ಏರ್ಪಾಡು ಮಾಡಿ ನಮಗೆ ರಿಪೋರ್ಟು ಮಾಡಿದಲ್ಲಿ ಮುಂದಿನ ಕೆಲಸಗಳನ್ನು ಮಾಡಲಾಗುತ್ತೆ.

ನಿಮ್ಮಿಂದ ಜವಾಬು ಬಂದನಂತರ ಬರುವ ಏಪ್ರೈಲ್ ಮೇ ತಿಂಗಳುಗಳಲ್ಲಿ ಮುಂಗಾರು ಮಳೆ ಬಿದ್ದನಂತರ ನೆಲ ಹದವಾದಾಗ ಉಳುಮೆ ಮಾಡಿ ತೋರಿಸುವದಕ್ಕಾಗಿ ಕಳುಹಿಸಲಾಗುತ್ತೆ.

ಪ್ರಶ್ನೋತ್ತರ ಲೇಖ್ಯಬೋಧಿನಿ.

ಐದನೆಯ ಮುದ್ರಣ. ದಿವ್ಯವಾದ ಕಾಗದ, ಗಟ್ಟಿ ಅಟ್ಟೆ.—
ಕ್ರಯ ಒಂದು ರೂಪಾಯಿ ಎಂಟಾಣೆ ಮಾತ್ರ.

ಕ್ಷೇಮಸಮಾಚಾರ ಕಾಗದ, ಪತ್ರ, ದಾವೆ, ರಶೀದಿ, ನೋಟೀಸು, ಮುಂತಾದವುಗಳನ್ನು ಮರ್ಯಾದೆಯರಿತು ಬರೆವ ರೀತಿ, ಸಿವಿಲ್, ರೆವಿನ್ಯೂ, ಕ್ರಿಮಿನಲ್, ಈ ಸಂಬಂಧವಾದ ಎಲ್ಲ ನಡೆಯ ತಿಳುವಳಿಕೆಗಳು, ಎಲ್ಲ ಬಗೆಯ ವ್ಯವಹಾರಗಳನ್ನೂ ಪ್ರಶ್ನೋತ್ತರ ರೂಪವಾಗಿ ಬರೆದಿರುವದರಿಂದ ಎಲ್ಲರೂ ಬಹು ಸುಲಭವಾಗಿ ತಿಳಿದುಕೊಳ್ಳಬಹುದು. [282-2]

ಕೆಲವು ಪ್ರತಿಗಳೇ ಉಳಿದಿವೆ! ಬೇಗ ಬರೆಯಿರಿ!! ಬೇಗ ಬರೆಯಿರಿ!!!

ಕ್ರಯ ಒಂದು ರೂಪಾಯಿ ಎಂಟಾಣೆ ಮಾತ್ರ.

ವಿಳಾಸ—ಭಾರತಿ ಸಂಪಂಗಿರಾಮ,
ಸಂಪಾದಕ, "ಸವಿನುಡಿ," ಚಿಕ್ಕಪೇಟೆ, ಬೆಂಗಳೂರು ಸಿಟಿ.

ಮೈಸೂರು ಬ್ಯಾಂಕ್, ಲಿಮಿಟೆಡ್.

ನೋಟೀಸ್.

ಬ್ಯಾಂಕಿನ ಷೇರುಗಳ ಕಂತು ಮೊಬಲಗು ಪಾವತಿಯಾಗದೆ ಇರುವ 167 ಷೇರುಗಳನ್ನು ಹೆಚ್ಚು ಪ್ರೀಮಿಯಂ ಕೊಡತಕ್ಕವರಿಗೆ ಮಾರಬೇಕೆಂದು ಡೈರೆಕ್ಟರುಗಳು ತೀರ್ಮಾನಿಸಿರುತ್ತಾರಾಗಿ ಷೇರುಗಳನ್ನು ತೆಗೆದುಕೊಳ್ಳಲು ಅಪೇಕ್ಷೆಯುಳ್ಳವರು ಮೇಲ್ಕಂಡ ಪೂರಾ ಷೇರುಗಳಿಗಾಗಲಿ, ಅಥವಾ 5 ಷೇರುಗಳಿಗೆ ಕಮ್ಮಿ ಇಲ್ಲದಂತೆ ಆಗಲಿ, ತಮ್ಮ ಅಪ್ಲಿಕೇಷನ್‌ಗಳನ್ನು ಇದೇ ಮಾಹೆ 21 ನೇ ತಾರೀಖಿನೊಳಗಾಗಿ ಬ್ಯಾಂಕಿಗೆ ಕೊಡಬಹುದೆಂದು ಈ ಮೂಲಕ ತಿಳಿಸಿರುತ್ತೆ.

ಸದರಿ ಅಪ್ಲಿಕೇಷನ್‌ಗಳಲ್ಲಿ 100 ರೂಪಾಯಿಗಳ 1 ಷೇರಿಗೆ 50 ರೂಪಾಯಿಗಳು ಕೊಡಬೇಕಾಗಿರುವದಕ್ಕೆ ಎಷ್ಟು ಜರೀದಿಗೆ ತೆಗೆದುಕೊಳ್ಳಲು ಇಷ್ಟವುಳ್ಳವರಾಗಿರುತ್ತಾರೆಂಬುವದನ್ನೂ ನಮೂದಿಸಬೇಕು.

(By order)

W. C. Rose,
[286-1] *Manager.*

NOTICE

Sealed tenders for the supply of good and cleaned kulthi required for the horses, etc., at the Kunigal Stud Farm, will be received up to 2 P.M. on Saturday, the 2nd January, 1915, in the office of the Military Secretary to His Highness the Maharaja of Mysore.

Conditions

1. About 2,000 pallas of kulthi will be required, which may be supplied at 170 pallas a month, or the whole lot at once before the end of January, 1915.
2. The kulthi is to be delivered at the premises of the Government Stud Farm, Kunigal.
3. The tenders should be accompanied by currency notes for Rs. 500, which will be forfeited to Government, if the tenderer, whose tender is accepted, fails to execute the agreement for the due fulfilment of the contract. If the tender is not accepted, the amount will be refunded.

[237-1] **(Sd) A. A. JONES, LT.-COL.,**
Military Secretary.

ಓರಿಯಂಟಲ್ ಗೌ॥ ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು.. ....ರೂ. 4,46,00,000
ಕಂಪನಿಯಿಂದ ಪಾವತಿ ಆಗಿರುವಷು ,, 4,00,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ.—ಮ॥ ಎಂ. ಎಸ್. ರಂಗಾಚಾರಿ, ಚೀಫ್ ಏಜೆಂಟ್, ಬೆಂಗಳೂರು; ಮ॥ ಎಂ. ಎಸ್. ನಂಜಪ್ಪನವರು ಅಥವಾ ಮ॥ ವೆಂಕಟಸುಬ್ಬಯ್ಯನವರು, ಕಂಪನಿ ಏಜೆಂಟರು, ಮೈಸೂರು; ಅಥವಾ
[221-12] ಬ್ರಾಂಚ್ ಸೆಕ್ರೆಟರಿ, ಮದರಾಸ್.

ರಾಮ್‌ಭಾನ್ (ರೆಜಿ.)

ಅದ್ಭುತವಾದ ಗುಣ! ಅವಶ್ಯವಾದ ಔಷಧ!

ಒಂದಾವರ್ತಿ ಪರೀಕ್ಷಿಸಿದರೆ ಗೊತ್ತಾಗುವುದು!

ನಮ್ಮ ರಾಮ್‌ಭಾನ್ ಎಂಬೀ ಔಷಧವು ಎಲ್ಲಾ ರೋಗಗಳನ್ನೂ ಗುಣಮಾಡುವುದು ಖಂಡಿತ. ಲೇಪಕ್ಕೂ ಸೇವನೆಗೂ ಆಗುತ್ತೆ. ಎರಡು ತೊಟ್ಟು ರಾಮ್‌ಭಾನನ್ನು ಬೆಳ್ಳೀದಲೆಗೆ ಸವರಿಯೋ, ಬಿಸಿನೀರಿಗೆ ಹಾಕಿಯೋ ಬೆಳಿಗ್ಗೆ ಸಾಯಂಕಾಲ ಸೇವಿಸಿದರೆ ಅಜೀರ್ಣ, ವಾಂತಿಭೇದಿ, ಭೇದಿ, ಪೋಕರಿಕೆ, ಕೆಮ್ಮು, ಜ್ವರ, ಹೊಟ್ಟೆನೋವು, ಮೊದಲಾದ ಎಲ್ಲಾ ಕಾಯಿಲೆಗಳನ್ನೂ ಖಂಡಿತ ಸಂಪೂರ್ಣವಾಗಿ ಗುಣಮಾಡುತ್ತೆ. ಪ್ಲೇಗ್ ಗಡ್ಡೆ, ತಲೆನೋವು, ಹುಳುಕಡ್ಡಿ, ವಾಯುನೋವು, ಕೀಲುನೋವು, ಗಾಯಗಳಿಗೆ 2 ತೊಟ್ಟು ಹಚ್ಚಿದರೆ ವಾಸಿಯಾಗುತ್ತೆ. 2 ತೊಟ್ಟು ಬಟ್ಟೆಗೆ ಹಾಕಿ ಹಲ್ಲಿನ ಮಧ್ಯೆ ಇಟ್ಟರೆ ಹಲ್ಲುನೋವು ಹೋಗುತ್ತೆ. ಚೇಳು ಮುಂತಾದ ವಿಷಜಂತು ಕಡಿದರೂ ಈ ಔಷಧ ಖಂಡಿತ ಬಾಧೆಯನ್ನು ತಪ್ಪಿಸುತ್ತೆ. ರಾಮ್‌ಭಾನನ್ನು ಮಕ್ಕಳಿಗೂ ಹಾಲಿನಲ್ಲಿ ಕುಡಿಸಲೂ, ಲೇಪಿಸಲೂ ಬಹುದು.

ಕ್ರಯ ಒಂದು ಬಾಟ್ಲಿಗೆ 10 ಆಣೆ ಮಾತ್ರ [285-1]

ನಮ್ಮ ವಿಳಾಸ—ಕೇಶವಜಿ ದೇವಚಂದ್,
ರಾಮ್‌ಭಾನ್ ಏಜನ್ಸಿ, ಸಾವಕ್ಕಾರ್ ಪೇಟೆ, ಮದರಾಸ್.

ಅರ್ಧಕ್ರಯ ಮಾತ್ರ! ಈ ತಿಂಗಳು ಮಾತ್ರ!

ನಿಕ್ಕಲ್ ಸಿಲ್ವರ್ 8 ದಿನಕ್ಕೆ ಕೀಕೊಡುವ ವಾಚ್.

ಅಸಲ್ ಕ್ರಯ ರೂ. 16; ಈಗ ವಿ.ಪಿ. ಖರ್ಚು ಸೇರಿ ರೂ. 8 ಗೆ ಕಳುಹಿಸುತ್ತೇವೆ. 10 ವರುಷದ ಗ್ಯಾರಂಟಿ!

ಎರಡು ಮೂರು ರೂಪಾಯಿ ಕ್ರಯದ ಬೊಂಬೆ ಗಡಿಯಾರಗಳನ್ನು ಕೊಂಡು ಹಣ ಕಳಕೊಳ್ಳಬೇಡಿ. 8 ದಿನಕ್ಕೆ ಕೀ ಕೊಡುವ ಈ ವಾಚು ಬಹಳ ಕಾಲ ಕೆಲಸಮಾಡುತ್ತದೆ. ಘಟ್ಟಿಯಾಗಿರುತ್ತದೆ. ಒಂದು ನಿಮಿಷವಾದರೂ ಹೆಚ್ಚು ಕಮ್ಮಿ ಇಲ್ಲದಂತೆ ಕಾಲ ತೋರಿಸುತ್ತದೆ. ವಾರಕ್ಕೆ ಒಂದೇ ಸಲ ಬೇಗದ ಕೈ ತಿರುಗಿಸಿದರೆ ಸಾಕು. ನಮಗೆ ಇಂಗ್ಲಿಷಿನಲ್ಲೇ ಕಾಗದ ಬರೆದು, ನಿಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ತಿಳಿಸಬೇಕು.

ನಮ್ಮ ವಿಳಾಸ:—ದಿ ಮಾರುತಿ ಏಜನ್ಸಿ,
[266-4] ಪಿ. ಓ. ಬಾಕ್ಸ್ 330, ಬೊಂಬಾಯಿ.

ನೋಟೀಸು.

ನಂಜನಗೂಡು ಮುನ್ಸಿಫ್ ಕೋರ್ಟಿನಲ್ಲಿ.

1914–15 ನೇ ಇಸವಿ O. S. No. 211.

ವಾದಿ.—ನಂಜನಗೂಡು ತಾಲ್ಲೂಕು ಗಟ್ಟವಾಡಿ ಗ್ರಾಮದಲ್ಲಿರುವ ಕಮ್ಮಾರಿಗಳ ಜಾತಿ ಸುಬ್ಬಣ್ಣನ ಮಗ ಸಿದ್ದಲಿಂಗಯ್ಯ.

ಪ್ರತಿವಾದಿಗಳು.—ಡಿಟೋ ಗ್ರಾಮದಲ್ಲಿರುವ ಸುಬ್ಬೇಗೌಡನ ಮಗ ಹೊನ್ನೆಗೌಡ ವಗೈರೆ 14 ಜನ.

ಇದರಿಂದ ನಂಜನಗೂಡು ತಾಲ್ಲೂಕು ಗಟ್ಟವಾಡಿಗ್ರಾಮದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—

ಮೇಲ್ಕಂಡ ನಂಬರಿನಲ್ಲಿ ವಾದಿಯು ಗಟ್ಟವಾಡಿ ಗ್ರಾಮದಲ್ಲಿರುವ ಸರ್ವೆ ನಂಬರುಗಳು 271–276 ನೇ ಜಮೀನುಗಳು ತನ್ನ ಹಕ್ಕಿನದೆಂತಲೂ, ಈ ಜಮೀನುಗಳ ಪಟ್ಟೆಯನ್ನು ಮೇಲ್ಕಂಡ ಪ್ರತಿವಾದಿಗಳು ಡಿಟೋ ಗ್ರಾಮದಲ್ಲಿರುವ ನಂಜುಂಡೇಶ್ವರ, ಸಿದ್ದೇಶ್ವರ ಈ ದೇವರುಗಳ ಹೆಸರಿಗೆ ಮಾಡಿಸಿರುತ್ತಾರೆಂತಲೂ, ಹೀಗೆ ಪ್ರತಿವಾದಿಗಳು ತಾಲ್ಲೂಕು ಅಮಲ್ದಾರ್ರಿಗೆ ಮತ್ತು ಇತರ ಗ್ರಾಮಸ್ಥರು ಸೇರಿ ಈ ಜಮೀನುಗಳು ದೇವರಿಗೆ ಬಿಟ್ಟದ್ದು ಎಂದು ಹೇಳಿ ಪಟ್ಟೆ ಮಾಡಿಸಿರುವದು ತಪ್ಪೆಂತಲೂ, ಅವುಗಳು ದೇವರಿಗೆ ಬಿಟ್ಟದ್ದಲ್ಲವೆಂತಲೂ, ಡಿಟೋ ಜಮೀನುಗಳು ವಾದಿಗೆ ಸೇರಿದ್ದೆಂತ ಉದಹರಿಸಿ ವಾದಿ ಹೆಸರಿಗೆ ಮೇಲ್ಕಂಡ ಪಟ್ಟೆಯನ್ನು ಬದಲಾವಣೆ ಮಾಡಬೇಕೆಂದು ಡಿಕ್ಲರೇಟರಿ ದಾವಾವನ್ನು ತಂದಿರುತ್ತಾನೆ. ಮೇಲ್ಕಂಡ ಜಮೀನುಗಳಲ್ಲಿ ಇವುಗಳನ್ನು ದೇವರಿಗೆ ಬಿಟ್ಟದ್ದೆಂದು ಹೇಳುವ ಮೇಲ್ಕಂಡ ಪ್ರತಿವಾದಿಗಳಲ್ಲದೆ ಇನ್ಯಾರಾದರು ಗ್ರಾಮದಲ್ಲಿ ಇದ್ದಲ್ಲಿ ಅವರುಗಳು ಪಾರ್ಟಿಯಾಗಿ ಸೇರತಕ್ಕ ಸಂದರ್ಭದಲ್ಲಿ ಈ ಕೋರ್ಟಿಗೆ 1915 ನೇ ಇಸವಿ ಜನವರಿ ಏಳನೇ ತಾರೀಖಿನಲ್ಲಿ ದಿವಿ 11 ಗಂಟೆಗೆ ಹಾಜರಾಗತಕ್ಕದ್ದು.

ತಾ. 14-12-14, ನಂಜನಗೂಡು. [288-1] **M. NARASAPPAYYA,**
Munsiff.



ಡಿಸೆಂಬರ್ ಮಹೋತ್ಸವದ ಕೈಗಡಿಯಾರ

ಅರ್ಧ ಕ್ರಯ ರೂ. 1–14–0

ಇದೇ ಡಿಸೆಂಬರ್ ಹಬ್ಬದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದ ಕೈಗಡಿಯಾರವನ್ನು ಡಿಸೆಂಬರ್ ಒಳಗೆ ತರಿಸಿಕೊಳ್ಳುವವರಿಗೆ ರೂಪಾಯಿ 1-14-0 ಆಣೆಗೆ ಕೊಡಲ್ಪಡುತ್ತೆ. [99-26]

ವಿಳಾಸ—ವಿ. ಕೃಷ್ಣಸ್ವಾಮಿ ಮೊದಲಿಯಾರ್, ನಂ.27 ಬಂದರ್ ಬೀದಿ, ಜಿ.ಟಿ., ಮದರಾಸು.

ಬಹು ಶ್ರೇಷ್ಠವಾದ ವಾಚ್! ನಾಣ್ಯವುಳ್ಳ ವಾಚ್!!

ರೈಲ್ವೆ ರೆಗ್ಯುಲೇಟರ್ ವಾಚ್.

ಬೆಲೆಯುಳ್ಳ, ಅನೇಕ ವರ್ಷಗಳ ಪರ್ಯಂತರ ಬಾಳಿಕೆ ಬರುವ, ಸುಲಭ ಕ್ರಯವುಳ್ಳ ವಾಚ್ ಇದೇ. ಘನವಂತರೇ, ನಾವು ಕಾಲಕ್ರಮವಾಗಿ ಹಲವು ಬಗೆ



ಅಂದರೆ ರೂ. 1-12-0; ರೂ. 2-4-0; ರೂ. 3-0-0, ಈ ರೀತಿಯಾಗಿ ರಾಸ್‌ಕೋಪ್ ಸಿಸ್ಟಂ ಲೀವರ್ ಮತ್ತು ರೈಲ್ವೆ ಗಾರ್ಡ್ ವಾಚ್ ಮುಂತಾದ ವಾಚ್‌ಗಳಿಗಿಂತಾ ಇದು ಬಹು ಶ್ರೇಷ್ಠವಾದದ್ದು. ಯಾಕಂದರೆ ಲೀವರ್ ಕೆಲಸದಿಂದ ತಯಾರಾದದ್ದು. ಬಲಿಷ್ಠವಾದ ಬಾಳಿಕೆ ಬರುವ ಚಕ್ರಗಳುಳ್ಳದ್ದು. ಬಿರುದಾಂಕಿತವಾದ ಎನಾಮಲ್ ಡಯಲ್ ಉಳ್ಳದ್ದು. ಅಲ್ಲದೇ ಒಳಗೆ ಕೆಂಪು ಸಿಕ್ಕಿಸಿರುತ್ತೆ. ಆದಕಾರಣವೇ ಇದಕ್ಕೆ ಯಾವ ವಿಧವಾದ ಬಹುಮಾನಗಳೂ ಇಲ್ಲ. ವಾಚೇ ಬಹು ಶ್ರೇಷ್ಠವಾದದ್ದು. ಮಣ್ಣು ಧೂಳು ಸೇರದಂತೆ ಗ್ಲಾಸ್ ಡೋಮ್ ಅಂದರೆ ಕನ್ನಡಿ ಸಹಾ ಒಳಗೂ ಮುಚ್ಚಿರುತ್ತೆ. ಇದರ ಕ್ರಯ ಸುಂದರವಾದ ವಾಚ್ ಸರಪಣಿ, ಉತ್ತರ ಮುಖಗಳ ಸಮೇತ ಕ್ರಯ ರೂ. 3-8-0 ಮಾತ್ರ. [259.4]

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.

ವಿಳಾಸ—ಬಿ. ಆರ್. ವೆಂಕಟರಮಣ ಅಂಡ್ ಕಂಪೆನಿ,
ನಂ. 7, ಕೋಪ್ ವೆಂಕಟಾಚಲಯ್ಯರ್ ಬೀದಿ, ಮದರಾಸು.

ಜಾಂನಗರದ ಸುಪ್ರಸಿದ್ಧ ರಾಜವೈದ್ಯರ ಅನುಭವಸಿದ್ಧ ಔಷಧಗಳು.

ಗರ್ಭಾಮೃತ ಚೂರ್ಣ—ಇದು ಸ್ತ್ರೀಯರ ಗರ್ಭಾಶಯದ ಸರ್ವರೋಗಗಳನ್ನು ಪರಿಹರಿಸಿ ಗರ್ಭಧರಿಸುವಂತೆ ಮಾಡುತ್ತದೆ. ಸ್ತ್ರೀಯರ ಎಲ್ಲಾ ತರಹೆಯ ವ್ಯಾಧಿಗಳಿಗೂ ಅಮೃತತುಲ್ಯವಾದದ್ದು. ಒಂದು ಡಬ್ಬಿ ಕ್ರಯ ರೂ. 2-0-0. ಬಾಲಪುಷ್ಟಿ ಕರಣವಟಿಕಾ—ಮಕ್ಕಳಿಗೆ ಬರುವ ಸಕಲವಿಧವಾದ ರೋಗಗಳನ್ನು ಪರಿಹರಿಸಿ ಅವುಗಳಿಗೆ ದೇಹಪುಷ್ಟಿಯನ್ನು ಆಯುರಾರೋಗ್ಯವನ್ನು ಕೊಟ್ಟು ಕಾಪಾಡುತ್ತದೆ. 120 ಮಾತ್ರೆಗಳ ಡಬ್ಬಿ ಕ್ರಯ ರೂ. 1-0-0. ಮಹಾಜ್ವರಾಂಕುಶ—ಇದು ಜೀರ್ಣಜ್ವರ ಮುಂತಾದ ಬಹಳ ಕಠಿನವಾದ ಜ್ವರಗಳನ್ನು ಕೂಡ ನಿವೃತ್ತಿಮಾಡಿ ಅಶಕ್ತಿಯನ್ನು ಹೋಗಲಾಡಿಸಿ ಸಂಪೂರ್ಣ ಬಲವನ್ನು ಕೊಡುತ್ತದೆ. 24 ಮಾತ್ರೆಗಳ ಡಬ್ಬಿ ಕ್ರಯ ರೂ. 1-0-0. ಸುಧಾಸಾಗರ ಅವಲೇಹ—ರಕ್ತ ಕೆಡುವದರಿಂದುಂಟಾಗುವ ಸಕಲ ರೋಗಗಳನ್ನು ಪರಿಹರಿಸಿ ರಕ್ತವನ್ನು ಶುದ್ಧಿಮಾಡುವದರಲ್ಲಿ ಸಾಟಿಯಿಲ್ಲದ ಆಯುರ್ವೇದ ಸಾಲ್ಸಾ. ಡಬ್ಬಿ ಕ್ರಯ ರೂ. 1-8-0. ಶ್ವಾಸಕಾಸಾರಿ ಅವಲೇಹ—ಉಬ್ಬಸ, ಕೆಮ್ಮು, ಶ್ವಾಸ ಮತ್ತು ಭಯಂಕರವಾದ ಕ್ಷಯರೋಗಕ್ಕೂ ಕೂಡ ಇದು ಅಮೃತತುಲ್ಯವಾದ ಔಷಧಿಯು. ಒಂದು ಡಬ್ಬಿ ಕ್ರಯ ರೂ. 1-8-0.

ನಮ್ಮ ಔಷಧಾಲಯದ ಔಷಧಿಗಳ ದೊಡ್ಡ ಕೇಟಲಾಗು ಕೋರಿದವರಿಗೆ ಕ್ರಯವು ಅಂಚೆ ಹಾಸಲು ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವದು.

ವಿಳಾಸ—ರಾಜವೈದ್ಯ ನಾರಾಯಣಜೀ ಕೇಶವಜೀ,
[247–6] 20, ಚೀನಾಬಜಾರು ರೋಡು, ಮದರಾಸು.

BRAHMAPPA TAVANAPPANAVAR,

Merchant & Commission Agent.

Agent to Messrs. Currimbhoy Ebrahim & Co's Mills, BOMBAY.

ನಾವು ಮುಂಬೈ ಮೆಸ್ಸರ್ಸ್ ಕರೀಂಬಾಯ್ ಇಬ್ರಾಹಿಂ ಅಂಡ್ ಕಂಪೆನಿಯವರ ಬಾಬತು, ಮೆಸ್ಸರ್ಸ್ ಫಜುಲ್ಭಾಯ್ ಮಿಲ್ಸ್ ಲಿಮಿಟೆಡ್ ಮುಂಬೈ, ದಿ ಕ್ರಿಸೆಂಟ್ ಮಿಲ್ಸ್ ಲಿಮಿಟೆಡ್ ಮುಂಬೈ, ಕರೀಂಬಾಯ್ ಮಿಲ್ಸ್ ಲಿಮಿಟೆಡ್ ಮುಂಬೈ, ದಿ ಇಂಡಿಯನ್ ಬ್ಲೀಚಿಂಗ್, ಡೈಯಿಂಗ್ ಅಂಡ್ ಪ್ರಿಂಟಿಂಗ್ ವರ್ಕ್ಸ್ ಲಿಮಿಟೆಡ್ ಮುಂಬೈ, ದಿ ಇಂದೋರ್ ಅಂಡ್ ಮಾಳ್ವಾ ಯುನೈಟೆಡ್ ಮಿಲ್ಸ್ ಲಿಮಿಟೆಡ್ ಇಂದೋರ್, ಇವುಗಳಲ್ಲದೆ ಇನ್ನೂ ಅನೇಕ ಮಿಲ್ಲುಗಳ ಬಟ್ಟೆಗಳನ್ನು ಮೈಸೂರು ಸೀಮೆಯಲ್ಲೆಲ್ಲಾ ವಿಕ್ರಯಮಾಡಲು ಕಮಿಷನ್ ಏಜಂಟರಾಗಿರುತ್ತೇವೆ. ನಮ್ಮ ಮುಖಾಂತರ ಮಾಲು ತರಿಸಿಕೊಳ್ಳತಕ್ಕವರಿಗೆ ಮುಂಬೈಯಲ್ಲಿ ಬಟ್ಟೆಗಳ ಮೇಲೆ ವಿಧಿಸತಕ್ಕ ದಳ್ಳಾಳಿ, ಚೋಟಾದಳ್ಳಾಳಿ, ಮೊಕ್ಕಾಮುಮ್ಮು, ಗಂಟುಕಟ್ಟುವದು, ಸ್ಟೇಷನ್ನಿಗೆ ಹೇರಿಸುವದು, ಹುಂಡೇಕರಿ ವಗೈರೆ ಯಾವ ವಿಧವಾದ ಖರ್ಚು ತಗಲದೆ ಇರುವದರಿಂದ ಮುಂಬೈಯಿಂದ ತರಿಸುವದಕ್ಕಿಂತಲೂ ಸುಲಭ ದರದಲ್ಲಿ ಸಿಕ್ಕುತ್ತೆ. ಮತ್ತು ಮುಂಬೈಗೆ ಹೋಗಿಬರುವ ದೇಹಶ್ರಮವೂ, ಖರ್ಚೂ ಉಳಿಯುತ್ತೆ. ಹೆಚ್ಚು ಬಟ್ಟೆಗಳನ್ನು ಏಕಕಾಲದಲ್ಲಿ ಕೊಳ್ಳತಕ್ಕವರಿಗೆ ಮಾಲಿನ ಮೇಲೆ ಸೇಕಡ 3 ರೂಪಾಯಿ ಲಾಗಾಯ್ತು 4½ ರೂಪಾಯಿ ವರಿಗೆ ಡಿಸ್ಕೌಂಟು ದೊರೆಯುತ್ತೆ. [97-36]

ನಮ್ಮ ಟ್ರಾವಲಿಂಗ್ ಏಜಂಟರ ವಶ ಬಟ್ಟೆಗಳ ನಮೂನೆಗಳನ್ನು ಕೊಟ್ಟು, ದರ ಒಬ್ಬ ವ್ಯಾಪಾರಗಾರನಿಗೆ ತೋರಿಸಿ ಆರ್ಡರು ತೆಗೆದುಕೊಳ್ಳುವ ಏರ್ಪಾಡು ಮಾಡಿರುತ್ತೆ. ನಮ್ಮ ದಾವಣಗೆರೆ ಮತ್ತು ಬೆಂಗಳೂರು ಆಫೀಸುಗಳಲ್ಲಿ ಮಾಲು ಹಾಜರು ಸಹ ದೊರೆಯುತ್ತೆ.

ಬಟ್ಟೆಗಳನ್ನು ವ್ಯಾಪಾರಮಾಡಲು ಅನುಭವಸ್ಥರಾದ ಏಜಂಟರುಗಳೂ ಮತ್ತು ಗುಮಾಸ್ತರುಗಳೂ ಬೇಕಾಗಿದೆ.

ಎಲ್ಲಾ ಕಾಗದಪತ್ರಗಳೂ ದಾವಣಗೆರೆ ಆಫೀಸಿಗೆ ಬರೆಯಲ್ಪಡಬೇಕು.

ಹೆಡ್ ಆಫೀಸು:—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್, ದಾವಣಗೆರೆ. ಬ್ರಾಂಚ್ ಆಫೀಸು:—ಬ್ರಹ್ಮಪ್ಪ ತವನಪ್ಪನವರ್, ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಹೊಸ ನೇಗಿಲುಗಳೂ, ಕೋಆಪರೆಟಿವ್ ಸೊಸೈಟಿಗಳೂ.

ನಮ್ಮ ಸರ್ಕಾರದವರು ಗ್ರಾಮಾಂತ್ರದ ಎಲ್ಲಾ ಕೋಆಪರೆಟಿವ್ ಸೊಸೈಟಿಗಳ ಸೆಕ್ರೆಟರಿಗಳಿಗೂ ತಿಳಿಸುವುದೇನಂದರೆ—

ಈಗ ನಮ್ಮ ರೈತಾಬಿ ಜನಗಳು ಅವರ ಬೇಸಾಯದ ಕೆಲಸಗಳಲ್ಲಿ ಬಹಳ ಪುರಾತನದಿಂದ ನಡೆದುಬಂದಂಥ ನೇಗಿಲು ವಗೈರೆ ವ್ಯವಸಾಯದ ಮುಟ್ಟುಗಳನ್ನೇ ಉಪಯೋಗಿಸುವದರಿಂದ ಅನೇಕ ವಿಧಗಳಲ್ಲಿ ಅವರುಗಳಿಗೆ ನಷ್ಟವೂ ಕಾಲವ್ಯಯವೂ ಉಂಟಾಗುತ್ತಿರುವುದಷ್ಟೆ. ಇದನ್ನು ತಪ್ಪಿಸಿ ನಮ್ಮ ರೈತರುಗಳನ್ನು ಅಭಿವೃದ್ಧಿಸ್ಥಿತಿಗೆ ತರಲು ಸರ್ಕಾರದವರು ಅನೇಕ ಅನುಕೂಲಗಳನ್ನು ಕಲ್ಪಿಸಿರುತ್ತಾರೆ. ಇದರಲ್ಲಿ ರೈತರುಗಳಿಗೆ ಸುಲಭ ಕ್ರಯದಲ್ಲಿ ಸಣ್ಣ ಸಣ್ಣ ವ್ಯವಸಾಯದ ಮುಟ್ಟುಗಳನ್ನು ಒದಗಿಸಿಕೊಡುವದು ಒಂದು. ಈ ಶ್ಲಾಘನೀಯವಾದ ಕೆಲಸದಲ್ಲಿ ನೀವೂ, ನಿಮ್ಮ ಸೊಸೈಟಿಯ ಮೆಂಬರುಗಳೂ ಸರ್ಕಾರದವರಿಗೆ ಸಹಾಯಮಾಡಿ ಅವರ ಉದ್ದೇಶವನ್ನು ನೆರವೇರಿಸುವುದಲ್ಲದೆ ನೀವೂ ಕೂಡ ಅನೇಕ ಪ್ರಯೋಜನಗಳನ್ನು ಹೊಂದಬಹುದು.

Before Insuring or taking agency elsewhere, it would be to your interest to know the rates of premium and terms of agency specially prepared by the Society's Consulting Actuary, Mr. H. E. W. Lutt, F.I.A. (one of the most eminent Actuaries in England).

First Valuation Result:—The total liabilities under all assurances issued up to 31st March 1913, are fully covered by the Society's Life Assurance Fund and Paid up Capital. Write for full particulars, Annual and Valuation Reports to the Manager, Ajmer, or Secretary,

Opposite to Minto Ophthalmic Hospital,
[131-25] Bangalore City.

NOTICE

Sealed tenders for the supply of cleaned good kulthi and chenna for the Imperial Service Transport Corps and Government Stables will be received up to 2 P.M., on Saturday, the 2nd January, 1915, in the office of the Military Secretary to His Highness the Maharaja of Mysore, Bangalore. The contract for the supply of the grains will be from 1st March, 1915, to the end of February, 1916.

For further particulars, reference is invited to the detailed Notification published in the issue of the *Mysore Gazette*, dated 17th December, 1914, page 2293.

[291-2] (Sd.) A. A. JONES, Lt.-Col.,
Military Secretary.

ರಾಸ್‌ಕೋಪ್ ಸಿಸ್ಟಂ ಲೀವರ್ ರಿಜಿಸ್ಟರ್ ಗಡಿಯಾರ.

ಇದರ ಕ್ರಯ ಸುಂದರವಾದ ಗಡಿಯಾರದ ಸರಪಣಿ ಸಮೇತ
ರೂ. 2-4-0 ಮಾತ್ರ. 5 ವರುಷಗಳ ಗ್ಯಾರೆಂಟಿ.
ಟಪಾಲು ಖರ್ಚು 1 ಕ್ಕೆ 4 ಆಣೆ ಪ್ರತ್ಯೇಕ.



ಈ ಗಡಿಯಾರವು ಬಲವಾದ ಸಾಮಾನುಗಳಿಂದ ತಯಾರಿಸಲ್ಪಟ್ಟಿದ್ದು. ನೋಡುವದಕ್ಕೆ ಗಂಭೀರವಾಗಿಯೂ ಬಹು ಸುಂದರವಾಗಿಯೂ ಇರುತ್ತೆ. ಓಟು ಕೆಲಸಮಾಡುವವರಿಗೆ ಅನುಕೂಲವಾದದ್ದು. ಇದನ್ನು ಧರಿಸಿಕೊಂಡು ಎಷ್ಟು ದೂರ ಸಂಚಾರಮಾಡಿದಾಗ್ಯೂ ನಿಲ್ಲದೇ ನಡೆಯುತ್ತದೆ. ಸಾವಿರಗಟ್ಟಲೆ ಗಡಿಯಾರಗಳು ಖರ್ಚಾಗಿರುತ್ತೆ. ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದ ಗಡಿಯಾರ. ಕೂಡಲೆ ಬರೆದು ತರಿಸಿಕೊಳ್ಳಿ.

ಮುಖ್ಯವಾಗಿ ಗಮನಿಸಿ ಓದಿರಿ.

೧ ಬಹುಮಾನ ಸಹಿತ ಕೈಯಲ್ಲಿ ಕಟ್ಟಿಕೊಳ್ಳುವ ಗಡಿಯಾರ.



ಈ ನಕ್ಷೆಯಲ್ಲಿ ಕಂಡ ಲೇಡಿ ವಾಚ ಶೀಲ್ಡ್ ಲಿವರ್ ಚಕ್ಕ ಸ್ಕ್ರೂ ಕಂಪೆನ್‌ಸೇಷನ್ ಬ್ಯಾಲೆನ್ಸು ಬಹು ಬಲಿಷ್ಠವಾದ 5 ವರುಷಗಳ ಗ್ಯಾರೆಂಟಿ ಉಳ್ಳ ಗಡಿಯಾರ. ಕೈಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಹಿತ ಟಪಾಲು ಖರ್ಚು ಸಹಿತ ಕ್ರಯ ರೂ. 5-0-0 ಇದನ್ನು ಡಿಸೆಂಬರ್ ಆಖ್ಯರೊಳಗಾಗಿ ತರಿಸಿಕೊಳ್ಳುವವರಿಗೆ 40 ಗಂಟೆಗೊಂದಾವರ್ತಿ ಬೀಗ ಕೊಡತಕ್ಕ ಮೇಲಾದ ಟೈಂಪೀಸು ಒಂದನ್ನು ಇನಾಮಾಗಿ ಕೊಡಲ್ಪಡುತ್ತೆ.

ವಿಳಾಸ—ಜಪಾನ್ ಸಿಲ್ಕು ವೇರ್‌ಹೌಸ್, 1-6 ವೆಂಕಟೇಶ ಮೇಸ್ತ್ರಿ ಬೀದಿ,
[109-31] ಸಾಹುಕಾರ್ ಪೇಟೆ, ಮದರಾಸು.

ಅಮೂಲ್ಯ ಜೈನಗ್ರಂಥಗಳು! ಮಾರಾಟಕ್ಕೆ ಸಿದ್ಧವಾಗಿವೆ!!

ಶ್ರೀಪದ್ಮಾವತಿಯ ಮಹಾತ್ಮ್ಯೆ

ಅಥವಾ, ಜಿನದತ್ತರಾಯನ ಚರಿತ್ರವು.

ಈ ಗ್ರಂಥವು 'ಪದ್ಮನಾಭ' ಕವಿಗಳಿಂದ ಸಾಂಗತ್ಯವೃತ್ತದಲ್ಲಿ ಪದ್ಯರೂಪದಿಂದ ಸುಲಭವಾದ ಕನ್ನಡಭಾಷೆಯಲ್ಲಿ ರಚಿಸಲ್ಪಟ್ಟಿದ್ದು ಇದರಲ್ಲಿ ಹೊಂಬುಜದ ಪದ್ಮಾವತೀದೇವಿಯ ಮಹಿಮೆಯೂ ಸಾಕಾರಮಹಾರಾಜನ ಪುತ್ರನಾದ ಜಿನದತ್ತರಾಯನ ಚರಿತ್ರೆಯೂ ವಿಶದವಾಗಿ ವರ್ಣಿಸಲ್ಪಟ್ಟಿರುವದು ಈ ಗ್ರಂಥವು ಬಹು ಪರಿಶ್ರಮದಿಂದ ಶುದ್ಧವಾಗಿಯೂ ಅಂದವಾಗಿಯೂ ಮುದ್ರಿಸಿ ಸಿದ್ಧಮಾಡಲ್ಪಟ್ಟಿದ್ದು, ಸಾಮಾನ್ಯ ವಾಚಕರಿಗೋಸ್ಕರ ಇದರ ಕಥಾಭಾಗದ ಸಾರಾಂಶವು ಗ್ರಂಥಾರಂಭದಲ್ಲಿ ಸ್ವಲ್ಪ ವಿಸ್ತಾರವಾಗಿ ಗದ್ಯರೂಪದಿಂದ ಕೊಡಲ್ಪಟ್ಟಿರುವದು. ಈ ಗ್ರಂಥದ ಕ್ರಯವು ೧ ರೂಪಾಯಿ ಮಾತ್ರವಿದ್ದು ಇದರ ಛಾಯಾದಿಂಗು ಗ್ರಾಹಕರ ಸಲುವಾಗಿ ೩ ಮಾದರಿಯಿಂದ ಮಾಡಲ್ಪಟ್ಟಿರುವದು. ೧ ನೇ ನಂಬರ (ಫುಲ್ಲಕಾಲಿಕೋ), ೨ ನೇ ನಂಬರ (ಹಾಫಕ್ಯಾಲಿಕೋ) ಮತ್ತು ೩ ನೇ ನಂಬರ (ಸಾದಾ ಜಾಡ ಪುಠ್ಠೆ). ಕುರ್ತಕ್ಕೆ ೨ ನೇ ಮತ್ತು ೩ ನೇ ನಂಬರದ ಪುಸ್ತಕಗಳು ಅನುಕ್ರಮವಾಗಿ ೧೫ ಮತ್ತು ೧೪ ಆಣೆಗೆ ಕೊಡಲ್ಪಡುವವು ೧೨ ಪ್ರತಿಗಳಿಗೆ ೧ ಪ್ರತಿಯು ಉಚಿತ. ಆದ್ದರಿಂದ ಗ್ರಾಹಕರು ತ್ವರೆಮಾಡಿ ಪುಸ್ತಕಗಳನ್ನು ತರಿಸಿಕೊಳ್ಳಬೇಕು. ಕ್ರಯದ ಹೊರ್ತು ವಿ. ಪಿ. ಟಪಾಲ ಖರ್ಚು ಬೇರೆ.

ಶ್ರೀಭಕ್ತಾಮರಸ್ತೋತ್ರವೃತ್ತಿಸಾರಸಮುಚ್ಚಯ.

ಈ ಗ್ರಂಥದಲ್ಲಿ ಶ್ರೀ ಮಾನತುಂಗಾಚಾರ್ಯರು ರಚಿಸಿದ ಭಕ್ತಾಮರ ಶ್ಲೋಕಗಳೂ ಅವುಗಳ ಕೆಳಗೆ ಅನ್ವಯಾರ್ಥವೂ ಇದ್ದು, ಒಂದೊಂದು ಶ್ಲೋಕದ ಮಹಿಮೆಯಿಂದ ಯಾರ್‍ಯಾರಿಗೆ ಯಾವ ಯಾವ ಫಲವುಂಟಾಗಿದೆಯೋ ಅದರ ವರ್ಣನೆಯು ಶ್ರೀರಾಯಮಲ್ಲ ಎಂಬ ಕವಿಯಿಂದ ಸಂಸ್ಕೃತ ಶ್ಲೋಕದೊಡನೆ ಕಥಾರೂಪದಿಂದ ರಚಿಸಲ್ಪಟ್ಟಿದ್ದು, ಅದರ ಕನ್ನಡ ತಾತ್ಪರ್ಯವು ನೆಲ್ಲೂರು ಆ. ವೆಂಕಟಾಚಾರ್ಯ ಶಾಸ್ತ್ರಿಗಳ ಸಹಾಯದಿಂದ ಪ ಶ್ರೀಚಂದ್ರಸಾಗರ ಸ್ವಾಮಿಗಳಿಂದ ಬರೆಯಲ್ಪಟ್ಟಿದೆ. ಇದರಲ್ಲಿ ಭಕ್ತಾಮರದ ಪ್ರತಿಒಂದು ಶ್ಲೋಕದ ಯಂತ್ರಗಳೂ ಮಂತ್ರಗಳೂ ವಿಧಿಯುಕ್ತ ಕೊಟ್ಟಿರುವದರಿಂದ ಈ ಗ್ರಂಥವು ಬಹಳ ಉಪಯುಕ್ತವಾಗಿದೆ. ಕ್ರಯ ೧ ರೂಪಾಯಿ. ೧೨ ಪ್ರತಿಗಳಿಗೆ ೧ ಪ್ರತಿ ಉಚಿತ.

(ಮಾರಾಟಕ್ಕೆ ಹೆಚ್ಚುಗಟ್ಟಲೆ ಪ್ರತಿಗಳನ್ನು ತಕ್ಕೊಳ್ಳುವವರಿಗೆ ಯೋಗ್ಯ ಕಮಿಷನವು ಕೊಡಲ್ಪಡುವದು.) [293-1]

ಮೇಲ್ಕಂಡ ಎರಡೂ ಪುಸ್ತಕಗಳು ದೊರೆಯುವ ಸ್ಥಳಗಳು:—

೧. ಮ್ಯಾನೇಜರ, ಶ್ರೀಮಹಾವೀರ ಪ್ರೆಸ, ಬೆಳಗಾಂವ.
೨. ಭರಮಪ್ಪಾ ಪದಮಪ್ಪಾ ಪಾಟೀಲ, ಸೆಕ್ರೆಟರಿ, ಶ್ರೀಚಂದ್ರಸಾಗರ ದಿಗಂಬರ ಜೈನ ಗ್ರಂಥಮಾಲಾ, ಹೋಸೂರ, ಪೋಷ್ಟ ಶಹಾಪೂರ, ಬೆಳಗಾಂವ.

ವೃತ್ತಾಂತ ಪತ್ರಿಕೆ.

—:o:—

ಸನ್ ೧೯೧೪ ನೇ ಇಸವಿ ಡಿಸೆಂಬರ್ ತಾ. ೩೧ ನೇ ಗುರುವಾರ.

1914 ನೇ ಸಂವತ್ಸರವು.

1914 ನೇ ಇಸವಿಯ ಕಡೇ ದಿನ ನಮ್ಮ ಪತ್ರಿಕೆಯ ಈ ಸಂಚಿಕೆಯು ಪ್ರಕಟವಾಗಿರುತ್ತದೆ. ಈ ಸಂವತ್ಸರವು ಪ್ರಪಂಚದ ಚರಿತ್ರೆಯಲ್ಲಿ ಅತ್ಯಂತ ವಿಶೇಷವಾದದ್ದಾಗಿರುವುದು. ಈ ವರುಷಾರಂಭದಲ್ಲಿ ಪ್ರಪಂಚದಲ್ಲೆಲ್ಲಾ ತಕ್ಕಮಟ್ಟಿಗೆ ನೆಮ್ಮದಿಯೂ ಸುಖ ಸಮಾಧಾನಗಳೂ ನೆಲೆಗೊಂಡಿದ್ದವು. ಯುದ್ಧವು ಹರಡಿಕೊಂಡು ಕೊಲೆಗಳು ನಡೆಯುತ್ತಾ ಪ್ರಪಂಚವೆಲ್ಲಾ ಕಳವಳಗೊಂಡು ಗಾಬರಿಯಿಂದ ಅಂತ್ಯವನ್ನು ಎದುರುನೋಡುವಂಥಾ ವರುಷಾಂತ್ಯವು ಬರುವುದೆಂದು ಯಾರಿಗೂ ನಿರೀಕ್ಷಣೆ ಇರಲಿಲ್ಲ. ಈ ಕಡಿದಾಟಕ್ಕೆ ನಮ್ಮ ದೇಶವು ಸೇರಿಕೊಂಡು ಯೂರೊಪ್ಪಿನಲ್ಲಿ ನಡೆಯುತ್ತಿರುವ ಅಪಾರವಾದ ಯುದ್ಧದ ದೆಸೆಯಿಂದ ಹಿಂದುಸ್ಥಾನದ ಸಮಸ್ತ ದಿಗ್ದೇಶಗಳೂ ಬಗೆಬಗೆಯ ಕಷ್ಟನಷ್ಟಗಳಿಗೆ ಸಿಕ್ಕಿ ವ್ಯಥೆಪಡುತ್ತಲಿವೆ.

ಜರ್ಮನಿಯು ಮೊದಲು ಯೂರೊಪ್ಪನ್ನು ತನ್ನ ಸ್ವಾಧೀನಕ್ಕೆ ತಂದುಕೊಂಡು ಆ ಬಳಿಕ ಪ್ರಪಂಚವನ್ನೆಲ್ಲಾ ಆಕ್ರಮಿಸಿಕೊಳ್ಳಬೇಕೆಂಬ ಉದ್ದೇಶದಿಂದ ಬಹು ಕಾಲದಿಂದಲೂ ಮಹತ್ತರವಾದ ಸನ್ನಾಹಗಳನ್ನು ಮಾಡಿಕೊಂಡು ಬಂದಿತ್ತೆಂಬ ಸಂಗತಿಯು ಈಗ ಜನಜನಿತವಾಗಿ ಗೊತ್ತಾಗಿದೆ. ಜರ್ಮನಿಯ ಇಂಥಾ ದುರಾಸೆಗೆ ಇಂಗ್ಲೆಂಡ್, ರಷ್ಯಾ, ಫ್ರಾನ್ಸ್ ರಾಜ್ಯಗಳು ಮುಖ್ಯ ಅಡಚಣೆಗಳಾಗಿದ್ದವು. ಅದರಲ್ಲೂ ಇಂಗ್ಲೆಂಡಿನ ಮೇಲೆಯೇ ಜರ್ಮನಿಗೆ ವಿಶೇಷವಾದ ಹೊಟ್ಟೇಕಿಚ್ಚು ಇದ್ದಿತು. ಜರ್ಮನಿಯೊಳಗೆ ಯುದ್ಧಾತುರರಾಗಿದ್ದ ಪಂಗಡದವರು ಯುದ್ಧಕ್ಕೆ ಹೊರಡಲು ಯಾವುದಾದರೊಂದು ನೆಪವು ಸಿಕ್ಕಿದರಾದೀತಲ್ಲಾ ಎಂದು ಎದುರುನೋಡುತ್ತಿದ್ದರು. ಆಸ್ಟ್ರಿಯದ ಆರ್ಚ್‌ಡ್ಯೂಕ್ ಎಂಬ ರಾಜಕುಮಾರನನ್ನು ಕೊಂದುಹಾಕಿದ್ದೇ ಒಂದು ನೆಪವಾಗಿ ಪರಿಣಮಿಸಿ, ಆಸ್ಟ್ರಿಯದವರು ಸೆರ್ಬಿಯವನ್ನು ಪುಡಿಪುಡಿ ಮಾಡಿಬಿಡಬೇಕೆಂದು ಹೊರಟರು. ರಷ್ಯಾದವರೂ ಫ್ರೆಂಚರೂ ಸೆರ್ಬಿಯಾಗೆ ಬೆಂಬಲವಾಗಿ ನಿಲ್ಲಲಾರರೆಂದು ಜರ್ಮನಿಯವರು ನಿರೀಕ್ಷಿಸಿಕೊಂಡಿದ್ದರು. ಮತ್ತು ಫ್ರೆಂಚರು ಯುದ್ಧಸನ್ನದ್ಧರಾಗಿಲ್ಲವೆಂಬುದನ್ನು ತಿಳಿದು ಜರ್ಮನಿಯವರು ಬಹು ಬೇಗನೆ ಫ್ರಾನ್ಸಿನ ಮೇಲೆ ತಮ್ಮ ಸೈನ್ಯವನ್ನು ಕಳುಹಿಸಬಹುದೆಂದೂ, ಶೀಘ್ರವಾಗಿ ನುಗ್ಗಿಹೋಗಿ ಪ್ಯಾರಿಸ್ ನಗರವನ್ನು ಆಕ್ರಮಿಸಿಕೊಳ್ಳೋಣವೆಂದೂ ಏರ್ಪಾಡುಮಾಡಿಕೊಂಡಿದ್ದರು. ಇಷ್ಟೇ ಅಲ್ಲ; ಜರ್ಮನಿಯವರು ತತ್ಕ್ಷಣವಾಗಿ ಫ್ರೆಂಚರನ್ನು ಗೆದ್ದು ತಮ್ಮ ಅಡಿಯಾಳುಗಳನ್ನಾಗಿ ಮಾಡಿಕೊಂಡು, ಪೂರ್ವ ದಿಕ್ಕಿಗೆ ತಿರುಗಿ ಆಸ್ಟ್ರಿಯಾದವರನ್ನು ಸಹಾಯಕ್ಕೆ ಕರೆದುಕೊಂಡು ರಷ್ಯಾದವರ ಮೇಲೆ ಯುದ್ಧಮಾಡಿ ಅವರನ್ನು ಸೋಲಿಸಿಬಿಡುತ್ತೇವೆಂದೂ ನಿಷ್ಕರ್ಷೆ ಮಾಡಿಕೊಂಡಿದ್ದರು.

ಜರ್ಮನಿಯು ಫ್ರಾನ್ಸಿನೊಳಕ್ಕೆ ಪ್ರವೇಶಮಾಡಬೇಕಾದರೆ ಅದಕ್ಕೆ ಬೆಲ್ಜಿಯಮ್ ದೇಶವೇ ಅನುಕೂಲವಾದ ಮಾರ್ಗ. ಈ ಬೆಲ್ಜಿಯಮ್ ದೇಶವಾದರೋ ಈ ಹೋರಾಟಕ್ಕೆ ಸೇರದಂಥಾ ಪ್ರತ್ಯೇಕವಾಗಿರುವ ರಾಜ್ಯ. ಈ ರಾಜ್ಯದ ಮೂಲಕ ಜರ್ಮನಿಯು ತನ್ನ ಸೈನ್ಯಗಳನ್ನು ಕಳುಹಿಸುವುದಿಲ್ಲವೆಂದು ಒಪ್ಪಂದ ಮಾಡಿಕೊಂಡಿತ್ತು. ಆದಾಗ್ಯೂ ಜರ್ಮನಿಯು ಬೆಲ್ಜಿಯಮ್ ರಾಜ್ಯವನ್ನು "ನಮಗೆ ನೀವು ಎದುರುಬೀಳದೆ ನಮ್ಮ ಸೈನಿಕರು ಮುಂದೆ ಹೋಗುವುದಕ್ಕೆ ಅವಕಾಶಕೊಡಿ" ಎಂದು ಕೇಳಿತು. ಸಣ್ಣದಾದರೂ ಬೆಲ್ಜಿಯಮ್ ರಾಜ್ಯವು ತನ್ನ ಸ್ವತಂತ್ರಸ್ಥಾನವನ್ನು ಎಂದಿಗೂ ಬಿಟ್ಟುಕೊಡುವುದಿಲ್ಲವೆಂದು ಬಹು ಧೈರ್ಯವನ್ನು ತಾಳಿ ಜವಾಬು ಕೊಟ್ಟಿತು. ಬಳಿಕ ಬೆಲ್ಜಿಯಮ್ ರಾಜ್ಯವು ಮೇಲ್ಕಂಡ ಒಪ್ಪಂದಕ್ಕೆ ರುಜು ಮಾಡಿರುವ ಗ್ರೇಟ್ ಬ್ರಿಟನ್ ಎಂಬ ಇನ್ನೊಂದು ರಾಜ್ಯಕ್ಕೆ ಬರೆದು ಜರ್ಮನಿಯ ಕಾರ್ಯಭಾಗವನ್ನು ತಿಳಿಸಿ ಸಹಾಯ ಕೇಳಿತು. ಗ್ರೇಟ್ ಬ್ರಿಟನ್ ರಾಜ್ಯವು ಸಹಾಯಮಾಡುತ್ತೇನೆಂದು ಬೆಲ್ಜಿಯಮ್‌ಗೆ ಭರವಸೆ ಕೊಟ್ಟಿತು. ಹೀಗೆಲ್ಲಾ ಮಾತುಕಥೆಗಳು ನಡೆಯುತ್ತಿರುವಾಗಲೇ ಜರ್ಮನಿಯವರೂ ಆಸ್ಟ್ರಿಯಾದವರೂ ಒಂದಾಗಿ ಫ್ರಾನ್ಸ್, ರಷ್ಯಾ, ಬೆಲ್ಜಿಯಮ್, ಗ್ರೇಟ್ ಬ್ರಿಟನ್, ಸೆರ್ಬಿಯಾ ಎಂಬೀ ಐದು ರಾಜ್ಯಗಳ ಮೇಲೆ ಮಹಾ ಅಗಾಧವಾದ ಯುದ್ಧವನ್ನು ಪ್ರಾರಂಭಿಸಿಬಿಟ್ಟರು. ಇಷ್ಟಾಗುವಾಗ್ಗೆ ಗ್ರೇಟ್ ಬ್ರಿಟನ್ನಿನ ಸ್ನೇಹಿತರಾದ ಜಪಾನಿನವರು ಸೇರಿಕೊಂಡು, ಚೀಣಾದಲ್ಲಿದ್ದ ಜರ್ಮನೀ ಸ್ವಾಸ್ಥ್ಯಗಳಿಗೆ ಮುತ್ತಿಗೆಹಾಕಿದರು. ಹತ್ತು ಹನ್ನೆರಡು ವಾರಗಳು ಕಳೆಯುವಷ್ಟರೊಳಗಾಗಿ ಜರ್ಮನಿಯವರ ಋಣದಾಸೆಯನ್ನೂ ಅವರ ಹುದ್ದೇದಾರರ ಬಲವದ್ಬಂಧಿಯನ್ನೂ ತಡೆಯಲಾರದೆ ಟರ್ಕಿಯವರು ಜರ್ಮನಿಯ ಪಕ್ಷವನ್ನು ವಹಿಸಿ ನಿಂತರು. ಈಗ ಈ ಘೋರವಾದ ಯುದ್ಧವು ಪ್ರಪಂಚದ ಬಹು ಭಾಗಗಳಿಗೆಲ್ಲಾ ವ್ಯಾಪಿಸಿಕೊಂಡಿರುತ್ತದೆ. ಈ ಯುದ್ಧದಲ್ಲಿ ಯಾರ ಪಕ್ಷವನ್ನೂ ವಹಿಸದೆ ತಟಸ್ಥರಾಗಿದ್ದುಕೊಂಡು ಬಂದಿರುವ ದೇಶಕೋಶಗಳ ಜನಗಳೂ ಸರ್ಕಾರಗಳೂ ಕಷ್ಟನಷ್ಟಗಳನ್ನು ಅನುಭವಿಸುತ್ತಿರುವವು. ಯಾಕಂದರೆ ಈ ಯುದ್ಧದ ದೆಸೆಯಿಂದ ವ್ಯಾಪಾರವೂ ಆಮದು ರಫ್ತೂ ಬಹಳ ಮಟ್ಟಿಗೆ ನಿಂತುಹೋಗಿದೆ. ಅನೇಕ ಕಸಬುಗಳು ಕ್ಷೀಣವಾಗುತ್ತಿರುವವು. ಲಕ್ಷಾಂತರ ಕೆಲಸಗಾರರಿಗೆ ಉದ್ಯೋಗ ತಪ್ಪಿಹೋಗಿದೆ. ಈ ಯುದ್ಧಭೂಮಿಯು ಅಮೇರಿಕದಿಂದ ಎಷ್ಟೋ ದೂರದಲ್ಲಿದ್ದಾಗ್ಯೂ ಅಮೇರಿಕದಲ್ಲಿ ಮೇಲ್ಕಂಡ ಕಷ್ಟಗಳು ಹೆಚ್ಚಾಗಿರುವವು. ಯೂರೋಪ್ ಖಂಡದೊಳಗಿದ್ದೂ ಈ ಯುದ್ಧದಲ್ಲಿ ಬೆರೆಯದಂಥಾ ರಾಜ್ಯಗಳವರು ತಮ್ಮ ತಮ್ಮ ಸೈನ್ಯಗಳನ್ನು ಕೂಡಿಸಿಕೊಂಡು ಅಪಾರ ಖರ್ಚುಗಳನ್ನಿಟ್ಟು ಯುದ್ಧಸನ್ನಾಹ ಕಾರ್ಯಗಳನ್ನೆಲ್ಲಾ ಸಿದ್ಧಪಡಿಸಿಕೊಳ್ಳುತ್ತಿದ್ದಾರೆ. ಅಲ್ಲಿಯೂ ವ್ಯಾಪಾರವೂ ಆಮದು ರಫ್ತೂ ಬಹಳ ಮಟ್ಟಿಗೆ ಕಡಮೆಯಾಗಿರುವುದು.

ಈ ಘೋರ ಯುದ್ಧದಲ್ಲಿ ಹಿಂದುಸ್ಥಾನವೂ ಬೆರೆತು ತನ್ನ ಪಾಲಿನ ಕಾರ್ಯಗಳನ್ನು ವಹಿಸಿಕೊಂಡು ಮಾಡುತ್ತಿರುವುದು. ಬ್ರಿಟಿಷ್ ರಾಜ್ಯಾಂಗವಾಗಿರೋಣದರಿಂದ ಹಿಂದುಸ್ಥಾನವು ತನ್ನ ಗಂಡಸು ಮಕ್ಕಳನ್ನು ಯೂರೊಪ್, ಪೂರ್ವ ಆಫ್ರಿಕಾ, ಚೀಣಾ, ಪಾರಸೀಖಾರಿಗಳಿಗೆ ಕಳುಹಿಸಿರುತ್ತದೆ. ಹಿಂದುಸ್ಥಾನದ ಸೈನ್ಯಗಳು ಎಲ್ಲಾ ಕಡೆಗಳಲ್ಲೂ ಬಹಳ ಪರಾಕ್ರಮದಿಂದ ಯುದ್ಧಕಾರ್ಯಗಳನ್ನು ನಡಿಸಿ ನಮ್ಮ ದೇಶಕ್ಕೆ ಅಮೋಘವಾದ ಕೀರ್ತಿಯನ್ನು ತಂದಿರುವವು. ನಮ್ಮ ಮೈಸೂರು ಸಂಸ್ಥಾನವೂ ಕೂಡ ಮಹಾ ಘನತರವಾದಷ್ಟು ದ್ರವ್ಯವನ್ನೂ ಸೈನ್ಯವನ್ನೂ ಒದಗಿಸಿರುತ್ತದೆ. ಮೈಸೂರು ಇಂಪೀರಿಯಲ್ ಸರ್ವಿಸ್ ಕುದುರೆ ಸೈನ್ಯವು ಯುದ್ಧಭೂಮಿಗೆ ಹೋಗಿರುವುದು. ನಮ್ಮ ಮಹಾರಾಜರವರು ಬಹು ಧಾರಾಳವಾಗಿ 50,00,000 ರೂಪಾಯನ್ನು ಕೊಟ್ಟರು. ನಮ್ಮ ಸಂಸ್ಥಾನದ ಎಲ್ಲಾ ಕಡೆಗಳಲ್ಲೂ ಯುದ್ಧದ ರಿಲೀಫ್ ಫಂಡಿಗೂ, ಸೆಂಟ್ ಜಾರ್ಜ್ ಆಂಬುಲೆನ್ಸ್ ಫಂಡಿಗೂ ಧಾರಾಳವಾಗಿ ಚಂದಾ ಕೊಟ್ಟು ಸಹಾಯಮಾಡುತ್ತಾ ಬಂದಿದ್ದಾರೆ.

ಯುದ್ಧವೆಂಬ ಕಗ್ಗತ್ತಲು ಯೂರೊಪ್ ಖಂಡದ ಮೇಲೆಲ್ಲಾ ಆವರಿಸಿಕೊಂಡಿದೆ; ಆದರೂ ಅಲ್ಲಲ್ಲಿ ಬೆಳಕಿನ ಕಿರಣಗಳು ಕಾಣುತ್ತಿರುವವು. ಈ ಮಹಾ ಘೋರವಾದ ಯುದ್ಧದ ವಿಷಯದಲ್ಲಿ ನಮ್ಮ ಚಕ್ರಾಧಿಪತ್ಯದ ಮನೋವೃತ್ತಿಯೆಲ್ಲಾ ಒಂದೇ ಆಗಿರುತ್ತದೆ. ನಮ್ಮ ಚಕ್ರಾಧಿಪತ್ಯದ ಸೈನಿಕರು ಯಾವ ಕಡೆಯವರಾಗಿದ್ದರೂ ಯುದ್ಧಭೂಮಿಯಲ್ಲಿ ಅತ್ಯಂತ ಶೌರ್ಯವನ್ನೂ ಮಹಾ ಪರಾಕ್ರಮವನ್ನೂ ತೋರಿಸಿ ಕಡಿದಾಡುತ್ತಾ ಬಂದಿರುವರು. ನಾವಾಗಿ ಈ ಯುದ್ಧಕ್ಕೆ ಪ್ರವೇಶಮಾಡಲಿಲ್ಲ; ನ್ಯಾಯವನ್ನೂ ಧರ್ಮವನ್ನೂ ವಾಗ್ದಾನವನ್ನೂ ಕಾಪಾಡಿಕೊಂಡು ಬರುವುದಕ್ಕಾಗಿಯೇ ನಾವು ಈ ಘೋರ ಯುದ್ಧಕ್ಕೆ ಸೆಳೆಯಲ್ಪಟ್ಟಿರೋಣದಿಂದ ಇಂಥಾ ಯುದ್ಧದಲ್ಲಿ ನಮಗೆ ದೇವರು ಜಯಪ್ರದವನ್ನು ಕೊಡುತ್ತಾನೆಂಬ ಪೂರ್ಣ ಭರವಸೆಯನ್ನು ಪಡೆದು ನಾವೆಲ್ಲಾ ಆತನ ವರಪ್ರಸಾದವನ್ನು ಬೇಡುತ್ತಲೂ ಅದನ್ನು ಎದುರುನೋಡುತ್ತಲೂ ಬರೋಣ. ಮುಂದಿನ ವರುಷ ಬಹುಬೇಗನೆ ಈ ಯುದ್ಧವು ಪೂರೈಸಿ ಶಾಶ್ವತವೂ ಗೌರವವೂ ಆದ ಸಮಾಧಾನವು ಪ್ರಪಂಚದಲ್ಲಿ ನೆಲೆಗೊಳ್ಳುವಂತಾಗಲೆಂದು ನಾವುಗಳೆಲ್ಲಾ ಪ್ರಾರ್ಥನೆ ಮಾಡುತ್ತಾ, ಅದಕ್ಕಾಗಿ ನಮ್ಮಿಂದಾಗುವಷ್ಟು ಸಹಾಯ ಮಾಡುತ್ತಾ ಬರಬೇಕಾಗಿದೆ.

ದೇವರ ದಯೆಯು.

ದೇವರು ಈ 1914 ನೆಯ ವರುಷವೆಲ್ಲಾ ನಮ್ಮನ್ನು ಸುರಕ್ಷಿತವಾಗಿ ಕಾಪಾಡಿ ನಾವು ಇದರ ಅಂತ್ಯವನ್ನು ನೋಡುವಂತೆ ಮಾಡಿರುತ್ತಾನೆ. ಆತನು ಅನೇಕಾನೇಕ ವಿಧಗಳಲ್ಲಿ ನಮ್ಮ ವಿಷಯದಲ್ಲಿ ಸಹನವುಳ್ಳವನಾಗಿದ್ದು ನಮಗೆ ತುಂಬಾ ದಯೆಯನ್ನು ತೋರಿಸುತ್ತಾ ಬಂದಿರುತ್ತಾನೆ. ನಮ್ಮ ಕುಟುಂಬಗಳಲ್ಲಿಯೂ ಕೆಲಸ ಕಾರ್ಯಗಳಲ್ಲಿಯೂ ಆತನು ನಮಗೆ ಅನೇಕ ಆಶೀರ್ವಾದಗಳನ್ನು ದಯಪಾಲಿಸಿರುತ್ತಾನೆ. ಈ ಕಾಲದಲ್ಲಿ ನಾವು ಸಾವಧಾನವಾಗಿ ಕೂತುಕೊಂಡು ದೇವರು ಪ್ರತಿದಿನದಲ್ಲಿಯೂ ನಮಗೆ ಇಷ್ಟು ಧಾರಾಳವಾಗಿ ದಯಪಾಲಿಸುತ್ತಾ ಬಂದಿರುವ ಪರಮಾಶೀರ್ವಾದಗಳನ್ನು ಸ್ಮರಿಸುವುದು ವಿಹಿತವಾಗಿರುತ್ತದೆ. ಇದರಿಂದ ನಾವು ದೇವರಿಗೆ ಎಷ್ಟು ಋಣಸ್ಥರಾಗಿದ್ದೇವೆಂಬುದು ವ್ಯಕ್ತವಾಗುವುದು.

ಈ ವರುಷದಲ್ಲಿ ಎಷ್ಟೋ ಜನರಿಗೆ ಕಷ್ಟನಷ್ಟಗಳು ಸಂಪ್ರಾಪ್ತವಾಗಿರುತ್ತವೆ. ಲಕ್ಷಾಂತರ ಜನರು ಯುದ್ಧಕ್ಕೆ ಹೋಗಿ ಅಪಾರವಾದ ಕಷ್ಟನಷ್ಟಗಳಿಗೆ ಗುರಿಯಾದರು. ಅವರಲ್ಲಿ ಸಾವಿರಾರು ಮಂದಿ ಮಡಿದುಹೋದರು. ಹತ್ತಾರು ಸಾವಿರ ಮಂದಿ ಗಾಯಪಟ್ಟಿರುತ್ತಾರೆ. ಇವರಲ್ಲಿ ಕೆಲವರು ತಮ್ಮ ಜೀವಾವಧಿ ಅಂಗಹೀನರಾಗಿರಬೇಕಾಗಿದೆ. ಯುದ್ಧದ ಕಾಲದಲ್ಲಿ ನಡೆಯುವ ಕ್ರೂರಕೃತ್ಯಗಳ ದೆಸೆಯಿಂದ ಅನೇಕಾನೇಕರು ಬಡ ಬೆಲ್ಜಿಯಮ್‌ನವರಂತೆ ತಮ್ಮ ಮನೆಮಠ ಆಸ್ತಿಪಾಸ್ತಿಗಳನ್ನೆಲ್ಲಾ ಕಳೆದುಕೊಂಡು ಕೇವಲ ನಿರ್ಗತಿಕರಾಗಿರುತ್ತಾರೆ. ಇವರುಗಳು ತುಂಬಾ ಧೈರ್ಯವನ್ನೂ ಪರಾಕ್ರಮವನ್ನೂ ಪ್ರಕಾಶಪಡಿಸಿರುತ್ತಾರೆ. ಇವರು ಸ್ವದೇಶಾಭಿಮಾನದಿಂದ ತುಂಬಿದವರಾಗಿ ಕಷ್ಟನಷ್ಟಗಳನ್ನು ಅನುಭವಿಸುವುದಕ್ಕೆ ಮಾತ್ರವೇ ಅಲ್ಲ, ಸಾಯುವುದಕ್ಕೂ ಕೂಡ ಸಿದ್ಧರಾಗಿರುತ್ತಾರೆ. ಇದರಲ್ಲಿಯೂ ಕೂಡ ಕೃಪಾಳುವಾದ ದೇವರು ನಿಶ್ಶಕ್ತರಿಗೆ ಶಕ್ತಿಯನ್ನೂ ಕಷ್ಟಗಳಲ್ಲಿ ಸಿಕ್ಕಿಬಿದ್ದವರಿಗೆ ಸಹನವನ್ನೂ ದಯಪಾಲಿಸುತ್ತಿರುವುದನ್ನು ನಾವು ನೋಡಬಹುದು. ದೇವರ ದಯೆಯು ಇವರ ಮೇಲೆ ಇಲ್ಲದಿದ್ದರೆ, ಇವರು ತಮ್ಮ ಕರ್ತವ್ಯಗಳನ್ನು ನೆರವೇರಿಸುವುದಕ್ಕೆ ಶಕ್ತರಾಗುತ್ತಿರಲಿಲ್ಲ.

ದೇವರ ದಯೆಯಿಲ್ಲದಿದ್ದರೆ ಈ ಜೀವನಯಾನದ ಕಷ್ಟದುಃಖಗಳು ಸಹಿಸಕೂಡದವುಗಳಾಗಿರುವುವು. ಆದರೆ ದೇವರ ದಯೆಯಿದ್ದರೆ, ಎಷ್ಟೇ ಕಷ್ಟನಷ್ಟಗಳು ಪ್ರಾಪ್ತವಾದರೂ ಮರಣವೇ ಸಂಭವಿಸಿದರೂ ಕೂಡ ದೇವರ ಚಿತ್ತವಿದ್ದಂತೆ ಯಾವ ಸ್ಥಿತಿಯಲ್ಲಾದರೂ ಇರುವುದಕ್ಕೂ ಯಾವ ಕೆಲಸವನ್ನಾದರೂ ಮಾಡುವುದಕ್ಕೂ ಸಂತೃಪ್ತಿಯು ಇರುವುದು. ದೇವರು ಯಾವಾಗಲೂ ನಮ್ಮ ಸಮೀಪದಲ್ಲೇ ಇರುತ್ತಾನೆ. ಆತನು ಕರುಣಾಸಮುದ್ರನಾಗಿರುವುದರಿಂದ ನಮಗೆ ಸಹಾಯ ಮಾಡಿ, ನಮ್ಮನ್ನು ಆದರಿಸಿ ಬಲಪಡಿಸುವುದಕ್ಕೆ ಯಾವಾಗಲೂ ಸಿದ್ಧನಾಗಿರುತ್ತಾನೆ.

ಆದರೆ ದೇವರ ಮಹೋಪಕಾರಗಳನ್ನು ಸ್ಮರಿಸದೇ ಇರುವ ಎಷ್ಟೋ ಜನರು ಇರುತ್ತಾರೆ. ದೇವರು ನನ್ನನ್ನು ಸುರಕ್ಷಿತವಾಗಿ ಕಾಪಾಡುತ್ತಾ ಬಂದಿರುವುದರಿಂದ ನಾನು ಆತನಿಗೆ ಎಷ್ಟು ಋಣಸ್ಥನಾಗಿದ್ದೇನೆಂದು ಅವರು ವಿಚಾರಮಾಡಿಕೊಳ್ಳುವುದೇ ಇಲ್ಲ. ನಮ್ಮಲ್ಲಿ ಪ್ರತಿಯೊಬ್ಬರೂ ಈ ವರುಷಾಂತ್ಯದಲ್ಲಿ, ಹೊಸವರುಷವನ್ನು ಸಂಧಿಸುವುದಕ್ಕಿಂತ ಮುಂಚಿತವಾಗಿ, ಕಳೆದ ವರುಷದಲ್ಲಿ ದೇವರು ನಮಗೆ ಎಷ್ಟು ವಿಧಗಳಲ್ಲಿ ಎಷ್ಟು ಉಪಕಾರಗಳನ್ನು ಮಾಡುತ್ತಾ ಬಂದಿದ್ದಾನೆಂದು ಸ್ಮರಿಸಬೇಕಾಗಿರುತ್ತದೆ.

ಇದು ಮಾತ್ರವಲ್ಲದೆ ದೇವರ ವಿಷಯದಲ್ಲಿ ನಾವು ಹ್ಯಾಗೆ ನಡೆದುಕೊಂಡು ಬಂದಿದ್ದೇವೆಂದು ತಿಳಿಯುವುದಕ್ಕಾಗಿ ನಮ್ಮ ಗುಣನಡತೆಗಳನ್ನು ನಾವೇ ಪರೀಕ್ಷೆಮಾಡಿಕೊಳ್ಳಬೇಕಾಗಿದೆ. ನಾನು ಪ್ರತಿ ದಿನದಲ್ಲಿಯೂ ದೇವರ ಉಪಕಾರವನ್ನೂ ಆತನ ಪ್ರೇಮಾತಿಶಯವನ್ನೂ ಕುರಿತು ಧ್ಯಾನಮಾಡುವುದಕ್ಕೆ ಪ್ರಯತ್ನಿಸಿದ್ದೇನೋ? ನಾನು ಆತನ ಆಜ್ಞೆಗಳನ್ನು ಕೈಕೊಂಡು, ಆತನು ಮೆಚ್ಚತಕ್ಕಂಥ ಕಾರ್ಯಗಳನ್ನು ಮಾಡುವುದಕ್ಕೆ ಪ್ರಯತ್ನಪಟ್ಟಿದ್ದೇನೋ? ಎಂದು ಪ್ರತಿಯೊಬ್ಬರೂ ವಿಚಾರಮಾಡಿಕೊಳ್ಳತಕ್ಕದು. ನಾವೆಲ್ಲರೂ ಸ್ವಾರ್ಥತೆಯ ಮಾರ್ಗಗಳನ್ನನುಸರಿಸಿ, ದೇವರನ್ನು ಮರೆತು, ಆತನ ಆಜ್ಞೆಗಳನ್ನು ಅತಿಕ್ರಮಿಸಿ, ಆತನ ದೃಷ್ಟಿಯಲ್ಲಿ ಕೆಟ್ಟದನ್ನು ಮಾಡಿರುವುದಿಲ್ಲವೇ? ನಾವು ನಮ್ಮ ಮನೋವಾಕ್ಕಾಯಗಳನ್ನು ಯಥಾರ್ಥವಾಗಿ ಪರೀಕ್ಷೆಮಾಡಿಕೊಂಡರೆ, ದೇವರಿಂದ ಒಂದೇ ಒಂದು ಚಿಕ್ಕ ವರವನ್ನು ಹೊಂದುವುದಕ್ಕಾದರೂ ಆತನ ದಯೆಗೆ ಪಾತ್ರರಾಗುವುದಕ್ಕಾದರೂ ನಮಗೆ ಯೋಗ್ಯತೆಯಿಲ್ಲವೆಂದು ಮನಃಪೂರ್ವಕವಾಗಿ ಒಪ್ಪಿಕೊಳ್ಳಬೇಕು.

ಆದರೆ ದೇವರು ದಯಾಪೂರಿತನಾಗಿಯೂ ಕರುಣಾನಿಧಿಯಾಗಿಯೂ ಇರುತ್ತಾನೆ. ಆತನು ಎಷ್ಟು ಉಪಕಾರಿಯಾಗಿಯೂ ಕರುಣಾಳುವಾಗಿಯೂ ಇದ್ದಾನೆಂಬುದನ್ನು ನಾವು ತಿಳಿದುಕೊಳ್ಳಬೇಕಾದರೆ ಯೇಸು ಕ್ರಿಸ್ತನ ಜೀವಚರಿತ್ರೆಯನ್ನು ಓದಬೇಕು. ದೇವರು ವಾಸ್ತವವಾಗಿ ಎಂಥವನಾಗಿದ್ದಾನೆಂಬುವನ್ನು ವ್ಯಕ್ತಪಡಿಸುವುದಕ್ಕಾಗಿ ಆತನು ನರಾವತಾರವೆತ್ತಿದನು. ದೇವರು ನಮ್ಮನ್ನು ಪ್ರೀತಿಸುತ್ತಾನೆ. ಆದರೆ ಆತನು ದುಷ್ಕೃತ್ಯವನ್ನು ಹಗೆಮಾಡುತ್ತಾನೆ. ಆದಕಾರಣ ನಾವು ಮಾಡಿರುವ ಎಲ್ಲಾ ಪಾಪಗಳಿಗಾಗಿ ಪಶ್ಚಾತ್ತಾಪಪಟ್ಟು, ಅವುಗಳ ವಿಷಯದಲ್ಲಿ ಅಸಹ್ಯಪಟ್ಟು, ಅವುಗಳನ್ನು ವಿಸರ್ಜಿಸಿ, ನಮ್ಮ ತಂದೆಯಾಗಿರುವ ದೇವರ ಕೃಪಾಪಾತ್ರರಾಗಬೇಕು. ದೇವರು ನಮ್ಮ ಹಿಂದಿನ ಪಾಪಾಪರಾಧಗಳನ್ನೆಲ್ಲಾ ಕ್ಷಮಿಸಿಬಿಟ್ಟಿದ್ದಾನೆ; ನಾವು ಪಾಪವನ್ನು ಜಯಿಸಿ ಅದನ್ನು ಬಿಟ್ಟುಬಿಡುವುದಕ್ಕೆ ಆತನು ನಮಗೆ ಸಹಾಯಮಾಡುವನು ಎಂಬೀ ತಿಳುವಳಿಕೆಯನ್ನು ಹೊಂದಿಕೊಂಡು ಹೊಸವರುಷವನ್ನು ಪ್ರಾರಂಭಿಸೋಣ. ನಾವು ಹೀರಿಕೊಳ್ಳುವ ಗಾಳಿಯು ಹೇಗೋ ಹಾಗೆಯೇ ದೇವರ ಕೃಪಾತಿಶಯವು ಯಾವಾಗಲೂ ನಮ್ಮನ್ನು ಆವರಿಸಿಕೊಂಡಿರುತ್ತದೆಂಬುದನ್ನು ನಾವು ಮನದಟ್ಟುಮಾಡಿಕೊಂಡು ಮುಂದಿನ ಹೊಸ ವರುಷದಲ್ಲಿ ಯೋಗ್ಯರಾಗಿ ಜೀವಿಸಬೇಕೆಂದು ತೀರ್ಮಾನಿಸಿಕೊಳ್ಳೋಣ. ನಾವು ಸ್ವಾರ್ಥತೆಯನ್ನು ಬಿಟ್ಟು, ನೀತಿವಂತರಾಗಿಯೂ ದಯಾಪೂರಿತರಾಗಿಯೂ ದೇವರಿಗೆ ವಿಧೇಯರಾಗಿ ನಡೆಯುವವರಾಗಿಯೂ ಇರೋಣ. ಮುಂದೆ ಬರುವ ಹೊಸ ವರುಷವು ನಮ್ಮ ವಾಚಕ ಮಹನೀಯರುಗಳಿಗೆಲ್ಲಾ ಶುಭವರುಷವಾಗಿರಲೆಂದೂ ಅದರಲ್ಲಿ ದೇವರ ಪರಮಾಶೀರ್ವಾದಗಳು ಅವರಿಗೆ ಸದಾ ಅಪಾರವಾಗಿ ಲಭ್ಯವಾಗುತ್ತಿರಲೆಂದೂ ಪ್ರಾರ್ಥಿಸುತ್ತೇವೆ.

ಯುದ್ಧದ ಸಮಾಚಾರಗಳು.

ನಮ್ಮ ಪಕ್ಷದವರು ಮುಂದೆ ನುಗ್ಗಿಹೋದರು.

ರಷ್ಯಾದವರು ತಮ್ಮ ಠಾಣ್ಯಾಗಳನ್ನು ಹಿಡಿದಿರುವರು.

ಫ್ರೆಂಚರೂ ಬ್ರಿಟಿಷರೂ ತಮ್ಮ ದೀರ್ಘವಾದ ಲೈನಿನ ಉದ್ದಕ್ಕೂ ನಿಧಾನವಾಗಿ ಮುಂದು ಮುಂದಕ್ಕೆ ನುಗ್ಗಿ ಹೋಗುತ್ತಿರುವುದೇ ಈ ವಾರದ ಮುಖ್ಯ ಸಮಾಚಾರವಾಗಿದೆ. ಪೂರ್ವ ದಿಕ್ಕಿನಲ್ಲಿ ಜರ್ಮನಿಯವರು ರಷ್ಯಾದವರ ಮೇಲೆ ಬಲವಾಗಿ ನುಗ್ಗಿಹೋಗಿ ಯುದ್ಧಕಾರ್ಯಗಳನ್ನು ನಡಿಸುತ್ತಾ ಬಂದಿದ್ದರೂ ರಷ್ಯಾದವರು ಅವರಿಗೆ ಜಗ್ಗದೆ ತಮ್ಮ ಸ್ಥಾನಗಳನ್ನು ಪರಾಕ್ರಮದಿಂದ ಕಾಪಾಡಿಕೊಳ್ಳುತ್ತಿರುವುದರಿಂದ ಜರ್ಮನಿಯವರು ಅವರನ್ನು ಹಿಂದಕ್ಕೆ ಓಡಿಸಬಲ್ಲರೆಂಬ ನಿರೀಕ್ಷೆ ಕಾಣುವುದಿಲ್ಲ.

ಫ್ರಾನ್ಸಿನಲ್ಲೂ ಬೆಲ್ಜಿಯಮ್‌ನಲ್ಲೂ.

ಫ್ರೆಂಚರಿಗೂ ಬ್ರಿಟಿಷರಿಗೂ ಹೊಸ ಸೈನ್ಯಗಳು ಯುದ್ಧಭೂಮಿಗೆ ಹೋಗಿ ಸೇರಿದವು. ಇದರಿಂದ ಅವರ ಠಾಣ್ಯಗಳು ತುಂಬಾ ಬಲಪಟ್ಟಿರುತ್ತವೆ. ಅವರು ಹಲವು ಸ್ಥಳಗಳಲ್ಲಿ ಮುಂದರಿಸಿ ನುಗ್ಗಿಹೋಗಿದ್ದಾರೆ; ಅದರಲ್ಲೂ ಬೆಲ್ಜಿಯಮ್‌ನೊಳಗೆ ಅವರು ಹೋಗಿರುವುದು ಹೆಚ್ಚು. ಜರ್ಮನಿಯವರು ಒಳ್ಳೆಯ ಬಲವಾದ ಠಾಣ್ಯಗಳಲ್ಲಿ ಕಂದಕಗಳನ್ನು ತೋಡಿಕೊಂಡು ಸೈನ್ಯಗಳನ್ನು ತಂದಿಟ್ಟುಕೊಂಡಿದ್ದಾರೆ. ಆದಕಾರಣ ಅವರನ್ನು ಬಹು ಕಠಿನವಾದ ಯುದ್ಧಮಾಡಿ ಸೋಲಿಸಿದಲ್ಲದೆ ಕಂದಕಗಳಿಂದ ಹಿಂದಕ್ಕೆ ಓಡಿಸುವುದು ಪ್ರಯಾಸ. ಆದರೂ ಫ್ರೆಂಚರೂ, ಬೆಲ್ಜಿಯನ್ನರೂ, ಬ್ರಿಟಿಷರೂ, ಹಿಂದುಸ್ಥಾನದವರೂ ಅದೇ ಉದ್ದೇಶದಿಂದ ತುಂಬಾ ಸಾಹಸ ಪ್ರಯತ್ನಗಳನ್ನು ಮಾಡುತ್ತಾ ಬಂದಿರೋಣದರಿಂದ ಇವರು ಕ್ರಮೇಣ ಸ್ವಲ್ಪ ಸ್ವಲ್ಪವಾಗಿ ಮುಂದರಿಸಿ ಹೋಗುತ್ತಿರುವಂತೆ ಗೊತ್ತಾಗುವುದು. ಹೀಗೆ ಮುಂದರಿಸಿ ನುಗ್ಗಿಹೋಗುವುದು ನಮ್ಮವರಿಗೆ ನಿಧಾನವಾಗಿದೆ; ಯಾಕಂದರೆ ಜರ್ಮನಿಯವರು ಮಾರ್ಗಗಳಲ್ಲಿ ಹೊಸ ಕೋಟೆಗಳನ್ನು ಕಟ್ಟಿ ಬಲಪಡಿಸಿಕೊಂಡಿದ್ದಾರೆ. ನಮ್ಮ ಕಡೆಯವರು ಯುದ್ಧಕಾರ್ಯಗಳನ್ನು ನಡಿಸುತ್ತಾ ಬರುವುದರಲ್ಲಿ ಕೆಲವು ದಿನ ಕೆಲವು ಗಜಗಳ ದೂರವೂ, ಕೆಲವು ವೇಳೆ ಒಂದು ಫರ್ಲಾಂಗ್ ದೂರವೂ, ಇನ್ನು ಕೆಲವು ವೇಳೆ ಎರಡು ಫರ್ಲಾಂಗ್ ದೂರವೂ ನಮ್ಮವರು ಮುಂದರಿಸಿ ನುಗ್ಗಿಹೋಗಿ ಶತ್ರುವನ್ನು ಹಿಂದಕ್ಕೆ ಓಡಿಸುತ್ತಾ ಬಂದಿರುವರು. ಅಂತು ನಮ್ಮ ಸೈನಿಕರು ಯುದ್ಧದ ಸಾಲಿನ ಉದ್ದಕ್ಕೂ ನಿಧಾನವಾಗಿ ಮುಂದು ಮುಂದಕ್ಕೆ ನುಗ್ಗಿ ಹೋಗುತ್ತಲೇ ಇದ್ದಾರೆ. ಕೆಲವು ವೇಳೆ ಕಳೆದುಕೊಂಡಿದ್ದ ಠಾಣ್ಯವನ್ನು ಜರ್ಮನಿಯವರು ನಮ್ಮವರಿಂದ ಪುನಃ ಗದ್ದುಕೊಳ್ಳುವುದೂ ಉಂಟು. ಆದರೆ ಎರಡು ಕಡೆಗಳ ಸ್ಥಿತಿಗತಿಯನ್ನೂ ನೋಡುವಲ್ಲಿ ನಮ್ಮ ಕಡೆಯವರೇ ಮುಂದರಿಸಿ ಹೋಗುತ್ತಿದ್ದಾರೆಂದು ಗೊತ್ತಾಗುತ್ತದೆ.

ಜರ್ಮನಿಯವರ ಒಂದು ವಿಮಾನ ಯಂತ್ರವು ಅಂತರಿಕ್ಷದಿಂದ ಕಲೆ ಎಂಬ ಪಟ್ಟಣದೊಳಕ್ಕೆ ಒಂದು ಗುಂಡನ್ನು ಹಾಕಿತು. ಆದರೆ ಇದರಿಂದ ನಷ್ಟವೇನೂ ಆಗಲಿಲ್ಲ. ಜರ್ಮನಿಯವರ ಎರಡು ವಿಮಾನ ಯಂತ್ರಗಳು ಡನ್‌ಕರ್ಕ್ ನಗರದೊಳಕ್ಕೆ ಬರವಣಿಗೆಯುಳ್ಳ ಕಾಗದಗಳನ್ನು ಕೆಡವಿ ಹೋದವು. ಅದರಲ್ಲಿ ಜರ್ಮನಿ ದಳಪತಿಯೊಬ್ಬನ ಕುಮಾರನ ಶವದ ವಿಷಯದಲ್ಲಿ ಸಮಾಚಾರವನ್ನು ತಿಳಿಸಬೇಕೆಂದೂ, ಜರ್ಮನಿಯವರು ಫ್ರೆಂಚರ ಒಂದು ವಿಮಾನ ಯಂತ್ರವನ್ನು ಕಿತ್ತು ಸ್ವಾಧೀನಪಡಿಸಿಕೊಂಡಿದ್ದಾರೆಂದೂ, ಜನರಿಗೆ ಕ್ರಿಸ್‌ಮಸ್ ಹಬ್ಬವು ಸಂತೋಷಪ್ರದವಾಗಲೆಂದೂ ಬರೆದಿತ್ತು.

ಜರ್ಮನಿಯ ಒಂದು ವಿಮಾನ ಯಂತ್ರವು ಇಂಗ್ಲೆಂಡಿಗೆ ಹಾರಿಬಂದು ಡೋವರ್ ಪಟ್ಟಣದೊಳಕ್ಕೆ ಒಂದು ಸಿಡಿಮದ್ದಿನ ಗುಂಡನ್ನು ಹಾಕಿತು. ಆದರೆ ಅದರಿಂದ ಕೆಲವು ಕಿಟಕಿಗಳು ಒಡೆದುಹೋದವಲ್ಲದೆ ಅನಾಹುತವೇನೂ ಆಗಲಿಲ್ಲ. ಇನ್ನೊಂದು ಜರ್ಮನಿ ವಿಮಾನ ಯಂತ್ರವು ಥೇಮ್ಸ್ ನದೀಮುಖದಲ್ಲಿರುವ ಷಿಯರ್ನೆಸ್ ಪಟ್ಟಣದ ಮೇಲೆ ಕಾಣಿಸಿಕೊಂಡಿತು. ಬ್ರಿಟಿಷ್ ವಿಮಾ

ವೃತ್ತಾಂತ ಪತ್ರಿಕೆ.

1915

ಪ್ರತಿ ಗುರುವಾರವೂ ಮೈಸೂರು ಪಟ್ಟಣದಲ್ಲಿ ಪ್ರಕಟವಾಗುವುದು. ಈ ಸಂಸ್ಥಾನದಲ್ಲೆಲ್ಲಾ ಅತ್ಯಂತ ವಿಶೇಷವಾಗಿ ಪ್ರಚಾರವಾಗುತ್ತದೆ.

ಚಂದಾ ವಿವರ ೧೨ ತಿಂಗಳಿಗೆ (ಮುಂಗಡ) ರೂ. ೧ ೦ ೦
" " ಪೋಸ್ಟೇಜು ಸೇರಿ " ೧ ೧೪ ೦
ಬಿಡಿ ಪತ್ರಿಕೆ ೧ಕ್ಕೆ ೪ ಕಾಸು.



[illegible]

ಟಪ್ಪಾಲ್ ಹಾಸಲು.

[illegible]

ಮನೆಯಾರ್ಡರ್ ಮತ್ತು ವ್ಯಾಲ್ಯೂಪೇಬಲ್

[illegible]

ಮೈಸೂರು ಸರ್ಕಾರೀ ರಜಾ ದಿನಗಳು.

[illegible]

[illegible]

ಜನವರಿ | ಫೆಬ್ರವರಿ

[illegible]

ಜೂಲೈ | ಆಗಸ್ಟ್

[illegible]

ಸೆಪ್ಟೆಂಬರ್ | ಅಕ್ಟೋಬರ್

ಯಾದ ಕಾರಣ ಆ ಕೆಲಸಕ್ಕೆ ರಾಜೀನಾಮೆ ಕೊಟ್ಟನು; ಪ್ರಿನ್ಸ್ ಯೂಜಿಸ್ ಎಂಬಾತನು ಸೈನ್ಯಾಧಿಕಾರಿಯಾಗಿ ನೇಮಕವಾಗಿರುತ್ತಾನೆ.

ಕಟ್ಟೆಯಲ್ಲಿ ಜನವರಿ ತಾ. 16 ರಿಂದ ಮೂರು ದಿನ ದನಗಳ ಪ್ರದರ್ಶನ ನಡೆದು ಬಹುಮಾನಗಳು ಕೊಡಲ್ಪಡುವವು.—ಕೃಷ್ಣರಾಜಪೇಟೆ ತಾಲ್ಲೂಕು ಹೇಮ

ಗವರ್ನ್‌ಮೆಂಟ್ ಸೆಕ್ರೆಟರಿ ಮ|| ಸಿ. ಎಸ್. ಬಾಲಸುಂದರಂ ಅಯ್ಯರವರಿಗೆ ಕ್ರಿಸ್ಮಸ್ ರಜೆಯೊಂದಿಗೆ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಸೋಮ	೧	೮	೧೫	೨೨	೨೯		೫	೧೨	೧೯	೨೬
ಮಂಗಳ	೨	೯	೧೬	೨೩	೩೦		೬	೧೩	೨೦	೨೭
ಬುಧವಾರ	೩	೧೦	೧೭	೨೪	೩೧		೭	೧೪	೨೧	೨೮
ಗುರುವಾರ	೪	೧೧	೧೮	೨೫		೧	೮	೧೫	೨೨	೨೯
ಶುಕ್ರವಾರ	೫	೧೨	೧೯	೨೬		೨	೯	೧೬	೨೩	೩೦
ಶನಿವಾರ	೬	೧೩	೨೦	೨೭		೩	೧೦	೧೭	೨೪	

	ಮೇ					ಜೂನ್				
ಆದಿತ್ಯವಾರ		೨	೯	೧೬	೨೩	೩೦	೬	೧೩	೨೦	೨೭
ಸೋಮ		೩	೧೦	೧೭	೨೪	೩೧	೭	೧೪	೨೧	೨೮
ಮಂಗಳ		೪	೧೧	೧೮	೨೫	೧	೮	೧೫	೨೨	೨೯
ಬುಧವಾರ		೫	೧೨	೧೯	೨೬	೨	೯	೧೬	೨೩	೩೦
ಗುರುವಾರ		೬	೧೩	೨೦	೨೭	೩	೧೦	೧೭	೨೪	
ಶುಕ್ರವಾರ		೭	೧೪	೨೧	೨೮	೪	೧೧	೧೮	೨೫	
ಶನಿವಾರ	೧	೮	೧೫	೨೨	೨೯	೫	೧೨	೧೯	೨೬	


ಜರ್ಮನಿಯವರ ಸ್ವಾಧೀನವಾಗಿರುವ ಬೆಲ್ಜಿಯಂ ದೇಶದ ಬ್ರಸೆಲ್ಸ್ ರಾಜಧಾನಿಯ ಟೌನ್ ಹಾಲ್.

ಆದಿತ್ಯವಾರ		೫	೧೨	೧೯	೨೬		೩	೧೦	೧೭	೨೪	೩೧
ಸೋಮ		೬	೧೩	೨೦	೨೭		೪	೧೧	೧೮	೨೫	
ಮಂಗಳ		೭	೧೪	೨೧	೨೮		೫	೧೨	೧೯	೨೬	
ಬುಧವಾರ	೧	೮	೧೫	೨೨	೨೯		೬	೧೩	೨೦	೨೭	
ಗುರುವಾರ	೨	೯	೧೬	೨೩	೩೦		೭	೧೪	೨೧	೨೮	
ಶುಕ್ರವಾರ	೩	೧೦	೧೭	೨೪		೧	೮	೧೫	೨೨	೨೯	
ಶನಿವಾರ	೪	೧೧	೧೮	೨೫		೨	೯	೧೬	೨೩	೩೦	

	ನೊವೆಂಬರ್					ಡಿಸೆಂಬರ್				
ಆದಿತ್ಯವಾರ		೭	೧೪	೨೧	೨೮		೫	೧೨	೧೯	೨೬
ಸೋಮ	೧	೮	೧೫	೨೨	೨೯		೬	೧೩	೨೦	೨೭
ಮಂಗಳ	೨	೯	೧೬	೨೩	೩೦		೭	೧೪	೨೧	೨೮
ಬುಧವಾರ	೩	೧೦	೧೭	೨೪		೧	೮	೧೫	೨೨	೨೯
ಗುರುವಾರ	೪	೧೧	೧೮	೨೫		೨	೯	೧೬	೨೩	೩೦
ಶುಕ್ರವಾರ	೫	೧೨	೧೯	೨೬		೩	೧೦	೧೭	೨೪	೩೧
ಶನಿವಾರ	೬	೧೩	೨೦	೨೭		೪	೧೧	೧೮	೨೫	

ಸಾಮಥಾರಿ ವಧುವರರು.

ವಿಶೇಷ ದಿನಗಳು.

ಜನವರಿ.—1 ಹೊಸ ವರುಷದ ಆರಂಭ; 13 ಆಖಿರಿ ಚಹರ್‌ಶಂಬ; 14 ಉತ್ತರಾಯಣ ಪುಣ್ಯಕಾಲ; 22 ರಥಸಪ್ತಮಿ, ಶ್ರೀಮನ್ ಮಹಾರಾಜರವರ ಪಟ್ಟಾಭಿಷೇಕ ದಿನ; 24 ಮಧ್ವನವಮಿ; 29 ಮಹಮ್ಮದನ ಜನ್ಮದಿನ; 31 ನಾ ಸಪ್ತೋತ್ಸವ.

ಫೆಬ್ರವರಿ.—12 ಶಿವರಾತ್ರಿ; 17 ಬೂದಿಬುಧವಾರ.

ಮಾರ್ಚಿ.—1 ಹೋಳೀಹಬ್ಬ; 16 ಚಾಂದ್ರಮಾನಯುಗಾದಿ; 25 ಶ್ರೀರಾಮನವಮಿ.

ಏಪ್ರಿಲ್.—2 ಗುಡ್ ಫ್ರೈಡೇ; 1-6 ಈಸ್ಟರ್ ರಜಾ; 13 ಸೌರಮಾನ ಯುಗಾದಿ; 20 ರಾಮಾನುಜಾಚಾರ್ಯರ ತಿರುನಕ್ಷತ್ರ.

ಮೇ.—13 ಅಸೆನ್ಶನ್ ದಿನ; 19 ಶ್ರೀ ಶಂಕರಾಚಾರ್ಯರ ಜಯಂತಿ; 26 ಶ್ರೀ ಶಂಕರಾಚಾರ್ಯರ ಆರಾಧನ; 28 ನಾ ಸಪ್ತೋತ್ಸವ.

ಜೂನ್.—3 ಚಕ್ರವರ್ತಿಯವರ ಜನ್ಮದಿನ; 23 ಶ್ರೀಮನ್ ಮಹಾರಾಜರವರ ವರ್ಧಂತಿ; 24 ಪ್ರಿನ್ಸ್ ಆಫ್ ವೇಲ್ಸ್‌ರವರ ಜನ್ಮದಿನ; 27, 28 ಷಬ್-ಎ-ಬರಾತ್.

ಜುಲೈ.—16 ದಕ್ಷಿಣಾಯನ ಪುಣ್ಯಕಾಲ; 26 ನಾ ಸಪ್ತೋತ್ಸವ; 31 ಟೀಕಾಚಾರ್ಯರ ಪುಣ್ಯದಿನ.

ಆಗಸ್ಟ್.—10 ಭೀಮನ ಅಮಾವಾಸ್ಯೆ; 13 ಜುಮ್ಮಾ-ಅ-ರಮ್ಜಾನ್; 15 ಗರುಡಪಂಚಮಿ; 20 ವರಮಹಾಲಕ್ಷ್ಮೀ ವ್ರತ; 23 [illegible]; 24 [illegible].

ಸೆಪ್ಟಂಬರ್.—1 ಕೃಷ್ಣಜನ್ಮಾಷ್ಟಮಿ; 2 ಶ್ರೀಕೃಷ್ಣಜಯಂತಿ; 11 ಸಾಮವೇದೋಪಾಕರ್ಮ; 12 ಗೌರಿ, ಗಣೇಶ; 22 ಅನಂತಚತುರ್ದಶಿ; 26 ಮಹಾಭರಣಿ.

ಅಕ್ಟೋಬರ್.—1 ಮಧ್ಯಾಷ್ಟಮಿ; 8 ಮಹಾಲಯ ಅಮಾವಾಸ್ಯೆ; 9 ನವರಾತ್ರಿ ಪ್ರಾರಂಭವು; 14 ಸರಸ್ವತಿ ಆವಾಹನ; 16 ದುರ್ಗಾಷ್ಟಮಿ; 17 ಮಹಾನವಮಿ; 18 ವಿಜಯದಶಮಿ; 14-25 ದಸರಾ ರಜಾ ದಿನಗಳು, 19, 20 ಬಕ್ರೀದ್.

ನೋವೆಂಬರ್.—5 ನರಕಚತುರ್ದಶಿ; 6 ದೀಪಾವಳಿ; 8 ಬಲಿಪಾಡ್ಯಮಿ; 15-17 ದೀಪಾವಳಿ ರಜಾ ದಿನಗಳು; 21 ನಾ ಸಪ್ತೋತ್ಸವ.

ಡಿಸೆಂಬರ್.—12 "ದರ್ಬಾರ್ ಡೇ;" 24-31 ಕ್ರಿಸ್ಮಸ್ ರಜಾ ದಿನಗಳು.

ನೋಟ್. (1) ಗರುಡಪಂಚಮಿ, ವರಮಹಾಲಕ್ಷ್ಮಿ ಹಬ್ಬಗಳಲ್ಲಿ ಕಚೇರಿಗಳು ಬೆಳಿಗ್ಗೆ ಮಾತ್ರ ತೆರೆದಿರತಕ್ಕದ್ದು. (2) ಅಮಾವಾಸ್ಯೆ ದಿನ ಅವರವರ ಪಿತೃ ವಾರ್ಷಿಕ ಮಧ್ಯಾಹ್ನ 1 ಗಂಟೆಗೆ ಕಚೇರಿಗೆ ಬರುವಂತೆ ಅವಕಾಶಕೊಡಬಹುದು. (3) ಮಧ್ವನವಮಿ, ಹೋಳೀಹಬ್ಬ, ಶ್ರೀರಾಮನವಮಿ, ಸೌರಮಾನ ಯುಗಾದಿ, ರಾಮಾನುಜಾಚಾರ್ಯರ ತಿರುನಕ್ಷತ್ರ, ಶ್ರೀಶಂಕರಾಚಾರ್ಯರ ಜಯಂತಿ, ಟೀಕಾಚಾರ್ಯರ ಪುಣ್ಯದಿನ, ಗೌರಿ, ಅನಂತಚತುರ್ದಶಿಗಳಿಗೂ ಮತ್ತು ಮಹಮ್ಮದೀಯರ, ಕ್ರೈಸ್ತರ ಹಬ್ಬಗಳಿಗೂ ಆಯಾ ಪಂಗಡದವರಿಗೆ ಮಾತ್ರ ರಜಾ ಕೊಡಬಹುದು. (4) ವಿದ್ಯಾ ಇಲಾಖೆಯಲ್ಲಿ ಹಂಗಾಮಿ ರಜವನ್ನು ಅರ್ಧ ದಿನದ ರಜವಂತೆ ಭಾವಿಸತಕ್ಕದ್ದು; ಮತ್ತು ಹಾಜರಾತಿಯ ಕಾಲವನ್ನು ಮುಖ್ಯಾಧಿಕಾರಿಯು ನಿರ್ಣಯಿಸತಕ್ಕದ್ದು. (5) "ದರ್ಬಾರ್ ಡೇ" ಡಿಸೆಂಬರ್ ತಾ. 12 ನೇ ಭಾನುವಾರವಾಗುವುದರಿಂದ ಮಾರನೇ ಸೋಮವಾರ ಸ್ಕೂಲುಗಳಿಗೆ ರಜಾ.

ಹೊಳೆನರಸೀಪುರ.

ವೃತ್ತಾಂತ ಪತ್ರಿಕೆ.

1915

ಪ್ರತಿ ಗುರುವಾರವೂ ಮೈಸೂರು ಪಟ್ಟಣದಲ್ಲಿ ಪ್ರಕಟವಾಗುವುದು. ಈ ಸಂಸ್ಥಾನದಲ್ಲೆಲ್ಲಾ ಅತ್ಯಂತ ವಿಶೇಷವಾಗಿ ಪ್ರಚಾರವಾಗುತ್ತದೆ.

ಚಂದಾ ವಿವರ:—೧೨ ತಿಂಗಳಿಗೆ (ಮುಂಗಡ) ರೂ. ೧-೦-೦
,, ,, ಪೋಸ್ಟೇಜು ಸೇರಿ ,, ೧-೧೪-೦
ಬಿಡಿ ಪತ್ರಿಕೆ ೧ಕ್ಕೆ ೪ ಕಾಸು.



ಬೆಂಗಳೂರಿನಲ್ಲಿ ಅಲಸೂರುಪೇಟೆ ದೇವಾಲಯು.

ಟಪ್ಪಾಲ್ ಹಾಸಲು.

		ಆ. ಪೈ.
ಕವರ್ :	ಒಂದು ತೋಲಾ ಒಳಗಿದ್ದರೆ	೦—೬
,,	೧ ತೋಲಾ ಮೇಲೆ ೧೦ ತೋಲಾ ಒಳಗೆ	೧—೦
,,	ಅಲ್ಲಿಂದ ಪ್ರತಿ ೧೦ ತೋಲಾ ಅಥವಾ ಅದರಭಿನ್ನಾಂಶಕ್ಕೆ	೧—೦
ಭಾಂಗಿ :	ಪ್ರತಿ ೪೦ ತೋಲಾಗೂ	೨—೦
,,	ಅಲ್ಲಿಂದ ಪ್ರತಿ ೪೦ ತೋಲಾ ಅಥವಾ ಅದರ ಭಿನ್ನಾಂಶಕ್ಕೆ	೨—೦

ಮಣಿಯಾರ್ಡರ್ ಮತ್ತು ವ್ಯಾಲ್ಯೂ ಪೇಬಲ್ :

ಮೊಬಲಗು	೫ ರೂಪಾಯಿಗೆ ಮೀರದಿದ್ದರೆ			೧ ಆಣೆ
,,	೧೦	,,	,,	೨ ,,
,,	೧೫	,,	,,	೩ ,,
,,	೨೫ವರೆಗೆ ,,		,,	೪ ,,

ಮೈಸೂರು ಸರ್ಕಾರೀ ರಜಾ ದಿನಗಳು.

ಜನವರಿ 1 ಹೊಸವರ್ಷ; 14 ಉತ್ತರಾಯಣ ಪುಣ್ಯಕಾಲ. ಫೆಬ್ರುವರಿ.—12 ಮಹಾಶಿವರಾತ್ರಿ. ಮಾರ್ಚಿ.—16 ಚಾಂದ್ರಮಾನ ಯುಗಾದಿ (ರಾಕ್ಷಸ ಸಂವತ್ಸರಾರಂಭ). ಏಪ್ರಿಲ್.—2 ಗುಡ್ ಫ್ರೈಡೇ. ಜೂನ್—3 ಚಕ್ರವರ್ತಿಯವರ ವರ್ಧಂತಿ; 23 ಶ್ರೀಮನ್ ಮಹಾರಾಜರವರ ವರ್ಧಂತಿ ಆಗಸ್ಟ್—23 ಅಶ್ವಲಾಯನ ಶ್ರಾವಣಿ; 24 ಆಪಸ್ತಂಬ ಶ್ರಾವಣಿ. ಸೆಪ್ಟಂಬರ್.—12 ಗೌರಿ ಮತ್ತು ಗಣೇಶ. ಆಕ್ಟೋಬರ್.—8 ಮಹಾಲಯ; 9 ನವರಾತ್ರಿ ಆರಂಭ; 14-25 ದಸರಾ ರಜಾ ನೊವೆಂಬರ್—6 ದೀಪಾವಳಿ; 8 ಬಲಿಪಾಡ್ಯಮಿ; 18 ಮೊಹರಂ ಕಡೇದಿನ. ಡಿಸೆಂಬರ್.—24-31 ಕ್ರಿಸ್ಮಸ್ ರಜಾ. ಸಿವಿಲ್ ಕೋರ್ಟುಗಳಿಗೆ ರಜಾ—ಏಪ್ರಿಲ್ ತಾ 12ರಿಂದ ಮೇ ತಾ. 22ರ ತನಕ. ಚೀಫ್ ಕೋರ್ಟಿಗೆ ರಜಾ—ಏಪ್ರಿಲ್ ತಾ 12ರಿಂದ ಜೂನ್ ತಾ 12ರ ತನಕ.

ಗುಬ್ಬಿಯ ಪಬ್ಲಿಕ್ ಪಾರ್ಕ್.

ಜನವರಿ

ಆದಿತ್ಯವಾರ		೩	೧೦	೧೭	೨೪ ೩೧
ಸೋಮ		೪	೧೧	೧೮	೨೫
ಮಂಗಳ		೫	೧೨	೧೯	೨೬
ಬುಧವಾರ		೬	೧೩	೨೦	೨೭
ಗುರುವಾರ		೭	೧೪	೨೧	೨೮
ಶುಕ್ರವಾರ	೧	೮	೧೫	೨೨	೨೯
ಶನಿವಾರ	೨	೯	೧೬	೨೩	೩೦

ಫೆಬ್ರವರಿ

೭	೧೪	೨೧	೨೮
೧	೮	೧೫	೨೨
೨	೯	೧೬	೨೩
೩	೧೦	೧೭	೨೪
೪	೧೧	೧೮	೨೫
೫	೧೨	೧೯	೨೬
೬	೧೩	೨೦	೨೭



ಜೂಲೈ

ಆದಿತ್ಯವಾರ		೪	೧೧	೧೮	೨೫
ಸೋಮ		೫	೧೨	೧೯	೨೬
ಮಂಗಳ		೬	೧೩	೨೦	೨೭
ಬುಧವಾರ		೭	೧೪	೨೧	೨೮
ಗುರುವಾರ	೧	೮	೧೫	೨೨	೨೯
ಶುಕ್ರವಾರ	೨	೯	೧೬	೨೩	೩೦
ಶನಿವಾರ	೩	೧೦	೧೭	೨೪	೩೧

ಆಗಸ್ಟ್

೧	೮	೧೫	೨೨	೨೯
೨	೯	೧೬	೨೩	೩೦
೩	೧೦	೧೭	೨೪	೩೧
೪	೧೧	೧೮	೨೫	
೫	೧೨	೧೯	೨೬	
೬	೧೩	೨೦	೨೭	
೭	೧೪	೨೧	೨೮	

ಸೆಪ್ಟೆಂಬರ್

ಅಕ್ಟೋಬರ್

...ಅವನ್ನು ಹಿಡಿಯಬೇಕೆಂದು ಅಂತರಿಕ್ಷಕ್ಕೆ ಹಾರಿಹೋಗಿ ಒಡನೆಯೇ ... ವಿಮಾನವನ್ನು ಓಡಿಸಿಬಿಟ್ಟರು.

ಫ್ರೆಂಚರ ಒಂದು ವಿಮಾನ ಯಂತ್ರವು ಜರ್ಮನಿಗೆ ಹಾರಿಹೋಗಿ ...ಗ್ ಎಂಬ ನಗರದೊಳಕ್ಕೆ ಕೆಲವು ಸಿಡಿಮದ್ದಿನ ಗುಂಡುಗಳನ್ನು ... ಮಟ್ಟಿಗೂ ನಷ್ಟಪಡಿಸಿರುತ್ತದೆ.

ಹಿಂದುಸ್ಥಾನದ ಯೌವನಸ್ಥರು ಇಂಗ್ಲೆಂಡಿನಲ್ಲಿ ವಿದ್ಯಾಭ್ಯಾಸಮಾಡುತ್ತಿದಾ... ಅವರ ಪೈಕಿ 230 ಮಂದಿ ಯುದ್ಧಭೂಮಿಯಲ್ಲಿ ಗಾಯಪಡುವವರನ್ನು ...ಹೋಗುವುದಕ್ಕೆ ಅಂಬುಲೆನ್ಸ್ ಸಂಘಕ್ಕೆ ಸೇರಿಕೊಂಡು ಬಹು ಸ್ತೋತ್ರಾರ್ಹ ...ವಾದ ಕಾರ್ಯಗಳನ್ನು ಮಾಡುತ್ತಾ ಬಂದಿದ್ದಾರೆ. ಈ ಪೈಕಿ 175 ಮಂದಿ ಈಗ ...ಸ್ಪತ್ರೆಗಳಲ್ಲೂ ಯುದ್ಧಭೂಮಿಯಲ್ಲೂ ಇದ್ದುಕೊಂಡು ಗಾಯಪಟ್ಟ ಸಿಪಾ...ಯಿಗಳನ್ನು ಉಪಚರಿಸುತ್ತಿದ್ದಾರೆ. ಹಿಂದುಸ್ಥಾನದ ಸಿಪಾಯಿಗಳ ಭಾಷೆಗಳು ...ಅವರಿಗೆ ಮಾತ್ರವೇ ತಿಳಿದಿರುವುದರಿಂದ ಅವರು ಕೈಗೊಂಡಿರುವ ಕಾರ್ಯವು ...ಬಹಳ ಪ್ರಯೋಜನಕರವಾಗಿದೆ. ಹಿಂದುಸ್ಥಾನದ ಸೈನಿಕರಲ್ಲಿ ಗಾಯಪಟ್ಟವರಿ...ಗೋಸ್ಕರ ಐಜಿಪ್ಟಿಗೆ ಸೇರಿದ ಅಲೆಕ್ಸಾಂಡ್ರಿಯಾನಗರದಲ್ಲಿ ಒಂದು ಆಸ್ಪತ್ರೆಯನ್ನು ...ಮಾಡಿದ್ದಾರೆ. ಹಿಂದುಸ್ಥಾನದ ಸೈನಿಕರಲ್ಲಿ ಗಾಯಪಟ್ಟದ್ದು ವಾಸಿಯಾಗಿರುವ ...ಅನೇಕ ಸಿಪಾಯಿಗಳು ಮತ್ತೆ ಯುದ್ಧಭೂಮಿಗೆ ಹೋಗುವುದಕ್ಕಿಂತ ಮುಂಚೆ ...ಲಂಡನ್ ಪಟ್ಟಣಕ್ಕೆ ಹೋಗಿ ಅಲ್ಲಿನ ತಮಾಷೆಗಳನ್ನೂ ಇತರ ವಿದ್ಯಮಾನಗ...ಳನ್ನೂ ನೋಡುತ್ತಿದ್ದಾರೆ.

ಒಂದು ತಂತೀ ವರ್ತಮಾನವು ತಿಳಿಸುವುದೇನೆಂದರೆ—ಸೆಪ್ಟಂಬರ್ ತಾ. 15 ರಿಂದ ನೊವೆಂಬರ್ ತಾ. 30 ರ ವರೆಗೆ 4,89,773 ಮಂದಿ ಫ್ರೆಂಚರ ಗಾಯಪಟ್ಟ ಸಿಪಾಯಿಗಳು ಆಸ್ಪತ್ರೆಗಳಲ್ಲಿದ್ದು ವಾಸಿಮಾಡಿಕೊಂಡು ಹೋದರೆಂದು ತಿಳಿಯುವುದು. ಈ ಪೈಕಿ ಶೇಕಡಾ 79 ರಷ್ಟು ಸೈನ್ಯಗಳು ಮತ್ತೆ ಯುದ್ಧಭೂಮಿಗೆ ಹೋದವೆಂದೂ, ಶೇಕಡಾ 2½ ಯಷ್ಟು ಸೈನ್ಯಗಳು ಮೃತಪಟ್ಟವೆಂದೂ ಹೇಳಿದೆ. ಸೈನ್ಯದ ಕೆಲಸಗಳಿಗೆ ಸಾಕಾಗುವಷ್ಟು ಆಸ್ಪತ್ರೆಗಳು ಅಂದರೆ 3,978 ಆಸ್ಪತ್ರೆಗಳು ಈಗ ಫ್ರಾನ್ಸಿನಲ್ಲಿ ಏರ್ಪಾಡಾಗಿರುವವು.

ಪ್ಯಾರಿಸ್ ನಗರದಲ್ಲಿ ಫ್ರೆಂಚರ ಪಾರ್ಲಿಮೆಂಟ್ ಸಭೆಮನೆಯಲ್ಲಿ ಫ್ರೆಂಚರ ಪ್ರಧಾನ ಮಂತ್ರಿಶ್ರೇಷ್ಠರು ಮೆಂಬರುಗಳನ್ನು ಕುರಿತು ಹೇಳಿದ್ದೇನೆಂದರೆ— ಜರ್ಮನಿಯವರನ್ನು ಬೆಲ್ಜಿಯಮ್‌ನಿಂದಲೂ ಫ್ರಾನ್ಸಿನಿಂದಲೂ ಹಿಂದಕ್ಕೆ ಹೊರಡಿಸುವ ತನಕಲೂ, ಆಲ್ಸೆಸ್ ಮತ್ತು ಲೊರೇನ್ ಅಧಿಪತ್ಯಗಳು ಪುನಃ ಫ್ರೆಂಚರ ಸ್ವಾಧೀನಕ್ಕೆ ಬರುವ ತನಕಲೂ, ಮತ್ತು ಪ್ರಷ್ಯಾದವರ ಯುದ್ಧದ ಆಸೆಯು ಸಂಪೂರ್ಣವಾಗಿ ನಾಶವಾಗುವ ತನಕಲೂ ಫ್ರೆಂಚರು ಈ ಯುದ್ಧವನ್ನು ಬಿಡುವುದಿಲ್ಲ. ಫ್ರೆಂಚರ ಸೈನ್ಯವು ಬಹು ಶೂರತನವುಳ್ಳದ್ದು; ಅದು ಅತ್ಯಂತ ಪರಾಕ್ರಮದಿಂದ ಯುದ್ಧಮಾಡುತ್ತಿದೆ. ಪಾರ್ಲಿಮೆಂಟಿನವರು ಫ್ರೆಂಚರ ಯುದ್ಧದ ಖರ್ಚಿಗೆ 3,43,00,000 ಪೌಂಡುಗಳನ್ನು (ಅಂದರೆ, 511½ ಕೋಟಿ ರೂಪಾಯಿಗಳನ್ನು) ಸ್ಯಾಂಕ್ಷನ್ ಮಾಡಿದ್ದಾರೆ. ಫ್ರಾನ್ಸಿನ ಬ್ಯಾಂಕು ಬೇಕಾದಷ್ಟು ದ್ರವ್ಯವನ್ನು ಒದಗಿಸಬಲ್ಲುದಾದ್ದರಿಂದ ಫ್ರೆಂಚರು ಈ ಯುದ್ಧಕ್ಕೋಸ್ಕರ ಸಾಲಮಾಡಬೇಕಾದ ಪ್ರಸಕ್ತವಿಲ್ಲ.

ಬ್ರಿಟಿಷ್ ಖಜಾನಾ ಇಲಾಖೆಯ ಮಂತ್ರಿಯವರಾದ ಮಿ|| ಲ್ಲಾಯಡ್ ಜಾರ್ಜ್‌ರವರು ಕೆಲವು ದಿನಗಳ ಕೆಳಗೆ ಹೇಳಿದ್ದೇನೆಂದರೆ—ಬ್ರಿಟಿಷ್ ರಾಜ್ಯವು ಈಗಿನ ಯುದ್ಧಕ್ಕೋಸ್ಕರ ತಿಂಗಳಿಗೆ 4,50,00,000 ಪೌಂಡುಗಳನ್ನು (ಅಂದರೆ, 67½ ಕೋಟಿ ರೂಪಾಯಿ) ಖರ್ಚು ಮಾಡುತ್ತಿದೆ. ನಮ್ಮ ಯುದ್ಧ ಭಟರೂ ನಾವೆಯ ಸೈನಿಕರೂ ಇದುವರೆಗೆ 20,00,000 ಮಂದಿ ಇದ್ದರು. ಇನ್ನು ಸ್ವಲ್ಪ ದಿನಗಳೊಳಗಾಗಿ 25,00,000 ಸೈನಿಕರು ಸಿದ್ಧವಾಗಿ, ಇಷ್ಟರೊಳಗೇ 5,00,000 ಸೈನಿಕರನ್ನು ಯುದ್ಧಭೂಮಿಗೆ ಫ್ರೆಂಚರ ಸಹಾಯಕ್ಕೆ ಕಳುಹಿಸುತ್ತೇವೆ.

ಪ್ರಿನ್ಸೆಸ್ ಮೇರಿ ಎಂಬ ನಮ್ಮ ರಾಜಕುಮಾರಿಯವರು 1,53,200 ಪೌಂಡುಗಳನ್ನು (ಅಂದರೆ, 22,98,000 ರೂಪಾಯಿ) ಚಂದಾ ಕೂಡಿಸಿ ಯುದ್ಧಭೂಮಿಯಲ್ಲಿರುವ ಸೈನಿಕರಿಗೆ ಬೇಕಾದ ಉಡುಪುಗಳನ್ನೂ ತಿಂಡಿಯ ಪದಾರ್ಥಗಳನ್ನೂ ಕ್ರಿಸ್ಮಸ್ ಹಬ್ಬದ ಬಹುಮಾನವಾಗಿ ಕಳುಹಿಸಿಕೊಟ್ಟಿದ್ದಾರೆ. ನಮ್ಮ ಚಕ್ರವರ್ತಿಯವರೂ ಮಹಾರಾಜ್ಞೀಯವರೂ ಪ್ರತಿ ಒಬ್ಬ ಸಿಪಾಯಿಗೂ, ನಾವಿಕನಿಗೂ ಕ್ರಿಸ್ಮಸ್ ಹಬ್ಬದ ಕಾರ್ಡುಗಳನ್ನು ಕಳುಹಿಸಿದ್ದಾರೆ.

ರಷ್ಯಾ, ಆಸ್ಟ್ರಿಯಾ, ಜರ್ಮನಿ

ಈಗಿನ ತಂತೀವರ್ತಮಾನಗಳು ಪೂರ್ವದಿಕ್ಕಿನಲ್ಲಿ ನಡೆಯುವ ವಿದ್ಯಮಾನಗಳನ್ನು ಸ್ಪಷ್ಟವಾಗಿ ತಿಳಿಸುವುದಿಲ್ಲ; ರಷ್ಯಾದವರು ತಮ್ಮ ಸೈನಿಕರನ್ನು ಕೆಲವು ಕಡೆ ಹಿಂದಕ್ಕೆ ಕರೆದುಕೊಂಡಿದ್ದಾರೆ. ಆದರೂ ಜರ್ಮನಿಯವರೂ ಆಸ್ಟ್ರಿಯಾದವರೂ ಮುಂದಕ್ಕೆ ನುಗ್ಗಿಹೋಗುತ್ತಾ ಇಲ್ಲ. ಇವರು ರಷ್ಯಾದವರನ್ನು ಹಿಂದಕ್ಕೆ ಓಡಿಸಬೇಕೆಂದು ಬಹು ಪರಾಕ್ರಮದಿಂದ ಅವರ ಮೇಲೆ ನುಗ್ಗಿ ಯುದ್ಧಮಾಡಿದ್ದರಲ್ಲಿ ಬಹಳ ಸೈನ್ಯಗಳನ್ನು ಕಳೆದುಕೊಂಡರು.

ಪೋಲೆಂಡಿನ ಉತ್ತರಭಾಗದಲ್ಲಿ ಜರ್ಮನಿಯವರು ಮುಂದಕ್ಕೆ ನುಗ್ಗಿ ಹೋಗದಂತೆ ತಡೆಯಲಾಯಿತು. ಒಂದು ಕಡೆ ಯುದ್ಧ ನಡೆದು ಜರ್ಮನಿಯವರ ಒಂದು ರಿಜಿಮೆಂಟಿನ ಸೈನ್ಯವೆಲ್ಲಾ ನಾಶಮಾಡಲ್ಪಟ್ಟಿತು. ರಷ್ಯಾದವರು 520 ಜನರನ್ನು ಸೆರೆ ಹಿಡಿದುಕೊಂಡರು. ಈಗ ಬಂದಿರುವ ತಂತೀವರ್ತಮಾನಗಳನ್ನು ನೋಡುವಲ್ಲಿ ಒಂದು ಸ್ಥಳದಲ್ಲಿ ಎರಡು ದಿನಗಳೊಳಗೆ ರಷ್ಯಾದವರು ಜರ್ಮನಿಯ ಸೈನ್ಯದಲ್ಲಿ 57 ಮಂದಿ ಹುದ್ದೇದಾರರನ್ನೂ 4,000 ಯುದ್ಧಭಟರನ್ನೂ, ಇನ್ನೊಂದು ಠಾಣ್ಯದಲ್ಲಿ 8 ಮಂದಿ ಹುದ್ದೇದಾರರನ್ನೂ 600 ಜನ ಸೈನಿಕರನ್ನೂ ಸೆರೆ ಹಿಡಿದುಕೊಂಡಿರುವಂತೆ ತಿಳಿಯುತ್ತದೆ.

ಆಸ್ಟ್ರಿಯಾದವರೂ ಎರಡು ಮೂರು ಠಾಣ್ಯಗಳಲ್ಲಿ ರಷ್ಯಾದವರಿಂದ ನಷ್ಟಪಟ್ಟಿರುತ್ತಾರೆ. ಒಂದು ಯುದ್ಧದಲ್ಲಿ ಆಸ್ಟ್ರಿಯಾದವರ ಕಡೆ 600 ಹೆಣಗಳು ಬಿದ್ದವು; 1,000 ಸೈನಿಕರು ಸೆರೆಯಾದರು. ಇನ್ನೊಂದು ಸ್ಥಳದಲ್ಲಿ ಆಸ್ಟ್ರಿಯಾದವರ ಒಂದು ಡಿವಿಜನ್ ಸೈನ್ಯದ ಮೇಲೆ ಅಕಸ್ಮಾತ್ತಾಗಿ ರಷ್ಯಾದವರು ನುಗ್ಗಿ ಯುದ್ಧಮಾಡಿದಾಗ ಆಸ್ಟ್ರಿಯಾದವರು ಚದರಿ ಓಡಿಹೋದರು. ಅವರಲ್ಲಿ 1,500 ಸೈನಿಕರು ಮೃತಪಟ್ಟರು; ರಷ್ಯಾದವರು ಅನೇಕ ಸಿಪಾಯಿಗಳನ್ನು ಫಿರಂಗಿಗಳ ಸಮೇತ ಸೆರೆಹಿಡಿದುಕೊಂಡರು. ಮೂರನೇ ಠಾಣ್ಯದಲ್ಲಿ ಯುದ್ಧ ನಡೆದದ್ದರಲ್ಲಿ ಆಸ್ಟ್ರಿಯಾದವರು 1,000 ಯುದ್ಧಭಟರ ಹೆಣಗಳನ್ನು ರಣರಂಗದಲ್ಲಿ ಬಿಟ್ಟುಹೋದರು.

ತಂತೀ ವರ್ತಮಾನಗಳು ಸಂಗತಿಗಳನ್ನು ಸ್ಪಷ್ಟವಾಗಿ ಹೇಳುವುದಿಲ್ಲ; ಆದರೂ ಒಂದೇನೋ ಮಂದಿತವೆಂದು ಕಾಣುತ್ತದೆ. ಜರ್ಮನಿಯವರ ಮತ್ತು ಆಸ್ಟ್ರಿಯಾದವರ ಸೈನ್ಯಗಳು ಅಪಾರವಾದಷ್ಟು ನುಗ್ಗಿ ಯುದ್ಧಮಾಡುತ್ತಿದ್ದಾಗ್ಯೂ ಅವು ರಷ್ಯಾದವರ ಸೈನಿಕರ ಸಾಲುಗಳನ್ನು ಒಡೆದು ನುಗ್ಗಲಾರದೆ ಹೋಗಿವೆ.

ಡಿಸೆಂಬರ್ ತಾ. 23 ರ ವರೆಗೆ ಜರ್ಮನಿ ಸೈನ್ಯದ 1,140 ಮಂದಿ ಹುದ್ದೇದಾರರೂ, 1,31,737 ಮಂದಿ ಸಿಪಾಯಿಗಳೂ ಸೆರೆಯಾಗಿ ರಷ್ಯಾದೊಳಗೆ ಇರುತ್ತಾರೆ. ರಷ್ಯಾದವರಿಗೆ ಆಸ್ಟ್ರಿಯಾ ಸೈನ್ಯದಲ್ಲಿ 3,186 ಮಂದಿ ಹುದ್ದೇದಾರರೂ, 2,21,447 ಮಂದಿ ಸಿಪಾಯಿಗಳೂ ಸೆರೆ ಸಿಕ್ಕಿರುವರು.

ಟರ್ಕಿ.

ಟರ್ಕಿಗೆ ಸಂಬಂಧಪಟ್ಟ ಯುದ್ಧದ ಸಮಾಚಾರಗಳಲ್ಲಿ ವಿಶೇಷವೇನೂ ತಿಳಿದು ಬಂದಿಲ್ಲ. ರಷ್ಯಾದವರು ಅರ್ಮೀನಿಯಾದಲ್ಲಿ ಟರ್ಕಿಯವರನ್ನು ಹಿಂದು ಹಿಂದಕ್ಕೆ ಓಡಿಸಿಕೊಂಡು ಹೋಗುತ್ತಿದ್ದಾರೆ.

ಸೆರ್ವಿಯಾದಲ್ಲಿ.

ಆಸ್ಟ್ರಿಯಾದವರು ಹೀನಾ ಕೆಟ್ಟುಹೋದದ್ದರಿಂದ ತಾವು ಸರ್ವಿಯಾದಿಂದ ಹೊರಡಿಸಲ್ಪಟ್ಟೆವೆಂದು ತಿಳಿಸುತ್ತಾರೆ. ಆಸ್ಟ್ರಿಯಾ ಸೈನ್ಯಾಧಿಪತಿಯು ಖಾಯಿಲೆಯಾದ ಕಾರಣ ಆ ಕೆಲಸಕ್ಕೆ ರಾಜೀನಾಮೆಕೊಟ್ಟನು; ಪ್ರಿನ್ಸ್ ಯೂಜೀನ್ ಎಂಬಾತನು ಸೈನ್ಯಾಧಿಪತಿಯಾಗಿ ನೇಮಕವಾಗಿರುತ್ತಾನೆ.

ಆಫ್ರಿಕಾದಲ್ಲಿ.

ದಕ್ಷಿಣ ಆಫ್ರಿಕಾದಲ್ಲಿರುವ ಬ್ರಿಟಿಷ್ ಸೈನಿಕರು ಜರ್ಮನಿಗೆ ಸೇರಿದ ದಕ್ಷಿಣ-ಪಶ್ಚಿಮ ಆಫ್ರಿಕಾವನ್ನು ಕುರಿತು ನುಗ್ಗಿಹೋಗಿರುತ್ತಾರೆ. ಇದುವರೆಗೆ ಇನ್ನೂ ಯುದ್ಧಗಳೇನೂ ನಡೆದಂತೆ ಕಾಣುವುದಿಲ್ಲ.

ಜರ್ಮನಿಯವರು ಪಶ್ಚಿಮ ಆಫ್ರಿಕಾದಲ್ಲಿರುವ ಪೋರ್ಚುಗೀಸರ ಸ್ವಾಸ್ಥ್ಯದ ಮೇಲೆ ಸೈನ್ಯವನ್ನು ಮತ್ತೆ ಕಳುಹಿಸಿದರು.

ಸಮುದ್ರದ ಮೇಲೆ.

ಪೆಸಿಫಿಕ್ ಸಾಗರದಲ್ಲಿರುವ ಜರ್ಮನಿಯವರ ಯುದ್ಧದ ಜಹಜುಗಳಿಗೆ ಸಾಮಾನು ಮುಂತಾದದ್ದನ್ನು ಒದಗಿಸುತ್ತಿದ್ದಂಥಾ ಎರಡು ಜರ್ಮನಿ ಜಹಜುಗಳನ್ನು ಬ್ರಿಟಿಷ್ ಜಹಜುಗಳು ಹಿಡಿದು ಸ್ವಾಧೀನಪಡಿಸಿಕೊಂಡವು.

ಇಟಲಿಯ ದಕ್ಷಿಣತೀರದ ಸಮುದ್ರದಲ್ಲಿ ಆಸ್ಟ್ರಿಯಾದವರ ಒಂದು ಸಬ್‌ಮೆರೀನ್ ಎಂಬ ಹಡಗು ಫ್ರೆಂಚರ ಒಂದು ಯುದ್ಧದ ಜಹಜನ್ನು ನಾಶಪಡಿಸಬೇಕೆಂದು ಎರಡು ಟಾರ್ಪೀಡೋಗಳನ್ನು ಬಿಟ್ಟು ಬಡಿಸಿತು. ಆದರೆ ಇದರಿಂದ ಫ್ರೆಂಚ್ ಜಹಜಿಗೆ ಅಷ್ಟೇನೂ ನಷ್ಟವಾಗಲಿಲ್ಲ.

ಇತರ ವಿಷಯಗಳು.

ಹಿಂದುಸ್ಥಾನದ ಸೈನಿಕರಿಗೋಸ್ಕರ ಉಪಯೋಗಿಸಬೇಕೆಂದು ಗ್ವಾಲಿಯರ್ ಸಂಸ್ಥಾನದ ಮಹಾರಾಜರವರು ಕೆಲವು ಮೋಟರ್ ಅಂಬುಲೆನ್ಸ್ ಗಾಡಿಗಳನ್ನು ಉಚಿತವಾಗಿ ಕೊಟ್ಟರು. ಈ ಮೋಟರುಗಳನ್ನು ಜಾರ್ಜ್ ಸಾರ್ವಭೌಮರವರು ಪರಾಂಬರಿಸಿ ಬಹು ಸಂತೋಷದಿಂದ ಅವುಗಳನ್ನು ಸ್ವೀಕರಿಸಿರುತ್ತಾರೆ.

ಜರ್ಮನಿಯವರು ಹಾರ್ಟ್‌ಲ್‌ಪೂಲ್ ಪಟ್ಟಣಕ್ಕೆ ಸಿಡಿಮದ್ದಿನ ಗುಂಡುಗಳನ್ನು ಹಾಕಿದ್ದರಿಂದ ಆ ನಗರದಲ್ಲಿ 22,50,000 ರೂಪಾಯಿಯ ಆಸ್ತಿಪಾಸ್ತಿಗಳು ನಾಶವಾದವು. ಬ್ರಿಟಿಷ್ ಗವರ್ನ್‌ಮೆಂಟಿನವರು ಅಷ್ಟನ್ನೂ ಕೊಡುವುದಾಗಿ ಒಪ್ಪಿಕೊಂಡಿದ್ದಾರೆ. ಸ್ಕಾರ್‌ಬರೊದಲ್ಲಿ ಜರ್ಮನಿಯವರ ಸಿಡಿಮದ್ದಿನ ಗುಂಡುಗಳು ಬಿದ್ದು ಗಾಯಪಟ್ಟ ಪ್ರಜೆಗಳಿಗೆಲ್ಲಾ ನಮ್ಮ ಸಾರ್ವಭೌಮರವರು ತಮ್ಮ ಸಂತಾಪವನ್ನು ತಿಳಿಸಿದ್ದಾರೆ. ಅಲ್ಲಿ 27 ಮಂದಿಗೆ ತುಂಬಾ ಗಾಯವಾಗಿದೆ; 100 ಜನರಿಗೆ ಅಲ್ಪಸ್ವಲ್ಪ ಜಖಂ ಆಗಿರುವುದು.

ಟ್ರಿಪೋಲಿ ಆಧಿಪತ್ಯವು ಇಟಲಿಗೆ ಸೇರಿದ್ದು. ಉತ್ತರ ಆಫ್ರಿಕದಲ್ಲಿರುವ ಅರಬ್ಬಿ ಜನರನ್ನು ಟರ್ಕಿ, ಜರ್ಮನಿ ಹುದ್ದೇದಾರರು ಕೂಡಿಸಿ ಟ್ರಿಪೋಲಿಯ ಮೇಲೆ ನುಗ್ಗಬೇಕೆಂದು ಹೊರಟಿರುವಂತೆ ವರ್ತಮಾನವಿದೆ. ಇದರ ಅರ್ಥವೇನೆಂಬುದಾಗಿ ಇಟಲಿ ಗವರ್ನ್‌ಮೆಂಟಿನವರು ಟರ್ಕಿಯವರನ್ನು ಕೇಳಿದ್ದಾರೆ.

ಈಜಿಪ್ಟಿನಲ್ಲಿ ಸುಲ್ತಾನನಿಗೆ ಪಟ್ಟವಾಯಿತೆಂದು ಖಾರ್ಟೂಮ್‌ನಲ್ಲೂ, ಸೂಡಾನ್‌ಗೆ ಸೇರಿದ ಎಲ್ಲಾ ಮುಖ್ಯ ನಗರಗಳಲ್ಲೂ ಉತ್ಸವಗಳನ್ನು ಮಾಡಿದರು. ಈಜಿಪ್ಟಿನ ಸೈನ್ಯದ ಹುದ್ದೇದಾರರುಗಳೆಲ್ಲಾ ಸುಲ್ತಾನರವರಿಗೆ ನಜರು ಒಪ್ಪಿಸಿ ಅವರ ಆಜ್ಞಾನುಸಾರ ನಡೆಯುವುದಾಗಿ ಅರಿಕೆಮಾಡಿದರು. ಹಿಂದುಸ್ಥಾನದ ಘನವನ್ನೈದಿದ ಆಗಾ ಖಾನ್‌ರವರೂ, ಇಂಡಿಯಾ ಕೌನ್ಸಿಲ್ ಮೆಂಬರಾದ ಮಿರ್ಜಾ ಅಲಿ ಅಬ್ಬಾಸ್ ಬೇಗ್‌ರವರೂ ಕೈರೋ ಪಟ್ಟಣಕ್ಕೆ ಹೋಗಿದ್ದು ಸುಲ್ತಾನರವರ ಭೇಟಿಮಾಡಿದರು.

ಹಾಲೆಂಡಿನ ಗವರ್ನ್‌ಮೆಂಟಿನವರು ತಮ್ಮ ಪ್ರಜೆಗಳೆಲ್ಲಾ ಖಂಡಿತವಾಗಿ ಸೈನ್ಯಕ್ಕೆ ಸೇರಿ ತರಪೇತಾಗಬೇಕೆಂಬ ಉದ್ದೇಶದಿಂದ ಬಲಾತ್ಕರಿಸುವ ಕಾನೂನ್ ಮಾಡಬೇಕೆಂದು ಪ್ರಯತ್ನಪಟ್ಟಿದ್ದಾರೆ.

ಒಳದೇಶದ ವೃತ್ತಾಂತಗಳು.

ಈ ವಾರ ನಮ್ಮ ಪತ್ರಿಕೆಯು ಹತ್ತು ಪುಟಗಳುಳ್ಳದ್ದಾಗಿದೆ.

ನಮ್ಮ ಚಂದಾದಾರರಿಗೆಲ್ಲಾ ಈ ಮೂಲಕ ಹೊಸ ವರುಷದ ಶುಭವಾದವನ್ನು ಸೂಚಿಸಿ, 1915 ನೇ ಇಸವಿಯ ನಮ್ಮ ಸುಂದರವಾದ ಕ್ಯಾಲೆಂಡರನ್ನು ಈ ಸಂಚಿಕೆಯೊಡನೆ ಕಳುಹಿಸಿರುತ್ತೇವೆ. ಈ ಕ್ಯಾಲೆಂಡರಿನಲ್ಲಿ ಅಡಕವಾಗಿರುವ ಚಿತ್ರಗಳು ಯಾವವೆಂದರೆ—(1) ಬೆಂಗಳೂರಿನಲ್ಲಿ ಅಲಸೂರುಪೇಟೆ ದೇವಾಲಯ, (2) ಗುಬ್ಬಿಯ ಹಡ್ಸನ್ ಹಾಲ್, (3) ನಾಮಧಾರಿ ವಧುವರರು, (4) ಹೊಳೆನರಸೀಪುರ, (5) ಜರ್ಮನಿಯವರ ಸ್ವಾಧೀನದಲ್ಲಿರುವ ಬೆಲ್ಜಿಯಮ್ ದೇಶದ ಬ್ರಸೆಲ್ಸ್ ರಾಜಧಾನಿಯ ಟೌನ್ ಹಾಲ್. ಇವಲ್ಲದೆ ಇದರಲ್ಲಿ ಮೈಸೂರು ಸರ್ಕಾರಿ ರಜಾ ದಿನಗಳೂ, 1915 ನೇ ವರುಷದಲ್ಲಿ ಬರುವ ವಿಶೇಷ ದಿನಗಳೂ ಪ್ರಕಟವಾಗಿವೆ. ಜನವರಿಯಲ್ಲಿ ಹೊಸದಾಗಿ ಬಾಯಿಂ ಚಂದಾದಾರರಾಗತಕ್ಕವರಿಗೆಲ್ಲಾ ಒಂದೊಂದು ಕ್ಯಾಲೆಂಡರನ್ನು ಬಹುಮಾನವಾಗಿ ಕೊಡುತ್ತೇವೆ. ಚಂದಾದಾರರಲ್ಲದವರಿಗೆ ಇದರ ಕ್ರಯ 8 ಕಾಸು.

ಶ್ರೀಮನ್ಮಹಾರಾಜರವರು ಪೌರ್ಣಮಿ ಉದ್ದಿಶ್ಯ ನಾಳೆ ಬೆಂಗಳೂರಿನಿಂದ ನಂಜನಗೂಡಿಗೆ ದಯಮಾಡುತ್ತಾರೆಂದು ತಿಳಿಯುವುದು.

ನಂಜನಗೂಡು ಚಿನ್ನದಗಣಿ ಕಂಪನಿಯು ದಿವಾಳಿ ಆಯಿತೆಂದೂ, ಆ ಕಂಪನಿಯವರು ಆದೇಶ್ಯಾಗಿ ಮದರಾಸಿನಲ್ಲಿ ಷೇರುದಾರರನ್ನು ಬಿಡಿಸಿ ಮೀಟಿಂಗನ್ನು ಮಾಡುತ್ತಾರೆಂದೂ ಪ್ರಕಟವಾಗಿದೆ. ಲಿಕ್ವಿಡೇಟರು ನೇಮಕವಾಗಿದ್ದಾರೆ.

ಮೈಸೂರು ಗವರ್ನ್‌ಮೆಂಟ್ ಪ್ರೆಸ್ಸಿನ ಸೂಪರಿಂಟೆಂಡೆಂಟರಾದ ಮಿ|| ಯೇಟ್ಸ್ ರವರು 1915 ನೇ ಇಸವಿಯ ಮೈಸೂರು ಸರ್ಕಾರಿ ಕ್ಯಾಲೆಂಡರನ್ನು ಬಹು ನೇತ್ರಾನಂದಕರವಾಗಿ ಚಿತ್ರಗಳ ಸಹಿತ ಪ್ರಿಂಟುಮಾಡಿ ನಮಗೊಂದು ಪ್ರತಿಯನ್ನು ಕಳುಹಿಸಿರುವುದನ್ನು ಆದರದಿಂದ ಸ್ವೀಕರಿಸುತ್ತೇವೆ.

ಹರಿಹರದಲ್ಲಿ ವರುಷೇ ವರುಷ ನಡೆಯುವ ವ್ಯವಸಾಯ ವಸ್ತುಪ್ರದರ್ಶನವನ್ನು ಇನ್ನು ಮುಂದೆ ನಿಲ್ಲಿಸಿಬಿಟ್ಟು, ಚಿತ್ರದುರ್ಗ ಟೌನ್ ಹಾಲಿನಲ್ಲಿ ವ್ಯವಸಾಯ ಮತ್ತು ಕೈಗಾರಿಕೆಗಳ ಪ್ರದರ್ಶನವನ್ನು ವೃದ್ಧಿಮಾಡಬೇಕೆಂದೂ, ವ್ಯವಸಾಯ ಮತ್ತು ಕಸಬುಗಳ ಇಲಾಖೆಗಳವರು ಹರಿಹರದಲ್ಲಿ ಜಾತ್ರೆ ಕಾಲದಲ್ಲಿ ಅವಶ್ಯ ಕಂಡುಬರುವ ವಿಧಾನಗಳನ್ನು ಜನರಿಗೆ ದೃಷ್ಟಾಂತಮಾಡಿ ತೋರಿಸಬಹುದೆಂದೂ ಡಿಸ್ಟ್ರಿಕ್ಟ್ ಬೋರ್ಡಿನವರು ತೀರ್ಮಾನಮಾಡಿರುತ್ತಾರೆ.

ಕಳೆದ ವಾರ ಮೈಸೂರಿನಿಂದ ಬೆಂಗಳೂರಿಗೆ ಹೋದ ಒಂದು ರೈಲ್ ಗಾಡಿಯಲ್ಲಿ ಗಾರ್ಡಿನ ಬಳಿ ಇದ್ದ 8,000 ರೂಪಾಯಿನ ಹಣದ ಪೆಟ್ಟಿಗೆಯು ಬಿಡದಿಯಲ್ಲಿ ಮಾಯವಾಯಿತು. ಈ ಹಣವೆಲ್ಲಾ ರೈಲ್ ಕಂಪನಿಯದು; ಟಿಕೆಟುಗಳ ಮಾರಾಟದಿಂದ ಉತ್ಪತ್ತಿಯಾದದ್ದು. 800 ರೂಪಾಯಿನ ಕರೆನ್ಸಿ ನೋಟುಗಳೂ, ಉಳಿದದ್ದು ನಾಣ್ಯವೂ ಆಗಿತ್ತು. ಕಳುವಾದ ಅರ್ಧ ಗಂಟೆಯಲ್ಲೇ ಪೆಟ್ಟಿಗೆಯೇನೋ ಸಿಕ್ಕಿದೆ. ಆಸಾಮಿಗಳು ಮಾತ್ರ ಇನ್ನೂ ಪತ್ತೆ ಆಗಲಿಲ್ಲ.

ಬೆಂಗಳೂರು ಸಿಟಿ ಮಾರ್ಕೆಟ್ಟಿನಲ್ಲಿ ಜನವರಿ ತಾ. 13 ನೇ ತಾ. ಬುಧವಾರ ಬೆಳಿಗ್ಗೆ ಹಣ್ಣು ಕಾಯಿಪಲ್ಯಗಳ ಪ್ರದರ್ಶನವು ನಡೆದು ಉತ್ತಮವಾದವುಗಳಿಗೆ ಬಹುಮಾನಗಳು ಕೊಡಲ್ಪಡುತ್ತವೆ.—ಯಡತೊರೆ ತಾಲ್ಲೂಕು ಚುಂಚನಕಟ್ಟೆಯಲ್ಲಿ ಜನವರಿ ತಾ. 15 ರಿಂದ ಮೂರು ದಿನ ದನಗಳ ಪ್ರದರ್ಶನ ನಡೆದು ಬಹುಮಾನಗಳು ಕೊಡಲ್ಪಡುವವು.—ಕೃಷ್ಣರಾಜಪೇಟೆ ತಾಲ್ಲೂಕು ಹೇಮಗಿರಿಯಲ್ಲಿ ಜನವರಿ ತಾ. 22 ರಲ್ಲಿ ಗೋಕಾಯಿಗಳ ಪ್ರದರ್ಶನವನ್ನು ನಡಿಸಿ ಉತ್ತಮವಾದ ದಾಸುಗಳಿಗೆ ಬಹುಮಾನಗಳನ್ನು ಕೊಡುತ್ತಾರೆ.

ಬೆಂಗಳೂರಿನಲ್ಲಿ ರಾಜಯ್ಯಂಗಾರ್ ಎಂಬವನೂ ಇನ್ನು ನಾಲ್ವರೂ ಸೇರಿ ಹನುಮಂತರಾಯನೆಂಬ ಬ್ರಾಹ್ಮಣನಿಗೆ ಒಬ್ಬ ಶೂದ್ರ ಹೆಂಗಸನ್ನು ಮೋಸದಿಂದ ಮದುವೆ ಮಾಡಿದರೆಂದು ಮೊಕದ್ದಮೆ ಆಗಿತ್ತಷ್ಟೆ. ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರು ಅಪರಾಧವು ರುಜುವಾತಾಯಿತೆಂದು ಹೇಳಿ ರಾಜಯ್ಯಂಗಾರಿಗೂ ವೆಂಕಟ್ರಮಣಶಾಸ್ತ್ರಿಗೂ ತಲಾ ಆರು ತಿಂಗಳ ಕಠಿಣಸಜವನ್ನೂ, 3 ನೇ ಅಪರಾಧಿ ಲಕ್ಷ್ಮಮ್ಮನಿಗೂ 4 ನೇ ಅಪರಾಧಿ ಅಂಡಾಳಮ್ಮನಿಗೂ ತಲಾ ಮೂರು ತಿಂಗಳ ಕಠಿಣಸಜವನ್ನೂ, 5 ನೇ ಅಪರಾಧಿ ವೆಂಕಮ್ಮನಿಗೆ ಒಂದು ತಿಂಗಳ ಕಠಿಣಸಜವನ್ನೂ ವಿಧಿಸಿರುತ್ತಾರೆ.

ಕಳೆದ ಭಾನುವಾರ ಮಧ್ಯಾಹ್ನ ನಮ್ಮ ಶ್ರೀಮದ್ಯುವರಾಜರವರು ಮದರಾಸ್ ಪಟ್ಟಣದಲ್ಲಿ ನಡೆದ ಹಿಂದುಸ್ಥಾನದ ಸಮಯಾಚಾರ ಪರಿಷ್ಕರಣ ಮಹಾಸಭೆಯಲ್ಲಿ ಅಗ್ರಾಸನವನ್ನು ವಹಿಸಿ ಬಹು ಶ್ಲಾಘ್ಯವಾದ ಉಪನ್ಯಾಸವನ್ನು ಮಾಡಿ ನಮ್ಮ ರಾಷ್ಟ್ರವು ಏಳಿಗೆಯಾಗದಿರುವುದಕ್ಕೆ ಇಲ್ಲಿನ ಜಾತಿ ಕಟ್ಟಳೆಗಳೂ, ಆಚಾರ ವ್ಯವಹಾರಗಳೂ ವಿಶೇಷ ಪ್ರತಿಬಂಧಕಗಳಾಗಿರುವವೆಂದು ಹೇಳಿ, ದೇಶವತ್ಸಲರು ತಮ್ಮ ಇಂಗಿತ ಕಾರ್ಯಗಳನ್ನು ತಮ್ಮ ತಮ್ಮ ಮನೆಗಳಲ್ಲಿ ಮೊದಲು ಪ್ರಾರಂಭಿಸಿ ಆಚರಿಸುತ್ತಾ ಬರಬೇಕೆಂದೂ, ಭಕ್ತಿಗೂ ಆಚಾರ ವ್ಯವಹಾರಕ್ಕೂ ಸಂಬಂಧವಿಟ್ಟುಕೊಂಡು ಪ್ರಜೆಗಳು ಏಕಮತ್ಯವಾಗಿ ಬೆರೆಯುವುದೂ ಅಭಿವೃದ್ಧಿಗೆ ಬರುವುದೂ ಸಾಧ್ಯವಲ್ಲದೆ ಹೋಗಿದೆಯೆಂದೂ ಹೇಳಿದರು. ಇವರು ಹೇಳಿದ ಅಭಿಪ್ರಾಯಗಳನ್ನು ಕೂಡಿದಮಟ್ಟಿಗೂ ಸಂಕ್ಷೇಪಮಾಡಿ ನಮ್ಮ ವಾಚಕರಿಗೆ ತಿಳಿಸಬೇಕೆಂದಿದ್ದೇವೆ.

ಮೈಸೂರು ಗೆಜೆಟ್ ಸಂಗ್ರಹ.

ಮೈಸೂರು ಸರ್ಕಾರದವರು ಸಮಸ್ತ ಜನರ ತಿಳುವಳಿಕೆಯ ಬಗ್ಗೆ ಪ್ರಕಟಪಡಿಸುವುದೇನೆಂದರೆ:—"ಮೈಸೂರು ಗವರ್ನ್‌ಮೆಂಟ್ ಸೆಕ್ಯೂರಿಟಿ ಲೈಫ್ ಅಂಡ್ ಮ್ಯಾರೇಜ್ ಅಷ್ಯೂರೆನ್ಸ್ ಕಂಪನಿ ಲಿಮಿಟೆಡ್, ಮೈಸೂರು" ಎಂಬ ಹೆಸರಿನಲ್ಲಿ "ಮೈಸೂರು ಗವರ್ನ್‌ಮೆಂಟ್ ಸೆಕ್ಯೂರಿಟಿ" ಎಂಬ ಮಾತುಗಳನ್ನು ಉಪಯೋಗಿಸಿ ಇರುವದರಿಂದ ಮೈಸೂರು ಸರ್ಕಾರದವರು ಇದರ ಏರ್ಪಾಟಿಗೆ ಅಪ್ಪಣೆ ಕೊಟ್ಟಿರುತ್ತಾರೆಂತಲಾಗಲೀ, ಅಥವಾ ಇದರ ಕಾರ್ಯವನ್ನು ಯಾವ ವಿಧದಲ್ಲಿಯಾದರೂ ಮೇಲ್ವಿಚಾರಣೆ ಮಾಡುತ್ತಾರೆಂತಲಾಗಲೀ, ಅಥವಾ ಇದರ ದಿವಾಳಿಯಾಗದಿರುವ ಸ್ಥಿತಿಗೆ ಖಾತರಿಯನ್ನು ಕೊಟ್ಟಿರುತ್ತಾರೆಂತಲಾಗಲೀ ಅರ್ಥಮಾಡಿಕೊಳ್ಳಲಾಗದು. ಇಂಥಾ ಯಾವ ನಂಬಿಕೆಯನ್ನಾಗಲೀ ಜನರು ಇಟ್ಟುಕೊಂಡು ಈ ಕಂಪನಿಯೊಡನೆ ವ್ಯವಹಾರ ನಡಿಸಿದರೆ ಅವರಿಗೆ ಮುಂದೆ ಹಾನಿ ಉಂಟಾದೀತೆಂಬ ಅಂಶವನ್ನು ಅವರಿಗೆ ಎಚ್ಚರಿಸಿರುತ್ತದೆ.

ಜನವರಿ ತಾ. 19 ರಿಂದ ಒಂದು ವಾರದ ತನಕ ಯಡತೊರೆ ತಾಲ್ಲೂಕು ಚುಂಚನಕಟ್ಟೆಯಲ್ಲಿ ನಡೆಯುವ ಶ್ರೀರಾಮದೇವರ ರಥೋತ್ಸವಕ್ಕಾಗಲಿ, ಜನವರಿ ತಾ. 22 ರಲ್ಲಿ ಕೃಷ್ಣರಾಜಪೇಟೆ ತಾಲ್ಲೂಕು ಹೇಮಗಿರಿಯಲ್ಲಿ ನಡೆಯುವ ಶ್ರೀವೆಂಕಟರಮಣಸ್ವಾಮಿ ಜಾತ್ರೆಗಾಗಲಿ ಪ್ಲೇಗ್ ಇರುವ ಸ್ಥಳಗಳಿಂದ ಯಾತ್ರಿಕರೇ ಮೊದಲಾದವರು ಹೋಗಕೂಡದೆಂದು ಅಡ್ಡಿಮಾಡಿದೆ.

ನಂಜನಗೂಡು ಟವನ್ ಅಡ್ವೊಕೇಟ್ ಮತ್ತು ಮ್ಯುನಿಸಿಪಲ್ ಕೌನ್ಸಿಲರ್ ಮ|| ಕೆ. ವೆಂಕಟರಾಮಯ್ಯನವರನ್ನು 1915 ನೇ ಜನವರಿಯಿಂದ ಮತ್ತೊಂದು ವರುಷದ ತನಕ ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟರಾಗಿ ನೇಮಕ ಮಾಡಿದೆ.

ದಾವಣಗೆರೆ ಮ|| ಓಂಕಾರಪ್ಪನವರನ್ನು ಚಿತ್ರದುರ್ಗದ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರಾಗಿ ನೇಮಕಮಾಡಿದೆ.

ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮ|| ಕೆ. ಚಾಂಡಿಯವರಿಗೆ ಕ್ರಿಸ್ಮಸ್ ರಜಾಕ್ಕೆ ಸೇರಿದಂತೆ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ದೊಡ್ಡಬಳ್ಳಾಪುರದ ಸಬ್ ಡಿವಿಜನ್ ಆಫೀಸರಾದ ಸೀನಿಯರ್ ಅ|| ಕಮಿಷನರ್ ಮ|| ಸಿ. ವೆಂಕಟರಾಮರು ಡೆಪ್ಯುಟಿ ಕಮಿಷನರ್‌ರವರ ಕೆಲಸಗಳ ಭಾರವನ್ನು ವಹಿಸಿರತಕ್ಕದ್ದು.

ಫಾರೆಸ್ಟ್ ಅ|| ಕನ್ಸರ್ವೇಟರ್ ಮ|| ಎಚ್. ರಾಮಯ್ಯನವರಿಗೆ ಕೊಟ್ಟಿರುವ ಖಾಯಿಲೆ ರಜವನ್ನು ಇನ್ನೂ ಐದು ತಿಂಗಳು ಜಾಸ್ತಿಮಾಡಿದೆ.

ಸಂಸ್ಥಾನದ ಕಂಟ್ರೋಲರವರಾದ ದಿವಾನ್ ಬಹದೂರ್ ಮ|| ಜೆ. ಎಸ್. ಚಕ್ರವರ್ತಿಯವರಿಗೆ ಜನವರಿ ತಾ. 11 ರಿಂದ ಆರು ವಾರಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಇವರು ಬೆಂಗಳೂರಿಗೆ ಕೆಲಸದ ಮೇಲೆ ಹಾಜರಾಗುವ ತನಕ ಮುಂದೆ ಹೇಳುವ ಏರ್ಪಾಡು ಜಾರಿಯಲ್ಲಿರತಕ್ಕದ್ದು:—

(1) ಮ|| ಎಂ. ಎನ್. ಕೃಷ್ಣರಾಯರು ಕಂಟ್ರೋಲರ್ ಮತ್ತು ಗವರ್ನ್‌ಮೆಂಟ್ ಸೆಕ್ರೆಟರಿಯಾಗಿಯೂ, (2) ಮಿ|| ಟಿ. ಸತ್ಯರಾಜಚೆಟ್ಟಿಯವರು ಡೆಪ್ಯುಟಿ ಕಂಟ್ರೋಲರಾಗಿಯೂ, (3) ಮ|| ಎಂ. ಎ. ರಂಗಾಚಾರ್ಯರು ಅ|| ಕಂಟ್ರೋಲರಾಗಿಯೂ ಇರತಕ್ಕದ್ದು.

ದೊಡ್ಡಬಳ್ಳಾಪುರದ ಮುನ್ಸಿಫ್ ಮ|| ಎನ್. ಕೆ. ಶ್ರೀನಿವಾಸರಾಯರಿಗೆ ಕ್ರಿಸ್ಮಸ್ ರಜಾದೊಂದಿಗೆ ಜನವರಿ ತಾ. 2 ರಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮಿ|| ಅಬ್ದುಲ್ ಘನಿಯವರು ಹಾಸನದಲ್ಲಿ ಛಾರ್ಜು ಕೊಟ್ಟ ಬಳಿಕ ದೊಡ್ಡಬಳ್ಳಾಪುರದ ಮುನ್ಸಿಫರಾಗಿ ಬದಲಿ ನೇಮಿಸಲ್ಪಟ್ಟಿದ್ದಾರೆ.

ಬೆಂಗಳೂರು ಡಿವಿಜನ್ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜರಾದ ಮಿ|| ಆರ್. ಬಿ. ಕ್ಲಮರ್‌ಯವರಿಗೆ ಕ್ರಿಸ್ಮಸ್ ರಜಾದೊಂದಿಗೆ ಜನವರಿ ತಾ. 2 ರಿಂದ ಎಂಟು ದಿನಗಳ ಪ್ರಿವಿಲೆಜ್ ರಜಾಕೊಟ್ಟಿದೆ.

ಚೀಫ್ ಕೋರ್ಟಿನ ರಿಜಿಸ್ಟ್ರಾರ್ ಮ|| ಎನ್. ಟಿ. ಗೋಪಾಲಯ್ಯಂಗಾರ್ರಿಗೆ ಕ್ರಿಸ್ಮಸ್ ರಜಾದೊಂದಿಗೆ ಮೂರು ದಿನಗಳ ಪ್ರಿವಿಲೆಜ್ ರಜಾಕೊಟ್ಟಿದೆ.

ಮೈಸೂರು ಸಿಟಿ ಪೋಲೀಸ್ ಅ|| ಸೂಪರಿಂಟೆಂಡೆಂಟ್ ಮಿ|| ಮಹಮದ್ ಜಾಫರ್ ಮೋಕ್ರಿಯವರಿಗೆ ಕ್ರಿಸ್ಮಸ್ ರಜಾದೊಂದಿಗೆ ಆರು ವಾರಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಮೈಸೂರು ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟ್ ಮ|| ಸಿ. ನಾರಾಯಣರಾಯರು ಅವರ ಕೆಲಸದ ಛಾರ್ಜನ್ನೂ ವಹಿಸಿರತಕ್ಕದ್ದು.

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯ ಹೆಲ್ತ್ ಆಫೀಸರ್ ಮ|| ಆರ್. ಸುಬ್ಬರಾಯರಿಗೆ ಡಿಸೆಂಬರ್ ತಾ. 7 ರಿಂದ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮೈಸೂರು ಸಿಟಿ ಮ್ಯುನಿಸಿಪಾಲಿಟಿಯ ಹೆಲ್ತ್ ಆಫೀಸರ್ ಮ|| ಎ. ಕೆ. ವಾಣಿಯವರಿಗೆ ಕ್ರಿಸ್ಮಸ್ ರಜಾದೊಂದಿಗೆ ಹದಿನಾಲ್ಕು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಮೈಸೂರು ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರವರು ಅವರ ಕೆಲಸದ ಛಾರ್ಜನ್ನೂ ವಹಿಸಿರತಕ್ಕದ್ದು.

ಕೋಲಾರ್ ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರ್ ಮಿ|| ವಿ. ಎಲ್. ಮಾರ್ಕರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಕೋಲಾರದ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರ್ ಮ|| ಜಿ. ಎಸ್. ಡೇವಿಡ್ ಯವರು ಅವರ ಕೆಲಸದ ಛಾರ್ಜನ್ನೂ ವಹಿಸಿರತಕ್ಕದ್ದು.

ಅ|| ಸರ್ಜನ್ ಮ|| ಟಿ. ಬಾಲಕೃಷ್ಣ ಮೊದಲಿಯಾರ್ರನ್ನು ಆಗಸ್ಟ್ ತಾ. 11 ರಿಂದ 5 ನೇ ಕ್ಲಾಸಿಗೆ ಬಡ್ತಿಮಾಡಿದೆ.

ಗವರ್ನ್‌ಮೆಂಟ್ ಸೆಕ್ರೆಟರಿ ಮ|| ಸಿ. ಎಸ್. ಬಾಲಸುಂದರಂ ಅಯ್ಯರವರಿಗೆ ಕ್ರಿಸ್ಮಸ್ ರಜಾದೊಂದಿಗೆ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಸೆಂಟ್ ಜಾನ್ ಅಂಬುಲೆನ್ಸ್ ಸಂಘ, ಮೈಸೂರು.

ಮೇಲ್ಕಂಡ ಸಂಘದ ಮೈಸೂರು ಶಾಖೆಯ ಆನರರಿ ಸೆಕ್ರಿಟರಿ ಸರ್ದಾರ್ ಎಂ. ಲಕ್ಷ್ಮೀಕಾಂತರಾಜೆಅರಸಿನವರು ತಮಗೆ ಏಳನೇ ಚಂದಾಪಟ್ಟಿಯ ಮೂಲಕ ಪಾವತಿ ಆಗಿರುವ ಹಣಗಳನ್ನು ತಿಳಿಸಿರುತ್ತಾರೆ. ಕೊಟ್ಟವರು ಯಾರೆಂದರೆ—

ಹರಿಹರ ತಾಲ್ಲೂಕಿನ ಹನ್ನೊಂದು ಗ್ರಾಮಗಳವರು ಕೊಟ್ಟದ್ದು ಅಮಲ್ದಾರರ ಮೂಲಕ ರೂ. 102-15-6, ಗುಳೂರು ನಡುವಣಮಡಿ ಮಠದ ಶ್ರೀ ಸ್ವಾಮಿಗಳವರು ಅಮಲ್ದಾರರ ಮೂಲಕ ರೂ 49-8-0, ಅರಸೀಕೆರೆ ತಾಲ್ಲೂಕಿನ ಪ್ರಜೆಗಳು ಅಮಲ್ದಾರರ ಮೂಲಕ ರೂ. 26, ಸೊರಬದ ಎ. ವಿ. ಸ್ಕೂಲ್ ಉಪಾಧ್ಯರೂ ವಿದ್ಯಾರ್ಥಿಗಳೂ 3-8-0, ಹಾಸನದಿಂದ ಬಂದದ್ದು ಅ|| ಕ|| ಮ|| ಪಿ. ಗೋಪಾಲರಾಜೆ ಅರಸಿನವರ ಮೂಲಕ ರೂ. 30, ಹಿರಿಯೂರು ಪ್ರಜೆಗಳು ಅಮಲ್ದಾರರ ಮೂಲಕ ರೂ. 186-14-0 ; ಜುಮ್ಲಾ ರೂ. 386-13-6 ಪೈ ; ಹಿಂದೆ ಜಮಾ ಬಂದಿರುವುದು ರೂ. 5,906-6-7 ಪೈ ; ಒಟ್ಟು ರೂ. 6,293-4-1 ಪೈ.

ಪ್ಲೇಗ್ ಉಪದ್ರವೂ ಅದರ ಅನುಭವವೂ.

ಆನೇಕಲ್ ತಾಲ್ಲೂಕು ಅತ್ತಿಬೆಲೆ.

ಈ ಗ್ರಾಮಕ್ಕೆ 1-9-1914 ರಲ್ಲಿ ಪ್ಲೇಗ್ ಪ್ರಾರಂಭವಾಯಿತು. ಆ ಕೂಡಲೆ ಈ ಗ್ರಾಮಸ್ಥರಿಗೆ ದೇವರು ಬುದ್ಧಿಕೊಟ್ಟು ಇನಾಕ್ಯುಲೇಷನ್ ಮಾಡಿಸಿಕೊಳ್ಳಲು ನಮ್ಮ ತಾಲ್ಲೂಕ್ ಅಮಲ್ದಾರ್ರವರನ್ನು ಪ್ರಾರ್ಥಿಸಿಕೊಂಡರು. ಕರುಣಾಶಾಲಿಗಳಾದ ಅಮಲ್ದಾರ್ರವರು ಡಾಕ್ಟರ್ ಮುತ್ತುಸ್ವಾಮಿದಾಸರವರನ್ನು ಕೂಡಲೆ ಕರಸಿಕೊಟ್ಟರು. ದಯಾಶಾಲಿಗಳಾದ ಡಾಕ್ಟರವರು ಪ್ರತಿಯೊಂದು ಮನೆಗೂ ದಯಮಾಡಿಸಿ ಜನಗಳಿಗೆ ಮನೆಗಳು ಚೊಕ್ಕಟವಾಗಿಟ್ಟುಕೊಳ್ಳುವಂತೆ ಬೋಧಿಸಿ ಪ್ಲೇಗ್ ವಿಷಯವಾದ ತಿಳುವಳಿಕೆಗಳೆಲ್ಲವೂ ಹೇಳಿ ಸುಮಾರು 500 ಜನರಿಗೆ ಇನಾಕ್ಯುಲೇಷನ್ ಮಾಡಿದರು. ಹೀಗೆ ಮಾಡಿಸಿಕೊಂಡವರಲ್ಲಿ ಒಬ್ಬನಿಗೆ ಪ್ಲೇಗ್ ತಗಲಿದರೂ ಈಗ ಸುಖವಾಗಿರುತ್ತಾನೆ. ಇನಾಕ್ಯುಲೇಷನ್ ಮಾಡಿಸಿಕೊಳ್ಳದೆ ಇದ್ದವರಲ್ಲಿ 30 ಜನಕ್ಕೆ ಪ್ಲೇಗ್ ತಗಲಿ 18 ಜನರು ಮೃತಪಟ್ಟರು. ಕಾಯಿಲೆಯು 1 ತಿಂಗಳಲ್ಲಿ ಶಮನವಾಯಿತು. ಈಗ ಎಲ್ಲರೂ ಸುಖವಾಗಿರುತ್ತಾರೆ. ಈ ವಿಷಯ ನನ್ನ ಅನುಭವಕ್ಕೆ ಬಂದಿರುವುದರಿಂದ ಇತರ ಗ್ರಾಮಗಳಲ್ಲಿ ಇಲಿಗಳು ಬಿದ್ದ ಕೂಡಲೆ ಡಾಕ್ಟರವರನ್ನು ಕರಸಿ ಇನಾಕ್ಯುಲೇಷನ್ ಮಾಡಿಸಿಕೊಂಡು ಎಲ್ಲರೂ ಸುಖಪಡುವರೆಂದು ನಂಬಿರುತ್ತೇನೆ. ಸಾವಕಾಶ ಮಾಡಿ ಅನಾಹುತಕ್ಕೆ ಗುರಿಯಾಗಬಾರದೆನ್ನುವುದೇ ನನ್ನ ಕೋರಿಕೆ

ಹಿತಚಿಂತಕ.

ಶ್ರೀಮನ್ಮಹಾರಾಜರವರ ಸರ್ಕೀಟು.

ದಾವಣಗೆರೆ ತಾಲ್ಲೂಕು ಮುದಹದಡಿಗ್ರಾಮ.

ಮೈಸೂರು ಸೀಮೆಯ ಶ್ರೀಮನ್ಮಹಾರಾಜ ಕೃಷ್ಣರಾಜೇಂದ್ರಒಡೆಯರ್ ಬಹದ್ದೂರ್, ಜಿ. ಸಿ. ಎಸ್. ಐ ಯವರ ಸಂದರ್ಶನಕ್ಕೂ, ತಮ್ಮ ಅಹವಾಲುಗಳನ್ನು ಬಿನ್ನೈಸಿಕೊಳ್ಳುವುದಕ್ಕೂ ಸಹ ದಾವಣಗೆರೆ ತಾಲ್ಲೂಕು ಮುದಹದಡಿ ಗ್ರಾಮದ ವೇ|| ಹಂಜಗಿ ಮಠದ ಮಹಾದೇವಯ್ಯನವರೂ, ಪಟೇಲ್ ವೀರಪ್ಪನವರೂ, ಸ್ಕೂಲ್ಮಾಸ್ಟರ್ ಸಿದ್ಧಲಿಂಗಯ್ಯನವರೂ, ಗೌಡ ಫಕೀರಪ್ಪನವರೂ ಸಹ ತಾ. 21 ರಲ್ಲಿ ದಾವಣಗೆರೆ ತಾಲ್ಲೂಕು ಕಚೇರಿಗೆ ಮಹಾಸ್ವಾಮಿಯವರು ದಯಮಾಡಿಸಿ ದಾನಫಲಪುಷ್ಪಪುನಗುಜವ್ವಾದಿಗಳಿಂದ ಅಲಂಕರಿಸಲ್ಪಟ್ಟಿದ್ದ ತಬಕೆಗಳಿಂದಲೂ, ವಿಜ್ಞಾಪನ ಪತ್ರಿಕೆಯೊಂದಿಗಿಸಲ್ಪಟ್ಟಿದ್ದ ಅಹವಾಲ್ ಅರ್ಜಿಯಿಂದಲೂ, ಪ್ರೀತಿಪೂರ್ವಕವಾದ ಭಯಭಕ್ತಿಗಳಿಂದಲೂ ಮಹಾಸ್ವಾಮಿಯವರಿಗೆ ಒಪ್ಪಿಸಲು ಮಹಾಸ್ವಾಮಿಯವರು ಪುತ್ರರ ಮೇಲಣ ಪ್ರೀತಿಗೌರವವನ್ನು ತೋರ್ಪಡಿಸುತ್ತಾ, ತಮ್ಮ ಕರಕಮಲಗಳಿಂದ ಸ್ಪರ್ಶಿಸಿ ಅರ್ಜಿಯನ್ನು ಆದರದಿಂದ ತೆಗೆದುಕೊಂಡರು. ಮಹಾಸ್ವಾಮಿಯವರು ಅರ್ಜಿಯನ್ನು ಪರಾಂಬರಿಸಿ ಬಡಪ್ರಜೆಗಳ ಮನೋಭೀಷ್ಟವನ್ನು ಕೂಡಲೆ ನೆರವೇರಿಸಿಕೊಡಲು ಮಹಾಸ್ವಾಮಿಯವರ ಅಪ್ಪಣೆಯನ್ನೇ ನಿರೀಕ್ಷಿಸಿಕೊಂಡಿರುತ್ತಾರೆ. ಮಹಾಸ್ವಾಮಿಯವರು ಕೂಡ ಬಡಪ್ರಜೆಗಳ ಕಷ್ಟವನ್ನು ನಿವಾರಣೆ ಮಾಡಿ ಉದ್ಧರಿಸುತ್ತಾರೆಂದು ಸಮಸ್ತ ಜನಮಂಡಲಿಯು ನಂಬಿಕೊಂಡಿರುತ್ತೆ. ಈ ವಿಷಯದಲ್ಲಿ ಒತ್ತಾಸೆ ಮಾಡಿದ ದಾವಣಗೆರೆ ತಾಲ್ಲೂಕು ಅಮಲ್ದಾರ್ ಸ್ವಾಮಿಯವರಿಗೆ ಸದರಿ ಗ್ರಾಮಸ್ಥರು ತುಂಬಾ ಕೃತಜ್ಞತೆಯನ್ನು ತೋರಿಸಿರುತ್ತಾರೆ

ಚಿತ್ರದುರ್ಗದ ತಾಲ್ಲೂಕು ಭರಮಸಾಗರ.

ಜಿ. ಸಿ. ಎಸ್. ಐ. ಎಂಬ ಬಿರುದಂ ಹೊಂದಿದ ಬಹದ್ದೂರ್ ಶ್ರೀ ಕೃಷ್ಣರಾಜೇಂದ್ರಒಡೆಯರ್ ಮಹಾಸ್ವಾಮಿಗಳವರು ಪರಿವಾರ ಸಮೇತ ಇದೇ ಮಾಹೆ ತಾ. 21 ನೇ ಸೋಮವಾರ ದಾವಣಗೇರೆ ಮೊಕ್ಕಾಮಿನಿಂದ ಸದರಿ ಗ್ರಾಮದ ಮಾರ್ಗವಾಗಿ ಮೊಳಕಾಲುಮುರುವಿಗೆ ದಯಮಾಡಿಸುವರೆನ್ನುವ ವರ್ತಮಾನ ತಿಳಿದು ಮುಂಚಿತವಾಗಿ ಪುರವಾಸಿಗಳು ರಸ್ತೆಯಲ್ಲಿ ಚಿತ್ರಕೆಲಸ, ಫೋಟೋ, ತಳಿರು ತೋರಣ, ಕದಳೀಸ್ತಂಭ, ಬಾವುಟಗಳಿಂದಲೂ ನೋಟಕರ ಕಣ್ಗೆ ಆನಂದವನ್ನುಂಟುಮಾಡುವಂತೆ ಮಂಟಪವು ಸಿಂಗರಿಸಲ್ಪಟ್ಟಿದ್ದಿತು. ಅಲ್ಲಿ ಗವರ್ನ್‌ಮೆಂಟ್ ಅಧಿಕಾರಿಗಳು, ಗ್ರಾಮ ಕಮಿಟಿ ಮೆಂಬರುಗಳು, ಮಠಾಧಿಕಾರಿಗಳು, ಜೋಯಿಸರುಗಳು, ಶೆಟ್ಟಿ ವರ್ತಕರು, ಬಾಯ್ಸ್ ಸ್ಕೂಲ್, ಗರ್ಲ್ಸ್ ಸ್ಕೂಲ್ ಮಾಸ್ತರುಗಳು, ಬಾಲಕ ಬಾಲಕಿಯರು, ಪುರವಾಸಿಗಳು ನೇಟಿವ್ ಪಂಡಿತರು ಮುಕ್ತ್ಯಾ ಪರಸ್ಥಳದಿಂದ 2-3 ಸಾವಿರ ಪ್ರಜೆಗಳು ಸೇರಿ ಶ್ರೀಗಳವರ ಆಗಮನವನ್ನೇ ಹಾರೈಸುತ್ತಿದ್ದರು. 11½ ಘಂಟೆಗೆ ಸರಿಯಾಗಿ ಸವಾರಿಯು ಮಂಟಪಕ್ಕೆ ಸಮೀಪಿಸಿದ ಕೂಡಲೆ ಮಂಗಳ ವಾದ್ಯಗಳು ಮೊಳಗಿದವು. ಪ್ರಜೆಗಳೆಲ್ಲಾ ಕರಜೋಡಿಸಿ ಶಿರಬಾಗಿ “ರಾಜಾ ಪ್ರತ್ಯಕ್ಷ ದೇವತಾ” ಬಹದ್ದೂರ್ ಕೃಷ್ಣರಾಜಒಡೆಯರವರಿಗೆ ಜಯವಾಗಲಿ ಎಂದು ಘೋಷ ಮಾಡಿದರು. ಬಾಲಕ ಬಾಲಕಿಯರು ಶ್ರೀಮನ್ಮಹಾರಾಜರವರ ಶ್ರೇಯೋ ಪ್ರಾರ್ಥನೆ ಹಾಡುಗಳನ್ನು ಹಾಡಿದರು. ಪ್ರಜೆಗಳು ಹಾರ, ತುರಾಯಿ, ಫಲಾದಿಗಳನ್ನು ಸಮರ್ಪಿಸಿ ಪುಷ್ಪವೃಷ್ಟಿಯನ್ನು ಕರೆದು, ತಮ್ಮಗಳ ವಿಜ್ಞಾಪನೆಗಳನ್ನು ಬಿನ್ನೈಸಿಕೊಂಡರು. ಈ ರಾಜಭಕ್ತಿಯನ್ನು ಕಂಡು ಶ್ರೀಗಳವರ ಮನಹರ್ಷವನ್ನು ತೋರಪಡಿಸಿಯೋಗಕ್ಷೇಮಾದಿಗಳನ್ನು ವಿಚಾರಿಸಿ ಸಕಲರಿಗೂ ದರ್ಶನವಿತ್ತು ಆಶೀರ್ವಾದಮಾಡಿ ಆನಂದದಿಂ ಸವಾರಿಯು ದಯಮಾಡಿಸಲು, ಜನಸಂದೋಹವು ವಂದನೆಮಾಡುತ್ತಾ ನಮ್ಮ ತಂದೆಗಳಿಗೆ ಯಾವಾಗಲೂ ಕಂದುಗಳೊಳಗಿನ ಪ್ರೇಮವು ಸ್ಥಿರವಾಗಿರಲಿ ಎಂದು ಘೋಷಮಾಡಿ ಚಪ್ಪಾಳೆಯನ್ನು ತಟ್ಟಿದರು. ಅನಂತರ ಪ್ರಜೆಗಳು ಪ್ರಭುಗಳವರ ಮಹಿಮಾತಿಶಯವನ್ನು ಕೊಂಡಾಡಿಕೊಳ್ಳುತ್ತಾ ಮನೆಗಳಿಗೆ ತೆರಳಿದರು. ಸರ್ಕಾರಿ ಆಫೀಸರುಗಳು ಯಾವನ್ಯೂನತೆಗೂ ಆಸ್ಪದವಿಲ್ಲದಂತೆ ಬಹಳ ಮುತುವರ್ಜಿಯಿಂದ ಕೆಲಸ ಮಾಡಿದರು

ಕಾವೇರಿ ರೆಜವಾರ್ಯರ್ ದೊಂಬಿ ವಿವಾದ.

ಕಾವೇರಿ ರಿಜರ್ವಾಯರ್ ನಾರ್ಥ್ ಬ್ಯಾಂಕಿನಲ್ಲಿ ಕಳೆದ ನವಂಬರ್ ತಾ. 11 ರಲ್ಲಿ ನವಗಾಣೆ ಗುಂಪಿನವರಿಗೂ, ವಾನಿಯಂಬಾಡಿ ವಡ್ಡರ ಗುಂಪಿನವರಿಗೂ ಕೂಲಿ ಕೆಲಸಗಳ ಮಾತಿಗಾಗಿ ಹೆಂಡದ ಅಂಗಡಿ ಬಳಿ ಹೊಡೆದಾಟ ಶುರು ಆಗಿ ನವಗಾಣೆ ಜನಗಳು ವಡ್ಡರುಗಳನ್ನು ಚದುರಿಸಿ ಓಡಾಡಿಸಿ ಹೊಡೆದು ಗುಡಿಸಲುಗಳಿಗೆ ನುಗ್ಗಿ ಹೆಂಗಸರನ್ನು ಹೊಡೆದು ಘಾಯಪಡಿಸಿ ಅಲ್ಲಿಂದ ತಪ್ಪಿಸಿಕೊಂಡು ಓಡಿ ಹೋಗುತ್ತಾ ಇದ್ದ ವಡ್ಡರುಗಳನ್ನು ಹಿಡಿಸಿಕೊಂಡು ಹೋಗುತ್ತಿದ್ದ ಸಮಯಕ್ಕೆ ಸರಿಯಾಗಿ ನಾರ್ತ್ ಬ್ಯಾಂಕಿನಿಂದ ದಫೆದಾರ್ ಮತ್ತು ಒಬ್ಬ ಕಾನ್‌ಸ್ಟೇಬಲ್ ಹೋಗಿ ಗುಂಪಿನಲ್ಲಿ ನುಗ್ಗಲು ಹಿಂದಟ್ಟಿಕೊಂಡು ಹೋಗುತ್ತಿದ್ದವರು ಚದುರಿ ಹೊರಟುಹೋದರು. ದಫೆದಾರ್ ಮತ್ತು ಕಾನ್‌ಸ್ಟೇಬಲ್‌ರ ಸರಹದ್ದು ಅಲ್ಲದಿದ್ದಾಗ್ಯೂ ಕೃತ್ಯವನ್ನು ಅಡಗಿಸುವದಕ್ಕೆ ಅವರು ಸ್ವಲ್ಪವೂ ಸಾವಕಾಶಮಾಡದೆ ಹೋದದ್ದು ತುಂಬಾ ಶ್ಲಾಘ್ಯವಾಗಿರುತ್ತೆ. ಪ್ರತಿ ಒಬ್ಬ ಪೊಲೀಸ್ ಆಫೀಸರು ಇದೇ ರೀತಿ ಅಕ್ರಮಕೃತ್ಯಗಳನ್ನು ನಡೆಯದಂತೆ ನಿಗಾಯಿಟ್ಟಲ್ಲಿ ಪ್ರಜೆಗಳಿಗೆ ತುಂಬಾ ಅನುಕೂಲವಾದೀತು.

ಈ ಕೇಸಿನಲ್ಲಿ ಕೃತ್ಯನಡಿಸಿದ ಅಪರಾಧಿಗಳನ್ನು ಕಂಡು ಹಿಡಿದು ದಸ್ತಗಿರಿ ಮಾಡುವದಕ್ಕೆ ಪೊಲೀಸ್ ಇನ್‌ಸ್ಪೆಕ್ಟರ್ ಮ|| ಸುಬ್ಬರಾಯರವರು ಒಳ್ಳೆ ಬುದ್ಧಿ ಮತ್ತು ಚಮತ್ಕಾರವನ್ನು ಉಪಯೋಗಿಸಿದರು. ಈ ಕೇಸಿನಲ್ಲಿ ಕೃತ್ಯನಡಿಸಿದವರ ಪೈಕಿ 28 ಜನಗಳನ್ನು ನವಂಬರ್ 17 ನೇ ತಾ. ದಸ್ತಗಿರಿಮಾಡಿ ಸ್ಟೇಷನ್‌ಗೆ ಸಾಗಿಸುವ ಕಾಲದಲ್ಲಿ ನೂರಾರು ಜನಗಳು ತಮಾಷೆ ನೋಡುವುದಕ್ಕೆ ಸೇರಿದ್ದರಲ್ಲದೆ ಇಂಥಾ ರಾಂಗ್‌ಫೋರ್ ಮನುಷ್ಯರನ್ನು ದಸ್ತಗಿರಿಮಾಡಿದ ಬಗ್ಗೆ ಪೊಲೀಸ್ ಇನ್‌ಸ್ಪೆಕ್ಟರನ್ನು ಹೊಗಳುತ್ತಿದ್ದರು. ಈ ಕೃತ್ಯಕ್ಕೆ ಸಂಬಂಧಪಟ್ಟವರು ಬಹಳ ರಾಂಗಿನ ಜನಗಳು ; ಇವರ ಭಯವು ಇತರ ಎಲ್ಲಾ ಕೂಲಿಗಳಿಗೂ ಇತ್ತು. ಇವರುಗಳ ವಿಚಾರದಲ್ಲಿ ಪೊಲೀಸ್ ಇನ್‌ವೆಸ್ಟಿಗೇಷನ್ ಮುಗಿದು ಇ. ಪಿ. ಕೋ. 147, 109, 323, 325 ನೇ ಸೆಕ್ಷನ್ ಮೇಲೆ ಛಾರ್ಜಮಾಡಿದರು. ಡಿಸೆಂಬರ್ ತಾ. 8 ರಲ್ಲಿ ಕೃಷ್ಣರಾಜಪೇಟೆ ತಾಲ್ಲೂಕು 2 ನೇ ಕ್ಲಾಸ್ ಮ್ಯಾಜಿಸ್ಟ್ರೇಟರು ಇಲ್ಲಿಗೇನೇ ಬಂದು ದರ್ಯಾಪ್ತಿ ಕ್ರಮವನ್ನು ಶುರುಮಾಡಿದರು. ಹತ್ತು ದಿವಸ ದರ್ಯಾಫ್ತಿಮಾಡಿ ಈ ಕೆಳಗೆ ಕಂಡಂತೆ ಫೈನಲ್ ಕೊಟ್ಟರು.

1, 9, 10 ನೇ ಅಪರಾಧಿಗಳಿಗೆ ಫೀ ಇಸಂ ಹತ್ತು ರೂ , 6, 7 ನೇ ಅಪರಾಧಿಗಳಿಗೆ ತಲಾ ಐದು ರೂ , 24, 26, 27 ನೇ ಅಪರಾಧಿಗಳಿಗೆ ಫೀ ಇಸಂ ಹದಿನೈದು ರೂ., 2 ನೇ ಅಪರಾಧಿಗೆ 2 ತಿಂಗಳು ಸಜಾ, ಇಪ್ಪತ್ತು ರೂ., 3 ನೇ ಅಪರಾಧಿಗೆ 1 ತಿಂಗಳು ಸಜಾ ಹತ್ತು ರೂ., 4 ನೇ ಅಪರಾಧಿಗೆ 3 ತಿಂಗಳು ಸಜಾ ಹತ್ತು ರೂ., 5 ನೇ ಅಪರಾಧಿಗೆ 1 ತಿಂಗಳು ಸಜಾ ಇಪ್ಪತ್ತು ರೂ , 8, 10 ನೇ ಅಪರಾಧಿಗಳಿಗೆ 1 ತಿಂಗಳು ಸಜಾ ಇಪ್ಪತ್ತೈದು ರೂ., 11, 13 ನೇ ಅಪರಾಧಿಗಳಿಗೆ 15 ದಿವಸಗಳು ಸಜಾ, 19, 20, 21 ನೇ ಅಪರಾಧಿಗಳಿಗೆ 15 ದಿವಸದ ಮೇರೆ ಸಜಾ, 22 ನೇ ಅಪರಾಧಿಗೆ 20 ದಿವಸಗಳು ಸಜಾ ಹತ್ತು ರೂ., ಈ ಪ್ರಕಾರ ಸಜಾ ಜುಲ್ಮಾನೆ ಶಿಕ್ಷೆಯಾಗಿರುತ್ತೆ.

ಸಜಾ ಆಗಿರುವ ಅಪರಾಧಿಗಳ ಪೈಕಿ 11 ನೇ ಅಪರಾಧಿಗೆ ಮಾತ್ರ ಸಾದಾ ಸಜಾ, ಬಾಕಿ ಅಪರಾಧಿಗಳಿಗೆ ಕಠಿಣ ಸಜಾ ನೇಮಮಾಡಿರುತ್ತೆಂದೂನೂ, ಬಾಕಿ 8 ಜನಕ್ಕೆ ಖುಲಾಸೆಮಾಡಿರುವದಾಗಿಯೂ ಅಪ್ಪಣೆಕೊಡಿಸಿದರು.

ಈ ಅಪರಾಧಿಗಳು ದಸ್ತಗಿರಿಯಾದ ಲಾಗಾಯ್ತು ಜಡ್ಜ್‌ಮೆಂಟ್‌ವರೆಗೆ ಒಂದು ತಿಂಗಳೂ ಎರಡು ದಿವಸ ಲಾಕಪ್ಪಿನಲ್ಲಿದ್ದರೂ ಇವರ ಪಹರೆ ವಿಚಾರದಲ್ಲಿ ಇನ್‌ಸ್ಪೆಕ್ಟರು ಮತ್ತು ಜಮಾದಾರ್ರು ಆಗಾಗ್ಗೆ ಬಂದು ತನಿಖೆಮಾಡಿಕೊಂಡು ಬಹಳ ಜಾಗ್ರತೆಯಾಗಿದ್ದರು. ಈ ಖೈದಿಗಳಿಗೆ ಸ್ಪೇಷಲ್ ವರಾಂಡಾ ಆಫೀಸು ಎಲ್ಲಾ ಸ್ಪೆಷಲ್ಲಾಗಿ ಲಾಕಪ್ ಮಾಡಿತ್ತು. ಇವರ ಅನ್ನಾಹಾರಾದಿಗಳ ವಿಚಾರದಲ್ಲಿ ಪೊಲೀಸಿನವರು ರೂಲ್ಸಿನಂತೆ ಶ್ರಮಪಡಿಸಿದ್ದರು.

ಈಚೆಗೆ ಕಾವೇರಿ ರೆಜವಾರ್ಯರ್ ನಾರ್ತ್ ಬ್ಯಾಂಕಿನಲ್ಲಿ ಡಿಸೆಂಬರ್ 18 ನೇ ಶುಕ್ರವಾರ ಬೆಳಗಿನ ಝಾವ ವಡ್ಡರ ಜಾತಿ ಕುರಿಕೆ ವೆಂಕ್ಟಬೋಯಿ ಷೆಡ್ಡಿನಲ್ಲಿ ಕನ್ನಾ ಕಳುವು ನಡೆದು ಒಂದು ಸಾವಿರ ಚಿಲ್ರೆ ರೂಪಾಯಿ ಬಾಳುವಷ್ಟು ನಗದು, ನೋಟು ಮತ್ತು ನಗ ಬಟ್ಟೆ ಸಹ ಹೋಗಿರುವದಾಗಿಯೂ, ಇದುವರೆಗೂ ಪತ್ತೆ ತರದೂದಿನಲ್ಲಿ ದೊರೆಯಲಿಲ್ಲವಾಗಿಯೂ, ಪೆಟ್ಟಿಗೆ ಕದ್ದು ತೆಗೆದುಕೊಂಡು ಹೋಗುತ್ತಿದ್ದ ಕಳ್ಳನನ್ನು ಮಾಲೀಕನು ಕಂಡದ್ದಾಗಿಯೂ, ಕತ್ತಲೆಯಲ್ಲಿ ಕನ್ನದಿಂದ ನುಗ್ಗುತ್ತಿದ್ದಾಗ ಅರ್ಧ ಭಾಗ ಅಪರಾಧಿ ಕಂಡದ್ದಾಗಿಯೂ, ತಾನು ಹಿಡಿಯಲಿಲ್ಲವಾಗಿಯೂ ಮಾಲೀಕನು ತಿಳಿಸಿದ್ದಾಗಿ ವಗೈರೆ ಜನಗಳು ಹೇಳಿಕೊಳ್ಳುತ್ತಾರೆ ಜನಗಳ ಹೇಳಿಕೆ ಮಾತುಗಳಿಂದ ಕೃತ್ಯನಡೆದಿರುವದು ಎಷ್ಟರಮಟ್ಟಿಗೆ ನಿಜವೋ ಗೊತ್ತಾಗುವದಿಲ್ಲ. ಪೊಲೀಸಿನವರು ಈ ಕೇಸಿನ ಪತ್ತೆದಾರಿಯಲ್ಲಿರುತ್ತಾರೆ. ಬೇಗನೆ ಮಾಲನ್ನು ಪತ್ತೆಮಾಡಿದಲ್ಲಿ ತುಂಬಾ ಉಪಕಾರವಾದೀತು.

ಬಾತ್ಮಿದಾರರಿಗೆ ನೋಟೀಸ್.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸವನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು ; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಕರೆಸ್ಪಾಂಡೆನ್ಸ್.

ಹಿತೋಪದೇಶಕರು ನೇಮಕವಾಗಬೇಕು.

ಅಯ್ಯಾ,—ಒಂದು ಊರು ಎಷ್ಟೇ ಚಿಕ್ಕದಾದರೂ ಒಂದು ಸಿಹಿನೀರಿನ ಜಲಾಶಯವು ಅತ್ಯಗತ್ಯ. ಲೌಕಿಕ ಕಾರ್ಯ ಭಾರವನ್ನು ವಹಿಸಿ ನಡಿಸುವುದಕ್ಕೆ ಪ್ರತಿಗ್ರಾಮಕ್ಕೂ ಒಬ್ಬ ಪಟೇಲನು ಇದ್ದೇ ತೀರಬೇಕು. ಹಾಗೆಯೇ ಜನರ ಜ್ಞಾನಾಭಿವೃದ್ಧಿಗಾಗಿ ಪ್ರತಿಯೊಂದು ಗ್ರಾಮಕ್ಕೂ ಒಬ್ಬ ಹಿತೋಪದೇಶಕನು ಇದ್ದೇ ತೀರಬೇಕು. ಪೂರ್ವ ಕಾಲದಲ್ಲಿ ಪ್ರತಿ ಗ್ರಾಮಕ್ಕೂ “ಬಾರಾ ಬಲೂತಿ” ಎಂಬ ಹೆಸರಿನಿಂದ ನಿಯಮಿತರಾಗಿದ್ದ ಹನ್ನೆರಡು ಮಂದಿ ಆಯಗಾರರಲ್ಲಿ ವಿದ್ಯಾಭ್ಯಾಸ ಮಾಡಿಸುವುದಕ್ಕೂ, ಹಿತೋಪದೇಶ ಕಾರ್ಯಕ್ಕೂ ಒಬ್ಬ ಉಪಾಧ್ಯಾಯನೂ ಇರುತ್ತಿದ್ದನು. ಈ ಕ್ರಮವು ಮನುಧರ್ಮಶಾಸ್ತ್ರದಲ್ಲಿ ಹೇಳಿ ಇದೆ. ಹೀಗೆ ಆದಿ ಕಾಲದಿಂದಲೂ ಪ್ರತಿ ಗ್ರಾಮದಲ್ಲಿಯೂ ಉಪಾಧ್ಯಾಯೋದ್ಯೋಗವು ರಾಜ್ಯವಿಪ್ಲವದಲ್ಲಿ ನಂದುಹೋಗಿ ಈಚೆಗೆ ಅದು ಇದೆಯೋ ಇಲ್ಲವೋ ಎನ್ನುವ ಮಟ್ಟಿಗೂ ಅಗೋಚರವಾಗುತ್ತಾ ಬಂದಿತ್ತು. ಬ್ರಿಟಿಷ್ ಸಾಮ್ರಾಜ್ಯವು ಈ ದೇಶದಲ್ಲಿ ನೆಲೆಗೊಂಡ ಮೇಲೆ ಎಲ್ಲೆಲ್ಲಿಯೂ ಶಾಂತಿಯುಂಟಾಗಿ ಕೆಲಕೆಲವು ಗ್ರಾಮಗಳಲ್ಲಿ ಪಾಠಶಾಲೆಗಳು ಏರ್ಪಟ್ಟು ನಡೆಯುತ್ತಾ ಬಂದಿದೆ ಈಗಲಾದರೋ ನಮ್ಮ ಘನತೆಯನ್ನೈದಿದ ಶ್ರೀಮನ್ಮಹಾರಾಜರ ಸರ್ಕಾರದವರು ಈ ಸೀಮೆಯ ವಿದ್ಯಾಭಿವೃದ್ಧಿಗೆ ಸಹಕಾರಿಗಳಾಗುವವುಗಳಲ್ಲಿ ಬಹು ಮುಖ್ಯವಾದ ಪಾಠಶಾಲೆಗಳನ್ನು ಎಲ್ಲೆಲ್ಲಿಯೂ ಅತ್ಯುದಾರಭಾವದಿಂದ ಸ್ಥಾಪಿಸುತ್ತಲಿದ್ದಾರೆ. ಇದಲ್ಲದೆ ಜ್ಞಾನಾಭಿವೃದ್ಧಿಸಾಧನಗಳಾದ ವಾರಪತ್ರಿಕೆಗಳು, ಮಾಸ ಪತ್ರಿಕೆಗಳು, ಹಸ್ತಪತ್ರಗಳು, ಈ ಮುಂತಾದುವುಗಳ ಮೂಲಕವೂ ತಿಳುವಳಿಕೆಯನ್ನು ಸರ್ವತ್ರ ಸುಲಭವಾಗಿ ಹರಡುತ್ತಲಿರುವರು. ಆದರೂ ಇಂತಹ ಪತ್ರಿಕೆಗಳು ಕಚೇರಿಗಳಲ್ಲಿಯೂ, ಶೇಕದಾರರುಗಳ ಬಳಿಯಲ್ಲಿಯೂ ಮೇಜುಗಳ ಮೇಲೆ ಮೌನವಾಗಿ ಕಟ್ಟಲ್ಪಟ್ಟು, ಸರ್ಕಾರದವರ ಉದ್ದೇಶಕ್ಕೆ ಭಂಗವುಂಟಾಗುತ್ತಿರುವುದನ್ನು ಅರಿತು ಅವುಗಳನ್ನು ಪ್ರಚುರಪಡಿಸುವುದಕ್ಕೋಸ್ಕರ ಅನುಭವದಾರರೂ, ದೇಶಹಿತೈಷಿಗಳೂ, ಉದಾರ ಬುದ್ಧಿಯುಳ್ಳವರೂ ಆದ ಉಪನ್ಯಾಸಕರನ್ನು ನೇಮಿಸುವರೆಂದು ಕಳೆದ ಜೂನ್ ತಿಂಗಳಲ್ಲಿ ನಡೆದ ಸಂಪದಭಿವೃದ್ಧಿ ಸಭೆಯಲ್ಲಿ ತೀರ್ಮಾನವಾಗಿರುವುದೆಂದು ತಿಳಿದು ಬಂದಿರುವುದಲ್ಲದೆ ಕಳೆದ ವಾರದ ಪತ್ರಿಕೆಯಲ್ಲಿ ಕಡೂರು ಬಾತ್ಮಿದಾರರೂ, ಈ 24 ನೇ ತಾ. ನ ಪತ್ರಿಕೆಯಲ್ಲಿ ಬೆಂಗಳೂರು ಬಾತ್ಮಿದಾರರೂ ಸೂಚಿಸಿ, ಈ ದೇಶೋದ್ಧಾರಕವಾದ ಏರ್ಪಾಡನ್ನು ಶ್ಲಾಘಿಸಿ, ಇದನ್ನು ಬೇಗ ಜಾರಿಗೆ ತರಬೇಕೆಂದು ನಮ್ಮ ಸರ್ಕಾರದವರನ್ನು ಕೇಳಿ ಕೊಂಡಿದ್ದಾರೆ ಇದು ಪ್ರಕಾರ ಬಹುಜನಾಭಿಮತವಿದೆ ಎಂಬುವುದರಲ್ಲಿ ಏನೇನೂ ಸಂದೇಹವಿಲ್ಲ. ಈ ಏರ್ಪಾಡು ಶೀಘ್ರವಾಗಿ ಜಾರಿಗೆ ಬರಲೆಂದು ಈ ಪ್ರಾಂತ್ಯದಲ್ಲಿಯೂ ಎಲ್ಲರೂ ಹಾರೈಸುತ್ತಾರೆ.

ಲೋಕಹಿತೈಷಿ, ಹಾಸನ.

ಹೆಂಡತಿಯಿಲ್ಲದಿದ್ದರೂ ಹೆಂಡವಿರಬೇಕಂತೆ!

ಅಯ್ಯಾ,—ನಮ್ಮ ತೀರ್ಥಹಳ್ಳಿ ತಾಲ್ಲೂಕಿಗೆ ಸೇರಿದ ಸಾಲೂರು ಗ್ರಾಮವು ಬಹಳ ಸಣ್ಣದಿದ್ದಾಗ್ಯೂ ಇಲ್ಲಿರತಕ್ಕ ಸಾರಾಯಿ, ಹೆಂಡ, ಕಳ್ಳು ಅಂಗಡಿಗಳು ದಿನೇ ದಿನೇ ಹೆಚ್ಚುತ್ತಿವೆ. ಇಲ್ಲಿ ಸಾಯಂಕಾಲ 3 ಘಂಟೆಯಿಂದ ಬೆಳಗ್ಗೆ 12 ಘಂಟೆ ವರೆಗೂ ಕುಡಿಯುವವರ ಕೂಗಾಟ, ದಾರಿಗರ ಪೇಚಾಟಗಳನ್ನು ನೋಡಿದರೆ ಯಾರಿಗೆ ತಾನೆ ಅಸಹ್ಯವಾಗಲಾರದು ? ಇಲ್ಲಿ ಸೇರತಕ್ಕವರು ಬಹು ನಾಮಧಾರಿಗಳೇ ವಿನಹ ಇತರರು ಕಡಮೆ. ಇವರು ಈ ಮದ್ಯಪಾನವನ್ನು ತಮ್ಮ ಕುಲದೇವತೆಯೆಂದು ಭಾವಿಸಿ ಒಂದೆರಡು ದಿವಸ ಅನ್ನಾಹಾರಗಳನ್ನು ಬಿಟ್ಟಾಗ್ಯೂ ಈ ಹೆಂಡ, ಸಾರಾಯಿಗಳನ್ನು ತ್ಯಜಿಸುವುದು ಅಸಾಧ್ಯ. ಇಂಥಾ ನಾಮಧಾರಿಗಳಿಗೆ ವಿದ್ಯೆಯ ಗಂಧವು ತಿಳಿದಿರುವುದು ಅಲ್ಪವಾಗಿದೆ. ಕೊಂಚ ತಿಳಿದವರು ಈ ವಿಷಯ ಚರ್ಚಿಸಿದರೆ ಯಾರೂ ನಿಗಾ ಕೊಡುವುದಿಲ್ಲ. ಇವರು ಕುಡಿಯುವ ಹೆಂಡದ ಕ್ರಯ ದಿನಕ್ಕೆ ಸುಮಾರು 250 ರೂಪಾಯಿ ಆಗುವದು “ಹಿರಿಯಕ್ಕನ ಚಾಳಿ ಮನೆಮಕ್ಕಳಿಗೆಲ್ಲ” ಎಂಬಂತೆ ತಮ್ಮಲ್ಲಿರತಕ್ಕ ಹೆಂಗಸರಿಗೂ ಪುತ್ರಮಿತ್ರರಿಗೆ ಸಹ ಎರಡು ಮೂರು ಬಾಟ್ಲಿಗಳನ್ನು ಕಂಕುಳಲ್ಲಿ ಸಿಗಾಕಿಕೊಂಡು ಬಂದು ಪ್ರತಿದಿನವೂ ಕೊಡುತ್ತಾರಲ್ಲದೆ ಆ ಸಂಬಂಧ ಸ್ವಲ್ಪ ಮಂತ್ರೋಪದೇಶವನ್ನೂ ಹೇಳುತ್ತಾರೆ ! ಮುಂದೆ ತಾವು ಸತ್ತ ಬಳಿಕ ತಮ್ಮ ಮೇಲ್ಪಂಕ್ತಿಯನ್ನು ಅನುಸರಿಸಬೇಕೆಂದು ಬೋಧಿಸುವವರು ಅನೇಕರಿರುತ್ತಾರೆ. ಹೆಂಡ ಕುಡಿಯುವುದರಿಂದ ಬಹಳ ತೊಂದರೆ ಇದೆಯೆಂದು ತಿಳಿಸಿದರೆ—“ನಮ್ಮಪ್ಪ ಕುಡಿದಿದ್ದನು ! ನಮ್ಮಜ್ಜ ಕುಡಿದಿದ್ದನು ! ನಾವೇಕೆ ಕುಡಿಯಬಾರದು ?” ಎಂದು ಧಿಕ್ಕರಿಸಿ ಮಾತಾಡುವರಲ್ಲದೆ. ಇವರಿಗೆ ಬುದ್ಧಿ ಹೇಳಿದವರ ಕೂಡ ಗುದ್ದಾಟ ಹೊಡೆದಾಟಕ್ಕೆ ಪ್ರಾರಂಭಿಸುತ್ತಾರೆ. ಇದರ ಖರ್ಚಿಗೋಸ್ಕರ ತಮ್ಮಲ್ಲಿರತಕ್ಕ ಸರ್ವ ಆಸ್ತಿಯನ್ನೂ ಈ ಮಾರಿಗೆ ದಾನಕೊಟ್ಟು ಈ ಮದ್ಯವನ್ನು ಕುಡಿಯುವುದಕ್ಕೆ ಸಾಲಮಾಡಿ, ಇದ್ದ ಆಸ್ತಿಯನ್ನೆಲ್ಲಾ ಸಾಹುಕಾರರಿಗೆ ಕ್ರಯಕ್ಕೆ ಕೊಟ್ಟು ಅವರ ಜೀತದ ಆಳುಗಳಾಗಿರುವವರನೇಕರಿರುತ್ತಾರೆ. ಅಲ್ಲದೆ ತಮ್ಮ ಹೊಟ್ಟೆಯಲ್ಲಿ ಹುಟ್ಟಿದ ಹೆಣ್ಣುಮಕ್ಕಳನ್ನು 500 ರಿಂದ 800 ರೂಪಾಯಿ ವರೆಗೆ ಬಿಕರಿ ಮಾಡಿ ಆ ಹಣವನ್ನು ಹೆಂಡಾ ಕುಡಿದೋ, ಇನ್ನೇನೋ ದುಂದು ಖರ್ಚುಮಾಡಿಯೋ ಮೂರು ದಿವಸಗಳಲ್ಲಿ ಪೋಲುಮಾಡಿ ಏನೂ ಇಲ್ಲದವರಂತೆ ಆಗುತ್ತಾರೆ ಇಂಥಾ ನವನಾಗರಿಕ ಕಾಲದಲ್ಲಿ ಇಷ್ಟು ಅಜ್ಞಾನಿಗಳಾಗಿರುವುದನ್ನು ನೋಡಿದರೆ ತುಂಬಾ ಶೋಚನೀಯವಾಗಿದೆ. ಹೆಂಡದ ಅಂಗಡಿಗಳ ದೆಸೆಯಿಂದ ಆರಗ, ಸಾಲೂರುಗಳಲ್ಲಿರತಕ್ಕ ನಾಮಧಾರಿಗಳು ಖಂಡಿತವಾಗಿ ಉತ್ತಮಸ್ಥಿತಿಗೆ ಬರಲು ಅಶಕ್ಯವಾಗಿದೆ. ದಯಾಳು ಸರ್ಕಾರದವರು ಈ ಹೆಂಡದ ಅಂಗಡಿಗಳನ್ನು ತೆಗೆದುಹಾಕುವುದಕ್ಕೆ ಅಪ್ಪಣೆ ಕೊಡಿಸಿದರೆ ಈ ಬಡಜನರಿಗೆ ಒಂದು ದೊಡ್ಡ ಉಪಕಾರವನ್ನು ಮಾಡಿದಂತಾಗುವುದಕ್ಕೆ ಏನೇನೂ ಸಂದೇಹವಿಲ್ಲ. ಇದನ್ನರಿತು ಇಲ್ಲಿಯ ಜನರು ಈ ಮಾರಿಯನ್ನು ತ್ಯಜಿಸಲು ಸರ್ವಪ್ರಯತ್ನ ಮಾಡುತ್ತಾರೆಂದು ನಂಬಿದೇನೆ.

ಮಹಾಭಿಮಾನಿ.

ತಿಪಟೂರಿನಲ್ಲಿ ವರ್ತಕರ ಮೋಸವಂತೆ.

ಅಯ್ಯಾ—ನಮ್ಮ ಮೈಸೂರು ಘನತೊಂದಿದ ಶ್ರೀಮನ್ಮಹಾರಾಜರವರ ಶಾಶ್ವತವಾದ ಸಾಮ್ರಾಜ್ಯದಲ್ಲಿ ಪ್ರಜೋಪಕಾರವಾದ ಅನೇಕ ತಿದ್ದುಪಾಟುಗಳು ಏರ್ಪಾಡಾಗಿದ್ದರೂ ಈ ತಿಪಟೂರು ಟವನ್ ವಾಸಿಗಳಾಗಿರುವ ಸಾಹುಕಾರರೆಂಬ ವರ್ತಕರು ನಡಸುತ್ತಿರುವ ವ್ಯಾಪಾರದ್ರೋಹಗಳು ಮಾತ್ರ ಯಾವ ಕಾರಣದಿಂದಲೋ ಯಾವ ದೊಡ್ಡ ಅಧಿಕಾರಿಗಳ ಗಮನಕ್ಕೂ ಬಾರದೆ ದಿನೇ ದಿನೇ ಬಡವರಾದ ನಮ್ಮಗಳಿಗೆ ಆ ಸಾಹುಕಾರರು ಮಾಡುತ್ತಿರುವ ಅನ್ಯಾಯವು ಪ್ರಬಲಿಸುತ್ತ ನಮ್ಮನ್ನು ಹೀನಾವಸ್ಥೆಗೆ ತಂದಿರುವದು ಹ್ಯಾಗೆಂದರೆ—ಈ ತಿಪ್ಟೂರು ತಾಲ್ಲೋಕಿನಲ್ಲಿ ತೆಂಗಿನಕಾಯಿನ ಬೆಳೆ ವಿಶೇಷವಾಗಿದೆ. ಇದರಿಂದಲೇ ನಮ್ಮಗಳ ಸಮಸ್ತ ಸಂಸಾರದ ವೆಚ್ಚಗಳೂ, ಸರ್ಕಾರದ ಕಂದಾಯವೂ ಸಹ ನಡೆಯಬೇಕಾಗಿದೆ ಸದರಿ ತೆಂಗಿನಕಾಯಿನ ಒಣಗಿದ ಕೊಬರಿಯನ್ನು ನಮ್ಮ ಸಾಹುಕಾರರುಗಳು ಸ್ವಪ್ರಯೋಜನಕ್ಕಾಗಿ ಇಟ್ಟುಕೊಂಡಿರುವ ವ್ಯಾಪಾರದ ಮಂಡಿಗಳಿಗೆ ನಾವುಗಳು ತೆಗೆದುಕೊಂಡು ಹೋದರೆ ಧಡಿಯ ಒಂದಕ್ಕೆ 310, 315, 320 ರೂಪಾಯಿಗಳ ಪೊಹರಿಲ್ಲದ ಕಬ್ಬಿಣದ ಗುಂಡಿನಿಂದ ಅವರವರಿಷ್ಟಪ್ರಕಾರ ತೂಗಿಕೊಂಡು ನಮ್ಮಗಳಿಗೆ 300 ರೂಪಾಯಿ ತೂಕವೆಂದು ಹೇಳುತ್ತಾ ಪರಸ್ಥಳಕ್ಕೆ ನಮ್ಮಿಂದ ತೆಗೆದುಕೊಂಡ ಧಾರಣೆಗಿಂತ 10 ರೂಪಾಯಿ ಜಾಸ್ತಿಯಾಗಿ ರವಾನೆಮಾಡುತ್ತಾ ನಮ್ಮಿಂದ ದಳ್ಳಾಳಿ ವಗೈರೆ ಅವರ ಮಂಡಿಯ ವಿಶಿಷ್ಟ ಖರ್ಚುಗಳನ್ನು ತೆಗೆದುಕೊಂಡು ಇದು ಸಾಲದೆ ನಮ್ಮಗಳ ತಗಾದೆ ಕಾಲವನ್ನು ನೋಡಿಕೊಂಡಿದ್ದು ಸದರಿ ಮಾಲನ್ನು ಪರಸ್ಥಳಕ್ಕೆ ರವಾನೆ ಮಾಡುತ್ತಾ ಇದ್ದರೂ “ನಮ್ಮಗಳಿಗೆ ಧಾರಣೆ ಇಲ್ಲದಂಥ ಕೊಬರಿ ದಾಸ್ತಾನು ಮಾಡಿದೇವೆ; ಮೊಬಲಗು ಕೊಡುವದಿಲ್ಲ” ವೆಂದು ಹೇಳುತ್ತಿದ್ದು, ಹೆಚ್ಚು ಧಾರಣೆಯಲ್ಲಿ ನಮ್ಮ ಕೊಬರಿಯನ್ನು ರವಾನಿಸಿ ನಮ್ಮಗಳಿಗೆ ಮಾತ್ರ ಎಂದಿಗಿಂತಲೂ ಕಮ್ಮಿ ದರದಿಂದ ಹಣವನ್ನು ಕೊಡುತ್ತಾರೆ. ನಾವುಗಳು ಹೊಟ್ಟೆ ಬಟ್ಟೆ ಖರ್ಚಿಗೆ ಬಹಳ ಪೇಚಾಡುತ್ತ ಅವರೆದುರಿಗೆ ಹೋಗಿ ಹಲ್ಲು ಕಿರಿದು ಬೇಡಿಕೊಂಡು ಕೊಟ್ಟದ್ದೇ ಸಾಕೆಂತ ತಂದು ಜೀವನಾ ಮಾಡುತ್ತೇವೆ. ನಮ್ಮ ಸರ್ಕಾರದವರು ಪ್ರಜೋಪಕಾರವಾದ ಅನೇಕ ಸತ್ಕಾರ್ಯಗಳನ್ನು ಮಾಡುತ್ತಿದ್ದರೂ ಈ ಸಾಹುಕಾರರಿಗೆ ಮಾತ್ರ ಯಾವ ವಿಧವಾದ ಅಳತೆ ತೂಕದ ಕಾನೂನ್ ಜಾರಿಗೆ ಕೊಡದೆ, ಕೊಟ್ಟಿದರೂ ರಾಕ್ಷಸ ಪ್ರವರ್ತನೆಯಂತಿರುವ ಈ ಅನ್ಯಾಯವನ್ನು ನಾಶಮಾಡದೆ ಇರುವದರಿಂದ ಪ್ರಜೆಗಳಾದ ನಾವುಗಳು ಸ್ವಲ್ಪ ದಿವಸದಲ್ಲಿ ನಮ್ಮ ಆಸ್ತಿಗಳನ್ನು ಈ ಸಾಹುಕಾರರುಗಳಿಗೆ ಕಾಣಿಕೆಯಾಗಿ ಒಪ್ಪಿಸಿ ನಾಮಾವಶೇಷವಾಗುವದರಲ್ಲಿ ಸ್ವಲ್ಪವೂ ಸಂಶಯವಿಲ್ಲ. ಇವರುಗಳು ಮಾಡತಕ್ಕ ಮೋಸವನ್ನು ನಮ್ಮ ದಿವಾನ್‌ರವರಾದ ಮ|| ವಿಶ್ವೇಶ್ವರಯ್ಯನವರು ಈಗಲಾದರೂ ನಾಶಮಾಡಬೇಕಾಗಿದ್ದರೆ ಅವರುಗಳಲ್ಲಿರತಕ್ಕ ಖರಾರುವಾಕಾ ಲೆಕ್ಕಗಳನ್ನು ತೆಗಿಸಿ ಪರಾಂಬರಿಸಿದರೆ ಈ ಸಂಗತಿ ನಿಜವಾಗುವದರಲ್ಲಿ ಯಾವ ಸಂಶಯವೂ ಇಲ್ಲ ಮತ್ತು ಈ ಸಾಹುಕಾರರು ಏಕಮತ್ಯದಿಂದ ಧಾರಣೆಯನ್ನು ಅವರಿಷ್ಟ ಪ್ರಕಾರ ಏಸ್ತಮ್ಮೆ ಮಾಡುವದಕ್ಕಾಗಿ ನಮ್ಮ ರೈತರುಗಳಲ್ಲಿ ಯಾರಿಗೂ ತಿಳಿಯದ ಹಾಗೆ ಅಂತರಂಗವಾಗಿ ಮೀಟಿಂಗು ನಡಿಸಿಕೊಂಡು ಕೊಬರಿ ದಾಸ್ತಾನು ಯಾ ಧಾರಣೆಮಾಡಿ ನಮ್ಮಗಳನ್ನು ಕಂಡರೆ ಗೋಮುಖ ವ್ಯಾಘ್ರರಂತೆ ವರ್ತಿಸುತ್ತಿರುವರು. ಇದಕ್ಕಾಗಿ ಇವರಲ್ಲಿ ಒಬ್ಬರನ್ನೊಬ್ಬರು ವಿಚಾರಿ ನಡೆಯದೆ ನಮ್ಮಗಳಿಗೆ ಕೆಡುಕು ಮಾಡುವದಕ್ಕೆ ದಿನೇ ದಿನೇ ಪ್ರಯತ್ನ ಪಡುತ್ತಿರುವದನ್ನು ನಮ್ಮ ಸರ್ಕಾರದವರು ಬಡವಿಧಿಯಗಳಾದ ನಮ್ಮಗಳಲ್ಲಿ ಪೂರ್ಣ ದಯವಿಟ್ಟು ತಪ್ಪಿಸಿ ನಮ್ಮಗಳನ್ನು ಕಾಪಾಡಬೇಕೆಂದು ಬೇಡಿಕೊಳ್ಳುವ ತಮ್ಮ ವಿಧೇಯನಾದ

ಬಡರೈತರ ಹಿತಚಿಂತಕ.

[ಸರ್ಕಾರದವರು ಜಾನೂನ್‌ಮಾಡಿ ಹೊಸ ಅಳತೆ ಮತ್ತು ತೂಕದ ಸಾಧನಗಳನ್ನು ಮಾಡಿಸಿ ರೂಲಸು ಜಾರಿ ಮಾಡುವಂತೆ ಅಪ್ಪಣೆ ಕೊಟ್ಟದಾರೆ. ಸ್ಥಳಾಧಿಕಾರಿಗಳು ಇದನ್ನು ಜಾರಿ ಮಾಡಿ ವರ್ತಕರಿಂದ ಪ್ರಜೆಗಳಿಗೆ ಇಂಥಾ ಅಧರ್ಮವಾದ ಕಷ್ಟನಷ್ಟಗಳು ಪ್ರಾಪ್ತವಾಗದಂತೆ ನೋಡಿಕೊಳ್ಳಬೇಕಾಗಿದೆ ಅವರಿಗೆ ಕರ್ತವ್ಯ ಪರಿಜ್ಞಾನವೂ, ಪರಹಿತಚಿಂತನೆಯೂ ಉಂಟಾಗುವ ತನಕ ಇಂಥಾ ಅನ್ಯಾಯಗಳು ನಡೆಯುತ್ತಾ ಬರುವವು —ಎಡಿ.]

ಗುಂಡ್ಲುಪೇಟೆಯ ದುಃಸ್ಥಿತಿ.

ಅಯ್ಯ,—ಈ ಊರು ನಮ್ಮ ಮೈಸೂರು ಸಂಸ್ಥಾನದ ದಕ್ಷಿಣದ ಎಲ್ಲೆಯಲ್ಲಿರುವುದು. ನಮ್ಮ ಮಹಾರಾಜರವರು ನೀಲಗಿರಿಗೆ ಪ್ರಯಾಣಮಾಡುವ ಮಾರ್ಗದಲ್ಲಿ ಹೊರತು ಉಳಿದ ಕಾಲಗಳಲ್ಲಿ ಸರ್ಕಾರದ ದೊಡ್ಡ ಅಧಿಕಾರಿಗಳು ತನಿಖೆಯಾಗಿ ಬಂದು ಊರಿನೊಳಗಣ ವಿಚಾರಗಳನ್ನು ತನಿಖೆಮಾಡುವುದು ವಿರಳ. ಬಹುಕಾಲದಿಂದಲೂ ಊರು ಒಂಬತ್ತೋ ಹತ್ತು ಪೋಲೀಸುಗಳ ಠಾಣೆಗೂ ಹೆಸರುಗೊಂಡಿದೆ. ಇಂಥ ಹಿಂದಿನಿಂದ ಮೊನ್ನೆ ತಾನೇ ಒಬ್ಬ ಅಧಿಕಾರಿಯು ಅವಮಾನವನ್ನು ಹೊಂದಿದರು. ಕೆಲವು ಹೀನಚಾರಿಗಳು ಈ ಊರಿಗೆ ಹೊಸಗಿ ನರ್ಕವಾದೀತೋ ಎಂದು ಆತುರದಿಂದ ಕಾದಿರುವರು. ಈ ಆಸೆಗೆ ಇಲ್ಲಿಯವರು ತನ್ನ ಬಹುದಾದ ಲಂಚವೇ ಮೂಲಕಾರಣವು. ಇಲ್ಲಿನ ಜನರು ವಿದ್ಯೆಗಾಗಲಿ, ನಾಗರಿಕತೆಗಾಗಲಿ ಬಹುದಿವಸದಿಂದ ಹೆಸರುಗೊಂಡಿಲ್ಲ. ಈ ಊರಿನ ಎ. ವಿ. ಸ್ಕೂಲ್ ಸ್ಥಾಪಿಸಲ್ಪಟ್ಟಾರಭ್ಯ ಈಗತಾನೇ ಇಬ್ಬರು ಮೂವರು ವಿದ್ಯಾರ್ಥಿಗಳು ಮೈಸೂರಿನಲ್ಲಿ ಯೂನಿವರ್ಸಿಟಿ ವಿದ್ಯಾಭ್ಯಾಸವನ್ನು ಮಾಡುತ್ತಿರುವರು. ಇಲ್ಲಿ ಸ್ವಲ್ಪಮಟ್ಟಿಗೆ ವಿದ್ಯಾಭ್ಯಾಸಮಾಡಿರುವ ಒಬ್ಬ ನವೀನಪಂಡಿತನಾಗಲಿ ಸಿಕ್ಕುವುದಿಲ್ಲ. ಜನರು ಹಳೇ ಸಂಪ್ರದಾಯಕ್ಕೆ ಸೇರಿದವರೆಂದು ಹೇಳುವುದಕ್ಕೆ ಯಾವ ಸಂಶಯವೂ ಇಲ್ಲ. ಈ ಊರನ್ನೂ ಇತರ ಪಟ್ಟಣಗಳಂತೆ ನಾಗರಿಕತೆಯಲ್ಲಿ ಮುಂದಾಗಿ ಮಾಡಬೇಕೆಂದು ಪ್ರಯತ್ನಪಡುವ ಕೆಲವು ಅಧಿಕಾರಿಗಳಿಗೆ ಇಲ್ಲಿನ ಶ್ರೀಮಂತರೇ ಮುರಿಗಡ್ಡಿ ಹಾಕುವರು. ಹಿಂದೆ ಪಿ. ಟಿ. ಪುಟ್ಟಣ್ಣ ಎಂಬ ಸಬ್ ರೆಜಿಸ್ಟ್ರಾರು ಇಲ್ಲಿನ ರೆಜಿಸ್ಟ್ರೇಷನ್ ಇಲಾಖೆಯ ಕೆಲವು ಅವ್ಯವಸ್ಥೆಯನ್ನು ಸರಿಮಾಡಬೇಕೆಂದು ಪ್ರಯತ್ನಪಡಲು ಇಲ್ಲಿನ ಪುಂಡಾಗ್ರೇಸರನೊಬ್ಬನು ಹಲವು ಸುಳ್ಳುಗಳನ್ನು ಅವರ ಮೇಲೆ ಎತ್ತಿಕಟ್ಟಿ ಅಡಚಣೆಮಾಡಿದನು. ಹೀಗೆಯೇ ಮ॥ ಮಾಧವರಾಯರಿಂದ ಜನೋಪಕಾರಕ್ಕಾಗಿ ಸ್ಥಾಪಿಸಲ್ಪಟ್ಟ ಪಬ್ಲಿಕ್ ರೀಡಿಂಗ್ ರೂಮೂ ಮೂಲೆಗೆ ಬಿದ್ದುಹೋಯಿತು. ಇತರ ಊರುಗಳ ಜನಗಳು ಸತ್ಯಸಂಧತೆಯಲ್ಲಿಯೂ, ನಾಗರಿಕತೆಯಲ್ಲಿಯೂ ಮುಂದುಗತ್ತಿರುವಾಗ ಇಲ್ಲಿನವರು ಒಂದು ಹಿಂದಕ್ಕೆ ಜರುಗುತ್ತಿರುವರು. ಕೆಲವು ಕಾಲದ ಹಿಂದೆ ಉಲ್ಬಣಸ್ಥಿತಿಯಲ್ಲಿದ್ದ ಅನೇಕ ಅನಾಯಕಗಳನ್ನು ನಡಿಸಿ ಸ್ವಲ್ಪ ಸಮಾಧಾನವನ್ನು ಹೊಂದಿದ್ದವು ಈಗ ಒಂದಕ್ಕೆರಡರಷ್ಟು ಅಭಿವೃದ್ಧಿಯನ್ನು ಹೊಂದುತ್ತಿದೆ. ಈ ಸನ್ನಿಧಾನದ ಕೋಟೆಯೊಳಗೆ ಮೂರು, ಪೇಟೆಯೊಳಗೆ ಎರಡು ಭಾರಿ ಜೂಜಿನ ಕಟ್ಟೆಗಳಿವೆ. ದಿನವೂ ರಂಗಕ್ಕೆ ನೂರರಗಟ್ಲೆ ರೂಪಾಯಿಗಳೂ ಮತ್ತು ಇತರ ವಸ್ತುಗಳೂ ಬರುವವು. ಬೀದಿಬೀದಿಗಳಲ್ಲಿಯೂ ಸಣ್ಣಸಣ್ಣ ಹುಡುಗರ ಜೂಜಿನ ಕಟ್ಟೆಗಳೂ ಇರುವಂತೆ ಕಂಡುಬರುವವು. ಸರ್ಕಾರದ ಅನೇಕ ಚಿಲ್ಲರ ಉದ್ಯೋಗಸ್ಥರೂ, ಹಲವರು ಮ್ಯುನಿಸಿಪಾಲಿಟಿಯ ಮೆಂಬರುಗಳೂ, ಸಾಹುಕಾರರೂ ಇದಕ್ಕೆ ಸಹಾಯಿಗಳಾಗಿಯೂ ಪೋಷಕರಾಗಿಯೂ ಇರುವರು. ಇದರಿಂದ ಮೊನ್ನೆ ತಾನೇ ಇಲ್ಲಿಗೆ ಹೊಸದಾಗಿ ಬಂದು ಹೋಟೆಲಿಟ್ಟಿರುವ ಒಬ್ಬ ಬ್ರಾಹ್ಮಣನಿಗೆ ಫಸಾದ್ ಜೂಜುಕೋರನಾದ ಈ ಊರಿನ ಒಬ್ಬ ಬ್ರಾಹ್ಮಣ ಯುವಕನಿಂದ ಏಟುಪಾಟುಗಳಾಯಿತೆಂದು ವರ್ತಮಾನವಿದೆ. ಪೋಲೀಸ್ ಆಫೀಸರುಗಳೇನು ಮಾಡಿಯಾರು? ಕೆಲವು ವೇಳೆ ಇವರುಗಳೇ ಈ ಜನಗಳ ಅನುಸಯೋಕ್ತಿಗೆ ಒಳಗಾಗುವ ಸಂದರ್ಭ ಬಂದುಬಿಡುತ್ತದೆ. ಇಷ್ಟರಮಟ್ಟಿಗೆ ಅಭಿವೃದ್ಧಿ ಹೊಂದಿರುವ ಈ ಜೂಜನ್ನು ಮೂಲೋತ್ಪಾಟನೆ ಮಾಡುವುದು ಅಸಾಧ್ಯವೆಂದು ತೋರುತ್ತದೆ. ಆದರೆ ಸಧ್ಯದಲ್ಲಿಯೇ ಎರಡು ಮೂರು ಭಾರಿ ಅನಾಹುತಗಳು ನಡೆಯುವಂತೆ ವರ್ತಮಾನವಿರುವುದರಿಂದ ಮುಂದಾಗಿಯೇ ಈ ವಿಷಯವನ್ನು ಗೌರ್ನಮೆಂಟಿನವರ ಅವಗಾಹನೆಗೆ ತಂದಿರುತ್ತೇನೆ.

ಸ್ವಾಭಿಮಾನಿಯಾದ ಸಜ್ಜನಸೇವಕ.

ನಿವಾಸಿ, ಚಾಮುಂಡಿಬೆಟ್ಟ.—ನಿಮ್ಮ ಹೆಸರು ವಿಳಾಸ ತಿಳಿಸಿಲ್ಲ.

ನಗರದ ತಾಲ್ಲೂಕು ಮದೂರು ಮಾಗಣೆಯ ಫಾರೆಸ್ಟ್ ಮ್ಯಾಪ್ ಆ ಪ್ರಾಂತ್ಯದ ಎಲ್ಲಾ ಗ್ರಾಮಸ್ಥರಿಗೂ ಆಕ್ಷೇಪಣೆ ಇಲ್ಲದಂತೆ ಕಾಗದ ಮುಂತಾದವುಗಳನ್ನು ಪಾವತಿಮಾಡುತ್ತಿರುವುದಾಗಿಯೂ, ಬೇಗದೂರ ಗ್ರಾಮದ ಬಾತ್ಮಿದಾರರ ಅಭಿಪ್ರಾಯವು ನ್ಯಾಯವಾದದ್ದಲ್ಲವೆಂದೂ ಒಬ್ಬ ಬಾತ್ಮಿದಾರರು ಬರೆದಿದ್ದಾರೆ.

ಚಾಮುಂಡಿಬೆಟ್ಟದ ದೇವಿಕೋಟೆಯಲ್ಲಿ ಅನ್ನಛತ್ರದ ಏರ್ಪಾಡುಗಳು ಪ್ರಯಾಣಿಕರಿಗೂ ದೇವಸ್ಥಾನದ ಸೇವೆಗೆ ಹೋಗತಕ್ಕವರಿಗೂ ತೃಪ್ತಿಕರವಾಗಿಲ್ಲವೆಂದೂ, ಶ್ರೀಕೃಷ್ಣಯ್ಯ ಪಾರುಪತ್ತೆಗೆ ನೇಮಕವಾಗಿರುವುದರಿಂದ ಅನ್ನಛತ್ರದ ಒಳಕಾರುಬಾರುಗಳನ್ನು ಸರಿಯಾಗಿ ನೋಡಿ ಕ್ರಮಪಡಿಸಲು ಅವಕಾಶವಿಲ್ಲವೆಂದೂ ಒಬ್ಬ ಆಗಂತುಕ ಬಾತ್ಮಿದಾರರು ಬರೆದಿದ್ದಾರೆ. ಮುಜರಾಯಿ ಇಲಾಖೆಯವರು ಇದರ ನಿಜಸ್ಥಿತಿಯನ್ನು ತನಿಖೆಮಾಡಿ ಸರಿಪಡಿಸುತ್ತಾರೆಂದು ನಿರೀಕ್ಷಿಸುತ್ತೇವೆ.

"ಗಬ್ಬಾರಲ್ ಡೇ" ಉತ್ಸವ ನಡೆದ ವೃತ್ತಾಂತಗಳು ಇನ್ನೂ ನಮಗೆ ತಲುಪುತ್ತಲೇ ಇರುವವು. ಆನೇಕಲ್ ತಾಲ್ಲೂಕು ಅಳಬೊಮ್ಮಸಂದ್ರ ಗ್ರಾಮ, ಬೆಂಗಳೂರು ತಾಲ್ಲೂಕು ಶಾಕೋಳು ಗ್ರಾಮ, ಕಡೂರು ತಾಲ್ಲೂಕು ಚಿಕ್ಕಂಗಳ ಗ್ರಾಮ, ಮಾಗಡಿ ತಾಲ್ಲೂಕು ಬಾಣವಾಡಿ ಗ್ರಾಮ, ಕೋಲಾರ ತಾಲ್ಲೂಕು ಕ್ಯಾಲನೂರು—ಈ ಸ್ಥಳಗಳಲ್ಲಿ ನಡೆದ ಉತ್ಸವ, ಸಭೆ, ಉಪನ್ಯಾಸಾದಿಗಳ ವಿವರಣೆಯುಳ್ಳ ಬಾತ್ಮಿಗಳನ್ನು ಆದರದಿಂದ ಸ್ವೀಕರಿಸಿ, ಸ್ಥಳಸಂಕೋಚದಿಂದ ಪ್ರಕಟಿಸಲಾಗಲಿಲ್ಲವೆಂದು ವಿಷಾದಿಸುವೆವು.

ತಾಲ್ಲೂಕು ವರ್ತಮಾನಗಳು.

ಚನ್ನರಾಯಪಟ್ಟಣ.—ನಮ್ಮ ದಿವಾನ್ ಸಾಹೇಬರವರು ದಯಮಾಡಿಸಿದ್ದಾಗ ಅವರು ಸ್ಕೂಲ್ ಒಳಕ್ಕೆ ದಯಮಾಡಿಸಿ ಕೆಲವು ರೂಪಾಯಿಗಳನ್ನು ಬಾಲಕಿಯರಿಗೆ ಬಹುಮಾನವಾಗಿ ಕೊಟ್ಟಿದ್ದರು. ಕಳೆದ ಶುಕ್ರವಾರ ನಮ್ಮ ಡೆಪ್ಯುಟಿ ಇನ್‌ಸ್ಪೆಕ್ಟರು ಸ್ಕೂಲಿಗೆ ಬರುವರೆಂದು ತಿಳಿದು ನಮ್ಮ ಸ್ಕೂಲ್ ಉಪಾಧ್ಯಾಯರಾದ ಶ್ರೀನಿವಾಸರಾಯರು ಕಮಿಟಿ ಮೆಂಬರುಗಳನ್ನೂ ಊರಿನ ಮುಖಂಡ ಜನಗಳನ್ನೂ ಸಭೆ ಸೇರಿಸಿ ದಿವಾನ್ ಸಾಹೇಬರವರು ಕೊಟ್ಟ ದ್ರವ್ಯಕ್ಕೆ ಮತ್ತಷ್ಟು ದ್ರವ್ಯವನ್ನು ಚಂದಾ ವಸೂಲ್ ಮಾಡಿ ಹೆಣ್ಣುಮಕ್ಕಳಿಗೆ ಇನಾಂ ಪುಸ್ತಕ ಮೊದಲಾದವುಗಳನ್ನು ಕೊಡಬೇಕೆಂದು ಏರ್ಪಾಡು ಮಾಡಿದರು. ಇದಕ್ಕಾಗಿ ಸ್ಕೂಲ್ ಕಟ್ಟಡದಲ್ಲಿ ಒಂದು ಸಭೆಯು ಸೇರಿಸಲ್ಪಟ್ಟಿತು. ಅ॥ ಡೆಪ್ಯುಟಿ ಇನ್‌ಸ್ಪೆಕ್ಟರವರು ಅಗ್ರಾಸನವನ್ನು ವಹಿಸಿದ್ದರು. ಮೊದಲು ಹೆಣ್ಣುಮಕ್ಕಳಿಂದ ದೇವರ ಸ್ತೋತ್ರದ ಹಾಡುಗಳು ಇಂಪಾಗಿ ಗಾನಮಾಡಲ್ಪಟ್ಟವು. ಹುಡುಗಿಯಿಬ್ಬರು ತಾಯಿ, ಮಕ್ಕಳ ಸಂವಾದ ಪಾಠವನ್ನು ಚೆನ್ನಾಗಿ ಓದಿದರು. ಸ್ತ್ರೀವಿದ್ಯಾಭ್ಯಾಸವು ಅತ್ಯವಶ್ಯಕವೆಂದು ತಿಳಿಸುವುದೇ ಈ ಹುಡುಗರು ಓದಿದ ಮುಖ್ಯ ಉದ್ದೇಶವಾಗಿತ್ತು. ನಮ್ಮ ಉಪಾಧ್ಯಾಯರು ಸ್ಕೂಲ್ ರಿಪೋರ್ಟನ್ನು ಓದಿದ ನಂತರ ಇನ್‌ಸ್ಪೆಕ್ಟರವರು ಹೆಣ್ಣುಮಕ್ಕಳಿಗೆ ಪುಸ್ತಕಗಳನ್ನೂ, ಕಟ್ಟಿಗಳನ್ನೂ ಬಹುಮಾನ ಕೊಟ್ಟು ಸ್ತ್ರೀವಿದ್ಯಾಭ್ಯಾಸವನ್ನು ಕುರಿತು ಸ್ವಾರಸ್ಯವಾದ ಉಪನ್ಯಾಸವನ್ನಿತ್ತು, ರೀಡಿಂಗ್ ರೂಮಿನ ವಿಚಾರವಾಗಿ ತಿಳುವಳಿಕೆ ಹೇಳಿದರು. ಕಮಿಟಿ ಮೆಂಬರುಗಳೂ, ಮುಖಂಡರೂ ಈ ಊರಿನಲ್ಲಿ ರೀಡಿಂಗ್ ರೂಮ್ (ವಾಚಕಶಾಲೆ) ಮಾಡಬೇಕೆಂದು ಗೊತ್ತುಮಾಡಿಕೊಂಡರು.—ಈಗ ಸ್ಕೂಲಿನಲ್ಲಿ 63 ಜನ ಬಾಲಕಬಾಲಕಿಯರು ಒಟ್ಟಿಗೆ ಇರುತ್ತಾರೆ. ಇದು ಒಬ್ಬ ಉಪಾಧ್ಯಾಯರಿಗೆ ಅಸಾಧ್ಯವಾಗಿರುತ್ತೆ. ಈಗ ಇರುವ ಸ್ಕೂಲ್ ಕಟ್ಟಡವು 63 ಬಾಲಕರಿಗೆ ಬಹಳ ಇಕ್ಕಟ್ಟಾಗಿದೆ. ಆದ್ದರಿಂದ ಪಕ್ಕದಲ್ಲಿಯೇ ಈಗಿರುವ ಕಟ್ಟಡದಂತೆ ಹೊಸ ಕಟ್ಟಡವನ್ನು ಕಟ್ಟುವುದಕ್ಕೆ ಪಕ್ಕದ ಜಮೀನ್‌ದಾರ್ ಕಮಿಟಿ ಮೆಂಬರಾದ ಪಟೇಲ್ ಆವಲಯ್ಯನವರು ಜಮೀನ್ ಕೊಡುತ್ತೇವೆಂದು ವಾಗ್ದಾನಮಾಡಿದ್ದರಿಂದ ಸರ್ಕಾರದವರು ಕಟ್ಟಿಸಿಕೊಡುತ್ತೇವೆಂದು ವಾಗ್ದಾನ ಮಾಡಿರುತ್ತಾರೆ. ನಮಗೆ ಸಹಾಯೋಪಾಧ್ಯಾಯರೂ, ಇನ್ನೊಂದು ಹೊಸ ಕಟ್ಟಡವೂ ಸರ್ಕಾರದಲ್ಲಿಯೇ ಲಭಿಸುವುದೆಂದು ನಂಬಿ ಸಂತೋಷಪಡುತ್ತೇವೆ.

ಟಿ. ನರಸೀಪುರ.—ಇಲ್ಲಿಗೆ ನಮ್ಮ ಮೊದಲನೇ ಕೌನ್ಸಲರಾದ ಮ॥ ಎಚ್. ವಿ. ನಂಜುಂಡಯ್ಯನವರು ದಯಮಾಡಿಸಿದ್ದರು. ಇವರ ಕೂಡ ನಮ್ಮ ಡೆಪ್ಯುಟಿ ಕಮಿಷನರಾದ ಮ॥ ಸುಬ್ರಹ್ಮಣ್ಯಯ್ಯರವರೂ, ಸಬ್ ಡಿವಿಜನ್ ಆಫೀಸರಾದ ಮ॥ ಎನ್. ಸುಬ್ಬರಾಯರೂ ದಯಮಾಡಿದ್ದರು. ನಮ್ಮ ಅಮಲ್ದಾರರಾದ ಮ॥ ಈಶ್ವರಂ ಮೊದಲಿಯಾರ್ರವರು, ಅಧಿಕಾರಿಗಳು, ಗ್ರಾಮದ ಮುಖ್ಯಸ್ಥರೂ ಸಹ ಬೆಸ್ತಗೇರಿ ಸಮೀಪದಲ್ಲಿ ಹಾಕಿಸಿದ್ದ ಹಸುರುವಾಣಿ ಚಪ್ಪರದಲ್ಲಿ ಅವರನ್ನು ಬಹಳ ಸಂಭ್ರಮದಿಂದ ಎದುರುಗೊಂಡು ಸಪತ್ನೀಕರಾದ ಇವರಿಗೂ, ಇತರ ಅಧಿಕಾರಿಗಳಿಗೂ ಹಾರ ಮತ್ತು ಫಲಗಳು ಒಪ್ಪಿಸಲ್ಪಟ್ಟವು. ಅನಂತರ ಕೌನ್ಸಲರವರು ತಮ್ಮ ಸಂದರ್ಶನಾರ್ಥವಾಗಿ ನೆರೆದಿದ್ದ ಜನಗಳಿಗೆಲ್ಲಾ ಮೃದುಮಧುರವಾದ ತಮ್ಮ ಸಂಭಾಷಣೆಯಿಂದ ಸಂತೋಷವನ್ನುಂಟುಮಾಡುತ್ತಾ, ಅಮಲ್ದಾರರು ಮತ್ತು ಅವರ ಅನುಚರರ ವಿನಯಕ್ಕೂ ರಾಜಭಕ್ತಿಗೂ ಮೆಚ್ಚಿ ತುಂಬಾ ಸಂತೋಷಿಸುತ್ತಾ, ಮೊದಲೇ ಅಲಂಕೃತವಾಗಿದ್ದ ಬಂಗಲೆಗೆ ತೆರಳಿದರು. ಅಲ್ಲಿ ಸ್ವಲ್ಪ ಕಾಲ ವಿಶ್ರಾಂತಿಯನ್ನು ಹೊಂದಿ, ಮಧ್ಯಾಹ್ನ 4 ಗಂಟೆಗೆ ತಾಲ್ಲೂಕ್ ಕಛೇರಿಗೆ ಬಂದು, ಅಲ್ಲಿನ ವಿಷಯಗಳನ್ನು ಬಹಳ ಶ್ರದ್ಧೆಯಿಂದ ಪರೀಕ್ಷಿಸಿ ಬಂಗಲೆಗೆ ದಯಮಾಡಿಸಿದರು. ಮರುದಿನ ಸೋಸಲೆ ಗ್ರಾಮಕ್ಕೆ ಹೋಗಿ ಶ್ರೀವ್ಯಾಸರಾಯರ ಮಠಕ್ಕೆ ದಯಮಾಡಿಸಿ ಅಲ್ಲಿ ಶ್ರೀಸ್ವಾಮಿಗಳ ಪೂರ್ಣಾನುಗ್ರಹಕ್ಕೆ ಪಾತ್ರರಾಗಿ ಗಗೇಶ್ವರಿ ಮಾರ್ಗವಾಗಿ ತಿರುಮಕೂಡಲಿಗೆ ಬಂದು, ಅಲ್ಲಿ ದೇವರ ಸೇವೆಯನ್ನು ನೆರವೇರಿಸಿ ಮಧ್ಯಾಹ್ನ 4½ ಗಂಟೆಗೆ ಹಿಂತಿರುಗಿ ಇಲ್ಲಿಗೆ ಬಂದರು. ಅನಂತರ ಕೊಂಚ ಕಾಲ ವಿಶ್ರಮಿಸಿಕೊಂಡಿದ್ದು ಹೊರಟು ಇಲ್ಲಿನ ಆಸ್ಪತ್ರೆ ಮತ್ತು ಗರಲ್ಸ್ ಸ್ಕೂಲುಗಳನ್ನು ಪರಾಂಬರಿಸಿ ಕೊನೆಗೆ ಇಲ್ಲಿನ ಎ. ವಿ. ಸ್ಕೂಲಿಗೆ ದಯಮಾಡಿ ಹೃದಯರಂಜಕವಾದ ಪ್ರಶ್ನೆಗಳಿಂದ ಹುಡುಗರನ್ನು ಪರೀಕ್ಷಿಸಿ, ಸ್ಕೂಲಿನ ಸ್ಥಿತಿಗೆ ಬಹಳ ಸಂತೋಷಿಸಿ ತೆರಳುವಾಗ್ಗೆ ಇಲ್ಲಿನ ಸಂಸ್ಕೃತ ಪಂಡಿತರು ಶ್ರೀಮಾನ್ ತಿರುನಾರಣಯ್ಯಂಗಾರ್ರ್ರು ಇಲ್ಲಿನ ಬಾಲಕರ ಪರವಾಗಿ ಕೌನ್ಸಲರವರಿಗೆ ಶ್ರೇಯಃಪ್ರಾರ್ಥನಾ ರೂಪವಾದ ಕೆಲವು ಸಂಸ್ಕೃತ ಪದ್ಯಗಳನ್ನು ರಚಿಸಿ ಅರಿಕೆಮಾಡಿದರು.

ಚಿತ್ರದುರ್ಗ ತಾ॥ ತುರುವನೂರು.—ಈ ಗ್ರಾಮಕ್ಕೆ ಯೂನಿಯನ್ ಆಗಿ ಸುಮಾರು 16 ವರ್ಷಗಳಾಯ್ತು. 800 900 ಮನೆಗಳಿರುವ ಈ ಗ್ರಾಮದಲ್ಲಿ ವರ್ಷಕ್ಕೆ ಮನೆಗಂದಾಯ 800 ರೂಪಾಯಿ ಹುಟ್ಟುವಳಿ ಇದ್ದಾಗ್ಯೂ ಯಾವುದೊಂದು ಅನುಕೂಲವನ್ನೂ ಸರ್ಕಾರದವರು ಕಲ್ಪಿಸಿಕೊಟ್ಟು ಇಲ್ಲ. ಗ್ರಾಮ ಪಾಕೀಜು ತಕ್ಕ ಮಟ್ಟಿಗೆ ಚೆನ್ನಾಗಿರುತ್ತದೆ. ಯೂನಿಯನ್ ಆದ ಲಾಗಾಯ್ತು ಕೇ ಅಥವಾ ಗೊಬ್ಬರವೆನ್ನುವುದು ಒಂದು ಹಿಡಿಯಷ್ಟಾದರೂ ಇಲ್ಲವೇ ಇಲ್ಲ. ಈ ಮೀಟಿಂಗ್ ಎಷ್ಟು ದಿವಸಕ್ಕೊಂದು ಸಾರಿ ನಡೆಯುತ್ತದೆ ಎನ್ನುವುದಾಗಲಿ, ಇದಕ್ಕೆ ಮೆಂಬರುಗಳು ಯಾರು ಎನ್ನುವುದಾಗಲಿ ಸಕಲರವರಾದ ನಮಗೆ ಗೊತ್ತೇ ಇಲ್ಲ.—ಈ ಗ್ರಾಮಕ್ಕೆ ನಲ್ಲಿ ಅವಶ್ಯಕವಾಗಿ ಬೇಕಾಗಿರುತ್ತದೆ. ಅರ್ಧ ಮೈಲಿ ದೂರದಲ್ಲಿರುವ ಭಾವಿಯಿಂದ ನೀರು ತಂದುಕೊಂಡು ಜೀವಿಸುವುದು ತುಂಬಾ ಕಷ್ಟ. ನೀರು ತರತಕ್ಕ ಭಾವಿಯ ರಸ್ತೆಯು ಕೆಟ್ಟು ಸಣ್ಣಸಣ್ಣ ಬೆಣಚುಕಲ್ಲುಗಳಿಂದ ತುಂಬಿರುತ್ತದೆ. ಇಷ್ಟು ದೊಡ್ಡ ಗ್ರಾಮಕ್ಕೆ ಮುನಿಸಿಪಲ್ ಲಾಂದ್ರಗಳು ಒಂದಾದರೂ ಇಲ್ಲದೇ ಇರುವುದು ತುಂಬಾ ಶೋಚನೀಯವಾಗಿರುತ್ತದೆ.—ತಾ. 21 ರಲ್ಲಿ ಇಲ್ಲಿಗೆ 6 ಮೈಲಿ ದೂರದಲ್ಲಿರುವ ಜಗಲೂರು ತಾಲ್ಲೂಕಿಗೆ ಸೇರಿದ ಮುಷ್ಟೂರು ಎಂಬ ಗ್ರಾಮದ ಹತ್ತಿರ ಇರುವ ಮಾರ್ಗದಲ್ಲಿ ನಮ್ಮ ಶ್ರೀಮನ್ ಮಹಾರಾಜರವರು ಪ್ರಯಾಣ ಬೆಳಸುವರೆಂದು ಭಾವಿಸಿ ನಮ್ಮ ಮಹಾರಾಜರವರನ್ನು ನೋಡಬೇಕೆಂಬ ಕುತೂಹಲದಿಂದ ಈ ಗ್ರಾಮದ ಜನಗಳು ಸುಮಾರು 40-50 ಗಾಡಿಗಳನ್ನು ಹೊಡೆದುಕೊಂಡು ಹೋಗಿದ್ದರು. ಸುತ್ತುಮುತ್ತಿನ ಗ್ರಾಮಗಳ ಜನರು ಎಲ್ಲರೂ ಸೇರಿ ಸುಮಾರು 4-5 ಸಾವಿರ ಜನಗಳ ವರೆಗೂ ಒಟ್ಟುಗೂಡಿ, ಸದರಿ ಮುಷ್ಟೂರು ಗ್ರಾಮದವರು ವಿಶೇಷ ಖರ್ಚಿನಿಂದ ಸದರಿ ರಸ್ತೆಯಲ್ಲಿ ಕಟ್ಟಿಸಿದ್ದ ತಳಿರುತೋರಣಗಳಿಂದಲೂ, ಕದಳೀ ವೃಕ್ಷಗಳಿಂದಲೂ, ಪುಷ್ಪಗಳ ಶೋಭಾಯಮಾನಗಳಿಂದಲೂ, ಧ್ವಜಪತಾಕೆಗಳಿಂದಲೂ ಒಪ್ಪುತ್ತಿರುವ ಮಂಟಪದ ಬಳಿ ಕಾದಿದ್ದರು. ಜಗಲೂರು ತಾಲ್ಲೂಕು ಅಮಲ್ದಾರರು ಇದೇ ಮಾರ್ಗವಾಗಿ ಮಹಾರಾಜರವರು ಬರಬಹುದೆಂಬ ಅಂದಾಜಿನಿಂದ ಅಪ್ಪಣೆಕೊಡಿಸಿದುದರಿಂದ ಪ್ರಜೆಗಳೆಲ್ಲರೂ ನೋಡಬೇಕೆಂಬ ಕುತೂಹಲದಿಂದ ಕಾದಿದ್ದರು. ಮತ್ತು ನಮ್ಮ ತುರುವನೂರು ಗರಲ್ಸ್ ಸ್ಕೂಲು ಬಾಲಕಿಯರು ಮಹಾರಾಜರವರಿಗೆ ಶ್ರೀಮುಖವನ್ನು ಬಯಸಲು ಹೋಗಿದ್ದರು. ಮುಷ್ಟೂರು ವಿ. ಇ. ಸ್ಕೂಲು ಬಾಲಕರೂ ಒಂದೇ ವಿಧವಾದ ಡ್ರೆಸ್ಸಿನಿಂದ ಮಂಟಪದ ಬಳಿ ಎದುರು ನೋಡುತ್ತಿದ್ದರು. ಆದರೇನು? ನಮ್ಮ ಆಸೆಯು ನಿರಾಸೆಯಾಯಿತು. ಮಹಾರಾಜರವರು ಈ ಮಾರ್ಗವಾಗಿ ಬರಲಿಲ್ಲ. ಎಲ್ಲಾ ಜನಗಳೂ ಆ ದಿನ ಸಾಯಂಕಾಲ 6 ಘಂಟೆಯ ವರೆಗೂ ಕಾದಿದ್ದು ಖಿನ್ನ ಮನಸ್ಕರಾಗಿ ತಮ್ಮ ತಮ್ಮ ಊರುಗಳಿಗೆ ಹೋಗಿ ಸೇರಿದರು.

ಇಂಡಿಯಾ ದೇಶದ ವೃತ್ತಾಂತಗಳು.

ಅಲಹಾಬಾದ್ (ಪ್ರಯಾಗ) ಯೂನಿವರ್ಸಿಟಿ (ಸರ್ವವಿದ್ಯಾ ನಿಲಯ)ಯವರು ವೇದವಿದ್ಯಾ ಪ್ರೋತ್ಸಾಹಕ್ಕಾಗಿ ಪಂಡಿತರನ್ನು ನೇಮಕಮಾಡಿರುತ್ತಾರೆ.

* * *

ಪಾಟಿಯಾಲಾ ಸಂಸ್ಥಾನದ ಯುವರಾಜರವರು ಲಿಸೋಲೀಲ್ ಎಂಬ ಒಂದು ಭಾರೀ ಜೂಜಿನ ಕುದುರೆಯನ್ನು 15,000 ರೂಪಾಯಿ ಕೊಟ್ಟು ಕೊಂಡು ತರಿಸಿದಾರೆ.

* * *

ಸಿಯಾಂ ಮಹಾರಾಜರವರು ಕಾಲವಾದದ್ದರಿಂದ ಅವರ ಸಮ್ಮಂಧಿರಾದ ಟ್ರಾಷಿ ವಾಂಗ್ಯಾಲ್ ಎಂಬವರಿಗೆ ರಾಜ್ಯಾಭಿಷೇಕಮಾಡಬೇಕೆಂದು ಇಂಡಿಯಾ ಗವರ್ನ್‌ಮೆಂಟಿನವರು ಸ್ಯಾಂಕ್ಷನ್ ಮಾಡಿದಾರೆ. ಅವರಿಗೆ ಈಗ 21 ವರುಷ ವಯಸ್ಸಾಗಿದೆ

* * *

ಕಳೆದ ಏಪ್ರಿಲ್ ತಾ. 1 ರಿಂದ ಡಿಸೆಂಬರ್ 12 ರ ವರೆಗೆ ಹಿಂದುಸ್ಥಾನದಲ್ಲಿ ಆಮದು ರಫ್ತು ತುಂಬಾ ಕಡಮೆಯಾದದ್ದರಿಂದ ಹಿಂದಿನ ವರುಷದ ರೈಲ್ವೆ ಹುಟ್ಟುವಳಿಗಿಂತ ಈ ಸಲದ ಉತ್ಪತ್ತಿಯು 1,95,26,682 ರೂಪಾಯಿ ಕಡಮೆಯಾಗಿರುತ್ತದೆ.

* * *

ಬಂಗಾಳಾ ಅಧಿಪತ್ಯದಲ್ಲಿ ಧಾರಣೆವಾಸಿಗಳು ಬಹಳ ಪ್ರಿಯವಾಗಿರುವುದನ್ನು ನೋಡಿ ಬಡನೌಕರನಾನೇರ ಮೇಲೆ ಕನಿಕರಪಟ್ಟು 12 ರೂಪಾಯಿನ ಒಳಗ ತಲಬುಳ್ಳ ನೌಕರರಿಗೆಲ್ಲಾ ತಲಾ ಒಂದೊಂದು ರೂಪಾಯಿ ಧಾನ್ಯದ ಅಲೋಯನ್ಸು ಕೊಡಬೇಕೆಂದು ಸ್ಯಾಂಕ್ಷನ್ ಮಾಡಿದಾರೆ

* * *

ಸಿಲೋನ್ (ಲಂಕಾ) ದ್ವೀಪಕ್ಕೆ ಸೇರಿದ ಟ್ರಿಂಕಾಮಲೆ ಎಂಬ ತೀರಪಟ್ಟಣದಿಂದ ಒಂದು ದೋಣಿಯ ತುಂಬಾ ಅಂದರೆ 40 ಜನಗಳು ಪ್ರಯಾಣ ಹೊರಟರು. ದಾರಿಯಲ್ಲಿ ಏನೋ ಅಚಾತುರ್ಯ ನಡೆದು ಆ ದೋಣಿಯು ಅನಾಮತ್ತು ಮುಳುಗಿ ಎಲ್ಲರೂ ಸಮುದ್ರದ ಪಾಲಾದರೆಂದು ತಿಳಿದು ಬರುತ್ತದೆ.

ಬ್ರಿಟಿಷರು ಯುದ್ಧದಲ್ಲಿ ಕೈಸೆರೆ ಸಿಕ್ಕಿದ ಕೆಲವು ಟರ್ಕಿ ಸೈನಿಕರನ್ನು ಪೂನಾ ಪಟ್ಟಣಕ್ಕೆ ತಂದು ಇಟ್ಟಿದಾರೆ. ಆ ಪೈಕಿ ಗಾಯಪಟ್ಟಿದ್ದ ಒಬ್ಬ ಟರ್ಕಿ ಹುದ್ದೇದಾರನು ಕಳೆದ ವಾರ ಕಾಲವಾದನು. ಸುಮಾರು 500 ಮುಸಲ್ಮಾನರು ಸೇರಿ ಆತನ ಶವವನ್ನು ಮೆರವಣಿಗೆಯಲ್ಲಿ ಸಾಗಿಸಿಕೊಂಡುಹೋಗಿ ದಫನ್ ಮಾಡಿದರು.

* * *

ಪೂನಾ ಪಟ್ಟಣದಲ್ಲಿ ದತ್ತಾತ್ರಿ ಸದಾಶಿವ ಎಂಬೊಬ್ಬ ದೊಡ್ಡ ವಕೀಲನೂ, ಲಾಯರ್ ಪರೀಕ್ಷೆಗೆ ಓದುತ್ತಿರುವ ದತ್ತಾತ್ರಿ ಮಹದಾದೆ ಓಕೆ ಎಂಬ ವಿದ್ಯಾರ್ಥಿಯೂ ಕೆಲವು ಕಾಲದಿಂದ ಕಳುವು ಮಾಲುಗಳನ್ನು ತೆಗೆದುಕೊಳ್ಳುತ್ತಿದ್ದರೆಂದು ಮೊಕದ್ದಮೆ ಆಗಿದೆ. ಕರ್ಕಿ ದಂಡಿನ ಮ್ಯಾಜಿಸ್ಟ್ರೇಟ್‌ರವರು ದರ್ಯಾಫ್ತು ಮಾಡುತ್ತಿದಾರೆ.

* * *

ಸಿಲೋನ್ ದ್ವೀಪಕ್ಕೆ ಸೇರಿದ ಕೊಲಂಬೊ ಪಟ್ಟಣದಲ್ಲಿ "ಮಾರ್ನಿಂಗ್ ಲೀಡರ್" ಎಂಬ ಪತ್ರಿಕೆಯಲ್ಲಿ ಪೊಲೀಸ್ ಮ್ಯಾಜಿಸ್ಟ್ರೇಟರ ವಿಷಯದಲ್ಲಿ ಅಪಮಾನಕರವಾದ ಬಾತ್ಮಿಯನ್ನು ಪ್ರಕಟಿಸಿದ್ದಕ್ಕಾಗಿ ಆ ಪತ್ರಿಕೆಯ ಎಡಿಟರಾದ ಮ॥ ಆರ್ಮಂಡ್ ಡಿಸೌಜಾ ಎಂಬಾತನಿಗೆ ಚೀಫ್ ಜಡ್ಜರವರು ಒಂದು ತಿಂಗಳ ಸಜಾ ಶಿಕ್ಷೆಯನ್ನು ವಿಧಿಸಿದರು.

* * *

ಇಂಡೋರ್ ಸಂಸ್ಥಾನದ ಪಶ್ಚಿಮಕ್ಕಿರುವ ಧಾರ್ ಎಂಬ ಸಣ್ಣ ಸಂಸ್ಥಾನದ ರಾಣಿಸಾಹೇಬರವರು ತಿಕ್ರಿ ಎಂಬ ಸಂಸ್ಥಾನದ ಕಾಡಿನಲ್ಲಿ ಹೋದ ತಾ. 14 ನೇ ಸೋಮವಾರ ಒಂದು ಭಾರೀ ಹುಲಿಯನ್ನು ಷಿಕಾರಿಮಾಡಿದರು. ಅದು 8½ ಅಡಿಯುಳ್ಳ ದೊಡ್ಡ ಮೃಗ. ಅದನ್ನು ರಾಣಿಯವರು ಮಚ್ಚಣಿಗೆ ಮೇಲಿನಿಂದ ಮೂರಾವರ್ತಿ ಗುಂಡು ಹೊಡೆದು ಕೊಂದುಹಾಕಿದಾರೆ.

* * *

ದಕ್ಷಿಣದೇಶಕ್ಕೆ ಸೇರಿದ ತಿನ್ನವೆಲ್ಲಿ ಮತ್ತು ಪಾಲಂಕೋಟೆಗಳಲ್ಲಿ ವಾಂತಿಭೇದಿ ಉಪದ್ರವು ಬಹಳ ಜೋರಾಗಿ ಹರಡಿಕೊಂಡಿದೆ. ಪಾಲಂಕೋಟೆಯಲ್ಲಿ ಕಳೆದ ವಾರ 60 ಮರಣಗಳೂ, ತಿನ್ನವೆಲ್ಲಿಯಲ್ಲಿ 25 ಮರಣಗಳೂ ಆಗಿರುತ್ತವೆ. ಆಸ್ಪತ್ರೆ ಡಾಕ್ಟರು ಕೂಡ ಈ ರೋಗದಲ್ಲಿ ಕಾಲವಾದರು. ಹೈಸ್ಕೂಲಿನಲ್ಲಿ ಆರು ವಿದ್ಯಾರ್ಥಿಗಳಿಗೆ ರೋಗ ತಗಲಿದ್ದರಿಂದ ಸ್ಕೂಲನ್ನು ಮುಚ್ಚಿಬಿಟ್ಟಿದಾರೆ.

* * *

ಮೆಕ್ಕಾ, ಮದೀನಾವಿಗೆ ಯಾತ್ರೆ ಹೋಗಿದ್ದ ಮಹಮದೀಯರ ಪೈಕಿ ಇದುವರೆಗೆ 10,864 ಜನರು ವಾಪಸು ಬಂದರು. ಇನ್ನೂ ಮೂರು ಜಹಜುಗಳ ತುಂಬಾ ಯಾತ್ರಿಕರು ವಾಪಸು ಬರುವುದರಲ್ಲಿದಾರೆ. ಇಂಡಿಯಾ ಗವರ್ನ್‌ಮೆಂಟಿನವರು ಇದಕ್ಕಾಗಿ ಕೆಲವು ಹಣವನ್ನು ಖರ್ಚುಮಾಡಿದರು. ಈಗ ಬೊಂಬಾಯಿ ಪಟ್ಟಣದ ಮುಸಾಫರ ಖಾನೆಗಳಲ್ಲೆಲ್ಲಾ ಈ ಯಾತ್ರಿಕರು ತುಂಬಿಕೊಂಡು ಜೀವನಕ್ಕೆ ತುಂಬಾ ಕಷ್ಟಪಡುತ್ತಿದಾರೆ.

* * *

ಕಲ್ಕತ್ತಾ ಪಟ್ಟಣದಲ್ಲಿ ಎಸ್ಪ್ಲನೇಡ್ ಪುರದ ಕೈನುಗಳ ಬಳಿ ಕೂಲಿಯವನು ಮಣ್ಣು ತೋಡುತ್ತಿದ್ದಾಗ ಕಳೆದ ಶನಿವಾರ ಅಲ್ಲಿ ಅವನಿಗೆ 800 ತೋಟಾಗಳು ಹೂತಿಟ್ಟಿದ್ದದ್ದು ಸಿಕ್ಕಿದವು. ಕೆಲವು ದಿನಗಳ ಹಿಂದೆ ಕಲ್ಕತ್ತೆಯ ಕೋಟೆಯಲ್ಲಿ ಕೆಲವು ತೋಟಾಗಳು ಕಳುವಾಗಿದ್ದವು. ಈಗ ಸಿಕ್ಕಿರುವುದು ಅದೇ ಎಂದು ಹೇಳುತ್ತಾರೆ. ಪೊಲೀಸ್ ಕಮಿಷನರವರು ಅದನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡು ಪತ್ತೆ ಹರದೂದು ನಡಿಸಿದ್ದರಲ್ಲಿ ಇಬ್ಬರು ಸಿಕ್ಕಿರುತ್ತಾರೆ.

* * *

ಬಂಗಾಳಾ ಅಧಿಪತ್ಯಕ್ಕೆ ಸೇರಿದ ಖುಲ್ನಾ ಪಟ್ಟಣದಲ್ಲಿ ಡೆಪ್ಯುಟಿ ಮ್ಯಾಜಿಸ್ಟ್ರೇಟನಾಗಿದ್ದ ಉಮಾಚರಣರಾಯ ಚೌಧ್ರಿ ಎಂಬಾತನು ಕೆಲವು ಮೊಕದ್ದಮೆಗಳಲ್ಲಿ ಲಂಚತಿಂದು ರಿಕಾರ್ಡುಗಳನ್ನು ಬದಲಾಯಿಸಿದನೆಂದೂ, ಇನ್ನು ಕೆಲವು ಕಕ್ಷಿಗಾರರಿಂದ ಲಂಚ ತೆಗೆದುಕೊಂಡನೆಂದೂ ಮೊಕದ್ದಮೆ ಬಂದು ದರ್ಯಾಫ್ತು ಆಯಿತು. ಕಮಿಷನ್ ಜಡ್ಜಿಗಳು ತಮ್ಮ ತೀರ್ಮಾನವನ್ನು ಗೌರ್ನಮೆಂಟಿಗೆ ಕಳುಹಿಸಿದಾಗ. ಸದ್ಯದಲ್ಲಿ ಆ ಮ್ಯಾಜಿಸ್ಟ್ರೇಟನನ್ನು ಸಸ್ಪೆಂಡ್ ಮಾಡಿರುವರು.

* * *

ಕಳೆದ ತಾ. 19 ಕ್ಕೆ ಅಬ್ಬೈರಾದ ಒಂದು ವಾರದಲ್ಲಿ ಹಿಂದುಸ್ಥಾನದೊಳಗೆಲ್ಲಾ 4,907 ಮಂದಿಗೆ ಪ್ಲೇಗ್ ತಗಲಿ, 3,885 ಜನರು ಕಾಲವಾದರು. ಬೇರೆ ಬೇರೆ ಅಧಿಪತ್ಯಗಳಲ್ಲಿ ಈ ಉಪದ್ರದಿಂದ ಕಾಲವಾದವರ ಸಂಖ್ಯೆ ಎಷ್ಟೆಂದರೆ—ಬೊಂಬಾಯಿ 332, ಮದರಾಸ್ 91, ಬೀಹಾರ್ 418, ಸಂಯುಕ್ತ ಅಧಿಪತ್ಯಗಳು 804, ಪಂಜಾಬ್ 1,746, ಬರ್ಮಾ 65, ಮಧ್ಯ ಪ್ರಾಂತ್ಯಗಳು 98, ಕೊಡಗು 2, ಮೈಸೂರು ಸಂಸ್ಥಾನ 232, ಹೈದರಾಬಾದು 43, ರಾಜಪುಟಾನಾ 1, ಕಾಶ್ಮೀರ 5.

* * *

ಅನಂತಪುರಕ್ಕೆ ಸೇರಿದ ನೆಯ್ಯಾಟಿಂಕರಾಯಿ ಎಂಬ ಗ್ರಾಮದಲ್ಲಿ ಸರ್ಕಾರದವರು ಕೊಟ್ಟ ಹುಕುಂ ಪ್ರಕಾರ ಹೊಲೆಯರು ತಮ್ಮ ಮಕ್ಕಳನ್ನು ಉತ್ತಮರ ಸ್ಕೂಲಿಗೆ ಸೇರಿಸುವುದಕ್ಕೆ ಹೋದಾಗ ಗಲಭೆಯುಂಟಾಯಿತು. ದಿವಾನ್‌ರವರು ಹೋಗಿದ್ದು ಪ್ರಜೆಗಳಿಗೆ ವಿವೇಕ ಹೇಳಿಬಂದರು. ಆ ಗಲಭೆಗೆ ಮುಖಂಡರಾಗಿದ್ದ ಇಬ್ಬರಲ್ಲಿ ಒಬ್ಬನಿಗೆ ಎರಡು ವರುಷವೂ, ಇನ್ನೊಬ್ಬನಿಗೆ ಎರಡು ತಿಂಗಳೂ ಸಜಾ ಶಿಕ್ಷೆವಿಧಿಸಲ್ಪಟ್ಟಿತು. ಉತ್ತಮರು ಸೇರಿ ಒಬ್ಬ ಹೊಲೆಯನ ಮನೆಯನ್ನು ಸುಟ್ಟುಹಾಕಿದ್ದೇ ಈ ಮೊಕದ್ದಮೆಗೆ ಕಾರಣವಾಯಿತು.

* * *

ದಕ್ಷಿಣ ದೇಶಕ್ಕೆ ಸೇರಿದ ತಿರುಚಿನಾಪಳ್ಳಿ ಬಳಿ ಮುತ್ತುಪೇಟೆಯಲ್ಲಿ ಕರೆನ್ಸಿ ನೋಟುಗಳನ್ನು ತಯಾರುಮಾಡುತ್ತಿದ್ದ ಇಬ್ಬರು ಪಾಲಘಾಟ ಬ್ರಾಹ್ಮಣರನ್ನು ಪೋಲೀಸಿನವರು ಹಿಡಿದಿದಾರೆ. ಇವರನ್ನು ಹಿಡಿಯಬೇಕೆಂದು ಅವರು ಕೆಲವು ಕಾಲದಿಂದ ನಾನಾ ಉಪಾಯಗಳನ್ನು ಮಾಡಿದರು. ಕಡೆಗೆ ಒಬ್ಬ ಪೋಲೀಸಿನವನು ವೇಷ ಮರಸಿಕೊಂಡು ಅವರಿದ್ದ ಮನೆಗೆ ಹೋಗಿ ಅವರ ಕೂಡ ಸ್ನೇಹಬೆಳಸಿ ಅವರು ತಯಾರುಮಾಡಿದ ನೋಟುಗಳನ್ನು ತಾನು ಮುರಿಸಿ ಹಣ ತರುತ್ತೇನೆಂದು ಅವರಿಗೆ ನಂಬಿಕೆ ಹುಟ್ಟಿಸಿ ಕರೆನ್ಸಿ ನೋಟು ತಯಾರುಮಾಡುತ್ತಿದ್ದ ಪದಾರ್ಥಗಳನ್ನೆಲ್ಲಾ ಕಂಡುಕೊಂಡು ಕಡೆಗೆ ಅವುಗಳ ಸಮೇತ ಅವರಿಬ್ಬರೂ ದಸ್ತಗಿರಿಯಾಗುವಂತೆ ಮಾಡಿದನು. ಈ ಅಪರಾಧಿಗಳಲ್ಲಿ ಒಬ್ಬನು ಬಿ.ಎ. ಪ್ಯಾಸ್ ಮಾಡಿದವನೆಂದು ಹೇಳುತ್ತಾರೆ.

* * *

ಪೊನ್ನಾಮಲಿಯಲ್ಲಿ ಕಳೆದ ವಾರ ಹಿಂದು ಮುಸಲ್ಮಾನರುಗಳಿಗೆ ಕಲಹವಾಯಿತು. ಸುಮಾರು 2,000 ಮಹಮದೀಯರು ಸೇರಿ ಪಟ್ಟು ಎಂಬ ಗ್ರಾಮಕ್ಕೆ ನುಗ್ಗಿ ಬೆಂಕಿಹಾಕಿ ಹಿಂದುಗಳ 40 ಮನೆಗಳನ್ನು ಸುಟ್ಟು ಹಾಳುಮಾಡಿದರು. ಇದಲ್ಲದೆ 4000 ರೂಪಾಯಿನ ಹುಲ್ಲು ಮೆದೆಗಳಿಗೆ ಬೆಂಕಿಹಾಕಿದರು. ಹಿಂದುಗಳು ರೋಷಗೊಂಡು ದೊಣ್ಣೆ ಕಲ್ಲುಗಳ ಸಮೇತ ನುಗ್ಗಿ ಮಹಮದೀಯರನ್ನು ಹೊಡೆದು ಕೆಡಿದಾಡಿದರು. ಒಬ್ಬ ಹಿಂದುವು ಗುಂಡುಹೊಡೆದದ್ದರಿಂದ ಒಬ್ಬ ಮಹಮದಿಯನ ಕಾಲು ಗಾಯವಾಯಿತು. ಒಬ್ಬ ಪೋಲೀಸಿನವನಿಗೆ ಕಲ್ಲೇಟು ಬಿದ್ದು ಗಾಯಗಳಾಗಿವೆ. ಅಷ್ಟುಹೊತ್ತಿಗೆ ಪೋಲೀಸಿನವರು ಹೋಗಿ ಗುಂಡುಗಳನ್ನು ಎತ್ತಿ ತೋರಿ ದೊಂಬಿಯನ್ನು ಚದರಿಸಿದರು. ಈಗ 50 ಮಂದಿ ರಿಜರ್ವ್ ಪೋಲೀಸಿನವರು ಹೋಗಿ ನೆಮ್ಮದಿಯನ್ನು ಕಾಪಾಡುತ್ತಿದಾರೆಂದೂ, ಸೂಪರೆಂಟರು ತನಿಖೆಮಾಡುತ್ತಿದಾರೆಂದೂ ತಿಳಿದುಬಂದಿದೆ.

ಫಿರೋಜ್‌ಪುರ ಡಿಸ್ಟ್ರಿಕ್ಟಿಗೆ ಸೇರಿದ ಮೈರೋಕೆ ಎಂಬ ಗ್ರಾಮದಲ್ಲಿ ಸುಖ ರಾಜನೆಂಬ ಸಾಹುಕಾರನ ಮನೆಗೆ ಕಳೆದ ಗುರುವಾರ ರಾತ್ರಿ ಆಯುಧಪಾಣಿಗಳಾದ ಕಳ್ಳರು ನುಗ್ಗಿ, ಸಾಹುಕಾರನ ಮಗಳನ್ನು ಕೊಂದು, ಗಂಡಸರನ್ನು ಗಾಯ ಮಾಡಿ, ಮನೆಯಲ್ಲಿದ್ದ ನಗನಾಣ್ಯಗಳನ್ನು ದೋಚಿಕೊಂಡು ಹೋದರು.

ಕಳೆದ ಭಾನುವಾರ ಸಿರಿಯಾ ಎಂಬ ಜಹಜಿನಲ್ಲಿ 320 ಮಂದಿ ಗಾಯ ಪಟ್ಟ ಹಿಂದುಸ್ಥಾನದ ಸೈನಿಕರು ಬೊಂಬಾಯಿಗೆ ಬಂದರು. ತುಂಬಾ ಗಾಯವಾಗಿದ್ದವರನ್ನು ಚಿಕಿತ್ಸೆಗೋಸ್ಕರ ಬೊಂಬಾಯಿನ ಆಸ್ಪತ್ರೆಗಳಲ್ಲಿಟ್ಟುಕೊಂಡು, ಇತರರನ್ನು ಉತ್ತರದೇಶಕ್ಕೆ ಅವರವರ ಊರುಗಳಿಗೆ ಕಳುಹಿಸಿರುತ್ತಾರೆ.

ಧಾಟಿಯಾ ಸಂಸ್ಥಾನದ ಮಹಾರಾಜರವರು ತಾವೂ, ತಮ್ಮ ಸರದಾರರುಗಳೂ, ತಮ್ಮ ಸಂಬಳಗಾರರೂ, ತಮ್ಮ ಸಂಸ್ಥಾನದ ಪ್ರಜೆಗಳೂ ಸೇರಿ ಯುದ್ಧದ ಖರ್ಚಿಗಾಗಿ ವರುಷ ಒಂದಕ್ಕೆ 25,000 ರೂಪಾಯಿನಂತೆ ಕೊಡುತ್ತಾ ಬರುವುದಾಗಿ ತಿಳಿಸಿದರು. ವೈಸ್ ರಾಯರವರು ವಂದನಾ ಪೂರ್ವಕವಾಗಿ ಅದನ್ನು ಅಂಗೀಕರಿಸಿರುತ್ತಾರೆ.

ಬೊಂಬಾಯಿ ಪಟ್ಟಣದಲ್ಲಿ ಗುಲಾಂ ಹೈದರ್ ಎಂಬೊಬ್ಬ ಹಕೀಮನು ಕಣ್ಣಿಗೆ ಔಷಧ ಹಾಕುತ್ತೇನೆಂದು ನಂಬಿಸಿ ಒಬ್ಬ ಮುಸಲ್ಮಾನ ಹೆಂಗಸಿನ ಕಣ್ಣನ್ನು ಒರಸುವ ಉಪಕರಣಗಳನ್ನು ಉಪಯೋಗಿಸಿ ಚೂರಿಯಲ್ಲಿ ಕೊಯಿದು ಕಣ್ಣನ್ನೇ ಹಾಳುಮಾಡಿಬಿಟ್ಟನು. ಅವನು ಆ ಹೆಂಗಸಿನಿಂದ 30 ರೂಪಾಯಿ ಫೀಜು ವಸೂಲ್ಮಾಡಿಕೊಂಡನು. ಇದು ಸರ್ಕಾರಕ್ಕೆ ತಿಳಿದು ಆ ಹಕೀಮನ ಮೇಲೆ ಮೊಕದ್ದಮೆ ಮಾಡಿದರು. ಮಿ॥ ಸೆಟಲ್ವಾಡ್ ಎಂಬ ಮ್ಯಾಜಿಸ್ಟ್ರೇಟರು ಆ ಹಕೀಮನಿಗೆ 2 ತಿಂಗಳ ಕಠಿಣಶಿಕ್ಷೆಯನ್ನೂ 150 ರೂಪಾಯಿ ಜುಲ್ಮಾನೆಯನ್ನೂ ವಿಧಿಸಿರುತ್ತಾರೆ.

ಹಿಂದುಸ್ಥಾನದ ರಾಷ್ಟ್ರಕೂಟವು (ನ್ಯಾಷನಲ್ ಕಾಂಗ್ರೆಸ್) ಮೊನ್ನೆ ಸೋಮವಾರ ಮದರಾಸ್ ಪಟ್ಟಣದಲ್ಲಿ ಪ್ರಾರಂಭವಾಗಿ ನೆನ್ನೆಗೆ ಮುಕ್ತಾಯವಾಯಿತು. ಮದರಾಸ್ ಗವರ್ನರವರು ಈ ಸಭೆಗೆ ದಯಮಾಡಿದ್ದು, ಪ್ರಜಾಪ್ರತಿನಿಧಿಗಳಿಗೆ ಒಂದು ದಿನ ತಮ್ಮ ಬಂಗಲೆಯಲ್ಲಿ ಟೀಪಾರ್ಟಿಮಾಡಿ ಸಂತೋಷಕೂಟವನ್ನು ನಡಿಸಿದರು. ಗವರ್ನರಂಥಾ ಅಧಿಪತಿಗಳು ಈ ಪ್ರಜೆಗಳ ರಾಷ್ಟ್ರಕೂಟಕ್ಕೆ ದಯಮಾಡಿದ್ದು ಹಿಂದುಸ್ಥಾನದ ಚರಿತ್ರೆಯಲ್ಲಿ ಇದೇ ಮೊದಲು. ಈ ವಿಷಯವು ದೇಶೀಯ ದೊಡ್ಡಮನುಷ್ಯರಲ್ಲೆಲ್ಲಾ ವಿಶೇಷವಾದ ಸಂತೋಷವನ್ನುಂಟುಮಾಡಿರುತ್ತದೆ.

ಬೊಂಬಾಯಿ ಅಧಿಪತ್ಯಕ್ಕೆ ಸೇರಿದ ವಿಂಗೋರ್ಲಾ ಮಾಮಲೇದಾರರು ತನಗೆ ಹೊಟ್ಟೆಕಿಚ್ಚಿನಿಂದ ಅನ್ಯಾಯಮಾಡಿದರೆಂದು ಮುಂತಾಗಿ ಆನಂದರಾಯನೆಂಬುವನು ಕಲೆಕ್ಟರಿಗೆ ಅರ್ಜಿಗಳನ್ನು ಕೊಟ್ಟನು. ಹಾಗೆ ಬರೆದದ್ದು ಅವಮಾನಕರವೆಂದು ಮಾಮಲೇದಾರರು ಆನಂದರಾಯನ ಮೇಲೆ ಫಿರ್ಯಾದು ತಂದರು. ಸಬ್‌ಡಿವಿಷನಲ್ ಮ್ಯಾಜಿಸ್ಟ್ರೇಟರು ವಿಚಾರಣೆಮಾಡಿ ಆನಂದರಾಯನಿಗೆ ಮೂರು ತಿಂಗಳ ಸಾದಾ ಶಿಕ್ಷೆಯನ್ನೂ 200 ರೂಪಾಯಿ ಜುಲ್ಮಾನೆಯನ್ನೂ ವಿಧಿಸಿ, ಅದರಲ್ಲಿ 75 ರೂಪಾಯಿಯನ್ನು ಮಾಮಲೇದಾರರಿಗೆ ಡಾಮಿಜು ಕೊಡಿಸಿದರು. ಆನಂದರಾಯನು ಅಪೀಲ್ ಮಾಡಿಕೊಂಡಾಗ ಆ॥ ಕಲೆಕ್ಟರು ಶಿಕ್ಷೆಯನ್ನು ರದ್ದುಮಾಡಿ ಜುಲ್ಮಾನೆಯನ್ನು ಖಾಯಂ ಮಾಡಿದರು. ಇದು ಹೈಕೋರ್ಟಿನಲ್ಲಿ ಅಪೀಲಾಯಿತು. ಆನಂದರಾಯನು ಆ ರೀತಿ ಅರ್ಜಿ ಬರೆದದ್ದು ಮಾಮಲೇದಾರರಿಗೆ ಅವಮಾನಕರವಲ್ಲವೆಂದೂ, ಇದಕ್ಕೆ ಕೆಳಕೋರ್ಟಿನವರು ಜುಲ್ಮಾನೆಯನ್ನು ವಿಧಿಸಿದ್ದೂ ಮಾಮಲೇದಾರರಿಗೆ ಡಾಮಿಜು ಕೊಡಿಸಿದ್ದೂ ನ್ಯಾಯವಲ್ಲವೆಂದೂ, ಕೆಳಕೋರ್ಟುಗಳ ಶಿಕ್ಷೆಯನ್ನೆಲ್ಲಾ ರದ್ದುಮಾಡಿದೆ ಎಂದೂ, ಮಾಮಲೇದಾರರಿಗೆ ಅವನಿಂದ ಕೊಡಿಸಿರುವ ಡಾಮಿಜು ಹಣವನ್ನು ಆನಂದರಾಯನಿಗೆ ವಾಪಸು ಕೊಡಿಸಬೇಕೆಂದೂ ಬೊಂಬಾಯಿ ಹೈಕೋರ್ಟಿನಲ್ಲಿ ತೀರ್ಮಾನವಾಗಿದೆ.

ವಿದೇಶ ವರ್ತಮಾನಗಳು.

ಮಾಂಗೋಲಿಯಾ ರಾಜಧಾನಿಯಾದ ಉರ್ಗಾ ನಗರದಲ್ಲಿ ಖುತುಖ್ತು ಎಂಬ ರಾಜನ ಅರಮನೆಗೆ ಬೆಂಕಿಬಿದ್ದು ಖಜಾನೆಯು ಸಮೇತ ಅರಮನೆಯೆಲ್ಲಾ ಉರಿದುಹೋಯಿತು. ಲಕ್ಷಾಂತರ ದ್ರವ್ಯದ ಆಸ್ತಿ ನಷ್ಟವಾಗಿರುತ್ತದೆ.

ರಷ್ಯಾ ಸೈನ್ಯಗಳಲ್ಲಿ 1,50,000 ಮಹಮದೀಯರು ಸಿಪಾಯಿಗಳಾಗಿರುವರು. ಕಾಕೇಷಿಯಾ ಮತ್ತು ಮಧ್ಯ ಏಷ್ಯಾ ರೆಜಿಮೆಂಟುಗಳಿಗೆ ಅಲ್ಲಿನ ಮಹಮದೀಯರು ವಿಶೇಷವಾಗಿ ಬಂದು ಸೇರಿಕೊಂಡು ಟರ್ಕಿಯವರ ಮೇಲೆ ಯುದ್ಧಕ್ಕೆ ಹೊರಡುವುದರಲ್ಲಿ ಉತ್ಸಾಹ ಪಡುತ್ತಿರುವರು.

ಜರ್ಮನಿ ರಾಜ್ಯದಲ್ಲಿ ಕ್ರುಪ್ ಕಂಪನಿಯವರು 50,000 ಕೂಲಿಗಳನ್ನಿಟ್ಟು ಯುದ್ಧದ ಸಾಮಗ್ರಿಗಳನ್ನು ತಯಾರ್ಮಾಡಿಸುತ್ತಿದ್ದಾರೆ. ಈ ಕಂಪನಿಯ ಮೂಲಧನವು ಇದುವರೆಗೆ 90 ಲಕ್ಷ ಪೌಂಡಾಗಿತ್ತು. ಈಗ ಅದನ್ನು 125 ಲಕ್ಷ ಪೌಂಡಿಗೆ ಹೆಚ್ಚಿಸಿ ಷೇರುಗಳನ್ನು ಬಿಕರಿ ಮಾಡಿ ಬರುವ ಹಣದಿಂದ ಆ ಕಾರ್ಖಾನೆಯನ್ನು ಇನ್ನೂ ಬಡಾವಣೆ ಮಾಡುವವರಾಗಿರುವಂತೆ ಪ್ರಕಟವಾಗಿದೆ.

ಆರ್ನೆಸ್ಟೊ, ಆಲಕ್ಸಾಂಡ್ರೊ ಫೆಬ್ರಿ ಎಂಬ ಇಟಲಿಯ ಕೋಟ್ಯಾಧೀಶ್ವರರಿಬ್ಬರು ಅಮೇರಿಕದಲ್ಲಿದ್ದುಕೊಂಡು, ಬ್ರಿಟಿಷ್ ಯುದ್ಧದ ಹಡಗುಗಳ ಸಂಚಾರದ ವಿಷಯದಲ್ಲಿ ಜರ್ಮನಿಯವರಿಗೆ ಏನೋ ಸಮಾಚಾರಗಳನ್ನು ತಮ್ಮ ಸ್ವಂತ ತಂತೀವರ್ತಮಾನ ಸಾಧನಗಳ ಮೂಲಕ ತಿಳಿಸಿರುತ್ತಾರೆಂದು ಬ್ರಿಟಿಷ್ ಸರ್ಕಾರದವರು ಆಕ್ಷೇಪಣೆ ಮಾಡಿದ ಹಾಗೂ, ಅಮೇರಿಕದವರು ಆ ಕೋಟ್ಯಾಧೀಶ್ವರರನ್ನು ದಸ್ತಗಿರಿಮಾಡಿರುವ ಹಾಗೂ ಒಂದು ತಂತೀವರ್ತಮಾನ ಹೇಳುತ್ತದೆ.

ಮ್ಯಾಗಿಲನ್ ಜಲಮಾರ್ಗದಲ್ಲಿ ಒಟ್ರೇಂಗಾ ಎಂಬ ಒಂದು ಫ್ರೆಂಚ್ ಜಹಜನ್ನು ಹಿಡಿದು ಅದರಲ್ಲಿದ್ದ 300 ಫ್ರೆಂಚ್ ಸಿಪಾಯಿಗಳ ಸಮೇತ ಮುಳುಗಿಸಬೇಕೆಂದು ಜರ್ಮನಿಯ ಜಹಜು ಅಟ್ಟಿಕೊಂಡು ಹೋಯಿತು. ಆ ಜಹಜು ಶತ್ರುವಿಗೆ ಸಿಕ್ಕದೆ ತಪ್ಪಿಸಿಕೊಂಡು ಬಂದದ್ದರಿಂದ ಫ್ರೆಂಚರ ಮಂತ್ರಿಯವರು ಗವರ್ನ್‌ಮೆಂಟಿನ ಪರವಾಗಿ ಆ ಜಹಜಿನ ಅಧಿಪತಿಗೆ ಒಂದು ಭಂಗಾರದ ಪದಕವನ್ನು ಬಹುಮಾನವಾಗಿ ಕಳುಹಿಸಿ ಆತನ ಸಾಮರ್ಥ್ಯವನ್ನು ಹೊಗಳಿದ್ದಾರೆ.

ಟರ್ಕಿ ಗವರ್ನ್‌ಮೆಂಟಿನವರು ಏಳೂವರೆ ಕೋಟಿ ರೂಪಾಯಿನ ಕರೆನ್ಸಿ ನೋಟುಗಳನ್ನು ತಯಾರ್ಮಾಡಿಸಿ ಪ್ರಜೆಗಳಿಗೆ ಕೊಟ್ಟು ಹಣವನ್ನು ಕೊಡಿಸುವವರಾಗಿದ್ದಾರೆ. ಪದ್ಧತಿಯಂತೆ ಕರೆನ್ಸಿ ನೋಟುಗಳ ಬೆಲೆಗೆ ತಕ್ಕಷ್ಟು ದ್ರವ್ಯವನ್ನು ಖಜಾನೆಯಲ್ಲಿ ಇಟ್ಟುಕೊಂಡಿಲ್ಲ. ಇದಲ್ಲದೆ ಅವರು ಹಣವನ್ನು ಕೊಡಿಸುವುದಕ್ಕೋಸ್ಕರ ಜರ್ಮನಿಯ ಕರೆನ್ಸಿ ನೋಟುಗಳನ್ನು ತಮ್ಮ ಪ್ರಜೆಗಳಿಗೆ ಕೊಡುತ್ತಿದ್ದಾರೆ. ಸೈನ್ಯಕ್ಕೆ ಆಹಾರ ದಿನಸುಗಳನ್ನು ಒದಗಿಸುವುದಕ್ಕೆ ಅಂಗಡಿ ಮುಂಗಟ್ಟುಗಳನ್ನೆಲ್ಲಾ ಬರಿದು ಮಾಡುತ್ತಿದ್ದಾರೆಂದು ಒಂದು ತಂತೀ ವರ್ತಮಾನ ಹೇಳುವುದು.

ಕೋಚರ್, ಫೋನಿಯಾ ಎಂಬ ವೈದ್ಯರಿಬ್ಬರು ಒಂದು ತರಹಾ ಹಾಲನ್ನು ಕಂಡುಹಿಡಿದು ತಯಾರ್ಮಾಡಿರುತ್ತಾರೆ. ಅದಕ್ಕೆ ಕೊಯಗುಲನ್ ಎಂದು ಹೆಸರು. ಅದನ್ನು ರಕ್ತ ಸುರಿಯುವ ಭಾಗಕ್ಕೆ ಹಚ್ಚಿದ ಕೂಡಲೇ ರಕ್ತ ಹರಿಯುವುದು ನಿಂತುಹೋಗುವುದು. ಈ ಹಾಲಿನ ಪುಡಿಯನ್ನು ನೀರಿನಲ್ಲಿ ಕಲಸಿ ಗಾಯದ ಮೇಲೆ ಸವರಬೇಕೆಂದು ಹೇಳುತ್ತಾರೆ. ಇದರಿಂದ ಡಾಕ್ಟರು ಚಿಕಿತ್ಸೆ ಮಾಡುವುದಕ್ಕೂ, ಗಾಯಪಟ್ಟವರು ಬೇಗನೆ ಗುಣಹೊಂದುವುದಕ್ಕೂ ತುಂಬಾ ಸಹಾಯವಾಗುವುದು. ಇದನ್ನು ಕಂಡುಹಿಡಿದ ಪಂಡಿತರು ಸ್ವಿಟ್ಸರ್ಲೇಂಡಿನವರು. ಇವರಿಗೆ ಎರಡು ವರುಷಗಳ ಹಿಂದೆ ಶಸ್ತ್ರವೈದ್ಯ ಚಿಕಿತ್ಸೆಯಲ್ಲಿ ಬಹು ಮೇಲಾದ ಬಹುಮಾನ ಕೊಡಲ್ಪಟ್ಟಿದೆ.

ಇಂಪೀರಿಯಲ್ ಇಂಡಿಯಾ ರಿಲೀಫ್ ಫಂಡು.

“ವೃತ್ತಾಂತ ಪತ್ರಿಕೆ” ಆಫೀಸ್ ಚಂದಾ ಪಟ್ಟಿ.

ಹಿಂದೆ ವಸೂಲಾಗಿರುವ ಚಂದಾ	ರೂ 216-2-7
ರೆವ್॥ ಜ. ವೆಸ್ಲಿಯವರು, ಶಿವಮೊಗ್ಗೆ	,, 3-0-0
ಜುಮ್ಲಾ ರೂಪಾಯಿ	219-2-7

ಸಚಿತ್ರ ಯುದ್ಧ ಚರಿತ್ರೆ.

ಈಗ ಯೂರೋಪಿನಲ್ಲಿ ನಡೆಯುತ್ತಿರುವ ಮಹಾ ಭಯಂಕರವಾದ ಯುದ್ಧದ ಕಾರಣವೂ, ಅದರ ವಿವರಣೆಯೂ ಚಿತ್ರ ಸಹಿತ ಅಚ್ಚಾಗಿರುವುದು.
ಕ್ರಯ 4 ಆಣೆ ; ವಿ. ಪಿ. ಮೂಲಕ 6 ಆಣೆ ಮಾತ್ರ.

ನಮ್ಮ ವಿಳಾಸ— ಪಿ. ನರಸಿಂಗರಾವ್,
[300-1] ಎಡಿಟರ್, ಲಾ ಗೆಜೆಟ್, ಬೆಂಗಳೂರು.

50 ರೂಪಾಯಿ ಬಹುಮಾನ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನಂದರೆ—ಈ ಕೆಳಗೆ ರುಜು ಮಾಡುವವರು ಇದೇ ಡಿಸೆಂಬರು 1 ನೇ ತಾರೀಖಿನಲ್ಲಿ ಮೈಸೂರು ನಗೇಶ್ವರಿ ಗಾಡಿ ಬಿಡುವ ಚೌಕದಿಂದ ದೇವಾಂಬಾ ಅಗ್ರಹಾರಕ್ಕೆ ಬರುವ ಕಾಲದಲ್ಲಿ ತಮ್ಮಲ್ಲಿದ್ದ ಕಾಗದಪತ್ರಗಳು, ನಿರೂಪಗಳು ಮತ್ತು ಸನ್ನದುಗಳು ಕಟ್ಟಿದ್ದ ಒಂದು ದಪ್ತರದ ಗಂಟನ್ನು ಕಳೆದುಕೊಂಡದ್ದರಿಂದ ಅದನ್ನು ಪತ್ತೆಮಾಡಿಯಾಗಲಿ ಅಥವಾ ತೆಗೆದು ಮಡಗಿಯಾಗಲಿ ಇದ್ದಲ್ಲಿ ಅದನ್ನು ಈ ಕೆಳಗಿನ ವಿಳಾಸದಾರರವಶಕ್ಕೆ ತಂದುಕೊಟ್ಟರೆ ಅವರಿಗೆ 50 ರೂಪಾಯಿ ಬಹುಮಾನ ಕೊಡಲ್ಪಡುತ್ತೆ.

ವಿಳಾಸ.—ಟಿ ಆರ್. ಶ್ರೀನಿವಾಸರಂಗಾಚಾರ್, ಕಸಬಾ ಟಿ. ನರಸೀಪುರ,
[294-1] ಅಥವಾ ಮ್ಯಾನೇಜರ್, “ವೃತ್ತಾಂತ ಪತ್ರಿಕೆ,” ಮೈಸೂರು.

ಮೈಸೂರು ಸಿಟಿ ಮ್ಯುನಿಸಿಪಾಲಿಟಿ
ನೋಟೀಸ್.

ಷಹರಿನಲ್ಲಿ ಜನಗಳ ಉಪಯೋಗಕ್ಕಾಗಿ ಕೆಲವು ನಮೂನಾ ಬಂಗ್ಲೆ ಅಥವಾ ವಿಲ್ಲಾ (ಚಿಕ್ಕ ಚಿಕ್ಕ ಬಂಗ್ಲೆ) ಗಳನ್ನು ಕಟ್ಟಿಸಬೇಕೆಂದು ಮ್ಯುನಿಸಿಪಲ್ ಕೌನ್ಸಿಲ್ಲರವರು ಇಷ್ಟಪಡುತ್ತಾರಾಗಿ ಈ ವಿಷಯದಲ್ಲಿ ಕಟ್ಟಡದ ವ್ಯಾಪಾರಸ್ಥರು ಮತ್ತು ವಿವಾಸಿಗಳು ಸಹ ತಮಗೆ ಬೇಕಾದ ನಿಯಾಮತಿಗಳ ನಮೂದಿನಿಂದ ದರಖಾಸ್ತುಗಳನ್ನು ಕೊಡಬಹುದು. ಇದರಲ್ಲಿ ಇಷ್ಟಾ ಪಟ್ಟವರೆಲ್ಲಾ ಜನರೂ 1915 ನೇ ಜನವರಿ 15 ನೇ ತಾರೀಖಿನೊಳಗೆ ಈ ಕೆಳಗೆ ನಮೂದಿಸುವ ಎಲ್ಲಾ ವಿಷಯಗಳಿಗೂ ತಪಸೀಲಾಗಿ ತಿಳಿಸಬೇಕು. ಇತರ ತಪಸೀಲುಗಳು ತಿಳಿಯಬೇಕಾಗಿದ್ದಲ್ಲಿ ಮ್ಯುನಿಸಿಪಲ್ ಆಫೀಸಿನಲ್ಲಿ ಪಡೆಯಬಹುದು.

ಅರ್ಜಿಯಲ್ಲಿ ಕಾಣಿಸಬೇಕಾದ ವಿವರಗಳು.

(1) ಮಾಡಲ್ ಬಂಗ್ಲಾ ಅಥವಾ ವಿಲ್ಲಾಗಳನ್ನು ಕಟ್ಟಲು ಇಚ್ಛಿಸುವವರ ಹೆಸರು.
(2) ಕಟ್ಟಲು ಇಷ್ಟಪಡುವ ಸ್ಥಳ.
(3) ಪದರಿ ಅಟ್ಟದ ಅಂದಾಜು ನಕಲುಗಳು.
(4) ಬೇಕಾಗಿರುವ ನಿಯಾಮತಿ ವಗೈರೆ.

ಮೈಸೂರು,] ಟಿ. ಲಕ್ಷ್ಮಣರಾವ್,
ತಾ. 28-12-1914.] [301-1] ಪ್ರೆಸಿಡೆಂಟ್.

“Benefit yourself and Benefit others.”

HINDUSTHAN CO-OPERATIVE INSURANCE SOCIETY, LIMITED.

HINDUSTHAN BUILDINGS, CALCUTTA.

Authorised Capital One Crore (1,00,00,000).
Subscribed Capital Rs. 87,50,000.
Paid-up Capital ... Rs. 12,50,000.
Policies effected over 2,30,00,000.

Some of the special features of the Hindusthan:

(1) It offers all that is best, latest, cheapest and most equitable in Life Assurance.

(2) It grants Loans on properties repayable on easy terms to Policy-holders at a moderate interest to the extent of the amount insured after the Policy has been in force for two full years.

(3) House and Land purchase system a speciality.

(4) It is governed by Maharajas and Zemindars.

(5) Funds invested in India on landed properties and with Policy-holders on unimpeachable security.

Wanted:—

Active and energetic Agents to represent the Society throughout the State on liberal terms of Commission and monthly Office Allowance.

For further particulars and Prospectus apply to

Messrs. **VENKATACHALAM & SONS,**
[292-1] *Chief Agents, 166, Doddapetta, Mysore.*

Notice dated 26th December, 1914.

Four bullock coaches of the Government Stables, the property of the Mysore Government, will be sold by public auction at the Government House, Mysore, on 9th January 1915, at 8 A.M.

Terms, cash.

(Sd.) **A. A. JONES, Lt.-Col.,**
[299-1] *Military Secretary.*

NOTICE

MILITARY

Office of the Military Secretary to H. H. the Maharaja of Mysore

Notification Dated 26th December, 1914

10 ponies and 4 bullocks of the Mysore Imperial Service Transport Corps will be sold by public auction at the Queen's Statue, Cubbon Park, Bangalore, at 8-30 A.M., on Saturday, the 9th January, 1915.

Terms. Cash

(Sd.) **A. A. JONES, Lt.-Col.,**
[298-1] *Military Secretary.*

ಹಿಂದಿ ವಿಜಯಾ.

ಬೇಸಿಗೆ ಕಾಲದಲ್ಲಿ ಬೇಳಿಗೆ ಸರಿಯಾದ ಮದ್ದು.

ಬೇಳಿನ ಹೊದತಕ್ಕೆ “ಸ್ಪ್ಯಾಷಿರಯಾನಿಯೊ” ವಿನಹಾ ನಿರಪಾಯಕರವಾದ ಮತ್ತು ಸೇವನೆಗೆ ಅರ್ಹವಾದ ಔಷಧವು ಮತ್ತೊಂದಿಲ್ಲ. ಪುನಾ ಪ್ರದರ್ಶನದಲ್ಲಿ ಇದು ಬಹುಮಾನ ಸರ್ಟಿಫಿಕೇಟುಗಳನ್ನು ಪಡೆದಿರುತ್ತೆ.

“ನಿಮ್ಮ ಬೇಳಿನ ಮದ್ದಿನಿಂದ ತಪ್ಪದೆ ಗುಣ ಬಂದಿದೆ” ಯೆಂದು ಭೀಮರಾವ ವಕೀಲ ಬಳ್ಳಾರಿ ಇವರು ಪತ್ರದ್ವಾರಾ ತಿಳಿಸಿರುತ್ತಾರೆ. ಬಾಟ್ಲಿ ಒಂದಕ್ಕೆ ಕ್ರಯ ರೂ ೦-೮-೦ ನಾಲ್ಕು ಬಾಟ್ಲಿವರಿಗೆ ಪೋಸ್ಟ್ ಹಸಲು ೪ ಆಣೆ ಆಗುತ್ತೆ. ಪ್ರತಿ ಮನೆಯಲ್ಲೂ ಈ ಔಷಧವು ಅವಶ್ಯಕ ಇರಬೇಕಾದ್ದು. ಕೂಡ್ಲೆ ಕೆಳಗಿನ ವಿಳಾಸಕ್ಕೆ ಬರದು ತರಿಸಿಕೊಳ್ಳಿರಿ.

[295-1] ವಿಳಾಸ — ಸ್ಪ್ಯಾಷಿರಯಾನಿಯೊ ಡಿಪೊ. ಹರಿಹರ.

ನಕ್ಕಲ್‌ಗಳಿಂದ ಮೋಸಹೋದೀರಿ, ಜೋಕೆ!
ಈಗಿನ ಕಾಲದಲ್ಲಿ ನಿಲ್ಲುವ ಸುವಾಸನೆಯುಳ್ಳ, ಮನೋಹರವಾದ
ಮತ್ತು ಪ್ರಾಚೀನವಾದ ಪರಿಮಳ ದ್ರಾವಕವೇ

ಅಟೋ ಮೋಹಿನಿ.

ಇದಕ್ಕೆ ಭಂಗಾರ ಮತ್ತು ಬೆಳ್ಳಿಯ ಪದಕಗಳು ದೊರಕಿವೆ. ಬಡವರಿಗೂ ಭಾಗ್ಯವಂತರಿಗೂ ಸುಲಭಸಾಧ್ಯವಾಗಿದೆ. ನಕ್ಕಲ್‌ಗಳಿಗೆ ಆಸೆಪಡಬೇಡಿ. ಅಟೋ ಮೋಹಿನಿಯನ್ನೇ ಉಪಯೋಗಿಸಿ. ನಾಲ್ಕು ದಿನಗಳ ತನಕ ಇದರ ಸುವಾಸನೆ ನಿಲ್ಲುವುದು. ಇದು ಅಸದ್ಧವೆಂದು ರುಜು ಮಾಡಿಕೊಡುವವರಿಗೆ ಒಂದು ನೂರು ರೂಪಾಯಿ ಬಹುಮಾನ ಕೊಡುತ್ತೇವೆ. ಕ್ರಯ ½ ಔನ್ಸ್ ಗಾಜಿನ ಬಿರಡೆ ಬಾಟ್ಲಿಗೆ ರೂ 2-0-0 ; 1 ಡ್ರಾಂ ಕೊಳವೆಗೆ 0-12-0 ; ½ ಡ್ರಾಂ ಕೊಳವೆಗೆ 0-8-0 ; ಅಟೋ ಮೋಹಿನಿ ಪರಿಮಳವುಳ್ಳ ಊದುಕಡ್ಡಿಗಳು 1 ಡಜನ್‌ಗೆ 0-12-0.

ಕೂದಲಿನ್ನಗೆ ಹಾಕುವ ಬೇಳೆ ಕೆರೋಸಿನ್ ಎಣ್ಣೆ ಕೊಟ್ಟಾರು,
ಜೋಕೆ! ನಮ್ಮ ರಾಜಗುಣಗಳುಳ್ಳ

ಪುಷ್ಪಕರ ಕೂದಲೆಣ್ಣೆ

ಯಲ್ಲಿ ಬೇರೆ ಎಣ್ಣೆ ಇದೆ ಎಂದು ರುಜು ಮಾಡಿಕೊಡುವವರಿಗೆ ಐದು ನೂರು ರೂಪಾಯಿ ಬಹುಮಾನ ಕೊಟ್ಟೇವು. ಈ ಎಣ್ಣೆ ಮೆದುಳಿಗೂ ಕಣ್ಣಿಗೂ ತಂಪು ಕೊಡುತ್ತೆ. ಕೂದಲು ಉದುರುವುದನ್ನು ತಡೆದು ಕೋಮಲವಾಗಿ ಬೆಳೆಸುತ್ತದೆ. ಮಹಿಳೆಯರಿಗೆ ಇದಕ್ಕಿಂತ ಉತ್ಕೃಷ್ಟವಾದ ಕೂದಲೆಣ್ಣೆ ಬೇರೊಂದಿಲ್ಲ.

ಕ್ರಯ 1 ಬಾಟ್ಲಿಗೆ 1 ರೂಪಾಯಿ ; ಒಂದಾವರ್ತಿ ತರಿಸಿ ಪರೀಕ್ಷಿಸಿ.

3 ಬಾಟ್ಲಿಗೆ ರೂ. 2-10-0 ; ಅಂಚೆ ವೆಚ್ಚ ಬೇರೆ. ನಮ್ಮ ವಿಶೇಷವಸ್ತುಗಳಿಗೆ ಮೂರು ಭಂಗಾರದ ಪದಕಗಳು ಬಂದಿವೆ.

ವಿಳಾಸ—ಷಾ ಭಗವಾನ್‌ದಾಸ್ ಚೂನಿಲಾಲ್ ಕಂಪನಿ,
[296-1] 177, ಮೈನಾಬಜಾರ್ ರೋಡ್, ಮದರಾಸ್.

ಚಿನ್ನದ ಗಿಲ್ಟು ಬೆಳ್ಳಿ ನಮೂನೆ ಗೆಜ್ಜೆ ಡಾಬು.

ಚಿನ್ನದ ಡಾಬು ಬೆಲೆ ರೂ. 4-0-0 } ಪೋಸ್ಟೇಜು
ಬೆಳ್ಳಿ ಗಿಲ್ಟು ಡಾಬು ,, ,, 3-0-0 } ಬೇರೆ.

ಈ ಡಾಬನ್ನು ಚಿಕ್ಕವರು ದೊಡ್ಡವರು ಸಹಾ ಹಾಕಿಕೊಳ್ಳಲು ಉಪಯೋಗಿಸುವ ಬೆಲ್ಟಿನ ನಮೂನೆಯಂತೆ ತಯಾರುಮಾಡಲ್ಪಟ್ಟಿದೆ. ಇದಕ್ಕೆ ಮುಂಭಾಗದಲ್ಲಿ ಮಲ್ಲಿಗೆ ಮೊಗ್ಗಿಗೆ ಸಮಾನವಾದ 160 ಗಟ್ಟಿ ಗೆಜ್ಜೆಗಳು ಜುತ್ತಲ್ಪಟ್ಟಿರುತ್ತೆ. ನಾವು ಕೊಟ್ಟಿರುವ ಗಿಲ್ಟು ಅಲ್ಪ ಸ್ವಲ್ಪ ಗಿಲ್ಟಲ್ಲ. ನಮ್ಮ ಗಿಲ್ಟು ಎಂದಿಗೂ ಕೆಡದು. ಶ್ರೀಮಂತರು ಸಹಾ ಇದನ್ನು ಉಪಯೋಗಿಸುತ್ತಿದ್ದಾರೆ.

ಸಾದಾ ಬೆಲ್ಟು ಒಡ್ಯಾಣ ರೂ. 1-2-0 ; ಚಿನ್ನದ ಗಿಲ್ಟು ನಾಗಮುರಿಗೆ ರೂ. 3-8-0 ; ಸುಂದರವಾದ ಕಾಲುಕಡಗ ರೂ 1-4-0, ಚಿಕ್ಕವರಿಗೆ ರೂ. 1-2-0, ಹುಡುಗರಿಗೆ 12 ಆಣೆ ; ಅಂದವಾದ ಡಾಬು (ಒಡ್ಯಾಣ) ರೂ. 1-4-0, ಚಿಕ್ಕವರಿಗೆ ರೂ 1-2-0, ಹುಡುಗಿಯರಿಗೆ 14 ಆಣೆ ; ಅಂದವಾದ ಪುದುಚೇರಿ ರುಳಿ ರೂ 1-12-0, ಚಿಕ್ಕವರಿಗೆ ರೂ. 1-9-0, ಹುಡುಗರಿಗೆ ರೂ 1-5-0, ಮಕ್ಕಳಿಗೆ ರೂ. 1-3-0. [297-1]

ವಿಳಾಸ :—“ನಾಗರಾಜ,” ಕೇರುಬೀದಿ, ತಿರುವಲ್ಲಿಕ್ಕೇಣಿ, ಮದರಾಸು.

ಜನವರಿ ಬಹುಮತಿ ಗಡಿಯಾರ.

೮ ಸಾಮಾನುಗಳ ಸಹಿತ ಕ್ರಯ ರೂ. 3-6-0.



ಜನವರಿ ಒಳಗಾಗಿ ತಂಸಿಕೊಳ್ಳುವವರಿಗೆ ಈ 7 ರೂಪಾಯಿ ಕ್ರಯದ್ದು ರೂ. 3-6-0 ಕ್ಕೆ ಸ್ಟಾಕ್ ಕ್ಲಿಯರುಗಾಗಿ ಕಮ್ಮಿ ಬೆಲೆಗೆ ವಿಕ್ರಯಿಸುವೆವು. ಆಲಸ್ಯಮಾಡಬೇಡಿರಿ. 5 ವರುಷ ಗ್ಯಾರಂಟಿ. (1) ವಾಚ್ ಸರಪಣಿ, (2) ಉತ್ತರ ಮುಖಿ, (3) ರೇಷ್ಮೆ ದಾರ, (4) ವಾಚ್ ಪೆಟ್ಟಿಗೆ, (5) ಕರವಸ್ತ್ರ, (6) ಸರ್ಪದ ಉಂಗರ, (7) ಕೈಕಪ್ಪ ಮೈಸೂರು ದೇಶದ ನಮೂನೆ, (8) ಬಿಲ್ಲಿಬ್ಲಾಕು ಇಂಕಿಪುಡಿ. ಪೋಸ್ಟೇಜು ಬೇರೆ.

ವಿಳಾಸ :—“ನಾಗರಾಜ,”
ಕೇರು ಬೀದಿ, ತಿರುವಲ್ಲಿಕ್ಕೇಣಿ, ಮದರಾಸು.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1914 ನೇ ಇಸವಿ ಡಿಸೆಂಬರ್ 17 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ.

ಜಮೆ—(1) ಷೇರು ಮೊಬಲಗು	ರೂ. 9,96,525
,, (2) ಡಿಪಾಜಿಟ್ಟುಗಳು	,, 23,50,918
,, (3) ಇತರೆ	,, 53,077
(ಅಣೆ, ಕಾಸು ಬಿಟ್ಟಿರುತ್ತೆ.)	ಜುಮ್ಲಾ ರೂ. 34,00,520

ಖರ್ಚು—(1) ಕೈಯಲ್ಲಿ, ಬ್ಯಾಂಕುಗಳಲ್ಲಿರುವ ಹಣ	ರೂ. 8,44,049
,, (2) ಬಾಕಿ ಮತ್ತು ಇತರ ಸಾಲಗಳು	,, 18,03,232
,, (3) ಡಿಸ್ಕೌಂಟು ಮಾಡಿದ ವಾಯಿದೆ ಹುಂಡಿಗಳು	,, 2,89,482
,, (4) ಇನ್‌ವೆಸ್ಟ್‌ಮೆಂಟುಗಳು	,, 2,60,000
,, (5) ಏಜನ್ಸಿಗಳಲ್ಲಿರುವ ಮೊಬಲಗು	,, 1,50,684
,, (6) ಬ್ಯಾಂಕಿನಲ್ಲಿರುವ ಸಾಮಾನುಗಳು	,, 15,250
,, (7) ಇತರೆ	,, 17,723
(ಅಣೆ, ಕಾಸು ಬಿಟ್ಟಿರುತ್ತೆ.)	ಜುಮ್ಲಾ ರೂ. 34,00,520

ಡಬ್ಲ್ಯು. ಸಿ. ರೋಸ್, ಮ್ಯಾನೇಜರ್.

ಕಾಫಿ, ಚಾ ಹೋಟೇಲುಗಳೂ, ವಿದ್ಯಾರ್ಥಿಗಳೂ.

ಈ ಕೆಲವು ವರ್ಷಗಳಲ್ಲಿ ಸಂಗತಿ ಇನ್ನಷ್ಟು ಕೆಟ್ಟಿದೆ ಎಂತ ಕಾಣಬರುತ್ತದೆ. ಒಂದು ಹೊಸ ಪಟ್ಟಣ ಊರನ್ನೆಲ್ಲಾ ಮುತ್ತಿದ ಹಾಗೆ ತೋರುತ್ತದೆ. ಬೀದಿ ಬೀದಿ, ಕೇರಿ ಕೇರಿ, ಗಲ್ಲಿ ಗಲ್ಲಿ, ಕೆಲವು ಮಾರುಗಳಿಗೊಂದು ಹೊಸ ಹೋಟೆಲು ಅಂಗಡಿಗಳು ಬಿದ್ದಿವೆ. ಅದರ ಹೊರ ಭಾಗದಲ್ಲಿ ಸಾಧಾರಣವಾಗಿ ಚಿತ್ರವಾಯ ನಾನಾ ತಿಂಡಿಗಳು ದಾರಿಗರನ್ನು ಆಕರ್ಷಿಸುತ್ತವೆ. ಮತ್ತೊಂದು ಕಡೆಯಲ್ಲಿ ವಿವಿಧ ಗ್ಲಾಸುಗಳೂ ಬೋಗಣಿ ಮುಂತಾದ ಪಾತ್ರೆಗಳೂ ಮಿಂಚುತ್ತವೆ. ಒಳಗೆ ಪರದೆಯಿಂದ ವಿಂಗಡಿಸಿದ ಕೆಲವು ಕೊಠಡಿಗಳೂ ಅದರೊಳಗೆ ಮೇಜು ಬೆಂಚು ಮುಂತಾದವುಗಳೂ ಕ್ರಮ ಪಡಿಸಿ ಇಟ್ಟಿವೆ. ಹಗಲು ರಾತ್ರಿ ಜನರು ಅವುಗಳೊಳಗೆ ಹೋಗುತ್ತಾ ಸಂತೃಪ್ತರಾದ ಮುಖದಿಂದ ಮೀಸೆ ಒರೆಸುತ್ತಾ ಹೊರಗೆ ಬರುವವನ್ನು ಕಾಣಬಹುದು. ಮುಂಚೆ ರಸಿಕರಾದವರು ಮಾತ್ರ ಇವರ ರುಚಿ ಬಲ್ಲವರೆಂದು ನೆನಸಬಹುದಾಯಿತು. ಆದರೆ ಈಗ ಇಂಥಾ ಅಂಗಡಿಗಳು ಸಿನೆಮಾ ಇತರ ಭಾಗವನ್ನೆಲ್ಲಿಯೂ ಹಬ್ಬಿರುವದನ್ನು, ಹಳ್ಳಿಯವರು ರಜೆಯಲ್ಲಿ ವ್ಯಾಜ್ಯಸಾಧ್ಯಗಳ ಮೇಲೆ ಬಂದವರು ಕೋರ್ಟುಗಳಲ್ಲಿ ಮಾತ್ರವಲ್ಲ, ಈ ಅಂಗಡಿಗಳಲ್ಲಿಯೂ ಧಾರಾಳವಾಗಿ ತಮ್ಮ ಹಣವನ್ನು ವೆಚ್ಚಮಾಡುವದನ್ನೂ ಕಾಣಬಹುದು. ಅದರ ಇತರ ವಿಷಯವಾಗಿ ಪ್ರಸ್ತಾಪಿಸುವದು ನಮ್ಮ ಉದ್ದೇಶವಲ್ಲ. ಇವಕ್ಕೆ ಪ್ರವೇಶಿಸುವ ಇನ್ನೊಂದು ಗುಂಪಿನವರನ್ನು ಕುರಿತು ಪ್ರಸ್ತಾಪಿಸುವದು ನಮ್ಮ ಉದ್ದೇಶವಾಗಿದೆ.

ಈ ಗುಂಪಿನವರು ಯಾರೆಂದರೆ ಶಾಲಾವಿದ್ಯಾರ್ಥಿಗಳೇ. ಇವರ ವಿಷಯದಲ್ಲಿ ಪ್ರಸ್ತಾಪಿಸುವ ಕಾರಣವೇನೆಂದರೆ—ವಿದ್ಯಾರ್ಥಿಗಳು ಇನ್ನೂ ಸಣ್ಣ ಪ್ರಾಯದವರು. ಅವರು ಈ ಸೀ ವಸ್ತುಗಳ ಗುಲಾಮತ್ವಕ್ಕೆ ಬೇಗನೇ ಸಿಕ್ಕಿಬೀಳುತ್ತಾರೆ. ಅವರು ತಮ್ಮ ಎಳೇ ಪ್ರಾಯದಲ್ಲಿ ಈ ದುರಭ್ಯಾಸಕ್ಕೆ ಸಿಕ್ಕಿಬಿದ್ದರೆ ಪ್ರಾಯಕ್ಕೆ ಬಂದಾಗ ಅದರಿಂದ ಬಿಡುಗಡೆಯಾಗುವದು ಬಹಳ ಕಷ್ಟವಾಗುತ್ತದೆ. ಈ ವಿದ್ಯಾರ್ಥಿಗಳು ತಂದೆತಾಯಿ, ಉಪಾಧ್ಯಾಯರ, ಗುರುಹಿರಿಯರ ತಿಳುವಳಿಕೆ, ಅನುಮತಿ ಇಲ್ಲದೆ ಇಂಥಾ ಹೋಟೇಲುಗಳಿಗೆ ಹೋಗುತ್ತಾರೆ. ಶಾಲೆಗೆಂತ ಹೋದ ಮಕ್ಕಳು ಈ ಹೋಟೇಲುಗಳ ದಾಸರಾಗಿದ್ದು ಹೆತ್ತವರಿಗೆ ತಿಳಿಯದೆ ಹೋಗುತ್ತವೆ. ಅವರ ವಿಷಯದಲ್ಲಿ ಮಾಡತಕ್ಕ ದೊಡ್ಡ ಪ್ರಶ್ನೆ ಏನೆಂದರೆ— ಅವರಿಗೆ ಈ ಹೋಟೇಲುಗಳಲ್ಲಿ ಖರ್ಚು ಮಾಡತಕ್ಕ ದುಡ್ಡು ಎಲ್ಲಿಂದ ಸಿಕ್ಕುತ್ತದೆ ಎಂಬದೇ. ನಮ್ಮ ತಿಳುವಳಿಕೆಗೆ ಬಂದ ಮೇರೆಗೆ ಅವರು ಕಂಡುಕೊಂಡ ಕೆಲವು ಮಾರ್ಗಗಳು ಏನೆಂದರೆ—ಹಣವಂತರಾದ ಹೆತ್ತವರ ಮಕ್ಕಳು ಯಾರದಾದರೊಂದು ಮಾರ್ಗದಿಂದ ಹಣ ತಂದು ಹೋಟೇಲಿಗೆ ಹೋಗುವ ಪದ್ಧತಿ ಮಾಡುವರು. ಕೆಲವು ಬಡವರಾದ ಬಡವರ ಮಕ್ಕಳು ಬಹು ಚಮತ್ಕಾರದಿಂದ ಇವರ ಸ್ನೇಹವನ್ನು ಕಟ್ಟಿಕೊಳ್ಳುವರು. (ಒಂದು ವೇಳೆ ಶಾಲೆಯಲ್ಲಿ ಇವರಿಗೆ ಬುದ್ಧಿಸಾಮರ್ಥ್ಯ ಹೆಚ್ಚು ಇದ್ದರೆ ನ್ಯಾಯವಾಗಿಯಾಗಲಿ ಅನ್ಯಾಯವಾಗಿಯಾಗಲಿ ಆ ದಡ್ಡರಾದ ದುಡ್ಡಿರುವ ವಿದ್ಯಾರ್ಥಿಗಳಿಗೆ ಸಹಾಯ ಮಾಡುವರು.) ಇವರನ್ನು ಕೂಡಿಕೊಂಡು ಕೆಲವು ಸಾರಿ ಹೋಟೇಲಿಗೆ ಹೋದ ಮೇಲೆ ಆ ದುಡ್ಡಿರುವ ಹುಡುಗನ ಸಹಾಯದ ಮೇಲೆ ಇವನೂ ಸಾಲ ತಕ್ಕೊಂಡು ಹೋಟೇಲಿನಲ್ಲಿ ತನ್ನ ಲೆಕ್ಕವನ್ನಿಡುವನು. ಇಲ್ಲಿಯೇ ಈ ಹುಡುಗನ ಘನ ಬುದ್ಧಿ ಕಡಮೆಯಾಗ ತೊಡಗಿತು. ತನ್ನವ ಅಕೆಯಿಂದ ಮತ್ತೊಬ್ಬರನ್ನು ಮುಖನೋಡದೆ ತಪ್ಪಿ ಬೇಡುವನು; ನಂಬಿಕೆ ಹೀನನಾಗ ತೊಡಗುವನು. ತರುವಾಯ ತನ್ನ ಹೋಟೇಲಿನ ಖರ್ಚಿಗೂ ಅಲ್ಲಿ ಮಾಡಿದ ಸಾಲದ ಪರಿಹಾರಕ್ಕೂ ದುಡ್ಡು ಸಂಪಾದನೆಗೆ ಮಾರ್ಗ ಹುಡುಕುವನು. ತಂದೆತಾಯಿಗಳಿಗೆ ಸುಳ್ಳು ಹೇಳಿ ಬೇಕಾದದ್ದಕ್ಕಿಂತ ಹೆಚ್ಚು ಶಾಲಾ ಫೀಸು ತಕ್ಕೊಳ್ಳುವನು. ಶಾಲಾ ಮೆನೇಜರರಿಗೆ ತಾನು ಬಡವನೆಂದು ತೋರಿಸಿಕೊಂಡು ಫೀಸಿನ ವಿಷಯದಲ್ಲಿ ಅವರ ಸಹಾಯವನ್ನು ಪಡೆದರೂ ಹೆತ್ತವರನ್ನು ವಂಚಿಸಿ, ಪೂರಾ ಫೀಸು ತಕ್ಕೊಂಡು ಬಾಕಿಯನ್ನು ಹೋಟೇಲಿಗಾಗಿ ಖರ್ಚು ಮಾಡುವನು. ಇನ್ನು ಪುಸ್ತಕ, ಕಾಗದ, ಪೆನ್ಸಿಲು ಇತ್ಯಾದಿ ಬೇಕೆಂದು ಕೇಳಿಯೂ ದುಡ್ಡು ತೆಗೆದು ಪಡೆದು ಆ ದುಡ್ಡನ್ನು ಹೋಟೇಲಿಗೆ ಖರ್ಚು ಮಾಡುವನು; ತಂದೆತಾಯಿಗಳು ಇತರ ಖರ್ಚಿಗಾಗಿ ದುಡ್ಡು ಕೊಟ್ಟರೆ ಅದರ ಲೆಕ್ಕವನ್ನು ಸರಿಯಾಗಿ ಕೇಳದೆ ಅದರ ಅಂಶವನ್ನು ಈ ನಿಮಿತ್ತವೂ ಪ್ರಯೋಗಿಸುವನು. ಅನೇಕ ಹುಡುಗರು ತರುವಾಯ ಮನೆಯಲ್ಲಿಯೂ ಶಾಲೆಯಲ್ಲಿಯೂ ಇತರ ಸ್ಥಳಗಳಲ್ಲಿಯೂ ಕದ್ದುಕೊಳ್ಳ ಸುರು ಮಾಡಿದ್ದೂ ಉಂಟು. ಕಳ್ಳಬೀಗ ಮಾಡಿ ಬಡ ತಂದೆತಾಯಿಗಳನ್ನು ವಂಚಿಸಲಿಲ್ಲವೆಂದು ಯಾರು ಧೈರ್ಯದಿಂದ ಹೇಳಬಹುದು? ಹೋಟೇಲಿನಲ್ಲಿ ಸಾಲಮಾಡಿದ್ದರಿಂದ ಹೋಟೇಲಿನವನು ಇವನ ದಾರಿ ಕಾಯುವನು. ಹುಡುಗನು ಅವನ ಕಣ್ಣು ತಪ್ಪಿಸಿ ಬೇರೆ ಅಡ್ಡಮಾರ್ಗಗಳನ್ನು ಹಿಡಿಯುವನು. ಕಳ್ಳತನದ ಮಾರ್ಗದಿಂದ ಹೋಟೇಲಿನವನ ಸಾಲವನ್ನು ತೀರಿಸಲಿಕ್ಕಾಗದಿದ್ದರೆ ಎಳೇ ಪ್ರಾಯದಲ್ಲಿಯೇ ಇತರರನ್ನು ವಂಚಿಸುವ ಸ್ವಭಾವವು ಸುರುವಾಗುತ್ತದೆ. ಮತ್ತು ತಾನು ಹೋಟೇಲಿಗೆ ಹೋಗುವ ಸಂಗತಿಯು ಯಜಮಾನರಿಗೂ ಇತರರಿಗೂ ಗೊತ್ತಾಗದಂತೆ ಅವರು ಹೋಗುವ ಮಾರ್ಗಗಳು ತೀರಾ ಬೇರೆ. ಮನೆಗೆ ತಕ್ಕ ಹೊತ್ತಿಗೆ ಹಿಂದೆ ಬಾರದು, ಮನೆಯಲ್ಲಿ ನ್ಯಾಯವಾದ ಊಟವನ್ನು ಉಣ್ಣರು. ಹೀಗೆ ಅವರ ಹೊಟ್ಟೆಯಾದರೂ ಕೆಡುವ ಗಂಡಾಂತರವಿದೆ. ಇನ್ನು ಹೋಟೇಲಿನಲ್ಲಿ ಯಾವ ಶುದ್ಧ ಪದಾರ್ಥಗಳು ತಿನ್ನಲಿಕ್ಕೆ ಸಿಕ್ಕುವವು! ಅಲ್ಲಿ ರೋಗ ಸೋಂಕನ್ನು ಹುಟ್ಟಿಸುವ ಎಂಥಾ ಸಂದರ್ಭಗಳು ಇರುವವು ಎಂಬದನ್ನು ನಾವಿಲ್ಲಿ ಚರ್ಚಿಸುವದಿಲ್ಲ.

ಹಾಗಾದರೆ ಪ್ರಿಯ ಹೆತ್ತವರೇ, ಉಪಾಧ್ಯಾಯರೇ, ಗುರುಹಿರಿಯರೇ, ಈ ಹೋಟೇಲಿನ ಚಟದಿಂದ ನಿಮ್ಮ ಮಕ್ಕಳ ಯಾ ದೇವರು ಕೈಯಲ್ಲಿ ಒಪ್ಪಿಸಿದ ಸಣ್ಣವರ ಆತ್ಮಿಕ, ಮಾನಸಿಕ, ನೈತಿಕ, ಶಾರೀರಿಕ ಹಿತಗಳು ಇದರಿಂದ ಎಷ್ಟು ಕೆಡುತ್ತವೆ ಎಂಬದನ್ನು ನೀವೊಂದು ಸಾರಿ ಆಲೋಚಿಸಿದಿರೋ? ನಿಮಗೆ ಈ ವರೆಗೆ ಇದು ಮರೆಯಾಗಿರಬಹುದು. ಹಾಗಾದರೆ ಈ ವಿಷಯದಲ್ಲಿ ಕೂಡಲೇ ಚಿಂತೆ ತಕ್ಕೊಳ್ಳಿ. ನಿಮ್ಮ ಮಕ್ಕಳ ಹೋಗೋಣ ಬರೋಣದರ ವಿಷಯ ಎಚ್ಚರಿಕೆಯಾಗಿರಿ. ಅವರ ಮಾರ್ಗಗಳ ವಿಷಯ ಮೇಲೆ ಬೇಕಾದಷ್ಟು ಸೂಚನೆ ಕೊಟ್ಟು ಆಯಿತು. ನಿಮ್ಮ ಸ್ಥಳದಲ್ಲಿರುವ ಉಪಾಧ್ಯಾಯರು ನಿಮ್ಮ ಮಕ್ಕಳ ವಿಷಯವಾದ ಸಂಗತಿಯಲ್ಲಿ ಚಿಂತೆ ತಕ್ಕೊಳ್ಳುವದಾದರೆ ಅವರಿಗೆ ಪೂರ್ಣ ಸಹಕಾರಿಗಳಾಗಿರಿ.—ಜ.

ಸುತ್ತಳಿರುವ ಮನೆಗಳಲ್ಲಿಯೂ ಪ್ರಯಾಣಕಾಲದಲ್ಲಿಯೂ ಛಳಿ ಮಳೆಗಾಲಗಳಲ್ಲಿಯೂ ಮಲೆನಾಡಿನಲ್ಲಿಯೂ ಸೋಂಕುರೋಗ ಸ್ಥಳಗಳಲ್ಲಿಯೂ ಆರೋಗ್ಯವನ್ನು ಕಾಪಾಡುವುದರಲ್ಲಿ ಶ್ರೇಷ್ಠತಮವಾದ

ಶ್ರೀಕರಕಸ್ತೂರಿಮಾತ್ರೆ

ಟಿಬೆಟ್ ದೇಶದ ಕಸ್ತೂರಿ—ಅನೇಕ ಪುಟಗಳಿಂದ ತಯಾರಿಸಿದ ಲೋಹ ಭಸ್ಮ—ಚಿನ್ನದ ರೇಕು ಮೊದಲಾದವುಗಳಿಂದ ಹಿರಿಯರ ಕಾಲದಿಂದಲೂ ತಯಾರಿಸಲ್ಪಡುತ್ತಿರುವ ಈ ಶ್ರೀಕರ ಕಸ್ತೂರಿಮಾತ್ರೆಗಳು ತಾಂಬೂಲವನ್ನು ರಂಜಿಸಿ ಎಂಥಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸಿ ಬಹಳ ಹೊತ್ತಿನವರೆಗೆ ಬಾಯಿ ಘಮಘಮಿಸುವಂತೆ ಮಾಡುವುವು. ಶೀತವಾಯು-ಕೆಮ್ಮು-ನೆಗಡಿ-ದಿನ ಜ್ವರ-ಮೂರರ ಜ್ವರ-ನಾಲ್ಕರ ಜ್ವರ-ಮಲೇರಿಯಾಜ್ವರ-ತಲೆನೋವು-ಮೈಕೈನೋವು ಮತ್ತು ಭಾರ-ಅರೋಚಕ ಹಲ್ಲುನೋವು-ಹೊಟ್ಟೆನೋವು-ಮಲಬಂಧ-ಅಜೀರ್ಣ ಭೇದಿ-ಮಕ್ಕಳಿಗೆ ಸಾಮಾನ್ಯವಾಗಿ ಬರುವ ಪಕ್ಕೆಗಳ ಕೆಳತ-ಹೊಟ್ಟೆಯುಬ್ಬರ-ಮಂದಜ್ವರ-ಭೇದಿ ಮುಂತಾದುವುಗಳನ್ನು ನಂಬಿಕೆಯಾಗಿ ಗುಣಪಡಿಸುತ್ತವೆ. ಒಂದು ವೇಳೆ ಈ ಮಾತ್ರೆಗಳನ್ನು ಪರೀಕ್ಷಿಸಿದರೆ ಯಾವಾಗಲೂ ಇದನ್ನೆ ತರಿಸುವರೆಂದು ನಾವು ಧೈರ್ಯವಾಗಿ ಹೇಳಬಲ್ಲೆವು. 250 ಮಾತ್ರೆ 4 ಆಣೆ. ಐದಕ್ಕೆ ಒಂದು ಇನಾಮು. ವಿ. ಪಿ. ಛಾರ್ಜು ಪ್ರತ್ಯೇಕ. [231-8]

ಬಿ. ವಿ. ಪಂಡಿತ್, ಸದ್ವೈದ್ಯಶಾಲಾ, ನಂಜನಗೂಡು.

ನಿನಗೆ ಮೈ ಸ್ವಸ್ಥವಿಲ್ಲವೋ?

ನಿನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ, ನಿನಗೆ ಯಾವ ನೋವೇ ಉಂಟಾಗಿರಲಿ— ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತದೆಯೇ?" ಎಂದು ನಿನ್ನನ್ನು ನೀನೇ ಕೇಳಿಕೋ; ಹಾಗೆ ಆಗದಿದ್ದರೆ ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತಗೆದುಕೋ. ಮಾರನೇ ದಿನ ಬೆಳಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನನಗೆ ಮೈ ಸ್ವಸ್ಥವಾಗುವುದು.

(೧೨ ಆಣೆ ಬುಡ್ಡಿ ಪರಿಮಾಣ)

ಮಲಬಂಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ ಪರಿಣಮಿಸುವುದು. ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲಕಾರಣವಾಗಿರುವುದು. ಮಲಬಂಧದಿಂದ ರೋಗಗಳೇಕೆ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು. ಆ ರೋಗಗಳಾವುವೆಂದರೆ:—ಪಿತ್ತಕೋಶ ರೋಗ; ಪಿತ್ತ; ಪಿತ್ತಜ್ವರ; ಅಜೀರ್ಣ; ಅಗ್ನಿಮಾಂದ್ಯ; ಗಾಬರಿ; ಅಶಕ್ತಿ; ಎದೆಯು ತಲ್ಲಣಿಸುವುದು; ಕಣ್ಣುತಿರುಗುವುದು; ತಲೆನೋವು; ಹೊಟ್ಟೆಯುಬ್ಬರ; ಹುಳಿತೇಗಿನ ಹೊಟ್ಟೆನೋವು; ಹೆಂಗಸರ ವ್ಯಾಧಿಗಳು; ಇವೇ ಮೊದಲಾದವು. ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು.

ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು. ಗಂಡಸರಿಗಾಗಲಿ ಹೆಂಗಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ ಕಶ್ಮಲವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ಶುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇಗ ನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು. [198-17]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ. ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು. ಔಷಧಗಳನ್ನು ಮಾರುವವರ ಬಳಿಯೆಲ್ಲಾ ದೊರೆಯುವುದು; ಅಥವಾ ಡೋನ್, ಪಿ. ಒ. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು

ಮಧುರೆ ಹುನ್ನಡಿ ಅಂಚಿನ ಸೀರೆ ಅವ್ವಲ್ ರಬಿ ರೂ. 2-6-0.

ಡಿಸೆಂಬರ್ ತಿಂಗಳ ಒಳಗಾಗಿ ತರಿಸಿಕೊಳ್ಳುವರಿಗೆ ಒಂದು ಸಿಂಗಪೂರು ರವಿಕೆಯನ್ನು ಪ್ರತಿ ಸೀರೆಗೂ ಇನಾಮಾಗಿ ಕೊಡುತ್ತೇವೆ.

ಇದು ಉಡುವುದಕ್ಕೆ ದಥೋತಿಯಾಗಿಯೂ ನೋಟಕ್ಕೆ ನಯವಾಗಿಯೂ, ಬೆಲೆ ಸುಲಭವಾಗಿಯೂ ಇದೆ. ಬಣ್ಣ ಹೋಗದು. ಸೀರೆಯು ಉದ್ದ 18 ಮೊಳ. ಸುಂದರವಾದ ಸರಗು. ಒಂದನ್ನು ತರಿಸಿ ಪರೀಕ್ಷಿಸಿ. ವಿಳಾಸ—

[99-20] ವಿ. ಕೃಷ್ಣಸ್ವಾಮಿ ಮೊದಲಿಯಾರ್, ನಂ. 27, ಬಂದರ್ ಬೀದಿ, ಜಿ. ಟಿ., ಮದರಾಸು.

ಗಂಟಲಿನ ಹುಣ್ಣು ಹಾನಿಕರವಾದದ್ದು.

ಸಾಧಾರಣವಾದ ಗಂಟಲುನೋವು ಲಿಟ್ಲ್ಸ್ ಓರಿಯೆಂಟಲ್ ಬಾಂ ಎಂಬದನ್ನು ಒಂದು ಅಥವ ಎರಡಾವರ್ತಿ ಉಪಯೋಗಿಸುವದರಿಂದ ಸುಲಭವಾಗಿ ವಾಸಿಯಾಗುತ್ತೆ. ಹಾಗಿಲ್ಲದೆ ನಿರ್ಲಕ್ಷ್ಯಮಾಡುವದಾದರೆ, ಅನೇಕ ವೇಳೆ ಎದೆ ನೆಗಡಿಯೂ ಕೆಮ್ಮೂ ಇತರ ದಾರುಣಕರವಾದ ದೊಡ್ಡರೋಗಗಳು ಪ್ರಾಪ್ತವಾಗುವವು. ಇಷ್ಟು ಸ್ವಲ್ಪ ಖರ್ಚಿಗೆ ಇಷ್ಟು ಸುಲಭವಾಗಿಯೂ ಖಂಡಿತವಾಗಿಯೂ ಚಿಕಿತ್ಸೆ ದೊರಕುವದರಿಂದ ಆಸ್ಪದ ಕಳಕೊಳ್ಳಬೇಡಿ.

ಸಾಧಾರಣ ಗಂಟಲು ನೋವಿಗಾಗಲೀ ಅಥವಾ ಹಾನಿಕರವಾದ ಕೆಮ್ಮಿಗಾಗಲೀ ಲಿಟ್ಲ್ಸ್ ಓರಿಯೆಂಟಲ್ ಬಾಮಿನಷ್ಟು ಖಂಡಿತವಾಗಿಯೂ ವೇಗವಾಗಿಯೂ ವಾಸಿಮಾಡುವಂಥಾದ್ದು ಮತ್ತೊಂದಿಲ್ಲ.

ಉರ್‌ಸೆಸ್ಟರ್‌ಷೈರಿಗೆ ಸೇರಿರುವ ಇವೇಷಾಂ ಪಟ್ಟಣದ ಮಿ॥ ಎಚ್. ಡ್ರಿನ್‌ಕ್ವೇಲ್‌ಯವರು ಬರೆಯುವದೇನೆಂದರೆ:—ನನಗೆ ಕಠಿಣ ಎದೆನೆಗಡಿಯಾಗಿ ಅದರಿಂದ ಕೆಮ್ಮಿಗೆ ಕಾರಣವಾಯಿತು. ಇದರಿಂದ ಯಾವಾಗಲೂ ಗಂಟಲಿನಲ್ಲಿ ಕಡತನ್ನ ಕಟ್ಟುಬಿಡಿಸುವ ಒಣಕೆಮ್ಮೂ ಆಗಿ ರಾತ್ರಿಯಲ್ಲಿ ನಿದ್ರೆ ಇರಲಿಲ್ಲ—ಹೇಳಿದ ಅನೇಕ ಔಷಧಿಗಳನ್ನು ಉಪಯೋಗಿಸಿ ಗುಣ ಕಾಣುಕೊಳ್ಳಲಿಲ್ಲ. ಕಡೆಗೆ ಲಿಟ್ಲ್ಸ್ ಓರಿಯೆಂಟಲ್ ಬಾಂ ಎಂಬದರಿಂದ ಗುಣವಾಯಿತು.

ಎಲ್ಲಾ ಔಷಧ ಮಾರುವವರಲ್ಲಿಯೂ ಸೀಸೆ 1ಕ್ಕೆ 1 ರೂ. ಮೇರಿಗೆ ಮಾರಲ್ಪಡುತ್ತೆ. 101-36

ಪ್ರೊಫೆಸರ್ ಬ್ರೇಸ್ಲರ್
ಇಲೆಕ್ಟ್ರೊ ಪೆಯಿನಾಡ್ಯನ್

ಮನುಷ್ಯನ ಶರೀರದಲ್ಲಿ ವಿದ್ಯುಚ್ಛಕ್ತಿ ವ್ಯಾಪಿತವಿರುವದೆಂತಲೂ, ವಿದ್ಯುಚ್ಛಕ್ತಿ ಕಡಮೆಯಾದ ಕೂಡಲೇ ನಾನಾ ತರದ ವ್ಯಾಧಿಗಳು ಲಭಿಸುವದೆಂತಲೂ, ಅಂತಹ ವ್ಯಾಧಿಗಳನ್ನು ಶೀಘ್ರ ಗುಣಪಡಿಸಲು ವಿದ್ಯುಚ್ಛಕ್ತಿ ಮಿಶ್ರವಾದ ಔಷಧದ ಉಪಯೋಗದಿಂದಲ್ಲದೆ ಬೇರೆ ಔಷಧಗಳಿಂದ ವ್ಯಾಧಿಗಳನ್ನು ಶೀಘ್ರ ಗುಣಪಡಿಸುವದು ಕಷ್ಟವೆಂತಲೂ ಅಮೇರಿಕಾ ದೇಶದ ವೈದ್ಯಶಾಸ್ತ್ರ ಪಂಡಿತರು ವೈದ್ಯಶಾಸ್ತ್ರ ಪರಿಶೋಧನೆಯಿಂದ ಸಿದ್ಧಿಸಿರುವರು. ಈ ಔಷಧವು ಉಪಯೋಗಿಸಿದ ಕೂಡಲೇ ದೇಹಕ್ಕೆ ಸಾಕಾಗುವಷ್ಟು ವಿದ್ಯುಚ್ಛಕ್ತಿಯನ್ನುಂಟುಮಾಡಿ ವ್ಯಾಧಿಯನ್ನು ಅತಿ ಶೀಘ್ರ ಗುಣಪಡಿಸುತ್ತೆ. ಪ್ರಾಚೀನಕಾಲದ ಔಷಧಗಳಿಗೆಲ್ಲವು ಇದು ಅತ್ಯುತ್ತಮವಾದದ್ದು. ಒಂದಾವರ್ತಿ ಪರೀಕ್ಷಿಸಿ ನೋಡಿದರೆ ಇದರ ಗುಣವು ವ್ಯಕ್ತವಾಗುತ್ತೆ.



ಎಲೆಕ್ಟ್ರೊಪೆಯಿನಾಡ್ಯನ್ ತೈಲದಿಂದ ಗುಣಪಡುವ ವ್ಯಾಧಿಗಳು:—

ತಿಮಿರುವಾಯುವು, ಕೀಲ್ವಾಯುವು, ಪಾರ್ಶ್ವವಾಯುವು, ಕ್ಷಯ, ಕೆಮ್ಮು, ನೆಗಡಿ, ವಾಯುನೋವು (ಕೈಕಾಲು ಹಿಡಿತ), ಉಳುಕುಹಿಡಿದಿದ್ದರು, ಕಠಿನಶ್ವಾಸ, ನಡುನೋವು (ಸೊಂಟನೋವು), ಪಕ್ಕಶೂಲೆ, ಹಲ್ಲುನೋವು, ತಲೆನೋವು, ಅರೆತಲೆನೋವು, ಉಬ್ಬಸ, ವಿಷಜ್ವರದ ಗಡ್ಡೆಗಳಿಗೂ ಮತ್ತು ಮಕ್ಕಳ ಪಕ್ಕಶೂಲೆ, (ಅಳ್ಳೆ) ಶೈತ್ಯದೋಷಗಳೂ, ಪಶುಗಳಿಗಳ ಕಡಿತಗಳಿಗೂ (ಚೇಳು ಮುಂತಾದದ್ದು), ಇದಕ್ಕೆಲ್ಲಾ ಬಹಳ ಶ್ಲಾಘನೀಯವಾದದ್ದು. [12-62]

ಉಪಯೋಗಿಸುವ ಕ್ರಮವು ಹಿಂದುದೇಶದ ಎಲ್ಲಾ ಭಾಷೆಗಳಲ್ಲಿಯೂ ಬುಡ್ಡಿಯ ಸಂಗಡ ಕಳುಹಿಸಲಾದೀತು.

ಬುಡ್ಡಿಯ ಕ್ರಯ ರೂ. 0-8-0. ವಿ. ಪಿ. ಖರ್ಚು 0-4-0. ಏಜಂಟರು ಬೇಕು.

ಮುಖ್ಯ ಏಜಂಟರು:—ಗುರುಬಸವ ಅಂಡ್ ಕಂಪನಿ, ಮದರಾಸ್.

ಕುಂತಳಾನಂದ ತೈಲವು.

213-15

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಿರುದಿನ ಬಿಲ್ಲೆಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ. ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು. ಈ ತೈಲವು ಕೂದಲನ್ನು ಚೆನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಗೊಳಿಸುತ್ತದೆ. ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದ್ದಾಗಿದೆ. ಬೆಲೆ ಬಾಟ್ಲಿಗೆ 1 ರೂಪಾಯಿ. 3 ಬಾಟಲಿಗೆ 2 ರೂಪಾಯಿ. 10 ಆಣೆ. ಅಂಚೆ ಹಾಸಲು ಬೇರೆ. ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ.

ನಮ್ಮ ವಿಳಾಸ:—ಬಿ. ಎಮ್. ನಾಥ ಮತ್ತು ಕಂಪೆನಿ,
ವೇಪೇರಿ, ಮದರಾಸ್.

ನರೆಕೂದಲಿಟ್ಟುಕೊಂಡು ಮುದುಕರಾಗಿ ಕಾಣುವುದೇಕೆ?

ದರ್ಬಾರ್ ಕೂದಲು ರಂಗು.

ಒಂದು ಸಲ ಹಚ್ಚಿದರೆ 20 ವರ್ಷದ ಪ್ರಾಯಸಮರ್ಥರಂತೆ ಕಾಣುತ್ತೀರಿ. ಈ ರಂಗು ಹಚ್ಚಿಕೊಂಡರೆ ಕೂದಲು ಅಚ್ಚಕಪ್ಪಾಗಿ ಹೊಳೆಯುತ್ತೆ. ಈಗ ಮಾರಿಕೆಗೆ ಬಂದಿರುವ ಅಲ್ಪತರದ ಕೂದಲಿಗೆ ಹಚ್ಚುವ ಬಣ್ಣಗಳು ಸುಮ್ಮಾ ಕೀಳುಜಾತಿಯವು; ಹಚ್ಚಿದ ಮೇಲೆ ಕೂದಲು ಕೆಂಚು ತಿರುಗಿ ಅಸಹ್ಯವಾಗಿ ಕಾಣುತ್ತದೆ. ನಮ್ಮ "ದರ್ಬಾರ್ ಕೂದಲ ರಂಗು" ಅಂಥಾದ್ದಲ್ಲ; ಬಹು ಮೇಲಾದದ್ದು. ಒಂದಾವರ್ತಿ ತರಿಸಿ ಪರೀಕ್ಷೆಮಾಡಿದರೆ ನೀವೇ ಸಂತೋಷಪಡುವಿರಿ. ಕ್ರಯ ಬ್ರಷು ಸಮೇತ ಬಾಟ್ಲಿ ಒಂದಕ್ಕೆ ರೂ. 1; ಅಂಚೆ ಹಾಸಲು 4 ಆಣೆ.

ವಿಳಾಸ:—ಪಿ. ಎ. ಎಸ್. ಪಾಣಿ ಕಂಪೆನಿ,
[276—3] ನಂ. 3, ಇರುಳಪ್ಪನ್ ಬೀದಿ, ಮದರಾಸು.

ಮಲೇರಿಯಾ

ಮತ್ತು ಹವಾ ದೋಷದಿಂದುಂಟಾಗುವ ಎಲ್ಲಾ ತರದ ಜ್ವರವೂ

ಈಸಾನೊಫೆಲ್

ಯ ಸೇವನೆಯಿಂದ ಬೇಗನೆ ನಿವಾರಣೆಯಾಗುತ್ತೆ.

ಕ್ವಿನೈನ್ ಜ್ವರವನ್ನು ಅಣಗಿಸುವುದು; ಆದರೆ ನಮ್ಮ ಈ ಸಾನೊಫೆಲೆಯು 15 ದಿನದಲ್ಲಿ ವಾಸಿಮಾಡುತ್ತದೆ. ಹಗಲು ರಾತ್ರಿ ಒಂದೊಂದು ಮಾತ್ರೆ ತೆಗೆದುಕೊಳ್ಳುತ್ತಾ ಬಂದರೆ ಜ್ವರ ಬಾರದಂತೆ ಸಂರಕ್ಷಣೆ ಮಾಡಬಲ್ಲದು.

ಜ್ವರವು ಸಂಪೂರ್ಣವಾಗಿ ವಾಸಿಯಾಗುವುದಕ್ಕೆ ಎರಡು ಬಾಟ್ಲಿ ಔಷಧ ಹದಿನೈದು ದಿನಕ್ಕೆ ಸಾಕು.

ಬಾಟ್ಲಿಗೆ ಕ್ರಯ 2 ರೂಪಾಯಿ.

ಬಿಕರಿಯಾಗುವ ಸ್ಥಳಗಳು.

1. ಫಾಸ್ಟರ್ ಕಂಪೆನಿ, ಕೆಮಿಸ್ಟ್ಸ್, ಬೆಂಗಳೂರು;

2. ಬಿ. ಜಿ. ಗೋರಿಯೋ ಕಂಪೆನಿ, ವಾಲೆನ್ ಬೀದಿ,

[172—21] ಬೊಂಬಾಯಿ;

ಇದಲ್ಲದೆ

ಎಲ್ಲಾ ಔಷಧ ಮಾರಾಟದ ಷಾಪಿನಲ್ಲೂ ಸಿಕ್ಕುವುದು.

ಗೊಬ್ಬರದ ಮಾರಾಟ.

ಬೂದಿ ಗೊಬ್ಬರ ಗಾಡಿ 1 ಕ್ಕೆ 10 ಆಣೆಯಂತೆ ಬಿಕರಿ ಮಾಡುತ್ತೇವೆ. ಬೇಕಾದವರು ಜಾಗ್ರತೆಯಾಗಿ ಬಂದು ತೆಗೆದುಕೊಳ್ಳಬೇಕು. ಗೊಬ್ಬರ ಸಿಕ್ಕುವ ಸ್ಥಳ:—ಪಿ. ಸಿದ್ದಯ್ಯ, ಸಿ. ಮದಾರ್ ಸಾಹೇಬ್, ಮಂಡಿ, ಫ್ರೆಂಚ್‌ರಾಕ್ಸ್.

Messrs. Petrie-Hay & Son, Hunsur.

ನಮ್ಮಲ್ಲಿ ತೇಗದ ತೊಲೆಗಳು 2 ಸಲೀ ಅಡಿ ಉದ್ದ ಮೊದಲುಗೊಂಡು 30-40 ಸಲೀ ಅಡಿಯ ವರೆಗೂ ಇರುತ್ತವೆ. ಇಷ್ಟವುಳ್ಳವರು ತಪ್ಸೀಲನ್ನು ಹುಣಸೂರಲ್ಲಿರುವ ಮೆ|| ಪಿಟ್ರಿಹೆ ಅಂಡ್ ಕಂಪನಿಗೆ ಬರೆದು ತಿಳಿದುಕೊಳ್ಳಬಹುದು. ಈ ತೊಲೆ ಗಾಡಿ ತಯಾರಿಗೂ ಮನೆ ಕಟ್ಟುವುದಕ್ಕೂ ಆಗುತ್ತವೆ. [232-9]

ಟೋಪಿಗಳು: ಟೋಪಿಗಳು.

ಉತ್ತಮವಾದ ಟೋಪಿಗಳು ಹಾಸನದಲ್ಲಿ ದೊರೆಯುತ್ತವೆ.

ವಿವಿಧ ತರದ ಉಣ್ಣೆ ಧಾರದಿಂದ ತಯಾರಿಸಲ್ಪಡುವ ಸಾಮಾನುಗಳಿಗೂ, ಸಾದರಿಗಳಿಗೂ, ದರಗಳಿಗೂ ಮ್ಯಾನೇಜರವರಿಗೆ ಬರೆದು ತಿಳಿದುಕೊಳ್ಳಬಹುದು.

Men's socks, vests and various knitted articles.

ಮ್ಯಾನೇಜರ್, ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ.

Apply:—MANAGER, WOOL WORKS,
[201-17] GIRLS' INDUSTRIAL SCHOOL, HASSAN.



ಡಿಸೆಂಬರ್ ಮಹೋತ್ಸವದ ಕೈಗಡಿಯಾರ
ಅರ್ಧ ಕ್ರಯ ರೂ. 1—14—0

ಇದೇ ಡಿಸೆಂಬರ್ ಹಬ್ಬದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದ ಕೈಗಡಿಯಾರವನ್ನು ಡಿಸೆಂಬರ್ ಒಳಗೆ ತರಿಸಿಕೊಳ್ಳುವವರಿಗೆ ರೂಪಾಯಿ 1-14-0 ಆಣೆಗೆ ಕೊಡಲ್ಪಡುತ್ತೆ. [99-30]

ವಿಳಾಸ—ಪಿ. ಕೃಷ್ಣಸ್ವಾಮಿ ಮೊದಲಿಯಾರ್, ನಂ. 27 ಒಂಡರ್ ಬೀದಿ, ಜಿ.ಟಿ., ಮದರಾಸು.

S U. N. & Co.,

BENARES CITY, U. P.

ಸೊಗಸಾದ ಸರಕುಗಳು!!
ದೊಡ್ಡ ಕಂಪೆನಿ!

ಈ ನಮ್ಮ ಕಂಪನಿಯಲ್ಲಿ ನೆಯ್ದು ತಯಾರಿಸುವ ಉತ್ತಮವಾದ ಬನಾರಸ್ ರೇಷ್ಮೆ ಜರೀ ಸೀರೆಗಳು, ಶಲ, ಪೇಟಾ, ಕಾಶ್ಮೀರ್ ಶಾಲು, ಪಟ್ಟೆ, ಮಗುಟ, ಜಗನ್ನಾಥ ಚಾಂಟಿಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಕ್ಯಾಟಲಾಗ್ 1 ನ್ನು ಮತ್ತು 2 ವಿಕ್ಟೋರಿಯ ಪಟಗಳನ್ನು ಇನಾಮಾಗಿ ಕಳುಹಿಸಲಾದೀತು [69-41]

ಎಸ್. ಯು. ಎನ್. ಮತ್ತು ಕಂಪೆನಿ, ಕಾಶಿ

ಮೈಸೂರಿಯನ್ ನಶ್ಯವು

ಸಾದಾ ನಶ್ಯ ಶೇರು 1 ಕ್ಕೆ 0-15-0.
ವಾಸನೆ ನಶ್ಯ ಡಬ್ಬಿ 1 ಕ್ಕೆ 0-4-0. ಡಜನ್ 2-8-0.

ಈ ನಶ್ಯವು ಇತರ ದೇಶದ ಬಹಳ ಮೇಲಾದ ಹೊಗೆಸೊಪ್ಪಿನಲ್ಲಿ ಪಕ್ವವಾಗಿ ತಯಾರಿಸಿ ಎಲ್ಲಾ ಸ್ಥಳಗಳಿಗೂ ಕಳುಹಿಸಿ ಒಳ್ಳೇ ಹೆಸರನ್ನು ಪಡೆದಿರುತ್ತೇವೆ. ಇದರಲ್ಲಿ ಸಾದಾ ನಶ್ಯ, ವಾಸನೆ ನಶ್ಯ ಎಂದು ಎರಡು ವಿಧವುಂಟು. ಬಹು ದಿನದ ವರೆಗೂ ಇದರ ಘಾಟು ಹೋಗುವುದಿಲ್ಲ. ನಮ್ಮ ವಾಸನೆ ನಶ್ಯವನ್ನು ಒಂದು ಚಿಟಿಕೆಯನ್ನು ಸಾದಾ ನಶ್ಯ 7-8 ಚಿಟಿಕೆಯಲ್ಲಿ ಬೆರಸಿ ಹಾಕಿಕೊಂಡರೆ ದಿವ್ಯಾನಂದವಾಗಿರುತ್ತೆ. ಅನೇಕ ವ್ಯಾಪಾರಸ್ಥರು ನಮ್ಮಲ್ಲಿಂದ ಹೋಲ್‌ಸೇಲ್ ತರಿಸಿ ವಿಕ್ರಯಿಸುತ್ತಿರುತ್ತಾರೆ. ಬಹು ಮಿತವಾಗಿ ಕೊಂಡಿದೆ. ಒಂದು ಸಲ ತರಿಸಿ ನೋಡಿ. ಅತ್ತರು ದಿನಸುಗಳು ಬೇಕಾದವರು "ದಿ ಮೈಸೂರಿಯನ್, ಮದರಾಸು" ಎಂಬ ಅಡ್ರೆಸ್ಸಿಗೆ ಬರೆದು ಕ್ರಯಪಟ್ಟಿ ತರಿಸಿಕೊಳ್ಳಿ.

ನಮ್ಮ ವಿಳಾಸ:—ಟ್ರೇಡ್ಸ್ ಏಜನ್ಸಿ ಕಂಪೆನಿ,
[246—7] 32, ವೆಂಕಟಯ್ಯರ ಬೀದಿ, ಮದರಾಸು.

ಜಾಂನಗರದ ಸುಪ್ರಸಿದ್ಧ ರಾಜವೈದ್ಯರ ಅನುಭವಸಿದ್ಧ ಔಷಧಗಳು.

ಗರ್ಭಾಮೃತ ಚೂರ್ಣ—ಇದು ಸ್ತ್ರೀಯರ ಗರ್ಭಾಶಯದ ಸರ್ವರೋಗಗಳನ್ನು ಪರಿಹರಿಸಿ ಗರ್ಭಧರಿಸುವಂತೆ ಮಾಡುತ್ತದೆ. ಸ್ತ್ರೀಯರ ಎಲ್ಲಾ ತರಹೆಯ ವ್ಯಾಧಿಗಳಿಗೂ ಅಮೃತಮೌಲ್ಯವಾದದ್ದು. ಒಂದು ಡಬ್ಬಿ ಕ್ರಯ ರೂ. 3-0-0, ಬಾಲಪುಷ್ಟಿ ಕರಣವಟಿಕಾ—ಮಕ್ಕಳಿಗೆ ಬರುವ ಸಕಲವಿಧವಾದ ರೋಗಗಳನ್ನು ಪರಿಹರಿಸಿ ಅವುಗಳಿಗೆ ದೇಹಪುಷ್ಟಿಯನ್ನು ಆಯುರಾರೋಗ್ಯವನ್ನು ಕೊಟ್ಟು ಕಾಪಾಡುತ್ತದೆ. 120 ಮಾತ್ರೆಗಳ ಡಬ್ಬಿ ಕ್ರಯ ರೂ. 1-0-0. ಮಹಾಜ್ವರಾಂಕುಶ—ಇದು ಜೀರ್ಣಜ್ವರ ಮುಂತಾದ ಬಹಳ ಕಠಿನವಾದ ಜ್ವರಗಳನ್ನು ಕೂಡ ನಿವೃತ್ತಿ ಮಾಡಿ ಅಶಕ್ತಿಯನ್ನು ಹೋಗಲಾಡಿಸಿ ಸಂಪೂರ್ಣ ಬಲವನ್ನು ಕೊಡುತ್ತದೆ. 24 ಮಾತ್ರೆಗಳ ಡಬ್ಬಿ ಕ್ರಯ ರೂ. 1-0-0. ಸುಧಾಸಾಗರ ಅವಲೇಹ—ರಕ್ತ ಕೆಡುವದರಿಂದುಂಟಾಗುವ ಸಕಲ ರೋಗಗಳನ್ನು ಪರಿಹರಿಸಿ ರಕ್ತವನ್ನು ಶುದ್ಧಿಮಾಡುವದರಲ್ಲಿ ಸಾಟಿಯಿಲ್ಲದ ಆಯುರ್ವೇದ ಸಾಲ್ಸಾ. ಡಬ್ಬಿ ಕ್ರಯ ರೂ. 1-8-0. ಶ್ವಾಸಕಾಸಾರಿ ಅವಲೇಹ—ಉಬ್ಬಸ, ಕೆಮ್ಮು, ಶ್ವಾಸ ಮತ್ತು ಭಯಂಕರವಾದ ಕ್ಷಯರೋಗಕ್ಕೂ ಕೂಡ ಇದು ಅಮೃತಮೌಲ್ಯವಾದ ಔಷಧಿಯು. ಒಂದು ಡಬ್ಬಿ ಕ್ರಯ ರೂ. 1-8-0.

ನಮ್ಮ ಔಷಧಾಲಯದ ಔಷಧಿಗಳ ದೊಡ್ಡ ಕೇಟಲಾಗು ಕೋರಿದವರಿಗೆ ಕ್ರಯವು ಅಂಚೇ ಹಾಸಲು ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವದು.

ವಿಳಾಸ—ರಾಜವೈದ್ಯ ನಾರಾಯಣಜೀ ಕೇಶವಜೀ,
[247—7] 20, ಚೀನಾಬಜಾರು ರೋಡು, ಮದರಾಸು.

ಶ್ರೇಷ್ಠವಾದ ವಾಚ್! ನೂತನವಾದ ವಾಚ್! ಸಾಧ್ಯವಾದ ವಾಚ್!

ಸ್ಪ್ರಿಂಗ್ ಪಾಕೆಟ್ ಲೀವರ್ ವಾಚ್,

ಇದರ ಕ್ರಯ 7 ಬಹುಮಾನಗಳ ಸಮೇತ ರೂ. 3-8-0 ಮಾತ್ರ.
ಏಳು ವರ್ಷಗಳ ಖಾತ್ರಿಯಾದ ಗ್ಯಾರಂಟಿ.



ಘನವಂತರೇ,

ಈ ನೂತನ ನಮೂನೆ ವಾಚ್ ಈಗ ತಾನೇ ಬಂದಿರುತ್ತೆ. ಪ್ರಪಂಚದಲ್ಲಿ ಹೆಸರುವಾಸಿಯಾದ ಮತ್ತು ಶ್ರೇಷ್ಠವಾದ ಲೀವರ್ ಕೆಲಸದಿಂದಲೂ, ಬಲಿಷ್ಠವಾದ ಮತ್ತು ನಾಜೂಕಾದ ಯಂತ್ರ ಸಾಮಾನುಗಳಿಂದಲೂ ತಯಾರಾಗಿ ಬಂದಿರುತ್ತೆ. ಈಗ ತಾನೇ ಹೊಸದಾಗಿ ನಾವು ಪ್ರತ್ಯೇಕವಾಗಿ ತರಿಸಿರುತ್ತೇವೆ. ಗೌರ್ನಮೆಂಟ್ ಟೈಂಗೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದದ್ದು. ನಂಬಿಕೆಯದಾಗಿ ದೀರ್ಘಕಾಲ ಅನೇಕ ವರ್ಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು. ಬಹು ರಮಣೀಯವಾದ ವಾಚ್. ಬರೀ ಮಾತುಗಳಿಂದಲೇನು? ಪ್ರಪಂಚದ ಬೆಲೆ ಬರುವ ವಾಚ್ ಇದೇ. ಇದರ 7 ಬಹುಮಾನಗಳ ತಪಸೀಲ್:—(1) ಸುಂದರವಾದ ವಾಚ್ ಸರಪಣಿ, (2) ದಿಕ್ಕುಗಳನ್ನು ತೋರಿಸುವ ಉತ್ತರಮುಖಿ, (3) ವಾಚ್‌ಗೆ ಧೂಳು ಸೇರದಂತೆ ಭದ್ರಪಡಿಸುವ ಕೊಗಲಿನ ಚೀಲ, (4) ಕುತ್ತಿಗೆಗೆ ವಾಚ್ ಸಂಗಡ ಧರಿಸಿಕೊಳ್ಳುವ ರೇಷ್ಮೆ ದಾರ, (5) ವಾಚ್ ಪೆಟ್ಟಿಗೆ (ಬಹು ಸುಂದರವಾದದ್ದು), (6) ಪರಿಮಳವುಳ್ಳ ಸುವಾಸನೆ ಶೀಷೆ, (7) ಕರವಸ್ತ್ರ.

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.—

ಟಿ. ಸೀತಾರಾಮ ಮೊದಲಿಯಾರ್, ನಂ. 1, ಕಂದಪ್ಪ
[180—13] ಮೊದಲಿ ಬೀದಿ, ತಿರುವಲ್ಲಿಕೇಣಿ, ಮದರಾಸು

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

11—12—1914 ರಿಂದ 18—12—1914 ರ ವರೆಗೆ

ಸ್ಥಳ		ಪ್ಲೇಗ್		ಕಾಲರಾ	
		ತಗಲಿದ್ದು.	ಸತ್ತದ್ದು.	ತಗಲಿದ್ದು.	ಸತ್ತದ್ದು.
ಬೆಂಗಳೂರು	ಪಟ್ಟಣ	33	25	0	0
ಮೈಸೂರು	,,	14	12	0	0
ಬೆಂಗಳೂರು ಡಿಸ್ಟ್ರಿಕ್ಟ್		29	22	0	0
ಮೈಸೂರು	,,	75	56	0	0
ಕೋಲಾರ್	,,	17	13	0	0
ಕೋಲಾರ್ ಚಿನ್ನದ ಗಣಿಗಳು		32	18	0	0
ತುಂಕೂರು ಡಿಸ್ಟ್ರಿಕ್ಟ್		24	19	0	0
ಹಾಸನ	,,	3	1	0	0
ಚಿತ್ರದುರ್ಗ	,,	22	16	2	2
ಕಡೂರ್	,,	1	2	0	0
ಶಿವಮೊಗ್ಗ	,,	9	3	0	0
	ಜುಮ್ಲಾ ...	259	187	2	2

ಶಾಲಿವಾಹನ ಶಕ ವರುಷಂಗಳು 1837 ನೇ ಆನಂದ ಸಂವತ್ಸರೇ ದಕ್ಷಿಣಾಯನೆ ಹೇಮಂತಋತೌ ಪುಷ್ಯ ಶುದ್ಧ ಪೌರ್ಣಮಿ ಶುಕ್ರವಾರದಿಂದ ಪುಷ್ಯ ಶುದ್ಧ ಚತುರ್ದಶಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1915 ನೇ ಜನವರಿ

ತಾ.	ವಾರ.	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಧನು ರ್ಮಾಸ ತೇದಿ
1	ಶುಕ್ರ *	ಪೌರ್ಣಮಿ	27-37	ಆರ್ದ್ರಾ	40-2	18
2	ಶನಿ	ಪಾಡ್ಯಮಿ	29-48	ಪುನರ್ವಸು	43-15	19
3	ಭಾನು ;;	ಬಿದಿಗೆ	30-33	ಪುಷ್ಯ	45-10	20
4	ಸೋಮ †	ತದಿಗೆ	30-4	ಆಶ್ಲೇಷ	45-46	21
5	ಮಂಗಳ §	ಚೌತಿ	28-18	ಮಘಾ	45-22	22
6	ಬುಧ ::	ಪಂಚಮಿ	25-26	ಪುಬ್ಬಾ	43-44	23
7	ಗುರು ‡	ಷಷ್ಠಿ	21-36	ಉತ್ತರಾ	42-9	24

* ಆರಿದ್ರೋತ್ಸವ, ಮೂಗೂರು ಛಂಡೀ ಉತ್ಸವ. ;; ಪಾತಾಭಾವ, ಮೂಗೂರು ರಥ. † ಸಂಕಟಹರಚತುರ್ಥಿ, ಕೋಲಾರೋತ್ಸವಾರಂಭ, ಮಳೆ ನಕ್ಷತ್ರ—ಪೂರ್ವಾಷಾಢ 3 ನೇ ಪಾದ. § ಮೂಗೂರು ತೆಗರು ಕಡಿಯುವುದು. :: ಪಂಚಮೀ ತಿಥಿ. ‡ ತಿಥಿದ್ವಯಂ, ದಗ್ಧಯೋಗ, ಮಳೆ ನಕ್ಷತ್ರ—ಪೂರ್ವಾಷಾಢ 4 ನೇ ಪಾದ.

Printed and Published by the Rev. H. GULLIFORD, Proprietor and Manager, Wesleyan Mission Press, Mysore. 31/12/1914.